ಕನ್ನಡ ಸಾಹಿತ್ಯ ಪರಿಷತ್ತಿನ

ಕನ್ನಡ ನಿಘಂಟು

ಐದನೆಯ ಸಂಪುಟ

"ಶಬ್ದಪಾರಮಾರ್ಗಮಶಕ್ಯಂ"
-ಕೇಶಿರಾಜ

ಪ್ರೊ. ಜಿ. ವೆಂಕಟಸುಬ್ಬಯ್ಯ
ಪ್ರಧಾನ ಸಂಪಾದಕ

ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ : ಬೆಂಗಳೂರು-೧೮

೧೯೮೮

KANNADA NIGHANTU - VOL-V
Second Edition : 2010
Published by : Kannada Sahitya Parishat
Pampa Mahakavi Road, Chamarajapet, Bangalore - 560 018
Pages : VIII+4491 to 5471, Price : Rs. 350=00

ಮೊದಲನೆಯ ಮುದ್ರಣ – ೧೯೮೮
ಎರಡನೆಯ ಮುದ್ರಣ – ೨೦೧೦
ಪ್ರತಿಗಳು : ೨೦೦೦
ಬೆಲೆ : ಮುನ್ನೂರು ಐವತ್ತು ರೂಪಾಯಿಗಳು
@ ಹಕ್ಕುಗಳನ್ನು ಕಾಯ್ದಿರಿಸಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು (೨೦೧೦)

ಅಧ್ಯಕ್ಷರು

ಡಾ. ನಲ್ಲೂರು ಪ್ರಸಾದ್ ಆರ್.ಕೆ.

ಗೌರವ ಕಾರ್ಯದರ್ಶಿಗಳು

ಪ್ರೊ. ಎಚ್.ಕೆ. ಮಳಲಿಗೌಡ

ಶ್ರೀ ಟಿ.ಎಸ್. ದಕ್ಷಿಣಾಮೂರ್ತಿ

ಗೌರವ ಕೋಶಾಧ್ಯಕ್ಷರು

ಶ್ರೀ ಮುಂಡಲೀಕ ಹಾಲಂಬಿ

ಮುದ್ರಣ: **ರಾಜಾ ಪ್ರಿಂಟರ್ಸ್**
ನಂ.೫೯, ೪ನೆ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು– ೫೬೦ ೦೨೭.

ಕನ್ನಡ ನಿಘಂಟು ಸಂಪಾದಕ ಸಮಿತಿ

(೧೯೮೭ ರ ಡಿಸೆಂಬರ್ ತಿಂಗಳಿನಲ್ಲಿ ಇದ್ದಂತೆ)

ಅಧ್ಯಕ್ಷರು ಮತ್ತು ಪ್ರಧಾನ ಸಂಪಾದಕರು

ಪ್ರೊ. ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.

ಸದಸ್ಯರು

ಡಾ. ಆರ್. ಸಿ. ಹಿರೇಮಠ, ಎಂ.ಎ., ಪಿಹೆಚ್.ಡಿ.

ಡಾ. ಸಿದ್ಧಯ್ಯ ಪುರಾಣಿಕ., ಬಿ.ಎ., ಎಲ್‌ಎಲ್.ಬಿ.

ಡಾ. ಜೆ. ಎಸ್. ಗಾಯಿ, ಎಂ.ಎ., ಪಿಹೆಚ್.ಡಿ.

ಡಾ. ಹಾ. ಮಾ. ನಾಯಕ, ಎಂ.ಎ. ಪಿಹೆಚ್.ಡಿ

ಡಾ. ಜಿ.ಎಸ್. ಶಿವರುದ್ರಪ್ಪ, ಎಂ.ಎ., ಪಿಹೆಚ್.ಡಿ.

ಡಾ. ಎಂ. ಚಿದಾನಂದಮೂರ್ತಿ, ಎಂ.ಎ., ಪಿಹೆಚ್.ಡಿ.

ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ, ಎಂ.ಎ., ಪಿಹೆಚ್.ಡಿ.

ಡಾ. ಕೆ. ವಿ. ರಮೇಶ್, ಎಂ.ಎ., ಪಿಹೆಚ್.ಡಿ.

ಡಾ. ಕೆ. ಕೃಷ್ಣಮೂರ್ತಿ, ಎಂ.ಎ., ಪಿಹೆಚ್.ಡಿ.

ಶ್ರೀ ಎನ್. ಬಸವಾರಾಧ್ಯ, ಎಂ.ಎ.

ಪರಿಷತ್ತಿನ ಆಡಳಿತಗಾರರು

ಶ್ರೀ ಅ. ರಾ. ಚಂದ್ರಹಾಸಗುಪ್ತ

ಸಹಾಯಕ ನಿರ್ದೇಶಕರು

ಶ್ರೀ ಕಾ. ತ. ಚಿಕ್ಕಣ್ಣ

ಸಂಪಾದಕ ವರ್ಗ

ಪ್ರಧಾನ ಸಂಪಾದಕರು

ಪ್ರೊ. ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.

ಉಪಸಂಪಾದಕರು

ಶ್ರೀ ಹೀ. ಚಿ. ಶಾಂತವೀರಯ್ಯ ಎಂ.ಎ., ಬಿ.ಇಡಿ.
ಶ್ರೀ ಟಿ. ಆರ್. ಮಹದೇವಯ್ಯ, ಎಂ.ಎ.

ಸಹಾಯಕ ಸಂಪಾದಕರು

ಶ್ರೀಮತಿ ಮಂಜುಳಾರಾವ್, ಎಂ.ಎ.
ಶ್ರೀಮತಿ ಎಂ. ಎನ್. ಜಾನಕಮ್ಮ, ಎಂ.ಎ.
ಶ್ರೀಮತಿ ಉಮಾದೇವಿ, ಎಂ.ಎ.
ಶ್ರೀಮತಿ ವಿಜಯಲಕ್ಷ್ಮಿ, ಎಂ.ಎ.
ಶ್ರೀಮತಿ ಎಂ.ಎಸ್. ಸುಜಯ, ಎಂ.ಎ.
ಶ್ರೀ ಬಿ. ಆರ್. ಬಸವರಾಜ, ಎಂ.ಎ.

ಬೆರಳಚ್ಚುಗಾರ್ತಿಯರು : ಶ್ರೀಮತಿ ಎ. ನೇತ್ರಾವತಿ ಬಾಯಿ, ಶ್ರೀಮತಿ ಸಿ. ಎನ್. ವಿಜಯಲಕ್ಷ್ಮಿ

ಸೇವಕರು : ರಾಘವೇಂದ್ರ, ಮಾದಪ್ಪ, ಶಂಕರಪ್ಪ, ರೇವಯ್ಯ

ಅಧ್ಯಕ್ಷರ ನುಡಿ

'ನಿಘಂಟು ಎಂದರೆ ಕನ್ನಡ ಸಾಹಿತ್ಯ ಪರಿಷತ್ತಿನ ಬೃಹನ್ನಿಘಂಟು' ಎಂದೇ ಖ್ಯಾತವಾಗಿರುವ ಈ ಮಹಾನಿಘಂಟಿನ ಎಂಟು ಸಂಪುಟಗಳನ್ನು ಅದು ಪ್ರಕಟವಾದ ೧೫ ವರ್ಷಗಳ ನಂತರ ಮತ್ತಷ್ಟು ಸುಂದರವಾಗಿ ಮರುಮುದ್ರಣಗೊಳಿಸಿ ಕನ್ನಡ ಕುಲಕೋಟಿಗೆ ಅರ್ಪಿಸಲು ನನಗೆ ಸಂತೋಷವೆನಿಸುತ್ತದೆ. ಕನ್ನಡ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ಪಡೆದುಕೊಂಡಿರುವುದು ಅದರ ಸಂಪನ್ನತೆ ಮತ್ತು ಅರ್ಹತೆಗಳಿಂದಾಗಿಯೇ ಎಂಬುದನ್ನು ಲೋಕದೆದುರು ಬಿಚ್ಚಿತೋರಿಸುವ ಸಾಧನಗಳಲ್ಲಿ ಮುಖ್ಯವಾದದ್ದು ಈ ಬೃಹತ್ ನಿಘಂಟು. ಕನ್ನಡದ ಸಮಸ್ತ ಜ್ಞಾನವನ್ನೂ ತನ್ನೊಳಗೆ ಐಕ್ಯಗೊಳಿಸಿಕೊಂಡಿರುವ ಈ ನಿಘಂಟಿನ ವಿವಿಧ ಸಂಪುಟಗಳಲ್ಲಿ ಶಬ್ದವೊಂದರ ಅರ್ಥ, ವಿವರಣೆ, ಉದಾಹರಣೆ ಒಮ್ಮೊಮ್ಮೆ ಅರ್ಥಪುಟವನ್ನು ದಾಟಿ ಒಂದು ಪುಟವನ್ನು ಆವರಿಸಿಕೊಂಡಿರುವುದುಂಟು.

ಕ್ರಿ.ಶ.೪೫೦ರ ಹಲ್ಮಿಡಿಶಾಸನದಿಂದ ಪ್ರಾರಂಭವಾಗಿ ಈ ಸಂಪುಟ ಯೋಜನೆ ಅನುಷ್ಠಾನಗೊಂಡ ೧೯೯೫ರವರೆಗೆ ಕನ್ನಡದಲ್ಲಿ ಪ್ರಕಟವಾದ ಎಲ್ಲ ಬಗೆಯ ಸಾಹಿತ್ಯ ಪ್ರಕಾರಗಳಿಂದಲೂ ಉಲ್ಲೇಖಗಳನ್ನು ನೀಡಲಾಗಿರುವುದು, ಕೆಲವೊಮ್ಮೆ ಒಂದೇ ಶಬ್ದಕ್ಕೆ ಬೇರೆ ಬೇರೆ ಅರ್ಥಗಳು ಪ್ರಾಪ್ತವಾಗುವ ಸಂದರ್ಭಗಳನ್ನು ಜೊತೆಗಿರಿಸಿ ಕೊಟ್ಟಿರುವುದು, ಪ್ರತಿಯೊಂದು ಶಬ್ದವನ್ನೂ ನಾಮಪದ ಅಥವಾ ಕ್ರಿಯಾಪದವೆಂದು ಖಚಿತವಾಗಿ ವಿಂಗಡಿಸಿಕೊಂಡಿರುವುದು, ಅರ್ಥ ಸ್ಪಷ್ಟೀಕರಣಕ್ಕೆಂದು ಉದಾಹರಣೆಯಾಗಿ ಕೊಟ್ಟಿರುವ ವಾಕ್ಯ ಅಥವಾ ವಾಕ್ಯತುಂಡುಗಳೇ ಮೂಲಕಾವ್ಯವನ್ನು ಓದಬೇಕೆನ್ನುವ ಆಸಕ್ತಿಯನ್ನು ಹುಟ್ಟಿಸುವುದು – ಈ ಎಲ್ಲ ಅಂಶಗಳು ಇದರ ಅಪೂರ್ವತೆಯನ್ನು ಎತ್ತಿ ಹಿಡಿಯುವ ಸಾಕ್ಷಿಕಲ್ಲುಗಳಾಗಿವೆ. ನಿಘಂಟು ಎನ್ನುವುದೇ ತುಂಬ ವೈಜ್ಞಾನಿಕವಾದ, ಒಂದು ಭಾಷೆಯ ಸೃಜನ ಸಾಹಿತ್ಯದಷ್ಟೇ ಪ್ರಮುಖವಾದ, ಭಾಷೆಯಲ್ಲಿರುವ ಶಬ್ದಗಳನ್ನು ಶುದ್ಧವಾಗಿ ಉಚ್ಚರಿಸಬೇಕೆಂದು ತಿಳಿಸಿಕೊಡುವ ರಚನೆಯಾಗಿರುವುದರಿಂದ ಜ್ಞಾನೇಂದ್ರಿಯಗಳೆಲ್ಲದರ ಎಚ್ಚರದ ದುಡಿಮೆಯನ್ನು ಬಯಸುತ್ತದೆ. ಕನ್ನಡದ ಅಭಿಮಾನವನ್ನು ಮೈತುಂಬಿಕೊಂಡ ಘನ ವಿದ್ವಾಂಸರ ಸತತ ಪರಿಶ್ರಮದಿಂದ ಈ ಯೋಜನೆ ಶಿಸ್ತುಬದ್ಧವಾಗಿ ಯಶಕಂಡಿದೆ. ಮೊದಲ ಮುದ್ರಣದ ೧೦,೦೦೦ ಪ್ರತಿಗಳು ಕೆಲವೇ ವರ್ಷಗಳಲ್ಲಿ ಕನ್ನಡಿಗರ ಮನೆಯ ಕಪಾಟುಗಳನ್ನು, ಗ್ರಂಥಭಂಡಾರಗಳನ್ನು, ಶಾಲೆಕಾಲೇಜುಗಳನ್ನು ಅಲಂಕರಿಸಿದ್ದರಿಂದ ಕನ್ನಡ ಸಾಹಿತ್ಯ ಪರಿಷತ್ತು ಧನ್ಯತಾಭಾವವನ್ನು ತಳೆಯುವಂತಾಯಿತು. ಆದರೆ ನಿಘಂಟುವಿನ ಉಪಯುಕ್ತತೆಯನ್ನು ತಡವಾಗಿ ಅರ್ಥಮಾಡಿಕೊಂಡವರು ಅಂದಿನಿಂದ ಇಂದಿನವರೆಗೆ ಸಾಹಿತ್ಯ ಪರಿಷತ್ತಿಗೆ ದೂರವಾಣಿ ಕರೆ ಮಾಡಿ, ಮಾರಾಟ ವಿಭಾಗದಲ್ಲಿ ವಿಚಾರಿಸಿ, ಪುಸ್ತಕ ಮಳಿಗೆಗಳಲ್ಲಿ ಹುಡುಕಾಡಿ ಸಿಗದೆ ನಿರಾಶರಾಗಿದ್ದಾರೆ. ಮರುಪ್ರಕಟಿಸುವಂತೆ ಒತ್ತಾಯ ಮಾಡಿದ್ದಾರೆ.

ಎಂಟು ಸಂಪುಟಗಳಲ್ಲಿ, ಒಂಬತ್ತು ಸಾವಿರಕ್ಕಿಂತಲೂ ಅಧಿಕ ಪುಟಗಳ ವಿಸ್ತಾರದಲ್ಲಿ ಹರಡಿಕೊಂಡಿರುವ, ಎಲ್ಲರ ಮನೆಯನ್ನೂ ಬೆಳಗಬೇಕಾಗಿರುವ ಈ ನಿಘಂಟನ್ನು ಮುದ್ರಿಸುವುದಾಗಲೀ, ಮುದ್ರಿತ ಪ್ರತಿಗಳನ್ನು ಒಂದೆಡೆ ಜೋಡಿಸಿಡುವುದಾಗಲೀ, ಮಾರಾಟದ ವ್ಯವಸ್ಥೆ ಮಾಡುವುದಾಗಲೀ, ಹೆಚ್ಚಿನ ಪ್ರಮಾಣದಲ್ಲಿ ಒಂದು

ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವುದಾಗಲೀ ಅಷ್ಟೊಂದು ಸುಲಭವಾದ ಕೆಲಸವಲ್ಲ. ಈ ಅಸಾಧ್ಯವನ್ನು ಸಾಧ್ಯವಾಗಿಸುವ ಧೈರ್ಯೋತ್ಸಾಹಗಳು ಪರಿಷತ್ತಿನೊಡಲಲ್ಲಿ ಚಿಮ್ಮುವುದಕ್ಕೆ ಕರ್ನಾಟಕ ರಾಜ್ಯ ಸರ್ಕಾರ ಕಾರಣವಾಯಿತೆಂದರೆ ಅದನ್ನು ಯಾರೂ ಅತಿಶಯೋಕ್ತಿಯೆಂದು ಭಾವಿಸಬೇಕಾಗಿಲ್ಲ. ಕರ್ನಾಟಕ ರಾಜ್ಯ ಸರ್ಕಾರ ಕನ್ನಡ ಸಾಹಿತ್ಯ ಪರಿಷತ್ತಿನ ಮಾತುಗಳನ್ನು ಪ್ರೀತಿಯಿಂದ ಆಲಿಸುತ್ತಿರುವುದು, ಕನ್ನಡ ಸಾಹಿತ್ಯ ಪರಿಷತ್ತನ್ನು ಕನ್ನಡದ ಸಾರ್ವಭೌಮ ಪ್ರತಿನಿಧಿಯೆಂದೇ ಭಾವಿಸುತ್ತಿರುವುದು ಕನ್ನಡದ ಭಾಗ್ಯವೆಂದೇ ಹೇಳಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಹಲವು ಒತ್ತಡಗಳ ನಡುವೆಯೂ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳಲ್ಲಿ ಅತ್ಯಂತ ಪ್ರೀತಿಯಿಂದ ಭಾಗವಹಿಸುತ್ತಿರುವುದು, ಸಮಾರಂಭಗಳಲ್ಲಿ ಕೊಟ್ಟ ಆಶ್ವಾಸನೆಗಳನ್ನು ಅತಿಶೀಘ್ರವಾಗಿ ಅನುಷ್ಠಾನಗೊಳಿಸುತ್ತಿರುವುದು, ಪರಿಷತ್ತಿನ ಎಲ್ಲಾ ಯೋಜನೆಗಳಿಗೂ ಹಸಿರು ನಿಶಾನೆ ತೋರುತ್ತಿರುವುದು, ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಮುಖ್ಯಮಂತ್ರಿ – ಕನ್ನಡ ಸಂಸ್ಕೃತಿ ಮಂತ್ರಿಗಳ ಕಚೇರಿಯ ಹೊರಗೆ ಕಡತಗಳೊಂದಿಗೆ ಗಂಟೆಗಟ್ಟಲೆ ಕಾಯುತ್ತಿದ್ದುದನ್ನು ತಪ್ಪಿಸಿರುವುದು, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಿಂದ ತಾಲ್ಲೂಕು ಸಮ್ಮೇಳನಗಳವರೆಗೆ ಎಲ್ಲವೂ ಅದ್ಧೂರಿಯಾಗಿ ನಡೆಯಲು ಬೇಕಾದಷ್ಟು ಪ್ರಮಾಣದಲ್ಲಿ ಹಣ ಬಿಡುಗಡೆ ಮಾಡುತ್ತಿರುವುದು – ಇಂಥವನ್ನೆಲ್ಲಾ ಕಂಡಾಗ ಪರಿಷತ್ತಿನ ಅಧ್ಯಕ್ಷನಾಗಿ ನನಗೆ ಮನಸ್ಸು ತುಂಬಿ ಬರುತ್ತದೆ. ಆರುಕೋಟಿ ಕನ್ನಡಿಗರ ಪರವಾಗಿ ಅವರಿಗೆ ಕೃತಜ್ಞತಾ ಕುಸುಮಗಳನ್ನು ಅರ್ಪಿಸಬೇಕೆನ್ನಿಸುತ್ತದೆ. 'ಕನ್ನಡದ ಮುಖ್ಯಮಂತ್ರಿ' 'ಕನ್ನಡಿಗರ ಮುಖ್ಯಮಂತ್ರಿ' ಎಂದು ಅಭಿಮಾನದಿಂದ ನುಡಿಯಬೇಕೆನ್ನಿಸುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳ ಕನ್ನಡದ ಮೇಲಿನ, ಕನ್ನಡ ಸಾಹಿತ್ಯ ಪರಿಷತ್ತಿನ ಬಗೆಗಿನ ಈ ಅಖಂಡ ಪ್ರೀತಿ ಹೀಗೇ ಮುಂದುವರಿಯಲೆಂದು ಆಶಿಸುತ್ತೇನೆ.

ಕರ್ನಾಟಕ ಸರ್ಕಾರ ನಿಘಂಟು ಯೋಜನೆಯ ಮಹತ್ವವನ್ನು ಮನಗಂಡು ಒಂದು ಕೋಟಿ ರೂಪಾಯಿಗಳನ್ನು ಸಾಹಿತ್ಯ ಪರಿಷತ್ತಿಗೆ ಉದಾರವಾಗಿ ನೀಡಿದೆ. ಸರ್ಕಾರ ಹಣ ನೀಡಿರುವುದು ಪರಿಷತ್ತಿಗಾದರೂ ಇದು ಜನತೆಯ ಹಣ ಮತ್ತು ಇದರ ಅಂತಿಮ ಫಲಾನುಭವಿಗಳೂ ಜನತೆಯೇ. ಈ ಎಚ್ಚರವನ್ನಿರಿಸಿಕೊಂಡೇ ಸಾಹಿತ್ಯ ಪರಿಷತ್ತು ಬಹುಬೇಡಿಕೆಯ ಬೃಹನ್ನಿಘಂಟಿನ ಎಂಟು ಸಂಪುಟಗಳನ್ನು ಪುನರ್ಮುದ್ರಣಗೊಳಿಸುತ್ತಿದೆ. ಸರ್ಕಾರದ ಉದಾರ ಆರ್ಥಿಕ ನೆರವಿನ ಪರಿಣಾಮವಾಗಿ ನಿಘಂಟಿನ ಬೆಲೆಯನ್ನು ಸಾಮಾನ್ಯರೂ ಕೊಳ್ಳಲು ಮನಸ್ಸು ಮಾಡುವಂತೆ ಕಡಿಮೆಗೊಳಿಸಲಾಗಿದೆ. ಭಾಷೆ ಮತ್ತು ಸಾಹಿತ್ಯಾಭಿಮಾನದ ಸಂಕೇತವೆಂಬಂತೆ ಈ ಯೋಜನೆಯ ಯಶಸ್ಸಿನಲ್ಲಿ ಪ್ರಮುಖ ಪಾತ್ರ ನಿರ್ವಹಿಸಿರುವ ರಾಜ್ಯ ಸರ್ಕಾರವನ್ನು ಹಾಗೂ ಕನ್ನಡ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಜಯರಾಮರಾಜೇ ಅರಸ್ ಮತ್ತು ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರುಗಳನ್ನು ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕೃತಜ್ಞತೆಯಿಂದ ಸ್ಮರಿಸುತ್ತದೆ. ನಿಘಂಟು ಯೋಜನೆ ಪ್ರಾರಂಭವಾದಾಗ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಜಿ. ನಾರಾಯಣರಿಂದ ಮೊದಲಗೊಂಡು ಮುಕ್ತಾಯವಾದಾಗ ಅಧ್ಯಕ್ಷರಾಗಿದ್ದ ಡಾ. ಸಾ.ಶಿ. ಮರುಳಯ್ಯನವರವರೆಗೆ ಇದನ್ನು ಆಸಕ್ತಿಯಿಂದ ಮುನ್ನಡೆಸಿಕೊಂಡು ಬಂದ ಎಲ್ಲ ಅಧ್ಯಕ್ಷರುಗಳಿಗೂ ನಿಘಂಟು ಸಮಿತಿಯ ಅಧ್ಯಕ್ಷರು, ಸದಸ್ಯರುಗಳು, ಸಂಪಾದಕರು, ಸಿಬ್ಬಂದಿ ವರ್ಗದವರಿಗೂ ಅಂದವಾಗಿ ಮುದ್ರಿಸಿಕೊಟ್ಟ ರಾಜಾ ಪ್ರಿಂಟರ್ಸ್‌ನವರಿಗೂ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ಕನ್ನಡ ಸಾಹಿತ್ಯ ಪರಿಷತ್ತು ತುಂಬಾ ಆಭಾರಿಯಾಗಿದೆ. ಮರುಮುದ್ರಣದ ಈ ನಿಘಂಟಿನ ಸಂಪುಟಗಳನ್ನು ಕನ್ನಡ ಜನತೆ ಪ್ರೀತಿ ವಿಶ್ವಾಸಗಳಿಂದ ಬರಮಾಡಿಕೊಳ್ಳುವರೆಂದು ನಂಬಿದ್ದೇನೆ.

ಬೆಂಗಳೂರು
೫-೬-೨೦೧೦

ಡಾ. ನಲ್ಲೂರು ಪ್ರಸಾದ್ ಆರ್.ಕೆ.
ಅಧ್ಯಕ್ಷರು

ಅರಿಕೆ

ಕನ್ನಡ – ಕನ್ನಡ ನಿಘಂಟಿನ ನಾಲ್ಕನೆಯ ಸಂಪುಟವು ೧೯೭೯ರಲ್ಲಿ ಬಿಡುಗಡೆಯಾಯಿತು. ಐದನೆಯ ಸಂಪುಟದ ಮುದ್ರಣವು ಕೆಲವು ತಿಂಗಳ ಹಿಂದೆಯೇ ಪೂರೈಸುವ ಹಂತವನ್ನು ತಲಪಿದ್ದರೂ ಅದರ ಬಿಡುಗಡೆ ಅನಿವಾರ್ಯವಾಗಿ ತಡವಾಯಿತು. ಈಗ ಆರನೆಯ ಸಂಪುಟವೂ ಮುದ್ರಣಕ್ಕೆ ಸಿದ್ಧವಾಗಿದೆ. ಇಷ್ಟರಲ್ಲಿಯೇ ಅದರ ಮುದ್ರಣವೂ ಪ್ರಾರಂಭವಾಗಿ ಐದಾರು ತಿಂಗಳುಗಳಲ್ಲಿ ಅದೂ ಬಿಡುಗಡೆಯಾಗುವ ನಿರೀಕ್ಷೆಯಿದೆ. ಏಳನೆಯ ಸಂಪುಟದ ಉಳಿದಿರುವ ಸ್ವಲ್ಪ ಭಾಗವೂ ಸಿದ್ಧವಾಗುತ್ತಿದೆ. ಸರಕಾರದ ಧನ ಸಹಾಯದಿಂದ ಏರ್ಪಾಟಾದ ನಿಘಂಟಿನ ಯೋಜನೆ ಪೂರೈಸಿ ಸಂಪೂರ್ಣ ನಿಘಂಟಿನ ಪ್ರಕಟನೆಯ ಮಹಾಕಾರ್ಯಕ್ಕೆ ಮಂಗಳವನ್ನು ಮಾಡುವ ಸಂತೋಷ ಕನ್ನಡ ಜನರಿಗೆ ಬೇಗ ಲಭಿಸಲಿ. ನಿಘಂಟಿನ ಕಾರ್ಯಕ್ಕೆ ತೊಂದರೆ ಬಾರದಂತೆ ಸಕಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಈ ಕನ್ನಡದ ಕೆಲಸಕ್ಕೆ ಈ ವಯಸ್ಸಿನಲ್ಲಿಯೂ ದುಡಿದು ಈ ಕೆಲಸವನ್ನು ಆಗಮಾಡಿರುವ ಕೋಶಸಮಿತಿಯ ಅಧ್ಯಕ್ಷರೂ ಪ್ರಧಾನ ಸಂಪಾದಕರೂ ಆದ ಪ್ರೊ. ಜಿ. ವೆಂಕಟಸುಬ್ಬಯ್ಯನವರಿಗೂ ಅವರಿಗೆ ಬೆಂಬಲವಾಗಿ ನಿಂತ ಸಂಪಾದಕ ಸಮಿತಿಯ ಸದಸ್ಯರಿಗೂ ನಿಘಂಟು ಕಛೇರಿಯ ಸಿಬ್ಬಂದಿಯವರಿಗೂ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಕನ್ನಡದ ಜನ ಈ ಸಂಪುಟದ ಪ್ರಯೋಜನವನ್ನು ಬೇಗ ಪಡೆಯುವಂತಾಗಲಿ.

ಬೆಂಗಳೂರು
೧೫–೧೨–೧೯೮೭

ಅ.ರಾ. ಚಂದ್ರಹಾಸಗುಪ್ತ
ಆಡಳಿತಾಧಿಕಾರಿ
ಕನ್ನಡ ಸಾಹಿತ್ಯ ಪರಿಷತ್ತು

ಸಂಪಾದಕರ ಮಾತು

ಐದನೆಯ ಸಂಪುಟವು ಸಿದ್ಧವಾಗಿ ಕೊನೆಯ ಪಕ್ಷ ಐದು ವರ್ಷಗಳಾದುವು. ಆರನೆಯ ಸಂಪುಟವು ಸಿದ್ಧವಾಗಿ ನಾಲ್ಕು ವರ್ಷಗಳಾದುವು. ಆದರೆ ಅನಿರೀಕ್ಷಿತ ಕಾರಣಗಳಿಂದ ಅವುಗಳ ಮುದ್ರಣಕ್ಕೆ ತಡೆಯುಂಟಾಗಿ ಕನ್ನಡದ ಈ ಕೆಲಸಕ್ಕೆ ಅಡ್ಡಿ ಬಂದಿತು. ಈಗಲಾದರೂ ಐದನೆಯ ಸಂಪುಟದ ಬಿಡುಗಡೆಯಾಗಿ ಆರನೆಯ ಸಂಪುಟದ ಮುದ್ರಣ ಪ್ರಾರಂಭವಾಗಿರುವುದು ಸಮಾಧಾನ ತರುವ ವಿಷಯವಾಗಿದೆ. ಇಷ್ಟು ಬೇಗ ಈ ಕಾರ್ಯ ಸಾಧ್ಯವಾದುದು ಇಂದು ಪರಿಷತ್ತಿನ ಆಡಳಿತಾಧಿಕಾರಿಗಳಾಗಿರುವ ಶ್ರೀ ಅ. ರಾ. ಚಂದ್ರಹಾಸ ಗುಪ್ತ ಅವರ ದಕ್ಷ ನಿರ್ವಹಣೆಯಿಂದ. ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಕೋಶ ಸಮಿತಿಯ ಉಪಾಧ್ಯಕ್ಷರಾಗಿದ್ದ ಪ್ರೊ. ಎಸ್. ಎಸ್. ಮಾಳವಾಡರು ಈಚೆಗೆ ನಿಧನ ಹೊಂದಿದುದರಿಂದ ನಾವೆಲ್ಲ ಅವರ ಅಪಾರ ವಿದ್ವತ್ತಿನ ಸಹಾಯವನ್ನು ಕಳೆದುಕೊಂಡಂತಾಗಿದೆ. ನಿಘಂಟಿನ ಕಾರ್ಯದ ಬಗ್ಗೆಯೂ ಕೆಲವು ಶಬ್ದಗಳ ಸ್ವರೂಪದ ವಿವರಣೆಯ ಬಗ್ಗೆಯೂ ನಾನು ಸಲಹೆ ಕೇಳಿದಾಗ ಅವರು ನೀಡುತ್ತಿದ್ದ ಮಾರ್ಗದರ್ಶನವನ್ನು ನಾನು ಎಂದೂ ಮರೆಯಲಾರೆ. ನನ್ನ ಕೃತಜ್ಞತೆಯನ್ನು ನಾನಿಲ್ಲಿ ದಾಖಲಿಸುತ್ತಿದ್ದೇನೆ.

ಕರ್ನಾಟಕ ಸರಕಾರವು ನೀಡುತ್ತಿರುವ ಧನಸಹಾಯವಿಲ್ಲದಿದ್ದರೆ ಈ ಕಾರ್ಯ ಎಂದೋ ನಿಂತು ಹೋಗುತ್ತಿತ್ತು. ಸರಕಾರದ ಅಪಾರ ಧನ ಸಹಾಯಕ್ಕಾಗಿ ನಾವೆಲ್ಲ ಅವರಿಗೆ ಕೃತಜ್ಞರಾಗಿರಬೇಕು. ಕೋಶ ಸಮಿತಿಯ ಸದಸ್ಯರು ನೀಡಿದ ಸಹಕಾರ ಸಹಾಯಗಳಿಗೆ ನಾನು ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ಶ್ರೀ ಭಗವಾನ್ ಇಂಡಸ್ಟ್ರೀಸ್‌ನವರು ಈ ಸಂಪುಟದ ಮುದ್ರಣವನ್ನು ಆಸಕ್ತಿಯಿಂದ ಪೂರೈಸಿಕೊಟ್ಟಿದ್ದಾರೆ. ಅದರ ಮಾಲೀಕರಾದ ಶ್ರೀ ಎಂ. ಜಿ. ಸತ್ಯನಾರಾಯಣ ಶೆಟ್ಟಿಯವರಿಗೆ ನಮ್ಮ ವಂದನೆಗಳು.

ಏಳನೆಯ ಸಂಪುಟದಲ್ಲಿ ಮ, ವ, ಸ, ಹ – ಇಷ್ಟು ಅಕ್ಷರಗಳಿಗೆ ಸಂಬಂಧಪಟ್ಟುದನ್ನು ಬಿಟ್ಟರೆ ಮಿಕ್ಕ ಅಕ್ಷರಗಳಿಗೆ ಸೇರಿದ ನಿಘಂಟಿನ ಮುದ್ರಣಪ್ರತಿ ಸಿದ್ಧವಾಗಿದೆ. ಈ ನಾಲ್ಕು ಅಕ್ಷರಗಳ ಸಭಾಪ್ರತಿಯೂ ಸಿದ್ಧವಾಗಿದೆ. ಮಿಕ್ಕಿರುವ ಪರಿಶೀಲನೆಯ ಕೆಲಸ ಪೂರೈಸಿ ಈ ಯೋಜನೆ ಯಶಸ್ವಿಯಾಗಿ ಮುಗಿಯಲಿ ಎಂದು ನಾನು ಹಾರೈಸುತ್ತೇನೆ.

ಐದನೆಯ ಸಂಪುಟದ ಕರಡನ್ನು ತಿದ್ದುವ ಕಾರ್ಯವನ್ನು ನಿಘಂಟಿನ ಸಂಪಾದಕ ವರ್ಗದವರು ನಿರ್ವಹಿಸಿದ್ದಾರೆ. ಅವರಿಗೂ ಕಚೇರಿಯ ಮಿಕ್ಕೆಲ್ಲ ಸಿಬ್ಬಂದಿವರ್ಗದವರಿಗೂ ಅವರ ಸೇವೆಗೆ ನಾವು ಕೃತಜ್ಞರಾಗಿರಬೇಕು.

ಬೆಂಗಳೂರು
ತಾ॥ ೧೫–೧೨–೧೯೮೭

ಜಿ. ವೆಂಕಟಸುಬ್ಬಯ್ಯ
ಪ್ರಧಾನ ಸಂಪಾದಕ

ನಾಭಿಕಮಲ (ನಾ). (ಪುರಾಣಗಳಲ್ಲಿ ಹೇಳಿರುವಂತೆ) ವಿಷ್ಣುವಿನ ಹೊಕ್ಕುಳಿನಲ್ಲಿರುವ ತಾವರೆ : ಶ್ರೀಪತಿಯ ನಾಭಿಕಮಲದಿ ಅಜ ಜನಿಸಿದನು (ಪುರಂದ. ೧-೩-೧). [ನಾಭಿ+ಕಮಲ]

ನಾಭಿಕೂಪ (ನಾ). ಹೊಕ್ಕಳುಗುಂಡಿ : ಅಹವಮಹಾಹುಂಕಾರ ಕಾಲಕೂಟವಿಟಪಿಪ್ರರೋಹಶಂಕಾವಹ ನಾಭಿಕೂಪಾವಲಂಬಿ ಕೂರ್ಚ ಕಲಾಪಂ . . . ಲಾಟಬಲಂ (ಆದಿಪು. ೧೩-೪೫). [ನಾಭಿ+ಕೂಪ]

ನಾಭಿಖಂಡನ (ನಾ). =ನಾಭಿನಿಕರ್ತನ : ಮೊದಲಿಗನವನೀಶ್ವರರೊಳ್ ಮಹಿಮಾಸ್ಪದನಾದಂ ನಾಭಿ ನಾಭಿಖಂಡನಕುಶಲಂ (ಪಂಚಮಾ. ೧-೯೨). [ನಾಭಿ+ಖಂಡನ]

ನಾಭಿಗೋಲ್ (ನಾ). ಒಂದು ಅಳತೆಯ ಕೋಲು ; ಎರಡು ಮೊಳದ ಅಳತೆಯ ಕಡ್ಡಿ : "ಎರಡು ಮೊಟನಾಗಲಾ ನಾಭಿಗೋಲೆಂದೆನಿಕ್ಕುಂ" (ಮುಂಗರಾ. ೯೬-೧೧೧). [ನಾಭಿ+ಕೋಲ್1]

ನಾಭಿಜ (ನಾ). (ವಿಷ್ಣುವಿನ) ನಾಭಿಕಮಲದಿಂದ ಹುಟ್ಟಿದವನು ; ಬ್ರಹ್ಮ. [ಸಂ.]

ನಾಭಿತಾನ (ನಾ). [ಸಂಗೀತ] ಏಳಕ್ಕಿಂತ ಕಡಿಮೆಯಿರುವ ಒಂದು ಸ್ವರಶ್ರೇಣಿ ; ℙ ನಾಭಿಯಿಂದ ಹುಟ್ಟುವ ಅತಿಮಂದ್ರವೂ ಗಂಭೀರವೂ ಗಭೀರವೂ ಗುಂಭವೂ ಆಗಿರುವ ಸ್ವರಗಳಿಂದ ಆದ ತಾನ : ಒಂದು ದಿನ ಅವರು ತಮ್ಮ ನಾಭಿತಾನಸಾಧಕವನ್ನು ಮಾಡಲಾರಂಭಿಸಿದರು (ಸಂಗೀತ. ೩೫). [ನಾಭಿ+ತಾನ2]

ನಾಭಿದಘ್ನ (ಗು). ೧. ಪಾದದಿಂದ ಹಿಡಿದು ಹೊಕ್ಕುಳು ಮುಳುಗುವಷ್ಟು ಆಳನಾದ (ನೀರಿನ) ಮಟ್ಟವುಳ್ಳ : ಪೆಣ್ಬಡೆ ನಿಂದುದು ಪೊಕ್ಕು ಜಾನುದಘ್ನೋರುದಘ್ನ ಕಟದಘ್ನ ನಾಭಿದಘ್ನ ಸ್ಥಳದೊಳ್ (ಜಗವಿ. ೧೪-೯೫). (ನಾ). ೨.ಹೊಕ್ಕುಳು ಮುಳುಗುವಷ್ಟು (ನೀರಿನ) ಆಳ,—ಮಟ್ಟ : ಮನಃಪ್ರಿಯಂ ಸವತಿಯ ಮೆಯ್ಯೊಳೊತ್ತೆ ಚಂದನಾಂಬುವಂ ಕುಟಿತೆಗೆ ನಾಭಿದಘ್ನಮಾಯ್ತು ನಿತ್ತೆ ಮತ್ತವಳ ವಿಲೋಚನಾಂಬುವಿಂ ಸ್ತನದ್ವಯಂ ಸಮಸಮಮಾಯ್ತು ಪೂಗೊಳಂ (ಲೀಲಾಪ. ೧೩-೧೫೨); ಸಂತಾಪಮುಂ ಮೆಯ್ವೆಚ್ಚಲ್ ತಟ್ಟಾಜುತಿರ್ದತ್ತೆನೆ ಪ್ರಥುಳಸರಸ್ಸಂಕುಳಂ ಕಂಠದಘ್ನಂ ಬಿಚ್ಚಿತ್ತಾ ನಾಭಿದಘ್ನಂ ತಡೆಯದೆ ಕಟಿದಘ್ನಂ ಕರಂ ಜಾನುದಘ್ನಂ (ಬಾಧವ. ೧೪-೨೯); ಊಹಿಸದೆ ನಾ ಸ್ಫಟಿಕವೆಂದುತ್ಸಾಹಿಸಲು ನೀರಾಯ್ತು ನನೆದೆನು ನಾಭಿದಘ್ನದಲಿ (ಕುವ್ಯಾಸ. ೧೩-೩೮). [ಸಂ.]

ನಾಭಿನಗ (ನಾ). ೧. [ಜೈನ] ಜಂಬೂದ್ವೀಪದ ಮಧ್ಯದಲ್ಲಿರುವ ಪರ್ವತ; ಮೇರು. ೨. ಜಂಬೂದ್ವೀಪದ ನಾಲ್ಕು ಕ್ಷೇತ್ರಗಳ ಮಧ್ಯದಲ್ಲಿರುವ ನಾಲ್ಕು ಪರ್ವತಗಳು : ನಾಲ್ಕು ನಾಭಿನಗಂಗಳಿಂದಂ . . . ಚತುರ್ದಶ ಮಹಾವಾಹಿನಿಗಳಿಂದಮೆಸೆದು (ಆದಿಪು. ೧-೪೪ ಪ). [ನಾಭಿ+ನಗ4]

ನಾಭಿನಾಲ, ನಾಭಿನಾಳ (ನಾ). ಹೊಕ್ಕುಳಿನ ಬಳ್ಳಿ. **ನಾಭಿನಾಳ :** ನಾಭಿನಾಮಮುಮಾಯ್ತ್ತರ್ಭಕನಿಕರನಾಭಿನಾಳಪ್ರಕರನಿಕರ್ತನಮನಜುಯೆ ಪೇಟ್ದುದಜಾಂದಂ (ಆದಿಪು. ೬-೬೬); ನುಗುವು ಬಲವಾಗಿದ್ದರೆ . . . ನಾಭಿನಾಳಕ್ಕೆ ನೀರು ಸೋಂಕದ ಹಾಗೆ ಸ್ನಾನಮಾಡಿಸಿ . . . ಮುಲಗಿಸಿದರೆ ೫-೬ ಗಂಟೆ ಅದು ಸುಖವಾಗಿ ನಿದ್ದೆಮಾಡುತ್ತದೆ (ಗೃಹವಿ. ೧೦೪). [ನಾಭಿ+ನಾಲ1]

ನಾಭಿನಾಳ 'ನಾಭಿನಾಲ' ನೋ.

ನಾಭಿನಿಕರ್ತನ (ನಾ). ತಾಯಿಗೂ ಮಗುವಿಗೂ ಸಂಪರ್ಕವನ್ನುಂಟುಮಾಡಿದ್ದ ಹೊಕ್ಕುಳುಕುಡಿಯನ್ನು ಜನನಕಾಲದಲ್ಲಿ ಕತ್ತರಿಸುವುದು : ಆತನ ಕಾಲದೊಳು ಶಿಶುಗಳ್ಗೆ ನಾಭಿನಿಕರ್ತನ ಮಾದೊಡೆ (ಜಾವುಂಪು. ೧೧). ℙ ಹದಿನಾಲ್ಕನೆಯ ಮನುವಾದ ನಾಭಿರಾಜನು ಮಕ್ಕಳ ಜನನಕಾಲದಲ್ಲಿ ನಾಭಿನಿಕರ್ತನ ವಿಧಾನವನ್ನು ತಿಳಿಯಪಡಿಸಿದುದರಿಂದ ಅವನಿಗೆ 'ನಾಭಿ' ಎಂಬ ಹೆಸರಾಯಿತೆಂದು ಪೂರ್ವಪುರಾಣದಲ್ಲಿ ಹೇಳಿದೆ. [ನಾಭಿ+ನಿಕರ್ತನ]

ನಾಭಿಮಂಡಲ (ನಾ). ವರ್ತುಲಾಕಾರವಾದ ಹೊಕ್ಕುಳು : ಮುನಿಕುಮಾರನ ಸುರು ಚಿರಗಂಭೀರನಾಭಿಮಂಡಲಮೆಸೆಗುಂ (ಕಾದಂಪೂ. ೬೩೬). [ನಾಭಿ+ಮಂಡಲ]

ನಾಭಿಮೂಲ, ನಾಭಿಮೂಳ (ನಾ). ೧. ಹೊಕ್ಕುಳಿನ ಕೆಳಭಾಗ,—ಬುಡ : ಅನುಕೂಲಪವನನಿಂ ಜೀವನಿಷ್ಪತ್ತಿಯಿಂ ನಾಭಿಮೂಲದೊಳ್ ಕಹಳೆಯ ಪಾಂಗಿನವೋಲ್ ಶಬ್ದದ್ರವ್ಯಂ ಜನಿಯಿಸುಗುಂ (ಶಸುದ. ೨). **ನಾಭಿಮೂಳ :** ೨. ಹೊಕ್ಕುಳಿನ ಕುಳಿ,—ಹಳ್ಳ : ಎಮೆಯಿಕ್ಕದೆ ನೋಡುವ ನರರಮರರ ಕಣ್ಗಳೊಳನಂಗರಾಜನ ಬಯ್ತುಟ್ಟಿಮರ್ದಂ ಕೊಳೆತಳಿದುದು ನಾಭಿಮೂಳ [ಪಾಪಾಂ.ಲ]ಮುಂ ಬಾಹುಮೂಳಮುಂ ಸುರವಧುವಾ (ಆದಿಪು. ೯-೩೫). [ನಾಭಿ+ಮೂಲ]

ನಾಭಿಮೂಳ 'ನಾಭಿಮೂಲ' ನೋ.

ನಾಭಿರಾಜ (ನಾ). ಆದಿತೀರ್ಥಂಕರನ ತಂದೆ : ಆತನ ಮಗಂ ನಾಭಿರಾಜನೆಂಬೊಂ ಪದಿನಾಲ್ಕನೆಯ ಕುಳಧರಂ ಪಂಚವಿಂಶತ್ಯುತ್ತರ ಪಂಚಶತಚಾಪೋತ್ಸೇಧನುಂ (ಜಾವುಂಪು. ೧೧); ನಾಭಿರಾಜಂ ಧರಣೀಯುವತಿಗೆ ಮರುದೇವಿಯೆ ದಲ್ ಸವತಿಯೆನಲ್ ಸುಖದಿನರಸುಗೆಯ್ಯುತ್ತಿರ್ದಂ (ಪಂಚಾಮೂ. ೧-೯೮) ; ನಾಭಿರಾಜ ಮರುತಾದೇವಿಗೆ ಹುಟ್ಟಿದಾತನರುಹ (ಬಸಪು. ೫೪೬) ; ಮನುವಂಶಾಗ್ರಣಿ ನಾಭಿರಾಜನೊಗೆದಂ ಸಂತಪ್ತಸೌಂದರ್ಯಕಾಂಚನವರ್ಣಂ (ಪುಣ್ಯಾಸ್ರ. ೧೦-೧೪). [ಸಂ.]

ನಾಭಿಶೂಲೆ (ನಾ). ಹೊಕ್ಕುಳು ನೋವು : ಹಿಂಗು, ಶುಂಠಿ, ಸೈಂಧವಲವಣ ಇವಂ ಸಮಾನಂಗೊಂಡು ಚೂರ್ಣಂ ಮಾಡಿ ಬಿಸಿ ನೀರಿನಲ್ಲಿ ಕುಡಿಯೆ, ನಾಭಿಶೂಲೆ, ಹೊಟ್ಟೆಬೇನೆ, ಅತಿಸಾರ ಮಾಣ್ಗುಂ (ವೈದ್ಯವಿ. ೧೨೩) ; ಜೀರಕಾದಿ ಚೂರ್ಣ . . . ತೆಗೆದು ಕೊಳ್ಳಲು ಸಕಲಾಜೀರ್ಣ . . . ನಾಭಿಶೂಲೆ . . . ಸರ್ವರೋಗವೂ ಪರಿಹರ (ಸಕವೈ. ೩೩೮). [ನಾಭಿ+ಶೂಲೆ1]

ನಾಭಿಸರೋಜ (ನಾ). =ನಾಭಿಕಮಲ : ಅವನ ನಾಭಿಸರೋಜದೊಳ್ ವಜಶ್ರೀವರನುತ್ಸವಂಬೆರಸು ಪುಟ್ಟಿದಂ (ಪಂಚಕಂ. ೧-೨). [ನಾಭಿ+ಸರೋಜ]

ನಾಭಿಸೂತ್ರ (ನಾ). =ನಾಭಿನಾಲ : ತಾಯಿವುಂಡನ್ನರಸ ನಾಭಿಸೂತ್ರದಿಗೊಂಬುತಿಹುದು (ಸಮೋ. ೧೪-೫೧). [ನಾಭಿ+ಸೂತ್ರ]

ನಾಭಿಸ್ಥಾನ (ನಾ). ಮಧ್ಯಪ್ರದೇಶ : ಶ್ರೀನಿಳಯನಿರುವೆ ನಾಭಿಸ್ಥಾನಮೆನಲ್ ನೆಲೆಗೊಂಡಯೋಧ್ಯೆಗವತರಿಸಲ್ ಶ್ರೀಜ್ಞಾನಧರಂ ಬಗೆದಂ (ಆದಿಪು. ೬-೧). [ನಾಭಿ+ಸ್ಥಾನ]

ನಾಭೀಕೂಪ (ನಾ). =ನಾಭಿಕೂಪ : ಲಾವಣ್ಯಾಂಬುರಸದ್ರವರೂಪಂ ಭಾವಿಪೊಡಾಕೆಯ ನಾಭೀಕೂಪಂ (ಸುಕುಮಾ. ೫-೫೧ ರಗಳೆ). [ಸಂ.]

ನಾಭೀನಳಿನ (ನಾ). =ನಾಭಿಕಮಲ : ಬಳಿಕ ಕಾರುಣ್ಯದಲಿ ನಾಭೀನಳಿನದಲಿ ತೆಗೆದನು ವಿರಿಂಚಿಗೆ ನಳಿನಸಂಭವನೆಂಬ ಹೆಸರಾಯ್ತಂದು ಮೊದಲಾಗಿ (ಕುವ್ಯಾಖ. ೧೪-೩೦). [ಸಂ. ನಾಭೀನಳಿನ]

ನಾಭೇಯ (ನಾ). ೧. ಬ್ರಹ್ಮ : ನಾಭೇಯಂ ಸುರಾಮಾತ್ಯನಿಂದ್ರ ನದೀಸಂದನನುದ್ಧತಂ . . . ನೀತಿಜ್ಯೋತಿರ್ನಿರ್ಣೇತಿಯಂ ಮನದೊಳ್ ನೂಟ್ಟೆ (ಪಂಚತಂ. ೩-೧). ೨. ಆದಿತೀರ್ಥಂಕರ. [ಸಂ.]

ನಾಮ (ನಾ). ೧. ಒಂದು ಪದಾರ್ಥವನ್ನು ಬೇರೆ ಪದಾರ್ಥಗಳಿಂದ, ಒಬ್ಬ ವ್ಯಕ್ತಿಯನ್ನು ಬೇರೆ ವ್ಯಕ್ತಿಗಳಿಂದ ಪ್ರತ್ಯೇಕವಾಗಿ ಗೊತ್ತುಪಡಿಸಿಕೊಳ್ಳಲು ಇಟ್ಟಿರುವ ಸಂಕೇತಪದ; ಹೆಸರು ; ಅಭಿಧಾನ :"ಅಖ್ಯಾಹ್ವ ನಾಮ ಗೋತ್ರಾಭಿಖ್ಯಾಹ್ವಯ ಸಂಜ್ಞೆಗಳ್ ಸಮಾನಾರ್ಥಂಗಳ್" (ವಸ್ತುಕೋ. ೮೧-೩೬) ; ನಿಮ್ಮ ನಾಮವೆನಗೆ ಮಂತ್ರ . . . ನಿಮ್ಮ ನಾಮ ಕಾಮಧೇನುವೆನಗೆ (ಬಸವ.೭೬) ; ತೊಡೆವೆಂ ಶಕ್ರನ ನಾಮಮಂ ತುದುಕಿ ನೀರೊಳ್ ಮೆಟ್ಟುವೆಂ ವಹ್ನಿಯಂ (ಜಗವಿ. ೩-೨೧) ; ಎಲೆಯಪ್ಪರೇ ನಿಮ್ಮ ನಾಮಮಂ ಪೇಳಿಯೆನೆ (ಸಂಬಿಪ. ೭-೪೫); ನಾರಾಯಣ ನಿನ್ನ ನಾಮದ ಸ್ಮರಣೆಯ ಸಾರಾಮೃತವೆನ್ನ ಬಾಯಿಗೆ ಬರಲಿ (ಪುರಂದ.೨-೧೪೮ ಪಲ್ಲವಿ); ಭರತಂಗೆ ಛಾಯಾಶರೀರವೆನೆ ಶತ್ರುಘ್ನನಿರ್ದನು ತನ್ನ ನಾಮಲಕ್ಷ್ಯಕೆ ಲಕ್ಷಣಂ ತಾನೆನಲ್ (ಕ್ರೀರಾಮಾ. ೨೬-೬೯೯) ; ಲೋಕದಲ್ಲಿ ಸಕಲ ವಸ್ತುಗಳಲ್ಲೂ ಅಸ್ತಿತ್ವ, ಪ್ರಕಾಶ, ಇಷ್ಟತ್ವ, ನಾಮ, ರೂಪ—ಈ ಐದು ಅಂಶಗಳು ವ್ಯವಹರಿಸಲ್ಪಡುವುವು (ಹಿಂದುಸಾ. ೨೨೫). ೨. ಗಂಧ, ಗೋಪೀಚಂದನ ಮೊದಲಾದುವುಗಳಿಂದ ಹಣೆ ಮೊದಲಾದ ಕಡೆಗಳಲ್ಲಿ ಧರಿಸುವ ಲಾಂಛನ.—ಗುರುತು : ಮುಖವ ತೊಳೆದು ನಾಮವನಿಟ್ಟುದಲ್ಲದೆ ಪ್ರಕಟಶಾಸ್ತ್ರವ ನಾನು ನೋಡಿದೆನೆ (ಪುರಂದ. ೧-೨೨೧-೧) ; ನೇಮವಿದ್ದವನಿಗೆ ಕಾಮವು ಕಡಿಮೆಯೆ ನಾಮವಿದ್ದವರೆಲ್ಲ ಮಡಿಯೆ (ಇಂಚಾಪ. ೯೫-೬೧) ; ತಲೆಯ ಮೇಲೆ ಜುಟ್ಟು ಹಣೆಯ ಮೇಲೆ ನಾಮ, ಇವನ್ನಿಟ್ಟುಕೊಂಡೇ ಅಪೂರ್ವ . . . ಎಂ. ಎಸ್ಸಿ. ಪಾಸು ಮಾಡಿದ (ಭಾರತಿ. ೧) ; ಈ ಗುಣಗಳನ್ನು ಅಳವಡಿಸಿಕೊಳ್ಳುವುದೇ ನಿಜವಾದ ಧರ್ಮ, ಇದಿಲ್ಲದೆ ನಾಮ, ಮುದ್ರೆ, ಲಿಂಗ, ಜನಿವಾರ, ಗಡ್ಡಗಳೆಲ್ಲವೂ ಡಂಭಾಚಾರ (ಯಕ್ಷಪ್ರ. ೧೬೨). ೩. ಪುಂಡ್ರಧಾರಣೆಗೆ ಉಪಯೋಗಿಸುವ ಗೋಪೀಚಂದನ; ತಿರುಮಣ್ಣು : ಇಪ್ಪತ್ತೈದು ಪೈಸೆಗೆ ನಾಮ ಕೊಡಿ (ರೂಢಿ). ೪. =ನಾಮಕಲ್ಪನೆ : ವಿಕಲ್ಪಗಳು ಐದು—ಜಾತಿ, ಗುಣ, ಕ್ರಿಯೆ, ನಾಮ ಮತ್ತು ದ್ರವ್ಯ ಎಂದು (ಭಾತತ್ತ್ವ. ೨೨೫). ೫. [ವ್ಯಾಕ] ಒಂದು ಪದಾರ್ಥವನ್ನು ತಿಳಿಸುವ ಪದ; ಕ್ರಿಯಾಪದ ಮತ್ತು ಅವ್ಯಯಗಳನ್ನು ಬಿಟ್ಟು ಉಳಿದ ಪದ : ತರದಿಂದಂ ಸಂಧಿನಾಮಸ್ಥಿತಿವಿಹಿತಸಮಾಸಕ್ರಮಂ (ಕಾವ್ಯಾಲ. ೫) ; ಕ್ರಮದಿಂದೆ ಸಂಧಿನಾಮಂ ಸಮಾಸಮಾ ತದ್ಧಿತಂ . . . ಸಂಧಿ ಶಬ್ದಮಣಿದರ್ಪಣದೊಳ್ (ಶಮದ. ೧). ೬. ನಾಲ್ಕು ಬಗೆಯ ಲಿಂಗಗಳಲ್ಲಿ ಒಂದು; ಅಸಾಧಿತವಾದ ನಾಮಪದ; ಮೂಲನಾಮಪದ : ಕ್ರಿಯೆಯಂ ನುಡಿಯದದು ವಿಭಕ್ತಿಯನಿಲ್ಲದುದರ್ಥಮುಳ್ಳದಂತದು ಲಿಂಗಂ ನಿಯತ ಚತುರ್ಭೇದಮುದಾರಯೆ ಕೃತ್ತದ್ಧಿತಸಮಾಸನಾಮಸ್ಥಿತಿಯಿಂ (ಶಮದ.೭೨). ೭. (ಆಲಂ) ಮೋಸ; ವಂಚನೆ: 'ಪಂಗನಾಮ' ಪರಾ.

ನಾಮದ ಉಂಡೆ=ನಾಮದ ಗೆಡ್ಡೆ : ನಾಮದ ಉಂಡೆ ತೀರಿದೆ, ತರಿಸು (ರೂಢಿ). **ನಾಮದ ಕೋಳಿ** = ಹಣೆಯ ಮೇಲೆ ನಾಮದಂತೆ ಪಟ್ಟೆಗಳುಳ್ಳ, ಕೋಳಿಯ ಜಾತಿಗೆ ಸೇರಿದ, ಒಂದು ಬಗೆಯ ಪಕ್ಷಿ : ಕೊಕ್ಕರೆ, ನಾಮದ ಕೋಳಿ . . . ಬೇರೆ ಬೇರೆ ಗಾತ್ರದ ೧೧ ಕುಟುಂಬಗಳುಳ್ಳ ಉಪವರ್ಗವಿದು (ಪಕ್ಷಿ. ೧೩೫). **ನಾಮದ ಗೆಡ್ಡೆ**=ನಾಮ ಹಾಕಿಕೊಳ್ಳಲು ಬಳಸುವ ಬಿಳಿಯ ಮಣ್ಣಿನ ಉಂಡೆ : ಕೋಡಿದಾರರು, ಓಲೆಗರಿ ಪುಸ್ತಕಗಳೂ ತಿರುಪಕೂಡೆಗಳೂ ನಾಮದ ಗೆಡ್ಡೆಗಳೂ ತುಂಬಿದ್ದ ಒಂದು ಕೊಡಿಯನ್ನು ಧೂಳು ಹೊಡೆಸಿ ಅವರಿಗಾಗಿ ಸಿದ್ಧಮಾಡಿದ್ದರು (ಬೈಸರ್ವೆ. ೨೦). **ನಾಮ ಹಾಕು**=೧. ಹಣೆ ಮೊದಲಾದ ಸ್ಥಾನಗಳಲ್ಲಿ ನಾಮವನ್ನು ಧರಿಸು. ೨. ಮೋಸ ಮಾಡು : ಎರಡು ವರ್ಷಗಳಿಂದ ನನ್ನ ಅಂಗಡಿಯಲ್ಲಿ ಉದ್ದರಿ ತೆಗೆದುಕೊಂಡು ಕೊನೆಗೆ ಆತ ನನಗೆ ನಾಮ ಹಾಕಿ ಓಡಿಹೋದ (ರೂಢಿ). [ಸಂ. ನಾಮನ್]

ನಾಮಂಜೂರ್ (ನಾ). ಅಸ್ವೀಕೃತವಾದುದು ; ನಿರಾಕರಿಸಿದುದು: ರಜೆ ನಾಮಂಜೂರ್ ಆಯಿತು (ಜೀದಾನ. ೧೧) ; ಆ ಸಾಹೇಬನು . . . ರಜೆ ನಾಮಂಜೂರ್ ಮಾಡಿದನು (ಇಪ್ಪತ್ತ. ೬೩).

[←ಪಾರ. ನಾಮಂಜೂರ್]

ನಾಮಂಜೂರಿ (ನಾ). ಅಸ್ವೀಕಾರ ; ನಿರಾಕರಣೆ : ರಜೆಯು ನಾಮಂಜೂರಿಯಾಗುವ ಬಗ್ಗೆ ನನಗೆ ಅಂಜಿಕೆಯೂ ಇರಲಿಲ್ಲ (ಹೇಮಂತ. ೨೭೬). [←ಹಿಂ. ನಾಮಂಜೂರೀ]

ನಾಮಕರಣ (ನಾ) ೧. ಹೆಸರಿಡುವುದು: ದೇಶಿಯರು ತಮ್ಮ ನಾಡಿಗೆ 'ಕರುನಾಡು' ಎಂಬ ನಾಮಕರಣವನ್ನು ಮಾಡಿ (ದ್ರಾವಿವಿ.೮೯). ೨. ಹುಟ್ಟಿದ ಮಗುವಿಗೆ ಹೆಸರಿಡುವ ಒಂದು ಸಾಂಪ್ರದಾಯಿಕ ವಿಧಿ: ಪ್ರಕಟಮುಮಪ್ಪಂತಿರೆ ಜಾತಕರ್ಮದೊಸಗೆಯುಮನೊಸೆದು ಮಾಡಿಸೆ ಬಬಿಕರ್ಭಕಜಿನಶೀತಾಂಶುಗೆ ನಾಮಕರಣದುತ್ಸವದೊಳುತ್ಸವಂಬೆರಸಾಗಳ್ (ಶಾಂತಿಪು. ೧೦-೭೭) ; ದ್ವಾದಶದಿನಕ್ಕೆ ನಾಮಕರಣೋತ್ಸವಮಂ ಮಾಡಲೆಂದು ಗಾರ್ಗ್ಯನೆಂಬ ಪುರೋಹಿತಂ ತಿರೋಹಿತವೇಷನಾಗಿ ಬಂದು . . . ತನಯರ್ಗೆ ರಾಮಕೃಷ್ಣರೆಂಬ ನಾಮಕರಣಂ ಮೊದಲಾಗೆ ಪಲವುಮನ್ವರ್ಥನಾಮಮನಿಟ್ಟು (ಜಗವಿ. ೩-೨೬ ವ) ; ಗರ್ಭಾಧಾನ ಪುಂಸವನ ಸೀಮಂತ ಉನ್ನಯನ ಜಾತಕರ್ಮ ನಾಮಕರಣ ಉಪನಿಷ್ಕ್ರಮಣ ಅನ್ನಪ್ರಾಶನ ಚೌಲ ಉಪನಯನ ಮಹಾನಾಮ್ನಿ ಮಹಾವ್ರತ ಉಪನಿಷತ್ತು ಶೋಭನ ಉದ್ವಾಹನ ಮೃತಿಗಳೆಂಬ ಷೋಡಶಕರ್ಮಂಗಳೊಡನೆಯುಂ (ವಿವೇಕ. ೬) ; ನಾಮಕರಣವನೆಂತು ಮಾಳ್ಪೆನನಾಮರೂಪಕ್ರಿಯೆಗೆ (ನಿಭಾಗ. ೧೦-೭-೩೮) ; ಜನನವಾದ ಹನ್ನೊಂದನೆಯ ದಿವಸ ನಾಮಕರಣವನ್ನು ಮಾಡುವುದು (ಅರ್ಥಧ. ೧೨೩). 'ಷೋಡಶಸಂಸ್ಕಾರ' ಪರಾ. ೩. ವಿಧಾನಸಭೆ ಮೊದಲಾದ ಸಂಸ್ಥೆಗಳಿಗೆ ಸದಸ್ಯರನ್ನು ನೇಮಕ ಮಾಡುವುದು,—ಚುನಾವಣೆ ನಡೆಸದೆ ನೇರವಾಗಿ ನೇಮಿಸುವುದು. ೪. ಚುನಾವಣೆಗಾಗಿ ಒಬ್ಬನ ಹೆಸರನ್ನು ಸೂಚಿಸುವುದು.

ನಾಮಕರಣ ಮಾಡು=೧. (ಹುಟ್ಟಿದ ಮಗುವಿಗೆ) ನಾಮಕರಣವೆಂಬ ಸಂಸ್ಕಾರವನ್ನು ನೆರವೇರಿಸು ; ಹೆಸರಿಡು : ನನ್ನ ಕಿರಿಹುಡುಗನ ನಾಮಕರಣ ಮಾಡುವಾಗ ಸ್ವಾಮಿಗಳನ್ನು ಕರೆಸಿದ್ದೆ (ರೂಢಿ). ೨. ಸಂಘ ಸಂಸ್ಥೆಗಳಿಗೆ ಸದಸ್ಯರನ್ನು ನೇಮಕಮಾಡು. ೩. "ಒಂದು ಅಧಿಕಾರಕ್ಕೆ ಚುನಾವಣೆಗೆ ಹೆಸರು ಸೂಚಿಸು ; ನಾಮಕರಣ ಮಾಡು" (Nominate. ಪತ್ರಿನಿ. ೫೭).

[ನಾಮ + ಕರಣ]

ನಾಮಕರಣಂಗೆಯ್, ನಾಮಕರಣಂಗೈ (ಕ್ರಿ). (ಹುಟ್ಟಿದ ಮಗುವಿಗೆ) ನಾಮಕರಣವನ್ನು ಮಾಡು; ಹೆಸರಿಡು : ಇಂತೊಪ್ಪುವ ಕುಮಾರನುದಯೋತ್ಸವದಿಂ ದೇವಮಾನ್ಯಾದಿಗಳಂ ಕೊಟ್ಟು ನಾಮಕರಣಂಗೆಯ್ದು (ಹಮ್ಮೀರ. ೨-೨೫ ಪ). **ನಾಮಕರಣಂಗೈ** : ಚಂದ್ರಹಾಸನೆಂದಿಳೆಯೊಳೀತಂಗೆ ಪೆಸರಾಗಲೆಂದುಚ್ಚರಿಸಿ ನಾಮಕರಣಂಗೈದರು (ಜೈಮಿಭಾ. ೨೮-೬೦).

[ನಾಮಕರಣ + ಕೆಯ್$_1$]

ನಾಮಕರಣಂಗೈ 'ನಾಮಕರಣಂಗೆಯರ್' ನೋ.

ನಾಮಕರಣಪತ್ರ (ನಾ). ಸಂಘ, ಸಂಸ್ಥೆಗಳ ಸದಸ್ಯತ್ವಕ್ಕೆ ಉಮೇದುವಾರರ ಹೆಸರುಗಳನ್ನು ಸೂಚಿಸುವ ಪತ್ರ : "ಹೆಸರು ಸೂಚನೆಯ ಪತ್ರ ; ನಾಮಕರಣಪತ್ರ ; ಉಮೇದುವಾರಿಕೆಯ ಅರ್ಜಿ" (Nomination Paper. ಪತ್ರಿ. ೫೭). [ನಾಮಕರಣ + ಪತ್ರ]

ನಾಮಕರ್ಮ (ನಾ). ೧. = ನಾಮಕರಣ ೨ : ನಾಮಕರ್ಮ ಬಹಿರ್ಯಾನ ನಿಷದ್ಯಾನ್ನಪ್ರಾಶನ ವ್ಯುಷ್ಟಿ ಕೇಶವಾಪ . . . ಎಂಬ ಯ್ತತ್ತು ಮೂಱು ಗರ್ಭಾದಿ ನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯ ಕ್ರಿಯೆಗಳುಂ (ಆದಿಪು. ೧೫-೧೫ ಪ); ಜಿನಂಗೆಸಗುದಂತಾ ನಾಮ ಕರ್ಮೋತ್ಸವಂ (ಶಾಂತಿಪು. ೧೦-೭೪); ನಾಮಕರ್ಮಮುಂ ಬಹಿರ್ಯಾನಮುಂ...ನಿರ್ವಾಣಪರ್ಯಂತಮಪ್ಪಯ್ತತ್ತು ಮೂಱು ಗರ್ಭಾನ್ವಯ ಕ್ರಿಯೆಯೊಳ್ (ಜಾವುಂಪು. ೨೧೨). 'ದೀಕ್ಷೆ' ಪರಾ. ೨. [ಜೈನ] ನಾಲ್ಕುವಿಧವಾದ ಅಘಾತಿಕರ್ಮಗಳಲ್ಲಿ ಒಂದು; ಆತ್ಮನಿಗೆ ಅನೇಕ ಪ್ರಕಾರವಾದ ಶರೀರ, ಅವಯವ, ರೂಪುಗಳನ್ನು ಉಂಟುಮಾಡುವ ಹಾಗೂ ತೊಂಬತ್ತುಮೂರು ಪ್ರಕೃತಿಗಳನ್ನು ಹೊಂದಿರುವ ಕರ್ಮ : ನಾಮಕರ್ಮಮುಂ ಪಿಂಡಾಪಿಂಡನಾಮದಿಂ ತೊಂಬತ್ತು ಮೂಱು ತೆರನಕ್ಕುಂ (ಶಾಂತಿಪು. ೧೨-೧೧ ಪ); ಜೀವ ವಿಪಾಕಿಯುಂ ಪುದ್ಗಲವಿಪಾಕಿಯುಂ ಕ್ಷೇತ್ರವಿಪಾಕಿಯುಮೆಂದಿಂತು ನಾಮಕರ್ಮಂ ತ್ರಿವಿಧಮಕ್ಕುಂ (ಗೊಮ್ಮಸಾ. ೫-೭).

[ನಾಮ + ಕರ್ಮ]

ನಾಮಕರ್ಮ ಪ್ರಕೃತಿ (ನಾ). = ನಾಮಕರ್ಮ ೨ : ಸತ್ಕಥನಮಲ್ಲದುಳಿದ ಬಂಧದೊಳಂ ಚತ್ವಾರಿ ನಾಲ್ಕು ನಾಮಕರ್ಮ ಪ್ರಕೃತಿಗಳಪ್ಪುವು (ಗೊಮ್ಮಸಾ. ೬-೧೦). 'ದೀಕ್ಷೆ' ಪರಾ. ೧ ಇದು ಜೀವನಿಗೆ ಅನೇಕ ಪ್ರಕಾರವಾದ ಶರೀರ, ಅವಯವ, ರೂಪಗಳನ್ನುಂಟುಮಾಡುತ್ತದೆ. ಆತ್ಮನಿಗೆ ನಾರಕ ಮೊದಲಾದ ರೂಪವನ್ನು ನಾಮಕರಣ ಮಾಡುವುದರಿಂದ ಈ ಹೆಸರು ಅನ್ವರ್ಥವಾಗಿದೆ. ಇದು ಜೀವನ ಶುದ್ಧಸ್ವಭಾವವನ್ನು ಆಚ್ಛಾದಿಸಿ ಅವನಿಗೆ ಮನುಷ್ಯ, ತಿರ್ಯಕ್, ನಾರಕ, ದೇವ ಮೊದಲಾದ ರೂಪಗಳನ್ನುಂಟುಮಾಡುತ್ತದೆ. ನಾನಾ ಬಗೆಯಾದ ರಚನೆಯನ್ನುಂಟುಮಾಡುತ್ತದೆ. ಇದು ಮೂಲತಃ ೪೨ ಭೇದಗಳನ್ನು ಹೊಂದಿದೆ. ಉಪಾಂಗಗಳು (ಉತ್ತರ ಭೇದಗಳು) ಸೇರಿ ಒಟ್ಟು ೯೩ ಆಗುತ್ತವೆ. ಅವು ಯಾವುದೆಂದರೆ : ೧. ನರಕಗತಿ, ೨. ತಿರ್ಯಗ್ಗತಿ, ೩. ಮನುಷ್ಯಗತಿ, ೪. ದೇವಗತಿ, ೫. ಏಕೇಂದ್ರಿಯಜಾತಿ, ೬. ದ್ವೀಂದ್ರಿಯಜಾತಿ, ೭. ತ್ರೀಂದ್ರಿಯ ಜಾತಿ, ೮. ಚತುರಿಂದ್ರಿಯಜಾತಿ, ೯. ಪಂಚೇಂದ್ರಿಯಜಾತಿ, ೧೦. ಔದಾರಿಕಶರೀರ, ೧೧. ವೈಕ್ರಿಯಿಕಶರೀರ, ೧೨. ಆಹಾರಕಶರೀರ, ೧೩. ತೈಜಸಶರೀರ, ೧೪. ಕಾರ್ಮಣಶರೀರ, ೧೫. ಔದಾರಿಕಶರೀರ ಬಂಧನ, ೧೬. ವೈಕ್ರಿಯಿಕಶರೀರ ಬಂಧನ, ೧೭. ಆಹಾರಕಶರೀರಬಂಧನ, ೧೮. ತೈಜಸ ಶರೀರಬಂಧನ, ೧೯. ಕಾರ್ಮಣಶರೀರಬಂಧನ, ೨೦. ಔದಾರಿಕ ಶರೀರಸಂಘಾತ, ೨೧. ವೈಕ್ರಿಯಿಕಶರೀರಸಂಘಾತ, ೨೨. ಆಹಾರಕಶರೀರಸಂಘಾತ, ೨೩. ತೈಜಸಶರೀರಸಂಘಾತ, ೨೪. ಕಾರ್ಮಣಶರೀರಸಂಘಾತ, ೨೫. ಸಮಚತುರಸ್ರ ಸಂಸ್ಥಾನ, ೨೬. ನ್ಯಗ್ರೋಧಪರಿಮಂಡಲಸಂಸ್ಥಾನ, ೨೭. ಸ್ವಾತಿಸಂಸ್ಥಾನ, ೨೮. ಕುಬ್ಜಕಸಂಸ್ಥಾನ, ೨೯. ವಾಮನಸಂಸ್ಥಾನ, ೩೦. ಹುಂಡಕ ಸಂಸ್ಥಾನ, ೩೧. ಔದಾರಿಕಾಂಗೋಪಾಂಗ, ೩೨. ವೈಕ್ರಿಯಿಕಾಂಗೋಪಾಂಗ, ೩೩. ಆಹಾರಕಾಂಗೋಪಾಂಗ, ೩೪. ವಜ್ರರ್ಷಭನಾರಾಚ ಶರೀರಸಂಹನನ, ೩೫. ವಜ್ರನಾರಾಚ ಶರೀರಸಂಹನನ, ೩೬. ನಾರಾಚಶರೀರಸಂಹನನ, ೩೭. ಅರ್ಧ ನಾರಾಚಶರೀರಸಂಹನನ, ೩೮. ಕೀಲಕಶರೀರಸಂಹನನ, ೩೯. ಅಸಂಪ್ರಾಪ್ತಾಸೃಪಾಟಿಕಾಶರೀರಸಂಹನನ, ೪೦. ಶುಕ್ಲವರ್ಣ, ೪೧. ಪೀತವರ್ಣ, ೪೨. ನೀಲವರ್ಣ, ೪೩. ರಕ್ತವರ್ಣ, ೪೪. ಕೃಷ್ಣವರ್ಣ, ೪೫. ಸುಗಂಧ, ೪೬. ದುರ್ಗಂಧ, ೪೭. ಮಧುರ ರಸ, ೪೮. ಆಮ್ಲರಸ, ೪೯. ತಿಕ್ತರಸ, ೫೦. ಕಟುರಸ, ೫೧. ಲವಣರಸ, ೫೨. ಕರ್ಕಶಸ್ಪರ್ಶ, ೫೩. ಕೋಮಲಸ್ಪರ್ಶ, ೫೪. ಶೀತಸ್ಪರ್ಶ, ೫೫. ಉಷ್ಣಸ್ಪರ್ಶ, ೫೬. ಸ್ನಿಗ್ಧಸ್ಪರ್ಶ, ೫೭. ರೂಕ್ಷಸ್ಪರ್ಶ, ೫೮. ಲಘುಸ್ಪರ್ಶ, ೫೯. ಗುರುಸ್ಪರ್ಶ, ೬೦. ನರಕಗತ್ಯಾನುಪೂರ್ವೀ, ೬೧. ತಿರ್ಯಗ್ಗತ್ಯಾನುಪೂರ್ವೀ, ೬೨. ಮನುಷ್ಯಗತ್ಯಾನುಪೂರ್ವೀ, ೬೩. ದೇವಗತ್ಯಾನುಪೂರ್ವೀ, ೬೪. ಪ್ರಶಸ್ತವಿಹಾಯೋಗತಿ, ೬೫. ಅಪ್ರಶಸ್ತವಿಹಾಯೋಗತಿ, ೬೬. ಅಗುರುಲಘು, ೬೭. ಉಪಘಾತ, ೬೮. ಪರಘಾತ, ೬೯. ಉಚ್ಛ್ವಾಸ, ೭೦. ಆತಪ, ೭೧. ಉದ್ಯೋತ, ೭೨. ತ್ರಸ, ೭೩. ಸ್ಥಾವರ, ೭೪. ಬಾದರ, ೭೫. ಸೂಕ್ಷ್ಮ, ೭೬. ಪರ್ಯಾಪ್ತಿ, ೭೭. ಅಪರ್ಯಾಪ್ತಿ, ೭೮. ಪ್ರತ್ಯೇಕಶರೀರ, ೭೯. ಸಾಧಾರಣ ಶರೀರ, ೮೦. ಸ್ಥಿರ, ೮೧. ಅಸ್ಥಿರ, ೮೨. ಶುಭ, ೮೩. ಅಶುಭ, ೮೪. ಸುಭಗ, ೮೫. ದುರ್ಭಗ, ೮೬. ಸುಸ್ವರ, ೮೭. ದುಃಸ್ವರ, ೮೮. ಆದೇಯ, ೮೯. ಅನಾದೇಯ, ೯೦. ಯಶಃಕೀರ್ತಿ, ೯೧. ಅಯಶಃಕೀರ್ತಿ, ೯೨. ನಿರ್ಮಾಣ, ೯೩. ತೀರ್ಥಕರ.

[ನಾಮಕರ್ಮ + ಪ್ರಕೃತಿ]

ನಾಮಕಲ್ಪನೆ (ನಾ.) [ಬೌದ್ಧ] ಪ್ರತ್ಯಕ್ಷಕ್ಕೆ ವಿರೋಧಿಯಾದ ಜಾತಿ, ಗುಣ, ಕ್ರಿಯೆ, ನಾಮ ಮತ್ತು ದ್ರವ್ಯ ಎಂಬ ಐದು ಬಗೆಯ ಕಲ್ಪನೆ ಅಥವಾ ವಿಕಲ್ಪಗಳಲ್ಲಿ ಒಂದು : ವಿಕಲ್ಪಗಳು ಅಥವಾ ಕಲ್ಪನೆಗಳು ಐದು ವಿಧ—ಜಾತಿಕಲ್ಪನೆ, ಗುಣಕಲ್ಪನೆ, ಕ್ರಿಯಾಕಲ್ಪನೆ, ನಾಮಕಲ್ಪನೆ ಮತ್ತು ದ್ರವ್ಯಕಲ್ಪನೆ ಎಂದು . . . ಶಬ್ದಾರ್ಥಗಳು ವಸ್ತುಸ್ಥಿತಿಯಲ್ಲಿ ಭಿನ್ನವಾದುವುಗಳು ; ನಾಮ ಕಲ್ಪನೆಯು ಇವುಗಳಿಗೆ ಅಭೇದವನ್ನು ಕಲ್ಪನೆ ಮಾಡುವುದು (ಭಾತಕ್ಕ. ೨೬೬). 'ದ್ರವ್ಯಕಲ್ಪನೆ' ಪರಾ. [ನಾಮ + ಕಲ್ಪನೆ]

ನಾಮಕಾಣಿಕೆ (ನಾ). ಶ್ರೀ ವೈಷ್ಣವ ಸಂಪ್ರದಾಯದ ಗುರುಗಳು ತಮ್ಮ ಶಿಷ್ಯರಿಗೆ ಪುಂಡ್ರಧಾರಣೆ ಮಾಡಿಸುವಾಗ ಶಿಷ್ಯರು ಅವರಿಗೆ ಸಲ್ಲಿಸುವ ಕಾಣಿಕೆ : ಈ ವೃತ್ತಿಗೆ ಸಲ್ಲುವ ಗದ್ದೆ ಬೆದ್ದಲು ಕೋಟಕುದಿಕೆ . . . ಏರುಕಾಣಿಕೆ ನಾಮಕಾಣಿಕೆ ಗುರುಕಾಣಿಕೆ (ಹುಬ್ಬಪ. ೩). [ನಾಮ + ಕಾಣಿಕೆ(<ಕಾಣ್ಕೆ)]

ನಾಮಕಾವಾಸ್ತೆ 'ನಾಮಕೇವಾಸ್ತೆ' ನೋ.

ನಾಮಕೀರ್ತನ (ನಾ). ದೇವರ ಹೆಸರನ್ನು ಭಕ್ತಿಯಿಂದ ಉಚ್ಚರಿಸುವುದು,—ಭಜಿಸುವುದು ; ಭಜನೆ : ಕುಲಜನಾಗಲಕುಲಜನಾಗಲಿ ಜಲರುಹಾಕ್ಷನ ನಾಮಕೀರ್ತನದೊಳಗೆ ಬದುಕುವನಾದನಾತನೆ ಸುಕೃತಿಯೆಂಬವನು (ಕುವ್ಯಾಭು. ೩-೧೨೩). [ನಾಮ + ಕೀರ್ತನ]

ನಾಮಕೀರ್ತನೆ (ನಾ). = ನಾಮಕೀರ್ತನ: ನಾಮಕೀರ್ತನೆ ಅನುದಿನ ಮಾಳ್ಪಗೆ ನರಕಭಯಗಳುಂಟೆ (ಪುರಂದ. ೨-೧೦೬ ಪಲ್ಲವಿ); ಪ್ರಯಾಣಿಕರು ಪೀರರ ನಾಮಕೀರ್ತನೆಯನ್ನು ಕೇಳಿ . . . ಏನಾಯಿತು ಎಂದು ಎಲ್ಲರೂ ಒಟ್ಟಾಗಿ ಕೇಳಲಾರಂಭಿಸಿದರು (ಕಪಾಕುಂ. ೪).

[ನಾಮ + ಕೀರ್ತನೆ]

ನಾಮಕೇವಾಸ್ತೆ, ನಾಮಕಾವಾಸ್ತೆ (ಅ). ಹೆಸರಿಗೆ ಮಾತ್ರ : ಶ್ಯಾಮರಾಯನ ಕೈಯಾಗ ಏನ ಭಗರಿ ಅದ ಅಂತ ಮಾಡೀರಿ? ಅಂವಾ ನಾಮಕೇವಾಸ್ತೇ ತಂದಿ ಏನ್ರೈವಾ ? (ದೀಪಹ. II, ೩೬೭). **ನಾಮಕಾವಾಸ್ತೆ** : ಮನೆಯಲ್ಲಿ ಆತ ನಾಮಕಾವಾಸ್ತೆ ಯಜಮಾನ. ಆದರೆ ಆಡಳಿತವೆಲ್ಲಾ ಆತನ ಹೆಂಡತಿಯದೇ (ರೂಢಿ).

[ℙ ಹಿಂದಿಯಲ್ಲಿ ಇದು ಒಂದು ಪದವಲ್ಲ]

ನಾಮಗ್ರಹ (ನಾ). ಹೆಸರನ್ನು ಕರೆಯುವುದು ; ಹೆಸರನ್ನು ಹೇಳುವುದು : ಬಂದು ನಿಂದನಿತಱೊಳ್ ನಾಮಗ್ರಹಂ ಮಾಡಿ. . . ಕಾರ್ಯಮಂ ನುಡಿದೆ ನಿನ್ನಿಂ ಬಿಟ್ಟು ದೈವಜ್ಞನಾವನುಮಿಲ್ಲಾಂ ಕೃತಕೃತ್ಯನಾದೆಂ (ಸುಕುಮಾ. ೩-೧೩). [ನಾಮ + ಗ್ರಹ]

ನಾಮಗ್ರಹಣ (ನಾ). = ನಾಮಗ್ರಹ : ಪಲಂಬರು ಶಿವಬ್ರಾಹ್ಮ[ಣ]ರ ಪೆಸರ್ಗೊಂಡೊಡೆ ಕೇಳದಂತಿರ್ಪ ಪರವೆಯರು ನಿಮ್ಮಡಿಗಳ ನಾಮಗ್ರಹಣಂಗೊಳಲೊಡನಂತಂತೆ ಪುಳಕಿಸುತೆ ತಲೆವಾಗಿ ಲಜ್ಜಿತೆಯಾಗಿರಲ್ (ನಂಬಿರ. ೧೦-೧೯). [ನಾಮ + ಗ್ರಹಣ]

ನಾಮದ ಬೇರು (ನಾ). ಸುರುಳಿಸುರುಳಿಯಾಗಿ ಸುತ್ತಿಕೊಂಡು ಬೆಳೆಯುವ ಒಂದು ಬಗೆಯ ಪೊದರುಗಿಡ; "ಶಾರಿವ, ಶ್ಯಾಮ" (ಪಂಡಿತ. ೨೫೫). [<ನಾಮ + ಬೇರು(<ಬೇರ್)]

ನಾಮದ ಸೊಪ್ಪು (ನಾ). ಒಂದು ಬಗೆಯ ಸೊಪ್ಪಿನ ಗಿಡ : (ಮೈಔಗಿ. ೫-೯೦). [<ನಾಮ + ಸೊಪ್ಪು$_2$]

ನಾಮದಾರ(ಗು). ೧. ಹೆಸರಾಂತ; ಕೀರ್ತಿ ಪಡೆದ; ಪ್ರಸಿದ್ಧವಾದ; ಸನ್ಮಾನ್ಯ : ನನ್ನ ೧೮೫೮ನೇ ಇಸವಿವರೆಗೆ ಹಿಂದುಸ್ತಾನದ ರಾಜ್ಯಕಾರಭಾರವನ್ನು ನಾಮದಾರ ಈಸ್ಟ ಇಂಡಿಯ ಕಂಪನಿಯವರು ಇಂಗ್ಲೆಂಡದ ಸರಕಾರದವರ ಅಪ್ಪಣೆಯಿಂದ ಸಾಗಿಸಿದರು (ಮುಂಬಯಿ. ೪-೧೧೨). (ನಾ). ೨. ಹೆಸರಿನ ಹಿಂದೆ ಸೇರಿಸುವ ಗೌರವಸೂಚಕವಾದ ಒಂದು ಉಪಪದ : ಇಂಥ ದಾರ್ಶನಿಕ ಮಹಾಕಾವ್ಯಕ್ಕೆ "ಮುರಿದ ರೆಕ್ಕೆ" (Broken wing) ಎಂಬ ಹೆಸರೇಕೆ . . . ಎಂಬ ಪ್ರಶ್ನೆಯನ್ನು ನಾಮದಾರ ಗೋಖಲೆಯವರೇ ಎತ್ತಿದ್ದರು (ಪ್ರಬಂಧ. ೮೯).

[←ಪಾರ.ಹಿಂ.ಮರಾ. ನಾಮದಾರ್]

ನಾಮದೇಶಿ (ನಾ). [ಸಂಗೀತ] ಒಂದು ರಾಗದ ಹೆಸರು : ನಾಮದೇಶಿ - ಸಂಪೂರ್ಣ ರಾಗ, ಷಡ್ಜಗ್ರಹವನ್ನು ಕೂಡಿಕೊಂಡಿದೆ (ಚತುಪ್ರ. ೧೪೩). [ಸಂ. ನಾಮದೇಶೀ]

ನಾಮಧಾರಕ (ಗು). ೧. ಹೆಸರನ್ನು ಮಾತ್ರ ಹೊಂದಿರುವ ; ನಿಜವಾದ ಯೋಗ್ಯತೆಯಿಲ್ಲದಿದ್ದರೂ ಶೂರ, ಪಂಡಿತ ಮೊದಲಾದ ಬಿರುದುಗಳನ್ನು ಹೊಂದಿರುವ : ಕವಿಗಳ ನಾಮಧಾರಕ ನರಾಧಿಪರೋಳಿಯೊಳೀತನೊಳ್ಳಿದಂ (ಪಂಪಭಾ. ೧-೧೦). (ನಾ). ೨. ಅರ್ಹತೆಯಿಲ್ಲದಿದ್ದರೂ ಅದನ್ನು ತಿಳಿಸುವ ಹೆಸರನ್ನು ಇಟ್ಟುಕೊಂಡಿರುವವನು : ವ್ರತಸಂಸ್ಕಾರದಿನಾದರ್ ವಿತತಗುಣರ್ ಬ್ರಾಹ್ಮಣರ್ ಕ್ರಿಯಾಸಂತತಿಸಂಯುತರುಚಿತಸತ್ಕ್ರಿಯಾ ವಿರಹಿತನಾತಂ ನಾಮಧಾರಕಂ ದ್ವಿಜನಲ್ಲಂ (ಆದಿಪು. ೧೫-೧೫) ; ಇಱಿಯದೆ ಬೇಡಿದೊಡೀಯದೆ ಬಱಿದೆ ಕುಲೀನತೆಗೆ ಬೆಸೆದು ಪಾರ್ಥಿವ ಶಬ್ದಕ್ಕೆಱೆ ವಟ್ಟೆನಿಸಿ ಧರಿತ್ರಿಗೆ ಪೊಱೆಯೆನಿಪಂ ರಾಜನಾಮಧಾರಕನಲ್ತೆ (ಪಂರಾಮಾ. ೪-೪೧) ; ಏನಱಿಯಲ್ಕೆ ಯೋಗ್ಯನೇ ಚತುರಕವಿಪ್ರತಾನರಚಿತಾಧ್ವಕೃತಿಪ್ರತಿರೈಕಪಾತ್ರಸಂಸ್ಥಿತಗುಣದೋಷದುಗ್ಧಜಳಭೇದನಮಂ ಕವಿನಾಮಧಾರಕಂ (ಚಂದ್ರಪು. ೧-೩೮). [ನಾಮ + ಧಾರಕ]

ನಾಮಧಾರಿ (ನಾ). ೧. ಹೆಸರು ಪಡೆದವನು ; ಹೆಸರುವಾಸಿಯಾದವನು ; ಪ್ರಸಿದ್ಧನಾದವನು. ೨. ನಟನೆ ಮಾಡುವವನು; ಸೋಗುಗಾರ : ಅತ್ಯಾಶಿಗೆ ಬಕವ್ರತಿಗೆ ಗ್ರಾಮಣಿಗೆ ಪಾಪಂಡಗಾತ್ಮವಿರಾಮಕಾರಿಗೆ ಕೂಟಸಾಕ್ಷಿಗೆ ನಾಮಧಾರಿಗೆ ಪಾರ್ಥಕೇಳ್ ಪರಲೋಕವಿಲ್ಲೆಂದ (ಕುವ್ಯಾಅ. ೪-೨೬). ೩. ಭಗವಂತನ ನಾಮವನ್ನು ಯಾವಾಗಲೂ ಮನಸ್ಸಿನಲ್ಲಿ ಧರಿಸಿರುವವನು,—ಅನುಸಂಧಾನ ಮಾಡುವವನು ; ಭಕ್ತ : ದೇವನಾಮದ ಜೋಡು ನಮ್ಮನು ಕಾವುದೈ ನೀ ಮುನಿದಡೆಯು ನಿಮಗಾವು ಹೆದಱೆವು ನಾಮಧಾರಿಗಳತುಳಬಲರೆಂದ (ಕುವ್ಯಾಅ. ೬-೪೩) ; ಸ್ವಾಮಿ ಶ್ರೀಪುರಂದರವಿಟ್ಠಲರಾಯನ ನಾಮಧಾರಿಗಳಿಗೆ ನರಕವುಂಟೆ (ಪುರಂದ. ೩-೧೦೯-೩). ೪. ಶ್ರೀವೈಷ್ಣವ ಸಂಗಡಕ್ಕೆ ಹೆಗ್ಗುರುತಾದ ಮೂರು ನಾಮಗಳನ್ನು ಧರಿಸಿರುವವನು ; ತ್ರಿಪುಂಡ್ರಧಾರಿ. ೫. ಶ್ರೀರಾಮಾನುಜಾಚಾರ್ಯರ ಮತಾನುಯಾಯಿ; ಶ್ರೀವೈಷ್ಣವ. [ಸಂ. ನಾಮಧಾರಿನ್]

ನಾಮಧೇಯ (ನಾ). ೧. ನಾಮ ; ಹೆಸರು : ಭವಪರಿಣಾಮ ಪರಾವರ್ತನದಿಂ ಬಂದು ವಿಂಧ್ಯಾಟವೀಮಧ್ಯದೊಳ್ ಸೋಮನಾಮಧೇಯ ತಾಪಸಂಗಂ ಶ್ರೀದತ್ತೆಗಂ ಸೋಮಿಲನೆಂಬೊಂ ಮಗನಾಗಿ (ಶಾಂತಿಪು. ೯-೯೧ ವ) ; ಪರವಾದೀ[ಶರಭ]ಭೇರುಣ್ಡಾ ಪರನಾಮಧೇಯರಪ್ಪ ಶ್ರೀಮತ್ ಶ್ರೀನನ್ದಿಪಣ್ಡಿತದೇವರ್ಗ್ಗೆ (ಸೌಇಇ. XX, ೪೬-೨೭ ; 1072) ; ಶೃಂಗಿಬೇರಪುರ ನಾಮಧೇಯದ ಬೇಡರೂರಿಂ ಗರಸು ಗುಹಂ (ಶ್ರೀರಾಮಾ. ೯೭-೫೩೨). ೨. ಯಜ್ಞಯಾಗಗಳ ಹೆಸರನ್ನು ಹೇಳುವ ವೇದದ ಭಾಗ : ಮತ್ತಮಾ ವೇದಂಗಳಾದೊಡೆ ವಿಧಿವಾದ ಅರ್ಥವಾದ ಮಂತ್ರವಾದ ನಾಮಧೇಯಂಗಳೆಂಬ ನಾಲ್ಕುಭೇದದಿಂ ಸಮಸ್ತ ಧರ್ಮಂಗಳಂ ಬೋಧಿಪವು . . . ಜನನೀ ಜನಕರಂತೆ ಯಾಗಾದಿಗಳ್ಗೆ ಪೆಸರಂ ಪೇಳ್ವುದೇ ನಾಮಧೇಯಮಕ್ಕುಂ (ವಿವೇಕ. ೪) ; ವೈದಿಕಜ್ಞಾನವು ವಿಧಿ, ನಿಷೇಧ, ಮಂತ್ರ, ನಾಮಧೇಯ, ಅರ್ಥವಾದವೆಂದು ವಿಭಜಿತವಾಗಿದೆ (ಭಾರದ. ೧೨೯).

[ಸಂ.]

ನಾಮನಕ್ಷತ್ರ (ನಾ). [ಜ್ಯೋತಿ] ವ್ಯಕ್ತಿಯ ಹೆಸರಿನ ಮೊದಲನೆಯ ಅಕ್ಷರದಿಂದ ಗೊತ್ತುಮಾಡುವ ನಕ್ಷತ್ರ ; ℙ ಜನ್ಮನಕ್ಷತ್ರವು (ಅಂದರೆ ಒಬ್ಬನು ಹುಟ್ಟಿದ ನಕ್ಷತ್ರವು) ಗೊತ್ತಿಲ್ಲದಿದ್ದರೆ ಅವನ ಹೆಸರಿನ ಮೊದಲನೆಯ ಅಕ್ಷರದಿಂದ ನಕ್ಷತ್ರವನ್ನೂ ನಕ್ಷತ್ರಪಾದವನ್ನೂ ಗೊತ್ತುಪಡಿಸುತ್ತಾರೆ. ಚು, ಚೆ, ಚೊ, ಲ, ಈ ಅಕ್ಷರಗಳು ಕ್ರಮವಾಗಿ ಅಶ್ವಿನಿ ೧, ೨, ೩, ೪ನೆಯ ಪಾದ. ಹೀಗೆಯೇ ಎಲ್ಲಾ ಅಕ್ಷರಗಳಿಗೂ ನಕ್ಷತ್ರಗಳನ್ನು ಪಾದದೊಂದಿಗೆ ಹೇಳಿದ್ದಾರೆ : ಜಾತಕ ಇಲ್ಲದಿದ್ದರೆ ಹೆಸರು ಹೇಳಿ. ನಾಮನಕ್ಷತ್ರದಿಂದ ನೋಡಿ ಹೇಳುತ್ತೇನೆ (ರೂಢಿ).

[ನಾಮ + ನಕ್ಷತ್ರ$_1$]

ನಾಮನಿರ್ದೇಶ (ನಾ). ೧. ಹೆಸರನ್ನು ತಿಳಿಸುವುದು. ೨. = ನಾಮಕರಣ ೩ : ರಾಷ್ಟ್ರಪತಿಯವರು ನಾಮನಿರ್ದೇಶ ಮಾಡಿದ ಹನ್ನೆರಡು ಜನಗಳೂ . . . ಸದಸ್ಯರಾಗಿರತಕ್ಕುದು (ಭಾಧಾನ. ೩೯).

[ನಾಮ + ನಿರ್ದೇಶ]

ನಾಮನಿರ್ವಚನ (ನಾ). ಹೆಸರನ್ನು ಹೇಳುವುದು,—ಹೊಗಳುವುದು,—ಪ್ರಶಂಸಿಸುವುದು : ಬಸವನವತಾರ ಬಸವನ ನಾಮನಿರ್ವಚನವೆಸೆವ ಬಾಲ್ಯದ ಲೀಲೆ (ಲಶಿಚಂ. ೧-೧೩).

[ನಾಮ + ನಿರ್ವಚನ]

ನಾಮಪತ್ರ (ನಾ). ಚುನಾವಣೆಗೆ ನಿಲ್ಲಲು ಅಭ್ಯರ್ಥಿ ಸಲ್ಲಿಸುವ ಪತ್ರ : ಮುಕುಂದನ ನಾಮಪತ್ರ ಕೊಡಿಸಿದರು . . . ಚಂಚಲೆ ಹಿಂದು

ಮುಂದು ನೋಡಲಿಲ್ಲ. ತಾನೂ. ನಾಮಪತ್ರ ಸಲ್ಲಿಸಿದಳು (ಭೂಮಿತಾ. ೭೪) ; ಚುನಾವಣೆಗೆ ನಾಮಪತ್ರವನ್ನು ಸಲ್ಲಿಸಲು ಇಂದೇ ಕೊನೆಯ ದಿನ (ರೂಢಿ). [ನಾಮ + ಪತ್ರ]

ನಾಮಪದ (ನಾ). [ವ್ಯಾಕ] ವಸ್ತು, ವ್ಯಕ್ತಿ, ಸ್ಥಳ ಮತ್ತು ಭಾವಗಳನ್ನು ಹೆಸರಿಸುವ ಪದ : ಸಂಗತಿಯಿಂದಂ ನಾಮಪದಂಗಳ ವೇಕಾರ್ಥಗತಿಯೊಳಾಗೆ ಸಮಾಸಂ ಸಂಗಳಿಸುಗುಂ (ಕಾವ್ಯಾವ. ೧೯೯) ; ಮರ, ದೇವ, ಎಂದು (ನಾಮ)ಲಿಂಗಮನಿಱಿಸಿಮ್ ಎಂಬ ನಾಮ ವಿಭಕ್ತಿಯಂ ಕೂಡೆ, ಮರಂ, ದೇವಂ ಎಂದು (ನಾಮ)ಪದಮಕ್ಕುಂ (ಶಮದ. ೩೫ ವೃತ್ತಿ) ; ಹೆಸರನ್ನು ಹೇಳುವ ಪದಗಳೆಲ್ಲ ನಾಮಪದಗಳು (ಮಧ್ಯಮ. ೭) ; ಒಂದು ವಾಕ್ಯದಲ್ಲಿ ಬರುವ ಪದಗಳನ್ನು ನಾಮಪದ, ಕ್ರಿಯಾಪದ, ಅವ್ಯಯ ಎಂದು ಮೂರು ಭಾಗಗಳಾಗಿ ವಿಂಗಡಿಸುತ್ತಾರೆ (ಕೈಪಿಡಿ. ೩೩). [ನಾಮ + ಪದ$_2$]

ನಾಮಪ್ರಕೃತಿ (ನಾ). [ವ್ಯಾಕ] ನಾಮಪದದ ಮೂಲರೂಪ: ಪ್ರಾತಿಪದಿಕ : ಸುಲಲಿತಾಕ್ಷರಂಗಳಪ್ಪ ನಾಮಪ್ರಕೃತಿಗಳಂ ಕನ್ನಡಕ್ಕೆ ಸರಿಮಾಡಿ, ಸಮಸಂಸ್ಕೃತಮೆಂಬ ಪೆಸರನಿಟ್ಟು, ಶಬ್ದಜ್ಞರ್ ಲಿಂಗಮಂ ಮಾಟ್ಪರ್ (ಶಮದ. ೮೦ ವೃತ್ತಿ) ; ನಾಮಪದದ ಮೂಲದಲ್ಲಿರುವ ಪ್ರಕೃತಿಯನ್ನು ನಾಮಪ್ರಕೃತಿ ಎಂದು ಕರೆಯುತ್ತಾರೆ (ಮಧ್ಯಮ. ೭); ಧಾತುಗಳಿಗೆ ಕೃತ್ತೃತ್ಯಯಗಳು ಸೇರಿ ನಾಮಪ್ರಕೃತಿಗಳಾಗುವುವು (ಕೈಪಿಡಿ. ೧೬). [ನಾಮ + ಪ್ರಕೃತಿ]

ನಾಮಫಲಕ (ನಾ). ಯಾವುದಾದರೂ ಒಂದು ಕಟ್ಟಡ, ಬೀದಿ ಮೊದಲಾದ ಕಡೆಗಳಲ್ಲಿ, ಇದು ಇಂಥದೆಂದು ಸೂಚಿಸಲು ಬರೆದು ತಗುಲುಹಾಕಿರುವ ಹೆಸರಿರುವ ಹಲಗೆ : ಪರಿಷನ್ಮಂದಿರದ ಮೇಲೆ ಎಲ್ಲರಿಗೂ ಕಾಣುವಂತೆ ಹಾಕುವ ನಾಮಫಲಕದ ಮೇಲೆ ಇವುಗಳಲ್ಲಿ ಯಾವುದನ್ನು ಬರೆಸಬೇಕು ?—ಎಂಬ ಬಗೆಬಗೆಯ ಪ್ರಶ್ನಾವಳಿ (ಪ್ರಶ್ನೆಯ ಹಾವಳಿ)ಯನ್ನು ವಿದ್ವಾಂಸರು ಎಸೆದರು (ದ್ರಾವಿವಿ.೮೧); ಅವರು ಹೊಸ ಅಂಗಡಿಯೊಂದನ್ನು ತೆರೆದು ನಾಮಫಲಕವನ್ನು ತಗುಲು ಹಾಕಿದರು (ರೂಢಿ). [ನಾಮ + ಫಲಕ]

ನಾಮಮೋಹ (ನಾ). ಹೆಸರಿನ ಮೇಲಿರುವ ಪ್ರೀತಿ : ಜಯದ ಮದ್ದಿನಲಿ ನಾಮಮೋಹದಲಿ ಭರತನಾದ ಮೂಢ(ಮುಕ್ತಕಂ.೨೫೦-೭). [ನಾಮ + ಮೋಹ]

ನಾಮಯ್ಯ (ನಾ). ಒಬ್ಬಾತನ ಹೆಸರು : ಬರೆದನ್ನಾಮಯ್ಯಂ (ಎಕ. X, ಮುಳಬಾ. ೩೮-೮೦ ; ಸು. 890). [ನಾಮ + ಅಯ್ಯ$_1$]

ನಾಮರೂಢಿ (ನಾ). ಪದದ ಪ್ರಸಿದ್ಧಾರ್ಥ,—ಮೂಲಾರ್ಥ ; ಶಬ್ದದ ನಿಜಸ್ವರೂಪ : ಸ್ವರಮಿದಿರೊಳಿರೆ ವಿಭಕ್ತಿಸ್ವರಕಂ ಪ್ರಕೃತಿಸ್ವರಕ್ಕಮಕ್ಕುಂ ಲೋಪಂ ವರಸಂಸ್ಕೃತ ಕರ್ಣಾಟಕಮೆರಡಱೊಳಂ ನಾಮರೂಢಿಯಟಿಯದ ಪಕ್ಷಂ (ಶಮದ. ೫೨) ; "ನಾಮರೂಢಿಯಟಿಯುದು" ಎಂದರೆ ಅರ್ಥಕ್ಕೆ ಹಾನಿ ಬರುವುದು ಎಂದು ಅರ್ಥ (ಕೈಪಿಡಿ.೭). [ನಾಮ + ರೂಢಿ]

ನಾಮರ್ದ (ನಾ). ೧. ಹೇಡಿ; ಪುಕ್ಕ. ೨. ನಪುಂಸಕ : ಆ ನಾಮರ್ದ ನಿನ್ನ ಭಾವ ಯಾವ ಮುಖ ತೆಗೆದುಕೊಂಡು ಇರುತ್ತಾನೆ (ದುಂಬಿಕ. ೧೭೧). ೩. ಸಾರವಿಲ್ಲದುದು : ನಿಸ್ಸತ್ತ್ವ : ಚಿತ್ರದುರ್ಗದ ಜಾಗ ನಾಮರ್ದ ಎಂತ ಕೇಳುತೇವೆ (ಚಿತ್ರಪಾ. ೭೩). [←ಪಾರ. ಹಿಂ. ಮರಾ. ನಾಮರ್ದ್]

ನಾಮಲಿಂಗ (ನಾ). = ನಾಮಪ್ರಕೃತಿ : ನಾಮಲಿಂಗಕ್ಕೆ—ಅರಸ . . . ಹರಿಣ, ಮೂಷಕ—ಎಂದಿರಿಸಿ ಸಪ್ತವಿಭಕ್ತಿಯಂ ಪತ್ತಿಸುವುದು (ಶಮದ. ೬೨ ಪ್ರಯೋ). [ನಾಮ + ಲಿಂಗ]

ನಾಮವಾಚಕ (ನಾ). = ನಾಮಪ್ರಕೃತಿ : ಬಗೆಬಗೆಯ ಪದಾರ್ಥಗಳ ಅಥವಾ ವಿಷಯಗಳ ಹೆಸರನ್ನು ತಿಳಿಸುವ ನಾಮಪದಕ್ಕೆ ನಾಮವಾಚಕವೆಂದು ಹೆಸರು (ಮಧ್ಯಮ. ೨೫). [ನಾಮ + ವಾಚಕ]

ನಾಮವಿಭಕ್ತಿ (ನಾ). [ವ್ಯಾಕ] ನಾಮಪ್ರಕೃತಿಗೆ ಕರ್ತೃ, ಕರ್ಮ ಮೊದಲಾದ ಅರ್ಥದಲ್ಲಿ ಸೇರುವ ಪ್ರತ್ಯಯ ; ವಿಭಕ್ತಿ ಪ್ರತ್ಯಯ : ಪಿಂತೆ ಪೇಟ್ಟ ನಾನಾ ತೆಱದ ಲಿಂಗಂಗಳ್ಗೆ ಪರವಾಗಿ ನಾಮವಿಭಕ್ತಿಗಳ್ . . . ಪ್ರಥಮೆಗಂ . . . ಸಪ್ತಮಿಗಂ—ಏಟಾಗಿ ಕಾರಕವಶದಿಂ ಪತ್ತುಗುಂ (ಶಮದ. ೯೩ ವೃತ್ತಿ). [ನಾಮ + ವಿಭಕ್ತಿ]

ನಾಮವಿಶೇಷಣ (ನಾ). [ವ್ಯಾಕ] ನಾಮಪದಗಳಿಗೆ ವಿಶೇಷಣವಾಗಿರುವ ಪದ : ವಿಶೇಷ್ಯದಲ್ಲಿರುವ ಗುಣ ಮೊದಲಾದ ಧರ್ಮಗಳನ್ನು ತಿಳಿಸುವ ಪದ ; ಗುಣವಾಚಕ : ನಾಮಪದಗಳಿಗೆ ವಿಶೇಷಣವಾಗಿ ಬರತಕ್ಕವುಗಳಿಗೆಲ್ಲಾ ನಾಮವಿಶೇಷಣಗಳೆಂದು ಹೆಸರು (ಮಧ್ಯಮ. ೧೮೧). [ನಾಮ + ವಿಶೇಷಣ]

ನಾಮವ್ಯತ್ಯಯ (ನಾ). ಹೆಸರಿನ ಬದಲಾವಣೆ ; ನಾಮಾಂತರ : ಅವನ ನಾಮವ್ಯತ್ಯಯದಿಂದ ಭೂಪತಿಗೆ ಯಾವ ಸಮಾಧಾನವೂ ಇರಲಿಲ್ಲ (ಇಪ್ಪಕ. ೨೬೨). [ನಾಮ + ವ್ಯತ್ಯಯ]

ನಾಮಶೂನ್ಯ (ನಾ). ಹೆಸರು ಕೂಡ ಇಲ್ಲದುದು ; ನಿರ್ನಾಮವಾದುದು ; ಸಂಪೂರ್ಣವಾಗಿ ನಾಶವಾದುದು : ನಾಮಶೂನ್ಯರ [ವ] ಮಾಡಿಬಿಡುವೆನು ರಾಮಸೇನೆಯನು (ಕೌಶಿರಾ. ೨೦-೭). [ನಾಮ + ಶೂನ್ಯ]

ನಾಮಶೇಷ (ನಾ). ಹೆಸರು ಮಾತ್ರ ಉಳಿದಿರುವುದು : ಅಳಿದು ಹೋದುದು ; ನಾಶವಾದುದು : ತೊಗಲುಗೊಂಬೆಯ ಬದಲು ಮರದ ಗೊಂಬೆಗಳನ್ನು ಕುಣಿಸುವುದೂ, ಯಕ್ಷಗಾನ ಹಾಡುತ್ತ, ಹಿನ್ನೆಲೆಯಲ್ಲಿ ನಿಂತು ಅರ್ಥ ಹೇಳುವುದೂ ವಾಡಿಕೆಯಾಗಿತ್ತು. ಈ ಕಲಾವಿಧಾನವೂ ಇಂದು ನಾಮಶೇಷವಾಗಿದೆ (ಯಕ್ಷಬ. ೧೫) ; ಬಡಗಣ ಸಿಂದರ ಆಳಿಕೆ ನಾಮಶೇಷವಾಗಿ ಅವರ ಸಿಂದವಾಡಿಯನ್ನು ಸಿಂಘಣನು ತನ್ನ ಸಾಮ್ರಾಜ್ಯಕ್ಕೆ ಕೂಡಿಸಿಕೊಂಡಿರಬೇಕು (ಮೂರುಉ. ೭೭). [ನಾಮ + ಶೇಷ]

ನಾಮಸಂಕೀರ್ತನ (ನಾ). = ನಾಮಕೀರ್ತನ : ಪೂಜೆ ಮಾಡುವುದಕ್ಕೆ ಕಷ್ಟವಾದರೆ ದೇವರ ನಾಮಸಂಕೀರ್ತನವನ್ನಾದರೂ ಮಾಡಲಿ (ರೂಢಿ). [ನಾಮ + ಸಂಕೀರ್ತನ]

ನಾಮಸಾದೃಶ್ಯ (ನಾ). ಹೆಸರಿನ ಸಾಮ್ಯ ; ಹೆಸರಿನ ಹೋಲಿಕೆ ; ಒಂದೇ ರೀತಿಯ ಹೆಸರಿರುವುದು : ಈ ಬಾಲಕನು 'ಶಕುಂತಲಾವಣ್ಯ' ಎಂದು ನಾನು ಆಡಿದುದನ್ನು ಕೇಳಿ ನಾಮಸಾದೃಶ್ಯದಿಂದ ಭ್ರಮಿಸಿದನು (ಶಾಕುಂತ. ೧೦೭-೧೨). [ನಾಮ + ಸಾದೃಶ್ಯ]

ನಾಮಸೂಚಿ (ನಾ). ಹೆಸರನ್ನು ತಿಳಿಸುವ ಪಟ್ಟಿ : ಹುಲುಸಾಗಿ ಬೆಳೆದು ಬಂದ ಸಾಹಿತ್ಯವನ್ನೆಲ್ಲಾ ಆ ವ್ಯಕ್ತಿಯ ಹೆಸರಿನಲ್ಲಿ ಒಂದೆಡೆಗೆ ತರುವುದೇ ನಾಮಸೂಚಿಯ ಧ್ಯೇಯ (ಗ್ರಂಥಾಲ. ೫೧). [ನಾಮ + ಸೂಚಿ]

ನಾಮಸ್ಮರಣ (ನಾ). (ಇಷ್ಟದೇವತೆ, ಗುರು ಮೊದಲಾದವರ) ಹೆಸರನ್ನು ನೆನೆಯುವುದು : ಬಲಿಯು . . . ದಿವಿಜಗಣಗಿಣವ ಹರಿಯ ನಾಮಸ್ಮರಣಬಲದಲಿ ಹಲಿಗೆಯ ತಿರುಹಿ ಸುರರ ರಾಜನ ವರರಥವ ನೆಱೆ ಗೆಲಿದು ಗಂಧರ್ವಾದಿ ನಾಯಕರ (ಸಂಭವ. ೯-೩೦) ; ಈ ಉಪಕಾರವನ್ನು ತಾವು ಮಾಡಿದರೆ ತಮ್ಮ ನಾಮಸ್ಮರಣವನ್ನು ಯಾವಾಗಲೂ ಮಾಡುತ್ತ ಇರುತ್ತೇನೆ (ರೂಢಿ). [ನಾಮ + ಸ್ಮರಣ]

ನಾಮಸ್ಮರಣೆ (ನಾ). =ನಾಮಸ್ಮರಣ : ಏನ ಓದಿದರೇನು ಏನ ಕೇಳಿದರೇನು ಈ ನಾಮಸ್ಮರಣೆಗೆ ಸರಿ ಬಾರದು (ಪುರಂದ. ಧಾ. ೧-೯೦-೩); ಉಪಾಧ್ಯಾಯನ ನಾಮಸ್ಮರಣೆ ವಿದ್ಯಾರ್ಥಿಯ ಕರ್ತವ್ಯ (ಕಒಸಾ. IV, ಪೀಠಿಕೆ). [ನಾಮ + ಸ್ಮರಣೆ]

ನಾಮಾಂಕ (ನಾ). ಹೆಸರಿನಿಂದ ಗುರುತು ಮಾಡಿರುವುದು; ಹೆಸರು ಹಾಕಿರುವುದು. [ನಾಮ + ಅಂಕ೨]

ನಾಮಾಂಕಿತ (ಗು). ೧. ಹೆಸರಿನಿಂದ ಗುರುತು ಮಾಡಿದ; ಹೆಸರನ್ನು ಕೆತ್ತಿರುವ. ೨. ಹೆಸರು ವಾಸಿಯಾದ; ಸುಪ್ರಸಿದ್ಧವಾದ: ನಾಮಾಂಕಿತ ವಕ್ತೃಗಳಲ್ಲಿ ಒಬ್ಬರಾದ ಗೋಖಲೆಯವರು . . . 'ರಂಗಸಜ್ಜಿಕೆ' ಮಾಡುತ್ತಿದ್ದರಂತೆ (ಕಥಸ. ೬೩). (ನಾ). ೩. ಹೆಸರಿನಿಂದ ಗೊತ್ತುಮಾಡುವುದು; ಹೆಸರುಳ್ಳದು: ಕಮಳವಿಂದು ನಿನ್ನ ಮುಖದಂತೆ ಮುಖಮುವಿಾ ಕಮಳದಂತೆ ನಿಕ್ಕುವ ಮೆಂದಿಂತಮರ್ದಿರೆ ಪೇಟ್ಟುದನಬುಗುತ್ತ ಮರನ್ಕೋಸ್ಕೋಪಮಾನ ನಾಮಾಂಕಿತಮಂ (ಕವಿಾ. ೩-೬೩). ೪. ಹೆಸರನ್ನು ಕೆತ್ತಿರುವುದು: ಆ ರಾಜರ್ಷಿಯು . . . ತನ್ನ ನಾಮಾಂಕಿತವಾದ ಮುದ್ರಿಕೆಯನ್ನು . . . ಶಕುಂತಲೆಯ ಬೆರಳಿಗಿಟ್ಟು ಹೋದನು (ಶಾಕುಂತ. ೪೭-೪). ೫. ಹೆಸರು: ಅನೇಕ ಶಿಲ್ಪಿಗಳು ತಾವು ಮಾಡಿದ ಕಲಾಕೃತಿಗಳ ಕೆಳಗೆ ತಮ್ಮ ನಾಮಾಂಕಿತದ ಮೊದಲನೆ ಅಕ್ಷರವನ್ನು ಮಾತ್ರ ಕೊರೆದಿರುವ ಪದ್ಧತಿಯನ್ನು ಇಟ್ಟುಕೊಂಡಿದ್ದರೆಂದು ಕಾಣುತ್ತದೆ (ಭಾರದ. ೫೦೬); ತಮ್ಮ ಗುರುಗಳಾಗಿದ್ದ ಶ್ರೀತೋಂಟದ ಸಿದ್ಧಲಿಂಗೇಶ್ವರರ ನಾಮಾಂಕಿತದಲ್ಲಿ 'ಸಿದ್ಧಾಪುರ' ವೆಂಬ ನಗರವನ್ನು ನಿರ್ಮಿಸಿ (ಸೊಳಂಬ. ೬೩).

ನಾಮಾಂಕಿತ ಮಾಡು = ಹೆಸರನ್ನು ಇಡು; ನಾಮಕರಣ ಮಾಡು: ಅವರ ಹೆಸರು ಅಜರಾಮರ ಉಳಿಯಲೆಂದು ಜನಪದವು ಆ ಊರನ್ನೇ ಅವರಿಗೆ ನಾಮಾಂಕಿತ ಮಾಡಿದ್ದುಂಟು (ಕನ್ನಜಾ. ೮೫).

[ನಾಮ + ಅಂಕಿತ]

ನಾಮಾಂತರ (ನಾ). ಬೇರೆಯ ಹೆಸರು: ರೌಹ್ಮನೇ ದೇವನಾವರ್ಣಕನೆಂದು ಪುರಾಣಭೇದಗಳಿಂ ನಾಮಾಂತರವುಂಟಾಗಿ (ವಿವೇಕ. ೩೧೮); ಊರು ಬಿಟ್ಟು ಹೋದ ಈ ವ್ಯಕ್ತಿ ನಾಮಾಂತರವನ್ನು ಹೊಂದಿ ಬೇರೆ ಊರಿನಲ್ಲಿ ವಾಸಿಸುತ್ತಿದ್ದನು (ರೂಢಿ). [ಸಂ.]

ನಾಮಾಂತರಿತ (ನಾ). [ಕಾವ್ಯವಿಾ] ಒಂದು ಬಗೆಯ ಪ್ರಬಂಧ ಚಮತ್ಕಾರ; ಹೇಳಬೇಕಾದ ಹೆಸರನ್ನು ಬೇರೆ ಬೇರೆ ಪದಗಳಲ್ಲಿ ಅಡಗಿಸಿ ಹೇಳುವ ಚಿತ್ರಕಾವ್ಯ; ಪ್ರಹೇಳಿಕೆ: ನಾಮಾಂತರಿತಕ್ಕೆ— ಮೊದಲೊಳಿ ವಿಕಾರಿ ನಾಕಾರದರ್ಶನೀಯಂ ವಿರಾಮದೊಳ್ಸಾಯಕಮಂತದು ತಾಂ . ವಿನಿಂದ್ಯಮಲ್ಲಾದಿದೇವಪುತ್ರಂ ಸದಾನವಾರಿ ಪ್ರಮುಖಂ (ಕಾವ್ಯಾವ. ೬೦೦). ℙ ಇಲ್ಲಿ 'ವಿನಾಯಕ' ಎಂಬ ಹೆಸರಿನ ಅಕ್ಷರಗಳು ಬೇರೆ ಬೇರೆ ಪದಗಳಲ್ಲಿ ಸೇರಿ ಹೋಗಿವೆ.

[ನಾಮ + ಅಂತರಿತ]

ನಾಮಾಕ್ಷರ (ನಾ). ಹೆಸರಿನಲ್ಲಿ ಸೇರಿರುವ ವರ್ಣ: ಅನುಜಂ ನಾಮಾಕ್ಷರದಿಂದನಂತವೀರ್ಯಂ ಪರಾಕ್ರಮಕ್ರಮದಿಂ ತನ್ನನೆ ತಾನೆ ಪೋಲ್ದುಂ (ಶಾಂತಪು. ೨-೧೧); ಅನುದಿನಮೊಂದೊಂದಾಗಲೆ ಪಣಿತಾಮಣಿಯೆಣಿಪುದೆನ್ನ ನಾಮಾಕ್ಷರಮುಂ (ಶಾಕುಂತ. ೪೪ ಆಡಿಟ).

[ನಾಮ + ಅಕ್ಷರ]

ನಾಮಾನುಕ್ರಮ (ನಾ). ಹೆಸರುಗಳ ಅಕಾರಾದಿಯಾದ ಪಟ್ಟಿ; ಪರಿವಿಡಿ; ಅನುಪೂರ್ವಿ: ಆಂಗರಚನಾಶಾಸ್ತ್ರದ ಪಾರಿಭಾಷಿಕ ನಾಮಾನುಕ್ರಮದಲ್ಲಿ (ನಾಮೆಂಕ್ಲೇಚರ್) ಹೊಂದಾಣಿಕೆ ತಗ್ಗಿದೆ (ಕವಿಕೋ. I, ೨೨). [ನಾಮ + ಅನುಕ್ರಮ]

ನಾಮಾನುಕ್ರಮಣಿಕೆ (ನಾ). =ನಾಮಾನುಕ್ರಮ : ಗ್ರಂಥದ ಕೊನೆಯಲ್ಲಿ ನಾಮಾನುಕ್ರಮಣಿಕೆಯನ್ನು ಸೂಚಿಸಿದರೆ ಓದುಗರಿಗೆ ಅನುಕೂಲವಾಗುತ್ತದೆ (ರೂಢಿ). [ನಾಮ + ಅನುಕ್ರಮಣಿಕೆ]

ನಾಮಾವಶೇಷ (ನಾ). =ನಾಮಶೇಷ : ಜರಾಸಂಧನನ್ನು ನಾಮಾವಶೇಷ ಮಾಡಿದುದು ಒಂದು ವಿಚಿತ್ರವಾದ ತಂತ್ರಗಾರಿಕೆಯ ನಿದರ್ಶನವಾಗುವಂತಿದೆ (ಪಾರ್ಥ. ೬೨). [ನಾಮ + ಅವಶೇಷ]

ನಾಮಿ$_1$, **ನೌಮಿ** (ನಾ). ಪಕ್ಷದ ಒಂಬತ್ತನೆಯ ದಿನ.—ತಿಥಿ; ನವಮಿ: ಪದಮುಧ್ಮತೋಪಕ್ಕೆ...ನವಮಿ-ನಾಮಿ, ನಯಮು-ನೇಮು (ಶಸುಪ. ೨೬೫ ಸ್ವಯೋ). **ನೌಮಿಕ**: ನವಮಿ, ನೌಮಿ; ದಶವಿ, ದಸವೆ (ಶಬ್ದಾನು. ೧೬೦ ಸ್ವಯೋ). 'ಮಾನಾಮಿ' ಪರಾ.

[<ಸಂ. ನವಮಿ]

ನಾಮಿ$_2$ (ಗು). ೧. ಬಗ್ಗಿಸುವ. ೨. [ವ್ಯಾಕ] ದಂತ್ಯಾಕ್ಷರವನ್ನು ತಾಲವ್ಯವನ್ನಾಗಿ ಅಥವಾ ಮೂರ್ಧನ್ಯವನ್ನಾಗಿ ತಿರುಗಿಸುವ. (ನಾ). ೩. ಅ, ಆಕಾರಗಳನ್ನುಬಿಟ್ಟು ಉಳಿದ ಸ್ವರಾಕ್ಷರಗಳು: ಪರಿಹರಿಸೆಯವರ್ಣಮನಾ ಸ್ವರಂಗಳವು ನಾಮಿ ಯೆಂಬುವಕ್ಕುಂ (ಕಾವ್ಯಾವ. ೧೨); ಅವರ್ಣಂ ಪಿಂಗಿದಾ ಸ್ವರಂ ನಾಮಿಯೆಂದು ಪೇಟಲ್ಪಡುಗುಂ (ಶಸುಪ. ೯); ಅವರ್ಣವನ್ನುಳಿದ ಸ್ವರಗಳನ್ನು "ನಾಮಿಗಳು" ಎಂದು ಕರೆದಿದ್ದಾರೆ (ಸಂಕೋಧ್ವ. ೧೭).

[ಸಂ. ನಾಮಿನ್]

ನಾಮ್ಮಿ (ನಾ). ಒಂದು ಬಗೆಯ ತೆರಿಗೆ: ನಾಮಿಯಡ್ಡವಂತಿಕೆ ನಾನಾ ಸುಲಿಗೆ ಲಾವಣಿಗೆಯೆಂಬೀ ಗಳಬಳಮಂ ನಿಲ್ಲಿಸಿ ಸುಂಕಮಂ ಬಾಳಿಸಿದಂ (ಕಳಚ್ಯ. ೭-೬೦). [?]

ನಾಮಿತ (ನಾ). [ಸಂಗೀತ] ಒಂದು ಬಗೆಯ ಹಾಡುವ ಧಾಟಿ; ಶಾರ್ಙ್ಗದೇವನು ಹೇಳಿರುವ ಹದಿನೈದು ಬಗೆಯ ಗಮಕಗಳಲ್ಲಿ ಒಂದು; ℙ ಹಿಂದಿನ ಸಂಗೀತಶಾಸ್ತ್ರಕಾರರು ಗಮಕದ ಸಂಖ್ಯೆಯಲ್ಲಿ ಮತಭೇದವನ್ನು ಹೊಂದಿರುತ್ತಾರೆ. "ಶಾರ್ಙ್ಗದೇವನ ಪಂಚದಶವಿಧ ಗಮಕಗಳು ಹೀಗಿವೆ:— ೧. ತಿರಿಪ—ಸ್ವರ ಸಮೂಹದಲ್ಲಿ ಒಂದು ಸ್ವರ ಒತ್ತಲ್ಪಟ್ಟು ನುಡಿಯುವುದು. ೨. ಸ್ಫುರಿತ—ಜಂಟಿಸ್ವರಗಳಲ್ಲಿ ಎರಡನೇ ಸ್ವರ ಒತ್ತಲ್ಪಟ್ಟು ನುಡಿಯುವುದು. ೩. ಕಂಪಿತ—ಮುಂದಿನ ಸ್ವರ ತಾಗುವಂತೆ ಅಲುಗಿದರೂ ಆ ಮುಂದಿನ ಸ್ವರಕ್ಕೆ ಪ್ರಾಧಾನ್ಯ ಇಲ್ಲದಂತೆ ಒಂದು ಸ್ವರ ಅಲುಗುವುದು ಅಥವಾ ಕಂಪಿಸುವುದು. ೪. ಲೀನ—ಹಿಂದಿನ ಸ್ವರವೊಂದು ಮುಂದಿನ ಸ್ವರದಲ್ಲಿ ಮೃದುವಾಗಿಯೂ ನಿಧಾನವಾಗಿಯೂ ಐಕ್ಯವಾಗುವುದು. ೫. ಆಂದೋಳಿತ—ದೀರ್ಘಕಾಲ ಒಂದು ಸ್ವರ ನುಡಿದ ನಂತರ ಮುಂದಿನ ಸ್ವರಕ್ಕೆ ಲೀನವಾಗುವಂತೆ ತಂತಿ ಎಳೆಯುವುದು (ವೀಣೆಗೆ ಮಾಸಲಾದ ಗಮಕ). ೬. ವಳಿ—ವೀಣೆಯ ಒಂದು ಸ್ವರಸ್ಥಾನದಲ್ಲೇ ಎರಡು ಅಥವಾ ಮೂರು ಮುಂದಿನ ಸ್ವರಗಳು ನುಡಿಯುವಂತೆ ತಂತಿಯನ್ನು ನಿರ್ಣಯದಿಂದ ಜಗ್ಗಿಸುವುದು (ವೀಣೆಗೆ ಮಾಸಲಾದ ಗಮಕ). ೭. ತ್ರಿಭಿನ್ನ—ವೀಣೆಯ ಒಂದು ಸ್ವರಸ್ಥಾನದಲ್ಲಿ ಸಾರಣೆ, ಪಂಚಮ ಮತ್ತು ಮಂದ್ರ, ಅನುಮ್ಮಂದ್ರ ತಂತಿಗಳ ಮೇಲೂ ಒಂದೇ ಬೆರಳು ಅಥವಾ ಬಿಡಿಬಿಡಿಯಾಗಿ ಬೆರಳುಗಳನ್ನೂರಿ, ನಾಲ್ಕು ತಂತಿಗಳನ್ನೂ ಏಕಕಾಲದಲ್ಲಿ ಧ್ವನಿಮಾಡುವಂತೆ ಒಂದೇ ಬೆರಳಿನಿಂದ ಅಥವಾ ಬಿಡಿಬಿಡಿಯಾಗಿ ಮಾಟುವುದು (ವೀಣೆಗೆ ಮಾಸಲಾದ ಗಮಕ). ೮. ಕುರುಳ—ಸ್ವರಸ್ಥಾನದಲ್ಲಿ ತಂತಿ ಜಗ್ಗಿಸಿ ಮತ್ತೊಂದು ಸ್ವರ ನುಡಿಸುವುದು

(ವೀಣೆಗೆ ಮೀಸಲಾದ ಗಮಕ). ೯. ಆಹತ—ಒಂದು ಸ್ವರಕ್ಕೆ ಮೀಟು ಹಾಕಿ, ಮೀಟಲ್ಲದೆ ಇನ್ನೊಂದು ಸ್ವರ ನುಡಿಯುವುದು (ವೀಣೆಗೆ ಮೀಸಲಾದ ಗಮಕ). ೧೦. ಉಲ್ಲಸಿತ—ಮಧ್ಯೆ ಇರುವ ಸ್ವರಗಳು ಗೋಚರವಾಗದಂತೆ ಒಂದು ಸ್ವರದಿಂದ ಮತ್ತೊಂದು ಸ್ವರಕ್ಕೆ ಜಾರುವುದು. ೧೧. ಪ್ಲಾವಿತ—ಮತ್ತೊಂದು ರೀತಿಯ ಕಂಪನ. ೧೨. ಹುಂಪಿತ—ಶಾರೀರವನ್ನು ಸಂಚಾಗಿ ಪ್ರಾರಂಭಿಸಿ ನಂತರ ಅದೇ ಸ್ವರವನ್ನು ಘಾತವಾಗಿ ಪ್ರಕಟಿಸುವುದು ಮತ್ತು ಘಾತವಾಗಿ ಸ್ವರ ಪ್ರಾರಂಭಿಸಿ ಸಂಚಾಗಿ ಅದೇ ಸ್ವರ ನುಡಿಯುವುದು. ೧೩. ಮುದ್ರಿತ—ತುಟಿಗಳನ್ನು ಮುಚ್ಚಿ ಶ್ರುತಿಲೀನವಾಗಿ ಹಾಡುವುದು. ೧೪. ನಾಮಿತ—ಸಣ್ಣ ಸಂಚುಶಾರೀರದಲ್ಲಿ ಹಾಡುವುದು. ೧೫. ಮಿಶ್ರಿತ—ಎರಡು ಮೂರು ವಿಧ ಗಮಕಗಳನ್ನು ಸೇರಿಸಿ ಹಾಡುವುದು" (ಸಂಗೀಚಂ. ೨೬): ಸ್ವರಕಂಪವು ಅವರೋಹಕ್ರಮದಲ್ಲಿ ಮಂದ್ರ (ಸ್ಥಾಯಿಯ)ದ್ದಾದರೆ ಅದು ನಾಮಿತ(ವೆಂಬ ಗಮಕ) (ಚತುಸ್ರ. ೩೨).

[ಸಂ.]

ನಾಮು (ನಾ). ಎಳೆಜೋಳವನ್ನು ತಿನ್ನುವುದರಿಂದ ದನಕರುಗಳಿಗೆ ಬರುವ ಒಂದು ಬಗೆಯ ರೋಗ; ಒಂದು ಸಲ ಜೋಳವನ್ನು ಕತ್ತರಿಸಿಕೊಂಡ ಮೇಲೆ ಕೂಳೆಯಲ್ಲಿ ಬೆಳೆಯುವ ಚಿಗುರು ಜೋಳವನ್ನು ತಿನ್ನುವುದರಿಂದ ಉಂಟಾಗುವ ರೋಗ: (ಎಸಮೈ. XV, ೪೨). ℙ ಇದು ನಾಮುಹುಳ ಎಂಬ ಕ್ರಿಮಿಗಳಿಂದ ಉಂಟಾಗುವುದೆಂದು ಹೇಳಲಾಗಿದೆ. ಈ ರೋಗ ಬಂದರೆ ದನಕರುಗಳು ನಡುಗುತ್ತವೆ. ಆಹಾರವನ್ನು ತೆಗೆದುಕೊಳ್ಳುವುದಿಲ್ಲ; ಮೆಲುಕು ಹಾಕುವುದಿಲ್ಲ; ಕಾಲುಗಳನ್ನು ಚಿಮ್ಮುತ್ತ ನೆಲಕ್ಕೆ ಬೀಳುತ್ತವೆ.

[ದೇ.॥ ತೆಲು. ನಾಮು = ಜೋಳದ ಕೂಳೆಯಲ್ಲಿ ಬೆಳೆಯುವ ಚಿಗುರು]

ನಾಮುಹುಳ (ನಾ). ನಾಮು ರೋಗವನ್ನು ತರುವ ಕ್ರಿಮಿ: (ಎಸಮೈ. XV, ೪೨). [ನಾಮು + ಹುಳ(<ಪುಟು)]

ನಾಮೂಷಿ (ನಾ). ಅಗೌರವ; ಅಪಮಾನ: ಅಣ್ಣಗೆ ನಾಮೂಷಿ ಮಾಡಿದ ವಿಧವೆಯ ಮೇಲೆ ರೋಷವನ್ನು ತಾಳಿದ ರಾಘವೇಂದ್ರ ಉಪಾಧ್ಯನು . . . ಆರ್ಭಟ ಮಾಡಿದನು (ಪಾಗ್ದೇವಿ. ೧೨೧).

[←ಹಿಂ. ನಾಮೂಸೀ; ಮರಾ. ನಾಮೋಶೀ, ನಾಮೋಸೀ, ನಾಮುಷ್ಕೀ]

ನಾಮೆ$_1$ (ನಾ). ಹೆಸರು; ಕೀರ್ತಿ; ಪ್ರಸಿದ್ಧಿ: ನಮ್ಮ ಹಿರೇರ ಕಾಲಕ್ಕ ಇದ್ದ ನಾಮೆ ನಮ್ಮ ಕಾಲಕ್ಕ ಇಲ್ಲ (ಗಂಪೂಯಿ. ೫೦); ಈಗಾಗಲೇ ಶ್ಯಾಮರಾಯ ಪ್ರಥಿತಯಶ ಕಂತ್ರಾಟದಾರನೆಂಬ ನಾಮೆಯನ್ನು ಪಡೆದಿದ್ದ (ದೀಪಹ. II, ೨೮). [<ಸಂ. ನಾಮನ್]

ನಾಮೆ$_2$ (ನಾ). ಕಾಗದ; ಪತ್ರ; ದಾಖಲೆ: 'ತಂಡನಾಮೆ', 'ಪಂಚನಾಮೆ' ಪರಾ. [←ಪಾರ. ಹಿಂ. ಮರಾ. ನಾಮಾ]

ನಾಮೋದ್ದಿಷ್ಟ (ಗು). ಹೆಸರಿಸಿದ; ನಮೂದಿಸಿದ: ಸಂಸತ್ತಿನ ಯಾವುದಾದರೊಂದು ಸದನದಿಂದ ನೇಮಕವಾದ ಅಥವಾ ನಾಮೋದ್ದಿಷ್ಟವಾದ ಯಾವುದೊಂದು ನ್ಯಾಯಾಲಯವು . . . ರಾಷ್ಟ್ರಪತಿಯವರ ಆಚರಣೆಯನ್ನು ಪುನರ್ವಿಲೋಕನಕ್ಕೆ ಒಳಪಡಿಸಬಹುದು (ಭಾಧಾನ. ೨೧೪). [ಸಂ.]

ನಾಯ್, ನಾಯಿ (ನಾ). ೧. ಶುನಕ; ಶ್ವಾನ: "ಕೌಲೇಯಕಃ, ಸಾರಮೇಯಃ, ಶುನಕಃ, ಶ್ವಾ, ಕುರ್ಕುರಃ, ಭಷಕಃ, ಮೃಗದಂಶಃ, ಶಾಲಾವೃಕಃ — ಈ ೮ ನಾಯ್[ಪಾಠಾಂ.ಯಿ]" (ಹಲಾಯು. ೪೭-೧೨೬); ಈತಂ ಸ್ವಾಮಿಭಕ್ತನೆಂದುಂ ನಾಯ್ವೋಲಿಳೆ [ಯೊಳ್] ಕರಮೆಂಬುದಿದಗ್ಗಳವಾ ಹೀನಾಧಿಕಪ್ರಶಂಸಾದೋಷಂ (ಕವಿರಾ. ೩-೮೮); ದುರಾತ್ಮಾ ಎನ್ನನೊದೆದ ನಿನ್ನ ಕಾಲ್ಗಳಂ ಜನ್ಮಾಂತರದೊಳಂ ನಾಯುಂ ನರಿಯುಮಾಗಿಯಪ್ಪೊಡಂ ಕೊಂದು ಮಕ್ಕಳ್ವೆರಸು ತಿಂಬೆಂ (ಪಡ್ಡಾರಾ. ೮-೧೯); ಪಂದಿವೇಂಟೆಯ ನಾಯೆಂತಪ್ಪುವೆಂದೊಡೆ (ಪಂಪಭಾ. ೫-೪೬ ಪ); ಮೀನಂ ಮೀನಂ ತಿಂಬಂತಿರೆ ನಾಯ್ನಾಯಂ ತಿಂಬಂತಿರೆ ತಿಂದರನಿಬರಂ ರಕ್ಕಸಿಯರ್ (ಗದಾಯು. ೪-೪೦); X X X ಪೋಗಲ್ ತ್ತಪ್ಪಿ ಹರಿದ ನಾಯಂ . . . ಸೂರಸೇವಿ ನಾಯಕಂ X X X ಕಟ್ಟಿಕೊಣ್ಡ ಬಿಡಲೊಲದಿಱುದೊಡೆ (ಎಕ. IV, ಹುಣಸೂ. ೧೧-೧೭; 1020 ?); ಪಲವು ನಾಯ್ಗಳ ನಡುವಣ ಪುಲ್ಲೆಯಂತೆ ನಡುನಡುಗಿ (ಧರ್ಮಾಮೃ. ೬-೯೨); ಪೊರೆದೇಂ ಬಾಳವೆ ಪಂದಿ ನಾಯ್ಗಳೊಡಲಂ (ಸೋಮೇಶ. ೧೮); ಹಾಸಗಳ ಪಿಡಿದೆಳೆವ ನಾಯ್ಗಳ . . . ಹೆಬ್ಬಲೆ ಬೀಸಿದರು ಬೇಂಟೆಗರು ಬಹಳ ಮೃಗಂಗಳನು ಕೆಡಹಿ (ಕುವ್ಯಾಅ. ೩-೯). ೨. (ಆಲಂ) ಹೀನಜಾತಿಯದು; ಕೀಳುಮಟ್ಟಕ್ಕೆ ಸೇರಿದುದು: 'ನಾಯಿತುಳಸಿ', 'ನಾಯಿನೇಱಲ್' ಪರಾ. ೩. ನೀಚ; ತುಚ್ಛ; ಅಯೋಗ್ಯ: ಕಡಿಗಳ ಹದಿನೆಂಟನೊಡಗೂಡಿ ಸಂದಿಸಿ ತೊಡಚಿ ಕಟ್ಟಿದೆ ನರರ ಬಂಧನದಲ್ಲಿ ಈ ತೊಡಹದ ನಾಯ ನಿಚ್ಚ ನೀನಿಕ್ಕಿ ಕೆಡಿಸಿದೆಯಯ್ಯ (ದೇದಾನ. ೩೭-೭೨); ಆಳ ಹೆದಱಿಸಿ ನುಡಿವ ನಾಯ್ಗಳ ಬೀಳ ಬಡಿ ಬಡಬಾಗ್ನಿ ನೊರಜಿನ ದಾಳಿಗಳುಕುವುದುಂಟೆ(ಕುವ್ಯಾದ್ರೋ. ೨-೭೯). **ನಾಯಿ**: ೧. ಕಳ್ಳನೊಕ್ಕಲಾದುದಿಲ್ಲ ನಾಯಿ ಜಂಗುಳಿಯಾದುದಿಲ್ಲೆಂಬ ನಾಟ್ಯುಡಿಯನಱಿದೆಯಿಲ್ಲಕ್ಕುಂ(ಧರ್ಮಾಮೃ. ೬-೧೩೩); ನಾಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ (ಬಸವ. ೨೨೩); ಚನ್ನಮಲ್ಲಿ ಕಾರ್ಜುನನ ಅಱಿದ ಬಳಿಕ ಆ ಕಾಯವ ನಾಯಿ ತಿಂದರೇನು (ಮಹಾದೇ. ಬ. ೩೯-೩); ಬಿಡಿಸುತ್ತುಂ ಬೆಳ್ಳಾರಮನಡಿಯಿಡು ಕಾಣದ ವೊಲೊಯ್ಯನಿಸು ನಾಯಿಗಳಂ ಸಡಲಿಸು ಹಾಸಮನೆನುತುಗ್ಗಡದಿಂ ಮುತ್ತಿದುದು ಪುಲ್ಲೆಯಂ ಭಿಲ್ಲೌಘಂ (ಉದ್ಭಟ. ೨-೭೦); ನಾಯಿ ಸಿಂಹಕ್ಕಿದಿರೆ ಫಡ ಹೋಗೆಂದಳಬುಜಾಕ್ಷಿ (ಕುವ್ಯಾವಿ. ೨-೩೯); ನಾಕದ ಸುಖ ನಾಯಿಗೆ ತಿಳಿದೀತೆ? (ಗಾದೆ). ೩. ಆ ರತ್ನಪುರಿಯೊಳಗೆ ಅತಿಮದದ ನಾಯಿಗಳು ಹೊಕ್ಕಿರೆ ಕ್ಷಿತಿತಳಕೆ ಸುರಮುನಿಪ ನಾರದ ಯತಿವರನು ಬರೆ (ಸಂಭಪ. ೭-೨೫); ವಾಯುಸುತನಂಜಿಸುವನೆಂದೀ ನಾಯಿ ಬೆದಱಿದನಕಟ (ಕುವ್ಯಾಸ. ೧೪-೫೯); ನಾಯೆ ಬಗುಳದೆ ಕೆಲಕೆ ಸಾರ್ . . . ಎಂದಸಹಾಯಶೂರರ ದೇವ ಜಱೆದೀಡಾಡಿದನು ಚರನ (ತೊರರಾ. ೫-೫-೬); ಕೊಟ್ಟ ಸಾಲವ ಕೊಡದ ನಾಯಿ ಇಟ್ಟ ಭಾಷೆಯ ತಪ್ಪುವ ನಾಯಿ (ಪುರಂದ. ೫-೪೯-೧); ನ್ಯಾಯವ ಬಿಟ್ಟ ನ್ಯಾಯವ ಪೇಳುವ ನಾಯಿಗೆ ನರಕವು ತಪ್ಪೀತೆ (ಕನಕ. ೨೫-೪); ನಿಶ್ಶ್ರೇಯಸಾಭ್ಯಾಸಿಗಳ ನಿಂದಿಪ ನಾಯಿಗೇತಕೆ ನವರಸಾನ್ನವು (ಅನುಶ. ೧-೩೨).

ನಾಯ ಡಿಂಗರ = ಬಹಳ ಹೀನನಾದವನು; ಕಡು ನೀಚ: ಕುಲಮುಳ್ಳ ನರಂ ಪೆಱರೆಂಜಲನುಂಡಂದೆಲ್ಲಮವನ ಡಿಂಗರನೆಂಬರು ಸಲೆಯಡಗೆಂ ನಾಯೆಂಜಲ ನಲಿದಲಸದೆ ತಿಂದಂದು ನಾಯ ಡಿಂಗರನಲ್ತೆ (ಪಸಾರ. ೫೯೮). ನಾಯ ಡೋಣಿ = ನಾಯಿಗೆ ಆಹಾರಕ್ಕಾಗಿ ಇಡುವ ಪಾತ್ರೆ: ಬಲ್ಲಿದನೆಂಬವನ ಕೆಡಿಸಿತ್ತು ವಿಧಿ . . . ದಶಮುಖನ ನಾಯ ಡೋಣಿಯಲ್ಲುಣಿಸಿತ್ತು (ಬಸಹೆ. ೩೭-೯೫). ನಾಯ ತೇಜ = "ಹೇಯವಾದ ದರ್ಪ ಅಥವಾ ಕೀರ್ತಿ" (ಬಸವ. ಕೋಶ): ಹರಗಣಪಂಕ್ತಿಯ ನಡುವೆ ಕುಳ್ಳಿರ್ದು ನಾನು ಒಡೆಯತನದ

ನಾಯ ತೇಜವ ಹೊತ್ತುಕೊಂಡು . . . ಒಡೆಯರಿಂದಲೂ ಮಿಗಿಲಾಗಿಕ್ಕಲು ತೆಗೆದಿರಿಸಿದನು (ಬಸವ. ೪೩೯). ನಾಯ ತೋಟ = ನಾಯಿಗಳ ಜಗಳ : ಬೇಟೆಯ ಬೆಂಬಳಿಗೆ ಸಿಕ್ಕವು ನಾಯ ತೋಟಗೆ ತೊಡಕಲು ಹಿಂಡಿನ ಗೊಂದಣದಲ್ಲಿ ಹೊಕ್ಕು ಅಡ ತಿಂದಹವು (ಕಲ್ಯಾಶಾಂ. ೧೧೧-೧೯). ನಾಯ ನಡುಬೋನ = ನಾಯಿಗಳ ಮಧ್ಯೆ ಇರುವ ಆಹಾರ : ನಾಯ ನಡುಬೋನವನು [ಪಾಠಾಂ. ನಾಯಿಗಳ ನುಡಿಗೇಳಿ, ನ್ಯಾಯಮಾರ್ಗವ ಬಿಟ್ಟು] ನೆಚ್ಚಿ ವೃಥಾಯ ಕೆಡಬೇಡಾ (ಕುವ್ಯಾಳು. ೩-೧೨೯). ನಾಯನೂಡು = ನಾಯಿಗೆ ತಿನ್ನಿಸು,—ಎರೆ : ಕವಿಲೆಯಂ ಕಱೆದು ನಾಯನೂಡುವ . . . ಕಟ್ಟಿಗ್ಗರಂತೆ (ಧರ್ಮಾಮೃ. ೯-೧೬೨). ನಾಯ ಪಾಡು = ನಾಯಿಯ ಗತಿ,—ಸ್ಥಿತಿ ; ಬಹಳ ಹೀನಾವಸ್ಥೆ : ಆತನು ಹೇಳಿದ ಹಾಗೆ ಕುಣಿಯುತ್ತಾ ಬಂದರೆ ನಮ್ಮ ಪಾಡು ನಾಯ ಪಾಡಾಗುವದರಲ್ಲಿ ಅವ ಸಂಶಯವೂ ಇರುವುದಿಲ್ಲ (ಬೆನ್ನಬೇ. ೫೯). ನಾಯ ಮಱಿ = ಮರಿನಾಯಿ ; ಕುನ್ನಿ : ಸಿಂಹವೆತ್ತಲು ನರಿಗಳೆತ್ತಲು ನಾಯ ಮಱಿಯೆತ್ತ (ಕುವ್ಯಾಕ. ೯-೭). ನಾಯಿ ತಲೆಯ ಮೇಲಿನ ಬುತ್ತಿ = ಹೆಚ್ಚು ಕಾಲ ಸ್ವಾಧೀನದಲ್ಲಿರುತ್ತದೆಂಬುದನ್ನು ನಂಬಲಾಗದ ವಸ್ತು ಅಥವಾ ಅಧಿಕಾರ ; ಅನಿಶ್ಚಿತವಾದುದು : ಈ ಕೆಲಸವೋ ನಾಯಿ ತಲೆಯ ಮೇಲಿನ ಬುತ್ತಿ ಇದ್ದ ಹಾಗೆ ಇದೆ. ಇದನ್ನು ನಂಬುವ ಹಾಗಿಲ್ಲ (ರೂಢಿ). ನಾಯಿ ಮುಟ್ಟಿದ ಗಡಿಗೆ = ಅಪವಿತ್ರವಾದುದು : ನಾಯಿ ಮುಟ್ಟಿದ ಗಡಿಗೆ ಮುಸುರೆಯಾದರೇನು ? ಮಡಿಯಾದರೇನು ? (ಗಾದೆ).

[ದೇ. ॥ ತಮಿ. ಮಲ. ನಾಯ್ ; ತುಳು. ನಾಯಿ ; ಕೊಡ. ನಾಯ್ ; ಗೊಂಡಿ. ನಯ್, ನಾಯ್, ನಾಯೊ]

ನಾಯ, ನೇಯ$_1$ (ನಾ). ನ್ಯಾಯ ; ನೀತಿ : ಯತ್ವಲೋಪಕ್ಕೆ—ಅಮಾವಾಸ್ಯಾ—ಅಮಾಸೆ, ಅವಸೆ . . . ನ್ಯಾಯ—ನೇಯ, ನಾಯ (ಶಮದ. ೨೮೧ ಪ್ರಯೋ) ; ನ್ಯಾಯ—ನಾಯ (ಶಬ್ದಾನು. ೧೬೦ ಪ್ರಯೋ); ಬಾಲನೊರ್ವನಂ ಬಳ್ಳು ಪಿಳ್ಳೆಯನೆಂತಂತು ಕೊಂಡುಯ್ವುದಿದಾವ ನಾಯಂ (ರಾಮಾಶ್ವ. ೧೫೬-೧೧) ; ಇಬ್ಬರ ನಾಯ ಒಬ್ಬನಿಗಾಯ (ಗಾದೆ). **ನೇಯ**$_1$: ಮೇಲಿನ 'ಶಮದ.' ಪ್ರಯೋಗವನ್ನು ನೋಡಿ. [<ಸಂ. ನ್ಯಾಯ]

ನಾಯಂಕ (ನಾ). = ನಾಯಕ ೨ : ಬಸವೆಯನಾಯಂಕನ ಚೆಉಂಡಪ್ಪನ ಮಗ ಧೂಳೆಯ ನಾಯಂಕನು . . . ಭಕ್ತರಿಗೆ ಧಾರಾಪೂರ್ವ್ವಕವಾಗಿ ಆಲೋಚ್ಸಿ ಕೊಟ್ಟ ಧರ್ಮದ ವ್ರಿತ್ತಿಗೆ (ಸೌಇಇ. IX-II, ೪೨೨-೪ ; 1397). [ℙ ಇದು 'ನಾಯಕ' ಎಂಬುದರ ಅಪಲಿಖಿತ]

ನಾಯಂದ 'ನಾವಿದ' ನೋ.

ನಾಯಕ (ನಾ). ೧. ಮುಂದಾಳು ; ಮುಖಂಡ; ಅಗ್ರೇಸರ ; ಗಣ್ಯ: "ಅರ್ಯಃ . . . ನಾಯಕಃ, ಅಧಿಭೂಃ, ಅಧಿಪಃ, ಅಧೀಶಃ, ಅಧಿಪತಿಃ— ಈ ೧೦ ಒಡೆಯಂ" (ಹಲಾಯು. ೫೭-೧೮೮) ; ರಾಯ ಝುಳಪ್ಪನ ಭುಜಕೌಕ್ಷೇಯಕವೆನಿಪಳವೆನಾಂತ ಗೋವಿನ್ದಚಮೂ ನಾಯಕನೊಳ್ ಸೆಣಸುವವಂ (ಎಕ. VII, ಶಿಕಾರಿ. ೧೩೭-೩೬; 1114). ೨. ದೊರೆ ; ರಾಜ : "ನಾಯಕಃ = ದೊರೆ" (ಕಾಶಕೃ. ೧೫೮) ; ನಾಯಕನಿಲ್ಲದ ಊರಲ್ಲಿ ಕಾಯಕ ಸಿಕ್ಕೀತೆ ? (ಗಾದೆ). ೩. ದಳಪತಿ; ಸೇನಾಪತಿ : ಎರಡುಮೊಡ್ಡಣದ ಮೊನೆಯ ನಾಯಕನಿಕಾಯದನೇಕ ವಿಧದ ಬಿಂಕದ ಪದಿರ ಪಱೆಗಳುಂ . . . ಒದವುವುದುಂ (ನೇಮಿಪು. ೧೨-೧೫೦ ಪ); ಶತಬಲಿ ಗಂಧಮಾದನ ಶರಭ ಮೈಂದಾದಿಗಳು ಕಾದಿತು ಮುಖ್ಯನಾಯಕರ (ಕೌಶಿರಾ. ೩೫-೧೫). ೪. ಗಂಡ ; ಪತಿ ; ಒಡೆಯ; ಯಜಮಾನ : ಪ್ರಿಯಕಾಂತೆಯಂ ಬಿಟ್ಟು ಆಗಲುವ ನಾಯಕನಂತೆ (ಸೌಗಂಧಿ. ೫೬-೭). ೫. = ನಾಯಕಮಣಿ ೨ : "ಮುತ್ತಿನ ಸರದ ನಡುವಣ ಮಾಣಿಕಮಂ ತರಳಮೆಂಬುದು ಅದನೆ ನಾಯಕಮೆಂಬುದು" (ಹಲಾಯು. ೯೨-೪೧೦) ; "ಆ ಹಾರಮಧ್ಯದ ರತ್ನ ನಾಯಕಂ" (ಮಂಗರಾ. ೧೦೦-೨೪) ; ಕರಮೊಪ್ಪಿದುದಂದು ಪುರಂದರನೀಯೆ ಪುಳೋಮಸುತೆಯ ಕಟ್ಟಿದ ಕಂಠಾಭರಣಕ್ಕೆ ತಗುಳ್ಚಿದ ಪದ್ಮರಾಗ ನಾಯಕಮಿದೆಂಬಿನಂ ರವಿಬಿಂಬಂ (ಶಾಂತಿಪು. ೮-೧೧೪); ನಾಯಕಮಿಲ್ಲದ ತೊಡವಿನ ನಾಯಕನಿಲ್ಲದ ದಿನಾವಸಾನಂ . . . ಮದಶ್ರೀಯಿಲ್ಲದ ಗಜಮದೇಂ ಮನಂಗೊಳಿಸುಗುಮೇ (ಅಜಿಪು. ೬-೯೪) ; ರಾಯರತುನದ ನಡುವೆ ನೀನನುಗಾಯಕವೊ ನಾಯಕವೊ ಮೇಣುಪನಾಯಕವೊ ನೀನಾವನೆಂದನು ಜಱೆದು ಮುರಹರನ (ಕುವ್ಯಾಸ. ೮-೩೨). ೬. ಮಾರ್ಗದರ್ಶಿಯಾದುದು ; ಪ್ರೇರಕವಾದುದು : ಈ ಪ್ರೇರಣೆಯು ಬುದ್ಧಿಗೆ ನಾಯಕವೇ ಇರುವುದರಿಂದ ಅದರ ಸಂಪೂರ್ಣ ಸ್ವರೂಪದ ಆಕಲನವನ್ನು ಒಮ್ಮೆಲೇ ಮಾಡಲು ಬರುವುದಿಲ್ಲ (ಪ್ರಬಂಧ. ೧೧೩). ೭. ಅಂಕಿತನಾಮಗಳ ಕೊನೆಯಲ್ಲಿ ಸೇರುವ ಪದ. ೮. [ಕಾವ್ಯಮೀ] ಕಾವ್ಯ, ನಾಟಕ ಮುಂತಾದುವುಗಳಲ್ಲಿರುವ ಕಥೆಯ ಮುಖ್ಯಪಾತ್ರ ; ಕಥಾನಾಯಕ : ನಾಯಕನನ್ಯನಾಗೆ ಕೃತಿ ವಿಶ್ರುತಮಾಗದುದಾತ್ತ ರಾಘವಂ ನಾಯಕನಾಗೆ ವಿಶ್ರುತಮೆನಿಪ್ಪುದು ವಿಸ್ಮಯಕಾರಿಯಲ್ತು (ಪಂರಾಮಾ. ೧-೩೭) ; ನಾಯಕನಲ್ಲಿ ಧೀರೋದಾತ್ತ, ಧೀರಲಲಿತ, ಧೀರೋದ್ಧತ, ಧೀರ(ಪ್ರ)ಶಾಂತ ಎಂದು ನಾಲ್ಕು ವಿಧ (ಕೈಪಿಡಿ. ೨೦೯) ; ಇಲ್ಲಿಯೂ ಸಹ ಕವಿಯಾಗಲಿ ಕವಿ ನಿರ್ಮಿತನಾದ ನಾಯಕನಾಗಲಿ ರಸಭಾವರಹಿತನಾಗಿ 'ಹೇಳುವವ' ನಾದರೆ ಸಂಘಟನೆಗೆ ನಿಯಮವಿಲ್ಲ (ಧ್ವನ್ಯಾಲೋ. ೧೪೩) ; ಅದೇ ಕಾತರವನ್ನು ತನ್ನ ಪಠ್ಯಪುಸ್ತಕಗಳಲ್ಲಿ ಬರುವ ನಾಯಕ ನಾಯಕೆಯರನ್ನೋ; ಕಾವ್ಯಸಂಪತ್ತನ್ನೋ, ಶೈಲಿಯನ್ನೋ ಅಭಿನಂದಿಸಲು ತಿರುಗಿಸಿದರೆ ಆಗ ಅದರಿಂದ ನಿಜವಾದ ಲಾಭವುಂಟಾದೀತು (ಶಿಕ್ಷದ. ೮೪). [ಸಂ.]

ನಾಯಕಗ್ಗಲಿ (ನಾ). ಒಂದು ಬಗೆಯ ಕಗ್ಗಲಿಮರ ; ದುರ್ವಾಸನೆಯುಳ್ಳ ಕಗ್ಗಲಿಮರ ; ಹುಚ್ಚು ಕಗ್ಗಲಿಮರ : "ಪಿಟ್ಟದಿರಃ—ನಾಯಕಗ್ಗಲಿ" (ಓಷಧಿ. ೧೫೩). [<ನಾಯ್ + ಕಗ್ಗಲಿ$_1$]

ನಾಯಕತಃಖ್ತೆ (ನಾ)$_1$ ಒಂದು ಕಾರ್ಯಾಲಯದ ಎಲ್ಲಾ ಕಾರ್ಯಗಳ ವಿವರವನ್ನು ನಮೂದಿಸಲು ಉಪಯುಕ್ತವಾದ ಕಲಮುಗಳನ್ನು ಒಳಗೊಂಡಿರುವ ಪಟ್ಟಿ ; ಸಮಗ್ರವಾದ ವಿವರಗಳನ್ನು ಬರೆಯಲು ಸಾಧಕವಾದ ಪಟ್ಟಿ : ಎಲ್ಲಾ ಕೆಲಸಗಳಿಗೂ ಅನ್ವಯಿಸುವ ಒಂದು ಕ್ರಮಬದ್ಧವಾದ ನಾಯಕತಃಖ್ತೆ (Master-Form) ಯಿರಬೇಕು (ಮುದ್ರಕ. ೧೦೪).

[ನಾಯಕ + ತಃಖ್ತೆ (<ತಖ್ತೆ)]

ನಾಯಕತನ (ನಾ). ಒಡೆತನ ; ಪ್ರಭುತ್ವ ; ಅಧಿಕಾರ : ತಿಂಮರಾಜಗಳು ತಮ್ಮ ನಾಯಕತನಕ್ಕೆ ಸಲುವ ಮುಳವಾಗಿಲ ರಾಜ್ಯದ ನಾನಾ ಗೋತ್ರದ . . . ಅಶೇಷವಿದ್ವನ್ಮಹಾಜನೇಭ್ಯಃ ಕೊಟ್ಟ ಧರ್ಮಶಾಸನ (ಎಕ. X (8), ಮುಳಬಾ. ೨೮೩-೧೧ ; 1157) ; ಮುಳವಗಿಲ ನಾಡಲು ನಮ್ಮ ನಾಯಕತನದ ತ್ಯನನಹಳ್ಳಿಯ ಅತ್ತಿಕುಣ್ಟೆಪೂರ್ವ್ವ (ಮೈಅರಿ.೧೯೨೩, ೧೪-೬ ; ?). [ನಾಯಕ + —ತನ]

ನಾಯಕತನಂಗೆಯ್ (ಕ್ರಿ). ಒಡೆತನವನ್ನು ವಹಿಸು ; ಅಧಿಕಾರ ಮಾಡು : ನಾಯಕತನಂಗೆಯ್ದಂಗೆ ಚಕ್ರವರ್ತಿತ್ವಮಾದಂತೆ ಮುನ್ನವೆ

ಬ್ರತಮಂ ಕೊಳಲೆಂದಿರ್ದವರ್ . . . ಜಿನದೀಕ್ಷೆಯಂ ಕೈಕೊಂಡರ್ (ಧರ್ಮಾಮೃ. ೧೦-೨೮೩). [ನಾಯಕತನ + ಕೆಯ್$_1$]

ನಾಯಕತ್ವ (ನಾ). ಮುಂದಾಳುತನ; ಮುಖಂಡತ್ವ : ಬಂಗಾಳದಲ್ಲೂ ಉತ್ತಮವಾದ ನಾಯಕತ್ವವಿರಲಿಲ್ಲ (ಯಕ್ಸಾರ. ೧೧೩ ಪೀಠಿಕೆ); ಅನೇಕ ಮುಖವಾದ ಜೀವನವೇ ಈ ಕಾದಂಬರಿಯಲ್ಲಿ ನಾಯಕತ್ವವನ್ನು ವಹಿಸಿದೆ (ಸಮಜೀ. ೨ ಪೀಠಿಕೆ). [ಸಂ.]

ನಾಯಕನರಕ (ನಾ). ನರಕಗಳಲ್ಲಿ ಮುಖ್ಯವಾದ ನರಕ; ಭಯಂಕರವಾದ ನರಕ; ಘೋರ ನರಕ : ನಮ್ಮ ಕೂಡಲಸಂಗನ ಶರಣರನವರಿವರೆಂದರೆ ಕುಂಭಿಯ ಪಾತಕ ನಾಯಕನರಕ ತಪ್ಪದು ಕಾಣಾ (ಬಸವ. ೫೬೯); ಲಿಂಗದ ಕೂಡ ಸಮಾಧಿಯ ಕೊಂಡೆನೆಂತೆಂಬ ಭಕ್ತರಿಗೆ ನಾಯಕನರಕ ತಪ್ಪದು (ಮೋಳಿಮಾ. ೫೦-೨೦೯); ಮನ್ನಿಸಳೆ ಮಗನ ಮಾತನಿದೇಂ ನಾಯಕನರಕವಿಾಕೆಗೊಚ್ಚತಮಾಯ್ತೋ (ಯಶೋಚ. ೩-೭೪); ವೈವಸ್ವತನು ನಾಯಕನರಕದೊಳಗದ್ದುತ ಬಹನು (ಕುವ್ಯಾಉ. ೪-೮೬). [ನಾಯಕ + ನರಕ]

ನಾಯಕಮಂಡಳೀಕ (ನಾ). ಮುಖ್ಯ ಪ್ರಾಂತ್ಯಾಧಿಕಾರಿ; ಒಂದು ದೇಶಭಾಗದ ಒಡೆಯ,—ಪ್ರಭು : ಬಂಡಿಬೋವರ್ಗೆಱೆದು ನಾಯಕಮಂಡಳೀಕರ್ಗೆಱೆದು ನಾಟಕಪಂಡಿತರಿಗೆಱೆದಾಲವಟ್ಟವ ನಿಕ್ಕುವರಿಗೆಱೆದು (ಬಸಪು. ೫೯-೨೭).

[ನಾಯಕ + ಮಂಡಳೀಕ (= ಮಂಡಲೀಕ)]

ನಾಯಕಮಣಿ (ನಾ). ೧. ಶ್ರೇಷ್ಠನಾದ ಮುಖಂಡ; ಮುಂದಾಳುಗಳಲ್ಲಿ ಉತ್ತಮನಾದವನು : ಭಾರತದ ನಾಯಕಮಣಿಗಳ ಜೀವನವನ್ನು ತಿಳಿಸುವ ಗ್ರಂಥಗಳೂ ಇವೆ (ಸಂಗೀತ. III, ಅಮುಖ). ೨. ಹಾರದ ಮಧ್ಯದಲ್ಲಿರುವ ರತ್ನ : ವಜ್ರಬಾಹುಮಹೀನಾಥಂ ನಿಜತನೂಜಗುಣಮಣಿಮಾಲೆಗೆ ತತ್ಕನ್ಯಾರತ್ನಮಂ ನಾಯಕಮಣಿ ಮಾಡಲೆಂದಾತ್ಮೀಯವಿಳಾಸಂಬೆರಸು ಬಂದು ಪುಂಡರೀಕಿಣಿಗೆ ಮುಂದಟ್ಟಿದ ದೂತಂಗೆ ಪ್ರೀತನಾಗಿ ಮೆಚ್ಚಿ ಮೆಚ್ಚಿತ್ತು (ಆದಿಪು. ೪-೨೩ ಪ); ಮೊಗಕ್ಕೆ ಮೂಗುಂ ಆಭರಣಕ್ಕೆ ನಾಯಕಮಣಿಯು ಮೆಂಬಂತೆ . . . ಇರ್ದುದು ಚಕ್ರವರ್ತಿಯ ರಾಜಧಾನಿ (ಶಾಂತಿಪು. ೩-೨ ಪ). [ನಾಯಕ + ಮಣಿ$_3$]

ನಾಯಕರತುನ (ನಾ). = ನಾಯಕಮಣಿ ೨ : ಪತಿಯಳಿದ ಸತಿಯಿರವು ನಾಯಕರತುನವಿಲ್ಲದ ಪದಕ ದೈವಸ್ತುತಿಗಳಿಲ್ಲದ ಕಾವ್ಯರಚನಾಭಾವದಂದದಲಿ (ಕುವ್ಯಾದ್ರೋ. ೮-೧೮). [ನಾಯಕ + ರತುನ]

ನಾಯಕರತ್ನ (ನಾ). = ನಾಯಕಮಣಿ ೨ : ವ್ರತವೆಂಬುದು ನಾಯಕರತ್ನ ವ್ರತವೆಂಬುದು ಸುಪ್ಪಾಣಿಯ ಮುತ್ತು (ಉರಿಜೆ. ಕ. ೨೫-೫೩); ಕಂಠಮಾಲೆಯೊಳ್ ಜಾತಿನಾಯಕರತ್ನಮಂ ತೆಗೆದು ಬಿಸುಟಂತೆ ಧಾತುಗೆಟ್ಟದೆ ತಮ್ಮ ಬಲಮೆಂದು ಹಲುಬಿದಂ ಧರೆಯೊಳ್ ಪೊರಳ್ದು ಮಱುಗಿ (ಜೈಮಿಭಾ. ೧೩-೫೮). [ನಾಯಕ + ರತ್ನ]

ನಾಯಕವಾಡಿ (ನಾ). ೧. (ಊರಿನ ಅಥವಾ ನಾಡಿನ) ಮುಖಂಡ; ಮುಖ್ಯಾಧಿಕಾರಿ; ಒಡೆಯ; ಅಧಿಪತಿ : ಪಸಾಯಿತರು ನಾಯಕವಾಡಿಗಳು ಮಕ್ಕಳುಗಳೊಳಗಾದ ಕಂದಹಕ್ಕ ಬರದಿಹ ಸ್ತಳಂಗಳು ಸಿರಿಪುರಮಹಮನೆ ಮಂನೆಎ (ಎಕ. IX, ಕಾನಕಾ. ೧೧೦-೧೭; 1306 ?); ಹೊಂನಿಗೆ ಆರಗದ ನಾಡ ನಾಯಕವಾಡಿಗಳು ಪೂವ X X X ಅನುಭವಿಸಿ ಬಹ ಹುಟ್ಟುವಳಿ (ಎಕ. VII, ತಿನಮೊ. ೭೧-೨೬; 1431). ೨. ಸೇನಾಪತಿ; ದಳಪತಿ : ದುರುಳನ ಮದವನಳಿವೆನು ಬಾಯ ಹೊಯ್ ಹೊಯ್ ಕದನದಲಿ ನಡುಗಿಸುವ ನಾಯಕವಾಡಿಗಳನೆನುತ ಬದಗನಿದಿರಾದನು . . . ಕೌರವರ ರಾಯ (ಕುವ್ಯಾಭೀ. ೫-೧೧); ಬೀಡು ಬಿಟ್ಟುದು ಸಕಲ ನಾಯಕವಾಡಿಗಳ ಗುಡಿಹೊಯ್ದವಸುರ ವಿಭಾಡಗೆ (ತೊರರಾ. ೬-೧-೧೯); ಅಮರನಿಕರವನೀಡಿಱುವ ತೋಳುಗಳ ನಾಯಕವಾಡಿಗಳ ಕೈದುಗಳ ಹೊಗರಂಬರವನಳ್ಳಿಱುಯೆ (ನಿಭಾಗ. ೮-೧೭-೨೩); ಸರಳು ಬಿಲುಗಳ ಬಿಱುಬಿನಿಱುತನ ಕರದ ನಾಯಕವಾಡಿಗಳ ನಿಷ್ಠುರದ ಹೀಹಾಳಿಗಳು ಮೆಱೆದುದು (ಮೂಲರಾ. ೧-೨೯). ೩. ಸೇನಾನಾಯಕರ ಗುಂಪು,—ಬೀಡು : ಅಭಿಮನ್ಯುವಿನ ಹೊಯ್ಲಲಿ ಹುರುಳುಗೆಟ್ಟುದು ಹೆಸರ ನಾಯಕವಾಡಿ ದುಗುಡದಲಿ (ಕುವ್ಯಾದ್ರೋ. ೫-೨೫).

[←ಮರಾ. ನಾಯಕವಡೀ./ತೆಲು. ನಾಯಕವಾಡಿ, ನಾಯಕವಾಳಿ]

ನಾಯಕಸಾನಿ, ನಾಯಿಕಸಾನಿ (ನಾ). ೧. ನೃತ್ಯಮಾಡುವವಳು; ನರ್ತಕಿ : (ಕಿ). ೨. ಸೂಳೆ; ಗಣಿಕೆ : "ವಾರಸ್ತ್ರೀ; ಪಾತರದವಳು; ನಾಯಕಸಾನಿ" (ಗಂಗಾಮ. ೨೮೬). **ನಾಯಿಕಸಾನಿ** : ೨. ಒಂದು ದಿನ . . . ಆ ನಾಯಿಕಸಾನಿಯ ಮನೇ ಮುಂದೆ ಸುಳಿದಾಡುವುದೂ . . . ಕಾರಣವಿಲ್ಲದಿದ್ದಾಗ್ಯೂ ತಾನೇ ನಗುತಾ ಹೀಗೆಲ್ಲಾ ಒಲಪು ಮಾಡುತಾ ಬಂದನು (ಮುಸುಗ. ೩).

[ನಾಯಕ + ಸಾನಿ$_1$]

ನಾಯಕಸಾರ (ನಾ). ಶ್ರೇಷ್ಠವಾದ ಪೇಯ : ನಾಯಕಸಾರವೊಲಿದು ಕಡುಸೀಯೆನೆ ಕುಡಿಯೆಂದು ತಂದು ಕುಡಿಯಿಸುವರ್ ತಪ್ತಾಯಸರಸಮಂ (ಶಾಂತಿಪು. ೭-೯೭). [ನಾಯಕ + ಸಾರ$_2$]

ನಾಯಕಸ್ಥಾನ (ನಾ). ಮುಖಂಡನ ಸ್ಥಾನ : ತಾನು ನಾಯಕಸ್ಥಾನಕ್ಕೆ ಚುನಾವಣೆಗೊಂಡ ವಿಷಯವನ್ನು ಆ ಪ್ರತಿಷ್ಠಾವಂತ ವ್ಯಕ್ತಿ ಅಧ್ಯಕ್ಷನಿಗೆ ತಿಳಿಸಿದನು (ಪುನರು. ೩೬). [ನಾಯಕ + ಸ್ಥಾನ]

ನಾಯಕಿ$_1$ (ನಾ). ೧. ಒಡತಿ; ಯಜಮಾನಿತಿ : ನಾಯಕಿಯರ್ಕಳ್ ತಮ್ಮಯ ನಾಯಕಿಯರನಟ್ಟಿ ನೀಲನೀರೇರುಹಪತ್ರಾಯತನಯನೆಯರ ತನುವ ಜಾಯಾ ಸಮಜಾತೆಯರ್ಕಳೆನೆ ನಂದನದೊಳ್ (ಮಹಾನೇ. ೧೪-೧೭). ೨. ಹೆಂಡತಿ; ಪತ್ನಿ : ಮಡಯಂಗುತ್ತ ಮಜಾತಿ ನಾಯಕಿಯ ಪಾಪಾತ್ಮಂಗೆ ದೀರ್ಘಾಯುವಂ . . . ನೀಡುವಂ ಸುಡು ಪಾಪಿಷ್ಠನ ಬೊಮ್ಮನಂ (ಸೋಮೇಶ. ೩೩). ೩. ರಾಣಿ : "ನಾಯಕಿ = ಅರಸಿ" (ಕಾಶಕೃ. ೧೫೮). ೪. ನರ್ತಕಿ; ನಾಯಕಸಾನಿ : ಬರೆ ಪುರದ ಬೀದಿಯೊಂದುಪ್ಪರಿಗೆಯೊಳ್ನಿಂದು ಹರನೋಲಗದ ನಾಯಕಿಯ ವಿಳಾಸಿನಿಯೊಂದು ಪರಿಯಾಣದೊಳೆದುದಕಮುಮನಲ್ಲಿ ಚೆಲ್ಲುತಿರೆ (ತಿರುರ. ದೇ. ೬-೧೦). ೫. ವೇಶ್ಯೆ; ಸೂಳೆ : ಮದನ ಕಲೆಗಳಂ ಪಾಟಿಸುವ ಬಗೆಯನೆಳೆಯರ್ಗೆ ಕಲಿಸುವ ನಾಯಕಿಗೆ (ಜೈಮಿಭಾ. ೬-೩೭). ೬. ಕಾವ್ಯ, ನಾಟಕಗಳಲ್ಲಿ ಪ್ರಧಾನವಾದ ಸ್ತ್ರೀಪಾತ್ರ; ನಾಯಕನ ಹೆಂಡತಿ : ಶಾಕುಂತಲ, ಸೀತ . . . ರಾಧ ಮುಂತಾಗಿ ನಾಯಕಿಯರ ಪಾತ್ರವೆಲ್ಲ ಇವಳ ಪಾಲಾಗಿದ್ದುವು (ರಂಗನಾ. ೧೮). ೭. ಹೆಂಗಸರ ಹೆಸರಿನ ಮುಂದೆ ಸೇರುವ ಪದ. ಉದಾ : ರಂಗನಾಯಕಿ. [ನಾಯಕ + -ಇ$_2$]

ನಾಯಕಿ$_2$ (ನಾ). [ಸಂಗೀತ] ಒಂದು ರಾಗದ ಹೆಸರು : ನಾಯಕೀ ರಾಗವು . . . ಸದಾ ಕಾಲದಲ್ಲಿಯೂ ಲಕ್ಷ್ಯಮಾರ್ಗವನ್ನು (ರೂಢಿಯನ್ನು) ಅನುಸರಿಸಿಯೂ ಹಾಡಲಾಗುತ್ತದೆ (ಚತುಪ್ರ. ೧೩೮); ನಾಯಕಿ—೨೨ನೇ ಮೇಳಕರ್ತ ಖರಹರಪ್ರಿಯದಲ್ಲಿ ಜನ್ಯ (ಸಂಗೀಚಂ. ೧೩೨). [ಸಂ. ನಾಯಕೀ]

ನಾಯಕಿಣಿ (ನಾ). = ನಾಯಕಸಾನಿ ೨ : ಮತ್ತೆಲ್ಲಿಯಾದರೂ ದೂರದೇಶದಿಂದ ನಾಯಕಿಣಿಯರನ್ನು ತರಿಸಿದ್ದರೆ ನೆಟ್ಟಗಾಗುತ್ತಿತ್ತು (ದೇಯಾನಿ. ೧೫೪). [<ನಾಯಕಿ$_1$]

ನಾಯಕತಿ 'ನಾಯಕಿತ್ತಿ' ನೋ.

ನಾಯಕಿತ್ತಿ, ನಾಗತಿ, ನಾಯಕಿತಿ, ನಾಯ್ಕಿತಿ (ನಾ). ೧. ನಾಯಕನ ಹೆಂಡತಿ : ಒಡತಿ : ನಾಯಕಿತ್ತಿಯ ಹಳ್ಳಿ ಕಾಲಬಯಲು ತಾವರೆಯಕೆಱೆ (ಎಕ. V, ಬೇಲೂರು. ೬೪–೧೩೨ ; 1261). ೨. = ನಾಯಕಿ ೨ : ಆ ಬೊಮ್ಮನಾಯ್ಕನ ಹೆಂಡತಿ X X X ಬನೆನಾಯಕಿತ್ತಿ (ಎಕ. VII, ಶಿವಮೊ. ೬೧–೧೩; 1287). **ನಾಗತಿ**₁ : ೧. ದೊರೆಯ ಹೆಂಡತಿಯರಿಗೆ ನಾಯಕಿತಿ ಅಥವಾ ನಾಗತಿ ಎಂದು ಹೆಸರು (ಚಕ್ರಪಾ. ೧೧ ಉಪೋದ್ಘಾತ). **ನಾಯಕಿತಿ** : ೧. ಮನ್ಮಥ ಸಂವಛರದ ಪುಸ್ಯ ಸುದ ಪಂಚಮಿಯಲು ಕೊಡಕುನೆಯ ತಿಂಮನಾಯಕನ X X ಯೆ ನಾಯಕಿತಿ ಸ್ವರ್ಗೋಪಭ್ರಾಪ್ತಳಾದ (ಎಕ. VIII(s), ಸೊರಬ. ೫೭–೫ ; ಸು. 1400) ; ದೊರೆಯ ಹೆಂಡತಿಯರಿಗೆ ನಾಯಕಿತಿ ಅಥವಾ ನಾಗತಿ ಎಂದು ಹೆಸರು (ಚಕ್ರಪಾ. ೧೧ ಉಪೋದ್ಘಾತ). ೨. ಭೀಮುವೆನಾಯಕಿತಿಯಗೆ ಪರೋಕ್ಷವಿನಯವಾಗಿ ಶ್ರೀಮನ್ಮಹಾಸಾಮಂತ ಬಾಚಿದೇವಂ ಭೀಮು ಜಿನಾಲಯಮೆನ್ದು ಬಸದಿಯಂ ಮಾಡಿಸಿಯುಂ (ಎಕ. XII, ತುಮಕೂ. ೯–೧೦೨ ; 1151) ; ಆ ಕೊಂತಿದೇವಿಗಧಿಕಂ ಚೋಕವೆನಾಯಕಿತಿ (ಎಕ. XIV, ನಾಗಮಂ. ೧೪೦–೫೫ ; ಸು. 1225). **ನಾಯಿಕ್ಕಿತಿ** : ೧. ಶ್ರೀಬಳರ ನಾಯಿಕ್ಕಿತಿಗೆ X X X ನಿಲಿನಿ ನಿಶಿದಿ ಜಯತ್ರ ಬಹುಳ ೧೦ (ಎಕ. VII, ಶಿವಮೊ. ೧೧೦–೬ ; ?). [ನಾಯಕ + –ಇತ್ತಿ]

ನಾಯಗ, ನಾಯಿಕ, ನಾಯಿಗ, ನಾಯ್ಕ (ನಾ). ಅಧಿಕಾರ ಮಾಡುವವನು ತನ್ನ ಹೆಸರಿನ ಮುಂದೆ ಸೇರಿಸಿಕೊಳ್ಳುವ ಒಂದು ಬಿರುದು : ವಿಜಣನಾಯಗರಾ ಮಗನ್ (ಎಇ. IX, ೧೭–೬ ; ಸು. 800). **ನಾಯಿಕ** : ನಾಯಕರು ಗುಣಿಕರರು ಮುಂತಾಗಿಯಿದಕ್ಕೆ ಸಾಕ್ಷಿ (ಎಕ. VII, ಶಿವಮೊ. ೧೦೭–೪೨ ; 1576 ?). **ನಾಯಿಗ** : ಗಂಗ ಪೆರ್ಮನಿಡಿದೇವರುಂ ಸಿಂಗವುರನಾಯಿಗರುಂ ಮೂವಾಡಿಗರುಂ . . . ಅಸ್ಮ ದಾನಸ್ಮ ಸಾಕ್ಷಿಣಃ (ಎಕ. XVI, ಗುಬ್ಬಿ. ೬೫–೫೫ ; 733). **ನಾಯ್ಕ** : ಉದಯಪುರ ನಾಯ್ಕರ ಮಗನ್ [ನಿ]ಂಗದತ್ತನು[೦] (ಎಇ. IX, ೨೧–೯ ; ಸು. 800).

ನಾಯಿಗನ ಚಕ್ರ = ಒಂದು ಬಿರುದು : ವಿಮಳಕೀರ್ತಿಧ್ವಜಂ ನಾಯಿಗನ ಚಕ್ರ ಪರಚಕ್ರವಕ್ರಂ ನಾಮಾದಿ ಸಮಸ್ತ ಪ್ರಶಸ್ತಿಸಹಿತಂ ಶ್ರೀಮನ್ಮಹಾಸಾಮಂತಂ ಸಿಂಗರಸರುಂ (ಸೌಇ. XX, ೫೬–೧೨ ; 1082). [<ಪ್ರಾ. ಹಾಯಗ./ ಸಂ. ನಾಯಕ]

ನಾಯಚಿಲಕೆ 'ನಾಯ್ಚಿಲೆ' ನೋ.

ನಾಯಚುಂಚಲು 'ನಾಯಿಚುಂಚ' ನೋ.

ನಾಯತುಳಸಿ 'ನಾಯಿತುಳಸಿ' ನೋ.

ನಾಯತೊಳಸಿ 'ನಾಯಿತೊಳಸಿ' ನೋ.

ನಾಯತ್ತಿ (ನಾ). ಒಂದು ಬಗೆಯ ಮರ ; ಕಲ್ಲುತ್ತಿಮರ : "ಕಾಕೋದುಂಬರಿಕಾ, ಫಲ್ಗು೬, ಮಲಫೂ೩, ಜಘನೇಫಲಾ — ಈ ೪ ನಾಯತ್ತಿ" (ನಾಚರಾ. ೧೦೪) ; ಎಸೆದಿರೆ ನಾಯತ್ತಿಯ ಸಂಧಿಸಿ ಸರ್ಪನ ಗೃಹಮುಮಾಗೆ ಪಡುವಣ ದೆಸೆಯೊಳ್ ನಿಸದಂ ಪುರುಷತ್ರಯದೊಳೊಸಗರ್ಪಂ ಜಲಮಲ್ಲಿ ಕೂಡೆ ಬೆಳ್ಸಲೆ ನೆಗೆಗುಂ (ಲೋಕೋಪ. ೫–೨೧) ; ಎಸೆವ ನಾಯತ್ತಿಯುಂ ಮೂಷ(ಲ್)ಲು ಪುತ್ತರೆ . . . ಮೂಜೂಳ ಮುಟ್ಟದಿಂ ಪಡುವ ಧಾರೆ ಭೋಗರ್ಗರೆದುದಿಸಿ ಬರ್ಪಂ (ಜಿಪು. ೧೧–೧೧). [ನಾಯ್ + ಅತ್ತಿ₁]

ನಾಯನ (ನಾ). ತಂದೆ ; ಅಪ್ಪ : ಬೇಗ ಅನ್ನುತ್ತೀರಿ, ನಾಯನ, ನಮಗೆ ತಿಂದಾಗ ಬೇಗ ಅಪ್ಪೆ (ಸಣ್ಣಕ. VII, ೪೪). [←ತೆಲು. ನಾಯನ]

ನಾಯನಾರ್, ನಾಯಿನಾರ್ (ನಾ). ತಮಿಳುನಾಡಿನಲ್ಲಿ ಶಿವಭಕ್ತಿಯನ್ನು ಪ್ರಚಾರ ಮಾಡಿದ ಅರುವತ್ತು ಮೂರು ಜನ ಸಂತರು : "ನಾಯನಾರ್ = ತಮಿಳುನಾಡಿನ ಶರಣರು ; ಅರುವತ್ತು ಮೂವರು" (ವೀಶೈಪಾ. ೨೪–೪) ; ತಮಿಳುನಾಡಿನ ಶೈವಪಂಥದ ಸಂತರು, ನಾಯನಾರರು (ಭಾರದ. ೪೦೦) ; ಈತನು ಮೊದಲು ಜೈನನಾಗಿದ್ದು ನಾಯನಾರರೆಂದು ಹೆಸರಾದ . . . ಅಪ್ಪರ್ ಎಂಬ ಯತಿಯ ಶಿಷ್ಯನಾಗಿ ಶೈವಮತವನ್ನವಲಂಬಿಸಿದನಂತೆ (ಭಾಇಸ್ಪ. ೨೪೬). **ನಾಯಿನಾರ್** : ಪಿಳ್ಳೈಯರ ನಾಯಿನಾರಂದೊಸೆದು ಮುಂದಿರ್ದ ನಾಗೀಶನಂ ತಳ್ಳಯಿಸಿ ನಲಿದು (ಪಾಗೀರ. ದೇ. ೬೭೫–೧೩).

[←ತಮಿ. ಮಲ. ನಾಯನಾರ್]

ನಾಯನೇಜುಲ್ 'ನಾಯಿನೇಜುಲ್' ನೋ.

ನಾಯನ್ಮಾರ (ನಾ). = ನಾಯನಾರ್ : ೬೩ ನಾಯನ್ಮಾರರ (ಶೈವಸಂತರ) ಬಗ್ಗೆ ಕಾಲಕ್ಷೇಪಗಳಿಗಾಗಿ ಶರಭಶಾಸ್ತ್ರಿಗಳು ಮರಾಠಿಯಲ್ಲಿಯೂ ತಮಿಳಿನಲ್ಲಿಯೂ ಸುಮಾರು ೫೦೦ಕ್ಕೂ ಹೆಚ್ಚು ಹಾಡುಗಳನ್ನು ರಚಿಸಿದ್ದಾರೆ (ಸಂಗೀತ. ೪೯). [←ತಮಿ. ನಾಯನ್ಮಾರ್]

ನಾಯಬ, ನಾಯಿಬ್, ನಾಯೇಬ (ನಾ). ೧. ಒಬ್ಬ ಅಧಿಕಾರಿಯ ಪ್ರತಿನಿಧಿಯಾಗಿ ಕೆಲಸ ಮಾಡುವವನು ; ಬದಲಿ ಸಹಾಯಕ : (೬). ೨. ಕೆಳದರ್ಜೆಯ ನೌಕರ : ನರಿಗಳಲ್ಲಿ ಕೆಲವು ದಿವಾನ, ಕೆಲವು ಅಡಳಿತಗಾರ . . . ಕೆಲವು ನಾಯಬ (ಕಮುಕ. ೧೦) ; ಅಲ್ಲಿಂದ ಹರಿ ನಾಯಬನ ನೆರವಿಂದ ಗೌಹರಳ ಮನೆಗೆ ಹೋದ (ಕೂತಕಾ. ೭೦). **ನಾಯಿಬ್** : ೩. ಪ್ರಾಂತಾಧಿಕಾರಿ : ಒಂದು ಪ್ರಾಂತದ ಮುಖ್ಯ ಮುಖ್ಯಾಧಿಕಾರಿಯೇ ಸೈನ್ಯಾಧಿಕಾರಿಯೂ ಆಗಿದ್ದನು. ಇವನಿಗೆ ನಾಯಿಬ್ ಎಂದು ಹೆಸರು (ಇಸ್ಲಾಂಸಂ. ೬೩). **ನಾಯೇಬ** : ೧. ಹರಕುಮಾರ . . . ತಮ್ಮ ಜವಿನದಾರರ ಬಳಿಗೆ ನಾಯೇಬರೆಂದು ಅವರ ಆಸ್ತಿಯ ಭಾರ ಹೊತ್ತ ಕರ್ಮಚಾರಿಯಾಗಿದ್ದಾರೆ (ಇಪ್ಪಕ. ೪೪).

[←ಅರ. ನಾಇಬ್ ; ಮರಾ. ನಾಯಬ್ ; ಹಿಂ. ನಾಯಬ್, ನಾಇಬ್]

ನಾಯಬಶಿರಸ್ತೆದಾರ (ನಾ). ತಾಲ್ಲೂಕು ಕಚೇರಿ ಮೊದಲಾದ ಕಂದಾಯವಿಭಾಗದ ಕಚೇರಿಗಳಲ್ಲಿ ಒಬ್ಬ ಅಧಿಕಾರಿ ; ಗುಮಾಸ್ತರ ಮೇಲ್ವಿಚಾರಕ ; ಮುಖ್ಯ ಗುಮಾಸ್ತ : (೬).

[ನಾಯಬ + ಶಿರಸ್ತೆದಾರ]

ನಾಯಬೇಳೆ 'ನಾಯ್ಬೇಲ' ನೋ.

ನಾಯಮಾರ 'ನಾಯಿಮಾರ' ನೋ.

ನಾಯಮ್ಮಾರ 'ನಾಯಿಮಾರ' ನೋ.

ನಾಯರ್ (ನಾ). ಒಂದು ಮರದ ಹೆಸರು : ಶಂಕರನಾಡನು ಅವನ ಕಿರಿಯ ತಂದೆ ಗೋವಿಂದನಾವಡನು ಕೊಟೆ ನಾಯರ ಮುಲ ಬಿಳುಸುರ ಮಾಡನೆಂಬ ಗದೆ ಮುಂ ಳ (ಸೌಇ. IX-ii, ೬೨೦–೫೪ ; 1546). [?]

ನಾಯಿಖಂಡ (ನಾ). ಒಂದು ನಾಡಿನ ಹೆಸರು : ಶ್ರೀಪೋಗಿಲ್ಲಿ ಸೇಂದ್ರಕಮಹಾರಾಜರ್ ನಾಯಿಖಂಡ್ಡಮುಂ ಜೆದುಗೂರಾಳ್ಕೆಯಾ ನಾಳುತ್ತು (ಇಆ. XIX, ೧೪೪–೪ ; 680). [<ನಾಗರಖಂಡ₁]

ನಾಯಿಹತ್ತಿ (ನಾ). ಒಂದು ಬಗೆಯ ಸಸ್ಯ ; ಕಾಡುಹತ್ತಿ : "ಪೈಚುಕಾ — ಕುರುಟಗೆ, ನಾಯಹತ್ತಿ" (ಓಷಧಿ. ೧೦೩).

[<ನಾಯ್ + ಹತ್ತಿ₂ (<ಪಟ್ಟಿ)]

ನಾಯಾಟ (ನಾ). ೧. ನಾಯಿಯ ಆಟ ; ನಾಯಿತನ ; ನಾಯಿಯ ವರ್ತನೆ. ೨. (ಆಲಂ) ಅತಿ ಕಾಮುಕತೆ :

ಆವಱಿಯವೆ ಪೊಸತೇ ನಿನ್ನ ನಾಯಾಟವಿಂ ಸಾಲ್ವುದು ಸಾಲ್ಗಂತಿ ರ್ದುದಕ್ಕುಂ (ಲೀಲಾವ. ೬-೧೨೦). [ನಾಯ್+ಆಟ]

ನಾಯಿ 'ನಾಯ್' ನೋ.

ನಾಯಿಉಗನಿಹಂಬು (ನಾ). ಒಂದು ಬಗೆಯ ಬಳ್ಳಿ : (ಮೈಔಗಿ. ೫೦-೯೯೭). [ನಾಯಿ (<ನಾಯ್)+ಉಗನಿ$_0$+ಹಂಬು$_2$]

ನಾಯಿಂದ 'ನಾವಿದ' ನೋ.

ನಾಯಿಂದಗತ್ತಿ 'ನಾವಿದಗತ್ತಿ' ನೋ.

ನಾಯಿಂದಗಿತ್ತಿ (ನಾ). ೧. ನಾಯಿಂದ ಜಾತಿಯ ಹೆಂಗಸು. ೨. ನಾಯಿಂದನ ಹೆಂಡತಿ : (ಕ).

[ನಾಯಿಂದ(<ನಾವಿದ)+-ಗಿತ್ತಿ]

ನಾಯಿಕ 'ನಾಯಗ' ನೋ.

ನಾಯಿಕಲಮೆಗಿಡ (ನಾ). ಒಂದು ಬಗೆಯ ಗಿಡ : ಚಿಕ್ಕಕಾವಲಿ, ನಾಯಿಕಲಮೆಗಿಡ (ಮೈಔಗಿ. ೧೮-೩೨೩).

[ನಾಯಿ(<ನಾಯ್)+ಕಲಮೆ ?+ಗಿಡ(<ಗಿಡು)]

ನಾಯಿಕಸಾನಿ 'ನಾಯಕಸಾನಿ' ನೋ.

ನಾಯಿಕುನ್ನಿ (ನಾ). ನಾಯಿಮರಿ : ಕಾಯಲಾಱಿನು ರಂಗ ಕಂಡವರ ಬಾಗಿಲನು ನಾಯಿಕುನ್ನಿಯಂತೆ ನರರ ಪೀಡಿಸುತ (ಪುರಂದ. ೨-೧೬೩ ಪಲ್ಲವಿ). [ನಾಯಿ(<ನಾಯ್)+ಕುನ್ನಿ$_1$]

ನಾಯಿಕೂಟೆ (ನಾ). ಒಂದು ಬಗೆಯ ಸಸ್ಯ : ನಾಯಿಕೂಟೆ, ಕರಿಕೊಮ್ಮೆ (ಮೈಔಗಿ. ೭-೧೨೬). [ನಾಯಿ(<ನಾಯ್)+ಕೂಟೆ$_2$]

ನಾಯಿಕೆ (ನಾ). ೧. ಒಡತಿ : ಸ್ವಾಮಿನಿ : ಯಜಮಾನಿ : 'ನಾಯಿಕೆತನ' ಪರಾ. ೨. ಹೆಂಡತಿ ; ಪತ್ನಿ : ಅನುಕೂಲಮಿತ್ರ ನನುರಕ್ತ ನಾಯಿಕಾನೀಕನನುಗತಪ್ರಕೃತಿ ಚಿರಂತನರೆನಿಪ ಚಕ್ರವರ್ತಿ ಗಳ ನೆಗಟ್ಟ ನೆಗಟ್ಟಿ ತನ್ನಭಶ್ಚರಪತಿಯಾ (ಶಾಂತಿಪು. ೨-೫೦). ೩.[ಕಾವ್ಯಮೀ]ನಾಟಕ, ಕಾವ್ಯ ಮುಂತಾದುವುಗಳಲ್ಲಿ ಪ್ರಧಾನ ವಾದ ಸ್ತ್ರೀಪಾತ್ರ; ೫ ಇದರಲ್ಲಿ ಅನೇಕ ವಿಧಗಳಿವೆ: "ನಾಯಿಕಾ —೩ : (ಅ) ಸ್ವ(ಸ್ವೀಯಾ), ಅನ್ಯಾ, ಸಾಧಾರಣಸ್ತ್ರೀ. ಅಂತರ್ಭೇದ : ಸ್ವ(ಸ್ವೀಯಾ) (i) ಮುಗ್ಧಾ, ಮಧ್ಯಾ, ಪ್ರಗಲ್ಭಾ (ಭಾವ., ರತ.). (ii) ಧೀರ. ಅಧೀರೆ, ಧೀರಾ ಧೀರೆ, ಜ್ಯೇಷ್ಠಾ, ಕನಿಷ್ಠಾ ; ಅನ್ಯಸ್ತ್ರೀ—ಕನ್ಯೆ (ಅವಿವಾಹಿತೆ), ಊಢೆ (ವಿವಾಹಿತೆ), (ದಶರೂ. ೯೯). (ಆ) ಕುಲಜಾ, ವೇಶ್ಯಾ, ಉಭಯಾ (ದಶರೂ. ೧೭೮). (ಇ) ಉತ್ತಮ, ಮಧ್ಯಮ, ಜಘನ್ಯ (ರಸರ. ೫೯). (ಈ) ಕನ್ಯೆ, ಪುನರ್ಭೂ (ಉಪಭುಕ್ತ, ಅನುಪಭುಕ್ತ), ವೇಶ್ಯೆ (ಕಾಮ. ೨೦). (ಉ) ಬಾಲಾ, ತರುಣೀ, ಪ್ರೌಢಾ (ಕಾಮ. ೧೬೧). ನಾಯಿಕಾ-೪ : (ಅ) ಅಂತಃಪುರ ನಾಯಿಕೆಯರು : ಏಕಚಾರಿಣಿ, ಜ್ಯೇಷ್ಠಾ, ಕನಿಷ್ಠಾ, ಪುನರ್ಭೂ (ಕಾಮ. ೧೯೪). (ಆ) ಧೀರಾ, ಲಲಿತಾ, ಉದಾತ್ತಾ, ನಿಭೃತಾ(ಸಂ. ೪೨). (ಇ)ಅನುಕೂಲಾ, ದಕ್ಷಿಣಾ, ಶಠಾ, ದುಷ್ಟಾ (ಅನಂಗರಂಗ - ಸಂ. ೪೨). ನಾಯಿಕಾ-೮: (ಅ) ಸ್ವಾಧೀನಪತಿಕಾ, ವಾಸಕಸಜ್ಜಾ, ವಿರಹೋತ್ಕಂಠಿತಾ, ಖಂಡಿತಾ, ಕಲಹಾಂತರಿತಾ, ವಿಪ್ರಲಬ್ಧಾ, ಪ್ರೋಷಿತಪ್ರಿಯಾ, ಅಭಿಸಾರಿಕಾ (ದಶರೂ. ೧೧೨ ; ನಾಟ್ಯಶಾ. ೨೪-೨೧೦)" (ಶ್ರೀಪತ್ಸ. ೨೩೭) : ಪ್ರಕಟತರ ನಾಯಿಕೆಯರಾ ಸ್ವಕೀಯೆ ಪರ ಕೀಯೆ ಪಣ್ಯೆಯೆನೆ ಮೂಱು ತೆಱಂ(ರಸರ. ೮೬ ಸೂತ್ರ) ; ನಾಯಿಕೆ ಯರಲ್ಲಿ 'ಸ್ವೀಯೆ' (ತನ್ನವಳು), 'ಅನ್ಯೆ' (ಇತರಳು), 'ಸಾಧಾರಣೆ' (ವೇಶ್ಯೆ) ಎಂದು ಮೂರು ವಿಧ (ಕೃಪಿಡಿ.೨೧೦). [ಸಂ. ನಾಯಿಕಾ]

ನಾಯಿಕೆತನ (ನಾ). ನಾಯಿಕೆಯ ಅಧಿಕಾರ,—ಗುಣ : ಆ ಮನೆಗಳಲ್ಲಿ ನೋಡಬೇಕು ಇವಳ ನಾಯಿಕೆತನ (ಕ್ರಿಕಿಜ. ೩೩).

[ನಾಯಿಕೆ+-ತನ]

ನಾಯಿಕೆಮ್ಮಲು 'ನಾಯಿಗೆಮ್ಮಲು' ನೋ.

ನಾಯಿಕೆಮ್ಮು 'ನಾಯ್ಗೆಮ್ಮು' ನೋ.

ನಾಯಿಕೊಡೆ (ನಾ). ಗೊಬ್ಬರದ ಗುಂಡಿ, ಹುತ್ತ, ತಿಪ್ಪೆ ಮುಂತಾದ ಕಡೆಗಳಲ್ಲಿ ಮಳೆಗಾಲದಲ್ಲಿ ವಿಶೇಷವಾಗಿ ಬೆಳೆಯುವ ಕೊಡೆಯಾಕಾರದ ಒಂದು ಬಗೆಯ ಸಸ್ಯ : ಅಣಬೆ ; ನಾಯಿ ಚತ್ರಿ : ಮೂಲೆಮೂಲೆಯಲ್ಲೂ ಮಾತಿನ ಮಲ್ಲರು ಹುಟ್ಟಿದರು ನಾಯಿಕೊಡೆಗಳಂತೆ (ಕಗಪ್ಯ. ೧೧೭) ; ಯಾರ ಪ್ರತಾಪಾಗ್ನಿಯು ಉದ್ದಂಡ ಬಾಹ್ಲೀಕರನ್ನು ಆಡುವ ಮಕ್ಕಳು ನಾಯಿಕೊಡೆಯನ್ನು ಕಿತ್ತೆಸೆಯುವಂತೆ ಕಿತ್ತೆಸೆಯಿತೋ . . . ಆ ದೇವಪುತ್ರ ತುವರ ಮಿಲಿಂದನ ಕನ್ಯೆ ಈಕೆ (ಬಾಣಆ. ೮೮) ; ಯಾವ ನೂತನ ಶಿಕ್ಷಣ ಪದ್ಧತಿಯೇ ಆಗಲಿ . . . ಅದು ಆರಂಭವಾದೊಡನೆ ಎಲ್ಲಾ ಕಡೆ ಯಿಂದಲೂ ಪ್ರಶಂಸಾಪೂರ್ಣ ಬೆಂಬಲ ದೊರೆತು, ನಾಯಿಕೊಡೆಯಂತೆ ಅದನ್ನನುಕರಿಸುವ ಸಂಸ್ಥೆಗಳು ಆರಂಭವಾಗುತ್ತವೆ (ಶಿಕ್ಷದ. ೭೨೩).

[ನಾಯಿ(<ನಾಯ್)+ಕೊಡೆ$_2$]

ನಾಯಿಗ 'ನಾಯಗ' ನೋ.

ನಾಯಿಗಣ್ಣು (ನಾ). ೧. ನಾಯಿಯ ದೃಷ್ಟಿ. ೨. (ಆಲಂ) ಕಾಮದಿಂದ ನೋಡುವ ನೋಟ ; ಕಾಮುಕ ದೃಷ್ಟಿ : ಅವನು . . . ಪ್ರಾಯಕ್ಕೆ ಬರುತ್ತಿದ್ದ ಆ ಮುಗ್ಧ ಹುಡುಗಿಯನ್ನು ನಾಯಿಗಣ್ಣಿನಿಂದಲೇ ನೋಡಿದ್ದನು (ಮಲೆಮ. ೭೯೧).

[ನಾಯಿ(<ನಾಯ್)+ಕಣ್ಣು(<ಕಣ್)]

ನಾಯಿಗಳ್ಳಿ (ನಾ). ಒಂದು ಬಗೆಯ ಕಳ್ಳಿಗಿಡ : ಪಾಲನೊಲ್ಲದೆ ನಾಯಿಗಳ್ಳಿಯ ಪಾಲನುಣ್ಬನುಂ . . . ಮರುಳಲ್ಲನೇ (ಧರ್ಮಾಮೃ. ೩-೧೮೩). [ನಾಯಿ (<ನಾಯ್)+ಕಳ್ಳಿ$_2$]

ನಾಯಿಗೆಮ್ಮಲು, ನಾಯಿಕೆಮ್ಮಲು (ನಾ). =ನಾಯ್ಗೆಮ್ಮು : ಆ ಮನೆಯಲ್ಲಿ ಹುಡುಗರಿಗೆಲ್ಲ ನಾಯಿಗೆಮ್ಮಲು ಬಂದುಬಿಟ್ಟಿದೆ (ರೂಢಿ). **ನಾಯಿಕೆಮ್ಮಲು :** ನಾಯಿಕೆಮ್ಮಲು ಬಂದರೆ ಮಕ್ಕಳಿಗೆ ಬಹಳ ಹಿಂಸೆ (ರೂಢಿ). [ನಾಯಿ (<ನಾಯ್)+ಕೆಮ್ಮಲು]

ನಾಯಿಗೆಮ್ಮು 'ನಾಯ್ಗೆಮ್ಮು' ನೋ.

ನಾಯಿಚತ್ರಿ (ನಾ). =ನಾಯಿಕೊಡೆ : ಮಳೆ ಬಿದ್ದು, ತಿಪ್ಪೆಗುಂಡಿ ಗಳಲ್ಲೆಲ್ಲಾ ನಾಯಿಚತ್ರಿಗಳು ಹುಟ್ಟಿಕೊಂಡಿವೆ (ರೂಢಿ).

[ನಾಯಿ (<ನಾಯ್)+ಚತ್ರಿ (<ಛತ್ರಿ$_2$)]

ನಾಯಿಚುಂಚ, ನಾಯಚುಂಚಲು (ನಾ). ಒಂದು ಬಗೆಯ ವನಸ್ಪತಿ : "ಕಟುಕಾ—ಕಟುಕರೋಹಿಣಿ, ಹಾಗಲ, ಕಹಿಸೋರೆ, ನಾಯಿಚುಂಚ, ಕೊಡಸಿಗ" (ಓಷಧಿ. ೨೩). **ನಾಯಚುಂಚಲು :** "ವೇದಿನೀ—ನಾಯಚುಂಚಲು, ಮೆಂಥೆಯ" (ಓಷಧಿ. ೧೫೬).

[ನಾಯಿ(<ನಾಯ್)+'ಚುಂಚ?']

ನಾಯಿಛತ್ತರಿಗೆ (ನಾ). =ನಾಯಿಕೊಡೆ : ಯುದ್ಧದ ಕಾಲದಲ್ಲಿ ಇಂತಹ ಬಣ್ಣದ ಬುರುಗಿನವರು ನಾಯಿಛತ್ತರಿಗೆಗಳಂತೆ ಹುಟ್ಟಿಕೊಂಡು . . . ಮೆರೆಯತೊಡಗಿದರು (ಭಾರಥಿ. ೪೬) ; ನಾಯಿಛತ್ತರಿಗ್ಯಾಗ ಕುಳಿತು 'ರುದ್ರಗಂಟಿ ಮೂಸಿ' ನೋಜು ಮಾಡುವ ಮಾಯಗಾರ್ತಿ ಪಾತರಗಿತ್ತಿ (ದತ್ತವಾ. ೩೧) ; ಕಲ್ಲಹೂ, ನಾಯಿಛತ್ತರಿಗೆ ಇವೆಲ್ಲ ಈ ವರ್ಗದೊಳಗೆ ಬರುತ್ತವೆ (ಮುಂಬಯಿ. ೬-೨೭೫).

[ನಾಯಿ(<ನಾಯ್)+ಛತ್ತರಿಗೆ(<ಚತ್ತರಿಗೆ)]

ನಾಯಿಜನ್ಮ (ನಾ). ೧. ನಾಯಿಯ ಹುಟ್ಟು : ನಾಯಿಯಾಗಿರುವಿಕೆ : ನರಿ ನಾಯಿ ಜನ್ಮದಿ ಬಾರದೆ ಈ ನರಜನ್ಮದಲಿ ಬಂದು ಸೇರಿದೆ (ಪುರಂದ. ೨-೪೧-೧). ೨. (ಆಲಂ) ನೀಚಜಾತಿ : ಅಲ್ಪವಾದುದು : ಸ್ವತಃ ಮಾಡೂ ಧೈರ್ಯವಿಲ್ಲ, ಬೇರೆಯವರು ಮಾಡಿದ್ದನ್ನು ಮೂಸಿ ನೋಡ್ತಾವೆ ನಾಯಿಜನ್ಮದವು (ಪೂರುದಾ. ೧೪೧).

[ನಾಯಿ(<ನಾಯ್) + ಜನ್ಮ]

ನಾಯಿಡು (ನಾ). ೧. ಗ್ರಾಮದ ಮುಖಂಡ : ಪಟೇಲ ; ಊರ ಗೌಡ : ಪಟೇಲನಿಗೆ—ಪಟೇಲ . . . ಮಣಿಗಾರ ಅಥವಾ ಅಡಿಗಾರ, ನಾಯಿಡು ಪಗ್ಗೆರೆ ಹೆಸರುಗಳುಂಟು (ಗ್ರಾಮೂಕ. ೧). ೨. ಹಿಂದೂಗಳಲ್ಲಿ ಒಂದು ಒಳಪಂಗಡ ಮತ್ತು ಆ ಪಂಗಡಕ್ಕೆ ಸೇರಿದ ಗಂಡಸರು ತಮ್ಮ ಹೆಸರಿನ ಮುಂದೆ ಸೇರಿಸಿಕೊಳ್ಳುವ ಪದ : ಕೃಷ್ಣಯ್ಯನಾಯಿಡು ಕಟ್ಟಿಸಿದ ದೇವಸ್ಥಾನ ಇದು (ರೂಢಿ).

[ದೇ.॥ ತಮಿ. ನಾಯುಡು ; ತೆಲು. ॥ನಾಯುಂಡು, ನಾಯಿಂಡು]

ನಾಯಿತಕ್ಕಲೆ (ನಾ). ಒಂದು ಬಗೆಯ ಮರ : ವಿಷಮಧಾರಿ, ಕುಂಡಲಿ, ನಾಯಿತೇ[ತ]ಕ್ಕಲೆ (ಮೈಬಿಗಿ. ೨೭-೪೧೭).

[ನಾಯಿ(<ನಾಯ್) + ತಕ್ಕಲೆ$_1$(<ತಕ್ಕಲ್)]

ನಾಯಿತನ 'ನಾಯ್ತನ' ನೋ.

ನಾಯಿತುಳಸಿ, ನಾಯತುಳಸಿ (ನಾ). ತುಳಸಿ ಗಿಡದಲ್ಲಿ ಒಂದು ಬಗೆ ; ಕಾಡುತುಳಸಿ : (ಮೈಬಿಗಿ. ೫೭-೧೧೪೭). **ನಾಯತುಳಸಿ** : "ಗಂಧಪರ್ಣಜಃ —ನಾಯತುಳಸಿ" (ಓಷಧಿ. ೪೭) ; ನೆತ್ತಿಯಶೂಲೆಗೆ—ನಾಯತುಳಸಿಯ ರಸಮಂ ನಂಬೇಹುಳಿಯಲ್ಲಿ ಕಾಸಿ ನೆತ್ತಿಗೊತ್ತಲು ನೆತ್ತಿಶೂಲೆ ಮಾಣ್ಗುಂ (ವೈವಿ. ೧೯೦).

[ನಾಯಿ(<ನಾಯ್) + ತುಳಸಿ(=ತುಲಸಿ)]

ನಾಯಿತೇಗ (ನಾ). ಒಂದು ಬಗೆಯ ಮರ; ಭಾರಂಗಿ; ಕಿರುದೇಗು : ''ಹಂಬಿಕಾ, ಬ್ರಾಹ್ಮಣೇ, ಪದ್ಮಾ . . . ವಂದಕಃ—೯ ಭಾರಂಗೀ ಹೆಸರುಗಳು, ಗಂಟುಭಾರಂಗೀ ಎಂಬುವ ಗ್ರಂಥಿಕದ್ರವ್ಯವು ಪ್ರಸಿದ್ಧವಾದದ್ದು, ಕಿರುದೇಗುಗಿಡವೆಂದು ಕೆಲವರನ್ನುವರು, ನಾಯಿತೇಗದ ಮರೆ'' (ಸಿದ್ಧಾಂತಿ. ೧೩೨).

[ನಾಯಿ(<ನಾಯ್) + ತೇಗ$_1$(<ತೇಗು$_4$)]

ನಾಯಿತೊಣಚಿ (ನಾ). ನಾಯಿಯ ಮೈಮೇಲಿನ ಕೂದಲಿನಲ್ಲಿ ಸೇರಿಕೊಳ್ಳುವ ಒಂದು ಬಗೆಯ ಕೀಟ ; ತೊನಸೆ : (ಕ).

[ನಾಯಿ(<ನಾಯ್) + ತೊಣಚಿ(<ತೊನಸೆ)]

ನಾಯಿತೊಳಸಿ, ನಾಯತೊಳಸಿ (ನಾ). = ನಾಯಿತುಳಸಿ : "ಅಜಕಃ—ನಾಯಿತೊಳಸಿ" (ಅಕಾಶಾ. ೨-೩೨) ; "ತೀಕ್ಷ್ಣಮಾಣಿ —ನಾಯಿತೊಳಸಿ" (ಓಷಧಿ. ೭೦). **ನಾಯತೊಳಸಿ** : ''ಪರ್ಣಶತಾ—ನಾಯತೊಳಸಿ" (ಓಷಧಿ. ೯೨). [ನಾಯಿ(<ನಾಯ್) + ತೊಳಸಿ]

ನಾಯಿದ 'ನಾವಿದ' ನೋ.

ನಾಯಿದೊಣ್ಣೆ (ನಾ).. ಗಾಡಿಯ ಅಚ್ಚುಮರ ಹೊರಳದಂತೆ ಕಾಪಾಡುವ ದಂಡ : ಗಾಡಿಗೆ ನಾಯಿದೊಣ್ಣೆಯೇ ಆಧಾರ (ರೂಢಿ).

[ನಾಯಿ(<ನಾಯ್) + ದೊಣ್ಣೆ$_1$]

ನಾಯಿನಾರ್ 'ನಾಯನಾರ್' ನೋ.

ನಾಯಿನಾರೆ (ನಾ). ಒಂದು ಬಗೆಯ ಮರ : ಮತ್ತಂ ಒಳಮಾಡಿನ ಒಳಗೆ ನಾಯಿನಾರೆಯ ಧರ್ಮದ ಬಳಿನ ಕಂಟ್ಟಿದ ಮೇಲಣ ತೆಂಗಿನ ಮರ ರುದ್ರಾಕ್ಷಿ ಒಡೆಯರ ಮಟ್ಟಿಕೆ ಒಬನ ಧರ್ಮ್ಮ ನಡವದು (ಸೌಇಇ. IX—ii, ೪೭೩-೨೫; 1487); ಸೊಗದೆ, ಸಿಲದೆ, ನಾಯಿನಾರೆ, ಇವಂ ಅಡಿನ ಹಾಲಲ್ಲಿ ಕೊಡಿಸುವುದು (ವಿವೈವಿ.೧೪೭). [?]

ನಾಯಿನಾಲಗೆ ಗಿಡ (ನಾ) ಒಂದು ಬಗೆಯ ಗಿಡ : ನೆಲ ಮುಚ್ಚಲು, ಹುಸ್ತಪಾದ, ಹಕ್ಕರಿಕೆ, ಅನೆಕಾಲುಗಿಡ, ನಾಯಿನಾಲಗೆಗಿಡ (ಮೈಬಿಗಿ. ೩೩-೬೪೧).

[ನಾಯಿ(<ನಾಯ್) + ನಾಲಗೆ + ಗಿಡ (<ಗಿಡು)]

ನಾಯಿನಿದ್ದೆ (ನಾ). ನಾಯಿಯ ನಿದ್ದೆಯಂತೆ ಆಳವಿಲ್ಲದ ನಿದ್ದೆ : ತಿಳಿನಿದ್ದೆ : "ನಾಯಿನಿದ್ದೆ ; ಲಘುವಾದ, ಆಗಾಗ ಎಚ್ಚರಗೊಳ್ಳುವ, ನಿದ್ದೆ" (Dog sleep. ಇಂಕಾ). [ನಾಯಿ(<ನಾಯ್) + ನಿದ್ದೆ]

ನಾಯಿನಿಸೊಪ್ಪು (ನಾ). ಒಂದು ಬಗೆಯ ಸೊಪ್ಪಿನ ಗಿಡ : (ಮೈಬಿಗಿ. ೨೭-೫೦೭). [?+ಸೊಪ್ಪು$_2$]

ನಾಯಿನೇರಳೆ 'ನಾಯಿನೇಜುಲ್' ನೋ.

ನಾಯಿನೇಜುಲ್, ನಾಯನೇಜುಲ್, ನಾಯಿನೇರಳೆ (ನಾ). ಒಂದು ಬಗೆಯ ನೇರಳೆ ; ಕಡಿಮೆ (ಯೋಗ್ಯತೆಯುಳ್ಳ) ರುಚಿಯನ್ನು ಹೊಂದಿರುವ ನೇರಳೆ ; ಕೇಳುನೇರಳೆ ; "ನಾದೇಯಿ, ಭೂಮಿಜಂಬುಕೆ"(ನಾಚರಾ. ೬). **ನಾಯನೇಜುಲ್** : "ಜಂಬೂಪ್ರಿಯಾ. ನಾಯನೇಜುಲ್" (ಓಷಧಿ. ೬೧). **ನಾಯಿನೇರಳೆ** : "ನಾದೇಯಿ, ಭೂಮಿಜಂಬುಕಾ—೨ ಕಾಗಿನೇರಳೇಗಿಡ ; ನಾಯಿನೇರಳೇ ಗಿಡ, ನೆಲನೇರಳೇ ಗಿಡ" (ಸಿದ್ಧಾಂತಿ. ೧೨). 'ಕುನ್ನೇರಿಳೆ' ಪರಾ.

[ನಾಯಿ(<ನಾಯ್) + ನೇಜುಲ್]

ನಾಯಿನೊಳಲೆ 'ನಾಯ್ನೊಳಲೆ' ನೋ.

ನಾಯಿಪಾಡು (ನಾ). ೧. ನಾಯಿಯ ಸ್ಥಿತಿ. ೨. (ಆಲಂ) ಬಹಳ ಹೀನವಾದ ಸ್ಥಿತಿ ; ಶೋಚನೀಯ ಸ್ಥಿತಿ : ಹೋರೆಯಿಲ್ಲದವನು ನಾರೀನೂ ಕಟ್ಟಿಕೊಂಡರೆ ಅವನ ಪಾಡು ನಾಯಿಪಾಡು (ತುಂಗಭ. ೧೫೫) ; ನಮ್ಮ ಹಿಂದಿನ ಜನ್ಮದ ವಿಷಯಗಳೆಲ್ಲ ಜ್ಞಾಪಕವಿರುವುದಾದರೆ ನಮ್ಮ ಪಾಡು ನಾಯಿಪಾಡು (ಜೀವಾತ್ಮ. ೧೪೬) ; ಆತ್ತಗುಬ್ಬಕ್ಕಿಯ ಪಾಡೋ ನಾಯಿಪಾಡು (ಒಡ್ಡಿಉ. ೯೫).

[ನಾಯಿ(<ನಾಯ್) + ಪಾಡು$_3$]

ನಾಯಿಪಾಲು 'ನಾಯ್ಪಾಲ್' ನೋ.

ನಾಯಿಬ್ 'ನಾಯಬ' ನೋ.

ನಾಯಿಬದುಕು 'ನಾಯ್ಬದುಕು' ನೋ.

ನಾಯಿಬಾಲ 'ನಾಯ್ಬಾಲ' ನೋ.

ನಾಯಿಬಾಳು 'ನಾಯ್ಬಾಳು' ನೋ.

ನಾಯಿಬೀಟಿ (ನಾ). ಬೀಟಿ ಮರದಲ್ಲಿ ಒಂದು ಬಗೆ : (ಮೈಬಿಗಿ. ೨೪-೫೫೦). [ನಾಯಿ(<ನಾಯ್) + ಬೀಟಿ$_1$]

ನಾಯಿಬೆಂಡೆ (ನಾ). ಒಂದು ಬಗೆಯ ಸಸ್ಯ : ಬೆಂಡೆಮರ, ಬೆಲ್ಲಕ, ಬೆಳಗಂ, ಕೋಳಿಬೆಂಡೆ, ನಾಯಿಬೆಂಡೆ (ಮೈಬಿಗಿ. ೪೪-೧೩೮).

[ನಾಯಿ(<ನಾಯ್) + ಬೆಂಡೆ]

ನಾಯಿಬೆತ್ತ (ನಾ). ಒಂದು ಬಗೆಯ ಬೆತ್ತ : ಬಲೆಬೆತ್ತ, ನಾಯಿಬೆತ್ತ (ಮೈಬಿಗಿ. ೧೫೫-೨೪೧). [ನಾಯಿ(<ನಾಯ್) + ಬೆತ್ತ]

ನಾಯಿಬೆಳೆಗಿಡ (ನಾ). ಒಂದು ಬಗೆಯ ಸಸ್ಯ ; "ಪೀತಜಗಂಧ, ನೂರ್ಯಭಕ್ತ" (ಪಂಡಿತ. ೨೪೨).

[ನಾಯಿ(<ನಾಯ್) + ಬೆಳೆ$_2$ + ಗಿಡ(<ಗಿಡು)]

ನಾಯಿಬೇಲ 'ನಾಯ್ಬೇಲ' ನೋ.

ನಾಯಿಬೇಳ 'ನಾಯ್ಬೇಲ' ನೋ.

ನಾಯಿಮರಸ 'ನಾಯಿಮ್ಮರಸ' ನೋ.

ನಾಯಿಮರಿ (ನಾ). ಮರಿನಾಯಿ ; ಎಳೆಯ ವಯಸ್ಸಿನ ನಾಯಿ; ಕುನ್ನಿ : ನೀನು ಸಾಕಿದ ನಾಯಿಮರಿ ಕೊಟ್ಟ ಹಾಲನ್ನು ಕುಡಿ

ಯದೆ, ನಿನಗಾಗಿ ಪಟಮಾಡುತ್ತಿದೆ (ಸಪದಾ. II, ೯೭೦) ; ಕೇಡುಗಾಲಕ್ಕೆ ನಾಯಿಮರಿ ಮೊಟ್ಟೆ ಇಕ್ಕಿತು (ಗಾದೆ).

[ನಾಯಿ(<ನಾಯ್)+ಮರಿ(<ಮಱಿ)]

ನಾಯಿಮೂರ, ನಾಯಮಾರ, ನಾಯಮ್ಮಾರ (ನಾ). ೧.ಕೇರಳ ದೇಶದ ನಾಯರು ಜನಾಂಗ. ೨. ಮಲೆಯಾಳಿ ಜನ : ಸುಕಾಲಿಯರು, ಕೊರಚರು, ನಾಯಿಮಾರರು ಮೊದಲಾದ ಬಿಡಿ ವರ್ಗಕರು (ಸೌಗಂಧಿ. ೧೩೫-೧೪) ; ಇಂತು ನೀಲೇಶ್ವರದ ಗಡಿಮುಖ ದೊಳ್ ತೊಲಗದ ಕಂಬನುಂ ನಿಲಿಸಿ ನಾಯಿಮಾರರಂ ಪಶಗ್ಗೆದು (ಕಳಸ್ಯ. ೬-೧೧). **ನಾಯಮಾರಃ** ೨. ನೀವು ಯಾವತ್ತು ನಾಯಿಮಾರರನ್ನು ಕರೆದುಕೊಂಡು ಕೊಡಗಿನ ಸೀಮೆಯನ್ನು ಸಾಧಿಸುವ ಬಗ್ಗೆ ಳುಟ್ಟಿ ಹತ್ತಿ ಬಂದರೆ ನಾನು ಕೆಲವು ಕೊಡಗರನ್ನು ನಿಮ್ಮ ಕುಮ್ಮಕ್ಕಿಗೆ ಸಾಕಾರ ಮಾಡಿಕೊಡುತ್ತೇನೆ (ರಾಜೇಂದ್ರ.೬). **ನಾಯಮ್ಮಾರಃ** ೨. ನಮ್ಮ ನಾಯಮ್ಮಾರರು ಕಳೆದ ಎರಡು ಗಳಿಗೆಗಳಿಂದ ಎಡೆಬಿಡದೆ ಹೋರುತ್ತಿದ್ದಾರೆ (ಹುಲಿಹಾ. ೬೮೭).

[←ತುಳು. ನಾಯಿಮೂರಿ]

ನಾಯಿಮ್ಮ, ನಾಯಿರ್ಮ (ನಾ). ಒಬ್ಬಾತನ ಹೆಸರು : ರೂಪಿನ ಮಣಿ ವಿನಯದ ಗೌರವದ ಧರ್ಮ್ಮೋದಾಗರಮೆನೆ ಸಜ್ಜನನುತ ಗೋತ್ರ ಳಳತ್ಯಕ ರೋಚಿರುಚಿ ನಾಯಿಮ್ಮ (ಕಇ. I, ೨೦-೨೬ ; ?). **ನಾಯಿರ್ಮ** : ಮಿಳ್ಳಿಸಟ್ಟಗೆ ತಾಂ ತರ್ಮ್ಮಂನಾರ್ಪಿನಾರ್ಮ್ಮನಾ ನಾಯಿಮ್ಮ (ಕಇ. I, ೨೦-೨೧; ?). [?]

ನಾಯಿಮ್ಮರಸ, ನಾಯಿಮರಸ (ನಾ). ಒಬ್ಬಾತನ ಹೆಸರು : ಕಾಲದಿಯ ನಾಯಿಮ್ಮರಸಂಗೆ ಶಾಸನಮಂ ತೋಱಲು (ಇಆ. XVIII, ೬೯-೭೨ ; 999). **ನಾಯಿಮರಸ** : ಶ್ರೀಮನ್ನೈಯ ನಾಯಿಮರಸ [ನುಂ] ಮೂಲಕರಸನುವಿಟ್ಟು (ಸೌಇಇ. XX, ೨೬-೧೭ ; 1040).

[ನಾಯಿಮ್ಮ+ಅರಸ]

ನಾಯಿಯುಳ್ಳಿ (ನಾ). ಒಂದು ಬಗೆಯ ಸಸ್ಯ : (ಕ).

[ನಾಯಿ(<ನಾಯ್)+ಉಳ್ಳಿ]

ನಾಯಿಯೆಲವ 'ನಾಯೆಲವ' ನೋ.

ನಾಯಿರಾಗಿ (ನಾ.) ರಾಗಿಯಲ್ಲಿ ಒಂದು ಬಗೆ : (ಕ).

[ನಾಯಿ(<ನಾಯ್)+ರಾಗಿ]

ನಾಯಿರ್ಮ 'ನಾಯಿಮ್ಮ' ನೋ.

ನಾಯಿವೇಳ 'ನಾಯ್ವೇಲ' ನೋ.

ನಾಯಿಸಂತೆ (ನಾ). ೧. ಬಹಳ ಅಗ್ಗಕ್ಕೆ ಪದಾರ್ಥಗಳು ಸಿಗುವ ಪೇಟೆ ; ತುಂಬ ಕಡಿಮೆ ಬೆಲೆಗೆ ಮಾಲುಗಳು ಸಿಗುವ ಸ್ಥಳ. ೨. ಬಹಳ ಅಗ್ಗ ; "ಹೊಲೆ ಅಗ್ಗ" (ಜಾನಕೋ. ೧೧).

[ನಾಯಿ(<ನಾಯ್)+ಸಂತೆ]

ನಾಯಿಸಾಸಿವೆ (ನಾ). ಸಾಸಿವೆಯಲ್ಲಿ ಒಂದು ಬಗೆ : ಕಾಡು ಸಾಸಿವೆ, ನಾಯಿಸಾಸಿವೆ (ಮೈಪಿಗಿ. ೨೨-೪೧೫).

[ನಾಯಿ(<ನಾಯ್)+ಸಾಸಿವೆ(<ಸಾಸವೆ)]

ನಾಯಿಸೊಂಕುಬಳ್ಳಿ (ನಾ). ಒಂದು ಬಗೆಯ ಬಳ್ಳಿ : ನಸಗುನ್ನಿ, ನಾಯಿಸೊಂಕುಬಳ್ಳಿ , ತುರಚಿ ಅವರೆ (ಮೈಪಿಗಿ. ೫೫-೧೧೦೪).

[ನಾಯಿ(<ನಾಯ್)+ಸೊಂಕು(<ಸೋಂಕು)+ಬಳ್ಳಿ]

ನಾಯಿಸೊಣಗು (ನಾ). ಒಂದು ಬಗೆಯ ಸಸ್ಯ : ಈಗ ನಶ್ತು ಹೋದ ಆ ವಾರ್ತೆಯನು ಪುನಃ ಮೊಳೆತು ನಾಯಿಸೊಣಗಿನ ಬಳ್ಳಿಯಂತೆ ಹಬ್ಬಿ ಯಾರ ಮೈಗೆ ಅಂಟಿಕೊಂಡೀತು (ವಿಧಿನೈ. ೧೨೬).

[←ತುಳು. ನಾಯಿಸೊಣಂಗ್]

ನಾಯಿಸೊಪ್ಪು (ನಾ). ಒಂದು ಬಗೆಯ ಸೊಪ್ಪು : (ಮೈಪಿಗಿ. ೭೫-೧೫೪೦). [ನಾಯಿ (<ನಾಯ್)+ಸೊಪ್ಪು]

ನಾಯಿಹಂಬೀಕಡ್ಡಿ (ನಾ). ಹಂಬೀಕಡ್ಡಿ ಜಾತಿಗೆ ಸೇರಿದ ಒಂದು ಬಗೆಯ ಸಸ್ಯ : ದೊಡ್ಡಹಂಬೀಹುಲ್ಲು, ಹಲ್ಲು ಜುಟ್ಟಿ ಹಂಬಿ, ನಾಯಿಹಂಬೀಕಡ್ಡಿ (ಮೈಪಿಗಿ. ೯-೧೫೧).

[ನಾಯಿ (<ನಾಯ್)+ ಹಂಬೀಕಡ್ಡಿ (<ಹಂಬಕಡ್ಡಿ)]

ನಾಯಿಹಕ್ಕರಿಕೆಗಿಡ (ನಾ). ಹಕ್ಕರಿಕೆ ಜಾತಿಗೆ ಸೇರಿದ ಒಂದು ಬಗೆಯ ಸಸ್ಯ : (ಕ).

[ನಾಯಿ (<ನಾಯ್)+ಹಕ್ಕರಿಕೆ(<ಹಕ್ಕಜುಕೆ)+ಗಿಡ(<ಗಿಡು)]

ನಾಯಿಹಾಲೆ (ನಾ). ಒಂದು ಬಗೆಯ ಹಾಲೆಮರ : ಆಡು ಮುಟ್ಟದ ಗಿಡ, ಅಂತಮೂಲ, ನಾಯಿಹಾಲೆ, ನೇಪಾಳದ ಬೇರು (ಮೈಪಿಗಿ. ೭೬-೧೫೫೬).

[ನಾಯಿ (<ನಾಯ್)+ ಹಾಲೆ(<ಪಾಲೆ)]

ನಾಯಿಲವ, ನಾಯಿಯೆಲವ (ನಾ). ಬೂರುಗದ ಜಾತಿಗೆ ಸೇರಿದ ಒಂದು ಬಗೆಯ ಮರ : "ಶಾಲ್ಮಲಿಕಃ—ನಾಯೆಲವ" (ಓಷಧಿ.೧೮೩). **ನಾಯಿಯೆಲವಃ** "ಕೂಟಶಾಲ್ಮಲಿ—ನಾಯಿಯೆಲವ" (ಓಷಧಿ.೨೨).

[ನಾಯ್+ಎಲವ]

ನಾಯೇಬ 'ನಾಯಬ' ನೋ.

ನಾಯೊಡಲ್ (ನಾ). (ಆಲಂ) ತುಚ್ಛವಾದ ಶರೀರ ; ಹೇಯವಾದ ದೇಹ : ಈ ಪುರುಳಿಲ್ಲದ ನಾಯೊಡಲಂ ಮರುಳೇ ಕರಮೊಲ್ದು ಕೂರ್ಪ ಮಾನಿಸರೊಳರೇ (ಧರ್ಮಾಮೃ. ೬-೧೪೩).

[ನಾಯ್+ಒಡಲ್]

ನಾಯೊಳಲೆ (ನಾ).=ನಾಯ್ನೊಳಲೆ ೧ : "ಗಂಡೂಪದಃ, ಕಿಂಜುಳಕಃ —ಈ ೨ ನಾಯೊಳಲೆ" (ಹಲಾಯು. ೧೦೯-೩೯) ; "ಕಿಂಜುಳಿಕ ಮೆನಲು ಗಂಡೂಪದಾಖ್ಯಮೆನೆ ನಾಯೊಳಲೆಗಕ್ಕು ನಾಮಂ" (ಮಂಗಂಗಾ. ೧೨೨-೪). 'ಎರುಬುಹುಳು' ಪರಾ.

[P ಇದು 'ನಾಯ್ನೊಳಲೆ' ಎಂಬುದರ ಅಪಲಿಖಿತ]

ನಾಯ್ಕಿತಿ 'ನಾಯಕಿತ್ತಿ' ನೋ.

ನಾಯ್ಗ 'ನಾಯಗ' ನೋ.

ನಾಯ್ಗೆಮ್ಮು, ನಾಯಿಕೆಮ್ಮು, ನಾಯಿಗೆಮ್ಮು (ನಾ). ಮಕ್ಕಳಿಗೆ ಬರುವ ಒಂದು ಬಗೆಯ ಕೆಮ್ಮು ; ಒಂದೇ ಸಮನೆ ಕೆಮ್ಮು ವಂತೆ ಮಾಡುವ ಒಂದು ಬಗೆಯ ರೋಗ ; ಕೋಡಗ ಕೆಮ್ಮು : ಕವನೋವು, ತಲೆನೋವು, ನಾಯ್ಗೆಮ್ಮು, ಬದಿಶೂಲೆ (ಬಿಗಾಳ. ೪೭-೬). **ನಾಯಿಕೆಮ್ಮು** : ಸಿಡುಬು, ಕ್ಷಯ, ದಿಫ್ತೀರಿಯಾ, ನಾಯಿಕೆಮ್ಮು, ಸೆಟೆರೋಗ ಮತ್ತು ಟೈಫಾಯ್ಡ್ ರೋಗಗಳು ಬರದಂತೆ ತಡೆಗಟ್ಟುವ ವಿಧಾನಗಳು ಇಂದು ನಮಗೆ ತಿಳಿದಿವೆ (ಕಲರೋ. ೬); ನಾಯಿಕೆಮ್ಮು. . . ಬರದಂತೆ ತಡೆಯಲು ಮಕ್ಕಳಿಗೆ ನಾಯಿಕೆಮ್ಮು ಇನಾಕ್ಯುಲೇಷನ್ (Inoculation) ಗಳನ್ನು ಮಾಡುವುದು ಉತ್ತಮ (ಗೃಪಡಿ. ೧೫೧). **ನಾಯಿಗೆಮ್ಮು** : "ನಾಯಿಕೆಮ್ಮು(ನಾಯಿಗೆಮ್ಮು) =ಕೋಡಗ್ಗೆಮ್ಮು" (ಜಾನಕೋ. ೧೦). [ನಾಯ್+ಕೆಮ್ಮು]

ನಾಯ್ನೊಲಿಕೆ, ನಾಯಚಿಲಕೆ (ನಾ). ಒಂದು ಬಗೆಯ ಚಿಲಿಕೆ ಸೊಪ್ಪು : "ಪುನಳಚಿಲ್ಲೀ—ನಾಯ್ಚಿಲಿಕೆ" (ಓಷಧಿ. ೧೬೯). **ನಾಯಚಿಲಕೆ** : "ಶ್ವಚಿಲ್ಲೀ—ನಾಯಚಿಲಕೆ" (ಓಷಧಿ. ೧೬೨).

[ನಾಯ್+ಚಿಲಿಕೆ]

ನಾಯ್ತನ, ನಾಯಿತನ(ನಾ). ೧. ನಾಯಿಯ ಗುಣ,—ಸ್ವಭಾವ. ೨. (ಆಲಂ) ಕೀಳುತನ ; ತುಚ್ಛಬುದ್ಧಿ ; ಹೀನಬುದ್ಧಿ :

ಇದೊಮ್ಮಿಗೆ ಕೂಗಿಡಲಾರ್ತಳಿಲ್ಲ ನಾಯ್ತನದೊಳೆ ಮಿಾಸಲೆಂಬುದಱನೊಕ್ಕುದನುಂಡಳೆ ದೇವಿ ಸಾವಳೆ (ಸಮಪ. ೯-೧೦೬); ವಂಚಿಸಲ್ಕಿನಿಸಂ ನೀಂ ಪುಸಿವೇಟ್ಟು ಮುಚ್ಚಿದೆಯಂದರ್ಕಾಂ ಬಲ್ಲೆನೇ ನಿನ್ನ ನಾಯ್ತನಮಂ ನಂಬದಿರೆಂದು ದೂಱುವವೊಲ್ (ರಸರ. ೬-೧೩೫). **ನಾಯಿತನ:** ೨. ಈ ನಾಯಿತನವ ಮಾಣಿಸು ಕೂಡಲಸಂಗಮ ದೇವಾ (ಬಸವ. ೩೫); ಬಾಯಿ ಹುಳುವುದು ಬಯಲ ನುಡಿದೊಡೆ ನಾಯಿತನ ಬೇಡಲವೊ ಕೆಡದಿರು (ಕುಷ್ಠಾವಿ. ೩-೧೩). [ನಾಯ್+-ತನ]

ನಾಯ್ದಱಿಯ (ನಾ). ಕಗ್ಗಲಿ ಜಾತಿಗೆ ಸೇರಿದ ಒಂದು ಮರ; ದುರ್ಗಂಧವುಳ್ಳ ಕಗ್ಗಲಿ ಮರ; ಹುಚ್ಚುಕಗ್ಗಲಿಮರ: "ಅರಿ ಮೇದ, ವಿಟ್ಟದಿರ" (ನಾಚಿರಾ. ೬).

[ನಾಯ್+ತಱಿಯ(<ತಱಿ$_3$)]

ನಾಯ್ನೊಳಲೆ, ನಾಯಿನೊಳಲೆ (ನಾ). ೧. (ಕೆಸರಿನಲ್ಲಿಯೂ ತೇವದ ನೆಲದಲ್ಲಿಯೂ ಇರುವ ಹಂಚೀಕಡ್ಡಿಯನ್ನು ಹೋಲುವ) ಒಂದು ಬಗೆಯ ಕೆಂಪುಹುಳು; ಎರುಬುಹುಳು: ಬಟಲದೆ ಪೊತ್ತು ಕಲ್ಲನುಲುವಂಗೆಣೆಯಾದ ಮಹಾಪ್ರತಾಪಿ ನೀಂ ಪೆಟಕ ನಡುರ್ತು ಕೊಂದ ಕಡುವಲ್ಕಣೆ ಮಾಣ್ದೆರದಣ್ಮೆ ಬಂದು ನಾಯ್ನೊಳಲೆಯ ಮೇಲೆ ಪಟ್ಟ ಕಡುವೀರ ಕುಟುಂಬದಿನಗ್ಗಳಿಕ್ಕೆ ಕೈಗಟಿದಿರೆ ಶಂಖಮೋ [ಗಡ] ಮಹಾತ್ಮ್ಯರಣಾಗ್ರದೊಳೇಡಗುಳ್ಳೆಯೋ (ಬಂಹರಿ. ೭-೬೭). **ನಾಯಿನೊಳಲೆ:** ೧. "ನಾಯಿನೊಳಲೆ—ಮಹೀಲತೆ, ಗಂಡೂಪದ, ಕಿಂಚುಲಕ" (ನಾಚಿರಾ. ೬); ಕ್ರಿಮಿ ಜಂತು ನಾಯಿನೊಳಲೆ ಶಂಖದ ಪುಟು ಗುಳ್ಳೆ ಮೊದಲಾದುವಕ್ಕೆ ಸ್ಪರ್ಶನಮುಂ (ಶಾಸ್ತ್ರಟೀ. ೧೧೭-೫); ನಾಯಿನೊಳಲೆ ಜಿಗುಟ್ ದೊಪ್ಪುಟು ಮೊದಲಾಗಿ ಪುಟ್ಟ . . . ದುಃಖಮನೆಯ್ದುಗುಂ (ಪಸಾರ. ೨೩೯). ೨. ನಾಯಿಕೊಡೆ; ಅಣಬೆ: (ಕ). [ನಾಯ್+ನೊಳಲೆ]

ನಾಯ್ಪಾಲ್, ನಾಯಿಪಾಲು (ನಾ). ನಾಯಿಯ ವಶಕ್ಕೆ ಸಿಕ್ಕಿದುದು; ನಾಯಿಗೆ ದೊರಕಿದುದು: ನಮ್ಮ ದೇವರ್ ಬಂದು ಕಾಯದಿರೆ . . . ಅದುವೆ ನಾಮ್ ನಾಯ್ಪಾಲ್ ಶವಂಗಳ್ (ಅಶ್ವತ್ಥಾ. ೪೨-೮೨೩). **ನಾಯಿಪಾಲು:** ಈ ಅನಾಥಶವ ನಾಯಿಪಾಲು ನರಿಪಾಲು ಆಗುವ ಮುಂಚೆ ಮಣ್ಣು ಮಾಡಬೇಕು (ರೂಢಿ).

ನಾಯಿಪಾಲಾಗು = ಹಾಳಾಗು; ನಾಶವಾಗು: ಮಕ್ಕಳ ಬೇಜವಾಬ್ದಾರಿಯಿಂದ ಅವರ ಆಸ್ತಿ ನಾಯಿಪಾಲಾಯಿತು (ರೂಢಿ).

[ನಾಯ್+ಪಾಲ್$_2$]

ನಾಯ್ಬದುಕು, ನಾಯಿಬದುಕು (ನಾ). (ಆಲಂ) ನಾಯಿಯಂಥ ಜೀವನ; ತುಚ್ಛವಾದ ಬಾಳು; ಹೇಯವಾದ ಜೀವನ: ನಿಂದಿರಾ ಛಿಃ ಕುನ್ನಿ ಕೈಕೈಯಿಂದೆ ಶಿವಲಿಂಗಪ್ರಸಾದವನಿಂದು ನಾಚಿಕೆಯಿಲ್ಲದಡೆ ನಾಯ್ಬದುಕು ಬಂದು (ಬಸಪು. ೬೧-೧೯). **ನಾಯಿಬದುಕು:** "ನಾಯಿಬದುಕು (ನಾಯಿಬಾಳು) = ದುಃಖಪ್ರಪಂಚ, ಕೆಟ್ಟ ಬಾಳು" (ಜಾನಕೋ. ೧೧); ಈ ನಾಯಿಬದುಕಿಗಿಂತ ಸಾಯುವುದೇ ಮೇಲು (ರೂಢಿ).

[ನಾಯ್+ಬದುಕು$_2$(<ಬರ್ದುಕು$_2$)]

ನಾಯ್ಬಸನಿಗತನ (ನಾ). (ಕಾಮವ್ಯಾಪಾರದಲ್ಲಿ) ನಾಯಿಯಂತೆ ನಡೆವಳಿಯನ್ನು ಹೊಂದಿರುವಿಕೆ; ಅತಿಯಾದ ಕಾಮಲೋಲುಪತೆ: ಬಸಿದಪುದು ಮೆಯ್ಯ ಕೀವುಂ ರಸಿಗೆಯುಮೊಡಲಟಿದುದಾದೊಡಂ ಮಾಣದೆ ನಾಯ್ಬಸನಿಗತನಮಂ ಕಂಡೀ ಕಿಸುಗುಳಿಯಂ ಜವನುಮುಯ್ಯಲೇಂ ಪೇಸಿದನೋ (ಯಶೋಚ. ೩-೬೨).

[ನಾಯ್+ಬಸನಿಗತನ]

ನಾಯ್ಬಾಳು, ನಾಯಿಬಾಳು (ನಾ). = ನಾಯ್ಬದುಕು: (ಕ) **ನಾಯಿಬಾಳು:** ನಿಮ್ಮ ಬಾಳು ನಾಯಿಬಾಳು (ಮುಂಗಾಮು. ೧೦೮); ನಮ್ಮ ಬಾಳು ನಾಯಿಬಾಳಲ್ಲದೆ ಮತ್ತೇನು (ಪುನರು. ೨೬೬).

[ನಾಯ್+ಬಾಳು$_2$(<ಬಾಟ್$_2$)]

ನಾಯ್ಬೇಲ, ನಾಯಬೇಳ, ನಾಯಿಬೇಲ, ನಾಯಿಬೇಳ, ನಾಯಿವೇಳ, ನಾಯ್ವೇಳ (ನಾ). ಒಂದು ಬಗೆಯ ಸಸ್ಯ: (ಕ). **ನಾಯಿಬೇಲ:** "ವರಣ—ನಾಯಬೇಳ" (ಓಷಧಿ. ೧೪೫). **ನಾಯಿಬೇಲ:** "ಚಿತ್ರವಲ್ಲಕಿ—ನಾಯಿಬೇಲ" (ಓಷಧಿ. ೫೭): ನಾಯಿಬೇಲದ ಸೊಪ್ಪು ಒಂದು ಒಳಹಿಡಿಯನ್ನು . . . ಮೆಲ್ಲಲು ಕೆಮ್ಮು ಉಬ್ಬಸ ಸಹ ಗುಣವಹುದು (ಸಕವೈ. ೨೦೮). **ನಾಯಿಬೇಳ:** ನಾಯಿಬೇಳದ ಸೊಪ್ಪನ್ನು ಎಣ್ಣೆಯಲ್ಲಿ ಅರೆದು ಕುಡಿಯಲು ಕೆಂಪಿನ ಹೆನ್ನೆ ಮಾಣುವುದು (ವಿವೈವಿ. ೧೭೬). **ನಾಯಿವೇಳ:** ವಿಮಳ ಮೆನಿಪಿಂದ್ರವಾರುಣಿಯ ಮೂಲಮಂ ಘೃತದೊಳ(ಳಿ)ಟ್ಟು ಪೂಸುಗೆ ಬಟಿಯಂ ಕ್ರಮದಿಂ ನಾಯಿವೇಳ[ಪಾಠಾಂ. ನಾಯ್ವೇಟ] ಕರಿಯ ಮರ್ವಿನೆಗಂ ತಳಿ(ಳಿ)ಯೆ ವಿಷದ ಪುಣ್ಗಳ್ ಕಿಡುಗುಂ (ಖಮದ. ೧೦-೫೯). **ನಾಯ್ವೇಳ:** ಕಯ್ಪೆಸೋರೆಯ ಮಿಡಿಯುಂ ಕುಡಿಯುಂ ನಾಯ್ವೇಳದ ಕಾಯುಂ ಪಣ್ಣುಂ . . . ಪೊಲ್ಲೆಂತಂತೆ ಮಿಥ್ಯಾದೃಷ್ಟಿಯ ನೆಗಟ್ತೆಯುಮೊಂದು ಪೊಲ್ಲೆಂದು ಮುನಿದು ಬಲಿಯನಿಂತೆಂದಂ (ಧರ್ಮಾಮೃ. ೯-೧೩೨). [ನಾಯ್+ಬೇಲ$_2$?]

ನಾಯ್ಮಣಿಗೆಱೆ (ನಾ). ಒಂದು ಕೆರೆಯ ಹೆಸರು: ನಾಯ್ಮಣಿಗೆಱೆಯ ತಾಯ್ಗಣ್ಡೆ ಮುಕೂಡಲ್ ತಟಃ (ಇಅ. XII, ೧೬-೪b; 735). [ನಾಯ್ಮಣಿ$_0$+ಕೆಱೆ]

ನಾಯ್ವಾಲ್ (ನಾ). ನಾಯಿಯ ಹಾಲು: ಕುಮತಿಗಳು ನಾಯ್ವಾಲನುಂಡರೊ ತಮವಿಡಿದು ಮರುಳ್ಗೊಂಡರೋ (ಬಸಪು. ೫೪-೩೦). [ನಾಯ್+ಪಾಲ್$_1$]

ನಾಯ್ವಾಲ, ನಾಯಿಬಾಲ (ನಾ). ೧. ನಾಯಿಯ ಬಾಲ,—ಪುಚ್ಛ: ಉದಾಸೀನಂ ಮಾಡಿದೆನಪ್ಪೊಡೆ ನಾಯ್ವಾಲಮಂ ಪಿಡಿದು ತೊಱೆಯಂ ಪಾಯ್ವ ಜಡನ ಪೋಲ್ವೆಂ (ಧರ್ಮಾಮೃ. ೭-೧೨೨). **ನಾಯಿಬಾಲ:** ೧. ನಾಯಿಬಾಲ ಎಂದಿದ್ದರೂ ಡೊಂಕೇ (ಗಾದೆ). ೨. (ಆಲಂ) ತಿದ್ದಲಾಗದುದು; ಸರಿಪಡಿಸಲಾಗದುದು: ಅವನ ಬುದ್ಧಿ ನಾಯಿಬಾಲ (ರೂಢಿ). [ನಾಯ್+ಬಾಲ$_1$]

ನಾಯ್ವೇಳ 'ನಾಯ್ಬೇಲ' ನೋ.

ನಾರ್, ನಾರು$_3$ (ನಾ). ೧. (ಬಾಳೆ, ಕತ್ತಾಳೆ, ತೆಂಗು, ಸೆಣಬು ಮೊದಲಾದವುಗಳ ಸಿಪ್ಪೆಯಲ್ಲಿರುವ) ಎಳೆ,—ನೂಲು,—ಕತ್ತ: ನಾರಿಲ್ಲದೆ ಪೂಗಟ್ಟುವೆನೆಂಬ ಪೆರ್ಗಾವಿಲನಂ ಪೋಲ್ಕುಂ (ಧರ್ಮಾಮೃ. ೫-೧೦೬); ತೋರಮುಡಿವಿಡಿದು ಕುಡಿಯಂ ನಾರಂ ಸದೆವಂತೆ ತದೆದು . . . ಒದೆದೊಡೆ ಕೇರು ಪೊರಳ್ವಂತೆ ಕಾಲ ಮೇಲೆ ಪೊರಳ್ದಳ್ (ಯಶೋಚ. ೨-೫೦). ೨. ಗಿಡ, ಮರಗಳ ಸಿಪ್ಪೆ; ತೊಗಟೆ; ವಲ್ಕ: "ವಲ್ಕಂ ನಾರಂತದು" (ವಸ್ತುಕೋ. ೩೧-೬); ಅದಟಂ ಬಡಪಟ್ಟು ಬೆಟ್ಟದೊಳ್ ಪೋಗಿ ತೊಟಲ್ದು ನಾರ್ಗಳನುಡಲ್ ತರುತಿರ್ದೆಲೆ ಮಾಡಲಾರ್ತನಿಲ್ಲಾಗಳೆ ಕೋಪಮಂ ನಿನಗೆ ಸಂಚಿತ ಶೌರ್ಯಧನಂ ಧನಂಜಯಂ (ಪಂಪಭಾ. ೬-೪೭); ಈಯಡವಿಯೆಲೆಮದ್ದು ಮರನುಂ ಕಾಯಿ ನಾರುಂ ಬೇರುಮಭವನ ಕಾಯರುಜೆಯಂ ಕಡೆಗೆ ಮಾಣಿಸಲಾಪವೇ ಇನ್ನು (ಬಸಪು. ೧೬-೧೦). ೩. ನಾರಿನಿಂದ ಮಾಡಿರುವ ಬಟ್ಟೆ; ನಾರುಮಡಿ; ವಲ್ಕಲ: ಪುಗಲಿಲ್ಲೀ ಬನಮಾರ್ಗಮಿಂಬು ನೆಲಸಲ್ ನಾರುಂಟುಡಲ್ ಮೆಲ್ಲೆ ಕೊಂಬುಗಳೊಳ್

ಪಣ್ಬಲಮುಂಟು (ಪಂಪಭಾ. ೭-೩೦) ; ಸೀರೆಯಂ ಬಿಟ್ಟು ನಾರನುಡುವಂತೆ ಸದ್ಧರ್ಮಮಂ ಬಿಟ್ಟು ನಿಷ್ಠಾತ್ಮಪ್ರೀತನಾಗಿರ್ಪುದುಂ (ಧರ್ಮಾಮೃ. ೧೧-೧೬೨). **ನಾರು**[3] : ೧. ನಾರು, ನೂಲು, ಕ್ರಿಮಿಜ ರೋಮ(ಜಂ)ಗಳೆಂದು ಪುಟ್ಟುವುವು ನಾಲ್ಕು ತೆಱನಕ್ಕುಂ (ಹಲಾಯು. ೯೦-೩೫) ; ಎಲೆ ನಾರು ನುಜ್ಜುಗು ಗೆಣಸುಂ . . . ದಿಂಡುಮಂದಿ ನಿತಜಿಹ್ವಂ ಸಲೆ ಕಾರ್ಯಕೊದಗುತೊಪ್ಪುವ ಜಿಲುವೆನೆದಿಹ ಬಾಟಿ ಮರಗಳೊಪ್ಪುಗು ವನದೊಳ್ (ಪುಲ್ಲಕಾ. ೪-೩೭೧) ; ಕಲ್ಲಲಿ ನಾರುವಂ ಕೊಳಲು . . . ಸತ್ತು ಹುಟ್ಟಲು ಬಲ್ಲ ನೆಜಿ ಜಾಣೆ (ಬಸಪು. ೫೦-೫) ; ನಾರು ನೂಲು ಕ್ರಿಮಿಜ ರೋಮಂಗಳಿಂದೆ ನೆಯ್ದಾ ಆ ಸೀರೆ ನಾಲ್ಕು ತೆಱನಕ್ಕು (ಪುಂಗರಾ. ೧೦೦-೩೭) ; ಹನಿಗೂಡಿ ಹಳ್ಳ ನಾರೊಡಗೂಡಿ ಹಗ್ಗ ವೆಂಬನುವಿನೊಳ್ಪಡೆಗೂಡಿ ಚಕ್ರಿ ಘನತೆವೆತ್ತನು (ಧರಚ. ೪೯-೮೨) ; ನಾರು ನಾರಂಕೇಳದ ಹೊರಗಿನ ಅಂಶ (ಕನುಳ. ೧೫೫) ; ಹೂವಿನಿಂದ ನಾರು ಸ್ವರ್ಗಕ್ಕೆ ಹೋಯಿತು (ಗಾದೆ). ೨. "ತ್ವಚ್, ವಲ್ಕಲಂ, ವಲ್ಕ—ಕ್ಕ ನಾರಿನ ಹೆಸರು, ನಾರು" (ಸಿದ್ಧಾಂತಿ. ೧೦೦) ; ನಾರು ಬೇರಂಜನಂ ಕುಟಜೆ . . . ಮಂತ್ರಯಂತ್ರಂ ತಂತ್ರಸಾರ ಪರಕಾಯಪ್ರವೇಶಮಂ ಬಯಸುವ ವಿಕಾರಿಸಿದ್ಧರು ಸರಿಯೆ ಸಿದ್ಧರಾಮಂಗೆ (ಸಿದ್ಧರಾ. ೧-೯). ೩. ನಾರನು ಉಟ್ಟರೆ ನಾರದನಾದಾನೆ ಬೂದಿಯ ಬಳಿದರೆ ಶಿವನೆ (ಇಂಚಾಪ. ೯೫-೬೧). ೪. ಬೇಲ, ಮಾವು ಇತ್ಯಾದಿ ಹಣ್ಣುಗಳು ಹಾಗೂ ಕೆಲವು ಕಾಯಿ, ಎಲೆ ಮುಂತಾದುವುಗಳಲ್ಲಿ ಇರುವ ಜುಂಗು: ಬೇಲದ ಹಣ್ಣಿನ ನಾರ ಬಿಸುಟು ತಿರುಳಂ ಮೊಸರಿನೊಳಗಿಕ್ಕಿ (ಸೂಪಶಾ. ೨-೧೨) ; ತನ್ನಯ ರೂಪಿಂಗೆ ಸೆಣಸುವ ಸತಿಯರ ಬೆನ್ನ ಪಟ್ಟೆಯನೆತ್ತು ವಂತೆ ರನ್ನದುಂಗುರವನಿಟ್ಟಳವೆರಲುಗುರಿಂದೆ ಪರ್ಣದ ನಾರನೆತ್ತಿದಳು (ಮೋಹತ. ೧೬-೩೨).

ನಾರ ಸೀರೆ = ನಾರುಸೀರೆ : ಬಗೆವೊಡೆ ಕಟ್ಟದೀ ಜಡೆಗೆ ತಕ್ಕುದೊ ಮೇಣ್ಪೊದೆದಿರ್ದ ನಾರ ಸೀರೆಗೆ ದೊರೆಯೋ ತಪಕ್ಕಿದನುರೂಪಮೊ (ಕಾದಂಪೂ. ೮೧೯) ; ನಿನ್ನನುಜರ್ ಬನ್ನದ ಕೂಟನುಂಡರ್ ಪನ್ನೆರಡು ವರ್ಷಂ ಬೇಡರಂತಡವಿಯೊಳ್ ನಾರ ಸೀರೆಯನುಟ್ಟು . . . ಪಂದೆಯ ಮನದಂತಳ್ಕಾಡುತಿರ್ದುಪರ್ (ಪಂಚತಂ. ೨೧೪-೧೪೪) ; ಆಕಳಿಗೆಮ್ಮೆಯಂ ಜವೆಗೆ ಗೋದುವೆಯಂ . . . ಬಜುಸೀರೆಗೆ ನಾರ ಸೀರೆಯಂ ಶಾಕಟಿಕಕ್ಕೆ ಮತ್ತೆ ರಥಮಂ ಪ್ರತಿಮಾಡಿದನೋರ್ವ ಜೀಯಂ (ಸಸುಪ. ೧೦-೧೨೦) ; ಭಸಿತದ ಭಾಳಲೋಚನೆ ರುದ್ರಾಕ್ಷಿಯ ಭದ್ರಾಂಗಿ ನಾರ ಸೀರೆಯ ಧೀರೆ (ಗಿಚಿ. ೯-೧೬೭); ಉಜ್ಜ್ವಳಮಣಿಕಾಂಚಿಯಿಂದೆಸೆವ ಮಧ್ಯದೊಳೆಂತುಗೆ ನಾರ ಸೀರೆಯಂ ತಳೆವೆ (ದಶಕು. ೮-೨೯) ; ನಾರ ಸೀರೆಯನುಡುವೆನೆಮಗಾಹಾರವೇ ಫಲಮೂಲತಿ (ಕುವಾಲ. ೨೭-೧೨) ; ಸಂತವಿಸುತತ್ತೆಯನು ಸತಿ ನಿಜಕಾಂತನಿತ್ತಾ ನಾರ ಸೀರೆಯ ನಾಂತುಕೊಂಡಳು (ತೊರವಾ. ೨-೩-೪೧). **ನಾರಾಗು** = ಬಡಕಲಾಗು; ಕೃಶವಾಗು ; ನರಗಳು ಕಾಣುವಂತಾಗು : ಕುರಿಗಳು ಸವೆದು ನಾರಾದವು (ಮೂಗಾದ. ೯೯). [ವೇ.॥ ತಮಿ. ಮಲ. ನಾರ್ ; ತುಳು. ನಾರ್, ನಾರು ; ತೆಲು. ನಾರ]

ನಾರ (ಗು). ೧. ಮನುಷ್ಯನಿಗೆ ಸಂಬಂಧಿಸಿದ ; ಮಾನವೀಯ: 'ನಾರಲೋಕ' ಪರಾ. (ನಾ). ೨. ನೀರು ; ಜಲ: 'ನಾರದ' ಪರಾ. ೩. ಆಗತಾನೆ ಹುಟ್ಟಿದ ಹಸುವಿನ ಕರು. ೪. ಮನುಷ್ಯರ ಗುಂಪು ; ಜನಸಮೂಹ. [ಸಂ.]

ನಾರಂಗ (ಗು). ೧. ಕೆತ್ತ ಕೆಬಣ್ಣವುಳ್ಳ ; ನಸುಗೆಂಪಾದ ; ಕೇಸರಿ ಬಣ್ಣದ : ನಾರಂಗ ಸಕಳನಟ್ಟೆಯ ಪುಟಿಯಿಗೆಗಳಂತೆ ನಭಕ್ಕೆ ನಿಳಿದುರ್ ಮಿಳ್ಕಿಸಿ ಪಾಜುವ ನೆತ್ತರ ಸುಟ್ಟುರೆಗಳುಮುಷಯಂಕರಾಕಾರಮಾಗೆ (ಪಂಪಭಾ. ೧೧-೧೪೦ ಪ). (ನಾ). ೨. ಒಂದು ಬಗೆಯ ಮರ ಮತ್ತು ಅದರ ಹಣ್ಣು ; ಕೆತ್ತಳೆ : ಕಟ್ಟು ಲಿಸುತ್ತಿ ರ್ಪ ಲಿವಳ್ಳಿ ಪಣ್ಮೊಲೆವ ನಾರಂಗಂ ಫಲವ್ರಾತದಿಂ ನೆಲನಂ ಮೋದುವ ಮಾತುಳುಂಗ ಮೆಸೆಗುಂ (ಆದಿಪು. ೧-೬೭) ; ನಾಯಿಗೆ ನಾರಂಗಹ[ವ]ಕ್ಕೂದೆ (ಸರ್ವಪ. ೧೪೬-೪೫೬) ; ನಾರಂಗಂ . . . ಸೊಗಯಿಸುತಂ ನೇರಿದವೆಸಿರ್ಪುವಲ್ಲಿ ಕಂಪಿಂ ಪೆಂಪಿಂ (ಪಾರ್ಶ್ವಪು. ೧೩-೯೭) ; ಒಂದು ಫಲದದು ಫಲಸು ಮೇಣ್ನಾರಂಗಫಲವೊಂದು (ಬಸಪು. ೧೯-೬೬) ; ಅವ ಕಾಲದೆ ಲಾದೊಡೆಯಂ: ಫಲವೀವುತಿಹ ಫಲತೆಜದ ನೇಱಲು . . . ನಾರಂಗಾದಿ ತರುಲತೆಯ . . . ತೀವಿ ಚಿಲಿಸುವ ಶುಕಪಿಕಭ್ರಮರಾವಳಿಯು (ಪ್ರಭುಲೀ. ೩-೩). ೩. ಒಂದು ಬಗೆಯ ಈಳೆ : "ಮೇದಿನಿಯೊಳ ಗೀಳೆಯೆನ್ನಲದು ನಾರಂಗಂ" (ಶಬಿಕಂ. ೭೫); ಈ ರೀತಿಯಿಂ ನಿಂಬೆ ಕಿತ್ತಳೆ ನಾರಂಗ ಹೇರಳೆ ಕಂಚ ನಿಂಬೆಯ ಕಾಯ ಕುಸುರೆಗಳನಾರಸವೊಡೆಯದಂತೆ ಹುಳಿದೆಗೆದು (ಸೂಪಶಾ. ೩-೧೦). ೪. ಈಳೆಯ ಜಾತಿಗೆ ಸೇರಿದ (ಉಪ್ಪಿನಕಾಯಿ ಮೊದಲಾದ ವ್ಯಂಜನಗಳನ್ನು ಮಾಡಲು ಉಪಯೋಗಿಸುವ ಹಣ್ಣನ್ನು ಬಿಡುವ) ಒಂದು ಬಗೆಯ ಮರ ಮತ್ತು ಅದರ ಹಣ್ಣು ; ಹೇರಳೆ : "ಐರಾವತಾಭಿಧಾನಂ ನಾರಂಗಂ" (ಪಸ್ಪಕೋ. ೩೪-೩) ; "ಐರಾವತಃ, ನಾರಂಗಃ . . . ನಾದೇಯಾ, ಭೂವಿಜಂಬುಕಾ—ಈಳ ನಾರಂಗ" (ನಾಚಿಂತಾ. ೧೦೭) ; ನೂಲಕಾಯಿ ಬಿಲ್ವಕಾಯಿ ಗಂಧದ ಮನೆ ನಾರಂಗದ ಕಾಯಿ (ಜನ್ನಪ. ೪. ೩೬-೧೫೧) ; ನಿಂಬೆಯ ಕುಲದಲ್ಲಿ ನಾರಂಗವೆಂಬುದುಂಟು. ಅದಕ್ಕೆ ಸಕ್ಕರಿಗಂಜಿ, ಕಂಚೀಕಾಯಿ ಎಂಬ ಹೆಸರುಗಳಿವೆ (ಕೃಷಿಪ್ರ. ೧೭೪) ; ನಾಯಿಗೆ ನಾರಂಗದ ಉಪ್ಪಿನಕಾಯೆ ? (ಗಾದೆ). ೫. = ನಾರಂಗವಟ್ಟಿ : ನೇಜುಲ ರಕ್ತಜಾಮರಂಗಳೊಳಂ ಬಿಗಿದ ನಾರಂಗದ ಮೇಲ್ಕಟ್ಟಿನೊಳಂ . . . ಎಸೆವ ಮಂಟಪಂಗಳ ನಡುವಣ ಪದ್ಮರಾಗದ ಪಟ್ಟಿವಜೆಯೊಳ್ ನಿಲಿಸಿದ ಕಾಮುದೇವನನತಿ ಪ್ರೀತಿಯಿಂದರ್ಚಿಸಿ (ಕಾದಂಉ. ೭೮೩). [ಸಂ.]

ನಾರಂಗವಟ್ಟಿ (ನಾ). ಕೆತ್ತ ಕೆಬಣ್ಣದ ಬಟ್ಟೆ ; ನಸುಗೆಂಪುಬಣ್ಣದ ವಸ್ತ್ರ : ನಾಂದ ನಾರಂಗವಟ್ಟಿಯ ಮೇಲ್ಕಟ್ಟನಂಬರದೊಳ್ಕಟ್ಟಿದ ಳೆಂಬಂತೆ ಸಂಜೆಸಂಜಾತಸ್ವರಾಗಪಟಲಮಂ ಪಸರಿಸೆ (ಕಾದಂಉ. ೩೭೫); ಭೃಂಗಕುಂತಳೆಯು ನಾರಂಗವಟ್ಟಿ ಶೃಂಗಾರವಾಗಿ ನಿಂದಿಹಳು (ಸೌಂದಕಾ. ೩-೪೭). [ನಾರಂಗ + ಬಟ್ಟೆ[2]]

ನಾರಂಗಸಂಳ (ನಾ). ಕೆತ್ತಳೆಮರಗಳ ತೋಪು.—ಗುಂಪು : ಸಕಳೋದ್ಯಾನಂಗಳೊಳ್ ಸಂತತ ರಸಫಳವ್ರಾತದಿಂ ಸೇವ್ಯಮಲ್ಲಿ ಕರಂ ಖರ್ಜೂರವೃಂದಂ . . . ಬೀಜಪೂರಪ್ರಕರಂ ನಾರಂಗಸಂಳಂ (ಪುಸ್ಪಪು. ೯-೧೫೫). [ನಾರಂಗ + ಸಂಳ]

ನಾರಂಗಿ (ಗು). ೧. = ನಾರಂಗೆ ೧ : ಆ ನೀಲಸಲಿಲದಲಿ ಕೊರೆದು ನಾರಂಗಿಪಥ ದಿನಕರನು ನಡೆಯಿಸುವ ದಿನದಿನದ ಅವನ ರಥ (ಧ್ಯಾವಾಪ್ಯ. ೪೭-೧೧). (ನಾ). ೨. = ನಾರಂಗ ೨ : ನಾರಂಗಿಯು ಸಸಿಗೆ ನೀರು ತಂದೆಜಿದಿಹರೆ ಮಿಜುದಮೃತವನೀವಂತೆ ಹಿರಿಯರ ಕಾರುಣ್ಯವೆಂದ (ಸರ್ವಜ್ಞ. ೬೯೮). [←ಹಾರೆ. ಹಿಂ. ಮರಾ. ನಾರಂಗೀ]

ನಾರಂದ (ನಾ). = ನಾರದ ೧ : ನಾರಂದ ಭಟ್ಟಸುತೆದ್ದು ಕೊಡು ವಸಿಷ್ಠಂಗೆ ಭಾಷೆಯನು ಕೌಶಿಕ ಎಂದನು (ಪಚಕಾ. ೨-೨೪) ; ಪಳುಕಿನ ಕಜ್ಜು ವೆಂದೆನೆ ಧರೆಗಿಳಿತಂದಂ ಪವನಮಾರ್ಗದಿಂ ನಾರಂದಂ (ಪುಣ್ಯಸ್ರ. ೫-೬೧) ; ಸಂದಣಿಸಿದ ಸಭೆ ಸುಮ್ಮನಾಗಲು ನಾರಂದ ನುಡಿದನು ಕೌಶಿಕಗೆ (ಹರಿಸಂ. ೧-೩೬). [P ಇದು ಛಂದಸ್ಸಿಗಾಗಿ ಮಾಡಿಕೊಂಡ ರೂಪ.] [<ಶಾಕಪ]

ನಾರಂಬೇಳೆ 'ನಾಱುಂಬೇಳೆ' ನೋ.

ನಾರಕ (ಗು). ೧. ನರಕಕ್ಕೆ ಸಂಬಂಧಿಸಿದ; ನರಕದ : 'ನಾರಕ ದುಃಖ' ಪರಾ. (ನಾ). ೨. ಭೂಮಿಯಲ್ಲಿ ಪಾಪ ಮಾಡಿದವರು ಸತ್ತ ಮೇಲೆ ಪಡೆಯುವರೆಂದು ಹೇಳಲಾದ ಒಂದು ಲೋಕ; ನರಕಲೋಕ : "ನಾರಕಃ, ನರಕಃ, ನಿರಯಃ, ದುರ್ಗತಿಃ —ಸಾಮಾನ್ಯವಾಗಿ ನರಕದ ಹೆಸರುಗಳು" (ಸಿದ್ಧಾಂತಿ. ೬೪); ವಿಚಾರಿಸದೆ ನುಡಿದವರಿಗಿಮ್ಮಡಿ ನಾರಕದ ಫಲ ತಪ್ಪದು (ಕುವ್ಯಾಉ. ೪-೯೧). ೩. ನರಕಲೋಕದಲ್ಲಿರುವವನು; ನರಕಲೋಕವಾಸಿ : "ನಾರಕಾಃ, ಪ್ರೇತಾಃ, ಯಾತ್ಯಾಃ, ಅತಿವಾಹಿಕಾಃ—ಈ ೪ ನಾರಕರ್" (ಹಲಾಯು. ೧೦೩-೩); ಎರಡನೆಯ ನರಕದೊಳ್ ಮೂಱುಸಾಗರೋಪಮಾಯುಷ್ಯಮನೊಡೆಯ ನಾರಕನಾಗಿ ಪುಟ್ಟ ಸತ್ತು (ಪಡ್ಡಾರಾ. ೧೭೮-೨೭); ಸೀಳ್ಸೀಳೆನುತ್ತೆ ನಾರಕರೈತಂದು . . . ಸೀಳ್ವರ್ತಗುಳ್ದು ನವನಾರಕರಂ (ಸುಕುಮಾ. ೧೧-೪೨); ವಿಶೇಷದಿಂ ನರಕಗತಿಯೊಳ್ ಪ್ರಥಮಪೃಥ್ವಿಯ ನಾರಕರ್ ಮಿಥ್ಯಾದೃಷ್ಟಿಗಳ್ (ತತ್ತ್ವಪ್ರ. ೨೧); ನಾರಕನಪ್ಪುದೊಂದೆಡೆಯೊಳೊಂದೆಡೆಯೊಳ್ ಕೃತಪುಣ್ಯಬಂಧದಿಂ ಚಾರುಗುಣಾಮರಾಧಿಪತಿಯಪ್ಪುದು (ಜೀವಸಂ. ೮೬-೨೪); ನಾರಕರೊಳಧಿಕನಾರಕರಾರೆನೆ ಮನ್ಮನಮೆ ವಿಷಯವೈತರಣಿಯೊಳಿಂತೋರಂತೆ ಬೆಂದೊಡಂ ಮತ್ತಾರಯದಲ್ಲಿಯೆ ವಿಮೋಹಿಸಿರ್ಪುದಱಿಂದಂ (ಉಸಾರ. ೧೬೧). ೪. ಪಾತಕ; ಪಾಪ; ದುಷ್ಕೃತ್ಯ : "ದುರಿತಂ ಪಾಪಮಧರ್ಮಸ್ವರೂಪಂ . . . ನಾರಕಂ ಮಳಂ ದುಷ್ಕರ್ಮಂ" (ವಸ್ತುಕೋ. ೨೦-೧೨). ೫. [ಜೈನ] ದೇವ, ಮನುಷ್ಯ, ತಿರ್ಯಕ್ ಮತ್ತು ನಾರಕ ಎಂಬ ನಾಲ್ಕು ವಿಧವಾದ ಜನ್ಮಗಳಲ್ಲಿ ಒಂದು; ನರಕಗತಿ : ನಾರಕ ತಿರ್ಯಗ್ಗತಿ ಸಂಸಾರಿಗೆ ಪಾಪೋಪಚಯದೆ (ಅಜಿಪು. ೧೧-೩೮); ನಾರಕ ತಿರ್ಯಙ್ನರಬೃಂದಾರಕಮೆನೆ ಗತಿಚತುಷ್ಟಯಂಗಳೆ ಸಲೆ ಸಂಸಾರದ್ರವ್ಯ ಕ್ಷೇತ್ರಾದ್ಯಾರೋಪಿತಭೇದದಿಂದಮದು ಪಂಚಾತ್ಮಂ (ಪುಷ್ಪಪು. ೧೩-೫೬). 'ಚತುರ್ಗತಿ' ಪರಾ.

[ಸಂ.]

ನಾರಕದುಃಖ (ನಾ). ನರಕವಾಸದಲ್ಲಿ ಅನುಭವಿಸುವ ದುಃಖ; ನರಕದುಃಖ : ನಾರಕದುಃಖಮಂ ಸೆಱೆಯೊಳೂಡುವೆನೋ ಪಲಕಾಲಮಾತನಂ ಎಂದು ನಿಶಾಚರಂ ರೋಷಾವೇಶಮಾನಸಂ ಮಾನಸದೊಳೆ ಬಗೆಯುತ್ತುಂ (ಚಂದ್ರಪು. ೫-೩೭). [ನಾರಕ + ದುಃಖ]

ನಾರಕಪಟಲ (ನಾ). [ಜೈನ] ನರಕಗಳಲ್ಲಿಯ ನಲವತ್ತೊಂಬತ್ತು ಭಾಗ,—ಸ್ತರ; ೧ ರತ್ನಪ್ರಭೆಯಲ್ಲಿ ಹದಿಮೂರು, ಶರ್ಕರಾಪ್ರಭೆಯಲ್ಲಿ ಹನ್ನೊಂದು, ವಾಲುಕಾಪ್ರಭೆಯಲ್ಲಿ ಒಂಬತ್ತು, ಪಂಕಪ್ರಭೆಯಲ್ಲಿ ಏಳು, ಧೂಮಪ್ರಭೆಯಲ್ಲಿ ಐದು, ತಮಃಪ್ರಭೆಯಲ್ಲಿ ಮೂರು, ಮಹಾತಮಃಪ್ರಭೆಯಲ್ಲಿ ಒಂದು—ಹೀಗೆ ಒಟ್ಟು ನಲವತ್ತೊಂಬತ್ತು ಪಟಲಗಳಿವೆ: ನಿನ್ನುಮಂ ಸ್ತಿಮಿತಸಾಗರಚರಧರಣೀಂದ್ರಂ ತೀವ್ರದುಃಖಮನನುಭವಿಸುವುದನಱಿದು ಮೋಹದಿಂ ಸಮ್ಯಗ್ದರ್ಶನಮಂ ಕೆಯ್ಕೊಳಿಸಿದನಾ ನಾರಕಪಟಲಂಗಳೊಳ್ (ಶಾಂತಿಪು. ೭-೮೪ ಪ). [ನಾರಕ + ಪಟಲ$_2$]

ನಾರಕಶರೀರ (ನಾ). ನರಕಲೋಕವಾಸಿಯ ಶರೀರ : ಅವು ತಾಮನುಕ್ರಮದೊಳ್ . . . ಪುಟ್ಟುವ ನಾರಕಶರೀರಾಯುಷ್ಯಪ್ರಮಾಣಂಗಳ್ (ಶಾಂತಿಪು. ೭-೮೬ ಪ). [ನಾರಕ + ಶರೀರ]

ನಾರಕಸ್ಥಳ (ನಾ). = ನಾರಕಾವಾಸ : ರಾಜನಾದಾತನಿಗವಶ್ಯವು ನಾರಕಸ್ಥಳವನು ನಿರೀಕ್ಷಿಸಬೇಕು ಪರದಲಿ ವೇದಸಿದ್ಧವಿದು (ತಿಮ್ಮಸ್ವ. ೧-೩೦). [ನಾರಕ + ಸ್ಥಳ(= ಸ್ಥಲ)]

ನಾರಕಾವಾಸ (ನಾ). ನರಕಲೋಕ : ಬೇಸಱೆ ಲೋಕಮಂ ತಗುಳ್ದು ಸುಟ್ಟಬಲಿಂದೆ ಖರಾಂಶು ನಾರಕಾವಾಸದೊಳಾಟ್ವವೋಲಪರವಾರ್ಧಿಯೊಳಾಟ್ವುದುಂ (ಪಂಪಭಾ. ೩-೮೧). [ನಾರಕ + ಆವಾಸ]

ನಾರಕಿ (ನಾ). ನರಕದಲ್ಲಿರುವವನು; ನರಕಲೋಕವಾಸಿ : ಅಂತಕಂ ತಾನಾದೊಡೆ ನಾರಕಿಗಳಂ ಬಾಧಿಸುವುದಲ್ಲದಸುರಸಂಹಾರಕನ ಸೇವೆಯಂ ಮಾಡುತಿಹ ನಮ್ಮ ಪರಿವಾರಮಂ ಕೊಲ್ವಡಧಿಕಾರಮೆತ್ತಣದು (ಜೈಮಿಭಾ. ೨೬-೩೩); ರಾಯನತ್ತಣಿಂ ಬಳಸಿ ವರ್ಷ ಗಾಳಿಯ ಸೋಂಕಿಂ ನಾರಕಿಗಳೆನಿಸುಂ ಚೇತರಿಸಿ ತಣ್ಪುಗೊಂಡು ಕಟ್ಟುಬ್ಬರದ ಬೇನೆಯಂ ಸೈರಿಪಂತಿರಾಗೆ (ರಾಮಾಶ್ವ. ೧೦೨-೨೯); ಮುಂದಿನ ಸಾಂಕರ್ಯಸ್ಥಿತಿಗೂ ಧರ್ಮಗ್ಲಾನಿಗೂ ಕಾರಣನಾಗುವುದಲ್ಲದೆ ಹಿಂದಿನ ಪಿತೃಗಳೂ ನಾರಕಿಗಳಾಗುತ್ತಾರೆ (ಭಾರದ. ೧೧೨). [ಸಂ. ನಾರಕಿನ್]

ನಾರಗಸೆ (ನಾ). (ಕಾಗದ ಮೊದಲಾದುವನ್ನು ತಯಾರಿಸಲು ಉಪಯುಕ್ತವಾದ ಕಚ್ಚಾವಸ್ತುವನ್ನು ಕೊಡುವ) ಅಗಸೆ ಜಾತಿಗೆ ಸೇರಿದ ಒಂದು ಬಗೆಯ ಮರ : ಕಾಗದವನ್ನು ತಯಾರಿಸಲು ಉಪಯೋಗಿಸುವ ಕಚ್ಚಾವಸ್ತುಗಳಲ್ಲಿ ಮುಖ್ಯವಾದುವುಗಳಾವುವೆಂದರೆ, ನಾರಗಸೆ (Linen), ಸಣಬು . . . ಒಣಹುಲ್ಲು ಮುಂತಾದುವು (ಮುದ್ರಕ. ೭೭). ಇವರ ಉಡುಪು ನಾರಗಸೆ ಮತ್ತು ರೇಷ್ಮೆಯ ಬಟ್ಟೆಯಿಂದ ಮಾಡಿದ್ದು (ಪ್ರವಾಇ. II, ೧೨೭).

[ನಾರು$_3$(<ನಾರ್) + ಅಗಸೆ$_2$]

ನಾರಚ, ನಾರಸ(ನಾ). ೧. ಬಾಣ; ಶರ : ನಡುತಂ ಮೊಗಮಂ ಪೇಚಕದೆಡೆಯಿಂದೊಂದೊಂದೇ ನಾರಂ ನುಸುಳೆ ಪಡಲ್ಗೆಡೆದುದಿಭಮಾಲೆ (ಜಗವಿ. ೧೨-೨೦); ವಿವರಂಗಳಿಂದಮೊಗೆವ ಗುರುವ ಪೊಗೆ ನಾರಜ[ಚ]ಕೆ ಮೇಲೆ ಮುಸುಱಿದ ಭೃಂಗೀನಿವಹದ ಗಱಿಗಱಿಗೆಣೆಯೆನೆ ಗವಾಕ್ಷಮಂಗಜನ ದೊಣೆಗೆ ತೊಣೆಯೆನಿಸಿರ್ಕುಂ (ವರ್ಧಪು. ೧-೬೨); ಅರು ನಿನ್ನವೊಲೆಳೆಯ ಹರಿಣನ ನಾರಚದಲೆಚ್ಚವರು . (ತೊರರಾ. ೬-೫೧-೭). **ನಾರಸ** : ೧. "ಪ್ರಕ್ಷ್ವೇಡನಃ, ನಾರಾಚಃ—೨ ನಾರಸದ ಹೆಸರುಗಳು, ನಿಡುಗೋಲು, ನಿಡುಸರಳು" (ಸಿದ್ಧಾಂತಿ. ೨೬೪). ೨. ಒಂದು ಬಗೆಯ ಚೂಪಾದ ಆಯುಧ : ನೀಲಗಪ್ಪಡದುಡಿಗೆ ಘಾಳಿಯ ಸೀಲೆ ಕೊಂಕಿಯ ನಾರಸಂ ಸೆಳೆಗೋಲು ಒಂದಟ್ಟಿಯ ಕರಹು ನಾಯಿಗಳ ಬಾಯ್ಕಟ್ಟು ಓಳಿಯಿಂದಿವು ಮೆಱೆಯೆ (ಬಸಪು. ೩೧-೪); ಮೋದುವ ಬಡಿಕೋಲುಮಿಱುವ ನಾರಸಮಿವ ಸಂಪಾದಿಸಿ ಬೇಂಟೆಯ ಭರದಿಂ ವ್ಯಾಧಂ ಕಾನನಮನೆಯ್ದಿ ಪೊಕ್ಕಂ ಭರದಿಂ (ನನ್ನಚಾ. ೬-೨೧೦). [<ಸಂ. ನಾರಾಚ]

ನಾರಜ (ನಾ). ಮನುಷ್ಯ(ಪದಾತಿ)ಸಮೂಹದಿಂದ ಉಂಟಾದುದು: ಅವಿಢೇಯಧ್ವಜಿನೀನಿಶಾಟನಿವಹಂ ನಾಗಾಳಿಯಂ ಗಾಳಿಯಂ ಜವದಿಂ ಗೆಲ್ವಿನಮಾರ್ದು ನೂಂಕೆ ನೆಗೆಯಲ್ ಸೇನಾರಜಂ ನಾರಜಂ . . . ಸಂಹರಿಸಿದಂ ಕಂಜೋದರಂ ಜೋದರಂ (ಜಗವಿ. ೧೨-೧೯). [ಸಂ.]

ನಾರಡೆ (ನಾ). ಒಂದು ಬಗೆಯ ಸುಂಕ : ಈ ಗ್ರಾಮದ ಚತುಸ್ಸೀಮೆಗೆ ಸಲುವ ನಂಜೆ ಪುಂಜೆ ವಾನ್‌ಪಯಿರು . . . ನಾರಡೆ ಬಳುಕುನೀರು ಊರ ಸಂತೆ ಮೊದಲಾದ ಹಲ ಉಪಾಧಿಗಳು ಸಹ (ಸೌಇಇ. IX—II, ೭೪-೭೬; 1472). [?]

ನಾರಣ 'ನಾರಯಣ' ನೋ.

ನಾರಣಬ್ಬೆ (ನಾ). ಒಬ್ಬಾಕೆಯ ಹೆಸರು : ನಾಗಿಯಬ್ಬೆಗಳಬ್ಬೆ ನಾರಣಬ್ಬೆಯ ಕಟ್ಟಿಸಿದ ನೈರುತಿಭಾಗದ ಮುಟ್ಟದ ಕೆರೆಯ ಎರಡು ಕಡೆಗೋಡಿನ ನಿಪ್ಪರಿಯೆ ಮೇರೆಯಾಗಿ (ಎಕ. XII, ಕಿರಾ. ೩೯-೩೩; 920)

[ನಾರಣ(<ನಾರಯಣ) + ಅಬ್ಬೆ$_1$]

ನಾರಣಾಗಾಲ (ನಾ). ಒಂದು ಊರಿನ ಹೆಸರು : ಎಜ್ಜೆಯಂಗ ಗಾವುಣ್ಡನುಂ ಪೆರ್ಮಾಯದ. ಕುಜುವತ್ತಿ. ಬೇಡಗಾವುಣ್ಡನುಂ . . . ಮಾರಯ್ಯಂಗೆ ದಾನಸುಗೊಟ್ಟರುತ್ತರಾಯಣದ ಸಂಕ್ರಾನ್ತಿ ಆದಿತ್ಯವಾರ ಮೂಗೆ ನಾರಣಾಗಾಲ ಬಿಟಂ (ಮೈಆರಿ. ೧೯೩೫, ೧೭-೧೫; 1010); ℙ ಇದನ್ನು 'ನಾರಾಯಣನಮಂಗಲ' ಎನ್ನುವ ಶಬ್ದದಿಂದ ನಿಷ್ಪನ್ನ ಮಾಡುವ ಸಾಧ್ಯತೆಯಿದೆ. 'ಗಾಲ' ಎಂದು ಕೊನೆಗಾಣುವ ಊರಿನ ಹೆಸರಿನ ಭಾಗ 'ಮಂಗಲ' ಎನ್ನುವ ಶಬ್ದದಿಂದ ವ್ಯುತ್ಪತ್ತಿಯಾಗಿರಬಹುದು. [?]

ನಾರದ (ನಾ). ೧. ಒಬ್ಬ ದೇವರ್ಷಿಯ ಹೆಸರು ; ℙ ಬ್ರಹ್ಮನ ಮಾನಸಪುತ್ರರಲೊಬ್ಬನಾದ ಈತ ಕಲಹಪ್ರಿಯನೆಂದು ಪ್ರಸಿದ್ಧ ; ವೀಣಾವಾದನದಲ್ಲಿ ಪಾರಂಗತ : ಕಮಲಸಂಭವನಂದನನೆಂದು ನೋಟಕರ್ ತಳವೆಳಗಾಗೆ ನಾರಿವರೆ ನೀರದಮಾರ್ಗದಿನಂದು ನಾರದಂ (ಪಂಪಭಾ. ೬-೩) ; ಆವ ಕಾಳಗದೊಳಂ ಕಣ್ಣಾರದಂ ನಾರದಂ (ಪಂರಾಮಾ. ೩-೧೫) ; ಇಳಿವ ಜಡೆ ಬಳಿವ ವೀಣಾಕಳಸ್ವನಂ . . . ಮುಖಮಂಡಳಮಂದ್ರಿಕೆಯೊಪ್ಪೆ ನಾರದಂ ನಡೆತಂದಂ(ಗಿವಿ. ೪-೩೮); ನಾರದನಂತೆ ಕಂಡವರ ಕೊಂಡೆಯ ಮಾತನಾಡಲಿಲ್ಲ (ಪುರಂದ. ೧-೪೧-೧೨) ; ನಿಜರಮಣನಂ ನಾರದಮುನಿಗೆ ಕೊಟ್ಟ ಬಳಿಕೊಡೆಯರುಂಟೆ ನಿನಗೆ (ಜೈದಿಭಾ. ೭-೨೬). ೨. ಮೋಡ ; ಮೇಘ. ೩. ಹದಿನೆಂಟು ಮಹಾಪುರಾಣಗಳಲ್ಲಿ ಒಂದು : ಪರಮಶೈವ ಸ್ಕಂದ ಲೈಂಗ್ಯಾದಿರಳ ನಾರದ ಮತ್ಸ್ಯ ಕೂರ್ಮ ಸ್ಫುರಿತ ವಾಮನ ಗಾರುಡ ಬ್ರಹ್ಮಾಂಡ ವಾರಾಹನಿರತ ಮಾರ್ಕಂಡೇಯ ವೈಷ್ಣವ ವರಭವಿಷ್ಯದ್ಭಾಗವತ ವಿಸ್ತರಣ ಪದ್ಮಾಗ್ನೇಯ ಬ್ರಾಹ್ಮ ಬ್ರಹ್ಮವೈ[ವೈ]ವರ್ತ ಸಾಂಗದಿಂದ ಷ್ಟಾದಶಪುರಾಣಂಗಳೊಳೆಸೆವ ಭಿನುತಸೇವಾಸಂಗವಾಯಿತ್ತು (ಬಸಪು. ೪೩-೭೬). ೪. ಶಿವಗಣಗಳಲ್ಲಿ ಒಬ್ಬ ; ಪ್ರಮಥರಲ್ಲಿ ಒಬ್ಬ : ನಾರದನೆಂಬ ಗಣೇಶ್ವರನಂತೆಂದ (ಎಇ. V, ೨೪೬-೨೨ ; ಸು. 1200). ೫. [ಜೈನ] ಒಂಬತ್ತು ಜನ ನಾರದರ ಗುಂಪು : 'ನವನಾರದ' ಪರಾ. [ಸಂ.]

ನಾರದಪುರಾಣ (ನಾ). ಹದಿನೆಂಟು ಮಹಾಪುರಾಣಗಳಲ್ಲಿ ಒಂದು; ℙ ನಾರದನಿಗೆ ಸನಕ ಸನಂದನಾದಿಗಳು ಮಾಡಿದ ಉಪದೇಶ ರೂಪವಾದ ಒಂದು ಪುರಾಣ. ಇದರಲ್ಲಿ ೨೫೦೦೦ ಗ್ರಂಥಗಳಿವೆ. ಇಲ್ಲಿ ಸೃಷ್ಟಿಯ ವರ್ಣನೆ, ನಾನಾಧರ್ಮಗಳ ವಿವರಣೆ, ಮೋಕ್ಷಸಾಧನೆ, ವೇದಾಂಗ, ಶುಕೋತ್ಪತ್ತಿ, ಪ್ರತಿತಿಂಗಳೂ ಮಾಡಬೇಕಾದ ವ್ರತಗಳು ಮೊದಲಾದ ವಿಷಯಗಳಿವೆ : ಬೃಹತ್ಕಲ್ಪ — ನಾರದಪುರಾಣ, ವಾರಾಹಕಲ್ಪ — ಮಾರ್ಕಂಡೇಯ ಪುರಾಣ (ಭಾರದ. ೧೪೭). 'ಅಷ್ಟಾದಶಪುರಾಣ' ಪರಾ.

[ನಾರದ + ಪುರಾಣ]

ನಾರದವೀಣೆ (ನಾ). ಒಂದು ಬಗೆಯ ವೀಣೆ : ಬಳಿಕ ವಿಪಂಚಿಕೆ . . . ನಾರದವೀಣೆ . . . ಕಾಲಕೀಯೆಂಬ ಮೂವತ್ತು ಮೂಱು ತಂತ್ರೀವಾದ್ಯಂಗಳಲ್ಲಿ (ವಿನೇಕ. ೨೫೩). [ನಾರದ + ವೀಣೆ]

ನಾರದಸಂಹಿತೆ (ನಾ). = ನಾರದಸ್ಮೃತಿ : ರಾಜನು ದೇಶವನ್ನು ರಕ್ಷಿಸುವುದಕ್ಕೆ ಪ್ರಜೆಗಳು ಹಿಂದಿರುಗಿ ಕೊಡುವ ಪ್ರತಿಫಲವೇ ತೆರಿಗೆಗಳೆಂದು (ಸಂ. ಕರ) ಗೌತಮಸಂಹಿತೆ, ನಾರದಸಂಹಿತೆ ಮುಂತಾದ ಸ್ಮೃತಿಗಳು ಭಾವಿಸುತ್ತವೆ (ಕರಾಶಾ. ೩೯೩). [ನಾರದ + ಸಂಹಿತೆ]

ನಾರದಸ್ಮೃತಿ (ನಾ). ಹದಿನೆಂಟು ಸ್ಮೃತಿಗಳಲ್ಲಿ ಒಂದು; ನಾರದನಿಂದ ರಚಿತವಾದ ಧರ್ಮಶಾಸ್ತ್ರ : ನಾರದಸ್ಮೃತಿಯು ಕ್ರಿ. ಶ. ೪—೫ ಶತಮಾನಗಳಿಗೆ ಹಿಂದಿನದೆಂದೂ . . . ಯಾಜ್ಞವಲ್ಕ್ಯ ಸ್ಮೃತಿಯು, ವಿಷ್ಣುಸ್ಮೃತಿಗಿಂತ ಹಿಂದಿನದಲ್ಲ ಎಂದು ಮುಂತಾಗಿ ಪಂಡಿತರು ಅಭಿಪ್ರಾಯಪಡುತ್ತಾರೆ (ಭಾರದ. ೫೦); ನಾರದಸ್ಮೃತಿಯ ಪ್ರಕಾರ ಬ್ರಹ್ಮನೇ ಲಿಪಿಯ ಸೃಷ್ಟಿಕರ್ತ (ಕರಾಶಾ. ೧೬ ಅಡಿಟಿ).

[ನಾರದ + ಸ್ಮೃತಿ]

ನಾರದೀಯಪುರಾಣ (ನಾ). = ನಾರದಪುರಾಣ: ಬ್ರಹ್ಮಪುರಾಣ ಪದ್ಮಪುರಾಣ ವೈಷ್ಣವಪುರಾಣ ಶೈವಪುರಾಣ ಭಾಗವತಪುರಾಣ ನಾರದೀಯಪುರಾಣ ಮಾರ್ಕಂಡೇಯಪುರಾಣ ಆಗ್ನೇಯಪುರಾಣ ಭವಿಷ್ಯತ್ಪುರಾಣ ಬ್ರಹ್ಮವೈವರ್ತಪುರಾಣ ಲೈಂಗಪುರಾಣ ವಾರಾಹ ಪುರಾಣ ಸ್ಕಂದಪುರಾಣ ವಾಮನಪುರಾಣ ಕೂರ್ಮಪುರಾಣ ಮತ್ಸ್ಯ ಪುರಾಣ ಗಾರುಡಪುರಾಣ ಬ್ರಹ್ಮಾಂಡಪುರಾಣವೆಂಬವೇ . . . ಹದಿನೆಂಟು ಮೂಲಪುರಾಣಂಗಳು (ವಿನೇಕ. ೪). [ಸಂ.]

ನಾರಯಣ, ನರಯಣ, ನರೇಯಣ, ನಾರಣ, ನಾರ್ಣ (ನಾ). ೧. ನಾರಾಯಣ ; ವಿಷ್ಣು : ದ್ವಿಜಗುರು ದೇವತಾಜ್ಞಾಪ್ತಜನ ಪರೋನಾರಯಣಚರಣನೂದ್ಭೂತ ಶ್ರೀಮದ್ವಿಷ್ಣುಗೋಪ ಮಹಾಧಿರಾಜ (ಎಕ. I, ೧-೯; ಸು. 466) ; ಕಾವುದಾನತ ಜನವ ಗದುಗಿನ ವೀರ ನಾರಯಣ (ಕುವ್ಯಾಚ. ೧-೧) ; ನಿಜಪುರವ ಹೊಕ್ಕನು ವೀರನಾರಯಣ (ಕುವ್ಯಾಗ. ೧೩-೧೫). **ನರಯಣ** : ೧. ಬಿಗಿ ಕಳವಳಿಸಿ ಪದುಳಿಸಿ ಕೊಳುತ ಭೂಪತಿತಿಲಕ ಬಂತಿನಿ ನೆನೆವುತಿದ್ದನು ವೀರನರಯಣನ (ಕುವ್ಯಾಸ. ೧-೯೪) ; ಭಯದಿ ಕುಂತೀಸೂನುಗಳು ಮಱೆಗೊಳುತ ಲಿರ್ದುದು ವೀರನರಯಣನ (ಕುವ್ಯಾಗ. ೫-೫೭). ೨. ವಿಷ್ಣುವಿನ ಪ್ರತಿಮೆ, — ವಿಗ್ರಹ : ಎವಂಜ್ಞಲ್ಲಕೊನ್ದು ದೇಗುಲಕ್ಕೆ ನೆಲನ ಕಟ್ಟಿಸಿ ಕೊಟ್ಟ ಪದ[ಜ್ಞ]ಲಿಗಂ ಒನ್ದು. ನರಯಣನ ದಾನಗೊಟ್ಟ (ಸೌಇಇ. XI-I, ೩೫-೧೦; 933). **ನರೇಯಣ** : ೫. ಸೃಷ್ಟಿಸಿ ನರೇಯಣ ಬೊಮ್ಮಾದಿಗಳಲುತ್ಕೃಷ್ಟ ಸತ್ಕಾದಿ ಲೋಕದಲಿ (ವೈಕುಂಪ. ೨-೩). **ನಾರಣ** : ೧. "ನಾರಣ (ನಾಣ)—ನಾರಾಯಣ (ನಾಣೆ—ನಾರಾಯಣೇ)" (ತಪ್ರಕೋ. ೨೧). ೩. ಒಬ್ಬಾತನ ಹೆಸರು : ವೇದ ವೇದಾಂಗ[ಮನೋದ]ದೆ ಶಾಸ್ತ್ರಮನಾದಿಮಧ್ಯಾಂತಮೆಱಯದೆ ನಾರಣಂಗಾದುದು ಕವಿತೆ ಸಹಜಮೀ (ಸೌಇಇ. XI-I, ೪೨-೩೫; ಸು. 971). **ನಾರ್ಣ** : ೩. 'ನಾರ್ಣಯ' ಪರಾ.

[< ಸಂ. ನಾರಾಯಣ]

ನಾರಲೆ (ನಾ). ಒಂದು ಬಗೆಯ ವನಸ್ಪತಿ : ನರುವಲು, ನಾರಲೆ, ನರವೆ, ಮುನ್ನು, ಮಡಿಕೆ (ಮೈಬಿಗಿ. ೬೪-೧೩೦೧). [?]

ನಾರವಳ್ಳಿ (ನಾ). ಒಂದು ಬಗೆಯ ಮರ : ಮರಗಳು : ಹೆಸವ . . . ಅಂಸಿನಬೂರುಗ, ಜಡಲೆ, ನಾರವಳ್ಳಿ, ನೀರವಳ (ಸಮ್ಮಸು. ೨೩೬).

[?]

ನಾರವೆ (ನಾ). ಒಂದು ಬಗೆಯ ಮರ : ಸಂಕೀರ್ಣ . . . ಕರೀ ಹಿಪ್ಪಲಿ, ಶಿರಂಟು, ನಾರವೆ, ಕೂಲಿ, ನೆಕ್ಕಿಲು, ತುಳಸಿ (ಸಮ್ಮಸು. ೨೩೮). 'ನರವೆ' ಪರಾ. [←ತೆಲು. ನಾರುವ]

ನಾರಸ 'ನಾರಜ' ನೋ.

ನಾರಸಿಂಗ (ನಾ). ವಿಷ್ಣುವಿನ ಹತ್ತು ಅವತಾರಗಳಲ್ಲಿ ನಾಲ್ಕನೆಯದು; ನರಸಿಂಹ : ವೈಕೋದರಂ . . . ವೈಥಳಿತಹೃದಯನಪ್ಪ ಹಿರಣ್ಯಾಕ್ಷನುಮಂ ಪೋಲ್ವ ನಾರಸಿಂಗನಂತೆ (ಪಂಪಭಾ. ೧೨-೧೫೨ ಪ). 'ನರಸಿಂಗ' ಪರಾ. [< ಸಂ. ನಾರಸಿಂಹ]

ನಾರಸಿಂಹ (ಗು.) ೧. ನರಸಿಂಹನಿಗೆ ಸಂಬಂಧಿಸಿದ : ಸುಧನ್ವಂ ಕಟಾಹದುರಿಯಂ ನಾರಸಿಂಹಜಪದಿಂ ಜಯಿಸೆ (ಜೈಮಿಭಾ. ೧೨-೧). (ನಾ). ೨. = ನಾರಸಿಂಗ : ನಾರಸಿಂಹನೆಂಬೊ ದೇವನು ನಂದಿದಂಥ

ನರರಿಗೆಲ್ಲ ವರವ ಕೊಡುವನು (ಪುರಂದ. ೪-೭ಪಲ್ಲವಿ). ೩. ಕಾಮಿಕಾಗಮದ ಮೂರು ಭೇದಗಳಲ್ಲಿ ಒಂದು : ಬಳಿಕ ಉತ್ತರ ಭೈರವೋತ್ತರ ನಾರಸಿಂಹವೆಂಬವೇ ಕಾಮಿಕಾಗಮದ ತ್ರಿಭೇದಂಗಳು (ವಿವೇಕ. ೬೪); ಕಾಮಿಕಾಗಮಕ್ಕೆ ಮೂರು ಉಪಾಗಮಗಳಿವೆ—ಉತ್ತರ, ಭೈರವೋತ್ತರ ಮತ್ತು ನಾರಸಿಂಹ (ಕಶಾಅ. ೧೨೬). [ಸಂ.]

ನಾರಸಿಂಹಪುರಾಣ(ನಾ). ಹದಿನೆಂಟು ಉಪಪುರಾಣಗಳಲ್ಲಿ ಒಂದು; ೫ ಇದರಲ್ಲಿ ವಿಷ್ಣುವಿನ ನರಸಿಂಹಾವತಾರದ ಕಥೆ ವರ್ಣಿತವಾಗಿದೆ : ಸನತ್ಕುಮಾರಪುರಾಣ ನಾರಸಿಂಹಪುರಾಣ ನಂದಿಪುರಾಣ ಶಿವಧರ್ಮಪುರಾಣ ದೂರ್ವಾಸಪುರಾಣ ನಾರದೀಯಪುರಾಣ ಮಾನವಪುರಾಣ ಉಶನಃಪುರಾಣ ಬ್ರಹ್ಮಾಂಡಪುರಾಣ ವಾರುಣಪುರಾಣ ಕಾಳೀಪುರಾಣ ವಾಸಿಷ್ಠಪುರಾಣ ಲೈಂಗಪುರಾಣ ಸಾಂಬಪುರಾಣ ಸೌರಪುರಾಣ ಪಾರಾಶರಪುರಾಣ ಮಾರೀಚಪುರಾಣ ಭಾರ್ಗವಪುರಾಣ ಎಂಬವೇ ಆಯಾ ನಾಮಧೇಯಮುಳ್ಳವಱಂ ನಿರೂಪಿತಂಗಳಾದ ಹದಿನೆಂಟು ಉಪಪುರಾಣಂಗಳು (ವಿವೇಕ. ೯).

[ನಾರಸಿಂಹ + ಪುರಾಣ]

ನಾರಸಿಂಹಾವತಾರ (ನಾ). ವಿಷ್ಣುವಿನ ದಶಾವತಾರಗಳಲ್ಲಿ ನಾಲ್ಕನೆಯದು : ೫ ಹಿರಣ್ಯಕಶಿಪುವೆಂಬ ರಾಕ್ಷಸನನ್ನು ಕೊಲ್ಲುವುದಕ್ಕಾಗಿ ಕಂಬದಿಂದ ಹೊರಗೆ ಬಂದನೆಂದು ನಂಬಲಾದ, ಅರ್ಧಮನುಷ್ಯ ಮತ್ತು ಅರ್ಧಸಿಂಹದ ರೂಪವುಳ್ಳ ಅವತಾರ : ಇಲ್ಲಿ ನಾರಸಿಂಹಾವತಾರವು ಪ್ರತ್ಯಕ್ಷವಾಗಿಯೇ ವರ್ಣಿತವಾಗಿದೆ (ಭಾರದ. ೧೪೫). 'ನರಸಿಂಹಾವತಾರ' ಪರಾ.

[ನಾರಸಿಂಹ + ಅವತಾರ]

ನಾರಳು 'ನಾನಲ್' ನೋ.

ನಾರಾಚ (ನಾ). ೧. ಕಬ್ಬಿಣದಿಂದ ತಯಾರಿಸಿದ (ಉದ್ದವಾದ ಐದು ಗರಿಗಳಿಂದ ಕೂಡಿಕೊಂಡಿರುವ) ಒಂದು ಬಗೆಯ ಬಾಣ: ನೆಱೆಗೊಂಡುದು ನಾರಾಚಂ ನೆಱೆಗಾಣಲ್ಕಾರ್ತುದಿಲ್ಲ ಬೀರಕೆ ಬೀಯಕ್ಕಿಱುವಬೆಡಂಗನೊಳಾರ್ ದೊರೆ ನೆಱೆ ತೋರ್ಕುಮೆ. ಶತ್ರುಜನಕ ಮರ್ಥಿಜನಕ್ಕಂ (ಗದಾಯು. ೧-೧೮) ; "೧. ಬಾಣ. ೨. ತೂಕ ಮಾಡುವ ತ್ರಾಸು" (ಗದಾಸಂ. ೯೪ ಟಿಪ್ಪಣಿ); ೫ 'ನಾರಾಚ' ಮತ್ತು 'ನಾರಾಚಿ' ಎಂಬ ಎರಡು ಶಬ್ದಗಳ ಉಚ್ಚಾರ ಸಾಮೀಪ್ಯದಿಂದ ಶ್ಲೇಷೆಯ ಚಮತ್ಕಾರವು ಹೊರಹೊಮ್ಮುವಂತೆ ಕವಿ ಈ ಶಬ್ದವನ್ನು ಉಪಯೋಗಿಸಿರುವಂತೆ ಕಂಡುಬರುತ್ತದೆ. ೨. ಬಾಣ ; ಸರಳು : "ಸರ್ವಾಯಸಃ, ಪ್ರಕ್ಷ್ವೇಳನಃ, ಏಷಣಃ, ನಾರಾಚಃ—ಈ ೪ ನಾರಾಚಂ" (ಹಲಾಯು. ೬೭-೩೧೩) ; ಅಂತು ಗುರುನಂದನಂ . . . ತೊಳಗುವ ನಾರಾಚದಿನೆಚ್ಚನೂಱಿ ಭೀಮನ ನೊಸಲಂ (ಪಂಪಭಾ. ೧೨-೬೯) ; ನಗಧರನ ನಿಶಿತನಾರಾಚಗಣಂ ನಡೆ ಪಾಯ್ವ ರಿಪುಭಟಾರುಣಜಲಧಾರೆಗಳಂ . . . ; ಪೂತನೆಯ ರಾಂತು ಕುಡಿದರ್ ಧುರದೊಳ್(ಜಗವಿ. ೭-೮೨) ; ಒಳಗುಡಿದ ನಾರಾಚದೇಱಿನಂದದಿ ಹೊಱಬಳಸದೊಳಗೊಳಗೇಗುವಾವಗೆಯ ಶಿಖಿಯಂತೆ... ಸತಿಯಳಲು ಸೀಗೆಯೊಳಗಣ ಬಾಳೆಗೆಣೆಯಾದುದು (ಹಚಕಾ. ೧೨-೧೩); ಕಡುಮನದ ಹಾಯ ನಾಲ್ಕರಂಗದಿ ಹೊಕ್ಕು ಹಾಯಿದವು ಝುಡಿತೆಯೊಳ್ನಾರಾಚ (ಕೋಗಯ. ೨೪-೧೧) ; ಕತ್ತಲೆಯನಟ್ಟಿ ಬರ್ಪಿನನ ನಾರಾಚದಿಂ ಗಾಯಗೊಂಡಿರ್ಪಿರುಳ್ ಕಾರ್ದ ನೆತ್ತರ್ ಸೋರ್ವ ಸೋನೆ ತುಂತುರ್ ಮಳೆಯೊ (ತ್ರೀರಾಮಾ. ೩೧-೯೯) ; ಈ ನಾಲ್ವರ ಪ್ರಾಣಗಳನ್ನೂ ಆಹುತಿಗೊಂಡ ನಾಲ್ಕು ನಾರಾಚಗಳೂ ಒಂದೇ ಮಾದರಿಯವು (ಶಾಂತಲಾ. ೨೨೧). ೩. ಒಂದು ಬಗೆಯ ಬಾಣ : ನಾರಾಚಂ ತಗರ್ತಲೆಯಂ . . . ಕವಲ[ಂಬುವೆಂ]ಬಂಕದಂಬೆತ್ತ[ಲುಂ] ತುಱುಗಿ ನಡುವಿನಂ ಸಾರ್ದು ಸಾರ್ದೆಚ್ಚೆಚ್ಚು ಕಾದಿದರತಿರಥರೊಂದು ಜಾವಂ (ಪಂಪಭಾ. ೧೩-೬೯) ; "ತಕ್ಕಡಿಯ ಮುಳ್ಳಿನಂತಿರುವ ಬಾಣ." (ಪಂಪದೀ. ೫೨೪). ೪. ಒಂದು ಬಗೆಯ ಆಯುಧ; ಈಟಿ : ಹೊಕ್ಕು ತಿವಿದನು ಸಬಳದಲಿ ಜಡಿವೆಕ್ಕಲನನಳವಿಯಲಿ ಹರಿಣವನಿಕ್ಕಿದರು ನಾರಾಚದಲಿ ಸೈವರಿದು (ಕುವ್ಯಾಅ. ೧೩-೨೬) ; ಬಿಲುತೀರು . . . ಭಲ್ಲ ನಾರಾಚ . . . ಖೇಟಕ ಮುಂತಾದ ಶತ್ರುಜಯಾತ್ಮರಕ್ಷಾದಿ ಸಾಧನವಿಶೇಷಂಗಳಿಂದಲುಂ (ವಿವೇಕ. ೨೮೧); ನಾರಾಚವೆಂದೂ ಚೂರಿಯೆಂದೂ ಅಂಕುಶವೆಂದೂ ಪ್ರಾಸವೆಂದೂ . . . ಈ ಮೂವತ್ತೆರಡು ಆಯುಧಂಗಳ ಹೆಸರು (ಖಡ್ಗಟೀ. ೨-೩೭). ೫. ಓಲೆಗರಿಯ ಮೇಲೆ ಬರೆಯಲು ಉಪಯೋಗಿಸುವ ಉಕ್ಕಿನ ಲೇಖನಿ; ಕಂಟ : "ಪತ್ರಿ ನಾರಾಚಮೆನೆ ಕಂಠಂ" (ಮಂಗರಾ. ೧೦೬-೧೫). ೬. [ಜೈನ]ಆರು ಬಗೆಯ ಸಂಹನನ ನಾಮಕರ್ಮಗಳಲ್ಲಿ ಒಂದು. 'ನಾರಾಚಸಂಹನನ' ಪರಾ. [ಸಂ.]

ನಾರಾಚಚೂರ್ಣ (ನಾ). ಒಂದು ಬಗೆಯ ಔಷಧದ್ರವ್ಯ : ನಾರಾಚು[ಚ]ಚೂರ್ಣ:- ತಿಗಡೆ ಗ ೧ ತೂಕ, ಹಿಪ್ಪಲಿ ಗ ೪ತೂಕ . . . ಸಕ್ಕರೆವೆರಸಿ ಜೇನುತುಪ್ಪದಿಂ ಸೇವಿಸೆ ವಿರೇಕವಹುದು (ಸಕವೈ. ೩೦೨).

[ಸಂ.]

ನಾರಾಚಜಾಲ (ನಾ). ಬಾಣಗಳ ಸಮೂಹ,—ಪರಂಪರೆ : ನಾರಾಚಜಾಲದಲರಿಭಟನ ಬಿಗಿದು ಕಡಿದು ಬಿಸುಟನು ದ್ರುಪದತನಯನು (ಕುವ್ಯಾದ್ರೋ. ೧-೫೬). [ನಾರಾಚ + ಜಾಲ]

ನಾರಾಚವಿಕ್ರಮ (ನಾ). ಬಾಣಪ್ರಯೋಗದ ಸಾಮರ್ಥ್ಯ,—ಪರಾಕ್ರಮ : ಚೂರಿಸುವ ನಾರಾಚವಿಕ್ರಮದೋರಜೆಗೆ ನಾರಾಚಿಸಿತು ವಿಸ್ತಾರದಲಿ ವಿಸ್ತರಿಸಿದನು ಜಯಸಮರಸಾಹಸವ (ಕುವ್ಯಾಶ. ೩-೬೨).

[ನಾರಾಚ + ವಿಕ್ರಮ]

ನಾರಾಚವೃಷ್ಟಿ (ನಾ). = ನಾರಾಚಸೋನೆ : ನಾರಾಚವೃಷ್ಟಿ ಮಂಗಳಧಾರಾಸ್ನಪನಮನೆ ಪೋಲೆ (ಶಾಂತಿಪು. ೧೦-೧೬೪).

[ನಾರಾಚ + ವೃಷ್ಟಿ]

ನಾರಾಚಸಂಹನನ (ನಾ). [ಜೈನ] ತೊಂಬತ್ತುಮೂರು ನಾಮಕರ್ಮಪ್ರಕೃತಿಗಳಲ್ಲಿ ಒಂದು ; ಆರು ಸಂಹನನ ನಾಮಕರ್ಮಗಳಲ್ಲಿ ಒಂದು ; ೫ ಕೀಲು ಮತ್ತು ಅಸ್ತಿಗಳು ಉತ್ಪತ್ತಿಯಾಗುವುದಕ್ಕೆ ಕಾರಣವಾದ ನಾಮಪ್ರಕೃತಿ : ನಾರಾಚವಿದ್ಧಮುಮಪ್ಪೆಲ್ಗಟ್ಟುಳ್ಳ ತೃತೀಯನಾರಾಚಸಂಹನನಮುಮಂ . . . ಮಾಳ್ಕುಂ (ತತ್ತ್ವಪ್ರ. ೨೯೬) ; ನಾರಾಚಸಂಹನನ : ಸಾಧಾರಣ ಕೀಲುಸಹಿತ ಅಸ್ಥಿಪಂಜರದ ನಿರ್ಮಾಣಕ ಕರ್ಮ (ಜೈನಪ. ೩೭೪).

[ನಾರಾಚ + ಸಂಹನನ]

ನಾರಾಚಸೋನೆ (ನಾ). ಬಾಣದ ಮಳೆ ; ಸರಳ ವೃಷ್ಟಿ : ಹೂಳಿಹೋಯಿತು ನಳನ ಪಡೆ ನಾರಾಚಸೋನೆಯಲಿ (ಕೌಶಿರಾ.೧೯-೧೬).

[ನಾರಾಚ + ಸೋನೆ]

ನಾರಾಚಿ (ನಾ). ಅಕ್ಕಸಾಲಿಗನ ತಕ್ಕಡಿ,—ತ್ರಾಸು; ಚಿಂತಾಲು : "ನಾರಾಚಿ, ಏಷಣಿಕಾ—೨ ತ್ರಾಸಿನ ಪೆಸರುಗಳು" (ಸಿದ್ಧಾಂತಿ. ೨೭೦).

[ಸಂ. ನಾರಾಚೀ]

ನಾರಾಟ (ನಾ). [ಸಂಗೀತ] ಒಂದು ಧ್ವನಿವಿಶೇಷ; ೫ ಮಾಧುರ್ಯವಿಲ್ಲದ ಹಾಗು ಬಹುಮಟ್ಟಿಗೆ ತಾಲಸಂಸ್ಪರ್ಶಯುಕ್ತವಾದ ಧ್ವನಿ : ಸೊಗಯಿಸುವ ಸಪ್ತಸ್ವರಂಗಳೊಗೆದವಿಪ್ಪತ್ತೆರಡು ಶ್ರುತಿಗಳು ನೆಗಳುತಿರೆ ನಾರಾಟ ಕಾವುಳವೆಂಬ ಧ್ವನಿಗೂಡಿ (ಬಸಪು. ೧೯-೧೦) ;

ಮತ್ತ ಮಾರಾಗಂಗಳಂ ಪಾಡುವಲ್ಲಿ . . . ಕಾವುಳ ಬಬ್ಬೋಳ ನಾರಾಟ ಮಿಶ್ರವೆಂಬ ಚತುರ್ವಿಧ ಸುಸ್ವರಗಳಿಂದುರುಳಿಸಿ . . . ಕರ್ಣರಸಾಯನ ಮಾಗಿ ಪಾಡಿ (ವಿವೇಕ. ೨೫೨). [ಸಂ.]

ನಾರಾಯಣ (ನಾ). ೧. ಜಗತ್ತಿನ ಮೂಲಪುರುಷ ; ಪರಬ್ರಹ್ಮ. ೨. ಹಿಂದೂಗಳ ಧರ್ಮಗ್ರಂಥಗಳಲ್ಲಿ ವಿವರಣೆಯಾಗಿರುವ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರೆಂಬ ತ್ರಿಮೂರ್ತಿಗಳಲ್ಲಿ ಎರಡನೆಯವನು ; ಜಗತ್ತಿನ ಸ್ಥಿತಿಯ ಅಧಿಪತಿ; ವಿಷ್ಣು : ಕ್ಷಾರಕ್ಷೀರಾಂಬುಧಿಗಂ . . . ಮುರಜಿನ್ನಾರಾಯಣರ್ಗಂ ಸಿರಿಗಂ ಶ್ರೀರಾಮೆ ಗಮತನುಗಂ ಭವಾರಿಗಮ್ಮೆಕ್ಕಂ (ಕಾವ್ಯಾಪ. ೯೦೬); ನಾರಾಯಣ ವೃದ್ಧಬ್ರಾಹ್ಮಣನಾಗಿ ಬಂದು ಬಲಿಯ ಭೂಮಿಯ ಬೇಡಿದ (ಬಸವ. ೬೨೩) ; ನಾರಾಯಣ ಎಂದರೆ . . . ಮಾನವ ಸಮಾಜರೂಪೀ ಭಗವಂತನೆಂದು ಅರ್ಥ (ಭಾರದ. ೩೬೪). ೩. ವಿಷ್ಣುವಿನ ಪೂರ್ಣಾವತಾರವೆನಿಸಿರುವ ಕೃಷ್ಣ ; ವಾಸುದೇವ: "ವಿಷ್ಣುಃ, ಕೃಷ್ಣಃ. . . ನಾರಾಯಣಃ, ಜಗನ್ನಾಥಃ, ವನಮಾಲೀ, ಗದಾಧರಃ— ಈ ೪೫ ನಾರಾಯಣನ ಪೆಸರ್" (ಹಲಾಯು. ೫-೨೫) ; ಅಂತು ದಕ್ಷಿಣಾಕ್ಷಿಸ್ಪಂದನದೊಳಂ ಸೂಚಿಸುವ ಶುಭಸೂಚನೆಯೊಳಂ ನಾರಾಯಣನುದಾತ್ತ ನಾರಾಯಣನ ಬರವನಱಿದು (ಪಂಪಭಾ. ೪-೩೩ ಪ) ; ನಾರಾಯಣಂ ಚಾಳುಕ್ಯನಾರಾಯಣನ ಶೂರಕೃತ್ಯಂಗಳಂ ಪೊಗಟುತ್ತಿರ್ಪಿನಂ (ಗದಾಯು. ೧೦-೧೧ ಪ) ; ಕಪಟನಾಟಕಸೂತ್ರಧಾರ ನಾರಾಯಣಪ್ರೇರಿತ ಮನಸ್ಕನಾಗಿ ವಸುದೇವನಿಂತೆಂದಂ (ಜಗವಿ. ೩-೨೨ ಪ); ನಾರಾಯಣನ ನುಡಿಯಿಂದ ಮುನ್ನ ಜಲಾಯತಾಸ್ತ್ರವನರ್ಜುನನು ಗಾಂಡಿವದಲುಗುಳಿಸಿದ (ಕುವ್ಯಾದ್ರೋ. ೧೯-೪೬) ; ನಾರಾಯಣ ನಿನ್ನ ನಾಮದಸ್ಮರಣೆಯ ಸಾರಾಮೃತವೆನ್ನ ಬಾಯಿಗೆ ಬರಲಿ (ಪುರಂದ. ೨-೧೪೮ ಪಲ್ಲವಿ). ೪. ಒಬ್ಬ ಋಷಿಯ ಹೆಸರು : ಆಯತಿಯಿಂದಂ ನರ ನಾರಾಯಣರೆನೆ ನೆಗೞ್ದೆವರಿಗ ನಾವಿರ್ವರುಂ (ಪಂಪಭಾ. ೪-೪೫). 'ನರನಾರಾಯಣಾಶ್ರಮ' ಪರಾ. ೫. ಒಬ್ಬಾತನ ಹೆಸರು : ವಸದಿಯಾನ್ಕೆಯ್ದೊನ್ನಾರಾಯಣ ಪೆರುನ್ತಚ್ಚನ್ (ಮೈಆರಿ. ೧೯೩೭, ೫೮-೭ ; ಸು. 825). ೬. = ನಾರಾಯಣೋಪನಿಷತ್ತು : ಬಳಿಕ ಶ್ರೀರುದ್ರ ಬೃಹದಾರಣ್ಯಕ . . . ನಾರಾಯಣ ಹಂಸ . . . ಮುಂಡಕವೆಂಬ ಮೊದಲಾದುವೆ ಶತೋಪನಿಷತ್ತುಗಳು (ವಿವೇಕ. ೪). ೭. = ನಾರಾಯಣಾಸ್ತ್ರ : ಕೈನೀಡಿದನು . . . ಹೊಂಗಱಿಯ ನಾರಾಯಣಮಹಾಶರಕೆ (ಕುವ್ಯಾದ್ರೋ. ೧೯-೧೪). ೮. [ಜೈನ] ಒಂಬತ್ತು ಜನ ವಾಸುದೇವರಲ್ಲಿ ಒಬ್ಬ: ನಾರಾಯಣನಂ ಮಣಿಮಯ ನೀರಾಜನ ದೀಪಮಾಲೆ ಬಳಸಿದುವಾಗಳ್ (ಪಂರಾಮಾ. ೧೪-೭೩); ನಾರಾಯಣರ ಸಂಪತ್ತಿ ಮೊದಲಾದುವು ಚಕ್ರವರ್ತಿಗಳ ಅರ್ಧದಷ್ಟು. ಆದುದರಿಂದ ನಾರಾಯಣರನ್ನು ಅರ್ಧಚಕ್ರಿಗಳೆಂದೂ ಹೇಳುವರು. ಇವರು ಒಂಬಯ್ವರು (ಚೈನಧ. ೧೨೮). 'ನವನಾರಾಯಣ' ಪರಾ. [ಸಂ.]

ನಾರಾಯಣಕವಚ (ನಾ). ಒಂದು ರಕ್ಷಾಮಂತ್ರ : ಪ್ರಣವರೂಪನೆ ಹೇಳು ನಾರಾಯಣಕವಚವೆಂದೇನು (ಸಿಭಾಗ. ೬-೮-೧) ; ಅವನು ಇವನಿಗೆ ನಾರಾಯಣಕವಚವನ್ನು ಅನುಗ್ರಹಿಸಿ ಕೊಟ್ಟು ಗುರುವಾದನಲ್ಲ ! (ನಡೆದಾ. II, ೧೪೦೪). [ಸಂ.]

ನಾರಾಯಣಗೌಲ 'ನಾರಾಯಣಗೌಳ' ನೋ.

ನಾರಾಯಣಗೌಳ, ನಾರಾಯಣಗೌಲ (ನಾ). [ಸಂಗೀತ] ಒಂದು ರಾಗದ ಹೆಸರು: ನಾರಾಯಣಗೌಳ ೨೮ನೇ ಹರಿಕಾಂಭೋಜಿಯಲ್ಲಿ ಜನ್ಯ (ಸಂಗೀಚಂ. ೧೫೯) ; ವೆಂಕೋಬರಾಯರು . . . ನಾರಾಯಣಗೌಳ ರಾಗವನ್ನು ಹಾಡುವಂತೆ ಸನ್ನೆ ಮಾಡಿದರು (ಸಂಗೀತ. ೧೩).

ನಾರಾಯಣಗೌಲ : ನಾರಾಯಣಗೌಲವು (೫೨) ಸಂಪೂರ್ಣವೆಂದು ಪ್ರಸಿದ್ಧವಾಗಿದೆ ; (ಇದು) ಕೇದಾರಗೌಲ ಮೇಳದಲ್ಲಿ ಹುಟ್ಟಿದೆ ; ಸಾಯಂಕಾಲದಲ್ಲಿ ಹಾಡುವಂತಹದು (ಚತುಪ್ರ. ೬೩).

[ನಾರಾಯಣ + ಗೌಳ$_1$]

ನಾರಾಯಣತೈಲ (ನಾ). ಸಂಧಿವಾತ ಮೊದಲಾದ ರೋಗಗಳನ್ನು ಪರಿಹರಿಸುವ ಮೂಲಿಕೆಗಳಿಂದಾದ ತೈಲ : ನಾರಾಯಣತೈಲ—ಎಳ್ಳೆಣ್ಣೆ ಸೇರು ೧೦, ಎಕ್ಕದ ಹಾಲು ಸೇರು ೧ . . . ಎಣ್ಣೆಯುಳಿವ ತನಕ ಅಟ್ಟು . . . ಸರ್ವಾಂಗ ಲೇಪಂಗೈಯೆ ಸಕಲಸನ್ನಿಪಾತಂಗಳು . . . ಮಾಣುವುವು (ಸಕವೈ. ೧೭೯). [ನಾರಾಯಣ + ತೈಲ$_1$]

ನಾರಾಯಣದೇಶಾಕ್ಷಿ (ನಾ). [ಸಂಗೀತ] ಒಂದು ರಾಗದ ಹೆಸರು : ನಾರಾಯಣದೇಶಾಕ್ಷಿಯು (೩೪) ಸಂಪೂರ್ಣ(ರಾಗ) ; ಪ್ರಾತಃಕಾಲದಲ್ಲಿ ಹಾಡಲ್ಪಡುತ್ತದೆ, ಶಂಕರಾಭರಣವೆಂಬ ರಾಗದ ಮೇಳದಲ್ಲಿ ಹುಟ್ಟಿದೆ (ಚತುಪ್ರ. ೬೧). [ನಾರಾಯಣ + ದೇಶಾಕ್ಷಿ]

ನಾರಾಯಣಬಲಿ (ನಾ). ಆತ್ಮಹತ್ಯೆ, ಅಪಘಾತ ಮೊದಲಾದ ನಿಮಿತ್ತದಿಂದ ದುರ್ಮರಣಕ್ಕೊಳಗಾದವರು, ಬ್ರಹ್ಮಚಾರಿಗಳಾಗಿ ಸತ್ತವರು ಮೊದಲಾದವರ ಉತ್ತರಕ್ರಿಯೆಯ ಕಾಲದಲ್ಲಿ ನಾರಾಯಣ ಮೊದಲಾದ ದೇವತೆಗಳಿಗೆ ಕೊಡುವ ಬಲಿ: ವ[ಜ್ಞೀ]ಶ್ವರನ್ನಾಮಗ್ರಾಮನ್ನಾರಾಯಣಬಲ್ಯುಪಹಾರಾರ್ಥಂ ಷೋಡಶ ಸಂಖ್ಯೇಭ್ಯೋ ಬ್ರಾಹ್ಮಣೇಭ್ಯಶ್ಚ ಸತ್ರನಿಬನ್ಧ ಪ್ರತಿದಿನಮನುವಿಧಾನಕ್ಕೃತ್ವಾ (ಕಇ. V, ೧-೧೩ ; 578) ; ಈಗಳುಂ ಕೈದುವಿಂ ಹೊಂದಿದರ್ಗವನಿ ನಾರಾಯಣಬಲಿಯನೆಸಪುದು (ಪದ್ಮರಾ. ೧೦-೧೫೪). [ಸಂ.]

ನಾರಾಯಣಾಸ್ತ್ರ (ನಾ). ನಾರಾಯಣನು ಅಧಿದೇವತೆಯಾಗಿರುವ ಬಾಣ ; ನಾರಾಯಣಮಂತ್ರದಿಂದ ಅಭಿಮಂತ್ರಿಸಿ ಪ್ರಯೋಗಿಸುವ ಬಾಣ : ರಾಯಕಟಕವ ಬೆದಱಿಸಿದ ನಾರಾಯಣಾಸ್ತ್ರದ ಬಾಧೆಯನು ಕಮಲಾಯತಾಂಬಕ ನಿಲಿಸಿ ಸಂತೈಸಿದನು ಪಾಂಡವರ (ಕುವ್ಯಾದ್ರೋ. ೧೯ ಸೂಚನೆ) ; ಭಂಗಿಸಿದನೆಚ್ಚು ನಾರಾಯಣಾಸ್ತ್ರದೊಳು (ಜೈಮಿಭಾ. ೮-೪೫) ; ಅವನಿಗೆ ಬ್ರಹ್ಮೇತಿಸಿಟ್ಟು ಬಂದು . . . ಪಾಂಡವಸೇನೆಯ ಮೇಲೆ ನಾರಾಯಣಾಸ್ತ್ರವನ್ನು ಅಭಿಮಂತ್ರಿಸಿ ಬಿಟ್ಟನು (ಪಚಭಾ. ೨೯೧). [ನಾರಾಯಣ + ಅಸ್ತ್ರ]

ನಾರಾಯಣಿ (ನಾ). ೧. ಸ್ತ್ರೀರೂಪವನ್ನು ತಾಳಿದ ವಿಷ್ಣು ; ಮೋಹಿನಿ : ದಾರುವನದಲ್ಲಿ ಮೋಹಿನಿ ನಾರಾಯಣಿ ಸುಳಿಯಲೊಡಂ ಮೋಹಿತರಾದರ್ ಧೀರ ಯತಿರಾಜರ್ (ಹಮ್ಮೀರ. ೬-೨೬). ೨. ವಿಷ್ಣುವಿನ ಪತ್ನಿ ; ಲಕ್ಷ್ಮಿ : 'ಆದಿನಾರಾಯಣಿ' ಪರಾ. ೩. ಆದಿಶಕ್ತಿ; ದುರ್ಗೆ. ೪. ಒಂದು ಬಗೆಯ ಗಡ್ಡೆ ; ಮಜ್ಜಿಗೆ ಗಡ್ಡೆ ; ಆಸಡಿ ; ಶತಾವರಿ : "ಶತಮೂಲೀ, ಬಹುಸುತಾ, ಅಭೀರುಃ, ಇಂದೀವರೀ, ವರೀ, ಋಷ್ಯಪ್ರೋಕ್ತಾ, ಅಭೀರುಪತ್ರೀ, ನಾರಾಯಣೀ, ಶತಾವರೀ, ಅಹೇರುಃ—೧೦ ಪಿಲ್ಲಪಿಚ್ಚರದ ಹೆಸರುಗಳು. ಅಂದರೆ ಆಸಡಿಯೆನ್ನುವರು, ಆಷಾಢೀಬೇರು ಪ್ರಸಿದ್ಧ, ಮಜ್ಜಿಗೇಗೆಡ್ಡೆ, ಅಜ್ಜಿಗೆಡ್ಡೆ" (ಸಿದ್ಧಾಂತಿ. ೧೩೫). ೫. [ಸಂಗೀತ] ಒಂದು ರಾಗದ ಹೆಸರು : ಬಳಿಕ ಸಮಸ್ತರಾಗಂಗಳೊಳಗೆ ರಾಮಕ್ರಿಯೆ . . . ನಾರಾಯಣಿ . . . ಮಧ್ಯಮಾವತಿಯೆಂಬ ಮೂವತ್ತಾಱು ರಾಗಂಗಳೇ ಮುಖ್ಯಮಾಗಿ (ವಿವೇಕ. ೨೫೧); ತಾಳದಂಡಿಗೆವಿಡಿದು ಸುವಾಸಿನಿಯರು ಬಂದು ನಿಂದು ದೇಶಾಕ್ಷಿ ನಾರಾಯಣಿ ಘೂರ್ಜರಿಯಿಂ ರತೀಶನ ಪಿತನ ಪಾಡಿದರು (ಮೋಹತ. ೧೬-೬೩) ; ನಾರಾಯಣೀರಾಗವು (೩೬) ಶಂಕರಾಭರಣವೆಂಬ ಮೇಳದಲ್ಲಿ ಹುಟ್ಟಿದೆ (ಚತುಪ್ರ. ೬೧).

[ಸಂ. ನಾರಾಯಣೀ]

ನಾರಾಯಣೋಪನಿಷತ್ತು (ನಾ). ವೇದಾಂತಗಳೆಂದು ಪ್ರಸಿದ್ಧವಾದ ಉಪನಿಷತ್ತುಗಳಲ್ಲಿ ಒಂದು : ಹರಿಯೆ ಜಗಮೆಂದೆನೆ ಪ್ರಮಾಣವು ಪುರುಷನೀ ವೇದಮ್ಮೆನಲು [ಪುರುಷಮೇ ವೇದಮೆನ್ನಲು] ಸಂಧರಿತನೆನೆ ನಾರಾಯಣೋಪನಿಷತ್ತು ಘೋಷಿಸಲು (ಗಗತಾ. ೧೬-೨೧). [ನಾರಾಯಣ + ಉಪನಿಷತ್ತು]

ನಾರಾಶಂಸಿ (ನಾ). ವೀರಪುರುಷರ ಪ್ರಶಂಸೆ ; ವೀರಗಾಥೆ : ಇತಿಹಾಸ, ಪುರಾಣ, ಗಾಥಾ, ನಾರಾಶಂಸಿಗಳು ಅವುಗಳನ್ನು ಅನುಸರಿಸಿ ಹೊರಟವು. ಇದು ಇತಿಹಾಸ, ಪುರಾಣ, ಗಾಥಾ ಮತ್ತು ನಾರಾಶಂಸಿಗಳ ಪ್ರಿಯಸ್ಥಾನ (ಭಾರದ. ೧೬೨). [ಸಂ. ನಾರಾಶಂಸೀ]

ನಾರಿ$_1$ (ನಾ). ೧. ಬಿಲ್ಲಿಗೆ ಕಟ್ಟುವ ಹುರಿ; ಸಿಂಜಿನಿ ; ಹೆದೆ : "ತಿರು ತಿರ್ಚಿಂದೊಡಂ ಬಿಲ್ಲ ನಾರಿ" (ಕಬ್ಬಿಕೃ. ೩೮); "ತಿರು ತಿರ್ಚು ಹೆದೆಯೆನೆ ಬಿಲ್ಲ ನಾರಿ" (ಶಬ್ದಮಂ. ೪೪); ನಾರಿ ಹಱಯಿತ್ತು ಬಿಲ್ಲು ಮುಱಯಿತ್ತು ಅಂಬೇನ ಮಾಡುವುದು (ಅವಚಂ. ೬೩-೨೬೬); ಆ ತವಸಿಯಂ ಮುಳಿದೆಟ್ಟೊಡೆ ಕರ್ಪುವಿಲ್ಲು ತಾಂ ಮುಱಯದೆ . . . ತುಂಬಿಯ ನಾರಿ ಬೇಗದಿಂ ಪಱಯದೆ (ಕಬ್ಬಿಕಾ.೨೩೩); ಪೂನಿನ ಬಿಲ್ಲ ಕೊಪ್ಪನೊದೆದೇಱಿಸಿ ತಾವರೆ ನೂಲ ನಾರಿಯಂ ಜೇವೊಡೆಗೆಯ್ದು (ಶಮುದ. ನ.೬೫ ಪ್ರಯೋ); ನಾರಿಯ ತೀಡಿ ಜೇವಡೆಗೈದು ಸಿಡಿಲಂತೆಱಗೆ ರಾಘವನು (ಕೌಶಂಬಾ. ೩೫-೧೯); ನಾರಿಯಂ ತೀಸಿ ನರಮಂ ಸೀಳಿ ಹೆದೆಗಟ್ಟು (ಸಮ್ಯಕೌ. ೧೦-೩೨); ಮದನಂ ಮಾಲೆಗಾರ್ತಿಯರ ಹುಬ್ಬೆಂಬ ಚಾಪಮಂ ಕುರುಳೆಂಬ ನಾರಿಯಂ . . . ಅಳವಡಿಸಿ ಕೊಂಡು (ಚೈಮಿಭಾ. ೬-೧೭); ಲವಂ ಪಲವಂ ರಾವುತವಡೆಯಂ . . . ಕಂಡು ಮೂಣ್ಡು ನಾರಿಯಂ ಬಿಲ್ಗೆ ಬಿಗಿದು (ರಾಮಾಶ್ವ. ೧೫೪-೧೦). ೨. ತೆಂಗು, ತಾಳೆ ಮೊದಲಾದ ಮರಗಳ ಗರಿಗಳ ಬುಡದಲ್ಲಿರುವ ನಾರಿನ ಪೊರೆ : (ಕೆ). [ದೇ.॥ ತಮಿ. ತುಳು. ತೆಲು. ನಾರಿ ; ಕೋಲಾ. ನಾರಾ = ಹಗ್ಗ]

ನಾರಿ$_2$ (ನಾ). ಹೆಂಗಸು; ಮಹಿಳೆ ; ಸ್ತ್ರೀ : "ವನಿತೆ ವಧು ನಾರಿ ಸೀಮಂತಿನಿಯೋಷಿದ್ವಾಮೆ ಕೇವಳಂ ಸ್ತ್ರೀನಾಮಂ" (ವಸ್ತುಕೋ. ೫೨-೧) ; "ನಾರಿಯೋಷಿತ್ಕಾಂತೆ ಮಹಿಳೆಯುಬಳೆ ರಾಮೆ ವರವರ್ಣಿನಿಯೆನಲ್ಕೆ ಹೆಂಗೂಸೆನಿಳ್ಕು" (ಮಂಗರಾ. ೮೧-೧); ಆಲದ ಬಿಟಲಂತೆ ನೆಲಕೈಜಗದೆ . . . ಬಿಲ್ಗಾಱನಂತೆ ನಾರಿಗಾಸೆ ಮಾಡದೆ ಹಂಸೆಯಂತೆ ಸಾರಗ್ರಾಹಿಯುಂ (ಧರ್ಮಾಮೃ. ೫-೯೯); ನಾರಿಗೆ ಗುಣವೇ ಶೃಂಗಾರ (ಬಸಪು. ೬೪); ನಾರಿಯ ರೂಪಂ ಮನದೊಳ್ ಬೇರೂಱಲು (ಪುಣ್ಯಾಸ್ರ. ೯-೩೯); ಹೊತ್ತುಗಳೆಯಬೆ ಹೆಱಸಿರೇ ನಾರಿಯನು ನಿಮ್ಮಯ ಬಾಣ ಗರ್ಭಿಣಿಯ (ಕುವ್ಯಾಭೀ. ೯-೩೪); ಚಾಪದ ನಾರಿ ಬೆಸಲಾಗಲಿ ಮಹಾಸ್ತ್ರವನು (ಕುವ್ಯಾದ್ರೋ.೩-೩೩); ☞ ಮೇಲಿನ 'ಧರ್ಮಾಮೃ', 'ಕುವ್ಯಾಭೀ' ಮತ್ತು 'ಕುವ್ಯಾದ್ರೋ' ಪ್ರಯೋಗಗಳಲ್ಲಿ 'ದ್ವಿಭಾಷಾಶ್ಲೇಷೆ' ಎಂಬ ಚಮತ್ಕಾರವನ್ನು ಕವಿಗಳು ಉಪಯೋಗಿಸಿದ್ದಾರೆ; ಅರು ಹಿತವರು ನಿನಗೆ ಮೂಱುಮಂದಿಗಳೊಳಗೆ ನಾರಿಯೋ ಧಾರಿಣಿಯೋ ಬಲುಧನದ ಸಿರಿಯೋ (ಪುರಂದ. ೧-೧೩೨ ಪಲ್ಲವಿ); ಒಲಿದರೆ ನಾರಿ ಮುನಿದರೆ ಮಾರಿ (ಗಾಜಿ). [ಸಂ. ನಾರೀ]

ನಾರಿ$_3$ (ನಾ). ಶತ್ರುಗಳಿಲ್ಲದವನು ; ಅಜಾತಶತ್ರು : "ವನಿತೆಯ ಜಾತಶತ್ರು ತಿರುವೆಂದಿವು ನಾರಿ ಸಮಾಖ್ಯಂ" (ನಾನಾರ. ೭೫).

[ಸಂ. (ನ + ಆರಿ)]

ನಾರಿಕೇರ (ನಾ). = ನಾರಿಕೇಲ. [ಸಂ.]

ನಾರಿಕೇಲ, ನಾರಿಕೇಳ (ನಾ). ಒಂದು ಬಗೆಯ ಮರ ಮತ್ತು ಅದರ ಕಾಯಿ ; ತೆಂಗು. **ನಾರಿಕೇಳ :** ನಾರಿಕೇಳಂ ಕ್ರಮುಕಂ ತಾಳದ್ರುಮ ಮೆಂದಿವು ಭೂಜಾಳಿಗಳೊಳ್ ತೃಣಮಹೀರುಹಂಗಳೆನಿಕ್ಕುಂ (ವಸ್ತುಕೋ. ೩೬-೧೯) ; ಮತ್ತಮನೇಕ ಪನಸ ಜಂಬೀರ ನಾರಿಕೇಳ ಸಹಕಾರ ಕದಳೀಪ್ರಮುಖ ಫಲಿತಭೂಜರಾಜಿಗಳ್ (ಪುಪ್ಪಪು.೫-೮೭ಎ); ಜೀಮೂತವಾಹಂಗೆ ನಿಜಸುಧಾರಸಮಂ ಮುರಳತಕಳಶದೊಳ್ ತೀವಿ ನಿಡುದೋಳಂ ನೆಗಸಿ ಮೇಗಣ್ಗೆ ನೀಡುಂ ನೀಡಿದಪಳೆಂಬಂತೆ ರಂಜಿಪ ನಾರಿಕೇಳಮುಂ (ಶಬಶಂ. ೨-೪೨ ಎ); ಮಾಚಿಕಬ್ಬೆ ಮಾರಸಿಂಗಮಯ್ಯನವರುಗಳು . . . ಶಾಂತಲೆಯ ಕೈಗೆ ನಾರಿಕೇಳಫಲವನ್ನಿತ್ತು . . . ಧಾರೆಯೆರೆದು (ಶಾಂತಲಾ. ೧೧೨). [ಸಂ.]

ನಾರಿಕೇಲಿ (ನಾ). = ನಾರಿಕೇಲ. [ಸಂ.]

ನಾರಿಕೇಳ 'ನಾರಿಕೇಲ' ನೋ.

ನಾರಿಕೇಳಪಾಕ (ನಾ). [ಕಾವ್ಯಮೀಾ] ಓದಿದ ಕೂಡಲೇ ಸ್ವಾರಸ್ಯ ತಿಳಿಯುವಂತಿರದೆ ನಿಧಾನವಾಗಿ ಪರ್ಯಾಲೋಚನೆಯಿಂದ ತಿಳಿಯಬೇಕಾದ ಕಾವ್ಯರಚನಾ ರೀತಿ ; ☞ ತೆಂಗಿನಕಾಯಿಯ ತಿರುಳನ್ನು ಉಪಯೋಗಿಸಬೇಕಾದರೆ ಮೊಟ್ಟೆ ಸುಲಿದು ಚಿಪ್ಪನ್ನು ಒಡೆಯಬೇಕಾಗಿರುವಂತೆ, ಕ್ಲೇಶದಿಂದ ಅಭಿಪ್ರಾಯವನ್ನು ಗ್ರಹಿಸಬೇಕಾದ ಕಾವ್ಯರಚನೆಯ ಹದ : ಕೆಲವು ಕಾವ್ಯಗಳಲ್ಲಿ . . . ಅರ್ಥವು ಗೂಢವಾಗಿದ್ದು ಅದು ತಿಳಿಯಬೇಕಾದರೆ ಬುದ್ಧಿಕ್ಲೇಶವಾಗುವುದು ; ಈ ಗಭೀರತೆಯ ತಾರತಮ್ಯವನ್ನು ಇಟ್ಟುಕೊಂಡು ಪಾಕವನ್ನು 'ದ್ರಾಕ್ಷಾಪಾಕ', 'ನಾರಿಕೇಳಪಾಕ' ಎಂದು ಎರಡು ಭಾಗ ಮಾಡಿದ್ದಾರೆ (ಕೃಸಿಡಿ. ೨೨೫) ; ವರ್ಣನೆ ಕಲ್ಪನೆ ಎರಡೂ ಪ್ರೌಢವಾಗಿವೆ. ಆದರೂ ನಾರಿಕೇಳಪಾಕದಂತೆ ವಿದ್ವಾಂಸರ ಮನಸ್ಸನ್ನು ಆಕರ್ಷಿಸಿದೆ (ಭಾರದ. ೪೫೩). 'ದ್ರಾಕ್ಷಾಪಾಕ' ಪರಾ.

[ನಾರಿಕೇಳ(= ನಾರಿಕೇಲ) + ಪಾಕ$_1$]

ನಾರಿಕೇಳಲೇಹ್ಯ (ನಾ). ಎಳನೀರು ಮೊದಲಾದುವುಗಳ ಮಿಶ್ರಣದಿಂದ ತಯಾರಿಸಿದ ಒಂದು ಬಗೆಯ ಔಷಧಿ : ನಾರಿಕೇಳಲೇಹ್ಯ . . . ಸೇವಿಸಿದರೆ ಕ್ಷಯರೋಗ, ಆಮ್ಲಪಿತ್ತ, ಅಶ್ಮರಿ, ಪಾಂಡು, ಕಾಮಿಲಾ, ಮೇಹ ಈ ರೋಗಗಳು ಗುಣವಾಗುವುವು (ಸಕವೈ. ೪೫೨).

[ನಾರಿಕೇಳ (= ನಾರಿಕೇಲ) + ಲೇಹ್ಯ]

ನಾರಿಗಳ್ಳ (ನಾ). ಹೆಂಗಸರನ್ನು ಕದಿಯುವವನು ; ಸ್ತ್ರೀಚೋರ : ವೀರರಂಗವ ಬಿಟ್ಟು ನೀನೇ ಚೋರರಂಗವ ಕಲಿತೆ ಹೊಸತೇ ನಾರಿಗಳ್ಳನು ತಂದೆ ನೀ ಧುರಗಳ್ಳ ಹಸನಾಯ್ತು (ಕೌಶಂಬಾ. ೧೯-೨೮).

[ನಾರಿ$_2$ + ಕಳ್ಳ$_1$]

ನಾರಿಚೋರ (ನಾ). = ನಾರಿಗಳ್ಳ : ನಾರಯೊಬ್ಬಳ ಪೆತ್ತೆಯಂತೆ . . . ನಾರಿಚೋರನ ಕೊಂದೆಯಂತೆ (ಪುರಂದ. ೧-೧೧೧-೨).

[ನಾರಿ$_2$ + ಚೋರ]

ನಾರಿಯಳಿ 'ನಾರಿವಾಳ' ನೋ.

ನಾರಿರನ್ನ (ನಾ). = ನಾರಿರನ್ನೆ : ನಾರಿರನ್ನಳ ಕಂಡೆಯ ವಾರಿಜನಾಭ . . . ಚೆನ್ನಿಗರಾಯನ (ಪುರಂದ. ೩-೧೬೫ ಪಲ್ಲವಿ).

[ನಾರಿ$_2$ + ರನ್ನ]

ನಾರಿರನ್ನೆ (ನಾ). ಸ್ತ್ರೀಯರಲ್ಲಿ ರತ್ನಪ್ರಾಯಳಾದವಳು ; ಶ್ರೇಷ್ಠಳಾದ ಹೆಣ್ಣು ; ಸ್ತ್ರೀರತ್ನ : ನಾರಿರನ್ನೆ ಸುಭದ್ರೆಸಹಿತ ಕುಮಾರನನು ಕಳುಹಿಂದನರ್ಜುನನೊಡನೆ (ಜಿನಭಾ. ೩೨-೪೬). [ನಾರಿ$_2$ + ರನ್ನೆ]

ನಾರಿವಣ 'ನಾರಿವಾಳ' ನೋ.

ನಾರಿವಾಣ 'ನಾರಿವಾಳ' ನೋ.

ನಾರಿವಾಳ, ನಾರಿಯಳಿ, ನಾರಿವಣ, ನಾರಿವಾಣ (ನಾ). ತೆಂಗು ; ನಾರಿಕೇಳ : ಪಾಪಿಗೆ ಕೋಪಿಗೆ ಭಕ್ತಿಯಾಗೆಂದರಪ್ಪುದೆ

ನಾರಿವಾಳ[ಪಾಠಾಂ.ಣ]ವಕ್ಕುವುದೆ ನಾಯಿಗೆ (ಬಸವ. ೬೫೦); ಕಬ್ಬು ಬಾಳೆ ನಾರಿವಾಳಕ್ಕೆ ಸಿಹಿನೀರನೆಱೆದವರಾರಯ್ಯ (ಸುಹಾದೇ.ಬ. ೧೦-೨); ನಾರಿವಾಳ[ಪಾಠಾಂ. ಣ]ದ ಕಾಯೊಳಗಣ ತಿರುಳನೊಡೆಯದೆ ಮೆಲ ಬಲ್ಲಡೆ ಬೆಡಗು (ಅಪಚಂ. ೧೨೬-೫೬೨). **ನಾರಿಯಳಿ** : "ನಾರಿಯಳಿ ನಾಳಿಕೇರಂ ತೆಂಗಿನಿಕ್ಕು" (ಮಂಗರಾ. ೩೪-೧೦). **ನಾರಿವಣ** : ಅಲ್ಲದ ಹೇಱೊಂದಕ್ಕಂ ಹಾಗ ನಾರಿವಣದ ಕಾಯ ಹೇಱೊಂದಕ್ಕಂ ಹಾಗ ಕಾಯಿ ಮೇಲೋಗರದ ಭಂಡಿ ಒಂದಕ್ಕಂ ಹಾಗ (ಎಕ. V, ಬೇಲೂರು. ೬೫-೧೦೪ ; 1382). **ನಾರಿವಾಣ** : ನಾಯಿಗೆ ನಾರಿವಾಣವಕ್ಕುವುದೆ (ಬಸವ. ೬೧) ; ನಾರಿವಾಣ ತಂದು ನಾಯ ಮುಂದೆ ಹಾಕಿದರೆ ಒಡೆಯಲಱಯದು ತಿನಲಱಯದು (ವಚಸಂ. ೧೮೮-೨೫) ; ಕಾಷ್ಠಾಂಗಾರಮುಖ್ಯನೃಪಾಲಕರು ಕವಿ ನಾರಿವಾಣಫಲಕ್ಕೆ ಮುತ್ತಿದ ತೆಱದೆ ಬೀಣೆಗಳ . . . ನುಡಿಸುತಿರೆ (ಜೀವಂಧ. ೯-೪).

[<ಪ್ರಾ. ಣಾರಿವಿಲ. / ಹಿಂ. ನಾರಿಯಲ್ ; ಮರಾ. ನಾರಳ್]

ನಾರೀಕೇಲ, ನಾರೀಕೇಳ (ನಾ). = ನಾರಿಕೇಲ. **ನಾರೀಕೇಳ** : ಭೂಸುರನು . . . ಮೊದಲು ದೇವಾಲಯದ ಹೊಗುತಲಿ ಕದಳಿ ನಾರೀಕೇಳವಿಡುತಲಿ ಪದುಮನಾಭ ನಮೋಯೆನುತ್ತಲಿ ಕರವ ಮುಗಿವುತಲಿ (ಸುದಾಮ. ೬-೧೧). [ಸಂ.]

ನಾರೀಕೇಳ 'ನಾರೀಕೇಲ' ನೋ.

ನಾರೀಚೋರ (ನಾ). = ನಾರಿಗಳ್ಳ : ನಾರೀಚೋರ ನಡೆನಡೆ ಎನುತ ತಿವಿದನು ಬಿಲ್ಲ ಕೊಪ್ಪಿನಲಿ (ಕುಮಾಹ. ೨೨-೩೬). [ಸಂ.]

ನಾರೀರೂಪ (ನಾ). ಹೆಂಗಸಿನ ಆಕೃತಿ ; ಸ್ತ್ರೀರೂಪ : ನಾರೀ ರೂಪದ ಯಂತ್ರಂ ಚಾರುತರಂ ನೋಡೆ ನೋಡೆ ಕರಗಿದುದು (ಅಪಿಪು. ೯-೪೪). [ಸಂ.]

ನಾರು$_1$ 'ನಾಱು$_1$' ನೋ.

ನಾರು$_2$ (ನಾ). ವಾಸನೆ ; ಕಂಪು : ಬಿರಿನನೆ ನಾರು ಬೀರದೇಂ ? ತಟಕದೀ ಎಲೆವನ ಇದೇನು ? (ಗಿಳಿವಿಂ. ೨೮-೫೯). [<ನಾಱು$_1$]

ನಾರು$_3$ 'ನಾರ್' ನೋ.

ನಾರು$_4$ (ನಾ). (ಕೆಲವು ಬಗೆಯ ಗುಳ್ಳೆ ಅಥವಾ ಕುರುವಿನಲ್ಲಿ ಉತ್ಪತ್ತಿಯಾಗುವ) ಎಳೆಯಂಥ ಒಂದು ಬಗೆಯ ಹುಳುವಿನಿಂದ ಉಂಟಾಗುವ ಹುಣ್ಣು ; ನಾಡೀವ್ರಣ : ಅದೇ ಕಾಲಕ್ಕೆ ನಾರಿನ ಉಪದ್ರವವಾದರೂ ಹೆಚ್ಚಾಗಲಿ ಕಡಮೆಯಾಗಲಿ ಆಗುತ್ತಿರುತ್ತದೆ (ಕಭಾಗೆ. ೪೧೫) ; ಅದರಿಂದ ನಾರು, ಹುರುಕು, ಕಜ್ಜಿ . . . ಮುಂತಾದ ತ್ವಗ್ರೋಗಗಳು . . . ಮೈಯೊಳಗೆ ಸೇರುತ್ತವೆ (ಮುಂಬಯಿ. ೫-೧೫೮).

ನಾರ ಹುಣ್ಣು = ನಾಡೀವ್ರಣ : ನೀಲಿಯ ಎಲೆಯ ಅವಿನ ಹಾಲಲ್ಲಿ ಅರೆದು ಪೂಸೆ ನಾರ ಹುಣ್ಣು ಮಾಣುವುದು (ವಿದೃವಿ. ೮೦).

[←ಹಿಂ. ಮರಾ. ನಾರೂ]

ನಾರುಂಬೇಳೆ 'ನಾಱುಂಬೇಳೆ' ನೋ.

ನಾರುಕಚೂರ (ನಾ). ಒಂದು ಬಗೆಯ ಗಂದಿಗೆಪದಾರ್ಥ : ಕರೀಅರಿಸಿನ, ನಾರುಕಚೂರ (ಮೈಔಗಿ. ೨೬-೪೯೯)

[ನಾರು$_1$(<ನಾಱು$_1$) + ಕಚೂರ]

ನಾರುಗ (ನಾ). ನಾರಿನ ವ್ಯವಹಾರದಲ್ಲಿ ತೊಡಗಿರುವವನು ; ನಾರಿನ ವ್ಯವಹಾರವನ್ನು ಮಾಡುವವನು : ಉಗ ಪ್ರತ್ಯಯಕ್ಕೆ— ನಾರುಗಂ, ಬೇರುಗಂ (ಶಮದ. ೨೦೪ ಪ್ರಯೋ) ; ನಾರುಗಂ, ಪಾರುಗಂ, ಪರಲುಗಂ (ಶಬ್ದಾನು. ೪೨೪ ಪ್ರಯೋ).

[ನಾರ್ + -ಉಗ]

ನಾರುಗಿ$_1$ (ಕ್ರಿ). ೧. ನಾರನ್ನು ತೆಗೆ ; ಎಳೆಯನ್ನು ಬಿಡಿಸು ; ಹಿಂಚು : ಸೌರಭಮಂ ಪಳಂಗೊಳಿಸೆ ಬಣ್ಣದೆ ನುಣ್ಣಸೆ ರಾತ್ರಿಮಾಳಿಕಾ ಕಾರೆ ತೊಡರ್ಚಿ ನಾರುಗಿದ ತಿಂಗಳ ತಣ್ಗದಿರಂ . . . ತನಗೆ ನೀಡಿದಳ್ (ಅನಂಪು. ೪-೧೧೪) ; ತರತರದಿಂದ ನಾರುಗಿದು ತೋಳ್ಪಳೆ ಮಾಡುವ ಕೊಯ್ದು ತಂದು ಪಾದರಿಯೊಡಗಟ್ಟ ಸೂಡುವ . . . ಅಲಂಪಿನಿಂ ಬಯಸಿದರ್ ಈನಚಂದ್ರಿಕೆಯಂ ಲತಾಂಗಿಯರ್ (ಸೂಕ್ತಿಸು. ೮-೨೬೬).

೨. ದೇಹದ ನರಗಳು ಕಾಣುವಂತೆ ಕೃಶವಾಗು ; ನವೆ ; ಬಡವಾಗು ; ಸೊರಗು : ನಾನಾವಿಧದಿಂದಮೇಂ ನಮೆದು ನಾರುಗಿ ದಿರ್ದೊಡೆ ಜೈನದೀಕ್ಷಿತರ್ (ಶಾಂತಿಪು. ೮-೧೨೯) ; ಅನಿವಿರಿದು ದುಃಖದೊಳ್ ನಮೆದು ನಾರುಗಿದು ಪೊಗೆದು ಸತ್ತು (ಸುಕುಮಾ. ೫-೧೯).

[ನಾರ್ + ಉಗಿ$_1$]

ನಾರುಗಿ$_2$ (ನಾ). ನಾರಿನ ವ್ಯವಹಾರದಲ್ಲಿ ತೊಡಗಿರುವವಳು ; ನಾರಿನ ವ್ಯವಹಾರವನ್ನು ಮಾಡುವವಳು : ನಾರುಗಿ, ನಾರುಗಿತಿ ; ಬೇರುಗಿ, ಬೇರುಗಿತಿ (ಶಬ್ದಾನು. ೧೯೩ ಪ್ರಯೋ). [ನಾರುಗ + -ಇ$_2$]

ನಾರುಡು (ಕ್ರಿ). ನಾರುಮೆಡಿಯನ್ನು ಉಟ್ಟುಕೊಳ್ಳು ; ವಲ್ಕಲವನ್ನು ಧರಿಸು: ಕ್ರಮವಱಯದಿತರ ಕುಮತಕ್ರಮದೆ ತಪಂಗೆಯ್ದು ನವೆದು ನಾರುಟ್ಟಡಮಕ್ಕುಮೆ ಸುಗತಿ (ಸಮಯ. ೩-೮೬).

ಉಡು$_1$]

ನಾರುಡೆ (ನಾ). ನಾರುಬಟ್ಟೆ ; ವಲ್ಕಲ : ಆರಯೆ ಸೂಚಕುಂ . . . ನಾರುಡೆಯಂಚಿನಿಂದಿಳಿದ ನೀರ್ಗೆರೆಯಾಂತ ತಟಾಕಮಾರ್ಗಮುಂ (ಶಾಕುಂತ. ೬-೧೪) ; ತುಡಿಸುತಿರೆ ರಘುಕುಲೇಶಂ ಸತಿಗೆ ನಾರುಡೆಗಳಂ, ಕಂಡ ಕೌಸಲೆಗುಕ್ಕಿ ದುಕ್ಕಮಳ್ತಳ್, ಮೊಗಂ ಪುದುಗಲಂಜಲಿಗೆ (ಕ್ರೌರಾಮಾ. ೯೨-೫೯೨). [ನಾರು$_3$(<ನಾರ್) + ಉಡೆ$_2$]

ನಾರುತೆಗೆ$_1$ (ಕ್ರಿ). (ಕೆಲವು ಹಣ್ಣು, ಕಾಯಿಗಳಲ್ಲಿರುವ ಅಥವಾ ಎಲೆಯ ಬೆನ್ನ ಮೇಲಿನ)ನಾರನ್ನು ತೆಗೆ.—ಸುಲಿ: ಬೀಳೆಯದೆಲೆಯ ನಾರುತೆಗೆದು ಸುಣ್ಣ ಹಚ್ಚು (ರೂಢಿ). [ನಾರು$_3$ (<ನಾರ್) + ತೆಗೆ$_1$]

ನಾರುತೆಗೆ$_2$ (ಕ್ರಿ). ನಾರುಹುಣ್ಣಿನಲ್ಲಿರುವ ಎಳೆಯನ್ನು ಹೊರಕ್ಕೆ ತೆಗೆ : ಅಡವೀಗೊಲ್ಲರು . . . ಈ ಗೊಲ್ಲರಲ್ಲಿ ಕೆಲವರು ಮೈಯೊಳಗಿನ ನಾರು ತೆಗೆಯುವುದರಲ್ಲಿಯೂ ತುಮ್ಮುಡೀ ಹಚ್ಚಿ ರಕ್ತ ತೆಗೆಯುವುದರಲ್ಲಿಯೂ ಕುಶಲರಿರುತ್ತಾರೆ (ಕಭಾಗೆ. ೧೭೬). [ನಾರು$_4$ + ತೆಗೆ$_1$]

ನಾರುಬಟ್ಟೆ (ನಾ). = ನಾರುಡೆ : ರಾಮನಿಗೆ ನಾರುಬಟ್ಟೆ ಉಡಿಸಿ ಅವನನ್ನು ೧೪ ವರ್ಷ ಕಾಡಿಗೆ ಕಳುಹಿಸತಕ್ಕದ್ದು (ನೀತಿಚಿಂ. ೩, ೧೪).

[ನಾರು$_3$(<ನಾರ್) + ಬಟ್ಟೆ$_2$]

ನಾರುಬೀರು (ನಾ). ಒಂದು ಬಗೆಯ ವನಸ್ಪತಿ : ನಾರುಬೇರು, ಹಾವುಲಿಗೆ, ಹಂಟಗೆ, ಹೌಳಿಗೆ, ಬೆಳಂಗಿ (ಮೈಔಗಿ. ೨-೬೨). [?]

ನಾರುಬೇಳೆ 'ನಾಱುಂಬೇಳೆ' ನೋ.

ನಾರುಮಡಿ (ನಾ). = ನಾರುಡೆ : ಶುಭ್ರವಾದ ನಾರುಮಡಿಯನುಟ್ಟು (ಸೌಂಧಿ. ೮೯-೧೦) ; ವಿಶೇಷ ಕೆಲಸಗಳಿಗೆ ಹೊರಕ್ಕೆ ಹೋಗುವಾಗ ತೊಡುವ ನಾರುಮಡಿಯನ್ನು ತೆಗೆದು ಉಟ್ಟುಕೊಂಡು (ಮರಮ. ೭೪). [ನಾರು$_3$(<ನಾರ್) + ಮಡಿ$_5$]

ನಾರುಮೋಡ (ನಾ). ನಾರು ನಾರಾಗಿರುವ ಮೋಡ ; ಜಾಳಾಗಿರುವ ಮೇಘ : ಮುಗಿಲೆಲ್ಲ ನಾರುಮೋಡದಿಂದ ಬಿಗಿದುಹೋಗಿತ್ತು (ಯದುರಾ. ೨೬). [ನಾರು(<ನಾರ್$_3$) + ಮೋಡ$_1$]

ನಾರುವಗೋರಟೆ (ನಾ). ಒಂದು ಬಗೆಯ ಸಸ್ಯ : "ಶೀತಪುಷ್ಪ:— ಕೋಟುಕುಟುಮ, ನಾರುವಗೋರಟೆ" (ಓಷಧಿ. ೧೬೬).

[ನಾರು$_1$(<ನಾಱು) + ಗೋರಟೆ(<ಗೋರಂಟೆ)]

ನಾರುವದ (ನಾ). ಪಾಕವು ನಾರಿನಂತೆ ಎಳೆಯಾಗುವ ಹದ; ಪಾಕವನ್ನು ಮೇಲಕ್ಕೆ ಎತ್ತಿದರೆ ನಾರಿನಂತೆ ಇಳಿಬೀಳುವ ಸ್ಥಿತಿ: ಹಿರಿದಾಗಿಯದ ಹಿಸಿದು ನಾರುವದನಂ ಮಾಡಿ ಅರಗಿನಂದದೊಳು ಸರಿಗೆಯ ಮಾಡಿಕೊಂಡು (ಸೂಪಶಾ. ೧-೪೧).

[ನಾರು$_3$(<ನಾರ್)+ಪದ$_1$]

ನಾರುಸಿರು (ನಾ). ದುರ್ವಾಸನೆಯಿಂದ ಕೂಡಿರುವ ಉಸಿರು; ಕೆಟ್ಟ ಉಸಿರು: "ಅತಿಕೆಟ್ಟ ನಾತದ ಉಸಿರು; ದುರ್ಗಂಧಶ್ವಾಸ; ನಾರುಸಿರು" (Halitosis. ಇಂಕನಿ).

[ನಾರು$_1$(<ನಾಱು$_1$)+ಉಸಿರು$_2$(<ಉಸಿರ್$_2$)]

ನಾರುಸೀರೆ (ನಾ). ನಾರಿನಿಂದ ತಯಾರಿಸಿರುವ ವಸ್ತ್ರ,—ಬಟ್ಟೆ; ವಲ್ಕಲ: "ವಾಲ್ಕಂ, ಕ್ಷೌಮಂ—೨ ನಾರುಸೀರೆ" (ಸಿದ್ಧಾಂತಿ. ೨೦೨); ಅಗ್ನಿಹೋತ್ರವನ್ನು . . . ಬಿಟ್ಟು ನಾರುಸೀರೆಗಳನ್ನು ಉಟ್ಟು . . . ಗ್ರಾಮದಲ್ಲಿರುವವನು ಅರಣ್ಯವಿಮುಖನೆನ್ನಿಸಿಕೊಳ್ಳುವನು (ಕೃವಾಅ. ೧೪೧); ನಾರುಸೀರೆ ಮಡಿಗೆ ಶ್ರೇಷ್ಠ (ರೂಢಿ).

[ನಾರು$_3$(<ನಾರ್)+ಸೀರೆ$_2$]

ನಾರುಸೂತ್ರ (ನಾ). ನಾರಿನಿಂದ ಮಾಡಿದ ದಾರ: ಬಿಡಿಮಾತು ಪವಣಿಸಿರೆ ಮೆರೆಯುವುವು ಒಲವುಗಂಪಿನ ನಾರುಸೂತ್ರದಲ್ಲಿ (ಮುಕ್ತಕಂ. ೫೩-೩). [ನಾರು$_3$(<ನಾರ್)+ಸೂತ್ರ]

ನಾರುಹಂಚಿಹುಲ್ಲು (ನಾ). ಒಂದು ಬಗೆಯ ಹುಲ್ಲು: ನಾಲೆಹುಲ್ಲು, ನಾರುಹಂಚಿಹುಲ್ಲು (ಮೈಔಗಿ. ೬೮-೧೩೯೩).

[ನಾರು$_1$(<ನಾಱು$_1$)+ಹಂಚಿಹುಲ್ಲು]

ನಾರುಹುಣ್ಣು (ನಾ). = ನಾರು$_4$: ಇದೇ ಹೊತ್ತಿಗೆ ಇಬ್ಬರ ಕಾಲಿಗೂ ನಾರುಹುಣ್ಣಾಯಿತು (ಸ್ಮೃತಿಚಿ. ೩೬); ಈ ವರ್ಗಕ್ಕೆ ಜಂತುಹುಳು, ನಾರುಹುಣ್ಣಿನ ಹುಳು . . . ಮುಂತಾದವು ಸೇರುತ್ತವೆ (ಪರಜೀ. ೪೯). [ನಾರು$_4$+ಹುಣ್ಣು(<ಪುಣ್)]

ನಾರೂಪ (ನಾ). [ಬೌದ್ಧ] ಶೂನ್ಯತತ್ತ್ವವನ್ನು ನಿರೂಪಿಸುವ ಒಂದು ಶಬ್ದ; ರೂಪದ ಅಭಾವವಿಲ್ಲದುದು; ಆಕಾರದಿಂದ ಕೂಡಿರುವುದು: ಈ ಪರಮಾರ್ಥವಾದ ಶೂನ್ಯತತ್ತ್ವವನ್ನು . . . ಅರೂಪ, ನಾರೂಪ, ಅವಿಧಿ, ಅಪ್ರತಿಷೇಧ ಇತ್ಯಾದಿ ಶಬ್ದಗಳಿಂದ ಉಪದೇಶಿಸುವರು (ಹಿಂದಸಾ. ೪೨). [ಸಂ.]

ನಾರೆತ್ತು (ಕ್ರಿ). ೧. ನೂಲನ್ನು ತೆಗೆ; ಎಳೆಯಾಗಿ ಬಿಡಿಸು: ಕಲ್ಲಲ್ಲಿ ನಾರೆತ್ತುವರ್ ತ್ವರಿತಂ ಬಿನ್ನಣದಿಂ ಬಿಸಿಲ್ಗುದುರೆಯಂ ತಂದೇಱುವರ್ ಮೇರುವಂ ಭರದಿಂದಂ ಪಿಡಿದೆತ್ತುವರ್ ಮಳಲೊಳಂ ನೀರ್ಮಾಡುವರ್ ಜೋಡೆಯರ್ (ಧರ್ಮಾಮೃ. ೩-೧೩೪); ಕಾಷ್ಠಮಂ ಕೊನರಿಪರ್ ಕಲ್ಲಲ್ಲಿ ನಾರೆತ್ತುವರ್ . . . ಕಿವಿಗಳೊಳ್ ಪೀಯೂಷಮಂ ಪಿಂಡಲುರ್ವರೆಯೊಳ್ ಸಂದ ಕವಿಪ್ರವೇಕರೆ ವಲಂ ಬಲ್ಲರ್ ಪೆಜರ್ ಬಲ್ಲರೇ (ಲೀಲಾವ. ೧-೧೩). ೨. ಮರ, ಗಿಡಗಳ ತೊಗಟೆಯನ್ನು ಸುಲಿ: ನಾರೆತ್ತುವ ತೆಱದಿಂ ಕೈಯಾರೆ ಕುಕಿಲ್ದಾರ್ದು ಪೊಯ್ದು ಮೆಯ್ಗಳ ತೊವಲಂ ಕ್ರೂರತನದಿಂದ ಮೆತ್ತುವರ್ (ಧರ್ಮಾಮೃ. ೩-೭೨) ಗಿಡುಮರ ಬಳ್ಳಿ ಹೊದಱು ಪುಲ್ಲು ಮೊದಲಾದುವಾಗಿ ಪುಟ್ಟ ಬೇಗೆಯಿ ಮುರಿಯೆಯುಂ . . . ಸೀಳೆಯುಂ ನಾರೆತ್ತೆಯುಂ . . . ದುಃಖಮನೆಯ್ದಿಸುಗುಂ (ಪಸಾರ. ೨೩೯). [ನಾರ್+ಎತ್ತು$_1$]

ನಾರೋಲಿ (ನಾ). ಒಂದು ಬಗೆಯ ಮರ: ನಾರೋಲಿ, ಮೂಢಮರ, ಮೂಢ, ಮೂಡಲಿ, ಕನಕಚಂಪಕ (ಮೈಔಗಿ. ೫೬-೧೧೪೦). [?]

ನಾರ್ಗವುಂಡು 'ನಾಟ್ಗಾಮುಂಡು$_2$' ನೋ.

ನಾರ್ಗವುಂಡುಗೆಯ್ 'ನಾಟ್ಗಾಮುಂಡುಗೆಯ್' ನೋ.

ನಾರ್ಗಾದೆ 'ನಾಟ್ಗಾದೆ' ನೋ.

ನಾರ್ಗಾಮುಂಡ 'ನಾಟ್ಗಾಮುಂಡ' ನೋ.

ನಾರ್ಗಾಮುಂಡು 'ನಾಟ್ಗಾಮುಂಡು$_2$' ನೋ.

ನಾರ್ಗಾಮುಂಡುಗೆಯ್ 'ನಾಟ್ಗಾಮುಂಡುಗೆಯ್' ನೋ.

ನಾರ್ಗಾವುಂಡ 'ನಾಟ್ಗಾಮುಂಡ' ನೋ.

ನಾರ್ಗಾವುಂಡು 'ನಾಟ್ಗಾಮುಂಡು$_2$' ನೋ.

ನಾರ್ಗಾವುಂಡುಗೆಯ್ 'ನಾಟ್ಗಾಮುಂಡುಗೆಯ್' ನೋ.

ನಾರ್ಗೌಡು 'ನಾಟ್ಗಾಮುಂಡು$_2$' ನೋ.

ನಾರ್ಣ 'ನಾರಯಣ' ನೋ.

ನಾರ್ಣಯ (ನಾ). ಒಬ್ಬಾತನ ಹೆಸರು: ಆತನ ತಮ್ಮಂ ನಾರ್ಣ್ಣಯಂ ಗೋಸಾಸಮಿಟ್ಟ ತಾಣಗುನ್ದೂರ ಮಹಾಜನಂ ಪರಸಿದರ್ (ಎಕ. VIII, ಸೊರಬ. ೫೩೨-೫; 964).

[ನಾರ್ಣ(<ನಾರಯಣ)+ಅಯ$_1$(<ಅಯ್ಯ$_1$)]

ನಾರ್ಥಕ (ನಾ). ಉಪಯೋಗವಿಲ್ಲದುದು; ನಿರರ್ಥಕ: ಮುಕ್ತಿ ನಾರ್ಥಕವಲ್ಲ, ಸದರ್ಥಕವಾದ್ದು . . . ಅಂಥ ಮುಕ್ತಿಯ ವಿವರವನ್ನು ಹೇಳಿದವನಿಗೆ ಶರಣುಹೊಗುತ್ತೇನೆ (ನಿಬಂಧ. I, ೯). [ಸಂ.]

ನಾರ್ನಪರ್ವರ್ಶಿ (ನಾ). ಉದ್ಯೋಗದಿಂದ ನಿವೃತ್ತಿ: ನಿನಗೆ ನಾರ್ನಪರ್ವರ್ಶಿ ಆದ ಮೇಲೆ ನಿನ್ನ ಕೆಲಸ ಅವನಿಗೆ ಕೊಡುವ (ವಾಗ್ದೇವಿ. ೧೪೩). [?]

ನಾಲ್, ನಾ$_2$, ನಾಲು$_1$ (ನಾ). ಸಮಾಸಗಳಲ್ಲಿ 'ನಾಲ್ಕು' ಎಂಬುದಕ್ಕೆ ಬರುವ ಆದೇಶರೂಪ: 'ನಾಲ್ಗಂಡುಗ', 'ನಾಲ್ಬಾಸಿರ' ಪರಾ. ನಾ$_2$: 'ನಾಗಂಡುಗ', 'ನಾಗಳ' ಪರಾ. ನಾಲು$_1$: 'ನಾಲುತೆಱ' ಪರಾ. [<ನಾಲ್ಕು]

ನಾಲ$_1$, ನಾಳ$_1$ (ಗು). ೧. ಲಾಳದ ಕಡ್ಡಿಯಿಂದ ಮಾಡಿದ,—ಕೂಡಿಕೊಂಡಿರುವ. (ನಾ). ೨. (ತಾವರೆ, ಕೆಸವು ಮುಂತಾದುವುಗಳ) ಒಳಗೆ ಟೊಳ್ಳಾಗಿರುವ ದಂಟು. ೩. ಟೊಳ್ಳಾದ ಕೊಳವೆ; ನಳಿಕೆ. ೪. ದೇಹದ ಒಳಗಿರುವ ರಕ್ತನಾಳ, ಶ್ವಾಸನಾಳ, ಉಸಿರುಗೊಳವೆ, ಮೂತ್ರನಾಳ ಮುಂತಾದುವು. ೫. ಹಿಡಿಕೆ; ಹಿಡಿ. ೬. ನೀರು ಹರಿಯುವ ಕಾಲುವೆ; ನಾಲೆ. ೭. ಹರಿದಳ; ಅರಿದಾಳ. ನಾಳ$_1$: ೨. "ನಾಳಂ, ಕಾಂಡಂ—ಈ ೨ ಕಂಡಿಕೆ" (ಹಲಾಯು. ೯೫-೪೨೫); "ದಂಟು ನಾಳ ಮಕ್ಕುಂ" (ಮಂಗರಾ. ೧೦೯-೩); ಶಶಿಕಳೆಗಳಂ ಮೆಲ್ವ ಸೈಂಹಿಕೇಯನಂತೆ ಮೃಣಾಳನಾಳಂಗಳಂ ಮೆಲ್ದು (ಕಾದಂಪೂ. ೧೭೪); ಭಾವಿಸೆ ಪೋಲ್ತುದು ನಾಳಂ ಕಾವನೆ ಕರ್ಣಿಕೆಯೆ ಕಳಸಮನೆ . . . ಜಲದೇವಿಯ ಪಿಂಛಾತಪತ್ರಮನೆ ಶತಪತ್ರಂ (ಗದಾಯು. ೬-೪೧); ನಾಳಂ ಸೊಗಯಿಪ ನಾಭೀನಾಳಂ ಮೃದುಚರಣಕರತಳಂ ಕೋಮಳಪತ್ರಾಳಿಯಿದೆನೆ ನೆನೆಯಿಸಿದಂ ಬಾಳಕನಿಂದಿರೆಯ ಕೈಯ ಕೆಂದಾವರೆಯಂ (ಚಂದ್ರಪು. ೩-೧೦೦); ಸೀದವಾ ಮಗ್ಗುಲಿನ ಮೈಯಲಿ ನೈದಿಲಿನ ತಾವರೆಯ ಕದಳಿಯ ನಾದಿಕೆಯ ನಾಳಂಗಳುರಿನೊರೆಗುದಿಯ ಸಬುದದಲಿ (ತೊರರಾ. ೩-೧೧-೪೭). ೩. ಅವನ ಮುಖವನ್ನು ತಂಬಾಕಿನ ನಾಳ ಸರ್ವದಾ ಅಲಂಕರಿಸಿರುವುದು (ಯೋಧಪು. ೭೭). ೪. ನಾರಿಯೆಂಬ ರೂಪಿಂಗೆ ನೀವು ಒಲಿದು ಬಂದಿರಣ್ಣ ಮೂತ್ರವು ಬಿಂದು ಒಸರುವ ನಾಳವೆಂದು ಕಂಗಾಣದೆ ಮುಂದುಗೆಟ್ಟು ಬಂದಿರಣ್ಣ (ಮಹಾದೇ. ಬ. ೬೭-೧೬೬); ಜೇಡಂ . . . ಕಾಲನೂಱುತ್ತದಱ ಶುಂಡಿಲ ನಾಳಮಂ ಹೊಕ್ಕಿಱದಿಱುದು ಶುಂಡಾಲಮಂ ತಲೆಗೇಱುಕೊಂಡಿತು (ಬಸಪು. ೧೮-೪೪); ನಿಡಿದಪ್ಪ ಕೊರಲ ನಾಳಂಬಡೆದತಿಗಂಭೀರದೀರ್ಘಸ್ವರ

ದೊಳ್ ತಾಂ ಪೊಡರಿಪ ಮಹೋದರಾಶ್ವಂ ಪಡೆಗುಂ ಪದಿನೇಟುವರ್ಷ ಮಾಯುವ ಪವಣಂ (ಅಶ್ವಶಾ. ೬-೧೮); ಕಡಿದು ಚಿಮ್ಮಿದ ಬೆರಳುಗಳ ಹಿಮ್ಮಡಿಯ ಘಾಯದ ನಾಳ ಹಱಿದರೆ ಮಡಿದ ಗೋಣನ ಬೆಸುಗೆ ಬಿರಿದ ಕಪಾಲದೋಡುಗಳ . . . ರಣಮಹಿ ಭಯಾನಕರಸಕೆ ಗುಱಿಯಾಯ್ತು (ಕುಷ್ಮಾಭೀ. ೯-೧೮); ಎಱಗಿದಶನೀಘಾತಮುಷ್ಟಿಯ ಬಿಱುಬಿನಲಿ ಬುಡುಬುಡಿಸಿ ನೆತ್ತರಿನೊಱತೆ ಹಾಯ್ದುದು ವದನದಲಿ ನಾಸಿಕದ ನಾಳದಲಿ (ತೊರರಾ. ೫-೫-೩೪); ಉದ್ದವಾದ ದಿಂಡುಗಳು ನಾಳಗಳು; ನಾಳಗಳ ಮಧ್ಯೆ ಇರುವ ಸ್ಥಳಗಳು, ಗೂಡುಗಳು (cells) . . . ನಾಳಗಳ ಸಂಖ್ಯೆ, ಅವುಗಳ ಶಾಖೆ, ಕ್ರಮ, ವರ್ಗೀಕರಣದಲ್ಲಿ ಉಪಯೋಗಿಸಲ್ಪಟ್ಟಿವೆ (ಕೀಟಬೆ. ೧೯). ೮. ದೋಣಿಯ ಹುಟ್ಟು : ಅರಿತ್ರಕಚ್ಛ = ಹಡಗದ ನಾಳ (ಗಂಗಾಮ. ೧೪). [ಸಂ.]

ನಾಲ$_2$, ನಾಲು$_2$, ನಾಳ$_2$, ಲಾಡ$_2$, ಲಾಳ$_3$ (ನಾ). ೧. ಕುದುರೆ, ಎತ್ತುಗಳಿಗೆ ಕಾಲುಗೊರಸಿನ ರಕ್ಷಣೆಗಾಗಿ ಮೊಳೆ ಹೊಡೆದು ಅಳವಡಿಸುವ ಕಬ್ಬಿಣದ ಹಲ್ಲೆ : "ನಾಲ (ನಾಲು) = ಕಬ್ಬಿಣದ ಪಟ್ಟ, ಮೊಳೆ" (ಜಾನಕೋ. ೧೧). ೨. ಜೂಜಾಟದ ಅಡ್ಡೆ ಇಟ್ಟವನಿಗೆ ಕೊಡುವ ಹಣ : ಅದರ ಹತ್ತಿರ ಒಂದು ಪೆಟ್ಟಿಗೆ ಇದ್ದಿತು, ಅದಕ್ಕೆ ಕೀಲಿ ಹಾಕಿದ್ದರು. 'ನಾಲ' ಹಾಕಲು ಒಂದು ಕಿಂಡಿ ಮೇಲೆ ಇದ್ದಿತು (ಕೊತಕಾ. ೨೫); "ನಾಲ ಎಂದರೆ ಹೆಡ್ಡದ ಹಣ" (ಕೊತಕಾ. ೨೫ ಅಡಿಟ). **ನಾಲು$_2$:** ೧. ಒಂದು ಕಬ್ಬಿಣದ ಕಂಬಿಯನ್ನು ಮಣಿಸಿ ಕುದುರೆಯ ನಾಲಿನ ಹಾಗೆ ಮಾಡಬೇಕು (ಮುಂಬಯಿ. ೬-೧೨೦); ನಾಲನು ಬಡಿಸದ, ಜೂಲವ ಹೊದಿಸದ (ಕಪಪು. ೧-೫೦). **ನಾಳ$_2$:** (ಕಿ). **ಲಾಡ$_2$:** (ಕಿ). **ಲಾಳ$_3$:** ೧. ಅಶ್ವರತ್ನದ ಆಭರಣದ ಲೆಖ್ಕಾ . . . ೨೪ ಲಾಳದ ಮೊಳೆ (ಎಕ. XIV, ನಂಜನ. ೨೯೩-ಪುಟ ೧೪೩ ; 1847) ; ಎತ್ತೊಂದು ಲಾಳವ ಕಟ್ಟಿಸಿ ಕೊಳುವಾಗ ಕಪ್ಪೆ ಕಾಲೆತ್ತಿದ ಹಾಗೆ (ಇಂಚಾಪ. ೨೦೫-೧೪).

[←ಅರ.ಪಾರ.ಹಿಂ.ಮರಾ. ನಾಲ್]

ನಾಲಕಟ್ಟು, ನಾಲುಕಟ್ಟು, ಲಾಳಕಟ್ಟು (ಕ್ರಿ). ೧. ಕುದುರೆ, ಎತ್ತು ಮೊದಲಾದುವುಗಳ ಗೊರಸಿಗೆ ಹಲ್ಲೆಯನ್ನು ಹೊಡೆ : ನಾಲಗಾರ = ನಾಲಬಂದಿ, ನಾಲಕಟ್ಟುವವ (ಜಾನಕೋ. ೧೧). **ನಾಲುಕಟ್ಟು :** ೧. ನಾಲಬಂದರು . . . ಕುದುರೆಗಳಿಗೂ ಯೆತ್ತುಗಳಿಗೂ ನಾಲುಕಟ್ಟುವದೇ ಇವರ ಕುಲದ ಹೋರೆ (ಕಭಾಗೆ. ೨೩೫). ೨. ಪಾದರಕ್ಷೆಗಳು ಸವೆಯದೆ ಇರುವಂತೆ ನಾಲು ಅಳವಡಿಸು : ಅದೇನು ಬೂಟಿಗೆ ನಾಲುಕಟ್ಟುವದಿದೆಯೆ ? (ಪ್ರತಿಸ. ೧). **ಲಾಳಕಟ್ಟು :** ೧. ಈ ಎತ್ತುಗಳ ಕಾಲಿಗೆ ಲಾಳಕಟ್ಟಿರುತ್ತಾರೆ (ಪ್ರವಾಇ. I, ೧೮೧); ಲಾಳಕಟ್ಟುವವನು ; ಲಾಳಗಾರ ; ಹಲ್ಲೆಗಾರ (Farrier. ಇಂಕನಿ). [ನಾಲ$_2$ + ಕಟ್ಟು$_1$]

ನಾಲಕಿ (ನಾ). ಒಂದು ಬಗೆಯ ಪಲ್ಲಕ್ಕಿ : ಆ ಸೋಮತೇಖರ ನಾಯಕಂ . . . ನಾಲಕಿಯೆಂಬ ಮನೋಹರಮಾದ ಮಹಾಯಾನಮನಾರೂಢನಾಗಿ ಸಮಸ್ತಸೈನ್ಯಸಹಿತಂ ಸರ್ವಸಂಭ್ರಮದಿಂ ಮಹಾನವಮಿಯ ಬಯಲ್ಗೆ ತೆರಳ್ದು (ಕೆಳನೃ. ೧೦-೬೬).

[←ಹಿಂ. ನಾಲಕೀ ; ಮರಾ. ನಾಲಕೀ, ನಾಲಖೀ ; ಪಾರ. ನಾಲ್ಕೀ]

ನಾಲಗಾರ, ಲಾಳಗಾರ (ನಾ). ಕುದುರೆ, ಎತ್ತು ಮೊದಲಾದುವುಗಳ ಗೊರಸಿಗೆ ಲಾಳ ಕಟ್ಟುವವನು ; ನಾಲಕಟ್ಟುವವನು : "ನಾಲಗಾರ = ನಾಲಬಂದಿ, ನಾಲಕಟ್ಟುವವ" (ಜಾನಕೋ. ೧೧). **ಲಾಳಗಾರ :** ಲಾಳಕಟ್ಟುವವನು ; ಲಾಳಗಾರ ; ಹಲ್ಲೆಗಾರ (Farrier. ಇಂಕನಿ). [ನಾಲ$_2$ + -ಕಾರ$_1$ (< -ಕಾಱ)]

ನಾಲಗೆ, ನಾಲಿಗೆ (ನಾ). ೧. ಮಾತನಾಡಲು ಮತ್ತು ರುಚಿ ನೋಡಲು ಸಾಧಕವಾದ ಅವಯವ ; ರಸನೆ ; ಜಿಹ್ವೆ : "ನಾಲಗೆ ರಸನೆ ರಸಜ್ಞೆ ಜಿಹ್ವೆ" (ವಸ್ತುಕೋ. ೬೯-೧೫); ನಮ್ಬಿರಾನ್ಗೋವದೊರಾ ನಾಲಗೆಯನ್ ಕಿಟ್ಪೊನ್ (ಎಇ. IX, ೧೯-೮ ; ಸು. 800) ; ಎರಟ್ಕೊಳಿಂಗನಾಗಂಗಳ್ ಪೆಡೆಗಳನೆತ್ತಿ ನಾಲಗೆಗಳಂ ಪೊಳೆಯಿಸುತ್ತಂ ಬಂದೊಡೆ (ಪಡ್ಡಾರಾ. ೧೦೦-೭) ; ಜೀವನಿಲ್ಲ ಮೊಱೆಯಿಲ್ಲಱನಿಲ್ಲ ಪರತ್ರೆಯಿಲ್ಲೆನಲ್ಕಸಕಳಿಯಂತೆ ನಾಲಗೆ ಪೊರಳ್ವುದು ರಾಜಸಭಾಂತರಾಳದೊಳ್ (ಆದಿಪು. ೨-೧೧) ; ನಾಲಗೆಯಿಲ್ಲದೆ ನುಡಿವೆನೆಂಬ ಪಱುಗೋಲಿಲ್ಲದೆ ತೊಱೆಯಂ ಪಾಯ್ವೆನೆಂಬ ಪಚ್ಚಪಸಿಯೆಗ್ಗನಂ ಪೋಲ್ಕುಂ (ಧರ್ಮಾಮೃ. ೧-೬೭) ; ಹಾಡಿ ನಾಲಗೆ ದಣಿಯದು (ಬಸವ. ೪೮೭) ; ತನು ಪಾದ್ಯಂ ನಾಲಗೆ ವಾದನದಂಡಂ ಕರ್ತೃವಾತ್ಮನವನ ಮನೋವೃತ್ತಿ ನಿಮಿತ್ತಮಾಗಿ ಶಬ್ದಂ ಜನಿಯಿಸುಗುಂ (ಶಮದ. ೩೪) ; ಕಡುಗಾದಾಲಿಗಳ ಮಣಿಮಕುಟದೊಲಹಿನ ನಾಲಗೆಯ ನಿರ್ದ್ರವದ ಮಾದ್ರಾಧೀಶನಿಂತೆಂದ (ಕುಷ್ಮಾಕ. ೫-೨೦) ; ನಾಲಗೆಗೆ ದ್ರವವಿಲ್ಲ . . . ಹೇಳಲಿನ್ನೇ ನರಸ (ನಳಚ. ೩-೧) ; ಶಿವಕವಿ ವಿರೂಪಾಕ್ಷ ನಿನ್ನಂತೆ ವರಕವಿಯ ನಾಲಗೆ ಕಿವಿ ಮನಂಗಳಂ ಸೆಳೆವವಂ ಕವಿಯಲ್ತೆ ಭೂತಳದೊಳು (ಚಬಪು. ೧-೨೭). ೨. (ಆಲಂ) (ಬೆಂಕಿಯ) ಜ್ವಾಲೆ : "ಜ್ವಾಲಾ ಶಿಖಾರ್ಚಿ ಕಿಚ್ಚಿನ ನಾಲಗೆಯು" (ವಸ್ತುಕೋ. ೭-೯೦) ; "ಅರ್ಚಿಃ, ಕೀಲಾ, ಜ್ವಾಲಾ—ಈ ೩ ಉರಿಯ ನಾಲಗೆ" (ಹಲಾಯು. ೧೨-೬೫); ಮರನೆಂದು ಪೋಗಿ ಸಾರ್ವುದುಮುರಿಗಳ ನಾಲಗೆಗಳಂತೆ ಮರದೆಲೆಯೆಲ್ಲಂ ಪಿರಿದಪ್ಪ ತೇಟ ರೂಪಿಂ . . . ಕಡಿವುವು ಮುಳಿಸಿಂ (ಧರ್ಮಾಮೃ. ೩-೮೫) ; ಹರಿವ ಹಾವಿಂಗಂಜೆ ಉರಿಯ ನಾಲಗೆಗಂಜೆ (ಬಸವ. ೪೪೬) ; ಕೊಂಡದೊಳಿನ್ನೆಬರಮೆಡೆವಿಡದೆ ಚಟಚಟಪಬೇಳುರಿ ನಾಲಗೆಗಳು ನೀಡಿಕೊಂಡಿರ್ದುದು (ರಾಮಾಶ್ವ. ೧೬೬-೮). ೩. ವಚನ ; ಮಾತು : ನಾಲಗೆ ಕುಲಮಂ ತುಬ್ಬುವವೊಲುಱದೆ ನೀಂ ಕೆಡೆನುಡಿವೈ (ಪಂಪಭಾ. ೧೦-೨೦) ; ಕುಲವ ನಾಲಗೆಯಱುಹಿತೆಂಬ ನಾಣ್ನುಡಿಗಿಂದು ನೆಲೆಯಾಯ್ತಲಾ (ಹಚಕಾ. ೨-೩೨) ; ಎರಡು ನಾಲಗೆಯವರನ್ನು ನಂಬಬಾರದು (ರೂಢಿ). **ನಾಲಿಗೆ :** ೧. ಆಚಾರವಿಲ್ಲದ ನಾಲಿಗೆ ನಿನ್ನ ನೀಚಬುದ್ಧಿಯ ಬಿಡು ನಾಲಿಗೆ (ಪುರಂದ. ೧-೧೮೩ ಪಲ್ಲವಿ) ; ಮುಖಪದ್ಮದಲಿ ಸಿರಿದೇವಿ . . . ಅಕಳಂಕನ ನಾಲಿಗೆಯೊಳು ವಾಗ್ದೇವಿ ಸುಖದಿಂದ ನೆಲಸಿಹರೊಲಿದು (ಕಂಸವಿ. ೪-೯೫) ; ಕಣ್ಣು ನಾಲಿಗೆ ಮನವು ತನ್ನದೆಂದೆನಬೇಡ (ಸರ್ವಜ್ಞ. ೧೨೮೨). ೩. ಕುಲವನ್ನು ನಾಲಿಗೆ ಹೇಳುವುದು (ಗಾದೆ) ; ನಾಲಿಗೆ ಒಳ್ಳೆಯದಾದರೆ ನಾಡೆಲ್ಲಾ ಒಳ್ಳೆಯದು (ಗಾದೆ). ೪. (ನಡುವೆ ಅಲುಗಾಡಿ ಬಾರಿಸುವಂತೆ) ಗಂಟೆಗೆ ಅಳವಡಿಸಿರುವ ಲೋಹದ ಅಥವಾ ಮರದ ತುಂಡು,—ಬಾರಿಸುವ ಸಾಧನ : ನಾಲಿಗಿಲ್ಲದ ಗಂಟೆಯಂತಾಯಿತೀ ಬಾಯಿ, ಜಾಲದೊಳು ಸಿಕ್ಕ ಹಕ್ಕಿಯವೊಲಾಯಿತು ಮನವು (ಸಖೀಗೀ. ೯೪-೧).

ನಾಲಗೆ ಉದ್ದ ಬಿಡು = ಹತೋಟಿ ಮೀರಿ ಮಾತನಾಡು ; ಬಹಳ ಮಾತನಾಡು : ಸುಮ್ಮನೆ ಇರಬಾರದೆ ? ಎಂದು ಚೌಡಪ್ಪ ತುಸು ನಾಲಗೆ ಉದ್ದ ಬಿಟ್ಟೇ ಸುಂದರಿಗೆ ಬುದ್ಧಿ ಹೇಳಿದರು (ಹಳ್ಳಿಹಾ. ೧೮೮). ನಾಲಗೆ ಉದ್ದ ಮಾಡು = ನಾಲಗೆ ಉದ್ದ ಬಿಡು : ನಾಲಗೆ ಉದ್ದ ಮಾಡಬೇಡ (ರೂಢಿ). ನಾಲಗೆಗೆ ವರ್ = ಬಾಯಿಯವರೆಗೆ ಬರು ; ಮಾತನಾಡುವಷ್ಟಾಗು : ಎರ್ದೆಯ ಮುಳಿಸು ನಾಲಗೆಗೆ ವರೆ ಸೈರಿಸಲಾಱದೆ ವಿದ್ವಿಷ್ಟವಿದ್ರಾವಣನನಿಂತೆಂದಂ (ಪಂಪಭಾ. ೨-೭೯). ನಾಲಗೆ ತಪ್ಪು, ನಾಲಿಗೆ ತಪ್ಪು = ಆಡಿದ ಮಾತನ್ನು ನಡೆಸದಿರು ; ಮಾತಿಗೆ ತಪ್ಪು : ಕಂಗಳು ತಪ್ಪಿ ನೋಡಿದರೆ ಮಾರಿ ನಾಲಗೆ ತಪ್ಪಿ

ನುಡಿದರೆ ಮಾರಿ (ಬಸವ. ೬೩೧) ; ನಾಲಿಗೆ ತಪ್ಪಿದವನು ನಾಯಿಗಿಂತ ಕಡೆ (ಗಾದೆ). **ನಾಲಗೆ ನಿಡಿದಾಗು** = ಬಹಳ ಮಾತನಾಡು : ನಾಲಗೆ ನಿಡಿದಾದರ್ಗೆ ಕೂರ್ವಾಳುಂ ಕೊ[ಕೋ]ಲುಮಿಗಳೆ ಸಾಧ್ಯಂ (ರಾಮಾಶ್ವ. ೯೧-೮). . **ನಾಲಗೆಯ ತಿಂಡಿ** = ಮಾತನಾಡಬೇಕೆಂಬ ಚಪಲ ; **ನಾಲಗೆಯ ತೀಟೆ** : ಜನರು ತಮ್ಮ ನಾಲಗೆಯ ತಿಂಡಿಯನ್ನು ಹೀಗೇಕೆ ತೀರಿಸಿಕೊಳ್ಳಬೇಕೋ (ಮೂರುದಾ.೧೩೧). **ನಾಲಗೆಯ ತೀಟೆ** = ನಾಲಗೆಯ ತಿಂಡಿ : ಅವರಿಗೆ ನಾಲಗೆಯ ತೀಟೆ ಬಹಳ (ರೂಢಿ). **ನಾಲಗೆಯ ವೀರ** = ಮಾತನಾಡುವುದರಲ್ಲಿ ಮಾತ್ರ ಗಟ್ಟಿಗ; ಬಾಯಿ ಶೂರ : ನಾಲಗೆಯ ವೀರರು ನೀವು ಮೂಢರು ನಾವು ನುಡಿಗಳಲಿ (ಕುವ್ಯಾಕ. ೧೦-೪೫). **ನಾಲಗೆಯಾಡಿಸು** = ೧. ನಾಲಿಗೆಯನ್ನು ಅಲುಗಾಡಿಸು : ನಾಲಗೆಯಾಡಿಸುತುಂ . . . ಕುಣಿದಂ ಶೂಲದ ತಲೆ ಕುಣಿವ ತೆಱದೆ ಕುಣಪಾಲಯಂದೊಳ್ (ಅರ್ಧನೇ. ೫-೨೬). ೨. ಮಾತನಾಡು: ಬಾಯಿ ತೆರೆದೆ. ನಾಲಗೆಯಾಡಿಸಿದೆ. ಆದರೆ ಧ್ವನಿ ಹೊರಡಲೇ ಇಲ್ಲ (ನಂಟರು. ೫೯) ; 'ನಾನೆಂದೂ ಹಾಗೆ ಯೋಚಿಸಿರಲಿಲ್ಲ' ಎಂದು ನೆಕ್ಲುದೋವ್ ನಾಲಗೆಯಾಡಿಸಿದನು (ಪುನರು. ೧೦೯). **ನಾಲಗೆಯಾಡು** = (ಅನಗತ್ಯವಾಗಿ) ನಾಲಿಗೆಯಿಂದ ತುಟಿಯನ್ನು ಸವರಿಕೊಳ್ಳು : ಕೆಮ್ಮನೆ ಕೆಮ್ಮಿ ಕೆನ್ನೆಯಂ ತುಱುಸುತ ಸನ್ನೆಯಿಂ ಕರೆದು ನಾಲಗೆ ಯಾಡುತಂ. . .ಐದಿತು ಜಾರೆಯರೊಂದು ಭಾವದಿಂ (ಪುಲ್ಲಕಾ.೮-೧೪೦). **ನಾಲಗೆ ಹರಿಬಿಡು** = ನಾಲಿಗೆಯ ಮೇಲಿನ ಹತೋಟಿಯನ್ನು ಕೈಬಿಡು ; ಮನಸ್ಸಿಗೆ ಬಂದಂತೆ ಮಾತನಾಡು : ದಳಪತಿ ತನ್ನ ಮಾತಿನ ಅರ್ಥ ಎಷ್ಟು ಘೋರವಾಗಿತ್ತೆಂಬುದನ್ನು ಅನುಮಾನಿಸದೆಯೆ ನಾಲಗೆ ಹರಿಬಿಟ್ಟನು (ಪುನರು. ೩೫೬) ; ನಿನ್ನನ್ನು ನೋಡಿ "ನಿಮ್ಮ ಯಜಮಾನತಿ ಏನು" ಅಂತ ನಾಲಗೆ ಹರಿಬಿಡತಾನಲ್ಲ ? (ಅಶ್ವಮೇ. ೧೫). **ನಾಲಿಗೆ ಉದ್ದ ಆಗು** = ಮಾತು ಹೆಚ್ಚಾಗು ; ಮಿತಿಮೀರಿ ಮಾತು ಬರು : ಪಾಪ ಅಂತ ಸುಮ್ಮನಿದ್ದರೆ ನಾಲಿಗೆ ಉದ್ದ ಆಗ್ತಾ ಇದೆ (ರೂಢಿ). **ನಾಲಿಗೆಗೂಟ** = (ನೆಯ್ಗೆಯವನ) ನೆಯ್ಗೆಮರದ ಬಲಗಡೆ ಕಾಲು : (ಕಿ). **ನಾಲಿಗೆ ತಿರುಗು** = ಸ್ಫುಟವಾಗಿ ಮಾತನಾಡಲು ಅನುಕೂಲವಾಗುವಂತೆ ನಾಲಿಗೆ ಹೊರಳು : ಅವನಿಗೆ ನಾಲಿಗೆ ತಿರುಗುವುದಿಲ್ಲ (ರೂಢಿ). **ನಾಲಿಗೆ ಬಿಗಿಹಿಡಿ** = ಮನಸ್ಸಿಗೆ ಬಂದಂತೆ ಮಾತನಾಡದಿರು ; ಎಚ್ಚರಿಕೆಯಿಂದ ಮಾತನಾಡು ; ತಾಳ್ಮೆಯಿಂದಿರು : ಸ್ವಲ್ಪ ನಾಲಿಗೆ ಬಿಗಿಹಿಡಿದುಕೊ, ಎಲ್ಲ ಸರಿಯಾಗುತ್ತೆ (ರೂಢಿ). **ನಾಲಿಗೆಯುಳಿಸಿಕೊಳ್ಳು** = ಮಾತನ್ನು ಉಳಿಸಿಕೊಳ್ಳು,— ನಡೆಸು ; ಭಾಷೆ ತಪ್ಪದಂತೆ ನೋಡಿಕೊಳ್ಳು : ನಾಲಿಗೆಯುಳಿಸಿಕೊಂಡು ಕೊಡುವ ಗುತ್ತಿಗೆ ಕೊಟ್ಟುಬಿಡು (ರೂಢಿ). **ನಾಲಿಗೆ ಸೇದಿಹೋಗು** = ಮಾತು ನಿಂತುಹೋಗು: ಅವರಿಗೆ ಪಾರ್ಶ್ವವಾಯುವಿನಿಂದ ನಾಲಿಗೆ ಸೇದಿಹೋಗಿದೆ (ರೂಢಿ).

[ದೇ.॥ ತಮಿ. ಮಲ. ನಾ, ನಾಕ್ಕು, ನಾವು ; ತುಳು. ನಾಲಗೆ, ನಾಲಯಿ, ನಾಲಾಯಿ ; ಕೊಡ. ನವು ; ತೆಲು. ನಾಲಿಕ, ನಾಲುಕ, ನಾಲ್ಕ ; ಕೋಲಾ. ನಾಯ್ಕಿ. ನಾಲ್ಕ]

ನಾಲಗೆಗಲಿ (ನಾ). ಬಾಯಿಬಡಾಯಿಯವನು ; ಮಾತಿನ ಶೂರ : ತಾಳುಗೆ ಪತ್ತಿ ಬತ್ತಿ ಬಾಯ್ಮಾಡಿ ನಾಲಗೆಗಿತ್ತುಕೊಳ್ವ ನಾಲಗೆಗಲಿಗಳುಮಂ (ಲೀಲಾವ. ೫-೧೧೪ ವ). . [ನಾಲಗೆ + ಕಲಿ$_2$]

ನಾಲಗೆಗಿಡುಕತನ (ನಾ). ಕೆಟ್ಟಮಾತುಗಳನ್ನಾಡುವಿಕೆ ; ನಿಂದಿಸುವಿಕೆ; ಹೀಯಾಳಿಸುವಿಕೆ : ಅಸುರಾರಿ ನುಡಿಯದಿರು ಜಡಖೂಳ ನಾಲಗೆಗಿಡುಕತನ ನಮ್ಮೊಡನೆಯೇ ಎನುತಡರಿ ಮುಂದಲೆ ನಿಡಿದು (ಅಕ್ರೂಜ. ೬-೨೫). [ನಾಲಗೆ + ಕಿಡುಕ (< ಕೆಡುಕ) + -ತನ]

ನಾಲಗೆಗೀಟ್, ನಾಲಿಗೆಕೀಳು, ನಾಲಿಗೆಗೀಳ್ (ಕ್ರಿ). ೧. ನಾಲಿಗೆಯನ್ನು ಕಿತ್ತು ಹಾಕು : ತಾಳುಗೆ ಪತ್ತಿ ಬತ್ತಿ ಬಾಯ್ಮಾಡಿ ನಾಲಗೆಗಿತ್ತುಕೊಳ್ವ ನಾಲಗೆಗಲಿಗಳುಮಂ (ಲೀಲಾವ. ೫-೧೧೪ ವ). ೨. ನಾಲಿಗೆಯನ್ನು ಚಾಚು,— ನೀಡು : ತೆಗಳಿಗೆವಿರ್ದೊಡಲುಂ ನಾಲಗೆಗಿತ್ತರೆಬಱುತ ಬಾಯುಮಟ್ಟರೆಗಣ್ಬೇಡುಗಳುಂ ತಾಱುವ ತಾಳ್ಗಳುಮಗುರ್ವಿಸಲ್ ; ಕಾಡ ಕೋಣನೆಯ್ದಿದುದಱಿಲಂ (ಜಗವಿ. ೧೬-೬೬). **ನಾಲಿಗೆಕೀಳು** : ೧. ಚಾಡಿಗಳ್ಹೇಳುವುದಿಲ್ಲಿ ನುಡಿಹಾಡುವ ನಾಲಿಗೆಕೀಳುವರಲ್ಲಿ (ಪುರಂದ. ೨-೩೯-೩). **ನಾಲಿಗೆಗೀಳ್** : ೧. ಹರನಿಂದೆಗೆಯ್ವವನ ಶಿರವರಿವುದಲ್ಲದೊಡೆ ಭರದೆ ನಾಲಿಗೆಗೀಳ್ವಂದಲ್ಲದೊಡೆ ತಾಂ ಹರಣವಂ ಬಿಡೆ (ಸಾನಂಚ. ೩-೯೯).

[ನಾಲಗೆ + ಕೀಟ್$_1$]

ನಾಲಗೆಗೆಳೆಯ (ನಾ). ಕೇವಲ ಮಾತಿನ ಸ್ನೇಹಿತ : ಕೆಲಸಕ್ಕೆ ಬಾರದ ಮಿತ್ರ : ನಾಡ ನಾಲಗೆಗೆಳೆಯರೆಂಬುದ ಮಾಡದಿರು (ಕುವ್ಯಾಉ. ೯-೧೮). [ನಾಲಗೆ + ಕೆಳೆಯ]

ನಾಲಗೆಗೊನೆ (ನಾ). ನಾಲಿಗೆಯ ತುದಿ; ತುದಿನಾಲಿಗೆ : ಮಱೆದು ನಾಲಗೆಗೊನೆಗೆ ನಾಮದ ನಿಱುಗೆ ನೆಲೆಗೊಳೆ (ಕುವ್ಯಾಭೀ. ೩-೮೩) ; ಅಚ್ಯುತನಾಮ ನಾಲಗೆಗೊನೆಗೆ ಬರುತಿರಲು (ನಿಭಾಗ. ೬-೨-೧೬) ; ಆತ್ಮನೊಳುದಿಸಿದ ಮಾತ ನಾಲಗೆಗೊನೆಯಲ್ಲಿ ವಿಸ್ತರಗೆಯ್ದ ಇನಿಯಳೆ ಕೇಳ್ ನಿನ್ನ ಕರ್ಣರಸಾಯನವೆನಲುಸಿರುವೆನೀ ಕೃತಿಯ. (ಮೋಹತ. ೧೨-೨). [ನಾಲಗೆ + ಕೊನೆ$_2$]

ನಾಲಗೆತೀಂಟೆ 'ನಾಲಗೆದೀಂಟೆ' ನೋ.

ನಾಲಗೆತೀಂತೆ 'ನಾಲಗೆದೀಂಟೆ' ನೋ.

ನಾಲಗೆತುದಿ 'ನಾಲಗೆದುದಿ' ನೋ.

ನಾಲಗೆದಳೆ (ಕ್ರಿ). ನಾಲಿಗೆಯನ್ನು ಪಡೆ,—ಹೊಂದು : ಕೆಲಬಲದ ವೇಲಾಯತರ ವೆಗ್ಗಳದ ರಾವ್ತರ ಗಡಣ ನಾಲಗೆದಳೆದುದೆನೆ ಹೊಳೆ ಹೊಳೆವಡಾಯುಧಭಟರು ನೂಕಿದರು (ಕುವ್ಯಾದ್ರೋ. ೫-೭೧).

[ನಾಲಗೆ + ತಳೆ$_1$]

ನಾಲಗೆದೀಂಟೆ, ನಾಲಗೆತೀಂಟೆ, ನಾಲಗೆತೀಂತೆ (ನಾ). ೧. ನಾಲಿಗೆಯ ಚಾಪಲ್ಯ ; ಹೆಚ್ಚು ಮಾತನಾಡುವ ಆತುರ : ನಾಲಗೆದೀಣ್ಟೆಯೇನು ?—ನೆರೆದ ಒಡ್ಡೋಲಗದಲ್ಲಿ ! (ಬೆಟ್ಟಅ. ೩೬-೯). **ನಾಲಗೆತೀಂಟೆ** : ೧. ಕೊಂಡೆಗಕ್ಕೆ ನಾಲಗೆತೀಂಟೆ [ಪಾಠಾಂ. ತಿಂತೆ] ಮಸಗೆ ನರೇಂದ್ರನೆಡೆಗೈದಿ ನಿಂದೆಱಗಿ ಕರಗಳಂ ಮುಗಿದು (ಪೃಸವಿ. ೮-೩ ವ). **ನಾಲಗೆತೀಂತೆ** : ೨. ತಿನ್ನುವುದರಲ್ಲಿ ಅತಿ ಆಸಕ್ತಿ : ಅಂತಂತೆ ನಲಿಪು ನಾಲಗೆತೀಂತೆ ಮಿಗಲ್ ಕಳಿಕೆಗೆಳಸಿ ಚಂಚುವನಿಟ್ಟೋರಂತೆ ಸವಿಸವಿದು ಸೊರ್ಕಿ ನಿರಂತಂ ಕರೆದತ್ತು ಮಾವಿನೊಳ್ ಪರಪುಟ್ಟಂ (ಗಿರಿಕ. ೨-೪೨). [ನಾಲಗೆ + ತೀಂಟೆ$_1$]

ನಾಲಗೆದುದಿ, ನಾಲಗೆತುದಿ (ನಾ). = ನಾಲಗೆಗೊನೆ : ಹೃದಯರಾಮಧ್ಯಾನ ನಾಲ[ಪಾಠಾಂ. ಲಿ]ಗೆದುದಿ ನಿಜೇಶಸ್ಮರಣೆ . . . ಇದಿರ ಬಗೆವಳೆ ಸೀತೆ ಮಾಯಾವಿದರ ಮಾಯೆಗೆ ಸಿಲುಕುವಳೆ (ತೊರರಾ. ೫-೩-೩೯). **ನಾಲಗೆತುದಿ** : ಆಗಲಿ ಎಂದರು ನಾಲಗೆತುದಿಯಿಂದ ಮನದೊಳು ನೊಂದರು ತಂದೆ (ಇಂಚಾಪ. ೧೯-೮೪).

[ನಾಲಗೆ + ತುದಿ]

ನಾಲಗೆದ್ರವ (ನಾ). ನಾಲಿಗೆಯಲ್ಲಿ ತೇವವುಂಟಾಗುವಿಕೆ : ನಾಲಗೆದ್ರವಕ್ಕೆ :—ಕೋಷ್ಠ, ಮಧುಕ, ಅಕಲಕರೆ . . . ಕುಂಕುಮ, ಇವಂ ನೀರಿಂದ ತೇದು, ನಾಲಿಗೆ ತೊಡೆಯಲು ಬಿದ್ದ ನಾಲಿಗೆ ಬಕ್ಕು. ದ್ರವ ವಕ್ಕು (ವಿವೈವಿ. ೬೫). [ನಾಲಗೆ + ದ್ರವ]

ನಾಲಗೆಯೇಱು(ನಾ). ನಾಲಗೆಯ ಹುಣ್ಣು,—ಗಾಯ,—ವ್ರಣ : ಸವಿವ ಪಯಂ ತವರಾಜಂ ತನಿವಣ್ಗಳು ಶಿವಾರ್ಪಿತವಲ್ಲದುದಂ ಸವಿದ ತರಣನಂತೆ ನಾಲಗೆಯೇಱು (ನಂಬಿರ. ೧೬-೧೭).

[ನಾಲಗೆ+ಏಱ್ಕು (<ಏಱ್ಕ್)]

ನಾಲಗೆವೆಟವ (ನಾ). ನಾಲಿಗೆಯ ಶಕ್ತಿಯನ್ನು ಕಳೆದುಕೊಂಡವನು ; ಮಾತನಾಡುವ ಶಕ್ತಿಯಿಲ್ಲದವನು : ಮಿಗೆ ಪದಮಿಡಲಱಿಯದ ನಾಲಗೆವೆಟವರ್ . . . ಬಗೆವೊಡೆ ಕಬ್ಬಿಗರಕ್ಕುಮೆ (ಲೀಲಾವ. ೧-೨೩). [ನಾಲಗೆ+ಪೆಟವ]

ನಾಲಗೆಸಿಕ್ಕು (ಕ್ರಿ). ನಾಲಿಗೆಗೆ ಅಡ್ಡಿಯುಂಟಾಗು,—ತಡೆಯುಂಟಾಗು ; ನಾಲಿಗೆ ತಡವರಿಸು : ಕಕ್ಕಸದ ಮಾತು ಬಂದಾಗ ನಾಲಗೆಸಿ[ಪಾಠಾಂ. ಸು]ಕ್ಕುವಂತಿದನೆಸಗಿದನು (ಭರಚ. ೩೮-೧೩೩).

[ನಾಲಗೆ+ಸಿಕ್ಕು$_1$(<ಸಿಲ್ಕು$_1$)]

ನಾಲತವಾಡ 'ನಾಲ್ವತುಂಬಾಡ' ನೋ.

ನಾಲತ್ತಾಣಿ (ನಾ). ನಲವತ್ತು ಜನರ ಸಭೆ (?) : ಅದರ್ಕ್ಕೆ ಸಾಕ್ಷಿ ಕೆಲ್ಲಿಪುಸೂರ್ ಪನ್ನಿರ್ವರುಂ ಅಯ್ಸಾಮಂತರುಮ್ ನಾಲತ್ತಾಣಿಉಂ ಇದಾನಟಿದೊನ್ಪಞ್ಚಮಹಾಪಾತಗನಪ್ಪೊನ್ (ಮೈಅರಿ. ೧೯೨೫, ೧೦೬-೨೧ ; ?). [?]

ನಾಲಬಂದ (ನಾ). ಕುದುರೆ ಮತ್ತು ಎತ್ತುಗಳಿಗೆ ಲಾಳ ಕಟ್ಟುವವನು ಮತ್ತು ಆ ಕಸುಬನ್ನು ಮಾಡುವ ಜಾತಿಗೆ ಸೇರಿದವನು: ನಾಲಬಂದರು . . . ಕುದುರೆಗಳಿಗೂ ಯೆತ್ತುಗಳಿಗೂ ನಾಲುಕಟ್ಟುವದೇ ಇವರ ಕುಲದ ಹೋರೆ (ಕಭಾಗೆ. ೨೩೫).

[←ಪಾರ.ಹಿಂ.ಮರಾ.ನಾಲ್‌ಬಂದ್]

ನಾಲಬಂದಿ, ನಾಲುಬಂದಿ, ನಾಲುಬಂದು, ನಾಳಬಂದಿ, ಲಾಲಬಂದಿ, ಲಾಳಬಂದಿ (ನಾ). ೧. ಎತ್ತು, ಕುದುರೆಗಳಿಗೆ ಲಾಳ ಕಟ್ಟುವಿಕೆ : (ಕ). ೨. =ನಾಲಬಂದ : (ಕ). **ನಾಲುಬಂದಿ :** (ಕ). **ನಾಲುಬಂದು :** (ಕ). **ನಾಳಬಂದಿ :** (ಕ). **ಲಾಲಬಂದಿ :** ೨. ಆಲೆಮನೆ ಕದರುಮಾಡಿದ ಬಡಗಿಯಿಂದ ೧/೪ ಲಾಲಬಂದಿಯಿಂದ ೧/೨ ಹಳೇ ಪೈಕದವರ ಗ್ರಾಮಾಂತ್ರಗಳಿಂದ ವರುಷ ೧ಕೆ ವರ್ತನೆ (ಎಕ. XII, ಮದ್ದಗಿ. ೩೧-೧೨ ; ಸು. 1656 ?). **ಲಾಳಬಂದಿ :** (ಕ).

[←ಪಾರ. ಹಿಂ. ಮರಾ. ನಾಲ್‌ಬಂದೀ]

ನಾಲಸ್ತಿ (ನಾ). ೧. ಫಿರ್ಯಾದು ; ತಕರಾರು. ೨. ನಿಂದೆ ; ಅಪವಾದ ; ದೋಷಾರೋಪಣೆ : ಶ್ಯಾಮರಾಯ ಅವರ ನಾಲಸ್ತಿಯನ್ನು ಮಾಡುವ ಭೀತಿ ಇತ್ತು (ದೀಪಹ. II, ೧೦೯).

[←ಮರಾ. ನಾಲಸ್ತೀ, ನಾಲಿಸ್ತೀ]

ನಾಲಾ 'ನಾಲೆ$_1$' ನೋ.

ನಾಲಾಭ (ನಾ). [ಬೌದ್ಧ] ಶೂನ್ಯತತ್ತ್ವವನ್ನು ನಿರೂಪಿಸುವ ಒಂದು ಶಬ್ದ ; ಅಲಾಭವಲ್ಲದುದು ; ಲಾಭ : ಈ ಪರಮಾರ್ಥವಾದ ಶೂನ್ಯತತ್ತ್ವವನ್ನು ಅನಭಿಲಪ್ಯ . . . ಅಲಾಭ, ನಾಲಾಭ . . . ಅಪ್ರತಿಷೇಧ ಇತ್ಯಾದಿ ಶಬ್ದಗಳಿಂದ ಉಪದೇಶಿಸುವರು (ಹಿಂದಸಾ. ೪೧). [ಸಂ. (ನ+ಅಲಾಭ)]

ನಾಲಾಯಕ್ 'ನಾಲಾಯಕ್ಕು' ನೋ.

ನಾಲಾಯಕು 'ನಾಲಾಯಕ್ಕು' ನೋ.

ನಾಲಾಯಕ್ಕು, ನಾಲಾಯಕ್, ನಾಲಾಯಕು, ನಾಲಾಯಖ್, ನಾಲಾಯಖ, ನಾಲಾಯಖು, ನಾಲಾಹಿಕ್(ನಾ). ೧. ಕೆಲಸಕ್ಕೆ ಬಾರದ ವ್ಯಕ್ತಿ ; ಅನರ್ಹ ; ಅಯೋಗ್ಯ : ನೀನು ಶುದ್ಧ ನಾಲಾಯಕ್ಕು, ಅಯೋಗ್ಯ (ಗರುದಾ. ೯೨) ; ಮೊದಲಿನವಳು ಮುದುಕಿಯಾದಳು ; ಚಂದವಿಲ್ಲ. ಇಂಥ ಪ್ರವಾಸಕ್ಕೆ ನಾಲಾಯಕ್ಕು (ಆಳಿನಿ. ೨೭೨). **ನಾಲಾಯಕ್ :** ೧. ಆ ದೂರುಗಳ ಆಧಾರದ ಮೇಲೆ ನನ್ನ ಸ್ನೇಹಿತರು ನಾಲಾಯಕ್ ಎಂದು ಅವರ ಎರಡು ಇಂಕ್ರಿಮೆಂಟನ್ನು ಸರ್ಕಾರದವರು ನಿಲ್ಲಿಸಿದರು (ಪಂಜಪಂ. ೧೬೩). **ನಾಲಾಯಕು:** ೧. "ನಾಲಾಯಕು = ನಿರುಪಯೋಗಿ, ಅಯೋಗ್ಯ" (ಜಾನಕೋ. ೧೧). **ನಾಲಾಯಖ್ :** ೧. ನಮ್ಮ ದೇವರ ಮುಂದೆ ಪ್ರಪಂಚದ ಇತರ ಎಲ್ಲ ದೇವರೂ ನಾಲಾಯಖ್ (ಧರ್ಮಶ್ರೀ. ೭೩). **ನಾಲಾಯಖ :** ೧. ಅವರು ಈ ಪ್ರಪಂಚಕ್ಕೆ ನಾಲಾಯಖ (ಕಾಮಿಕಾಂ. ೯೮) ; ಕೇರಿಯ ಗೃಹಸ್ಥರು ಮಾತ್ರ ಲಗ್ನವಾಗಲು ನಾಲಾಯಖನಾದವನಿಗೆ ಸುಳ್ಳೇ ತಂಗಿಯನ್ನು ಕೊಟ್ಟರಿ ಎಂಬ ಧಾಟಿಯಲ್ಲೇ ಅದನ್ನು ಹೇಳಿರಬೇಕು (ಮೂರುದಾ.೬೯). **ನಾಲಾಯಖು :** ೨. ಅನರ್ಹವಾದುದು : ಸಾಗುವಳಿಲಾಯಖುಭೂಮಿಯಲ್ಲಿ . . . ಇದ್ದರೆ ಸಾಗುವಳಿ ನಾಲಾಯಖೆಂದು ವುತ್ತರ ಮಾಡಲಾಗುತ್ತೆ (ಭೂಮಿಅ. ೩೪). **ನಾಲಾಹಿಕ್ :** ೧. ನೀನು ದನ ಕಾಯುವುದಕ್ಕೂ ನಾಲಾಹಿಕ್ (ಬೆಳುಮ. ೧). [←ಪಾರ. ಹಿಂ. ಮರಾ. ನಾಲಾಯಕ್]

ನಾಲಾಯಖ್ 'ನಾಲಾಯಕ್ಕು' ನೋ.

ನಾಲಾಯಖ 'ನಾಲಾಯಕ್ಕು' ನೋ.

ನಾಲಾಯಖತನ (ನಾ). ಅಯೋಗ್ಯತನ ; ಅನರ್ಹತೆ : ದೇವರ ನಾಲಾಯಖತನವನ್ನು ಹಳಿಯುತ್ತ . . . ಥಾಲಿಹಸ್ತರಾಗಿ ಪೂಡಾ ಪರೇಡಿಗೆ ಹೊರಟೆವು (ದೀಪಹ. II, ೭).

[ನಾಲಾಯಖ(<ನಾಲಾಯಕ್ಕು)+-ತನ]

ನಾಲಾಯಖು 'ನಾಲಾಯಕ್ಕು' ನೋ.

ನಾಲಾಹಿಕ್ 'ನಾಲಾಯಕ್ಕು' ನೋ.

ನಾಲಿ, ನಾಳಿ$_1$ (ನಾ). ೧. (ತಾವರೆ ಮುಂತಾದುವುಗಳ) ಟೊಳ್ಳಾಗಿರುವ ದಂಟು,—ಕಾಂಡ. ೨. ದೇಹದ ಒಳಗಿರುವ ನಾಡಿ. ೩. ಕೊಳವೆ ; ನಳಿಕೆ. ೪. ತಾವರೆ; ಕಮಲ. ೫. ಆನೆಯ ಕಿವಿಯನ್ನು ತೂತುಮಾಡಲು ಉಪಯೋಗಿಸುವ ಒಂದು ಬಗೆಯ ಸಾಧನ. ೬. ಇಪ್ಪತ್ತುನಾಲ್ಕು ನಿಮಿಷಗಳ ಕಾಲ; ಒಂದು ಗಳಿಗೆ. ೭. ಒಂದು ಬಗೆಯ ಜಾಗಟೆ. ೮. ಪಟ್ಟ ; ಸೀಳು : ತನ್ನ ಬಟ್ಟೆಯ ಕೊನೆಯನ್ನು ಒಂದು ನಾಲಿಯಾಗಿ ಹರಿದು ಗಾಯದ ಮೇಲೆ ಬಿಗಿದು ತಲೆಯ ಹಿಂದಕ್ಕೆ ಕಟ್ಟಿದನು (ಚಿಕರಾ. ೩೧೧). **ನಾಳಿ$_1$:** ೨. "ನಾಳಿಯೆ ನಾಡಿಯೊಳ್" (ಕರ್ಣಾಶಿ. ೩೫). ೩. ಬಿದಿರ ಪೊಸನಾಳಿಯೊಳ್ ಕಾಸಿದ ಪಾಲಂ ಪೊಯ್ದು ಮತ್ತೆ ಕೊಗ್ಗೆಸಱೊಳ್ ಮೂಱುದಿನಂಬರಮಿರಿಸಿ ಬಱಿಕ್ಕದನೊಡೆದೊಡೆ ನಾಳಿಯಂದದಿಂ ಮೊಸರಕ್ಕುಂ (ಲೋಕೋಪ. ೮-೫೦) ; ಸಿಂಬುಳ ನಾಳಿ ಮೂಗುಗುಟ ಪೆರ್ದೊಱೆ ಬಾಯ್ ಮಲೆದಾಗರಂ ಬಸಿಱ್ (ಧರ್ಮಾಮೃ. ೫-೨೮) ; ಪಳಿಕಿನ ಪುಡಿಕೆಗಳೊಳಂ ಹರಿನೀಲದ ನಾಳಿಗಳೊಳಂ . . . ತೀವಿದೆನಿ ತಾನುಂ ತೆಱದ ಬಂಧುರ ಸುಗಂಧವಸ್ತುಸಂದೋಹಮಂ ಪಿಡಿದು (ಜಗವಿ. ೬-೧೮ ಪ) ; ಬಾವಿಯ ತಡಿಗೆ ಪೋಗಿ . . . ನೀರ್ಮೊಗೆ ವುಪಾಯಮನಾಂ ಮಿಗೆ ಕಂಡದೊಂದು ಬಳ್ಳಿಯ ಕಡೆಯಲ್ಲಿ ಪೆರ್ದಿದರ ನಾಳಿಯನಾರ್ಪಿನೆ ಕಟ್ಟಿ ಮೆಲ್ಲನಲ್ಲಿಯ ಲಲಿತಾಂಬುವಂ ಪದೆದು ಸೇಂದಿದೆನಾಗಳ್ (ದಶಕು. ೧೪-೧೫). ೬. "ನಾಳಿಯೆ ತಾಂ ಘಟಿಗೆಯೆನಿಕುಮವನೀತಳದೊಳ್" (ಕವಿಕಂ. ೧೧೫) ; "ನಾಳಿಯೆನೆ ನಾಡಿಯೆನೆ ಗಳಿಗೆಯೆಂದಕ್ಕು" (ಕಶರ. ೫೪). ೯. ಒಂದು ಅಳತೆಯ ಪ್ರಮಾಣ : ಬೆಲ್ಲ ನಾಳಿ ೪ . . . ತುಪ್ಪ ನಾಳಿ ಮೆಣಸು ನಾಳಿ ×

ಉಪು ನಾಳಿ ೧ (ಸೌಇಇ. IX—ii, ೫೪೭-೫ ; 1332) ; ಆ ಅಧರಣವನ್ನು ಮಾಡುವುದಕ್ಕೆ ನಾಲ್ಕು ನಾಳಿ ವಜ್ರಗಳನ್ನೂ ಹನ್ನೊಂದು ನಾಳಿ ಮುತ್ತುಗಳನ್ನೂ . . . ಇದಲ್ಲದೆ ಇನ್ನೂ ಇತರವಾದ ಸಪ್ತರತ್ನಗಳನ್ನೂ ಉಪಯೋಗಿಸಿದರು (ಹತ್ತುಮು. ೩೦). ೧೦. ಕಾಲುವೆ; ನಾಲೆ. ೧೧. ನೆಯ್ಗೆಯವನು ಬಟ್ಟೆಯನ್ನು ನೇಯುವಾಗ ಉಪಯೋಗಿಸುವ ಒಂದು ಉಪಕರಣ ; ಹೊಕ್ಕುನೂಲನ್ನು ಹಾಸುನೂಲಿನಲ್ಲಿ ಸೇರಿಸುವ ಉಪಕರಣ ; ಲಾಳಿ : "ವೇಮು, ವಾಯುವಂಡ—ನೆಯ್ಗೆಕಾಜಿನ ನಾಳಿ" (ನಾಚರಾ. ೪). ೧೨. (?) : "ನಾಳಿ=ನಾಡೆ ; ಪಾಡಿ [ಪಾಕಾಂ. ನಾಟುಯೆಂದು ನಾಡಿಯೆಂ ಬರ್ಥಂ]" (ಕಸುದ.ಪಂ. ೨). ℙ ಇಲ್ಲಿಯ 'ನಾಡೆ' ಶಬ್ದವು 'ನಾಡಿ' ಎಂಬುದರ ಅಪಲಿಖಿತವಿರಬಹುದೆ ?

ನಾಳಿಯ ಕೋಲ್=(ಬಿದಿರಿನಂಥ) ಟೊಳ್ಳಾದ ಸಸ್ಯಕಾಂಡದಿಂದ ತಯಾರಿಸಿದ ಬಾಣ (?) : ನಾಳಿಯ ಕೋಲ್ ಜವನಾಳವೆಂದಿನಂ ಕವಿದುವು (ಪಂಂಪಾಮಾ. ೧೩-೬೧). 'ನಾಳಿಯಂಬು' ಪರಾ. **ನಾಳಿಯ ಬಿಲ್ಲು**=ಒಂದು ಬಗೆಯ ಬಿಲ್ಲು : ಗಗನತಳವನು ಬಿಗಿದ ಬಲುಜೀಂಜೆಗಳ ತುಂಬಿದ ಹೊದೆಯ ಕಡಗಳ ಬಿಗಿದ ನಾಳಿಯ ಬಿಲ್ಲುಗಳ . . . ಜೋದರಡರಿದರಂದು ಬೊಬ್ಬಿಡುದು (ಕುಪ್ಯಾದ್ಯೂ. ೬-೫). 'ನಾಳಿವಿಲ್' ಪರಾ. [ಸಂ.]

ನಾಲಿಕ, ನಾಳಿಕ (ನಾ). ೧. ತಾವರೆ; ಕಮಲ. ೨. ಬಾಯಿಂದ ಊದುವ ಒಂದು ಬಗೆಯ ವಾದ್ಯ; ಕೊಳಲು. ೩. ಬಂದೂಕು; ಕೋವಿ : ಪ್ರಾಚೀನ ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಅಗ್ನಿಚೂರ್ಣ (ಇದನ್ನು 'Gun powder' ಎಂದು ಒಪ್ಪೆರ್ಟ್ ಅವರು ಅನುವಾದಿಸುತ್ತಾರೆ)ವೆಂಬ ಪದವಾಗಲಿ, ನಾಲಿಕ . . . ಎಂಬ ಪದವಾಗಲಿ ಸಾಹಿತ್ಯದಲ್ಲಿ ಶಾಸನಗಳಲ್ಲಿ ಇಲ್ಲ (ಕಕಾಅ.೨೭೯). **ನಾಳಿಕ:** ೧. ಲೋಲಕುಂತಳೆಯೆಯವಧರಿಸುಯಿಂತೆಂದು ಸಿರಿಮೌಳಿಯಂ ಮಣಿದು ಬಾ ಣಾ ಖ್ಯ ಶಿವನಂಘ್ರಿಯುಗನಾಳಿಕಂಗಳಿಗೆ ವಂದಿಸಲು (ನಮೋ. ೩೩-೪೯). [ಸಂ.]

ನಾಲಿಕೆ, ನಾಳಿಕೆ (ನಾ). ೧. (ತಾವರೆಯ) ನಾಳ; ದಂಟು. ೨. ಕೊಳವೆ; ನಳಿಕೆ : (೪). **ನಾಳಿಕೆ :** ೩. ಇಪ್ಪತ್ತುನಾಲ್ಕು ನಿಮಿಷಗಳ ಕಾಲ ; ಒಂದು ಗಳಿಗೆ : ಅದು ಸಮಯಾವಳಿಕೋಜ್ಜ್ವಸನಸ್ತೋಕ ನಿಮೇಷನಾಳಿ [ಪಾಕಾಂ. ೫]ಕಾ ಮುಹೂರ್ತದಿವಸಪಕ್ಷಮಾಸರ್ತ್ವಯನ ಸಂವತ್ಸರಾದಿ ಗಣನಾನುಕ್ರಮದಿಂದಂ ಪೆರ್ಚಿದೆಣಿಕೆಯೊಳ್ ಕೂಡಿದುದು (ಆದಿಪು.೬-೪೪ ಪ) ; ಸ್ತೋಕಂ ನೆಲೆದೇಟುಗಾಲವಾಳಾಲಂ ಮೂವತ್ತೆಂಟುವರೆಯನಿಪ ಲವಾಖ್ಯಾಕಂ ನಾಳಿಕೆ ತನ್ನಾಳ್ಕಾಲಯುಗಂ ಮುಹೂರ್ತಮೆನೆ ವರ್ತಿಸುಗುಂ (ಪಂಂಪಾಮಾ. ೧-೫೦). [ಸಂ. ನಾಳಿಕಾ]

ನಾಲಿಕೇರ, ನಾಳಿಕೇರ (ನಾ). =ನಾರಿಕೇಲ: ನಾಳಿಕೇರಸಹಕಾರೇಕ್ಷುರಸಪ್ರವಾಹದಿಂ ಬೆಳೆದು ಮಗಮಗಿಪ . . . ತಂಡುಲಂಗಳಂ ಕಳಪುಕೊಂಡು ಡಾಗಿದೋಗರಮನಾರೋಗಿಸುವಂ (ಪುಳುಪಾ. ೧೧-೬೫ ಪ) ; ಚೆಲ್ವುವೆತ್ತುವಮರೀಕರಪಲ್ಲವದೊಳ್ ನವೀನಕದಲೀ ನವಾಮ್ರ ನಾರಂಗ ನಾಳಿಕೇರಫಲಂಗಳ್ (ಪಂಂಪಾಮಾ.೧೬-೮೪). **ನಾಳಿಕೇರ :** "ನಾಳಿಕೇರಃ, ನಾರಿಕೇಳಃ, ಲಾಂಗಲೀ—ತೆಂಗಿನ ಮರದ ಹೆಸರುಗಳು" (ಸಿದ್ಧಾಂತಿ. ೧೫೨) ; ಆಜ್ಯ ಕ್ಷೀರ ದಧಿ ನಾಳಿಕೇರ ಸಹಕಾರ ಪೂಗೀಫಲ ಪುಂಡ್ರೇಕ್ಷುರಸಂಗಳಿಂದಂ . . . ಅಧಿಪೇಕಂಗೆಯ್ದು (ಆದಿಪು. ೧೬-೧ ಪ) ; ಪೂಗದ್ರುಮ ನಾಳಿಕೇರ ಬಹುಳಂ . . . ಪ್ರೋತ್ಫುಲ್ಲ ನಾನಾ ಲತಾಲಲಿತಂ ಕಾನನಮೆಯ್ದೆ ಕಣ್ಗೊಳಿಸುಗುಂ ಮುಷ್ಕಾಕ್ರಮೋಪಾಂತದೊಳ್ (ಕಾದಂಪೂ. ೨೧೬) ; ನಾಳಿಕೇರಮನವಳಂಬಿಸಿರ್ದುವು ಫಲಂ ರಸಪೂರಿತಮಾಗಿ ಮಾಗಿಯೊಳ್ (ಜಗತಿ. ೧೪-೫) ; ನಳನಳಿಸಿ ಬೆಳೆದ ನವನಾಳಿಕೇರಂಗಳಂ . . . ತೋಜುತುಂ (ನಂಬಿರ. ೯-೧೦೦). [ಸಂ.]

ನಾಲಿಗೆ 'ನಾಲಗೆ' ನೋ.

ನಾಲಿಗೆಕಚ್ಚು (ಕ್ರಿ). ನಾಲಿಗೆಯನ್ನು ಕಡಿ.

ನಾಲಿಗೆ ಕಚ್ಚಿ ನುಡಿ=ಹಿಡಿದು ಹಿಡಿದು ಮಾತನಾಡು; ತಡೆದು ತಡೆದು ಮಾತನಾಡು : ಅವಳು ನಾಲಿಗೆಕಚ್ಚಿ ನುಡಿಯುತ್ತಿದ್ದಳು (ಇಪ್ಪಕ. ೧೫೬). [ನಾಲಿಗೆ (<ನಾಲಗೆ)+ಕಚ್ಚು$_1$(<ಕರ್ಚು$_1$)]

ನಾಲಿಗೆಕಲ್ಲು (ನಾ). (ಕಟ್ಟಡದಲ್ಲಿ ಅಥವಾ ಬಾವಿಯ ಒಳಗೆ) ಮುಂದಕ್ಕೆ ಚಾಚಿಕೊಂಡಿರುವ ಚಪ್ಪಡಿಕಲ್ಲು : (೪).

[ನಾಲಿಗೆ (<ನಾಲಗೆ)+ಕಲ್ಲು(<ಕಲ್$_3$)]

ನಾಲಿಗೆಕೀಳು 'ನಾಲಗೆಗೀಟು' ನೋ.

ನಾಲಿಗೆಕೆಡು (ಕ್ರಿ). ರೋಗ ಮೊದಲಾದ ಕಾರಣಗಳಿಂದ ರುಚಿ ತಿಳಿಯದಂತಾಗು ; ನಾಲಿಗೆಯಿಂದ ರಸವು ತಿಳಿಯದೆ ಹೋಗು; ಅರುಚಿಯುಂಟಾಗು : ಎರಡು ದಿನ ಜ್ವರ ಬಂದಿದ್ದಕ್ಕೆ ನಾಲಿಗೆ ಕೆಟ್ಟುಹೋಗಿದೆ (ರೂಢಿ). [ನಾಲಿಗೆ (<ನಾಲಗೆ)+ಕೆಡು$_1$]

ನಾಲಿಗೆಗೀಳ್ 'ನಾಲಗೆಗೀಟು' ನೋ.

ನಾಲಿಗೆದೋಷ (ನಾ). ಸನ್ನಿ ಮೊದಲಾದ ರೋಗಗಳಲ್ಲಿ, ನಾಲಿಗೆಯಲ್ಲಿ ತೋರುವ ಜಾಡ್ಯದ ಸೂಚನೆ,—ರೋಗ ಉಲ್ಬಣವಾಗುವುದರ ಗುರುತು : ಆಕಲಕರೆಯನ್ನು ತೇದು ಕೊಂಬುದು ನಾಲಿಗೆ ದೋಷ ಗುಣ (ವೈವಿ. ೧೦೨). [ನಾಲಿಗೆ(<ನಾಲಗೆ)+ದೋಷ]

ನಾಲಿಗೆಪ್ರಮಾಣ (ನಾ). ಮತ್ತೊಬ್ಬರ ಮಾತಿನಲ್ಲಿ ನಂಬಿಕೆ ಬರುವಿಕೆ ; ಒಬ್ಬರು ಮಾಡಿದ ವಾಗ್ದಾನದಲ್ಲಿ ನಂಬಿಕೆ ಇರುವಿಕೆ : (೪). [ನಾಲಿಗೆ (<ನಾಲಗೆ)+ಪ್ರಮಾಣ]

ನಾಲಿಗೆಬೀಳು (ಕ್ರಿ). =ನಾಲಿಗೆ ಹೋಗು : ಪಾರ್ಶ್ವವಾಯುವಿನಿಂದ ಆ ರೋಗಿಗೆ ನಾಲಿಗೆ ಬಿದ್ದಿದೆ (ರೂಢಿ).

[ನಾಲಿಗೆ(<ನಾಲಗೆ)+ಬೀಳು$_1$(<ಬೀರ್$_1$)]

ನಾಲಿಗೆವಾಸಿ (ನಾ). ಆಡಿದ ಮಾತಿಗೆ ತಪ್ಪದಿರುವಿಕೆ ; ಸತ್ಯಸಂಧತೆ ; ಪ್ರಾಮಾಣಿಕತನ : ನಾಲಿಗೆವಾಸಿಯಿದ್ದವನ ಮಾತು ಹಾಲಿಗಿಂತ ಹೆಚ್ಚು (ಗಾದೆ). [ನಾಲಿಗೆ(<ನಾಲಗೆ)+ವಾಸಿ$_2$]

ನಾಲಿಗೆಹೋಗು (ಕ್ರಿ). ಮಾತನಾಡುವ ಶಕ್ತಿ ಹೋಗು ; ಮಾತನಾಡದಂತಾಗು: ಕಳೆದ ವರ್ಷ ಪಾರ್ಶ್ವವಾಯುವಿನಿಂದ ಅವರಿಗೆ ನಾಲಿಗೆ ಹೋಯಿತು (ರೂಢಿ).

[ನಾಲಿಗೆ(<ನಾಲಗೆ)+ಹೋಗು$_1$ (<ಪೋ$_1$)]

ನಾಲೀಕ, ನಾಳೀಕ (ನಾ). ೧. ಬಾಣ ; ಶರ. ೨. ಈಟಿ ; ಭಲ್ಲೆ. ೩. ತಾವರೆ ; ಕಮಲ. ೪. ತಾವರೆಯ ನಾಳ,—ದಂಟು. **ನಾಳೀಕ :** ೩. ನಾಳೀಕನಯನೆ ಎನಗಿದು ಪ್ರಥಮ ಜನ್ಮವೊ ಮುಂದೆ ಸದ್ಗುಣವಪ್ಪುದು (ಗುರುಚಾ. ೬-೮೫). 'ನಾಳೀಕ ಭವ' ಪರಾ. [ಸಂ.]

ನಾಲೀಜಂಘ, ನಾಳೀಜಂಘ (ನಾ). ೧. (ನಾಳದಂತಿರುವ ಕಾಲುಗಳನ್ನುಳ್ಳ) ಒಂದು ಬಗೆಯ ಪಕ್ಷಿ; ಕೊಕ್ಕರೆ; ಬಕ. ೨. ಒಂದು ಬಗೆಯ ಕಾಗೆ ; ಡೊಂಬಕಾಗೆ. ೩. ಕೋತಿ; ಕಪಿ: "ಪ್ಲವಂಗಮ ಶಬ್ದಂ ನಾಲೀಜಂಘಾಖ್ಯೆಯೊಳಂ ಶಾಲೂರದೊಳಂ ಯಥಾರ್ಥಕಂ ವರ್ತಿಸುಗುಂ" (ವಸ್ತು ಕೋ. ೧೩೦-೭೬). **ನಾಳೀಜಂಘ:** ೩. ಏಳುತ್ತಂ ಮೆಲ್ಲನಲ್ಲಿಂ ಪುಜಾಯಮಂದಿರೆ ತಿಳ್ಪೊಟ್ಟೆಯೊಳ್ . . . ಶಾಖಾಗ್ರದೊಳಡರ್ದಲುಗಲ್ಲುಸೆ ಮೇಲ್ಕೆಲೆತ್ತಂ ನಾಳೀಜಂಘಂ

ಕರಂ ಪಲ್ದೆಱೆದು ನಡುಗಿ ಹಱ್ಱೆಂದು ಪುರ್ಬಿಕ್ಕಿತಾಗಳ್ (ರಾಜಶೇ. ೯-೨೯). [ಸಂ.]

ನಾಲೀಸು (ನಾ). ಹೇಯವಾದುದು ; ತಿರಸ್ಕಾರಕ್ಕೆ ಯೋಗ್ಯವಾದುದು : ಒಂದು ಸಂಗತಿಯಲ್ಲಿ ಮಾತ್ರ ಅವರ ವ್ಯಾಪಾರ ನಾಲೀಸು (ಮುಗಿಯು. ೧೩). [←ತುಳು. ನಾಲೀಸ್, ನಾಲಿಸ್]

ನಾಲು$_1$ 'ನಾಲ್' ನೋ.

ನಾಲು$_2$ 'ನಾಲ$_2$' ನೋ.

ನಾಲುಕಟ್ಟು 'ನಾಲಕಟ್ಟು' ನೋ.

ನಾಲುಕು 'ನಾಲ್ಕು' ನೋ.

ನಾಲುತೆಱ 'ನಾಲ್ದೆಱ' ನೋ.

ನಾಲುಬಂದಿ 'ನಾಲಬಂದಿ' ನೋ.

ನಾಲುಬಂದು 'ನಾಲಬಂದಿ' ನೋ.

ನಾಲುಬಡಿಸು (ಕ್ರಿ). ಕುದುರೆ, ಎತ್ತು ಮೊದಲಾದುವುಗಳ ಗೊರಸಿಗೆ ಹಲ್ಲೆಯನ್ನು ಹೊಡೆಸು; ನಾಲುಕಟ್ಟಿಸು: ಕುದುರೆಯು ನೆಟ್ಟಗೆ ಅದೆ; ಅದರ ಕಾಲು ಮಾತ್ರ ಕುಂಟುತ್ತದೆ! ಆದ್ದರಿಂದ ಅದಕ್ಕೆ ನಾಲುಬಡಿಸಿ ನಮ್ಮ ಸರ್ಕಸ್‌ದೊಳಗೆ ಕೂಡಿಸಿಕೊಳ್ಳೋಣ! (ಮೋಹಿನೀ. ೫೬). [ನಾಲು$_2$(<ನಾಲ$_2$)+ಬಡಿಸು$_1$]

ನಾಲುಮಡಿ 'ನಾಲ್ವಡಿ' ನೋ.

ನಾಲುವಿ (ನಾ). (?) : ಹೊಸವಳಲ ಪ್ರಭುಮುಖದಾಮೋದರಭಟ್ಟೋಪಾಧ್ಯಾಯರು ಅನಂತಭಟ್ಟೋಪಾಧ್ಯಾಯರೊಳಗಾಗಿ ನಾಲುವಿರುದ್ರಮ ಮುಖ್ಯಧಿದಾವ ತೊದಲುಂ ತೊಂದಿರರು ವೈನೂರ್ವ್ವರುಮಿರ್ದ್ದುವಿಟ್ಟ ಧರ್ಮ್ಮಮೆಂತೆಂದಡೆ (ಇಆ. XI, ೨೭೪-೨೬; 1080). [?]

ನಾಲುಸಾಸಿರ 'ನಾಲ್ಪಾಸಿರ' ನೋ.

ನಾಲೆ$_1$, ನಾಲಾ (ನಾ). ೧. ನೀರು ಹರಿಯುವುದಕ್ಕಾಗಿ ಮಾಡುವ ತಗ್ಗು,—ತೋಡು ; ಕಾಲುವೆ : ನಾವು ಸ್ಕೂಲಿಗೆ ಹೋಗುತ್ತಿದ್ದ ಮಾರ್ಗದ ನಾಲೆಯಲ್ಲಿ ಕರಿಯ ಬಲೆ ಎಸೆದು ಮೀನು ಹಿಡಿಯುತ್ತಾ ನಿಂತಿರುತ್ತಿದ್ದ (ಬೆಸ್ತಕ. ೮) ; ವ್ಯವಸಾಯದ ಸಲುವಾಗಿ ಯಾವುದೇ ನಾಲೆಯ ಅಥವಾ ಜಲಮಾರ್ಗದ ಉಪಯೋಗ (ಭಾಧಾನ. ೨೬೩) ; ಗೌಡರು ಹಳ್ಳಿಗೆ ಐದು ಮೈಲಿ ದೂರದಲ್ಲಿದ್ದ ನಾಲೆಯನ್ನು ಪರೀಕ್ಷಿಸಲು ಹೊರಟಿದ್ದರು (ಗೋಪುರ. ೧೪೯) ; ನಾಲೆ ಇಲ್ಲದ ಊರೂ ಮಾಲೆ ಇಲ್ಲದ ಪ್ರಸ್ತವೂ ಒಂದೇ (ಗಾದೆ). **ನಾಲಾ :** ೧. ನೀರುಗಂಟ—ಕೆರೆ ಮತ್ತು ನಾಲಾಗಳಿಂದ ನೀರನ್ನು ಬಿಡುವವನು (ಗ್ರಾಮಾಕ. ೧) ; ಅರವತ್ತುವರ್ಷದಿಂದ ಮಂದಗೆರೆ ಉತ್ತರನಾಲಾ ಬರಬೇಕೆಂತ ಸರಕಾರದವರನ್ನು ಕೇಳಿಕೊಳ್ಳುತ್ತಾ ಇನ್ನಿ (ಹುಟ್ಟಹ. ೧೭೦). ೨. ಬಂದೂಕಿನ ನಾಳ,—ನಳಿಕೆ : ಕೋವಿಗಳು ಒಂದೂವರೆ ಮಾರು ಉದ್ದ. ಅವುಗಳನ್ನು ಬಾರುಮಾಡಬೇಕಾದರೆ . . . ನಾಲಾದಲ್ಲಿ ಮದ್ದನ್ನು ಸುರಿಯಬೇಕು (ಸಕತೆ.೮೧). [←ಹಿಂ. ಮರಾ. ನಾಲಾ]

ನಾಲೆ$_2$ (ನಾ). ಒಂದು ಬಗೆಯ ಹುಲ್ಲು : "ಕುರರೀ—ನಾಲೆ, ನಾರುಂ ಬೇಳೆ" (ಓಷಧಿ. ೩೪) ; ನೊಸೆ ನೈಹಂಚಿ ಕಣಿಗಿಲೆ ನಾಲೆ ಗರುಗ . . . ಎಸೆದಿಹವಾ ವಿಪಿನದೊಳು (ಶ್ರೀಪಾಲ. ೬-೧೪) ; ನಾಲೆಹುಲ್ಲು, ನಾರು ಹಂಚಿಹುಲ್ಲು (ಮೈಔಗಿ. ೬೮-೧೩೯೩). [<ಸಂ. ನಲ ?]

ನಾಲ್ಕಡಿ, ನಾಕಡಿ(ನಾ). ೧. ನಾಲ್ಕು ಹೆಜ್ಜೆ,—ಕಾಲು,—ಪಾದ: ಕಂದ ಕೇಳ್ಬಲುಗುಣಂ ಪಾಲಿಪಂ ನಾಲ್ಕಡಿಯದೊಂದು ಹರಿಯಂ ನಿನಗದಱ ಚಿಂತೆ ಬೇಡ (ಜೈಮಿಭಾ. ೧-೧೨). **ನಾಕಡಿ :** ೨. ನಾಲ್ಕು ಅಡಿಗಳ ಉದ್ದ : ಹಲಬರ ನುಂಗಿದ ಹಾವಿಂಗೆ ತಲೆ ಬಾಲವಿಲ್ಲ . . . ನಾಕಡಿಯನೈದುವುದು ಲೋಕದ ಕಡೆಯೆನೆ ಕಾಣ್ಬುದು (ಬಸವ. ೮೫೬).

ನಾಲ್ಕಡಿಯವು = ನಾಲ್ಕು ಕಾಲುಗಳನ್ನುಳ್ಳುವು ; ನಾಲ್ಕು ಕಾಲಿನ ಪ್ರಾಣಿಗಳು ; ಚತುಷ್ಪಾದಿ : "ನಾಲ್ಕಡಿಯವೆಲ್ಲಂ ಪಶುಗಳಕ್ಕು" (ಮಂಗರಾ. ೫೫-೯). [ನಾಲ್ಕು + ಅಡಿ$_1$]

ನಾಲ್ಕರೆ 'ನಾಲ್ಕುವರೆ' ನೋ.

ನಾಲ್ಕಳವೆ (ನಾ). ನಾಲ್ಕುಕೊಳಗ ಬತ್ತದ ಬೀಜವರಿ ಭೂಮಿ (?) : ಮಱುಗರೆಯರ್ ಚಿತ್ತಪ್ಪಕೆಱೆಯಂ ಕಟ್ಟಿಸಿ ನಾಲ್ಕಳವೆಯ ಭಾಗಂ ಬಿತ್ತುವಾಟಂ ಕೆಱೆಗೆ ಕುಡುವುದು (ಎಕ. XI, ಹಿರಿಯೂ. ೩೩-೫; ಸಂ. 890). [ನಾಲ್(<ನಾಲ್ಕು)+ಕಳವೆ$_2$(<ಕಬವೆ)]

ನಾಲ್ಕಾಣೆ, ನಾಕಾಣೆ (ನಾ). ನಾಲ್ಕು ಆಣೆ ; ರೂಪಾಯಿಯ ನಾಲ್ಕನೆಯ ಒಂದು ಭಾಗ ; (ಇಂದಿನ) ಇಪ್ಪತ್ತೈದು ಪೈಸೆ : ಸುಳ್ಳು ಹೇಳಿದ್ದಕ್ಕಾಗಿ ನಾಲ್ಕು ನಾಲ್ಕಾಣೆ ಜುಲ್ಮಾನೆ ವಿಧಿಸಿ ನಾಲ್ಕಾಣೆಯನ್ನೂ ಕೋಳಿಗಳನ್ನೂ ಪಾದಿಗೆ ಕೊಡಿಸಿ, ಉಳಿವ ನಾಲ್ಕಾಣೆಯನ್ನು ಊರೊಟ್ಟಿನ ಹಣಕ್ಕೆ ಸೇರಿಸಿದರು (ಹುಟ್ಟಹ. ೧೬೭). **ನಾಕಾಣೆ :** ಆರತಿತಟ್ಟಿಗೆ ನಾಕಾಣೆ ಬಿದ್ದ ಜ್ಞಾಪಕ (ಹುಟ್ಟಹ. ೭೦). [ನಾಲ್ಕು + ಆಣೆ$_3$]

ನಾಲ್ಕಾಳು (ನಾ). ೧. ನಾಲ್ಕುಜನ. ೨. ನಾಲ್ಕು ಆಳು ಉದ್ದದ ಅಳತೆ; ನಾಲ್ಕು ಪುರುಷಪ್ರಮಾಣ : ನಾಲ್ಕಾಳುದ್ದಕ್ಕೆ ನೀರುಂಟು (ಲೋಕೋಪ. ೫-೨೬ ಅಡಿಟ) ; ಆಳ ನಾಲ್ಕಾಳಾದ ಕಮ್ಮರಿಯೊಳುರುಳಿ ಮೇಣ್ ಬಾಳ್ವುದೇಂ ಕೀಳೊಡೆಯ ಕಾಯ್ದನೆಂದರಿದಂ (ಕಾಲೂರ. ೧೩೮-೨೯೮). [ನಾಲ್ಕು + ಆಳು$_3$(<ಆಳ್$_3$)]

ನಾಲ್ಕು, ನಾಕು$_1$, ನಾಲುಕು (ನಾ). ಒಂದು ಸಂಖ್ಯೆ ; ಮೂರು ಮತ್ತು ಐದರ ನಡುವಿನ ಸಂಖ್ಯೆ : ಶ್ರುತದುಷ್ಟಮರ್ಥದುಷ್ಟಂ ಶ್ರುತಿಕಷ್ಟಂ ಕಲ್ಪನೋಕ್ತಿಕಷ್ಟಮುಮೆಂದೀ ಕೃತಕೃತ್ಯಮಲ್ಲ ವಲ್ಲಭ ಮತದಿಂ ನಾಲ್ಕಕ್ಕುಮಿಲ್ಲಿ ಕೃತಿದೋಷಂಗಳ್ (ಕವಿರಾ. ೧-೬೨) ; ನಾಲ್ವರು ನಾಲ್ಕುಂ ಸಮುದ್ರಂಗಳ್ ಮೇರೆದಪ್ಪಿದಂತೆ ವಿರಾಟನೊಳ್ ಕೂಡಿ ಪೋಗಿ ತಾಗಿದಾಗಳ್ (ಪಂಪಭಾ. ೮-೯೦ ವ) ; ಕ್ಷಿತಿಯೊಳ್ ವರ್ತಿಸುಗುಂ ಕ್ರಮಗತಿಯಿಂದಂ ಬ್ರಾಹ್ಮಣಾದಿ ವರ್ಣಂ ನಾಲ್ಕುಂ (ವಸ್ತುಕೋ. ೫೬-೩೦) ; ಮಾನಭಂಗವದೊಂದು ಕಾಣದೆ ದೀನನಾಗಿಹುದೆರಡು ನಾಚಿಕೆ ತಾನಱಯದದು ಮೂಱು ನಗೆಗೆಡೆಯಾಗಿಹುದು ನಾಲ್ಕು (ಬಸಪು. ೪೦-೬೨) ; ನಿಮ್ಮರಿಭಟಗೆ ನಾಲ್ಕಿಲ್ಲ ಕೈ ಕಣ್ಣಿಲ್ಲ ನೊಸಲಿನಲಿ . . . ವೃಥಾ ಭಯವೇಕೆನುತ ಕುರುರಾಯನನುವಾದ (ಕುವ್ಯಾಕ. ೪-೨೬). **ನಾಕು$_1$:** ಶ್ರೀವೀರಕೇಶವದೇವರ ನಿವೇದ್ಯಕ್ಕೆ ಕೊಟ್ಟ ವ್ರಿತ್ತಿ ಎರಡಕ್ಕಂ ಎರೆಯ ಮತ್ತರು ನಾಕು ಕೆಂಗಾಡು ಮತ್ತರು ಅಯಿದು (ಸೌಇಇ. IX-i, ೨೫೪-೬೩ ; 1169) ; ನಾಕು ಷಂಡನ ಕೂಡೆ ಕಾದುವುದೇಕೆ ತಿದ್ದುವೆನೆನುತ ರಥವನು ನಾಕು ಶರದಲಿ ಮುಱಿದು . . . ಐದಿದನು ದ್ರೋಣ (ಕುವ್ಯಾದ್ರೋ. ೨-೪೨) ; ಜೋಕೆ ಮಾಡದೆ ಮೇಲ್ವಾಯಿದು ಕುದುರೆಗಳ ನಾಕು ಕಾಲನು ಪಱಿದಿಡಲು ಆಕಾಶದಿಂದ ಬಿರ್ದಂತು ತುರಗಗಳು ಭೂಕಾಂತೆಯೊಳುರುಳಿದವು (ಅಂಜಚ. ೬-೧೧೮) ; ನಾಕೂ ಮೂಲೀಗೇ ನಾಕೂ ಬೆಳ್ಳಿಯ ಗಂಟೆ . . . ಭೈರುವನ್ತೇರು ಜೋಕಾ ತಲ್ಲಣಿಸೇ ಹರಿದಾವೂ (ಹುಟ್ಟಹ. ೧೧೦). **ನಾಲುಕು :** ಮೇಲಾದ ನಾಲುಕು ಮತ್ತರು ಕೆಯ್ಗಂ . . . ಧಾರಾಪೂರ್ವ್ವಕಮ್ಮಾಡಿ ಪ್ರತಿಶಾಸನಮಂ ಕೊಟ್ಟರು (ಸೌಇಇ. XI-i, ೫೦-೩೧ ; 1138) ; ವ್ಯಸನಗಳೇಱುಮಂ . . . ಕರಣ ನಾಲುಕುಮಂ ತನು ಮೂಱುಮೆಂಬಿವಂ ನುಸುಳಿರಿಸುತ್ತ ಚಿತ್ತದೊಳ

ಗೀಶನ ನಿರ್ಮಳ ಧರ್ಮಮೂರ್ತಿಯಂ ಪಸರಿಸಿ ಭಿನ್ನವಿಲ್ಲದಿರುತಿರ್ಪ ಮಹಾಮುನಿಮುಖ್ಯನೊಪ್ಪಿದಂ (ಪುಲ್ಲಕಾ. ೩-೭೬); ಬೆಳಗಿದವು ಬೊಂಬಾಳದೀವಿಗೆ ಬಲದೊಳಾನೆಗೆ ಹತ್ತು ರಥಕಾವಳಿಗೆ ನಾಲುಕು ಹಯಕೆರದು ಕಾಲಾಳಿಗೊಂಬೊಂದು (ಕುವ್ಯಾದ್ರೋ. ೧೫-೨೩); ಅವನಿಜಾನುತ ಕೇಳು ಸಂದವು ದಿವಸ ನಾಲುಕು (ತೊರಕಾ. ೩-೪-೩೯); ತಿವನೊಳು ಸೆಣಸುವ ವಿಮಾನಕೇತನಪರಿವಾರದಂತೆ ನೂತನಾವಯವ ಸದ್ಗುಣರೂಪು ನಾಲುಕು ಜಾತಿಯಂಗನೆಯರೊಪ್ಪಿದರು (ನೋತಪ. ೧೪-೨೪).

ನಾಕಪ್ಪತ್ತು = ನಾಲ್ಕರಿಂದ ಗುಣಿಸಲ್ಪಟ್ಟ ಇಪ್ಪತ್ತು; ಎಂಭತ್ತು: ನಾಕಪ್ಪತ್ತು ಆಗಿ ಹೋತು ವಯಸ್ಸು (ಸುಜ್ಞಜ. ೧೧೧). **ನಾಲ್ಕನೆಯ, ನಾಲ್ಕನೆ, ನಾಲ್ಕನೇ** = ನಾಲ್ಕರ ಸ್ಥಾನವನ್ನು ಪಡೆದಿರುವ,— ಅಂತಸ್ತಿನಲ್ಲಿರುವ; ಚತುರ್ಥ: ಶ್ರುತಕೇವಳಿಗಳ್ ನಾಲ್ಕನೆಯವರ್ ಗೋವರ್ಧನರೆಂಬ ಭುವನರುಜ್ಜಯಂತಮಂ ವಂದಿಸಲೆಂದು ವಿಹರಿಸುತ್ತಂ ಬರ್ಪೊರಾ ಕೌಂಡಿನೀನಗರಕ್ಕೆ ವಂದು (ಪಡ್ಡಾರಾ. ೭೩-೨೬); ಶ್ರೀರಾಜ್ಯವಿಜಯಸಮ್ಮತ್ಸರ ಸತ್ಯವಾಕ್ಯ ಪೆರ್ಮ್ಮನಡಿಗಳಾಳುತ್ತ ನಾಲ್ಕನೆಯ ವರ್ಷದ ಮಾರ್ಗ್ಗಶಿರಮಾಸದ ಪೆಜಕಲೆದಿವಸವಾಗೆ (ಎಕ. III, ಶ್ರವಂಗ. ೧೪೮-೩; 904 ?); ಕ್ಷೇಮಂಧರನೆಂಬೊಂ ನಾಲ್ಕನೆಯ ಕುಲಧರಂ . . . ಅಪ್ಪ ಪ್ರಮಾಣ ಸಂವತ್ಸರಾಯುಷ್ಯನುಮಾಗಿ (ಜಾವುಂಪು. ೧೦); ಕರುಳ ಮಾಲೆಯ ಯಡದ ಕೈಯಲ್ಲಿ ಪಿಡಿದು ಕಂಠಕೆ ತೊಡಹು ಮಾಡ್ದ ನೃಸಿಂಹ ನಾಲ್ಕನೆ ಅವತರಣ (ಗಗತಾ. ೧೯-೨೮); ನಾಲ್ಕನೇ ವೇಗಾ ಛರ್ದಿ ದೇಹದಲ್ಲಿ ನಡುಕ (ವಿಷಚಿ. ೯-೫), **ನಾಲ್ಕಯ್ದು** = ಕೆಲವು; ಹಲವು: ಅರಸಂ . . . ತನ್ನೇಡಿಜ ವಾರುವ ದೊಡವರ್ಪ ನಾಲ್ಕಯ್ದು ಕುದುರೆಗಳ್ವೆರಸು . . . ವೈಶಂಪಾಯನನ ಬೀಡಾವುದೆಂದಲ್ಲಿಗಲ್ಲಿಗೆ ಬೆಸಗೊಳ್ಳುದುಂ (ಕಾದಂಬಿ. ೪೩೪). **ನಾಲ್ಕರ ಚಳಿ** = ನಾಲ್ಕು ದಿನಗಳಿಗೊಮ್ಮೆ, ತಪ್ಪದೆ ಬರುವ ಚಳಿಜ್ವರ: ದೇಹಾದ್ಯಂತವೂ ಬೆಮರಿಟ್ಟು ನಾಲ್ಕರ ಚಳಿ ಬಂದವರ ಹಾಗೆ ಅವನು ಗದಗುಟ್ಟ ನಡುಗಲಾರಂಭಿಸಿದ (ಬನಸಿ. ೪೭). **ನಾಲ್ಕಾರು** = ಕೆಲವು; ಹಲವು: ಉಳ್ಳಿ, ಸೈಂಧವ, ಹಿಪ್ಪಲಿ . . . ಬಿಸಿನೀರಿಂದರೆದು ನಸ್ಯಂಗೆಯ್ಕೆ ನಾಲ್ಕಾರು ಹನಿ ಸೋಕಿದ ಮಾತ್ರದಲ್ಲಿಯೆ ಮೈಮರಹು ಎಚ್ಚರಹುದು (ಸಳವೈ. ೧೪೧); ತೀರ್ಥಹಳ್ಳಿಯ ಪರಿಸರದ ನಾಲ್ಕಾರೂರು ಬಾಲ್ಯದೊಳಾಡಿದ ಊರು (ಇಂಚಾಸ. ೯-೩೧); ಹೀಗೆಯೇ ನಾಲ್ಕಾರು ವರ್ಷಗಳು ಕಳೆದವು (ಹುಬ್ಬಜ. ೧೬೨). **ನಾಲ್ಕುಕಾಲ** = ಕೆಲವು ವರ್ಷ; ಕೆಲವು ಕಾಲ, — ಸಮಯ: ಪ್ರಪಂಚದಲ್ಲಿ ನಾಲ್ಕುಕಾಲ ಬದುಕಿರಬೇಕಾದರೆ ನನಗೆ ತೋರುವುದು ಒಂದೇ ಮಾರ್ಗ (ಪಚಭಾ. ೧೧೩). **ನಾಲ್ಕುಗೆಯ್** = ಗಿ. ನಾಲ್ಕು ಭಾಗವನ್ನಾಗಿ ಮಾಡು: ರಪ್ಪುರ ನಾಗಯ್ಯಂ ತನ್ನ ಮಾಡಿಸಿದ ದೇಗುಲಕ್ಕೆನ್ದು . . . ಆ ಪನ್ನಿರ್ಮ್ಮತ್ತರ್ಕೆಯ್ದಂ ನಾಲ್ಕುಗೆಯ್ದು[ದೇವ]ಮನ್ಯ[ಗ್ಗಾ]ರ್ಗಿ ಬಾಟ್ಟುದು (ಸೌಇಇ. XI-1, ೩೪-೧೩; 925). **೨.** ನಾಲ್ಕರಷ್ಟು ಮಾಡು: ಒಂದೊಂದು ಮಾನಸ್ತಂಭಕ್ಕೆ ನಾಲ್ಕುಗೆಯ್ದು ಸಮುಚಿತ ರಸ್ತಂಗಳಪ್ಪ ಪದಿನಾಜುಬಾವಿಗಳನಜವಜ ಬಾಹ್ಯಕೋಣದ್ವಯಸ್ಥಿತ ಪಾದಪ್ರಕ್ಷಾಳನಾರ್ಥಂ ಕಾಂಚನಕುಂಡದ್ವಯಂಗಳಂ ಪೆಜಪಿದು (ಜಾವುಂಪು. ೪೪). **ನಾಲ್ಕುಜನ** = ಹಲವು ಜನ; ಅನೇಕ ಮಂದಿ; ಜನತೆ: ಮಾಡುವ ಕೆಲಸ ನಾಲ್ಕುಜನ ಒಪ್ಪುವ ಹಾಗೆ ಇರಬೇಕು (ರೂಢಿ). **ನಾಲ್ಕುಜಾತಿ** = ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣ: (೬). **ನಾಲ್ಕು ತೆಱ** = ನಾಲ್ಕುಬಗೆ,— ವಿಧ: ತಿಕ್ಷಾವ್ರತಮಿದು ನಾಲ್ಕುತೆಱನನೂನಾಗಮದೊಳ್(ಶಾಂತಪು. ೧-೪೦). **ನಾಲ್ಕು ದಿನ** = ನಾಲ್ಕು ದಿವಸ: ಲೇಸೆನಿಸಿಕೊಂಡು ನಾಲ್ಕು ದಿನ ಬದುಕಿದರೇನು (ಬಸವ. ೧೫೪). **ನಾಲ್ಕು ದಿವಸ** = ಕೆಲವು ದಿನ: ನಾನು ಬಡತನದಿಂದ ಸಂಪತ್ತನ್ನು ಕಂಡೆ. ಆದನ್ನು ನಾಲ್ಕು ದಿವಸ ಅನುಭವಿಸಿದೆ (ಸಚಸಾ. ೬೩೪); ನಮ್ಮ ಮನೆಯಲ್ಲೂ ನಾಲ್ಕು ದಿವಸ ಇದ್ದು ಹೋಗು (ರೂಢಿ). **ನಾಲ್ಕು ದೆಸೆ** = ನಾಲ್ಕು ದಿಕ್ಕು; ಎಲ್ಲಾ ಕಡೆ: ವಸುಧೇಶ್ವರನ ವಲ್ಲಭೆ ನಾಲ್ಕು ದೆಸೆಗಳನೀಕ್ಷಿಸುತ್ತ . . . ಎನಲು (ಬಸಪು. ೪೩-೧೦); ಹೋಗಹೋಗಲು ಮುತ್ತೆ ಕುರುಬಲ ಸಾಗರದ ಭಟಲಹರಿ ಲಳಯಲಿ ತಾಗಿದರು ತುಡುಕಿದರು ತಡೆದರು ನಾಲ್ಕು ದೆಸೆಗಳಲಿ (ಕುವಾಕಳ. ೧೪-೨೫). **ನಾಲ್ಕು ನಾಲಿಗೆಯಾಗು** = ಹೆಚ್ಚಾಗಿ ಮಾತನಾಡುವ ಅವಕಾಶವುಂಟಾಗು,— ಶಕ್ತಿಬರು: ನಗುವವರಿಗೆ ನಾಲ್ಕು ನಾಲಿಗೆಯಾದ ಮೇಲಿನ್ನೇನಿನ್ನೇನು (ಪುರಂದ. ೨-೩೬-೨). **ನಾಲ್ಕುನೀರ್, ನಾಲ್ಕುನೀರು** = (ಮುಟ್ಟಾದ) ನಾಲ್ಕನೆಯ ದಿನ ಶುದ್ಧಿಗಾಗಿ ಎರೆದುಕೊಳ್ಳುವ ನೀರು; ಶುದ್ಧಿಜಲ: ಬೆಡಗಿನ ತುಂಬುಜವ್ವನೆ ನಾಲ್ಕು ನೀರನು ವಿಂದಳೊಲವಿಂದ (ಸಾಳ್ವಭಾ. ೩-೩೪); ಪುಷ್ಪವತಿಯಾಗಿ ನಾಲ್ಕುನೀರೆ ವಿಂದು ಒಪ್ಪದಿಂದಾಭರಣವಿಟ್ಟು (ಜಜ್ಜರಾ. ೫-೨). **ನಾಲ್ಕುನೀರ್ಮಿಂ** = (ಮುಟ್ಟಾದ) ನಾಲ್ಕನೆಯ ದಿನ ಶುದ್ಧಿಗಾಗಿ ಸ್ನಾನಮಾಡು: ಜನಕಸುತೆ ನಾಲ್ಕುನೀರ್ಮಿಂದು ನಾಡೆ ಬೆಳ್ವಸದನಂ ವಿರಾಜಿಸೆ . . . ಸಜ್ಜೆವನೆಗೆ ವಿಜಯಂಗೆಯ್ದುಳ್ (ಸಂರಾಮಾ. ೧೫೫-೬೨); ಚತುರ್ಥದಿವಸಸ್ನಾತಾ = ನಾಲ್ಕುನೀರ್ಮಿಂದ ಸ್ತ್ರೀ (ಸೀತಿಪಾ. ೨೩-೧೯); ಕೆಲವಾನುಂ ದಿವಸಕ್ಕೆ ರುಗ್ಮಿಣಿಮಹಾದೇವಿ ನಾಲ್ಕುನೀರ್ಮಿಂದು ಮಂಗಳವಸದನಂಗೊಂಡು (ಬಂಹರಿ. ೪-೩ ವ). **ನಾಲ್ಕು ಮಡಿ, ನಾಳು ಮಡಿ** = ನಾಲ್ಕುಪಟ್ಟು; ನಾಲ್ಮಡಿ: ಚಲುವಿಕೆಗೆ ಹಿಮವಂತಸುತೆಗಗ್ಗಳೆ ರಮಾದೇವಿಯ ಪುಣ್ಯಾಮಂಗಳತೆಗಿಮ್ಮಡಿ ನಾಲ್ಕು ಮಡಿ ಸೊಬಗಿಗೆ ಸರಸ್ವತಿಯ (ತೊರಕಾ. ೩-೭-೧೪೪); ನಳ ಭೂಪನೀ ನರಲೋಕದೊಳಗುತ್ತಮನಲಾ ತತ್ಪತ್ನಿ ಸಾರ್ವಜ್ಞೆಗೆ ನಾಳು ಮಡಿ ವಿಗಿಲೆಂಬ ನಾಣ್ಣುಡಿ ಕಾಳು ಬಳಸಿತೆ (ತೊರಕಾ. ೩-೨-೧೪೮). **ನಾಲ್ಕು ಮಾಡು** = ನಾಲ್ಕು ಹೋಳುಗಳನ್ನಾಗಿ ಮಾಡು; ನಾಲ್ಕು ಭಾಗ ಮಾಡು: ಈ ಕಬ್ಬಿನ ಜಲ್ಲೆಯನ್ನು ನಾಲ್ಕು ಮಾಡಿ ನಾಲ್ಕು ಜನಕ್ಕೂ ಕೊಡು (ರೂಢಿ). **ನಾಲ್ಕು ಮಾತು** = ಕೆಲವು ಮಾತು: ಸಮಾಧಾನಪರವಾದ ನಾಲ್ಕುಮಾತಿನ ವಿನಾ ಬೇರೆ ವಿನು ಮಾಡ ಬಲ್ಲಳು ? (ಗೀಚಂಗೆ. ೬೫). **ನಾಲ್ಕು ಯೋಗ** = ಆರ್ತ್ತಧ್ಯಾನ, ರೌದ್ರ ಧ್ಯಾನ, ಧರ್ಮಧ್ಯಾನ ಮತ್ತು ಶುಕ್ಲಧ್ಯಾನವೆಂಬ ನಾಲ್ಕು ಧ್ಯಾನಗಳು: ನಾಲ್ಕು ಯೋಗವ ಧರಿಸಿ . . . ಬೋಧಿಪ ನಾಲ್ಕು ಗಣಧಾಚಾರ್ಯರೆಡಿಗಳ ವಿಕಚತ್ವದಿ ನುತಿಸಿ ವಂದಿಪೆ (ನಾಗಚ. ೧-೨೮). **ನಾಲ್ಕು ವರ್ಣ** = ನಾಲ್ಕು ಜಾತಿ: ನಾಲ್ಕು ವರ್ಣಂಗಳೊಳು ಬ್ರಾಹ್ಮಣಂ ಕ್ಷತ್ರಿಯಂ ವೈಶ್ಯನೆಂಬೀ ಮೂಜು ವರ್ಣಂ ದ್ವಿಜಾತ್ಮಮಕ್ಕುಂ (ಪುಂಗರಾ. ೬೪-೧). **ನಾಲ್ಕುವೇದ** = ಋಕ್ಕು, ಯಜುಸ್ಸು, ಸಾಮ ಮತ್ತು ಅಥರ್ವಣ ಎಂಬ ನಾಲ್ಕು ವೇದಗಳು; ಚತುರ್ವೇದ: ಶ್ರುತಿಗಳೂ ನಾಲ್ಕುವೇದವೂ ಹುಸಿಯದೆ . . . ಕೂಡಲ ಸಂಗಮನಲ್ಲದಿಲ್ಲೆಂದುದು ವೇದ (ಬಸವ. ೫೩೦); ಮತ್ಸ್ಯಾವತಾರದಿ ನಾಲ್ಕು ವೇದವ ತಂದೊ ವೆಂಕಟೇಶ (ಪುರಂದ. ೨-೬೪-೧). **ನಾಲ್ಕು ಸಾಸಿರ, ನಾಳು ಸಾವಿರ** = ಒಂದು ಸಂಖ್ಯೆ; ನಾಲ್ಕು ಸಾವಿರ: ಪೊಲಲೊಳಾದ ಜನಪುಲಿಪುಮುಂ . . . ರೇವತೀಮಹಾದೇವಿವೆರಸು ನಾಲ್ಕು ಸಾಸಿರ ಮಕುಟಬದ್ಧರಿಂ ಪರಿವೃತನಾಗಿಯೊಡ್ಡೋಲಗಂ ಗೊಟ್ಟರ್ದ ವರುಣಮಹಾರಾಜಂ ಕೇಳ್ದು (ಧರ್ಮಾಸ್ಯ. ೫-೨೦೭); ಅಜುಸಾಸಿರ ಕಾಲಾಳು ಗಜಗಳೆಂಟು ವಾರುವ ನಾಲ್ಕು ಸಾಸಿರದ

ಮೇರೆಯ ಬಲವ ಖಾನನಿಗೆ ತೋಱಿಸಿದನು ಕೈರಿತಿಖಾನನೆಂಬವನು (ಕಂನವಿ. ೧೧-೮೪); ನಾಕುಸಾವಿರ ತೇಜಿ . . . ನೂಱಾನೆ ನೂಕಿತು ಕಾಟಣ್ಣನ ಮೇಲೆ (ಕುರಾಸಾಂ. ೧೩-೧೦). **ನಾಲ್ಕೆಂಟು = ಕೆಲವು; ಹಲವಾರು :** ನಾಲ್ಕೆಂಟು ದಿನಮಂ ಮನ್ನಿಸಿ ಗಜಪುರಮಂ ಪೊಕ್ಕು ವಿಳಾಸದಿನಿರ್ದು (ಧರ್ಮಾಮೃ. ೨-೨೦೬); ನಾಲ್ಕೆಂಟು ದಿನದೊಳು ಕಂತುಸನ್ನಿಭನ ನಾ ತಹೆನು (ಕಂನವಿ. ೯-೧೪೫). **ನಾಲ್ಕೆರಡು = ಕೆಲವು; ಹಲವಾರು :** ಬಸವರಾಜಂ . . . ಮುತ್ತಬ್ಬೆಯ ಪಕ್ಕದೊಳು ಶಿವ ಪ್ರಸಾದಸಂತುಷ್ಟಹೃದಯನಾಗಿ ನಾಲ್ಕೆರಡು ಪರುಷಂ ಸುಖದೊಳಿರೆ (ಬಸರ.೨-೧೦); ನೀಂ ನಾಲ್ಕೆರಡು ಪಗಲೊಳೆಮ್ಮೊಡೆಯನ ಕೈಯ ನನೆಯ ಕೋಲ ಕಾಲಾಟಮಂ ಕಾಣ್ಬರ್ (ಕಬ್ಬಿಕಾ. ೧೮೮). **ನಾಲ್ಕೊಂದು = ಐದು :** ಆ ಪ್ರಸಿದ್ಧಪ್ರಸಾದವೆಂಬ ಮಹಾವೃಕ್ಷ ತನ್ನ ಚಿಚ್ಛಕ್ತಿಯ ಲೀಲಾವಿನೋದದಿಂದ ಪಂಚಶಕ್ತಿಗಳೆಂಬ ನಾಲ್ಕೊಂದು [ಪಾತಾಂ. ನಾಲ್ವತೊಂದು] ಹೂವಾಯಿತು (ಘನಪ. ೫೪-೪೬); ನಾಲ್ಕೊಂದು ಕೋಶದಲ್ಲಿ ವಾಸವಾಗಿ ಇದ್ದು . . . ನಾಲ್ಕೊಂದು ಯಜ್ಞವ ತಿಳಿದು ಮಾಡಿ ನಿತ್ಯ ನಾಲ್ಕೊಂದು ಇಂದ್ರಿಯಂಗಳ ಬಂಧನವ ಮಾಡು (ವಿಸಾಸು. ೬-೩). **ನಾಲ್ಕೊಡ್ಡಿ = ಹದಿನಾರು :** ನಾನು ಇಲ್ಲಿ ಕೆಲಸ ಮಾಡುತ್ತಾ ಇರುವುದು ನೀವು ಕೊಡೋ ನಾಲ್ಕೊಡ್ಡಿ ಒಕ್ಕಾಳಿಗೆ ಎಂದು ತಿಳಿದಿರೇನು? (ಬೆಳುಮ.೯೭). **ನಾಲ್ಕೊಪ್ಪತ್ತು = ಕೆಲವು ಕಾಲ:** ಈ ಅಂಜಿಕೆಗೆ ಸ್ವಲ್ಪವೂ ಅಳುಕದ ಒಂದೇ ಒಂದು ಜೀವ ನಾಲ್ಕೊಪ್ಪತ್ತು ಬದುಕಿ ಹೋಯಿತು (ಹೊಸಕ್ಷಿ. ೧೯೭); ಇನ್ನೂ ನಾಲ್ಕೊಪ್ಪತ್ತು ಬದುಕಿದ್ರ ನಮಗ ತಿನ್ನಲಿಕ್ಕೆ ಅದೇ ಅನ್ರಿ (ತಿಡುಗು. ೩). **ನಾಲ್ಗ್, ನಾಲುವರು, ನಾಲ್ಬರ್, ನಾಲ್ವರು = ನಾಲ್ಕುಮಂದಿ,—ಜನ :** ಇಂದ ಕಾವನ್ನಾರ್ ಲ್ವರ್ಮ್ಮಲೆಪರುಂ (ಇಆ. VI, ೧೦೨-೧೪; 777 ?); ಪರದರ್ಗಾ ಪಾರ್ವರ್ಗಾಯ್ತರಸರ್ಗಾ ಕುಡಿಯರಪ್ಪ ನಾಲ್ವರ್ಗಾಗಳ್ ಸ್ಥಿರಗೋಪಾ ಧ್ಯಾಯಕ್ಷ್ಮಾಪರಿಪಾಲ್ಯಕ್ಷೇತ್ರಕ [illegible]ಗಳ್ ಕ್ರಿಯೆಗಳ್ (ಕವಿರಾ. ೧-೬೫); ಆ ಸಭಾಮಂಟಪದ [illegible] ಧರ್ಮರ [illegible] ತನ್ನ ನಾಲ್ವರ್ ತಮ್ಮಂದಿರೊಡನೆ ದೇವೇಂದ್ರಲೀಲೆಯಿಂದೋಲಗಂಗೊಟ್ಟರೆಯಿರೆ (ಪಂಪಭಾ. ೬-೫ ಪ); ಆ ಬಲದೇವಾಶ್ವತ್ಥಾಮರುಮಿರ್ದರವರಿರ್ವರು ಮಲ್ಲದೆ ಕೃಪ ಕೃತವರ್ಮರುಮಿರ್ದರಂತು ನಾಲ್ವರೊಳೊರ್ಬಂಗೆ ವೀರಪಟ್ಟಮಂ ಕಟ್ಟಿ (ಗದಾಯು. ೩-೫೯ ಪ); ಸರಿದರೀ ನಾಲುವರು ರಾಯನ ಮರಳಲೀಯದೆ ಮತ್ತೆ ಮಾರುತಿ ಹರಿಸಿದನು ನಿಜರಥವನು (ಕುಪ್ಯಾದ್ರೋ. ೨-೭೭); ನಾಲುವರು ನಂದನರಿಗವನೀಪಾಲ ತೇಜೋರಾಜಿ ಮಿಗೆ ಸಮ್ಮೇಳವಿಸಿದುದು ಮೆಱೆದುದವರಭ್ಯುದಯ ದಿನದಿನಕೆ (ತೊರರಾ. ೧-೮-೮೨); ಎನ್ನೊಲ್ದು ಬೇಟ್ಟುದಂ ನೆಟ್ಟನೀಗುಂ ನಾಲ್ಬರೆಣ್ಬರುಂ ನಾಗರೊಳ್ (ಕಾಪ್ಯಾವ. ೩೧); ಮಿಕ್ಕ ನಾಲ್ವರನ್ನು ಸಾಯ ಬಡಿದನು ಮುಂದೆ ಕೌರವರಾಯನನು ತಾಗಿದನು ಭೀಮನ ದಾಯ ಬಂದುದು ಸಕಲ ಕುರುತಳತಂತ್ರ ತಲ್ಲಣಿಸೆ (ಕುಪ್ಯಾದ್ರೋ. ೨-೮೨); ಚಳಗತಿಯ ವಾಜಿಗಳು ಕೊಂಡೊಯ್ದುಳುಹಿದವು ತಮಸೆಯಲಿ ನಾಲ್ವರು ಕಳಿದರಾ ತೀರದಲಿ ಜಲದಾಹಾರದಲಿ ತಮಿಯ (ತೊರರಾ. ೨-೪-೮); ಲಲನೆಯೊಲಿವುದಕಿದೆ ಉಪಾಯವು ಹಲವು ಮಾತೇನೆಂದು ನಾಲ್ವರು ನಳನ ರೂಪನು ತಾಳ್ದರಿತ್ತಲು ಧರಣಿವಲ್ಲಭರು ನಲಿದು ಬರುತಿರೆ (ನಳಚ. ೩-೪೯).

[ದೇ.॥ ತಮಿ. ನಾಲ್ಕು, ನಾನ್ಕು, ನಾಲ್, ನಾಲು; ಮಲ. ನಾಙ್ಕು, ನಾಲ್, ನಾಲು, ನಾನ್; ತುಳು. ನಾಲು; ಕೊಡ. ನಾಲೀ; ತೆಲು. ನಾಲುಗು, ನಾಲ್ಗು, ನಾಲುವು; ಗೊಂಡಿ. ನಾಲುಂಗ್; ಕುಇ. ನಾಲ್ಗಿ, ನಾಲ್]

ನಾಲ್ಕುವರೆ, ನಾಲ್ಕರೆ (ನಾ). ನಾಲ್ಕು ಮತ್ತು ಅರ್ಧ ಸೇರಿ ಆದ ಮೊತ್ತ : ರತ್ನಪ್ರಭೆಯಿಂ ತೊಟ್ಟು ನಾಲ್ಕುವರೆ ನರಕಭೂಮಿವರಂ ಉತ್ಕೃಷ್ಟಮುಷ್ಣಮುಂ (ಆಚಿಪು. ೧೧-೬ ಪ); ನಾಲ್ಕುವರೆ ನರಕದೊಳ್ ಬಗೆಯಲ್ಕರಮದ್ಭುತತರಂ ಮಹೋಷ್ಣಂ (ಪರ್ಧಮಾ. ೫-೨೫). **ನಾಲ್ಕರೆ :** ಕರಗಂಗುಮಾಗಳೆ ವಜ್ರಮುಮಿರದನಿಪುಷ್ಣಮಯಮಾಗಿ ನಾಲ್ಕರೆನೆಲನತ್ತೆರಡರೆಯಗ್ನಿಗಮ್ಯೆಕಿಲ್ದೊರೆಕೊಳ್ಗುಮೆನಿಪ್ಪ ಶೀತಮಯ ಮಾಗಿರ್ಕುಂ (ಚಂದ್ರಪು. ೧೬-೯). [ನಾಲ್ಕು + ಅರೆ$_3$]

ನಾಲ್ಕುವೆಟ್ಟು (ನಾ). ಖಡ್ಗಯುದ್ಧದಲ್ಲಿ ಒಂದು ಪ್ರಕಾರ : ಪೂರ್ವಪ್ರಕಾರದಿಂದ ಮೇಲುಗಡೆಯಲ್ಲಿ ಬಂಡಿಗೋಲ್ಗಳ ಘಾತವು ಪುರುಷರಿಂದ ನಾಲ್ಕುಬಾರಿ ಆವದಾನೊಂದು ಮಾಡಲು ತಕ್ಕಂಥಾದು ಅದು ನಾಲ್ಕುವೆಟ್ಟನ ಬದಿತಳವೆಂದು ನುಡಿಯಲ್ಪಡುವುದು (ಖಡ್ಗಟೀ. ೫-೪೦). [?]

ನಾಲ್ಕೂಟ (ನಾ). (ಪರಸ್ಪರ ಸಂಬಂಧವಿರುವ) ನಾಲ್ಕರ ಗುಂಪು,— ಸಮೂಹ : ಈ ಮುಕ್ಕೂಟನಾಟಕದೊಂದಿಗೇ ಸಂಬಂಧಿಸಿದ . . . ಅಣಕನಾಟಕವೂ (ಸ್ಯಾಟಿರ್ ನಾಟಕ) ಸೇರಿ ನಾಲ್ಕೂಟ ನಾಟಕವೂ ಆಗಿದೆ (ಬದ್ಧಪ್ರ. X, ಪೀಠಿಕೆ).

[ನಾಲ್(<ನಾಲ್ಕು) + ಕೂಟ$_1$]

ನಾಲ್ಕೌಷಧಿ (ನಾ). (ರೋಗ ತೀವ್ರವಾಗಿದ್ದಾಗ ನೀಡುವ) ನಾಲ್ಕು ಬಗೆಯ ಔಷಧಿದ್ರವ್ಯ; ℙ ಸಂಧ್ಯಾಕರಣಿ, ಶಲ್ಯಾಕರಣಿ, ಮೃತಸಂಜೀವಿ ಮತ್ತು ಸಂಜೀವಿ : ಗಿರಿಯ ಮೇಲಿರುತಿರ್ಪ ಅತ್ಯಾಶ್ಚರಿಯದೌಷಧಿ ನಾಲ್ಕು ಸಂಧ್ಯಾಕರಣಿ ಶಲ್ಯಾಕರಣಿ ಮೃತ ಸಂಜೀವಿ ಸಂಜೀವಿ . . . ಅದನಱಿದು ತಹುದೆನೆ ಮರುತಸುತ ನಾಲ್ಕೌಷಧಿಯಲಿನ್ನೇನು ಗುಣವೆಂದ (ತೊರರಾ. ಪರಿ. ೭೧೦-೪).

[ನಾಲ್ಕು + ಔಷಧಿ]

ನಾಲ್ಗಂಡಗ 'ನಾಲ್ಗಂಡುಗ' ನೋ.

ನಾಲ್ಗಂಡುಗ, ನಾಗಂಡುಗ, ನಾಘಂಡುಗ, ನಾಲ್ಗಂಡಗ (ನಾ). ಒಂದು ಅಳತೆ; ನಾಲ್ಕು ಕಂಡುಗ : ಸ್ವಸ್ತಿಶ್ರೀದಾಟಿಸಿನ್ದರ್ ಜಯ ಮೆಮ್ಬ ಸಂವತ್ಸರದ ಉತ್ತರಾಯಣಸಂಕ್ರಾನ್ತಿ ಅನ್ದು ನಾಲ್ಗಣ್ಡುಗದ ಬೆದೆ ಮಣ್ಣನ್ ಕೌಣ್ಡಿನ್ಯಗೋತ್ರದ ದೇವದತ್ತರ್ಗೆ ಇತ್ತಾರ್ (ಎಕ. XVI, ಪಾವುಗ. ೧೧-೨; 754); ನಾಲ್ಗಣ್ಡುಗ ಕೊಡಗಿ ಆಚನ್ದ್ರ ತಾರಂಬರಂ ಸಲ್ಗುಂ (ಎಕ. III, ನಂಜನ. ೧೯೨-೧೨; 968); ಇಪಗೊಣ್ಡನ ಒರೆಯ್ಗೆ ಮೆಚ್ಚಿ ಕಟ್ಟಿದ ಕೊಡಗೆ ಪಳ್ಳ ಗಟ್ಟಿ ನಾಲ್ಗಣ್ಡುಗ (ಎಕ.IV, ಹುಣಸೂ. ೧೧-೧೦; 1020 ?). **ನಾಗಂಡುಗ:** ಚಕ್ಕಗವುಡನ ಕೆಱೆಯ X X X ಗದ್ದೆ ಅದಕ್ಕೆ ಬೆದ್ದಲು ನಾಗಣ್ಡುಗ ಶಿವಾಲ್ಯಕ್ಕೆ ಗದ್ದೆ ಬೆದ್ದಲುಮಂ . . . ಚಾವುಡಗವುಡ ಬಿಟ್ಟ ದಾನ (ಎಕ. XVI, ತಿಪಟೂ. ೧೫೭-೨೬; ?); ಇಬ್ಬರಿಗೂ ಎರಡು ಖಂಡುಗ ಎಳ್ಳು ನಾಗಂಡುಗ ಜೋಳ ಆಗೇ ಆಯ್ತು (ಹುಟ್ಟಿಹ. ೧೬೮). **ನಾಘಂಡುಗ:** ಬಡಮೂಡಲ ತಾಕಿನಡು ನಾಘಣ್ಡುಗ (ಎಕ. XIV, ಗುಂಡ್ಲುಪೇ. ೧೨೮-೮೨; 1510). **ನಾಲ್ಗಂಡಗ :** ಮಹೀದೇವಭಟಾರರ ಗುಡ್ಡಂ ನಿರವದ್ಯಯ್ಯಂ . . . ಉಜ್ಜೆನಿಯೊಳ ನಾಲ್ಗಂಡಗ ಭತ್ತಮ ನಿತ್ತರ್ (ಎಕ. VI, ಚಿಕ್ಕಮ. ೭೫-೧೦; 1060 ?).

[ನಾಲ್(<ನಾಲ್ಕು) + ಕಂಡುಗ(<ಖಂಡುಗ)]

ನಾಲ್ಗರ$_1$ (ನಾ). ಪಗಡೆಹಾಸಿನ ಚತುರ್ಬಾಹುಗಳಲ್ಲಿರುವ ಮನೆಗಳ ಸಾಲು: ತತ್ಪುರ ದಿನ ಶಶಿವೀಧಿಗಳುನ್ನತಿಕೆಯೊಳೊಪ್ಪುವಡೆದ ಪಗಡೆಯ ನಾಲ್ಗರದಂತೊಪ್ಪಿದುವು (ಜಯಕಾ. ೧-೫೫).

[ನಾಲ್(<ನಾಲ್ಕು) + ಗರ$_3$]

ನಾಲ್ಗರ$_2$ (ನಾ). ನಾಲ್ಕು ಕೈ : ಪಾಲ್ಗಡಲ ತೆರೆಯ ಬೊಂಬಲ್ಗಳಂ ಜೇಂಗೊಡನ ಸಾಲ್ಗಳಂ ಮಿಱುಗುವಿಂಗೋಲ್ಗಳಗ್ಗಳವಾದ ಮೇಲ್ಗಳಂ ಪರಕಲಿಪ ಕೀಲ್ಗಳಂ ತಿಳಿದವರ ನಾಲ್ಗರದರಸುವೆನಿಸುವ ಓಲ್ಗಾಡಿವೆತ್ತ . . . ನೀವೆಮ್ಮ ಪಾಲ್ಗಕ್ಕಱಂ ಬಹುದು ಕಾಲ್ಗಣ್ಣ ಶಾಂತಮಲ್ಲ (ವಿಶ್ವೈಪು. ೩-೧-೧). [ನಾಲ್(<ನಾಲ್ಕು)+ಕರ$_3$]

ನಾಲ್ಗುಳ, ನಾಗುಳ (ನಾ). = ನಾಲ್ಗೊಳ : ತರುಗುಲ್ಮಾಂಘ್ರಿಪವಲ್ಲಿಗಳ್ಗೆ ಜವೆಯೋರೊಂದೊಬ್ಬಳಂ ನಾಲ್ಗುಳಂ ಕರಿಯೆಳ್ಳಿಬ್ಬಳ ಮೇಷವಾದಮಲಮೋರೊಂದೊಕ್ಕುಳಂ . . . ಬಿತ್ತರದಿಂದಿಕ್ಕುಗೆ ಸಾರ್ವಕಾಲಫಲಮಕ್ಕುಂ (ಲೋಕೋಪ. ೬-೬೦). **ನಾಗುಳ** : ಇನಿತಱ ಬೇರಂ ನಾಗುಳಮೆನೆ ನೀರುಮನೆಟೆದುಕೊಂಡು ಮತ್ತೊಕ್ಕುಳ ಮಪ್ಪನಿತಾಗೆ ತೆಗಪಿ (ಅಶ್ವಶಾ. ೧೧-೬೧); ದೇವರಿಂದ ನಾಗುಳ ಬ್ರಾಹ್ಮರಿಂದ ನಾಗುಳ ಉಭಯಂ ಯೆಂಟುಕೊಳಗ ಗದ್ದೆಯನೂ . . . ಬಾಯಣಾಚಾರ್ಯ್ಯರಿಗೆ ಧಾರಾಪೂರ್ವ್ವಕವಾಗಿ ಕೊಟ್ಟ ಮಣುವಿನ ಎಣ್ಟುಕೊಳಗದ ಗದ್ದೆ (ಎಕ. XI, ಪಾವಣ. ೨೩-೭೯; 1410); ಕೊಡಸಿಗನ ತೊಕ್ಕು ನೂಱು ಹಲವ ನಾಗುಳ ನೀರಲ್ಲಿ ಕಷಾಯವೆತ್ತಿ (ವೈದ್ಯಸಾ. I, ೨೧೫). [ನಾಲ್(<ನಾಲ್ಕು)+ಕುಳ$_3$]

ನಾಲ್ಗೆಲ (ನಾ). ನಾಲ್ಕು ಕಡೆ,— ಪಕ್ಕ ; ಸುತ್ತುಮುತ್ತು : ಸುಂಡಿಲಿನೆತ್ತಿ ಸುತ್ತ ನಾಲ್ಗೆಲದೊಳಡರ್ತು ಪಾಯ್ದು . . . ಅದೊಂದು ಪಲ್ಲಮಱ ಲಲ್ಲೆಯ ಚಲ್ಲಮನೇನೊಡರ್ಚಿತೋ (ಧರ್ಮನಾ. ೩-೧೧೪). [ನಾಲ್(<ನಾಲ್ಕು)+ಕೆಲ$_1$]

ನಾಲ್ಗೊಂಟು (ನಾ). ನಾಲ್ಕು ದಿಕ್ಕು : ನಾಲ್ಗೊಂಟುಗಳ ಪೆಣ್ಗಳಾಣ್ಗಳಿಂ ಹೂನೋಟಮಿನ್ನುಲಿಯ ತುಂಬಿಯಿರೆ ಚಪ್ಪರವೆ ತೋಟಂ (ಕಾಲೂರ. ೩೮-೪೪). [ನಾಲ್(<ನಾಲ್ಕು)+ಗೊಂಟು]

ನಾಲ್ಗೊಳ, ನಾಗಳ, ನಾಗೊಳ (ನಾ). ಒಂದು ಅಳತೆ ; ನಾಲ್ಕು ಕೊಳಗ : ಎಳನೊಮ್ಮೆದಿವ್ಯಯ ಮಗನಯ್ಯಪಣಮ್ಮೆಯನ ಕೊಟ್ಟ ಮಣ್ಣು ಬಸದಿಗೆ ಪಡುವಣ ತೆಜ್ಜತೋಣ್ಟಮುಂ ತೆಮ್ಮೊಲದೊಳ್ನಾಲ್ಗೊಳವೆಡೆ ಪಳ್ಳ ಕಟಿನಿ (ಎಕ. X, ಕೋಲಾರ. ೯೦-೯೩; 903). **ನಾಗಳ** : ಬೆಣೆಗೆರಿಯಸ್ತವರದ ಸೋಮಣೊಡೆಯರಿಗೆ ನಾಗಳದ ಗದ್ದೆ ಬದುಹತಿಯ ಹಕಲು (ಎಕ. VIII, ಸೊರಬ. ೩೪೯-೭; ?); ಹಿರಿ ಮದ್ದು, ಕಳ್ಳಂಗಡಲೇಬೇರು, ಅರಗು ಇವು ಪ್ರತ್ಯೇಕ ೧೬ ಹಲವನ್ನು ನಾಗಳ ನೀರಿನಲ್ಲಿ ಕಷಾಯವ ಕಾಯಿಸಿ . . . ಪಾಕವ ಮಾಡುವಾಗ ಹಾಕುವ ಕಲ್ಕದ್ರವ್ಯ (ಸಕವೈ. ೧೨೬); ಗಂಡಿನವರೇ ಹೆಣ್ಣಿನವರಿಗೆ ಅವರು ಬಡವರಾಗಿದ್ದಲ್ಲಿ ಐಗಳ ಭತ್ತ, ನಾಗಳ ರಾಗಿ, ಒಕ್ಕಳ ಕಾಳು ಕೊಡುತ್ತಿದ್ದುದುಂಟು (ಸನ್ನೂರು. ೭೨); ಉಪ್ಪಿಲ್ಲದೆ ಮೂಗಳ ಗಂಜಿ ಕುಡಿಯುವವನಿಗೆ, ಉಪ್ಪಿದ್ದರೆ ನಾಗಳವೂ ಸಾಲದು (ಗಾದೆ). **ನಾಗೊಳ** : ನಾಉ ಪ್ರಿಯವಾಗಿ ನಮ್ಮ ಕೊಡಿಗೆ ಹೊಲದಲು ಪೊಳಗೆ ನಾಗೊಳ ಕೊಟ್ಟೆಉ (ಎಕ. X, ಕೋಲಾರ. ೧೫೦-೧೬; 1393).

[ನಾಲ್(<ನಾಲ್ಕು)+ಕೊಳ$_1$]

ನಾಲ್ಭಾಸಿರ, ನಾಲುಸಾಸಿರ, ನಾಲ್ಸಾವಿರ, ನಾಲ್ಸಾಸಿರ, ನಾಸಾವಿರ (ನಾ). ಒಂದು ಸಂಖ್ಯೆ ; ನಾಲ್ಕುಸಾವಿರ : ಸುಶರ್ಮನುಮಂ ನಾಲ್ಭಾಸಿರ ರಥಂಬೆರಸು ದಕ್ಷಿಣದಿಶಾಭಾಗಕ್ಕೆ ವೇಟ್ಟು ತುಱುವಂ ಕೊಳಿಸಿದಾಗಳ್ (ಪಂಪಭಾ. ೮-೮೯ ಪ); ಪರಮಪ್ರಮಾಣಮಱುಸಾಸಿರಂಬರಂ ಮತ್ತೆ ಮಧ್ಯಮಸ್ಥಿತಿ ನಾಲ್ಭಾಸಿರಮಧಮಮಾತ್ರಮಿರ್ಭಾಸಿರಂ ಶರಾಸನಮದು ಕ್ರಮಕ್ರಮದಿಂದಂ (ಶಾಂತಿಪು. ೬-೧೦೩); ಪಾರ್ಶ್ವದೇವರ ಬಸದಿಗೆ ಕರಹಡ ನಾಲ್ಭಾಸಿರದೊಳಗಣ ಕಟಿಂಬಡಿ ೩೦೦ ರ ಬಟಾಯ ಕನ್ನಡಿಗೆಯ ಸಂಖರಸನ ಮಗಂ (ಇಅ. XIX, ೨೭೩-೪೪; 1054). **ನಾಲುಸಾಸಿರ** : ಕೌಂಗಿನ ಮರಂ ನಾಲುಸಾಸಿರಂ (ಎಕ. VI, ಕಡೂರು. ೫೧-೫೯; 1169). **ನಾಲ್ಸಾವಿರ** : ಅಳ ಕೊಂದನು ಕಲ್ಕವನು ತುರಗಾಳಿಯನು ನಾಲ್ಸಾವಿರವ ಶುಂಡಾಲಘಟೆಗಳ ತುಂಡಿಸಿದ ನೊಂದೆರಡುಸಾವಿರವ (ಕುಪ್ಕಾಕ. ೧೧-೧೬). **ನಾಲ್ಸಾಸಿರ** : ನಾಲ್ಸಾಸಿರದ ಮೂನೂಱರ್ಪತ್ತು ಮಹಾಧ್ವಜಂಗಳಿಂದಂ . . . ಎಸೆವ ಪತಾಕಾವನಿ ತಳಮೊಂದುಯೋಜನಮಗಲಂ (ಅದಿಪು. ೧೦-೩೩ ಪ); ನಾಲ್ಸಾಸಿರದ ಮೂನೂಱರ್ಪತ್ತು ಮಹಾಧ್ವಜಂಗಳಿಂ (ಅಜಿಪು. ೭-೨೦ ಪ); ಸುಮಿತ್ರನಂತೆಗೆಯ್ವೆನೆಂದು ನಾಲ್ವರ್ ಸಾಹಸಭಟರಪ್ಪ ಸುಭಟರ್ಗೆ ನಾಲ್ಸಾಸಿರ ಪೊನ್ನಂ ನುಡಿದು . . . ಮನೆಗೆ ಪೋಪುದುಂ (ಸುಕುಮಾ. ೭-೮ ಪ); ತನು ನಾಲ್ಸಾಸಿರವಿಲ್ಲಿಡಿದೆನಿಕ್ಕುಂ (ಪಂರಾಮಾ. ೧-೬೭). **ನಾಸಾವಿರ** : ಗುರುಗಳಿದಿರಲಿ ವೀರವೇ ಸಾಕಿರಲಿ ಮೂದಲೆಯೆನುತಲಾ ಬಿಲುದಿರುವ ಮಿಡಿದೈದಿದರು ನಾಸಾವಿರ ಮಹಾರಥರು (ಕುಪ್ಕಾಪ್ರೋ. ೧-೬೬).

ನಾಲ್ಭಾಸಿರ್ವರ್, ನಾಲ್ಸಾಸಿರ್ವರ್ = ನಾಲ್ಕು ಸಾವಿರ ಜನ : ನಾಲ್ಭಾಸಿರ್ವರ್ ಮನೋನಯನವಲ್ಲಭೆಯರೊಳಂ . . . ಭೋಗಿಸಿದಂ ಲಲಿತಾಂಗವಲ್ಲಭಂ (ಅದಿಪು. ೨-೬೯ ಪ); ಆ ಸಾಹಸಭೂಷಣೆ ನಾಲ್ಸಾಸಿರ್ವರ್ ಕುಡದ ಕೂಸುಗಳ್ವೆರಸು . . . ಅಮಳದೀಕ್ಷೆಯಂ ಕೆಯ್ಗೊಂಡಳ್ (ಶಾಂತಿಪು. ೪-೮೪).

[ನಾಲ್(<ನಾಲ್ಕು)+ಸಾಸಿರ]

ನಾಲ್ದಿಂಗಳ್ (ನಾ). ನಾಲ್ಕು ತಿಂಗಳು : ನಾಲ್ದಿಂಗಳೊಳ್ ಜೀರ್ಣಪರ್ಣದ ಸಂಸೇವನೆ ಮಾಸಪಂಚಕದೊಳಾಯ್ತಾತಂಗೆ ವಾತಾಶನಂ (ಶಬಶಂ. ೨-೯೯). [ನಾಲ್(<ನಾಲ್ಕು)+ತಿಂಗಳ್]

ನಾಲ್ದಿನ (ನಾ). ನಾಲ್ಕುದಿವಸ : ಮಾವಂ . . . ನಾಲ್ದಿನದ ಕೆಲಸಮೊಂದೇ ದಿನದೊಳಾಗುವಂತೆಸಗುತಿರ್ದಂ (ಮಲ್ಲಡ. ೧೭-೧೮). 'ನಾಲ್ದಿನಗಾಣ್' ಪರಾ. [ನಾಲ್(<ನಾಲ್ಕು)+ದಿನ]

ನಾಲ್ದಿನಗಾಣ್ (ಕ್ರಿ). ೧. ನಾಲ್ಕು ದಿನಗಳನ್ನು ನೋಡು. ೨. (ಮುಟ್ಟಾದ ಹೆಂಗಸು) ಮೈಲಿಗೆಯ ಮೂರು ರಾತ್ರಿಗಳನ್ನು ಕಳೆದು ನಾಲ್ಕನೆಯ ದಿನವನ್ನು ನೋಡು,—ಮುಟ್ಟು : ಅತ್ತ ಭೀಷ್ಮಕರಾಯನಾತ್ಮಸಂಜಾತೆ ನಖಬಣ್ಣವ ಕಂಡು ನಾಲ್ದಿನಗಂಡು ವೈದಿಕದಲ್ಲಿ ಮಿಂದಳುತ್ಸವದಿ (ಮೋಹತ. ೪-೨೭).

[ನಾಲ್ದಿನ+ಕಾಣ್]

ನಾಲ್ದೆಸೆ (ನಾ). ನಾಲ್ಕು ದಿಕ್ಕು ; ಸುತ್ತಮುತ್ತ ; ಎಲ್ಲ ಕಡೆ : ನೀರ್ವಾಣಮಂ ನೋಡಿ ಮೆಲ್ಲನೆ ಸಾರ್ದಲ್ಲಿ ಬಟಿಲ್ಕೆಯಂ ಕಳೆದು ಪೋಪೆಂ ಬಟಾಕ್ಕೆಂದು ವಾರಿನಿವಾಸಂಗಳನಲ್ಲಿ ನಾಲ್ದೆಸೆಗಳೊಳ್ ನೋಟ್ಕುಂ ಮಹೀವಲ್ಲಭಂ (ಕಾದಂಪೂ. ೬೨೯); ಕರ್ಕಟಕನುಪಾಯನಿಪುಣಂ ನಾಲ್ದೆಸೆಯುಮಂ ನೋಡಿ ನದನದೀತಟಾಕಸರೋವರಂಗಳನೊಂದುಮಂ ಕಾಣದೆ (ಪಂಚತಂ. ೮೫-೪); ಮಾರ್ಬಲಂ . . . ತವತವಗೆ ನಾಲ್ದೆಸೆಯೊಳಾರ್ದು ಮಸಗುತ್ತಿರಲು (ಇಹರ. ದೇ. ೪೧-೧೦); ತೆರಳಿದುದು ಕಪಿಸೇನೆ ಸಾಗರ ಹೊರಳಿದೆಗೆವಂದದಲಿ ನಾಲ್ದೆಸೆಗೆ (ತೊರರಾ. ೪-೮-೨೦); ನಾಲ್ದೆಸೆಯಲಿ ಬಲುಪೌಜ ದಾಯ ವಱುತು ಮಾಡಿದರು (ಕಂಸವಿ. ೧೩-೨೦); ಬಳಸಿ ನಾಲ್ದೆಸೆಯಲ್ಲು ಜಲರಾಶಿ ಹಬ್ಬಿಹುದು (ವಿಸೀಗೀ. ೧೯-೭).

[ನಾಲ್(<ನಾಲ್ಕು)+ದೆಸೆ$_2$]

ನಾಲ್ದೆಱ, ನಾಲುತೆಱ (ನಾ). ೧. ನಾಲ್ಕು ರೀತಿ,— ಬಗೆ : ಅಂಗಜನಿಲಯವಿದಂಗನೆ ನಾಲ್ದೆಱನು (ಜನವ. ೮-೨೫). **ನಾಲುತೆಱ** : ೨. ನಾಲ್ಕು ದಿಕ್ಕು : ಕಾಯ್ದುರಿಯೊಳು ಕರ್ಬುನದ ಮೇಲ್ಗಂಬದಿ

ಸಾಧನೆಗೆಯ್ದು ಪುಲ್ಸರದಿ ಐದಿದ ದಾರಿ ತಾ ನಾಲುತೆಱದೆ ತಾನಾದುದು ಬಂದ ದೈತ್ಯರಿಗೆ (ಮೋಹತ. ೧೨-೩೯).

[ನಾಲ್(<ನಾಲ್ಕು)+ತೆಱ$_1$]

ನಾಲ್ದೋಳ್ (ನಾ). ನಾಲ್ಕು ತೋಳು : ನಾಲ್ದೋಳ್ಗಳಿನಾಱು ಕೋಟಿ ಭಟರಿಂದೊಪ್ಪಿರ್ದು . . . . ಕಣ್ಗಂಬಾದನುನ್ಮತ್ತಭೈರವ ನುದ್ಯದ್ವರುಣಾಶೆಯೊಳ್ ಪುರದ ಬಾಗಿಲ್ವಾಡದೊಳ್ ಶೂಲಿಯಾ (ಶಬಶಂ. ೧-೬೧) ; ನಾರಾಯಣನ ನಾಲ್ಕುಂ ತೋಳ್ಗೆ ಪಡಿವರ್ಪ ನಾಲ್ದೋಳಿಂ (ರಾಮಾಶ್ವ. ೭೫-೨೪).

[ನಾಲ್(<ನಾಲ್ಕು)+ತೋಳ್]

ನಾಲ್ದೋಳ (ನಾ). ನಾಲ್ಕು ತೋಳುಗಳನ್ನುಳ್ಳವನು ; ವಿಷ್ಣು ; ನಾರಾಯಣ : "ರಕ್ಕಸವಗೆಯನೆಯ್ದೆ . ನಾಲ್ದೋಳನೆನೆಯಲ ರ್ಪೊಕ್ಕುಟಂ ನಾಡೆ ತಾವರೆಗಣ್ಣ ನೆಲರುಣಿಯಪಕ್ಕೆಗನೆನಲ್ಕುಪೇಂದ್ರಾಖ್ಯ" (ಶಬ್ದಮಂ. ೬) ; "ನಾಲ್ದೋಳನೆನೆ ಹರಿಯಕ್ಕು" (ಕಶರ. ೫೪) ; ನಿನ್ನ ಪದಕೆಳಸಿ ಕಣ್ಣಟ್ಟ ಗಡ ನಾಲ್ದೋಳಂ (ಉದ್ಭದೇ. ೨-೨) ; ನಾಲ್ಕು ತೋಳ್ಗಳ್ ಅವಂಗೆ ಆತಂ, ನಾಲ್ದೋಳಂ (ಶಬ್ದಾನು. ೩೧೦ ಪ್ರಯೋ).

[ನಾಲ್ದೋಳ್+-ಅ$_7$]

ನಾಲ್ನೀರ್ (ನಾ). (ಮುಟ್ಟಾದ) ನಾಲ್ಕನೆಯ ದಿನ ಶುದ್ಧಿಗಾಗಿ ಹಾಕಿಕೊಳ್ಳುವ ನೀರು: ಮರುದೇವಿಮಹಾದೇವಿ ಋತುಮತಿಯಾಗಿ ನಾಲ್ನೀರಂ ಮಿಂದು ಪತಿಯ ಸೂಳ್ಗೆಯ್ದು ಸುಖನಿದ್ರಾಮುದ್ರಿತಾಂಕಿತ ದೊಳ್ ಬೆಳಗಪ್ಪ ಜಾವದೊಳ್ . . . ಶುಭಸ್ವಪ್ನಂಗಳಂ ಕಂಡೆಚ್ಚತ್ತು (ಪೂರ್ವಪು. ೪೧-೧೫). [ನಾಲ್(<ನಾಲ್ಕು)+ನೀರ್]

ನಾಲ್ನೀರ್ತಳೆ (ಕ್ರಿ). (ಮುಟ್ಟಾದ) ನಾಲ್ಕನೆಯ ದಿನ ಶುದ್ಧಿಗಾಗಿ ಎರೆದುಕೊಳ್ಳು : ಅಲ್ಲಿ ರೇಣುಕೆ . . . ಪುಷ್ಪಿಣಿಯಾಗಲ್ಲಿ ನಾಲ್ನೀರ್ತಳೆದ ದಿನದಿರುಳಲ್ಲಿ ರವಿಶಶಿಗಂಡ ಸ್ವಪ್ನವ ನಲ್ಲಗುಲಿದಳು (ಪರಶು. ೪-೪೮). [ನಾಲ್ನೀರ್+ತಳೆ$_1$]

ನಾಲ್ನೀರ್ಮಿಾ (ಕ್ರಿ). = ನಾಲ್ನೀರ್ತಳೆ : ಬಳಿಕ ನಾಲ್ನೀರ್ಮಿಂದಾ ಸಮಯದೊಳಾ ಲಲಿತಾಂಗಿಯೊಪ್ಪಿದಳು (ಚಂಪ್ರಸಾಂ. ೪-೩೦).

[ನಾಲ್ನೀರ್+ಮಿಾ$_1$]

ನಾಲ್ನೂಱು, ನನೂರು, ನನ್ನೂಱು, ನಾನೂರು, ನಾನೂಱು (ನಾ). ನೂರರ ನಾಲ್ಕರಷ್ಟು ; ನಾಲ್ಕುನೂರು : ಕರ್ಬೊನ್ನ ರಥಮುಮಾ ರಥದೊಳೊಡಂಬಡೆ ಪೂಡಿದ ನಾಲ್ನೂಱು ಗೊಂಕಱು ಗಟ್ತಿಯುಂ (ಪಂಪಭಾ. ೧೨-೬ ಪ). **ನನೂರು** : ಇಡೆಯ ಗಟದೊಳಗೆ ಚಡಿಬಾಚಿಯ ಪಡುವಲು ನನೂರು ಕಂಬ ತೋಟ (ಸೌಇಇ. IX-1, ೨೯೧-೩೧ ; 11ನೆಯ ಶತ ?). **ನನ್ನೂಱು** : ಈ ಭೂಮಿ ಪದಿನಱು ಗೇಣ್ಕೋಲೊಳ್ಸಾಯಿರದ ನನ್ನೂಱು ನಾಲ್ವತ್ತು ಕಮ್ಮಂ (ಎಕ. IX, ನೆಲಮಂ. ೧-೧೪ ; 1029). **ನಾನೂರು** : ಈಗಿನ ಕಾಲದಲ್ಲಿ ನಾನೂರು ರೂಪಾಯಿ ಸಂಬಳ ಬಂದರೂ ಸಂಸಾರಕ್ಕೆ ಎಲ್ಲಿ ಸಾಕಾಗುತ್ತದೆ ? (ರೂಢಿ). **ನಾನೂಱು** : ಧಾರುಣೇಶರು ಮಡಿದರೊಂದೇ ಸಾರಿಗೆಯಲ್ಪೆನೂಱು ಮತ್ತೆ ಮಹಾರಥರು ಮೂನೂಱು ಪುನರಪಿ ನೂಱು ನಾನೂಱು (ಕುನ್ಯಾದ್ರೋ. ೧೮-೫೧) ; ಮೌಳಿಮಣಿಯಲಿ ಹೊಳೆಹೊಳೆವ ನರಪಾಲರನು ನಾನೂಱರೋಲೆಯ ಸೀಳಿದನಲ್ಪೆ ಚೈದ್ಯ ಪಾಂಚಾಲರಲಿ ಕಲಿಕರ್ಣ (ಕುನ್ಯಾಕ. ೧೧-೧೬).

ನಾಲ್ನೂರ್ವರ್, ನಾನೂರ್ವರ್ = ನಾಲ್ಕು ನೂರು ಮಂದಿ : ಪನ್ನಿರ್ಚ್ಚಾಸಿರದ ನಾಲ್ನೂರ್ವರ್ ಪಾದಿಗಳುಂ ಪ್ರಾಕ್ಕುಬ್ಜಾರ್ಯಕೆಯರ್ . . . ಮೂಱುಲಕ್ಕೆಯುಮಿರ್ಪತ್ತು ಸಾಸಿರ್ವರಜ್ಜಿಕೆಯರುಂ (ಅಜಿಪು. ೮-೨೫ ಪ) ; ಪೇರೂರ ಮಹಾಜನಂ ಒಱಿಲ್ದು ನಾಲ್ನೂರ್ವ್ವರು ಮುರ್ವ್ವೀರಮಣರಖಿಳಗುಣಗಣಸಾರರ್ಪ್ಪಾಲಿಸುಗೆ (ಇಅ. XVIII, ೨೬೪-೩೮; ಸು.1022); ಇರ್ಪತ್ತು ಸಾಸಿರದ ನಾನೂರ್ವರ್ ವಿಕ್ರಿಯಾರ್ಧಿ ಸಂಪನ್ನರುಂ (ಅಜಿಪು. ೮-೨೫ ಪ).

[ನಾಲ್(<ನಾಲ್ಕು)+ನೂಱು$_2$]

ನಾಲ್ಪಗಲು 'ನಾಲ್ವಗಲ್' ನೋ.

ನಾಲ್ಪಗೆ 'ನಾಲ್ವಗೆ' ನೋ.

ನಾಲ್ಪಟ್ಟೆ 'ನಾಲ್ವಟ್ಟೆ' ನೋ.

ನಾಲ್ಭುಜ (ನಾ). ೧. ನಾಲ್ಕು ಭುಜ,—ತೋಳು. ೨. ನಾಲ್ಕು ಭುಜಗಳನ್ನುಳ್ಳವನು ; ವಿಷ್ಣು : ನಾಲ್ಭುಜನೀತಂ (ಶಬ್ದಾನು. ೨೯೪ ಪ್ರಯೋ). [ನಾಲ್(<ನಾಲ್ಕು)+ಭುಜ]

ನಾಲ್ಮಡಿ 'ನಾಲ್ವಡಿ' ನೋ.

ನಾಲ್ಮಡಿಸು 'ನಾಲ್ವಡಿಸು' ನೋ.

ನಾಲ್ಮೆ (ನಾ). ನಾಲ್ಕುಸಲ ; ನಾಲ್ಕುಬಾರಿ ; ನಾಲ್ಕಾವರ್ತಿ : ಒರ್ಮೆ, ಇರ್ಮೆ, ಮೂಮೆ, ನಾಲ್ಮೆ, ನೂರ್ಮೆ, ಸಾಸಿರ್ಮೆ (ಭಾಷಾಭೂ. ೧೭೬ ಉದಾ) ; ನಾಲ್ಮೆ, ನಾಲ್ವರ್, ಅಯ್ಮೆ, ಅಯ್ವರ್ (ಶಬ್ದಾನು. ೩೫೧ ಪ್ರಯೋ) ; ದಶರಥಂ ತಾನೆಯ್ದಿದನು ಮಿಥಿಳೆಯಂ ನಾಲ್ಮೆ ದಿನಮಣಿ ಮುಳುಗುವನಿತರಲಿ (ತ್ರೀರಾಮಾ. ೫೦-೬೨೧).

[ನಾಲ್(<ನಾಲ್ಕು)+-ಮೆ$_2$]

ನಾಲ್ಮೊಗ (ನಾ). ೧. ನಾಲ್ಕು ಮುಖ : ನಾಲ್ಮೊಗಮಿರದಚ್ಚ ದಾವರೆಯ ಚೆಂದಮನಂದೊಳಕೆಯ್ಯೆ . . . ಕಣ್ಗೆಸೆದಂ ಬಿದಿ ನಿಂದು ನೋಟ್ಪರಾ (ಕಬ್ಬಿಕಾ. ೧೬೪) ; ತಳೆವುದೆಂಟಾನನದ ರುದ್ರಾಕ್ಷೆಯಂ ಕಂಠದೊಳಗೆ ಮೂವತ್ತೆರಡ ನಾಲ್ಮೊಗದವೈವತ್ತ ತಳೆವುದು (ಸೌಂದಪು. ೬-೩೩). ೨. ನಾಲ್ಕುಕಡೆ,—ದಿಕ್ಕು : ಉರವಣಿಸಿತು ದಳಪತಿಯ ನೇದುದೆ ಬಲ ಪುರದ ನಾಲ್ಮೊಗದೊಳುಬ್ಬಿಱದು (ಕಂನವಿ. ೧೮-೧೫೨). ೩. ನಾಲ್ಕು ಕಡೆಯ ಲಕ್ಷ್ಯ : ವರಸತಿಯರ ಕೂಡೆ ನುಡಿದಾಡ ಬೇಕೊಮ್ಮೆ ಸರಸತಿಯೊಳು ನುಡಿಬೇಕು ಪರಸತಿಯೊಳು ಮೌನ ಮುಕ್ತಿಸತಿಧ್ಯಾನವಿರಬೇಕು ನಾಲ್ಮೊಗ [ಪಾಠಾಂ. ಮೌನವು] ಬೇಕು (ಭರಡ. ೫-೬೯). ೪. ನಾಲ್ಕು ಮುಖಗಳನ್ನುಳ್ಳವನು ; ಬ್ರಹ್ಮ : "ಅಂಚೆದೇರಂ, ನುಡಿವೆಣ್ಣನಿಯಂ . . . ನಾಲ್ಮೊಗಂ, ತಾವರೆ ವಸೆಯಂ—ಈ ಲ ಬ್ರಹ್ಮಂಗೆ ಪೆಸರ್" (ಕಶಸಾ. ೨-೧೫) ; "ಅರಲಿಚ ನಾಲ್ಮೊಗ ನುಡಿವೆಣ್ಣೆಱೆಯಂ . . . ಬೇದಬಿಜ್ಜೆಗನುಮೆನೆ ಧಾತ್ರಂ" (ಕವಿಕಂ. ೨೯); ಜನ್ನಕ್ಕೆ ಕರ್ತನಮರೇಂದ್ರ ವೇದಕ್ಕೆ ಕರ್ತಂ ನಾಲ್ಮೊಗಂ (ಸೌಂದಪು. ೬-೫); ಈಗಳೇತಕೆ ತಪವೆಂದು ನಾಲ್ಮೊಗ ಮನೋರಾಗದೆ ಪೇಳ್ದನಚ್ಯುತಗೆ (ಮೋಹತ. ೫-೧೭) ; ಸಲೆ ನಾಲ್ಮೊಗನಾಗಳ್ ಮತ್ತಮಿಂತು ನುತಿಸಿದನೊಳ್ಪಿಂ (ವಿಷ್ಣುಪು. ೨-೧೪೮) ; ನಾಲ್ಮೊಗ ನಗ್ಗಿಟ್ಟಿಕೆಯೊಳೊಗೆದ ಒಳ್ನಗೆಯ ಮುದ್ದುಗುವರಿ ! ಸುವ್ವಿ ! ಸುವ್ವಿ ! (ರಾಮಾಶ್ವ. ೮೮-೫).

ನಾಲ್ಮೊಗದ = ನಾಲ್ಕುಮುಖಗಳನ್ನುಳ್ಳವನು : ನಾಲ್ಕು ಮುಖದ ವ್ಯಕ್ತಿ : ತೊಲಗತ್ತ ಸಾರ್ನಿನ್ನತೆಱದ ನಾಲ್ಮೊಗದರಂ ಪಲ ಬರಂ ಕಂಡಱವೆಂ (ಜೈಮಿಭಾ. ೩೨-೩೮). ನಾಲ್ಮೊಗದವ = ನಾಲ್ಕು ಮುಖಗಳನ್ನುಳ್ಳವನು ; ಬ್ರಹ್ಮ : ನೀ ನಾಲ್ಮೊಗದವನ ನೇಮದಲಿ ಪಾಲಿಪುದಾ ಮಹಾಪುರವಾ (ಅನಂರಾ. ೧-೬-೫೦). ನಾಲ್ಮೊಗನಣುಗ = ಬ್ರಹ್ಮನ ಮಗ ; ನಾರದ : ನಾಲ್ಮೊಗನಣುಗಂ ಮುಂತೆ ಸುರ್ಗಿದಂ (ಅದ್ಭುತ. ೧೯-೨೦). ನಾಲ್ಮೊಗನಯ್ಯ = ಬ್ರಹ್ಮನ ತಂದೆ ; ವಿಷ್ಣು : ನಾಲ್ಮೊಗನಯ್ಯನ ಗುಣ ಪೊಗಳಿ ಹಿಗ್ಗುವುದೇ (ಜಗದಾ. ೩೬೩).

[ನಾಲ್ (<ನಾಲ್ಕು)+ಮೊಗ]

ನಾಲ್ಲಾವು 'ನಲ್ಲಾವು' ನೋ.

ನಾಲ್ವಂಡೆ (ನಾ). (?) : ನಖರೇಶ್ವರದ ಶ್ರೀಮಹಾದೇವರ ಶಾಂತಿದೇವ ಪೊಜೆಯ ಮಾಡು[ವ] ಅಡಿಗಳಿಗೆ ನಡಸಿ ಕೊಡುವ ಭಕ್ತ ನಾಲ್ವಂಡೆಯಲು ಮುಡಿ ೨೬ ಕಾಟಿಗ ೨ (ಸೌಇಇ. IX-ii, ೪೪೯-೨೬; 1444); ಆ ದುಗ್ಗಣಸೆಟ್ಟಿಯರೂ ಅವರ ಅಳಿಯಂದಿರೂ ದಾನಧಾರಾಪೂರ್ವ್ವಕವಾಗಿ ಧಾರೆಯನೂ ಎಱದು ಕೊಟ್ಟ ಧರ್ಮದ ಬಾಳಿನ ವಿವರ ಗುಡ್ಡಂಪಾಡಿಯ [ಕ]ಱಕೆಯ ಕಳಿಯಲ್ಲಿ ನಾಲ್ವಂಡೆಯಲಿ ಮುವತ್ತ ನಾಲ್ಕು ಮುಡಿ ಅಕ್ಕಿ ಗೇಣಿಯಿಕ್ಕುವ ಬಾಳು (ಸೌಇಇ. IX-ii, ೪೬೪-೧೧; 1472). [?]

ನಾಲ್ವಗಲ್, ನಾಲ್ಪಗಲು (ನಾ). ೧. ನಾಲ್ಕುದಿನ. ೨. ಮುಟ್ಟಾದ ನಾಲ್ಕನೆಯ ದಿನ : ಲಲನೆಗೆ ನಾಲ್ವ [ಪಾಠಾಂ. ನಾಲ್ಪ] ಗಲಾಗೆ ಕುಂದಣದ ಪುತ್ಥಳಿಯ ದೂಸಱ ಕೆಡಲೆಂದು ಪುಳಿದೊಳೆ ವಂದದಿಂದವೆ ಕೋಮಲೆಯರು ಝಳಕವ ಮಾಡಿಸಲೆಸಗಿದರು (ಶ್ರೀಪಾಲ. ೨-೪೯). **ನಾಲ್ಪಗಲು** : ೨. ಎಳೆಲತೆಯೆಳಸಿ ಮಳೆಗೆ ಮೆಯ್ಯೊಡ್ಡುವವೋಲ್ನಾಲ್ಪಗಲಿನ ನೀರ್ಮಿಂದು . . . ಎಳಮಿಂಚಿಂ ಕಂಡರಿಸಿದ ಕಾಂತೆಯೆನಲ್ಕಡು ಸೊಗಸಿದಳು (ಜಯಕಾ. ೨-೪೯).

[ನಾಲ್(<ನಾಲ್ಕು)+ಪಗಲು (<ಪಗಲ್)]

ನಾಲ್ವಗೆ, ನಾಲ್ಬಗೆ (ನಾ). ೧. ನಾಲ್ಕು ವಿಧ; ನಾಲ್ಕು ರೀತಿ. 'ನಾಲ್ವಗೆ ಫಲ' ಪರಾ. **ನಾಲ್ಬಗೆ** : ೨. ನಾಲ್ಕು ಮನಸ್ಸು : ಒಗ್ಗದಿರೆ ನಾಲ್ಬಗೆಗೆ ಹುಡುಕಿ ಹದುಳದ ಪೊಳ್ತು ಸುಗ್ಗಿಯೊಳ್ ಮದುವೆನಾಳ್ ಮುಗಿಸಿದರ್ ಮಾತಂ (ಕಾಲೂರ. ೭೩-೧೩೩).

[ನಾಲ್(<ನಾಲ್ಕು)+ಬಗೆ$_3$]

ನಾಲ್ವಗೆ ಫಲ (ನಾ). ನಾಲ್ಕು ವಿಧವಾದ ಪ್ರಯೋಜನ : ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ನಾಲ್ಕು ಬಗೆಯಾದ ಪುರುಷಾರ್ಥ : ಶಿಷ್ಯಜನರ ಪ್ರೇರಿಸಿ ನಾಲ್ವಗೆ ಫಲವೀವ ತಾತಾಚಾರಿಯರಡಿಗೆಱಗುವೆನು (ಮೋಹತ. ೧-೪). [ನಾಲ್ವಗೆ+ಫಲ$_1$]

ನಾಲ್ವಗೆಮುಕ್ತಿ (ನಾ). ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಮತ್ತು ಸಾಯುಜ್ಯವೆಂಬ ನಾಲ್ಕುಬಗೆಯ ಮೋಕ್ಷಗಳು : ಭಕ್ತಿಯೊಳೆನ್ನನಾರಾಧಿಸಿ ನಾಲ್ವಗೆ ಮುಕ್ತಿಯ ಪಡೆದವನಲ್ಲ ಶಕ್ತಿಯೊಳ್ ಳಾಳೆಗ ಬೇಕೆಂಬ ಸಮರಸದುಕ್ತಿಯ ನೀ ಬಲ್ಲೆ ಮಗನೆ. (ಮೋಹತ. ೩೫-೬೧). [ನಾಲ್ವಗೆ+ಮುಕ್ತಿ]

ನಾಲ್ವಟ್ಟೆ, ನಾಲ್ಬಟ್ಟೆ (ನಾ). ೧. ನಾಲ್ಕು ದಾರಿ,—ಬೀದಿ. ೨. ನಾಲ್ಕು ಬೀದಿ ಸೇರುವ ಸ್ಥಳ; ಚೌಕ; ಚೌಪಥ : "ಚೌವಟಮಱವುದು ನಾಲ್ವಟ್ಟೆ" (ಚತುಸಿ. ೯೦); ಮತ್ತಮಾ ನಾಡ ನಾಲ್ವಟ್ಟೆಯೊಳಲ್ಲಲ್ಲಿ . . . ತೆವರೊಳವಿರಳಮಾದಱವಂಟಿಗೆದಾಣಂಗಳೊಳ್ (ಧರ್ಮನಾ. ೨-೩೨ ಸ); ನಾಲ್ಬುಜನೀತಂ, ನಾಲ್ವಟ್ಟೆ (ಶಬ್ದಾನು. ೨೯೪ ಪ್ರಯೋ). **ನಾಲ್ಬಟ್ಟೆ** : ೧. ನಾಲ್ಬಟ್ಟೆಯ ಪಿಟ್ಟೆ ಪೋಲ್ ಕುಲನಗೌಘಂ ನುರ್ಗಿದತ್ತು (ಜಗವಿ. ೧-೩೦).

[ನಾಲ್(<ನಾಲ್ಕು)+ಬಟ್ಟೆ$_1$]

ನಾಲ್ವಡಿ, ನಾಲುಮಡಿ, ನಾಲ್ಮಡಿ (ನಾ). ೧. ನಾಲ್ಕರಷ್ಟು; ನಾಲ್ಕುಪಟ್ಟು : ಸಕ್ಕದದೊಳ್ ಮುನ್ನುಳ್ಳ ಕಾಳಿದಾಸಂಗನ್ನಾಲ್ವಡಿ ರಚನೆಯೊಳ್ ಕುರುಳ್ಗಳ ಸವಣಂ (ಶಾಂತಿಪು. ೧-೧೧); ಧರೆಯೊಳ್ ಬೀರದ ಪೆಂಪಿಂ ನರನಿಂದಿರ್ಮಡಿ ಬಕಾರಿಯಿಂ ಮೂವಡಿ ಭಾಸ್ಕರ ಸುತನಿಂ ನಾಲ್ವಡಿ ಶಂಕರನಿಂದಯ್ವಡಿ ನೆಗೞ್ತೆಯದಟರ ಭೀಮಂ (ಕಾಪ್ಯಾಪ. ೭೦); ಮೋನದಿಂದಿರ್ದರ್ಗೆ ನಾಲ್ವಡಿಯನೀವುತಂ (ಅನೀರ. ದೇ. ೮೫-೬); ಪಾವಿಂದಿರ್ಮಡಿ ವಿಷದಿಂ ಮೂವಡಿ ತಾರ್ಮೂಲದಿಂದ ನಾಲ್ವಡಿ ಭಲ್ಲೂಕಾವಳಿಯಿಂದೈವಡಿ ಹೋಹೋವೆಂಬುದು ಖಳ ಚರಿತ್ರಮಂ ಭುವನಜನಂ (ಸೂಕ್ತಿಸು. ೧-೫೧). (ಗು). ೨. ನಾಲ್ಕನೆಯ : ಬೀರಂಗೊಂಡೆಸೆವಾನೆ ಪೆರ್ಬುಲಿಯನೇ ಕೈಗೋವಿಯಿಂ ಖಟ್ಗದಿಂ ಬೀರಂ ನಾಲ್ವಡಿ ಕೃಷ್ಣರಾಯನಳವಿಂ . ಕೊಂದಿಕ್ಕೆ (ಮೈಸೂಮೆ. ೧-೩೬); ನಾಲ್ವಡಿಕೃಷ್ಣರ ಮದುವೆಯ ಕರೆಯೋಲೆ ಸೀಕೆಯಗೌಡರ ಮನೆಗೆ ಬಂದಿತ್ತು (ಇಂಚಾಪ.೭-೨೩). **ನಾಲುಮಡಿ** : ೨. ಕನ್ನಡದ ಕಣ್ಣದು, ಮೈಸೂರು, ನಾಲುಮಡಿ ಕೃಷ್ಣನ ಮೈಸೂರು (ಹೊಂಗಳು. ೫-೭). **ನಾಲ್ಮಡಿ** : ೧. ಒದ್ದಾಯನಮಹಾರಾಜಂಗೆ ಪಟ್ಟದರಸಿ ಪ್ರಭಾವತಿಯೆಂಬಳ್ , . . ರೂಪಿನೊಳಬ್ಜವಾಸೆಗಂ ಪರಿಣತರಪ್ಪವರ್ಬಗೆದು ನೋಟ್ಪೊಡೆ ನಾಲ್ಮಡಿ (ಧರ್ಮಾಮೃ.೪-೧೪); ಪಿಡಿಯವಲಕ್ಕಿಗೋಸುಗ ಕುಚೇಲನಿಗೆ ನಾಲ್ಮಡಿ ಭಾಗ್ಯವಿತ್ತ ಮಾಧವನ ಅಡಿದಾವರೆಯ ಪ್ರಾರ್ಥಿಸಿ (ಮೋಹತ. ೩೦-೧); ವೀಣಾವಾದನ ಅರಮನೆಯಲ್ಲಿ ನಡೆದ ದಿನ ಪ್ರಭುಗಳು ಈ ಕನ್ಯೆಯರಲ್ಲಿ ನೋಡಿದ ಸೌಂದರ್ಯಕ್ಕಿಂತ ನಾಲ್ಮಡಿ ಹೆಚ್ಚಿದ್ದಿತು ಇಂದು (ಶಾಂತಲಾ. ೧೦೯); ವಲ್ಲಭಭಾಯಿಪಟೇಲರ ಸಂಘಟನಾಶಕ್ತಿ, ಕಾರ್ಯನಿರ್ವಾಹಕ ಶಕ್ತಿ ಹಾಗೂ ಕರ್ತವ್ಯನಿಷ್ಠೆಗಳು ನಾಲ್ಮಡಿಯಾಗಿ ಬೆಳಗಿ (ರಾಜಪ. ೩೫). ೨. ಸಿಂಗರವಾಯಿತು ಮೈಸೂರು . . . ನಾಲ್ಮಡಿಕೃಷ್ಣನ ಮೈಸೂರು (ಕನ್ನಬಾ. ೧೪೬-೨೯). [ನಾಲ್(<ನಾಲ್ಕು)+ಮಡಿ$_3$]

ನಾಲ್ವಡಿಸು, ನಾಲ್ಮಡಿಸು (ಕ್ರಿ). ನಾಲ್ಕರಷ್ಟಾಗು : ನಾಲ್ಕು ಪಟ್ಟಾಗು : ಪೆಣ್ಗಳಿ . . . ವಿರಹವಿಮ್ಮಡಿಸೆ ಸುಯ್ ಮೂವಡಿಸೆ ಮೈಬಿಸುರ್ಪಿರದೆ ನಾಲ್ವಡಿಸೆ ಕಿಡಿಕಿಡಿಯಾಗಿ (ಚೆಬಪು. ೪೬-೧೦). **ನಾಲ್ಮಡಿಸು** : ನಲ್ಮೆ ನಾಲ್ಮಡಿಸೆ ಕಂದರ್ಪಾಸ್ತ್ರವೈದೆಯ್ದೆ ನಟ್ಟುವು (ಶೃಂಗಾರ. ೧-೫೪). [ನಾಲ್ವಡಿ+=ಇಸು$_3$]

ನಾಲ್ವಣಿಗೆ (ನಾ). (?) : ಬಾಳೆಯಹಳಿ ನಗುಲವೆಗ್ಗಡೆಯರು x x x ಗೆಯ ನಾಡವರು ನಾಲ್ವಣಿಗೆಯತಿಯ ನಾಡು ಭೂಮಿಯ ನಾಡು ವೀರೇಸ್ವರದೇವರಿಗೆ . . . ಬಿಟ್ಟ ದರ್ಮ್ಮಾ (ಮೈಆರಿ.೧೯೩೪,೧೧-೧೮; ?).

[?]

ನಾಲ್ವತು 'ನಾಲ್ವತ್ತು' ನೋ.

ನಾಲ್ವತುಂಬಾಡ, ನಾಲತವಾಡ (ನಾ). ಒಂದು ಸ್ಥಳದ ಹೆಸರು; ℙ ಈಗಿನ ಬಿಜಾಪುರಜಿಲ್ಲೆಯ ನಾಲತ್ತವಾಡ : ಶ್ರೀನಾಲ್ವತುಂಬಾಡದ ಕೊಂಡಿಱುವ ಗೋಮರಸ ಅವರ ಹೆರ್ಗ್ಗಡೆ ಪತಾಇತ ದುರ್ಗ್ಗಿಮಯನ ಅ[ರ್ಧ್ಧ][ಂ][ಗ]ಲಕ್ಷ್ಮಿ ಬಲಿಕಬೆ [ಗೌಡಿ]ಶ್ರೀಮತು ತಂಬೆಧಡೆ ಬಲೇಶ್ವರದೇವರ್ಗ್ಗೆ ಬಿಟ್ಟ . . . ಮತರು ೩೦ (ಸೌಇಇ. XI-i, ೬೮-೯; 1033). **ನಾಲತವಾಡ** : ನಾಲತವಾಡದ ಶರಣರನ್ನು ಕುರಿತು (ಅರಳು. ೩೨೮-೧).

[ನಾಲ್ವತು(<ನಾಲ್ವತ್ತು)+ಬಾಡ$_1$]

ನಾಲ್ವತ್ತರ್ (ನಾ). ನಾಲ್ಕು ಮತ್ತರು : ಮೂವತ್ತರ x x x ಯ ಕೆಟಗೆ ಏಟು ಮತ್ತರ x x x ಙ್ಗಣ್ಗೆಱೆಯ ಕೋಡಿ ನಾಲ್ವತ್ತರ್ ಊರ ಧರ್ಮದೇಗುಲದ ಪೊಱಗೆ ಮೂಮತ್ತರ್ (ಎಕ. VII, ಶಿಮೊ. ೧೧೫-೮; ?). [ನಾಲ್(<ನಾಲ್ಕು)+ಮತ್ತರ್]

ನಾಲ್ವತ್ತು, ನಲವತ್ತು, ನಾಲ್ವತು (ನಾ). ಒಂದು ಸಂಖ್ಯೆ; ನಾಲ್ಕರ ಹತ್ತರಷ್ಟು : ನಾಲ್ವತ್ತು ಸಾಮ್ಪಿನೊಳೊನ್ದು (ಎಇ. VI, ೧೬೬-೬; 793); ಈ ಭೂಮಿ ಪದಿನಱು ಗೇಣ್ಕೋಲೊಳ್ಸಾಯಿರದ ನನ್ನೂಱು ನಾಲ್ವತ್ತು ಕಮ್ಮಂ (ಎಕ. IX, ನಲಮಂ. ೧-೧೪; 1029); ನಾಲ್ಕರ್ಕೆ—ನಾಲ್ವಡಿ, ನಾಲ್ವತ್ತು, ನಾಲ್ವೆರಲ್ (ಶಮದ. ೧೮೯ ಪ್ರಯೋ); ನಾಲ್ವತ್ತರ ಮೇಲೆ ನಡಿಕೆ ಎಂಭತ್ತರ ಮೇಲೆ ಬಡಿಕೆ (ಗಾದೆ).

ನಲವತ್ತು : ಈ ಪುಸ್ತಕದ ಬೆಲೆ ನಲವತ್ತು ರೂಪಾಯಿಗಳು (ರೂಢಿ).

ನಾಲ್ವತು : 'ನಾಲ್ವತುಂಬಾಡ' ಪರಾ.

ನಾಲ್ವತ್ತನೆಯ = ನಲವತ್ತರ ಸ್ಥಾನದಲ್ಲಿರುವ ; ಎಣಿಕೆಯಲ್ಲಿ ನಲವತ್ತಕ್ಕೆ ಬರುವ : ನಾಲ್ವತ್ತನೆಯ ವಾರುಷಿಕನಾಗಿಹ ಚತುರ್ವದನ ನಿಲ್ಲಿಗೆ ಮರಾಳವಾಹನದೊಳಕ್ಕರ್ವೆರಸಿ ಬಂದೆನ್ನ ಮುಂದೆ ನಿಂದಾಗಳ್ (ಜೈಮಿಭಾ. ೩೨-೩೭). **ನಾಲ್ವತ್ತಿರ್ವರ್, ನಾಲ್ವತಿಬ್ಬರು, ನಾಲ್ವತ್ತೀರ್ವರ್** = ನಲವತ್ತೆರಡು ಜನರು : ಸಯೋಗಿಕೇವಲಿಗಳೊಳ್ ಔದಾರಿಕ ಮಿಶ್ರಕಾಯ ಯೋಗಿಗಳೊಳ್ ನಾಲ್ವತ್ತಿರ್ವರ್ (ತತ್ತ್ವಪ್ರ. ೨೩) ; ಶ್ರೀಮದಗ್ರಹಾರಂ ಹೊಂನೆಯನೂರ ಊರೊಡೆಯ ಪ್ರಮುಖ ಮಹಾಜನಂಗಳು ನಾಲ್ವತಿಬ್ಬರು . . . ಶ್ರೀಮತ್ಸೋಮೇಶ್ವರಪಣ್ಡಿತರ ಕಾಲಂ ಕಟ್ಟಿ ಧಾರಾಪೂರ್ವಕಂ ಮಾಡಿ (ಸೌಇಇ. XV, ೧೩-೩; 1128) ; ಬಾದಾಳ—ನಾಲ್ವತ್ತೀರ್ವರ್ ಚಂದ್ರರ್ (ತಸೂವೃ. ೧೪೧). **ನಾಲ್ವತ್ತೆಣ್ಗಾವುದ** = ನಲವತ್ತೆಂಟು ಗಾವುದ : ನಾಲ್ವತ್ತೆಣ್ಗಾವುದ ನೀಳದ ಮೂವತ್ತಾಱು ಗಾವುದಗಲದ ಬೀಡಿಂಗೆ ವಾಸ್ತುವಿಭಾಗಕ್ಕೆಡೆಯಿಲ್ಲದೆ ಕುಱುಂಬಗಳೊಳ್ ಬೀಡಂ ಬಿಡಿಸಿದಾಗಳ್ (ಆದಿಪು. ೧೨-೬೮ ಪ). **ನಾಲ್ವದಿಂಬರ್, ನಾಲ್ವದಿಂಬರು, ನಾಲ್ವದಿಂಬಾರು, ನಾಲ್ವದಿನ್ವರ್** = ನಲವತ್ತು ಜನರು : ವೈಶಾಖಮಾಸದ ಪೌರ್ಣ್ಣಮಾಸೆಯನ್ದೆಟ್ಟುಣುಸೆಯ ನಾಲ್ವದಿಮ್ಬರ್ಮ್ಮಹಾಜನಮುಂ ಮೋನಿಗೊರವರುಂ . . . ಗೋಕರ್ಣ್ಣಪಣ್ಡಿತ ಭಟರರ್ಗ್ಗೆ ಸರ್ವಬಾಧಾಪರಿಹಾರಂ ಕಾಲಂ ಕಟ್ಟಿ ಕೊಟ್ಟರ್ (ಕಇ. I, ೧೩-೭ ; 865) ; ಎಳಅರಸರ್ಮ್ಮಗನ್ದಿರ್ಮ್ಮಲ್ಲಡಿಯುಂ ಕದಂಬೂರಾ ನಾಲ್ವದಿನ್ವರು ವಿದತ್ತೂರುನಾವಿದ (ಎಕ. X, ಕೋಲಾರ. ೭-೫ ; ಸು. 760) ; ಸ್ವಸ್ತಿಶ್ರೀತೊನ್ದೆಗೊಲೆಉಕ X X ತೊಱುಕೊಳ X ಸತ್ತೋನ್ X X ಕೊಳತ್ತೂರಾ X X ನಾಲ್ವದಿಮ್ಬಾರು ಇಟ್ಟು ಮೆಚ್ಚಿ ಕೊಟೊದು (ಎಕ. X, ಚಿಂತಾಮ.೧೦೫-೬; ?); ಇದರ್ಕ್ಕೆ ಸಾಕ್ಷಿ ಬೆಳತೂರಾ ಮಹಾಜನಮುಂ ಕಡತೂರಾ ಮಹಾಜನಮುಂ ಕದಂಬೂರಾ ನಾಲ್ವದಿನ್ವರುಂ (ಎಕ. X, ಕೋಲಾರ. ೧೧-೧೨; ಸು. 753) ; ಸ್ವಸ್ತಿಶ್ರೀಮನ್ ವಿಷ್ಣುಗೋವರಸರ್ X ದುಗ್ಗಮಾರರ್ ಸೇನೆ ಮಗ X X ನಾವ್ವೆದಿನ್ವರ್ಕಸಪ್ರ X X X ಪೊನ್ತೊಱೆ ಬಿಟ್ಟದು (ಎಕ. X, ಚಿಂತಾಮ. ೧೨೬-೩b ; ಸು. 800).

[ನಾಲ್(<ನಾಲ್ಕು) + ಪತ್ತು$_3$]

ನಾಲ್ವರಲ್ (ನಾ). ನಾಲ್ಕು ಬೆರಳು : ಗಿರಿಗೆ ಮೆಳಸಿನ್ದಂ ಕಿಱುದಕ್ಕ ಕಾಲೊಳ್ಪು ನಾಲ್ವರಲಳವಿಗ ಕಿಱುದುಮಕ್ಕ ತುರಗಂ ಬೆಟ್ಟದಿಂ ಪಿರಿದಕ್ಕ (ಎಕ. II, ೧೩೩-೧೦೦ ; 982).

[ಐ ಇದು 'ನಾಲ್ವೆರಲ್' ಎಂಬುದರ ಅಪಲಿಖಿತ]

ನಾಲ್ವರ್ತನ (ನಾ). ನಾಡಾಡಿಯ ನಡವಳಿಕೆ : ನೆಲನಂ ಪೊತ್ತೆತ್ತಿ ನಾಲ್ವರ್ತ್ತನದ ಮಹಿಮೆಯಿಂ ಪೋಗುವಂ ಕೂರ್ಮ್ಮರಾಜಂ (ಎಕ.IV, ನಾಗಮಂ. ೯೮-೨೫ ; 1229).

[ಐ ಇದು 'ನಾಟ್ವರ್ತನ' ಎಂಬುದರ ಅಪಲಿಖಿತ]

ನಾಲ್ವಲ (ನಾ). ಒಂದು ತೂಕ ; ನಾಲ್ಕು ಪಲ : ಸುಲಿದ ಉದ್ದಿನ ಬೇಳೆಯು ನಾಲ್ವಲ (ಸಾಳ್ವಸಾಂ. ೧೧). 'ಮೂವಲ' ಪರಾ.

[ನಾಲ್(<ನಾಲ್ಕು) + ಪಲ$_3$]

ನಾಲ್ವಾಗಿಲ್ (ನಾ). ನಾಲ್ಕು ಬಾಗಿಲು,—ದ್ವಾರ : ರತಿ ಪಾರ್ವತಿರಮೆ ರಾಜೀವೋದ್ಭವ ಸತಿಯರ್ ಕುಳ್ಳಿರ್ಪುರುಪೀಠಗಳೆನಲತಿರಂಜಿಸೆ ನಾಲ್ವಾಗಿಲ ಗೋಹುರಂ (ಜಯಕಾ. ೧-೫೫).

[ನಾಲ್(<ನಾಲ್ಕು) + ಬಾಗಿಲ್]

ನಾಲ್ವಾಡ (ನಾ). ನಾಲ್ಕು ಗ್ರಾಮ.

ನಾಲ್ವಾಡರು, ನಾಲ್ಪಡರು = ನಾಲ್ಕು ಗ್ರಾಮದವರು : ದೇವರ ಬಸವಂತ ಕಲ್ಲ ಮುಂದೆ ನಾಲ್ವರು ನಾಲ್ವಾಡರು . . . ಕೋಟೀಸರಾ ಚಾಯಿಂತ್ತಿನಿಬರು ನಡಸುವಂಥಾ ಸೀಮೆ ಸ್ವಾಮ್ಯಉ . . . ನಡಸಿ ಬಹರು (ಸೌಇಇ. IX-ii, ೪೫೭-೧೪; 1455); ತೋಟಕ್ಕೆ X X X ತೆಕಲ ಮಂಡೆ ೪ ನಾಲ್ಪಡರ ಒಪ್ಪ ಮುದ್ದಣದೇವರು ಯಿಾ ಧರ್ಮವನೂ ಪಡುವಕೇರ್ಯ ಹಲರು ಸೆಟ್ಟಿಕಾರರೂ ಪಾಲಿಸುವವರು (ಸೌಇಇ. IX-ii, ೪೪೪-೩೮; 1433). [ನಾಲ್(<ನಾಲ್ಕು) + ಬಾಡ$_1$]

ನಾಲ್ವೆರಲ್, ನಾಬೆರಳು, ನಾಲ್ವೆರಳು (ನಾ). ೧. ನಾಲ್ಕು ಬೆರಳು. ೨. ನಾಲ್ಕು ಬೆರಳುಗಳ ಅಳತೆ : ಅದಱ ಮೇಗಲರ್ಪ ಪೊಂದಾಮರೆಯಕ್ಕುಮದಂ ನಾಲ್ವೆರಲಂ ಮುಟ್ಟದೆ ಅದಱ ಮೇಗೆ ಪಲ್ಯಂಕದೊಳಿರ್ದೊಂದು ಬೆಳ್ಗೊಡೆಯನೊಡೆಯೊನಾಗಿ ಮೂವತ್ತೆರಡುಂ ಚಾಮರಂಗಳಿಂ ದೇವರ್ಕಳ್ ಬೀಸುತ್ತಮಿಂತಿರ್ಪನ್ನೆಗಂ (ವಡ್ಡಾರಾ. ೧೫೫-೩); ಜಸಕ್ಕಾಗರಮಾದ ಬದ್ದೆಗನಿನಾ ನರಸಿಂಹನಿನತ್ತ ನಾಲ್ವೆರಲ್ ಮೇಗು ಪೊದಟ್ಟ ಚಾಗದೊಳಮೊಂದಿದ ಬೀರದೊಳಂ ಗುಹಾರ್ಣವಂ (ಪಂಪಭಾ. ೧-೫೦) ; ಜನಕಂಗತ್ತಗ್ಗಳಂ ನಾಲ್ವೆರಲ್ಚಲದೊಳ್ ಶೌರ್ಯದೊಳೆಂಬಿನಂ ಭರೆಗೆ ಸಂದಂ ಸಿಂಹಭೂಪಾಳಕಂ (ಎಕ. VIII, ಸೊರಬ. ೧೮೪-೨೧ ; 1033 ?) ; ಅತನ ಸಿರಿಯಂ ಪೇಟ್ಟೊಡೆ ಭೂತಳದೊಳ್ . . . ದೇವೇಂದ್ರಂಗಂ ಮಾತೇಂ ಬಗೆವಂದು ನಾಲ್ವೆರಲ್ ತಾಂ ಪಿರಿಯಂ (ಧರ್ಮಾಮೃ. ೬-೧೧) ; ಉರಗಂ ಕೊಂಡಲ್ಲಿಂ ನಾಲ್ವೆರಲನಿತಂ ಕಳೆದು ಕಟ್ಟ ಮೇಗಂ ಬೇಗೆಂ ಸೆರೆವಿಡುಗೆ ಸುಡುಗೆ ಕಡಿದಿರದರಿದಿಕ್ಕುಗೆ ನೀವಿ ಕಳೆಗೆ ನಿರ್ವಿಷಮಕ್ಕುಂ (ಕಾವ್ಯಾವ. ೨೬೮). **ನಾಬೆರಳು :** ೧. ನಾಬೆರಳು ಅಗಲದ ನಿಗಿನಿಗಿ ಉರಿಯುವ ಕೆಂಪಿನ ಬಣ್ಣದ ಬುಗುಡಿ ಅಂಚಿನ ಹೋಡುಪಂಚೆ (ಸುವಸಂ. ೫೨). **ನಾಲ್ವೆರಳು :** ೨. ಹೆಗಲ ಮೇಲಣ ಕಂಬಿ ನಾಲ್ವೆರಳುಗಳ ಹವಣಿಗೆ ನೆಗೆದು ಬರುತಿರೆ (ಬಸಪು. ೪೪-೭) ; ನಾಲ್ವೆರಳು ಹಸ್ತಿನಿಗೆ ಮೂವೆರಳು ಚಿತ್ತಿನಿಗೆ ಇರ್ವೆರಳು ಕುಚಮಧ್ಯ ಶಂಖಿನಿಗೆ ಪದ್ಮಿನಿಗೆ ಒರ್ವೆರಳು ನೋಡ (ಸರ್ವಜ್ಞ.೧೬೩೫).

[ನಾಲ್(<ನಾಲ್ಕು) + ಬೆರಲ್]

ನಾಲ್ವೆರಳು 'ನಾಲ್ವೆರಲ್' ನೋ.

ನಾಲ್ಸರ (ನಾ). ನಾಲ್ಕು ಬಾಣ,—ಶರ : ಅಸಮಾಸ್ತ್ರನೈಸರಂಗಳಲಿಸದೀಗಳೀ ನೆಗಟ್ಟ ನಾಲ್ಸರದಿಂದಿಸುವಂ ವಿಯೋಗಿಯಂ (ಮಲ್ಲಿಪು. ೫-೨೬).

[ನಾಲ್(<ನಾಲ್ಕು) + ಸರ$_4$]

ನಾಲ್ಸಾದರ 'ನಾಲ್ಭಾಸಿರ' ನೋ.

ನಾಲ್ಸಾಸಿರ 'ನಾಲ್ಭಾಸಿರ' ನೋ.

ನಾವ 'ನಾವೆ' ನೋ.

ನಾವಧಾನ್ಯ (ನಾ). ಒಂಬತ್ತು ಬಗೆಯ ಧಾನ್ಯ ; ನವಧಾನ್ಯ : ನಾವಧಾನ್ಯವ ಕುಡಿಸಿ ಕುಳಿತು ಭಿಸಿ ಹೆಂಡೆ ಮಾಡಿ (ಎಕ. VII, ಶಿವಮೊ. ೧೦೭-೧೬ ; 1576 ?). [ಸಂ.]

ನಾವನಿವಾಸಗಾರ್ತಿ (ನಾ). ಅಂಬಿಗಿತ್ತಿ : ಆ ಸಮಯದಿ ಸದ್ಗುಕುರಾಯ ನೆನೆದ ಹರಾಶರಮುನಿಗಾದ ಹದನ ಭೂಸಭೆಯೊಳು ತನಗಹುದೆಂದು ನಾವನಿವಾಸಗಾರ್ತಿಯರ ಬೀಳ್ಕೊಂಡ (ಮೋಹತ. ೫-೨೭).

[ನಾವ(<ನಾವೆ) + ನಿವಾಸ + -ಕಾಜ + -ತ್ತಿ$_1$ (<-ಇತ್ತಿ)]

ನಾವಲಗೆಡ್ಡೆ (ನಾ). ಒಂದು ಬಗೆಯ ಗೆಡ್ಡೆ : ತುಲಸಿ, ನಾವಲಗೆಡ್ಡೆ ಇವಿಷ್ಟು ಪ್ರತ್ಯೇಕವಾಗಿ . . . ಕಷಾಯವಂ ಕಾಯಿಸಿ, ತೋಧಿಸಿ ಕೊಂಡು (ಸಕವೈ. ೭೨). [ನಾವಲ$_0$ + ಗೆಡ್ಡೆ(<ಗಡ್ಡೆ)]

ನಾವಲಿಗ, ನಾವಳಿಗ (ನಾ). (ಉಕ) ನಾವಿದ ; ನಾಪಿತ : ನಾವಲಿಗ ನಾವರೂ 'ಸ್ವಲ್ಪ ತಡೆಯಿರಿ ರಾಯರೇ' ಎಂದು ನಮ್ರಮಾತಿನಿಂದ

ಸಂತೈಸುತ್ತಿದ್ದ (ಮುಂಗಾಪು. ೮೭) ; ಈ "ಗರುಡೆಯರ" ಮುಂಡನಕ್ಕೆ ಬರುವ ನಾವಳಿಗರ ಯಮನ್ಯಾ ಕೂಡ ಹೊರಗಿನ ಕಟ್ಟೆಯ ಮೇಲೆಯೇ . . . ತನ್ನ ಕರ್ತವ್ಯಕರ್ಮವನ್ನು ಯಥಾಸಾಂಗವಾಗಿ ಪೂರೈಸುತ್ತಾನೆ (ಗೀಡುಗೆ. ೬). **ನಾವಳಿಗ** : (ಕ). [<ನಾವಿಲ$_1$ + -ಇಗ]

ನಾವಳಿಗ 'ನಾವಲಿಗ' ನೋ.

ನಾವಳ್ಳಿ (ನಾ). ಒಂದು ಊರಿನ ಹೆಸರು : ಮೊಳೆಊರಾ ಮಣಿಯ ಗಾಮುಣ್ಡರುಂ ನಾವಳ್ಳಿಯರುಂ ಅಣ್ಣುಗಿಯಾಗಾಮಿಗರುಂ . . . ಮುಖಮಾಗೆ ಎರಡುಂ ನಾಟ್ಕೆ ರಾಜಕ್ರಾವಿತಮಾಗೆ ಪ್ರಸಾದಂ ಕೆಯ್ದಾರ್ (ಎಕ. VII, ಶಿಕಾರಿ. ೧೫೪-೧೦ ; ಸು. 685). [?]

ನಾವಾಟ (ನಾ). ದೋಣಿ, ಹಡಗುಗಳಲ್ಲಿ ಕುಳಿತು ನೀರಿನ ಮೇಲೆ ಸಂಚಾರ ಮಾಡುವ ಆಟ,—ಕ್ರೀಡೆ ; ನೌಕಾವಿಹಾರ : ಗೆಳೆಯ ಮುದ್ದಿಯಾರನು 'ನಾವಾಟ'ದ ಕಾರ್ಯದರ್ಶಿಯಿದ್ದುದರಿಂದ ಬೇಕಾದಾಗ ವಿಹರಿಸುವ ಅಸ್ಪದವಿತ್ತು (ಶ್ರೀರಂಗ. ೫೮).

[ನಾವ (<ನಾವೆ) + ಆಟ]

ನಾವಾಡಿ (ನಾ). ದೋಣಿ, ಹಡಗು ಮೊದಲಾದ ಜಲಯಾನಗಳನ್ನು ನಡೆಸುವವನು ; ಅಂಬಿಗ : ನಾವಾಡಿಯು ಹುಟ್ಟು ಹೊಡೆಯುತ್ತ ನಾವು ಸಾಗಿಸತೊಡಗಿದ್ದನು (ಸಕುಮಂ. ೩೦).

[ನಾವ(<ನಾವೆ) + -ಆಡಿ$_1$]

ನಾವಾಡಿಗ (ನಾ). ೧. ನಾವೆಯನ್ನು ಅಥವಾ ಹಡಗನ್ನು ನಡೆಸುವವನು ; ನಾವಿಕ ; ಅಂಬಿಗ : ನಾವು ಬುಡಮೇಲಾದುದರಿಂದ, ಎಲ್ಲರೂ ಮುಳುಗಿದರು . . . ನಾವಾಡಿಗ ಮತ್ತು ಸಂತೋಷಕೂಟದ ಹೊತೆಗಿದ್ದ ಒಂದು ನಾಯಿ ಇಷ್ಟು ಬೆಟ್ಟು ಉಳಿದವರೆಲ್ಲರೂ ಗಂಗಾ ಜಲದಲ್ಲಿ ಮುಳುಗಿದರೆಂದು ತಿಳಿದುಬಂದಿದೆ (ರಕ್ತಧ್ವ. ೩೨೩); ನಾವಾಡಿಗನಿಗೆ ನಾವನ್ನು ಬೇಗನೆ ದಂಡೆಗೊಯ್ಯಲು ಹೇಳವ್ವ (ಅಕ್ಕಾಜಿ. ೭೯) ; ಗಂಗೆಯ ದಡದಲ್ಲಿ ನಿಂತು ಅಲ್ಲಿರುವ ನಾವಾಡಿಗರನ್ನುದ್ದೇಶಿಸಿ ಜ್ವಾಲೆಯೆಂದಳು (ಬಿಮರೆ. ೪೦). ೨. ಸಮುದ್ರಯಾನದಲ್ಲಿ ಆಸಕ್ತಿಯುಳ್ಳವನು ; ನೌಕಾಪ್ರಯಾಣದಲ್ಲಿ ವಿಶೇಷವಾಗಿ ತೊಡಗಿರುವವನು : ಆ ಕಾಲಕ್ಕೆ ನಾವಾಡಿಗನೆಂದು ಹೆಸರಾದ ಈ ಹೆನ್ರಿಯು ಪೋರ್ತುಗಲ್ಲದ ಮರ್ದ್ಯೆವದಿಂದ ೧೪೬೦ರಲ್ಲಿ ಸತ್ತನು (ಚರಿಸಂ. ೨೧೮) ; ಖಾಂದೆ ಕಾರ್ವಿಯೆಂದರೆ ಹೆಗಲ ಮೇಲೆ ಶಸ್ತ್ರವಿಟ್ಟುಕೊಂಡು ಸಮುದ್ರದಲ್ಲಿ ಸಂಚರಿಸುವ ನಾವಾಡಿಗರೆಂಬ ಅರ್ಥವಿರುತ್ತದೆಂದು ಹೇಳುತ್ತಾರೆ (ಕಭಾಗೆ. ೧೮೪).

[ನಾವಾಡಿ + -ಗ$_2$]

ನಾವಾರೋಹ (ನಾ). ೧. ಹಡಗಿನಲ್ಲಿ ಪ್ರಯಾಣ ಮಾಡುವವನು; ಸಮುದ್ರಪ್ರಯಾಣಿಕ : "ನಾವಾರೋಹಃ, ನಾವಿಕಃ—ಈ ೨ ಹಱುಗಲೇಱುವಾತಂ" (ಹಲಾಯು. ೬೫-೨೩೬). ೨. ಅಂಬಿಗ ; ನಾವಿಕ. [ಸಂ. (ನೌ + ಆರೋಹ)]

ನಾವಾಸನ (ನಾ) [ಯೋಗ] ಆಸನಗಳಲ್ಲಿ ಒಂದು ; ೫ ಈ ಆಸನದ ಭಂಗಿಯು ಹುಟ್ಟುಗಳಿಂದ ಕೂಡಿದ ನಾವೆಯನ್ನು ಹೋಲುವುದು : ಮುಖ್ಯವಾದ ಕೆಲವು ಆಸನಗಳು—ಅಷ್ಟವಿನ್ಯಾಸಗಳು ೧. ಉತ್ತಾನಾಸನ ೨. ಚತುರಂಗದಂಡಾಸನ . . . ೨೨. ನಾವಾಸನ (ಭಾರದ. ೧೬೭). [ಸಂ. (ನೌ + ಆಸನ)]

ನಾವಿಂದ 'ನಾವಿದ' ನೋ.

ನಾವಿಕ (ನಾ). ೧. ಹಡಗು, ದೋಣಿ ಮೊದಲಾದುವನ್ನು ನಡೆಸುವವನು ; ಅಂಬಿಗ : "ತತ್ಪೋತವಾಹಿ ನಾವಿಕನಕ್ಕುಂ" (ಪಸ್ತುಕೋ. ೨೩-೧೦) ; "ಕರ್ಣಧಾರಃ, ನಾವಿಕಃ—೨ ಹಡಗು ನಡೆಸುವವನ ಹೆಸರು" (ಸಿದ್ಧಾಂತಿ. ೭೧) ; ಇಳಿದು ರಥದಿಂದ ಮಂಜಾಕಿನಿಗೆ ಪೊಡಮಟ್ಟು ಬಳಿಕ ನಾವಿಕರೊಡನೆ ನಾವದೊಳ್ಗಂಗೆಯಂ ಕಳಿದು ನಿರ್ಮಲತೀರ್ಥದೊಳ್ ಮಿಂದು (ಜೈಮಿಭಾ. ೧೯-೭) ; ಕುರಿಯ ಬಾಲವ ಪಿಡಿದ ಗರ್ವದಿ ಶರಧಿಯನ್ನುತ್ತರಿಸಲೆಳಸಲು ಸರಿಸಮಪ್ಪುದೆ ನಾವೆ ನಾವಿಕರೊಲುಮೆಯಿಲ್ಲದೊಡೆ (ಗಗತಾ. ೧೬-೫೬) ; ಅಲ್ಲಿ ತಾನು ಕಂಡ ಪ್ರವಾಸಿಗಳನ್ನೂ ನಾವಿಕರನ್ನೂ ವಿಚಾರಿಸಿ ತಾನೆ ರಚಿಸಿದ ಆತನ ಗ್ರಂಥವು ಪ್ರತ್ಯಕ್ಷತಃ ತೀರ ನಿರ್ದುಷ್ಟವೂ ಅಲ್ಲ ; ಅದರಲ್ಲಿಯ ಹೇಳಿಕೆಗಳು ತೀರ ನಿಷ್ಕೃಷ್ಟವೂ ಅಲ್ಲ (ದ್ರಾವಿವಿ. ೭೦). ೨. ಹಡಗು, ದೋಣಿ ಮೊದಲಾದ ಜಲಯಾನಗಳಲ್ಲಿ ಪ್ರಯಾಣ ಮಾಡುವವನು ; ಸಾಗರದಲ್ಲಿನ ಪ್ರಯಾಣಿಕ : "ನಾವಾರೋಹಃ, ನಾವಿಕಃ—ಈ ೨ ಹಱುಗಲೇಱುವಾತಂ" (ಹಲಾಯು. ೬೫-೨೩೬); "ದೋಣಿಯೇಱುವಂ ನಾವಿಕಂ" (ಮಂಗರಾ. ೭೨-೨೬) ; ಪೊಸದೇಶಗಳ ಕಂಡು ಹಿಡಿವೆನೆಂಬುಲ್ಲಸದಿ ಸಾಹಸದ ನಾವಿಕಂ ತನ್ನ ಹಡಗಿನ ಪಡೆಯೆ ಕೂಡಿ ತೊಡಗುವನು ವಾರಾವಾರಯಾತ್ರೆಯಂ (ಚಿತ್ರಾಂಗ. ೨೧-೫೭೨).[ಸಂ.]

ನಾವಿಕಕಳ್ಳ (ನಾ). ಸಮುದ್ರದ ಮೇಲೆ ಪ್ರಯಾಣ ಮಾಡುವ ಹಡಗುಗಳನ್ನು ಲೂಟಮಾಡುವ ಕಳ್ಳ ; ಕಡಲುಗಳ್ಳ ; ಹಡಗುಗಳ್ಳ : ಆ ಕಾಲದಲ್ಲಿ ಪೋರ್ಚುಗೀಸು ಮತ್ತು ಇತರ ನಾವಿಕಕಳ್ಳರ ಭಯದಿಂದ ಸಮುದ್ರಯಾನದ ಪ್ರಯಾಣಿಕರು ನಾಲ್ಕೈದು ಹಡಗುಗಳನ್ನು ಜತೆಮಾಡಿಕೊಂಡು ಪ್ರಯಾಣಮಾಡುವುದು ಪದ್ಧತಿಯಾಗಿದ್ದಿತು (ಕಪಾಕುಂ. ೧). [ನಾವಿಕ + ಕಳ್ಳ$_1$]

ನಾವಿದ, ನಯಿಂದ, ನಾದಿಗ, ನಾಯಂದ, ನಾಯಿಂದ, ನಾಯಿದ, ನಾವಿಂದ, ನಾವಿಲ$_1$ (ನಾ). ಕ್ಷೌರ ಮಾಡುವುದು ವೃತ್ತಿಯಾಗುಳ್ಳವನು ; ಕ್ಷೌರಿಕ ; ಕೆಲಸಿಗ ; ಹಜಾಮ : "ಕ್ಷುರಮರ್ದೀ, ದಿವಾಕೀರ್ತಿಃ, ಚಂಡಿಳಃ, ನಾಪಿತಃ - ಈ ೪ ನಾವಿದಂ" (ಹಲಾಯು. ೯೬-೪೩೫) ; ಕದಂಬೂರಾ ನಾಲ್ಪದಿನ್ಪರು ವಿದತ್ತೂರು ನಾವಿದ ಪಂದೆಮು ಅಱಿಯ ಈರೆದೆತ್ತರಾ ಪೊರುಳ್ತ X X X ಱ ಮುನಿಗಿತ್ತು (ಎಕ. X, ಕೋಲಾರ. ೭-೬ ; ಸು. 760) ; ನಾವಿದರ ಗೋಸಾಸಿ ಗುಲುಗಂ ಕಟ್ಟಿ ಸತ್ತು ಸುರಲೋಕಕ್ಕೋದ (ಎಕ. VII, ಶಿಕಾರಿ. ೧೯೫-೫; 1007); ಅನ್ನೆಗಂ ನೆರೆಮನೆಯ ನಾವಿದನ ಪೆಂಡತಿಯಪ್ಪ ದೂದವಿ ಪಾದರಿಗನಂ ಸಂಕೇತಸ್ಥಾನದೊಳಿರಿಸಿ ಪರಿತಂದು (ಪಂಚತಂ. ೭೫-೨) ; ಕೌಂಡಿನ್ಯನೆಂಬ ಋಷಿ ಮೂಱು ಭುವನವಱಿಯೆ ನಾವಿದ ಕಾಣಂ ಭೋ (ಬಸವ. ೫೯೦) ; ನಾವಿದಂ ಕನ್ನೆಯ ಪುರ್ವುಂ ನೊಸಲುಮಂ ಸಮಱಿದಾಗಳ್ (ಬಂಹರಿ. ೯-೭ ಪ) ; ನಾವಿದ ಚಟ್ಟೋಜನ ಮಗ ಸೋವೋಜ ಅಕ್ಷಯಭಂಡಾರವಾಗಿ ನಿತ್ಯಾಧಿಸೇಕಕ್ಕೆ ಕೊಟ್ಟ ಗ ೧ (ಸೌಇಇ. IX-i, ೩೪೭-೧೮ ; 1276). **ನಯಿಂದ** : ನಯಿಂದರ ಜುಂಜಾಯನ ಮಗ ತಂಮಯಗೆ ಉಂಬಳಿ ಕೊಟ ತೋಟ (ಮೈಅರಿ. ೧೯೩೯, ೨೦-೯ ; 1657). **ನಾದಿಗ** : ನಾದಿಗರು, ಗೌಳಿಗರು, ಅಗಸರು, ಬೇಡರು ಮುಂತಾದ ಕುಲಗಳಿಗೆ ಈ ಮೇಲಿನ ಕಟ್ಟಳೆಗಳು ಹತ್ತುವದಿಲ್ಲ (ಕಭಾಗೆ. ೯೬) ; ನಾದಿಗರ ಬಳಿಯಲ್ಲಿ ರಕ್ತ ತೆಗೆಯುವ ತುಮ್ಮಡಿ ಇರುತ್ತದೆ (ಮುಂಬಯಿ. ೫-೭೭) ; ಇಲ್ಲಿ ಸ್ಲೇಟಿನ ಕಲ್ಲುಗಳೂ, ನಾದಿಗರ ಕತ್ತಿಯನ್ನು ಮಸೆಯುವ ಕಲ್ಲುಗಳೂ ದೊರೆಯುತ್ತವೆ (ವಿಹಾಸ. ೪೧). **ನಾಯಂದ** : ಇವರು ನಾಯಂದರು ಅಸಗರು ಕುಂಬಾರರಿಗೆ ಕಾಲುಗರು ಮೇಲುಕಟ್ಟುಯಿಲ್ಲಯೆನಲಾಗಿ ಕುಂಬಾರ ಸೆಟ್ಟಿಗಳು ಉಂಟುಯೆಂದು . . . ಗೆದ್ದಾಗ ಬರದ ಶಾಸನದ ಕ್ರಮ (ಎಕ. IV, ಎಳಂದೂ. ೨-೫ ; ಸು. 1580 ?). **ನಾಯಿಂದ** : ಶಿಖೆ ಬ್ರಾಹ್ಮಣ . . . ನಖ ನಾಯಿಂದ ಒಡಲು ಡೊಂಬ ದೆನ್ನು ಅಗಸ . . . ಇಂತೀ ಹದಿನೆಂಟು ಜಾತಿ ತನ್ನಲ್ಲಿ ಉಂಟು (ಸರ್ವಪ. ೧೬೧-೬೬೭);

ರಾಮನಾಥಪುರದ ಗ್ರಾ ೧ ಆ ದೇವರಿಗೆ ಸಲುವ ಹಳಿಗಳ ಅಡೆದರೆ ಮಗ್ಗದೆರೆ ಕುಂಮರ ಗಾಣಿಗರ ನಾಯಿಂದರದರೆ ಎರಡು ಗಡಿಯ ಸುಂಕವಳಗಾಗಿ (ಎಕ. XV, ಅರಕ. ೧೧೨-೧೪ ; 1383) ; ನಾಯಿಂದರ ತೆಱಿಗೆ ಕುಂಭಾರತೆಱಿಗೆ . . . ಮುಂತಾದ . . . ಸರ್ವತೆಱಿಗೆಯನು ಶ್ರೀವೀರಪ್ರತಾಪಕ್ರುಷ್ಣರಾಯರಿಗೆ ಪುಣ್ಯವಾಗಬೇಕೆಂದು (ಎಕ. IV, ಗುಂಡ್ಲು ಶಿ. ೩-೧೯ ; 1573) ; ಶ್ರೀಮನ್ಮಹಾಮಂಡಲೇಸ್ವರ ರಾಮರಾಜಯ್ಯವಿಜಲೇಸ್ವರದೇವಮಹಾಅರಸುಗಳು ನಾಯಿಂದರಿಗೆ ಕೊಟ ಶಾಸನ (ಎಕ. XI, ಹಿರಿಯೂ. ೨೯-೧೩ ; 1544) ; ಗಂದಿಗ ಬೋಗಾರ ತಿಲಗಾತಳ ನಾಯಿಂದರ . . . ಜಾಲಗಾಜರ ಗೃಹ ಬೆಂದದಿಂ ಪೊಪ್ಪಿದುವಾಗ (ಶಂನವಿ. ೬-೫೪) ; ಬಾಯಿಂದ ಕೆಟ್ಟ ನಾಯಿಂದ ಮುರುವ (ಗಾದೆ). **ನಾಯಿಂದ** : ರಾಮರಾಜಯ X ಪ ಮಹಾ ಅರಸುಗಳು ಶ್ರೀರಂಗಪಟಣದ ಸೀಮೆಯ ನಾಯಿದರಿಗೆ ಕೊಟರು (ಎಕ. XIV, ಶ್ರೀರಂಗ. ೧೭೯-೪ ; ಸು. 1576) ; ಕೆದಱುದಡೆ ನಾಯಿಂದರ ತಿಪ್ಪೆಯೊಳು ಮುಡಿವಳದ ಬೇರು ಕಾಣಿಪುದೆಯನಗೆ (ರಾಘಚ. ೪-೬೭). **ನಾಯಿಂದ** : "ದಿವಾಕೀರ್ತಿ ಚಂಡಿಲನು ನಾಯಿಂದನಕ್ಕುಂ" (ಮಂಗರಾ. ೧೧೧-೧) ; ಗ್ರಾಮ ೧ ಆ ಮಗ್ಗ ಬೆಱಿ ಮುದು ಭಡಗಿ ಕಂಮಾಱ ಅಸಗ ನಾಯಿಂದ ಕುಂಭಾರ ಮಾದೆಗ ಕಯ್ಕಾಣ ಎತ್ತು ಗಾಣ (ಎಕ. IX(೩), ಬೆಂಗಳೂ. ೧೩೨-೪ ; 408) ; ರಾಮರಾಜವೊಡೆಯರು ನಾಯಿಂದರ ಕೊಂಡೋಜಿಗೆ ಮೆಚ್ಚಿ ಬಿಟ್ಟದು (ಎಕ. VI, ತರೀಕೆ. ೧೩-೬ ; 1545).

ನಾವಿಲ$_1$: ಯಿಂ ರಾಯರಾಷ್ಟದ ಪೊಳಗೆ ತಂಮ ನಾವಿಲಕುಲದ X X X ಯಿಂ ಬಿರಾದವ ಕೊಳುತಿದ್ದರು (ಸೌಇಇ. XX, ೨೩೯-೪ ; 1547) ; ನಾವಿಲರಿಗೆ ಕೊಟ್ಟ ಬಿರಾಡ ಕಾಣಿಕೆ (ಸೌಇಇ. XX, ೨೩೯-೨೧ ; 1547) ; [ರಾ]ಮರಾಜ X X X ತಿಂಮರಾಜ ಮಹಾ ಅರಸುಗಳು ನಾವಿಲರು ತಿಂಮೋಜ ಕೊಂಡೋಜ ಭದ್ರೋಜಗಳಿಗೆ ಕೊಟ್ಟ ಶಾಸನದ ಕ್ರಮವೆಂತೆಂದರೆ (ಸೌಇಇ. XV, ೨೫೯-೧೦ ; 1547) ; ಭತ್ತ ಖಂ ೧೩೦ ನಾವಿಲರಿಗೆ ಖಂ ೬೦ (ಎಕ. VIII, ತೀರ್ಥಹ. ೧೯-೧೦೪ ; 1573).

ನಾಯಿಂದನ ವರಿ = ನಾವಿದವಾರಿ : ನಾಯಿಂದನ ವರಿ ಕುಂಭಾರರು ಕಾಣಿಯಾಲರ ಬೀದಿಗೆ . . . ಅಂತು ಯಿಂ ತೆಱಿಗೆ ಸಹವಾಗಿ ಆದಿ ಯೂರು ಯಿಪತ್ತ ಐದು ಹೊಂನು (ಎಕ. XIV, ಗುಂಡ್ಲು ಶಿ. ೧೨೯-೧೧೦ ; 1521). [<ಪ್ರಾ. ಣಾವಿಅ./ಸಂ. ನಾವಿತ]

ನಾವಿದಗತ್ತಿ, ನಾಯಿಂದಗತ್ತಿ (ನಾ). ಕ್ಷೌರಿಕನ ಕತ್ತಿ ; ಕ್ಷೌರ ಮಾಡುವ ಕತ್ತಿ ; "ಕ್ಷುರ" (ನಾಚಿಂಗ. ೬) : "ಕ್ಷುರಂ, ಕ್ಷುರಿಕಾ, ಈ ೨ ನಾವಿದಗತ್ತಿ" (ಕಾಶಕ್ಕ. ೨೨೪). **ನಾಯಿಂದಗತ್ತಿ** : (೬). [ನಾವಿದ + ಕತ್ತಿ]

ನಾವಿದಗೆಯ್, ನಾವಿದಗೆಯಿ (ನಾ). ಕ್ಷೌರಿಕನಿಗೆ ಬಿಟ್ಟ ಉಂಬಳಿ ಜಮಿನು : ನಾವಿದಗೆಯ್ಕತ್ತರೆಂಟು ಮನೆಯೊನ್ದು ಪಱಿಕಾಱಗ್ಗೆ ಮುತ್ತರ್ಪನ್ನೆರಡು ಮನೆಯೊನ್ದು ಗುಣಶಾಸನದಿನಾಳ್ವರೆ ಸತ್ಕಕ್ಕೆ ಮುತ್ತರ್ನ್ನೂಱು ಮನೆಯೆರಡು (ಎಇ. XX, ೬೮-೨೯ ; 1012). **ನಾವಿದಗೆಯಿ** : ನಾವಿದಗೆಯಿ ೨೦೦ ಮನೆ ಕೈ ೬ (ಕೂಲ್ಹಾ ಕಾ. ೨೩-೫೪ ; ?). [ನಾವಿದ + ಕೆಯ್$_4$]

ನಾವಿದಗೆಯಿ 'ನಾವಿದಗೆಯ್' ನೋ.

ನಾವಿದದೆಱಿ (ನಾ). = ನಾವಿದವಾರಿ : ಪನ್ನಾಯದೆಱಿ ನಾವಿದ ದೆಱಿ ಇನ್ತಿನಸಜ ತೆಱಿಯನು ಧಾರಾಪೂರ್ವಕಂ ಮಾಡಿಪಿಟ್ಟರು (ಎಕ. IV, ಹುಣಸೂ. ೧೩೭-೪೦ ; 1162). [ನಾವಿದ + ತೆಱಿ$_3$]

ನಾವಿದಬಾಳು 'ನಾವಿದವಾಳ್' ನೋ.

ನಾವಿದವಾರಿ (ನಾ). ಕ್ಷೌರಿಕನು ಕೊಡಬೇಕಾದ ಉದ್ಯೋಗ ತೆರಿಗೆ : ಮಹಾಜನಂ ಮಹಾದೇವಯ್ಯಂಗೆ ನಾವಿದವಾರಿಯುಂ ತಳಂದಿ ಗೂಲಿಯುಮನಾವಕಾಲಮುಂ ಪರಿಹಾರಂ ಮಾಡಿದರ್ (ಸೌಇಇ. IX-೫, ೧೩೨-೨೭ ; 1068).

[ನಾವಿದ + ವಾರಿ$_0$ (P←ತಮಿ. ವಾರಿ = ತೆರಿಗೆ)]

ನಾವಿದವಾಳ್, ನಾವಿದಬಾಳು (ನಾ). = ನಾವಿದಗತ್ತಿ : ಚಾಟ್ಳ್ = ಜೀವನಾರ್ಥಂ ; (ನಾವಿದವಾಳ್, ಕೂರ್ವಾಳ್, ಹರಗುವಾಳ್ — ಎಂಬಲ್ಲಿ ಕುಳಂ) (ಶಮದ. ಸರಿ. ೧). **ನಾವಿದಬಾಳು** : ವೀರನ ತೋಳ ಬಾಳುಮಂ ನಾವಿದಬಾಳುಮಂ ಸಮನೆ ಪತ್ತಿಪ ನಾಡೆಯೋ ಮದ್ಭುಜಸ್ಪರ್ಜಂ (ಆಪಂಪು. ೧೧೧-೧೩). [ನಾವಿದ + ಬಾಳ್$_3$]

ನಾವಿದಿತಿ (ನಾ). ೧. ಕ್ಷೌರಿಕನ ಹೆಂಡತಿ. ೨. ನಾಯಿಂದಜಾತಿಯ ಹೆಂಗಸು : ಮೂಲೆಗಾರ್ತಿಯುಸಗಿತಿ ಯೋಗೀಶ್ವರಿಯರ ಕಿಡಿಕಿಡಿಯ ನಾವಿದಿತಿಯರೊಳಂ[ಪಾಂಡಾಂ. ಕಿಡಿಕಿಯ ನಾದಿತಿಯರ ಮುಂದಂ, ಕುಳಗೇಡಿಯನಾವರೀತಿಯೊಳ್]ನುಡಿಯಲೀಯಲಾಗದು ಪಧುವಂ (ಪುಡಿತಿ. ೪-೨೬) ; (ಸೂಕ್ತಿಸು. ೪-೧೦೪ ನೋ) ; ಸ್ವರಲೋಪಕ್ಕೆ — ಳಿಟ್ಟವಳ್ತಿ . . . ನಾವಿದಿತಿ, ಹಾದರಿಗಿತಿ (ಶಮದ. ೨೦೯ ಪ್ರಯೋ).

[ನಾವಿದ + -ಇತಿ$_1$ (<-ಇತ್ತಿ)]

ನಾವಿಲ$_1$ 'ನಾವಿದ' ನೋ.

ನಾವಿಲ$_2$ (ನಾ).. ೧. ಹಡಗನ್ನು ನಡೆಸುವವನು ; ನಾವಿಕ : ನಾವಿಲಂ . . . ನಾವಾ ದಿವ್ಯನ್ ನಾವಿಲ ಇತಿ ನಾವಿಕ ಇತ್ಯರ್ಥಃ (ಶಬ್ದಾಸು. ೪೪೧ ಪ್ರಯೋ). ೨. ಹಡಗಿನಲ್ಲಿ ಪ್ರಯಾಣ ಮಾಡುವವನು. [ನಾವ(<ನಾವೆ) + -ಇಲ]

ನಾವೀನ್ಯ (ನಾ). ಹೊಸತನ ; ನವೀನತೆ : ಇವುಗಳಲ್ಲಿ ಕೇವಲ ಕಲ್ಪನೆಗಳ ಹುಚ್ಚಾಟವಿರದೆ ನೈಜಭಾವದ ನಾವೀನ್ಯವು ತುಂಬಿ ಹರಿಯುವುದು (ಕನ್ನಜಾ. ೮೪) ; ಊರಲ್ಲಿ ಹಳತು ಹೊಸತು ಕೂಡಿ ಬೆರೆತಿರುವಂತೆ ಅವರ ಮನಸ್ಸಿನಲ್ಲಿ ಮಾಲಿನ್ಯವೂ, ನಾವೀನ್ಯವೂ ಸಂಗಮಿಸಿರುವವು (ಸಮಜೀ. ೬) ; ಆ ಬಾಳಿನ ನಾವೀನ್ಯ ನೈರ್ಮಲ್ಯಗಳನ್ನವನು ಮತ್ತೆ ಅನುಭವಿಸಿದಂತಾಯಿತು (ಪುನರು. ೨೭೪). [ಸಂ.]

ನಾವು 'ನಾವೆ' ನೋ.

ನಾವೆ, ನಾವ, ನಾವು (ನಾ). ನೀರಿನ ಮೇಲೆ ಪ್ರಯಾಣ ಮಾಡಲು ಉಪಯೋಗಿಸುವ ಒಂದು ಬಗೆಯ ಯಾನ ; ಹರಿಗೋಲು ; ದೋಣಿ : "ಪೋಗಂ, ಪರೀತಂ . . . ದೋಣಿಯೆಂದೆನಲ್ ನಾವೆಯಕ್ಕುಂ" (ಮಂಗರಾ. ೧೨೦-೪) ; ಈ ಸಂಸಾರಾಂಭೋಧಿಯನೀಸುವ ನಿನಗಿದುವೆ ನಾವೆ ಕಡಿಗಾಕ್ಷಯನಾಯಾಸದೊಳ್ (ಆದಿಪು. ೫-೩೦) ; ಅರಿತ್ರಂ, ಕೋಟಪತ್ರಂ — ಈ ೨ ನಾವೆಯ ಸೋಗೆ (ಹಲಾಯು.೧೧೧-೫೦) ; ಪ್ರಸಾದಪರಿಮಳಮಂ ಘ್ರಾಣಕ್ಕೆ ನಡೆಯಿಸುವ ಸಂಪಗೆಯ ಮುಗುಳ ನಾವೆಯಂತೊಪ್ಪುವ ನಾಸಿಳದ . . . ಬಸವರಾಜಂ ಕಾರಣಿಕಪುರುಷಂ (ಬಸರ. ೨-೨೭) ; ನಾವೆಗಳಿಂದ ನದಿಯನು ದಾಟಿ ಬಳಿಕಲ್ಲಿಂದ ತೆರಳಿದ ಇವರು ಮೂವರು ಕಾಲುನಡೆಗಳಲಿ (ತೊರಂಗ. ೨-೪-೧೪) ; ಆದೊಡೆ ದ್ವೀಪಾಟನಂಗೆಯ್ಕೆ ನಾವೆಯೊಳ್ ಬಂದರಕ್ಕುಂ (ಅದ್ಭುತ. ೪೩-೯). **ನಾವ** : "ನೌ, ನಾವಂ, ನಾವಾ, ಈ ೩ ಹಡಗು" (ಕಾಶಕ್ಕ. ೬೮). 'ನಾವನಿವಾಸಗಾರ್ತಿ' ಪರಾ. **ನಾವು** : ಒಬ್ಬ ಕವಿಯು ಒಂಟಿಯನ್ನು ಅಡವೀನಾವು ಎಂದು ವರ್ಣಿಸಿದ್ದಾನೆ (ಮುಂಬಯ. ೩-೩೭) ; ಆ ನಾಯಕನು ಆ ಆನೆಯನ್ನು ನಾವಿನೊಳಗೇರಿಸಿ . . . ಆಚೆ ದಂಡೆಗೆ ಇಳಿಸಿದನು (ಮುಂಬಯ. ೪-೩೧) ; ಇವರ ನಾವು ಇನ್ನೂ ಆ ಸಂಗನ ದೋಣಿಯಿಂದ ತುಸು ದೂರದಲ್ಲೇ ಹೋಗುತ್ತಿತ್ತು (ಇಂದುಮು. ೬೭).

[<ಸಂ. ನೌ./ಪ್ರಾ. ಣಾವಾ./ಪಾರ.ಹಿಂ. ಮರಾ. ನಾವ್./ತಮಿ. ನಾವಾಯ್; ತುಳು. ನಾವೆ; ತೆಲು. ನಾವ]

ನಾವ್ಯ (ಗು). ೧. ದೋಣಿಯ ಮುಖಾಂತರ ದಾಟಬೇಕಾದ; ದೋಣಿ ಹಾಯಿಸಬಹುದಾದ. ೨. ಹೊಗಳುವುದಕ್ಕೆ ತಕ್ಕ. (ನಾ). ೩. ಹಡಗು, ದೋಣಿ ಮೊದಲಾದ ಸಾಧನಗಳಿಂದ ದಾಟಬೇಕಾದ ಹೊಳೆ ಮೊದಲಾದ ಜಲಾಶ್ರಯ; ಹಾಯ್ದು ಕೊಂಡು ಹೋಗಲಾರದಷ್ಟು ನೀರಿರುವ ಹೊಳೆ; ಹೆಚ್ಚು ನೀರುಳ್ಳ ನದಿ: "ನೌತಾರ್ಯಂ ನಾವ್ಯಂ" (ವಸ್ತುಕೋ. ೧೧೦-೭೨); "ನಾವ್ಯ ಯೆಂಬುದು ಹಱುಗಲಿಕ್ಕುವ ನೀರ್" (ಹಲಾಯು. ೧೦೭-೨೭); "ನಾವ್ಯಂ . . . ಹಡಗು ಅಥವಾ ತೆಪ್ಪ ಅಥವಾ ದೋಣಿ ಮುಂತಾದವುಗಳಿಂದ ಹಾಯ್ದು, ಆಚೇ ದಡಕ್ಕೆ ಸೇರತಕ್ಕ ದುಸ್ತರಜಲವುಳ್ಳ ಹೊಳೆ ಮುಂತಾದುವುಗಳ ಹೆಸರು" (ಸಿದ್ಧಾಂತಿ. ೭೨). ೪. ನವೀನತೆ; ನಾವೀನ್ಯ.

[ಸಂ.]

ನಾಶ (ನಾ). ೧. ಕಣ್ಣಿಗೆ ಕಾಣದೆ ಹೋಗುವುದು; ಅದೃಶ್ಯವಾಗುವುದು. ೨. ಕೆಟ್ಟುಹೋಗುವುದು; ಹಾಳು; ಅಳಿವು: "ವಿಲಯಂ ನಾಶ ಯುಗಾಂತದೊಳ್" (ವಸ್ತುಕೋ. ೧೨೩-೩೪); ದುಃಖಮಿಶ್ರವಾದ ಸುಖ ಇಹಲೋಕದಲ್ಲಿಪ್ಪುದು ನಾಶವುಂಟು ದಿನಕೊಂದು ಬಗೆಬಗೆಯಾದಂಥ ಸುಖವಾಗಿ ನಾಶವಿಲ್ಲದ ಪ್ರಾಕೃತವಾದ ಸುಖವನನುಭವಿಸುತ್ತ ಕ್ರಮದಿ ತಿರುಗುವರು (ಪುರಂದ. ೫-೧೬೧-೧೨೩). ೩. ಸಾವು; ಮರಣ: "ನಿಧನಂ, ನಾಶಃ, ಮೃತ್ಯುಃ . . . ದೀರ್ಘನಿದ್ರಾ - ಈ ೧೨ ಸಾವು" (ಹಲಾಯು. ೧೦೩-೬); "ಮೃತ್ಯು ಮರಣಂ ದೀರ್ಘನಿದ್ರೆ ನಿಧನಂ ನಾಶಂ . . . ವಿನಿವೃತ್ತಿಯೆನೆ ಸಾವಕ್ಕು" (ಮಂಗರಾ. ೧೧೬-೩); "ಪಂಚತಾ, ಕಾಲಧರ್ಮಃ . . . ನಾಶಃ, ಮೃತ್ಯುಃ, ಮರಣಂ, ನಿಧನಂ - ೧೦ ಸಾಯುವುದಕ್ಕೆ ಹೆಸರುಗಳು, ಮರಣ" (ಸಿದ್ಧಾಂತಿ. ೨೭೨).

ನಾಶ ಮಾಡು = ಹಾಳು ಮಾಡು; ನಾಶಪಡಿಸು: ದೋಷರಾಶಿ ನಾಶಮಾಡು ಶ್ರೀಶ ಕೇಶವ (ಕನಕ. ೯೮ ಅನುಪಲ್ಲವಿ); ಈ ನಿಶ್ರಣಗಳನ್ನು ಸರಿಯಾದ ಪ್ರಮಾಣದಲ್ಲಿ ಉಪಯೋಗಿಸಿ ಕ್ರಿಮಿಗಳನ್ನು ನಾಶ ಮಾಡಬೇಕು (ತರಬೆ. ೧೪); ಯಾವುದಾದರೂ ವಿಷಾಪಹಾರಿ (Disinfectant) ದ್ರವ್ಯವನ್ನು ನೀರಿಗೆ ಬೆರೆಸಿ, ನೆಲವನ್ನು ತೊಳೆಯುವುದರಿಂದ ನೆಲದ ಮೇಲೆ ತಂಗುವ ಜೀವಿಗಳನ್ನು ನಾಶ ಮಾಡಲು ಸಾಧ್ಯವಾಗುತ್ತದೆ (ಗೃಹವಿ. ೧೩೮); ನಾಶ ಮಾಡುವವನು ದಾಸನಾದರೆ ಲೇಸು ಮಾಡಿಯಾನೆ? (ಗಾದೆ). ನಾಶವಾಗು = ೧. ಹಾಳಾಗು; ನಷ್ಟವಾಗು: ಶರಣನೆಂತೆಂಬೆನಯ್ಯಾ ಪಂಚೇಂದ್ರಿಯ ನಾಶವಾಗ [ಪಾಠಾಂ. ನಷ್ಟವಾಗ, ನಾಸ್ತಿಯಾಗ] ದನ್ನಕ್ಕ (ಬಸವ. ೫೧೧); ಕ್ಷರ ಎಂದರೆ ನಷ್ಟವಾಗುವುದು. ಕ್ಷೀಣ ಅಥವಾ ನಾಶವಾಗುವುದು (ದ್ರಾವಿವಿ. ೯೩). ೨. ಸಾಯು; ಮರಣ ಹೊಂದು: ಕುದಿಯುವ ನೀರಿಗೆ ಸೀಮೆಯೆಣ್ಣೆಯನ್ನು ಹಾಕಿ ತಿಗಣೆಗಳಿರಬಹುದಾದ ಸ್ಥಳಗಳಿಗೆ ಸಿಚಕಾರಿ ಹೊಡೆದರೆ ಇವುಗಳ ಮೊಟ್ಟೆಗಳು ಮತ್ತು ಮರಿಗಳು ನಾಶವಾಗುವುವು (ಗೃಹವಿ. ೧೮೭); ನಾಶವಾಗುವವರೆಗೆ ಆಶೆ ಬಿಡದು (ಗಾದೆ). [ಸಂ.]

ನಾಶಕ (ಗು). ೧. ಹಾಳು ಮಾಡುವ; ನಾಶ ಮಾಡುವ: ಕ್ಷಯಕಾರಿ, ಖಾದಕ, ನಾಶಕ (corrosive. ಪಾರಿನಿ. ೨೪). (ನಾ). ೨. ಹಾಳು ಮಾಡುವವನು; ಕೆಡಿಸುವವನು; ನಿರ್ನಾಮ ಮಾಡುವವನು: 'ಕುಲನಾಶಕ' ಪರಾ.

[ಸಂ.]

ನಾಶಗುಂದು (ಕ್ರಿ). ಕ್ಷಯಿಸು; ಹಾಳಾಗು: ವೇದವೆಂಬುದನಧಿಕತರವಾಗಿ ನಾಶಗುಂದಿತು ಕಾಲವಶದಿಂದ (ನಿಭಾಗ. ೧೧-೨೧-೨).

[ನಾಶ + ಕುಂದು$_1$]

ನಾಶಗೊಳಿಸು (ಕ್ರಿ). ಕೊಲ್ಲು; ನಿರ್ಮೂಲಗೊಳಿಸು: ಸಂಹಾರ ಮಾಡುವಿಕೆ, ಖೂನೀಮಾಡುವಿಕೆ . . . ನಾಶಗೊಳಿಸುವುದು, ಸಾಯಗೊಳಿಸುವಿಕೆ (ಸಿದ್ಧಾಂತಿ. ೨೭೨); ಇದರಿಂದ ಜಿರಲೆಗಳಿಗೆ ಮಂಕು ಹಿಡಿದಂತಾಗುತ್ತದೆ. ಆಗ ಅವುಗಳನ್ನೆಲ್ಲ ಹಿಡಿದು ನಾಶಗೊಳಿಸಬಹುದು (ಅಡುಸೌ. ೪೯); ಅವುಗಳ ಧೂಮವು ಅಣುಜೀವಿಗಳನ್ನು ನಾಶಗೊಳಿಸುತ್ತದೆ (ಗೃಹವಿ. ೧೮೩). [ನಾಶ + ಕೊಳ್$_1$ + -ಇಸು$_3$]

ನಾಶನ (ನಾ). ೧. ಹಾಳು; ನಾಶ; ನಿರ್ಮೂಲ; ಧ್ವಂಸ: ನಿನ್ನ ಕುಲ ನಾಶನಾಗ! (ಕಾನೂರು. ೧೬೦); ನನ್ನ ಹೊಟ್ಟೆ ಉರಿಸುತ್ತೀಯಲ್ಲ, ನಿನ್ನ ಮನೆ ನಾಶನವಾಗಿ ಹೋಗದೆ ಇರುವುದಿಲ್ಲ (ರೂಢಿ). ೨. ಒಂದು ಬಗೆಯ ನರಕಶಿಕ್ಷೆ: ಮತ್ತಂ ನಾಶನ . . . ದುರ್ಭೋಗ್ಯ ನಾನಾವಿಧಾಸಂಖ್ಯಾತ ತೀವ್ರವೇದನಾರೂಪಂಗಳಾಗಿ ಶಿವದ್ರೋಹಿಗಳಿಗೆ ನಿಷ್ಕಾರುಣ್ಯದಿಂ ಮಾಳ್ಪ ಶಿಕ್ಷಾಲೇಶಮೆಂದೆನಿಸಿ (ವಿವೇಕ. ೧೮೧). [ಸಂ.]

ನಾಶಪಡಿಸು (ಕ್ರಿ). ಹಾಳುಮಾಡು; ಧ್ವಂಸಮಾಡು; ನಿವಾರಿಸು; ಇಲ್ಲದಂತೆ ಮಾಡು: ಅದಿತಿಪುತ್ರರಾದ ಮಿತ್ರ, ಅರ್ಯಮ ಮತ್ತು ವರುಣ ಈ ಮೂರು ದೇವತೆಗಳೂ . . . ಉತ್ತಮವಾದ ಕರ್ಮಜ್ಞಾನವುಳ್ಳವನೂ, ಕರ್ಮವನ್ನು ಆಚರಿಸುವವನೂ ಆದ ಪುರುಷನನ್ನು ಸಮೀಪಿಸಿ ಅವನ ಪಾಪವನ್ನು ನಾಶಪಡಿಸುತ್ತ ಅವನನ್ನು ಉತ್ತಮ ಮಾರ್ಗಕ್ಕೆ ಒಯ್ಯುತ್ತಾರೆ (ಹುಕ್ಸಾರ. ೧೩೦); ಕೋಣೆಯೊಳಗೆ ನೊಣ ಮತ್ತು ಸೊಳ್ಳೆಗಳಿಗೆ ಅವಕಾಶವೇ ಇರಕೂಡದು. ಕೋಣೆಯೊಳಗಿರತಕ್ಕಂತಹವುಗಳನ್ನು ನಾಶಪಡಿಸಬೇಕು (ಕಲರೋ. ೬).

[ನಾಶ + ಪಡಿಸು]

ನಾಶಹೇತು (ನಾ). ನಾಶಕ್ಕೆ ಕಾರಣವಾದುದು: ನಾಶಹೇತುಗಳೊಗೆದುವು ಸುತ್ತಿಟುದು ಧೂಮಕೇತುಗಳಾಗಳ್ (ಚಂದ್ರಪು. ೬-೧೫).

[ನಾಶ + ಹೇತು$_2$]

ನಾಶಹೊಂದು (ಕ್ರಿ). ಹಾಳಾಗು; ಧ್ವಂಸವಾಗು; ನಿವಾರಣೆಯಾಗು: ಹುಳುಗಳನ್ನು . . . ಹಳ್ಳಗಳಲ್ಲಿ ಸುರಿದು ಸುಡಬೇಕು ಹೀಗೆ ಮಾಡುವುದರಿಂದ ಮೊಟ್ಟೆ—ಮರಿಗಳೆಲ್ಲವೂ ನಾಶಹೊಂದುತ್ತವೆ (ತರಬೆ. ೧೩). [ನಾಶ + ಹೊಂದು$_1$ (<ಪೊರ್ದು)]

ನಾಶಿ 'ನಾಸಿ' ನೋ.

ನಾಶೀಪುಡಿ 'ನಾಸೀಪುಡಿ' ನೋ.

ನಾಶ್ತಾ, ನಾಷ್ಟಾ, ನಾಷ್ಠಾ (ನಾ). ಬೆಳಗಿನ ತಿಂಡಿ; ಅಲ್ಪಾಹಾರ; ಉಪಾಹಾರ: ನಿಮ್ಮ ನಾಶ್ತಾ ಸಿದ್ಧವಾಗುತ್ತಿದೆ. ಇನ್ನು ಎರಡು ನಿಮಿಷಗಳಲ್ಲಿ ತರುತ್ತೇನೆ (ಸಮಜೀ. ೮೩೫). **ನಾಷ್ಟಾ**: ಇನ್ನು ನಾಷ್ಟಾನೆ ಮಾಡಿಲ್ಲ ಕಣಯ್ಯ (ರುದ್ರಿಮ. ೧೧). **ನಾಷ್ಠಾ**: ನಾಯಕನು ಶಿವಪೂಜೆ ಮುಗಿಸಿಕೊಂಡು, ನಾಷ್ಠಾ ಮಾಡಿಕೊಂಡು . . . ದಿವಾನ್‌ಖಾನೆಯಲ್ಲಿ ಕುಳಿತಿದ್ದನು (ಮಲ್ಲಿ. ೨೯); ಹೋಟಲಿಗೆ ನಾಷ್ಠಾಕ್ಕೆ ಕರೆದೊಯ್ದ (ಭೀಮಕಾ. ೬೩).

[←ಪಾರ. ನಾಶ್ತಾ, ನಾಸ್ತಹ್; ಹಿಂ. ನಾಶ್ತಾ, ನಾಸ್ತಾ; ಮರಾ. ನಾಷ್ಟಾ, ನಾಸ್ತಾ]

ನಾಶ್ಯ (ಗು). ಹಾಳಾಗಬಲ್ಲ; ನಾಶವಾಗುವ. [ಸಂ.]

ನಾಷ್ಟಾ 'ನಾಶ್ತಾ' ನೋ.

ನಾಷ್ಠಾ 'ನಾಶ್ತಾ' ನೋ.

ನಾಸ (ನಾ). ಮೂಗು ; ನಾಸಿಕ : ತರಳನೋಟದ ವರಸುನಾಸದ . . . ಕರದರಾಂಬುಜ ವಜ್ರಚಿಹ್ನೆಯಲೊಪ್ಪಿದಳು ದೇವಿ (ಕೌತರಾ. ೨-೩) ; ಕರ್ಣ ಗೀತಂಗಳ ಕೇಳಲಿ ನಿನ್ನ ನಿರ್ಮಾಲ್ಯ ನಾಸವಾಘ್ರಾಣಿಸಲಿ ಹರಿಯೆ (ಪುರಂದ. ೧-೨೧-೧) ; ಕುಮುದವಕ್ಷಿಗಳೊಳಾ ಚಂಪಕಂ ನಾಸದೊಳ್ . . . ಕೇತಕಿಯುಗುರ್ಗಳೊಳಗೆ ಕ್ರಮದಿಂದೆ ಮಚ್ಚರಿಸಲು (ಚಿಬಪು. ೧೦-೪). 'ನಾಸೆ' ಪರಾ. [ಸಂ. ನಾಸಾ]

ನಾಸತ್ಯ (ನಾ). ಅಶ್ವಿನಿದೇವತೆಗಳಲ್ಲಿ ಒಬ್ಬ ; ದೇವತೆಗಳ ವೈದ್ಯ : "ನಾಸತ್ಯೌ, ಅಶ್ವಿನೌ, ದಸ್ರೌ, ದೇವಭಿಷಕ್ಕೌ—ಈ ೪ ದೇವರ ವೈದ್ಯರ್" (ಹಲಾಯು. ೧೫-೮೪) ; "ದೇವಚಿಕಿತ್ಸಕರಶ್ವಿನಿದೇವರ್ ನಾಸತ್ಯರಶ್ವಿಗಳ್ ದಸ್ರಾಖ್ಯರ್" (ವಸ್ತುಕೋ. ೧೦-೫೩) ; ನರರಾಕೃತಿಯನಾಂತು ನಾಸತ್ಯರೇಂ ನೆಲಕೆ ಬರವಾಯ್ತೊ (ವೆಂಕಾರಾ. ೩-೯-೧೧) ; ಸೂರ್ಯಂ ಸರಣ್ಯಯಂ ಕೂರ್ತು . . . ತಾಂ ಕುದುರೆಯಾಗಿ ಪೆಣ್ಣುದುರೆಯಾಗಳನೊಂದಿ ನಾಸತ್ಯರಂ ಪುಟ್ಟಿಸಿದನೆಂದಪರ್ (ಸೌನಂದ. ೭-೨೬). [ಸಂ.]

ನಾಸವಾತ (ನಾ). ಮೂಗಿಗೆ ಉಂಟಾಗುವ ಒಂದು ಬಗೆಯ ರೋಗ : ಹಿಂಗ್ವಾದಿಚೂರ್ಣ . . . ಅಲ್ಲದ ರಸದಿ ಕೊಳ್ಳೆ . . . ಕ್ರಿಮಿ, ಶ್ವಾಸ, ನಾಸವಾತ, ಶೂಲೆ ಎಲ್ಲಾ ಮಾಣ್ಗುಂ (ವಿನೈವಿ. ೫೮). [<ಸಂ. ನಾಸಾವಾತ]

ನಾಸಾಂತರ (ನಾ). ಮೂಗಿನ ರಂಧ್ರ ; ಹೊಳ್ಳೆ : ಗಳಸುಂಟ(ಟ)ಗೆ ಕಿಡುಗುಂ ಪಿಪ್ಪಲಿ ಕಾಮನ ನಸ್ಯದಿಂದೆ ನಾಸಾಂತರದೊಳ್ ಕಳೆಯಿಸೆ ರಕ್ತಮನಂತದು ಕಳೆಗುಂ ಕರಮೊದವಿ ತೋಱುವುಪಜಿಹ್ವಿಕೆಯುಂ (ಲೋಕೋಪ. ೯-೯೮). [ಸಂ.]

ನಾಸಾಗ್ರ (ನಾ). ೧. ಮೂಗಿನ ತುದಿ ; ತುದಿಮೂಗು : ನಾಸಾಗ್ರದೆದಿಟ್ಟ ಮಟ್ಟಮಿರೆ . . . ಏಂ ಕರಮೊಪ್ಪಿರ್ದನೊ ಪುಷ್ಪದಂತಮುನಿಪಂ ಯೋಗೋಪಯೋಗಸ್ಥಿತಂ (ಪುಷ್ಪಪು. ೧೪-೩೧) ; ಅರೆಮುಗುಳಾದ ಕಣ್ಣಳ ನಾಸಾಗ್ರದೊಳಿರಿಸಿ . . . ಜಾನಿಸಿದನಾ ಮಂತ್ರಿ ನಿರ್ಜರರಾಜನ ಬೇಗದೊಳು (ಕುರುಸಾಂ. ೩೬-೮) ; ನಾಸಾಗ್ರನ್ಯಸ್ತಾಂಬಕನಾ ಸುಭಗಂ . . . ಭಾಸುರಹರಿಯಂ ಜಾನಿಸುತ (ಯಾದಚಂ.೧೪-೭೬). ೨. ಮೂಗಿನ ಆದಿಭಾಗ ; ಹುಬ್ಬಿನ ಮಧ್ಯ ; ಭ್ರೂಮಧ್ಯ : ನಾಸಾಗ್ರವೆಂದರೆ ಭ್ರೂಮಧ್ಯವೆಂದರ್ಥ (ಉತ್ತಟೀ. ೮-೪). [ಸಂ.]

ನಾಸಾಚ್ಛೇದ (ನಾ). ಮೂಗನ್ನು ಕೊಯ್ಯುವುದು : ಅರಸ ಕರ್ಣಚ್ಛೇದವೇ ಭಯಸಿರಿಯ ನಾಸಾಚ್ಛೇದವಿನ್ನರವರಿಸದಿರು ಹೊಯ್ದಾಡಿ ಹೊಗಳಿಸು ಬಾಹುವಿಕ್ರಮವ (ಕುವ್ಯಾಶ. ೧-೧೬). [ಸಂ.]

ನಾಸಾಛೇದ (ನಾ). = ನಾಸಾಚ್ಛೇದ : ನಾಸಾಛೇದವಾದವಳಿಂದ ನೀ ಮರುಳಾದ ಕಾಮುಕತನದಿ ಕಂಗಾಣದೆ ವಿಭೀಷಣನ ವೇದಮಾರ್ಗದ ಮಧುರವಚನವನಾದರಿಸದುಱ್ ಕೆಟ್ಟೆ (ತೊರರಾ. ೬-೧೦-೫೩). [ಸಂ.]

ನಾಸಾನಿಲ (ನಾ). ಮೂಗಿನಿಂದ ಹೊರಕ್ಕೆ ಬರುವ ಗಾಳಿ; ನಿಶ್ವಾಸ: ನಾಸಾನಿಲನ ಕಂಪು ಸುಳಿಯೆ . . . ನಿತ್ಯನಾಗೆಸೆವ ಪಂಪಾವಿರೂಪಾಕ್ಷ ಸೂರ್ಯನಾನಂದಮಂ ನಮಗೀಯಲಿ (ಚಿಬಪು. ೧-೨). [ಸಂ.]

ನಾಸಾಪುಟ (ನಾ). ೧. ಮೂಗಿನ ಹೊಳ್ಳೆ,—ರಂಧ್ರ : ಕೋಪದ ಪೆರ್ಚೊಳ್ ನಡುಗುವೂರುಯುಗಂ ಕಡುಪಿಂದರಲ್ತ ನಾಸಾಪುಟಂ . . . ಭುಜಾಗಳಂ ರಿಪುಗಳಗ್ರಹಮಾದುದು ಭೀಮಸೇನನಾ (ಪಂಪಭಾ. ೭-೬) ; ಅರಳ್ವ ನಾಸಾಪುಟಂ . . . ಹುರಿಯೊಡೆದ ರೋಮಂ ತೂಗಿ ತೊನೆದು ನೆಯ್ಮುಱುವ ಹಂದಿಯನು ಕೌಶಿಕ ಕಂಡನು (ಹಚಕಾ. ೬-೬೦) ; ನಾಸಾಪುಟದೊಳ್ ವಿತ್ತವಿನಾಶನಮಂ . . . ಪತಿಗೆ ಮಾಟ್ಟು ಮಾವರ್ತಂಗಳ್ (ಅಶ್ವಶಾ. ೪-೧೬) ; ಘೂತ್ಕೃತಿ ಬಲಿದ ನಾಸಾಪುಟದ . . . ದಂತಿಗೆಳೆಸೆದವೊಗ್ಗಿನಲಿ (ಕುವ್ಯಾದ್ರೋ. ೧೭-೧೮) ; ಹೊದಱಿದ್ದ ಕಂಗಳ ಕಿಡಿಯ ನಾಸಾಪುಟದ ಕಬ್ಬೊಗೆಯ ಎದ್ದ ರೋಷದಿ ಮೂಱು ಲೋಕವನದ್ದಿ ನುಂಗುವ ಹರನ ಖತಿಯನು ಕದ್ದನೆನೆ ಕಾಲಿಕ್ಕಿದನು ನಿಜರಥದೊಳಿಂದ್ರಜಿತು (ತೊರರಾ. ೬-೪೨-೩೨) ; ಹುಂಕಾರದೊಡನೆ ನಿಶ್ವಾಸಮಂ ಬಿಡುವ ನಾಸಾಪುಟಂ ಜ್ವಾಲೆಯಿಂದದೊಳೊಪ್ಪಿರೆ ಕಿಡಿ ಹಿಡುವ ಕೋಪಮಂ ತಾಳ್ದಂ ಧನಂಜಯಂ (ಜೈಮಿಭಾ. ೧೩-೩೬). ೨. ಮೂಗು ; ನಾಸಿಕ : ನಾಗಚಂಪಕಳುಟ್ಟಲಾನುಕಾರಿ ನಾಸಾಪುಟ ವಿಕಸಿತಮುಕುಲಶೋಭಿತ ಚಂಪಕಂಗಳಂ . . . ನಿಂದು ಮೆಲ್ಲಮೆಲ್ಲನೆ ನೋಡುತ್ತಂ (ಸುಕುಮಾ. ೯-೧೦೬ ಸ) ; ತನ್ನಚ್ಚಯ ಮುರಿನೋಟದ ವಿಶ್ರಾಂತಿಯೆಡೆಯಿದನೆ ನೀಳ್ದ ನಾಸಾಪುಟಂ ರಂಜಿಸೆ . . . ವಾಲ್ಮೀಕಿ ತಾನಾ ಬಟ್ಟೆಯೊಳೆ ಬರುತುಮಿರ್ದಂ (ರಾಮಾಶ್ವ. ೪೦-೨೨) ; ದೇಶ ಚರಿತೆಗಮವರ ಜಸಕಮಂಕುಶವಾಯ್ತು ನಾಸಾಪುಟದ ರೇಖೆ (ಮಂಕುಶ. ೩೦೬). [ಸಂ.]

ನಾಸಾಭರಣ (ನಾ). ಮೂಗಿಗೆ ಹಾಕಿಕೊಳ್ಳುವ ಒಂದು ಬಗೆಯ ಒಡವೆ ; ಮೂಗುತಿ ; ಮೂಗುಬೊಟ್ಟು : ನಸುನಗುಮುಖವು ನಾಸಾಭರಣ ಎಸೆವ ಕಪೋಲ . . . ಶಶಿಸೂರ್ಯರ ಆಭರಣ ಸುಶೋಭಿತೆ (ಪುರಂದ. ೧-೧೯೧-೪). [ಸಂ.]

ನಾಸಾಮಣಿ (ನಾ). ೧. = ನಾಸಾಭರಣ. ೨. [ಸಂಗೀತ] ಒಂದು ರಾಗದ ಹೆಸರು : ಜ್ಯೋತಿರಾಗ ಮತ್ತು ಧೌತಪಂಚಮರಾಗ, ಅಮೇಲೆ ನಾಸಾಮಣಿ (ಚತುಪ್ರ. ೧೨೯). [ಸಂ.]

ನಾಸಾರೋಗ (ನಾ). ಮೂಗಿಗೆ ಬರುವ ರೋಗ,—ಖಾಯಿಲೆ : ವಾತಜಪ್ರತಿಶ್ಯಾಯ . . . ನಾಸಿಕಾರ್ಬುದ, ಏಂದು ಹೀಗೆ ನಾಸಾರೋಗ ಹದಿನೆಂಟು ತೆಱನೆಂದು ವೈದ್ಯರು ನಿರೂಪಿಸಿದರು (ವೈದ್ಯಸಾ. II, ೧೦೦). [ಸಂ.]

ನಾಸಾವಂಶ (ನಾ). ಮೂಗಿನ ನಡುಮೂಳೆ,—ಕಂಬಿ,—ಸಿಂಬೆ : ನಾಸಾವಂಶದೊಳಂತಕವಾಸಮನಾ ಪತಿಗೆ ಮಾಟ್ಟುಮಾವರ್ತಂಗಳ್ (ಅಶ್ವಶಾ. ೪-೧೬) ; ಪ್ರೋಥದ ಕಣ್ಣೆಡೆ ಘೋಣಮದಾ ತೆಱ ಮೂಗೆಸೆವ ಕಂಬಿ ನಾಸಾವಂಶಂ . . . ಪೆಸರೋತಿರ್ಕುಂ ಮೂಗಿನೊಳಗುಮಶ್ವಾಗಮದೊಳ್ (ಅಶ್ವಶಾ. ೯-೧೩). [ಸಂ.]

ನಾಸಾವಳಯ (ನಾ). ಮೂಗು ; ನಾಸಿಕ : ಸುಳಿದುದಾ ಕಾಂತಾರ ಮಧ್ಯಸ್ಥಳದೊಳಗೆ ನರಗಂಧ ನಾಸಾವಳಯದಲಿ ನೈಶಾಟಕುಲದಾಟವಿಕಿ ತಾಟಕಿಯ (ತೊರರಾ. ೧-೧೦-೫). [ಸಂ. ನಾಸಾವಲಯ]

ನಾಸಾವಿರ 'ನಾಲ್ಬಾಸಿರ' ನೋ.

ನಾಸಾವಿವರ (ನಾ). = ನಾಸಾಪುಟ ೧ : ಹರಿಪದಪರಾಙ್ಮುಖಜೀವಿಗಳು . . . ತತ್ಪಾದತುಳಸೀಪಾವನಾಮೋದವನು ನಿಜನಾಸಾವಿವರವೆಡೆಗೊಳ್ಳದುಸುರುವೆಣಂಗಳವರೆಂದ (ನಿಭಾಗ. ೨-೨-೬). [ಸಂ.]

ನಾಸಿ, ನಾಶಿ (ನಾ). ನಾಸೀಪುಡಿ ; ನಸ್ಯ. 'ನಾಸೀಪುಡಿ' ಪರಾ. **ನಾಶಿ** : ನಾಶಿ ಬೇಕಾಗಿತ್ತೇನ? (ಬೆನ್ನುಹಿಂ. ೭೧). [<ನಾಸ./ತುಳು. ನಾಸ್]

ನಾಸಿಕ (ನಾ). ಶರೀರದ ಪಂಚೇಂದ್ರಿಯಗಳಲ್ಲಿ ಒಂದು ; ಘ್ರಾಣೇಂದ್ರಿಯ ; ಮೂಗು : "ನಾಸಿಕಂ ಸಿಂಘಿನಿ . . . ನಾಸೆಯೆನೆ ಮೂಗಕ್ಕುಂ" (ಮಂಗರಾ. ೯೪-೫); ನಾಸಿಕ ವಾಯುವಿನ ಸ್ಥಾನ (ಬಸವ. ೮೪೪) ; ಸಾಸಿವೆಯ ಹಾಲು ಸಾಥಕಾಂಗಂ ನಾಸಿಕದ ನೀರ ಬರಿಸಿತ್ತು (ಕಲ್ಯಾಶಾಂ. ೯-೧೦೪) ; ಸುಳಿವ ತಂಗಾಳಿಯಿಂ ತೀಡುವ ಸುಗಂಧಮಂ ವಾಸಿಸಿದ ನಾಸಿಕಕೆ ನಾಡೆ ಹೊಲೆಯಿಲ್ಲ ಸೋಂಕಿಂಗೆ ಹೊಲೆಯುಂಟಾಯ್ತೆ (ಹಚಕಾ. ೭-೧೯) ; ಕರದ ಚಳಕದ ಕಾದ ನಾಸಿಕದೆರಲ

[ಪಾಠಾಂ. ವೆರಳ]ಕೆತ್ತುವ ಮೀಸೆಗಳ ಭಟರೆಚ್ಚರುರವಣಿಸಿ (ಕುಪ್ಯಾಕ. ೨೩-೫) ; ನಾಸಿಕದಲುಸುರಿರಲು ಸೀತೆಯ ಬಿಡುವುದಿಲ್ಲೆಂದ (ಕೌಶಿಂ. ೨೩-೩೧). 'ನಾಸಿಕೆ' ಪರಾ. [ಸಂ. ನಾಸಿಕಾ]

ನಾಸಿಕಾಗ್ರ (ನಾ). ೧. ಮೂಗಿನ ತುದಿ ; ತುದಿಮೂಗು : ಭ್ರೂಮಧ್ಯದೆಡೆಯೊಳು ನಾಸಿಕಾಗ್ರದೊಳು ನೇಮದಿಂದ ದೃಷ್ಟಿಯ ನಿಲ್ಲಿಸಿ ಪ್ರೇಮದಿ ಪುರಂದರವಿಠಲನ ಭಜಿಸುತ (ಪುರಂದ. ೪-೧೪೪-೩) ; ಕೈದಳದೊಳೆಸೆವ ತಲೆಯಂ ನಾಸಿಕಾಗ್ರದೆಡೆಗೊಯ್ದು ಮುರಮಥನನಾ ಘ್ರಾಣಿಸಿದನು (ಜೈಮಿಭಾ. ೧೩-೫೨). ೨. ಮೂಗಿನ ಆದಿಭಾಗ ; ಭ್ರೂಮಧ್ಯ : ನಾಸಿಕಾಗ್ರ ಭ್ರೂನಿಟಲ ಮಧ್ಯದೊಳ್ಪ್ರಜ್ವಲಿಸಿ ಬೆಳಗುವ ಸ್ವಯಂಪ್ರಕಾಶಲಿಂಗಕ್ಕೆ ಆಕಾಶದಿಂದೊಸರ್ದ ಅಗ್ಗವಣಿಯಿಂ ಮಜ್ಜನವಂ ಮಾಡಿ (ಅದಪ. ೨೮-೮೪). [ಸಂ.]

ನಾಸಿಕಾಚೂರ್ಣ (ನಾ). ನಶ್ಯ ; ನಸ್ಯ. [ಸಂ.]

ನಾಸಿಕಾಪುಟ (ನಾ). = ನಾಸಾಪುಟ ೧ : ತನ್ನ ಕದಪುಗಳೊದಗೆ ಪುರ್ಬುಗಳುಂ ನಯಂಬಡೆ ನಾಸಿಕಾಪುಟದಿಂ ನಡೆಯಲು ಶ್ವಾಸವಧರಂ ಮಿಡುಕೆ ಮುಖವೆತ್ತಿ (ಬಸಪು. ೪೭-೫೮). [ಸಂ.]

ನಾಸಿಕಾಭರಣ (ನಾ). ಮೂಗಿಗೆ ಹಾಕಿಕೊಳ್ಳುವ ಮೂಗು ಬೊಟ್ಟು, ನತ್ತು, ಬುಲಾಕು ಮುಂತಾದ ಒಡವೆ : ಸ್ತ್ರೀಯರು ಗಳಿಗೆ ಶುಭವನ್ನೂ, ಶ್ರೇಷ್ಠತ್ವವನ್ನೂ ಉಂಟುಮಾಡಿ . . . ಪ್ರಕಾಶಿಸುವುದೇ ನಾಸಿಕಾಭರಣದ ಗುಣ (ಸಕವೈ. ೩೭). [ಸಂ.]

ನಾಸಿಕಾವಿಜ್ಞಾನ (ನಾ). ೧. ಘ್ರಾಣೇಂದ್ರಿಯದಿಂದ ಉಂಟಾಗುವ ತಿಳಿವಳಿಕೆ. ೨. [ಬೌದ್ಧ] ಪ್ರವೃತ್ತಿ ವಿಜ್ಞಾನದ ಆರುಬಗೆಗಳಲ್ಲಿ ಒಂದು : ಪ್ರವೃತ್ತಿವಿಜ್ಞಾನವು ಚಕ್ಷುರ್ವಿಜ್ಞಾನ, ಶ್ರೋತ್ರವಿಜ್ಞಾನ, ನಾಸಿಕಾವಿಜ್ಞಾನ, ರಸನಾವಿಜ್ಞಾನ, ಕಾಯವಿಜ್ಞಾನ, ಮನೋವಿಜ್ಞಾನ ಎಂದು ಆರು ಪ್ರಕಾರವಾಗಿದೆ (ಹಿಂದಸಾ. ೨೯). [ಸಂ.]

ನಾಸಿಕೆ (ನಾ). ೧. ಮೂಗು ; ನಾಸಿಕ : "ಮೂಗು ನಾಸಿಕಾ ಘ್ರಾಣ ಸಿಂಘಿನೀ ಘೋಣಾಖ್ಯಂ" (ವಸ್ತುಕೋ. ೭೦-೧೭) ; ಕೊರಲುಂ ಜಿಹ್ವಾಮೂಲಮುಮುರಮುಂ ತಾಲುಗೆಯುಮೋಸ್ಠಮುಂ ನಾಸಿಕೆಯುಂ ಶಿರಮುಂ ದಂತಮುಮೆಂದಕ್ಕರಮುದಯಿಪ ತಾಣ ಮಾದುವೀ ಪೇಟ್ಡಿಂಟುಂ (ಶಮದ. ೩೦) ; ಅವರಿಸುವ ಮಧುಕರದ ಝುಂಕಾರದಿ ತೀವಿ ಕರ್ಣಕೆ ಸುಖಗೊಡುವ ಪಾವನ ಪರಿಮಳದೊಳು ನಾಸಿಕೆಯನುಱೆ ಕಾವಲಿಕ್ಕಿತು ಗಂಧವಸರ (ವರ್ಧಚ. ೧-೧೦೮). ೨. ಆನೆಯ ಸೊಂಡಿಲು. [ಸಂ. ನಾಸಿಕಾ]

ನಾಸಿರ (ನಾ). ೧. ಸೇನೆಯ ಮುಂಭಾಗ ; ಮುಂದುಗಡೆಯ ಸೈನ್ಯ ; ಮುಂಚೂಣಿ : ನಾಸಿರದೊಳ್ ಸುನಾಸೀರನಂತೆಸೆವ ನಿನಗೆ ಸಕಲ ಸುಭಟ ಸಾಧಾರಣ ಕಪಿಧ್ವಜಂ (ಕಕುಮಾ. ೮-೧೦). ೨. ಮುಂಚೂಣಿಯ ಭಟ. [ಸಂ.]

ನಾಸೀಪುಡಿ, ನಾಶೀಪುಡಿ (ನಾ). ಮೂಗಿಗೆ ಹಾಕಿಕೊಳ್ಳುವ, ಹೊಗೆಸೊಪ್ಪಿನಿಂದ ತಯಾರಾದ ಪುಡಿ,—ಚೂರ್ಣ ; ನಸ್ಯದ ಹುಡಿ : ಅವುಗಳ (ಮೊಸಳೆ) ಮೈಬಣ್ಣವು ನಾಸೀಪುಡೀ ಬಣ್ಣದಂತೆ ಇರುತ್ತದೆ (ಮುಂಬಯಿ. ೪-೧೨೮) ; ಕಿಸೆಯೊಳಗಿಂದ ನಾಸೀಪುಡಿಯ ಡಬ್ಬಿಯನ್ನು ಹೊರತೆಗೆದು ಮನಸ್ಸಿನ ಬೇಸರ ಮರೆಯಲು ನಾಸೀಪುಡಿಯ ಮರೆಹೊಕ್ಕರು (ಮೂರುದಾ. ೮೨). **ನಾಶೀಪುಡಿ** : ಟೊಂಕದಲ್ಲಿಯ ನಾಶೀಪುಡಿಯ ಡಬ್ಬಿಯನ್ನು ತೆಗೆದು ನಾಶಿ ಏರಿಸುತ್ತಾ ಬಾದ-ಆಚಾರ್ಯರು ನುಡಿದರು (ಜೀವಪ್ರ. ೧೦) ; ಮಂಗಳೂರಿನ ಖಾರದ ಹಳದೀ ನಾಶೀಪುಡಿ . . . ವಾಸನೆ ನನ್ನ ಮೂಗಿನಲ್ಲಿ ಸೇರಿದಂತಾಯಿತು (ಚೆಂದುಟ. ೧೦೭) ; ಶಿವರಾಮನು . . . ನಾಶೀಪುಡಿ ಬಣ್ಣದ ತನ್ನ ಕೋಟು ಹಾಗೂ ಗೆರೆಗೆರೆಯ ಷರ್ಟು ತೆಗೆದಿಡುವನು (ಪ್ರತಿಬಿಂ. ೨೯). [ನಾಸಿ + ಪುಡಿ]

ನಾಸೀರ (ನಾ). ೧. = ನಾಸಿರ ೧. ೨. = ನಾಸಿರ ೨ : ಮೋಹದಿ ಮುಳುಗಿ ಶೋಕಿಸುತ ನಾಸೀರಮುಳಿದ ಖಿ[ಬ]ಲಂದತಳ್ಕಿ ಬಳ್ಳುತ ಸುರೇಶನೇಹಿತ ಕರಂಗಳಂ ಮುಗಿದು ಕೌಸಲ್ಯೆಯನ್ನು ಪ್ರಾರ್ಥನೆಗೈದನು (ವೆಂಕಾರಾ. ೨-೨೩-೯). [ಸಂ.]

ನಾಸೆ (ನಾ). ೧. = ನಾಸಿಕ : "ನಾಸಿಕಂ ಸಿಂಘಿನಿ ಘ್ರಾಣಮಾ ಘೋಣಮೆನೆ ನಾಸೆ [ಪಾಠಾಂ. ನಾಸಿಯೆನೆ] ಮೂಗಕ್ಕು" (ಮಂಗರಾ. ೯೪-೫) ; "ನಾಸೆ (ನಾಸ)- ನಾಸಾ" (ತದ್ಭಕೋ. ೨೧). ೨. ಆನೆಯ ಸೊಂಡಿಲು. ೩. ಚಾಚಿಕೊಂಡಿರುವ ಬಾಗಿಲ ಮೇಲುಭಾಗದ ತೊಲೆ,—ಬಡು ; "ಬಾಗಿಲ ಮೇಲೆ ಹಾಕಿದ ಮರ" (ಅಮರ. ಟೀಕೆ). [ಸಂ. ನಾಸಾ]

ನಾಸ್ತಿ (ನಾ). ಇಲ್ಲದಿರುವಿಕೆ ; ಅಭಾವ : ನಿಮ್ಮ ಅನುಭಾವದಿಂದ ಎನ್ನ ಭವಂ ನಾಸ್ತಿಯಾಯಿತ್ತು (ಬಸವ. ೮೪೨) ; ತನುಗುಣ ನಾಸ್ತಿ ಮನಗುಣ ನಾಸ್ತಿ ಧನಗುಣ ನಾಸ್ತಿಯಾದಡೇನು ಭಾವ ನಾಸ್ತಿಯಾಗಬೇಕು (ಅವಚಂ. ೨೩೭-೧೦೭೭) ; ಕರಿಕುಂಭೋದ್ಭವಮೌಕ್ತಿಕಪ್ರತತಿಯುಂಟೇ ನಿಮ್ಮೊಳೆಂದೆನ್ನಲ್ . . . ಸೊಸೆಯಂ ಕಣ್ಸನ್ನೆಯೊಳ್ ತೋಱದಳ್ ಕರಿಕುಂಭಪ್ರತಿಮಾನಕುಂಭಕುಚೆಯಾದಂದಿಂದ ಮದ್ಗೇಹದೊಳ್ ಕರಿಕುಂಭೋದ್ಭವ ನಾಸ್ತಿಯೆಂದಳಿದು ತಾನೇನೆಂಬ ತಾತ್ಪರ್ಯವೋ (ಮಲ್ಲಕಾ. ೩-೨೨೩) ; ಲಿಂಗವೆ ಪತಿಯಾಗಿ ಪಂಚೇಂದ್ರಿಯಂಗಳು ನಾಸ್ತಿಯಾಯಿತ್ತು (ಸಿದ್ಧೇವ. ೧೦೪-೩೨೩) ; ತನ್ನ ಶ್ರಮದ ಹೊರತು ಅವನ ಬಳಿಗೆ ಮತ್ತೆ ಯಾವ ಧನವೂ ಧನೋತ್ಪಾದನೆಯ ಸಾಧನವೂ ಇರಕೂಡದು. ನಾಸ್ತಿಯೇ ಅವನ ಆಸ್ತಿಯಾಗಿರಬೇಕು (ಮಾವಾದ. ೧೨೪). [ಸಂ. P ಸಂಸ್ಕೃತದಲ್ಲಿ ಇದು ನಾಮಪದದ ಅರ್ಥವನ್ನು ಕೊಡುವ ಅವ್ಯಯ]

ನಾಸ್ತಿಕ (ಗು). ೧. ದೇವರು, ಪರಲೋಕ, ಆಗಮ ಇವುಗಳಲ್ಲಿ ನಂಬಿಕೆಯಿಲ್ಲದಿರುವ : 'ನಾಸ್ತಿಕವಾದ' ಪರಾ. (ನಾ). ೨. ದೇವರು, ಪರಲೋಕ, ಆಗಮ ಇವುಗಳಲ್ಲಿ ನಂಬಿಕೆಯಿಲ್ಲದವನು; ನಿರೀಶ್ವರವಾದಿ : ಧರಣೀಪುತ್ರನಿವಾಸದೊಳ್ ನಿಲೆ ಬುಧಂ . . . ನಾನಾನ್ನಪಾನರತಂ ನಾಸ್ತಿಕಂ (ಜಾತತಿ. ೧೭-೨೨) ; ಹಿಡಿದ ಶರಣಾಗತರ ಕಾಯದೆ ಬಿಡುವವನ ನಾಸ್ತಿಕನ ವಿಪ್ರರ ಜಡಿದು ನುಡಿದನ ಗತಿಗಳಾಗಲಿ ರಣದೊಳೋಡಿದರೆ (ಕುಪ್ಯಾದ್ರೋ. ೨-೮) ; ಎಲಾ ನಾಸ್ತಿಕನೇ, ಕಂಡ ಮಾತ್ರವೇ ಕತ್ತನ್ನು ಕತ್ತರಿಸುವ ಕಡಿನಾಯಿಯೇ (ಕವಿಕ. I, ೪). ೩. ವೇದಕ್ಕೆ ಪುರಸ್ಕಾರವನ್ನು ಕೊಡದಿರುವ ಬೌದ್ಧ ಮೊದಲಾದ ಮತಕ್ಕೆ ಸೇರಿರುವವನು : "ಶೂನ್ಯವಾದಿನ್, ಸುಗತಃ, ಬಾರ್ಹಸ್ಪತ್ಯಃ, ನಾಸ್ತಿಕಃ—ಈ ೪ ನಾಸ್ತಿಕನು" (ನಾಚಿರಾ. ೧೨೬). ೪. ವೇದವನ್ನು ಖಂಡಿಸುವ ಮತ : ನಾಸ್ತಿಕವೆಂದರೆ ವೇದವನ್ನು ಖಂಡಿಸುವ ಮತ (ಭಾತತ್ತ್ವ. ೮). 'ಆಸ್ತಿಕ$_1$' ಪರಾ. [ಸಂ.]

ನಾಸ್ತಿಕತನ (ನಾ). = ನಾಸ್ತಿಕತೆ : ಈಗಂತೂ ಎಲ್ಲೆಲ್ಲೂ ನಾಸ್ತಿಕತನ ಹೆಚ್ಚಿದೆ (ರೂಢಿ). [ನಾಸ್ತಿಕ + -ತನ]

ನಾಸ್ತಿಕತೆ (ನಾ). ದೇವರು ಮತ್ತು ಪರಲೋಕಗಳನ್ನು ನಂಬದಿರುವಿಕೆ ; ನಾಸ್ತಿಕತನ ; ನಾಸ್ತಿಕತ್ವ : "ಮಿಥ್ಯಾದೃಷ್ಟಿಃ, ನಾಸ್ತಿಕತಾ — ೨ ಪರಲೋಕವಿಲ್ಲವೆಂಬ ಅಪ್ರಾಮಾಣಿಕ ಬುದ್ಧಿಯ ಹೆಸರುಗಳು" (ಸಿದ್ಧಾಂತಿ. ೪೫). [ಸಂ. ನಾಸ್ತಿಕತಾ]

ನಾಸ್ತಿಕತ್ವ (ನಾ). = ನಾಸ್ತಿಕತೆ. 'ಆಸ್ತಿಕತ್ವ' ಪರಾ. [ಸಂ.]

ನಾಸ್ತಿಕದರ್ಶನ (ನಾ). ವೇದಪ್ರಾಮಾಣ್ಯವನ್ನು ಅಂಗೀಕರಿಸದ ತತ್ತ್ವ,—ಶಾಸ್ತ್ರ : ಈ ಮೂಲ ತತ್ತ್ವಾನ್ವೇಷಣರೂಪದಲ್ಲಿ ಚಾರ್ವಾಕ, ವೈಭಾಷಿಕ, ಸೌತ್ರಾಂತಿಕ, ಯೋಗಾಚಾರ, ಮಾಧ್ಯಮಿಕ, ಜೈನದರ್ಶನಗಳೆಂಬ ಆರು ನಾಸ್ತಿಕದರ್ಶನಗಳೂ ವೈಶೇಷಿಕ, ನೈಯಾಯಿಕ, ಸಾಂಖ್ಯ, ಯೋಗ, ಜೈಮಿನೀಯ, ಔಪನಿಷದಗಳೆಂಬುವ ಆರು ಆಸ್ತಿಕ ದರ್ಶನಗಳೂ ಆವಿರ್ಭವಿಸಿರುತ್ತವೆ (ಭಾರದ. ೨೨೯).

[ನಾಸ್ತಿಕ + ದರ್ಶನ]

ನಾಸ್ತಿಕಧರ್ಮ (ನಾ). ದೇವರು ಮತ್ತು ಪರಲೋಕವಿಲ್ಲವೆಂಬ ಮತ : ಮೂಢಜನರು ಸಾಕ್ರೇತೀಸನು ನಾಸ್ತಿಕಧರ್ಮವನ್ನು ಜನರಿಗೆ ಬೋಧಿಸುತ್ತಾನೆಂದು ಅವನ ಮೇಲೆ ಆರೋಪ ತಂದು, ಅವನನ್ನು ನ್ಯಾಯಸಭೆಯ ಮುಂದೆ . . . ನಿಲ್ಲಿಸಿದರು (ಮುಂಬಯಿ. ೪-೧೮೨).

[ನಾಸ್ತಿಕ + ಧರ್ಮ]

ನಾಸ್ತಿಕಮತ (ನಾ). = ನಾಸ್ತಿಕಧರ್ಮ : ಆಸ್ತಿಕಮತದಲ್ಲಿ ನಾಸ್ತಿಕ ಖಂಡನೆಯೂ ನಾಸ್ತಿಕ ಮತದಲ್ಲಿ ಆಸ್ತಿಕಖಂಡನೆಯೂ ಇರುವುದರಿಂದ . . . ಈ ಅಭಿಪ್ರಾಯಗಳು ಇದ್ದುವೆಂದು ತಿಳಿಯಬೇಕು (ಹಿಂದಸಾ. ೧೭). [ನಾಸ್ತಿಕ + ಮತ]

ನಾಸ್ತಿಕವಾದ (ನಾ). ದೇವರು ಮತ್ತು ಪರಲೋಕವಿಲ್ಲವೆಂಬ ಅಭಿಪ್ರಾಯವನ್ನು ಸಮರ್ಥಿಸುವ ವಾದ ; ನಿರೀಶ್ವರವಾದ : ಇಂತಹ ಸಂದರ್ಭಗಳನ್ನು ನೋಡಿದರೆ ನಾಸ್ತಿಕವಾದ ಮಾಡುವವರಿಗೆ ಆಸ್ತಿಕ್ಯ ದೃಢವಾಗುವುದೆಂಬ ಅಭಿಪ್ರಾಯ ವ್ಯಕ್ತವಾಗುವುದು (ಹಿಂದಸಾ.೧೪೬) ; ಈ ಪ್ರಶ್ನೆಗೆ ಉತ್ತರವಾಗಿ ಎರಡು ಪ್ರಮುಖ ಪಂಥಗಳು ಜಗತ್ತಿನಲ್ಲಿ ಹುಟ್ಟಿಕೊಂಡುವು. ಅವೇ ಆಸ್ತಿಕ ನಾಸ್ತಿಕವಾದಗಳು (ನಿಶೆಉ. V, ಮುನ್ನುಡಿ) ; ಸಾಂಖ್ಯದರ್ಶನವನ್ನು ನಿರೀಶ್ವರವಾದವೆಂದೂ ನಾಸ್ತಿಕವಾದವೆಂದೂ ವೇದಾಂತದಾರ್ಶನಿಕರು ದೂರ ತಳ್ಳಿದ್ದಾರೆ (ಭಾರದ. ೧೧೩). [ನಾಸ್ತಿಕ + ವಾದ$_2$]

ನಾಸ್ತಿಕವಾದಿ (ನಾ). ದೇವರ ಮತ್ತು ಪರಲೋಕವಿಲ್ಲವೆಂದು ವಾದಿಸುವವನು : ಅವರಲ್ಲಿ ನಾಸ್ತಿಕವಾದಿಗಳೇ ಹೆಚ್ಚು ಮಂದಿ (ರೂಢಿ).

[ಸಂ. ನಾಸ್ತಿಕವಾದಿನ್]

ನಾಸ್ತಿಕ್ಯ (ನಾ). = ನಾಸ್ತಿಕತೆ : "ಮತಧರ್ಮವಿರೋಧ ; ಮತಧರ್ಮನಿರಾಕರಣೆ ; ನಾಸ್ತಿಕ್ಯ" (Irreligion. ಇಂಕನಿ); ಆಸ್ತಿಕ್ಯದಾಧಿಕ್ಯ ನಿನ್ನ ನಾಸ್ತಿಕ್ಯ ದೈವವುಳ್ಳಗೆ ದೇವರುಂಟೆನೆ ಅಶಕ್ಯ (ಗಣೇಶ. ೭೧-೧೫). 'ಆಸ್ತಿಕ್ಯ' ಪರಾ. [ಸಂ.]

ನಾಸ್ತಿತ್ವ (ನಾ). ಇಲ್ಲದಿರುವಿಕೆ ; ಅಭಾವ : ಹೀಗೆಯೇ ಜ್ಞಾನಾದಿ ಚೈತನ್ಯಧರ್ಮ ವ್ಯತಿರಿಕ್ತವಾದ ಅಸ್ತಿತ್ವ, ನಾಸ್ತಿತ್ವ, ವಸ್ತುತ್ವ—ಮೊದಲಾದ ಧರ್ಮಗಳು ಅಜೀವದ್ರವ್ಯದಲ್ಲಿಯೂ ಇವೆ (ಭಾರದ. ೧೪೦). 'ಅಸ್ತಿತ್ವ' ಪರಾ. [ಸಂ.]

ನಾಸ್ಯೆ (ನಾ). ದನಗಳ ಮೂಗಿಗೆ ಹಾಕುವ ದಾರ ; ಮೂಗುದಾರ : "ನಾಸ್ಯೆ = ಎತ್ತುಗಳ ಮೂಗ ನೇಣು" (ನಾಚಿರಾ. ೬). [ಸಂ. ನಾಸ್ಯ]

ನಾಹ (ನಾ). ೧. ಕಟ್ಟುವಿಕೆ; ಬಂಧನ. ೨. ಸೆರೆ; ತಡೆ; ಅಡ್ಡಿ : ದೇಹಕರಣಾದಿ ಪ್ರಪಂಚವು ನಾಹಮೆನಲಳಿದುಳಿದ ನಿತ್ಯನಿರೀಹವಿಮಳ ಜ್ಞಾನರೂಪನು ನಿನ್ನ ನೋಡೆಂದ (ಕುಸ್ಯಾದ್ರೋ. ೧೮-೫೯). ೩. ಬಲೆ; ಬೋನು. [ಸಂ.]

ನಾಹಂ (ನಾ). ನಾನು ಎಂಬ ಭಾವನೆಯಿಲ್ಲದಿರುವಿಕೆ : ನಾಹಂ ಕೋಹಂ ಸೋಹಂ ಎಂಬ ಭಾವರಹಿತನಾಗಿ ಇಪ್ಪನು (ಸಿದ್ಧೇಪ. ೧೮೯-೫೭೭). [ಸಂ.]

ನಾಹಲ, ನಾಹಳ (ನಾ). ಕೀಳುಜಾತಿಯವನು ; ಬೇಡ ; ದಸ್ಯು ; ಮ್ಲೇಚ್ಛ ; ಕಿರಾತ. ನಾಹಳ : "ಕಿರಾತಃ . ೪ . ನಾಹಳಃ, ಭಟಃ, ಮಾಳಾಃ, ಮ್ಲೇಚ್ಛಃ — ಈ ೮ ಬೇಡರ್ಮೊದಲಾಗುಳ್ಳಂತ್ಯ ಜಾತಿಗಳ್" (ಹಲಾಯು. ೯೦-೪೪೫). [ಸಂ.]

ನಾಹಳ 'ನಾಹಲ' ನೋ.

ನಾಹ್ಯ (ನಾ). ಕಟ್ಟಲ್ಪಡುವುದು ; ಬಂಧಿಸಲ್ಪಡುವುದು. [ಸಂ.]

ನಾಳ್$_1$ (ನಾ). ದಿನ : 'ತಿರುನಾಳ್', 'ಮದುವೆನಾಳ್' ಪರಾ. [ದೇ.॥ ತಮಿ. ಮಲ. ಕೊತ. ತೊದ. ನಾಳ್]

ನಾಳ್$_2$ 'ನಾಟ್' ನೋ.

ನಾಳ$_1$ 'ನಾಲ$_1$' ನೋ.

ನಾಳ$_2$ 'ನಾಲ$_2$' ನೋ.

ನಾಳಕಿವಿ (ನಾ). ಕಿವಿಯಲ್ಲಿ ಕೀವು ಸುರಿಯುವ ಒಂದು ರೋಗ ; ಕಿವಿಯಲ್ಲಿ ತೂತು ಬೀಳುವ ಒಂದು ರೋಗ : ಉತ್ತರಾಣಿ ಸೊಪ್ಪಿನ ರಸ ಇಳುಹಿ ಕಿವಿಗೆ ಬಿಡಲು ನಾಳಕಿವಿ ಮಾಣ್ಗುಂ (ವಿನೈವಿ. ೬೧). [ನಾಳ$_1$(=ನಾಲ$_1$)+ಕಿವಿ$_2$]

ನಾಳಬಂದಿ 'ನಾಲಬಂದಿ' ನೋ.

ನಾಳಲು 'ನಾನಲ್' ನೋ.

ನಾಳಲುವಾಸೆ (ನಾ). ಒಂದು ಬಗೆಯ ಗಿಡ : "ಪುಷ್ಯ—ಕುಂಬಳ, ಉತ್ತರಣೆ, ನಾಳಲುವಾಸೆ" (ಓಷಧಿ. ೧೦೦). [?]

ನಾಳವಾಸಿಗೆ 'ನಾಟವಾಸಗೆ' ನೋ.

ನಾಳವ್ಯಾಸ (ನಾ). ಬಂದೂಕಿನ ಕೊಳವೆಯ ರಂಧ್ರ,—ಟೊಳ್ಳು : "ಬಂದೂಕಿನ ಕೋವಿಯ ನಾಳ ; ನಾಳವ್ಯಾಸ" (Bore. ಇಂಕನಿ).

[ನಾಳ$_1$(=ನಾಲ$_1$)+ವ್ಯಾಸ]

ನಾಳಸಂಕೋಲೆ (ನಾ). ಒಂದು ಬಗೆಯ ಕಂಠರೋಗ ; ಲೋಳಸಂಕೋಲೆ : ನಾಳಸಂಕೋಲೆ, ಛಳಿಜ್ವರ, ರೇಷ್ಮೆಜ್ವರ, ಗಂಟಲುಬೇನೆಗಳಿಗೆ ಸಿದ್ದಣ್ಣನ ಮೂಲಿಕೆಗಳು ಸಿದ್ಧೌಷಧವಾಗಿದ್ದವು (ಪಂಚಪಂ. ೫೪).

[ನಾಳ$_1$(=ನಾಲ$_1$)+ಸಂಕೋಲೆ(<ಸಂಕಲೆ)]

ನಾಳಿ$_1$ 'ನಾಲಿ' ನೋ.

ನಾಳಿ$_2$ (ನಾ). ಒಂದು ಬಗೆಯ ಸಸ್ಯ : "ಕಹಿದೊಂಡೆ ನಾಳಿಯಕ್ಕು" (ಮಂಗರಾ. ೩೩-೮) ; "ಶೃಂಗೀ—ಅತಿಬಜೆ, ಕರ್ಕಾಟಕಶೃಂಗಿ, ನಾಳಿ, ಗೋಣಿ, ಅರಳಿ, ವೃಷಭಕ, ಖಡ್ಗಮೃಗ" (ಓಷಧಿ. ೧೬೦). [?]

ನಾಳಿಂಧಮ (ನಾ) = ನಾಡಿಂಧಮ : "ನಾಳಿಂಧಮಂ ಕಳಾದಂ ಮುಷ್ಟಿಕದನಕ್ಕಸಾಲೆಯೆನಿಸಿಕ್ಕು" (ಮಂಗರಾ. ೧೧೧-೧) ; ಕೀಳುಚಿನ್ನದ ಕುಂದನವನೆಂದಿನಂತಾಲೋಚಿಸದೆ ತೆಗೆದು ಕೊಡುವುದೆನಲು ಪೋಲಾಗದಂತಿತ್ತ ನಾಳಿಂಧಮನ ಕಂಡೆವು (ಭಕ್ತಿಸ. III, ೨೬-೨).

[<ಸಂ. ನಾಡಿಂಧಮ]

ನಾಳಿಕ 'ನಾಲಿಕ' ನೋ.

ನಾಳಿಕಾದಳನೇತ್ರ (ನಾ). ೧. ತಾವರೆಯ ಎಸಳುಗಳಂತೆ ಕಣ್ಣುಳ್ಳವನು. ೨. ಶ್ರೀಕೃಷ್ಣ : ಅವನ ಪಿಡಿತರಲು ನಾಳಿಕಾದಳನೇತ್ರ ಬಂದಪನುಮವನೊಡನೆ ಸೆಣಸಿ (ನವಮೋ. ೨೯-೬).

[ಸಂ. ನಾಲಿಕಾದಲನೇತ್ರ]

ನಾಳಿಕಾಪಾತ್ರ (ನಾ). ಕೊಳವೆಯಾಕಾರದ ಪಾತ್ರೆ ; ಬಿದಿರಿನ ಅಂಡೆ : ಶ್ರುತಿನಾದಂ ಚರಣಾಯುಧಧ್ವನಿ ಶಿವಾಗಾರಾಳಿ ತೂರ್ಯಸ್ವನಂ ತತಸೂರ್ಯಸ್ವನಮಿಂದು ಸಿಂಧುಜಲಮಗ್ನಂ ನಾಳಿಕಾಪಾತ್ರ ಮುದ್ಗತ ಭೃಂಗೀರುತಿ ಶೋಭನಂ ನೆಱೆಯೆ (ವೃಷವಿ. ೯-೨೬).

[ಸಂ. ನಾಲಿಕಾಪಾತ್ರ]

ನಾಳಿಕಾಯಂತ್ರ (ನಾ). ದೂರದರ್ಶಕಯಂತ್ರ; ದುರ್ಬೀನು: ಈ ಸ್ಥಳೀಯವಾದ ಒಂದು ಐತಿಹ್ಯವನ್ನು ಈ ನಮ್ಮ ಭರತಖಂಡವೆಂಬ ಮಹಾರಾಜ್ಯಕ್ಕೆ ಹೋಲಿಸಿ ಚರಿತ್ರೆ ಎಂಬ ದುರ್ಬೀನು ಅಥವಾ ನಾಳಿಕಾಯಂತ್ರದಿಂದ ತೋಧಿಸಿ ನೋಡಿದರೆ . . . ಅನೇಕವಾಗಬಹುದು (ಪಾಳಗಾ. ೨). [ಸಂ. ನಾಲಿಕಾಯಂತ್ರ]

ನಾಳಿಕಾವಾದ್ಯ (ನಾ). ಒಂದು ಬಗೆಯ ಊದುವ ವಾದ್ಯ; ನಾಳ ಮೊದಲಾದ ಟೊಳ್ಳುವಸ್ತುಗಳಿಂದ ಮಾಡಿದ ವಾದ್ಯ: (ಸಾಮಾನ್ಯವಾಗಿ ಬಹುವಚನದಲ್ಲಿ) ನಾಳಿಕಾವಾದ್ಯ(ಗಳು) (Reed. ಇಂಕನಿ). [ಸಂ. ನಾಲಿಕಾವಾದ್ಯ]

ನಾಳಿಕೆ 'ನಾಲಿಕೆ' ನೋ.

ನಾಳಿಕೇರ 'ನಾಲಿಕೇರ' ನೋ.

ನಾಳಿಕೇರಗುಳಿಗೆ (ನಾ). ಒಂದು ಬಗೆಯ ಔಷಧ: ಬಹುಮೂತ್ರಕ್ಕೆ ನಾಳಿಕೇರಗುಳಿಗೆಯಂ ಕೊಡುವುದು (ಎನೈವಿ. ೧೫೫).

[ನಾಳಿಕೇರ (=ನಾಲಿಕೇರ)+ಗುಳಿಗೆ$_1$]

ನಾಳಿಕೇರತೋಯ (ನಾ). ತೆಂಗಿನ ಕಾಯಿಯ ಒಳಗಿರುವ ನೀರು; ಎಳನೀರು: ಘೃತಕ್ಷೀರದಧಿನಾಳಿಕೇರತೋಯಾಮ್ರರಸೇಕ್ಷುರಸ ಗಂಧೋದಕಾದಿಗಳಿಂ ಮಾಡುವ ಸವನಮುಂ (ಆದಿಪು. ೧೫-೧೩ ವ).

[ನಾಳಿಕೇರ (=ನಾಲಿಕೇರ)+ತೋಯ$_2$]

ನಾಳಿಕೇರಪರ್ಣ (ನಾ). ತೆಂಗಿನ ಮರ: ಅಂತು ಪೊಕ್ಕು ಶತಪತ್ರ ಸೂತ್ರಂಗಳೊಳಂ . . . ಶೀರ್ಣನಾಳಿಕೇರಪರ್ಣಂಗಳೊಳಂ ಅಮರ್ಕೆಯುಂ ಪೋಲ್ಕೆಯುಂ ಒಲ್ವುಂ ಚೆಲ್ವುಮಾಗೆ (ಚಂದ್ರಪು. ೭-೧೧೪ ವ).

[ನಾಳಿಕೇರ (=ನಾಲಿಕೇರ)+ಪರ್ಣ]

ನಾಳಿಕೇರಫಲ (ನಾ). ತೆಂಗಿನಕಾಯಿ: ನಿರವದ್ಯಾಮಳನಾಳಿಕೇರಫಲ ತೋಯಸ್ನಾನಮುಂ . . . ಆಯ್ತು ಪಾತ್ತಸುರಸೇನಾಚಕ್ರನಿಂ ಶಕ್ರನಿಂ (ಪುಷ್ಪಪು. ೧೧-೬). [ನಾಳಿಕೇರ (=ನಾಲಿಕೇರ)+ಫಲ$_1$]

ನಾಳಿಕೇರರಸ (ನಾ). =ನಾಳಿಕೇರತೋಯ: ನಾಳಿಕೇರರಸಧಾರಾ ವೃಷ್ಟಿ ಜೇನೆಯ್ಯ ಸೋನೆ ಸುಧಾಸಾರವಿದೆತ್ತಣಿಂ ಪಸರಿಸಿತ್ತೆಂಬಂತು ದೈತ್ಯಾರಿ ಬಾಜಿಸಿದಂ . . . ವಾಸವಂ (ಜಗವಿ. ೫-೪).

[ನಾಳಿಕೇರ (=ನಾಲಿಕೇರ)+ರಸ]

ನಾಳಿಕೇರವಟಕ (ನಾ). =ನಾಳಿಕೇರಗುಳಿಗೆ: ನಾಳಿಕೇರವಟಕ:— ಇದನ್ನು ಮಾಡುವ ಕ್ರಮ ಬಹುಮೂತ್ರಕ್ಕೆ ಗುಳಿಗೆಯಂ ಮಾಡುವ ಪ್ರಕಾರವು—ತೆಂಗಿನ ಹೊಂಬಾಳೆ, ಬಾಳೇಹೂವು, ಇವು . . . ಪ್ರತ್ಯೇಕ ಹತ್ತು ಪಲದ ಮರ್ಯಾದೆಯಲ್ಲಿ ತೂಗಿಕೊಂಡು ಸಣ್ಣನಾಗಿ ಅರೆದು ೭೯೮ ಪಲ ಉದಕವನ್ನು ದೊಡ್ಡ ಕಳಸಿಗೆಯಲ್ಲಿ ಹೊಯಿದು . . . ಕಾಸಿ ಇರಿಸುವುದು (ಎನೈವಿ. ೩೫). [ನಾಳಿಕೇರ (=ನಾಲಿಕೇರ)+ವಟಕ]

ನಾಳಿಕೋದ್ಭವ (ನಾ). ಕಮಲದಲ್ಲಿ ಹುಟ್ಟಿದವನು; ಬ್ರಹ್ಮ: ಕಾಲಗತಿ ಯಾರನುಳುಹಿದುದಿಲ್ಲ . . . ನಾಳಿಕೋದ್ಭವನ ಶಿರಗಳೆಸಿತ್ತು . . . ಮುನಿಜನರ ಮೈಗೆ ಬೂದಿಯ ಪೂಸಿತು (ನವಮೋ. ೮-೫೯).

[ನಾಳಿಕ (=ನಾಲಿಕ)+ಉದ್ಭವ]

ನಾಳಿಗಡಿತ (ನಾ). ನಾಳಗಳನ್ನು ಕತ್ತರಿಸುವಿಕೆ; ನರಗಳನ್ನು ಛೇದಿಸುವುದು: ವೈರಿಸೇನೆಯ ನಾಳಿ[ಪಾಠಾಂ. ಳೆ]ಗಡಿತದ ನೊರೆಯ ರಕುತದ ನೂಕುಧಾರೆಗಳ ಏಳಿಗೆಯಲಾ ಛತ್ರಚಮರೀಜಾಳ ನನೆದವು (ಕುಮ್ಯಾಕ. ೧೦-೨೩). [ನಾಳಿ$_1$ (=ನಾಲಿ)+ಕಡಿತ$_2$]

ನಾಳಿಗೆ 'ನಾಟಿಕೆ' ನೋ.

ನಾಳಿಗೊಂಡ (ನಾ). "ನಿರ್ಮಾಲ್ಯವಿರುವ ಗುಂಡಿ" (ಶಿವಸಂ. ಕೋಶ): ಚೋಳನೃಪ ಲಿಂಗಾರ್ಚನೆಯ ಮಾಡಿ ಪುಷ್ಪವನು ನಾಳಿಗೊಂಡದೊಳಂದು ಹಾಯ್ಕೆ ನಿರ್ಮಾಲ್ಯವನು (ಶಿವಸಂ. ೨೫೬-೧೮೦); ಚೋಳನೃಪ ಬರುತೆ ಕೊಂಡದೊಳಾರು ಕೇಳಿರೇ ನಾಳಿಗೊಂಡಕೆ ಬಂದ ನೀವಾರು ಹೇಳಿರೇ ಎನುತೆ ನಮ್ಮೊಡೆಯರಲ್ಲಿಗೆ ನಡೆಯಿ ನಡೆಯೆನುತೆ (ಶಿವಸಂ. ೨೫೬-೨೦೪).

[ನಾಳಿ ? +ಕೊಂಡ$_2$]

ನಾಳಿದು, ನಾಡದು, ನಾಡಿದು, ನಾಡಿದ್ದು, ನಾಳಿದ್ದು, ನಾಳಿರ್ದು (ನಾ). ನಾಳೆ ಕಳೆದ ಮರುದಿನ; ಇಂದಿಗೆ ಮೂರನೆಯ ದಿನ: ನೀನಿನ್ನುಬ್ಬೆಗಂಬಡಿದಿರ್ ನಾಳೆಯೊ ನಾಳಿದೊ ನಿಜಪ್ರಿಯಸಮಾಗಮ ಮಕ್ಕುಂ (ಚಾವುಂಪು. ೧೮); ತರುಣಿಯೆ ಕೇಳಾದೊಡೆ ನಾಳಿದು ಹಿಮ ಕರವಾರಂ ಪೋಪೆಂ ಪೋಪೆಂ (ಉದ್ಭದೇ. ೩-೬೩). **ನಾಡದು**: ಕೂಡುವೌ ಬಗೆಗೊಳೆ ನಾಳೆ ನಾಡದು ಮಹೋತ್ಸವದಿಂ ನಿಜಜೀವಿ ತೇಶನೊಳ್ (ಆದಿಪು. ೩-೫೦); ಇಂದು ಮಾಡತಕ್ಕ ಕಾರ್ಯವನ್ನು ನಾಳೆ ಮಾಡಿದರೇನು ನಾಡದು ಮಾಡಿದರೇನು ಮಾಡದೆ ಇದ್ದರೇನು ? (ಮುಂಗಾಪು. ೬೯). **ನಾಡಿದು**: ಸವಸಂದ ಕಾಲವಾಚಕವಿವು ನಾಡಿದು ನಾಳೆ ನಿನ್ನೆ ಮೊನ್ನೆಗಳಾದಂ (ಶಪುದ. ೩೨೨); ನಾಳೆ ನಾಡಿದಿನೊಳು ಮುಗಿವುದಾ ಗ್ರಂಥ ಭೂಪಾಲವಂಶಾಂಬರಭಾನು (ಭರಚ. ೨೦-೯೨). **ನಾಡಿದ್ದು**: ನಾಳೆ ಬೇಡ, ನಾಡಿದ್ದು ಬಾ (ರೂಢಿ). **ನಾಳಿದ್ದು**: "ನಾಳಿದ್ದು—ನಾಡದು" (ಜಾನಕೋ. ೧೧); ಇಂದೆನ್ನ ವಧುವ ನಾಳೆನ್ನ ಧನವ ನಾಳಿ[ಪಾಠಾಂ. ಡಿ]ದ್ದೆನ್ನ ತನುವ ಬೇಡರೇಕಯ್ಯಾ (ಬಸವ. ೭೨೨). **ನಾಳಿರ್ದು**: ಗುರುಮಠದೊಳೆಮ್ಮಯ್ಯಗಳ ಪರ್ಬಕ್ಕೆ ನಾಳಿರ್ದು ಕರೆಯ ಬಹೆ ನಾ ನಿನ್ನನು (ಬಸಪು. ೧೪-೧೨).

[ದೇ.॥ ತಮಿ. ನಾಳೈನಿನ್ಱು]

ನಾಳಿದ್ದು 'ನಾಳಿದು' ನೋ.

ನಾಳಿಪತ್ರ (ನಾ). ರಕ್ತನಾಳ; ಧಮನಿ; ಸೆರೆ: "ಸಿರೆ ನಾಳಿಪತ್ರ ಮೆನೆ ಸೆರೆಯಕ್ಕು" (ಮಂಗರಾ. ೧೩೪-೩೪). [ಸಂ. ನಾಲಿಪತ್ರ]

ನಾಳಿಪುಣ್ 'ನಾಳಿವುಣ್' ನೋ.

ನಾಳಿಬೀಟ್ (ಕ್ರಿ). ನಾಡಿಹುಣ್ಣಾಗು; ಗುಳಿಬಿದ್ದು ಹುಣ್ಣು ಉಂಟಾಗು: ಮನೆಯೊಳ್ ಪೆಣ್ಣತ್ತೆಯಾಗಿ ಪುಟ್ಟ ಪಿರಿಯವಪ್ಪ ಪೊಱೆಗಳಂ ಪೊತ್ತು ಪೋಗಿ ಬೆನ್ನೊಳ್ ನಾಳಿಬಿರ್ದು ಕಱಮೆಯಾಗಿ ಪುಟಾತು ನಮೆದು ಸತ್ತು (ವಡ್ಡಾರಾ. ೯-೨).

[ನಾಳಿ$_1$ (=ನಾಲಿ)+ಬೀಟ್$_1$]

ನಾಳಿಯಂಬು (ನಾ). ಒಂದು ಬಗೆಯ ಬಾಣ: ಬೋಳೆಯಂಬೀ ರೈದುಸಾವಿರ ನಾಳಿಯಂಬುಗಳಾಱು ಬಿಂಡಿಯ ಲೆಕ್ಕವಿದೆಯೆಂದ (ಕುಮ್ಯಾಕ. ೧೮-೨೨); ಆತನ ಆಯುಧಗಳ ಗಣನೆ ಎಷ್ಟೆಂತೆಂದಡೆ . . . ನಾಳಿಯಂಬುಗಳು ಹತ್ತುಸಾವಿರ (ಭೈರಸೂ. ೮೫). 'ನಾಳಿವಿಲ್' ಪರಾ.

[ನಾಳಿ$_1$ (=ನಾಲಿ)+ಅಂಬು$_2$]

ನಾಳಿಯ ಸೊಪ್ಪು (ನಾ). ಒಂದು ಬಗೆಯ ಗಿಡ: "ನಾಸಾವತೀ —ನಾಳಿಯ ಸೊಪ್ಪು" (ಓಷಧಿ. ೮೫). [ನಾಳಿ$_2$+ಸೊಪ್ಪು$_3$]

ನಾಳಿರ್ದು 'ನಾಳಿದು' ನೋ.

ನಾಳಿವಳುಗು (?). (?): ನಾಳಿವಳುಗು ಕೊ ೯ ದೇವಾಲಯದಿಂ ಬಡಗಲು ಮಣಲಿಹಂತ ಗದ್ದೆ ಸ ೨ (ಎಕ. XVI, ಚಿಕ್ಕನಾ. ೬೯-೩೦; 1177). [?]

ನಾಳಿವಿಲ್, ನಾಳಿವಿಲು, ನಾಳಿವಿಲ್ಲು (ನಾ). ಒಂದು ಬಗೆಯ ಬಿಲ್ಲು: ಬಾಂಬರಮೆಸೆವ ಶಕ್ಕೆಯದ ನಾಳಿವಿಲ್ ಝುಗಝುಗಿಪ ಪೊಸಪೊನ್ನ ಪಕ್ಕ ರಕ್ಕೆಗಳ . . . ಮದಾಂಧಸಿಂಧುರವರ್ಗಮಸ್ತಕಮನಗಿದು ಪೊನ್ನಂಕುಶದೆ ಮೈವಳಿಗೆ ತರ್ಪ ಜೋದರ ಹಿಂಡು ನಡೆಗೊಂಡುದು (ಚಿಬಪು. ೪೧-೫೦). **ನಾಳಿವಿಲು**: ಲೌಡಿಯ ವಜ್ರಮುಷ್ಟಿಗಳ ನಾಳಿವಿಲುಗಳ

ರಾಯಜೋದರ ಮೇಳವಣಿಗಳ ಚಿತ್ರಗತಿಶುಂಡಾಲವನು ನೋಡಿದರು ಗಜಸೇನಾಸಮುದ್ರದಲಿ (ಕುವ್ಯಾಉ. ೧೧-೧೯) ; ಅಲ್ಲಿಯಾತನ ಕೂಡೆ ತಟ್ಟೆಯ ಬಿಲ್ಲುಗಳನಾ ಪೊಂಗುವಿಲುಗಳ ಬಲ್ಲಿತೆನಿಪಾ ನಾಳಿವಿಲುಗಳನಂತೆ ಸಿಂಗಾಡಿಬಿಲ್ಲುಗಳ . . . ಪಿಡಿದಾ ನಿಶಾಟರು ನೆರೆದುದವನೊಡನೆ (ಸಾಳ್ವಭಾ. ೫-೧೩). **ನಾಳಿವಿಲ್ಲು** : ವರಾಳಕಳಿಂಗಬರ್ಬರರಾನೆಗಳ ಥಟ್ಟಿಂಗೆ ಕೈವೀಸಿದರು ಕೊಂಡರು ನಾಳಿವಿಲ್ಲುಗಳ (ಕುವ್ಯಾದ್ರೋ. ೨-೭೮) ; ಇಡುಗುಂಡು ನಾಳಿವಿಲ್ಲಂಬು ಡೊಂಕಣಿ ಇಟ್ಟ ಬಿಡದೆ ಬೀಱುವ ಪಾಶ ಲೌಡಿ . . . ಕೈಪಾರೆಯ ಕಡುಗಲಿ ಜೋದರೆಯ್ದಿದರು (ಕುರಾಸಾಂ. ೧೯-೨೧). [ನಾಳಿ$_1$ (=ನಾಲಿ)+ಬಿಲ್$_2$]

ನಾಳಿವಿಲು 'ನಾಳಿವಿಲ್' ನೋ.

ನಾಳಿವಿಲ್ಲು 'ನಾಳಿವಿಲ್' ನೋ.

ನಾಳಿವುಣ್, ನಾಳಿಪುಣ್ (ನಾ). ನಾಡಿಹುಣ್ಣು ; ಗುಳಿ ಬಿದ್ದ ಹುಣ್ಣು ; ಚರ್ಮ ಬಿರುಕು ಬಿಟ್ಟು ಆಳವಾಗುವ ಹುಣ್ಣು : ಚಂಚಪತ್ರರಸಮಂ ಘೃತಮಿಶ್ರಿತಮಟ್ಟು ಪೊಯ್ದೊಡಂ ಪರಿಹರಿಸಲ್ಕೆ ಸಾಲ್ಗುಮಿದು ಬೆನ್ನೊಡೆದೆಟ್ಟಿನ ನಾಳಿವುಣ್ಗಳಂ (ಲೋಕೋಪ. ೯-೨೧೪); ಎಣ್ಣೆವಿಡುಗೆ ಮೇಣ್ ಘೃತಪರಿಸೇಕಂಗೆಯ್ಗೆ ನಾಳಿವುಣ್ಗಳ್ ಕಿಡುಗುಂ (ಅಶ್ವಶಾ. ೧೨-೨೫). **ನಾಳಿಪುಣ್** : ಎತ್ತುಗಳ ಬೆನ್ನೊಡೆದು ಅಡ್ಡ ನಾ(ಲಾ)ಳಿಪುಣ್ಗಳ್ ಮಾಣ್ಬುವು (ಲೋಕೋಪ. ೯-೨೧೪ ಟೀಕು) ; ನಡುವೆನ್ನೊಡೆದಿರ್ಬಗಿಯಾಗಿ ಪೋಟ್ಟು ನೀರೇಱಿದ ನಾಳಿಪುಣ್ಣೊಡೆದು ಸೌಳನೆ ಸೀಳ್ದುದು ದೋಣಿಪೋಪಿನಂ (ಸುಕುಮಾ. ೫-೧೬).

[ನಾಳಿ$_1$ (=ನಾಲಿ)+ಪುಣ್]

ನಾಳಿವೋಗು (ಕ್ರಿ). ಗುಳಿಬೀಳು ; ಪೋಟುಬೀಳು : ಭಿನ್ನಪದಕ್ಕೆ . . . ಪುಣ್ ನಾಳಿವೋದಪುದು, ಪುಣ್ಣಾಳಿವೋದಪುದು (ಶಮದ. ೧೫೮ ಪ್ರಯೋ). [ನಾಳಿ$_1$ (=ನಾಲಿ)+ಪೋಗು$_1$]

ನಾಳೀಕ 'ನಾಲೀಕ' ನೋ.

ನಾಳೀಕಭವ (ನಾ). ಕಮಲದಲ್ಲಿ ಹುಟ್ಟಿದವನು; ಬ್ರಹ್ಮ : ನಾಳೀಕಭವನ ನುಡಿಯಿಂದ ವೈಕುಂಠಪತಿ ಮನುಜಾವತಾರವನ್ನು ತಾಳಿ ದಶರಥ ಕುವರನೆನಿಸಿರ್ದ ಪರಿಯನಾಂ ಕೇಳಿ ಕ್ರತುರಕ್ಷಣೆಗೆ ಯಾಚಿಸಲ್ ನೃಪತಿ ಸಮ್ಮೇಳದಿಂ ಸುತರಿರ್ವರನ್ನು ಕಳುಪಿದ (ವೆಂಕಾರಾ. ೧-೧೭-೧).

[ಸಂ. ನಾಲೀಕಭವ]

ನಾಳೀಜಂಘ 'ನಾಲೀಜಂಘ' ನೋ.

ನಾಳೀಪತ್ರ (ನಾ). ಒಂದು ಬಗೆಯ ಗಿಡ : "ಧಾತ್ರೀಪತ್ರಂ—ನಾಳೀಪತ್ರಂ" (ಓಷಧಿ. ೮೧). [ಸಂ. ನಾಲೀಪತ್ರ]

ನಾಳೀವ್ರಣ(ನಾ). = ನಾಳಿವುಣ್: ಆ ವ್ರತಶಿತಾಸಿಸಂಸಾರವ್ರತತಿಚ್ಛೇದ ಮಕ್ಕುಮಾ ಸಂಸಾರಂ ತೀವ್ರತರದುಃಖದಂ ನಾಳೀವ್ರಣಸದೃಶಂ ಶರೀರಿಗದ ಕಿಡೆ ನೆಗಟಾಂ (ಶಾಂತಿಪು. ೭-೭) ; ಕೊಳಗುಳಿಕೆಯ ಪುಣಿಸೆಯ ಕೋಮಳಿಕೆಯನೆ(ದ)ಳೆದಳಿಸುವೆತ್ತು ನಾಲಿಗೆಯೆಲೆಯಂ ತಿಲತೈಲ ದೊಳರೆದೊಂದನೆ ವಿಲೇಪನಂಗೆಯ್ವುದಡಸಿ ನಾಳೀವ್ರಣಮಂ (ಅಶ್ವಶಾ. ೧೨-೧೬). [ಸಂ. ನಾಲೀವ್ರಣ]

ನಾಳು 'ನಾಟು' ನೋ.

ನಾಳುಪ್ರಭು 'ನಾಟ್ಪ್ರಭು' ನೋ.

ನಾಳೆ (ನಾ). ಈವೊತ್ತಿನ ಮರುದಿನ; ಇಂದಿನ ರಾತ್ರಿ ಕಳೆದ ಕೂಡಲೆ ಬರುವ ದಿನ : ಅನ್ನೆಗಮರಸನುಮರಸಿಯುಂ ಭಟ್ಟಾರರೊಡ ನಂದ ಬ್ರಹ್ಮಚಾರಿ ತಪಂಬಟ್ಟನೆಂಬುದಂ ಕೇಳ್ದು . . . ನಾಳೆ ನಮ್ಮ ಮನೆಯೊಳ್ ಪಾನಿಗಟ್ಟುವಮೆಂದು ಬಗೆದಿರ್ದು (ಪಡ್ಡಾರಾ. ೭೯-೧೧); ಗುಣಾರ್ಣವನಿಂ ನಾಳೆಯೆ ಕೇಳದಿರ್ಪಿರೆ ಮಹಾಗಾಂಡೀವನಿರ್ಘೋಷಮಂ (ಪಂಪಭಾ. ೯-೫೬) ; ನಾಳೆ ಬಂದು ಜಾಲಮಂ ಬೀಸಿ ಮತ್ಸ್ಯಂಗಳಂ ಪಿಡಿವಂ (ಪಂಚತಂ. ೧೫೮-೨೦) ; ನಾಳೆ ಬಪ್ಪುದು ನಮಗಿಂದೆ ಬರಲಿ (ಬಸವ. ೬೯೬) ; ಇಂದಿಗೆಂತು ನಾಳಿಗೆಂತೆಂದು ಚಿಂತಿಸಲೇಕೆ (ದೇವಾವ. ೪೬-೯೧); ನಾಳೆ ಪಡುವಣ ತರಣಿ ತೊಲಗದ ಮುನ್ನ ಕೊಲುವೆನು ವೈರಿ ಸೈಂಧವನ (ಕುವ್ಯಾದ್ರೋ. ೮-೩೫) ; ತುರಗವಿವು ನಾಳಿಸಲಿ ಕುಂಡಿನಿ ಪುರಿಗೆ ಪರಗತವಾಗವು (ತೊರರಾ. ೩-೨-೧೯) ; ನಾಳೆಯ ತನಕ ನಾನು ನಿರೀಕ್ಷಿಸಿಕೊಂಡಿರಲಾರೆ (ಬಂಕಿಮ. ೧೭೬). [ದೇ.॥ ತಮಿ. ನಾಳ್ಕೆ ; ಮಲ. ನಾಳ ; ಕೊಡ. ನಾಳೆ ; ಗೊಂಡಿ. ನಾಱು]

ನಾಳ್ಕಡಿವೋಗು 'ನಾಟ್ಕಡೆವೋಗು' ನೋ.

ನಾಳ್ಕೇಳೋ (ನಾ). ಒಂದು ದುರ್ಗದ ಹೆಸರು : ತಞ್ಜಾಪುರಿ ನಾಳ್ಕೇಳೋಪ್ರಮುಖಾದಿ ದುರ್ಗನಿವಹಾನ್ ದಗ್ಧ XXX (ಮೈಅರಿ. ೧೯೨೧, ೧೦-೮೯ ; 967). [?]

ನಾಳ್ಗತೆ (ನಾ). ನಾಡ ಕತೆ ; ಸಾಮಾನ್ಯವಾದ ಕಥೆ : ನಾಳ್ಗತೆಯ ನಡೆಸುವ ಪುಣ್ಯಬಾಹಿರರು . . . ಹರಿಭಕ್ತಿ ಶೂನ್ಯರು ನಿಂದಕರು ಹೊಱವಡಲಿ ಬಣ್ಣಿಪೆ ಹರಿಕಥಾಮೃತವ (ಕೌತಿರಾ. ೪-೨).

[ನಾಳ್$_2$ (<ನಾಡು)+ಕತೆ]

ನಾಳ್ಗಾದೆ 'ನಾಟ್ಗಾದೆ' ನೋ.

ನಾಳ್ಗಾಮಿಗ 'ನಾಟ್ಗಾಮಿಗ' ನೋ.

ನಾಳ್ಗಾಮುಂಡ 'ನಾಟ್ಗಾಮುಂಡ' ನೋ.

ನಾಳ್ಗಾವುಂಡ 'ನಾಟ್ಗಾಮುಂಡ' ನೋ.

ನಾಳ್ಗಾವುಂಡು 'ನಾಟ್ಗಾಮುಂಡು$_2$' ನೋ.

ನಾಳ್ಗಾವುಂಡುಗೆಯ್ 'ನಾಟ್ಗಾಮುಂಡುಗೆಯ್' ನೋ.

ನಾಳ್ನುಡಿ 'ನಾಟ್ನುಡಿ' ನೋ.

ನಾಳ್ಮಾತು, ನಾಣ್ಮಾತು (ನಾ). = ನಾಟ್ನುಡಿ : ಎಲೆಲೇ ಉಳ್ಳುದ ನಾಡೆ ಕೊಳ್ಳಿಗೊಳುವರ್ ನೋಡೆಂಬ ನಾಳ್ಮಾತಿದೇಂ (ರಜ್ಞಾಶ. ೩೩). **ನಾಣ್ಮಾತು**: ಎನ್ನಯ ನುಡಿಯಂ ಕೊಂಡೀ ಕನ್ನೆಯನೊಲ್ದಿತ್ತೆಯೆಂಬುದದು ವಿಕ್ರಯದೋಷನ್ನಿನಗೆ ಬರ್ಕುಮೆಂತೆನೆ ರನ್ನಮನಳಗಿತ್ತರೆಂಬ ನಾಣ್ಮಾತಿನವೋಲ್ (ದಶಕು. ೮-೧೨೫).

[ನಾಳ್$_2$ (<ನಾಡು)+ಮಾತು$_1$]

ನಾಳ್ಪ್ರಭು 'ನಾಟ್ಪ್ರಭು' ನೋ.

ನಾಱು$_1$, ನಾರು$_1$ (ಕ್ರಿ). ನಾರ್ಪ, ನಾರ್ವ (ಭವಿಕೃ). ೧. ಗಮಗಮಿಸು ; ಸುವಾಸನೆಯನ್ನು ಬೀರು : ರಾಜಾನ್ನದ ಕೂಟುಂ ಪೆಸಱ ತೊವೆಯುಂ ಬೆಣ್ಣೆಗಾಸಿದಾಮೋದಸುಗಂಧಪರಿಮಳಂ ನಾರ್ಪ ತುಪ್ಪಮುಂ . . . ಭಟ್ಟಾರರ್ಗೆ ಬಡ್ಡಿಸಿ (ಪಡ್ಡಾರಾ. ೭೮-೧೫) ; ಸೊಡರ್ಗುಡಿಯೊಯ್ಯನಾಗೆ ಪೊಸಮಲ್ಲಿಗೆ ಮೆಲ್ಲಗೆ ಕಂಪು ನಾಱೆ . . . ಗುಣಾರ್ಣವಂ ನೆಱೆಯೆ ನಿಟ್ಟಿಸಿದಂ ಬೆಳಗಪ್ಪ ಜಾವಮಂ (ಪಂಪಭಾ. ೪-೧೧೦) ; ಪೀತವರ್ಣದ ಮಣ್ ಆ ಮಣ್ಣಿನಿಂದತ್ತ ಪಡುವ ಮೊಗೆ ವಂತಪ್ಪ ಧಾರೆ ಲೋಹಗಂಧಂ ನಾಱುಗುಮುಪ್ಪಕ್ಕುಂ (ಱಟ್ಟಮ. ೧೧-೨೯) ; ಯಾತಱದು ಹೂವೇನು ನಾತರದು ಸಾಲದೆ ಜಾತಿ ವಿಜಾತಿಯೆನಬೇಡ ದೇವನೊಲಿದಾತನೇ ಜಾತ (ಸರ್ವಜ್ಞ. ೯೭೮). ೨. ದುರ್ವಾಸನೆಯನ್ನು ಬೀರು; ದುರ್ಗಂಧವನ್ನುಂಟುಮಾಡು : "ನಾಱು—ದುರ್ಗಂಧೇ, ಆರ್ದ್ರೀಕರಣೇ ಚ (ನನೆಯಿಸು)" (ಶಮಧಾ) ; ಸಿಡಿಲ್ದ ನೆತ್ತರೊಳ್ ಪೊರೆದು ನಿರಂತರಂ ಪೊಲಸು ನಾಱುವ ಮೆಯ್ಯನೆ ಕರ್ಚಲೆಂದು ಚಚ್ಚರಮಪರಾಂಬುರಾಶಿಗಿಱವಂತಿಱುದಂ ಕಮಳೈಕ ಬಾಂಧವಂ (ಪಂಪಭಾ. ೧೧-೫೧); ಕಾಡ ಪಂದಿಗಳ ಬಲ್ನೆಣದಿಂ ಪೊಲಸಟ್ಟ ನಾರ್ವ ಜೇವಡೆಗಳ ಪುಣ್ಗಳಿಂ ತೊರೆವ ನೆತ್ತರ ಕಯ್ನುಡುಗಲ್ಕೆ

(ಕಾದಂಪೂ. ೧೮೩) ; ಕಾಗೆಯ ಗೂಡಿನ ಗಂಧಂ ನಾಱುವೊಡಂ ಮನ ವಿಕ್ಕುವೊಡಂ ಹಯಕ್ಕೆ ತಪ್ಪದು ಮರಣಂ (ಅಶ್ವಶಾ. ೬-೫೨) ; ಬುಡುಬುಡಿಸುವೇಱುನಲಿ ದುರ್ವ್ರಣದೊಡನೆ ಸೂಸುವ ಬಸೆಯ ನಾಱುವ ಮೊಡೆವೆಣನ . . . ಹೆಣಸಾಲುಗಳ ಸಂದಣಿಯಡವಿಯ ಕಂಡಿ ವರು ನಿನ್ನವರಹರೆ ನೋಡೆಂದ (ತೊರರಾ. ೩-೮-೪) ; ನೀಱಿಗೆ ರೋಗ ಬಂದಾಗೊಮ್ಮೆ ಮೈಯೆಲ್ಲ ನಾಱುತಿಹುದು(ಭರಡ.೩-೬೫-೩೨). **ನಾರು$_1$** : ೨. ಆವಾಗ ನಾರುವ ಮೈಯ ಬಿಚ್ಚಿ ತೋರಿ ನಲಿಯುವ ಕಾಲು ಕೈಯ, ಕೋರೆಯ ಮಸಿಯುತ ಕೊಸರಿಕೊಂಡಸುರನ್ನ ಉದರವ ಬಗೆ ದಂಥ ಅದ್ಭುತಮಹಿಮ ತಾ (ಕರ್ನಾಕ. ೨೮೨) ; ದುರ್ವಾಸನೆ ನಾರದಲ್ಲಿ ಅಹಂಕಾರ ಸೇರದಲ್ಲಿ (ಅರಳು. ೩೮೩-೧೦) ; ನೀರುಳ್ಳಿಯನು ಕಚ್ಚಿ ಬಾಯಿ ನಾರುವುದೆಂದು ದೂರಿದರದಕಾವ ಕುಂದು(ಇಂಬಾಪ. ೯೬-೬೯); ಸಮುದ್ರವು ಉಪ್ಪಾಗಿಯಿರುವುದರಿಂದ ಅನೇಕ ಗುಣಗಳು ಉಂಟು. ಅದರಲ್ಲಿ ಸತ್ತ ಜಂತುಗಳ ಕಳೇಬರಗಳಿಂದ ದುರ್ಗಂಧ ನಾರುವದಿಲ್ಲ (ಅನಂಶ. ೫೪ ಟೀಕು) ; ನೀರಾದರೂ ನಾರಬಾರದು (ಗಾದೆ) ; ಕಾಡುವ ಬ್ರಾಹ್ಮಣನಿಗೆ ನಾರುವ ಉಪ್ಪಿನ ಕಾಯಿ (ಗಾದೆ). ೩. (ಆಲಂ) ಮುಗಿಯದಿರು ; ಉಳಿದಿರು : ಎಷ್ಟು ಕೆಲಸ ಹಾಗೇ ನಾರ್ತಾ ಬಿದ್ದಿದೆ (ಮುನಿಮಾ. ೧೮). [ದೇ.॥ ತಮಿ. ಮಲ. ನಾಱು ; ತುಳು. ಕೊಡ. ನಾರ್]

ನಾಱು$_2$ (ಕ್ರಿ). ಒದ್ದೆಮಾಡು : "ನಾಱು—ದುರ್ಗಂಧೇ, ಆರ್ದ್ರೀ ಕರಣೇ ಚ (ನನೆಯಿಸು)" (ಶಮಧಾ). [?]

ನಾಱುಂಬೇಳೆ, ನಾರಂಬೇಳೆ, ನಾರುಂಬೇಳೆ, ನಾರುಬೇಳೆ, ನಾಱುಬೇಳೆ (ನಾ). ಆಡಿನ ವಾಸನೆಯುಳ್ಳ ಒಂದು ಬಗೆಯ ಔಷಧಿ ಸಸ್ಯ ; ಅಜಗಂಧಿಕೆ : ನಾಱುಂಬೇಳೆ, ಹೊಂಗೆಬೇರು, ಹಿಪ್ಪಲಿ . . . ಇಷ್ಟನು ಪ್ರತ್ಯೇಕ ಎರಡು ವರಹ ತೂಕವ ಒಂದು ಬಳ್ಳ ನೀರಲ್ಲಿ ಹಾಕಿ ಕಷಾಯವೆತ್ತಿ ಅಷ್ಟಾವಶೇಷವಾಗಿ ಕಾಸಿ ಕೊಡಲು ಉದರಶೂಲೆ . . . ಪರಿಹರ (ವೈದ್ಯಸಾ. I, ೨೯೫) ; ಹಿರೀಮದ್ದಿನ ಗೆಣಸು, ನಾಱುಂಬೇಳೆಬೇರು, ಬಜೆ . . . ಇವಿಷ್ಟನೂ ಪ್ರತ್ಯೇಕ ನಾಲ್ಕು ವರಹ ತೂಕವನು ಸಣ್ಣನಾಗಿ ಚೂರ್ಣಿಸಿ (ವೈದ್ಯಸಾ. II, ೫೧). **ನಾರಂಬೇಳೆ** : ಹಿಪ್ಪಲಿ, ಪಿಪ್ಪಲಿಮೂಲ, ನಾರಂಬೇಳೆ ಇವು ಪ್ರತ್ಯೇಕ ಹತ್ತು ಹಲವಂ . . . ಪ್ರಾತಃಕಾಲದಲ್ಲಿ ಗ ೪ ತೂಕವಂ ಸೇವಿಸುವುದು (ಸಕವೈ. ೨೧೭) ; ತಿಲಪರ್ಣಿಕಾ (ನಾರಂಬೇಳೆ) (ಅಷ್ಟಾಂಗ. ೧೩೪-೭೬) ; ನಾರಂಬೇಳೆ ತಿಲಾಕ್ಷೀರಬೇರಂ ತಂದು ಹಾಲೊಳರೆದು ಹಾಲೊಳ್ಳೆರಸಿ ಕುಡಿದಡೆ ಮುಟ್ಟಾಗದೆ ಇದ್ದ ಸ್ತ್ರೀ ಶೀಘ್ರದಲ್ಲಿ ಮುಟ್ಟಾಗುವಳು (ಕಾಮತಾ. ೧೧-೨೭೮). **ನಾರುಂಬೇಳೆ** : "ಬರ್ಬರಾ—ಬರ್ಬರಿ, ನಾರುಂಬೇಳೆ" (ಓಷಧಿ. ೧೦೫). **ನಾರುಬೇಳೆ** : "ನಾರುಬೇಳೆ, ಅಜನಿ" (ಅಕಾನಿ. ೧-೩) ; "ಅಜಗಂಧ - ಅಜಗಂಧಿ ; ನಾರುಬೇಳೆ" (ಓಷಧಿ. ೬). **ನಾಱುಬೇಳೆ** : ಹೊಟ್ಟೆಶೂಲೆಗೆ : —ನಾಱುಬೇಳೆ, ಅಗುಳಶುಂಠಿ, ಗಂಟುಭಾಂಗಿ ಈ ಮೂಱನ್ನೂ ಕಷಾಯವಂ ಕಾಸಿ . . . ಕೊಳ್ಳೆ ಹೊಟ್ಟೆಶೂಲೆ ಮಾಣ್ಗುಂ (ವಿವೈವಿ. ೭೧).

[ನಾಱು$_1$ + ಬೇಳೆ$_2$]

ನಾಱುಬೇಳೆ 'ನಾಱುಂಬೇಳೆ' ನೋ.

ನಾಟ್, ನಾಣ್$_2$, ನಾಳ್$_2$, ನಾಳು (ನಾ). ಸಮಾಸದಲ್ಲಿ 'ನಾಡು' ಎಂಬುದಕ್ಕೆ ಬರುವ ಆದೇಶರೂಪ : ಕೊಂಡು ಪೋದ ಭಂಡಮಂ ಮಾಱು ಪೆಱದಂ ತಮ್ಮ ನಾಟ್ಕಪೂರ್ವಮಪ್ಪ ಭಂಡಮಂ ತೀವಿ ಕೊಂಡು . . . ಬಂದಿರ್ದರ್ (ಪಡ್ಡಾರಾ. ೭೧-೨೫). 'ನಾಟ್ಗಾದೆ', 'ನಾಟ್ಗಾಮುಂಡ' ಪರಾ. **ನಾಣ್$_2$** : 'ನಾಣ್ಣುಡಿ', 'ನಾಣ್ಬಟ್ಟೆ' ಪರಾ. **ನಾಳ್$_2$** : 'ನಾಳ್ಗತೆ', 'ನಾಳ್ನುಡಿ' ಪರಾ. **ನಾಳು** : 'ನಾಳುಪ್ರಭು' ಪರಾ.

ನಾಟ್ಕಳ್, ನಾರ್ಕಳ್, ನಾಟ್ಗಳ್ (ಬಹುವ) : ಅರುವಿಲ್ಲದಲ್ಲಿ ಕಳ್-ಮಕ್ಕಳ್, ನಾಟ್ಕಳ್, ಕೋಟ್ಕಳ್ (ಶಮದ. ೧೦೧ ಪ್ರಯೋ) ; ಎನೆತುಂ ನಾರ್ಕಳನೂರ್ಗ್ಗಳಂ ಪ್ರಜೆಗಳಂ ಸಂತೋಷದಿಂ ಮಾಡಿದಂ ವಿನಯಾದಿತ್ಯ ನೃಪಾಳ (ಎಕ. II, ೧೪೩-೮ ; 1143) ; ಕೆಲದೂರ್ಗಳುಮಂ ನಾಟ್ಗಳುಮಂ ತೊಟಲ್ದು (ಪಡ್ಡಾರಾ. ೭೬-೨೦). [<ನಾಡು]

ನಾಟ (ನಾ). ಮೋಸವಾದುದು ; ಕೃತಕವಾದುದು : ಆಡೆ ವಿರೋಧಮಾಗದಿರಬಾಗಲೊಡಂ ಬಟಾಕೇನನಾದೊಡಂ ಮಾಡುವಮೆ ನ್ನೊಳಿರ್ದಪುವು ಪಾಸಗೆ ನಾಟಮನುಳ್ಳವಿತ್ತಪೆಂ ಬೇಡಿದ ದಾಯಮಂ ಕುಡುವವೆಂಬುದುಂ (ಮಹಾನೇ. ೧೦-೮) ; ಜಟಕೆ ನಾಟ ನುಡಿ ತುಂಬು ಕಳ್ಳನೊಳುಂಟು ನಾಟವಾಸಗೆ ಕುಳಂ ಲತೆಯೊಳ್ ಕ್ಷಳಂ (ಸಂಜೀವ. ೨೩). 'ನಾಟವಾಸಗೆ' ಪರಾ. [←ತಮಿ. ನಾಟ್]

Δ **ನಾಟಲ್** 'ನಾನಲ್' ನೋ.

ನಾಟವಾಸಗೆ, ನಾಳವಾಸಿಗೆ (ನಾ). ಕಳ್ಳ ದಾಳ ; ಕೃತ್ರಿಮವಾದ ದಾಳ : "ನಾಟವಾಸಗೆ = ಕಳ್ಳವಾಸಗೆ ; (ಸಂಸ್ಕೃತದೊಳ್ 'ನಾಳಂ' ಕ್ಷಳಂ)" (ಶಮದ. ಪರಿ. ೧) ; ನಾಟವಾಸಗೆಗಳಂ ಮುನ್ನಮೆ ಸಮಕಟ್ಟಿ ತಾಮುಮಾಮುಂ ಕೆಲವು ದೆವಸಂ ಗೋಷ್ಠಿಯೊಳಿರ್ಪಂ ಬರ್ಕೆಂದು ಬಟಾಯನಟ್ಟಿದೊಡೆ (ಪಂಪಭಾ. ೬-೬೮ ಪ) ; ಶಕುನಿಯೆಂಬ ಮಂತ್ರಿಯೆಂದಂ ಧರ್ಮನಂದನಂ ದ್ಯೂತದೊಳತಿಪ್ರೀತನಪ್ಪುದಱಂ ನಾಟವಾಸಗೆಗಳಂ ಸಮೆದುಪಾಯಾಂತರದಿಂ . . . ಧನಮಂ ಗೆಲ್ವಂ (ನೇಮಿಪು. ೧೦-೨೧ ಪ) ; ದುರ್ಯೋಧನನಲ್ಲಿಂದಮೆರ್ದು ಪೋಗಿ ಗೂಢದೊಳ್ನಾಟವಾಸಗೆಗಳಂ ಸಮೆಯಿಸಿ . . . ಪಾಂಡವರಂ ಬರಿಸಿ(ಬಂಹರಿ.೧೧-೨೩ ಪ); ಮಾಡಿದ ನಾಟವಾಸಗೆಯ ದೂಸಱಾನಾಯ್ತು ಧರಿತ್ರಿ (ಮಹಾನೇ. ೧೦-೫೩). **ನಾಳವಾಸಿಗೆ** : ನಾಳವಾಸಿಗೆಯಿಂದ ಕುರುಪತಿ ಕೌಳಿಕಾಱನ ತೆಱದಿ ಪಾಂಡವರಾಳುವಿಗೆಯನು ಸೆಳೆದುಕೊಂಡು (ಸಾಳ್ವಭಾ. ೩೯-೪೦). 'ಕಳ್ಳವಾಸಗೆ'$_2$ ಪರಾ. [ನಾಟ + ಪಾಸಗೆ$_2$ (<ಪಾಸಂಗೆ)]

ನಾಟಿ$_1$ (ನಾ). ಗಳಿಗೆ ; ಇಪ್ಪತ್ತುನಾಲ್ಕು ನಿಮಿಷದಷ್ಟು ಕಾಲ : "ನಾಟಾಯೆಂದು ಗಟಾಗೆ" (ಕಶಸಾ. ೧೩-೨೫೦) ; "ನಾಟಾ ನಾಡಿ ಗಾಯ್ತಿವು ಘಟಾಗೆ" (ಸಂಜೀವ. ೨೨) ; ಮೂಟಾ, ಬೋಟಾ, ನಾಟಾ, (ಶಬ್ದಾನು. ೧೪೦ ವ್ಯಾಖ್ಯಾ). [<ಸಂ. ನಾಡೀ]

ನಾಟಿ$_2$ (ನಾ). ಒಂದು ಊರಿನ ಹೆಸರು (?) : ನಾಟಾಯುಳ್ ಮೂವತ್ತುಗಣ್ಡುಗ ಭತ್ತ ಪಡೆಯ ತೆಱುವೊದು (ಇಆ. XIV, ೨೩೩-೬೫; ಸು. ೨ನೆಯ ಶತ). [?]

ನಾಟಿಕೆ, ನಾಳಿಗೆ, ನಾಟಿಗೆ (ನಾ). ಗಳಿಗೆ ; ಘಟಿಕೆ : ಉದಯಂಬರೆ ಬಂದ ಪಿಲಗ್ನದಲ್ಲಿ ತಾನೆನಿತನೆ ಸಲ್ಗು ಮುನ್ನನಿತೆ ನಾಟಿಕೆ ಜನ್ಮಘಟೀ ಪ್ರಮಾಣಮಾ ದಿನ ರಜನೀಪ್ರಮಾಣದನುಪಾತನದಿಂ ನಿಜಲಗ್ನಸಂಜ್ಞೆಯೊಳ್ (ಜಾತತಿ. ೩-೧೯). **ನಾಳಿಗೆ** : "ನಾಳಿಗೆ - ನಾಡಿಕಾ = ಗಳಿಗೆ" (ತದ್ಭಕೋ. ೨೧). **ನಾಟಿಗೆ** : "ನಾಡಿಕೆಗೆ ನಾಟಿಗೆಯೆನಿಪ್ಪುದು" (ಸಂಜೀವ. ೨೨) ; ನಾಡಿಕಾ - ನಾಟಿಗೆ (ನಾಟಿಗೆಯೆಂದು ಘಟಿಗೆ) (ಶಮದ. ೧೯ ಪ್ರಯೋ). [<ಸಂ. ನಾಡಿಕಾ]

ನಾಟಿಗೆ 'ನಾಟಿಕೆ' ನೋ.

ನಾಟ್ಕಡಿಗಟಿ 'ನಾಟ್ಕಡೆಗಟಿ' ನೋ.

ನಾಟ್ಕಡಿಗಟಿ 'ನಾಟ್ಕಡೆಗಟಿ' ನೋ.

ನಾಟ್ಕಡಿವೋಗು 'ನಾಟ್ಕಡೆವೋಗು' ನೋ.

ನಾಟ್ಕಡಿವೋಗು 'ನಾಟ್ಕಡೆವೋಗು' ನೋ.

ನಾಟ್ಕಡೆ (ನಾ). ನಾಡಿನ ಕಡೆ,—ಗಡಿ : "ನಾಡ ಕಡೆ ನಾಟ್ಕಡೆ . . . ಆಯ್ತು" (ಸಂಜೀವ. ೨೧); ನಾಟ್ಪಗರಣಂ, ನಾಟ್ಕಡೆ, ಕೋಟ್ಕುಟ್ಟು (ಭಾಷಾಭೂ. ೧೧೯ ಉದಾ) ; ಡಕಾರಕ್ಕಾದೇಶಮಾದ ಱಟಕ್ಕೆ ಪ್ರಯೋಗಂ . . . ನಾಡಕಡೆ = ನಾಟ್ಕಡೆ (ಶಮದ. ೧೯ ಪ್ರಯೋ).

[ನಾಟ್ಕ್(<ನಾಡು) + ಕಡೆ$_3$]

ನಾಟ್ಕಡೆಗಟಿ, ನಾಟ್ಕಡಿಗಟಿ, ನಾಟ್ಕಡಿಗಟಿ, ನಾಟ್ಗಡಿಗಟಿ (ಕ್ರಿ). ೧. ದೇಶವನ್ನು ಬಿಟ್ಟುಹೋಗು ; ನಾಡಿನಿಂದ ಹೊರಗೆ ಹೋಗು; ಗಡೀಪಾರಾಗು : ನಾಟ್ಕಡೆಗಟಿದುಱಿ [ಪಾಶಾಂ. ನಾಟ್ಕಡಿ ಗಡಿದೆಡೆ] ಬೇರಂ ಬಿಟ್ಕೆಯುಮಂ ತಿಂದು (ಗದಾಯು. ೬-೩೫). **ನಾಟ್ಕಡಿಗಟಿ** : ೨. ದೇಶದಿಂದ ಹೊರಗೆ ಹಾಕು ; ದೇಶ ಬಿಡುವಂತೆ ಮಾಡು; ಗಡೀಪಾರು ಮಾಡು : ಏಟ್ಕಟ್ಟನೆಟಿದು ನಿಮ್ಮಂ ನಾಟ್ಕಡಿಗಟಿದೊಡೆ ಮದೀಯ ನಾಥಂ ಬೇರಂ ಬಿಟ್ಕೆಯನೆ ತಿಂದ ದೆವಸದೊಳಟ್ಕಾಡಿದ ಬೀರಮಿಗಳೇಂ ಪೊಸತಾಯ್ತೇ (ಪಂಪಭಾ. ೧೨-೧೭೮). **ನಾಟ್ಕಡಿಗಟಿ** : ೨. ಅಕ್ರೋಶಂಗೆಯ್ದು ಕಪಿಳಂಗರಸಂ ಮುಳಿದು ನಾಲ್ಕ[ಟ್ಕ]ಡಿಗಟಿದಂ (ಚಾವುಂಪು.೧೯೩). **ನಾಟ್ಗಡಿಗಟಿ** : ೨. ಪಡೆವಳ್ಳರ್ ನೃಪಗುಣಮಂ ಬಿಡದೆ ನಾಟ್ಗಡಿಗಟಿವ ತೆಱದೆ ನಡೆ ನಡೆಯೆಂಬರ್ (ಕಾದಂಪೂ. ೫೫೬). ℙ ಇದು 'ನಾಟ್ಕಡಿಗಟಿ' ಎಂಬುದರ ಅಪಲಿಖಿತವಿರಬಹುದು.

[ನಾಟ್ಕಡೆ + ಕಟಿ$_1$(<ಕಟು$_1$)]

ನಾಟ್ಕಡೆವೋಗು, ನಾಳ್ಕಡಿವೋಗು, ನಾಟ್ಕಡಿಪೋಗು, ನಾಟ್ಕಡಿವೋಗು(ಕ್ರಿ). ೧. ನಾಡನ್ನು ಬಿಟ್ಟು ತೊಲಗು; ಗಡೀಪಾರಾಗು: ಕಾಟ್ಕುಚ್ಚು ತಗುಳೆ ತಮ್ಮೊಳ್ ಕೋಟ್ಕುಟ್ಟೆ ವನದ್ವಿಪೇಂದ್ರಚಯಮತಿ ಭಯದಿಂ ನೀಟ್ಕುರಿಸಿ ನಿಲ್ಲದೆನಸುಂ ನಾಟ್ಕಡೆವೋಪಂತೆ ಪೋಪುದೀ ನಗತಟದಿಂ (ಕಾವ್ಯಾವ. ೨೯೮). ೨. ಹಾಳಾಗು; ನಷ್ಟವಾಗು : ಮಸುಳೆ ನಿಜಾನ್ವವಾಯ ಮಹಿಮೋನ್ನತಿ ನಾಟ್ಕಡೆವೋಗೆ ಪಾಟಿಯುಂ ಪಸುಗೆಯುಂ . . . ಭೂಚರರ್ಗೆ ಖೇಚರ ನೀಂ ಚರನಾಗಿ ಬರ್ಪುದೇ (ಪಂರಾಮಾ. ೧೧-೧೩೬). **ನಾಳ್ಕಡಿವೋಗು** : ೧. ಪಡೆಮಾತೇಂ ಗಳ ಗಂಗೆಗೊಣ್ಡಪುರದಾ ಚೋಳಂ ಜಯಗೊಣ್ಡ ನಾಳ್ಕಡಿವೋದಂ (ಮೈಅರಿ. ೧೯೩೦, ೭೬-೨೩ ; 1080). **ನಾಟ್ಕಡಿಪೋಗು** : ೧. ಅರಸಂ ನಾಲ್ಕ[ಟ್ಕ]ಡಿಪೋಗವೇಟ್ಟೊಡೆ ಭಯಂಗೊಂಡೆನ್ನನಾ ಸಾಧು ತಂದರಸಂಗೊಪ್ಪಿಸಿ ಪೋದಂ (ಧರ್ಮಾಮೃ. ೧೨-೧೩೫). **ನಾಟ್ಕಡಿವೋಗು** : ೨. ಅಳವಾಳದೊಳಮರತರುಣಿಯರದಕೆ ಪೊಯ್ವಮರ್ದ ನುಂಡು ನಂಜು ನಾಟ್ಕಡಿವೋಗೆ (ಲೀಲಾವ. ೮-೫೨ ವ).

[ನಾಟ್ಕಡೆ + ಪೋಗು$_1$]

ನಾಟ್ಗಡಿಗಟಿ 'ನಾಟ್ಕಡೆಗಟಿ' ನೋ.

ನಾಟ್ಗಮುಂಡು 'ನಾಟ್ಗಾಮುಂಡು$_2$' ನೋ.

ನಾಟ್ಗಮುಂಡುಗೆಯ್ 'ನಾಟ್ಗಾಮುಂಡುಗೆಯ್' ನೋ.

ನಾಟ್ಗಾದೆ, ನಾಣ್ಗಾದೆ, ನಾರ್ಗಾದೆ, ನಾಳ್ಗಾದೆ (ನಾ). ೧. ಜನಜನಿತವಾದ ಗಾದೆ ; ನಾಣ್ಣುಡಿ ; ಲೋಕೋಕ್ತಿ : ಕೊರಲ ಸತ್ವಮಿಲ್ಲದೊರಲಂ ನುಂಗಿದರೆಂಬ ನಾಟ್ಗಾದೆಯಂತೆ (ಧರ್ಮಾಮೃ. ೬-೧೬೩) ; ಆವಿಷ್ಯತಂ ಮಾಡಿದಂ ದೇವಂಗಾಱದೆ ಧರ್ಮಿಯಂ ಬಡಿದರೆಂಬೀ ಸಂದ ನಾಟ್ಗಾದೆಯಂ (ಪುಷ್ಪಪು. ೧೨-೮೬). **ನಾಣ್ಗಾದೆ** : ೨. ಸಾಮಾನ್ಯವಾದ ಮಾತು ; ಅಲ್ಪವಿಚಾರ : ಕಾದಿ ಕೊಂಬುದು ಪಾಳುನಾಡೆಂಬುದೆಂದು ನಾಣ್ಗಾದೆಯಂ ನೀವೆಸಗಬೇಡ (ಸೌಂದಪು. ೧೨-೯೧) ; ನಾಣ್ಗಾದೆಯಲ್ತು . . . ಹರಿಗಳಂ ಕುವರರೆಯ್ದೆ ಮೇಗಣ್ಗೆ ಭೋಂಕೆನಲಡರಿ ಬಿದಿಯನಲರ್ವೊಡೆಯ ಮೆಯ್ದಣ್ಗರುವರಂ ಜಱಿದರು (ಭಾವಚಿಂ. ೮-೪) ; ಚೆಲ್ವಪೆಣ್ಗಳೆಯ್ತರುತಿರ್ದರೀಶನೆಡೆಗೇನವರು ನಾಣ್ಗಾದೆಯನಿತರವರೆ (ವೀಕೈಪು. ೨-೩-೨೬). **ನಾರ್ಗಾದೆ** : ೧. ಆದರದಿಂದಂ ಬೋಧರ್ ಬೋಧರನಪ್ಪಿದೊಡೆ ಬೂದಿ ಬೂದಿಯೆ ನಾಱತ್ತಾದಮೆನಲ್ನೆಗಳ್ದರ್ನಾರ್ಗಾದೆಗೆ ದೊರೆ ಸಮಯಧರ್ಮದೆಡೆಗುಟಿದವರ್ಗಳ್ (ಸಮಪ. ೪-೮೯). **ನಾಳ್ಗಾದೆ** : ೧. ಕಾಮಿಗಳ್ ಕಣ್ಗಾಣರೆಂಬ ನಾಳ್ಗಾದೆ ಪುಸಿಯೆ (ಪದ್ಮರಾ. ೮-೯೦). [ನಾಟ್ಗ್(<ನಾಡು) + ಗಾದೆ]

ನಾಟ್ಗಾಮಿಗ, ನಾಳ್ಗಾಮಿಗ (ನಾ). ನಾಡಿನ ಗ್ರಾಮಸ್ಥ : ದಿಟ್ಟಗೆಱಿಗಳ ಎಡೆನಾಡ ಗಾಮಂ . . . ಕಲಿಮ್ಮಾರಾನೆಟಿದು ಕೊಣ್ಡಾಳುತ್ತಿರೆ ಕಣ್ಡು ನಾಟ್ಗಾಮಿಗರ್ಕ್ಕಳುಂ ನಿನ್ದು ವಸವೂರ ಎಱದು ಕೊಟ್ಟೆಯಂ ಕೊಳ್ವಲ್ಲಿ (ಎಕ. VIII, ಸೊರಬ. ೧-೩ ; 797 ?). **ನಾಳ್ಗಾಮಿಗ** : ಬಿಟ್ಟಗ ಎಱಿಗೆ ಗೊಳ್ಳಿನಾಡ ನಾಳ್ಗಾಮಿಗರ್ (ಎಕ. VIII, ಸೊರಬ. ೫೪೨-೨ ; ಸು. 800). [ನಾಟ್ಗ್ (<ನಾಡು) + ಗಾಮಿಗ]

ನಾಟ್ಗಾಮುಂಡ, ನಾರ್ಗಾಮುಂಡ, ನಾರ್ಗಾವುಂಡ, ನಾಳ್ಗಾಮುಂಡ, ನಾಳ್ಗಾವುಂಡ, ನಾಟ್ಗಾಮುಂಡು$_1$, ನಾಟ್ಗಾವುಂಡ (ನಾ). ದೇಶ ಭಾಗದ ಒಡೆಯ ; ಪ್ರಾಂತಾಧಿಕಾರಿ ; ನಾಡಿನ ಮುಖಂಡ : ನಾಟ್ಗಾಮುಣ್ಡನುಮಿಟ್ಟು ಕೊಟ್ಟೋರ್ (ಎಇ. XIV, ೧೯೧-೪೯ ; 725) ; ರಣಪಾರಗಾಮುಣ್ಡರುಂ ಅನ್ದಮಾಸಲ ಉತ್ತಮಗಾಮುಣ್ಡರುಂ ನವಿಲೂರ ನಾಟ್ಗಾಮುಣ್ಡರುಂ (ಎಕ. II, ೩೫-೮ ; ಸು. 800) ; ಇ ಕೊಡಱ್ಗೆಯ ಬಳಸಿದೋರ್ ನಾಟ್ಗಾಮುಣ್ಡ ಬಿಯಳನುಂ ಪಿರಿಯಮುಗುಳಿಯ ಕೊಮರಯ್ಯನುಂ (ಎಕ. VI, ಚಿಕ್ಕಮ. ೩-೧೨; 899 ?). **ನಾರ್ಗಾಮುಂಡ** : ಬೆಳ್ವೊಲ ಮೂನೂಱಱ ನಾರ್ಗ್ಗಾಮುಣ್ಡಂ ತೊಣ್ಡಯ್ಯನುಂ (ಎಇ. XIV, ೩೬೫-೧೪ ; 945). **ನಾರ್ಗಾವುಂಡ** : ಭಾವಿಸೆ ಮುಗುನ್ದ ಮೂ[ವ]ರ್ತ್ತಕ್ಕೀ ವಸುಧೆಗೆ ತಿಳಕಮದೆ[ಱ]ನಾರ್ಗ್ಗಾವುಣ್ಡಂ ಚಾವುಣ್ಡಂ (ಸೌಇಇ. XI-i, ೭೮-೪೨ ; 1045) ; ನಾರ್ಗಾವುಣ್ಡ ಭೂಮಿ ೨೦೦೦ ಗೃಹೇಹಸ್ತ ೪೦ (ಇಆ. XIV, ೧೪೧-೨೬; ಸು. 12ನೆಯ ಶತ). **ನಾಳ್ಗಾಮುಂಡ** : (ಲೋಕಸ. ೩೭). **ನಾಳ್ಗಾವುಂಡ** : ಸೂರ್ಯ್ಯಗ್ರಹಣದನ್ದು ಮುಳುಗುನ್ದಪನ್ನೆರಡಱೊಳಗೆ ವೆಲೆಯ ಪೊಸವೂರೊಳ್ನಾಳ್ಗಾವುಣ್ಡಂ ಕೊಱಲಗುನ್ದಂ . . . ಪೊಸವೂರ ಮೂಲಸ್ಥಾನದೇವರ್ಗ್ಗೆ ಬಿಟ್ಟಪಟ್ಟವರ್ದ್ಧನದ ತೋಣ್ಟವೊನ್ದು (ಸೌಇಇ. XI-i, ೪೭-೧೩ ; 995). **ನಾಟ್ಗಾಮುಂಡು$_1$** : ಬೆಳ್ಳಂವ್ವಾಡಿಯ ಗೊಟ್ಟವಾಡಿಯ ಇನ್ತಿನಿತು ಮೂರಱ್ ಕಲ್ಗಾ ನಾಟ್ಗಾಮುಣ್ಡುಗಳ್ಗಂ ತಂಭುಲಶ್ರಾವಣಗೆಯ್ದು ಒಡಂಭಡಿಸಿ ಕೊಣ್ಡುದು (ಎಕ.XII, ನಂಜನ. ೨೬೯-೯೭ ; 904) ; ಇದಕ್ಕೆ ಸಕಿಳೆ ಬೆಳ್ಗುನ್ದೂರುಂ ಕಿಱುವೆಳ್ಗುನ್ದೂರುಂ . . . ಎಡೆನಾಡ ಮುವನ್ಗಾಟ್ಗಾಮುಣ್ಡುಗಳುಂ ಸಕ್ಕಿ (ಎಕ. III, ನಂಜನ. ೧೫೫-೯ ; 970 ?). **ನಾಟ್ಗಾವುಂಡ** : ನಾಡ ಅಱಿಗೇಱಿಯ ನಾಟ್ಗಾವುಣ್ಡ XXX ಗೆಲ್ಲೂರ ಮಾರಗಾವುಣ್ಡ . . . ತುಱುಗಳೊಳ್ಸತ್ತು (ಎಕ. VII, ಶಿವಮೊ. ೨೨-೩ ; 963) ; ಶ್ರೀಧರಯ್ಯನುಂ ನಾಡುಂ ನಾಟ್ಗಾವುಣ್ಡಂ ಸಿನ್ದಗಾವುಣ್ಡನುವಿಟ್ಟು ಸತ್ತಿವಂಗಲದ ಭೂಮಿಯ ಸಮ್ಮನ್ದಂ ಮಾರಯ್ಯನುಂ (ಎಕ. IX, ಹೊಸಕೋ.೧೧೧-೫ ; 997). [ನಾಟ್ಗ್ (<ನಾಡು) + ಗಾಮುಂಡ]

ನಾಟ್ಗಾಮುಂಡು$_1$ 'ನಾಟ್ಗಾಮುಂಡ' ನೋ.

ನಾಟ್ಗಾಮುಂಡು$_2$, ನಟ್ಗವುಂಡು, ನಾರ್ಗವುಂಡು, ನಾರ್ಗಾಮುಂಡು, ನಾರ್ಗಾವುಂಡು, ನಾರ್ಗೌಡು, ನಾಳ್ಗಾವುಂಡು, ನಾಟ್ಗಮುಂಡು, ನಾಟ್ಗಾವುಂಡು (ನಾ). ನಾಡಿನ ಅಧಿಕಾರ ; ಪ್ರಾಂತಾಧಿಕಾರ : ಪೆರ್ಮಾನಡಿ ಗಾಮುಣ್ಡಣ್ಗಂ ಕೊಣ್ಗುಣಿಗನ್ನಾಡ ನಾಟ್ಗಾಮುಣ್ಡು ಕಿಱುವುಸುವೂರುಮಂ ಕಲ್ನಾಡುಗೊಟ್ಟರ್

(ಎಕ.IV,ಹೆಗ್ಗಡ. ೧೦೩-೧೧; ಸು. 910). **ನಟ್ಗವುಂಡು**: 'ನಟ್ಗವುಂಡುಗೆಯ್' ಪರಾ. **ನಾರ್ಗವುಂಡು**: 'ನಾರ್ಗವುಂಡುಗೆಯ್' ಪರಾ. **ನಾರ್ಗಾಮುಂಡು** : 'ನಾರ್ಗಾಮುಂಡುಗೆಯ್' ಪರಾ. **ನಾರ್ಗಾವುಂಡು** : 'ನಾರ್ಗಾವುಂಡುಗೆಯ್' ಪರಾ. **ನಾರ್ಗೌಡು** : ಮಡಲೂರ ಸಾತಗೌಉಡನ ಮಗನು ಚೌಡಗೌವುಡಂ ನಾರ್ಗೌಡುರ್ಗ್ಗವುಡುಗೆಯ್ಯುತ್ತಮಿರೆ (ಕಇ. IV, ೪೮-೨೦ ; 1247). **ನಾಳ್ಗಾವುಂಡು** : 'ನಾಳ್ಗಾವುಂಡುಗೆಯ್' ಪರಾ. **ನಾಟ್ಗಮುಂಡು**: 'ನಾಟ್ಗಮುಂಡುಗೆಯ್' ಪರಾ. **ನಾಟ್ಗಾವುಂಡು**: 'ನಾಟ್ಗಾವುಂಡುಗೆಯ್' ಪರಾ.

[ನಾಟ್ (<ನಾಡು) + ಗಾಮುಂಡು$_2$]

ನಾಟ್ಗಾಮುಂಡುಗೆಯ್, ನಟ್ಗವುಂಡುಗೆಯ್, ನಾರ್ಗವುಂಡುಗೆಯ್, ನಾರ್ಗಾಮುಂಡುಗೆಯ್, ನಾರ್ಗಾವುಂಡುಗೆಯ್, ನಾಳ್ಗಾವುಂಡುಗೆಯ್, ನಾಟ್ಗಮುಂಡುಗೆಯ್, ನಾಟ್ಗಾವುಂಡುಗೆಯ್ (ಕ್ರಿ). ನಾಡಿನ ಅಧಿಕಾರವನ್ನು ಮಾಡು ; ದೇಶಭಾಗದ ಒಡೆತನವನ್ನು ಮಾಡು : ಶಂಕರಂ ನಾಟ್ಗಾಮುಂಡುಗೆಯೆ (ಎಇ. VII, ೨೧೩-೧೫ ; 874) ; ಶ್ರೀಮತ್ ಬೊ (?) ಟಗದಿ ತಲೆಯುಂ ರಾಜಯ್ಯನುಂ ನಾಟ್ಗಾಮುಂಡುಗೆಯ್ಯೆ (ಇಆ. XII, ೨೬೧-೧೨ ; 973) ; ಬಾಸವುರ ನೂಱ ನಾಲ್ವತ್ತರ್ಕ್ಕ ಮಲ್ಲರಸಂ ನಾಟ್ಗಾಮುಣ್ಡುಗೆಯ್ಯೆ (ಸೌಇಇ. XX, ೩೫-೭ ; 1055). **ನಟ್ಗವುಂಡುಗೆಯ್** : ಜವನೈಶಮಿ ಬ[ನ]ವಸಿನಾಡನಾಳೆ ಬಿಟ್ಟಗ ನಟ್ಗವುಣ್ಡುಗೆಯ್ಯೆ . . . ಕೂದಲಿಯನಿಱುದು . . . ಮಸೆಯರ ಗಡಿ ತುಱುವನಿಳಿಸಿದೋರಣದೊಳ್ಬಿಟ್ಟು ಸುಗತಿಗೆ ಸನ್ದೊನ್ (ಎಕ. VIII, ಸೊರಬ. ೨೦೨-೨ ; 955). ℙ ಇದು 'ನಾಟ್ಗಾವುಂಡುಗೆಯ್' ಎಂಬುದರ ಅಪಲಿಖಿತ ವಿರಬಹುದು. **ನಾರ್ಗವುಂಡುಗೆಯ್** : ಬನ್ದಣಿಕೆಯ ಸತ್ತರಱ ನಾಗಾರ್ಜ್ಜುನ ನಾರ್ಗ್ಗವುಣ್ಡುಗೆಯೆ (ಎಕ. VIII, ಸೊರಬ. ೨೩೪-೭ ; 999). **ನಾರ್ಗಾಮುಂಡುಗೆಯ್** : ಸಾಮನ್ತ ಬನ್ದಣಿಕೆಯ ಬೊಪ್ಪರಸಂ ನಾರ್ಗಾಮುಂಡುಗೆಯ್ಯುತ್ತಮಿರೆ (ಕಇ. IV, ೩-೧೫ ; 1114). **ನಾರ್ಗಾವುಂಡುಗೆಯ್** : ಬನ್ದಣಿಕೆಯ ಬೊಪ್ಪ ನಾರ್ಗ್ಗಾವುಣ್ಡುಗೆಯ್ಯೆ (ಎಕ. VIII, ಸೊರಬ. ೨೩೫-೮ ; 1084). **ನಾಳ್ಗಾವುಂಡುಗೆಯ್** : ಬಿನ್ನವುರಂ ೧೨ ಮುರ್ಚ್ಚನೂರು ೧೨ ಅಂತು ೫೪ ಬಾಡವುಮಂ ಚಳಿಕಿ ಅಯ್ಯ ಹರಸಂ ನಾಳ್ಗಾವುಂಡುಗೆಯ್ಯೆ (ಎಕ. XI, ದಾವಣ. ೧೯-೭ ; 1043). **ನಾಟ್ಗಮುಂಡುಗೆಯ್** : ಪುರಿಗೆಱೆ ಮುನೂಱುಮ ಕುಪ್ಪೆಯರಸರಾಳೆ ಮಣಲೆರಗಾಡಿಗ ನಾಟ್ಗಮುಣ್ಡುಗೆಯ್ಯೆ (ಕಇ. I, ೧೪-೫ ; ಸು. 866). **ನಾಟ್ಗಾವುಂಡುಗೆಯ್** : ಬಿಜ್ಜಂ ನಾಟ್ಗಾ[ವು]ಣ್ಡುಗೆಯೆ (ಸೌಇಇ. XX, ೧೫-೧೦ ; 904) ; ಜಿಡ್ಡೂರಾಳ್ಗೆಯೆಟ್ಟತ್ತರ್ಕಂ ಬಳ್ಳಿಗಾಮೆಯ ಬಾಟಿಗೆ ಸಹಿತ ನಾಟ್ಗಾವುಂಡುಗೆಯ್ಯೆ ಗಿಂಗಿಟಿಯೂರ್ಗ್ಗಾಮುಣ್ಡುಗೆಯ್ಯೆ (ಮೈಆರಿ. ೧೯೨೯, ೭೮-೮ ; 1179 ?). [ನಾಟ್ಗಾಮುಂಡು$_2$ + ಕೆಯ್$_1$]

ನಾಟ್ಗಾವುಂಡ 'ನಾಟ್ಗಾಮುಂಡ' ನೋ.

ನಾಟ್ಗಾವುಂಡಪಂತ (ನಾ). ನಾಡಿನ ಗೌಡಿಕೆಯ ಅಧಿಕಾರ,—ಪದವಿ : ಶ್ರೀಕಲಿವಿಟ್ಟರಸರ ಬೆಸದೊಳತೀತನಾದೊಡಾತನ ಗಾವುಣ್ಡಗರಸರ್ನ್ನಾಟ್ಗಾವುಣ್ಡಪಂತಮನಿತ್ತೊಡೆ ಜಕ್ಕಿಯಬ್ಬೆ ನಾಟ್ಗಾವುಣ್ಡುಗೆಯ್ಯುತ್ತಿರೆ (ಎಕ. VII, ಶಿಕಾರಿ. ೨೧೯-೧೧ ; 918). 'ಗಾವುಂಡಪಂತ' ಪರಾ. [ನಾಟ್ಗಾವುಂಡ (<ನಾಟ್ಗಾಮುಂಡ) + ಪಂತ$_2$]

ನಾಟ್ಗಾವುಂಡು 'ನಾಟ್ಗಾಮುಂಡು$_2$' ನೋ.

ನಾಟ್ಗಾವುಂಡುಗೆಯ್ 'ನಾಟ್ಗಾಮುಂಡುಗೆಯ್' ನೋ.

ನಾಟ್ಜೋಡೆ (ನಾ.) ಊರ ಹಾದರಗಿತ್ತಿ ; ನಾಡಾಡಿಯಾದ ವ್ಯಭಿಚಾರಿಣಿ : ಧರಣೀನಂದನ ಗೇಹದೊಳ್ ಧರಣಿಜತ್ರಿಂಶಾಂತಕಂ ಲಗ್ನವಾಗಿರೆ ದೋಷಾಕರನಲ್ಲಿ ಕೂಡೆ ಕೊಡಗೂಸಾಗಿರ್ದು ನಾಟ್ಜೋಡೆ (ಜಾತತಿ. ೨೨-೩); ಪಾತಕಿ ನಾಣಲಿ ಕೆಟ್ಟ ಬೂತು ನಾಟ್ಜೋಡೆಯವಳ್ಗದಕ್ಕುಂ (ಬಂಹರಿ. ೧೧-೧೦೪); ಕೌಮುದಿಯೆಂಬ ಪೊಚ್ಚಪೊಸವೆಣ್ಣೇನೆಂಬ ನಾಟ್ಜೋಡೆಯೋ (ರಸರ. ೪-೨೪೩).

[ನಾಟ್ (<ನಾಡು) + ಜೋಡೆ]

ನಾಟ್ತುಡುಗುಣಿ (ನಾ.) ನಾಡಾಡಿಯಾದ ಕಳ್ಳ : ಡಕಾರಕ್ಕಾ ದೇಶಮಾದ ಱಟಕ್ಕೆ . . . ನಾಟ್ಪಗರಣಂ ; ನಾಟ್ತುಡುಗುಣಿ (ಶಮದ. ೬೬ ಪ್ರಯೋ). [ನಾಟ್ (<ನಾಡು) + ತುಡುಗುಣಿ]

ನಾಟ್ತೊಲೆ (ನಾ). ಸಾಮಾನ್ಯದರ್ಜೆಯ ತೊಲೆ : ನಾಟ್ತೊಲೆ, ನಾಟ್ಪಗರಣಂ (ಶಪ್ದಾನು. ೯೦ ಪ್ರಯೋ).

[ನಾಟ್ (<ನಾಡು) + ತೊಲೆ$_3$]

ನಾಟ್ನುಡಿ (ಕ್ರಿ). (?) : ಕಡುಮುಳಿಸಿಂದೆ ಬಯ್ದುಡೆ ದಿಟಂಬಿಡಿ ತಾನೆ ಕನಲ್ದು ಬಯ್ದು ನಾಟ್ನುಡಿದಡೆ ಪೋಲೆಯಂ ಜವನುಮಾತನ ಬಾಳ್ಕೆಯ ಲೆಕ್ಕದೋಲೆಯಂ ತೊಡದು ಬಿಸುಟ್ಟನ್ (ಸೌಇಇ. IX-i, ೨೯೭-೩೦ ; 1177). [?]

ನಾಟ್ನುಡಿ, ನಾಣ್ಣುಡಿ, ನಾಣ್ನುಡಿ, ನಾನ್ನುಡಿ, ನಾಳ್ನುಡಿ (ನಾ). ನಾಡಿನಲ್ಲಿ ಬಹು ಪ್ರಚಲಿತವಾಗಿರುವ ಮಾತು ; ಜನಸಾಮಾನ್ಯರಲ್ಲಿ ಬಳಕೆಯಲ್ಲಿರುವ ದೃಷ್ಟಾಂತವಾಕ್ಯ; ಗಾದೆ; ಲೋಕೋಕ್ತಿ: ನುಡಿಗಳೊಡಂಬಡಲ್ ಬಗೆದವೋಲ್ ಬಗೆಯಂ ಮಿಗಲೀಯದೊಂದೆ ನಾಟ್ನು[ಪಾಠಾಂ.ಣ್ನು]ಡಿಯ ಬೆಡಂಗೆ ಕನ್ನಡದ ಮಾತಿನೊಳ್ (ಕಮಿಾ. ೧-೧೪೯) ; ನನ್ನಿಯಾದುದು ಸುತಂಗೆ ಕಥೆವೇಟ್ದರೆಂಬ ನಾಟ್ನುಡಿ ಜಗದೊಳ್ (ಆದಿಪು. ೮-೧೪) ; ಪೊಕ್ಕಿಱಯಲ್ ಪೋಗಿ ಮೂಗರಿವಡೆದರ್ ಎಂಬ ನಾಟ್ನುಡಿ ತನ್ನೊಳ್ ಸನ್ನಿದಮಾದುದು (ಪಂಚತಂ. ೭೬-೧೭) ; ದೇವ ನೀಂ ಕೊಟ್ಟ ಕುನ್ನಿ ಬೆಳೆವೆಳೆಯ ನಾಯಾಯ್ತೆಂಬ ನಾಟ್ನುಡಿಯಂ ನನ್ನಿ ಮಾಡದೆ (ಧರ್ಮಾಮೃ. ೫-೪೨); ಊರ ಸೀರೆಗಗಸಂ ಬಡಿವೆತ್ತನೆನಿಪ್ಪ ಜನದ ನಾಟ್ನುಡಿ ನಿನಗಾಗಲ್ಕೆ (ಜಗವಿ. ೬-೭) ; ಜಗದೊಳ್ಸನ್ನಿದಮಾದ ನಾಟ್ನುಡಿಗಳಂ ಛಂದಕ್ಕೆ ಬರ್ಪಂತೆ ನೆಟ್ಟಗೆ ಮಾತಾಡುವ ಬಲ್ಮೆ . . . ಇನ್ನಾವಂಗೆ ಪುಣ್ಯೈಕಭಾಗಿಗೆ ಸೈಪಿಂದೊರೆಕೊಳ್ಳುಮಾತನೆ ವಲಂ ಶೃಂಗಾರರತ್ನಾಕರಂ (ಶೃಂಗಾರ. ೧-೯). **ನಾಣ್ಣುಡಿ**: ಪಣನನಿಱುದು ಪಗೆಗೊಂಡರೆಂಬ ನಾಣ್ಣುಡಿಯಂ ನನ್ನಿ ಮಾಡಿ (ಪಂಪಭಾ. ೧೨-೨೯ ಪ) ; ಪರದರೊಳ್ಮರುಳಿಲ್ಲ ಸೂಳೆ ಸಾಧುವಲ್ಲ ಎಂಬ ನಾಣ್ಣುಡಿಯುಂಟು (ಧರ್ಮಾಮೃ. ೧-೧೭೮) ; ಕೂಳ ಭಣಗಿಗೆ ನೆರವು ತಪ್ಪಿದುದೆಂಬ ನಾಣ್ಣುಡಿಯಾಯಿತು (ಬಸಪು. ೫೭-೧೨) ; ಬೆಂದವಸ್ತುಗೆ ದಹನವುಂಟೇ ಎಂಬ ನಾಣ್ಣುಡಿ ನಮ್ಮೊಳಾದುದಲಾ (ಕುಪ್ಕಾಶ. ೧-೬). **ನಾಣ್ನುಡಿ** : ತಾನುಳ್ಳೊಡೆ ಮೂಱುಲೋಕಮುಂಟು ಎಂಬ ನಾಣ್ನುಡಿಯುಂಟು (ಪಂಚತಂ. ೩೯-೧೦) ; ಕುಲವ ನಾಲಗೆಯಱುಹಿತೆಂಬ ನಾಣ್ನುಡಿಗಿಂದು ನೆಲೆಯಾಯ್ತಲಾ (ಪಚಕಾ. ೨-೨೨) ; ತತ್ಪತ್ನಿ ಪಾರ್ವತಿಗೆ ನಾಕುಮಡಿ ಮಿಗಿಲೆಂಬ ನಾಣ್ನುಡಿ ಕಾಕ ಬಳಸಿತೆ (ತೊರರಾ. ೩-೨-೧೮). **ನಾನ್ನುಡಿ** : [ನುಡಿ]ದುದೆ ನಂನ್ನಿ ಮಾಡಿದುದೆ ಶಾಸನಮೆಂಬ ನೆಗರ್ತ್ತೆವೆತ್ತ ನಾನ್ನುಡಿ ತನಗೊಪ್ಪೆ (ಸೌಇಇ.XX, ೬೬-೩೭; 1118). **ನಾಳ್ನುಡಿ** : ಪರಮಾರ್ತಂ ಕೊಂದಳಿನ್ತು ಮುಂಗುರೆಯ ತಾನೆರಡಿಲ್ಲದೆಂಬ ನಾಳ್ನುಡಿ ಪೊರೆದುದಿದರ್ಕಮೆನ್ದು (ಮೈಆರಿ. ೧೯೨೭, ೩೪-೫ ; 1100) ; ಪ್ರಾರಬ್ಧಸ್ಯಾಂತ ಗಮನಂ ಮಹಾಪುರುಷಸ್ಯ ಲಕ್ಷಣವೆಂಬ ನಾಳ್ನುಡಿಯಂ ನನ್ನಿ ಮಾಡಿ (ಸೌಇಇ. IX-i,೨೭೩-೮೭; 1179);

ಸಂಧಿಯಾಗುವಾಗ ಮೊದಲಿನ ಪದದ ಕೊನೆಯ ಡುಕಾರವು ಳ ಕಾರವಾಗಿ ನಾಳ್ನುಡಿ ಎಂದಾಯಿತು (ನಾಣ್ಣುಡಿ. ೩).

[ನಾಟ್ (<ನಾಡು)+ನುಡಿ$_2$]

ನಾಟ್ಪಗರಣ (ನಾ). ೧. ಗ್ರಾಮೀಣವಾದ ನಾಟಕ; ಜನಪದ ನಾಟಕದ ಒಂದು ಬಗೆ : ನಾಟ್ಪಗರಣಂ, ನಾಟ್ಕಡೆ, ಕೋಟ್ಕುಟ್ಟು (ಭಾಷಾಭೂ. ೧೧೯ ಉದಾ); ಡಕಾರಕ್ಕಾದೇಶಮಾದ ಱಟಕ್ಕೆ . . . ನಾಟ್ಪಗರಣಂ; ನಾಟ್ಟುಡುಗುಣಿ (ಶಮದ. ೬೬ ಪ್ರಯೋ); 'ನಾಡಿನ ಪಗರಣ' ಅಲ್ಲವೆ 'ನಾಟ್ಪಗರಣ' ಎಂಬುದರಿಂದ ದೇಶದೊಳಗೆ ಆಡಿ ತೋರಿಸಲು ಅರ್ಹವಾದ 'ಯಕ್ಷಗಾನ' ಪ್ರಬಂಧವೇ ಸೂಚಿತವಾಗುತ್ತಿದೆ ಎನ್ನಬಹುದು (ಪಾರ್ತಿಸು. ೨೯). ೨. ನಾಟಕದ ಲಕ್ಷಣಗಳನ್ನು ಗರ್ಭೀಕರಿಸಿಕೊಂಡ ಒಂದು ವಿನೋದ ಪ್ರದರ್ಶನ.

[ನಾಟ್(<ನಾಡು)+ಪಗರಣ]

ನಾಟ್ಪಾಡು (ನಾ). ನಾಡ ಹಾಡು : ಚಟುಲತರಘಟಚೇಟೀ ವಿಚೇಷ್ಟಿತಂಗಳಂ ಪೆಱತಪ್ಪ ಸೂಳೆವಾದದ ನಾಟ್ಪಾಡುಗಳೊಳ್ ಕೇಳ್ದು ಕಿವಿಗಳ್ ನಿಬ್ಬರಮುಬ್ಬೆಗಂಗೊಂಡಿರ್ಕುಂ (ಚಿಕವಿ. ೬-೧೫೬ ವ).

[ನಾಟ್(<ನಾಡು)+ಪಾಡು$_2$]

ನಾಟ್ಪ್ರಭು, ನಾಳುಪ್ರಭು, ನಾಳ್ಪ್ರಭು (ನಾ). ನಾಡಿನ ಪ್ರಭು,—ದೊರೆ; ಒಂದು ಪ್ರದೇಶದ ಒಡೆಯ : ಸಂತತಂ ಪರಿಮಳದಂತೆ ವಾಣಿ ನೆಲಸಿರ್ಕೆ ವಿಕಾಸವಿಲಾಸದಂತೆವೋಲ್ ಸಿರಿ ನೆರೆದಿರ್ಕೆ ನಾಟ್ಪ್ರಭು ಜನಾರ್ದನದೇವನ ವಕ್ತ್ರಪದ್ಮದೊಳ್ (ಯಶೋಚ. ೪-೮೭); ಜಗದೊಳ್ ನಾಟ್ಪ್ರಭು ಶಾಂತಿವರ್ಮನೆಸೆವಂ ಪ್ರೋದ್ದಾಮಲಕ್ಷ್ಮೀಗೃಹಂ (ಪುಷ್ಪಪು. ೧-೭೬). **ನಾಳುಪ್ರಭು** : ಕುಲಮಂ ಪೇಳ್ವಡೆ ನಂದಿಯ ಕುಲವಾ ನಾಳುಪ್ರಭುಗಳುಂನತಿಕ್ಕೆಯನಾರಯ್ಯಲನೂನಂ (ಎಕ. IV(R), ಹುಣಸೂ. ೨೪-೪೫; 1162); ಎಡೆದೊಱೆಯೆಪ್ಪತ್ತು ಮಂಡಲಿ ಸಾಯಿರದ ನಾಳುಪ್ರಭು ನೇಮವೆಗ್ಗಡೆಯಾತನ ಮಗಂ ಚಿಣ್ಣಗವುಡ ಮಹಾಪ್ರಭು (ಎಕ. VII, ಶಿವಮೊ. ೪೩-೩೦; 1172 ?). **ನಾಳ್ಪ್ರಭು**: ನಾಳ್ಪ್ರಭು ಚಾಳುಕ್ಯವಿಕ್ರಮಕಾಲದ ೩೫ನೆಯ ವಿಕ್ರುತಸಂವತ್ಸರದ . . . ವಾರದಂದು. . . ಚಂದ್ರಶೇಖರವೆರ್ಗ್ಗಡೆ ಕಟ್ಟಿಸಿದ ಕೆಱೆಯ ಕೆಳಗೆ ಗಟ್ಟಿ ಕಮ್ಮ ಮೂವತ್ತು (ಎಕ. VII, ಶಿವಮೊ. ೮೯-೨೫; 1111); ಹಿಱಿಯಪ್ಪನು ಮಂಡಲಿ ಸಾಯರದ ನಾಳ್ಪ್ರಭು ವಡ್ಡ ವ್ಯವಹಾರಿಯಡವಿಗೊಡೆಯ ಹೊಯ್ಸಳ ಗೋಯಿಸೆಟ್ಟಿಯರ ಸುಪುತ್ರ ಕಲ್ಲಿಸೆಟ್ಟಿ (ಎಕ. VII, ಶಿವಮೊ. ೩೬-೩; 1180); ಆ ವ್ರಿತ್ತಿಯ ಶ್ರೀಮಂನಾಳ್ಪ್ರಭುಗಳು ಹುಲ್ಲೂರ ವಿಚವೆನಾಯಕಿತಿಯಜ್ಜುಗಾವುಂಡ (ಎಕ. XI, ಚಿತ್ರದು. ೨೩-೨೯; 1205); ಅತನ ತನೂಜಂ ನಾಗರಖಂಡಕೆ ನಾಳ್ಪ್ರಭು ಬೊಮ್ಮಿಸೆಟ್ಟಿ (ಕಇ. IV, ೨-೧೨; 1241).

[ನಾಟ್(<ನಾಡು)+ಪ್ರಭು]

ನಾಟ್ಪ್ರಭುತ್ವ (ನಾ). ನಾಡಿನ ಒಡೆತನ,—ಅಧಿಕಾರ : ಶ್ರೀಮಚ್ಚಾಳುಕ್ಯಗಂಗವೆರ್ಮ್ಮಾಡಿ ಕೇಸ(ಶ)ವಗಾವುಣ್ಡಂ ನಾಟ್ಪ್ರಭುತ್ವದಿಂ ಪೊಟ್ಟಿಯೂ[ರ್ಗ್ಗೆ] ಗಾವುಣ್ಡುಗೆಯ್ಯುತ್ತವಿಟ್ಟು (ಎಇ. XVI, ೮೪-೨೨; 1067). [ನಾಟ್ (<ನಾಡು)+ಪ್ರಭುತ್ವ]

ನಾಟ್ಪಟ್ಟೆ$_1$, ನಾಣ್ಬಟ್ಟೆ (ನಾ). ಹಳ್ಳಿಗಾಡಿನ ಹಾದಿ; ಊರ ಹಾದಿ : ತೊಟ್ಟನೆ ರಾಗಂ ಮನದೊಳ್ ಪುಟ್ಟೆ ಕಿರಾತೇಶನೊಸೆದು ಪಲವುಂ ಪೊನ್ನಂ ಕೊಟ್ಟೊಡವಂ ಕೊಳ್ಳದೆ ನಾಟ್ಪಟ್ಟೆ [ಪಾಠಾಂ. ನಾಡ್ಪಟ್ಟೆ]ಯ ದೆಸೆದೋಱಲಟ್ಟಮೆಸಗದೆ ಸಾಲ್ಗುಂ (ಜೀವಸಂ. ೫೬-೩೮). **ನಾಣ್ಬಟ್ಟೆ** : ಎಂಟೆಡೆಗೆಯ್ದುಪ್ಪುವು ಕಾರ್ಯಹಾನಿ ಪಥಿಕರ್ಗೂರೂರ ನಾಣ್ಬಟ್ಟೆಯೊಳ್ (ಅನಂಪು. ೧-೮೪); ಪುಟ್ಟೆದುದಂಜದಲ್ಲ ದೊಡೆ ಮುಟ್ಟೆದುದಂಜದೆನಿಪ್ಪುದೊಂದು ನಾಣ್ಬಟ್ಟೆಯ ಗಾದೆಗೊಂದೊರೆ ವಿಶೇಷಮುದಂತೆನೆ (ಶತಕ. ೧೬೫-೨೨).

[ನಾಟ್ (<ನಾಡು)+ಬಟ್ಟೆ$_1$]

ನಾಟ್ವರ್ತನ (ನಾ). ೧. ದೇಶದ ಧರ್ಮ,—ಸಂಪ್ರದಾಯ; ದೇಶಾಚಾರ. ೨. ಸಾಧಾರಣವಾದ ನಡೆವಳಿಕೆ; ಸಾಡಾಡಿಯಾದ ಪದ್ಧತಿ : ಎಳವಿದಿರ ಬಣ್ಣಮೊಳ್ನಡು . . . ಸೊಬಗಿವಳ್ಳೆ ನಾಟ್ವರ್ತನಮೇ (ಅದಿಪು. ೪-೪೪). ೩. ಮುಚ್ಚು ಮರೆ; ಕಪಟ : ಅಂತಾ ನಾಲ್ವರುಂ ನಾಟ್ವರ್ತನಮಿಲ್ಲದುಳ್ಳುದನುಳ್ಳಂದದೊಳಱಿಪುವುದುಂ (ಸುಕುಮಾ. ೭-೧೫ ವ).

[ನಾಟ್(<ನಾಡು)+ವರ್ತನ]

ನಾಟ್ವಿಳಾಸ (ನಾ). ದೇಶೀಯವಾದ ಬೆಡಗು,—ಸೊಗಸು : ನಾಟ್ವಿಳಾಸದೊಳ್ ಪೊರೆದಿರೆ ಬಂದುದಂದೊಡನೆ ಸಜ್ಜನವೆಂದಿರ ತಂಡಮೋಳಿಯೊಳ್ (ಅದಿಪು. ೧೧-೪೬ ಅಡಿಟಿ).

[ನಾಟ್ (<ನಾಡು)+ವಿಳಾಸ (=ವಿಲಾಸ)]

ನಿಂಗ (ನಾ). ಶಿವನ ಒಂದು ಆಕಾರ; ಲಿಂಗ : ಗಂಡ ಹೆಂಡಿರ ಜಗಳ ಗಂಧ ತೀಡಿದ್ದಾಂಗ ನಿಂಗಕ ನೀರು ಎರೆದ್ದಾಂಗ ಹಿರಿಹೊಳೆಯ ಗಂಗವ್ವ ಸಾಗಿ ಹರಿದ್ದಾಂಗ (ಗರತಿ. ೩೧). [<ಸಂ. ಲಿಂಗ]

ನಿಂಗಪ (ನಾ). ಒಬ್ಬಾತನ ಹೆಸರು : ನಿಂಗಪಗೆ ಕೊಟ್ಟ ಕೆಱೆಗೊಡಗೆ ಮಾನ್ಯ ಧರ್ಮ (ಮೈಆರಿ. ೧೯೨೯, ೧೦೬-೨; ?).

[ನಿಂಗ+ಅಪ (<ಅಪ್ಪ$_1$)]

ನಿಂಗಮುದ್ರೆ (ನಾ). ಲಿಂಗದ ಗುರುತು ಇರುವ ಮುದ್ರೆ; ಲಿಂಗ ಮುದ್ರೆ : ನಿಂಗಮುದ್ರೆ ಸ್ತಾಪ್ಯ ಮಾಡಿಸಿ ನಿಮಾಪ್ಪದಾಕ್ಕೆ ನಾಮಾಸ್ಕಾರಾ ಮಾಡಿದನೂ (ಮೈಆರಿ. ೧೯೪೪, ೪೦-೫; 17ನೆಯ ಶತ).

[ನಿಂಗ+ಮುದ್ರೆ]

ನಿಂಗರಾಯ (ನಾ). ಒಬ್ಬಾತನ ಹೆಸರು : ನಿಂಗರಾಯನಟ್ಟು ಸತ್ತ (ಎಕ. X, ಮುಳಬಾ. ೨೬-೧೦; ಸು. 890 ?). [ನಿಂಗ+ರಾಯ]

ನಿಂಗವಂತ (ನಾ). ಲಿಂಗವನ್ನು ಧರಿಸಿದವನು; ಲಿಂಗಾಯತ; ಲಿಂಗವಂತ : ಜಾತಿ ನಿಂಗವಂತರದು (ಬೆಟ್ಟಹೊ. ೪೨).

[ನಿಂಗ+-ವಂತ]

ನಿಂಗಾಯತ (ನಾ). =ನಿಂಗವಂತ : ಅವನು ನಿಂಗಾಯತ (ರೂಢಿ).

[<ಲಿಂಗಾಯತ]

ನಿಂದಕ (ನಾ). ೧. ತೆಗಳುವಿಕೆ; ದೂಷಣೆ; ನಿಂದೆ : ಕೊಂಡೆಯದ ಕೋಂಟೆ ನಿಂದಕದಗಳಿನಡಿಗಡಿಗೆ ತೊಂಡಿನಟ್ಟಳೆ . . . ಆಟಮಟದ ಡೆಂಕಣಗಳಿಂದೊಪ್ಪುವ ತಂಡ ದುಮಾರ್ಗದುರ್ಗವ ಬಸವರಾಜೇಂದ್ರ ಕೊಂಡು (ಸಿಂಗಿರಾ. ೪೫-೮). ೨. ದೂಷಣೆ ಮಾಡುವವನು; ಜರೆಯುವವನು; ನಿಂದಿಸುವವನು : "ಗರ್ಹಕಃ, ಗರ್ಹಮಾಣಃ ಈ ೨ ನಿಂದಕಂ" (ಕಾಶಕೃ. ೧೨೩); ವಿರಸನಜ್ಞನು ನಿಂದಕಂ ನಿಃಕರುಣಿ ಮರ್ದಿಂಗಾದೊಡೊಬ್ಬನು ಪುರದೊಳಱಿಸಿದೊಡಿಲ್ಲ (ಬಸಪು. ೪-೫೫); ನಿಂದಕರ ಸುಡುವ ಎದೆಗಿಚ್ಚು ನೋಡಾ (ಸಿದ್ಧೇವ. ೧೦೫-೩೨೬); ನಿಂದಕರಿರಬೇಕಿರಬೇಕು (ಪುರಂದ. ೪-೧೨೩ ಪಲ್ಲವಿ); ಒಂದೆಲಗ ಮೆಲ ಹೊಲ್ಲ ನಿಂದಕರ ನೆರೆ ಹೊಲ್ಲ (ಸರ್ವಜ್ಞ. ೧೯೦೦). [ಸಂ.]

ನಿಂದಣ, ನಿಂದಣೆ (ನಾ). =ನಿಂದನೆ : ತಮಗೆಂದುಂ ಮಾಡಿದ ವೈಯಾಪೃತ್ಯಮನಱಿದು ನಿಂದಣಗರುಹಣಂಗೆಯ್ದು (ವಡ್ಡಾರಾ. ೧೭೨-೧೧) **ನಿಂದಣೆ** : ರಿಸಿಯರಂ ಕೊಂದೆನೆಂದು ನಿಂದಣೆಗರುಹಣೆಗೆಯ್ದು ತಾನು ಮಲ್ಲಿಯೆ ಕಿಚ್ಚಂ ಪೊಕ್ಕು ಸತ್ತು (ವಡ್ಡಾರಾ. ೧೫೬-೧೫).

[<ಸಂ. ನಿಂದನ]

ನಿಂದಣೆ 'ನಿಂದಣ' ನೋ.

ನಿಂದನೆ (ನಾ). ದೂಷಣೆ ; ಬಯ್ಗುಳು ; ನಿಂದೆ : ವಂದನೆ ನಿಂದನೆ ಎಂಬುದು . . . ಉಪಮಾತೀತನಾದ ಪ್ರಾಣಲಿಂಗೈಕ್ಯನಿಗುಂಟೆ (ಸಿದ್ಧೇಶ. ೨೧೫–೬೭೧) ; ಹೆರರು ಆಡುವ ನಿಂದನೆಯ ನುಡಿಗಳನ್ನು ಯಾವನು ತಾಳಿಕೊಳ್ಳುವನೋ ಅವನು ಲೋಕವನ್ನೆಲ್ಲ ಜಯಿಸುವನು (ವ್ಯಾಸಚಿ. ೨೯) ; ನಿಂದನೆ ಮಾಡುವವನಿಗೆ ವಂದನೆ ಇಲ್ಲ (ಗಾದೆ).

[ಸಂ. ನಿಂದನ]

ನಿಂದಾವಾಣಿ (ನಾ). ದೂಷಣೆ ; ಬಯ್ಗುಳು ; ನಿಂದೆಯ ಮಾತು : ಯುದ್ಧಕಾಲದಲ್ಲಿ ನಿರಸ್ತ್ರರಾದ ಪಟ್ಟಣಗರ ಮೇಲೆ ಆಕಾಶದಿಂದ ಅಗ್ನಿ ಬಾಣದ ಮಳೆಗರೆದಾಗ, ಮೊದಲ ಬಾರಿಗೆ ಧರ್ಮಬುದ್ಧಿಯ ನಿಂದಾವಾಣಿ ಕೇಳಿಸಿತು (ನಿಬಂಧ. II, ೨೧೧). [ಸಂ. ನಿಂದಾವಾಣೀ]

ನಿಂದಾಸ್ತುತಿ (ನಾ). ೧. ಕಾವ್ಯದ ಪ್ರಾರಂಭದಲ್ಲಿ ದೇವತೆಗಳನ್ನೂ ಹಿರಿಯರನ್ನೂ ಹೊಗಳುವಾಗ, ಅವರನ್ನು ತೆಗಳಿದಂತೆ ಪದ್ಯವನ್ನು ರಚಿಸಿದರೂ ಅದರ ಹಿಂದೆ ಹೊಗಳಿಕೆ ತೋರುವಂತೆ ಮಾಡುವ ಒಂದು ರಚನಾಚಮತ್ಕಾರ. ೨. ಅಂಥ ಚಮತ್ಕಾರವುಳ್ಳ ಪದ್ಯ : ಇನ್ನು ನಿಂದಾಸ್ತುತಿರೂಪವಾದ ವ್ಯಾಜಸ್ತುತಿಯು : ಶರ: ನಿಂದ್ಯ ಮಾಡುತ್ತದರೊಳು ಸ್ತುತಿಯು ತೋರೆ ಚಂದದಿಂದದು ವ್ಯಾಜಸ್ತುತಿಯು ಇಂದು ನೀ ಗಂಗೆ ಪಾಪಿಗಳ್ಗೀವೆ ಸ್ವರ್ಗ ಭಂದದಿಂದಿದಾವ ವಿವೇಕ (ಕುವಲ. ೬೬). [ಸಂ.]

ನಿಂದಿ (ನಾ). ಒಂದು ಊರಿನ ಹೆಸರು ; ಈ ಈಗಿನ ಹೆಗ್ಗಡದೇವನ ಕೋಟೆಯ 'ಹಿರಿನಂದಿ' ಎಂಬ ಊರು : ನಿನ್ನಿಯ ಕೊರನ್ತಿಯರಸರ ಮಕ್ಕಳ್ನಾಲ್ನಾಲ್ವರು ನೆಲದಟಾಬಿನೊಳ್ಳಾದಿ ಸತ್ತ XX (ಎಕ. IV, ಹೆಗ್ಗಡ. ೧೧೬–೯ ; ಸು. 930). [?]

ನಿಂದಿತ (ಗು). ೧. ನಿಂದೆಗೊಳಗಾದ ; ದೂಷಣೆಗೊಳಗಾದ. ೨. ತಿರಸ್ಕಾರಯೋಗ್ಯವಾದ ; ಕೀಳಾದ. ೩. ನಿಷೇಧಿಸಿದ ; ನಿರೋಧ ಮಾಡಿದ. (ನಾ). ೪. ತಿರಸ್ಕಾರಯೋಗ್ಯವಾದುದು ; ಕೀಳಾದುದು : ಸತ್ಕಾರವಿಲ್ಲದೆ ಅಥವಾ ತಿರಸ್ಕಾರದಿಂದ ಇಟ್ಟ ಅನ್ನವು ನಿಂದಿತವು (ಆರ್ಯಧ. ೨೧೮). ೫. ದೂಷಿತನಾದವನು ; ನಿಂದೆಗೊಳಗಾದವನು : ಆಚಾರವಿಲ್ಲದ ಮಾನವನು ಲೋಕದಲ್ಲಿ ನಿಂದಿತನಾಗುವನು (ಶಕ್ತಿವಿ. ೭೩). ೬. (ಆಲಂ)ಕೆಟ್ಟಫಲವನ್ನುಂಟು ಮಾಡುವವನು : ತ್ರಿತಯಾಯಾಷ್ಟಮದೊಳ್ ತುಷಾರಕರನಿಂದೇ ಕಾದಶದ್ರವ್ಯಧರ್ಮತನೂಜಾಸ್ತದೊಳಿಂದ್ರಮಂತ್ರಿ ಶುಭದಂ ಶೇಷಂಗಳೊಳ್ ನಿಂದಿತಂ (ಜಾತತಿ. ೧೦–೧೧). [ಸಂ.]

ನಿಂದಿತಾನ್ನ (ನಾ). ತಿರಸ್ಕಾರದಿಂದ ನೀಡುವ ಆಹಾರ : ನಿಂದಿತಾನ್ನ —ಶುದ್ಧವೇ ಆದರೂ ಕಾರಣಾಂತರದಿಂದ ಕೆಡುವುದು. ಸತ್ಕಾರವಿಲ್ಲದೆ ಅಥವಾ ಪುರಸ್ಕಾರವಿಲ್ಲದೆ, ತಿರಸ್ಕಾರದಿಂದ ಇಟ್ಟ ಅನ್ನವು ನಿಂದಿತವು (ಆರ್ಯಧ. ೨೧೮). [ನಿಂದಿತ + ಅನ್ನ$_3$]

ನಿಂದಿರಿಕೆ 'ನಿಲ್' ಪರಾ.

ನಿಂದಿರಿಸು 'ನಿಲ್' ಪರಾ.

ನಿಂದಿಸು (ಕ್ರಿ). ಬಯ್ಯು ; ದೂಷಿಸು ; ತೆಗಳು ; ಜರೆ : ತನ್ನ ಭೋಗ ಕೃಷ್ಣೆಯಂ ತಾನೆ ತನ್ನ ಮನದೊಳ್ ನಿಂದಿಸುತುಂ (ಆದಿಪು. ೧೬–೬೦ ಪ) ; ಎತ್ತಿಕೊಳಲೇಕೆ ಮತ್ತಿಳುಹಲೇಕಯ್ಯಾ . . . ನಿಂದಿಸಲೇಕೆ ಸ್ತುತಿಸಲೇಕೆ (ಬಸವ. ೪೧೯) ; ನಿಮ್ಮ ನಿಂದಿಸುವವರುಗಳು ದುಷ್ಕರ್ಮಿಗಳು (ಕುವ್ಯಾಅ. ೬–೧೦೯) ; ಹಿಂದೆ ನಿಂದಿಪರನ್ನು ವಂದಿಸುತಲಿರಬೇಕು (ಪುರಂದ. ೨–೭೫–೨) ; ನಿಂದಿಸುವ ದುರ್ಜನರೆಂಬೊಂದು ಭಯಂಬೆತ್ತು ಸುಕವಿ ರಚಿಸನೆ ಕೃತಿಯಂ (ರಾಜಶೇ. ೧–೩೧) ; ಇನ್ನೊಬ್ಬರ ಪುಸ್ತಕವನ್ನು ಹೀಗೆ ತೆಗೆದುಕೊಂಡು ನಿಂದಿಸ ಹಚ್ಚುವುದು ಒಳ್ಳೆಯದಲ್ಲ (ಜಯಂತ. ೨೬).

ನಿಂದಿಸಿಕೊಳ್ — ಜರೆದುಕೊಳ್ಳು ; ಹೀಯಾಳಿಸಿಕೊಳ್ಳು : ತಮ್ಮಂ ತಾಮೆ ಕೃಪಾಶೂನ್ಯರೆಂದು ನಿಂದಿಸಿಕೊಂಡರ್ (ಪಂಠಾಮಾ. ೧೫–೧೬) ; ತನ್ನಂ ತಾನೆ ನಿಂದಿಸಿಕೊಂಡು ತಡವರಿಸಿ ಬೀಟ್ಟ ಮುನಿನಾಥನಂ ಬೀಟಲೀಯದೆ ತರ್ಕೈಸಿಕೊಂಡು (ಧರ್ಮಾಮೃ. ೪–೧೬೯).

[ನಿಂದೆ + –ಇಸ್ತು$_3$]

ನಿಂದೆ (ನಾ). ೧. ತೆಗಳಿಕೆ ; ಬಯ್ಯುವಿಕೆ ; ದೂಷಣೆ : "ತೆಗಟೆನ್ನಲದು ತಾಂ . . . ನಿಂದಾತ್ಯುಂ" (ಕವಿಕಂ. ೧೨೨) ; ಸ್ತುತಿ ನಿಂದೆಗಳು ಬಂದರೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು (ಮಹಾದೇ. ಬ. ೪೫–೧೦೬) ; ಸ್ತುತಿ ಇಲ್ಲ ನಿಂದೆ ಇಲ್ಲ ನೆಂಟರಿಲ್ಲ . . . ತಾನೆಂಬ ನೆನಪಿಲ್ಲಾಗಿ (ಅದವ. ೪೭–೧೩೨) ; ಮೆಱೆವನಭವನ ನಿಂದೆಯಂ ಕೇಳದತಿರಾಗಿ (ಇಱುರ. ದೇ. ೧೦೬–೧೨) ; ಅಂತು ನಿಂದೆಯನಾಂತು ಸ್ತುತಿವೆತ್ತ ಮಣಿಗಾಱರ ಪಸರದಿಂ ಮುಂದೆ . . . ಎಸೆವುವಂಬರಂಗಳ ಪಸರಂ (ದಶಕು. ೧–೩೬ ಪ) ; ನಿಂದೆ ಹೊದ್ದುದು ನಡೆವಳಿಗಳೆಲಿ (ತೊರರಾ. ೧–೩–೨೮) ; ಒಂದೊಂದು ವೇಳೆ ಮಾತಿನ ಭರದಲ್ಲಿ ಬೇರೊಬ್ಬರ ನಿಂದೆಯ ಮಾತುಗಳಾಗಲಿ ಚಾಡಿಯಾಗಲಿ ಬಾಯಿಂದ ಹೊರಬೀಳಬಹುದು (ಮುಂಬಯಿ. ೪–೪೯). ೨. ಅನ್ಯಾಯವಾದ ಆರೋಪ, — ಅಪವಾದ ; ಆಕ್ಷೇಪ : "ಅಪವಾದಃ . . . ನಿಂದಾ, ಜುಗುಪ್ಸಾ . ಈ ೮ ಅಪವಾದದ ನಾಮಂ" (ಹಲಾಯು. ೨೪–೧೪೭) ; "ಅವಾರ್ತೆಯಪವಾದಂ ಜುಗುಪ್ಸೆ ನಿರ್ವಾದಮಪಕೀರ್ತಿ . . . ಉಪಕ್ರೋಶಮೆನೆ ನಿಂದೆಯಕ್ಕುಂ" (ಮಂಗರಾ. ೨೬–೪).

ನಿಂದೆಯತನ = ದೂಷಣೆ : ಹಾವ ಹಿಡಿವುದಕ್ಕೆ ಗಾರುಡವ ಹೇಳಿದುದಿಲ್ಲ ಕುತ್ತುವ ಹಸುವಿನ ಕೊಂಬ ಹಿಡಿಯ ಕಲಿಸಿದುದಿಲ್ಲ ತಿಂಬ ಹುಲಿಗೆ ಅಂಗವ ತಪ್ಪಿಸುವುದ ಕಲಿಸಿದುದಿಲ್ಲ ನಿನಗಿದು ನಿಂದೆಯತನವೆ (ಮೋಳಿಮಾ. ೨೦೨–೭೫೪). [ಸಂ. ನಿಂದಾ]

ನಿಂದೆಗಾಱ (ನಾ). ತೆಗಳುವವನು ; ನಿಂದಕ : ನಿಂದೆಗಾಱನೊ ಮೇಣು ಲೋಕದ ಬಂದಿಗಾಱನೊ (ನಿಭಾಗ. ೪–೧೧–೧೫). [ನಿಂದೆ + –ಕಾಱ]

ನಿಂದೋಪಮೆ (ನಾ). [ಕಾವ್ಯಮೀ] ಉಪಮಾನವಸ್ತುಗಳನ್ನು ದೋಷಪೂರ್ಣವೆಂದು ಹೇಳಿ ಅವುಗಳನ್ನು ನಿಂದಿಸುವ ಮತ್ತು ಉಪಮೇಯವನ್ನು ಹೊಗಳುವ ಒಂದು ಬಗೆಯ ಉಪಮಾಲಂಕಾರ : ಸರಸೀಜಂ ಸರಜಂ ಶಶಧರಬಿಂಬಮದತಿಕಳಂಕಿತಂ ನಿನ್ನ ಮೊಗಂ ನಿರುಪಮಮಾಗಿಯುಮವಱೊಳ್ ದೊರೆಯೆಂಬುದನಱಿದು ಕೊಳ್ಗೆ ನಿಂದೋಪಮೆಯಂ (ಕವಿರಾ. ೩–೭೩). 'ಪ್ರಶಂಸೋಪಮೆ' ಪರಾ. [ಸಂ. ನಿಂದೋಪಮಾ]

ನಿಂದ್ಯ (ಗು). ೧. ನಿಂದಿಸಲು ತಕ್ಕುದಾದ ; ದೂಷಣೆಗೆ ಯೋಗ್ಯವಾದ : ಪಾಪಪರಿಶೋಧನೆಗಾಗಿ ಪ್ರತಿನಿತ್ಯವೂ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ಇಲ್ಲದಿದ್ದ ಪಕ್ಷದಲ್ಲಿ ಅವರು ನಿಂದ್ಯಲಕ್ಷಣಯುಕ್ತರಾಗಿ ಹುಟ್ಟಬೇಕಾಗುತ್ತದೆ (ಭಾರದ. ೫೫). (ನಾ). ೨. ನಿಂದಿಸುವಂತಹ ಕೆಲಸ ; ದೂಷಣೆಗೊಳಗಾಗುವ ಕಾರ್ಯ : ವಂದಿಗಳ್ ನಿಂದ್ಯಮೆನೆ ಮಾಗಧರಾಗದೆನೆ ಸೂತರನೀತಿಯೆನೆ . . . ಸಮುದ್ರಕ್ಷೋಭದಂತೆ ಘೂರ್ಣಿಸುವ ಜನಕ್ಷೋಭಮಂ ಕೈಕೊಳ್ಳದೆ (ಜಗವಿ. ೨–೫೩ ಪ). ೩. ತೆಗಳಿಕೆಗೆ ಯೋಗ್ಯವಾದುದು : ಆತನಿಗೆ ಈ ಅಸಹಿಷ್ಣುತೆಯು ನಿಂದ್ಯವಾಗಿದೆಯೆಂದು ಬೋಧಿಸಿದ ವೃತ್ತವು ಲೀಲಾಚರಿತ್ರೆಯಲ್ಲಿದೆ (ಕರ್ಣಾಟ. ೧೬೭). ೪. ದೂಷಣೆಗೆ ಯೋಗ್ಯನಾದವನು, —ಅರ್ಹನಾದವನು : ನಿಂದ್ಯನಾವನು ಲೋಕದೊಳಗಭಿವಂದ್ಯನಾವನು (ಕುವ್ಯಾಅ. ೨೩–೪೨). [ಸಂ.]

ನಿಂಬ (ನಾ). ೧. ಒಂದು ಬಗೆಯ ಮರ ; ಬೇವು : "ನಿಂಬಮರಿಷ್ಟಂ ಪಿಚುಮಂದಂ ಬೇವು" (ವಸ್ತುಕೋ. ೩೪-೧೦) ; "ನಿಂಬಮದರಿಷ್ಟಮೆನೆ ಪಿಚುಮಂದಮೆನೆ ಬೇವು" (ಮಂಗರಾ. ೩೫-೧೩) ; ಕಕ್ಕೆ ಮುಸ್ತೆ ನಿಂಬಂ ಕೊತ್ತಂಬರಿಯೆಂದಿವಂ . . . ಮಜುಗಿಸಿ ಕುಡಿಯೆ ಪೈತ್ತಿಕಜ್ವರ ಹರಣಂ (ಲೋಕೋಪ. ೯-೧೭); ನಿಂಬದ ಕುಸುಮಂಗಳನೌದುಂಬರಪಂಚಕಮ ಸಂತೆ . . . ಗಿಣ್ಣನುಣ್ಣದಿರ್ಪುದಮೋಘಂ (ಸುಕುಮಾ. ೬-೪೩). ೨. ಮಂದಾರ ; ಪಾರಿಭದ್ರ : 'ನಿಂಬತರು' ಪರಾ. [ಸಂ.]

ನಿಂಬಕೈಪೆ (ನಾ). ಬೇವಿನ ಕಹಿ,—ತಿಕ್ತರುಚಿ : ನಿಂಬಕೈಪೆಯುಂ ಸರ್ಪನ ಪಲ್ಲೊಳು ವಿಷಮೆಂತು ಸ್ವಭಾವಮಂತೆ ಸ್ತ್ರೀಯಿನಿತು . . . ಭಯಮಂ ದರ್ಪಮುಮೆಂದಿವಂ ಬಿಡುವರಲ್ಲದಱಂ ಸ್ತ್ರೀಗೆ ನಿರ್ವಾಣ ಮಿಲ್ಲ (ಶ್ರಾವಕಾ. ೧೧೫-೮). [ನಿಂಬ+ಕೈಪೆ (<ಕಯ್ಪೆ)]

ನಿಂಬಜೆ (ನಾ). ನಿಂಬವನದಲ್ಲಿ ವಾಸಿಸುವ ದೇವತೆ ; ಮಲ್ಲರ ದೇವತೆ ; ರಣದೇವತೆ ; ಚಂಡಿ ; ☞ ಈಕೆಯು ನಿಂಬವೃಕ್ಷದಲ್ಲಿ ವಾಸಿಸುವುದರಿಂದ ಈ ಹೆಸರು ಬಂದಿದೆಯೆಂದು 'ಬ್ರಹ್ಮಾಂಡ ಪುರಾಣದ ನಿಂಬಜಾಶಕ್ತಿವಿಜ್ಞಾನ' ಎಂಬ ಭಾಗದಲ್ಲಿ ಹೇಳಿದೆ : ಭುಜದಲಿ ಶಿರದಲಂದಕ್ಕಡದ ಮಣ್ಣನು ಬೆರಳಲುದುರಿಚಿ ಬಾಳುಗೆಂದರು ನೆನೆದು ನಿಂಬಜೆಯ (ಕುಮ್ಮಾಕ. ೧೯-೪೧) ; ಬಹಳ ರವದಬ್ಬರದಲೆದ್ದನು ನೆನೆದು ನಿಂಬಜೆಯ (ಪ್ರಹ್ಲಾಚ. ೩-೫೪) ; "ಗರುಡಿಯವರ ಕುಲದೇವತೆ" (ಪ್ರಭಣ್ಣ). [ಸಂ. ನಿಂಬಜಾ]

ನಿಂಬತರು (ನಾ). ೧. ಮಂದಾರ ವೃಕ್ಷ : "ಪಾರಿಭದ್ರಃ, ನಿಂಬತರುಃ, ಮಂದಾರಃ, ಪಾರಿಜಾತಕಃ — ೪ ಹಾಲಿವಾಣದ ಮರದ ಹೆಸರುಗಳು. ಇದಕ್ಕೆ ಗಂಧಬೇವೆಂತಲೂ ಪಾರಿಜಾತವೆಂದೂ ಕೆಲವರು ಅರ್ಥ ಹೇಳುವರು" (ಸಿದ್ಧಾಂತಿ. ೧೧೭). ೨. ಬೇವಿನ ಮರ. [ನಿಂಬ+ತರು$_2$]

ನಿಂಬದಳ (ನಾ). ಬೇವಿನ ಎಲೆ,—ಸೊಪ್ಪು : ನಿಂಬದಳಂ ಧಾತ್ರೀ ಫಳಮೆಂಬಿವನೊಡನರೆದು ಕುಡಿವುದು . . . ಕುಷ್ಠರೋಗಮಿವಱಂ ಕಿಡುಗುಂ (ಲೋಕೋಪ. ೯-೧೧೦) ; ಮನಂಗೊಳಿಪ ನಿಂಬದಳದಂದದಿಂ ಪೊಂಗಡರ್ದ ಬಂಧುರಭ್ರೂಲತೆಯ ಕೋಮಲಲತಾಂಗಿಯರು ಬಂದರು (ಸೌಂದಪು. ೭-೫೩). [ನಿಂಬ+ದಳ$_2$(=ದಲ)]

ನಿಂಬಪತ್ರ (ನಾ). = ನಿಂಬದಳ : ನಿಂಬಪತ್ರವನು ತಲೆ ಉಡಿಯಲ್ಲಿ ಚಿಂತೆಯಿಲ್ಲದೆ ಕಟ್ಟ ಮಾರಿಯಂ ಕುಣಿಸುತ್ತ (ಪ್ರೌಢರಾ. ೬-೪೧) ; ಪಾಪಿಗಳಾರವರ್ಗೆ ಹರಿಕೀರ್ತನೆಯಲ್ಲಿಯುಪೇಕ್ಷೆ ಯೋಗ್ಯಮೆ ಜ್ಞಾಪಿಸೆ ಚೂತಪಕ್ವಫಲಮಂ ಮಿಗೆ ಬಿಟ್ಟುಱೆ ನಿಂಬಪತ್ರಮಂ ವ್ಯಾಪಿಸಿ ಭಕ್ಷಿಪುಷ್ಟದವೊಲ್ (ಯಾದಚಂ. ೧೨-೩೨). [ನಿಂಬ+ಪತ್ರ]

ನಿಂಬಫಲ (ನಾ). ಬೇವಿನ ಹಣ್ಣು : ಕಾವನ ಕೈಯೆರಲೆಯ ಕೋಡಿಗೆಣೆಯಾದ ಭಾವೆಯ ಕುಡಿವುರ್ಪುಗಳಿಗೆ ತಾವೆಣೆಯೆಂದು ಗರ್ವಿಸಿ ಕೈಪೆ ಮಾಡಿದನಾ ವಿಧಿ ನಿಂಬಫಲಕೆ (ಶ್ರೀಪಾಲ. ೩-೬೪). [ನಿಂಬ+ಫಲ$_1$]

ನಿಂಬಮಾಲೆ (ನಾ). ಬೇವಿನ ಸೊಪ್ಪಿನಿಂದ ಮಾಡಿದ ಮಾಲೆ,—ಹಾರ : ನಿಂಬಮಾಲೆಯ ಕಿಱುವೀಲಿಯ ಪೆಂಚೆಯದ ಕೇಶಬಂಧದೊಳಂ . . . ಪಟ್ಟಪಟ್ಟಾವಳಿಯ ಗಂಡುಡಿಗೆಯೊಳಮೆಸೆದು ಪಸದನಂಗೆಯ್ದು (ಜಗವಿ. ೪-೮೦ ಪ). [ನಿಂಬ+ಮಾಲೆ]

ನಿಂಬಳ (ನಾ). ಒಂದು ಬಗೆಯ ಆಭರಣ : ಸಾರುತಿರೆ ಕೆಂಬರಲನಿಂಬಳದ ಕಡುರಂಗು ಹಾರದೆಳಮುತ್ತು ತಾರಗೆಗಳ ತಿರಸ್ಕರಿಸೆ ಚೇರಮಕ್ಷಿತಿಪಾಲ . . . ಪುರವಿಹಾರಕ್ಕೆ ಬರೆ (ಸೌಂದಪು.೧೭-೨೧) ; ನುಣ್ಮಾಣಿಕದ ನಿಂಬಳವನಿಟ್ಟು (ರೇವಣ. ೬೩-೧೪). [?]

ನಿಂಬಾಲ್ಯ (ನಾ). ನಿರ್ಮಾಲ್ಯ : ಮಜ್ಜನದ ಮಾರಿಯೇ ಪತ್ರೆಯ ತಾಪತ್ರಯ ನಿಂಬಾಲ್ಯದ ಲಿಂಗಾರ್ಪಿತವ ಮಾಡುವವನೇನೆಂಬೆ (ಸರ್ವವ. ೩೨-೧೫೮) ; ಲಿಂಗಭೋಗೋಪಭೋಗಂಗಳೆಂದು ಬಿಟ್ಟ ನಿಂಬಾಲ್ಯವ ನರ್ಪಿಸಬಹುದೆ (ಪ್ರಭೋಗ. ೮೩). [<ನಿರ್ಮಾಲ್ಯ]

ನಿಂಬಾವಳಿ (ನಾ). ನಿಂಬೆಯ ಹಣ್ಣಿನ ಬಣ್ಣದ ಬಟ್ಟೆ ; ಪೀತಾಂಬರ (?) : ಜರತಾರಿಯ ಅಂಚಿನ ನಿಂಬಾವಳಿ ಮಗುಟದ ಮಡಿಯ ಉತ್ತರೀಯ (ಸಡೆದಾ. I, ೫೫೮).

[<ನಿಂಬೆ+ಪಳ್ಳಿ(<ಪಟ್ಟಿ$_6$)]

ನಿಂಬಿ$_1$ 'ನಿಂಬೆ' ನೋ.

ನಿಂಬಿ$_2$ (ನಾ). (?) : ಕೆಲರು ಕರ್ಮದಿನೆಂಬರಕ್ಕಟ ಕೆಲರು ಬೊಮ್ಮದಿನೆಂಬರಯ್ಯೋ . . . ಗೆಲಲು ನಿರಯಮಹಾಸಮರವಂ ಸಲಲು ಮುಕ್ತಿಯೊಳಣ್ಣ ಮೊಗ್ಗೇ ತೊಲಗು ನಿಂಬಿಯ ಸೂಱೆಯೆ ಗಣಿಸದಿರುಮವನಿಲ್ಲಿ (ಸಾನಂಚ. ೮-೬೨). [?]

ನಿಂಬೆ, ಇಂಬಿ, ನಿಂಬಿ$_1$, ಲಿಂಬಿ, ಲಿಂಬೆ (ನಾ). ಈಳೆ ಜಾತಿಗೆ ಸೇರಿದ ಒಂದು ಬಗೆಯ ಮರ ಮತ್ತು ಅದರ ಹಣ್ಣು ; ಜಂಬೀರ: "ಕರಣಃ, ಜಂಬೀರಃ—ಈ ೨ ನಿಂಬೆ" (ಹಲಾಯು. ೩೨-೪೧) ; "ಜಂಬೀರಮೆನೆ ನಿಂಬೆ" (ಮಂಗರಾ. ೩೪-೧೦); ಈಳೆ ನಿಂಬೆ ಮಾವು ಮಾದಲಕ್ಕೆ ಹುಳಿನೀರ ನೆಱೆದವರಾರಯ್ಯ (ಮಹಾದೇ.ಬ. ೧೦-೧೩) ; ನಿಂಬೆಯ ಕೌಂಗು ತೆಂಗು ಪೊಸ ನೆಲ್ಲಿ . . . ಸುಚಂಪಕಾದಿ ತರುಸಂತತಿ ತೋಭಿಸಿತ್ತು (ಉದ್ಭಟ. ೯-೧೩);ನಿಂಬೆಯಂಬಟೆ ಮಾತುಳಂಗ ವಿಳಂಗ ನಾರಂಗ ಎಂಬ . . . ತರು ನಿಕುರುಂಬವನು ನಿರ್ಣೈಸಿದನು ನಿಶ್ಶೇಷವೆನೆ ಹನುಮ(ಕೊರರಾ. ೫-೪-೬); ನಿಂಬೆ, ಕಿತ್ತಲೆ . . . ಇವೇ ಮುಂತಾದ ಹಣ್ಣಿನ ಗಿಡಗಳನ್ನು ತೋಟಗಳಲ್ಲಿ ಬೆಳೆಯಬಹುದು (ವ್ಯವಮ. ೫೮). 'ಗಜನಿಂಬೆ' ಪರಾ. **ಇಂಬಿ** : ರಂಬೆ ವರನಂದಿ ಬರುವಾಗ . ಚಳುವೈಯ್ಯ ಇಂಬೀಹಣ್ಣಿನ್ದಂಗೆ ಹೊಳೆದಾನೂ (ಹುಟ್ಟಹ. ೯೦) ; ಇಂಬೀವನದಲ್ಲಿ ಸೆರೆಯಿರುವ ಸೀತಮ್ಮಗೆ ಉಂಗುರವ ತಂದ ಹನುಮಯ್ಯ (ಹಳ್ಳಿಬಾ. ೮). **ನಿಂಬಿ$_1$** : "ರೋಚನಕಃ—ನಿಂಬಿ" (ಓಷಧಿ. ೧೪೦) ; ನಿಂಬಿ ಗಜನಿಂಬಿ . . . ಮಾದಳನಿಂಬಿ ಎಂದು ಇವೆ (ಕೃಷಿಪ್ರ. ೧೭೮). **ಲಿಂಬಿ** : ಲಿಂಬಿಯವನಂ ಮತಮಾನೆ (ಲೋಕಗೀ. ೨೪). **ಲಿಂಬೆ** : ಅಲ್ಲ ಹೇರಳೆ ಲಿಂಬೆ ಮೆಣಸು ಯಾಲಕ್ಕಿಕಾಯ್ ನೆಲ್ಲಿಯಂಬಟೆಕಾಯಿ ಚೆಲುವ ಮಾಗಾಯಿ . ಬಿಲ್ವ ಮುಂಗ್ರುಳಿ ಸೊಂಡೆ ಚೆಲುವ ಪಾಪಟೆಕಾಯಿ ಎಲ್ಲಾ ಧರಾದೇವಿ ತಾ ಬಡಿಸಿದಳಯ್ಯ (ಪುರಂದ. ೨-೧೬೯-೨) ; ಲಿಂಬೆ - ಸಹ್ಯಾದ್ರಿಯ ಹಳ್ಳಿಗಳಲ್ಲಿ ಬಹಳ ಬೆಳೆಯುತ್ತವೆ. ವ್ಯವಹಾರದಲ್ಲಿ ಇದು ಬಹಳ ಪ್ರಸಿದ್ಧ ಉಂಟು (ಕಭಾಗೆ. ೪೭) ; ಸಿರ್ಕದ ಬದಲಿಗೆ ಲಿಂಬೇರಸ ಸೇರಿಸಬಹುದು (ಅಡುಸೌ. ೧೦೯).

ನಿಂಬೆಯ ಕಾಯ್, ಲಿಂಬೀಕಾಯಿ = ಹಣ್ಣಾಗದೆ ಇರುವ ನಿಂಬೆ: ನಾರುವದನಾದ ಕಣಿಕವನು ನಿಂಬೆಯಕಾಯ [ಪಾಠಾಂ. ಹಣ್ಣ] ತೋರದುಂಡೆಯ ಮಾಡಿ (ಸೂಪಶಾ. ೧-೨೬) ; ಅವಳು ತನ್ನ ಪೆಟ್ಟಿಗೆಯಲ್ಲಿ ಲಿಂಬೀಕಾಯಿಯಷ್ಟು ಅಫೀಮನ್ನು ಸಹ ಸಂಗ್ರಹಿಸಿಟ್ಟಳು (ಅಂಬಿಕೆ. ೭೬). ನಿಂಬೆಯ ಪುಟಿ, ನಿಂಬೆಯ ಹುಳಿ, ಲಿಂಬಿಹುಳಿ = ನಿಂಬೆಯ ಹಣ್ಣಿನ ಹುಳಿಯಾದ ರಸ: ನಿಂಬೆಯ ಪುಟಿಯಿಂ ತೇದೆಚ್ಚು (ಖಮದ. ೬-೪೩) ; ಉತ್ತಮದ ಸೇವಗೆಯ ತೆಱದಿ ಬಾಳೆಯ ದಿಂಡ ನುತ್ತರಿಸಿ ನೀರೊಳೊಂದಿನಿಸು ನಿಂಬೆಯಹುಳಿಯನಿತ್ತರದೊಳಿಕ್ಕಿ ಪೊಂದಿನಿಸು ಹೊತ್ತಿನ ಮೇಲೆ ತೆಗೆದು (ಸೂಪಶಾ. ೪-೬೯) ; ಅಣ್ವಸ್ತ್ರಗಳ ಹಿಡಿದು ಹೊರಟವರ ತಲೆಯ ನುಣ್ಣಗೆ ಮಾಡಿ, ಲಿಂಬಿಹುಳಿಯನು ಹಿಂಡಿ . . . ವಿಶ್ವಸಂಸ್ಥೆಯ ಮುಂದೆ ಮೆರೆಸೋಣ (ನೆಲಮು. ೧೬-೬). **ನಿಂಬೆಯ ಹಣ್ಣು, ನಿಂಬಿಯ ಹಣ್ಣು, ನಿಂಬೇಹಣ್ಣು** = ನಿಂಬೆವಣ್ : ನಿಂಬೆಯ [ಪಾಠಾಂ. ನಿಂಬಿ, ನೇಬಿಯ] ಹಣ್ಣು ಅತ್ತಿಯ ಹಣ್ಣು

ಹುಣಸೆಯ ಹಣ್ಣು (ಬಸಪು. ೧೮-೧೬) ; ಕಾಣಕೆಗೆ ಹೊಸ ನಿಂಬೆಯ ಹಣ್ಣ ತಂದಿತ್ತು (ಧರಚ. ೫-೨೯) ; ಪದಿನೆಂಟು ಪರಿಯ ಪಕ್ವಾನ್ನಂಗಳಂ ಮಾಡಿ ಭೋಜನಮಂ ಮಾಡಿಸಿ ಒಪ್ಪಿಡಿ ಒಗರಡಿಕೆಯ ಭಾಗವನು ಎರಡೆಲೆಯೊಳ್ ನಿಂಬೆಯ ಹಣ್ಣಿನ ಪ್ರಮಾಣದ ಸುಣ್ಣಮನಿಕ್ಕಿ ವೀಳೆಯಮಂ ನೀಡಲ್ (ಪುಣ್ಯಾಸ್ರ. ೬-೧೮ಪ); ನಿಂಬೇ ಹಣ್ಣಾದರೆ ಹಂಬಲಿಸಿದರೆ ಬಂದೀತೇ ? (ಗಾದೆ); ನಿಂಬೇಹಣ್ಣಿನ ಪಾನಕ ತಂಪು (ರೂಢಿ).

[<ಸಂ. ನಿಂಬೂ, ನಿಂಬೂಕ./ಪ್ರಾ. ಲಿಂಬ./ಮರಾ. ಲಿಂಬೂ./ತುಳು. ನಿಂಬಿ, ಲಿಂಬಿ, ಲಿಂಬೆ]

ನಿಂಬೆಗಿಡ (ನಾ). ನಿಂಬೆಯ ಹಣ್ಣಿನ ಗಿಡ : ನಮ್ಮ ಮನೆಯ ಹಿತ್ತಲಲ್ಲಿ ಒಂದು ನಿಂಬೆಗಿಡ ಇದೆ (ರೂಢಿ). [ನಿಂಬೆ+ಗಿಡ(<ಗಿಡು)]

ನಿಂಬೆಚೊಟ್ಟೆ (ನಾ). ರಸ ಹಿಂಡಿದ ಮೇಲೆ ಉಳಿಯುವ ನಿಂಬೆ ಹಣ್ಣಿನ ಸಿಪ್ಪೆ. [ನಿಂಬೆ+ಚೊಟ್ಟೆ$_3$]

ನಿಂಬೆತುಳಸಿ (ನಾ). ಒಂದು ಬಗೆಯ ಸಸ್ಯ ; ತುಳಸಿಯಲ್ಲಿ ಒಂದು ವಿಧ ; "ಮರತುಳಸಿ" (ಸಸ್ಯನಿ. ೯೭). [ನಿಂಬೆ+ತುಳಸಿ (=ತುಲಸಿ)]

ನಿಂಬೆವಣ್ಣು, ನಿಂಬೆಹಣ್ಣು (ನಾ). ಹಣ್ಣಾದ ನಿಂಬೆ ; ಜಂಬೀರ ಫಲ : ಬೆಣ್ಣೆ ಕಾಸಿದ ತುಪ್ಪ ಹಪ್ಪಳಂ ನಸುನಿಂಬೆವಣ್ಣನಿಕ್ಕಿದ ಹಲವು ಪರಿಯ ಹೋರಕಂ (ಸಮ್ಯಕೌ. ೭-೨೪). **ನಿಂಬೆಹಣ್ಣು** : ನವಿಲುಗರಿಯ ಕಣ್ಣುಗಳು . . . ನಿಂಬೆಹಣ್ಣು ಮೊದಲಾದ ಫಲಗಳಲ್ಲಿ ರಸ ವೈಚಿತ್ರ್ಯವು—ಇವು ಮೊದಲಾದುವು ಹೇಗೆ ಸ್ವಭಾವಸಿದ್ಧವೋ ಹಾಗೆ ಮನುಷ್ಯರ ಸುಖದುಃಖಗಳೂ ಆಯಾ ದೇಹಾದಿ ವಸ್ತುಸ್ವಭಾವ ಮೂಲಕವು (ಹಿಂದಸಾ. ೧೧); ನಿಂಬೆಹಣ್ಣಿನ ಪರಿಮಳ ನಶ್ಯಕ್ಕೆ ಸೇರಿ . . . ಮೂಗಿಗೆ ಸ್ವರ್ಗಸುಖವನ್ನೇ ನೀಡುತ್ತದೆ (ನನ್ನೂರು. ೧೮೬).

[ನಿಂಬೆ+ಪಣ್ಣು$_3$]

ನಿಂಬೆಹಣ್ಣು 'ನಿಂಬೆವಣ್' ನೋ.

ನಿಂಬೆಹುಲ್ಲು (ನಾ). ಒಂದು ಬಗೆಯ ಹುಲ್ಲು : ಮಜ್ಜಿಗೇಹುಲ್ಲು, ನಿಂಬೇಹುಲ್ಲು (ಮೈಚಿಗಿ. ೨೭-೫೧೩). [ನಿಂಬೆ+ಹುಲ್ಲು(<ಪುಲ್)]

ನಿಃಕಂಟಕ (ನಾ). ≡ ನಿಷ್ಕಂಟಕ : ನೆಲನಂ ನಿಃಕಂಟಕಂ ಮಾಡಿ ವಿಕ್ರಮ[ದಿಂ] ವಿಸ್ವನರೇಸ್ವರ ಪ್ರಭುತೆಯಂ ತಾಳ್ದಿರ್ದ್ದ ಚಾಳುಕ್ಯಚಕ್ರಿ ಮಹೋತ್ಸಾಹದಿನಾಳ್ದನೆಯ್ದೆ ಧರೆಯಂ ಪೆರ್ಮ್ಮಾಡಿ ಭೂವಲ್ಲಭ (ಸೌಇಇ. XX, ೮೫-೮ ; 1124). [ಸಂ.]

ನಿಃಕರಿಸು (ಕ್ರಿ). ತಾತ್ಸಾರಮಾಡು ; ತಿರಸ್ಕರಿಸು (?) : ಆಕೃತಿ ನಿರಾಕೃತಿಗಳೆಂಬ ಕೃತಿಯಳಿದು ವ್ಯಾಕುಳ ನಿರಾಕುಳವಡಗಿ ನಿಃಕರಿಸುವುದು ಸ್ವೀಕರಿಸುವುದಲ್ಲದೆ ಚರಾಚರನಲ್ಲದಖಿಳಾತೀತನಾಗಿ ನಿಂದ ನಿಜವು (ಅದವ. ೪೩-೧೧೩) ; ಭಕ್ತಿಯ ಕುಳಸ್ಥಲವನಱಿಯದೆ ಎಲ್ಲರೂ ಎಂದಂತೆ ಎಂದರು ಬಲದಲ್ಲಿ ಬಂದರು ಇದ ನಿಃಕರಿಸಿ ಜಂಗಮವೇ ಲಿಂಗವೆಂದು ಸಂಗಸಾಹಿತ್ಯವಾದ ಬಸವಣ್ಣ (ಮಡಿಮಾ. ೬೨-೯೧). 'ನೀಕರಿಸು', 'ನೀಟ್ಕರಿಸು$_2$' ಪರಾ. [ನಿಃಕರಣ$_0$+-ಇಸು$_3$]

ನಿಃಕರುಣ (ಗು). ೧≡ನಿಷ್ಕರುಣ ೧. (ನಾ). ೨.≡ನಿಷ್ಕರುಣ ೨ : ತಕ್ತ ಕಲ್ಪಭೂಮಿರುಹನಿಕುಂಜಮಂಜರಿಗಳೊಳ್ ತೊಡಕಿರ್ಪನೊ ತೊಟ್ಟನೆಯ್ದಿ ನಿಃಕರುಣ[ಪಾಠಾಂ.ನಿಕ್ಕರುಣ]ದೆ ಕಾಯ್ದು ನುಂಗಿದಪನಂತಕಂ (ವರ್ಧಪು. ೧೦-೫೭). 'ನಿಕ್ಕರುಣ' ಪರಾ. [ಸಂ.]

ನಿಃಕರುಣಿ (ನಾ).≡ನಿಷ್ಕರುಣಿ : ದುರುಳನಧಮನು ದುರ್ಜನಂ . . . ನಿಂದಕಂ ನಿಃಕರುಣಿ ಮರ್ದಿಂಗಾದಡೊಬ್ಬನು ಪುರದೊಳಱಸಿದೊಡಿಲ್ಲ (ಬಸಪು. ೪-೫೫). [ಸಂ. ನಿಃಕರುಣಿನ್]

ನಿಃಕರ್ಮ (ನಾ). ≡ ನಿಷ್ಕರ್ಮ$_2$: ವಿನಿರ್ಮಳನಿತ್ಯನಿಃಕರ್ಮ ಏಕ ಪರಮಾನಂದಮೂರ್ತಿ ಗುಣ್ಯೆಕ ದುರ್ಮಲದಷ್ಟದುಃಕರ್ಮಾಕೃತಿಗಳವರುಂ ಸಮಾನವೆ ಆಗಮೋಕ್ತಿಯಲಿ (ಬಸಪು. ೫೪-೨೦).

[ಸಂ. ನಿಃಕರ್ಮನ್]

ನಿಃಕರ್ಮಿ (ನಾ).≡ನಿಷ್ಕರ್ಮಿ ೧ : ಬಸವನ ಮೂರ್ತಿಯ ಕರ್ಮವ ಹಱಿದು ಆನು ನಿಃಕರ್ಮಿಯಾದೆನಯ್ಯಾ (ನೀಲವ. ೩೨-೧೦೫); ದುಃಕರ್ಮಿ ಜೀವನಹ ದೇವನತಿ ನಿಃಕರ್ಮಿಯಪ್ಪನು (ಬಸಪು. ೫೧-೨೬).

[ಸಂ. ನಿಃಕರ್ಮಿನ್]

ನಿಃಕಲ, ನಿಃಕಳ (ನಾ). ೧.≡ನಿಷ್ಕಲ ೧ : ಜಡ ಅಜಡವೆಂಬುಭಯವನಱಿದು ಸಕಲವೋ ನಿಃಕಲವೋ ಬೇಱೊಂದು ಹೊಲಬೋ ನಿನ್ನೊಲವರವ ನೀನೇ ಬಲ್ಲೆ (ಸರ್ವವ. ೧೦೭-೫೭೨). ೨.≡ನಿಷ್ಕಲ ೨ : ಸಕಲ ನಿಃಕಲನಯ್ಯ ನಿಃಕಲ ಸಕಲನಯ್ಯಾ ಸಕಲನಾಗಿ ಸಂಸಾರಿಯಲ್ಲ ನಿಃಕಲನಾಗಿ ವೈರಾಗಿಯಲ್ಲ (ಚನ್ನವ. ಕ. ೬೧೨-೧೩೭೨); ನಿಃಕಲ ನಿರಂಜನ ಶೂನ್ಯ ಮಹಾಲಿಂಗ ಸದಾಶಿವ . . . ಎಂಬ ಪ್ರಭುಮೂರ್ತಿಗಳಂ ತಾಳ್ದಂಥ ಆ ಪರಶಿವನುಂ (ಭೈರಸೂ. ೧). **ನಿಃಕಳ** : ೩. [ಸಂಗೀತ] ವೀಣೆ ನುಡಿಸುವುದರಲ್ಲಿ ಒಂದು ರೀತಿ ; ಅತಿಸೂಕ್ಷ್ಮವಾದ ನಾದವನ್ನು ಹೊರಡಿಸುವುದು : ಸಾರಸೆಯ ಸಕಳ ನಿಃಕಳ ಚಾರಣೆಯ ಬೆಡಂಗುಸರದ ರಾಗದ ಸವಿಯಂ ಪೂರಿಸೆ ಕಿವಿಯೊಳ್ ದಿವಿಜಸ್ತ್ರೀರಮಣೆಯ ಮುಂದೆ ವೀಣೆಯಂ ಬಾಜಿಸಿದಳ್ (ಚಂದ್ರಪು. ೧೧-೧೩೯). [ಸಂ.]

ನಿಃಕಲಾತೀತ (ಗು). ನಿಷ್ಕಲಸ್ಥಿತಿಯನ್ನೂ ಮೀರಿದ : ಸಕಲ ನಿಃಕಲಾತ್ಮಕ ಸಕಲ ನಿಃಕಲಾತೀತ [ಪಾಠಾಂ. ನಿಷ್ಕಲಾತೀತನು] ಲಿಂಗ ಬಾಹ್ಯಾತ್ಪರಂ ನಾಸ್ತಿ ಲಿಂಗಪೂಜ್ಯಮೇವ ಚ (ಉರಿಶೆ. ಕ. ೧೯೫-೨೬೫). [ಸಂ.]

ನಿಃಕಲಾತ್ಮಕ (ಗು). ಭಾಗಗಳಿಲ್ಲದ ; ಅಖಂಡವಾದ : ಸಕಲ ನಿಃಕಲಾತ್ಮಕ [ಪಾಠಾಂ. ನಿಷ್ಕಲಾತ್ಮನು] ಸಕಲ ನಿಃಕಲಾತೀತ ಲಿಂಗ ಬಾಹ್ಯಾತ್ಪರಂ ನಾಸ್ತಿ ಲಿಂಗಪೂಜ್ಯಮೇವ ಚ (ಉರಿಶೆ. ಕ. ೧೯೫-೨೬೫).

[ಸಂ.]

ನಿಃಕಳ 'ನಿಃಕಲ' ನೋ.

ನಿಃಕಳಂಕ (ಗು).≡ನಿಷ್ಕಲಂಕ ೨ : ಲಿಂಗದಾದಿಯ ಅಂತವನಱಿದಡೆ ಗುಣಸಂಗಿಯಲ್ಲದೆ ಯೋಗಿಯಲ್ಲ ನಿಃಕಳಂಕ ಮಲ್ಲಿಕಾರ್ಜುನಾ (ಮೋಳಿಮಾ. ೪-೧೧) ; ಭಾಪುರೇ ವೇಮನ ಶುಭಾಂಕಾ ಭಾಪುರೇ ಮನ ನಿಃಕಳಂಕಾ (ಬಸಪು. ೪೬-೭೬). [ಸಂ. ನಿಃಕಲಂಕ]

ನಿಃಕಾಂಕ್ಷತೆ (ನಾ). ಬಯಕೆಯಿಲ್ಲದಿರುವಿಕೆ ; ಆಸೆಯಿಲ್ಲದಿರುವುದು : ಕುದೃಷ್ಟ್ಯಂತರ ಕಾಂಕ್ಷಾನಿರಸನಮುಂ ಮೇಣ್ ನಿಃಕಾಂಕ್ಷತೆ ಶರೀರಾದ್ಯ ಶುಚಿಸ್ವಭಾವಮನಱಿದು (ತತ್ತ್ವಪ್ರ. ೨೬೫).

[ಸಂ. ನಿಃಕಾಂಕ್ಷತಾ]

ನಿಃಕಾಂಕ್ಷಿತ (ನಾ). [ಜೈನ] ಲೌಕಿಕವಾದ ಬಯಕೆಗಳನ್ನು ಇಟ್ಟುಕೊಳ್ಳದಿರುವುದು; ಸಮ್ಯಗ್ದರ್ಶನದ ಎಂಟು ಅಂಗಗಳಲ್ಲಿ ಒಂದು: ನಿಃಕಾಂಕ್ಷಿತಃ - ಯಾವ ಪ್ರಕಾರದ ಲೌಕಿಕಸುಖದ ಇಚ್ಛೆಯನ್ನೂ ಮಾಡದಿರುವುದು (ಜೈನವ. ೪೬೦). [ಸಂ.]

ನಿಃಕಾಂಕ್ಷೆ (ನಾ). ೧. ಆಸೆಯಿಲ್ಲದಿರುವುದು ; ನಿಷ್ಕಾಮಬುದ್ಧಿ : ಚಿಂತೆ ಸಂತೋಷವೆಂಬ ಕಾಂಕ್ಷೆ ನಿಃಕಾಂಕ್ಷೆಯೆಂಬ ಜೀವ ಪರಮರೆಂಬ ಇಂತೀ ದ್ವಂದ್ವಂಗಳೆಲ್ಲವು ದ್ವಾರಸಂಚಾರಕ್ಕೆ ಅವಧಿಯಾದವು (ಮೋಳಿಮಾ. ೨೩೨-೭೮೫). ೨. = ನಿಃಕಾಂಕ್ಷಿತ : ಇಹಲೋಕ ವಿಷಯೋಪಭೋಗಕಾಂಕ್ಷೆಯುಮಂ ಪತ್ತುವಿಡುವುದು ನಿಃಕಾಂಕ್ಷೆ (ಚಾವುಂಪು. ೨೬೧). [ಸಂ. ನಿಃಕಾಂಕ್ಷಾ]

ನಿಃಕಾಮಿ (ನಾ).≡ನಿಷ್ಕಾಮಿ : ಕಾಮಿಯಾಗಿ ನಿಃಕಾಮಿಯಾದಳು ಸೀಮೆಯಲ್ಲಿರ್ದು ನಿಃಸೀಮೆಯಾದಳು (ಮಡಿಮಾ. ೧೫-೮) ; ಕಾಮಿಗಳು

ನಿಃಕಾಮಿಗಳು ಆಶ್ರಿತರು ಅದೆಂತು ಕಲ್ಯಾಣವ ಹೊಗಬಹುದಯ್ಯ (ಸುಹಾದೇ. ಬ. ೧-೧) ; ಹಂಪ್ರಭರನಂ ನಿಃಕಾಮಿಯುಂ ಸ್ವಾಮಿಯುಂ . . . ಹೃದ್ರಾಜೀವದೊಳಿಟ್ಟು ನಾಡೆ ನೆನೆದಂ ಮುದ್ರಾಜ ಮುರ್ದೀಶ್ವರಂ (ಹಮ್ಮೀರ. ೨-೭). [ಸಂ.]

ನಿಃಕಾಶ (ನಾ). = ನಿಷ್ಕಾಶ : ನಿಃಕಾಶಮನೆಯ್ದುಮದನಳಿಜನೇತನ ಳನಸಕಳವಿಮಳಕೇವಳಬೋಧಂ (ಪಥಪು. ೧೫-೭). [ಸಂ.]

ನಿಃಕೃತಿ (ನಾ).=ನಿಷ್ಕೃತಿ ೧ : ಪಂಚವಿಂಶತಿಕ್ರಿಯಾಚಯದಲ್ಲಿ . . . ಪರಿಗ್ರಹಾವಿನಾಶಾರ್ಥಮುಪ್ಪುದು ಪಾರಿಗ್ರಾಹಿಕೀಕ್ರಿಯೆ ೩೨, ಜ್ಞಾನ ದರ್ಶನಾದಿಗಳೊಳ್ ನಿಃಕೃತಿಯುಂ ವಂಚನೆಯುಂ ಮಾಯಾಕ್ರಿಯೆ ೨೪ (ತತ್ತ್ವಪ್ರ. ೨೫೭). [ಸಂ.]

ನಿಃಕ್ರಿ (ನಾ). [ವೈಶೈ] ಯಾವುದೇ ವಿಧವಾದ ಕರ್ಮವನ್ನು ಮಾಡದಿರುವಿಕೆ ; ಕರ್ಮರಾಹಿತ್ಯ : ಅಪ್ಪು ಪಡುವರ್ಣದ ಕೂಡಿ ಭಿನ್ನವಿಚ್ಛಿನ್ನವಿಲ್ಲದೆ ವರ್ಣಭೇದದ ಕೊಟ್ಟು . . . ಸಕ್ರಿಯಲ್ಲಿ ಭಾವಿತ ನಾಗಿ ನಿಃಕ್ರಿಯಲ್ಲಿ ನಿರಂಗನಾಗಿ ಕರ್ಪೂರದ ಬುಡದಲ್ಲಿ ಕಿಚ್ಚು ಹುಟ್ಟಿದಂತೆ ಅದು ಹುಟ್ಟುವಲ್ಲಿ ಆ ಬುಡಕ್ಕೆ ನಿಶ್ಚಯವಾಯಿತ್ತು (ಪೋಳಮಾ. ೧೫-೫೪) ; ಪಂಚೇಂದ್ರಿಯಾತೀತದ ಸಂಚವನಳಿದನು ಪಂಚೇಂದ್ರಿಯ ಲಿಂಗಸಮ್ಮತ ವಾದನು ಕ್ರಿಯುಳಿದು ನಿಃಕ್ರಿಯಲ್ಲಿ ನಿಂದನು (ಪಮೀ. ೧೧೧-೫೪೬). 'ಸಕ್ರಿ' ಪರಾ. [<ಸಂ. ನಿಃಕ್ರಿಯಾ]

ನಿಃಕ್ರೀವಂತ (ನಾ). ಕರ್ಮರಹಿತನಾದವನು ; ನಿಷ್ಕರ್ಮಿ : ಕ್ರೀವಂತಂಗೆ ಅಂಗ ಭವಿ ನಿಃಕ್ರೀವಂತಂಗೆ ಮನ ಭವಿ ವೇಷವ ಹೊತ್ತು ತಿರುಗುವ ಜಂಗಮಕ್ಕೆ ಆತ ಭವಿ (ಪೋಳಮಾ. ೧೫೭-೫೭೭).

[<ಸಂ. ನಿಃಕ್ರಿಯಾವತ್]

ನಿಃಕ್ರೋಧಿ (ನಾ). = ನಿಷ್ಕ್ರೋಧಿ : ಜಂಗಮವೇನು . . . ಕ್ರೋಧಿಯೆ . . . ನಿಃಕಾಮಿ ನಿಃಕ್ರೋಧಿ ನಿರ್ಲೋಭಿ ನಿರ್ಮೋಹಿ ನಿರ್ಮದ ನಿರ್ಮತ್ಸರನಯ್ಯ (ಸಿದ್ಧೇ. ೧೫೫-೪೬೧).

[ಸಂ. ನಿಃಕ್ರೋಧಿನ್]

ನಿಃಕ್ಷಪಾತ (ನಾ).=ನಿಷ್ಪಕ್ಷಪಾತ. [ಸಂ.]

ನಿಃಪತಿ (ನಾ). ಒಡೆಯನಿಲ್ಲದಿರುವವನು ; ತಾನೇ ಒಡೆಯನಾದವನು ; ಪರಮೇಶ್ವರ : ನಿರ್ದೇಹ ನಿಃಪತಿ ನಿರಂಜನನಾಗಿ ವೇದಂಗಳಱಯವು ಶಾಸ್ತ್ರ ಶ್ರುತಿ ಸ್ಮೃತಿಗಳು ನಿಮ್ಮನಱಯವು (ಅಮಱಂ. ೧೫೪-೬೦೬) ; ಮಾರುಗ ಕ್ರೀಗಳೊಳಗೆ ನಿಃಪತಿಯಾಗಿ ದೇವ ಕ್ರೀವಿಡಿದ ಕಾರಣ ಭಿನ್ನಭಾವವಳಿದು ಶಿವಾಚಾರ ಜೀವವಾಗಿ ಲಿಂಗದೊಳು ಬೆರಸ ಬಲ್ಲಡೆ ಯೋಗಿ (ಪಮೀ. ೪೬-೪೦೬) ; ಪ್ರತಿ ಇಲ್ಲದ ಅಪ್ರತಿಮ ಪ್ರಸಾದ ದಲ್ಲಿ ನಿಷ್ಪತಿ(ನಿಃಪತಿ)ಯಾಗಿ ಮಹಾಪ್ರಸಾದಿಯಾದೆನು ನೋಡಾ(ಸಿದ್ಧೇ. ೧೬೬-೫೬೪). [ಸಂ.]

ನಿಃಪತ್ತಿ (ನಾ). = ನಿಷ್ಪತ್ತಿ ೨ : ಅಂಗಕ್ಕೆ ಆಚಾರ ಮನಕ್ಕೆ ಅರಿವು ಅರಿವಿಂಗೆ ಒಂದು ಕುರುಹು ಆ ಕುರುಹು ನಿಃಪತ್ತಿಯಪನ್ನಕ್ಕ ಶೂಲದ ಮೇಲಣ ಭಟ ಚೇತನ ಹೋಹನ್ನಕ್ಕ . . . ಬೋಧಿಸಬೇಡ (ಪೋಳಮಾ. ೧೫೧-೫೭೦). [ಸಂ.]

ನಿಃಪಸಿವು (ನಾ). ಹಸಿವಾಗದಿರುವುದು : ಭೋಗಮುಭೋಗವೆರಡು ಪಸಿವು ನಿಃಪಸಿವೆರಡು ರುಚಿಯರುಚಿಯೆಂಬೆರಡು ಭಾವಿಸಿ ನೋಡೆ ವರವೀತರಾಗರ್ಗೆ ಸಮವಾಗಿ ತೋಱದಿಹುದೇ (ಸಮ್ಮೆ. ೧೧-೪೯).

[ನಿರ್ + ಪಸಿವು]

ನಿಃಪಾತ (ನಾ). ನಾಶ; ಧ್ವಂಸ.

ನಿಃಪಾತ ಮಾಡು = ನಾಶಮಾಡು : ದೇವತೆಗಳು ಯುದ್ಧದಲ್ಲಿ ಅವರೆಲ್ಲರ ನಿಃಪಾತ ಮಾಡಿದರು (ತುಳಸೀ. ೪೯). [ಸಂ.]

ನಿಃಪಿಚ್ಛಸಂಘ (ನಾ).[ಜೈನ]ನವಿಲುಗರಿಯನ್ನು ಉಪಯೋಗಿಸದೆ ಇದ್ದ ಸಾಧುಗಳ ಒಂದು ಪಂಗಡ ; ☞ ಈ ಸಂಘವು ಮಧುರಾ ಪಟ್ಟಣದಲ್ಲಿ ಶ್ರೀರಾಮಸೇನಮುನಿಯಿಂದ ಕ್ರಿ. ಶ. ೯೯೬ರಲ್ಲಿ ಸ್ಥಾಪಿತವಾಯಿತು.ಈ ಸಂಘದವರ ಗ್ರಂಥಗಳನ್ನು ಪ್ರಾಮಾಣಿಕ ವೆಂದು ಅನೇಕರು ಅನುಮೋದಿಸಿರುತ್ತಾರೆ : ಈ ಸಂಘದ ಸಾಧು ಗಳು ಪಿಚ್ಛವನ್ನು ಉಪಯೋಗಿಸುತ್ತಿರಲಿಲ್ಲ. ಅದಕ್ಕಾಗಿ ಇವರಿಗೆ ನಿಃಪಿಚ್ಛಸಂಘದವರೆಂದೂ ಹೆಸರಾಯಿತು (ಜೈನಸ. ೭೩). [ಸಂ.]

ನಿಃಪ್ರತ್ಯೂಹ (ಗು). = ನಿಷ್ಪ್ರತ್ಯೂಹ ೧ : ನಿಃಪ್ರತ್ಯೂಹವಿಕ್ರಾಸ್ತ (ದಿಂ)ದುದ್ಭವದಿಂದುತ್ತಮನಾದಂ . . . ಶ್ರೀ ವಿಷ್ಣು ಭೂಪಾಳಕಂ (ಎಕ. V, ದೇಲೂರು. ೧೪೦-೧೧ ; 1200 ?). [ಸಂ.]

ನಿಃಪ್ರಪಂಚ (ನಾ).=ನಿಷ್ಪ್ರಪಂಚ ೧ : ನಭೋದ್ಯ ನಿಃಪ್ರಪಂಚ . . . ಮಹಿಮಾನಂದಾರ್ಣವ ಕೃಪಾಮೃತೇಕ್ಷಣ ಪರಶಿವನುಂ (ಭೈರಸೂ. ೧).

[ಸಂ.]

ನಿಃಪ್ರಪಂಚಿ 'ನಿಃಪ್ರಪಂಚು' ನೋ.

ನಿಃಪ್ರಪಂಚು, ನಿಃಪ್ರಪಂಚಿ (ನಾ). ಲೌಕಿಕಸಂಬಂಧವನ್ನು ಬಿಟ್ಟವನು ; ನಿಷ್ಕಾಮಿ: ಕರಣಂಗಳ ಮೋಹಕ್ಕೆ ಈಡಾಗದೆ ಪ್ರಾಣನ ಪ್ರಪಂಚಿನಲ್ಲಿ ಬೆರಸದೆ ಜೀವನ ಬುದ್ಧಿಯಲ್ಲಿ ಮೋಹಿಸದೆ ಹಂಸನ ಆತ ಗೊಳಗಾಗದೆ ನಿಃಪ್ರಪಂಚುಗಳಾಗಿ (ಮಡಿವಾ. ೩೬-೫೧). **ನಿಃಪ್ರಪಂಚಿ:** ನಿರಹಂಕಾರಿ ನಿರ್ಮಮಕಾರಿ ನಿಃಪ್ರಪಂಚಿ ನಿರ್ದೇಪಳನಯ್ಯ (ಸಿದ್ಧೇವ. ಕ. ೧೫೫-೪೬೧). [<ಸಂ. ನಿಃಪ್ರಪಂಚ]

ನಿಃಪ್ರಾದೇಶಿಕ (ನಾ). ದೇಶಾತೀತನಾದವನು ; ಪರಮಾತ್ಮ : ಏದೊರೆಯನಾತ್ಮನೆಂದೊಡನಾದಿಯನಂತಂ ನಿರವಯಂ ಚಿನ್ಮಯ ನಿಃಪ್ರಾದೇಶಿಕ[ಪಾಠಾಂ. ದೇಶಕ]ನೆಂದಾತನುಪಾದೇಯಂ ಮುಕ್ತಿಮುಕ್ತ ನುಂ ಪರಮಾತ್ಮಂ (ಯಕೋಚ. ೪-೨೬). [ಸಂ.]

ನಿಃಫಲ (ನಾ).=ನಿಷ್ಫಲ ೨ : ಬಡಭಕ್ತರುಗಳಿಂ ಮೇಲೆ ಬಿದ್ದಡೆ ನಿಃಫಲಂ (ಬಸಪು. ೨೩-೩೮) ; ಹಲವು ಕಾಲಂ ಕೊಡಗಿಯಾಲದ ನೆಲೆ ಯೊಳಿದ್ದೆನ್ನಿರವಳಿದು ನಿಃಫಲವೆನಿಸಲ್ಕಾ (ಬಸಪು. ೫೭-೧೫). [ಸಂ.]

ನಿಃಶಂಕ (ನಾ).=ನಿಶ್ಶಂಕ ೧ : ನಿಃಶಂಕ :—ನಾವು ಯಾವ ಸತ್ಕರ್ಮಾ ವನ್ನು ಅವಲಂಬಿಸಿರುವೆವೋ ಅದರ ವಿಷಯದಲ್ಲಿ ಸಂಶಯವಿಲ್ಲದಿರುವುದು (ಜೈನಸ. ೪೭೦). [ಸಂ.]

ನಿಃಶಂಕತೆ (ನಾ).=ನಿಶ್ಶಂಕತೆ : ಪೀಂ ನಿಃಶಂಕತೆಯಿನಿಹು ದೇಹಿಗಳಂ ಕೊಂದಪ ನರಕದೊಳ್ ನಿವಾರಣೆವಡೆದಯ್ (ಯಕೋಚ. ೪-೭೦).

[ಸಂ. ನಿಃಶಂಕತಾ]

ನಿಃಶಂಕೆ (ನಾ).=ನಿಶ್ಶಂಕೆ ೧ : ಪೀಂ ನಿಃಶಂಕೆಯನೀ ದೇವಾ ನಿಃಶರಣ ಜನರಿಂಗೆ ಶರಣಾಗೀಗಳ್ (ಭಂಡೋಬು. ೬. ೧-೪೪).

[ಸಂ. ನಿಃಶಂಕ]

ನಿಃಶಬ್ದ (ನಾ).=ನಿಶ್ಶಬ್ದ : ಭಕ್ತನಧಿ ನಿರ್ದೇಹ ದೇಹಿ ವಿರಕ್ತಗತಿ ನಿನಾದಿನಿ ನಾದಿ ಚಿದುತ್ತಮತಿ ನಿಃಶಬ್ದಶಬ್ದಿ ವಿಭಾವಭಾವಿತನು (ಬಸಪು. ೬-೫) ; ಪಗಲಿನ ಜಗದ ಸದ್ದಳಿದು ಶಿವವಾಯ್ತು ನಿಃಶಬ್ದಂ (ಶ್ರೀರಾಮಾ. ೧೨೯-೧೨೬). [ಸಂ.]

ನಿಃಶಮ (ನಾ). ನೆಮ್ಮದಿಯಿಲ್ಲದಿರುವಿಕೆ ; ಆತಂಕ ; ಕಳವಳ : ನಿಃಶಮಮುಂ ಪರಿಹರಿಸೀ ನಿಃಶಾಪ ಪ್ರಸಾದಮುಂ ಕರುಣಾತ್ಮ (ಭಂಡೋಬು. ೬. ೧-೪೪). [ಸಂ.]

ನಿಃಶರಣ (ಗು). ರಕ್ಷಕರಿಲ್ಲದ ; ಅನಾಥ : ಪೀಂ ನಿಃಶಂಕೆಯನೀ ದೇವಾ ನಿಃಶರಣ ಜನರಿಂಗೆ ಶರಣಾಗೀಗಳ್ (ಭಂಡೋಬು. ೬. ೧-೪೪).

[ಸಂ.]

ನಿಃಶರೀರತ್ವ (ನಾ). ಶರೀರವಿಲ್ಲದಿರುವಿಕೆ : ನಿಃಶರೀರತ್ವದಿಂ ಪಂಚೇಂದ್ರಿಯ ವಿಷಯಾನುಭವರಹಿತರಪ್ಪ ಸಿದ್ಧರ್ಗೆ ಮುಕ್ತಿಯೊಳ್ ಸುಖವೆಂತಕ್ಕುಮೆನವೇಡ (ತತ್ತ್ವಪ್ರ. ೩೭೪). [ಸಂ.]

ನಿಃಶಸ್ತ್ರ (ಗು). ೧. ಆಯುಧವಿಲ್ಲದ. (ನಾ). ೨. ಆಯುಧವಿಲ್ಲದವನು.

ನಿಃಶಸ್ತ್ರಗೊಳಿಸು=ಆಯುಧರಹಿತನನ್ನಾಗಿ ಮಾಡು; ನಿರಾಯುಧನನ್ನಾಗಿ ಮಾಡು : ಅವರನ್ನು ನಿಃಶಸ್ತ್ರಗೊಳಿಸಿ ಕೈಕಾಲುಗಳಿಗೆ ಸರಪಳಿಗಳನ್ನು ಹಾಕುವುದರಲ್ಲಿ ತೊಡಗಿದ್ದರು (ಮೇದಿಮ. ೮೮). [ಸಂ.]

ನಿಃಶಾಠ್ಯ (ನಾ).≡ನಿಶ್ಶಾಠ್ಯ : "ನಿಃಶಾಠ್ಯಂ[ಪಾಠಾಂ. ನಿಶ್ಶಾಠ್ಯಂ, ನಿಶ್ಶೋಧ್ಯಂ] ಅನವಸ್ಕರಂ—ಈ ೨ ದಿರದುದು?" (ಹಲಾಯು.೧೨೬-೮೫). [ಸಂ.]

ನಿಃಶೀಲವ್ರತ (ನಾ).[ಜೈನ] ಸಪ್ತಶೀಲವ್ರತಗಳನ್ನು ಆಚರಿಸದಿರುವಿಕೆ : ಅಲ್ಲಿ ನಿಃಶೀಲವ್ರತಮನುಷ್ಯತಿರ್ಯಗ್ಜೀವಂಗಳ್ ದಾನಾನುಮೋದನದಿಂ ಪರಸ್ಪರವಿರೋಧವಿರಹಿತಪಂಚೇಂದ್ರಿಯತಿಯಗ್ಜಾತಿಗಳಾಗಿ ಪುಟ್ಟಿ (ಸುಕುಮಾ. ೧೧-೫೪ ಪ). 'ಶೀಲವ್ರತ' ಪರಾ. [ಸಂ. ?]

ನಿಃಶೂನ್ಯ(ನಾ).≡ನಿಶ್ಶೂನ್ಯ : ಅಷ್ಟದಳಕಮಲದ ಮೇಲಿಪ್ಪ ನಿಃಶೂನ್ಯನ ಮರ್ಮವನಱಿಯದೆ ಪ್ರಾಣಲಿಂಗವೆಂದೆಂಬರು (ಅನಚಿಂ. ೩೩-೧೪೨). [ಸಂ.]

ನಿಃಶೇಷ (ನಾ).≡ನಿಶ್ಶೇಷ ೨ : ನಿಃಶೇಷಂ[ಪಾಠಾಂ. ನಿಶ್ಶೇಷಂ]ನ್ಯಕ್ಷಮೆನಲುಟಿಯದಿಹುದಕ್ಕೆ ನಾಮಂ" (ಮಂಗರಾ. ೧೩೪-೩೧). [ಸಂ.]

ನಿಃಶೋಧ್ಯ (ನಾ). ತೊಳೆದು ಶುಚಿ ಮಾಡಿದುದು ; ಶುಚಿಯಾದುದು. [ಸಂ.]

ನಿಃಶ್ರೇಣಿ (ನಾ).≡ನಿಶ್ರೇಣಿ : "ಅಧಿರೋಹಿಣೀ ನಿಃಶ್ರೇಣಿ[ಪಾಠಾಂ. ನಿಶ್ರೇಣಿ]ಯೆನಲೇಣಿಯಕ್ಕುಂ" (ಮಂಗರಾ. ೫೯-೧೨). [ಸಂ.]

ನಿಃಶ್ರೇಯಸ(ನಾ).≡ನಿಶ್ಶ್ರೇಯಸ : "ನಿಃಶ್ರೇಯಸ[ಪಾಠಾಂ. ನಿಶ್ರೇಯಸಂ] ಮಹಾನಂದವೆನೆ ಮೋಕ್ಷಕ್ಕೆ ಪೆಸರೆನಿಕ್ಕುಂ" (ಮಂಗರಾ. ೮-೨೩) ; ಅಭ್ಯುದಯನಿಃಶ್ರೇಯಸಾರ್ಥಕ್ರಿಯಾವಿನಾಶಕಪ್ರಯೋಗಮಪಾಯಂ (ತತ್ತ್ವಪ್ರ. ೨೭೧) ; ಬ್ರಹ್ಮಜ್ಞಾನಕ್ಕೆ ಅಂದರೆ ಫಲವು ನಿಃಶ್ರೇಯಸವು (ಬ್ರಹ್ಮಭಾ. ೧೧). [ಸಂ.]

ನಿಃಶ್ವಾಸ (ನಾ).≡ನಿಶ್ವಾಸ ೧ : ಉಚ್ಛ್ವಾಸಮುಮುಱೆ ನಿಃಶ್ವಾಸ ಸೂತ್ಯತಂ ಸೀತ್ಯತಮುಂ (ಲಾಸ್ಕರಂ. ೩-೭೭). [ಸಂ.]

ನಿಃಷಮ (ನಾ). ೧. ಅಕಾಲ ; ಅವೇಳೆ. ೨. ಸಮವಲ್ಲದುದು. [ಸಂ.]

ನಿಃಸಂಜ್ಞ (ನಾ).≡ನಿಸ್ಸಂಜ್ಞ ೨ : ಪ್ರಜ್ಞೆ ನಿದ್ರಿಸಿದರೆ ನಿಃಸಂಜ್ಞಳಾದನಗೆ ಕಣಸಾದುದು (ಕ್ರೀರಾಮಾ. ೪೪-೪೫೦). [ಸಂ.]

ನಿಃಸಂಪರ್ಕ (ಗು). ಸಂಪರ್ಕವಿಲ್ಲದ : ಭೂಪತಿಯು ಚಾರುನನ್ನು ಅತ್ಯಂತ ಅನಾಸಕ್ತಭಾವದಿಂದ ನಿಃಸಂಪರ್ಕ ಮನುಷ್ಯನ ಹಾಗೆ ದೂರದೂರದಿಂದಲೇ ನೋಡಹತ್ತಿದನು (ಇಪ್ಪಕ. ೨೯೩). [ಸಂ.]

ನಿಃಸತ್ವ (ನಾ).≡ನಿಸ್ಸತ್ವ ೩ : ಮೆಣಸು . . . ಚಪಟಾಗಿದ್ದು ಹಾಂಗೂ ಪೊಳ್ಳ ಮತ್ತು ನಿಃಸತ್ವ ಇಂಥಾದಿರಬಾರದು (ಮುಂಬಪ್ಯಾ. ೫೦). [ಸಂ.]

ನಿಃಸರಣ (ನಾ).≡ನಿಸ್ಸರಣ ೨ : "ಮುಖಂ, ನಿಃಸರಣಂ—ಈ ೨ ಹೆಬ್ಬಾಗಿಲ ಮುಂತು" (ಹಲಾಯು. ೪೮-೧೩೪). [ಸಂ.]

ನಿಃಸಹ (ನಾ).≡ನಿಸ್ಸಹ ೨ : ಈ ವಕ್ರ ಚಕ್ರದ ಜೊತೆಗೆ ನಿಃಸಹನಂತೆ ಏತಕೊ ತಿರುಗುವೇ ಯಾ ಕಲ್ಪ ತವ ಸಂಕಲ್ಪವೋ ಈ ಹೃದಯ ದುಡಿಸಿದೆ ಸ್ವಲ್ಪವೇ (ಅರಳು. ೧೯೬-೫). [ಸಂ.]

ನಿಃಸಾರ (ನಾ).≡ನಿಸ್ಸಾರ ೨ : ತತ್ತಿಯನ್ನು ಹೆಚ್ಚು ದಿವಸ ಇಟ್ಟ ಹಾಗೆ ಅದರೊಳಗಿನ ರಸವು ಒಣಗುತ್ತ ಹೋಗಿ ನಿಃಸಾರವಾಗುತ್ತದೆ (ಮುಂಬಯಿ. ೫-೧೬೫). [ಸಂ.]

ನಿಃಸೀಮೆ (ನಾ). ೧≡ನಿಸ್ಸೀಮೆ. ೨. ನಿಸ್ಸೀಮಳಾದವಳು ; ಮೇರೆ ಇಲ್ಲದವಳು ; ಸೀಮಾತೀತಳು : ಕಾಮಿಯಾಗಿ ನಿಃಕಾಮಿಯಾದಳು ಸೀಮೆಯಲ್ಲಿರ್ದು ನಿಃಸೀಮೆಯಾದಳು (ಮಡಿಮಾ. ೧೫-೧೮). [ಸಂ. ನಿಃಸ್ಸೀಮಾ]

ನಿಃಸ್ಥಲ (ನಾ).≡ನಿಸ್ಥಲ : ಲಿಂಗಸುಖ . . . ಪರಮಸುಖ ಇವುಗಳಿಗೆ ಸುಸ್ಪಷ್ಟವಾದ ಸ್ವರೂಪವನ್ನು ಕ್ರಮವಾಗಿ ಅಂಗಸ್ಥಲದ ವಚನಗಳಲ್ಲಿ, ಲಿಂಗಸ್ಥಲದ ವಚನಗಳಲ್ಲಿ 'ನಿಶ್ಶಬ್ದವೇ ಅನುಭಾವ' ಎಂಬ ಸ್ಥಲಕುಲವನ್ನು ಮೀರಿದ ನಿಃಸ್ಥಲದ ವಚನಗಳಲ್ಲಿ ಕಾಣಬಹುದು (ಮೋಳಿಮಾ. ೧೮ ಪ್ರಸ್ತಾವನೆ). [ಸಂ.]

ನಿಃಸ್ವಾರ್ಥ (ನಾ). ≡ನಿಸ್ವಾರ್ಥ ೨ : ನಿಃಸ್ವಾರ್ಥದಾ ಬಯಕೆಗಿಂ ಪರತು ಕಣ್ಣೀನೊಳದೆ ಧರ್ಮಕ್ಕೆ ? (ಕ್ರೀರಾಮಾ. ೧೦೮-೨೩೬). [ಸಂ.]

ನಿಕಟ (ಗು). ೧. ಹತ್ತಿರದಲ್ಲಿರುವ ; ಸಮೀಪದ : ನಿಜನಿಕಟ ಭೂಮಿಯನಳಂಕರಿಸಿ ಜಳಜಳುಸುಮದೆಸಟ ಪಸೆಯೊಳ್ಕುಳ್ಳಿರ್ದು (ಮಲ್ಲಿಪು. ೩-೧೦೧) ; ರಾಮಲಕ್ಷ್ಮಣರಿರ್ವರುಂ ಬಲ್ಲುಗುಡದಿಂ ಮುಂತೆ ಮುಂತೆ ಋಷ್ಯಮೂಕಪರ್ವತ ನಿಕಟಪ್ರಾಂತದೊಳ್ ಬರೆವರೆ (ಅದ್ಭುತ. ೩೫-೧೨). (ನಾ). ೨. ಹತ್ತಿರ ; ಸಮೀಪ : "ಸವಿಧಂ ಸಮೀಪ ಪಭ್ಯಾತವಂತಿಕಂ ನಿಕಟಂ" (ವಸ್ತುಕೋ. ೧೦೯-೬೮) ; ತದಾತ್ರಮ ಮನೆಯ್ದಿದನಂತರಂ ನಿಕಟಮಂ ಸಾರ್ದೆನ್ನಂ ನಿನ್ನಂತೆ ಮಾಡೆಂಬುದುಂ (ನೇಮಿಪು. ೩-೯೬ ಪ) ; ಮಗುವಿನ ಬಾಳಿಗೂ ತಾಯಿಯ ಬಾಳಿಗೂ ಯಾವುದೋ ಒಂದು ಅತಿ ನಿಕಟವಾದ ಸಂಬಂಧವಿದೆ (ರಾಮಾನೆ. ೮೮) ; ತುಳು ಮತ್ತು ಕನ್ನಡದ ಸಂಬಂಧ ಅತ್ಯಂತ ನಿಕಟವಾದುದೆಂಬುದರಲ್ಲಿ ಸಂಶಯವಿಲ್ಲ (ವ್ರಾವಿವಿ. ೧೪೨). ೩. ಹತ್ತಿರದ ಸ್ಥಳ,—ಪ್ರದೇಶ : ಅನ್ನೆಗಂ ಪಿಂತೆ ಕಂಡರಿಯದೆಡೆಗಳನಂತೆ ದೂರಮಂ ನಿಕಟಮಂ, ಮೇಣಂತೆ ಪೂವೆಡೆಗಳಂ ಮತ್ತೆ ಪಣ್ಣೆಡೆಗಳಂ ಪುಡುಕಿದರ್ (ಕ್ರೀರಾಮಾ. ೨೫೬-೭೫೧). [ಸಂ.]

ನಿಕಟಗೊಳ್ಳು (ಕ್ರಿ). ಹತ್ತಿರವಾಗು ; ಕೂಡಿಕೊಳ್ಳು : ಅವರ ಪರಸ್ಪರ ಸ್ನೇಹ ನಿಕಟಗೊಂಡ ಬಗೆಯನ್ನವನು ನೆನೆದು ಸುಖಿಸಿದನು (ಪುನರು. ೨೨೧). [ನಿಕಟ+ಕೊಳ್ಳು₁ (<ಕೊಳ್₁)]

ನಿಕಟಪರಿಚಯ (ನಾ). ಹತ್ತಿರದ ಪರಿಚಯ ; ಆಪ್ತತೆ : ಜೀವನದ ದುರಂತ, ನಾಂಕೇತಿಕತೆ, ವಿನೋದಪೂರ್ಣತೆ - ಹೀಗೆ ಮೂರು ಮುಖಗಳ ನಿಕಟಪರಿಚಯವನ್ನು ಲೇಖಕರು ಮಾಡಲೆತ್ನಿಸಿದ್ದಾರೆ (ಅಬೋಲೀ. I, ಸಂಪಾದಕರ ಮಾತು). [ನಿಕಟ+ಪರಿಚಯ]

ನಿಕಟವರ್ತಿ (ನಾ).೧. ಹತ್ತಿರವಾದುದು ; ಸಮೀಪದಲ್ಲಿರುವುದು: ನಿಮ್ಮಗಾತಟನಿಕಟವರ್ತಿಗಳಪ್ಪ ಮಹಾದ್ಯೋಣಾಮುಖಂಗಳುಮಂ . . . ಘೋಷಾಕರಸಂಗ್ರಹಾಕರ ಗೋಪ್ರಜಂಗಳುಮನವನಾಳ್ವ ತೆಱಗೊಳ್ವ ಬಿಟ್ಟ ಬೆಸಕೆಯಿಸಿಕೊಳ್ವ ಘೋಗಿಪನಿಯೋಗಂಗಳುಮನಿಂತು ಮಾಡಿ (ಅದಿಪು. ೮-೬೩ ಪ). ೨. ಹತ್ತಿರದಲ್ಲಿರುವವನು ; ಸಮೀಪದಲ್ಲಿರುವವನು : ಒಂದು ದಿವಸ[ಮ]ಶಿಶಿರಕಿರಣನಪರಜಲನಿಧಿತಟ ನಿಕಟವರ್ತಿಯಾದಂ (ಪಂಪಭಾ. ೩-೩೧ ಪ). ೩. ಹತ್ತಿರವಾದ ವ್ಯಕ್ತಿ ; ಆಪ್ತವ್ಯಕ್ತಿ : ಮಹಾತ್ಮರ ನಿಕಟವರ್ತಿಯಾದ ಅನುಯಾಯಿಗಳಲ್ಲಿ ಅವಳೊಬ್ಬಳಾಗಿದ್ದಳು (ಪ್ರಬಂಧ. ೯೧). [ಸಂ. ನಿಕಟವರ್ತಿನ್]

ನಿಕಟವರ್ತಿತ (ಗು). ಹತ್ತಿರದಲ್ಲಿರುವ : ಸೌಮಿತ್ರಿ ವಿಲಯಕಾಲ ಮಹಾಮೇಘಸ್ಕಂಧನಿಕಟವರ್ತಿತವಿದ್ಯುದ್ದಾಮಮಿದೆನೆ ದಂತಾಂತು

ಸ್ತೋಮಂ ಪೊಳೆದುಳ್ಳೆ ಬೆಟ್ಟವೆಟ್ಟನೆ ನುಡಿದಂ (ಪಂರಾಮಾ. ೬-೧೪೦).
[ಸಂ.]

ನಿಕಟಸಂಪರ್ಕ (ನಾ). ಹತ್ತಿರದ ಸಂಪರ್ಕ ; ಹೆಚ್ಚು ಗಾಢವಾದ ಸ್ನೇಹ : ಅಲೆಕ್ಸಾಂಡರನ ಮರಣಾನಂತರ ಸೆಲ್ಯೂಕಸ್‌ನಿಕೆಟಾರ್ ಚಂದ್ರಗುಪ್ತಮೌರ್ಯನೊಡನೆ ನಿಕಟಸಂಪರ್ಕ ಬೆಳೆಸಿದ (ತತ್ವಪ್ರಾ. ೧೩ ಪ್ರವೇಶ). [ನಿಕಟ + ಸಂಪರ್ಕ]

ನಿಕಟಸಂಬಂಧ (ನಾ). ಹತ್ತಿರದ ಸಂಬಂಧ,—ನಂಟು : ಜನಜೀವನಕ್ಕೂ ಈ ಸಾಹಿತ್ಯಕ್ಕೂ ನಿಕಟಸಂಬಂಧವಿದೆ (ಕನ್ನಜಾ. ೨೦೬) ; ಅವರಿಂದ ನಾನೆಷ್ಟೋ ದೂರದೂರವಾಗಿ ಹೋದಂತೆ ಹತ್ತಿರ ಹತ್ತಿರವಾಗಿ ಅವುಗಳ ನಿಕಟಸಂಬಂಧವು ನನ್ನ ಕಣ್ಮುಂದೆ ಕಟ್ಟತೊಡಗಿದ್ದಿತು (ಹೇಮಂತ. ೨೯೯). [ನಿಕಟ + ಸಂಬಂಧ]

ನಿಕಟಸ್ಥ (ನಾ). ಹತ್ತಿರದಲ್ಲಿರುವವನು ; ಸಮೀಪದಲ್ಲಿರುವವನು; ನಿಕಟವರ್ತಿ : ಅನಿಬರಿಗೆ ಹರಿ ವಿಶ್ವತೋಮುಖನೆನಿಸಿ ಭೋಜನ ಮಂಡಲದ ನಡುವನಿಬರಭಿಮುಖನೆನಿಸಿ ತನ್ನಿಕಟಸ್ಥನೆಂದೆನಿಸಿ . . . ಉಣುತಿರ್ದನನಿಬರ ಮಧ್ಯದಲಿ ನಲಿದು (ನಿಭಾಗ. ೧೦-೧೩-೯). [ಸಂ.]

ನಿಕಟಾರ್ಥಕ (ನಾ). ಸಮೀಪದ ಅರ್ಥವನ್ನು ಉಳ್ಳುದು : ನಾದರೂಪಗಳ ಮಾತಂತಿರಲಿ ; ಸಮಾನಾರ್ಥಕವಾದ ಅಥವಾ ನಿಕಟಾರ್ಥಕವಾದ ಪದಗಳೂ ಅನೇಕ ವೇಳೆ ಸಿಗುವುದಿಲ್ಲ (ಸಾಹಿಪ್ರ. X, ಪ್ರಸ್ತಾವನೆ). [ಸಂ.]

ನಿಕಟೋದ್ದೇಶ (ನಾ). ಹತ್ತಿರದ ಪ್ರದೇಶ ; ಸಮೀಪದ ಸ್ಥಳ : ಈ ಚಂಪಾನಗರ ನಿಕಟೋದ್ದೇಶದೊಳ್ ಶ್ವೇತಪುರಮೆಂಬ ಪುರಮುಂಟು (ಸುಕುಮಾ. ೭-೨೯ ಪ). [ನಿಕಟ + ಉದ್ದೇಶ]

ನಿಕಟ್ಟ (ನಾ). = ನಿಕಟ ೨ : ನಿಕಟ್ಟಯಲಿಯಿದ್ದು ಪರಿಪರಿಯಿಂದಲಿ ಒಲಿಸಿ ಮಾಧವನಿಂದ ಪುರುಷಾರ್ಥ ಪಡೆದು ಸುಖಿಸಿದರು (ವಿನಕೀ. ೧೮).
[<ಸಂ. ನಿಕಟ]

ನಿಕರ$_1$ (ನಾ). ೧. ಗುಂಪು ; ಸಮೂಹ : "ನಿಕುರುಂಬಂ ನಿವಹಂ . . . ನಿಕರಂ ಸಂಹತಿ ಸಂಚಯಂ . . . ವ್ರಾತಮೇಕಾರ್ಥಕಂ" (ವಸ್ತುಕೋ. ೧೦೨-೨೭) ; "ನಿಕರಂ ನಿಳಾಯಂ . . . ಸ್ತೋಮಕ್ಕೆ ನಾಮಮಕ್ಕುಂ" (ಮಂಗರಾ. ೧೨೬-೧) ; ಅಂತವನಿಪನಿಕರಂ ಕಯ್ಯಾಂತವನಿಪನಿಕರಮೊಂದು ಕೋಟಿಗೆ ಮಿಗಿಲೆಂಬಂತೆ (ಗದಾಯು. ೧-೧೫) ; ಶಿಶಿರಕರನಿಕರದಂತೆ ಕುಮುದಪ್ರಕಾಶಕರರುಂ . . . ಸಾರ್ವಭೌಮೋಪಜೀವಿಗಳಂತೆ ವಿಷಯಾಸಕ್ತರುಮೆನಿಸಿ (ಸುಕುಮಾ. ೨-೫ ಪ) ; ನಾನಾವಿಲಾಸಿನೀನಿಕರದಿಂದಿದಿರ್ಗೊಳಲು ಪುರಮಂ ಪೊಕ್ಕು (ನಂಬಿರ. ೮-೭೨). ೨. ರಾಶಿ ; ಗುಪ್ಪೆ ; ಒಟ್ಟಲು. ೩. ಕಟ್ಟು ; ಪಿಂಡಿ. ೪. ತಿರುಳು ; ಸಾರ. ೫. ಯೋಗ್ಯವಾದ ಪಾರಿತೋಷಕ ; ಗೌರವದ ಕಾಣಿಕೆ. ೬. ನಿಧಿ. ೭. (?) : ನಿಕರಂ ತೆಂಕಣಗಾಳಿ ನಾಗರಿಕನಾಗಲ್ ದರ್ಪಕಂ ಪೀಠಮರ್ದಕನಾಗಲ್ ಮಧುಮಾಸಮೊಲ್ದು ವಿಟನಾಗಲ್ . . . ಸೌಭಾಗ್ಯನಾಯಕನಾದಂ ಶಠದೃಷ್ಟದಕ್ಷಿಣಗುಣಂ ಶೃಂಗಾರಕಾರಾಗೃಹಂ (ಅರ್ಧನೇ. ೪-೧೫೪).

ನಿಕರಕೆ ಗಂಡ = ಗುಂಪಿನಲ್ಲೆಲ್ಲಾ ಪರಾಕ್ರಮಿಯಾದವನು ; ಒಂದು ಬಿರುದು : ನಿಕರಕೆ ಗಣ್ಡ ವೈರಿಬಳಮಲ್ಲಂ ಗಡಿಯಜ್ಜಮಲ್ಲಂ ಮಾರಸಿಙ್ಗನ ನನ್ನನಂ ದಾಯಾದ್ಯಬನ್ಧನಂ (ಎಕ. III(R), ಹೆಗ್ಗಡ. ೧೧೪-೪ ; 1087). [ಸಂ.]

ನಿಕರ$_2$, ನಿಖರ, ನಿಗರ$_3$, ನಿರಕು, ನಿರಕ್ಕು, ನಿರುಕು (ಗು). ೧. ಸ್ಪಷ್ಟವಾದ ; ನಿಶ್ಚಿತವಾದ ; ಕರಾರುವಾಕ್ಕಾದ ; ಖಚಿತವಾದ. (ನಾ). ೨. ನಿಶ್ಚಿತವಾದ ಘಟ್ಟ,— ಸ್ಥಿತಿ ; ನಿರ್ದಿಷ್ಟತೆ ; ಸ್ಪಷ್ಟತೆ ; ನಿರ್ಣಯ : ಅವನಿಗೂ ಅರಸನಿಗೂ ನಿಕರದ ವಾಗ್ವಾದಗಳಾದವು (ಇಂಗ್ಲಂಡ. ೩೬) ; ಅವರಿಗೆ ಅದೆಲ್ಲ ನಿಕರವಾಗಿ ಗೊತ್ತು (ನನ್ನಜೊ. ೬೯) ; ಕೊನೆಗೊಮ್ಮೆ ಮಹಾಬಳೇಶ್ವರದಲ್ಲಿ ಮಾತು ನಿಕರಕ್ಕೇ ಬಂತು (ಸ್ಮೃತಿಚಿ. ೮) ; ನಮ್ಮ ಸಂಗ್ರಾಮವು ಇಷ್ಟೊಂದು ನಿಕರಕ್ಕೆ ಬಂದು ಮುಟ್ಟಿರುವಾಗ . . . ಉಗ್ರವಾದ ಅಸ್ತ್ರವನ್ನು ಪ್ರಯೋಗಿಸಲೇಬೇಕು (ಕರವೀ. ೪೮). **ನಿಖರ** : ೨. ನಿಖರವಾದ ಉತ್ತರ ನೀಡುವ ಆಸಕ್ತಿಯಿಂದ ವಕೀಲ ಕ್ಷಣಕಾಲ ಮೌನವಾಗಿದ್ದನು (ಪುನರು. ೨೪೫) ; ಭೂಮಿಯ ವಯಸ್ಸನ್ನು ನಿಖರವಾಗಿ ಗೊತ್ತು ಪಡಿಸಲು ಮಾರ್ಗವೊಂದನ್ನು ಭೂಗರ್ಭಶಾಸ್ತ್ರಜ್ಞರು ಕಂಡುಹಿಡಿದುದು ೧೯ನೆಯ ಶತಮಾನದಲ್ಲಿ (ಭೂಹುಟ್ಟು. ೯೭) ; ನ್ಯಾಯವಾದ ವ್ಯಾಪಾರ ನಡೆಯಲಿ, ನಿಖರವಾದ ಬೆಲೆ ಇರಲಿ (ಕೊನೆಭೇ. ೫೪). **ನಿಗರ**$_3$: ೨. ಬಗೆಯದಾವುದು ವೇದ ಲೋಕಕೆ ನಿಗರದಲಿ ಪ್ರಾಮಾಣ್ಯವಲ್ಲವೆ ಬೆಡಗುಗೊಳಿಸಿದೆ ಬೇಗ ಹೇಳೆನೆ (ಉತ್ತರಾ. ೩೮-೯೫). **ನಿರಕು** : ೨. ಕುಕ್ಕರಿನ ಅಡಿಗೆ ಇಬ್ಬರಿಗೆ ಇಷ್ಟು ಅಂತ ನಿರಕು ಆಯ್ತು (ಬಾಳಹೊ. ೪೬). ೩. "ಸತ್ಯ ; ನ್ಯಾಯ" (ಜಾನಕೋ. ೧೧). **ನಿರಕ್ಕು** : ೨. ಅತ್ಯಂತ ಪ್ರಾಚೀನ ಕಾಲದಲ್ಲಿ ನಮ್ಮ ದೇಶದಲ್ಲಿ ಯಾವ ಯಾವ ಗಣಿತಶಾಸ್ತ್ರಜ್ಞರಿದ್ದರು, ಅವರ ಕೃತಿಗಳಾವುವು ಎಂಬ ವಿಚಾರದಲ್ಲಿ ನಮಗೆ ನಿರಕ್ಕಾದ ತಿಳಿವಳಿಕೆಯಿಲ್ಲ (ಗಣಿಚಿ. ೧೭). **ನಿರುಕು** : ೨. ಕೆಲವು ನಿರುಕಾದ, ಆಡುವ ಮಾತಿನ ಮಟ್ಟವನ್ನು ಅಷ್ಟೇನೂ ಮೀರಿ ಏರದ, ವಾಕ್ಯರಚನೆ (ಕಬಸಾ. ೩೯) ; ಸುಮ್ಮನೆ 'ಕರು' ಎನ್ನುವುದಕ್ಕಿಂತಲೂ 'ಎಳೆಯ ಕರು' ಎಂದರೆ ಕರುವಿನ ವಿಷಯ ಇನ್ನೂ ನಿರುಕಾಗಿ ತಿಳಿಯುತ್ತದೆ (ಮಧ್ಯಮ. ೧೦).
[←ಮರಾ. ನಿಕರ್, ನಿಕರೂ]

ನಿಕರಿಸು (ಕ್ರಿ). ತಿರಸ್ಕರಿಸು : ಮನ ಬೆದಱ ಭ್ರಾಂತಿಯ ಸದಮದದೊಳು ಸಿಲುಕಿ ನಿಜವ ನಿಕರಿಸುವಾ ಉನ್ಮದಗತಿಯ ಬಿಸುಟು (ಷಡಕಂ. ೬೯). [<ನಿಃಕರಿಸು]

ನಿಕರ್ತನ (ನಾ). ೧. ಕತ್ತರಿಸುವಿಕೆ ; ತುಂಡರಿಸುವಿಕೆ : "ಛೇದನಂ ನಿಕರ್ತನ ನಾಮಂ" (ವಸ್ತುಕೋ. ೧೧೪-೨೧) ; ಸುಕದ ಕಣಿಯೆನಿಸಿ ಮಾಪುಬ್ಬಕೋಟಿ ಪರಮಾಯುನಾಭಿ ನಾಮಮುಮಾಯ್ತರ್ಭಕನಿಕರ ನಾಭಿನಾಳಪ್ರಕರನಿಕರ್ತನಮನಱಿಯೆ ಪೇಟ್ದುದಱಿಂದಂ (ಅದಿಪು. ೬-೬೭) ; ಆತನ ಕಾಲದೊಳು ಶಿಶುಗಳ್ಗೆ ನಾಭಿನಿಕರ್ತನಮಾದೊಡೆ (ಚಾವುಂಪು. ೧೧). ೨. ಸಂಪೂರ್ಣವಾಗಿ ತೊಡೆದುಹಾಕುವಿಕೆ ; ನಿರ್ನಾಮಗೊಳಿಸುವಿಕೆ. [ಸಂ.]

ನಿಕರ್ಷ (ನಾ). ೧. ಅತಿರೇಕ ; ಪರಾಕಾಷ್ಠೆ : (ಕಿ). ೨. "ನೀಚತನ" (ಗಂಗಾಮ. ೧೮೨). [?./ಮರಾ. ನಿಕರ್ಷ್, ನಿಕರ್ಶ್]

ನಿಕರ್ಷಣ (ನಾ). ೧. ಪಟ್ಟಣದ ಒಳಗಿನ ಅಥವಾ ಸಮೀಪದ ಬಯಲುಪ್ರದೇಶ,—ಕ್ರೀಡಾಂಗಣ : "ಸನ್ನಿವೇಶಃ, ನಿಕರ್ಷಣಂ-೨ ಪಟ್ಟಣದ ಸುತ್ತಲೂ ಪುರಜನ ಸಂಚಾರಾದಿಗಳಿಗಾಗಿ ಬಿಡಲ್ಪಟ್ಟಿರುವ ಬೈಲು, ಊರು ಹೊರಗಣ ಮುಂಗಳ, ಪೌಳೀಬೈಲು" (ಸಿದ್ಧಾಂತಿ. ೧೦೫). ೨. ಮನೆಯ ಅಂಗಳ. ೩. ನೆರೆಹೊರೆ ; ಅಕ್ಕಪಕ್ಕದ ಮನೆಯವರು. ೪. ಎಳೆಯುವುದು ; ಜಗ್ಗುವುದು. [ಸಂ.]

ನಿಕಶೋಪಳ (ನಾ). ಒರೆಗೆ ಹಚ್ಚುವ ಕಲ್ಲು ; ಒರೆಗಲ್ಲು : ನಿಶ್ಶಂಕರಾಮಂ ಸುಭಟಕನಕ ನಿಕಶೋಪಳಂ ಶರಣಾಗತವಜ್ರಪ್ರಾಕಾರಂ (ಸೌಇಇ. XV, ೯-೧೧ ; 1125). [<ಸಂ. ನಿಕಷೋಪಲ]

ನಿಕಷ (ನಾ). ೧. ಚಿನ್ನ, ಬೆಳ್ಳಿಗಳನ್ನು ಒರೆಗೆ ಹಚ್ಚುವ ಕಲ್ಲು ; ಒರೆಗಲ್ಲು : "ಶಾಣಃ, ನಿಕಷಃ, ಕಷಃ - ೩ ಒರೆಗಲ್ಲಿನ ಪೆಸರು, ಸಾಣೆಯು" (ಸಿದ್ಧಾಂತಿ. ೩೧೬) ; ಸಂಗರನಿಕಷದೊಳೆಮ್ಮಂದಮಂ ನೀನೆ

ಕಾಚ್ಛೈ (ಆದಿಪು. ೧೪-೮೨) ; ಈ ಸಂಸಾರದಲ್ಲಿ ಸಾಹಿತ್ಯವು ಕಪ್ಪಾನೆ ನಿಕಷದಲ್ಲಿ ತೊಳಗುತ್ತಿರುವ ಚಿನ್ನದ ಒರೆಯಂತಿರಬೇಕು (ಕಂನಾಸಾ.೧೪). ೨. ಒರೆ ; ಪರೀಕ್ಷೆ : ಅವಂದಿರ ಕಬ್ಬಮಿನ್ನುಮಿರ್ಪುವು ಗುಣದೋಷಮಂ ನಿಕಷಮಿಟ್ಟು ಪರೀಕ್ಷಿಸಿ ನೋಡೆ (ಗದಾಯು. ೧-೪೭) ; ಕಂ - ನಾಡು ಇಂಥ ಪ್ರಾದೇಶಿಕ ಹೆಸರುಗಳ ಯುಕ್ತಾಯುಕ್ತ ನಿರ್ಣಯಕ್ಕೆ ಕೆಲವೊಂದು ತಾತ್ವಿಕ ನಿಕಷವು ಅವಶ್ಯವಿರುತ್ತದೆ (ಕರ್ನಾಟ. ೫೨೪) ; ಮೂಕಕೋಕರಸದ ನಿಕಷ ನಮ್ಮ ಪ್ರಣಯಸಿದ್ಧಿಗೆ (ಭಾರಂಗ. ೩೧-೧೫). ೩. ಒರೆಗಲ್ಲಿನ ಮೇಲಿನ ಬಂಗಾರದ ಗೆರೆ. [ಸಂ.]

ನಿಕಷಜ್ಞ (ನಾ). ೧. ಒರೆಯಿಟ್ಟು ಪರೀಕ್ಷಿಸುವವನು. ೨. (ಆಲಂ) ಗುಣದೋಷಗಳನ್ನು ಅರಿಯುವವನು : ಭಾಷಾಸಂಸ್ಕರಣಪ್ರಮಾಣ ನುಯಿಕ್ಷೇಪರ್ ಜಿನೇಂದ್ರಾಗಮಾಶೇಷಜ್ಞರ್ ನಿಕಷಜ್ಞರಪ್ಪುದುಚಿತಂ ವಿದ್ವತ್ಸಭಾಮಧ್ಯದೊಳ್ (ಸುಕುಮಾ. ೧-೪೭). [ಸಂ.]

ನಿಕಷಣ (ನಾ). ಉಜ್ಜುವುದು ; ತಿಕ್ಕುವುದು ; ಘರ್ಷಣೆ : ಶ್ರೀವಿಜಯಾರ್ಧಾಚಳಖಚರಾವಳಿ ಮಣಿಮಕುಟಮಕರಿಕಾನಿಕಷಣ ಲೇಖಾವಿಳಸಿತಪದಕಮುಳನಿಳಾವಂದ್ಯಯಶಂ ಸರಸ್ವತೀಮಣಿಹಾರಿ (ಆದಿಪು. ೨-೧). [ಸಂ.]

ನಿಕಷದೃಷದ (ನಾ). = ನಿಕಷ ೧ : ಪಾಷಾಣಹೃದಯರಪ್ಪೊಡೆ ದೂಷಿಸಿ ಮತ್ಕಾವ್ಯಮಂ ಪರೀಕ್ಷಿಸುಗೆ ಗುಣಾನ್ವೇಷಿಗಳಪ್ಪೊಡೆ ಕನಕ ನಿಕಾಶದೊಳೇಂ ನಿಕಷದೃಷದಮಱಸದೊಳರೇ (ಲೀಲಾವ. ೧-೬೯).

[ಸಂ. ನಿಕಷದೃಷದ್]

ನಿಕಷೆ (ಗು). ೧. ಹತ್ತಿರದ ; ಸಮೀಪದ. (ನಾ). ೨. ರಕ್ಕಸರ ತಾಯಿ : "ರಾಕ್ಷಸರ ತಾಯಿ ನಿಕಷಾ" (ಹಲಾಯು. ೨೦-೧೧೯) ; "ರಕ್ಕಸರ ವೃಂದಮಂ ಪಡೆದಾಕೆ ನಿಕಷೆ[ಜಾತಾಂ. ಸೆ]ಯಕ್ಕು" (ಮಂಗರಾ. ೭-೨೪). [ಸಂ. ನಿಕಷಾ]

ನಿಕಷೋಪಲ (ನಾ). = ನಿಕಷ ೧ : ಆಕಾಶಂ ನಿಕಷೋಪಲಂ ತನಗೆನಲ್ . . . ನಾನಾಪತಾಕಾಧ್ವಜವ್ಯಾಕೀರ್ಣಂ ಸುರಶೈಲಮಂ ನೆನೆಯಿಸಲ್ ಪೋಲ್ದತ್ತಯೋಧ್ಯಾಪುರಂ (ನಳಚಂ. ೬೨೯). [ನಿಕಷ + ಉಪಲ]

ನಿಕಸ (ನಾ). ಒರೆಗಲ್ಲು : ಸಕಲೇಶಮಾದರಸು ಭಕುತ ಮಾದಯ್ಯನಿಗೆ ನಿಕಟ ಗುರು ಲಿಂಗ ಜಂಗಮನು ಕಾಯಕದ ನಿಕಸಮಂಟಪಕೆ ಮೂಗುತಿಯು (ಕನ್ನಜಾ. ೨೮೦). [ಸಂ.]

ನಿಕಸೆ$_1$ (ನಾ). = ನಿಕಷೆ ೨ : "ರಕ್ಕಸರ ವೃಂದಮಂ ಪಡೆದಾಕೆ ನಿಕಸೆ [ಜಾತಾಂ. ಷೆ]ಯಕ್ಕು" (ಮಂಗರಾ. ೭-೨೪). [<ಸಂ. ನಿಕಷಾ]

ನಿಕಸೆ$_2$ (ನಾ). ಒರೆಗಲ್ಲು : "ನಿಕಸೆ—೧. ನಿಕಷಾ. ೨. ನಿಕಷ = ಒರೆಗಲ್ಲು" (ತದ್ಭವಕೋ. ೨೧). [ಸಂ. ನಿಕಸ]

ನಿಕಾ, ನಿಕಾವು, ನಿಖಾ (ನಾ). (ಮುಸ್ಲಿಮರ ಪದ್ಧತಿಯ ಮೇರೆಗೆ ನಡೆಯುವ) ಮದುವೆ,—ವಿವಾಹ : ನನ್ನನ್ನು ಅದೇ ಅವಸ್ಥೆಯಲ್ಲಿ ಮುಸ್ಲಿಮನೊಬ್ಬನಿಗೆ ನಿಕಾ ಮಾಡಿಕೊಟ್ಟದ್ದು (ಹೋಳಛಿ. ೨೭) ; ಗುಲಾಮನಿಗೆ ಕೊಟ್ಟು ನಿಕಾ ಮಾಡಿಸತಕ್ಕದ್ದು (ದೌಲತ್. ೧೭೩) ; ಹಾಗಾದರೆ ನನ್ನನ್ನು ಯಾವಾಗ ನಿಕಾ (ಮದುವೆ) ಮಾಡಿಕೊಳ್ಳುವಿರಿ (ಕೋಹಿನೂ. ೬೫). **ನಿಕಾವು**: (ಕ). **ನಿಖಾ** : ಆಕಿ ನಮ್ಮ ಜಾತಿಯವನ್ನ ನಿಖಾ ಮಾಡಿಕೊಂಡ್ರೆ ಆಕಿ ಹೊಟ್ಟಾಗೆ ಹುಟ್ಟೂ ಮಕ್ಕಳ್ನ ನೀವು ಮುಟ್ಟೇರಿ (ಎಳಕ. ೧೯) ; ಏನೇನೋ ಹೇಳಿ ನಿಖಾ ಮಾಡಿಕೊಂಡು ಬಿಟ್ಟನಂತೆ (ಉಡುಗೊ. ೮೮).

[←ಮರಾ. ನಿಕಾ ; ಅರ. ಹಿಂ. ನಿಕಾಹ್]

ನಿಕಾಚನ (ನಾ). [ಜೈನ] ಕರ್ಮಪ್ರಕೃತಿಯ ಒಂದು ಅವಸ್ಥೆ ; ಉದೀರಣಾ, ಸಂಕ್ರಮಣ, ಉತ್ಕರ್ಷಣ, ಅಪಕರ್ಷಣಗಳೆಂಬ ಅವಸ್ಥೆಗಳಿಗೆ ಒಳಪಡದಿರುವಿಕೆ : ಈ ಕರ್ಮಪ್ರಕೃತಿಗಳೆಲ್ಲ ವಿಶ್ವದಲ್ಲಿ ಬಂಧ (ಆತ್ಮನಿಗೆ ಕಟ್ಟಿದ್ದು) . . . ನಿಕಾಚನ (ಉದೀರಣಾ ಸಂಕ್ರಮಣ, ಉತ್ಕರ್ಷಣ, ಅಪಕರ್ಷಣ ಆಗದಿರುವುದು) ಈ ಹತ್ತು ಅವಸ್ಥೆಗಳಲ್ಲಿ ಇರುತ್ತವೆಂದು ನೇಮಿಚಂದ್ರಸಿದ್ಧಾಂತಚಕ್ರವರ್ತಿಗಳು 'ಗೊಮ್ಮಟಸಾರ'ದಲ್ಲಿ ಹೇಳುವರು (ಜೈನಪ. ೩೬೯). [ಸಂ.]

ನಿಕಾಮ (ಗು). ೧. ಹೆಚ್ಚಾದ ; ಬಹಳವಾದ ; ವಿಪುಲವಾದ ; ಅತಿಶಯವಾದ : "ನಿಕಾಮವೆನೆ ಪರ್ಯಾಪ್ತಂ" (ವಸ್ತುಕೋ. ೧೦೫-೪೨) ; ಅತಿಮೃದುಕೋರಕದಿಂ ಬಱಯಂ ಮಂಜರಿ ನಿಕಾಮ ಕೋಮಳವಿಲಾಸದಿಂ ಪುಟ್ಟುವವೋಲ್ (ಶಾಂತಿಪು. ೫-೧೬) ; ನಿಸ್ಸೀಮ ನಿಕಾಮಬಾಹುಸಾಹಸಾಡಂಬರಪ್ರಳಂಬನೆಂಬ ಪ್ರಳಂಬನುಮಂ (ಜಗವಿ. ೬-೨೨ ಪ). ೨. ಇಚ್ಛೆಸುವ ; ಬಯಸುವ. (ನಾ). ೩. ಯಥೇಷ್ಟವಾದುದು ; ಬಹಳವಾದುದು : "ಕಾಮಂ, ಪ್ರಕಾಮಂ, ಪರ್ಯಾಪ್ತಂ, ನಿಕಾಮಂ, ಇಷ್ಟಂ, ಯಥೇಷ್ಟಿತಂ—ಈ ೬ ಯಥೇಷ್ಟವಾದುದರ ಹೆಸರುಗಳು. ಬೇಕಾದಷ್ಟು, ಬಹಳವಾದ್ದು" (ಸಿದ್ಧಾಂತಿ. ೨೯೧). ೪. ಇಚ್ಛೆ ; ಬಯಕೆ. [ಸಂ.]

ನಿಕಾಮಂ (ಅ). ೧. ಯಥೇಚ್ಛವಾಗಿ ; ವಿಪುಲವಾಗಿ ; ಅತಿಶಯವಾಗಿ : ಕುಚಂ ಬೆಳ್ಪುವೆತ್ತುದು ರೋಮಾವಳಿ ರಾಜಿತಂ ನಡು ನಿಕಾಮಂ ಪೀವರಶ್ರೋಣಿ ಸಂಪ[ದೆ]ಗಂ ತೀವಿದುದೀ ಕುಮಾರಿಗೆ ವಿಳಾಸಾಳಂಬನಂ ಯವ್ವನಂ (ಪರ್ಧಮಾ. ೬-೪೬) ; ಮುಕುರದೊಳಾ ಪ್ರತಿಬಿಂಬಂ ನಿಕಾಮಮೆಸೆವಂತೆ ತದ್ವಶೋವಿಸ್ತರದೊಳ್ ಸಕಲಜಗಂ ಸೊಗಯಿಸುಗುಂ (ಚಂದ್ರಪ್ರ. ೨-೮೫). ೨. ಸಾಕಷ್ಟು ; ತೃಪ್ತಿಯಾಗುವಷ್ಟು. [ಸಂ.]

ನಿಕಾಮಕೋಮಳೆ (ನಾ). ತುಂಬ ಕೋಮಲಳಾದವಳು ; ಸುಕುಮಾರಿ : ಬಱಲ್ಮಡಿ ಜೋಲ್ದು ನೇಲೆ ಸಂಚಳದಳಕಾಳಿಗಳ್ ವಿಳಿರ್ದು ನರ್ತಿಸೆ ನರ್ತಕಿವೋಲ್ ನಿಕಾಮಕೋಮಳೆ ಪರಿತಂದು . . . ಕುಮಾರನನಂದು ನೋಡಿದಳ್ (ಸುಕುಮಾ. ೧೧-೧೧).

[ನಿಕಾಮ + ಕೋಮಳೆ (= ಕೋಮಲೆ)]

ನಿಕಾಮಿ (ನಾ). ಕೆಲಸಕ್ಕೆ ಬಾರದವನು ; ನಿಷ್ಪ್ರಯೋಜಕ : ಸುರೇಶ—ಶಕೂರ ಸಮಸ್ಯೆ ಬಗೆಹರಿದರೆ, ಅವನು ತೀರಾ ನಿಃಸತ್ವನಾಗಿ ನಿಕಾಮಿಯಾಗಿ ಬಿಡುತ್ತಿದ್ದ (ದೀಪಹ. II, ೩೭೧).

[←ಮರಾ. ನಿಕಾಮಿ ; ಹಿಂ. ನಿಕಾಮ್, ನಿಕಮ್ಮಾ]

ನಿಕಾಮಿನಿ (ನಾ). ಬಹಳವಾಗಿ ಆಸೆ ಪಡುವವಳು ; ಅತ್ಯಾಪೇಕ್ಷೆಯುಳ್ಳವಳು : ಭಾಮಿನಿಯೆಸೆದಳ್ ಸೌಂದರಜಿತಸುರಕಾಮಿನಿ ಐಸಿರಿಯೆಸಕದೊಳಧಿಸವಗೋಮಿನಿ ಸತತಂ ಭೋಗಾನುಭವನಿಕಾಮಿನಿ (ಉದ್ಭವೇ. ೨-೫೮). [ಸಂ. ನಿಕಾಮಿನೀ]

ನಿಕಾಯ (ನಾ). ೧. ಗುಂಪು ; ಸಮೂಹ ; ಸಮುದಾಯ : "ನಿಕುರುಂಬಂ ನಿವಹಂ . . . ನಿಕಾಯಂ ಚಯಂ ನಿಕರಂ ಸಂಹತಿ . . . ಸಮೂಹಂ ವ್ರಾತಮೇಕಾರ್ಥಕಂ" (ವಸ್ತುಕೋ. ೧೦೨-೨೭) ; "ನಿಕರಂ ನಿಕಾಯಂ . . . ಸ್ತೋಮಕ್ಕೆ ನಾಮಮಕ್ಕುಂ" (ಮಂಗರಾ. ೧೨೬-೧); ಆದರದಿಂ ದೇವನಿಕಾಯದೊಳ್ ನೆರೆವುದೊಂದುತ್ಸಾಹಮುಂ (ಪಂಪಭಾ. ೧೦-೪೩); ಪರಿಚಾರಿಕಾನಿಕಾಯಂಬೆರಸು . . . ಕುಟ್ಟಿಯೆಂಬ ಸೈರಂಧ್ರಿ ನಡೆತರೆ (ಜಗವಿ. ೬-೧೮ ಪ) ; ನೆರೆದು ಸಿಂಗರಿಸಿದ ಮಹಾರಥ ನಿಕಾಯದಿಂ (ಸಂಬರ. ೧೧-೧೪೫) ; ಪುತ್ರನಳಿವು ಜನ್ಮನಿಕಾಯದಳಿವಂಗನಾಜನನ ಮಾಯಾಜನನಮಂಜಬೇಡ (ಹಚಕಾ. ೧೪-೬). ೨. ವಾಸಸ್ಥಳ ; ಮನೆ ; ಗೃಹ. ೩. ದೇಹ ; ಶರೀರ : ಅಂದು ನೀಲಾಚಲ ನಿಕಾಯದ ಸೌಂದರಾಂಗದ ಕೌಸ್ತುಭಪ್ರಭೆಯಿಂದ ಕಾಂಚನರಥವನಿಳಿದನು ದಾನವಾ

ರಾಶಿ (ಕುಮ್ಮಾಳು. ೮-೫೭). ೪. ಲಕ್ಷ್ಯ ; ಗುರಿ. ೫. ಗಾಳಿ ; ವಾಯು. ೬. ಭಾಗ ; ವರ್ಗ. ೭. ಪರಮಾತ್ಮ ; ಪರಮೇಶ್ವರ. ೮. [ಬೌದ್ಧ] "ಸುತ್ತಪಿಟಕದ ಐದು ಭಾಗಗಳು" (ಬುದ್ಧಪ. ಮಿಲಿಂದ. ೧೩೧ ಕೋಶ) : ಮೂರು ಪಿಟಕಗಳನ್ನು ಬಲ್ಲ ಭಿಕ್ಷುಗಳೂ ಐದು ನಿಕಾಯಗಳನ್ನು ತಿಳಿದವರೂ ನಾಲ್ಕು ನಿಕಾಯಗಳನ್ನು ಬಲ್ಲವರೂ ಆ ನಾಗಸೇನನನ್ನು ಪುರಸ್ಕರಿಸುವರು (ಬುದ್ಧಪ. ೨೯ ಮಿಲಿಂದ). [ಸಂ.]

ನಿಕಾಯ್ಯ (ನಾ). ವಾಸಸ್ಥಾನ ; ಮನೆ ; ಗೃಹ : ಆವಾಸಃ . . . ನಿಲಯಃ, ನಿಕಾಯ್ಯಃ, ಉಟಜಂ . . . ನಿವಸನಂ, ಆಲಯಃ—ಈ ೩೧ ಮನೆ" (ಹಲಾಯು. ೪೯-೧೩೬). [ಸಂ.]

ನಿಕಾರ$_1$ (ನಾ). ೧. ಧಾನ್ಯಗಳನ್ನು ತೂರುವುದು : "ಉತ್ಕಾರಃ, ನಿಕಾರಃ . . . ಅಂದರೆ ಧಾನ್ಯವನ್ನು ತೂರಿ ರಾಶಿಮಾಡುವಿಕೆ" (ಸಿದ್ಧಾಂತಿ. ೩೬೮). ೨. ಮೇಲಕ್ಕೆ ಎತ್ತುವುದು. ೩. ಕೊಲೆ ; ಸಂಹಾರ. ೪. ಅನಾದರ ; ತೇಜೋವಧೆ ; ತಿರಸ್ಕಾರ ; ಅಪಮಾನ : "ಪರಿಭೂತಿ ನಿಕಾರಮನಾದರಂ ತಿರಸ್ಕಾರಮಭಿಭವಂ ಭಂಗಂ" (ಪಸ್ತುಕೋ. ೧೧೧-೨) ; ಗೋಪೀಯುವತಿಜನ ಚಾರನಾಚಾರವಿಹೀನನೆ ಪೂಜ್ಯನಾಗೆ ನಿನಗೆ ನಿಕಾರಂ (ಜಗವಿ.೧೭-೨೩). ೫. ಕೇಡು ; ದ್ವೇಷ ; ಮತ್ಸರ. ೬. ವಿರೋಧ. [ಸಂ.]

ನಿಕಾರ$_2$ 'ನಿಖಾರಿ' ನೋ.

ನಿಕಾರಣ (ನಾ). ಕೊಲೆ; ಸಂಹಾರ : "ಪ್ರಮಾಪಣಂ, ನಿಬರ್ಹಣಂ, ನಿಕಾರಣಂ . . . ವಧಃ - ಈ ೩೦ ಕೊಲ್ಲುವುದಕ್ಕೆ ಹೆಸರುಗಳು" (ಸಿದ್ಧಾಂತಿ. ೨೬೨). [ಸಂ.]

ನಿಕಾರವಟ್ಟೆ (ನಾ). ಒಂದು ಬಗೆಯ ಬಟ್ಟೆ ; ಶುಭ್ರವಾದ ಬಟ್ಟೆ : ನೋಡುವ ನೆವದಿಂ ಮಣಿಮಂಟಪಕ್ಕೆ ನಿಕಾರವಟ್ಟೆಯ ಚಂದ್ರೋದಯಮಂ ಸಂದಿಸುವಂತೆಯುಂ (ಅನಂಪು. ೮-೭ ಪ) ; ಮಿಳಿರ್ದು ಮಸಗಿಸುವ ನಿಕಾರವಟ್ಟೆಯ ಗುಡಿಯ ತುಱುಗಲೊಳಂ (ಅನಂಪು. ೧೪-೨೩ ಪ). [ನಿಕಾರ$_2$(<ನಿಖಾರಿ)+ಬಟ್ಟೆ$_2$]

ನಿಕಾರಿ 'ನಿಖಾರಿ' ನೋ.

ನಿಕಾರಿಸು (ಕ್ರಿ). ೧. ಸ್ವಚ್ಛಮಾಡು ; ಮಡಿಮಾಡು : ಪ್ರುಡನ ಭಕ್ತರಿತ್ತ ವಸ್ತ್ರಮಂ ನಿಕಾ[ಪಾಠಾಂ. ಖಾ]ರಿಸಲ್ಕೆ ನೆನೆದು (ತಿರುತೊಂ. ದೇ. ೨೬೨-೨೨). ೨. ಮುಚ್ಚು ; ಕಾಣದಂತೆ ಮಾಡು : ನಾರಿ ಹರಿ ತಂದಕಟ ನೊಂದನು ಕಾರುಣಿಕಸನ್ಯಾಸಿಯೆನುತ ನಿಕಾರಿಸುತೆ[ಪಾಠಾಂ. ನಿಕಾರಿಸಿದ, ವಿಕಾರಿಸದೆ]ಸೆಱಗಿನಲಿ ತೋದಳು ಬಹಳ ತೋಣಿತವ(ಕುಮ್ಮಾವಿ. ೯-೨೦) ; ಕಾರುಣ್ಯವಾರ್ಧಿಯ ಕಾರುಣ್ಯಜಲಧಿಯ ನೀರನು ಮೊಗೆದೆತ್ತಿದಂತೆ ಕಾರು ತೋಱುದುದೆದ್ದ ಜಲಧರಪಟಲ ನಿಕಾರಿಸೆ ಗಗನಮಾರ್ಗವನು (ಪರ್ಧಚ. ೯-೬೪).

[ನಿಕಾರ$_2$(<ನಿಖಾರಿ)+-ಇಸು./ಹಿಂ. ನಿಖಾರನಾ]

ನಿಕಾಲ 'ನಿಕಾಲೆ' ನೋ.

ನಿಕಾಲಸು (ಗು). ೧. ಮುಚ್ಚುಮರೆಯಿಲ್ಲದ ; ನೇರವಾದ ; ಸ್ಪಷ್ಟವಾದ : (ಕ). (ನಾ). ೨. ಮುಚ್ಚುಮರೆ ಇಲ್ಲದಿರುವಿಕೆ ; ನೇರವಾದುದು : (ಕ)

[←ಮರಾ. ನಿಕಾಲಸ್, ನಿಖಾಲಸ್ ; ಹಿಂ. ನಿಖಾಲಿಸ್]

ನಿಕಾಲಿ 'ನಿಕಾಲೆ' ನೋ.

ನಿಕಾಲೆ, ನಿಕಾಲ, ನಿಕಾಲಿ, ನಿಖಾಲೆ (ನಾ). ೧. ಇತ್ಯರ್ಥ ; ಅಂತಿಮನಿರ್ಣಯ ; ಫೈಸಲು ; ಬಗೆಹರಿಯುವಿಕೆ : ಎಲ್ಲ ಪ್ರಕರಣಗಳ ನಿಕಾಲೆಯು ಒಮ್ಮೆಲೇ ಆಗುವದು! (ಕಳ್ಳಕಾ.೨೪) ; ಇದರ ನಿಕಾಲೇ ಆಗಲಿ (ನಡೆದಾ. I, ೨೬೭) ; ಅದರ ನಿಕಾಲೇ ಆಗೂದು ಎಷ್ಟು ಮಹತ್ವದ್ದು ಅದ (ದೀಪಹ. II, ೭೯). ೨. ತೀರುವಳಿ; ಸಂದಾಯವಾಗುವಿಕೆ : ದಿನದಿನದ ಚೆಕ್ ಸಾಲದ ನಿಕಾಲೆ ಸುಲಭವಾಗುವಂತೆ ಮಾರ್ಪಾಡುಗಳನ್ನು ತೋರಿಸಿ ಸುಲಭ ಮಾಡುವುದು (ಹಣಪ್ರ.೩೦೭). **ನಿಕಾಲ:** ೧. ಎಲ್ಲ ಮೂಲವು ಒಂದೇ ಖಾತೆಯಲ್ಲಿ ಇದ್ದದರಿಂದ ಎಲ್ಲ ಕಲಮಿಗಳ ನಿಕಾಲ ಆಗದ ಹೊರ್ತು ಲೆಖ್ಖದ ಪಟ್ಟಿಯು ನಿಕ್ಕೆ ತಯಾರ ಆಗುವುದಿಲ್ಲ (ಮುಂಬವ್ಯಾ. ೭೮) ; ಇಂದ ಗಪ್ಪನ ನಿಕಾಲದಾಗ ತಗದ ಬಿಡೂಣ ಅಂತೀನಿ (ದೀಪಹ. I, ೯೪). **ನಿಕಾಲಿ :** ೧. ಹಿಂದಕ ಒಮ್ಮೆ ಹೋಗಿದ್ದೆ, ಅವರ ಕೇಸು ನಿಕಾಲಿ ಆಗಿದ್ದಿಲ್ಲ. ವಿಚಾರ ಮಾಡಿಕೋಕ ಕೂತಿದ್ದರು (ಸಮಜೀ. ೧೫೧). ೩. ಇಲ್ಲವಾಗುವುದು ; ಖಾಲಿಯಾಗುವುದು : ಅಲ್ಲಿ ಕಾಣುವ ಮೋಡ ಒಂದೇ ಮಳೆ ಸುರಿಸಿ ನಿಕಾಲಿ ಆಗ್ಬೇಕು ಇಲ್ಲಾ ನಮ್ಮ ಕಣ್ಣಿಗೆ ಕಾಣಿಸದ ಹಾಗೆ ದೂರ ಹೋಗ್ಬೇಕು (ತಳಿರು. ೯೧). **ನಿಖಾಲೆ :** ೧. ಇದರ ನಿಖಾಲೆ ಇಂದು ಆಗಿಯೇ ಬಿಡಲಿ (ಮೂರುದಾ. ೩೯).

ನಿಕಾಲೆ ಮಾಡು, ನಿಕಾಲ ಮಾಡು, ನಿಕಾಲಿ ಮಾಡು = ೧. ಇತ್ಯರ್ಥಮಾಡು ; ನಿರ್ಣಯಿಸು ; ಬಗೆಹರಿಸು : ಲಗೂನ ಏನರ ನಿಕಾಲೇ ಮಾಡರೀ (ದೀಪಹ. II, ೨೧೬); ನಾ ಕುಂಡ್ರೋದಿಲ್ಲ . . . ಇದರ ನಿಕಾಲೆ ಮಾಡಿ (ಕಮ್ಮಟ. ೨) ; ಈ ಪ್ರಕರಣದ ಪತ್ತೆ ಹಚ್ಚಿ ನಿಕಾಲ ಮಾಡದಿದ್ದರ ಗೌಡಿಕೀ ಬಿಡತೇನಿ (ಗ್ರಾಮಾಯ. ೩೧). ೨. ತೀರುವಳಿ ಮಾಡು ; ಸಂದಾಯ ಮಾಡು : ಅದನ್ನೇನ ನಿಕಾಲಿ ಮಾಡೂ ಅವನೋ, ಏನ ಹಂಗ ಬಡ್ಡೀ ಬೆಳೆಸಿಗೋತ ಇರಾವ್ನೋ (ದೀಪಹ. I, ೧೮೧). ೩. ಕೊಲ್ಲು ; ಸಾಯಿಸು : ಇವನ ನಿಕಾಲಿ ಮಾಡೂ ವ್ಯಾಳೇದಾಗ ಅಡ್ಡ ಬರಬ್ಯಾಡ (ಮನೆಬೆ. ೬೩).

[<ಪ್ರಾ. ಣಿಕ್ಕಾಲ್./ಹಿಂ. ಮರಾ. ನಿಕಾಲ್]

ನಿಕಾವು 'ನಿಕಾ' ನೋ.

ನಿಕಾಶ (ಗು). ೧. ಹೋಲುವ ; ಹೋಲಿಕೆಯುಳ್ಳ : ದಳಿತ ಧವಳಾಬ್ಜಮುಕ್ತಾಫಳಶಂಖ ಶಶಾಂಕಕಾಶನಿಕಾಶ[ಸು] ವಿನಿರ್ಮಳ ರುಚಿರವರ್ಣನುಂ ಸಲೆ ತಳೆದಂ ಹಳಿ ತನ್ನ ಮೆಯ್ಯೊಳಂ ಲೋಕದೊಳಂ (ಪರ್ಧಮಾ. ೩-೮) ; ಫಲಪುಷ್ಪಭಾರಾವನತ ತರುಲತಾಶ್ರೇಣಿ ತಾಂ ಮಣಿನಿಕಾಶೋದಕ ನದೀವಕ್ಷದರ್ಪಣದಿ ಮಾರ್ಪೊಳೆವವೊಲ್ ಬಾಗಿ (ಶ್ರೀರಾಮಾ. ೧೫೦-೨೨೨). (ನಾ). ೨. ತೋರಿಕೆ. ೩. ದಿಗಂತ ; ಬಾನಂಚು ; ದಿಕ್ಕಿನ ಕೊನೆ. ೪. ಹತ್ತಿರ ; ಸಾಮೀಪ್ಯ. ೫. ಹೋಲಿಕೆ ; ಎಣೆ ; ಸಾದೃಶ್ಯ : ಆಶಾವಳಯಿತ ಲೋಕಾಕಾಶ ಮಿದೇನತಿವಿಶಾಲಮೋ ನಿನ್ನ ಯಶೋರಾಶಿಯನಿಂದುದ್ಯುತಿಯ ನಿಕಾಶ ಮನೊಳಕೊಳ್ಗುಮಳವಿಗಟುದಿರ್ದುದುಮಂ (ಕವಿಶಾ. ೩-೯೪) ; ಪಾಷಾಣ ಹೃದಯರಪ್ಪೊಡೆ ದೂಷಿಸಿ ಮತ್ಕಾವ್ಯಮಂ ಪರೀಕ್ಷಿಸುಗೆ ಗುಣದ್ವೇಷಿಗಳಪ್ಪೊಡೆ ಕನಕನಿಕಾಶದೊಳೇಕ ನಿಕಷದೃಷದಮಱಸದರೊಳರೇ (ಲೀಲಾವ. ೧-೬೯) ; ಅಮರತರು ನಿಕಾಶೋದಾರ ಗುಣನಿಧಿ (ನಿಭಾಗ. ೩-೧-೪೫). ೬. ಬೆಳಕು ; ಕಾಂತಿ. ೭. ಗುಟ್ಟು ; ರಹಸ್ಯ. [ಸಂ.]

ನಿಕಾಸ (ನಾ). ಹೋಲಿಕೆ ; ಎಣೆ ; ಸಾದೃಶ್ಯ : ಊರುದ್ವಯಂ ಕದಳೀಸ್ತಂಭನಿಕಾಸಮಾದುದು ಕುಮಾರಂಗೊಪ್ಪಿ ತಾರುಣ್ಯದೊಳ್ (ಪರ್ಧಮಾ. ೭-೭೩). [ಸಂ.]

ನಿಕೀರ್ಣ (ಗು). ತುಂಬಿದ ; ದಟ್ಟವಾದ : ಕರಾಳನಕ್ರಚಕ್ರಚರ್ವಿತ ನಿಕೀರ್ಣ[ಪಾಠಾಂ. ಉದ್ಗೀರ್ಣ, ವಿಕೀರ್ಣ, ವಿಶೀರ್ಣ]ನಿರಯಜನಿಕುರುಂಬ ಶಲ್ಯಶಕಲಪರಿಪೂರಿತ ಧವಳಪ್ಲವದುರ್ನಿರೀಕ್ಷಣವಿಷಮಯಂ (ಅದಿಪು. ೫-೮೭ ಪ) ; ಅತೋಕವೃಕ್ಷಮೆಸೆದಪುದು ನಮಜ್ಜನಮನತೋಕಂ ಮಾಟ್ಟಿ ವೊಲನೇಕ ಶಾಖಾನಿಕೀರ್ಣ ಕಿಸಲಯಚಯದಿಂ (ಅಜಿಪು.೮-೧೫). [ಸಂ.]

ನಿಕುಂಚ (ನಾ). [ನಾಟ್ಯ] ಹಸ್ತವಿನ್ಯಾಸದ ಒಂದು ಬಗೆ ; ℙ "ಹೊರಕೈಯನ್ನು ತಗ್ಗಿಸುವುದು ವಿ.ದಾನ, ಅಭಯಪ್ರಧಾನ ಇವುಗಳನ್ನು ತೋರಿಸುವಾಗ" (ಲಾಸ್ಯರಂ. ೨೬೪ ಗದ್ಯಾನುವಾದ) : ಕಳದಿರೆ ನಿಕುಂಚ ಮೇಗಯ್ಕಳವಟ್ಟೊಳಕಯ್ಯ ಕಳಿಯಲಾಕುಂಚಂ (ಲಾಸ್ಯರಂ. ೩-೧೫೧). 'ಅಕುಂಚ' ಪರಾ. [ಸಂ.]

ನಿಕುಂಚಕ (ನಾ). ಒಂದು ಅಳತೆ ; ಸೇರಿನ ಹದಿನಾರನೆಯ ಒಂದು ಭಾಗ ; ಚಟಾಕು ; ಚಿಟ್ಟಿ : "ನಿಕುಂಚಕಃ - ನಿ ಸೊಲಿಗೆಯ ಪೆಸರು" (ನಿಘಂ೨ಂ. ೨೫೯). [ಸಂ.]

ನಿಕುಂಚಹಸ್ತ (ನಾ). = ನಿಕುಂಚ : ಪತಾಕದ ಕರ[ದೊ]ಳ್ ವಿರಚಿಪ ಮುಧ್ಯಮೆಯ ಮೂಲಮಂ ಪೆರ್ದೆರಲ್ ಪತ್ತಿರೆ ಕೇಳ್ ನಿಕುಂಚಹಸ್ತಂ (ಲಾಸ್ಯರಂ. ೨-೬೯). [ನಿಕುಂಚ + ಹಸ್ತ]

ನಿಕುಂಚಿತ (ಗು). ವಿ. ಸಂಕುಚಿತಗೊಂಡ ; ಕುಗ್ಗಿದ : ಸತಿಗೆಸಗುಂ ಚತುರೋಕ್ತಿಪ್ರ ನಿಕುಂಚಿತ ಪತಿತಸಮಭ್ರುಕುಟಿರೇಚಿತಭ್ರೂಲತೆಗಳ್ (ಲೀಲಾವ. ೪-೧೧೪) ; ವಿವಿಧ ಗುಲ್ಮನಿಕುಂಜದಲಿ ಭೂವಿವರವಳಯುಂಗಳಲಿ ಭೂರುಹನಿವಹದಲಿ ನರ್ಜರನಿಕುಂಚಿತಪಲ್ಲಲಂಗಳಲಿ . . . ಅಜಿನಿ ನೋಡಿದರಿವರು ಜಾನಕಿಯು (ತೊರವಾ. ೬-೧೧೧-೬೨). (ನಾ). ವಿ. [ನಾಟ್ಯ] ನರ್ತನದ ಒಂದು ಭಂಗಿ; ನೂರೆಂಟು ಕರಣಗಳಲ್ಲಿ ಒಂದು ; ℙ "ಕಾಲನ್ನು ಚೇಳಿನ ಬಾಲದಂತೆ [ಕೊಂಡಿಯಂತೆ] ಹಿಂದಕ್ಕೆತ್ತಿ ಇನ್ನೊಂದು ಪಾರ್ಶ್ವದ ಕೈಯಿಂದ ಅರಾಲಹಸ್ತವನ್ನು . . . ಮಾಡಿ ತಲೆಯ ಪಕ್ಕದಲ್ಲಿ ಹಿಡಿದು ಇನ್ನೊಂದು ಕೈಯನ್ನು ಅರಾಲಹಸ್ತದಲ್ಲಿ . . . ಮೂಗಿನ ನೇರಕ್ಕೆ ಎದೆಗೆ ಎದುರಾಗಿ ಹಿಡಿಯುವುದು. ವಿ - ಹಾರುವುದು, ಔತ್ಸುಕ್ಯ ಇವುಗಳನ್ನು ತೋರಿಸುವಾಗ" (ಲಾಸ್ಯರಂ. ೨೯೨ ಗದ್ಯಾನುವಾದ) : ತಲಪುಸ್ಪುಟ, ಲೀನ . . . [ವಿ]ಕ್ಷಿಪ್ತಾ ಕ್ಷಿಪ್ತ,[ನಿ]ಕುಂಚಿತ, ಘೂರ್ಣಿತ . . . ಗಂಗಾವತರಣ - ಈ ನೂಱೆಂಟು ಕರಣಂಗಳ್ (ಲಾಸ್ಯರಂ.೪-೪೨ ಪ). [ಸಂ.]

ನಿಕುಂಚಿತಕೇಶ (ನಾ). ವಿ. ಗುಂಗುರು ಕೂದಲು. ವಿ. ಗುಂಗುರು ಗೂದಲನ್ನುಳ್ಳವನು ; ಸುರುಳಿಗೂದಲನ್ನುಳ್ಳವನು : ಕವಿವೇದಿ ಶಾಸ್ತ್ರಕುತಲಂ ಜೂದಾಳಿ ಚೆಲ್ವಂ ನಿಕುಂಚಿತಕೇಶಂ ಪ್ರಿಯವಾದಿ (ಜಾಶಿಪು. ೧೬-೬). [ನಿಕುಂಚಿತ + ಕೇಶ]

ನಿಕುಂಜ (ನಾ). ವಿ. ಪೊದೆ ; ಮೆಳೆ ; ಹೊದರು : ಎಳ್ಕಲವಂದಿಯುಂ ತಿವಿ ಕರಕ್ಷುವದಿರ್ದಪುದೀ ನಿಕುಂಜದೊಳ್ ಪೊಕ್ಕಿಱಿ (ನಳಚಂ. ೬೪) ; ವಿವಿಧ ಗುಲ್ಮನಿಕುಂಜದಲಿ ಭೂವಿವರವಳಯುಂಗಳಲಿ ಭೂರುಹನಿವಹದಲಿ ನರ್ಜರನಿಕುಂಚಿತಪಲ್ಲಲಂಗಳಲಿ . . . ಅಜಿನಿ ನೋಡಿದರಿವರು ಜಾನಕಿಯು (ತೊರವಾ. ೬-೧೧೧-೬೨) ; ನಡೆ ಸಾರ್ ಮುಂದ್ಕೆದು ಬೆಳ್ಕಾರಮನೆ ಬಿಗಿ ನಿಕುಂಜಂಗಳಂ ನೋದಿಸು (ಶಬಚಂ. ೬-೪೯). ವಿ. ಬಳ್ಳಿಮಾಡ ; ಲತಾಗೃಹ : "ನಿಕುಂಜಃ, ಕುಂಜಃ - ತ ಲತಾದಿನಿ ಹಿತೋದರೇ - ಬಳ್ಳಿಗಳು ರೆಂಬೆ ಮುಂತಾದವುಗಳು ಗುಂಪಾಗಿ ಸುತ್ತಿಕೊಂಡು . . . ಮನೆಯ ಹಾಗಿರುವ ಬೇಲಿ, ಲತಾಗೃಹ" (ನಿಘಂ೨ಂ.೨೦೯) ; ನನೆಯ ಕೊನೆಯ ತೆಳರೆಮುಗುಳ ವನಲತಾ ನಿಕುಂಜದಿಂ ಪ್ರಸೂನರಜದ ಪುಂಜದಿಂ (ಪಂಪಭಾ. ೧-೫೫ ಗದ್ಯ) ; ಕನಕಾದ್ರೀಂದ್ರನಿಕುಂಜರಂಜಿತವನಕ್ಕೋ ರೋಮೆ . . . ಪೋಗಿ ಪೊಯ್ದುಗಳೆವಂ ನಿಜ್ಜಂ ನಿಳಂಪೋತ್ತಮಂ (ಸುಕುಪಾ. ೯-೪೦) ; ಮತ್ತ ಮಾ ಮದಗಜಗಮನೆ ವನ್ಯಗಜಬೃಂಹಿತಕ್ಕೆ ಕಲ್ಲೂಸಿ ತನ್ನಂ ಕುಮ್ಮಿಸಿದ ಸಲ್ಲಕೀನಿಕುಂಜಮುಮುಂ . . . ವಿಯೋಗಕೋಕಾಕುಲಚಿತ್ತನವಲೋಕಿಸುತ್ತುಂ (ಪಂರಾಮಾ. ೯-೧೨೦ ಪ) ; ಈನ್ಮಹಾದ್ರಿನಿಕುಂಜವನದ ನಿಕುಂಜದಲಿ ನಿರ್ಭಯವಿಹಾರದಲಿ . . . ಅಲಿಸಿವನಾ ಧ್ವನಿಯ (ಕುವ್ಯಾಅ.೫-೬೯). ತ. ಗುಹೆ ; ಗವಿ : "ಗಹ್ವರಮಾ ನಿಕುಂಜಮೆನೆ" (ಮಂಗರಾ. ೩೦-೨) ; ಮಾಳವಂ ವಿಂಧ್ಯ ನಿಕುಂಜಪ್ರಾಪ್ತನಾದಂ ಜಳಧಿ ನಿಕಟಮಂ ಪೋಳಿಕಂ ಪೇಳಿಗೊಂಡಂ (ಎಳ. V, ಅರಣ್ಯ. ೬೨-೨೯ಕ 1177). [ಸಂ.]

ನಿಕುಂಜವನ (ನಾ). ಬಳ್ಳಿಮಾಡಗಳಿಂದ ಕೂಡಿದ ವನ : ಸೌಂದರ್ಯದ ಒಂದು ನಿಭೃತ ನಿಕುಂಜವನವನ್ನು ರಚಿಸಿಕೊಳ್ಳಬಲ್ಲುದಾದರೆ, ಆಗ ಮಾತ್ರ ಅದರ ಈ ದುಡಿಮೆ, ತನಗೆ ತಕ್ಕ ಗೌರವವನ್ನು ಸಂಪಾದಿಸಿಕೊಳ್ಳಬಲ್ಲದು (ಶಬಂಧ. I, ೨೬). [ನಿಕುಂಜ + ವನ]

ನಿಕುಂಭ (ನಾ). ವಿ. ಒಂದು ಬಗೆಯ ಸಸ್ಯ ; ಜಾಪಾಳ : "ಮುಕೂಲಳಃ, ನಿಕುಂಭಃ, ದಂತಿಕಾ, ಪ್ರತ್ಯಕ್ಪೈಣೇ, ಉದುಂಬರ ಪರ್ಣೀ ೫ ದಂತಿಗಿಡದ ಹೆಸರುಗಳು" (ನಿಘಂ೨ಂ. ೧೪೫). ತಿ. ಒಬ್ಬ ರಕ್ಕಸನ ಹೆಸರು ; ಸುಂದೋಪಸುಂದರೆಂಬ ರಾಕ್ಷಸರ ತಂದೆ : ದೈತ್ಯೆಶ್ವರಂ ಶರಭಿನ್ನಪಾಕಶಾಸನಗಜಕುಂಭನಂ . . . ಅಸಮಾನ ರೌದ್ರರಸಕುಂಭನನೆಯ್ದಿದನಾ ನಿಕುಂಭನಂ (ಜಗವಿ. ೧೫-೫) ; ಬರಹೇಳ್ ನಿಕುಂಭನಂ ಶುಂಭನಂ . . . ಎನುತ್ತುರಿದಿದ್ದನು (ಜಬಭ. ೪೭-೨೧). [ಸಂ.]

ನಿಕುಟ್ಟಿಕೆ (ನಾ). [ನಾಟ್ಯ] ನರ್ತನದ ಒಂದು ಭಂಗಿ ; ನೂರೆಂಟು ಕರಣಗಳಲ್ಲಿ ಒಂದು ; ℙ "ಮೊದಲು ಮಂಡಲಸ್ಥಾನಕದಿಂದಲೂ . . . ಅನಂತರ ಚತುರಸ್ರಸ್ಥಾನಕದಿಂದಲೂ . . . ನಿಂತುಕೊಂಡು ಬಲಗೈಯನ್ನು ಉದ್ವೇಷ್ಟಿತ ಮಾಡಿ ಹೆಗಲಿನೆಲುಬಿನ [ಸ್ಕಂಧಶಿರಸ್ಸಿನ]ಹತ್ತಿರಕ್ಕೆ ತಂದು ಅಲಪದ್ಮ ಹಸ್ತ . . . ಮಾಡಿ ಎದೆಗೆ ತಂದು, ಬಲಗಾಲಿನಿಂದ ನೆಲವನ್ನು ಗಟ್ಟಿಸಿ, ಅವಿದ್ಧ ಮುಖಹಸ್ತವನ್ನು . . . ಮಾಡಿ ಚತುರಸ್ರದಂತೆ . . . ಹಿಡಿಯುವುದು. ಹೀಗೆಯೇ ಎಡಗಡೆಯೂ ಮಾಡುವುದು. ವಿ—ಆತ್ಮ ಸಂಭಾವನಾಪ್ರಧಾನವಾದ ವಾಕ್ಯಾರ್ಥವನ್ನು ಅಭಿನಯಿಸುವಾಗ" (ಲಾಸ್ಯರಂ. ೨೯೦ ಗದ್ಯಾನುವಾದ) ; ನಿಕುಟ್ಟಿಕ, [ಅರ್ಧ ನಿಕುಟ್ಟಿಕ],ಕಟೀಛಿನ್ನ. . . ಗಂಗಾವತರಣ—ಈ ನೂಱೆಂಟು ಕರಣಂಗಳ್ (ಲಾಸ್ಯರಂ. ೪-೪೨ ಪ) ; ಒದವಿದ ಕುಂಚಿತಪದಮುಂ ಪುದಿದುಂ ನಿಲೆ ಧಾತ್ರಿಯೊಳ್ ನಿಕುಟ್ಟಿಕಮನಿಕುಂ (ಲಾಸ್ಯರಂ. ೬-೪೭). [ಸಂ.]

ನಿಕುಟ್ಟಿಕಕರಣ (ನಾ). = ನಿಕುಟ್ಟಿಕ : ನಿಕುಟ್ಟಿಕಕರಣಮನೊಂದೇ ಭಾಗದಿಂದ ಮಾಡಿ ತೋಱೆ ಅರ್ಧನಿಕುಟ್ಟಿಕಕರಣಮಕ್ಕುಂ (ಲಾಸ್ಯರಂ. ೪-೬೦ ಪ). [ನಿಕುಟ್ಟಿಕ + ಕರಣ]

ನಿಕುಟ್ಟಿನ (ನಾ). (ಪುಡಿಯಾಗುವಂತೆ) ತುಳಿಯುವಿಕೆ ; ತುಳಿತ: ವನರುಹಲೋಚನ ಚಂಡಾಂಭ್ರನಿಕುಟ್ಟನಘುಗ್ನಮಸ್ತಕಗ್ರೀವನಹೀಂದ್ರ ನಮ್ಮುರುಧಿರಮಂ ನೆಟ್ಟನೆ ಕಾಜಾ ದಿಗುತ್ತುಂ ಮೂರ್ಛೆಪೋಪಂ (ವಿಷ್ಣು ಭಿ. ೫-೨-೧೧೬). [ಸಂ.]

ನಿಕುರುಂಬ (ನಾ). ಗುಂಪು ; ಸಮೂಹ : "ನಿಕುರುಂಬಂ ನಿವಹಂ . . . ಸಮೂಹಂ ವ್ರಾತಮೇಕಾರ್ಥಳಂ" (ಪಸ್ಪು.ಕೋ. ೧೦೬-೩೬) ; "ನಿಕರಂ . . . ನಿಕುರುಂಬಮುತ್ಕರಂ . . . ರಾಶಿ ಚಯಂ ಕುಳಮೆನಲ್ ಮತ್ತೆ ಸ್ತೋಮಕ್ಕೆ ನಾಮಮಕ್ಕುಂ" (ಪುಂಗರಾ. ೧೨೬-೧) ; ಆನವರತ ನಿಹತ ನರಕರಿತುರಗನಿಕುರುಂಬ ಕೀಲಾಲ ಕಲ್ಲೋಲ ಪ್ರವರ್ತನಾನೇಕ ನದನದೀಪ್ರವಾಹಬಾಹುಳ್ಯದುಸ್ತರಾವತರಣಮಾರ್ಗಮುಂ (ಪಂಪಭಾ. ೧೩-೫೧ಪ); ನಗೆಗೆಡೆಯಾದನುತ್ಪಲಿನಿಗೆಂದು ತಲೆವಾಗಿತಬ್ಜ ನೀನಿಕುರುಂಬಂ (ನಳಚಂ. ೧೪೨) ; ಕುಮಾರರನು ಪಾಂಚಾಲರನು ಸೋಡುವೆದೆನುತ ಭೂಪಾಲ ನಡತರಲಿದಿರುವಂದುದು ಯುವತಿನಿಕುರುಂಬ (ಕುಸ್ಕಾಗ. ೧೦-೧೪). [ಸಂ.]

ನಿಕುರುಂಬಕ (ನಾ). = ನಿಕುರುಂಬ : ರಮ್ಯಹರ್ಮ್ಯನಿಕುರುಂಬಕದಿಂ . . . ಸೊಗಯಿಕುಂ . . . ಅಲ್ಲಿಯ ಸೂಳೆಗೇರಿಗಳ್ (ಜಗವಿ. ೯-೯೯) ; ತಮ್ಮ ಕೇಕರನಿಕರಂ ಗವಾಕ್ಷನಿಕುರುಂಬಕದಿಂ ಪೊಱಪೊಱ್ಮೆ ನೋಡಿದರ್ (ಜಗವಿ. ೧೬-೮೭). [ಸಂ.]

ನಿಕುರುಂಬೆ (ನಾ). ಪರಿವಾರದಿಂದ ಕೂಡಿದವಳು ; ಪರಿವಾರ ಸಹಿತೆ (?) : ಸಕಲ ವಿದ್ಯಾರಂಭೆ ಕನಕಪುತ್ಥಳಿಬೊಂಬೆ ವಿಕಸಿತ ಸುಲಲಿತಾಂಬೆ ಸುನಿತಂಬೆ ನಿಕುರುಂಬೆ ಸುರರಂಭೆ ದಂತ ದಾಳಿಂಬೆ (ವಿದಾಕೃ. ೩೪-೧). [ನಿಕುರುಂಬ + -ಎ$_2$]

ನಿಕೃತ (ಗು). ೧. ತಿರಸ್ಕೃತವಾದ ; ಅಪಮಾನ ಹೊಂದಿದ. ೨. ವಂಚಿತವಾದ ; ಮೋಸಗೊಂಡ. ೩. ತೆಗೆದುಹಾಕಿದ ; ಕಳೆದ. ೪. ಘಾಸಿ ಹೊಂದಿದ ; ಕೇಡಿಗೊಳಗಾದ. ೫. ತುಚ್ಛವಾದ ; ನೀಚವಾದ. (ನಾ). ೬. ಅಪಮಾನ ; ತೇಜೋಭಂಗ. ೭. ದೀನ ; ದೈನ್ಯಸ್ಥಿತಿಯಲ್ಲಿರುವವನು : "ನಿ[ಪಾಠಾಂ. ವಿ]ಕೃತಃ, ವಿಪ್ರಲಬ್ಧಃ —ಈ ೨ ದೈನ್ಯಂಬಟ್ಟವಂ" (ಹಲಾಯು. ೬೩-೨೨೮). [ಸಂ.]

ನಿಕೃತಿ (ನಾ). ೧. ತುಚ್ಛತನ ; ನೀಚತನ. ೨. ಮೋಸ ; ವಂಚನೆ. ೩. ಅಪಮಾನ : ನೃಪಕುಲ ನಿಕೃತಿಗಿದು ಮೊದಲಾಯ್ತಲಾ (ನಿಭಾಗ. ೧೦-೮೧-೬). ೪. ತೆಗೆದುಹಾಕುವಿಕೆ. ೫. ಬಡತನ ; ದಾರಿದ್ರ್ಯ. ೬. ಭೂಮಿ. ೭. ಅಷ್ಟವಸುಗಳಲ್ಲಿ ಒಬ್ಬ. ೮. ಮಾಯೆ : "ಈರ್ಷ್ಯಾ . . . ನಿಕೃತಿಃ, ಮಾಯಾ, ಶಾಂಬರೀ, ಶಠಕಲ್ಪನಾ—ಈ ೧೦ ಮಾಯೆ" (ಹಲಾಯು. ೧೨೨-೫೬). ೯. [ಜೈನ]ನಿಕೃತಿ, ಉಪಾಧಿ, ಸಾತಿಪ್ರಯೋಗ, ಪ್ರಣಿಧಿ, ಪ್ರತಿಕುಂಚನಗಳೆಂಬ ಐದು ಬಗೆಯ ಮಾಯೆಗಳಲ್ಲಿ ಒಂದು ; ಹಣದ ವಿಷಯದಲ್ಲಿ, ಒಂದು ಕಾರ್ಯದಲ್ಲಿ ಆಸೆಯಿರುವವನನ್ನು ಮೋಸಗೊಳಿಸುವುದು. 'ನಿಕೃತಿ ವಿಚ್ಛೇದಿನಿ' ಪರಾ. [ಸಂ.]

ನಿಕೃತಿವಿಚ್ಛೇದಿನಿ (ನಾ). [ಜೈನ]ಒಂದು ಬಗೆಯ ವಿದ್ಯೆ ; ಮಾಯೆಯನ್ನು ನಿವಾರಿಸುವುದು,—ಕತ್ತರಿಸುವುದು : ಅವಳೋಕಿನಿಗೀ ರೋಹಿಣಿ ಗರುಡವಾಹಿನಿ ವಿದ್ಯೆ ನಿಕೃತಿವಿಚ್ಛೇದಿನಿಯೆಂ (?) ದಿವು ಮೊದಲಾಗಿರೆ . . . : ಕೇಶವಂಗಂದಿತ್ತಂ (ವರ್ಧಮಾ. ೪-೩೦). [ಸಂ. ನಿಕೃತಿವಿಚ್ಛೇದಿನೀ]

ನಿಕೃತ್ತ (ಗು). ಕತ್ತರಿಸಿದ ; ತುಂಡುಮಾಡಿದ : ಜಯಜಯ ನಿಕೃತ್ತಸುರಪಕ್ಷದಕ್ಷಮಹೋಗ್ರ ಜಯಜಯ ನೃಸಿಂಹಸಂಹರಣಪಟು ಶರಭಾಂಗ (ರಾಜಶೇ. ೧೪-೧೬೯ ರಗಳೆ). [ಸಂ.]

ನಿಕೃಷ್ಟ (ಗು). ೧. ತುಚ್ಛವಾದ ; ನೀಚವಾದ ; ಕೀಳಾದ : ಪಾಪದಿಂದಿನಿತು ನಿಕೃಷ್ಟ ದುರ್ಗತಿಗಳೊಳ್ ಬಲವಂದುದನೀಗಳಾಗಿಯುಂ ನೆನೆದು (ಸುಕುಮಾ. ೫-೨೯). ೨. ಬಹಿಷ್ಕರಿಸಿದ ; ಬಹಿಷ್ಕೃತವಾದ. ೩. ಅಸಂಸ್ಕೃತವಾದ ; ಅಸಭ್ಯವಾದ. ೪. ಹತ್ತಿರದ ; ಸಮೀಪದ. (ನಾ). ೫. ತುಚ್ಛವಾದುದು ; ಕೀಳಾದುದು : "ಅರ್ವಾಣಂ, ಅಣಕಂ . . . ನಿಕೃಷ್ಟಂ, ಅವಕೃಷ್ಟಂ . . . ರೇಫಸಂ —ಈ ೧೩ ಹೊಲ್ಲಹ ವಸ್ತು" (ಹಲಾಯು. ೫೬-೧೮೨) ; ಉತ್ತಮ ಮಧ್ಯಮ ಕನಿಷ್ಠ ನಿಕೃಷ್ಟವೆಂಬ ಜಾತಿವಿಕಾರಂಗಳ ಮೇರೆದಪ್ಪಿದ ದಾಸಿವೇಶಿ . . . ಕನ್ನಿಕೆಯರಲ್ಲಿ ಕಂಗೆಟ್ಟು ವರ್ತಿಸುವ ಪಾಪದೃಷ್ಟಿಯ ಕ್ರೂರಾತ್ಮಂಗೆ (ಉರಿಶೆ. ೧೦೧-೮೯). ೬. ಹತ್ತಿರ ; ಸಮೀಪ. ೭. ಕೆಟ್ಟವನು ; ನೀಚ ; ತುಚ್ಛ : "ನಿಕೃಷ್ಟನೆನೆ ಕಷ್ಟವೆಂದೆಂಬವಗೆ ನಾಮಮಕ್ಕುಂ" (ಮಂಗರಾ. ೬೭-೪) ; ಕುಲಜಂ ಕುಲಹೀನನೆಂದು ಬಗೆಯದೆ ನೆಲಸುವೆ ನಿನ್ನಿಂ ನಿಕೃಷ್ಟರೆಂಬರುಮೊಳರೇ (ಗದಾಯು. ೯-೬) ; ದುಃಖದೊಳ್ ಪಿರಿದುಮವರಿಂ ಕಣ್ಗೆಟ್ಟಂ ಭಟ್ಟಂ ನಿಕೃಷ್ಟರ ದೂಸಱಿಂ (ಸುಕುಮಾ. ೨-೯) ; ಮಾನವನನನುಸರಿಸಿ ಯಾಚನೆಯ ನೀ ಗೈಯೆ ಕಾಣುವನು ನಿಕೃಷ್ಟನೆಂದು ನಿನ್ನ (ಕುಮಾಕೃ. ೩೮-೬). [ಸಂ.]

ನಿಕೃಷ್ಟಚೇಷ್ಟೆ (ನಾ). ತುಚ್ಛವಾದ ನಡತೆ ; ನೀಚತನ : ನಗೆಗೆಡೆಯಾಗೆ ದೈವವೆನಗೇನನೊಡರ್ಚಿಸಿತೀಗಳಕ್ಕ ರಾಗಿಗಳ ನಿಕೃಷ್ಟಚೇಷ್ಟೆ ಗನುಗೆಯ್ದುವೆಂ (ಕಾದಂಪೂ. ೮೧೯). [ನಿಕೃಷ್ಟ + ಚೇಷ್ಟೆ]

ನಿಕೃಷ್ಟಜೀವಿ (ನಾ). ಹೀನ ವ್ಯಕ್ತಿ ; ನೀಚ ವ್ಯಕ್ತಿ : ಮನೆಯ ಎಲ್ಲರ ದೃಷ್ಟಿಯಲ್ಲೂ ವಿನುತೆ ಮರ್ಯಾದೆ ಇಲ್ಲದ . . . ನಿಕೃಷ್ಟಜೀವಿ (ದೂರಸ. ೨೨೦). [ನಿಕೃಷ್ಟ + ಜೀವಿ$_2$]

ನಿಕೃಷ್ಟತೆ (ನಾ). ಕೆಳಮಟ್ಟ ; ಕೀಳುತನ : ದಡ್ಡರೆಂದು ಅವರನ್ನು ಪ್ರತ್ಯೇಕಿಸಿದರೆ ನಿಕೃಷ್ಟತೆಯ ಮನೋಭಾವ ಹುಟ್ಟಿಕೊಳ್ಳುತ್ತದೆ (ಶಿಕ್ಷದ. ೯೪). [ಸಂ. ನಿಕೃಷ್ಟತಾ]

ನಿಕೃಷ್ಟಾಚಾರ (ನಾ). ೧. ಕೆಟ್ಟ ನಡತೆ ; ಹೀನವಾದ ಆಚಾರ. ೨. ಕೆಟ್ಟ ನಡತೆಯುಳ್ಳವನು ; ಹೀನವಾದ ಆಚಾರವನ್ನುಳ್ಳವನು : ಜಾರರಿಗೆ ಜಡರಿಗೆ ನಿಕೃಷ್ಟಾಚಾರರಿಗೆ ಪಿಸುಣರಿಗೆ ಧರ್ಮವಿದೂರರಿಗೆ ಕಲಿಪಾರ್ಥ ಕೇಳ್ ಪರಲೋಕವಿಲ್ಲೆಂದ (ಕುಮಾಕೃ. ೪-೨೪). [ನಿಕೃಷ್ಟ + ಆಚಾರ]

ನಿಕೇತ (ನಾ). ಗೃಹ ; ನಿಕೇತನ : 'ಜಿನನಿಕೇತ' ಪರಾ. [ಸಂ.]

ನಿಕೇತನ (ನಾ). ೧. ಮನೆ ; ವಾಸಸ್ಥಳ ; ಗೃಹ : "ಭವನಂ ಸದನಂ . . . ಗೇಹವಾಲಯಂ ಕುಟಿ ನಿಕೇತನಂ ; ಗೃಹಮುಟಜಂ" (ವಸ್ತುಕೋ. ೪೬-೮) ; "ಸದ್ಮಮೋಕಸಮಾಲಯಂ ಗೃಹಂ ಭವನಂ ನಿಕೇತನಂ . . . ಗೇಹಮೆನೆ ಧಿಷ್ಣ್ಯಮೆನಲಿವು ಮನೆಗೆ ಪೆಸರಕ್ಕು" (ಮಂಗರಾ. ೫೮-೭) ; ಪುರಜನಮಂತಃಪುರಜನಮುಂ ಪರಿಜನಮುಮಳ್ಕೆ ತದ್ರಾಜನಿಕೇತನದಲ್ಲಿ ಬಿರ್ದು ಪಡೆದುದು ಮನಕ್ಕೆ ಕಡುಮುಳಿಸಿನೆ ಸಕಮಂ ಮಾಗಧನಾ (ಅದಿಪು. ೧೨-೯೨) ; ಸೌಧರ್ಮಕಲ್ಪದ ಶ್ರೀಪ್ರಭವಿಮಾನದುಪಪಾತನಿಕೇತನದೊಳ್ (ಚಂದ್ರಪು. ೪-೬೦ ಪ) ; ಅವಳೆರಡು ಕೈಗಳ ಮುಗಿದು ಹೊಱವಂಟಳು ನಿಕೇತನವ (ತೊರರಾ. ೨-೧-೩೦) ; ಸ್ಫಟಿಕ ನಿರ್ಮಲ ಸರೋವರ ಸುಭಗತೀರದಲಿ ಶೋಭಿಸಿದುದಾ ಮುನಿ ನಿಕೇತನಂ (ಶ್ರೀರಾಮಾ. ೩೪-೧೮೪). ೨. ನೆಲೆ ; ಆಶ್ರಯಸ್ಥಾನ : ನೋಟ್ಪೊಡೆ ನಾಲ್ವತ್ತೆಣ್ಣಾನುದಗಲಮುಂಬ ಪವಣ್ಗೆ ನಿಕೇತನಮದಾಯ್ತು ಸಾಕೇತಪುರಂ (ಅಜಿಪು. ೨-೨೨) ; ಎಸೆದಂ ಫಣಜಿತ್ಕೇತನನುತ್ಪಲಕಾಂತಿ ನಿಕೇತನಂ (ಜಗವಿ. ೧೨-೨). ೩. ದೇವಾಲಯ ; ದೇವಸ್ಥಾನ. ೪. ಈರುಳ್ಳಿ. [ಸಂ.]

ನಿಕೋಚ (ನಾ). ಸಂಕುಚಿತಗೊಳ್ಳುವುದು ; ಮುಚ್ಚಿಕೊಳ್ಳುವಿಕೆ : ಹಯಕಂಠನುರಃಕಮಳಾಲಯದಿಂ ಸಿರಿ ಸಂಜೆವೊಟ್ಟು ಬರೆ . . . ತದ್ಭೀತಿಯಿಂದೆ ಮುಚ್ಚುವವೊಲಾಯ್ತು ನಳಿನನಿಕೋಚಂ (ವರ್ಧಪು. ೮-೨೪). [ಸಂ.]

ನಿಕೋಚಕ (ನಾ). ಒಂದು ಬಗೆಯ ವೃಕ್ಷ ; ಅಂಕೋಲೆ : "ಅಂಕೋಲಃ, ನಿಕೋಚಕಃ— ೨. ಅಂಕೋಲೆಗಿಡ' (ಸಿದ್ಧಾಂತಿ.೧೧೮). [ಸಂ.]

ನಿಕ್ಕ (ನಾ). ಒಂದು ತೂಕ ; ನಿಷ್ಕ : "ಸಿಕ್ಕಿಸಲ್ಪೇಳೆಯೆರಡುಮನೊಂದು ಪಾಗಮವು ನಾಲ್ಕಾಗೆ ಪಣಮೆನಿಕ್ಕವು ದಶಂ ತೂಕಕ್ಕೆ ನಿಕ್ಕ [ಪಾಠಾಂ. ನಿಲ್ಕ]ವೀರೆಂಟಾಗೆ ಪಲಮಕ್ಕು" (ಮಂಗರಾ. ೧೦೪-೧೧). [<ಪ್ರಾ. ಣಿಕ್ಖ./ಸಂ. ನಿಷ್ಕ]

ನಿಕ್ಕಣಿ (ನಾ). (ಉಕ) ಕಾಳನ್ನು ತೆಗೆದ ಮೇಲೆ ಉಳಿಯುವ ಭಾಗ,—ಹೊಟ್ಟು : ಇದು ನಿಕ್ಕಣಿರಾಶಿ (ರೂಢಿ). [?]

ನಿಕ್ಕರು (ನಾ). ಚಡ್ಡಿ ; ಚಲ್ಲಣ : ಪೋಲೀಸಿನವರಂತೆ ಕಾಖಿಬಣ್ಣದ ನಿಕ್ಕರನ್ನು ಹಾಕಿ, ಜಾತ್ರೆಯಲ್ಲಿ ತಂದ ಬಟ್ಟೆಯ ಬೆಲ್ಟನ್ನು ಪರಟನ ಮೇಲೆ ಬಿಗಿದು (ಧರ್ಮಶ್ರೀ. ೪). [←ಇಂ. Knicker]

ನಿಕ್ಕರುಣ (ನಾ). ಕರುಣೆಯಿಲ್ಲದಿರುವುದು ; ನಿರ್ದಯೆ ; ನಿಷ್ಕರುಣೆ : ತಳ್ತ ಕಲ್ಪಭೂಮಿರುಹನಿಕುಂಜಮಂಜರಿಗಳೊಳ್ ತೊಡಕಿರ್ಪೆನೊ ತೊಟ್ಟನೆಯ್ದಿ ನಿಕ್ಕರುಣ [ಸಾಕಾಂ. ನಿಃಕರುಣ]ದೆ ಕಾಯ್ದುನುಂಗಿದಪ ನಂತಕಂ (ಪರ್ಧಪು. ೧೦-೫೭). [<ಪ್ರಾ. ನಿಕ್ಕರುಣ./ಸಂ. ನಿಷ್ಕರುಣ]

ನಿಕ್ಕರುಣೆ (ನಾ). ಕರುಣೆಯಿಲ್ಲದ ವ್ಯಕ್ತಿ ; ನಿರ್ದಯಿ ; ನಿಷ್ಕರುಣೆ : ರೊಕ್ಕ ಬಡ್ಡಿಗೆ ಕೊಟ್ಟು ವ್ಯವಹಾರ ಮಾಡುವ ನಿಕ್ಕರುಣಿಯಾಗಿ ತಿರುಗುವಳು ಹೊಲತಿ (ವಿಸಾಸು. ೫೯-೨). [<ಸಂ. ನಿಷ್ಕರುಣಿನ್]

ನಿಕ್ಕಳ (ನಾ). ಸಂಪೂರ್ಣವಾದುದು ; ಅಖಂಡವಾದುದು : ತಲೆಯಲಲೆದರು ಬುಡದೊಳಿದೆ ನೆಲೆಗೊಂಡ ನಿಲವಿನ ನಿಕ್ಕಳ ಮರದ ನೆಲೆ ನೋಡುವದು ನಡುಗಿಸಿ ಸ್ಥಿರದ—ಚಂಚಲದಿಕ್ಕಳ (ಹೃದಸ. ೫೯-೧೧) ; ಅನಂತರದಲ್ಲಿ, ಅವನು ಪ್ರಕಟಿಸಿದ 'ಅಮೃತಾನುಭವ'ಕ್ಕೆ ತನ್ನ ನಿಕ್ಕಳ ಅನುಭವವನ್ನೇ ನೆಲೆ ಮಾಡಿಕೊಂಡಿದ್ದಾನೆ (ಮಸಾಹಿ.೧೫).

ನಿಕ್ಕಳಾಗು = ದೃಢವಾಗು ; ನಿಶ್ಚಿತವಾಗು ; ಖಾತರಿಯಾಗು : ಸತ್ಯ—ಸಂಶೋಧನೆಯಲ್ಲಿ ಅರೆದು—ಒರೆದು ಕೊನೆಗೆ ನಿಕ್ಕಳಾಗಿ ನಿಂತು ದನ್ನು ಒಪ್ಪಿಕೊಳ್ಳಲೆಬೇಕಲ್ಲವೇ ?' (ಕರ್ಣಾಪೂ. ೧೯).

[←ಮರಾ. ನಿಕ್ಕಳ, ನಿಖಳ, ನಿಖ್ಖಳ./ಸಂ. ನಿಖಿಲ]

ನಿಕ್ಕಳಿಕೆ (ನಾ). (ಉಕ) ದಣಿವು ; ಆಯಾಸ : 'ನಿಕ್ಕಳಿಕೆ ಬೀಳು' ಪರಾ. [?]

ನಿಕ್ಕಳಿಕೆಬೀಳು (ಕ್ರಿ). (ಉಕ) ದಣಿ ; ನಿತ್ರಾಣವಾಗು ; ಸುಸ್ತಾಗು : ಪ್ರತಿಭಾನ ಪಾಲಿಗೆ ಆ ಸುಖವಿಲ್ಲ. ಅತ್ತು ಅತ್ತು ಆಕೆ ನಿಕ್ಕಳಿಕೆ ಬಿದ್ದಳು (ಮಾಲತಿ. ೧೩). [ನಿಕ್ಕಳಿಕೆ + ಬೀಳು$_1$ (<ಬೀಟ್$_1$)]

ನಿಕ್ಕಾರಣ (ಗು). ಕಾರಣವಿಲ್ಲದ ; ನಿಷ್ಕಾರಣ : "ನಿಕ್ಕಾರಣ—ನಿಷ್ಕಾರಣ" (ತದ್ಭಕೋ. ೨೨). [<ಸಂ. ನಿಷ್ಕಾರಣ]

ನಿಕ್ಕಿ$_1$, ನಿಕ್ಕೆ$_1$ (ನಾ). ನಿಶ್ಚಯ ; ಖಚಿತ : ಕಡೇ ಮನೆ ಗೋವಿಂದ ನಿಗೆ ಕೊಡಕ್ಕು ಅಂತ ನಿಕ್ಕಿ ಆತು (ತುಂಬಿಕೊ. ೭೬). **ನಿಕ್ಕೆ$_1$** : ನಿಕ್ಕೆ ಭಾವವನ್ನು ಬರಿಯಲಿಕ್ಕೆ ಅಡಚಣೆ ಬರುವದು (ಮುಂಬವ್ಯಾ. ೭೩). 'ನಿಕ್ಕುವ' ಪರಾ.

[←ಮರಾ. ನಿಕಾ, ನಿಕೇ, ನಕೀ ; ನಕ್ಕೀ ; ಹಿಂ. ನಕ್ಕೀ]

ನಿಕ್ಕಿ$_2$, ನಿಕ್ಕೆ$_2$ (ಅ) ನಿಶ್ಚಯವಾಗಿ ; ಖಚಿತವಾಗಿ : ನಿಕ್ಕಿ ಆರಿಸಿ ಬರೂ ಗಿರಾಕಿರಿ ಅವು (ಅಪನಾ. ೧೭೬). **ನಿಕ್ಕೆ$_2$** : ೨. ಪೂರ್ಣವಾಗಿ : ಅವು ತಿರಿಗಿ ಬಂದು ತೂಕ ಆಗದ ಹೊರ್ತು ಲೆಖ್ಖವು ನಿಕ್ಕೆ ತಯಾರ ಆಗುವುದಿಲ್ಲ (ಮುಂಬವ್ಯಾ. ೭೮). [<ನಿಕ್ಕಿ$_1$]

ನಿಕ್ಕುವ (ನಾ). ೧. ನಿಶ್ಚಯ ; ದಿಟ ; ಸತ್ಯ : "ನನ್ನಿ, ನಿಕ್ಕುವಂ . . . ದಿಟಂ—ಈ ೬ ಸತ್ಯಂ" (ಕಶಸಾ. ೧೩-೨೫೪) ; "ನಿಸದಂ ನಿಕ್ಕುವ ಮೆಂದುಂ ಪೆಸರಿಸುತುಂ ನನ್ನಿ ಸಾಜನೆನಸುಂ ದಿಟಮೆಂದುಸಿರಲ್ಕೆ ಸತ್ಯ ಮಕ್ಕುಂ" (ಕವಿಕಂ. ೧೨೧) ; ಬಂಧುರಗುಣಬಂಧುಸಂತತಿಗೆ ನಿಕ್ಕುವ ಮೆಂಬುದಧುಷ್ಟಕಾರ[ಕಂ] (ಕವಿರಾ. ೧-೧೧೬) ; ಸಲೆ ಮೆಲ್ಪು ಬಲ್ಪನಟಿಗುಂ ಕೈಪಾರಮಂ ಕೂಡೆ ಕೂರಿಸುಗುಂ ನಿಕ್ಕುವಮಪ್ಪ ಕಾರಣದಿಂ (ಪಂಪಭಾ. ೯-೧೯) ; ತಂಗಿ ನೀನೆನಗೆ ಕೂರ್ಪುದು ನಿಕ್ಕುವ ಮಪ್ಪೊಡೆ . . . ಮದೀಯ ಶೋಕದಿಂ ಜೀವಮನಬ್ಬೆ ಪತ್ತುವಿಡದಂತಿರೆ ಮಾಡುವುದಾವುಪಾಯದಿಂ (ಕಾದಂಉ. ೫೯೧) ; ಮೊಕ್ಕಳಮೆ ತಿಳಿಯಿಸುವ ತತ್ವದ ನಿಕ್ಕುವಮನಾ ಮುನಿಪರೆಂಬ ರವಕ್ಕೆ ಕಿವಿಗೊಡುತೆಯಿದೆ ಮೆಚ್ಚುತಲ್ಕೆದಿದನು ಭೂಪ (ಸಾಳ್ವಭಾ. ೪-೩೩).

ನಿಕ್ಕುವಂ ಮಾಡು = ಸತ್ಯವನ್ನಾಗಿ ಮಾಡು ; ನಿಶ್ಚಯಗೊಳಿಸು : ಸೆಟ್ಟಿಯ ಬಳ್ಳಂ ಕಿಱುದೆಂಬುದೊಂದು ನುಡಿಯಂ ನೀಂ ನಿಕ್ಕುವಂ ಮಾಡಿದ್ಯೆ (ಪಂಪಭಾ. ೧೨-೧೭೫).

[?./ತೆಲು. ನಿಕ್ಕುವ, ನಿಕ್ಕ./ಮರಾ. ನಕೀ, ನಕ್ಕೀ]

ನಿಕ್ಕುವಂ (ಅ). ಸತ್ಯವಾಗಿಯೂ ; ದಿಟವಾಗಿಯೂ : ಬಾಟೆಂಬುದು ನಿಕ್ಕುವಂ ಗುಣಗ್ರಾಮಣಿಗಳ್ ಪಾಟ್ಯಾಗೆ ತೆಗಟೆ ಬಾಟ್ಯಾ ಬಾಟೇನಾ ಚಂದ್ರತಾರವೋ ಮಾನಸರಾ (ಕವಿರಾ. ೩-೧೭೭) ; ಪೆಂಡಿರೆಂಬರೊಳ್ ಕೂಡುವನಲ್ಲೆನಿಂದು ಮೊದಲಾಗಿರೆ ನಿಕ್ಕುವವೆಂದು ರಾಗದಿಂ ಕೂಡಿದನುಯ್ದುಂ ಸತ್ಯವತಿಯಂ ಸತಿಯಂ ಪತಿಯೊಳ್ ನದೀಸುತಂ (ಪಂಪಭಾ. ೧-೭೩) ; ನೆಗಟ್ಟೀ ಮನೋಹರವಧೂಸಂದೋಹಮಿಾ ರಾಜಕಪ್ರಸರಂ ನಿಕ್ಕುವಮೆನ್ನದೆಂದು ವಿಹಗೇಂದ್ರಂಗಾಂದೆ ತೋಱುತ್ತು (ಪಂಚತಂ. ೧೨೬-೮) ; ಇಲ್ಲಿರ್ಪಾಕೆಯೆ ನಿಕ್ಕುವಮನಂತ ಮತಿಯಕ್ಕುಂ (ಧರ್ಮಾಮ್ಯ. ೩-೨೫೭) ; ನಿಕ್ಕುವಮೊರ್ವಂ ಜನನುತನು ದಯಿಪಂ (ಜಯಕಾ. ೨-೪೫) ; ಮರುಗದಿರು, ನಿಕ್ಕುವಂ ಮುನ್ನೆ ನಿನ್ನ ಪಗೆಯಳಿವೋದಂ (ಗಿಳಿವಿಂ. ೨೮-೪೫). [<ನಿಕ್ಕುವ]

ನಿಕ್ಕುಳಿಸು (ಕ್ರಿ). ಒಯ್ಯಾರದಿಂದ ಒಲೆದಾಡು ; ಬೆಡಗಿನಿಂದ ಬಾಗು : "ನಿಕ್ಕುಳಿಸು—ವಿಲಾಸಾವಿನಮ್ರೇ (ವಿನೋದದಿಂದ ಬಗ್ಗು)" (ಶಮಧಾ) ; ನಾಡೆ ನಿಕ್ಕುಳಿಸಿದ ಕೈಯ ಮೆಯ್ಯ ನಱುಗಂಪಿನ ಸೊಂಪಿನ ಚೆಲ್ಲಗಾರ್ತಿ (ರಾಮಾಶ್ವ. ೧೨೦-೧೯) ; (ಅತನಿಗೆ ಮೇಲಂದನ್ನೋಸರಿಸಿ ನಿಕ್ಕುಳಿಸಿ . . ಆಹ್ವಾನದಾಲಿಂಗನದ ನಳಿತೋಳ್ಗಳನ್ನು ಮುನ್ನೀಡಿ, ಪ್ರತೀಕ್ಷಿಸುತ್ತಿರುವಳು) (ಬೆಟ್ಟಅ. ೮೭-೬) ; ಒಂದು ಮಟ್ಟನ ಹಿಂದೆ ಮರೆಯಾಗಿ ನಿಂತು, ಕಾಲ ತುದಿಯ ಹೆಬ್ಬೆಟ್ಟನ ಮೇಲೆ ನಿಮಿರಿ ನಿಕ್ಕುಳಿಸಿ ನೋಡಿದನು (ಮಲೆಮ. ೪೪೬). [? + –ಇಸು$_3$]

ನಿಕ್ಕೆ$_1$ 'ನಿಕ್ಕಿ$_1$' ನೋ.

ನಿಕ್ಕೆ$_2$ 'ನಿಕ್ಕಿ$_2$' ನೋ.

ನಿಕ್ತ (ಗು). ೧. ತೊಳೆದ ; ಶುದ್ಧಿಪಡಿಸಿದ. ೨. ಕಾಪಾಡಿದ. (ನಾ). ೩. ಶುಚಿಗೊಳಿಸುವಿಕೆ ; ಶುದ್ಧ ಮಾಡುವಿಕೆ. [ಸಂ.]

ನಿಕ್ವಣ (ನಾ). ೧. ಶಬ್ದ ; ಧ್ವನಿ. ೨. ಆಭರಣಗಳ ಧ್ವನಿ,—ಸಪ್ಪುಳು : "ನಿಕ್ವಾಣಃ, ಕ್ವಾಣಃ, ಕ್ವಣಃ, ಕ್ವಣನಂ—ಇ ವೀಣಾದಿ ಸಕಲವಾದ್ಯ ಧ್ವನಿಗಳಿಗೆ ಹೆಸರುಗಳು" (ಸಿದ್ಧಾಂತಿ.೫೬) ; ನವ್ಯಪುಷ್ಪಮಂ ಮುಡಿಸೆನಗೆಂಬವೋಲ್ಕಲಿತಕಂಕಣನಿಕ್ವಣಮುಣ್ಮೆ (ರಾಜಶೇ. ೧೦-೪೭) ; ಒಂದು ಕಡೆಯಿಂದ ಸ್ವರ್ಣಭೂಷಣಗಳ ಗುಂಜನ, ಮತ್ತೊಂದು ಕಡೆಯಿಂದ ನೂಪುರಗಳ ನಿಕ್ವಣ (ಇಪ್ಪಕ. ೧೪೭). [ಸಂ.]

ನಿಕ್ವಣಧ್ವನಿ (ನಾ). = ನಿಕ್ವಣ ೨ : ನೃತ್ಯಲೀನಪ್ರಕೃತಿಯ ನೂಪುರ ನಿಕ್ವಣಧ್ವನಿಯ ಹಾಗೆ . . . ತರಂಗಿತವಾಗತೊಡಗಿತು (ಇಪ್ಪಕ. ೬೧).

[ನಿಕ್ವಣ + ಧ್ವನಿ]

ನಿಕ್ವಣಿತ (ನಾ). = ನಿಕ್ವಣ ೨ : ಮೃದುಪದನ್ಯಾಸ ಕಿಂಚಿಚ್ಚಲತ್ಕಂಕಣ ಕಾಂಚೀಕಿಂಕಿಣೀ ನಿಕ್ವಣಿತಯುತೆ ವರಾಭ್ಯರ್ಣಮಂ ಸಾರ್ದಳಾಗಳ್ (ರಾಜಶೇ. ೮-೫೮). [ಸಂ.]

ನಿಕ್ವಣಿಸು (ಕ್ರಿ). ಧ್ವನಿಯನ್ನುಂಟುಮಾಡು ; ನಾದವನ್ನು ಹೊರಡಿಸು : ದರ್ಶಸಂದೋರೆಮಗೆ ಓ ವಾಙ್ಮಯಿಯೆ, ನಿತ್ಯಸತ್ಯಂ ನಿಕ್ವಣಿಸುವೋಲ್ ವಚಸ್‌ತಂತ್ರಿ ಕವಿಯ ಚಿದ್ಯಂತ್ರ ಸಮಹೃದ್ವೀಣೆಯಿಂ (ಶ್ರೀರಾಮಾ. ೪೪೫-೧೧). [ನಿಕ್ವಣ + –ಇಸು$_3$]

ನಿಕ್ವಾಣ (ನಾ). = ನಿಕ್ವಣ ೨ ; "ನಿಕ್ವಾಣಃ, ನಿಕ್ವಣಃ, ಕ್ವಾಣಃ, ಕ್ವಣಃ, ಕ್ವಣನಂ—ಇ ವೀಣಾದಿ ಸಕಲವಾದ್ಯಧ್ವನಿಗಳಿಗೆ ಹೆಸರುಗಳು" (ಸಿದ್ಧಾಂತಿ. ೫೬) ; ಕಾಣಿಸಿದುದಸಮಬಾಣನ ಬೀಣೆಯ ಚೆಲ್ವಂ ಪ್ರಗಲ್ಭ

ಕೋಕಿಲಕಲನಿಕ್ವಾಣಂ (ಲೀಲಾವ. ೧೩-೪೫) ; ಮಧುರನಿಕ್ವಾಣದೊಳೆದೆ ಗೆಡಿಸುವೆನು (ವರ್ಧಚ. ೧೧-೧೦೭). [ಸಂ.]

ನಿಕ್ಷತ್ರಂ (ಅ). ನಿರ್ವೀರ್ಯವಾಗಿ ; ನಿಸ್ತೇಜವಾಗಿ : ಹಗೆಗಳನ್ನೆಲ್ಲ ನಿಕ್ಷತ್ರಂ ಮಾಡಿ ಏಕಚ್ಛತ್ರಚ್ಛಾಯೆಯಲ್ಲಿ ಆಳುತ್ತಿರಲು ವೀರ ಮಹೇಂದ್ರನು ಗಂಗರಾಜ್ಯದ ಮೇಲೆ ದಂಡೆತ್ತಿ ಬಂದನು (ಕರ್ಣಾಅ. ೧೮೩). [ಸಂ.]

ನಿಕ್ಷಿಪಿತ (ನಾ). ಇರಿಸಿದುದು ; ಇಟ್ಟುದು : ಬಹುನೃಪರ ಗಂಟಲ ಗಾಳವೆನೆ ನಿಕ್ಷಿ [ಪಾಠಾಂ. ಕ್ಷು] ಪಿತವಾದುದು ಯಂತ್ರ (ನಿಭಾಗ. ೧೦-೭೪-೩೫). [<ಸಂ. ನಿಕ್ಷಿಪ್ತ]

ನಿಕ್ಷಿಪ್ತ (ಗು). ೧. ಇಟ್ಟ ; ಇರಿಸಿದ : ಏನುಂ ತೊದಳಿಲ್ಲದುವೆ ಶಿಲಾ ನಿಕ್ಷಿಪ್ತಾಕ್ಷರಂ ವಿಭೀಷಣರಣದೊಳ್ ಜಾನಕಿಯ ದೂಸಱಂ ಲಂಕಾ ನಾಥಂ ದಾಶರಥಿಯ ಕೈಯೊಳ್ ಮಡಿಗುಂ (ಪಂರಾಮಾ. ೩-೨೩) ; ವಿದೇಹಗ್ರಹಣದಿಂ ದೇವ ಕುರೂತ್ತರ ಕುರುಗ್ರಹಣಮಾದೊಡೆ ತನ್ನಿಷೇ ಧಾರ್ಥಂ ಅನ್ಯತ್ರಗ್ರಹಣಶಬ್ದಂ ನಿಕ್ಷಿಪ್ತಮಾಯ್ತು (ತತ್ತ್ವಪ್ರ. ೧೭೪) ; ನಿಜವಕ್ಷೋಜನಿಕ್ಷಿಪ್ತಕ್ಷ್ವೇಡಪೀಡಿತ ಲೋಕಘಾತನಿಯಪ್ಪ ಪೂತನಿ ಯುಮಂ . . . ಕರೆದು (ಜಗವಿ. ೩-೨೨ ಪ). ೨. ಕೆಳಗೆ ಬೀಳಿಸಿದ ; ಎಸೆದ ; ಒಗೆದ. ೩. ಅಡಗಿರುವ ; ಹುದುಗಿರುವ : ಲಗ್ಗೆ ನುಗ್ಗಿ ಮೇಲ್ವಾಯುವನಿತರೊಳೆ ನೀಮೆಬ್ಬಿಸಲ್ವೇಳ್ಕುಮಯ್ ಲಂಕಾಂತ ರಂಗನಿಕ್ಷಿಪ್ತಲಯಶಕ್ತಿಯಂ (ಶ್ರೀರಾಮಾ. ೬೬೭-೧೬೭). ೪. ಹೂಳಿಟ್ಟ. ೫. ಕಳುಹಿಸಿದ ; ಸಾಗುಹಾಕಿದ. ೬. ಬಿಟ್ಟ ; ತೆಗೆದುಹಾಕಿದ. ೭. ನಿಯೋಜಿಸಿದ ; ನಿಯಮಿಸಿದ ; ನೇಮಿಸಿದ. [ಸಂ.]

ನಿಕ್ಷಿಪ್ತಚಿತ್ತ (ನಾ). ಮನಸ್ಸನ್ನು ಇರಿಸಿದವನು,— ಇಟ್ಟವನು : ಸಕಳವಿಳಾಸಿನೀನರ್ತಕನರ್ತನಗೀತವಾದ್ಯನೂತನವಿದ್ಯಾನಿರೀಕ್ಷಣ ನಿಕ್ಷಿಪ್ತ ಚಿತ್ತನುಂ . . . ಆಗಿ (ನಂಬಿರ. ೧೬-೧೨೪). [ನಿಕ್ಷಿಪ್ತ + ಚಿತ್ತ]

ನಿಕ್ಷಿಸು (ಕ್ರಿ). ನೋಡು ; ಈಕ್ಷಿಸು ; ದಿಟ್ಟಿಸು : ಚಂದ್ರಮಂಡಲ ಪೋಲುವ ಇಂದಿರಾಮೊಗವನು ಚಂದದಿಂದಲಿ ಬಿಡದೆ ನಿಕ್ಷಿಸುವ ಲೋಚನ (ತೀರ್ಥಮ. ೧೬೨). [<ಈಕ್ಷಿಸು ?]

ನಿಕ್ಷುಣ್ಣ (ಗು). ಸ್ಪಷ್ಟವಾದ; ನೇರವಾದ: ಮುಸಲ್ಮಾನರ ಮಗಳನ್ನು ಮದುವೆಯಾಗುವಂತಹ ಅಧರ್ಮದ ಕೃತ್ಯವನ್ನು ಮಾಡಲಾರೆನೆಂದೂ ರಾಮನಾಥನು ನಿಕ್ಷುಣ್ಣವಾಗಿ ಉತ್ತರ ಕೊಟ್ಟನು (ಕವೀರ. ೮೬). [<ನಿಕ್ಷೂಣ]

ನಿಕ್ಷೂಣ (ಅ). ಸರಳವಾಗಿ ; ಸ್ಪಷ್ಟವಾಗಿ ; ನೇರವಾಗಿ : (ಕಿ). [←ಮರಾ. ನಿಕ್ಷೂಣ, ನಿಕ್ಷೂನ]

ನಿಕ್ಷೇತ್ರ(ನಾ). ನೆಲೆಯಿಲ್ಲದಂತಾಗುವಿಕೆ; ಕ್ಷೇತ್ರವಿಲ್ಲದಂತಾಗುವಿಕೆ: ದಕ್ಷಯಾಗವ ಮಾಡಿ ನಿಕ್ಷೇತ್ರ ನೆರೆ(?)ದುದಕಟಕಟಾ ಕೇಳಿಯೂ ಏಕೆ ಮಾಣರೊ (ಬಸವ. ೫೮೩) ; "ಕ್ಷೇತ್ರವಿಲ್ಲದಂತಾಗುವುದು ; ನಾಶ (?)" (ಬಸವ. ಕೋಶ). [ಸಂ.]

ನಿಕ್ಷೇಪ (ನಾ). ೧. ಒಗೆಯುವುದು ; ಎಸೆಯುವುದು. ೨. ಅಳಿಸುವುದು ; ತೆಗೆದು ಹಾಕುವುದು. ೩. ಇಡುಗೆ ; ಠೇವಣಿ ; ಠೇವಣಾತಿ : (Deposit. ಪಾರಿನಿ. ೨೮). ೪. ಹುಗಿದಿಟ್ಟ ಹಣ ; ಗುಪ್ತ ಧನ ; ನಿಧಿ : "ಕಡಾರಂ ನಿಕ್ಷೇಪ" (ಕವಿಕಂ. ೩೩೫) ; ನಿಧಿ ನಿಧಾನ ನಿಕ್ಷೇಪ ಸಹಸ್ರದಣ್ಡಂ ಮೊದಲಾಗಿ ದುಷ್ಟನಿಗ್ರಹ ವಿಸಿಷ್ಟಪ್ರತಿಪಾಳ ನಂಗೆಯ್ದು ಸುಖದಿನಾಳುತ್ತಿರೆ (ಎಕ. XI, ಚಿತ್ರದು. ೪೯-೨೧ ; 947) ; ಸಾಯಲಡಸಿದ ಬಡತನಕ್ಕೆ ಪಲಾಯನವೆ ನಿಕ್ಷೇಪವಿದೆ ಬಯಲಾಯಸವು ನಮಗೇತಕೆಂದನು ಮಾದ್ರಪತಿ (ಕುವ್ಯಾಕ. ೧೨-೧೬) ; ಸಕಲರಶ್ಮಿಗಳೂ ಸೂರ್ಯನಲ್ಲಿ ಶಾಶ್ವತವಾಗಿ ಸ್ಥಾಪಿತವಾಗಿರುವಂತೆ ಸಕಲ ಸಂಪತ್ತುಗಳೂ ವೈಶ್ವಾನರಾಗ್ನಿಯಲ್ಲಿ ನಿಕ್ಷೇಪಗಳಂತೆ ಸ್ಥಾಪಿತವಾಗಿವೆ (ಪುಕ್ಸಾರ. ೩). ೫. ಇರಿಸುವುದು ; ಇಡುವುದು : ಹಗೆಯ ತಲೆ ಹೋಗದಡೆ ವಹ್ನಿಯ ಹೊಗುವ ನುಡಿ ತಮ್ಮನದು ಬಳಿಕಾ ಸೆಗಳಿಕೆಯೊಳುಳಿದೆಮ್ಮ ನಾಲ್ವರ ದೇಹ ನಿಕ್ಷೇಪ (ಕುವ್ಯಾದ್ರೋ. ೯-೩೨). ೬. ಒಪ್ಪಿಗೆಯ ಪ್ರಕಾರ ಬಿಡುಗಡೆ ಮಾಡುವುದಕ್ಕಾಗಿ ಯಾವುದಾದರೊಂದು ಸ್ವತ್ತನ್ನು ವಶಕ್ಕೆ ಒಪ್ಪಿಸುವುದು ; ಜಾಮೀನು ಆಗುವುದು ; ಒತ್ತೆ ಇಡುವುದು; ಗಿರವಿ; ಅಡವು : ವ್ಯವಹಾರವು (೧) ಋಣಾದಾನ (Debt) (೨) ನಿಕ್ಷೇಪ (Bailment) . . . ದ್ಯೂತ ಸಮಾಹ್ವಯ (Gambling) ಎಂದು ಹದಿನೆಂಟು ವಿಧವಾಗಿ ವಿಭಜಿಸಲ್ಪಟ್ಟಿತ್ತು (ಭಾರದ. ೫೬). ೭. ವಸ್ತುಗಳನ್ನು ಶೇಖರಿಸಿ ಇಡುವುದು : ವಾಯವ್ಯದಲ್ಲಿ ನಿಕ್ಷೇಪದ ಮನೆ (ಮನೆಲ. ೧೮-೫). ೮. [ಜೈನ] ನಾಮ, ಸ್ಥಾಪನ, ದ್ರವ್ಯ ಮತ್ತು ಭಾವಗಳೆಂಬ ನಾಲ್ಕು ಸಾಧನೆಗಳ ಮೂಲಕ ವಸ್ತುವಿನಲ್ಲಿ ಪರಸ್ಪರ ಭೇದವನ್ನು ಅರಿಯುವ ಉಪಾಯವನ್ನು ಅಳವಡಿಸುವುದು; ಅಪ್ರಕೃತವನ್ನು ನಿರಾಕರಿಸುವುದರ ಮೂಲಕ ಪ್ರಕೃತವನ್ನು ನಿರೂಪಿಸುವುದು : ಸಮ್ಯಗ್ದರ್ಶನಾದಿಗಳ ಜೀವಾದಿಗಳ ಸಂವ್ಯವಹಾರದ ವಿಪ್ರತಿಪತ್ತಿಯಂ ಮಾಣಿಸಲುವೇಡಿ ಸಂಕ್ಷೇಪದಿಂ ನಿಕ್ಷೇಪಮಂ ಪೇಟ್ದಪರು (ತಸೂವೃ. ೪೧) ; ಪ್ರಮಾಣ ನಯ ನಯ ನಿಕ್ಷೇಪಂಗಳಿಂ ಯಥಾವಸ್ಥಿತಿ ಸಮಸ್ತವಸ್ತುಸ್ವರೂಪಮಂ ನಿಶ್ಚಯಮಾ ಗಿರಲಱುವುದು ಸಮ್ಯಜ್ಞಾನಮೆಂಬುದಕ್ಕುಂ (ಸುಕುಮಾ. ೬-೮ ಪ) ; ನಯವಾದಂ ನಯಮಾಗಿ ಕೂಡೆ ಪೊಳೆಯಲ್ ನಿಕ್ಷೇಪಮಾಕ್ಷೇಪಮಾರ ಯಮಿಲ್ಲೆಂದೆನಿಸಲ್ ಪ್ರಮಾಣಗದಿತಾರ್ಥಂ ಸಂಶಯಂಗೊಳ್ಳ ವಾದಿ ಯೊಳುಂಟಾಗೆ (ಪುಷ್ಪಪು. ೧-೪).

ನಿಕ್ಷೇಪವಾಗಿರು = ಅಡಕವಾಗಿರು ; ಸೇರಿರು ; ಅಡಗಿರು : ಮನವು ಮಹಾಲಿಂಗದಲ್ಲಿ ನಿಕ್ಷೇಪವಾಗಿರಬೇಕು (ಅಖಂಡೇ. ೧೩೯-೧೨೧). [ಸಂ.]

ನಿಕ್ಷೇಪಣ (ನಾ). ೧. ಇರಿಸುವಿಕೆ ; ಇಡುವಿಕೆ : ಅದಾನನಿಕ್ಷೇಪಣ ಸಮಿತಿ - ಕೊಳುವ ಇಡುವ ಎಡೆಯೊಳಪ್ಪ ಯತ್ನಮುಂ(ತತ್ತ್ವಪ್ರ. ೨೬೯). ೨. ಇಟ್ಟ ವಸ್ತು ; ಇಟ್ಟುದು. [ಸಂ.]

ನಿಕ್ಷೇಪನಿಧಿ (ನಾ). (ರಾಜ್ಯ ಅಥವಾ ಸಂಸ್ಥೆ ತನ್ನ ಸಾಲವನ್ನು ಕ್ರಮ ಕ್ರಮವಾಗಿ ತೀರಿಸುತ್ತ ಬರಲು) ಕೂಡಿಹಾಕುವ ಹಣ; ಇಳಿಕೆನಿಧಿ : ಬಡ್ಡಿಗೆ ಮತ್ತು ನಿಕ್ಷೇಪನಿಧಿಗೆ ಸಂಬಂಧಪಟ್ಟ ವೆಚ್ಚಗಳೂ ಹೊಣೆಯ ಮೋಚನೆಗೆ ಸಂಬಂಧಪಟ್ಟ ವೆಚ್ಚಗಳೂ ಸೇರಿ ಭಾರತಸರ್ಕಾರವು ಬದ್ಧತೆಯನ್ನು ಹೊತ್ತಿರತಕ್ಕ ಋಣಭಾರದ ವೆಚ್ಚಗಳು (ಭಾಧಾನ. ೫೮). [ನಿಕ್ಷೇಪ + ನಿಧಿ]

ನಿಕ್ಷೇಪಾಧಿಕರಣ (ನಾ). [ಜೈನ] ಅಜೀವಾಸ್ರವದ ಭೇದಗಳಲ್ಲಿ ಒಂದು ; ಯಾವುದಾದರೂ ವಸ್ತುವನ್ನು ಭೂಮಿಯ ಮೇಲೆ ಅಜಾಗರೂಕತೆಯಿಂದ ಇಡುವಾಗ ಸಂಭವಿಸುವ ಪಾಪಕರ್ಮಕ್ಕೆ ಆಧಾರವಾದುದು; ℙ "ಅಜೀವಾಧಿಕರಣಾಸ್ರವ ಭೇದಗಳು ೧೧: (೧). ನಿರ್ವರ್ತನಾಧಿಕರಣ, ಇದರಲ್ಲಿ ದೇಹ ದುಃಪ್ರಯುಕ್ತ ನಿರ್ವರ್ತನಾಧಿಕರಣ (ಶರೀರದಿಂದ ಕುಕೃತಿ ಮಾಡುವುದು), ಉಪಕರಣ ನಿರ್ವರ್ತನಾಧಿಕರಣ (ಶಸ್ತ್ರಾದಿ ಹಿಂಸೋಪಕರಣ ಗಳನ್ನು ಮಾಡುವುದು) ಎಂಬ ಎರಡು ಪ್ರಕಾರಗಳು. (೨). ನಿಕ್ಷೇಪಾಧಿಕರಣ. ನಿಕ್ಷೇಪ = ಎತ್ತುವುದು. ಇದರಲ್ಲಿ ಸಹಸಾನಿಕ್ಷೇಪ, (ಭೀತಿ, ಆತುರತೆ ಮುಂ. ಗಳಿಂದ ಪುಸ್ತಕ, ಕಮಂಡಲು ಮೊದಲಾದುವನ್ನು ಒಮ್ಮೆಲೆ ಚೆಲ್ಲುವುದು), ಅನಾ ಭೋಗನಿಕ್ಷೇಪ (ಆತುರತೆಯಿಲ್ಲದೆಯೂ ಚೆಲ್ಲುವುದು),

ದುಃಪ್ರಮೃಷ್ಟನಿಕ್ಷೇಪ (ದುಷ್ಟತನದಿಂದ ಇಲ್ಲವೆ ಎಚ್ಚರಗೇಡಿತನದಿಂದ ಉಪಕರಣಗಳನ್ನು ಇಡುವುದು), ಅಪ್ರತ್ಯವೇಕ್ಷಿತನಿಕ್ಷೇಪ (ಸ್ವಲ್ಪವೂ ನೋಡದೆ ಉಪಕರಣಗಳನ್ನಿಡುವುದು) ಎಂಬ ನಾಲ್ಕು ಪ್ರಕಾರಗಳು. (೩). ಸಂಯೋಗಾಧಿಕರಣ - ಇದರಲ್ಲಿ ಉಪಕರಣಸಂಯೋಗ (ಪುಸ್ತಕಾದಿ ಉಪಕರಣಗಳನ್ನು ಬಿಸಿಲಲ್ಲಿ ಕಾಯ್ದು ಪಿಂಛದಿಂದ ಒರೆಸುವುದು ಮುಂ.), ಭಕ್ತಪಾನ ಸಂಯೋಗ (ಅನ್ನಪಾನಗಳಲ್ಲಿ ಬೇರೆ ವಿಧದ ಅನ್ನಪಾನಗಳ ಬೆರಕೆ ಮಾಡುವುದು) ಎಂಬ ಎರಡು ಪ್ರಕಾರಗಳು. (೪). ನಿಸರ್ಗಾಧಿಕರಣ - ಇದರಲ್ಲಿ ಮನೋನಿಸರ್ಗ (ದುಷ್ಕೃತ್ಯಗಳಲ್ಲಿ ಮನಸ್ಸನ್ನು ತೊಡಗಿಸುವುದು), ವಾಗ್ನಿಸರ್ಗ (ಅಭದ್ರವಚನ), ಕಾಯನಿಸರ್ಗ (ಅಯೋಗ್ಯವಾಗಿ ಶರೀರ ಚಲನವಲನ) ಎಂಬ ಮೂರು ಪ್ರಕಾರಗಳು. ಈ ಮೇರೆಗೆ ಅಜೀವಾಸ್ರವಾಧಿಕರಣಗಳು ಒಟ್ಟಿಗೆ ೧೧೧" (ಜೈನಧ. ೬೪) : ಅಜೀವಾಧಿಕರಣಾಸ್ರವ ಭೇದಗಳು ೧೧ : (೧) ನಿರ್ವರ್ತನಾಧಿಕರಣ . . . (೨) ನಿಕ್ಷೇಪಾಧಿಕರಣ (ಜೈನಧ. ೬೪). [ನಿಕ್ಷೇಪ + ಅಧಿಕರಣ]

ನಿಕ್ಷೇಪಿಸು (ಕ್ರಿ). ೧. ನಿಧಿಯಾಗಿರಿಸು; ಹುಗಿದಿರಿಸು ; ಅಡಗಿಸು: ರುದ್ರ ಮುಖದಲ್ಲಿ ವಿಷ್ಣು ಭುಜದಲ್ಲಿ . . . ಜಗವ ನಿಕ್ಷೇಪಿಸಿದ ಕುಕ್ಷಿಯಲ್ಲಿ ಅಕ್ಷಯನಗಣಿತನು (ಬಸವ. ೫೩೬) ; ಸರ್ವಪ್ರಸೂನಗಳನಳಿ ಪೀರ್ವುದು ದಿಡದೆನುತಲಿದನೆ ನಿಕ್ಷೇಪಿಸಿದನೊ ಕರ್ವಿಲ್ಲನೆಂಬ ಬಗೆಯಿಂ ಬೇರ್ವರಿದೆಸೆದಿರ್ಪುವಲ್ಲಿ ಮುಂಡಿವಾಳಂಗಳ್ (ಸುಲ್ಲಕಾ. ೪-೫೧೦); ಗಾಳಿ ಮರೆಯಾಗಿದ್ದ ಭೂಮಿಯಲ್ಲಿ ಧಾನ್ಯರಾಶಿಯಲ್ಲಿ ಮಾಸವಾಗಲಿ ಪಕ್ಷವಾಗಲಿ ನಿಕ್ಷೇಪಿಸಿರಿಸಿ . . . ಸೇವಿಸಲು ಬಹುದಿವಸದ ಕ್ಷಯರೋಗ, ಶ್ವಾಸ . . . ಗುಣಮಕ್ಕು (ಸಕವೈ. ೨೫೫). ೨. ಸ್ಥಾಪಿಸು ; ಸ್ಥಿರವಾಗಿರಿಸು : ಮನ ಭಾವ ಜ್ಞಾನ ನೋಟವ ತಂದು ಕರಸ್ಥಲದಲ್ಲಿ ನಿಕ್ಷೇಪಿಸಿ ಅಂತರಂಗ ಬಹಿರಂಗವೆಂದಜಯದೆ ಅನಿಮಿಷನಾಗಿಪ್ಪನು (ಅಪಚಂ. ೧೬೭-೭೫೪) ; ತನ್ನ ನಂಬಿದ ಸಜ್ಜನ ಸದ್ಭಕ್ತರಲ್ಲಿಗೆ ಲಿಂಗವಾಗಿ ಗಮಿಸಿ ತಾ ಕಂಡ ಲಿಂಗಾಂಗವನು ಅಲ್ಲಿಯೇ ನಿಕ್ಷೇಪಿಸಿ ತಾ ನಿರ್ಮಮನಿಯಾಗಿ ಸುಳಿಯಬಲ್ಲರೆ ಜಂಗಮಲಿಂಗವದು (ವಚಸಂ. ೧೪೬-೧೭೬). ೩. ವಿಸಾಸಲಾಗಿರಿಸು ; ಇಡುಗಂಟಾಗಿರಿಸು : ಈತಂ ತಟಾಕಮಂ ಕಟ್ಟದಂ ಸದ್ಧನವ್ರಾತಮಂ ನಿಕ್ಷೇಪಿಸಿದಂ (ಚಿಬಪು. ೫೬-೧೭). [ನಿಕ್ಷೇಪ + -ಇಸು೩]

ನಿಖಂಡಿತ (ಗು). ಕತ್ತರಿಸಿದ ; ತುಂಡರಿಸಿದ : ಆತಿಶರಳರರಥತುರಗ ಖುರಶಿಖರ ನಿಖಂಡಿತ ಲವಂಗಪಲ್ಲವಮುಮ್ಮೈರಾವತಕರಲೂನಸಲ್ಲಕೀ ಶಬಳಮುನುಪ್ಪುದಯಗಿರಿಯಿಂ ಸೊಗಯಿಸುವ ಹೂಡಣದೆಸೆಗೆ ವಂದು (ಪಂಪಭಾ. ೪-೧೪೪ ಪ). [ಸಂ.]

ನಿಖರ 'ನಿಕರ೨' ನೋ.

ನಿಖರತೆ (ನಾ). ಹೆಚ್ಚು ಕಡಮೆಯಿಲ್ಲದಿರುವಿಕೆ ; ನಿಶ್ಚಿತತೆ : ಒಂದೇ ಮಟ್ಟದ ಉತ್ತರ ಬರೆದಿದ್ದರೆ ಅಂಕಗಳನ್ನು ಕೊಡುವಾಗ ನಿಖರತೆ ಕಲ್ಪಿಸುವುದು ಬಹು ಕಷ್ಟ (ಶಿಕ್ಷಣ. ೬೪೪).

[ನಿಖರ (<ನಿಕರ೨) + -ತೆ೨]

ನಿಖರ್ವ (ಗು). ೧. ಕುಳ್ಳಾದ ; ಗಿಡ್ಡಾದ. (ನಾ). ೨. ಗಿಡ್ಡ ; ಕುಳ್ಳ. ೩. [ಗಣಿತ] ಒಂದು ದೊಡ್ಡ ಸಂಖ್ಯೆ : ಅಂಕಿಗಳ ಶ್ರೇಣಿ ಹದಿನೆಂಟರ ವರೆಗೂ ಹೋಗುತ್ತದೆ. ಈ ಹದಿನೆಂಟು ಶ್ರೇಣಿಗಳು ಯಾವು ವೆಂದರೆ: ಏಕಂ . . . ಖರ್ವ, ನಿಖರ್ವ, ಮಹಾಪದ್ಮ, ಶಂಖ, ಸಮುದ್ರ, ಮಧ್ಯ, ಅಂತ್ಯ ಮತ್ತು ಪರಾರ್ಧ (ಪ್ರವಾಇ. I, ೬೫೭). 'ಮಹಾಖರ್ವ' ಪರಾ. [ಸಂ.]

ನಿಖಾ 'ನಿಕಾ' ನೋ.

ನಿಖಾತ (ಗು). ಹೂಳಿದ ; ಹುಗಿದಿಟ್ಟ : 'ನಿಖಾತನಿಧಿ' ಪರಾ. [ಸಂ.]

ನಿಖಾತನಿಧಿ (ನಾ). ಹೂಳಿಟ್ಟ ದ್ರವ್ಯ ; ಗುಪ್ತನಿಧಿ ; ನಿಕ್ಷೇಪ : ೪೩. ರಾಜ್ಯದ ಸಾರ್ವಜನಿಕ ಋಣ. ೪೪. ನಿಖಾತನಿಧಿ (ಭಾಧಾನ.೨೯೧).

[ನಿಖಾತ + ನಿಧಿ]

ನಿಖಾರಿ, ನಿಕಾರ೨, ನಿಕಾರಿ (ನಾ). ೧. = ನಿಕಾರವಟ್ಟಿ : ಐದು ಮುಂದಿಯನೆಡಗ್ಯೆಯೊಳಿಂದಿಸುತ ವರ ನಿಖಾರಿಯ ನೀಲಿಯ ರಥದ . . . ಗಮನದ ಭರದಿ ಕಿಜುಬೆಮರಿಂದುತ ನಡೆತರುತಿರ್ದಳು (ಕುವ್ಯಾವಿ. ೫-೭೭). **ನಿಕಾರ೨** : ೧. ತರಿಸಿದನು ನವಹೇಮಮುಖಭಾಸುರದ ನುಂಬದ ಮೇಲೆ ಲಲಿತಾಸ್ತರಣದಡಿಕಿಲುವಾಸಗಳ ನಿರ್ಮಳ ನಿಕಾರಗಳ (ಕುವ್ಯಾಸ. ೪-೫). ೨. ಸ್ವಚ್ಛತೆ ; ಶುಭ್ರತೆ : 'ನಿಕಾರಿಸು' ಪರಾ. **ನಿಕಾರಿ** : ೧. ನವನಿಕಾರಿಯ ವಲ್ಲಿ ಪೀರೆಗಳವಯವದ ರಕುತದಲಿ ತೋದವು ಜವನೆಲೆದು ಸಾರಥಿಗೆ ಸೂಚಿಸೆ ರಥವ ಮರಳಿಚದ (ಕುವ್ಯಾವಿ. ೮-೭೫). [←ಹಿಂ. ಮರಾ. ನಿಖಾರ್]

ನಿಖಾಲೆ 'ನಿಕಾಲೆ' ನೋ.

ನಿಖಿಲ, ನಿಖಿಳ (ಗು). ಎಲ್ಲ ; ಸಕಲ ; ಸಮಸ್ತ : ನಿಜಭುಜಪ್ರತಾಪ ನಿರ್ಜಿತನಿಖಿಲಭೀಮಸೇನಂ ಭೀಮಸೇನಂ ಕೌರವನಿದಿರ್ಗೆ ವಂದು (ಗದಾಯು. ೩-೩೦ ಪ) ; ಮಂತ್ರಿಯುಂ ಸೈಪತಿಯುಂ ಬಗೆಗೊಂಡ ನುಕೂಲವೃತ್ತಿಯೊಳಂ ನೆಜೀದಿರೆ ಕೂಡುಗುಂ ನಿಖಿಲರಾಜ್ಯವಿಭೂತಿಗಳ್ (ಪಂಚತಂ. ೯೩-೨೨) ; ದಿನಕರರಹಿಮಕರನಕ್ಷತ್ರನಿಖಿಲತಾರಾಗ್ರಹಂಗಳ ತ್ಯಾಗ್ರಹದಿಂ ಕನಕಮಹೀಧರಮಂ ನಿಚ್ಚ ನಿಚ್ಚಮೋರಂತೆ ಸಂತತಂ ಬಲವರ್ಕುಂ (ಸುಕುಮಾ. ೧೧-೬೦); ಚಂಪ್ರಮೌಳಿಪ್ರಮುಖನಿಖಿಲವಿದ್ವಜ್ಜನಂ ಮೆಚ್ಚೆ ರುದ್ರಾಂಕನೆ ಪೇಟ್ದಂ (ಜಗವಿ. ೧-೨೨) ; ಪ್ರೇಮವೆ ನಿಖಿಲ ಪೂಜೆಯಾಯ್ತು (ಕ್ರೀರಾಪಾ. ೧೭-೪೩೩). **ನಿಖಿಳ** : "ಸಮುಮಖಿಳಂ ನಿಖಿಳಂ . . . ಸಮಗ್ರಮೆಂದಿವು ಸಮಸ್ತವಾಚಿಗಳಕ್ಕುಂ" (ಪಸ್ತು ಕೋ. ೧೦೭-೫೭) ; ನಿಖಿಳಜಗಂಗಳೊಳಧಿಕನು ಮಖಂಡತೌರ್ಯನುಂ (ಪರ್ಮಪು. ೧೫-೭೫) ; ನಿಖಿಳಸರೋರುಹಕುಟ್ಮಳಮುಖಲಗ್ನ ಮಯೂಖಲೇಖೆಯಿಂ (ಪುಷ್ಪಪು.೪-೧೦೪) ; ಕಮಳಾಸನನ ಹತ್ತಿರೆ ಕರೆದು ಮನ್ನಿಸಿ ನಿಖಿಳ ನಿರ್ಜರ ಜನವ ಸಂತೈಸಿ (ಕುವ್ಯಾಳ. ೬-೨೧). [ಸಂ.]

ನಿಖಿಲಜನ (ನಾ). ಸಮಸ್ತ ಜನ : ಎಲ್ಲಾ ಜನ : ಪರುಷದ ಕರಧಿಯೊಳಗೋಲಾಡುತಿಮ್ಮುದು ನಿಖಿಲಜನ ನಲಿದು (ಕೌಂಪಾ. ೪೪-೫೫).

[ನಿಖಿಲ + ಜನ]

ನಿಖಿಲಸಮತೆ (ನಾ). [ಜೈನ] ತೀವ್ರೋಪವಾಸ, ದಾನವ್ರತ, ನಿಖಿಲಸಮತೆ ಮತ್ತು ಸಂನ್ಯಾಸವ್ರಜನಗಳೆಂಬ ನಾಲ್ಕು ಬಗೆಯ ಶಿಕ್ಷಾವ್ರತಗಳಲ್ಲಿ ಒಂದು ; ೨ ಸರ್ವಜೀವಗಳಲ್ಲಿ ಭೇದವನ್ನು ಎಣಿಸದೆ ಸಮಾನಭಾವವನ್ನು ಹೊಂದಿರುವಿಕೆ : ತೀವ್ರೋಪವಾಸವುಂ ದಾನವ್ರತಮುಂ ನಿಖಿಲಸಮತೆಯುಂ ಸನ್ಯಾಸವ್ರಜನಮುಮೆಂಬಿವು ಶಿಕ್ಷಾವ್ರತವಿದು ನಾಲ್ಕುತೆಅನನೂನಾಗಮದೊಳ್ (ಶಾಂಚಪು. ೧-೯೦). [ಸಂ. ನಿಖಿಲಸಮತಾ]

ನಿಖಿಳ 'ನಿಖಿಲ' ನೋ.

ನಿಖಿಳಪರಿವಾರ (ನಾ). ಸಕಲ ಪರಿವಾರ,—ಪರಿಜನ : ಕರ್ಣ ನೀನೇ ಮರಳಿ ಸೇನೆಯ ರಕ್ಷಿಸೆಂದುದು ನಿಖಿಳಪರಿವಾರ (ಕುವ್ಯಾದಕ್ರೀ. ೧೬-೨೦). [ನಿಖಿಳ (=ನಿಖಿಲ) + ಪರಿವಾರ]

ನಿಖಿಳಭುವನ (ನಾ). ಸಮಸ್ತ ಲೋಕ : ಈತ ನರಯುಷಿ ನಿಖಿಳ ಭುವನಖ್ಯಾತ ನಾರಾಯಣನಲ್ಲೆ (ಕುವ್ಯಾಅ. ೪-೬೪).

[ನಿಖಿಳ (=ನಿಖಿಲ) + ಭುವನ]

ನಿಖಿಳೆ (ನಾ). "ಪರಿಪೂರ್ಣೆ" (ಪ್ರಭುಲೀ. ಕೋಶ) : ಅಖಿಲ ಶರಣರು ನೋಡಲಚಳಿತಸುಖದೊಳೋಲಾಡುತ್ತಲಿರ್ದಳು ನಿಖಿಳೆ ಸದ್ಯೋನ್ಮುಕ್ತೆ ಮುಕ್ತಾಯಿಗಳು ಜಗವಱಿಯೆ (ಪ್ರಭುಲೀ. ೧೨-೨೬). [ಸಂ. ನಿಖಿಲಾ]

ನಿಖಿಳೇಂದ್ರಿಯ (ನಾ). ಸಮಸ್ತ ಇಂದ್ರಿಯಗಳು ; ಇಂದ್ರಿಯ ಸಮೂಹ : ನಿಖಿಳೇಂದ್ರಿಯ ರೋಚಕ ಬಿಗಿಯೆ ಬೇಗೆಯ ಬೇಸಱಿನ ಬಿಸುಗುದಿಯ ಸುಯ್ಲಿನಲಿ (ಕುನ್ಯಾಅ. ೨೧-೧೫).

[ನಿಖಿಳ (= ನಿಖಿಲ) + ಇಂದ್ರಿಯ]

ನಿಗ$_1$ (ನಾ). ಪ್ರಜ್ವಲಿಸುವುದನ್ನು ಸೂಚಿಸುವ ಒಂದು ಅನುಕರಣ ಶಬ್ದ.

ನಿಗನಿಗ (ದ್ವಿರುಕ್ತಿ) : ಕೆಂಡ ನಿಗನಿಗ ಎನ್ನುತ್ತಿದೆ (ರೂಢಿ). ನಿಗನಿಗ ಉರಿ = ಚನ್ನಾಗಿ ಉರಿ : ಬಲೆಗೆ ತರಗು ತುಂಬು, ನಿಗನಿಗ ಉರಿಯಲಿ (ರೂಢಿ).

ನಿಗ$_2$ 'ನಿಗಾ' ನೋ.

ನಿಗಂಟು (ನಾ). = ನಿಘಂಟು ೧ : "ನಿಗಂಟು - ನಿಘಂಟು = ಅರ್ಥ ಕೋಶ" (ತದ್ಭಕೋ. ೨೨) ; ನಿಘಂಟು - ನಿಗಂಟು ; ಸಂಘ - ಸಂಗ (ಶಮದ. ೨೫೫ ಪ್ರಯೋ). [<ಸಂ. ನಿಘಂಟು]

ನಿಗಂಠ 'ನಿಗ್ಗಂಥ' ನೋ.

ನಿಗಂಠಿ (ನಾ). [ಜೈನ] ಸಂನ್ಯಾಸಿನಿ : ಈ ಶ್ರವಣ ಶ್ರವಣಿಯರನ್ನು ಜೈನಗ್ರಂಥಗಳು 'ನಿಗಂಠ', 'ನಿಗಂಠೀ' ಎಂದು ಕರೆಯುತ್ತವೆ (ತೀರ್ಥಕ. ೧೦೮). [<ಪ್ರಾ. ಣಿಗ್ಗಂಥೀ./ಸಂ. ನಿರ್ಗ್ರಂಥೀ]

ನಿಗಚು 'ನಿಮಿರ್ಚು' ನೋ.

ನಿಗಠಣೆ (ನಾ). ಬಿಗಿಯಾಗಿರುವುದು ; ಬೀಗಿರುವುದು : ನಿಗಠಣೆ ಬೇಡೆಲೆ ಮಕರಂದೆ ನೃಪನೊಳು ಪಗಠಣೆ ಸಲ್ಲದು ತಂಗಿ ನಿಗಠಣೆ ಪಗಠಣೆ ನಟನೆಗಳನ್ಯರೊಳಗೆ ಸಲ್ವುವಿಲ್ಲಿ ಮೆಱೆಯವು (ಭರಚ. ೯-೯೬).

[←ಮರಾ. ನಿಗಟಣೇ = ಬಂಧಿಸು]

ನಿಗಡ (ಗು). ೧. ಸಂಕೋಲೆ ಹಾಕಿದ ; ಸರಪಳಿಯಿಂದ ಬಂಧಿಸಿದ. ೨. ಇಕ್ಕಟ್ಟಾದ ; ಬಿಗಿಯಾದ : 'ನಿಗಡಬದ್ಧ' ಪರಾ. (ನಾ). ೩. (ಆನೆಯ ಕಾಲಿಗೆ ತೊಡಿಸುವ) ಸಂಕೋಲೆ ; ಸರಪಳಿ : ನಿಗಡಂ[ಪಾಠಾಂ. ನಿಗಳಂ, ವಿಗಡಂ] ಸೊರ್ಕಾನೆಯೊಳ್ ವಿಗ್ರಹಮೊದವಿದ ವಾದಂಗಳೊಳ್ . . . ತಳ್ತಿಱುವುದೆಮೆಯೊಳುಂಟಲ್ಲಿ ಬೇಱಿಲ್ಲ ನಾಡೊಳ್ (ಅನಂಪು. ೧-೮೫) ; (ಸೂಕ್ತಿಸು. ೪-೨೩ ನೋ). ೪. ಬಂಧನ ; ಸೆರೆ.

[ಸಂ.]

ನಿಗಡನಿರುದ್ಧ (ಗು). ೧. = ನಿಗಡಬದ್ಧ ೧. (ನಾ). ೨. ಬಂಧಿತನಾದವನು : ನಿಗಡನಿರುದ್ಧನಂ ತನಯಶೋಕವಿಲಾಪಿಯನುಗ್ರಸೇನನಂ ನಗಧರನೊಲ್ದು ಸಂತವಿಸೆ (ಜಗವಿ. ೬-೧೦೫). [ಸಂ.]

ನಿಗಡನಿರೋಧ (ನಾ). ಸರಪಳಿಯ ಬಂಧನ,—ಸೆರೆ : ಅನ್ನೆಗ ಮಿಾತನನುಱೆ ಬಲ್ಪಿನ್ನಿಗಡನಿರೋಧದಲ್ಲಿ ಕುಳ್ಳಿರಿಸಿ (ದಶಕು. ೮-೧೮೮) ; ಬೀದಿಬೀದಿಗಳಲ್ಲಿ ನಿಗಡನಿರೋಧಮದಗಜತತಿಯ ಬೃಂಹಿತನಾದದಲಿ ಕಳಕಳತೆವೆತ್ತಿಹುದಾಗಳಾ ಪುರವು (ಪ್ರಭುಲೀ. ೬-೫). 'ನಿಗಳನಿರೋಧ' ಪರಾ. [ನಿಗಡ + ನಿರೋಧ]

ನಿಗಡಬಂಧನ (ನಾ). ಒಂದು ಬಗೆಯ ದಂಡನೆ ; ಸರಪಳಿ ಹಾಕಿ ಬಂಧಿಸುವಿಕೆ : ಸ್ವಲ್ಪ ಹೆಚ್ಚು ಕಡಮೆಯಾದರೂ ನಿಗಡಬಂಧನವೇ ದಂಡನೆಯಾಗುತ್ತಿತ್ತು (ಕಭವಿ. II, ೩೦೨) ; ಆ ಬಾಲಕರ ಮೇಲೆ ರಾಜಾನುಗ್ರಹವಾದರೆ ಭಾಗಣ್ಣನ ಬಲುಮೆಯಿಂದ ಅವರು ದೊಡ್ಡ ಪದವಿಗೇರುವರೆಂದು ಅಸೂಯೆಯಿಂದ ಮೂವರಿಗೂ ನಿಗಡಬಂಧನ ಮಾಡಿಸಿದರು (ಕಭವಿ. II, ೪೩೨). [ನಿಗಡ + ಬಂಧನ]

ನಿಗಡಬದ್ಧ (ಗು). ೧. ಸರಪಳಿಯಿಂದ ಬಿಗಿದ,—ಬಂಧಿಸಿದ. ೨. ಇಕ್ಕಟ್ಟಾದ ; ತೊಡಕಿನ : ಆ ನಿಗಡಬದ್ಧ ಪರಿಸ್ಥಿತಿಯಲ್ಲಿಯೂ ಆಕೆ ಸಾಷ್ಟಾಂಗಪ್ರಣಿಪಾತ ಮಾಡಿ . . . ತನ್ನ ಅಪರಾಧವನ್ನು ತೊಳೆದುಕೊಂಡಳು (ಬಾಣಅ. ೨೯೪). [ಸಂ.]

ನಿಗಡಿತ (ಗು). ೧. ಸಂಕೋಲೆ ಹಾಕಿದ ; ಸರಪಳಿ ಹಾಕಿದ. ೨. ಬಂಧಿತವಾದ ; ಬಂಧಿಸಿದ : ಕರ್ನಾಟಕದಂತೆಯೇ ಮಹಾರಾಷ್ಟ್ರವೂ . . . ಜನ್ಮಾಂತರಸ್ನೇಹದಿಂದ ನಿಗಡಿತವಾದ ನರನಾರೀಗಣದಿಂದ . . . ಸಮೃದ್ಧವಾಗಿ ಬೆಳೆದು ಬಂದಿದೆ (ಮಸಾಹಿ. ೬) ; ತೆರಳುವೊಡಿಚ್ಛಿಸನಿದನರಿತಿನಿಯನು ಶೋಕನಿಗಡಿತ ಪಥಿಕನು (ಗಾಥಾಸ. ೧೨೫-೧೦೦).

[ಸಂ.]

ನಿಗತಂದಿವಿ (ಕ್ರಿ). (?) : ಭೃಗುಮತದೊಳಾದ ಪರಿಣತಿ ಪೊಗಳಲ್ದೇವಂಗಮರಿದು ನೆಟ್ಟನೆ ಚಟ್ಟಂ ತ್ರಿಗುಣಿಸುವ ತಿರಿಗಿ ಪಾಯಿಪ ನಿಗತಂದಿವಿವೆಡೆಯೊಳಾದಿಬ್ರಿಗುವಂ ಮಿಗುವಂ (ಎಕ. V, ಬೇಲೂರು. ೧೯೩-೬೩ ; 1160). [? + ತಿವಿ$_1$]

ನಿಗದ (ನಾ). ೧. ಕಂಠಪಾಠ ಮಾಡಿ ಹೇಳುವುದು ; ಉರು ಹೊಡೆದು ಹೇಳುವುದು. ೨. ಗಟ್ಟಿಯಾಗಿ ಹೇಳುವ (ಹೋಮದ) ಮಂತ್ರ,—ಪ್ರಾರ್ಥನೆಯ ಘೋಷಣೆ. ೩. ಸ್ಪಷ್ಟವಾಗಿ ಹೇಳುವಿಕೆ,— ಹೇಳುವುದು : "ನಿಗಾದಃ, ನಿಗದಃ — ೨ ಸ್ಪಷ್ಟವಾಗಿ ನುಡಿಯುವಿಕೆ, ವ್ಯಕ್ತವಾಗಿ ಪೇಳುವಿಕೆ" (ಸಿದ್ಧಾಂತಿ. ೩೫೯). ೪. ಭಾಷಣ : 'ನಿಗದಿತ', 'ನಿಗದಿಸು' ಪರಾ. [ಸಂ.]

ನಿಗದಿ (ನಾ). ನಿಶ್ಚಯ ; ನಿರ್ಣಯ ; ಗೊತ್ತುಪಾಡು : ನಾವು ನಿಗದೀ ಮೇಲೆ ಹಣಾ ಕೊಟ್ಟು ಇದ್ದೇವೆ (ರಾಜೇಂದ್ರ. ೧೧) ; ಎಲ್ಲಾ ಪ್ರಾಂತಗಳೂ ನಿಗದಿಯಾದ ಕಾಲದಲ್ಲಿ ಚಿನ್ನವನ್ನು ಟಂಕಸಾಲೆಗೆ ತರಬೇಕು (ಪ್ರವಾಇ. II, ೧೫೭); ನಿಗದಿಯಾದ ಶುಲ್ಕವನ್ನು (ಫೀ) ಕೊಡಬೇಕಷ್ಟೆ (ಗಲಿಪ್ರ. ೭೦) ; ನಿಗದಿಯಾದ ಹಣವನ್ನು ಮಠಕ್ಕೆ ತಂದು ಕೊಡುತ್ತಿದ್ದರು (ಕಭವಿ. ೧೨೯) ; ನಿಗದಿ ಇದ್ದವನಿಗೆ ಪೊಗದಿ ಇದ್ದೀತೇ ? (ಗಾದೆ).

ನಿಗದಿ ಮಾಡು = ನಿಶ್ಚಯಿಸು ; ಗೊತ್ತುಮಾಡು : ಸಕಲರೂ ನಿಗದೀ ಮಾಡಿದ ವಿವರ (ಎಕ. IX, ಬೆಂಗಳೂ. ೯೬-೮೧; 1402 ?); ಸಂಬಳವನ್ನು ನಿಗದಿ ಮಾಡಿದ (ಪ್ರವಾಇ. II, ೨೩೬) ; ಜನರಿಂದ ಎಷ್ಟು ತೆರಿಗೆ ವಸೂಲು ಮಾಡಬೇಕೋ ಅಷ್ಟನ್ನು ಮೊದಲೇ ನಿಗದಿ ಮಾಡಲಾಗಿದೆ (ಪ್ರತಾಪ. ೯೧). [?]

ನಿಗದಿತ (ಗು). ೧. ಹೇಳಿದ ; ಹೇಳಲ್ಪಟ್ಟ : ನಿಗದಿತ ಕಾವ್ಯೋಕ್ತಿಗಳೊಳ್ ನೆಗೞ್ದುವು ಮಾರ್ಗಂಗಳಿಂತುಮೆರಡುಕ್ತಿಗಳುಂ (ಕವಿರಾ. ೨-೫). (ನಾ). ೨. ಮಾತು ; ಭಾಷಣ. [ಸಂ.]

ನಿಗದಿಸು (ಕ್ರಿ). ಹೇಳು ; ನುಡಿ : ಮಿಗೆ ಕನ್ನಡಗಬ್ಬಂಗಳೊಳಗಣಿತ ಗುಣಗದ್ಯಪದ್ಯಸಮ್ಮಿಶ್ರಿತಮಂ ನಿಗದಿಸುವರ್ ಗದ್ಯಕಥಾಪ್ರಗೀತಿಯಿಂ ತಚ್ಚಿರಂತನಾಚಾರ್ಯರ್ಕಳ್ (ಕವಿರಾ. ೧-೨೬) ; ಅಂಕಮದಾದಿ ಪುರೋಂಶ ವಿಟಂಕಂಗಳೊಳಗ್ರಶಬ್ದವಂ ನಿಗದಿಸುವರ್ (ವಸ್ತುಕೋ. ೧೩೦-೬೬) ; ಮಿಗೆ ಕಳ್ಳರಿನಪ್ಪ ಬಾಧೆಯಂ ನಿಗದಿಪುದಾಱುವೀಥಿಯ ಫಲಾಫಲಮಂ ಬುಧರೊಲ್ದು ಬಣ್ಣಿಸಲ್ (ಆಟ್ಟಸು. ೬-೧೩೯) ; ನಿಗಮಾಗಮ ಧರ್ಮಶಾಸ್ತ್ರನಯಶಾಸ್ತ್ರಂಗಳ್ ನಿಗದಿಸುಗುಂ ನಿಕ್ಕುವಮಂ (ಕೀತಿಮಂ. II, ೨೫೦). [ನಿಗದ + -ಇಸು$_3$]

ನಿಗನಿಗನೆ (ಅ). ನಿಗನಿಗ ಎಂದು ಹೊಳೆಯುತ್ತ : ಮೃಗಲಕ್ಷ್ಮಸಾಮ್ಯ ಮೊಗದಿಂ ಮೃಗಸನ್ನಿಭನಯನದಿಂದೆ ಪೊಸವೆಳ್ದಿಂಗಳ್ ನಿಗನಿಗನೆ ಮಿಂಚಿ ಮುಂಚುತಲೊಗೆತರೆ ನಿಜಪತಿಗೆ ಕಂಡ ಕನಸಂ ಪೇೞ್ದಳ್ (ಮಲ್ಲಕಾ. ೬-೧೧೫). [<ನಿಗ$_1$ + -ಅನೆ$_1$]

ನಿಗನಿಗಿಸು (ಕ್ರಿ). ಹೊಳೆ ; ಪ್ರಜ್ವಲಿಸು ; ಪ್ರಕಾಶಿಸು : ನಿಗನಿಗಿಪ ಪೊಂಬಾಳೆದೊಡೆ ಜಾನುಗಳ ಜಂಘಾವಿಭ್ರಮವನಾರ್ಗಣಿಸಬಲ್ಲವರು (ಅನಂರಾ. ೧-೩-೩೫) ; ನಿಗನಿಗಿಪ ಗೋಪುರಪುರದ್ವಾರಗಳ ದರ್ಪಣಮಕರ ತೋರಣಮಗಣಿತಪ್ರಭೆಯಂ ವಿಡಾಯಿಸುತಿರ್ದವೆಲ್ಲೆಡೆಯ (ಅನಂರಾ. ೬-೨೫-೩). [<ನಿಗ$_1$ + -ಇಸು$_3$]

ನಿಗಮ (ನಾ). ೧. ವೇದ; ಶ್ರುತಿಗಳ ಸಮೂಹ : "ಶ್ರುತಿಯಲ್ಲಿಯುಂ ನಿಗಮಮೆಂಬುದು" (ಹಲಾಯು. ೧೩೨-೧೦); ನಿಗಮಂಗಳ್ ವಿಷ್ಣು ವಿರಿಂಚಿಗಳಱಯದ ಶಿವನನಱಪೊಡೆನ್ನಳವೆ (ಗಿರಿಕ. ೫-೪೯) ; ಹೊಲಬು ಗೆಡಿಸಿದನಖಿಳನಿಗಮಂಗಳನು ತನ್ನಱಕೆಯಲಿ (ಕುಪ್ಯಾಉ. ೮-೧೪) ; ನಿಗಮಂಗಳ್ಮಿಗೆ ಕಾಣಲಾರ್ತವೆ ಭವತ್ಪಾದಾಬ್ಜಮಂ (ರಾಜಶೇ. ೩-೪೧) ; ಮುಗುದೆಯರೀ ಕೃತಿಗೇಳೆ ನಿಗಮದೊಳೊಗೆದ ನೇಮಂಗಳ ತಿಳಿದೀ ಜಗದೆ ಪಾವನೆಯರೆನಿಪರು (ಹದಿಬ.೧-೫೭) ; ನಿಗಮ ಸತ್ಕಲೆಕಾವ್ಯಗಳ ಗವಾಕ್ಷ ಗಳಿಂ ಗಗನದೊಳನಂತದರ್ಶನದೆ ಮುಕ್ತಿಯನೊಂದು (ಮಂಕುಕ. ೪೬೦); ನಿಗಮಗಳು ಉತ್ತರಭಾರತದ ಮಡಿಲಲ್ಲಿ ಜನಿಸಿದವುಗಳಾದರೆ ಆಗಮಗಳು ಬಹುಮಟ್ಟಿಗೆ ದಕ್ಷಿಣಭಾರತದಲ್ಲಿ ಜನಿಸಿದವು (ಭಾರದ. ೩೯೬). ೨. ವೇದ ಗಳಿಂದ ಉದ್ಧರಿಸಿದುದು; ವೇದವಾಕ್ಯ. ೩. ವೇದಗಳನ್ನು ಅರ್ಥ ಮಾಡಿಕೊಳ್ಳಲು, ವಿವರಣಾತ್ಮಕ ಹಾಗೂ ಸಹಾಯಕವಾದ ನಿರುಕ್ತ, ಮೀಮಾಂಸೆ ಮೊದಲಾದ ಗ್ರಂಥ. ೪. ನಿಶ್ಚಯ ; ನೆಚ್ಚಿಕೆ ; ಭರವಸೆ. ೫. ತರ್ಕಶಾಸ್ತ್ರ ಅಥವಾ ನೀತಿಶಾಸ್ತ್ರ. ೬. ವ್ಯಾಪಾರ ; ಮಾರಾಟ. ೭. ಅಂಗಡಿಬೀದಿ; ಮಾರುಕಟ್ಟೆ; ಸಂತೆ. ೮. ವ್ಯಾಪಾರಿ ; ವರ್ತಕ. ೯. ವ್ಯಾಪಾರಿಗಳ ಗುಂಪು ; ವರ್ತಕರ ತಂಡ. ೧೦. ದಾರಿ ; ಮಾರ್ಗ : "ಅಧ್ವಾ . . . ಪದ್ಯಾ, ನಿಗಮಃ—ಈ ೧೨ ಬಟ್ಟೆ" (ಹಲಾಯು. ೪೩-೧೦೫). ೧೧. ನಗರ; ಪಟ್ಟಣ : "ನಗರಿ ಪುಟಭೇದನಂ ಪೂಃ ಪುರಂ ಪತ್ತನಂ ನಿಗಮಂ ಪುರೀಂ ಪ್ರಜಾಸ್ಥಾನಮಾದುರ್ಗಮೆನೆ ನಗರಮೆನೆ ಪಟ್ಟಣಂ" (ಮಂಗರಾ. ೫೬-೩) ; ಅನೇಕ ನಗರನಿಗಮ . . . ಸಂವಾಹನಿಚಯನಿಚಿತಮುಂ . . . ಎನಿಸಿದ ಭರತಕ್ಷೇತ್ರದ ಮಧ್ಯದೊಳ್ ಮಧ್ಯದೇಶಮುಂಟು (ಜಗವಿ. ೨-೧ ಪ); ತನತು ಪದಪಾಂಸುವಿಂ ಗ್ರಾಮನಗರ . . . ನಿಗಮಪತ್ತನತತಿ ಪಾವನಮಾಗೆ ವಿಹಾರಿಸುತ್ತೆ ಮೌನವ್ರತದಿಂ (ಪುಷ್ಪಪು.೧೪-೧೪) ; ಅವನು ಬಂದುದು ಯಾವ ಗ್ರಾಮ ನಿಗಮ ನಗರಗಳಿಂದ ? (ಬುದ್ಧಪ. ೮೦) ; ನಿಗಮಗಳೆಂದು ಹೆಸರು ಪಡೆದ ವ್ಯಾಪಾರಪ್ರಧಾನವಾದ ಪಟ್ಟಣಗಳಲ್ಲಿ (ಭಾಇಪ್ರ. ೧೯೫). ೧೨. ಪ್ರಾರ್ಥನೆಗಳಲ್ಲಿ ದೇವತೆಯ ಹೆಸರನ್ನು ಸೇರಿಸಿಕೊಂಡು ಹೇಳುವುದು; ಸ್ತೋತ್ರ. ೧೩. ದೃಢಸಂಕಲ್ಪ; ಪ್ರತಿಜ್ಞೆ. ೧೪. ಹೊಂದುವುದು ; ಪ್ರಾಪ್ತಿ. ೧೫. ಛಂದಸ್ಸು; ಛಂದಶ್ಶಾಸ್ತ್ರ. ೧೬. (ಒಂದು ವ್ಯಕ್ತಿಯಂತೆ ಕಾರ್ಯ ನಡೆಸಲು ಅಧಿಕಾರ ಪಡೆದ) ಸಂಸ್ಥೆ : "ನಿಗಮ - ಕಾರ್ಪೊರೇಷನ್" (Corporation. ಪತ್ರಿನಿ. ೨೫). ೧೭. [ವ್ಯಾಕ] ಶಬ್ದದ ಪ್ರಕೃತಿ. ೧೮. [ತತ್ತ್ವಶಾ] ಅನುಮಾನ ; ಊಹೆ : "ನಿಗಮ (ಅನುಮಾನ)" (Deduction. ಪಾರಿನಿ. ೨೭).

ನಿಗಮಾಗಮ = ವೇದ ಮತ್ತು ಶಾಸ್ತ್ರ : ಆ ಮಾಧವಂ . . . ಬಿಜಯಂಗೈದನಾ ಮಧ್ಯಮಾರ್ಗದೊಳ್ಳಂಡುದು ಮಹಾಜನಂ ತಾಮರಸ ನೇತ್ರನಂ ತಮತಮಗೆ ನುತಿಸಿದರ್ನಿಗಮಾಗಮೋಕ್ತಿಯಿಂದೆ (ಜೈಮಿಭಾ. ೧-೧೩). [ಸಂ.]

ನಿಗಮಕರ (ನಾ). ಪೌರಸಂಸ್ಥೆಯು ವಿಧಿಸುವ ತೆರಿಗೆ,— ಸುಂಕ : "ವರಮಾನದ ಮೇಲಿನ ಕರಗಳು" ಎಂಬುದರಲ್ಲಿ ನಿಗಮಕರವು ಸೇರಿರ ತಕ್ಕುದಲ್ಲ (ಭಾಧಾನ. ೧೫೪). [ನಿಗಮ + ಕರ$_3$]

ನಿಗಮಗೋಚರ (ನಾ). ವೇದಗಳಿಗೆ ಗೋಚರಿಸುವವನು ; ದೇವರು ; ಪರಮಾತ್ಮ : ನೀನೇ ದಯಾಳೋ ನಿರ್ಮಲಚಿತ್ತ ಗೋವಿಂದ ನಿಗಮಗೋಚರ ಮುಕುಂದ (ಪುರಂದ. ೧-೫೮ ಪಲ್ಲವಿ).

[ನಿಗಮ + ಗೋಚರ]

ನಿಗಮಚೋರ (ನಾ). ವೇದಗಳನ್ನು ಕದ್ದವನು ; ಹಯಗ್ರೀವ ನೆಂಬ ರಕ್ಕಸ : ನಿಗಮಚೋರನ ಕೊಂದು ನೀರೊಳು ಮುಳುಗ್ಯಾಡಿ ನಗವ ಬೆನ್ನಿಲಿ ಪೊತ್ತು ಸುರರಿಗಮೃತವನಿತ್ತು . . . ಜಗದೊಳುದ್ದಂಡ ಬಾಹುಕನಾದ ದೇವನಾ (ಕರ್ನಾಕ. ೨೮೧).

[ನಿಗಮ + ಚೋರ]

ನಿಗಮತತಿ (ನಾ). ವೇದಗಳ ಗುಂಪು,—ಸಮೂಹ : ನಿಗಮತತಿ ನುತಿಪಾತ್ರ ನಿಖಿಲಮುನಿವನಚೈತ್ರ . . . ಪಾಲಿಪುದು (ಪ್ರೌಢರಾ. ೪-೧); ಕಟಾಕ್ಷವಿತ್ತನು ನಿಗಮತತಿವುಲಿಯೆ (ಗಗತಾ. ೨-೧).

[ನಿಗಮ + ತತಿ$_2$]

ನಿಗಮತುರಗ (ನಾ). ನಾಲ್ಕು ವೇದಗಳನ್ನು ತನ್ನ ರಥಕ್ಕೆ ಕುದುರೆಗಳನ್ನಾಗಿ ಮಾಡಿಕೊಂಡವನು; ತ್ರಿಪುರಸಂಹಾರಿಯಾದ ಶಿವ : ನಿಗಮತುರಗಪಾಪವನಮೂಲದಾವಾ ಮೃಗಪಾಣಿ ಮೃತ್ಯುಂಜಯ ಜಯ ಸುಪ್ರಭಾವ (ವಿದಾಕೃ. ೬-೧). [ನಿಗಮ + ತುರಗ]

ನಿಗಮನ (ನಾ). ೧. ವೇದಗಳಿಂದ ಉದ್ಧರಿಸಿದ ವಾಕ್ಯ ; ವೇದ ವಾಕ್ಯ. ೨. ಒಳಹೊಗುವಿಕೆ ; ಪ್ರವೇಶ. ೩. ಸಿದ್ಧಾಂತ ; ನಿರ್ಣಯ : ತತ್ವಗಳ ನಿಗಮನವು ತರ್ಕಬದ್ಧವಾದದ್ದು (ತತ್ವಪ್ರಾ. ೨೬೩). ೪. [ನ್ಯಾಯ] ಅನುಮಾನಪ್ರಮಾಣದಲ್ಲಿ ಬಳಸುವ ಪ್ರತಿಜ್ಞಾ, ಹೇತು, ಉದಾಹರಣ, ಉಪನಯ ಮತ್ತು ನಿಗಮನ ಗಳೆಂಬ ಐದು ನ್ಯಾಯವಾಕ್ಯಗಳಲ್ಲಿ ಒಂದು : "ಕಾರಣಪೂರ್ವಕ ಊಹನ ; ನಿಗಮನ" (Deduction. ಇಂಕನಿ) ; ಪರಾರ್ಥಾನುಮಾನವು ಪ್ರತಿಜ್ಞಾ, ಹೇತು, ಉದಾಹರಣ, ಉಪನಯ, ನಿಗಮನ ಎಂಬ ಐದು ಅಂಗವುಳ್ಳದ್ದು (ಭಾತತ್ತ್ವ. ೨೭೩) ; ನ್ಯಾಯವಾಕ್ಯಗಳಾದ ಪ್ರತಿಜ್ಞಾ ಹೇತೂದಾಹರಣೋಪನಯನಿಗಮನಗಳಲ್ಲಿ ಐದೂ ಅವಶ್ಯಕವಿಲ್ಲ (ಹಿಂದಸಾ. ೨೦೨). [ಸಂ.]

ನಿಗಮನಿಧಾನ (ನಾ). ವೇದಗಳನ್ನು ತನ್ನಲ್ಲಿ ಒಳಗೊಂಡವನು : ಈತನಾರೈ ಬಂದವನು . . . ಎಂದರಸ ಬೆಸಗೊಳಲು ಈತನೀಗೆಲೆ ಜೀಯ ನಮ್ಮಿ ಯಾತುಧಾನಶಿರಃಪ್ರಧಾನಸುನೀತಿನಿಗಮನಿಧಾನ ಸತ್ವನಿಧಾನ ನಿವನೆಂದ (ತೊರರಾ. ೬-೧೯-೨೧). [ನಿಗಮ + ನಿಧಾನ]

ನಿಗಮನುತ (ನಾ). ವೇದಗಳಿಂದ ಸ್ತುತಿಸಿಕೊಂಡವನು,— ಹೊಗಳಿಸಿಕೊಂಡವನು : ಶರಣು ನಿಸ್ಸಂಕಲ್ಪ ನಿತ್ಯಾನಂದ ನಿಗಮನುತ (ಗಗತಾ. ೧-೪೩). [ನಿಗಮ + ನುತ]

ನಿಗಮಪೂತ (ಗು). ವೇದಮಂತ್ರೋಚ್ಚಾರಣೆಗಳಿಂದ ಶುದ್ಧಿ ಗೊಂಡ : ಕಮಲಜನ ಹೋಲುವೆಯ ಧಾರುಣಿಯಮರಕರದಲಿ ನಿಗಮ ಪೂತೋತ್ತಮ ಸುವಾರಿಗಳಿಳಿದವಜಸನ್ನಿಭನ ಮಸ್ತಕಕೆ (ಕುಪ್ಯಾಭೀ. ೧-೩೧). [ನಿಗಮ + ಪೂತ$_2$]

ನಿಗಮಮಂತ್ರೋಚ್ಚರಣೆ (ನಾ). ವೇದಮಂತ್ರಗಳ ಉಚ್ಚಾರಣೆ; ವೇದಘೋಷ : ನಿಗಮಮಂತ್ರೋಚ್ಚರಣೆಯಲಿ ಪೂರ್ಣಾಹುತಿಗೆ ತನ್ನೊಡಲನೊಪ್ಪಿಸಿದ (ಕುಪ್ಯಾಗ. ೯-೨೨).

[ನಿಗಮ + ಮಂತ್ರ + ಉಚ್ಚರಣೆ]

ನಿಗಮಮಸ್ತಕ (ನಾ). ವೇದಗಳ ತುದಿ,—ಕೊನೆಯ ಭಾಗ ; ಉಪನಿಷತ್ತು ; ವೇದಾಂತ : ನಿಗಮಮಸ್ತಕದರ್ಥವೇದಿಗಳುಜ್ವಳಾತ್ಮ ವಿಚಾರಿಗಳ್ ಸೊಗಯಿಪಷ್ಟವಿಧೋರುಯೋಗಪರಾಯಣರ್ . . .

ಸೊಗದೆ ಸುಂದರರಾಜನಂ ಸಲೆ ಪಾಡುತೊಪ್ಪಿದರಾಗಳುಂ (ಹಾಲಾಸ್ಯ. ೧-೧೦-೬). [ನಿಗಮ + ಮಸ್ತಕ]

ನಿಗಮರಾಜಿ (ನಾ). = ನಿಗಮತತಿ : ನಿಗಮರಾಜಿವಿರಾಜಿತವಾಜಿ . . . ಭಗಣಭಾಸುರಭಾಸ್ವರ ಸಜ್ಜಟಾಪ್ರಗುಣಪಾವನ ಪಾಲಯ ಮಾಂ ಹರಾ (ಹಾಲಾಸ್ಯ. ೨-೧೪-೫೬). [ನಿಗಮ + ರಾಜಿ$_1$]

ನಿಗಮಲಿಪಿ (ನಾ). ಒಂದು ಬಗೆಯ ಲಿಪಿ : ಗಗನಲಿಪಿ ಧೂಮಲಿಪಿ ಜಲಲಿಪಿ ಪಿಶಾಚಲಿಪಿ ಖಗಲಿಪಿ ಕದಂಬಲಿಪಿ ಕಾಕಲಿಪಿ ಕವುಷಲಿಪಿ ನಿಗಮಲಿಪಿ ವೀಲಲಿಪಿ ಬಿಂದುಲಿಪಿ ಚಕ್ರಲಿಪಿ ಲೇಖಲಿಪಿ ದರ್ಪಣಲಿಪಿ ಮೃಗಲಿಪಿ ಪ್ರಬಂಧಲಿಪಿ ರಗಣಲಿಪಿ ಶೈಲಲಿಪಿ ದೇವಲಿಪಿ ನಂದಿಲಿಪಿ ಈ ಅಗಣಿತ ಲಿಪಿಗಳ ನೋಡಲಱಯದೆ ಬಿಜ್ಜಳರಾಯನ ಸಭೆಯೊಳು ಕಳವಳಗೊಳುತಿದ್ದರು ವಿದ್ವಾಂಸರುಗಳೆಲ್ಲಾ (ಭಾಸ್ಕರ. ೬೬-೫); ℙ ಈ ಲಿಪಿಗಳೆಲ್ಲವು ನಿಶ್ಚಯವಾಗಿ ಇವೆಯೆಂಬುದಕ್ಕೆ ಆಧಾರ ದೊರೆತಿಲ್ಲ.

[ನಿಗಮ? + ಲಿಪಿ]

ನಿಗಮವಂದ್ಯ (ನಾ). ವೇದಗಳಿಂದ ವಂದಿತನಾದವನು,— ನಮಸ್ಕರಿಸಿಕೊಂಡವನು : ನಿಗಮವಂದ್ಯನೆ ನಿತ್ಯಸಂತುಷ್ಟ . . . ಶರಣು (ಕೌಶಿರಾ. ೨೬-೫೭); ನಿಗಮವಂದ್ಯನು ಕಂಡನುರಿಯೊಳಗಿರ್ದ ಮೈಥಿಲಿಯ (ಕೌಶಿರಾ. ೪೩-೩೮). [ನಿಗಮ + ವಂದ್ಯ]

ನಿಗಮವಿದೂರ (ನಾ). ವೇದಗಳಿಗೂ ನಿಲುಕದವನು ; ವೇದಗಳಿಗೂ ವರ್ಣಿಸಲಸಾಧ್ಯನಾದವನು,— ಅನಿರ್ವಚನೀಯನಾದವನು ; ವೇದಾತೀತನಾದವನು : ಲಲಿತವಿಹಾರ ನಿಗಮವಿದೂರ ಸುಖಸಾಕಾರ ಗತಪಾರ . . . ಸಲಹಬೇಕೆಂದ (ಕುಮ್ಯಾಭೀ. ೩-೮೭).

[ನಿಗಮ + ವಿದೂರ]

ನಿಗಮವೇದ್ಯ (ನಾ). ವೇದಗಳಿಂದ ತಿಳಿಯಲ್ಪಡುವವನು ; ವೇದವೇದ್ಯ ; ವೇದಗಳು ಸ್ಥಾಪಿಸುವ ಪರವಸ್ತು,—ಪರಮಾತ್ಮ : ನಿಗಮವೇದ್ಯನ ಭಜನೆಯಱಿದು ಪುರದಾ ಜೈನರುಗಳೆಲ್ಲ ಬಂದು . . . ನಿನ್ನಂಗನೆಯಳಿಂದೆಮ್ಮ ಜೈನಕುಲಕಳಿವೆಂದೆನೆ (ಪ್ರೌಢರಾ. ೧೨-೧೬).

[ನಿಗಮ + ವೇದ್ಯ]

ನಿಗಮಶಿರ (ನಾ). = ನಿಗಮಮಸ್ತಕ: ಸ್ವಾನುಭವ ಸಂಸಿದ್ಧ ನಿಜವಿಜ್ಞಾನ ದೀಪವೆನಿಪ್ಪ ನಿಗಮಶಿರೋನಿತಾಂತರಹಸ್ಯ ವೇದಪುರಾಣಸಂಹಿತೆಯ . . . ಕರುಣಿಸಿದಾ ನಿಖಿಳಮುನಿವಂದ್ಯ ಶುಕಮುನಿಚರಣ ಶರಣೆಂದ (ನಿಭಾಗ. ೧-೨-೩೦) ; ನಿಗಮಶಿರಗಳಿಗಂದದಾವಗ ಧಗಧಗಾಯತ ರೂಪನಾಗಿಯೆ ಬಗೆಗಗೋಚರನಾಗಿ (ಗಗಶಾ. ೧೪-೧). [ನಿಗಮ + ಶಿರ$_2$]

ನಿಗಮಸ್ತೋಮ (ನಾ). = ನಿಗಮತತಿ : ನಿಗಮಸ್ತೋಮದ ನಿಲಯಂ ನಿಗಮಸ್ತೋಮಕ್ಕೆ ಬೀಡು ನಿಗಮಂ ನಿತ್ಯಂ ನಿಗಮಸ್ತೋಮದ ಸೌಖ್ಯಂ ನಿಗಮಸ್ತೋಮಕ್ಕೆ ಲೋಕನಾಥಂ ಮುಖ್ಯಂ (ಹವಿಸ್ಮಾರ. ೧-೬೩).

[ನಿಗಮ + ಸ್ತೋಮ]

ನಿಗಮಾಂತ (ನಾ). ವೇದಾಂತ ; ಉಪನಿಷತ್ತು : ನಿಗಮಾಂತಾಭೇದ್ಯ ಸದ್ರೂಪ ಚಿದ್ವ್ಯೋಮಾಕಾರ . . . ನಿಷ್ಕಾಮಪ್ರೇಮ ಮಹೇಶ ರಕ್ಷಿಸೊಲವಿಂ (ರಾಜಶೇ. ೩-೩೯). [ನಿಗಮ + ಅಂತ$_2$]

ನಿಗಮಾತೀತ (ನಾ). ೧. ವೇದಗಳಿಗೆ ಸಿಕ್ಕದುದು ; ವೇದಗಳನ್ನು ಮೀರಿದುದು : ಇಂತೀ ಶರಣನ ಮಹಿಮೆಯನಂತಿಂತೆಂದುಸಿರಲಳವೆ ನಿಗಮಾತೀತಂ (ಹವಿಸ್ಮಾರ. ೫-೫೦). ೨. ವೇದಗಳಿಂದ ತಿಳಿಯಲಾಗದವನು ; ವೇದಾತೀತ : ಅಲಿಸು ಪುನೀತ ನಿಗಮಾತೀತ ಮನ್ನಾಥ ಭೂಲೋಕದೊಳು ಭಕ್ತಿ ಮಸುಳಿಸಿತು ದೇವ ಕರುಣಾಲೋಕನಂಗೆಯ್ದು ಶಿವಮತವ ಪೆಚ್ಚಿಸುವದೆಂದು ಮುನಿ ಬಿನ್ನೈಸಲು (ಪ್ರೌಢರಾ. ೨-೩). [ನಿಗಮ + ಅತೀತ]

ನಿಗಮಾನೀಕ (ನಾ). = ನಿಗಮತತಿ : ನಿಗಮಾನೀಕಮನಾ ಸ್ಮೃತಿ ಪ್ರಚಯಮಂ ಬಲ್ಲರ್ ತದರ್ಥಂಗಳಂ ಸೊಗಸಿಂದೋದುತಮೊಂದೆಯಾದೊಡದನಂಗೀಕಾರಮಂ ಮಾಡುತಂ (ಹಾಲಾಸ್ಯ. ೨-೧೫-೨೫).

[ನಿಗಮ + ಅನೀಕ]

ನಿಗಮಾರ್ಥ (ನಾ). ವೇದಗಳ ಅರ್ಥ,—ತಾತ್ಪರ್ಯ : ನಿರುತವಿದು ನಿಜವೆಂದು ಬಗೆ ನಿರ್ಧರಿಸಿದೆವು ನಿಗಮಾರ್ಥದಲಿ ನಿನಗುರುತರಾನುಗ್ರಹದ ಬೀಜಾಕ್ಷರವಿದೀಗೆಂದ (ತೊರರಾ. ೧-೨-೯). [ಸಂ.]

ನಿಗಮಾಳಿ (ನಾ). = ನಿಗಮತತಿ : ಕಾದಿ ಕೈವಲ್ಯವನು ಪಡೆದರು ಸೋದರರು ನಿಗಮಾಳಿ ಕಾಣದ ಪರಮಪಾವನನ (ಕೌಶಿರಾ. ೨೭-೧).

[ನಿಗಮ + ಅಳಿ$_4$ (= ಅಲಿ$_4$)]

ನಿಗಮಿತ (ಗು). ಸಂಘಟಿತವಾದ ; ಸೇರಿದ : 'ನಿಗಮಿತ ಸಮವಾಯ' ಪರಾ. [ಸಂ.]

ನಿಗಮಿತಸಮವಾಯ (ನಾ). ಅನೇಕ ವ್ಯಕ್ತಿಗಳಿಂದ ಅಥವಾ ಸಂಸ್ಥೆಗಳಿಂದ ಸಂಘಟಿತವಾದ ಒಂದು ಸಂಸ್ಥೆ : ಒಂದು ರಾಜ್ಯದ ಸರ್ಕಾರದ ಪರವಾಗಿ ನಡೆದ ಯಾವುದಾದರೂ ಸಂವಿದೆಯಲ್ಲಿ . . . ಒಂದು ನಿಗಮಿತಸಮವಾಯದ ಸದಸ್ಯರಾಗಿ . . . ಯಾವ ಪ್ರಕಾರದಲ್ಲಾದರೂ ಭಾಗಿಯಾಗಿದ್ದಲ್ಲಿ (ಭಾಧಾನ. ೧೮೪). [ನಿಗಮಿತ + ಸಮವಾಯ]

ನಿಗಮೋತ್ತಮಾಂಗ (ನಾ). = ನಿಗಮಮಸ್ತಕ: ಉಡುವೊಡೆ ಸಂತತಂ ಪುಲಿದೊವಲ್ ನಿಮಗಲ್ಲದೊಡಾ ದಿಗಂಬರಂ . . . ನಿಗಮೋತ್ತಮಾಂಗ ಮುಣ್ಪೊಡೆ ವಿಷಮಲ್ಲದಿರ್ದೊಡೆ ಸಮಸ್ತಜಗಂ ನಿಮಗೇನನೆಂದಪರ್ (ಪಂಪಾಶ. ೨೦). [ನಿಗಮ + ಉತ್ತಮಾಂಗ]

ನಿಗಮೌಘ (ನಾ). = ನಿಗಮತತಿ : ನಿಗಮೌಘವಱಿಸಿದಡತ್ತಲಿತ್ತಲು ಸರಿವ . . . ನೆನೆವರಿಗೆ ತನ್ನನು ತೆತ್ತು ಬದುಕುವೆನೆಂಬ ಬೋಳೆಯರರಸ ನಡೆತಂದ (ಕುಮ್ಯಾವಿ. ೧೦-೫೨). [ನಿಗಮ + ಔಘ]

ನಿಗರ$_1$ (ನಾ). ೧. ಮನೋಹರತೆ ; ಚೆಲುವು : "ನಿಗರ . . . ಕಣ್ಗೆವಂದುದು, ಪರಿವಡೆದುದು—ಈ ೧೪ ಮನೋಹರಂ" (ಕಶಸಾ. ೧೧-೨೧೧); "ನಿಗರಂ ನೆಟ್ಟು ಚೊಕ್ಕ ಚೊಕ್ಕಳಿಕೆಯು . . . ಎನೆ ಮನೋಹರ ಮಕ್ಕುಂ" (ಕವಿಕಂ. ೯೯) ; ಜಗದ್ವ್ಯಾಪಕನ ನಿಲವಿನ ನಿಗರದವೊಲೆಂದ (ತೊರರಾ. ೩-೬-೩೩) ; ಕೆಲಕೆ ಸಾರುತ್ತುರ್ಬುತಂ ನಿಗರದಿಂ ನಲಿಗರ್ಚುತಂ ಪುಲ್ಲಂ (ಕೊಟ್ಟೂಬ. ೧೦-೨೧). ೨. ಯೋಗ್ಯವಾದುದು ; ಒಪ್ಪತಕ್ಕುದು ; ಉತ್ತಮವಾದುದು ; ಸರಿಯಾದುದು : ಮಗುವು ರಾಘವನೆಂದು ತಪ್ಪಿಸಿ ನುಡಿದ ನುಡಿ ನಿನಗೆ ನಿಗರವೇ (ತೊರರಾ. ೧-೯-೩೦) ; ಧಗಧಗಿಸಿತುರಿ ಮತ್ತೆ ಝುಳಪಿಸೆ ನಿಗರವಲ್ಲಿದೆನುತ್ತ ರಕ್ಕಸವಿಗಡಕೈದುವನಿರಿಸಿ ಕೆಲಸಾರಿದನು ಕಲಿಹನುಮ (ತೊರರಾ. ೫-೨-೮೫) ; ಬಱದೆ ಸೇನೆಯನಿವನ ಕೈಯಿಂದ ಗಗನಪಥಿಕರ ಮಾಡಿಸುವದಿದು ನಿಗರವಲ್ಲೆಮಗೆ (ತೊರರಾ. ೬-೪೦-೧೭).

[←ತಮಿ. ನಿಕರ್ = ಹೋಲಿಕೆ, ಎಣೆ. ಸಾದೃಶ್ಯ ; ಸಮಾನಾಂತರವಾದುದು, ಸಮವಾದುದು ; ಕಾಂತಿ, ಪ್ರಕಾಶ, ಹೊಳಪು ; ಕಾಳಗ, ಯುದ್ಧ]

ನಿಗರ$_2$ (ನಾ). ಗುಂಪು ; ಸಮೂಹ : "ನಿಗರ—ನಿಕರ = ಸಮೂಹ" (ತದ್ಭಕೋ. ೭೭) ; ವಿಟನಿಗರ ಬಳಿಕೆಸೆದುದಂದು ವಸಂತಮತುವಿನಲಿ (ಅಂಬಿಕಾ. ೧೧-೪) ; ತೋಳಿನಿಂ ಪಿಡಿದೆತ್ತಿ ತನ್ನ ಪೀತಾಂಬರದ ಮೇಲ್ಸೆರಗಿನಿಂದೆ ಮೈರಜವನೆಲ್ಲಂ ಪೊಡದು ಜಾಳಿಸುವ ಕಣ್ಣೀರನೊರಸಿ ಮಂಡೆಯ ನಿಗರ ವಾಸನಿಸಿ ನುಡಿದಂ (ತುರಂಗ. ೨೬-೧೮) ; ನೀಲಗಿರಿಯ ಮುಗಿಲ ನಿಗರದ ಶಿಖರಮನೇಱಿ ಮೈಮೆವೆತ್ತ ಶ್ರೀಪುರುಷೋತ್ತಮನಂ ಕಂಡು (ರಾಮಾಶ್ವ. ೭೬-೧೯).

ನಿಗರಕೋಳ್ಗಂಡ, ನಿಗರಕೊಳುಗಂಡ, ನಿಗರಕ್ಕೊಳ್ಗಂಡ = ಗುಂಪಿಗೇ ಸಾಹಸಿಯಾದವನು ; ಒಂದು ಬಿರುದು : ನಿಗರಕೋಳ್ಗಣ್ಡಂ ಸತ್ಯಯುಧಿಷ್ಠಿರಂ ಶ್ರೀಮನ್ಮಹಾಸಾಮನ್ತಂ ಭಾವಂ ಬಿಜ್ಜರಸರ್ . . . ತ್ರಿಭೋಗಾಭ್ಯನ್ತರಸಿದ್ಧಿಯಿನ್ದಮಾಳುತ್ತಮಿರೆ (ಕಇ. IV, ೪೧-೧೦ ; 11ನೆಯ ಶತ) ; ಮನ್ನೆಯರ ಗಂಡ ನಿಗರಕೊಳುಗಂಡ ಬಾಜಗಭೂಪ ನಂಕಕಾ[ಜ] (ಕಇಅ. ೧೩-೪-೮೮ ; 1093) ; ಪಾಣ್ಡ್ಯಗಜಕೇಸರಿ ನಿಗರಕ್ಕೊಳ್ಗಂಡ (ಸೌಇಇ. IX-1, ೨೬೫-೧೪ ; 1155). [<ಸಂ. ನಿಕರ]

ನಿಗರ$_3$ 'ನಿಕರ$_2$' ನೋ.

ನಿಗರಗತ್ತುರಿ (ನಾ). ಶ್ರೇಷ್ಠವಾದ ಕಸ್ತೂರಿ ; ಉತ್ತಮವಾದ ಅಥವಾ ಶುದ್ಧವಾದ ಕಸ್ತೂರಿ : ಪದನಱಿದರೆವ ಸಿರಿಗಂಪಿನ ಕುರುಳ್ಗೆ ಪುಡಿಗತ್ತುರಿಗೆಯ್ವ ನಿಗರಗತ್ತುರಿಯ ಕಾಲ್ಗಳಿವ ಕಪ್ಪುರದ ತೊಳೆವ ಜವಾದಿಯ ಮೇದಿಸುವ ಪೊಗೆಗೊಳಿಸುವಗರುವಿನ ಪೊರೆವರಲ ಪೊಟ್ಟಳದ ಪೆಂಪಿಟ್ಟಳಮಾದ ತಂತಮ್ಮ ಮನೆಗಳೊಳ್ . . . ಬಾಲೆಯರ್ ಲೀಲೆಯಿಂದಿರೆ (ಧರ್ಮನಾ. ೨-೧೦೮ ಪ) ; ನಿಗುರು[ಗರ]ಗತ್ತುರಿಗಂಪನತಿಗಳೆವ ತನುವಿನೋರಗೆವರೆಯದಂಗನೆಯರೇಳ್ತಂದು ಬಳಸಿದರು ಸುಗುಣರಧಿನಾಥನಂ ವರಸುಂದರೇಂದ್ರನಂ (ಸೌಂದಪು.೧೦-೨೪); ನಿಗರಗತ್ತುರಿಯಡ್ಡ ಬೊಟ್ಟು (ರೇವಣ. ೩-೩೬). [ನಿಗರ$_1$ + ಕತ್ತುರಿ]

ನಿಗರಣ (ನಾ). ೧. ನುಂಗುವುದು ; ಕಬಳಿಸುವುದು. ೨. ಪೂರ್ಣವಾಗಿ ಗ್ರಹಿಸುವುದು. ೩. ಗಂಟಲು. ೪. ಹೋಮದ ಹೊಗೆ. ೫. ಕುತ್ತಿಗೆ ; ಕೊರಳು : ಸುಹೃಜ್ಜನದಯಿತಂ ಬೃಹನ್ನಿಗರಣಂ ಕ್ಷಯವೃದ್ಧಿಧನಾನ್ವಿತಂ . . . ಕುಬ್ಜಶರೀರಿ ಕುಳೀರಸಂಭವಂ (ಜಾತತಿ. ೧೭-೪). [ಸಂ.]

ನಿಗರಳ (ನಾ). ಕುತ್ತಿಗೆ ; ಕೊರಳು : "ಕೊರಲ್ ಕಂಠ ಗ್ರೀವಾ ಗಳ ನಿಗರಳಂ ಕಂಧರವೆನಲ್" (ವಸ್ತುಕೋ. ೬೦-೭). [<ಸಂ. ನಿಗರಣ]

ನಿಗರಾಣಿ (ನಾ). (ಉಕ) ಮೇಲ್ವಿಚಾರಣೆ ; ಉಸ್ತುವಾರಿ : ಪರೀಕ್ಷಾಮಂದಿರದಲ್ಲಿ ನಿಗರಾಣಿ ಮಾಡಲು ನಾಲ್ವರು ಅಧ್ಯಾಪಕರಿದ್ದಾರೆ (ರೂಢಿ). [←ಮರಾ. ನಿಗರಾಣೀ ; ಪಾರ. ಹಿಂ. ನಿಗರಾನೀ]

ನಿಗರ್ಭ (ನಾ). ಹೊಟ್ಟೆ ; ಬಸಿರು : ನಿಗರ್ಭಪೂರಿತಮಾಗಿರಲ್ ಪ್ರಾಣಾಯಾಮವಂತರ್ಮುಖ ಸವಿಷಯಸ್ತೋಮ ಚಾರಿತ್ರಪ್ರವರ್ತನ ಸೀಮೆಯಲಿ ಪೊಸತೆನಿಸೆ ಪ್ರತ್ಯಾಹಾರಮೊದಗಿರಲು (ಬಸಪು. ೩೫-೧೮). [ಸಂ.]

ನಿಗರ್ವ (ನಾ) = ನಿಗರ್ವತೆ. [ಸಂ.]

ನಿಗರ್ವತೆ (ನಾ). ಗರ್ವವಿಲ್ಲದಿರುವಿಕೆ ; ವಿನಯ : ಸರ್ವೋಪಾಯದಿಂದೊಡಬಡಿಸಿದೆನು ನಿಗರ್ವತೆಯಿಂದ ರಾವಣನು ಸರ್ವಥಾ ಸೀತೆಯ ಬಿಡೆನೆಂದವನತಿಗರ್ವದ ಮಾತನಾಡಿದನು (ರಾಮವಿ. ೧೫-೫೬). [ಸಂ. ನಿಗರ್ವತಾ]

ನಿಗರ್ವಿ (ನಾ). ಜಂಭವಿಲ್ಲದಿರುವವನು ; ಗರ್ವವಿಲ್ಲದಿರುವವನು : ಅಳದ ಮಡುವಿನೊಳಾಡುತಲಿದ್ದರು ತಾನು ನಿಗರ್ವಿ ರೋಹಿತನು (ಇಂಚಾಪ. ೬೨-೪೯) ; ಅವರು . . . ನಿಗರ್ವಿಗಳು (ಸುಪಸಂ. ೧). [ಸಂ. ನಿಗರ್ವಿನ್]

ನಿಗರ್ವಿತೆ (ನಾ). = ನಿಗರ್ವತೆ : ದರ್ಪವುಳ್ಳಂಗೀಸು ಮಂಗಳವೊಪ್ಪದೇನ್ಯೆ ಜಗದೊಳಾವಂಗಪ್ಪುದೀ ಬಲವೀ ನಿಗರ್ವಿತೆಯೆಂದನಾ ಮತ್ಸ್ಯ (ಕುವ್ಯಾವಿ. ೯-೨೮). [ಸಂ. ನಿಗರ್ವಿತಾ]

ನಿಗಲ, ನಿಗಳ (ನಾ). ೧. ನುಂಗುವುದು ; ಕಬಳಿಸುವುದು. ೨. ಕುದುರೆಯ ಕೊರಳು,—ಕುತ್ತಿಗೆ. ೩. ಬೇಡಿ; ಸಂಕೋಲೆ; ಸರಪಳಿ. **ನಿಗಳ** : ೨. ಹಯದ ಕೊರಲೊಳುತ್ತಮ ನಡುವಣ ಪ್ರದೇಶ ನಿಗಳಮದಕ್ಕುಂ (ಅಶ್ವಶಾ. ೯-೨೫). ೩. ವೇದಕ್ಕೆ ಒಱೆಯ ಕಟ್ಟುವೆ ಶಾಸ್ತ್ರಕ್ಕೆ ನಿಗಳವನಿಕ್ಕುವೆ ತರ್ಕದ ಬೆನ್ನ ಬಾರನೆತ್ತುವೆ (ಬಸವ. ೭೧೬) ; ಹರನಾಜ್ಞೆಯೆಂಬ ನಿಗಳವ ಹಱಿದು ಕೈಲಾಸಗಿರಿಯೆಂಬ ಸಜ್ಜಾರದಿಂದ ಪೊಱಮಟ್ಟು (ನಂದಿಮಾ.೧೩-೬). ೪. ಆನೆಯ ಕಾಲಿಗೆ ತೊಡಿಸುವ ಸರಪಳಿ ; ಸಂಕೋಲೆ : "ನಿಗಳಃ . . . ಶೃಂಖಲಾ, ಅಂದುಕಃ - ಈ ೫ ಆನೆಯ ಕಾಲ್ಗಟ್ಟು" (ಹಲಾಯು. ೩೭-೭೦) ; "ಹಿಂಜೀರಮಂದುಕಂ ಶೃಂಖಳಂ ಪಾದಬಂಧಂ ನಿಗಳಮೆನಲು ಸಂಕಲೆಯೆನಿಕ್ಕುಂ" (ಮಂಗರಾ. ೪೬-೨) ; ನಿಗಳಂಬೋಲ್ ತೊಡರ್ದಿರ್ದ ಮೋಹನಿಗಳಂ ನಿರ್ವ್ಯಾಕುಳಂ ಪಿಂಗೆ ಮತ್ತಗಜೇಂದ್ರಂಬೊಲಲರ್ಗಳಂ ವನಮನಂದಾನಂದದಿಂ ಪೊಕ್ಕಂ (ಕಾಪ್ಯಾವ. ೩೪೨) ; ಪೆರ್ಮಾಡಿರಾಯನ ಪಟ್ಟದಾನೆ ಸಪ್ತಮದಾವಸ್ಥೆಯಿಂ ಮುಂದುಗಾಣದೆ . . . ಕಾಲೊಳ್ಬಂಧಿಸಿದ ಮಾಲೆಯ ನಿಗಳಂಗಳುಂ ಘುಲಘುಲಿಸೆ ಜಾಣಂ ಸೆಳೆದುಣ್ಮೆ ಪೊಣ್ಮೆ ಘಳಿಲನೆ ಕಂಪಿಸಿ ನಿಟ್ಟೋಡಿಯಾಡಿಗೊಂಡು ಪರಿದು (ಬಾಹೂರ. ಹ. ೩೧೯-೬); ಕಾವನ ಮದದಂತಿಯ ಕಾಲ್ಗೆ ನಿಗಳಮನೋವದೆ ತಂದಿಕ್ಕುವಂತೆ ಕೋವಿದೆಯೊರ್ವಳವಳ ಪದಯುಗಳಕೆ ನೇವುರವನು ರಚಿಸಿದಳು (ಕುರಾಸಾಂ. ೨೯-೯೪). ೫. ಕಾಲಿಗೆ ಧರಿಸುವ ಒಂದು ಬಗೆಯ ಆಭರಣ ; ನೂಪುರ ; ಕಾಲಂದುಗೆ : ನಿಗಳದ ನುಣ್ಬರಂ ನೆಗೆವಿನಂ ನುಡಿಗಳ್ ಕಿವಿಗಿಂಪನೀವಿನಂ . . . ನೀಱೆಯರೊಲ್ದು . . . ಮುತ್ತಿನ ಸೇಸೆಯನಾಗಳಿಕ್ಕಿದರ್ (ಕಬ್ಬಿಕಾ. ೩೪೨) ; ನಿಗಳ ಉಂಗುರ ಗೆಜ್ಜೆ ಪೊನ್ನಂದುಗೆ ಪವಳಮಂ ಮುತ್ತು ಪೊಸ ಅವಕಿಗೆ ಕಿಱುಗೆಯುಂ . . . ತಂದುಕೊಡುವರು ನಾಳೆಯೆಮ್ಮಯ ತಂದೆತಾಯಿಗಳೆನಗೆ (ಬಸಪು. ೧೪-೧೫). ೬. ಕೈಗೆ ತೊಡುವ ಒಂದು ಬಗೆಯ ಆಭರಣ ; ತೋಡ : ಮುಂಗೈ ನಿಗಳವನು ತಿರುಹುತ್ತ ನಸುನಗುತೆದ್ದನಭಿಮನ್ಯು (ಕುಸ್ಯಾದ್ರೋ. ೪-೩೪). ೭. (ಆಲಂ) ಬಂಧನ ; ಕಟ್ಟು ; ಪಾಶ : ಮೋಹಮಯಂ ನಿಗಳಂ ಕಳತ್ರಂ (ಪಂಪಭಾ. ೪-೧೨) ; ಕರಮೆಸೆದಿರ್ದುದು ಚಪಳೆಗೆ ಸಿರಿಗಿಕ್ಕಿದ ನಿಯಮನಿಗಳಮೆನೆ ಭುಜಗಯುಗಂ (ಕಾದಂಪೂ. ೩೧) ; ಪೋಪೊಡಂ ತನಯವಿಮೋಹಮೆಂಬ ನಿಗಳಂ ತೊಡರ್ದಿರ್ದಪುದು (ಸುಕುಮಾ. ೧೦-೩೨) ; ಪಿತೃವಾಕ್ಯಪರಿಪಾಲನಾ ನಿಗಳದಿಂ ಧರ್ಮದಾಲಾನಕ್ಕೆ ಕಟ್ಟುಗೊಂಡಿನಕುಲನ ಧೈರ್ಯದೈರಾವತಂ ಹೋರಾಡುತಿರ್ಪುದಂ ಕಾಣುತೆ ಗುರುವಸಿಷ್ಠನಾಡಿದನ್ (ಶ್ರೀರಾಮಾ. ೧೬೯-೪೮೨) ; ಈ ಭೋಗದ ನಿಗಳದಿಂದ ಪಾರಾಗಲು ಎಚ್ಚೆತ್ತುಕೊಳ್ಳುವುದಕ್ಕೂ ಕಾಲಲಬ್ಧಿ ಬೇಕು (ಪರಿಶೀ. ೧೩೫). ೮. ಕಾಲುಪೆಂಡೆಯವನ್ನು ಧರಿಸಿದ ಪರಾಕ್ರಮಿ,—ಶೂರ (?) : ಆ ಕಳದ ಕೆಲದೊಳ್ ಸಾರಿಯಂ ಕೋಲೊಡ್ಡಿ ಗೆಲ್ವ ನಿಗಳನ ನೆಗಟ್ತಿಗಿಡಿಪ ಭೃಗುವಂ ನಗುವ ಬೇತಾಳನಂ ಬೇಡೆನಿಪ ತಕ್ಕು ಮಿಕ್ಕುವರೆ ಕಲ್ತ ಬಿನ್ನಣಗಳಿರ್ದು (ಪುಷ್ಪಪು. ೨-೬೦ ಪ). ೯. (?) : ಅಲ್ಲಿ ಮಹಾಜನಮಾನ್ಕರೆದು ನಿಗಳ ಬಾಟ್ವನ್ತು ಜೀವಿತಂ ಬೇಡಿಕೊಳ್ಳಿಮೆನ್ದೊಡೆ (ಸೌಇಇ. IX-1, ೪೬-೪ ; ಸು. 8ನೆಯ ಶತ) ; ಏವೂರ ನಿಗಳದೊಂದು ಬಣ್ಣಗುದುರೆ! ಎಮ್ಮಿ ಜಾಯಿಲಂಗೆ ದೊರೆವರ್ಕುಂ. ಕೊಂಕದ ಬಾಲಂ, ನಿಮಿರ್ದ ಕೊಡಂಕೆ, ಡಗೆವೊಯ್ವಳ್ಳೆ, ಗುಜ್ಜುಗಾಲ್, ನಟ್ಟೊಡಲ್, ಕಟ್ಟಾಯದ ಮೆಯ್ಸಿರಿ (ರಾಮಾಶ್ವ. ೮೪-೨೪). 'ನಿಗಡ' ಪರಾ.

ನಿಗಳಂಕಮಲ್ಲ = ಕಾಲುಪೆಂಡೆಯವನ್ನು ಧರಿಸಿದ ಪರಾಕ್ರಮಿ,—ಶೂರ ; ಒಂದು ಬಿರುದು : ವೈರಿಭೇರುಣ್ಡಂ ನಿಗಳಂಕಮಲ್ಲಂ ಕಟಕದ ಗೋವಂ ಅಣ್ಣನ ಸಿಂಗಂ (ನಾಂದೇಡ್. ೬-೧೫ ; 1066) ; ನೃಪರೊಳು ನಿಗಳಂಕಮಲ್ಲನಾದಗಲದ ವೀರವಾರಳವೊ (ಕೊಲ್ಹಾಶಾ. ೧೫-೫೪ ; 1186). [ಸಂ.]

ನಿಗಳ 'ನಿಗಲ' ನೋ.

ನಿಗಳನಿರೋಧ (ನಾ). ಸಂಕೋಲೆಯಿಂದ ಬಂಧಿಸುವುದು; ಸರಪಳಿಯ ಬಂಧನ: ನಿಗಳನಿರೋಧಂ ಮದಗಜಂಗಳೊಳ್. . . ಅಕ್ಕು ಮಲ್ಲದೆ ಜನಪದದ ಜನಂಗಳೊಳಿಲ್ಲ (ಜಗವಿ. ೨-೧ ಪ). 'ನಿಗಡನಿರೋಧ' ಪರಾ. [ನಿಗಳ (=ನಿಗಲ)+ನಿರೋಧ]

ನಿಗಳಬಂಧ (ನಾ). = ನಿಗಳನಿರೋಧ: ಸಗರಮುನಿಕುಂಜರಂ ಸಂಸಾರ ಬಂಧಕಾರಣ ನಿಗಳಬಂಧಂಗಳಂ ಪಱಿಯೆ ಪೊಯ್ದು . . . ಸನ್ಮಾರ್ಗ ವೀಧಿಯೊಳ್ ಪರಿದು ಪರಮಗತಿಯನೆಯ್ದುವುದುಂ (ಅಜಿಪು. ೧೨-೧ ಪ).
[ನಿಗಳ (=ನಿಗಲ)+ಬಂಧ]

ನಿಗಳಮೋಕ್ಷ (ನಾ). ಸಂಕೋಲೆಯಿಂದ ಬಿಡುಗಡೆ: ಅವುದಚ್ಚರಿ ಹೊಱವಡುವ ವಸುದೇವನಂಘ್ರಿಯ ನಿಗಳಮೋಕ್ಷವದಾವುದ್ಯೆ ನೃಪ ಚಿತ್ರಬಂಧಕವಾಟನಿರ್ಭೇದ (ನಿಭಾಗ. ೧೦-೪-೧೧).
[ನಿಗಳ(=ನಿಗಲ)+ಮೋಕ್ಷ]

ನಿಗಳವಿಕ್ಕು (ಕ್ರಿ). ಸೆರೆಹಾಕು; ಬಂಧಿಸು: ಕೇಳ್ವನ ಕಿವಿಯೊಳು ಗೂಂಟಮನಾಳ್ವಿನೆಗಂ ಬೆಟ್ಟ ತೆನಸುಯೊಟ್ಟ ಜಿವಿರುದಿಂದೇಳ್ವರೆಲಕ್ಕೆಯೊಳ ದಟುರ್ವ್ವೇಟ್ವಿನೆಗಂ ನಿಗಳವಿಕ್ಕಿದಂ ಭೂತನ್ರಿ(ನೃ)ಪ (ಇಅ. XII, ೯೬-೧೧; 1187). [ನಿಗಳ(=ನಿಗಲ)+ಇಕ್ಕು]

ನಿಗಾ, ನಿಗ್ಗ (ನಾ.) ೧. ಲಕ್ಷ್ಯ; ಗಮನ: ಅವಳ ಗಂಡ ಬಹು ಕಾಲದಿಂದ ಮನೆಯ ಕಡೆ ನಿಗಾ ಕಡಿಮೆ ಮಾಡಿದ್ದ (ಪ್ರಹಾರ. ೭); ಈ ಕಲಿಗಾಲದ ಮಹರ್ಷಿಗಳ ಮೇಲೆ ಸ್ವಲ್ಪ ನಿಗಾ ಇರಲಿ (ಕೆಲನೆ. ೩೭೮); ಇವರ ಮೇಲೂ ನಿನ್ನ ನಿಗಾ ಇರಲಿ (ಮುನಿಸಾ. ೩೦). ೨. ಹೊಣೆ; ಜವಾಬ್ದಾರಿ: ಮನೆಗೆ ಬೀಗ ಹಾಕಿ . . . ಮನೆಯ ಮೇಲೆ 'ನಿಗಾ' ಒಪ್ಪಿಸಿ . . . ಹೊರಟರು (ಸುಖವಿ. ೧೮); ಮಗುವಿನ ತಂದೆಯಾದ ನಿಮಗೆ ಸ್ವಲ್ಪವೂ ನಿಗಾ ಇರಬೇಡವೇ? (ವಂಶವೃ. ೬೯). **ನಿಗ್ಗ**: ೧. ಅವರ ನಿಗಕ್ಕೆ ಸುಬ್ಬುವೂ ಬಿದ್ದನು (ಅವತಂ. ೫೧); ಅಮೇಲೇನೇ ನನಗೆ ನನ್ನ ತಾಯಿಯ ಜ್ಞಾಪಕ, ಅವಳ ಸೊಸೆ ಮೇಲೆ ನಿಗ ಬಂದದ್ದು (ಚಿಂಗೂಲಿ. ೩೮).

ನಿಗಾ ಇಡು = ಗಮನಿಸು; ಲಕ್ಷ್ಯವಿಡು: ಮೇಸ್ತ್ರಿಗಳು ಕೂಲಿಗಳ ಮೇಲೆ ನಿಗಾ ಇಟ್ಟೇ ಇರುತ್ತಾರೆ (ಸಾಹೇಬ್.೧೪); ಅವನ ಮೇಲೆ ನಿಗಾ ಇಡಬೇಕೆಂದು ಆರ್ಡರ್ ಇದೆ (ಭಾರತಿ. ೨೬); ನಿಗಾ ಇಡದ ಹೊಲ ಹೊಗೆಯಾಗಿ ಹೋದೀತು (ಗಾದೆ). ನಿಗಾ ತಕೊಳ್ಳು, ನಿಗಾ ತೆಗೆದುಕೊಳ್ಳು = ಗಮನಕ್ಕೆ ತೆಗೆದುಕೊಳ್ಳು; ಲಕ್ಷ್ಯಕೊಡು: ಹಾಗಿದ್ದರೆ ಅಧಿಕಾರಿಗಳಾರೂ ಈ ವಿಷಯದಲ್ಲಿ ನಿಗಾ ತಕೊಳ್ಳಲಿಲ್ಲವೇ? (ದೇಶಧು. ೮೨); ನಾನು ಸ್ವಲ್ಪ ನಿಗಾ ತೆಗೆದುಕೊಳ್ಳದಿದ್ದರೆ ಈ ಮನೆಯಲ್ಲಿ, ಅವರ ಪಾಡು ಏನಾಗಬೇಕು? (ಕೊನೆಭೇ. ೧೧೫). ನಿಗಾ ತಪ್ಪು, ನಿಗ ತಪ್ಪು = ಗಮನವಿಡದಿರು; ನಿರ್ಲಕ್ಷ್ಯದಿಂದಿರು: ಸ್ವಲ್ಪ ನಿಗಾ ತಪ್ಪಿದರೂ ಈ ಕೆಲಸ ಹಾಳಾಗುತ್ತದೆ(ರೂಢಿ); ನಿಗ ತಪ್ಪಿ ಸ್ವಲ್ಪ ತೇವವಾಗಿರುವ ಸ್ಥಳದಲ್ಲಿ ಇಡಲ್ಪಡುವ ತೆಂಗಿನ ಕಾಯಿ ಹೋಳುಗಳು, ಬ್ರೆಡ್, ಉಪ್ಪಿನಕಾಯಿ, ಕಳಿತ ಹಣ್ಣುಗಳು ಇವನ್ನು ಬೂಜು ಒಳ ಹೊಕ್ಕು . . . ಕೆಡಿಸಿ ಹಾಳು ಮಾಡುವುವು (ಗೃಹವಿ. ೫೬). ನಿಗಾ ನೋಡು = ನೋಡಿಕೊಳ್ಳು; ಕಾಯ್ದುಕೊಳ್ಳು; ಲಕ್ಷ್ಯವಹಿಸು: ಇವರೇ ಆ ಹುಡುಗನ್ನ ತಮ್ಮ ಮನೇಲಿ ಇಟ್ಟುಕೊಂಡು ನಿಗಾ ನೋಡಬೇಕಾಗಿತ್ತು (ಧರ್ಮಶ್ರೀ. ೨೬). ನಿಗಾ ಮಡಗು = ಲಕ್ಷ್ಯವಿಡು; ಗಮನವಿಡು: ನೀವು ಅವರನ್ನ ನಿಗಾ ಮಡಗಿ ನೋಡಿಲ್ಲ (ನಮ್ಮಳ್ಳಿ. ೧೮). ನಿಗಾ ವಹಿಸು = ಲಕ್ಷ್ಯ ತೆಗೆದುಕೊಳ್ಳು; ಮುತುವರ್ಜಿ ವಹಿಸು: ಜ್ಞಾನಾಂಬೆ ಪಟ್ಟಕ್ಕೆ ಬಂದ ನಂತರ, ಅಜ್ಜಿಯು, ಮೊಮ್ಮಗಳ ವಿಷಯದಲ್ಲಿ ಮೊದಲಿಗಿಂತ ಹೆಚ್ಚು ನಿಗಾ ವಹಿಸಿ ನೋಡಿಕೊಂಡಳು (ಪ್ರತಾಪ. ೧೦೧).
[←ಮರಾ. ನಿಗಾ; ಪಾರ. ಹಿಂ. ನಿಗಾಹ್]

ನಿಗಾದ (ನಾ). ೧. ಕಂಠಪಾಠ ಮಾಡಿ ಹೇಳುವಿಕೆ; ಉರು ಹೊಡೆದು ಹೇಳುವುದು. ೨. ಗಟ್ಟಿಯಾಗಿ ಹೇಳುವ (ಹೋಮದ) ಮಂತ್ರ; ಪ್ರಾರ್ಥನೆಯ ಘೋಷಣೆ. ೩. ಸ್ಪಷ್ಟವಾಗಿ ನುಡಿಯುವಿಕೆ: "ನಿಗಾದಃ, ನಿಗದಃ—೨ ಸ್ಪಷ್ಟವಾಗಿ ನುಡಿಯುವಿಕೆ, ವ್ಯಕ್ತವಾಗಿ ಹೇಳುವಿಕೆ" (ಸಿದ್ಧಾಂತಿ. ೩೫೯). 'ನಿಗದ' ಪರಾ. [ಸಂ.]

ನಿಗಾಬಾನಿ, ನಿಗಾವಣೆ, ನಿಗಾವಾನಿ, ನಿಗೆವಾನಿ (ನಾ). ೧. ಮೇಲ್ವಿಚಾರಣೆ; ಉಸ್ತುವಾರಿ: ತಮ್ಮ ಸೀಮೆ ಆರೈಕೆ ಬಗ್ಗೂ, ನಿಗಾಬಾನಿಯಿಂದ ಮಡಗುವುದಕ್ಕೂ, ಲಡಾಯ ಪ್ರಯತ್ನಗಳು ಜರೂರು ಇದೆ (ರಾಜೇಂದ್ರ. ೧೨೩). **ನಿಗಾವಣೆ**: ೧. ಹೆಂಗಸರ ಗುಂಪಿನಿಂದ ಬಿಡುವು ಮಾಡಿಕೊಂಡು, ಮನೋರಮೆ ಮೇಲೆ ನಿಗಾವಣೆಗೆ ಬಂದಳು (ಶೇಷಪ್ರ. ೨೦); ಪೋಲೀಸಿನವರ ನಿಗಾವಣೆ ಪ್ರಾರಂಭವಾದ ಮೇಲೆ ಅಲ್ಲಲ್ಲಿಂದ ಬಂದ ಬಾತ್ಮಿಗಳಲ್ಲಿ ಯೋಗೀಶ್ವರರು . . . ಹಣ ಪಡೆದರು (ಕೆಲನೆ. ೩೭೮). **ನಿಗಾವಾನಿ**: ೧. ಅದೇ ಮೇರೆ ನಿಗಾವಾನಿ ಸಾಮಾನು ತಯಾರು ಮಾಡಿಸುವುದಕ್ಕೆ ಆ ಸಾಹೇಬರು ತಮಗೆ ಬರಸಿ ಕಳುಹಿಸಿ ಇದ್ದಾರೆ (ರಾಜೇಂದ್ರ. ೧೩೧); ವೀರರಾಜೇಂದ್ರಪೇಟೆ ಮೋದಿಖಾನೆ ನಿಗಾವಾನಿ ಬಗ್ಗೆ ಮುನ್ನೂರು ಮಂದಿ ಮಡಗಿದರು (ರಾಜೇಂದ್ರ. ೧೪೭). **ನಿಗೆವಾನಿ**: ೨. ಎಚ್ಚರಿಕೆ; ಜಾಗರೂಕತೆ: ರಸ್ತಿನ ಸಾಮಾನವನ್ನು ನಿಗೆವಾನಿಯಿಂದ ಮಡಕೇರಿಗೆ ತಲಪಿಸಿ (ರಾಜೇಂದ್ರ.೬೨).
[←ಮರಾ. ನಿಗಾಬಾನೀ; ಪಾರ. ಹಿಂ. ನಿಗಹ್‌ಬಾನೀ]

ನಿಗಾರ(ನಾ). ನುಂಗುವುದು; ಕಬಳಿಸುವುದು: "ನಿಗಾರಃ-ನುಂಗುವಿಕೆ" (ಸಿದ್ಧಾಂತಿ. ೩೬೮). [ಸಂ.]

ನಿಗಾಲ, ನಿಗಾಳ (ನಾ). "ಕುದುರೆಯ ಕತ್ತಿನ ಸಮೀಪ ಭಾಗ" (ಅಮರ. ಟೀಕೆ). **ನಿಗಾಳ**: "ನಿಗಾಳಃ . . . ಕುದುರೆಯ ಕೊರಳು ಮೇಲ್ಗಡೆಗೆ ಹೆಸರು" (ಸಿದ್ಧಾಂತಿ. ೨೫೦). [ಸಂ.]

ನಿಗಾವಣೆ 'ನಿಗಾಬಾನಿ' ನೋ.

ನಿಗಾವಾನಿ 'ನಿಗಾಬಾನಿ' ನೋ.

ನಿಗಿ (ನಾ). ಒಂದು ಅನುಕರಣ ಶಬ್ದ.

ನಿಗಿನಿಗಿ (ದ್ವಿರುಕ್ತಿ): ಅದರಿಂದ ಕುಲಿಮೆಯಲ್ಲಿ ನಿಗಿನಿಗಿ ಕಿಚ್ಚಾಗಿ (ಮುಂಬಯಿ. ೬-೧೯); ನಿಗಿನಿಗಿ ಮುಗಿಲು ನಿಗಿನಿಗಿ ಹಗಲು ಕೆಂಡವ ಕಾರುವುದು (ನಾದಲೀ. ೨೧-೧); ಸೌದೆ ಇಜ್ಜಲುಗಳನ್ನು ಹಾಕಿ ಹಚ್ಚಿ ನಿಗಿನಿಗಿ ಬೆಂಕಿಯಾಗುವಂತೆ ಮಾಡುತ್ತಾರೆ (ಮನೋನಂ. ೧೯೫). **ನಿಗಿನಿಗಿ ಉರಿ** = ಪ್ರಜ್ವಲಿಸು: ಇರುಳ ಕತ್ತಲೆಯಲ್ಲಿ ಈ ನಿಗಿನಿಗಿ ಉರಿಯುವ ಕೆಂಡದ ರಾಶಿ . . . ಕಾಣಿಸುತ್ತದೆ (ನಂಟರು. ೧೩೫). **ನಿಗಿನಿಗಿ ಕೆಂಡ** = ಪ್ರಜ್ವಲಿಸುತ್ತಾ ಉರಿಯುವ ಕೆಂಡ; ಕೆಂಪಾಗಿ ಹೊಳೆಯುವ ಕೆಂಡ: ಎದೆಯು ನಿಗಿನಿಗಿ ಕೆಂಡ ಮನವೆಲ್ಲ ಹಳವಂಡವೆಂದುಸುರುತಿತ್ತು ಒಗುಮಿಗುವ ಹೊಗೆಯು (ಪಯಣ. ೮೭-೧೦).

ನಿಗಿಚು 'ನಿಮಿರ್ಚು' ನೋ.

ನಿಗಿನಿಗಿಯೆನ್ನು (ಕ್ರಿ). = ನಿಗಿನಿಗಿಸು: ಅದೊಂದು ವಜ್ರದ ಪದಕ,ನಿಜವಾಗಿಯೂ ನಿಗಿನಿಗಿಯೆನ್ನುತ್ತಿತ್ತು (ರಂಗನಾ. ೧೯೪).
[<ನಿಗಿ+ಎನ್ನು(<ಎನ್ಗ್)]

ನಿಗಿನಿಗಿಸು (ಕ್ರಿ). ಪ್ರಜ್ವಲಿಸು; ಹೊಳೆ; ಪ್ರಕಾಶಿಸು: ಬಗೆ ಬಗೆಯ ಚಾತುರ್ಯಕದ ವಾರನಾರಿಯರ್ ನಿಗಿನಿಗಿಪ ತನುಕಾಂತಿಯಿಂದ ಲೈತಂದರಸನೊಗುಮಿಗೆಯ ಚರಣಕಾನತರಾಗಿ (ವೆಂಕಾರಾ. ೧-೬-೩೧); ನಿಗಿನಿಗಿಸುವ ಉಗುರುಗಳೊಡನೆ ಸಲಿಗೆಯಂಗೈದು (ಸೌಗಂಧಿ.೧೮೫-೨೦);

ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ಚಿಗುರೊಡೆದ ಜ್ಯೋತಿರ್ಲತೆಗಳಂತೆ ನಿಗಿನಿಗಿಸಿದರು (ದಾನಚಿಂ. ೬೫) ; ಬೆಳಗಿನಿಂದ ಸಂಜೆಯ ತನಕ ನಿಗಿನಿಗಿಸುವ ಬಿಸಿಲು (ಮಾಗ೯ದ. ೯೭). [<ನಿಗಿ + -ಇಸು$_3$]

ನಿಗಿರಿಸು 'ನಿಮಿರಿಸು' ನೋ.

ನಿಗುಂಬಿಸು (ಕ್ರಿ). ೧. ಒಟ್ಟಾಗು ; ಒಟ್ಟುಗೂಡು ; ಗುಂಪಾಗು ; ಸಂದಣಿಸು : ಇದಿರೊಳ್ ಕಂದಂ ನೆರೆದು ನಿಗುಂಬಿಸಿ [ಜಾತಾಂ. ವಿಗುರ್ವಿಸಿ] ತಂದಂಗೊಂಡಿರ್ದ ನರರ ಖಚರರ ಗುಂದಂ (ಆದಿಪು. ೪-೩) ; ನಭೋಯಾನದಿಂದವಮರವಾಹಿನಿ ಬರ್ಪ ಪರಿಕಲಿಸಿಯುಂ ತುಜುಂಬಿಯುಂ ನಿಗುಂಬಿಸಿಯುಂ ಕೇಳಿಸಿಯುಂ ನಡೆದು (ಶಾಂತಿಪು. ೧೧-೨೧ ಪ) ; ಪೆಣ ದೆರ್ದೆಯಲ್ಲಿ ತಣ್ಮಲೆವ ಸಂತಸವತ್ತಣದೀ ವಿಮಾನವತ್ತಣದಿರೊಳ್ ನಿಗುಂಬಿಪಮರಾಳಿಯೆತ್ತಣದು (ಚಂದ್ರಪ್ರ. ೪-೩೪) ; ಪವಳದ ಕೆಂಬಣ ಇಂಬಿನೊಳ್ ನಿಗುಂಬಿಸಿ ನಿಂದು ಪಾಡುವ ಕೂಡುವ-ನೋಡುವ ಭಾವ ಸಮುಚ್ಚಯದ ಸಜೀವಮಾದ ವಿಚಿತ್ರಪುತ್ರಿಕೆಗಳ ಚಿತ್ತರಂಗಳಂ (ಅಜಿತ. ೧-೧೧೫ ಪ) ; ಅಮರಕೋಟಿ ತಳರ್ದುದೊಡನೆಯೆ ನೆರೆದು ನಿಗುಂಬಿಸೆ ನಿಯುಕ್ತ ನಿಜನಿಜವಿಭವಂ (ಪುಷ್ಪಪು. ೧೪-೪೩) ; ಕಾನನದುಜ್ಜಳಿಸಿ ಬೆಳೆದು ಲಂಬಿಸುವ ಪೆರ್ಬಿದಿರ ರವಕೆ ನಿಗುಂಬಿಸುವ ರವಿರಥತುರಗವ ವಿಡಂಬಿಸುವ ಮುರ್ಕಟವನೀಕ್ಷಿಸುತಸುರಿಪು ನಡೆದ (ಆಚ್ಯೂಚ. ೫-೧೩) ; ಮುಮ್ಮೊಯ್ಯ ದುಪ್ಪತಿಗಳ್ ನಿಗುಂಬಿಸೆ ಬಾಬಿಳ್ಕೆಯೊಂದು ತಗದೆ ವಿಬ್ರು ಪೊಟ್ಟಂ ಬಾರೆ (ರಾಮಾಶ್ವ. ೨೪-೩). ೨. ಒಟ್ಟಿಗೆ ಸೇರಿಸು ; ಒಂದುಗೂಡಿಸು; ರಾಶಿಮಾಡು : "ನಿಗುಂಬಿಸು—ಸಂಕೀರ್ಣ ರಾಶೌ (ನಾನಾ ಪದಾರ್ಥಗಳನ್ನು ರಾಶಿ ಮಾಡು)" (ಶಮುಧಾ) ; ಕರಪುಟದಲ್ಲಿ ನೆಲ್ಲನ್ನೆತ್ತಿ ನಿಗುಂಬಿಸಿ ಕೊಂಡು (ಬೆಟ್ಟ.ಅ. ೧೧೯-೧೧) . ೩. ಹೆಚ್ಚಾಗು ; ವೃದ್ಧಿಯಾಗು : ಜಗತ್ತ್ರಿತಯಚಿತ್ತವಲ್ಲಭನ ವರ್ಧನೋತ್ಸಾಹದೊಳ್ ನಿಗುಂಬಿಸೆ ಮನೋಮುದಂ (ಅನಂಪು. ೫-೧೪) ; ಕುಳಿತು ತನ್ನಳವಿಯ ತತ್ವ ಸತ್ವಶ್ನೆಯ ತಿಳಿದವರೊಳು ಪಲ ಪೊತ್ತ ಕಳುಪಿ ಬೀಳ್ಕೊಂಡುದೀ ಮಾನ ನಿಗುಂಭಿ [ಬಿ]ಸಲೊಳಪೊಕ್ಕ ಸಗ್ಗದ ನೆಲೆಯು (ವರ್ಧಚ. ೯-೩೭).

[ನಿಗುಂಬು + -ಇಸು$_3$]

ನಿಗುಂಬು (ಕ್ರಿ). ೧. ಒಟ್ಟುಗೂಡು; ಸಂದಣಿಸು : 'ನಿಗುಂಬಿಸು' ಪರಾ. ೨. ರಾಶಿಹಾಕು ; ಒಟ್ಟುಗೂಡಿಸು : "ನಿಗುಂಬು—ಪುಂಜೀಕರಣೇ(ಒಟ್ಟುಗೂಡಿಸು)" (ಶಮುಧಾ.) ೩. ಕುಪ್ಪಳಿಸು:"ನಿಗುಂಬಿತು = ಕುಪ್ಪಳಿಸಿತ್ತು" (ಶಮದ. ಪರಿ. ೨). [?]

ನಿಗುಂಬೂರ್ (ನಾ). ಒಂದು ಸ್ಥಳದ ಹೆಸರು : ಸಪ್ತತ್ಯಭ್ಯನ್ತರೇ ನಿಗುಂಬೂರುನಾಮಗ್ರಾಮಃ (ಸ್ಮಅರಿ. ೧೯೬೫, ೪೦-೬೭ ; 951 ?).

[ನಿಗುಂಬ ? + ಊರ್]

ನಿಗುಚು 'ನಿಮಿರ್ಚು' ನೋ.

ನಿಗುಣ (ನಾ). ಶ್ರೇಷ್ಠವಾದ ಗುಣವುಳ್ಳವನು : ಬಿಗಿಪುಗಿದಡಮರ್ದು ಬಗೆಗೆಸೆವ ಗದ್ಯವಿರಚನೆಗೆ ಬಾಣಾ[ಂ]ದಂ ಬಣ್ಣಂ ನಿಗುಣಂಗಂ ನಿಗುಣಂ ವೃತ್ತಗುಣಂ ಪದ[ದ]ಡೆಗೆ ನಾಗವರ್ಮ ಕವೀಂದ್ರಂ (ವರ್ಧಮಾ. ೧-೩೬); "ನಿಕೃಷ್ಟ ಮತ್ತು ಉತ್ಕೃಷ್ಟ ಗುಣ" (ವರ್ಧಮಾ.ಕೋಶ).

[ಸಂ.]

ನಿಗುತು 'ನಿಮಿರ್' ಪರಾ.

ನಿಗುರ್ 'ನಿಮಿರ್$_1$'ನೋ.

ನಿಗುರಿ (ನಾ). ನಿರಿಗೆ : ಮುಳುರವನೀಕ್ಷಿಸಿ ಜಗುಳಿದ ಚಳುರವ ಸ್ಮೈತಿಕ್ಕಿ ನಿಗುರಿಗಳ ನೀವುತ್ತಂ ಶುಕಪಿಕನಿಕರದ ಗಾನದ[ವ] ಚಕಿತೇಕ್ಷಣಾಂಬಕಿಯುಂ ಮುಂದದಿ ಲಾಲಿಸುತಿರ್ದಳ್ (ಬೀಳವಂ. ೩-೧೪೭). [ಇದು 'ನಿರಿಗೆ' ಎಂಬುದರ ಅಸಲಿಖಿತವಿರಬಹುದು]

ನಿಗುರಿಕೆ 'ನಿಮಿರ್ಕೆ' ನೋ.

ನಿಗುರಿಸು 'ನಿಮಿರಿಸು' ನೋ.

ನಿಗುರು$_1$ 'ನಿಮಿರ್$_1$' ನೋ.

ನಿಗುರು$_2$ 'ನಿಮಿರು$_2$' ನೋ.

ನಿಗುರುತೆಗೆ 'ನಿಗುರುದೆಗೆ' ನೋ.

ನಿಗುರುದೆಗೆ, ನಿಗುರುತೆಗೆ (ಕ್ರಿ). ಬಿಗಿಯಾಗಿ ಎಳೆ ; ನೆಟ್ಟಗೆ ಮಾಡು : ಬೆಳೆಯಬೇಕೆಂದೆನುತ ಕೈಕಾಲ್ಗಳನೊಡನೊಡನೆ ನಿಗೆ ನಿಗುರು[ಜಾತಾಂ. ರ]ದೆಗೆವಳು . . . ಕೋಮಲತನುವನೊರೆಸುವಳು (ಬಸಪು. ೧೫-೯). **ನಿಗುರುತೆಗೆ :** ಬಿಗಿದ ಹಾವಿನ ಸುತ್ತಳಿದು ವಿಕ್ರಮ ಶಾಲಿ ನಿಗರ[ಗುರು]ತೆಗೆದು ನೋಡಿಯಿಸಲು (ತ್ರೈಪಾಲ. ೧೧-೭೪).

[ನಿಗುರು$_1$(<ನಿಮಿರ್$_1$)+ತೆಗೆ$_1$]

ನಿಗುರುಬಾಲ (ನಾ). ಮೇಲಕ್ಕೆತ್ತಿರುವ ಬಾಲ ; ನಿಗುರಿ ಕೊಂಡಿರುವ ಬಾಲ : ಕನಸಿನಲಿ ಖಂಡಿತಾ ಕಂಡಿದ್ದೆ, ಕಂಡಿದ್ದ ನಿಗುರುಬಾಲದ ಕಂತ್ರಿನಾಯಿ (ಚಂತಮ. ೩೧-೧೩).

[ನಿಗುರು$_1$(<ನಿಮಿರ್$_1$)+ಬಾಲ$_1$]

ನಿಗುರೊಡಲು (ನಾ). ನೀಳವಾಗಿನಿಕೊಂಡ ದೇಹ ; ದೀರ್ಘ ಶರೀರ : ನಿಗುರೊಡಲ ಮುಂಬರಿವ ಬಮ್ಮುದ . . . ಮ್ಯಗಮ್ಯಗೀ ನಿಕುರುಂಬದೊಳಗದಹಾಯ್ದುದು (ತೊರಣಾ. ೩-೪-೪೫).

[ನಿಗುರು$_1$(<ನಿಮಿರ್$_1$)+ಒಡಲು(<ಒಡಲ್)]

ನಿಗುರ್ಗಣೆ (ನಾ). ನೆಟ್ಟಗೆ ಹಾರುವ ಬಾಣ : ರಣನವದನೇನೆಂಬೆನೈ ಧಾರುಣಪತಿಯೆ ವಿಗ್ರಹದ ವಿಸ್ತಾರಣ ನಿಗುರ್ಗಣೆ ವಿಗಡಿಸಿತು ವಿಬುಧರ ವಿಡಾಯಿಗಳ (ಕುವ್ಯಾಅ. ೧೩-೨೩). [ನಿಗುರ್(<ನಿಮಿರ್$_1$)+ಕಣೆ$_1$]

ನಿಗುರ್ಗುಡಿ (ನಾ). ಮೇಲಕ್ಕೆ ಎತ್ತಿದ ಧ್ವಜ,—ಬಾವುಟ : ನಿಗುರ್ಗುಡಿಗಳೇರಿಕೆಯ ರಾಹದಿಂ (ಪರಶು. ೩೧-೯).

[ನಿಗುರ್(<ನಿಮಿರ್)+ಗುಡಿ$_2$]

ನಿಗುರ್ಚು 'ನಿಮಿರ್ಚು' ನೋ.

ನಿಗುರ್ದು 'ನಿಮಿರ್$_1$' ಪರಾ.

△ ನಿಗುಳ್ 'ನಿಮಿರ್$_2$' ನೋ.

ನಿಗೂಢ (ಗು). ೧. ಮುಚ್ಚಟ್ಟು ; ಅವಿಚಟ್ಟು ; ಬಚ್ಚಟ್ಟು : ಸಿಂಹಾಸನಾರೂಢನಾರೂಢಯಾ[ಾ]ವನೆಯುಮಂತರ್ನಿಗೂಢ ಶೋಕೋದ್ರೇಕಮುಂಕೆಯುಮಾಗಿರ್ದ ನಿಜತನೂಜೆಗೆ ಬಟಾಯನಟ್ಟಿದಾಗಳ್ (ಆದಿಪು. ೩-೪೬ ಪ) ; ಜಡರು ನಿಜವೆಂದಕ್ಷಗೋಚರದೊಡಲನೇ ಬಗೆವಂತೆ ಮರ್ಮಾತಿ ನುಡಿಸಿದನು ನಿದ್ರಾನಿಗೂಢಶ್ರಮನೆನಿಪ ನೃಪನ (ನಿಭಾಗ. ೧೦-೫೧-೫೦). ೨. ರಹಸ್ಯವಾದ ; ಗುಟ್ಟಾದ : ಒಂದೊಂದು ಳಿಯೂ ಒಂದೊಂದು ನಿಗೂಢ ತತ್ವವನ್ನು ಉದ್ದೇಶಿಸಿ ಹೊರಟಿದೆ (ಭಾರದ. ೧೦೨) ; ಅವರ ಮನಸ್ಸಿನ ಅಂತರಾಳದಲ್ಲಿ ಮೂಡಿದ ನಿಗೂಢ ಭಾವನೆಗಳು . ಬಾನಾನಲ್ಲಿ ಮೂಡಿದ ತಾರೆಗಳಂತೆ ಮಿನುಗುತ್ತಿದ್ದುವು (ಧೂಪಮು. ೧೫). ೩. ಭೇದಿಸಲಾಗದ ; ಮರ್ಮವರಿಯಲಾಗದ. (ನಾ). ೪. ಗುಟ್ಟು ; ರಹಸ್ಯ : ನೂತನವೂ ನಿಗೂಢವೂ ಅದ ಸತ್ಯವನ್ನು ಶೀಘ್ರವಾಗಿ ಅರಿಯಬಲ್ಲ ಶಕ್ತಿಗೆ ಪ್ರತಿಭೆಯೆಂದು ಹೇಳುವರು (ತಿಕ್ಷದ. ೫೬೨). [ಸಂ.]

ನಿಗೂಢಚತುರ್ಥ (ನಾ). [ಛಂದ] ಒಂದು ಬಗೆಯ ಪದ್ಯಬಂಧ; ಚಿತ್ರಕವಿತ್ವ: ಚ್ಯುತದತ್ತಾಕ್ಷರಮುಂ ಗೋಪಿತಕ್ರಿಯಾಕಾರಕಂ ನಿಗೂಢ ಚತುರ್ಥಂ ಪ್ರತಿನಿಯತ ಗತಪ್ರತ್ಯಾಗತಂ ಬಲೆಂದಿಂತು ಪೆಜವುಮಕ್ಕುಂ ಚಿತ್ರಂ (ಕಾವ್ಯಾನ. ೫೮೭). 'ಗೂಢಚತುರ್ಥ' ಪರಾ.

[ನಿಗೂಢ + ಚತುರ್ಥ]

ನಿಗೂಢತ್ವ (ನಾ). ಅಡಗಿರುವಿಕೆ ; ಗುಪ್ತವಾಗಿರುವಿಕೆ : ಧ್ವನಿಯಿರುವಲ್ಲಿ ಮಾತ್ರ ಲಕ್ಷಣಾಪ್ರಯೋಜನವು ನಿಗೂಢತ್ವವನ್ನೇ ಆಶ್ರಯಿಸಿರುತ್ತದೆ (ಧ್ವನ್ಯಾಲೋ. ೪೩). [ಸಂ.]

ನಿಗೂಢಾಂಸ (ನಾ). ಸಣ್ಣ ಹೆಗಲನ್ನು ಉಳ್ಳವನು ; ಕುಗ್ಗಿದ ಅಥವಾ ಗುಜ್ಜಾದ ಹೆಗಲುಳ್ಳವನು : ಪಿತೃವಿತ್ತಭೋಗಿ ಕುನಖಂ ಮೆಲ್ಪಿಂದೆ ಬಲ್ಪಿಂದೆ ಸಾಧಿಸೆ ಸಾಧ್ಯಂ ನಿಪುಣಂ ಮಹೋದ್ಯಮಿ ನಿಗೂ [ಪಾಣಂ. ಸುಗಾ, ಸುಗೂ] ಢಾಸಂ ಧನುರ್ಗೇಹಜಂ (ಜಾತಕ. ೧೭–೯).

[ನಿಗೂಢ + ಅಂಸ]

ನಿಗೂಹನ (ನಾ). ೧. ಅಡಗಿಸುವಿಕೆ ; ಬಚ್ಚಿಡುವಿಕೆ. ೨. [ಕಾವ್ಯಮೀ] ಅರ್ಥಾಲಂಕಾರಗಳಲ್ಲಿ ಒಂದು ; ಗುಟ್ಟಾಗಿಡಬೇಕೆಂದಿರುವ ಸಂಗತಿಯು ಬಹಿರಂಗವಾಗುವ ಸಂದರ್ಭವೊದಗಿದಾಗ ಉಪಾಯವಾಗಿ ಅದನ್ನು ಮರೆಮಾಚುವುದು : ಉದಾ : ಪರಿವಿಡಿಗೆಯ್ದಿ ಸೊಂದಿಗಿಳಿ ತಂದೆಯು ತಾಯು ಸವಿಪಾಪದೊಳ್ ತನೂದರಿಯ ರತೋಪಯುಕ್ತರುತಮಂ ವಿನತಾನನೆ ನಾನ್ಗೆ ತಾಳತತ್ಪರಿಶಿಲನರ್ತನ ಪ್ರಹತಕಂಕಣಧ್ವನಿಯಿಂಕೃತಹಸ್ತತೂರ್ಯಸುಂದರರವದಿಂದದಂ ಮಜ್ಜಿಸಿದಳ್ ಗಡ ಮುಗ್ಧೆ ಕರಂ ವಿದಗ್ಧೆವೊಲ್ (ಶಾಂತಪು. ೪–೪೫) ; (ಕಾವ್ಯಾವ. ೬೪೧ ನೋ). ℙ ಈ ಪದ್ಯದಲ್ಲಿ ತರುಣಿಯು ರತಿಕೂಜಿತವನ್ನು ಮರೆಮಾಚುವುದು ಚಮತ್ಕಾರವಾಗಿ ವಿವರಿಸಲ್ಪಟ್ಟಿದೆ : ಗುಣಮನೆ ತರ್ಪುದು ದೋಷದ ಗಣನೆಗೆ ದೋಷಮುಮನಿಸು ಗುಣಗಣನೆಗೆ ತಂದೊಣರ್ವುದು ಲೇಶಂ ವಿಬುಧಾಗ್ರಣಿಗಳ್ ಕೆಲಬರ್ ನಿಗೂಹನಂ[ಪಾಠಾಂ. ಮಂ] ಲವಮೆಂಬರ್ (ಕಾವ್ಯಾವ. ೬೬೯); ನೆಗಳ್ದಿಪ್ಪ ವಸ್ತು ರೂಪದ ನಿಗೂಹನಂ ಲೇಶದಿಂದ ಭಿನ್ನಮದಾಗಲ್ (ನೂಧಸಾ. ೨–೨೫೩). [ಸಂ.]

ನಿಗೃಹೀತ (ಗು). ೧. ಸೆರೆ ಹಿಡಿದ ; ಸ್ವಾಧೀನಪಡಿಸಿಕೊಂಡ ; ಬಂಧಿಸಿದ. ೨. ನಿಗ್ರಹಿಸಿದ ; ದಂಡನೆಗೊಳಪಡಿಸಿದ ; ತಡೆದ. ೩. ಆಕ್ರಮಣಗೊಂಡ ; ದಮನಗೊಂಡ. (ನಾ). ೪. [ನಾಟ್ಯ] ವಿವರ್ತಿತ, ಕಂಪಿತಗಳೇ ಮೊದಲಾದ ಹತ್ತು ವಿಧವಾದ ತುಟಿಯ ವಿನ್ಯಾಸಗಳಲ್ಲಿ ಒಂದು ; ℙ "ತುಟಿಗಳನ್ನು ಒಳಕ್ಕೆಮಾಡಿಬಾಯನ್ನು ಮುಚ್ಚುವುದು. ಹೆಂಗಸರ ರೋಷ ಮತ್ತು ಈರ್ಷ್ಯೆ, ಬಲಾತ್ಕಾರ, ಚುಂಬನ ಇವುಗಳಲ್ಲಿ ಇದನ್ನು ವಿನಿಯೋಗಿಸಬೇಕು" (ಅಸ್ಯರಂ. ೨೭೯ ಗೆದ್ಯಾನುವಾದ) : ವಿವರ್ತಿತ, ಕಂಪಿತ, ವಿಸೃಷ್ಟ, ನಿಗೃಹೀತ, ಸಂದಷ್ಟ, ಸಮುದ್ಗ, ಉದ್ವೃತ್ತ, ವಿಕಾಶ್ಯ, ಆಯತ, ರೇಚಿತ—ಈ ಹತ್ತು ಅಧರ ಭೇದಂಗಳ್ (ಅಸ್ಯರಂ. ೩–೪೧ ಪ) ; ಸಲೆಯಧರದ ಮೊಗಮೆರಡುಂ ನಲವಿಂದೊಳಗಾಗಿ ಪೊಂದೆ ನಿಗೃಹೀತಾಖ್ಯಂ (ಅಸ್ಯರಂ. ೩–೪೩). [ಸಂ.]

ನಿಗ್ರಹ್ಯ (ಗು). ೧. ಅಡ್ಡಿಪಡಿಸಬೇಕಾದ ; ನಿರೋಧಿಸಬೇಕಾದ. ೨. ದಂಡಿಸಲು ಯೋಗ್ಯವಾದ ; ಶಿಕ್ಷೆಗೆ ಅರ್ಹವಾದ. [ಸಂ.]

ನಿಗೆವಾನಿ 'ನಿಗಾಬಾನಿ' ನೋ.

ನಿಗೋದ (ನಾ). [ಜೈನ] ಸಾಧಾರಣವಾದ ನಾಮಕರ್ಮದ ಉದಯದಿಂದ ಉಂಟಾಗುವ ಅನಂತಜೀವಗಳಿಗೆ ಆಶ್ರಯವಾದ ಒಂದು ಶರೀರವಿಶೇಷ ; ℙ ಒಂದೇ ವಿಧವಾದ ಕರ್ಮವನ್ನು ಮಾಡಿರುವ ಅನೇಕ ಜೀವಗಳಿಗೆಲ್ಲಾ ಒಂದೇ ಶರೀರವಿರುತ್ತದೆ. ಈ ಶರೀರದೊಳಗಿನ ಜೀವಗಳಿಗೆಲ್ಲ ಜನ್ಮ, ಮರಣ, ಉಸಿರಾಡುವುದು ಇತ್ಯಾದಿ ಕಾರ್ಯಗಳೆಲ್ಲಾ ಸಮಾನರೂಪವಾಗಿ ನಡೆಯುತ್ತದೆ. ಒಬ್ಬರು ಯಾತನೆಯನ್ನು ಅನುಭವಿಸಿದರೆ ಎಲ್ಲರೂ ಅದನ್ನು ಅನುಭವಿಸಬೇಕು. ಒಂದು ಜೀವವು ಸತ್ತರೆ ಎಲ್ಲ ಜೀವಗಳೂ ಸಾಯುತ್ತವೆ. ಏಕೆಂದರೆ ಅವರೆಲ್ಲರೂ ಒಂದೇ ಪಾಪವನ್ನು ಮಾಡಿರುತ್ತಾರೆ. ಸಾಧಾರಣನಾಮಕರ್ಮದ ಉದಯದಿಂದ ಜೀವನಿಗೆ ಉಂಟಾಗುವ ಈ ನಿಗೋದಶರೀರವು ಏಳು ನರಕಭೂಮಿಗಳ ಕೆಳಗೆ ಒಂದು ರಜ್ಜುಪ್ರಮಾಣಕ್ಷೇತ್ರದಲ್ಲಿ ತಮೋಮಯವಾದ ಶೂನ್ಯಸ್ಥಳದಲ್ಲಿರುತ್ತದೆ. ಈ ಸ್ಥಳವನ್ನು ನರಕಕ್ಕಿಂತ ಕೀಳೆಂದು ಭಾವಿಸುತ್ತಾರೆ. ಔಪಚಾರಿಕವಾಗಿ ಕೆಲವು ಕವಿಗಳು ಇದನ್ನೂ 'ನರಕ' ಎಂದರೆ ಮಹಾಹಿಂಸೆಯ ಸ್ಥಳವೆಂದು ತಿಳಿದು ಆ ಅರ್ಥದಲ್ಲಿ ಉಪಯೋಗಿಸಿದ್ದಾರೆ: ಸಂಭಿನ್ನ ಮಹಾಮತಿಗಳ್ ಗಂಭೀರ ನಿಗೋದದೊಳ್ ತಮೋಮಯದೊಳ್ ದುಃಖಾಂಭೋಧಿಯ ಕಡೆಗಾಣದ ಜೃಂಭಿತ ದುಸ್ಸಮ್ಯದಿಂದೆ ನಮೆದಪರಿನ್ನುಂ (ಆದಿಪು. ೫–೭೭); ಸಂಭಿನ್ನನುಂ ಮಹಾಮತಿಯುಂ ನಿಗೋದಮಂ ಜೊಕ್ಕರ್ (ಚಾವುಂರಾ. ೨೯) ; ಅವಂ ಬೀಳ್ದುಂ ನಿಗೋದಂಗಳೊಳ್ (ಎಇ. XVIII, ೧೪೦–೧೭ ; 1082) ; ಶಿವತತ್ವವೆಮ್ಮೊಳೆ ವಿಮುಕ್ತಿಯುವೆಮ್ಮೊಳೆ ನಿಂದುವೆಂಬ ಗಾವಿಲರ ನೆಗಟ್ಟಿ ದುರ್ಯಶದೊಳೊಂದಿ ನಿಗೋದದೊಳಿತ್ತದಿಕ್ಕುಮೆ (ನಮಪ. ೧೪–೭೨); ವಿಖ್ಯಾಜ್ಞಾನದಿಂ ಪೃಷ್ಟಿಗಾಣದೆ ನಿಗೋದದೊಳ್ನುಂ ದುಃಖಮನುಣುತ್ತಿರ್ದಪರ್ (ಪೂರ್ವಸು.೩೪). 'ನಿತ್ಯನಿಗೋದ' ಪರಾ. [ಸಂ.]

ನಿಗೋದಜೀವ (ನಾ). [ಜೈನ] (ಯಾತನೆಯನ್ನು ಅನುಭವಿಸುವ) ಅನಂತಜೀವರ ಶರೀರಗಳಿಗೆ ಆಶ್ರಯವಾದ ಒಂದು ಶರೀರ ವಿಶೇಷ : ಏಳ ನಿಗೋದಶರೀರದೊಳ್ ಅತೀತಕಾಲ ನಿಖಿಲ ಸಿದ್ಧರಾಶ್ಯನಂತಗುಣಂ ಭಾವಿಕಾಲಸಿದ್ಧರಾಶ್ಯನಂತೈಕಭಾಗಮಾತ್ರಮಪ್ಪ ನಿಗೋದ ಜೀವಂಗಳಿಪ್ಪುದಜಂ (ತತ್ತ್ವಸ್ಪ. ೨೩೭) ; ನಿಗೋದ[ದ್ರ]ಜೀವಂ ಪೊಕ್ಕು ನಮೆವ ಜೀವಂಗಳು ಚತುರ್ಗತಿ ನಿಗೋದ[ದ್ರ]ಜೀವಂಗಳಕ್ಕುಂ (ಶ್ರಾಪಕಾ. ೬೫–೮). [ನಿಗೋದ + ಜೀವ]

ನಿಗೋದಶರೀರ (ನಾ). = ನಿಗೋದಜೀವ : ಒಂದೊಂದು ನಿಗೋದ ಶರೀರದೊಳ್ ಅತೀತಕಾಲ ನಿಖಿಲಸಿದ್ಧರಾಶ್ಯನಂತಗುಣ ಜೈಕೇಂದ್ರಿಯ ಜೀವಂಗಳಿರ್ಪುವು (ತತ್ತ್ವಸ್ಪ. ೩೩೧). [ನಿಗೋದ + ಶರೀರ]

ನಿಗೋಧ (ನಾ). = ನಿಗೋದ : ಕ್ರೋಧಿಯುಮಿರದ ಸುಗತಿಯುಂ ಸಾಧಿಸಿ ರೌರವ ನಿಗೋಧಕಳಿಗುಂ (ಕಇ. V, ೧೧೧–೩೯ ; 1078).

[ℙ ಇದು 'ನಿಗೋದ' ಎಂಬುದರ ಅಪಲಿಖಿತ]

ನಿಗ್ಗ 'ನಿಗ್ಗವ' ನೋ.

ನಿಗ್ಗಂಥ 'ನಿಗ್ರಂಥ' ನೋ.

ನಿಗ್ಗಂಥಧಮ್ಮ (ನಾ). [ಜೈನ] ಜೈನಧರ್ಮ ; ದಿಗಂಬರ ಮತ : ಈಗ ಜೈನಧರ್ಮವೆಂದು ಯಾವ ಆಚಾರವಿಚಾರಗಳಿಗೆ ತಿಳಿಯಲಾಗುತ್ತಿದೆಯೋ ಅದಕ್ಕೆ ಭಗವಾನ್ ಪಾರ್ಶ್ವನಾಥ ಹಾಗೂ ಮಹಾವೀರರ ಕಾಲಗಳಲ್ಲಿ 'ನಿಗ್ರಂಥಧಮ್ಮ' ಅಂದರೆ 'ನಿರ್ಗ್ರಂಥಧರ್ಮ' ಎಂದು ಕರೆಯಲಾಗುತ್ತಿದ್ದಿತು (ಜೈಸಪ. ೩). [<ಪ್ರಾ. ನಿಗ್ಗಂಥಧಮ್ಮ]

ನಿಗ್ಗಂಥ, ನಿಗಂಠ, ನಿಗ್ರಂಠ (ನಾ). [ಜೈನ] ದಿಗಂಬರ ಜೈನಯತಿ; ಸವಣ : (ನಿಗ್ಗಂಥ) ಶಬ್ದವನ್ನು ಜೈನರು ಮೊದಲಿನಿಂದಲೂ ತಮ್ಮ ಗುರುವರ್ಗಕ್ಕೆ ಉಪಯೋಗಿಸುತ್ತ ಬಂದಿದ್ದಾರೆ (ಜೈಸಪ. ೫೩೧). **ನಿಗಂಠ** : ಕ್ರಿ. ಪೂ. ೩ನೆ ಶತಮಾನದ ಅಶೋಕನ ಶಾಸನಗಳಲ್ಲಿ ಕೂಡ 'ನಿಗಂಠ' ಶಬ್ದವನ್ನು ಜೈನಸಂನ್ಯಾಸಿಗೆ ಪ್ರಯೋಗಿಸಲಾಗಿದೆ (ತೀರ್ಥಕ. ೧೦೯). **ನಿಗ್ರಂಠ** : 'ನಿಗ್ರಂಥಧಮ್ಮ' ಪರಾ.

[<ಪ್ರಾ. ನಿಗ್ಗಂಥ. /ಸಂ. ನಿರ್ಗ್ರಂಥ]

ನಿಗ್ಗಂಥಪಾವಯಣ (ನಾ). [ಜೈನ] ಜೈನ ಶಾಸ್ತ್ರ, —ಪ್ರವಚನ : ಇದೇ ಕಾರಣದಿಂದ ಜೈನಶಾಸ್ತ್ರಗಳಿಗೆ "ನಿಗ್ಗಂಥ ಪಾವಯಣ"(ನಿರ್ಗ್ರಂಥ ಪ್ರವಚನ) ಎಂದು ಹೇಳಲಾಗುವುದು (ಜೈಸಪ.೫೩೧).

[<ಪ್ರಾ. ನಿಗ್ಗಂಥಪಾವಯಣ]

ನಿಗ್ಗಡಿ 'ನಿರ್ಗೇಡಿ' ನೋ.

ನಿಗ್ಗವು (ನಾ). ಮುಂದೆ ಚಲಿಸುವುದು,—ನುಗ್ಗುವುದು : ಹರಿಣನಂ ಹಳಿವ ಮಾರುತನನೇಸುವ ಹಂಸರಳನಳಿಕೆಯ್ವ ದೃಷ್ಟಿಗಳ ಸಣಕಿಸುವ ಮುನಿದುರವಸೆಯನಲ್ಲೆಂಬ ನಿಗ್ಗ[ಪಾಣಾಂ. ಗ]ಮದ ಲಾಗು ಬೇಗಂಗಳ . . . ಚಾರುತುರಗಕುಲವನುವಾಗಿ ನಿಂದವು (ಸೋಮಚ. ೫-೨೮); ಗವುನ ನಟ್ಟಿಯವಾಯ್ತು ವೇಗಭ್ರಮಣ ಜಡವಾಯ್ತು ದಿಗಡಿಗೆ ನಿಗ್ಗ ಮದೊಳಗೆ ರಥವದ್ದುದು (ಕುಸ್ಯಾದ್ರೋ. ೧೦-೨೫).

[<ಸಂ. ನಿರ್ಗಮ]

ನಿಗ್ಗರೆ, ನಿಗ್ರ, ನಿಳ್ರ, ನಿರ್ಗ (ನಾ). ೧. ಅಂಕೆ ; ಹಿಡಿತ; ಹತೋಟಿ : "ನಿಗ್ಗರ — ನಿಗ್ರಹ = ಹಿಡಿತ" (ತದ್ಭವಕೋ. ೬೭). ೨. ತೊಂದರೆ ; ಕಷ್ಟ ; ಉಪದ್ರವ : ಅಸುರನ ನಿಗ್ಗರಕೆ ತನು ದಿಕ್ಕು ಧಿಗಿಲೆನುತಿರ್ದುದಿನಸುತನ (ತೊರಂಾ. ೬-೩೪-೩೯) ; ಈಗಲೇ ಆ ಸಂಸಾರದ ನಿಗ್ಗರ ಬ್ಯಾಡ ಮಾರಾಯರೆ (ಬೀದಿಬ. ೩೬); ತನಗೆ ಮಗುವಿನ ನಿಗ್ಗರ ತಪ್ಪಿದರೆ ಸಾಕು ಎಂದಿಷ್ಟೆ ಅವಳ ಎಣಿಕೆ (ನಡದಾ.II, ೪೮೪); ಹಡೆದೌವನೆ ಬರಹೇಳ ಅತ್ತಿಮನಿ ನಿಗ್ಗರ ಬಾಳ ಇರಲಾರೆ (ಕನ್ನಜಾ. ೧೧೧). ೩. ಒತ್ತಾಯ ; ಬಲಾತ್ಕಾರ ; ನಿರ್ಬಂಧ : ಎಂದಾದರೂ ತಾಯಿ ನಿಗ್ಗರದಿಂದ ಎಣ್ಣೆ ಹಚ್ಚಿ ಎರೆಯಹತ್ತಿದರೆ, ಈಕೆ ದೊಡ್ಡ ದನಿ ತೆಗೆದು ಅಳುತ್ತಾಳೆ (ಮುಂಬಯಿ. ೧-೧೪) ; ನುಗ್ಗಿಯ ತಾಯಿ ಬಗ್ಗಡವೇ ನೀನುಣದಿದ್ದರೆ ಬಲು ನಿಗ್ಗರವೇ ? (ಗಾಜ). **ನಿಗ್ರ** : ೨. ಆ ಕಾಯಕದಿಂದ ಪದಾರ್ಥ ದೊರೆಯದೆ ನಿಗ್ರವಾಗಿರಲಾ ವೇಳೆಯಲ್ಲಿ ಶಿವನು ರಸವಾದ ಸಿದ್ಧನೆಂಬ ಜಂಗಮವಾಗಿ ಬಂದು ವೇಮಯ್ಯನೊಡನೆ ಇಂತೆಂದನು (ಭೈರಸೂ. ೩೪೪). **ನಿಳ್ರ** : ೨. ಆ ನಿಳ್ರವಂ [ಪಾಣಾಂ. ನಿಗ್ರಹವ, ನಿಗ್ರಮಂ] ನೋಡಲಾಜದೀಶ್ವರನೊಬ್ಬ ಮಾನವನ ರೂಪಿನಿಂ ಬಂದಿರ್ದಾಗಳು (ಸಿದ್ಧರಾ. ೨-೫೧). **ನಿರ್ಗ** : ೧. ನಿರ್ಗವನು ತಾನಿರಿಸಿದಪೆ ನಪವರ್ಗಪದವಿಗೆ ಮನವನುಜ್ಜೆ ಸ್ವರ್ಗವನು ಜಿತಶತ್ರುವಾಗಿ ವಿಕಾರ ರೂಪವನು ನಿರ್ಗಮಾಗಮವಿಲ್ಲ (ನಿಭಗೀ. ೬-೧೦-೪೧).

ನಿಗ್ಗರದ ವೇಳೆ = ತೊಂದರೆಯ ಸಮಯ; ಇಕ್ಕಟ್ಟಿನ ಪರಿಸ್ಥಿತಿ: ಅಂದ ಬಳಿಕ ವೆಂಕಟದೊರೆಯು ಆ ಸ್ವಾಮಿನಿಷ್ಠ ವಂಶದ ಪ್ರತಾಪಿಯಾದ ತರುಣನನ್ನು ಇಂಥ ನಿಗ್ಗರದ ವೇಳೆಯಲ್ಲಿ ಬಹುಮಾನದಿಂದ ನೋಡಿದ್ದು ಆಶ್ಚರ್ಯವೇನು ? (ಕುಸುದಿ. ೪೬). 'ಇಗ್ಗರ' ಪರಾ.

[<ಸಂ. ನಿಗ್ರಹ]

ನಿಗ್ಗರಿಸು (ಕ್ರಿ). ೧. ತೊಂದರೆ ಕೊಡು ; ಹಿಂಸಿಸು ; ಕಾಡು : ನುಗ್ಗುನುರಿ ಮಾಡು ಕುಲಭೂಧರವನಲ್ಲಕಲ್ಲೋಲಮಾಡಂಬುಧಿಯನು ಒಗ್ಗರಿಸು ಸಚರಾಚರೋರ್ವಿಯ ಪದಾರ್ಥಮಂ ನಿಗ್ಗರಿಸು ನಟಿಲಲೋಚನನನು (ಸಮ್ಯಕ್ತಾ. ೫-೩೬) ; "ನಿಗ್ರಹಿಸು ; ಕೆಡಹು ; ಜಯಿಸು" (ಪ್ರಭಣ್ಣ); ಕರುಣವಿಲ್ಲದೆ ಪೋಪಹೆ ಕಂಟಕಿಯಾಗಿ ಪಿಂದು ನಿಗ್ಗರಿಸಲು ನೀನು ಹರಣವ ಬಿಟ್ಟ ಬಳಿಕ ನಾನು ಬಿಡುವೆನು ಸವಸಕಲಾಕೋವಿದನ (ನೇಮಿಸಂ. ೧೦-೧೪೬). ೨. ತೊಂದರೆಗೊಳಗಾಗು; ಹಿಂಸೆಪಡು : ಹಳ್ಳಿಗಳಲ್ಲಿ ಸಣ್ಣ ಮಕ್ಕಳನ್ನು 'ಭರಮಪ್ಪ'ನು ಹಿಡಿದುಕೊಳ್ಳುವುದುಂಟು. ಆಗ ಕೂಸುಗಳು ನಿಗ್ಗರಿಸಿ ಅಳಹತ್ತುವುವು (ಕನ್ನಜಾ. ೨೨).

[ನಿಗ್ಗರಿ+ – ಇಸು$_3$]

ನಿಗ್ಗವ, ನಿಗ್ಗ (ನಾ). ಆನೆಯ ಕೋರೆ ; ಹಸ್ತಿದಂತ : "ನಿಗ್ಗವಂ ಗಜದಂತಂ" (ಪಪುಪ: ಪರಿ. ೨); ದಿಗ್ಗಜದ ನಿಗ್ಗವನುನುಡಿವಂತೆ ನಿಯಚ್ಛರ ಪತಿಯ ನಚ್ಚಿನ ಖರದೂಷಣರಂ ಕೊಂದು (ಪಂಂಪಮಾ. ೪-೧೧೪ ಬಿ) ; ಚಂದದ ನಿಗ್ಗವಂಗಳ ಲನುಸ್ಮಸಲಗಳನಾಂತು ಪಾಡುತಂ ಕುಂದದೆ ವೈಣವಂಗಳನೆ ಕುಟ್ಟುತೆ ಕಣ್ಗೆಸೆದರ್ ಪುಳಿಂದಿಯರ್ (ಉದ್ಭಟ. ೨-೪೦); ಉಗುರೊಳೌಕುವ ನಿಗ್ಗವದೊಳಿಬ್ಬಗಿಯ ಮಾಡುವ ಕಾಲುಗೊಲೆಯಲಿ ವಿಗಡಳಿ ತುಳಿದಾಡಿತಿದಿರಿದಿರಾದ ಪಟುಭಟರ (ಕುಸ್ಯಾದ್ರೋ. ೩-೧೬) ; ನಿಗ್ಗವದೋಡಿಜುಯೆಂ ಕುಲಪರ್ವತಂಗಳುಂ ನುಗ್ಗುನುಸಿಯಪ್ಪುವು (ಚಪುರು. ೨೮-೧೦) ; ಬನರಂಗೆಯುಂ ಗಜಂಗಳ ನಿವಹದ ನಿಗ್ಗವದು ದುಡಿದು ಸೂಸಿರೆ ನೆಲದೊಳ್ (ರಾಜಶೇ. ೫-೬೧). **ನಿಗ್ಗ** : ಏಂಗದೆಳೆವಣಿಯುಂಗುರೆಂಗಳಂ . . . ಪೆರ್ಮಂದಿಗೊರೆಗಳ ಬಡಿಗೋಲ್ಗಳಂ ನುಂಗೈವ ನಿಗ್ಗಗಳ ಗದೆಗಳಿಂ . . . ಎಸೆದ ವನಚರರೆಜ್ಜೆಯೆರಂ ಕಂಡಳು (ಪುದೇಪು. ೩೧-೨೩). [?]

ನಿಗ್ಗವಂಗೀಳು (ಕ್ರಿ). ಆನೆಯ ದಂತವನ್ನು ತೆಗೆ,—ಕೋರೆ ಹಲ್ಲನ್ನು ಕೀಳು : ಕಡಲೇಳನೊಡಗಲಿಸಲೋ ಚಂದ್ರಸೂರ್ಯರನು ಪೊಡವಿಗಿಳುಪಲೊ . . . ದಿಗ್ಗಜಂಗಳ ನಿಗ್ಗವಂಗಿತ್ತು ತಂದಿರಿಸಲೋ (ಸಾಳ್ವಭಾ. ೨೫-೩). [ನಿಗ್ಗವ + ಕೀಳು$_1$ (<ಕೀಟ್$_1$)]

ನಿಗ್ಗವಣಿ (ನಾ). (?) : ನಿನದತ್ಸಂಧ್ಯಾನಕಂ ನಿಗ್ಗವಣಿಯ ಪಟು ಪೂರ್ವಾಚಲಂ ತುಂಗರಂಗಂ ತನಗಾದತ್ಕೆಂದಿನಂ ನೀಲಿಯ ಜವನಿಕೆ ವೋಲ್ ಪಿಂಗೆ ಸಂಧ್ಯಾತಮಂ ಮೆಲ್ಲನೆ ತಾರಾನೀಕಪುಷ್ಪಾಂಜಲಿಯ ನೆಸೆವಿನಂ ಸೂಸಿ ತತ್ಪೂರ್ವರಂಗಕ್ಕನುಗ್ಗೈವುದನ್ನಿಶಾನರ್ತಕಿಯು ವದನ ದಂತಿಂದು ಕಣ್ಗೆಡ್ಡನೊದಂ (ಚಂದ್ರಪು. ೮-೩೦). [?]

ನಿಗ್ಗಳ (ನಾ). ಕೇಳಾದವನು (?) : ದಶಮುಖನಿಂದ ಬಲಿಮುಖರಗ್ಗಳರೊ ನಿಗ್ಗ[ಪಾಣಾಂ. ರ್ಗ]ಳರೊ ಚಿತ್ತಯಿಸು ಸಂಧಿಸದೆ ಭೀತಿಯನು (ತೊರಾ. ೫-೮-೫೮). [?]

ನಿಗ್ಗಾವು (ನಾ). ಹೆಚ್ಚಾದ ಕಾವು; ಅಧಿಕವಾದ ತಾಪ: ಚಿತ್ತವಿದು ಬೆಂಬೊನ್ನು ವಿಷಯದ ಮೊತ್ತವೇ ಕರುವದರ ನೆನವೇ ಬಿತ್ತಿಗೆಯು ನಿಗ್ಗಾವು ಮೋಹದೊಳೆರೆಯಲದರೊಳಗೆ ಮತ್ತೆ ಬೇರೊಂದಾಕೃತಿಯು ತಾಂ ಪತ್ತುವದೆ (ವಿವೇಭ. ೧೩-೪೨). [<ನಿಡಿದು$_1$ + ಕಾವು$_2$ (<ಕಾಯ್ವು$_1$)]

ನಿಗ್ಗು (ನಾ). (ಕರಾ) ದಟ್ಟಣೆ ; ನಂದಣಿ ; ನೂಕುನುಗ್ಗಲು : ಆ ಬಂಡಿಯನ್ನು ಭಕ್ತಕೋಟಿ ಒಳಗೂ ಹೊರಗೂ ಅವರಿಸಿ, ಉಳಿದ ಪ್ರಯಾಣಿಕರಿಗೆ ಎಡೆಯಿಲ್ಲದಷ್ಟು ನಿಗ್ಗನ್ನುಂಟುಮಾಡಿತ್ತು (ಆಳಾ. ೬) ; ಎಲ್ಲ ನಿಬ್ಬಣಿಗರೂ ಒಂದೇ ಕಡೆ ಇರುವುದಂದರೆ, ಒಟ್ಟು ನಿಗ್ಗಾಗುತ್ತದೆ (ಮರಸಂ. ೧೭೩). [←ತುಳು. ನಿಗ್, ನಿರ್ಗ್]

ನಿಗ್ಗೆಡಿ 'ನಿರ್ಗೇಡಿ' ನೋ.

ನಿಗ್ಗೆಡಿತನ (ನಾ). ಅವಿವೇಕ ; ದಡ್ಡತನ : ಎಲೆ ಗಾಂಪ ಸಮಸ್ತ ನಂಟರಂ ಮುಡದಿಯನಿಷ್ಟರಂ ಕಿಡಿಸಿ ದುರ್ಗತಿವೋಗದೆ ಬಪ್ಪುದೆಂದು ನಿಗ್ಗೆಡಿತನದಿಂ ಸಜಾಂಧವಜನಂ ತೆಗೆದಪ್ಪಿದರಾ ಮುನೀಂದ್ರನಂ (ಧರ್ಮಾಮೃ. ೮-೮೮). [ನಿಗ್ಗೆಡಿ (<ನಿರ್ಗೇಡಿ) + –ತನ]

ನಿಗ್ಗೊಳ (ನಾ). ಒಂದು ಬಿರುದು (?) : ಕೊಱ್ಗುಣ ಅರಸರ ಆಳು ಎಱುದು ಸತ್ತೊನ್ ಛಾನುದಾಸನ್ ಜಯವಿತ್ತನ್ ಊನರ ವೈರಿಕನ್ ಒಡವೆಟ್ಟೆ ರಾಯಿಳನ್ನಿಗ್ಗೊಳನ್ನನುಜಾಗರನ್ (ಮೈಆರ್.೧೧೬೯, ೩೨-೧೪; ಸಂ. 790). [?]

ನಿಗ್ರ 'ನಿಗ್ಗರ' ನೋ.

ನಿಗ್ರಂಥನ (ನಾ). ಸಂಹಾರ ; ಕೊಲೆ. [ಸಂ.]

ನಿಗ್ರಹ (ನಾ). ೧. ಅಂಕೆ ; ಹಿಡಿತ ; ಹತೋಟಿ ; ದಮನ : ಈ ವ್ಯಕ್ತಿತ್ವದಲ್ಲಿ ಸಮಗ್ರತೆಯಿದೆ, ಸಮತೂಕವಿಲ್ಲ ; ಉತ್ಸಾಹವಿದೆ, ನಿಗ್ರಹವಿಲ್ಲ (ಕಸಾಚ.೧೬೧). 'ಮನೋನಿಗ್ರಹ' ಪರಾ. ೨. ಹಿಂಸೆ; ಪೀಡೆ : "ನಿಗ್ರಹಂ ಪೀಡನಂ ಸ್ಪರ್ಶನಂ ಗ್ರಹಣ ಮೆನಲು ಹಿಡಿಹಂ" (ಸುಂಗರಾ. ೧೩೦-೧೬) ; ಪೊದೆದಾತನನಜಯದಂತೆ ಪೊದೆದ ಮಡಿ ಬಯಿಯಂ ಧೂಳಿಯೊಳ್ ಮಾಸಿಯಸಗನ ಬಾರಿಯೊಳ್ಪಿರ್ದು

ನಿಗ್ರಹಕ್ಕೊಳಗಪ್ಪಂತೆ ಚಪಲರ್ . . . ದುಃಖಂಬಡುವರ್ (ಧರ್ಮಾಮೃ. ೪-೩೮) ; ಕುದಿದೌಷಧಂ ಬಾಯ್ಗೆ ನಿಗ್ರಹಂ ಮಾಡಿ ತಾಳ್ದೊಡಲಿಂಗೆ ಸುಖವನೀವಂತೆ (ಹಡಪ. ೧೪-೩) ; ಪಲವಂದದ ನಿಗ್ರಹದಿಂ ಕೊಲಿಸಿ ದೊಡಾ ಮೊಸಳೆ ತನುವನುಬಿಡದು . . . ಬಲಿಕೊಯ್ಯನೊಗೆದುದಾಡಿನ ರೂಪಿಂ (ಯಶೋಧ. ೩-೪೯). ೩. ಶಿಕ್ಷೆ ; ದಂಡನೆ : ತಳಾಜಿನಂ ಕರೆಪು ಬೇಗಂ ಕಳ್ಳನನಾರಯ್ಯಲ್ಲದಾಗಳ್ ಕಳ್ಳಂಗೆ ತಕ್ಕ ನಿಗ್ರಹಮಂ ನಿನಗೆ ಮಾಟ್ಪೆನೆಂದರಸನಾತನಂ ಬಗ್ಗಿಸಿ ನುಡಿದೊಡೆ (ಪಡ್ಡಾ೦ಗ.೧೫-೧೦); ಪೊನ್ನನಾವ ಪ್ರಕಾರದೊಳಮಾಗಿಯುಮಾರಯ್ವುಂ ತಂದು ಕುಡುವದಂತಲ್ಲದೊಡೆ ಕಳ್ಳಂಗೆ ಮಾಟ್ಪ ನಿಗ್ರಹಮುಂ ನಿನಗೆ ಮಾಟ್ಪೆಂ (ಸುಕುಮಾ. ೬-೪ ಪ) ; ಹಿಂದಿನ ನಿಗ್ರಹ ರೀತಿಯ ಕಾರ್ಯಕ್ರಮಗಳು ಮಾರ್ಪಟ್ಟು ದುಕ್ಕಳ ಮನೋವಿಜ್ಞಾನವನ್ನನುಸರಿಸಿ ಹೊಸರೂಪವನ್ನು ತಾಳುತ್ತಿವೆ (ಶಿಕ್ಷಣ. ೬೮೪). ೪. ಸೋಲಿಸುವುದು ; ಪರಾಭವಗೊಳಿಸುವುದು : ತಪೋಬಲಂ ಋತಿಕಾತ್ಮಜಂಗೆ ನಿಗ್ರಹಕರ್ಪೊಡಂ, ನಿನ್ನ ತನುಜಾತರಭ್ಯುದಯಕಾಗಿ ಬಂದಿಹನಂದು ಕೇಳ್ ಸಾಕೇತಪುರಿಗೆ (ಕ್ರಿಂರಾಮಾ. ೭೦-೭೭). ೫. ಯಾತನೆ ; ನೋವು: 'ನಿಗ್ರಹಂಬಡು' ಪರಾ. ೬. ಎಲ್ಲೆ ; ಮಿತಿ. ೭. ಸಾಲ. ೮. ನಿಂದೆ ; ಬಯ್ಗಳು. ೯. ಬಂಧಿಸುವುದು ; ಸೆರೆ ಹಿಡಿಯುವುದು. ೧೦. ದೇವತೆ. ೧೧. ಹಿಡಿಕೆ ; ಹಿಡಿ. ೧೨. (ರೋಗವನ್ನು) ಅಧೀನಕ್ಕೆ ತರುವುದು,—ಗುಣಪಡಿಸುವುದು ; ಚಿಕಿತ್ಸೆ. ೧೩. ಜುಗುಪ್ಸೆ ; ಅಸಹ್ಯ. ೧೪. [ನ್ಯಾಯ]ನ್ಯಾಯವಾದದ ಒಂದು ದೋಷ; ℙ ನೈಯಾಯಿಕನು ವಾದದಲ್ಲಿ ದೋಷಯುಕ್ತವಾಗಿ ವಾದಿಸಿ ಸೋಲನ್ನು ಅನುಭವಿಸುವುದು. ೧೫. [ನಾಟ್ಯ] ನೃತ್ಯದ ಇಪ್ಪತ್ತು ಹಸ್ತವಿನ್ಯಾಸಗಳಲ್ಲಿ ಒಂದು ವಿಧ : ಧೂನನ . . . ನಿಗ್ರಹ, ಉತ್ಕ್ಷಿಪ್ತ . . . ಈ ಇಪ್ಪತ್ತು ಕರಕರ್ಮ ಭೇದಂಗಳ್ (ಲಾಸ್ಯರಂ. ೪-೧೩ ಪ). [ಸಂ.]

ನಿಗ್ರಹಂಗೆಯ್ (ಕ್ರಿ). ೧. ಹಿಂಸಿಸು ; ಪೀಡಿಸು : ಚಿತ್ರಸೇನೆಯುಂ ಸೋಮಿಲೆಯೊಳಪ್ಪ ವೈರಸಂಬಂಧದಿಂ . . . ವೃಷಭಸೇನಂಗೆ ಭಾರ್ಯೆಯಾಗೆ ತನ್ನ ನಿದಾನವೈರಸಂಬಂಧದಿಂ ಚಂದನೆಗೆ ನಿಗ್ರಹಂಗೆಯ್ದುಳ್ (ಜಾವುಂಪು. ೪೦೧) ; ಕುಡು ಕೊಂಡೊಡಮೆಯನೀಗಳೆ ಕುಡದಿರ್ದಡೆ . . . ಪಿಡಿದೊಯ್ದು ಮೆಟ್ಟುವೆಂ ಪೆರ್ಗಜೆಯೊಳ್ ಎಂದು ಕೌದ್ರಾಟೋಪಮಂ ಪಣ್ಣ ನಿಗ್ರಹಂಗೆಯ್ಯಲೆಂದಿರ್ಪುದುಂ (ಧ ಸಂ ೯ ಪ್ಯ. ೧೨-೨೩೦). ೨. ಶಿಕ್ಷಿಸು ; ದಂಡಿಸು ; ದಂಡನೆಗೆ ಗುರಿಮಾಡು. [ನಿಗ್ರಹ + ಕೆಯ್$_1$]

ನಿಗ್ರಹಂಬಡು (ಕ್ರಿ). ಯಾತನೆಯನ್ನು ಅನುಭವಿಸು ; ಹಿಂಸೆಪಡು : ನಿಗ್ರಹಂಬಡುವೆಮಗಭಯವನನುಗ್ರಹಿಸಿ ಕಾಯರೆ ಸದಾಚಾರಾಗ್ರಗಣ್ಯರು ನೀವು (ಬಸಪು. ೫೬-೪೫). [ನಿಗ್ರಹ + ಪಡು$_1$]

ನಿಗ್ರಹವಡಿಸು (ಕ್ರಿ). ತೊಂದರೆ ಕೊಡು ; ಕಾಡು ; ಹಿಂಸಿಸು : ನಿಗ್ರಹವಡಿಸದೆ ಪ್ರಜೆ ಪರಿವಾರವ ಬೆಗ್ಗಳದಿಂ ತುಷ್ಟಿಬಡಿಸು (ಪೋಹಪ. ೧೩-೧೧). [ನಿಗ್ರಹ + ಪಡಿಸು]

ನಿಗ್ರಹಶಂಕೆ (ನಾ). ಪೀಡೆಯ ಹೆದರಿಕೆ ; ಹಿಂಸೆಯ ಭಯ : ತಂತನ್ನ ಸರ್ವಸ್ವಮಂ ಕೊಟ್ಟುನುಗ್ರಹಂಬಡೆಯದೆ ನಿಗ್ರಹಶಂಕಾಭರಾತಂಕಿತಹೃದಯರಾಜ ಅಂಗ ವಂಗ . . . ಮುರುಪ್ರಭೃತಿಭೂಪಾಲಕರಿಂ (ಜಗವಿ. ೨-೩೯ ಪ). [ನಿಗ್ರಹ + ಶಂಕೆ]

ನಿಗ್ರಹಸ್ಥಾನ (ನಾ). [ನ್ಯಾಯ] ನ್ಯಾಯದರ್ಶನಗಳಲ್ಲಿ ಹೇಳಿರುವ ಹದಿನಾರು ಪದಾರ್ಥಗಳಲ್ಲಿ ಒಂದು; ವಿದ್ವತ್ಸಭೆಗಳಲ್ಲಿ ನಡೆಯುವ ವಾಕ್ಯಾರ್ಥಗಳಲ್ಲಿ ಪರಾಜಯಕ್ಕೆ ಕಾರಣವಾದುದು ; ℙ ವಿದ್ವತ್ಸಭೆಗಳಲ್ಲಿ 'ವಾಕ್ಯಾರ್ಥ'ವೆಂಬ ಹೆಸರಿನಿಂದ ಕರೆಯಲಾಗುತ್ತಿದ್ದ ಚರ್ಚೆಯಲ್ಲಿ ಭಾಗವಹಿಸಿದ್ದ ವಿದ್ವಾಂಸನು ಪರಾಜಿತನಾದನೆಂದು ನಿರ್ಣಯಿಸಲು ಕೆಲವು ಲಕ್ಷಣಗಳಿದ್ದುವು. ಅವಕ್ಕೆ 'ನಿಗ್ರಹಸ್ಥಾನ'ವೆಂಬ ಹೆಸರು ಪ್ರಸಿದ್ಧವಾಗಿದ್ದಿತು. ಈ ತಪ್ಪುಗಳನ್ನು ಮಾಡದೆ ಎಚ್ಚರಿಕೆಯಿಂದ ಚರ್ಚೆಯಲ್ಲಿ ಭಾಗವಹಿಸುವುದು ವಿದ್ವಾಂಸನ ಕರ್ತವ್ಯ. ನ್ಯಾಯಶಾಸ್ತ್ರದಲ್ಲಿ ೨೨ ನಿಗ್ರಹಸ್ಥಾನಗಳನ್ನು ಹೇಳಿದ್ದಾರೆ. ಅವುಗಳು ಹೀಗಿವೆ :— ೧. ಪ್ರತಿಜ್ಞಾಹಾನಿ : ಒಂದು ನಿರ್ದಿಷ್ಟ ವಿಷಯವನ್ನು ಪ್ರತಿಪಾದಿಸುವುದಾಗಿ ಆರಂಭಿಸಿ ಆ ವಿಷಯವನ್ನೇ ಬಿಟ್ಟು ಭಾಷಣ ಮಾಡುವುದು. ೨. ಪ್ರತಿಜ್ಞಾಂತರ : ತಾನು ಒಂದು ಗೊತ್ತು ವಳಿಯನ್ನು ಪ್ರತಿಪಾದಿಸಲು ಪ್ರಾರಂಭಿಸಿ ವಿರೋಧಿಗಳಿಂದ ಬಂದ ಆಕ್ಷೇಪಣೆಗಳನ್ನು ಸರಿಪಡಿಸಲು ಮೊದಲು ಸೂಚಿಸದಿದ್ದ ತಿದ್ದುಪಡಿಗಳನ್ನು ಸೇರಿಸಿಕೊಳ್ಳುವುದು. ೩. ಪ್ರತಿಜ್ಞಾವಿರೋಧ : ಸಾಧಿಸಬೇಕಾದ ವಿಷಯಕ್ಕೆ ವಿರೋಧವಾದ ದೃಷ್ಟಾಂತಗಳನ್ನು ಕೊಡುವುದು. ೪. ಪ್ರತಿಜ್ಞಾಸಂನ್ಯಾಸ : ತಾನು ಸಾಧಿಸಲು ಹೊರಟ ವಿಷಯದ ಬಗೆಗೆ ಎದುರಾಳಿಗಳು ಆಕ್ಷೇಪಣೆಯೆತ್ತಲು ಅದನ್ನು ಪರಿಹರಿಸಲಾರದೆ ತಾನು ಸಾಧಿಸಬೇಕಾದ ವಿಷಯವನ್ನು ಕೈಬಿಡುವುದು. ೫. ಹೇತ್ವಂತರ : ಪ್ರತಿಪಕ್ಷಕ್ಕೆ ಸೇರಿದ ವ್ಯಕ್ತಿಯು ಮಾಡಿದ ದೋಷಾರೋಪಣೆಯನ್ನು ಒಪ್ಪಿಕೊಂಡು ತಾನು ಹಿಂದೆ ಹೇಳಿದ್ದ ಕಾರಣಗಳನ್ನು ಹೇಳಲು ಪ್ರಾರಂಭಿಸುವುದು. ೬. ಅರ್ಥಾಂತರ : ತನ್ನ ಪಕ್ಷದ ಸಾಧನೆಗೆ ಅನಾವಶ್ಯಕವಾದ ವಿಷಯವನ್ನು ಹೇಳಲು ಹೊರಡುವುದು. ೭. ನಿರರ್ಥಕ : ಅರ್ಥವೇ ಇಲ್ಲದ ಅಂದರೆ ಅವಾಚಕವಾದ ಪದಗಳನ್ನು ಸೇರಿಸಿ ಮಾತನಾಡುವುದು. ೮. ಅವಿಜ್ಞಾತಾರ್ಥ : ಅರ್ಥವಿಲ್ಲದ ಮಾತುಗಳನ್ನು ಉಪಯೋಗಿಸುವುದು. ೯. ಅಪಾರ್ಥಕ : ತನ್ನ ವಾದಕ್ಕೆ ಬಾಧಕವಾಗುವಂತೆ ಅಸಂಗತವಾದ ಮಾತುಗಳನ್ನಾಡುವುದು. ೧೦. ಅಪ್ರಾಪ್ತಕಾಲ : ಇಷ್ಟೇ ವಿಷಯವು ಚರ್ಚನೀಯವೆಂಬ ನಿಯಮವಿದ್ದರೂ ಅದನ್ನು ಬದಿಗೊತ್ತಿ ಸಂಬಂಧಪಡದ ಯಾವುದೋ ವಿಷಯವನ್ನು ಎತ್ತಿ ಮಾತನಾಡುವುದು. ೧೧. ನ್ಯೂನ : ಪ್ರತಿಪಾದಿಸಬೇಕಾದ ವಿಷಯಕ್ಕೆ ಸ್ವಲ್ಪವೂ ಸಾಧಕವಾಗದ ಉಪವಿಷಯಗಳನ್ನು ಎತ್ತಿ ಮಾತನಾಡುವುದು. ೧೨. ಅಧಿಕ : ಸಾಧಿಸಬೇಕಾದ ವಿಷಯಕ್ಕೆ ಸಾಧಕವಾದ ಹಿತಮಿತವಾದ ಕಾರಣಗಳನ್ನು ಕೊಡದೆ ಅಪ್ರಾಸಂಗಿಕವಾದ ಅನೇಕಾನೇಕ ಕಾರಣಗಳನ್ನು ಹೇಳುತ್ತಾ ಹೋಗುವುದು. ೧೩. ಪುನರುಕ್ತ : ಹೇಳಿದುದನ್ನೆ ಮತ್ತೆ ಮತ್ತೆ ಹೇಳುತ್ತಿರುವುದು. ೧೪. ಅನನುಭಾಷಣ : ನಿರ್ಣಾಯಕರು ಒಂದು ವಿಷಯವನ್ನು ಮೂರಾವರ್ತಿ ತಿಳಿಸಿದರೂ ಅದನ್ನು ಅನುಸರಿಸದಿರುವಿಕೆ. ೧೫. ಅಜ್ಞಾನ : ವಾದಿಯು ಮೂರುಸಲ ಹೇಳಿದ ವಿಷಯವನ್ನು ಸಭೆಯು ತಿಳಿದುಕೊಂಡರೂ ಪ್ರತಿವಾದಿಯು ತಿಳಿದುಕೊಳ್ಳದಿರುವುದು. ೧೬. ಅಪ್ರತಿಭೆ : ಎದುರಾಳಿಯು ಕೇಳಿದ ಪ್ರಶ್ನೆಯು ಉತ್ತರಿಸಲು ಅರ್ಹವಾಗಿದ್ದರೂ ಉತ್ತರ ಕೊಡಲು ಹೊಳೆಯದಿರುವುದು. ೧೭. ವಿಕ್ಷೇಪ : ಇಲ್ಲದ ನೆಪವನ್ನು ಹೇಳಿ ವಾದವನ್ನು ನಿಲ್ಲಿಸಿ ಹೊರಟುಹೋಗುವುದು. ೧೮. ಮತಾನುಜ್ಞೆ : ಪ್ರತಿಪಕ್ಷಕ್ಕೆ ಸೇರಿದ ವ್ಯಕ್ತಿಯು ಮಾಡಿದ ದೋಷಗಳನ್ನು ನಿವಾರಿಸದೆ ಆ ವ್ಯಕ್ತಿಯ ಮೇಲೆ ದೋಷಗಳನ್ನು ಹೇಳುವುದು. ೧೯. ಪರ್ಯನುಯೋಜ್ಯೋಪೇಕ್ಷಣ : ನಿಗ್ರಹಸ್ಥಾನವನ್ನು ಪಡೆ

ದಿರುವನನಿಗೆ ಕೂಡಲೆ ಆ ದೋಷವನ್ನು ತಿಳಿಸದೆ ಉಪೇಕ್ಷೆ ಮಾಡುವುದು. ೨೦. ನಿರನುಯೋಜ್ಯಾನುಯೋಗ : ನಿಗ್ರಹ ಸ್ಥಾನಕ್ಕೆ ಅವಕಾಶವಿಲ್ಲದಿದ್ದರೂ ಇದೆಯೆಂದು ಆಕ್ಷೇಪಿಸುವುದು. ೨೧. ಅಪಸಿದ್ಧಾಂತ : ಚರ್ಚೆಯಲ್ಲಿ ಅಂಗೀಕರಿಸಿರುವ ನಿರ್ಣಯವನ್ನು ತಿರಸ್ಕರಿಸುವುದು. ೨೨. ಹೇತ್ವಾಭಾಸ : (೧. ಬೆಂಕಿಯೊಂದು ವಸ್ತುವಾದುದರಿಂದ ಅದು ಬೆಟ್ಟದಲ್ಲಿದೆ. ೨. ಕೃತಕವಾದುದರಿಂದ ಶಬ್ದವು ನಿತ್ಯವಾದುದು. ೩. ಕಣ್ಣಿಗೆ ಕಾಣುವುದರಿಂದ ಶಬ್ದವು ನಿತ್ಯವಾದುದು ಎಂಬಂತೆ) ಸಾಧಿಸಬೇಕಾದ ವಿಷಯ ; ಸಾಧ್ಯಕ್ಕೆ ವಿರೋಧಕಾರಿಯಾದ ದುಷ್ಟಕಾರಣಗಳನ್ನು ಕೊಡುವುದು : ಪ್ರತಿವಾದಿ ನಿರುತ್ತರನಾಗಿ ಪಕ್ಷಪರಿತ್ಯಾಗಂ ನಿಗ್ರಹಸ್ಥಾನಮೆಂಬುದುಂ ನಿಗ್ರಹಸ್ಥಾನಮನೆಯ್ದಿಯುಮಿರದೆ . . . ಸುಗತಮತಮಂ ಪಿಡಿದಂ (ಶಾಂತಿಪು. ೪-೧೪೧ ಪ); ಗೌತಮೋಕ್ತ ನ್ಯಾಯವು ಪ್ರಮಾಣ . . . ನಿಗ್ರಹಸ್ಥಾನಗಳೆಂಬ ಹೋಡಶಪದಾರ್ಥಂಗಳಂ ನಿರೂಪಿಸುತ್ತ (ವಿವೇಕ. ೧೧೦) ; ನ್ಯಾಯದರ್ಶನದಲ್ಲಿ ಪ್ರಮಾಣ ಪ್ರಮೇಯ ಸಂಶಯ ಪ್ರಯೋಜನ ದೃಷ್ಟಾಂತ ಸಿದ್ಧಾಂತ ಅವಯವ ತರ್ಕ ನಿರ್ಣಯವಾದ ಜಲ್ಪ ವಿತಂಡಾ ಹೇತ್ವಾಭಾಸ ಛಲ ಜಾತಿ ನಿಗ್ರಹಸ್ಥಾನ ಎಂದು ಹದಿನಾರು ಪದಾರ್ಥಗಳನ್ನು ನಿರೂಪಿಸಿರುವರು (ಹಿಂದುಸಾ.ಗಣಿತ). 'ಷೋಡಶ ಪದಾರ್ಥ' ಪರಾ. [ನಿಗ್ರಹ+ಸ್ಥಾನ]

ನಿಗ್ರಹಿಸು (ಕ್ರ). ೧. ಅಂಕೆಗೊಳಪಡಿಸು : ಹತೋಟಿಗೆ ತರು : ಮನಮಂ ನಿಗ್ರಹಿಸುತ್ತ ಸದ್ವಿಷಯದತ್ತಲ್ ಪೊರ್ದದಂತಾಗೆ ಮಾಡಿ . . . ಲೋಕೈಕನಾಥನ ನಾನಾಗಳನಾಥೆಯಂ ಶರಣೆನುತ್ತಾಶ್ರಯಿಸಿದೆಂ ಸ್ಥಾಣುವಂ (ಕಾದಂಪೂ. ೯೫೩) ; ಬಹುವಿಧದೊಳಂತಾರುಹತರಾಗ್ರಹಿಸಿ ಕೊಲಲಾಜಿದೆ ಬಳಿಕ ನಿಗ್ರಹಿಸಿ ತಮ್ಮಂ ಕೊಲುವನೇಂ ಎಂದೆಯ್ದೆ ಮೋಜಿಯೊಳ್ಕು (ಜಸಪು. ೪೯-೪೦) ; ಎಲೆ ಗಿರಿಜಾತೆ ನೋಡಿವನ ಸಾಹಸಮಂ . . . ನಿಗ್ರಹಿಸಿರ್ದ ಶರೀರದಿಂದದೇಂ ಕಲಿಯೊ ಕಡಂಗಿ ಕಾದಿದನಿವಂ ಸಮುದಂದಿಯೊಳೆನ್ನೊಳರ್ಜುನಂ (ಶಬಶಂ. ೪-೩೬). ೨. ಪೀಡಿಸು ; ಹಿಂಸಿಸು : ಬೆಟ್ಟತ್ತಾಗಿ ಬಯ್ದು ಕಿನಿಸುವುದುಂ ಗಜಬುವುದುಂ ಬಡಿವುದುಂ ನಿಗ್ರಹಿಸುವುದುಂ ಇಟ್ಟಿವುದುಂ ಕೊಲ್ವುದುಂ ಎಂದಿಂತನೇಕ ಲಕ್ಷಣಮಾಗುಳ್ಳುದು ಹಿಂಸಾನಂದಮೆಂಬ ರೌದ್ರಧ್ಯಾನಮಕ್ಕುಂ (ಪಸಾರ. ೩೮೧).

[ನಿಗ್ರಹ+-ಇಸು$_3$]

ನಿಗ್ರಾಹ (ನಾ). ೧. ಶಿಕ್ಷೆ ; ದಂಡನೆ. ೨. ಕೆಡುಕು ಬಗೆಯುವುದು. ೩. ನಿಂದೆ. [ಸಂ.]

ನಿಘ (ಗು). ೧. ಅಗಲ ಮತ್ತು ಎತ್ತರಗಳು ಸಮವಾಗಿರುವ. (ನಾ). ೨. ಸಮವಾದ ಪ್ರದೇಶ ; ಜಗಲಿ : "ನಿಘ ಶಬ್ದವು ಉದ್ದವು, ಅಗಲವು, ಹಳ್ಳವು, ಎತ್ತರವುಯಿಲ್ಲದೆ ಸರಿಯಾಗಿರುವ ಜಗುಲಿ ಮೊದಲಾದವುಗಳ ಹೆಸರು" (ಗುರುಬಾ. ೫೭ ಮೂರನೆಯ ಕಾಂಡ). ೩. ಗುಂಡಾದುದು ; ಚೆಂಡು. ೪. ಪಾಪ. [ಸಂ.]

ನಿಘಂಟು (ನಾ). ೧. ಶಬ್ದಾರ್ಥಗಳ ಕೋಶ ; ಶಬ್ದಕೋಶ ; ಅರ್ಥಕೋಶ : ಛಂದಮಲಂಕಾರಂ ನಿಘಂಟು ಶಾವ್ಯ ನಾಟಕಂಗಳುಂ . . . ಮಂತ್ರವಾದಂ ಮೊದಲಾಗೊಡೆಯ ಶಾಸ್ತ್ರಂಗಳೆಲ್ಲವುಂ ನೆಜಿಯೆ ಕಲ್ಪಿಸಿ (ಪಜ್ಞಾರಾ. ೩-೨೪) ; ಸಮುದಿತ ಸಂಖ್ಯಾವ್ಯಯರಹಿತಮನಿವರ್ವಿಧ ನಿಘಂಟುವಿನ ನಾಮಪದೋಕ್ತಮವರ್ಣಪ್ರಕೃತಿಗಳಂ ಸಮಸಂಸ್ಕೃತವೆಸರನಿಟ್ಟು ಲಿಂಗಂ ಮಾಬ್ಪರ್ (ಪಮದ. ೪೦) ; ನಿಘಂಟುಗಳಲ್ಲಿ ಜನಸಾಮಾನ್ಯರಿಗೆ ಗೌರವ ಹುಟ್ಟುವುದು ಅಪೂರ್ವ ; ನಿಘಂಟು ಒಂದು ಗ್ರಂಥವೆಂದು ಒಪ್ಪದವರೇ ಹಲವರಿದ್ದಾರು (ಸಮೂಲೋ. ೨೬೬) ; ಮಗನಿಂದ ಕಾಗದ ಬಂದರೆ ಒಡನೆನಗರ್ಥಕೆ ಬೇಕು ನಿಘಂಟು (ಇಂಚಾಪ. ೧೬೯-೭೪). ೨. ನಿಶ್ಚಿತವಾದುದು ; ಖಚಿತವಾದುದು ; ಖಾತ್ರಿಯಾದುದು : ಒಂದು ಮೊಳದ ಅಳತೆಯನ್ನು ತಾಮ್ರದ ಪಟ್ಟಿಯಲ್ಲಿ ನಿಘಂಟು ಮಾಡಿ . . . ವಿಭಾಗ ಮಾಡಿದರು (ಶಲ್ಪನಾ. ೬೯). ೩. ಯಾಸ್ಕಾಚಾರ್ಯರಿಂದ ವಿರಚಿತವಾದ ನಿರುಕ್ತವೆಂಬ ವೇದದ ಶಬ್ದಗಳ ಕೋಶ.

ನಿಘಂಟಾಗಿ ಹೇಳು = ಖಾತ್ರಿಯಾಗಿ ಹೇಳು ; ಖಚಿತವಾಗಿ ಹೇಳು : ಕೆಲವು ವಿಚಾರಗಳಲ್ಲಿ ಹೀಗೇ ಸರಿ ಎಂದು ನಿಘಂಟಾಗಿ ಹೇಳುವುದು ಕಷ್ಟ (ರೂಢಿ). ನಿಘಂಟಾಗು = ಖಾತ್ರಿಯಾಗು ; ಖಚಿತವಾಗು ; ನಿಖರವಾಗು : ನಿಘಂಟಿನ ಹೇಳಿಕೆ ನಮ್ಮ ಜನಕೆ ಅನ್ನುವಂತೆ "ನಿಘಂಟಾಗ ಬೇಕಾದರೆ ಎಷ್ಟು ಕಾಲ ಎಷ್ಟು—ದುಡಿದರೂ ಸಾಲದು (ಸಮೂಲೋ. ೨೬೦). [ಸಂ.]

ನಿಘಂಟುಪ್ರಮಾಣ (ನಾ). ನಿರ್ಧಾರವಾದ ಆಧಾರ ; ಖಚಿತವಾದ ಪುರಾವೆ : ಹರಿಯ ಕಾಲೊಳು ಗಂಗೆ ಜನಿಸಿತೆಂದು ಧಾರುಣಿಯ ಮೂಢ ಪರಸಮಯಿಗಳು ಬಗುಳುವರು . . . ಅದಱಂ ವಿಚಾರವೆಂತೆನೆ ನಿಘಂಟುಪ್ರಮಾಣದೊಳೊರೆವೆನು (ವಿಶ್ವಪು. ೩-೧೪-೨೩).

[ನಿಘಂಟು+ಪ್ರಮಾಣ]

ನಿಘಂಟುಸಮಯ (ನಾ). ಶಬ್ದಕೋಶ ರಚನೆಯ ತತ್ವ ಅಥವಾ ನಿಯಮ ; ನಿಘಂಟು ಶಾಸ್ತ್ರ,—ಸಿದ್ಧಾಂತ : ಅಭಿಧಾನಲಿಂಗಾಂಗೀಕೃತಮಪ್ಪ ನಿಘಂಟುಸಮಯಮುಮಂ ತತ್ತಾರ್ಯವೃತ್ತಕಮಪ್ಪ ನಾಟ್ಯವಿದ್ಯೆಯುಮಂ . . . ತ್ರಿದಶವರ್ಗಕ್ಕುಪದೇಶಂಗೆಯ್ತುಂ (ಶಾಂಪು. ೧೦-೯೦ ಪ). [ನಿಘಂಟು+ಸಮಯ$_1$]

ನಿಘರ್ಷಣ (ನಾ). ತೀಡುವಿಕೆ ; ಉಜ್ಜುವಿಕೆ ; ಘರ್ಷಣೆ : ಸಿದ್ಧಾರ್ಥದ ಸೇಸೆಗಳನಿಕ್ಕಿದೊಡೆತ್ತಾನುಮುದಿರ್ದು ಬಿರ್ದ ಸಿತಸರ್ಷಪ ಸ್ಪರ್ಶನಿಘರ್ಷಣದಿಂ ಪದುಳವಿರಲಜುಯದೆ (ಸುಕುಮಾ. ೧೧-೩೫ ಪ) ; ಕರಟನಿಘರ್ಷಣದೆ ಮುದಂ ಬೊರೆದಾನೆಯ ಕೈಯನಳಿಗಳಾವರಿಸಿದವೊಲ್ ಮರಕತಕಂಕಣಮೆಸೆದುವು ತಿರುವೊಯ್ಲಿಂ ಕರ್ಬುವೆತ್ತ ತತ್ಕರಯುಗದೊಳ್ (ಚಂದ್ರಪ್ರ. ೬-೬೦) ; ನಿಘರ್ಷಣಚ್ಛೇದನ ತಾಪನತಾಡನಾದಿ ಕ್ರಿಯೆಗೆಲ್ಲಂ ಬಂದೊಡೆ ಪೊನ್ನೊಳ್ಳಿತ್ತು (ಜೀಪಸಂ. ೫೧-೨೬ ಪ). [ಸಂ.]

ನಿಘರ್ಷಿಸು (ಕ್ರ). ೧. ಉಜ್ಜು ; ತೀಡು ; ತಿಕ್ಕು. ೨. ಪುನಃ ಪುನಃ ಚರ್ಚಿಸು,—ಆಲೋಚಿಸು : ಪ್ರತ್ಯಕ್ಷಾನುಮಾನಂಗಳಿಂ ಕಾರ್ಯಾಕಾರ್ಯಂಗಳನುಪಧಾವಿಸುದ್ಧ ಮಂತ್ರಿಮಂಡಲದೊಳವಿರತಂ ನಿಘರ್ಷಿಸಿಯುಂ (ಚಂದ್ರಪ್ರ. ೨-೬೦ ಪ). [ನಿಘರ್ಷಣ+-ಇಸು$_3$]

ನಿಘಸ (ನಾ). ೧. ತಿನ್ನುವುದು ; ಆಹಾರಸೇವನೆ ಮಾಡುವುದು : "ಜಗ್ಧಿಃ, ಭೋಜನಂ, ಜೇಮನಂ, ಲೇಪಃ, ಆಹಾರಃ, ನಿಘಸಃ, ನ್ಯಾದಃ—೭ ಭೋಜನದ ಹೆಸರುಗಳು, ಊಟ, ಆರೋಗಣೆ" (ಸಿದ್ಧಾಂತಿ. ೨೯೧). ೨. ಆಹಾರಪದಾರ್ಥ ; ತಿಂಡಿ. [ಸಂ.]

ನಿಘಾತ (ನಾ). ೧. ಏಟು ; ಹೊಡೆತ : ಚಕ್ರನಿಘಾತದಿನಿಕ್ಕಿ ಬೀರ ಮುರಿಗೆ ಪಡಿಚಂದಮಾಗಿ ತಜಿದೊಟ್ಟು ಜಯಾಂಗನೆಗಾಣ್ಮನಾದಪೆಂ (ಪಂಪಭಾ. ೧೨-೨೦೪) ; ಅಡಿ ಕಾಲಿಟ್ಟೊಡಿಡೆ ನಿಘಾತದಿಂ ಪೊಯ್ದೊಡಾಂಕೆಗೊಂಡಣ್ಮೆ ಕಾದಿದರ್ ಕಡುಗಲಿಗಳ್ (ಗದಾಯು. ೮-೯) ; ತಿರದ ಸೀಸಕವನು ನಿಘಾತದಲೆರಡು ಶರದಲಿ ಮತ್ತೆ ಭೂಪತಿಯುರವನೆಗುಳಿದ ನೆಂಟಱಿ ಮಗುಳೆಚ್ಚು ಬೊಬ್ಬಿಟ್ಟಜ (ಕುಮ್ಯಾಶ. ೩-೪೪). ೨. ನಾಶ ; ಧ್ವಂಸ : ಪಾತಳವ್ಯಾತಪ್ರಜಾತನಿಕೇತನಂಗಳು ಕುಡುಗುನಿಗಳು ನಿಘಾತಕರ್ಮಕ್ರಿಯೆಗಳವಿಚಾರಿಗಳು (ಜಸಪು. ೪೦-೬೫) ; ಪಾ ನವರ ಕಟ್ಟಳೆಯ ಕೀಲಣದಾ ನಗರಿಯನು ನೆಗ್ಗಿದಂತಿರಲೀ ನಿಘಾತದ ಸೇನೆ ಮುಯ್ದುದು ಭಟನ ಭಾರಕ್ಕೆ (ಕುಮ್ಯಾಕ. ೧೩-೧೩). [ಸಂ.]

ನಿಘೃಷ್ಟ (ಗು). ೧. ಉಜ್ಜಿದ ; ತಿಕ್ಕಿದ : ಪರಿಣಯನಾರ್ಥಂ ಭಾಸುರಸುರಮಕುಟನಿಘೃಷ್ಟ ಚರಣಕಮಲನನುದ್ಯದ್ವರದನನಾದಿತ್ಯನನಾದರದಿಂದಂ ನೆನೆದು (ಪಂಚತಂ. ೨೫೬-೧೬). ೨. ಏಟು ತಿಂದ ; ಸೋಲಿಗೊಳಗಾದ ; ಪರಾಧೀನವಾದ. [ಸಂ.]

ನಿಘ್ನ (ಗು). ೧. ಅಧೀನವಾದ ; ವಶವಾದ. (ನಾ). ೨. ಅಧೀನನಾದವನು ; ವಶವಾದವನು : ಅಧಿಕಚಿಂತಾನಿಘ್ನನಾಗಿ ವಿಹಿತಧ್ಯಾನದಿಂದೆ ಲಕ್ಷ್ಮೀನಾಥನಂ . . . ಕಾಣಲ್ಕೆ (ಪದ್ಮರಾ. ೧೦-೧೨). ೩. ಪರರ ವಶದಲ್ಲಿರುವವನು ; ಪರಾಧೀನನಾದವನು : "ನಿಘ್ನಂ ಪರವಶವರ್ತಿ" (ಪಸ್ತುಕೋ. ೧೦೧-೨೧); "ಪರವಶಂ ನಿಘ್ನಂ ಪರಾಧೀನನೆಂದೆನಲು . . . ಪರರ ವಶದವನಕ್ಕು" (ಮಂಗರಾ. ೬೮-೬).

[ಸಂ.]

ನಿಘ್ರ 'ನಿಗ್ಗರ' ನೋ.

ನಿಚಯ (ನಾ). ೧. ಗುಂಪು ; ಸಮೂಹ : "ಪಟಳವೆಂಬ:(ದದು) ನಿಚಯದೊಳಂ" (ಪಸ್ತುಕೋ. ೧೩೮-೧೨೩) ; ದೇವಾಪ್ಸರೋನಿಚಯ ನಿಚಿತಮಪ್ಪ ದೇವವಿಮಾನಮಂ ಪೊಕ್ಕಾಗಳ್ (ಪಂಪಭಾ. ೮-೨೬ ಪ) ; ಉಜ್ವಲದಶನನಿಚಯತಾಂಬೂಲಚರ್ವಣಭರಿತಕಪೋಲರುಂ . . . ಆಗಿ (ಜಗವಿ. ೪-೮೦ ಪ) ; ಮದನಂಗೀಶ್ವರ ಶತ್ರು ಬಂಧುನಿಚಯಕ್ಕಂ ಜಾರೆಯೇ ಶತ್ರು (ಸೋಮೇಶ. ೮೬) ; ಬಿರುಗಾಳಿ ಬೆದರಿಕೆ ಭೂರುಹನಿಚಯಕೆ ಮಂಜಿನ ಭಯವಬ್ಜವನಕೆ (ಇಂಚಾಪ. ೧೫೮-೮೦). ೨. ನಿಸ್ಸಂದೇಹವಾದ ನಂಬಿಕೆ ; ಖಂಡಿತವಾದ ಭಾವನೆ ; ನಿಶ್ಚಯ.

[ಸಂ.]

ನಿಚಿತ (ಗು). ೧. ಸೇರಿದ ; ಕೂಡಿದ : ಪ್ರಚಾರತೆಯಿಂ ಪ್ರಥಮಾಬಹುವಚನಂಗಳವೇಕವಚನಕೃತಲಿಂಗಂಗಳ್ ನಿಚಿತವಿಸರ್ಗಮನುಟಿದಂದು (ಶಮದ. ೮೭). ೨. ತುಂಬಿದ ; ವ್ಯಾಪ್ತವಾದ : ಆತ್ಮೀಯಚೇತೋನಿಚಿತಮೋಹಾಂಧತಮಸ್ತೋಮಮಂ ಕಳೆದು (ಅದಿಪು. ೨-೧೭ ಪ) ; ಸಕಲವಿನೇಯಜನವಿಲೋಚನಚಂಚರೀಕನಿಚಯ ನಿಚಿತಾಶೋಕಾನೋಕಹನುಂ (ಅಜಿಪು. ೬-೨೦ ಪ). ೩. ಅತಿಶಯವಾದ ; ವಿಶೇಷವಾದ : ಪ್ರಚುರದಿ ಪದಿನೆಂಟುರಚನೆಯ ಕಾವ್ಯಕೆ ರಚಿಸುವರಾನಂತು ಪೇಳೆ ಉಚಿತಕೆ ತಕ್ಕಷ್ಟು ಪೇಳ್ವೆನಧ್ಯಾತ್ಮವೆ ನಿಚಿತಪ್ರಯೋಜನವೆನಗೆ (ಭರಚ. ೧-೧೫) ; ಅಧ್ಯಾತ್ಮವೇ ನಿಚಿತಪ್ರಯೋಜನವಾಗಿ ಉಳ್ಳ ಭಾರತೀಯರ ಸಾಹಿತ್ಯದಲ್ಲಿ ಸರ್ವವ್ಯಾಪಿಯಾಗಿರುವ ಒಂದುಭಾವವನ್ನೇ—ಭಗವತ್ತ್ರೇಮವನ್ನೇ—ಇಲ್ಲಿಯೂ ನಾವು ಎದುರುಗೊಳ್ಳುತ್ತೇವೆ (ಭಾವಗೀ. ೧೮೬). (ನಾ). ೪. ತುಂಬಿದುದು ; ವ್ಯಾಪ್ತವಾದುದು : ಉದಯಗಿರಿಕಟಕಕುಹರಪರಿಕರ [ನಿಶಾಕರ]ಹರಿ[ದ]ಳಿತ ನಿಜಹರಿಣರು[ಧಿ]ರನಿಚಯನಿಚಿತಮಾದಂತೆ ಲೋಹಿತಾಂಗನಾಗೆ (ಪಂಪಭಾ. ೪-೪೯ ಪ) ; ಆ ಮೇರುಗಿರಿಯ ದಕ್ಷಿಣದಿಶಾಭಾಗದೊಳನೇಕನಗರನಿಗಮಾಗ್ರಹಾರಗ್ರಾಮನಿಕರಪೇಟಖರ್ವಟಮಟಂಬಪತ್ತನದ್ರೋಣಾಮುಖಸಂವಾಹನಿಚಯನಿಚಿತಮುಂ (ಜಗವಿ. ೨-೧ ಪ) ; ಯಮನ ನಾಲಗೆಯ ತೆಱದಿಂದಮಿತಭಯಂಕರಸುತೀಕ್ಷ್ಣ ಶಸ್ತ್ರಂಗಳಿನಾದಮೆ ನಿಚಿತಮಾದ ಶಾಲಾಸಮುದಯಮನಿಶಂ ಬೆಡಂಗನವಗಯಿಸಿರ್ಕುಂ (ಜಾಧಪು.೧-೧೫೨). ೫. ಗುಂಪು ; ಸಂದಣಿ : "ಆಚಿತಂ, ನಿಚಿತಂ . . . ಭರಿತಂ, ಪೂರ್ಣಂ—ಈ ೯ ಸಂದಣಿ" (ಹಲಾಯು. ೧೧೬-೧೭) ; "ಭರಿತಂ ಪ್ರಪೂರ್ಣಮಾಚಿತಂ ನಿಚಿತಮಾಕುಳಂ ಪರಿಕೀರ್ಣಮಾಚ್ಛದನಮೆನಲು ಸಂದಣಿಯಕ್ಕು" (ಮಂಗರಾ. ೧೨೮-೯).

[ಸಂ.]

ನಿಚಿತಂ (ಅ). ನಿಶ್ಚಯವಾಗಿ : ಪರಕೃತಿಯುಕ್ತಿಯನೊಲ್ದಪಹರಿಸುವ ಕಳ್ಳಂಗೆ ಕಾವ್ಯಕೃತಕೃತ್ಯಮದೇಂ ವರಕೃತಿಯುಕ್ತಿಯನಱಿಯದ ದುರುಳಂಗಂ ಜಱೆದು ಮೆಱೆವುದುಚಿತಂ ನಿಚಿತಂ (ಹವ್ಮೀರ. ೧-೧೬).

[<ನಿಚಿತ]

ನಿಚಿತವಚನೆ (ನಾ). ಅತಿಶಯವಾದ ನುಡಿ,—ಮಾತು : ಇನಿತೇಟ್ಗೆ ವಿವಾದಾಡಂಬರದೊಳಳುಂಬಮೊದವಿ ನಿಲೆ ಪಾಸುಂಪೊಕ್ಕುಂಬರಿದು ನಿಚಿತವಚನಕದಂಬಕಮೆರ್ದೆಗೊಳಿಸೆ ಸಭೆಯ ವಿಬುಧಾವಳಿಯಂ (ಶಾಂತಿಪು. ೮-೧೨೮). [ನಿಚಿತ + ವಚನ]

ನಿಚಿತಹರುಷ (ನಾ). ೧. ಹೆಚ್ಚಾದ ಹರ್ಷ,—ಸಂತಸ. ೨. ಅತಿಶಯವಾದ ಸಂತಸವನ್ನು ಹೊಂದಿದವನು : ನಿಚಿತಹರುಷರು ವಿಶ್ವಕರ್ಮಂಗಱುಹಿದರು ಹದನ (ಕುಸ್ಕಾಕ. ೬-೧). [ನಿಚಿತ + ಹರುಷ]

ನಿಚುಲ, ನಿಚುಳ (ನಾ). ೧. ಒಂದು ಬಗೆಯ ಸಸ್ಯ ; ಹಬಸೆ ಗಿಡ : "ವಂಜುಲಃ, ನಿಚುಲಃ—ಈ ೨ ಹಬಸೇಗಿಡದ ಪೆಸರ್" (ಹಲಾಯು. ೩೨-೪೨). ೨. ಒಂದು ಬಗೆಯ ಮರ ; ನೀರುಹಲಸು. ೩. ಒಂದು ಬಗೆಯ ಕಣಿಗಿಲೆ ಮರ ; ತೊರೆಗಣಿಗಿಲೆ : "ನಿಚುಲ, ಅಂಬುಜ, ಹಿಜ್ಜಲ—ತೊಱೆಗಣಿಗಿಲೆ" (ನಾಚಿರಾ. ಕಿ.). ೪. (ಒಳ ಅಂಗಿಯ ಮೇಲೆ ತೊಡುವ)ಮೇಲಿನ ಅಂಗಿ ; ಕವಚ. ನಿಚುಳ : ೧. "ನಿರ್ಜುಳ ನಿಚುಳ[ಪಾಠಾಂ. ಲ]ಮಾರಂ" (ಮಂಗರಾ. ೩೪-೧೦). ೨. "ನಿಚುಳಃ, ಅಂಬುಜಃ, ಇಜ್ಜಲಃ—೩ ಗನ್ನೇರಳೇಗಿಡದ ಹೆಸರುಗಳು. ಇದನ್ನು ನೀರುಹಲಸಿನ ಗಿಡವೆನ್ನುವರು" (ಸಿದ್ಧಾಂತಿ. ೧೨೫) ; ಅದಱೊಂದೊಂದೆಡೆ ಸಾಳತಾಱಲವಳೀಹಿಂತಾಳನಾಳೀತಮಾಳದಿಂ . . . ಒಂದೊಂದೆಡೆ ಭೂರ್ಜ ಕೋಳನಿಚುಳಾಕ್ಷೋಣಂಗಳಿಂದೊಪ್ಪುಗುಂ (ವರ್ಧಮಾ. ೫-೪೮). [ಸಂ.]

ನಿಚುಳ 'ನಿಚುಲ' ನೋ.

ನಿಚೋಲ, ನಿಚೋಳ(ನಾ). ೧. ಮೇಲಂಗಿ ; ಕವಚ. ನಿಚೋಳ : ೨. ಹಾಸಿಗೆಯ ಮೇಲೆ ಹಾಸುವ ವಸ್ತ್ರ : "ನಿಚೋಳಃ, ಪ್ರಚ್ಛದಪಟಃ—೨ ಮೇಲುಹಾಸಿಗೆ, ಹಾಸಿಗೆ ಮೇಲೆ ಹಾಸುವ ನೌರುಬಟ್ಟೆ" (ಸಿದ್ಧಾಂತಿ. ೨೦೪). [ಸಂ.]

ನಿಚೋಲಕ, ನಿಚೋಳಕ (ನಾ). = ನಿಚೋಲ ೧. ನಿಚೋಳಕ : ಪದನಖದೀಪ್ತಿಮಂಜರಿ ನಿಚೋಳಕದಂತಿರೆ ತನ್ನನಾವಗಂ ಪುದಿಯಲೊಡಂ ಬಿಗುರ್ವಣೆ ರಘೂದ್ವಹಸನ್ನಿಧಿಯಿಂದದೃಶ್ಯಮಪ್ಪುದುಂ (ಪಂಠಾಮಾ. ೫-೮೬). [ಸಂ.]

ನಿಚೋಳ 'ನಿಚೋಲ' ನೋ.

ನಿಚೋಳಕ 'ನಿಚೋಲಕ' ನೋ.

ನಿಚ್ಚ[1] (ನಾ). ಪ್ರತಿದಿನ ; ಪ್ರತಿನಿತ್ಯ.

ನಿಚ್ಚಕ್ಕಂ = ನಿತ್ಯದ ಭಿಕ್ಷೆಗೆ,— ಆಹಾರಕ್ಕೆ : ದುರ್ವಾಸಮಹಾಮುನಿಯರೆಮ್ಮ ಮನೆಗೆ ನಿಚ್ಚಕ್ಕಂ ಬರ್ಪರ್ (ಪಂಪಭಾ. ೧-೧೧೮ ಪ) ; ನಿಚ್ಚಕ್ಕೆ = ಪ್ರತಿನಿತ್ಯವೂ ; ಪ್ರತಿದಿನವೂ : ಮನವೇ ಸರ್ವ ತನುವೇ ಹೇಳಿಗೆ . . . ಇನ್ನಾವಾಗ ತಿಂದಹುದೆಂದಱಿಯೆ ನಿಚ್ಚಕ್ಕೆ[ಪಾಠಾಂ. ನಿಚ್ಚನಿಚ್ಚಕ್ಕೆ]ನಮ್ಮ ಪೂಜಿಸಬಲ್ಲೊಡೆ ಅದೇ ಗಾರುಡ (ಬಸವ. ೧೬೦). ನಿಚ್ಚಕ್ಕೆ ನಿಚ್ಚ = ನಿರಂತರವಾಗಿ ; ಒಂದೇ ಸಮನೆ : ನಿಚ್ಚಕ್ಕೆ ನಿಚ್ಚ ಒತ್ತೆಯಂ ಬೇಡಿದಡೆ ಅಚ್ಚಿಗವಾಯಿತವ್ವಾ ನಮ್ಮ ನಲ್ಲಂಗೆ (ಅವಚಂ. ೨೫-೨೦೬) ; ನಿಚ್ಚಕ್ಕೆ ನಿಚ್ಚ[ಪಾಠಾಂ. ನಿಚ್ಚಕ್ಕೆ, ನಿಚ್ಚನಿಚ್ಚ]ನೆನೆವ ಮನವ ಅಂದಂದಿಂಗೆ ಆತ್ತಲಿತ್ತ ಹರಿವ ಮನವ ಚಿತ್ತದಲ್ಲಿ ನಿಲಿಸಬಲ್ಲಡೆ ಬಚ್ಚ ಬಱಿಯ ಬೆಳಗು ಗುಹೇಶ್ವರಲಿಂಗವು (ಅವಚಂ. ೭೮-೩೫೧). ನಿಚ್ಚಕ್ಕೆ ಬರು = ನಿತ್ಯದ ಕೂಟಕ್ಕೆ ಬರು,— ಆಗಮಿಸು : ನೆಲ ಹುಟ್ಟದಂದಿನ ಧವಳಾರ ಧವಳಾರದೊಳಗೊಬ್ಬ ಸೂಳೆ ನೋಡಯ್ಯ ತಲೆಯಿಲ್ಲದಾತ ನಿಚ್ಚಕ್ಕೆ ಬಪ್ಪ ಕರುಳಿಲ್ಲದಾತ ಕುಂಟಣಿಯಾದ ನೋಡಯ್ಯ

(ಅವಚಂ. ೯೯-೪೪೫). ನಿಚ್ಚದ ಕಾಹು = ಎಡೆಬಿಡದೆ ಕಾಯುವ ಕಾವಲು ; ನಿತ್ಯದ ಕಾವಲು : ಮಹಾರಥರುಮತಿರಥರುಂ ಜೋದರುಂ ನಿಚ್ಚದ ಕಾಹಿನ ಬಂಟರನಟಾದು ಪಡಿಬಲಮಂ ಕೂಡಿ ತೆರಳ್ದರ್ (ರಾಮಾಶ್ವ. ೯೪-೧). ನಿಚ್ಚನಿಚ್ಚಕ್ಕೆ = ನಿಚ್ಚಕ್ಕೆ ನಿಚ್ಚ : ಮಣ್ಣ ಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದರೆ ನಿಚ್ಚನಿಚ್ಚಕ್ಕೆ [ಸಾಕಾಂ. ನಿಚ್ಚನಿಚ್ಚ]ಕೆಸಱಹುದಲ್ಲದೆ ಅದಱಚ್ಚುಗ ಬಿಡದಣ್ಣಾ (ಬಸವ. ೯೩). ನಿಚ್ಚಲ್, ನಿಚ್ಚಲು = ೧. ನಿತ್ಯವೂ ; ಪ್ರತಿದಿನವೂ : ಮಕ್ಕಳಂ ಬೇಡಿ ಪನ್ನೆರಡುವರುಷಂಬರೆಗಂ ನಿಚ್ಚಲುಂ ಶ್ರೀವಿಹಾರಕ್ಕೆ ಪೋಗಿ ಶ್ರೀಯಾದೇವತೆಯನರ್ಚಿಸುತ್ತಂ . . . ಇರೆ (ವಡ್ಡಾರಾ. ೧೦೮-೨); ಇಪ್ಪತ್ತುಗದ್ಯಾಣ ಪೊನ್ನೊಟ್ಟು ಪಡದರ್ ನಿಚ್ಚಲೊನ್ದು ಪರಿವಡಿಯಂ (ಎಕ. X, ಕೋಲಾರ. ೫೭-೧೨ ; 925); ನಿಚ್ಚಲುಮೋರಂತಿರೆ ಕಾವರ್ (ಪಂಪಭಾ. ೫-೮೧) ; ನಿಮಗೆ ಕರಿಗಳ್ ದೊರೆಕೊಳ್ವನ್ನಂ ನಿಚ್ಚಲೊಂದೊಂದು ಮೃಗವನಟ್ಟುವೆವು (ಪಂಚತಂ. ೮೮-೯) ; ನಿಚ್ಚಲುಂ ತಱಂಟುದಲೆಯಂ ಕಂಡಲ್ಲದುಣವೇಡೆಂಬುದುಂ (ಧರ್ಮಾಮೃ. ೨-೧೭೬) ; ವನಾಂತದಲಾದ ಚಿತ್ತವ್ಯಥೆಯ ಕೇಳಿದು ಬೆಂದುದೆನ್ನೊಡಲು ಆ ದಿವಾಕರನಂತೆ ನಿಚ್ಚಲು ಕಾದುದುದಯಾಸ್ತಮಯದಲಿ ದನುಜಾದಿ ಖಳರೊಡನಟವಿಗೋಟಲೆಯೆಂದು ಬಿಸುಸುಯ್ದ (ಕುವ್ಯಾಅ. ೧೭-೯) ; ಕಂತುರಾಯನ ಸತ್ಕುಮಾರಕನು . . . ನಿಚ್ಚಲೊಂದೊಂದು ವಿನೋದ ವಿಶೇಷವನಚ್ಚರಿಯೆನೆ ತೋಱುತಿರ್ದ (ಮೋಹತ.೧೭-೭೪). ೨. ಯಾವಾಗಲೂ; ಸದಾ : ಪರಿಣತ ಜೈನತತ್ತ್ವರುಪದೇಶಕರೆನ್ನಯ ಚಿತ್ತಗೇಹದೊಳ್ ಭರವಸದಿಂ ಪ್ರಕಾಶಿಸುಗೆ ನಿಚ್ಚಲುಮುತ್ತಮಬೋಧರತ್ನಮಂ (ಬಾಧಪು. ೧-೪) ; ನಿಚ್ಚಲರ್ಜಿಸಿ ತಂದ ಬತ್ತವು ವೆಚ್ಚಕಿಬ್ಬಳವಾಗಿ ಕುಂದವು ಹೆಚ್ಚವದಱಂ ಜಂಗಮಾವಳಿಗೊಲಿದು ಮಾಡುತ್ತ . . . ಆಸಮಭಕ್ತಿಸಮುನ್ನತಿಯೊಳಿರಲು (ಬಸಪು. ೨೯-೯). [<ಪ್ರಾ. ಣಿಚ್ಚ./ಸಂ. ನಿತ್ಯಂ]

ನಿಚ್ಚ$_2$ 'ನಿಚ್ಚಂ' ನೋ.

ನಿಚ್ಚ$_3$ (ಗು). ೧. ಯಾವಾಗಲೂ ಇರುವ; ನಿರಂತರವಾದ; ಶಾಶ್ವತವಾದ: 'ನಿಚ್ಚೈದೆ' ಪರಾ. (ನಾ). ೨. ಯಾವಾಗಲೂ ಇರುವಂಥದು; ನಿತ್ಯವಾದುದು; ಶಾಶ್ವತವಾದುದು : ನಿಚ್ಚಮೆಂದರಿತು ವಿಷಯಾನುಭೋಗಂಗಳನು ಮಚ್ಚಿ ಗುರುತರಪಾತಕಗಳನೆಸಗಿ (ವೆಂಕಾರಾ. ೨-೧೯-೩೬). [<ಸಂ. ನಿತ್ಯ]

ನಿಚ್ಚಂ, ನಿಚ್ಚ$_2$ (ಅ). ೧. ಪ್ರತಿದಿನವೂ; ನಿತ್ಯವೂ : ನಿಚ್ಚಂ ಧರಾಧೀಶರಂ ಪಡಲಿಟ್ಟಂತಿರೆ ಮಾಟ್ಟಿಂ (ಪಂಪಭಾ. ೧೦-೨೫) ; ನಿಚ್ಚಂ ಬಂದಾದರದಿಂದೆ ನೋಡಿ ಪೋಪಂ ಗುರುಜನಪರಿವೃತನೆನಿಪ್ಪ ನಿಜನಂದನನಂ (ಕಾದಂಪೂ. ೪೩೬) ; ಕಲ್ಪಭೂರುಹವನಕ್ಕೋರೋರ್ಮೆ . . . ಪೋಗಿ ಪೊಟ್ಟುಗಳೆವಂ ನಿಚ್ಚಂ ನಿಳಿಂಪೋತ್ತಮಂ (ಸುಕುಮಾ. ೯-೪೦) ; ಇಂತು ಪೊಟ್ಟುಗಳೆವರ್ ನಿಚ್ಚಂ ಪುರೋದ್ಯಾನದೊಳ್ (ಮಲ್ಲಿಪು. ೨-೩೮) ; ಅಣುಗುಣ ಶಿಕ್ಷಾವ್ರತಸನ್ಮಣಿಭೂಷಣಭೂಷಿತಾಂಗನರ್ಹದ್ವಚನಪ್ರಣುತರುಚಿರುಚಿರನಾದಂ ಪ್ರಣಯಮನೊದವಿಸನೆ ಮೋಕ್ಷಲಕ್ಷ್ಮಿಗೆ ನಿಚ್ಚಂ (ಉಸಾರ. ೧೮-೧೦೬) ; ಮೇಲೆ ನಿಚ್ಚಂ ಪರಿವ ದಿನಮಣಿ (ಜೈಮಿಭಾ. ೩-೨೧). ೨. ಯಾವಾಗಲೂ ; ಸದಾ : ಇದು ನಿಚ್ಚಂ ಪೊಸತರ್ಣವಂ ಬೋಲತಿಗಂಭೀರಂ ಕವಿತ್ವಂ (ಅದಿಪು. ೧-೨೭) ; ಸಿರಿವೆಣ್ಣವನೊಳ್ ನಿಚ್ಚಂ ಬೆರಸಿರ್ದಪಳ್ (ಕಬ್ಬಿಕಾ. ೧೩). ನಿಚ್ಚ$_2$: ೧. ನೊಟಂಬಸೆಟ್ಟ ಉತ್ತನೂರ ಮಹಾಜನಂ ಪನ್ನಿರ್ಬ್ಬರ್ಗ್ಗಂ ನೂಱುಗದ್ಯಾಣಂ ಪೊನ್ನ ಕೊಟ್ಟ ನಿಚ್ಚವಯ್ವರತಿತಿಗಳ್ ಪರಿವಡಿಯುಣ್ಬರ್ (ಎಕ. X, ಮುಳಬಾ. ೧೨೨-೯ ; 969) ; ಈ ವಾಲ್ಮಿಕೇಶ್ವರನು ನಿಚ್ಚ ಸಾವಿರ ಹೊನ್ನ ಪಡಿಯಂ ವೆಚ್ಚ ಕುಡುಗದೆ . ಕೊಡುವನಾತನೊಳೊಚ್ಚತಂಗೊಂಡೇನನಾದಡೆ ಬೇಡಿದುದನೀವ (ಬಸಪು.೨೬-೧೮) ; ಮೆಚ್ಚದಿರು ಪರಸತಿಯರಚ್ಚೆಯೊಳು ಬೆರೆಯದಿರು ನಿಚ್ಚ ನೆರೆಯೊಳಗೆ ಕಾದದಿರು ಒಬ್ಬರ ಇಚ್ಛೆಯಲಿರದಿರು (ಸರ್ವಜ್ಞ. ೧೫೪೬).

ನಿಚ್ಚಂನಿಚ್ಚಂ, ನಿಚ್ಚಂನಿಚ್ಚ, ನಿಚ್ಚನಿಚ್ಚ, ನಿಚ್ಚನಿಚ್ಚಂ (ದ್ವಿರುಕ್ತಿ): ಪರಮಜಿನಪತಿಚಾರುಚಾರಿತ್ರಮಂ ನಿಚ್ಚಂನಿಚ್ಚಂ ನಿಚ್ಚಳಂ ಮಾಡೆನಗೆ (ಸುಕುಮಾ. ೧೨-೪) ; ನಿಚ್ಚಂನಿಚ್ಚವಾನಂದಸಂಗತಿಯಿಂದಂ ನೆಲೆವೆರ್ಚುತಿರ್ದರೆನಸುಂ ಹರ್ಷಾಂಬುವಿಶ್ರಾಂಬಕದ್ವಿತಯಶ್ರೀವಿಜಯಾವತೀಯುವತಿಯುಂ ವಿಶ್ವಂಭರೋರ್ವೀಶನುಂ (ಕುಸುಮಾ. ೬-೧೫೮) ; ಅಚ್ಚ ಶರಣರು ನಿಮ್ಮ ನಿಚ್ಚನಿಚ್ಚ ನೆನೆವರು (ಬಸವ. ೩೦೧) ; ನಿಚ್ಚನಿಚ್ಚಂ ಪೊಸತೆಂಬಂತಾಗೆ ಪಾರ್ಥಂಗೊಸೆದು . . . ಸಾಧಿಸಿತುದ್ಯದ್ಭಕ್ತಿ (ಪಂಪಭಾ. ೬-೭೮) ; ಸೂನುಗೊಲವಿಂ ಸೊಡರ್ವಕ್ಕಿನ ಬೊಟ್ಟನಿಟ್ಟು ತೂಪಿಱದು ಪಲರ್ಮೆಯುಂ ಪರಸಿ ಸೋಗಿಲೊಳಿಟ್ಟುಱ ನಿಚ್ಚನಿಚ್ಚ ಮಟ್ಟಿಱನೊಳೆ ಮೆಚ್ಚನಿತ್ತು ತನಿವೆರ್ಚುವ ಸೈಪೆನಗೆಂದು ಸಾರ್ಗುಮೋ (ಚಂದ್ರಪು. ೬-೪೫). ನಿಚ್ಚನಿರಂತರ = ಯಾವಾಗಲೂ : ಅಚ್ಚವಳ ಹಲ್ಲೀಗೆ ಸರಿ ಮುಚ್ಚು ಮಲ್ಲೀಗೆ ನಿಚ್ಚ ನಿರಂತರ ಇದು ಸುಗ್ಗಿ (ಮೂರ್ತಿಕಾ. ೪೭-೫). ನಿಚ್ಚ ಮದವಣಿಗ = ಒಂದು ಬಿರುದು (?): ನಿಚ್ಚಮದವಣಿಗ ಹನುಮಪ್ಪನಾಯಕರಾ ಪೌತ್ರರಾದ ಶರಜಾಹನುಮಪ್ಪನಾಯಕರ ಪುತ್ರರಾದ ಸೀತಾರಾಮಪ್ಪನಾಯಕರು (ಎಕ. VI, ತರೀಕೆ. ೨೨-೯ ; 1681). [<ನಿಚ್ಚ$_1$]

ನಿಚ್ಚಂಗ (ನಾ). ನಿರ್ಲಿಪ್ತ ಸ್ಥಿತಿ; ನಿಸ್ಸಂಗತ್ವ : ನಾದದ ತಂಬುರಿ ಮೋದ ಮಂದಾರವು ನಿಚ್ಚಂಗದ ಟೊಪ್ಪಿಗೆನಿಟ್ಟ ಬೋಧದ ಭಂಗಿ ಅಮೃತದ ಲುಂಗಿ ಸಮಾನಗುಳಿಗೆಯನಿಟ್ಟ (ಪುರಂದ. ೫-೬೬-೨). [<ಸಂ. ನಿಸ್ಸಂಗ]

ನಿಚ್ಚಗಟ್ಟಳೆ (ನಾ). = ನಿತ್ಯಗಟ್ಟಳೆ ೧ : ನೀವು ಕಿರಿಯ ಉಗ್ರಾಣಕ್ಕೆ-ನಿಚ್ಚಗಟ್ಟಳೆಯ ಉಗ್ರಾಣಕ್ಕೆ ಹೋಗಿ ಒಂದು ಬಗಸೆಯಷ್ಟು ಭತ್ತವದನ್ನೀಗಳೇ ತರಬೇಕು (ಬೆಟ್ಟಅ. ೧೧೪-೨೦). [ನಿಚ್ಚ$_1$ + ಕಟ್ಟಳೆ$_1$]

ನಿಚ್ಚಗಲಿ (ನಾ). = ನಿಚ್ಚಟಗಲಿ : ಕವಿಯಂತೆ ಯತಿಪ್ರಿಯನುಂ ಸಾಗರದಂತೆ ನಿಸ್ಸಾರದೂರನುಂ ನಿಚ್ಚಗಲಿಯಂತೆ[ಧರ್ಮದೊಳ್]ನಿಶ್ಶಂಕನುಮಪ್ಪುದು (ಧರ್ಮಾಮೃ. ೪-೪೬). [<ನಿಚ್ಚಟ$_2$ + ಕಲಿ$_2$]

ನಿಚ್ಚಗಾಳೆಗ (ನಾ). ನಿತ್ಯದ ಕಾಳಗ,—ಹೋರಾಟ : ಚಳಾತಾವರ್ತನರೆಂಬರ್ವರ್ ಮ್ಲೇಂಚ್ಛರಾಜರ್ ತುಚ್ಛಪರಿಚ್ಛದರುಚ್ಚವಿಗ್ರಹಮನೆತ್ತಿಕೊಂಡು ನಿಚ್ಚಗಾಳೆಗದೊಳಚ್ಚಿಗಂಗೊಳಿಸಿ (ಅಜಿಪು. ೯-೩೪ ಪ). [ನಿಚ್ಚ$_1$ + ಕಾಳೆಗ]

ನಿಚ್ಚಟ$_1$ (ನಾ). ೧. ಕಪಟವಿಲ್ಲದುದು; ನಿಷ್ಕಪಟವಾದುದು : "ನಿಚ್ಚಟ—ನಿಶ್ಶಠ = ನಿಷ್ಕಪಟ" (ತದ್ಭಕೋ. ೨೨) ; ಬಿಚ್ಚಿ ಗವಸಣಿಗೆಯಲಿ ತನ್ನಯ ನಚ್ಚನಾಯುಧವನು ಕರ್ಣನ ನಿಚ್ಚಟದ ಮನವೈದೆ ಹರುಷದಿ ಕೊಟ್ಟನಮರೇಂದ್ರ (ಸಂಭವ.೨೩-೧೬). ೨. ಯಥಾರ್ಥತೆ; ನಿಜ ; ಸತ್ಯ : ಗ್ರಾಮದ ಪದಗತಿಯನಱಯರು ಗ್ರಾಮಕ್ಕೆ ಗುರುವಾವುದೆಂದಱಯರು ಗ್ರಾಮದ ಕರಣವಿದಿದಲ್ಲಿ ನಿಚ್ಚಟವಾವುದೆಂದಱಯರು (ಚನ್ನಪ. ಕ. ೫೯೨-೧೩೨೬); ಕಿಚ್ಚಿನಲಿ ತಣುವಿಲ್ಲ ನಿಚ್ಚಟಕೆ ಸಟೆಯಿಲ್ಲ ಮುಚ್ಚಳವು ಇಲ್ಲ ಆಗಸಕೆ (ಸರ್ವಜ್ಞ. ೫೫೨). ೩. ಸಹಜವಾದ ರೀತಿ; ನೈಸರ್ಗಿಕ ಸ್ಥಿತಿ; ಬೆತ್ತಲೆ : ಅಚ್ಚ ಬೆಳ್ದಿಂಗಳೊಳ್ಮತ್ತೊರ್ವನಿನಿಯಳಂ ನಿಚ್ಚಟದೊಳುಳಿವಂತೆ ನೀವಿಯಂ ಬರಸೆಳೆದು (ಜೈಮಿಭಾ. ೨೬-೧೯). [<ಸಂ. ನಿಃಶಠ]

ನಿಚ್ಚಟ$_2$, ನಿಶ್ಚಟ (ಗು). ೧. ಸ್ಥಿರವಾದ; ದೃಢವಾದ; ನಿಶ್ಚಲವಾದ: 'ನಿಚ್ಚಟಗತಿ', 'ನಿಚ್ಚಟಭಕ್ತಿ' ಪರಾ. (ನಾ). ೨.

ನಿಶ್ಚಲವಾದುದು ; ದೃಢವಾದುದು ; ಸ್ಥಿರವಾದುದು : ಅಚ್ಚ ಪ್ರಸಾದಿಗಳು ನಿಚ್ಚಪ್ರಸಾದಿಗಳು ನಿಚ್ಚಟದಸಮಸುಖದ ಸರ್ವಪ್ರಸಾದಿಗಳು (ಬಸರ. ೭-೧೭೬) ; ವೀರಭೀಷ್ಮನ ನಿಚ್ಚಟದ ಭಕ್ತಿಯನು ನೆನೆನೆನೆದೊಲೆದ ಹರಿ ಶಿರವ (ಕುಪ್ಯಾಭೀ. ೬-೪೬); ಎನ್ನ ತನುಮನಧನಂಗಳ ಪರಬ್ರಹ್ಮಕ್ಕೆ ಮಾಱುಕೊಟ್ಟೆನೆಂಬ ನಿಚ್ಚಟದ ನುಡಿಯೇ ಕಾಲನ ಗಂಟಲ ಗಾಣ (ಘನವ. ೧೫-೧೩) ; ಸಚ್ಚಿದಾನಂದೈಕರಸವಹ ನಿಚ್ಚಟದ ನಿಜಸುಖವ ನಱಿಯದೆ ಮೆಚ್ಚಿ ಮಾಯಾಮಯವಿಷಯಸುಖಲೇಶದನುಭವಕೆ ಕಿಚ್ಚ ತಿಂಬರು (ನಿಭಾಗ. ೧೦-೩೬-೫) ; ಅಚ್ಚಳಿದು ಐಕ್ಯಸ್ಥಲವಾದ ಶರಣಂಗೆ ನಿಚ್ಚಟದ ನಿಲವು (ಸರ್ವಜ್ಞ. ೧೫೨). ೩. ನಿರ್ಧರಿತವಾದುದು ; ಸ್ಪಷ್ಟವಾದುದು : ಗೆಲ್ಲಂ ನಿಚ್ಚಟಮಾಗಿರೆ ಬಲ್ಲಿತ್ತೆನೆ ಪೊಣರ್ದು ಪೊಯ್ವುದು (ಚಿಕವಿ. ೫-೫೨). ೪. ದೃಢತೆ; ಸ್ಥಿರತೆ ; ಸ್ಥೈರ್ಯ: ನಿಚ್ಚಟದ ರಾವುತರಂ ಚಲ್ಲಣಂದೆಗದುಂ ಮುಂಗುಡಿಯ ರಾವುತರಂ ಭಂಗಿಸಿ ತಿವಿದು (ಮಳರ. ಹ. ೨೨೭-೧೪) ; ಉಭಯರಾಯರ ನಿಚ್ಚಟಕೆ ಮಝು ಪೂತುರೆಂದುದು ಮೇಲೆ ಸುರಕಟಕ (ಕುಪ್ಯಾಕ.೪-೩೩); ದಿಟಮಲ್ಲ ಪುಸಿಪೊಯ್ಲಿದಂ ತೆಗೆಯೆನುತ್ತೆ ನಿಚ್ಚಟದ ಕಲಿಗಳ್ ಕಾದುತಿರ್ದರ್ (ಚೆಬಪು. ೪೮-೨೭). ೫. ದೃಢಮನಸ್ಸಿನವನು ; ಸ್ಥಿರಮನಸ್ಸನ್ನುಳ್ಳವನು ; ನಿಶ್ಚಲ : ಅನಿತ್ಯವ ಹಱಿದ ನಿಚ್ಚಟಂಗೆ ಮಿಥ್ಯವನಾರಾಡಿದಡೇನು (ಮೋಳಿಮಾ. ೪೨-೧೭೬) ; ಬಳಭದ್ರಕೇಶವಾದಿಗಳ್ ನೇಮಿಕುಮಾರಂ ನಿಚ್ಚಟನಾಗಿ ದೀಕ್ಷೆಗೊಂಡುದಕ್ಕೆ ಚೋದ್ಯಂಬಟ್ಟು ಪೂಜಿಸಿ ಪೊಡೆವಟ್ಟು ಮಗುಟ್ಟು ಪೋದರ್ (ಬಂಹರಿ. ೧೩-೨೮ ವ) ; ಸುರಗಿಯ ಚಾವುಂಡರಾಯಂ ನಿಚ್ಚಟಂ ನಿರ್ಮಳಂ ನಿರುಪಮಂ ಕಡುಮಾನಿ ಅಚ್ಚ ಶಿವಭಕ್ತನುತೃಷ್ಟನೀಶಧ್ಯಾನಿ (ಸುರರ. ೮೭-೨) ; ಪದೆದು ಗೋವಿಂದ ಪ್ರತಿಷ್ಠೆಯಂ ನೃಪತಿ ರಾಗದೊಳೆಸಗಿಯದಱ ಗೃಹದೊಳಗಣ್ಣೆ ಕರೆಯೆ ಪೋಗದೆಯವಂ ಕಿನಿಸುತೀ ಪೆರ್ಮಳೆಯೊಳಗೆ ನನೆಯದೆಯ್ದನೆ ನಗುತೆ ನನೆಯದೆ ಸದನಕೆಯ್ದಿದ ನಿಚ್ಚಟಂ (ಪದ್ಮರಾ. ೫-೧೦); ಮೆಚ್ಚಿದರ ನೀ ವರಿಸಿ ಕಾದುವುದಚ್ಚರಿಯ ಮಾತೇನು ಗೆಲವಿನ ನಿಚ್ಚಟನೆ ನೆಲಕೊಡೆಯನಹುದಿದು ಸಮಯಕೃತವೆಂದ (ಕುಪ್ಯಾಗ. ೫-೪೫) ; ಭಕ್ತಿಯ ಮಾಡಿ ಮುಕ್ತಿಯ ಹಡೆವೆವೆಂದನುಗೂಡಿ ನಿಚ್ಚಟರಾಗಿ ಧೀರೋದಾರವೃತ್ತಿಯಲಿ ಖೋಡಿ ಪೋಗದೆ ನಿರ್ವಹಿಸಿ ಹೇಡಾಡದವರನು ಕಾಂಬೆವು (ಪ್ರಭುಲೀ. ೧೮-೩೫); ಮಾಯಾವಿರೋಧಿಗಳ್ಕರ್ಮದ್ವಯಂಗಳಂ ಬಾಯೆ ನೆಱೆ ಪೊಯ್ದವಂ ಭಂಗಿಸುವ ನಿಚ್ಚಟರ್ (ಏಕೋಪು. ೬-೩೯). ೬. = ನಿಚ್ಚಟಗಲಿ : ಇಳಾತಳಕ್ಕೆ ಪಾಯ್ದಸಿಯೊಳೆ ತಾಗಿ ತಳ್ತಿಱುವ ನಿಚ್ಚಟರೊಪ್ಪಿದರಾಜಿ ರಂಗದೊಳ್ (ಪಂಪಭಾ. ೧೧-೬೫) ; ಶಸ್ತ್ರವ ಹಿಡಿವಲ್ಲಿ ರಣಕ್ಕೆ ನಿಚ್ಚಟನಾಗಿರಬೇಕು (ಮೋಳಿಮಾ. ೫೫-೨೨೬) ; ಚಕ್ರವ್ಯೂಹದೊಳಭಿಮನ್ಯು ನಿಚ್ಚಟನಾಗಿ ಪೊಕ್ಕು ಪಲರಂ ಗೆಲೆ (ಬಂಹರಿ. ೧೨-೨೫ ವ) ; ಕೋಲಳವಿಗೊಡ್ಡಿದ ನಿಚ್ಚಟರ ನೀಗಿದನು (ಕುಪ್ಯಾಕ. ೧೫-೨೨) ; ಅವನ ಪುಣ್ಯವೆ ಮೂರ್ತಿಯಾದಂತೆ ನಿಚ್ಚಟನೆ ನೀನವನ ಬಂಧನ ಬಿಚ್ಚುವೀ ಗಳಿಗೆಗಳ ಕಂಡುದೆ ಅಚ್ಚರಿ ಕಣಾಯೆಂದು ಕೊಂಡಾಡಿದರು ನಿಜಸಖರು (ಸಾಳ್ವಭಾ. ೧೬-೨೧). ನಿಶ್ಚಟೆ : ೨. ಭಕ್ತಿಯುಳ್ಳವರು ಬಲ್ಲರು ನಿಶ್ಚಟದ ನಿಜಾಂಗಿಗಳ (ಮೋಳಿಮಾ. ೧೯-೭೫). ೪. ನೀಟುಗಾಱಿಕೆಯ ನಿಶ್ಚಟದ ಕಮಠದ ಕಠಿಣದೋಟಿಯಂಡ್ಡಣದ ಕನಕಮಣಿಖಚಿತಖೇಟಕದುಬ್ಬಟೆಯಬ್ಬರದ ಹರಿಗೆಕಾಱರ ಮೊತ್ತದೊತ್ತಿನುಭಯಪಾರ್ಶ್ವದೊಳಿಂಬುಗೊಂಡು(ಹಮ್ಮೀರ. ೩-೩೩ ವ). ೫. ಅಗ್ನಿಗೆ ತಂಪುಂಟೆ ವಿಷಕೆ ರುಚಿಯುಂಟೆ ಹೇಳಾ . . . ನಿಮ್ಮ ಶರಣರು ಮೂಱುಲೋಕವಱಿಯೆ ನಿಶ್ಚಟರಯ್ಯ (ಅಪಚಂ. ೩೨-೧೩೪); ಇಂತು ತನು ಮನ ಪ್ರಾಣ ನಿಮಗೆ ಸಂದಿಪ್ಪ ನಿಸ್ಸಂಗಿಯಾದ ನಿಶ್ಚಟ ನಿಜಲಿಂಗೈಕ್ಯ ಕಾಣಾ (ಅಪಚಂ. ೩೬-೧೫೪) ; ಭಕ್ತರೆಂದರೆ ಶಿವನೊಪ್ಪುಗೊಂಬನೆ ನಿಶ್ಚಟರನಲ್ಲದೆ ನೀಕಳಂಕ ಮಲ್ಲಿಕಾರ್ಜುನನವರ ಬಲ್ಲನಾಗಿ ಒಲ್ಲನು (ಪದಗೋ. ೧೧೫-೯೩) ; ನಿರಾಳದಲ್ಲಿ ನಿಶ್ಚಟನಾಗಿ ನೀಶೂನ್ಯವೆಂಬ ಸಿಂಹಾಸನದ ಮೇಲೆ ಸೋಂಕಿಲ್ಲದೆ ಸೊಬಗಿನಲ್ಲಿ ಮೂರ್ತಿಗೊಂಡಿಪ್ಪ ಆ ಮಹಾಪ್ರಭುವಿನ ಪಾದಕ್ಕೆ ನಾನು ನಮೋನಮೋಯೆಂದು ಬದುಕಿದೆನು (ಸರ್ವವ. ೨೦೫-೯೨೮). 'ನಿಚ್ಚಲ' ಪರಾ.

[?./ಸಂ. ನಿಶ್ಚಲ]

ನಿಚ್ಚಟಂ$_1$ (ಅ). ನಿಜವಾಗಿಯೂ ; ದಿಟವಾಗಿಯೂ : ತನು ಕಡುಗೋಡುಗೋಡಿದಪುದೆಳ್ಳನಿತುಂ ಮಿಡುಕಂತದಿಲ್ಲ ಮೂಗಿನೊಳುಸುರೆಂಬ ಮಾತು ಪಱಿಪಟ್ಟುದು ನಿಚ್ಚಟಮೆಂದು ಸಂಕೆಯಿಂ ವನಜದಳಾಕ್ಷಿ ನೋಡಿ (ಪರ್ಧಮಾ. ೫-೫). [<ನಿಚ್ಚಟ$_1$]

ನಿಚ್ಚಟಂ$_2$ (ಅ). ಸ್ಥಿರವಾಗಿ ; ಶಾಶ್ವತವಾಗಿ : ಕುರುಪ್ರಧಾನನೊಳ್ ಕಱುಪನೆ ನಿಚ್ಚಟಂ ಬಿಸುಟು ನಿನ್ನಯ ಪೇಟ್ಟುದುಗೆಯ್ದು (ಪಂಪಭಾ. ೧೪-೧೦); ದೇಹಮನಿದನೆಂತು ನಿಚ್ಚಟಂ ನಂಬಿದಪೋ (ಶಬ್ದಾನು. ೪೬೧ ಪ್ರಯೋ). [<ನಿಚ್ಚಟ$_2$]

ನಿಚ್ಚಟಗತಿ (ನಾ). ಶಾಶ್ವತವಾದ ಪದವಿ ; ಮೋಕ್ಷ ; ಮುಕ್ತಿ : ಮನದೊಳಾದ ಹೇವದಿಂ ನಿಚ್ಚಟಗತಿಯಪ್ಪುದುಂ ಪರಿಚ್ಛೇದಿಸಿ ತಂದರ್ಥ ಮೆಲ್ಲಮುಮಂ ತಾಯ್ಗಂ ಪೆಂಡತಿಗಂ ತಕ್ಕನಿತಂ ಕೊಟ್ಟು . . . ವರಧರ್ಮಭಟ್ಟಾರಕರಲ್ಲಿಗೆ ಬಂದು (ಧರ್ಮಾಮೃ. ೨-೨೧೧).

[ನಿಚ್ಚಟ$_2$ + ಗತಿ]

ನಿಚ್ಚಟಗಲಿ (ನಾ). ನಿಶ್ಚಲನಾದ ವೀರ ; ಕೆಚ್ಚೆದೆಯ ವೀರ ; ಕಡುಗಲಿ : ಸಾರ್ಚಿದ ಮದರದನಿಗೆ ಹರಿ ನಿಲ್ಲದೆ ನಿಚ್ಚಟಗಲಿಗೆ ಪೆಸರ ಕಲಿ ನಿಂದಪನೇ (ಶಾಂತಿಪು. ೨-೧೦೮) ; ಸೆರಗಂ ಬೆರಗಂ ಬಗೆಯದ ನಿಚ್ಚಟಗಲಿಗಳುಮಂ . . . ನೋಡಿ (ಗದಾಯು. ೯-೩೪ ವ) ; ಅಂತಪ್ಪ ನಿಚ್ಚಟಗಲಿ ಕಲಹವನೇ ಬಯಸಿ ತನಗೆ ಅಧಿಕನನಱಸುವಂ (ಪಂಚತಂ. ೩೭-೮); ಬಂಟರೊಳ್ ನಿಚ್ಚಟಗಲಿ (ಧರ್ಮಾಮೃ. ೯-೧೦೮); ನಿಚ್ಚಟಗಲಿ ನೀಲವರ್ಣನೆಡೆಗೆ ಬಂದು ಕಚ್ಚುವೆನೆಂದು ಕೋಪದೊಳು ಒತ್ತಿ ಬಿಟ್ಟಾ ಬಾಯನು ಕಂಡು (ನೇಮಿಸಂ. ೧೫-೧೧೩). [ನಿಚ್ಚಟ$_2$ + ಕಲಿ$_2$]

ನಿಚ್ಚಟಗಲಿತನ(ನಾ). ಸ್ಥಿರವಾದ ಶೌರ್ಯ ; ಸಹಜ ಪರಾಕ್ರಮ; ಕಡುಗಲಿತನ : ಸ್ವಭಾವಶೂರತ್ವಂ—ನಿಚ್ಚಟಗಲಿತನಮುಂ (ನೀತಿವಾ. ೨೧-೧೫). [ನಿಚ್ಚಟಗಲಿ + -ತನ]

ನಿಚ್ಚಟತ್ವ (ನಾ). ದೃಢತೆ ; ನಿಶ್ಚಲತೆ ; ಸ್ಥಿರತೆ : ಎನ್ನ ಭಕ್ತನ ನಿಚ್ಚಟತ್ವವನೇನನೆಂಬೆನು (ನಿಭಾಗ. ೧೧-೨೧-೨೬).

[ನಿಚ್ಚಟ$_2$ + -ತ್ವ]

ನಿಚ್ಚಟಭಕ್ತಿ (ನಾ). ದೃಢವಾದ ಭಕ್ತಿ : ನಿಚ್ಚಟಭಕ್ತಿಯಿಂ ತಪವನಾಗಿಸಿ ಸದಾಶಿವನನೊಲಿಸಿ (ನಂದಿಮಾ. ೧೦-೬). [ನಿಚ್ಚಟ$_2$ + ಭಕ್ತಿ]

ನಿಚ್ಚಟವಕುತಿ (ನಾ). = ನಿಚ್ಚಟಭಕ್ತಿ : ನಿಚ್ಚಂ ಶ್ರೀರಾಮನಂ ಮೂವಗೆಯ ನಿಚ್ಚಟವಕುತಿಯಿಂ ತುತಿಸಿ (ರಾಮಾಶ್ವ. ೧೦೩-೪).

[ನಿಚ್ಚಟ$_2$ + ಬಕುತಿ]

ನಿಚ್ಚಟಕೆ, ನಿಚ್ಚಟಕ್ಕೆ (ನಾ). = ನಿಚ್ಚಟತ್ವ : ಜೀಮೂತವಾಹನನೆಂಬಂಕದ ಚಾಗಿ ನಿಚ್ಚಟಕೆಯಿಂದೀ ಶೈಳದೊಳ್ ಶಂಖಚೂಡನಾನಂದದೆ ಕಾದ ಪೆಂಪೆಸೆಯೆ ನಾಗಾನಂದಮಂ ಮಾಡಿದಂ (ಪಂಪಭಾ. ೪-೨೬). ನಿಚ್ಚಟಕ್ಕೆ : ಪಾಂಡ್ಯನನ್ನನಿನ್ನೀ ಮಹಿಯೊಳ್ ಪೆಱಂ ಕಲಿಯೆ ನೆಟ್ಟನಿದಿರ್ಚುವ ನಿಚ್ಚಟಕ್ಕೆಯೊಳ್ ಭೀಮನುಮಿನ್ನನಲ್ಲನೆನೆ ಪೋಲ್ವೆ[ಗಿ]ವಂಗೆಣೆ ಗಂಡರೆಂಬರಾರ್ (ಪಂಪಭಾ. ೧೨-೮೪).

[ನಿಚ್ಚಟ$_2$ + -ಇಕೆ]

ನಿಚ್ಚಟಕ್ಕೆ 'ನಿಚ್ಚಟಕೆ' ನೋ.

ನಿಚ್ಚಣಿ (ನಾ). ಏಣಿ ; ನಿಚ್ಚಣಿಗೆ : ನಿಚ್ಚಣಿಯ ಹಲ್ಲಿಗೆ ಅಂತರವಲ್ಲದೆ ಕೀಳು ಮೇಲುಂಟೆ (ಮೋಳಿಮಾ. ೧೭೧-೬೫೯) ; ದುರ್ಗಕ್ಕೆ ನಿಚ್ಚಣಿ ಸಾರ್ಚುಂದೊಲೆ ವೀರಸೇತು ನಡೆಸಾರಂ ಬದ್ದರಂ . . . ಎಂಬ ಬಹು ಕೋಟಾಯಂತ್ರಸಾಮಗ್ರಿ ತಿಂತಿಣಿಗೊಂಡಾಂತಿರೆ ಲಗ್ಗೆಗಾರ್ದು ವಸು ಸೇಣಂ ಸಾರ್ದು ಸೂಚ್ಯಿಸಿದಂ (ಅನಂಪು. ೧೧-೮೩) ; ಪರಮಾತ್ಮಂಗೆಣೆ ಯಿಲ್ಲಂಬರಕೆ ನಿಚ್ಚಣಿಯಿಲ್ಲ (ಸರ್ವಜ್ಞ. ೧೫೨೦).

[<ಸಂ. ನಿಶ್ರೇಣಿ]

ನಿಚ್ಚಣಿಕೆ, ನಿಚ್ಚಣಿಗೆ (ನಾ). ೧. = ನಿಚ್ಚಣಿ : "ನಿಶ್ರೇಣಿ, ಅಧಿರೋಹಿಣಿ— ಈ ೩ ನಿಚ್ಚಣಿಕೆಯ ಹೆಸರು" (ನಾಚಿರಾ.೧೦೪) ; ಮೋಕ್ಷದ ನಿಚ್ಚಣಿಕೆಯೆನಿಪ ಜಿನೇಂದ್ರಧರ್ಮಮಂ ಕೇಳ್ದು (ಧರ್ಮಾಮೃ. ೯-೪೬) ; ನಿಚ್ಚಣಿಕೆಯನೇಱ ತೆಗೆವುದಕ್ಕೆ ಮುಂದೊಂದು ಅಟ್ಟಳೆಯಲ್ಲಿ ಬಯಕೆ ಲಕ್ಷಿಸಿದ್ದಿತ್ತು (ಮೋಳಿಮಾ. ೨೭೮-೬೫) ; ಕೊತ್ತಳದ ಹುಲಿಮುಖದ ದಿಡ್ಡಿಗಳ ಸರಿಸದೊಳ್ ಪತ್ತಿದರ್ ಸಾಲ ನಿಚ್ಚಣಿಕೆಗಳ ಮೇಲೆ (ಚಿಬಪು. ೪೨-೬೫) ; ಮುಗಿಲಿಗೆ ನಿಚ್ಚಣಿಕೆ ಬೇಕು . . . ಚಂದ್ರಸೂರ್ಯ ಸಾಲವೋ (ನಾದಲೀ. ೨೮-೧೩) ; ನಿನ್ನ ಹಗ್ಗ—ಕೋಲುಗಳು ಕೈಗೆ ನಿಲುಕಲಿಕ್ಕಿಲ್ಲ—ನಿಚ್ಚಣಿಕೆ ಒಂದಿರಲಿ (ವೈದ್ಯರಾ. ೯೪). ೨. ಒಂದಾದ ಮೇಲೆ ಮತ್ತೊಂದು ಬರುವ ಕ್ರಮ ; ಆರೋಹಣಕ್ರಮ : ಮನೋರೋಗಗಳ ಸಂಖ್ಯೆಯನ್ನು ನಿಚ್ಚಣಿಕೆಯ ಕ್ರಮದಲ್ಲಿ ಸೇರಿಸಿ ನೋಡಬಹುದು (ಮನೋರೋ. ೫). **ನಿಚ್ಚಣಿಗೆ** : ೧. "ನಿಶ್ರೇಣಿ, ಅಧಿರೋಹಿಣೀ — ಈ ೨ ನಿಚ್ಚಣಿಗೆ" (ಹಲಾಯು. ೫೦-೧೪೬) ; ಇದು ಋತುವಿಮಾನಮಂ ತನ್ನುದಗ್ರಚೂಳಿಕೆಯೊಳಾಂತುಕೊಂಡಿರೆ ಸಗ್ಗಕ್ಕಿದು ನಿಚ್ಚಣಿಗಿಪ್ಪವೊಲಿರ್ದುದಲ್ತೆ ಜಿನಸವನಜಲಪವಿತ್ರಿತಕಟಕಂ (ಆದಿಪು. ೨-೩೧) ; ನಸು ಜೋಲ್ದು ಕೋದ ಗಱಿಯೆ ನಿಚ್ಚಣಿಗೆಯಾಗೆ (ಮಲ್ಲಿಪು. ೩-೧೦೫ ವ) ; ಗಗನಕ್ಕೆ ನಿಚ್ಚಣಿಗೆಯನಿಕ್ಕಿದವರುಂಟೆ (ಅವಚಂ. ೧೯೬-೮೮೭) ; ಸುದುರ್ಗದ ಹಿರಿಯಗಳೊ ಬಲುಗೋಂಟೆಯೋ ನಿಚ್ಚಣಿಗೆ[ಪಾಠಾಂ. ಕೆ]ಯೋ ದಿವದ ಮುರಿಮುರಿದ ಹುಲಿಮುಖದ ಹೇಮದ ತರದ ತೆನೆಗಳ ವಜ್ರಮಯಬಂಧುರಕವಾಟಸ್ಫುಟದಲೆಸೆದುದು ಹಸ್ತಿನಾನಗರ (ಕುಮ್ಯಾಉ. ೭-೨೮) ; ಅಟ್ಟವನೇಱುವುದಕ್ಕೆ ನಿಚ್ಚಣಿಗೆಯೇ ಸೋಪಾನವಯ್ಯ ಹರಪದವನು ಎಯ್ದುವರೆ ಶ್ರೀಗುರು ಹೇಳಿದ ಸದಾಚಾರವೇ ಸೋಪಾನವಯ್ಯ (ಸಿದ್ಧೇವ. ೯೦-೨೭೧); ಮುಗಿಲ ಮುಟ್ಟುವ ನಿಚ್ಚಣಿಗೆಗಳನು ತಂದು ನಿಗುರಿಸಿದರು (ಕಂಸವಿ. ೧೮-೧೫೩) ; ಮತ್ತಮದಾಳ್ದಂಗಂ ಬಹುವಿತ್ತಸುಧಾನ್ಯಾತ್ಮಸಂಭವರ್ಕಳನೀಗುಂ ಸತ್ತಮನೊಸಲೊಳ್ ಮೂಸುಳಿಯೊತ್ತಿರೆ ನಿಚ್ಚಣಿಗೆಯಂತೆ ಕುದುರೆಗೆ ಧರೆಯೊಳ್ (ಹಾಲಾಸ್ಯ. ೪-೧೧-೮೩) ; ಇಹವು ಪರದ ನಿಚ್ಚಣಿಗೆ ಎಂದು ಭಾವಿಸಿದರು (ಭಾರದ. ೪೦೧). [<ಸಂ. ನಿಶ್ರೇಣಿಕಾ]

ನಿಚ್ಚಣಿಗೆ 'ನಿಚ್ಚಣಿಕೆ' ನೋ.

ನಿಚ್ಚಣಿಗೆಗೆಯ್ (ಕ್ರಿ). ಏಣಿಯನ್ನಾಗಿ ಮಾಡು : ಭಕ್ತಿರಸಪರಿಪಾಕ ಭೇದಮಂ ನಿಚ್ಚಣಿಗೆಗೆಯ್ದು ಪರಮಪದಮನೇಱಿದಂ (ಚಿಕವಂ.೫೬-೧೬).

[ನಿಚ್ಚಣಿಗೆ(<ನಿಚ್ಚಣಿಕೆ)+ಕೆಯ್$_1$]

ನಿಚ್ಚತ (ನಾ). ಸ್ಥಿರತೆ ; ಸ್ಪಷ್ಟತೆ : ಚೆನ್ನಲಾಕೆಯ ಕೊಂದು ನಿಚ್ಚತನನ್ನಿಯಿಲ್ಲದೆಯಾಯವಾರದಿ ಮನ್ನಿಸುತದೊಬ್ಬತಿಥಿಗಿಕ್ಕುತಲೇಕಭುಕ್ತದಲಿ . . . ವಿಜಿತೇಂದ್ರಿಯಂಗಿದು ಬದುಕು ಲೋಕದಲಿ (ಸಂಭವ.ಪರಿ.೬೪೧).

[<ನಿಚ್ಚಟ$_2$]

ನಿಚ್ಚತಗೊಳ್(ಕ್ರಿ).ಸ್ಪಷ್ಟಪಡಿಸಿಕೊಳ್ಳು ; ಸ್ಥಿರವಾಗಿಸಿಕೊಳ್ಳು : ಪುರುಳಂ ಕೇಳ್ದದಱೊಳ್ಪನೂಹಿಸಿಯಪೋಹಂಗೆಯ್ದು ತಾತ್ಪರ್ಯದೊಂದಿರವಂ ನಿಚ್ಚತಗೊಂಡದಂ ಮಱೆಯದಿರ್ಪಾ, ಧಾರಣಾಶಕ್ತಿಯುಂ ಪರರಂ ಬೋಧಿಸುವಾರ್ಪಿನೊಳ್ ತಿಳಿವಿನಂ ಸಂಕ್ಷೇಪವಿಸ್ತಾರವಿಮಾಯೆರಡುಂ ಮಾರ್ಗಮುಮಾರ್ಗಮುಂಟೆ ಚಿಕದೇವೇಂದ್ರಂಗೆ ಕೈವಂದವೋಲ್ (ಚಿಕವಿ. ೪-೯೭). [ನಿಚ್ಚತ+ಕೊಳ್$_1$]

ನಿಚ್ಚದಂದುಗ (ನಾ). ನಿತ್ಯದ ವ್ಯವಹಾರದ ಚಿಂತೆ ; ಪ್ರತಿದಿನದ ಕೆಲಸದ ಚಿಂತೆ : ತನ್ನ ಕೂಡುವಳಗದ ನಿಚ್ಚದಂದುಗದೊಂದು ಮಿಡುಗಿಂ ನಂಜುಂಡ ಬಾನ್ನವಿರಂ, ಗಜಮುಖನ ಬಿರಿವೊಡೆಯ ಪಾವಂ . . . ತನ್ನ ಬಸವನಂ ಇನ್ನಾನುಂ ಪಗೆಯಂ ಮಱೆದು ಸಂತಂ ಪುದುವಾಟ್ಟುದೆಂದು ಬುದ್ಧಿವೇಟಲ್ (ರಾಮಾಶ್ವ. ೪೨-೧೧).

[ನಿಚ್ಚ$_2$(<ನಿಚ್ಚಂ)+ದಂದುಗ]

ನಿಚ್ಚನರಕ (ನಾ). ಶಾಶ್ವತವಾದ ನರಕ : ಅಚ್ಚಭವಿತನದಿಂದ ನಿಚ್ಚನರಕಕ್ಕಿಳಿವ ಕರ್ಮಚಾಂಡಾಲವಿಪ್ರರು ನೀವು ಕೇಳಿರೆ (ಉರಿಜಿ. ಕ. ೧೬೧-೨೧೬). [ನಿಚ್ಚ$_1$+ನರಕ]

ನಿಚ್ಚಪಯಣ 'ನಿಚ್ಚವಯಣ' ನೋ.

ನಿಚ್ಚಪೊಸತು (ನಾ). ಯಾವಾಗಲೂ ಹೊಸದಾಗಿರುವುದು ; ನಿತ್ಯನೂತನವಾದುದು : ಪೂಣ್ದರದರ್ಥಕೃತಿಪ್ರಬಂಧಮುಂ ಕಿವಿಗಿನಿದಾಗೆ ನಿ[ಪಾಠಾಂ. ಪೊ]ಚ್ಚಪೊಸತಾಗೆ . . . ಪೇಟಲೊಡರ್ಚದೆನೀ ಪ್ರಬಂಧಮಂ (ಛಂದೋಂಬು. ೧-೧೧).

[ನಿಚ್ಚ$_2$(<ನಿಚ್ಚಂ)+ಪೊಸತು]

ನಿಚ್ಚಪ್ರಸಾದಿ (ನಾ). [ವೀಶೈ] ನಿತ್ಯವೂ ಶಿವಪ್ರಸಾದವನ್ನು ಸ್ವೀಕರಿಸುವವನು ; ℙ ಮನಸ್ಸು ನಿರ್ಮಲವಾಗಿರುವುದಕ್ಕೆ ಪ್ರಸಾದವೆಂದು ಹೆಸರು. ಅದು ಲಿಂಗರೂಪಿಯಾದ ಶಿವನ ಅನುಗ್ರಹದಿಂದಲೇ ಸಿದ್ಧಿಸುತ್ತದೆ. ಯಾವ ಪದಾರ್ಥವನ್ನು ಶಿವನಿಗೆ ನಿವೇದನೆ ಮಾಡುತ್ತೇವೆಯೋ ಅದಕ್ಕೂ ಪ್ರಸಾದವೆಂದೇ ಹೆಸರು. ಅದು ಮನಸ್ಸಿನ ನೈರ್ಮಲ್ಯವನ್ನುಂಟುಮಾಡುತ್ತದೆ. ಹೀಗೆ ಶಿವನಿಗೆ ಸಮರ್ಪಣೆ ಮಾಡಿದ ಅನ್ನಾಹಾರಗಳನ್ನೇ ಸ್ವೀಕರಿಸುವುದರಿಂದ ಮನಃಪ್ರಸಾದವುಂಟಾಗಿ ಅದರಿಂದ ನಿರ್ಮಲಜ್ಞಾನವುಂಟಾಗುತ್ತದೆ : ಅಚ್ಚಪ್ರಸಾದಿ ನಿಚ್ಚಪ್ರಸಾದಿ ಸಮಯಪ್ರಸಾದಿಗಳೆಂದು ಜಲಕ್ಕೆ ಕನ್ನವನಿಕ್ಕಿ ಉದಕವ ತಂದು ಲಿಂಗಮಜ್ಜನಕ್ಕೆಱೆವ ಹಗಲುಗಳ್ಳರಿಗೆ ಮೆಚ್ಚುವನೆ ಚೆನ್ನಮಲ್ಲಿಕಾರ್ಜುನ (ಮಹಾದೇ. ಬ. ೪೭-೧೧೦) ; ಅಚ್ಚಪ್ರಸಾದಿ ನಿಚ್ಚಪ್ರಸಾದಿ ಎಂದು ತಮ್ಮಿಚ್ಚೆಗೆ ಬಗುಳುವ ಕುನ್ನಿಗಳ ನೋಡಾ (ಚನ್ನವ. ಕ. ೩೫೯-೬೪೯). 'ಅಚ್ಚಪ್ರಸಾದಿ' ಪರಾ. [<ನಿತ್ಯಪ್ರಸಾದಿ]

ನಿಚ್ಚಯ, ನಿಚ್ಚೆಯ (ನಾ). ದಿಟ; ಸತ್ಯ ; ನಿಶ್ಚಯ : "ನಿಚ್ಚಯ (ನಿಚಯ)—ನಿಶ್ಚಯ" (ತದ್ಭಕೋ. ೨೨) ; ನಿಚ್ಚಳದ ಸುರನರರಿಗಳವೆ ನೋಡುತಬರಲ್ ಪೊಚ್ಚ ಪೊಸತೆನಿಸಿ ತೋರುತ್ತಮಿದೆ ಸಂತಸದಿ ನಿಚ್ಚಯಮಿದೆಂತೆಂದು ಪೇಳಲಕ್ಕುಮೆ (ವೆಂಕಾರಾ. ೫-೪-೫). **ನಿಚ್ಚೆಯ** : ಭಕ್ತಮಾಡುವುದೇ ಕ್ರಿಯೆ ಮತ್ತೆ ಮಾಹೇಶ್ವರಗೆ ಪುತ್ರ ಕೇಳ್ ನಿಚ್ಚೆ[ಪಾಠಾಂ. ಶ್ಚ]ಯ ಅದಱ ಮುಂದಿಹ ನಿಷ್ಠೆ ತಥ್ಯಪ್ರಸಾದಿಗಿವು ಮೂಱು (ಗುರುಬೋ. ೩-೧೪೭). [<ಸಂ. ನಿಶ್ಚಯ]

ನಿಚ್ಚಯಗೆಯ್ (ಕ್ರಿ). ನಿರ್ಣಯಮಾಡು ; ನಿಶ್ಚಯಿಸು ; ಗೊತ್ತುಮಾಡು: ನಿಚ್ಚಯಗೆಯಿದ ಪರದನನೊಂದೆ ಕೊರಳೊಳು ಜಗವು ಪೊಗಳಲು (ಸಾಳ್ವಭಾ. ೧೭-೫೨). [ನಿಚ್ಚಯ+ಕೆಯ್$_1$]

ನಿಚ್ಚಯವಿಡಿ (ಕ್ರಿ). = ನಿಚ್ಚಯಗೆಯ್ : ಬೆಚ್ಚದೆ ಒಚ್ಚಯವಿಲ್ಲದೆ ಮನದಿಂ ನಿಚ್ಚ[ಪಾಠಾಂ. ಶ್ಚ]ಯವಿಡಿದೆಚ್ಚಱಿಕೆಯ ಬಲದಿಂ ಎಂದು ಬುದ್ಧಿಗಲಿಸಿದ ಗುರುನಾಥಂ (ದೀಕ್ಷಾಬೋ. ೧೦೬-೨೪).

[ನಿಚ್ಚಯ+ಪಿಡಿ$_1$]

ನಿಚ್ಚಯಿಸು, ನಿಚ್ಚಯ್ಸು (ಕ್ರಿ) =ನಿಚ್ಚಯಗೆಯ್ : ನಿಚ್ಚಯಿಸಿದರು ರಾಮಲಕ್ಷ್ಮಣಸೀತೆಯರ್ ಮರಳಲ್ಕಯೋಧ್ಯೆಯಂ (ತ್ರೀರಾಮಾ. ೨೨೯-೨೫). **ನಿಚ್ಚಯ್ಸು** : ನಿಚ್ಚಯ್ಸಲಾಱದುಮ್ಮಟ್ಟದೊಳಚ್ಚಗಂ ಗೊಂಡು ಮೂರ್ಛೆಯಿಂದರ್ಚತ್ತಂತೆ ಬೆಚ್ಚನೆ ಸುಯ್ದು (ಸುಕುಮಾ. ೩-೬ ಪ) ; ಚಿತ್ತದೊಳ್ ನಿಚ್ಚಯ್ಸಿ ನೆರೆಯಲೆಳಸುವಳೊಮ್ಮೆ (ಚಂದ್ರಸ. ೩೮-೨೫). [ನಿಚ್ಚಯ + -ಇಸು$_3$]

ನಿಚ್ಚಯ್ಸು 'ನಿಚ್ಚಯಿಸು' ನೋ.

ನಿಚ್ಚಲ, ನಿಚ್ಚಳ$_1$ (ಗು). ೧. ಅಲುಗಾಡದ ; ಸ್ಥಿರವಾದ ; ದೃಢವಾದ. (ನಾ). ೨. ಅಲುಗಾಡದಂಥ ಸ್ಥಿತಿ; ಸ್ಥಿರತೆ; ದೃಢತೆ : ಶತ್ರುಕ್ಕೆ ಚತ್ರಂ—ನಿಶ್ಚಲ-ನಿಚ್ಚಲ ; ನಿಶ್ಚಿಂತ-ನಿಚ್ಚಿಂತ (ಶಮದ. ೨೬೩ ಪ್ರಯೋ) ; ಜ್ವಲಿಪ ಪಂಚಾಗ್ನಿಯ ನಡುವೆ ನಿಚ್ಚ[ಪಾಠಾಂ. ಶ್ಚ]ಲದಿ ಬಯಲೊಳು ಮುಸುಕಿ ಪೆರ್ದೊಱೆಗಳು ಪರಿಯೆ ಪಟುತಪವನಾಚರಿಸುವ ತಪಸ್ವಿಗಳು (ಬಸಪು.೧೯-೮೧). **ನಿಚ್ಚಳ$_1$** : ೨. "ನಿಚ್ಚಳಮೆಂದು ನಿಶ್ಚಲದ ನಾಮದೊಳಂ" (ಕರ್ಣಾಸಿ. ೫೩) ; ಮೆಚ್ಚದೆನೆಲೆ ಗಿಳಿ ನಿನ್ನಯ ನಿಚ್ಚಳ [ಪಾಠಾಂ. ಲ] ಮಾದಮಳಭಕ್ತಿಗೀವೆಂ ಪೇಱ್ಪುನ್ನಿಚ್ಚಯದಾವುದು (ಉದ್ಭಟ. ೭-೧೦೭) ; ಕರಮೆಸೆವ ಕರ್ಣಾಭರಣಗಳೆಯೆಬಲಿಕ್ಕಿದ ದೂವೆಯದ ನೇವಳಂಗಳ ನಿಚ್ಚಳಂಗಳ ಪೊನ್ನ ಕಿವರಕಂಗಳ ಜಾಯಿಲ ಮೆನಿಪ ಜಾತ್ಯಶ್ವಂಗಳನೇಱಿ (ಮಹಾನೇ. ೧೨-೩೨ ಪ); ನಿಚ್ಚಳದೊಳೆಸೆವ ತಿಳಿಗೊಳನ ಕಲಕಾಡಿ ಬಿರಿದಚ್ಚಲರ ಧೂಳಿಗಳ ಚೆಲ್ಲಾಡಿ ಸಲೆ ಮದಂ ಪೆಚ್ಚೆ . . . ನಿಚ್ಚಮೆಳವೆಲರೆಂಬ ಸೊಕ್ಕಾನೆ ತಾನೆ ತನ್ನಿಚ್ಚೆಯಿಂ ತಿರುಗುತಿದೆ (ಚೈಮಿಭಾ. ೩-೨೪) ; ಮೇರುಗಿರಿ ನಿಚ್ಚಳದಲಿಳೆ ಪದಿನಾಲ್ಕ ಧರಿಸಿಹುದು (ಕೋಗಯ. ೪-೫೦) ; ಕಕ್ಕಡವು ನಿಚ್ಚಳವಾಗಿ ಉರಿಯುತ್ತಿತ್ತು (ಮುಂಬಯಿ. ೪-೬೯) ; ಗಾಳಿ ಬೀಸದ ಕಡೆಯಲ್ಲಿಟ್ಟ ಸೊಡರಿನಂತೆ ಅವನ ಬಗೆಯಾಳವು ನಿಚ್ಚಳವಾಗಿತ್ತು (ನಾಗಕಾ. ೨). ೩. ಸ್ಪಷ್ಟವಾಗಿರುವುದು ; ಸಂದೇಹರಹಿತವಾದುದು : ನಿಚ್ಚಳದ ಸುರನರರಿಗಳವೆ ನೋಡುತ ಬರಲ್ ಪೊಚ್ಚ ಪೊಸತೆನಿಸಿ ತೋರುತ್ತಮಿದೆ ಸಂತಸದಿ ನಿಚ್ಚಯಮಿದೆಂತೆಂದು ಪೇಳಲಳ್ಕುಮೆ (ಪಂಕಾರಾ. ೫-೪-೫) ; ದಾರಿ ನನಗೀಗ ನಿಚ್ಚಳವಾಗಿ ಕಾಣುತ್ತಿದೆ (ಮುಚ್ಚಟಾ. ೪೨) ; ಇನ್ನೊಂದು ಪ್ರಶ್ನೆಯು ನಿಚ್ಚಳವಾಗಬೇಕಾಗಿದೆಯೆಂದು ತೋರುತ್ತದೆ (ಬೆಟ್ಟಹೂ. ೧೦೫) ; ಗುರಿಯು ನಿಚ್ಚಳವಾಗಿದ್ದರೆ . . . ಸರಿಯಾದ ಸಾಧನಗಳನ್ನು ಉಪಯೋಗಿಸುವುದು ಕಷ್ಟವಲ್ಲ (ಕಥಕ. ೧೨).

ನಿಚ್ಚಳಾಗು$_1$ =ಸ್ಪಷ್ಟವಾಗು : ಪೂಜ್ಯ ಮಹಾತ್ಮಾಜಿಯವರ ಬಲಿದಾನದ ತರುವಾಯ ಈ ಮಾತು ಇನ್ನಿಷ್ಟು ನಿಚ್ಚಳಾಗಿ ಎಲ್ಲರ ಅನುಭವಕ್ಕೆ ಬಂದಿತು (ಯಕ್ಷಪ್ರ. ೧೬) ; ನನಗೇನೂ ಆ ಮಾತು ಅಷ್ಟೊಂದು ನಿಚ್ಚಳಾಗಿ ಗೊತ್ತಿಲ್ಲ (ಪೂತನಾ. ೨೧).

[<ಪ್ರಾ. ಣಿಚ್ಚಲ./ ಸಂ. ನಿಶ್ಚಲ]

ನಿಚ್ಚಲವಕ್ಕಿ (ನಾ). ಕಣ್ಣು ಮಿಟುಕಿಸದೆ ಇರುವ ಒಂದು ಬಗೆಯ ಹಕ್ಕಿ ; "ಆಂದೆಗೀರ ; ಶಕುನದ ಹಕ್ಕಿ" (ಪ್ರಭಣ್ಣ) : ಧನುರ್ವೇದಿಯುಂ ಶಬ್ದವೇದಿಯುಮುಪ್ಪ ಬಿಲ್ಲ ಬಿನ್ನಣಿಯುಸೊರ್ವನಂ ಕರೆದು ನಿಚ್ಚಂ ವಕ್ರಿಸುತಿರ್ಪ ನಿಚ್ಚಲವಕ್ಕಿಯನೆಚ್ಚು ಬಾಯೆಂದು ಪೇಳ್ವುದುಂ(ಪಂಚತಂ. ೧೨೬-೨೦). [ನಿಚ್ಚಲ + ಪಕ್ಕಿ]

ನಿಚ್ಚವಚ್ಚ (ನಾ). ಯಾವಾಗಲೂ ತೊಡುವ ಆಭರಣ : ಎನ್ನ ಬಲ್ಗಾಲದ ನಚ್ಚನ ನಲ್ಗೆಳದಿ ಚಂದ್ರಮತಿಗಾ ಎನ್ನ ಚಂದಿರಗಾವಿಸೀರೆಯಂ ಬಣ್ಣಗುಪ್ಪಸಮಂ ಹಬ್ಬದ ನಿಚ್ಚವಚ್ಚಮನೆಲ್ಲಮಂ ಮೆಚ್ಚನಿತ್ತು . . . ಮಱುಗದಂತಿರೆ ಪೇಱ್ಕೆ (ರಾಮಾಶ್ವ. ೩೮-೨೧).

[ನಿಚ್ಚ$_2$(<ನಿಚ್ಚಂ) + ಪಚ್ಚ$_2$]

ನಿಚ್ಚವಯಣ, ನಿಚ್ಚಪಯಣ (ನಾ). ನಿತ್ಯವೂ ಸ್ವಲ್ಪಸ್ವಲ್ಪ ದೂರ ಮಾಡುವ ಪ್ರಯಾಣ : ನಿಚ್ಚವಯಣದಿಂ ಬಂದು ಕುರುಕ್ಷೇತ್ರದ ಪೂರ್ವದಿಗ್ಭಾಗದೊಳ್ ಪ್ರಳಯಂ ಮೂರಿವಿಟ್ಟಂತೆ ಬೀಡಂ ಬಿಟ್ಟು (ಪಂಪಭಾ. ೧೦-೩೧ ಪ) ; ನಡೆಯೆ ನಿಚ್ಚವಯಣಂಗಳೊಳ್ ಅಱಿಕೆಯ ಕೆಱೆಯ ನದೀನದಂಗಳ ಬೀಡುದಾಣಂಗಳೊಳ್ (ಶಾಂತಿಪು. ೧೧-೭೪ ಪ); ಸಾಲದೆ ಸೋಲದೆ ಪೊಡೆಮಟ್ಟೋಲೈಸದೆ ನಿಚ್ಚವಯಣಮಿಲ್ಲದೆ ತನ್ನಿರ್ದಾಲಯದೊಳಿರ್ದುಂ (ಪಂಚತಂ. ೫೩-೬); ಬಲಾಳ್ಕುತರ್ ನಿಚ್ಚವಯಣದಿಂದೆಯ್ತಂದರ್ (ಪಂರಾಮಾ. ೪-೫೨) ; ನಿಚ್ಚವಯಣಂ ಬಂದಂ ಮುರಧ್ವಂಸಕಂ (ಜಗವಿ. ೧೬-೬೮) ; ಅಂದಿನ ದಿನಮಲ್ಲಿರ್ದುಂ ಮಱುದಿವಸಂ ಪುಂಡರೀಕಿಣಿಗೆ ನಿಚ್ಚವಯಣಂ ಬಂದು (ಪುಸ್ವಪು. ೮-೧೪ ಪ). **ನಿಚ್ಚಪಯಣ** : ನಿಚ್ಚಪಯಣಂಗಳಿಂ ಯುವರಾಜನನೇಕಯೋಜನಂಗಳಂ ಪೆಱಗಿಕ್ಕಿ ಪೋಗುತ್ತಮಿರೆಯಿರೆ (ಕಾದಂಉ. ೫೨೮) ; ನಿಚ್ಚಪಯಣದಿಂ ಬಂದು (ಎಕ. VII, ೨ಧಪೊ. ೪-೨೫ ; 1122) ; ನೇಸರಿಂದುಗಳು ನಿಚ್ಚಪಯಣದಲಿ ವಿಶ್ರಮಿಸುವ ನಿಲ್ಗಾಣವಾದ ಸಹ್ಯಾದ್ರಿಶೃಂಗದ ಇಲ್ಲವೆ ಪವನಮಾರ್ಗದ ಪುಣ್ಯಯಾತ್ರಿಕನಾದ ಮೇಘ (ಸಾಸಮಾ. ೧೨). [ನಿಚ್ಚ$_2$(<ನಿಚ್ಚಂ) + ಪಯಣ]

ನಿಚ್ಚವಲಿ (ನಾ). ಪ್ರತಿದಿನವೂ ದೇವತೆಗಳಿಗೆ ಸಮರ್ಪಿಸುವ ನಿವೇದನವಸ್ತು,—ಬಲಿ : ನಾಡಿಗರ್ ದಿನದಿನಂ ಬೇಳ್ಪೊಂದು ಹವ್ಯಮನುಂಡುಂಡು ಸವಿಗೊಂಡ ಬೋಟೆಯರೆತ್ತಾನುಮೊರ್ವನೀ ನಿಚ್ಚವಲಿಯೆಡೆಯಿಂ ಪುರುಳ್ಗಾಣದೆ ಪೆಚ್ಚೆವಿಟ್ಟು ತಿರುಳಂ ಸಮಂತು ಪುರುಳಂ ತೋಱುಪ ಜೋಗವೆಣ್ಗೆ ಸಂಚುಗೈಯಲೊಡಂ ಕಱುಂಬಿ ನರ್ನೆರವಿಾವುಜ್ಜುಗಕ್ಕೆ ತಡೆವರ್ಗರ್ (ರಾಮಾಶ್ವ. ೫೫-೩೦).

[ನಿಚ್ಚ$_2$(<ನಿಚ್ಚಂ) + ಬಲಿ$_2$]

ನಿಚ್ಚವಸದನ (ನಾ). ನಿತ್ಯವೂ ತೊಡುವ ಉಡಿಗೆ,—ವಸ್ತ್ರ : ತಮ್ಮ ನಿಚ್ಚವಸದನದ ಸಿಂಗರಕ್ಕೆಂದು ಸಿಂಗನೆಱಿಗಿ ಮಿಡುಡುಂಡು ಕೆಲಕೊಳ್ಕ ಮುತ್ತಾನೆಯ ಅಣಿಮುತ್ತುಗಳಂ . . . ತಿಱಿದೊಟ್ಟೆ (ರಾಮಾಶ್ವ. ೬೩-೧೩). [ನಿಚ್ಚ$_2$(<ನಿಚ್ಚಂ) + ಪಸದನ]

ನಿಚ್ಚವಳ (ನಾ). ಪ್ರತಿನಿತ್ಯವೂ ನಿಯಮಿತವಾಗಿ ಬರುವವನು : ಆ ಕೆಱೆಯ ಮೂಡಣ ಪದಿನಯ್ದು ಮತ್ತರು ಬೆದ್ದಲೆಯುಮಂ ನಿಚ್ಚವಳ ಪೂರ್ವ್ವ ಬ್ರಾಹ್ಮಣಂಗೆ ಅಕ್ಕಿ ಮಾ ೫ . . . ಎಲೆ ೪ ಱ ಪಡಿಯಲು ನಡಸುವನ್ತಾಗಿ (ಸೌಇಇ. IX-1, ೨೪೫-೩೩ ; 1146).

[ನಿಚ್ಚ$_2$(<ನಿಚ್ಚಂ) + -ವಳ]

ನಿಚ್ಚಶಿವರಾತ್ರಿ (ನಾ). ನಿತ್ಯವೂ ಮಾಡುವ ಜಾಗರಣೆ ಮತ್ತು ಶಿವಪೂಜೆ: ದೇವದೇವ ಶಿವರಾತ್ರಿಯ ಸುಖಮಂ ಸವಿಗಂಡೆಂ ಬಿಡಲಾಱೆ ನಾಱೆಂ ಇಂದಿನ ತೆಱದೊಳ್ ಬಂದೆಂದಿಂಗಂ ಕುಂದದೆ ನಿಚ್ಚಶಿವರಾತ್ರಿಯಂ ಮಾಳ್ಪೆನೆಂಬ ನೇಮವಂ ಕೈಕೊಂಡೆಂ (ಬಸರ. ೬-೫೩).

[ನಿಚ್ಚ$_2$(<ನಿಚ್ಚಂ) + ಶಿವರಾತ್ರಿ]

ನಿಚ್ಚಳ$_1$ 'ನಿಚ್ಚಲ' ನೋ.

ನಿಚ್ಚಳ$_2$ (ನಾ). ೧. ನಿರ್ಮಲವಾದುದು; ಶುದ್ಧವಾದುದು; ಶುಭ್ರವಾದುದು : ಬಚ್ಚಲೊಳಗಣ ಬಾಲಹುಳು ಬಲ್ಲುದೇ ನಿಚ್ಚಳದ ನೀರಿನನುಭವವ (ಪುಡಿಮಾ. ೧೩-೧೬) ; ಪಚ್ಚೆಯ ತೊಲೆ ಪವಳದ ಕಂಬ ಬೋದಿಗೆ ನಿಚ್ಚಳವಹ ನೀಲದಿಂದ . . . ಮಣಿಮಂಟಪವಚ್ಚರಿಯಾಗಿರುತಿಹುದು (ತ್ರಿಪುಸಾಂ. ೭-೮೦) ; ನಿಚ್ಚಳುಂ ತುಂಗಭದ್ರಾನದಿಯೊಳುಂ ಮಿಂದಾ ನಿಚ್ಚಳದ ಧೌತಾಂಬರವನುಟ್ಟು (ಚಿಒಪು. ೩೪-೩೧) ; ಇಕ್ಕೆಲದೊಳಿಹ ನಿಚ್ಚಳ[ಪಾಠಾಂ. ಲ]ದ ಕರುಮಾಡದೋರಣದ ನೆಲೆನೆಲೆಯೊಳೊಚ್ಚೀರೆಗಂಗಳೆಳವೆಂಗಳ ಕಟಾಕ್ಷದ ಮಂರೀಚಿಗಳ್ಸೊಗಯಿಸಿದುವು

(ಜೈಮಿಭಾ. ೬-೧೦). ೨. ಕಾಂತಿ ; ಹೊಳಪು : ಜಜ್ಜಾರ ಮಕರ ತೋರಣ ರತ್ನಕೀಲಿತ ನಿಚ್ಚಳ ಹೊನ್ನ ತೋರಣದಿ ಸ್ವಚ್ಛದಿ ಪೊಳೆ ಮುಟ್ಟಳು (ನೋಹಕ. ೨೪-೨೪) ; ಲಲಿತಾಂಗಿಯರ ಕರತಳದ ವಿಮಲ ಕಲಶೋದಕವನೊಲಿದೀಂಟುತಿರ್ದೂದಂ ಮನತಣಿಯದಧ್ವಗರ್ಗಾ ಹೆಂಗಳ ಮೂದಲಿರ ಪಳಿವ ಚೆಂದುಟಿಯ ಸವಿಗೆಳನಗೆಯೊಳಾದರಿಪ ತಂಗಡಿಯ ನಿಚ್ಚಳಕೆ . . . ಬಯಸಿ ಬಯಸಿ (ಜೈಮಿಭಾ. ೬-೧೦) ; ಮನೆಯೊಳ ಅಂಗಳದೊತ್ತಿನ ನಿಚ್ಚಳದ ಪಚ್ಚೆಯ ಜಗಲಿಯೊಳ್ ಕುಳ್ಳಿರ್ದು (ಚಳವಿ. ೬-೧೫೪ ಪ). ೩. "ಎಚ್ಚರ, ಅರಿವು" (ಜಾನಪೋ. ೧೧) : ಇನ್ನೂ ನಿಚ್ಚಳವಾಗಿಲ್ಲ. ನಿದ್ದೆಗಣ್ಣಲ್ಲಿಯೆ ಇದ್ದ ಹಾಗಿದೆ (ರೂಢಿ).

ನಿಚ್ಚಳಾಗು$_2$ = ಎಚ್ಚರವಾಗು : ನೀರನ್ನು ತೆಗೆದು ಕೊಂಡು ಮುಖಕ್ಕೆ ಉಗ್ಗಿಕೊಂಡೆ. ನಿಚ್ಚಳಾಗಿ ಎಚ್ಚೆತ್ತೆ (ಮೋದಿಮು. ೧೦೫).

[?]

ನಿಚ್ಚಳಗೊಳಿಸು (ಕ್ರಿ). ಸ್ಪಷ್ಟಗೊಳಿಸು : ಒಂದೆರಡು ಉದಾಹರಣೆಗಳಿಂದ ನಾನು ಛಿದ್ರಾಛಿದ್ರಾಭಿಪ್ರಾಯಗಳನ್ನು ಬಗೆಹರಿಸಿಕೊಂಡೆ ರೀತಿನೀತಿಗಳನ್ನು ನಿಚ್ಚಳಗೊಳಿಸಬಹುದು (ತರಜ. ೧೩ ಮುನ್ನುಡಿ).

[ನಿಚ್ಚಳ$_1$(<ನಿಚ್ಚಲ)+ಕೊಳ್$_1$+-ಇಸು$_3$]

ನಿಚ್ಚಳಗೊಳ್ಳು (ಕ್ರಿ). ನಿರ್ಮಲವಾಗು ; ಶುದ್ಧವಾಗು : ಕೆಲದಿನ ಮುದದಿಯಿಂದ ದೂರವಿದ್ದ ಪ್ರಭಾಕರನ ಕವಿ ಚುರುಕಾಗಿ ಕಣ್ಣು ನಿಚ್ಚಳಗೊಂಡು ಮನಸ್ಸು ಜಾಗೃತವಾಯಿತು (ತೀಮೋಡ. ೧೦೭).

[ನಿಚ್ಚಳ$_2$+ಕೊಳ್ಳು$_1$(<ಕೊಳ್$_1$)]

ನಿಚ್ಚಳತೆ (ನಾ). ಕದಲದಿರುವಿಕೆ ; ದೃಢತೆ ; ಸ್ಥಿರತ್ವ : ಮುಲವ ಪೊದ್ದದೆ ಜಗದೊಳೆಲ್ಲಿಯು ಸುಳಿವ ಮಾರುತನಂತೆ ಕದುನಿಚ್ಚಳತೆಗುಂದದೆ ತೊಳಲುತಿಹೆನೆಲೆ ಭೂಪ (ನಿಭಾಗ. ೧೧-೧೩-೩೧). [<ಸಂ. ನಿಶ್ಚಲತಾ]

ನಿಚ್ಚಳಮನ (ನಾ). ೧. ದೃಢವಾದ ಮನಸ್ಸು. ೨. ದೃಢವಾದ ಮನಸ್ಸುಳ್ಳವನು ; ದೃಢಚಿತ್ತ ; ಸ್ಥಿರಮನಸ್ಕ : ಒರಲ್ದ ಕೊಳಂ ಬಿದಿರಕ್ಕಿಯಿಕ್ಕಿ ನಿಚ್ಚ[ಪಾಠಾಂ. ಶ್ಚ]ಳಮನ ಸುವ್ವಿ ಕಾಜೊಡೆಯ ಸುವ್ವಿ ನುನೋಹರ ಸುವ್ವಿ ಸುವ್ವಿಯೆಂದಳವಡೆ ರಾಗದಿಂ ತಳಿಸಿದರ್ ವನದಲ್ಲಿ ಪುಳಿಂಜಕಾಂತೆಯರ್ (ಗಿಂಕ. ೧-೧೨೩).

[ನಿಚ್ಚಳ$_1$(<ನಿಚ್ಚಲ)+ಮನ$_1$]

ನಿಚ್ಚಳಾಗು$_1$ 'ನಿಚ್ಚಲ' ಪರಾ.

ನಿಚ್ಚಳಾಗು$_2$ 'ನಿಚ್ಚಳ$_2$' ಪರಾ.

ನಿಚ್ಚಳಿತ (ನಾ). ಸ್ಥಿಮಿತವಾದ ಮನಸ್ಸುಳ್ಳವನು ; ದೃಢಚಿತ್ತ : ಧ್ಯಾನದೊಳಭವಂ ನೆಲೆದಿನಿನಾನುಮನರೆಮುಚ್ಚಿ ಕಣ್ಣಳಂ ನಿಚ್ಚ[ಪಾಠಾಂ. ಶ್ಚ]ಳಿತಂ ತಾನಿರ್ದು (ಪಂಪಭಾ. ೮-೧೩). [<ಸಂ. ನಿಶ್ಚಲಿತ]

ನಿಚ್ಚಳಿಸು(ಕ್ರಿ). ೧. ಶುದ್ಧಪಡಿಸು; ಜೊಕ್ಕಟಮಾಡು: ವಿಶ್ವಭೂತಿ ಪಾರ್ವಂ ಪೋಗಿ ಮುಪ್ಪಿಯಂ ಬೇಡಿ ತಂದಾ ತಂಡುಲವನು ನಿಚ್ಚಳಿಸಲ್ವಡೆಯದೆ ಜಲವಿಶ್ರದಿಂ ಪಿಟ್ಟುಗುಟ್ಟ (ಸಮ್ಮಳಾ. ೬-೩೧); ಕುದುಪಲಕ್ಕಿಯ ನಿಚ್ಚಳಿಸಿ ನೆನೆಯಿಕ್ಕಿ ಕುಟ್ಟ (ಭೀಮಸೂ.೧೯). ೨. (?) : ರತ್ನುತ್ಸವದಂ ರತ್ನಂತದೊಳ್ ನಿಚ್ಚಳಿಸಿನಿಯರ ಮೆಚ್ಚಿಂದಂ (ಅನಂಪು. ೮-೫೮).

[ನಿಚ್ಚಳ$_2$+-ಇಸು$_3$]

ನಿಚ್ಚಳಿಕೆ (ನಾ). ಸ್ಥಿರವಾದ ಮನಸ್ಸುಳ್ಳವಳು ; ದೃಢಚಿತ್ತೆ : ಬಿಚ್ಚಿ ಬಿಚ್ಚಿಲ್ಲದನು ಕೇಳ್ದತಿಯಚ್ಚಿಯಿಂ ಶ್ರೀರಾಮಚಂದ್ರಗೆ ನಿಚ್ಚಳಿಕೆಗೆ ಸರಿತರಲುಬೇಕೆನಲಾಗ ಕೌಸಲ್ಯೆ (ಜಾರಾಮಾ. ೧೩೪-೬೧) ; ನಿಚ್ಚಳಿಕೆಯಂ ಕೊಂಡೊಯ್ದ ದೈತ್ಯನ ಮೆಚ್ಚದಿರೆ ಕಾವಲನುಗ್ರೆದಿಹನಚ್ಚು ತಾಗ್ರಜನಂವುದನೆ ನೆಲೆಗೇಳ ಜಾನಕಿಯೂ (ಜಾರಾಮಾ. ೬೩೧-೫೦).

[<ಸಂ. ನಿಶ್ಚಲಾ]

ನಿಚ್ಚಿಂತ (ಗು). ೧. ಚಿಂತೆಯಿಲ್ಲದ; ಯೋಚನೆಯಿಲ್ಲದ; ನಿಶ್ಚಿಂತವಾದ. (ನಾ). ೨. ಚಿಂತೆಯಿಲ್ಲದ ವ್ಯಕ್ತಿ ; ಯೋಚನೆಯಿಲ್ಲದವನು: ಕತ್ತಲ್ಕೆ ಚತ್ತಂ—ನಿಶ್ಚಲ-ನಿಚ್ಚಲ; ನಿಶ್ಚಿಂತ-ನಿಚ್ಚಿಂತ (ಕಮುದ. ೨೬೬ ಪ್ರಯೋ). [<ಪ್ರಾ. ಣಿಚ್ಚಿಂತ. / ಸಂ. ನಿಶ್ಚಿಂತ]

ನಿಚ್ಚಿತ (ಗು). ೧. ನಿಶ್ಚಯವಾದ ; ಗೊತ್ತುಪಡಿಸಿದ. (ನಾ). ೨. ನಿಶ್ಚಯ ; ನಿರ್ಣಯ : "ನಿಚ್ಚಿತಮೆಂದು ನಿಶ್ಚಿತದೊಳಂ" (ಕರ್ನಾಕಾ. ೫೩) ; ಬೆಚ್ಚು ಭಯ ಸಂಗವನುಳಿದು ನಿಜ ನಿಚ್ಚಿತದಿ ರುದ್ರಿಗಳನಾಂತರಿಚ್ಚಿಸುತ ಜಿನಮುನಿಗಳನು ಪೆಚ್ಚಿದನು (ಸಾಳ್ವಭಾ. ೪-೩೨).

[<ಸಂ. ನಿಶ್ಚಿತ]

ನಿಚ್ಚಿನಿಸು (ಕ್ರಿ). ನಿಶ್ಚಯಿಸು ; ನಿರ್ಧರಿಸು : ತನುರುಹಯಂ ಪುದುಱ್ಸುಳಿಸೆ ಸಂನ್ಯಸ್ತಿಘೋಗಮನಾರಮೆಂದು ನಿಚ್ಚಿನಿಸಿ ನಿಜಪ್ರಯೋಕ್ತೃಗೆ ಸನ್ಮತಿಯಂ ಕರೆದಿತ್ತು (ಎಳ. VII, ೩೫೨. ೨೧೯-೩೩ ; ೩೧೩). [ಇದು 'ನಿಚ್ಚಯಿಸು' ಎಂಬುದರ **ಅಪಲಿಖಿತವಿರಬಹುದು**]

ನಿಚ್ಚಿಲಿ (ನಾ). ನೈಜತೆ ಇಲ್ಲದವನು; ಕಪಟಿ; ಮೋಸಗಾರ (?) : ನಿಚ್ಚಿಲಿ ಕಾರಿರುಳೊಳ್ ಪೋಪಪಚ್ಚೆಮನುಟ್ಟಿರ್ದಿಱುಂತೆ ಕಳ್ಳದೊಳಾ ಖಾಟಚ್ಚರಧಯದಿಂದುಟ್ಟು ಪಟಚ್ಚರಮಂ ಮನೆಗೆವಂದು ನಿಂದಂಗಣದೊಳ್ (ಕಾಂಪಪು. ೬-೬೫). [ನಿಚ್ಚ$_1$+-ಇಲಿ$_3$]

ನಿಚ್ಚಿಯ 'ನಿಶ್ಚಯ' ನೋ.

ನಿಚ್ಚೈದೆ (ನಾ). ಬಹಳ ಕಾಲ ಮುತ್ತೈದೆಯಾಗಿರುವವಳು ; ದೀರ್ಘಸುಮಂಗಲಿ : ಆ ಸತಿಯಂ ಪರಸಿದರಾಯುಷ್ಮತಿ ನೀಂ ನಿಚ್ಚೈದೆಯಾಗೆನುತ್ತೆ (ಕಾದಂಬು. ೬೮೩). 'ನಿಟ್ಟೈದೆ' ಪರಾ.

[ನಿಚ್ಚ$_3$+ಐದ$_2$(<ಆಯ್$_2$)]

ನಿಜ (ಗು). ೧. ಸ್ವಕೀಯ ; ತನ್ನ : ಅರಿಮುಚ್ಚಿ ಕಣ್ಗಳಂ ವನಕರಿ ಮಿಲ್ಲದೆ ಲಲಿತಸಲ್ಲಕೀಪಲ್ಲವಮಂ ಸ್ಮರವಶದಿಂದಿರ್ದುದು ನಿಜಕರೇಣುಪೇಚಕ ನಿರೂಪಿತಾಯತಶ್ರೀತ್ವಂ (ಕವಿಕಾ. ೩-೮) ; ಮಿಕ್ಕೆಸೆವ ಪ್ರಚಂಡ ಮಾರ್ತಾಂಡನಲರ್ಜುಗೆನ್ನ ಹೃದಯಾಂಬುಜಮಂ ನಿಜವಾಹ್ಯದೀಚಿಯಿಂ (ಪಂಪಭಾ. ೧-೩) ; ಏದೊರೆ ಪೆಂಪೊ ಲಕ್ಷ್ಮಿ ನಿಜವಲ್ಲಭೆ ಜಾಹ್ನವಿ ತನ್ನ ಪಾದಪದ್ಮೋದಕಮಿಂದ್ರಮುಖ್ಯದಿವಿಜರ್ ಸ್ವಪರಿಗ್ರಹಂ . . . ಎನಿಪ್ಪ ದುಗ್ಧೋದಧಿತಲ್ಪನಂ ನರನಥಿಷ್ಟುತಿಗೆಯ್ವುದು ಧಾರ್ಷ್ಟ್ಯಮಲ್ಲದೇ (ಜಗವಿ. ೧-೩೦). ೨. ಸ್ವಭಾವಸಿದ್ಧವಾದ ; ಸಹಜವಾದ ; ಕೃತ್ರಿಮವಲ್ಲದ. (ನಾ). ೩. ಸ್ವಕೀಯತೆ ; ತನ್ನತನ ; ಆತ್ಮ ಸ್ವಭಾವ : ಎನಗೊಂದು ನಿಜವಿಲ್ಲ ಎನಗೊಂದು ನಿಷ್ಪತ್ತಿಯಿಲ್ಲ ಲಿಂಗವ ತೋಜಾ ಉದರನ ಹೊರೆವ ಭಂಗಗಾಡು ನಾನು (ಬಸವ. ೩೦೬); ಹೊರಳಿದನು ಹುಡಿಯೊಳಗೆ ಸಲೆ ಕಾತರಿಸಿದನು ಮೋಹಾಂಧಕಾರಕೆ ಕರಣವನು ಕೈಸೂಜಿಗೊಟ್ಟನು ನಿಜದೊಳಿಚ್ಚಿಸಿದೆ (ಕುಪ್ಯಾದ್ಯೆಪ್ರಾ. ೬-೯). ೪. ಸ್ವಭಾವ ; ಸಹಜತೆ ; ಹುಟ್ಟುಗುಣ : ಆ ನಾಡವರ್ಗಳ್ ಚದುರರ್ ನಿಜದಿಂ ಕುಜುತೋದದಯಂ ಕಾವ್ಯಪ್ರಯೋಗಪರಿಣತ ಮತಿಗಳ್ (ಕವಿಕಾ. ೧-೩೮) ; ನಿಜದೊಳೆ ಭೂಪರೆಂಬರವಿವೇಕಗಳಪ್ಪರ್ (ಪಂಪಭಾ.೧೩-೪೦); ನಿಜದಿಂದ ಕ್ಷತ್ರಿಯನೆಂಪು ತನ್ನ ನಿಜವನಱಿದ ಕರ್ಣನ ವ್ಯಾಧಭಾವ ಬಿಡದಂತೆ ತಾನು ತನ್ನ ನಿಜವಸಱಿದರೂ . . . ಮುನ್ನಿನ ಭ್ರಮೆಗಳ ಬಿಡಲಱಿಯದ ಬಡಮನದ ಮನುಜರೆಲ್ಲರೂ ನಿಜಗುಣನ ನಿಜ ಭಾವದಲೂ ನಿಲ್ಲದವಂಗೆ ನಿಜಸುಖವು ಸಾಧ್ಯವಪ್ಪುದೆ ಹೇಳಾ (ಪಚಸಂ. ೧೧-೫೮) ; ಕ್ರಮದೆ ಗುರು ದೀರ್ಘಮೇಕಾರಮುಖ್ಯಸಂಧ್ಯಕ್ಷರಂಗಳವು ನಿಜದಿಂ (ಕಮುದ. ೧೦). ೫. ಯಥಾರ್ಥವಾದುದು ; ದಿಟ; ಸತ್ಯ : ಚಿತ್ರದ ರೂಹು ಕಾಣರಣ್ಣಾ . . . ಅಪ್ಪುದರೆ ಸುಖವಿಲ್ಲ ಮೆಲಿದರೆ ರುಚಿಯಿಲ್ಲ ಕೂಡಲಸಂಗನುದೇವಾ ನಿಜವಿಲ್ಲದವನ ಭಕ್ತಿ (ಬಸವ. ೧೨೬); ನಿಜವಿಲ್ಲದ ಮಾತು ಸಜ್ಜನರ ಮನಕ್ಕೆ ಬಾರದು (ಸಾಮ್ರಾ. ೧೦-೧೦೦).

ಆ ಮಾತು ಕಪಟವೊ ನಿಜವೊ ಬಳಿಕೀ ರೀತಿಗಳನಾರೈದು ನೋಡುವೆನು (ಬಸಪು. ೨೮-೪೪) ; ಮಗುವುತನದೊಳು ಕೂಡಿ ಮೆಱೆವುದು ಜಗವದಲ್ಲದೆ ನಿಜವ ಬೆರೆಸುವ ವಿಗಡರಿಗೆ ಪರತತ್ತ್ವಚಿನುಮಯರೂಪ ತಾನೆಂದ(ಕುವ್ಯಾಭೀ. ೩-೫೬); ಅವನು ನನ್ನ ಮಾತು ನಿಜವೆಂದು ನಂಬಿದನು(ಮುಂಬಯಿ. ೪-೪೪). ೬. ಸಹಜವಾದ ಸ್ವರೂಪ : ಇವರೆತ್ತ ಬಲ್ಲರು ಲಿಂಗದ ನಿಜವ (ಅದನ. ೨-೪) ; ಮಾರ್ಕಂಡೇಯಮಹಾಮುನಿ ಸ್ವೇಚ್ಛಾಮರಣೆಯೆನಿಸಿಕೊಂಡನಲ್ಲದೆ ಲಿಂಗದ ನಿಜವನಱಿಯನು (ಬಸವ. ೮೫೬) ; ಈತನ ನೆನಹನೀತನ ನಿಜವನಱಿವ ಮಹಾತ್ಮರಾರೆಂದ (ಕುಸ್ಮಾಸ. ೯-೩) ; ಭಜಿಸಿ ನೆರೆಯರು ನಾರದಾದ್ಯರು ನಿಜವನೀತನನೀತ ನಿನಗಾತ್ಮಜನೆ ಹೋಗೆಲೆ ಮರುಳೆ (ತೊರರಾ. ೧-೯-೩೬). ೭. ದಿಟವಾದುದು ; ಸತ್ಯವಾದುದು ; ಆತ್ಮ : ಪ್ರಣವದಲ್ಲಿ ನಿಜವ ಕಂಡು ತೋಱಿದ ಬಸವ (ನೀಲವ. ೨೭-೮೪); ನಿಜವನಱಿಯದ ಭಕ್ತ ಬಳಲುವನಲ್ಲದೆ ಲಿಂಗ ಬಳಲುವುದೆ (ಬಸವ. ೧೧೩); ಮತಿಗಗೋಚರವಾದಖಂಡಪರಿಪೂರ್ಣಾದ್ವಿತೀಯ ಚಿನ್ಮಯ ನಿಜವಿದೇ . . . ಎನುತಡಿಯ ಮೇಲೆ ಬೀಳ್ದು (ಪದ್ಮರಾ. ೬-೩೮) ; ನೀತಿಜ್ಞಂ ನಿಜನಿತ್ಯತತ್ತ್ವನಿಪುಣಂ . . . ರಾಜೇಂದ್ರಚಕ್ರೇಶ್ವರಂ (ಹಮ್ಮೀರ. ೧-೨೭). ೮. ಮೋಕ್ಷ ; ಕೈವಲ್ಯ ; ಪರಮಾರ್ಥ : ಅದುದವಿವೇಕದಲಿ ಸತ್ಪಥವೈದಿಕಾತಿಕ್ರಮಣವಿನ್ನು . . . ಈ ದುರಾಗ್ರಹ ನಿಲಲಿ ಹಾಯಿಕು ಕೈದುವನು ಸುಸಮಾಧಿಯೋಗದಲೈದು ನಿಜವನು (ಕುಸ್ಮಾದ್ರೋ. ೧೮-೫೮). ℙ ಈ ಶಬ್ದದೊಂದಿಗೆ ಬೇರೆಬೇರೆ ನಾಮಪದಗಳು ಸೇರಿ ಅನೇಕ ಸಮಾಸಪದಗಳು ಕಾವ್ಯಗಳಲ್ಲಿ ಪ್ರಯೋಗವಾಗಿವೆ.

ನಿಜ ಆಯಗಾರ = ವಂಶಪಾರಂಪರ್ಯವಾಗಿ ಸೇವೆ ಸಲ್ಲಿಸುವ ಗ್ರಾಮದ ಅಧಿಕಾರಿ : ಈ ಪಾಳಯಗಾರರ ಆಳಿಕೆಗಳಲ್ಲಿ ಗ್ರಾಮಗಳ ಬಾರಾಬಲೂತಿ ಕೆಲಸದವರಿಗೆ ಮಾನ್ಯ ಮಿರಾಸಿ ಮೊದಲಾದ ಆಗತೆಗಳನ್ನುಂಟುಮಾಡಿಕೊಟ್ಟು, ಖಂಡಿತವಾಗಿ ಸರ್ಕಾರದಿಂದ ನೇಮಕ ಮಾಡಿದ ವಿವರ ಹೇಗೆಂದರೆ :—ನಿಜ ಆಯಗಾರರು ೧. ಗೌಡ. ೧. ಶಾನುಭೋಗ. ೧. ಬಡಗಿ . . . ಆರೆ ಆಯಗಾರರು ೧. ಜೋಯಿಸ. ೧. ಕುಲಾಲ (ಕುಂಬಾರ). ೧. ನಾಪಿತ(ಕ್ಷೌರದವನು)(ಚಿತ್ರಪಾ. ೮೪ಪೋದ್ಧಾತ).[ಸಂ.]

ನಿಜಕರ್ತೃ (ನಾ).[ವ್ಯಾಕ](ಅನ್ಯಪ್ರೇರಣೆಯಿಲ್ಲದೆ) ತಾನೇ ಕರ್ತೃವಾಗಿರುವುದು ; ಸ್ವಯಂಕರ್ತೃ : ಸಂಸ್ಕೃತದಾ ಧಾತುಗನೇಕಾಕ್ಷರ ಕಿಸುಜಾತಂ ನಿಜಕರ್ತೃವೊಳ್ ಪ್ರಯೋಜನದೆಡೆಯೊಳ್ (ಶಮದ. ೨೩೧). 'ಅನ್ಯಕರ್ತೃ' ಪರಾ. [ನಿಜ+ಕರ್ತೃ]

ನಿಜಕಾಯ (ನಾ). ತನ್ನ ದೇಹ ; ಸ್ವಂತ ಶರೀರ : ನಿಜಜೀವಂ ಪರಲೋಕದೊಳ್ . . . ನಿಜಕಾಯಂ ಕುರುಭೂಮಿಯೊಳ್ ನೆಲಸೆ ಗಾಂಧಾರೀಜ ದುರ್ಯೋಧನಾನುಜ ದುಶ್ಶಾಸನ ಭೀಮಭೀಮಗದೆಯಿಂ ಪಂಚತ್ವಮಂ ಪೊರ್ದಿದ್ದೆ (ಗದಾಯು. ೫-೫). [ನಿಜ+ಕಾಯ]

ನಿಜಕೃತ್ಯ (ನಾ). ತನ್ನ ಕರ್ತವ್ಯ ; ತಾನು ಮಾಡಬೇಕಾದ ಕೆಲಸ: ನಿತ್ಯವಲ್ಲದ ದೇಹವಿದು ವಶವರ್ತಿಯಾಗಿಹುದರಿದೆನುತೆ ನಿಜಕೃತ್ಯ ಲೋಪಿಸದಂತೆ ಸನ್ಮಾರ್ಗದಲಿ ಸಂಚರಿಸಿ (ಅಕ್ರೂಚ. ೩-೪೧). [ನಿಜ+ಕೃತ್ಯ$_2$]

ನಿಜಗಲಿ (ನಾ). ಸಹಜಪರಾಕ್ರಮಿ ; ಆಜನ್ಮಶೂರ : ನಿಜಗಲಿ ನೀತಿನೈಪುಣನಪಾರರಥಾಶ್ವಪದಾತಿಕುಂಜರವ್ರಜನಖಿಳಾಯುಧಾತಿಕುಶಲಂ (ವರ್ಧಪು. ೨-೩೧) ; ಸಕಳಮಂ ತನ್ನೊಳಗಿರಿಸಿ ಮೇಣ್ ಸಕಳಮಂ ತೊಡೆದೆಸೆವ ನಿಜಗಲಿ (ಬಸಪು. ೫೧-೪೫) ; ತ್ರಿಜಗದೊಳದಟುಳ್ಳ ದೈತ್ಯನ ಮಡುಹಿದ ಭುಜಬಲನಾರು ಪೇಳೆನಲು ನಿಜಗಲಿಯಿವನೀಗ ನೋಡೆಂದು ಮಕರಧ್ವಜನ ವಿಗ್ರಹವ ತೋಱಿಸಿದ (ಮೋಹತ. ೧೩-೩೫).

[ನಿಜ+ಕಲಿ$_2$]

ನಿಜಗಾಣ್ (ಕ್ರಿ). ದಿಟವಾದುದನ್ನು ಕಾಣು,—ತಿಳಿ ; ಆತ್ಮ ಸ್ವರೂಪವನ್ನು ಕಾಣು : ಇಂದು ನಿಜಗಂಡು ಪರಮಾನಂದದ ಕಡಲೊಳಗೆ ಮುಳುಗಿ ಸವಿಯುತಿರ್ಕುಂ (ಭಸ್ಯಾಮೃ. ೧೮).

[ನಿಜ+ಕಾಣ್]

ನಿಜಗಾರ (ನಾ). ಸತ್ಯವನ್ನು ಹೇಳುವವನು ; ಸತ್ಯವಂತ : ಕೃಷ್ಣ ನೀನು ನಿಜಗಾರನೆಂದು ಲೋಕದಲ್ಲೆಲ್ಲಾ ಪ್ರಸಿದ್ಧನಾಗಿದ್ದೀಯೆ ; ಹಾಗಿದ್ದರೂ ನನ್ನ ಮೊಮ್ಮಗನ ಸಾವನ್ನೇ ಮರೆಸುವುದೇ ? (ಪಚಭಾ. ೩೬೨). [ನಿಜ+-ಗಾರ(<-ಕಾಱ)]

ನಿಜಗುಣ (ನಾ). ೧. ಹುಟ್ಟುಗುಣ ; ಸಹಜಗುಣ ; ಸ್ವಭಾವ : ಬೇಡಲು ಹುಟ್ಟಿದ ಪ್ರಾಣಿಗೆ ಬೇಡಲು ವಿಧಿಯೇ ಸೂಳೆಗೆ ಹುಟ್ಟಿದ ಪ್ರಾಣಿಗೆ ನಿಜಗುಣ ಸಜ್ಜನವಪ್ಪುದೆ (ಬಸವ. ೧೨೮) ; ನಿತ್ಯಗುಣಾರ್ಣವ ನಿಜಗುಣಪರಿಪೂರ್ಣ ಸಚ್ಚಿದಾನಂದ ಸನಕಾದಿವಂದ್ಯ (ಪುರಂದ. ೨-೩೭-೫). ೨. (ಸೃಷ್ಟಿಕರ್ತೃತ್ವಾದಿ) ಮೂಲಗುಣಗಳಿಂದ ಕೂಡಿದವನು ; ಪರತತ್ತ್ವ ; ಭಗವಂತ ; ಪರಮಾತ್ಮ : ತಾನು ತನ್ನ ನಿಜವನಱಿದರೂ ಜಾತಿಯಾಶ್ರಮಗುಣಧರ್ಮಜೀವಾದಿ ಭೇದಂಗಳೊಳಗಾದ ಮಾಯಾಮಯಂಗಳೆಂಬ ಮುನ್ನಿನ ಭ್ರಮೆಗಳ ಬಿಡಲಱಿಯದ ಬಡಮನದ ಮನುಜರೆಲ್ಲರೂ ನಿಜಗುಣನ ನಿಜಭಾವದಲೂ ನಿಲ್ಲದವಂಗೆ ನಿಜಸುಖವು ಸಾಧ್ಯವಪ್ಪುದೆ ಹೇಳಾ (ಪಚಸಂ. ೯೧-೫೮). [ನಿಜ+ಗುಣ]

ನಿಜಗುರು (ನಾ). ತನ್ನ ಗುರು,—ಆಚಾರ್ಯ : ನಿಜಗುರು ಪರೋಕ್ಷವಿನಯಮನಜಾತರಿಪು ತನ್ನ ತಮ್ಮನುಂ ತಾನುಂ ಭೂಭುಜರಱಿವಿನಂ . . . ನೆಗೞ್ದು (ಶಾಂತಿಪು. ೧-೫೦) ; ಅರಸಂ ಪ್ರಿಯರತಿಗೆ ಮೆಚ್ಚುಗೊಟ್ಟು ಸುರಗಿರಿಗೆ ನಿಜಗುರುವಂದನಾರ್ಥದಿಂ ಬರುತ್ತುಂ (ಚಾವುಂಪು. ೭೩) ; ನಿಜಗುರು ದೀಕ್ಷೆಯಂ ತಳೆಯೆ (ನೇಮಿಪು. ೫-೮) ; ಶ್ರೀವಿಜಯಜಿನಾಲಯ[ಂ] ಕಾಲದಿಂ ಜೀರ್ಣ್ಣಮಾ[ದೊಳು] ನಿಜಗುರೂಪದೇಶದಿಂ ಪೊಸತಾಗೆ ಮಾಡಿಸಿ (ಸೌಇಇ. XX, ೨೦೫-೩೩ ; 1247). [ನಿಜ+ಗುರು$_2$]

ನಿಜಗೃಹ (ನಾ). ತನ್ನ ಮನೆ ; ಸ್ವಂತ ಮನೆ ; ಸ್ವಗೃಹ : ಮಡಿವಾಳಯ್ಯಗಳಿಗೆ ನಮಸ್ಕರಿಸಿ ಹೊಣೆಯ ಕೊಂಡು ತನ್ನ ಲಿಂಗ ಸಹಿತ ಬೀಳ್ಕೊಂಡು ನಿಜಗೃಹಕ್ಕೆ ಬಂದು ಆ ಲಿಂಗದ ಕಯ್ಯಲ್ಲಿ ಕಾಯಕವ ಮಾಡಿಸಿ (ಶೂನ್ಯಸಂ. ೨೯೩-೧೪). [ನಿಜ+ಗೃಹ]

ನಿಜಗೆಂಪು (ನಾ). ೧. ಸ್ವಾಭಾವಿಕವಾಗಿ ಇರುವ ಕೆಂಪುಬಣ್ಣ ; ಸಹಜವಾದ ಕೆಂಪು : ವರಪಶ್ಚಿಮಾಂಗನೆ ರಮಣನೈತರುತಿರೆ ಮಜ್ಜನ ಮಾಡಿ ಅರುಣ[ವರ್ಣದ] ಪೊಂಬಟ್ಟೆಯನುಟ್ಟಂತೆ ಪರಿಶೋಭಿಸಿತು ನಿಜಗೆಂಪು (ಕಂನವಿ. ೨೩-೬೦). ೨. ಸಹಜವಾದ ಕೆಂಪುಬಣ್ಣವುಳ್ಳುದು : ತಂಗಿ ನಿನ ಮೈಯು ನಿಜಗೆಂಪು (ನಾಪದ. ೭೫).

[ನಿಜ+ಕೆಂಪು$_1$]

ನಿಜಗೋತ್ರ (ನಾ). ತಾನು ಹುಟ್ಟಿದ ಗೋತ್ರ,—ಕುಲ,—ವಂಶ.

ನಿಜಗೋತ್ರದೀಪಕ = ತನ್ನ ಮನೆತನವನ್ನು ಬೆಳಗುವವನು ; ಕುಲದೀಪಕ : ಕಳಂಬಲದ ಸಲೆ ಕಟ್ಟರೆಂಬುದಾಗದು[ಮೆ]ಸಿಡಿವ ಮನ್ನಣೆಯ ಬೆಳ್ಳಿಯ ಬಟ್ಟಲ ತಂಬುಲಂ ಜಯಂಗೊಂ × ಪಡೆದಂ ಕದಂಬಕುಳಭೂಷಣನೊಳ್ ನಿಜಗೋತ್ರದೀಪಕಂ (ಸೌಇಇ. XX, ೩೧-೧೦ ; 1044). [ನಿಜ+ಗೋತ್ರ$_2$]

ನಿಜಚರ್ಮ (ನಾ). ಮೇಲಿನ ಚರ್ಮದ ಅಡಿಭಾಗದಲ್ಲಿರುವ ಚರ್ಮ ; ಒಳಚರ್ಮ : (ಹೊರಚರ್ಮದ ಅಡಿಯಲ್ಲಿರುವ) ನಿಜಚರ್ಮ (Cutis, ಇಂಕನಿ). [ನಿಜ+ಚರ್ಮ]

ನಿಜಜನನಿ (ನಾ). ತನ್ನ ತಾಯಿ, — ಮಾತೆ : ಕುಳವಣಿಜನೆಂಬೊಂ . . . ನಿಜಜನನಿ ತನಗಱಿಪೆ ತಮ್ಮಯ್ಯನಲ್ಲಿಗೆ ಪೋಗಿ ಪೊಡೆವಡುವಂದುಂ (ಚಾವುಂಪು. ೩೯೮) ; ಧರೆಯೊಳಗಡವಿಪಾಲಾಗೆಂದು ಪಡೆದಳೊ ತನ್ನ ನಿಜಜನನಿ (ನಳಚ. ೫-೨೫). [ನಿಜ + ಜನನಿ$_1$]

ನಿಜಜೀವ (ನಾ). ತನ್ನ ಜೀವ, — ಪ್ರಾಣ : ನಿಜಜೀವಂ ಪರಲೋಕದೊಳ್ನಿಜಮಹಾಪಾಂಸಂ ಪಿಶಾಚಾಸ್ಯದೊಳ್ . . . ನಿಜಶಿರಂ ನಕ್ತಂಚರೀಹಸ್ತದೊಳ್ (ಗದಾಯು. ೫-೫). [ನಿಜ + ಜೀವ]

ನಿಜಜ್ಞಾನ (ನಾ). ಸ್ವಸ್ವರೂಪಜ್ಞಾನ : 'ನಿಜಜ್ಞಾನಮೂರ್ತಿ' ಪರಾ. [ನಿಜ + ಜ್ಞಾನ]

ನಿಜಜ್ಞಾನಮೂರ್ತಿ (ನಾ). ಜ್ಞಾನಸ್ವರೂಪನಾದವನು ; ಸತ್ಯಸ್ವರೂಪಿ ; ಪರಮಾತ್ಮ : ಜ್ಞಾನ ಸುಜ್ಞಾನ ಮಹಾಜ್ಞಾನ ಎಂಬ ವೃತ್ತಿಜ್ಞಾನಂಗಳು ಇಲ್ಲದಂದು ಅಖಂಡ ಪರಿಪೂರ್ಣ ಅದ್ವಯ ನಿಷ್ಕಲ ನಿಜಜ್ಞಾನಮೂರ್ತಿ ನೀನೆಯಯ್ಯ (ಸಿದ್ಧೇಪ. ೮-೨೬).

[ನಿಜಜ್ಞಾನ + ಮೂರ್ತಿ]

ನಿಜತನಯ (ನಾ). = ನಿಜಸುತ : ನಿಜತನಯರಾಲಿಂಗಿಸಿದರಂಗನೆಯ (ನಳಚ. ೭-೪೨). [ನಿಜ + ತನಯ]

ನಿಜತನು (ನಾ). ತನ್ನ ದೇಹ, — ಶರೀರ : ತಾರಾಪತಿವಕ್ಕೀರ್ತಿ ವಿಹಾರಾ[ಹಾರ]ಪ್ರಭಯಾ ನಿಜತನುಪೂರಾ ಪೂರಾಶ್ರಿತ ಹೃತ್ಕ್ಲೇಶ ವಿದೂರಾ (ಕವಿರಾ. ೨-೨೩೫). [ನಿಜ + ತನು]

ನಿಜತನೂಭವ (ನಾ). ತನ್ನ ಮಗ ; ಸ್ವಂತ ಮಗ : ನಿಜತನೂಭವರೈಸಾಸಿರ್ವರ್ ಪದಿನಾಱುಸಾಸಿರ್ವರ್ ಮಕುಟಬದ್ಧರ್ . . . ಬೆರಸಾಗಳ್ ವಜ್ರನಾಭಿ ನಿಜದ ರೂಪುಮಂ ನಿರ್ಗ್ರಂಥರೂಪುಮಂ ಕೈಕೊಂಡು ನೆಗಟ್ದಿನಿಂತೀ ಮಾಟ್ಕೆಯಿಂ (ಅದಿಪು. ೬-೨೭).

[ನಿಜ + ತನೂಭವ]

ನಿಜತರುಣಿ (ನಾ). ತನ್ನ ಯುವತಿ, — ಪತ್ನಿ : ನಿಷಧಪತಿ ನಿಜತರುಣಿಸುತರೊಡಗೂಡಿ ಮಂಗಳಕರದೊಳೊಪ್ಪಿದ ಸಕಲದೇವಾಮರರು ನಲಿದಾಡೆ (ನಳಚ. ೯-೬೩). [ನಿಜ + ತರುಣಿ]

ನಿಜತೇಜ (ನಾ). ತನ್ನ ಪ್ರಕಾಶ, — ಕಾಂತಿ : ನಿಜತೇಜಂ ಪೊಱಗಾಗೆ ಸೈರಿಪನೆ ರಾಮಸ್ವಾಮಿಯೆಂಬಂತೆ ನೀರಜಮಿತ್ರಪ್ರಭೆಯಂ ಪಳಂಚಲೆದು (ಪಂಚಾಮಾ. ೧೩-೩೪). [ನಿಜ + ತೇಜ$_1$]

ನಿಜತ್ವ (ನಾ). ಯಥಾರ್ಥತೆ ; ಸ್ವಂತತನ ; ವಸ್ತುಸ್ಥಿತಿ : ಬಹಳ ಕಾಲ ಜನರ ಸ್ಮೃತಿಯಿಂದ ಮಾಯವಾಗಿದ್ದ ಈ ಅಮೂಲ್ಯಗ್ರಂಥ ೧೯೦೯ರಲ್ಲಿ ಸಿಕ್ಕಿ ಅದರ ಕಾಲ ಮತ್ತು ನಿಜತ್ವ ಕರ್ತೃತ್ವಗಳ ಬಗ್ಗೆ ದೀರ್ಘವಾದ ಮತ್ತು ಬಹುಮುಖವಾದ ವಾದವಿವಾದಗಳಿಗೆ ಗುರಿಯಾಯಿತು (ತತ್ವಪ್ರಾ. ೧೦೮). [ಸಂ.]

ನಿಜದಾತಾರ (ನಾ). ತನಗೆ ಕೊಡುವವನು ; ತನ್ನ ಪೋಷಕ : ಜಜ್ಜಾರ ಮಾಸಾಳುಗಳು ನಿಜದಾತಾರನವಸರಕೊದಗಿ ಹಣವಿನ ಋಣನ ನೀಡಿದರು (ಕುಸ್ಯಾದ್ರೋ. ೧-೫೦). [ನಿಜ + ದಾತಾರ$_1$]

ನಿಜದೋರು (ಕ್ರಿ). ಸ್ವರೂಪವನ್ನು ಕಾಣಿಸು ; ಪ್ರತ್ಯಕ್ಷವಾಗು : ಲಿಂಗಾರ್ಚನಂಗೆಯ್ಯೆ ಕರದಿಷ್ಟಲಿಂಗದೊಳಗೀಶ ನಿಜದೋರಿಯವ ಕುರಿತ ಇಷ್ಟಾರ್ಥಮಂ ಸಲಿಸಿ (ನಸಮೋ. ೨೦-೧೯).

[ನಿಜ + ತೋರು (< ತೋಱು)]

ನಿಜಧಾರುಣಿ (ನಾ). ತನ್ನ ಭೂಮಿ, — ರಾಜ್ಯ ; ಸ್ವಂತ ರಾಜ್ಯ : ಸೈರಿಸುವನೆಲೆ ಅಣ್ಣ ಧರ್ಮಕುಮಾರಕನು . . . ಕೊಡು ನಿಜಧಾರುಣಿಯೊಳರ್ಧವನು ಪಾಂಡುಕುಮಾರರಂಗೆಂದ (ಸಿಭಾಗ. ೩-೧-೮). [ನಿಜ + ಧಾರುಣಿ]

ನಿಜನಾಥ (ನಾ). ತನ್ನ ಅಧಿಪತಿ, — ಅರಸು : ಅತನುಂ ಗಗನಗಮನನಾಗಿ ವಿವಿಧ ನದನದೀನಗನಗರಜನಪದಾಸ್ಪದಂ ನಿಜನಾಥಪುರವರಮನೆಯ್ದಿ (ಶಾಂತಿಪು. ೫-೩೬ ವ). [ನಿಜ + ನಾಥ]

ನಿಜನಾಮ (ನಾ). ತನ್ನ ಹೆಸರು ; ಸ್ವಂತ ನಾಮ : ಬರೆಯಿಸಿದಂ . . . ವೃಷಭಾಚಲದೊಳ್ ಭರತಂ ನಿಜನಾಮಮನೆನೆ ಪರಿಹಸಿತಂ ಬುಧಜನಕ್ಕದಲ್ಲದೆ ಪೆಱತೇಂ (ಅದಿಪು. ೧೪-೭೩). [ನಿಜ + ನಾಮ]

ನಿಜನಿವಾಸ (ನಾ). ತನ್ನ ವಾಸಸ್ಥಳ, — ಮನೆ ; ಸ್ವಂತಸ್ಥಳ : ಮೂರ್ಛೆ ಪೋದ ದುರ್ಯೋಧನನನಶ್ವತ್ಥಾಮಕೃಪಕೃತವರ್ಮಶಕುನಿಯರ್ ನಿಜನಿವಾಸಕ್ಕೊಡಗೊಂಡು ಪೋದರ್ (ಸಂಪಭಾ. ೧೨-೨೨೦ ವ) ; ಧರಣೀಂದ್ರಂ ವಿದ್ಯುದ್ದಂಷ್ಟ್ರನಂ ಸಂತೋಷಂಬಡಿಸಿ ನಿಜನಿವಾಸಕ್ಕೆ ಪೋದಂ (ಚಾವುಂಪು. ೧೬೨) ; ತನ್ನ ಮುನ್ನಿನ ಸಿಂಹಸಂಹನನಮನಾ ಸಿಂಹಸನ್ನನಂ ದಿವ್ಯದ್ರವ್ಯಂಗಳಿಂ ಸಂಸ್ಕಾರಿಸಿ ಧರ್ಮಪ್ರಭಾವಮಂ ದಿವಿಜಲೋಕಕ್ಕೆ ಮೆಱೆಯುತ್ತಂ ನಿಜನಿವಾಸಕ್ಕೆ ವಂದು (ವರ್ಧಮಾ. ೬-೪೬ ವ). [ನಿಜ + ನಿವಾಸ]

ನಿಜನಿವಾಸಿ (ನಾ). [ವೀಶೈ] ಸ್ವಸ್ವರೂಪದಲ್ಲಿ ನೆಲೆಯಾದವನು ; ಶಿವೈಕ್ಯನಾದವನು : ಬಸವಪ್ರಿಯ ಕೂಡಲಚೆನ್ನಸಂಗಮದೇವರಲ್ಲಿ ನಿಜನಿವಾಸಿಯಾಗಿರ್ದೆನು (ಶೂನ್ಯಸಂ. ೪೪೧-೬೯). [ಸಂ. ನಿಜನಿವಾಸಿನ್]

ನಿಜಪ (ನಾ). ಒಬ್ಬಾತನ ಹೆಸರು : ಮಹಾಬಲಿ ವಂಶ ನಿಜಪನ ಮಗ ಅಣ್ಣಿಗ ಇರ್ಬ್ಬರರಸುಗಳಲ್ಲಿ ಪಡೆದು (ಎಕ. IX, ಬೆಂಗಳೂ. ೪೦-೫ ; ಸು. 820). [ನಿಜ + ಅಪ (< ಅಪ್ಪ$_1$)]

ನಿಜಪತಿ (ನಾ). ೧. ತನ್ನ ಒಡೆಯ, — ಅಧಿಪತಿ : ನೇಸರ್ಪಡುವಿನ ಮಿರ್ದು ನಿಜಪತಿಯಂ ಬೀಟ್ಕೊಂಡು ಪಯಣಂಬೋಗಿ ಹಸ್ತಿನಾಪುರಮಂ ಪೊಕ್ಕು . . . ಬೀಡಂ ಮಂಜಿಱುವಂತಿರುಳೊಳಿಱುದನಶ್ವತ್ಥಾಮಂ (ಗದಾಯು. ೯-೩೨). ೨. ತನ್ನ ಪತಿ, — ಗಂಡ : ಪರಪುರುಷಸೇವನಾಕೃತಸುರತವಿಕಾರಂಗಳೆಲ್ಲಮಂ ನಿಜಪತಿಯೊಳ್ ನೆರೆದಾಗಳೆ ಮಱೆಯಲ್ಪಗೆದಿರವದು ನಗಿಸಿತ್ತು (ಕವಿರಾ. ೩-೧೯೬) ; ವಸುಪೂಜ್ಯನೃಪತಿಯ (ವಿ)ಜಯಾವತೀದೇವಿ . . . ಷೋಡಶಸ್ವಪ್ನಂಗಳಂ ಕಂಡು ತತ್ಫಲಗಳಂ ನಿಜಪತಿಯಿಂದಱಿದು . . . ಸಂತೋಷಂಬಟ್ಟಿರ್ಪಿನಂ (ಚಾವುಂಪು. ೧೪೫) ; ತಮದ ರಾಹುಗ್ರಹವು ಸೋಂಕಿದ ದ್ಯುಮಣಿಯಂತಿರೆ ಕಂಡು ಧೈರ್ಯದಿ ಕಮಲಮುಖಿ ಕೈಮುಗಿದು ಬಿನ್ನೈಸಿದಳು ನಿಜಪತಿಗೆ (ನಳಚ. ೪-೩೫).

[ನಿಜ + ಪತಿ$_2$]

ನಿಜಪಥ (ನಾ). ೧. ಸತ್ಯವಾದ ದಾರಿ ; ನಿಜವಾದ ಮಾರ್ಗ ; ಮೋಕ್ಷಮಾರ್ಗ. ೨. ಮೋಕ್ಷ ; ಕೈವಲ್ಯ : ಕರಣಮಥನಕರ್ಕಶದಿಂದೆ ಹೋರುವವರು ಸಲ್ಲರೆಂಬೆನಯ್ಯ ನಿಜಪಥಕ್ಕೆ (ಅಖಂಡೇ. ೧೩೧-೧೦೨). [ನಿಜ + ಪಥ]

ನಿಜಪದ (ನಾ). ಶಾಶ್ವತವಾದ ಪದವಿ ; ಮೋಕ್ಷ : ಎನ್ನ ಮನ ಸಂಗನ ಬಸವಣ್ಣನ ನಿಜಪದವ ಬೆರಸಿತ್ತು (ಶೂನ್ಯಸಂ. ೪೪೧-೬೪) ; ಎಲ್ಲಾ ಕ್ರೀಗಳನು ಜಂಗಮದಾಸೋಹದಲ್ಲಿಯೇ ತಿಳಿದು ಅಲ್ಲಿಯೇ ಮನ ಮಗ್ನವಾಗಿ ಅದೇ ತನ್ನ ನಿಜಪದವಾಗಿರುತ್ತಂ (ವಚಸಂ. ೨೫೭-೪೩) ; ನಾರಾಯಣನೆಂಬ ನಿಜಪದವಱಿಯದೆ ಹೋರಾಡುವೆ ಹಗಲಿರುಳೆಂದೆನ್ನದೆ (ಪುರಂದ. ೩-೧೯೦ ಪಲ್ಲವಿ) ; ಸದ್ಧರ್ಮಂಗಳಂ ಮಾಡಿ ನಿಜಪದವ ಪಡೆದ ರೊಲವಿಂ (ಪ್ರೌಢರಾ. ೮ ಸೂಚನೆ). [ನಿಜ + ಪದ$_2$]

ನಿಜಪಾಯದಳ (ನಾ). ತನ್ನ ಸೈನ್ಯ, — ದಳ : ಎಲೆಲೆ ಕಟಕಾಚಾರ್ಯನಕಟಾ ಕೊಳುಗುಳದೊಳಪದೆಸೆಯ ಕಂಡನೊ ಗೆಲಿದನೋ ರಿಪುವೆಂದುಲಿಯೆ ನಿಜಪಾಯದಳವಂದು (ಕುಸ್ಯಾದ್ರೋ. ೧೩-೧೬).

[ನಿಜ + ಪಾಯದಳ]

ನಿಜಪಾಳಯ (ನಾ). ತನ್ನ ಪಾಳೆಯ ; ಸ್ವಂತ ಶಿಬಿರ : ತೆಗೆದವು ಬಲವೆರಡು ನಿಜಪಾಳಯಂಗಳಿಗೆ (ಕುಪ್ಯಾದ್ರೋ. ೨-೧) ; ಸಮಸಪ್ತಕರ ಬಲ ನಿಜಪಾಳಯಕೆ ತಿರುಗಿದುದು ತೀರಿತು ತರಣಿಯಾಟೋಪ (ಕುಪ್ಯಾದ್ರೋ. ೮-೧). [ನಿಜ + ಪಾಳಯ(<ಪಾಳೆಯ)]

ನಿಜಪುತ್ರ (ನಾ). ತನ್ನ ಮಗ ; ಸ್ವಂತ ಮಗ : ನಿಜಪುತ್ರಂ ಜಿತಶತ್ರುಗಪ್ರತಿಮಮಂ ಸಾಮ್ರಾಜ್ಯಮಂ ಕೊಟ್ಟು . . . ಮುಕ್ತ್ಯಂಗನಾ ಭುಜಪಾಶಕ್ಕೊಳಗಾಗಿ ಪೀರ್ದನೊಲವಿಂ ತದ್ವಕ್ತ್ರಪೀಯೂಷಮಂ (ಪಂರಾಮಾ. ೧೦-೭೨). [ನಿಜ + ಪುತ್ರ]

ನಿಜಪುರ (ನಾ). ತನ್ನ ಊರು,—ಸ್ಥಳ : ಕಾಳಿದಾಸಂಗೆ ಕಣ್ಣನಿತ್ತೆ ಓಹಿಲಯ್ಯನ ನಿಜಪುರಕ್ಕೊಯ್ದೆ . . . ಎನ್ನನೇಕೆ ಒಲ್ಲೆಯಯ್ಯಾ (ಬಸವ. ೫೧೭). [ನಿಜ + ಪುರ$_2$]

ನಿಜಪುರುಳ್ (ನಾ). ಸತ್ಯಾರ್ಥ ; ಒಳತತ್ವ : ಅಱಿಯದವನ್ ನಿಜಪುರುಳ್ಗಂಡವೋಲಾರಯ್ವೊಡರುಳದವನ್ ಗೆಯ್ವ ಅಱಂ (ಕುಱಿಳ್. ೧-೨೫-೯). [ನಿಜ + ಪುರುಳ್$_2$]

ನಿಜಪ್ರಿಯ (ನಾ). ತನ್ನ ಸ್ನೇಹಿತ,—ಆಪ್ತ : ತನ್ನ ಮೆಯ್ಯೊಳ್ ಬಲನೆನಿಪ್ಪರಸು ವಿಶ್ವಾಸದಿನ್ನಿಜಮೆನಿಪ್ಪ ಪೆರ್ಗಡೆ ನೆಗೞ್ತಿಯ ಸಂಭ್ರಮೋನ್ನತದ ಜನಪದಂ ಜಲಶಿಲಾಧಾರವಹ ಸರ್ವಸಂಗ್ರಹದ ದುರ್ಗಂ ರನ್ನ ಹೇಮಾದಿ ಭಂಡಾರಂ ಮಹಾವೀರಸೈನ್ಯಂ ನಿಜಪ್ರಿಯಂ ಕೂಡಿ ಸಪ್ತಾಂಗ ಸಂಪನ್ನನೆನಿಸುವ ರಾಜನಕ್ಕುಂ (ಸುಂಗರಾ. ೮೦-೧೦). [ನಿಜ + ಪ್ರಿಯ]

ನಿಜಬಲ (ನಾ). ತನ್ನ ಸೈನ್ಯ,—ದಳ : ಪುಷ್ಕರ ಭರದಿ ಕೋಪದೊಳಂದು ಕರೆಸಿದನಾಗ ನಿಜಬಲವ (ನಳಚ. ೯-೩೫). [ನಿಜ + ಬಲ$_2$]

ನಿಜಬಿಂದು (ನಾ). [ವ್ಯಾಕ] ಸ್ವಾಭಾವಿಕವಾಗಿ ಅನುಸ್ವಾರದಿಂದೊಡಗೂಡಿರುವ ಶಬ್ದ ; ನಿತ್ಯಬಿಂದುವಾದ ಶಬ್ದ : ಕೆಲವು ನಿಜಬಿಂದುಗಳ್ ಕೆಲಕೆಲವು ವಿಕಲ್ಪಾರ್ಥಬಿಂದುಗಳ್ ದ್ವಿತ್ವಂಗಳ್ (ಶಮದ. ೩೬). 'ನಿತ್ಯಬಿಂದು' ಪರಾ. [ನಿಜ + ಬಿಂದು]

ನಿಜಬೋಧೆ (ನಾ). ಆತ್ಮವಿಚಾರವಾದ ಉಪದೇಶ,—ಬೋಧನೆ : ಮೃದುತರಭಾವರೋಳ್ ಕಲಹಮಂ ಸಲೆ ವರ್ಧಿಸಿ ರೋಷವಾಂತು ನಾಂ ಮದಿಸಿದೆನಯ್ಯಾ ಕಾಯೊ ನಿಜಬೋಧೆಯನಿತ್ತು (ಅಮಶ. ೩೯).

[ನಿಜ + ಬೋಧೆ]

ನಿಜಬ್ಬೆ (ನಾ). ಒಬ್ಬಾಕೆಯ ಹೆಸರು : ಎಳೆಯ ಬಸವಂಗೆ ಒನ್ದು ಮತ್ತಲ್ ಕೆಯ್ಯಂ ನಾಗಾರ್ಜುನಯ್ಯನುಂ ನಿಜಬ್ಬೆಯುಂ ಪೆಱಗೆ ನಡೆಯಿಸುವರ್ (ಎಕ. VII, ಶಿಕಾರಿ. ೨೨೦-೨೦ ; 1015). [ನಿಜ + ಅಬ್ಬೆ$_1$]

ನಿಜಭಕ್ತಿ (ನಾ). ಸಟೆಯಿಲ್ಲದ ಭಕ್ತಿ ; ದಿಟಭಕ್ತಿ : ಸಹಜಗುಣವೆನ್ನಲ್ಲಿಲ್ಲಯ್ಯಾ ನಿಜಭಕ್ತಿಯೆನಗಿಲ್ಲ ತಂದೇ (ಬಸವ. ೨೮೬).

[ನಿಜ + ಭಕ್ತಿ]

ನಿಜಭಗಿನಿ (ನಾ). ತನ್ನ ಒಡಹುಟ್ಟಿದವಳು ; ಸ್ವಂತ ಸಹೋದರಿ : ನಿಜಭಗಿನಿಯನುಂದರಿಯಂ ಗಜಗಮನೆಯನಂದು ಕಾರ್ಮುಕಾಚಾರ್ಯಂಗಾ ವಿಜಿತರಿಪುವೀಯೆ (ನೇಮಿಪು. ೯-೧೪). [ನಿಜ + ಭಗಿನಿ]

ನಿಜಭಾವ (ನಾ). ಸಹಜವಾದ ಭಾವನೆ ; ಸ್ವಾಭಾವಿಕವಾದ ಭಾವ : ಮಾಯಾಮಯಂಗಳೆಂಬ ಮುನ್ನಿನ ಭ್ರಮೆಗಳ ಬಿಡಲಱಿಯದ ಬಡಮನದ ಮನುಜರೆಲ್ಲರೂ ನಿಜಗುಣನ ನಿಜಭಾವದಲೂ ನಿಲ್ಲದವಂಗೆ ನಿಜಸುಖವು ಸಾಧ್ಯವಪ್ಪುದೆ ಹೇಳಾ (ಪಚಸಂ. ೯೧-೫೮) ; ನಿಜಭಾವ ಲಕ್ಷ್ಮಿ ಸರಸ್ವತಿ ಒಲಿದಡೆ ಕುಲವನಱಸಲದೇಕೆ (ಬಸವ. ೬೦೨). [ನಿಜ + ಭಾವ$_2$]

ನಿಜಭುಜಗರ್ವ (ನಾ). ತನ್ನ ತೋಳ್ಬಲದ ಬಗೆಗಿರುವ ಹೆಮ್ಮೆ,—ಜಂಭ : ನಿಜಭುಜಗರ್ವದಿಂ ಮಕುಟಬದ್ಧರನಷ್ಟಸಹಸ್ರಮಂ ಕ್ರಮಾಂಬುಜನತರಾಗೆ ಮಾಡಿ (ನೇಮಿಪು. ೨-೧೫). [ನಿಜ + ಭುಜ + ಗರ್ವ]

ನಿಜಭುಜಚಕ್ರವರ್ತಿ (ನಾ). ಸ್ವಂತ ಶೌರ್ಯದಿಂದ ಚಕ್ರವರ್ತಿಯಾಗಿರುವವನು ; ಒಂದು ಬಿರುದು : ಆತನ ಮಗಂ ನಿಜಭುಜಚಕ್ರವರ್ತ್ತಿ ನೂರ್ಮ್ಮಡಿತೈಲನ್ (ಸೌಇಇ. XX, ೧೯-೨೦ ; 1015).

[ನಿಜ + ಭುಜ + ಚಕ್ರವರ್ತಿ]

ನಿಜಮಂಡಲ (ನಾ). ಸ್ವಂತ ಪ್ರದೇಶ ; ಸ್ವದೇಶ : ಚರಗೃಹಮಷ್ಟಮಮಾಗಿರೆ [ಪರ]ಮಂಡಲದೊಳ್ ಸ್ಥಿರಾಲಯಂ ತದ್ಗೃಹಮಾಗಿರೆ ನಿಜಮಂಡಲದೊಳ್ . . . ಮಡಿಗುಂ (ಜಾತತಿ. ೨೩-೩). 'ಪರಮಂಡಲ' ಪರಾ. [ನಿಜ + ಮಂಡಲ]

ನಿಜಮಂದಿರ (ನಾ). = ನಿಜಾಲಯ : ಹರೆದುದೋಲಗವಲ್ಲಿ ನಿಜಮಂದಿರಕೆ ಬಂದಾಲೋಚಿಸುತ ಮಿಗೆ ತರುಣಿಯರ ಕಳುಹಿಸಲು ಬಂದರು ಬಾಣಸಿನ ಮನೆಗೆ (ನಳಚ. ೮-೪೫). [ನಿಜ + ಮಂದಿರ$_2$]

ನಿಜಮತ (ನಾ). ತನ್ನ ಅಭಿಪ್ರಾಯ ; ಸ್ವಂತ ಅಭಿಪ್ರಾಯ : ನಿಜಮತಮನೆನಗೆ ಮಿಾಱಲ್ಕಜಾತ ದೊರೆಯಲ್ಲವಲ್ಲದಿರ್ದೊಡಮೆನ್ನಿಂ[ದ] ಜನಿಸಿ ನುಡಿಯಿಸಿದುವಹಿಧ್ವಜನೋವದೆ ಮುನ್ನೆ ನೆಗೞ್ದ ದುಶ್ಚರಿತಂಗಳ್ (ಪಂಪಭಾ. ೯-೨೧) ; ದನುಜರದ್ಭುತತಪವ ಮಾಡಿದರನಿಮಿಷಾವಳಿ ಬೇಂಟೆಯಾಡಲು ನೆನೆದು ಬಿನ್ನೈಸಿದರು ಕಮಲಭವಂಗೆ ನಿಜಮತವ (ಕುಪ್ಯಾಕ. ೬-೪). [ನಿಜ + ಮತ]

ನಿಜಮಹಿಮ (ನಾ). ನಿಜವಾದ ಮಹಿಮೆಯುಳ್ಳವನು ; ಸತ್ಯವಾದ ಪ್ರಭಾವವುಳ್ಳ ವ್ಯಕ್ತಿ : ಪರಧನಕಾತವರೆ ನಿಜಮಹಿಮರಾದೊಡೆಯಾತರದು ಊಚತ್ವ ನೀಚವು ಬಗೆದು ನೋಳ್ಪರಿಗೆ (ಬಿಜ್ಜಪು.೧೦೮-೭೬). 'ಘನಮಹಿಮ' ಪರಾ. [ನಿಜ + ಮಹಿಮ]

ನಿಜಮಾರ್ಗ (ನಾ). ೧. ಸತ್ಯವಾದುದನ್ನು ಅರಿಯುವ ದಾರಿ,—ಮಾರ್ಗ ; ಮೋಕ್ಷಮಾರ್ಗ : ನಿಜಮಾರ್ಗಂ ನಿಜಮಾರ್ಗಬೋಧಿತಲಸಜ್ಜೀವಸ್ವರೂಪಂ ದಲಾ ನಿಜಮಂ ಮಾನಿಜನಂಗಳಲ್ಲದವರೋವಂತಿರ್ದುದಿಂ ತೀರ್ದುದೆಂದು ಜಡವ್ಯಾಕೃತಿಯಿಂ ಗಡಂ ಗಟಿಪುವರ್ (ವರ್ಧಪು. ೧೬-೮೧). ೨. ಸರಿಯಾದ ರೀತಿ,—ಕ್ರಮ ; ಯೋಗ್ಯಮಾರ್ಗ. [ನಿಜ + ಮಾರ್ಗ]

ನಿಜಮುಕ್ತ (ನಾ). ಶಾಶ್ವತವಾದ ಮುಕ್ತಿಯನ್ನು ಪಡೆದವನು ; ನಿತ್ಯಮುಕ್ತ : ಶಿವಶರಣನಾಗಿ ಭವಮರಣಗಳ ನೆರೆ ನೀಗಿ ಶಿವಲಿಂಗವನು ಧರಿಸಿಕೊಂಡು ನಿಜಜಂಗಮಕೆ ಶಿವಭಕ್ತನಾಗಿ ನಿಜಮುಕ್ತನೆನಿಸಿದ ಪರಿಯ ಜಡಮರ್ತ್ಯರೆತ್ತರಿವರು (ಮೈಲಾರ. ೩೧-೨೬). [ನಿಜ + ಮುಕ್ತ]

ನಿಜಮೋಹರ (ನಾ). ತನ್ನ ಸೈನ್ಯ,—ದಳ : ಕರಸಿ ಧೃಷ್ಟದ್ಯುಮ್ನ ನಿಜಮೋಹರವ ರಚಿಸಿದನು (ಕುಪ್ಯಾದ್ರೋ. ೨-೨೪).

[ನಿಜ + ಮೋಹರ$_1$]

ನಿಜಮ್ಮ (ನಾ). ಒಬ್ಬಾತನ ಹೆಸರು : ಸ್ವಸ್ತಿ ಶ್ರೀ ನಿಜಮ್ಮನೆ ಪದೆದರಿಯ ಪಳ್ಳಕ್ಕೆ ವೆಳೆಯೆಳ್ದು ಸತ್ತಂ (ಎಕ. V, ಮಂಜರಾ. ೨೮-೫; 1000 ?).

[ನಿಜ + ಅಮ್ಮ$_1$]

ನಿಜರಕ್ತ (ನಾ). ತನ್ನ (ದೇಹದ) ರಕ್ತ : ನಿಜರಕ್ತಂ ರಿಪುಕುಕ್ಷಿಯೊಳ್ ನಿಜಶಿರಂ ಸಕ್ತಂಚರೀಹಸ್ತದೊಳ್ . . . ನೆಲಸೆ ಗಾಂಧಾರೀಜ ದುರ್ಯೋಧನಾನುಜ ದುಶ್ಶಾಸನ ಭೀಮಭೀಮಗದೆಯಿಂ ಪಂಚತ್ವಮಂ ಪೊರ್ದಿದಯ್ (ಗದಾಯು. ೫-೫). [ನಿಜ + ರಕ್ತ]

ನಿಜರವ (ನಾ). ಒಬ್ಬಾತನ ಹೆಸರು : ಸ್ವಸ್ತಿಶ್ರೀ ನಿಜರವನ ಮಗ ಮ್ಮಣ್ಗಪರಸರಟಿಯ ತುಟುಗೋಳೂರಟಿಯನೊಳೆಟಪದೆ ಪರಿಯಾಟ್ಟು × × ಸತ್ತ (ಎಕ. XII, ತುಮಕೂ. ೬೯-೧ ; ಸು. 900 ?). [?]

ನಿಜರಿಪು (ನಾ). ತನ್ನ ಶತ್ರು,—ಹಗೆ : ಮರುದಾತ್ಮಜ ನಿಜರಿಪು ತಲೆಗರೆದರ್ದಪನಲ್ಲಿ ನೋಡು ಕೊಳದೊಳಗೆಂಬಂತಿರೆ ಪೊಳೆದು ತೋರ್ಪ

ಜಲಚರಪರಿಕರಮಱಿಪಿದುವು ತಾಮೆ ದುರ್ಯೋಧನನಂ (ಗದಾಯು. ೬-೪೬). [ನಿಜ+ರಿಪು]

ನಿಜರೂಪ (ನಾ). ತನ್ನ ಸ್ವರೂಪ,—ಸೌಂದರ್ಯ : ನಿಜರೂಪವಿಜಿತ ಮಕರಧ್ವಜನಖಿಳದಿಶಾಂತರಪ್ರತಿಷ್ಠಿತಕೀರ್ತಿ (ಚಂದ್ರಪು. ೬-೬); ತರುಣೇಂದು ಸುರನದಿ ಜಟಾಮಕುಟ[ವ]ಸಮಾಕ್ಷವುರಗಕುಂಡಲವೈದುವದನ ವೀರೈದು ತೋಳ್ ಗರಳಗಳವಿಭಚರ್ಮವೆಡದ ಗಿರಿಸುತೆವೆರಸಿ ತೋಱುದಂ ನಿಜರೂಪನು (ಸಿದ್ಧರಾ. ೨-೬೯). [ನಿಜ+ರೂಪ]

ನಿಜಲಕ್ಷ್ಮಿ (ನಾ). ತನ್ನ ಸಂಪತ್ತು,—ಐಶ್ವರ್ಯ : ರಾಜನಮಿತ ತೇಜಂ ವಲಮೆಂಬಿನೆಗಂ ಶ್ರೀವಿಜಯಂ ಮೈದುನಂಗೆ ನಿಜಲಕ್ಷ್ಮಿಯಂ ನಿವೇದಿಸಿ ನೆಗಟ್ಟಂ (ಶಾಂತಿಪು. ೫-೮೦). [ನಿಜ+ಲಕ್ಷ್ಮಿ]

ನಿಜಲಿಂಗ (ನಾ). [ವೀಶೈ] ಇಷ್ಟಲಿಂಗ; ಪರವಸ್ತು; ಪರಮಾತ್ಮ : ಪೃಥ್ವಿ ಅಪ್ಪು ತೇಜ ವಾಯು ಆಕಾಶದಿಂದ ಹೊಂದುವ ಹುಟ್ಟುವ ದೇಹದ ಅಂದಗಾಱಿಕೆಯಲ್ಲಿ ಬಂದುದನಱಿಯಾ . . . ಮುಂದಣ ನಿಜಲಿಂಗವನಱಿಯಾ (ಮೋಳಿಮಾ. ೧೧-೩೯). [ನಿಜ+ಲಿಂಗ]

ನಿಜಲಿಂಗೈಕ್ಯ (ನಾ). [ವೀಶೈ] ಪರಮಾತ್ಮನಲ್ಲಿ ಐಕ್ಯನಾದವನು; ಕೈವಲ್ಯವನ್ನು ಹೊಂದಿದವನು; ಮುಕ್ತಿ ಪಡೆದವನು : ಕುಱುಹಿಲ್ಲದ ಬ್ರಹ್ಮದಲ್ಲಿ ತೆಱಹಿಲ್ಲದಿರ್ಪನು ನೋಡಾ ಅಖಂಡೇಶ್ವರಾ ನಿಮ್ಮ ನಿಜಲಿಂಗೈಕ್ಯನು (ಅಖಂಡೇ. ೩೧೫-೨೨). [ನಿಜಲಿಂಗ+ಐಕ್ಯ]

ನಿಜಲೋಕ (ನಾ). ತನ್ನ ಲೋಕ,—ಸ್ಥಳ : ಆ ಸಮಯದೊಳ್ ದೇವತೆಗಳೆಲ್ಲಂ ನಿಜಲೋಕಕ್ಕೆ ಪೋದರ್ (ಹಾಲಾಸ್ಯ. ೧-೫-೧೭ ವ). [ನಿಜ+ಲೋಕ]

ನಿಜವಾಸ (ನಾ). ಸತ್ಯದ ನೆಲೆ : ನಿಜನಿರ್ವಯಲ ಸಮಾಧಿಯ ನಿಜವಾಸದ ಬಾಗಿಲ ತೋಱಿದ ಬಸವಣ್ಣ (ಶೂನ್ಯಸಂ. ೪೪೨-೭೫). [ನಿಜ+ವಾಸ$_2$]

ನಿಜವಾಸಿ (ನಾ). = ನಿಜನಿವಾಸಿ : 'ಕೇಡಿಲ್ಲದ ಪದವಿ'ಯಲ್ಲಿ ಮನವನಿರಿಸಿ ತಮ್ಮ ನಿಜವನರಿದು ನಿಜವಾಸಿಯಾಗಿರಬೇಕೆಂದರೆ ಮನದ ಚಾಂಚಲ್ಯವೊಂದು (ಮೋಳಿಮಾ. ೧೦೧ ಪ್ರಸ್ತಾವನೆ). [ಸಂ. ನಿಜವಾಸಿನ್]

ನಿಜವಾಹ (ನಾ). ತನ್ನ ವಾಹನ : ನಿಜನೇತ್ರಂ ಲೋಕನೇತ್ರಂ ನಿಜಭರಣಮಿಳಾಚಕ್ರಭಾರಾವಹಂ ಮೇಣ್ನಿಜವಾಹಂ ಧರ್ಮಗೇಹಂ (ರಾಜಶೇ. ೧-೨). [ನಿಜ+ವಾಹ]

ನಿಜವಿಷ್ಟರ (ನಾ). ತನ್ನ ಆಸನ,—ಪೀಠ : ತಮ್ಮೊಡೆಯನ ಪದಯುಗಕೆಱಗಿ ಕಡೆಗೆ ಸರಿದು ನಿಜವಿಷ್ಟರದೊಳೊಗ್ಗೊಡೆಯದೆಸೆವ ಸಮಯದೊಳು (ತ್ರಿಪುಸಾಂ. ೧೪-೧೫೧). [ನಿಜ+ವಿಷ್ಟರ]

ನಿಜವೃತ್ತಿ (ನಾ). ತನ್ನ ಸ್ವಭಾವ; ಸ್ವಂತ ಮನೋಭಾವ : ನಿಜವೃತ್ತಿಗೆ ಸದೃಶಮಾದ ಮಗಳ ಮನೋವೃತ್ತಿಗೆ ಅತ್ಯಂತಸಂತುಷ್ಟ ಹೃದಯನಾಗಿ (ಚಂದ್ರಪು. ೫-೧೩೬ ವ). [ನಿಜ+ವೃತ್ತಿ]

ನಿಜವೆಱು (ಕ್ರಿ). ಸತ್ಯವಾಗು; ಯಥಾರ್ಥವಾಗು; ದಿಟವಾಗು : ಪಶುಗಳ ಮೊತ್ತವೊಮ್ಮೆಯುಂ ಹುಲ್ಲನುದಕವನೊಲ್ಲದಿರ್ದುದಕೆ ಉತ್ತಮದ ಶಿವಲಿಂಗವೇ ನಿಜವೆತ್ತ ಸಾಕ್ಷಿಯೆನಲ್ಕೆ ಹರುಷಂಬೊತ್ತು ಲಿಂಗಸ್ಪರುಶನದ ನಿಯಮಂಗಳಂ ತೀರ್ಚಿ (ಬಸಪು. ೬೦-೩೩). [ನಿಜ+ಪೆಱು$_1$]

ನಿಜವ್ರತ (ನಾ). ಸತ್ಯವಾದ ವ್ರತ; ಸಹಜವಾದ ನಿಯಮ : ಶರಣ ಸಜ್ಜನಿಕೆ ಸಮಯಾಚಾರ ನಿಜವ್ರತವು ದುರಾಚಾರಿಗಳಿಗಳವಡದು (ಬಸವ. ೮೫೫). [ನಿಜ+ವ್ರತ]

ನಿಜಶರಣ (ನಾ). ಸ್ವಭಾವದಿಂದಲೇ ಭಕ್ತನಾದವನು : ಸ್ವಾದು ಉದಕದಲ್ಲಿ ಉಂಟೆ ಕಷ್ಟದ ಜಾರಿ ಸಮಯದಲುಂಟೆ ನಿಜಶರಣರ ನೆಲೆ (ಶೂನ್ಯಸಂ. ೩೧೧-೨೯). [ನಿಜ+ಶರಣ]

ನಿಜಸಂಗ (ನಾ). ನಿಜವಾದ ಕೂಟ; ಶಾಶ್ವತವಾದ ಜೊತೆ : ವಿವೇಕದ ಸಂಗವೇ ನಿಜಸಂಗವಾಗಿ ನಿಂದನೆಮ್ಮ ಬಸವಯ್ಯನು (ನೀಲವ. ೪-೪). [ನಿಜ+ಸಂಗ$_2$]

ನಿಜಸಂಯುಕ್ತ (ನಾ). ಪರಮಾತ್ಮನ ಸತ್ಯಸ್ವರೂಪದಲ್ಲಿ ಐಕ್ಯನಾದ ವ್ಯಕ್ತಿ; ನಿಜೈಕ್ಯ : ಪರಮತತ್ವದ ನಿಜಸಂಯುಕ್ತರ ಅನು ನೀನೆಂಬ ಶಬ್ದಸುಖಿಗಳ ತೋಱಿಂ ಎನಗೆ (ಬಸವ. ೮೮೦). [ನಿಜ+ಸಂಯುಕ್ತ]

ನಿಜಸಖಿ (ನಾ). ತನ್ನ ಗೆಳತಿ : ನಿಜಸಖಿಯರೊಡವರಲ್ ಸಾಮಜಗತಿವನದೊಳಗೆ ಪೊಕ್ಕು ಕಂಡಳ್ ಮೀನಧ್ವಜನಿಧನಂ ಪಾಂಡುವಂ (ನೇಮಿಪು. ೩-೩೯). [ನಿಜ+ಸಖಿ]

ನಿಜಸತಿ (ನಾ). ತನ್ನ ಹೆಂಡತಿ,—ಪತ್ನಿ : ದುರುಳ ದುಶ್ಶಾಸನನ ತೊಡೆಯ ಮೇಲಡಗೆಡಹಿ ಎರಡುಬಲದತಿರಥರ ಜಱಿದಳಲಿಸಿ ನರಹರಿಯ ಲೀಲೆಯಿಂದವನುರವ ಬಗಿದು ನಿಡಿಗರುಳ ನಿಜಸತಿಗೆ ಮುಡಿಸಿದೆಲ ಭಾಪುರೆ (ಪುರಂದ. ೩-೭೫-೪); ಬಾಹುಕನು . . . ಮನದಲಿ ಕಾತರಿಸಿ ನಿಜಸತಿಗೆ ಹಲುಬಿದ ಮದನನೆಸುಗೆಯಲಿ (ನಳಚ. ೭-೯). [ನಿಜ+ಸತಿ$_1$]

ನಿಜಸಮಾಧಿ (ನಾ). ನಿಜವಾದ ಸಮಾಧಿ; ಸರಿಯಾದ ತನ್ಮಯತೆ : ಗೊಹೇಶ್ವರಲಿಂಗದಲ್ಲಿ ಬಯಲ ಭ್ರಮೆಯಳಿದು ಜ್ಞಾನಸಮಾಧಿಯನೆಯ್ದು ಬಲ್ಲಡೆ ಅದೇ ನಿಜಸಮಾಧಿ ಕೇಳಾ (ಅವಚಂ. ೧೯೨-೮೬೬). [ನಿಜ+ಸಮಾಧಿ]

ನಿಜಸಾಕ್ಷಿ (ನಾ). ದಿಟವಾದ ಸಾಕ್ಷಿ,—ಆಧಾರ : (ಕಿ). [ನಿಜ+ಸಾಕ್ಷಿ]

ನಿಜಸಾರ (ನಾ). ತನ್ನ ಸತ್ಯ,—ಚೈತನ್ಯ : ಅನುಭಾವದ ಸಾರವೇ ನಿಜಸಾರವಾಗಿ ನಿಂದನೆಮ್ಮ ಬಸವಯ್ಯನು (ನೀಲವ. ೪-೪). [ನಿಜ+ಸಾರ$_3$]

ನಿಜಸಿರಿ (ನಾ). ತನ್ನ ಐಶ್ವರ್ಯ,—ಸಂಪತ್ತು : ಕುಲಾಂಗನೆಯ ವ್ರತಫಲದ ಪುಣ್ಯೋದಯದಿ ನಿಜಸಿರಿ ಫಲಿಸಿತಿನ್ನೀ ಲೋಕದಲಿ ನಿನಗಾರು ಸರಿಯೆಂದ (ನಳಚ. ೯-೮). [ನಿಜ+ಸಿರಿ]

ನಿಜಸುಖ (ನಾ). ಶಾಶ್ವತವಾದ ಆನಂದ; ಮೋಕ್ಷಸುಖ : ಮಾಯಾಮಯಂಗಳೆಂಬ ಮುನ್ನಿನ ಭ್ರಮೆಗಳ ಬಿಡಲಱಿಯದ ಬಡಮನದ ಮನುಜರೆಲ್ಲರೂ ನಿಜಗುಣನ ನಿಜಭಾವದಲೂ ನಿಲ್ಲದವಂಗೆ ನಿಜಸುಖವು ಸಾಧ್ಯವಪ್ಪುದೆ ಹೇಳಾ (ವಚಸಂ. ೯೧-೫೮); ನಿಶ್ಚಿಂತ ನಿರಾಳದಲ್ಲಿ ಆಡುವ ಮಹಾದೇವನ ಕರ್ತೃವೆಂದಱಿದ ಕಾರಣದಿಂದ . . . ನಿಜಸುಖದಲ್ಲಿ ನಿಂದು ಕತ್ತಲೆಯ ಹರಿಯಿಸಿ ತಮವ ಹಿಂಗಿಸಿ . . . ಮುಂದೆ ನೋಡಿದಡೆ ಜ್ಯೋತಿಯ ಬೆಳಗ ಕಾಣಬಹುದೆಂದರು (ಲಿಂಗವ. ೬೫-೫೬); ಭವಭಯ ದಾಹವನು ನೆಱೆ ಜಱೆದು ನಿಜಸುಖತುಷ್ಟನಹುದೆಂದ (ನಿಭಾಗ. ೨-೧-೩೮). [ನಿಜ+ಸುಖ]

ನಿಜಸುಖಿ (ನಾ). ಶಾಶ್ವತವಾದ ಆನಂದವನ್ನು ಅನುಭವಿಸುವ ವ್ಯಕ್ತಿ : ನಾವಲ್ಲಿದ್ದಡೇನು ನಾವಿಲ್ಲಿದ್ದಡೇನು ನಮ್ಮ ನಮ್ಮ ಸಂಸರ್ಗದಲ್ಲಿ ನಿರುಪಮಾಕಾರಮೂರ್ತಿಗಳಾಗಿ ನಿರವಯವನೈದಿ ನಿಜಸುಖಿಗಳಾದೆವು (ನೀಲವ. ೧೫-೩೯); ದ್ವೈತಾದ್ವೈತವ ಮೀಱಿ ನಿಂದ ನಿಜಸುಖಿಗಳಯ್ಯಾ ನಿಮ್ಮ ಶರಣರು (ವಚಸಂ. ೫೪೧-೨೪). [ನಿಜ+ಸುಖಿ]

ನಿಜಸುತ (ನಾ). ತನ್ನ ಮಗ; ಸ್ವಂತ ಮಗ : ನಿಜಸುತನಪ್ಪ ಸುಬಾಹುಗೆ ನಿಜರಾಜ್ಯಮನಿತ್ತು ದೀಕ್ಷೆಯಂ ಕೈಕೊಂಡಂ (ಪಂರಾಮಾ. ೧೦-೧೮೨); ನಿಜಸುತ ಸಮಾಜವರ್ಯನನಜೇಯಭುಜವೀರ್ಯನಂ ನೃಪಂ ಬರಿಸಲ್ (ನೇಮಿಪು. ೩-೧೨೧); ಮುನ್ನ ವಿತಳಕೆ ಗರುಡಭಯವಾಯ್ತೆಂದು ತಕ್ಷಕನಿರಿಸಿದನು ನಿಜಸುತನನಮರೇಶ್ವರನನುಜ್ಞೆಯಲಿ (ಕುವ್ಯಾಅ. ೨೦-೫೮). [ನಿಜ+ಸುತ]

ನಿಜಸುತೆ (ನಾ). ತನ್ನ ಮಗಳು; ಸ್ವಂತ ಮಗಳು: ನಿಜಸುತೆ ಸುತಾರೆಯಂ ಶ್ರೀನಿಜಯಂಗೆ ಪರಸ್ಪರಾನುರಾಗಂ ಬಿಗೆ ತೊಟ್ಟು (ಪಭಾಪ. ೯–೪೮); ಭೀಮನ್ನಪಾಲ ಕರಸಿದನು ಬಾಲೆಯರ ತನ್ನಾಪ್ತ ಸಚಿವರ ಮೇಳದಲಿ ನಿಜಸುತೆಯ ಕರೆತರಹೇ ರತ್ನಾಭರಣಗಳನಿತ್ತ ವರ ಕಳುಹಿಂದನು (ಸಳಚ. ೬–೩೩). [ನಿಜ+ಸುತೆ]

ನಿಜಸ್ಥಿತಿ (ನಾ). ದಿಟವಾದ ಸ್ಥಿತಿ,—ಇರವು: ಮದ್ದಿನ ನಿಜಸ್ಥಿತಿಯನ್ನು ಮುದುಳನಿಗೆ ಹೇಳದೆ ಅವನಿಗೆ ನೆಮ್ಮದಿಯಿರಲಿಲ್ಲ(ಕಂಬಚ. ೫೧). [ನಿಜ+ಸ್ಥಿತಿ]

ನಿಜಸ್ವರೂಪ (ನಾ). ೧. ಮೂಲಸ್ವರೂಪ; ಸತ್ಯಸ್ವರೂಪ: ಹರಿಪೀಠದ ಮೇಗೆ ನಿಜಸ್ವರೂಪವಿರೆ ನೆಗೆದ ನಾಲ್ಕುದೆರಲುಳವಿಯೊಳಾ ಪರಮೇಶ್ವರನಳವಿಪಟನಳರನಾಪ್ತಾಗಮಪದಾರ್ಥವಾಗಮೈತಮು ಪಂ (ಶಾಂತಿಪು. ೧೬–೨) ; ಮಾಧವ ನಿನ್ನ . . . ನಿಜಸ್ವರೂಪದ ಪವಣುಮ ನಾರ್ ಬಲ್ಲರ್ (ಜಗವಿ. ೬–೧೧೬); ಗ್ರಂಥದ ನಿಜಸ್ವರೂಪವೇನೆಂಬುದನ್ನು ತಿಳಿಯಲು ನಾವು ಆಧುನಿಕ ಸಂಶೋಧಕರ ಅಭಿಪ್ರಾಯಗಳನ್ನು ನೋಡಬೇಕಾಗುತ್ತದೆ (ಭಾರಪ. ೮೬). ೨. ನಿಜಸ್ವರೂಪವುಳ್ಳವನು; ಸತ್ಯಸ್ವರೂಪಿಯಾದವನು; ಪರಮಾತ್ಮ: ನಿರವಯ ನಿರಾಮಯ ನಿರಾಳಂ ನಿರ್ದ್ವಂದ್ವ ನಿರ್ಮಲ ನಿಜಸ್ವರೂಪ ನಿರ್ಭಾವ . . . ನಿರ್ಮಾಯ ನಿರಾಳಕಂ (ಸಿದ್ಧೇಪ. ೧–೧). [ನಿಜ+ಸ್ವರೂಪ]

ನಿಜಾಂಕ (ನಾ). ತನ್ನ ತೊಡೆ: ಪರಾವತದ ಬೆಂಗೆವಂದ ನಿಜಪರಮ ಸ್ವಾಮಿಯಂ . . . ನಿಬಿಡನಿಬದ್ಧ ಪವಿತ್ರಕ್ಷೌಮೋಪಚ್ಛ ಮೋಪಚಿತ ಸುಖಾಸನಾಂಕಿತಮಂ ನಿಜಾಂಕಮನೇಱಿಸಿಕೊಂಡು . . . ನೋಡುತ್ತುಂ (ಶಾಂತಿಪು. ೧೦–೬೫ ಪ). [ನಿಜ+ಅಂಕ$_2$]

ನಿಜಾಂಗನೆ (ನಾ). ತನ್ನ ಹೆಂಡತಿ,—ಪತ್ನಿ: ತನ್ನ ಮನೆಗೆ ವಂದು ನಿಜಾಂಗನಾಮುಖವಿಲೋಕನಂಗೆಯ್ದು (ಸುಕುಮಾ. ೩–೧೫ ಪ). [ನಿಜ+ಅಂಗನೆ]

ನಿಜಾಂಗರುಚಿ (ನಾ). ತನ್ನ ದೇಹದ ಕಾಂತಿ,—ಪ್ರಕಾಶ: ಕನಕಾಂಭೋಜರಜಂ ನಿಜಾಂಗರುಚಿಯಂ ಕನ್ನೆಯ್ದಿಲಿಂದಂ ಕಬಿಲ್ದಿನಿಸಂ ತೂಳ್ದಿ ತೆರಳ್ದು (ಅವಿಪು. ೧–೬೨). [ನಿಜ+ಅಂಗರುಚಿ]

ನಿಜಾಂಗಿ (ನಾ). ಪರಮಾತ್ಮಸ್ವರೂಪನಾದವನು; ಸತ್ಯ ಸ್ವರೂಪಿ: ಹೊತ್ತು ತುಂಬಿದವಳು ತನ್ನ ನಿತ್ತರಿಸುವ ಬೇನೆಯನಱು ವಳು ಭಕ್ತಿಯುಳ್ಳವರು ಬಲ್ಲರು ನಿಶ್ಚಟದ ನಿಜಾಂ[ಪಾಠಾಂ.ಲಿಂಗಾಂ]ಗಿಗಳ (ಮೋಕಾಮೂ. ೧೯–೬೫). [ಸಂ. ನಿಜಾಂಗಿನ್]

ನಿಜಾಂತರಂಗ (ನಾ). ತನ್ನ ಅಂತರಂಗ,—ಮನಸ್ಸು: ಆ ಮಹಾ ಪ್ರಕಾಶಮಂ . . . ನೋಡಲಳ್ಕಿ. ಬಳ್ಕುತ್ತುಂ ನಮಿತಾಲಿತನೇತ್ರನಾಗಿ ನಿಜಾಂತರಂಗದೊಳ್ ಅತಿದುರ್ನಿರೀಕ್ಷ್ಯಮಾದೀ ಪ್ರಕೃತಿಯಂ ತೊಲಗಿಪುದು ತೋರ್ಪುದಾಕಾರಮನಚ್ಯುತ ನೀನೆಂದಾ ಬ್ರಹ್ಮಂ ಸ್ತುತಿಯಿಸೆ (ಜವಿ. ೧–೪೪). [ನಿಜ+ಅಂತರಂಗ]

ನಿಜಾಂಬಿಕೆ (ನಾ). ತನ್ನ ತಾಯಿ; ಸ್ವಂತ ತಾಯಿ: ಪೊಕ್ಕು ನಿಜಾಂಬಿಕಾಜನಕರಂ ಸುತೆ ಬೀಟ್ಕೊಳ್ಕೆ (ಶಾಂತಿಪು. ೪–೧೦೪). [ನಿಜ+ಅಂಬಿಕೆ]

ನಿಜಾಂಶ (ನಾ). ಸತ್ಯವಾದ ಅಂಶ,—ಭಾಗ: ಲಿಪಿಯ ಚರ್ಚೆಯಲ್ಲಿ ನಿಜಾಂಶಕ್ಕೂ ವಿಮಾರಿದ ಗಾಳಿಸವಾರಿಯ ಚಳಮಕಿಯಿದೆ (ದ್ರಾವಿ. ೫೬); ಈ ವಾಕ್ಯದಲ್ಲಿ ಎಷ್ಟರ ಮಟ್ಟಿಗೆ ನಿಜಾಂಶವಿದೆ ಎಂಬುದರ ಬಗ್ಗೆ ನಿಖರವಾಗಿ ಹೇಳುವುದು ಕಷ್ಟ (ನೋಳಂಬ. ೪೦). [ನಿಜ+ಅಂಶ]

ನಿಜಾಂಸ (ನಾ). ತನ್ನ ಹೆಗಲು: ಉತ್ತುಂಗವೀನನಿಜಾಂಸಾರ್ಪಿತ ಲಂಬಹಾರಂ (ಪಂಪಭಾ. ೩–೫೪). [ನಿಜ+ಅಂಸ]

ನಿಜಾಕೃತಿ (ನಾ). ಸಹಜವಾದ ಸ್ವರೂಪ; ಸ್ವಸ್ವರೂಪ: ಓಲಗದ ಸಭಾಸದರೀ ದಿವ್ಯನೇನೆಂಬನೇಳೆ ನಿಜಾಕೃತಿಸಂಪ್ರತಿಯಿಂ ಬಂದು ನಮ್ಮೊಳ್ ನುದಿದು ನೋಲ್ಪು ಪೋದನೆಂದು ತನ್ನಂ ಬೆಸಕೊಳೆ (ಶಾಂತಿಪು. ೪–೧೫೫ ಪ). [ನಿಜ+ಆಕೃತಿ]

ನಿಜಾಗಾರ (ನಾ). ತನ್ನ ನೆಲೆ; ಸ್ವಂತ ಬೀಡು: "ನಿಜಾಗಾರ ಗಳೊಳಂ ನಿದಾನದೊಳು ನೆಲೆ" (ಕಬ್ಬಮಂ. ೧೦೬). [ನಿಜ+ಆಗಾರ]

ನಿಜಾಗ್ರಜ (ನಾ). ತನ್ನ ಅಣ್ಣ; ಸ್ವಂತ ಸಹೋದರ: ಅನಿಲಸುತಂ ನಿಜಾಗ್ರಜಂಗೆ ಮುಂಬಿದು (ಗದಾಯು. ೧–೬೦ಪ); ನಿಜಾಗ್ರಜನ ಸಾವು ಬೇವಸಮಸಗ್ಗಳಂ ಮಾಬ್ಬುದುಂ (ಪಂಂಪಾಮೂ. ೧೩–೧೨೫). [ನಿಜ+ಅಗ್ರಜ]

ನಿಜಾತ್ಮಜ (ನಾ). = ನಿಜಸುತ: ಅತ್ಮೀಯಾನ್ವಯೋದ್ಧರಣ ಸಮರ್ಥನಪ್ಪ ನಿಜಾತ್ಮಜಂಗೆ ಸಮಸ್ತಗೃಹಪರಿಚ್ಛದಮನೊಪ್ಪಿಸುವ ಸಳಲದತ್ತಿಯುಮನುಳ್ಳುದು ದತ್ತಿಯೆಂಬ ಮೂಲಿನೆಯಾರ್ಯಸರ್ಮಂ (ಸುಕುಮಾ. ೩–೨೫ ಪ). [ನಿಜ+ಆತ್ಮಜ]

ನಿಜಾಧಿಪತಿ (ನಾ). ೧. ತನ್ನ ಅಧಿಪತಿ,—ಒಡೆಯ. ೨. ತನ್ನ ಗಂಡ,—ಪತಿ: ದೀನಜನದುರ್ಲಭಬುದ್ಧಿಯಪ್ಪ ಪ್ರಿಯನಿತ್ತೆ ತನ್ನಂತ ರಂಗದೊಳ್ ಬಗೆದುವ ಪೊಬ್ಬಾಗೆ ಪೋಗಿ ನಿಜಾಧಿಪತಿಗದೆಲ್ಲಮನಱು ಪುವುದುಂ (ಶಾಂತಿಪು. ೯–೧೧೨ ಪ). [ನಿಜ+ಅಧಿಪತಿ]

ನಿಜಾನಂದ (ನಾ). ದಿಟವಾದ ಆನಂದ; ಆತ್ಮಾನಂದ: ಯೋಗಾ ಭ್ಯಾಸಬಲದಿಂ ಮನೋಲಯವಾದಲ್ಲಿ ತೋರ್ಪುದೇ ನಿಜಾನಂದಮೆನಿಸು ವುದು (ವಿವೇಕ. ೨೩). [ನಿಜ+ಆನಂದ]

ನಿಜಾನುಭಾವ (ನಾ). [ವೀಶೈ] ತಾನು ಪಡೆದ ಆನಂದಾನುಭವ: ಅತನು ಒಳ್ಳೆಯ ಶಿವಾನುಭಾವಿ . . . ಅತನ ಪಟ್ಟಾಲದ ನಿಜಾನು ಭಾವದ ವೈಶಿಷ್ಟ್ಯವೇನೆಂಬುದನ್ನು ಅರಿಯಬಹುದು (ಶಂಚಳಂ. XI, ಪೀಠಿಕೆ). [ನಿಜ+ಅನುಭಾವ]

ನಿಜಾಪತ್ಯ (ನಾ). ತನ್ನ ಸಂತಾನ; ಸ್ವಂತ ಮಕ್ಕಳು: ಗಳತ ಬಾಷ್ಪಾಂಭಃಕಣಂ ಬೇಗಮುಣ್ಮುವಿನಂ ಪೊಣ್ಮುವಿನಂ ವಿಷಾದದೊದ ವಿಂದೆಂದಳ್ ನಿಜಾಪತ್ಯರಂ (ಸುಕುಮಾ. ೨–೩೬).

[ನಿಜ+ಅಪತ್ಯ]

ನಿಜಾಪ್ತವರ್ಗ (ನಾ). ತನ್ನ ಬಂಧುಗಳು,— ನಂಟರು,— ಅತ್ಮೀಯರ ಗುಂಪು: ಬಂಧು ಸನಾಭಿಸಗೋತ್ರಂ . . . ಬಂಧು ಸಮೂಹಂ ಕೃತಸಂಬಂಧಂ ಬಂಧುತೆ ನಿಜಾಪ್ತವರ್ಗಂ ನಂಟರ್ (ಪಸ್ತುಕೋ. ೫೬–೩೪). [ನಿಜ+ಆಪ್ತ+ವರ್ಗ]

ನಿಜಾಭಿಮಾನ (ನಾ). ತನ್ನ ಹಿರಿಮೆಯ ಬಗೆಗೆ ಇರುವ ತಿಳಿವಳಿಕೆ; ಸ್ವಂತ ಅಭಿಮಾನ; ಸ್ವಾಭಿಮಾನ: ಸುಟ್ಟುರಿಯು ಪೊಲಪ್ಪ ದರ್ಥಮನುಪಾರ್ಜಿಸುವಲ್ಲಿ ನಿಜಾಭಿಮಾನಸಮಂ ಧರಿಯಿಸುವಲ್ಲಿ ಜಾದಗೆವೊಲಪ್ಪುದು ತಪ್ಪದಮಾತ್ಯಲಕ್ಷಣಂ (ಕಾವ್ಯಸಾ. ೪೫೨).

[ನಿಜ+ಅಭಿಮಾನ]

ನಿಜಾಭಿರೂಪ (ನಾ). (ತನ್ನ) ನಿಜವಾದ ರೂಪ; ಸಹಜ ಸೌಂದರ್ಯ: ನಳನಮುಖಿ ನಳನೇಪ ಮುಕ್ತಾವಳಿಯಲಂಕಾರವನುಗಿದು ಸಭೆಯೊಳಗೆ ಬಿಸುಟಳು ನಿಂದಳಬಲೆ ನಿಜಾಭಿರೂಪದಲಿ (ಕುವ್ಯಾಸ. ೧೩–೫೯). [ನಿಜ+ಅಭಿರೂಪ]

ನಿಜಾಭ್ಯುದಯ (ನಾ). ತನ್ನ ಏಳಿಗೆ; ಸ್ವಂತ ಅಭಿವೃದ್ಧಿ: ನಿಜಾಭ್ಯುದಯ ನಿವೇದನೀರ್ಶಳರಮೊಪ್ಪೆ ಜಗತ್ಪ್ರಿಯನಾದ ಬೇವನಂಳದ ಗಣನಾಯಕಂ ವರದನಕ್ಕೆಮಗಮ್ಮನ ಗಂಧವಾರಣಂ (ಗದಾಯು. ೧–೧೧). [ನಿಜ+ಅಭ್ಯುದಯ]

ನಿಜಾಮ (ನಾ). ೧. ದೊರೆ; ರಾಜ : ರಾಮ ಬಲ್ಲನು ರಾಜಕಾರ್ಯ ಶುಭವು ನಿಜಾಮ ಬಂದರೆ ಬರಲೇಳು (ಸೌಂದಕಾ. ೪–೭). ೨. ಹೈದರಾಬಾದಿನ ಮಹಮದೀಯ ದೊರೆಗಳಿಗೆ ಇದ್ದ ಒಂದು ಬಿರುದು : ವರಡಿಳ್ಳೀಶ್ವರನಾಜ್ಞೆಯಿಂದುರೆ ನಿಜಾಮಂ ಲೇಖನಂಗೆಯ್ಸಿ (ಕೆಳನೃ. ೧೦–೭೦); ಅಲ್ಲಿಂದ ಹಾಗೇ ಸ್ವಲ್ಪ ಮುಂದಕ್ಕೆ ಬಂದರೆ ನಿಜಾಮನ ರಾಜ್ಯವು ಇದರ ಉತ್ತರ ಮೇರೆಯಾಗುತ್ತದೆ (ವಿಜಾಭೂ. ೪).

[←ಅರ. ಹಿಂ. ಮರಾ. ನಿಜಾಮ್]

ನಿಜಾಮಶಾಹಿ (ನಾ). ಹೈದರಾಬಾದಿನ ಮಹಮದೀಯ ದೊರೆಗಳಾದ ನೈಜಾಮರ ಆಡಳಿತ, —ರಾಜ್ಯಭಾರ : ಅದರ ಗೋಡೆ ತದ್ರೂಪಪ್ರತ್ಯಕ್ಷ ಚಾಂದಬೀಬಿಯ ಗುರುತು ಹೇಳುವಂಥದು. ಅದರಿಂದ ನಿಜಾಮಶಾಹಿಯ ಇತಿಹಾಸವನ್ನು ಕಂಡ ಸರ್ಪ ಹೊರಬೀಳುತ್ತಿತ್ತು (ಸ್ಮೃತಿಚಿ. ೩೯೭). [ನಿಜಾಮ + ಶಾಹಿ]

ನಿಜಾಯತಿ (ನಾ). ತನ್ನ ಹಿರಿಮೆ, — ಮಹಿಮೆ : ಸತತಂ ಪೆರ್ಚಿತ್ತು ನಿಜಾಯತಿಯೊಡನೆ ಮಹಾವಿಭೂತಿ ಪರಮೋದಯನಾ (ಕವಿಾ. ೩–೧೫೫). [ನಿಜ + ಅಯತಿ]

ನಿಜಾಯತ್ತ (ನಾ). ತನಗೆ ಸೇರಿರುವುದು,—ಅಧೀನವಾದುದು : ಇಂತು ಸಾಮ್ರಾಜ್ಯಮಂ ನಿಷ್ಕಂಟಕಮುಂ ನಿರಾತಂಕಮುಂ ನಿಜಾಯತ್ತ ಮುಮೆನಿಸಿ (ಚಂದ್ರಪು. ೨–೬೧). [ನಿಜ + ಆಯತ್ತ$_2$]

ನಿಜಾಯುಷ್ಯಾಂತ (ನಾ). ತನ್ನ ಜೀವಿತಕಾಲದ ಕೊನೆ,— ಅಂತ್ಯ : ವಿತತಾಷ್ಟಾದಶಸಾಗರೋಪಮ ನಿಜಾಯುಷ್ಯಾಂತದಿಂದಂ ಪ್ರಜಾಪತಿ ಭೂಚಕ್ರಿಗೆ ಬಂದು ಪುಟ್ಟೆ (ಶಾಂತಿಪು. ೭–೬೨).

[ನಿಜ + ಆಯುಷ್ಯಾಂತ]

ನಿಜಾರಿ (ನಾ). ತನ್ನ ವೈರಿ, — ಶತ್ರು : ತತುಪುತ್ರಂ ನೆಗಳ್ದಂ ನಿಜಾರಿಬಳವೊನ್ದಲು ಬನ್ನಮಂ ಕಂನಮಂ (ಕಇಆ. ೭೪–೧೨–೭ ; 1170).

[ನಿಜ + ಅರಿ$_6$]

ನಿಜಾಲಯ (ನಾ). ತನ್ನ ಮನೆ ; ಸ್ವಂತ ಸ್ಥಳ : ಮಾತ ಕೇಳಿದ ನವನು ಬಲಸಂಗಾತಲೈತಂದವರ ಕಂಡತಿಪ್ರೀತಿಯಿಂ ತಕ್ಕೈಸಿ ಕರೆತಂದನು ನಿಜಾಲಯಕೆ (ನಳಚ. ೭–೪೧). [ನಿಜ + ಆಲಯ]

ನಿಜಾವಷ್ಟಂಭ (ನಾ). ತನ್ನ ಬಗೆಗಿರುವ ವಿಶ್ವಾಸ ; ಆತ್ಮ ಪ್ರತ್ಯಯ ; ದರ್ಪ : ಅರಿಕುಳಗಹ[ನೋ] [ವ್ವೀರುಹೋದ್ಘಾಟ]ಣಂ ಮಾಟ್ಟಿ ನಿಜಾವಷ್ಟಂಭ[ದಿಂ] ಕಾಳಿಗನ ಮದಗಜ ಬಾಪ್ಪುರಯೆನ್ದು ವನ್ದಿಜನಮೆಲ್ಲಂ ಕಿತ್ತಿ × × ಧಾತ್ರಿಗೆ ನೆಗಟ್ಟಿ ಯಶೋದ್ಧಾಮನಾದಿತ್ಯ ವರ್ಮಂ (ಸೌಇಇ. XX, ೩೧–೨೭ ; 1044). [ನಿಜ + ಅವಷ್ಟಂಭ]

ನಿಜಾವಳಿ (ನಾ). ತನ್ನ ಬಿರುದುಗಳ ಮಾಲೆ, — ಪ್ರಶಂಸೆಗಳ ಸಮೂಹ : ಈ ಮೂವರುಂ ಬಂದ ವಂಶಾವಳಿಯುಮಂ ನಿಜಾವಳಿಯುಮನೊಳ್ಳಿತ್ತಾಗಿ ಪೇಟ್ಟೀ ನಿನ್ನ ಚೆನ್ನಭಾಷಿತಮದೊಳ್ಳಿತ್ತಾದುದು (ಗದಾಯು. ೨–೮ ಪ) ; 'ಶರಣಾಗತ ಪರಿಪಾಲಕ' ಎಂಬ ನಿಜಾವಳಿಯ ಬಿರುದು ಒಳಗಳಿದ — ಟಕ್ಕಿನ ಜಳ್ಳುಮೆರೆತವಾಗಿ . . . ಪತಿತವಾಗ ಬೇಕೆಂಬ ಉತ್ಕಟಾಭಿಲಾಷೆಯೇನು (ಬೆಟ್ಟಅ. ೭೪–೧೦).

[ನಿಜ + ಆವಳಿ$_1$ (= ಆವಲಿ)]

ನಿಜಾವಾಸ (ನಾ). ತನ್ನ ವಾಸಸ್ಥಾನ ; ಸ್ವಂತ ಸ್ಥಳ : ತದನಂತರಂ ನಿಜಾವಾಸಕ್ಕೆ ಪೋಗಿರ್ದು (ಶಾಂತಿಪು. ೭–೧೦ ಪ) ; ಏಟನೆಯ ಗೇಹಂ ಕನ್ನೆಯಾದಂದು . . . ಕೂಡೆ ತೀಕ್ಷ್ಣಗು ಲಗ್ನಸ್ಥಿತನಾಗೆ ಪೆಣ್ಣ ಕತದಿಂ ಸಾಯ್ಗುಂ ನಿಜಾವಾಸದೊಳ್ (ಜಾತತಿ. ೨೩–೮) ; ಸೌಧರ್ಮ ಕಲ್ಪೇಶ್ವರಂ . . . ನಿಜಾವಾಸದತ್ತಣ್ಗೆ ಪೋದಂ (ಸುಕುಮಾ. ೯–೩).

[ನಿಜ + ಆವಾಸ]

ನಿಜಾಶ್ರಮ (ನಾ). ತನ್ನ ಆಶ್ರಮ ; ಸ್ವಂತ ಆಶ್ರಮ : ಮುನಿಯಮನಂದನನ ಬೀಳ್ಕೊಂಡು ತಾಪಸವೃಂದಸಹಿತಲ್ಲಿಂದ ಹೊಱವಂಟನು ನಿಜಾಶ್ರಮಕೆ (ನಳಚ. ೯–೭೦). [ನಿಜ + ಆಶ್ರಮ]

ನಿಜಾಸಿ (ನಾ). ಸ್ವಂತ ಕತ್ತಿ, — ಖಡ್ಗ : ದಿಗ್ವಧೂಪ್ರಸರಮೆ ಸಾಕ್ಷಿ ಕೀರ್ತಿಗೆ ರಿಪುಬ್ರಜೆ ಮುಂಡಳಮೆಯ್ದೆ ಸಾಕ್ಷಿ ಸಾಹಸಕೆ ನಿಜಾಸಿ ಸಾಕ್ಷಿಗಳ ವೀರಗುಣಕ್ಕೆನೆ (ಸೌಇಇ. XX, ೪೬–೩೨ ; 1072).

[ನಿಜ + ಅಸಿ$_8$]

ನಿಜೇಂದ್ರಿಯ (ನಾ). ತನ್ನ ಇಂದ್ರಿಯ : ಒಡಲ ಪೊಡರ್ಪು ತುಟ್ಟಿಸದ ಮುನ್ನ ನಿಜೇಂದ್ರಿಯವರ್ಗದೇಳ್ಗೆಯೊರ್ಗುಡಿಸದ ಮುನ್ನ . . . ನಿಮ್ಮ ಪದಮಂ ನೆಱೆ ಪೂಜಿಸವೇಳ್ಕುಂ (ಶಂಕಶ. ೧೪). [ನಿಜ + ಇಂದ್ರಿಯ]

ನಿಜೇಶ್ವರ (ನಾ). ತನ್ನ ಒಡೆಯ,—ಪತಿ : ಗೋಪಿ ಬಂದು . . . ನಿಜೇಶ್ವರಂಗಱಿಪಿ ಮಾಡಿಸಿದಳ್ ಬಹುಶಾಂತಿಕರ್ಮಮಂ (ಜಗವಿ. ೩–೩೧).

[ನಿಜ + ಈಶ್ವರ]

ನಿಜೇಷ್ಟವಸ್ತು (ನಾ). ತನಗೆ ಇಷ್ಟವಾದ ಪದಾರ್ಥ ; ತಾನು ಬಯಸುವ ವಸ್ತು : ಬೇಡಲ್ ನಿಜೇಷ್ಟವಸ್ತುವ-ನೀಡಿದ ಕೈ ತೆರಪನುಳಿದ ಬೆರಳ್ಗಳಿನೆಸೆಗುಂ (ಶಾಕುಂತ. ೧೦೫–೧೭೯).

[ನಿಜ + ಇಷ್ಟ$_1$ + ವಸ್ತು]

ನಿಜೇಷ್ಟಸಿದ್ಧಿ (ನಾ). ತನ್ನ ಅಭೀಷ್ಟವು ಸಿದ್ಧಿಸುವಿಕೆ,—ನೆರವೇರುವಿಕೆ : ಜನಮಂಗೀಕರಿಪುದು ನೆಟ್ಟನೆ ಸಂಬಂಧಾಭಿಧೇಯ ಶಕ್ಯಾನುಷ್ಠಾನ ನಿಜೇಷ್ಟಸಿದ್ಧಿಗಳ್ ನೆಲಸಿ ನಿಂದ ಕಾರಣದೆ ಶಬ್ದಮಣಿದರ್ಪಣಮಂ (ಶಮದ. ೭ ಪೀಠಿಕೆ). [ನಿಜ + ಇಷ್ಟಸಿದ್ಧಿ]

ನಿಜೈಕ್ಯ (ನಾ). ೧. [ವೀಶೈ] ಪರಮಾತ್ಮನಲ್ಲಿ ಐಕ್ಯವಾಗುವಿಕೆ ; ಶಿವನಲ್ಲಿ ಲೀನ ಹೊಂದುವಿಕೆ ; ಮೋಕ್ಷ : ನಿಷ್ಕಳ ನಿಜೈಕ್ಯ ತ್ರಿವಿಧನಿರ್ಣಯ ಕೂಡಲಸಂಗಮದೇವಾ ನಿಮ್ಮ ಶರಣರಿಗಲ್ಲದಿಲ್ಲಾ (ಬಸವ. ೭೬೯). ೨. ಪರಮಾತ್ಮನಲ್ಲಿ ಲೀನನಾದವನು ; ಶಿವನಲ್ಲಿ ಐಕ್ಯನಾದವನು : ತನುಮನಧನವ ಮೀಱಿ ಮಾತಾಡಬಲ್ಲರೆ ಆತ ನಿಸ್ಸೀಮನು ಆತ ನಿಜೈಕ್ಯನು (ಬಸವ. ೨೧೬) ; ನಿಶ್ಚಿಂತ ನಿರಾಳನಾದ ನಿಜೈಕ್ಯನ ತಥ್ಯಮಿಥ್ಯದಿಂದ ನುಡಿವ ತುಚ್ಛರ ನುಡಿ ತಟ್ಟಬಲ್ಲುದೇ (ಸಿದ್ಧೇವ. ೨೧೫–೬೭೦). [ನಿಜ + ಐಕ್ಯ]

ನಿಜೈಕ್ಯಪದ (ನಾ). = ನಿಜೈಕ್ಯ ೧ : ನಿಮ್ಮ ಶರಣರು ಲಿಂಗನೆನಹೆಂಬ ಕಿಚ್ಚ ಹಿಡಿಯಲು ಅಂಗಜನ ಅರಮನೆ ಬೆಂದು ಭವ ಹೆಱೆಹಿಂಗಿತ್ತು ನೋಡಾ ಇದೇ ಲಿಂಗದೊಲವು ನಿಜೈಕ್ಯಪದ ಉಳಿದವೆಲ್ಲಾ ಹುಸಿಭ್ರಮೆ ಕಾಣಾ (ಸಿದ್ಧೇವ. ೪೨–೧೧೫). [ನಿಜೈಕ್ಯ + ಪದ$_2$]

ನಿಜೈಕ್ಯಾನುಭಾವ (ನಾ). [ವೀಶೈ] ಶಿವನೇ ನಾನು ಎಂಬ ವಸ್ತು ಸ್ಥಿತಿಯನ್ನು ತನ್ನ ಮನಸ್ಸಿನಲ್ಲಿ ದೃಢವಾಗಿ ಅಳವಡಿಸಿಕೊಳ್ಳುವುದು ಮತ್ತು ಈ ಐಕ್ಯಾನುಸಂಧಾನದಿಂದ ಉಂಟಾಗುವ ಆನಂದಾನುಭವ : ಇಷ್ಟಲಿಂಗಸಂಬಂಧ . . . ಪ್ರಾಣದ ಮಱೆ ಜ್ಞಾನ ಇಂತೀ ಗುಣಂಗಳ ಏಕವ ಮಾಡಿ ಉಭಯದ ದೃಷ್ಟಕ್ಕೆ ಒಡಲಿಲ್ಲದೆ ನಿಂದುದೆ ನಿಜೈಕ್ಯಾನುಭಾವ (ಮೋಳಿಮಾ. ೧೧೨–೪೪೩).

[ನಿಜೈಕ್ಯ + ಅನುಭಾವ]

ನಿಜೋಜ್ವಲ, ನಿಜೋಜ್ವಳ (ನಾ). ಸಹಜವಾಗಿ ಪ್ರಕಾಶಿಸುವಂಥದು ; ಸಹಜವಾಗಿ ಇರುವಂಥದು : ಕೇಶಿರಾಜನು . . . ಕನ್ನಡದಲ್ಲಿ ನಿಜೋಜ್ವಲವಾಗಿ ಹಲವು ಮಹಾಪ್ರಾಣಗಳಿವೆಯೆಂದು ಹೇಳಿದನು (ಭಾಷಾಶಾ. ೧೦೮). **ನಿಜೋಜ್ವಳ** : ಒಳವು ಮಹಾಪ್ರಾಣಂಗಳ್ವಿಳಸತ್ಕರ್ಣಾಟಭಾಷೆಯೊಳ್ ಕೆಲವು ನಿಜೋಜ್ವಳಮಾಗಿ (ಶಮದ. ೧೫).

[ಸಂ.]

ನಿಜೋಜ್ವಳ 'ನಿಜೋಜ್ವಲ' ನೋ.

ನಿಜೋತ್ತಂಸ (ನಾ). ತನ್ನ ಶಿರೋಭೂಷಣ,—ತಲೆಯ ಒಡವೆ : ದಶಕುಲಧರ್ಮನಿರ್ಮಳರೆನಿಸಿದ ಸುಧರ್ಮಾಚಾರ್ಯರ ಪಾದಪದ್ಮಮಂ ನಿಜೋತ್ತಂಸಂಗಳಂ ಮಾಡಿ ತದೀಯ ಪಾದಪದ್ಮಂಗಳಂ ಕರಪಲ್ಲವಂಗಳಿನೊತ್ತುತ್ತುಂ (ಸುಕುಮಾ. ೩-೪೪ ಪ). [ನಿಜ+ಉತ್ತಂಸ]

ನಿಜೋದಾರತೆ (ನಾ). ತನ್ನ (ವಿಶೇಷವಾದ) ಉದಾರಗುಣ,—ಔದಾರ್ಯ : ಜನಿತ ಪ್ರಗಲ್ಭದೊಳ್ ಮಾಂತನದೊಳ್ ಮಾಹಾತ್ಮ್ಯದೊಳ್ ನಿಜೋದಾರತೆಯೊಳ್ ಅನುಪಮಗುಣದೊಳ್ ಶ್ರೀಶಂ ಘನಮೆನೆ ಮಾಲೋಪಮಾನಭೇದಮಿದಕ್ಕುಂ (ಕವಿರಾ. ೩-೮೧).

[ನಿಜ+ಉದಾರತೆ]

ನಿಜೋನ್ನತಿ (ನಾ). ಸ್ವಂತ ಹಿರಿಮೆ,—ಅಗ್ಗಳಿಕೆ : ಈಸು ಮಹಿಮೆಯ ಮಱೆಸಿ ಲೋಕವಿಳಾಸಚೇಷ್ಟೆಯನನುಸರಿಸಿ ನರವೇಷವನು ನಟಿಸಿದನು ಹರಿ ಹೂಳಿದ ನಿಜೋನ್ನತಿಯ (ಕುಸ್ಯಾಸ. ೧೧-೨೩).

[ನಿಜ+ಉನ್ನತಿ]

ನಿಜೌನ್ನತ್ಯ (ನಾ). = ನಿಜೋನ್ನತಿ : ಬಿಡದೆ ಬಿಡಲೊಂದೊಂದ ನುಂಗಿ ನುಂಗಿದವು ಬಳಿಕೆಡವಿಡದೆ ಝೇಂಕೃತಂ ಭೀಂಕೃತಂ ಭೂತ್ಕೃತಂ ಹೊಡಳರಿಸೆ ಕಾದಿದರು ಹರಿಯಜರು ಖಂಡಿತನಿಜೌನ್ನತ್ಯ ಕಲ್ಪಕುಜರೂ (ವೀಶೈಪು. ೩-೧೨-೯). [ನಿಜ+ಔನ್ನತ್ಯ]

ನಿಜ್ಜರ (ನಾ). ಮುಪ್ಪಿಲ್ಲದವನು ; ಜರೆಯಿಲ್ಲದವನು ; ದೇವತೆ: 'ನಿಜ್ಜರವನಿತೆ' ಪರಾ. [<ಸಂ. ನಿರ್ಜರ]

ನಿಜ್ಜರವನಿತೆ (ನಾ). ದೇವತೆ ; ದೇವತಾಸ್ತ್ರೀ : ಮಜ್ಜನವಡಿಸಿ ಸುವರ್ಣಶೂರ್ಪದೊಳಾಂತು ಸೆಜ್ಜೆಗೆ ತಂದರಾ ಶಿಶುವ ನಿಜ್ಜರವನಿಕೆ[ತೆ]ಯ ಪಕ್ಕದೊಳಿಟ್ಟರು ಸಜ್ಜಾತ ಶ್ರೀಕೃಷ್ಣನಂತೆ (ಮೋಹತ. ೧೭-೨೩).

[ನಿಜ್ಜರ+ವನಿತೆ]

ನಿಜ್ಜವಣೆ (ನಾ). [ನಾಟ್ಯ] ನೃತ್ಯದ ಒಂದು ಭಂಗಿ ; ದೇಶೀಲಾಸ್ಯದ ನಂದ್ಯಾವರ್ತವೆಂಬ ಸ್ಥಾನವಿಶೇಷದಲ್ಲಿ ಮೊಳಕಾಲುಗಳನ್ನು ಎರಡು ಕಡೆಗಳಲ್ಲೂ ಬಗ್ಗಿಸಿಕೊಂಡಿರುವುದು : ಭಂಗಿಯನಾಳೆ ನಿಜ್ಜವಣೆ ರೇಖೆ[ಪಾಠಾಂ.ಣ ರಾಜಿ] ಮನೋಹರಮಾಗೆ ರೂಪು ಚೆಲ್ವಿಂಗೆಡೆಯಾಗೆ ತಾಳದನುಕೂಳತೆಯಿಂ ವಳನೋರುವರ್ತನಂ ಸಂಗತಮಾಗೆ ಗೀತದೊಳಮೊಂದಿದ ವಾದ್ಯದೊಳಂ ಲತಾಂಗಿ ಸರ್ವಾಂಗದೆ ಪಾಡುವಂತೊಸೆದು ಬಾಜಿಸುವಂತೆವೊಲಾಯ್ತು ನರ್ತನಂ (ಪಾರ್ತ್ವಪು.೧೨-೨೮); ಪಯಪಾಡು ನಿಜ್ಜವಣೆ ಚಾಳೆಯಮುಲ್ಲಾಸಂ ತಿರಿಂಪು ತಡವಿತ್ತಡಮುನ್ನಯನವಿಶೇಷಂ ಡಿಳ್ಳಾಯಿಯ ಲುಳಿ ಪುದಿದುಸುರಮೆಸೆವಿನಂ ನರ್ತಿಸಿದಳ್ (ಧರ್ಮಪ. ೨-೨೬). [<ಸಂ. ನಿಜವಣಾ]

ನಿಜ್ಜಾಡಿಸು 'ನಿರ್ಧಾಟಿಸು' ನೋ.

ನಿಜ್ಜೋಡು (ನಾ). ಸರಿಯಾದ ಹೊಂದಿಕೆ ; ವಿಶೇಷವಾದ ಹೊಂದಾಣಿಕೆ : ಧರ್ಮಜನ ಸತ್ಯಾಭ್ಯುದಯಕೋಸುಗ ಊರ್ಪಶಿಯ ಶಾಪದಲಿ ಬಂದುದು ಹೊತ್ತು ನೂಕಿದೆನೊಂದುವತ್ಸರವ, ಇದಕೆ ನಿಜ್ಜೋ[ಪಾಠಾಂ.ನಲ್ಜೋ]ಡಾಯ್ತು, ನಿರ್ವಿಘ್ನದಲಿ ನೂಕಿದೆವವಧಿಯನು ತನ್ನದಟುತನವನು ಭೀತಿಗೊಳ್ಳದೆ ನೋಡು (ಕುಸ್ಯಾವಿ. ೬-೪೮).

[<ನಿಡಿದು$_1$+ಜೋಡು]

ನಿಟ್, ನಿಡಿ$_1$, ನಿಡು (ಸಪೂರೂ) 'ನಿಡಿದು' ಎಂಬುದಕ್ಕೆ ಸಮಾಸಗಳಲ್ಲಿ ಬರುವ ಆದೇಶರೂಪ. 'ನಿಟ್ಟಾಲಿ' ಪರಾ. **ನಿಡಿ$_1$** : 'ನಿಡಿಗರುಳು' ಪರಾ. **ನಿಡು** : ಬಿಸು, ಕಿಱು, ನಿಡು ಇತಿ ಇನಾದಿರಾ ಕೃತಿಗಣಃ (ಶಬ್ದಾನು. ೩೩೪ ಪ್ರಯೋ). 'ನಿಡುಗರುಳ್' ಪರಾ.

[<ನಿಡಿದು$_1$]

ನಿಟಂಬ (ಅ). ಉದ್ದಕ್ಕೆ ; ಸಾಷ್ಟಾಂಗವಾಗಿ : "ಮಗು ತಾಯಿಯ ಬಳಿಯಿಂದ ಎಷ್ಟುದಿನ ದೂರ ಉಳಿದೀತು" ಎಂದು ಆತ ಹೇಳಿದಾಗ ಕೋನಮ್ಮನಿಗೆ ದುಃಖ ತಡೆಯುವುದಕ್ಕಾಗಲಿಲ್ಲ. ಕ್ಷಣಾರ್ಧದಲ್ಲಿಯೇ ಅವರ ಕಾಲಿಗೆ 'ನಿಟಂಬ' ಅಡ್ಡಬಿದ್ದಳು (ಕೈಮಾಂಸ. ೯೭). [?]

ನಿಟಲ, ನಿಟಳ$_1$ (ನಾ). = ನಿಟಲ. **ನಿಟಳ$_1$** : ವೀರಲಕ್ಷ್ಮಿನಿಟಳಾಗ್ರಲಲಾಮನಾಶ್ರಿತೋತ್ಸವಕರಂ (ಸೌಇಇ. XX, ೭೬-೭೦ ; 1118). [ಸಂ.]

ನಿಟಳ$_1$ 'ನಿಟಲ' ನೋ.

ನಿಟಳ$_2$ (ನಾ). ಒಂದು ಬಗೆಯ ಮರ ; ತಡಸು : "ತಡಸು ನಿಟಳಂ" (ಮಂಗರಾ. ೩೬-೧೮). [?]

ನಿಟಾಲ (ನಾ). = ನಿಟಲ : ಅಂಗುಲಿಗಳುಂ ಕಟಿ ನಿಟಾಲ ಚುಬುಕ . . . ಕಕುದ ಗಂಡಂಗಳುಂ ಸಂಘಟಪವೈದನೆಯ ತಿಂಗಳೊಳ್ಗರ್ಭಸ್ತಮಾದ ಪಿಂಡಕ್ಕಮೈದೆ (ವೆಂಕಾರಾ. ೨-೩೫-೭). [ಸಂ.]

ನಿಟಾಲಾಕ್ಷಿ (ನಾ). ಹಣೆಯ ಕಣ್ಣು ; ನಿಟಲಾಕ್ಷಿ : ಪ್ರಳಯರುದ್ರನ ನಿಟಾಲಾಕ್ಷಿ ಸಂಭವಜ್ವಲೋಜ್ವಳವೀತಿಹೋತ್ರಸ್ಫುಲಿಂಗಪಾತನದಿಂದ ಚಿಳಿಚಿಳಿಲೆನುತ ಬ್ರಹ್ಮಾಂಡಂಗಳೊಡೆವಂತೆ . . . ಸಿಡಿದು (ವೆಂಕಾರಾ. ೩-೬-೧೯). [ನಿಟಾಲ+ಅಕ್ಷಿ]

ನಿಟಲ್, ನಿಟಲು$_1$ (ನಾ). ಒಂದು ಅನುಕರಣ ಶಬ್ದ : ಕಟವಾಯ್ಗೆ ಕೈಯನಿಟ್ಟಿರದೆರಳ್ ಸೀಳಾಗಿ ನಿಟನೆರಿಲ್ ನಿಟಲೆನಲ್ ನಿಟ್ಟೆಲು ವನುಱೆ ಮುಱಿದು (ಚಿಬಪು. ೨೧-೬) ; ಅನುಕರಣಾವ್ಯಯಗಳು — ಗಟಗಟ, ಕವಕವ . . . ನಿಟಲ್, ಪಠಿಲ್ . . . ದುಢುಮ್ಮನೆ ಇತ್ಯಾದಿ (ಕೈಪಿಡಿ. ೫೨). **ನಿಟಲು$_1$** : ಧಂಧಗಂ ಘುಳುಘುಳು ಛಟಲ್‌ಛಟಲೆಂಬ ಕಟಿ ಪಟಿ ನಿಟಲು ನಿಱಿಲೆಂಬ . . . ಧ್ವನಿಗಳವನಿಗೆ ಭಯವನೀವುತಿರೆ (ಸಾನಂಚ. ೮-೧೩).

ನಿಟಲ, ನಿಟಳ (ನಾ). ಹಣೆ ; ನೊಸಲು : ಕೋಮಲಶ್ಯಾಮಲಚ್ಛಾಯಾಕಾಯಮುಪನಿಟಲಕುಟಲಘಟತಜೂಟಬಂಧಮುಂ (ಅದಿಪು. ೧೩-೪೫ ಪ) ; ನಿಟಲನ್ಯಸ್ತಕರಾಬ್ಜಸಂಪುಟ ವಿನಮ್ರಾತ್ಮಾಂಗರಂ ಭಕ್ತಿಲಂಪಟರಂ ತನ್ಮುನಿ ಧರ್ಮವೃದ್ಧಿ ನಿಮಗೆಂದಾ ನಾಲ್ವರಂತಸ್ತಮಃಪಟಮಂ ಪಿಂಗಿಸಿ (ಶಾಂತಿಪು. ೭-೯) ; ನಿಟಲಂ ರುಂದ್ರಾರ್ಧಚಂದ್ರಾಭಂ (ಸುಕುಮಾ. ೫-೫೩) ; ಬೆದಱೆ ಮನಂ ವನಸ್ಥಲದೊಳೊಂದಿಭಮಿರ್ದುದು ಮೂರ್ಧಪಿಂಡಮಲ್ಲಿದು ಶಿಖರಸ್ಥಲಂ ನಿಟಲವಲ್ಲಿದು ಪಾಸಱೆ . . . ಮದಗಜವಲ್ಲಿದಿಂದ್ರನೊಳಿದಿರ್ಚಿದ ನೀಲನಗೇಂದ್ರಮೆಂಬಿನಂ (ಪಂಠಾಮಾ. ೧೦-೧೫೯) ; ಬಾಲಪ್ರವಾಳೋಷ್ಠನುತ್ಪಳಪತ್ರಾಂಬಕನಷ್ಟವಿಂದು ನಿಟಲಂ [ಪಾಠಾಂ. ಳಂ] . . . ಉಜ್ವಳಕೇಶಂ ಧರಣೀಶಸೂನುತಳೆದಂ ಸಾಶ್ಚರ್ಯಸೌಂದರ್ಯಮಂ (ಚಂದ್ರಪು. ೪-೭). **ನಿಟಳ** : "ನಿಟಳಂ ಭಾಳಂ ಅಳಿಕಮಱಿಗೆ ಲಲಾಟಂ" (ವಸ್ತುಕೋ. ೭೦-೧೮) ; ಸಂತೋಷದಿಂ ಬೀಗಿದಂತುಚ್ಚಮಾದ ನಿಟಳಮುಮಂ ವಕ್ಷಸ್ಥಳಮುಂ . . . ಸೊಗಯಿಸುವ ರೂಪುಂ ಗಾಡಿಯುಮಖಿಳಲೋಕಾಶ್ಚರ್ಯಮಾಗೆ (ವರ್ಧಮಾ. ೭-೭೩ ಪ).

ನಿಟಳನಿಹಿತಾಂಜಳಿ = ಕೈಗಳನ್ನು ಬೊಗಸೆಯಾಗಿ ಜೋಡಿಸಿ ಹಣೆಯ ಬಳಿ ಇಟ್ಟುಕೊಂಡವನು ; ಕೈಮುಗಿದವನು : ಅಂತು ನಿಂದು ಪುಷ್ಪಾಂಜಲಿವಿಕ್ಷೇಪಮಂ ಮಾಡಿ ನಿಟಳನಿಹಿತಾಂಜಳಿಯಾಗಿ (ಚಂದ್ರಪು. ೧೨-೧೭೫ ಪ). [ಸಂ.]

ನಿಟಲಂದೆಱೆ (ಕ್ರಿ). (ಆಲಂ) ಹಣೆಗಣ್ಣನ್ನು ತೆರೆ,—ತೆಗೆ : ಹಂಪೆಯರಸಂ ನಿಟಲಂದೆಱೆಯಲ್ ಬಳಿಕ್ಕ . . . ಎತ್ತಣ ತ್ರಿದಶಸಂಕುಳವೆತ್ತಣ ಭಾಸ್ಕರೇಂದುಗಳ್ (ಪಂಪಾಶ. ೩೮).

[ನಿಟಲ+ತೆಱೆ$_1$]

ನಿಟಲತಟ, ನಿಟಳತಟ (ನಾ). ಹಣೆಯ ಪ್ರದೇಶ; ನೊಸಲು : ಉಪನಯನಾನಂತರಮೊಂದುಪನಯನಂ ನಿಟಲತಟದೊಳುಂಟೆನೆ (ಮಲ್ಲಿಪು. ೪-೧೩೮) ; ನಿಟಲತಟದೊಳುಯ್ಯಲಾಡುವ ಮುಂಗುರುಳನುಗುರ್ಗೊನೆಯಿಂ ತಿರ್ದಿಯುಂ (ರಾಮಾಶ್ವ. ೨೦-೧೫). **ನಿಟಳತಟ :** ಏಕಾಗ್ರಚಿತ್ತದೊಳ್ ಏಕಪಾರ್ಶ್ವದೊಳ್ ಮೆಯ್ಯನಿಕ್ಕಿ ನಿಟಳತಟಘಟಿತಕರಪುಟಯುಗಲನುಂ ಧರ್ಮಧ್ಯಾನೋಪಯೋಗನುಮಾಗೆ(ಸುಕುಮಾ.೧೨-೧೮ ಪ); ಪಂಡಿತತತಿವಿನತಂ ಮಾಘನಂದ್ಯಾಖ್ಯವಾಚಂ ಯಮಿರಾಜಂ ವಾಗ್ವಧೂಟೀ ನಿಟಳತಟಹಟನ್ನೂತ್ನಸದ್ರತ್ನ ಪ × × × (ಎಕ. II, ೬೪-೬೬ ; 1163) ; ನಿರ್ಭರಭಕ್ತಿಯಿಂ ನಿಟಳತಟಘಟಿತಕರಸರೋಜನಾಗಿ (ಪುಷ್ಪಪು. ೯-೨ ಪ).

[ನಿಟಲ + ತಟ$_3$]

ನಿಟಲತಟನಯನ (ನಾ). ೧. ಹಣೆಯಲ್ಲಿ ಇರುವ ಕಣ್ಣು ; ಹಣೆಗಣ್ಣು : ನಿಟಲತಟನಯನನ ನಿಟಲತಟನಯನಶಿಖಿಯಿಂದ ಪಟುಪುರಂಗಳು ಬೇವವೋಲುತ್ಕಟವೆನಿಸಿ (ಬಸಪು. ೫೬-೩೨). ೨. ಹಣೆಯಲ್ಲಿ ಕಣ್ಣುಳ್ಳವನು ; ಹಣೆಗಣ್ಣ ; ಶಿವ : ನಿಟಲತಟನಯನನೆ ನಿಟಲತಟನಯನಶಿಖಿಯಿಂದ ಪಟುಪುರಂಗಳು ಬೇವವೋಲು (ಬಸಪು.೫೬-೩೨).

[ನಿಟಲತಟ + ನಯನ]

ನಿಟಲದೃಕ್ಕು (ನಾ). = ನಿಟಲತಟನಯನ ೧ : ನಿಟಲದೃಗ್ವಿಸ್ಫುಲಿಂಗಾಕೀರ್ನಶಮನ ತಜ್ಜಟಿಯ ಗಂಗಾಬಿಂದು ನಾಟ್ಯಲೀಲಾಮಹೋತ್ಕಟ ಶಾಂತಮಲ್ಲೇಶ ಜಯಸುಪ್ರಕಾಶ (ವೀಶ್ಶಿಪು. ೫-೧೮-೧).

[ನಿಟಲ + ದೃಕ್ಕು]

ನಿಟಲನಯನ (ನಾ). ೧. = ನಿಟಲತಟನಯನ ೧ : ನಿಟಲನಯನವನುಳಿದ ಬಲುಧೂರ್ಜಟಿಗಳಂದದಲೆಸೆವ ತನ್ನಯ ತಟದ ತಾಪಸನಿಕರದಾ ನದಿಯಿತ್ತಡಿಯಲೆಸೆವ ಉಟಜವನು ನೋಡುತ್ತ . . . ದೂರದಲಿ ಕಂಡನು ಕರ್ದಮವ್ರತಿಯ (ನಿಭಾಗ. ೩-೧೦-೨೧). ೨. = ನಿಟಲತಟನಯನ ೨ : ತಾನೆಯೆಲ್ಲಾ ಇನ್ನು ಗುಗ್ಗುಳವೀ ನಿಟಲನಯನಂಗೆ ಈ ಕಾಲಾನುಕೂಲಕ್ಕೆನುತ (ಬಸಪು.೪೪-೨೦) ; ನಿಟಲನಯನಪ್ರತಿಮತನುವಾಘಟದೊಳಗೆ ಕೈದುಡುಕಿ ಪಟುದುರ್ಘಟಿಗರಳಧರನಂ ಪಿಡಿಪಿಡಿದು ತೆಗೆವ ಸಮಯದಲಿ (ಬಸಪು. ೫೧-೬೧). [ನಿಟಲ + ನಯನ]

ನಿಟಲನೇತ್ರ (ನಾ). = ನಿಟಲತಟನಯನ ೨ : ನಿಟಲನೇತ್ರನ ಭುಜಬಲಕೆ ಸಮಜೋಳಿ ಗಡ ನೀವು (ಕುವ್ಯಾಭೀ. ೯-೩೨) ; ನಿಟಲನೇತ್ರನ ದೇವಿಸುತನೇ ನಾಗಭೂಷಣಪ್ರಿಯನೇ ತಟಲ್ಲತಾಂಕಿತ ಕೋಮಲಾಂಗನೆ ಕರ್ಣಕುಂಡಲಧಾರನೆ . . . ಪಕ್ಷಿವಾಹನ ಸಿರಿಪುರಂದರವಿಟ್ಠಲನ ನಿಜದಾಸನೆ (ಪುರಂದ. ೧-೫-೧). [ನಿಟಲ + ನೇತ್ರ]

ನಿಟಲಲೋಚನ (ನಾ). = ನಿಟಲತಟನಯನ ೨ : ಆ ಶಿವಜ್ಞಾನಪ್ರಭೆಯೊಳಗೆ ನಿಟಲಲೋಚನನೆಂಬ ನಿತ್ಯನನು ಕಂಡು ಅದೇ ಎನ್ನ ನಿಜವೆಂದು ಬೆರಸಿ ಅಭಿನ್ನಸುಖಿಯಾಗಿದ್ದೆನಯ್ಯಾ (ಸಿದ್ಧೇಶ.೩೩-೮೪) ; ಕುಟಿಲತನದಲಿ ಗೆಲುವೆನೇ ಹುಲುಕುಟಗರವದಿರ ಹೊಯ್ದು ತನ್ನನು ನಿಟಲಲೋಚನನಡ್ಡ ಹಾಯ್ದರೆ ಹಿಡಿವೆನೆನುತೆಚ್ಚ (ಕುಮ್ಯಾದ್ರೋ. ೨-೩೬) ; ನೀನಲಾ ಪೂರ್ವದಲಿ ಕಾಮನು ತಾನಲಾ ರತಿ ನಿನ್ನ ಸತಿ ಮುನಿದಾ ನಿಟಲಲೋಚನನು ಸುಟ್ಟಡೆ ಬೆಂದು ಮತ್ತಿಂದು ಮಾನನಿಧಿ ಜನಿಸಿದೆ ಮುಕುಂದನ ಮಾನನಿಗೆ ಮಗನಾಗಿ (ನಿಭಾಗ. ೧೦-೬೬-೧೨). [ನಿಟಲ + ಲೋಚನ]

ನಿಟಲಲೋಚನೆ (ನಾ). ಹಣೆಯಲ್ಲಿ ಕಣ್ಣುಳ್ಳವಳು ; ದುರ್ಗಾದೇವಿ ; ಆದಿಶಕ್ತಿ ; ಪಾರ್ವತಿ : ಪಟುತರಚಿತ್ತೆ ನಿಟಲಲೋಚನೆ ವಟವೃಕ್ಷದ ಕೆಳಗೆ . . . ಘೋರತಪದೊಳ್ ನಿಂದಳ್ (ಗಿರಿಕ.೯-೩೫ ಪ) ; ನಿಟ್ಟಸುತಯೆಡಬಲನ ನಿಟಲಲೋಚನೆಯು (ಕರಿಕ. ೨೫-೫).

[ಸಂ. ನಿಟಲಲೋಚನಾ (ನಿಟಲ + ಲೋಚನ + -)]

ನಿಟಲಾಂಬಕ (ನಾ). = ನಿಟಲತಟನಯನ ೨ : ನಿಂದಿಯಕ್ಕನೆನಲ್ಕೆ ಶರಣಪದಾಂಬುರುಹಸೇವಾನಿರತೆ ನಿಟಲಾಂಬಕಧ್ಯಾನಪ್ರಮತ್ತೆ (ಬಸಪು. ೨೪-೧). [ನಿಟಲ + ಅಂಬಕ]

ನಿಟಲಾಕ್ಷ (ನಾ). ಹಣೆಗಣ್ಣ ; ಶಿವ : ಅಕ್ಷಯಂ ನಿಟಲಾಕ್ಷನಭವಂ ದಕ್ಷ ದಕ್ಷಮಖಕ್ಷಯಕ್ಷಮನುಕ್ಷಗಂ ಪ್ರತ್ಯಕ್ಷವಾಗಿ ಸಮಕ್ಷದಲಿ ನಿಂದು (ಬಸಪು. ೨೬-೩೨) ; ಕುಟಿಲಕುಹಕವ ಮಾಡದಾತ ಭಕ್ತ ನಿಟಲಾಕ್ಷನ ಧ್ಯಾನದಲ್ಲಿ ಇದ್ದಾತ ಭಕ್ತ (ಆಖಂಡೇ. ೭೬-೫೩).

[ಸಂ. (ನಿಟಲ + ಅಕ್ಷಿ + -)]

ನಿಟಲಾಕ್ಷಿ, ನಿಟಳಾಕ್ಷಿ (ನಾ). ಹಣೆಯಲ್ಲಿರುವ ಕಣ್ಣು ; ಭಾಳನೇತ್ರ: ನಯನಯುಗದಿಂ ಜಗವ ಪೊರೆದು, ನಿಟಲಾಕ್ಷಿಯಿಂ ಲಯವಡಿಸುವುದದೇನು ಶಿವಯೋಗಲೀಲೆ ? (ಮಂಕುಕ. ೬೧೩). **ನಿಟಳಾಕ್ಷಿ :** ಹರನ ನಿಟಳಾಕ್ಷಿವಹ್ನಿ × × ಣಂ ಮುರಹರನ ಚಕ್ರಮಬ್ಬಜಪಾಶಂ . . . ಎನಿಪುದು ಧುರದೊಳ್ರಿಪುನೃಪರ್ಗೆ ಗೋನಭೂಪನ ಕರವಾಳ್ (ಎಕ. VIII, ಸಾಗರ. ೧೦೯-೧೬ ; 1042). [ನಿಟಲ + ಅಕ್ಷಿ]

ನಿಟಲಾಗ್ರ (ನಾ). ಹಣೆಯ ಮೇಲುಭಾಗ : ನಿಟಲಾಗ್ರದೊಳ್ ಪೊದಟ್ಟಂಜನರೇಖೆ ಕಣ್ಗೆಸೆಯೆ (ಸುಕುಮಾ. ೧೦-೩೮). [ನಿಟಲ + ಅಗ್ರ$_1$]

ನಿಟಲು$_1$ 'ನಿಟಲ್' ನೋ.

ನಿಟಲು$_2$ 'ನಿಡಿಲು' ನೋ.

ನಿಟಲೇಕ್ಷಣ (ನಾ). = ನಿಟಲಾಕ್ಷಿ : ಕೋಪಂ ನಾಡೆಯುಮೊತ್ತರಿಸಿ ನೀಳ್ದು ನಿಟಲೇಕ್ಷಣದೊಳ್ ಕೂಡೆ ಬಳೆಬಳೆದು ಸುಳಿಸುಳಿದೀಡಿಱಿದೊಳಗೊಳಗೆ ಘುಳುಘುಳಿಸಿ ಕುದಿದಾಗಳ್ (ಗಿರಿಕ. ೮-೪೬). [ನಿಟಲ + ಈಕ್ಷಣ]

ನಿಟಳ 'ನಿಟಲ' ನೋ.

ನಿಟಳತಟ 'ನಿಟಲತಟ' ನೋ.

ನಿಟಳಾಕ್ಷಿ 'ನಿಟಲಾಕ್ಷಿ' ನೋ.

ನಿಟ್ಟಡಕಿಲ್, ನಿಟ್ಟಡಕಿಲು (ನಾ). ಎತ್ತರವಾದ ರಾಶಿ ; ಎತ್ತರವಾಗಿ ಒಂದರ ಮೇಲೊಂದರಂತೆ ಇಟ್ಟಿರುವುದು : ಕಟ್ಟಾಳ್, ನಿಟ್ಟಡಕಿಲ್ (ಭಾಷಾಭೂ. ೧೪೦ ಉದಾ) ; ಟಕಾರಕ್ಕೆ—ನಿಟ್ಟಡಕಿಲ್, ನಿಟ್ಟರ್ಕೆ (ಶಮದ. ೧೮೧ ಪ್ರಯೋ). **ನಿಟ್ಟಡಕಿಲು :** ಪಕ್ಕದ ನಿಟ್ಟಡಕಿಲ ಮೇಲಡ್ಡಣದ ಮೇಗೆ ದಾಡಿಯನ್ನಿರಿಸಿ (ಮಂತ್ರಶ. ೧೫೪-೪).

[ನಿಟ್(<ನಿಡಿದು$_1$) + ಅಡಕಿಲ್]

ನಿಟ್ಟಡಕಿಲು 'ನಿಟ್ಟಡಕಿಲ್' ನೋ.

ನಿಟ್ಟಡಕಿಲ್ವಲೆ (ನಾ). ಒಂದು ಬಗೆಯ ಬಲೆ : ತಡಿಕೆವಲೆ ಕಣ್ಣೆವಲೆ ನಿಟ್ಟಡ[ಪಾಠಾಂ. ಡಿ,ಡು]ಕಿಲ್ವಲೆ ಗೂಂಟವಲೆ . . . ನಿಡುವಲೆ ಗಳೊಪ್ಪಿದವು (ಗಿರಿಕ. ೧-೮೦). [ನಿಟ್ಟಡಕಿಲ್ + ಬಲೆ$_1$]

ನಿಟ್ಟಡಿ (ನಾ). ದೂರದೂರಕ್ಕೆ ಹೆಜ್ಜೆಯಿಡುವುದು ; ದಾಪುಗಾಲು: ನಿಟ್ಟಡಿಯಿಂದ ಹೋಗಿ, ಚೆನ್ನನಿಗೆ ನಿಂತು, ಆತನಿಗೆ ನಡುಗಣ್ಣಾಗಿದ್ದು, ಮಿಕ್ಕಿನವರ್ಗಳನ್ನೆಲ್ಲ ಪರಿಕಿಸಿ (ಮಂತ್ರಶ. ೮೨-೪).

[ನಿಟ್(<ನಿಡಿದು$_1$) + ಅಡಿ$_1$]

ನಿಟ್ಟಯಿಸು 'ನಿಟ್ಟಸು' ನೋ.

ನಿಟ್ಟಯ್ದೆ, ನಿಟ್ಟೆಯ್ದೆ, ನಿಟ್ಟೈದೆ (ನಾ). ಬಹುಕಾಲ ಸುಮಂಗಲಿಯಾಗಿರುವವಳು,— ಮುತ್ತೈದೆಯಾಗಿರುವವಳು ; ದೀರ್ಘ ಸುಮಂಗಲಿ : ಅಯ್ದುಂವದನನ ಕಾಂತೆಯನೆಯ್ದಿ . . . ಮುತ್ತಯ್ದೆಯೆ ನಿಟ್ಟಯ್ದೆ [ಪಾಠಾಂ. ಟ್ಟೈದೆ]ಯೆ ನೆಱೆಯಯ್ದೆಯೆ ಸಲೆಯಯ್ದೆಯೆಂದು ಪರಸುತ್ತಿರ್ದರ್ (ಗಿರಿಕ. ೧೦-೯೭) ; ದ್ವಿತ್ವಕ್ಕೆ—ನಿಟ್ಟಯ್ದೆ, ನಿಟ್ಟೆಸಱ್ (ಶಮದ. ೧೮೧ ಪ್ರಯೋ). **ನಿಟ್ಟೆಯ್ದೆ :** 'ನಿಟ್ಟೆಯ್ದೆತನ' ಪರಾ. **ನಿಟ್ಟೈದೆ :** ಜಗವೆಲ್ಲ ಅಱಿಯಲು

ಎನಗೊಬ್ಬ ಗಂಡನುಂಟು ಅನು ಮುತ್ತೈದೆ ಅನು ನಿಟ್ಟೈದೆ (ಬಸವ. ೫೦೩) ; ಒಪ್ಪುವ ನಿಟ್ಟೈದೆಯರೊಗ್ಗು ರಂಜಿಸಿದುದು (ಉದ್ಭಟ. ೪-೫೪) ; ನಿಟ್ಟೈದೆ ನುಡಿದಳೆಲೆ ರಾಯ ಜಾತಿಸ್ಮರಣೆ ಹುಟ್ಟದೇ ನಿನಗೆ ಕೇಳೆಂದು ಪೂರ್ವದ ಕಥೆಯ ಬಿತ್ತರಿಸಿದಳು ಮಾನಿನಿ (ವೀಶ್ವಪು. ೨-೬-೧೬); ಕಟ್ಟ ವಿಷಯಾಪಾಶದಿಂ ನಿಟ್ಟೈದೆಯರ ಪಟ್ಟಗಟ್ಟ ಜಾರರ ದೇಶ ಕಟ್ಟ ವೀರರ . . . ಹುಟ್ಟುಗಡಲೊಳ್ ತಿರುಗಿಸುವ ಕಾಮನಖಿಳಜನರ (ಪತಿಲ. ೨-೨೭).

ನಿಟ್ಟೆಯ್ದೆಯಾಗು, ನಿಟ್ಟೈದೆಯಾಗು = ದೀರ್ಘಸುಮಂಗಲಿಯಾಗಿ ಬಾಳು ; ಬಹುಕಾಲ ಮುತ್ತೈದೆಯಾಗಿರು : ನಿಟ್ಟೆಯ್ದೆಯಾಗು ಪತಿಯೊಳ್ ತೊಟ್ಟನನುವಶೆಯಾಗು ಶೀಲವತಿಯಾಗು . . . ನೀನೆಂದಿಟ್ಟರ್ ಸೇಸೆಯಂ (ಕಾನ್ಯಾಪ. ೨೨೩); ಕಣಿದಿರುವ ಸೆಳೆವಂಗುಲಿಯ ಪರ್ವದಾ ನಿಮ್ನವಣಿಯರ ಧನೋನ್ನತ ಸುರೇಖೆಯುಳ್ಳವಳು ಧಾರುಣಿಯಲ್ಲಿ ನಿಟ್ಟೈದೆಯಾಗಿ ಬಾಳ್ವಳು ಕಣಾ (ವೀಶ್ವಪು. ೪-೨೩-೪೦).

[ನಿಟ್(<ನಿಡಿದು$_1$)+ಅಯ್ದೆ$_2$]

ನಿಟ್ಟೆಯ್ದೆತನ, ನಿಟ್ಟೆಯ್ದೆತನ (ನಾ). ಬಹುಕಾಲ ಸುಮಂಗಲಿಯಾಗಿ ಬಾಳುವುದು ; ಮುತ್ತೈದೆಯಾಗಿರುವುದು : ಭೂವನಿತೆ ಗೇಱುಂಜವ್ವನಂ ರಾಜ್ಯಲಕ್ಷ್ಮಿಗೆ ನಿಟ್ಟೆಯ್ದೆತನಂ ಜನಕ್ಕೆ ಪಸರಂ ತೇಜಕ್ಕೆ ಕಾಯ್ಪಾತನೆಂದ ಗುಣಂಗೊಳ್ಳುದು (ಎಇ. XIII, ೪೪-೩೨ ; 1112).

ನಿಟ್ಟೆಯ್ದೆತನ : ನಿಟ್ಟೆಯ್ದೆತನಂ ತನಗಳವಟ್ಟೇಚಲದೇವಿ ನ್ರುಪಂ ನರಸಿಂಹಂಗಾದಳು ಪಟ್ಟಮಹಾದೇವಿಯೆನಲು ನೆಟ್ಟನೆ ತತುಕಾಂತೆಯಂತೆ ನೋನ್ತರುಮೊಳರೇ (ಮೈಅರಿ. ೧೯೩೦, ೧-೩೧ ; ಸು. 1180).

[ನಿಟ್ಟೆಯ್ದೆ+-ತನ]

ನಿಟ್ಟೆಯ್ಸು (ಕ್ರಿ). ನೆಟ್ಟಗಾಗು ; ನೇರವಾಗು ; (ಮರವಟ್ಟು) ಸೆಡೆತುಕೊಳ್ಳು : ಕಾಪಿನಾಳ್ಗಳ್ ಬಳಿಗೆ ಬಪ್ಪನಿತರೊಳ್ ಕೆಂಜೊಡರ್ ವೆಳಗಿನೊಳ್ ಕಂಡುದಾಳ್ ಕಂಡುದಾಕೃತಿ, ಪೆಣನ ಮಾಳ್ಕೆಯಿಂ, ನಿಮಿರಿ ನಿಟ್ಟೆಯ್ಸು (ಶ್ರೀರಾಮಾ. ೬೦೩-೭೬). [<ನಿಡಿದು$_1$]

ನಿಟ್ಟೆರಿಸು (ಕ್ರಿ). = ನಿಟ್ಟೆಯ್ಸು : ಬಾಹುಗಳು ನಿಟ್ಟೆರಿಸಿದುವು (ದೌಲತ್. ೭೧). [?]

ನಿಟ್ಟೆರುಳಿ (ನಾ). ದೊಡ್ಡ ಅರಳಿಮರ,—ಅಶ್ವತ್ಥವೃಕ್ಷ : ಬಲಗೈ ನಡದು ಕಲ್ಮಲರುಳಿ ಕೊಲಿಗನ್ನೇಲ ಕಾರಱೆ ಎ ಇಟ್ಟಗೆ ಸೊಣೆ ಎ ಬಡಗೈ ನಿಟ್ಟೆರುಳಿ ಎ ಕರಡಿಗುಱುಕಿ ಮೇಲ ಕೋಡುಙ್ಗಲ್ (ಎಕ. X(s), ಚಿಕ್ಕಬ. ೬೬-೨೦ ; 850).

[ℙ ಇದು 'ನಿಟ್ಟರಳಿ' ಎಂಬುದರ ಅಪಲಿಖಿತವಿರಬಹುದು]

ನಿಟ್ಟವಧಿ (ನಾ). ಬಹುಕಾಲ ; ದೀರ್ಘಾವಧಿ: ನೆಟ್ಟನಾ ಧರ್ಮಾರ್ಥ ಕಾಮಮೋಕ್ಷಂಗಳಂ ಮೆಟ್ಟ ಹರ್ಯಜರಿಂದ್ರಪದವನೊದೆದಾವಗಂ ನಿಟ್ಟವಧಿ ವಿಧಿಗಳ ಶಿರೋಮಧ್ಯದೊಳ್ ನಿಂದು ಬಿನದಿಸುತ್ತ (ಭಾವಚಿಂ. ೧-೪). [ನಿಟ್(<ನಿಡಿದು$_1$)+ಅವಧಿ]

ನಿಟ್ಟಱೆ (ನಾ). ೧. ಎತ್ತರವಾದ ಬಂಡೆ ; ಹೆಬ್ಬಂಡೆ : ಕಗ್ಗಲ್ಲ ಸೆರೆಯ ನಿಟ್ಟಱೆ ಅದಱ ತದನಾಂತರ ಕುಂಟೆಯ ತಡಗೋಡ ಮೇಕೆಱೆಯಾಲ ಅದಱ ತದನಾನ್ತರ ಮುಕುಟ ಅಲದ ಹಾಳ ಅದರ ತದನನ್ತರ ಚೈಕೋಲ ತಾಟಮರ (ಸೌಇಇ. IX-1, ೪೧-೨೪ ; ಸು. 11ನೆಯ ಶತ).

[ನಿಟ್(<ನಿಡಿದು$_1$)+ಅಱೆ$_4$]

ನಿಟ್ಟಾಣಿ (ನಾ). ಉದ್ದವಾದ ಮೊಳೆ ; ದೊಡ್ಡ ಮೊಳೆ : ವಿಜಯನಾರಸಿಂಹನ ಕಟಬಂಧದೊರೆಯನ್ನು ಕಳಲ್ಚಿ, ಪುದಿಯ ಗೋಡೆಯ ನಿಟ್ಟಾಣಿಗೆ ನೇಲ್ದಗುಳ್ಚಿ (ಮಂತ್ರಶ. ೧೪೦-೧೧).

[ನಿಟ್(<ನಿಡಿದು$_1$)+ಆಣಿ$_3$]

ನಿಟ್ಟಾಯ (ನಾ). ಅಧಿಕವಾದ ಪರಾಕ್ರಮ : ಶ್ರೀಯಂ ಕೂರಿಸಲಾಜ್ಞೆಯಂ ಪಸರಿಸಲ್ . . . ದುರಿತಮಂ ನಿರ್ಮೂಲಿಸಲ್ ನಿಂದ ನಿಟ್ಟಾಯಂ ನಿಟ್ಟಸಲೊಳ್ಪನಪ್ಪಿ ತಣಿಸಲ್ಪೇಟ್ಪಂಗೆ ಬೇಟ್ಪೀ ಸುಖೋಪಾಯಂ ತ್ವಚ್ಚರಣಪ್ರಣಾಮಮಱಿದಂ ಶ್ರೀಮಜ್ಜಿನಾಧೀಶ್ವರಾ (ಲೀಲಾವ. ೩-೭೯) ; ನಿಡಿದು ಆಯಂ, ನಿಟ್ಟಾಯಂ (ಶಬ್ದಾನು. ೩೩೯ ಪ್ರಯೋ). [ನಿಟ್(<ನಿಡಿದು$_1$)+ಆಯ್$_3$]

ನಿಟ್ಟಾಯು (ನಾ). ೧. ದೀರ್ಘವಾದ ಬಾಳು ; ದೀರ್ಘಾಯುಸ್ಸು. ೨. ದೀರ್ಘಾಯುಸ್ಸನ್ನು ಉಳ್ಳುದು : ಮೀಱಿದರಂತವೆ ಕೊಂದ ಪೆಂಪು ಕಟ್ಟಾಯದ ಪೆಂಪು ಶಕ್ರನೊಡನೇಱಿದ ಪೆಂಪಿಪು ಪೆಂಪುವೆತ್ತು ನಿಟ್ಟಾಯುಗಳಾಗಿ ನಿನ್ನೊಳಮರ್ದಿರ್ದುವು (ಪಂಪಭಾ. ೧೪-೧೭). ೩. ದೀರ್ಘವಾದ ಆಯುಸ್ಸನ್ನು ಉಳ್ಳ ವ್ಯಕ್ತಿ : ನಿಟ್ಟಾಯುವಾಗು ನೀನೆಂದಿಟ್ಟರ್ ಸೇಸೆಯನಗಣ್ಯಪುಣ್ಯಾಂಗನೆಯರ್ (ಕಾನ್ಯಾಪ. ೨೨೩). [ನಿಟ್ (<ನಿಡಿದು$_1$)+ಆಯು$_2$]

ನಿಟ್ಟಾರವೆ (ನಾ). ವಿಶಾಲವಾದ ತೋಟ,—ತೋಪು : ಇಂದರ ಗಾವುಣ್ಡನ ಮಗಂ ಬರ್ಮ್ಮಿಸೆಟ್ಟಿಗೆ ಬಿನ್ನವುರಂ ೧೨ಱೊಳಗಣ ಕುಳುವ ನೂರುಂ ನಿಟ್ಟಾರವೆಯಂ ಅಂತೆರಡೂ ವನಂ ಖಚಾಯ ಎಲೆ ಕುಡುವ ನೂರ್ಮ್ಮಡಿಆಯ್ಯಹರಸಂ ಬರ್ಮ್ಮಿಸೆಟ್ಟಿಗೆಗೊಟ್ಟ ಶಾಸನದ ಪೊಲದ ಸೀಮೆ (ಎಕ. XI, ದಾವಣ. ೧೯-೧೧ ; 1043).

[ನಿಟ್(<ನಿಡಿದು$_1$)+ಆರವೆ]

ನಿಟ್ಟಾಲಿ (ನಾ). ವಿಶಾಲವಾದ ಕಣ್ಣು,—ನೇತ್ರ : ಎನಿತಾನುಂ ಮಱೆದೊಂದನೊಂದಿ ನೆನೆಯುತ್ತಿರ್ದಪಳೆಂಬಂತೆ ತೊಟ್ಟನೆ ನಿಟ್ಟಾಲಿಗಳಾಟವಚ್ಚಟಿದು ವಕ್ಷಸ್ಪಂದನಂ ನಿಂದು . . . ಮರವಟ್ಟೋರಂದದಿಂದಿರ್ದಳ್ (ಕುಸುಮಾ. ೧೨-೧೩೧) ; ಮಾರಾಂತ ಸೇನೆಗಳನ್ನೆಲ್ಲ ಅಲ್ಲ ಕಲ್ಲೋಲ ಮಾಡಿ . . . ಕೊಂದಿಕ್ಕಿದನು. ನಿಟ್ಟಾಲಿಯಿಂದ ನೋಡಿ ಯುಧಿಷ್ಠಿರನನ್ನು ಮುಟ್ಟಬಂದನು (ಭಾಮಣಿ. ೨೭).

ನಿಟ್ಟಾಲಿಯಾಗು = ನಿಟ್ಟಾಲಿಗೊಳ್ : ಅಶ್ವತ್ಥಾಮಂ . . . ಹಸ್ತಿನಪುರದೊಳ್ ಪಾಂಡವರಿರ್ದರೆಗೆತ್ತುಮಲ್ಲಿಗೆ ನಿಟ್ಟಾಲಿಯಾಗಿ ದಾಟಿಯನಿಟ್ಟು ಮುಟ್ಟೆವಂದು (ಪಂಪಭಾ. ೧೩-೧೦೬ವ) ; ವಿಶ್ವನಂದಿಯುಂ . . . ವಿಹಾರಿಸುತ್ತುಮುತ್ತರಮಧುರೆಗೆ ವಂದು ಮಾಸೋಪವಾಸದ ಪಾರಣೆಯೊಳ್ ಚರಿಗೆವುಗೆ ಕಟ್ಟದಿರೊಳ್ ನಿಟ್ಟಾಲಿಯಾಗಿ ಕೆಂಗಣ್ಮಸಗಿ ಬಂದೊಂದೀಂದ ಪಸು ತನ್ನುನಿಪತಿಯನಿಱುವುದುಂ (ಶಾಂತಿಪು. ೭-೫೯ ವ).

[ನಿಟ್ (<ನಿಡಿದು$_1$)+ಆಲಿ$_2$]

ನಿಟ್ಟಾಲಿಗೊಳ್ (ಕ್ರಿ). ಕಣ್ಣನ್ನು ಅರಳಿಸು ; ದಿಟ್ಟಿಸು : ಅಱಿಕೆಯ ನಾಯಕರನಱುವತ್ತು ಸಾಸಿರ್ವರನೊರ್ವನಂ ಕೊಲ್ವಂತೆ ಕೊಂದು ನಿಟ್ಟಾಲಿಗೊಂಡು ಯುಧಿಷ್ಠಿರನಂ ಮುಟ್ಟೆವಂದಾಗಳ್ (ಪಂಪಭಾ. ೧೨-೧೧೬ ವ). [ನಿಟ್ಟಾಲಿ+ಕೊಳ್$_1$]

ನಿಟ್ಟಾಸುರ (ನಾ). ಅತಿ ಭಯಂಕರವಾದುದು : ಸೂಸಿತಬಲಾವೃಂದ ಕೆದಱಿದ ಕೇಶಪಾಶದ ತೆಳುವಸುಱ ನಿಟ್ಟಾಸುರದ ಹೊಯ್ಲುಗಳ (ಕುನ್ಯಾಗ. ೧೨-೫). [ನಿಟ್ (<ನಿಡಿದು$_1$)+ಆಸುರ]

ನಿಟ್ಟಾಳ್ (ನಾ). ಎತ್ತರವಾದ ಮನುಷ್ಯ : ಪುಣ್ಯದ ಪುರ ಮೆಂಫಿಗೊಡೆಯ ಆರಸಮೀಸ್, ಬಲ್ನಿಟ್ಟಾಳ್ (ಪಾರಸಿ. ೩-೬೬).

[ನಿಟ್ (<ನಿಡಿದು$_1$)+ಆಳ್$_3$]

ನಿಟ್ಟಾಳ (ನಾ). ಹೆಚ್ಚಾದ ಆಳ ; ತುಂಬ ಆಳ : ಒಂದೆಸತದಿ ನೆಸೆಗೆನ್ನನ್ ಕಡುಗಟ್ತಲೆ ಟಾರ್ಟರಸ್ಗೆ ; ಜಗವಿದಱಾ ಕೆಟನೆಲೆಯಾ ಅಡಿನೆಲನಾ ನಿಟ್ಟಾಳಕೆ (ಬದ್ಧಪ್ರ. ೫೬-೧೨೨೧).

[ನಿಟ್ (<ನಿಡಿದು$_1$)+ಆಳ$_1$ (<ಆಟ)]

ನಿಟ್ಟಿತ (ಗು). ನೆಲೆ ನಿಂತ ; ಸ್ಥಿರಗೊಂಡ ; ಸುಪ್ರತಿಷ್ಠಿತವಾದ : ಅಘಹರನು . . . ಜೈಮಿನಿಮುನಿಯ ಕೊಂಡಾಡಿ ನಗುತ ನುಡಿಸಿದನೇ ನಿವೇನ್ನೆ ಸುಗಮಯಷಿ ನಿನಗೇಕೆ ನಿಟ್ಟಿತ ನಿಗಮಮತಸುಗುಣಾಬ್ಧಿ ಯೆನುತಾ ಮುನಿಯನೀಕ್ಷಿಸಿದ (ಕುವ್ಯಾಅ. ಓರಿಇ. ೩-೪೩).

[<ಸಂ. ನಿಷ್ಠಿತ]

ನಿಟ್ಟಿದಿರ್ (ನಾ). ನೇರವಾದ ಇದಿರುಭಾಗ ; ಕಟ್ಟಿದಿರು : ಕನಲ್ಗಾಖುಗಳಗಿದ ವಿಷಂ ದಿನಪನ ನಿಟ್ಟಿದಿರ ತಿಮಿರದಂತಿರೆ ಕಿಡುಗುಂ (ಖಮದ. ೧೨-೩೧). [ನಿಟ್ (<ನಿಡಿದು₁) + ಇದಿರ್]

ನಿಟ್ಟಿರ್ (ಕ್ರಿ). ದೂರದಲ್ಲಿರು : ಮಕ್ಕಳ ತೊಟ್ಟಲ ಮೇಲೆ ಕಟ್ಟಿದ ಕೆಂಪಿನ ಹಣ್ಣು ನಿ(ಪ)ಟ್ಟಿರ್ದು ನಿಲುಕಲು ಬಾರದು (ಸರ್ವವ. ೮೭-೪೮೩).

[<ನಿಡಿದು₂ + ಇರ್₁]

ನಿಟ್ಟಿರುಳು (ನಾ). ದೀರ್ಘವಾದ ರಾತ್ರಿ : ಅರೆವೀದಿಯಲ್ಲಿಯೇ ಮುಂಗಾಳು, ಮುಸುಕಿಸಿತ್ಯೆ ದೊರೆಯ ಹೆಜ್ಜೆಯ ಸುಳುವು ತೋರದಿಲ್ಲಿ ! ನಿಟ್ಟಿಸುತ ಕತ್ತಲೆಯ ನಿಟ್ಟಿರುಳಿನಲ್ಲಿಯೂ ಗಟ್ಟಿಸುತೆ ನಿನ್ನನ್ನೆ ಅತ್ತು ಕರೆವೆ (ನಾದಲೀ. ೧೨-೧೭).

[ನಿಟ್ (<ನಿಡಿದು₁) + ಇರುಳು (<ಇರುಳ್)]

ನಿಟ್ಟಿರ್ಕೆ (ನಾ). ಬಹುಕಾಲದಿಂದಿರುವ ವಾಸಸ್ಥಾನ : ಬಿಣ್ಪೊಱೆ, ನಿಟ್ಟಿರ್ದೆ, ನಿಟ್ಟಿರ್ಕೆ (ಭಾಷಾಧೂ. ೧೩೭ ಉದಾ) ; ಟಕಾರಕ್ಕೆ . . . ನಿಟ್ಟಡಕಿಲ್, ನಿಟ್ಟಿರ್ಕೆ (ಶಮದ. ೧೮೧ ಪ್ರಯೋ).

[ನಿಟ್ (<ನಿಡಿದು₁) + ಇರ್ಕೆ]

ನಿಟ್ಟಿಸು, ನಿಟ್ಟಯಿಸು, ನಿಟ್ಟೈಸು (ಕ್ರಿ). ೧. ನೋಡು ; ಕಾಣು : ಬೇಗಂ ತುಡುವ ಬಿಡುವ ಸೂಟ್ಗೆಯ್ಯ ವೇಗಂಗಳಂ ನಿಟ್ಟಿಸಲಾರ್ಗಂ ಬಾರದಂತಾಗಸದಳಮಿಸೆ (ಪಂಪಭಾ. ೧೨-೨೦) ; ಗೃಹಮಿದು ಗೃಹವನಮೆಂಬುದನಾರ್ಗಂ ನಿಟ್ಟಿಸಲ್ಕೆ ಬಾರದು ಪುರದೊಳ್ (ಮಲ್ಲಿಪು. ೨-೬೨) ; ಸಂಕ್ರಾಂತಿಯಂತೆ ನಿಟ್ಟಿಸಲರಿದಪ್ಪ ಮರುಳಂತೆ ಕೊಂಡಾಡಲರಿದಪ್ಪ ಪರಿಪ ತೊಱೆಯಂತೆ ಮಾಣಿಸಲರಿದಪ್ಪ . . . ವ್ರತಪರಿರಕ್ಷಣೋಪಾಯಮಂ ಚಿಂತಿಸುತ್ತಿರ್ದಳ್ (ಧರ್ಮಾಮೃ. ೩-೧೮೬); ಕೆಟ್ಟ ಸಂಸ್ಕೃತಿಯೆಂಬ ನಿಟ್ಟೊಡಲ ದಂತಿ ಕಟ್ಟೊಟ್ಟೈಸಲಾರ್ಗಮರಿದೆನಿಪುದಿದನು ನಿಟ್ಟಿಸುವುದಟ್ಟುವುದು ಕಟ್ಟುವುದು ಸಱಸಱನೆ ಮೆಟ್ಟಿಸೀಳುವುದು ಪಂಚಾಸ್ಯಮಂತ್ರ (ಸಾನಂಚ. ೧-೪೧) ; ಸರಲ ಸರಿಯಂ ಸುರಿವಂತಿಸುವವರ್ಗಳ ಕೈಯೊಳ್ ನಿಟ್ಟಿಸಬಾರದು ತುಡುವ ಬಿಡುವ ಪವಣ್ (ಕಬ್ಬಿಕಾ. ೨೬೮) ; ಬೆಟ್ಟದ ಮೇಗಣಂ ಕೆಟಗೆ ಬೀಟ್ಟ ಸುನಿರ್ಝರವಾರಿವೇಗದೋಲೊಟ್ಟಜೆಯಿಂ ಬಪ್ಪ ಬರವೇ ನೆಱೆ ಪೋಪುದು ಪೋಪುದೇ ಕರಂ ನೆಟ್ಟನೆ ಬಪ್ಪುದೆಂದೊಡದಱಸ್ಥಿರಭಾವಮನಾವನೋ ನರಂ ನಿಟ್ಟಿಸಲಾರ್ಪನಂತೆ ಸಿರಿಯಾಗತಿಯುಂ ಗತಿಯುಂ ಸ್ಥಿರತ್ವಮುಂ (ಬಾಧಪು. ೫-೨೩) ; ಇರುಳು ನಿಟ್ಟಿಸಿದ ಹೆಬ್ಬಾವಿಗೆ ಹಗಲೆ ಬಿದ್ದಂತಾದುದೆಮಗೆ (ಮೋಹತ. ೩೯-೨೦). ೨. ದೃಷ್ಟಿಸಿ ನೋಡು; ನೇರವಾಗಿ ನೋಡು ; ಗಮನವಿಡು ; ದಿಟ್ಟಿಸು : "ನಿಟ್ಟಿಸು—ನಿರ್ಭರಾಲೋಕೇ" (ಶಮಧಾ) ; ಅಂಜಲಿಕಾಸ್ತ್ರಮನಮೋಘಾಸ್ತ್ರಧನಂ ಜಯನಾಕರ್ಣಾಂತಂಬರಂ ತೆಗೆದು . . . ಕಂಧರಸಂಧಿಯಂ ನಿಟ್ಟಿಸಿ (ಪಂಪಭಾ. ೧೨-೨೧೨ ವ) ; ತುರಗರತ್ನದವಯವಮುಖದೊಳ್ ಮಿಱುಗುವ ಚೆಲ್ವಂ ನಿಟ್ಟಿಸಲಱಿಯದೆ ಬೆಱಗಾಗಿ ನೃಪತಿ ನೋಡುತ್ತಿರ್ದಂ (ಕುಸುಮಾ. ೮-೪೪) ; ನೆಲನನುಂಗುಟದ ಕುಡಿಯೊಳು ಬರೆದು ನಿಟ್ಟಿಸುತ ತನ್ನಡಿಗಳ (ಅಂಜಚ. ೭-೮೩) ; ಹೊನ್ನ ಪುತ್ತಳಿಯಂತೆ ನಿಂದಿರ್ದ ಕುವರಿಯ ಚೆನ್ನಾಗಿ ಮೊಗವ ನಿಟ್ಟಿಸಿದ (ಮೋಹತ. ೨೫-೩೬) ; ನಿಟ್ಟಿಸಿದರೆ ಮುತ್ತಮುದುಕಿಗಾದರು ಜುಮ್ಮುದಟ್ಟಿಸುತಿಹುದು ರೂಪವನ (ಧರಚ. ೧-೫೧) ; ಈ ಪದ್ಯಕರ್ಥವದಾವುದೆನಲ್ . . . ಮೇಲೆ ನಿಟ್ಟಿಸಿ ಕಾಣದೆ ತವೆ ತಲೆಯ ಬಾಗಿ ನುಡಿಯುಡುಗುವಳಿಗಬ್ಬಿಗಂ ಕವಿಯೆ (ಚಿಬಪು. ೧-೨೭); ನೆಱೆ ಗುಹೆಯಿಂದೆದ್ದ ಸಿಂಹಗರ್ಜನೆಗಳ್ಕಿ ಪರಿದೋಡಿ ಮದಗಜವಿಂಡು ನೆರೆದು ದೂರದಲಿ ನಿಟ್ಟಿಸುವಂತೆ (ಕಂಪವಿ. ೧೪-೯೭). ೩. ನಿರೀಕ್ಷೆ ಮಾಡು ; ನಿರೀಕ್ಷಿಸು : ತೆಱಪಂ ನಿಟ್ಟಿಸಿ ಕುರುಪತಿ . . . ಪೊಯ್ಯಲ್ (ಗದಾಯು. ೮-೨೬); ನಾಳೆಯಂ ನಿಲುಕಿ ನಿಟ್ಟಿಪರಿಗೆಲ್ಲ ಕೂಗುತಿದೆ ಕತ್ತಲೆಯ ಕಾವಲಿನ ಕೋಳಿ (ಗಿಳಿವಿಂ. ೧೧೯-೧೬). ೪. ಅರಸು ; ಹುಡುಕು : ದಿಟ್ಟದೆಱೆದು ವಸಂತತಿಲಕೆಯ ನಿಟ್ಟಿಸಿಯೆ ಕಾಣದೆ ವಿಕಲನಾದನು ವಣಿಗ್ವರನು (ಸಾಳ್ವಭಾ.೧೭-೩೩). ೫. (ಆಲಂ) ಪರಿಶೀಲಿಸು : ಶುಭದಿನ ನಕ್ಷತ್ರ ಯೋಗಕರಣಂಗಳಂ ನಿಟ್ಟಿಸಿ (ಪಂಪಭಾ. ೫-೨೪ ವ) ; ಪುಟ್ಟದನಂ ಪೊಂದದನಂ ನೆಟ್ಟನೆ ಲೋಕೈಕದರ್ಶಿ ತಾನೆನಿಸಿದನಂ ನಿಟ್ಟಿಸಿ ಮನದೊಳು ದುರಿತಘರಟ್ಟನನೆನಗಾಪ್ತನೆಂದು ಭಾವಿಪುದು (ಸಮಪ. ೧-೬೭) ; ನೆಟ್ಟನೆ ಕಾಱಿದ ಕೂಟಂ ಮುಟ್ಟದು ನಾಯುಂ ಧರಾತಳಾಗ್ರದೊಳೆನೆ ಮುಂ ಬಿಟ್ಟು ಬಟಾಕ್ಕಳಿಪವನುಂ ನಿಟ್ಟಿಸುವೊಡೆ ಪಂದೆ ಕಷ್ಟನಾ ನಾಯಿಂದಂ (ಧರ್ಮಾಮೃ. ೭-೨೩೨) ; ನಿಟ್ಟಿಸಲು ರವಿ ಕಾಣದುದ ಕವಿ ಕಂಡನೆಂಬ ನುಡಿ ಹುಸಿಯಲ್ಲ (ಹಚಕಾ. ೩-೪೦). ೬. ಕಂಡುಕೊಳ್ಳು ; ಗುರುತಿಸು : ನಿಟ್ಟಿಸುವುದು ಮೋಕ್ಷ ಮಾರ್ಗಮಂ ಜಿನಮತದೊಳ್ (ಸಮಪ. ೩-೬೭) ; ಸಂಭಿನ್ನನೆಂಬ ವಿನೂತೋತ್ತಮನಂ ನಿಮಿತ್ತವಿದನಂ ಪೇಟೆಂಬುದುಂ ನೋಡಿ ಪಾರ್ಥಿವ ಕೇಳೀ ಭರತತ್ರಿಖಂಡಪತಿ ತಾನಕ್ಕುಂ ವರಂ ನಿಕ್ಕುವಂ ಎಂಬುದುಮದನೆಂತು ನಿಟ್ಟಿಸಲಕ್ಕುಮೆನೆ (ನೇಮಿಪು. ೬-೧೧೧). ೭. ದಯೆಯಿಂದ ನೋಡಿಕೊಳ್ಳು ; ಕರುಣೆ ತೋರು ; ಕರುಣಿಸು : ಶಶಿಯೇ ನಿಟ್ಟಿಸು ಪುಷ್ಪಬಾಣದರಸೇ ಕೈಗಾಯಿ ತಂಗಾಳಿಯೇ ಪೊಸತಣ್ಪೇ ಕಮನೀಯ ಮಾಧವನೆ ಕೊರ್ಪಿಂದೋವು . . . ಎಂದು ಚಿಂತಿಸುತುಂ ತದ್ವನಿತಾಕದಂಬವಟಲುತ್ತಿರ್ದತ್ತು ತಾಂ ಖೇದದಿಂ (ಉದ್ಭಟ. ೭-೬೩). **ನಿಟ್ಟಯಿಸು** : ೫. ಒಟ್ಟದ ನಿರ್ಜರಬಲದೊಳ್ ಕಟ್ಟದಿರಾಗಿರ್ದು ನಿಂದರಾರಾರವರಂ ನೆಟ್ಟನೆನಗಱಿಪವೇಳ್ಕೆನೆ ನಿಟ್ಟಯಿಸಿಯೆ ನುಡಿದನಸುರಕುಲಗುರು ಭರದಿಂ (ಗಿರಿಕ. ೬-೫೬) ; ನಿಟ್ಟಯಿಪೊಡೆ ಮೆಲ್ಲಡಿಗಿವು ಬೆಟ್ಟದುವಂಬುರುಹಮೆನುತುಮಿಟಿಕೆಯ್ದುವನಿಂ ಮುಟ್ಟೆವಣಮೆಂಬ ತೆಱದಿಂ ಮೆಟ್ಟದೆ ಸುರಸತಿಯರಾಡಿದರ್ ಸರಸಿಜದೊಳ್ (ಪಾರ್ಶ್ವಪು. ೧೪-೪೧). **ನಿಟ್ಟೈಸು** : ೩. ವಸಂತನದಿರ್ವಂದ ಕೋಕಿಲಂಗಳಂತೆ ಪರಮಾನುರಾಗಂಬಡೆದು ಕೊಟ್ಟೆವೆಂದು ನೆಟ್ಟನೆ ನುಡಿವುದುಂ ನಿಟ್ಟೈಸಿ [ಪಾಠಾಂ. ನಿಶ್ಚಯಿಸಿ, ನಿಶ್ಚೈಸಿ] ಕೇಳ್ದುತ್ಸವಂದಾಳ್ದು (ನಂಬಿರ. ೪-೬೫). ೮. (?) : ತುಟ್ಟಿಯ ದಿನಮಂ ಪಣದಿಂದೊಟ್ಟಜೆಯಿಂದಿಂದು(ದ್ವಿ) ಗುಣಿಸಿ ಕೇಳು ಅಂತದುಮಂ ನಿಟ್ಟೈಸಿ ಮಾಸ ತ್ರಿಗುಣಿಸುವೊಟ್ಟಜೆಯಿಂ ತೆಗೆಯೆ ವೀಸಮತ್ತದು ಬರ್ಕುಂ (ವ್ಯವಹಾ. ಉಪಮಾನ ?).

[<ದಿಟ್ಟಿಸು ?]

ನಿಟ್ಟು₁ 'ನೀಡು₁' ನೋ.

ನಿಟ್ಟು₂ (ನಾ). ೧. ಚೀಲ ಮೊದಲಾದುವುಗಳನ್ನು ಒಂದರ ಮೇಲೊಂದರಂತೆ ಪೇರಿಸಿ ಇಟ್ಟಿರುವುದು ; ಅಡಕಿಲು : ಶಿವಪುತ್ರ ಜೋಳದ ಚೀಲಗಳ 'ನಿಟ್ಟ'ನ ಮೇಲೆ ಬೋರಲಾಗಿ ಬಿದ್ದುಕೊಂಡಿದ್ದ (ಬರಹಾ. ೧೬) ; ನನ್ನ ಧಣೀ ನನ್ನ ಮನ್ಯಾಗ ಚೀಲದ ನಿಟ್ಟು ಹಚ್ಚ್ಯಾನ (ಬೆಂದಯ. ೬೧) ; ಜೋಳದ ಚೀಲಗಳ ನಿಟ್ಟು ನಿಮ್ಮ ಮನೆಯೊಳಗೆ ಇರುವದಿಲ್ಲ (ಅಶೋಕ. ೨೩೬). ೨. ದಿಕ್ಕು; ದೆಸೆ ; ಕಡೆ : ಅವ ನಿಟ್ಟನೊಳಂ ಐವತ್ತುಕೋಟಿ ಯೋಜನಮಾಗಿರ್ಕುಂ (ಚಿಳಬಿ. ೨೯) ; ಚಾಮರಾಜೇಶ್ವರಸ್ವಾಮಿದೇವಸ್ಥಾನದಲ್ಲಿ ಪಶ್ಚಿಮನಿಟ್ಟನ ಕೈಸಾಲೆ

ಲಿಂಗಸಾಲಿನ ಮಧ್ಯದಲ್ಲಿ (ಎಕ. XIV, ಚಾಮರಾ. ೨೨೭-೪ ; 1853) ; ಭಾರತದ ನಾಲ್ಕು ನಿಟ್ಟಿನಿಂದಲೂ ಕೇಳಿ ಬರುತ್ತಿತ್ತು ಭಾರತದ ರಾಷ್ಟ್ರಗೀತೆ (ಆತ್ಮಾರ್ಪ. ೧೯೨) ; ನಮ್ಮೂರಿನಿಂದ ನಾಲ್ಕೂ ನಿಟ್ಟಿನಲ್ಲಿ ದಾರಿಗಳು ಹೋಗಿವೆ ಇದರಿಂದ . . . ಹಳ್ಳಿಗೆ ಬೇಕಾಗುವ ವಸ್ತುಗಳು ಬರುವುವು (ಕಪಪು. ೬-೧೩) ; ಈ ಹತ್ತು ವರ್ಷಗಳಿಂದ ನಮ್ಮ ಸಾಹಿತ್ಯದ ಮೋರೆ ಬೇರೆ ನಿಟ್ಟಿಗೆ ತಿರುಗಿದೆಯೆನ್ನಬೇಕು (ತಿಹುಗು. ೮) ; ಈ ಎರಡೂ ಧರ್ಮಗಳ ಆಧ್ಯಾತ್ಮಿಕ ಹಿನ್ನೆಲೆಯಿಂದ ಮಹಾತ್ಮರು ಹುಟ್ಟುತ್ತ ಹೋಗುವರೆಂದೂ, ಮಾನವಕುಲಕ್ಕೆ ಒಂದೇ ಪರಮಸತ್ಯವನ್ನು ಬೇರೆ ಬೇರೆ ನಿಟ್ಟುಗಳಿಂದ ನಿಲುಕಿಸಬಹುದೆಂಬುದನ್ನು ಸಾರಿ ಹೇಳುವರೆಂದೂ ಭವಿಷ್ಯ ನುಡಿಯಬಹುದಾಗಿದೆ (ತತ್ವಪ್ರಾ. ೫೯೭) ; ಪ್ಲಾಟಿಯದ ನಿಟ್ಟುಗಳ ಮೆತ್ತುವುದು ನೆತ್ತರಿನ್ ಡೋರಿಕರ ಕಯ್ಯೂಟ (ಪಾರಸಿ. ೩೦-೭೦೩) ; ಹುಟ್ಟು ನಿಟ್ಟು ಗೊತ್ತಾಗಿದ್ದವನಾಗಿದ್ದರೆ, ಅಂತಹವನನ್ನು ನಮ್ಮ ಮನಸ್ಸಿನಲ್ಲಿ ಹೊಗಿಸಿ ಧ್ಯಾನಿಸಬಹುದು (ದೇವೀಚೌ. ೫೪) ; ಹೊಸತೇನು ಇಲ್ಲ ಇದರಲ್ಲಿ ಅಹುದು ಆಗಿಲ್ಲ ಗುಟ್ಟುರಟ್ಟು ತಮ್ಮರಿವೆ ಗುರುವು ತಂತಮಗೆ ಎಂಬೆ, ಪರಮಾತ್ಮ ಎಲ್ಲ ನಿಟ್ಟು (ಮುಕ್ತಕಂ. ೧೫-೨). ೩. ಗುರಿ ; ಉದ್ದೇಶ : ಇದರಲ್ಲಿ ಅದಾವ ಕಟ್ಟೂ ಇಲ್ಲ, ನಿಟ್ಟೂ ಇಲ್ಲ (ಗೊಲ್ಗೊಥಾ. IX, ಮುನ್ನುಡಿ) ; ಗಿಡ ಗುಲ್ಮ ತೆವರು ತಿಟ್ಟು ಎನ್ನದಿದ ಕೊಂದು ನಿಟ್ಟು (ಗಣೇಶ. ೩೯-೮). ೪. ಕಟ್ಟಳೆ ; ನಿರ್ಬಂಧ : ಹೀಗೆ ನಿಯಮದ ನಿಟ್ಟು ಕಡಮೆಯಾಗಿ . . . ಈ ಸಮಾಸನಿಯಮದ ಕಡಿವಾಣ ಕಡಿದು ಹೋಗಿರುವುದು ಸ್ಪಷ್ಟವಾಗಿರುವ ವಿಷಯ (ಸಂಶೋಧ. ೮೨). 'ಕಟ್ಟುನಿಟ್ಟು' ಪರಾ. ೫. ಒಂದೇ ಘಟಕವಾದುದು ; ಒಂದೇ ರೀತಿಯಾದುದು : ಬಡಗಲ ನಿಟ್ಟು ೧ಕ್ಕೆ ೪೧೧ ನೀಳ ಮಾರೂ ೫೦೯ ತೆನೆಗಳೂ ಈ ಮೇರೆಗೆ ಅಳತೆಮಾಡಿ (ಚಾಮವಂ. ೮೮) ; ಕಛೇರಿಯ ಕಟ್ಟಡಕ್ಕೆ ಹೋದೆವು. ಅದು ಒಂದೇ ಒಂದು ದೊಡ್ಡ ನಿಟ್ಟು (ಚಂಗಾಳ್ವ. ೩೧೭). ೬. ಗುತ್ತನಾಗಿರುವುದು ; ಅಳತೆಗೆ ಸರಿಯಾಗಿರುವುದು (?) : ಹರಡೇಕಂಕಣ ಕಮಲಾದೇವೀ ಒಂಕೀ ಬಾಪೂರೀ ನಿಟ್ಟೀ ನೊಳಗೇ ಕುಪುಸಾವೂ (ಹುಟ್ಟಹ. ೧೫೩).

ನಿಟ್ಟನ ಸೂಡು, ನಿಟ್ಟುಸೂಡು = (?) : ದೇವಸ್ಥಾನದ ದ್ವಾರ ಪಾಲಕರ ಮುಂಭಾಗದಲ್ಲಿ ಭದ್ರಬಾಗಿಲ ಕೈಸಾಲೆಗೆ ಪೂರ್ವದಲ್ಲಿ ಇರತಕ್ಕ ೯ ಅಂಕಣದ ನಿಟ್ಟನ ಸೂಡು ೩ಕ್ಕೆ ೨೭ ಅಂಕಣಗಳ ಕಲ್ಲುಮಂಟಪವನ್ನು ಕಟ್ಟಿಸಿ (ಮಹಾವಂ. I, ೧೦೦) ; ತ್ರಿನಯನೇಶ್ವರಸ್ವಾಮಿ ದೇವಸ್ಥಾನದ ದ್ವಾರಪಾಲಕರ ಮುಂಭಾಗ ಭದ್ರ ಬಾಗಿಲ ಕೈಸಾಲೆಗೆ ಪೂರ್ವ ಅಂಕಣ ನಿಟ್ಟುಸೂಡು ೩ಕ್ಕೆ ೨೭ ಅಂಕಣ ಕಲ್ಲುಮಂಟಪವನ್ನು ಕಟ್ಟಿಸಿ . . . ನಿಲ್ಲಿಸಿದರು (ಚಾಮವಂ. ೯೫). ನಿಟ್ಟು ಹಾಕು = ಒಂದರ ಮೇಲೊಂದರಂತೆ ಸಾಲಾಗಿರಿಸು ; ಪೇರಿಸಿಡು : ಮೆಣಸನ್ನು ಚೀಲಗಳಲ್ಲಿ ತುಂಬಿ ಮಳಿಗೆಗಳಲ್ಲಿ ನಿಟ್ಟು ಹಾಕಿದ್ದರು (ಪ್ರವಾಇ. II, ೧೯೭).

ನಿಟ್ಟುಡುಗೊಱೆ (ನಾ). ಅಧಿಕವಾದ ಉಡುಗೊರೆ,-ಬಹುಮಾನ : ನಿಟ್ಟುಡುಗೊಱೆಯಿತ್ತು ನಾಟ್ಯಮಾಲನ ಕೂಡಿ ಕೊಟ್ಟು ಮುಂದವನ ಕಳುಹಿದ (ಭರಚ. ೩೭-೧೫). [ನಿಟ್(<ನಿಡಿದು$_1$)+ಉಡುಗೊಱೆ]

ನಿಟ್ಟುಪವಾಸ (ನಾ). ನಿಷ್ಠೆಯಿಂದ ಕೂಡಿದ ಉಪವಾಸ ; ಕಟ್ಟು ನಿಟ್ಟಾಗಿ ಆಚರಿಸುವ ಉಪವಾಸ : ಗಂಗೋದಕ ಸಹ ನಾನು ಬಾಯಿಗೆ ಹಾಕುವುದಿಲ್ಲ, ನಿಟ್ಟುಪವಾಸ ! ಈಗ ಹತ್ತು ವರುಷಗಳಿಂದ ನಡೆಸಿಕೊಂಡು ಬರುತ್ತಿದೇನೆ (ಮಹಾಗ. ೧೪೪). [<ನಿಟ್ಟೆ+ಉಪವಾಸ]

ನಿಟ್ಟುಪಾಸ (ನಾ). ದೀರ್ಘಕಾಲದ ಉಪವಾಸ : ಅನಿತಱಲಿ ಕೂಲಿ ಹುಟ್ಟದೆ ನಿಟ್ಟುಪಾಸದೊಳೇಳುದಿನವಿರಲು (ಬಸಪು. ೨೭-೧೬). 'ಕಟ್ಟುಪಾಸ' ಪರಾ. [ನಿಟ್(<ನಿಡಿದು$_1$)+ಉಪಾಸ]

ನಿಟ್ಟುರ, ನಿಟ್ಟೂರ, ನಿಷ್ಟುರ, ನಿಷ್ಟೂರ, ನಿಷ್ಠೂರ (ನಾ). ೧. ಕಠಿನತೆ ; ಕಠೋರತೆ ; ನಿಷ್ಠುರತೆ : "ಹೆಲ್ಲಣಿಯೆಂದುಂ ನಿಟ್ಟುರ ಮೆಂದುಂ ನಿಷ್ಠುರಂ" (ಕಶಸಾ. ೬೭-೪೯೯) ; "ಹೆಲ್ಲೆಡೆ ನಿಟ್ಟುರ ನಿಷ್ಠುರಂ" (ಕವಿಕಂ. ೨೦೩) ; ಸುರಿವ ಮದಂ ಮಳೆ . . . ದಂತಂ ನಿಟ್ಟು [ಪಾಕಾಂ. ಷ್ಠು]ರದಿಂದೆಱಗುವ ಸಿಡಿಲಾಗಿರೆ ಕಾರ್ಗಾಲದವೊಲಿರ್ದುವಲ್ಲಿಯ ಕರಿಗಳ್ (ಗಿರಿಕ. ೨-೭೬) ; ಪುಟ್ಟಿಸಿದನೇಕೆಯೊ ವಿಧಿ ನಿಟ್ಟುರದಿಂ ಲೋಕದೊಳ್ (ಪುಷ್ಪಪು. ೧-೫೧) ; ನಿಷ್ಠುರ-ನಿಟ್ಟುರ ; ಪಿಷ್ಟ—ಪಿಟ್ಟು, ಹಿಟ್ಟು. (ಶಮದ. ೨೮೩ ಪ್ರಯೋ) ; ಉರವಣಿಸಿ ಬಿಗಿದ ಬಿಲ್ಲಂಬುಗಳ ಪಿಡಿದು ನಿಟ್ಟುರದೀಟಿಗಳನಾಂತು ಲೌಡಿಗಳನಕ್ಕಱಂ ತಿರುಪುತಿಹ ವೀರ ಶಿವದೂತರೈತಂದರಾಹಾಹ ಬೊಬ್ಬಿಱಿದು ಕೂಡೆ (ವೀಶೈಪು. ೨-೭-೩೦) ; ಕಟ್ಟಳದಿಂ ನಿಟ್ಟುರಮೊಂದಿ ಪಟ್ಟಣಕೆ ಕೈಯಿಟ್ಟಂ ಕರಂ ಬೆಟ್ಟದಂ (ಚಿಕವಿ. ೨-೧೦೨). ೨. ಕಠೋರವಾದ ಮಾತು ; ಕ್ರೂರನುಡಿ : ಕಟ್ಟುಱದೊಳ್ ಬೆಟ್ಟತ್ತೆನೆ ನಿಟ್ಟುರಮಂ ನುಡಿದು (ಚಿಕವಂ. ೬೭-೨೧). ೩. ನಿರ್ದಯನಾದ ವ್ಯಕ್ತಿ ; ಕಠಿಣಮನಸ್ಕ : ನಾಣಿಲಿ ನಿಟ್ಟುರಂ ಸಿತಗ ನಾಟವಿಟಂ . . . ನಿನಗೆ ಕೂರದರೊಳ್ ಬೆರಸಿರ್ಪಂ (ಲೀಲಾವ. ೨-೧೨೩). **ನಿಟ್ಟೂರ** : (ಕ). **ನಿಷ್ಟುರ** : ೪. ನಿಂದೆ ; ಅಪವಾದ : ಕಷ್ಟ ಪಡಲಾರೆ, ನಾ ಕಾನನದೊಳಿರಲಾರೆ ; ನಿಷ್ಟುರವು ಇದ್ದ ಕಡೆ ನಿಲಲಾರೆನು (ಕಎಪು. ೫೧). **ನಿಷ್ಠೂರ** : ೧. ಎದುರಾಳಿನ ಸ್ವಭಾವ ವನ್ನಾಗಲಿ, ಯೋಗ್ಯತೆಯನ್ನಾಗಲಿ ಲಕ್ಷಿಸದೆ ನಿಷ್ಠೂರವೆಂದು ಹಿಂತೆಗೆಯದೆ ತನ್ನ ಅಭಿಪ್ರಾಯವನ್ನು ಖಂಡಿತವಾಗಿ ಹೇಳುವುದು (ಕಾಂಪೂಚ. ೨೬). **ನಿಷ್ಠೂರ** : ೨. ಅಂದು ನಿಮ್ಮ ಸಮಕ್ಷದಲ್ಲಿ ಅವನನು ಆ ಬಗೆ ನಿಷ್ಠೂರ ಗಳನು ನುಡಿದು . . . ಹೋದೆನಲ್ಲ (ವಚಕಾ. ೨೬). ೪. ನನಗೂ ಈ ನಿಷ್ಠೂರ, ಕೆಟ್ಟ ಹೆಸರು ತಪ್ಪುತ್ತಿತ್ತು (ಮಹಾಗ. ೧೫೩).

[<ಪ್ರಾ. ಣಿಟ್ಠುರ./ಸಂ. ನಿಷ್ಠುರ]

ನಿಟ್ಟುರಗೈ (ಕ್ರಿ). ಖಂಡಿತವಾಗಿ ಮಾತನಾಡು ; ನಿಷ್ಠುರವಾಗಿ ನುಡಿ : ಮುನಿಯದಿರು ಮಗುಳಾಸರಿಂದ ನಿಟ್ಟುರಗೈದು ಮನವ ಕದಡೆನಿಸದಿರು . . . ಇನನೇಳ್ವ ಸಮಯಕೈತಹುದೆ ಎಂದು ಸಖಿಯಳಂ ಬಿನದದಿಂ ಕಳುಪಿದಳ್ (ವೆಂಕಾರಾ. ೫-೨-೪೦).

[ನಿಟ್ಟುರ+ಗೈ(<ಕೆಯ್$_1$)]

ನಿಟ್ಟುರದನಿ (ನಾ). ಕಠೋರವಾದ ಧ್ವನಿ ; ಕರ್ಕಶವಾದ ಶಬ್ದ : ಪೆಟ್ಟಿಗೆ ಪೆಟ್ಟ ಕೋ ಎನುತ ಮಸ್ತಕದಲ್ಲಿ ಕುಟ್ಟಿದ ಗದೆಯ ಗಾಯದಲಿ ಕುಟ್ಟಿದ ನಿಟ್ಟುರದನಿಗೆ ಖಾತಿಯಲಿ ಕಂಗೆಟ್ಟುದು ಸುರ ನಿಶಾಚರರು (ಮೋಹತ. ೧೨-೭೩). [ನಿಟ್ಟುರ+ದನಿ$_1$]

ನಿಟ್ಟುರಿಗೊಳ್ (ಕ್ರಿ). (?) : ನಾಲ್ವತ್ತೆಣ್ಗಾವುದಪರಿಪ್ರಮಾಣ ಕುರುಕ್ಷೇತ್ರದೊಳೆಲ್ಲಿಯುಂ ದುರ್ಯೋಧನನಂ ಅಱಸಿ ಕಾಣದೆ ವಿಸ್ಮಯಂ ಬಟ್ಟವನ ಬಿಟ್ಟ ಬೀಡಿಂಗೆ ನಿಟ್ಟುರಿಗೊಂಡು . . . ಕುರುರಾಜದ್ವಾರೋ ಪಾಂತಮನೆಯ್ದಿವಂದಾಗಳ್ (ಗದಾಯು. ೬-೨೮ ವ).

[ಇದು 'ನಿಟ್ಟುವರಿಗೊಳ್' ಎಂಬುದರ ಅಪಲಿಖಿತವಿರಬಹುದು]

ನಿಟ್ಟುರಿಸು (ಕ್ರಿ). ನಿಷ್ಠುರ ಮಾಡು ; ನಿಂದಿಸು ; ಆಕ್ಷೇಪಿಸು : ಯಾತರಿಂದೊಂದು ದಿನದಲ್ಲಾದಲುಭಯರುಂ ಮಾತಿನಿಂ ನಿಟ್ಟುರಿಸಲದ ಮನದೊಳಿಡದೆ ನಿಜಪ್ರೀತಿಯಿಂ ಕಾಪಿಡಲ್ವೇಳ್ಕುಂ (ವೆಂಕಾರಾ. ೨-೨೩-೩೨).

[ನಿಟ್ಟುರ+-ಇಸು$_3$]

ನಿಟ್ಟುರುಹು (ಕ್ರಿ). ಪೂರ್ಣವಾಗಿ ಸುಡು,—ದಹಿಸು ; ನಾಶ ಮಾಡು ; ಫಲಪದವ ನೆಲಕೊತ್ತಿ ಮಲ ಮೂರು ನಿಟ್ಟುರುಹಿ ಮೂಲರಿತ ನಿಜದ ನಿರ್ಮಯಲ ಚಿದ್‌ರೂಪ (ಸಿದ್ಧಪು. ೩೭-೭).

[<ನಿಡಿದು$_2$+ಉರುಹು(<ಉರಿಪು$_1$)]

ನಿಟ್ಟುವಡು (ಕ್ರಿ). ಸಾಲಾಗಿರು : ವ್ಯೂಹದೊಳ್ ನಿಟ್ಟುವಟ್ಟು [ಪಾಠಾಂ. ನಿಟ್ಟೆಪಟ್ಟ] ಮಣಿಮಯಮಂಡನಾಯೋಗದೊಳೊಡಂಬಟ್ಟ ಪಿಡಿಗಳುಮಂ (ಆದಿಪು. ೪-೫೪ ಪ). [ನಿಟ್ಟು$_2$ + ಪಡು$_1$]

ನಿಟ್ಟುವರಿ (ಕ್ರಿ). ದೂರಕ್ಕೆ ಓಡು,—ಧಾವಿಸು : ನಿಟ್ಟುವರಿಯಲು ಕೂಡೆ ರಥ ಸಾಲಿಟ್ಟು ಹರಿದವು ಬಿಡದೆ ಸುಭಟರು ಮುಟ್ಟಿ ಮೂದಲಿಸುತ್ತ ಹೊಯ್ದರು ಹೊಕ್ಕು ಪರಬಲವ (ಕುಪ್ಯಾದ್ರೋ. ೧-೫೧).

[ನಿಟ್ಟು$_2$ + ಪರಿ$_2$]

ನಿಟ್ಟುವೊಟ್ಟು (ಕ್ರಿ). ಸಾಲಾಗಿ ಪೇರಿಸು,—ಅಡಕುಹಾಕು : ಖಾದರ್‌ಖಾನನು . . . ದಂಡಿನ ಸುತ್ತಾ ರಸ್ತು ತುಂಬಿದಂಥ ಗೋಣಿಗಳನ್ನು ಕೋಟೆ ಕಟ್ಟಿದ ಹಾಗೆ ನಿಟ್ಟುವೊಟ್ಟ, ಅದರ ಆಶ್ರಯದೊಳಗೆ ಹೊಕ್ಕೊಂಡು, ಸಾಯಂಕಾಲದ ಪರಿಯಂತರ ಜಗಳಮಾಡುತ್ತಿದ್ದನು (ರಾಜೇಂದ್ರ. ೬೦). [ನಿಟ್ಟು$_2$ + ಒಟ್ಟು$_1$]

ನಿಟ್ಟುಸಿರ್, ನಿಟ್ಟುಸಿರು, ನಿಟ್ಟುಸುರ್, ನಿಟ್ಟುಸುರು (ನಾ). (ದುಃಖ, ನಿರಾಸೆಗಳಿಂದ) ದೀರ್ಘವಾಗಿ ಬಿಡುವ ಉಸಿರು ; ನಿಡಿದಾದ ನಿಶ್ವಾಸ : ನಿಟ್ಟುಸಿರಿಂ ಕೊಲ್ವಹಿಯುಮಳುರ್ಮ ದಿಟ್ಟಿಯ ನೋಟಂ . . . ಪೆಸರ್ಗೊಳೆ ಕೊಲಲಾರ್ಪ ಖಳನೊಳೆಡೆವಂದಪುವೇ (ಪುಷ್ಪಪು. ೧-೫೩) ; ನಿಡಿದು ಉಸಿರ್, ನಿಟ್ಟುಸಿರ್ (ಶಬ್ದಾನು. ೩೩೯ ಪ್ರಯೋ) ; ಪದಪದಂಗಳ ತೊಡರಿ ನಿಟ್ಟುಸಿರ್ಗಳಿಕ್ಕುತ್ತೆ ಮನ್ಮಥನ ಸಾಣಿ ವಿಡಿದಲಗಿನಂತಲ್ಲಲ್ಲಿ ಮರೆದೊರಗಿದ ಸೊಕ್ಕುಜವ್ವನೆಯರೋ (ವೆಂಕಾರಾ. ೫-೪-೧೯) ; ತಡೆಯದಿಹ ನಿಟ್ಟುಸಿರ್ ಗುರುಗುರಿಸುತಿಹುದು (ಕಾಲೂರ. ೧೭೨-೩೮೯). **ನಿಟ್ಟುಸಿರು** : ಬಾಗಿಹುದು ಬಲುಬಿಲ್ಲು ಕಿವಿವರೆಗಾಗಿ ರಿಪುಬಲ ನಿಮಿಷನಿಮಿಷಕೆ ನೀಗಿಹುದು ನಿಟ್ಟುಸಿರನೆಲೆಭೂಪಾಲ(ಕುಪ್ಯಾಭೀ. ೯-೧೪); ತಡೆದುದಾ ಬಹಳಾಗ್ನಿ ಕಣದುಗ್ಗಡದ ಧೂಮಾಕಲಿತಶಿಖಿಯನು ಕಡುಹಿನನಿಲಕುಮಾರಕನ ನಿಟ್ಟುಸಿರಿನಾಟೋಪ (ತೊರರಾ. ೬-೧೭-೧೯); ಮಗುವು ನಿರಾಧಾರಾ ಹೆಸರು ವಸುಂಧರಾ ಇಟ್ಟಾರಯಾರು ನಿಟ್ಟುಸಿರಿನ ಲೆಕ್ಕಾ ? ಉಸುರಿನ ಲೆಕ್ಕಾ ? (ನಾದಲೀ. ೩೪-೬) ; ಅವಳು ನಿಟ್ಟುಸಿರು ಬಿಟ್ಟು ಇಳಿದನಿಯಲ್ಲಿ ಹೇಳಿದಳು (ಬಾಣಅ. ೨೪೮). **ನಿಟ್ಟುಸುರ್** : 'ನಿಟ್ಟುಸುರ್ವಿಡು' ಪರಾ. **ನಿಟ್ಟುಸುರು** : ಮೀಱುತಸು ಕಂಠವನು ನಾಸಿಕಕೇಱುದುದು ನಿಟ್ಟುಸುರು ನಿಮಿಷಕೆ ಚೀಱುದುದು ಕುರುರಾಯದಳ ಶಲ್ಯಾವಸಾನದಲಿ (ಕುಪ್ಯಾಶ. ೩-೬೮); ಘರ್ಜಿಸುವ ಸಿಂಹವೋ ಹೆರೆಗಳೆದ ನಿಟ್ಟುಸುರಿನುರಗನೊ ಮೇಣನಲು ಸೌಮಿತ್ರಿ ಹಲುಮೊರೆದ (ತೊರರಾ. ೨-೩-೭) ; ರಾಯರು ನಿಟ್ಟುಸುರನ್ನು ದೀರ್ಘವಾಗಿ ಬಿಟ್ಟು ಮೇಜಿನ ಮೇಲೆ ಬಿದ್ದಿದ್ದ ಅಂದಿನ ಪತ್ರಿಕೆಯನ್ನು ನೋಡುತ್ತಾ . . . ಹೇಳಿದರು (ರಾಯಕ. ೮೩); ಹುಟ್ಟಿದಾಗ ಬಾರದ ಇಷ್ಟೊಂದು ಜನವೆಲ್ಲ ನಿಟ್ಟುಸುರ ನೀಡುತ ಬರುವರು ತಾಯಿತಂದೆ ಸುಟ್ಟ ಹೊಟ್ಟೇಯ ತಣಿಸಲು (ಸಿದ್ಧಪು. ೪-೭೯). [ನಿಟ್(<ನಿಡಿದು$_1$) + ಉಸಿರ್$_2$]

ನಿಟ್ಟುಸಿರಿ(ನಾ). ನಿಡುಸುಯ್ಯುವವಳು: ನಡುಗುತವಳಪ್ಪಿದಳ್ ನಲ್ಲನಂ ಗಾಳಿಯಿಂ ಬಡಿಗೊಂಡ ಬಳ್ಳಿ ಸಾಲಮನಪ್ಪುವಂತೆವೊಲ್ ಪೊಡರದದಿರೊಸರ್ಗಣ್ಣಿ ನಿಟ್ಟುಸಿರಿ ನೋಡಿದಳ್ (ಸೌನಂದ. ೪-೧೯).

[ನಿಟ್ಟುಸಿರು(<ನಿಟ್ಟುಸಿರ್) + -ಇ$_2$]

ನಿಟ್ಟುಸಿರು 'ನಿಟ್ಟುಸಿರ್' ನೋ.

ನಿಟ್ಟುಸಿರುಗರೆ (ಕ್ರಿ). ನಿಟ್ಟುಸಿರು ಬಿಡು ; ನಿಡುಸುಯ್ಯು : ಕಟ್ಟ ಕಡೆಗೆ ಒಂದು ನಿಟ್ಟುಸಿರುಗರೆದು, ಕ್ಷಣಕಾಲ ಅವನು ಚೇತನಾವಿಹೀನವಾದ ಕಲ್ಲ ಬೊಂಬೆಯಂತೆ ಸುಮ್ಮನೆ ನಿಂತುಬಿಟ್ಟನು (ಅಂಬಿಕೆ. ೨೦) ; "ಅದಂತು ಭಯಂಕರವಾಗಿದೆ" ಎಂದವಳು ನಿಟ್ಟುಸಿರುಗರೆದಳು (ಪುನರು. ೨೦೯). [ನಿಟ್ಟುಸಿರು(<ನಿಟ್ಟುಸಿರ್) + ಕರೆ$_2$(<ಕಱೆ$_1$)]

ನಿಟ್ಟುಸಿರ್ವಿಡು, ನಿಟ್ಟುಸುರ್ವಿಡು (ಕ್ರಿ). = ನಿಟ್ಟುಸಿರುಗರೆ : ಬಡಬಾನಲಂ ತನ್ನೊಳು ದಿನದಿನದೊಳವಗಡಿಸುತಿರ್ಪುದಂ ಬಹಳ ಜಡತನಂ ತನಗೆ ಬಂದುದಂ . . . ನೆನೆನೆನೆದು ನಿಟ್ಟುಸಿ[ಪಾಠಾಂ. ಸು]ರ್ವಿಟ್ಟು ಸುಯ್ವಂತುದಧಿ ತೆರೆಪೆರ್ಚುಗೆಯೊಳಿರ್ದುದು (ಚೈಮಿಭಾ. ೬-೨).

ನಿಟ್ಟುಸುರ್ವಿಡು : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ನಿಟ್ಟುಸಿರ್ + ಬಿಡು$_1$]

ನಿಟ್ಟುಸುರ್ 'ನಿಟ್ಟುಸಿರ್' ನೋ.

ನಿಟ್ಟುಸುರು 'ನಿಟ್ಟುಸಿರ್' ನೋ.

ನಿಟ್ಟುಸುರ್ವಿಡು 'ನಿಟ್ಟುಸಿರ್ವಿಡು' ನೋ.

ನಿಟ್ಟೂರ 'ನಿಟ್ಟುರ' ನೋ.

ನಿಟ್ಟೂರಿ (ನಾ). ದಯೆಯಿಲ್ಲದವನು ; ಕ್ರೂರಿ : (ಕಿ).

[ನಿಟ್ಟೂರ(<ನಿಟ್ಟುರ) + -ಇ$_3$]

ನಿಟ್ಟೆ (ನಾ). ೧. ನಿಯಮ ; ಕಟ್ಟಳೆ : "ನಿಟ್ಟೆಯೆಂದು ನಿಷ್ಠೆ" (ಕಶಸಾ. ೬೯-೫೬೨) ; "ನಿಟ್ಟೆಯೆನೆ ನಿಷ್ಠೆಯಕ್ಕುಂ" (ಕವಿಕಂ. ೨೨೮) ; ಜಸಮುಂ ಧರ್ಮಮುಮನುಪಾರ್ಜಿಸುವೊಡೆ ಚದುರದುವೆ ನಿಟ್ಟೆ ನಿಮಗಕ್ಕಟ ಮಾನಸವಾಟ್ಗೆ ಮಱುಗಿ ಸೋಲ್ತಪಿರೆಸಗುವುದರ್ತಿಯೊಳ್ ಜಸಮುಮಂ ಧರ್ಮಮುಮಂ (ಅಜಿಪು. ೨-೭೮) ; ದೇವಿಯರಿನ್ನೆಗಂ ನೆಗಟ್ಟ ನಿತ್ಯನಿಯಾಮದ ನಿಟ್ಟೆ ದೇವಪೂಜಾವಿಧಿ . . . ಫಳದಾಯಕಮಾದುದು (ಮಲ್ಲಿಪು. ೪-೬೬) ; ಷಕಾರಕ್ಕೆ ಟತ್ವಂ—ನಿಷ್ಠಾ-ನಿಟ್ಟೆ (ಶಮದ. ೨೮೩ ಪ್ರಯೋ); ಹುಟ್ಟಿದಳು ಹರಿಪಾದಸೇವೆಯ ನಿಟ್ಟೆಯಲಿ (ಸಂಭಪ. ೬-೪೯); ನಡೆಸುವರಖಿಳವೇದಸ್ತುತ್ಯಪಾರಾಯಣವ ಶಾಸ್ತ್ರವನತ್ಯಧಿಕನಿಟ್ಟೆಯಲಿ (ಕೌಶಾ. ೩೯-೭). ೨. ಶ್ರದ್ಧೆ ; ಆಸಕ್ತಿ : ಜಿನನಂ ನಿಟ್ಟೆಯಿನೋಲಗಿಪುದು (ಸಮಪ. ೮-೨೨೧) ; ನಾಲ್ಕುಂ ನಿಯಮವಿಧಾನದ ಬಟಿಸಂದು ನಿಟ್ಟೆಯಿಂ ಚರಿಯಿಸಿ(ಮಲ್ಲಿಪು.೪-೪೬); ಪೆಱರಿಂದಪ್ಪ ಕಾರ್ಯಂ ನಿಟ್ಟೆಯಿಲ್ಲೆಂಬುದು ತಾತ್ಪರ್ಯಂ (ನೀತಿವಾ. ೨೫-೧೦) ; ನಿಟ್ಟೆಯ . . . ಕಟ್ಟಾಳುಗಳೆಲ್ಲರ್ ಪೊಱಮಟ್ಟರು (ಕುಮುರಾ. ೮-೩೧) ; ರಥದುರವಣೆಯಿಂ ರಿಪುಸಾರಥಿಯಂ . . . ಪತ್ತಿಸಿದಪೆವವಿತಥಮೆನ್ನದೆ ನೋಟ್ಟುದೆಮ್ಮ ಕಾಳೆಗದನುವಂ ಎಂದು ರಥಿಕರ್ ನುಡಿದು ನಿಟ್ಟೆಯಿಂ ನಿಲ್ವುದುಂ (ದಶಕು. ೭-೫೩ ಪ). ೩. ಮಾಡಬೇಕಾದುದು ; ಕರ್ತವ್ಯ : ಬಿಮ್ಮನೆಯೆ ನಿಂದು ತುಸುವೊಳ್ತು, ಮುಂಬಟ್ಟೆಯಂ ತನಗೆ ನಿಟ್ಟೆಯಂ ನಿಶ್ಚಯ್ಸಿ ನರಲೋಕನಿಷ್ಠಕರ್ತವ್ಯಮಂ (ಶ್ರೀರಾಮಾ. ೮೩೮-೩೧೫). ೪. ದೀರ್ಘಕಾಲ ಇರುವಂಥದು ; ಶಾಶ್ವತವಾದುದು : ತೃಣಶಿಖರಾಧ್ಯುಷಿತಾಂಭಃಕಣಸಂಚಳಮಮರಚಾಪಚಪಳಂ ವಿದ್ಯುತ್ ಕ್ಷಣಿಕಂ ನಿಟ್ಟೆ[ಪಾಠಾಂ. ಟ್ಟೆ]ಯೆ ತನುಭೃದ್ಗಣ ಯೌವನರೂಪವಿಭವಭೋಗಾಭೋಗಂ (ಆದಿಪು. ೪-೭೫) ; ಸೊಗಯಿಪ ಜವ್ವನಂ ನೆರೆದ ರೂಪು . . . ಇವು ನಿಟ್ಟೆಯೆಂಬ ದಂದುಗಮೆರ್ದೆಯುರ್ಚೆ (ಶಾಂತಿಪು. ೯-೩೬) ; ನೆಟ್ಟನೆ ಬಂದಪನೆನ್ನಯ ನಿಟ್ಟೆ[ಪಾಠಾಂ. ಟ್ಟೆ]ಯ ನಿಧಿ ಚಂದ್ರನೆಂದು ರಾತ್ರೀವಧು ತಾಂ ಕಟ್ಟದ ಬಹುರತ್ನದ ಮೇಲ್ಕಟ್ಟೆನಿಸಿದುದಂಬರಂ ಸುತಾರಾಗಣದಿಂ (ಗಿರಿಕ. ೪-೯೨) ; ಜರೆ ರುಜೆ ಕಂಟಕಂ ತುಡುಕಲಣ್ಮದ ದಿವ್ಯಶರೀರಮಂ ನರಂ ಕರಗಿ ಕಟಲ್ಚಿಪಂ ದಿವದಿನೆಂದೊಡೆ ಮರ್ತ್ಯರ ಬಾಟ್ಕೆ ನಿಟ್ಟೆ[ಪಾಠಾಂ. ಟ್ಟೆ]ಯೇ (ಅನಂಪು. ೩-೭೨) ; ಸಂಸಾರಿಗೆ ನಿಟ್ಟೆಯಲ್ಲದು ಸುಖಂ (ಪುಷ್ಪಪು. ೧೩-೨೫) ; ನಿನ್ನ ಜವ್ವನಂ ನಿಟ್ಟೆಯೆ (ಶಾಂತೀಶ್ವ. ೫-೧೦೩). ೫. ಶಾಶ್ವತವಾದ ಪದವಿ ; ಮೋಕ್ಷ ; ಕೈವಲ್ಯ : ಒಟ್ಟದ ಕಿಚ್ಚು ಚಕ್ರಾಕೃತಿಮಧ್ಯದಿ ನೆಟ್ಟಂತೆ ಏಕಪಾದದಲಿ ನೆಟ್ಟನೆ ನಿಂದುಗ್ರತಪಸಿಗಳಿರ್ದರು ನಿಟ್ಟೆಯ[ಪಾಠಾಂ. ಕಟ್ಟನ] ವರವ ಬೇಡುತಲಿ (ಅಬ್ಬಲೂ. ೩-೪೫). ೬. (?) : ಕಟ್ಟೆಯೋ ಹರಿಸೇನೆ

ನಡೆವಾ ಬಟ್ಟೆಯೋ . . . ಕುಲಗಿರಿಯ ವಂಶದ ಕಟ್ಟೆದೆಯ ಪಕ್ಷವನು ಹೋಲಿತು ಸೇತು ಖಳಕೇತು (ಕೌಶಿರಾ. ೧೬-೨೭).

ನಿಟ್ಟೆಗೆ ವರ್ = ನಿಯಮಕ್ಕೆ ಒಳಪಡು ; ಲಕ್ಷಣಕ್ಕೆ ಹೊಂದು : ನಿಟ್ಟೆಗೆ ವಂದು ಕೋಮಲಗುಣಂ ಗೆಡೆಗೊಂಡಿರೆ ಪೂವಿನಂತಿರಾಯ್ದಿಟ್ಟ ಪದಂ ಬೆಡಂಗೆನಿಸೆ ಬಣ್ಣಸರಂ ಪೊಸತಾಗೆ ನುಣ್ಪೊಡಂಬಟ್ಟರೆ ಬಂದವೊಂದೆ ಚತುರಾಳಿ ಕರಂ ಬಸದಾಗೆ ಬಾಸಿಗಂಗಟ್ಟುವನಂತು ಕಟ್ಟುವುದು ಕಬ್ಬಮಂ (ಲೀಲಾವ. ೧-೬೨). [<ಸಂ. ನಿಷ್ಠಾ]

ನಿಟ್ಟೆ ಕಾಱ (ನಾ). ನಿಷ್ಠೆಯುಳ್ಳ ವ್ಯಕ್ತಿ : ಡಾಳ ಹಾಕುವ ಚಾಮರದ ಪೊಡೆವ ದೌಡೆಯ ಜೇಗಟೆಯ ಹಿಂದೆ ಮುಂದೆ ಸಂದಣಿಸಿ ಹರಿದಾಡುವ ನಿಟ್ಟ[ಟ್ಟೆ]ಕಾಱರ ಮುಖದೊಳಮರ್ಚಿ ಮಾರ್ಪೊಳೆವ ಲೋಹದರ್ಪಣದ ಕಾಲ್ಗಳೊಗೆದಪರಿಮಿತ ರೂಪಂದಳೆದು (ಹಮ್ಮೀರ. ೩-೩೩ ವ).

[ನಿಟ್ಟೆ + -ಕಾಱ]

ನಿಟ್ಟೆಗೊಳ್, ನಿಟ್ಟೆಗೊಳ್ಳು (ಕ್ರಿ). ೧. ಸ್ಥಿರಗೊಳ್ಳು ; ದೃಢವಾಗು: 'ನಿಟ್ಟೆಗೊಳಿಸು' ಪರಾ. ೨. ಶ್ರದ್ಧೆಯನ್ನು ಹೊಂದು ; ಆಸಕ್ತನಾಗು : ಲೋಗರು ಮಾಡಿದ ಪಲತೆಱದಾಗಮಮಂ ಕೇಳ್ದು ನಿಟ್ಟೆಗೊಳ್ಳದವಂ ಕೇಳ್ವಾಗಳೆ ಸನ್ಮತಿಯಕ್ಕುಂ (ಸಮಸ. ೩-೫೩). ನಿಟ್ಟೆಗೊಳ್ಳು : ೩. (?) : ನಟ್ಟಡವಿಯಲಿ ನೀನು ವೈರಿಘರಟ್ಟ ಕೇಳ್ ನಿಷ್ಕರುಣದಿಂ ನೆಱೆ ಬಿಟ್ಟುಹೋಗಲು ನಿನ್ನ ಪದವೆಂತಿರ್ದುವಕಟೆನ್ನ ನಿಟ್ಟೆಗೊಂಡಗಲಿಸಿತು ರಾಜಶ್ರೇಷ್ಠ ನೀ ಮೈದೋಱಿ ಕರುಣಾದೃಷ್ಟಿಯಲಿ ನೋಡು (ಜೀವಂಚ. ೫-೨೦). [ನಿಟ್ಟೆ + ಕೊಳ್$_1$]

ನಿಟ್ಟೆಗೊಳಿಸು (ಕ್ರಿ). ೧. ಸ್ಥಿರಗೊಳಿಸು ; ಸ್ಥಾಪಿಸು : ಇಟ್ಟಮಕುಟದ ಕಟ್ಟಿದ ಬಾಸಿಗದ ದೆಸೆಗಧಿಷ್ಠಾನಮಂ ಕಟ್ಟುವಂತೆ ಭಾಳಪಟ್ಟದೊಳ್ ಸಾಮ್ರಾಜ್ಯಪಟ್ಟಮಂ ನಿಟ್ಟೆಗೊಳಿಸಿದಿಂ ಬಟಿಕ್ಕೆ (ಅನಂಪು. ೬-೫೮ ವ). ೨. ಶ್ರದ್ಧೆಯನ್ನುಂಟುಮಾಡು ; ಆಸಕ್ತಿ ಹೊಂದುವಂತೆ ಮಾಡು : ಜೈನಯತೀಂದ್ರರಂತು ನಿಟ್ಟೆಗೊಳಿಸಲ್ಕೆಂತುಂ ಪೆಱರ್ ಬಲ್ಲರೆ (ಸಮಸ. ೪-೪೫). [ನಿಟ್ಟೆಗೊಳ್ + -ಇಸು$_3$]

ನಿಟ್ಟೆಗೊಳ್ಳು 'ನಿಟ್ಟೆಗೊಳ್' ನೋ.

ನಿಟ್ಟೆದುರು (ನಾ). = ನಿಟ್ಟೆದಿರ್ : ಜೀವವನ್ನು ನಮ್ಮ ಭಾವದ ನಿಟ್ಟೆದುರಿನಲ್ಲಿ ಬೊಂಬೆ ಮಾಡಿ ನಿಲ್ಲಿಸುವುದೊಂದು ಕಾರ್ಯ (ವಿಚಾಮಂ. ೫೭).

[ನಿಟ್(<ನಿಡಿದು$_1$) + ಎದುರು(<ಎದಿರ್)]

ನಿಟ್ಟೆಪಡು 'ನಿಟ್ಟೆವಡು' ನೋ.

ನಿಟ್ಟೆಯ್ದೆ 'ನಿಟ್ಟಯ್ದೆ' ನೋ.

ನಿಟ್ಟೆಯ್ದೆತನ 'ನಿಟ್ಟಯ್ದೆತನ' ನೋ.

ನಿಟ್ಟೆರ್ದೆ (ನಾ). ವಿಶಾಲವಾದ ವಕ್ಷಸ್ಥಳ : ಬಿಣ್ಪೊಱೆ, ನಿಟ್ಟೆರ್ದೆ, ನಿಟ್ಟೆರ್ಕೆ (ಭಾಷಾಭೂ. ೧೩೭ ಉದಾ). [ನಿಟ್ (<ನಿಡಿದು$_1$) + ಎರ್ದೆ]

ನಿಟ್ಟೆಲು 'ನಿಟ್ಟೆಲ್ವು' ನೋ.

ನಿಟ್ಟೆಲುವು 'ನಿಟ್ಟೆಲ್ವು' ನೋ.

ನಿಟ್ಟೆಲೆಹೊನ್ನೆ (ನಾ). ಒಂದು ಬಗೆಯ ಸಸ್ಯ : ನಿಟ್ಟೆಲೆಹೊನ್ನೆ, ಬೆಟ್ಟೆಲೆಹೊನ್ನೆ . . . ತೈಲವನಟ್ಟು ನಿರೂಹಣಂಗೆಯ್ಯೆ ಆಜೀರ್ಣಮುಂತಾದ ಸಕಲಜ್ವರಂಗಳುಂ ನಾಶಮಹುದು (ಸಕವೈ. ೧೨೯).

[ನಿಟ್ (<ನಿಡಿದು$_1$) + ಎಲೆಹೊನ್ನೆ]

ನಿಟ್ಟೆಲ್ವು, ನಿಟ್ಟೆಲು, ನಿಟ್ಟೆಲುವು (ನಾ). ಉದ್ದವಾದ ಮೂಳೆ ; ಬೆನ್ನುಮೂಳೆ : ಮುಱಿದ × × ನಿಟ್ಟೆಲ್ವು (ಎಕ. IV, ಹೆಗ್ಗಡ. ೧೧೬-೧೫; ಸು.930); ಪಗೆವರ ನಿಟ್ಟೆಲ್ವಂ ಮುಱಿವೊಡೆನಗೆ ಪಟ್ಟಂಗಟ್ಟಾ (ಪಂಪಭಾ. ೧೦-೧೬) ; ಕಿಟ್ಟೊಡೆ ಮೇಗಾಲ್‌ವೆರಲುಂಗುಟಂ ಬರಿ ನೊಸಲ್ ನಿಟ್ಟೆಲ್ವು ಗೋನಾಳಿ ಬೆನ್ (ಶಾಂತಿಪು. ೪-೧೬) ; ಧೂರ್ತಜನ ಹೃತ್ಸೆಲ್ಲಂ ನಿಟ್ಟೆಲ್ವುಳ್ಳ ಬಿರುದ ಪೆಣ್ಡತಿಗಣ್ಡಂ (ಎಕ. VII, ಶಿಕಾರಿ. ೩೦-೧೫ ; 1031) ; ನಿಟ್ಟೆಲ್ವುಗಳ್ ತೋಱುವಿನಂ ಕಾಯ್ದಿಕ್ಕುಟಿಂದಿರ್ಕುಟಿಸೆ (ಸುಕುಮಾ. ೭-೩೫) ; ನಿಱಿಲು ನಿಟಲೆನೆ ನಿಟ್ಟೆಲ್ವಂ [ಮೆಟ್ಟುತ] ಮುಱಿವುತಿರೆ (ಕುಮುರಾ. ೮-೪೮). **ನಿಟ್ಟೆಲು** : ದುಷ್ಟಚತುಷ್ಟೆಯರಲಟೆ ಹೊಟೆ ನಿಟ್ಟೆಲು ಗೋನಾಳಿಯಂ ಮುಱಿದು (ಎಕ. VIII, ಸೊರಬ. ೨೬೮-೩೩ ; ಸು. 1245) ; ಕರುಳುಗಿಯೆ ತಲೆ ಸಿಡಿಯೆ ನಿಟ್ಟೆಲು ಮುಱಿಯೆ ಮೂಳೆಗಳುದಿರೆ (ಕುವ್ಯಾಭೀ. ೪-೨೮) ; ಕೊಂಡು ಗದೆಯ ನಿಕುಂಭನಿನಕುಲನ ಮನ್ನಣೆಯ ಮನಮಚ್ಚುಗಾಱನ ಬೆನ್ನನಪ್ಪಳಿಸಿದನು ನಿಟ್ಟೆಲು ಭಿನ್ನವಾಗದೆ ಮಾಣದಿರದೆಂದಮರಗಣ ನುಡಿಯೆ (ಶೊರರಾ. ೬-೩೯-೮) ; ನಿಟ್ಟೆಲುಗಳನು ನಿಱಿನಿಟಲೆಂಬಂತೆ ಕಿತ್ತು ಮಸ್ತಕವನು ತಿಱಿಕಲ್ಲನಾಡಿ ಬೊಬ್ಬಿಱಿದ (ಮೋಹತ. ೧೨-೩೭) ; ನಿಟ್ಟೆಲು ಮುರಿ ಮುರಿದೊಟ್ಟಿದರೂ (ದೇವೀಮ. ೧-೨೪). **ನಿಟ್ಟೆಲುವು** : ಸ್ವಸ್ಥಪದ್ಮಾಸನದಲ್ಲಿ ಕುಳ್ಳಿರ್ದು ನಿಟ್ಟೆಲುವ ಮುಱಿದು . . . ಅಮೃತವನುಂಡಿಹೆನೆಂಬವರ ಕೇಡಿಂಗೆ ಕಡೆಯಿಲ್ಲ (ಅವಚಂ. ೯೯೯-೨೨೦) ; ನಿನ್ನ ನಿಟ್ಟೆಲುವ ಮುಱಿವೆನೆಂದುರವಣಿಸಿ ಜಱೆಯುತ್ತ . . . ಸುತನ ಹಿಂಗಾಲ್ವಿಡಿದು ಸೆಳೆದು ಬಿಸುಟಂ (ಹಚಕಾ. ೧೨-೩೬) ; ಮುರಹರನ ನಿ[ಪಾಠಾಂ. ನೆ]ಟ್ಟೆಲುವೆ ಕಟ್ಟಗೆ ಉರಗರಾಜನೆ ನೇಣು ನರಕೇಸರಿಯ ನಖವೇ ಕೊಂಕಿ . . . ಪಿರಿಯ ಗಾಳವನಿಕ್ಕುವಾ ಬಲೆಗಾಱನುಂ ತಾನೆ (ಬಸಪು. ೨೧-೨೮) ; ಕೌರವ ನಾಯಿಗಳ ನಿಟ್ಟೆಲುವ ಮುಱಿದು ನವಾಯಿಯಲಿ ಘಟ್ಟಸದೆ ಕೊಬ್ಬಿದ ತನ್ನ ತೋಳುಗಳ ವಾಯುಸಖನಲಿ ಸುಡುವೆನು . . . ಎಂದೊಡನೊಡನೆ ಮಿಡುಕಿದನು ಕಲಿಭೀಮ (ಕುವ್ಯಾಸ. ೧೪-೯೧) ; ಕಟವಾಯ್ಗೆ ಕೈಯನಿಟ್ಟರದೆರಳ್ ಸೀಳಾಗಿ ನಿಟನೆರಿಲ್ ನಿಟಲೆನಲ್ ನಿಟ್ಟೆಲುವನುಱೆ ಮುಱಿದು (ಚೆಬಪು. ೨೧-೬).

[ನಿಟ್(<ನಿಡಿದು$_1$) + ಎಲ್ವು]

ನಿಟ್ಟೆವಡಿಸು (ಕ್ರಿ). ೧. ನಿಯಮಕ್ಕೆ ಅಳವಡಿಸು. ೨. ಶ್ರದ್ಧೆಗೆ ಒಳಪಡಿಸು : ಮತ್ತಮೊಳಗಣಾಱುಂ ತಪದೊಳಗಂ ಪ್ರಾಯಶ್ಚಿತ್ತವಿನಯ ವೈಯಾಪೃತ್ಯ ಸ್ವಾಧ್ಯಾಯ ಧ್ಯಾನ ಕಾಯೋತ್ಸರ್ಗಂಗಳಂ ನಿಟ್ಟೆವಡಿಸಿ (ಶಾಂತಿಪು. ೯-೧೦೮ ವ) ; ಎರಡುಂ ತೆಱದ ಧರ್ಮಮಂ ಮನದೊಳ್ ತಾಳ್ದಿ ಪಾಯ್ದು ಪತ್ತಿದಂಕಮನೊತ್ತಿ ಪಿಡಿದು ಗೆಲ್ವ ಗಾಯಮಱುವಂಕದಂತೆ ಬೋಧೆಯಂ ನಿಟ್ಟೆವಡಿಸಿ (ಬಂಹರಿ. ೧೦-೩೧ ವ).

[ನಿಟ್ಟೆವಡು + -ಇಸು$_3$]

ನಿಟ್ಟೆವಡು, ನಿಟ್ಟೆಪಡು (ಕ್ರಿ). ೧. ಶ್ರದ್ಧೆಯನ್ನು ಹೊಂದು ; ಆಸಕ್ತಿಯನ್ನು ತಾಳು : ನಿನ್ನತುಳನಾಮಜಪಕ್ರಿಯೆಯಲ್ಲಿ ನಿಟ್ಟೆವಟ್ಟ ನತಿಶಯಾಂಗಿ ಸಾಧಿಸಿದಪಳ್ ನಿಜದೇಹವಿದಾಹಮುಕ್ತಿಯಂ (ಚಂದ್ರಪು. ೮-೮೩) ; ಅಯ್ದುಂ ಸಮತೆಯೊಳ್ ಪೊಕ್ಕು ಆಱುಂ ಕ್ರಿಯೆಗಳೊಳ್ ನಿಟ್ಟೆವಟ್ಟು (ಅನಂಪು. ೧೨-೩೩). **ನಿಟ್ಟೆಪಡು** : ೨. ಶ್ರದ್ಧೆಯನ್ನುಂಟುಮಾಡು ; ನಿಷ್ಠೆಯನ್ನು ಹೊಂದುವಂತೆ ಮಾಡು : ಕರೆದೊಡೆ ಜೂದಿಂಗಂ ಧುರಭರ[ಕಾಖೇಟ]ಕ್ಕೆ ಭೂಭುಜಂಗಾಗದು ಮೆಯ್ಗರೆದಿರಲೆಂಬ ಪುರಾತನಗುರುವಚನಂ ತನಗೆ ನಿಟ್ಟೆಪಟ್ಟುದಱಿಂದಂ (ಪಂಪಭಾ. ೬-೭೧). [ನಿಟ್ಟೆ + ಪಡು$_1$]

ನಿಟ್ಟೆಸರಿಡು (ಕ್ರಿ). ಹೆಚ್ಚುಹೊತ್ತು ಚೆನ್ನಾಗಿ ಕುದಿಯಲು ಒಲೆಯ ಮೇಲೆ ನೀರಿಡು : ನೆಟ್ಟನೆ ಪುಷ್ಪವಾಸನೆಯ ಕಪ್ಪುರಶಾಲಿಯ ತಂಡುಲಂಗಳಂ ನಿಟ್ಟೆಸರಿಟ್ಟು ಬಾಗಿ ಮೃದುವಾದ . . . ಅನ್ನಮನಲ್ಲದೆ ಮತ್ತಿನನ್ನಮಂ ಮುಟ್ಟುವನಲ್ಲಂ . . . ಸುಕುಮಾರವಲ್ಲಭಂ (ಸುಕುಮಾ. ೧೦-೧೦೮). [<ನಿಡಿದು$_2$ + ಎಸರಿಡು]

ನಿಟ್ಟೆಸಳ್ 'ನಿಟ್ಟೆಸಟ್ಟೆ' ನೋ.

ನಿಟ್ಟಿಸಳು 'ನಿಟ್ಟಿಸಟುಂ' ನೋ.

ನಿಟ್ಟಿಸಳುಗಣ್ 'ನಿಟ್ಟಿಸಳ್ಗಣ್' ನೋ.

ನಿಟ್ಟಿಸಳ್ಗಣ್, ನಿಟ್ಟಿಸಳುಗಣ್, ನಿಟ್ಟಿಸಳ್ಗಣ್ಣು (ನಾ). ಉದ್ದವಾದ ರೇಕು ಅಥವಾ ಪಳಕೆಯನ್ನು ಹೋಲುವ ನೀಳವಾದ ಕಣ್ಣು : ನಿಟ್ಟಿಸಳ್ಗಣ್ಣಳ ನಿಜಗುರುಳಬರೆಯ . . . ಎನೆಯುಲುಗದೆ ನೀಡುಂ ನಿಟ್ಟಿಪ ನೀಜನ ಬಗೆ (ಜಯಕಾ. ೪-೧೦). **ನಿಟ್ಟಿಸಳುಗಣ್** : ಏಳನೆಯ ನಿರಮೊಗದ ಬೆಲುವಿನ ಹೊಳಹೊಳೆವ ನಿಟ್ಟಿಸಳುಗಂಗಳ (ಕುಸ್ಯಾಭ. ೩-೭೬) ; ನಿಟ್ಟಿಸಳುಗಂಗಳ . . . ಪಡೆದ ನಿಜರೂಪನಂ ಕಂಡನವನೀಪಾಲನು (ಜೈಮಿಭಾ.೩-೪೮). **ನಿಟ್ಟಿಸಳ್ಗಣ್ಣಿ** : ಬಾಲೆಯು ಕೊರಲು ಹೊನ್ನೊರಲು . . . ನಿಟ್ಟಿಸಳ್ಗಣ್ಣಾಲೆಯು ಮನೆಗಕೊಪ್ಪಿದುವು (ಮೋಹಶ. ೩-೫೦) ; ಅಂದವಡೆದಿರ್ದ ನಾನಿಳದ ನಿಟ್ಟಿಸಳ್ಗಣ್ಣ ಕಾಂತಿಗಳ ತುಜುಗೆವೆಗಳ . . . ಮದನನಂ ಕಾಣದಂತಿರ್ಪನೋ (ಚಿಬಪು. ೩೫-೩೭).

[ನಿಟ್ಟಿಸಳ್(<ನಿಟ್ಟಿಸಟುಂ)+ಕಣ್]

ನಿಟ್ಟಿಸಳ್ಗಣ್ಣು 'ನಿಟ್ಟಿಸಳ್ಗಣ್' ನೋ.

ನಿಟ್ಟಿಸಟುಂ, ನಿಟ್ಟಿಸಳ್, ನಿಟ್ಟಿಸಳು (ನಾ). ಉದ್ದವಾದ ದಳ; ನೀಳವಾದ ಎಸಳು,—ರೇಕು,—ಪಕಳೆ : ನೀಳ್ದ ಕಣ್ಮಲರ್ಗಳೊಳ್ ಕೊತ್ತಲುಕ್ಕಳದ ನಿಟ್ಟಿಸಟುಂ (ಲೀಲಾವ. ೯-೧೩೧) ; ನೀರೇಜದ ನಿಟ್ಟಿಸಟು ಹಸೆಗಳಿಂದಸೆಯೆ ವಿರಚಿಸಿದ ಲತಾಮಂಟಪಮಂ ಕಂಡು (ಕುಸುಮಾ. ೫-೯೬ ಪ) ; ಪೂತೆಸೆವ ಜಾದಿಯಲರ್ಮಂಡನುಜಿಯುಂದು ತನೆದು ಕೇತಕಿಯ ನಿಟ್ಟಿಸಟು ಬಂಬಲ್ಗಳೊಳ್ಕುಣೆದು (ಉದ್ಭಟ. ೧೦-೧೩೨) ; ಮಿನುಗುವ ನಿಟ್ಟಿಸಟೊಳ್ ನೀರ್ವನಿಗಳನೊಳಕೊಂಡು ಕೋರ್ಪ ಕೆಂದಾವರೆಯಂ (ಕಬ್ಬಕಾ. ೭೪).; ದ್ವಿತ್ವಕ್ಕೆ . . . ನಿಟ್ಟಿಯ್ದೆ, ನಿಟ್ಟಿಸಟುಂ (ಶಸಮ. ೧೪೦ ಪ್ರಯೋ). **ನಿಟ್ಟಿಸಳ್** : 'ನಿಟ್ಟಿಸಳ್ಗಣ್' ಪರಾ. **ನಿಟ್ಟಿಸಳು** : 'ನಿಟ್ಟಿಸಳುಗಣ್' ಪರಾ.

[ನಿಟ್(<ನಿಡಿದು$_1$)+ಎಸಟುಂ]

ನಿಟ್ಟಿಸಟ್ಟುವಳಿಗೆ (ನಾ). ಉದ್ದವಾದ ಓಲೆಯ ಗರಿಗಳ ಕಟ್ಟು : ಓದುವುದಲರಾದ ಕೇದಗೆಯ ಕುತ್ತಿಸಟಕೋಲೆಯನೆತ್ತಿ ನಿಟ್ಟಿಸಟ್ಟುವಳಿಗೆಯಾಗೆ ಭೃಂಗವಿಟರಾಜಿ ಮನೋಜನ ವೀರಪ್ರತ್ತಿಯಂ (ಅನಂಪು. ೧-೯೧).

[ನಿಟ್ಟಿಸಟುಂ+ಕವಳಿಗೆ$_1$]

ನಿಟ್ಟೀರಿಸು (ಕ್ರಿ). ಒಂದರ ಮೇಲೊಂದರಂತೆ ಪೇರಿಸು ; ನಿಟ್ಟು ಹಾಕು : ಆ ಎರಡು ನಿಟ್ಟೀರಿಸಿದ ಟೀಲಗಳ ಮೇಲೆ ಹತ್ತಿ (ಗಂಗಾಗೌ.೮೨).

[ನಿಟ್ಟು$_2$+ಏರಿಸು(<ಏಱಿಸು)]

ನಿಟ್ಟೆಯ್ದೆ 'ನಿಟ್ಟಯ್ದೆ' ನೋ.

ನಿಟ್ಟೆಸು 'ನಿಟ್ಟಿಸು' ನೋ.

ನಿಟ್ಟೊಡಲ್, ನಿಟ್ಟೊಡಲು (ನಾ). ೧. ನೀಳವಾದ ಒಡಲು,—ಶರೀರ ; ದೀರ್ಘದೇಹ : ವೀರ ಜನಳುಮಾರಸಂ ದೂರದೊಳೆ ಭೋಂಕೆನೆ ಕಂಡು . . . ಪೊಣ್ಮುವ ಪೂತ್ಕ್ರಿಯಾರಭಸಮಾವಂ ಭೀತಿಯಂ ಮಾಡೆ ನಿಟ್ಟೊಡಲಂ ನೆಟ್ಟನೆ ನಾಗರಾಜನಿಳೆಯಿಂದಟ್ಟಿಂದನುಂ ತಾಳ್ದಿದಂ (ಪಧಪು. ೧೪-೬೪) ; ಏವೂರ ನಗಳದೊಂದು ಬಣ್ಣಗುದುರೆ ! . . . ನಿಮಿರ್ದ ಕೊಡಂಕೆ, ಡಗೆವೊಯ್ವುಕ್ಕೆ, ಗುಜ್ಜುಗಾಲ್, ನಿಟ್ಟೊಡಲ್ (ರಾಮಾಶ್ವ.೪೪-೨೬). **ನಿಟ್ಟೊಡಲುಃ** ೧. ಸರಿಸದಲಿ ನಿಂದರೆ ನಾದುವೆನು ನಿಟ್ಟೊಡಲ ರಕುತದಲುಳಿಗೆ ದಿಗುತಟವ (ಕುಸ್ಯಾದ್ರೋ. ೧೩-೩೦) ; ಬಿಟ್ಟ ಮುಂಡೆಯ ಕೆಂಚುಗೂದಲ ನಿಟ್ಟೊಡಲ . . . ಕಡುಮರುಳು ವೇಷವ ಕೊಟ್ಟು (ಪ್ರಭುಲೀ. ೨೨-೨೩). ೨. ದೊಡ್ಡ ಶರೀರ : ಕೆಟ್ಟ ಸಂಸ್ಕೃತಿಯೆಂಬ ನಿಟ್ಟೊಡಲ ದಂತಿ ಕೊಟ್ಟೊಟ್ಟೈಸಲಾರ್ಗಮರಿದನಿಪುದು (ಸಾನಂಚ. ೧-೪೧). [ನಿಟ್(<ನಿಡಿದು$_1$)+ಒಡಲ್]

ನಿಟ್ಟೊಡಲ (ನಾ). ನೀಳವಾದ ಶರೀರವುಳ್ಳವನು ; ಎತ್ತರದ ವ್ಯಕ್ತಿ : ತಪದಿಂದಂ ಬಡಪಟ್ಟ ನಿಟ್ಟೊಡಲನಂ ನರ್ವಗ್ರನಂ ತಪ್ಪು ರೋರು ಪದಪ್ರಾಪ್ತನನೆಬ್ಬು ಪಾಯ್ವು ಪಸು ಕೊಗೊಂಡಿಂದೆ ಕೋಪತ್ತಿ . . . ತಡಾಡಿದತ್ತು (ಪಧಪು. ೬-೬).

[ನಿಟ್ಟೊಡಲ್+-ಅ$_7$]

ನಿಟ್ಟೊಡಲು 'ನಿಟ್ಟೊಡಲ್' ನೋ.

ನಿಟ್ಟೊರಸು (ಕ್ರಿ). ಸಂಪೂರ್ಣವಾಗಿ ನಾಶಮಾಡು; ಇಲ್ಲವಾಗಿಸು; ಧ್ವಂಸಮಾಡು : ಗುರುಲಿಂಗ ಜಂಗಮದ ಕಾಲ ಕಟ್ಟುವೆ ವ್ರತಭ್ರಷ್ಟರ ನಿಟ್ಟೊರಸುವೆ (ಸರ್ಪಸ. ೧೮೬-೪೬೦) ; ಆ ರವಿಯ ತೇಜಮಂ ಕೊರಗಿಸನೆ ಮೇಘವಾ ಮೇಘಮಂ ವಾಯು ನಿಟ್ಟೊರಸನೆ (ಲಕಚಂ. ೬೯-೪೦) ; ಧರಧುರದ ದುರ್ಮಸನಿಗಳ ನಿಟ್ಟೊರಸಿ ತೆಗೆ ನಿನ್ನವರನೆನುತುಬ್ಬರವ ಮಾಣಿಸಿ ಹೂಣಿಗರ ಹೊಯ್ದಿವನು ಕಲಿ ಭೀಷ್ಮ (ಕುಪ್ಯಾಸ. ೧೧-೩೭);ಗಜರಾಜಿಯಂ ದಿಂಡುರುಳ್ಚಿಸಿ ತೇರ್ಗಳಂ ಛತ್ರಚಮರಾಳಿಗಳ್ಕೆರಸಿ ನಿಟ್ಟೊರಸಿ . . . ನವಜೀವದುದು ಸುಭಟರಂ ಮತ್ತಗಜವೇನೆಂಬೆನು (ಚಿಬಪು. ೨೪-೨೪) ; ತುದಿವಾಲದಲಿ ಫಣಿಗಹ್ನ ನಿಟ್ಟೊರಸುತ ಲಲಾಟಗಳಿಗೊರಸುವನು ಗೋಮಯವ (ಉತ್ತಕ. ೩೨-೩೩) ; ಬಾಬಾಯುಧನು . . . ಕಂಘಟ ತುರಂಗಮಂ ಬರಿಗೈವುಕ ನಿಟ್ಟೊರಸಿ ತೇರ್ಗಳಂ ಪುಡಿಮಾಡಿ . . . ಯುದ್ಧಿಷ್ಠಿರನ ಏಲ್ಲುನಲ್ಲೆಂಬೆನುತ ಬಿಲ್ದುಡುಕು ಸಾಕೋಡಬೇಡೆಂದನು (ತುರಂಗ. ೪೯-೧೧). [<ನಿಡಿದು$_2$+ಒರಸು$_1$]

ನಿಟ್ಟೊಟ್ಟೆ (ನಾ). (ದಾವುಗಾಲಿನ) ರಭಸವಾದ ಓಟ ; ಅತಿ ವೇಗದ ಓಟ : ಎಡನಂ ಬಲನಂ ದಿಟ್ಟಿಸುತೆ ನಿಂದು ನಿಲ್ಲದೆ ನಿಟ್ಟೊಟ್ಟೆ ದೊಳೋಡಿತೆಸೆವ ಮಸಕದ ಶಶಕಂ (ನಿರಿಕ. ೧-೪೬) ; ಬದುಕಿದೆನೆಂದು ನಿಟ್ಟೊಟ್ಟೆದಲಿ ಹಾಯ್ದನು ಬಿಟ್ಟ ಮಂಡೆಯುಲಿ (ಕುವ್ಯಾವಿ. ೬-೧೨) ; ಸಪ್ತಮದಾವಸ್ಥೆಯಿಂ ಮುಂದುಗಾಣದೆ ಬಲ್ಗಂಬಮಂ ಮುಟ್ಟಿದು ನಿಗಳಮಂ ಪಟ್ಟಿದು ನಿಟ್ಟೊಟ್ಟೆದಿಂ ಬೀದಿವರಿದು (ರಾಜಶೇ. ೬-೧೧ ಪ) ; ಹಸು ಬೆಟ್ಟ ಬೆದರಿ . . . ಗುರುಗಳನ್ನು ಮುಳ್ಳಿನಲ್ಲಿಯೂ ಕಲ್ಲಿನಲ್ಲಿಯೂ ಎಳೆದುಕೊಂಡು ನಿಟ್ಟೊಟ್ಟೆವಾಗಿ ಓಡಿ ಹೋಗಿ ಬಳಲಿ ಬಂದು ಕಡೆ ನಿಂತುಕೊಂಡಿತು (ಸಗಗ. ೨೫) ; ನೆಟ್ಟಾನೆ ಕಲ್ಲು ನಿಟ್ಟೊಟ್ಟೆ ಓಡೀತೆ ? (ಗಾದೆ). [ನಿಟ್(<ನಿಡಿದು$_1$)+ಓಟ]

ನಿಡವು (ನಾ). (?) : ಶ್ರವಣ ಧನಿಷ್ಠೆಯುಂ ಶತಭಿಷಂ ನೆಗಟ್ಟಿರ್ಪಿನ (ಪುನರ್ವಸು)ವೈದು ಮಧ್ಯಮಂ ಭರಣಿ ಕೃತ್ತಿಗೆ ಚಿತ್ತೆ ವಿಶಾಖೆ ಮೂಱು ನಿವರಣಮಪ್ಪ ಪೂರ್ವವೆರಸಾದ್ರನುಹಾವಹನಾರ್ಕ್ಷಮೆಂಬ ಪತ್ತು ನಿಡವಿಂ ಕನಿಷ್ಠಮಿವ ಬಿತ್ತಿಪುದು (ಅಬ್ಬಸಂ. ೯-೨೬). [?]

ನಿಡಿ$_1$ 'ನಿಟ್' ನೋ.

ನಿಡಿ$_2$ (ನಾ). ಕಟುವಾದ ವಾಸನೆ ; ತೀಕ್ಷ್ಣವಾದ ವಾಸನೆ ; ಘಾಟು : (ಕ). [←ತಮಿ. ನಿಟ]

ನಿಡಿ$_3$ (ನಾ). ೧. ಅನ್ನವನ್ನು ಬೇಯಿಸಿ ಬಸಿದ ನೀರಾದ ಗಂಜಿ ; ಅನ್ನದ ನೀರುನೀರಾದ ಗಂಜಿ : ಓಗರದ ಮೇಲಣ ನಿಡಿ=ಮಾಸರೆ, ಅಚಾಮು, ನಿಃಸ್ರಾವೆ, ಓಗರದ ಗಂಜಿ ಎಂಡೂ ಎಂಬರು (ನಾಚಂಠಾ. ೬); ಬಿಚ್ಚಿ-ಕೂಟ ಮೇಲಣ ನಿಡಿ (ನಾಚಂಠಾ. ೬). ೨. ಮದ್ಯ ಅಥವಾ ಹೆಂಡದ ಮೇಲಿನ ತಿಳಿ : ಕಾರೋತ್ತರ, ಸುರಾಮಂಡ-ಮದ್ಯದ ಮೇಲಣ ನಿಡಿ (ನಾಚಂಠಾ. ೬) ; ಸುರಮಂಡೇನ=ಕೀಳುಜಾತಿಯಾದರೆ ಹೆಂಡದ ಮೇಲಣ ನಿಡಿಯಿಂದ . . . ಪಾಯಯೇತ್=ಕುಡಿಸಬೇಕು (ಬಾಹಟೀ. ೨-೧-೮೬ ಪ). ೩. ಮೊಸರ ಮೇಲಿನ ಒಡಕು ಒಡಕಾದ ನೀರಿನಂತಹ ಭಾಗ,—ತಿಳಿ : ಮಸ್ತು-ಮೊಸರ ಮೇಲಣ ನಿಡಿ (ನಾಚಂಠಾ. ೬) ; ಮಂತ=ಕಡೆಗೋಲು, ಮೊಸರ ಮೇಲಣ ನಿಡಿ (ಶಮದ. ೨೫೫ ಆಡಿಟ). ೪. ತಂಪು ; ತಣ್ಣಗಾದುದು : ಗಡಿಯಾಗಲಟುಧಿ

ನೀರಸವೆತ್ತು ಚಂದ್ರ ಕೆಂಗಿಡಿಯಾಗಲಗ್ನಿ ಮೆಯ್ಯಱತು ನಿಡಿಯಾಧರಾಗ ಬೇಕಲ್ಲದೆ ನೀ ಪೇಳ್ವ ನುಡಿಯೊಳು ಪುಸಿಯಿಲ್ಲ ತಾಯೆ (ಮೋಹತ. ೨೫-೨೯).

ನಿಡಿ$_4$ (ನಾ). (?) : ಗಡಿ ನಿಡಿ ಹುಟ್ಟು ಕಟ್ಟಳೆಯ ವಿವರ . . . ಮೂಡಕೇರಿ ಪಡುವಕೇರಿಯ ಗಡಿ ನಿಡಿಯನು ತಿದ್ದಿ ಮುಗಿದು ಬರಸಿದ ವಿವರ (ಸೌಇಇ. IX-ii, ೪೫೭-೧೦; 1455); ಲೊಕ್ಕಿ ನಿಡಿ ಅನುಭ ಸನುಭ ಅಕ್ಷೀಣ ಆಗಾಮಿ. × × × ಲ ಪಾಷಾಣ ಸಿದ್ಧ ಸಾಧ್ಯ ಯೇನು ಳಂಥಾದನು ಸರ್ವಮಾನ್ಯವ × × × ರ(ಂ)ಕ್ಕೋದಕದಾನ ಧಾರ ಪೂರ್ವಕವಾಗಿಯೆಱದು ಕೊಟ್ಟೆಱ (ಸೌಇಇ. IX-ii, ೪೭೦-೩೭; 1482); ಅಂತು ಗ ೭೩ ಎಪತಮೂರು ವರಹನ ಭೂಮಿಯನು . . . ಮಠ ಧರ್ಮಕ್ಕೆ ನಡಸಿ ಅಷ್ಟಭೋಗ ತೇಜಸ್ವಾಮ್ಯಮ ಪ್ರಾಕು ಮರಿಯಾದೆ ಯಲ್ಲಿ ಆಗುಮಾಡಿಕೊಂಡು ಅಷ್ಟಾದಶಜಾತಿಗು ನಿಡಿ ಮಾಡಿಕೊಂಡು . . . ಸುಖದಿಂ ಅನುಭವಿಸಿ ಬಹಿರಿ (ಎಕ. VIII, ತೀರ್ಥಹ. ೬೨-೨೮; 1633); ಅರೈದು ನೂತ ಕುಕ್ಕಡಿಯ ತಂದು ಮೂರೇಳು ಸಾಸಿರದರು ನೂರು ನಿಡಿಯ ಸೇರಿಸಿ ಹೊಯ್ದ ಸಣ್ಣಡಿಯ ಹುಂಜ ಈರೈದು ಹಣಗೆಯಿಂ ನೇಯ್ದ ಚಿತ್ಕೊಡೆಯ (ಮೈಲಾರ. ೯೦-೧). [?]

ನಿಡಿಗಣ್ 'ನಿಡುಗಣ್' ನೋ.

ನಿಡಿಗಣ್ಣ 'ನಿಡುಗಣ್ಣ' ನೋ.

ನಿಡಿಗಣ್ಣು 'ನಿಡುಗಣ್' ನೋ.

ನಿಡಿಗರುಳು 'ನಿಡುಗರುಳ್' ನೋ.

ನಿಡಿಗಲ್ಲು 'ನಿಡುಗಲ್' ನೋ.

ನಿಡಿಗುರುಳ್ 'ನಿಡುಗುರುಳ್' ನೋ.

ನಿಡಿಗುರುಳು 'ನಿಡುಗುರುಳ್' ನೋ.

ನಿಡಿಗೊಂಡೆಯ (ನಾ). ಉದ್ದವಾದ ಗೊಂಡೆ : ಎನಗೆ ನಿನ್ನನೊಲಿಸ ಬೇಕೆಂಬ ಸಂಭ್ರಮದ ಕಾಂಚೀದಾಮ ಕಟಸೂತ್ರ ಕೇಯೂರ ನಿಡಿ ಗೊಂಡೆಯ[ಪಾಠಾಂ. ನಿಡುಗೊಂಡೆಹ]ವೆಂಬಾಭರಣ ಅನುಲೇಪನ ವಸ್ತ್ರಂ ಗಳೆನಗೆ ಅಲಂಕಾರವಾಯಿತ್ತು (ಘನವ. ೨-೧).

[ನಿಡಿ$_1$ (<ನಿಡಿದು$_1$)+ಗೊಂಡೆಯ]

ನಿಡಿಗೊರಲು 'ನಿಡುಗೊರಲ್' ನೋ.

ನಿಡಿದು$_1$ (ನಾ). ೧. ಉದ್ದವಾದುದು ; ನೀಳವಾದುದು : "ನಿಡಿದೆಂದೆನಲ್ ಪಿರಿದುದ್ದವಾದುದು" (ಕಶರ. ೫೫) ; ನಕುಲನಂ ತೊಟ್ಟಲ ಸಮೀಪದೊಳ್ ನಿಡಿದಪ್ಪ ನೇಣಂ ಕಟ್ಟ ಪೋದಂ (ಪಂಚತಂ. ೧೮೮-೨೦) ; ನಿಡಿದೊಂದು ಕೋಲನು ಕಡಿದು ಎರಡು ಮಾಡಿ . . . ಹೊಸೆದೊಡೆ ಹುಟ್ಟದ ಕಿಚ್ಚು ಹೆಣ್ಣೋ ಗಂಡೋ (ದೇದಾವ. ೬೯-೧೪೪); ನಿಡಿದಾದ ಕಪ್ಪುಗಣ್ಣಳ ವಾರನಾರಿಯರಡಿಯಿಟ್ಟರು (ಮೋಹತ. ೧೫-೨೬). ೨. ವಿಸ್ತಾರವಾದುದು ; ವಿಶಾಲವಾದುದು : ಕನ್ನಡನುಡಿಯ ನಿಡಿದಾದ ಬೆಳವಣಿಗೆಯಲ್ಲಿ ಜನಭಾಷೆಯ ಸ್ವರೂಪ ವಿವಿಧ ಶತಮಾನಗಳಲ್ಲಿ ಹೀಗೇ ಇತ್ತೆಂದು ಹೇಳುವುದು ಸದ್ಯದ ಪರಿಸ್ಥಿತಿಯಲ್ಲಿ ಕಷ್ಟಸಾಧ್ಯವಾಗಿದೆ (ದ್ರಾವಿವಿ. ೭೬). ೩. ದಪ್ಪವಾದುದು ; ಸ್ಥೂಲ ವಾದುದು : ನಡು ನಿಡಿದಲ್ಲದೆಯುಂ ಮೇಣ್ ಕಡುಕಿಱುದಲ್ಲದೆಯು ಮೊದವಿ ಸಿಂಹದ ಕಟವೋಲ್ ಕಡು ಚೆಲ್ವೆನೆ ಕಟ ಕಪ್ಪೆಯ ಪೊಡೆವೊಡೆ ವೋಲ್ ತೋರ್ಪೊಡೆವೊಡಾತಂ ಧನ್ಯಂ (ಲೋಕೋಪ. ೧೧-೪). ೪. ವಿಸ್ತಾರ; ಹರಹು: ನುಡಿಗೆ ಗಿಣಿ ನಿಲದೆ ಮರನೇಱುದವು ಕಣ್ಣುಗಳ ನಿಡಿದು[ದಿ]ಗೆ ಮಿಗಂ ಪುಲ್ಲ ಕಚ್ಚಿದುವು(ನಂದಿಮಾ. ೯-೩೭). ೫. ನೀಳ ; ದೀರ್ಘತೆ : "ಚೆಲ್ಲೆಯೆನೆ ನಿಡಿದು" (ಕಚ್ಚಿಕೈ. ೫೦) ; ಎಡಹಿದೊಡಿಲ್ಲ ನಿದ್ರೆ ನಿಡಿದಾದೊಡಮಿಲ್ಲುಸಿರಿಕ್ಕುತಿರ್ಪುಸಿರ್ ತಡೆದೊಡಮಿಲ್ಲ . . . ಕೆಮ್ಮಿದೊಡಮಿಲ್ಲದದಸ್ಥಿರಮಿಂತು ಕೆಟ್ಟುಪೋಪೊಡಲಿದಕೇಕೆ ಕಾಮ (ಪಂಪಾಶ. ೮೩) ; ದೊಡ್ಡ ಸಿಂಹಗಳು ಮೂಗಿನ ತುದಿಯಿಂದ ಬಾಲದ ತನಕ ಐದು ಐದೂವರೆ ಮೊಳ ನಿಡಿದು ಇರುತ್ತವೆ (ಮುಂಬಯಿ. ೪-೨೦೮).

ನಿಡಿದಾಗು = ಉದ್ದವಾಗು : ಸ್ಥೂಣತೀತಿ ನಿಡಿದಾದಪುದೆಂಬುದು (ಕಾಶಕೃ. ೩೬). ನಿಡಿದು ಮಾಡು = ಉದ್ದಮಾಡು : ಕೂನುವೆರಸಿದ ಕುಬ್ಜಾಕಾರಮಂ ಕೈಕೊಂಡು ಬರೆ ತಜ್ಜನಂಗಳ್ ನೋಡಿ ನಗೆ ವಿಗುರ್ವಣೆಯಿಂ ಕೆಲಂಬರ ಘ್ರಾಣಮಂ ಸೂಕರಘ್ರಾಣದಗ್ರದಂತೆ ನಿಡಿದು ಮಾಡಿಯುಂ . . . ಬಂದು (ಮಹಾನೇ. ೬-೧೩೨ ವ). ನಿಡಿಯ = ಉದ್ದವಾಗಿರುವವನು ; ಎತ್ತರವಾಗಿರುವವನು : ತತ್ಕ್ಷೇತ್ರ ಪ್ರಮಾಣಬಲಪ್ರಕಾಶವಿಕ್ರಿಯಾಶರೀರನುಂ ಇರ್ಮೊಬ ನಿಡಿಯನುಂ ಶುಕ್ಲ ಲೇಶ್ಯಾಪರಿಣಾಮನುಮಪ್ಪ ಹಮಿಂದ್ರನಾಗಿರ್ಪಿನಂ (ಚಾವುಂಪು. ೧೧-೧೧); ನಿಡಿಯಂ ಚಳತ್ಕೃತಶರೀರಂ ತುಂಗನಾಸಂ . . . ತೌಲಿಗೇಹೋದ್ಭವಂ (ಜಾತತಿ.೧೭-೬) ; ಕಡುಗುಜ್ಜಂ ಕಪಟಮನಂ ನಿಡಿಯಂ ಚಪಳಂ ಸಮಂತು ಸಮಸಂಸ್ಥಾನಂಬಡೆದೊಡೆ ನಿಧಿಪುರುಷಂ (ಲೋಕೋಪ. ೧೧-೨೮). ನಿಡಿಯಟ್ಟಳೆ = ಅಗಲವಾದ ಅಟ್ಟಣೆ ; ವಿಸ್ತಾರವಾದ ಅಟ್ಟಳೆ : ಮಲ್ಲಿಗೆಯ ಬೆಳರ್ವಂದರೋಳಿಯಂತೆಸೆದವದಱೊಳು ತೆಳ್ವಳುಕಿನ ನಿಡಿ ಯಟ್ಟಳೆಗಳು (ಕುರಾಸಾಂ. ೪-೯೧). ನಿಡಿಯ ನಾಲಗೆ = ಉದ್ದವಾದ ನಾಲಗೆ : ನಿಡಿಯ ನಾಲಗೆಯಂ ಪಿಡಿದು ಪೆರ್ಮಡುಗಳೊಳಿದಿರುಂ ಬಱಿಯುಮಿಾಸಿಸುತ್ತುಂ (ಅಜಿಪು.೧೦-೧೧ ವ) ; ಗುಣವಚನದತ್ವಮಿತ್ವಕ್ಕೆ . . . ನಿಡಿಯ ನಾಲಗೆ, ಪಿರಿಯ ಮಗಂ, ಕಿಱಿಯ ಮಗಂ (ಶಮದ. ೧೬೮ ಪ್ರಯೋ). ನಿಡಿಯ ಭೂತ = ದೊಡ್ಡದಾದ ಭೂತ : ಕಡಿಖಂಡ ಮಾಡಿ ಕಾನನದೊಳು ಚರಿಸುವ ನಿಡಿಯ ಭೂತಗಳನು ಬರಿಸಿ ಕುಡದೆ ಮಾಣೆನು ತಾನೆಂದಾಗ್ರಹವನು ಪಿಡಿದು ನುಡಿದನಿಂತೆಂದು (ಅಂಜಚ. ೧೩-೬೧). ನಿಡಿಯ ಮರ = ಎತ್ತರವಾದ ವೃಕ್ಷ : ಗುಂಡಿಗೆಯು ಮೊಂದು ನಿಡಿಯ ಮರದ ತುತ್ತತುದಿಯೊಳಿರ್ದುದು (ವಡ್ಡಾರಾ.೯೧-೧೬). ನಿಡಿಯ ಮಾತು = ಹೆಚ್ಚಾದ ಮಾತು : ಮೃಡನ ಮೋಹದ ಭಕ್ತ ನಿಡುಮಾರದೇವಯ್ಯನೊಡನೆ ವಾದಿಸಿ ಸೋಲ್ತ ಶ್ರವಣಪಡೆಯನೆಲ್ಲವ ತಡೆಗಡಿದನೆಂಬುದ ಕೇಳಿ ನಿಡಿಯ ಮಾತೇನೆಲೊ ನಿನಗೆ (ಭೈರವೇ. ೫-೬೧). ನಿಡಿಯರ್ (ಬಹುವ) : ಕಡುಗಲಿತನಮುಂ ಚಾಗದ ಪಡೆಮಾತುಂ ವಿದ್ಯೆಯುರ್ಕುಮೊರ್ವನೊಳೆಂತುಂ ನಡೆಯವು ಭುವನಾಂತರದೊಳ್ ನಿಡಿಯರ್ಗಂ ನಿಡಿಯರೊಳರಿದೇಂ ವಿಸ್ಮಯಮೇ[ಪಾಠಾಂ. ನಿಡಿಯಂಗಂ ನಿಡಿಯನೊಳವಿದೊಂದಚ್ಚರಿಯೇ] (ಅದಿಪು. ೧೨-೧೦೪) ; ಲೋಕದೊಳ್ ಕವಿಗಳುಂ ಚಾಗಿಗಳುಂ ಒರ್ವರೊರ್ವರ್ಗೆ ನಿಡಿಯರ್ಗೆ ನಿಡಿಯರೊಳರ ದೇನಪೂರ್ವಂ (ಧರ್ಮಾಮೃ. ೪-೨೧೯) ; ಧರೆಯೊಳು ನಿಡಿಯರ್ಗಂ ನಿಡಿಯರುಂಟು ಚೂಡಾರತ್ನ (ನೀತಿಸಾ. ೨೩೦). ನಿಡಿಯ ರಸ = ಹೆಚ್ಚಾದ ರಸ ; ಅಧಿಕವಾದ ರಸ : ತುಡುಕಿ ತರಣಿಯನಗಿವ ರಾಹುವಿ ನೆಡಬಲದ ಕಟವಾಯಲೊಸರುವ ನಿಡಿಯ ರಸವೆನಲೆಸೆವ ದಾಡೆಯ ಹುರಿಯ ಹುಬ್ಬುಗಳ . . . ರಕ್ಕಸರಾಯನೆಸೆದಿರ್ದ (ತೊರರಾ. ೩-೭-೩). ನಿಡಿಯಲರ್ಗಣ್ = ನೀಳವಾದ ಹೂವಿನಂತಿರುವ ಕಣ್ಣು : ನಿಡಿಯಲರ್ಗಣ್ಣಳ ಬೆಡಂಗಿಯರ್ಕಳನರ್ಕಂ ನಡೆ ನೋಡಿ ಪೋಗಲಾಱದೆ ತಡೆಯೆ ಪಗಲ್ ಪಿರಿಯಪ್ಪುವು (ಕಾವ್ಯಸಾ. ೧೭೮ ಶೂದ್ರಕ) ; ಉಂತೆ ಪೊಳೆವ ನಿಡಿಯಲರ್ಗಣ್ಣಳ್ಗೆ ಮಳಮಳಿಪ ನೋಟಮುಮನುಂತೆ ತೊದಳಿ ಸುವ ನುಡಿವ ನುಡಿಗಳ್ಗೆ ತೊದಳುಮನೆಕ್ಕೆಯಿಂ ತಳೆಯೆ ನೆಱೆಯೆ ಕೆಯ್ಗೆಯ್ದು (ಪಂಪಭಾ. ೭-೮೧ ವ) ; ಆ ಸುಕುಮಾರನನೀಕ್ಷಿಪ ನೀಱೆಯ ನಿಡಿಯಲರ್ಗಣ್ಣೊಗರು (ಜಯಕಾ. ೪-೧೪). ನಿಡಿಯಲರ್ಗಣೆ = ಉದ್ದವಾದ ಹೂವಿನ ಬಾಣ : ವಿಟರಂ ಬಿಡದಿಸಲ್ ತೆಗೆದ ಮದನನ

ನಿಡಿಯಲರ್ಗಣೆಗಳನೆ ಪೋಲ್ತುವಾಕೆಯ ಕಣ್ಗಳ್ (ಕಾವ್ಯಾವ. ೧೫೦). **ನಿಡಿಯವು (ಬಹುವ)** = ೧. ಉದ್ದವಾದುವು : ಕಾಯ್ದ ಕರ್ಬೋನ್ನ ನಿಡಿಯವುಂ ತೋರಮುಮಪ್ಪ ಕೀಲ್ಗಳಿಂದಂ ಮೆಯ್ಯೆಲ್ಲಮುಂ ನಿರಂತರ ಮುರ್ಚ ಪೋಗಿ (ವಡ್ಡಾರಾ. ೫೦-೬); ಕಡುನಿಡಿಯವಹ ಜಾಜುವೆಟ್ಟ ದಲಡಿವಡೆದು ನಡೆತಂದವೋಯೆನೆ . . . ಚಾಣೂರಮುಖ್ಯರು ನಡೆದುಬಹ ಹವಣಿಯೆ ತದಾಸ್ಥಾನವನು ಮೆಚ್ಚಿಸಿತು (ಸಾಳ್ವಭಾ.೨೨-೫೪); ಇನಿಯವು, ಪಿರಿಯವು, ಕಡಿಯವು, ನಿಡಿಯವು, ಕಿಱಿಯವು (ಶಬ್ದಾನು. ೨೩೬ ಪ್ರಯೋ). ೨. ಎತ್ತರವಾದುವು : ಸಾಲ್ವತ್ತೊಂಬತ್ತು ದಿವಸದೊಳ್ ಸಮುಚತುರಸ್ರಸಂಸ್ಥಾನ ಸಂವಾಹನಂಗಳಱುಸಾಸಿರಬಿಲ್ ನಿಡಿಯವಾಗಿ ದಿನತ್ರಯದೊಳ್ ಬದರೀಫಳ ಮಾತ್ರಾಹಾರಿಗಳುಂ . . . ಆಗಿ (ಅವಿಪು. ೫-೪೧). **ನಿಡಿಯಸಿಯೊಱ್** = ಉದ್ದವಾದ ಕತ್ತಿಯ ಒರೆ,— ಕೋಶ:ಪಿಡಿಕೆಯ್ ತೀವಿದ ಕೂರ್ಗಣೆ ಮಡಕಾಲ್ವರಮಲೆವ ಕಚ್ಚೆ ನಿಡಿಯಸಿಯೊಱ್ . . . ಬೆಡಂಗನೊಳಕೊಳ್ಳೆ (ಪಂಪಭಾ. ೧೦-೬೧). **ನಿಡಿಯ ಸೊಬಗು** = ಅತಿಶಯವಾದ ಸೊಬಗು,— ಚೆಲುವು : ಅಡಗಿದವಾ ಕೋಕಿಲಗಳ ನುಡಿಗಳು ಒಡೆದವು ತರುನಿಕರಗಳು ಬಡವಾದಳು ಭಾಗೀರಥಿ ಲೋಕದ ನಿಡಿಯ ಸೊಬಗು ಮಸುಳಿಸಿತು (ಅಂಜಜ. ೪-೧೪೦). **ನಿಡಿಯಳ್** = ಎತ್ತರವಾಗಿರುವವಳು : ಕಡು ನಿಡಿಯಳ್ ಕರಮೆ ಗುಜ್ಜೆ ಮೇಣ್ ಕರಮಸಿಯಳ್ ಕಡುದೊಡ್ಡೆ ಯೆನಿಪ್ಪೊಡಂ ನೋಟಪ್ಪೊಡೆ ಪುರುಷಾಕಾರೆಯಪ್ಪೊಡಂ ಕಪ್ಪೆಯವಳ್ (ಲೋಕೋಪ. ೧೧-೬೦); ನಿಡಿಯಂ, ನಿಡಿಯಳ್ (ಶಬ್ದಾನು. ೧೬೭ ಪ್ರಯೋ). **ನಿಡಿಯೆಸಟ್ಟಿಣ್** = ನಿಡಿಯಲರ್ಗಣ್ : ನಾಸಿಕಮಡ್ಡಂ ಬಂದಂದಮನೀಕ್ಷಿಸಿ ಪೆಜನಿಂ[ದಂ]ದೀಕ್ಷಿಸು[ವು]ವವಳ ನಿಡಿಯೆಸಟ್ಟಿಣ್ಗಳ್ (ಕವಿಗಾ. ೩-೨೩೩). **ನಿಡಿಯೊಡಲು** = ದೊಡ್ಡದಾದ ಶರೀರ ; ದೀರ್ಘಕಾಯ : ನಿಡಿಯೊಡಲ ಮುರಿಮೀಸೆಗಳ ಕೆಂಪಡರ್ದ ಕಂಗಳ ಹೊಳೆವ ದಾಡೆಯ ದಡಿಗದಾನವ (ಕುಸ್ಯದ್ರೋ. ೧೫-೪೪); ಅಂಬುಧಿಯ ನಿಡಿಯೊಡಲನುಱ್ ಬಗಿದಂಬರವ ಚುಂಬಿಸುವ ರಚನಾಡಂಬರದ ವಡಬಾಗ್ನಿಯಂಪೊಲುಪ್ಪರಿಸಿದನು ಹನುಮ (ತೊರಾ. ೫-೫-೨೫). **ನಿಡುಬೊಂಬೆ ಪಟ್ಟೆಪಚ್ಚಡ** = ದೊಡ್ಡದೊಡ್ಡ ಗೊಂಬೆಗಳ ಚಿತ್ರವಿರುವ ರೇಷ್ಮೆ ವಸ್ತ್ರ : ನಿಡುಬೊಂಬೆಪಟ್ಟೆಪಚ್ಚಡವಿತ್ತು ವೀಳೆಯಗೊಡುತ ಜಾಳಿಗೆ ನೂಱಗೊಟ್ಟ (ಭರತ.೨-೯೯).

[ದೇ.॥ ಕಮಿ.ನೆಟ್ಟಮ್, ನೆಟ್ಟು, ನೆಟ್ಟೈ ; ಮಲ. ನೆಡು, ನಿಡು ; ತುಳು. ನಿಡಿ, ನಿಡು, ನೆಡಿ ; ತೆಲು. ನಿಡಿವಿ, ನಿಡು, ನಿಡುದ, ನಿಡುಪು]

ನಿಡಿದು$_2$ (ಅ). ೧. ಎತ್ತರವಾಗಿ ; ಉತ್ತುಂಗವಾಗಿ : ನಿಡಿದಡರೆ ಮಿಗೆ ಬಳೆದ ಮೊಲೆಗೊಡನುಂ ಪೊಜವಾಱುಮಲೆಗೆ ಮಾಮಿಡಿಯಂಚೆಪ್ಪೊಡರುಸಿರೆ ನಿಳ್ಳೆ ನೀಂ ತಿಱುವೆಡೆಯೊಳ್ ತೆಱವಾದುದಲ್ತೆ ಲಲಿತಲತಾಂಗಿ (ಪಾರ್ಶ್ವಪು. ೯-೪೭). ೨. ದೃಢವಾಗಿ ; ಗಾಢವಾಗಿ.

ನಿಡಿಯಪ್ಪು = ದೃಢವಾಗಿ ಅಪ್ಪು ; ಗಾಢವಾಗಿ ಆಲಿಂಗಿಸು : ಸಂಬುಗೆ ತತ್ವಾರ್ಥಮಾನವಳಂಬಿಸಿ ನಿಡಿಯಪ್ಪೆ ಸನಿಂತಿಗಕ್ಕುಂ ಪರ್ಯಾಯಂ ಬಿಡಿದು ಕ[ಡೆ]ಯ ನಿರ್ವಾಣಂಬರಮಂತೆಯ್ದೆ ಸಪ್ತಪರಮಸ್ಥಾನಂ (ಪರ್ಧಮಾ. ೬-೩೦). [<ನಿಡಿದು$_1$]

ನಿಡಿದೇಹ (ನಾ). ನೀಳವಾದ ಶರೀರ ; ದೀರ್ಘಕಾಯ : ನಿಡಿದೇಹ ಸ್ವರ್ಣಚ್ಛಾಯೆ ಮಂಜಿಷ್ಠೆ ಬಾಯ್ವಿಡುವ ಪೆಣ್ಣೇನ ತಂದವಳು ಪಿಡಿನಡುವಿನ ಮಾಯಾಂಗನೆಗೆತ್ತು (ಮೋಪತ. ೧೧-೩೭).

[ನಿಡಿ$_1$(<ನಿಡಿದು$_1$)+ದೇಹ]

ನಿಡಿದೋಳ್ 'ನಿಡುದೋಳ್' ನೋ.

ನಿಡಿದೋಳು 'ನಿಡುದೋಳ್' ನೋ.

ನಿಡಿನಾಲಗೆ 'ನಿಡುನಾಲಗೆ' ನೋ.

ನಿಡಿನಿಲ್ (ಕ್ರಿ). ನೆಟ್ಟಗೆ ನಿಲ್ಲು ; ಎತ್ತರವಾಗಿ ನಿಲ್ಲು : ಮಡಿವಸಸ ವನುಟ್ಟು ಪೂರ್ವದಿಗ್ವನಿತೆಯ ಮುಡಿಯೊಳು ಹೊತ್ತ ಹೊಂಗಳಸ ನಿಡಿ ನಿಂದ ರಥದ ಮೇಲಡರ್ದ ರನ್ನಗನ್ನಡಿಯಂತೆ ಸೂರ್ಯ ಮೂಡಿದನು (ಮೋಪತ. ೧೮-೧೦೯). [<ನಿಡಿದು$_2$+ನಿಲ್]

ನಿಡಿಯಮಾರ (ನಾ). ಒಬ್ಬಾತನ ಹೆಸರು : ನಿಡಿಯಮಾರ[ಂ] ಪಡೆದೊನ್ (ಕಇ. I, ೪-೬ ; ಸು. ೫ನೆಯ ಶತ). [?]

ನಿಡಿಲು$_1$, ನಿಟಲು$_2$ (ನಾ). [?] : ಮರ ನೆಕ್ಕಿ ನಿಡಿಲು ಹಾಡಿ ಹಕ್ಕಲು (ಸೌಇಎ. ೧೯೩೨, ೩೧೯-೮ ; 1336) ; ಮಾದವ ಕಲ್ಲಂಬಿಯ ಕಯ್ಯಲು ಅರಸು ಭಂಡಾರಿ ತಾ ಕೊಂಡು ಬಾಳು ನೀರು ತೋಟ ಮನೆ ಮಕ್ಕಿ ಮ[ರ]ನೆಕ್ಕಿ ನಿಡಿಲು ಯಿಂತಿನಿ × × × ತಂಸ ಹೆಸರಲು . . . ನೀರ ನೆಜದು ಬಿಟ್ಟನು (ಸೌಇಇ. IX-ii, ೪೦೬-೩೦ ; 1364) ; ಮನೆಯ ಹಿಂದಣ ಬೆಟ್ಟು ತಿಪ್ಪೆ ಮಕ್ಕಿ ಮೆಕ್ಕೆ ಬಯಲು ಕಳೆ ಕೆಱ ಮಕ್ಕಿ ಮರ ನೆಕ್ಕಿ ನಿಡಿಲು ನಿಧಿ ನಿಕ್ಷೇಪ . . . ಸಹಿತವಾಗಿ(ಸೌಇಇ.IX-ii,೪೨೩-೧೮; 1400). **ನಿಟಲು$_2$** : ಒಳಗಣ ಚತುಸೀಮೆಯಿಂದೊಳಗುಳ ಮಕಿ × × × ರ ನಿಕಿ ನಿಟಲು ನಿಧಿ ನಿಕ್ಷೇಪ ಜಲ ಪಾಶಾಣ ಸಿಧ ಸಾಧ್ಯ ಅಕ್ಷಣ ಆಗಾಮಿಯಿಡಿಕವಾದಯಿಂತೀ ಅಪ್ಪಭೋಗಕ್ಕೆ ಬಹ ಸಾ(ಂ)ಮ್ಯ ಸಹಿತ ವಾಗಿಯೆಜದು ಕೊಟು (ಸೌಇಇ. IX-ii, ೪೧೯-೧೮ ; 1380). [?]

ನಿಡಿವಲೆ 'ನಿಡುವಲೆ' ನೋ.

ನಿಡಿವಾಸೆ 'ನಿಡುವಾಸೆ' ನೋ.

ನಿಡಿವುರ್ವು 'ನಿಡುವುರ್ವು' ನೋ.

ನಿಡಿಹುಲ್ಲು (ನಾ). ಎತ್ತರವಾಗಿ ಬೆಳೆಯುವ ಒಂದು ಬಗೆಯ ಹುಲ್ಲು : ನಡೆದಂತೆಲ್ಲ ಕುರುಡಲುಹುಲ್ಲುನೆಲ ನಿಡಿಹುಲ್ಲು ತುಂಬಿ ಪೊದರುನೆಲವಾಯಿತು (ಹಸುಹೊ. ೧೬೮).

[ನಿಡಿ$_1$(<ನಿಡಿದು$_1$)+ಹುಲ್ಲು(<ಪುಲ್)]

ನಿಡು 'ನಿಟ್' ನೋ.

ನಿಡುಂಗೊಂಡೆ (ನಾ). ಒಂದು ಊರಿನ ಹೆಸರು ; ℙ ಈಚೆಗೆ ಸಿಕ್ಕಿರುವ ೧೦ನೆಯ ಶತಮಾನದ ಜಿನವಲ್ಲಭನ ಶಾಸನದಲ್ಲಿ ಈ ಶಬ್ದ ಬಂದಿದೆ : ಸ್ವಸ್ತಿ ಸಮಸ್ತ ಸಕಳಕಳಾಳಾಪಪ್ರವೀಣಂ . . . ಶ್ರೀವತ್ಸಗೋತ್ರಂ ಗುಣ್ಡೆಕಜ್ಜ ನಿಡುಂಗೊಣ್ಡೆಯಧಿಮಾನಚಂದ್ರನ ಮರ್ಮಂ ಭೀಮಪಯ್ಯನ ಬೆಳ್ವೊಲದಣ್ಣಿಗೆಜೆಯ ಜೋಯಿಸ ಸಿಂಘನ ಮರ್ಮ[ಂ] (ಪ್ರಕಣಾ: ೫೦-೩-೬೯). 'ನಿಡುಗುಂದ' ಪರಾ. [?]

ನಿಡುಂಬರೆ (ನಾ). ಸಿಪಾಯಿಗಳಿಗಾಗಿ ಕಟ್ಟಿದ ಪಾಳೆಯ ; ದಂಡಿನ ಪಾಳೆಯ : ತಮ್ಮ ರಾಜ್ಯದಲ್ಲಿ ನಿಡುಂಬರೆ ಕಟ್ಟುವ ಕೆಲಸದಲ್ಲಿ ಮುನ್ನೂರು ಚೆಲುವಾನು ಆಳು ಉಂಟಪ್ಪೆ (ರಾಚೇಂದ್ರ. ೬೫).

[←ತುಳು. ನಿಡುಂಬರೆ, ನಿಡುಂಬರ]

ನಿಡುಕ (ನಾ). ೧. ಉದ್ದವಾಗಿರುವವನು ; ಎತ್ತರವಾದ ಶರೀರ ವುಳ್ಳವನು : ಕ ಪ್ರತ್ಯಯಕ್ಕೆ—ಬಡಕಂ, ನಿಡುಕಂ, ಒಣಕಂ (ಕಮದ. ೨೦೫ ಪ್ರಯೋ); ನಾತಿದೀರ್ಘಃ—ಅತಿ ನಿಡುಕನಲ್ಲದಾತಂ (ಪ್ರಕಚಿಂ.೫-೪). ೨. ಗೊಮ್ಮಟಮೂರ್ತಿ : ಬಿಳಿಯ ಕೊಳದ ಕಾರಕಳದ ನಿಡುಕರೆನಿತೊ ಬಂಧುರಂ ! (ಗಿಳಿವಿಂ. ೮೧-೩೭); "ನಿಡುಕರು = ನಿಡುನಿಂದಿರುವ ಗೊಮ್ಮಟಮೂರ್ತಿಗಳು" (ಗಿಳಿವಿಂ. ಉಪ್ಪಣಿ).

[ನಿಡು(<ನಿಡಿದು$_1$)+-ಕ$_3$]

ನಿಡುಕರ (ನಾ). ಉದ್ದವಾದ ಕೈ ; ನೀಳವಾದ ಹಸ್ತ : ನಡೆದು ಬಂದಡಿಗಳನೆರಡುಮಂ ಕಡಿದು ತರ್ಕೈಸಲು ಬಯಸಿದಾ ನಿಡುಕರಂಗಳ ನರಿದು (ಬಸಪು. ೪೫-೨೯). [ನಿಡು(<ನಿಡಿದು$_1$)+ಕರ$_3$]

ನಿಡುಕುಂಗೋಣ್(ನಾ). (?) : ಕೆಕ್ಕಳಗಣ್ ಕೆದಱಿದ ಕೆಂಗೂದಲ್ ಮೊಕ್ಕ ನೊಸಲ್ ನಿಡುಕುಂ[ಪಾಠಾಂ. ನೆನುಕುಂ]ಗೋಣ್ ಬಿಡುಬಾಯ್ . . . ಎಸೆವ ಪಲರಕ್ಕಸಿಯರ ತಂಡಂ ನಡೆತಂದುದು ತದ್ಧುರಧರಣಿಯೊಳು (ಜಯಕಾ. ೭-೨೬). [?]

ನಿಡುಕೊರಳು 'ನಿಡುಗೊರಲ್' ನೋ.

ನಿಡುಕೋಲ್ 'ನಿಡುಗೋಲ್' ನೋ.

ನಿಡುಗಂಪು (ನಾ). ಹೆಚ್ಚಾದ ಸುವಾಸನೆ ; ಅತಿಶಯವಾದ ಕಂಪು : ಎಡೆಯಾಡುವಂಗನೆಯರ ಪದದಳಿರ್ಗಂಪು ಕೊಡಹಿದ ನಿಡು ಮುಡಿಯಲರ ನಿಡುಗಂಪು (ಕಂನವಿ. ೬-೯೬).

[ನಿಡು(<ನಿಡಿದು$_1$)+ಕಂಪು]

ನಿಡುಗಂಬ (ನಾ). ಉದ್ದವಾದ ಕಂಬ ; ದೊಡ್ಡಸ್ತಂಭ : ಪಿರಿದಪ್ಪ ಕಲ್ಲ ನಿಡು[ಪಾಠಾಂ. ಕಡು]ಗಂಬಮನೊಂದೆ ಕರಾಗ್ರದಿಂದಮೆತ್ತಿದ . . . ಅದಟದು ಪೋದುದೇ (ಪರ್ಧಪು. ೩-೧೫); ಮೃಗಾಕ್ಷಿ ನಿಂದೀಕ್ಷಿಸು ತಿರ್ಪೆಡೆಯೊಳ್ ಪೋಲ್ತಳ್ ನೀಲದ ನಿಡುಗಂಬದೊಳಮರ್ದ ಪೊನ್ನ ಪೊಸ ಪುತ್ಥಳಿಯಂ (ಪುಷ್ಪಪು. ೫-೩೧) ; ಗಿರಿಯೆಂಬ ನಿಡುಗಂಬದ ಕೊನೆಯೊಳು ಹೊತ್ತಿಸಿದ ಹೆಜ್ಜೊಡರೆಂದೆಂಬ ಮಾಳ್ಕೆಯೊಳು . . . ನಡು ಬೊತ್ತಿನೊಳೆಸೆದುದು ಬಿಂಬಮಂಭೋರುಹಸಖನ (ಶ್ರೀಪಾಲ. ೪-೪೮) ; ಘನಕೇಶಪಾಶ ಸಡಿಲಿ ಮಡಕಿಳಿದೊರ್ವ ವನಿತೆ ನಿಂದೀಕ್ಷಿಸುತೆಸೆದಳು ಜನಪ ಕೇಳ್ನೀಲದ ನಿಡುಗಂಬದೊಳೊಂದಿ ಮಿನುಗುವ ಪೊನ್ನ ಪುತ್ಥಳಿಯಂತೆ (ತ್ರಿಭುತಿ. ೧೧-೨೦). [ನಿಡು(<ನಿಡಿದು$_1$)+ಕಂಬ$_1$(<ಕಂಭ)]

ನಿಡುಗಡಿ(ಕ್ರಿ). ನೇರವಾಗಿ ಕಡಿ ; ನೆಟ್ಟಗೆ ಕತ್ತರಿಸು : ದಮಿತಾರಿಯ ರಥಚಕ್ರರಕ್ಷಕರಪ್ಪ ಖಟ್ಗಾವೃಂದಂ ಬಳೆಯೊಳ್ ತೊಡರ್ದ ಖಟ್ಗಾವೃಂದಮಂ ಕೂಡುವಿನಂ ನಿಡುಗಡಿದಂತಿರೆ (ಶಾಂತಿಪು. ೪-೪೪ ಪ).

[<ನಿಡಿದು$_2$+ಕಡಿ$_2$]

ನಿಡುಗಡ್ಡ(ನಾ). ನೀಳವಾದ ಗಡ್ಡ ; ದೊಡ್ಡ ದಾಡಿ : ನಿಡುಗಡ್ಡವನು ತೋಱುತ ನಕ್ಕವನು ಭೃಗು ನೀನಲಾಯೆನುತ ಬವರಿಗಡ್ಡವ ಹಱುದು ಅಗ್ನಿಗೆ ಹವಿಯ ಮಾಡಿದನಿವನಲಾ ನಕ್ಕವನು ಪೂಷನೆನುತ್ತ ಹೊಡೆದನು ಬಾಯ ಹಲು ಕಳೆಯೆ (ನಿಭಾಗ. ೪-೨-೨೬).

[ನಿಡು(<ನಿಡಿದು$_1$)+ಗಡ್ಡ$_1$]

ನಿಡುಗಣ್, ನಿಡಿಗಣ್, ನಿಡಿಗಣ್ಣು, ನಿಡುಗಣ್ಣು (ನಾ). ವಿಶಾಲವಾದ ಕಣ್ಣು ; ನೀಳವಾದ ನೇತ್ರ : ತುಱುಗೆಮೆ ನೀಳ್ದ ಪುರ್ವು ನಿಡುಗಣ್ ಪೊಱೆಯಲ್ಲದೆ ಬಟ್ಟತಪ್ಪ ಬಾಯ್ದೆಱೆ (ಪಂಪಭಾ. ೧-೧೦೮) ; ನಿಱುದಲೆ ನೀಳ್ದ ಪುರ್ವು ನಳಿತೋಳ್ನಿಡುಗಣ್ ಸುಲಿಪಲ್ (ಧರ್ಮಾಮೃ. ೪-೧೪೨) ; ಚೆಲ್ಲೆಗಣ್ಗಳಲರ್ಗಣ್ಗಳ ನಿಡುಗಣ್ಗಳ ಬೆಡಂಗಿಯರ್ (ಜಗವಿ. ೪-೧೨೪) ; ಅರಳ್ವ ನಿಡುಗಂಗಳ ನಿಹಾರದ ಕರದ ಚಳಕದ ಕಾದ ನಾಸಿಕ ದೆರಲಿ ಕೆತ್ತುವ ಮೀಸೆಗಳ ಭಟರೆಚ್ಚರುರವಣಿಸಿ (ಕುವ್ಯಾಕ. ೨೩-೫) ; ಮೊಳೆತುದು ಕೋಪಾಗ್ನಿ ಪೊಗೆದುದುಸಿರೊಳ್ ನಿಡುಗಣ್ಗಳ ಕಡೆಯೊಳ್ ಕಿಡಿಗೆದರ್ದುದು ಬಳಿಕಲರ್ದುದು ಮುಖದೊಳ್ (ಶಬಶಂ. ೪-೩೬). **ನಿಡಿಗಣ್** : 'ನಿಡಿಗಣ್ಣ' ಪರಾ. **ನಿಡಿಗಣ್ಣು** : ನಿಱುಗುರುಳಳೆ ನಿಡಿಗಣ್ಣಳೆ ಕೆಂಬಾಯಿದೆಱೆಯಳೆ ಕುಡಿಯುರ್ವಿನವಳೆ (ಪರ್ಧಚ. ೩-೧೮) ; ನಿಡಿಗಣ್ಣ ಹುಲ್ಲೆಗಣ್ಣವರ್ . . . ನಗೆನೋಟದ ತೋರಧಮ್ಮಿಲ್ಲೆಯರೆಯ್ದಿತೊಗ್ಗಿನಲಿ (ಮೋಹತ. ೨೪-೧೨). **ನಿಡುಗಣ್ಣು** : ನಿಡುಗಣ್ಣ ನೋಟ ನವರಸಿಕರ ಗೆಲವಿನೋಟ . . . ದ್ವಿಜತನೂಜೆಯ ವಿಲಾಸಮನದೇನೆಂಬೆನು (ಸಮ್ಯಕೌ. ೬-೧೧) ; ತಾವರೆಯೆಸಳನೇಳಿಪ ನಿಡುಗಣ್ಣು (ಮೋಹತ. ೧೮-೬೨) ; ತವದ ಕಾಮೋದ್ರೇಕದಲಿ ಕೂಡುವ ಸಮಪ್ರಣಯಿಗಳ ನಿಡುಗಣ್ಣೆವೆಗಳರೆಮುಗಿವುತಿರೆ (ಸಾಳ್ವಭಾ. ೮-೩೭) ; ನಿಡುಗಣ್ಣ ಕುಣಿಕೆಯುಮನೊತ್ತಿದೊಡಪಾಂಗದತ್ತಣಿನಿಳಿಗುಮಾ ಜಳಂ (ಕುಮಾಪು. ೪-೨೪೧). [ನಿಡು(<ನಿಡಿದು$_1$)+ಕಣ್]

ನಿಡುಗಣೆ(ನಾ). ಉದ್ದವಾದ ಬಾಣ,—ಸರಳು : ಬಿಲ್ವಿಡಿದು ಜೇಗೈದು ನಿಂದು ನಿಡುಗಣೆಗಳಂ ತೆಗೆದೆಚ್ಚು (ಜೈಮಿಭಾ. ೧೨-೨೩).

[ನಿಡು(<ನಿಡಿದು$_1$)+ಕಣೆ$_1$]

ನಿಡುಗಣ್ಗಱುವಕ್ಕಿ (ನಾ). ಗರಿಯಲ್ಲಿ ನೀಳವಾದ ಕಣ್ಣುಗಳನ್ನು ಉಳ್ಳ ಹಕ್ಕಿ ; ನವಿಲು ; ಸೋಗೆ : ನುಡಿವಕ್ಕಿಯ ಬೆಳುದಿಂಗಳ ಹಕ್ಕಿಯ ನಿಡುಗಣ್ಗಱುವಕ್ಕಿಯ ಬಳಗಂ ಬಳಸಿದುದಾ ನೃಪಸತಿಯ (ಜಯಕಾ. ೨-೧೮). [ನಿಡುಗಣ್+ಗಱು+ಪಕ್ಕಿ]

ನಿಡುಗಣ್ಣ, ನಿಡಿಗಣ್ಣ (ನಾ). ನೀಳವಾದ ಕಣ್ಣುಗಳನ್ನು ಉಳ್ಳವನು : ನಿಡಿದು ಕಣ್ ಅವಂಗೆ ಅತಂ, ನಿಡುಗಣ್ಣಂ (ಶಬ್ದಾನು. ೩೧೦ ಪ್ರಯೋ). **ನಿಡಿಗಣ್ಣ** : ಹಿಡಿದ ಪೂಸರಳುಗಳಿವೆ . . . ನುಡಿವ ಪಿಕಾಳಿಗಳಿವೆ ತಳತಳಿಸುವ ನಿಡಿಗಣ್ಣ ನಿಲ್ಲೆಂದಳಳುತ (ಮೋಹತ. ೯-೩೩).

[ನಿಡುಗಣ್+-ಅ$_7$]

ನಿಡುಗಣ್ಣಿ (ನಾ). ನೀಳವಾದ ಕಣ್ಣುಗಳನ್ನು ಉಳ್ಳವಳು : ನಿಡುಗಣ್ಣಿ, ನಿಡುವೆರಲಿ . . . ಬಿಳಿಕಿ, ಮುದುಕಿ (ಶಬ್ದಾನು. ೧೯೪ ಪ್ರಯೋ).

[ನಿಡುಗಣ್ಣ+-ಇ$_2$]

ನಿಡುಗಣ್ಣು 'ನಿಡುಗಣ್' ನೋ.

ನಿಡುಗಯ್ 'ನಿಡುಗೈ' ನೋ.

ನಿಡುಗರುಳ್, ನಿಡಿಗರುಳು (ನಾ). ಉದ್ದವಾದ ಕರುಳು ; ದೊಡ್ಡ ಕರುಳು : ನಿಡುಗರುಳ್ಪಂಡ ಮಿದುಳಡಗು ಸುಂಟಿಗೆ ಮಜ್ಜೆ ಮಾಂಸಂಗಳ ನೆಣಮಯಂ . . . ರಣರಂಗಂ (ಜೈಮಿಭಾ. ೨೨-೨೩). **ನಿಡಿಗರುಳು** : ದುರುಳ ದುಶ್ಶಾಸನನ ತೊಡೆಯ ಮೇಲಡಗೆಡಹಿ ಎರಡು ಬಲದತಿರಥರ ಜಱೆದಳಲಿಸಿ ನರಹರಿಯ ಲೀಲೆಯಿಂದವನುರವ ಬಗಿದು ನಿಡಿಗರುಳ ನಿಜಸತಿಗೆ ಮುಡಿಸಿದೆಲ ಭಾಪುರೆ (ಪುರಂದ. ೩-೭೫-೪) ; ತರಳನ ಕೂರ್ಗಣೆಯಿಂದೆ ದೈತ್ಯರ ನಿಡಿಗರುಳೊಡೆಹಾಯ್ದು ಕುಪ್ಪಳಿಸಿ . . . ಭೀಕರವಾಯ್ತು (ಮೋಹತ. ೩೫-೧೪). [ನಿಡು(<ನಿಡಿದು$_1$)+ಕರುಳ್]

ನಿಡುಗರ್ಪು (ನಾ). ಅತಿಶಯವಾದ ಕಪ್ಪುಬಣ್ಣ : ಭವದಧರ ಪುಟಾಂಚಚ್ಛೋಣದಿಂ ರಾಜಸಂ ತ್ವತ್ತ್ರವಿಮಲಹಸನಾಂಶುಶ್ವೇತದಿಂ ಸಾತ್ವಿಕಂ ನಿನ್ನೆವೆಗಳ ನಿಡುಗರ್ಪಿಂ ತಾಮಸಂ ಪುಟ್ಟಿತೆಂದಾಡುವರಖಿಳ ಮುನೀಂದ್ರರ್ಕೂರ್ತು ಪಂಪಾಭವಾನೀ (ಉದ್ಭಟ. ೩-೧೦೫).

[ನಿಡು(<ನಿಡಿದು$_1$)+ಕರ್ಪು$_1$]

ನಿಡುಗಲ್, ನಿಡಿಗಲ್ಲು, ನಿಡುಗಲ್ಲು (ನಾ). ೧. ನಿಡಿದಾದ ಕಲ್ಲು; ದೊಡ್ಡದಾದ ಶಿಲೆ ; ಹೆಬ್ಬಂಡೆ : ಮರಳಿ ಗಿರಿಗಿರಿಶಿಖರದಲಿ ನಿಬ್ಬರದ ನಿಡುಗಲ್ಗಳಲಿ ಬಲು ಹಾಸಱೆಗಳಲಿ . . . ಬವರದ ಬಿನ್ನಣಿಗರಚ್ಚರಿಯ ಸಮರೋಚಿತವ ಮೆಱೆದರು (ತೊರರಾ. ೪-೪-೨೨). **ನಿಡಿಗಲ್ಲು** : ನಿಡಿಗಲ್ಲು ನಿಶಿತ ಹಾಸಱೆಗಲ್ಲು ಚೌಕದ ಬಡಿಗಲ್ಲು ಬಟುಗಲ್ಲು ಬೀಳೆ . . . ಶ್ರೀಕೃಷ್ಣ ಹುಡಿಯೇಳಲೆಚ್ಚು ಹಾಱಿಸಿದ (ಮೋಹತ. ೪೦-೬೩) ; ಜಡದೊಳಗೆ ಮುಣುಗಿ ದಟ್ಟಡಿಯಾಗಿ ಮೂಗನು ಪಿಡಿದು ನಿಡಿಗಲ್ಲಿನಲಿ ವಾಸವಾಗಿ ಗಿಡ ಲತೆ ಎಲೆ ಮೆದ್ದು (ವಿಸಾಸು. ೮೯-೧). **ನಿಡುಗಲ್ಲು** : ೧. ಅದ್ರಿಯ ನಿಡುಗಲ್ಲುಗಳನದಱೊಳಗೆ ಎಡೆಯಾಡುತಿಹ ದೋಣಿ ದುಗ್ಗಿ ಕಪ್ಪಲು ದೊಡ್ಡ ಹಡಗುಗಳಿರವ ನೋಡಿದರು (ಭರಚ. ೨೩-೯೬) ; ಕರೆಸಿದರು ಹುಡಿಗಲ್ಲು ನಿಡುಗಲ್ಲು ಬಡಿಗಲ್ಲು . . . ಬಿರಿಗಲ್ಲುಗಳನು (ನವಮೋ. ೩೩-೩೩). ೨. ಒಂದು ಊರಿನ ಹೆಸರು (?) : ಈ ನಿಡುಗಲ್ಲಂ ಕಾವಡೆ ನೀನಲ್ಲ ನಾಮನೆಂದಿರುಂಗೋಳಧರಿತ್ರೀನಾಥನಿತ್ತನೀಯಲ್ಕಿಳ್ದಂ ತಂತ್ರಪಾಳನಾಮಂ ಸುಖದಿ (ಸೌಇಇ. IX—I, ೨೭೦-೫೨ ; 1169) ;

ನಿಡುಗಲ್ಲ ರಾಜ್ಯಕೆ ಮುಖ್ಯವಹ ಸಿವರದ ಪಟ್ಟಣದಲು (ಸೌಇಇ. IX—II, ೪೧೦-೧೮ ; 1365). [ನಿಡು(<ನಿಡಿದು$_1$)+ಕಲ್$_3$]

ನಿಡುಗಲ್ಲು 'ನಿಡುಗಲ್' ನೋ.

ನಿಡುಗವಣೆ (ನಾ). ಉದ್ದವಾದ ಕವಣೆ; ದೊಡ್ಡ ಕವಣೆ ಮತ್ತು ಅಂತಹ ಕವಣೆಯಿಂದ ಆಡುವ ಆಟ : ಗುಡುಗು ಗುತ್ತಿನ ಚೆಂಡು . . . ಹರಿಹಲಗೆ ನಿಡುಗವಣೆ ಕೆಡಹು ಕುಟ್ಟಿಗನಾದಿಯಾದವ ಗಡ ವಿನೋದದಲಾಡಿದರು (ಕುವ್ಯಾಅ. ೬-೨).

[ನಿಡು(<ನಿಡಿದು$_1$)+ಕವಣೆ$_1$]

ನಿಡುಗಳಿಲೆ (ನಾ). ಉದ್ದವಾದ ಎಳೆಯ ಬಿದಿರು : ನಿಡುಗಳಿ [ಪಾಠಾಂ. ಳ]ಲೆಯ ಮೊನೆಯುರ್ಚಿದ ಜಡಧರಮೆಸೆದುದು(ಶಬಶಂ. ೩-೩೭).

[ನಿಡು(<ನಿಡಿದು$_1$)+ಕಳಿಲೆ(<ಕಳಿಲೆ)]

ನಿಡುಗಾರಣೆ (ನಾ). ಗೋಡೆಯ ಅಂಚಿನಲ್ಲಿರುವ ದೊಡ್ಡದಾದ ಹಸೆಯ ಗೀಟು,—ಕಾರಣೆ: ಹೊರೆದ ಕಸ್ತುರಿಸಾರಣೆಯ ನವಪರಿಮಳದ ಪನ್ನೀರ ಚಳೆಯದ ಪರಿಸರದ ಕುಂಕುಮದ ನಿಡುಗಾರಣೆಯ . . . ಧೂಮಗಂಧೋತ್ಕರಸಮುದ್ರದೊಳದ್ದನೊಲ್ಲದೆ ಪಥವ ಪವಮಾನ (ತೊರರಾ. ೧-೧೩-೫). [ನಿಡು(<ನಿಡಿದು$_1$)+ಕಾರಣೆ$_1$]

ನಿಡುಗಾಲ್, ನಿಡುಗಾಲು (ನಾ). ಉದ್ದವಾದ ಕಾಲು : 'ನಿಡುಗಾಲ$_1$' ಪರಾ. **ನಿಡುಗಾಲು** : ಐತಾಳರ ನಿಡುಗಾಲುಗಳು ಬೀಸು ಬೀಸಾಗಿ ನಡೆದವು (ಮರಮ. ೮೬). [ನಿಡು(<ನಿಡಿದು$_1$)+ಕಾಲ್$_1$]

ನಿಡುಗಾಲ$_1$ (ನಾ). ಉದ್ದವಾದ ಕಾಲುಗಳನ್ನು ಉಳ್ಳವನು : ಕುಡುವಿಲ್ಲಂ, ನಾಲ್ದೋಳಂ, ನಿಡುಗಾಲಂ (ಶಬ್ದಾನು. ೩೨೭ ಪ್ರಯೋ).

[ನಿಡುಗಾಲ್+-ಅ$_7$]

ನಿಡುಗಾಲ$_2$ (ನಾ). ಹೆಚ್ಚು ಸಮಯ; ದೀರ್ಘಕಾಲ : ಒಂದೇ ಸ್ಥಳದಲ್ಲಿ ನಿಡುಗಾಲ ವಾಸಮಾಡುವುದು ಒಳ್ಳೆಯದಲ್ಲ (ವ್ಯಾಸಚಿ. ೭೬).

[ನಿಡು(<ನಿಡಿದು$_1$)+ಕಾಲ]

ನಿಡುಗಾಲು 'ನಿಡುಗಾಲ್' ನೋ.

ನಿಡುಗಾಲುವೆ (ನಾ). ಉದ್ದವಾದ ಕಾಲುವೆ; ದೊಡ್ಡ ಕಾಲುವೆ : ಹರಿವ ನಿಡುಗಾಲುವೆಯನಗಲಕೆ ಜರುಹಿ ರಕ್ಕಸದೋಟಿಗರ ಹೊಯ್ದೊರಸಿ ಬನದಲಿ ಬೀದಿವರಿದಾಡಿದನು (ತೊರರಾ. ೫-೪-೧೪).

[ನಿಡು(<ನಿಡಿದು$_1$)+ಕಾಲುವೆ(<ಕಾಲ್ವಾಯ್)]

ನಿಡುಗಿಂಡಿ (ನಾ). ಉದ್ದವಾದ ಗಿಂಡಿ,—ಬಟ್ಟಲು : ಮಿಸುನಿಯ ನಿಡುಗಿಂಡಿ ಕರಂ ಪರಿರಂಜನೆಯಂ ಪಡೆದತ್ತು (ಜಯಕಾ. ೨-೧೫); ಎಡಗೈ ಯೊಳಾಂತ ಹೊಂಬಟ್ಟೆ ಅಕ್ಷತೆ ಪುಷ್ಪ ನಿಡುಗಿಂಡಿ ಬಲದ ಹಸ್ತದೊಳು ತೊಡಿಗೆಯ ಪ್ರಭೆ ದಿಕ್ಕುದಿಕ್ಕಿಗೆ ಪಸರಿಸಿ ನಡೆಯೆ ನಡೆದನಾ ರಾಯ (ಭರಚ. ೩-೬). [ನಿಡು(<ನಿಡಿದು$_1$)+ಗಿಂಡಿ]

ನಿಡುಗಿಚ್ಚು (ನಾ). ಅತಿಶಯವಾದ ಉರಿ,—ಕಿಚ್ಚು : ದಶಕಂಧರನ ನಗರಾಂಗನೆ ವಿರಾಗದಲಿ ಪರಮಪ್ರಾಯಶ್ಚಿತ್ತಕಂಗೀಕರಿಸಿ ಹೊಗಲು ದ್ಯೋಗಿಸಿದ ನಿರ್ಭರದ ನಿಡುಗಿಚ್ಚನವೊಲಿರ್ದುದು ದಹನ ರಿಪುಪುರದ (ತೊರರಾ. ೫-೮-೬೪). [ನಿಡು(<ನಿಡಿದು$_1$)+ಕಿಚ್ಚು]

ನಿಡುಗುಂಡು (ನಾ). ದಪ್ಪವಾದ ಕಲ್ಲು ; ಹೆಬ್ಬಂಡೆ : ಜಾಳಿಸಿದ ಹದವಿಲ್ಲು ಮುಮ್ಮೊನೆ ಬೋಳೆಗಳ ನಿಡುಗುಂಡುಗಳ ಬಡಿಕೋಲುಗಳ ನೆಕ್ಕಡವನುರು ಪಾರಿಯದ ಕುಪ್ಪಸವ ಮೇಳವಿಸಿ ಹೊಱವಂಟನವನೀಪಾಲ ಬೇಂಟೆಗೆ (ಕುವ್ಯಾಅ. ೨೩-೮); ಸಾಲ ಮುಗಿಲಟ್ಟಣೆಯ ಡೆಂಕಣೆಯ ಪಂದಿದಲೆಯೋಳಿಗಳ ಮರುಳಕೈಗಳ ತೂಗದೊಲೆಯ ಧ್ವಜಾಳಿಗಳ ನೆಟ್ಟ ಸಬಳಗಳ ನಿಡುಗುಂಡುಗಳ ಸಂದಣಿಯ . . . ದಿವಿಜಪತಿ ಕಂಡು (ಚಿಬಪು. ೪೨-೨೨). [ನಿಡು(<ನಿಡಿದು$_1$)+ಗುಂಡು]

ನಿಡುಗುಂದ (ನಾ). ಒಂದು ಊರಿನ ಹೆಸರು : ಸ್ವಸ್ತಿಶ್ರೀ ನಿಡುಗುನ್ದದ ಮಹಾಜನಕ್ಕೆ ಪತ್ತುಗದ್ಯಾಣಗೊಟ್ಟು (ಎಕ. VI, ಮೂಡಗೆ. ೧೯-೧ ; ಸು. 1025) ; ಆ ನಾಡಿಂದ ಪೂರ ಬಸವನ ಹಳ್ಳಿ ಕೊಡಗಿನಾಡ ಬಾರಸಿ ಹಂನೆರಡು ನಿಡುಗುಂದ ಹಳ್ಳಿಗಳು ಸಹಿತ (ಎಕ. V, ಬೇಲೂರು. ೫೮-೮೨ ; 1117). 'ನಿಡುಂಗೊಂಡೆ' ಪರಾ. [?]

ನಿಡುಗುಂದಗೆ (ನಾ). ಒಂದು ಊರಿನ ಹೆಸರು : ನಿಡುಗುನ್ದಗೆ ಪನ್ನೆರಡುಮಾನಾಳುತ್ತಿಟ್ಟು (ಎಇ. VII, ೨೧೩-೯ ; 874) ; ನೈಷ್ಠಿಕ ಸ್ಥಾನಂ ಮಾಡಿ ಪೂರ್ವಭುಕ್ತಿಯೊಳು ನಡೆವ ಪಾನುಂಗಲ್ಲಯ್ನೂಱಱ ಕಮ್ಪಣಂ ನಿಡುಗುನ್ದಗೆ ಪನ್ನೆರಡಱ ಬಳಿಯ ಪಳ್ಳವುರಂ ತಳವೃತ್ತಿಯಾಗೆ (ಕಇ. I, ೧೭-೩೩ ; ಸು. 1055). [?]

ನಿಡುಗುಂದಿ (ನಾ). ಒಂದು ಊರಿನ ಹೆಸರು : ಆದುವೆ ವಸಂತಂ ಕೊಟ್ಟೂರೊದವಿದ ನಿಡುಗುಂದಿ ಮಿಕ್ಕ ವಿಕ್ರಮಪುರವೆಂಬುದುಮಗ್ರಹಾರ ಸಂಪತ್ಪದವಿಗಳೊಳಮಗ್ರಗಣ್ಯನೂರ್ಜಿತಪುಣ್ಯಂ (ಪಂಪಭಾ. ೧೪-೪೧) ; ಅಂದಣಿಗೆಯ ಕಲ್ಲಗೌಂಡನುಂ ನಿಡುಗುಂದಿಯ ಸಮಸ್ತಪ್ರಜೆ ಪಿ(ಹಿ?)ಟ್ಟು ಕಾರರುಂ (ಕಕುಲ. ೧೭-೧೫ ; ಸು. 1050); ಅಗ್ರಹಾರಂ ನಿಡುಗುಂದಿಯ ಮಹಾಜನಂ ನಾಲ್ನೂವ್ವರುಂ ಪೂರ್ವಸ್ಥಿತಿಯಿಂ ನಡೆವ ಪಾರಿಖಾಯದ ಹೊಂಗೆ ಮೂಱುವರೆ ವೀಸವಮಂ ಪರಸ್ಥಾನದ ಮಹಾಜನದಭ್ಯಾಗತ ಪೂಜೆಗೆ ಬಿಟ್ಟರು (ಸೌಇಇ. XI-i, ೧೧೭-೪ ; 1076). [?]

ನಿಡುಗುಡಿ (ನಾ). ನೀಳವಾದ ಕುಡಿ,—ಚಿಗುರು : ಬಳ್ಳಿವರಿದ ಬಳ್ಳಿವಂದರದ ಬಳ್ಳಿಗಳೊಳ್ ನಿಮಿರ್ವ ನಿಡುಗುಡಿಗಳಳ್ಳಿಱಯೆ (ಲೀಲಾವ. ೩-೨೧ ವ). [ನಿಡು(<ನಿಡಿದು$_1$)+ಕುಡಿ$_2$]

ನಿಡುಗುರುಳ್, ನಿಡಿಗುರುಳ್, ನಿಡಿಗುರುಳು, ನಿಡುಗುರುಳು (ನಾ). =ನಿಡುಗೇಶ : ಮೆಱೆವರ್ ಸುರ್ಕುಂಗುರುಳ ಸುಟಿಗುರುಳ ನಿಡುಗುರುಳುರುಳಿಗುರುಳ ತುಂಬಿಗುರುಳ ಗೋಪಸ್ತ್ರೀಯರ್ (ಜಗವಿ. ೪-೧೨೫). **ನಿಡಿಗುರುಳ್** : ನಿಡಿಗುರುಳ್ಗೆಸೆವ ಧೂಪದ ಪೊಗೆಗಳಂ ಕೊಟ್ಟು . . . ಮಧುಪಾನಮಂ ಮಾಡಿ ಕಪ್ಪುರವೀಳೆಯಂಗೊಂಡು ಸೊಗಯಿಸಿದರು (ಜೈಮಿಭಾ. ೩೦-೧೭). **ನಿಡಿಗುರುಳು** : ನಿಱಿಗುರುಳ ಸುಕ್ಕುಂಗುರುಳ ನಿಡಿಗುರುಳ . . . ಕೋಮಲೆಯರೆಡೆವಿಡದೊದಗಿ ಬರುತಿರ್ದರು (ಚಿಬಪು. ೩೭-೪೬). **ನಿಡುಗುರುಳು** : ಬಾಲೆವೆಂಗಳು . . . ನಿಡುಗುರುಳಿನ ಮುತ್ತಿನ ಕುಚ್ಚಿನಿಂದ ಬಲ್ಪೆಡಗಾಗಿ ಮೆಱೆದರರ್ತಿಯಲಿ (ಕಂನವಿ. ೨೪-೪೨).

[ನಿಡು(<ನಿಡಿದು$_1$)+ಕುರುಳ್$_1$]

ನಿಡುಗುರುಳು 'ನಿಡುಗುರುಳ್' ನೋ.

ನಿಡುಗೆಡೆ (ಕ್ರಿ). ೧. ಉದ್ದವಾಗಿ ಬೀಳು: ನೀಲಗಿರಿಯೆಡೆವೊಕ್ಕುದೆನೆ ಖಳನೋಡಲು ನಿಡುಗೆಡೆಯೆ (ಕುವ್ಯಾದ್ರೋ.೧೭-೧). ೨. ಅಡ್ಡ ಬೀಳು; ಸಾಷ್ಟಾಂಗ ಬೀಳು: ಕೃಷ್ಣ ಜಯಜಯಯೆನುತ ನಿಡುಗೆಡೆದ(ಕುವ್ಯಾಭೀ. ೬-೧೬). [<ನಿಡಿದು$_2$+ಕೆಡೆ$_1$]

ನಿಡುಗೆಱೆ$_1$(ನಾ). ೧.ಒಂದು ಕೆರೆಯ ಹೆಸರು: ನಿಡುಗೆಱೆಯ ಬಯಲ ನೋಡಿ ಗಟ್ಡೆಯ ಎಱೆಯ ಹಯ್ಯ ಪುಣುಸೆಯ ನಡುವೆ ಪದಿನಯ್ದು ಕೊಳಗ ಬೆದೆ ಗಟ್ಡೆಯುಂ (ಎಕ. IV, ಹೆಗ್ಗಡ. ೧೬-೧೭ ; 1021). ೨. ಒಂದು ಊರಿನ ಹೆಸರು : ಮೂಡಲು ತಾವರೆಗೆಱೆಯ ತೆಂಕಣ ಕೋಡಿ ಸೀಮೆ ತೆಂಕಲು ನಿಡುಗೆಱೆಯೊಳಗಣಂ ಮೇರೆಯಾಗಿ (ಎಕ. VII, ಶಿಕಾರಿ. ೧೩೮-೪೯ ; 1194). [ನಿಡು(<ನಿಡಿದು$_1$)+ಕೆಱೆ]

ನಿಡುಗೆಱೆ$_2$ (ನಾ). ಉದ್ದವಾದ ಗೆರೆ,—ಸಾಲು : ನಿಡುಗೆಱೆಯಾಗಿ ನಾಲ್ದೆಸೆಗೆ ಸಾಲಾಗಿ ಚೆಲ್ವಡರಿದ ಸೆಜ್ಜೆವನೆಗಳು ಇಡಿಕಿಱಿದಿದ್ದುವು (ಭರಚ. ೧೫-೨೦). [ನಿಡು(<ನಿಡಿದು$_1$)+ಗೆಱೆ]

ನಿಡುಗೇರಿ (ನಾ). ಉದ್ದವಾದ ರಸ್ತೆ; ದೊಡ್ಡ ಬೀದಿ; ಹೆದ್ದಾರಿ: ದಿವ್ಯಧೂಪದೀಪಗಳ ಗಡಣದಿಂ ಗಾಡಿವೆತ್ತೆಸೆದವಾ ನಗರದ ನಿಡುಗೇರಿಗಳೆಡೆವಿಡದೆ (ಕುರಾಸಾಂ. ೨೧-೧೭). [ನಿಡು(<ನಿಡಿದು$_1$)+ಕೇರಿ]

ನಿಡುಗೇಶ (ನಾ). ಉದ್ದವಾದ ಕೂದಲು; ನೀಳವಾದ ಕೇಶ: ನಿಡುಗೇಶದೊಳು ಮುದ್ರಿಕೆಯೊಳು ಲಾಮಂಡದೊಳು . . . ದೇವಕೀತನಯನೊಳು ಬಾಲಕಾಧಿಪೈಯಕ್ಕುಂ (ಮಂಗರಾ. ೧೫೩-೬೧); ನಿಡುಗೇಶವ ಬಗಿಬಗಿದು ಕಮ್ಮೆಣ್ಣೆಯನೊಡನೆಱೆದು (ಕುರಾಸಾಂ. ೨೯-೮೨); ನಿಡುಗೇಶವಾಱಪ ಮಡದಿರನ್ನೆಯರೊಪ್ಪಿದರು (ಕಂಸವಿ. ೨೫-೧೩೩); ಮುತ್ತುಮಾಣಿಕವೇಕೆ ಮತ್ತೆ ಕುರುಳುಗಳೇಕೆ ಉತ್ತಮದ ಉಡಿಗೆ ಉಡಲೇಕೆ ನಿಡುಗೇಶ ಕೊತ್ತಿಗೇಕೆಂದ (ಸರ್ವಜ್ಞ. ೧೩೮೬).

[ನಿಡು(<ನಿಡಿದು$_1$)+ಕೇಶ]

ನಿಡುಗೇಸ (ನಾ). = ನಿಡುಗೇಶ: ವೀರಶೈವಾಗಮದ ನಡವಳಿಯ ಕುಡಿವರಿಸಿ ಬೆಳಹುವನೆನಿಪ್ಪಂತೆ ನಿಡುಗೇಸ ಕವಲಿಱದು ಬೆಳೆದುದು (ಸೌಂದಪು. ೨-೩೦); ತೀರಮನಡರ್ದು ನಿಡುಗೇಸಂಗಳೊಳ್ ಸುರಿವ ನೀರನಾಱಿಸಿ (ಚಿಬಪು. ೪೫-೬೯). [ನಿಡು(<ನಿಡಿದು$_1$)+ಕೇಸ$_2$]

ನಿಡುಗೈ, ನಿಡುಗಯ್ (ನಾ). = ನಿಡುಕರ: ತಿಸುಳಿಯುಂ ಗೆಲ್ದುದರ್ಕೆ ಮುಡಿಗಿಕ್ಕುವಂತೆ ನಿಡುಗೈಗಳಂ ಮುಡಿಗಿಕ್ಕಿ ನಡೆದು (ಕಬ್ಬಿಕಾ. ೨೩೨). **ನಿಡುಗಯ್**: ಮಿಂಚುದಲೆ ಒಣಕರುಂ ನಿಡುಗಯ್ಯದಡಿಗರುಂ (ವಾಗೀರ. ದೇ. ೨೫೪-೨೨); ರಾಣಿ ಬಂದುದನ್ನು ಕಂಡ ನಾಗಯ್ಯ ಗಂಗರಾಜರು ಎದ್ದು ನಿಂತು ನಿಡುಗಯ್ಯಳಲ್ಲಿ ಬಾಗಿ ನಮಿಸಿದರು (ಸಪಿ. ೨೭). [ನಿಡು(<ನಿಡಿದು$_1$)+ಕೈ$_2$(<ಕೆಯ್$_2$)]

ನಿಡುಗೊಂಬು (ನಾ). ೧. ಉದ್ದವಾದ ಕೊಂಬೆ,—ಟೊಂಗೆ: ತೋರಗೊಂಬಿನ ನೊಗಂ ನಿಡುಗೊಂಬಿನ ಮೂಂಕು ಕಣ್ಣೆ ಚೆಲ್ವೆನೆ ನಡೆತಂದುವಂದಸುಗೆಯೆಂಬ ನೆಗೞ್ತೆಯ ತೇರ್ಗಳ್ (ಕಬ್ಬಿಕಾ. ೨೧೩); ನಿಡುಗೊಂಬಿನೆಲೆದುಱುಗಲ ಪೊದಱ ಪೊರೆಯೊಳ್ ಮೆಯ್ಗರೆದಿರ್ದ ಗಂಧರ್ವ ಸೌಂದರಿ ನೆಲೆವಡೆದಕ್ಷೀಣರೂಪಯಕ್ಷಿಣಿಯಂತೆಸೆಯೆ ಮಿಸುಪ ವಟವಿಟಪಿಯಿಂ (ಶಬಶಂ. ೩-೩೫ ಪ). ೨. ಕೊಂಬಿನಾಕಾರದ ಉದ್ದವಾದ ಒಂದು ವಾದ್ಯ; ಕಹಳೆ: ಚಿನ್ನದ ಚೀಱುಗಳ ನಿಡುಗೊಂಬುಗಳ ಚೆಂಬಕನ ನಿರ್ಘೋಷ ಡೋಱುಗಳೆದುವು ನೆಲನನುದಧಿಯ ಕಾಱಿಸಿದವಡ ಮಳಲನೆನೆ ಹುರಿಯೇಱಿಶಬ್ದರವಿವರ ಬಲದಲಿ (ಕುವ್ಯಾಕ. ೨೧-೭).

[ನಿಡು(<ನಿಡಿದು$_1$)+ಕೊಂಬು$_1$]

ನಿಡುಗೊಂಬೆ(ನಾ). = ನಿಡುಗೊಂಬು ೧: ಆ ಉದ್ಯಾನದಲ್ಲಿ ಚೆತ್ತಲೆಯ ನಿಡುಗೊಂಬೆಗಳ . . . ವೃಕ್ಷಗಳು ದಟ್ಟವಾಗಿ ಬೆಳೆದಿದ್ದವು (ಪುನರು. ೫೬೩). [ನಿಡು(<ನಿಡಿದು$_1$)+ಕೊಂಬೆ$_1$]

ನಿಡುಗೊನರು (ನಾ). = ನಿಡುಗುಡಿ: ಎಸಳ ಕಱುಂಕೆಯೆಳೆಯ ನಿಡುಗೊನರಿಟ್ಟ ಸಿತೋತ್ಪಲಲೋಚನೆಯರ್ ಮಿಗೆ ಸಂತಸದಿಂ ತುಱುಗೆವೆಯೆತ್ತಿ ನಿರೀಕ್ಷಿಸಲ್ (ಜಯಕಾ. ೮-೧೭).

[ನಿಡು(<ನಿಡಿದು$_1$)+ಕೊನರು$_2$(<ಕೊನರ್$_2$)]

ನಿಡುಗೊನೆ (ನಾ). = ನಿಡುಗೊಂಬು ೧: ಮುತ್ತುಗ ನಿಡುಗೊನೆ ನಿಕರ ಹೂವಾದಂತೆ ನೆತ್ತರ ಬಣ್ಣ ತೋಱಿಸಲು ಚಿತ್ತಜನಾತ್ಮಸಂಭವನ ಕೀರ್ತಿಸಿದ ಖಳೋತ್ತಮ ಕಡು ಮೆಚ್ಚಿ ನಗುತೆ (ವೋಚಿಕ. ೩೫-೪೧).

[ನಿಡು(<ನಿಡಿದು$_1$)+ಗೊನೆ$_2$(<ಕೊನೆ$_2$)]

ನಿಡುಗೊರಲ್, ನಿಡಿಗೊರಲು, ನಿಡುಕೊರಳು, ನಿಡುಗೊರಲು (ನಾ). ಉದ್ದವಾದ ಕೊರಳು; ನೀಳವಾದ ಕುತ್ತಿಗೆ: ನಿಡುಗೊರ[ಪಾಠಾಂ. ಡ]ಲೆತ್ತಲ್ ಶರಭಕ್ಕೆ ಕರಭನೆಣೆಯೆನಿಸುಗುಮೇ (ಧರ್ಮನಾ. ೧-೫೪); ನಿಂದರೆಗಣ್ಮುಗಿದಾತ್ಮಚಂಚುವಂ ನಿಡುಗೊರಲಿಂ ಮರಲ್ಚಿ ನಿಜಪಕ್ಷದೊಳೊಯ್ಯನೆ ಸಾರ್ಚಿ (ರಾಜಶೇ. ೬-೯). **ನಿಡಿಗೊರಲು**: ನಿಡಿಗೊರಲ ತುರ್ಪುರವ ಕೆದಱುತವೆಡೆಯೆತ್ತಿ ಪೊಯ್ಯುತ್ತ . . . ಕುಳ್ಳುಟದ ಸರ್ಪಗಳೆರಡು ಹೆಣಗುವವು (ನಾಗಚ. ೧೩-೧೦೦). **ನಿಡುಕೊರಳು**: ಪೇರುರಂ ನಿಡುಕೊರಳು [ಪಾಠಾಂ. ಗೊರಲು]. . . ಖಂಡಗಳ್ ತೋಱಿ ಬಟುವಾಗಿರ್ಪ ವಾರುವಂ ರಾಜವಾಹನಮಪ್ಪ ತೇಜಯಕ್ಕುಂ (ಮಂಗರಾ. ೮೪-೨೨). **ನಿಡುಗೊರಲು**: ಮೇಲಿನ 'ಮಂಗರಾ' ಪ್ರಯೋಗದ ಪಾಠಾಂತರವನ್ನು ನೋಡಿ.

[ನಿಡು(<ನಿಡಿದು$_1$)+ಕೊರಲ್]

ನಿಡುಗೊರಲು 'ನಿಡುಗೊರಲ್' ನೋ.

ನಿಡುಗೊಲೆ (ನಾ). (ಅಲಂ) ಸಂಪೂರ್ಣ ನಾಶ: ಯಾವ ಭಾರತಸ್ತ್ರೀಯು ಸೀತಾ ಸಾವಿತ್ರಿಯರ ಮಟ್ಟಕ್ಕೇರಬೇಕೆಂದು ಆಶಿಸಿದ್ದೇವೋ ಅಂತಹರ ತೀಲದ ನಿಡುಗೊಲೆಯಾಯಿತು (ಅಮಗಾಂ. ೭೧).

[ನಿಡು (<ನಿಡಿದು$_1$) + ಕೊಲೆ$_2$]

ನಿಡುಗೊಳ (ನಾ). ವಿಶಾಲವಾದ ಕೊಳ; ದೀರ್ಘಿಕೆ: ಅದಕ್ಕೆ ಸೀಮೆ ಪಡುವಲುಂ ಬಡಗಲುಂ ನಿಡುಗೊಳಂಗಳೆ ಮೇರೆ (ಎಕ. VII, ಶಿಕಾಂ. ೧೨೫-೩೮; 1019). [ನಿಡು (<ನಿಡಿದು$_1$) + ಕೊಳ$_2$]

ನಿಡುಗೋಡು (ನಾ). ೧. (ಪ್ರಾಣಿಯ) ಉದ್ದವಾದ ಕೊಂಬು,—ನೀಳವಾದ ಶೃಂಗ: ಮಿಗೆ ಬೆಚ್ಚಿಸಿದಂತೆ. ತೋಱುವಗ್ಗದ ನಿಡುಗೋಡು . . . ಕುಡಿವಾಲಮಂದೆಸೆಯೆ ಕರ್ಬಸುಗಳ್ ಪರಿಗೊಂಡುವಾಱಿಯೊಳ್ (ಪಂಪಭಾ. ೮-೧೦೪). ೨. = ನಿಡುಗೊಂಬು ೧: ಚಳಿಗಾಱದೆ ಪೇರಾಲದ ಕೆಳಗರ್ಪನಿತಱೊಳೆ ಚಪಲಕಪಿ ನಿಡುಗೋಡಂ ಸೆಳೆದಲುಗೆ ಸೂಸುವೆಲೆವನಗಳಿನೊರ್ವಂ ನೆನೆದು ನಡುಗಿ ಸಿಡಿಮಿಡಿಗೊಂಡಂ (ರಾಜಶೇ. ೯-೨೪). [ನಿಡು (<ನಿಡಿದು$_1$) + ಕೋಡು$_5$]

ನಿಡುಗೋಣ್ (ನಾ). ಉದ್ದವಾದ ಕುತ್ತಿಗೆ: ನಿಡುಗೋಣುಂ ಕುಸಿಗೋಣುಮಾದೊಡಿಣಿ ದೊಡ್ಡಿತ್ತಾದೊಡೆ . . . ಅದನಾಳ್ವಾತಂ ಸುಖಂ ಬಾೞ್ವನೇ (ಲೋಕೋಪ. ೧೧-೯೮). 'ನಿಡುಗೋಣ' ಪರಾ.

[ನಿಡು(<ನಿಡಿದು$_1$) + ಗೋಣ್]

ನಿಡುಗೋಣ (ನಾ). ಉದ್ದವಾದ ಕುತ್ತಿಗೆಯನ್ನುಳ್ಳವನು: ನಿಡುಗೋಣಂ ಶಠನಂಗನಿರ್ಗತಶಿರಾಜಾಲಂ ಘಟಪ್ರೋದ್ಭವಂ (ಜಾತಕ. ೧೭-೧೧). [ನಿಡುಗೋಣ್+-ಅ$_7$]

ನಿಡುಗೋಲ್, ನಿಡುಕೋಲ್, ನಿಡುಗೋಲು (ನಾ). ೧. ಉದ್ದವಾದ ಕೋಲು: (ಕ). ೨. ನಿಡಿದಾದ ಕಣೆ; ಉದ್ದವಾದ ಬಾಣ; ನಿಡುಸರಳು: ಫಲುಗುಣಂ ಕಾಣುತಡ್ಡುಗ್ರದಿಂ ವ್ಯಗ್ರದಿಂ ಸೆಳೆದು ಕೋದಂಡಮಂ ತೀದಿದಂ ಪೂಡಿದಂ ಪೊಳೆವ ಕೆಂಗಱಯ ನಿಡುಗೋ[ಪಾಠಾಂ. ಕೋ]ಲ್ಗಳಂ ಸಾಲ್ಗಳಂ ಕಟ್ಟಿದಂ ಗಗನಪಥಕೆ (ಚೈಮಿಭಾ. ೨೫-೩೧). **ನಿಡುಕೋಲ್**: ೨. ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. **ನಿಡುಗೋಲು**: ೨. "ಪ್ರಕ್ಷ್ವೇಡನಃ, ನಾರಾಚಃ — ೨ ನಾರಸದ ಹೆಸರುಗಳು, ನಿಡುಗೋಲು, ನಿಡುಸರಳು" (ಸಿದ್ಧಾಂತಿ. ೨೬೪). [ನಿಡು (<ನಿಡಿದು$_1$) + ಕೋಲ್$_1$]

ನಿಡುಗೋಲು 'ನಿಡುಗೋಲ್' ನೋ.

ನಿಡುಚಾಪೆ (ನಾ). ಉದ್ದವಾದ ಚಾಪೆ; ದೊಡ್ಡ ಮಂದಲಿಗೆ: ಗಾಳಿ ಸೋಂಕದ ಹಾಂಗೆ ಗಿಡುಗಳಿಗೋಳಿಯಲಿ ನಿಡುಚಾಪೆಗಳ ನಾಱೇಳನಾಗಳೆ ಕಟ್ಟಿ (ಬಸಪು. ೩೮-೧೧). [ನಿಡು(<ನಿಡಿದು$_1$)+ಚಾಪೆ]

ನಿಡುಚಾಲ್ (ನಾ). ಉದ್ದವಾದ ಸಾಲು,—ಶ್ರೇಣಿ; ದೊಡ್ಡ ಸಾಲು: ಕಡುಚೋಱಿಗಂ, ನಿಡುಚಾಲ್ (ಶಬ್ದಾನು. ೯೩ ವ್ಯಾಖ್ಯಾ).

[ನಿಡು (<ನಿಡಿದು$_1$) + ಸಾಲ್$_2$]

ನಿಡುಚೀಲ (ನಾ). ನೀಳವಾಗಿರುವ ಚೀಲ; ದೊಡ್ಡ ಚೀಲ: ನೀಡಗಲದ ಗಗನದ ನಟ್ಟ ನಡುವೆ ಮುಚ್ಚೋಡಿಯ ನಿಡುಚೀಲದಂತೆ ಕೂಡಿ ಗಾಳಿಗಳು ಮೂಱಹುವದಱೊಳು ತುಂಬಿದೀಡಿನಂತಿಹುವಾಱು ವಸ್ತು (ಧರಶ. ೬೭-೬೯). [ನಿಡು (<ನಿಡಿದು$_1$)+ ಚೀಲ]

ನಿಡುಚು (ನಾ). ಉದ್ದ; ನೀಳ: ಈ ಪಣಗಳು . . . ಕರಿದಾದ ನಿಡುಚಾದ ಕೂದಲುಗಳುಳ್ಳವರಾಗಿದ್ದಾರೆ (ತುಳುನಾ. ೨೧೫).

[ನಿಡು (<ನಿಡಿದು$_1$) +-ಚು$_2$]

ನಿಡುಜಂಘೆ (ನಾ). ೧. ಉದ್ದವಾದ ಕಣಕಾಲು. ೨. ದೊಡ್ಡ ಹೆಜ್ಜೆ; ದಾಪುಗಾಲು: ಎಲ್ಲಿಗೆಯ್ದುವೆನೆಲ್ಲಿ ಹೊಗುವೆವದೆಲ್ಲಿ ಸಾರುವೆ ವೆನುತ ಕಳವಳದಲ್ಲಿ ನಿಗೆ ಕುಱುಜಂಘೆಯಂ ನಿಡುಜಂಘೆ [ಪಾಕಾಂ. ಗೆ] ಗಳನಿಡುತ ಕುದುಕುವರಿಯಲಿ ಪರಿದು (ಬಸವು. ೨೬-೩೧).

[ನಿಡು (<ನಿಡಿದು$_1$) + ಜಂಘೆ]

ನಿಡುಜಡೆ, ನಿಡುಜೆಡೆ (ನಾ). ೧. ಉದ್ದವಾದ ಜಡೆ; ನೀಳವಾದ ಹೆರಳು: ಕಾಮಿನಿಯ ನಿಡುಜಡೆ ರಂಜಿಸಿದುದು (ಉದ್ಯಟ. ೯-೧೧೩); ಕಣ್ಣೆವಂದತ್ತು ಬೆನ್ನಂ ಮುಸುಕಿ ಪೊಱೆವಾಱುಗಿಳಿದ ನಿಡುಜಡೆ (ಚಪಸು. ೧೦-೩೩); ಅಳಿವೆದೆಯಂ ಸಡಿಲ್ಚಿ ನಿಲಿಸಿದ ತನುಡಾಪಲತೆಯಂತೆ ತನುಲತೆ ನಿಡುಜ[ಪಾಕಾಂ. ಜೆ]ಡೆಯಿಂ ಕಡು ಬೆಡಂಗುವಡೆಯೆ (ರಾಜಶೇ. ೫-೧೯ ವ); ನಿಡುಜಡೆ ಬಡನಡು ಕುಡಿಹುಬ್ಬು ಕುಣಿಸುತ್ತ . . . ಪೊಡವಿಯೊಳೆನ್ನ ಸೋಲಿಸುವರಿಲ್ಲೆಂದು ಮಡದಿ ಒಪ್ಪಿದಳು (ಸೌಂದಕಾ. ೩-೩೩). ೨. ನೀಳವಾದ ಜಟೆ, — ಜಡೆಗಟ್ಟಿದ ಕೂದಲು: ನಿಡುಜಡೆ ಕರ್ಣದೊಳ್ ಪಳಿಕಿನೊಪ್ಪುವ ಕುಂಡಲಂ . . . ಒಳ್ಪಡರ್ದಿರೆ ಬಂದನೊರ್ವ ನವ ಪಾಶುಪತಾಸ್ತ್ರಕಧಾರಿ ತಾಪಸಂ (ದಶಕು. ೮-೧೪೦); ನಿಡುಜಡೆಯ ಶಶಿಕಲೆಯ . . . ಮೃಡನನು ಕಂಡುದಮರಗಣ (ಸಭಾಗ. ೪-೩-೨೭); ಭಟಿ ಭಟಿಲೆಂಬ ಮಧ್ಯಾಹ್ನದ ದಿಸಿಲಿಂಗೆ ನಿಟಿಲಾಕ್ಷ ಭೀತಸ್ಥನಾಗಿ ಕುಟಿಲ ವರ್ಜಿತ ನಿಡುಜಡೆಯೊಳಗಾಕಾಶತಟಿನಿಯ ನೆಲೆಗೊಳಿಸಿದನು (ಮೋಹತ. ೧೯-೪೭). **ನಿಡುಜೆಡೆ**: ೧. ಮೇಲಿನ 'ರಾಜಶೇ. ೫-೧೯ ವ' ಪ್ರಯೋಗದ ಪಾಠಾಂತರವನ್ನು ನೋಡಿ. ೨. ಅಡರ್ದು ನಿಡುಜೆಡೆಯೆಡೆಯೊಳಹಿಯಡಂಗೆ ತನ್ನಸ್ತಕಸ್ಥಫಣಮಣಿ ಪದಪಂ ಪಡೆದುದು ತನ್ನುನಿಪನ ತಲೆಯೆಡೆಯಣ ಚಿಚ್ಚೋಕ್ತಿ ಜಿಗಿದು ಪೊಱಪೊಣ್ಮಿದವೋಲ್ (ರಾಜಶೇ. ೧-೧೩೫). [ನಿಡು (<ನಿಡಿದು$_1$) + ಜಡೆ$_1$]

ನಿಡುಜಲ್ಲಿ, ನಿಡುಝುಲ್ಲಿ (ನಾ). ಉದ್ದವಾದ ಗೊಂಡೆ,—ಗೊಂಚಲು: ಅಲ್ಲಲ್ಲಿ ಕಟ್ಟಿದ ಚೋಹಗಳಂ ನಿಡುಜಲ್ಲಿಗಳಿಂದ ಪಟ್ಟಿಗಳ ಪಲ್ಲವಕೋಟಿಗಳಿಂದಾ ಗಿರಿದುರ್ಗದಲ್ಲಿ ಕೂಲಗಳು ಮೆಱೆದವು (ಕುರಾಸಾಂ. ೨೧-೧೩). **ನಿಡುಝುಲ್ಲಿ**: ಮುಡಿವಾಳದ ನಿಡುಝುಲ್ಲಿಗಳನು ಕಟ್ಟಲೊಡನೊಪ್ಪಿದುದಾಗಸವ ಒಡೆದವನಿಗೆ ಬಪ್ಪ ಸುರತರುವಿನ ಬೇರ ಗಡಣ ವಿದೆಂಬಂದದೊಳು (ರಾಮವಿ. ೭-೨೯).

[ನಿಡು (<ನಿಡಿದು$_1$) + ಜಲ್ಲಿ$_2$]

ನಿಡುಜಾಗರ (ನಾ). ಹೆಚ್ಚುಕಾಲ ಮಾಡುವ ಜಾಗರಣೆ; ಬಹಳ ಹೊತ್ತು ಎಚ್ಚರವಾಗಿರುವಿಕೆ: ಅಲಸದೆ ಮಾಡಿ ಬೇಸಱದೆ ಸಾಲ್ಗುಂದಿನ್ನದೆ ಮೆಯ್ಯೊಗಕ್ಕೆ ಪಂಬಲಿಸದೆ ನಿದ್ದೆಗೆಟ್ಟು [ನಿಡು]ಜಾಗರದೊಳ್ ತೊಡರ್ದು (ಪಂಪಭಾ. ೧-೧೩೬).

[ನಿಡು (<ನಿಡಿದು$_1$) + ಜಾಗರ$_3$]

ನಿಡುಜೆಡೆ 'ನಿಡುಜಡೆ' ನೋ.

ನಿಡುಝುಲ್ಲಿ 'ನಿಡುಜಲ್ಲಿ' ನೋ.

ನಿಡುಡೆಂಕಣಿ (ನಾ). ದೊಡ್ಡ ಡೆಂಕಣಿ: ಪಗೆಗಳ ಶೃಂಗಲಮಂ ಡೊಹಗೆ ಗೆತ್ತಿ ತಪ್ಪುರವರೇಶನಾನಂದಲತಾಳಿಗೆಗಳ ಪರ್ಷುಪುದೆಂತುಂ ಬಗೆಗೆ ನಿಡುಂ ಪುಂಕದಿಂದೆ ನಿಡುಡೆಂಕಣಿಗಳ್ (?) (ದಶಕು. ೧-೩೫); ಬಾಲಗಳ ಝೂಡಣೆಯ ನಿಡುಡೆಂಕಣಿಯ ಕಟ್ಟಾಡಿಕೆಯ ಕಪಿಸೇನೆ ಸರಿಸದ ಲೀಡಱೊಡು ಹತ್ತಿದುದು ಕೊತ್ತಳದಾಳುವೇರಿಯಲಿ (ತೊರರಾ. ೬-೧೧-೬).

[ನಿಡು (<ನಿಡಿದು$_1$) + ಡೆಂಕಣಿ]

ನಿಡುಡೊಳ್ಳು, ನಿಡುದೊಳ್ಳು (ನಾ). ಮುಂದಕ್ಕೆ ಚಾಚಿ ಬೆಳೆದ ಹೊಟ್ಟೆ; ಬೊಜ್ಜು ಹೊಟ್ಟೆ: (ಕ). **ನಿಡುದೊಳ್ಳು**: ತುಂದಿಲಃ, ಬೃಹತ್ಕುಕ್ಷಿಃ—ನಿಡುದೊಳ್ಳುಳ್ಳವನು (ನಾಚಿರಾ. ೫).

[ನಿಡು(<ನಿಡಿದು$_1$)+ಡೊಳ್ಳು$_1$(<ಟೊಳ್ಳು$_1$)]

ನಿಡುತೋಳ್ 'ನಿಡುದೋಳ್' ನೋ.

ನಿಡುದಂಡೆ (ನಾ). ಉದ್ದವಾದ ಸರ,—ಮಾಲೆ: ತೊಂಡಲ್ಮಾವಿನ ಗಾಲಿ ನನೆಯ ನಿಡುದಂಡೆ ಮನೋಹರಮಾದಱ್ಕು ತರಂಗೊಂಡಿಕ್ಕಿದ ಹೊಸಹೊಂಗೇದಗೆಯೆಸಳ್ಗಳ್ ನವಶಸ್ತ್ರತತಿ . . . ಒಪ್ಪಿದುದು (ಜಯಕಾ. ೫-೬). [ನಿಡು(<ನಿಡಿದು$_1$)+ದಂಡೆ$_1$]

ನಿಡುದಡ (ನಾ). ಎತ್ತರವಾದ ದಂಡೆ,—ಜಗಲಿ: ಹೆಡಗಯ್ಯ ಬಿಗಿದ ನೇಣಂ ಕೊಯ್ದು ಬಿಸುಟು ನಿಡುದಡದಲ್ಲಿ[ಪಾಕಾಂ. ಬಿಸುಟಿಳೆದು ಹಿಡಿತಂದು]ಮೂಡ ಮುಂತಾಗಿ ಕುಳ್ಳಿರಿಸಿ ಹಿಂದಡದಲ್ಲಿ ಕುಸಿದು ನೀಡಡಿಯಟ್ಟು ನಿಂದು ಖಡ್ಗವ ಸೆಳೆದು ಜಡಿದು ನೋಡಿ (ಹಚಕಾ. ೧೩-೧೨).

[ನಿಡು(<ನಿಡಿದು$_1$)+ದಡ$_3$(<ತಡ$_2$)]

ನಿಡುದನಿ (ನಾ). ದೊಡ್ಡ ಸ್ವರ; ಜೋರಾದ ಧ್ವನಿ: ಗಟ್ಟಿಯಾದ ಧ್ವನಿ: "ಕೀಜ, ಕೂಜ, ಕುಜಿ—ಅವ್ಯಕ್ತೇ ಶಬ್ದೇ, ನಿಡುದನಿಯೊಳ್" (ಶಾಕಶ. ೧೪); ಹಾ ಎನುತೊಱಲುತಿಹ ನಿಡುದನಿಗಳಂ ಕೇಳಿ (ಬಸವು. ೪೬-೨೨); ಕೊಬ್ಬಿ ಹರಿದುದು ವಿವಿಧವಾದ್ಯದ ನಿಬ್ಬರದ ನಿಡುದನಿಯು (ಕುವ್ಯಾಭೀ. ೮-೫); ಇಟ್ಟಣಿಸ ಜನದ ಕಡೆಗಾಲ್ಗಳಿಂದಾ ಸುತಂ ಪೊಡೆಗೆಡೆಯಲು ಕಡುತವಕದಿಂ ಬರ್ಷ ಮಂತ್ರಲಕ್ಷಂ ಕಂಡು ನಿಡುದನಿಯೊಳೊದಱ ತೇಜಿಯ ದಾಂಟಿಸಿದಂ (ಭಾವಚಿಂ. ೮-೧೮); ನನಗಾವ ನಿಡುದನಿಯೂ ಕೇಳ್ದುದಿಲ್ಲ! (ಬಿಗಾಳಿ. ೪೫-೧೮). [ನಿಡು(<ನಿಡಿದು$_1$)+ದನಿ$_1$]

ನಿಡುದನಿಗೆಯ್ (ಕ್ರಿ). ಗಟ್ಟಿಯಾಗಿ ಧ್ವನಿ ಮಾಡು; ದೊಡ್ಡದಾಗಿ ಕೂಗು: ಕೀಜತಿ—ನಿಡುದನಿಗೆಯ್ದುಪುದು (ಶಾಕಶ. ೧೪).

[ನಿಡುದನಿ+ಕೆಯ್$_1$]

ನಿಡುದಲೆ (ನಾ). ಉದ್ದವಾದ ತಲೆ: ಈ ಮೆಡಿಟರೇನಿಯರೂ ಆಸ್ಟ್ರೇಲಿಯನರಂತೆ ನಿಡುದಲೆಯವರೇ ಆಗಿದ್ದರು (ದ್ರಾವಿವಿ. ೨೯); ಉದ್ದವಾದ ತಲೆಯುಳ್ಳ; ನಿಡುದಲೆಯ (Dolichocephalic. ಇಂಕನಿ).

[ನಿಡು(<ನಿಡಿದು$_1$)+ತಲೆ$_1$]

ನಿಡುದಲೆಯ(ನಾ). ಉದ್ದವಾದ ತಲೆಯುಳ್ಳವನು: ಕುಱುಗಯ್ಯಂ, ನಿಡುದಲೆಯಂ (ಶಬ್ದಾನು. ೯೭ ಪ್ರಯೋ). [ನಿಡುದಲೆ+-ಅ$_7$]

ನಿಡುದುರುಬು (ನಾ). ನೀಳವಾದ ಹೆರಳು; ಉದ್ದವಾದ ಮುಡಿ: ನಿಡುದುರುಬಿನೊಯ್ಯಾರಿ ಬೈತಲೆಯ ಶೃಂಗಾರಿ (ಮಹಾವಿ. ೬-೧೮).

[ನಿಡು(<ನಿಡಿದು$_1$)+ತುರುಬು$_2$(<ತುಱುಂಬು$_2$)]

ನಿಡುದೆಂಗು (ನಾ). ಎತ್ತರವಾದ ತೆಂಗಿನ ಮರ: ಜಿನಗೆ ಗಗನವ ತುಡುಳುವ ನಿಡುದೆಂಗಿನೆಳನೀರ ತೆಗೆತೆಗೆದಭಿಷೇಕಗೈದ (ಭರಶ. ೧೬-೬೨).

[ನಿಡು(<ನಿಡಿದು$_1$)+ತೆಂಗು$_3$]

ನಿಡುದೆನೆ (ನಾ). ೧. ದೊಡ್ಡ ಕದಿರು; ದಪ್ಪವಾದ ಹೊಡೆ. ೨. ಕೋಟೆಯ ಮೇಲಿರುವ ದೊಡ್ಡ ಬುರುಜು,—ಗುಮ್ಮಟ. ೧, ೨: ನಿಡುದೆನೆಯಿಂ ಪ್ರಾಕಾರದೊಳುಡುಗದ ಕಣಿಯಿಂದೆ ಡೊಡೆಯೊಳೆಣೆಯೆನಿಸಿದುವಂ ಶಾಳಿಗಳಂ . . . ಬೆಳೆವ ನೆಲನೆ ಪೊಲನಾ ನೆಲದೊಳ್ (ಪುಷ್ಪಪು. ೨-೧೩). [ನಿಡು(<ನಿಡಿದು$_1$)+ತೆನೆ$_1$]

ನಿಡುದೆರೆ (ನಾ). ೧. ದೊಡ್ಡ ಅಲೆ ; ದೀರ್ಘವಾದ ತರಂಗ : ಇಂಗಡಲ ನಿಡುದೆರೆಗಳೋ ಬೆಳುದಿಂಗಳೊಳುದಿರುಳುಗಳೊ . . . ಎನಲು ಮುಂಗಡೆಯೊಳಂತುಗಿನ ಪೊನ್ನ ಸಿಂಗುಗುಳ ವಸ್ತ್ರಂಗಳುನ್ನತ ಕಂಗೆ ಮುಂಗಳವಾಯ್ತು (ಬಸವ. ೧೧–೬೪) ; ಪಾಡುವುದು ಆಳರವದಿ ಕೈಗಳ ನೀಡುವುದು ನಿಡುದೆರೆಗಳಿಂ ದನೆ ನೋಡುವುದು ನೆಯ್ದುಲುಗಳರಿಂ . . . ಕಾಸಾರವದು (ಸಾಳ್ವಭಾ. ೧೬–೯). ೨. ಅಗಲವಾದ ತೆರೆ,—ಪರದೆ : ಪಲ್ಲವದ ನಿಡುದೆರೆಯ ಧವಳಚ್ಛತ್ರಚಮರದೊಳಿದಗಿತತಿರಥರು (ಕುಮ್ಮಾಳ. ೬–೧೬). [ನಿಡು(<ನಿಡಿದು$_1$)+ತೆರೆ$_4$]

ನಿಡುದೊಡೆ (ನಾ). ದಪ್ಪವಾದ ತೊಡೆ ; ತೋರವಾದ ತೊಡೆ : ಬಿಡದ ಜಂಘಾಕಾಂಡವ ನಿಡುದೊಡೆಯೊಳಗೊಡನೊಂದಿಸುತುಬ್ಬಿನಿಂದ . . . ಕೂಡಿ ರಾಜಿಪ ಕಡುಚೆಲ್ವನಿಬರೊಪ್ಪಿದರು (ಕಂಸವಿ. ೬–೧೨೫). [ನಿಡು(<ನಿಡಿದು$_1$)+ತೊಡೆ$_2$]

ನಿಡುದೊರೆ (ನಾ). ದಪ್ಪವಾದ ಗುಲ್ಮ ; ದೊಡ್ಡ ತೊರೆ : ಕಾಳಿಜದ ಜೆಮ್ಮಾರಿ ಕೆನ್ನೆತ್ತರಿನ ಮಡು . ನಿಡುದೊರೆಗಳ ಜೆ ರಾ ನಿ . . . ಭೂತಕೋಟಿಯ ನೆರವಿಗುಣಬುಸಿದವೊಲಿರ್ದುದು ಖರವಿರೋಧಿಯ ಕದನ (ತೊರವಿ. ೬–೪೫–೬೧). [ನಿಡು(<ನಿಡಿದು$_1$)+ತೊರೆ$_1$]

ನಿಡುದೊಳ್ಳು 'ನಿಡುದೊಳ್ಳು' ನೋ.

ನಿಡುದೋಳ್, ನಿಡಿದೋಳ್, ನಿಡಿದೋಳು, ನಿಡುತೋಳ್, ನಿಡುದೋಳು (ನಾ). ನೀಳವಾದ ಬಾಹು ; ಉದ್ದವಾದ ತೋಳು : ಬಲ್ವಳ ಬಳೆದ ವಿಕ್ರಾಂತತುಂಗನ ನಿಡುದೋಳ್ಗಳ್ ಗಣಿಕಾಜನಕ್ಕೆ ಕಾಮ ಪಾಶಂಗಳುಮರಾತಿಜನಕ್ಕೆ ಯಮಪಾಶಂಗಳುಮಾದುವು (ಪಂಪಭಾ. ೨–೩೯ ಪ) ; ಪಡೆದೆಂ ಪುತ್ರುಣ್ಣಾದಿಂದೀ ಪದಮನ್ನಿನಿತುಳಾಲಕ್ಕೆನುತ್ತುಂ ನರೇಂದ್ರಂ ನಿಡುದೋಳಿಂದಪ್ಪಿ ಭೋಂಕೆಲ್ ಭುಯದೆ ನಡುಗುತಂ ಕಣ್ಣಳಂ ಮುಚ್ಚಿ (ಕಾದಂಬ. ೬೮೮) ; ನಿಡುದೋಳ್ ನೀಳ್ದುವು ನೀಳ್ಕಲುದ್ದತ ನಿಜಚ್ಛತ್ರಂಗಳಂ ನಾಡೆಯುಂ ತೊಡೆಗಳ್ಕೊರ್ವಿದುವುಗ್ರದಂತಿಯನದಿರ್ಪಲ್ (ಪುಲ್ಲಿಚ. ೪–೧೩೯) ; ವೀರಶ್ರೀಯಂ ನಿಡು[ಪಾತಾಂ. ದಿ]ದೋಳ್ ತೂರಿ ನಿಡುದು ಕೈದುಗಲ್ತು (ಅರ್ಧನೇ. ೨–೩೩) ; ತೊಬ್ಬಿದ ಭುಜಯುಗಳದಿ ವೀರರಸದಿಂದುಬ್ಬಿದ ನಿಡುದೋಳ್ಗಳಿದೆಯ ಪರ್ದಾದ ಕಾಂತಿತಾಣಗಳಿನೆ ನೆಱಗೊಬ್ಬಿಲಿ ಗರುವನೊಪ್ಪಿದನು (ಮೋಚಪ. ೩೩–೫೩) ; ನಿಡುದೋಳ್ ನೀಳ್ದ ತರಂಗಮಾನನಮರಲ್ದಂಭೋರುಹಂ . . . ಎಂಬಂತಿರೆ ಸಿಂಧು ರಾಜನೊಸೆದೇಳ್ತಂದಂ ಗಭೀರಾನ್ವೇಷಂ (ರಾಜಶೇ. ೧೨–೧೦೦). **ನಿಡಿದೋಳ್** : ಇವಾತನ ನಿಡಿದೋಳ್ (ಪಮುದ. ೫೩ ಪ್ರಯೋ). **ನಿಡಿದೋಳು** : ನಿಡಿದೋಳಿನಿಂದೆ ಕೃಷ್ಣಾಗ್ರಜಾತನ ಸಿರಿಮುಡಿಯಲ್ಲಿ ಪೆಟ್ಟು ನಿಕ್ಕಿದನು (ಮೋಚಪ. ೪೦–೬೦). **ನಿಡುತೋಳ್** : ಉತ್ಕಲಿಕಾ ನಹಸ್ರವಿಷಮರಾಗಸಾಗರಮನೀಸಿದಪನೆಂಬಂತೆನ್ನನಪ್ಪಮಾಯಾನೆಯಂ ದೂರದೊಳ್ ನಿಮಿರ್ದ ನಿಡುತೋಳ್ಗಳಂ ತನ್ನೊಳ್ ತೋಱಿ . . . ಬರುತಿರ್ದಂ (ಕಾದಂಬ. ೫೬೫). **ನಿಡುದೋಳು** : ಉಗಿದು ಪಾಯ್ಕುವ ಖಳನ ನಿಡುದೋಳುಗಳು ಬಳಲಿದವು (ಕುಮ್ಮಾಸ. ೧೫–೨) ; ನಿಡು[ಪಾತಾಂ. ದಿ]ದೋಳು ತೋರಮುಡುಪು . . . ಬಿಡದೆ ಮಿಣ್ಕೆಯ ರಾಮನಧರಾಮಣಿ ಕಣ್ಣಿಡಿದುಮು ಕಡುಬಲದೇಕ್ಕೆಯರೆ (ಕುರಾಪಾಂ. ೦–೨೮) ; ಕಾದುಕೊಳ್ಳೆನುತಾರ್ದಿಟ್ಟು ಕೈಪ್ಪನು ಚಕ್ರದಲಿ . . . ಪೈಕೆಲ್ಬರಪ ಇಡಿತಲುಂದೊಂದ್ಯೆನೂಟ ತೊಂಬತ್ತೆಂಟು ನಿಡುದೋಳ ಕತ್ತರಿಸುವು (ಮೋಚಪ. ೪೦–೬೦) ; ಮುಂದಿಯ ಮುತ್ತಿನ ಬಲೆ . . . ನಿಡುದೋಳ ಬಲೆ ತಾಕಿ ಕೆಡಗೆ ಕಂಕಣವಾಂತ ಕಡುಚೆಲುವೆಯರೆನಿದಿರು (ಕಂಸವಿ. ೬–೧೦೪). [ನಿಡು(<ನಿಡಿದು$_1$)+ತೋಳ್]

ನಿಡುದೋಳ (ನಾ). ಉದ್ದವಾದ ಕೈಗಳುಳ್ಳವನು ; ದೀರ್ಘ ಬಾಹುಗಳುಳ್ಳವನು : ಕುಡುವಿಲ್ಲ, ನಿಡುದೋಳ, ಆರಮಗ (ಶಬ್ದಾನು. ೮ ವ್ಯಾಖ್ಯಾ). [ನಿಡುದೋಳ್+ –ಅ$_7$]

ನಿಡುದೋಳು 'ನಿಡುದೋಳ್' ನೋ.

ನಿಡುನಡಿಕೆ (ನಾ). ಕುದುರೆಯ ನಡಗೆಯಲ್ಲಿ ಒಂದು ಬಗೆ : "ರೇಚಕಂ . . . ಬಿಡುನಡೆ, ಜಾರುನಡಿಕೆ, ನಿಡುನಡಿಕೆ" (ಸಿದ್ಧಾ. ೨೩. ೨೫೧). [ನಿಡು (<ನಿಡಿದು$_1$)+ನಡಿಕೆ (<ನಡಗೆ)]

ನಿಡುನನೆ (ನಾ). ನಿಡಿದಾದ ಮೊಗ್ಗು ; ದೊಡ್ಡ ಮುಗುಳು : ನಲವಿಂದಂ ಸೂಡಿ ಪೊಂಜಾದಿಯು ನಿಡುನನೆಯಂ ವೇಡಯೋಳ್ ಸೆಕ್ಕಿ (ಲೀಲಾವ. ೫–೬೯). [ನಿಡು (<ನಿಡಿದು$_1$)+ನನೆ$_3$]

ನಿಡುನರ (ನಾ). ಉದ್ದವಾದ ನರ ; ನೀಳವಾದ ಸೆರೆ : ಅಡಗುಗಳ ತಿರುಳಿಂದೆ ನಿಡುನರದ ಕರುಳಿಂದೆ ಕಡಲಿಡುವ ನೆತ್ತರಿಂದೆಡೆಬಿಡದೆ ಸತ್ತರಿಂದಿ ಡಿದಿರ್ದುದಾ ರಣದಲೋರಣದ ಮಾರಣದ ಕಾರಣದ ಪೂರಣದೊಳು (ಜೈಮಿಭಾ. ೧೨–೪೪). [ನಿಡು (<ನಿಡಿದು$_1$)+ನರ$_1$ (<ನರವು)]

ನಿಡುನಾಲಗೆ, ನಿಡಿನಾಲಗೆ (ನಾ). ೧. ಉದ್ದವಾದ ನಾಲಗೆ ; ನೀಳವಾದ ಜಿಹ್ವೆ : ಮೂಡಿದನೇಕೆಯೊ ಮೇಲಂ ನೋಡದೆ ಬಿದಿ ನಿಷಮಘಟಿಗಣಾಲ್ಗಳ ಪಲ್ಲಂ ರೂಪಿಸಿದ ತೇಜ್ಕೆ ಮುಳ್ಕಂ ನಾಡಜಾಕೆಯ ದುರ್ಜನಂಗೆ ನಿಡುನಾಲಗೆಯಂ (ಧರ್ಮನಾ. ೧–೬೨) ; ಸ್ಕೂಸ್‌ದೇವನೇ ಗಳುವರ್ ಕಡುವಿಂಗಿಲ್ ದ್ವೇಷಿಪರ್ ನಿಡುನಾಲಗೆಯೆ ಗಟಪಿದಾ ಸೊರ್ಕು ನುಡಿಗಳರ್ (ಅಂತಗೊ. ೬–೧೧೦). ೨. (ಆಲಂ) ಹರಟುವ ನಾಲಗೆ. **ನಿಡಿನಾಲಗೆ** : ೧. "ನಿಡಿನಾಲಗೆ = ದೀರ್ಘಜಿಹ್ವೆ, ಉದ್ದವಾದ ನಾಲಗೆ" (ಸ್ವಭಗ್ನ). [ನಿಡು (<ನಿಡಿದು$_1$)+ನಾಲಗೆ]

ನಿಡುನಿಗ್ಗವ (ನಾ). ಉದ್ದವಾದ ಹಸ್ತಿದಂತ,—ಆನೆಯ ಕೋರೆ : ಹೊಳೆವ ನಿಡುನಿಗ್ಗವದ ಬೆಳುವೆಳಗು ಕುದಿವಿಂಬುಗಳ ಬಳಗ . . . ಮಳೆವೊನ್ಲುದಧಾರೆಯೊಗೆ ಕಾರ್ಗಾಲವೆಂದೊಲು ಮೈಮೆವಡೆದಿರ್ದ ಮತ್ತಮಾತಂಗವಿಟ್ಟಳಿಸಿದ ಜನಂಗಳಂ ತೂಳ್ದು ನೀಳ್ದ್ದಿದಿ ವಿಸಟಿಂಬರಿದು ಬರುತಿರ್ದುದು (ಸೌಂದಭ. ೩–೧೪). [ನಿಡು (<ನಿಡಿದು$_1$)+ನಿಗ್ಗವ]

ನಿಡುನಿದ್ದೆ (ನಾ). ೧. ಹೆಚ್ಚುಹೊತ್ತು ಮಾಡುವ ನಿದ್ರೆ ; ಗಾಢ ನಿದ್ರೆ : ನಿಡುನಿದ್ದೆಯಲ್ಲಿ ಗುಹೆಯೊಳಗೆ ಮೆಯ್ಮಱೆದಿರ್ದ ಕಡುಗಲಿ ಮೃಗಾಧೀಶನಾಡುವೊಲನಂ ಬಿಗಗಳೊಡಗೂಡಿಯುಲುಹುಮಾಡುವ ತೆಱದಿನೆನ್ನ ಮಜವೆಯೊಳಿನಗೆಯಾಳ್ವಿನನು ಬಿಡದೆ ಮಾಡುವರು (ಸಮ್ಮೇ. ೨–೬) ; ನನ್ನ ನಿಡುನಿದ್ದೆ ಮುಗಿದು, ಎಚ್ಚರವಾಗುವಾಗ ಅವಳಂತು ಜಾವದಿಯಲ್ಲಿರಲಿಲ್ಲ (ಮೂಕಜ್ಜಿ. ೨೩೪). ೨. (ಆಲಂ) ದೀರ್ಘನಿದ್ರೆ ; ಸಾವು ; ಮರಣ : ಅರಸಾ ನಿನ್ನ ಸುಹೃದ್ಭೂವರಜಯತರುಣಿಯವಗೆ ನಿಡುನಿದ್ದೆಯನೊದವಿಸಿ ಛರದಿಂ ಬರ್ಪನೆನುತುಮೆನ್ನಂ ನಿನ್ನೆಡೆಗಟ್ಟದಳ್ (ಜಯಾಕ. ೬–೯). [ನಿಡು (<ನಿಡಿದು$_1$)+ನಿದ್ರೆ]

ನಿಡುನಿದ್ರೆ (ನಾ). ೧. =ನಿಡುನಿದ್ದೆ ೨ : 'ನಿಡುನಿದ್ರೆಗೈಸು' ಪರಾ. ೨. ನಾಶ ; ಅಂತ್ಯ : ಜಗದ ನಿಡುನಿದ್ರೆಯಲಿ ಮೋಹರದೆಗೆದ ಮುಗಿಲೋ ಮೇಣಖಿಳಕುಲದಿಗಿಭವೆಂಟೊಂದಾಯ್ತೊ ಕೈಕಾಳ್ ಮೂರಿತೋ ನಭಳೆ (ಕುಮ್ಮಾದ್ರೋ. ೬–೯).

[ನಿಡು(<ನಿಡಿದು$_1$)+ನಿದ್ರೆ]

ನಿಡುನಿದ್ರೆಗೈಸು (ಕ್ರಿ). ೧. (ಆಲಂ) ವಧಿಸು ; ಸಾಯಿಸು ; ಕೊಲ್ಲು : ಕೃಷ್ಣದುಮ್ಮನ ಸರಮನೆಗಾಗಿ ಚಹಿಲದಲಿ ಬಂದು ಬಾಗಿಲ ಮುಂದೆ ಬಾಹಿನ ಮುಂದಿಯನು ನಿಡುನಿದ್ರೆಗೈಸಿದನು (ಕುಮ್ಮಾಗ.೯–೨೭). ೨. ನಿಷ್ಕ್ರಿಯಗೊಳಿಸು : ನಿದ್ರೆಗೈವನೊಲಂ ಧರ್ಮಾಜ ತೊಟ್ಟ

ನೆಂದಡೆ ಕರಣವನು ನಿಡುನಿದ್ರೆಗೈಸಿ ನಿಜಾನುಭವದಲಿ ನಿಂದ ವರಯೋಗಿ (ನಿಘಾಗ. ೬-೧೫-೨೬).

[ನಿಡುನಿದ್ರೆ + ಕೈಸು (< ಕೆಯ್ಸು)]

ನಿಡುನೀಳ್ (ಕ್ರಿ). ಉದ್ದವಾಗಿ ಇಳಿಬೀಳು,—ಜೋಲುಬೀಳು : ನಿಡುನೀಳ್ದ ಸೆಜಗ ಸಾಗಿಸುತೊಮ್ಮೆ ಕೈಲಾಗುಗೊಡುತ ಮುಂದವಧಾನವೆಂದು ನುಡಿಯುತ ತಂದೆಯ ಹಿಂದುಮುಂದೆಡಬಲವಿಡಿದು ಕುಮಾರರೆಯ್ದಿದರು (ಭರತ. ೪೫-೬೧). [< ನಿಡಿದು$_2$ + ನೀಳ್]

ನಿಡುನೆನಪು (ನಾ). "ಬಹುಕಾಲ ಮರೆಯದಿರುವ ಜ್ಞಾಪಕ ಶಕ್ತಿ; ನಿಡುನೆನಪು" (Long-memory. ಇಂಕನಿ).

[ನಿಡು(< ನಿಡಿದು$_1$) + ನೆನಪು]

ನಿಡುನೇಜೆಯ (ನಾ). ಉದ್ದವಾದ ಬರ್ಜಿ; ದೊಡ್ಡ ಈಟಿ : ನಿಡುನೇಜೆ[ಪಾಠಾಂ. ಜೆ]ಯದಿನದೊರ್ವಂ ಜಡಿದಿಱೊದ್ತಿದೊಡೆ ಮತ್ತವಂ ಕರವಾಳಿಂ ಪೊಡೆದಂ (ರಾಜಶೇ. ೬-೬೪).

[ನಿಡು (< ನಿಡಿದು$_1$) + ನೇಜೆಯ(< ನೇಜಯ)]

ನಿಡುನೇಣ್(ನಾ). ಉದ್ದವಾದ ಹಗ್ಗ; ನಿಡಿದಾದ ಪಾಶ : ಅಂ ನಿನ್ನಂ ತೆಗೆದು ಬಾಟಾಪ್ಪೆನೆನಗೆ ರಸಮಂ ಮೊಗೆದು ಕುಡೆಂದು ನಿಡುನೇಣಂ ಪಲವುಂ ಸೋರೆಗಳುಮಂ ತಂದು ತೀವಿಸಿ (ಪಡ್ಡಾರಾ. ೧೮೭-೧೭).

[ನಿಡು (< ನಿಡಿದು$_1$) + ನೇಣ್$_1$]

ನಿಡುನೊಗ (ನಾ). ದೊಡ್ಡ ನೊಗ : ಕಡಿಯಣವನಾನೆಗಳ ಮೋಱೆಗೆ ತೊಡಸಿದರು ದಂತಿಗಳ ಹೆಗಲಲಿ ನಿಡುನೊಗನ ಕಟ್ಟಿದರು (ಕುಮಾದ್ರೋ. ೮-೪೫). [ನಿಡು (< ನಿಡಿದು$_1$) + ನೊಗ]

ನಿಡುನೋಟ (ನಾ). ೧. ಒಂದೇ ಸಮನೆ ನೋಡುವ ದೃಷ್ಟಿ; ನೆಟ್ಟ ನೋಟ : ಅರಸುಗಳ ನಿಡುನೋಟವಲ್ಲಿಯ ಗರುವೆಯರ ನಸುನೋಟ ತಮ್ಮೊಳು ಬೆರಸಿ ಹೊಯ್ದಾಡಿದವು ಖಾಡಾಖಾಡಿಯಂದದಲಿ (ಕುಮಾಅ. ೧೩-೪೪). ೨. (ಆಲಂ) ದೂರಾಲೋಚನೆ; ದೂರದೃಷ್ಟಿ : ಹಲವರಂತೆ ತನ್ನ ಭವಿಷ್ಯದ ಕಡೆಗೆ ನಿಡುನೋಟ ಚಾಚಿದವನಲ್ಲ (ಚಿಗುಳಿ.೬).

[ನಿಡು (< ನಿಡಿದು$_1$) + ನೋಟ]

ನಿಡುಪಗೆ 'ನಿಡುವಗೆ' ನೋ.

ನಿಡುಪಚ್ಚಳ (ನಾ). ದೊಡ್ಡ ಪಿರ್ರೆ,—ಹಿಂಭಾಗ; ಬಾಲದ ವಿಸ್ತಾರವಾದ ಬುಡ : ಕೂರಂಬಿನಲಿ ಕೋದನು ಗಜದ ಮಸ್ತಕವ ನಿಲುಕಿ ನೆತ್ತಿಯನೊಡೆದು ನಿಡುಪಚ್ಚಳಕೆ ಹಾಯ್ದವು ಬಾಣ (ಕುಮಾದ್ರೋ. ೩-೭೪). [ನಿಡು (< ನಿಡಿದು$_1$) + ಪಚ್ಚಳ]

ನಿಡುಪತಾಕೆ (ನಾ). (ಎತ್ತರದಲ್ಲಿರುವ) ದೊಡ್ಡ ಬಾವುಟ,—ಧ್ವಜ : ಗಗನದೊಳಿಡಿದ ಸತ್ತಿಗೆಯ ಮುತ್ತಿಗೆಯ ಢಾಳಿಸುವ ಚಮರಂಗಳ ನಿಡುಪತಾಕೆಯ ವಿವಿಧ ಧಾತುಗಳ ಕೇತುಗಳ . . . ಭೂರಿಗಳ ಪದಪಿಂದೆ ಪಡೆ ನಡೆದುದು (ಜೈಮಿಭಾ. ೨೦-೩೩).

[ನಿಡು (< ನಿಡಿದು$_1$) + ಪತಾಕೆ]

ನಿಡುಪನೆ (ನಾ). ಉದ್ದವಾದ ಕೋರೆ ಹಲ್ಲು; ದೊಡ್ಡದಂತ : ತಲೆಯೊಲೆದು, ಸೊಂಡಿಲಂ ತೊನೆದು, ನಿಡುಪನೆಗಳಂ ತೂಗಿ, ಮೊರಗಿವಿಗಳಂ ಬೀಸಿ, ಘೀಳಿಟ್ಟೊಡನೆ ಮುನ್ನುಗ್ಗಿ ಹೋರಾಡಲನುವಾದುದಾ ಹೋರಿಹೇರಾನೆ (ಶ್ರೀರಾಮಾ. ೪೫೮-೩೫೭).

[ನಿಡು (< ನಿಡಿದು$_1$) + ಪನೆ$_2$]

ನಿಡುಪು$_1$ (ನಾ). ದೀರ್ಘತೆ; ಗಾಢತೆ : ಮುಖೇಂದು ಬಿಗುರ್ತಿರೆ ಸುಯ್ಯ ಬೆಂಕೆಯುಂ ನಿಡುಪ[-ಪು]ಮಳುಂಬಮಪ್ಪಿನೆಗಮಿಾಶನದೆಲ್ಲಿದನೆತ್ತ ಪೋದನಾವೆಡೆಯನಧೀಶನೆಂದು ಪಲವಾಡಿದರಂದಜಿತಾಂಗನಾಜನಂ (ಅಜಿಪು. ೬-೧೨೧); ಸುಯ್ಯ ನಿಡುಪು[ಪಾಠಾಂ. ಕ]ಡುಗದಿರೆಯುಂ ಮೆಯ್ಯರೆ ಮುಟ್ಟದೆಯುಮಿಂತು ಸಂದಂದಿನಿಬರ್ ಬಯ್ಯಲೆ ಪೊಯ್ಯಲೆ ಕುರುಳಂ ಕೊಯ್ಯಲೆ ಪೋಯ್ತಿಂತು ವಿನಯವತಿಗಂ ಪತಿಗಂ (ಕಾವ್ಯಾವ. ೩೧೧).

[ನಿಡು (< ನಿಡಿದು$_1$) + -ಪು$_2$]

ನಿಡುಪು$_2$ (ನಾ). (?) : ಜಡಿವ ಗುಳ ರೆಂಚೆಗಳ ಘಂಟೆಯ ತೊಡಪುಗಳ ನಿಡುಪುಗಳ ಶುಂಡಿಲ ಕಡುಶಿಲೆಯ ದಡಿವಲೆಯ ಮಿಂಚುವ ಕೊಂಬುಗತ್ತಿಗಳ ಕುಡಿಹದದ ಕಡುಮದದ ಕರಿಗಳು . . . ನಡೆದವು ಪದ್ಮಸಂಖ್ಯೆಯಲಿ (ಅಂಬಿಕಾ. ೪೦-೯). [?]

ನಿಡುಪುರ್ಬು 'ನಿಡುವುರ್ವು' ನೋ.

ನಿಡುಪುರ್ವು 'ನಿಡುವುರ್ವು' ನೋ.

ನಿಡುಪೊಂಗು (ಕ್ರಿ). ದಪ್ಪವಾಗಿ ಊದು; ಅತಿಯಾಗಿ ಬಾತುಕೊಳ್ಳು : ತೊಡೆದು ತಿಲತೈಲಮಂ ಕರಪು(ವು)ಡಿ ಸಾಸಿವೆ ಲೋಯಿಸರದ ತಿರುಳಿಂದಿವನಿಟ್ಟಡಸಿ ಬಿಗಿತಾಗಿ ಕಟ್ಟಲ್ ನಿಡುಪೊಂಗುಡಿದರ್ಕೆಯ್ಗೆ ಭಂಗಂಬಡುಗುಂ (ಲೋಕೋಪ. ೯-೧೩೨); "ಮುಱಿದ ಕೆಯ್ಗೆ—ಆ ಠಾವಿಂಗೆ ಎಳ್ಳೆಣ್ಣೆಯಂ ತೊಡೆದು ಸಾಸಿವೆಯ ಚೂರ್ಣಂ, ಲೋಯಿಸರದ ತಿರುಳ್ ಈ ಎರಡುಮಂ ಇಕ್ಕಿ ಬಿಗಿತಾಗಿ ಕಟ್ಟಲ್ ಸತ್ವವಿಲ್ಲದಿರ್ದ ಕೈಗೆ ಸತ್ವವಪ್ಪುದು" (ಲೋಕೋಪ. ಟೀಕೆ).

[< ನಿಡಿದು$_2$ + ಪೊಂಗು$_1$]

ನಿಡುಪೊಳ್ತು 'ನಿಡುಪೊಟ್ಟು' ನೋ.

ನಿಡುಪೊಳ್ತುಗಳೆ (ಕ್ರಿ). ದೀರ್ಘಕಾಲವನ್ನು ಕಳೆ; ಬಹಳ ಹೊತ್ತನ್ನು ತಳ್ಳು : ತಾವೆಲ್ಲಿ ನೆಲಸಿರ್ಪರವರೆನಲ್ ಪೇಳಿದರ್ ಭಾವದಿಂದಿಲ್ಲಿಯೇ ನಿಡುಪೊಳ್ತುಗಳೆದವರ್ ಬೇಗದಿಂದೀಗ ಮನೆಗೆಯ್ದಿದರ್ ತಾವೆನಲ್ (ತಿವಸಂ. ೯-೬೯).

[ನಿಡುಪೊಳ್ತು (< ನಿಡುಪೊಟ್ಟು) + ಕಳೆ$_1$]

ನಿಡುಪೊಟ್ಟು, ನಿಡುಪೊಳ್ತು (ನಾ). ಹೆಚ್ಚುಹೊತ್ತು; ಬಹಳ ಕಾಲ : ನೇಸಱೊಡನಾ ಕೌರವನ್ ಮುಟುಗೆ, ನಿಡುಪೊಟ್ಟು ಪಕ್ಕದೊಳ್ ಕುಳ್ತು (ಅಶ್ವತ್ಥಾ. ೨-೩೩). **ನಿಡುಪೊಳ್ತು** : 'ನಿಡುಪೊಳ್ತುಗಳೆ' ಪರಾ. [ನಿಡು(< ನಿಡಿದು$_1$) + ಪೊಟ್ಟು]

ನಿಡುಬತ್ತಳಿಕೆ (ನಾ). ದೊಡ್ಡ ಮೂಡಿಗೆ,—ಬತ್ತಳಿಕೆ : ಪೊಳೆವಂಬುಬೆನ್ನ ನಿಡುಬತ್ತಳಿಕೆ ವಿರಾಜಿಸೆ ಪುಳಿಂದನಂದೊಳಪೊಕ್ಕಂ (ರಾಜಶೇ. ೫-೨೪).

[ನಿಡು(< ನಿಡಿದು$_1$) + ಬತ್ತಳಿಕೆ(< ಪತ್ತಳಿಕೆ$_1$)]

ನಿಡುಬತ್ತಿ (ನಾ). (ದೀಪದ) ಉದ್ದವಾದ ಬತ್ತಿ; ನೀಳವಾದ ಬತ್ತಿ : ತೆಗೆತೆಗೆದು ಹೊತ್ತಿಸಿದ ನಿಡುಬತ್ತಿಗಳ ತೆಱದಲಿಯಲಗುವೆಳಗುಱೆ ಝಗಝಗಿಸಿ ಧಾನುಷ್ಕಹಸ್ತದೊಲೆಸೆದವಂಬುಗಳು (ತಿಮ್ಮಅ. ೬-೪೦).

[ನಿಡು(< ನಿಡಿದು$_1$) + ಬತ್ತಿ]

ನಿಡುಬಯ್ತಲೆ (ನಾ). ಉದ್ದವಾದ ಬೈತಲೆ; ನೀಳವಾದ ಬೈತಲೆ : ಚೆನ್ನಪೊಂಗರ ಕುಡಿ ಮುಂಜೆಱಂಗು ನಿಡುಬಯ್ತಲೆ [ಪಾಠಾಂ. ಬೈತಲೆ] ಬಾರ್ತೆಯೆ (ಅನಂಪು. ೮-೪೯); (ಸೂಕ್ತಿಸು. ೮-೩೬೭ ನೋ).

[ನಿಡು(< ನಿಡಿದು$_1$) + ಬಯ್ತಲೆ]

ನಿಡುಬವಣೆ (ನಾ). ಸತತವಾದ ತಿರುಗಾಟ; ನಿರಂತರವಾದ ಚಲನೆ : ಮೊಗಮುಂ ಮೆಯ್ಯುಂ ಪೊಗರುಂ ಮಿಗೆ ಸೊಗಸಂ ಪಡೆಯೆ ಕಂಡು ಕಳವಳದಿಂದನ್ನೆಗಮಿಂದುಕಾಮಸೂರ್ಯರ್ ಜಗುಟ್ಟರ್ ಕಱೆ ರೂಪುಗೇಡು ನಿಡುಬವಣೆಗಳಿಂ (ಚಕವಿ. ೩-೧೦).

[ನಿಡು(< ನಿಡಿದು$_1$) + ಬವಣೆ(< ಬವಣೆ)]

ನಿಡುಬವರಿ (ನಾ). ಮಲ್ಲಯುದ್ಧ ಮುಂತಾದುವುಗಳಲ್ಲಿ ದೀರ್ಘವಾಗಿ ಸುತ್ತುವ ಒಂದು ಬಗೆಯ ವರಸೆ,—ಚಲನೆ : ಪ್ಲವಗಗತಿ ಜಂಘಾಕ್ರಮಣ ನಿಡುಬವರಿ ಭಂಜನೆ ಲಾಗು ಲಳಿ ಲುಳಿ ತ್ರಿವಳಿ ವಂಚನೆ

ಯುತ್ಪತನ ಪತನಪ್ರಬಂಧದಲಿ ದಿವದರಸುಗಳ ಸೂನುಗಳು . . . ಕಾದಿದ ರುಳಿಚಿತ್ರದಲಿ (ತೊರರಾ. ೪-೪-೨೬). [ನಿಡು (<ನಿಡಿದು$_1$) + ಬವರಿ]

ನಿಡುಬಾವಿ (ನಾ). ಆಳವಾದ ಬಾವಿ ; ದೊಡ್ಡ ಬಾವಿ : ಪೊಸ ದುರ್ಗವಂ ಪಾಟಿಸಿ ಪಿರಿಯ ನಿಡುಬಾವಿಗಳನಗುಳಿಸಿದನದಱೊಳಗೆ (ಬಸಪು. ೧೬-೧೧). [ನಿಡು(<ನಿಡಿದು$_1$) + ಬಾವಿ]

ನಿಡುಬಾಸೆ 'ನಿಡುವಾಸೆ' ನೋ.

ನಿಡುಬಾಳು$_1$ (ಕ್ರಿ). ಬಹುಕಾಲದವರೆಗೆ ಬದುಕು,—ಜೀವಿಸು : ಶ್ರೀಜಯನ್ ನಿಡುಬಾಳಿ ನಮ್ಮನೊಲಿದಾಳ್ಗೆ ; ಕನ್ನಡಿಗರುಸಿರಾಗಿ ಕನ್ನಡಂ ಬಾಳ್ಗೆ (ಹೊಂಗಳು. ೩೮-೨೨).

[<ನಿಡಿದು$_2$ + ಬಾಳು$_1$(<ಬಾಳ್$_1$)]

ನಿಡುಬಾಳು$_2$ (ನಾ). ಬಹಳಕಾಲದ ಬದುಕು ; ದೀರ್ಘಾವಧಿಯ ಜೀವನ : ಶ್ರೀವಾದಿರಾಜರು ಹೀಗೆ ಸೂರಿಪ್ಪತ್ತುವರ್ಷಗಳ ಕಾಲ ನಿಡುಬಾಳನ್ನು ಬಾಳಿ ೧೬೦೦ರಲ್ಲಿ ಸಶರೀರರಾಗಿ ವೃಂದಾವನಪ್ರವೇಶ ಮಾಡಿದರು (ಜಗಧಾ. ೯೮). [ನಿಡು(<ನಿಡಿದು$_1$) + ಬಾಳು$_2$(<ಬಾಳ್$_2$)]

ನಿಡುಬಿಡುವು (ನಾ). ದೀರ್ಘಕಾಲದ ರಜೆ,—ಸೂಟಿ : ಬೇಸಗೆಯ ಬೇಗೆ, ಶಾಲೆ ಕಾಲೇಜುಗಳ ನಿಡುಬಿಡುವಿನ ಬೇಸರಗಳಿಂದ ಜೀವ ತೀರ ಬೇಸರಿಸಿದಾಗ ಮಳೆಗಾಲದ ಕಾರ್ಮೋಡಗಳು ಸುಳಿಯುತ್ತಲೆ . . . ಚೇತರಿಸಿಕೊಂಡೇಳುವುದು (ಮುಂಗಾಪು. ೩೨).

[ನಿಡು(<ನಿಡಿದು$_1$) + ಬಿಡುವು(<ಬಿಡು$_2$)]

ನಿಡುಬಿಲ್ (ನಾ). ಉದ್ದವಾದ ಬಿಲ್ಲು ; ದೊಡ್ಡ ಧನುಸ್ಸು. ನಿಡುಬಿಲ್ಬಾಗು = ದೊಡ್ಡ ಬಿಲ್ಲಿನಂತೆ ಬಗ್ಗು ; ದೊಡ್ಡ ಕಮಾನಿನಂತಾಗು : ನಿಡುಬಿಲ್ ಬಾಗಿದ ಬಾನ ಗೋಲಮನ್ ಬೆನ್ನೊಳಗಿನ್ನುಂ ನರಲುತೆ ಪೊಱುವನ್ (ಬದ್ಧಪ್ರ. ೨೩-೪೮೭).

[ನಿಡು(<ನಿಡಿದು$_1$) + ಬಿಲ್$_2$]

ನಿಡುಬೆನ್, ನಿಡುಬೆನ್ನು (ನಾ). ಉದ್ದವಾದ ಬೆನ್ನು; ನೀಳವಾದ ಹಿಂಭಾಗ : ನ[ಪಾಠಾಂ. ನ]ಡುಬೆನ್, ಉಡುಮೊಗಂ (ಭಾಷಾಭೂ. ೩೧ ಪ್ರಯೋ). **ನಿಡುಬೆನ್ನು** : ಆ ಮಂದಿರದಲ್ಲಿ ಸಭೆಗೆಂಬಂತೆ ನಿಡುಬೆನ್ನಿನ ಕೆತ್ತನೆಯ ಕುರ್ಚಿಗಳನ್ನು ಸಾಲಾಗಿ ಜೋಡಿಸಿತ್ತು (ಪುನರು. ೩೪೫). [ನಿಡು(<ನಿಡಿದು$_1$) + ಬೆನ್]

ನಿಡುಬೆನ್ನು 'ನಿಡುಬೆನ್' ನೋ.

ನಿಡುಬೆರಳು 'ನಿಡುವೆರಲ್' ನೋ.

ನಿಡುಬೇಸಱು (ನಾ). ಅತಿಯಾದ ಬೇಜಾರು,— ಬೇಸರ : ನಿಟ್ಟುಸಿರು ನಿಡುಬೇಸಱುನ ಕಡಲಿಟ್ಟೆಳಿವ ಕಂಬನಿಯ . . . ಗೋಳಿನಲಱಿಳ ಜನ ನಡೆತಂದುದರಮನೆಗೆ (ನಿಭಾಗ. ೪-೧೨-೫).

[ನಿಡು(<ನಿಡಿದು$_1$) + ಬೇಸಱು$_2$]

ನಿಡುಬೊಗರೆ (ನಾ). ದೊಡ್ಡ ಬುಗುರಿ : ಹರಿಯ ವರವರೂಥಮನೆತ್ತಿ ಕರಯುಗಳದಿಂ ನಭಕೆ ತಿರುಪಿಟ್ಟ ನಿಡುಬೊಗರೆಯಂತೆ (ಚಿಬಪು. ೨೫-೨೬).

[ನಿಡು(<ನಿಡಿದು$_1$) + ಬೊಗರೆ(<ಬೊಗರಿ)]

ನಿಡುಬೊಟ್ಟು (ನಾ). ದೊಡ್ಡ ಬೊಟ್ಟು : ನಿಡುಬೊಟ್ಟೆಸೆಯೆ ದರ್ಚೆ ಕರಮತಿಶಯದಿಂ ಬೆರಳೊಳ್ ರಂಜಿಸೆ ಕಾಶಾಂಬರಮೆಸೆದಿರೆ ಬಂದು ನಿಂದು ಭೂಸುರನೊರ್ವಂ . . . ವೇದರುಕ್ಕಂ ಪೇಟ್ಟುಕ್ಷತೆಯನೀವುದುಂ (ಧರ್ಮಾಮೃ. ೧೯-೯೫).

[ನಿಡು(<ನಿಡಿದು$_1$) + ಬೊಟ್ಟು$_2$(<ಬಟ್ಟು$_1$)]

ನಿಡುಬೊಬ್ಬೆ (ನಾ). ದೊಡ್ಡ ಕೂಗಾಟ; ಭಾರಿ ಗದ್ದಲ : ಕುಂದಲಾ ತಿವಳಕ್ತಿ ಲೋಕದೊಳೆಂದು ನಿಡುಬೊಬ್ಬೆಗಳನಿಡುತಾನಂದಿಸುತಾ ರುತ. (ಬಸಪು. ೩೨-೨೩). [ನಿಡು(<ನಿಡಿದು$_1$) + ಬೊಬ್ಬೆ$_1$]

ನಿಡುಭರಿಕೆಯ್ (ನಾ). ನೀಳವಾದ ಸೊಂಡಿಲು : ಕಡಿದ ಕದ್ದಾಳ ಕುಮ್ಮರಿಯಂತೆ ಕಂಸಾರಿಯಡಿಯಿಂದ ಮಡಿದ ಸರ್ಪಗಳ ಪಡೆಯಂತೆ ಮೆಱೆದುದು ಕಡಿವಡೆದಾನೆಯ ನಿಡುಭ[ಪಾಠಾಂ. ಡಿಬ]ರಿಕೆಯ್ಗಳಾಜಿಯೊಳು (ಕುರಾಪಾಂ. ೧೬-೬೦). [ನಿಡು(<ನಿಡಿದು$_1$) + ಭರಿಕೆಯ್]

ನಿಡುಮಗುಡ (ನಾ). ಭಾರಿಯಾದ ಕಿರೀಟ : ನಿಡುಮಗುಡಂ ತೆಱಂಬೊಳೆವ ಸುಣ್ಣಡೆ . . . ಪೊದಱ್ಚಿ ಕನ್ನಡಿಗದಪಂ ಮೊಗಂ ಕಱೆಗುಮೇಂಗಳ ಕಣ್ಗಳ ಮಂಗಳಂಗಳಂ (ಚಕವಿ. ೬-೮೮).

[ನಿಡು(<ನಿಡಿದು$_1$) + ಮಗುಡ]

ನಿಡುಮರ(ನಾ). ದೊಡ್ಡಮರ; ಹೆಮ್ಮರ : ನಿಡುಮರದ ತುದಿಗೋಡುಗಳೊಳ್ಕಟ್ಟಿದ ತೃಣಪುಲೀಚಹ್ನಂಗಳಿನಱಾಯಲಾದ ಕಾಡ ಪಱವಾವಿಗಳೊಳಂ (ಕಾದಂಬಿ. ೨೬೬) ; ಮೇಗೆಮೇಗುಬ್ಬೇಳ್ವ ಸುಯ್ಲಿನ ತಾಗುವಳ್ಳಿಯ ತೋಡ ಬೆಮರಿನ ಬಾಗುಗಳ ನಿ[ಪಾಠಾಂ. ಗಿ]ಡುಮರನ ಮಱೆಗಳಲಟ್ಟಿದನು ಮೃಗವ (ತೊರರಾ. ೬-೮-೫೨).

[ನಿಡು(<ನಿಡಿದು$_1$) + ಮರ$_1$]

ನಿಡುಮಾಲೆ (ನಾ). = ನಿಡುದಂಡೆ : ಇವನೆದೆಯೊಳಿಯದ ಭಾವಗಳು ಕರಿಗಲ್ಲಿನ ನಿಡುಮಾಲೆಗಳು ! (ಕವಿಕಾ. ೪೨-೮).

[ನಿಡು(<ನಿಡಿದು$_1$) + ಮಾಲೆ]

ನಿಡುಮಾಳ (ನಾ). ವಿಶಾಲವಾದ ಬಯಲು ; ವಿಸ್ತಾರವಾದ ಮೈದಾನ: ಎರಡೂರೆಡೆಯ(ಂ) ನಿಡುಮಾಳ(ಮ)ಂ ಪ್ರಾಂತರಮೆಂಬುದು (ಹಲಾಯು. ೪೩-೧೦೬) ; ನಿಡುಮಾಳಂ ಮುಂದೆ ನೀರಿಲ್ಲಣಮೆ ಮಗುಚ್ಚೊಡಂ ಪಿಂತಣೂರ್ಗೆಂಟು (ರಮಿದ. ೧೮೧ ಪ್ರಯೋ).

[ನಿಡು(<ನಿಡಿದು$_1$) + ಮಾಳ$_4$]

ನಿಡುಮಿಾನ್ (ನಾ). ಭಾರಿಯಾದ ಮೀನು ; ದೊಡ್ಡ ಮೀನು : ನೆಱೆನೆಗೆವ ನಿಡುಮೀನ್ಗಂಗಳಂ ನಿಳ್ಳಿ ನೋಡಿ ಳುಳುಳುಳಿಸಿ ಮೊಱೆವ ನೆವದಿಂ ಪಲ್ಮೊಱೆದು (ರಾಜಶೇ. ೨-೮ ಪ).

[ನಿಡು(<ನಿಡಿದು$_1$) + ಮೀನ್$_3$]

ನಿಡುಮುಗಿಲ್ (ನಾ). ದೊಡ್ಡ ಮೋಡ : ನಡೆವುವು ನಭಕ್ಕೆ ಮಿಂಡುವ ನಿಡುಮುಗಿಲಮರಿಯರ ಕಣ್ಣೆ ಕುಡಲೆಂದಗದೊಳ್ ಬಿಡದೋಡುವ ಬೇಚರಿಯರ ಕಡೆಗಣ್ಗಳ ಬೆಳಗನೇಱಾ ತೋಱುವ ತೆಱದಿಂ (ಅರ್ಧನೇ. ೨-೬೪). [ನಿಡು(<ನಿಡಿದು$_1$) + ಮುಗಿಲ್]

ನಿಡುಮುಡಿ (ನಾ). ೧. ಉದ್ದವಾದ ಜಡೆ,—ಹೆಳಲು : ನಿಡುಮುಡಿಯರಸಂಚೆನಡೆ ತಳರಿಡಿ ಬಟ್ಟದೊಡೆ ಬಡಬಾಸೆ ನುಣ್ದೋಳ್ಗಳ . . . ಜವ್ವನೆಯರೆಯ್ದುದರಾಗ (ತ್ರಿಭುತಿ. ೧೪-೧೯) ; ಎಡೆಯಾಡುವಂಗನೆಯರ ಪದಪಳಿರ್ಗೆಂಪು ಕೊಡಹಿದ ನಿಡುಮುಡಿಯಲರ ನಿಡುಗಂಪು . . . ತೀವಿ ಕೊಂಡಡಗಿಹುದಾ ಬೀದಿಯೊಳಗೆ (ಕಂಸವಿ. ೬-೯೬) ; ನಿಡುಮುಡಿಯಲರ ವಾಸನೆ ಕರಕಮಲದೆ ಪಿಡಿದ ಕಪ್ಪುರದ ವೀಳ್ಯಗಳ ಕಡುಪರಿಮಳ . . . ಬಿಡದೆ ದೆಸೆಯ ತುಂಬಿದುದು (ಕಂಸವಿ. ೨೧-೨೩). ೨. ನೀಳವಾದ ಜಟೆ,—ಜಡೆಗಟ್ಟಿದ ಕೂದಲು : ನಿಡುಮುಡಿಯೊಳು ರಂಜಿಸುವ ಹಸುಳೆವೆಱೆಯಂತೆ ವಿರಾಜಿಪ ಬೆಳಗೇರ್ದಗೆಯೆಸಳಂ . . . ದುರ್ಗಾಂಬಿಕೆಯಂತೊಪ್ಪಿದಳು (ಜಯಕಾ. ೨-೧೧).

[ನಿಡು(<ನಿಡಿದು$_1$) + ಮುಡಿ$_3$]

ನಿಡುಮುಸುಕು (ನಾ). (ಮುಖವನ್ನು ಮುಚ್ಚುವ) ದೊಡ್ಡ ಬಟ್ಟೆ,—ಮುಸುಕು : ಮೆಲ್ಲನೆಬ್ಬಿಸೆ ಸುಮ್ಮನಿರುತಮಿರೆ ನಿಡುಮುಸುಕ ನೋಸರಿಸೆ ದೇಹದುಸಿರಿಲ್ಲದಿರೆ (ಬಸರ. ೯-೧೫೦) ; ಸಿಡಿವ ತಲೆಗಳ ಬಳಿ ವಿಡಿದು ಧಾರಿಡುವ ರಕುತದಲೆರಡುಬಲದಲಿ ಹಿಡಿದ ದೀವಿಗೆ ನಂದಿದವು . . . ಸುಭಟರ ನಿಡುಮುಸುಕು ಮೋಹಿಸಿತು (ಕುವ್ಯಾದ್ರೋ. ೧೬-೧೭);

ಹೊತ್ತ ದುಗುಡದ ನಿಡುಮುಸುಕುಗಳ ಬಿಗಿದ ಬೆಜಗಿನ ಬಿಟ್ಟ ಕಣ್ಣುಗಳ ಒಡೆಯನಿದಿರಲಿ ಕುಳ್ಳಿರದೆ (ಕುಸ್ಯಾಕ. ೧-೧೮).

[ನಿಡು(<ನಿಡಿದು$_1$)+ಮುಸುಕು$_2$(<ಮುಸುಂಕು$_2$)]

ನಿಡುಮೂಗ (ನಾ). ಉದ್ದವಾದ ಮೂಗುಳ್ಳವನು ; ನೀಳವಾದ ಮೂಗುಳ್ಳವನು : ಹೆಟ್ಟಿಗಾಲಂ, ನಿಡುಮೂಗಂ, ಕುಸಿಗೊರಲಂ, ಸಪಟೆವಾಯಂ (ಶಮಿಪ. ೭೬ ಪ್ರಯೋ). [ನಿಡುಮೂಗು+-ಅ$_7$]

ನಿಡುಮೂಗಿ (ನಾ). ನೀಳವಾದ ಮೂಗಿರುವ ವ್ಯಕ್ತಿ : ಮೆಲ್ವಿನ್ನಣ, ಕಡುಗೇಡಿ, ನಿಡುಮೂಗಿ, ಹೆಟ್ಟಗಾಲಿ (ಶಮಿಪ. ೧೬೫ ಪ್ರಯೋ) ; ಕಡುಗೆಲಸಿ, ನಿಡುಮೂಗಿ, ಚಲವಾದಿ (ಶಮಿಪ. ೧೮೬ ಪ್ರಯೋ).

[ನಿಡುಮೂಗು+-ಇ$_3$]

ನಿಡುಮೂಗು(ನಾ). ಉದ್ದವಾದ ಮೂಗು ; ನೀಳವಾದ ನಾಸಿಕ : ಈ ನಿಡುಮೂಗನು ನಾನೇ ಬಯಸಿದೆ ಈ ಹಿರಿತಿವಿಯನು ನಾನೇ ಬಯಸಿದೆ (ಗಣೇಶ. ೫-೨೪) ; ಅವರೆಲ್ಲರಿಗಿಂತ ಅತ್ಯಂತಾಸಕ್ತಿ ವಹಿಸಿದ್ದವನೆಂದರೆ ಕುರುಗಡ್ಡದ ನಿಡುಮೂಗಿನ ಮಂದ್ರಧ್ವನಿಯ ಎತ್ತರದ ವ್ಯಕ್ತಿ (ಪುನರು.೩೦೧). [ನಿಡು(<ನಿಡಿದು$_1$)+ಮೂಗು$_1$]

ನಿಡುಮೂತಿ (ನಾ). ನೀಳವಾದ ಮೂತಿ,—ಮುಖ : ನಿಡುಮೂತಿಯ, ನೀಳಮೂಗಿನ (Snipy. ೩೦೪೫).

[ನಿಡು(<ನಿಡಿದು$_1$)+ಮೂತಿ]

ನಿಡುಮೆದೆ (ನಾ). ದೊಡ್ಡರಾಶಿ,—ಒಟ್ಟಲು : ಬೆಳ್ಳೆಯ ನಿಡುಮೆದೆ ಘನಸಾರಚೂರ್ಣದ ರಾಶಿಗಳೊಡನೆಸೆದವು ಚಪ್ಪರದೊಳು (ರಾಮವಿ.೭-೩೭).

[ನಿಡು(<ನಿಡಿದು$_1$)+ಮೆದೆ$_1$]

ನಿಡುಮೆಯ್ (ನಾ). =ನಿಡುವೊಡಲು : ಅಡದ ಮೆಯ್ಯಳಿಲ್ಲ ನಿಡುಮೆಯ್ಯಳುಮಾಡಿದುವಂತೆ ಮೆಟ್ಟುವಳ್ ನೋಡಿದರೆಲ್ಲರಂ ಪಿಡಿದು ಮೆಟ್ಟಿದಳ್ (ಪಂಪಭಾ. ೭-೧೧). [ನಿಡು(<ನಿಡಿದು$_1$)+ಮೆಯ್]

ನಿಡುಮೊಗ (ನಾ). ಉದ್ದವಾದ ಮುಖ ; ನೀಳವಾದ ಮುಖ. ನಿಡುಮೊಗದವಳ್=ನೀಳವಾದ ಮುಖವುಳ್ಳವಳು ; ಕೋಲುಮುಖದವಳು : ನಿಡುಮೊಗದವಳ್ ಕೃಷಾಕುರಿ ತುಡಲುಣಲಾಟಿಸುವಳೊಂದೆ ಕಾಲೊಳ್ ನಿಲುವಳ್ . . . ತನ್ನೇಷಮಧ್ಯಮದ್ರೇಕ್ಷಾಣಂ (ಜಾತಕ. ೧೯-೨). [ನಿಡು(<ನಿಡಿದು$_1$)+ಮೊಗ]

ನಿಡುಮೊಲೆ (ನಾ). ದೊಡ್ಡ ಮೊಲೆ ; ತೋರಸ್ತನ ; ಉದ್ದವಾದ ಮೊಲೆ : ಬಾಂದಳಕದರ್ದೇಳ್ವ ನಿಡುಮೊಲೆಗಳಿಂ ಬಲವನಪ್ಪಳಿಸಿದತ್ತಿರುತಿರುಗಿ ಬೀಸುತ್ತೆ ಯೋಜನಸ್ತನಿ ಕನಲ್ದಾಕ್ಷಣದೊಳು (ಜೈಮಿಭಾ. ೧೬-೩೬). [ನಿಡು(<ನಿಡಿದು$_1$)+ಮೊಲೆ$_1$]

ನಿಡುಮೋಹರ (ನಾ). ದೊಡ್ಡ ಗುಂಪು,—ಸಮೂಹ : ದೊರೆ ಮುಗಿಲು ತೆರೆಮುಗಿಲು ನಿಡುಮೋಹರದ ಮುಗಿಲು ಪ್ರರದ ಮುಗಿಲುಬ್ಬರದ ಝೂಡಿಯ ಹೋಡಿಗಳ ಜಂಗಳದ ಮುಗಿಲಿನಲಿ ತರಣಿ ತಿತಿತಾರಾಗ್ರಹಂಗಳ ಹರವು ನಿಂದುದು (ಹರಿಹಾ. ೪-೬-೫).

[ನಿಡು(<ನಿಡಿದು$_1$)+ಮೋಹರ$_1$]

ನಿಡುರೂಪು (ನಾ). ದೊಡ್ಡ ಆಕೃತಿ : ತೊಡೆ ಮಡ . . . ಬೆನ್ನು ನಡುಗಳನತ್ತಿತ್ತ ಮುರಿದು ಅಡಗಿಸುವರು ನಮಿರಿಸುವರು ಮೇಣದ ನಿಡುರೂಪೊ ಮೈಯೊಯೆಂಬಂತೆ (ಭರತ. ೬೬-೫೨).

[ನಿಡು(<ನಿಡಿದು$_1$)+ರೂಪು]

ನಿಡುವಕ್ಕರಿಕೆ (ನಾ). ದೊಡ್ಡ ಹಕ್ಕರಿಕೆ,—ಪಕ್ಕರೆ : ಮಲೆಯಾಳ ಜನಪದದ ಅರಸಿನಂತಿರೆ ಚೇರಮಯವೆನಲುರವಣಿಸಿ ನೂಕಿದರು ನಿಡುವಕ್ಕರಿಕೆಗಳ ಗರುವಾಯಿಗಳ ಘನಮದದ ಕೇಣಿಗಳ (ಕುಸ್ಯಾಭೂ. ೪-೫೧).

[ನಿಡು(<ನಿಡಿದು$_1$)+ಪಕ್ಕರಿಕೆ(<ಪಕ್ಕರಕ್ಕೆ)]

ನಿಡುವಗಲು (ನಾ). ದೀರ್ಘವಾದ ಹಗಲು : ನಿಡುವಗಲಿನ ಬೆಳಕಿನಲ್ಲಿ ನಡುನಿಶಿಬೆಳುದಿಂಗಳಲ್ಲಿ ಕರಿನಿಶಿಕತ್ತಲೆಗಳಲ್ಲಿ ಕೊಳನ ನೋಡುತೆ (ವಿಸೀಗೀ. ೬೬-೧). [ನಿಡು(<ನಿಡಿದು$_1$)+ಪಗಲು(<ಪಗಲ್)]

ನಿಡುವಗೆ, ನಿಡುಪಗೆ (ನಾ). ೧. ದೀರ್ಘಕಾಲದ ಶತ್ರು ; ಬದ್ಧದ್ವೇಷಿ : ನಿಡುವಗೆ ಸೈಪಿನಿಂದೆ ದೊರೆಕೊಂಡುದು (ಪಂಪಭಾ.೧೧-೧೪೨); ಪಗೆಗೆ ಮೊದಲಿಗನೆ ನಾಂ ನಿ[ಪಾಕಾಂ. ನಾಂಗಿ, ನಾನ]ಡುವಗೆ ಕೌರವನಂತದಕ್ಕೆ ನೀಮೆಲ್ಲಂ ದಾಯಿಗತನಮನಲ್ಲಿ ತೋಱಲ್ತಗದು (ಗದಾಯು.೬-೬೨). **ನಿಡುಪಗೆ : ೨.** ದೀರ್ಘಕಾಲದ ವೈರ ; ಬದ್ಧದ್ವೇಷ ; ಬಹುಕಾಲದ ಶತ್ರುತ್ವ : ತಂತಮ್ಮ ನಿಡುಪಗೆಗಳಸ್, ಕೆಳಗಳನ್, ಪೊರ್ದುಗೆಗಳನ್, ದೇವತೆಗಳನ್, ಮಿಗೆ ನಲಿಪ . . . ಪಲವಗೆಯ ಬಣ್ಣಗಳ್ ಸೂಚಿಸುವುದೇನೆಂದು ಕಲಿಸಿದೆನ್ ಅವರ್ಗೆ (ಪದ್ಮಪ್ರ. ೨೬-೫೫೭).

[ನಿಡು(<ನಿಡಿದು$_1$)+ಪಗೆ$_2$]

ನಿಡುವಚ್ಚೆ (ನಾ). ದೊಡ್ಡ ಹೆಚ್ಚೆ,—ದಾಪು : (ನಿಡುವಚ್ಚೆಗಳಿಂದ ಮುನ್ನುಗ್ಗಿ, ಚೆಲ್ಲಮ್ಮನ ಕೆಟ್ಟದಿರಲ್ಲಿ ನಿಂತು,) (ಬೆಟ್ಟಅ. ೧೨-೪).

[ನಿಡು(<ನಿಡಿದು$_1$)+ಪಚ್ಚೆ]

ನಿಡುವಟ್ಟೆ (ನಾ). ನಿಡಿದಾದ ದಾರಿ ; ದೀರ್ಘವಾದ ಮಾರ್ಗ : ಸಂಪಾತಿ ತಾಂ ಕುಳ್ತು, ತಾಪದ ವಿಮೋಚನದ ನಿಡುವಟ್ಟೆಯಂ ನೋಡುತಿರ್ದನ್ (ತ್ರೀರಾಮಾ. ೩೩೩-೪೩).

[ನಿಡು(<ನಿಡಿದು$_1$)+ಬಟ್ಟೆ$_1$]

ನಿಡುವಣೆ, ನಿಡುಹಣೆ (ನಾ). ಅಗಲವಾದ ಹಣೆ ; ವಿಶಾಲವಾದ ನೊಸಲು: 'ನಿಡುವಣೆಯ' ಪರಾ. **ನಿಡುಹಣೆ :** ಚಂದ್ರಬಿಂಬದ ಮೇಲೆ ಕಂದು ಕಾಣುತಲಿಹುದು ; ಕಂದ ಮುದ್ದನ ಅಚ್ಚ ನಿಡುಹಣೆಗೆ ಹೋ ; ಕಂದ ಮುದ್ದನ ಅಚ್ಚ ನಿಡುಹಣೆಗೆ ತಾಯ್ ತರಳೆ ಚಂದದಿಂ ಬೊಟ್ಟಿಟ್ಟ ಕತ್ತುರಿಗೆ ಹೋ ! (ಕಏಪು. ೪-೨).

[ನಿಡು(<ನಿಡಿದು$_1$)+ಪಣೆ$_2$]

ನಿಡುವಣೆಯ (ನಾ). ಅಗಲವಾದ ಹಣೆಯುಳ್ಳವನು ; ವಿಶಾಲವಾದ ನೊಸಲುಳ್ಳವನು : ನಿಡುವಣೆಯಂ, ನುಣ್ಣೊಡೆಯಳ್ . . . ನಿಡುಜಡೆಯಳ್, ಪೆಜ್ಜಿವಣೆಯಳ್ (ಶಬ್ದಾನು. ೩೨೮ ಪ್ರಯೋ).

[ನಿಡುವಣೆ+-ಅ$_7$]

ನಿಡುವಯಣ (ನಾ). ದೀರ್ಘವಾದ ಪ್ರಯಾಣ : ನಿಡುದೋಳ್, ನಿಡುವಯಣಂ, ಸಡುಸೆಜಂಗು (ಶಮಿಪ. ೧೮೧ ಪ್ರಯೋ) ; ಪೆಡಸಾರ್ದ ಚೆನ್ನಬಸವಂ ನೆಲೆವಿಡಿದಂ ಪಡಿಬರಿಸಿದ ಕೊಪುಖಾನಂ ನಿಡುವಯಣಂ ಪೋದಂ (ಅಪ್ರತಿ.೩-೯೦ ಪ) ; ಏಗೆಯ್ವೆನೆನುತೆ ವಿಚಾರದಿಂ ಅಪ್ಪುದಪ್ಪುದು ನಿಡುವಯಣಂ ಇರ್ಕೆ ರಾಘವಂ ಪೇಟ್ಟಂ ಅಲ್ಲದೊಡೆ ತಾಂ ತಮಗೆ ನೆಲೆಗೆಯ್ವರ್ (ರಾಮಾಶ್ವ. ೨೬-೨೯). [ನಿಡು(<ನಿಡಿದು$_1$)+ಪಯಣ]

ನಿಡುವರಿ (ನಾ). ವೇಗದಿಂದ ಕೂಡಿದ ಗತಿ,—ಚಲನೆ; ನಿಟ್ಟೋಟ: ಮದಗಜದ ನಿಡುವರಿಯ ತೇರಿನ ಕುದುರೆಕಾಜರ ಕಾಹಿನಲಿ ಕೊಟ್ಟಿದುದು ನಿಬ್ಬರವಾಗಿ ಬಹುವಿಧವಾದ್ಯನಿರ್ಘೋಷ (ಕುಸ್ಯಾದ್ರೋ. ೨-೬೮) ; ನಿಡುವರಿಯ ಗಜ ತೂಳಿದವು ತೋಳಿನ ಬಾಳ ಹೊಯ್ಲಿನಲಿ (ಹರಿಹಾ. ೩-೬-೧೫). [ನಿಡು(<ನಿಡಿದು$_1$)+ಪರಿ$_3$]

ನಿಡುವಲ್, ನಿಡುಹಲ್ಲು (ನಾ). ೧. ನೀಳವಾದ ಹಲ್ಲು. ೨. ಆನೆಯ ಉದ್ದವಾದ ಕೋರೆದಾಡೆ,—ದಂತ : ಘನಕರಿಘಟೆಗಳ್ . . . ಪೆಟ್ಟುವೆಟ್ಟಿ ನಿಮಿರ್ದ ನಿಡುವಲ್ ಬೆಳಗೆ, ತುಂಬಿಕೆಯೊಳಿಂಬುಗೊಂಡ ತುಂಬುನೀರಂ ಪೂತ್ಕರಿಸಿದಪುವೆಂಬಂತಿರೆ ಎಡೆಬಿಡದೆ ಬಲ್ಸರಿಸುರಿಯೆ ಮಟ್ಟಿಗಾಲಂ ಚೆಲ್ವಾಯ್ತು (ರಾಮಾಶ್ವ.೩-೧೦). **ನಿಡುಹಲ್ಲು:** ೧. ಕತ್ತೆಯ ರೂಪಿನಂ . . . ಪರಿದು ಬಹ ಭರಕಿತ್ತರೆದ ಪೆರ್ಮಾರಗಳವು

ಬುಡಗೆಡೆಯೆ ಬಾಯನು ತೆಱೆದು ನಿಡುಹಲ್ಲುಗಳ ತೋಱುತಲಿದಿರೆ ನಡೆ ತರಲು (ಸಾಳ್ವಭಾ. ೨೧-೫೮). [ನಿಡು(<ನಿಡಿದು$_1$)+ಪಲ್]

ನಿಡುವಲಗೆ (ನಾ). ದೊಡ್ಡ ಹರಿಗೆ,—ಗುರಾಣಿ : ಪಿಡಿದ ಪೆರ್ಬಾಳ ನಿಡುವಲಗೆಯ ತುಡುಕಿ ಗಗನವನಲೆವ ಮೌಳಿಗಳ ಚಲ್ಲಣದ ಕುಡಿಯ ತೊಂಗಲ ಹಲವು ವಿಧದ ನಾನಾಧ್ವಾನವಿಡಿದ ಗರ್ಜನೆಯ ರಕ್ಕಸಭೂತ ವೇತಾಳರಮೃತಮಂ ಕಾದಿರ್ದರು (ಸಿದ್ಧರಾ. ೬-೪೪).

[ನಿಡು(<ನಿಡಿದು$_1$)+ಪಲಗೆ]

ನಿಡುವಲೆ, ನಿಡಿವಲೆ (ನಾ). ಒಂದು ಬಗೆಯ ದೊಡ್ಡ ಬಲೆ : ತಡಿಕೆವಲೆ . . . ನಡುವಲೆ ತಡೆವಲೆ ಸಿಡಿವಲೆ ನಿಡುವಲೆಗಳೊಪ್ಪಿದವು ಲುಬ್ಧಕರೊಳ್ (ಗಿರಿಕ. ೧-೮೦); ಇಡುವಲೆ ಸಿಡಿವಲೆ. . . ಕಕ್ಕಡವಲೆ ನಿಡುವಲೆ ಸಾಲ್ವಲೆ ಬಿಡುವಲೆಗಳೆನಿಪ್ಪುವೆಸೆದುವಾ ಬೇಂಟೆಗರೊಳ್ (ಕಬಸಂ. ೩-೨೪). **ನಿಡಿವಲೆ :** ಕೋಲುವಲೆಗಳ ಸಿಡಿವಲೆಯ ನಿ[ಪಾಠಾಂ. ಮಿ]ಡಿವಲೆಯ . . . ಬೇಟೆಗಾಱರು ಬಳಸಿದರು ಶಿವನ (ಕುಮಾಅ. ೫-೩೩); ನಿಡಿವಲೆ ಪಾಶಿ ಬೆಳ್ಳಾರ ಬಡಿವಲೆ ಬಲುವಲೆಗಾಱರು ಕೂಗಿ ಬೊಬ್ಬಿಡುತಲ್ಬೆದಿದರು (ಮೋಕಶ. ೧೯-೧೬).

[ನಿಡು(<ನಿಡಿದು$_1$)+ಬಲೆ$_1$]

ನಿಡುವಳ್ಳಿ (ನಾ). ದೊಡ್ಡ ಹಳ್ಳಿ : ನಡುವಣ ಖಂಡದೊಳಿಪ್ಪತ್ತ ನಾಲ್ಕೋಟಿ ನಿಡುವಳ್ಳಿಗಳನಾಯ್ದು ಕೊಟ್ಟು ಅಡಿಗಡಿಗವರ ಸೇವೆಯ ಮಾಳ್ಪುದೆಂದವರೊಡೆಯರ್ಗೆ ನೇಮಿಸಿ ಬಿಟ್ಟ (ಭರಜ. ೪೪-೨೬).

[ನಿಡು(<ನಿಡಿದು$_1$)+ಪಳ್ಳಿ$_1$]

ನಿಡುವಾನಿ (ನಾ). ಒಂದು ಸ್ಥಳದ ಹೆಸರು : ನಿಡುವಾನಿಯ ತುಱುಗೋಳೊಳ್ ಬಿದಿರ್ಹಕದ ಏಱಗಾವುಣ್ಣನ ತಮ್ಮ ಕೆಣ್ಣ (ಎಕ. XV, ಹೊಳೆನ. ೧೨೯-೩, 970). [?]

ನಿಡುವಾಯಿದೆ (ನಾ). ಬಹಳ ಕಾಲದ ಗಡುವು ; ದೀರ್ಘಕಾಲಾವಧಿ : ಡಿಪಾಸಿಟ್ (ಪುದುವಟ್ಟು ಅಥವಾ ಠೇವಣಿ) ಲೆಕ್ಕ ಎರಡು ಬಗೆಯಾಗಿ ಇರಬಲ್ಲದು : ಒಂದು ನಿಡುವಾಯಿದೆ (ಗಟ್ಟು) ಡಿಪಾಸಿಟ್ಟು ; ಇನ್ನೊಂದು ಕಿರುವಾಯಿದೆ (ಚಾಲ್ತಿ) ಡಿಪಾಸಿಟ್ಟು (ಹಣಪ್ರ. ೩೩); ಇನ್ನೊಂದು ಬೇಂಕಿನವರು . . . ನಿಡುವಾಯಿದೆಯ ಸಾಲ ಒದಗಿಸಿದರು (ಅಪೂಸ. ೭). [ನಿಡು(<ನಿಡಿದು$_1$)+ವಾಯಿದೆ]

ನಿಡುವಾಸೆ, ನಿಡಿವಾಸೆ, ನಿಡುಬಾಸೆ (ನಾ). ಹೆಂಗಸರ ಹೊಟ್ಟೆಯ ಮೇಲೆ ಸಾಲಾಗಿರುವ ಕೂದಲು,—ರೋಮರೇಖೆ : ತೆರೆದೋಳ್ ನ್ನೆತ್ತಿ ಕಶೆಗೊಂಡು ಪೊಡೆವಂತೆ ತಳ್ತು ಪಾಯ್ವ ನಿಡುವಾಸೆಯಿಂ ರಂಜಿಸಿ ನೀರಾಟಕೆಳಸಿ (ರಾಜಶೇ. ೨-೮ ಪ). **ನಿಡಿವಾಸೆ:** ನೇರ್ಪುವಟ್ಟ ನಿಡಿವಾಸೆಯ ಳ್ಪರ್ದೆಗರೇಯಾಸೆ ಕಟ್ಟಿನಿವಾಸು ವಿಟರ್ಗೆ ಕೇತು (ಉದ್ಭಟೇ. ೫-೧೮). **ನಿಡುಬಾಸೆ :** ಕಂಬುಗೊರಳ ಬಲ್ಮೊಲೆಗಳಸಿಯ ನಡುಗಿಂಬಾದ ನಿಡುಬಾಸೆಗಳ ಪೊಂಬಣ್ಣವೆಟ್ಟದಂತೆಸೆವ ಜಘನಗಳ ಪೊಂಬಾಳೆದೊಡೆಯವರೆಸೆಯೆ (ಜೀವಂಸಾಂ. ೧೯-೮೨); ಶಿವಜ್ಞಾನದೀಪದ ಕುಡಿಯೊಳಮರ್ದ ಧೂಮಚ್ಛವಿಯೊಯೆಂದೆನಲ್ ಕಪ್ಪಡರ್ದ ನಿಡುಬಾಸೆ ಕಣ್ಗೆಸೆದುದು (ಚೆಪು. ೪-೧೨). [ನಿಡು(<ನಿಡಿದು$_1$)+ಬಾಸೆ$_1$]

ನಿಡುವಾಳ್ (ನಾ). ಉದ್ದವಾದ ಕತ್ತಿ ; ನೀಳವಾದ ಖಡ್ಗ : ಮಡದಿ ಗಂಡನ ಕಾಣುತೇಳುತಲಿ . . . ನಿಡುವಾಳ್ಮ[ಳ]ತ್ತಪರವಾಂತು ಕಡುಜವದಿ ಬೆನ್ನಟ್ಟಿದಳು (ಸಾಳ್ವಭಾ. ೧೬-೩೩); ಮಾರನ ತರಿದ ನಿಡುವಾಳೊ ನಾಸಿಕವೊ ನೋಡ ! (ಗೊಲ್ಲಾಥಾ. ೪-೧).

[ನಿಡು(<ನಿಡಿದು$_1$)+ಬಾಳ್$_3$]

ನಿಡುವಾಳೆ (ನಾ). ಒಂದು ಬಗೆಯ ಉದ್ದವಾದ ಬಾಳೆಮಿಾನು : ಪಿಡಿದಿರ್ದ ಬಾಳ್ಗಳುಣ್ಮದ ನಿಡುವಾಳೆಯಂ ಬೀಳೆಯ ಸತ್ತಿಗೆಗಳ್ ಸೊರೆ ವಿಂಡಂ . . . ನೆಗಟ್ಟೆ ಪೆರ್ಜಾದ ಕಡಲೆಂದಿನಂ ಮಸಗಿ ಬಂದುದು ಪೆರ್ಬಡೆ ಕರ್ಬುವಿಲ್ಲನಾ (ಕಬ್ಬಕಾ. ೨೦೭). [ನಿಡು(<ನಿಡಿದು$_1$)+ಬಾಳೆ$_2$]

ನಿಡುವುಟೆ (ನಾ). ಒಂದು ಸ್ಥಳದ ಹೆಸರು : ಕಾದಿ ತ × ಯಣ್ಣ ಸತ್ತೊಡೆ ನಿಡುವುಟೆಯನೆ ಕಲ್ಲಡಾಗೆಯಿತ್ತ (ಎಕ. XIV, ನಾಗಮಂ. ೧೩೭-೯ ; ?). [?]

ನಿಡುವುರಿ (ನಾ). ದೊಡ್ಡ ಉರಿ ; ಮಹಾಜ್ವಾಲೆ : ವಿಯೋಗಾವಳಿ ಮೃಗಂಗಳಂ ಮಧುವೆಂಬ ಬೇಂಟೆಗಂ ಸುಡಲೆಂದು ಬನದೊಳಿಟ್ಟ ಡಾವಾಗ್ನಿ ನಿಡುವುರಿಯು[ಪಾಠಾಂ. ಯುರಿಯುರಿವ]ನಾಲಗೆಗಳೆನೆ ಕೆಂಪುದೀವಿ ದಟ್ಟಯಿಸಿರ್ದ ತಳರ್ವೊದರ್ಗಳ ಕೆಳಗನಾವರಿಸುತೆಳಲ್ವ ತಳರಿಂದತೋಕ ದ್ರುಮಂಗಳ್ ಕರಂ ಮೆಱೆದುವು (ಚಿಪು. ೪೫-೧೯).

[ನಿಡು(<ನಿಡಿದು$_1$)+ಉರಿ$_2$]

ನಿಡುವುರ್ಬು 'ನಿಡುವುರ್ವು' ನೋ.

ನಿಡುವುರ್ವು, ನಿಡಿವುರ್ವು, ನಿಡುಪುರ್ಬು, ನಿಡುಪುರ್ವು, ನಿಡುವುರ್ಬು, ನಿಡುಹುಬ್ಬು, ನಿಡುಹುರ್ಬು (ನಾ). ಉದ್ದವಾದ ಹುಬ್ಬು ; ನೀಳವಾದ ಭ್ರೂ : ನಿಜಮುಖಾಂಬುಜಮುಮಂಬುಜಮು ಮೊಡನಲರ್ವಿನಂ ನಿಜದ ಚೆಲ್ವುಮರೆ ನಿಡುವುರ್ವುಗಳ್ ನಿಮಿರ್ವಿನಂ (ಅಪಪು. ೬-೨೬ ರಗಳೆ); ಕರಂ ಪೊಳೆವಪಾಂಗೆ ಕಣ್ದಂದಳುರ್ತುಳುಂಕೆ ನಿಡುವುರ್ವುಗಳ್ ಪೊಡರೆ . . . ಪಿಡಿದು ಮೆಟ್ಟುವಳ್ ನೋಬ್ಬರಂ (ಪಂಪಭಾ. ೪-೮೯); ಇವಳ ಲಲಾಟಮೆಂಬ ಸಸಿಯಂ ನೆಱೆ ನೋಡುವೆವೆಂದೊಡೀ ಮನೋಭವನೆಮಗಡ್ಡಮಾಗಿ ನಿಡುವುರ್ವುಗಳೆಂಬ ಪೊದಟ್ಟ ಚಾಪಮಂ ಸುವಿಟಜನೋಪದಾಮಮನುದಗ್ರದಿಸಿಕ್ಕಿದಂ (ಧರ್ಮಾಮೃ. ೬-೨೦೦); ನಿಡುದೋಳ್, ನಿಡುವುರ್ವು ; ನಡುವಗಲ್, ನಡುಮನೆ (ಭಾಷಾಭೂ. ೧೪೩ ಉದಾ). **ನಿಡಿವುರ್ವು :** ನಿಱುಗುರುಳ್ಪೆಱೆನೊಸಲ್ನಿಮಿರ್ದ ಕಣ್ನಿಡಿವುರ್ವು ಮಿಱುಪ ಕದಪು (ಕುರಾಸಾಂ. ೧-೧೦೪). **ನಿಡುಪುರ್ಬು :** ಪೊಳೆವ ಕಂಗಳ ತುಱುಗಿದೆವೆಯ ನಿಡುಪು[ಪಾಠಾಂ.ವು]ರ್ಬುಗಳ ಪೆಱೆನೊಸಲ . . . ಮೋಹನದ ಚೆಲ್ವನೊಬ್ಬುಳಿಯೆನಿಪ ರಾಘವನ ಸಿರಿಮೊಗವನೆಂತು ನೋಡದೆ ಮಾಣ್ಬೆಂ (ಜೈಮಿಭಾ. ೧೯-೨೧). **ನಿಡುಪುರ್ವು :** ಮಿಱುಗುವ ನಿಡುಪುರ್ವಿಂಗೆ ತಾನಿಕ್ಷುಚಾಪಂ ದೊರೆಯಲ್ಲಂ (ಪಲ್ಲಕಾ. ೬-೭೪); ನಿಡುಪುರ್ವುಕೋದಂಡವೇಱಿಸಿ ಕಡೆಗಣ್ಣ ಸರಳಿಂದಲೆಸೆವುತ . . . ಅಂಗಜಪಡೆಯುಂ ಹಿನ್ನೆಲೆಯಾಗಿ ನಿಂತಿತು ಕಲಹಕಾಯತದಿ (ನಾಗಚ. ೪-೩೦). **ನಿಡುವುರ್ಬು :** ಮನೋಭವನ ಕಾರ್ಮುಕವ ಪೋಲ್ವ ನಿಡುವುರ್ಬುಗಳು ಸೊಗಯಿಸುವಲರ್ಮೆಯ್. . . ಬೆಳರ್ಮುಸುಂಕಿದ ಸೆಳ್ಳುಗುರ್ಮನೋಹರಮಾಗೆ ಸರವೆಯೆಸೆದಳು (ಸೌಂದಪು. ೬-೧೦). **ನಿಡುಹುಬ್ಬು :** ಕುಂಭಿನೊಸಲಿನ ತಳತೆಸೆಯ ನಿಡುಹುಬ್ಬುಗಳ ಕೋಮಲಸುಮುಕ್ತಾಫಲಕೆ ಸೆಣಸುವ ದಂತಪಂಕ್ತಿಗಳ . . . ಮುನ್ನಿನ ರೂಪ ತೋಱೆಂದ (ಕುಮಾಭಾ. ೩-೭೭); ಕಬ್ಬುವಿಲ್ಲಗೆ ಹೇಳು ಭರತರಾಜನ ನಿಡುಹುಬ್ಬನೋಲ್ಪೆಸೆಂದು ಗಿಳಿಯೆ (ಭರಚೆ. ೬-೪೫); ಕಡೆಗಣ್ಣು ಸವಿನುಡಿ ನಿಡುಹುಬ್ಬಿನ ಬೇಟೆ ಬಡನಡು ಕಡುನಿತಂಬಗಳ ಬಿಡದೆ ಬಳುಕೆ ಕುಣಿಸುವ ಚೆಲ್ವಿನ ಮುದ್ದುಮಡದಿರನ್ನೆಯರ್ಕೈದಿದರು (ಕಂಸವಿ. ೨೧-೭೫); ಬಡನಡು ಕಿರಿದೊಡೆ ಗಿರಿದಲೆ ತುರುಗೆವೆ ನಿಡುಹುಬ್ಬು . . . ಅಂಡೆಯ ನಡೆ ನುಡಿಯ ಜಾಣೆಯರು (ಸೌಂದಕಾ. ೩-೭೬). **ನಿಡುಹುರ್ಬು :** ಕಣ್ಗಳಿಗೆ ತಾವರೆಯ ನಿಟ್ಟೆಸಬ ವಿಳಾಸಮಂ ಪಟ್ಟಗಟ್ಟದಂತೆ ನಿಡುಹುರ್ವಿಂಗಂ ಕರ್ವಿಲ್ಲ ಬಿಂಕಮಂ ಸುಂಕಮಿಕ್ಕಿದಂತೆ ನಗೆಮೊಗಕ್ಕೆ ಚಂದ್ರಮಂಡಲದೊಪ್ಪಮಂ . ಕಪ್ಪಮಿಕ್ಕಿದಂತೆ . . . ಶೃಂಗಾರಕ್ಕೆ ಸೀಮೆಯಾಗಿಪ್ಪಳ್ (ಪುಣ್ಯಾಸ್ರ. ೨-೩೨ ಪ).

[ನಿಡು(<ನಿಡಿದು$_1$)+ಪುರ್ವು]

ನಿಡುವೆತ್ತಕೆಜೆ² (ನಾ). ಒಂದು ಸ್ಥಳದ ಹೆಸರು : ಉತ್ತರತಃ ನೇಸಱುಪಳ್ಳಂ ಸೆಱುವೆಣ್ಣೇ ಕಿಱುಬಳ್ಳಿಯೂಕ್ಕೆಱೆ ಸೆಳ್ಳಕೆಱೆ ನಿಡುವೆತ್ತ ಕೆಱೆ ಕೊಲ್ಲಿ ಸಹಿತಾ (ಎಕ. III, ಮಂಡ್ಯ. ೧೧೩೬–೬೦ ; 713).

[? + ಕೆಱೆ²]

ನಿಡುವೆರಲ್, ನಿಡುಬೆರಳು (ನಾ). ಉದ್ದವಾದ ಬೆರಳು ; ನೀಳವಾದ ಅಂಗುಲಿ : ನೀಳ್ದ ಕಣ್ಮರಲ್ ನಿಡುವೆರಲಿಂಪು ಸೊಂಪಿದ ಚೆಂದುಟ . . . ಒಪ್ಪಿರೆ ಕಣ್ಗೆ ತೋಱುವೆರಲ್ (ರಾಜಶೇ. ೧೧–೮೫). **ನಿಡುಬೆರಳು :** ಕಡಲ ಮುನ್ನೞುಯದ ಪೆಂಗಳಱ್ಚರಿವಟ್ಟು ನಿಡುಬೆರಳಿಟ್ಟು ನಾಸಿಕಕೆ ಮುಡಿಯೊಲೆದೊಲೆದು ನೋಡಿದರದಱೊಂದು ಬಲ್ಗಡಣಗೆ ಬಗೆಯೊಳು ಮೆಚ್ಚ (ಭರತ. ೨೩–೯೩).

[ನಿಡು(<ನಿಡಿದು$_1$)+ಬೆರಲ್]

ನಿಡುವೆರಲ (ನಾ). ಉದ್ದವಾದ ಬೆರಳಿರುವವನು: 'ನಿಡುವೆರಲಿ' ಪರಾ. [ನಿಡುವೆರಲ್ + –ಅ$_7$]

ನಿಡುವೆರಲಿ (ನಾ). ಉದ್ದವಾದ ಬೆರಳಿರುವವಳು ; ನೀಳವಾದ ಅಂಗುಲಿಯವಳು : ನಿಡುಗಣ್ಣಿ, ನಿಡುವೆರಲಿ, ಬಡಕಿ, ಮುದುಕಿ (ಶಬ್ದಾನು. ೨೯ ಪ್ರಯೋ). [ನಿಡುವೆರಲ + –ಇ$_2$]

ನಿಡುವೇರು (ನಾ). ಉದ್ದವಾದ ಬೇರು ; ನೀಳವಾದ ಬೇರು : ಇದಿಕಿಱುದಿಹ ಪುಷ್ಪದೊಳು ಗಂಧವಿರಲಾಜಡಿ ತುಡುಕುವುದೆಂದು ನೆಲದೆ ನಿಡುವೇರಿನೊಳು ಪರಿಮಳವೆತ್ತು ರಂಜಿಪ ಮುಂದಿವಾಳವಸರವೊಪ್ಪಿದುವು (ಮೋಹತ. ೩–೧೬). [ನಿಡು(<ನಿಡಿದು$_1$)+ಬೇರು (<ಬೇರ್)]

ನಿಡುವೈಹಾಳಿ (ನಾ). ದೀರ್ಘವಾದ ಸಂಚಾರ; ನಿಡಿದಾದ ಸುಳಿದಾಟ : ಸೂಳಗಿವ ನಿಟ್ಟುಸುರ ನಿಡುವೈಹಾಳಿಯಲಿ ತಜಗೆಲೆಯೊಲು ಹೊಕ್ಕಾಳು ಹಾಱುತು ಲಕ್ಷಸಂಖ್ಯೆಯಲಭ್ರಮಂಡಲಕೆ (ತೊರರಾ. ೬–೨೬–೩೧). [ನಿಡು(<ನಿಡಿದು$_1$)+ವೈಹಾಳಿ]

ನಿಡುವೊಡಲು (ನಾ). ನೀಳವಾದ ಹೊಟ್ಟೆ ; ಕೃಶವಾದ ಒಡಲು : ಮಡಿದ ಕೊಡಕೆಗಳೊಡ್ಡಿದುರದೊಪ್ಪಿದಿಯ ನಡುವಿನ ಕೊಂಕಿದುಗುರಿನ ನಿಡುವೊಡಲ ನಿರ್ಮಾಂಸಜಂಘೆಯ . . . ನಾಯ್ ನೂಕಿದವು ಹಾಸದ ವಿಳಾಸದಲಿ (ಕುಪ್ಪಾಅ. ೧೩–೨೦).

[ನಿಡು(<ನಿಡಿದು$_1$)+ಒಡಲು(<ಒಡಲ್)]

ನಿಡುವೊಡೆ (ನಾ). ಉದ್ದವಾದ ತೆನೆ; ನೀಳವಾದ ಕಣಿಶ : ಪಾವುರಿಯರ ಪೆರ್ಮುಡಿಯಿನಲ್ಲೊಕ್ಕು ನಸುವಾಡಿದ ನೆಲ್ಲ ನಿಡುವೊಡೆಗಳಿಂ . . . ಮನೋಹರಮಾದ ಮಾಧವೀಮಂಟಪದ ಮೊಗಶಾಲೆಯೊಳ್ ಕುಳ್ಳಿರ್ದು (ಲೀಲಾವ. ೫–೫೯ ಪ). [ನಿಡು(<ನಿಡಿದು$_1$)+ಪೊಡೆ$_3$]

ನಿಡುವೊನಲ್ (ನಾ). ದೊಡ್ಡ ಪ್ರವಾಹ : ರಸದಾಳಿಯೊಸರ್ದು ನಿಡುವೊನಲೆಸೆಗುಂ (ಹಸ್ತಿಮಾ.೧–೩೧). [ನಿಡು(<ನಿಡಿದು$_1$)+ಪೊನಲ್]

ನಿಡುವೊಯ್ಲು (ನಾ). ನೇರವಾಗಿ ಬೀಳುವ ಹೊಡೆತ,—ಸೆಟ್ಟು: ನಿಡುವೊಯ್ಲು ಓರೆವೊಯ್ಲು ಪ್ರರದ ಹೊಯ್ಲು ಬ್ಬೇಱುವೊಯ್ಲಿನಲೊದಗಿದರು ಭಟರಸಮಸಮರದಲಿ (ತೊರರಾ. ೪–೪–೨೪).

[ನಿಡು(<ನಿಡಿದು$_1$)+ಪೊಯ್ಲು<ಪೊಯಲ್)]

ನಿಡುವೊಸಗೆ (ನಾ). (ಮದುವೆಯ) ದೊಡ್ಡ ಉತ್ಸವ,—ಮೆರವಣಿಗೆ : ದೊರೆವಟ್ಟೆಯಂ ಪಿಡಿದು ಮಂಗಳವರೆಯ ನಾದಕ್ಕೆ ನಡೆನಡೆಯೆ ನಿಡುವೊಸಗೆ, ತೆಕ್ಕನೆಯೆ ತೋರ್ದುವುತ್ಪಾತಕತಿ (ಕ್ರೈರಾಮಾ. ೫೧–೬೪೮). [ನಿಡು(<ನಿಡಿದು$_1$)+ಒಸಗೆ]

ನಿಡುಶ್ವಾಸ (ನಾ). ನಿಟ್ಟುಸಿರು ; ದೀರ್ಘಶ್ವಾಸ : ಬಲವಿಳಿದು ಹೋದ ಹೆಬ್ಬುಲಿಯಂತೆ ನಿಡುಶ್ವಾಸ ಬಿಡುವ ಈರ (ಮುಂಗಾಮು.೭೧).

[ನಿಡು(<ನಿಡಿದು$_1$)+ಶ್ವಾಸ]

ನಿಡುಸರ$_1$ (ನಾ). ದೊಡ್ಡ ಕೂಗು ; ಗಟ್ಟಿಯಾದ ಸ್ವರ ; ದೀರ್ಘಧ್ವನಿ : ತುಡುಕಿ ನೆಗಹಿದ ಕಯ್ಯ ನಿಷ್ಕಾರಣಂ ನೃಪತಿ ಹೊಡೆದನೆಲೆ ಕೌಶಿಕಮುನೀಂದ್ರ ಮೊಱೆಯೋ ಎಂಬ ನಿಡುಸರದ ಮುಡದಿಯರ ದನಿಯನಾಲಿಸಿ ಸಣ್ಣಶಾಲೆಯಂ ಪೊಱಮಟ್ಟನು (ಹಚಕಾ. ೭–೨೬) ; ಕೋಗಿಲೆಯ ನಿಡುಸರಂ ಪಾರಿದದ ಕಲ್ಲುಗಸು ಗೂಗೆಗಳ ಕಣ್ದೊಳಸು . . . ಗಹನಗಹ್ವರದೊಳಳುವ ಶಿಶುವಂ ನೋಡಲಾಗಿ ಬಂದೆಗೊಂಡ ದುಃಖಾತಿರೇಕಮೆಂಬಂತೆ ಕಾಣಿಸುತಿರ್ದುದು (ಜೈಮಿಭಾ. ೨೮–೩೮) ; ನಿಡುಸರದಿಂ ಕೂಗಿ ಕರೆಕರೆದು ಕಾಣದೆ (ರಾಜಶೇ. ೧೩–೧೦೨ ಪ).

[ನಿಡು(<ನಿಡಿದು$_1$)+ಸರ$_2$]

ನಿಡುಸರ$_2$ (ನಾ). ಉದ್ದವಾದ ಮಾಲೆ ; ದೊಡ್ಡ ಹಾರ : ಹೊಡೆದವಮರರ ಭೇರಿ ಹೂವಿನ ನಿಡುಸರದ ಸೋನೆಗಳ ದಿವಿಜರ ಮುಡದಿಯರು ಸೂಸಿದರು ರಘುಕುಲಸುತ್ತಮಾಂಗದಲಿ (ತೊರರಾ. ೧–೧೦–೧೯).

[ನಿಡು(<ನಿಡಿದು$_1$)+ಸರ$_3$]

ನಿಡುಸರಂಗೊಳ್ (ಕ್ರಿ). ದೊಡ್ಡ ಧ್ವನಿ ಮಾಡು ; ಹೆಚ್ಚು ಕಾಲ ಕಿರಿಚು ; ಒಂದೇ ಸಮನೆ ಕಿರಿಚು : ಒಡನೆದ್ದುವಾ ಬಾಗಿಲೊಳ್ಕೊಂಬುಂಪೆಗಳು ನಿಡುಸರಂಗೊಂಡು ಕರೆದುವು ಪಗಲ ಬಳ್ಳಿಗಳು ಈ ತೆಱದೊಳುತ್ಪಾತವಾಗುತಿರೆ ನಡೆತಂದು (ವಿಕಾಂರ. ಹ. ೨೮೨–೨೫).

[ನಿಡುಸರ$_1$ + ಕೊಳ್$_1$]

ನಿಡುಸರಳ್, ನಿಡುಸರಳು (ನಾ). = ನಿಡುಗೋಲ್ ೨ : ಅನುಸಾಲ್ವಂ ಕನಲ್ದು ಜಗದಳಿವಿನಂದು ಸುಳಿವ ಬಿಱುಗಾಳಿಯಂ ಸೋಲಿಸುವ ನಿಡುಸರಳ್ಗಳ ಗಱಿಯ ಭರದನಿಲಘಾತದಿಂ ಬಯಲಾದುದಳವಿಯೆನಲಿಸುಗೆಯಂ ಕೈಗೊಂಡು ಸಮಱಂದಂ ಒಂದರಿಪುಮೋಹರವನು (ಜೈಮಿಭಾ. ೧೨–೪೦). ನಿಡುಸರಳು : "ಪ್ರಕ್ಷ್ವೇಡನಃ, ನಾರಾಚಃ—೨ ನಾರಸದ ಹೆಸರುಗಳು, ನಿಡುಗೋಲು, ನಿಡುಸರಳು" (ಸಿದ್ಧಾಂತಿ. ೨೬೪) ; ಕೈಗಿಡದಿರಿಸು ನಿಡುಸರಳ ತುಡು ಕೆಲಕೆ ಸಿಡಿಯದಿರ್ಪೊಡೆ ಸಾರ್ಚು (ಜೈಮಿಭಾ.೨೮–೪೫); ಸಿಡಿಲು ಹೊಡೆದಂತಾಗಿ ದೇವಿಯ ನಿಡುಸರಳು ತಾಗಲಿಕೆ ಕೋಪದ ಸಡಗರವನೇನೆಂಬೆ (ದೇವೀಮಾ. ೩೦೮–೩೧) ; ತುಡು ನಿಡುಸರಳ (ಚಂದ್ರಸ. ೨೮–೧೮). 'ನಿಡುಗೋಲ್' ಪರಾ.

[ನಿಡು(<ನಿಡಿದು$_1$)+ಸರಳ್(<ಸರಲ್$_1$)]

ನಿಡುಸರಳು 'ನಿಡುಸರಳ್' ನೋ.

ನಿಡುಸಾಣ (ನಾ). ಗರಡಿಯಲ್ಲಿ ಉಪಯೋಗಿಸುವ ಒಂದು ಬಗೆಯ ಸಾಧನ : ಗರುಡಿವನೆಯಂ ಪೊಕ್ಕು ವಾಸಿಪಂಥದೊಳಲ್ಲಿ ದುಡಿವವರಿಗಮ್ಮಡಿಯ ಸಾಸದಿಂ ದಂಡೆಗಳ ನೂಕುತ್ತೆ ತಿರುಹುತ್ತೆ ಲೋಡು ನಿಡುಸಾಣಂಗಳ (ಪರಶು. ೪–೧೦). [ನಿಡು(<ನಿಡಿದು$_1$)+ಸಾಣ]

ನಿಡುಸಾಲ (ನಾ). ದೀರ್ಘಾವಧಿಯ ಸಾಲ,—ಕಡ : ಲೇವಾದೇವಿ ಕೆಲಸಗಳ ಜೊತೆಗೆ ನಿಡುಸಾಲ ಕೊಟ್ಟು ಹೊಸ ಕೈಗಾರಿಕೆಗಳಿಗೆ ಬಂಡವಾಳ ಒದಗಿಸುವ ಕಾರ್ಯವನ್ನು ಮಾಡುವ ಬ್ಯಾಂಕುಗಳು ಬೇರೆ (ಹಣಪ್ರ.೬೯).

[ನಿಡು(<ನಿಡಿದು$_1$)+ಸಾಲ$_1$]

ನಿಡುಸಿಂಬಿ (ನಾ). = ನಿಡುಸುರುಳಿ : (ಹಗ್ಗ, ಮೊ.ವನ್ನು) ಸುರುಳಿ ಸುತ್ತು ; ಸಿಂಬಿ ಸುತ್ತು ; ಬಟ್ಟೆಸಿಂಬಿಯಾಗಿ ಅಥವಾ ನಿಡುಸಿಂಬಿಯಾಗಿ ಸುತ್ತು (coil. ಇಂಗಿಸ). [ನಿಡು(<ನಿಡಿದು$_1$)+ಸಿಂಬಿ$_1$]

ನಿಡುಸುಯ್¹, ನಿಡುಸುಯ್ಯು (ಕ್ರಿ). ದೀರ್ಘವಾಗಿ ಉಸಿರನ್ನು ಬಿಡು ; ನಿಟ್ಟುಸಿರು ಬಿಡು : ಮೊಗಂ ಮೊಗದತ್ತ ಸಾರ್ಚ ಬೆಚ್ಚಗೆ ನಿಡುಸುಯ್ದು ನೆಲ್ಲಳ ಮುಖಾಂಬುಜಸೌರಭದೊಳ್ ಪೊದಟ್ಟುದೇಂ ಮಗಮಗಿಸಿತ್ತೊ . . . ಕದಂಬದಂಬುಲಂ (ಪಂಪಭಾ. ೪–೧೦೭) ; ನಿಡುಸುಯ್ದುಂ ಗುಡುಗುಡನೆ ಸುರಿವ ಕಣ್ಬನಿಗಳಂ ಮಿಡಿವುತ್ತಂ ಮತ್ತ

ಮಿಂತೆಂದಳ್ (ಕಾದಂಪೂ. ೯೩೨) ; ಒಡೆದಿರೆ ರೋಮಂ . . . ನೀರಡಿಕೆ ಪಿರಿದಾಗೆ ಝೊಂಪಿಸೆ ನಿಡುಸುಯ್ಯೆ ಹಯಂ ಕರಂ ಜ್ವರಾರ್ತನೆನಿಕ್ಕುಂ (ಲೋಕೋಪ. ೯-೨೩೪). **ನಿಡುಸುಯ್ಯು** : ಕಣ್ಣಿನ ಮುಂದಿರುವ ಈ ದೈನಂದಿನ ಚೆಲುವಿನ ಬಗೆಗೆ ಕುರುಡಾಗಿರುವ ಈ ಜನಕ್ಕೆ ಸೌಂದರ್ಯಾನುಭವ ಶಕ್ತಿ ಲಭಿಸುವುದೆಂದಿಗೆ ಎಂಬ ಹಂಬಲದಲ್ಲಿ ನಿಡುಸುಯ್ಯುವ ಕವಿ (ಸೌಂದಸ. ೨೬). [<ನಿಡಿದು₂ + ಸುಯ್ಯ್₁]

ನಿಡುಸುಯ್ಯ್₂ (ನಾ). ನಿಡಿದಾದ ಉಸಿರು ; ನಿಟ್ಟುಸಿರು ; ದೀರ್ಘಶ್ವಾಸ : ದೆಸೆಗೆಟ್ಟಲರ್ಗಣ್ಣ ನೋಟಮುಣ್ಮದ ಬೆಮರೋಳಿವಟ್ಟ ನಿಡುಸುಯ್ಯ್ ತೊದಳಿಂಗೆಡೆಗೊಂಡ ಮಾತು ಕುಂದಿದ ಲತಿಕಾಂಗಮೊಂದಿದ ವಿಕಾರಮದೀಕೆಯೊಳೀಗಳಾದುದು (ಪಂಪಭಾ. ೪-೬೦) ; ಓರೊರ್ಮೆ ರಣರಣಕವ್ಯಥಾವ್ಯಜನಪಲ್ಲವಭಂಗವಾದಪ್ಪುದೆಂದಂಜಿ ನಡುಗುವಂತೆ ನಿಡುಸುಯ್ಯ ಗಾಳಿಯಿಂ ನಡುಗುವ ಲತಾಮಂಟಪದೊಳರ್ಪಳ್ (ಕಾದಂಉ. ೩೩೪) ; ನಿಡುಸುಯ್ಯ್ ಸುಯ್ಯೊಳ್ ಹೃದಯದ ನಡುಕಂ ಮಿಡುಕಿನೊಳ್ . . . ಬೆರಸಿತರಸನೊಳಾಗಳ್ (ಲೀಲಾವ. ೩-೫೩) ; ನಿಡುಸುಯ್ಯುಣ್ಮಲ್ ಕಪಟದೆ ಕೊಡುವೆಲೆಯೆಂ ಬಿಸುಟು ಮುಳಿದು ಪೊಯ್ಯಲ್ಕೆ (ಉದ್ಭಟ. ೧೦-೮೪) ; ಬೇಱೂರ್ಗೆ ಪೋದ ನಲ್ಲರ ನೆನೆದು ದೂಱಿಸುವ ನೀಱೆಯರ ನಿಡುಸುಯ್ಯ ಗಡಣದಿಂ (ಕಬ್ಬಿಕಾ. ೫೪) ; ನಿಡುಸುಯ್ಯಿಂ ಭುಗಿಲೆನೆ ಪೊಱಮಡೆ ಪೊಗೆ . . . ಗರ್ಜನಕ್ಕಿಳೆ ನಡುಗೆ ಮಹಾಹವಮನೆಸಗಿದರ್ ಧುರಗಲಿಗಳ್ (ಶಬಶಂ. ೪-೭೭) ; ಕುಚಂಗಳೊಳಿನ್ನುಂ ಮಿತಿಮೀರಿ ಬರ್ಪ ನಿಡುಸುಯ್ಯಳ್ ಕಂಪಮಂ ಪುಟ್ಟಿಕುಂ (ಶಾಕುಂತ. ೧೬-೩೦) ; ನಿಡುಸುಯ್ಯಳ್ ತುಟಿಗೆಂಪನಿಲ್ಲೆನಿಸೆ ಚಿಂತಾಜಾಗರಂಬೆತ್ತು (ಶಾಕುಂತ. ೮೨-೧೩೭). [ನಿಡು(<ನಿಡಿದು₁) + ಸುಯ್ಯ್₂]

ನಿಡುಸುಯಲ್, ನಿಡುಸುಯ್ಲು (ನಾ). ೧. = ನಿಡುಸುಯ್ಯ್₂ : ಎಱಗಿ ನೋಡುವುದೊಂದಱಲಿ ಎರಡಱಲಿ ಚಿಂತನೆ ನಿಡುಸುಯ [ಪಾಠಾಂ. ಯಿ]ಲ್ ಮೂಱಱಲಿ . . . ಮೇಣ್ ಹತ್ತಱಲಿ ಮರಣ ಇವು ದಶಾವಸ್ಥೆಗಳೆನಲು ಹೇಳುವವು ವಿರಹಿಜನರ್ಗೆ (ಬಸಪು. ೩೫-೩೨). **ನಿಡುಸುಯ್ಲು** : ೧. ಅಕ್ರೂರನೊಡನೆ ಹರಿ ಪೊಱಮಡಲಾಗಡೆ ಪೊಱಮಟ್ಟುದದೊರ್ವಳ ನಿಡುಸುಯ್ಲ ಸಮೀರನೊಡನೆ ಜೀವಸಮೀರಂ (ಜಗವಿ. ೫-೯೮) ; ಸೂಳುರಿಯ ನಿಡುಸುಯ್ಲ ಕಬ್ಬೊಗೆ ಜಾಳಿಗೆಯಲೇಕಾವಳಿಯ ಮುಕ್ತಾಳಿ ಕಂದಿತ್ತು (ಕುವ್ಯಾಸ. ೧೦-೨೩) ; ನಿಡಿಲ್[ದೆ]ನಿಪ ನಿಡುಸುಯ್ಲುಗಳು ಪೊಱಮಡುತಿರಲು ಮೂಗಿನಲಿ . . . ಎಡೆಬಿಡದೆ ಗದ್ಗದ ನಿನಾದಗಳಡಸಿರಲು ಕಂಠದಲಿ ಜಾಹ್ನವಿ ನುಡಿದಳಾ ಸಮಯದಲಿ ಕೌರವ ಸಮಿತಿಯಿದಿರಿನಲಿ (ತಿಮ್ಮಅ. ೧೧-೩೬) ; ನಿಡುಸುಯ್ಲ ಧಾಳಿಯ ಜಳಕೆ ಚೆಂದುಟರಸವೊಡನೆ ಬಱತುದು (ಕಂಸವಿ. ೯-೧೭೨). ೨. ಏದುಸಿರು ; ಉಬ್ಬಸ : ನಿಡುಸುಯ್ಲಂ ತನ್ನನೊತ್ತಂಬರಿಸೆ ನಿಲುಪುತುಂ . . . ಪಾಣ್ಬೆಯೊರ್ವಳ್ ನಿಜಮಣಿಭವನದ್ವಾರದೊಳ್ ಬಂದು ನಿಂದಳ್ (ಸೂಕ್ತಿಸು. ೪-೧೬೭) ; ಕಾಡಾನೆಯ ಅಳಿಗಾಲದ ನಿಡುಸುಯ್ಲಂತೆ ಕೇಳಿಸಿತಂತೆ (ಹಸುಹೊ. ೨೮೦). [ನಿಡುಸುಯ್ಯ್₁ + -ಅಲ್₂]

ನಿಡುಸುಯಿಲ್, ನಿಡುಸುಯಿಲು (ನಾ). = ನಿಡುಸುಯ್ಯ್₂ : ಎಱಗಿ ನೋಡುವುದೊಂದಱಲಿ . . . ನಿಡುಸುಯಿ[ಪಾಠಾಂ. ಯ]ಲ್ ಮೂಱಱಲಿ (ಬಸಪು. ೩೫-೨೨). **ನಿಡುಸುಯಿಲು** : ಬಿಡದೆ ಭುಸ್ಸೆನುತಿರ್ಪ ಫಣಿಪನ ನಿಡುಸುಯಿಲುಗಳಿಗಳುಕಿ ದ್ರುಗುಶಿಖಿಕಿಡಿಗಳೊಗೆ ಭುಗಿಭುಗಿಲು ಛಟಛಟಲೆನುತ ಮಿಗೆ ನೆಗೆಯೆ (ಬಸಪು. ೧೭-೧೯).

[ನಿಡುಸುಯ್ಯ್₁ + -ಇಲ್₃]

ನಿಡುಸುಯಿಲು 'ನಿಡುಸುಯಿಲ್' ನೋ.

ನಿಡುಸುಯ್ಯು 'ನಿಡುಸುಯ್ಯ್₁' ನೋ.

ನಿಡುಸುಯ್ಯೆಲರ್ (ನಾ). ನಿಟ್ಟುಸಿರಿನ ಗಾಳಿ. ನಿಡುಸುಯ್ಯೆಲರಿಂ ಮೇಲುದು ತೊಲಗೆ ಚಾಮರದೆಲರ್ಗೆ ನಿಮಿತ್ತತೆಯನೊಡರ್ಚಯುಂ (ಕಾದಂಉ. ೩೬). ಆ ನಗೇಶ್ವರನ ನಿಡುಸುಯ್ಯೆಲರ್ಗಳೆ ಪೊಱಮಟ್ಟುವೆಂಬಂತೆ ಗುಹಾಮುಖದಿಂ ಪೊಱಮಟ್ಟು ಜೀವಮಂ ಬಿಡುವ ಜರದ ಜಗರಂಗಳುಮಂ . . . ನೋಡಿ (ಜಗವಿ. ೩೮-೫೫) ; ಒಳಗಡೆವೊತ್ತುವ ಮದನಾನಳಸಂ ಚಮರೀಜಧಾರಿಣೀಚಾಳಿತ ಕೋಮಳತಾಳವೃಂತಮಂದಾನಿಳಮುರಿಪಿದುದೊದವಿ ನೃಪನ ನಿಡುಸುಯ್ಯೆಲರಿಂ (ಪರ್ಧಪು. ೫-೧೬).

[ನಿಡುಸುಯ್ಯ್₂ + ಎಲರ್]

ನಿಡುಸುಯ್ಲು 'ನಿಡುಸುಯಲ್' ನೋ.

ನಿಡುಸುರಗಿ (ನಾ). ಉದ್ದವಾದ ಕತ್ತಿ ; ನೀಳವಾದ ಖಡ್ಗ ; "ಗೇಣ್" (ಚತುನಿ. ಕಿ. I, ೮). [ನಿಡು(<ನಿಡಿದು₁) + ಸುರಗಿ₂]

ನಿಡುಸುರುಳಿ (ನಾ). ಯಾವುದಾದರೊಂದು ವಸ್ತುವಿನ ದೊಡ್ಡ ಸುರುಳಿ,—ಸುತ್ತು : ವಿದ್ಯುತ್ತ್ವಾಹದ ಚಲನೆಗಾಗಿ ಮಾಡಿರುವ ತಂತಿಯ ನಿಡುಸುರುಳಿ (Coil. ಇಂಕನಿ.) ; ವಿದ್ಯುತ್ತ್ವಾಹವೆನ್ನು ಹೊತ್ತ ನಿಡುಸುರುಳಿಯು ಎಲ್ಲಾ ವಿಧದಲ್ಲಿಯೂ ದಂಡಕಾಂತಕ್ಕೆ ಸಮನಾಗಿರುವುದು (ಭೌತವಿ. ೩೩೫). [ನಿಡು(<ನಿಡಿದು₁) + ಸುರುಳಿ]

ನಿಡುಸೂಟಿ (ನಾ). ಅಧಿಕವಾದ ವೇಗ : ಇರ್ದೆಸೆಯ ಕುದುರೆಗಾಱರ್ ಚೂಣಿಯೊಳ್ ಕಾಣುತಾರ್ದು ನಿಡುಸೂಟಿಯೊಳ್ ನಿಲ್ಲದೋರ್ವಾಘೆಯೊಳ್ ಮೀರ್ದು ಸದಳಂಗಳಂ ಸುಲಿದು ಸೆಱೆತುಱುಗಳಂ ಪಿಡಿದರ್ (ಚೆಒಪು. ೪೮-೨೫). [ನಿಡು(<ನಿಡಿದು₁) + ಸೂಟಿ₁]

ನಿಡುಸೂಳ್, ನಿಡುಸೂಳು (ನಾ). ದೊಡ್ಡ ಧ್ವನಿ ; ಗಟ್ಟಿಯಾದ ಶಬ್ದ : ಕಡುಗಂಪು, ನಿಡುಸೂಳ್ (ಶಬ್ದಾನು. ೮೭ ಪ್ರಯೋ). **ನಿಡುಸೂಳು** : ಗಬ್ಬರಿಸಿದುದು ಗಗನವನು ಬಲುಬೊಬ್ಬೆ ಬಹುವಿಧವಾದ್ಯರಭಸದ ನಿಬ್ಬರದ ನಿಡುಸೂಳು ಸೂಳ್ಯೆಸಿದುದು ದಿಗುತಟವ (ಕುವ್ಯಾಕ. ೨೩-೩). [ನಿಡು(<ನಿಡಿದು₁) + ಸೂಳ್₃]

ನಿಡುಸೂಳು 'ನಿಡುಸೂಳ್' ನೋ.

ನಿಡುಸೆರೆ (ನಾ). ದೀರ್ಘವಾದ ಕಂಠನಾಳ : ಅರಸ ಬಳಲಿದನೇನ ಮಾಡುವೆ ದುರುಳ ನುಡಿದನ ನಾಲಗೆಯ ನಿಡುಸೆರೆಯ ಬಿಡಿಸುವೆ ಮಾವಸೈರಿಸಿಯೆಂದನಾ ಭೀಮ (ಕುವ್ಯಾಕ. ೧೨-೩೦).

[ನಿಡು(<ನಿಡಿದು₁) + ಸೆರೆ₃]

ನಿಡುಸೊಂಡೆ (ನಾ). ಸೊಂಡೆಯ ಗಿಡದಲ್ಲಿ ಒಂದು ಬಗೆ : ಕುಟಜಂ ನಿ(ಗಿ)ಡುಸೊಂ [ಪಾಠಾಂ. ಗೊಂ, ಗೊ]ಡೆಯೆನಿಪ್ಪಿವೆಲ್ಲಮಂ ಗುಣನಿಧಿ ಸಾಧಿಸಿಟ್ಟಡಿದು ಕತ್ತುರಿಗೂಡಿದ ಚೂರ್ಣಮಾದೊಡಂ (ಖಮದ. ೧೬-೧೦೪). [ನಿಡು(<ನಿಡಿದು₁) + ಸೊಂಡೆ₁]

ನಿಡುಸೋಗೆ (ನಾ). ೧. ಉದ್ದವಾದ ಸೆರಗು : ತೆಳುದೊಗಲ ನಿಡುಸೋಗೆಯುಡುಗೆಯನೆಳಗುರುಳ ಸಿಂಗಾರದುಱುಬಿನ . . . ಕೊಡಗೂಸು ಪೂತನಿನಿಕರಮೊಪ್ಪಿದವು (ಕುವ್ಯಾಭೀ. ೫-೩೪). ೨. ಕಣ್ಣಿನ ಕುಡಿಗೆ ಮಾಡಿದ ಗೆರೆಯ ಅಲಂಕಾರ : ದೇವಕಾಮಿನಿಯೋರ್ವಳಾ ಶಿವದೇವಿಯಕ್ಷಿಗೆ ಕಜ್ಜಳವ ಪರಿಭಾವಿಸಿದ ನಿಡುಸೋಗೆ ದೃಗುಪುತ್ರಿಕೆಯ ಸೋರ್ಮುಡಿಯ ಭಾವವಾಗಿರೆ (ಸಾಳ್ವಭಾ. ೩೨-೨೩).

[ನಿಡು(<ನಿಡಿದು₁) + ಸೋಗೆ₁]

ನಿಡುಹಣೆ 'ನಿಡುವಣೆ' ನೋ.

ನಿಡುಹಲ್ಲು 'ನಿಡುವಲ್' ನೋ.

ನಿಡುಹಾಸು (ನಾ). ಉದ್ದವಾದ ಹಾಸು : ರಾಯನ ಸಿಂಹಾಸನಕ್ಕೆ ಹೋಗುವ ದಾರಿಯ ಉದ್ದಕ್ಕೂ . . . ಕೆಂಪುಮೊಖಮಲ್ಲಿನ ನಿಡುಹಾಸು (ಪಂಯಾತ್ರೆ. ೫೬). [ನಿಡು(<ನಿಡಿದು₁) + ಹಾಸು₃(<ಪಾಸು₂)]

ನಿಡುಹುಬ್ಬು 'ನಿಡುವುರ್ವು' ನೋ.

ನಿಡುಹುರ್ಬು 'ನಿಡುವುರ್ವು' ನೋ.

ನಿಡ್ಡಳ (ನಾ). (?) : ಮನಸ್ಸಿನಲ್ಲಿ ನಿಡ್ಡಳಮಲ್ಲದೆ ಸತ್ವಮಿನಿಸುಂಟೆ ಯೆಡೆಯಲ್ಲಿ ಮಾತಿನೊಳು ದೀನತ್ವಮಲ್ಲದೆಯುಂಟೆ ನಿಷ್ಠುರಂ ನೋಡೆ ನಿಜಪರವಶತ್ವಮಲ್ಲದೆ ರತಿಯೊಳೆಚ್ಚಱುಂಟೇ ಮನ್ಮನೋವಲ್ಲಭೆಗೆ ಭಾವಿಸೆ (ಸಮ್ಮಳಾ. ೩-೧೭) ; ಬಲ್ಮೆಯಿಂ ನಿಡ್ಡಳದ ತನ್ನಳಲ ಕಂಬನಿಯೊಳೆರೆವಂ ಕಡ್ಡದೀ ಬಾಳ್ವೆಯಾಟದಿ ನಲ್ಮೆಯಂ ಪಡೆಯಲ್ (ಕಾಲೂರ. ೧೬೭-೩೭೨).

[?]

ನಿತಂಬ (ನಾ). ೧. (ಸ್ತ್ರೀಯರ) ಸೊಂಟದ ಕೆಳಗಿನ ಹಿಂಭಾಗ ; ಕಟಪ್ರದೇಶ ; ಪಿರ್ರೆ ; ಕುಂಡೆ : "ಆರೋಹಃ, ನಿತಂಬಃ, ಕಟೀ-ಈ ೩ ಕಟಿ" (ಹಲಾಯು. ೮೪-೩೫೮); ವನಿತೆಯ ಪುಳಿನನಿತಂಬೋದ್ದೇಶಂ ಮನಸಿಜಮದಗಜಕುಂಭನಿಕಾಶಂ (ಸುಕುಮಾ. ೫-೫೧ ರಗಳ); ಮುಡಿಯ ಭಾರಕ್ಕೆ ಕೊರಲೆಸೆವ ಕುಚಭಾರಕ್ಕೆ ಬಡನಡು ನಿತಂಬಭಾರಕ್ಕೆಸೆವ ಬಟ್ಟ ನುಣ್ದೊಡೆ ಚೆಲುವನಾಂತವಯವದ ಸೌಕುಮಾರತೆಯ ಭಾರಕ್ಕೆ ಸರ್ವಾಂಗವೂ ಬಿಡದೆ ಬಳುಕುತಿವೆ (ಹಚಕಾ. ೪-೧೬). ೨. ಬೆಟ್ಟದ ಇಳುಕಲುಪ್ರದೇಶ ; ಸಾನು : "ನಿತಂಬಃ, ಕಟಕಃ, ಸಾನು, ಪ್ರಸ್ಥಂ, ತಟಂ, ಭೃಗುಃ-ಈ ೬ ತಟ್ಟಲ್" (ಹಲಾಯು. ೨೭-೧೨) ; "ಸಾನು ಕಟಕಂ ಭೃಗು ಪ್ರಸ್ಥಂ ತಟಂ ನಿತಂಬಂ ಗಿರಿಯ ಹೊರೆಯಕ್ಕು" (ಮಂಗರಾ. ೩೦-೨) ; ಆ ಗಿರಿಯ ತೆಂಕಣ ದರಿಯ ರುಚಕಮಮೋಘಂ ವಿಮಳಂ ರುಚಕೋತ್ತರಮುಚಿತಸುಪ್ರಬುದ್ಧಂ ಭದ್ರಂ ರುಚಿನನ್ಮಂದರ ಮಪವರಕಚಾರುತರ ಸುಪ್ರತಿಷ್ಠಮೆಂಬ ನಿತಂಬಂ (ಶಾಂತಿಪು. ೯-೧೬೫); ಅಭ್ರಂಕಷೋತ್ತುಂಗಸಂಗತ ಗಿರಿವರ ನಿತಂಬಸಂವಾಸಶಬರಶಿಬಿರಸಂಕೀರ್ಣ ಮುಮಪ್ಪುದೊಂದು ಮಹಾಟವಿಯನೆಯ್ದಿವರ್ಪುದುಂ (ಪಂಚತಂ. ೨೩-೧೨) ; ದಶವದನಂ . . . ಕ್ರಮದಿಂ ಕೈಲಾಸಪರ್ವತಮನೆಯ್ದಿ ವಾಲಿದೇವರ ಸಾಮರ್ಥ್ಯಮಂ ನೆನೆದು ಪೊಗಟುತ್ತುಮಾ ನಗದ ನಿತಂಬ ದೊಳ್ ಬೀಡುವಿಟ್ಟರ್ಪುದುಂ (ಪಂರಾಮಾ. ೧೦-೧೮೪ ವ); ಆ ಪೊಂಬೆಟ್ಟದ ನಿತಂಬದೊಳಿಂಬುವಡೆದ ಜಂಬುಜಂಬೀರಪನಸಪಾಟಳಿರಸಾಲತಮಾಲ . . . ಕಮಳಷಂಡಂಗಳಿಂದಿಡಿದು ಕಡುಬೆಡಂಗಾದ ಸಾರ್ವರ್ತುಕಮಾದ ಸದಮಳ ತಪೋವನದ (ರಾಜಶೇ. ೧-೧೨೫ ವ). ೩. [ನಾಟ್ಯ] ಮೂವತ್ತು ಬಗೆಯ ನೃತ್ತಹಸ್ತಗಳಲ್ಲಿ ಒಂದು ; ℙ "ಪತಾಕಹಸ್ತಗಳೆರಡರಲ್ಲಿ ಒಂದನ್ನು ಮೇಲ್ಮುಖವಾಗಿಯೂ ಇನ್ನೊಂದನ್ನು ಕೆಳಮುಖ ವಾಗಿಯೂ ಮಾಡಿ ಕೈಗಳನ್ನು ಭುಜ ಮತ್ತು ನಡುಗಳಿಗೆ ಕ್ರಮವಾಗಿ ಸುತ್ತಿಸುವುದು" (ಲಾಸ್ಯರಂ. ೨೫೦ ಗದ್ಯಾನುವಾದ) : ಚತುರಸ್ರ, ಉದ್ವೃತ್ತ, ತಲಮುಖ, ಸ್ವಸ್ತಿಕ, ವಿಪ್ರಕೀರ್ಣ, ಅರಾಳಕಟಕಾ ಮುಖ, ಅವಿದ್ಧವಕ್ತ್ರ, ಸೂಚ್ಯಾಸ್ಯ, ರೇಚಿತ, ಅರ್ಧರೇಚಿತ, ನಿತಂಬ, ಪಲ್ಲವ . . . ಲಲಿತ-ಈ ಮೂವತ್ತು ನೃತ್ಯಹಸ್ತಂಗಳ್ (ಲಾಸ್ಯರಂ. ೨-೪೪ ವ). ೪. ನೂರೆಂಟು ಕರಣಗಳಲ್ಲಿ ಒಂದು ; ℙ "ಪತಾಕ ಹಸ್ತಗಳೆರಡರ ಬೆರಳುಗಳನ್ನು ಕೆಳಕ್ಕೆ ಮಾಡಿ ಹಿಡಿದು ಪರಿವರ್ತ ದಿಂದ ಬೆರಳುಗಳನ್ನು ಮೇಲಕ್ಕೆ ಮಾಡಿ ತಲೆಯ ಹತ್ತಿರ ನಿಲ್ಲಿಸಿ, ಕೈಗಳನ್ನು ಎದುರಾಗಿಯೂ, ಬೆರಳುಗಳನ್ನು ದೇಹಕ್ಕಭಿಮುಖ ವಾಗಿಯೂ ಮಾಡಿ ಭುಜದ ಸಮಕ್ಕೆ ಇಳಿಸಿ, ನಿತಂಬಹಸ್ತವನ್ನು . . . ಮಾಡುವುದು" (ಲಾಸ್ಯರಂ. ೩೦೨ ಗದ್ಯಾನುವಾದ) : ತಲಪುಷ್ಪ ಪುಟ, ಲೀನ, ವಿವರ್ತಿತ . . . ಅಪಕ್ರಾಂತ, ನಿತಂಬ . . . ಗಂಗಾವ ತರಣ-ಈ ನೂಱೆಂಟು ಕರಣಂಗಳ್ (ಲಾಸ್ಯರಂ. ೪-೪೨). [ಸಂ.]

ನಿತಂಬದ್ವಯಸ (ನಾ). ನಿತಂಬದವರೆಗೆ ಬರುವಷ್ಟು (ನೀರಿನ) ಆಳ ; ಸೊಂಟದವರೆಗೆ ಮುಳುಗುವಷ್ಟು (ನೀರಿನ) ಆಳ : ಜಳಕೇಳಿ ನಿಮಿರ್ಗೆ ಭರತನ ಲಳಿತಾಂತಃಪುರದೊಳೆಂಬ ತನ್ನಟ್ಟಱೊಳಾ ಜಳದೇವಿ ಬೆಸಸೆ ಗಂಗಾಜಳಮಾಯ್ತು ನಿತಂಬಿನೀನಿತಂಬದ್ವಯಸಂ (ಆದಿಪು. ೧೧-೧೪೪). 'ಊರುದ್ವಯಸ' ಪರಾ. [ಸಂ.]

ನಿತಂಬಬಿಂಬ (ನಾ). ದುಂಡನೆಯ ಪೊರವಾರು ; ವೃತ್ತಾಕಾರದ ಪಿರ್ರೆ : ಆಕೆಗಳ ಪೀವರತುಂಗನಿತಂಬಬಿಂಬದೊಂದಗಲದ ವೃದ್ಧಿ ಪೆರ್ಚೆ ನೆಲೆವರ್ಚದುದೀ ಕೊಳಂ (ಶಾಂತಿಪು.೮-೨೮) ; ತೆರೆವಿಡಿದೀಸುವೆಳೆವೇಡಿತಿಯ ಗುರುತರನಿತಂಬಬಿಂಬಮಂ ಮುಳುಂಗಿ ತೋರ್ಪ ಕರಿಣಿಯ ಶಿರಂಗೆತ್ತು (ರಾಜಶೇ. ೬-೨೪ ವ). [ನಿತಂಬ + ಬಿಂಬ]

ನಿತಂಬಸ್ಥ (ಗು). ನಿತಂಬದ ಮೇಲಿರುವ. [ಸಂ.]

ನಿತಂಬಹಸ್ತ (ನಾ). = ನಿತಂಬ ೩ : ನೆಲೆವಡೆದ ಪತಾಕಂಗಳ್ ನೆಲೆ ಮೊಗಮಾಗೊಂದು ಮೇಗುಮೊಗಮಾಗೊಂದುಂ ಸಲೆ ಭುಜದಿನಿಳಿದು ಕಟಿಗಳೊಳಲಸದೆ ತಿರುಗಲ್ ನಿತಂಬಹಸ್ತಮದಕ್ಕುಂ (ಲಾಸ್ಯರಂ.೨-೫೫).

[ನಿತಂಬ + ಹಸ್ತ]

ನಿತಂಬಿನಿ (ನಾ). ೧. ಸ್ಥೂಲವಾದ ನಿತಂಬವನ್ನುಳ್ಳವಳು ; ಚೆಲುವೆ; ಸುಂದರಿ : "ಸ್ಥೂಲನಿತಂಬವುಳ್ಳವಳು ನಿತಂಬಿನೀಯೆನಿಸುಗು" (ನಾಚಿರಾ. ೧೧೬) ; ಪರಿಜನವೆಟ್ಟು ಕಯ್ಗುಡೆ ನಿತಂಬಿನಿ ಮೆಲ್ಲನೆ ವಾಮ ಜಾನುವಂ ಕರತಳದಿಂದಮೂಱ . . . ಅತಿಸಂಭ್ರಮದಿಂದಮೇಟಿ (ಕಾದಂಪೂ. ೩೯೬) ; ಸುಗುಣಾವಲಂಬಿನಿಯರ ಶಿರೋಮಣಿಗೆ ತುಂಬಿತು ನವಮಾಸ ಮಣಿಮಂಚದೆಡೆಯ ನಿತಂಬಿನಿ ತನುವ ಸಾರ್ಚದಳು (ಮೋಹತ. ೧೭-೧೨); ನೋಡದೊ, ನಿತಂಬಿನಿ, ತೊರೆಯ ನಡುವಣಾ ನಿನ್ನ ಮೈಬಣ್ಣದ ಪುಳಿನಪುಂಜದೆಡೆಯಲ್ಲಿ, ಬೆಳ್ದಾವರೆಯ ಬೆಳ್ಪು (ಶ್ರೀರಾಮಾ. ೧೫೪-೫೧). ೨. ಹೆಂಗಸು ; ಸ್ತ್ರೀ : "ರಾಮಾ, ವಾಮಾ . . . ರಮಣೀ, ನಿತಂಬಿನೀ, ವನಿತಾ, ದಯಿತಾ, ಪ್ರತೀಪದರ್ಶಿನೀ, ವಧೂಃ, ವಶಾ, ಯುವತಿಃ—ಈ ೨೮ ಸ್ತ್ರೀಯರ್" (ಹಲಾಯು. ೭೯-೩೨೮) ; "ಭಾಮಿನಿ ನಿತಂಬಿನಿ . . . ಮಹಿಳೆಯಬಳೆ ರಾಮೆ ವರವರ್ಣಿನಿಯೆನಲ್ಕೆ ಹೆಂಗೂಸೆನಿಕ್ಕು" (ಮಂಗರಾ. ೮೯-೧). [ಸಂ. ನಿತಂಬಿನೀ]

ನಿತಂಬಿನೀಕದಂಬ (ನಾ). ಚೆಲುವೆಯರ ಗುಂಪು ; ಸುಂದರಿಯರ ಸಮೂಹ : ಒದವಿಸಲಾರ್ತುದಲ್ಲಿ ಜಳಕೇಳಿಯೊಳಿರ್ದ ನಿತಂಬಿನೀಕದಂಬದ ಮುಖವಬ್ಜಮಂ ನಯನಮುತ್ಪಲಮಂ (ಪುಷ್ಪಪು. ೬-೧೫). [ಸಂ.]

ನಿತಂಬಿನೀಜನ (ನಾ). = ನಿತಂಬಿನೀಕದಂಬ : ನೆಗಟ್ಟ ನೃಪಂ ತನಗಹಿತನಾಗೆ ಮೈಮಱೆದು ನೆಗಟ್ಟ ಭೂಪಂ ನಿಜಸೈನ್ಯನಿತಂಬಿನೀಜನಾ ಕ್ರಂದನಮಂ ಕೇಳುತ್ತುಮಿರ್ಪಂ ಇರುಳುಂ ಪಗಲುಂ (ಪಂಚತಂ. ೨೧೮-೭). [ಸಂ.]

ನಿತಂಬಿನೀನಿವಹ (ನಾ). = ನಿತಂಬಿನೀಕದಂಬ: ಶುದ್ಧಾಂತನಿತಂಬಿನೀ ನಿವಹಮೊಲ್ದೆಳಸುತ್ತಿರೆಯುಂ ಧರಾಂಗನಾಕಾಂತನ ಚಿತ್ತವೇಕಱಯೆ ಮೊಂದದಣಂ ಸುರತೋಪಭೋಗಮಂ (ಕಾದಂಪೂ. ೨೦). [ಸಂ.]

ನಿತಪ್ತ (ಗು). ಕಂದಿದ ; ಕಾಂತಿಗುಂದಿದ : ಉಚ್ಛ್ವಾಸನಿತಪ್ತಾಧರ ರುಚಿಯಂ ಮನುಜೇಂದ್ರಾಂಗನೆಯನೆಯ್ದಿ ಕಂಡಿತೆಂದಳ್ (ಯಶೋಚ. ೨-೩೫). [ಸಂ.]

ನಿತರಾಂ (ಅ). ಅತಿಯಾಗಿ ; ಸಂಪೂರ್ಣವಾಗಿ : ಶತರಾಜ್ಯಲಾಭದಿಂದ ಮುಮತಿಪ್ರಿಯಂ ಮಾತಿದೆನಗೆ ಸತ್ಯಂ ಸತ್ಯಂ ನಿತರಾಂ ಪ್ರಮಾದಿಯೊಳ್ ವಿಸ್ಮಿತಮಾಗದ ನೇಹಮೆನ್ನೊಳಂ ವಸಿಪುದರಿಂ (ಸ್ವಪ್ನವಾ. ೫೮). [ಸಂ.]

ನಿತಾಂತ (ಗು). ೧. ಅಧಿಕವಾದ ; ಹೆಚ್ಚಾದ ; ಅತಿಶಯವಾದ : ಮೇಘನಾದಂ ತನ್ನ ಮಗಂ ಸಿಂಹನಾದಂಗೆ ರಾಜ್ಯಭಾರಮನಿತ್ತು ತಪೋಭಾರ ದೊಳ್ ತಾಂ ನಿಂದು ಶುಭಭಾವನಿತಾಂತಶುದ್ಧಾಂತರಂಗಂ . . . ಕಲ್ನೆಲೆ ನಿಂದು (ಶಾಂತಿಪು. ೬-೧೦೭ ವ) ; ಕವಿಪ್ರತತಿ ನಿತಾಂತಸೇವ್ಯತೆಯಿನೊಂದಿ

ಸರಸ್ವತಿಯಂದದಿಂ ಸರಸ್ವತಿ ದಯೆಗೆಯ್ಗೆ ನಮ್ಮೊಳನುಕೂಲತೆಯಿಂದವೆ ನಿರ್ಮಳತ್ವಮಂ (ಕಾದಂಪೂ. ೨) ; ಮೋಕ್ಷನಿತಾಂತೇಚ್ಛೆಯಿನನಿಬರುಮನಿವರ್ತಿತರಾದರ್ (ವಿಷ್ಣುಪು. ೪-೧೩೭) ; ಹನ್ನೆರಡುವರ್ಷಗಳಲ್ಲಿ ಕನ್ನಡ ಕಲಿತು ಇಂಥ ನಿತಾಂತಸುಂದರವಚನಗಳನ್ನು ರಚಿಸಿದುದು ಮರುಳು ಶಂಕರದೇವನ ಸಾಹಸವೆಂದೇ ಹೇಳಬೇಕು (ಶರಚ. ೩೪೫) ; ಭೂದೇವಿ ವಿಸ್ಮಯಮೂಕಳಾಗಿ ನೋಡುತ್ತಿರುವಂತೆ ಎಲ್ಲೆಡೆಯಲ್ಲೂ ನಿತಾಂತಮೌನ ವ್ಯಾಪಿಸಿರುತ್ತದೆ (ಬೆತಂಬಾ. ೯೩) ; ಈ ಷಡ್ದರ್ಶನಗಳ . . . ಉದ್ದೇಶ—ಬಂಧ, ಬಂಧಕಾರಣ, ಮೋಕ್ಷ, ಮೋಕ್ಷೋಪಾಯಗಳ ನಿತಾಂತ ವಿಮರ್ಶೆ (ಭಾರದ. ೧೨೨). (ನಾ). ೨. ಹಿರಿದು ; ದೊಡ್ಡದು : "ಕಾಮಂ, ಪ್ರಕಾಮಂ, ಪರ್ಯಾಪ್ತಂ, ನಿತಾಂತಂ . . . ಅತಿಮರ್ಯಾದಂ, ಅತಿವೇಳಂ—ಈ ೮ ಹಿರಿದಾಗಿರ್ದುದು" (ಹಲಾಯು. ೧೧೯-೩೬) ; "ನಿತಾಂತ ಮತ್ಯರ್ಥಮತಿವೇಳಂ ಪ್ರಕಾಮಮತಿಮರ್ಯಾದಮೆನಲು ಪಿರಿದೆನಿಕು" (ಮಂಗರಾ. ೧೨೯-೧೪). [ಸಂ.]

ನಿತಾಂತಂ (ಅ). ಬಹುವಾಗಿ ; ಹೆಚ್ಚಾಗಿ ; ಅತಿಶಯವಾಗಿ ; ಬಹಳವಾಗಿ : ನುತಶಿಶಿರಕಿರಣಕಾಂತಿಪ್ರತತಿಯನೊಡಗೂಡಿ ಮಾಡಿದ ವೊಲಾಯಿತ್ತಿಂತತಿಶಯಮಿನಿ ನಿನ್ನ ಮುಖಂ ನಿತಾಂತಮೆಂಬಾಗಳಱಿಗಭೂತೋಪಮೆಯಂ (ಕವಿರಾ. ೩-೭೮) ; ಆ ರಾಶಿಯಂ ನೋಟಿಪ್ಪೊಡೆ ಕೃಶತನುವಕ್ಕುಂ ನರಂ ತದ್ಗೃಹಂ ಸ್ತ್ರೀಗೃಹಮಾದಂದುಗ್ರರಾಲೋಕಿಸೆ ಕೃಶತನು ತತ್ಕಾಂತೆಯಕ್ಕುಂ ನಿತಾಂತಂ (ಜಾತತಿ. ೨೧-೮) ; ಆಗ್ರಹಿಸಿ ತರ್ಕಶಾಸ್ತ್ರಸಮಗ್ರತೆಯಂ ತೋರ್ಪುದಿಲ್ಲಿ ನೀಮೆನೆ ಕುಳಿಕಾಹಿಗ್ರಸ್ತರಂತೆ ನುಡಿವುದವಗ್ರಹಮೆಂದುರ್ಗುಗೊಂಡರಂತೆ ನಿತಾಂತಂ (ಸುಕುಮಾ. ೨-೧೯) ; ಈ ಧರೆಯೊಳ್ ದೌರ್ಜನ್ಯರೆಲ್ಲಂ ಪರಕೃತಿನುತಿಗಂ ಸಲ್ವರಲ್ಲಂ ನಿತಾಂತಂ (ಪುಣ್ಯಾಸ್ರ. ೧-೨೪) ; ಸತ್ಕಾವ್ಯದಂತಬ್ಧಿಯಂತೆ ನಿತಾಂತಂ ಸರಸಂ ವಿರಾಜಿಸಿದನಾ ರಾಜೇಂದ್ರಪಂಚಾನನಂ (ರಾಜಶೇ. ೩-೧೦). [ಸಂ.]

ನಿತಾಂತವಂದ್ಯ (ನಾ). ಅತ್ಯಂತ ಪೂಜ್ಯ ; ಅಧಿಕ ಗೌರವಕ್ಕೆ ಪಾತ್ರನಾದವನು : ಜೈನದರ್ಶನಕ್ಕೆ ಮೂಲರಾದ ಆದಿತೀರ್ಥಂಕರರು, ಋಷಭದೇವರು ವೈಷ್ಣವ ಆಗಮಗಳಿಗೂ ನಿತಾಂತವಂದ್ಯರಾಗಿರುವರೆಂಬುದು ನಮಗೆ ಕಂಡುಬರುವುದು (ಭಾರದ. ೧೬೮).

[ನಿತಾಂತ+ವಂದ್ಯ]

ನಿತಾಂತಶಠ (ನಾ). ಅತ್ಯಂತ ತಿಳಿಗೇಡಿಯಾದವನು ; ಮಹಾಮೂರ್ಖ : ನಿಷ್ಠುರನೊಳ್ ನಿತಾಂತಶಠನೊಳ್ ನಿಸ್ನೇಹಮಂ ತೋರ್ಪ ಸಂಚಳನೊಳ್ ಸದ್ಗುಣಹೀನನೊಳ್ ನೆರೆವ ಕೂಟಂ ನಂಜಿನೂಟಂ ಸಖೀ (ರಾಜಶೇ. ೧೧-೧೫೧). [ನಿತಾಂತ+ಶಠ]

ನಿತ್ತ 'ನಿಲ್' ಪರಾ.

ನಿತ್ತಧರ್ಮ (ನಾ). ಪ್ರತಿದಿನವೂ ಮಾಡುವ ಧರ್ಮ,—ಪುಣ್ಯಕಾರ್ಯ : ಈ ನಿತ್ತಧರ್ಮ್ಮಮಾನ್ಕಾದೋರಾ ಕುಲಮ್ ಪೆಟ್ಟುಗೆ (ಎಕ. VI, ಕೊಪ್ಪ. ೩೭-೮ ; ಸು. 675 ?). [<ಸಂ. ನಿತ್ಯಧರ್ಮ]

ನಿತ್ತರಣೆ (ನಾ). ಉದ್ಧಾರ ; ರಕ್ಷಣೆ : ಪಳ್ಳದೊಳಗಣ ಬಳಂಬೆಯಂತೆ ದ್ರೋಹನ ನಿತ್ತರಣೆಯಂತೆ (ಧರ್ಮಾಮೃ. ೯-೨೩).

[<ಸಂ. ನಿಸ್ತರಣ]

ನಿತ್ತರಿಸು (ಕ್ರಿ). ೧. ಸಹಿಸು ; ಸೈರಿಸು ; ತಾಳಿಕೊಳ್ಳು : ಇನ್ನೆವರೆಗಮಿರ್ದೆವಿನ್ನೆಮಗೆ ನಿತ್ತರಿಸಲ್ ನೆಱವಿಲ್ಲ ತಾಱಲಾದುಪು ತನುಕೂಟ ನೀರ ದೆಸೆಯಿಲ್ಲದೊಡಲ್ಗಳನೆಂತು ತಾಳ್ದುವಂ (ಅಜಿಪು. ೯-೮೯) ; ಇತ್ತಂ ವಿಶ್ವನಂದಿಗಂ ವಿಶಾಖನಂದಿಗಂ ಒಂದು ನಂದನ ವ್ಯತಿಕರಣದಿಂ ಕಲಹಮಾಗೆ ವಿಶಾಖನಂದಂ ನಿತ್ತರಿಸಲಾಱದೋಡುವುದುಂ (ಚಾವುಂಪು. ೧೪೧) ; ನಿಸಿತಾಸ್ತ್ರಾಘಾತದಿಂ ಸತ್ತ ಭೂಪರ ಪೆಂಡಿರ್ ಬಿಸುಸುಯ್ಯೆ ನೀಳ್ದ ಶಿಖಿ ತಂನಂ ಮುಟ್ಟೆ ನೊಂದಿಂದು ನಿತ್ತರಿಸಲ್ತಾನಣಮಾಱದೆ (ಎಕ. VIII, ಸಾಗರ. ೧೦೯-೩೫ ; 1042) ; ಹೊತ್ತು ತುಂಬಿದವಳು ತನ್ನ ನಿತ್ತರಿಸುವ ಬೇನೆಯನಱಿವಳು (ಮೋಳಿಮಾ. ೧೯-೨೬) ; ಮದನದಹನಂ ಪತ್ತೆ ನಿತ್ತರಿಸಲಾಱದೆ ಲಲನೆಯ ಲಾವಣ್ಯರಸದ ಬಯಲೊನಲೊಳೋಲಾಡಿ ಬಿಟ್ಟಂತೆಯುಂ . . . ಕಂದರ್ಪದೇವನಿರ್ಪುದುಂ (ಲೀಲಾವ. ೩-೬೦) ; ಸುರನದಿ ಬತ್ತೆ ನಿತ್ತರಿಸದೊರ್ಮೊದಲಲ್ಲಿಯ ಬಾಳೆಮೀಂಗಳೇ ಧರಣೀತಳಕ್ಕೆ ಬಿಟ್ಟಪುವು (ಜಗವಿ. ೧೮-೪೮) ; ಬೊಜಗನೊರ್ವಳೊಲ್ವಳಂ ನುಡಿದು ಬೇಳಾಗಿ ಕೇಳಿವನದೊಳೆಸಟ ಪಸೆಯೊಳ್ ಪೊರಳ್ದು ಪೊತ್ತುಗಳೆದಿರುಳಿನ ಜೊನ್ನದುರಿವರಿಗೆ ನಿತ್ತರಿಸಲಾಱದೆ (ಅನಂಪು. ೮-೩೨ ಪ) ; ಸಿಡಿಮಿಡಿಗೊಂಡು ತನ್ನ ಮನೆಯ ವಿತ್ತಮೆಲ್ಲಂ ಪೋಗಲಿಯೆಂದು ಬಾರಿಸೆ ಎಲ್ಲಂ ಪೋಯ್ತಾ ನೆರೆಮನೆಯವನರ್ಧಂ ಪೋಯ್ತು ಮತ್ತೆ ನಿತ್ತರಿಸದನ್ನು ವೆರಡುಕಣ್ಣೊಡೆದು ಪೋಗಲಿ ಎಂದು ಬಾರಿಸೆ (ಧರ್ಮಪ. ೪-೧೫ ಪ) ; ಉತ್ತರ ನಗರದೊಳೊಬ್ಬ ಪಾತಕ ತನ್ನ ಪೆತ್ತ ತಾಯಿಗೆ ಅಳುಪಿದರೆ ನಿತ್ತರಿಸದೆ ಊರ ಜನರೆಲ್ಲ ಹೋಗೆಂದು ಅತ್ತ ನೂಕಲಾಗವರು (ಸನ್ನಕಾ. ೧೩-೩). ೨. ಪಾರಾಗು : ಪರಹಿತವಿದಾತ್ಮಹಿತಮೆಂಬೆರಡುಮನುಟಿಪಿದಟಲನೆಮಗೆ ಮಾಡಿದವಂ ನಿತ್ತರಿಸಂ ತಿರ್ಯಗ್ಜಾತಿಯೊಳೆರಡಿಲ್ಲದೆಯಿಂ ವಿಜಾತಿಪುಟ್ಟದೆ ಮಾಣಂ (ಕಾದಂಉ. ೪೮೪) ; ತಿರಿಕ ನಾರಕ ಮಾನವಾಮರಲೋಕದೊಳ್ ನೆಲೆಗೊಂಡು ನಿತ್ತರಿಸದೆಲ್ಲಿಯುಂ (ಧರ್ಮಾಮೃ. ೧-೬೫) ; ಸಿರಿಗೆಡಱು ಜಡತೆ ಭಾರತಿಗಿರದಾಡವೊಲಾತ್ಮವೇದಿಗೆತ್ತಾನುಂ ದುಶ್ಚರಿತಂ ತೋಱಿದೊಡದು ನಿತ್ತರಿಕುಮೆ ಕಳ್ತಲೆ ತಮೋರಿಗಿದಿರಾದಪುದೇ (ಉಸಾರ. ೨೯-೧೭೫) ; ಒತ್ತಾಗಿ ಬಲೆಯ ಬೀಸಿದನು ನಿತ್ತರಿಸದೆ ಪಕ್ಷಿ ಬಲೆಯೊಳು ಬೀಳಲು ಸುತ್ತಿ ಹಾಕಿದ ಕಲ್ಲಿಯೊಳಗೆ (ಕಪೋತ. ೭-೨೪). ೩. ಸಾಗಿಸಿಕೊಂಡು ಹೋಗು ; ನಿಭಾಯಿಸು ; ನಿರ್ವಹಿಸು : ಅರಿದು ಗೆಲಲ್ಕೆ ಪಾರ್ವನ ಶರಾಸನವಿದ್ಯೆಯನೆಂದು ನೊಂದು ನಿತ್ತರಿಸದೆ . . . ಭಾಸ್ಕರಸುತನೊಯ್ಯನೋಸರಿಸೆ (ಪಂಪಭಾ. ೩-೭೧) ; ತದ್ಭಾರಮಂ ಪೊತ್ತುಂ ನಿತ್ತರಿಸುತ್ತಿರ್ಪುದಱಿಂದೆ ನೀನೆ ಪಿರಿಯೈ ಶ್ರೀದಾನಚಿಂತಾಮಣೀ (ಅಜಿಪು. ೧೨-೯) ; ನಾಮವರೊಳ್ ಪಗೆಯನೆತ್ತಿಕೊಂಡು ನಿತ್ತರಿಸಲಱಿಯೆವು (ಪಂಚತಂ. ೨೪೦-೧೫) ; ಮಹೋಗ್ರನೆಂಬ ಪೆಸರಂ ಕೈಕೊಂಡನಂ ಪೊರ್ದಿ ಬಿತ್ತರದಿಂ ನಿತ್ತರಿಸಲ್ಕೆ ಬಾರದೆನುತಂ ನಿಶ್ಚಯಿಸಿ ಬಿಟ್ಟುಂ ಜಿನೇಶ್ವರನಂ ಶಂಕರನಂ ಗುಣಾಕರನನತ್ಯಾನಂದದಿಂ ಪೊರ್ದುವರ್ (ಸಮಪ. ೮-೧೦೭) ; ಕರಗಸ ಗಾಳ ನಿಚ್ಚಣಿಗೆ ದಬ್ಬುಕವೆಂಬಿವನಿಕ್ಕಿ ಕಾದಿ ನಿತ್ತರಿಸದೆಯೋಡಿಹೋದ ಬೆಳ್ಳೆರಳೆಯ ಬೇಂಟೆಯಲು ಕೊಲಲುವೊಲ್ಲದೆ ಕಾವನು ವಿಕ್ರ[ಮ]ಭೂಭುಜ (ಸೌಇಇ. IX-i, ೨೭೬-೩೩ ; 1183) ; ಅರರೆ ಚತುರ್ಬಲಂ ಬೆರಸು ಭೋಂಕನೆ ನೂಂಕಿದ ವೀರತಾರಕಾಸುರನೊಳ್ . . . ಅವನೊಡರ್ಚುವನಾವನಾಂತು ನಿತ್ತರಿಸುವಂ (ಗಿರಿಕ. ೬-೭೫) ; ಆ ನಾಗನಾಂತ ಪೊಱಿಯಂ ಭೂನಾಗಂ ಪೊತ್ತು ದೇವ ನಿತ್ತರಿಸುವುದೆ (ಅನಂಪು. ೩-೯೦) ; ಎಮ್ಮಯ ವಂಶದಿಕ್ಕರಿಗಳೆಂಟು ಮಿಳಾತಳಭಾರಮಂ ಕೊರಳ್ ಕೊಮ್ಮಿಸಿ ಪೊತ್ತು ನಿತ್ತರಿಸುತಿರ್ದೊಡಮೀ ನೆಲನೆಯ್ದೆ ಕಾಯ್ದು ಸುಡುತಿರ್ದಪುದೆಂದಿಡುವಂತೆ ಪುಯ್ಯಲಂ ತಮ್ಮ ಕರಾಗ್ರದೊಳ್ ತೊವಲನಾಂತು ನೆಟಲ್ಗೆ ತೊಟಲ್ದವಾನೆಗಳ್ (ಬಾಧಪು. ೪-೮೩) ; ಬಹಳ ಭಂಗಂಬಡೆದು ಕದನಮಂ ನಿತ್ತರಿಸಲಾಱದಾಳ್ವೇರಿಯಿಂ ಕೆಡೆದರಗಳೊಳಗಾಗಲಸುರಭಟರು (ಚೆಬಪು. ೨೪-೩೦) ; ಎತ್ತಿಕೊಂಬಳು ಪೆಣನನು ಮತ್ತೆ ದಣಿಯದೆ ಮುತ್ತ ಕೊಡುವಳು ಮಗನಿಗೆ ನಿತ್ತರಿಸುವೆ ನಾನಿನ್ನಾವಪರಿಯೆಂದು ಹೆತ್ತ ತಾಯಿ ಹಲುಬುವಳು (ಧನ್ಯಚ. ೯೨). ೪. ಪಾರುಮಾಡು ; ದಾಟಿಸು ; ಉದ್ಧಾರಮಾಡು : ಬಾಲತ್ವದೊಳ್ ಉಪಾಸಕಾಧ್ಯಯನಮನೋದಿ ಲಬ್ಧಸಂಸ್ಕಾರನಾದಾತಂ

ತನ್ನುಮಂ ಪೆಱರುಮಂ ಕೊಂಡು ನಿತ್ತ[ಪಾಠಾಂ. ಸ್ತ]ರಿಸುಗುಂ (ಚಾವುಂಪು. ೯೬) ; ಸುರಿವ ಕೂರ್ಗಣೆಯಿಂದ ಕೂರ್ಗಣೆಯೆಚ್ಚು ನಿತ್ತರಿಸಿ ಮಾರ್ಬಲವ ರಕ್ಷಿಸಿದ (ಮೋಹತ. ೪೦-೫೦). ೫. ಉಳಿ ; ಸುರಕ್ಷಿತವಾಗಿರು ; ತಪ್ಪಿಸಿಕೊಳ್ಳು : ಅರಣ್ಯದೊಳ್ ನಿತ್ತರಿಪಂತು ನಾಡಗಡಿಯಂ ಮಱೆದುಂ ಪುಗದಂತವಂಗೆ ಭೂಪೋತ್ತಮನಾಜ್ಞೆಯೆಂಬ ಮಣಿಮಂಡನಮಂ ನಡುನೆತ್ತಿಗಿತ್ತು ದಿಗ್ಭಿತ್ತಿಗೆ ಕೀರ್ತಿಚಂದನವಿಲೇಪಮನಿತ್ತನಿದೇನುದಾತ್ತನೋ (ಪಂರಾಮಾ. ೪-೭೪) ; ಕುಡಲಾರ್ಪ್ಪನೇ ಕನಕಶೈಳಂ ದೂರವಾಗಿದ್ದುರ್ ನಿತ್ತರಿಸಿತ್ತು (ಎಕ. V, ಬೇಲೂರು. ೫೮-೩೯ ; 1117). ೬. ತಡೆಯಲ್ಪಡು ; ಅಡ್ಡಿಹೊಂದು : ಎಣ್ಡೆಸೆಯಿಂ ಬಿಡೆ ಬೀಸೆ ಗಾಳಿ ನಿತ್ತರಿಸದೆ ಬೀಸಿದಂದು ಮಱೆಯಿಲ್ಲ[ಪಾಠಾಂ. ನಿಸ್ತರಿಸಿದೆಂದು ಮಱೆ]ನೆಲಂ ಪುಡಿವಿಟ್ಟು ಪಾಱುಗುಂ (ಜಟ್ಟಮ. ೪-೨). ೭. ಕಳೆ ; ಮೀರು : ಪೊತ್ತು ನಿತ್ತರಿಸಲಾ ಕನ್ನೆ ಕೈಸಾರ್ವುದಿನ್ನೆತ್ತ (ಜಿನಮು. ೩-೧೯). ೮. ಬೀಸು ; ತೀಡು : ಕಂಪನವುಂಕಿ ಪೊತ್ತು ನಿತ್ತರಿಪೆರಲೆಂಬಿವೇವುವೊ ಮದೀಯ ಮನೋಗತಕಾಮರಾಗಸಾಗರದೊದವಿಂಗೆ ನಲ್ಲಳ ವಿಲೋಕನ ಚಂದ್ರಿಕೆಯೊಂದೆ ಸಾಲದೇ (ಪಂಪಭಾ. ೫-೧೧). [<ನಿಸ್ತರಿಸು]

ನಿತ್ತವ್ಯವಸ್ಥೆ (ನಾ). ನಿತ್ಯವೂ ನಡೆಯುವಂತೆ ಮಾಡಿದ ಏರ್ಪಾಡು : ಶ್ರೀರಣಸಾಗರಾಳುಪೇನ್ದ್ರರಾ ರಾಜ್ಯದುಳ್ಳೆ ಕವುಳಪ್ಪಳ್ಮುಟ್ಟೆಱೆಯೆ ಪದಿನೆಣ್ಟುಪಟ್ಟಣಮುಮ್ ನಿತ್ತವ್ಯವಸ್ಥೆ . . . ಈ ವ್ಯವಸ್ಥೆ ಆಗೆ ಊರು ರಕ್ಷಿಪ್ಪುದು (ಸೌಇಇ. VII, ೨೮೪-೬ ; ?). [<ಸಂ. ನಿತ್ಯವ್ಯವಸ್ಥಾ]

ನಿತ್ತಿರಿಕೆ 'ನಿಲ್' ಪರಾ.

ನಿತ್ತು 'ನಿಲ್' ಪರಾ.

ನಿತ್ತೆ (ನಾ). ಒಂದು ಬಗೆಯ ಸಸ್ಯ : (ಮೈಔಗಿ. ೨-೩೬). [?]

ನಿತ್ಯ1 (ಗು). ೧. ಪ್ರತಿದಿವಸದ ; ದಿನನಿತ್ಯದ : 'ನಿತ್ಯಜೀವನ', 'ನಿತ್ಯಜ್ವರ' ಪರಾ. (ನಾ). ೨. ಪ್ರತಿದಿವಸ ; ಪ್ರತಿದಿನ : ನಿತ್ಯದಲ್ಲಿ ಹಲವು ಕೆಲಸ ಭೃತ್ಯನಂತೆ ಮಾಡಿ ರಿಕ್ತಹಸ್ತದಿಂದ ಮನೆಗೆ ಸೇರುವೆ (ಕನಕ. ೪೬-೧) ; ದೇವಿಚರಿತವನಿದನು ನಿತ್ಯದಲೋದಿಕೊಂಡಿರಲು ಈವಳ್ಳೆ ಬೇಡಿದ್ದ ಬಯಕೆಗಳ (ದೇವೀವ. ೧೧-೧೮) ; ನಿತ್ಯ ಸಾಯುವವರಿಗೆ ಅಳುವವರು ಯಾರು ? (ಗಾವೆ).

ನಿತ್ಯಾಲು = ಪ್ರತಿದಿನ ; ದಿನಂಪ್ರತಿ : ಪಂಚಪಾಂಡವರಾ ವರಜನನಗಳಾ ಕಾಲಕಾಲದೊಳಾವುವುದ್ಭವದಾಳಿದವರವರಾಲಯಕೆ ನಿತ್ಯಾಲು ಪೌರೋಹಿತರು ನಾವಹುದೆಂದ ಧರ್ಮಜನು (ಜಿನಭಾ. ೨೦-೫).

[ಸಂ. ನಿತ್ಯಂ]

ನಿತ್ಯ2 (ಗು). ೧. ಶಾಶ್ವತವಾದ ; ನಿರಂತರವಾದ ; ಯಾವಾಗಲೂ ಇರುವ ; ಅನಂತವಾದ : ಇಂತೀ ತತ್ವದಾದ ತಾನೆಂತೆನಲು ಆ ಪರಬ್ರಹ್ಮವಪ್ಪ ನಿತ್ಯನಿರಾಳ ನಿಃಶೂನ್ಯಲಿಂಗವೇ ತನ್ನ ಲೀಲಾವಿಲಾಸದಿಂದ ತಾನೆ . . . ಮಹಾಲಿಂಗವೆಂದೆನಿಸಿತ್ತು (ಮಹಾದೇ. ಕ. ೧೪೬-೩೪೧) ; ದೇಹ ಕರಣಾದಿ ಪ್ರಪಂಚವು ನಾಹಮೆನಲಳಿದುಳಿದ ನಿತ್ಯ ನಿರೀಹವಿಮಳ ಜ್ಞಾನರೂಪನು ನಿನ್ನ ನೋಡೆಂದ (ಕುಸ್ಯಾದ್ರೋ. ೧೮-೫೯). 'ಅನಿತ್ಯ' ಪರಾ. ೨. ದಿನವೂ ಮಾಡುವ ; ದೈನಂದಿನ ಆಚರಣೆಯ. 'ನಿತ್ಯಕರ್ಮ' ಪರಾ. (ನಾ). ೩. ಶಾಶ್ವತವಾದುದು : ಸ್ಥಿರವಾದುದು ; ಎಂದೆಂದಿಗೂ ನೆಲಸಿರುವಂಥದು : "ನಿತ್ಯಂ ಧ್ರುವಂ ಶಾಶ್ವತಮದು ಸನಾತನಮನಶ್ವರಂ ಸ್ಥಿರಮೆನಿಕ್ಕು" (ಮಂಗರಾ. ೮-೨೫) ; ಸತಿಸುತರು ಮನೆ . . . ಭೋಗೈಕಸಂಪದವು ನಿತ್ಯವಲ್ಲ (ನಳಚ. ೪-೩೯) ; ನಿತ್ಯವಲ್ಲ ನಿತ್ಯವಲ್ಲ ಅನಿತ್ಯ ದೇಹವಿದಣ್ಣ (ಪುರಂದ. ೨-೯೪ ಸಲ್ಲವಿ) ; ಸತ್ತು ಚಿತ್ತು ಆನಂದ ನಿತ್ಯಪರಿಪೂರ್ಣ ಅಖಂಡವೆಂಬ ಆಱು ಲಕ್ಷಣಯುಕ್ತವಾದ ಮಹಾಲಿಂಗವೇ ಪತಿ ನಾನೇ ಶರಣಸತಿ (ಅಖಂಡೇ. ೨೪೬-೧) ; ವಾಗರ್ಥಗಳ ಸಂಬಂಧ ನಿತ್ಯವಾದುದು. ಹಾಗೆಯೇ ಪಾರ್ವತೀಪರಮೇಶ್ವರರ ಸಂಬಂಧವೂ ನಿತ್ಯವಾದುದೇ (ಭಾರದ. ೪೫೦) ; ಮುಕ್ತಿಕಾಲದಲ್ಲಿ ಅವನೊಳಗೇ ಸೇರಲಿರುವುದರಿಂದ ಜೀವ ಜಗತ್ತುಗಳು ಮಿಥ್ಯೆ ಅಥವಾ ವಸ್ತುಕಲ್ಪಿತವೆನಿಸಲಾರವು. ಆದರೆ ಅವು ಸತ್ಯ ನಿತ್ಯಶಾಶ್ವತವಸ್ತುಗಳೇ ಆಗಿರುವುವು (ಶಕ್ತಿವಿ. ೧೪). ೪. ಶಾಶ್ವತವಾಗಿರುವವನು ; ಪರಮಾತ್ಮ ; ದೇವರು : ನಿತ್ಯಂ ನಿರೀಂದ್ರಿಯಂ ಸಂಪ್ರತ್ಯಯನವಿನಾಶಿ (ಮಲ್ಲಿಪು. ೧೪-೬೮) ; ಕೂಡಲಸಂಗಯ್ಯನೇ ನಿತ್ಯ ಉಳಿದ ದೈವವೆಲ್ಲಾ ಅನಿತ್ಯ (ಬಸವ. ೫೫೨) ; ಪರಮಾತ್ಮನೆನ್ನನೆಂದೊಡೆ ಚರಮಾಂಗಪ್ರಮಿತನಖಿಲಲೋಕಸಮಾನಂ ನಿರವಯವಂ ನಿತ್ಯಂ[ಪಾಠಾಂ. ನಿರಂಜನ]ನಿರ್ದುರಿತನನಂತ ಪ್ರಬೋಧದರ್ಶನಸೌಖ್ಯಂ (ಯಶೋಚ. ೪-೨೦) ; ಸುರಗಿರಿಯ ಶಿಖರದೊಳು ಇರುತಿಹನ ನಿರ್ಮಲನ ನಿತ್ಯನ ನಿರುಪಮನ . . . ಗುರುತರಿವರಾರೆಂದ (ಗಗತಾ. ೧೬-೧). ೫. ಸ್ಥಿರವಾದ ಪದವಿ ; ಮೋಕ್ಷ : ಧ್ರುವಂ ಸನಾತನಂ ನಿತ್ಯಮವಿನಶ್ವರವಪ್ರತಿಚ್ಯವ ಶಾಶ್ವತಸ್ಥಾನಮೆಮಗಕ್ಕೆ ನಿರಾಕುಳಂ (ವಸ್ತುಕೋ. ೨೧-೨೦). ೬. ಮೋಕ್ಷವನ್ನು ಪಡೆದವನು ; ಜೀವನ್ಮುಕ್ತ : ನಿತ್ಯನೆಂದೆನಿಸಯ್ಯ ಎನ್ನ (ಅಖಂಡೇ. ೭೮-೬೦) ; ಸತ್ಯರನುಡಿ ತೀರ್ಥ ನಿತ್ಯರ ನಡೆ ತೀರ್ಥ . . . ಹರಿವ ನೀರೆತ್ತಣದು ತೀರ್ಥ (ಸರ್ವಜ್ಞ. ೮೦೦). ೭. (ಸಂಧ್ಯಾವಂದನೆ, ಪೂಜೆ ಮುಂತಾದ) ನಿತ್ಯಕರ್ಮ ; ನೇಮ : ಗುರುವಚನವಲ್ಲದೆ ನಿತ್ಯವೆಂದೆನಿಸದು ಗುರುವಚನವಲ್ಲದೆ ನೇಮವೆಂದೆನಿಸದು (ಬಸವ. ೭೨) ; ಅಂಬರದಿ ಉಡುಗಣಂಗಳ ಸಹಿತೆ ವಿಭವದಿ ಉಡುಗಣಾಧೀಶ್ವರನು ಮೂಡಿದ ಪೊಡವಿಪತಿ ನಿತ್ಯವನು ಸಲಿಸಿದನು (ಕೌತಿರಾ. ೧೬-೨೧) ; ನಿತ್ಯವಿಲ್ಲ ನೇಮವಿಲ್ಲ ಮತ್ತೆ ದಾನಧರ್ಮವಿಲ್ಲ ವ್ಯರ್ಥವಾಗಿ ಕೆಡದೆ ಪುರುಷೋತ್ತಮನ ನೆನೆಯಿರೊ (ಪುರಂದ. ೨-೧೦-೧) ; ನಿತ್ಯನೈಮಿತ್ತಿಕದ ಕರ್ಮಗಳ ಸನುಮತದಲಾರ್ಜಿಸಲು (ಗಗತಾ. ೧೬-೩೧) ; ಮಾನವನ ಕಾಯಿಕ . . . ನಿತ್ಯ, ನೈಮಿತ್ತಿಕ, ಕಾಮ್ಯ, ನಿಷಿದ್ಧ, ವಿಹಿತ, ಕೃತಿಗಳೆಲ್ಲ 'ಕರ್ಮ' ಪದದಲ್ಲಿಯೇ ಅಡಕವಾಗುತ್ತವೆ (ಧರ್ಮಸಾ. ೧೩೦). ೮. ಪ್ರತಿದಿನದ ಸೇವೆ ; ನಿತ್ಯವ್ಯವಸ್ಥೆ : ಇನ್ತೀ ಚತು[ಃ]ಸೀಮೆಯೊಳಗಣ ಬಾಳನೂ ತೆಂಗಿನ ತೋಟವನೂ ನಿತ್ಯಕೆ ಬಿಟ್ಟೆನು (ಸೌಇಇ. IX-II, ೪೪೮-೧೫ ; 1442). ೯. ಒಂದು ಬಗೆಯ ಸಸ್ಯ ; ಪ್ರಿಯಾಲ : "ಸನ್ನಃ—ಪುರಾಣಿ, ನಿತ್ಯ" (ಓಷಧಿ. ೧೭೪). ೧೦. ಕಡಲು ; ಸಮುದ್ರ. ೧೧. [ವ್ಯಾಕ] ವಿಕಲ್ಪವಲ್ಲದುದು ; ಅಗತ್ಯವಾದುದು : ಪ್ರತಿಷೇಧದ ಧಾತುಗೆ ಮುಂದೆ ತಱುಂಬೆ ವಿಭಕ್ತಿಪೂರ್ವಕಾಲಕ್ರಿಯೆಯೊಳಾ ಪ್ರತಿಷೇಧದದೆಂಬುದು ತೋಱೆ ಮೇಣ್ ದ್ವಿತ್ವವೃತ್ತಿ ನಿತ್ಯಮೆನಿಕ್ಕುಂ (ಶಮದ. ೭೧) ; ಇದುವರೆಗೆ ಹೇಳಿದ ಸಂಧಿಕಾರ್ಯಗಳೆಲ್ಲ, ಪ್ರಕೃತಿಗೆ ಪ್ರತ್ಯಯವು ಸೇರುವಾಗಲೂ ಸಮಾಸದಲ್ಲೂ ನಿತ್ಯವಾಗಿ ಬರುತ್ತವೆ (ಮಧ್ಯಮ. ೨೧). ೧೨. [ವಿಶಿಷ್ಟಾ]ಮೂರು ಬಗೆಯ ಜೀವಾತ್ಮರಲ್ಲಿ ಒಂದು ಬಗೆ ; ೧ ವಿಶಿಷ್ಟಾದ್ವೈತಸಿದ್ಧಾಂತದಂತೆ ಜೀವರಲ್ಲಿ ನಿತ್ಯ, ಮುಕ್ತ ಮತ್ತು ಬದ್ಧ ಎಂಬುದಾಗಿ ಮೂರು ವಿಧ. ಯಾವಾಗಲೂ ಸಂಸಾರಕ್ಕೆ ಸಿಲುಕದ ಜೀವರು ನಿತ್ಯರು—ಗರುಡ ಮೊದಲಾದವರು. ಇವರಿಗೆ ನಿತ್ಯಸೂರಿಗಳೆಂದೂ ಹೆಸರು. ಸಂಸಾರದಲ್ಲಿದ್ದು ಪ್ರಕೃತಿಸಂಬಂಧವನ್ನು ಬಿಡಿಸಿಕೊಂಡವರು ಮುಕ್ತರು—ಶುಕ, ವಾಮದೇವ, ವ್ಯಾಸ ಮತ್ತು ಆಳ್ವಾರರು ಮೊದಲಾದವರು. ಪ್ರಕೃತಿಸಂಬಂಧದಿಂದ ಸಂಸಾರದಲ್ಲಿರುವವರು ಬದ್ಧರು : ಈ ಜೀವಾತ್ಮತತ್ತ್ವವು ನಿತ್ಯ, ಮುಕ್ತ, ಬದ್ಧ ಎಂದು ಮೂರುವಿಧ. ಯಾವಾಗಲೂ ಸಂಸಾರವೆಂಬ ಪ್ರಕೃತಿಸಂಬಂಧವಿಲ್ಲದ ಅನಂತ, ಗರುಡ, ವಿಷ್ವಕ್ಸೇನ ಮೊದಲಾದ ಭಗವಂತನ ಪರಿಜನರು ನಿತ್ಯರು (ಹಿಂದಸಾ. ೨೪೬).

ನಿತ್ಯಾನಿತ್ಯ = ಶಾಶ್ವತ ಮತ್ತು ಅಶಾಶ್ವತ ; ಸ್ಥಿರ ಮತ್ತು ಅಸ್ಥಿರ : ಅದಿ ಅನಾದಿಯ ನಿತ್ಯಾನಿತ್ಯವ ತಿಳಿಯಲಱಯದೆ ವಾಯಕ್ಕೆ ಪರಬ್ರಹ್ಮವ ನುಡಿವ ವಾಯುಪ್ರಾಣಿಗಳವರೆತ್ತ ಬಲ್ಲರೋ ಆ ಪರಬ್ರಹ್ಮದ ನಿಜದ ನಿಲವ (ಮಹಾದೇ. ಬ. ೧೧೧-೨೩೫) ; ಅಮೃತದಿಂದುವ ಸೇವಿಸಿ ನಿತ್ಯಾನಿತ್ಯವ ಗೆದ್ದು ನಿರ್ಮಲ ನಿರಾವರಣನಾದೆನು (ಸಿದ್ಧೇ.೧೨೬-೩೮೦) ; ಧರ್ಮ ಧರ್ಮಿಗಳಿಗೆ ಅಭೇದವನ್ನು ಸ್ವೀಕರಿಸಿರುವುದರಿಂದ ನಿತ್ಯಾನಿತ್ಯ ವ್ಯವಸ್ಥೆಯಿಲ್ಲದೆ ಹೋಗುವುದು (ಹಿಂದಸಾ. ೨೭೭). ನಿತ್ಯಾನಿತ್ಯವಸ್ತು = ಶಾಶ್ವತವಾದ ಮತ್ತು ಅಶಾಶ್ವತವಾದ ವಸ್ತು ; ಸ್ಥಿರ ಮತ್ತು ಅಸ್ಥಿರವಾದ ವಸ್ತು : ಭಜಿಸು ನಿತ್ಯಾನಿತ್ಯವಸ್ತುವ ವಿಜಯನಹೆ ಇಹಪರಕೆ ತತ್ವದ ನಿಜವಿದೆಲೆ ಧೃತರಾಷ್ಟ್ರ ಚಿತ್ತೈಸೆಂದನಾ ಮುನಿಪ (ಕುಸುಳು. ೪-೧೦). ನಿತ್ಯಾನಿತ್ಯವಸ್ತುವಿವೇಕ = ಯಾವುದು ಶಾಶ್ವತ, ಯಾವುದು ಅಶಾಶ್ವತವೆಂದು ತಿಳಿಯುವ ಜ್ಞಾನ : ನಿತ್ಯಾನಿತ್ಯ ವಸ್ತುವಿವೇಕವೆಂದರೆ ಈ ಪ್ರಪಂಚದಲ್ಲಿ ಇದು ಶಾಶ್ವತ, ಇದು ಅಶಾಶ್ವತ ಎಂದು ತಿಳಿಯುವುದು (ಹಿಂದಸಾ. ೨೨೦) ; ನಿತ್ಯಾನಿತ್ಯವಸ್ತುವಿವೇಕ, ಈ ಲೋಕದ ಮತ್ತು ಪರಲೋಕದ ವಸ್ತುಗಳ ಉಪಭೋಗದಲ್ಲಿ ವಿರಕ್ತಿಯು . . . ಮೋಕ್ಷದಲ್ಲಿ ಇಚ್ಛೆಯುಳ್ಳವನಾಗಿರುವದು (ಬ್ರಹ್ಮಭಾ. ೧೨). [ಸಂ.]

ನಿತ್ಯ$_3$ (ಅ). ಯಾವಾಗಲೂ ; ಸದಾ ; ಎಡೆಬಿಡದೆ : ನಿತ್ಯ ಸಂಗರ ನಿಷ್ಣಾತ ಭೃತ್ಯಪುಂಗವಸಂಘದಿಂ ಸತ್ಯಮಂಗಲಸಂಪನ್ನಂ ಸತ್ಯಮಂಗಲ ಮೊಂದಿದಂ (ಚಕವಿ. ೨-೧೩೪) ; ಈ ಸಮಸ್ತಮೂರ್ತಿ ಶ್ರೀಶರಂಗನೆಂದು ವಾಸನಾಮಯದಿಂದ ನೀ ಸೇವಿಸುತ ನಿತ್ಯ (ವಿದಾಕ್ಯ. ೬೭-೪). [<ನಿತ್ಯ$_1$]

ನಿತ್ಯಂ (ಅ). ಯಾವಾಗಲೂ ; ಸದಾ : "ಸಂತತಂ, ಸತತಂ, ಅನಿಶಂ, ನಿತ್ಯಂ, ಅಜಸ್ರಂ, ಶಶ್ವತ್ . . . ಅಸಕ್ತಂ-ಈ ೧೧ ಸಂತತಂ" (ಹಲಾಯು. ೧೧೬-೧೩) ; ನಿತ್ಯಮಣುವ್ರತಮನದ ಪ್ರತ್ಯಾಖ್ಯಾನಂ . . . ಕಿಡಿಕುಂ (ಪಾರ್ಶ್ವಪು. ೫-೨೬) ; ಕಂದನೀತನ ರಕ್ಷಿಯೊಳ್, ಪ್ರಳಯಾಗ್ನಿ ಚಕ್ರ ಕೇಂದ್ರದೊಳಿರ್ಪ ಸುಧೆಯುವೊಲ್, ನಿತ್ಯಂ ಸುರಕ್ಷಿತಂ (ಶ್ರೀರಾಮಾ. ೩೦-೭೪). [ಸಂ.]

ನಿತ್ಯಕಟ್ಟಲೆ 'ನಿತ್ಯಗಟ್ಟಳೆ' ನೋ.

ನಿತ್ಯಕರ್ಮ (ನಾ). ೧. ಪ್ರತಿದಿನವೂ ಕ್ಲುಪ್ತಕಾಲದಲ್ಲಿ ಮಾಡುವ ಸಂಧ್ಯಾವಂದನೆಯೇ ಮುಂತಾದ ಕರ್ಮ ; ಈ ಕರ್ಮಗಳನ್ನು ಐದುವಿಧಗಳಾಗಿ ವಿಂಗಡಿಸಿದ್ದಾರೆ. (೧). ನಿತ್ಯಕರ್ಮ—ಪ್ರತಿ ನಿತ್ಯವೂ ಮಾಡಬೇಕಾದ ಕರ್ಮ. ಸಂಧ್ಯಾವಂದನೆ, ಬ್ರಹ್ಮಯಜ್ಞ ಮೊದಲಾದುವು. (೨). ನೈಮಿತ್ತಿಕ ಕರ್ಮ—ಒಂದು ನಿಮಿತ್ತ ದಿಂದ ಮಾಡುವ ಕರ್ಮ. ಗ್ರಹಣಸ್ನಾನ, ಉಪಾಕರ್ಮ ಮೊದಲಾದುವು. (೩). ಪ್ರಾಯಶ್ಚಿತ್ತಕರ್ಮ—ಪಾಪಪರಿಹಾರ ಕ್ಕಾಗಿ ಮಾಡುವ ಗಂಗಾಸ್ನಾನ, ರಾಮಸೇತುದರ್ಶನ ಮೊದಲಾ ದುವು. (೪). ಕಾಮ್ಯಕರ್ಮ — ಯಾವುದಾದರೊಂದು ಇಷ್ಟಾರ್ಥವು ಸಿದ್ಧಿಸಲೆಂಬ ಆಶೆಯಿಂದ ಮಾಡುವ ಕರ್ಮ. ಸತ್ಯನಾರಾಯಣವ್ರತ ಮೊದಲಾದುವು. (೫). ನಿರ್ಮಲಕರ್ಮ —ಚಿತ್ತಶುದ್ಧಿಗಾಗಿ, ಎಂದರೆ ಫಲಾಭಿಲಾಷೆಯಿಲ್ಲದೆ ಮಾಡುವ ಪಂಚಾಕ್ಷರೀ ಜಪ ಮೊದಲಾದುವು. ಕೆಲವರು ಇದನ್ನು ನಿಷಿದ್ಧ ಕರ್ಮವೆಂದು ಹೇಳಿದ್ದಾರೆ, ಎಂದರೆ ಇದು ಮಾಡಬಾರದ ಕರ್ಮ, ಅಭಿಚಾರಿಕ ಕರ್ಮ. ಅವರು ನಿರ್ಮಲಕರ್ಮವನ್ನು ಬಿಡುತ್ತಾರೆ : "ನಿತ್ಯಕರ್ಮಮದು ಯಮಮುಕ್ಕುಂ" (ಪಸ್ತುಕೋ. ೫೮-೩೬) ; ನಿತ್ಯಕರ್ಮಂಗಳನು ಚರಿಸುವ ನಿತ್ಯದೌಪಾಸನವ ಬೇಳುವ . . . ರಾಕ್ಷಸವಿಪ್ರಗೃಹಗಳಲಿ (ಕೌಶಿಂಾ. ೩೯-೬) ; ಮತ್ತಮಾಗೃಹಸ್ಥ ನಿಂದನುಷ್ಠಿಸಲ್ಪಕ್ಕ ಕರ್ಮವಾದೊಡೆ ನಿತ್ಯನೈಮಿತ್ತಿಕ ಪ್ರಾಯಶ್ಚಿತ್ತ ಕಾಮ್ಯ ನಿರ್ಮಲವೆಂದು ಪಂಚವಿಧವಾಗಿಹುದದಱಲ್ಲಿ ಸಂಧ್ಯಾವಂದನಾದಿ ಕವೇ ನಿತ್ಯಕರ್ಮವೆನಿಸುವುದು (ವಿವೇಕ. ೧೩೮) ; ಕರ್ಮಗಳಲ್ಲಿ ನಿತ್ಯ, ನೈಮಿತ್ತಿಕವೆಂದು ಎರಡು ವಿಧ. ಸಂಧ್ಯಾವಂದನ, ಶ್ರಾದ್ಧಾದಿಗಳು ನಿತ್ಯಕರ್ಮಗಳು. 'ವಿಷ್ಣುಪಂಚಕ' ಮೊದಲಾದವು ನೈಮಿತ್ತಿಕಕರ್ಮ (ಹಸಾರ. ೯-೧೬ ತಾತ್ಪರ್ಯ) ; ಮಾಡದಿದ್ದೊಡೆ ದೋಷ ಬರುತ್ತದೆಂದು ಶಾಸ್ತ್ರಗಳಲ್ಲಿ ಹೇಳಿರುತ್ತದೆ. ಆ ಕರ್ಮಂಗಳ ಸಮೂಹಕ್ಕೆ ನಿತ್ಯಕರ್ಮ ವೆನಬೇಕು (ನಿಗಮ. ೧-೪-೧) ; ದೇವ, ನಿನ್ನ ನಿತ್ಯಕರ್ಮ ಮುಗಿಯುವ ವೇಳೆಗೆ ನಾನು ಬಂದುಬಿಡುತ್ತೇನೆ (ಮಹಾಣ. ೧೩೬). ೨. ಪ್ರತಿನಿತ್ಯವೂ ಸಂಪ್ರದಾಯ ಮಾಡಿಕೊಂಡಿರುವ ಕ್ರಿಯೆ ; ದಿನನಿತ್ಯದ ವ್ಯಾವ ಹಾರಿಕವಾದ ಕೆಲಸ. [ನಿತ್ಯ$_1$ + ಕರ್ಮ]

ನಿತ್ಯಕೃತ್ಯ (ನಾ). ಪ್ರತಿದಿನವೂ ಮಾಡುವ ಮುಖಪ್ರಕ್ಷಾಳನ, ದಂತಧಾವನ, ಸ್ನಾನ ಮೊದಲಾದ ಕೆಲಸ : ಮಂಗಳಗಾಯಿಕಾ ಮಧುರಗಾನದಿನೆಚ್ಚಱಸೆಯ್ದಿ ನಿತ್ಯಕೃತ್ಯಂಗಳ ಮಂಗಳಾಚರಣಮಂ ನೆಗಳುತ್ತೆ (ಪುಷ್ಪಪು. ೩-೧೨೧) ; ಇಲ್ಲಿ ಹೇಳಿರುವ ಅನೇಕ ನಿತ್ಯಕೃತ್ಯಗಳು ಕೇವಲ ದ್ವಿಜರಿಗೆ ಮಾತ್ರ ನಿಯಮಿತವಾದವುಗಳಲ್ಲ (ಭಾರದ. ೫೪). [ನಿತ್ಯ$_1$ + ಕೃತ್ಯ$_2$]

ನಿತ್ಯಕ್ಷೇತ್ರ (ನಾ). ಸದಾ ಪವಿತ್ರವಾದ ಸ್ಥಳ ; ತೀರ್ಥಯಾತ್ರಾ ಕ್ಷೇತ್ರ : ಜಾತರಿ ಕೂಡುವುದು ನಿತ್ಯಕ್ಷೇತ್ರವೆನ್ನುವರು (ಸಿದ್ಧಪು. ೫-೬೬). [ನಿತ್ಯ$_3$ + ಕ್ಷೇತ್ರ]

ನಿತ್ಯಗಟ್ಟಲೆ 'ನಿತ್ಯಗಟ್ಟಳೆ' ನೋ.

ನಿತ್ಯಗಟ್ಟಳೆ, ನಿತ್ಯಕಟ್ಟಲೆ, ನಿತ್ಯಗಟ್ಟಲೆ, ನಿತ್ಯಗಟ್ಲೆ (ನಾ). ೧. ಪ್ರತಿದಿವಸವೂ ಮಾಡುವಂಥದು; ದಿನವೂ ನಡೆಸುವ ಕೆಲಸ,— ಕಾರ್ಯ : ಯಾವುದಾದರೂ ಆಪತ್ತಿಗೋ ಮದುವೆಯಂಥ ದೊಡ್ಡ ಖರ್ಚಿಗೋ ಇರಲಿ ; ಹುಡುಗರು ನೀವು ನಿತ್ಯಗಟ್ಟಳೆಗೆ ಖರ್ಚುಮಾಡಿ ಬಿಟ್ಟೀರಿ ಎಂದು ಹಾಗೆ ಹೇಳಿದೆನಪ್ಪ (ಮಹಾಗ. ೨೮೮). **ನಿತ್ಯಕಟ್ಟಲೆ:** ೧. ಅವರೆಲ್ಲರೂ ರತ್ನಮಯವಾದ ತಮ್ಮ ಬಿಡಾರಗಳಿಗೆ ಹೋಗಿ ವ್ಯಾಯಾಮ ಮುಂತಾದ ನಿತ್ಯಕಟ್ಟಲೆಯ ಕೆಲಸ ಮುಗಿಸಿಕೊಂಡು . . . ಅಂದಿನ ರಾತ್ರಿಯನ್ನು ಕಳೆದರು (ಸಚಭಾ. ೯೧). ೨. ಪ್ರತಿನಿತ್ಯವೂ ದೇವಸ್ಥಾನದಲ್ಲಿ ಮಾಡುವ ನೈವೇದ್ಯದ ಏರ್ಪಾಟು : ಸಾಂಪ್ರ ದಾಯಿಕ ದೇವಾಲಯಗಳಲ್ಲಿ ಈಗಲೂ ಅವೆಲ್ಲ ಸೇವೆ-ನಿತ್ಯಕಟ್ಟಲೆ ಉತ್ಸವಾದಿಗಳು ನಡೆಯುತ್ತಿರುವುದರಿಂದ, ಅವುಗಳನ್ನು ಪ್ರತ್ಯಕ್ಷವಾಗಿ ಈಗಲೂ ನೋಡಬಹುದಾಗಿದೆ (ಕರ್ನಾಜ. ೧೭೪). **ನಿತ್ಯಗಟ್ಟಲೆ :** ೧. ಹೆಂಗಸರು ತಮ್ಮ ಮನೆಯ ಮುಂದಿನ ನೀರಿನಲ್ಲಿಯೇ ಪಾತ್ರೆತೊಳೆ ಯುವುದು ಮೊದಲಾದ ನಿತ್ಯಗಟ್ಟಲೆಯ ಕೆಲಸಗಳನ್ನು ಮಾಡಿಕೊಳ್ಳು ತ್ತಾರೆ (ನಿಬಂಧ. II, ೧೩೫) ; ಬರುವ ಚಿಲ್ಲರೆ ಹಣವು ನಿತ್ಯಗಟ್ಟಲೆಯ ಚಿಕ್ಕಪುಟ್ಟ ಖರ್ಚುಗಳಿಗೆ ಕರಗಿ ಹೋಗಿಬಿಡುತ್ತಿತ್ತು (ಚಿತಸ. ೧೨೮). **ನಿತ್ಯಗಟ್ಲೆ :** ೧. ನಿತ್ಯಗಟ್ಲೆ ಸಂಚಾರ ಮಾಡುವ ಕ್ರಮ-ನಾಲ್ಕು ಗಳಿಗೆ, ಎಂಟು ಗಳಿಗೆ, ಎರಡು ಗಳಿಗೆ, ಈ ಪ್ರಕಾರದಲ್ಲಿ ಉದಯ ಕಾಲದಲ್ಲಿ ಸಂಚಾರಮಾಡುವುದು, ಹೀಗೆ ಮಾಡಿದಲ್ಲಿ ಶರೀರವು ಲಘುವಾಗು ವುದು ; ಕೈಕಾಲಿನಲ್ಲಿ ತ್ರಾಣಹುಟ್ಟುವುದು (ಸಕವೈ. ೨೯). ೨. ಆಯಾ ದೇವಸ್ಥಾನದ ತಾರತಮ್ಯವಿದ್ದಂತೆ ನಿತ್ಯಗಟ್ಲೆ ಪದಿತರ ದೀಪಾರಾಧನೆ ಬ್ರಹ್ಮೋತ್ಸವ ಮುಂತಾದ ಅನೇಕ ಉತ್ಸವಗಳಿಗೂ . . . ಅನೇಕ ವಸ್ತ್ರಾಭರಣ ಪಾತ್ರೆಗಳನ್ನು ಕೊಟ್ಟರು (ಜಾಮವಂ. I, ೪೩). [ನಿತ್ಯ$_1$ + ಕಟ್ಟಳೆ$_1$]

ನಿತ್ಯಗಟ್ಟೆ 'ನಿತ್ಯಗಟ್ಟಳೆ' ನೋ.

ನಿತ್ಯಜೀವನ (ನಾ). ದೈನಂದಿನ ಜೀವನ ; ಪ್ರತಿನಿತ್ಯವೂ ನಡೆಸುವ ಬಾಳು,— ಬದುಕು : ನಿತ್ಯಜೀವನದಲ್ಲಿ ಅಭಿವ್ಯಕ್ತವಾಗುವ ಸಚ್ಚಿದಾನಂದಸ್ವರೂಪವನ್ನರಿಯಬೇಕೆಂಬುದೇ ಭಾರತೀಯ ಕಲಾವಿದರ ಮುಖ್ಯೋದ್ದೇಶ (ಭಾರದ. ೫೮೧). [ನಿತ್ಯ$_1$ + ಜೀವನ]

ನಿತ್ಯಜೀವಿ (ನಾ). ೧. ಚಿರಂಜೀವಿ; ಚಿರಾಯು. ೨. ಅಶ್ವತ್ಥಾಮ, ಬಲಿ, ವ್ಯಾಸ, ಹನುಮಂತ, ವಿಭೀಷಣ, ಕೃಪ ಮತ್ತು ಪರಶುರಾಮ ಎಂಬ ಸಾವಿಲ್ಲವೆಂದು ನಂಬಲಾದ ಏಳು ಜನ ಪುರಾಣಪ್ರಸಿದ್ಧವ್ಯಕ್ತಿಗಳು. 'ಚಿರಂಜೀವಿ' ಪರಾ.

[ನಿತ್ಯ$_2$ + ಜೀವಿ$_1$]

ನಿತ್ಯಜ್ವರ (ನಾ). ಪ್ರತಿನಿತ್ಯವೂ ಬರುವ ಜ್ವರ ; ದೈನಂದಿನ ಜ್ವರ: ಇದನ್ನೇ ಗೋಮೂತ್ರದಿಂದೇಳುದಿನ ಕೆಗೆದುಕೊಳ್ಳಲು ನಿತ್ಯಜ್ವರಂ ಮಾಣ್ಬುಂ (ಸಕವೃ. ೧೧೩). [ನಿತ್ಯ$_1$ + ಜ್ವರ]

ನಿತ್ಯತತ್ತ್ವ (ನಾ). ಶಾಶ್ವತವಾದ ತತ್ತ್ವ ; ಪರಮಾತ್ಮತತ್ತ್ವ : ನೀತಿಜ್ಞಂ ನಿಜನಿತ್ಯತತ್ತ್ವನಿಪುಣಂ ನಿಷ್ಠಾಪರಂ . . . ರಾಜೇಂದ್ರ ಚಕ್ರೇಶ್ವರಂ (ಹಮ್ಮೀರ. ೧-೨೩). [ನಿತ್ಯ$_2$ + ತತ್ತ್ವ]

ನಿತ್ಯತತ್ತ್ವವಾದ (ನಾ). ಶಾಶ್ವತವಾದ ತತ್ತ್ವವು ಉಂಟೆಂಬ ವಾದ : ಬುದ್ಧಮತದಲ್ಲಿ ನಿತ್ಯತತ್ತ್ವವಾದವೂ ಒಂದಿರಬಹುದು (ಹಿಂದಸಾ. ೪೫). [ನಿತ್ಯತತ್ತ್ವ + ವಾದ$_2$]

ನಿತ್ಯತಾಪ್ರತಿಭೆ (ನಾ). ಸದಾಕಾಲವಿರುವ ಪ್ರತಿಭೆ; ಸದಾ ಎಚ್ಚರ ಗೊಂಡಿರುವ ಪ್ರತಿಭಾಶಕ್ತಿ : ವಾಲ್ಮೀಕಿ . . . ಧ್ಯಾನದೊಳ್ ಮುಳುಗಿರಲ್, ಮಿಂಚಿತಯ್ ಕಾವ್ಯದಿವ್ಯಪ್ರಜ್ಞೆ, ನವನವೋನ್ಮೇಷ ಶಾಲಿನಿ, ನಿತ್ಯತಾಪ್ರತಿಭೆ (ಕ್ರೀಂರಾಮಾ. ೨-೫೦). [ಸಂ. ನಿತ್ಯತಾಪ್ರತಿಭಾ]

ನಿತ್ಯತೃಪ್ತ (ನಾ). ೧. ಯಾವಾಗಲೂ ತುಷ್ಟಿಯನ್ನು ಹೊಂದಿರುವವನು ; ಸದಾ ತೃಪ್ತನಾಗಿರುವವನು : ಅವನು ನಿತ್ಯತೃಪ್ತ. ಯಾವ ಚಿಂತೆಯನ್ನೂ ಇಟ್ಟುಕೊಂಡಿಲ್ಲ (ರೂಢಿ). ೨. ದೇವರು ; ಪರಮಾತ್ಮ : ನಿತ್ಯತೃಪ್ತಂಗೆ ನೈವೇದ್ಯದ ಹಂಗೇತಕ್ಕೆ (ಮಹಾದೇ. ಬ. ೧೩೩-೩೦೪) ; ಅರ್ಪಿತವ ಮಾಡುವಡೆ ನೀನು ನಿತ್ಯತೃಪ್ತನು (ಅವಚಂ. ೯೫-೪೨೪) ; ಭೂವಂದಿತಂ ನಿತ್ಯತೃಪ್ತಂ ಸಮಸ್ತಮುಖಜೀವಾನುಕಂಪಿಯೆಂದೆನಿಸಿ ರಾಜಿಪ ಸುಕೃತಭಾವಿ ಹಂಪೆಯ ಶಂಕರಪ್ರಭು ಮದೀಯ ಮತಿಗೀಗೆ ಪ್ರಸನ್ನತೆಯನು (ಹಚಳಾ. ೧-೯) ; ನಿತ್ಯತೃಪ್ತನಿಗೆ ಹಸಿವಿನ ಭಯ ಉಂಟೇ (ಸಿದ್ಧೇಸ. ೨೧೬-೬೮೩) ; ನಿಗಮಗೋಚರ ಬಂದ ನಿತ್ಯತೃಪ್ತನು ಬಂದ (ಪುರಂದ. ೧-೪೮-೬) ; ನಿತ್ಯತೃಪ್ತ ಸರ್ವಸಾರಭೋಕ್ತ ಪುರುಷೋತ್ತಮ . . . ಹರಿಗೆ ನಾನೋಪಚಾರದಿಂದ ಭಕ್ತಿವೆಗ್ಗಳವಾಗಿ ಮಜ್ಜನಾದಿಯ ಮಾಡಿ (ವಿಪಾಕ್ಯ. ೫೯-೨೩). [ನಿತ್ಯ$_3$ + ತೃಪ್ತ]

ನಿತ್ಯತೃಪ್ತತ್ವ (ನಾ). ಸದಾಕಾಲ ತೃಪ್ತಿಯಿಂದಿರುವಿಕೆ: ಸರ್ವಜ್ಞತ್ವ, ನಿತ್ಯತೃಪ್ತತ್ವ . . . ಅನಂತಶಕ್ತಿತ್ವಗಳೆಂಬ ಷಡ್ಗುಣೈಶ್ವರ್ಯಸಂಪನ್ನನಾದ ಪರಮೇಶ್ವರನು . . . ಭಕ್ತಾನುಗ್ರಹ ಮಾಡುತ್ತಾನೆಂಬುದು ಶೈವಾಗಮದ ಸಿದ್ಧಾಂತ (ಭಾರದ. ೬೪). [ಸಂ.]

ನಿತ್ಯತೃಪ್ತಿ (ನಾ). ಯಾವಾಗಲೂ ಇರುವ ಆನಂದ; ನಿರಂತರವೂ ಇರುವ ತುಷ್ಟಿ,—ತೃಪ್ತಿ : ಕರದಿ ನಿರಹಂಕರದ ಪಾತ್ರೆಯ ಧರಿಸಿಯದರೊಳು ನಿತ್ಯತೃಪ್ತಿಯ ಭರಿತ ಸಿದ್ಧರಸಾಮೃತವ ಸೇವಿಸುತಲದರಿಂದ ಪರಮ ಸೌಖ್ಯಮೆನಿಪ್ಪ ತೃಪ್ತಿಯ ವರಿಸಿ (ಗಗತಾ. ೧೬-೨೧) ; ಮನೆಯವರೆಲ್ಲ ಆರೋಗ್ಯ, ನಿತ್ಯತೃಪ್ತಿ . . . ಇವೆಲ್ಲವನ್ನೂ ಸುಸೂತ್ರವಾಗಿ ಸಾಗಿಸುವುದು ಹೆಚ್ಚಾಗಿ ಹೆಣ್ಣುಮಕ್ಕಳ ಸಂಸ್ಕೃತಿ, ಚಾತುರ್ಯ, ಕಾರ್ಯದಕ್ಷತೆ ಇವನ್ನು ಅವಲಂಬಿಸಿರುವುದು ಸತ್ಯ (ಗೃಹವಿ. ೧೧೨). [ನಿತ್ಯ$_3$ + ತೃಪ್ತಿ]

ನಿತ್ಯತೆ (ನಾ). ೧. ಶಾಶ್ವತವಾಗಿರುವಿಕೆ ; ಸ್ಥಿರತೆ ; ಅನಂತತೆ : ಮನುಷ್ಯ ಕೀಟಜನ್ಮವನಿರದೆಯ್ದು ಬಾಳುವರ ನಿತ್ಯತೆಯೇನಿದಱೊಳ್ ಕೃಪಾಪ್ರಸಾದವನಿರದಿತ್ತು ಕಾಯಿ ಪರಮಪ್ರಭುವೇ ಮಹದೈಶ್ವರ್ಯದಾ (ಶಕಶ. ೧೮೮-೭೦) ; ಎಲ್ಲ ಇದೆ, ಎಲ್ಲ ಇದೆ ನಿತ್ಯತೆಯ ಗುಟ್ಟದಲಿ ; ಮುಂದೆಯದು ತೋರುವುದು ಬಿಡುಗಡೆಯ ಹಬ್ಬದಲಿ ! (ಹಾಂಚಜ. ೬-೨). ೨. ಚಿರಂಜೀವಿತ್ವ. [ಸಂ. ನಿತ್ಯತಾ]

ನಿತ್ಯತ್ವ (ನಾ). ೧. = ನಿತ್ಯತೆ ೧ : ತಿವಸ ಸರ್ವಕರ್ತೃತ್ವ, ಸರ್ವಜ್ಞತ್ವ, ಪೂರ್ಣತ್ವ, ನಿತ್ಯತ್ವ, ವ್ಯಾಪಕತ್ವ ಎಂಬ ಶಕ್ತಿಗಳು ಸಂಕೋಚವಾಗಿ ಕ್ರಮೇಣ ಪಂಚಕಂಚುಕಗಳಾಗುತ್ತವೆ (ಭಾರದ. ೨೧೪) ; ಸಮಸ್ತ ಜಗತ್ಕಾರಣವಾದ ಈ ಬ್ರಹ್ಮಕ್ಕೆ ವ್ಯಾಪಿತ್ವ, ನಿತ್ಯತ್ವ . . . ಎಂಬೀ ಜಾತಿಯ ಧರ್ಮಗಳನ್ನು ಹೇಳಿದಂತೆಯೇ ಆಗಿರುತ್ತದೆ (ಬ್ರಹ್ಮಭಾ. I, ೨೪೯); ಮೋಕ್ಷದಲ್ಲಿ ಜೀವಾತ್ಮನು ತನ್ನ ಸ್ವಾಭಾವಿಕಸ್ಥಿತಿಯಲ್ಲಿರುವನು. ಅದೆಂತೆಂದರೆ ವಿಭುತ್ವ ದ್ರವ್ಯತ್ವ ನಿತ್ಯತ್ವ . . . ಮೊದಲಾದ ಧರ್ಮಗಳೊಡನೆ ಯಾವತ್ಕಾಲ ನಿರ್ದೋಷಿಯಾಗಿರುತ್ತಾನೆ (ಹಿಂದಸಾ. ೧೨೪). ೨. ಮೋಕ್ಷ ಪದವಿ: ನಿನ್ನಂಥ ಬಗೆವ ತಾಯಿಗಳಿರುತಿರಲ್ ವ್ಯಾಧಿಗಳವೇಗೆಯ್ದುವವೆನುತ್ತವನಿಗೆ ಮೆಱೆಯಲಮ್ಮವ್ವೆಗಂ ನಿತ್ಯತ್ವಮಂ ಕೊಟ್ಟ (ಬಸಪು. ೧೫-೩೬) ; ಚಿಪ್ಪಳಿದು ಮುತ್ತು ಬೆರಸಲಾಗಿ ನಿತ್ಯತ್ವ ಪದವಾಯಿತ್ತೆಂಬೆನು (ಸಿದ್ಧೇಸ. ೧೯೬-೫೯೭). ೩. [ವ್ಯಾಕ] ಅವಿಕಲ್ಪವಾಗಿರುವಿಕೆ ; ಅಗತ್ಯ ; ಕಡ್ಡಾಯವಾಗಿರುವಿಕೆ : ಆಕಾರಾಂತ ನಪುಂಸಕಲಿಂಗದ ಏಕವಚನದಲ್ಲಿ ದ್ವಿತ್ವದ ನಿತ್ಯತ್ವಕ್ಕೆ ಹೆಚ್ಚಿನ ಬಲವು ಹೊಸಗನ್ನಡದಲ್ಲಿದೆ (ಸಂಕೋಧ. ೬೧). [ಸಂ.]

ನಿತ್ಯದರಿದ್ರ (ನಾ). ಯಾವಾಗಲೂ ದರಿದ್ರನಾಗಿರುವವನು ; ದಟ್ಟ ದರಿದ್ರ : ಜೋತಿಷ್ಯರು ನಿತ್ಯದರಿದ್ರರಾಗಿ ತಪ್ಪೋಬಲಮಿಲ್ಲದೆ . . . ಭ್ರಾಂತರಾಗಲೆಂದು . . . ಶಾಪವಂ ಕೊಡಲು (ವಿವೇಕ. ೨೭೧); ನಿತ್ಯದರಿದ್ರನಿಗೆ ನಿಶ್ಚಿಂತೆ (ಗಾದೆ). [ನಿತ್ಯ$_3$ + ದರಿದ್ರ]

ನಿತ್ಯದರಿದ್ರತನ (ನಾ). ಯಾವಾಗಲೂ ಬಡತನದಿಂದ ಕೂಡಿರುವುದು ; ಬಹಳ ದಾರಿದ್ರ್ಯ : ತನ್ನ ನಿತ್ಯದರಿದ್ರತನಕ್ಕೆ ಮರಮರಮರುಗಿದಳು (ಜಯಂತ. ೮೯). [ನಿತ್ಯದರಿದ್ರ + -ತನ]

ನಿತ್ಯದಾನ (ನಾ). ದಿನವೂ ಮಾಡುವ ದಾನ : ಹೆತ್ತ ತಾಯಿತಂದೆಗಳ ಚಿತ್ತವ ನೋಯಿಸಿ ನಿತ್ಯದಾನವ ಮಾಡಿ ಫಲವೇನು (ಪುರಂದ. ೪-೧೯೬-೧).

[ನಿತ್ಯ$_1$ + ದಾನ]

ನಿತ್ಯದೀಪಾವಳಿ (ನಾ). ಪ್ರತಿನಿತ್ಯವೂ ಬೆಳಗುವಂಥ ದೀಪಗಳ ಸಮೂಹ : ದೀಪಗಳ ನಿತ್ಯದೀಪಾವಳಿಯ ಶಾರದಸಂಧ್ಯೆಯಲ್ಲಿ ಕರಗಿ ಕನಸಾಗಿತ್ತು ಆ ಹಕ್ಕಿ (ಕಿಲಾಲ. ೩೦-೪). [ನಿತ್ಯ$_1$ + ದೀಪಾವಳಿ]

ನಿತ್ಯದುಃಖಿ (ನಾ). ಯಾವಾಗಲೂ ದುಃಖದಿಂದ ಇರುವವನು ; ಸದಾದುಃಖಿ : ವಾಸ್ತವವಾಗಿ ನಿತ್ಯಸುಖಿಯಾದ ಜೀವನು ಮಲಸಂಬಂಧದಿಂದ ನಿತ್ಯದುಃಖಿಯಾಗಿ ನರಳುತ್ತಿರುವನು (ಶಕ್ತಿವಿ, ೬೨) ; ನಾಸ್ತಿಕನು ಇಹವೂ ಪರವೂ ಇಲ್ಲದೆ ನಿತ್ಯದುಃಖಿಯಾಗುವನು (ಹಿಂದಸಾ. ೨೬೨).

[ನಿತ್ಯ$_3$ + ದುಃಖಿ]

ನಿತ್ಯದೇಹ (ನಾ). ಶಾಶ್ವತವಾದ ದೇಹ,—ಶರೀರ : ಕೊಲೆಗಡಕರಿಗೆ ನಿತ್ಯದೇಹವನೊಲಿದು ಕೊಟ್ಟರೆ ಲೇಸು(ಕುಪ್ಯಾಕ. ೬-೭). [ನಿತ್ಯ$_2$ + ದೇಹ]

ನಿತ್ಯದ್ರವ್ಯ (ನಾ). ದೈನಂದಿನವಾಗಿ ಗಳಿಸಿದ ವಸ್ತು,—ಪದಾರ್ಥ: ಕಾಯಕದಿಂದ ಬಂದುದು ಲಿಂಗಕ್ಕರ್ಪಿತವಲ್ಲದೆ ದುರಾಸೆಯಿಂದ ಬಂದುದು ಅನರ್ಪಿತ ಇದು ಕಾರಣ ಸತ್ಯಶುದ್ಧಕಾಯಕದ ನಿತ್ಯದ್ರವ್ಯವಾದರೆ ಚಂದೇಶ್ವರಲಿಂಗಕ್ಕೆ ನೈವೇದ್ಯ ಸಂದಿತ್ತು ಕೇಳಯ್ಯ (ಶೂನ್ಯಸಂ. ೨೫೩-೧೫). [ನಿತ್ಯ$_1$ + ದ್ರವ್ಯ]

ನಿತ್ಯನರಕ (ನಾ). ಶಾಶ್ವತವಾದ ನರಕ : ಎರಡನೆಯವರು ನಿತ್ಯನರಕವೆಂಬ ತಮೋಲೋಕಪ್ರಾಪ್ತಿಗೆ ಸಾಧನವನ್ನು ಸಂಪಾದಿಸಿಕೊಂಡು ನಿತ್ಯದುಃಖಾನುಭವಕ್ಕೆ ಸಿದ್ಧರಾಗುವರು (ಹಿಂದಸಾ. ೨೬೫).

[ನಿತ್ಯ$_2$ + ನರಕ]

ನಿತ್ಯನಾರಕಿ (ನಾ). ೧. ನಿತ್ಯವೂ ನರಕಯಾತನೆಯನ್ನು ಅನುಭವಿಸುವವನು. ೨. [ದ್ವೈತ] ಶಾಶ್ವತವಾಗಿ ನರಕವನ್ನು ಅನುಭವಿಸುವವನು ; ಮೋಕ್ಷವನ್ನು ಪಡೆಯುವ ಅವಕಾಶವನ್ನೇ ಕಳೆದುಕೊಂಡಿರುವವನು : ℙ ತಮೋಯೋಗ್ಯರಿಗೆ ಶ್ರೀಹರಿಯು ಕೊಡುವ ಕಠಿನದಂಡನೆಯೇ ನಿತ್ಯನರಕ. ಇಂಥ ನರಕದಲ್ಲಿರುವವನು ನಿತ್ಯನಾರಕಿ : ನಿತ್ಯನಾರಕಿಗಳೆಂದರೆ . . . ಭಗವದ್ದ್ವೇಷ ಪರಿಪಾಕದಿಂದ ನಿತ್ಯನರಕಲೋಕಪ್ರಾಪ್ತಿಯಾಗಿ, ನಿತ್ಯದುಃಖಾನುಭವದಲ್ಲಿರುವವರು (ಹಿಂದಸಾ. ೨೪೮).

[ಸಂ. ನಿತ್ಯನಾರಕಿನ್]

ನಿತ್ಯನಿಗೋದ (ನಾ). [ಜೈನ] ಶಾಶ್ವತವಾದ ನರಕಕ್ಕಿಂತ ಕೀಳಾದ ಸ್ಥಳ : ಆ ನರಕಭೂಮಿಗಳೇಜುಂ ಕೆಲಗೇಕರಜ್ಜ್ವಂತರದೊಳನೇಕದುಃಖ ನಿಗೋದಮಪ್ಪ ನಿತ್ಯನಿಗೋದಂ ತಮೋಪುಯಮಾಗಿರ್ಕುಂ (ಸುಳುಮಾ. ೧೧–೫೦ ಪ) ; ಆ ನರಕಂಗಳೇಜುಂ ಕೆಲಗೆ ನಿತ್ಯನಿಗೋದಮೆಂಬ ನರಕವಿಪ್ಪುದು (ಮಲ್ಲಿಪು. ೧೩–೧೫೪). 'ನಿಗೋದ' ಪರಾ. [ಸಂ.]

ನಿತ್ಯನಿಯಮ (ನಾ). ದೈನಂದಿನ ನಿಯಮ ; ದಿನವೂ ಅನುಸರಿಸುವ ಪದ್ಧತಿ,—ವಿಧಿ : ಲೋಕಗುರುವುಂ ನಿಜಗುರುವುಮಪ್ಪ ಕ್ರೇಮಂಕರಾವನೀಶ್ವರಂಗವನತೋತ್ತಮಾಂಗನಾಗಿ ಕಂಡು ನಿತ್ಯನಿಯಮದಿನೋಲಗಿಸುತ್ತುಮಿರ್ದ (ಶಾಂತಿಪು. ೮–೧೧೪ ಪ). [ನಿತ್ಯ$_1$ + ನಿಯಮ]

ನಿತ್ಯನೂತನ (ನಾ). ಸದಾ ಹೊಸದಾಗಿರುವುದು ; ಯಾವಾಗಲೂ ನವೀನವಾಗಿರುವುದು : ವಚನಸಾಹಿತ್ಯವು ನಿತ್ಯನೂತನವಾಗುತ್ತ ನಡೆದಿರುತ್ತದೆ (ಪಚಾಸಾ. ೧೩) ; ಗತಕಾಲದ ಇತಿಹಾಸಸಾತ್ಪಯಿಂ ಪವಿತ್ರ ಪಂಪಾಕ್ಷೇತ್ರದಲ್ಲಿ ಹೇಮಕೂಟ ನಿಂತಿದ್ದರೆ . . . ಪುರಂದರದಾಸರೆಂಬ ಹೇಮಕೂಟ ಕನ್ನಡಸಾಹಿತ್ಯಕ್ಷೇತ್ರದಲ್ಲಿ ನಿಂತಿದೆ. ಎರಡೂ ಶಾಶ್ವತವೇ, ಅದರ್ಶವೇ, ನಿತ್ಯನೂತನವೇ ! (ಹೇಪುಕೂ. ೧ ಮುನ್ನುಡಿ).

[ನಿತ್ಯ$_3$ + ನೂತನ]

ನಿತ್ಯನೇಮ (ನಾ). ದಿನಗಟ್ಟಳೆಯ ವಿಧಿ,—ನಿಯಮ ; ದಿನವೂ ಮಾಡುವ ಕಟ್ಟಳೆ : ಗುಣವಿರಹಿತನಾಗಿ ಚತುರ್ವಿಧಫಲ ಹೊಜತೆಯಾಗಿ ನಿತ್ಯನೇಮವೆಂದು ಮಾಡುವ ಭಕ್ತವಿದಂಗೆ ಮಾಡಿಯೂ ಮಾಡದಿದ್ದಡೇನು ದಗ್ಧಪಟದಂತೆ ನಿಃಕಳಂಕಮಲ್ಲಿಕಾರ್ಜುನಾ (ಮೋಕಮಾ. ೧೪–೫೦) ; ತನ್ನ ಲಿಂಗಕ್ಕೆ ಮಾಡುವ ನಿತ್ಯನೇಮವನು ತಾ ಮಾಡಬೇಕಲ್ಲದೆ ಬೇಱೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ (ಬಸಪು. ೧೪೬) ; ನಿತ್ಯನೇಮಂಗಳ [ಪಾಠಾಂ. ನೇಮನಿತ್ಯಗಳ, ನಿತ್ಯನಿಯಮಂಗಳ] ಮಾಡುವಡೆ ನಿನಗನಂತ ನಾಮಂಗಳಾದವು ಗುಹೇಶ್ವರ (ಅಪಚಂ. ೧೫–೪೨); ಸತ್ಕೃತಪ ನಿತ್ಯನೇಮಯುಕ್ತ ಶೈವಾಗಮಾನೇಶ ಲಿಂಗಾರ್ಚನಾಸಕ್ತಯಿಂ ಬೆಳೆದ ಪುಣ್ಯದೊಳರ್ಧಮಂ ಸುಧಾಭುಕ್ತರಜಯಲು ಕೊಡುವೆನಾ ಹರಿಬ್ರಹ್ಮೆಂದ್ರ ಹುಸಿಯಂ ಸುದಿಯದಿರಲಿ (ಪಜಕಾ.೨–೨೬); ತಂದ ಧೃತವಂ ಚಿತ್ತಜಾರಿಗೆ ನಿತ್ಯನೇಮಂ ಪೊತ್ತು ಸಾವಿರದೀವಿಗೆಗಳಂ ಪೊತ್ತಿಸುತಮಿರಲು (ಬಸಪು. ೫೦–೫೨). [ನಿತ್ಯ$_1$ + ನೇಮ$_1$]

ನಿತ್ಯಪದ (ನಾ). ಶಾಶ್ವತವಾದ ಪದವಿ ; ಮೋಕ್ಷ ; ಮುಕ್ತಿ : ನಿತ್ಯಸುಖ ಬಲುಹಿಂದಲ್ಲುಳಿದಾ ನಿತ್ಯಪದ ಬ್ರಹ್ಮಾದಿ ಭೋಗಗಳತ್ತ ಸಾರಿರದವನು ತುಷಮಾತ್ರದಿ ತೃಡೇಕರಿಸಿ (ಗಗತಾ. ೧೬–೨೨).

[ನಿತ್ಯ$_2$ + ಪದ$_2$]

ನಿತ್ಯಪಯಣ (ನಾ). ದಿನವೂ ಮಾಡುವ ಸಂಚಾರ,—ಪ್ರಯಾಣ: ನಿತ್ಯಪಯಣ ಬುತ್ತಿಗೇಡು (ಗಾದ). [ನಿತ್ಯ$_1$ + ಪಯಣ]

ನಿತ್ಯಪರಿಪೂರ್ಣ (ನಾ). ಪರಮಾತ್ಮ ; ದೇವರು : ನಾನು ತುರ್ಯತುರ್ಯಾತೀತವಪ್ಪ ಸಚ್ಚಿದಾನಂದನಿತ್ಯಪರಿಪೂರ್ಣನೇ ತನ್ನಿರವೆಂದು ತಿಳಿಯೆ (ಪುಪಾದೇ. ಬ. ೧೮೨–೨೩೫) ; ಸಚ್ಚಿದಾನಂದ ನಿತ್ಯಪರಿಪೂರ್ಣ ನಿರಂಜನ ನೀನಾದ ಕಾರಣ ನಿನ್ನ ನಿಷ್ಕಲ ಶಿವತತ್ತ್ವವೆಂದೆನು ಕಾಡಾ (ಸಿದ್ಧೇಪ. ೯–೩೨) ; ಆ ಸಚ್ಚಿದಾನಂದನಿತ್ಯಪರಿಪೂರ್ಣವೆನಿಪಾ ಸಮಗ್ರ ಬ್ರಹ್ಮವೇ ಭಾವಿಸಲ್ (ವೀಶ್ವಪು. ೪–೧೧–೯).

[ನಿತ್ಯ$_2$ + ಪರಿಪೂರ್ಣ]

ನಿತ್ಯಪರೀಕ್ಷಣ (ನಾ). ದಿನವೂ ಮಾಡುವ ಪರೀಕ್ಷೆ : ನಿತ್ಯಪರೀಕ್ಷಣ ಸ್ಥಳವಿಪರ್ಯಯಪ್ರತಿಪತ್ತಿದಾನಂಗಳಂ ನಿಯೋಗಿಗಳಂ ಕಾಮುದುಳಿರ್ ಮಾಡಿಯುಂ (ಚಂದ್ರಪು. ೨–೬೧). [ನಿತ್ಯ$_1$ + ಪರೀಕ್ಷಣ]

ನಿತ್ಯಪುಣ್ಯ (ನಾ). [ದ್ವೈತ] ಶಾಶ್ವತವಾದ ಪುಣ್ಯ ; ನಾಶರಹಿತವಾದ ಪುಣ್ಯ ; ℙ ಪುಣ್ಯ ಮತ್ತು ಪಾಪಗಳು ಅನುಭವಿಸುವುದರಿಂದ ನಾಶವಾಗುತ್ತವೆ. ಅದುದರಿಂದಲೇ ಪುಣ್ಯ ಮಾಡಿದರೂ ಜನ್ಮಾಂತರ ಪಪ್ಪುವುದಿಲ್ಲವೆಂದು ಬೇರೆ ಸಿದ್ಧಾಂತಗಳು ಹೇಳುತ್ತವೆ. ದ್ವೈತಸಿದ್ಧಾಂತದಲ್ಲಿ ನಾಶವಾಗದಿರುವ ಪುಣ್ಯವುಂಟೆಂದೂ ಅದು ಬ್ರಹ್ಮಾದಿಗಳಲ್ಲಿರುವುದೆಂದೂ ಹೇಳಿದೆ. ಅದೇ ನಿತ್ಯಪುಣ್ಯ : ಧರ್ಮಾಧರ್ಮವೆಂಬ ಪುಣ್ಯಪಾಪಗಳಲ್ಲಿ ನಿತ್ಯಪುಣ್ಯವು ಬ್ರಹ್ಮಾದಿ ಸಜ್ಜೀವಸ್ವರೂಪವು (ಹಿಂದಸಾ. ೨೪೪).

[ನಿತ್ಯ$_2$ + ಪುಣ್ಯ]

ನಿತ್ಯಪುಷ್ಪ (ನಾ). ದಿನವೂ ಹೂವು ಬಿಡುವ ಒಂದು ಬಗೆಯ ಗಿಡ ಮತ್ತು ಅದರ ಹೂವು ; ನಿತ್ಯಮಲ್ಲಿಗೆ : ಅಂಗಳದಿ ಬೆಳಿಸಿದ್ದ ಬಂಗಾರಗೊಂಡೆಹೂ, ಸಬ್ಬಿ, ದಾಸಾಳ, ಕರಿತುಳಸಿ, ಬೀನಿತ್ಯಪುಷ್ಪ ಎಲ್ಲ ದಿಕ್ಪಾಲು (ನಸ್ಯಧ್ವ. ೫–೨೫). [ನಿತ್ಯ$_1$ + ಪುಷ್ಪ]

ನಿತ್ಯಪೂಜೆ (ನಾ). ಪ್ರತಿದಿನವೂ ಮಾಡುವ ಅರ್ಚನೆ,—ಸೇವೆ,—ಆರಾಧನೆ : ಅದಿತ್ಯಬಿಂಬದರ್ಶಟ್ಟಾರಕಂಗೆ ಶಾಸ್ತ್ರೋಕ್ತಕ್ರಮದಿಂ ನಿತ್ಯಪೂಜೆಯುಂ ಅಷ್ಟಾಹ್ನಿಕಮುಂ . . . ಮಾಡುತ್ತುಂ (ಜಾವುಂಪು. ೬೭೩). [ನಿತ್ಯ$_1$ + ಪೂಜೆ]

ನಿತ್ಯಪ್ರಯಾಣ (ನಾ). = ನಿತ್ಯಪಯಣ : ದಕ್ಷಿಣಾಭಿಮುಖನಾಗಿ ನಿತ್ಯಪ್ರಯಾಣಂಗಳಂ ಬಂದು (ಆದಿಪು. ೧೩–೬೭ ಪ).

[ನಿತ್ಯ$_1$ + ಪ್ರಯಾಣ]

ನಿತ್ಯಪ್ರಲಯ (ನಾ). ೧. ಪ್ರತಿದಿನವೂ ಉಂಟಾಗುವ ಪ್ರಳಯ. ೨. ನಿದ್ದೆ ; ನಿದ್ರೆ : ಪ್ರತಿದಿವಸದಲ್ಲೂ ಪ್ರಾಣಿಗಳಿಗೆ ಬರುವ ಗಾಢನಿದ್ರೆಯೆಂಬ ಸುಷುಪ್ತ್ಯವಸ್ಥೆಯೇ ನಿತ್ಯಪ್ರಲಯ (ಹಿಂದಸಾ. ೧೫೭) ; ಸುಷುಪ್ತಿಯು ನಿತ್ಯಪ್ರಲಯ ಎನ್ನಿಸುವುದು (ಭಾತತ್ತ್ವ. ೬೧೩).

[ನಿತ್ಯ$_1$ + ಪ್ರಲಯ]

ನಿತ್ಯಪ್ರವರ್ತಿತ (ಗು). ದಿನವೂ ನಡೆಯುವ : ಸ್ವಸ್ತ್ಯನವರತ ಪರಮ ಕಲ್ಯಾಣಾಭ್ಯುದಯ ಸಹಸ್ರಫಲಭೋಗಭಾಗಿನಿ ನಿತ್ಯಪ್ರವರ್ತಿತ ಪಯದಾನಧರ್ಮೋದ್ಯೋಗಿನಿ (ಸಾಇತಿ. XX, ೪೬–೧೧ ; 1072).

[ನಿತ್ಯ$_1$ + ಪ್ರವರ್ತಿತ]

ನಿತ್ಯಪ್ರಸಾದಿ (ನಾ). = ನಿಚ್ಚಪ್ರಸಾದಿ : ಅನಿತ್ಯವಿಲ್ಲದ ನಿತ್ಯಪ್ರಸಾದಿ . . . ಕೂಡಲಸಂಗಮದೇವರಲ್ಲಿ ತಾನೇ ಪ್ರಸಾದಿ (ಬಸವ. ೧೪೨).

[ನಿತ್ಯ$_1$ + ಪ್ರಸಾದಿ]

ನಿತ್ಯಬಿಂದು (ನಾ). ೧. [ವ್ಯಾಕ] ಕಡ್ಡಾಯವಾಗಿ ಬರುವ ಅನುಸ್ವಾರ. ೨. ಯಾವಾಗಲೂ ಅನುಸ್ವಾರ ಸಹಿತವಾಗಿಯೇ

ಇರುವ ಶಬ್ದ : ಕೆಲವು ಪದಂಗಳ್ ಸ್ವಭಾವದಿಂ ನಿತ್ಯಬಿಂದುಗಳ್ (ಶಸುದ. ೩೬ ವೃತ್ತಿ); ನಿತ್ಯಬಿಂದುಗೆ—ಬೆಡಂಗು, ಕಡಂಗು, ಅಡಂಗು . . . ಕರಂಡಗೆ, ತಂದಲ್ (ಶಸುದ. ೩೬ ಪ್ರಯೋ). 'ನಿಜಬಿಂದು' ಪರಾ.

[ನಿತ್ಯ$_2$ + ಬಿಂದು]

ನಿತ್ಯಬ್ರಹ್ಮಚಾರಿ (ನಾ). ಬ್ರಹ್ಮಚರ್ಯವ್ರತವನ್ನು ಶಾಶ್ವತವಾಗಿ ಪಾಲಿಸುವವನು: ಪರ್ವತಗಳೂ ಗಿಡಮರಗಳೂ ಸಿದ್ಧಿಯನ್ನು ಪಡೆದಾವು! ಏಕೆಂದರೆ ಅವು ನಿತ್ಯಸಂನ್ಯಾಸಿಗಳು, ನಿತ್ಯಬ್ರಹ್ಮಚಾರಿಗಳು(ಪಡಪಾ.೩೨೯).

[ನಿತ್ಯ$_3$ + ಬ್ರಹ್ಮಚಾರಿ]

ನಿತ್ಯಮಲ್ಲಿಗೆ (ನಾ). = ನಿತ್ಯಪುಷ್ಪ : ಮನೆಯ ಮುಂದಿರುವ ನಿತ್ಯ ಮಲ್ಲಿಗೆಯ ಬಳ್ಳಿಯ ತುಂಬಾ ಹೂವುಗಳು ಅರಳಿವೆ (ರೂಢಿ).

[ನಿತ್ಯ$_1$ + ಮಲ್ಲಿಗೆ]

ನಿತ್ಯಮಹ (ನಾ). ದಿನವೂ ನಡೆಯುವ ಪೂಜೆ; ಪ್ರತಿದಿನದ ಪೂಜೆ: ಮುನಿಜನಪೂಜಾನ್ನದಾನಾದಿ ಕರಣಜಿನಗೃಹಜನಸತತೋಪನೀಯಮಾನ ಪಾದ್ಯಗಂಧಾಕ್ಷತಕುಸುಮಚರು ಧೂಪದೀಪಫಲಾದ್ಯರ್ಚನಾತ್ಮಕಮಪ್ಪ ನಿತ್ಯಮಹಮುಂ (ಆದಿಪು. ೧೫-೧೩೭); ನಿತ್ಯ(ಮಹ)ಮೆಂಬುದು ನಿಷ್ಠಂ ಯಥಾಶಕ್ತಿಯಿಂ ಜಿನಗೃಹಂಗಳ್ಗೆ ತನ್ನ ಮನೆಯಿಂ ಗಂಧಪುಷ್ಪಾಕ್ಷತಾದಿ ಗಳನುಯ್ವುದುಂ . . . ಶಾಸನಂಗಳಂ ಬಿಡುವುದುಂ (ಚಾವುಂಪು. ೨೧೧); ಅಲ್ಲಿ ಯಥಾಶಕ್ತಿಯಿಂ ಸದಾ ಜಿನಗೃಹಕ್ಕೆ ನಿಜಗೃಹದಿಂ ಅಷ್ಟವಿಧಾರ್ಚನೆಯಂ ನಡೆಯಿಸುವುದು ಚೈತ್ಯಚೈತ್ಯಾಲಯಂಗಳಂ ಮಾಡಿಸಿ ಶಾಸನ ಪೂರ್ವಕದಿಂ ಗ್ರಾಮಕ್ಷೇತ್ರಾದಿಗಳಿಂ ಕುಡುವುದುಂ ಜಿನಪೂಜೆಯಂ ಮಾಟ್ಟುದುಂ ನಿತ್ಯಮಹವೆಂಬುದು (ತತ್ತ್ವಪ್ರ.೨೮೭). [ನಿತ್ಯ$_1$ + ಮಹ]

ನಿತ್ಯಮುಕ್ತ (ನಾ). ೧. ಶಾಶ್ವತವಾಗಿ ಬಿಡುಗಡೆಯನ್ನು ಹೊಂದಿದವನು ; ಮೋಕ್ಷವನ್ನು ಪಡೆದವನು : ಮನ ಘನವಸ್ತುವಾದ ಬಳಿಕ ಮನವಚನಕಾಯ ಎಂಬ ತ್ರಿಕರಣಶುದ್ಧಾತ್ಮನೆಂಬೆ ನಿತ್ಯಮುಕ್ತನೆಂಬೆ (ಸಿದ್ಧೇಪ. ೨೧೫-೬೭೩). ೨. ಪರಮಾತ್ಮ ; ದೇವರು : ಭ್ರಾಂತಿಗಳು ಕೆಡಲಾತನೆಂದುವುಂ ತಾನಪ್ಪನಿಂತುಬಿದೆ ನಿತ್ಯಮುಕ್ತನುಮಪ್ಪ ತದ್ಬ್ರಹ್ಮನೆಂತು ಜೀವನ್ಮುಕ್ತನೆನಿಪನೆಂಬುದು ನಿಜಂ ಶ್ಲೋಕದ್ವಯಂಗಳರ್ಥಂ (ವೀರೈಪು. ೫-೧೬-೩೨) ; ಪುಣ್ಯಪಾಪಾನುಸಾರವಾಗಿ ಜೀವರಿಗೆ ಫಲವನ್ನೀಯತಕ್ಕವನಿವನು. ಇವನು ನಿತ್ಯಮುಕ್ತನು (ಭಾರದ. ೨೩೭).

[ನಿತ್ಯ$_3$ + ಮುಕ್ತ]

ನಿತ್ಯಮುತ್ತಯ್ದೆ, ನಿತ್ಯಮುತ್ತೈದೆ (ನಾ). ೧. ದೀರ್ಘಸುಮಂಗಲಿ: (ಕ). ೨. (ಅಲಂ)ಸೂಳೆ ; ವೇಶ್ಯೆ : (ಕ). **ನಿತ್ಯಮುತ್ತೈದೆ** : ೧. ಬತ್ತೈಸಿದ ವ್ಯಾಸರಾಯ ಬಿತ್ತಜನಯ್ಯನ ಸಭೆಗೆ ನಿತ್ಯಮುತ್ತೈದೆಯರೆಲ್ಲ ಎತ್ತೆ ರತುನದಾರತಿಯ (ಪುರಂದ. ೧-೨೧೪ ಅನುಪಲ್ಲವಿ). 'ನಿತ್ಯಸುಮಂಗಲಿ' ಪರಾ. [ನಿತ್ಯ$_2$ + ಮುತ್ತಯ್ದೆ]

ನಿತ್ಯಮುತ್ತೈದೆ 'ನಿತ್ಯಮುತ್ತಯ್ದೆ' ನೋ.

ನಿತ್ಯಮೈತ್ರಿ (ನಾ). ಸ್ಥಿರವಾದ ಸ್ನೇಹ ; ಶಾಶ್ವತವಾದ ಗೆಳೆತನ : ವ್ಯಾಕರಣಪಟುಗಳಿಂತೀ ರೇಖೆಗಳಿಂತೆಂಬುವಿವನ ಜತೆಯೆರಡಡಿಗಳ್ ಸಾಕುಗಡ ನಿತ್ಯಮೈತ್ರಿಗೆ ಲೋಕಾವಳೀಗೀತನಲ್ತೆ. ಪ್ರಥಮಂ ಸುಜನಂ (ವಸ್ತುಪಾ. ೬-೪೬). [ನಿತ್ಯ$_2$ + ಮೈತ್ರಿ]

ನಿತ್ಯಯಾತ್ರೆ (ನಾ). ೧. ದಿನವೂ ಭಿಕ್ಷೆಗಾಗಿ ಹೋಗುವುದು ; ನಿತ್ಯವೂ ಭಿಕ್ಷೆಬೇಡುವುದು: ನಿತ್ಯಯಾತ್ರೆ ಮಾಡುವಾಗ ಪುತ್ರರ ಮೇಲಿನ ಚಿಂತೆ ಎತ್ತ ನೋಡಿದರತ್ತ ಉದರದ ಚಿಂತೆ (ಪುರಂದ. ಧಾ. ೨-೬೫-೨); ರಮಣಾಚಾರ್ಯರು ಸತ್ತ ಮೇಲೆ ದಾಸರು . . . ವಾರಕ್ಕೊಮ್ಮೆ ನಿತ್ಯಯಾತ್ರೆಗೆ ಹೋಗುತ್ತಿದ್ದವರೂ ಕೂಡ ಈಚೆಗೆ ಅತ್ತ ಸುಳಿಯುವುದನ್ನು ನಿಲ್ಲಿಸಿಬಿಟ್ಟಿದ್ದರು (ರಾಗಿಣಿ. ೪೬). ೨. ಜೀವನೋಪಾಯ ; ಉದರ ನಿರ್ವಾಹ : ನನ್ನಂತಹ ಕಳ್ಳನಿಗೆ ಸುಖಜೀವನದ ಸುದ್ದಿಯೇತರದು ? ಈ ರೀತಿ ಚಿಂತಿಸುತ್ತಾ ಕುಳಿತರೆ ನಿತ್ಯಯಾತ್ರೆಯು ಸಾಗದು(ಚಿನ್ನ ಬೇ.೨೪).

[ನಿತ್ಯ$_1$ + ಯಾತ್ರೆ]

ನಿತ್ಯಯೌವನ (ನಾ). ೧. ಯಾವಾಗಲೂ ಇರುವ ತಾರುಣ್ಯ. ೨. ಸದಾಕಾಲ ಯುವಕನಾಗಿರುವವನು ; ಮುಪ್ಪಿಲ್ಲದವನು : ನಿತ್ಯಯೌವನನುಮಾಗಿ ಮಣಿಚೂಳಾಮರೇಶ್ವರನಿರೆ (ಶಾಂತಿಪು. ೬-೬೬ ಪ).

[ನಿತ್ಯ$_3$ + ಯೌವನ]

ನಿತ್ಯರುದ್ರ (ನಾ). ಶಾಶ್ವತನಾದ ಶಿವ : ಜಗದಲ್ಲಿ ಹೊತ್ತು ಹೊರುವ ದುಃಖವಂತರಿಗೆ ತತ್ವದ ಸುದ್ದಿಯ ಹೇಳಿದರೆ ನಿತ್ಯರುದ್ರನಾದಡೂ ತಪ್ಪದು ನರಕವೆಂದೆ ನಿಃಕಳಂಕ ಮಲ್ಲಿಕಾರ್ಜುನಾ (ವೋಳಿಮಾ. ೨೩-೮೯).

[ನಿತ್ಯ$_2$ + ರುದ್ರ]

ನಿತ್ಯರೂಪ (ನಾ). ಶಾಶ್ವತವಾದ ರೂಪವುಳ್ಳವನು ; ನಾಶವಿಲ್ಲದ ಆಕಾರವುಳ್ಳವನು : ಗಣನಿಕರದಿಂದ ವೈಭವವೆರಸಿ ಯಮುನ ಪಟ್ಟಣದತ್ತ ನಡೆದನಾ ನಿತ್ಯರೂಪಂ (ವೀರೈಪು. ೨-೩-೪೪). [ನಿತ್ಯ$_3$ + ರೂಪ]

ನಿತ್ಯರೋಗ (ನಾ). ಯಾವಾಗಲೂ ಇರುವ ವ್ಯಾಧಿ ; ಸದಾ ಇರುವ ಕಾಯಿಲೆ : ಕುಲಹೀನಂ . . . ಪಂಚಕಂ ನಿತ್ಯರೋಗಾಕುಳನೆಂದೀ ನಾಮನಾಮಾವಳಿಗೆ ನಿಳಯನಕ್ಕುಂ ವ್ರತವ್ರಾತಹೀನಂ (ಪಡ್ಡಾರಾ. ೧೦-೩೧). [ನಿತ್ಯ$_3$ + ರೋಗ]

ನಿತ್ಯರೋಗಿ (ನಾ). ಯಾವಾಗಲೂ ರೋಗದಿಂದಿರುವ ವ್ಯಕ್ತಿ ; ಸದಾ ರೋಗಿ : ಅವರ ಹೆಂಡತಿ ನಿತ್ಯರೋಗಿ (ಸಂಸ್ಕಾರ. ೪೨) ; ನಿಷ್ಫಲವಾದ ಯಾವುದೋ ಪರಿಶೋಧನೆಯ ಸಂಬಂಧದಲ್ಲಿ ಇತರ ಉಪಕರಣಗಳ ಜೊತೆಗೆ ತನ್ನ ಶರೀರದ ರಕ್ತವನ್ನೇ ಯಥೇಚ್ಛವಾಗಿ ಬೆರಸಿ ಉಪಯೋಗಿಸಿದನೆಂದೂ ಅಂದಿನಿಂದ ಅವನು ನಿತ್ಯರೋಗಿಯಾದನೆಂದೂ ಜನರು ಹೇಳಿಕೊಳ್ಳುತ್ತಿದ್ದರು (ಯೋಧಪು. ೫೩). [ನಿತ್ಯ$_3$ + ರೋಗಿ]

ನಿತ್ಯಲಂಪಟ (ಗು). ಸದಾ ಆಸಕ್ತಿಯುಳ್ಳ ; ಯಾವಾಗಲೂ ಆಸೆಯುಳ್ಳ : ವಿಭ್ರಮಮತಿರೌದ್ರಮಾಯ್ತು ಸುಮನಸ್ಸುಮನೋಭರನಿತ್ಯಲಂಪಟಭ್ರಮರಮನೇಕಭೂತನಿಳಯಂ ಸಮರಂ ಕುಮರಂಕರಾಮನಾ (ಗದಾಯು. ೧೦-೩). [ನಿತ್ಯ$_3$ + ಲಂಪಟ]

ನಿತ್ಯಲಿಂಗಾರ್ಚನೆ (ನಾ). ಪ್ರತಿದಿನವೂ ಮಾಡುವ ಲಿಂಗಾರಾಧನೆ: ನಿತ್ಯಲಿಂಗಾರ್ಚನೆಯ ಮಾಡದವರ . . . ಎನಗೊಮ್ಮೆ ತೋಱದಿರು (ಬಸವ. ೪೫೪). [ನಿತ್ಯ$_1$ + ಲಿಂಗಾರ್ಚನೆ]

ನಿತ್ಯವಂತ (ನಾ). ಶಾಶ್ವತವಾದವನು; ನಿತ್ಯನಾದವನು; ದೇವರು; ಪರಮಾತ್ಮ : ಮಾತುಮಾತಿನೊಳಗೇಕೆ ಅಜಾತನ ಸಂವ್ಯಾಪ್ತಿ ಅ ನಿತ್ಯವಂತನದೇತಜ್ಞೊಳಗಿದ್ದಿಹನೆಂಬುದನಱಯದೆ ಉದರದ ಹುತ್ತಳ್ಳಾಗಿ ಮಹಾಸುಪದದಾಸೆಯ ಸಂಬಯಸಲೇಕೆ (ವೋಳಿಮಾ. ೧೭೩-೬೫೦).

[ಸಂ. ನಿತ್ಯವತ್]

ನಿತ್ಯವರದ (ನಾ). ಸದಾಕಾಲ ವರ ಕೊಡುವವನು : ಶರಣಜನ ಪುಣ್ಯಫಲಂ ಭಕ್ತಜನಭಾಗ್ಯೋದಯಂ ಭೃತ್ಯಕುಲನಿತ್ಯವರದಂ . . . ತಿರುವಾರೂರ ಶಿವಾಲಯಕ್ಕೆ ಜಿಜಯಂಗೆಯ್ದಂ (ಸಂಬಿರ. ೧೬-೯೪) ; ನಿತ್ಯವರದ ಪುರಂದರವಿಠಲನ ನೆನೆದರೆ ಸ್ಥಿರವಾದ ಮುಕುತಿಯಹುದು (ಪುರಂದ. ೪-೧೩೦-೩). [ನಿತ್ಯ$_3$ + ವರದ]

ನಿತ್ಯವಸ್ತು (ನಾ). (ಜೀವಾತ್ಮ ಮುಂತಾದ) ಶಾಶ್ವತವಾದ ವಸ್ತು,—ಪದಾರ್ಥ : ನಿತ್ಯವಸ್ತುಗಳು ಪರಮಾತ್ಮನಿಗೆ ನಿತ್ಯಪ್ರತಿಬಿಂಬಗಳಾಗಿಯೇ ಇರುವುವು (ಹಿಂದಸಾ. ೨೩೧). [ನಿತ್ಯ$_2$ + ವಸ್ತು]

ನಿತ್ಯವಾದ (ನಾ). [ತತ್ತ್ವಶಾ] ಶಬ್ದವನ್ನು ಉಚ್ಚರಿಸಿದಾಗ ಹೊರಡುವ ಧ್ವನಿಯು ನಿತ್ಯವಾದುದು ಎಂಬ ತತ್ವ ; ☞ ತಾರ್ಕಿಕರು

ವರ್ಣಗಳು ಅನಿತ್ಯವೆನ್ನುತ್ತಾರೆ. ಅವರ ಸಿದ್ಧಾಂತದಂತೆ ನಿಳಿಂಟು ಎಂಬ ಪದದಲ್ಲಿ ಮೊದಲನೆಯ ವರ್ಣವಾದ 'ನಿ' ಎಂಬುದು ಉಚ್ಚರಿತವಾದ ಮರುಕ್ಷಣದಲ್ಲಿ ನಷ್ಟವಾಗುತ್ತದೆ. 'ಳಿಂ' ಎಂಬ ವರ್ಣೋಚ್ಚಾರಣೆಯ ಕಾಲದಲ್ಲಿ 'ನಿ' ಇರುವುದಿಲ್ಲ. 'ಟು' ಎಂದಾಗ 'ನಿ' ಮತ್ತು 'ಳಿಂ' ಇರುವುದಿಲ್ಲ. ಆಗ 'ನಿ ಳಿ ಂ ಟು' ಎಂಬ ಮೂರಕ್ಷರಗಳು ಸೇರಿ ಕೋಶವೆಂಬ ಅರ್ಥವನ್ನು ಹೇಗೆ ಕೊಡುತ್ತವೆ ಎಂಬ ಅನುಪಪತ್ತಿ ಸಹಜವಾಗಿ ಬರುತ್ತದೆ. ಅದಕ್ಕೆ ಅವರು ಮೂರು ನಾಲ್ಕು ಬಗೆಯ ಸಮಾಧಾನವನ್ನು ಹೇಳಿದ್ದಾರೆ. ಪೂರ್ವವರ್ಣವು ನಷ್ಟವಾದರೂ ಸಂಸ್ಕಾರವಿಶೇಷದಿಂದ ಉತ್ತರವರ್ಣದ ಜೊತೆಯಲ್ಲಿ ಅದು ಇದ್ದಂತೆಯೆ ಗ್ರಹಿಸಲ್ಪಟ್ಟು ಕೊನೆಯ ವರ್ಣದ ಉಚ್ಚಾರಣೆಯಾದ ಮೇಲೆ ಎಲ್ಲಾ ವರ್ಣಗಳೂ ಸೇರಿದಂತಾಗಿ ನಿಳಿಂಟು ಮೊದಲಾದ ಪದಗಳು ಗ್ರಹಿಸಲ್ಪಟ್ಟು ಅರ್ಥವನ್ನು ಕೊಡುತ್ತವೆ. ಆದುದರಿಂದ ವರ್ಣಗಳು ಅನಿತ್ಯವೇ ಎನ್ನುತ್ತಾರೆ. ವೈಯಾಕರಣರು ಈ ವಾದವನ್ನು ನಿರಾಕರಿಸಿ ವರ್ಣಗಳು ನಿತ್ಯವೆನ್ನುತ್ತಾರೆ. ಈ ನಿತ್ಯವರ್ಣಗಳೇ ಶಬ್ದಗಳನ್ನು (ಪದಗಳನ್ನು) ನಿರ್ಮಿಸುತ್ತವೆ. ಅವುಗಳಿಗೆ ಅರ್ಥದೊಂದಿಗೆ ಸಂಬಂಧವಿರುತ್ತದೆ. ಈ ಸಂಬಂಧಕ್ಕೆ ಶಕ್ತಿ ಎಂದು ಹೆಸರು. ಈ ವಾದವನ್ನೇ ಮೀಮಾಂಸಕರೂ ವೇದಾಂಗಗಳೂ ಸಾಂಖ್ಯರೂ ಯೋಗಶಾಸ್ತ್ರಜ್ಞರೂ ಅಂಗೀಕರಿಸಿರುತ್ತಾರೆ. ಒಬ್ಬರು ಹೇಳುವ ಸಂಗೀತ, ಭಾಷಣಗಳನ್ನು ಯಂತ್ರಗಳ ಸಹಾಯದಿಂದ ಸೆರೆಹಿಡಿದು ಮರುಪ್ರಸಾರ ಮಾಡುವ ಟೇಪ್ ರಿಕಾರ್ಡುಗಳು ಶಬ್ದ ನಿತ್ಯವಾದವನ್ನು ದೃಢೀಕರಿಸುತ್ತವೆ.

ವೈಯಾಕರಣರು ಹೇಳಿರುವ ಸ್ಫೋಟವಾದದಲ್ಲಿ ಅನಿತ್ಯವಾದ, ನಿತ್ಯವಾದ ಎಂಬ ಎರಡು ಬಗೆಗಳಿವೆ. ಅನಿತ್ಯವಾದವೆಂದರೆ ಉತ್ಪತ್ತಿವಾದ. ಗಂಟೆಯನ್ನು ಬಾರಿಸಿದರೆ ಅನುರಣನರೂಪವಾದ ಧ್ವನಿಯು ಹೊರಡುವಂತೆ ವಕ್ತೃ ಒಂದು ಮಾತನ್ನು ಹೇಳಿದರೆ ಅದೂ ಇದೇ ರೀತಿ ತರಂಗಾಕಾರವಾಗಿ ಒಂದಾದ ಮೇಲೆ ಒಂದರಂತೆ ಧ್ವನಿಯು ಹೊರಟು ಶ್ರೋತೃವಿನ ಕಿವಿಯನ್ನು ಸೇರುತ್ತವೆ. ಮೊಟ್ಟಮೊದಲು ವಕ್ತೃವಿನ ಬಾಯಿಂದ ಹೊರಟ ಪದವು ಸ್ಫೋಟವೆಂಬ ಹೆಸರನ್ನು ಪಡೆಯುತ್ತದೆ. ಕಿವಿಯವರೆಗೂ ಒಂದು ಶಬ್ದದಿಂದ ಮತ್ತೊಂದು ಶಬ್ದವು ಹುಟ್ಟುತ್ತಾ ಬರುವ ಶಬ್ದಜನ್ಯಶಬ್ದಕ್ಕೆ ಧ್ವನಿಯೆಂದು ಹೆಸರು. ಅದರಿಂದಲೇ ಅರ್ಥವು ವ್ಯಂಗ್ಯವಾಗುತ್ತದೆ. ಈ ಪಕ್ಷದಲ್ಲಿ ವ್ಯಂಗ್ಯವಾದ ಅರ್ಥಕ್ಕೆ ಧ್ವನಿಯೆಂದು ಹೆಸರು. ನಿತ್ಯವಾದದಲ್ಲಿ ಕಿವಿಗೆ ಬೀಳುವ ಅಕ್ಷರಕ್ಕೆ ನಾದವೆಂದು ಹೆಸರು. ಇಲ್ಲಿ ಇಡೀ ಪದದ ಶ್ರವಣಾನಂತರ ಪೂರ್ವವರ್ಣಶ್ರವಣಗಳ ಸಂಸ್ಕಾರವೆಲ್ಲ ಕಡೆಯ ವರ್ಣಶ್ರವಣಸಮಕಾಲದಲ್ಲಿ ಕೂಡಿಕೊಂಡು ಅಖಂಡ ಸ್ಫೋಟವನ್ನು ಪ್ರಕಾಶಿಸುತ್ತದೆ. ಹೀಗೆ ಅಂತ್ಯವರ್ಣಸಂಸ್ಕಾರವನ್ನು ಅಪೇಕ್ಷಿಸಿ ಸ್ಫೋಟಕ್ಕೆ ಅಭಿವ್ಯಂಜಕವಾದ ವರ್ಣಗಳು (ಗೌಃ ಎಂಬಲ್ಲಿ ಗ+ಉ+ಃ) ಧ್ವನಿಯೆನಿಸುತ್ತವೆ. ಆಲಂಕಾರಿಕರ ಅನಿತ್ಯಪಕ್ಷದ ಆಧಾರದಿಂದ ವ್ಯಂಗ್ಯಾರ್ಥವನ್ನೂ ನಿತ್ಯಪಕ್ಷದ ಆಧಾರದಿಂದ ವ್ಯಂಜಕವಾದ ಶಬ್ದ ಮತ್ತು ಅರ್ಥಗಳನ್ನೂ ಧ್ವನಿಯೆಂದು ವ್ಯವಹರಿಸುತ್ತಾರೆ: ವೈಯಾಕರಣರ ಸ್ಫೋಟವಾದದಲ್ಲಿ i ಅನಿತ್ಯವಾದ (=ಉತ್ಪತ್ತಿವಾದ), ii ನಿತ್ಯವಾದ (=ಅಭಿವ್ಯಕ್ತಿವಾದ)ವೆಂಬ ಪಕ್ಷದ್ವಯಗಳಿವೆ (ಧ್ವನ್ಯಾಲೋ. ೩೮ ಅಡಿಟಿ). [ಸಂ.]

ನಿತ್ಯವಿಧಿ (ನಾ). ೧. = ನಿತ್ಯಕರ್ಮ ೧: ಅವರು ಸಂಧ್ಯಾವಂದನೆ ಮೊದಲಾದ ನಿತ್ಯವಿಧಿಗಳನ್ನು ಪೂರೈಸಿಕೊಂಡು . . . ಬಂದರು (ಕಳಹು. ೯). ೨. = ನಿತ್ಯಕರ್ಮ ೨: ನಿತ್ಯವಿಧಿಗೆಂದು ಅತ್ಯತ್ತಿರುಗುವಾಗಲೂ ದೊಡ್ಡಮ್ಮನ ಬೈಗಳು ಶಾದಿದೆಯೆಂದು ಯಶೋದೆಗೆ ಗೊತ್ತು (ವಾತ್ಸಲ್ಯ. ೨೪೯); ಇದು ನಮ್ಮ ಜನಗಳ ಜೀವನದ ಸಾಮಾನ್ಯ ನಿತ್ಯವಿಧಿ ಎನ್ನಬಹುದು (ಭಾರದ. ೬). 'ನಿತ್ಯನಿಯಮ' ಪರಾ.

[ನಿತ್ಯ$_1$ + ವಿಧಿ]

ನಿತ್ಯವಿಭೂತಿ (ನಾ). [ವಿಶಿಷ್ಟಾ.] ವಿಷ್ಣುವಿನ ಶಾಶ್ವತವಾದ ಪ್ರಭಾವ,—ದಿವ್ಯ ಪರಿಣಾಮ: ಶ್ರೀವೈಷ್ಣವಮತವೂ ಪಾಂಚರಾತ್ರಾಗಮವೂ ಮೋಕ್ಷ(=ಪರಮಪದ)ವೂ ದೇವರ ನಿತ್ಯವಿಭೂತಿ ಎಂದೂ . . . ಹೇಳುವುವು (ಭಾರದ. ೩೩೪); ಈಶ್ವರಸಂಕಲ್ಪಾನುಸಾರ ಪ್ರಾಕೃತಮಂಡಲದಂತೆ ಬಹುವಿಧ ಸನ್ನಿವೇಶಗಳು ಸೃಷ್ಟಿಸಲ್ಪಡುವುವು. ಆದರೂ ನಿತ್ಯವಾದ ಸನ್ನಿವೇಶಗಳೇ ಅಧಿಕವಾಗಿರುವುದರಿಂದ ನಿತ್ಯವಿಭೂತಿಯೆಂದು ಪ್ರಸಿದ್ಧಿ (ಹಿಂದಸಾ. ೨೩೮). [ನಿತ್ಯ$_2$ + ವಿಭೂತಿ]

ನಿತ್ಯವೇಷ (ನಾ). (ಮುಖ್ಯವಾಗಿ ಯಕ್ಷಗಾನಾದಿಗಳಲ್ಲಿ) ಯಾವ ಸಂದರ್ಭದಲ್ಲಿಯೂ ಯಾವ ಕಥೆಯಲ್ಲಿಯೂ ವ್ಯತ್ಯಾಸವಾಗದ ಪಾತ್ರ,—ವೇಷ: ನಿತ್ಯ – ನೈಮಿತ್ತಿಕಗಳೆನ್ನಬಹುದಾದ ಈ ಭೇದಗಳನ್ನು ಹೀಗೆ ಕಾಣಿಸಬಹುದು :—ಪ್ರಸ್ತಾವನೆ—ನಿತ್ಯ (೧) ೧. ಕೋಡಂಗಿಗಳು. ೨. ಬಾಲಗೋಪಾಲರು, ನಿತ್ಯವೇಷ ಅಲ್ಲವೆ ಕಟ್ಟುವೇಷ (ಪಾತಾಸು. ೩೨). [ನಿತ್ಯ$_2$ + ವೇಷ]

ನಿತ್ಯವ್ರತ (ನಾ). = ನಿತ್ಯನೇಮ: ಅವಗ್ರಹಂ ನಿತ್ಯವ್ರತದೊಳ್ ಅಸವಾಸಕ್ತಿ ಮಧುವ್ರತದೊಳ್ (ಚಂದ್ರಪು. ೩–೯೫); ಅತಿಥಿಸತ್ಕಾರವು ಪ್ರತಿಯೊಬ್ಬ ಮನುಷ್ಯನ ನಿತ್ಯವ್ರತವಾಗಿತ್ತು (ಭಾರದ. ೧೦೫).

[ನಿತ್ಯ$_1$ + ವ್ರತ]

ನಿತ್ಯಶುದ್ಧ (ನಾ). ಯಾವಾಗಲೂ ಪರಿಶುದ್ಧನಾಗಿರುವವನು: ನಿತ್ಯಶುದ್ಧಂಗೀ ದ್ವಿಜಾದಿ ಕುಲೋಕ್ತ ಸಂಸ್ಕಾರದಲಿ ಸಿದ್ಧಿಯದೆತ್ತಣದು (ನಿಭಾಗ. ೧೦–೭–೩೯); ತಾನು ನಿತ್ಯಶುದ್ಧನೆಂಬ ಜ್ಞಾನ ಮತ್ತು ಅದರ ಸಾಕ್ಷಾತ್ಕಾರವೇ . . . ಸಾಂಖ್ಯದರ್ಶನದ ಮುಖ್ಯಾಂಶಗಳು (ಭಾರದ. ೧೫೧). [ನಿತ್ಯ$_3$ + ಶುದ್ಧ]

ನಿತ್ಯಸಂಕಟ (ನಾ). ನಿರಂತರವಾದ ಸಂಕಟ; ಎಡೆಬಿಡದ ಯಾತನೆ: ಕೈಯಲ್ಲಿ ಹರಿಯದ ರಾಜನನ್ನು ಆಶ್ರಯಿಸಿರುವುದರಿಂದ ನಮಗೆ ಈ ನಿತ್ಯಸಂಕಟ ಬಂದಿದೆ (ವಜಭಾ. ೪೫). [ನಿತ್ಯ$_2$ + ಸಂಕಟ]

ನಿತ್ಯಸಂಗತಿ (ನಾ). ದಿನವೂ ನಡೆಯುವ ಸಂಗತಿ: ಇಂತಹ ಅನುಭವ ನಿತ್ಯಸಂಗತಿಯಾಗಿ ಸತ್ಯದ ಕಥೆಯಾಗಿ ನಾವು ಒಲಿದ ಮದುಮಕ್ಕಳು ಭಾನ್ಯೆಕರಸರಾಗಿ ಸಂಸಾರಕಿದನು ಹೂಡಿದೆವು (ಇಂಜಾಪ. ೩೬–೭೫).

[ನಿತ್ಯ$_1$ + ಸಂಗತಿ]

ನಿತ್ಯಸಂದಿ (ನಾ). = ನಿತ್ಯಸಂಧಿ: ಶ್ರೀಚೆಲುವರಾಯರಿಗೆ ನಿತ್ಯಸಂದಿ ತೆಪ್ಪ ತಿರುನಾಳು ಚಂಪು ತಿರುನಂದಾವನ ಮೊದಲಾದ ಕೈಂಕರ್ಯದ ಕೆಲವಾಗಿ ಸಹಿರಣ್ಯೋದಕ ದಾನ ಧಾರಾಪೂರ್ವಕವಾಗಿ ನಮಿಗೆ ಸಮರ್ಪಿಸಿದವಾಗಿ (ಎಕ. XIV, ಶ್ರೀರಂಗ. ೯೫–೨; 1535).

[P ಇದು 'ನಿತ್ಯಸಂಧಿ' ಎಂಬುದರ ಅಪಲಿಖಿತ]

ನಿತ್ಯಸಂಧಿ (ನಾ). ದೇವರಿಗೆ ದಿನವೂ ಮಾಡುವ ಒಂದು ಬಗೆಯ ಸೇವೆ: ಕಿಲ್ಲೆಯ ಕಟ್ಟಿಸಿ ಮಾಡಿದ ನಿತ್ಯಸಂಧಿ ॥ ೪ ಮಯಿಲನಳಿಯ ಸಂದುಂಧ ನಿತ್ಯಸಂಧಿ ೩೦ ೧/೪ (ಎಕ. XIV, ಶ್ರೀರಂಗ. ೯೫–೩; 1535); P ಮೇಲುಕೋಟೆ ಶ್ರೀ ನಾರಾಯಣಸ್ವಾಮಿ ದೇವಸ್ಥಾನದ ಕೈಪಿಡಿಯ ೧೬೭ನೆಯ ಪುಟದಲ್ಲಿ ದೇವರಿಗೆ ಮಾಡ

ಬೇಕಾದ ದಿನವಹಿ ಸೇವೆಗಳನ್ನು ವಿವರಿಸುತ್ತ — "ಈ ಕಾಲದಲ್ಲಿ ಪ್ರಬಂಧಸೇವಾಕಾಲಕ್ಕೆ 'ಅರುಳಪ್ಪಾಡ'ನ್ನು ಪ್ರಸಾದಿಸುವುದಕ್ಕೆ ಅರ್ಚಕರು ಹೇಳುವುದು. ಆಧ್ಯಾಪಕರು 'ನಿತ್ಯಾನುಸಂಧಾನ' ಪ್ರಬಂಧವನ್ನು ಹೇಳುವುದು" ಎಂಬ ನಿರ್ದೇಶವಿದೆ. ಸಂಧಿ ಮತ್ತು ಸಂಧಾನಗಳು ಪರ್ಯಾಯಪದಗಳಾಗಿರುವುದರಿಂದ ಇಲ್ಲಿರುವ 'ನಿತ್ಯಸಂಧಿ' ಎಂಬ ಪದಕ್ಕೆ ದೇವರ ಸನ್ನಿಧಿಯಲ್ಲಿ ಪಠಿಸುವ ಒಂದು ನಿರ್ದಿಷ್ಟವಾದ ಪ್ರಬಂಧವೆಂದು ಹೇಳಲು ಅವಕಾಶವಿದೆ. [ನಿತ್ಯ$_1$ + ಸಂಧಿ]

ನಿತ್ಯಸಂಧ್ಯಾಕರ್ಮ (ನಾ). ದಿನವೂ ಮಾಡಬೇಕಾದ ಸಂಧ್ಯಾವಂದನೆಯೇ ಮೊದಲಾದ ವೈದಿಕಕಾರ್ಯ : ಮಾಧ್ಯಾಹ್ನಿಕಾದಿ ನಿತ್ಯಸಂಧ್ಯಾಕರ್ಮಂಗಳನ್ನು ನಿಯಮಪೂರ್ವಕವಾಗಿ ಮಾಡಿದವನಾಗಿ . . . ಭೋಜನ ಮಾಡಬೇಕೆಂದು ಬಲ್ಲವರ ಮತವು (ಸಕವೈ. ೪೯).

[ನಿತ್ಯ$_1$ + ಸಂಧ್ಯಾಕರ್ಮ]

ನಿತ್ಯಸಂನ್ಯಾಸಿ (ನಾ). ನಿರಂತರವಾಗಿ ಸಂನ್ಯಾಸವ್ರತವನ್ನು ಪಾಲಿಸುವವನು : ಪರ್ವತಗಳೂ ಗಿಡಮರಗಳೂ ಸಿದ್ಧಿಯನ್ನು ಪಡೆದಾವು ! ಏಕೆಂದರೆ ಅವು ನಿತ್ಯಸಂನ್ಯಾಸಿಗಳು, ನಿತ್ಯಬ್ರಹ್ಮಚಾರಿಗಳು ; ಅವುಗಳಿಂದ ಯಾರಿಗೂ ಏನೂ ಬಾಧೆಯಿಲ್ಲ ! (ಯಭಾ. ೩೨೯).

[ನಿತ್ಯ$_3$ + ಸಂನ್ಯಾಸಿ]

ನಿತ್ಯಸಂಶಯ (ನಾ). ಬಹುಕಾಲದ ಸಂಶಯ ; ಬೇರೂರಿದ ಸಂಶಯ : (Chronic-doubt. ಇಂಕನಿ). [ನಿತ್ಯ$_2$ + ಸಂಶಯ]

ನಿತ್ಯಸಂಸಾರ (ನಾ). [ದ್ವೈತ] ಸುಖದುಃಖಗಳಿಂದ ತುಂಬಿರುವ ಜೀವನ,—ಬಾಳು : ನಿತ್ಯಸಂಸಾರವೆಂಬ ನಿತ್ಯಸುಖದುಃಖಮಿಶ್ರಾನುಭವಸ್ಥಾನಗಳಲ್ಲಿ ಸಾಧನಾನುಷ್ಠಾನದಿಂದ ಮಿಶ್ರಾನುಭವಕ್ಕೆ ಸಿದ್ಧರಾಗುವರು (ಹಿಂದಸಾ. ೨೭೫). 'ನಿತ್ಯಸಂಸಾರಿ' ಪರಾ. [ನಿತ್ಯ$_2$ + ಸಂಸಾರ]

ನಿತ್ಯಸಂಸಾರಿ (ನಾ). [ದ್ವೈತ] ಜೀವಾತ್ಮರುಗಳಲ್ಲಿ ಇರುವ ಮೂರು ಭೇದಗಳಲ್ಲಿ ಒಂದು ; ಸಂಸಾರದಲ್ಲೇ ತೊಳಲುವವನು; ಮುಕ್ತಿಯಿಲ್ಲದವನು : ಜೀವಾತ್ಮರಲ್ಲಿ ಉತ್ತಮ ಮಧ್ಯಮಾಧಮ ಭೇದದಿಂದ ಮುಕ್ತಿಯೋಗ್ಯರು, ತಮೋಯೋಗ್ಯರು, ನಿತ್ಯಸಂಸಾರಿಗಳೆಂದು ಭೇದವಿರುವುದು (ಹಿಂದಸಾ. ೨೭೪). [ಸಂ. ನಿತ್ಯಸಂಸಾರಿನ್]

ನಿತ್ಯಸಭೆ (ನಾ). ದಿನವೂ ನಡೆಯುವ ಸಭೆ : ನಾಯಕರು ನಿತ್ಯಸಭೆ, ನೈಮಿತ್ತಿಕ ಸಭೆ, ಯುದ್ಧಸಭೆ, ಶ್ರಾದ್ಧಸಭೆ ಮೊದಲಾದವುಗಳಲ್ಲಿ ಯಾವಾಗಲೂ ಓಡಾಡುತ್ತಿರುತ್ತಾರೆ (ಸಿಬಂಧ. II, ೨೦೧). [ನಿತ್ಯ$_1$ + ಸಭೆ]

ನಿತ್ಯಸುಂದರ (ನಾ). ಸದಾ ಚೆಲುವಿನಿಂದ ಕೂಡಿರುವವನು : ಸತ್ಯವನ್ನು ನಿತ್ಯಸ್ಮರಣೆಯಿಂದ ಆರಾಧಿಸುವವನು ನಿತ್ಯಸುಂದರನಾಗಿ ಶೋಭಿಸಬಲ್ಲನು (ಶಕ್ತಿವಿ. ೩). [ನಿತ್ಯ$_3$ + ಸುಂದರ]

ನಿತ್ಯಸುಖ (ನಾ). ಶಾಶ್ವತವಾದ ಸುಖ : ನಿತ್ಯಸುಖಮಾತ್ಮರೂಪಮನಿತ್ಯಸುಖಂ ಮೋಹರೂಪವೆಂಬ ವಿವೇಕಂ ಸತ್ಯಸ್ವರೂಪಮದಱೊಳಗತ್ಯಂತಾನುಭವವಿಭವಮಕ್ಕೆಮಗರುಹಾ (ಪಂರಾಮಾ. ೭-೪೩) ; ಧರ್ಮಾರ್ಥಕಾಮಂಗಳಂ ಕ್ರಮದಿಂ ಪೆರ್ಚಿಸಿ ಪೆತ್ತು ನಿತ್ಯಸುಖಮಂ ಸತ್ಕೀರ್ತಿಯಂ, ತಾಳ್ದು ರಾಜ್ಯಮನಾಳ್ದರೊ ಪದ್ಮರಾಜನಪೊಲುರ್ವೀಭಾಗದೊಳ್ ಭೂಭುಜರ್ (ಪುಸ್ವಪು. ೩-೨೧) ; ನಿತ್ಯಸುಖವಹ ಸಂಕರುಪಹಾಂಭ್ರಿಯನು ನೆನೆ (ಸಿಭಾಗ. ೬-೧೦-೪೦). [ನಿತ್ಯ$_2$ + ಸುಖ]

ನಿತ್ಯಸುಖಾನುಭವ (ನಾ). ಶಾಶ್ವತವಾದ ಸುಖದ ಅನುಭವ : ಸಂಶಯವ ಕಳೆದು ನಿತ್ಯಸುಖಾನುಭವಪದದೊಳಗೆ ನಿಲಿಸಿದುದೆನ್ನ ಜನ್ಮದ ಫಲಸಮಗ್ರವೆನಲ್ಕೆ ಸಲೆ ಸಂಪನ್ನವಾಯ್ತು (ಸಿಭಾಗ. ೫-೮-೪೨).

[ನಿತ್ಯಸುಖ + ಅನುಭವ]

ನಿತ್ಯಸುಖಿ (ನಾ). ಸದಾಸುಖಿ ; ಯಾವಾಗಲೂ ಸುಖದಿಂದ ಇರುವವನು : ವಾಸ್ತವವಾಗಿ ನಿತ್ಯಸುಖಿಯಾದ ಜೀವನು ಮಲಸಂಬಂಧದಿಂದ ನಿತ್ಯದುಃಖಿಯಾಗಿ ನರಳುತ್ತಿರುವನು (ಶಕ್ತಿವಿ. ೬೨).

[ಸಂ. ನಿತ್ಯಸುಖಿನ್]

ನಿತ್ಯಸುಮಂಗಲಿ (ನಾ). ೧. ದೀರ್ಘಸುಮಂಗಲಿ ; ಮುತ್ತೈದೆ. ೨. (ಅಲಂ) ಸೂಳೆ ; ವೇಶ್ಯೆ : ಅಲಂಕರಿಸಿಕೊಂಡಿರುವ ರೀತಿ ನೋಡಿದರೆ ತಿಳಿಯುವುದಿಲ್ಲವೇನೋ ಗುಗ್ಗೂ ? ಅವಳು ನಿತ್ಯಸುಮಂಗಲಿ ಕಣೋ (ಹೂಹಣ್ಣು. ೧೧೯). [ನಿತ್ಯ$_2$ + ಸುಮಂಗಲಿ]

ನಿತ್ಯಸೂರಿ (ನಾ). ಜೀವನ್ಮುಕ್ತನಾದವನು ; ಮುಕ್ತಿಯನ್ನು ಹೊಂದಿದವನು : ಯಾವಾಗಲೂ ಸಂಸಾರವೆಂಬ ಪ್ರಕೃತಿಸಂಬಂಧವಿಲ್ಲದ ಅನಂತ, ಗರುಡ, ವಿಷ್ವಕ್ಸೇನ ಮೊದಲಾದ ಭಗವಂತನ ಪರಿಜನರು ನಿತ್ಯರು. ಇವರೇ ನಿತ್ಯಸೂರಿಗಳು (ಹಿಂದಸಾ. ೨೪೬). [ನಿತ್ಯ$_2$ + ಸೂರಿ$_1$]

ನಿತ್ಯಸೌಖ್ಯ (ನಾ). = ನಿತ್ಯಸುಖ : ವರಮುನಿಗಳೆಲ್ಲರುಂ ಲಿಂಗಮುಂ ಧರಿಸಿಯುಱೆ ದುರಿತವನೊರಸಿ ಪೂರ್ವವಳಿದು ಮಿಗಿಲೆನಿಸಿಹರು ನರಸುರೋರಗರೆಲ್ಲ ಲಿಂಗಧಾರಿಗಳಾಗಿ ನಿತ್ಯಸೌಖ್ಯದೊಳಿರ್ಪರು (ಪ್ರೌಢರಾ. ೮-೨). [ನಿತ್ಯ$_2$ + ಸೌಖ್ಯ]

ನಿತ್ಯಸ್ಥಿತಿ (ನಾ). ದಿನವೂ ನಡೆಯುವ ಕಟ್ಟಳೆ : ಬರೆಯಲುಂ ಬಾಚಿಸಲು ಬಲ್ಲ ಶಬ್ದಸಂಸ್ಕಾರವುಳ್ಳಾತ ನಾಗದೇವಿಗರ್ಗೆ ನಿತ್ಯಸ್ಥಿತಿಯೊಂದು ಪೊಟ್ಟಜಾಹಾರಮುಂ ವರಿಷಕ್ಕೊನ್ದು ಕಪ್ಪಡವುವನಿಕ್ಕಿಯೋದಿಸಿ ಗುಣಶಾಸನದಿನಾಳ್ವಕ್ಕರಿಗವೃತ್ತಿ ಮತ್ತರಿರ್ಪತ್ತೈದು (ಎಇ. XX, ೬-೨೬ ; 1012). [ನಿತ್ಯ$_1$ + ಸ್ಥಿತಿ]

ನಿತ್ಯಸ್ಮರಣೆ (ನಾ). ನಿರಂತರವಾದ ಸ್ಮರಣೆ,—ಚಿಂತನೆ,—ಧ್ಯಾನ : ಸತ್ಯವನ್ನು ನಿತ್ಯಸ್ಮರಣೆಯಿಂದ ಆರಾಧಿಸುವವನು ನಿತ್ಯಸುಂದರನಾಗಿ ಶೋಭಿಸಬಲ್ಲನು (ಶಕ್ತಿವಿ. ೩). [ನಿತ್ಯ$_2$ + ಸ್ಮರಣೆ]

ನಿತ್ಯಸ್ವತಂತ್ರ (ನಾ). ಯಾವಾಗಲೂ ಸ್ವತಂತ್ರನಾದವನು ; ಸದಾ ಸ್ವತಂತ್ರ : ನಿತ್ಯಸ್ವತಂತ್ರನು ನೀನೆ ದೃಷ್ಟಲಿಂಗಜಂಗಮ ಒಂದೆ ಎಂದಿಪ್ಪೆನು ಪರಮಪ್ರಭುವೆ (ಬಸವ. ೮೨೧). [ನಿತ್ಯ$_3$ + ಸ್ವತಂತ್ರ]

ನಿತ್ಯಹರಿದ್ವರ್ಣ (ನಾ). ಸದಾ ಹಸುರುಬಣ್ಣದಿಂದ ಕೂಡಿರುವುದು; ಯಾವಾಗಲೂ ಹಸುರಿನಿಂದ ಕೂಡಿರುವುದು : ಎಂದೆಂದೂ ಹಸುರಾಗಿರುವ ಸಮಭಾಜಕವೃತ್ತದ ನಿತ್ಯಹರಿದ್ವರ್ಣದ ಕಾಡುಗಳು (ಧೂವಿನಿ. ೧೪೮). [ನಿತ್ಯ$_3$ + ಹರಿದ್ವರ್ಣ]

ನಿತ್ಯಾಂಧಕಾರ (ನಾ). ಶಾಶ್ವತವಾದ ಕಗ್ಗತ್ತಲೆ,—ಗಾಢಾಂಧಕಾರ : ಕ್ರೂರವ್ಯಾಘ್ರಪ್ರಕೀರ್ಣಕಟಕಂ ನಿತ್ಯಾಂಧಕಾರಂ ಮಣಿಪ್ರಭವಸ್ಥಾನನಿಕುಂಜವೆನ್ನದಱೊಳೆಂದೊಪ್ಪಿರ್ದುದೌನ್ನತ್ಯದಿಂ ನಭಮಂ ಚುಂಬಿಸುತಿರ್ಪದೊಂದು ಕುಧರಂ (ಪಲ್ಲಕಾ. ೩-೧೪).

[ನಿತ್ಯ$_2$ + ಅಂಧಕಾರ]

ನಿತ್ಯಾಗ್ನಿ (ನಾ). ಶಾಶ್ವತವಾದ ಅಗ್ನಿ ; ಅಗ್ನಿಹೋತ್ರ ಮಾಡುವುದಕ್ಕಾಗಿ ವೈದಿಕರು ಉಪಯೋಗಿಸುವ ಅಗ್ನಿ : ನೀಲಕಂಠಭಕ್ತರು ಅಲ್ಲಿಗೆ ಹೋಗಿ ಅಲ್ಲಿರುವ ನಿತ್ಯಾಗ್ನಿಗೆ ಪ್ರದಕ್ಷಿಣೆಯಂ ಗೈದು . . . ಮಲಗಿದರು (ಧಾಂವಿ. ೧೪೨). 'ಅಗ್ನಿಹೋತ್ರ' ಪರಾ.

[ನಿತ್ಯ$_2$ + ಅಗ್ನಿ]

ನಿತ್ಯಾತುಮ (ನಾ). = ನಿತ್ಯಾತ್ಮ : ಇಂದಿದನು' ವರ್ಣಿಸುವ ಕೇಳುವರಿಂದಧಿಕಸುಕೃತಿಗಳಹಾರು ಮುಕುಂದ ನಿತ್ಯಾತುಮಪದಾಬ್ಜವರ ಪ್ರಸಾದದಲಿ (ಸಿಭಾಗ. ೯-೧೧-೫೩) ; ರಕ್ಷಿಸುತಾ ಕಾಂತೆ ಮೈಯಿಕ್ಕಿದಳು ನಿತ್ಯಾತುಮನ ಚರಣದಲಿ (ಸಿಭಾಗ. ೧೦-೩-೫೪).

[<ಸಂ. ನಿತ್ಯಾತ್ಮನ್]

ನಿತ್ಯಾತ್ಮ (ನಾ). ಶಾಶ್ವತನಾದವನು ; ಪರಮಾತ್ಮ : ದೊರಕುವುದು ಸರ್ವಾರ್ಥಸಿದ್ಧಿಗಳುರುದಯೂನಿಧಿ ಸಕಲಜಗದೀಶ್ವರನೆನಿಪ ನಿತ್ಯಾತ್ಮ ವಿಶ್ವಂಭರನ ಕರುಣದಲಿ (ನಿಭಾಗ. ೫-೪-೪೪). [ಸಂ. ನಿತ್ಯಾತ್ಮನ್]

ನಿತ್ಯಾನಂದ (ನಾ). ೧. ಶಾಶ್ವತವಾದ ಆನಂದ ; ಸ್ಥಿರವಾದ ಸಂತೋಷ : ವೇದಾಂತಶ್ರವಣಮನನನಿದಿಧ್ಯಾಸನಗಳಿಂ ತೋರ್ಪುದೆ ನಿತ್ಯಾನಂದವೆನಿಸುವದು (ನಾನಾಗು. ೫೬-೩) ; ಮುಕ್ತಯೋಗ್ಯರಾದ ಜೀವರು ಭಗವತ್ಪ್ರಸಾದದಿಂದ ವೈಕುಂಠಲೋಕಕ್ಕೆ ಹೋಗಿ ನಿತ್ಯಾನಂದವನ್ನು ಅನುಭವಿಸುವ ಹಾಗೆ (ಹಿಂದಸಾ. ೩೪೪). ೨. ಶಾಶ್ವತವಾದ ಆನಂದವನ್ನು ಪಡೆದವನು ; ಪರಮಾತ್ಮ : ಆರು ಏಳದ ಮುನ್ನ ಎಬ್ಬಿಸಿ ಶೃಂಗಾರ ಮಾಡಿ . . . ನಿತ್ಯಾನಂದಗೆ ನಲುವುಗನ್ನಡಿಯ ತೋಱು (ಪುರಂದ.೫-೧೧೮೮-೨) ; ನಿತ್ಯಾನಂದಂ ನಿಯತವರದಂ ನಿಷ್ಕಳಂ . . . ಭುವನ ಶರಣಂ ತ್ವಾಂ ಶರಣ್ಯಂ ಪ್ರಪದ್ಯೇ (ರಾಜಪ್ರ. ೧೩-೫೮) ; ಶರಣು ನಿಷ್ಕಳಲ್ಪ ನಿತ್ಯಾನಂದ ನಿಗಮನುತ (ಗಗಶಾ. ೧-೪೩). [ನಿತ್ಯ$_2$ + ಆನಂದ]

ನಿತ್ಯಾನುಮೇಯ (ನಾ). ಕಡ್ಡಾಯವಾಗಿ ಊಹಿಸಿ ತಿಳಿಯಬೇಕಾದ ವಿಷಯ : ಸೃಷ್ಟಿವಿಷಯಕವಾದ ವೇದಾಂತವಾಕ್ಯಗಳೆಲ್ಲಾ ಕಾರ್ಯಕಾರಣವನ್ನು ಅನುಮಾನ ಪ್ರಮಾಣಗಳಿಂದಲೇ ನಿರ್ಣಯಿಸುವುದು ಉದ್ದೇಶವೆಂದೂ . . . ಪ್ರಧಾನ, ಪುರುಷ, ಅವುಗಳ ಸಂಯೋಗ —ಇವು ನಿತ್ಯಾನುಮೇಯಗಳೆಂದೂ ಸಾಂಖ್ಯರು ಭಾವಿಸುತ್ತಾರೆ (ಬ್ರಹ್ಮಭಾ. ೭೬). [ನಿತ್ಯ$_2$ + ಅನುಮೇಯ]

ನಿತ್ಯಾಧಿಯೋಗ (ನಾ). ಸದಾ ಕೂಡಿರುವಿಕೆ ; ನಿತ್ಯಸಂಬಂಧ : ಸತಿಯು ಪತಿಯೊಡನೆ ಕೂಡಿ ಬಾಳುವೆ ಮಾಡುವಂತೆ, ಜೀವನು ಶಿವನೊಡನೆ ಕೂಡಿ ನಿತ್ಯಾಧಿಯೋಗ ಹೊಂದಿರುವನು (ಶಕ್ತಿವಿ. ೪೧). [ಸಂ.]

ನಿತ್ಯಾರ್ಚನ (ನಾ). ದಿನವೂ ಮಾಡುವ ಪೂಜೆ: 'ನಿತ್ಯಾರ್ಚನಂಗೈ' ಪರಾ. [ನಿತ್ಯ$_1$ + ಅರ್ಚನ]

ನಿತ್ಯಾರ್ಚನಂಗೈ (ಕ್ರ). ದಿನವೂ ಪೂಜೆಯನ್ನು ಮಾಡು,—ಸೇವಿಸು : ಹಿಮಗಿರೀಶ್ವರ ನಂದಿಗರುಹಿ ನಿತ್ಯದಿ ನಿನ್ನ ರಮಣನಂಘ್ರಿಯನು ಸದ್ಭಕ್ತಿಯಿಂ ಭಜಿಸಿಮೊಲಿಸುವದೆಂದು ಸೇಳಿ ಪೋಗೆ ಕ್ರಮವಿದಿದು ನಿತ್ಯಾರ್ಚನಂಗೈವುತಿರಲು (ಸಪಮೋ. ೬-೧೯).

[ನಿತ್ಯಾರ್ಚನ + ಕೈ$_1$ (< ಕೆಯ್$_1$)]

ನಿತ್ಯಾರ್ಚನೆ (ನಾ). = ನಿತ್ಯಾರ್ಚನ : ಜೀವನು ಶಿವನೊಡನೆ ಕೂಡಿ ನಿತ್ಯಾಧಿಯೋಗ ಹೊಂದಿರುವನು. ಹೀಗೆ ಅವನು ನಿತ್ಯಸಂಬಂಧದಿಂದ ನಿತ್ಯಾರ್ಚನೆಯಲ್ಲಿ ನಿರತನಾಗುವನು. ಈ ಬಗೆಯ ನಿತ್ಯಾರ್ಚನೆಯೇ ಈ ವೇದಾಂತದಲ್ಲಿ ಯಜ್ಞವೆನಿಸಿದೆ (ಶಕ್ತಿವಿ. ೪೧). [ನಿತ್ಯ$_1$ + ಅರ್ಚನೆ]

ನಿತ್ಯಾರ್ಥ (ನಾ). ತಪ್ಪದೆ ಇರುವುದು ಎಂಬ ಅರ್ಥ ; ಕಡ್ಡಾಯ ಎಂಬ ಅರ್ಥ : ಸಲೆಯೆಂಬುದು ನಿತ್ಯಾರ್ಥದೊಳಂ . . . ವರ್ತಿಸುಗುಂ (ಶಸುದ. ೬೧೩ ವೃತ್ತಿ). [ನಿತ್ಯ$_2$ + ಅರ್ಥ]

ನಿತ್ಯಾರ್ಥಾವಲಂಬಿ (ನಾ). ನಿತ್ಯಾರ್ಥವನ್ನು ಹೊಂದಿಕೊಂಡಿರುವುದು : ಸಲೆಯೆಂಬುದು ನಿತ್ಯಾರ್ಥಾವಲಂಬಿ . . . ಅನುಮಾನಾರ್ಥಯುಗಳಮವು ಶಾಬ್ದಿಕರಿಂ (ಶಸುದ. ೬೧೩).

[ಸಂ. ನಿತ್ಯಾರ್ಥಾವಲಂಬಿನ್]

ನಿತ್ಯಾಲಂಬ (ನಾ). ಸದಾಕಾಲದಲ್ಲಿರುವ ಆಶ್ರಯ ; ಯಾವಾಗಲೂ ಆಧಾರವಾಗಿರುವಿಕೆ : ಶೀಲಂ ಪಾಲಿತಪಟ್ಟಕಾರಮೆನಿಸಿರ್ದಾವಶ್ಯಕಕ್ರಿಯೆಯ್ತು ನಿತ್ಯಾಲಂಬಂ (ಚಂದ್ರಪು. ೧-೫). [ನಿತ್ಯ$_3$ + ಆಲಂಬ]

ನಿತ್ಯಾವರಣ (ನಾ). ಸದಾ ಆವರಿಸಿಕೊಂಡಿರುವಿಕೆ ; ಯಾವಾಗಲೂ ಸುತ್ತುಗಟ್ಟಿರುವಿಕೆ : 'ನಿತ್ಯಾವರಣದೇವತೆ' ಪರಾ.

[ನಿತ್ಯ$_3$ + ಆವರಣ]

ನಿತ್ಯಾವರಣದೇವತೆ (ನಾ). ಸದಾಕಾಲವೂ ಪ್ರಧಾನದೇವರ ಸುತ್ತಲೂ ಇರುವ ಪರಿವಾರದೇವತೆ : ಇಲ್ಲಿ ಅರ್ಕೇಶ್ವರಗೆ ನಿತ್ಯಾವರಣದೇವತೆಗಳಾದ ಗಣಪತಿ ಭೈರವ ಮೊದಲಾದ ಯಾವ ಗಣಗಳುಂಟೊ ಅವರ ಪೂಜೆಯೇ ಈ ಕ್ಷೇತ್ರದಲ್ಲಿ ಸರ್ವಕಾರ್ಯಗಳಿಗೂ ಸಾಧನೆಯಾಗುವದು (ಅರ್ಕಮಾ. ೧೪). [ನಿತ್ಯಾವರಣ + ದೇವತೆ]

ನಿತ್ಯಾವಳಿ (ನಾ). ವರ್ತನೆಯಾಗಿ ಪ್ರತಿನಿತ್ಯವೂ ಪೂಜೆಗೆ ಹೋಗುವುದು : ಬೆಳಗಿನ ಸ್ನಾನ ಬಗೆಹರಿಸಿ . . . ನಾಳು ನಿತ್ಯಾವಳೀ ಮನೆಯ ದೇವರ ತಲೆಯ ಮೇಲೆ ತಣ್ಣೀರು ಸುರುವಿ . . . ಮನೆಗೆ ಬರುತ್ತಿದ್ದೆವು (ವೀಸಹ. ೫೯, ೧). [←ಮರಾ. ನಿತ್ಯಾವಳಿ]

ನಿತ್ಯೆ (ನಾ). ೧. ಗಿರಿಜೆ ; ಪಾರ್ವತಿ : ನಿತ್ಯೆ ಸತ್ಯೆ ನಿರ್ವಿಕಾರೆ . . . ಪಾಲಿಸಮ್ಮ ಸರ್ವಮಂಗಳೇ (ಹಾಲಾಸ್ಯ. ೫-೧೬-೪೭). ೨. ಕಶ್ಯಪನ ಮಗಳು ; ಮನಸಾದೇವಿ. [ಸಂ. ನಿತ್ಯಾ]

ನಿತ್ಯೇಷ್ಟಿ (ನಾ). ನಿತ್ಯವೂ ಮಾಡುವ ಯಾಗ,—ಯಜ್ಞ : ನಿತ್ಯೇಷ್ಟಿ ಕಾಮ್ಯೇಷ್ಟಿ ಮೊದಲಾದವುಗಳಂ . . . ಕ್ಷತ್ರಿಯನಾದೊಡೆ ಅಧಿಕೃತಮಾಗಿ ಮಾಳ್ಪುದು (ವಿತೇಶ. ೧೪೩). 'ಕಾಮ್ಯೇಷ್ಟಿ' ಪರಾ.

[ನಿತ್ಯ$_1$ + ಇಷ್ಟಿ]

ನಿತ್ಯೇಶ್ವರವಾದ (ನಾ). ಶಾಶ್ವತನಾದ ಒಬ್ಬನೇ ದೇವರಿದ್ದಾನೆಂಬ ವಾದ : ಯಾರು ಬೇಕಾದರೂ ಈಶ್ವರನಾಗಬಹುದೆಂಬ ಸಿದ್ಧಾಂತದಲ್ಲಿ ಕಲಹವನ್ನು ತಿಳಿದು ಈಶ್ವರವಾದಿಗಳು ನಿತ್ಯೇಶ್ವರವಾದವನ್ನು ಆಶ್ರಯಿಸಿರುವರು (ಹಿಂದಸಾ. ೨೬೪).

[ನಿತ್ಯ$_2$ + ಏಳ + ಈಶ್ವರ + ವಾದ$_2$]

ನಿತ್ಯೋತ್ಸವ (ನಾ). ೧. ದಿನವೂ ನಡೆಸುವ ಮಂಗಳಕಾರ್ಯ,—ಉತ್ಸವ : ಅಂತು ವಿಜಯಮಂಗಳಂ ನೆಗಟ್ಟಿ ಗೋಕುಲಮಂ ಪೊಕ್ಕು ನಂದನಂದನಂ ಗೋಪಾಲವಿನೋದಮೆ ನಿತ್ಯೋತ್ಸವಮಾಗೆ ಸುಖದಿಂದಿರ್ಪನ್ನೆಗಂ (ಜಗವಿ. ೪-೫೮ ಪ) ; ಭೂಲೋಲ ನರಸೇಂದ್ರನ ನಿತ್ಯೋತ್ಸವದೋಲಗಸಿರಿಯೆ ಬಣ್ಣಿಸುವೆ (ಕಾನವಿ.೪ ಸೂಚನೆ) ; ಆಲಂಬನದಿ ನಿರುಪಮ ಶಿವಮಯಮಾವನಯಿತ್ತು ನಿತ್ಯೋತ್ಸವವ ಪಾಲಿಸು (ಜಿಂಪಾ. ೧-೩) ; ಮೂರ್ತಿಪೂಜೆಯು ಸ್ವ-ಪರ ಶ್ರೇಯಸ್ಸಾಧಕವಾದ ನಿತ್ಯೋತ್ಸವ ಮೊದಲಾಗಿ ರಥೋತ್ಸವ ಪರ್ಯಂತವಾದ ವಿಶೇಷೋತ್ಸವಾಚರಣೆಗಳಿಂದ . . . ಸಿದ್ಧರಿಗೂ ಕೂಡ ಜ್ಞಾಪಕವಾಗಿಯೂ ಬೋಧಕವಾಗಿಯೂ ಇದೆ (ಭಾರದ. ೪೨). ೨. ನಿತ್ಯೋತ್ಸವಕ್ಕೆ ಪಾತ್ರನಾದವನು : ತೆತ್ತೀಸ ಕೋಟಿ ದೇವರ್ಕಳ ಒಡಗೂಡಿ . . . ನಿತ್ಯೋತ್ಸವ ಬಂದ ಕಾಣರೇನೆ (ಪುರಂದ. ೧-೧೪೦-೬). [ನಿತ್ಯ$_1$ + ಉತ್ಸವ]

ನಿತ್ಯೋದಯ (ನಾ). ೧. ದಿನವೂ ಉದಯಿಸುವವನು : ನಿತ್ಯೋದಯನೆನುಮಪ್ಪ ಗಭಸ್ತಿಘಾಲಿಗರ್ಘ್ಯಮನೆತ್ತಿದ ಹಸ್ತಕಮಲದೊಳ್ (ಪಂಚತಂ. ೩೫೭-೫). ೨. ಯಾವಾಗಲೂ ಅಭ್ಯುದಯವುಳ್ಳವನು : ಪ್ರಳಯತಿಯೊಳ್ ನಿತ್ಯೋದಯನುಂ ನಿಸರ್ಗದೊಳ್ ರಿಪುವರ್ಗದುರ್ಗಸರ್ಭೇದಿಯುಂ . . . ಅಜೇಯನುಮಪ್ಪ ದಮಿತಾರಿಗೆ ಸಾಮ್ರಾಣ್ಯದೊಳ್ ಯಾನಮುಮುಪಾಯಚತುಷ್ಟಯದೊಳ್ ದಂಡಮುಮುಲ್ಲಜುಬಾದ ಗುಣಸಂಚಯಮುಮುಪಾಯತ್ರಯಮುಂ ದೊರೆಯಲ್ಲವು (ಕಾಂಪು. ೫-೫೧ ಪ). [ಸಂ.]

ನಿತ್ಯೋಪಹಾರ (ನಾ). ಪ್ರತಿನಿತ್ಯವೂ ಅರ್ಪಿಸುವ ನೈವೇದ್ಯ : ಮತ್ತಮಾ ಹಂನಿರ್ವ್ವರ್ ಗಾವುಂಡುಗಳ್ ಮುಖ್ಯಸಮಸ್ತಪ್ರಜೆಗಳುಂ ದೇವರ ನಿತ್ಯೋಪಹಾರಕ್ಕೆಂದು ಚಂದ್ರಾರ್ಕ್ಕಸ್ಥಾಯಿಯಾಗಿ ಮೇಟೆ ಗೊಳಗವ ಕೊಟ್ಟರ್ (ಪೌಇಶಾ. XX, ೨೪೪-೬೪ ; 1228).

[ನಿತ್ಯ$_1$ + ಉಪಹಾರ]

ನಿತ್ರಾಣ (ನಾ). ೧. ದುರ್ಬಲತೆ; ಶಕ್ತಿಹೀನತೆ: ಆಕೆಗಪಜಯ ವಿಲ್ಲಲೇ ಕೀಳಾಣ ಟಂಕದೊಳಿಲ್ಲಲೇ ನಿತ್ರಾಣದಲಿ ಸಂಗರವ ಹೊಗೆಯೆರೆ . . . ಉಪೇಕ್ಷೆಯ ಕೇಣವನು ದಾನದಲಿ ಮಾಡಿಲೆ ರಾಯ (ಕುವ್ಯಾಸ. ೧-೪೪). ೨. ದುರ್ಬಲವಾದುದು; ಅಶಕ್ತವಾದುದು: ನಿತ್ರಾಣವಾದ ಬಿಳಿಯ ಕುದುರೆಯೂ . . . ನಿಧಾನವಾಗಿ ಸಾಗುತ್ತಿದ್ದುದರಿಂದ ಅವನು ಆಪರಿಚಿತವ್ಯಕ್ತಿಯನ್ನು ಮಾತಾಡಿಸಬೇಕೆಂದು ಕಾತರನಾಗಿದ್ದನು (ಪುಸರು. ೨೬೩). ೩. ಅಶಕ್ತನಾದವನು; ದುರ್ಬಲ ವ್ಯಕ್ತಿ: ಪ್ರಾಣದಾಸೆಯ ಮಜ್ಜದು ತನ್ನೊಳು ಕೇಣವಿಲ್ಲದೆ ಕಾದನುತೆ ನಿತ್ರಾಣನನು ನಿಬ್ಬರದ ನುಡಿಗಳಲಿಱಿದನಾ ಕರ್ಣ (ಕುವ್ಯಾಕ. ೧೬-೩೬); ಕಾಣದಿರೆ ಕುಂದಲವ ಕೆಟ್ಟನೆಂದೆನುತ ನಿತ್ರಾಣನಾದನು ಮುನಿಪ (ತುರಂಗ. ೬-೧೫); ಇದುವರೆಗೂ ಮಾತಾಡಲು ಶಕ್ತಿಯಿಲ್ಲದೆ ನಿತ್ರಾಣನಾಗಿದ್ದ ಕನಕಸಭೆ, ಸ್ವಲ್ಪ ಚೇತರಿಸಿಕೊಂಡ (ಪ್ರತಾಪ. ೧೩). [ಸಂ.]

ನಿತ್ರಾಣಿ (ನಾ). = ನಿತ್ರಾಣ ೩: ಮೇಣ ತಿದ್ದಿದ ರೂಪಿಗಡಗಿಬಹಂತೆ ಕುಂದಾಣ ಬಹಂತೆ ಭೂಷಣಕೆ ಕ್ಷೀಣಕರ್ಮಗಳ ಕೈಮಾಟಕೆ ಬಂದು ನಿತ್ರಾಣಿಯಾಗಿರುತಿಹನಾತ್ಮ (ಭಪಚ. ೬೪-೧೧೧). [ಸಂ. ನಿತ್ರಾಣಿನ್]

ನಿತ್ರಾಣಿಸು (ಕ್ರಿ). ಶಕ್ತಿಗುಂದು; ಅಶಕ್ತವಾಗು; ದುರ್ಬಲವಾಗು: ಏಣಲೋಚನೆಯ ಬಲ್ಮೊಲೆಯ ಭಾರಕೆ ನಿತ್ರಾಣಿಸಿ ನಡು ನಿಲ್ಲದೆನುತೆ ಕೇಣವಿಲ್ಲದೆ ರತ್ನಕೀಲಿತ ಸ್ವರ್ಣದೂಡ್ಯಾಣವ ತಂದಿಕ್ಕಿದರು (ಮೋಪತ. ೨೩-೪೪). [ನಿತ್ರಾಣ+-ಇಸು೩]

ನಿದರ್ಶ (ನಾ). = ನಿದರ್ಶನ ೨: ನಿದರ್ಶಮಂ ಮಾಡಿದಂದದಂ ನೀಂ ನುಂದಂಗೊಳುತ್ತಂ ಮುದಿಯ ಪೆಣ್ಣಂ ವಿವಾಹಮಾಗೆಂದು . . . ಪೇಳಲ್ (ಹಾಲಾಸ್ಯ. ೪-೯-೫೫). [ಸಂ.]

ನಿದರ್ಶನ (ನಾ). ೧. ಉದಾಹರಣೆ; ದೃಷ್ಟಾಂತ: ಮಹೀಪತಿ ಸಂಸ್ಕೃತಿಯ ಅನಿತ್ಯತೆಗಿದುವೆ ನಿದರ್ಶನಂ (ಚಂದ್ರಪು. ೪-೫೧೧ ಪ); ಈ ನಿದರ್ಶನ [ಸಾತಾಂ. ನಿದರುಶನ]ದಿಂದ ಪಾಂಡವಸೇನೆಯನು ಕಗ್ಗೊಲೆಯೊಳಗೆ ಕೊಲಲೇನು ಹೊಲ್ಲೆಹ (ಕುವ್ಯಾಗ. ೯-೬); ಹಳೆಯ ತಮಿಳು ಮತ್ತು ಕುರುಖ್ ಭಾಷೆಗಳು ಈ ಮಾತಿಗೆ ಉತ್ತಮನಿದರ್ಶನ (ದ್ರಾವಿವಿ. ೨೩೬); "ಕಾವ್ಯೇಷು ನಾಟಕಂ ರಮ್ಯಂ" ಎಂಬ ಪ್ರಶಸ್ತಿ ಮೇಲಿನ ಹೇಳಿಕೆಗೆ ಒಂದು ನಿದರ್ಶನ (ಭಾರವಿ. ೬). ೨. ನೋಟ; ದೃಶ್ಯ. ೩. ತೋರಿಸುವುದು; ಕಾಣಿಸುವುದು. ೪. ಸೂಚನೆ; ಶಕುನ: ಎಂದುವಿಲ್ಲದದೊಂದುಮಾರ್ಗಂ ಮುಂದೆಸೆಯೋರೆ ಸೋದಿ ಜೋದ್ಯಮನೊಂದಿ ದರುಶನವಿದು ನಿದರ್ಶನವಾಯ್ತಲಾ ಎನಗೆ ಎಂದು ತನ್ನೊಡತನ ಶಬರರಂ ಪಿಂದಿರಿಸಿಯೊರ್ವನೆ ಬರುತ (ಬಸವ. ೧೪-೫). ೫. ಗಮನ; ಲಕ್ಷ್ಯ: ಗೋವಿಂದರಾಯರ ಧರ್ಮಬಾಹಿರತೆ ನೀತಿಬಾಹಿರತೆಯನ್ನು ಶ್ರೀಗಳವರ ನಿದರ್ಶನಕ್ಕೆ ತರಬೇಕು(ಸಪುಜೀ. ೬೭). ೬. = ನಿದರ್ಶನಾಲಂಕಾರ: ಸತತಮದಱಿಯೆ ನಿದರ್ಶನಗತಮಿಂತಕ್ಕುಂ ಪ್ರಮೋದದಿಂ ಕವಿಜನದೊಳ್ (ಕವಿಂಪ್ರ. ೧-೪೬); ಸರಸೋಪಮಾನೋಪಮೇಯವಾಕ್ಯಾರ್ಥವನುರೆ ಏಕ್ಯ ಮಾಡೆ ನಿದರ್ಶನವು (ಕುಸಲ. ೪೪-೧೧). [ಸಂ.]

ನಿದರ್ಶನಾಲಂಕಾರ (ನಾ). [ಕಾವ್ಯವಿ] ಅರ್ಥಾಲಂಕಾರಗಳಲ್ಲಿ ಒಂದು; ℘ ಇದನ್ನು ಅಲಂಕಾರಶಾಸ್ತ್ರದಲ್ಲಿ ಮೂರು ಬಗೆಯಾಗಿ ವಿವರಿಸಿದ್ದಾರೆ. ಹೆಸರು ಒಂದೇ ಆದರೂ ಲಕ್ಷಣಗಳು ಬೇರೆ ಬೇರೆ. (೧). ಹೇಳಬೇಕಾದ ವಾಕ್ಯಾರ್ಥವೊಂದನ್ನು ಹೇಳಿದ ಮೇಲೆ ಅದಕ್ಕೆ ಸಮಾನವಾದ ಮತ್ತೊಂದು ವಾಕ್ಯಾರ್ಥವನ್ನು ಉದಾಹರಣೆಯಾಗಿ ಕೊಡುವುದು. ಹೇಗೆಂದರೆ ಸತ್ಪುರುಷರು ಜನರ ಗುಣಗಳನ್ನು ಇದ್ದುದನ್ನು ಇದ್ದಂತೆಯೇ ಜೆನ್ನಾಗಿ ಗ್ರಹಿಸುತ್ತಾರೆ. ಕನ್ನಡಿಯು ತನ್ನ ಮುಂದಿರುವ ವಸ್ತುವನ್ನು ಇರುವ ರೀತಿಯಲ್ಲಿಯೇ ಸರಿಯಾಗಿ ಪ್ರತಿಬಿಂಬಿಸುತ್ತದೆ. ಇಲ್ಲಿ ಕವಿಯು ಹೇಳಬೇಕೆಂದಿರುವ ವಾಕ್ಯಾರ್ಥಕ್ಕೆ ಅನುಗುಣವಾದ ವಾಕ್ಯಾರ್ಥವನ್ನು ನಿದರ್ಶನವಾಗಿ ಕೊಟ್ಟಿದ್ದಾನೆ. ಇದು 'ಕವಿರಾಜಮಾರ್ಗ'ದ ನಿದರ್ಶನಾಲಂಕಾರ. (೨). ಒಂದು ವ್ಯಕ್ತಿ ಅಥವಾ ವಸ್ತು ತನ್ನ ಸಹಜಸಿದ್ಧವಾದ ಕ್ರಿಯೆಯಿಂದ ಜನರಿಗೆ ನಂದರ್ಭಾನುಸಾರವಾಗಿ ನೀತಿಯೊಂದನ್ನು ಬೋಧಿಸುವುದು. ಸೂರ್ಯನು ಉದಯಿಸಿದ ಕೂಡಲೇ ತನ್ನ ಪ್ರೀತಿಪಾತ್ರವಾದ ತಾವರೆಗಳನ್ನು ಅರಳಿಸುತ್ತಾನೆ. ಇದರ ಉದ್ದೇಶವು—ಒಬ್ಬನಿಗೆ ಅಧಿಕಾರವಾಗಲಿ ಐಶ್ವರ್ಯವಾಗಲಿ ಒದಗಿದರೆ ಕೂಡಲೆ ಅವನು ತನ್ನ ಆಪ್ತೇಷ್ಟರಿಗೆ ತನ್ನ ಏಳಿಗೆಯ ಫಲವನ್ನು ಹಂಚಿಕೊಡಬೇಕು. ಎಂದರೆ ಕೈಲಾದಷ್ಟು ಸಹಾಯ ಮಾಡಲೇ ಬೇಕು ಎಂಬುದೇ ಆಗಿದೆ. ಇದು ದಂಡಿಯ ನಿದರ್ಶನಾಲಂಕಾರ. (೩). ಎರಡು ಸಮಾನವಾದ ವಾಕ್ಯಾರ್ಥಗಳನ್ನು ಹೇಳಿ ಅದೇ ಇದು ಎಂದು ಆರೋಪ ಮಾಡುವುದು ವಾಕ್ಯಾರ್ಥಾರೋಪ. ರೂಪಕಾಲಂಕಾರದಲ್ಲಿ ಎರಡು ಪದಾರ್ಥಗಳಿಗೆ 'ಮುಖವೇ ಚಂದ್ರ' ಎಂಬಂತೆ ಆರೋಪವಾಗುತ್ತದೆ. ಇಲ್ಲಿ ಎರಡು ವಾಕ್ಯಾರ್ಥಗಳಿಗೆ ಅದೇ ಇದು ಎಂದು ಮಾಡುವ ಆರೋಪ. ಉದಾ:—ಉದಾರಿಯಾದ ವ್ಯಕ್ತಿಯಲ್ಲಿ ಸೌಮ್ಯಸ್ವಭಾವವಿರುವುದೂ ಪೂರ್ಣಚಂದ್ರನಲ್ಲಿ ನಿಷ್ಕಳಂಕತ್ವವಿರುವುದೂ ಒಂದೇ. ಇಲ್ಲಿ ಸಮಾನವಾದ ಎರಡು ವಾಕ್ಯಗಳಿಗೆ ಒಂದೇ ಎಂಬ ಪದದಿಂದ ಏಕ್ಯಾರೋಪವಿದೆ. ಇದು ಕುವಲಯಾನಂದಕಾರರೇ ಮೊದಲಾದ ನವೀನಾಲಂಕಾರಿಕರು ಹೇಳಿರುವ ನಿದರ್ಶನಾಲಂಕಾರ: ಗುಣದೋಷಾದಿಗಳಿಂದನುಗುಣಮಾಗಿರೆ ಪೇಟ್ದು ತದನುಸದೃಶದಿನೊಂದಂ ಪ್ರಣಿಹಿತನಿದರ್ಶನಕ್ಕಮದೆಣಿಸುವುದಕ್ಕುಂ ನಿದರ್ಶನಾಲಂಕಾರಂ (ಕವಿರಾ. ೩-೧೪೧); ಉಪಮೇಯವಾಕ್ಯಾರ್ಥಮುಂ ಉಪಮಾನವಾಕ್ಯಾರ್ಥಮುಂ ಏಕಮೆಂದಾರೋಪಿಸಿ ಪೇಟಿ ನಿದರ್ಶನಾಲಂಕಾರಂ (ಅಪ್ರತಿ. ೬೧-೧೬); ಉಪಮಾನೋಪಮೇಯವಾಕ್ಯಾರ್ಥವು ಏಕ್ಯದಿಂದಾರೋಪಿಸೆ ನಿದರ್ಶನಾಲಂಕಾರ (ಕುಪಲ. ೪೪-೧೯ ಟೀಕೆ). [ನಿದರ್ಶನ+ಅಲಂಕಾರ]

ನಿದರ್ಶಿಸು (ಕ್ರಿ). ಉದಾಹರಿಸು: ನನಗೆ ಕೊಂಡಮಟ್ಟಿಗೆ ಪ್ರವೇಶವಿರುವ ಕಾವ್ಯಮೀಮಾಂಸಾಶಾಸ್ತ್ರದಿಂದ ಇದನ್ನು ನಿದರ್ಶಿಸುವುದು ಸಾಧ್ಯ (ಸಪೂಪೋ. ೧೩೫). [ನಿದರ್ಶನ+-ಇಸು೩]

ನಿದಾಘ (ಗು). ೧. ಸುಡುವ; ಉರಿಯುವ; ಬಿಸಿಯಾದ: ತಲೆಯ ಮೇಲೆ ನೆರಳು, ಕಾಲಿನ ಮೇಲೆ ಶೀತಲವಾರಿ, ಸುತ್ತ ನಿದಾಘ ರವಿಕಿರಣಸಮುದ್ರ (ಅಚಕ. ೨). (ನಾ). ೨. ಬಿಸುವು; ಕಾವು; ಉಷ್ಣತೆ: "ನಿದಾಘಃ, ಘರ್ಮಃ, (ಉಷ್ಮತೆ)—ಈ ೩ ಬೆಂಕೆಯ ಪೆಸರ್" (ಪಲಾಯು. ೪-೪೦); ಅನಂತವೀರ್ಯನಿಷ್ಪ್ರಕುಳುಲಾಮೃತಾರ್ಜವ ಸುಧಾಕರಣಂ ರಣಮೇರು ಲೋಕಲುಂಟಾಳನಿದಾಘತಾಪಹರವರ್ಷಣ ಮೇಘನುದಾತ್ತರಾಘವಂ (ಪಂರಾಪು. ೫-೭೨); ನವಘನಮಾಲಾರವದಿಂದವನೀದೇವಿಯ ನಿದಾಘಪರಿತಾಪಮಡಂಗುವವೋಲ್ ಸಭೆಯ ಸುಭಾಷಿತರವದಿನಡಂಗಿದುದು ದೇವಕೀಹೃತ್ತಾಪಂ (ಜಗವಿ. ೨-೭೧). ೩. ಬಿಸಿಲುಕಾಲ; ಬೇಸಗೆ: "ನಿದಾಘಃ, ಗ್ರೀಷ್ಮಃ—ಈ ೨ ಬೇಸಗೆ" (ಹಲಾಯು. ೨೦-೧೧೬); ಪಾದರಿ ಭೂತುವು ತೋರಿದುವಾದುವು ಮಲ್ಲಿಗೆ ಗಳೆಯ್ದೆ ಪಣ್ತುವು ಪೂವಿಂಬಾದುದು ನಿದಾಘಮಧುವಿನ ಭೇದಮದೀ ಬನದೊಳಾತಪಕ್ಕೆಡೆಯುಂಟೇ (ಆದಿಪು. ೧೧-೮೬); ಪರಿದುದತಿಶಯ ದೃಗ್ಜಲನಿದಾಘಂ ನಿದಾಘಂ (ಜಗವಿ. ೧೭-೭೧); ಅಂತು ನಿದಾಘದ

ಚಾತಕದಂತೆ ಬಾಯ್ವಿಟ್ಟು . . . ಪಲಂಬುತ್ತಮೆತ್ತ ಪೋದಳೋ ನೋಟ್ಪೆನೆಂದು (ಪುಣ್ಯಾಸ್ರ. ೧೨-೩೫ ಪ); ಅರಸನಲುಕಿದನೆಂಬ ಜಯದುಬ್ಬರದ ಬೆಳೆಸಿರಿಗಿದೆ ನಿದಾಘದ ಬಿಜುಬಿಸಿಲು ಕೊಳ್ಳಂದು ಕೈಗೊಂಡೆ ಚ್ಛತಿರಥರು (ಕುಸ್ಯಾವಿ. ೮-೪); ಪುಡಿ ತನಗೆಂಡದ ಬೂದಿಯ ಪಡಿ ನೆಲಮಟ್ಟೊಲೆಯ ತೊಲೆಯಲರ್ ಬಿರಯಿಯ ಬಾಯಿಡೆಯೆಲರ್ಗೆಡೆಯುರಿಗಿದು ಸರಿ ಕಡುವಿಸಿಲೆನಿಸಿರೆ ನಿದಾಘಮೇಂ ಪಸರಿಸಿತೋ (ರಾಜಶೇ. ೫-೩೪). ೪. ಕಡುಬಿಸಿಲು ; ಉಗ್ರವಾದ ಬಿಸಿಲು : "ಕಡುವಿಸಿಲು ಘರ್ಮಂ ನಿದಾಘಮೆನಿಕ್ಕು" (ಮಂಗರಾ. ೧೦-೨). ೫. ಬೆವರು ; ಸ್ವೇದ. [ಸಂ.]

ನಿದಾಘಋತು (ನಾ). ಬೇಸಗೆ ; ಬೇಸಗೆಯ ಸಮಯ ; ಗ್ರೀಷ್ಮಋತು : ವಸಂತದ ಕಡೆಯ ನಿದಾಘಋತುಕಾಲದೊಳೊಂದುದಿನಂ ಸಕಲನಿಯೋಗದೋಲಗದೊಳಿರ್ದ ಸಮಯದೊಳ್ ಕಾಲವಿಕ್ರಮನೆಂಬ ಬೇಡನಾಯಕಂ ಬಂದು ನಿಂದಿರೆ (ಹಮ್ಮೀರ. ೪-೩೬ ಪ).

[ನಿದಾಘ + ಋತು]

ನಿದಾಘಕಾಲ (ನಾ). = ನಿದಾಘ ೩ : ಕುಲಗಿರಿ ಕಾಯ್ದ ಕರ್ಬುನದ ಬೆಟ್ಟುವೊಲಿರ್ದುವು . . . ದಿಶಾವಿವರಂ ಸಲೆ ಕಾಜುಗಾಱನಟ್ಟೊಲೆಯವೊಲಿರ್ದುವೇಂ ಪ್ರಳಯಕಾಲಮೊ ತೀವ್ರನಿದಾಘಕಾಲಮೋ (ಸೂಕ್ತಿಸು. ೧೦-೧೦೧). [ನಿದಾಘ + ಕಾಲ]

ನಿದಾಘಜ್ವಾಲೆ (ನಾ). ಬೇಸಗೆಯ ಉರಿ,—ತಾಪ,—ಬೇಗುದಿ : ಏನನೆಂಬೆನು ಪಾರ್ಥನುಗ್ರತಪೋನಿದಾಘಜ್ವಾಲೆಯನುಸಂಧಾನವನು ತಪ್ಪರಿಸರದ ಪಾವನತಪೋಧನರ ಮೌನವುಱ್ ಸೀದುದು(ಕುಸ್ಯಾಅ.೫-೧೨).

[ನಿದಾಘ + ಜ್ವಾಲೆ]

ನಿದಾಘತಪ್ತ (ಗು). ಬಿಸಿಲಿನ ಬೇಗೆಯಿಂದ ಬೆಂದ,—ಸುಟ್ಟ : ನಡುನೆತ್ತಿ ಬಿರಿದು ಮುತ್ತುಗಳೊಡೆದುಚ್ಛಳಿಸುತ್ತೆ ಪಾಱ್ ಪನಿಗೆತ್ತು ನವಿಲ್ ತುಡುಕೆ ನಿಜಚಂಚುವಂ ಸುಡೆ ಮಿಡುಕಿದುದು ನಿದಾಘತಪ್ತಕರಿ ಸಂಕುಳದಾ (ರಾಜಶೇ. ೫-೪೧). [ನಿದಾಘ + ತಪ್ತ]

ನಿದಾಘತಾಪ (ನಾ). = ನಿದಾಘಜ್ವಾಲೆ : ಉರಿವ ನಿದಾಘತಾಪದೊಳೆ ಮೇರುನಗಂ ಪೊಱ್ ವೋಗೆ ಸುತ್ತಲುಂ ಕರಗಿ ಬಟಾಕ್ಕಿಳಾವಳಯದೆಣ್ದೆಸೆಗಂ ನೆಱ್ ಸೂಸಿ (ಚಂದ್ರಪ್ರ. ೯-೭೦). [ನಿದಾಘ + ತಾಪ$_2$]

ನಿದಾಘವ್ಯೋಮ (ನಾ). ಬೇಸಗೆಕಾಲದ ಆಕಾಶ ; ನಿರ್ಮಲವಾದ ಗಗನ : ನಿದಾಘವ್ಯೋಮದಿ ಮೆಲ್ಲಗೆ ಮೆಲ್ಲಗೆ ತನ್ನೊಂದಿಷ್ಟೆಗೆ ತೇಲುವ ಮೇಘದ ಆಲಸ್ಯಕೆ ಅರಸನ ಅಳುಕಿಲ್ಲ (ಪಾಂಚಜ. ೩೬-೮).

[ನಿದಾಘ + ವ್ಯೋಮ]

ನಿದಾಘಸಮಯ (ನಾ). = ನಿದಾಘ ೩ : ನಿಜಸ್ನುಷಾವಿರಹವಿಧುರೆ ಪೊಣ್ಮುವ ಕಣ್ಣ ನೀರ್ಗಳಂ ನಿದಾಘಸಮಯಸರಸಿಯಂತಱಸಿ ಮಿಗಲೀಯದೊಳಗಡಂಗಿಸಿ ಸಭೆಯೊಳಿಂತೆಂದಳ್ (ಶಾಂತಿಪು. ೬-೩೬ ಪ) ; ನಿದಾಘಸಮಯಮಧ್ಯಂದಿನಪ್ರಾಪ್ತಸಪ್ತಸಪ್ತಿಪ್ರತಾಪವಿಹ್ವಲೀಭೂತಜೀವಕಂ ಸಂಜೀವಕಂ ನಿಲ್ವುದುಂ (ಪಂಚತಂ. ೨೩-೧೭) ; ಅಂತತಿಪ್ರಬಲಮಾದ ನಿದಾಘಸಮಯದೊಳ್ ದಿನಮಂ ಕೆಲವಂ ದಶರಥತನುಜರ್ ದಶಪುರದೊಳಿರ್ದು ಪೋಗಲೊಡಂ ನೊಂದನದರ್ಕೆ ವಜ್ರಕರ್ಣಂ (ಪಂರಾಮಾ. ೬-೯೮ ಪ) ; ಅಪ್ರತಿಮಪ್ರತಾಪದಾ ರಾಜತೆಯಂ ನಿದಾಘಸಮಯಾರ್ಕನೊಳೂರ್ಜಿತಸಾರ್ವಭೌಮನೆಂಬೀ ಜಸಮಂ ದಿಶಾಕರಿಯೊಳಲ್ಲದೆ ವೈರಿನೃಪಾಳರಲ್ಲಿ ರಾರಾಜಿಸಲೀಯದಿಂತು ನೆಗೞ್ದಂ . . . ಬಿಜ್ಜಳಂ (ಶಾಪಮಂ. ೮೧೫ ; 1172 ; ಎಇ. XV, ೩೨೦-೧೭ ನೋ). [ನಿದಾಘ + ಸಮಯ$_1$]

ನಿದಾಘಾಕ್ರಾಂತ (ಗು). ಬೇಸಗೆಯ ಝಳಕ್ಕೆ ಗುರಿಯಾದ,—ಸಿಕ್ಕಿದ; ಗ್ರೀಷ್ಮದ ತಾಪಕ್ಕೆ ಒಳಗಾದ : ನಿದಾಘಾಕ್ರಾಂತಭೂಜಾಳಿ ಶೌರಿಯ ಸಂಕಲ್ಪದ ಪತ್ರಪುಷ್ಪಫಲಭಾರಾಕ್ರಾಂತಮಾಗಿರ್ದುವು (ಜಗವಿ. ೩-೬೭). [ನಿದಾಘ + ಆಕ್ರಾಂತ]

ನಿದಾನ$_1$ (ನಾ). ೧. ನಿಧಿ ; ಐಶ್ವರ್ಯ ; ಸಂಪತ್ತು : ಬಡವಂ ನಿದಾನಮಂ ಪಡೆದಂತೆ ಕುರುಡಂ ಕಣ್ಪಡೆದಂತೆ ಮನದೊಳ್ ಪಿರಿದು ಮುತ್ಸಾಹಮಂ ಪಡೆದಳಾತ್ಮಜರ ಬರವಿಂದೆ (ಸುಕುಮಾ. ೨-೭೨). ೨. ಸಂಕಲ್ಪ ; ನಿರ್ಣಯ ; ನಿಶ್ಚಯ : ಇದು ನಿದಾನವೆನುತ್ತ ಮನದೊಳು ಮದನನ್ನೆಯನು ತಿಳಿದು ಬಾರೈ ಸದಮಲಾತ್ಮಕಕ್ರೂರಹಿತನಕ್ರೂರ ನಾಮದಲಿ (ಕೋಗಯ. ೧೨-೧೫); ದಾನವ-ಮಾನವ-ಸುರರೊಳಗೆ ನೀನೇ ಭಟ ಎಂಬ ನಿದಾನವನ್ನು ಕೇಳಿ ತಿಳಿದು, ನಾನು ಸಂಗ್ರಾಮದಾನವನ್ನು ಬಯಸಿ ಬಂದಿದ್ದೆನೆ (ಬಿಮಭಾ.೫೬). ೩. ತಡ ; ವಿಳಂಬ ; ಸಾವಕಾಶ: ಮದಗಜಯಾನಮದನಿತುಂ ನಿದಾನಮಾದತ್ತನಿತ್ತು ಕೇಸರಿಮಧ್ಯಂ ಪದೆಪಿಂ ಪೊಂಗಿದುದು (ಚಂದ್ರಭ್ಯು. ೪-೩೮); ಅಣ್ಣನ ನಿದಾನವು ನಂಜರಾಜಯ್ಯನ ಮನಸ್ಸಿನಲ್ಲಿ ಅಸಮಾಧಾನವನ್ನು ಹುಟ್ಟಿಸಿತ್ತು (ಬಡೆಕ. ೬೬) ; ಇದು ನಿದಾನದ ದಾರಿ (ಮುನಿವಾ. ೨೬). ೪. ತಾಳ್ಮೆ ; ಸೈರಣೆ : ನಿದಾನವಿದ್ದವನು ಸ್ವಾಧೀನ ತಪ್ಪಾನೇ ? (ಗಾದೆ). [<ಸಂ. ನಿಧಾನ]

ನಿದಾನ$_2$ (ನಾ). ೧. ಹಗ್ಗ ; ರಜ್ಜು ; ಮಿಣಿ. ೨. ಕಾರಣ ; ನಿಮಿತ್ತ : ಧರ್ಮಮೆ ದೇಹಿಗ(ಮಿ)ಹಪರಶರ್ಮಕ್ಕೆ ನಿದಾನಂ (ಪುಷ್ಪಪು. ೩ ೧೦೮) ; ಏನು ನಿನಗೀ ವನಕೆ ಬರವು ನಿದಾನವನು ಹೇಳೆನಲು ಕುಂತೀಸೂನು ನುಡಿದನು ತನ್ನ ಪೂರ್ವಾಪರದ ಸಂಗತಿಯ (ಕುಸ್ಯಾಅ. ೧೩-೪೪); ಎಷ್ಟು ದೋಷಗಳಿದ್ದರೂ ರಸಿಕತೆಯು ತಿರಸ್ಕಾರಕ್ಕೆ ತಕ್ಕದ್ದಲ್ಲ. ಅದು ನಾಗರಿಕತೆಗೆ ನಿದಾನ (ಸಾಹಿಶೇ. ೬೪). ೩. (ರೋಗದ) ಮೂಲ ಕಾರಣ ; ಆದಿಕಾರಣ : "ನಿದಾನಮೆಂಬುದು ಕುತ್ತದ ಕಾರಣಂ" (ಹಲಾಯು. ೧೦೦-೪೫೮). ೪. ರೋಗಮೂಲವನ್ನು ಕಂಡುಹಿಡಿಯುವಿಕೆ; ರೋಗಪರೀಕ್ಷೆ : "ರೋಗಂಗಳಂ ತಿಳಿವುದು ನಿದಾನಮಕ್ಕುಂ" (ಮಂಗರಾ.೧೧೫-೨); ನಿದಾನಪ್ರಾಗ್ರೂಪಲಕ್ಷಣೋಪಶಯಾಪ್ತಿಗಳೆಂಬೈದು ತೆರದಿಂದಲೂ ರೋಗದ ಪರೀಕ್ಷಿಸುವುದು. ನಿದಾನವೆಂಬುದು ರೋಗಕ್ಕೆಲ್ಲಾ ಆದಿಕಾರಣವಾದಂಥಾದ್ದು (ಸಕವೈ. ೨೧) ; ಆ ಡಾಕ್ಟರುಗಳ ನಿದಾನಕ್ರಮದಂತೆ ಆ ರೋಗಿಗಳು ಪೂರ್ಣನಿರೋಗಿಗಳಾಗಿದ್ದರು (ಪುನೀರೋ. ೧೦). ೫. ಕೊನೆ; ಅಂತ್ಯ ; ಮುಕ್ತಾಯ : "ಮುಗಿದ ಬಗೆಯೊಳು ನಿದಾನಮೆನಿಸಿರ್ಕುಂ" (ಮಂಗರಾ. ೧೪೨-೧೯). ೬. [ಜೈನ] ಭವಿಷ್ಯಜನ್ಮದಲ್ಲಿ ನಿರ್ದಿಷ್ಟಸುಖವು ಬೇಕೆಂಬ ಅಪೇಕ್ಷೆ,—ಬಯಕೆ : ಮನಮಲ್ಲಿಯೆ ಕೀಲಿಸೆ . . . ಗತಜೀವಿತನಂತವಿವೇಕದಿಂ . . . ಬಂದಿಲ್ಲಿ ನಿದಾನದಿಂದತಿಬಲಂಗೆ ಮಹಾಬಲನಾಗಿ ಪುಟ್ಟಿದಂ (ಆದಿಪು. ೨-೪೨) ; ಪಲಕಾಲಂ ತಪಂಗೆಯ್ದವಸಾನಕಾಲದೊಳ್ ನಿದಾನಪೂರ್ವಕಂ ಸತ್ತಶನಘೋಷನಾಗಿ ಪುಟ್ಟಿ (ಶಾಂತಿಪು. ೭-೪೪ ಪ); ಈ ಸಮಾಧಿಯ ಫಲದಿಂದೆನಗಿಂತಪ್ಪೈಶ್ವರ್ಯಮನುಕ್ಕೆಂದು ಸಂಸಾರಭೋಗಮಂ ಬಯಸುವುದು ನಿದಾನವೆಂಬುದು (ಪಸಾರ. ೩೭೧). 'ನಿದಾನಂಗೆಯ್' ಪರಾ. ☞ ಇದರಲ್ಲಿ ಪ್ರಶಸ್ತನಿದಾನ, ಅಪ್ರಶಸ್ತನಿದಾನ ಮತ್ತು ಭೋಗಕೃತ ನಿದಾನ ಎಂದು ಮೂರು ಬಗೆಗಳಿವೆ. ಮರಣಕಾಲದಲ್ಲಿ ತಾನು ಬಲಶಾಲಿಯಾಗಬೇಕು, ಮುಂದೆ ಧನಿಕರ ಮನೆಯಲ್ಲಿ ಹುಟ್ಟಬೇಕು ಎಂಬಿತ್ಯಾದಿ ಅಭಿಲಾಷೆಯುಳ್ಳದೇ ಪ್ರಶಸ್ತನಿದಾನ. ಮುಂದಿನ ಜನ್ಮದಲ್ಲಾದರೂ ತನ್ನ ವೈರಿಯನ್ನು ಕೊಲ್ಲಬೇಕು ಎಂಬಿತ್ಯಾದಿಯಾಗಿ ಕ್ರೋಧಾವೇಶದಿಂದ ಇಷ್ಟಪಡುವುದು ಅಪ್ರಶಸ್ತನಿದಾನ. ತಾನು ದೇವತೆಯಾಗಿ ದಿವ್ಯಭೋಗಗಳನ್ನು ಅನುಭವಿಸಬೇಕು ಎಂಬಿತ್ಯಾದಿಯಾದ ಅಪೇಕ್ಷೆಯೇ ಭೋಗಕೃತನಿದಾನ. [ಸಂ.]

ನಿದಾನಂಗೆಯ್ (ಕ್ರಿ). [ಜೈನ] ಯಾವುದಾದರೊಂದು ನಿರ್ದಿಷ್ಟ ಸುಖವು ಭವಿಷ್ಯಜನ್ಮದಲ್ಲಿ ಸಿಗಲಿ ಎಂದು ಅಪೇಕ್ಷಿಸು,—ಬಯಸು : ವಾದಿಯುಂ ಶ್ರೀಯಾದೇವತೆಯ ವಿಭೂತಿಯಂ ಕಂಡು ನಿದಾನಂಗೆಯ್ದು ಕೆಲವುದಿವಸದಿಂ ಕಾಲಂಗೆಯ್ದು (ಪಡ್ಡಾರಾ. ೧೦೭-೨೩); ಎನ್ನನೊದೆದ ನಿನ್ನ ಕಾಲ್ಗಳನೆನ್ನ ಮಕ್ಕಳುಮಾನುಮೊಂದಾಗಿಯುಮೇ ನಾಗಿಯಂ ಸೀಳ್ದು ಪೋಯ್ದು ತಿಂಬೆವೆಂದಾರ್ತಧ್ಯಾನದಿಂ ನಿದಾನಂಗೆಯ್ದು ಸತ್ತು (ಸುಕುಮಾ. ೫-೮ ಪ); ನಂದಯಶೆಗಂತಿಯರ್ ಎಮಗೆ ಮಱುಭವದೊಳಮಿವರೆ ಮಕ್ಕಳಕ್ಕೆಂದು ನಿದಾನಂಗೆಯ್ದೆ (ನೇಮಿಪು. ೬-೫೮ ಪ); ಆ ಭೀರುವಾವ ಜನ್ಮದೊಳಂ ಮತ್ತೆನಗೆ ನವವಯಸದೊಳ್ ತಾಂ ಜನಿಯಿಸದಿರ್ಕೆಯ ವಿಷಾದಗರ್ಭಂ ಗರ್ಭಂ ಎಂದು ನಿದಾನಂಗೆಯ್ದು (ಚಂದ್ರಪ್ರ. ೩-೭೭ ಪ); ಈತನನಾನೀ ಭವದೊಳ್ ಘಾತಿಸಲಣಮಾಜದಿರ್ದೊಡಂ ಮಱುಭವದೊಳ್ ಘಾತಿಸುವೆನಕ್ಕೆನುತ್ತಾ ಪಾತಕನೀಯಂದದಿಂ ನಿದಾನಂಗೆಯ್ದುಂ (ಪರ್ಧಪ್ರ. ೩-೨೨). [ನಿದಾನ$_2$+ಕೆಯ್$_1$]

ನಿದಾನಂಬಡೆ (ಕ್ರಿ). ನಿಧಿಯನ್ನು ಹೊಂದು ; ಐಶ್ವರ್ಯವನ್ನು ಪಡೆ : ಗಂಡಂ ಬೆಸಸಿದೊಡೋಸದೆಗೊಂಡರ್ಹತ್ಪೂಜೆಯಂ ಸುದಾನಮುಮಂ ಕೈಕೊಂಡೊಲ್ದು ಮಾಡುತಿಪ್ಪಾ ಪೆಂಡತಿಯಂ ಪಡೆದವಂ ನಿದಾನಂಬಡೆದಂ (ಸಮಪ. ೫-೧೨೮). [ನಿದಾನ$_1$+ಪಡೆ$_1$]

ನಿದಾನಫಲ (ನಾ). [ಜೈನ] ಪೂರ್ವಜನ್ಮದ ಅಂತ್ಯಕಾಲದಲ್ಲಿ ಕೈಕೊಂಡ ನಿದಾನದ ಪರಿಣಾಮ : ಇಂತು ವಿಗತಜೀವಿತೆಯಾಗಿ ನಿದಾನಫಲದಿಂದಾ ತ್ರಿವೇದಿಯ ಗರ್ಭದೊಳ್ ನೆಲಸುವುದುಂ (ಸುಕುಮಾ. ೫-೪೮ ಪ). [ನಿದಾನ$_2$+ಫಲ$_1$]

ನಿದಾನವಂತ (ನಾ). ೧. ತಾಳ್ಮೆಯಿಂದ ಕೂಡಿದವನು ; ಸೈರಣೆಯಿಂದ ಕೂಡಿದವನು : (ಕ). ೨. ತಡಮಾಡುವವನು ; ಸಾವಕಾಶ ಮಾಡುವವನು : (ಕ). [ನಿದಾನ$_1$+-ವಂತ]

ನಿದಾನಶಲ್ಯ (ನಾ). [ಜೈನ]ವ್ರತಗಳನ್ನು ಆಚರಿಸುವವನಿಗೆ ಉಂಟಾಗುವ ಮೂರು ಬಗೆಯ ಶಲ್ಯಗಳಲ್ಲಿ ಒಂದು ; ಭವಿಷ್ಯಜನ್ಮದಲ್ಲಿ ಇಂಥ ವಿಷಯೋಪಭೋಗಗಳು ದೊರೆಯಬೇಕೆಂದು ಬಯಸುವುದು ; ☞ ಮಾಯಾಶಲ್ಯ, ಮಿಥ್ಯಾತ್ವಶಲ್ಯ ಹಾಗೂ ನಿದಾನಶಲ್ಯವೆಂಬ ಮೂರು ಬಗೆಗಳಿವೆ. ನಿದಾನಶಲ್ಯದಲ್ಲಿ ಪ್ರಶಸ್ತನಿದಾನ, ಅಪ್ರಶಸ್ತನಿದಾನ ಮತ್ತು ಭೋಗಾರ್ಥನಿದಾನ ಎಂದು ಮತ್ತೆ ಮೂರು ಭೇದಗಳಿವೆ. ಇವು ಸಂಸಾರಕ್ಕೆ ಕಾರಣವಾಗಿವೆ : ನಿಜನಿತ್ಯಾನಂದಾತ್ಮೈಕತ್ವಭಾವನಾಸಂಜಾತಪರಮಾನಂದಾಮೃತಸೇವೆಯಿಲ್ಲದೆ ದೃಷ್ಟಶ್ರುತಾನುಮಾನಂಗಳೆನಿಪ ಪಂಚೇಂದ್ರಿಯ ವಿಷಯಂಗಳಪ್ಪ ಭೋಗೋಪಭೋಗಂಗಳಂ ಬಯಸುವುದು ನಿದಾನಶಲ್ಯವಹುದು (ಶ್ರಾವಕಾ. ೧೨೫-೩). [ನಿದಾನ$_2$+ಶಲ್ಯ$_2$]

ನಿದಾನಶಾಸ್ತ್ರ (ನಾ). ವ್ಯಾಧಿಯ ಮೂಲಕಾರಣವನ್ನು ತಿಳಿಯುವ ಶಾಸ್ತ್ರ ; ರೋಗನಿದಾನಶಾಸ್ತ್ರ : "ಕಾರಣವಿಜ್ಞಾನ ; ನಿದಾನಶಾಸ್ತ್ರ" (Actiology. ಪಾರಿಸಿ. ೨). [ನಿದಾನ$_2$+ಶಾಸ್ತ್ರ]

ನಿದಾನಸ್ತ (ನಾ). = ನಿದಾನವಂತ : (ಕ). [ನಿದಾನ$_1$+-ಸ್ತ]

ನಿದಾನಿ (ನಾ). = ನಿದಾನವಂತ : (ಕ). [ನಿದಾನ$_1$+-ಇ$_3$]

ನಿದಾನಿಸು$_1$ (ಕ್ರಿ). ೧. ತಡಮಾಡು ; ವಿಳಂಬಮಾಡು : ಪ್ರಾಣ ಹೋಗುವಾಗಲೂ ಅದನ್ನು ತೆಗೆಯಲು ನಿದಾನಿಸುತ್ತಿದ್ದನು (ಹುಟ್ಟಹ. ೧೫೮); ಸ್ವಲ್ಪವೂ ನಿದಾನಿಸದೆ ಈ ಕೆಲಸವನ್ನು ಮಾಡಿ ಮುಗಿಸು(ರೂಢಿ). ೨. ಸಾವಧಾನದಿಂದ ಕೇಳು,—ವಿಚಾರಿಸು : ಇತ್ತ ನಿಜಭಾಷೆಗೆ ಪರಾಭವ ಹತ್ತಿರಾಯಿತು ನರ ನಿದಾನಿಸೆನುತ್ತೆ ಮುರಿಂಪು ರಥವ ಬಿಟ್ಟನು ಕಡೆಯ ಮೋಹರಕೆ (ಕುಮ್ಮಾರ್ಜ್ರೀ. ೧೪-೨೫); ಸ್ತಳದ ಹನ್ನೆರಡುಮಂದಿ ಆಯಗಾರರ ನಿದಾನಿಸಿ ಯಥಾಪ್ರಕಾರ ನಿಮ್ಮ ಸ್ಥಳ ಮಿರಾಸಿ ನಿಮಗೆ ಕೊಟು (ಎಕ. XII, ೩೨. ೧೧೨-೩೧ ; 1720). ೩. ನಿರ್ಧರಿಸು : ಒಂದು ಹರ ಹಿಡಿವಂಬು ಶಕ್ರನದೊಂದು ಕೌಬೇರಾಗ್ನಿ ವಾಯುವದೊಂದು ಪಾರ್ಥನ ಬತ್ತಳಿಕೆ ದಿವ್ಯಾಸ್ತ್ರ ತುಂಬಿಹವು . . . ಒಂದ ಕೊಬ್ಬರು ಗುಱು ನಿದಾನಿಸಲಿಂದು (ಕುಮ್ಮಾರ್ಜ್ರೀ. ೧೫-೧೫) ; ಶಲ್ಯಮಾಡಿದ ಭಾಷೆಯವರೊಡನೆ ಅವನಂಶೈಸುವನೊ ಪಾರ್ಥನೊ ಪಾವಮಾನಿಯೊ ನಕುಲನೋ ಸಹದೇವನೋ ತಾನೋ ನಿದಾನಿಸಲಱಯೆ ನಾನೆಂದ (ಕುಮ್ಮಾಶ. ೧-೨೯) ; ಮಾನನಿದಾನೆಯ ಮಂದಶ್ವಾಸಮನೇ ನವಸುರಭಿಸಮೀರಂಗೆತ್ತು ನಿದಾನಿಸಿಯಂಗಜನೆಂಬ ಮಹಾಕಾಳೋರಗನೆತ್ತುರುತ (ಜಯಕಾ. ೩-೫೧). [ನಿದಾನ$_1$+-ಇಸು$_3$]

ನಿದಾನಿಸು$_2$ (ಕ್ರಿ). ೧. ರೋಗ ಮುಂತಾದುವುಗಳ ಮೂಲಕಾರಣವನ್ನು ಪರೀಕ್ಷಿಸು : ಪುರುಷರ ಬಲದ ಕೈಯ ಹೆಬ್ಬೆರಳ ಮೂಲದಲ್ಲಿ ಮೂರು ಬೆರಳ ತುದಿಗಳಿಂದೊತ್ತಿ ಪಿಡಿದು ನಾಡಿಯನ್ನು ನಿದಾನಿಸಬೇಕು (ಸಕವೈ.೧೦) ; ಅಲ್ಲಲ್ಲಿಯ ವೈದ್ಯಡಾಕ್ಟರುಗಳಿಂದ ನಿದಾನಿಸಿದ್ದಾಯಿತು. ಆದರೆ ಪ್ರಕೃತಿಯು ಸರಿಯಾಗಲಿಲ್ಲ (ಕ್ರೀರಂಗ.೩೧) ; ಒಬ್ಬ ರಾಜಕನ್ನಿಕೆಗೆ ಒಂದು ವಿಚಿತ್ರವಾದ ರೋಗ . . . ಆ ರೋಗ ಅವಳು ನಕ್ಕರೆ ನಿವಾರಣೆಯಾಗುವುದೆಂದು ರಾಜವೈದ್ಯರು ನಿದಾನಿಸಿದರು (ಕಥಕ. ೬೮). ೨. = ನಿದಾನಂಗೆಯ್ : ಕಿಱಯ ಪದ್ಮಾವತಿಯೋರ್ವ ಸೂಳೆಗೆ ಯೊರ್ವರು ಕೈಗೆಯ್ವದ ಕಂಡು ಸಿರಿದು ಮನದಿ ರಾಗದಿ ನಿದಾನಿಸಿ ತಾ ಸುರವೇಶ್ಯೆಯಾಗಿರ್ದು (ಶಾಂತೀಶ. ೨-೫೪). [ನಿದಾನ$_2$+-ಇಸು$_3$]

ನಿದಾನೆ (ನಾ). ಭವಿಷ್ಯಜನ್ಮದಲ್ಲಿ ಯಾವುದೋ ಒಂದು ನಿರ್ದಿಷ್ಟ ಅಪೇಕ್ಷೆಯನ್ನು ಹೊಂದಿದವಳು : ನಂದಯಶೆಗಂತಿಯರ್ ಎಮಗೆ ಮಱುಭವದೊಳಮಿವರೆ ಮಕ್ಕಳಕ್ಕೆಂದು ನಿದಾನಂಗೆಯ್ದೆ . . . ತಾನುಂ ನಿದಾನೆಯಾದಳ್ (ನೇಮಿಪು. ೬-೫೮ ಪ). [ನಿದಾನ$_2$+-ಎ$_2$]

ನಿದಾರುಣ (ಗು). ಬಹು ಉಗ್ರವಾದ; ಅತಿ ಕ್ರೂರವಾದ : ನಿದಾರುಣ, ನಿಷ್ಕಾರಣಹಿಂಸೆಯನ್ನು ನೀರಿನಲ್ಲಿಯೂ ನೆಲದ ಮೇಲೆಯೂ ಆಕಾಶದಲ್ಲಿಯೂ ಗುಹೆ ಗಹ್ವರಗಳಲ್ಲಿಯೂ ದೇಶದೇಶಾಂತರಗಳಲ್ಲಿಯೂ ಮನುಷ್ಯನು ವ್ಯಾಪ್ತಗೊಳಿಸಿಬಿಡುತ್ತಿದ್ದನು (ನಿಬಂಧ. I, ೮೭). [ಸಂ.]

ನಿದಾಹ (ನಾ). ಬೇಸಗೆ : 'ನಿದಾಹಸಮಯ' ಪರಾ.

[<ಸಂ. ನಿದಾಘ]

ನಿದಾಹಸಮಯ (ನಾ). ಬಿಸಿಲುಕಾಲ ; ಬೇಸಗೆಯ ಸಮಯ : ಚೋಳಕೀರ್ತಿವಲ್ಲಿಪಲ್ಲವ ನಿದಾಹಸಮಯದಿವಸಕರಂ (ಕಇಅ. ೨೧-೭-೧೮; 1083). [ನಿದಾಹ+ಸಮಯ$_1$]

ನಿದಿ (ನಾ). = ನಿಧಿ : ನಿಧಾನ—ನಿದಾನ, ನಿಧಿ—ನಿದಿ (ಶಮದ. ೨೫೫ ಪ್ರಯೋ) ; ಧರೆ, ದರೆ ; ನಿಧಿ, ನಿದಿ (ಶಬ್ದಾನು. ೧೪೩ ಪ್ರಯೋ).

[<ಸಂ. ನಿಧಿ]

ನಿದಿಗ್ಧ (ಗು). ೧. ಬಳಿದ ; ಪೂಸಿದ ; ಸವರಿದ. ೨. ಒಟ್ಟುಗೂಡಿಸಿದ ; ಸಂಗ್ರಹಿಸಿದ ; ಕಲೆಹಾಕಿದ. (ನಾ). ೩. ಒಟ್ಟುಗೂಡಿಸಿದುದು ; ರಾಸಿಹಾಕಿದುದು : "ನಿದಿಗ್ಧಸಂಕೀರ್ಣಮಾಚಿತಂ ಸಮುಚಿತ್ತಂ" (ಪಸ್ತುಕೋ. ೧೦೫-೪೫) ; "ನಿದಿಗ್ಧ, ಉಪಚಿತ, ಒದಗಿಸಲ್ಪಟ್ಟುದು" (ನಾಚಿಂಶಿ. ೫). [ಸಂ.]

ನಿದಿಗ್ಧಿಕೆ (ನಾ). ನೆಲಗುಳ್ಳದ ಗಿಡ ಮತ್ತು ಅದರ ಕಾಯಿ ; ಕಂಟಕಾರಿಕೆ : "ನಿದಿಗ್ಧಿಕಾ, ಕಂಟಕಾರಿಕಾ, ವ್ಯಾಘ್ರೀ—ಈ ೩ ನೆಲಗುಳ್ಳಂ" (ಪಲಾಯು. ೧೦೧-೪೬೫). [ಸಂ. ನಿದಿಗ್ಧಿಕಾ]

ನಿದಿಧ್ಯಾಸ (ನಾ). [ಯೋಗ] ಅರಿತ ವಿಷಯಕ್ಕೆ ಸಂಬಂಧಿಸಿದ ಆಳವಾದ ಚಿಂತನೆ,—ಸತತವಾದ ಅನುಸಂಧಾನ ; ☞ ಮೋಕ್ಷಾ

ಪೇಕ್ಷೆಗೆ ಮೂರು ಸಾಧನಗಳಿವೆಯೆಂದು ಯೋಗಿಗಳು ತಿಳಿಸುತ್ತಾರೆ. (೧) ಶ್ರವಣ—ಗುರುಗಳಿಂದ ವೇದಾಂತದ ಅರ್ಥವನ್ನು ಕೇಳುವುದು. (೨) ಮನನ—ಆ ಅರ್ಥದ ಚಿಂತನೆ. (೩) ನಿದಿಧ್ಯಾಸ(ನ)—ಮತ್ತೆ ಅದರ ನಿರಂತರವಾದ ಧ್ಯಾನ. ಈಚೀಚೆಗೆ ಎಲ್ಲ ಆಳವಾದ ಚಿಂತನೆಗೂ ಈ ಪದ ಉಪಯುಕ್ತವಾಗುತ್ತಿದೆ: ತ್ರಿವಿಧವಿಘ್ನಂಗಳಿಗೆ ಪರಿಹಾರವನು ಕೇಳ್ವೇದಾಂತಶಾಸ್ತ್ರಶ್ರವಣದಿಂದ ಜ್ಞಾನಮುಮ್ಮನನದಲಿ ಸಂಶಯವೂ ತವೆ ನಿದಿಧ್ಯಾಸದಲಿ ವಿಪರೀತವದ ಭಾವನಜಾರ್ಪುದಿಂತರಿದವರೆ ಯೋಗ್ಯರು ಮುಕ್ತಿಗೆ (ಗಗತಾ. ೧೩-೧೬); ಘನಮಹಾವಾತಕವು ಕಳೆದವು ದಿನಕರನ ತೆರನಂತೆ ತೋರಲು ಘನ ಮಹಾತ್ಮರು ಪೇಳ್ವರದನನು ನಿದಿಧ್ಯಾಸವೂಯೆಂದ (ಜ್ಞಾನಸಿಂ. ೧೨-೨೭); ಜ್ಞಾನಿಗಳಿಗೆ ಮನಸ್ಸು ಬಹಿರ್ಮುಖವಾಗಿದ್ದರೂ ಅವರಿಗೆ ಸರ್ವವೂ . . . ನಿದಿಧ್ಯಾಸವೆನಿಸಿಕೊಳ್ಳುವುದು (ಅಮೃತ. ೬-೫೧ ಟೀಕು); ಅಹಂ ಬ್ರಹ್ಮಾಸ್ಮಿ ಅಹಂ ಬ್ರಹ್ಮಾಸ್ಮಿಯೆಂಬ ಸ್ವಜಾತಿಯ ವೃತ್ತಿಗಳಲ್ಲಿ ಆತ್ಮನು ಸಂಧಾನವ ಮಾಡಿಕ್ಕೊಂಡರೆ ನಿದಿಧ್ಯಾಸವೂ (ಈಶ್ವಸ್ವ. ೨೧-೧೦). [ಸಂ.]

ನಿದಿಧ್ಯಾಸನ (ನಾ). = ನಿದಿಧ್ಯಾಸ : ಮನನದಿಂ ಶ್ರವಣದಿ ನಿದಿಧ್ಯಾಸನದಿ ನಿವ[ವು]ಗಳನೊತ್ತಿ ವಿದ್ಯಾವಿನಯಸೌಶೀಲ್ಯದಲಿ ನಡೆವುದು (ಕುಪ್ಯಾಅ. ೧೫-೧೬); ಶ್ರವಣ ಮನನವಾ ನಿದಿಧ್ಯಾಸನವೆನೆ ತ್ರಿಪುಟಭೇದಂಗಳಿಂದಂ ಪುಟ್ಟ ರಾಜಸಿರ್ಪ ಪರೋಕ್ಷದನುಭವಂ ಬಾಧಕಕ್ಕಲ್ಲಿಯಾ ನೆಪದೊಳಂತಾಗೆ ವೇದಾಂತವಾಕ್ಯಶ್ರವಣವಾಗಿ ಪ್ರಧಾನವಹುದೈ (ವೀಶೃಪು. ೫-೧೧-೧೧); ಮನಕ್ಕೆ ಗೋಚರಮಾದ ವಸ್ತುವಿನಲ್ಲಿ ಭಾವಾಭಾವಂಗಳಿಲ್ಲದೆ ಕಲ್ಪಿತಾ ಕಲ್ಪಿತಂಗಳಿಲ್ಲದೆ ಮನೋಲಯಮಾಗುವದೇ ನಿದಿಧ್ಯಾಸನವೆನಿಸುವದು (ನಾನಾಗು. ೩೦-೧೮); (ಆತ್ಮನನ್ನು) ಶ್ರವಣ ಮಾಡಬೇಕು, ಮನನ ಮಾಡಬೇಕು . . . ನಿದಿಧ್ಯಾಸನ-ಇವುಗಳನ್ನು ಮಾಡಬೇಕು (ಬ್ರಹ್ಮಭಾ. ೩, ೫೨); ನಿದಿಧ್ಯಾಸನ ಎಂದರೆ ಧ್ಯಾನ (ಭಾತತ್ತ್ವ. ೪೩೯). [ಸಂ.]

ನಿದುಗಟ್ಟು (ನಾ). ಒಂದು ಊರಿನ ಹೆಸರು : ತತಃ ಕಿಷ್ಕಿಂದನ್ತರೇ ನಿದುಗಟ್ಟನಾ ದಕ್ಷಿಣಾನ್ತಭಾಗಂ (ಮೈಅರಿ. ೧೯೪೨, ೭೫-೧೧೫ ; 819). [?]

ನಿದೇಶ (ನಾ). ಆಜ್ಞೆ ; ಆದೇಶ ; ಅಪ್ಪಣೆ : ಈ ಭಾಗದಿಂದ ಕೊಡಲಾಗಿರುವ ಅಧಿಕಾರಗಳಲ್ಲಿ ಯಾವುದೊಂದನ್ನಾದರೂ ಚಲಾಯಿಸುವ ಸಂಬಂಧವಾಗಿ ಉಚ್ಚತಮನ್ಯಾಯಾಲಯದವರು ಆಯಾ ಸಂದರ್ಭದಲ್ಲಿ ಉಚಿತವಾಗಿರಬಹುದಾದಂತೆ . . . ಯಾವ ನಿದೇಶವನ್ನಾಗಲಿ, ಆದೇಶವನ್ನಾಗಲಿ ಅಥವಾ ನಿರೂಪಲೇಖವನ್ನಾಗಲಿ ಸಾದರು ಮಾಡಲು ಶಕ್ತರಾಗಿ ಇರತಕ್ಕುದು (ಭಾಧಾನ. ೧೯). 'ನಿರ್ದೇಶ' ಪರಾ. [ಸಂ.]

ನಿದ್ದಂಡಿ (ಗು). ಸೋಮಾರಿಯಾದ ; "ಮಬ್ಬು ; ಆಲಸಿ" (ಜಾನಕೋ. ೧೧). [<ನಿದ್ದೆ]

ನಿದ್ದಿಸು (ಕ್ರಿ). ನಿದ್ರೆಮಾಡು; ನಿದ್ರಿಸು : ಪದುಮಮಿತ್ರನ ಉದಯಹರಿಗಳ್ಕುದಯದಂತಿರೆ ರಾಮ ನಿದ್ದಿಸದುದಯದಿಂದುಪವಾಸಮಟ್ಟನು ಮೂಱುದಿನ ತನಕ (ಕೌಶಿಂಾ. ೧೫-೩೮); ಸ್ವಾಗತವನಲ್ಲಿ ಕೊಳ್ಳುತೆ ನೀಗುತೆ ಕಷ್ಟವನವರ್ ಸೊಗದೆ ನಿದ್ದಿಸಿದರ್ (ಮೈಸಾಮಿ. ೬-೧೩೩); ಎಂದುಂ ನಿದ್ದಿಸದ ಆ ಸ್ಯೂಸನಾಯುಧಂ . . . ಅವನ ಮೇಲ್ ಕಟ್ಟಿಜಿಗಿ . . . ಎತ್ತಿ ಬಡಿಯಿತ್ತು ಅವನನ್ (ಬದ್ಧಪ್ರ. ೨೦-೪೧೪). 'ನಿದ್ರಿಸು' ಪರಾ. [ನಿದ್ದೆ+-ಇಸು$_3$]

ನಿದ್ದೆ (ನಾ). ಎಚ್ಚರವಿಲ್ಲದಿರುವ ಸ್ಥಿತಿ ; ನಿದ್ರೆ : "ನಿದ್ರಾ, ಶಯನಂ, ಸ್ವಾಪಃ, ಸ್ವಪ್ನಃ, ಸಂವೇಶಃ-೫ ನಿದ್ದೆಯ ಹೆಸರುಗಳು" (ಸಿದ್ಧಾಂತಿ.೬೩); ಇಂದೆನಗೆ ನಿದ್ದೆ ಬಾರದು ಬಂದಪುದಾಲಸ್ಯಮಸದಳಂ (ಸುಕುಮಾ. ೬-೧೬); ಪಸಿವಱಯದೆ ತೃಷೆಯಱಯದೆ ದೆಸೆಯಱಯದೆ ನಿದ್ದೆಯಱಯದಿರುಳುಂ ಪಗಲುಂ[ಪಾಶಾಂ. ಮದನ ಮನದಿ ಪಲವುಂ ಕಾಲಂ]ಕುಸುಮದೆ ಲಿಂಗಮನೊಸೆದರ್ಚಿಸಿದ ಫಲಂ ಕಿರ್ಚನೊಳಗೆ ಬೇವಂತಾಯ್ತೆ (ಗಿರಿಕ. ೮-೬೯); ಹಸುಳೆ ನಿದ್ದೆಯ ಹಾವ ಹೊಯ್ದುಬ್ಬಿಸುವರೇ (ಕುನ್ಯಾಕ. ೯-೬); ಪುಂಡರೀಕಾಕ್ಷಿ ನಿದ್ದೆಯೊಳಾನೊಱಗಿರೆ ಕಂಡೆನು ಬಲು ಕೆಟ್ಟ ಕನಸ (ಮೋಹತ. ೪-೮೯); "ಕಲ್ಲಿ ! ಕಲ್ಲಿ !" ಎನ್ನುತ ಚೀರಿ ಕನಸೊಡೆದೆದ್ದೆ ! ಇನ್ನೆಲ್ಲಿಯ ನಿದ್ದೆ ? (ಪಾಂಚಜ. ೭೧-೨೧); ಮುದ್ದೆಯಂತೆ ನಿದ್ದೆ (ಗಾದೆ).

ನಿದ್ದೆ ಕಾಯು ನಿದ್ದೆಕಟ್ಟು : ಇಡೀ ರಾತ್ರಿಯೆಲ್ಲಾ ನಿದ್ದೆ ಕಾಯುಲು ನನ್ನಿಂದ ಸಾಧ್ಯವಿಲ್ಲ (ರೂಢಿ). **ನಿದ್ದೆ ಮಂಪರು** = ನಿದ್ರೆಯಿಂದುಂಟಾದ ಜಡತ್ವ,—ಆಲಸ್ಯ : ನಿದ್ದೆಮಂಪರಿನಲ್ಲಿ ಅವಳು ಬಡಬಡಿಸುತಿದ್ದಾಳೆ (ರೂಢಿ). **ನಿದ್ದೆ ಮಾಡು** = ನಿದ್ದೆಗೆಯ್ : ಜಗದ ಕೂಡ ಬಂದೆವು ಜಗಳಾಡಿ, ಕೊಟ್ಟೆರಿ ನಿಮ್ಮ ತೊಡಿ, ಅಲ್ಲಿ ನಿದ್ದೆಮಾಡಿ ಎದ್ದೇವೀಗ ಯಾವುದೋ ಹೊಸಾ ನಸುಕಿನ್ಯಾಗ (ಹಾಡುಪಾ. ೪೦-೧). **ನಿದ್ದೆ ಹತ್ತು** = ನಿದ್ದೆಬರು : ನೀ ಏನೂ ಹೆದರಬೇಡ ಚಂದ್ರಭಾಗೀ, ಡಾಕ್ಟರರು ಹೇಳಿದ್ದಾರಲ್ಲ—ಅವಳಿಗೆ ನಿದ್ದೆ ಹತ್ತಿದೆ (ಪೂರುದಾ. ೩೧೩); ರಾಸಮಣಿಯು ನಿಶ್ಚೇಷ್ಟಿತಳಾಗಿ ನಿದ್ದೆ ಹತ್ತಿ ಮಲಗಿದ್ದಳು (ಇಪ್ಪಕ. ೩೯೫). **ನಿದ್ದೆ ಹರಿ** = ಎಚ್ಚರವಾಗು ; ನಿದ್ರೆತಿಳಿ : ನಿದ್ದೆಹರಿಯುವ ಹೊತ್ತು ನಸುಕುಹರಿಯುವ ಹೊತ್ತು (ನನಲ್ಲ. ೧೪-೬). **ನಿದ್ದೆ ಹಾರು** = ಎಚ್ಚರವಾಗು ; ನಿದ್ರೆ ಕೆಡು : ರಾತ್ರಿ ನಿದ್ದೆಹಾರಿ ಒಂದು ನಿಮಿಷ ಸಹ ಅವನ ಕಣ್ಣಿಗೆ ಕಣ್ಣು ಹಚ್ಚಲಾಗಿಲ್ಲ (ಇಪ್ಪಕ. ೩೯೪). [<ಪ್ರಾ.ಣದ್ದಾ./ಸಂ. ನಿದ್ರಾ]

ನಿದ್ದೆಕಟ್ಟು (ಕ್ರಿ). ನಿದ್ರೆಯನ್ನು ಹತ್ತಿಕ್ಕು,—ತಡೆ; ನಿದ್ದೆಮಾಡದೆ ಇರು ; ಜಾಗರಣೆ ಮಾಡು : ಇತ್ತೀಚಿನ ದಶಾವತಾರ ಇಡೀ ನೋಡಲಾರದೆ ನಿದ್ದೆಕಟ್ಟಲು ಟ್ರ್ಯಾಡೆಡಿ ಆದದ್ದೂ ಉಂಟು (ಹುಚ್ಚಾಟ. ೮೨). [ನಿದ್ದೆ+ಕಟ್ಟು$_1$]

ನಿದ್ದೆಕಣ್ಣು 'ನಿದ್ದೆಗಣ್ಣು' ನೋ.

ನಿದ್ದೆಗಣ್ಣು, ನಿದ್ದೆಕಣ್ಣು (ನಾ). ನಿದ್ರೆಯಿಂದ ಮುಚ್ಚಿಕೊಳ್ಳುತ್ತಿರುವ ಕಣ್ಣು ; ನಿದ್ರೆಯಿಂದ ಅರೆಮುಚ್ಚಿದ ಕಣ್ಣು : ನಿದ್ದೆಗಣ್ಣೋರ್ದು ಗೂಗೆದಲೆಯನುದ್ದಂ ನೆಗಪಿ ಪರಿವ ಕದ್ದಲಿಗಳುಮಂ . . . ಕಂಡು (ಲೀಲಾವ. ೫-೧೧೪ ಪ); ಗುದ್ದಲಿಗೆ ಹೊನ್ನ ಹಿಡಿಯೇಕೆ ಸೂಳೆಗೆ ನಿದ್ದೆಗಣ್ಣೇಕೆ (ಸರ್ವಜ್ಞ. ೧೮೯೩); ಗದ್ದಿಗೆಯ ಬಳಿ ಕೆಡವಿದರು . . . ನಿದ್ದೆಗಣ್ಣಿನ, ಒದ್ದೆಕೂದಲ ಡೊಂಬನಾ (ಕಎಪು. ೪೦-೨೯); ಭೈವಾಜ್ಞೆಯೆಂದು ನಾನು ಬಗೆದಿದ್ದು ನಿದ್ದೆಗಣ್ಣಲ್ಲಿದ್ದ ನನ್ನ ಭ್ರಮೆಯೋ . . . ನನ್ನ ಅಹಂಕಾರದ ಮೋಸವೋ ಬಗೆಹರಿಯಲಿಲ್ಲ (ಹೊಸಕ್ರಿ. ೨೫೨); ಬೀಗರ ಪರಕೀಯಮುಖಗಳನ್ನು ನಿದ್ದೆಗಣ್ಣಿನಿಂದಲೆ ಬಂದು ಸೋಚಿಗದಿಂದ, ಕುತೂಹಲದಿಂದ ಕದ್ದುಕದ್ದು ನೋಡುತ್ತಿದ್ದೆ (ವೈಸಿ. ೭). **ನಿದ್ದೆಕಣ್ಣು** : ನಿದ್ದೆಕಣ್ಣಾ ನಾನಿದ್ದೆ ಗೊಡನೆಂದು ಬುದ್ಧಿಯಿಲ್ಲದೆ ಕೂಡಿದೆ (ಪುರಂದ. ೧-೬೦-೩). [ನಿದ್ದೆ+ಕಣ್ಣು (<ಕಣ್)]

ನಿದ್ದೆಗರೆ (ಕ್ರಿ). ನಿದ್ರೆಮಾಡು ; ನಿದ್ರಿಸು : ಮಗ್ಗುಲೊಳಗಿದ್ದವನ ಕೂಟಕೊಡದಗಲಾಜಿದೆ ನಿದ್ದೆಗರೆದು ವದನಕ್ಕೆ ಮಸಿಸುಣ್ಣವ ಬರೆಯಿಸಿಕೊಂಡ ಚದುರೆವೆಣ್ಣಲ್ಲವೆ ನೀನು (ಕಂನವಿ. ೬-೧೮೬). [ನಿದ್ದೆ+ಕರೆ$_1$]

ನಿದ್ದೆಗುಳಿಗೆ (ನಾ). ನಿದ್ರೆಯನ್ನು ಬರಿಸುವ ಮಾತ್ರೆ : ನಿದ್ದೆಗುಳಿಗೆ ಕೊಟ್ಟು ಇದನ್ನೆಲ್ಲ ಗುಣಪಡಿಸಬಹುದೇ ? (ಪೂರುದಾ. ೩೧೪). [ನಿದ್ದೆ+ಗುಳಿಗೆ$_1$]

ನಿದ್ದೆಗೆಡಿಸು (ಕ್ರಿ). ನಿದ್ರೆಯನ್ನು ಕೆಡಿಸು ; ಎಬ್ಬಿಸು : ನಿದ್ದೆಗೆಡಿಸಿದುದೆ ಕಾರಣವಾಗಿ ಹೆಂಡತಿಗೂ ಶಿಷ್ಯನಿಗೂ ಶಾಪ ಕೊಟ್ಟ ಋಷಿಗಳು ನನ್ನ ಬೆನ್ನು ಕಟ್ಟಿ ನಿಂತಿದ್ದಾರೆ (ಗಾಳಿಪ. ೧೫೯).

[ನಿದ್ದೆಗೆಡು + –ಇಸು$_3$]

ನಿದ್ದೆಗೆಡು (ಕ್ರಿ). ನಿದ್ರೆ ಇಲ್ಲದಿರು ; ನಿದ್ರೆ ಮಾಡದಿರು ; ನಿದ್ರೆ ಕಟ್ಟು : ಅಲಸದೆ ಮಾಡಿ ಬೇಸಱದೆ ಸಾಲ್ಗುಮಿದೆನ್ನದೆ ಮೆಯ್ಯೊಗಕ್ಕೆ ಪಂಬಲಿಸದೆ ನಿದ್ದೆಗೆಟ್ಟು [ನಿಡು]ಜಾಗರದೊಳ್ ತೊಡರ್ದೇಕಪಾದದೊಳ್ ಬಲಿದುಪವಾಸದೊಳ್ ನಮೆದು (ಪಂಪಭಾ. ೧–೧೩೬) ; ನಿದ್ದೆಗೆಟ್ಟೊಡೆ ನಾಳೆ ಹಸಿವಿಲ್ಲದೆನ್ನವಂ ಇದ್ದಂತೆ ಇಪ್ಪನೇನುವನುಣ್ಣನೆನ್ನವಂ (ಕಣ್ಣರ. ದೇ. ೧೩೨–೧೧) ; ನಿದ್ದೆಗೆಟ್ಟವನೋ ಬುದ್ಧಿಗೆಟ್ಟವನೋ ? (ಗಾಡ).

[ನಿದ್ದೆ + ಕೆಡು$_1$]

ನಿದ್ದೆಗೆಯ್ (ಕ್ರಿ). ಮಲಗು ; ನಿದ್ರೆಮಾಡು : ಪುಟ್ಟಂ ಸತ್ತೊಂ [ಕೆಟ್ಟಂ] ಕೊಟ್ಟೊಂ ಬಾಟ್ಪನ್ನಮಿಂದ್ರಿಯಾಳಿಗೆ ಪಸರಂಗೊಟ್ಟುಂ ಮೆಯ್ಮೊಚ್ಚಿದವೋಲುಟ್ಟುಂಡುಂ ನಿದ್ದೆಗೆಯ್ದು ಸುಖಮಂ ಪಡೆಯಾ (ಶಾಂತಿಪು. ೮–೧೩೪) ; ನಿದ್ದೆಗೆಯ್ತಂದೆ ಇನ್ನಾವ ದುಗುಡಂ ಬೇಡ ಇದ್ದಪೆಂ ಕಾಹಾಗಿ ಒಂದುಂ ಭಯಂ ಬೇಡ (ಕಣ್ಣರ. ದೇ. ೧೩೨–೭) ; ಸತಿಪತಿಗಳ್ ಸುಖದಿಂ ಪರ್ಯಂಕಾಗ್ರದೊಳ್ ನಿದ್ದೆಗೆಯ್ವೊಗಳ್ (ಹರಿಹರ. ೨–೧೬ ಪ) ; ಉದ್ಯೋಗ ವೆವಹಾರ ನೃಪಸೇವೆಯಾಳ್ದರು ಮಧ್ಯರಾತ್ರಿಗೆ ಬರ್ಪನಕ ನಿದ್ದೆಗೆಯ್ದಂತೆ ಮಂದಿರದೊಳು ಹಾದರವಿದ್ದೆಯಂಗನೆಗಳೊಪ್ಪಿದರು (ಮೋಹತ. ೧೮–೨೯). [ನಿದ್ದೆ + ಕೆಯ್$_1$]

ನಿದ್ದೆಗೇಡು (ನಾ). ನಿದ್ರೆಯಿಲ್ಲದಿರುವಿಕೆ ; ನಿದ್ದೆಗೆಡುವಿಕೆ : ಕುಂಭಕರ್ಣನಿಗೆ ನಿದ್ದೆಗೇಡಿನಿಂದ ನಾಲ್ಕೈದು ದಿವಸ ಮೈಯಲ್ಲಿ ತುಸು ಸ್ವಸ್ಥವಿದ್ದಿಲ್ಲ (ಮುಂಗಾಪು. ೯೮). [ನಿದ್ದೆ + ಕೇಡು]

ನಿದ್ದೆಗೊಳ್ (ಕ್ರಿ). ೧. ನಿದ್ರೆಮಾಡು. ೨. (ಆಲಂ) ಸಾಯು; ಮರಣ ಹೊಂದು : ನಾಲ್ಗಳಿಗೆಯೊಳೆ ರಕ್ಕಸಬಲದೊಳಡ್ಡವಡೆ ನಿದ್ದೆಗೊಂಡುದು (ಅದ್ಭುತ. ೪೭–೧೨). [ನಿದ್ದೆ + ಕೊಳ್$_1$]

ನಿದ್ದೆತಿಳಿ 'ನಿದ್ದೆದಿಳಿ' ನೋ.

ನಿದ್ದೆದಿಳಿ, ನಿದ್ದೆತಿಳಿ (ಕ್ರಿ). ನಿದ್ರೆಯಿಂದ ಎಚ್ಚರಗೊಳ್ಳು ; "ಎಚ್ಚರಗೊಳ್" (ಪ್ರಭಣ್ಣ). **ನಿದ್ದೆತಿಳಿ** : ನಿದ್ದೆತಿಳಿದೆರ್ದುವು ನಲ್ಲ ವೊಣರ್ ನಿಶಾಂತ್ಯದೊಳ್ (ಸೂಕ್ತಿಸು. ೯–೬೦) ; ಸುನೀತಿದೇವಿ ನಿದ್ದೆ ತಿಳಿದು ಎದ್ದು ಕುಳಿತಳು (ಸನಲ್ಲ. ೨೩ ಪಲ್ಲವಿ). [ನಿದ್ದೆ + ತಿಳಿ$_1$]

ನಿದ್ದೆನೆಲೆ (ನಾ). ನಿದ್ರೆಯ ಆಳ,—ನೆಲೆ : ನಿದ್ದೆನೆಲೆ ನಮಗಿಲ್ಲ ; ತಿಳಿದೀತೆಂತು ಸಾವಿನ ಆಳವು ? (ಪಾಡುಸಾ. ೫೦–೧೦). [ನಿದ್ದೆ + ನೆಲೆ]

ನಿದ್ದೆಬರು (ಕ್ರಿ). ನಿದ್ರೆಯು ಆವರಿಸು ; ನಿದ್ರೆಬರು : ಆ ಪಂಡಿತನಿಗೆ ದಿನದಿನಕ್ಕೆ ಚೆನ್ನಾಗಿ ಹಾಡಿಸಿ ಹಾಸಿಗೆ ಹಾಸದಿದ್ದರೆ ನಿದ್ದೆಬರುತ್ತಿದ್ದಿಲ್ಲ (ಮುಂಬಯಿ. ೪–೧೫೪) ; ಭವಾನಿಚರಣನಿಗೆ ನಿದ್ದೆಬರುತ್ತಿರಲಿಲ್ಲ (ಇಪ್ಪಕ. ೬೯೫). [ನಿದ್ದೆ + ಬರು (< ವರ್)]

ನಿದ್ದೆಮೊಬ್ಬು (ನಾ). ನಿದ್ರೆಯ ಜಡತೆ ; ನಿದ್ರಾಲಸ್ಯ : ನಿದ್ದೆಮೊಬ್ಬಿನಲ್ಲಿ ಅವನು ಏನು ಮಾತಾಡುತ್ತಿದ್ದಾನೆಂದು ಅವನಿಗೇ ಗೊತ್ತಿಲ್ಲ (ರೂಢಿ).

[ನಿದ್ದೆ + ಮೊಬ್ಬು (< ಮರ್ವು)]

ನಿದ್ದೆವೋಗು, ನಿದ್ದೆಹೋಗು (ಕ್ರಿ). ನಿದ್ರೆ ಮಾಡು ; ಮಲಗು : ಅಂತು ಬಗೆಯ ಬಗೆವಗೆಯ ನೆನಪಿನ ಕಳವಳದಿಂ ನಿದ್ದೆವೋದ ರಾಯಂ . . . ಕನಸಂ ಕಂಡು ಪೊಟ್ಟಱೆಯೊಳೆಟ್ಟು ನಿತ್ಯಕರ್ಮಂಗಳಂಗೆಯ್ದೋಲ ಗಮಂ ಪುಗುತಂದಂ (ರಾಮಾಶ್ವ. ೭೫–೧೫) ; ಅವನು ನಿದ್ದೆವೋಗುವ ಕಲ್ಮಂಚವಿರುವ ಸಜ್ಜೆಗೆ ಹೊಸದಾಗಿ ಕಟ್ಟಿಸಿರುವ ಗುಪ್ತಮಾರ್ಗದ ಬಾಗಿಲುಗಳನ್ನು ಬಲ್ಲಿರೇನು ? (ಮಂತ್ರಶ. ೫೩–೧೭). **ನಿದ್ದೆಹೋಗು:** ನಿದ್ರಾಣಃ, ಶಯಿತಃ—೨ ನಿದ್ದೇ ಹೋಗುವವನ ಹೆಸರು (ಸಿದ್ಧಾಂತಿ. ೩೩೧).

[ನಿದ್ದೆ + ಪೋಗು$_1$]

ನಿದ್ದೆಹೋಕ (ನಾ). ಸದಾ ನಿದ್ರೆ ಮಾಡುವವನು ; ಸೋಂಬೇರಿ ಮನುಷ್ಯ : "ತೂಕಡಿಕೆಯ, ಗಮನವಿಲ್ಲದ,—ಮನುಷ್ಯ ; ಸೋಂಬೇರಿ; ನಿದ್ದೆಹೋಕ" (Sleepyhead. ಇಂಕನಿ).

[ನಿದ್ದೆ + ಹೋಕ (< ಪೋಕ)]

ನಿದ್ದೆಹೋಗು 'ನಿದ್ದೆವೋಗು' ನೋ.

ನಿದ್ರಸ್ತ (ನಾ). ಮಲಗಿರುವವನು ; ನಿದ್ರಿಸುವವನು : ತಾನ ತೊಟ್ಟಲವಾಗಿ ತಾನ ಮಲಗಿದ್ದ ತನ್ನ ಕೈಲೆ ತೂಗಿ ನಿದ್ರಸ್ತನಾದ ತಾನ ಎಚ್ಚರಾಗಿ ಎದ್ದ ಕೂತಿದ್ದ ಹಿಂಗ ಅಲ್ಲಮಪ್ರಭುಲಿಂಗ ಲೀಲಾ ತೋರಿದ್ದ (ಲೋಕಗೀ. ೧೦೪). [< ಸಂ. ನಿದ್ರಾಸ್ಥ]

ನಿದ್ರಾಂಗಿ (ನಾ). ನಿದ್ದೆಮಾಡುತ್ತಿರುವವಳು ; ಮಲಗಿರುವವಳು: ಎಡಗಯ್ಯಂ ತಲೆಗಿಂಬಿನೊಳ್ ಮಡಗಿ . . . ಮೃದೂಲತಲ್ಪದೆಡೆಯೊಳ್ ನಿದ್ರಾಂಗಿ ಕಣ್ಗೊಪ್ಪಿದಳ್ (ಪುಲ್ಲಕಾ. ೬–೧೧೦).

[ಸಂ. ನಿದ್ರಾಂಗೀ (ನಿದ್ರಾ + ಅಂಗ + –)]

ನಿದ್ರಾಕುಲ, ನಿದ್ರಾಕುಳ (ನಾ). ನಿದ್ರೆಯಿಂದ ಆವೃತವಾದವನು; ನಿದ್ರೆಗೊಳಗಾದವನು : ತೋಳುಗಳ ತಲೆಯೊಳಾನಿಸಿ ಗುಱುಗುಱುಸಿ ರಥದೊಳಗೆ ಸಾರಥಿವೆರಸಿ ನಿದ್ರಾಕುಲ[ಪಾಠಾಂ. ಳ]ರು ಜೊಮ್ಮಿನ ಮೇಲೆ ಮೈಮುಱಿದಿರ್ದರತಿರಥರು (ಕುಮಾವಿ. ೮–೮೫). **ನಿದ್ರಾಕುಳ** : ಎಲೆಲೆ ಕವಿ ಕಳ್ಳೇಱುಕಾಱನ ತಲೆಯ ಹೊಯ್ ಹೊಯ್ಯೆನುತ ನಿದ್ರಾಕುಳರು ಗರ್ಜಿಸುತಾಗುಳಿಸಿ ತೂಕಡಿಸಿದರು ಮರಳಿ (ಕುಮಾಗ. ೯–೩೭). [ಸಂ.]

ನಿದ್ರಾಕುಳ 'ನಿದ್ರಾಕುಲ' ನೋ.

ನಿದ್ರಾಜನಕ (ಗು). ೧. ನಿದ್ರೆಯನ್ನು ಬರಿಸುವ : ಅಫೀಮು, ಭಂಗಿ ಮತ್ತು ಇತರ ನಿದ್ರಾಜನಕ ಔಷಧಗಳು ಮತ್ತು ನಿದ್ರಾಜನಕಗಳು (ಭಾಧಾನಿ. ೨೯೨). (ನಾ). ೨. ನಿದ್ರೆಯನ್ನು ಬರಿಸುವಂಥದು : ಅವನಿಗೆ ನಿದ್ರೆಬರಿಸಿ ತಾನು ತಪ್ಪಿಸಿಕೊಂಡು ಹೋಗುವ ಸಲುವಾಗಿ . . . ನಿದ್ರಾಜನಕವೆಂದು ತಿಳಿದಿದ್ದ ಒಂದು ಪುಡಿಯನ್ನು ಬ್ರಾಂದಿಗೆ ಬೆರೆಸಿ ಸ್ಕೆಲ್ಟೋನ್‌ನಿಗೆ ಕೊಟ್ಟುದಾಗಿಯೂ . . . ಅವಳು ಹೇಳಿದಳು (ಪುನರು. ೪೪). [ಸಂ.]

ನಿದ್ರಾಣ (ಗು). ೧. ನಿದ್ರೆ ಮಾಡುತ್ತಿರುವ ; ನಿದ್ರೆಯಲ್ಲಿರುವ. (ನಾ). ೨. ನಿದ್ರೆ ಮಾಡುವವನು : "ನಿದ್ರಾಣಃ, ಶಯಿತಃ—೨ ನಿದ್ದೇ ಹೋಗುವವನ ಹೆಸರು" (ಸಿದ್ಧಾಂತಿ. ೩೩೧). [ಸಂ.]

ನಿದ್ರಾದರ್ಶನಾವರಣೀಯ (ನಾ). [ಜೈನ] ನಾಲ್ಕು ಬಗೆಯ ಘಾತಿಕರ್ಮಗಳಲ್ಲಿ ಒಂದು ; ನಿದ್ರೆಯು ಆವರಿಸುವುದು : ನಿದ್ರಾದರ್ಶನಾವರಣೀಯಕರ್ಮೋದಯದಿಂದಮೆನತನೆಚ್ಚಱಸಿದೊಡಂ ದೃಷ್ಟಿಗಳಂ ತೆಱೆಯಲು ಶಕ್ತನಲ್ಲಂ (ಗೂಢಸಾ. ೬–೫). 'ಘಾತಿಕರ್ಮ', 'ದರ್ಶನಾವರಣೀಯ' ಪರಾ. ☞ ರಾಜದ್ವಾರದಲ್ಲಿ ನಿಯುಕ್ತನಾದ ದ್ವಾರಪಾಲಕನು ರಾಜದರ್ಶನಕ್ಕೆ ಪ್ರತಿಬಂಧಕನಾಗಿರುವಂತೆ ದರ್ಶನಾವರಣೀಯವು ಜೀವನಿಗಿರುವ ದರ್ಶನಗುಣಕ್ಕೆ ಆವರಣವನ್ನುಂಟುಮಾಡುತ್ತದೆ. ಅಂದರೆ ಪ್ರತಿಬಂಧಕವಾಗಿದೆ. ಇದರಲ್ಲಿ ಚಕ್ಷುರ್ದರ್ಶನಾವರಣೀಯ, ಅಚಕ್ಷುರ್ದರ್ಶನಾವರಣೀಯ, ಅವಧಿದರ್ಶನಾವರಣೀಯ, ಕೇವಲದರ್ಶನಾವರಣೀಯ, ನಿದ್ರಾ, ನಿದ್ರಾನಿದ್ರಾ, ಪ್ರಚಲಾ, ಪ್ರಚಲಾಪ್ರಚಲಾ ಮತ್ತು ಸ್ತ್ಯಾನಗೃದ್ಧಿ ಎಂಬ ಒಂಬತ್ತು ಬಗೆಗಳಿವೆ. ೧. ಚಕ್ಷುರ್ದರ್ಶನಾವರಣಕರ್ಮದ ಉದಯದಿಂದ ಚಕ್ಷುರಿಂದ್ರಿಯದಿಂದ ನೋಡಬಹುದಾದ ಮೂರ್ತದ್ರವ್ಯಗಳನ್ನು

ನೋಡಲಾಗುವುದಿಲ್ಲ. ೨. ಅಚಕ್ಷುರ್ದರ್ಶನಾವರಣೀಯದಿಂದ ಕಣ್ಣನ್ನು ಬಿಟ್ಟು (ಚಕ್ಷುರಿಂದ್ರಿಯವನ್ನು ಬಿಟ್ಟು ಉಳಿದ ಇಂದ್ರಿಯಗಳಿಂದ ಹಾಗೂ ಮನಸ್ಸಿನಿಂದ) ಗ್ರಹಿಸಬಹುದಾದುದನ್ನು ಗ್ರಹಿಸಲಾಗುವುದಿಲ್ಲ. ೩. ಅವಧಿದರ್ಶನಾವರಣೀಯದಿಂದ ದ್ರವ್ಯ, ಕ್ಷೇತ್ರ, ಕಾಲ, ಭಾವ ಇವುಗಳ ಚೌಕಟ್ಟಿಗೆ ಒಳಪಟ್ಟಿರುವ ರೂಪದ್ರವ್ಯಗಳನ್ನು ಇಂದ್ರಿಯಗಳ ಸನ್ನಿಕರ್ಷ ವಿಲ್ಲದಿದ್ದರೂ ಸಮ್ಯಗ್ದರ್ಶನ ಅಥವಾ ಸಮ್ಯಕ್ಚಾರಿತ್ರದ ವಿಶುದ್ಧತೆಯ ಪ್ರಭಾವದಿಂದಲೇ ಗ್ರಹಿಸುವ ಅವಧಿಜ್ಞಾನವು ತಿರೋಹಿತವಾಗುತ್ತದೆ. ೪. ಕೇವಲ ದರ್ಶನಾವರಣೀಯದಿಂದ ನಿರವಧಿಕವಾದ ತ್ರಿಕಾಲವರ್ತಿಯಾದ ಸಮಸ್ತ ಪದಾರ್ಥಗಳನ್ನೂ ಅವುಗಳ ಪರ್ಯಾಯ(ವಿಕಾರ)ಗಳನ್ನೂ ಕೈಗನ್ನಡಿಯಂತೆ ಸ್ಪಷ್ಟವಾಗಿ ತಿಳಿಯಬಹುದಾದ ಕೇವಲಜ್ಞಾನವು ನಿರುದ್ಧವಾಗುತ್ತದೆ. (ಈ ಕೇವಲಜ್ಞಾನವು ಜೀವನ್ಮುಕ್ತನಾದ ಯೋಗಿಗೆ ಉಂಟಾಗುವ ಒಂದು ಬಗೆಯ ಅತೀಂದ್ರಿಯಜ್ಞಾನ). ೫. ನಿದ್ರಾ—ಇದರ ಉದಯದಿಂದ ಸಾಮಾನ್ಯನಿದ್ರೆಯು ಬರುತ್ತದೆ. ೬. ನಿದ್ರಾನಿದ್ರಾ—ಇದರ ಉದಯದಿಂದ ಮೇಲೆ ಮೇಲೆ ಗಾಢನಿದ್ರೆ ಬರುತ್ತದೆ. ೭. ಪ್ರಚಲಾ—ಇದರ ಉದಯದಿಂದ ಕುಳಿತುಕೊಂಡಿರುವಾಗಲೇ ತೂಕಡಿಕೆಯುಂಟಾಗುತ್ತದೆ. ೮. ಪ್ರಚಲಾಪ್ರಚಲಾ—ಈ ತೂಕಡಿಕೆಯೇ ಪದೇ ಪದೇ ಅನುಸ್ಯೂತವಾಗಿ ಬರುತ್ತಿರುತ್ತದೆ. ೯. ಸ್ತ್ಯಾನಗೃದ್ಧಿ—ಇದರಿಂದ ಸ್ವಪ್ನದಲ್ಲಿ ವೀರ್ಯಾತಿಶಯವುಂಟಾದಂತಾಗಿ ಭಯಂಕರಕಾರ್ಯಗಳನ್ನು ಮಾಡುವಂತೆ ಭಾಸವಾಗುತ್ತದೆ. [ಸಂ.]

ನಿದ್ರಾನಿದ್ರೆ (ನಾ). [ಜೈನ] ದರ್ಶನಾವರಣೀಯಕರ್ಮಗಳಲ್ಲಿ ಒಂದು; ಮೇಲಿಂದ ಮೇಲೆ ನಿದ್ರೆ ಬರುವುದು : ಪೂರ್ವೋಕ್ತ ವಿಧಾನದಿನಂತರ್ಮುಹೂರ್ತದಿಂ ನಿದ್ರಾನಿದ್ರಾಪ್ರಚಳಾಪ್ರಚಳಾಸ್ತ್ಯಾನಗೃದ್ಧಿ ನರಕಗತಿ ತತ್ಪ್ರಾಯೋಗ್ಯಾನುಪೂರ್ವಿತಿರ್ಯಗ್ಗತಿ ತತ್ಪ್ರಾಯೋಗ್ಯನುಪೂರ್ವೇಕೇಂದ್ರಿಯವಿಕಳೇಂದ್ರಿಯಜಾತ್ಯಾತಪೋದ್ಯೋತಸ್ಥಾವರ ಸಾಧಾರಣಸೂಕ್ಷ್ಮಂಗಳೆಂಬ ಪದಿನಾಱುಂ ಕರ್ಮಪ್ರಕೃತಿಗಳಂ ನಿರವಶೇಷಂ ಕಿಡಿಸಿ (ಆದಿಪು. ೧೦-೧೪ ಪ); ಮತ್ತಮಂತರ್ಮುಹೂರ್ತದಿಂ ನಿದ್ರಾನಿದ್ರಾಪ್ರಚಳಾಪ್ರಚಳಾ . . . ಸಾಧಾರಣ ಸೂಕ್ಷ್ಮಂ[ಗಳೆಂಬ] ಪೋಡಶಕರ್ಮಪ್ರಕೃತಿಗೆ ವಿಳಯಂ ಮಾಡಿ (ಶಾಂತಿಪು. ೧೧-೧೧೧ ಪ); ಚಕ್ಷುರ್ದರ್ಶನಾವರಣೀಯಂ . . . ನಿದ್ರಾ ನಿದ್ರಾನಿದ್ರಾ ಪ್ರಚಲಾ ಪ್ರಚಲಾಪ್ರಚಲಾ ಸ್ತ್ಯಾನಗೃದ್ಧಿಭೇದದಿಂ ನವವಿಧಭೇದಮಪ್ಪ ದರ್ಶನಾವರಣೀಯಮುಮಂ (ಸುಕುಮಾ. ೩-೩೯ ಪ); ನಿದ್ರಾನಿದ್ರೆಯುದಯದೊಳೆರ್ದಿರ್ದೊಡಮೆಂತುಂ ಕಣ್ಣಂ ತೆಱೆಯಲಾಱದೊಱಗಿಸುವುದುಮಕ್ಕುಂ (ಪಸಾರ. ೧೦); ಆತ್ಮನ ದರ್ಶನಶಕ್ತಿಯನ್ನು ಮುಚ್ಚುವ ಕರ್ಮವು ದರ್ಶನಾವರಣೀಯಕರ್ಮವೆನಿಸುವುದು. ಇದು ಚಕ್ಷುರ್ದರ್ಶನಾವರಣೀಯ . . . ನಿದ್ರಾನಿದ್ರಾ, ಪ್ರಚಲಾ, ಪ್ರಚಲಾಪ್ರಚಲಾ ಮತ್ತು ಸ್ತ್ಯಾನಗೃದ್ಧಿ ಎಂದು ಒಂಬತ್ತು ವಿಧವಾಗಿದೆ (ಜೈನಪ. ೩೬೬). [ಸಂ. ನಿದ್ರಾನಿದ್ರಾ]

ನಿದ್ರಾಪ್ರಬೋಧಿನಿ (ನಾ). ನಿದ್ರೆಯಿಂದ ಎಚ್ಚರಿಸುವಂಥದು : ನಿದ್ರಾಪ್ರಬೋಧಿನಿಯೆಂಬ ದಿವ್ಯಬಾಣದಿಂ ಸುಗ್ರೀವಂ ಹನುಮಂ ಮೊದಲಾಗೆ ಮಿಕ್ಕ ನಾಯಕರ ನಿದ್ರಾಮುದ್ರೆಯಂ ಕಳೆವುದುಂ (ಪಂಠಾಮಾ. ೧೩-೧೩೨ ಪ). [ಸಂ. ನಿದ್ರಾಪ್ರಬೋಧಿನೀ]

ನಿದ್ರಾಭಂಗ (ನಾ). ನಿದ್ರೆಗೆ ಉಂಟಾಗುವ ಅಡ್ಡಿ,—ತಡೆ : ಶ್ವಾಸನಳಿಕೆಗೆ ಸಂಬಂಧಪಟ್ಟ ಕೆಮ್ಮು, ಮೂಗಿನಲ್ಲಿ ರಕ್ತ ಸೋರುವುದು ಮತ್ತು ರಾತ್ರಿಯ ವೇಳೆ ನಿದ್ರಾಭಂಗಗಳುಂಟಾಗುತ್ತವೆ (ಕಲರೋ. ೭೩). [ಸಂ.]

ನಿದ್ರಾಭರ (ನಾ). ನಿದ್ರೆಯ ಆಧಿಕ್ಯ,—ಹೆಚ್ಚಳ : ತರುಣಿಯರ ಮಱೆಗೊಂಡವರ . . . ನಿದ್ರಾಭರದೊಳಿರ್ದರ ಕೊಲುವುದುಚಿತವೆ (ನಳಚ. ೨-೨೦). [ಸಂ.]

ನಿದ್ರಾಭಾರ (ನಾ). = ನಿದ್ರಾಭರ : ನಿದ್ರಾಭಾರ[ಪಾಠಾಂ. ವ] ಮುದ್ರಿತಂಗಳುಂ ಕಿಂಚಿದಾಕುಂಚಿತಪರ್ಣಂಗಳುಮಾದುಪವನದ ತರುಲತಾಗುಲ್ಮಜಾಲಮಂ ಸೋಂಕಿ ಬಂದು (ಚಂದ್ರಪು. ೮-೪ ಪ); ನಾರಿ ನಸುನಗುತೊಳಗೆ ಹೊಕ್ಕು ಬಕಾರಿ ಮಂಚದೊಳಿರಲು ನಿದ್ರಾಭಾರವಿಹ್ವಲ ಕರಣನನು ಹೊದ್ದಿದಳು ಲಲಿತಾಂಗಿ (ಕುಪ್ಯಾವಿ. ೩-೩೮). [ಸಂ.]

ನಿದ್ರಾಭಾವ (ನಾ). ೧. ನಿದ್ರೆಯ ಸ್ಥಿತಿ : ನಿದ್ರಾಭಾವ[ಪಾಠಾಂ. ರ] ಮುದ್ರಿತಂಗಳು ಕಿಂಚಿದಾಕುಂಚಿತಪರ್ಣಂಗಳುಮಾದುಪವನದ ತರುಲತಾಗುಲ್ಮಜಾಲಮಂ ಸೋಂಕಿ ಬಂದು (ಚಂದ್ರಪು. ೮-೪ ಪ). ೨. ನಿದ್ದೆಯಿಲ್ಲದಿರುವಿಕೆ. [ಸಂ. (ನಿದ್ರಾ+ಭಾವ ; ನಿದ್ರಾ+ಅಭಾವ)]

ನಿದ್ರಾಭಿಭೂತ (ನಾ). ನಿದ್ರೆಗೆ ವಶವಾದವನು : ನಿದ್ರಾಭಿಭೂತನಾದ ಕಲ್ಯಾಣಮಲ್ಲನು . . . ಅರನಿದ್ದೆಯಲ್ಲಿ ಎಚ್ಚೆತ್ತು . . . ಬಾಯಿಗೆ ಬಂದ ಹಾಗೆ ಮಾತನಾಡಿಕೊಂಡನು (ಬಿನ್ನಬೇ. ೧೫೪). [ಸಂ.]

ನಿದ್ರಾಮುಗುದ (ನಾ). ನಿದ್ರೆಗೆ ಒಳಗಾದವನು,—ವಶವಾದವನು : ಬಿಗುಹು ಸಹಿತವೆ ಹೊನ್ನ ಮರಗೋಡುಗಳ ಮೇಲಡಗೆಡೆದು ನಿದ್ರಾಮುಗುದರಾದರು ರಾವುತರು ತೂಕಡಿಸಿದವು ತುರಗ (ಕುಪ್ಯಾವಿ. ೮-೮೪). [<ಸಂ. ನಿದ್ರಾಮುಗ್ಧ]

ನಿದ್ರಾಮುದ್ರೆ (ನಾ). ನಿದ್ರೆಯು ಆವರಿಸಿರುವ ಸ್ಥಿತಿ; ಎಚ್ಚರವಿಲ್ಲದಿರುವಿಕೆ : ಕುಂಭಕರ್ಣನತಿಕುಪಿತನಾಗಿ . . . ನಿದ್ರಾಪ್ರಬೋಧಿನಿಯೆಂಬ ದಿವ್ಯಬಾಣದಿಂ ಸುಗ್ರೀವಂ ಹನುಮಂ ಮೊದಲಾಗೆ ಮಿಕ್ಕ ನಾಯಕರ ನಿದ್ರಾಮುದ್ರೆಯಂ ಕಳೆವುದುಂ (ಪಂಠಾಮಾ. ೧೩-೧೩೨ ಪ); ಭರತಂ, ಬಳಲ್ದ ಶಿಶು ನೋವಂ ಮರೆತು ನೆಮ್ಮದಿಯನರಿತು ಮುಗ್ಧ ನಿದ್ರಾಮುದ್ರೆಯಪ್ಪಂತೆ . . . ತೇಲಿದನು ಶಾಂತಿಯ ತುರೀಯಕೆ (ತ್ರೀರಾಮಾ. ೧೬೪-೩೪೫). [ಸಂ. ನಿದ್ರಾಮುದ್ರಾ]

ನಿದ್ರಾಮೌನ (ನಾ). ನಿದ್ರೆಯಿಂದ ಉಂಟಾಗುವ ನಿಶ್ಶಬ್ದತೆ,—ನೀರವತೆ : ಭಾನು ಭುವನದ ಜನದ ನಿದ್ರಾಮೌನಮುದ್ರೆಯನೊಡೆದ ನುತ್ತರಧೇನುವಿಗ್ರಹಣವನು ಮಾಡಿದನಂದು ಕುರುರಾಯ (ಕುಪ್ಯಾವಿ. ೪-೬೧); ಸೇನೆ ಮೈಮಱೆದೊಱಗಿದದಟ ನಿದಾನವೊಗೆದಱುಹಿತ್ತು ನಿದ್ರಾಮೌನ ವಿಭ್ರಮಿಸಿತ್ತು ಬಲು ಸಂಸಾರದಂದದಲಿ (ಕುಪ್ಯಾವಿ. ೮-೮೭). [ಸಂ.]

ನಿದ್ರಾರಸ (ನಾ). ನಿದ್ರೆಯಿಂದ ಉಂಟಾಗುವ ಆನಂದ : ಅನೇಕ ವಿಳಾಸಿನೀವಿಳಾಸಾವಾಸಭವನದೊಳಾ ದಂಪತಿಗಳನ್ಯೋನ್ಯಾಂಗಸ್ಪರ್ಶಸುಖೋನ್ಮೀಳಿತವಿಲೋಚನರಂತಂತೆ ನಿದ್ರಾರಸವಶಗತರಾಗಿರ್ದರ್(ಆದಿಪು. ೫-೨೨ ಪ). [ಸಂ.]

ನಿದ್ರಾರೂಢ (ನಾ). ನಿದ್ರೆಯನ್ನು ಹೊಂದಿದವನು : ಅವನು ತನ್ನ ಕೋಣೆಗೆ ಹಿಂದಿರುಗಿ, ಹಾಸಿಗೆ ಮೇಲುರುಳಿಕೊಂಡು, ನಿದ್ರಾರೂಢನಾದನು (ಪುನರು. ೮೧). [ಸಂ.]

ನಿದ್ರಾಲಸ್ಯ (ನಾ). ನಿದ್ರೆಯಿಂದ ಬರುವ ಜಡತೆ,—ಆಲಸ್ಯ : ನಿದ್ರಾಲಸ್ಯಾಕ್ಷೀಪಕ್ಷಪಾತೇತರನು . . . ನಿತ್ಯಯೌವನನುಮಾಗಿ ಪಣಿಚೂಳಾಮರೇಶ್ವರನಿರೆ (ಶಾಂತಿಪು. ೭-೭೭ ಪ); ಗುಲ್ಮ ಸ್ವಲ್ಪ ದೊಡ್ಡದಾಗಿರುತ್ತದೆ. ನಿದ್ರಾಲಸ್ಯ ಹೆಚ್ಚಾಗಿರುತ್ತದೆ (ಕಲರೋ. ೭೫). [ಸಂ.]

ನಿದ್ರಾಲಾಪ (ನಾ). ನಿದ್ರೆಯಲ್ಲಿ ಮಾತನಾಡಿಕೊಳ್ಳುವ ಅಭ್ಯಾಸ; ಕನವರಿಕೆ : "ನಿದ್ರೆಯಲ್ಲಿ ಮಾತನಾಡಿಕೊಳ್ಳುವ ಅಭ್ಯಾಸ; ನಿದ್ರಾಲಾಪ" (Somniloquy. ಇಂಕನಿ). [ಸಂ.]

ನಿದ್ರಾಲಿಂಗನವಿಮುಖ (ನಾ). ನಿದ್ರೆಯಿಂದ ಎಚ್ಚೆತ್ತವನು : ನೇಸರ್ ಮೂಡುವುದುಂ ಪಟುಪುಣ್ಯಪಾಠಕಸಮುಚ್ಚಾರ್ಯಮಾಣ ಮಂಗಳವಚನರಚನಾಸಮುಕೃಷ್ಟಶ್ಲಥಬಾಹು ನಿದ್ರಾಲಿಂಗನವಿಮುಖನಾಗಿ ಸಜ್ಜೆಯಿಂದೆಟ್ಟು (ಶಾಂತಿಪು. ೮-೧೧೪ ವ). [ಸಂ.]

ನಿದ್ರಾಲು, ನಿದ್ರಾಳು (ಗು). ೧. ನಿದ್ರೆಯಲ್ಲಿರುವ ; ನಿದ್ರಿಸುವ. ೨. ಆಲಸ್ಯಭಾವವುಳ್ಳ ; ಸೋಮಾರಿಯಾದ. **ನಿದ್ರಾಳು :** (ನಾ). ೩. ನಿದ್ರೆಯೇ ಸ್ವಭಾವವಾಗಿ ಉಳ್ಳವನು : "ಸ್ವಪ್ನಕ್, ಶಯಾಳುಃ, ನಿದ್ರಾಳುಃ-೩ ನಿದ್ರೆಗೈಯುವ ಸ್ವಭಾವವುಳ್ಳವನ ಹೆಸರುಗಳು" (ಸಿದ್ಧಾಂತಿ. ೩೩೧) ; ಕಾಳುನುಡಿಯಿನಿತೇಕೆ ನೀವ್ ನಿದ್ರಾಳುವಾಗಿರ್ದವನನೆಬ್ಬಿಸಲಾಜದವರು (ತೊರರಾ. ಪರಿ. ೬೯೯-೧). [ಸಂ.]

ನಿದ್ರಾಲೋಲ (ನಾ). ನಿದ್ರೆಯಲ್ಲಿ ಸುಖಿಸುವವನು ; ಸುಖದಿಂದ ನಿದ್ರಿಸುತ್ತಿರುವವನು : ಆ ವಿಷಯೆ . . . ನಿದ್ರಾಲೋಲನಾಗಿ ಮಲಗಿಹ ಚಂದ್ರಹಾಸನಂ ಕಂಡು ಸೈವೆಜಗಾದಳು (ಜೈಮಿಭಾ. ೩೦-೧೯). [ಸಂ.]

ನಿದ್ರಾವಾತರೋಗ (ನಾ). ನಿದ್ರೆಯನ್ನುಂಟುಮಾಡುವ ಒಂದು ಬಗೆಯ ವಾತರೋಗ : ಎಲ್ಲ ಕಡೆ ಹರಡಿದ್ದ ಭಯಂಕರ ನಿದ್ರಾವಾತರೋಗವನ್ನು (ಸ್ಲೀಪಿಂಗ್ ಸಿಕ್‌ನೆಸ್) ತಡೆಗಟ್ಟಲಾಗಿದೆ (ಕವಿಕೋ. I, ೬೧). [ಸಂ.]

ನಿದ್ರಾವಿದ್ರಾವಣ (ನಾ). ನಿದ್ರೆಯನ್ನು ಪರಿಹರಿಸುವವನು : ನಿದ್ರಾವಿದ್ರಾವಣನ ಲೋಚನದ್ವಯರಸನದಂತೊಡನೊಡನೆ ಮಾಣ್ಬುದು ಮಶನಿಘೋಷಂ ಮನದೊಳ್ ನಿಶ್ಶಂಕನಾಗಿ (ಶಾಂತಿಪು. ೬-೪೦ ವ). [ಸಂ.]

ನಿದ್ರಾವ್ಯಸನ (ನಾ). ನಿದ್ರೆ ಮಾಡಬೇಕೆಂಬ ಆಸಕ್ತಿ : ಎಸಲು ಸಮ್ಮೋಹನದ ಶರ ಪಸರಿಸಿತು ಬಲದಲಿ ಬಹಳ ನಿದ್ರಾವ್ಯಸನ (ಕುಪ್ಯಾವಿ. ೮-೮೨). [ಸಂ.]

ನಿದ್ರಾವ್ಯಾಕುಲ (ನಾ). = ನಿದ್ರಾವ್ಯಸನ : ಆ ಕಮಲಜನ ತುರಗ ನಿದ್ರಾವ್ಯಾಕುಲದಿ ಮಲಗಿರಲು ಕಂಡು (ನಳಚ. ೨-೧೫). [ಸಂ.]

ನಿದ್ರಾಸಕ್ತ (ನಾ). ನಿದ್ರೆಯಲ್ಲಿ ಆಸಕ್ತನಾದವನು : ಸರಳ ಸೊಕ್ಕವ ಗಡಿಸಿ ಸಲೆ ಮೈಮಱೆದನಿತ್ತಲು ದ್ರೋಣ ರಥದಲಿ ಪರಮನಿದ್ರಾಸಕ್ತ [ಪಾಠಾಂ. ಗುಪ್ತ]ನಾದನು ತನ್ನ ಮಗ ಸಹಿತ (ಕುಪ್ಯಾವಿ. ೮-೮೬). [ಸಂ.]

ನಿದ್ರಾಹವ (ನಾ). ನಿದ್ರೆಯಲ್ಲಿ ಮಾಡುವ ಕಾಳಗ : ಕೊಂದನು ಶ್ವಾಸದಲಿ ಕೆಲಬರು ಸಂದರಾಗುಳಿಕೆಯಲಿ ಕೆಲಬರು ನಿದ್ರಾಹವದಲಳಿದರು ಗಣನೆಯಿಲ್ಲದಕೆ (ತೊರರಾ. ಪರಿ. ೭೦೦-೧). [ಸಂ.]

ನಿದ್ರಾಳು 'ನಿದ್ರಾಲು' ನೋ.

ನಿದ್ರಿತ (ಗು). ಮಲಗಿದ ; ನಿದ್ರಿಸಿದ. [ಸಂ.]

ನಿದ್ರಿಸು (ಕ್ರಿ). ನಿದ್ದೆಮಾಡು ; ಮಲಗು : ಕುಸಿದಂ ರಿಪುವಿಜಯ[ದೆ] ನಿದ್ರಿಸಿದಂ ಕಂಡೆಂದಿನಂದಮಂ ತಪ್ಪಿದನಾಳ್ವೆಸಕಗಿಯೆ ನುಡಿದನೆಂಬೀ ಪಿಸುಣನಣಂ ಕೇಳ್ದೆನಿಲ್ಲ ಬೀಡಿನೊಳವನಾ (ಪಂಪಭಾ. ೭-೪೨); ಪುಳಿಂದರು ಬಳಸಿ ಬೇಂಟೆಯನೆಯ್ದಿ ಬನದೊಳು ತೋಹಿನಲ್ಲಿರ್ದು ಕಿಱುದು ನಿದ್ರಿಸಲಲ್ಲಿ ರುದ್ರನ ಕುಱುಪುವೆರಸಿ ತಪಸ್ವಿವೇಷಂ ಮೆಱೆಯೆ ಶಿವನೆಯಿತಂದು (ಬಸಪು. ೧೮-೩) ; ಮಱೆಪೊಂದದೆಳ್ಳಱದ ಕಣ್ದೆಱೆಯದ ನಿದ್ರಿಸದ ಬೆರೆಯದಗಲದ ಕಣ್ಣಂ ಪೊಱಸೂಸದೊಳಗಿರದ ಸಯ್ವೆಱಗಿನ ಸಮರಸದ ಭಾವಮೇಂ ರಂಜಿಸಿತೋ (ಶಬಶಂ. ೨-೧೦೪) ; ಒಮ್ಮೆಲೆ ನಾನು . . . ನಿಶ್ಚಿಂತೆಯಿಂದ ನಿದ್ರಿಸುತ್ತಿದ್ದ ನಿಮ್ಮನ್ನು ಕಂಡೆ (ಮುಂಗಾಮು. ೧೯). 'ನಿದ್ದಿಸು' ಪರಾ. [ನಿದ್ರೆ+-ಇಸು$_3$]

ನಿದ್ರೆ (ನಾ). ೧. ಎಚ್ಚರವಿಲ್ಲದಿರುವ ಸ್ಥಿತಿ ; ನಿದ್ದೆ : ಅಂತಿಱುವಾಗಳ್ ಕೆಲವುದಿವಸಂ ಕಾದು ಪಿರಿದುಂ ಪಯಣಂ ಬಂದು ಬಟಲ್ದು ಕೋರೈಸಿ ನಿದ್ರೆಗೆಯ್ದುವರ್ ತೊಟ್ಟನೆ ನಿದ್ರೆಯಿಂದೆಟ್ಟತ್ತು (ಗದಾಯು. ೯-೩೨ ವ) ; ಪಸಿವಿಂಗೆ ತೃಷೆಗೆ ನಿದ್ರೆಗೆ ಬಿಸಿಲ್ಲೆ ಸೀತಕ್ಕೆ ತಮಗೆ ಯತ್ನಂ ಮಾಟ್ಪಿಂತು ಸದಾ ಪ್ರಯತ್ನಮಂ ಭವ್ಯಸಮಿತಿ ನಿಜಸಮಯಿಗೊಲ್ದು ಮಾಟ್ಪಂ ನಿಚ್ಚಂ (ಸಮಸ. ೪-೭೨) ; ಶ್ವಾನನ ನಿದ್ರೆ ಅಜ್ಞಾನಿಯ ತಪದಂತೆ ಆಯಿತಯ್ಯಾ ಎನ್ನ ಮತಿ (ಬಸವ. ೨೮೦) ; ದೈವದ ನೆಲೆಯನಱಿಯದವಂಗೆ ದಿಟವಿದು ತಿಳಿಯೆ ಬಾರದು ನಿದ್ರೆ (ಕುಪ್ಯಾಉ. ೩-೩) ; ನಿದ್ರೆಯಿನಾಗಳೊಂದಿರಲವಂ ಮಹೀಪತಿಯ ವಾಜಿ ಬಂದು ತುಳಿಯಲ್ (ಹಾಲಾಸ್ಯ. ೩-೮-೨೧) ; ಅವಳ ಕೆಲಸ-ಬೊಗಸಿ, ಊಟ-ಉಪಚಾರ, ನಿದ್ರೆ-ಜಾಗರಣೆ ಮೊದಲಾದುವುಗಳು ತನ್ನ ಸಲುವಾಗಿ ಗಂಡನ ಸುಖಕ್ಕಾಗಿ (ಕನ್ನಜಾ. ೧೧೯). ೨. ಆಲಸ್ಯ ; ಸೋಮಾರಿತನ : ನಿದ್ರೆಯಿದ್ದೆಡೆಯಲ್ಲಿ ಬುದ್ಧಿಯೆಂಬುದಿಲ್ಲ ನೋಡಾ ಕಾಯವೊಂದೆಸೆ ಜೀವವೊಂದೆಸೆ ಗುಹೇಶ್ವರಲಿಂಗ ತಾನೊಂದೆಸೆ (ಅಸಚಂ. ೨೬೧-೧೧೮೬). ೩. [ಕಾವ್ಯಮೀ] ಸಂಚಾರಿಭಾವಗಳಲ್ಲಿ ಒಂದು : ಚಿಂತೋಗ್ರತೇಷ್ಯಾಧೃತಿ ನಿದ್ರಾವೇಗ . . . ಇಂತೆಯ್ದೆ ಸಂಚಾರಿಭಾವಂ (ಕಾವ್ಯಾವ. ೭೮೫) ; ನಿದ್ರೆ ಧೃತಿ ತರ್ಕ . . . ಅಪಸ್ಮಾರವೆಂಬ ಮೂವತ್ತು ಮೂಱು ಸಂಚಾರೀಭಾವಂಗಳಿಂ ಪರಿವರ್ಧಿಸಿ (ವಿವೇಕ. ೨೨೭); "ಮನಃಸಂಮೀಳನಂ ನಿದ್ರೆ" ; ಇದು ಜೊಂಪು. ಮೈಮುರಿಯುವುದು, ಆಗುಳಿಕೆ ಇವೆಲ್ಲ ಇಲ್ಲಿ ಉಂಟು (ಭಾರಮೀ. ೩೪೭). ೪. [ಯೋಗ]ಚಿತ್ತವೃತ್ತಿಗಳಲ್ಲಿ ಒಂದು : ನಿದ್ರೆ ಎಂದರೆ ಜಾಗ್ರತ್ಸ್ವಪ್ನಕಾಲಗಳಲ್ಲಿ ಬರುವ ಯಾವ ವಿಧ ಜ್ಞಾನವೂ ಇಲ್ಲದಿರುವ ಸ್ಥಿತಿ (ಹಿಂದಸಾ. ೧೦೪) ; ಪ್ರಮಾಣ, ವಿಪರ್ಯಯ, ವಿಕಲ್ಪ, ನಿದ್ರೆ, ಸ್ಮೃತಿ-ಈ ೫ ಅಂತಃಕರಣ ವೃತ್ತಿಗಳು (ಭಾರದ. ೧೨೭). 'ಸಂಚಾರಿಭಾವ' ಪರಾ. ೫. [ಜೈನ]ಒಂಬತ್ತು ಬಗೆಯ ದರ್ಶನಾವರಣೀಯಗಳಲ್ಲಿ ಒಂದು : ಧ್ಯಾನಪರಿಣತಪರಿಮಿತಪ್ರದೇಶನಿರ್ಜರಾದಿಕ್ರಿಯಾಕಲಾಪಕಲಿತನುಚಿತಕತಿಪಯಸಮಯಂಗಳಿನಾತ್ಮದ್ವಿಚರಮಸಮಯದೊಳ್ ನಿದ್ರಾಪ್ರಚಲೆಗಳಂ ಕಿಡಿಸಿ (ಆದಿಪು. ೧೦-೧೪ ವ) ; ಚಕ್ಷು ದರ್ಶನಾವರಣೀಯಂ . . . ನಿದ್ರಾ ನಿದ್ರಾನಿದ್ರಾ . . . ನವವಿಧಭೇದಮಪ್ಪ ದರ್ಶನಾವರಣೀಯಮುಮಂ (ಸುಕುಮಾ. ೩-೩೯ ವ); ಆತ್ಮನ ದರ್ಶನಶಕ್ತಿಯನ್ನು ಮುಚ್ಚುವ ಕರ್ಮವು ದರ್ಶನಾವರಣೀಯಕರ್ಮವೆನಿಸುವುದು. ಇದು ಚಕ್ಷು . . . ನಿದ್ರಾ, ನಿದ್ರಾನಿದ್ರಾ . . . ಎಂದು ಒಂಬತ್ತು ವಿಧವಾಗಿದೆ (ಜೈನಪ. ೩೩೬).

ನಿದ್ರೆ ಮಾಡು = ನಿದ್ರಿಸು ; ಮಲಗು : ಕೆಲವರಿಗೆ ಊಟ ಮಾಡಿದ ಕೂಡಲೆ ನಿದ್ರೆ ಮಾಡುವುದು ಅಭ್ಯಾಸ (ರೂಢಿ). ನಿದ್ರೆಹತ್ತು = ನಿದ್ದೆಹತ್ತು ; ನಿದ್ರೆಬರು : ಚಿಂತೆ ಪ್ರಾಪ್ತಿಯಾದ ಕಾರಣ ಆತಗೆ ನಿದ್ರೆ ಹತ್ತದೆ (ಮುಂಬಯಿ. ೫-೪೧). [ಸಂ. ನಿದ್ರಾ]

ನಿದ್ರೆಗೆಡು (ಕ್ರಿ). = ನಿದ್ದೆಗೆಡು : [ಅಂತು ಬೆಗಡುಗೊಂಡು ನಿಲಲುಂ ನಿತ್ತರಿಸಲುಮಾಱದೆ] ಗಾಳಿಗೊಡ್ಡಿದ ಸೊಡರಂತೆ ನಡುಗಿ . . . ತಳಾಱನಂತೆ ನಿದ್ರೆಗೆಟ್ಟು ಸಮ್ಯಕ್ತ್ವಚೂಡಾಮಣಿಗಿಂತೆಂದಂ (ಧರ್ಮಾಮೃ. ೧-೧೬೮). [ನಿದ್ರೆ+ಕೆಡು$_1$]

ನಿದ್ರೆಗೆಯ್, ನಿದ್ರೆಗೈ (ಕ್ರಿ). = ನಿದ್ದೆಗೆಯ್ : ಮಹೇಂದ್ರಸಿಂಹನೊರ್ವನೆ . . . ಪ್ರಿಯಂಗುಷಂಡಮೆಂಬ ವನಮನೆಯ್ದಿ ತದ್ವನಮಧ್ಯಸ್ಥಗೃಹದೊಳಿರುಳಿರ್ದು . . . ದೇವತೆಯ ಮುಂದೆ ನಿದ್ರೆಗೆಯ್ದೊಂ (ಪಡ್ಡಾರಾ. ೫೪-೧೨) ; ಅಂತಿಱುವಾಗಳ್ ಕೆಲವುದಿವಸಂ ಕಾದು ಪಿರಿದುಂ ಪಯಣಂ ಬಂದು ಬಟಲ್ದು ಕೋರೈಸಿ ನಿದ್ರೆಗೆಯ್ದುವರ್ ತೊಟ್ಟನೆ ನಿದ್ರೆಯಿಂದೆಟ್ಟತ್ತು (ಗದಾಯು. ೯-೩೨ ವ) ; ರಕ್ಕಸಿಯ ಮನೆಗೆ ಹೋಗಿ ನಿದ್ರೆಗೆಯ್ದು ಬಂದೆನೆಂದರೆ ಇದ ಕಂಡು ಬೆಱಗಾದೆ (ಅಸಚಂ. ೭-೨೭); ಪುರದುರ್ಗಂಗಳ ಬಲ್ಮೆಮಾಡದೆ . . . ಆತುರದಿಂದುಂಡತಿನಿದ್ರೆಗೆಯು

ಮದನಂಗಾಳಾಗಿಹಂ ಲೋಕದೊಳ್ ದೊರೆಯೇ ನೊಕ್ಕಿದ ಕೋಣನ್ಗೆ (ನೋಮೇಶ. ೫೫) ; ಬಡಮುನಿಸು ಇಂತೊಂದು ಬಾವಿಯು ನುಡಿಯಲಿಲ್ಲದಹಂಗೆ ಹದುಳಿಸಿ ಕಡೆಯೊಳಾಂ ತಿಳುಹಿದಪೆನೆಲೆ ನೀ ನಿದ್ರೆಗೆಯ್ಸುತಿರು (ಬಸಪು. ೪೬-೨೨) ; ನಿದ್ರೆಗೆಯ್ದಿರೆ ಭೂಪಾಲಂ ರುದ್ರಜಂಗಮವೇಷದಿಂ (ಹಾಲಾಸ್ಯ. ೧-೪-೫೦). **ನಿದ್ರೆಗೈ** : ಶರಣ ನಿದ್ರೆಗೈದಡೆ [ಪಾಕಾಂ.ಗೆಯ್ದಿರೆ] ಜಪ ಕಾಣರೋ ಶರಣನೆದ್ದು ಕುಳಿತರೆ ಶಿವರಾತ್ರಿ ಕಾಣರೋ (ಒಸಪ. ೪೬೨) ; ನಿದ್ರೆಗೈದರನಿಜವುದೇನಿದು ಪಂಥನೇ ಪೌರಾಣಮಾರ್ಗದಲಿ (ಕುವ್ಯಾಗ. ೯-೧೧) ; ನಿದ್ರೆಗೈವವನೊಡಲ ಧರ್ಮವ ಹೊದ್ದನೆಂದಡೆ ಕರಣವನು ನಿಡುನಿದ್ರೆಗೈಸಿ ನಿಜಾನುಭವದಲಿ ನಿಂದ ವರಯೋಗಿ (ನಿಭಾಗ. ೬-೧೫೯-೨೬) ; ನಿದ್ರೆಗೈದಿಂದುಹಾಸನ ಕಂಚುಕದ ಕೊನೆಯೊಳಿರ್ದ ಪತ್ರವನೋದಿಕೊಂಡು ಚದುರಿಂದದಂ ತಿರ್ದಿ (ಜೈಮುಭಾ ೩೦ ಸೂಚನೆ). 'ನಿದ್ದೆಗೆಯರ್' ಪರಾ. [ನಿದ್ರೆ+ಕೆಯ್[1]]

ನಿದ್ರೆಗೆಯ್ಸು (ಕ್ರಿ). ನಿದ್ರೆ ಮಾಡಿಸು : ಪರಿಚತಚಕ್ರವಾಕಮಿಥುನಂಗಳನೊಯ್ಯನೆ ನಿದ್ರೆಗೆಯ್ಸುವಳ್ (ಕಾದಂಉ. ೨೪). [ನಿದ್ರೆಗೆಯರ್+-ಸು[1]]

ನಿದ್ರೆಗೇಡು(ನಾ). = ನಿದ್ದೆಗೇಡು : ಬರೀ ಗುಲ್ಲು, ನಿದ್ರೆಗೇಡು (ಗಾಡ). [ನಿದ್ರೆ+ಕೇಡು]

ನಿದ್ರೆಗೈ 'ನಿದ್ರೆಗೆಯರ್' ನೋ.

ನಿದ್ರೆತಿಳಿ (ಕ್ರಿ). = ನಿದ್ದೆದಿಳಿ : ನಿದ್ರೆತಿಳಿದು ಕಣ್ದೆಱೆದು ನೋಡಿ ಬೆಚ್ಚಿ ಬೆಗಡುಗೊಂಡು (ಬಸರ. ೪-೨೪) ; ಸತಿ ನಿದ್ರೆತಿಳಿದದ್ದು ನಡನಡುಗಿ ಹಾ ಎನುತೊದಲುತಿಹ ನಿಡುದನಿಗಳಂ ಕೇಳಿ ಪತಿಯೆದ್ದೊಡನೆ ರಕ್ತಂ ಸುರಿವ ಕರವಂ ಸರ್ಪನಂ ಕಂಡು (ಬಸಪು. ೪೬-೨೨) ; ಸರಸರನೆ ಸತಿ ಗೊಪೆಯನಗೆವುದ್ಧರದ ಪನಿಯಂ ಕೇಳಿ ಧಿಕ್ಕನೆ ತರುಣನಾಗಳೆ ನಿದ್ರೆತಿಳಿದದ್ದು (ಬಸಪು. ೪೬-೪) ; ನಿದ್ರೆ ತಿಳಿದೇಳ್ವತೋಲುನ್ನಿದ್ರೇಕ್ಷಣೆಯೆಳ್ದು ಚೌಡದೇವನ ಪದಭಾಸ್ವದ್ರಾಜೀವಕೆ ಮನಂಯೆ (ಸ್ವಪವಿ. ೨೧-೪೨). [ನಿದ್ರೆ+ತಿಳಿ[1]]

ನಿದ್ರೋಪಾಸಕ (ನಾ). ನಿದ್ರೆಯನ್ನು ಅಪೇಕ್ಷಿಸುವವನು ; ನಿದ್ರೆಯಲ್ಲಿ ಆಸಕ್ತನಾದವನು : ತಗುಣಿ, ಸೊಳ್ಳೆ ಮೊದಲಾದವು ನಿದ್ರೋಪಾಸಕರನ್ನು ಚೆನ್ನಾಗಿಯೇ ಬಾಧಿಸುತ್ತಿದ್ದಿರಬೇಕು (ಸಂಟರು. ೪೨). [ಸಂ.]

ನಿಧತ್ತಿ (ನಾ). [ಜೈನ] ಉದಯಾವಳಿಯಲ್ಲಿ ಇರಿಸಲೂ ಮತ್ತು ಬೇರೆ ಕರ್ಮಪ್ರಕೃತಿಯೊಂದಿಗೆ ಸಂಕ್ರಮಿಸಲೂ ಆಗದಿರುವ ಕರ್ಮಪ್ರಕೃತಿ ; ℙ ಬಂಧ, ಉತ್ಕರ್ಷಣ, ಸಂಕ್ರಮಣ, ಅಪಕರ್ಷಣ, ಉದೀರಣಾ, ಸತ್ತ್ವ, ಉದಯ, ಉಪಶಮ, ನಿಧತ್ತಿ ಮತ್ತು ನಿಕಾಚನ ಎಂಬ ಹತ್ತು ಕರ್ಮಪ್ರಕೃತಿಗಳಿವೆ. ಇವಕ್ಕೆ ದಶಕರಣವೆಂದೂ ಹೆಸರು : ಈ ಕರ್ಮಪ್ರಕೃತಿಗಳೆಲ್ಲ ವಿಶ್ವದಲ್ಲಿ ಬಂಧ (ಆತ್ಮನಿಗೆ ಕಟ್ಟಬೇಕು) . . . ನಿಧತ್ತಿ (ವೃದ್ಧಿ, ಕಡಿಮೆ ಆಗದೆಯೇ ಉದೀರಣಾ ಅಥವಾ ಉಪಶಾಂತವಾಗುವುದು), ನಿಕಾಚನ (ಉದೀರಣಾ, ಸಂಕ್ರಮಣ, ಉತ್ಕರ್ಷಣ, ಅಪಕರ್ಷಣ ಆಗದಿರುವುದು) ಈ ಹತ್ತು ಅವಸ್ಥೆಗಳಲ್ಲಿ ಇರುತ್ತವೆಂದು ನೇಮಿಚಂದ್ರಸಿದ್ಧಾಂತಚಕ್ರವರ್ತಿಗಳು 'ಗೊಮ್ಮಟಸಾರ'ದಲ್ಲಿ ಹೇಳುವರು (ಜೈಸಪ. ೩೬೯). [ಸಂ./ℙ ಪಾಣಿನಿಯ ಸೂತ್ರಗಳ ಪ್ರಕಾರ ಈ ಶಬ್ದದ ಸ್ವರೂಪ 'ನಿಹಿತಿ'ಎಂದಾಗಬೇಕು]

ನಿಧನ[1] (ನಾ). ಹೂಳಿಟ್ಟ ದ್ರವ್ಯ ; ನಿಧಿ ; ನಿಧಾನ : ಜ್ಯೋತೀಯ ಎತ್ತಿ ನೀತೀಲಿ ಕೈಮುಗಿದು ನೀತ್ಯುಳ್ಳ ಕಂದಯ್ಯಗೆ ನಿಧನಾವ ಹೆಜ್ಜಾಲಿ ಎಂದು ಜಗಜ್ಯೋತಿಗೆ ಕೈಯ ಮುಗಿದೇವು (ನನ್ನೂರು. ೧೯). 'ನಿಧನವೆತ್ತು' ಪರಾ. [<ಸಂ. ನಿಧಾನ]

ನಿಧನ[2] (ನಾ). ೧. ನೆಲೆ ; ಆಶ್ರಯಸ್ಥಾನ : ಆನಿಧನನಿಧನನಿಧನೋದ್ಭವ ಶಿವ ಶರ್ವಶ್ಚ ಎಂದನುತ (ವೀಕೃಪು. ೬-೪-೩೭). ೨. ವಂಶ; ಕುಲ ; ಮನೆತನ. ೩. ಅಂತ್ಯ ; ಕೊನೆ ; ಮುಕ್ತಾಯ. ೪. ಸಾವು ; ಮರಣ : "ನಿಧನಂ, ನಾಶಃ, ಮೃತ್ಯುಃ, ಪರಿಣಾಂ . . . ದೀರ್ಘನಿದ್ರಾ—ಈ ೧೨ ಸಾವು" (ಹಲಾಯು. ೧೦೩-೬); ಧನಮೆಂಬುದು ವಿಭುಗೆ ಯಶೋಧನಮದನಿಂಬುಪಿ ಕಳಿಪಿ ಕಡೆ ಮಾಡಿರ್ದಾತನ ಪಡೆದ ಧನಮದೇತಱ ಧನಮದಱಂ ನಿಧನಮೆಯ್ದಿದರ್ ಪಲರರಸರ್ (ಆದಿಪು. ೧೪-೭೪) ; ಓಲೆಗಾಣುತ ಭರತ . . . ಹಾಳುಮೆಜಿವಾ ಪುರವ ಹೊಗುತವೆ ಕೇಳಿ ಪಿತೃನಿಧನವನು ಹಲುಬುತ ಗೋಳುಗುಟ್ಟುತ ಬಂದು ಕೈಕೆಯ ಕೇಳಿದನು ಹದನ (ಕಾತಿಂಪು. ೪-೧೦) ; ಪಿತೃದೇವನಾ ದೈನ್ಯಮುಂ ದುಃಖಮುಂ ನಿಧನಮುಂ ಕೇಳ್ದನ್ನ ರಿಕ್ತಮತಿ ತತ್ತರಿಸಿತು (ಕ್ರೀರಾಪು. ೧೩೦-೫೦೭) ; ಪ್ರಭುಗಳು ರಾಜಧಾನಿಗೆ ಬಂದುಪೂ ರಾಜಮಾತೆಯವರ ನಿಧನ ವೃತ್ತಾಂತವೂ . . . ಬೊಪ್ಪಣನಿಗೆ ತಿಳಿದು ಬಂದುವು (ಶಾಂತಲಾ. ೧೭೯) ; ಕೌಲ್ಟರನಂತಹ ಪ್ರತಿಭಾನ್ವಿತ ಸಸ್ಯವಿಜ್ಞಾನಿಯೊಬ್ಬನ ನಿಧನದಿಂದ . . . ವಿಜ್ಞಾನಜಗತ್ತಿಗೇ ಅಪಾರನಷ್ಟವಾಗಿದೆ (ಸಸ್ಯಕ. ೪೧). ೫. ನಾಶ : ನಿಧನಮನೆಯ್ದಿಸಿದಂ ಸುಗುಣಧನಂ ತತ್ಕೃತ್ಯಕಸಾಧನಂ ವಿಜಿತಾಂಪ್ರಧನಂ ಶಕ್ಷುರಜಕ್ಷುರವಧಿಕೇವಳದರ್ಶನಾವರಣಮಂ ನಾಲ್ಕಂ (ಚಂದ್ರಪು. ೧೪-೭೫) ; ವೈರಿಪಾಂಚಾಲಕರೊಳ್ಕಿವರು ಧಾರುಣೀಶ್ವರರಸುವ ಬಿಟ್ಟರು ಚಾರುಚಾಪಳಚಾತುರಂಗದ ನಿಧನನಿರ್ಣಯವ ಆರು ಬಲ್ಲರು (ಕುವ್ಯಾಕ. ೧೧-೨೫). ೬. ಸಾಮಗಾನದ ಐದು ಭಾಗಗಳಲ್ಲಿ ಒಂದು : ಉದ್ಗೀಥ, ಪ್ರಸ್ತಾವ, ಹಿಂಕಾರ, ಪ್ರತಿಹಾರ, ನಿಧನವೆಂಬ ೫ ಪ್ರಕಾರವಾಗಿ ಸಾಮಗಾನವು . ಭಾಗಿಸಲ್ಪಟ್ಟಿರುವುದು (ಹಸಾಸಾ. ೬-೧೪೪ ಶಾತ್ಪರ್ಯ). ೭. ಅನಿರುದ್ಧರೂಪನಾದ ಪರಮಾತ್ಮ : ಸಂಹಾರಕರ್ತನಾದುದರಿಂದ ನಿಧನನೆಂದು ಸಂಕರ್ಷಣನಿಗೆ ಹೆಸರು (ಹಸಾಸಾ. ೬-೧೪೪ ಶಾತ್ಪರ್ಯ). ೮. ಬಡವ ; ದರಿದ್ರ. ೯. [ಜ್ಯೋತಿ] ಜಾತಕದಲ್ಲಿ ಲಗ್ನದಿಂದ ಎಂಟನೆಯ ಸ್ಥಾನ : ಶಶಲಕ್ಷ್ಮಂ ಕ್ಷೀಣಂ ದ್ವಾದಶದೊಳ್ ನಿಲೆ ಜನ್ಮ ಲಗ್ನದೊಳ್ ನಿಧನದೊಳಕ್ಕುಭರಿರೆ ಕೇಂದ್ರದಿಂ ತೊಲಗೆ ಶುಭಗ್ರಹ ಮುಂದೆ ಸಾಯ್ವುನ್ಮಾ ಪುಟ್ಟಿದವಂ (ಜಾತಕ. ೬-೫) ; ನಿಧನದೊಳಧಿಕ ಕ್ಷೀಣಂ ವಿಧು ನಿಲೆ ರವಿತನಯಸುದಯದೊಳ್ ಹತ್ತನೆಯೊಳ್ ರುಧಿರಂ ನಾಲ್ಕನೆಯೊಳ್ ರವಿ ನಿಧನಂ ಮನುಜಂಗೆ ಲಗುಡಪಾತದಿನಕ್ಕುಂ (ಜಾತಕ. ೨೬-೧೧). [ಸಂ.]

ನಿಧನರಹಿತ (ನಾ). ಸಾವಿನಿಂದ ದೂರವಾದವನು ; ಅಮರ : ನಿಧನರಹಿತನೆ ಕೇಳ್ವಡೆನ್ನಾಶ್ರಯದೊಳಿರ್ದು ಬುಧರೊಡರ್ಬದ ಕಾರಣದೊಳಾದುದ್ಯಯ ಗೋವಧೆ (ವೀಕೃಪು. ೪-೨-೧೨). [ನಿಧನ[2]+ರಹಿತ]

ನಿಧನವೆತ್ತು (ಕ್ರಿ). (ಹೂಳಿಟ್ಟ) ನಿಧಿಯನ್ನು ಎತ್ತಿ ತೆಗೆ,—ಹೊರದೆಗೆ : ಉಬ್ಬಿದು ವಧೂಸಂಕುಳಮೋಳುಳಿಯಂ ಪೊಜಮುಟ್ಟು ಪೋಪುದಂ ಪಜಗೆ ಕರಂಗಿಟಾದಾಗಿ ನಿಧನವೆತ್ತಿದ ಕುಟುಂಬಿಯಂತಿರ್ದತ್ತು ಕನ್ಸ ಪೂಗೊಳನಾಗಳ್ (ಚಂದ್ರಪು. ೬-೧೪೮). [ನಿಧನ[1]+ಎತ್ತು[1]]

ನಿಧನವೈದಿಸು (ಕ್ರಿ). ಸಾವನ್ನುಂಟುಮಾಡು ; ಕೊಲ್ಲು ; ಸಾಯಿಸು : ಬುಧರೊಳಗೆ ಹಗೆಗೊಳುವ ಬುಧರಂ ನಿಧನವೈದಿಪ ಬುಧರ ನೇಪ . . . ಬುಧರಂ ವಿಧಿಗೊಪಿಪ ಬುಧಗೀವರಂ ಕವರ್ಮಧಮ ಭೂಪರಿಗಂಟಿದಿಹುದೆ ವಿನಾಶಕರವೆಂದ (ಕುವ್ಯಾಉ. ೬-೫೬). [ನಿಧನ[2]+ಐದಿಸು(<ಎಯ್ದಿಸು)]

ನಿಧನಸ್ಥ (ನಾ). [ಜ್ಯೋತಿ]ಎಂಟನೆಯ ಸ್ಥಾನದಲ್ಲಿ ಇರುವವನು : ರವಿ ಲಗ್ನಾವಸಥಕ್ಕೆ . . . ನಿಧನಸ್ಥನಾಗೆ ವಿಕಲಾಕ್ಷಂ ಸ್ವಲ್ಪಪುತ್ರಾನ್ವಿತಂ (ಜಾತಕ. ೧೪-೩). [ಸಂ.]

ನಿಧನೋದ್ಭವ (ನಾ). ಜಗತ್ತಿನ ಲಯವನ್ನುಂಟುಮಾಡುವವನು; ಲಯಜನಕ; ಲಯಕಾರಣ: ಅನಿಧನ ನಿಧನ ನಿಧನೋದ್ಭವ ಶಿವ ಶರ್ವಶ್ಚ ಎಂದೆನುತ ಪರಮಾತ್ಮ ಮಹೇಶ್ವರ ಮಹಾಕೇಜ ಎನುತ (ವೀರೇಶ. ೬-೪-೨೬). ☞ ಪ್ರಪಂಚದ ಸೃಷ್ಟಿ, ಸ್ಥಿತಿ, ಲಯಗಳಿಗೆ ಪರಮೇಶ್ವರನೇ ಕಾರಣನೆಂಬುದು ಶೈವಸಿದ್ಧಾಂತ.

[ನಿಧನ$_2$+ಉದ್ಭವ]

ನಿಧಾನ (ನಾ). ೧. ಹುದುಗಿಟ್ಟ ಧನ,—ದ್ರವ್ಯ; ನಿಕ್ಷೇಪ: ಪಿರಿದಪ್ಪ ನಿಧಾನಂ ಸಾರ್ದುರೆ ಮನುಜನ ಪುಣ್ಯದುದಯದಿಂ (ಸಮಪ. ೪-೫); ನೆಲನನಗುಬ್ಬರೆಲ್ಲಂ ನಿಧಾನಮಂ ಕಾಣ್ಬರೇ (ಧರ್ಮಾಮೃ. ೫-೨೬೯); ನೆಲದ ಮಜಿಯ ನಿಧಾನ[ಪಾಠಾಂ. ನಿಕ್ಷೇಪ]ಪಂತೆ ಫಲದ ಮಜಿಯ ರುಚಿಯಂತೆ (ಪುಹಾದೇ.ಬ. ೧೦-೨); ಮೂಡುವ ನೀಡುವ ಭಕ್ತನ ಕಂಡರೆ ನಿಧಿ ನಿಧಾನವ ಕಂಡಂತಾಯಿತ್ತು (ಬಸವ. ೬೫೮); ಬಡನಂ ನಿಧಾನಮಂ ಕಂಡಂತೆ ಹರುಷಮಂ ತಾಳ್ದು (ಪುಣ್ಯಾಸ್ರ. ೨-೮ ಪ); ನೆಲನ ಮಜಿಯ ನಿಧಾನ ನುಗಿಲೊಳಡಗಿದ ಮಿಂಚು ಸಲೆ ಭಸ್ಮದೊಳಗಡಗಿ ತೋರ್ಪ ಹುತವಹನವೊಲು ನಲಿದು ಶಿವಶರಣರಿರ್ಪರು (ಲಿಂಚಿಂ. ೩೮-೧೫೭); ಇದೋ ನಿಧಾನವನ್ನು ಎಡವಿ ಕಂಡ ಹಾಗೆ, ಸಮಯ ಒದಗಿ ಬಂದಿದೆ! (ಬದುಕಿ. ೬೭). ೨. (ಚಿನ್ನ, ಬೆಳ್ಳಿ ಮೊದಲಾದ ನಿಧಿಯನ್ನು) ಹೂಳಿಟ್ಟ ಸ್ಥಳ ಅಥವಾ ಪಾತ್ರೆ. ೩. ಅಷ್ಟಭೋಗಗಳಲ್ಲಿ ಒಂದು; ಸಂಪತ್ತು; ಐಶ್ವರ್ಯ: "ಸೇವಧಿಃ, ನಿಧಿಃ—ಈ ೩ ನಿಧಾನಂ" (ಹಲಾಯು. ೧೪-೮೨); ನಿಧಾನಮನೀಡಾಡುವಂತೆ ಕೂಸಂ ಗಂಗೆಯೊಳೀಡಾಡಿ ಬಂದಳ್ (ಪಂಪಭಾ. ೧-೯೫ ಪ); ಶ್ರೀಮತ್ ಕನ್ನಯ್ಯಂ ಕದಂಬಳಗೆಸಾಯಿರಮುಮಂ ನಿಧಿ ನಿಧಾನ ನಿಕ್ಷೇಪ ಸಹಸ್ರದಣ್ಣಂ ಮೊದಲಾಗಿ ದುಷ್ಟನಿಗ್ರಹ ವಿಶಿಷ್ಟಪ್ರತಿಪಾಳನಂಗೆಯ್ದು (ಎಕ. XI, ಚತ್ರದು. ೪೯-೧೯; ೪೯) ; ನಿಧಾನ ತಪ್ಪಿ ಬಂದರೆ ಒಲ್ಲೆನೆಂಬವರಿಲ್ಲ (ಬಸವ. ೮೫೪). ೪. ಆಶ್ರಯಸ್ಥಾನ; ನೆಲೆ: "ನಿಜಾಗಾರಗಳೊಳಂ ನಿಧಾನದೊಳು ನೆಲೆ" (ಶಬ್ದಮಂ. ೧೦೭); ಅಧಿಕತರರಾಗದೀ ಧಿತಿ ನಿಧಾನಮೆನಲೆಸವ ಚಕ್ರಿಚರಣಾಂಬುಜವಾ ಮಧುಕೈಟಭಮದನುರ್ದನ ರುಧಿರಾರುಣಚಕ್ರಿಚರಣಮಂ ನೆನೆಯಿಸುಗುಂ (ಕಾದಂಪೂ. ೨೭) ; ಕೌಶ ಸಂಪತ್ತಿಗೆ ಕುಳಭವನಂ ಸಂತತಾನೂನದಾನಕ್ಕೆ ನಿಧಾನಂ (ವಿಜ. XVI, ೫೫-೧೧ ; ೧೦೬೩) ; ಅನತಿಶಯಗರ್ಭಸುಖಿಸುಜನನಿಧಾನಂ . . . ತನೂಭವಂ ನಿನಗೆ ಪುಟ್ಟುಗುಂ (ಸುಕುಮಾ. ೯-೧೧೦). ೫. (ಮಾಡಬೇಕಾದ) ಕೆಲಸ; ಕಾರ್ಯ: ತನ್ನನಿಕ್ಕಿ ನಿಧಾನವ ಸಾಧಿಸಲಜಯದ ಹಂದಿಗಳಿದ್ದು ಫಲವೇನು (ಜನ್ನಪ. ೪. ೪೦೧-೪೪೪). ೬. ತಡ; ವಿಳಂಬ; ಸಾವಕಾಶ; ಮನ ನುವಿಧಾನದಿಂದೈದುವಡೆ ಸ್ವಲ್ಪ ನಿಧಾನವಿರಲೆನ್ನೆದುರೊಳೆಂದನು ಭೀಮ ರಾಕ್ಷಸಗೆ (ಜಿನಭಾ. ೧೪-೧೧). ೭. ತಾಳ್ಮೆ; ಸಹನೆ: ನಿಧಿ ಇದ್ದರೂ ನಿಧಾನವಿರಬೇಕು (ಗಾದೆ). ೮. ನಿಶ್ಚಯ; ನಿರ್ಧಾರ; ದೃಢಸಂಕಲ್ಪ: ಇದು ನಿಧಾನವು ಭೀಮ ಪಾರ್ಥರಿಗಿದು ಮುಹೂರ್ತವು ವೀಳೆಯವ ತಾ ಕದನಜಯದ ವೀರಸೇನೆಯನಿಕ್ಕಿ ಕಳುಹೆಂದ (ಕುಮಾಸ. ೨-೫೦); ದೇವತೆಯು ಮೇಲಾಣೆ ವರವಸುದೇವನಂಘ್ರಿಗಳಾಣೆ ಮನುಮಥದೇವನಾಣೆ ನಿಧಾನವನು ಕೇಳಬಲೆ ನಿನ್ನಾಣೆ (ಕುಮಾಭಾ. ೬-೧೩). ೯. (?): ಉಂಡೆನ್ನ ಹಲಕಾಲಕಿಂದಿನಲುಂಡದೂಟ ಕಣಾ ನಿಧಾನವು ಖಂಡಪರಶುವಿನಾಣೆನುತ ನುದವೇಱುದನು ಭೀಮ (ಕುಮಾಭಾ. ೧೦-೨೫).

ನಿಧಾನವಾಗು=ತಡವಾಗು; ವಿಳಂಬಗತಿಯಿಂದ ಕೊಡಿರು: ಹುಟ್ಟುಹಾಕುವ ಜಾಗದಲ್ಲಿದ್ದ ಮನುಷ್ಯ . . . ನಿಧಾನವಾಗಿ ಬರುತ್ತಿದ್ದ (ಸುಹಾತ್ಮಾ. ೧೩೧) ; ಕಲ್ಲುಬಂಡೆಗಳಿಲ್ಲದ, ಆಳವಾಗಿಯೂ ನಿಧಾನವಾಗಿಯೂ ಹರಿಯುವಲ್ಲಿ ಮಾತ್ರ ನದಿ ಸಂಚಾರಯೋಗ್ಯವಾದುದು (ಸಸದಿ. ೧೯). [ಸಂ.]

ನಿಧಾನತ್ರಿವುಡೆ (ನಾ). ಯಕ್ಷಗಾನದ ವಾದನಪದ್ಧತಿಯಲ್ಲಿ ಪ್ರಚಲಿತವಿರುವ ಒಂದು ತಾಳಗತಿ: ತ್ರಿಶ್ರಜಾತಿ ತ್ರಿಪುಟತಾಳದಲ್ಲಿ ಬರುವ ಪ್ರತಿಯೊಂದು ಸಶಬ್ದ ಮತ್ತು ನಿಶ್ಶಬ್ದಕ್ರಿಯೆಗೂ ಎರಡೆರಡು ಅಕ್ಷರ ಕಾಲ ಕೊಡುವುದರಿಂದ ನಿಧಾನತ್ರಿವುಡೆಯಾಗುತ್ತದೆ (ಸಂಶೋಧ. ೧೬೦). 'ತ್ರಿಪುಡ' ಪರಾ. [ನಿಧಾನ+ತ್ರಿವುಡೆ(<ತ್ರಿಪುಡ)]

ನಿಧಾನಿ (ನಾ). ತಾಳ್ಮೆಯುಳ್ಳ ವ್ಯಕ್ತಿ: ಅನನು ತುಂಬಾ ನಿಧಾನಿ (ರೂಢಿ). [ನಿಧಾನ+-ಇ$_3$]

ನಿಧಾನಿಸು (ಕ್ರಿ). ೧. ಸಾವಕಾಶ ಮಾಡು; ತಡ ಮಾಡು: ಒಂದು ನಿಮಿಷ ನಿಧಾನಿಸಿ, ಅದಕ್ಕೆ ಲೆಖ್ಖ ಮಾಡಲು ಅವಕಾಶ ಕೊಡಿ (ಶಾಲೆಸು. ೫೦೭). ೨. ಆಲೋಚಿಸು; ವಿಚಾರ ಮಾಡು; ವಿಚಾರಿಸು: ಆ ನುಡಿಯ ಮಾರ್ಕೊಂದು ಶಿವಶಿವದೇನನಾಡಿದೆ ತಾಯೆ ನೀನೆಂದೂ ನಿಧಾನಿಸಲಜಲಸುಖಿಗಳು ಶಿವನ ಕರುಣದಲಿ (ಪ್ರಭುಲೀ. ೪-೨೬) ; ನಿಧಾನಿಸೆ ವೈದಿಕಾಂಗದಲಿ ಗುರುನಲಾ (ಕುಮ್ಯಾಸ. ೧೬-೬೫): ಮಗನೆ ಸಮಗ್ರಬಲ ನೀನಹೆ ನಿಧಾನಿಸಲಿಂದು (ಕುಮ್ಯಾದ್ರೋ. ೪-೪೨) : ದೇವ ನೋಡೀ ಸಂಭ್ರಮವು ತಾನಾನ ರಾಯರಲುಂಟು ಸೇನಾರಾವವಿದು ಲಯಸಾಗರದಲುಂಟೀ ನಿಧಾನಿಸಲು (ತೊರಾ. ೬-೨೦-೫೬) ; ಶರ್ಯಾತಿ ತಾಂ ತಲೆವಾಗಿ ರಾಜಿಯೊಳ್ ನಿಧಾನಿಸಲ್ಕೆಂದು ತನ್ನಾವಾಸಕ್ಕೆ ನಡೆತಂದು ಅರಸಿಗೀ ಕತೆಯಂ ಪೇಳ್ದಂ (ರಾಮಾಶ್ವ. ೬೬-೨೯). ೩. ನಿರ್ಧರಿಸು: ಹೊಜಗೊಳಗೆ ಹದನಿದು ನಿಧಾನಿಸಲಜಾಯೆನೆನ್ನಸುನಿಲಿ ಹೃದಯದ ಸೆಜೆ ಬಿಡದು ಶಿವಶಿವಯೆನುತ ಮಜುಗಿದನು ಧೃತರಾಷ್ಟ್ರ (ಕುಮ್ಯಾಸ. ೧೨-೬೯). ೪. ಎದುರಿಸು; ಪ್ರತಿಭಟಿಸು: ಇಂದಿನೀ ಮೋಹರದ ಮುದಿನಸದಳ ನಿಧಾನಿಸಲರಿದೆನಲು ಮನದೊಳಗೆ ನಿಶ್ಚೈಸಿದನು ಮುರವೈರಿ (ಕುಮ್ಯಾದ್ರೋ. ೪-೨೬). [ನಿಧಾನ+-ಇಸು$_3$]

ನಿಧಾನೆ (ನಾ). ನೆಲೆಯಾದವಳು; ಆಶ್ರಯ ನೀಡುವವಳು: ಕಲಶೀರವಾಣಿಯರ್ . . . ಕಾಯಜನಿಧಾನೆಯರ್ (ಜೈಮಿಭಾ. ೩೦-೩). [ಸಂ. ನಿಧಾನಾ]

ನಿಧಿ (ನಾ). ೧. ಅಷ್ಟಭೋಗಗಳಲ್ಲಿ ಒಂದು; ಸಂಪತ್ತು; ಐಶ್ವರ್ಯ: "ಸೇವಧಿಃ, ನಿಧಿಃ—ಈ ೩ ನಿಧಾನಂ" (ಹಲಾಯು. ೧೪-೮೨); "ನಿಧಾನಮದು ನಿಧಿ ಶೇವಧಿಯೆನಿಕ್ಕುಂ" (ಸುಂಗಂಗಾ.೧೬-೧೭); ನಿಧಿ ದೊರೆಕೊಳ್ವೊಡಂ ಕುಲಧನಂ ದೊರೆಕೊಳ್ವೊಡಂ (ಆದಿಪು.೧೨-೩೦); ಶ್ರೀಮತ್ ಕನ್ನಯ್ಯಂ ಕದಂಬಳಗೆ ಸಾಯಿರಮುಮಂ ನಿಧಿನಿಧಾನನಿಕ್ಷೇಪ ಸಹಸ್ರದಣ್ಣಂ ° ಮೊದಲಾಗಿ ದುಷ್ಟನಿಗ್ರಹವಿಶಿಷ್ಟಪ್ರತಿಪಾಳನಂಗೆಯ್ದು (ಎಕ. XI, ಚತ್ರದು. ೪೯-೧೯ ; ೪೯) ; ಭೋಗವಜಾಯದ ತರುಣನಂ ನಿಧಿಗೆ[ಪಾಠಾಂ. ತರಳನಂ ನಿಧಿಗೆ, ನಿಧಿಗೆ ತರುಣನಂ]ಕೂಡೆ ಹೃಪ್ತನಾಗಿ ತನ್ನಂ ಕೊಡುವುದೆಂಬಾಗಳ್ (ಜಡಶಾ. ೧೦-೧೦) ; ಸುರಧೇನುವೊಸೆದು ಬಂದಂತಿರೆ ನಿಧಿ ಬಂದಂತಿರಮರಭೂಜಂ ಬಂದಂತಿರೆ (ಪುಷ್ಪಪು. ೧೩-೧೨೨) ; ಏತಕ್ಕೂ ಜಾರದ ಚಿಪ್ಪುಗಳನ್ನೂ, ಜೂರುಗಳನ್ನೂ, ಮಕ್ಕಳು ದೊಡ್ಡ ನಿಧಿಯಂತೆ ಕೂಡಿಟ್ಟುಕೊಂಡಿರುವುದನ್ನು ನೋಡಿರುತ್ತೇವೆ (ಕ್ಷಪ್ರ. ೬೫). ೨. ಹುದುಗಿಟ್ಟ ಧನ,—ದ್ರವ್ಯ; ನಿಕ್ಷೇಪ: ಮೂಡುವ ನೀಡುವ ಭಕ್ತನ ಕಂಡರೆ ನಿಧಿ ನಿಧಾನವ ಕಂಡಂತಾಯಿತ್ತು (ಬಸವ. ೬೫೮); ಪುಟ್ಟದಂದಿಂದ ಪುರುಳುಗಾಣದವರು ನೆಟ್ಟನೆ ನಿಧಿಯಂ ಕಂಡಂತೆ ಕಟ್ಟಿಜಕದೊಳಿನಯನ ಕಾಣುತ ಪುರವಟ್ಟು ಮೈಮಱೆತು ನಿಟ್ಟಪಳು (ಜಡಿಬ. ೬-೪೧). ೩. ನಿಯತಕಾರಣಕ್ಕಾಗಿ ಬಳಸಿಕೊಳ್ಳಲು ನಿವಾಸಲಾಗಿಡುವ ಹಣ; ಪುದುವಟ್ಟು: ಆ ನಿಧಿಗಳಲ್ಲಿ ಕೂಡುವ ಒಟ್ಟು ಹಣವೂ . . .

ಪೋಷಕಕ್ಕೆ ಒದಗುತ್ತದೆ (ಹಣಪ್ರ. ೧೫೧). ೪. ಒಟ್ಟಲು; ರಾಶಿ: "ನಿಧಿಯೆನಲು ರಾಶಿ" (ಪುಂಗವಾ. ೧೦೯-೩). 'ನಿಧಿಗೊಳು' ಪರಾ. ೫. ಆಶ್ರಯ; ನೆಲೆ: ಸ್ವಾಭಾವಿಕಶುಭಗುಣನಿಧಿಗಂಬುಜನಾಭ ನಿಗಾನೆಜಗುವೆನು (ಹರಿಚ. ೩-೧). ೬. ಕಡಲು; ಸಮುದ್ರ. ೭. [ಗಣಿತ] ಒಂಬತ್ತು ಎಂಬ ಸಂಖ್ಯೆಯ ಸಂಕೇತ: "ನಿಧಿ ಮಣಿ ಗ್ರಹ ರಂಧ್ರವಿರಲುವೊಂಬತ್ತು" (ಪುಂಗವಾ. ೧೦೪-೪); ವಸುಧಾಭಾವಂ ಕೇಶವ ದಿಶ ವಂಕಂ ಭಾವ ರಂಧ್ರ ನಂದ ಪದಾರ್ಥಂ . . . ನಿಧಿ ರತ್ನ ನವಮ ವೊಂಭತ್ತೆನಿಸುಂ (ಸ್ಯಹಾ. ೯-೯); ನವ ಪದಾರ್ಥ ರಂಧ್ರ ನಂದ ಲಬ್ಧ ನಿಧಿ ನವನಿಧಿ . . . ನಾಟ್ಯಾಂಗ ಇಂತಿನಿತುಂ ೯ಕ್ಕೆ ಪೆಸರು (ಸ್ಯಹಾ. ೧೧-೩); ಕೋವಿದರು ಕೇಳ್ದೊಳ್ಳಿತೆನಲುಡು ದೇವ ನಿಧಿ ನಯನೇಂದುಸಂಖ್ಯೆಗಳೋವಿ ಶಕವರುಷಂಗಳಾಗಲು (ಬಸಪು. ೬೧-೯೨). 'ಜಲನಿಧಿ', 'ವಿಷನಿಧಿ' ಪರಾ. ೮. ಒಂದು ದೊಡ್ಡ ಸಂಖ್ಯೆ: ಎಕ್ಕಂ ದಹಂ ಶತಂ . . . ಕ್ಷೋಭ ಮಹಾಕ್ಷೋಭ ನಿಧಿ ಮಹಾನಿಧಿ ಸಾಗರ ಮಹಾಸಾಗರ ಹರಿ ಮಹಾಹರಿ ಶಂಖ ಮಹಾಶಂಖ ಘಣ ಮಹಾಘಣ ಕೃತು ಮಹಾಕೃತುವೆಂದಿವೇ ಉಗ್ಗಡಣೆಗಳು (ವಿವೇಕ. ೬): ಕ್ಷೋಭ ಮಹಾಕ್ಷೋಭ ನಿಧಿ ಮಹಾನಿಧಿ ಸಾಗರ ಮಹಾಸಾಗರಾ ಪರಿಮಿತ . . . ಇವು ೩೨ ಪುಳಡಣೆ ಹೆಸರುಗಳು (ಭಾಸ್ಕರ. ೧೧-೪). ೯. [ಜೈನ] ಚಕ್ರವರ್ತಿಗೆ ಲಭಿಸುವ ನವನಿಧಿಗಳು; ಚಕ್ರವರ್ತಿಗೆ ಇಷ್ಟಾರ್ಥವನ್ನು ಕೊಡುವ ದಿವ್ಯವಸ್ತುಗಳು; ℙ(೧). ಕಾಲನಿಧಿ—ಋತುಗಳಿಗೆ ಅನುಸಾರವಾಗಿ ಫಲಪುಷ್ಪಾದಿಗಳನ್ನು ಕೊಡುವುದು. (೨). ಮಹಾಕಾಲನಿಧಿ—(ಪಂಚಲೋಹದ) ಭಾಜನವನ್ನು ಕೊಡುವುದು. (೩). ಪಾಂಡುನಿಧಿ—ಆಹಾರಕ್ಕೆ ಬೇಕಾದ ಧಾನ್ಯಗಳನ್ನು ಕೊಡುವುದು. (೪). ಮಾನವ ನಿಧಿ—ಬೇಕಾದ ಆಯುಧಗಳನ್ನು ಕೊಡುವುದು. (೫). ಶಂಖನಿಧಿ—ಚತುರ್ವಿಧ ವಾದ್ಯಗಳನ್ನು ಕೊಡುವುದು. (೬). ಪದ್ಮನಿಧಿ—ಬೇಕಾದ ಬಟ್ಟೆಗಳನ್ನು ಕೊಡುವುದು. (೭). ನೈಸರ್ಪನಿಧಿ—ಒಳ್ಳೆಯ ಭವನಗಳನ್ನು ಕೊಡುವುದು. (೮). ಪಿಂಗಲನಿಧಿ—ಒಡವೆ, ವಸ್ತುಗಳನ್ನು ಕೊಡುವುದು. (೯). ನಾನಾರತ್ನ—ಅನೇಕ ಪ್ರಕಾರವಾದ ರತ್ನಗಳನ್ನು ಕೊಡುವುದು. ಇವುಗಳು ಯಾವಾಗಲೂ ನಾಶವಾಗುವುದಿಲ್ಲ. ನಿಧಿಪಾಲರೆಂಬ ದೇವಪುರುಷರು ಇವುಗಳನ್ನು ಕಾಯುತ್ತಿರುತ್ತಾರೆ. ಒಂದೊಂದೂ ಒಂಬತ್ತುಯೋಜನ ಅಗಲವಾಗಿಯೂ ಹನ್ನೆರಡು ಯೋಜನ ಉದ್ದವಾಗಿಯೂ ಎಂಟುಯೋಜನ ಆಳವಾಗಿಯೂ ಇದ್ದು ಗಾಡಿಯ ಆಕಾರದಲ್ಲಿರುತ್ತವೆ: ನಿಧಿಯೆಂಬುದು ಪರಮ ಗುಣನಿಧಿಯನರ್ಹದ್ದೇವನನಾರಾಧಿಸೆ ತನ್ನ ನಿಧಿದ್ರವ್ಯಂಗಳಂ ಪತ್ತು ವಿಟ್ಟು ದೀಕ್ಷೆಯೊಳ್ನಿಗುರ್ಚಿಂಡೆ ದಿವ್ಯವಿಜಯ ಪರಮನಿಧಿಗಳ್ಗಧೀಶ್ವರನಕ್ಕುಂ (ಜಾವುಂಪು. ೨೩೦). 'ನವನಿಧಿ' ಪರಾ.

ನಿಧಿಯೊಡೆಯ = ಐಶ್ವರ್ಯದ ಅಧಿಪತಿ: ನಿಧಿಯೊಡೆಯರ್ ನೀವಿರ [ಲಾ]ಮಧನರ್ ಪೋದಪ್ಪೆವೆಂಬುದುಂ (ಪುಷ್ಪಾನೇ. ೧೪-೬೮). [ಸಂ.]

ನಿಧಿಗಾಣ್ (ಕ್ರಿ). ಹೂಳಿಟ್ಟ ಹಣವನ್ನು ಕಾಣು: ಕರಂ ಮೇಳಿಸಿದಪ್ಪುದೆನ್ನೆರ್ಪಯನೆಂದು ಬೊದಿಲ್ಲೆನೆ ಪಾಯ್ದು ನೀರೊಳಾ ಬಾಳನನಾದಮಾದರದೆ ಕಂಡೊಸೆದಂ ನಿಧಿಗಂಡನಂತೆವೋಲ್ (ಪಂಪಭಾ.೧-೯೬); ಮರ್ದನಗಬಲ್ಪೋದಂ ನಿಧಿಗಂಡಂತೆ ಪೆರ್ಚ್ (ಧರ್ಮಾಮೃ. ೧-೧೩೪); ದಾರಿದ್ರ್ಯನಾದರದಿಂದಂ ನಿಧಿಗಂಡವೋಲ್ ಕ್ಷಪಣಕತ್ವಂ ಪಿಂಗಿ ಸದ್ಭಕ್ತನಾಗಿರುತ (ವಾಗೀಶ. ಜೀ. ೨೬೩-೨); ನಿಧಿಗಂಡ ಬುದ್ಧಿವಂತಂ ಅದನಾನಾಬುದ್ಧಿಯಿಂದ ರಕ್ಷಿಸುವಂದದಿ (ಭವ್ಯಾಮೃ. ೩೪). [ನಿಧಿ+ಕಾಣ್]

ನಿಧಿಗೊಳು (ಕ್ರಿ). ರಾಶಿಮಾಡು; ಒಟ್ಟುಗೂಡಿಸು: ಆ ನೆನಹಿನೊಸಗೆಗಳ ನಿಧಿಗೊಳುತ, ಗುಡಿಯೆ, ನಿಂತೆ ನನ್ನ ಮಾನಸ ನಿನ್ನ ಶ್ಯಾಮಸುಂದರಗರ್ಭದೊಳಗವನು ತಡತಡಕೆ ತೀರದಂತೆ (ಮಲೆದೇ. ೧೦-೯); ಆ ಧೂಪವಾ ದೀಪವಾ ತಾಳಮೇಳಗಳ ಆ ಸರ್ವಸಂಘಾತದಿ ಮೂಡಿಬಹ ದಿವ್ಯತೆಯು ದಿನದಿನವು ನಿಧಿಗೊಳುತ ಕಳಕಳಿಪುದೀ ಬಿಂಬದಿ (ಮಲೆದೇ. ೩೦-೧೨). [ನಿಧಿ+ಕೊಳು(<ಕೊಳ್[1])]

ನಿಧಿತೆಗೆ 'ನಿಧಿದೆಗೆ' ನೋ.

ನಿಧಿದಾಣ (ನಾ). ನಿಕ್ಷೇಪವಿರುವ ಸ್ಥಳ: ಸುಡುವೆಡೆ(ಕಾ)ಗಾಡು ಪುತ್ತಿನೊಳಮುಕ್ಷಕುಜಂ ನಿಧಿದಾಣ ಕೋಟರಂ ಕಡೆಸಿದಿದೊಂದೆ ಭೂಜವಟ ಕಾನನಮೊಪ್ಪುವ ವೇಣುಕಾಂಜನವೆಂಬೆಡೆಗಳೊಳಿರ್ದ ಪಾವು ಕೊಳಲಪ್ಪುದಸಾಧ್ಯವಿಳಾತಳಾಗ್ರದೊಳ್ (ಜಸುದ. ೩-೪೧). [ನಿಧಿ+ತಾಣ]

ನಿಧಿದೆಗೆ, ನಿಧಿತೆಗೆ (ಕ್ರಿ). ೧. ಹೂತಿಟ್ಟ ಹಣವನ್ನು ಹೊರತೆಗೆ: ಬಾರದ ಕವಿತೆಯನುಸುರ್ವಂ ಧಾರುಣಿಯೊಳಗಿನ್ನದಾತನೇತಕ್ಕಂಜುಸನಾರಾಯರ್ ಪಿಡಿದೊಯ್ದೊಡೆ ಬಾರದ ನಿಧಿದೆಗೆದು ಕೊಡುವುದಾತಂಗರಿದೇ (ಪುಲ್ಲಶಾ. ೧-೯೧). **ನಿಧಿತೆಗೆ:** ೨. ಜೋಳವನ್ನು ತುಂಬುವಾಗ ದೇವರಿಗೆಂದು ಒಂದು ಭಾಗವನ್ನು ತೆಗೆದಿರಿಸು; ℙ ಹೀಗೆ ತೆಗೆದಿರಿಸಿದ ಜೋಳವನ್ನು ರಾಶಿಯ ಮೇಲೆ ಹಿಡಿಹಿಡಿಯಾಗಿ ಚೆಲ್ಲುತ್ತ ಹೋಗುವರು. ಇದರಿಂದ ರಾಶಿಯು ಜೋಳ ಹೆಚ್ಚಾಗುವುದೆಂದು ಭಾವನೆ. ಹೀಗೆ ಹಾಕಿ ಉಳಿದ ಜೋಳವನ್ನು ದೇವಸ್ಥಾನಕ್ಕೆ ಸಲ್ಲಿಸುವರು: ನಿಧಿತೆಗೆದು ರಾಶಿಯನ್ನು ತುಂಬು (ದೂಷ). [ನಿಧಿ+ತೆಗೆ[1]]

ನಿಧಿನಾಗರ (ನಾ). ಐಶ್ವರ್ಯವನ್ನು ಕಾಯುವ ಸರ್ಪ,—ಹಾವು: ಥಟ್ಟನೆರಗಿ ಗರುಡನ ತೆರ ಆಹಮೆಂದೀ ನಿಧಿನಾಗರನೊಯ್ದಿಹೆ ನೀ ಮುದವಿದ್ಯುತ್‌ಸ್ಪರ್ಶವ ಮನ ಪಡೆಯೆ (ಗಣೇಶ. ೨೫-೧೪).

[ನಿಧಿ+ನಾಗರ[1] (<ನಾಗರು)]

ನಿಧಿಪತಿ (ನಾ). ನವನಿಧಿಗಳಿಗೆ ಒಡೆಯನಾದವನು; ಐಶ್ವರ್ಯದ ಅಧಿದೇವತೆ; ಕುಬೇರ: ನಿಧಿಪತಿಪಿತಸುತಶಿಕ್ಷಿತಶೀಲನೆ ಕುಧರಸ್ಥ ಕುಶಲವಿಡೆನ್ನ (ಶತಸಾಂ. ೬೨-೭). [ನಿಧಿ+ಪತಿ[2]]

ನಿಧಿಪತಿತ್ವ (ನಾ). [ಜೈನ]ನವನಿಧಿಗಳಿಗೆ ಒಡೆಯನಾಗಿರುವಿಕೆ: ಮಗಧನ ಕೆಯ್ಯ ಚಕ್ರಮೆನಗಾವ ಪುರಾತನಪುಣ್ಯದಿಂದೆ ತೊಟ್ಟಗೆ ಜೊರೆ ಕೊಂಡುದೀ ನಿಧಿಪತಿತ್ವಮುಮೆತ್ತಣನಾಯ್ತು (ಸುಹಾನೇ. ೧೫-೧೩೦).

[ಸಂ.]

ನಿಧಿಪುರುಷ (ನಾ). ೧. ನವನಿಧಿಗಳುಳ್ಳವನು; ಅತುಳೈಶ್ವರ್ಯವನ್ನು ಹೊಂದಿರುವವನು: ದಧಿ ನವನೀತಂ ತಕ್ರಂ ಸುಧೆ ಘೃತಮೆಂಬವನೆ ಮಾಜಾ ಗಳಿಸಿದ ಧನದಿಂ ನಿಧಿಪುರುಷರೆನಿಸುತೊಲವಿಂದಧಿಕಸುಖಂ ಬೆತ್ತು ಘೋಷಜನಮೆಸೆದಿರ್ಪಂ (ತ್ರಿಪುವಿ. ೧೫-೪). ೨. [ಜೈನ] ಚಕ್ರವರ್ತಿ: ನಿಧಿಪುರುಷಂ ಪುಟ್ಟುವುದುಂ ನಿಧಿಗಂಡುದು ನಿಖಿಲ ಲೋಕಮನೆ · ಜನನದೊಳತ್ಯಧಿಕೋತ್ಸವದಿಂದಧನರ್ಗಧನತೆ ತಲೆದೋಜ ದಂತು ಪಾರ್ಥಿವನತ್ತಂ (ಪಾರ್ಶ್ವಪು. ೬-೪೪). [ನಿಧಿ+ಪುರುಷ]

ನಿಧಿವಾಸ (ನಾ). ಮುಖರಂಧ್ರಕ್ಕೂ ತಾರರಂಧ್ರಕ್ಕೂ ನಡುವೆ ಒಂಬತ್ತು ಭಾರತೀಯ ಅಂಗುಲಗಳು ಇರುವ ಕೊಳಲು: ಜಾತಿವಾಸ ಸುಜಾತಿವಾಸ . . . ದಿಗ್ವಾಸ ನಿಧಿವಾಸ ಋಷಿವಾಸ . . . ಶಿವಶಕ್ತಿವಾಸ ಭುವನಾಧಿಪವಾಸವೆಂಬ ಹದಿನೆಂಟು ತೆಜದ ವಾಸಂಗಳ ಲಕ್ಷಣವಜುತು (ವಿವೇಕ. ೨೬೭). [ನಿಧಿ+ವಾಸ[1]]

ನಿಧಿಸಮಿತಿ (ನಾ). [ಜೈನ]ನವನಿಧಿಗಳ ಗುಂಪು,—ಸಮೂಹ: ಪೊಸ ಪೊನ್ನವೇದಿ ನಾಲ್ಕುಂ ದೆಸೆಗಳೊಳಂ ಬೆಳ್ಳಿವೆಸದ ಬಾಗಿಲ್ವಾಡಂ

ಪಸರಿಸಿದ ಸಕಳಮಂಗಳವಿಸರಂ ನಿಧಿಸಮಿತಿ ಯಕ್ಷರಕ್ಷಕರೆಸೆವಂ (ಚಂದ್ರಪ. ೧೫-೫೫). [ನಿಧಿ + ಸಮಿತಿ]

ನಿಧೀಶ (ನಾ). ೧. ಐಶ್ವರ್ಯಕ್ಕೆ ಅಧಿಪತಿಯಾದವನು; ಕುಬೇರ. ೨. [ಜೈನ] ಚಕ್ರವರ್ತಿ : ಅಗ್ರಜನಕ್ಕುನ್ನತಮಪ್ಪ ಮಸ್ತಕದ ಮೇಗೋರಂತೆ ಜಾಯ್ಯಾತ್ಮಬಾಹ್ಯ ಜಲೌಘಂಗಳಿನಂದು ಬಾಹುಬಲಿ ತನ್ನಿಂದಂ ನಿಧೀಶಂಗೆ ವಂಶಜರಾಜ್ಯಾಭಿಷವೋತ್ಸವಂ ನೆಗಟ್ಟುದೆಂಬಾ ಶಂಕೆಯಂ ಪಡಿದಂ (ಆದಿಪು. ೧೪-೧೩೩). [ನಿಧಿ + ಈಶ]

ನಿಧೀಶ್ವರ (ನಾ). ೧. ಐಶ್ವರ್ಯಕ್ಕೆ ಅಧಿಪತಿಯಾದವನು; ಕುಬೇರ. ೨. ಜ ನಿಧೀಶ ೨ : ಏಲಾಲವಂಗಲಪಲೀವೇಲಾವನಭೂಮಿಯೊಳ್ ನಿಧೀಶ್ವರಸ್ಯೇನ್ಯಾಕುಲಗಜಂಗಳ್ ವನಗಜಲೀಲೆಯನನುಕರಿಸೆ ಕಣ್ಸೆವಂದುವು ಪಲವುಂ (ಆದಿಪು. ೧೩-೨) ; ನಿಧೀಶ್ವರನಖಂಡಿತಮುಂಡಳನಾಥನದ್ರಿವಿನ್ಯಸ್ತನಿಜಪ್ರಶಸ್ತಿ ಕೃತಶಾಂತಿಮಹೀಪತಿ ಸಿದ್ಧದಿಗ್ಜಯಂ (ಶಾಂತಿಪು. ೧೫-೬೪). [ನಿಧಿ + ಈಶ್ವರ]

ನಿಧುವನ (ನಾ). ೧. ಕಂಪನ ; ಅಲ್ಲಾಡುವಿಕೆ ; ನಡುಕ. ೨. ಸುರತ ; ಸಂಭೋಗ : "ಸಂವೇಶನಂ, ನಿಧುವನಂ, ಸಂಪ್ರಯೋಗಃ . . . ಮೋಹನಂ-ಈ ೭ ಸುರತಂ" (ಹಲಾಯು. ೪೩-೪೧೫) ; ಬಳವಿ ವಡೆದಬ್ಜಮುಮನೋರೊರ್ವರೊಳ್ ನೆಜೆದವೇಕವಿಧನಿಧುವನಸುಖಸುಧಾರಸಾಧೀನಚಿತ್ತರುಂ (ಆದಿಪು. ೪-೫೨ ಪ) ; ಪಸಂತೆಯುಂ ರಮಣಿಯುಂ ಮೆಂಬಿರ್ವರ್ ಗಣಕೆಯರ್ಗಾರ್ಸಕ್ಕನಾಗಿ ಧನಮಂ ನಿಧುವನಕ್ಕೆ ಸಲಿಸಿ (ಪಂರಾಮಾ. ೧೫-೪೭ ಪ) ; ನಿಧುವನಸಮುದ್ಭೂತಂ ನೂತಂ ಮೃಗಾನ್ವಯಸಿಂಧುರಂ (ಬಂಹು. ೨-೪೯) ; ಇನ್ನು ಕೆಲವೇ ನಿಮಿಷಗಳಲ್ಲಿ ರತಿಮನ್ಮಥರು ಅವರನ್ನು ನಿಧುವನದ ಶಿಖರಾನುಭವಕ್ಕೂ ಒಯ್ಯುತ್ತಿದ್ದರೊ ಏನೋ ? (ಪುಟಿಮು. ೨೫೮). [ಸಂ.]

ನಿಧುವನನಿಕೇತನ (ನಾ). ಮಲಗುವ ಮನೆ ; ಸುರತಾಲಯ ; ಶಯ್ಯಾಗೃಹ : ಜತುರೋಕ್ತಿಜಳಮನೆಜಿದು ಮುಳಿಸಂ ಕಳೆದಿಗೆವಂತೆ ತೆಗೆದು ಬಗೆನೆಲದೊಳ್ಪೇಟವೆಂಬ ಸಖಿಯಂ ಬೇರ್ಮರಿಯಿಸಿ ವಿನಯದಿಂದೊಡಗೊಂದು ಬಂದು ನಿಧುವನನಿಕೇತನಮಂ ಪುಗಿಸಲ್ (ರಾಜಶೇ. ೧೧-೧೪೦ ಪ). [ನಿಧುವನ + ನಿಕೇತನ]

ನಿಧ್ಯಾನ (ನಾ). ನೋಡುವಿಕೆ ; ನೋಟ ; ದೃಷ್ಟಿ : "ನಿಧ್ಯಾನಂ, ನಿಶಮನಂ, ನಿಧ್ಯಾನಂ . . . ದ್ಯೋತನಂ – ಈ ೪ ನೋಟಂ" (ಹಲಾಯು. ೪೩-೪೧೨). [ಸಂ.]

ನಿನತು 'ನಿನತ್ತು' ನೋ.

ನಿನತ್ತು, ನಿನತು, ನಿನ್ನತು, ನಿನ್ನದು (ಸ) . ನಿಮುತು, ನಿಮುತ್ತು, ನಿಮ್ಮತು, ನಿಮ್ಮದು, ನಿಮ್ಮುತು (ಬಹುವ) : ನಿನಗೆ ಸೇರಿದುದು : "ನಿನತ್ತೆಂದುಂ ನಿನ್ನದು" (ಆಚಸಾ. ೬೮-೫೩೨) ; ನಿನ್ನದು ಎನ್ನದು ತನ್ನದು ಎಂಬವರ್ಗೆ ನಿನತು ಎನತು ತನತು ಎಂದಾದೇಶಮಕ್ಕುಂ ; ಮೇಣೆಂಬ ವಿಕಲ್ಪದಿಂದವರ್ಗೆ ದ್ವಿತ್ವಮುಂಟು ನಿನತ್ತು ಎನತ್ತು ತನತ್ತು – ಎಂದು (ಶಸದ. ೧೪೭ ಸೃತ್ತಿ) ; ನಿನಮು, ನಿನತ್ತು (ಶಬ್ದಾನು. ೨೪೪ ಪ್ರಯೋ) ; ನಿನ್ನ ರೂಪು ಕಾಮಿನಿಯೆರಡಚ್ಚಿಯೊಳ್ ನೆಲನುಮಾಗಸಮುಂ ದೆಸೆಯುಂ ನಿನತ್ತು ರೂಪನೆ ತಳೆದೊಪ್ಪಿ ತೋಱುವುದು ನೀಱಿಗೆ ನಿನ್ನಯ ಮಾಯೆಯೇಂ ಸ್ವಪಾ (ರಸರ. ೧-೭೩) ; ಎನ್ನ ಮತಿಯೊಳಗುಗಾಣದ ನಿನತ್ತೆಂದು ಸುತಿಗೆಯುಂ ಕಂಗಳ ಹಬ್ಬವಾಗೆ ನಿನ್ನಯ ಗುರುವರನ ನೋಳ್ಪಡುಜ್ಜುಗಿಸಿ ಬಂದನೆನಲು (ರಾಹಜ. ೧೪-೪೨). **ನಿನತು** : "ನಿನತೆಂದು ನಿನ್ನದಕ್ಕುಂ" (ಆವಿಕಂ. ೨೧೯) ; ನಿನ್ನದೀ ಮೇದಿನಿ ಪಟ್ಟಮುಂ ನಿನತೆ (ಪಂಪಭಾ. ೯-೭೪) ; ಎನಗೆ ಕೂರ್ಪುದನಾ ಘಟಸಂಭವಂ ನಿನಗೆ ಕೂರನಲುಲ್ ನಿನತಲ್ತು ಕೇಳ್[ನ] ಕುಮಾಜಿದ ಶೋಕವನಿರ್ವರುಂ ಮುನಿನರಂ ತವೆ ಕೊಂದೊಡನೀಗುವಂ (ಪಂಪಭಾ. ೧೨-೭೬) ; ಸರಸತಿ ನಿನ್ನ ಭಾಗ್ಯವರೆಯೊದುದೆ ಹಾ ನಿನತೋಲೆವಾಗ್ಮಯೋಸರಿಸಿದುದೇ ಧರಿತ್ರಿ (ಸಧಪು. ೯-೭೦) ; ಅವ ರೂಪದಲಿ ನೋಡಿದೊಡೆ ನಿಮಗಿಲು ಸೊಗಸು ನಿನತು ? (ಸನ್ನಪ. ೧೩-೨). **ನಿನ್ನತು** : ಕವೀ ಎಂಬುದೊಂದೇ ಪೆಸರ್ ಸಾಲದೇ ನಿನ್ನತೆಲ್ಲಕ್ಕಮೇಂ ಪೇಳಲೇ ! (ಸಂಪಪ. ೧೩-೭೩). **ನಿನ್ನದು** : ಕಾರವನುಳಿವು ನಿನ್ನದು ಕಂದ ಕದನವ ಜಯಿಸು ಪೋಗೆಂದ (ಕುಪಾಂದ್ರೋ. ೧-೨೩) ; ಕುಂತಿಯು ತನ್ನ ಮುಕ್ಕಳ್ಕೈವರ ತಂದು ಮುಂದ್ದುಕೃಷ್ಣನ ಕರದಿ ಕೊಟ್ಟು ಪರಿಭಾರವಿದುಯಿದ್ದು ನಿನ್ನದೆಂದು ಪೇಳಲ್ (ತುರಂಗ. ೧೩-೪೮). **ನಿನುತು** : ನಾವೆ ನಿನುತಿಚ್ಛೆಯೆನೆ ಪೊಣದರ್ವಾಂ ತಳ್ಪಿಜ್ಜುದು ಗೆಲ್ವುಂ (ಪಂಪಭಾ. ೧೧-೩೧) ; ಕೃತಾರ್ಥನೆನಾದೆನಿನ್ನಮತು ದೆಸೆಯಿಂದನ್ಯರ್ ನಿಮ್ಮಂತು ಮಾನ್ಯರೆ ಧನ್ಯರೇ (ಪುಷ್ಪಪು. ೧೨-೧೧); ಬಲ್ಮೆಯಾಕ್ರೋಶಕ್ಕೆ ಮಣಿಯದಿಹ ಶಿರ ನಿಮುತು (ಅಸುತಂ. ೨೨-೭). **ನಿಮುತ್ತು** : ನಿನತು ಎನತು ತನತು – ಎಂಬ ನಕಾರಕ್ಕೆ ಬಹುವಚನದೊಳ್ ಮತ್ವಮಂಟು – ನಿಮುತು ಎಮುತು ತಮುತು; ವಿಕಲ್ಪದಿಂದವದು ದ್ವಿರ್ಭಾವಮುಮುಂಟು – ನಿಮುತ್ತು ಎಮುತ್ತು ತಮುತ್ತು –ಎಂದು (ಶಸದ. ೧೪೭ ವೃತ್ತಿ); ಬ್ರೇನುದಿಂ ಶರ್ಕರಾಮೃತದೊಳ್ಗೂಡಿದವೋಲ್ ನಿಮುತ್ತು ನವಿಗೂಟಂ ಪಿಂಗೆ ಕಾಮಾಗ್ನಿಗಾಹುತಿಯಪ್ಪಂದಮದಲ್ತೆ (ರಸರ. ೪-೧೭೮). **ನಿಮ್ಮತು** : "ನಿಮ್ಮತೆಮ್ಮತು ತಮ್ಮತೆನೆ ಬಹುವಚನಮಕ್ಕುಂ" (ಕಬ್ಬಕೈ. ೬೦). **ನಿಮ್ಮದು** : ತನು ನಿಮ್ಮದೆಂಬೆ ಮನ ನಿಮ್ಮದೆಂಬೆ ಧನ ನಿಮ್ಮದೆಂಬೆ (ಬಸವ. ೩೦೪) ; ನಿಮ್ಮದೊಂದು ಗಿರಾಕಿ ಕಳೆದೆ ನಾನು (ಬೆಂಗಬು. ೨೩೦). **ನಿಮ್ಮುತು** : ದೇವಾ ಸುಭದ್ರೆಯುಂ ಪದ್ಮಾವತಿಯುಂ ನಿಮ್ಮುತಿರ್ವರರಸಿಯರಸ್ಮದ್ಭೂವಲ್ಲಭಾಗ್ರಜೆಯರಿನ್ನಾವೆಡೆ ವೈತರ್ಕ್ಯನಿಷಯವಿವಾ ಕೊಳ್ತೊಡೆಯೊಳ್ (ಪಜಿನೇ. ೩-೧೩೦) ; ನಿಮ್ಮುತಿರ್ವರುಂ, ಎಮ್ಮುತ್ತೈವರುಂ, ತಮ್ಮತಱುವರುಂ (ಶಸದ. ೧೪೮ ಪ್ರಯೋ).

[<ನೀನ್]

ನಿನದ (ನಾ). ಧ್ವನಿ ; ಸಪ್ಪಳು ; ಶಬ್ದ : "ನಾದಂ ಸ್ವರಂ ಘೋಷಂ . . . ಧ್ವನಿಮಾ ನಿನದಮಾ ಧ್ವನಿಯೆನಿಕ್ಕುಂ" (ನುಂಗರಾ. ೯-೩೧) ; ಕನಕಕಾಂಚೀನಿನದಪ್ರಗಡತಮಗಲ್ವ ನಲ್ಲಳ ಜಗನಮಿದೆನ್ನೆರ್ದೆಯನೆಂತು ಪೊಕ್ಕಳಿಪುವುದೋ (ಪಂಪಭಾ. ೪-೭೩); ವನರುಹವದನದ ಮದಟುಕನಿನದದ . . . ಮಳಯರುಹಗಂಧದ ವನಿತಾನಿಕರಕ್ಕೆ ದೇಮನಭಿನವಕಾಮಂ (ಸೌಇಇ. IX-i, ೧೧೮-೩೯ ; ಸು. 1057); ನೆರಪುವ ಗೋಧನಮನ ಲಂಕರಿಸುವ ಭೋಜ ನಿವಾಸಿಗಳಿಂದಮಾಯ್ತು ಕಳಕಳನಿನದಂ (ಜಗವಿ. ೪-೪೦); ಈ ನಿನದವೆಮ್ಮಂದಿನಗ್ಗದ ವಾನರನ ಗರ್ಜನೆಗೆ ಗುರು ವಾಯ್ತೆನಸೆಂಬೆನೆಸುತ್ತ ಮೆಲ್ಲನೆ ಮಿಡುಕಿದನು ಹನುಮ (ಕುವ್ಯಾಅ. ೧೦-೧೩); ಮುದಗಜದತ್ತ ಬೊಬ್ಬೆಯ ನಿನದದಲಿ ತಿರುಗಿದನು (ತೊರಾರಾ. ೫-೩೨-೩೧); ಪಡ್ ಎಂದುಂ ಬೀಯದ ಫಲವೃಕ್ಷಂಗಳೆತ್ತಂ ತುಜುಗಿ ಬೆಳೆದಿರೆ ಭ್ರಮದ್ಭೃಮರ ನಿನದಮೆಂದುಂ ಕಿವಿಗಿನಿದಂ ಕಜಿಯೆ, ಮುಖ್ಯಾಶ್ರಮೋಪವನಂ ನೀತೆಗೆ ಕಣ್ಸೆವಂದತ್ತು (ರಮಾಶ್ವ. ೪೩-೧೩). [ಸಂ.]

ನಿನದಂಗೆಯ್ (ಕ್ರಿ). ಸದ್ದು ಮಾಡು ; ಧ್ವನಿ ಮಾಡು : ನಿನದಂಗೆಯ್ದುಱುಪುತ್ತುಮೆಯ್ದೆ . . . ನೆರೆದುದೋರಂತಾ ರಥಾಂಗವ್ರಜಂ (ಕುಸುಮಾ. ೪-೭೪). [ನಿನದ + ಕೆಯ್]

ನಿನದಿಸು (ಕ್ರಿ). ನುಡಿ ; ಧ್ವನಿಸು ; ಮೊಳಗು : ತನೆಯ ಶತಮಾನದ ಆಡುನುಡಿಯ ಸ್ವರೂಪ ನಮಗೆ ತಿಳಿದು ಬಂದಿಲ್ಲವಾಗಿ, ಈ ಪ್ರಹಸನದ ಮಾತುಗಳು ಆ ಆಡುನುಡಿಯನ್ನು ನಿನದಿಸುತ್ತಿವೆಯೆ ? (ದ್ರಾವಿವಿ. ೪೧); ಇಗರ್ಜಿಯಿಂದ ಹೊರಟ ಗಂಟೆಯ ಧ್ವನಿ ಸುತ್ತಲಿನ ಗುಡ್ಡಗಳಲ್ಲಿ ನಿನದಿಸು

ವಾಗ ನಿರ್ಮಲೆಯ . . . ಮನಸ್ಸು ಪುಲಕಿತವಾಯಿತು (ಪೂರುದಾ. ೯೧); ವಸಂತನ್ನಯವಾದ ಮಾತು ಅವಳ ಕವಿಯಲ್ಲಿ ನಿನದಿಸುತ್ತಿತ್ತು (ಕಮಸೆ. ೧೯೭); ಭಾಗವತರ ತಬಲವಂತೂ ಕವಿಯಲ್ಲಿ ನಿನದಿಸುತ್ತಿದೆ (ಕತ್ತಜೆ. ೬೫). [ನಿನದ+-ಇಸು$_3$]

ನಿನಾದ (ನಾ). =ನಿನದ: ಮುನಿಕುಮಾರರೋದುವ ವೇದನಿನಾದದಿಂ ವಿಗತನಿದ್ರೆಯಾಗಿ ಪಾಂಡುರಾಜಂಗಮಲ್ಲಿಯು ಮುನಿಜನಂಗಳ್ಗಮಜಿಸಿ ದೊಡೆ (ಪಂಪಭಾ. ೧-೧೪೨ ಪ); ಪೊಣ್ಮಿತುಚ್ಚೈಃಖಿಲಂ ಗೋತ್ರ ಗಿರಿಚ್ಛಾತ್ರಾನುವಾದಾಧ್ಯಯನಗುರುಜರಾಸಂಧಭೇರೀನಿನಾದಂ (ಜಗವಿ. ೬-೬೯); ಆ ಪುರದೊಳಗುಣ್ಕ ಪೊಣ್ಕ ಕೃತಮುಂಗಳತೂರ್ಯನಿನಾದ ವೆತ್ತಲುಂ (ಪುಪ್ಪಪು. ೮-೫೦); ನಾದ ನಿನಾದ ಗಗನಭೇದಿಯಾಗಿತ್ತು (ಪೀಸಪ. 11, ೩೮೪). [ಸಂ.]

ನಿನಾದಗೊಳ್ಳು (ಕ್ರಿ). ಧ್ವನಿಗೊಳ್ಳು: ಛಂದೋಬಂಧಗಳಲ್ಲಿ ಈ ಸಹಜ ನಾದಮಯ ವರ್ಣಗಳು ಲಯದ ಜಾಡ ಹಿಡಿದು ಹೊಂದಿಕೊಳ್ಳುವುದರಿಂದ ಲಯವು ನಾದಮಯವಾಗುತ್ತದೆ; ನಿನಾದಗೊಳ್ಳುತ್ತದೆ (ಛಂದೋವಿ. ೧೩). [ನಿನಾದ+ಕೊಳ್ಳು$_1$(<ಕೊಳ್$_1$)]

ನಿನ್ನತು 'ನಿನತ್ತು' ನೋ.

ನಿನ್ನದು 'ನಿನತ್ತು' ನೋ.

ನಿನ್ನೆ, ನೆನ್ನೆ (ನಾ). ೧. ಈ ದಿನದ ಹಿಂದಿನ ದಿನ; ಈವತ್ತಿನ ಹಿಂದಿನ ದಿನ: "ನಿನ್ನೆಯೆಂಬಲ್ಲಿಯುಂ ಕಲ್ಯಮೆಂಬುದು" (ಹಲಾಯು. ೧೩೫-೨೩); ನಿನಗೆ ನಿನ್ನೆ ತಣಿಯೆಯವಿಣಲಿಕ್ಕಿದೆನೆಂದು ಮುಳಿದು ಬಡಿದಟ್ಟಿ ಕಳೆಮೊಂ (ಪಡ್ಡಾರಾ. ೬೭-೧೬); ಅನಜುಯದೆ ನಿನ್ನೆ ನೋಯಿಸಿದೆಂ (ಪಂಪಭಾ. ೮-೬೩); ಸತ್ತ ಕಜುವಿನ ಮಾಂಸವಂ ಮುದವೆತ್ತಿ ಯೊರೋಗಿಸುವ ನೇಮಂಬೊತ್ತು ಬಂದೆನು ನಿನ್ನೆ (ಬಸಪು. ೫೬-೩೪); ಮೊನ್ನೆ ಮದುವೆಯಾದೆನ್ನೆ ಕಜಿವುದೊಂದೆರ್ದೆಮ್ಮೆ ನಿನ್ನೆ ಕೊಂಡೆನು ಕ್ಷೇತ್ರಫಲವು ಬಹುದು (ಪುರಂದ. ೨-೬೧-೨); ಜೋಡಾಡಿ ಹೋದಿರಿ ನಿನ್ನೆ ನೀವಿಂದೇನ ಮಾಡಬೇಕೆಂದೆಣಿಸಿದಿರಿ (ಭರಜ. ೪೨-೧೫); ನಾವು ಲೀಲಾಮಾತ್ರಜೀವರು, ನಮ್ಮ ಜೀವನಲೀಲೆಗೆ! ನಿನ್ನೆ ನಿನ್ನೆಗೆ, ಇಂದು ಇಂದಿಗೆ, ಇರಲಿ ನಾಳೆಯು ನಾಳೆಗೆ! (ನವಿಲು. ೫೧-೧೪). ೨. ಸ್ವಲ್ಪ ದಿನಗಳ ಹಿಂದಿನ ದಿನ; ಈಚಿನ ದಿನ: ಬವರಂಗೆಯ್ವುಮೆಮೋಳಮೆಂಬ ಬಗೆಯಿಂ ಪೀಮೆಲ್ಲಮಾದಂ ರಣೋತ್ಸವದಿಂ ನಿನ್ನೆಯೆ ಪೋದ ಗೋಗ್ರಹಣದಂದೇನಾದಿರ್ (ಪಂಪಭಾ. ೯-೫೬). ೩. ಹಿಂದಿನ ದಿನ; ಮುನ್ನಾದಿನ: ಯೇಸು ಸಾವಂದಿನ ನಿನ್ನೆಯ ಗುರುವಾರದ ರಾತ್ರಿ . . . ಯೂದನು ಅವರನ್ನು ಬಿಟ್ಟು ಹೊರಟು ಹೋದನು (ಗೂಡ್ಸ್ಪೀಡ್ VI, ಮುನ್ನುಡಿ). **ನೆನ್ನೆ**: ಇಲ್ಲಿಯವರೆಗೂ ಯೋಗ ಕೂಡಿ ಬಂದಿರಲಿಲ್ಲ. ನೆನ್ನೆ ಮನಸ್ಸು ಮಾಡಿದೆ (ನಿಶಿಬು. ೧೪೧). ℙ ಕಾಲವಾಚಕಶಬ್ದಗಳು ಕನ್ನಡದಲ್ಲಿ ಅವ್ಯಯವಾಗಿಯೂ ಉಪಯೋಗವಾಗುತ್ತವೆ. [ದೇ.॥ ತಮಿ. ನೆರುನಲ್, ನೆರುನ್ಯೆ, ನೆನ್ನಲ್, ನೇಱ್ಱು; ಮಲ. ಇನ್ನಲೇ; ಕೊಡ. ನಿನ್ನಾಂದಿ; ತೆಲು. ನಿನ್ನ; ಗೊಂಡಿ. ನಿನ್ನೆ]

ನಿಪ (ನಾ). ನೀರು ತುಂಬುವ ಪಾತ್ರೆ; ಕೊಡ: "ನಿಪಂ ಕುಂಭಂ ಕುಟಂ ಕಳಶಮೆಂದೆನಲು ಕೊಡವಂ(ನೆ)ನಿಕ್ಕುಂ" (ಸುಂಗಾರಾ. ೬೨-೨೭). [ಸಂ.]

ನಿಪಕ (ನಾ). ಜಾಣ; ಚತುರ: ಆತಾಪಿಯೂ ನಿಪಕನೂ ಅದ ಭಿಕ್ಷುವು [ಗೋಜಿದ ಈ ಸಂಸಾರದ] ಗೋಜನ್ನು ಬಿಡಿಸುವನು (ಬುದ್ಧಪ. ೪೫ ಮಿಲಿಂದ). [←ಪಾಲಿ. ನಿಪಕ]

ನಿಪಶ(ನಾ). ಓದುವಿಕೆ; ಪಠನ; ಅಭ್ಯಾಸಮಾಡುವಿಕೆ: "ನಿಪಾತಃ, ನಿಪಠಃ, ಪಾಠಃ-ಕ್ಷ ಓದುವಿಕೆ" (ನಿದ್ವಾಂತಿ. ೬೬೫). [ಸಂ.]

ನಿಪತನ (ನಾ). ಕೆಳಗೆ ಬೀಳುವುದು; ಪತನ: 'ನಿಪತನಂಗೆಯ್ಸು' ಪರಾ. [ಸಂ.]

ನಿಪತನಂಗೆಯ್ಸು (ಕ್ರಿ). ಕೆಳಗೆ ಬೀಳುವಂತೆ ಮಾಡು,- ಬೀಳಿಸು,- ಕೆಡಹು: ನಿನ್ನನೀ ರಥದಿಂದೆ ನಿಪತನಂಗೆಯ್ದುದೊಡೆ ತನಗೆ ಪರಲೋಕದೊಳ್ಳಪರೀತಗತಿಯಾಗದಿರ್ದಪುದೆ ಪೇಳೆಂದು ತೆಗೆದೆಚ್ಚು ಬೊಬ್ಬಿಜುಜನು (ಜೈಮಿಭಾ. ೧೪-೧೩). [ನಿಪತನ+ಕೆಯ್ಸು]

ನಿಪತಿತ (ಗು). ಕೆಳಕ್ಕೆ ಬಿದ್ದ; ಪತಿತವಾದ: ಸಂಗತೋರಗಖಗ ಮೃಗಾವಾಸಂಗಳೊಳು ಗಿರಿಶಿಖರನಿಪತಿತತುಂಗಧಾರೋದ್ಧಾರಕಲ್ಪೋ ರ್ವೀತಳಂಗಳೊಳು ಪೊಂಗಿ ನಡೆವುತೆ (ಬಸಪು. ೧೯-೬೫); ಶೀತಳಪ್ರದವಾಗಿ ರಾಜಿಸುವಾ ತರುಚ್ಛಾಯೆಗೆ ಮನಸಿಜಾರಾತಿ ಒಯ್ಯನೆ ಬಂದವನಿಯೊಳು ನಿಪತಿತಪ್ರಸವಜಾತವಾಸನನಾಗೆ ಕುಳ್ಳಿರ್ದು (ಬಸಪು.೨೬-೪೨). [ಸಂ.]

ನಿಪತ್ತಿ (ನಾ). =ನಿಪತನ: 'ಪ್ರಣಿಪತ್ತಿ' ಪರಾ. [ಸಂ.]

ನಿಪನ (ನಾ). (?): ಆಗತಮೆನಿಸಿದ ನಿಪನದನಾಗತಮತ್ತದಱೊಳು ತ್ತಮಂ ಪುಧ್ಯಮನೊಂದಾಗೆ ಕನಿಷ್ಠಾರ್ಥಮನೊಂದಾಗತ ನಾಲ್ಕುಂ ತೆಱಕ್ಕಮಯ್ದುಯ್ದುಕ್ಕುಂ (ಅಶ್ವಶಾ. ೬-೪೩). [?]

ನಿಪಾಠ (ನಾ). ಓದುವುದು; ಅಧ್ಯಯನ: "ನಿಪಾಠಃ, ನಿಪಠಃ, ಪಾಠಃ-ಕ್ಷ ಓದುವಿಕೆ" (ನಿದ್ವಾಂತಿ. ೬೬೫). [ಸಂ.]

ನಿಪಾತ (ನಾ). ೧. ಕೆಳಗೆ ಬೀಳುವುದು; ಪತನ: ಘನಶರಾಘ ನಿಪಾತಗಳೊ ಘನಜನಿತ ವರುಷಾಸಾರಗಳೊ ತಾನೆನೆ ಘಟಿಪ್ಪಯದಾಹವಾ ಕೃತಿ ಮೋಹಿಸಿತು ಜಗವ (ತೊರಣಾ. ೬-೨೪-೨೫). ೨. (ಬಾಣದಂತೆ) ಎಸೆಯುವಿಕೆ,—ಪ್ರಯೋಗಿಸುವಿಕೆ: ತಮುದಂಬನರ್ಕಶರದಿಂದಾಶೀ ವಿಷೋಗ್ರಾಸ್ತ್ರಮಂ ಖಗರಾಜಾಸ್ತ್ರನಿಪಾತದಿಂ ಕಡಿಸಿ ದಿವ್ಯಾಸ್ತ್ರಂಗಳಿಂ ಗೆಲ್ದಂ (ಪಂರಾಮಾ. ೧೪-೨೦). ೩. ಮೇಲೇರಿ ಬರುವಿಕೆ; ಧಾಳಿ. ೪. ಮರಣ. ೫. ನಾಶ; ಹಾಳು. ೬. ವೇದಕ್ಕೆ ಸಂಬಂಧಪಟ್ಟಂತೆ ವಿಭಾಗಿಸುವ ಶಬ್ದಗಳಲ್ಲಿ ನಾಲ್ಕನೆಯ ವಿಧ: ಯಾಸ್ಕರೇ ಮೊದಲಾದವರು ಪದಗಳನ್ನು ನಾಮ ಆಖ್ಯಾತ ಉಪಸರ್ಗ ನಿಪಾತ ಎಂದು ನಾಲ್ಕು ವಿಧಗಳಾಗಿ ಉಪದೇಶಿಸಿರುವರು(ಹಿಂದಸಾ.೧೪೭). ೭. [ವ್ಯಾಕ] ನಿಯಮಕ್ಕೆ ಒಳಪಡದ ಶಬ್ದ; ವ್ಯಾಕರಣ ಸೂತ್ರಕ್ಕೆ ಅಳವಡದ ಶಬ್ದ; ℙ ಸಂಸ್ಕೃತದಲ್ಲಿ 'ಸಿಂಹ', 'ಹಂಸ' ಮೊದಲಾದ ಶಬ್ದಗಳನ್ನು ಹೀಗೆ ಗುರುತಿಸುತ್ತಾರೆ. ೮. ಭಯ, ವಿಸ್ಮಯಾದಿ ಭಾವಗಳನ್ನು ಸೂಚಿಸುವ ಅಕ್ಕಟಾ, ಅಯ್ಯೋ, ಅಃ, ಅಃ, ಎ, ಏ, ಒ, ಓ ಮುಂತಾದ ಉದ್ಗಾರವಾಚಕ ಪದ: ಅರಮೆ ಏಲೇ ಏ ಓಹೋ ಅರೆ ಎಂಬ ನಿಪಾತಮುಂ ನಿಶಂಕಾಪರಮುಂ ದೊರೆವೆತ್ತ ಪಧಾರಣಮುಂ ಸ್ವರೂಪದಿಂ ನಿಲ್ಕುಮವಿಕೃತಂಗಳವೆಂದುಂ (ಕಾವ್ಯಾವ. ೪೬); ಎ, ಏ, ಒ, ಓ ಎಂಬೀ ಯುಗಲಾಕ್ಷರಂಗಳುಂ ವಿಶಂಕಾವಧಾರಣ ನಿಪಾತಂಗಳಲ್ಲದೆ ನಿಜದಿನೊಳವು (ಶಪದ. ಸ. ೧೪ ಸೃತ್ತಿ); ಅವ್ಯಯಂಗಳನ್ನು (I) ಸಾಮಾನ್ಯ, (II) ನಿಪಾತ . . . (V) ಕೃದಂತ ಎಂದು ವಿಭಾಗ ಮಾಡುತ್ತಾರೆ (ಕ್ರಸಿದಿ. ೫೨). ℙ ಅವ್ಯಯಗಳಲ್ಲಿ ಕೆಲವನ್ನು ಪ್ರತ್ಯೇಕಿಸಿ ನಿಪಾತವೆಂಬ ಸಂಜ್ಞೆಯನ್ನು ಹೇಳಿರುವುದು ಏಕೆಂದರೆ, ಇವುಗಳ ಮುಂದೆ ಸ್ವರ ಬಂದರೂ ಸಂಧಿ ಕಾರ್ಯಗಳು ಬರುವುದಿಲ್ಲ.

ನಿಪಾತ ಮಾಡು=ನಾಶ ಮಾಡು; ಹಾಳುಮಾಡು: ತಾವು ಅವರೀತಿಯಿಂದಾದರೂ ಶತ್ರುವನ್ನು ನಿಪಾತ ಮಾಡೋಣವಾಗಲಿ (ಜೈಮಿಬೀ. ೬೨). **ನಿಪಾತವಾಗು**=ಹಾಳಾಗು; ನಾಶವಾಗು: ರಜಸ್ವಲೆ

ಯಾಗಿದ್ದ ದ್ರೌಪದಿಯನ್ನು ಸಭೆಗೆ ಎಳೆದು ತರಿಸಿ ನಮ್ಮ ಎದುರಿಗೇ ಅಪಚಾರ ಮಾಡಿದ ಪಾಪಿಗಳು ಎಲ್ಲರೂ ನಿಪಾತವಾದರು (ಅಗ್ರಹ. ೧೨). [ಸಂ.]

ನಿಪಾತಕ (ಗು). ೧. ಪಾಪದ; ದುಷ್ಕರ್ಮದ: ಅಕ್ರಮಣಕಾರರ ನಿಪಾತಕ ಪರಿಣಾಮಗಳನ್ನೆಲ್ಲ ತಡೆದುಕೊಂಡು ಇವರು ತಮ್ಮ ಕಲೆಯನ್ನು ಉಳಿಸಿಕೊಂಡು ಬರುತ್ತಾರೆ (ಭಾರದ. ೫೫೧). (ನಾ). ೨. ಪಾಪ; ದುಷ್ಕರ್ಮ. [ಸಂ.]

ನಿಪಾತಗೊಳಿಸು(ಕ್ರಿ). ಹಾಳುಮಾಡು; ನಾಶಮಾಡು: ಮಹಮ್ಮದೀಯರನ್ನು ನಿಪಾತಗೊಳಿಸಲು ಒಂದು ದಂಡು ಬಂದಿತು (ಸೃಗಂಬ. ೮೦). [ನಿಪಾತ + ಕೊಳ್$_1$ + –ಇಸು$_3$]

ನಿಪಾತತೃಣ (ನಾ). ಕೆಳಗೆ ಬಿದ್ದಂಥ ಹುಲ್ಲುಕಡ್ಡಿ: ಯಕ್ಷನಿಟ್ಟ ನಿಪಾತತೃಣವಂ ನೆಗಪಲಾಜದೆ ಧಾತುಗೆಟ್ಟರು ವಿಷ್ಣು ಧಾತರು ತಾವೆ ಘನವೆಂದು (ಬಸಪು. ೫೪–೪೫). [ನಿಪಾತ+ತೃಣ]

ನಿಪಾತನ (ನಾ). ೧. ಕೆಳಗೆ ಬೀಳಿಸುವುದು. ೨. ಕೆಳಗೆ ಬೀಳುವುದು. ೩. ಎಸೆಯುವುದು. ೪. ಕೆಳಕ್ಕೆ ಹಾರುವುದು. ೫. ಕೊಲೆ; ಸಂಹಾರ: ಹರಿದುಬ್ಬಿ ಹಾಯ್ದೊಡೆ ಪೇಡೆಯವರಿಗೆ ಹಬ್ಬವಾಯ್ತೇನೆಂಬೆನಗಣಿತ ಮೃಗನಿಪಾತನವ (ಕುಪ್ಯಾಅ. ೧೩–೨೫). [ಸಂ.]

ನಿಪಾತಾವ್ಯಯ (ನಾ). = ನಿಪಾತ ಲ: ನಿಪಾತಾವ್ಯಯಗಳು—ಇವು ಭಯ ವಿಸ್ಮಯಾದಿ ಭಾವಗಳನ್ನು ತಿಳಿಸುತ್ತವೆ (ಕೃವಿಡಿ. ೫೨). [ನಿಪಾತ+ಅವ್ಯಯ]

ನಿಪಾತಿಸು (ಕ್ರಿ). ೧. ಹಾಳುಮಾಡು; ನಾಶಮಾಡು: ಅಶನಿವೇಗನುಮಂ ಸಂಗ್ರಾಮದೊಳ್ ನಿಪಾತಿಸುವನಾವನೊರ್ವನಾತಂಗೆ ನಿಮ್ಮ ಮಗಳಂ ಕುಡಿಮೆಂದು ದೇವಗುರುವೆಂಬ ನೈಮಿತ್ತಿಕಂ ಪೇಟ್ಟಂ (ಪದ್ಮಾರಾ. ೬೧–೨೪). ೨. [ವ್ಯಾಕ] ನಿಪಾತಶಬ್ದವೆಂದು ತಿಳಿ,—ವರ್ತಿಸು; ಅವ್ಯಯವೆಂದು ಭಾವಿಸು: ಪೊಸತು ಪಟದೆಳದು ಪೊಱಗೊಳಗು ಸಮಮೆನಿಪ್ಪಿವಱೊಳತ್ವಮಂತಕ್ಕೆ ನಿಪಾತಿಸೆ ಪಡೆಗು ಮವಱೊಳೊಳಗಿಂಗಸಂಗದಿಂ ಸಮನಿಸಿರ್ಕುಮುಳ್ಳಾದೇಶಂ (ಕಾಪ್ಯಾವ. ೨೩೯). [ನಿಪಾತ + –ಇಸು$_3$]

ನಿಪಾನ (ನಾ). ೧. ಕುಡಿಯುವುದು. ೨. ನೀರಿರುವ ಸ್ಥಳ; ಜಲಾಶಯ. ೩. ಸಣ್ಣ ಹೊಂಡ; ಬೆಂಚೆ: "ನಿಪಾನಂ, ಉದಪಾನಂ, ವಾಪೀ, ಆಹಾವಃ –ಈ ೪ ಬೆಂಚೆ" (ಹಲಾಯು. ೧೧೩–೬೨). ೪. ಬಾವಿ. ೫. ಪಶುಗಳು ನೀರು ಕುಡಿಯಲು ಏರ್ಪಡಿಸಿರುವ ತೊಟ್ಟ: "ಆಹಾವಃ, ನಿಪಾನಂ –೨ ಭಾವೀ ಬಳೀ ಪಶುಗಳು ನೀರು ಕುಡಿಯುವ ಬಗ್ಗೆ ಕಟ್ಟಲ್ಪಟ್ಟ ನೀರ ತೊಟ್ಟಿಯ ಹೆಸರುಗಳು" (ಸಿದ್ಧಾಂತಿ. ೮೫). [ಸಂ.]

ನಿಪೀಡನ (ನಾ). ೧. ಹಿಂಡುವುದು; ಹಿಸುಕುವುದು. ೨. ಪೀಡಿಸುವುದು; ಹಿಂಸಿಸುವುದು: 'ನಿಪೀಡಿಸು' ಪರಾ. [ಸಂ.]

ನಿಪೀಡಿತ (ಗು). ಹಿಂಡಿದ; ಹಿಸುಕಿದ; ಒತ್ತಿದ: ಆ ಮಸ್ತಕದ ರೋಷೋತ್ಕರದ ಝಳ ಝಾಡಿಸಿತು ಶುಭ್ರಸ್ಫುರಣದಂತ ನಿಪೀಡಿತಾಧರನಾದನಾ ಭೂಪ (ಕುಪ್ಯಾಗ. ೫–೩೭). [ಸಂ.]

ನಿಪೀಡಿಸು (ಕ್ರಿ). ಯಾತನೆಪಡಿಸು; ಹಿಂಸಿಸು; ಕಾಡು: ಮನಸಿಜನೆಂಬ ಬಲ್ಲ್ರಹಮದೊತ್ತಿ ನಿಪೀಡಿಸೆ (ಪಾಧಪು. ೧೬–೩೮). [ನಿಪೀಡನ+ –ಇಸು$_3$]

ನಿಪೀತ (ಗು). ಚೆನ್ನಾಗಿ ಕುಡಿದ: ಸುಧೆಯಂ ತೆಗೆದುಂಬ ಮರಾಳನೆತ್ತ . . . ನಿಪೀತಚಂದ್ರಿಕಾಮೃತಸುಚಕೋರನೆತ್ತ ಬಿಸಿಲಂ ಕುಡಿದಂದಮದೆತ್ತ ಲೋಕದೊಳ್ (ವೃಷವಿ. ೯–೪೨). [ಸಂ.]

ನಿಪುಣ (ಗು). ೧. ನುರಿತ; ಪ್ರವೀಣನಾದ. (ನಾ). ೨. ಪಾರಂಗತ; ಜಾಣ: "ಕೃತಹಸ್ತಂ . . . ಪ್ರವೀಣಂ ವಿಚಕ್ಷಣಂ ನಿಷ್ಣಾತಂ ಕೃತಮತಿ ನಿಪುಣಂ ವಿಜ್ಞಂ ಕೃತಕರ್ಮಂ ಕೋವಿದಂ [ವಿದಂ ಜ್ಞಂ] ಜಾಣಂ" (ವಸ್ತುಕೋ. ೯೯–೫); ಕಿಱಿದಱೊಳೆ ಪಿರಿದು ಮರ್ಥಮನಱಿಪಲ್ ನೆಱೆ(ವಾ)ತನಾತನಿಂದಂ ನಿಪುಣಂ (ಕವಿರಾ. ೧–೧೫); ಬುಧರ್ಕ್ಷಾಂಶಮಾ ಸ್ಥಿತಿಯೊಳ್ ಕೂಡಿರೆ ಪಂಡಿತಂ ನಿಪುಣನಕ್ಕುಂ . . . ತದ್ವಧೂಟೀವರಂ (ಜಾತತಿ. ೨೨–೧೮); ಕಪಟವನು ನೆಱೆ ಮಾಡಿ ಜೂಜಿಸೊಳು ಪರಿಕಾರ್ಯವ ಜೈಸಿಕೊಡುವೆನು ನಿಪುಣರೆನ್ನಂದದಲಿ ಲೋಕದೊಳಿಲ್ಲ . . . ಎಂದನಾ ಶಕುನಿ (ಕುಪ್ಯಾಸ. ೧೨–೧೯); ಯಾವನೋ ನಿಪುಣನಾದ ಕಲಾವಿದನು ವರುಷಗಟ್ಟಲೆ ದುಡಿದು ಆದರಲ್ಲಿ ತನ್ನ ಕಲಾಪ್ರೌಢಿಮೆಯ ಭಟ್ಟ ಇಳಿಸಿದ್ದನು (ಕಂಬಹು. ೧). ೩. ನೈಪುಣ್ಯ; ಕುಶಲತೆ; ಕೌಶಲ್ಯ: ತಾಂ ಪಟ್ಟುವಿಟ್ಟ ಕ್ಷೇತ್ರದೊಳು ಕೃಷಿ ಮೊದಲಾಗೊಡೆಯ ಕೆಲಸಂಗೆಯ್ಯುತಿರ್ದ ಭೃತ್ಯಾದಿಗಳ್ಗೆನ್ನ ರೂಪುಗಂಡಲ್ಲದೆ ನಿಪುಣಮಾಗಿ ಗೆಯ್ಯರೆಂದು ದೂರದೊಳಿರ್ದು ಮಯ್ದೋರ್ಪುದು ರೂಪಾನುಪಾತಂ (ಶ್ರಾವಕಾ. ೨೨೬); ಅಪರಿಮಿತ ಸೂಕ್ಷ್ಮದೊಳಖಿಳಮಂ ಕಪಟನಾಟಕಸೂತ್ರವಿದ್ಯಾನಿಪುಣದಿಂ ಪ್ರಕಟಿಸುವ ತತ್ ಚೈತನ್ಯಭಾವಿ ಶಿವಂ (ಬಸಪು. ೫೧–೩೧). [ಸಂ.]

ನಿಪುಣತನ (ನಾ). ಕುಶಲತೆ; ನೈಪುಣ್ಯ: ಜಪ ಮಾಡಿದರೇನು ನೀತಪ ಮಾಡಿದರೇನು ಕಪಟ ಕಲ್ಮಷ ಕಳೆಯಲಿಲ್ಲ ನಿಪುಣತನ ಪಡೆಯಲಿಲ್ಲ (ಪುರಂದ. ೩–೧೫೫–೨). [ನಿಪುಣ+ –ತನ]

ನಿಪುಣತೆ (ನಾ). ೧. = ನಿಪುಣತನ: ಕೃತಿಪರಿಚಯಮುಂ (ತರ್ಕುಂ) ಪ್ರತೀತಿ(ಯಂ) ವಾಗ್ವಿದಗ್ಧತಾ ನಿಪುಣತೆ (ಯೊಳ್) (ಕವಿರಾ. ೧–೧೧), ಸಾಂಖ್ಯತತ್ತ್ವದ ಕೃಪೆಯ ಮಾಡಿದನಾತ್ಮಯೋಗದ ನಿಪುಣತೆಯಲಿ (ನಿಭಾಗ. ೧–೨–೪); ರಥಾರೋಹಣ ನಿಪುಣತೆಯೊಳ್ ಪಾರ್ಥನಂ ಪಳಿವ ಪಾರ್ಥಿವಸಮುದಯಂ ಮುದಂದಳೆದೇಱ ಪನ್ನತಿಕೆಯಿಂ ಪರಿಯಿಪಾಗಳ್ (ರಾಜಶೇ. ೬–೧೧ ಪ). ೨. ಜಾಣತನ; ಬುದ್ಧಿವಂತಿಕೆ: ಅವರಲ್ಲನೇಕರು ಕೃಷಿಯಲ್ಲಿಯೂ ಅದೇ ನಿಪುಣತೆಯನ್ನು ಇಟ್ಟುಕೊಂಡಿದ್ದಾರೆಂದು ಕೇಳಿದ್ದೇನೆ (ಚಂಗಾಳ್ವ. ೩೪೨); ಶಕ್ತಿ(= ಪ್ರತಿಭೆ), ಲೋಕದ ನಡವಳಿಕೆ, ಶಾಸ್ತ್ರ, ಕಾವ್ಯ ಮೊದಲಾದುವುಗಳ ಪರಿಶೀಲನೆಯಿಂದ ಬರುವ ನಿಪುಣತೆ (= ವ್ಯುತ್ಪತ್ತಿ) . . . (= ಅಭ್ಯಾಸ)–ಇವು ಮೂರು ಒಟ್ಟಿಗೆ ಕಾವ್ಯನಿರ್ಮಾಣಕ್ಕೆ ಕಾರಣ (ಭಾರವಿಣಾ. ೧೭೯). ೩. ಸಾಮರ್ಥ್ಯ; ದಕ್ಷತೆ. [ಸಂ. ನಿಪುಣತಾ]

ನಿಪುಣತ್ವ (ನಾ). = ನಿಪುಣತನ: ಅಪರಿಮಿತಕರ್ಮಗಳ ಅನುಸರಿಸಿ ನಡೆವುದಕೆ ನಿಪುಣತ್ವ ಮೊದಲೆ ಇಲ್ಲ (ಕನಕ. ೬೬–೧); ಆ ಲಲಿತತ್ವಂ ನಿಪುಣತ್ವಮಾ ರತಿವಿಲಾಸೌತ್ಸುಕ್ಯಮೇನಾದುದುಜ್ವಲ ಸಾಮಂತಕಿರೀಟ ರತ್ನರುಚಿಸಂಘಟ್ಟಾಂಘ್ರಿಪಂಕೇರುಹಾ (ವಿಷ್ಣುಪು. ೫–೫–೧೧೬). [ಸಂ.]

ನಿಪುಣಿಸು (ಕ್ರಿ). ಪಾರಂಗತನನ್ನಾಗಿ ಮಾಡು; ನಿಪುಣನನ್ನಾಗಿ ಮಾಡು: ಶಸ್ತ್ರವಿದ್ಯೆಗೊವಜಂ ಕಣಾ ನೀನಾಗು, ನಿನ್ನೊಲಿವರೆಲ್ಲರಂ ನಿಪುಣಿಸಾ ಎಂದವನ ಕುರುಕುಲದ ಶಸ್ತ್ರಾಗಮಾಚಾರ್ಯನಾಗಿಸಿಹನಂತೆ (ಹೆಬ್ಬೆರ. ೨–೨೧). [ನಿಪುಣ+ –ಇಸು$_3$]

ನಿಪುಣೆ (ನಾ). ಜಾಣೆ; ಬುದ್ಧಿವಂತೆ: ನೃಪಪುತ್ರಿ ಶೂರಸೇನಾಧಿಪನಿದಿರೊಳ್ ರಥಿನಿ ನಿಲ್ವುದುಂ ಚತುರಕಳಾಲಪನೆ ನೃಪೇಶ್ವರವರ್ಣನ ನಿಪುಣೆ ಪತಿಂವರೆಯ ಮುಂದೆ ನಿಂದಿಂತೆಂದಳ್ (ಶಾಂತಿಪು. ೫–೧೨೬); ಅಕ್ಕ ಮದನಶಾಸ್ತ್ರದಿ ನಿಪುಣೆಯರು ಸಿಕ್ಕ ಮಾಧವನ ಕಂಡರೆ ಅವರ್ ಬಿಡರು (ಪುರಂದ. ೩–೧೯೬–೧). [ಸಂ. ನಿಪುಣಾ]

ನಿಪುತ್ರಿಕ (ಗು). ೧. ಮಕ್ಕಳಿಲ್ಲದ ; ಸಂತಾನವಿಲ್ಲದ : ಖಾನಾವಳಿಯ ಊಟ ಮಗನಿಗೆ ಬಗ್ಗದೆಂದು ತಮ್ಮ ತಂಗಿಯಾದ ವನಮಾಲಾನನ್ನು ಜೊತೆಗೆ ಇಟ್ಟರು. ವನಮಾಲಾ ನಿಪುತ್ರಿಕ ವಿಧವೆ (ಜಯಂತ. ೧೫೩). (ನಾ). ೨. ಮಕ್ಕಳಿಲ್ಲದಿರುವಿಕೆ ; ಸಂತಾನವಿಲ್ಲದಿರುವಿಕೆ : ಪುರದೊಳಗೆ ಅನ್ಯಾಯ ನಿಪುತ್ರಿಕವಿಲ್ಲ ನಾಡಿಂಗೆವು ಪಟ್ಟಣಕ್ಕೆವು ಅಸತು ಅಕಾಂತುಕಯೇನು ಹುಟ್ಟಿದಡೆವು ಅರಸುಮಂನೆಯ (ಕೆಲ್ಲಾಶಾ. ೨೦–೩೪ ; 1265). ೩. ಮಕ್ಕಳಿಲ್ಲದವನು ; ಸಂತಾನವಿಲ್ಲದವನು : ಅಹುದೇ ನಾ ನಿಪುತ್ರಿಕ ?–ಇಹಪರದೊಳು ನಿರ್ಗತಿಕ ? (ಕ್ರೌಂಚಪ್ಪ. ೩೮–೬). 'ಅಪುತ್ರಿಕ' ಪರಾ. [ಸಂ.]

ನಿಪುತ್ರಿಕತೆ (ನಾ). = ನಿಪುತ್ರಿಕ ೨ : ಆ ಪಂಹಾಸವು ತನ್ನ ನಿಪುತ್ರಿಕತೆಯನ್ನು ವ್ಯಂಗ್ಯವಾಗಿ ಸೂಚಿಸಿದಂತೆ ಕಿಟ್ಟಿಗೆ ಅನಿಸಿದ ಮೂಲಕ ಅವನ ಮುಖ ಗಂಭೀರವಾಯಿತು (ಗುಸೂಯಾ. ೧೮೫).

[ಸಂ. ನಿಪುತ್ರಿಕತಾ]

ನಿಪ್ಪಟ (ಗು). ಅಧಿಕವಾದ ; ಅತಿಶಯವಾದ : ಪಜ್ರದ ಹರಳೊಳಡಕವಾಗಿರುವ ದ್ರವಾಗ್ನಿಯಂತಾ ಭಾಲಗುಲ್ಮಮೂ ನಿಪ್ಪಟ ಬ್ರಹ್ಮಚರ್ಯದ ದೀಧಿತಿಯ ನೋಡ ! (ಗೂಳ್ಳೋಥಾ. ೪–೮೮).

ನಿಪ್ಪಟನೀರು = ಬರೀ ನೀರು ; ತುಂಬಾ ನೀರು : ಈ ದಿನ ಸಾರು ನಿಪ್ಪಟ ನೀರಾಗಿದೆ (ರೂಢಿ). [<ಪ್ರಾ. ಣಪ್ಪಟ್ಟ]

ನಿಪ್ಪಟಂ (ಅ). ಅಧಿಕವಾಗಿ ; ಅತಿಶಯವಾಗಿ : ನಿಪ್ಪಟಮೆ ಜೀರ್ಣಮಾದುದನುಪ್ಪಟ್ಟಾಯ್ತನ ಮಹಾಜಿನೇಂದ್ರಾಲಯಮಂ ನಿಪ್ಪೊಸತು ಮಾಡಿದಂ ಕರಮೊಪ್ಪರೆ ಹುಳ್ಳಂ ಮನಸ್ವಿ ಬಂಕಾಪುರದೊಳ್ (ಎಕ. II, ೩೪೫–೪೦ ; ಸು. 1159). 'ನಿಪ್ಪುಟಂ' ಪರಾ. [<ನಿಪ್ಪಟ]

ನಿಪ್ಪಟ್ಟು, ನಿಪ್ಪಿಟ್ಟು (ನಾ). ಒಂದು ಬಗೆಯ ಕರಿದ ಕಾರದ ತಿಂಡಿ : ಏನು ಬೇಕಾದರೂ ಕೇಳು ಮಗು. ನಾಚಿಕೆಪಟ್ಟುಕೊಳ್ಳಬೇಡ. ನಿಪ್ಪಟ್ಟು ಬೇಕೆ ? (ದಾನಚಿಂ. ೮೪). ನಿಪ್ಪಿಟ್ಟು : ಸೀತೆ ಹೆದರಿ ಅವರ ಕೈಗೆಲ್ಲ ಒಂದೊಂದು ನಿಪ್ಪಿಟ್ಟು ಕೊಟ್ಟು . . . ಹೊರಕ್ಕೆ ಕಳಿಸಿದಳು (ಅಪತಂ. ೬೦).

[ದೇ.॥ ತೆಲು. ನಿಪ್ಪಟ್ಟು, ನಿಪ್ಪಟ ; ಕೋಲಾ. ನಿಪಟಿ, ನೀಪಟಿ]

ನಿಪ್ಪಟ್ಟೆ (ನಾ). ಒಂದು ಬಗೆಯ ಮಂಚ (?) : ಚಪ್ಪರಮಂಚ ಗುಜ್ಜರಿಗಾಲಮಂಚ ಮೇಲುಪ್ಪರಮಂಚ ಹೂಮಂಚ ನಿಪ್ಪಟ್ಟೆ ಶಕುನಿ ತೂಗುವ ಮಂಚ ಸೆಳೆಮಂಚವೊಪ್ಪವಾಂತೆಸೆದುವು (ಧರಚ. ೧೫–೨೬).

[?]

ನಿಪ್ಪಡಂ (ಅ). ಅಧಿಕವಾಗಿ ; ಅತಿಶಯವಾಗಿ (?) : ಒಪ್ಪುವ ಮಾರ್ಗಶೀರುಷದ ಪುಣ್ಣಮೆಯೊಳ್ ಕುಜಾಪಾಗೆ ಶುಂಠಿಯಂ ತುಪ್ಪ ಮನುಪ್ಪು ಜೇನ ಘೃತ ಸರ್ಕರೆಯಂ ಪಿಡಿದರ್ಪು ಮಾಜುಕೊಳ್ ತಪ್ಪದೆ ಮೂಱುತಿಂಗಳೊಳೆ ಲಾಭಮನುನ್ನತಮುಂಟುವಾಡುಗುಂ ನಿಪ್ಪಡ ಮಲ್ಲದಿರ್ಪ [ಪಾಠಾಂ. ಪೊಪ್ಪದೆ] ಸರದಂಗೆ ಧನಂ ಕಿಡದಂತೆ ನಿಶ್ಚಯಂ (ಉಟ್ಟಮ. ೬–೩೯). [<ನಿಪ್ಪಟ ?]

ನಿಪ್ಪಡಿ (ನಾ). ಎಲೆಗಳಲ್ಲದ ಕೆಂಪುಹೂವುಗಳನ್ನು ಬಿಡುವ ಒಂದು ಬಗೆಯ ಗಿಡ ; "ಕ್ರಾಕರ" (ಪಂಚಿಕ. ೨೫೯). [?]

ನಿಪ್ಪತಿ (ನಾ). ಒಡೆಯನಿಲ್ಲದಿರುವಿಕೆ.

ನಿಪ್ಪತಿಯಾಗು = ದಿಕ್ಕಿಲ್ಲದಾಗು : ಮನದಯುಕ್ತಿ ನಿಪ್ಪತಿಯಾಗಿ ನಿಜವನೊಡಗೊಂಡರ್ಪ ಭಕ್ತರಿಗೆ ತೊತ್ತಾಗಿ ಬಾಳ್ವನೆಂಬುದು ನಿಜೈಕ್ಯಂಗೆ ಭೃತ್ಯಾಚಾರವು (ಸ್ಥಲಾರ. ೨–೩೧). [<ಸಂ. ನಿಃಪತಿ]

ನಿಪ್ಪರಿ (ನಾ). ನೀರು ಹರಿಯುವ ಹಳ್ಳ : ನಾಗಿಯಬ್ಬೆಗಳಬ್ಬೆ ನಾರಣಬ್ಬೆಯ ಕಟ್ಟಿಸಿದ ನೈರುತಿಭಾಗದ ಮುಟ್ಟದ ಕೆಜೆಯ ಎರಡು ಕಡೆಗೋಡಿನ ನಿಪ್ಪರಿಯೆ ಮೇರೆಯಾಗಿ (ಎಕ. XII, ೨೦೨. ೩೯–೩೩; 920).

[ಇ ಇದು 'ನೀರ್ವರಿ' ಎಂಬುದರ ಅಪಲಿಖಿತವಿರಬಹುದೆ ?]

ನಿಪ್ಪಲ್ (ನಾ). ಮಕ್ಕಳಿಗೆ ಶೀಶೆಯಲ್ಲಿ ಹಾಲು, ಹಣ್ಣಿನ ರಸ ಮುಂತಾದುವುಗಳನ್ನು ಕುಡಿಸುವಾಗ ಉಪಯೋಗಿಸುವ ಮೊಲೆತೊಟ್ಟಿನ ಆಕಾರದ ರಬ್ಬರಿನ ಸಾಧನ : ಶೀಶೆಗಳು, ನಿಪ್ಪಲ್‌ಗಳು, ಹಾಲನ್ನು ತಯಾರುಮಾಡುವ ಇತರ ಪಾತ್ರೆಗಳು ಇವೆಲ್ಲವುಗಳನ್ನೂ ಪರಿಶುದ್ಧವಾಗಿ ತೊಳೆದು ಶುಚಿಯಾಗಿಟ್ಟುಕೊಳ್ಳಬೇಕು (ಗೃಹವಿ. ೧೦೩). [←ಇಂ. Nipple]

ನಿಪ್ಪಸರ (ನಾ). ೧. ಅತಿಶಯ ; ಆಧಿಕ್ಯ ; ಹೆಚ್ಚಳ : ಉಲನೆ . . . ನಿಚ್ಚಲುಮಿಸೆ ಕಂತು ನಿಪ್ಪಸರದಿಂ ಸರದಿಂ ಸರದಿಂಪುದೋಱೆ ಕೋಗಿಲೆ ವಿಧು ಬೀಱೆ ಭೀತಿಕರಮಂ ಕರಮಂ ಕರಮಂ ಕಪೋಲದೊಳ್ ನಿಲಿಸುವಳೆಯ್ದೆ (ಜಗವಿ. ೧೧–೧೯) ; ಆಡುತೆ ಪಾಡುತೆ ಶಿವನಂ ಪರಸುತೆ ಒಪ್ಪುವ ಮುತ್ತೈದೆಯರಿಕ್ಕೆಗಳಿಂ ನಿಪ್ಪಸರದ ಕವಿಗಳ ತೆಕ್ಕೆಗಳಿಂ . . . ಪೊನ್ನಾಂಬಲದಧಿಪತಿಯೊಪ್ಪಿರ್ದಂ (ತಿರುನಾ. ಹ. ೧೧೧–೨೨) ; ಒಪ್ಪುವ ಕರಸ್ಥಲ ಉರಸ್ಥಲದಚಲರಲ್ಲಿ ನಿಪ್ಪಸರದಚ್ಚಶಿವಲಿಂಗವ್ರತಿಗಳಲ್ಲಿ ಪಂಚಾಕ್ಷರಿಯೆ ರೂಪುಗೊಂಡಂದದಿಂ ಕೆಲರು . . . ಕೋಟವೃಷಭಧ್ವಜದ ನಡುವೆ ಕೂಡೆ (ವಿಕಾಂದ. ಹ. ೨೮೬–೧೨) ; ಹೊಸ ಹೊಗಳ ಜವ್ವನ ಸಿರಿಯ ಜೋಡಣೆ ಜನಮನವನಾವರಿಸಿದುದು ನಿಪ್ಪಸರದಲಿ ಪಾಂಚಾಲನಂದನೆಯ (ಕುಸ್ಯಾಅ. ೧೩–೨೬) ; ಬಸುಜ ಬಾಯ್ಗಳ ಹೊಯ್ಗುಳಿನ ನಿಪ್ಪಸರ ದಾಕ್ರಂದನದ ನಾರೀವಿಸರ ಬಳಸಿತು ವೀರಧೀರೋದ್ಧತ ದಶಾನನನ (ತೊರರಾ. ೬–೫೧–೯೧). ೨. ವೇಗ ; ಶೀಘ್ರತೆ : ಅಸಿಯಲಿಟ್ಟರೆದಂತೆ ಬಲ ನಿಪ್ಪಸರದಲಿ ನುಗ್ಗಾಯ್ತು ನೀಗಿದರಸುವನೀ ದುಶ್ಶಾಸನನ ನಂಬುಗೆಯ ಪರಿವಾರ (ಕುಸ್ಯಾಕ. ೧೯–೨೦) ; ಈ ಸೈನ್ಯಸುಭಟರ ನೆರವಣಿಗೆ ನಿಪ್ಪಸರದಲಿ ಮುಸುಕಿತು ಧನಂಜಯನ (ಕುಸ್ಯಾಕ. ೨–೫೩) ; ಮಿಸುಪ ಸಂಪಗೆಯ ಕುಸುಮದ ಸುರಭಿಗೆಜಿಗಿ ನಿಪ್ಪಸರದಿಂ ಮೂರ್ಛೆಯೊಂದಿದ ಪರಮೆವಜುಯಂತೆ (ಅರಾಶ. ೫–೫–೨೬) : ಚಪ್ಪರಿಸಲರಿದೀ ನಿಸಾಟನ ನಿಪ್ಪಸರದಿಂ ಪಾಂಡವರಿಗಡಪ್ಪಿತೆಂದರೆ ಸಾಮವೇ ಹಿತವೆಂದು ನಡೆತಂದ (ಸಾಳ್ವಭಾ. ೩೦–೨೭). ೩. ರಭಸ ; ಜೋರು ; ಆವೇಗ : ಕೇಳು ಭೂಮಿರುಹದ ಶಿಖರ ವಿಶಾಲದೊಳು ನಿಪ್ಪಸರದಿಂ ಸಲೆ ಬೀಳುತಿಹ (ಸ್ವರೂಪಾ. ೧–೨) ; ಮಸಗಿದುದು ಬಹುವಾದ್ಯಶಯ ನಿಪ್ಪಸರದಲಿ ನಿಸ್ಸಾಳತತಿ ಗರ್ಜಿಸಿದುವು (ಸಂಭವ. ೩೦–೫) ; ಮತ್ತೆ ಹೊಯ್ದನು ಭೀಮಸೇನನ ನೆತ್ತಿಯನು ನಿಪ್ಪಸರದಲಿ ಕಳೆ ಹತ್ತಿ ಝೋಂಯಿಸಿ ತಿರುಗಿದಿದ್ದನು ಬಿಗಿದ ಮೂರ್ಛೆಯಲಿ (ಕುಸ್ಯಾಗ. ೬–೩೬) ; ಬೆಸುಗೆಗಳಚಿದ ಶಾಲ್ಮಲಿಯ ಭೂರಸದವೊಲು ಬಯಲಾಯ್ತು ಬಲ ನಿಪ್ಪಸರದಲಿ ಬೊಬ್ಬಿದಲು ಬಿರಿದುದು ಗಿರಿ (ತೊರರಾ. ೬–೨೩–೧೯) ; ದರ್ಪಕ ದೈತ್ಯನಲ್ಲಭನೊಳಗಿದಿರಾಂತು ನಿಪ್ಪಸರದೆ ತೋಳ ಮೊದಲ ಚಪ್ಪಳೆಗೊಳಿಸಿ ದಂಡೆಯ ಹೂಡಿ ನಿಂದಿರುವೊಪ್ಪವನೇನ ಬಣ್ಣಿಪೆನು (ವೋಹಕ. ೧೨–೮೪). ೪. ನಿಷ್ಠುರ ; ಉರವಣೆ : "ಉರವಣೆಯೆಂದುಂ, ನಿಪ್ಪಸರಮೆಂದುಂ ನಿಷ್ಠುರಂ" (ಕಶಾಸಾ. ೩೧–೬೨೮) ; ನಿಪ್ಪಸರದಸಿ ಬಯಲ ದೇಹಿಯನಪ್ಪಲಜಾಯದಿದೇನು ಚೋದ್ಯವೊ (ಪ್ರಭುಲಿಂ. ೧೯–೩೫) ; ಅಪ್ಪುವೊಡೆ ನಿಜಕಾಂತನಿಲ್ಲದೊಡೆ ಮನ್ಮಥಂ ನಿಪ್ಪಸರದಿಂದಿಸುವ ಕುಸುಮಾಸ್ತ್ರಕನ್ಯರಂ ಬಪ್ಪಸರಕವನಜಾಯದೊಡಗೂಡವೇಳ್ಪುದಿದಕಂಜುವೆಂ ತಾನೆಂದಳು (ಚೈಸುಭಾ. ೨೭–೧೩). ೫. ನಿಷ್ಠುರತೆಯಿಂದ ಕೂಡಿದವನು : ಪ್ರತಿಬಲದಗ್ಗಳೆ ರಿಪುಗೆ ನಿಪ್ಪಸರ ಕಲಿಯುಗಕಾಮಂ ಶ್ರೀಮತ್ ಕನ್ನಯ್ಯಂ (ಎಕ. XI, ಚತ್ರದು. ೪೯–೧೫ ; 947) ; ಸುಖಗೆಟ್ಟು ಕುಸುಮಕ್ಕೆ ಕೋಪಿಸುವ ಸ್ಥಾಣುವಂ ಹೊರೆವ ನಿಪ್ಪಸರ ಹೋ (ಸಿದ್ಧರಾ. ೧–೫೯). [<ನಿಡಿದು + ಪಸರ]

ನಿಪ್ಪಸರಂಬೆಱು (ಕ್ರಿ). ಆಧಿಕ್ಯವನ್ನು ಪಡೆ ; ಅತಿಶಯವನ್ನು ಹೊಂದು: ಪೊಸತಂಡಸದಿಂ ಕಿಳ್ತಂ ದಸಿಯಂ ಜೀರ್ಕೋಳವಿ ಚಮ್ಮಿದಂತಿರೆ ಮುನ್ನುಂಡಸಮಸಿತಭಸಿತಮದು ನಿಪ್ಪಸರಂಬೆತ್ತೆಱ್ಚು ಪಾಯ್ದು ದೇಱುಂದಾಗಳ್ (ವೃಷಪಿ. ೨೯-೧೩೫). [ನಿಪ್ಪಸರ + ಪೆಱು$_1$]

ನಿಪ್ಪಸರಿಸು (ಕ್ರಿ). ಹೆಚ್ಚಾಗು ; ಹರಡು ; ವ್ಯಾಪಿಸು : ಈ ಇಂದಿನ ನಮ್ಮವನು ಕೊಲೆಗಾದ ಬಳಿಕ ಕೆರಳ್ದು ಕಡಂಗಿ ನಿಪ್ಪಸರಿಸುವ ಕಡುಪಿನ ಅವನ ಪಕ್ಷದವರ ಮಂತ್ರತಂತ್ರಗಳು ಕಾರ್ಯರೂಪಕ್ಕೇರಿ ಬಂದು (ಮಂತ್ರಶ. ೧೩೪-೯). [ನಿಪ್ಪಸರ + -ಇಸು$_3$]

ನಿಪ್ಪಾಳೆಯ (ನಾ). ಪಾಳೆಯವನ್ನು ತೆಗೆಯುವಿಕೆ ; ಊರು ಬರಿದಾಗುವಿಕೆ : ಧೃಗು ಜಾಬಾಲಿ ಜಮದಗ್ನ್ಯಾದಿ ದಿವ್ಯಮುನೀಂದ್ರ ಗಣವಿದೆಲ ಓಲಗಿಸುವುದು ದುಷ್ಕೃತಿಗೆ ನಿಪ್ಪಾ[ಪಾಠಾಂ. ಪ್ಪಾ]ಳೆಯುವು ಬಳಿಕಹುದು ಮಂತ್ರವಿಶಾಲಬೀಜದಿಯಹುದು ಸಂತತಿ ಕಾಂತೆ ಕೇಳೆಂದ (ಕುಮಾಭಾ. ೪-೩೧). [<ನಿರ್ + ಪಾಳೆಯ]

ನಿಪ್ಪಿಟ್ಟು 'ನಿಪ್ಪಟ್ಟು' ನೋ.

ನಿಪ್ಪು$_1$ (ಕ್ರಿ). (ಕರಾ) ಹೊಡೆ ; ಜಪ್ಪು.

ನಿಪ್ಪಿಸಿಕೊಳ್ಳು = ಹೊಡೆಯಿಸಿಕೊಳ್ಳು ; ಜಪ್ಪಿಸಿಕೊಳ್ಳು : ಅವನ ಹತ್ತಿರ ಜಗಳಕ್ಕೆ ಹೋಗಿ ನಿಪ್ಪಿಸಿಕೊಂಡು ಬಂದೆಯಾ ? (ರೂಢಿ). 'ಜಪ್ಪಿಸು' ಪರಾ. [?]

ನಿಪ್ಪು$_2$ (ನಾ). ಕೆಂಡ : ಉರಿಯುವ ಬೆಂಕಿಗಿಂತ ನಿಪ್ಪಿನಲ್ಲಿ ಗಡ್ಡೆ ಚೆನ್ನಾಗಿ ಬೇಯುತ್ತದೆ (ರೂಢಿ). [ದೇ.॥ ತಮಿ. ನೆರುಪ್ಪು ; ಮಲ. ನೆರಿಪ್ಪು, ನೆರಪ್ಪು ; ತೆಲು. ನಿಪ್ಪು, ನಿಪ್ಪುಕ ; ಕೋಲಾ ನಿಪ್ಪ]

ನಿಪ್ಪುಗು (ಕ್ರಿ). ನೀರು ಒಳಗೆ ನುಗ್ಗು,—ಪ್ರವೇಶಿಸು (?) : ಸಮುದ್ರಂ ಬಹಿತ್ರಂ ಬೆದಱುವಂದು ತಿಟ್ಟನೆ ತಿಱುದು ಕಲ್ಲೆಯುಂ ಕವಿಯುಮಾಗೆ . . . ಕೀಲ್ ಕಬಲೆ ಬಿಗುಪು ಬಬಲೆ ನಿಪ್ಪುಗೆ ಭಯಂ ಮಿಗೆ ನಾವಿಕಾಜನಮೆರ್ದೆಗೆಟ್ಟು ಬಾಯ್ವಿಟ್ಟು ಸುಯ್ದು ಪೊಯ್ದು ಬಬಲ್ದೆಱಲ್ದು ಮಮ್ಮಲಮಱುಗೆ ಚಾರುದತ್ತಂ ಕಂಡು (ಬಂಹರಿ. ೪-೧೪ ಸ). [P ಇದು 'ನೀರ್ಪುಗು' ಎಂಬುದರ ಅಪಲಿಖಿತವಿರಬಹುದೆ ?]

ನಿಪ್ಪುಟಂ (ಅ). ಸಂಪೂರ್ಣವಾಗಿ ; ಪೂರ್ತಿಯಾಗಿ : ವಿರಲಫಲಂಗಳಾದುಮಖಿಲೌಷಧಿಗಳ್ ರಸವೀರ್ಯಪಾಕಮುಂ ವಿರಳಮೆ ವೃಕ್ಷರಾಜಿಗಳೊಡಲ್ ಪಸಿವಾರ್ದಳುರ್ದಳ್ಕೆ ನಿಪ್ಪುಟಂ ಕರಗಿದುದೆಮ್ಮ ಬಾಟ್ಪ. ತೆಱನಾವುದೊ (ಅಪಿಪು.೮-೬೨). 'ನಿಪ್ಪಟಂ' ಪರಾ. [<ಸಂ. ನಿಷ್ಪುಟ]

ನಿಪ್ಪೆಣ (ನಾ). ನಿಡಿದಾದ ಹೆಣ : ಹನುಮನಂಗದ ನಿಪ್ಪೆಣನ ಕೊಂಡಗ್ನಿಸುತ ಸಹಿತ್ಯೆದಿದನು ನೃಪನ (ತೊರಾ. ೬-೪೮-೨೯).

[<ನಿಡಿದು$_1$ + ಪೆಣ]

ನಿಪ್ಪೊಸ(ಗು). ಹೊಚ್ಚಹೊಸ ; ಬಹಳ ನೂತನವಾದ : ಪೊಸ ಪೊಸ ಕಾದಲೆಯರ್ ನಿಪ್ಪೊಸ ಪೊಸರುಚಿ ರಸನೆಗಂತೆ ಕಾಳ್ಗಳಪಂಗಳ್ ಪೊಸಪೊಸ ಬವಱಗಳುತ್ಕಟದ ಸುಖಂಗಳುಮಾಳ್ವವರಮೆ ಕವಿ ಕವಿ ನಿಸದಂ (ಸಂಸಪ. ೪೫-೮೫) ; ಪೊಸ ಪುಣುಸೆಯ ಪಗಿನಂ ನಿಪ್ಪೊಸ ಬೇವಿನ ಬಿತ್ತನರೆದು ಬಲ್ಲರ್ಬೇಗಂ ಪಶುವಿನ ಮೂಗಿನಲರೆದಡೆ ಬಸವಳಿದ ಜ್ವರಾತಿಸಾರಮಾಗಳೆ ಕೆಡುಗುಂ (ಗೋವೈದ್ಯ.೧೯೯-೯). 'ನಿಪ್ಪೊಸತು' ಪರಾ.

[<ನಿಡಿದು$_1$ + ಪೊಸ]

ನಿಪ್ಪೊಸತು (ನಾ). ಹೊಚ್ಚಹೊಸದು ; ಅತಿ ಹೊಸದು : ಪೊಸತಂ ಮಾಡಿಟ್ಟನೋ ನಿಪ್ಪೊಸತು ದಲಿದಱೊಂದಂದಮೆಂಬಂತದೇಂ ರಂಜಿಸಿತೋ ವಿದ್ಯಾಧರಾಧೀಶ್ವರನ ಕೆಲದ ವಿದ್ಯಾಧರಸ್ತ್ರೀಸಮೂಹಂ (ಅಪಿಪು. ೧-೮೨) ; ನಿಪ್ಪೊಸತೆನಿಪ ದೇಸೆ ಮಾಸಱಮೆಸೆದಿರೆ ಸಭೆ ಮೆಚ್ಚೆ ಪೊಚ್ಚ ಪೊಸತಾಯ್ತು ರಸಂ (ಅಜಿಪು. ೪-೩೩) ; ನಿಪ್ಪಟಮೆ ಜೀರ್ಣಮಾದುದನುಪ್ಪಟ್ಟಾಯ್ತನ ಮಹಾಜಿನೇಂದ್ರಾಲಯಮಂ ನಿಪ್ಪೊಸತು ಮಾಡಿದಂ ಕರಮೊಪ್ಪಿರೆ ಹುಳ್ಳಂ ಮನಸ್ಸಿ ಬಂಕಾಪುರದೊಳ್ (ಎಕ. II, ೩೪೫-೪೧; ಸು. 1158) ; ನೋಡುವೊಡಿಲ್ಲ ಕಣ್ಣಲಸಿ ನಿಪ್ಪೊಸತಂ (ಲೀಲಾವ. ೨-೭೯); ತೆಳ್ವಸಿಱುನಿಸಂ ಪೊಂಗದು ನಿಪ್ಪೊಸತು ಸತಿಯ ಗರ್ಭವಿಲಾಸಂ (ಅಸಂಪು. ೪-೧೩೧) ; ನಿಪ್ಪೊಸತಪ್ಪ ರತ್ನಚಯಮಂ ಪಿಡಿದಾಯ್ದು ಸುಧಾರಸಂಗಳಿಂ ತೊಪ್ಪನೆ ತೊಯ್ದುವೊಲ್ ಪೊಳೆವ ಪಲ್ಗಳಂ (ಬಾಧಪು. ೨-೫೦) ; ಒಂದಿನಿಸುಂ ತಡವಂ ಮಾಡದೆ ತಮಗುಳ್ಳ ನಿಪ್ಪೊಸತಪ್ಪ ಸುವಸ್ತುವನೆಮ್ಮಯ ಚೊಪ್ಪಂಗೆಲ್ಲಾ ಲೋಕವಱುವೊಲ್ ಕಪ್ಪಂದೆತ್ತವರಲ್ಲದೆ ನಿರ್ನೆರ ಮಾಗಿರ್ದವರಿಲ್ಲ (ಜಯಕೀ. ೬-೩) ; ನಿಪ್ಪೊಸತೆನಿಪ ನೈವೇದ್ಯದಿಂದೊಮ್ಮೆ ಲೇಸಪ್ಪ ಭಕ್ಷ್ಯಾಳಿಯಿಂದೊಮ್ಮೆ . . . ಜನಪನಂಬಿಕೆಯನರ್ಚಿಸಿದ (ಭರಪ. ೧೯-೧೨೦).

ನಿಪ್ಪೊಸವು (ಬಹುವ) : ರಸಭಾವಾಭಿನಯಂಗಳ್ ಪೊಸವೆ ಪುಗಿಲ್ ಪೊಸವೆ ಚಲ್ಲಿಗಳ್ ಪೊಸವೆ ನಯಂ ಪೊಸವೆ ಕರಣಂಗಳುಂ ನಿಪ್ಪೊಸವನೆ ಪೊಸಯಿಸಿದಳಾಕೆ ನಾಟ್ಯಾಗಮಮಂ (ಅಪಿಪು. ೯-೨೫).

[<ನಿಡಿದು$_1$ + ಪೊಸತು]

ನಿಬಂದಿ, ನಿಬಂಧಿ (ನಾ). ಒಂದು ಬಗೆಯ ತೆರಿಗೆ : ಗಾಣವಾರಿ ಗಾಣಂ ಪ್ರತಿಮಾನ ೧ ಅಸಗರೊಕ್ಕಲು ನಿಬಂದಿ ಹಿಡಿಯದೆ ಸೀರೆ ೧ ಉಪಿನ ಕಾವಲಿದೆಱೆ ಪ್ರತೀಕಂ ಪಣ ೫ ಉಪ್ಪು ಕೊಳಗ ೫ ಯಿಂತಿವು ಮೊದಲಾಗಿ . . . ದೇವರ ಶ್ರೀಪಾದಕ್ಕೆ ಧಾರೆಯನೆಱೆದು ಬಿಟ್ಟಳು (ಸೌಇಇ. IX-i, ೧೪೫-೩೬ ; 1079) ; ಹಲುಗೂರು ಬೋಡರ ಹಳ್ಳಿಯಲು ನಾಲು ಕೋಟಿ ಪಾಣ ನಿಬಂದಿ ದರುಸನ ಕಾಣಿಕೆ ಮುಂತಾದ ಕಾಣಿಕೆಗಳು (ಎಕ. IX, ಕಾಸಕಾ. ೭೨-೨೭ ; 1277). **ನಿಬಂಧಿ** : ಪಾಣ ಎಳ್ಳು . . . ಕಳುಕು ಕಂಡಿಕೆವಣ ಪಾಣ ನಿಬನ್ಧಿ ನೂಲ ಹದಿಕೆ ಅಡಕೆಯ ಸುಂಕ (ಎಕ. VI, ತರೀಕ. ೨೦-೨೯ ; 1185).

[<ಸಂ./ನಿಬಂಧ]

ನಿಬಂಧ (ನಾ). ೧. ಕಟ್ಟು ; ಬಂಧ : "ಅನಾಹಮದು ನಿಬಂಧಂ" (ಪಸ್ತಕೋ. ೩೩-೩೫) ; ದಾಶರಥಿಸುತ ಕೇಳ್ ಕಪರ್ದಿಯ ಮೃಸಿರಿಯ ಮಿಳ್ಕಸು - ಶಿರೋವಿನ್ಯಾಸವಿಮಲಜಟಾನಿಬಂಧದ [ಪಾಠಾಂ. ನಿಬದ್ಧತ, ವಿಬಂಧದ]ನಾಟಕಾಂಗದಲಿ (ತೊರಾ. ೨-೪-೧೩). ೨. ಕರಾರು ; ನಿಯಮ ; ಕಟ್ಟಳೆ. ೩. ಕಾರಣ ; ನಿಮಿತ್ತ : ನೂತನರುಂ ಪುರಾತನರುಮಪ್ಪ ಮಹಾಕವಿಗಳ್ಕವಿವಿಖ್ಯಾತಿಗೆ ಶಾಸನಂ ಬರೆದ ಸತ್ಕೃತಿಬಂಧಮದರ್ಕೆ ಸಜ್ಜನಸ್ತ್ರೀನಿಬಂಧನಲ್ಲದೊಡದೇಂ ಮರಿತಕ್ಷಯಕಾರಣಂ ಜಿನಖ್ಯಾತಿನಿಬಂಧಮೆಂಬ ಬಗೆ ಕೈಮಿಗೆ ಪೇಟ್ಟಪೆನೀ ಪ್ರಬಂಧಮಂ (ಪಲ್ಲಿಪು. ೧-೫೧). ೪. ಒಂದು ನಿರ್ದಿಷ್ಟವಿಷಯದ ಮೇಲೆ ಬರೆಯುವ ಗ್ರಂಥ ; ಪದವಿಗಾಗಿ ಬರೆಯುವ ಸಂಶೋಧನಾತ್ಮಕ ಬರೆವಣಿಗೆ : ಅವರ ಪ್ರೋತ್ಸಾಹದ ಮತ್ತು ಮಾರ್ಗದರ್ಶನದ ಫಲವೇ ಈ ನಿಬಂಧ (ಕಶಾಅ. ಮೊದಲ ಅರಿಕೆ). ೫. ಆಧುನಿಕ ಗದ್ಯ ಸಾಹಿತ್ಯದ ಒಂದು ಪ್ರಕಾರ ; ಪ್ರಬಂಧ : ನಾನು ಹಿರಕ್ಲಿಟೋಸನನ್ನು ಕುರಿತು ಒಂದು ನಿಬಂಧವನ್ನು ಬರೆದಿದ್ದೆ. ಆ ನಿಬಂಧವನ್ನು ಕುರಿತು ಶ್ರೀ ಅರವಿಂದರು ಹತ್ತು ಬರಹಗಳನ್ನು ಬರೆದರು (ಪರಸ. ೭). ೬. ಒಂದು ಬಗೆಯ ತೆರಿಗೆ : ಮನ್ನೆಯ ನಿಬನ್ಧದ ಕಿಱುದೆಱೆಗಳವಾವು ವೆನ್ದಡೆ (ಸೌಇಇ. XX, ೪೭-೩೫ ; 1074) ; ಅಲ್ಲಿ ತವಗೆ ನಡವ ಮನ್ನೆಯದ ನಿಬನ್ಧದ ಹೊನ್ನೊಳಗೆ ವರ್ಷಂಪ್ರತಿ ಮೂಱುಗದ್ಯಾಣ ಪೊನ್ನನಾಱಂದ್ರಾರ್ಕ್ಕಕಾರಂಬರಂ ಸಲ್ವನ್ತಾಗಿ ಧಾರಾಪೂರ್ವ್ವಕವಾಗಿ ಕಾಲಂ ಕಟ್ಟಿ ಬಿಟ್ಟರ್ (ಸೌಇಇ. XX, ೧೦೪-೨೨ ; 1133) ;

ಪಾಂಡ್ಯನಾಡ ಪಡಿಕೇಣಯ ಸ್ಥಳದ ಕೋಗಳಿನಾಡ ದವಸಾಯದೊಳಗೆ ವರಿಶಂ ಪ್ರತಿ ನಿಬಂಧವಾಗಿ ಸಲುವ ಗದ್ಯಾಣವೆರಡು (ಸೌಇಇ. IX–i, ೩೪೧–೧೦; 1226); ಆ ನಾಡಧಿಕಾರಿಯ ನಿಬಂಧ ಆ ನಾಡ ಸೇನಬೋವರ ನಿಬಂಧ ಪೊಲಗಾಯಿತ್ತಕ್ಕೆ ತೆರ್ಪುವ ಗ ೨೦೫ ಪ ೭ (ಎಕ. XV, ಬೇಲೂರು. ೨೯೮–೬೬; 1279); ತೊಡರು ಗ ೧ ಪಾಣ ನಿಬಂಧ ಪ ೯ ಅನ್ತೂ ಗ ೧೬ ಪ ೬ (ಎಕ. VI, ಕಡೂರು. ೬೮–೩೫; ?). ೭. [ವ್ಯಾಕ] (ವಾಕ್ಯ) ರಚನೆ,—ಪ್ರಕ್ರಿಯೆ. [ಸಂ.]

ನಿಬಂಧನ (ನಾ). ೧. ಕಟ್ಟುವುದು; ಬಂಧನ : ನಿಮಿತ್ತನಿಬಂಧನಮಪ್ಪ ಶಾಸ್ತ್ರದೊಳಂ ಪುರಾಣದೊಳಂ ತನ್ನ ಕಂಡ ತೆಱನಿನಂತೆಂದು ಬಿನ್ನಪಂಗೆಯ್ದುಂ (ಚಾವುಂಪು. ೨೯೭). ೨. ನಿಯಮ ; ಕಟ್ಟಳೆ : ಹೀನಗತಿ ಪಡಿತಳದ ಹೊಯ್ಲುತ್ತಾನಘಾಯದಲೊದಗಬೇಕೆಂಬೀ ನಿಬಂಧನವಾರಲಳಿದುದು ಕೃಷ್ಣ ಹೇಳು (ಕುಮಾಗ. ೮–೩೦). ೩. =ನಿಬಂಧ ೪. ೪. [ವ್ಯಾಕ] (ವಾಕ್ಯ) ರಚನೆ,—ಪ್ರಕ್ರಿಯೆ. [ಸಂ.]

ನಿಬಂಧನಶಾಸನ (ನಾ).(ರಾಜ್ಯಾಡಳಿತದ) ಕಾನೂನಿಗೆ ಸಂಬಂಧಪಟ್ಟ ಶಾಸನ,—ಕಟ್ಟಳೆ : ಎಲ್ಲ ಅನಿರೀಕ್ಷಿತ ವಿಷಮಸನ್ನಿವೇಶಗಳಲ್ಲಿಯೂ ರಾಜ್ಯರಕ್ಷಣೆ ಮಾಡುವ ಕರ್ತವ್ಯವು (ರಾಜ) ರಾಷ್ಟ್ರಾಧ್ಯಕ್ಷನದು. ನಿಬಂಧನಶಾಸನವು ಅನ್ಯತ್ರ ದಿಗ್ದರ್ಶನ ಮಾಡಿಸದಿರುವ ಕಡೆ ಆತನು ರಾಜ್ಯಕ್ಕೆ ಪರಮಗತಿ (ರಾಜ್ಯಶಾ. ೯೮). [ನಿಬಂಧನ+ಶಾಸನ]

ನಿಬಂಧನೆ (ನಾ). =ನಿಬಂಧನ ೨ : ಕೋಪಿಸಿದಂತವರ್ಕೆ ಪರಿಭಾವಿಸೆ ಜನದನುರಾಗಮದೆ ನಿಬಂಧನೆಯಲ್ತೇ (ಚಂದ್ರಪು. ೪–೨೧); ಅವಳ ನಿಬಂಧನೆ ಬಲ್ಲೆಯಲ್ಲಾ ! ಅವಳ ಚಿಕ್ಕಮನೆಗೆ ಹೋಗು (ಅರ್ಯಕ.೩೮); ನಿಬಂಧನೆಯು ಅಸ್ಥಿರವಿರದೆ, ಜನರ ಗೌರವಾದರಗಳನ್ನು ದೊರಕಿಸಿಕೊಂಡರೆ ಪರಂಪರೆ ಎಂಬುದು ತಾನಾಗಿ ನಿರ್ಮಿತವಾಗುತ್ತದೆ (ರಾಜಪ.೫೪);ರಾಜ್ಯನಿಬಂಧನೆಯ ವಿಷಯದಲ್ಲಿ ಅಧ್ಯಕ್ಷನಾದವನು ಅಪರಾಧ ಮಾಡಿದನೆಂಬ ಕಾರಣದಿಂದ ಶಾಸನಸಂಸ್ಥೆಯು ಆತನನ್ನು ಅಧಿಕಾರಪದವಿಯಿಂದ ಚ್ಯುತಮಾಡಬಹುದು (ರಾಜ್ಯಶಾ. ೯೯) ; ಸಂಸತ್ತು ವಿಧಿದ್ವಾರಾ ತನಗೆ ಉಚಿತ ತೋರುವ ನಿಬಂಧನೆಗಳ ಮತ್ತು ಷರತ್ತುಗಳ ಸಮೇತ ನೂತನರಾಜ್ಯಗಳನ್ನು ಸಂಘಕ್ಕೆ ಸೇರಿಸಬಹುದು (ಭಾಧಾಸ. ೨).

[ಸಂ. ನಿಬಂಧನ]

ನಿಬಂಧಿ 'ನಿಬಂದಿ' ನೋ.

ನಿಬಡ್ಡಿ 'ನಿಬ್ಬಡ್ಡಿ' ನೋ.

ನಿಬದ್ಧಿ (ನಾ). ದಿಟ ; ಸತ್ಯ : "ಶಚಂ, ಶಚಿ . . . ಶಚ್ಯಂ ಈ ೬ ನಿಬದ್ಧಿಯ ನುಡಿ" (ಕಾಶಕ್ಯ. ೯೩) ; ಸಕಲಭೋಗೋಪಭೋಗಂಗಳೆಲ್ಲವ ಸರಳ ಮಾಡಿ ಶ್ರದ್ಧೆ ನಿಬದ್ಧಿಯೆಂಬ ರುದ್ರ ಮಾಱೊಡುತ್ತಿರಲಾಗಿ ವಿರಕ್ತಿಯೆಂಬ ಚೀಟಿಗೆ ಒಪ್ಪವಿಲ್ಲದಿರಲಲ್ಲಿ (ಸುಂಕಬಂ. ೬೫೩–೨೩).

[ದೇ.॥ ತಮಿ. ನಿಪತ್ತಿ ; ತೆಲು. ನಿಬದಿ, ನಿಬದ್ಧಿ, ನಿಬ್ಬದ್ದಿ]

ನಿಬದ್ದಿವಿಡಿ (ಕ್ರಿ). ಗೀತಕ್ಕೆ ಹೊಂದು, —ಮೇಳವಾಗು : ಶುದ್ಧ ಸಾಳಂಗ ಸಂಕೀರ್ಣ ಠವಣಿಗಳೆಂಬ ಮದ್ದಣಿಗಳುಲಿಯೆ ಕಂದಾವುಜ ಪಟಾವುಜ ನಿಬದ್ದಿವಿಡಿದಿರ್ದ ಕುಡುಪಾವುಜವಡಾವುಜಂಗಳು ಶಬ್ದದುಗ್ಗಡಣೆಯ ವೃದ್ಧಿವಡಿಯಾಸೆ . . . ವಿಮಳಹಿಮಕೃದ್ಧರನ ಸಮ್ಮುಖದೊಳೊಪ್ಪಿದವು ತತವಿತತಘನಸುಷಿರವೆನಿಪ ವಾದ್ಯ (ಸೌಂದಪು. ೮–೬).

[<ನಿಬದ್ಧ+ಪಿಡಿ]

ನಿಬದ್ಧ (ಗು). ೧. ಕಟ್ಟಿದ ; ಒಟ್ಟಿಗೆ ಸೇರಿಸಿದ ; ಹೊಂದಾಣಿಕೆಯಿಂದ ಕೂಡಿದ; ಬಂಧಿಸಿದ : ಮದಲೇಖೆಯ ಮಾತಿನೊಳ್ ನಿರ್ಭರಾನಂದಯಾಗಿ ಕಾದಂಬರಿ ಮಹಾಶ್ವೇತೆಗಂ ಚಂದ್ರಾಪೀಡ ಚರಣಕಮಲನಿಬದ್ಧ ಚೇತಿತಮಪ್ಪ ರಾಜಲೋಕಕ್ಕಂ ಪ್ರಿಯತಮಾಕೃತಿಯಂ ತೋಱಲೊಡಂ (ಕಾದಂಬಿ. ೬೩೧); ಸದಾನುರಾಗನಿಬದ್ಧರಾಗುತವರ್ಕಳುಂದೊಕ್ಕ ಪ್ರಸಾದವನು ಸಿದ್ಧಿತಾರ್ಥಮಿದೆಂದು ಮೊಗೆಮೊಗೆದುದ್ಧರಿಸುತಂ ಹೆಡಗೆಗಳನಭಿವೃದ್ಧಿಕರಮಾಗಲ್ಕೆ ತಂದು (ಬಸಪು. ೫೬–೯) ; ವಿಕಟರಶ್ಮಿನಿಬದ್ಧ ರತ್ನಪ್ರಕರಮಧ್ಯದ ಕೌಸ್ತುಭದ ಪೋಲ್ ಚಕಿತಬಾಲಮೃಗಾಕ್ಷಿ ಮೆಱೆದಳು ಯುವತಿಮಧ್ಯದಲಿ (ಕುಮ್ಯಾಸ. ೧೪–೪೮) ; ಏನೆಲವೊ ಶುಕನಮ್ಮೊಡನೆ ಮಾಯಾನಿಬದ್ಧೋಕ್ತಿಗಳೆ ತನ್ನನು ನೀನಱಿಯದವನೇ ವಿಚಾರಿಸಿ ಗಳಹದಾದೆಯಲಾ (ತೋರಠಾ. ೬–೮–೪೬). ೨. ಅಡಚಣೆ ಉಂಟುಮಾಡಿದ; ಅಡ್ಡಿಪಡಿಸಿದ ; ತಡೆದ. ೩. ಬರೆದ ; ರಚಿಸಿದ. ೪. ನಿರ್ಬಂಧಕ್ಕೊಳಗಾದ. (ನಾ). ೫. ಕಟ್ಟುದುದು ; ಬಂಧಿಸಿದುದು : ವೃದ್ಧಬಾಲವಧೂಜನರು ಸಹಿತಧ್ವಗಮನಶ್ರಮವನುಳಿದು ನಿಬದ್ಧವೆನೆ ಮನೆಮಾಡಿದರು ವೃಂದಾವನಾಂತದಲಿ (ನಿಭಾಗ. ೧೦–೧೧–೧೯); ಪ್ರಕೃತಿಜನ್ಯವಾದ ಕರ್ಮವಶವಾಗಿ ಎಲ್ಲ ಕಾರ್ಯಗಳೂ ನಡೆಯುತ್ತಿವೆ. ಸ್ವಾಭಾವಿಕವಾದ ಸ್ವಕರ್ಮದಿಂದ ಸರ್ವವೂ ನಿಬದ್ಧವಾಗಿದೆ (ಭಾರದ. ೧೧೫). ೬. ಕಟ್ಟಳೆ ; ನಿಯಮ : "ಸತ್ಯಂ ನಿಬದ್ಧಮೆನೆ ಕಟ್ಟಳೆ" (ಮಂಗರಾ. ೧೦೫–೧೪). ೭. ಹೊಂದಾಣಿಕೆಯಾದುದು ; ಕೂಡಿದುದು : ಪದರಚನಾತಿಶಯಂ ರೀತಿ ದಲದುವುಂ ನಿಯತವರ್ಣಗುಂಫನಗುಣದೊಂದೊದವಿಂ ಮೂದೆಱನಕ್ಕುಂ ವಿದರ್ಭ ಪಾಂಚಾಲ ಗೌಡವಿಷಯ ನಿಬದ್ಧಂ (ಕಾವ್ಯಾಪ. ೭೮೧) ; ತೊದಳೊಂದಿಲ್ಲದೊಳ್ವಾತು ಶಾಸ್ತ್ರೋತ್ಕರ ಪಾಂಡಿತ್ಯಂ ಭವದ್ವಂಶಜರೊಳಿದು ನಿಬದ್ಧಂ ನಿತಾಂತಂ ಪ್ರಸಿದ್ಧಂ (ರಾಜಶೇ. ೬–೧೩೬). ೮. [ಸಂಗೀತ] ಯತಿ ಹಾಗೂ ಛಂದಸ್ಸಿನಿಂದ ಕೂಡಿ ನಿಯತಾಕ್ಷರಗಳನ್ನುಳ್ಳ ನಾಲ್ಕುಸಾಲಿನ ಒಂದು ಬಗೆಯ ರಚನೆ : ನಾಭಿಗತಮುರೋಗತಂ ಶಿರೋಗತಮೆಂಬ ತ್ರಿಸ್ಥಾನ ಶುದ್ಧಿಯೊಡೆದು ನಿಬದ್ಧಾನಿಬದ್ಧಭೇದಮನುಳ್ಳೆರಡುಂ ಮಾರ್ಗದೊಳ ಮನುನಾಸಿಕಾನುಕಂಪನ ಗದ್ಗದ ಗರ್ಭರಾದಿ ದೋಷಂಗಳಂ ಪೊರ್ದಲೀಯದೆ . . . ಪಾಡಿ ಪರೀಷಜ್ಜನಮಂ ತಲೆದೂಗಿಸುವುದುಂ (ಪಹಾನೇ. ೪–೫೪ ಪ) ; ಜಾತಿತಾಳದ ಮಾನದಿಂಪಿನ ಧಾತುವಂಗಂ ಮಾತು ರೀತಿ ಸಮೇತವಾಗಲೊಡರ್ಚ ಸಿದ್ಧನಿಬದ್ಧರೂಪದಲಿ (ಬಸಪು. ೧೯–೧೨); ಕೀರ್ತನೆಗಳು ಮತ್ತು ಪಿಳ್ಳಾರಿ ಗೀತೆಗಳು—ಇವುಗಳಲ್ಲಿ ಬಹುತೇಕವಾಗಿ ವೈವಿಧ್ಯತೆಗೆ ಅವಕಾಶವಿದೆ . . . ಇವೆಲ್ಲವೂ ನಿಬದ್ಧ, ಅನಿಬದ್ಧ ಮತ್ತು ರಾಗಾಲಾಪನದ ಉದ್ದೇಶದಿಂದಲೇ ರಚಿಸಲ್ಪಟ್ಟವೆ (ಹೇಪುಕೂ. ೧೦೫).

[ಸಂ.]

ನಿಬದ್ಧಗಾಯನ (ನಾ). [ಸಂಗೀತ] ನಿಯಮಗಳಿಗೆ ಹೊಂದಿಕೊಂಡ ಹಾಡುಗಾರಿಕೆ : ರಾಗಮಾಧುರ್ಯವನ್ನು . . . ಸವಿಯಲು ವಿಧವಿಧವಾದ ಮಾರ್ಗಗಳನ್ನು ನಿರ್ಮಿಸಿಕೊಂಡಿದ್ದಾರೆ. ಅದರಲ್ಲಿ ಪ್ರಧಾನವಾದುವು ನಿಬದ್ಧ, ಅನಿಬದ್ಧಗಾಯನ. . . ನಿಬದ್ಧಗಾಯನವು ನಿಯಮಪೂರಿತ, ಕಲಾವಿದನ ಕೌಶಲ್ಯಕ್ಕೆ ಸಾಧನ (ಭಾರದ. ೫೪೧) ; ನಿಬದ್ಧಗಾಯನದಲ್ಲಿ (೧) ಬರೇ ರಾಗಲಯಪ್ರಧಾನವಾದ ಪ್ರೌಢಬಂಧಗಳೂ (ಧ್ರುವ, ಪದ, ವರ್ಣ . . . ಇತ್ಯಾದಿ) (೨) ಕಾವ್ಯಗಾನ ಸಮನ್ವಿತವಾದ (ಕೀರ್ತನ, ಪದ, ಭಜನ್ . . . ಜಾವಳಿ ಇತ್ಯಾದಿ) ಕೃತಿಗಳೂ ಸೇರುತ್ತವೆ (ಭಾರದ. ೫೪೨). [ನಿಬದ್ಧ+ಗಾಯನ]

ನಿಬದ್ಧಮಂಗಳ (ನಾ). ಕಾವ್ಯಾರಂಭದಲ್ಲಿ ಕವಿಯು ದೇವತಾಸ್ತುತಿರೂಪವಾಗಿ ರಚಿಸುವ ಮಂಗಳ ಅಥವಾ ನಾಂದೀಪದ್ಯ ; ಕವಿಯೇ ರಚಿಸಿದ ಮಂಗಳಪದ್ಯ : ಮೇಣ್ನಿಬದ್ಧಾನಿಬದ್ಧಭೇದದಿಂ ಮಂಗಳಂ ದ್ವಿವಿಧಮಕ್ಕುಂ ತನ್ನಿಂ ಮಾಡೆ ಪಟ್ಟ ನಾಂದೀನಿಬದ್ಧಮಂಗಳಂ ಪರಕೃತಮನಿಬದ್ಧಮಂಗಳಂ (ತತ್ತ್ವಪ್ರ. ೪).

[ನಿಬದ್ಧ + ಮಂಗಳ(= ಮಂಗಲ)]

ನಿಬದ್ಧಾಂಜಳಿ (ನಾ). ಜೋಡಿಸಿದ ಕೈ : ಸೂರ್ಯಮಿತ್ರಜಿನೇಂದ್ರನಂ ಶ್ರೀಪ್ರದಕ್ಷಿಣಂಗೆಯ್ದು ಭಕ್ತಿಭರವಿನಮಿತೋತ್ತಮಾಂಗ ನಿಬದ್ಧಾಂಜಳಿಗಳಾಗಿ (ಸುಕುಮಾ. ೪-೬೬ ಸ). [ನಿಬದ್ಧ + ಅಂಜಳಿ(=ಅಂಜಲಿ)]

ನಿಬದ್ಧಿ (ನಾ). (ಸಂಸಾರ) ಬಂಧನಕ್ಕೆ ಒಳಗಾದವನು : ನಿಬದ್ಧಿಯೆಂಬುದೊಂದನುಪಮಬೋಧಿ ಪುಟ್ಟದೊಡೆ ಪೇರ್ಮೆ ಮನೆಯೊಳ್ ಕೊಡದಿಂತು ನಿಲ್ವುದೇ (ಜೀವಸಂ. ೨೧೦-೫೪). [<ನಿಬದ್ಧ]

ನಿಬದ್ಧಿಸು (ಕ್ರಿ). ೧. ಒಟ್ಟಾಗು; ಸೇರಿಕೊಳ್ಳು ; ಕೂಡಿಕೊಳ್ಳು : ಬುದ್ಧಿಸಾಗರನ ಕಂಡೆಮಗೇನು ಪ್ರಸ್ತ ನಿಬದ್ಧಿಸಿ ನಾವು ನಮ್ಮೊಳಗೆ ಬುದ್ಧಿಸಾಗರನೊಡೆಯನ ಮುಂದೆ ತಾಂಡವ ಪದ್ಧತಿಯೆಂದು ತೋಱುವೆವು (ಭರಡ. ೧೪-೧೬) ; ಶುದ್ಧಚಿತ್ತದೊಳು ನಮೋಸ್ತು ಗೈದರೆ ಧರ್ಮವೃದ್ಧಿಯೆಂದುಱಿ ಹರಸಿದರು ವೃದ್ಧಿ ತಪ್ಪದು ನಿಮ್ಮ ಹರಕೆಯಿಂದೆನುತ ನಿಬದ್ಧಿಸಿ ಬೀಳ್ಕೊಂಡನಿಂದ್ರ (ಭರಡ. ೭೦-೧೦೬). ೨. ನಿಬದ್ಧಗಾಯನವನ್ನು ಮಾಡು : ಶುದ್ಧದೊಳಗೆ ಜಿನಸಿದ್ಧರ ಪಾಡಿ ನಿಬದ್ಧಿಸಿ ಸಂಕೀರ್ಣದೊಳಗೆ ವೃದ್ಧಸಂಪನ್ನಯೋಗಿಗಳ ಪಾಡಿದರಹೊ ಶುದ್ಧಸಂಕೀರ್ಣಕೋವಿದರು (ಭರಡ. ೬೪-೧೪). [ನಿಬದ್ಧ + -ಇಸು$_5$]

ನಿಬರ್ಹಣ (ನಾ). ೧. ಕೊಲೆ ; ಸಂಹಾರ : "ಮಾರಣಂ, ನಿಶರಣಂ, ನಿಬರ್ಹಣಂ, ಸೂದನಂ . . . ಹಿಂಸಾ, ಸಂಜ್ವಪನಂ—ಈ ೨೧ ಕೊಲೆ" (ಹಲಾಯು. ೭೪-೩೨) ; ಕಂಸಂ ತದೀಯ ಬಾಲಹಿಂಸಾಪರನಾಗಿ . . . ಪಾಸಱೆಯೊಳ್ ಕೂಸನಪ್ಪಳಿಸಿ ಬಾಲನಿಬರ್ಹಣಗರ್ಹಣಾತಿರೇಕದಿಂ ಗತಶ್ರೀಕನಾಗಿ ನಿಜರಾಜಮಂದಿರಮಂ ಪೊಕ್ಕಂ (ಜಗವಿ. ೨-೫೪ ಸ). ೨. ನಾಶ ; ಹಾಳು : ನರಭಸಿತಧಾರಿಗಳ ಛಾಪೋತ್ಕರದ ಪರಿಯಲಿ ಪೂರ್ವಲಿಖಿತಾಕ್ಷರವಿತಾನನಿಬರ್ಹಣಕಳಾನಿಪುಣನಾಗುತ್ತ (ಬಸವ. ೩೮-೪೩). 'ನಿವರ್ಹಣ' ಪರಾ. [ಸಂ.]

ನಿಬಾಯಿಸು 'ನಿಭಾಯಿಸು' ನೋ.

ನಿಬಿಡ (ಗು). ೧. ದಟ್ಟವಾದ ; ಸಾಂದ್ರವಾದ ; ಒತ್ತಾದ : ನಿಜಪರಮಸ್ವಾಮಿಯಂ ನಿಷಾದಿಯಂತೆ ನಿಬಿಡ ನಿಬದ್ಧ ಪವಿತ್ರಕ್ಲೌಮೋಪಜ್ಞದೋಪಚಿತಸುಖಾಸನಾಂಕಿತಮಂ ನಿಜಾಂಕಮನೇಱಿಸಿಕೊಂಡು (ಶಾಂತಿಪು. ೧೦-೬೫ ಸ) ; ಶ್ರೀಲಲನಾಸ್ತನಭರನಿಬಿಡಾಲಿಂಗನಕುಂಕುಮಾಂಕಿತೋರಸ್ಥಲನುರ್ವೀಲೋಕಮಂಡನಂ ಮಹಿಮಾಲಂಬನ ಚಾರು ಚರಿತನಧಿನವಪಂಪಂ (ಪಂಚಾಮೃ. ೧೦-೧) ; ಉತ್ತುಂಗನಿಬಿಡಸ್ತನಕಳಸಯುಗದಂದವಂ ನೆನೆವ ಅಂಗನೆಯ ಗಂಭೀರನಾಭಿಸುರಂಗವನು ನೆನೆವನು (ಬಸವ. ೪೧-೨೨) ; ನೀರಸತರುನಿಬಿಡವಿಪಿನ, ಹಸುರ ಹೆಸರ ಕಾಣದಿರುವ ನೆಲವು (ಸೂಂದಳ. ೩೪-೧೦). (ನಾ). ೨. ದಟ್ಟವಾದುದು ; ಸಾಂದ್ರವಾದುದು ; ಒತ್ತಾದುದು : "ನಿಬಿಡಂ, ನಿರೀಸಂ, ದೃಢಂ, ಗಾಢಂ – ಈ ೪ ತೆಱಿಪಿಲ್ಲದುದುಂ" (ಹಲಾಯು. ೧೧೪-೩೩) ; ನಿಬಿಡಮಾದ ನೆಳಲುಳ್ಳ ಪುಷ್ಪವೃಕ್ಷಂಗಳಿಂದ (ಗರಸು. ೯-೫೯-೬) ; ಚಿತ್ತ ಳಿನ ನಿಬಿಡ ವನ ; ಹೊತ್ತು ಗೊತ್ತಿಲ್ಲ ; ದಿಸುಗುಡದೆ ಮನ ತನ್ನ ನುಂಗಿದೆ ತಾನು (ಉಮ್ಮಾಲೆ. ೪-೨) ; ತೆರೆಯ ಮೇಲೆ ತೆರೆಯೆದ್ದು ಬರುವಂತೆ, ರಹದಾರಿ ನಿಬಿಡವಾಗತೊಡಗಿತು (ದೀಸಪ. II, ೨೦೪) ; ಸದ್ದಾಗದಂತೆ ಅಡ್ಡದಾರಿಯಿಂದ ನಿಬಿಡವಾದ ಕಾಡಿಗೆ ಕರೆದುಕೊಂಡು ಹೋದನು (ಮಲ್ಲಿನಾ. ೧೦೫). ೩. ಅಧಿಕವಾದುದು : ದೇವತತಿಗಂಜಿಕೆಯಂ ನಿಬಿಡವೆನೆ ಮಾಡದೊಡೆ ನರಕಬಾಧೆಗೊಳಗಪ್ಪೆ ನರಸ (ದಶಕು. ೬-೫೭). ೪. ವಿಪುಲವಾದುದು ; ಬಹಳವಾದುದು : ಈ ವಿಪಿನದಲ್ಲಿ . ಉಗ್ರವಾದ ಹಿಂಸ್ರಪಶುಗಳು ನಿಬಿಡವಾಗಿರುವವು (ಅಗಡ್ಯ. ೧೨೦). ೫. [ಕಾವ್ಯವಿ] ಕಾವ್ಯದ ಹತ್ತು ಗುಣಗಳಲ್ಲಿ ಒಂದು ; ಶಿಥಿಲವಲ್ಲದ ಪದರಚನೆ ; ಪದಗಳು ಒಂದಕ್ಕೊಂದು ಸಾಂದ್ರವಾಗಿ ಅಂಟಿಕೊಂಡಿರುವುದು ; ಶ್ಲೇಷವೆಂಬ ಕಾವ್ಯಗುಣ : ಸಮ ಮಧುರ ನಿಬಿಡ ಕಾಂತ ಸುಕುಮಾರಸುಸಮೂಹಿತ ಪ್ರಸನ್ನೋದಾರಪ್ರಮಿತಗ್ರಾಮ್ಯೋಜಸ್ವಿಕ್ರಮದಿಂ ದಶಭೇದಮಲ್ಲಿ ದಕ್ಷಿಣ ಮಾರ್ಗಂ (ಕವಿಗಾ. ೨-೫೪). 'ನಿವಿಡ' ಪರಾ. [ಸಂ.]

ನಿಬಿಡಂಬೆಱು (ಕ್ರಿ). ದಟ್ಟವಾಗು ; ಸಾಂದ್ರವಾಗು ; ಒತ್ತಾಗು : ಅಮೂಲಾಗ್ರಭಾಗಂಬರಮತಿನಿಬಿಡಂಬೆತ್ತಿರಲ್ (ಕುಸುಮಾ. ೧-೨೫). [ನಿಬಿಡ + ಪೆಱು$_1$]

ನಿಬಿಡತೆ (ನಾ). ಒತ್ತೊತ್ತಾಗಿ ಇರುವ ಸ್ಥಿತಿ ; ಸಾಂದ್ರತೆ ; ದಟ್ಟಣೆ : ಪೆಂಪುವೆತ್ತ ಪರಿಮಿತ ಫಲಪರ್ಣಪುಷ್ಪಗುಚ್ಛಂಗಳಿನತಿನಿಬಿಡತೆಯಿನಪ್ಪೈದು ರವಿಶಶಿಕರಂಗಳೆಡೆಯಾಟಕ್ಕೆ ತೆಱಿಪುಗೊಡದೆ (ಶಬಶಂ. ೩-೬೫ ಸ) ; ಈ ವಚನಗಳನ್ನು . . . ಬಿಡಿಯಾಗಿ ಓದಿದಾಗ ಅದ ಪರಿಣಾಮದ ನಿಬಿಡತೆಯೇ ಇಡಿಯಾಗಿ ಓದಿದಾಗ ತೀವ್ರತೆ (ಕನಾಗಳ. ೭೯). [ಸಂ. ನಿಬಿಡತಾ]

ನಿಬಿಡತ್ವ (ನಾ). = ನಿಬಿಡತೆ : ಇಂತಪ್ಪ ಪುರವೀಧಿಯೊಳಗೆ ನಿಬಿಡತ್ವದಿಂ ದಂತಿವಾಜಿವರೂಥಗಳನಡರಿಯಧಿಳಭೂಕಾಂತರಾತ್ಮಜರು ವೈಯ್ಯಾಳಿ ಕೇಳಿ ಮೇಳದೊಡನೆಯೆಡೆಯಾಡುತಿಹರು (ಸವಮೋ. ೨-೪೯). [ಸಂ.]

ನಿಬಿಡಬಂಧ (ನಾ). [ಕಾವ್ಯವಿಮಾ] ವರ್ಣಗಳು ಒಂದನ್ನೊಂದು ಅಗಲದೆ ಒತ್ತಾಗಿರುವ, ಶ್ಲೇಷೆಯಿಂದ ಕೂಡಿದ ಒಂದು ಬಗೆಯ ರಚನೆ : ದಿಗೆ ನಿಬಿಡಬಂಧಮೆಂಬುದು ತಗುಳ್ವುವು ವರ್ಣಂಗಳಗಲದಿರೆ (ಕವಿಗಾ. ೨-೬೪). [ನಿಬಿಡ + ಬಂಧ]

ನಿಬಿಡಮತಿ (ನಾ). ದಡ್ಡ ; ಮಂದಮತಿ : ನಿಬಿಡಮತಿ ನೃಪವರಂ ಬಂದು ಬನದೊಳಾಂ ಬೇಳ್ದ ಹೋಮಮಂ ಕಂಡು . . . ಬೆಕ್ಕಸಂಬಟ್ಟು ನೋದಿದಂ ಮುದ್ರೂಪಂ (ದಶಕು. ೧೦-೧೦೩). [ನಿಬಿಡ + ಮತಿ]

ನಿಬಿಡಸ್ಯೂತ (ನಾ). ಒತ್ತಾಗಿ ಹೊಲಿದಿರುವುದು ; ದಟ್ಟವಾಗಿ ಹೊಲಿದಿರುವುದು : ಇದು ಜತುಮುದ್ರಾಮುದ್ರಿತಮಿದು ನಿಬಿಡ ಸ್ಯೂತಮಿದು ಮಹಾಗ್ರಹಧೃತಮಿಂತಿದು ಲೋಹಪಿನದ್ಧಮೆನಿಪ್ಪುದು ಪರಕೃತಿನುತಿಯೊಳಖಿಳ ಖಳಜನವಕ್ತ್ರಂ (ಚಂದ್ರಪ್ರ. ೧-೪೦). [ನಿಬಿಡ + ಸ್ಯೂತ]

ನಿಬಿಡಿ, ನಿಬ್ಬಡಿ, ನಿಬ್ಬಿಡಿ (ನಾ). ಗಟ್ಟಿಯಾದುದು ; ಸಾಂದ್ರವಾದುದು (?) : ಕಾರಣಕಾರ್ಯದಲ್ಲಿ ವ್ಯಾಪ್ತವಾಗಿದೆ ವಿಸ್ತಾರ ಬೊಮ್ಮಾಂಡದೊಳು ನಿಬಿಡಿಯಾಗಿ ದ್ವೀರಷ್ಟ ಪಂಚ ಪಂಚ ಚತುರಷ್ಟಾಚತುಃಶಾಖಿಯಾಗಿ ಚಾರುಪ್ರಕಾಶದಿಂದ ಅಧಿವಕ್ತಿಯೊ ಆರು ಎರಡರಿಂದ ತೀಯಬೇಕು (ವಿಸಾಸು. ೩-೧). **ನಿಬ್ಬಡಿ :** ಶಬ್ದಾದಿಗಳಲ್ಲಿ ಉಬ್ಬಿ ಉತ್ಪಹನಾಗಿ ನುಬ್ಬು ಕವಿದಂತೆ ಗಟ್ಟುದೇಹದಲ್ಲಿ ಹಬ್ಬಿದ ಪಾಪದ ನಿಬ್ಬಡಿ ತೀಯದೆ . . . ನಿನ್ನ ಶಬ್ದವನ್ನು ಬಿಟ್ಟು ಕೊಬ್ಬಿದವನಾದೆ (ನೋಕ್ಷದೀ. ೩೮-೨). **ನಿಬ್ಬಿಡಿ :** ಅಬ್ಬಿದ ಜ್ಞಾನದಲ್ಲಿ ಪೊರೆಯೆಂದಿನೊ ನಿಬ್ಬಿಡಿಯಾದ ಇಹಸುಖವೆ ಒಲ್ಲೆನೆಂದು ಅರ್ಭಕನಾಗಿ ಕೇಳಿಕೊಂಡಿರಲು (ನೋಕ್ಷದೀ. ೬೫-೧). [<ನಿಬಿಡ ?]

ನಿಬಿಡಿತ (ಗು). ತುಂಬಿದ ; ಭರ್ತಿಯಾದ ; ಆವರಿಸಿದ : ವಿತರ ಶ್ವೇತಾತ್ಕಾರವಕ್ತ್ರಂ ಜಳನಿಬಿಡಿತವಾಸಸ್ಸ್ಫುಟೀಭೂತನಿಮ್ನೋನ್ನತಮುದ್ಯದ್ರೋಮಹರ್ಷಸ್ತವನಿಹಿತಘೋಷಸ್ವಸ್ತಿಕಂ ಲೋಚನೋಪ್ಮದ್ವಿತಯ ಪ್ರತ್ಯಸ್ತವರ್ಣಸ್ಥಿತಿ ತಿವಿತಕಪೋಳಾವಗ್ರಾಳಕಂ ಯೌವತಮಾದಂ ಕಜ್ಜ ವಂದಿರ್ದುದು ಕೃತಸಲಿಲಕ್ರೀಡಮಸ್ರೋಷ್ಣ ಪೀಡಂ (ಚಂದ್ರಪ್ರ. ೬-೧೪೯). [ಸಂ.]

ನಿಬಿಡೀಕೃತ (ಗು). ತುಂಬಿದ ; ಭರ್ತಿಮಾಡಿದ ; ಇಡಿಕಿರಿದ. [ಸಂ.]

ನಿಬಿಡೋಕ್ತಿ (ನಾ). [ಕಾವ್ಯಮೀ] ಶ್ಲೇಷಗುಣದಿಂದ ಕೂಡಿದ ಮಾತು,—ಉಕ್ತಿ : ಅದ್ಭುತರಸಂ ನಿಬಿಡೋಕ್ತಿಗಳಿಂದಮಲ್ತೆ (ಕವಿರಾ. ೨-೯೯). [ನಿಬಿಡ+ಉಕ್ತಿ]

ನಿಬಿಡೋರು (ನಾ). ದಪ್ಪವಾದ ತೊಡೆ; ತುಂಬಿಕೊಂಡ ತೊಡೆ : ಕುರುರಾಜ ನಿರ್ವ್ಯಾಜನಿಬಿಡೋರುದ್ವಯಭಂಗ ಪ್ರತಿಜ್ಞಾಭಾರನುಂ. . . ಸಾಹಸಾಂಕನುಮೆನಿಸಿದ ಭೀಮಸೇನನಂತು ಆರೂಢಕೋಪನುಂ ಪ್ರತಿಜ್ಞಾರೂಢನುಮಾಗೆ (ಗದಾಯು. ೨-೧ ವ). [ನಿಬಿಡ+ಊರು$_4$]

ನಿಬಿರೀಸ (ನಾ). ದಟ್ಟವಾದುದು ; ನಿಬಿಡವಾದುದು : "ನಿಬಿಡಂ, ನಿಬಿರೀಸಂ, ದೃಢಂ, ಗಾಢಂ– ಈ ೪ ತೆಱವಿಲ್ಲದುದು" (ಹಲಾಯು. ೧೧೯-೩೩) ; ಖಲಸಮೂಹಚ್ಛಾಯೆ ಬಲುಹಿಂದ ಪರ್ಬಿದುದೊ ನಭ ದಂಜನಾಸಾರ ಕಲೆಯೊಯೆನಲಂಧಕಾರಂ ಪರಪಿತೆಜ್ಜೆಸೆಗೆ ನಿಬಿರೀಸಮಾಗಿ ಜವದಿ (ವೆಂಕಾರಾ. ೫-೨-೩೨) ; ಅವನೀತನೂಜಾತೆಯ್ಯೆತರುತಮಿರೆ ಲೋಕನಿವಹ ನಿಬಿರೀಸಮನೆ ನೆರೆದು 'ಪಂಥಾನಕುಂ ಪವಣೇಯದಿದೆ (ವೆಂಕಾರಾ. ೬-೬೩-೧೧). [ಸಂ.]

ನಿಬುದ್ಧಿ, ನಿಬ್ಬುದ್ಧಿ (ನಾ). ಹೆಡ್ಡತನ ; ಮಂದಬುದ್ಧಿ : ಪೀನಗ್ರಹಣದಿಂದೆ ಕೆಲವಱೊಳ್ ವತ್ವಮಿಲ್ಲ—ಅಚ್ಛಮಲ್ಲಿಕಾ–ಅಚ್ಛಮಲ್ಲಿಗೆ . . . ನಿರ್ಬುದ್ಧಿ–ನಿಬುದ್ಧಿ (ಶಮದ.೨೯೨ ಪ್ರಯೋ). **ನಿಬ್ಬುದ್ಧಿ** : ದ್ವಿತ್ವಾಗ್ರರೇಫಲೋಪಕ್ಕೆ—ಅರ್ಘ–ಅಗ್ಗ . . . ನಿರ್ಬುದ್ಧಿ–ನಿಬ್ಬುದ್ಧಿ (ಶಮದ. ೨೬೧ ಪ್ರಯೋ) ; ಕೀಲಾರಂ, ಕೀರಾರಂ . . . ನಿಬ್ಬುದ್ಧಿ, ಮಾಲೆದೋರಣಂ . . . ಇತಿ ಕೀಲಾರಾದಿರಾಕೃತಿಗಣಃ (ಶಬ್ದಾನು. ೩೭೮ ಪ್ರಯೋ). [<ಸಂ. ನಿರ್ಬುದ್ಧಿ]

ನಿಬುದ್ಧಿ (ನಾ). ೧. ಸ್ಪಷ್ಟವಾದ ತಿಳಿವಳಿಕೆ ; ಜ್ಞಾನ ; ಬುದ್ಧಿ. ೨. ಬುದ್ಧಿವಾದ : ಹಾನಿ ನಿನಗುಪಕರಿಸದಿರದೆಂಬೀ ನಿಬುದ್ಧಿಗೆ[ಪಾಠಾಂ. ನಿಬದ್ಧಕೆ, ವಿಪತ್ತಿಗೆ] ನಿನ್ನ ಮನದನುಮಾನವಾವುದು ಹೇಳು ಕೇಳುವೆ ನೆಂದನಸುರಮುನಿ (ತೊರರಾ. ೩-೭-೩೨). [ಸಂ.]

ನಿಬ್ಬ (?) (ನಾ). ಒಂದು ಬಗೆಯ ಹಕ್ಕಿ (?) : ಪಿಕ್ಕುಳಿಕ ಚೆಂಬೋತ ಗೀಜಗ ಕುಕ್ಕು ಕೋಗಿಲೆ ಕಾಮುರುಳೆ ಬೆಳ್ಳಕ್ಕಿಯೆಲಗೊಲೆ ಹುಲ್ಲಬಂದಿಗ ನಿ[ಪಾಠಾಂ. ೪]ಬ್ಬ ನೀರ್ಮುಳುಕ . . . ಕೆಂಡವಕ್ಕಿಗಳವ ಱೊಳೊಪ್ಪಿದವು (ಸಾಳ್ವಭಾ. ೫-೨೨). [?]

ನಿಬ್ಬಂದಿಗ (ನಾ). ಬಂಧನಕ್ಕೆ ಒಳಗಾದವನು : "ನಿಬ್ಬಂದಿಗ—ನಿರ್ಬಂಧಿಕ" (ತದ್ಭಕೋ. ೨೨) ; ಪೀನಗ್ರಹಣದಿಂದೆ ಕೆಲವಱೊಳ್ ವತ್ವಮಿಲ್ಲ—ಅಚ್ಛಮಲ್ಲಿಕಾ–ಅಚ್ಛಮಲ್ಲಿಗೆ . . . ನಿಬ್ಬಂದಿಗ–ನಿರ್ಬಂಧಿಕ (ಶಮದ. ೨೯೨ ಪ್ರಯೋ). [<ಸಂ. ನಿರ್ಬಂಧಿಕ]

ನಿಬ್ಬಗಡಿ (ನಾ). ಒಂದು ಬಗೆಯ ಆಹಾರ (?) : ನೆಟಲು ಮೂಢ[ಡ]ಪರಿಧಿ[ದ] ಬಟಾಕ್ಕುಂಬ ಪುರೀಮಂಡಳಂ ಬಱಾಗೂಳನುಂಬ ನಿಬ್ಬಗಡಿಯುಂ ಕಳಿಯುಂ ಕೂಟನುಂಬ ಆಯಂಬಿಲಮುಮೆಂದಿವಂ ತನ್ನ ಶಕ್ತಿಯಿಂ ಮಱಸದಾವುದುಂ ಮಾಡಿದೊಡಂ ಪ್ರೋಷಧೋಪವಾಸ ಮೆಂಬೆರಡನೆಯ ಶಿಕ್ಷಾವ್ರತಮಕ್ಕುಂ (ಪಸಾರ. ೩೧೬). [?]

ನಿಬ್ಬಡವ (ನಾ). ಅತ್ಯಂತ ಬಡವ ; ಕಡುಬಡವ : ಬಡವನೆ ರತ್ನತ್ರಯಮಂ ಪಡೆದಾತಂ ಪುಣ್ಯಮೂರ್ತಿ ಸಿರಿಯೊಡೆಯಂ ನಿಬ್ಬಡವಂ [ಪಾಠಾಂ. ನೋಟ್ಪಡೆ ತಾಂ]ರತ್ನತ್ರಯಮಂ ಪಡೆಯದವಂ ಭಾಗ್ಯಹೀನನವನೆ ದರಿದ್ರಂ (ಸಮಪ. ೬-೬೭). [<ನಿಡಿದು$_1$+ಬಡವ]

ನಿಬ್ಬಡಿ 'ನಿಬಿಡಿ' ನೋ.

ನಿಬ್ಬಡ್ಡಿ, ನಿಬಡ್ಡಿ (ನಾ). ಬಡ್ಡಿರಹಿತವಾದುದು ; ಬಡ್ಡಿಯಿಲ್ಲದುದು : ನಿಬ್ಬಡ್ಡಿಯಾಗಿ ನಾನು ಸಾಲ ತೆಗೆದುಕೊಂಡಿದ್ದೆ (ರೂಢಿ). **ನಿಬಡ್ಡಿ** : ಸ್ವಲ್ಪ ಹಣ ಸಾಲ ಮಾಡಬಹುದು, ಅದನ್ನು ತಮ್ಮ ಸಾಹುಕಾರರೇ ಒಂದೆರಡು ವರ್ಷಗಳ ಮಟ್ಟಿಗೆ ನಿಬಡ್ಡಿಯಿಂದಲೇ ಕೊಟ್ಟಾರು (ಜಾರುದಾ. ೮). [<ನಿರ್+ಬಡ್ಡಿ$_3$]

ನಿಬ್ಬಣ 'ಬಿರ್ದಿನ' ನೋ.

ನಿಬ್ಬಣಗಿತ್ತಿ (ನಾ). ಮದುವೆಯ ಗುಂಪಿನ ಮೆರವಣಿಗೆಯಲ್ಲಿ ಬರುವವಳು ; ಬೀಗರ ಗುಂಪಿನವಳು : ಹಳೆಗಾಲದಲೊಬ್ಬ ಪುರುಷಂಗೆ ಎಳೆಯ ಕನ್ನಿಕೆಯ ಮದುವೆಯ ಮಾಡಲು ಕೆಳದಿಯರೈವರು ನಿಬ್ಬಣ ಬಂದರು . . . ಕೂಡೆ ಬಂದ ನಿಬ್ಬಣಗಿತ್ತಿಯರೆಲ್ಲಾ ಹೆಂಡಿರಾದರು (ಅವಚಂ. ೨೧-೮೬); ಅವಿರಳ ವಿಟನ ಮದುವೆಗೆ ನಿಬ್ಬಣಗಿತ್ತಿಯವರೆಲ್ಲಾ ಬಂದು ಕೆಂಡದಂಡೆಯನೆ ಮುಡಿದು (ಅವಚಂ. ೧೩೭-೬೨೮).

[ನಿಬ್ಬಣ (<ಬಿರ್ದಿನ)+-ಗಿತ್ತಿ]

ನಿಬ್ಬಣಗೂಡು (ಕ್ರಿ). ಮದುವೆಯ ಮೆರವಣಿಗೆಯ ಗುಂಪಿನಲ್ಲಿ ಒಂದಾಗು ; ನಿಬ್ಬಣದೊಂದಿಗೆ ಸೇರು : ಗುಣನಿಧಿ ಶ್ರೀಕೃಷ್ಣರಾಮರು ಸಕಲ ನಿಬ್ಬಣಗೂಡಿ ಪೊಕ್ಕರಾಲಯವ (ಮೋಹತ. ೧೩-೭೧).

[ನಿಬ್ಬಣ (<ಬಿರ್ದಿನ)+ಕೂಡು$_1$]

ನಿಬ್ಬಣಜನ (ನಾ). ಮದುವೆಗೆ ಬಂದ ಆಪ್ತೇಷ್ಟಜನ : ಮದುವೆಗೆ ಬಂದ ನಿಬ್ಬಣಜನಂ ಬಿಡದಚ್ಚರಿವಟ್ಟೆರಲ್ಕರಂ ಮುದದೊಳದೃಶ್ಯಮಾಗಿ ಮುನಿ ಪೋಗೆ (ಉದ್ಭಟ. ೮-೭೯).

[ನಿಬ್ಬಣ (<ಬಿರ್ದಿನ)+ಜನ]

ನಿಬ್ಬಣಿಗ 'ದಿಬ್ಬಣಿಗ' ನೋ.

ನಿಬ್ಬಯಲು (ನಾ). ವಿಸ್ತಾರವಾದ ಬಯಲು : ಅಪರಭಾನುವಾಳ್ದಪನು ನಿಬ್ಬಯಲೊಳಗೆ ನೋಡ ! (ವೈಶಾಖಿ. ೭೦-೧೬೪).

[<ನಿಡಿದು$_1$+ಬಯಲು(<ಬಯಲ್$_2$)]

ನಿಬ್ಬರ್ (ಗು). ೧. ಅತಿಶಯವಾದ ; ಅಧಿಕವಾದ. ೨. ಕಠೋರವಾದ ; ಸಹಿಸಲಸಾಧ್ಯವಾದ. ೩. ತೀಕ್ಷ್ಣವಾದ ; ಹರಿತವಾದ. ೪. ಹುರುಪಿನಿಂದ ಕೂಡಿದ. ೫. ತುಂಬಿದ ; ಪೂರ್ಣವಾದ. ೬. ಊದಿಕೊಂಡ ; "ಉಬ್ಬಿದ" (ಜಾನಕೋ. ೧೧). (ನಾ). ೭. ಅತಿಶಯ ; ಆಧಿಕ್ಯ ; ಹೆಚ್ಚಳ : ಆತುರದಿಂ ಶೀತಾಂಶುತಾರಾವಳಿವೆರಸಿಟಾತಂದುರ್ವರಾಭಾಗದೊಳ್ ನಿಬ್ಬರದಿಂ ಭಾಸ್ವತ್ತಪೋಮೂರ್ತಿಯನೆ ತಳೆದವೋಲ್ ತಾಪಸಾವೃತ್ತದಿಂ ಭಾಸುರಮಾಗಿರ್ಪಂದಯಾಂಭೋನಿಧಿ ಕಪಿಲಮಹಾಚಾರ್ಯನಾಚಾರ್ಯವರ್ಯಂ(ಕುಸುಮಾ. ೧-೧೧೬) ; ದಂಡಾಧೀಶ್ವರಂ ಮನಗದಡಿ ಬೊಮ್ಮಯ್ಯಗಳನೀಕ್ಷಿಸಿ ಹದುಳಿಸದೆ ನಿಬ್ಬರದ ಶೋಕಾಕ್ರಾಂತನಾಗುತ್ತ (ಬಸಪು. ೩೬-೧) ; ಸಭ್ಯತಾಲತೆ ಹೂತು ಹಸರಿಸಿ ಹಬ್ಬಿ ಫಲವಾದಂತೆ ಕಾಯುವ ನಿಬ್ಬರದಲೀಡಾಡಿದಳು ಹರಿಪದಪಯೋಜದಲಿ (ಕುಸ್ಯಾಅ. ೧೬-೩೪) ; ಸುಳಿಸುಳಿದು ಕಪ್ಪೊಪ್ಪುವಂದಣದ ಗೊಂದಣದ ಕಳಕಳದ ವಾದ್ಯರವದಬ್ಬರದ ನಿಬ್ಬರದಲಾ ಪುರಂ ರಂಜಿಸಿದುದು (ಚಬಪು. ೧೧-೩೫) ; ನಂಬುಗೆಯ ಕೊಂಬುದು ನಿಬ್ಬರದಿಂದೆ ಬರ್ಪವೋಲ್ (ಚಿಕವಿ. ೬-೧೫೮). ೮. ಕಠೋರತೆ ; ಕಠಿನತೆ : ಧರೆಯೊಳುದಯಿಸಿ ನೀವೆನುತ ನಿಬ್ಬರದ ಶಾಪವನಾಗಳೀಯಲು (ಬಸಪು. ೩೪-೧೧) ; ನಿಬ್ಬರದ ಮನವೆಂದು ಕಾಮದೇವಂ ಕರಿಯ ಕಬ್ಬಿನತ್ಯಧಿಕ ಬಿಲ್ಲಿಂಗೆಯುನ್ಮದವೆನಿಪ್ಪುಬ್ಬಟೆಯ ಬಾಣಮಂ ತೊಟ್ಟು ತೆಗೆದಾಕರ್ಣಪೂರಕ್ಕೆ ನಿಲಿಸಿ ಬಿಡಲು (ಲಕಿಚಿಂ. ೧೪-೫೦) ; ಒಬ್ಬನೇ ನೀನೆನ್ನ ಸಮರದ ಹಬ್ಬವನು ನೋಡೆನಲು ನುಡಿಗಳ ನಿಬ್ಬರವತಾ ಕಂಡು ದ್ರುಪದನು ಪಾರ್ಥಗಿಂತೆಂದ (ಸಂಭಪ. ೧೮-೯೬) ; ಸಾಕುಸತಿ ನಿಬ್ಬರದ ನುಡಿಗಳದೇಕೆ ಹೃದಯವನಱಿದು ಮತ್ತವಿವೇಕತನದಲಿ ಮುಳಿಯಬೇಡೆಂದೆನುತೆ ಕೈಮುಗಿದ (ಅಕ್ರೂಚ. ೪-೮೧). ೯. ತೀಕ್ಷ್ಣತೆ ; ಹರಿತ : ಹೆಬ್ಬೊಗೆಯನಡಗಿ ಸತತ ಪಿರಿಯುರಿ ಹಬ್ಬು

ತಡರುತ ಭಾಳನೇತ್ರನ ನಿಬ್ಬರದ ಭಾಳಾಂಬಕಾಗ್ನಿಗೆ ಸಮುವೆನಿಸುತಿರಲು (ಬಸಪು. ೪೪-೨೧) ; ಕಿಬ್ಬದಿಯ ಕೀಲಿಸಿದ ಕಾಮನ ನಿಬ್ಬರದ ಕೂರಂಬಿನಲಿ ತನುವಿಬ್ಬರಿವವೊಲು ನಿಮಿಷ ಕುಳ್ಳಿರಲಾಜದಳವಳಿದು (ಪ್ರಭುಲಿಂ. ೫-೨೧) ; ಪ್ರಾಣದಾಸೆಯ ಮಱೆದು ತನ್ನೊಳು ಕೇಣವಿಲ್ಲನೆ ಕಾದೆನುತ ನಿತ್ರಾಣನನು ನಿಬ್ಬರದ ನುಡಿಗಳಲಿಱದನಾ ಕರ್ಣ (ಕುಮಾಕ. ೧೩-೩೬). ೧೦. ಹುರುಪು ; ಉತ್ಸಾಹ ; ಹುಮ್ಮಸ್ಸು : ಕುಡುದಾಡೆಯಂ ನಿಬ್ಬರದಿ ಮನೆದು ಕೊಱದಂ ಹೊಯ್ದು . . . ಹೆಬ್ಬಂದಿ ವಿಸಿನದೊಳು ನಿಂದುದಾ ಶಬರರಿಗೆ ಮೃತ್ಯು ತಾನೆಂಬಂದದಿ (ಹಚಕಾ. ೬-೬) ; ಒಬ್ಬರೊಬ್ಬರುಳೇ ಉಳೇ ಱಾಂಗು ಛಲ ಎನುತಿರಲು ನಿಬ್ಬರದ ನಿಡುಬೊಬ್ಬೆಗಳ ನಿಡುತುಬ್ಬರಿಸುತಬ್ಬರಿಸುತಾರುತ ಬಿಬ್ಬಬಾಹುಯ್ಕಗಳು ಹೊಬ್ಬೂರೊಳಗೆ ಹುಗುತಿರಲು (ಬಸಪು. ೫೬-೧೪) ; ಕೆಂಪೇಱುದಕ್ಷಿಯಲೆರಡುಕೋಡಿಯ ಲೊಗುತಲದೆ ಕಿಡಿಗಳ ತುಷಾರಚಯ ಸ್ಫುರದಹಂಕಾರಪ್ರತಾಪಜ್ವರದಿಮ್ಮೆ ಕಾಹೇಱುತದೆ ನಿಬ್ಬರದ ಬರದಿಂದೀಕ್ಷನದು ಕಲಿಕರ್ಣ ನೋಡೆಂದ (ಕುಮಾಕ. ೧೨-೧೫) ; ಬೊಬ್ಬೆಯೊಳಂಗಜಾತಗೆ ವೀರರಸವುಕ್ಕಿ ನಿಬ್ಬರದಲಿ ಕೋಲ ಕಱೆದ (ಮೋಹಶ. ೨೮-೧೪) ; ನಿಬ್ಬರದಿ ತಾ ಪಿಡಿದ ಖಡ್ಗದಿ ಬೊಬ್ಬಿಱಾದು ಧನಪತಿಯ ಸಟಿವನನುಬ್ಬಿ ಹೊಯ್ದನು ಚಿನಕಡಿದು ದೆಸೆದೆಸೆಗೆ ಚಿಮ್ಮಿದನು (ಉತ್ತಕಾ. ೧೩-೨೫) ; ನಿಬ್ಬರದಿಂದಲಿ ಸರ್ವರ ಕೂಡುಂಬೊ ಹಬ್ಬನನುಣಿಸುವಿ ಹರಿಯೆ (ವಿದಾಕೃ. ೯-೧) ; ಕೊಬ್ಬಿದ ಖಂಡವ ತಿಂದು ಭೂತಗಳಾಗ ನಿಬ್ಬರದಲಿ ಕುಣಿದಾಡಿ ಹಬ್ಬವಾಯಿತು ನಮಗೆಂದು ಮರುಳುಮನ ಉಬ್ಬಿ ಹರಸಿ ಹಾಡಿದವು (ಮಾದೇಸಾಂ. ೨-೧೩೫). ೧೧. ವೇಗ ; ರಭಸ ; ಜೋರು : "ನಿಬ್ಬರ—ನಿರ್ಭರ=ರಭಸ" (ತದ್ಭ ಕೋ. ೨೨); ಶ್ರವಣಕುಲವಂ ನಿಬ್ಬರದಿ ತಾಗುವ ಹೊಯಿಲುಗಳುಮಾದವಾ ವೈಜವ ವಿನಿರ್ಮಳಭಕ್ತಿಮಾನಸೆಯಾದ ಕಾರಣವು (ಬಸಪು. ೫೨-೨೦) ; ಒಬ್ಬ ದೈತ್ಯನ ಕೊಲಲು ನಮಗಿನಿತುಬ್ಬಸಂಗಳು ಕೋಟಿ ಹುಟ್ಟಲು ಹುಬ್ಬ ನಮಗಹುದಿಂದು ಸಂಶಯವಿಲ್ಲ ಕೆಡಿಸುವೊಡೆ ನಿಬ್ಬರದಲಟ್ಟುವುದು ಹನುಮನ (ಕೌಶಾರಾ. ೩೮-೩೧) ; ಅದ್ಭುತವಾದ ಕನಸ ಕಂಡು ರಾಯನು ಉಬ್ಬಿ ಹೆದಱ ಕಣ್ಣ ತೆಱೆದು ಬೆಬ್ಬಳಯಾಗಿ ನೋಡಲು ನಾಲ್ಕುದೆಸೆಯನು ನಿಬ್ಬರದಲ್ಲಿ ತಬ್ಬಿದಳು (ಪರಿಸಾಂ. ೨-೨೦); ಕರದ ವಾಳೆಯ ಸಡಿಲ ಬಿಡೆ ನಿಬ್ಬರದೆ ಗಮನದೊಳ್ಪೆದಿತವನೊಳುರವಣಿಸಿ (ನಳಚ. ೭-೬) ; ಅಬ್ಬರಿನುತ ಬರ್ಹ ಹೆಂಗಳ ಬೀಳ್ಕೊಂಡೊಬ್ಬಳು ಕೆಳದಿಯ ಕೂಡಿ ನಿಬ್ಬರದಲಿ ಕಾಮನರ್ಥಾಂಗಿ ನಡೆದಳು ಹೆಬ್ಬನನು ನಿಟ್ಟಿಸುತೆ (ಮೋಹಶ. ೯-೨೨) ; ನಿಬ್ಬರದಿ ದಶಮುಖನು ಮಾಡುವ ಪೊಬ್ಬುಳಿಯ ದೇವೋಪಕರಣವ ಬೊಬ್ಬಿಡುತ ಕೊಂಡೊಯ್ದುಯಾಶನನುಳುಹಿ (ಉತ್ತಕಾ. ೧೯-೩೬) ; ಪರಿದು ಪೊಸಕೋಂಟೆಯಂ ಮುತ್ತಿರಲೊಡಮಾ ನಂಜರಾಜನಂಜುವಿನಂ ನಿಬ್ಬರದಿಂದೆ ನಾಗಮಂಗಲದರಸಂ ಬೆನ್ನಟ್ಟಿ ಬಂದನಂಗುಸರಾಜಂ (ಚಿಕವಿ. ೨-೭೩) ; ನಿಬ್ಬರದಲಿ ಬಂದ ನೀಲಕುದುರೆಯನೇರಿ ಹೆಬ್ಬೂರ ಚೆಲುವರಾಜ್ಯೆಯ್ಕ (ಸೌಂದಕಾ. ೧-೬೧). ೧೨. ಅಗಲವಾದುದು; ದೊಡ್ಡದಾದುದು; ವಿಸ್ತಾರವಾದುದು : ಕೊಬ್ಬಿ ಕೋಮಲವಾದನಿಗುರಿದ ನಿಬ್ಬರದ ನಿಡುಗಣ್ಣುಗಳ ಕಾಗಬ್ಬನಱಯದೆ ಕಬ್ಬಿನಿಚ್ಚೆಗೆ ಮೆಲುವ ಮರುಳಂತೆ . . . ಮಾಟ ನಿಷ್ಪಲವೆಂದಳಾ ವಿಮಳೆ (ಪ್ರಭುಲಿಂ. ೭-೭). ೧೩. ನೀಳವಾದುದು; ನಿಡಿದು : ನಿಬ್ಬರದ ನಿಡುಸುಯ್ಲು ಬೋಡಿಯ ಮನದ ಕಳ್ಳುದಿಯ . . . ಬೇದದ ಮುಬ್ಬಿನಲಿ ಹಣಗಿದರು ಪವನಜಪಲುಗುಣಾದಿಗಳು (ಕುಮಾಸ. ೧೬-೫೭) ; ಹೆಬ್ಬಾವುಗಳ ನಿಬ್ಬಿರದುಸುರು (ಅರಸಾ. ೫-೨೧೫). ೧೪. ಭಾವೋದ್ವೇಗ ; ಉದ್ರೇಕ ; ತಳಮಳ : "ತಳವಳಗೆಂದೆನ್ನಲದುವೆ ನಿಬ್ಬರಮಕ್ಕುಂ" (ಕವಿಕಂ. ೨೪೩) ; ಕಱೆಕಂಕನಡಿಗೆಱಗಿ ಕದನದುದ್ಯೋಗಕ್ಕೆ ಪೊಜಮಡಲ್ಕೆಂದಿರ್ದುದಾ ಸಮಯದಲ್ಲಿ ಗುಱುನೆಱೆದಿರ್ದುದಬ್ಬರಿಪ ಪರಸಮಯಿಗಳಿಗೆಲ್ಲ ನಿಬ್ಬರ[ಪಾಕಾಂ. ನಿರ್ಭರ] ವದೇವೊಗಳ್ವೆನು (ಸೋಮಪ. ೫-೩೩) ; ಕಂಡೆನರಸನ ನಿಬ್ಬರವ ಬಳಿಕಂಡಲೆದುದತಿಶೋಕತಿಪಿ ಕೈಗೊಂಡುದಿಲ್ಲರೆಕಳಿಗೆ ಬಳಿಕೆಚ್ಚತ್ತು ಕಂದೆಱೆದು ಖಂಡಿಸಿದನೆನ್ನುಬ್ಬೆಯನು (ಕುಮಾಗ. ೪-೬). ೧೫. ಕಷ್ಟ; ತೊಂದರೆ : ಕಬ್ಬುವಿಲ್ಲುಂದಿವೆದೆ ಪೂಸರಲ್ಪೂಣ್ಡೆಸಲ್ ನಿಬ್ಬರಮಿದೆಂದು ಮದನಂ ಮಾಲೆಗಾರ್ತಿಯರ ಹುಬ್ಬೆಂಬ ಚಾಪಮಂ ಕುರುಳೆಂಬ ನಾರಿಯಂ ಕಣ್ಣೆಂಬ ಕೊರ್ಗಱಯನು ಉಬ್ಬರದ ಸಾಹಸದೊಳಳವಡಿಸಿಕೊಂಡು (ಚೈಮಿಭಾ. ೬-೧೭) ; ಕಿಬ್ಬದಿಯೊಳಗೋಡಿದಂತಾ ನಿಬ್ಬರದಿ ಬೆಂಡಾಗಿ ಭೂಪತಿ . . . ಇಬ್ಬರಂಗದ ನೋವ ನಿಲ್ಲಿಸಿ ತಬ್ಬಿದನು ವೈರಾಗ್ಯವ (ಕೃಷ್ಣಾಶಾ. ೯-೧೩). 'ನಿರ್ಭಾರ' ಪರಾ.

ನಿಬ್ಬರವಾಗು=ಅತಿಶಯವಾಗು : ಮದಗಜದ ನಿಡುವರಿಯ ತೇರಿನ ಕುದುರೆಕಾಜರ ಕಾಹಿನಲಿ ಕೊಬ್ಬಿದುದು ನಿಬ್ಬರವಾಗಿ ಬಹುವಿಧವಾದ್ಯನಿರ್ಘೋಷ (ಕುಮಾದ್ರೋ. ೩-೬೮) ; ಅನ್ನೆಯವಾಯಿತು ನನ್ನದು ಬಾಳು ; ಒಬ್ಬರನುಳಿದು ಹೋಗಲು ನನಗೆ ನಿಬ್ಬರವಾಗಿದೆ ಮನದಲಿ ಹುಃಖ (ಚೆಲುವು. ೫೦-೮). [<ಸಂ. ನಿರ್ಭರ]

ನಿಬ್ಬರ$_2$ (ನಾ). ಆರುವಿಕೆ ; ಬತ್ತುವಿಕೆ ; ಒಣಗುವಿಕೆ : ನಾಲಗೆ ನಿಬ್ಬರಮಾಗೆ ಕಣ್ಣೊಡರ್ ಕನಲದೆ ನಂದೆವೊಯ್ದು ತೆಱನಾಗೆ ಕೃಷಾತುರ ನಾದನಾ ನೃಪಂ (ಲೀಲಾವ. ೬-೪೪). 'ನಿಬ್ಬರಿಸು$_2$' ಪರಾ.

[<ನಿಡಿದು$_1$ + <ಬಱ ?]

ನಿಬ್ಬರಂ (ಅ). ಅತಿಶಯವಾಗಿ : ಅರಳಂಬುಗಳ್ ಕಬ್ಬುವಿಲ್ಲುಮಿವು ನಾಡೆ ನಿಬ್ಬರಮಮರರಂ ಜಯಿಸಲೆಂದವಂ ಬಿಟ್ಟ ಶಂಬರಮಥನ ನಾಂದೋಳಚಾಪದಿಂ ಸುದತಿಯೆಂಬೊಂದು ಬಾಣವನೆ ಪೂಡಿ (ಚೆಚಪು. ೧೦-೧೩).

ನಿಬ್ಬರಂ ಬಿರಿ=ಅತಿಶಯವಾಗಿ ಅರಳು : ಕಾರ್ಗೊಯ್ಕ ಮೇರೆಯೊಳಿಟ್ಟ ಕೆಕ್ಕರಿಕೆ ಬಿರಿವಂತಾನುಂ ಮೆಯ್ ಬಿರ್ಕುಬಿರ್ಕೆನೆ ನಿಬ್ಬರಂ ಬಿರಿದೊಳಬುಗುಂ ಜೋಲ್ಬುಂ ವೈಚಿತ್ರ್ಯ ಜೀವರ ರೂಪದಿಂ (ಶಾಂತಿಪು. ೭-೯೨) ; ತೆಱಪುಗುಡದೆ ಸೂಚ್ಯಿಸುವ ನಿಸ್ವಾಳದ ಬಲ್ಬರಳೆ ದೆಸೆವೆಟ್ಟುಗಳ್ ನಿಬ್ಬರಂ ಬಿರಿಯೆಯುಂ ಬೇಗದಿಂ ನಡೆದೆತ್ತಿ ಬಂದು ಮಂಜುವೆಟ್ಟಮಂ ಮೂಲಪಸಾಗಿ ಮುತ್ತಿದಾಗಳ್ (ಕಬ್ಬಿಗಾ.೨೮೮).[<ನಿಬ್ಬರ$_1$]

ನಿಬ್ಬರಗತಿ (ನಾ). ವೇಗವಾದ ಗತಿ ; ರಭಸದ ಗಮನ : ಜೋದರ ಜೀವ ಜಾಳಿಸಿ ಬೀದಿವರಿದವು ಗಜಘಟಾಳಿಗಳು ತಾವು ನಿಬ್ಬರಗತಿಯ ರಥ ತುರಗಾವಳಿಗಳೆಳೆದವು ರಥಂಗಳನು (ಕುಮಾಕ.೧೫-೨೯). [ನಿಬ್ಬರ$_1$+ಗತಿ]

ನಿಬ್ಬರಗಲಹ (ನಾ). ಹುಮ್ಮಸ್ಸಿನಿಂದ ಕೂಡಿದ ಕಲಹ ; ಹುರುಪಿನ ಕಾದಾಟ : ನಿಲಿಸಿತವರುಬ್ಬರದ ನಿಬ್ಬರಗಲಹವಾ ದಿಸ ದುಳುಯ ಸಮರದ ಕಲಿಕಳಾಹಿಯನು (ಕೌರಾ. ೬-೧೪-೧೪).

[ನಿಬ್ಬರ$_1$ + ಕಲಹ]

ನಿಬ್ಬರತೆ (ನಾ). ಅತಿಶಯತೆ ; ಆಧಿಕ್ಯ : ಅದಿರುದ್ರನ ವಾಮನಯನದಲ್ಲಿ ಚಂದ್ರನು ಹುಟ್ಟಿದನು ಬಲದ ನಯನದಲ್ಲಿ ಸೂರ್ಯ ಹುಟ್ಟಿದನು ಅವರ ನಿಬ್ಬರತೆಗೆ ಹೋಡಶಚಂದ್ರರು ಹುಟ್ಟಿದರು (ರುದ್ರಭಾ. ೮೯).

[ನಿಬ್ಬರ$_1$ + -ಅತೆ$_1$]

ನಿಬ್ಬರದಿಟ್ಟ (ನಾ). ತೀಕ್ಷ್ಣವಾದ ನೋಟ ; ಹೆರಿತವಾದ ದೃಷ್ಟಿ : ಕರುವಿಯನ್ : —ಅರಮನೆಯ ನೆಲವಾಳಿಗೆಯಲ್ಲಿ . . . ಸಜ್ಜೆಗೆ ಹೊಸದಾಗಿ ಕಟ್ಟಿಸಿರುವ ಗುಪ್ತದೂರ್ಗದ ಬಾಗಿಲುಗಳನ್ನು ಬಲ್ಲೆರೇನು ? . . . (ನಿಬ್ಬರದಿಟ್ಟಯಿಂದ) ಅವಕ್ಕೆ ಇರುವ ಒಳಗಣ ಹೊರಗಣ ಬಿಯ್ಯುಗಗಳಿಗೆ ಎಷ್ಟು ಚಾವಿ (ಮಂತ್ರಶ. ೫೩-೨೨). [ನಿಬ್ಬರ$_1$+ದಿಟ್ಟ]

ನಿಬ್ಬರಿಬಾಯ್ (ನಾ). ದೊಡ್ಡ ಬಾಯಿ: ಮರುಳಿತ್ತಿತ್ತೊಡಮು ಬಿಕ್ಕಂ ಮುಸುಡು ಮರುಳ ಮುಂಗೆಯ್ಯುಮಂ ಬಿಕ್ಕುಮಂ ನಿಬ್ಬರಿ [ಬಾಹಾಂ. ನಿಬ್ಬರಿ, ಗಿಬ್ಬರಿ]ಬಾಯೊಳ್ಪೊಕ್ಕೊಡಂ ಕಂಡಿಸುವ ಸಿದಿದ ಬೇತಾಳನಂ ಮಚ್ಚದಿಂ ಚೆಚ್ಚರದಿಂದಂ ಕಿಟ್ಟು ಬೇತಾಳನ ತಲೆಯನೆ ನಕ್ತಂಚರಂ ತಿಂದ ನಕ್ತಂಚರನಂ ನುಂಗಿತ್ತು ಭೂತಂ (ಅರ್ಧನೇ. ೫-೪೦).

[<ನಿಬ್ಬರ್+ಬಾಯ್]

ನಿಬ್ಬರಿಸು$_1$ (ಕ್ರಿ). ೧. ಅತಿಶಯವಾಗು ; ಅಧಿಕವಾಗು : ಪರಿಯೆ ಪರ್ವಿದ ಮುಂಜು ರಂಜಿಸುವಂತೆ ತಾವರೆ ನಾಡೆಯುಂ . . . ಭೂಳಿ ಧೂಸರಿತಮಾದ ಸುವರ್ಣಪುತ್ರಿಕೆ ಬಣ್ಣ ನಿಬ್ಬವೊಲೆಯ್ದೆ ನಿಬ್ಬರಿಸಿದಂಗ ಮುಪೂರ್ವಕಾಂತಿಗೆ ತೊಟ್ಟನೇನಿಡೆಗೊಟ್ಟುದೋ (ಸುಲ್ಲಪು. ೪-೬೧) ; ಅಬ್ಬರಿಸುತ ಬಂದರು ದೊರೆದೊರೆಗಳು ಉದ್ಭಿದವರೆ ಹಿಡಿಕೊಂಡು ಹೆದ್ಬಾಗಿಲ ದಿಡ್ಡಿಯಲಿ ಹರಿಯ ಹೊಯ್ಕೆ ನಿಬ್ಬರಿಸಿತು ಚೋರಭಯವು (ಬಸಪು. ೫-೪೧). ೨. ತುಂಬಿಕೊಳ್ಳು ; ನಿಬಿಡವಾಗು : ಕುಂಭಸ್ಥಳಂ ನಿಬ್ಬರಿಪಂತುದ್ಯತ್ಕುಚಂ ಪಿಂಬಿಡೆಸೆ . . . ಕಣ್ಮುಚ್ಚಿಸಿ ಬಿಡೆ ಮನಭೂಷಾಳಿ ಮೈ ಸೋಂಕೆ ಬಿಂಬಾಧರೆ ಪಿಂಗಲ್‌ನಂದು ಕಂದರ್ಪನ ಕರುವಿಡುತರ್ಪಂತೆ ಕಣ್ಗೆಡ್ಡಮಾದಳ್ (ಅನಂಪು. ೪-೧೩).

[ನಿಬ್ಬರ$_1$+-ಇಸು$_3$]

ನಿಬ್ಬರಿಸು$_2$ (ಕ್ರಿ). ಬಾಡು ; ಕಂದು ; ಮಸುಳಿಸು : ನೇಸಲಿ ಸಾರೆ ನಿಬ್ಬರಿಸುವುತ್ಪಲಮಾಲೆಯಿನಿಪ್ಪ ದೃಷ್ಟಿನಿನ್ನಾಸಮನೊಯ್ಯನೋಸರಿಸಿ ನಮ್ರಿಶಿರೋಧರೆ ಸೀತೆ ಲೋಕಸಂತ್ರಾಸಿಯ ರೂಪು ಪಾವನಮಪರ್ಣದೊಳ್ ಪಲವಾಗಿ ತೋಯ್ ಕಂಡಾ ಸತಿ ಬೆರ್ಚಿ ಮುಚ್ಚಿದಳೆರ್ಕ್ಕುರದಿಂ ಕರಲೇಕ್ಷಣಂಗಳಂ (ಸಂರಾಮಾ. ೯-೧೧೨) ; "ಮುಚ್ಚೆ" (ಪಂರಾಮಾ. ಕೋಶ); ವಿರಹಭರೋತ್ಕಂಪಮನೋಹರಿಯ ಕಪೋಳಂಗಳಂತೆ ನಿಬ್ಬರಿಸಿದ ಬೆಳ್ಕರಿಸಿದಲೆಗಳನದಲೆಗಳ ಬರಿಸುವುದನುನಯದೆ ಪೆಂಟೆ ಗೆಂಟಲಿ ವಿಟರಂ (ಪುಸ್ಪಪು. ೨-೮೨). [ನಿಬ್ಬರ್$_2$+-ಇಸು$_3$]

ನಿಬ್ಬಾಣ 'ನಿಬ್ಬಾನ' ನೋ.

ನಿಬ್ಬಾನ, ನಿಬ್ಬಾಣ, ನಿರ್ಬಾಣ (ನಾ). ೧. ನಿರ್ವಾಣ; ಮೋಕ್ಷ : ಈ ಮೂರು ಸಂಕೋಲೆಗಳನ್ನು ಕಳಚಿ ಎಸೆಯದಿದ್ದರೆ ಶುದ್ಧಿಯ ಮೊದಲ ಘಟ್ಟವಾದ ಮೋಕ್ಷದ ಪ್ರವಾಹದೊಳಕ್ಕೆ ಇಳಿಯುವುದೂ ಕೂಡ ಸಾಧ್ಯವಿಲ್ಲ (ಸೋತಾಪತ್ತಿ). ಇನ್ನು 'ನಿಬ್ಬಾನ' ದೂರವೇ ಉಳಿಯಿತು (ತತ್ವಪ್ರಾ. ೧೬೬). **ನಿಬ್ಬಾಣ** : ೧. ಮಾರನಂ ಮುರಿದು ಸಂಬುದ್ಧನೆನುಗಗ್ಗಂ ನಿಬ್ಬಾಣಮೊಂದೆ, ತಣ್ಣಿಯರಣ್ಯಮಂ ತರಿದು, ಕೋರ್ದನರಿಯಟ್ಟಿಂಗಿಕದ ಧಮ್ಮಮಗ್ಗಂ (ಗಿಳವಿ. ೪೫-೬). **ನಿರ್ಬಾಣ** : ೨. ಮುಕ್ತಾಯ; ಮುಗಿತಾಯ : ಚಿಂತಿಸಲಾಗದಂ ಬಾರದು ಎಂಬಂತು ಟಿಣ ಕಳಸ ನಿರ್ಬ್ಬಾಣಮಪ್ಪನ್ನೆಗಂ (ಎಇ. XV, ೯೦-೫೩ ; 1060) ; ಶ್ರೀಸೋಮನಾಥದೇವರ ದೇವಾಲ್ಯಮನುತ್ತುಂಗಪ್ರಾಸಾದಶಿಖರ ಕಳಸಂಬರಂ ಕಲುವೆಸ ನಿರ್ಬ್ಬಾಣವಾಗಿ ಮಾಡಿಸಿ (ಎಕ. XI, ಚಿತ್ರದು. ೩೬-೪೩; 1199); ಯಿಂ ದೇವರ ದೇವಾಲ್ಯದ ಕಳಸ ನಿರ್ಬ್ಬಾಣ ಪವುಳಿ ಬಾಗಿಲುವಾಡ ಅಳುವಣೆಯ ಕೊಂಡ ಸಂಪೂರ್ನ್ನವಾದ ದಿನದಿಂ (ಎಕ. VI, ಕಡೂರು. ೪೯-೬೫ ; 1291).

[<ಪಾಲಿ. ನಿಬ್ಬಾನ./ಪ್ರಾ.ಣಿವ್ವಾಣ./ಸಂ.ನಿರ್ವಾಣ]

ನಿಬ್ಬಿಡಿ 'ನಿಬಿಡ' ನೋ.

ನಿಬ್ಬುದ್ದಿ 'ನಿಬುದ್ಧಿ' ನೋ.

ನಿಬ್ಬೆಗ 'ನಿರ್ಬೇಗ' ನೋ.

ನಿಬ್ಬೆದೆ (ನಾ). "ಬೆದೆಯಿಲ್ಲದ್ದು." (ಜಾನಕೋ. ೧೧).

[<ನಿರ್+ಬೆದೆ]

ನಿಬ್ಬೆರಗು 'ನಿಬ್ಬೆಱಗು' ನೋ.

ನಿಬ್ಬೆರಸು (ಕ್ರಿ). ಸಂಪೂರ್ಣವಾಗಿ ಬೆರೆತುಕೊಳ್ಳು,—ಒಂದಾಗು; ಸಮರಸವಾಗು : ಭಕ್ತಿಯ ಭಾವನೆಗೆ ನಿಬ್ಬೆರಸಲಾಗಿ ಶಿವನ ತನ್ನ ವಶವ ಮಾಡಿತ್ತು ಭಕ್ತಿ(ಪಚಸಂ. ೨೮೨-೨೪); ನಿಷ್ಠೆ ನಿಬ್ಬೆರಸಿ [ಸಾಹಾಂ. ನಿಬ್ಬರಿಸಿ] ಗಟ್ಟಿಗೊಂಡು ಅಖಿಲಾಜೆ ಸಮುನಸವೆ ಪರಿಚ್ಛೇದಬುದ್ಧಿಯುಳ್ಳಲ್ಲಿ ಮಾಹೇಶ್ವರ (ಚನ್ನಸಿ. ೪. ೫೯೯-೧೩೪೧).

[<ನಿಡಿದು$_2$+ಬೆರಸು$_1$(<ಬೆರೆಯಿಸು)]

ನಿಬ್ಬೆಳಕು (ನಾ). ಅಧಿಕವಾದ ಬೆಳಕು; ಪ್ರಜ್ವಲವಾದ ಬೆಳಕು : ಯಾವ ಕಗ್ಗತ್ತಲ್ಲಲ್ಲಿಯೂ ಯಾವ ನಿಬ್ಬೆಳಕಿನಲ್ಲಿಯೂ ಕಾಣಿಸುವಂತೆ (ಚತ್ರಸ್ಯ. ೧). [<ನಿಡಿದು$_1$+ಬೆಳಕು$_2$(<ಬೆಳಗು$_2$)]

ನಿಬ್ಬೆಱಗು, ನಿಬ್ಬೆರಗು (ನಾ). ಅತಿಯಾದ ಆಶ್ಚರ್ಯ,—ವಿಸ್ಮಯ : "ತಳವೆಳಗೆನೆ ನಿಬ್ಬೆಱಗು" (ಚತುನಿ. ೯೮) ; ಜೊಗಳುವ ಕುನ್ನಿಗಳ ನೋಡಿ ಎನ್ನ ಮನ ಬೆಜಗು ನಿಬ್ಬೆಜಗು ಆಯಿತ್ತಯ್ಯ ಚೆನ್ನಮಲ್ಲಿಕಾರ್ಜುನ (ಮಷಾದೇ. ಬ. ೯೪-೨೨೫); ಕುಜುಹಳಿದ ಕರಸ್ಥಳದ ನಿಬ್ಬೆಜಗಿನ ನೋಟದ ಎನ್ನ ಪರಮಗುರುವ ಕಂಡು ಬದುಕಿದೆನು ಕಾಣಾ ಗೊಹೇಶ್ವರ (ಅಪಚಂ. ೧೬೭-೬೫೨) ; ಮಜುಗಿದನು ಸುರನಾಥನಿಗ್ಗಿ ಬಸವಳಿದ ಯಮ ಬೆಜಗಾದ ನಿರುತಿ ಹಲುಗಚ್ಚಿದನು ವರುಣ ನಿಬ್ಬೆಜಗಿನೊಳಿರ್ದ (ಪಚಕಾ. ೪-೧೧೧) ; ಇದೇ ಕಡಾ ಶಿವಲಿಂಗಭಕ್ತಿಯ ಹೃದಯವನು ಸಾಧಿಸುವ ಪರಿ ಭಾವದಲಿ ನೆಜಿ ನಿಬ್ಬಾಲಿಯಲಿ ನಿಬ್ಬೆಜಗಿನಂದದಲಿ ಇದನು ಸಾಧಿಸದೆ (ಪ್ರಭುಲೀ. ೧೧-೨೩) ; ಯತಿರಾಜ ನಿಬ್ಬೆಜಗಿನಿಂ ಕೆಲದೊಳಿತರೇತರವನಜ್ಞಾಯದಿರೆ ನೋಡಿ ಸಂಜಲಚಿತ್ತನಾಗಿ (ಸಿದ್ಧೇಪು. ೬-೨೮) ; ಪರಹತಿಗೆ ಗಾಜುಗೆಟ್ಟು ಬ್ಬಸಂಬಟ್ಟು ಮೈಮಜ್ಜದನಾಗೆ ಬಲದೊಳಿತ್ತಂ ನಿಬ್ಬೆಜಗಿನ ಕಳಕಲಂ ಪಿರಿದಾಯಿತ್ತು. (ರಾಮಾಶ್ವ. ೧೪೫-೬). **ನಿಬ್ಬೆರಗು** : ಜನರು ನಿಬ್ಬೆರಗೊಂದಿ ಬಾಯ್ವಿಡುತಿರಲ್ (ಪುಚಾವಿ. ೫-೧೩); ಕೊನೆಕೊನೆಗೆ ಶಂಕರರು ದೇವೋನ್ಮಾದದ ಪೂರ್ಣ ನಿಬ್ಬೆರಗಿನಲ್ಲಿರುತ್ತಿದ್ದರು (ಶಂಕಭ. ೬೧ ಕವಿಕಾವ್ಯಪರಿಚಯ); ಬಿರುಗಾಳಿ ಮತ್ತು ಮೊಳಗು ಮಿಂಚುಗಳ ಹೊದ್ದಿಗೆ ಕಡಿದುರುಳುವ ಹೆಬ್ಬಂಡೆ ಇವೆಲ್ಲ ನಿಬ್ಬೆರಗಿನ ನೋಟಗಳು(ಬದ್ಧಪ್ರ.LVIII, ೨೯೫) ; ಜಗ ಜೀವಗಳನು ತಾ ಹೊರಗುಮಾಡಿ ನಿಬ್ಬೆರಗು ಮೌನವಾಂತ ಎರಡರಿಯದೊಂದು ಕೈವಲ್ಯ ನೈಜ ಬರಿ ಚೆತ್ತಲೆತ್ತಲೂನೂ (ಆರಳು. ೨೨೮-೧೦).

ನಿಬ್ಬೆಱಗಾಗು, ನಿಬ್ಬೆರಗಾಗು = ಆತ್ಯಾಶ್ಚರ್ಯವನ್ನು ಹೊಂದು: ಅತಿಮುದದಿಂದಂ ಸೌಂದರವತಿ ಬರಲೊಂದನುಗೆಯುಮುರ್ವ ತಣ್ಣಬಲೊಳ್ಭೂಪತಿಯುಂದೃಟ್ಟನಿರೆ ಕಂಡಾ ಸಿತಪಂಕಜಪತ್ರನೇತ್ರೆ ನಿಬ್ಬೆಜಗಾದಳ್ (ಉದ್ಭವ. ೬-೧೨) ; ಕೂತಾಡಿ ದೇವರು ಪೊತ್ತ ತಾಂಡನಮೂರ್ತಿಯಂ ಕಾಣುತ್ತ ನಿಬ್ಬೆಜಗಾಗುತಂ ಪೂಜಾರಿಗಿಂತೆಂದ (ಬಸಪು.೧೬-೧); ಪರವೆಯಿಂ ಪರಿಯಿಂದ ನರ್ತನಂಗೆಯ್ಯುತ್ತಲಿರಲು ನಿಬ್ಬೆಜಗಾಗಿ ನಟ್ಟ ದಿಟ್ಟಿಯಲಿ ಸೌಂದರಗಣಾಧೀಶ ನಿಟ್ಟಿಸುತಿರ್ದೊಡೆ (ಸೌಂದಪು. ೯-೧೪) ; ಆಲಿಸ ನಿನಿಷಗಮಲಲಿಂಗಮಂ ನೀನಿತ್ತ ಮೇಲೆ ತಲ್ಲಿಂಗದೊಳ್ ಮನ ಲೀನವಾಗಿ ಕಣ್ಣಾಲಿಗಳ್ ನಟ್ಟು ದಿಟ್ಟಿಯಲಿ ನಿಬ್ಬೆಜಗಾಗಿ ನಿಜಸುಖಸಮಾಧಿಯೊಳಿರೆ (ಚೆಬಪು. ೬-೧೨) ; ಇಷ್ಟಲಿಂಗದಲ್ಲಿ ನಿಷ್ಠೆ ನಿಬ್ಬೆಜಗಾಗಿ ಆಚರಿಸುವಲ್ಲಿ (ಅಮಂತೇ. ೨೬೩-೧೬) ; ನಾನು ನಿಬ್ಬೆರಗಾಗಿ, ಬಾಯಿ ದಿಟ್ಟಿದ್ದರೂ ನುಡಿಯದೆ ಕುಳಿತಿದ್ದೆ (ನಡೆವಾ. II, ೧೦೧೬) ; ಉತ್ತರನು ಬಹುವಾಗಿ ಹೆದರಿ ರಥದಲ್ಲಿ ನಿಬ್ಬೆರಗಾಗಿ ಕುಳಿತುಬಿಟ್ಟನು (ನಚಭಾ. ೨೨೮).

[<ನಿಡಿದು$_1$+ಬೆಜಗು/ತೆಲು.ನಿವ್ವೆರಗು]

ನಿಬ್ಬೆಱಗುವಡು (ಕ್ರಿ). ಅತಿಯಾದ ಆಶ್ಚರ್ಯವನ್ನು ಹೊಂದು : ನಿಬ್ಬೆಜಗುವಟ್ಟು ಸೌಂದರಿಯೊಬ್ಬುಳಿಗೊಂಡಳ್ಳದುಣ್ಮದೀಕ್ಷಿಸಿ ನೈಪನಂ

ಬಿಬ್ಬೋಕಂ ಕುಡಿವರಿಯಲ್ ನಿಬ್ಬೆಗದೆ ನಿನಗಕಾರಣಹಸನಮದೆಂದಳ್ (ಉದ್ಭಟ. ೧೧-೨೩). [ನಿಬ್ಬೆಜಗು + ಪಡು1]

ನಿಬ್ಬೆಜಗುವಡೆ (ಕ್ರಿ). = ನಿಬ್ಬೆಜಗುವಡು : ಮಾಲೆ ತೊಡಿಯುವ ಕಜ್ಜವಂ ಮುಱಿದು ನಿಬ್ಬೆಜಗುವಡೆದು ಲೆಪ್ಪದ ಪೆಣ್ಣೆ ನಂತಿರ್ದಳು (ಸೌಂದಪು. ೧೨-೪೦). [ನಿಬ್ಬೆಜಗು + ಪಡೆ1]

ನಿಬ್ಯಸನ (ಗು). ೧. ಯಾವುದೇ ಬಗೆಯ ಚಟವಿಲ್ಲದಿರುವ : ಕುಸುಮಮನಾಲೆಗಳಂ ರಚಿಸಿ ತಂದೊಸೆದು ಭಕ್ತಂಗಿತ್ತು ತಾ ನಿಬ್ಯಸನ [ಪಾಠಾಂ. ತ್ಯಶನ]ಕಾಯಕಲಬ್ಧಿಯಲಿ ಜಂಗಮಕೆ ಮಾಡುತ್ತ ಪೆಸರು ಪಸರಿಸಿ ಈರ್ತಿಸುತ್ತಿರೆ (ಬಸಪು. ೨೨-೨೬). (ನಾ). ೨. ಯಾವುದೇ ಬಗೆಯ ಚಟವಿಲ್ಲದಿರುವುದು. [<ಸಂ. ನಿರ್ವ್ಯಸನ]

ನಿಭ (ಗು). ೧. ಸಮಾನವಾದ ; ಸದೃಶವಾದ ; ಹೋಲಿಕೆಯುಳ್ಳ. (ನಾ). ೨. ಸೋಗು ; ಕಪಟ ; ಮೋಸ. ೩. ನೆವ ; ನೆಪ : "ಕೈತವಂ, ಕಪಟಂ . . . ವಿಸಂ, ನಿಭಂ, ನಿರ್ದಿಷ್ಟಂ, ವ್ಯಪದೇಶಃ – ಈ ೧೦ ನೆವಂ" (ಹಲಾಯು. ೧೧೭-೨೪) ; "ಕಪಟಂ ನಿಭಂ ಕೈತವಂ ಮೃಷಂ . . . ವ್ಯಪದೇಶಮೆನೆ ನ್ಯಾಜಮಕ್ಕುಂ" (ಪುಂಗರಾ. ೧೨೪-೧೦). ℙ 'ನಿಭ' ಎನ್ನುವುದು ಸಂಸ್ಕೃತದಲ್ಲಿ ಸಮಾಸದ ಕೊನೆಯಲ್ಲಿ ಸೇರಿಬರುವ ಒಂದು ಶಬ್ದ. ಇದಕ್ಕೆ ಸ್ವತಂತ್ರವಾದ ಪ್ರಯೋಗವಿಲ್ಲ. [ಸಂ.]

ನಿಭಾಯಿಸು, ನಿಬಾಯಿಸು (ಕ್ರಿ). ಸಾಗಿಸಿಕೊಂಡು ಹೋಗು ; ನಿರ್ವಹಿಸು : ಆ ಜನರು ತಮ್ಮ ಹೆಂಡರು ಮಕ್ಕಳಿಗೆ ಅನ್ನ ವಸ್ತ್ರ ಕೊಟ್ಟು ಯಾವ ಮೇರೆ ನಿಭಾಯಿಸುತ್ತಾ ಇದ್ದರು (ರಾಜೇಂದ್ರ. ೬೪) ; ಈಗ ಕೆಲಸವಿಲ್ಲದ ತಾನು ಅವಳನ್ನು ಕಟ್ಟಕೊಂಡು ಸಂಸಾರ ಹೇಗೆ ನಿಭಾಯಿಸುವುದು ? (ಮೂಡುಸೆ. ೩೩) ; ಅನಂದನಿಗೆ ಎಲ್ಲಾ ಕಡೆಗೂ ದೃಷ್ಟಿ ಯಿಟ್ಟು ನಿಭಾಯಿಸಲು ವ್ಯವಧಾನವೇ ದೊರೆಯುತ್ತಿರಲಿಲ್ಲ (ಮುರ. ೩೭); ಶ್ರೋತ್ರಿಯರೇ ನನ್ನ ಸ್ಥಾನದಲ್ಲಿದ್ದಿದ್ದರೆ . . . ಅವರೊಬ್ಬರೇ ಈ ಕೆಲಸವನ್ನು ಮಾಡಿ ನಿಭಾಯಿಸುತ್ತಿದ್ದರು (ಪಂಪಭಾ. ೩೬೯) ; ಮುಂದೆ ಹೇಗೆ ತಾನೆ ನಿಭಾಯಿಸುತ್ತೀಯೋ ತಿಳಿಯದು (ದಂಗಳ. ೧೩೭) ; ಸ್ವಭಾವ ತಿಳಿದರೆ ನಿಭಾಯಿಸಬಹುದು (ಗಾಜೆ). **ನಿಬಾಯಿಸು** : ಈ ಕೆಲಸ ನಿಬಾಯಿಸಲು ಅವರೊಬ್ಬರಿಂದಲೇ ಸಾಧ್ಯವಿಲ್ಲ (ಡೂಢಿ).

[←ಹಿಂ.ನಿಭಾನಾ, ನಿಬಹನಾ, ನಿಬಾಹನಾ ; ಮರಾ. ನಿಭಣೇ, ನಿಭಾವಣೆ./ತುಳು. ನಿಭಾಯಿಸು ನಿಭಾಸು, ನಿಬಾಸು ; ತೆಲು. ನಿಭಾಯಿಂಚು]

ನಿಭಾರಿ (ನಾ). ಒಂದು ಬಗೆಯ ಬಟ್ಟೆ (?) : ಪರನಿಭಾರಿಯ ಬಳವಿನಲಿ ಬಲನುರಿಯ ಬಿಗಿದನು ಪಡಮುಖಕೆ ಮುಂಜೆಜಗ ಬಿಟ್ಟನು ಬಿಗಿದ ಬದ್ದುಗೆ ದಾರಗೊಂಡೆಯಪ (ಕುಸ್ಕಾಕ. ೪-೧೬).

[ℙ ಇದು 'ನಿಖಾರಿ' ಎಂಬುದರ ಅಪಲಿಖಿತವಿರಬಹುದು]

ನಿಭಾಲನ, ನಿಭಾಳನ (ನಾ). ನೋಡುವಿಕೆ; ನೋಟ. **ನಿಭಾಳನ** : "ನಿಭಾಳನಂ, ನಿಶಮನಂ, ನಿಧ್ಯಾನಂ . . . ದ್ಯೋತನಂ ಈ ೮ ನೋಟಂ" (ಹಲಾಯು. ೧೩-೪೧). [ಸಂ.]

ನಿಭಾಳನ 'ನಿಭಾಲನ' ನೋ.

ನಿಭೃತ (ಗು). ೧. ಕೆಳಗೆ ಇಟ್ಟ,—ಇರಿಸಿದ. ೨. ತುಂಬಿದ ; ಆವರಿಸಿದ : ಪುಳಕಿತಕಪೋಳಫಳಕಂ ವಿಳಸಿತಮದಿರಾರುಣೇಕ್ಷಣಂ ಸ್ಮರ ತೋಷ್ಮಂ ಕೆಳದೀ ನಿನ್ನ ಮುಖಂ ತಳಮಳಗೊಳಿಸುಗುವಿಂತು ನಿಭೃತ ಶೃಂಗಾರರಸಂ (ಕವಿತಾ. ೩-೧೯೨) ; ಎರಡನೆಯಬ್ಧಿಯುಂ ನೊಡಲ ವಾರಧಿಯುಂ ಗಡಿಯಾಗೆ ನೀಳ್ದು . . . ಕರನುಸೆದಿರ್ಪುದಾತತ ಗುಹಾದ್ವಯ ವಜ್ರಮಯಿಾದರೀಪ್ರಭಾಪರಿಚಿತಪಾರ್ಶ್ವಮಗ್ನನಿಭೃತಾಂಬುಘರಂ ವಿಜಯಾರ್ಧಭೂಧರಂ (ಪಂದ್ರಪು. ೬-೨) ; ಜಾರು ಮನಾನಂದದ ಸಲುವಾಗಿ ಅತ್ಯಂತ ಏಕಾಂತದಲ್ಲಿ . . . ಸಾಹಿತ್ಯನೀಡವನ್ನು ನಿರ್ಮಿಸಿ ಕೊಂಡಿದ್ದಾಳೆ. ಆದರ ಮೇಲೆ . . . ಒಂದು ಶಿಲಾಖಂಡ ಬಂದು ಬಡಿದು ಅವಳ ನಿಭೃತನೀಡವನ್ನು ಅನೂಲಾಗ್ರ ಕೆಡವಿಬಿಡುವಂತಾಯಿತಲ್ಲ (ಇಪ್ಪಕ. ೨೫೪). ೩. ಮರೆಮಾಚಿದ ; ಗುಪ್ತವಾಗಿರಿಸಿದ. ೪. ಬಲವಾದ ; ಶಕ್ತಿಯುತವಾದ ; ಸಮರ್ಥವಾದ : ಭಾನು ಭಾರಿಯ ತಮವ ತಿವಿನವದಾರ ನೆರವಿನ[ಪಾಠಾಂ. ಯು]ಲಿ ಈ ನಿಭೃತ ಗದೆಯಿರಲು ಕುಂತೀಸೂನುಗಳ ಕೈಕೊಂಬೆನೇ (ಕುಪ್ಯಾಗ. ೩-೩೧). (ನಾ). ೫. ಗುಟ್ಟು ; ರಹಸ್ಯ : ಏಕಾಂತವಾಗಿ, ನಿಭೃತವಾಗಿ ಆತನಿಗೆ ಬಾರಿ ಬಾರಿಗೆ ಯಾವುದನ್ನು ಸಮರ್ಪಣೆ ಮಾಡಿದ್ದೇನೆಯೊ ಅದೇ ಅರ್ಘ್ಯವನ್ನು ಇಂದು ಇಲ್ಲಿ ಅರ್ಪಿಸುತ್ತಿದ್ದೇನೆ (ಶಿಖಂಧಿ. ೧, ೩) ; ಕಪಾಲಕುಂಡಲೆಯು ಪಥಿಕನನ್ನು ಸಂಗಡ ಕರೆದುಕೊಂಡು ನಿಭೃತವಾಗಿದ್ದ ಒಂದು ಶಾಸನ ದೊಳಗೆ ಪ್ರವೇಶಿಸಿದಳು (ಕಪಾಕುಂ. ೨೯) ; ದೇವಮಾರ್ತಾಗಳೆಲ್ಲವೂ ಅತಿನಿಭೃತವಾದ ಗೃಹಗಳೊಳಗೆ ತರಗೆಲೆಗಳ ರಾಶಿಯಲ್ಲಿ ಮುಚ್ಚಿಡಲ್ಪಟ್ಟಿದ್ದುವು (ಕೋಹಿಸೂ. ೬) ; ಇಪ್ಪು ರಾತ್ರಿ ಒಮ್ಮಿಂದೊಮ್ಮೆ ತಮ್ಮ ನಿರಾಪದವೂ ನಿಭೃತವೂ ಆದ ನಿವಾಸದ ಹತ್ತಿರ ಜನಸಮಾಗಮ ಕಂಡು ಅವು ಚಕಿತವಾಗಿ ಚೀತ್ಕರಿಸಿದೆ (ಇಪ್ಪಕ. ೧೨೭). [ಸಂ.]

ನಿಭೃತಕಾಂತಿ (ನಾ). ಏಕಾಂತದಲ್ಲಿ ದೊರಕುವ ಸಮಾಧಾನ,—ಸಮಚಿತ್ತತೆ : ಆ ಸಹಜಲಭ್ಯವಾದ ಸುಖಸಾಧನಗಳ ಮುಖಾಂತರ ಅವನ ಜೀವನದ ಗೃಹಕೋಣದಲ್ಲಿ ಸಂಜೆಯ ದೀಪ ತೊಳಗಿಸಿ, ನಿಭೃತಕಾಂತಿಯನ್ನು ಅವನು ನೆಲೆಗೊಳಿಸತಕ್ಕವ (ಇಪ್ಪಕ. ೨೬೯).

[ನಿಭೃತ + ಕಾಂತಿ]

ನಿಭೃತಸ್ಥಾನ (ನಾ). ಗುಪ್ತಸ್ಥಾನ ; ಗುಟ್ಟಾದ ಸ್ಥಳ : ಅವರ ಸಂಗಡ ಆ ಕಲ್ಲುಮಂಟಪದ ನಿಭೃತಸ್ಥಾನಕ್ಕೆ ಹೋಗಿ ಅದನ್ನು ಪಾಷಯೋಗ್ಯವನ್ನಾಗಿ ಮಾಡುವ ಸಾಹಸದಲ್ಲಿ ಅವರಿಗೆ ನೆರವಾಗಿದ್ದನು (ಪುಲಿಮ. ೬೧೦). [ನಿಭೃತ + ಸ್ಥಾನ]

ನಿಭೃತೇಂಗಿತ (ನಾ). ಗುಪ್ತವಾದ ಇಂಗಿತವನ್ನುಳ್ಳವನು : ಸನ್ಮತಿಯ ನುಡಿಯಂ ಕೇಳ್ದು ಮುನಿದು ಸಂವೃತಾಕಾರನುಂ ನಿಭೃತೇಂಗಿತನುಮಾಗಿ ದಕ್ಷಜನೋಪಲಕ್ಷಿತಾಕೂತಪರಾಜಿತಾನುಜನ್ಮಂ ನುಡಿವಾಗಳ್ (ಶಾಂತಿಪು. ೨-೫೫ ಪ). [ನಿಭೃತ + ಇಂಗಿತ]

ನಿಭ್ರಾಂತ (ಗು). ೧. ಭ್ರಾಂತಿಯಿಲ್ಲದ ; ಭ್ರಮೆರಹಿತವಾದ : ನುಡಿಯ ಸಡಗರದಲಾದ ಬಿಂದು ತಾನಲ್ಲ ಪದುಮಪರಿಮಳಕೆಜಗುವ ಭ್ರಮರ ತಾನಲ್ಲ ಭವದ ಕುಳವನು ಗೆಲಿದ ನಿಭ್ರಾಂತ ತರಣ (ಆಪಚಂ. ೨೮೩-೧೨೯೬) ; (ನಾ). ೨. ಭ್ರಮೆಯಿಲ್ಲದವನು; ಭ್ರಾಂತಿಯಿಲ್ಲದವನು : ಹೊನ್ನು ಹೆಣ್ಣು ಮಣ್ಣೆನೊಳು ನಿಲುಕದಾ ತ್ರಯವ ತನ್ನವೆನ್ನವೆ ಅಂಗಜಂಗಮಕೆ ಸವಿಸುತ್ತ ತನ್ಮೂರ್ತಿಯಾಗಿ ನಿಭ್ರಾಂತನಾಗಿರಬಲ್ಲಡಾತನೇ ಸದ್ಭಕ್ತನು (ತಿಪಗೀ. ೧೩-೬೨).

[<ಸಂ. ನಿರ್ಭ್ರಾಂತ]

ನಿಭ್ರಾಂತಿ (ನಾ). ಭ್ರಾಂತಿಯಿಲ್ಲದಿರುವಿಕೆ : ಎನ್ನ ದಿವ್ಯಜ್ಞಾನವೇ ದೀಪ ಎನ್ನ ನಿಭ್ರಾಂತಿಯೇ ಸ್ನೇಹವೆಡ್ಡ (ವಚಸಂ. ೧೫೧-೨೮).

[<ಸಂ. ನಿರ್ಭ್ರಾಂತಿ]

ನಿಮಂತ್ರಣ (ನಾ). ೧. ಕರೆಯುವಿಕೆ ; ಬರಹೇಳುವಿಕೆ. ೨. ಯಾವುದಾದರೂ ಸಮಾರಂಭಕ್ಕೆ ಕೊಡುವ ಕರೆ,—ಆಹ್ವಾನ. ೩. ಕರೆಯೋಲೆ ; ಆಹ್ವಾನಪತ್ರಿಕೆ : ಶ್ರೀಕ್ಷೆಕರು ನಿಮಂತ್ರಣದ ಮೂಲಕ ಆಹ್ವಾನಿಸಲ್ಪಟ್ಟಿದ್ದರು (ದೂಂಗಾಣಿ. ೪). ೪. ಶ್ರಾದ್ಧ ಭೋಜನಕ್ಕೆ ಹೇಳುವುದು ; ಪೂರ್ವಪಂಕ್ತಿಗೆ ಕರೆಯುವುದು. ೫. ಶ್ರಾದ್ಧದಲ್ಲಿ ಪೂರ್ವಪಂಕ್ತಿಯ ಊಟ ; ಶ್ರಾದ್ಧ ಭೋಜನ :

ಭಟ್ಟರು ನಿಮಂತ್ರಣಕ್ಕೆ ಹೋಗಿದ್ದಾರಂತೆ (ರೂಢಿ). ☞ ಅಂಗೀಕರಿಸಿದರೆ ನಡೆಸಲೇ ಬೇಕಾದ ಶ್ರಾದ್ಧಭೋಜನಕ್ಕೆ ನಿಮಂತ್ರಣವೆಂದೂ ನಡೆಸದಿದ್ದರೂ ಅಡ್ಡಿಯಿಲ್ಲದ ಆಹ್ವಾನಕ್ಕೆ ಆಮಂತ್ರಣವೆಂದೂ, ಹೇಳುತ್ತಾರೆ. 'ಆಮಂತ್ರಣ' ಪರಾ. [ಸಂ.]

ನಿಮಂತ್ರಣೆ (ನಾ). =ನಿಮಂತ್ರಣ ೪ : ಅದಕೆನಗೆ ನಿಮಂತ್ರಣೆ ಮೂರುದಿನಕೊಮ್ಮೆ . . . ನಮ್ಮ ಬ್ರಾಹ್ಮಣ್ಯದಲಿ ಶ್ರಾದ್ಧವೇ ಸಾರ (ಗಣೇಶ. ೬೮-೧೩). [ಸಂ. ನಿಮಂತ್ರಣ]

ನಿಮಂತ್ರಿತ (ಗು). ೧. ಕರೆದ ; ಆಹ್ವಾನಿಸಿದ : ಶಂಭುಶಾಸ್ತ್ರಿಗಳು ನನ್ನನ್ನು ಸಭಾಭವನಕ್ಕೆ ಕರೆದೊಯ್ದು ಕೆಲವು ನಿಮಂತ್ರಿತ ದೊಡ್ಡ ವ್ಯಕ್ತಿಗಳಿಗೆ ಸಿದ್ಧಪಡಿಸಿದ ಸ್ಥಳದಲ್ಲಿ ಕೂಡ್ರಿಸಿದರು (ಅಬೋಲೀ. ೧೩೧). ೨. ಆಹ್ವಾನಿತನಾದವನು ; ಆಮಂತ್ರಿಸಲ್ಪಟ್ಟವನು : ಉಂಡು ಹೊಟ್ಟೆಯುಬ್ಬಿಸಿ ತೇಗುತ್ತ . . . ನಿಮಂತ್ರಿತರು ಹಾದು ಹೋದರು (ಅನ್ನ. ೨೫೦). [ಸಂ.]

ನಿಮಂತ್ರಿಸು (ಕ್ರಿ). ಕರೆ ; ಆಹ್ವಾನಿಸು : ಶ್ರೋತ್ರಿಯರು ತಮ್ಮ ಮನೆಯ ಶ್ರಾದ್ಧಗಳಲ್ಲಿ ಅವರನ್ನು ಪೂರ್ವಪಂಕ್ತಿಗೆ ನಿಮಂತ್ರಿಸುತ್ತಿದ್ದರು (ವಂಶವೃ. ೪೮೩). [ನಿಮಂತ್ರಣ+ -ಇಸು$_3$]

ನಿಮಕ್‌ಹರಾಮ 'ನಮ್ಮಕ್‌ಹರಾಮ' ನೋ.

ನಿಮಗ್ನ (ಗು). ೧. ಮುಳುಗಿರುವ ; ವಿಲೀನವಾದ : ದುಶ್ಶಾಸನೋರಸ್ಸ್ಥಳೋತ್ಥಲದುಷ್ಣಾಂಬುನಿಮಗ್ನಪೂರ್ಣಜಠರಂ . . . ಚಾಳುಕ್ಯ ಕಂಠೀರವಂ (ಗದಾಯು. ೨-೪೮) ; ಫಣಿಶಿರೋಮಣಿಯಂತೆ ಪೊಳೆದು ದರ್ಧನಿಮಗ್ನಬಿಂಬ ರವಿಮಂಡಲದ ವರ್ತುಲಾಗ್ರಂ (ಶ್ರೀರಾಮಾ. ೪೧೬-೩೭೦). ೨. ಕಾಣದ ; ಅಡಗಿದ : ಮರೆಯಾದುದಾ ದೇವ ತೇಜಃಪುಂಜಮಖಮೂರ್ತಿಯಗ್ನಿ ಮೆಯ್ ಜ್ವಾಲಾನಿಮಗ್ನಮೆನಲ್ (ಶ್ರೀರಾಮಾ. ೧೪-೩೬೬). (ನಾ). ೩. ಮುಳುಗಿದವನು ; ತಲ್ಲೀನನಾದವನು ; ಅಡಗಿದವನು : ಭವವಾರಾಶಿನಿಮಗ್ನರಂ ದಯೆ ದಮಂ ದಾನಂ ತಪಂ ಶೀಲಮೆಂದಿವೆ ಮೆಯ್ಯಾಗಿರೆ ಸಂದ ಧರ್ಮಮೆ ವಲಂ ಪೊತ್ತೆತ್ತುಗುಂ (ಅಪಪು. ೨-೭) ; ಜನನಿಯ ಮೊಗಮಂ ನೋಡಲ್ಕೆ ನಾಣ್ಚಿ ಸಿಗ್ಗಾಗಿ ಬಾಗಿ ತಲೆಯಂ ಚಿಂತಾಬ್ಧಿನಿಮಗ್ನರಾಗಿ ಕಣ್ಣೀರ ನಿಕ್ಕುತಿರೆ ನೋಡಿ (ಸುಕುಮಾ. ೨-೩೦); ತೆರಳಿದನ್ ಧಾನ್ಯಮಾಲಿನಿವೆರಸಿ ರಾವಣಂ, ಚಿಂತಾನಿಮಗ್ನನಂತರ್ಮಥಿತನಾ ಜೀವನಾಂಭೋಧಿ (ಶ್ರೀರಾಮಾ. ೩೩೪-೧೦೦). ೪. ಹೀನಸ್ಥಿತಿಯಲ್ಲಿರುವವನು; ಹಿಂದುಳಿದವನು ; ಪಾಪಿ : ಈ ಪ್ರದೇಶದಲ್ಲಿ ನಿಮಗ್ನರನ್ನು ಉದ್ಧಾರಮಾಡಲು . . . ದ್ರಾವಿಡವೇದರೂಪವಾದ ದಿವ್ಯಪ್ರಬಂಧಗಳನ್ನು ರಚಿಸುವರೆಂದೂ ಭವಿಷ್ಯ ನುಡಿದಿದೆ (ಭಾರದ. ೩೯೬). [ಸಂ.]

ನಿಮಗ್ನತೆ (ನಾ). ಮುಳುಗಿರುವುದು ; ತಲ್ಲೀನತೆ ; ತತ್ಪರತೆ : ಆ ನಿಮಗ್ನತೆಯಿಂದ ಪಾರಾಗಿ ಬೇರೆಯಾಗಿ ನಿಲ್ಲುವ ಲಘಿಮಾಕೌಶಲ (ಕಾವ್ಯಕು. ೧). [ಸಂ. ನಿಮಗ್ನತಾ]

ನಿಮಚಿಕಣಿ (ನಾ). ಒಂದು ಬಗೆಯ ಅಡಕೆ : ಚಿಕಣಿ ಅಡಿಕೆ-ಥೆಳ್ಳಗೆ ಮತ್ತ ಚಪಟಯಾಗಿರಬೇಕು . . . ಇದರಲ್ಲಿ ನಿಮಚಿಕಣಿ ಅಂತೆಂದು ಒಂದು ಜಾತಿಯುಂಟು. ಅದು ಚಪಟಾಗಿದ್ದು ದಪ್ಪಿರುವದು (ಮುಂಬಪ್ರಾ. ೪೮). [←ಮರಾ. ನಿಮಚಿಕಣೀ]

ನಿಮಜ್ಜಕ (ನಾ). ೧. ಮುಳುಗುವವನು. ೨. ಮುಳುಗಿಸುವವನು. ೩. ಅಳವನ್ನು ಅಳೆಯುವುದಕ್ಕಾಗಿ ನೀರಿನಲ್ಲಿ ಮುಳುಗಿಸುವ ಗುಂಡು : "ಗಾಳವನ್ನು, ಗಾಧಮಾಪಕವನ್ನು ನೀರಿನಲ್ಲಿ ಮುಳುಗಿಸಲು ಉಪಯೋಗಿಸುವ ಭಾರ ; ನಿಮಜ್ಜಕ ; ಮುಳುಗುಗುಂಡು" (Sinker. ಇಂಕನಿ). [ಸಂ.]

ನಿಮಜ್ಜನ (ನಾ). ೧. ಮುಳುಗುವುದು : ಪಾಪಂಡಾಗಮಕರ್ದಮದೊಳ್ ನಿಮಜ್ಜನಮಾಗದಂತೆ ವಿಜ್ಞಾನಮುನಿಮ್ಮುಮಂ ನೀನುದ್ಧರಿಸಲ್ವೇಳ್ಕುಂ (ಯಾದಚಂ. ೧೩-೧೮ ವ) ; ಶಿಕ್ಷಣವಿಧಾನದ ಗುಣಸನ್ನಿಪಾತದಲ್ಲಿ ನಿಮಜ್ಜನವಾಗದೆ-ಇರುವ ಏಕೋಷದೋಷ-ಈ ನಸುಕಿನ ನಿದ್ರಾಭಂಗ (ಗಾಳವ. ೧೬೧). ೨. ಮುಳುಗಿಸುವುದು. ೩. ಸ್ನಾನ ಮಾಡುವುದು. [ಸಂ.]

ನಿಮಜ್ಜರ (ನಾ). ದೋಣಿ ; ನಾವೆ : "ಜೋಗಂ ಪರೀತಂ ನಿಮಜ್ಜ [ಪಾಠಾಂ. ನಿಮಂಜ]ರಂ ದುಗ್ಗಯೋಡಂ ದೋಣಿಯೆಂದನಲ್ ನಾವೆಯಕ್ಕುಂ" (ಮಂಗರಾ. ೧೨೦-೪). [?]

ನಿಮತು 'ನಿನತ್ತು' ಪರಾ.

ನಿಮತ್ತು 'ನಿನತ್ತು' ಪರಾ.

ನಿಮಾಜು 'ನಮಾಜು' ನೋ.

ನಿಮಾನಿಮಿ (ನಾ). ಶೇಕಡ ಐವತ್ತರಷ್ಟು ; ಅರ್ಧಾರ್ಧ : ಪಟ್ಟೇದಾರನ ಸಿಕಮಿಾಕುಳಗಳ ಗೊಣಗಾಟಗಳಿಗೆ ಸ್ವಲ್ಪವಾದರೂ ಅವಕಾಶವಿಲ್ಲದಂತೆ ನಿಮಾನಿಮಿ ಕಂದಾಯವನ್ನು ಪಟ್ಟೇದಾರನಿಗೆ ಇತರ ಕುಳಗಳು ಕೊಡುವುದೆಂದು ಗೊತ್ತುಮಾಡಿಕೊಡುವುದಕ್ಕೆ ಅನುಕೂಲವಾಗಿರುವುದು (ಭೂಮಿಅ. ೩೭). [←ಪಾರ. ನಿಮಾ; ಹಿಂ. ಮರಾ. ನಿಮಾ, ನಿಮ್ಮೆ]

ನಿಮಿ (ನಾ). ೧. ಕಣ್ಣಿನ ರೆಪ್ಪೆ ಆಡುವುದು; ರೆಪ್ಪೆ ಹೊಡೆಯುವಿಕೆ; ಎವೆಯಿಕ್ಕುವಿಕೆ. ೨. ಇಕ್ಷ್ವಾಕು ಎಂಬ ಸೂರ್ಯವಂಶದ ಚಕ್ರವರ್ತಿಯ ಮಗ ; ವಿದೇಹದೇಶದ ರಾಜ : ವರವಿದೇಹನೃಪಾಲನಾ ನಿಮಿಧರಣಿಪಂಗುದುಭವಿಸಿದುದ ವಿಸ್ತರಿಸಿದನು . . . ಮುನಿ ವಸಿಷ್ಠಂಗೆ (ತೊರರಾ. ೧-೧೬-೨೧); ಈಕೆ ನಿಮಿಕುಲದೆ ಪುಟ್ಟಿದ ರಾಜಯೋಗಿಯಪ್ಪ ಜನಕನಣುಗುಗುವರಿ (ರಾಮಾಶ್ವ. ೩೯-೨). [ಸಂ.]

ನಿಮಿತ್ತ (ನಾ). ೧. ಕಾರಣ ; ಹೇತು : ಪಲಂಬರ್ . . . ದೀಕ್ಷೋಪವಾಸತ್ರಿರಾತ್ರಂಗೆಯ್ದು ಶರೀರಸಂಧಾರಣನಿಮಿತ್ತಂ ಚರಿಗೆ ವೊಕ್ಕೊಡೆ (ವಡ್ಡಾರಾ. ೬೮-೨೫) ; ಪ್ರಭಾತಸಮಯದೊಳ್ ಪುರಬಹಿರುಪವನೋದ್ದೇಶೋಚಿತಾಂಭೋರುಹವನಕ್ಕೆ ವಂದು ಸಂಧ್ಯಾವಂದನಕ್ರಿಯಾನಿಮಿತ್ತಸ್ನಾನಾನಂತರಂ (ಸುಕುಮಾ. ೩-೩ ವ) ; ಆಗಳ್ ಪುರೋಹಿತಂ ವಿವಿಧಾಗಮವಿದನಿದುವೆ ಭಾವಿಪುತ್ರಾವಾಪ್ತಿಶ್ರೀಗೆ ನಿಮಿತ್ತಂ ಪಿಡಿನೀಂ ರಾಗದೊಳೆಂದನ್ನ ಕೆಯ್ಗೆ ಪರಸುತ್ತಿತ್ತಂ (ಪುಷ್ಪಸು. ೩-೧೦೪) ; ಮನೋವೃತ್ತಿನಿಮಿತ್ತಮಾಗಿ ಶಬ್ದಂ ಜನಿಯಿಸುಗುಂ (ಶಮದ. ೩೪) ; ನಾವು ಮೊದಲು ಕೊಟ್ಟ ನಿದರ್ಶನದಲ್ಲಿ ನಮ್ಮ ಚಿತ್ತವನ್ನು ಕಲಕಿದ "ನಿಮಿತ್ತ" ಯಾರೋ ನಡೆಸಿದ ಅಪಚಾರ (ಭಾಸಗೀ. ೩೫). ೨. ಉದ್ದೇಶ ; ಅಪೇಕ್ಷೆ : ಜಟಾಯುದೇವಂ ನೀನೀ ಪೆಣಂ ಪೊತ್ತು ತೊಟಲ್ವುದೇನಿಮಿತ್ತಮೆಂದು ತೋಱೆ ನುಡಿವುದುಂ (ಪಂರಾಮಾ. ೧೬-೫೫ ವ) ; ಪೂಜೆಕ್ಕೆ ಮಾಂಸಾದಿ ನಾನಾಬಲಿಯಿಂ ದೇವರ್ ನರರ್ ತ್ವಚ್ಚರಣಕಮಲಮಂ ಶ್ರೀಜಯಶ್ರೀನಿಮಿತ್ತಂ (ಜಗವಿ. ೨-೫೮) ; ಇಂದು ಶರ್ಮನಿಗೆ ಕ್ಷಪಣಕವೇಷಮಂ ಹಾಕಿಸುವುದಕ್ಕೆ ನಿಮಿತ್ತವೇನು (ಕಗದ್ಯ. II, ೮) ; ಬಡತನದಲ್ಲಿ ರೈತನು ಅಡಚಣೆಗಳಿಗಾಗಲಿ ಅಥವಾ ಬೇರೊಂದು ನಿಮಿತ್ತಕ್ಕಾಗಲೀ . . . ಸಾಲ ತೆಗೆದು ತನ್ನ ಅಡಚಣೆಯನ್ನು ಸಾಗಿಸುವನು (ಕನ್ನಜಾ. ೧೦೮). ೩. ಗುರಿ ; ಲಕ್ಷ್ಯ : "ವೇಧ್ಯಂ, ಲಕ್ಷ್ಯಂ, ಶರವ್ಯಂ, ನಿಮಿತ್ತಂ—ಈ ೪ ಗುಱಿ" (ಹಲಾಯು. ೭೭-೩೧೪) ; "ಲಕ್ಷ್ಯಂ ಶರವ್ಯಂ ನಿಮಿತ್ತಮೆನೆ ಗುಱಿಯಕ್ಕುಂ" (ಮಂಗರಾ. ೮೭-೩೫). ೪. ನೆಪ ; ನೆವ : ಏನೋ ಒಂದು ಸುಳ್ಳು ನಿಮಿತ್ತ ತೆಗೆದು ಹೇಳಿದನು (ಮುಂಬಯಿ. ೪-೧೯೩) ; ನಿಮಿತ್ತಕ್ಕೆ ಪೀತಾಂಬರವೊಂದು ನನ್ನ ಹತ್ತಿರ ಉಳಿಯಿತು (ಸ್ಮೃತಿಚಿ. ೩೨) ;

ಆಕೆಯ ಮೇಲಿದ್ದ ಮುನಿತೆಯನ್ನು ಅಂತೇ ನನ್ನನ್ನು ಗುಣಪಡಿಸುವ 'ನಿಮಿತ್ತ'ವನ್ನಾಗಿ ಬಳಸಿಕೊಂಡಿತು (ಸುಸೋಸಂ. ೧೫೮). 'ನಿಮಿತ್ತ ಮಾತ್ರ' ಪರಾ. ೫. ಮುಂದೆ ಬರುವ ಶುಭಾಶುಭಗಳನ್ನು ಸೂಚಿಸುವ ಶಕುನ : "ಶಕುನಂ ನಿಮಿತ್ತಮೆಂಬರ್" (ದಸ್ತು.ಕೋ. ೧೨೬-೪೮) ; ದತ್ತ ಜೋತಿಷ ಶಕುನ ನಿಮಿತ್ತಂಗಳಂ ಬಲ್ಲಹಗೆ ಪ್ರತ್ಯಕ್ಷಗೆಯ್ದುಂ . . . ಪಡೆದನರ್ ಗೋಲೆಯ ಭಟ್ಟರ್ (ಸೌಇಇ. XI-1, ೮-೨೨; 862) ; ಪೆಜವು ನಿಮಿತ್ತಂಗಳಂ ನೋಡಿ ಪೇಟೆ (ಜಾವುಂಪು.೬೯೦); ತಪೋಧನರೇನಾನುಂ ನಿಮಿತ್ತಂಗಳನಱಿವರಕ್ಕುಂ (ಸುಕುಸಾ.೩-೪ ಸ) ; ಪ್ರವೇಶವನ್ನು ಅಭಿನಯಿಸಿ ನಿಮಿತ್ತವನ್ನು ಸೂಚಿಸಿ (ಶಾಕುಂತ. ೭-೧೫) ; ಅವರ ಉದ್ಯೋಗಗಳಲ್ಲಿ ಮುಖ್ಯವಾದುವೆಂದರೆ ದೇವರ ಪೂಜೆ, ನಿಮಿತ್ತ ನೋಡುವುದು, ಭವಿಷ್ಯತ್ತು ಹೇಳುವುದು (ಕಾಸೂರು. ೬೭). ೬. ಗುರುತು ; ಚಿಹ್ನೆ : "ನಿಮಿತ್ತ ಶಬ್ದವು ಕಾರಣಕ್ಕೂ ಗುರ್ತಿಗೂ ಹೆಸರು" (ಗುರುಬಾ. ೩೩೫). ೭. = ನಿಮಿತ್ತಕಾರಣ. ೮. [ಜೈನ] ಅಂತರಿಕ್ಷ, ಭೌಮ, ಅಂಗ, ಸ್ವರ, ವ್ಯಂಜನ, ಲಕ್ಷಣ, ಛಿನ್ನ, ಮತ್ತು ಸ್ವಪ್ನ ಎಂಬ ಎಂಟು ನಿಮಿತ್ತಗಳು ; ℘ ೧. ಸೂರ್ಯ ಚಂದ್ರಾದಿ ಗ್ರಹಗಳ ಉದಯಾಸ್ತಗಳನ್ನು ಅನುಲಕ್ಷಿಸಿ ಸುಖ ದುಃಖಗಳನ್ನು ತಿಳಿಯುವುದು ನಭ ಅಥವಾ ಅಂತರಿಕ್ಷ ನಿಮಿತ್ತ (ಜ್ಞಾನ). ೨. ಭೂಮಿಯ ಛಿನ್ನ, ಸುಷಿರ, ಸ್ನಿಗ್ಧತೆ, ರೂಕ್ಷತೆ ಮೊದಲಾದುವುಗಳಿಂದ ತಾಮ್ರ, ಕಬ್ಬಿಣ, ಬೆಳ್ಳಿ, ಬಂಗಾರಗಳ ಹಾನಿ ಅಥವಾ ವೃದ್ಧಿಯನ್ನು ತಿಳಿಯುವುದು ಭೌಮನಿಮಿತ್ತ(ಜ್ಞಾನ). ೩. ಮನುಷ್ಯ ಹಾಗೂ ತಿರ್ಯಗ್ಜೀವಿಗಳ ಅಂಗೋಪಾಂಗಗಳನ್ನು ದರ್ಶನ ಹಾಗೂ ಸ್ಪರ್ಶನದ ಮೂಲಕ ವಾತ, ಪಿತ್ತ, ಕಫರೂಪ ಪ್ರಕೃತಿಗಳನ್ನೂ ರುಧಿರಾದಿ ಸಪ್ತಧಾತುಗಳನ್ನು ನೋಡಿ ತ್ರಿಕಾಲದಲ್ಲಿ ಉಂಟಾಗುವ ಸುಖ, ದುಃಖ, ಮರಣಾದಿಗಳನ್ನು ತಿಳಿಯುವುದು ಅಂಗನಿಮಿತ್ತ(ಜ್ಞಾನ). ೪. ಮನುಷ್ಯರ ಹಾಗೂ ತಿರ್ಯಗ್ಜೀವಿಗಳ ವಿಚಿತ್ರ ಶಬ್ದಗಳನ್ನು ಕೇಳಿ ಮುಂದಾಗಲಿರುವ ಸುಖ ದುಃಖಗಳನ್ನು ತಿಳಿಯುವುದು ಸ್ವರನಿಮಿತ್ತ(ಜ್ಞಾನ). ೫. ತಲೆ, ಹೆಗಲು ಮೊದಲಾದುವುಗಳ ಮೇಲೆ ಇರುವ ಕಾಳೆಳ್ಳು, ಮಚ್ಚೆ, ಸಂಗಾತಿ ಮೊದಲಾದುವನ್ನು ನೋಡಿ ಭವಿಷ್ಯವನ್ನು ತಿಳಿಯುವುದು ವ್ಯಂಜನನಿಮಿತ್ತ(ಜ್ಞಾನ). ೬. ಅಂಗೈ, ಅಂಗಾಲುಗಳಲ್ಲಿ ಇರುವ ರೇಖೆಗಳನ್ನು ನೋಡಿ ತ್ರಿಕಾಲದ ಸುಖದುಃಖಾದಿಗಳನ್ನು ತಿಳಿಯುವುದು ಲಕ್ಷಣನಿಮಿತ್ತ (ಜ್ಞಾನ). ೭. ಪ್ರಾಸಾದ, ನಗರ ಹಾಗೂ ದೇಶಾದಿಕಚಿಹ್ನೆಗಳನ್ನು ನೋಡಿ ತ್ರಿಕಾಲಭಾವಿ ಶುಭಾಶುಭಫಲಗಳನ್ನು ತಿಳಿಯುವುದು ಚಿಹ್ನ ಅಥವಾ ಛಿನ್ನನಿಮಿತ್ತ (ಜ್ಞಾನ). ೮. ವಾತ ಪಿತ್ತಾದಿ ದೋಷರಹಿತನಾದ ವ್ಯಕ್ತಿ ರಾತ್ರಿ ಮಲಗಿದಾಗ ಕಾಣುವ ಸ್ವಪ್ನಗಳನ್ನು ಗಮನಿಸಿ, ತನ್ಮೂಲಕ ಭವಿಷ್ಯದಲ್ಲಾಗುವ ಅವನ ಸುಖ ದುಃಖಗಳನ್ನು ತಿಳಿಯುವುದು ಸ್ವಪ್ನನಿಮಿತ್ತ (ಜ್ಞಾನ) : ಇವಷ್ಟಾಂಗನುಹಾನಿಮಿತ್ತವಿವಂ ಕಲ್ತು (ಜಾವುಂಪು. ೧೪೬) ; ಅಂತರಿಕ್ಷಭೌಮಾಂಗಸ್ವರಸ್ವಪ್ನಲಕ್ಷಣವ್ಯಂಜನಚ್ಛಿನ್ನಾಭಿಧಾನಾಷ್ಟಾಂಗನುಹಾನಿಮಿತ್ತಂಗಳುಮಂ ಪೇಟ್ಟುಂ (ತತ್ತ್ವಸ್ಪ. ೬೩). 'ನಿಮಿತ್ತಾಂಗ' ಪರಾ. [ಸಂ.]

ನಿಮಿತ್ತಕ (ನಾ). ೧. ಹೇತು ; ಕಾರಣ. ೨. [ಕಾಮಶಾ] ನಿಮಿತ್ತಕ, ಸಂಘಟಕ, ಸ್ಫುರಿತಕ, ಭ್ರಾಂತಕ, ತಿರ್ಯಗಾಯಿತಕ, ಅತಿದೃಷ್ಟಕ, ಉತ್ತರಸಂಘಟ್ಟಿತಕ, ಜಿಹ್ವಾಮೇಳನಕ, ಜಿಹ್ವಕ, ಅತಿಜಿಹ್ವಾಯೋಗ, ಸೀತ್ಕಾರ ಮತ್ತು ದಂಶನಕ ಎಂಬ ಹನ್ನೆರಡು ಬಗೆಯ ಚುಂಬನಗಳಲ್ಲಿ ಒಂದು ; ಮುಖವನ್ನು ಎದುರೆದುರಿಗಿಟ್ಟು ತುಟಿಯನ್ನು ಚುಂಬಿಸುವುದು ; ℘ ವಿಕ್ಕಿ ಕಾಮಶಾಸ್ತ್ರಗಂಥಗಳಲ್ಲಿ ಈ ಹೆಸರುಗಳು ಬೇರೆಬೇರೆಯಾಗಿವೆ. 'ಮನ್ಮಥವಿಜಯ'ದಲ್ಲಿ ನಿಮಿತ್ತಕ, ಸ್ಫುರಿತ, ಅಧರ, ಉತ್ತರ, ವಿಘಟಿತ, ಘಟ್ಟಿತ, ಸಂಘಟಿತ, ಜಿಹ್ವಕ, ಪೀಡಿತಕ, ಭ್ರಾಂತಾ, ತಿರ್ಯಕ್ಕು ಮತ್ತು ಅನುವದನವೆಂದೂ, 'ಜನವಶ್ಯ'ದಲ್ಲಿ ನಿಮಿತ್ತಕ, ಸಂಘಟಿತಕ, ಸ್ಫುರಿತಕ, ಭ್ರಾಂತಕ, ತಿರ್ಯಕ್ಕು, ಅತಿಕೃಷ್ಟ, ಉತ್ತರ, ಸಂಘಟಕ, ಜಿಹ್ವಾಮೇಳನ, ಜಿಹ್ವಕ, ಅಧಿಕ ಮತ್ತು ಜಿಹ್ವಾಪಾನವೆಂದೂ ಇದೆ : ಮುದದಭಿಮುಖವಾಗಿಸಿ ನುಣ್ಪೊಪ್ಪದವಿರೆ ಸಾರ್ದೋಪರೊರ್ಮ ರೊರ್ಮರ ದಂತಚ್ಛದನೀಯೂಷನನುನಿರದೀಂಟದೊಡದು ಪೆಸರಿಂ ನಿಮಿತ್ತ ಕಾಖ್ಯಮನಾಳ್ಗುಂ (ಮನ್ಮವಿ. ೧೨-೩) ; ಇಂಬಾದಳನೊತ್ತಂಬಿ ಪಿಡಿದುಜ್ಜೆ ಚುಂಬಿಸಲದುವೆ ನಿ[ಪಕಾಂ. ನೈ]ಮಿತ್ತಕವು (ಜನನ. ೬-೧೬); ನಿಮಿತ್ತಕ ಸಂಘಟಿತಕ ಸ್ಫುರಿತಕ ಭ್ರಾಂತಿಕ ತಿರ್ಯಗಾಯಿತಕ ಅತಿದೃಷ್ಟಕ ಉತ್ತರಸಂಘಟಿತಕ ಜಿಹ್ವಾಮೇಳನಕ ಜಿಹ್ವಕ ಅತಿಜಿಹ್ವಾಯೋಗ ಸೀತ್ಕಾರ ದಂಶನಕವೆಂಬ ದ್ವಾದಶವಿಧ ಚುಂಬನಸಂಭ್ರಮಗಳಂ (ವಿನೋ. ೨೨೯). [ಸಂ.]

ನಿಮಿತ್ತಕಾರಣ (ನಾ). [ತತ್ತ್ವಶಾ]ನ್ಯಾಯಶಾಸ್ತ್ರದಲ್ಲಿ ಹೇಳಿರುವ ಸಮವಾಯಿಕಾರಣ, ಅಸಮವಾಯಿಕಾರಣ, ನಿಮಿತ್ತಕಾರಣ ಎಂಬ ಮೂರು ಕಾರಣಗಳಲ್ಲಿ ಮೂರನೆಯದು; ತಾನೇ ಕಾರ್ಯರೂಪವನ್ನು ಹೊಂದದೆ ಕಾರ್ಯಕ್ಕೆ ಸಹಾಯಕವಾದ ಕಾರಣ; ವೇದಾಂತಿಗಳು ಹೇಳಿರುವ ಉಪಾದಾನಕಾರಣದಿಂದ ಭಿನ್ನವಾದ ಕಾರಣ; ℘ ತಾರ್ಕಿಕರು ಕಾರಣದಲ್ಲಿ ಸಮವಾಯ ಕಾರಣ, ಅಸಮವಾಯಕಾರಣ ಮತ್ತು ನಿಮಿತ್ತ ಕಾರಣ ಎಂದು ಮೂರುವಿಧಗಳನ್ನು ಹೇಳುತ್ತಾರೆ. ೧. ಸಮವಾಯಕಾರಣವೆಂದರೆ ಕಾರ್ಯದಲ್ಲಿಯೇ ಸೇರಿಕೊಂಡು ಕಾರ್ಯವನ್ನು ಉಂಟುಮಾಡುವ ಕಾರಣ. ಉದಾ : ವಸ್ತ್ರಕ್ಕೆ ದಾರ ಕಾರಣವಾಗಿರುವಂತೆ. ೨. ಕಾರ್ಯ ಕಾರಣಗಳೆರಡರಲ್ಲಿ ಸೇರಿಕೊಂಡು ಕಾರ್ಯವನ್ನುಂಟುಮಾಡುವುದು ಅಸಮವಾಯಕಾರಣ. ಉದಾ : ಬಟ್ಟೆಯ ನೇಯ್ಗೆ. ೩. ಇವೆರಡನ್ನು ಬಿಟ್ಟು ಉಳಿದ ಕಾರಣಗಳು ನಿಮಿತ್ತಕಾರಣ. ಉದಾ : ಬಟ್ಟೆಗೆ ಮಗ್ಗ ಕಾರಣವಾಗಿರುವಂತೆ : ಸಾಗರನ ಮಗಳಜ್ಜಯಂತೆ ಸರಾಗದಲಿ ಸಂಚರಿಸುತಿಹೆ ಉದ್ಯೋಗವೇನು ನಿಮಿತ್ತ [ಪಾಕಾಂ.೪] ಕಾರಣವಿಲ್ಲ ಲೋಕದಲಿ (ಹರಸಾ. ೨೬) ; ಈ ಉಪಾದಾನಕಾರಣದಿಂ ಕಾರ್ಯಮನುಂಟುಮಾಡುವ ತೇಜನಜಾತು ಉಂಟುಮಾಡುವ ಕರ್ತೃ ನಿಮಿತ್ತಕಾರಣಂ (ಚಕಬ. ೨೧) ; ಕಣಾದರ ಮತದಪರಾದರೋ ಜಗತ್ತಿಗೆ ಈಶ್ವರನು ನಿಮಿತ್ತಕಾರಣವೆಂದೂ ಪರಮಾಣುಗಳು ಸಮವಾಯಿಕಾರಣವೆಂದೂ ಇದೇ ವಾಕ್ಯಗಳಿಂದ ಊಹಿಸಿ ಗೊತ್ತುಮಾಡುತ್ತಾರೆ (ಬ್ರಹ್ಮಭಾ. ೭೭) ; ವೇದಾಂತಸಿದ್ಧಾಂತದಲ್ಲಿ ಬ್ರಹ್ಮನೆಂಬ ಪರಮೇಶ್ವರನೇ ಉಪಾದಾನ ಕಾರಣವು, ನಿಮಿತ್ತಕಾರಣವು ಸಹ ಎಂದು ಅಭಿಪ್ರಾಯವಿರಬಹುದು (ಹಿಂದುಸಾ.೧೩). 'ಉಪಾದಾನಕಾರಣ' ಪರಾ. [ನಿಮಿತ್ತ + ಕಾರಣ]

ನಿಮಿತ್ತಘಟಕ (ನಾ). ಯಾವುದಾದರೂ ಒಂದು ಕಾರಣವನ್ನು ಅವಲಂಬಿಸಿ ಕಲ್ಪಿತವಾದ ಘಟಕ ; ಕಾರ್ಯಕಾರಿ ಸಮಿತಿ : ರಜನಿಯಲ್ಲಿ ಸೆಲ್ ಅಥವಾ "ನಿಮಿತ್ತಘಟಕ" ಇಬ್ಬಗೆಯ ಸ್ವರೂಪದ್ದಾಗಿರಬಹುದು (ರಾಜಪ. ೧೭). [ನಿಮಿತ್ತ + ಘಟಕ]

ನಿಮಿತ್ತಜ್ಞ (ನಾ). ೧. ಶಕುನ, ಸಾಮುದ್ರಿಕ, ಗ್ರಹಗೆತಿಗಳನ್ನು ತಿಳಿದು ಅವುಗಳಿಂದುಂಟಾಗುವ ಫಲವನ್ನು ಹೇಳುವವನು; ಜ್ಯೋತಿಷ್ಯ, ಶಕುನ, ಸಾಮುದ್ರಿಕಶಾಸ್ತ್ರಗಳನ್ನು ಬಲ್ಲವನು. ೨. [ಜೈನ]ಅಷ್ಟಾಂಗನಿಮಿತ್ತಗಳನ್ನು ಬಲ್ಲವನು : ಅವನೀಶನೆಬ್ಬು ಬೆಸಗೊಂಡಾಗಳ್ ನಿಮಿತ್ತಜ್ಞನಂಬರಭೂಗೋಚರರೊಳ್ ಪರೀಕ್ಷಿಸಿ ನಿಮಿತ್ತಾಂಗಂಗಳೊಳ್ ನೋಡಿ ಕಂಡಿರದಿಂತೆಂದನಧೀಶನಂ ಬಗೆದು (ಶಾಂತಿಪು. ೫-೨೧). [ಸಂ.]

ನಿಮಿತ್ತಮಾತ್ರ (ನಾ).೧. ಹೆಸರಿಗೆ ಮಾತ್ರ ಕಾರಣವೆನಿಸಿಕೊಂಡಿರುವುದು; ತೋರಿಕೆಯ ಕಾರಣ : ಆದರಾತನ ಗೆಲವಿಗಾ ಬಟ್ಟಗಲ್ಲೊಂದು ಬರಿ ನಿಮಿತ್ತಮಾತ್ರಂ (ಚಂದ್ರಸ. ೫೦-೧೮); ವಿಧಿಲಿಖಿತಕ್ಕೆ ಅನುಸಾರವಾಗಿ ನಾವು ನಡೆಯಬೇಕಾಗುವುದರಿಂದ . . . ತಪ್ಪುತಡೆಗಳಿಗೆ ಎಡೆಯುಂಟಾಗಿ, ಅವು ಮತ್ತು ಸಂಬಂಧಿಸಿದ ವ್ಯಕ್ತಿಯೂ ನಿಮಿತ್ತಮಾತ್ರವಾಗಿ ಉಳಿಯಬೇಕಾಗುತ್ತದೆ (ಹೇಮಂತ. ೧೪೧); ಶ್ರೀಕೃಷ್ಣನೇ ಎಲ್ಲ ಕೌರವರನ್ನೂ ಸಂಹರಿಸಿದ. ಅರ್ಜುನ, ಪಾಂಡವರು ನಿಮಿತ್ತಮಾತ್ರ (ಧರ್ಮಸಾ. ೧೦೭). ೨. ಹೆಸರಿಗೆ ಮಾತ್ರ ಕಾರಣನೆನಿಸಿಕೊಂಡವನು; ತೋರಿಕೆಗೆ ಮಾತ್ರ ಕಾರಣನಾಧವನು : ಕೇಳು ಧರ್ಮಜ ಕೃಷ್ಣರಾಯನು ಹೇಳಿ ಮಾಡಿಸುವೊಡೆಯ ನೀನವ ನೂಳಿಗದಲಿ ನಿಮಿತ್ತಮಾತ್ರ ಸ್ವತಂತ್ರ ನೀನಲ್ಲ (ತಿಮ್ಮಶಾಂ. ೧-೧೫). [ಸಂ.]

ನಿಮಿತ್ತವಾದ (ನಾ). [ತತ್ತ್ವಶಾ]ತನ್ನ ಸುಖಕ್ಕಾಗಿ ಯಜ್ಞಯಾಗಗಳನ್ನು ಮಾಡದೆ, ಸುಖದ ಅಪೇಕ್ಷೆ ಬಂದರೆ ಅದನ್ನು ಧ್ವಂಸ ಮಾಡುವುದಕ್ಕಾಗಿ ಯಾಗವನ್ನು ಮಾಡಬೇಕೆಂಬ ವಾದ; ಸ್ವಾರ್ಥಕ್ಕಾಗಿ ಮಾಡದೆ ಪರಾರ್ಥವಾಗಿ ಮಾಡಬೇಕೆಂಬ ವಾದ : ಯಾಗವನ್ನು ಸ್ವಾರ್ಥಕ್ಕಾಗಿ ಮಾಡುವುದು ಫಲಸಂಯೋಗವಾದವು. ಪರಾರ್ಥಕ್ಕಾಗಿ ಮಾಡುವುದೇ ನಿಮಿತ್ತವಾದವು (ಹಿಂದಸಾ. ೨೫೯). [ನಿಮಿತ್ತ + ವಾದ್ದ]

ನಿಮಿತ್ತವಿದ (ನಾ). = ನಿಮಿತ್ತಜ್ಞ ೨ : ತ್ರಿಜಗದ ತಿರಿಕಂ ವಿದ್ಯಾಭಿಜಾತಗಂಧಂ ನಿಮಿತ್ತವಿದನಾ ಸಭೆಯೊಳ್ ದ್ವಿಜನಱಿಂದಿಂತೆಂದನಮೋಘಜಿಹ್ವನೆಂದೊಂ ಸಮಸ್ತವಸುಧಾಧಿಪನಂ (ಶಾಂತಿಪು. ೬-೨೪). [ಸಂ. ನಿಮಿತ್ತವಿದ್]

ನಿಮಿತ್ತಸ್ಥಲ (ನಾ). ವೈದಿಕವಾದ ಶ್ರಾದ್ಧಕರ್ಮದಲ್ಲಿ ನಿಯಮಿತವಾದ ಒಂದು ಅಧಿಕಾರಸ್ಥಾನ; ಉತ್ತರಕ್ರಿಯೆಯ ಸಪಿಂಡೀಕರಣಶ್ರಾದ್ಧದಲ್ಲಿ ಪ್ರೇತಸ್ಥಾನ; ಪಿತೃತ್ವಕ್ಕೆ ಏರಿಸಬೇಕಾದ ಮೃತನ ಸ್ಥಾನ; ಇ ಸತ್ತ ಹನ್ನೆರಡನೆಯ ದಿನ ಮಾಡುವ ಸಪಿಂಡೀಕರಣಶ್ರಾದ್ಧದಿಂದ ಮೃತನಿಗೆ ಪ್ರೇತತ್ವ ತೊಲಗಿ ಪಿತೃತ್ವ ಪ್ರಾಪ್ತಿಯಾಗುತ್ತದೆ. ಈ ಶ್ರಾದ್ಧದಿಂದ ಮೃತನಿಗೆ ಪರಲೋಕ ಪ್ರಾಪ್ತಿಯಾಗುತ್ತದೆ. ಈ ಸಂದರ್ಭದಲ್ಲಿ ಬ್ರಾಹ್ಮಣನೊಬ್ಬನನ್ನು ನಿಮಂತ್ರಿಸಿ ಭೋಜನಕ್ಕೆ ಪ್ರತ್ಯೇಕಸ್ಥಲದಲ್ಲಿ ಕೂರಿಸುತ್ತಾರೆ. ಇದು ನಿಮಿತ್ತ ಸ್ಥಲ. ಯಾರ ನಿಮಿತ್ತವಾಗಿ ಈ ಶ್ರಾದ್ಧ ನಡೆಯುವುದೋ ಅವನಿಗೆ ನಿಮಿತ್ತನೆಂದು ಹೆಸರು : ನಿಮಿತ್ತಸ್ಥಲಕ್ಕೆ ಕುಳಿತುಕೊಂಡವರಿಗೆ ಅವರ ಮನೆಯಲ್ಲಿ ನೂರೊಂದು ರೂಪಾಯಿ ದಕ್ಷಿಣೆ ಕೊಟ್ಟರು (ರೂಢಿ). [ನಿಮಿತ್ತ + ಸ್ಥಲ]

ನಿಮಿತ್ತಾಂಗ (ನಾ). ೧. ಭಾವೀಫಲಗಳನ್ನು ಸೂಚಿಸುವ ರೇಖೆಗಳುಳ್ಳ, ಕೈಕಾಲು ಮೊದಲಾದ ಮಾನವಶರೀರಭಾಗ : ಆತ ನಿಮಿತ್ತಾಂಗಗಳಲ್ಲಿಯ ರೇಖೆಯನ್ನು ನೋಡಿ, ಹುಟ್ಟಿದ ದಿನ, ನಕ್ಷತ್ರ ಮೊದಲಾದುವನ್ನು ಹೇಳುತ್ತಾನೆ (ರೂಢಿ). ೨. ಶಕುನದ ವಿಧ; ಬೇರೆ ಬೇರೆ ಶಕುನ. ೩. = ನಿಮಿತ್ತ ೮ : ನಿಮಿತ್ತಜ್ಞನಂಬರಭೂಗೋಚರರೊಳ್ ಪರೀಕ್ಷಿಸಿ ನಿಮಿತ್ತಾಂಗಂಗಳೊಳ್ ನೋಡಿ (ಶಾಂತಿಪು. ೫-೨೧). [ನಿಮಿತ್ತ + ಅಂಗ$_2$]

ನಿಮಿತ್ತಾಭ್ಯಾಸ (ನಾ). [ಜೈನ] ನಿಮಿತ್ತಾಂಗದ ಅಭ್ಯಾಸ : ಅನುಮಾಕೆಯುಂ ಸುಖದೊಳಿರ್ದು ನಿಮಿತ್ತಾಭ್ಯಾಸಂಗೆಯ್ಯುತ್ತಿರೆ (ಚಾವುಂಪು. ೧೮೬). [ನಿಮಿತ್ತ + ಅಭ್ಯಾಸ]

ನಿಮಿತ್ತೋದ್ಭೂತ (ನಾ). ಯಾವುದಾದರೂ ಒಂದು ಕಾರಣಕ್ಕಾಗಿ ಹುಟ್ಟಿದವನು; ಜಗತ್ತಿನ ಉದ್ಧಾರಕ್ಕಾಗಿ ಅವತಾರವನ್ನು ತಾಳಿದವನು; ದೇವರು; ಪರಮಾತ್ಮ : ಚಿದ್ರೂಪನಪ್ಪ ತಾನೇ ನಿಮಿತ್ತೋದ್ಭೂತ ಸದ್ರಮಾಕರನಪ್ಪ ಕರ್ತುವಾದಂದದಿಂ (ವೀಶೈಪು. ೫-೧೪-೩೦). [ನಿಮಿತ್ತ + ಉದ್ಭೂತ]

ನಿಮಿತ್ಯ (ನಾ). ೧. ಕಾರಣ: ಶೂ(ಸೂ)ರ್ಯ್ಯಗ್ರಹಣ ನಿಮಿತ್ಯ(ತ್ತ)ದಿಂ (ಇಅ. XIX, ೨೭೩-೩೪; 1054); ಇದು ನಿಮಿತ್ಯಂ[ಪಾಠಾಂ.ತ್ತಂ] ಹೇಳಲಂಜುವೆನು (ಬಸಪು. ೩೭-೧೫); ಗೋಬ್ರಾಹ್ಮಣರ ನಿಮಿತ್ಯವಾಗಿ ತನ್ನಾತ್ಮಾರ್ಥವಾಗಿ ಸರ್ವಧನವನಪಹರಿಸಿಕೊಂಡು ಹೋಗುವ ಸಮಯದಲ್ಲಿ (ಶೇಷಧ. ೬-೫); ಚಿತ್ತದೋಳ್ ಕುದಿಯದಿರು ಸತ್ಯಕಂ ನ್ಯಾಯದೊಳ್ ನಿತ್ತುರಗಲೇಕೀ ನಿಮಿತ್ಯದೋಳ್ ಮಗನೆ (ತುರಂಗ. ೮೦-೩). ೨. ಶಕುನ; ಭವಿಷ್ಯ : ಪುರಾಣದಲ್ಲಿ ಹೋರುವರೆ ರೂಪಿನವನಲ್ಲ ಅರ್ಚಿಸಿ ಕಾಬುದಕ್ಕೆ ಹಕ್ಕಿ ಹಂಗನ ನಿಮಿತ್ಯವೆ ಈ ಸಚ್ಚಿದಾನಂದನ ಸಂಗ ಬಚ್ಚಬಯಲು (ಮೋಳಿಮಾ. ೬-೨೧); ಎಲ್ಲಾದರೂ ಹೋಗಿ ನಿಮಿತ್ಯ (ಪ್ರಶ್ನೆ) ಕೇಳಿ ಬರುವೆನೆಂದು ಧಾವಿಸಿದಳು (ಚೋಮದು. ೬೨); ಹಣೆ ತುಂಬ ಕುಂಕುಮ ಬಳೆದು, ಕೈಯಲ್ಲಿ ಅಡಿಕೆಯ ಹಿಂಗಾರ ಹಿಡಿದು ಅವಳು ನಿಮಿತ್ಯ ಹೇಳುತ್ತಿದ್ದಳು (ಪ್ರಶ್ನೆ. ೯೯); ಬೇಗೆ ಹತ್ತಿದ್ದಲ್ಲಿ ಹೊಗೆಗೆ ನಿಮಿತ್ಯ ಕೇಳಬೇಕೆ? (ಗಾದೆ). ೩. ದೋಷಾರೋಪಣೆ; ಅಪವಾದ : ಜನರಿಂದ ಬರುವ ನಿಮಿತ್ಯಕ್ಕೆ ಹೆದರಿ ಆಕೆ ಸುಮ್ಮನಾದಳು (ರೂಢಿ). [<ಸಂ. ನಿಮಿತ್ತ]

ನಿಮಿತ್ಯಕ (ನಾ). ಉದ್ದೇಶ : ನಗರೇಶ್ವರದೇವರ ಭೋಗಕ್ಕಂ ಖಣ್ಡಸ್ಫುಟತಕ್ಕಮಲ್ಲಿರ್ಪ್ಪ ತಪೋಧನರ ಪಥ್ಯಾಹಾರಮೋಷಧನಿಮಿತ್ಯಕಮಾಗಿ . . . ಧಾರಾಪೂರ್ವ್ವಕಂ ಮಾಡಿ ಬಿಟ್ಟ ನೆಲಂ (ಸೌಇಇ. XX, ೨೧-೫೬; 1019). [<ಸಂ. ನಿಮಿತ್ತಕ]

ನಿಮಿರ್$_1$, ನಿಗುರ್, ನಿಗುರು$_1$, ನಿಗುಳ್, ನಿಮಿರು$_1$, ನಿಮಿಟ್, ನಿಮುರು, ನಿವುರು (ಕ್ರಿ). ನಿಮಿರ್ದ (ಭೂತಕೃ). ನಿಗುತು, ನಿಗುರ್ದು, ನಿಮಿರ್ದು (ಭೂತನ್ಯೂ). ೧. ಹರಡು; ವ್ಯಾಪಿಸು; ಪಸರಿಸು; ವಿಸ್ತಾರವಾಗು : "ನಿಮಿರ್ —ಪ್ರಸಾರಣೇ" (ಶಮಧಾ); ನಿಮಿರ್ದ ಲತೆಯ ಮೇಲೆ ವಿಳಾಸಂ ನಿಲೆ ನೀಡಿ ಕಾಲನರೆಬರ್ ಮಲಂಗಿದರ್ (ಅಪಿಪು. ೧೧-೭೬); ಆ ದೇವರ ತೆಂಕ ದೆಸೆಯಿಂ ಮೂಡಲ್ ನಿಮಿರ್ದ್ದ ಕೇರಿಯೆರಡು (ಇಅ. V, ೧೬-೩೩; 1019); ನಮ್ಮ ನೋಡಿ ನೋಡಿ ಮನದಲ್ಲಿ ರತಿ ಹುಟ್ಟಿ ನಿಮಿರ್ದುವೆನ್ನ ಕಳೆಗಳು (ಬಸವ. ೪೯೧); ಕೆನ್ನೆವರಂ ನಿಮಿರ್ದಕ್ಷಿಗಳ್ಗೆ ರಾಗಂ ಮಧುಸೇವೆಯಿಂ ನೆಗಟಿ ರಂಜಿಸಿದರ್ ಮಧುಮತ್ತಕಾಂತೆಯರ್ (ಜಗವಿ. ೧೬-೧೧೮), ಕಾಂತೆಯೊಳ್ ನಿಮಿರ್ದ ಕಾಮಧ್ವಾಂತಮಂ ತವಿಸಿ ಕಂತುಹರಭಕ್ತಿಯೊಳಹೊಱಗನಾವರಿಸೆ (ಪದ್ಮರಾ. ೫-೩೨); ಸೌಖ್ಯದೊಳಮರ್ದು ನಿಮಿರ್ದು ಮಹೋಲ್ಲಸಜ್ಜಳ ಕ್ರೀಡೆಯೊಳೊಂದಿ ನೋಡಿ ಸೊಗಸಂಬಡೆದರ್ಲಲಿತಾಂಗಿಯರ್ ವಲಂ (ಹಮ್ಮೀರ. ೪-೨೭). ೨. (ಹೊರ) ಚಾಚು; ನೀಡು : ಬಡಿ ಕೊಲ್ . . . ಸುಡು ಪಿಡಿ ಬಡಿ ನಿಮಿರ್ದಿಱಿ ಬಯ್ ಕಡಂಗಿ ನುಂಗು (ಪಡ್ಡಾರಾ. ೧೨೭-೧೧); ದೇವಕನ್ಯೆ ಮತ್ತೊರ್ವಳ್ ಕೋಮಲಲತೆಯ

ನಿಮಿರ್ದ ಕುಡಿಯೊಳ್ ಗಿಳಿ ಪಾಯ್ದುತ್ತೆನಿಸಿ ಸತಿಗೆ ತಂಬುಲಮಿತ್ತಳ್ (ಅದಿಪು. ೬-೧೨); ಇನಿತು ದಿವಸಕ್ಕೆಂತಾನುಂ ಕಂಡೆನಪ್ಪುವೆ ಕಂದ ಹಾಯೆನುತ ನಿಮಿರಲ್ ತೋಳ್ಗಳ್ . . . ಎಟ್ಟಂದಳ್ ಸೋತ್ಕಂಠೆ ಪುತ್ರವಿಮೋಹದಿಂ (ಕಾದಂಬಿ. ೬೭೧); ಮಹೋಜ್ಜ್ವಲತೆಯೆಂದಮಂ ನಿಮಿರ್ದ ತೋಳ್ . . . ಪೋಲ್ವುದಱಿಂದರವಿಂದವಕ್ತ್ರೆ ಕೋಮಳೆ ಕಡುಗಾಡಿಕಾರ್ತಿ ಮರವಾನಸೆಯೆಂಬುದನುಂಟುಮಾಡಿದೌ (ಧರ್ಮಾಮೃ. ೬-೧೮೦); ನಿಮಿರ್ದ ಕೊರಲ್ ಮರಲ್ದು ಮಡಿದೂಱದ ಮುಂದಣ ಕಾಲ್ಗಳ್ . . . ಮಿಡುಕೋಡುವ ಕಂಕನಾಳಮಂದಮರ್ದಿರೆ ನೀರನುಂಬೆರಲೆಯುಂ ಬರಲೊಲ್ಲದೆ ನೋಡಿದಂ ನೃಪಂ (ಲೀಲಾವ. ೬-೫೬); ನಿಮಿರ್ದು ಹಿಡಿದನು ಕಮಲಪಂಕ್ತಿಗಳ (ಕುಮಾಭ. ೧೦-೫೬); ಸುಖಿಂದಿಟ್ಟ ಸೊರ್ದನಿಮಿರ್ದು ಮನೆಯಂ ಸುಟ್ಟಂದದಿಂ (ಶತಕ. ೧೦೮-೫೪). ೩. ನೆಟ್ಟಗೆ ನಿಲ್ಲು; ನೇರವಾಗಿ ನಿಲ್ಲು; ಎದ್ದು ನಿಲ್ಲು : ಅಡಿವಿಡಿದಿಟ್ಟ ಪುತ್ತುಗಳ ನೆತ್ತಿಗಳಿಂ ನಿಮಿರ್ದಿರ್ದ ಬಳ್ಳಿಗಳ್ವಿಡಿದು ವಿಹೋರಗಪ್ರತತಿ ನೋಟ್ಟೊಡಗುರ್ದಿಸೆ (ಅದಿಪು. ೧೪-೧೪೦); ತುಳುಕೆ ಸಪತ್ನಿ ಕುಂಕುಮರಜಂಗಳ್ಕೋಪದ ಮೇಲೆ ಚಲ್ಲಮಂ ತುಳುಕುವ ಕಣ್ಗಳೊಳ್ ನಿಮಿರ್ದು ನಿಳ್ಕಿ ವಿಳೋಕಿಸುವಾಕೆಯುಕ್ತಿಗಳ್ (ಕಾವ್ಯಸಾ. ೭೬೮); ಕೋಪಂ ಪೆರ್ಚುದು; ಕಣ್ಗಳ್ ಕೆಂಪಾದುವು; ಮೆಯ್ಯುವಿರ್ ನಿಮಿರ್ದತ್ತು (ಅದ್ಭುತ. ೪೨-೨); ೪. ಬೆಳೆ; ವರ್ಧಿಸು : ಮದಕರಿಗಳ ಮದಜಳದೊಳ್ನಿಮಿರ್ದಿರ್ದ ಮರದ ತುದಿಗೊಂಬುಗಳೊಳ್ (ಕಾದಂಪೂ. ೯೪); ಅಕ್ಕುಳಿಸಿದ ಬಸಿಱಂ ಬೆಮರಿಕ್ಕಿದ ಮೆಯ್ಯುಂ ಸಮಂತು ನಿಮಿರ್ದಿರೆ ಸುಯ್ಯುಂ ಮಿಕ್ಕ ಧರಾಮರನಾ ಸಭೆಯೊಕ್ಕು ಕರಂ ಸೇದೆವಟ್ಟು ಬಿಟ್ಟುರ್ಪಿನೆಗಂ (ಸೇಮಿಪು. ೩-೧೨೮); ಕಮಳವದನೆಗೆ ರುಚಿಯುರುಚಿಯಾಯ್ತು ಮಳಕಾಯದ ಮೂರ್ತಿ ಸುದತಿಯ ನಿಮಿರ್ದ ಜಠರದೊಳಿರೆ ತನೂಲತೆ ಬೆಳುಪು ಬಲಿದಪುದು (ಬಸಪು. ೩-೧). ೫. (ಕೊಂಕಳಿದು) ಉದ್ದವಾಗು; (ಬಿಚ್ಚಿ) ದೀರ್ಘವಾಗು,—ನೀಳವಾಗು : ಜಲಕೇಳೀಲೀಲೆಯೊಳ್ ಮಱೆದು ನಿಮಿರ್ದ ಕುರುಳ್ಗಳುಂ ಕೆಂಪೇಱದ ಕಣ್ಗಳುಂ ಬೆಳ್ಪೇಱದ ಬಾಯ್ದೆಱೆಗಳುಂ ಪಳಂಚಿದ ಬಣ್ಣಂಗಳುಮೆಸೆಯೆ ಸೊಗಯಿಸುವ ನಿಜವಧೂಜನಂಬೆರಸು ಪೊಱಮಟ್ಟುಗಳ್ (ಪಂಪಭಾ. ೫-೬೬ ಪ); ಪೊಸಜಾದಿ ಚೆಲ್ವನೀಯುತ್ತಿರೆ ದೇಸಿಯಿಂ ನಿಮಿರ್ದ ಸೋರ್ಮುಡಿಯೊಳ್ (ಧರ್ಮಾಮೃ. ೪-೧೩೭); ಪೊದವುತ್ತುಂಗಸ್ತನಂ ಕೊಂಕಱದು ನಿಮಿರ್ದ ನೀಳಾಳಕಂ . . . ಳಂಪಿಸುವ ತನು ರತಿಶ್ರಾಂತಿಯಿಂದಂ ಬೆಡಂಗಂ ಕುಡೆ (ಜಗವಿ. ೧೬-೧೨೪); ಸುದತೀರಾಜಿತರೋಮರಾಜಿ ನಿಮಿರ್ದತ್ತುತ್ತೋಮಳಶ್ಯಾಮಳಂ (ಪುಷ್ಪಪು. ೪-೫); ನುಣ್ಪೊಗರೊಪ್ಪೆ ಘನಸ್ತನಂಗಳವ್ವಳಿಸೆ ನಿಮಿರ್ದ ವೆಱೆ ಕದಪಂ ಪುಗೆ . . . ನಸುಬಾಗಿ ಬೀಸುಗಲ್ಗಳನಿಡುತಿರ್ಪ ಪಾಮರಿಯರೊಪ್ಪುವರಾ ಕಳಮಪ್ರದೇಶದೊಳ್ (ಪಶಕು. ೧-೨೯); ಎತ್ತಿದ ಸತ್ತಿಗೆಯ ಡಾಳಿಸುವ ಚಾಮರದ ಮಿಳಿರ್ದ ಕೇತನದ ಪಂತಿಯೆತ್ತಂ ನಿಮಿರ್ದಿರೆ (ರಾಮಾಶ್ವ. ೫೦-೫). ೬. ಅತಿಶಯವಾಗು; ಅಧಿಕವಾಗು; ಹೆಚ್ಚಾಗು : ಅದಱಿಂದಂ ತನ್ನೊಳ್ ಪುಟ್ಟಿದ ಸಂತಸದಿಂದಮಾದ ಸುಖಮುದು ಸುಖಮಲ್ಲದುದಲ್ತು ವಸ್ತುವಿಂದಾದುದು ವಸ್ತುವೆ ಕುಂದೆ ಕುಂದುಗುಂ ನಿಮಿರ್ದಪುದೇ (ಅದಿಪು. ೬-೪೫); ಪೊದಪ್ಪು ಭೃಂಗಾಳಿಯ ನಿಸ್ವನಂ ನಿಮಿರ್ದ ಮಂಗಳಗೀತಮನಂತೆ ಚೂತಭೂಜಾಳಿಗಳೊಳ್ಪು . . . ನೆಱೆಯೆ ಪೋಲ್ವುದು ನೋಡ ವಿವಾಹಗೇಹಮಂ (ಧರ್ಮಾಮೃ. ೧೩-೨೧); ಸುಮನಶ್ಶಿಲೀಮುಖಾಕ್ರಾಂತಮಿದಲರ್ಗುಡಿ ದೇವ ತನ್ನೊಳುತ್ಕಳಿಕೆ ಕರಂ ನಿಮಿರ್ದಿರೆ ನಿನಗೆಜಕಮನಾಂತು (ಪರ್ಧಪು. ೪-೧೨); ಮೇಗಾಯ್ತು ಯಾದವಾನ್ವಯಮಿಾಗಳ್ ನಿಮ್ಮುದಯದಿಂದಮಖಿಳಾನ್ವಯಂ ಯಾಗಂ ದಾನಂ ಧರ್ಮಂ ಚಾಗಂ ನಿಮಿರ್ದಪುವು (ಅನಂಪು. ೧೩-೩೪); ಚದುರೆಸೆವಂತು ಭಾವಮಮರ್ಪಂತು ನಯಂ ನಿಮಿರ್ವಂತು ಮಲ್ಲಪಂ ಪದವಿಡೆ ಭಾರತೀವನಿತೆ ಭೋಂಕನೆ ಬಂದು ಮನಸ್ಸರೋಜದೊಳ್ ಚದುರೆಸೆವಂತು ಭಾವಮಮರ್ಪಂತು ನಯಂ ನಿಮಿರ್ವಂತು ಲೀಲೆಯಿಂ ಪದವಿಡುತಿರ್ಪಳಾ ಹವನಕಾರಣಮಂತ್ರಮಿದಾಗದಿರ್ಕುಮೇ(ಸೂಕ್ತಿಸು.೧-೨೭); ಅವಿರಳಿತ ಶಿವಭಕ್ತಿಯೆಲ್ಲಾ ಭುವಿಗಳೊಳು ಪಸರಿಸಿ ನಿಮಿರ್ದಿರೆ (ಬಸಪು. ೫೮-೧೩); ಪರಮೋತ್ಸಾಹಂ ನಿಮಿರೆ ಕೊಂದಾಡಿ (ಮಹಾವಿ. ೪-೨೫). ೭. ಎತ್ತರವಾಗು; ಉನ್ನತವಾಗು : ತಕ್ಕವರವೊಲು ವಂಶಾವಳಿಗಳಿಂದಾ ಸದನದಂದದಿ ನಿಮಿರ್ದ ಭದ್ರದಿ ವಿದಿತ ಪತ್ರಲತಾವಳಿಗಳಿಂ (ಸಾಳ್ವಭಾ. ೧೬-೪). ೮. ಜರುಗು; ನಡೆ; ಉಂಟಾಗು : ಜಲಕೇಳಿ ನಿಮಿರ್ಗೆ ಭರತನಲಿತಾಂತಃಪುರದೊಳೆಂಬ ತನ್ನಟ್ಟಱೊಳಾ ಜಳದೇವಿ ಬೆಸಸೆ ಗಂಗಾಜಲಮಾಯ್ತು ನಿತಂಬಿನೀನಿತಂಬದ್ವಯಸಂ (ಅದಿಪು. ೧೧-೧೪೪); ನಿಮಿರ್ದ ರತಿಕೇಳೀವಿನೋದದಿನಮರ್ದುದಕ್ಕೆನ್ನಂತರಾಯತ್ವಮುವಹುದೊ ತನಗೆನುತ ತತ್ ಕಮಲಾಸ್ಯೆ ತನ್ನೊಳಗೆ (ಬಸಪು. ೩೫-೨೫). ೯. ಹೊರಡು; ನಿರ್ಗಮಿಸು : ನಿಖಿಳಾಚಲ ಕಂಜಕುಂಜದಿಂದಮೆ ನಿಮಿರ್ದಾಗಳಾಗಳೆ ಪೊದಪ್ಪುದು ಪರ್ದಿ ತಮಂ ದಿಗಂತಮಂ (ಕುಸುಮಾ. ೧-೪೬); ಅಧೀಶನಿಂ ನಿಮಿರ್ದು ಕುಮಾರನತ್ತಲೆಳಸಿರ್ದಳ್ . . . ರಾಜ್ಯರಮಾವಧು (ಪುಷ್ಪಪು. ೪-೮೬); ನಿಮಿರ್ದ ಹೊಂಗಱಯಂಬು ಹೊಳೆಹೊಳೆದು ಮುರಹರನ ಪಾದಾರವಿಂದದ ಹೊರೆಯೊಳಡಗಿತು (ಕುಮಾದ್ರೋ. ೧೯-೪೯). ೧೦. ಮುಂದುವರಿ; ಮುಂದಕ್ಕೆ ಚಲಿಸು; ಮುನ್ನುಗ್ಗು : ಅಂತು ರಥಮುಂ ಮನೋರಥಮುಂ ನಿಮಿರೆ ವಿವಾಹಮಂಗಳವೇಷಸನಾಥೆಯಾಗಿ ಮಂಚಾಂತರ ರಾಜಮಾರ್ಗಮಂ ಪೊಕ್ಕು (ಶಾಂತಿಪು. ೫-೯೭ ಪ); ಪೊಸವಿಸಿಲ ಪೊಳಪಿನಿಂ ನುಣ್ಣನುಜ್ಜ್ವಳಿಪ ರನ್ನದೆಳವೆಳಗಿನ ಬಳಗದಿಂ ಬಣ್ಣಿಸಿ ಸುರಶರಾಸನಂಗಳನೆಸೆಲಿಕ್ಕಿದಂತೆ ನಿಮಿರ್ದ ನಿರ್ಝರಂಗಳುಮನಪ್ಪುಕೆಯ್ದು ಕೇಳೀಪರ್ವತನಿತಂಬಂಗಳೊಳಂ(ಕಾದಂಬಿ. ೫೨೬); ನಿಜಾವಿಡಿದು ನಿಮಿರ್ ಪೆರ್ದೆರೆಗಳಿಂ . . . ನೆರೆವ ಬಲ್ದೊಱೆಗಳಿಂದೆಸೆದುದಬುಧಿ (ಸಂವಿಪೂ. ೨-೧೪). ೧೧. ನೆರವೇರು; ಈಡೇರು; ಫಲಿಸು : ಬಗೆಯದಿರೆಯಿರೆ ಕೃತಾಂತಂ ಬಗೆದಂ ಪೆಱತೊಂದನಾರ ಪುಱುವಗೆಯುಮುವಂ ಬಗೆಯದಿರೆ ನಿಮಿರ್ಗುಮಾತಂ ಬಗೆದೊಡೆ ಬಗೆದಂತೆ ಬಗೆದ ಬಗೆ ನಿಮಿರ್ದಪುದೇ (ಶಾಂತಿಪು. ೭-೧೧); ಮುಕ್ತಿಶ್ರೀಯ ಶೃಂಗಾರಪೂರದೊಳೋಲಾಡುವ ನಿನ್ನಪೇಕ್ಷೆ ನಿಮಿರ್ಗುಂ ಭದ್ರಂ ಶುಭಂ ಮಂಗಳಂ (ಪುಷ್ಪಪು. ೧೩-೭೧). ೧೨. ಚಿಮ್ಮು; ನೆಗೆ; ಪುಟ : ನೆಣದಳಿರ್ ಸೂಸೆ ಬಂಬಲ್ಮಿದುಱ್ ಪಾಯ್ತರೆ ನೆತ್ತರ್ ಸುರ್ರೆನುತ್ತುಂ ನಿಮಿರೆ . . . ಕಾದಿತ್ತು ಖಡ್ಗಪ್ರತಾನಂ (ಜಗವಿ. ೬-೫೭). ೧೩. ಉಬ್ಬು; ಎದ್ದುಕಾಣು : ಆಳಿ ನಿಜಾಸ್ಯದಿಂ ನಿಮಿರೆ ಪುತ್ತಿನ ಬಾಯ್ದಲೆಯೊಳ್ ಪಿಪೀಲಿಕಾಮಾಳಿಗೆ ಪಾಸಿ ನಾಲಗೆಯನೊಂದು ಭಯಂಕರ ಭಲ್ಲಮುಲ್ಲಸದ್ಭಾಳತಮಾಳಗುಲ್ಮದೊಳಗಿರ್ಪುದುಮಾ ಸೊವಡಿಂಗೆ ಕಾಯ್ವಿನಂ ಕಾಳಿಗನಾಗನಿರ್ದುಪುದಿದೊಂದು ತಮಾಳದ ಬಳ್ಳಿಯೆಂಬಿನಂ (ಪುಷ್ಪಪು. ೫-೬೨). ೧೪. ಸುರುಳಿ ಬಿಚ್ಚು; ನೇರವಾಗು : ಅತಿವಿಷಃ, ದೀರ್ಘಪೃಷ್ಠಃ —ಈ ೨ ನಿಮಿರ್ದ ಪಾ(ಹಾ)ವು (ಹಲಾಯು. ೧೦೫-೧೮). ೧೫. ಪ್ರಯತ್ನಪಡು; ಶ್ರಮಪಡು. **ನಿಗುರ್** : ೧. ಅಗರುಧೂಪದ ಪೊಗೆಯ ಕಂಪಿಂದೆ ಪೆಂಪಿಂದೆ ಮೃಗನಾಭಿ ಕರ್ಪೂರದ ಸೊಂಪಿಂದೆ ತಂಪಿಂದೆ ನಿಗುರ್ವ ಪೂಮಾಲೆಗಳಲಂಪಿಂದಲಂಪಿಂದೆ ಮುಂಟಪಂ ಚೆಲ್ವಾದುದು (ಚಪು. ೩೭-೩೨). ೨. ತಳ್ಳಿಸುವ ಪ್ರೀತಿಯಿಂ ತವಕಿಸಿ ನಿಗುರ್ವ ತೋಳ್ ಸಲೆ ಚುಂಬಿಪಾತುರದೊಳೊರೆವ ಬಾಯ್ (ಚಿಪು. ೧೯-೩೨); ಶುಂಡಾದಂಡವಂ ನೆಗಪಿ ಕರ್ಣಾಗ್ರದಿಂ ಗಂಡ

ಮಂಡಲವನು ಪೊಡೆದು ಅಂಡಲೆದಭ್ರಕಡರುವಂತೆ ನಿಜವಾಲದಂಡಮಂ ನಿಗುರಿತಾಗಸಕೆ (ಅಂಜಚ. ೧೧-೧೯೩); ಬಿಣ್ಪುವೆತ್ತ ಬಟ್ಟಮೊಲೆಗಳ ರ್ದೆಯನೇಜೆಂತ್ತಿ ನಿಗುರೆ (ರಾಮಾಶ್ವ. ೫೯-೧೬). ೩. ಬೆನ್ನನೊಯ್ಯನೆ ನುಲಿದುಕೊಳುತಾತಂ ನಿಗುರೆ ಕೈವೆರಳುಗಳು ತಲೆಯಂ ನಿಲಿಸಿಯುಳ್ಳಿಗಳ ದಿರೆ ತೋಳೆರಡು ಪೂರ್ಯೆಸೆ (ಬಸಪು. ೪೭-೫೮); ಅಂಬರವನಳ್ಳಿರಿವ ನಿಡುದಿನ ಕೊಂಬುಗಳ ನಿಗುತಿದ್ದ ಕಿವಿಗಳ . . . ಚರಣವಿಡಂಬಗಳ ಮಿಡುಕಿಡುವ ಬಾಲದ ಡಂಬಕದಿ ರಂಜಿಸಿದ ಶತಯೋಜನದ ನಿಲುವಿನಲಿ (ಅಂಬಿಕಾ. ೨೪-೭೧). ೬. ಮಿಗೆ ನುಡಿಗಳಿಂದೊಲಿಸಿ ನೇಹಂ ನಿಗುರ್ದು . . . ಒಲುಮೆಯಂ ತೋಱುತ (ಬಸಪು. ೪೨-೧೫). ೧೬. (ಅಲಂ)ಉತ್ಸಾಹಪಡು ; ಸಡಗರಪಡು : ಶಿವನೆಂದು ನಿಶ್ಚಯಿಸಿ ನಿಗುರ್ವ ನಾಲಗೆಯಿಂದ ಪೊಗಳ್ದರಂದು (ಚಿಬಪು. ೨೦-೩೨). ೧೭. ಗರ್ವಿಸು ; ಹೆಮ್ಮೆಪಡು ; ಸೊಕ್ಕು : ಹಂತವಂ ಮುಱುತಾಳಿನಂತೆ ನಿಗುರ್ದಱಿರಿ ಸಂಕಿಸದೆ ಬಿಂಕದಲಿ (ಬಸಪು. ೫೬-೧೬). **ನಿಗುರು₁** : ೧. ಅಗಿಲು ಸಾಂಬ್ರಾಣಿಯ ಧೂಪ ವಾಸನೆ ನೆಱೆ ನಿಗುರಿತು ಗಗನಮಂಡಲಕೆ (ಕಂನವಿ. ೨೦-೧೮). ೨. ನೆಲಕೆ ನಿಗುರುವ ಗಂಗೆವಾಳದ ಬಿಳಿಯ ಚೌರಿಗಳುಲಿವ ಗಂಟೆಯ . . . ಹೊಳೆವ ಕದಿತಲೆಗಳ ವಿಲಾಸದೊಳಂದು ಹೊಳ್ಕುದು ತುಳುವಪಡೆ ಕಡುಗಿ (ಕುಪ್ಯಾಭೀ. ೪-೭೩) ; ನೆಗೆವ ನಿಗುರಿಯೊಳಸರಿವ ಲಗಡಿನಂತೆಱಗಿ ಲಾಗಿಸುವ ಹೋರಾಟದ ವಿಗಡಮಲ್ಲರುಗಳೊಪ್ಪಿದರು (ಕಂನವಿ. ೨೧-೯೩). ೩. ನಿಗುರುವ ನಿಲುವ ನಿರುಪಮ ಹಯವ ನೋಡಿದರು (ಕುಪ್ಯಾಉ. ೧೨-೧೭) ; ಪಗಡೆ ಚದುರಂಗ ಕವಡೆಯನಾದ ಕರೆದರೆ ನಿಗುರಿದುವು ಕರ್ಣಗಳು ಮಚ್ಚೆಯಂತೆ (ಪುರಂದ. ೪-೫೨-೩) ; ಬಿನ್ನಣದೆ ಗೋಪುರದ ಮಂಟಪದ ಪ್ರಥಮೆಗಳ ಚೆನ್ನಾಗಿ ನಿಗುರುತಂ ಬಗ್ಗುತ್ತ ಕೀಳ್ಮೇಲನನ್ನಿಯಂ ನೋಳ್ಪವೊಲ್ ನೋಡಿ (ಚತುಪು. ೨-೩-೩೬). ೪. ರುದ್ರನ ಪರಿಗೆ ನೂರ್ಮಡಿಯೆನಲು ನಿಗುರಿದನಂಜನಾಸೂನು (ತೊರರಾ. ೪-೧೦-೨೭). ೧೦. ಖುರಪುಟದಲಾಕಾಶವನು ಕತ್ತರಿಸುವವೊಲುಬ್ಬರದಲತಿನಿಬ್ಬರದ ಗತಿಯಲಿ ನಿಗುರಿದವು ರಥವಾಜಿಗಳು (ಕುಪ್ಯಾಕ. ೨೩-೧೨); ಲಂಘಿಸಲು ಲಾಗಱಂದು ಮೃಗವುಲ್ಲಂಘಿಸಿತು ರಘುಪತಿಯ ನೃಪ ನಿಡು ಜಂಘೆಯಲಿ ನಿಗುರಿದಡೆ ನಿಗುರಿತು ನಿಮಿಷನಿಮಿಷದಲಿ (ತೊರರಾ. ೩-೮-೬೮); ವೀರಭಟರುಬ್ಬರಣೆ ನಿಗುರುವ ತೇರ ಚೀತೃತಿ ಗಜದ ಬೃಂಹಿತ . . . ರಣಕಹಳಾರವದ ರಭಸದಲಿ ಮೇಲ್ವಗದೋರಣಿಗೆ ಪೈಸರಿಸಿ ನಡೆತಂದನು ಸುರೇಂದ್ರಜಿತು (ತೊರರಾ. ೫-೬-೭). ೧೬. ನಿಗುರುತಿದೆ ಚಿಗುರುತಿದೆ ನಾಲಗೆ ಪರನಿಂದೆಗೆ ಮಹೇಶಭಜನೆಗದೇಕೋ ಹಗಲು ಕೌಶಿಕನ ಸೊಲು ಬಾಯ್ದೆಗೆಯದು (ಶಂಕಕಂ. ೫) ; ಕನ್ನವಂ ತೋಡಿದ್ದ ಬಾಗಿಲ ಹೊನ್ನನೀಕ್ಷಿಸುತದುಭುತಸ್ವಾಂತನ್ನಿಗುರಿ ಚಟುಕಿಡುತ ಬೆರಳಂ ನಾಸಿಕದೊಳಿಟ್ಟು . . . ಇಂತೆಂದಂ (ಬಸಪು. ೩೧-೧೬); ಹಗೆಯ ಪತಿಕರಿಸುವರೆ ನಾಲಗೆ ನಿಗುರುವುದು ನೂಱುಮಡಿಯಲಿ ಕಾಳಿಗಳೆ ತನ್ನನು ಬಿಟ್ಟು ನೋಡಿರೆ (ಕುಪ್ಯಾದ್ರೋ. ೧೦-೪೫). ೧೭. ನಿಗುರುವದ್ವೈತಕ್ರಿಯಾ ಮಾಯೆಗಳ ದುರ್ಮತದಿಂದ ಸದ್ವಿದ್ಯೆಗೆ ಪರಶಿವನ ಭಜನೆಯಿಲ್ಲದನಾಮಿಕರು ಗಳೆರಾ (ಬಸಪು. ೫೦-೪೮). ೧೮. ಸೆಟೆದುಕೊಳ್ಳು ; ಬಿರುಸಾಗು ; ಸೆಟೆ : ಆಱುದಿನದ ಕೂಸಂ ಪಿಂಗಳಾಶಿನಿಯೆಂಬ ದೇವತೆ ಪಿಡಿದೊಡಾ ಕೂಸು ಕೈಕಾಲನಾಡಿಸುಗುಂ . . . ಮೈ ಮೊಡೆನಾಱುಗುಂ ನಿಗುರುಗುಂ ಮೊಲೆಯನುಣ್ಣದುಂ (ಬಾಲಚಿ. ೧೨೬-೧). ೧೯. ಹೊಡೆ ; ಬಡಿ : ಅಡಿಗಡಿಗೆ ಮಿಗೆ ಪರ್ಜುತಿಹ ಶಕ್ರಜಿತುವ ಕಾಣುತ ತೊಡರಿ ನಿಗುರಿದಂ ನಿರಿನಿಟಲುನಿಟಲೆನುತ ಸಂಧಿಗಳು ಸೆಗ್ಗುವೋಲ್ಮರುತಸುತನು (ವೆಂಕಾರಾ. ೫-೧೬-೧೮) △**ನಿಗುಳ್** : ೩. ಕೊರಳುದ್ದ ನೀರೊಳು ನಿಂದು ಕಾಲೊಂದ ಧರೆಯೊಳೂಱು ನಭಕ್ಕೆ ಮುಖಪಂಕರುಹಮೊಗ್ಗಿ ನಿಗುಳ್ದು ಭೋರನೆ ಸುರಿವ ಪೆರ್ಮಳೆಯೊಳಗೆ ತಾಂ ಕಂಪಿಸದೆ ನಿಂದಿರ್ದು (ಬಸಪು. ೨-೧೨). ೬. ಅಸಮನಿರತಿಶಯಾನುಭವ ಭವ್ಯಸುಖಮೆಯ್ದೆ ನಿಗುಳ್ದು ನಿಶ್ಚಲವೆಸೆವ ಪರಶಿವಯೋಗನಿದ್ರಾಮುದ್ರಿತದೊಳಿರಲು (ಬಸಪು. ೩೫-೮). **ನಿಮಿರು₁** : ೧. ಬಾನ್ಕೈಯೆ ಕದಿರ ಗರಿಗರಿ ಬಿಚ್ಚಿ ನಿಮಿರಿರಲು ಚೈತ್ಯದಾಕಾಶದಲಿ ಏರುತಿಹುದು (ಅರಳು. ೧೨೬-೭). ೩. ಸ್ವಲ್ಪ ಕುಳ್ಳಾಗಿರುವವರು ತಮ್ಮ ಮುಂದೆ ನಿಂತಿದ್ದವರ ಬೆನ್ನ ಮೇಲೆ ಕೈಯೂರಿ ನಿಮಿರಿ ನಿಂತಿದ್ದರು (ಭೀಮಕಾ. ೨೪೭) ; ಅದನ್ನು ಕೇಳಿದೊಡನೆ ನಾಯಿಯ ಬೆನ್ನ ಕೂದಲೆಲ್ಲ ನಿಮಿರಿ ನಿಂತಿತು (ಯೋಧಪು. ೮೦) ; ದಾರುಣ ವಿಧ್ವಂಸಲೀಲೆಯನ್ನು ಜ್ಞಾಪಿಸಿಕೊಂಡಾಗ ರೋಮರೋಮವೂ ನಿಮಿರಿ ನಿಲ್ಲುತ್ತದೆ (ಬಾಣಅ. ೩೭೧). ೫. ಆನನದಿ ಬೆಳ್ಪೊಂದಿರದೆ ಕುಂಠಳ ನಿಮಿರಲೆಸೆದುದು ಗರ್ಭವಂಗನೆಯ (ಜೀವಂಚ. ೪-೩೫). ೬. ಮಿಸುಪ ಮುಖದೊಡನೆ ತನುಕಾಂತಿ ನಳನಳಿಸೆ ಸಂತಸದೊಡನೆ ಪುಣ್ಯಕಳೆ ನಿಮಿರೆ . . . ಸುಮುಹೂರ್ತವನುವಾದವೈದುತಿಂಗಳೊಳಬಲೆಗೆ (ಸಿದ್ಧರಾ.೧-೫೨); ಮೃದುಮೋಹನಂ ನಿಮಿರೆ ತಾಳಲಯಕಾಲಮಾನಸ್ಥಾನವಿಧಿಯೊದವೆ ಬಾಲೆಯರ್ ಕೇಳಿಸಿದರಾರ್ಯನಂ ರಸಮೊಸರ್ವವೋಲ್ (ಪದ್ಮರಾ.೮-೬೧); ಪದಸರೋಜಕವನತನಾಗಿ ಸಾತ್ವಿಕಂ ನಿಮಿರೆ ಬಸವಂ ಭಯಭಕ್ತಿವೆರಸಿ ಕೀರ್ತಿಸಿ (ವೃಷವಿ. ೧೩-೧೮ ವ); ತೆರೆ ನೊರೆ ಬುದ್ಬುದಂ ನಿಮಿರೆ ತೋಯಕುಲಂ ಕಮಲೋದ್ಭವಾಂಡವಿಸ್ತರದೊಳಧಃಕಟಾಹಮೊಡೆದೂರ್ಧ್ವಕದಂದುಱೆ ಚಿಮ್ಮಿ ಬಂದು (ಜಾಲಾಸ್ಯ. ೧-೧-೮೦). ೨೦. ನೆಟ್ಟಗೆ ನಿಲ್ಲುವಂತೆ ಮಾಡು ; ನೇರವಾಗಿಸು : ಕಿವಿಗಳನು ನಿಮಿರಿ . . . ಕೊರಳ ಕೊಂಕಿಸಿ ಮರುತನಚ್ಚರಿಯ ಕುವರ ನೀರಧಿಯನುಲ್ಲಂಘಿಸುವಡುಲ್ಲಾಸದಿಂದೆಸೆದನು (ವೆಂಕಾರಾ.೪-೧-೧೫). ೨೧. ಅಲ್ಲಾಡು ; ಕಂಪಿಸು : ಹಿಮಾನಿಲನಿಂ ನಿಮಿರುವ ಪೊಂಬಾಟೆಯ ಸುಟಿಯೆಲೆಯ ಬಿಜ್ಜಣಂಗಳಿಂ (ಕುಸುಮಾ. ೧೩-೪೬ ವ). △ **ನಿಮಿಱ್** : ಅ[ಕಾ]ಶಗಂಗಾಜಲ ಜಲರುಹನೀಹಾರ ಕೀರ್ತ್ತಿಪ್ರತಾನಂ ನಿಮಿಟ್ಟಿತ್ತಾ ಶಾನ್ತಮಂತಾ ಜನಮಿನಿಪುದು ಮಾರ್ತ್ತಣ್ಡನುಗ್ರಪ್ರತಾಪಂ (ಸೌಇ. XI-i, ೭೮-೭೧ ; 1045) ; ಈ ನಿಮಿಟ್ಟಿ ಚಂಚನ್ಮಾತ್ರೆಗಳ್ (ಎಇ. XII, ೨೮೦-೧೬೩ ; 1077) ; ಶ್ರೀರಣಬೇಗೆಯ ಚೋಡ್ಡ ಕಳಿಂಗ ಬಲ್ಲಾಳ ನಿಮಿಟ್ಟುದು ಆರಸಂಕಕಾಱರ ಬಲ್ಲಹಹ್ವೋಱಂ ಣಟ್ಟವ (ಕಇಅ. ೧೨೨-೩೦-೨ ; ?). **ನಿಮುರು:** ೧. ಬೆಟ್ಟದ ಮೇಲೊಂದು ದಳ್ಳುರಿ ನಿಮು[ಪಾಶಾಂ. ನಿ]ರಿ ಬಳ್ಳಿವರಿದು ಆಕಾಶಕ್ಕಡರಿ ಜಗದೋಳ್ಪಸರಿಸಿ ಸಪ್ತಸಮುದ್ರಂಗಳ ನುಂಗಿತ್ತು (ಅದನ. ೩೩-೯೬). 'ನಿಮುರಿಚು' ಪರಾ. **ನಿವುರು** : ೩. ಭವಿಗಳಂ ನೋಡೆವೆಂಬಂತೆ ಕಣ್ಣುಂ ಜೋಗೆ ನಿವುರಿ ತಲೆಗೇಱುತ್ತು ಸುಕೃತವೆನೆ ನರೆ ಮೇಗೆ ಬಲವರಲ್ಕಲ್ಲದಡಿಯಿಡದಂತೆ ನಡೆಯುಡುಗೆ . . . ಕೈ ನಡುಗಿ (ತಿರುರ. ದೇ. ೧೦-೩).

ನಿಗಿತುಕೊಳ್ಳು = ೧. ನೆಟ್ಟಗಾಗು. ೨. ಸೆಟೆದುಕೊಳ್ಳು : ಚಳಿಯಿಂದಾಗಿ ಕೈಕಾಲುಗಳೆಲ್ಲಾ ನಿಗಿತುಕೊಂಡಿವೆ (ರೂಢಿ). ೩. ಸಾಯು; ಮರಣ ಹೊಂದು : ಅಘಿಮನ್ನು ಸ್ವಲ್ಪ ಹೆಚ್ಚಿಗೆ ಪ್ರಮಾಣದಲ್ಲಿ ಬಳಸಿದ್ದರಿಂದ ತನ್ನ ಭಾವಮೈದುನನ ಹೆಂಡತಿ ಇನ್ನೇನು ನಿಗಿತುಕೊಳ್ಳುವುದರಲ್ಲಿದ್ದಳೆಂದೂ . . . ಹೇಳಿದನು (ಪುನರು.೧೦೫). **ನಿಗುರಿದ ಕಿವಿ** = ನೆಟ್ಟಗೆ ನಿಂತ ಕಿವಿ : ಹೊಗರುಗಣ್ಣು, ನಿಗುರಿದ ಕಿವಿ, ಹಗುರು ಮೈಯ ಚಿಗುರೆಯು (ನಾದಲೀ. ೨೬-೧), **ನಿಮಿರ್ದು ಪೇಳ್** = ವಿಸ್ತಾರವಾಗಿ ಹೇಳು ; ಬಣ್ಣಿಸು : ಆ ವೇಳೆಯೊಳೊರ್ವ ಕಳ್ಳ ಬಂಟನಂ ಕಳಪಿದೊಡವಂ ಬಂದು . . . ನಿಮಿರ್ದು ಪೇಳಿದಂ (ಹಮ್ಮೀರ. ೩-೮). [ದೇ.॥ ತಮಿ. ನಿಮಿರ್ ; ಮಲ. ನಿವರು, ನೀರು ; ತುಳು. ನಿಮುರು ; ತೆಲು. ನಿವುಡು, ನಿಗುಡು]

ನಿಮಿರ್$_2$, ನಿಗುರು$_2$, ನಿಮಿರು$_2$ (ನಾ). ೧. ವಿಸ್ತಾರ; ವಿಶಾಲತೆ; ನೀಳ : 'ನಿಮಿರ್ವೆಱು' ಪರಾ. **ನಿಗುರು$_2$** : ೨. ಚಾಚಿರುವಿಕೆ : ಭುಗುಭುಗಿಲ್ ಭುಗಿಲೆಂದು ಭೋರ್ಗರೆದುಗುಳಿದವು ಬಲುಗಿಡಿಯನುರ ನಾಲಗೆಯು ನಿಗುರಿನಲಲಗುಗಳು (ತೊರಗಾ. ೧-೧೧-೧೭). ೩. ಹೆಚ್ಚಳ; ಅಧಿಕ್ಯ ; ಸಮೃದ್ಧಿ : ಉಬ್ಬಿದನು ಹರುಪದಲಿ ಕಂಗಳ ಗಬ್ಬ ಮುಱು ದುದು ಮದದ ನಿಗುರಿನ ಹಬ್ಬುಗೆಯು ಹೊಲಬಳಿಯೆ ನಾಲಗೆಯುಡುಗೆ . . . ಬೆಱಗಾದ (ಕುಸ್ಮಾಭೀ. ೩-೬೬). **ನಿಮಿರು$_2$**: ೧. ಸೃಷ್ಟಿಯ ನಿಮಿರೊಳು ಹುಟ್ಟ ಚಂದದೊಳಿದ್ದ ಧಿಟ್ಟ ಜೀವಿಗಳ ಭಂಗದ ಬರಿಯಂತರಂಗ (ವಿಸೀಗೀ. ೩-೬). [<ನಿಮಿರ್$_1$]

ನಿಮಿರಿಸು, ನಿಗಿರಿಸು, ನಿಗುರಿಸು(ಕ್ರಿ). ೧. ನೆಟ್ಟಗೆ ನಿಲ್ಲಿಸು ; ನೆಟ್ಟ ಗಿರಿಸು : ಬೆನ್ನು ನಡುಗಳನತ್ತಿತ್ತ ಮುರಿದು ಅಡಗಿಸುವರು ನಿಮಿರಿಸು ವರು ಮೇಣದ ನಿಡುರೂಪೊ ಮೈಯೊಯೆಂಬಂತೆ (ಧರಚಿ. ೬೬-೫೨) ; ಮುಂಗಾಲಂ ನಿಮಿರಿಸಿ ಮಿಗೆ ಪೊಂಗುವ ಪೆರ್ಬುಲಿಯ ಕಂಡು (ಶ್ರೀಮಹಾ. ೧-೮೩) ; ಕಿವಿಗಳ ನಿಮಿರಿಸಿಕೊಂಡೆ ನಾವಿರುವೆವು ಕರೆಯೆಂದು ಬರುವುದೊ ಎಂದು (ಇಂಜಾಪ. ೨೧೯-೮೧) ; ಬಸ್ಸು ಗಾಡಿಗೆ ಎದುರಾಗಿ ಬರುತ್ತಿದ್ದರೆ ಎತ್ತುಗಳಿಗೆ ಬೆಟ್ಟದಾಕಾರದ ಭೂತವೇ ಬಂದಂತೆ ಕಂಡು . . . ಕಿವಿ ನಿಮಿರಿಸಿಕೊಂಡು . . . ಪರಾರಿಯಾಗುತ್ತಿದ್ದುವು (ಸನ್ನೂರು. ೨೯). **ನಿಗಿರಿಸು** : ೧. ಕೃಷ್ಣರಾಯನು ಅನೆಯ ಕೊಂದ ತಱು . . . ಕೃಷ್ಣರಾಯನು ಕೂಸಿಯ ನಿಗಿರಿಸಿದ ತಾಱು (ಎಳ. XIV, ಶ್ರೀರಂಗ. ೨೭೩, ಪುಟ ೨೦೩; ?). **ನಿಗುರಿಸು**: ೧. ಹೊಗರೊಗುವ ಜವ್ವನದ ಸೊಂಪಿನ ನಿಗುರಿಸಿದ ನಿಡುದೋಳುಗಳ ಸೆಳ್ಳುಗುರ ಮಣಿ ಮುದ್ರಿಕೆಯ ಘನ ಶೃಂಗಾರದುಬ್ಬುಗಳ . . . ಅಬಲಾಜನದ ಕೈಗಳ ಲಗಿನ ಚಾಮರವೆಸೆದವು (ತೊರಗಾ. ೬-೧೦-೧೨) ; ಮೃಗಮದದ ತಿಲಕ ವನು ನ[ಶಾಂಗಾ. ರಿ]ಗುರಿಸಿದಾರ್ಕೆದಱಲಿ ಮಳಮಳಿಪ ಸೂತನ ಯಕ್ಷ ಕರ್ದಮವನು ನಿಜಾಂಗದಲಿ (ತೊರಗಾ.೬-೨೦-೧೫); ನಿಗುರಿಸಿ ಗೋಣ್ಗಳಂ ದಿಗಿಧಸಂತತಿ ಸಂತಸಮಿರ್ಪಿನಂ (ಅಪ್ರತಿ. ೧೨-೬) ; ಮುಗಿಲ ಮುಟ್ಟುವ ನಿಷ್ಟುಣಿಗೆಗಳನು ತಂದು ನಿಗುರಿಸಿದರು ಕೋಟೆತೆನೆಗೆ (ಕಂಸವಿ.೧೮-೧೫೭) ; ಎರಡು ತೋಳುಗಳನ್ನೂ ನಿಗುರಿಸಿಕೊಂಡು ಸೋವು ಹೋಗು ನಿಪಾರಿಸಿ ಕೊಂಡೆ (ಚಂಗಾಳ್ವ. ೮೨) ; ಕಣಿಕೆಯನ್ನು ಮೆಲ್ಲುತ್ತ ನಿಂತಿದ್ದ ಎತ್ತುಗಳೆ ರಡೂ ಬಡೆಯನನ್ನು ಕಂಡು ಕಿವಿಗಳನ್ನು ನಿಗುರಿಸಿದುವು (ಮಲ್ಲಿ ಹ.೨೫); ಕಿವಿಗಳನ್ನು ನಿಗುರಿಸಿ ಸೋಡುತ್ತಿದ್ದ ನಿಮಲೆಯು ತಾಯಿಯು . . . 'ಏನು ಬಹಳ ಮಾತುಕಥೆ ನಡಿಯುತ್ತಿತ್ತು ?' ಎಂದು ಪ್ರಶ್ನಿಸಿದಳು (ಶಿಕ್ಷಾಮ.೧೭). ೨. ಹರಡುವಂತೆ ಮಾಡು; ಹರಹು :"ನಿಮಿರ್ಚು— ಪ್ರಸಾರಣೇ (ನಿಗುರಿಸು)" (ಕವಿಧಾ). ೩. ಉಂಟುಮಾಡು ; ಉಂಟಾ ಗಿಸು : ಅಸಿಕಿಯೊಳ್ಕಟ್ಟಿದೊಳ್ಕಟ್ಟೆಯ ಮೂಱುಂ ಸೆಱಂಗುಗಳೊ ಳ್ಕೋದು ನೇಲ್ವ ಬಟ್ಟೆಮುತ್ತುಗಳುಂ ಕಿವಿಯೊಳ್ಕಟ್ಟ ಚಾಕುಳಿವಾವುಲಿ ಗಳುಮಿನಿಯನು ಬಱಸಂದುವಂದ ತಾರಗೆವೆಣ್ಗಳೆಂಬ ಸೆನಪಂ ನಿಗುರಿಸು ತ್ತಿದೆ (ಚಕಪಂ. ೮೨-೫). [ನಿಮಿರು$_1$(<ನಿಮಿರ್$_1$)+-ಇಸು$_3$]

ನಿಮಿರು$_1$ 'ನಿಮಿರ್$_1$' ನೋ.

ನಿಮಿರು$_2$ 'ನಿಮಿರ್$_2$' ನೋ.

ನಿಮಿರ್ಕೆ, ನಿಗುರಿಕೆ (ನಾ). ೧. ಹರಡುವಿಕೆ; ವಿಸ್ತಾರ; ಪಸರಿ ಸುವಿಕೆ : ತದಂಬು ಮೃದುತ್ವದಿಂ ತಳೋದರಿಯ ಮೆಯ್ಯ ಕುಂಕುಮ ದೊಳೊಂದಿ ನಿಮಿರ್ಕೆಯಿನೊಪ್ಪಿ ಮಾಣಿಕಾಭರಣದ ಭಂಗಿಯಂ ನೆಱೆಯೆ ತಾಳ್ದಿದುದು (ಧರ್ಮಾಮೃ. ೧೪-೧೫); ಪಡೆಯ ನಿಮಿರ್ಕೆಗೀ ಧರಣಿ ಸಾಲದು ಕೇತುಗಳೇಱ್ಪಿಗಂ ಸಭಂ ಕಡುಕಿಱುದು (ಜಗವಿ. ೯-೬೬). ೨. ನೆಟ್ಟಗಿರುವಿಕೆ ; ನೇರವಾಗಿರುವಿಕೆ : ಸೋತು ಹೋಲ್ದುದು ಮಾಸೆಯ ನಿಮಿರ್ಕೆ ತುಟಿಗಳ್ ವಿಕಂಪಿಸಿದುವು (ಶ್ರೀರಾಮಾ. ೫೭೮-೮೪). ೩. ಬೆಳವಣಿಗೆ ; ಬೆಳೆಯುವಿಕೆ ; ಅಭಿವೃದ್ಧಿ : ಕಾದಂಬರೀಪ್ರಣಯಕ್ಕೆ ನಿಮಿರ್ಕೆಯಂ ಮಾಟ್ಟುದೆಂಕಾಸುಂ ಕಯ್ಯೊಳ್ ದಿರಲಾಕೆ ಭಗ್ನಪ್ರಣಯೆಯಾದಪ್ಪಳ್ (ಕಾದಂಬ. ೧೨೧) ; ಜನಪನ ನಿಜಾಧಿಮತಲತೆಯ ನಿಮಿರ್ಕೆಗೆ ನೀಲರತ್ನದಂಡದಡರ್ಪಂ ವನಜಭವನಿಟ್ಟ ನೆಂಬಂತೆ ನಭಕ್ಕೊಗೆದತ್ತು . ಹೋಮಧೂಮೋದ್ಗಾಮಂ (ಕುಸುಮಾ. ೪-೧೩೮). ೪. ಅಧಿಕ್ಯ ; ಅತಿಶಯ ; ಪೆಂಪು ; ಏಳಿಗೆ ; ಹಿರಿಮೆ : ಶ್ರೀಯ ನಿಮಿರ್ಕೆಗಂ ಸುಖದಳುರ್ಕೆಗಮುನ್ನತಕೀರ್ತಿಗಂ . . . ಅಟ ಪೊಡೆ ಪೂಜಿಸು . . . ದುರಿತಾರಿ ಚತುರ್ಮುಖಶಾಂತಿನಾಥನಂ (ಧರ್ಮಾಮೃ. ೫-೬೨) ; ಸೋಮವಂಶಜರೊಳಾದ್ದೊರೆ . ತನ್ನೊಳಿಪ್ಪುದೊಂದು ಸಾಹಸದ ನಿಮಿರ್ಕೆ . . . ಧರಿತ್ರಿಯೊಳ್ ವಿರಾಜಿಸುತಿರಲುತ್ತರೋತ್ತರ ವಿಳಾಸ್ತುತಿವೆತ್ತುದು ವೀರಪಾಂಡ್ಯನಾ (ಎಳ. XI, ಧಾವಣ. ೮೫-೨೦ ; 1143) ; ದಮಿತಾರಿಗೆ ಸಮಸ್ತಧಾತ್ರೀವಿಭಾಗದೊಳ್ ಭಾವಿಸೆ ವಿಕ್ರಮದ ನಿಮಿರ್ಕೆಗಮಾಯತಿಯಮರ್ಕೆಗಂ ಪೇಟ ಪೋಲ್ಕೆಗಾವಂ ಬರ್ಪಂ (ಕಾವ್ಯಾವ. ೩೪೬) ; ಅದಟಿನಳುರ್ಕೆ ಮೆಯ್ಯೊಯ ನಿಮಿರ್ಕೆಯ ಶೋಧನ ದಿರ್ಕೆ . . . ತನ್ನದೆಂಬುದನೆನೆ ಪೆರ್ಮೆಯಂ ತಳೆದನೋ ನ್ರಿಪರೊಳು ನ್ರಿಪತೈಲಶಾನ್ತರಂ (ಎಳ. VIII, ಸಾಗರ. ೧೫೯-೧೨೦ ; 1259). ೫. ಎತ್ತರ ; ಔನ್ನತ್ಯ : ಆ ಪುಣ್ಯದಂಪತಿಗಳ ಮತಿಯ ನಿಕ್ಕೆಯ ನಿಮಿರ್ಕೆಗೆ ಮೆಚ್ಚ ಸಂತತಂ ಕ್ಷಿತಿಯೊಳಗೆ ಪುಟ್ಟಲಿರ್ಪಾದಿಗಣನಾಥನಂ ಸತಿಯುದರದೊಳಗೆಂದು ಮಡಗಿದಂ ಕರುಣದಿಂ ಸೌರಾಷ್ಟ್ರಪುರದರಸನು (ಸೋಮಚ. ೧-೬೮). 'ನಿಮಿರ್ಕೆವೆಱು' ಪರಾ. ೬. ಹೊರಹೊರಡು ವಿಕೆ ; ನಿರ್ಗಮನ : ಜೀವಸಿಂಡಸ್ಸ ಣಿಗ್ಗಮಣಂ—ಜೀವ ಪ್ರದೇಶದ ನಿಮಿರ್ಕೆ (ತತ್ತ್ವಾರ್ಥ. ೬೧). ೭. ಜಂಬ ; ಗರ್ವ ; ಅಹಂಕಾರ : ಧರೆ ಗೆಸೆದತ್ತು . . . ತಾರಕಾಸುರನ ನಿಮಿರ್ಕೆ ತಾರಕನ ಮೂರ್ಖತೆ ತಾರಕನುತ್ಪಥಕ್ರಮಂ (ಗಿರಿಕ. ೬-೧೧). ೮. ಗತ್ತು ; ಠೀವಿ ; ಬೀಂಕ : ಕೆಲಬಲದಲ್ಲಿ ಕುಂಜರಘಟಾವಳಿಯಶ್ವಬಲಂ ಪದಾತಿಸಂಕುಳ ವೊಲವಿಂ ಬರುತ್ತಮಿರೆ ಮುಂದೆ ಸುವರ್ಣದ ಪೆಟ್ಟಕಾಳಿಯಗ್ಗಳಿಸಿ ನಿಮಿರ್ಕೆಯಿಂ ನಡೆಯೆ ಕಾಲ್ನಡೆಯೊಳ್ ನಡೆತಂದನು . . . ಮರುಳಾಗಿ ಸೌಂದರಂ (ಸಂಬರ. ೧೫ ಸೂಚನೆ). **ನಿಗುರಿಕೆ** : ೧. ಪ್ರಕಾಶದ ಕಿಱಿಯ ನಿಗುರಿಕೆಯ ಝಳದ ಝಾಡಿಯ ಹೋಡಿಯಲಿ ಕಪಿಬಲಕೆ ಮೈದೋಱು ದನು ಬೊಬ್ಬೆಯ ಬಿಲುದನಿಯ ಬಱಸಿದಿಲಬುಜಭವಾಂಡಘಟ ಬಿರಿಯೆ (ತೊರಗಾ. ೬-೨೦-೪೯). [ನಿಮಿರ್$_1$+-ಕೆ]

ನಿಮಿರ್ಕೆಗುಂದು (ಕ್ರಿ). ಅತಿಶಯವು ಕಮ್ಮಿಯಾಗು; ಹಿರಿಮೆಯು ಕ್ಷೀಣವಾಗು : ನಿಮಿರ್ಕೆಗುಂದದಾವಗಮತಿಸೌಖ್ಯಮುಂ ಪಡೆವುದೀ ದೊರೆಯು[ಶಾಂಗಾ. ತು]ನ್ನತಿ ಪಾತ್ರದಾನದಾ (ಅವಿಪ. ೫-೪೩).

[ನಿಮಿರ್ಕೆ+ಕುಂದು$_1$]

ನಿಮಿರ್ಕೆವಡೆ (ಕ್ರಿ). ಪೆಂಪನ್ನು ಹೊಂದು ; ಹಿರಿಮೆಯನ್ನು ಪಡೆ; ಅಧಿಕ್ಯವನ್ನು ಹೊಂದು ; ಅತಿಶಯವಾಗು : ಪದಿನೆಣ್ಣಾಸಿರ ಮ್ಮೋಱ್ಪರಾಜರುಸುಣ್ಬತ್ತುನಾಲ್ಕುಕೋಟಿ ವೀರಭಟರ್ಕಳುಂ ನಿಮಿರ್ಕೆ ವಡೆದ ನಾಲ್ವತ್ತೆಂಟುಕೋಟಿ ಪತಾಕೆಗಳುಂ (ಪಾರ್ಶ್ವಪು. ೧೨-೧ ಪ).

[ನಿಮಿರ್ಕೆ+ಪಡೆ$_1$]

ನಿಮಿರ್ಕೆವೆಱು (ಕ್ರಿ). ೧. ಹಬ್ಬು; ಹರಡು; ಪಸರಿಸು : ಮೊರಟದ ಬಂಕಿದೇವವಿಭುವಿಂದೆ ಕೊರಂಟು ತಳರ್ತ ಪಾಂಗಿನಿಂ . . . ಶಾಂತ ಪಸರಯ್ಯನ ಭಾವದ ಬಲ್ಪಿನಿಂದಮಂಕುರಿಸಿ ನಿಮಿರ್ಕೆವೆತ್ತು ಕರಪಲ್ಲವ ಮೊಪ್ಪಿದುದಾ ತಪಸ್ವಿಯ (ಪ್ರಭವಿ. ೨೬-೪೬). ೨. ಉದ್ದವಾಗು : ನೀಳವಾಗು ; ನಿಡಿದಾಗು : ನಿಮಿರ್ಕೆವೆತ್ತ ನಿಶ್ವಸಿತಮುಂ ಶೂನ್ಯ

ಮಾದ ಸಾಶ್ರುನಯನಂಗಳುಂ . . . ಜಡತೆಗೆಡೆಯೊದ ಯಾನಮುಂ ಬೆರಸು ಮೆಲ್ಲನಲ್ಲಿಗೆ ವಂದು (ಕುಸುಮಾ. ೧೩–೪೬ ಪ). ೩. ಆಧಿಕ್ಯ ಹೊಂದು ; ಹೆಚ್ಚಾಗು : ಅದು ನಿಮಿರ್ಕೆವೆತ್ತ ಳುಸ್ಮಹೋದಕಧಾರೆ ನವಾರುಣಾಂಶುವೋಲ್ ಪೊದೆಯಿನಿತಂಬುಜಾನನೆಯರೆಂಬ ನವಾಂಬು ಜಿನೀಕಪಂಬಮುಂ (ಜಗವಿ. ೧೪–೧೦೬) ; ಳುಸುಮಾವೇತನೂದರಿಯ ವಿವಾಹವೈಭವಮನೀಕ್ಷಿಪ ಕಾಂಕ್ಷೆ ನಿಮಿರ್ಕೆವೆತ್ತು (ಕುಸುಮಾ. ೧೫–೮೩). ೪. ಎತ್ತರವನ್ನು ಹೊಂದು ; ಎತ್ತರವಾಗು : ನಿಮಿರ್ಕೆವೆತ್ತ ಳುಜಮೆತ್ತಿದ ಸತ್ತಿಗೆ ಸಿಂಹವಿಷ್ಟರಂ ತೋಜುವ ಚಂದ್ರಕಾಂತಶಿಲೆಯಾಗೆ . . . ಪರ್ವತರಾಜನೊಪ್ಪುಗುಂ (ಗಿರಿಕ. ೧–೫೦). [ನಿಮಿರ್ಕೆ + ಪೆಜ್ಜು]

ನಿಮಿರ್ಚು, ನಿಗಚು, ನಿಗಿಚು, ನಿಗುಚು, ನಿಗುರ್ಚು, ನಿಮುರಿಚು, ನಿವುಚು (ಕೈ). ೧. ಹರಡು; ವಿಸ್ತರಿಸು "ನಿಮಿರ್ಚು-ಪ್ರಸಾರಣೇ. (ನಿಗುರಿಸು)" (ಕಮಧಾ) ; ವನಧಿಪರೀತಭೂತಳದೊಳೀತನೆ ಸೋಲದ ಗಂಡನೆಂಬ ಪೆಂಪಿನ ಪೆಸರಂ ನಿಮಿರ್ಚಿದುದುಮಲ್ಲದೆ ವಿಕ್ರಮದಿಂದೆ ನಿಂದ ಗುರ್ಪೊನಲ್ . . . ಮೆಯ್ಯಲಿ ಬಿದ್ದೆಗನನ್ನನಾವನೋ (ಪಂಪಭಾ. ೧–೩೬) ; ಕೊಂಕಣೇಶ್ವರನನಿರ್ಚಿ ಸಾಧಿಸಿದನಂಬುಧಿಸೀಮೆವರಂ ನಿಮಿರ್ಚಿದಂ ಧರೆಯನದೇಕೆ ಕೇಳ್ದಿಲ್ಲಿಯ ಸಾಹಸಭೀಮನ ಸಾಹಸಂಗಳಂ (ಗದಾಯು. ೨–೪೭) ; ತುಂಗನಿಜಪ್ರತಾಪಮುಂ ನೇತುವರಂ ನಿಮಿರ್ಚಿ ತಳೆದಂ ಜನಮಂ ರಘುವಂಶಮಂಡನಂ (ಪಂಡಶಂ. ೧೦೩–೧೪); ಮನೆಯಂ ಪೆರ್ಚಿಸುವೊಡೆ ಮುನ್ನಿನ ಮಾಟಕ್ಕಿಯೊಳೆಯ್ದೆ ಮೂಡಲುಂ ಬಡಗಲ್‌ಪೊತ್ತಿ ನಿಮಿರ್ಚುಗುಟುಂದ ದೆಸೆಗಳೊಳಿನಿತಂ ಪೆರ್ಚಿಸಲೆವೇಡ ಪೆರ್ಚಂ ಬಗೆವಂ (ಲೋಕೋಪ. ೩–೧೩) ; ಸುತ್ತಣ ಕಡಲ್ಬರೆಗಂ ನೆಲನಂ ನಿಮಿರ್ಚಿ ಭೂಮೋತ್ತಮನಿಂತು ತನ್ನ ಜನಮಂ ದೆಸೆಯಂತುವರಂ ನಿಮಿರ್ಚಿದಂ (ಪಂರಾಮಾ. ೨–೩೮) ; ಶ್ರೀಬಪ್ಪರ್ಮದೇವಂ ಮಹೀತಳಮಂ ತೋಳುವಲದಿಂ ನಿಮಿರ್ಚ್ಚಿದನಿದೇಂ ಪೆರ್ಮ್ಮಾಡಿ ಶೌರ್ಯಾತ್ಮನೋ (ಎಕ. VII, ೫೪ಮೊ. ೫೭–೬೮; 1115) ; ಹಾವಭಾವವಿಳಾಸವಿಭ್ರಮವರ್ದ್ಧನಾತಿಶಯಂಗಳಿಂದಾವಗಂ ಧರಣೀತಳಾಧಿಪಚಿತ್ತವೃತ್ತಿಯುಮುಂ ಲಸದ್ಭಾವದಿಂದದಱಿಂದನೆ ಪಾತ್ರವಿಶೇಷದಾನದ ವೃತ್ತಿಯಂ ಪೀವರಸ್ತನೆ ಸೂಜಿಗೊಂಡು ನಿಮಿರ್ಚಿದಳ್ ನಿಜ ಕೀರ್ತಿಯಂ (ಬಾಧಪು. ೪–೫೦). ೨. ಹೊರಚಾಚು ; ನೀಡು : ಇದಿರ್ಗೊಂಬಿನೊಳ್ ತೊಡರ್ದ ಚಂಚುವನಂಟ ನಿಮಿರ್ಚ ನೀವಿ . . . ವಿಹಂಗಮಮಂಗಳೆಬ್ಬಜಿ ಕುಟುಕಂ ಕೊಡಲ್ಕಿರದೆ ಪಾಱುದುವು (ಕುಸುಮಾ. ೧೦–೮೫) ; ಸನತ್ಕುಮಾರಂ ಶೂನ್ಯಹೃದಯಾಂಧಂ ಕಣ್ಮುಚ್ಚಿ ಗೋಣಂ ನಿಮಿರ್ಚಿ ಬಲ್ಕರಂ ಪೊಡೆದಂತೆ ಬೆಬ್ಬನೆ ಬೆಜಱಿರೆ ಮೂಡಲಿಸುವಂತೆ ನಗುತ್ತುಂ (ಪಾನಂಜಿ. ೨೩ ಪ ಕಥಾಗರ್ಭಸಂಧಿ). ೩. ನೆಟ್ಟಗೆ ಮಾಡು ; ನೇರವಾಗಿಸು : ಉಳ್ಳೆಸಟಱೊಂಕನೊಯ್ಯನೊಯ್ಯನೆ ಕರದಿಂ ನಿಮಿರ್ಚಿ . . . ಪದ್ಮಿನಿಯೊಳಿನಂ ಪ್ರವಾಸಪರಿಖೇದಮನಾಜ್ಞಸಿದಂ ಪ್ರಭಾತದೊಳ್ (ಅನಂಪು. ೪–೬೭). ೪. ಅತಿಶಯಗೊಳಿಸು ; ಅಧಿಕಗೊಳಿಸು ; ವಿಜೃಂಭಿಸು : ಖಡ್ಗಧರರ ಭುಜಬಲಮದೇಂ ನಿಮಿರ್ಚಿದುದೊ ರಣದೊಳದ್ಭುತರಸಮಂ (ಗದಾಯು. ೪–೩೦) ; ಜಯಕೇತಿಯಂ ಮಹಾಹವದೊಳ್ ಮಾರಸಿಂಹನೃಪನಕ್ಕ ನಿಮಿರ್ಚಿದನಾತ್ಮಶೌರ್ಯಮಂ (ಎಕ. VII, ೫೪ಮೊ. ೪–೪೬ ; 1122) ; ಭೂವನಿತೆ ನಿಮಿರ್ಚುಗೆನ್ನ ಮತಿಯಂ ಜತುರಪ್ರಿಯಮಾಗೆ ನಲ್ಮೆಯಿಂ (ಕಮಪು. ೧–೩). ೫. ಏರ್ಪಡಿಸು ; ನಡೆಸು ; ಜರುಗಿಸು : ದವಿತಾರಿಮಹಾರಾಜಾಧಿರಾಜವಂಶಕ್ಕಮನಂತವೀರ್ಯ ಸಂಬಂಧಮುಂಟಿದನಱಿದು ತದೀಯ ಕುಲವೃದ್ಧರ್ ನಿರ್ಮಿರ್ಚಲುಂ ನಿರ್ಮಹಿಸಲುಂ ಪೇಟ್ಟುದು (ಶಾಂತಿಪು. ೨–೭೭ ಪ); ಸುರಗುರುವಂ ಕಳಿಪುವುದಾದರದಿಂ ಸಂಧಾನಮಂ ನಿಮಿರ್ಚುವುದು (ಗಿರಿಕ ೬–೧೪). ೬. ನೆರವೇರಿಸು; ಈಡೇರಿಸು; ಸಫಲವಾಗಿಸು : ವಿಜಯಂಕಂ ತಾನ್ನಿಮಿರ್ಚುಗೆ ಕಬ್ಬಮಂ ನಯದಿಂ ಗುಣಾಸ್ಪದಭೂಪನಾ (ಪಂಪಭಾ. ೧–೬) ; ಅನಿತಜ್ಜೊಳವರೆ ಘನೋರಥಮಂ ನಿಮಿರ್ಚಲೆಂದು ಸ್ಮೃಪು ಸಾಕಾರತೆವೆತ್ತು ಬರ್ಪಂತೆ (ರಾಜೇ. ೬–೬೪ ಪ). ೭. ತೋರಿಸು ; ಪ್ರಕಟಗೊಳಿಸು : ಉದಾರರಾಗೋದಯಮಂ ನಿಮಿರ್ಚಿದುದು ಕಣ್ಗೆ ವಿಯತ್ಪಳಚಾರಹೋದಯಂ (ಅದಿಪು. ೫–೪೬) ; ಸಾರ್ದ ಲೋಹಾಸನದೊಳಮರ್ಚಿದ ಬೊಂದಂಗೆ ಪಟುಯುವಿತ್ತರಿಗೆ ಕರಂ ಪೆರ್ಚುವ ಮಹಿಮೆಯನೆಯ್ದೆ ನಿಮಿರ್ಚಿ ಮಹಾಮಕುಟಬದ್ಧರೋಳಿಯೊಳಿರ್ದರ್ (ಪಂಪಭಾ. ೧೪–೨೪). ೮. ಸುರುಳಿಯನ್ನು ಬಿಚ್ಚು;—ಅಗಲವಾಗಿ ಮಾಡು : ಪಿಶಾಚವೇಷಮಂ ಕೈಕೊಂಡ ರಮನೆಯಂಗಣದೊಳಿರ್ದ ಪಟಮಂ ನಿಮಿರ್ಚಿಯೆತ್ತಿ ತೋಜು ಪಾಡುತ್ತಂ (ಪಡ್ಡಾರ. ೩೯–೩೪) ; ಮನಃಪ್ರಿಯತಮನ ಬರೆದ ಸಾಧುಜ್ಞಾನಪಟಿಮ ನೀವುದುಮಾಕೆಯುಮದಂ ನಿಮಿರ್ಚಿ ನೋಡಿ (ಅದಿಪು. ೪–೨೨ ಪ); ಅನಂತರಮಾ ಲೇಖನಮಂ ಕಳಿದುಕೊಂಡು ನಿಮಿರ್ಚಿ ನೋಟ್ಪನ್ನೆಗಂ (ಕಾದಂಪೂ. ೪೦೦) ; ರತ್ನಕಂಬಲಮಂ ನಿಮಿರ್ಚಿ ತೋರ್ಪುದುಂ (ಸುಕುಮಾ. ೧೦–೧೧೭ ಪ). ೯. ನೆಟ್ಟಗಾಗು ; ನೇರವಾಗು : ದಿನೆಯ ನುಣ್ಣನೆ ನುಂಗಿ ಸೂರ್ಯನ ಹೊಸೆದು ಮುಕ್ಕಿತೊ ರಾಹು . . . ಸಿರ ಹಸರಿನಿ ನಿಮಿರ್ಚಿತೊ (ಸಾಳ್ವಭಾ. ೫–೨). ೧೦. ಉಂಟುಮಾಡು ; ಉಂಟಾಗಿಸು : ಪಿದ್ಧರನಂತಸುಖಪ್ರಯುಕ್ತರಭ್ಯುದಯಸುಖಂಗಳಂ ನಮಗೆ ಮಾಡಿ ನಿಮಿರ್ಚುಗೆ ಕಾವ್ಯಸಿದ್ಧಿಯುಂ (ಅಜಿಪು. ೧–೨) ; ಮೇಳದವಳಂ ಸತಿ ನಿರ್ಭರರಗರ್ಭಭಾರದಿಂ ನೆರ್ಮಿ ನಿಮಿರ್ಚುವಳ್ ಪುರುಳಿಯೊಳ್ ಪರಿಹಾಸವಜೋವಿಲಾಸಮಂ (ಪಂರಾಮಾ. ೩–೧೧೪) ; ವಿಗೆ ತೂರ್ಯಧ್ವನಿಯಂ ನಿಮಿರ್ಚಿ ಬಹುಳೋರ್ವೀಗರ್ಜಿತಂ . . . ಬಂದನಾಜಿಗೆ ಖಗೇಶಂ (ಪರ್ಧಪು. ೮–೪೧) ; ಭವತ್ತನೂಭವ ತ್ರಿಸಿಪ್ಪಳುಮಾರಂಗಂ ಮದೀಯ ನಂದನೆ ಸ್ವಯಂಪ್ರಭೆಳುಮಾರಿಗಂ ಪರಿಣಯಮನೊಡರ್ಚ್ಚಿ ತಾಮೆಮಗೆ ಮಾಟ್ಪ ಸುಪ್ರೇಮಮಂ ನಿಮಿರ್ಚುವುದು (ಶಾಂತೀಶ್ವ. ೨–೧೧೧ ಪ) ; ನಡಬಾಗ್ನಿಗಳ್ಕೆ ತನ್ನಲ್ಲಿಯ ರತ್ನಮಂ ಕಳಪಿತೋ ಕಡಲೀ ಪುರಿಗೆಂಬ ಮಾತನಲ್ಲಲ್ಲಿ ನಿಮಿರ್ಚುಗುಂ ವಿಪಣಿವೀಥಿಯೊಳೊಪ್ಪುವ ರತ್ನರಾಶಿಗಳ್ (ಪುಷ್ಪಪು. ೨–೪೮) ; ವಾರ್ಧಿತರತ್ನರಂಗನಿನದತ್ಕಾಂಚೀಕಲಾದಾಂಚಿತಾಸ್ಪದಯಂ ಸಾಧಿಸಿ ಕಬ್ಬಿಗಂಗೆ ನೆಲನಂ ನಿವಾರ್ಯಜದಿಂದಂ ನಿಮಿರ್ಚಿದ ಗೆಲ್ಲಂ ಭುವನೈಕರಾಮಮಹಿಪಂಗಕ್ಕುಂ ಪೆಜರ್ಗಕ್ಕುಮೇ (ಪಮಪ. ೧೫೬ ಪ್ರಯೋ) ; ತುಂಜರೀಟಾಸ್ತ್ರಿಯೊರ್ವಳು . . . ಮುತ್ತಿನ ಸರಗಳಂ ಹಾಱ್ಕಯಿಂದಮರ್ಚಿದಳು ಸೌಂದರನ ಬಗೆಗೊಲವಂ ನಿಮಿರ್ಚಲೆಂದು (ಸೌಂದಪು. ೧೩–೩೯). ೧೧. ನಿರ್ಮಿಸು; ರಚಿಸು; ಮಾಡು : ಅಂತು ತಳತಳ ತೊಳಗುವ ದುಕೂಲದ ಸಳಪಟ್ಟೆಯೊಳ್ ನಿಮಿರ್ಚಿದಂತಾಸುಂ (ಪಂಪಭಾ. ೪–೪೧ ಪ) ; ಅಧಿಷೇಕಮಂ ಜಿನೇಂದ್ರಂಗೆ ಸುರೇಂದ್ರನಂದು ನೆರೆವೆರ್ಚಿದ ಸಮ್ಮದದಿಂ ನಿಮಿರ್ಚಿದಂ (ಪರ್ಧಪು. ೧೪–೩೯) ; ಸಸದಲೆಯಂ ನಿಮಿರ್ಚಿದುರುಳ್ಪ ನೆಯಂ ಪರಿಲಂಘಿಸಲ್ಬಮಂತಹುರ ಹರಾದಿ ದೇವತತಿಗಾಗದು (ಉದ್ಭಟ. ೧೧–೪೨); ಅತ್ತಣಿನೆಂದು ನಿಮಿರ್ಚುವರತ್ತೆಂದಾಗಿರ್ದ ಪಂಚಮಿಯನಲ್ಲಿ ಕೆಲರ್ (ಕಮಪ. ೧೫೬) ; ಪನ್ನೆರಡು ಪೊನ್ನಿಂ ಸಮಸ್ತ ಪೂಜಾಪ್ರವ್ಯಮುಂ ನಿಷ್ಟಮೊದವಿಸೆ ಶಿವಾರ್ಚನ ಮನತಿಸಾಂಗದಿಂ ನಿಮಿರ್ಚ (ಪಪ್ಪಕಾ. ೨–೧೫). ೧೨. ಮಾಡಿಸು : ಗಾಂಗತೋಯದೆ ಸಖಿಯರ್ ಸ್ವಪಾಂಗನೆಗೆ ಮಂಗಳಮಜ್ಜನಮಂ ನಿಮಿರ್ಚಿದರ್ (ಪುಷ್ಪಪು. ೩–೧೧೭). ೧೩. ಬಿತ್ತರಿಸು ; ನಿರೂಪಿಸು : ಕೆಱುದೀ ಕಥಾಪರಿಸ್ಪಂದಮಿದಂ ನಿಮಿರ್ಚ ಕವಿತಾರಸಮಂ ನೆಜಿ ಪೇಟ್ದ ರಿಲ್ಲ (ಸುಲ್ಲಪು. ೧–೪೫) ; ಮಲಯಾನಿಲದಂತೆ ಮರಾಳನಂತೆ ಹಂಪೆಯ ಹರಿದೇವನೊಪ್ಪಿರೆ ನಿಮಿರ್ಚಿದ ಕಾವ್ಯವಿಳಾಜನೋತ್ಸವಂ (ಗಿರಿಕ. ೧–೧೪),

ಕಬ್ಬಿಗರ್ ಪದದೊಲವಿಂದ ಕೀರ್ತಿಸೆ ನಿಮಿರ್ಚುವೆನೀ ಸುಭಗಪ್ರಬಂಧಮಂ (ಶಬತಂ. ೬೧-೨); ಕ್ಷಿತಿಗಿದಲೇ ಮಹೋಪಕೃತಿಯೆಂದೆನೆ ಕನ್ನಡದಿಂ ನಿಮಿರ್ಚೆ ಸತ್ಯತಿಯಂ . . . ಹರದೇವ ರಾಘವ ಪಡಕ್ಷರಿದೇವರನೊಲ್ದು ವಂದಿಪೆಂ (ದಮಸ್ವ. ೫ ಪೀಠಿಕಾಪ್ರಕರಣಂ). **ನಿಗಚು : ೧೪.** ಕೊಲ್ಲು; ಸಾಯಿಸು : ಸರಕಾರೀ ಅಮಲದಾರರಿಗೇ ವಿಷ ಹಾಕೋ ಅವ ನೀನು ಯಾಕೋ ಅಮಲದಾರನ ನಿಗಚಿ ದೊಡ್ಡವ ಅನಿಸಿಗೋಬೇಕಂತ ಮಾಡಿದ್ದಿಯೇನು ? (ಗಂಪಾಯಿ. ೧೮೯). **ನಿಗಿಚು : ೧೫.** ಅಗಲಿಸು; ಹಿಗ್ಗಿಸು : ಗುರಿಯನಿಸುವ ಕಣಕವ ನಿಗಿಚಿ (ಚಿದಾಪ. ೧೧೬-೧೧). **ನಿಗುಚು : ೨.** ಪವನಸುತ ಡೆಂಡಣಿಸಿ ಬಿದ್ದನು . . . ಜವದಿ ಹಸರಿಸಿಕೊಂಡನೊಯ್ಯನೆ ಅವಯವಂಗಳ ನಿಗುಚುತಿದ್ದನು (ಕೌಶರಾ. ೨೨-೧೯); ಮಂತ್ರದಿಂ ಕುಂಡದೊಳ್ ತುತ್ತುಗಳ ಘೃತಧಾರೆಯೊಳ್ ಬಿಡಲು ಶಿಖಿಗೆದರಿ ನಿಗುಚಿದಂ ನಾಲಗೆಯನು (ತುರುಗ. ೮೩-೨೯). **೩.** ಮಡಿವಳನ ಮಲಗಿಸಿ ನಿಗುಚಿದನು ಕುಬುಜೆಯ ಕಳೇಬರವ (ಸಿಭಾಗ. ೩-೩-೨೭); ಕೆಳದೀಯ ಕೂದಲು ಚೊಗಚೀಯ ಕಾಯ್ಹಂಗ ನಿಗುಚಿ ಬೈತಲೆ ತೆಗೆದಾಳ (ಹಳ್ಳಿಯ. ೫೬). **೯.** ನಿಂದೆಯ ನೆಗ್ಗಿಲ ಮುಳ್ಳು ಸ್ವಪ್ರಶಂಸೆಯ ಗೊಳಗುಳಿಕೆ . . . ಕೊಬ್ಬಿನ ಬಡ ಚೊಗಚಿ ನಿಂತಿವೆ ನಿಗುಚಿ ! (ಮಾನಸ. ೭೯-೧೩). **೧೫.** ಸೂಲಿಸುವ ಬಗ್ಗಿಸುವ ನೋಯಿಸುವ ನುಲಿವ ಮರ್ಮಸ್ಥಾನಮಂ ನಿಗುಚುವ ಬಾಲೆಯರ ಹಂಗಿಲ್ಲ (ಸಿದ್ಧರಾ. ೧-೫೫). **೧೬.** ಹೊಡೆ; ಬಡಿ; ಚಚ್ಚು; ಹಣಿ : ಚಿನ್ನವ ಕಾಸಿದಡೆ ಕರಗಿಸಿದಡೆ ಕಡಿದಡೆ ನಿಗುಚಿದಡೆ ಬಣ್ಣವಧಿಕವಪ್ಪುದು (ಚನ್ನವ.ಕ.೧೨೮-೨೮೯); ಬಳವತ್ಕಾಲನ ಕೋಪದ ಬಂಟಂ ಪ್ರಳಯಾನಳನಿಂ ಕಾಯಿಸಿ ರಾಹುವ ಕೇತುವ ಬಲಿದಿಕ್ಕುಳಿನಂ ತೆಗೆದಂಧಾಸುರನೆರ್ದಗಲ್ಲೊಳ್ ವಜ್ರದ ಸಮ್ಮಟಿಗೆಯ ನಿಗುಚಿ (ವೀರೇಶ. ೨-೯); ಕರ್ಣನ ನೆನಹಿನಲಿ ಪುಟವಿಟ್ಟು ಶಕುನಿಯ ನೀತಿಯಲಿ ನಿಗುಚಿ ಅನುಜಮತದಲಿ ವಿಸ್ತರಿಸಿ ಮೈದುನನ ನುಡಿಯಲಿ ಬಣ್ಣವಿಟ್ಟನು (ಕುಮಾಶು. ೨-೨೨); ಕುಡಿದ ರಕುತದ ಜಿಗುಳಿ ನೀ ನಿನ್ನೊಡಲ ನಿಗುಚುವೆ ನಿಲ್ಲೆನುತ ಬಲನೆಡನ ಬಿರುದರ ಮೇಳದಲಿ ತೂಗಿದನು ವೃಷಸೇನ (ಕುಮಾಕ. ೨೦-೪). **೧೭.** ಪ್ರಯೋಜನಕ್ಕೆ ಬರು; ಉಪಯೋಗಕ್ಕೆ ಬರು : ಓಡಲಜಿಯದೆ ಭೀಮನಂಬಿನ ರೂಢಿ ನಿಗುಚದೆ ಕಾದುವರೆ ಜಯ ಜೋಡಿಸದೆ ಜೋವಳಿಸಿ ಜವಗುಂದಿದನು ಕಲಿಭೀಮ (ಕುಮಾಕ. ೨೦-೧೧). **೧೮.** (ಆಲಂ) ಹಿರಿಮೆಯನ್ನುಂಟುಮಾಡು; ಅಗ್ಗಳಿಕೆಯನ್ನುಂಟುಮಾಡು : ದೇವರಾವೆಂದೆಮ್ಮನುದ್ದಕೆ ನೀವು ನಿಗುಚದಿರಾವು [ಪಾಪಾಂ. ನಿಗುರದಿರಾವು, ನೆಗಹಿದರಾವು] ಮರ್ತ್ಯರು (ತೊರರಾ. ೬-೪-೫೮). **ನಿಗುರ್ಚು : ೨.** ನಾಗೇಂದ್ರಂ ನಾಲಗೆಗಳಂ ನಿಗುರ್ಚದವೊಲ್ ಸರ್ತ್ಸಾಂದ್ರರುಚಿಖಡ್ಗಮರಸನ ರುಂದ್ರೋಜ್ಜ್ವಲಕರದೊಳಿರ್ದುದು (ಹಮ್ಮೀರ. ೩-೩೭). **ನಿಮುರಿಚು : ೧೬.** ಶಿವ ಕೃಪೆಯೆಂಬ ಚಮ್ಮಟಿಗೆಯಿಂ ಪೊಡೆದು ನಿಮುರಿಚಿ ಪರಶುವೆಂಬಾಯುಧಮಂ ಮಾಡಿ (ಸನ್ನಚಾ. ೧-೪೮ ಪ). **ನಿವುಚು : ೩.** ಅತಿವೃದ್ಧ ತಾಪಸಂ ನಸಿದೊಯ್ಯನೊಯ್ಯನೈತಂದು ನೆಳಲಂ ಸಾರ್ದು ಕುಸಿದ ಬೆನ್ನಂ ನಿವುಚಿಕೊಳುತ ಶಿವಶಿವ ಮಹಾದೇವಯೆನುತಂ ಕುಳ್ಳಿರೆ (ಸೋಮೂಚ. ೩-೮೧). **೧೫.** ಅಜುತರಾ ಘಟ್ಟಗಳ ಪರಿಯೆನು ಇರಿಸಿ ಹೂವನು ತೋಜುಚು ನಿವುಚಲು ಯರಕ ಮ್ಯಾಣದ ಕೆಲಸದಂತೆಯು ಹಜುದು ನಿವುಚಿದವು (ರೇವಕಾ. ೫-೫೮). [ನಿಮಿರ್$_1$ + -ಚು$_1$]

ನಿಮಿರ್ನವಿರ್ (ನಾ). ಮೇಲೆದ್ದ ಮೈಗೂದಲು; ರೋಮಾಂಚ; ಪುಳಕ : ಬಳ್ಳಿವೊದರ್ಮಡಲ್ತು ಸೊಂಪೇಜುದುದು; ಮೇಣ್ ಪೊಸಸುಸಿಲೊಳ್ ಸಸಿದೆದ್ದ ನಿಮಿರ್ನವಿರೆನೆ ಪಸಲೆಯೆಸೆದುದು (ರಾಮಾಶ್ವ. ೩-೧೭).

[ನಿಮಿರ್$_1$ + ನವಿರ್]

ನಿಮಿರ್ವೆಱು (ಕ್ರಿ). ನೀಳವಾಗು; ಉದ್ದವಾಗು : ನಯಂಬಡೆದ ರೋಮಚಯಂ ನಿಮಿರ್ವೆತ್ತ ವಾಳಮುತ್ಕುತ್ತಮಲಕ್ಷಣಂ ಮೆಱೆದ ವಾರುವವಂ ಪದೆದಿತ್ತನಾ ನೃಪಂ (ದಶಕು.೫-೩೮). [ನಿಮಿರ್$_2$ + ಱು$_1$]

ನಿಮಿಷ(ನಾ). ೧. ರೆಪ್ಪೆ ಹೊಯ್ಯುವುದು; ಕಣ್ಣುಮಿಟುಕಿಸುವುದು: "ಪಳಚುವಕ್ಷಿ ನಿಮಿಷಂ ನಿಮೇಷಮೆನಿಕ್ಕು" (ಮಂಗರಾ. ೯೪-೩); ನಿಮಿಷ ತಡೆದರೆ ಅನಿಮಿಷನಾದಾನೆ ? (ಗಾದೆ). **೨.** ಒಂದು ಸಲ ರೆಪ್ಪೆ ಹೊಡೆಯುವಷ್ಟು ಕಾಲ; ಅತ್ಯಲ್ಪಕಾಲ : "ನಿಮಿಸ ನಿಮಿಷಂ" (ಶಬ್ದಮಂ. ೧೯); "ನಿಮಿಸಂ ನಿಮಿಷವು" (ಕಶರ. ೫೪); ಒಂದು ನಿಮಿಷವಾದರೆಯೂ ನಿಮ್ಮ ಶರಣರ ಸಂಗದಲ್ಲಿರಿಸಯ್ಯಾ (ಬಸವ. ೬೧); ನಿಮಿಷಮಂಗಲ್ದು ತಾನಿರದವಳ್ ತಳರ್ದಿಂದಿನಿತೊಂದು ಪೊಟ್ಟುದೇಕೆಮ ತಡೆದಿರ್ದಳ್ (ಕುಸುಮಾ.೧೩-೩೭); ಸಂಗತಭುವನತ್ರಯರಾಜ್ಯಾಂಗನೆಯಂ ನಿಮಿಷದಿಂ ವಶಂ ಮಾಡುವ ಮಂತ್ರಂಗಳಂ . . . ಸಹಜಶುಭಮತಿ ಪೇಟ್ಟುಂ (ಪಾರ್ಶ್ವಪು. ೧೫-೨೮); ನಿಮಿಷದೊಳ್ ತುಂಬಿ ನೀಡಿದನಮರೇಶಂ ಸಲಿಲದೇವಿಯರ್ ಕಾಣಿಕೆಗೊಟ್ಟ ಮೃತದ ಕುಂಭಂಗಳ ಸುರಸಮಿತಿಗೆ ಕೊಡುತಿರ್ಪ ಮಾಱ್ಕೆಯಿದೆಂಬಿನೆಗಂ (ಬಾಧಪು. ೮-೮೭); ಕರ್ಣನ ಹೊಳ್ಪುಗಳೆದನು ಪಾರ್ಥ ನಿಮಿಷದಲಿ (ಕುಮಾಕ. ೨೩-೨೫); ಕೇಳಿಸಿತು ಬಳಿಕಖಿಳಪೃಥ್ವೀಪಾಲಪಂಕ್ತಿಯನಶ್ವಮೇಧವಿಶಾಲಸುತಕಾಮೇಷ್ಟಿಯೆಧ್ವರಪಾರ್ತ್ಥ ನಿಮಿಷದಲಿ (ತೊರರಾ. ೧-೬-೧೬); ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ (ಗಾದೆ). **೩.** ಒಂದು ಗಂಟೆಯ ಅರುವತ್ತನೆಯ ಒಂದು ಭಾಗ; ಅರವತ್ತು ಸೆಕೆಂಡುಗಳಷ್ಟು ಕಾಲ; ಮಿನಿಟ್ಟು : ಅದರೊಡನೆ ತೆಂಗಿನಕಾಯಿಹಾಲು, ಉಪ್ಪು ಮತ್ತು ಅಲೂಗಡ್ಡೆ ಹಾಕಿ ಕೆಲವು ನಿಮಿಷಗಳ ವರೆಗೆ ಆರಲು ಬಿಡಬೇಕು (ಅಡುಸೌ. ೯೩); ಒಂದೆರಡು ನಿಮಿಷ ಬಡಬಡಿಸುತ್ತಿದ್ದರು (ಮಹಾತ್ಮಾ. ೧೪೩); ಶಾಲೆ ಬಿಡುವುದಕ್ಕೆ ಹದಿನೈದು ನಿಮಿಷಗಳು ಮಾತ್ರ ಇವೆ (ನಾಡಿಗೀ. ೧೦೯). **೪.** [ಜ್ಯೋತಿ]ಒಂದು ಖಗೋಳೀಯ ರೇಖಾಂಶದ ಅರುವತ್ತನೆಯ ಒಂದು ಭಾಗ : ಖಗೋಳೀಯ ರೇಖಾಂಶಗಳನ್ನು ಡಿಗ್ರಿಗಳಿಂದ ಅಳೆಯುವುದಕ್ಕಿಂತ ಘಂಟೆಗಳಿಂದ ಅಳೆಯುವುದು ಹೆಚ್ಚು ರೂಢಿಯಲ್ಲಿದೆ . . . ಒಂದು ಘಂಟೆ ರೇಖಾಂಶಾಂತರವನ್ನು ೬೦ ಸಮಭಾಗಗಳನ್ನಾಗಿ ಮಾಡಿ ಅವನ್ನು ನಿಮಿಷಗಳೆಂದು ಕರೆಯುತ್ತಾರೆ (ನಕ್ಷತ್ರ. ೩೭). [ಸಂ.]

ನಿಮಿಷಮಾತ್ರ (ನಾ). ಕೇವಲ ಒಂದು ನಿಮಿಷ; ಅತ್ಯಲ್ಪಕಾಲ : ಹಿಳುಕ ಹೊದಿಸಿದಖಿಲದೆಸೆಗಳ ನಿಲುಕಲರಿದೆನೆ ನಿಮಿಷಮಾತ್ರಕೆ ಕಳಚಿ ಕಳೆದನು ಭೀಮ ತೊಟ್ಟನು ಮತ್ತೆ ಮಾರ್ಗಣವ (ಕುಮಾದ್ರೋ.೧೩-೩೫); ನಿಮಿಷಮಾತ್ರದಲ್ಲೇ ಈ ಘಟನೆ ನಡೆದು ಹೋಯಿತು (ರೂಢಿ). [ಸಂ.]

ನಿಮಿಷಾದೇವಿ (ನಾ). ಒಬ್ಬ ದೇವತೆಯ ಹೆಸರು : ಜೀನಗಾರರು . . . ಇವರ ಕುಲದೇವತೆಯು ಮೈಸೂರುಶೀಮೆಯಲ್ಲಿ ಇರುವ ನಿಮಿಷಾದೇವಿಯು (ಕಭಾಗ. ೧೫೪). [?]

ನಿಮಿಷಾರ್ಧ (ನಾ). ನಿಮಿಷದ ಅರ್ಧದಷ್ಟು ಕಾಲ : ನಿಮಿಷಾರ್ಧಕ್ಕೊರ್ಮೊದಲೊಳೆ ಸಮನಿಸೆ ಪರ್ಯಾಸ್ತಿ (ಮಲ್ಲಿಪು. ೧೩-೧೩೪); ನಿಮಿಷಾರ್ಧಂ ನುತಿಗೆಯ್ದೊಡಪ್ಪುದೆ ವಲಂ ಚಕ್ರೇಶ್ವರತ್ವಂ (ಶಾಂತೀಶ್ವ. ೧೭-೯೭); ನಿನ್ನಂ ಕಂಡು ನಿಮಿಷಾರ್ಧದಿ ಪೋಪುದು (ಮಲ್ಲಕಾ. ೧೫-೧೧೧); ರಾಘವನಾಡಿಸುವ ಮಜುಕೋಡಗಂಗಳ ನಾವು ನಿಮಿಷಾರ್ಧನೋಡುತಿರೆ (ಕೌಶರಾ. ೧೫-೨೭). [ನಿಮಿಷ + ಅರ್ಧ]

ನಿಮಿಸ, ನಿಮುಷ, ನಿವಿಸ (ನಾ). = ನಿಮಿಷ ೨ : "ಇತ್ವಕ್ಕೆ— ನಿಮಿಸ—ನಿಮಿಸ" (ಶಮದ. ೨೭೧ ಪ್ರಯೋ); "ನಿಮಿಸ (ನಿವಿಸ)— ನಿಮುಷ" (ಶಬ್ದಕೋ. ೨೨). **ನಿಮುಷ :** ಎಂದು ನಳನೃಪ ನುಡಿಯೆ ಭೂವರ ಮುಂದಜಯದೆಂತೆಂದು ಬೆಸಗೊಳೆ ಒಂದು ನಿಮುಷಕೆ ಲೇಖನಾ

ರ್ಥದಿ ಒದಗಬೇಕೆಂದ (ಅಂಬಿಕಾ. ೪೮–೨೮) ; ವಿನೋದದೊಳಗವನೀಶ ಕಳೆದನು ವರುಷ ನಿಮುಷಾಗಿ (ಚಿಜ್ಜಪು. ೬೪–೫) ; ಅವರ ಪದಕ ಕಿರೀಟ ಕಂಕಣವವರ ಕರ್ನಾಭರಣ ಕೇಯೂರವನು ಕಡಿಕಡಿದೊಟ್ಟದನು ಕಲಿ ಪಾರ್ಥ ನಿಮುಷದಲಿ (ಕೃಕರ್ಣಾ. ೩–೨೩). **ನಿವಿಸ :** "ನಿವಿಸ ನಿಮಿಷಂ" (ಶಬ್ದಮಂ. ೧೯), ಆರೆನಿವಿಸದೊಳಗೆ ಧರೆಗೆ ನಾಂ ಕೆಡಹದಿರೆ . . . ಅಘಂ ಘಟಿಸಲೆನಗೆಂದು ಪೂಣ್ಕೆಗೈದು (ಶೀಷರಾ. ೩೧–೧೮) ; ಅವನಿಯಲಿ ನಿನ್ನುಳಿಯುತೊರ್ವಳೆ ನಿವಿಸವಾದರು ಜೀವಿಸೆನು (ಸೀತಾಚ. ೩–೨೬) ; ನಿನ್ನ ಈ ಕುನ್ನಿಗಳು ಇನ್ನರೆನಿವಿಸದೊಳಗಾಗಿ ತೊಲಗಿಹೋಗಿರದಿದ್ದರೆ, ನೀನು ಯಮಪಾಶದಲ್ಲಿ ಹಲ್ಗಿರಿಯುತ್ತಿರುವುದು ಖಂಡಿತ (ಮಂತ್ರಶ. ೮೩–೪). [<ಸಂ. ನಿಮಿಷ]

△ **ನಿಮಿಟ್** 'ನಿಮಿರ್$_1$' ನೋ.

ನಿಮೀಲನ, ನಿಮೀಳನ (ನಾ). ೧. (ಕಣ್ಣು)ರೆಪ್ಪೆಯನ್ನು ಮುಚ್ಚುವುದು : ಅಕ್ಷಿನಿಮೀಲನ ಮಾಡದೆ ನಕ್ಷತ್ರದ ಗಣ ಗಗನದಿ ಹಾರದಿದೆ (ನಾದಲೀ. ೫೦–೧೩). ೨. ದೃಷ್ಟಿಯನ್ನು ತಗ್ಗಿಸುವುದು; ಕೆಳಗೆ ನೋಡುವುದು ; ಅಧೋಮುಖವಾದ ದೃಷ್ಟಿ : "ಮೇಲ ದೀಕ್ಷಿಸಲದುನ್ಮೀಲನಾಖ್ಯಂ ಅಕ್ಷಿಯಿಂ ಕೆಟಗೆ ನೋಡಲ್ ನಿಮೀಲನ ಮೆನಿಕ್ಕು" (ಮಂಗರಾ. ೯೪–೩). 'ಉನ್ಮೀಲನ' ಪರಾ. ೩. (ಅರಳಿರುವ) ಹೂವು ಮುಚ್ಚಿಕೊಳ್ಳುವುದು,—ಸಂಕೋಚನಗೊಳ್ಳುವುದು : "ಮುಗುಳ್—ನಿಮೀಲನೇ (ಕಣ್ಣು ಮುಚ್ಚು), ಕುಟ್ಮಲೇ ಚ (ಮೊಗ್ಗು)" (ಶಮಧಾ) ; ಇಲ್ಲಿ ಲೀಲಾಕಮಲನಿಮೀಲನವು ಯಾವ ಅಭಿಪ್ರಾಯಕ್ಕೆ ಸೂಚಕವೋ ಅದನ್ನು ನೇರವಾಗಿ ಶಬ್ದಗಳಿಂದಲೇ ಹೇಳಿಬಿಟ್ಟದೆ (ಧ್ವನ್ಯಾಲೋ. ೯೮). ೪. ಸಾವು ; ಮರಣ : "ಮೃತ್ಯು ಮರಣಂ ದೀರ್ಘನಿದ್ರೆ ನಿಧನಂ ನಾಶಮತ್ಯಯಂ ಕಾಲಂ ನಿಮೀಲನಂ ನಿಷ್ಠೆ ವಿನಿವೃತ್ತಿಯೆನೆ ಸಾವಕ್ಕುಂ" (ಮಂಗರಾ. ೧೧೬–೩). ೫. [ಕಾವ್ಯಮೀ] ಅರ್ಥಾಲಂಕಾರಗಳಲ್ಲಿ ಒಂದು ; ಒಂದು ಪದಾರ್ಥವು ತನಗೆ ಸದೃಶವಾದ ಪದಾರ್ಥದಲ್ಲಿ ಐಕ್ಯವನ್ನು ಪಡೆದು ■ ಸದೃಶಪದಾರ್ಥಕ್ಕಿಂತ ಬೇರೆಯಾಗಿ ಕಾಣದಿರುವುದು ; ಸಾದೃಶ್ಯವುಳ್ಳ ವಸ್ತು ತನ್ನ ಸಾಮ್ಯವಸ್ತುವಿನಲ್ಲಿ ಬೆರೆತು ಭೇದ ತೋರದಿರುವುದು : ಜಾತಿ ಸಹೋಕ್ತಿ . . . ಸಾರ ನಿಮೀಲನಂಗಳೆಂದೀ ತೆಱದಿಂದಮೊಂದಿ ನೆಗಟ್ಗುಂ ನೆಱೆ ವಾಸ್ತವಭೇದವೃತ್ತಿಗಳ್ (ಕಾವ್ಯಾವ. ೬೦೭). **ನಿಮೀಳನ :** ೪. "ನಿಧನಂ, ನಾಶಃ . . . ನಿಮೀಳನಂ, ದೀರ್ಘನಿದ್ರೆ—ಈ ೧೨ ಸಾವು" (ಹಲಾಯು. ೧೦೩–೬). ೫. ಪ್ರಕೃತಿಯಿನಲ್ಲದೊಡಾಗಂತುಕಹೇತುವಿನಿಂ ಪ್ರಕೋಪರಾಗಾದಿ ಮನೋವಿಕೃತಿಯನುಪಲಕ್ಷಿಸಿ ತಿಳಿಯೆ ಕಾಣದಿರಲದು ನಿಮೀಳನಂ ಪೆಸರಿಂದಂ (ಕಾವ್ಯಾವ. ೬೯೧). [ಸಂ.]

ನಿಮೀಲಿಕೆ (ನಾ). ಕಣ್ಣು ಮುಚ್ಚುವಿಕೆ : 'ಗಜನಿಮೀಲಿಕೆ' ಪರಾ. [ಸಂ. ನಿಮೀಲಿಕಾ]

ನಿಮೀಲಿತ, ನಿಮೀಳಿತ (ಗು). ೧. ಮುಚ್ಚಿದ:'ನಿಮೀಲಿತನಯನ' ಪರಾ. (ನಾ). ೨. ಮುಚ್ಚುವಿಕೆ : ಕಡೆಜಾವದ ಇರುಳಿನ ತೊಡೆ ಮೇಲೆ ಮೂಡುವ ಉಷೆಯ ನಿಮೀಲಿತದೋಲೆ ಶಿಶು ಮಲಗಿರೆ, ಕಾವ್ ಕೂತಿದೆ ಮೇಲೆ ಮಾತೃಪ್ರೇಮದ ನಿಃಸ್ವಾರ್ಥ (ಕೋಗಿಲೆ. ೫೯–೮೬). **ನಿಮೀಳಿತ :** ೧. ಸುಖನಿಮೀಳಿತೋನ್ಮೀಳಿತನಯನಂಗಳು ಮುಕುಳಿತಮುಂ ಕುಸುಮಿತಮುಮಾದ . . . ವಧೂವರರಾಗವಿಷಯವಲ್ಲರಿ ಫಲಿತಮಾದುದೆನಿಸಿ (ಜಗವಿ. ೨–೫೨ ಪ). ೨. ಲೋಚನಂಗಳನತ್ಯುನ್ಮೀಳಿತಮುಮತಿನಿಮೀಳಿತಮುಮಾಗಲೀಯದೆ (ಚಾವುಂಪು. ೪೪೩). [ಸಂ.]

ನಿಮೀಲಿತನಯನ (ನಾ). ಮುಚ್ಚಿದ ಕಣ್ಣುಳ್ಳವನು : ಅಂತು ಸಹಸ್ರನಯನಂ ಸುಖರಸನಿಮೀಲಿತನಯನನಾಗೆ (ಆಜಿಪು. ೮–೧೬ ಪ). [ನಿಮೀಲಿತ + ನಯನ]

ನಿಮೀಲಿತಾಕ್ಷ (ನಾ). ೧. ಮುಚ್ಚಿದ ಕಣ್ಣುಳ್ಳುದು : ರೋಮಂಥ ಲೀಲಾತತ್ಪರತೆಯಿಂ ದರನಿಮೀಲಿತಾಕ್ಷಂಗಳಾದ ಕಾಡೆರ್ಮೆಯ ಮೊಗದಿನುಗುವ ನೊರೆಯನುರುಳಿಗೊಂಡು ತಂದಡವಿಯ ಗಿಡುಗಳೊಳ್ ಗುಡಿಗಟ್ಟಿದಂತೆ ತೊಡರ್ಚಿಯುಂ (ಚಂದ್ರಪು. ೮–೪ ಪ). ೨. = ನಿಮೀಲಿತನಯನ : ಆ ಲಲಿತತಲ್ಪದ ಯತೋದಾಬಾಲಕಂಗಭಿನಮಿಸಿ ನಿಮಿಷ ನಿಮೀಲಿತಾಕ್ಷನು ಕಂದೆಱೆದು ಮುನಿಜನಕೆ ಕೈಮುಗಿದು (ಕುಮ್ಯಾಸ. ೯–೧). [ಸಂ. (ನಿಮೀಲಿತ + ಅಕ್ಷಿ + –)]

ನಿಮೀಲಿಸು (ಕ್ರಿ). ಕಣ್ಣು ಮುಚ್ಚು : ಜ್ವಾಲಾಸಟಾಳಿಗಳ್ಕಿ ನಿಮೀಲಿಸಿದಿಂದ್ರನ ಸಹಸ್ರಲೋಚನಮೆನಲುನ್ಮೀಲಿಸೆ ಮಹಾಸ್ತ್ರದಿಂ ವನಮಾಲಾಧರನೆಚ್ಚು ಶಕ್ತಿಯಂ ಖಂಡಿಸಿದಂ (ಜಗವಿ. ೧೨–೪೪) [ನಿಮೀಲನ + –ಇಸು$_3$]

ನಿಮೀಳನ 'ನಿಮೀಲನ' ನೋ.

ನಿಮೀಳಿತ 'ನಿಮೀಲಿತ' ನೋ.

ನಿಮುರಿಚು 'ನಿಮಿರ್ಚು' ನೋ.

ನಿಮುರು 'ನಿಮಿರ್$_1$' ನೋ.

ನಿಮುಷ 'ನಿಮಿಸ' ನೋ.

ನಿಮೇಷ (ನಾ). ೧. ರೆಪ್ಪೆ ಹೊಡೆಯುವಿಕೆ : "ಪಳಚುವಕ್ಷಿ ನಿಮಿಷಂ ನಿಮೇಷವೆನಿಕ್ಕು". (ಮಂಗರಾ. ೯೪–೩). 'ವಿಗತನಿಮೇಷ' ಪರಾ. ೨. ಕಣ್ಣನ್ನು ಮುಚ್ಚುವಿಕೆ ; ನಿಮೀಲನ : ನಿಜನಿಮೇಷೋನ್ಮೇಷ ಮಾತ್ರಂ ಜಗತ್ತ್ರಯಸೃಷ್ಟಿಕ್ಷಮನಾದ ಕೃಷ್ಣನ ಮಹತ್ತ್ವಕ್ಕೇನಿದಾಶ್ಚರ್ಯಮೇ (ಜಗವಿ. ೩–೬೭) ; ಈ ಸೂತ್ರದಲ್ಲಿ ಆತ್ಮನ ಚಿಹ್ನೆಗಳನ್ನು ಸೂಚಿಸಲಾಗಿದೆ. (೧) ಪ್ರಾಣ, (೨) ಅಪಾನ, (೩) ನಿಮೇಷ, (೪) ಉನ್ಮೇಷ . . . (೧೨) ಪ್ರಯತ್ನ (ಜೀವಾತ್ಮ. ೩೪). ೩. ಅತ್ಯಂತ ಸೂಕ್ಷ್ಮವಾದ ಕಾಲಭಾಗ; ಎರಡು ಲವದಷ್ಟು ಕಾಲ : "ಸಮಯಮನೇಹಂ ಕಾಲಂ ನಿಮೇಷ ಕಾಷ್ಠಾದಿ ತದ್ವಿಶೇಷಮದೆನಿಕುಂ"(ವಸ್ತುಕೋ. ೧೫–೧) ; ವ್ಯವಹಾರಕಾಲಮೆಂಬುದು . . . ಸಮಯಾವಲಿಕೋಚ್ಛ್ವಾಸಸ್ತೋಕನಿಮೇಷನಾಡಿಕಾಮುಹೂರ್ತದಿವಸಪಕ್ಷಮಾಸರ್ತ್ವಯನಸಂವತ್ಸರಾದಿಗಣನಾನುಕ್ರಮದಿಂದಂ ಪೆರ್ಚಿದೆಣಿಕೆಯೊಳ್ ಕೂಡಿದುದು(ಆದಿಪು. ೬–೪೮ ಪ); ಒಮ್ಮೆ ಕಣ್ಣೆವೆಯನಿಕ್ಕುವನಿತಱ ನಾಲ್ಕುಭಾಗದೊಳೊಂದು ಭಾಗವೇ ತೃ[ತ್ರು]ಟಿಯೆನಿಸುವದು ಮತ್ತೆರಡಾಗಲೊಂದು ಲವವೆನಿಸುವದು ಮತ್ತೆರಡಾಗಲೊಂದು ನಿಮೇಷವೆನಿಸುವದು (ವಿವೇಕ. ೩೨೦). ೪. ಒಂದು ನಿಮಿಷದ ಅರುವತ್ತನೆಯ ಒಂದು ಭಾಗ ; ಒಂದು ಸೆಕೆಂಡು : ಹೆಣಗೆಯ ದಬ್ಬಳದ ಒಂದು ತುದಿಯನ್ನು ಪರೀಕ್ಷೆಮಾಡಬೇಕಾದ ಹಾಲಿನಲ್ಲಿ ಕೆಲವು ನಿಮೇಷಗಳು (ಎಂದರೆ ಸೆಕೆಂಡುಗಳು) ಮುಳುಗಿಸಿಡಬೇಕು (ವಿಜ್ಞಾನ. ೨೬). [ಸಂ.]

ನಿಮೇಷಶೂನ್ಯ (ಗು). ಎವೆಯಿಕ್ಕದಿರುವ ; ರೆಪ್ಪೆ ಹೊಡೆಯದಿರುವ : ನವಕುಮಾರನು ನಿಮೇಷಶೂನ್ಯವಾದ ಚಕ್ಷುಗಳಿಂದಾ ನೂತನ ನೂತನವಾಗುತ್ತಿದ್ದ ಶೋಭಾರಾಶಿಯನ್ನು ನೋಡುತ್ತಿದ್ದನು (ಕಪಾಕುಂ. ೪೫). [ನಿಮೇಷ + ಶೂನ್ಯ]

ನಿಮೇಷಿತ (ನಾ). [ನಾಟ್ಯ] ಒಂಬತ್ತು ಬಗೆಯ ಎವೆಯ ಚಲನ ಭೇದಗಳಲ್ಲಿ ಒಂದು ; ರೆಪ್ಪೆಗಳನ್ನು ಮುಚ್ಚುವುದು : ಪ್ರಸೃತ, ಕುಂಚಿತ, ಉನ್ಮೇಷಿತ, ನಿಮೇಷಿತ, ವಿವರ್ತಿತ, ಸ್ಫುರಿತ, ಪಿಹಿತ, ವಿತಾಡಿತ, ಸಮ—ಈ ಒಂಬತ್ತು ಎವೆಯ ಭೇದಂಗಳ್ (ಲಾಸ್ಯರಂ. ೩–೪೯ಪ). [ಸಂ.]

ನಿಮೋನಿಯ 'ನ್ಯುಮೋನಿಯ' ನೋ.

ನಿಮ್ನ (ಗು). ೧. ತಗ್ಗಾದ ; ಆಳವಾದ : ತೆವರೆಲ್ಲಂ ದೇವತಾಮಂದಿರ ನಿವಹಮೆ ನಿಮ್ನಸ್ಥಳೀರಾಜಿಯೆಲ್ಲಂ ಸುವಿರಾಜದ್ದೀರ್ಘಿಕಾಸಂಕುಳಭರಿತ ಪಯಃಪೂರ ನೀರೇಜಕಾಸಾರವೆ (ಎಇ. XVI, ೩೮–೨೪ ; 1152). ೨. ಕೀಳಾದ ; ಕೆಳಮಟ್ಟದ : ದರಿಯಿರದೆ ಗಿರಿಯಿಲ್ಲ, ನೆರಳಿರದೆ ಬೆಳಕಿಲ್ಲ, ಮರಣವಿಲ್ಲದೆ ಜನನ ಜೀವನಗಳಿಲ್ಲ ವರಗುಣೋನ್ನತಿಗೆ ನಿಮ್ನಗುಣಂಗಳೊಡವುಟ್ಟು ತೆರೆ ಬೀಳದೇಳುವುದೇ ? (ಮಂಕುಕ. ೨೯೩) ; ಮಾನವಸಂಸ್ಕೃತಿ ಮತ್ತು ಸಂಸ್ಕೃತಿವಿಶೇಷಗಳ ಜನ್ಮಭೂಮಿಯಾದ ಏಶಿಯ . . . ಈಗ ತೀರ ನಿಮ್ನಹಂತವನ್ನು ಮುಟ್ಟಿದೆ (ಏಶಿಸಂ. ೧). (ನಾ). ೩. ಬಿಲ; ರಂಧ್ರ ; ಕುಳಿ : "ನಿಮ್ನಂ, ಅಗಾಧಂ . . . ದರಃ – ಈ ೧೫ ಕುಟಾ" (ಹಲಾಯು. ೧೦೩–೨). ೪. ಆಳವಾಗಿರುವ ಪ್ರದೇಶ ; ಆಳವಾಗಿರುವುದು:"ನಿಮ್ನಂ,ಗಭೀರಂ,ಗಂಭೀರಂ–೩ ಆಳವಾಗಿರುವುದರ ಹೆಸರುಗಳು, ಅಂದರೆ ಘಾತವುಳ್ಳದ್ದು" (ಸಿದ್ಧಾಂತಿ. ೮೦); ಎಸೆವೀ ನಿಮ್ನೋನ್ನತಂಗಳ್ ವಿರಾಜಿಸಿ ಚೆಲ್ವಿಂಗೆಡೆಗೊಂಡುವು (ಆದಿಪು. ೪–೪); ತತ್ತರುಣಿಯಾ ಪೂರ್ವತಾಪತ್ರಯಂ ಪೋಪುದೆನುತಂ ಮುಂದೆ ಸಾರ್ವಂತೆ ತ್ರಿವಳಿಯಡಗಿದುವು ಶಿವತತ್ವಮದು ಬೇರ್ವರೆಯಲಜ್ಞಾನಕೂಪ ನೆಲೆಗೆಟ್ಟುದೆನೆ ನಾಭಿ ನಿಮ್ನವನುಳಿದುದು (ಚಿಬಪು. ೪–೧೩) ; ಬರುತಬರುತಂ ಮುಂಗಡೆಯ ಕಂಡರು ಮಹಾಪಾತಾಳನಿಮ್ನದ ಪರಿಖೆಯಿಂದಟ್ಟಣೆಯ ಸಹ ಕಂಗೆಸೆವ . . . ಮಯೂರಪುರಮಂ (ಶಂಕದಾ. ೨–೨೩) ; ಪರ್ಣಶಾಲೆಗೆ ಸಮೀಪಮಾ ನಿಮ್ನದೊಳ್ . . . ಗೋದಾವರಿಯ ತೆರದಿ ಪರಿದಿರಲ್ ಕಾಲನದಿ (ಶ್ರೀರಾಮಾ. ೧೯೬–೬೮). [ಸಂ.]

ನಿಮ್ನಗಾತಟ (ನಾ). ನದಿಯ ತೀರ ; ಹೊಳೆಯ ದಡ : ಸಿಂಧುವಿನೊಳ್ ಕೂಡಿದ ಗುಹಾಮಧ್ಯದೊಳುನ್ಮಗ್ನನಿಮಗ್ನಜಲನಿಮ್ನಗಾತಟದೊಳ್ ಬೀಡಂ ಬಿಡಿಸಿ (ಆದಿಪು. ೧೩–೫೦ ವ). [ಸಂ.]

ನಿಮ್ನಗೆ (ನಾ). ಹೊಳೆ ; ನದಿ : "ಹ್ರದಿನಿ ತರಂಗಿಣಿ ನಿಮ್ನಗೆ ನದಿ . . . ಧುನಿ ತೊಱೆ" (ವಸ್ತುಕೋ. ೨೩–೧೧) ; "ನದಿ . . . ನಿಮ್ನಗೆ ಸರಸ್ವತಿ ದ್ವೀಪವತಿಯಾಪಗೆಯೆನೆ ತೊಱೆಗೆ ನಾಮಂ" (ಮಂಗರಾ. ೧೨೨–೧೦) ; ಬೇಸಗೆಗೆ ಸಿಲ್ಕಿದ ನಿಮ್ನಗೆಯಂತೆ. . . ಕನ್ನೆವೇಟದ ಪೊಸಗಿಚ್ಚಿನೊಳ್ ಪೊರಳುತಿರ್ದು ಕರಂ ಕೊರಗಿರ್ದ ಕಾಂತೆಯಂ . . . ಕಂಡಂ (ಲೀಲಾವ. ೧೨–೩೫) ; ಪರಮಸುಖಾಮೃತಂ ನಯನನಿಮ್ನಗೆಯಂ ಕರೆಗಣ್ಮುವಂತಿರುಬ್ಬರಿಸೆ ಮುದಶ್ರುಪೂರಂ . . . ಮಾತರಪಿತರರ್ ಕುಮಾರಮುಖದರ್ಶನದಿಂ ಪಡೆದರ್ ಪ್ರಮೋದಮಂ (ಅನಂಪು.೫–೯೧) ; ವಾಪಿ ತಟಾಕಂ ದೀರ್ಘಿಕೆ ಕೂಪಂ ನಿಮ್ನಗೆ ಮಹಾಹ್ರದಂಗಳ್ ನೋಡಲ್ಕೇಪೊಳ್ತುಂ ಸಕಳೋರ್ವೀತಾಪಮನಪಹರಿಸುತಿರ್ಪುವಾ ಜನಪದದೊಳ್ (ತ್ರಿಪುವಿ. ೨–೨೯); ಅತ್ಯುರುತರದಿವಿಜನಿಮ್ನಗೆಯಂ ತಾಳ್ದನನೀಶ್ವರನ . . . ನೆನೆವೆಂ ಸತತಂ (ಉದ್ಭದೇ. ೬–೩೭) ; ಆ ದೇವದಂಪತಿಗಳಿರ್ವರುಂ ನಗಮೇಖಲಾ ನಿಮ್ನಗೆಯ ತಣ್ಪುತೀರ್ಥದೊಳ್ ಮನದಣಿಯೆ ಮಿಂದು ! (ಶ್ರೀರಾಮಾ. ೧೫೪–೭೫). [ಸಂ. ನಿಮ್ನಗಾ]

ನಿಮ್ನನಾಭಿ (ನಾ). ಆಳವಾದ ಹೊಕ್ಕುಳು,—ನಾಭಿ : ಜಳನಿಧಿಯನೆ ಪೋಲ್ವ ಶರಣಾಗತಜಳನಿಧಿಯ ನಿಮ್ನನಾಭಿ ಚೆಲ್ವಿಂಗೆ ತಾನೆ ನಾಭಿಯಾದುದು (ಪಂಪಭಾ. ೨–೩೯ ವ) ; ಒಯ್ಯನೊಯ್ಯನೆಯ್ದಿದುವು ವಿಲೋಲನೇತ್ರಜಲಬಿಂದುಗಳಾಕೆಯ ನಿಮ್ನನಾಭಿಯಂ (ಪಂಪಭಾ.೫–೯); ನಿಮ್ನನಾಭಿಮಂಡಳಮನೊಳಪೊಕ್ಕು ಒಳಗೆ ತೀವಿದ ಪುಡಿಗತ್ತುರಿಯ ಸುಟ್ಟುರೆಯನಸಿದನೆ ಬೇಱೊಂದು ಬಾಸೆಯೆಂಬಂತೆ ನೆಗಪಿ . . . ಸುಟಾದಾಡಿಯುಂ ಸಾಯಂತನಸಮಯಸಮೀರಣಂ ಸೌಖ್ಯಸಾರಸರ್ವಸ್ವಮೆನಿಸಿದಾಗಳ್ (ಚಂದ್ರಪು. ೮–೪ ವ). [ನಿಮ್ನ + ನಾಭಿ]

ನಿಮ್ನಪ್ರದೇಶ (ನಾ). ತಗ್ಗಾದ ನೆಲ ; ಹಳ್ಳವರಿ ಭೂಮಿ : ವತ್ಸಕಾವತೀವಿಷಯದಾವಾವೆಡೆಯೊಳಂ ನಿಮ್ನಪ್ರದೇಶಂದಪ್ಪದೆ ಪಥಿಕಜನದ ಕಣ್ಗಂ ಮನಕ್ಕಂ ಪಸರಂಬಡೆದ ನೆಱೆ ಸೊಗಯಿಸುವ ಸರಸ ಸರಸೀರುಹಾಕರಂಗಳೊಳ್ (ಶಾಂತಿಪು. ೧–೫೬ ವ). [ನಿಮ್ನ + ಪ್ರದೇಶ]

ನಿಮ್ನಮಧ್ಯ (ಗು). ಮಧ್ಯದಲ್ಲಿ ಹಳ್ಳವಾಗಿರುವ,—ತಗ್ಗಾಗಿರುವ : ರೂಪರೇಖೆ ಅಥವಾ ಹೊರಮುಖವು ವರ್ತುಲರೇಖೆಯ ಅಥವಾ ವರ್ತುಲದ ಒಳಭಾಗದಂತಿರುವ ; ಒಳಬಾಗಿನ ; ನಿಮ್ನಮಧ್ಯ ; ಪುಟಾಕಾರ (Concave. ಇಂಕನಿ). [ನಿಮ್ನ + ಮಧ್ಯ$_1$]

ನಿಮ್ನಮಸೂರ (ನಾ). ಒಳಬಾಗುಳ್ಳ ಮಸೂರ ; ಅಂತರ್ವಕ್ರ ಮಸೂರ : ಮಸೂರಗಳು ಮಧ್ಯೆ ದಪ್ಪವಾಗಿ ತುದಿಗಳಲ್ಲಿ ತೆಳುವಾಗಿದ್ದರೆ ಪೀನಮಸೂರಗಳೆಂದೂ (Convex lenses) ಮಧ್ಯೆ ತೆಳುವಾಗಿದ್ದು ತುದಿಗಳಲ್ಲಿ ಮಂದವಾಗಿದ್ದರೆ ನಿಮ್ನಮಸೂರಗಳೆಂದೂ(Concave lenses) ಹೆಸರು (ಭೌತವಿ. ೧೮೩). [ನಿಮ್ನ + ಮಸೂರ$_2$]

ನಿಮ್ನವರ್ಗ (ನಾ). ಕೆಳಗಿನ ವರ್ಗ ; ಹಿಂದುಳಿದ ಪಂಗಡ : ನಿಮ್ನವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಪರೀಕ್ಷಾಶುಲ್ಕವಿಲ್ಲ (ರೂಢಿ). [ನಿಮ್ನ + ವರ್ಗ]

ನಿಮ್ಮಕ್‌ಹರಾಮ 'ನಮ್ಮಕ್‌ಹರಾಮ' ನೋ.

ನಿಮ್ಮಕುಹರಾಮತನ (ನಾ). ಸ್ವಾಮಿದ್ರೋಹ ಮಾಡುವಿಕೆ ; ಉಂಡ ಮನೆಗೆ ಎರಡು ಬಗೆಯುವಿಕೆ : ಟೀಪುಸುಲ್ತಾನರ ದಿವಸದಲ್ಲಿ ಅಧಿಕಾರಿಕೆ ಮಾಡಿದಂಥವರು ನಿಮ್ಮಕುಹರಾಮತನದಿಂದಾ ಹಣಕಾಸು ತಿಂದು, ರೈತರಿಗೂ ದುಃಖಕೊಟ್ಟು, ಟೀಪುಸುಲ್ತಾನರ ಒಡವೆ ತಿಂದಂಥವರು ಎಂಬದು ಇಂಗ್ರೇಜಸರಕಾರಕ್ಕೂ ಜಾಹೇರು ಇದೆ (ರಾಜೇಂದ್ರ. ೧೯೫). [ನಿಮ್ಮಕುಹರಾಮ$_0$(<ನಮ್ಮಕ್‌ಹರಾಮ) + –ತನ]

ನಿಮ್ಮಕುಹಲಾಲು 'ನಮ್ಮಕ್‌ಹಲಾಲ್' ನೋ.

ನಿಮ್ಮತು 'ನಿನತ್ತು' ಪರಾ.

ನಿಮ್ಮದ (ನಾ). ಮದವಿಲ್ಲದಿರುವಿಕೆ ; ಸೊಕ್ಕಿಲ್ಲದಿರುವಿಕೆ : ಹರಿಕಾನ್ತೆಯುಮೀಕಾನ್ತೆಯ ದೊರೆಗೆವರಲ್ಕೋಱಳೆಂಬ ನಿಮ್ಮದದ ಗುಣೋತ್ಕರಮನೊಳಕೊಣ್ಡು ಹರಿಯಬೆ ಪರಹಿತದಿಂ ಧರೆಯೊಳೆಯ್ದೆ ಜಸಮಂ ತಳೆದಳ್ (ಎಕ. VI, ಮೂಡಗೆ. ೨೨–೨೪ ; 1129). [<ಸಂ. ನಿರ್ಮದ]

ನಿಮ್ಮದು 'ನಿನತ್ತು' ಪರಾ.

ನಿಮ್ಮನೆ (ಅ). ನೆಟ್ಟಗೆ ; ನಿಡಿದಾಗಿ : ಅದರ ಅಂಗಾಂಗಗಳೆಲ್ಲ ಮರ್ಮಾಂಗಗಳೂ ಸೇರಿ, ನಿಮ್ಮನೆ ನಿಗುರಿದ್ದುವು, ಹುಡುಗರ ಕುಚೋದ್ಯ ಟೀಕೆಗಳಿಗೆ ಪಕ್ಕಾಗಿ (ಪುಲಿಮ. ೪೯೫). [? + –ಅನೆ$_1$]

ನಿಮ್ಮಳ (ಗು). ೧. ಸ್ವಚ್ಛವಾದ ; ಪರಿಶುದ್ಧವಾದ : ದ್ವಿತ್ವಾಗ್ರರೇಫಲೋಪಕ್ಕೆ:—ಆಘ–ಅಗ್ಗ . . . ನಿರ್ಮಳ–ನಿಮ್ಮಳ (ಶಮದ. ೨೬೧ ಪ್ರಯೋ) ; ನಿಮ್ಮಳತನುಮಿನುಗಿಂದುಱದೆಳಸುವ ಮೊಗಮ್ಯೆದುಂ . . . ಸಮ್ಮಂಗುಡುಗೆಮಗೆ (ಉದ್ಭದೇ. ೭–೩). (ನಾ). ೨. ನಿರ್ಮಲತೆ ; ಪರಿಶುದ್ಧತೆ : ಅಮ್ಮನಯ್ಯೋ ಸ್ತ್ರೀಯರೊಳು ಮನ ನೆಮ್ಮಿಹುದು ಸುಖವಲ್ಲೆನುತ ಮನ ನಿಮ್ಮಳದಿ ಹೇಳಿದನು (ಸಾಳ್ವಭಾ. ೨೦–೫೨). [<ಪ್ರಾ.ಣಿಮ್ಮಲ./ಸಂ. ನಿರ್ಮಲ]

ನಿಮ್ಮಳಂ (ಅ). ಸ್ವಚ್ಛವಾಗಿ ; ಪರಿಶುದ್ಧವಾಗಿ : ಉಮ್ಮಳಿಸದಿರೆಲೆ ಭೂಮಿಪ ನಿಮ್ಮಳಮೀ ಮಗುವಿನುರದ ಮಧ್ಯದ ಕುಚಮಂ ತಮ್ಮಯ್ಯದಲೆಯನೀಕ್ಷಿಸೆ ಗಮ್ಮನೆ ಬಯಲಪ್ಪುದೆಂದು ನುಡಿದುದು ವಾಣಿ(ಹಾಲಾಸ್ಯ. ೧–೫–೧೬). [<ನಿಮ್ಮಳ]

ನಿಮ್ಮಳಿಕೆ (ನಾ). ನಿರ್ಮಲತೆ ; ಸ್ವಚ್ಛತೆ : "ನಿಮ್ಮಳಿಕೆ ನಿರ್ಮಲದೊಳ್" (ಕರ್ಣಾನಿ. ೪) ; "ನಿಮ್ಮಳಿಕೆಯು ಬೆಳ್ಪಳಿಯುಂ . . .

ನಿರ್ಮಲಾಹ್ವಯಂ ತಾನಕ್ಕುಂ" (ಕವಿಕಂ. ೧೦೧) ; ಜೋಗಿಯ ಮನದ ನಿಮ್ಮಳಿಕೆಯಂತಿರೆ ದೆಸೆಯೆತ್ತಂ ನಿರ್ಮಲಮಾದುದು (ರಾಮಾಶ್ವ.೧೧೦-೨); ದಾಳಗಳನ್ನೂ ನಿಮ್ಮಳಿಕೆಗಾಗಿಸಿ ಆ ಹಸೆಯ ನಟ್ಟ ನಡುವೆ ಪ್ರತಿಷ್ಠಿಸಿ (ಮಂತ್ರಶ. ೧೬೪-೧೧). [ನಿಮ್ಮಳ+-ಇಕೆ]

ನಿಮ್ಮುತು 'ನಿನತ್ತು' ಪರಾ.

ನಿಯಂತ (ನಾ). ೧. ನಿಯಮಿಸುವವನು ; ವ್ಯವಸ್ಥೆ ಮಾಡುವವನು ; ನಿರ್ವಹಿಸುವವನು : "ನಿಯಂತ—ನಿಯಂತೃ = ವ್ಯವಸ್ಥಾಪಕ" (ತದ್ಭಕೋ. ೨೨); ವೇದಾಂತ ದೈತ್ಯಹಂತ ವಾದದುರಂತ ನುತ ನಿಯಂತ ಯುಕ್ತಿವಂತ (ಪುರಂದ. ೫-೧೨ ಅನುಪಲ್ಲವಿ) ; ಹಾದಿ ತೋರಿಸುವವನು . . . ನಿರ್ವಾಹಕ ; ನಿಯಂತ್ರಕ. ಮೇಳನಿಯಂತ್ರಕ. (ಮೋಟಾರು, ಟ್ರಾಂಬಂಡಿ, ಮೊ.ಗಳಲ್ಲಿ) . . . ಪ್ರಯಾಣಿಕರ ವಿಚಾರವನ್ನು ನೋಡಿಕೊಳ್ಳುವ ಅಧಿಕಾರಿ ; ನಿಯಂತ (Conductor. ಇಂಕನಿ). ೨. ರಥ, ಬಂಡಿ ಮೊದಲಾದುವನ್ನು ನಡೆಸುವವನು ; ಸಾರಥಿ : "ನಿಯಂತಾ, ಪ್ರಾಜಿತಾ . . . ಸೂತಃ—ಈ ೭ ಸಾರಥಿ" (ಹಲಾಯು. ೭೪-೨೯೫). [ಸಂ. ನಿಯಂತೃ]

ನಿಯಂತೃ (ಗು). ೧. ನಿಯಮಿಸುವ ; ಹತೋಟಿ ಮಾಡುವ ; ಅಧೀನದಲ್ಲಿಟ್ಟುಕೊಳ್ಳುವ : ಮರ್ದಮನಿಯಂತೃ ವಿಧಿ ತಾಂತಂದೊಡ್ಡಿದೀ ಮಹತ್ಕ್ಲೇಶಮಂ ಬುದ್ಧಿಯಿಂ ಪರಿಹರಿಸೆ ಯತ್ನಗೈ (ಶ್ರೀರಾಮಾ. ೧೧೭-೧೫೪)(ನಾ) ೨. ನಿಯಮಿಸುವವನು; ಅಧೀನದಲ್ಲಿ ಇಟ್ಟುಕೊಂಡಿರುವವನು : ಸರ್ವಾಂತರ್ಯಾಮಿಯುಮಾ ಸರ್ವನಿಯಂತೃವುಮಶೇಷಿತತನು ಸತತಂ ಪರ್ವಿರೆ (ವಿಷ್ಣುಪು. ೩-೧೩೪) ; ಒಬ್ಬನೇ ಆತ್ಮನಾದರೆ ನಿಯಂತೃ ನಿಯಂತವ್ಯ ಭೇದವು ಹೇಗಾಗುತ್ತದೆ ? (ಬ್ರಹ್ಮಭಾ. ೩೦೮ ಆಡಿಟಿ). [ಸಂ.]

ನಿಯಂತ್ರಕ (ನಾ). ಹತೋಟಿಯಿಟ್ಟುಕೊಂಡಿರುವವನು ; ನಿಯಂತ್ರಣ ಮಾಡುವವನು ; ನಡೆಸುವವನು : ಈ ಕ್ಷಿಪಣಿಗೆ ಯಾವ ನಿಯಂತ್ರಕನನ್ನು ನಿಯಮಿಸಲಿ ? (ಕಲ್ಲೋಲ. ೩೮-೩) ; ಭಾರತದ ನಿಯಂತ್ರಕ ಮಹಾಲೇಖಾಪರೀಕ್ಷಕರಿಗೆ ಅಥವಾ ಅವರ ಸಂಬಂಧವಾಗಿ, ಪಾವತಿಯಾಗಬೇಕಾದ ವೇತನ (ಭಾಧಾನ. ೫೮). [ಸಂ.]

ನಿಯಂತ್ರಣ (ನಾ). ೧. ಅಂಕೆಯಲ್ಲಿಟ್ಟುಕೊಳ್ಳುವುದು ; ವಶದಲ್ಲಿಟ್ಟುಕೊಳ್ಳುವಿಕೆ ; ಅಧೀನದಲ್ಲಿಟ್ಟುಕೊಳ್ಳುವುದು ; ಹತೋಟಿ ; ಹಿಡಿತ ; ನಿರ್ಬಂಧ : ನಿನ್ನ ನಿಯಂತ್ರಣವ ಹೇಳೌ ನಿಧಾನವನೆಂದಳಿಂದುಮುಖಿ (ಕುಮ್ಯಾಅ. ೧೫-೨೨) ; ಆಗಿನ ಚಟುವಟಿಕೆಗಳು ಗುಪ್ತವಾಗಿಯೇ ನಡೆಯುತ್ತಿದ್ದವು. ಸುದ್ದಿಯ ಮೇಲೆ ಭೀಕರವಾದ ನಿಯಂತ್ರಣವಿತ್ತು (ಸಾಸಮಾ. ೧೭) ; ಈ ನಿಯಂತ್ರಣವು ಅಸಹ್ಯವಾಗಿ ತೋರಿತು (ಕೆಲಕ. ೬೯) ; ರಾಜ್ಯ ಶಿಕ್ಷಣದಲ್ಲಿ ಕೇಂದ್ರದ ಹೊಣೆಗಾರಿಕೆಯೂ ನಿಯಂತ್ರಣವೂ ಬಲಗೊಳ್ಳುತ್ತಿವೆ (ಶಿಕ್ಷದ. VII, ಮುನ್ನುಡಿ) ; ಎಲ್ಲರಿಗೂ ತಿಳಿದಿರುವಂತೆ ಮೂಷಕನಿಯಂತ್ರಣಕ್ಕೆ ಪ್ರಚಲಿತವಾದ ವಿಧಾನ ಮೂರು (ದೇಕನ್ಯೆ. ೪೭). 'ನಿಯಂತ್ರಣಕ್ರಮ', 'ನಿಯಂತ್ರಿಸು' ಪರಾ. ೨. ಮಾರ್ಗದರ್ಶನ ; ಚೋದನೆ ; ನಿರ್ದೇಶನ : ಅಸಂಖ್ಯಾತ ವಿಷಯಗಳನ್ನು ಒಳಗೊಂಡಿರುವ ಅಧೀನ ನಿಯಮಗಳನ್ನು . . . ಮಾರ್ಗ ತೋರಿಸುವ ಅಪ್ಪಣೆ ಅಥವಾ ಕಾರ್ಯಕ್ರಮದ ವಿಷಯವಾದ ನಿಯಂತ್ರಣಗಳೆಂದೂ (ಡೈರೆಕ್ಷನ್ಸ್) . . . ಕರೆಯಬಹುದು (ಕವಿಕೋ. I, ೨೮೭). ೩. ಕಟ್ಟಿಹಾಕುವುದು ; ಬಂಧನದಲ್ಲಿಡುವುದು : ಮತ್ತಂ ನಿಯಂತ್ರಣ . . . ದುರ್ಭೋಗ್ಯ ನಾನಾವಿಧಾಸಂಖ್ಯಾತಕೀಪ್ರವೇದನಾರೂಪಂಗಳಾಗಿ ಶಿವದ್ರೋಹಿಗಳಿಗೆ ನಿಷ್ಕಾರುಣ್ಯದಿಂ ಮಾಳ್ಪ ಶಿಕ್ಷಾಲೇಶಮೆಂದೆನಿಸಿ (ವಿವೇಕ. ೧೮೧). [ಸಂ.]

ನಿಯಂತ್ರಣಕ್ರಮ (ನಾ). ಹತೋಟಿಯಲ್ಲಿಡುವ ರೀತಿ ; ನಿರ್ಬಂಧಿಸುವ ವಿಧಾನ : ಈ ಮುಂದಿನ ನಿಯಂತ್ರಣಕ್ರಮಗಳಿಂದ ಮೊಣಗಳನ್ನು ತಡೆಗಟ್ಟಬಹುದು (ಆಡುಸೌ. ೫೦). [ನಿಯಂತ್ರಣ+ಕ್ರಮ]

ನಿಯಂತ್ರಣಗೊಳಿಸು (ಕ್ರಿ). ಹತೋಟಿಗೆ ತರು ; ಅಧೀನಕ್ಕೆ ಬರುವಂತೆ ಮಾಡು : ಶಿಕ್ಷಕರು . . . ತಮ್ಮ ಕಾರ್ಯವನ್ನು ಸೂಕ್ತ ರೀತಿಯಲ್ಲಿ ನಿಯಂತ್ರಣಗೊಳಿಸಿಕೊಳ್ಳುವುದು (ಶಿಕ್ಷದ. ೪೧೦). [ನಿಯಂತ್ರಣ+ಕೊಳ್ಳ್+-ಇಸ್ಸು]

ನಿಯಂತ್ರಣೋಪಾಯ (ನಾ). ಹತೋಟಿಯಲ್ಲಿಡುವ ಕ್ರಮ,—ಉಪಾಯ : ಆತನಿಗೆ ಕೀಟಕಗಳ ಪ್ರಕಾರಗಳು, ಅವುಗಳ ಸ್ವಭಾವ, ಹಾವಳಿಯ ರೀತಿ, ನಿಯಂತ್ರಣೋಪಾಯಗಳು ಮುಂತಾದ ವಿಷಯಗಳ ಬಗೆಗೆ ಸ್ಥೂಲವಾದ ಪ್ರಾತ್ಯಕ್ಷಿಕಜ್ಞಾನವಿರುವದು ಅತ್ಯಾವಶ್ಯಕವಾಗಿದೆ (ಕೀಟವಿ. VI, ಅರಿಕೆ). [ನಿಯಂತ್ರಣ+ಉಪಾಯ]

ನಿಯಂತ್ರಿ (ನಾ). ರಥ, ಬಂಡಿ ಮೊದಲಾದುವುಗಳನ್ನು ನಡೆಸುವವನು ; ಸಾರಥಿ : "ದಕ್ಷಿಣಸ್ಥಂ ನಿಯಂತ್ರಿಯಾ ಕ್ಷತ್ತೃ ಸೂತನೆನೆ ಸಾರಥಿಗೆ ನಾಮಮಕ್ಕುಂ" (ಮಂಗರಾ. ೮೫-೨೫). [ಸಂ. ನಿಯಂತ್ರಿನ್]

ನಿಯಂತ್ರಿತ (ಗು). ೧. ಕಟ್ಟಿದ ; ಬಂಧಿಸಿದ ; ಬಿಗಿದ : ಮದೇಭಾಂತ್ರನಿಯಂತ್ರಿತಾಶ್ವಶವಮಾಂಸರಸಾಸವ ಮತ್ತಯೋಗಿನೀತಂತ್ರಮಿದೇ ನಗುರ್ವನೊಳಕೊಂಡುದೊ ಕರ್ಣನ ಗೆಲ್ಡ ಕೊಳ್ಗುಳಂ (ಪಂಪಭಾ. ೧೨-೧೨೦). (ನಾ). ೨. ಹತೋಟಿಗೊಳಗಾದುದು : ಅಲ್ಲಿ . . . ಮೂಡುವ ಪಾತ್ರಗಳು ಬಹುಮಟ್ಟಿಗೆ ರಾಷ್ಟ್ರದ ವಸ್ತುದೃಷ್ಟಿಯಿಂದ ನಿಯಂತ್ರಿತವಾದುದು (ಭಾವಗೀ. ೫). [ಸಂ.]

ನಿಯಂತ್ರಿಸು (ಕ್ರಿ). ೧. ಅಂಕೆಯಲ್ಲಿಟ್ಟುಕೊಳ್ಳು ; ವಶದಲ್ಲಿಟ್ಟುಕೊಳ್ಳು ; ಅಧೀನದಲ್ಲಿರಿಸಿಕೊಳ್ಳು ; ಹತೋಟಿಯಲ್ಲಿರಿಸು : ಅವ ದೇವಿ . . . ಮನುಜ ದನುಜಸುರನಿಸರ್ಗಯಂತ್ರತಂತ್ರಮಂತ್ರವಾಗಿ ನಿಯಂತ್ರಿಸಿರುವಳೋ ಅವಳೆ ಇಂದು ಮನೆಗೆ ಬಂದು . . ಹರಸುತಿಹಳು (ಅನಿಕೇ. ೧೨-೧೬) ; ಈ ಎರಡು ಬಗೆಯ ಸಂಸ್ಥೆಗಳೂ ಒಂದನ್ನೊಂದು ಯಾವ ರೀತಿ ನಿಯಂತ್ರಿಸಬೇಕು (ರಾಜ್ಯಾಂಗ. ೫೩) ; ಜನಸಂಖ್ಯೆಯನ್ನು ನಿಯಂತ್ರಿಸಲು ನಾವು ಕೈಲಾದಷ್ಟು ಪ್ರಯತ್ನಿಸುತ್ತಿದ್ದೇವೆ (ಕಾಲಯಾ. ೫೬) ; ಇದಕ್ಕೆ ಬದಲಾಗಿ ಇಲಿಗಳ ಸಂತತಿಯನ್ನೆ ನಿಯಂತ್ರಿಸುವುದು ಸ್ಪೃಹಣೀಯವೆನಿಸುತ್ತದೆ (ದೇಕನ್ಯೆ. ೫೦). ೨. ಕೆಲಸ ಮಾಡುವಂತೆ ಮಾಡು ; ಚೋದಿಸು : ಶರೀರದೊಳಗೆ ಎಲ್ಲಕ್ಕಿಂತ ದೊಡ್ಡ ಪಿಂಡವೆಂದರೆ ಯಕೃತ್ತು (Liver) ರಕ್ತದ ಘಟಕಗಳನ್ನು ನಿಯಂತ್ರಿಸುವದು (ಗೋಗ್ರಾಸ. ೪೫). [ನಿಯಂತ್ರಣ+-ಇಸ್ಸು]

ನಿಯತ (ಗು). ೧. ಅಂಕೆಯಲ್ಲಿಟ್ಟ ; ಹತೋಟಿಗೆ ಒಳಗಾದ ; ನಿಗ್ರಹಿಸಲ್ಪಟ್ಟ. ೨. ಆಳಿಕೆಗೊಳಪಟ್ಟ ; ಅಧೀನವಾದ. ೩. ಗೊತ್ತುಮಾಡಿದ ; ನಿರ್ಣಯಿಸಿದ : ನಿಶ್ಚಿತವಾದ : ನಿಯತಾಗಮಾರ್ಥದೊಳ್ ಸಂಶಯಮೊಂದೆಡೆಯಲ್ಲಿ ತೋಱೆ ಸಂಜಯವಿಜಯಾಹ್ವಯಚಾರಣಯುಗಳಂ ನಿರ್ಣಯಾರ್ಥಮೆಯ್ತಂದು ತೀರ್ಥಕರದಾರಕನಂ ಬಲವರೆ . . . ತೊಲಗಿದುದು ಪದಾರ್ಥಸಂಶಯಂ (ವರ್ಧಪು. ೧೪-೬೪) ; ನಿಯತರಸರಸಿಕೆ ಕಿಂಚಿದ್ಭಯತರತನು ವಿಜಿತವಿಷಯಮತಿಗರ್ವಸಮಾಶ್ರಯಮಾಗೆ ಸುಭಗೆಯೆನೆ ನೆಗಟ್ಟು ಯುವತಿ ಸಲೆ ಮಧ್ಯೆಯೆಂಬ ಪೆಸರಂ ಪಡೆಗುಂ (ಶೃಂಗಾರ. ೩-೩೦) ; ನಿಯತಾಷ್ಟಾದಶದುಷ್ಟದೋಷರಹಿತ ಶ್ರೀಜೈನವಿಂಬಂ ವಿಶುದ್ಧಿಯನುತ್ಪಾದಿಕುಂ (ಪಾರ್ಶ್ವಪು. ೧೭-೧೪) ; ಅವಧಾರಣೆಯ ಎಕಾರಂ ತನ್ನ ನಿಯತಾರ್ಥಮಂ ಬಿಟ್ಟು ಅನಿಯೋಗಮಾದಲ್ಲಿಯುಂ . . . ಸಂಧಿಯುಂಟು (ತಮದ. ೬೪ ವೃತ್ತಿ). ೪. ನಿಶ್ಚಲವಾದ ; ದೃಢವಾದ : ಅಚಲವಾದ ; ಸ್ಥಿರವಾದ :

ನಿರ್ದಿಷ್ಟವಾದ : ನಿಯತಸಮುಯಸಾರಾಸಾಧನೀಯೊದಿ ತಾರಾನ್ವಯ ಪರಮತಪೋನುಷ್ಠಾನಮಿಷ್ಟಾರ್ಥಸಿದ್ಧಂ (ಕವಿರಾ. ೩-೩೧೫); ಅ ಮಹಂತಂ ನಿಯತ [ಸಾಹಾಂ. ನಿಪಿಳ] ಭಕ್ತಿ ಮಹಾಮಹಿಮೆಯಿಂದೊಪ್ಪಿ ತಿಪ್ಪ ಧರಾಮಪುರವೇ ರಾಜಧಾನಿಯೆನಲ್ಕೆ ನುತಿಪೆತ್ತು ಭೂಮಿಯಂ ಪರಿಪಾಲಿಸುತ್ತ . (ಬಸಪು. ೧೯-೪). ೫. ತಪ್ಪಿಸಿಕೊಳ್ಳಲಾಗದ; ಅನಿವಾರ್ಯವಾದ. ೬. ಬಂಧನಕ್ಕೆ ಒಳಗಾದ; ಬಂಧಿಸಿದ. (ನಾ). ೭. ಗೊತ್ತುಮಾಡಲ್ಪಟ್ಟಿರುವುದು; ನಿಶ್ಚಿತವಾದುದು; ವ್ಯವಸ್ಥಿತವಾಗಿರುವುದು: "ನಿಶ್ಚಿತಂ, ನಿಯತಂ —ಈ ೩ ನಿಶ್ಚಯಿಸಲ್ಪಟ್ಟುದು" (ಹಲಾಯು. ೧೧೪-೩೫); ನಿಯತಾಯುರಬ್ದಸಂಖ್ಯಾಕ್ಷಯದೊಳ್ ದಿವದಿಂದಮಿಬಾದು ಬಂದನುರಂ ಧಾತ್ರಿಯೊಳ್ಳಿಸುಲ್ಲಿ ಪುಟ್ಟಲ್ ಬಯಸುವರೆನೆ ಪೆಜಿದನಿನ್ನದೇವಣ್ಣಿಸುವೆಂ (ಸಧರಮಾ. ೧೧-೬); ಪ್ರತಿಯೊಂದು ಇಂದ್ರಿಯಕ್ಕೂ ಬೇರೆ ಬೇರೆ ವಿಷಯಗಳು ನಿಯತವಾಗಿವೆ (ಜೀವಾತ್ಮ. ೬೬). ೮. ನಿಶ್ಚಲವಾದುದು; ಸ್ಥಿರವಾದುದು; ದೃಢವಾದುದು: ನಿಯತವಹ ಶೌಚಾಚಮನ ನಿರ್ಣಯವನುಜೀ ವಿಸ್ತರಿಸಿ . . . ಸಂಕಲ್ಪ ಸಮಯದಲಿ ಬಯಕೆಯಿಲ್ಲದೆ ವಿಷ್ಣು ಚರಣದ್ವಯವ ಸಂಸ್ಮರಿಸುತ್ತ ವಾಣೀಪ್ರಿಯವಧುವ ಮಧ್ಯದಲಿ ಮುಳುಗಿದ ತನ್ನನೀಕ್ಷಿಸುತೆ (ಅಕ್ರೂಚ. ೫-೨೭). ೯. ಕೂಡಿಕೊಂಡಿರುವುದು; ಯುಕ್ತವಾಗಿರುವುದು; ಗ್ರಥಿತ: ನಯಗಣದಿಂದಂ ನಿಯತಮಿದಕ್ಕುಂ ಪ್ರಿಯಲಲನೇ ಕೇಳ್ ನಯದಿನುದಾತ್ತಂ (ಛಂದೋಂಬು. ೨-೭೫). ೧೦. ಖಂಡಿತ; ನಿಶ್ಚಯ: "ನಿಶ್ಚಿತ ನಿಯತಮೆನೆ ನಿಶ್ಚಯಂ" (ಪುಂಗಂರಾ. ೧೪೯-೧೩೩); ನಿಯತದಿನೆ ಮರ್ದಿಸೊಳಮರ್ದನ್ನಯ ಜೀವನಮಂ ಮರಾಳಮಿದು ಬೇರ್ಪಡಿಕುಂ (ಪ್ರಸವಿ. ೧೪-೧೪); 'ಹಿಪ್ಪಾರ್ಕಸ್' (Hipparchus) ಎಂಬಾತನೇ ಕ್ರಿಸ್ತಶಕಾರಂಭಕ್ಕೆ ೧೩೦ ಸಂವತ್ಸರಗಳ ಹಿಂದೆ ತಾರಾಪುಂಜಗಳ ಸ್ಥಾನಗಳನ್ನು ಸ್ವಲ್ಪಮಟ್ಟಿಗೆ ನಿಯತವಾಗಿ ನೊಟ್ಟ ಮೊದಲು . . . ನಿರ್ಣಯಿಸಿದನು (ಜ್ಯೋತಿರ್ವಿ. ೩೩). ೧೧. ನಿಯಮಿತವಾಗಿ ನಡೆಯುವ ಕ್ರಮ; ನಿಯಮ: ಸುವ್ರತನಿಯತವಂ ಬುಧರಿಂದುಮುಖಿಗಜುಸಿದಡೆ ಪರಮಾನಂದದಿಂ ಮಾದಾಯಿ ಶಿವಮಂದಿರಕೆ ನಡೆತಂದು (ಬಸಪು. ೨-೪೯); ಚೋರವಿದ್ಯವು ಸಹಜ ನಿಮಗಾ ಪಾರದಾರ್ಯವು ನಿಯತ ದಿಟ ದಿಟ (ಕಾಶಾ. ೩೬-೪೩). ೧೨. ಒಂದರಲ್ಲಿ ಚೆನ್ನಾಗಿ ಅಂಟಿಕೊಂಡಿರುವವನು; ನಿಷ್ಠ; ಸೇವಾಪರ; ಗಾಢಾಸಕ್ತ: ಭವದ ಭಾರಿಯ ತಪ್ಪಿಸಿಕೊಂಬರೆ ನೀನು ನಿಯತನಾಗಿ ಭಯಭರಿತನಾಗಿ ಅಹಂಕಾರಿಯಾಗದೆ ಶರಣನ್ನು ಮನವೇ (ಬಸಪ. ೨೭೪); ದಾಸತ್ವಂ ವೀರದಾಸತ್ವಂ . . . ಎಂಬ ಶ್ರುತಿಯರ್ಥವ ನೋಡಿ ನಿಯತನಾಗಬಲ್ಲಡೆ ಆತ ಮಹೇಶ್ವರನಪ್ಪನಯ್ಯಾ (ಚನ್ನಪ. ೨೧-೬). [ಸಂ.]

ನಿಯತಂ (ಅ). ೧. ಯಾವಾಗಲೂ; ತಪ್ಪದೆ; ಸತತವಾಗಿ; ಸದಾ: ನಿಯತಂ ಸಮ್ಯಜ್ಞಂತ್ರಪ್ರಯೋಗಪಟುವೆನಿಪ ಭೂತಳಾಧೀಶ್ವರನ ಪ್ರಿಯವರಂ ಮರ್ದಿಸಿ ಧರೆಯಂ ಜಯಲಕ್ಷೀಧಾಮನಾಗಿ ಪರಿರಕ್ಷಿಸುಗುಂ (ಪಂಚತಂ. ೨೧೨-೧೫೫); ನಿಯತಂ ಭಾವಿಸು ಚಿತ್ತದೊಳ್ ವಿದಜಜೊಲ್ಲಾರಯುದ್ದು ಕೇಳಗ್ನಿಭೂತಿಯೆನಾನಗ್ರಜನೆಂ (ಸುಳುದಾ. ೫-೨೪); ನಿಯತಂ ಪಡಿಯಜಬಿಸನಾದಿಯಾಗೆ ಬಿಸನೆನಿತನಿತ್ತುಮಂ ಸಲೆ ಸುರಕಾಂತೆಯರೆ ತನಗೆಸಪರ್ (ಪಧರಸು. ೧೩-೫೪); ಸಕಾರಂ . . . ಆರೆ ಎಡೆಯೊಳ್ ಜತ್ವಂ ಮೇಣರೆಎಡೆಯೊಳ್ ಸಂಪ್ಯೆಯಾಗೆ ನಿಯತಂ ಭತ್ವಂ (ಪಮದ.೬೮). ೨. ಖಂಡಿತವಾಗಿ; ನಿಶ್ಚಯವಾಗಿ; ಸಂದೇಹವಿಲ್ಲದೆ; ವಿಕಲ್ಪವಿಲ್ಲದೆ: ನಿಯತಂ ಕಶಿಪುವೆನಿಪ್ಪುಕ್ತಿಯೊಳೊಳಕೊಂಡಿರ್ಕುಮಶನ ವಸನಮಿವೆರಡುಂ (ಜಸ್ತು ಕೋ. ೧೪೦-೧೩೦); ಸತತಾಭ್ಯಾಸಪ್ರಯತ್ನಂ ಕವಿತೆಗೆ ನಿಯತಂ ಕಾರಣಂ (ಕಾಪಾ ಪ. ೪೨೪); ನಿಯತಂ ಶೀಲಕ್ಕೆ ಪಕ್ಕಾಗಿಯೆ ಪೆಸರ್ವಡೆಪಂ ದೇವರಿಂದಂ ಕುಬೇರಪ್ರಿಯನೆಂಬಂ ರೂಪವಂತಂ (ಪುಣ್ಯಾಸ್ರ. ೭-೫); ನಿಯತಂ ಕಲ್ಯಾಣದ ಸಾರ್ಥೆಯೊಳೊಪ್ಪುವ ಕಾಡೊಳೆಯಿಂ ಕರಡಿಯ ರೂಪಿಂ ಭಯವಿಲ್ಲದೊಗೆವುದೆಂದಾ ಭಯಾಕರಂ ಬೆಸನೆ (ವೃಸವಿ. ೨೨-೩೧). [<ನಿಯತ]

ನಿಯತಕಾಲ (ನಾ). ನಿಗದಿಮಾಡಿದ ಕಾಲ,—ಅವಧಿ: ಶಿಕ್ಷಣಕ್ಕೆ ಸಂಬಂಧಿಸಿದ ನಿಯತಕಾಲದ ಯೋಜನೆಗಳನ್ನು ರೂಪಿಸುವಾಗ ರಾಜ್ಯ ಸರ್ಕಾರಗಳ ಸಲಹೆ ಸಹಕಾರಗಳನ್ನು ಪಡೆಯುತ್ತಿದೆ(ಶಿಕ್ಷಪ.VII,ಮುನ್ನು೩). [ನಿಯತ+ಕಾಲ]

ನಿಯತಕಾಲಿಕ (ಗು). ೧. ನಿಗದಿಯಾದ ಕಾಲಕ್ಕೆ ಸಂಬಂಧಿಸಿದ; ನಿಯಮಿತ ಕಾಲದಲ್ಲಿ ಹುಟ್ಟುವ,—ಹೊರಡುವ: ನಿರ್ದಿಷ್ಟ ಸಮಾಂತರದಲ್ಲಿ ಪುನರಾವರ್ತವಾಗುವ; ನಿಯತಕಾಲಿಕ (Periodic. ಇಂಳಸಿ). (ನಾ). ೨. ನಿಗದಿಯಾದ ಕಾಲಗಳಲ್ಲಿ ಹೊರಡುವ ವಾರ, ಪಕ್ಷ, ಮಾಸ, ತ್ರೈಮಾಸಿಕ ಪತ್ರಿಕೆ ಮೊದಲಾದುವು: "ದಿನಪತ್ರಿಕೆ; ನಿಯತಕಾಲಿಕ; ಪತ್ರಿಕೆ" (Journal. ಪತ್ರಿಸಿ. ೪೮); ಧಾರವಾಡದಲ್ಲಿನ ವೃತ್ತಪತ್ರಿಕೆಗಳು ಹಾಗೂ ನಿಯತಕಾಲಿಕಗಳ ಮೂಲಕರ ಸಂಘವಾಗಿದ್ದು ತನ್ನ ಸದಸ್ಯರ ನಡುವಣ ವ್ಯಾಪಾರಾಸಕ್ತಿಗಳನ್ನು ಉತ್ತೇಜನಗೊಳಿಸಿ ಅಭಿವೃದ್ಧಿಪಡಿಸುವುದು (ಕವಿಕೋ. I, ೧೬೭). [ಸಂ.]

ನಿಯತದ್ವಿತ್ವ (ನಾ). [ವ್ಯಾಕ]ಸ್ಥಿರವಾಗಿ ದ್ವಿತ್ವವಾಗಿಯೇ ಇರುವುದು; ಒತ್ತಕ್ಷರವಿಲ್ಲದೆ ಪ್ರಯೋಗವಾಗದುದು: ಇನ್ನು ನಿಯತದ್ವಿತ್ವಕ್ಕೆ ಪಪ್ಪಿಕಂ, ಕಪ್ಪಡಿ, ಬಿಪ್ಪಂಡಂ, ಉಪ್ಪಂಡಂ (ಕಪದ. ೫೬ ಪ್ರಯೋ). 'ಶಿಥಿಲದ್ವಿತ್ವ' ಪರಾ. [ನಿಯತ+ದ್ವಿತ್ವ]

ನಿಯತಧರ್ಮ (ನಾ). ಒಂದು ವಸ್ತುವಿನಲ್ಲಿ ಸ್ಥಿರವಾಗಿ ಇರುವ ಧರ್ಮ; ಒಂದು ವಸ್ತುವಿನ ಹುಟ್ಟಿನಿಂದ ನಾಶ ಪರ್ಯಂತವಾಗಿ ಅವಿನಾಭಾವದಿಂದ ಅದರಲ್ಲಿ ಇರುವ ಜಾತಿ, ಗುಣ ಮೊದಲಾದುವು: "ಕಾಗೆ ಕುಳಿತ ಮನೆಯೇ ದೇವದತ್ತನ ಮನೆ", ಎಂದು. ಇಲ್ಲಿ "ಕಾಗೆ" ಮನೆಯ "ಲಕ್ಷಣ"ವಲ್ಲ, ನಿಯತಧರ್ಮವಲ್ಲವಾದ್ದರಿಂದ; ಆದರೆ "ಉಪಲಕ್ಷಣ", ಅಥವಾ ಪ್ರಸಂಗಾತ್ ಸೂಚಕ (ಧ್ವನ್ಯಾಲೋಕ ೫೧ ಆತಿ). [ನಿಯತ+ಧರ್ಮ]

ನಿಯತಪ್ರತೀತಿ (ನಾ). ೧. ಖಂಡಿತವಾಗಿ ನಡೆಯುವ ಲೋಕವಾದ; ಸುಳ್ಳಾಗದ ಜನವಾದ. ೨. ನಡೆಯಬೇಕಾದುದು ನಡೆದೇ ತೀರುವುದೆಂಬ ಜ್ಞಾನ; ಅನುಭವಿಸಬೇಕಾದುದನ್ನು ಅನುಭವಿಸಲೇ ಬೇಕೆಂಬ ನಿಶ್ಚಯಜ್ಞಾನ: ಸತತೋದಯನಪ್ರತಿಹತಗತಿತೀವ್ರಂ ತದ್ವಿನಾಧಿನಾಥನುಮುಸ್ತಂಗತನಾದನಂತೆ ನಿಯತ ಪ್ರತೀತಿಯಂ ಕಳೆಯಲಕ್ಕುಮೇ ವ್ಯಾಪಕನುಂ (ಕವಿರಾ. ೩-೩೦). [ನಿಯತ+ಪ್ರತೀತಿ]

ನಿಯತವಿಧಿ (ನಾ). ಆತ್ಮಸಾಕ್ಷಿಯ ಆದೇಶವೇ ನೀತಿಯ ಪರಮ ಪ್ರಮಾಣ ಎಂಬ ತತ್ತ್ವ: "ನಿಯತವಿಧಿ, ಪರಮವಿಧಿ, ನಿರಪೇಕ್ಷ ವಿಧಿ" (Categorical imperative. ಸಾಂಖಿ. ೧೭) [ನಿಯತ+ವಿಧಿ]

ನಿಯತವೃತ್ತಸ್ಥಿತ (ನಾ). ೧. ಒಂದೇ ರೀತಿಯಾದ ನಡವಳಿಕೆಯಲ್ಲಿರುವವನು; ಸ್ಥಿರವಾದ ನೀತಿಯುಳ್ಳವನು. ೨. ಬೇರೆ ಬೇರೆ ಸಂಕ್ರಾಂತಿವೃತ್ತಗಳಲ್ಲಿ ಸಂಚರಿಸದೆ ಒಂದೇ ವೃತ್ತದಲ್ಲಿ ನೆಲಸಿರುವವನು. ೧, ೨: ಪರಮೋದಯರಿರ್ ಕಮಲಾಕರಬೋಧಕರಿರ್ ದಿನೇಶನುಂ ನೀನುಂ ಭಾಸ್ಕರನನಿಯತವೃತ್ತಕ್ರಮನರಸಾ ನಿನ್ನಂತೆ ನಿಯತವೃತ್ತ[ಸಾಹಾಂ. ತ್ರಿ]ಸ್ಥತನೇಂ (ಕವಿರಾ. ೩-೪೧). [ಸಂ.]

ನಿಯತಸಾಹಚರ್ಯ (ನಾ). ಯಾವಾಗಲೂ ಕೂಡಿಕೊಂಡೇ ಇರುವುದು; ಯಾವಾಗಲೂ ಒಂದನ್ನು ಬಿಟ್ಟು ಮತ್ತೊಂದು

ಇರದೇ ಇರುವಿಕೆ; ಕಾರ್ಯಕಾರಣ ಭಾವ ಮೊದಲಾದುವುಗಳಲ್ಲಿರುವ ಸ್ಥಿರವಾದ ಸಂಬಂಧ : ಆ ಸಂಬಂಧವು ಕಾರ್ಯಕಾರಣಭಾವ, ಸಾಮಾನ್ಯವಿಶೇಷಭಾವ . . . ನಾಶ್ಯನಾಶಕ ಭಾವ–ಮೊದಲಾದ ಸಂಬಂಧ ಮೂಲಕ ನಿರ್ಣಯಿಸಲ್ಪಡಬೇಕು. ಇದನ್ನು ನಿಯತಸಾಹಚರ್ಯವೆಂದು ವ್ಯವಹರಿಸುವರು (ಹಿಂದಸಾ. ೧೪೦). [ನಿಯತ + ಸಾಹಚರ್ಯ]

ನಿಯತಸ್ವರೂಪ (ನಾ). ನಿರ್ದಿಷ್ಟವಾದ ಆಕಾರ,—ರೀತಿ : "ಸರ್ವೇಜನಾಸ್ಸುಖಿನೋಭವಂತು"–ಇಂಥಾ ಬೃಹದೌದಾರ್ಯದ ವಾಕ್ಯಗಳು ಎಲ್ಲರಿಗೂ ಸುಲಭವಾಗಿ ಬರುತ್ತವೆ. ಅವುಗಳನ್ನು ಒಂದು ನಿಯತಸ್ವರೂಪದಲ್ಲಿ ತೋರಿಸಿರೆಂದಾಗ ಮಾತ್ರ ಅದನ್ನು ಬಲ್ಲವರು ಬಹುಮಂದಿ ದೊರೆಯಲಾರರು (ರಾಜ್ಯಶಾ. ೨೪೩). [ನಿಯತ + ಸ್ವರೂಪ]

ನಿಯತಸ್ವಾಂತ (ನಾ). ಸ್ಥಿರವಾದ ಮನಸ್ಸು ; ದೃಢವಾದ ಮನಸ್ಸು : ಇಂತು ಲೋಕಹಿತೈಕ ನಿಯತಸ್ವಾಂತಚೇಷ್ಟಿತನಾದ ಮುನಿ ವೇದಾಂತಸಾಗರಸಾರಸಂಗ್ರಹವೆನಲು ವಿರಚಿಸಿದ (ನಿಭಾಗ. ೧–೪–೧೨).

[ನಿಯತ + ಸ್ವಾಂತ]

ನಿಯತಾಂಕ (ನಾ).[ಗಣಿತ]ಬದಲಾವಣೆಯಾಗದ ಅಂಕ; ಖಚಿತವಾಗಿರುವ ಅಂಕ : "ವ್ಯತ್ಯಾಸ ಹೊಂದದ ಅಂಕ, ಪದ: ನಿಯತಪದ ; ನಿಯತಾಂಕ" (Constant, ಇಂಕನಿ). [ನಿಯತ + ಅಂಕ$_2$]

ನಿಯತಾಧಿಕಾರ (ನಾ). ೧. ಸ್ಥಿರವಾದ ಅಧಿಕಾರ. ೨. ಸ್ಥಿರವಾದ ಅಧಿಕಾರವುಳ್ಳವನು ; ಒಂದು ಅಧಿಕಾರದಲ್ಲಿ ನಿಯಮಿಸಲ್ಪಟ್ಟವನು ; ಅಧಿಕಾರಿ : "ನಿಯತಾಧಿಕಾರನಱಿಗಾಯುಕ್ತಂ" (ವಸ್ತುಕೋ. ೬೧–೫೬). [ನಿಯತ + ಅಧಿಕಾರ]

ನಿಯತಾಪ್ತಿ (ನಾ). ೧. ಯಾವ ಸಂಶಯವೂ ಇಲ್ಲದೆ ಪಡೆಯುವುದು. ೨. [ಕಾವ್ಯಮೀ] ನಾಟಕಲಕ್ಷಣದಲ್ಲಿ ಹೇಳಿರುವ ಕಥಾವಸ್ತುವಿನ ಐದು ಅವಸ್ಥೆಗಳಲ್ಲಿ ನಾಲ್ಕನೆಯದು ; ಅಪಾಯಗಳು ಇಲ್ಲದಿರುವುದರಿಂದ ನಾಯಕನಿಗೆ ಫಲ ದೊರಕುವುದರಲ್ಲಿ ಇರುವ ಭರವಸೆ,—ದೃಢವಾದ ನಂಬಿಕೆ,—ನಿಶ್ಚಯಜ್ಞಾನ : ನಿಯತಾಪ್ತಿ –ಅಡಚಣೆಗಳು ಕಳೆದುಹೋಗಿ ಫಲಪ್ರಾಪ್ತಿ ನಿಶ್ಚಯವಾಗಿ ಆಗಬಹುದೆಂಬ ಭರವಸೆ (ಕೈಪಿಡಿ. ೨೦೮). [ನಿಯತ + ಆಪ್ತಿ]

ನಿಯತಾಹಂಕೃತಿ (ನಾ). ಅಹಂಕಾರವನ್ನು ಅಡಗಿಸಿರುವವನು : ನಿಯತಾಹಂಕೃತಿ ಪೂತನಾಪ್ರತಿಭಯಂ . . . ಜಯಮಂ ತಾಳ್ದಿದು ದಾತ್ಮಸನ್ನಿಭಗುಣಂ ಶ್ರೀಗಂಧಗೋಪಾಳನಾ (ಅರ್ಧನೇ. ೭–೯೩).

[ನಿಯತ + ಅಹಂಕೃತಿ]

ನಿಯತಾಹಾರ (ನಾ). ಪರಿಮಿತವಾದ ಆಹಾರ. 'ನಿಯತಾಹಾರಯಜ್ಞ' ಪರಾ. [ನಿಯತ + ಆಹಾರ]

ನಿಯತಾಹಾರಯಜ್ಞ (ನಾ). ಪರಿಮಿತಾಹಾರ ಸೇವನಾರೂಪವಾದ ಯಜ್ಞ,—ದೇವತಾರಾಧನೆ; ಆಹಾರನಿಯಮಪಾಲನೆಯಿಂದ ದೇವರನ್ನು ಒಲಿಸಿಕೊಳ್ಳುವುದು : ದ್ರವ್ಯಯಜ್ಞ, ತಪೋಯಜ್ಞ. . .ಪ್ರಾಣಾಯಾಮಯಜ್ಞ, ನಿಯತಾಹಾರಯಜ್ಞ– ಹೀಗೆ ಅನಂತ ಯಜ್ಞಗಳನ್ನು ಶ್ರೀಕೃಷ್ಣನು ಹೇಳುತ್ತಾ . . . ಮೇಲಣ ಮಾತನ್ನು ಹೇಳುತ್ತಾನೆ (ಭಾರದ. ೧೧೬). [ನಿಯತಾಹಾರ + ಯಜ್ಞ]

ನಿಯತಿ (ನಾ). ೧. ಹತೋಟಿ ; ನಿರ್ಬಂಧ ; ಅಡ್ಡಿ ; ತಡೆ. ೨. ಅದೃಷ್ಟ; ವಿಧಿ; ದೈವ; ಜನ್ಮಾಂತರೀಯ ಕರ್ಮ: "ಯಮ ನಿಯತಿ ದಿಷ್ಟ ವಿಧಿ ನಾಮಮಯಾನಯರೂಪಮಂತದಕ್ಕುಂ ದೈವಂ" (ವಸ್ತುಕೋ. ೧೦–೫೫) ; "ನಿಯತಿಃ, ವಿಧಿಃ—ಈ ೨ ಬಿದಿ" (ಹಲಾಯು. ೧೫–೮೭) ; "ನಿಯತಿಯೆನೆ ವಿಧಿಯಕ್ಕು" (ಮಂಗರಾ. ೨೨–೧) ; ನಿಯತಿಯನಾರ್ ಮೀಱಿದಪರ್ (ಯಶೋಚ. ೧–೪೯) ; ನಿಯತಿಯ ಗತಿಯನ್ನು ಯಾರು ಬಲ್ಲರು ? (ಕಸರಿ. ೧೮೧) ; ನಿಯತಿಯ ವಜ್ರಮುಷ್ಟಿಯಿಂದ ಬಿಡುಗಡೆಯೇ ಇಲ್ಲವೆ ? (ರೂಪಸ. ೪). ೩. ಕಟ್ಟು ; ನಿಯಮ ; ಕ್ರಮ; ವ್ಯವಸ್ಥೆ : ಪ್ರಾರಬ್ಧದಲಿ ನಿನ್ನ ಪುಣ್ಯವಿನಿತಾನುಮಿರೆ ಸೇರೆ ಪಶ್ಚಾತ್ತಾಪ ಭಾರವದರೊಡನೆ ದಾರುಣದ ಕರ್ಮನಿಯತಿಯನಿನಿತು ಶಿಥಿಲಿಪುದು ಕಾರುಣ್ಯದಿಂ ದೈವ (ಮಂಕುಕ. ೫೦೯) ; ಕಲಿತರೈ ಬಿಲ್ಬಿಜ್ಜೆಯಂ, ವೇದಮಂ, ನೀತಿನಯವಿನಯನಿಯತಿಯಂ (ಶ್ರೀರಾಮಾ. ೨೫–೬೭೧) ; ತಾವು ದೊಡ್ಡವರು. ನಿಯತಿಗೆ ಭಂಗ ತರಬಾರದು (ನಡೆದಾ. II, ೧೩೯೧). ೪. ವ್ರತ ; ನೇಮ : ಧೀವರಂ ಬೆವಹಾರಕೆಯ್ದಿದ ಶಾವಿನಲಿ ಕಣ್ಬೇನೆಯಾಗಿರಲಾವಗಂ ಶಿವಲಿಂಗದರ್ಶನನಿಯತಿ ತಪ್ಪಿದಡೆ ಜೀವವಂ ತಾಂ ತ್ಯಜಿಸುವಂ (ಬಸಪು. ೯–೬). ೫. ಪ್ರಪಂಚದ ವಸ್ತುಗಳಲ್ಲಿರುವ ಮೂಲಶಕ್ತಿ : ನಿಯತಿಗೂ(Norm) ಪ್ರಕೃತಿಗೂ (Matter) ಇರುವ ಸಂಬಂಧ ಮತ್ತು ಪರಿಣಾಮಕ್ರಮ (ತತ್ವಪ್ರಾ. ೬೪೪). ೬. ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ; ಮನೋನಿಗ್ರಹ; ಆತ್ಮಸಂಯಮನ. ೭. ಪದಾರ್ಥಗಳ ನಿರ್ದಿಷ್ಟವಾದ ಕ್ರಮ : (೬). ೮. [ವ್ಯಾಕ] ವಿಕಲ್ಪವಿಲ್ಲದೆ ನಿತ್ಯವಾಗಿ ಬರುವಿಕೆ : ಕೆಲವು ಶಬ್ದದೊಳ್ = ಕೆಲವು ಶಬ್ದಂಗಳಲ್ಲಿ ; ದತ್ವನಿಯುಕ್ತಯತ್ವಮುಂ = ದತ್ವದೊಡನೆ ಕೂಡಿದ ಯತ್ವವುಂ ; ಜತ್ವನಿಯತಮಂ = ಜಕಾರದ ನಿಯತಿಯಂ ; ತಾಳ್ದಿರ್ಕುಂ = ಧರಿಸಿರ್ಪುದು (ಶಮದ. ಕಿ. ೨೫೯ ಟೀಕು). ೯. [ಶೈವ] ಶೈವಾಗಮದಲ್ಲಿ ಹೇಳಿರುವ ಮೂವತ್ತಾರು ತತ್ತ್ವಗಳಲ್ಲಿ ಒಂದು ; ನಿಯಮನ ಶಕ್ತಿ : ಷಟ್ತ್ರಿಂಶತ್ತತ್ವಗಳು :–ಶಿವ, ಶಕ್ತಿ . . . ನಿಯತಿ, ಪುರುಷ . . . (ಇವು ಶೈವಾಗಮದಲ್ಲಿರುವ ತತ್ತ್ವಸಂದೋಹಗಳು)(ಭಾರದ.೭೩೮೧೬); ಷಡ್ಗುಣೈಶ್ವರ್ಯಸಂಪನ್ನನಾದ ಪರಮೇಶ್ವರನು —ನಿಯತಿ, ವಿದ್ಯಾ, ಪ್ರತಿಷ್ಠಾ, ಶಾಂತಿ, ಶಾಂತ್ಯತೀತಗಳೆಂಬ ಐದು ಕಲೆಗಳಿಗಾಶ್ರಯವಾದ . . . ಮೂರ್ತಿಗಳಿಂದ . . . ಭಕ್ತಾನುಗ್ರಹ ಮಾಡುತ್ತಾನೆ (ಭಾರದ. ೭೪). ೧೦. ಪರಮೇಶ್ವರನ ಐದು ಕಲೆಗಳಲ್ಲಿ ಒಂದು : ಅಶುದ್ಧಸೃಷ್ಟಿಯಲ್ಲಿ ಮಾಯಾತತ್ತ್ವವು ಕಾಲ, ನಿಯತಿ, ಕಲಾ, ವಿದ್ಯಾ, ರಾಗ ಎಂದು ಪಂಚವಿಧವಾಗಿ ಪರಿಣಮಿಸುವುದು (ಹಿಂದಸಾ. ೨೯೬) ; ಈ ನಿಮಿತ್ತವೇ ನಿಯತಿ. ಇದು ಆಯಾ ಜೀವನ ಕರ್ಮಭೋಗವನ್ನು ನಿಯಮಿಸುವುದು (ಭಾತತ್ತ್ವ. ೬೬೫). ೧೧. [ವೀಶೈ] ಪರಮೇಶ್ವರನಿಗೆ ಅಧೀನವಾಗಿರುವಿಕೆ : ನಿಯತಿ ಎಂದರೆ ಪರಾಧೀನತೆ ; ಪರಮಾತ್ಮನಿಗೆ ವಶನಾಗಿರುವಿಕೆ ; ಇದು ಸರ್ವನಿಯಾಮಕತೆಯ ಸಂಕೋಚ (ಶಕ್ತಿವಿ. ೪೫). ೧೨. [ತತ್ತ್ವಶಾ] ಹೃದಯಕಮಲದಲ್ಲಿರುವ ಹನ್ನೆರಡು ದಳಗಳ ಹನ್ನೆರಡು ರೂಪಗಳಲ್ಲಿ ಒಂದು : ಹೃದಯಕಮಲದಲ್ಲಿರುವ ೧೨ ದಳಗಳಲ್ಲಿ ೧೨ ರೂಪಗಳು. ಅವು ಶಕ್ತಿ, ಪ್ರತಿಷ್ಠಾ, ಸಂವಿತ್, ಸ್ಫೂರ್ತಿ, ಪ್ರವೃತ್ತಿ, ಪರಾ, ವಿದ್ಯಾ, ಮತಿ, ನಿಯತಿ, ಮಾಯಾ, ಕಾಲ, ಪುರುಷ—ಹೀಗೆ ೧೨ ರೂಪಗಳು (ಹಸಾರ. ೪–೨೩ ತಾತ್ಪರ್ಯ). [ಸಂ.]

ನಿಯತಿಕೃತ (ಗು). ೧. ವಿಧಿಯಿಂದ ಮಾಡಿದ ; ಅದೃಷ್ಟದಿಂದ ನೆರವೇರಿಸಿದ. (ನಾ). ೨. ಸೃಷ್ಟಿಯ ನಿಯಮದಿಂದ ಮಾಡಿದುದು : ನಿಯತಿಕೃತವೂ ನಿಯಮರಹಿತವೂ ಆದ ಸಾಹಿತ್ಯಿಕ ನಾಟಕಗಳಲ್ಲಿಯೂ ಕೂಡ ದೈವ ಪೌರುಷಗಳ ಸಂಘರ್ಷದಿಂದಲೇ ಸ್ವಭಾವದ ವಿಲಾಸವು ಪ್ರಕಟವಾಗುವುದು (ಪ್ರಬಂಧ. ೩೧). [ನಿಯತಿ + ಕೃತ]

ನಿಯತಿಕ್ರಮ (ನಾ). ನಿಯಮದ ರೀತಿ: ನಿಗದಿತ ಕಾವ್ಯೋಕ್ತಿಗಳೊಳ್ ನೆಗೞ್ದುವು ಮಾರ್ಗಂಗಳಿಂತುಮೆರಡುಕ್ತಿಗಳುಂ ಬಗೆವಾಗಳೆರಡು ಮಾೞ್ಕೆಯೊಳೊಗೆದುವು ವಕ್ರಸ್ವಭಾವ ನಿಯತಿಕ್ರಮದಿಂ (ಕವಿರಾ. ೨–೫೨).

[ನಿಯತಿ + ಕ್ರಮ]

ನಿಯತಿಕ್ಲುಪ್ತ (ನಾ). ನಿಯಮಕ್ಕೆ ಕಟ್ಟುಬಿದ್ದವನು : ಆಳದಲಿ ನಿರ್ಲಿಪ್ತ ಮೇಲೆ ನಿಯತಿಕ್ಲುಪ್ತ ಲೀಲಾಪ್ರಿಯಂ ಬ್ರಹ್ಮ (ಮಂಕುಕ.೯೪).

[ನಿಯತಿ + ಕ್ಲುಪ್ತ]

ನಿಯತಿವಾದ (ನಾ). ಮನುಷ್ಯನಿಗೆ ಇಚ್ಛಾಸ್ವಾತಂತ್ರ್ಯವಿಲ್ಲವೆಂಬ ವಾದ : (ಇಚ್ಛೆಯೇ ಅನ್ಯಶಕ್ತಿಸಂಸ್ಕಾರಗಳಿಗೆ ಅಧೀನವಾಗಿರುವುದರಿಂದ) ಮನುಷ್ಯನಿಗೆ ಇಚ್ಛಾಸ್ವಾತಂತ್ರ್ಯವಿಲ್ಲವೆಂಬ ವಾದ; ನಿಯತಿವಾದ ; ಸಂಕಲ್ಪನಿರ್ಣಯವಾದ (Determinism. ಇಂಕನಿ).

[ನಿಯತಿ + ವಾದ$_2$]

ನಿಯತಿವಾದಿ (ನಾ). ನಿಯತಿವಾದವನ್ನು ಪ್ರತಿಪಾದಿಸುವವನು ; ನಿಯತಿವಾದದಲ್ಲಿ ಶ್ರದ್ಧೆಯುಳ್ಳವನು : (Determinist. ಇಂಕನಿ).

[ಸಂ. ನಿಯತಿವಾದಿನ್]

ನಿಯತೇಂದ್ರಿಯ (ನಾ). ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡವನು; ಜಿತೇಂದ್ರಿಯ : ನಾವಪ್ಪೊಡೆ ನಿಯತೇಂದ್ರಿಯವರ್ತಿಗಳ್ (ಶಾಂತಿಪು. ೮-೬೬ ಪ); ನಿಯತೇಂದ್ರಿಯನೊಳ್ ತೇಜೋಮಯನೊಳ್ ರೂಪೈಕಪಕ್ಷಪಾತದೆ ನೆಱೆ ನೀತಿಯನುಟಾದು ಮುನಿಪನೊಳ್ ನಿರ್ಭಯನಂಗಜನೆನ್ನನಿಂತಿರಲ್ ಸೋಲಿಕುಮೇ (ಕಾದಂಪೂ. ೭೪೯).

[ಸಂ.]

ನಿಯತೋದ್ದೇಶಿ (ನಾ). [ಕಾವ್ಯಮೀ] ಒಂದು ಕ್ರಮವಾಗಿರಬೇಕೆಂಬ ಉದ್ದೇಶದಿಂದ ಹೇಳಿರುವ ಪದ ; ನಿಶ್ಚಿತವಾದ ಕ್ರಮವನ್ನನುಸರಿಸಿ ಅನ್ವಯಿಸಿಕೊಳ್ಳಬೇಕಾದ ಪದಗಳ ಜೋಡಣೆ : ನಿಯತೋದ್ದೇಶಿಯುಮನುದೇಶಿಯುಮನನುವಿನಂತು ಪೇೞೆ ಯಾಥಾಸಂಖ್ಯಾಹ್ವಯಮಕ್ಕುಂ (ಕವಿಶಾ. ೧-೮೬) ; "ನಿಯತವಾದ ಉದ್ದೇಶಿಯನ್ನೂ ಅನುದೇಶಿಯನ್ನೂ ಅನುವಾಗಿ ಹೇಳಿದರೆ ಯಥಾಸಂಖ್ಯ". ಉದ್ದಿಷ್ಟವಾದ ಕ್ರಮದಲ್ಲಿ ಅರ್ಥಗಳನ್ನುಳ್ಳ ಪದವರ್ಗ ಉದ್ದೇಶಿ (ಕವಿಶಾ. ೧-೮೬ ಟಿಪ್ಪಣಿ). [ಸಂ. ನಿಯತೋದ್ದೇಶಿನ್]

ನಿಯತ್ತು, ನೀಯತ್ತು (ನಾ). ೧. ದುರ್ಗುಣಗಳಿಂದ ದೂರವಾದ ವರ್ತನೆ; ಸದಾಚಾರ; ನೀತಿ; ಧರ್ಮ; ಪ್ರಾಮಾಣಿಕತೆ : ಇವನು ಯಾರೋ ಕಳ್ಳ ಅಂತ ನಾವು ಕರಕೊಂಡು ಬಂದಿವಿ. ನಿಜಕ್ಕೆ ಎಂತ ನಿಯತ್ತಿನ ಮನುಷ್ಯ ! (ಚಿಕರಾ. ೩೫೨) ; ಒಳ್ಳೇ ನಿಯತ್ತಿನಿಂದ ನ್ಯಾಯವನ್ನು ಮಾಡುತ್ತೇವೆ (ಚಾಮವಂ. ೨೨೮) ; ಸ್ವಲ್ಪವಾದರೂ ನಿಯತ್ತಿಗೆ ಹೆದರಬೇಕಾಗುತ್ತದೆ (ಪದ್ಮಸ. ೨೧೫) ; ನನ್ನೂರಿನ ಪೂಜಾರಿ ಗಂಗಣ್ಣ ನಿಯತ್ತಿನ ಮನುಷ್ಯ (ನನ್ನೂರು. ೧೩೨) ; ಆಗ ನಮ್ಮಲ್ಲಿದ್ದ ಪೋಲೀಸ್ ಇನ್‌ಸ್ಪೆಕ್ಟರು . . . ಒಳ್ಳೆಯ ನಿಯತ್ತಿನವರು (ಕಲನೆ.೧೦೦). ೨. ಕರ್ತವ್ಯಪ್ರಜ್ಞೆ ; ಔಚಿತ್ಯಜ್ಞಾನ : ರಂಗಸ್ಥಳಕ್ಕೆ ಹೋಗುವ ಮೊದಲು ನನಗೆ ನಮಸ್ಕರಿಸದೆ ಹೊರಡುವದಿಲ್ಲ. ಅದೀಗ ನಿಯತ್ತು (ಬಣ್ಣಮಾ. ೧೮೬). ೩. ನಂಬಿಕೆ ; ವಿಶ್ವಾಸ : ಅತ ತುಂಬಾ ನಿಯತ್ತಿನ ಮನುಷ್ಯ (ರೂಧಿ). **ನೀಯತ್ತು** : ೧. ನನ್ನನ್ನು ಇದುವರೆಗೆ ಕಾಪಾಡಿರುವುದು ನನ್ನ ನೀಯತ್ತು. ನೀಯತ್ತಿದ್ದವರಿಗೇ ಬರಖತ್ತು ಎಂದು ತುರುಕರು ಹೇಳುವುದು ನಿಜ (ಶನಿಸಂ. ೧೪೮).

[←ಅರ. ಹಿಂ. ನೀಯತ್; ಮರಾ. ನಿಯತ್, ನಿಯೇತ್, ನೇತ್]

ನಿಯಮ(ನಾ).೧. ಅಂಕೆಯಲ್ಲಿಡುವುದು; ಹತೋಟಿ; ನಿರೋಧಿಸುವುದು ; ನಿಗ್ರಹಿಸುವುದು ; ಪ್ರತಿಬಂಧ. ೨. (ಹೀಗೆಯೇ ಇರಬೇಕೆಂಬ) ಕಟ್ಟು ; ವಿಧಿ ; ಕಟ್ಟಳೆ : ನಿಯಮಮನೀವರ ಸಂಗಂ ನಿಯತಂ ಶಿಕ್ಷಿಸಲೆವೇಡಿದೆನಗಂ ಮನದೊಳ್ ದಯೆ ಪುಟ್ಟುವಂತೆ ನೆಗಟ್ಟನೆ ನಯಹೀನಂ ಮೆಚ್ಚಿದಂದದಿಂದಂ ನೆಗಟ್ಟಂ (ಪಾರ್ಶ್ವಪು. ೪-೨೧) ; ನಿಯಮದ ತೈಲಂ ತೀರ್ದೊಡೆ ಭಯಮಿಲ್ಲದೆ ತನ್ನ ರುಧಿರದಿಂ ದೀಪ್ತಿಗಳಂ ನಯದಿಂ ಬೆಳಗಿದಂ (ತ್ರಿಪುವಿ. ೪೭-೧೭) ; "ವಿಧಿ" ಎಂಬುದರಲ್ಲಿ, ಯಾವುದೊಂದು ಅಧ್ಯಾದೇಶ ಆದೇಶ ಉಪವಿಧಿ ನಿಯಮ ವಿನಿಯಮ ಅಧಿಸೂಚನೆ ಭಾರತ ರಾಜ್ಯಕ್ಷೇತ್ರದಲ್ಲಿ ವಿಧಿಯಂತೆಯೇ ಪ್ರಭಾವವುಳ್ಳ ರೂಢಿ ಅಥವಾ ಪದ್ಧತಿ ಸೇರಿರುತ್ತದೆ (ಭಾಧಾನ. ೭) ; ಧ್ವನಿಪರಿವರ್ತನೆ ಹಾಗೂ ಧ್ವನಿಸ್ಥಾಯಿತ್ವದ ನಿಯಮಗಳು ಈ ಹೋಲಿಕೆಯಲ್ಲಿ ಆಡಗಿವೆಯೇ ? (ದ್ರಾವಿವಿ. ೩೮); ಕರ್ಮನಿಯಮ: ಪ್ರತಿಯೊಂದು ಕ್ರಿಯೆಗೂ ಸಮವಾದ ಹಾಗೂ ವಿರುದ್ಧವಾದ ಪ್ರತಿಕ್ರಿಯೆಯುಂಟೆಂಬುದು ನ್ಯೂಟನ್ನನ ನಿಯಮ (ನಿಶೆಉ. ೨೩೬). ೩. ಅಪ್ಪಣೆ ; ಆಜ್ಞೆ : ಗಿರಿಗುಹೆಯ ಪಡಿಗಳಂ ದಂಡರತ್ನದಿಂ ತೆಱೆದು ಬೆಂಕಿಯಾಱುವಿನಂ ಚೆಚ್ಚರಮಾ ಮ್ಲೇಚ್ಛಮಹೀಪಾಳರ ತೇಜಮನಾಱುಸೆಂದು ನಿಯಮಮನಿತ್ತಂ (ಪಾರ್ಶ್ವಪು. ೧೧-೨೭). ೪. ನಿರ್ಣಯ ; ನಿರ್ಧಾರ ; ನಿಶ್ಚಯ. ೫. ಒಪ್ಪಿಗೆ ; ಸಮ್ಮತಿ ; ಅಂಗೀಕಾರ ; ವಾಗ್ದಾನ : "ಸಂವಿದ್, ಆಗೂಃ, ಪ್ರತಿಜ್ಞಾನಂ, ನಿಯಮಃ, ಆಶ್ರವಃ, ಸಂಶ್ರವಃ . . . ೧೦ ಅಂಗೀಕಾರದ ಹೆಸರುಗಳು ಅಂದರೆ ನನಗಿರಲಿ ಎಂದು ಒಪ್ಪುವಿಕೆ" (ಸಿದ್ಧಾಂತಿ.೪೩). ೬. ಕ್ರಮಬದ್ಧವಾದ ಅನುಷ್ಠಾನ,—ಆಚರಣೆ : ನಿಯಮದಿನಾಗಳುಂ ವನದೊಳಿರ್ಪ ವಳೀಕ್ಷಿಸಿ ಕಲ್ತಳಕ್ಕುಮೀ ಕ್ರಿಯೆಗಳನೆಂಬಿನಂ ಶಬರಿ ತಾಳ್ದಿದ ಪುಲ್ಲೆಯ ಕೊಲ್ಲಿನೋಟಮಂಚೆಯ ನಿಮಿರ್ದಿಂಚರಂ . . . ಒಱಲ್ಚಿತು ಕೂಟದೊಳೊರ್ವ ಭಿಲ್ಲನಂ (ಪುಷ್ಪಪು.೫-೯೭) ; ನಿಯಮದೆ ಸನ್ನಿಧಿಗುತ್ತರದಯನದೊಳೆಸೆದಿರ್ಪ ಕರಿಯ ಮಾಣಿಕ್ಯಸ್ವಾಮಿಯ ಸನ್ನಿಧಿಯೊಳವರ್ . . . ಕುಳ್ಳಿರಲೊಡಂ (ವಿಷ್ಣಪು.೧೦-೨೯); ಈ ನಿಯಮಗಳನ್ನು ಲಕ್ಷ್ಯದೊಳಗಿಟ್ಟುಕೊಂಡು ನಡೆಯುವವನಿಗೆ ಬಹುತರ ರೋಗಗಳು ಬರಲಿಕ್ಕಿಲ್ಲ (ಮುಂಬಯಿ. ೪-೨೫) ; ನಿಯಮ ಉಳ್ಳವನನ್ನು ಕಂಡರೆ ಯಮನಿಗೂ ಭಯ (ಗಾದೆ). ೭. ದೇವರ ಪ್ರೀತಿಗಾಗಿ ಮಾಡುವ ಉಪವಾಸ, ಧ್ಯಾನ ಮೊದಲಾದ ಆಚರಣೆ; ವ್ರತ : "ಪರಿಮಿತವ್ರತಸ್ಥಿತಿ ನಿಯಮಂ" (ಪಸ್ತುಕೋ. ೫೮-೩೬) ; ದಯೆ ವೃಕ್ಷಮೂಲಮೆನಿಕುಂ ನಿಯಮಂ ವೃತಿ ಶೀಲಮಾಳವಾಳಮೆನಲ್ಕೇೞ್ಗೆಯನಾಳ್ದು ಸುಖದ ಫಲಪ್ರಾಪ್ತಿಯನಾಗಿಪ ಕಲ್ಪವೃಕ್ಷಮಲ್ಲದೆ ಧರ್ಮಂ (ಪುಷ್ಪಪು. ೧೩-೫೫). ೮. ತಪಸ್ಸು : "ವ್ರತಂ ನಿಯಮವೆನೆ ತಪಂ" (ಮಂಗರಾ. ೧೩೫-೩೬) ; ನಿಯಮದಿನಿರ್ದನಂ ನಿರಪರಾಧನನನ್ನೆಯದಿಂದಮೆನ್ನ ತಂಗೆಯ ಮಗನಂ ವಿದಾರಿಸಿದನಂ ತಱುದು . . . ಆಱಾಪೆಂ ಖರನ ಶೋಕಕೃಶಾನುವಂ (ಪಂರಾಮಾ. ೯-೭೨). ೯. [ತತ್ತ್ವಶಾ] ಪರಮೇಶ್ವರನ ಪಂಚಕೃತ್ಯಗಳಲ್ಲಿ ಒಂದು ; ಪ್ರಪಂಚದ ಮೇಲಿನ ಹತೋಟಿ,—ಅಂಕೆ: ಸೃಷ್ಟಿ, ಸ್ಥಿತಿ, ಸಂಹಾರ, ನಿಯಮ, ಅನುಪ್ರವೇಶ ಎಂಬ ಪಂಚಕೃತ್ಯಗಳಿಂದ ಪ್ರವೃತ್ತಿ ಮಾಡಿದಂಥ ಪದಾರ್ಥಗಳ ಪ್ರಪಂಚಮಯನಾದವನು (ಈಶ್ವರ) (ಅಮೃತ. ೩-೧೫೦ ಅಡಟಿ). ೧೦. ಹೇತು ಮತ್ತು ಸಾಧ್ಯಕ್ಕೆ ಇರುವ ಸಂಬಂಧವಿಶೇಷ ; ವ್ಯಾಪ್ತಿ ; ℙ ಒಂದು ಬೆಟ್ಟದಲ್ಲಿ ಹೊಗೆಯನ್ನು ನೋಡಿದಾಗ ಅಲ್ಲಿ ಬೆಂಕಿ ಇದೆ ಎಂಬ ಊಹೆ ಬರುತ್ತದೆ. ಈ ಸಂದರ್ಭದಲ್ಲಿ ಬೆಂಕಿಯು ಸಾಧ್ಯ (ಸಾಧಿಸಬೇಕಾದ ವಸ್ತು), ಧೂಮವು ಹೇತು : ಮೀಮಾಂಸಕಮತದಲ್ಲಿ ವ್ಯಾಪ್ತಿಯೆಂದರೆ ಅದೊಂದು ಸಂಬಂಧವು . . . ಹೇತು ಸಾಧ್ಯಗಳಿಗೆ ವ್ಯಾಪ್ತಿಯೆಂಬ ಸಂಬಂಧವಿರುವುದು, ಅದಕ್ಕೆ ನಿಯಮವೆಂದು ಹೆಸರು (ಹಿಂದಸಾ. ೧೭೯). ೧೧. [ಕಾವ್ಯಮೀ] ಕವಿಸಮಯದಲ್ಲಿ ಒಂದು ಬಗೆ : ನಿಯಮವೆಂದರೆ, ಅನೇಕ ಕಡೆಗಳಲ್ಲಿ ದೊರಕಬಹುದಾದ್ದನ್ನು ಒಂದೇ ಕಡೆ ದೊರಕುವಂತೆ ಹೇಳುವುದು, ಅಥವಾ ಅನೇಕ ಗುಣಗಳು ಇರುವ ಕಡೆ ಒಂದೇ ಗುಣವಿರುವಂತೆ ಹೇಳುವುದು (ಕೈಪಿಡಿ. ೨೪೫). ℙ ಉದಾಹರಣೆಗೆ ಅನೇಕ ಕಡೆ ದೊರಕಬಹುದಾದ ಶಂಖವನ್ನು

ಸಮುದ್ರದಲ್ಲಿ ಮಾತ್ರ ಇದೆಯೆಂದು ವರ್ಣಿಸುವುದು. ೧೨. = ನಿಯಾಮ ೫ : ರೇಫ ಜಕಾರಂಗಳ ನಿಯಮಮಾಗ ಮುದರ್ಕೆ – ಧುರದೊಳ್ ಪಲುಮಜಯಮಾಡುವ ತೆಜದಿಂದುಜದಿಜುದನೆಂಬ ನಿಯಮಂ ದೂಷ್ಯಂ (ಶಪುದ. ೧೯ ಪ್ರಯೋ). ೧೩. [ಯೋಗ] ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂಬ ಯೋಗದ ಎಂಟು ಅಂಗಗಳಲ್ಲಿ ಎರಡನೆಯದು; ℙ ಯೋಗದ ಮೊದಲನೆಯ ಅಂಗವಾದ ಯಮವು ಸಮಾಜದಲ್ಲಿ ಮನುಷ್ಯನ ನಡೆ ನುಡಿಗಳನ್ನು ಪರಿಷ್ಕರಿಸುತ್ತದೆ. ನಿಯಮವು ವ್ಯಕ್ತಿಯ ಅಂತರಂಗ ಜೀವನವನ್ನು ಪರಿಷ್ಕರಿಸುತ್ತದೆ. ನಿಯಮದಲ್ಲಿ ಐದು ಬಗೆಗಳಿವೆ. ೧. ಶೌಚ = ಶುಚಿಯಾಗಿರುವುದು. ೨. ಸಂತೋಷ = ತೃಪ್ತಿಯಿಂದಿರುವುದು. ೩. ತಪಸ್ಸು = ಕಠಿನವಾದ ಕೃಚ್ಛ್ರ, ಚಾಂದ್ರಾಯಣ ಮೊದಲಾದ ವ್ರತೋಪವಾಸಗಳನ್ನು ಆಚರಿಸುವುದು; ಶಾಸ್ತ್ರೀಯ ಕ್ರಮದಿಂದ ನೂಡುವ ದೇಹದಂಡನೆ. ೪. ಸ್ವಾಧ್ಯಾಯ = ಮಂತ್ರ ಜಪ, ವೇದಾಧ್ಯಯನ. ೫. ಈಶ್ವರಪ್ರಣಿಧಾನ = ದೇವರನ್ನು ಒಂದೇ ಮನಸ್ಸಿನಿಂದ ಧ್ಯಾನಿಸುವುದು: "ಯಮಂ ನಿಯಮಾದಿ ನಿಜಯೋಗಮಕ್ಕುಂ"(ಪುಂಗರಾ. ೬೬–೧೭); ಯಮನಿಯಮಸ್ವಾಧ್ಯಾಯ ಧ್ಯಾನಧಾರಣಮೋನಾನುಷ್ಠಾನಜಪಸಮಾಧಿಶೀಳಸಂಪ್ಪನ್ನರ್ . . .ರುದ್ರ ಭಟ್ಟೋಪಾಧ್ಯಾಯರ್ (ಪೌಇ. XX, ೪೬–೧೬; 1072); ಯಮ ನಿಯಮಸ್ವಾಧ್ಯಾಯಕ್ರಮಯುತರ್ . . . ಜಾರಣ[ರ್] ಮುಖಿ [ಯುಗಳರ್] (ಬಂಪು. ೮–೬೫); ಯಮನಿಯಮಆಸನಪ್ರಾಣಾಯಾಮ ಪ್ರತ್ಯಾಹಾರಧ್ಯಾನಧಾರಣಸಮಾಧಿಗಳೆಂಬ ಅಷ್ಟಾಂಗಯೋಗದೊಳಗೆ (ಅಐಂಡೇ. ೨೧೪–೫೪); ಈ ಎರಡನೆಯದಾದ ನಿಯಮವು ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ, ಈಶ್ವರಪ್ರಣಿಧಾನ ಎಂಬ ಐದು ಅಂಶಗಳನ್ನೊಳಗೊಂಡಿದೆ (ಭಾರದ. ೧೫೫೫). [ಸಂ.]

ನಿಯಮಜ್ಞ (ನಾ). ನಿಯಮವನ್ನು ಬಲ್ಲವನು; ವ್ರತದ ಕ್ರಮವನ್ನು ತಿಳಿದಿರುವವನು: ನಿಯಮಜ್ಞರ್ ಸಕಳಾಗಮಜ್ಞರಮಳರ್ ಸಂದರ್ ಧರಾಜಕ್ರದೊಳ್ (ಸುಕುಪೂ. ೧–೧೨). [ಸಂ.]

ನಿಯಮನ (ನಾ). ೧. ಅಂಕೆಯಲ್ಲಿಡುವುದು; ಹತೋಟಿಯಲ್ಲಿಡುವುದು; ನಿಗ್ರಹಿಸುವುದು: ನಾವು ಆಗಲೇ ಹೇಳಿರುವ ಐದು ವಿಧವಾದ ಚಿತ್ತವೃತ್ತಿಯ ನಿಯಮನವೇ, ನಿರೋಧವೇ ಯೋಗದ ಲಕ್ಷಣ (ತತ್ತ್ವಪ್ರಾ. ೨೬೯); ನಿಯಮನವೆಂದರೆ ಸರ್ವವಸ್ತುಗಳನ್ನು ಆಯಾ ಸ್ವಭಾವದಲ್ಲಿರಿಸುವ ಅಧಿಕಾರ (ಹಿಂದಸಾ. ೨೫೩). ೨. ಅಪ್ಪಣೆ; ಆಜ್ಞೆ: ಯಮನ ಗೆಲ್ಲುವಡೆ . . . ಯಮಳಾರ್ಜುನಭಂಜನ ಶ್ರೀಹರಿಯ ನಿಯಮನವಿಲ್ಲದೆ ಘಟಿಸುವುದೆ (ತತಪಾಂ. ೬೩–೬೮). ೩. = ನಿಯಮನ ೯: ನಿಯಮನವೆಂದರೆ ಸಕಲವಿಧಪ್ರಯತ್ನಕ್ಕೂ ಕಾರಣವಾಗಿರುವ ಪರಮಾತ್ಮಪ್ರೇರಣೆ (ಹಿಂದಸಾ. ೨೮೪); ನಿಯಮನವೆಂದರೆ ವ್ಯಾಪಾರ ಮಾಡುವುದರಲ್ಲಿ ಪ್ರೇರಣೆ (ಭಾತತ್ತ್ವ. ೯೨೫); ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷಗಳೆಂಬ ೮ ಕರ್ತೃತ್ವ ಉಳ್ಳ ಶ್ರೀ ಪರಮಾತ್ಮನಿಗೆ (ಪಸಾರ. ೨೨–೧೧ ಪದ್ಯಾರ್ಥ). [ಸಂ.]

ನಿಯಮನಿಧಾನ (ನಾ). ತಪಸ್ಸೇ ನಿಧಿಯಾಗಿ ಉಳ್ಳವನು; ತಪಸ್ವಿ: ಸ್ನಾನಾರ್ಥಮೊಂದು ಕಳಶಮನಾ ನಿಯಮನಿಧಾನನೆಬಲೆ ನಿಡಿದನುಳಿನಗಂಗಾನದಿಗೆ ಸಂದು ಸುರತನಧಾನಿಯನಸುರೇಂದ್ರಗಜಕೆಯಂ ಮುನಿ ಕಂಡಂ (ಪಂಪಭಾ. ೨–೪೧). [ನಿಯಮ + ನಿಧಾನ]

ನಿಯಮನಿರತೆ (ನಾ). ವ್ರತ, ಉಪವಾಸ ಮೊದಲಾದುವನ್ನು ಪಾಲಿಸುವವಳು: ನಿಯಮಪರಾಯಣೆ : ಎಲೌ ಸುವ್ರತೆ, ನಡೆ, ನಿಯಮನಿರತೆಯಾಗಿರುವ ಶಕುಂತಳೆಗೆ ಈ ವೃತ್ತಾಂತವನ್ನು ತಿಳಿಸೋಣ (ಶಾಕುಂತ. ೧೦೮–೧೦). [ಸಂ. ನಿಯಮನಿರತಾ]

ನಿಯಮನಿಷ್ಠೆ (ನಾ). ಕ್ರಮಬದ್ಧವಾದ ಅನುಷ್ಠಾನದಲ್ಲಿ ಆಸಕ್ತಿ; ವ್ರತೋಪವಾಸಾದಿಗಳಲ್ಲಿ ಶ್ರದ್ಧೆ: ಅವನು ವೈದಿಕವನ್ನು ಒಳ್ಳೆ ನಿಯಮನಿಷ್ಠೆಯಿಂದ ನೂಡುತ್ತಾನೆ (ರೂಢಿ). [ನಿಯಮ + ನಿಷ್ಠೆ]

ನಿಯಮಪಾಲನೆ (ನಾ). ಕಟ್ಟಳೆಗಳನ್ನು ಪಾಲಿಸುವುದು: ದಂಡ ತೆಗೆದುಕೊಳ್ಳುವುದರ ಉದ್ದೇಶವು ಗ್ರಂಥಾಲಯಕ್ಕೆ ಉತ್ಪನ್ನವನ್ನು ಮಾಡಿಕೊಳ್ಳಬೇಕೆಂದಿದರೆ ಓದುಗರಿಗೆ ನಿಯಮಪಾಲನೆಯನ್ನು ಮನವರಿಕೆ ಮಾಡಿಕೊಡುವುದಾಗಿದೆ (ಗ್ರಂಥಾಲ. ೬೭). [ನಿಯಮ+ಪಾಲನೆ]

ನಿಯಮಬದ್ಧ (ನಾ). ಕ್ರಮದಿಂದ ಕೂಡಿರುವುದು; ಕ್ರಮಬದ್ಧವಾದುದು: ಅವಳ ಕಾಲಿನ ಗೆಜ್ಜೆಯಂದಿಗೆಯು ಕೂಡ ನಿಯಮಬದ್ಧವಾಗಿರುವಂತೆ ಮೃದುವಾಗಿ ಮಂಜುಳನಾದಿಯಾಗಿ ಮನಸ್ಸನ್ನು ಮೆಚ್ಚಿಸುತ್ತಿತ್ತು (ಮುಹಾಗ. ೨೩೭). [ನಿಯಮ+ಬದ್ಧ]

ನಿಯಮರಹಿತ (ನಾ). ನಿಯಮವನ್ನು ಬಿಟ್ಟಿರುವುದು; ಕಟ್ಟುಪಾಡಿಗೆ ಒಳಪಡದಿರುವುದು: ನಿಯತಿಕೃತನಿಯಮರಹಿತವಾದ ಸಾಹಿತ್ಯಿಕ ನಾಟಕಗಳಲ್ಲಿಯೂ . . . ಸ್ವಭಾವದ ವಿಲಾಸವು ಪ್ರಕಟವಾಗುವುದು (ಪ್ರಬಂಧ. ೩೧). [ನಿಯಮ + ರಹಿತ]

ನಿಯಮವಿಘ್ನ (ನಾ). ತಪಸ್ಸಿಗೆ ತೊಂದರೆ,—ಎಡರು; ತಪೋಭಂಗ: ಆ ರಾಜರ್ಷಿಯು ನಿಯಮವಿಘ್ನಾರ್ಥವಾಗಿ ಭೀತರಾದ ದೇವತೆಗಳಿಂದ ಮೇನಕೆಯೆಂಬ ಅಪ್ಸರಸ್ತ್ರೀಯು ಕಳುಹಿಸಲ್ಪಟ್ಟಳು (ಶಾಕುಂತ. ೧೪–೯). [ನಿಯಮ + ವಿಘ್ನ]

ನಿಯಮವಿಚಾರ (ನಾ). [ರಾಜನೀ] ಶಾಸನ ಸಭೆಗಳಲ್ಲಿ ಯಾವುದಾದರೂ ಒಂದು ಅಂಶವು ಸಭೆಯ ನಿಯಮಗಳಿಗೆ ವ್ಯತಿರಿಕ್ತವಾಗಿದೆಯೆ ಎಂಬ ಅಂಶದ ಪರಿಶೀಲನೆ: (ಸಭಾ) ನಿಯಮವಿಚಾರ (Point of order.' ಇಂಳಸಾ). [ನಿಯಮ+ವಿಚಾರ]

ನಿಯಮಸ್ಥ (ನಾ). ಸದಾಚಾರವುಳ್ಳವನು; ಆಚಾರಶೀಲ: ಮುಂದುಗಾಣನು ಲೋಗರಂ ತೃಣವೆಂದುವಜುಯನು ತನ್ನನಜುಯನ ಮಂದಗರ್ವದಿ ತಾ ಮಹಾನಿಯಮಸ್ಥನಂದದಲಿ (ಬಸತ. ೪೩–೩೬).

[ಸಂ.]

ನಿಯಮಸ್ಥಾನ (ನಾ). [ಕಾಮಶಾ] ಕಾಮಶಾಸ್ತ್ರದಲ್ಲಿ ಹೇಳಿರುವಂತೆ ಯಾವಾಗ, ಎಲ್ಲಿ ಕಲೆಗಳಿರುತ್ತವೆ ಎಂದು ನಿಯಮಿಸಿರುವ ಸ್ಥಳ; ℙ ಪಾಠ್ಯ ಮೊದಲಾದ ಹದಿನೈದು ತಿಥಿಗಳಿಗನುಗುಣವಾಗಿ ಸ್ತ್ರೀಯೊಬ್ಬ ಮನುಷ್ಯನಲ್ಲೂ ಪಾದಾಂಗುಷ್ಠ, ಗುಲ್ಫ, ಊರು, ಭಗ, ನಾಭಿ, ಎದೆ, ಹೃದಯ, ಕಕ್ಷ, ಕಂಠ, ಓಷ್ಠ, ಗಂಡ, ನಯನ, ಶ್ರವಣ, ಲಲಾಟ, ಶಿಖೆ—ಈ ಹದಿನೈದು ಸ್ಥಾನಗಳಲ್ಲಿ ಯಥಾಕ್ರಮವಾಗಿ ಸ್ತ್ರೀಯರಿಗೆ ಎಡಪಾರ್ಶ್ವದಲ್ಲಿಯೂ ಪುರುಷರಿಗೆ ಬಲಪಾರ್ಶ್ವದಲ್ಲಿಯೂ ಕಾಮು ಸಂಚರಿಸುತ್ತಾನೆ. ಪಕ್ಷದ ಆಯಾ ದಿನಗಳಿಗೆ ಸಂಬಂಧಿಸಿದಂತೆ ಕಾಮೋತ್ಪತ್ತಿಯಾಗುವ ಸ್ಥಳಗಳಿಗೆ ಈ ಹೆಸರು ಅನ್ವಯಿಸುತ್ತದೆ: ನಿಯಮಸ್ಥಾನಮನಂಟ ಸತ್ಪದೊದವಂ ಮುಂ ನೋಡಿ . . . ಅಂಗನೆಯಿಚ್ಛೆಯಂ ಸಲಿಸಿದೆಂ ಸಂಭೋಗದೊಳ್ ಯೋಗದೊಳ್ (ದಶಕು. ೧೦–೪೦). [ನಿಯಮ + ಸ್ಥಾನ]

ನಿಯಮಸ್ಥಿತಿ (ನಾ). ವ್ರತ ನಿಯಮಾದಿಗಳಿಂದ ದೇಹವನ್ನು ದಂಡಿಸುತ್ತಾ ಧ್ಯಾನಮಾಡುವುದು; ತಪಸ್ಸು: "ತಪಸ್ಯಾ, ನಿಯಮಸ್ಥಿತಿ! — ಈ ತ ತಪಂ" (ಹಲಾಮು. ೧೩೪–೬೧).

[ನಿಯಮ+ಸ್ಥಿತಿ]

ನಿಯಮಾಂತರಿತ (ನಾ). ನಿಯಮದಿಂದ ಕೂಡಿಕೊಂಡಿರುವುದು; ನಿಯಮಿತವಾದುದು: ಸರಸಿಜದೊಳ್ ನಿನ್ನ ಮುಖಂ ತರುಣೀ ಸದೃಶಂ ಸಮಂತು ಪೋಲದು ಪೆಱತಂ ನಿರುತಮಿದೆಂಬುದು ನಿಯಮಾಂತರಿತಂ ನಿಯಮೋಪಮಾವಿಕಲ್ಪಿತಭಾಗಂ (ಕವಿರಾ. ೩-೬೪).

[ನಿಯಮ+ಅಂತರಿತ]

ನಿಯಮಾಧೀನ (ನಾ). ನಿಯಮಕ್ಕೆ ಅಧೀನವಾದುದು; ವ್ಯವಸ್ಥೆಗೆ ಒಳಪಟ್ಟುದು; ಕಟ್ಟುಪಾಡಿಗೆ ವಶವಾದುದು: ಈಗ ಜೀವನ ಅತ್ಯಂತ ಸ್ಪಷ್ಟವಾಗಿ ಸರಳವಾಗಿ ಸ್ವನಿರ್ಮಿತ ನಿಯಮಾಧೀನವಾಗಿ ಸಾಗುತ್ತಿತ್ತು (ಪುನರು. ೫೯). [ನಿಯಮ+ಅಧೀನ]

ನಿಯಮಾರ್ಥ (ನಾ). = ನಿಯಮ ೧೧: ಅತತಸತ್ಕವಿಸಮಯಂ ಜಾತಿದ್ರವ್ಯಕ್ರಿಯಾಗುಣಾಶ್ರಯಮಸದಾಖ್ಯಾತಿ ಸದಕೀರ್ತನಂ ನಿರ್ಣೀತಂ ನಿಯಮಾರ್ಥಮೈಕ್ಯಮೆನೆ ನಾಲ್ಕು ತೆಱಂ (ಕಾವ್ಯಾವ. ೮೪೫). 'ನಿಯಮ' ಪರಾ. [ನಿಯಮ+ಅರ್ಥ]

ನಿಯಮಾವಳಿ (ನಾ). ೧. ನಿಯಮಗಳ ಗುಂಪು,—ಸಮೂಹ. ೨. ನಿಬಂಧನೆಗಳ ಗುಂಪು: ಪಕ್ಷದ ನಿಯಮಾವಳಿಗಳು, ಧೋರಣೆಗಳು ವ್ಯಕ್ತಿಯ ನಿಷ್ಠೆ ಎಲ್ಲವನ್ನೂ ಬೇಡುವುವು (ರಾಜಪ. ೭೬).

[ನಿಯಮ+ಆವಳಿ (=ಆವಲಿ)]

ನಿಯಮಿಗ (ನಾ). ನಿಯಮಗಳನ್ನು ಆಚರಿಸುವವನು: ಪಡಿಸಣ ಮನಾಚರಿಪಂ ಪಡಿಸಣಿಗಂ, ಏವಂ ಅಟಮಟಿಗಂ . . . ನಿಯಮಿಗಂ (ಶಬ್ದಾನು. ೪೦೭ ಪ್ರಯೋ). [ನಿಯಮ+-ಇಗ]

ನಿಯಮಿತ (ಗು). ೧. ಹತೋಟಿಗೆ ತಂದ; ಅಂಕೆಗೊಳಿಸಿದ; ವಶಪಡಿಸಿಕೊಂಡ: ಶೀಲಸಂಬಂಧ ಬ್ರತಿಗಳಂ ಶೀಲಸಂಬಂಧಸ್ಥಿತಿಯೊಳನು ಕೂಲಭಾವದೊಳಿರಿಸಿ ಯಿರಿಸಿ ನಿಯಮಿತಶೀಲರನು (ಬಸವು. ೬-೩೧). ೨. ಗೊತ್ತುಮಾಡಿದ; ನಿಗದಿಮಾಡಿದ; ನಿರ್ಧರಿಸಿದ: ನಿಯಮಿತಾನ್ವಯ ಜಾತಿಗುಣಕ್ರಿಯಾಶ್ರಯಮಿದಾಯವಧಾರಣಲಕ್ಷಣಂ (ಕವಿರಾ. ೧-೧೩೮); ಹಿಂದುಸ್ತಾನದೊಳಗಿನ ಯಾವದೇ ಸ್ಥಳಕ್ಕೆ ಆಗಲಿ ನಿಯಮಿತ ತೂಕದವರೆಗೆ ಅರ್ಧ ಆಣೆಗೆ ಪತ್ರ ಮಾತ್ರ ಮುಟ್ಟಿಸುವ ಬಗ್ಗೆ ವ್ಯವಸ್ಥೆಯಾದಂದಿನಿಂದಲೂ ಪತ್ರವ್ಯವಹಾರವು ಬಹಳೇ ಬೆಳೆದದೆ (ಮುಂಬಯಿ. ೪-೮೩). ೩. ಆಳಿಕೆಗೆ ಒಳಗಾದ. ೪. (ಮಾತಿಗೆ) ಕಟ್ಟುಬಿದ್ದಿರುವ; (ಪ್ರತಿಜ್ಞೆಯಿಂದ) ಬಂಧಿತನಾಗಿರುವ. (ನಾ). ೫. ಹತೋಟಿಗೊಳಗಾದುದು; ಅಧೀನಕ್ಕೆ ಒಳಪಟ್ಟುದು: ಪಾಚಸ್ಪತಿಯು ತನ್ನ "ಭಾಮತಿ"ಯಲ್ಲಿ ಪ್ರಕೃತಿಯ ಚಲನೆಯು ಈಶ್ವರನಿಂದ ಪ್ರೇರಿತವೂ ನಿಯಮಿತವೂ ಆಗಿದೆಯೆಂದು ಹೇಳುತ್ತಾನೆ (ತತ್ವಪ್ರಾ. ೨೬೯). ೬. (ಒಂದು ಕೆಲಸದಲ್ಲಿ) ನಿಯೋಜಿತನಾದವನು; ನೇಮಕ ಹೊಂದಿದವನು: ಕಾಸಕ್ ಜನಗಳಿಗೆ, ತಮ್ಮ ಹಳ್ಳಿಯನ್ನು ಕಾಯಲು ನಿಯಮಿತನಾಗಿರುವ . . . ರಷ್ಯನ್ ಶಿಪಾಯಿಯಲ್ಲಿ ದ್ವೇಷ ಹೆಚ್ಚು (ಪುಲೆನಾ. ೨೧). ೭. ಕ್ರಮಬದ್ಧವಾಗಿರುವುದು; ವ್ಯವಸ್ಥೆಯಿಂದ ಕೂಡಿರುವುದು: ಹೆಚ್ಚು ಶಾಸ್ತ್ರೀಯವಾಗಿ ಹಾಗು ನಿಯಮಿತವಾಗಿ ಮಾಡುತ್ತಾರೆಂದು ಕಾಣುತ್ತದೆ (ದೇಕನ್ಯೆ. ೩೮). [ಸಂ.]

ನಿಯಮಿತತನ (ನಾ). ನಿಯಮಬದ್ಧವಾಗಿರುವಿಕೆ; ಕ್ರಮಬದ್ಧವಾಗಿರುವಿಕೆ; ಸಮಯನಿಷ್ಠೆ; ಕಾಲನಿಷ್ಠೆ: ಕೈಗಾಡಿಯಲ್ಲಿ 'ಉಪ್ಪು' ಬೇಕೇ ಎಂದು ಕೂಗುತ್ತ ಹೋಗುವಾತನ ನಿಯಮಿತತನ, ಪರಿಚಿತ ದನಿ, ಇವೆಲ್ಲವುಗಳಿಗೆ ಯಶೋದೆ ಹೊಸ ಅರ್ಥವನ್ನೆ ಕೊಡಲಾರಂಭಿಸಿದಳು (ವಾತ್ಸಲ್ಯ. ೧೨೦); ವಿದ್ಯಾರ್ಥಿಗಳಲ್ಲಿ ನಿಯಮಿತತನವು ಎದ್ದು ಕಾಣುತ್ತಿದೆ (ಕಪಪು. ೫-೨). [ನಿಯಮಿತ+-ತನ]

ನಿಯಮಿತಶ್ಲೇಷೆ (ನಾ). [ಕಾವ್ಯಮೀ] ಶ್ಲೇಷೆಯಲ್ಲಿ ಒಂದು ವಿಧ; ನಿಯಮಕ್ಕೆ ಒಳಪಟ್ಟರುವ ಶ್ಲೇಷೆ; ೫ ಅರಿಗೋತ್ರಭೇದಿ ವಿಬುಧೇಶ್ವರನಲ್ಲಂ (ಕವಿರಾ. ೩-೧೧೨) —ಎಂಬುದು ಉದಾಹರಣೆ. ಅರಿಗೋತ್ರಭೇದಿ ಎಂಬುದರಲ್ಲಿ "ದ್ವೇಷಿಗಳಾದ ಬೆಟ್ಟಗಳನ್ನು ಭೇದಿಸುವವನು" ಮತ್ತು "ಶತ್ರುಗಳ ವಂಶವನ್ನು ನಾಶಪಡಿಸುವವನು" ಎಂಬ ಎರಡು ಅರ್ಥಗಳಿವೆ. ಇಲ್ಲಿ ಆ ಪದದ ಇಂದ್ರಪರವಾದ ಅರ್ಥವು ಹೋಗಿ ಶತ್ರುಗಳ ವಂಶವನ್ನು ನಾಶಪಡಿಸುವವನು ಎಂಬ ಅರ್ಥದಲ್ಲಿ ನಿಯಮವನ್ನು ಹೊಂದಿದೆ. ಎಂದರೆ ಇಲ್ಲಿ ಶ್ಲೇಷೆಯಿಂದ ಎರಡು ಅರ್ಥ ಹೊರಡುವಾಗ ಒಂದು ಅರ್ಥವನ್ನು ಒಂದು ಕಡೆ ನಿಯಮ ಮಾಡಿ ಮತ್ತೊಂದು ಕಡೆ ಇಲ್ಲವೆಂದು ಹೇಳುವುದು. ಇದನ್ನು ಪರಿಸಂಖ್ಯಾಲಂಕಾರವೆಂದೂ ಹೇಳುತ್ತಾರೆ: ವರರೂಪಕಾದ್ಯಳಂಕಾರರಚನೆಯೊಳ್ ಮುನ್ನೆ ಪೇಟ್ದು ಬಂದೆಂ ಕೆಲವಂ ದೊರೆಕೊಳೆ ಬಗೆಗೀ ತೆಱದಿಂ ನಿರಂತರವಿರುದ್ಧ ನಿಯಮಿತಶ್ಲೇಷೆಗಳಂ (ಕವಿರಾ. ೩-೧೧೩). [ನಿಯಮಿತ+ಶ್ಲೇಷೆ]

ನಿಯಮಿತಾಕ್ಷರ (ನಾ). [ಕಾವ್ಯಮೀ] ಇಂಥದೇ ಇರಬೇಕೆಂದು ಒಂದು ಕ್ರಮದಲ್ಲಿ ಗೊತ್ತುಮಾಡಿರುವ ಪದ: ನಿಯಮಿತಾಕ್ಷರದಿಂದುಪಮಾಪ್ರತಿಜ್ಞೆಯನೆ ತಿರ್ದುವುದಟ್ಟಿಯಿಂ (ಕವಿರಾ. ೧-೧೪೪).

[ನಿಯಮಿತ+ಅಕ್ಷರ]

ನಿಯಮಿಸು (ಕ್ರಿ). ೧. ಹತೋಟಿಮಾಡು; ಅಂಕೆಯಲ್ಲಿಟ್ಟುಕೊಳ್ಳು; ವಶದಲ್ಲಿಟ್ಟುಕೊಳ್ಳು: ಪೇಟೇವೆನೆಂತಾಂ ನಿಯಮಿಸಿದದೆ ಪೆನಾ ಧೂರ್ತನಂ ಪತ್ರಲೇಖೇ (ಕಾದಂಉ. ೩೦೫); ನೆಲನಂ ಮರ್ಯಾದೆಯಿಂ ಪಾಲಿಸಿ ನಿಯಮಿಸಿ ವರ್ಣಾಶ್ರಮಾಚಾರಮಂ . . . ಆತ್ಯಂತಿಕ ಸುಖಪದಮಂ ಪೆತ್ತ ರಾಜಾಧಿರಾಜರ್ ಪಲರಿಂದಿಕ್ಷ್ವಾಕುವಂಶಂ ಕುಲನದಿಯ ಪೊಲಾಯ್ತು ವ್ಯವಚ್ಛಿನ್ನರೂಪಂ (ಪಂರಾಮಾ. ೧-೧೩೨); ಎಲ್ಲಾ ಇಂದ್ರಿಯಂಗಳಂ ನಿಯಮಿಸುವುದು ಬ್ರಹ್ಮಚರ್ಯಮೆಂಬುದು (ಹಲಾಯು. ೬೬-೨೪೩); ಮನಮಂ ನಿಯಮಿಸಲರಿಯರ್ . . . ಮನಮಂ ತನುವಂ ನಿಯಮಿಸಲನುದಿನಮೀ ನೇಮಿದೇವನೋರ್ವನೆ ಬಲ್ಲಂ (ಎಕ.VII; ಶಿವಮೊ. ೬೬-೧೭; 1227 ?). ೨. ಅಪ್ಪಣೆ ಮಾಡು; ಆಜ್ಞೆಮಾಡು; ವಿಧಿಸು; ಕಟ್ಟುಮಾಡು: ಸಹದೇವನಂ ವರುಣನನದಿರ್ಪಲ್ ನಿಯಮಿಸುವಂತೆ ಪಶ್ಚಿಮದಿಗ್ಭಾಗಕ್ಕೆ ವೇಟ್ದು (ಪಂಪಭಾ. ೬-೨೮ ಪ); ಸರೋಜನಿಳಯೆಯನೆನ್ನ ಬರ್ಪನ್ನಮರಸನನಗಲದೆ ವಿಕಸಿತಶತಪತ್ರಾತಪತ್ರದ ತಣ್ಣೆಟಲುಮಂ ಕುಂದಲೀಯದಿರೆಂದು ನಿಯಮಿಸಿ ರುದ್ರಾವತಾರಂ . . . ಪೋದಂ (ಪಂಪಭಾ. ೧೩-೧೦೫ ಪ); ಪಡೆವಳನಂ ಬರಿಸಿ ಬೀಡೆಲ್ಲಮರ್ಚನಾದ್ರವ್ಯಂ ಬೆರಸು ಪೊಱಮಡುವಂತೆ ಸಾರೆಂದು ನಿಯಮಿಸಿ (ಧರ್ಮಾಸ್ಯು. ೧-೬೨); ನಿಯಮಿಸೆ ವರೂಥಿನೀಪತಿ ಹಯರತ್ನಮನೇಱಿ ದಂಡರತ್ನಮನಹಿತಕ್ಷಯಕರಮಂ ಧರಿಯಿಸೆ (ಪಾರ್ಶ್ವಪು. ೧೧-೨೯); ನಿಮ್ಮನು ನಿಯಮಿಸುವರಾರುಂಟು ಭಾಗ್ಯೋದಯವಿಹೀನನು ತಾನೆನುತ ಕುರುರಾಯ ಬಿಸುಸುಯ್ದು (ಕುಸ್ಯಾಭೀ. ೧-೨೪). ೩. ಶಿಕ್ಷಿಸು; ದಂಡಿಸು: ಅನ್ನೆಯದಿಂ ನಡೆವವರಂ ನೀನ್ನಿಯಮಿಸುವೈ ದಶಾಸ್ಯ ಪೆಱನಾವಂ ನಿನ್ನನ್ನಿಯಮಿಸುವಂ (ಪಂರಾಮಾ. ೯-೯೨). ೪. ಕಟ್ಟಹಾಕು; ಕಟ್ಟು; ಬಂಧಿಸು: ಆ ಮಹಿಪಂ ಪೀತಾಂಬುವನಂದು ಹಯವನಾಸನ್ನವಿಟಪಿಯೊಳ್ ನಿಯಮಿಸಿದಂ (ಕಾದಂಪೂ. ೬೪೬). ೫. ನೇಮಕಮಾಡು; ನಿಯೋಜಿಸು: ಇಳಾದೇವಿ . . . ಸೀತೆ ಭದ್ರೆಯೆಂಬೆಣ್ಬರುಮಂ ನಾಕನಾಯಕಂ ತ್ರಿಲೋಕಗುರು ಸವಿತ್ರಿಗೆ ಸೀಯನಪ್ಪ ಗೇಯದಿಂ ಪೊಟ್ಟುಗಳೆಯಲ್ ನಿಯಮಿಸಿದಂ (ತಾಂತಿಪು. ೯-೧೬೮ ಪ); ಮತ್ತಮಿತರನಿವಾಸಿನಿಯರಪ್ಪ ಪೆಱಪೆಱರುಮೆನಿಬರಾನುಂ ದೇವಿಯರುಮಂ ದೇವರಾಜಂ ವಿಜಯಸೇನಾ

ದೇವಿಯ ಸಂಶೋಧನಾವಿಧಿವಧೂರಹಸ್ಯ ವ್ಯಾಪಾರಪರಾಯಣರುಂ ಪರಿಚಾರಿಕೆಯರುಮಾಗಿ ನೆಗೞ್ದಂತು ನಿಯಮಿಸೆ (ಆಪಿಪು. ೩-೫೫ ಪ); ಮಹಾಶಿವಮೂರ್ತಿಯಂ ಮತ್ತೆ ಜ್ಯಾತಲಿಂಗಸುಮೂರ್ತಿಯಾಗಿರಲೋತು ನಿಯಮಿಸಿ (ಬಸಪು. ೬೯-೧೪). ೬. ಗೊತ್ತುಪಡಿಸು; ನಿಗದಿಮಾಡು; ಏರ್ಪಡಿಸು; ವ್ಯವಸ್ಥೆ ಮಾಡು: ಅವರ್ಗೆ ಬಾಧೆಯಾಗದಂತು ಕಾಪಂ ನಿಯಮಿಸುತ್ತಂ . . . ಬಂದು (ಸಂಪಭಾ. ೨-೧೭ ಪ); ದೆಸೆಗಳೆನೆ ಮೇರೆಯಂ ನಿಯಮಿಸಿದಲ್ಲದೆ ನಡೆಯದು (ಶಾಂತಿಪು. ೧-೮೯); ಉಭಯಬಲದ ಮಂತ್ರಿಗಳೆರ್ವರುಂ . . . ಧರ್ಮಯುದ್ಧಕ್ಕೆ ಭರತ ಬಾಹುಬಲಿಗಳನೊಡಂಬಡಿಸಿ ಬಲಮೆರಡುಂ ಮಿಡುಕದೆ ನೋಡುವಂತು ನಿಯಮಿಸಿದಾಗಳ್ (ಚಾವುಂಪು. ೪೯). ೭. ಉಪದೇಶಿಸು; ನಿರ್ದೇಶಿಸು: ಸಾವದ್ಯಂ ಸಾರದಂತಾಗಿರೆ ನಿಯಮಿಸುವಾಚಾರ್ಯರಿನ್ನೆಮ್ಮನೇನೋಪಾವಂ ತಳ್ಪಟ್ಟದಂತೋಸರಿಸಿ ಕಳೆಗೆ ಸಂಸಾರಕಾಂತಾರದಿಂದಂ (ಆದಿಪು. ೧-೩); ಗುರುಗಳ್ನಿಯಮಿಸಿದ ಮೋಕ್ಷಮಾರ್ಗದ ಮಾತಂ ನಿರುತಂ ಮಿಾಱಲ್ಪಲ್ಲದು (ಸಮಯ. ೩-೪೧); ಶಿಷ್ಯರಂ ನಿಯಮಿಸುವರ್ ತ್ರಿವಿಧಧನುಃಪ್ರಯೋಗದೊಳ್ . . . ಚತುರಜಾಪಾಚಾರ್ಯರ್ (ಪುಷ್ಪಪು. ೨-೫೯). [ನಿಯಮ+-ಇಸ್ಸು]

ನಿಯಮೋಪಮೆ (ನಾ). [ಕಾವ್ಯವಿಾ] ಉಪಮಾಲಂಕಾರದಲ್ಲಿ ಒಂದು ವಿಧ; ಉಪಮೇಯಕ್ಕೆ ಇದೊಂದೇ ಸಮಾನವಾಗಿದೆ, ಮತ್ತಾವುದೂ ಸಮಾನವಾಗುವುದಿಲ್ಲ ಎಂದು ಪಕ್ಷಾಂತರವನ್ನು ಬಿಟ್ಟು ಪ್ರಕೃತೋಪಮಾನವನ್ನು ನಿಯಮಿಸುವುದು,— ದೃಢಪಡಿಸುವುದು: ಸರಸಿಜದೊಳ್ ನಿನ್ನ ಮುಖಂ ತರುಣೇಂದ್ವಶಂ ಸಮಂತು ಪೋಲದು ಪೆಱತಂ ನಿರುತವಿದೆಂಬುದು ನಿಯಮಾಂತರಿತಂ ನಿಯಮೋಪಮಾವಿಕಲ್ಪಿತಭಾಗಂ (ಕವಿರಾ. ೩-೬೪).

[ಸಂ. ನಿಯಮೋಪಮಾ]

ನಿಯಾಮ (ನಾ). ೧. ಅಂಕೆಯಲ್ಲಿಡುವುದು; ಹತೋಟಮಾಡುವುದು. ೨. ನಿರ್ದೇಶನ; ಮಾರ್ಗದರ್ಶನ: "ಉಯ್-ನಿಯಾಮೇ" (ಶಪಥಾ). ೩. ಅಪ್ಪಣೆ; ಆಜ್ಞೆ: ಆ ಚವುಡಿಸೆಟ್ಟಿಯರ ನಿಯಾಮದಿಂ ನಾಗರಸರು ಪುರದಿಂ ಪಡುವಲು ತೊಱೆಯ ಕೂಡಿದ ಹಳ್ಳ (ಎಇ. XXI, ೧೪-೩೩; 1260). ೪. ದೋಣಿ ನಡೆಸುವವನು; ಅಂಬಿಗ. 'ನಿಯಾಮಕ' ಪರಾ. ೫. [ಛಂದ] ಪದ್ಯದ ಪ್ರತಿಸಾಲಿನ ಪ್ರಥಮ ಮತ್ತು ದ್ವಿತೀಯ ಸ್ವರಗಳ ನಡುವೆ ಒಂದೇ ಬಗೆಯ ವ್ಯಂಜನ ಬರುವುದು; ದ್ವಿತೀಯಾಕ್ಷರ ಪ್ರಾಸ: ಕುಳದ ನಿಯಾಮದೊಳೆಂದುಂ ಕ್ಷಳಕ್ಕೆ ಲಾಕ್ಷರವಿಕಲ್ಪವಿಲ್ಲ (ಶಮದ. ೫); ಇಂತೇಕಸ್ಥಾನಿಗಳಾದ ಕಾರಣದಿಂದಿವು ವರ್ಣಾವೃತ್ತಿಗೆ ಸಲ್ವುವು, ನಿಯಾಮಕ್ಕಂ ಯಮಕ ವ್ಯವಹೃತಿಗಮಾಗವು (ಶಮದ. ೧೯ ವೃತ್ತಿ). [ಸಂ.]

ನಿಯಾಮಕ (ಗು). ೧. ಅಂಕೆಯಲ್ಲಿಡುವ; ಹತೋಟಿಯಲ್ಲಿಟ್ಟುಕೊಳ್ಳುವ. (ನಾ). ೨. ಅಂಕೆಯಲ್ಲಿಟ್ಟುಕೊಂಡಿರುವುದು; ಹತೋಟಿ ಮಾಡುವುದು: ಮನುಷ್ಯನು ವಿಹಿತಕರ್ಮವನ್ನಾಚರಿಸಬೇಕೆಂದೂ ಎಲ್ಲಕ್ಕೂ ಕರ್ಮವೇ ನಿಯಾಮಕವೆಂಬ ಮೀಮಾಂಸಕರ ವಾದ ಮನುಷ್ಯನನ್ನು ಜಡತ್ವ ಬಿಡುವಂತೆ ಪ್ರೇರೇಪಿಸುತ್ತದೆ (ಗೋಪುರ. ೧೭೪); 'ಸರ್ಗಬಂಧ'ವು ಮುಖ್ಯವಾಗಿ ರಸಪ್ರತಿಪಾದನೆಗೆ ಹೊರಟಿದ್ದರೆ ರಸಾನುಗುಣವಾದ ಔಚಿತ್ಯವೇ ಅದರ ಸಂಘಟನೆಗೆ ನಿಯಾಮಕವಾಗುತ್ತದೆ (ಧ್ವನ್ಯಾಲೋ. ೧೫೩); ಬ್ರಹ್ಮಚರ್ಯಾದ್ಯಾಶ್ರಮವ್ಯವಸ್ಥೆಯೆ ಆದರ್ಶ ಜೀವನದ ನಿಯಾಮಕ (ಮಕ್ಕಾರ. ೮೮ ಪೀಠಿಕೆ). ೩. ಅಂಕೆಯಲ್ಲಿಟ್ಟುಕೊಂಡಿರುವವನು; ಹತೋಟಿಯಲ್ಲಿಟ್ಟುಕೊಂಡಿರುವವನು: ಈ ಸರಿಯಲಚ್ಯುತನ . . . ವಿಷಯ ವ್ಯಾಪಕ ಸ್ಥಾಪಕ ನಿಯಾಮಕ ವ್ಯಾಪಕನುಯೆಂದಱಿದು ನೀ ನಿರ್ದೋಷನಾಗಿರು (ಹಸಾರ. ೪-೨೯); ಈ ಕಾರಣದಿಂದಲೇ ಅವರು ಸ್ವಸ್ವರೂಪವನ್ನಾಗಲಿ ತಮಗೆ ನಿಯಾಮಕನಾದ ಭಗವಂತನ ಎಂದರೆ ಬ್ರಹ್ಮನ ಸ್ವರೂಪವನ್ನಾಗಲಿ ತಿಳಿಯದೆ . . . ಸಂಸಾರಬಂಧವನ್ನು ಹೊಂದುವರು (ಭಾಗತ್ತ್ವ. ೯೨೫); ಪ್ರಾಣಿಗಳಿಗೆಲ್ಲಾ ನಿಯಾಮಕನಾದ ಆ ಯಮದೇವನು ಹೊರಟುಹೋದ (ಪಚಭಾ. ೧೭೪). ೪. ರಥವನ್ನು ನಡೆಸುವವನು; ಸಾರಥಿ. ೫. ದೋಣಿ ಅಥವಾ ಹಡಗನ್ನು ನಡೆಸುವವನು; ನಾವಿಕ; ಹಡಗಿನ ಮಾರ್ಗದರ್ಶಕ: "ನಿಯಾಮಕಾಃ, ಪ್ರೋತವಾಹಾಃ — ೨ ಹಡಗಿನ ಕುಳದ ಮೇಲೆ ಇದ್ದು ಹಡಗು ನಡಿಸತಕ್ಕ ಉಪಾಯಗಳನ್ನು ಹೇಳುವವರ ಪೆಸರುಗಳು" (ಸಿದ್ಧಾಂತಿ. ೭೯). ೬. ಅಪ್ಪಣೆ; ನಿಯಮ; ಶಾಸನ: (ಕ).

[ಸಂ.]

ನಿಯಾಮಿಸು (ಕ್ರಿ). ೧. ಅಂಕೆಯಲ್ಲಿರಿಸು; ಹತೋಟಿಯಲ್ಲಿರುವಂತೆ ಮಾಡು; ನಿಗ್ರಹಿಸು: ಉನ್ಮಾರ್ಗದಿಂ ಪರಿವಿಂದ್ರಿಯಂಗಳಂ ನಿವಾರಿಸದೆಯುಂ ಕದಡಿದ ಮನಮಂ ನಿಯಾಮಿಸದೆಯುಂ ಇಂತಿರ್ಪುದುಚಿತಮಲ್ಲಂ (ಕಾದಂಪೂ. ೮೪೮); ಉತ್ಸಾಹಿಗಳಪ್ಪ ರಾಜಪುತ್ರರಂ ನಿಯಾಮಿಸುತ್ತಮಿರ್ದು ಪಗಲುಂ ಕಳೆಯೆ (ಕಾದಂಉ. ೫೦೧). ೨. ಅಪ್ಪಣೆ ಮಾಡು; ಆಜ್ಞಾಪಿಸು: "ನಿಯಾಮಿಸು—ಆಜ್ಞಾಪನೇ" (ಶಪಥಾ); ಮೆಱೆಮಿಂಡಮಾಹೇಶ್ವರನಂ ಶಂಕರಂ ಪರಮಕರುಣದಿಂದೆತ್ತಿ ತಾಂ ಬರಿಸಿದ ದಿವ್ಯವಿಮಾನದೊಳ್ ಕುಳ್ಳಿರಿಸಿ ನಿಯಾಮಿಸಲ್ಕಾಗಳ್ ಸುರಕಾಂತಾಜನವತ್ಯಾದರದಿಂ ನರ್ತಿಸುತಿರಲ್ಕೆ (ತ್ರಿಪುವಿ. ೬-೧೫ ಪ). ೩. ನೇಮಿಸು; ನೇಮಕ ಮಾಡು: ಒಸೆದೀವ ತೆಱಕಾಜನಾರಾತನಂ ನಿಯಾಮಿಸು ತಂದೆ ಎನೆ (ಹಚಕಾ. ೯-೧೫); ಸಕಳಬ್ರಹ್ಮಾಂಡಮಂ ರಕ್ಷಿಸುವ ರುದ್ರಾಣಿಗೆ ರಕ್ಷಣಾರ್ಥಂ ತಂದೆ ನಿಯಾಮಿಸಿ ಕೊಟ್ಟ ದಂಡಿಗೆಯ ಧವಳಛತ್ರದ ಅಂಗರಕ್ಷಕರ . . . ಪೋಡಶಸಹಸ್ರ ವೀಣಾಸಿಯರ್ವೆರಸು ನಡೆತಂದು (ಗಿರಿಕ. ೩-೯೧ ಪ). ೪. ನಿರ್ದೇಶಿಸು; ಅನುಸರಿಸುವಂತೆ ಮಾಡು: ಭವ್ಯನಿವಹಕ್ಕೆ ದಯಾಮಯಮಪ್ಪ ಧರ್ಮಮಂ ಕರಣದಿನೂಱುತೋಱೆ ನೆಱೆ ಪೇಟ್ದು ನಿಯಾಮಿಸುವರ್ ಸುಧರ್ಮದೊಳ್ (ಬಾಧಪು. ೧-೪). ೫. ನಿರೂಪಿಸು; ಹೇಳು: ನೇಹದ ರಮಣಿಯಾಕೆಯ ಸುತರು ಮಹದುದ್ಯಮರು ಕೇಳೆಂದಸುರರಿಪು ಕುಂತಿಗೆ ನಿಯಾಮಿಸಿದ (ಕುವ್ಯಾಉ. ೮-೨೦). [ನಿಯಾಮ+-ಇಸ್ಸು]

ನಿಯುಕ್ತ (ಗು). ೧. (ಒಂದು ಕೆಲಸದಲ್ಲಿ) ನೇಮಕಮಾಡಿರುವ. ೨. ಸೇರಿಕೊಂಡಿರುವ; ಕೂಡಿಕೊಂಡಿರುವ: ದುರ್ವಾರಸಂಸಾರವಿಚ್ಛೇದೋಪಾಯನಿಯುಕ್ತಸೂಕ್ತಿವೃಷಮಾರ್ಗಾಗ್ರೇಸರಂ . . . ದಯೆಗೆಯ್ವನಕ್ಕೆಸುಗೆ (ಆದಿಪು. ೧-೧); ನುಡಿದಂ ಕ್ರಮದಿಂ ಪ್ರಶ್ರಯನಿಯುಕ್ತ ಮಧುರೋಕ್ತಿಗಳಂ (ಚಂದ್ರಪ್ರ. ೫-೨೫); ಸಂಸ್ಕೃತಶಬ್ದನಿಯುಕ್ತ ಲಕಾರದ ನೆಲೆಗೆ ನಿಂದು ಸರಿಯಾಗಿ ಸಲ್ವುದಂ ಕ್ಷಳನೆಂಬರ್ (ಶಮದ. ೧೬). ೩. ಕಟ್ಟಿ ಹಾಕಿರುವ; ಬಂಧಿಸಿರುವ. (ನಾ). ೪. (ಕೆಲಸದಲ್ಲಿ) ನೇಮಕ ಹೊಂದಿರುವವನು: ದ್ವಾರನಿಯುಕ್ತಂ ರೌದ್ರಾಕಾರಂ ವಜ್ರಮುಖನೆಂಬ ದನುಜಂ . . . ತಾಗಿದೊಡೆ (ಸಂಶಾಮಾ. ೧೧-೭೦); ನಿಯುಕ್ತನೆಂದರೆ ಒಂದು ಕೆಲಸದಲ್ಲಿ ಒಬ್ಬಧಿಕಾರಿಯಿಂದ ನಿಯಮಿಸಲ್ಪಡುವವನು (ಹೊಸಗು. ೮೬); ತಂದೆ ಚರ್ಚನ ಕೆಲಸದಲ್ಲಿ ನಿಯುಕ್ತ (ಗಂಮಾಯಿ. ೬೮); ಆ ಕಾರ್ಯಕ್ಕಾಗಿ ಭಾರತದ ಡೊಮಿನಿಯನ್ ಸರ್ಕಾರದಿಂದ ನಿಯುಕ್ತವಾಗಿರತಕ್ಕಂಥ ಪದಾಧಿಕಾರಿಗೆ (ಭಾಧಾನ. ೪). ೫. ಗೊತ್ತುಮಾಡಿದುದು; ನಿಗದಿಯಾಗಿರುವುದು; ನಿಯಮಿತವಾದುದು: ಪಹೋಯುಗ್ಮದಿಂದಂ . . . ಪ್ರಯೋಗಪ್ರಸಿದ್ಧಂ ನಿಯುಕ್ತಂ ವಿಚಿತ್ರಂ (ಛಂದೋಂಬು. ೨-೬೬);

ಪ್ರಿಯೂನಿವರ್ಸಿಟಿ ಮತ್ತು ಡಿಗ್ರಿ ತರಗತಿಗೆ ನಿಯುಕ್ತವಾದ, ಸಮಾಜಶಾಸ್ತ್ರ ಮತ್ತು ವಿಜ್ಞಾನಗಳಿಗೆ ಸಂಬಂಧಿಸಿದಂತೆ . . . ಸುಮಾರು ೫೦ ಪುಸ್ತಕಗಳು ಈ ಮಾಲೆಯಲ್ಲಿ ಹೊರಬಿದ್ದಿವೆ (ಸುವರ್ಣ. ೨೧೫). [ಸಂ.]

ನಿಯುಕ್ತಿ (ನಾ). ೧. ಅಪ್ಪಣೆ; ಆಜ್ಞೆ. ೨. ನಿಯಮಿಸುವುದು; ನೇಮಕ: ಪ್ರಧಾನಮಂತ್ರಿಯವರ ನಿಯುಕ್ತಿಯನ್ನು ರಾಷ್ಟ್ರಪತಿಯವರು ಮಾಡತಕ್ಕುದು (ಭಾಧಾನ. ೩೭). ೩. ಸೇರುವಿಕೆ; ಕೂಡುವಿಕೆ: ಹರುಷಂಬಟ್ಟು ಪುನರಪಿ ಜಂಗಮಕೆ ಪೊಡವಟ್ಟು ಭಕ್ತಿನಿಯುಕ್ತಿಯಲಿ ದಸರಯ್ಯನಿರುತಿರಲು (ಬಸಪು. ೩೮-೫೦); ಗುರುಪದಾಂಬುಜ ಭಕ್ತಿಯುಂ ಗುರುಕರುಣಾಕಾರ್ಯನಿಯುಕ್ತಿಯುಂ . . . ನಿರುತದಿಂ ರಂಜಿಸುತಮಿರಲು (ಬಸಪು. ೩೯-೪). ೪. ಹುದ್ದೆ; ಅಧಿಕಾರ.

ನಿಯುಕ್ತಿ ಮಾಡು = ನೇಮಕ ಮಾಡು; ನೇಮಿಸು: ಪದವೀಧರರಾಗಿದ್ದ ತರುಣಯರಿದ್ದರೆ ತಮ್ಮ ಶಾಲೆಯಲ್ಲಿ ಅಧ್ಯಾಪಿಕೆಯರಾಗಿ ನಿಯುಕ್ತಿ ಮಾಡಲು ಸಿದ್ಧರಾಗಿರುವುದಾಗಿಯೂ . . . ಪತ್ರ ಬರೆದರು (ಥೇಮ್ಸ್‌ಗಂ. ೧೬೧). [ಸಂ.]

ನಿಯುತ (ನಾ). ೧. ಕೂಡಿಕೊಂಡಿರುವುದು; ಸೇರಿರುವುದು. ೨. ಒಂದು ಸಂಖ್ಯೆ; ಒಂದು ಲಕ್ಷ. ೩. ಹತ್ತುಲಕ್ಷ; ದಶಲಕ್ಷ. ೪. ಹತ್ತುಸಾವಿರಕೋಟಿ; ಒಂದು ನೂರು ಅಯುತ. ೫. ಅತಿ ದೊಡ್ಡಸಂಖ್ಯೆ. P ಈ ಶಬ್ದವು ಯಾವ ಸಂಖ್ಯೆಯನ್ನು ಸೂಚಿಸುತ್ತದೆ ಎಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿವೆ. [ಸಂ.]

ನಿಯುದ್ಧ (ನಾ). ಕುಸ್ತಿ; ಮಲ್ಲಯುದ್ಧ; ದ್ವಂದ್ವಯುದ್ಧ; ಮಲ್ಲಗಾಳಗ: ಸಕಲಕಟಕಚಾತುರಂಗಬಲಮಕುಟಸಂಘಟಿತ ಚಕ್ರಚಟುಲಗತಿನಿಯುದ್ಧಾಯುಧಘಾತರುಧಿರಕರ್ದಮಸಮ್ಮರ್ದಿತಮುಮಪ್ಪ ಸಂಗ್ರಾಮಭೂಮಿಯೊಳಗನೆ ಬರ್ಪಲ್ಲಿ (ಗದಾಯು. ೪-೩೭ ಪ); ಘನದೃಢೋರುಢೊಕ್ಕರಣಪಾತನೋನ್ಮೂಲಿತನಿಯುದ್ಧ ಪ್ರಸಿದ್ಧ ಚಾಣೂರಮುಷ್ಟಿಕಾಸುರ . . . ಚಂದ್ರಕಾಪೀಡರೂಢಗೋಪಾಲ ಶ್ರೀಭಗವದ್ವಾಸುದೇವ ನಮಸ್ತೇ ನಮಸ್ತೇ (ಜಗವಿ. ೧೨-೫೭ ಪ); ಪತ್ತುವ ಲಗ್ಗೆಗೆ ಮಾರಿಯೊಳ್ ಮೊಗಂಬೊಕ್ಕವೊಲಾಗೆ ಬೆರ್ಚದನವಂ ಕುವರಂಗೆನಸುಂ ನಿಯುದ್ಧದೊಳ್ (ಚಂದ್ರಪು. ೫-೮೦); ಅಲಘುಬಲ ನೀನೆಂದು ಬಗೆದಿಹೆ ನಿನ್ನ ಚಿತ್ತದಲಿ ತಿಳಿವಡರಿದಾದುದು ನಿಯುದ್ಧಕೆ ನಿಲುಕುವುದು ಬೆಜಗಲ್ಲವೇ (ತೊರರಾ. ೬-೬-೫೩); ನೆರೆ ಮುಳಿದದಕ್ಕೆ ಬಳಿಕನುಪಮ ನಿಯುದ್ಧಚಾತುರಿಯಿಂದೆ ಬಲ್ವೊತ್ತು ಸೆಣಸುತ್ತೆ (ಶೇಷರಾ. ೨೨-೨೧); ನಿಯುದ್ಧದಲಿ ನನ್ನ ಸಮನಿಲ್ಲ (ಭಾಸನಾ. ೨೨). [ಸಂ.]

ನಿಯುದ್ಧರಂಗ (ನಾ). ಮಲ್ಲಶಾಲೆ; ಅಖಾಡ: ವಸುದೇವಂ ಬಲದೇವಂಬೆರಸು ಚಾತುರ್ದಂತಬಲಮಂ ಕೂಡಿಕೊಂಡು ನಿಯುದ್ಧರಂಗದ ಕೆಲದೊಳ್ ಯುದ್ಧಸನ್ನದ್ಧರಾಗಿರ್ದಾಗಳ್ (ಅರ್ಧನೇ. ೮-೭೩ ಪ).

[ನಿಯುದ್ಧ + ರಂಗ]

ನಿಯೂರ್ (ನಾ). ಒಂದು ಊರಿನ ಹೆಸರು: ಪೆರ್ಮ್ಮಕ್ಕಳ ಸನ್ತಾನ ಪಾರ್ವ್ವನ್ತಿ ನಿಯೂರಾ ಮಹಾಜನಕ್ಕೆ ಕೊಟ್ಟದು (ಎಕ. VII, ಶಿಕಾರಿ. ೪೫-೨೭; ಸು. 890 ?). [? + ಊರ್]

ನಿಯೋಕ್ತೃ (ನಾ). ಪ್ರೇರಿಸುವವನು; ಪ್ರೇರಕ; ಚೋದಕ: ಸುಯಶನೆ ನಿಯೋಕ್ತೃ ಕರ್ತೃ ಹರ . . . ಭಸ್ಮಾಂತಕಂ (ವೀಶೈಪು. ೬-೪-೨೨). [ಸಂ.]

ನಿಯೋಗ (ನಾ). ೧. ಸೇರುವುದು; ಕೂಡುವುದು; ಅನ್ವಯಿಸುವುದು. ೨. ನೇಮಿಸುವುದು; ನೇಮಕ. ೩. ನೇಮಿಸಿದ ಕೆಲಸ,—ಕಾರ್ಯ,—ವ್ಯವಹಾರ: ಇದರ್ಕೆ ಪ್ರಥಮಮೇಖಲಾಸ್ಥಿತೋಭಯ ಶ್ರೇಣಿಗಳೊಳ್ ಕರ್ಮಭೂಮಿಯ ನಿಯೋಗಮೆ ನಿಯೋಗಂ. (ಅವಿಪು. ೯-೧೨೧ ಪ); ವೀರಪುರುಷರಂ ಬರಿಸಿ ಯಥೋಚಿತಪ್ರತಿಪತ್ತಿಗಳೊಳಿರಿಸಿ ಪೇಟಾಮಿನ್ನೆಮ್ಮ ಗೆಯ್ವ ನಿಯೋಗಮೇನೆನೆ (ಪಂಪಭಾ. ೧೩-೨೦ ಪ); ಭರತಕ್ಷೇತ್ರದೊಳಲ್ಲಿಂದಿತ್ತವೀ ತೆಜದ ನಿಯೋಗಮಕ್ಕುಮೆಂದಱಿಪಿ (ಚಾವುಂಪು. ೧೦); ಜನಕಜೆಯ ಸುದ್ದಿಯಂ ತರ್ಪ ನಿಯೋಗಂ ನಿನಗೆ ಮೊನೆಯೊಳಾಟಂದು ದಶಾಸ್ಯನನಿಕ್ಕಿ ದೇವಿಯಂ ತರ್ಪ ನಿಯೋಗಂ ಲಕ್ಷ್ಮಣಂಗೆ ಪುದು ಪೆಱರ್ಗುಂಟೇ (ಪಂರಾಮಾ. ೧೧-೪೫); ಒಲಿವ ಹಿತವರು ಸೋದರರು ಮಕ್ಕಳುಗಳಾಱಾಯ್ತಾದಡೀತನ ಬಲುನಿಯೋಗವನೆಲ್ಲವಂ ಪ್ರತಿಪಾಲಿಸುವರೊಳರೆ (ಬಸಪು. ೫-೪); ನಾಗನಗರಿಧರಿತ್ರಿಕೋಶವಿಭಾಗ ತಂತ್ರನಿಯೋಗ ಗಮನಸರಾಗ ಪಾಂಡವರಾಜಜಿತಸಂಗ್ರಾಮನಿಸ್ಸೀಮ (ಹರಿಸಾ. ೧೫). ೪. ಊಳಿಗ; ಸೇವೆ: ಅಂತಾ ಸಮಯದೊಳ್ ಗಂಧರ್ವರಾಜನಂದನೆ ಸುರಭಿಗಂಧೋದ್ಗಾರಿಗಳಪ್ಪ ದೀವಿಗೆಗಳಂ ಪಿಡಿದು ದೀಪಧಾರಿಣಿಯರ್ವಂದು ನಿಜನಿಯೋಗಾಶೂನ್ಯಾರ್ಥಮಾಗಿ ಗೆಂಟಱೊಳೆ ಬಳಸಲವಂ ಸೈರಿಸದೆ ನಿವಾರಿಸುತ್ತಮಿರ್ದು (ಕಾದಂಉ. ೩೨೨); ಹಡವಳ ಬೋಕಣಂ ಕುಡೆ ನಿಯೋಗಮನೂರ್ಜ್ಜಿತತೇಜದೆಳ್ತರಂ ಪೊಡವಿಗಪೂರ್ವ್ವಮಾಗೆ . . . ಪೊಗಳ್ತೆವೆತ್ತ ಹೆಗ್ಗಡೆಯೆಱಗಂ ಪ್ರತಾಪನಿಧಿ ಸೋಭಿಸುವಂ (ಎಕ. V, ಹಾಸನ. ೬೯-೪೧; 1155); ಈ ನಿಯೋಗಮನೀತಂ ನಡೆಯಿಸುವನೆಂಬಲ್ಲಿ ವಳ-ವಳ್ಳ, ಆಯ್ತ ಪ್ರತ್ಯಯಂಗಳಕ್ಕುಂ (ಶಮದ. ೧೯೮ ವೃತ್ತಿ); ಖುರಮಂ ಸೋದಿಸುವುದು . . . ಸಮತಲನೆಲದೊಳ್ ಪೊರಳಿಸುವುದೊರಸುವುದು ಪಗಲಿರುಳುಂ ಪರಿಚಾರಕಂಗೆ ನಿತ್ಯನಿಯೋಗಂ (ಅಶ್ವಶಾ. ೭-೯). ೫. ಅನುಷ್ಠಾನ; ಆಚರಣೆ: ಕಲ್ನೆಲೆ ನಿಂದು ಯೋಗದ ನಿಯೋಗದಿನಿರ್ಪುದುಮೊರ್ವಂ . . . ನೆನೆದಂ ವಿಭಂಗದಿನತೀತ ಭವಾಂತರಭೂರಿವೈರಮಂ (ಶಾಂತಿಪು. ೭-೧೦೮); ಮಹಾಕಾಳಶ್ಮಶಾನದೊಳಗೆ ಯೋಗನಿಯೋಗಧ್ಯಾನೋಪಯೋಗದಿಂ ನಿರುದ್ಧಕರಣ ನಿಷ್ಪಂದ ಶರೀರನಾಗಿ (ಸುಕುಮಾ. ೧೨-೨೪ ಪ). ೬. ಹಿಂದಿನ ಕಾಲದಲ್ಲಿ ರಾಜರು ಆಡಳಿತಕ್ಕಾಗಿ ಏರ್ಪಡಿಸುತ್ತಿದ್ದ ಸಭೆ,—ಮಂಡಲಿ; ಅಧಿಕಾರಿಸಮಿತಿ: ಸಾರ್ವ್ವಭೌಮರಾಜ್ಯನಿಯೋಗರಾಜಾಧ್ಯಕ್ಷನುಂ (ಕಇಆ. ೫-೨-೧೪೬; 1058); ಬಿಜ್ಜಳಧರಣಿವಲ್ಲಭನು ಹರುಷದಿಂ ತಾನುಂ ಬಸವಧೀವರನು ಮಖಿಳನಿಯೋಗದೋಲಗವೆರಸಿ ಬರುತಿಪ್ಪೆಡೆಯೊಳಾ ಪುರವೀಥಿವೀಥಿಯಲಿ (ಬಸಪು. ೫-೧೯); ಶರಣರ ಕೊಂಡಾಡಿದವರು ಮುಕ್ತರೆಂಬುದ ಕಂಡೆವೆಂದು ತನ್ನ ನಿ[ಪಾಠಾಂ. ವಿನಿ]ಯೋಗವೆರಸಿ ವಂದಿಸಿದನು ಬಿಜ್ಜಳನು (ಭೈರಸೂ. ೨೦). ೭. ಛತ್ರ, ದೇವಸ್ಥಾನ ಮೊದಲಾದ ಸಂಸ್ಥೆಗಳ ಆಡಳಿತ ವರ್ಗ; ಧರ್ಮದರ್ಶಿ ಸಮಿತಿ: ಮಂತ್ರಿಪದಮಂ ಕೈಕೊಳ್ಳೆಂದೊಡೆ ಸಕಟಾಳನೊಲ್ಲದೆ ಛತ್ರಶಾಲೆಯ ನಿಯೋಗಕಧ್ಯಕ್ಷನಾಗಿ ಯರಸಂಗಪಾಯಮಂ ಚಿಂತಿಸುತ್ತಿರ್ದು (ಕಗವಿ. ೯೦ ರಾಜಾಪ). ೮. ಯಾವುದಾದರೂ ಒಂದು ಅಂಶವನ್ನು ಅಥವಾ ಬೇಡಿಕೆಯನ್ನು ಮಂತ್ರಿಗಳೇ ಮೊದಲಾದ ಆಡಳಿತಕ್ಕೆ ಸಂಬಂಧಪಟ್ಟವರಿಗೆ ನಿವೇದಿಸಲು ಹಾಗೂ ಚರ್ಚಿಸಲು ಏರ್ಪಟ್ಟಿರುವ ಅಧಿಕಾರಿ ಅಥವಾ ಸಮಿತಿ: "೧. (ಪ್ರತಿನಿಧಿಗೆ) ಅಧಿಕಾರ ವಹಿಸಿಕೊಡುವುದು. ೨. ಪ್ರತಿನಿಧಿಗಳು; ಶಿಷ್ಟಮಂಡಲ, ನಿಯೋಗ" (Delegation. ಪತ್ರಿನಿ. ೩೦); ಅದು ರಣಧೀರನಿಗೆ ಪ್ರತಿಕೂಲವಾಗಿರುವುದಾದರೂ ರಣಧೀರನು ಆ ನಿಯೋಗದವರನ್ನು ಔದಾರ್ಯದಿಂದ ಉಪಚರಿಸುತ್ತಾನೆ (ಸಂಸಕ. ೧೧೦); ಶಿಕ್ಷಕರ ನಿಯೋಗವೊಂದು ವಿದ್ಯಾಮಂತ್ರಿಗಳ ಬಳಿ ಹೋಗಿತ್ತು (ರೂಢಿ). ೯. ವೇದ: ನಿಯೋಗವೆಂದರೆ ಅಪ್ರತಿಹತವಾದ, ಅನುಲ್ಲಂಘನೀಯವಾದ, ಸಾರ್ವಭೌಮನ ಆಜ್ಞೆಯಂತಿರುವ ವೇದವೆಂಬ ಮಹಾಪುರುಷನ ಆಜ್ಞೆ (ಹಿಂದಸಾ. ೧೬೫); ಸರ್ವರಿಗೂ ಕಾವ್ಯದಲ್ಲಿ ಉಂಟಾಗುವುದು ರಸಾಸ್ವಾದವೇ ಹೊರತು ತಿಳಿವಳಿಕೆಯಲ್ಲ, ನಿಯೋಗವಲ್ಲ (ಭಾರವಿಸಾ. ೮೧). ೧೦. (ಗಂಡನ

ನಪುಂಸಕತ್ವ ಮೊದಲಾದ ಅನರ್ಹತೆಯಿಂದ ಅಥವಾ ವೈಧವ್ಯದಿಂದ) ಅಪುತ್ರವತಿಯಾದವಳು ಗಂಡನ ಸಹೋದರರೇ ಮೊದಲಾದ, ಧರ್ಮಶಾಸ್ತ್ರವು ಅನುಮತಿ ಕೊಟ್ಟಿರುವ, ಪುರುಷರಿಂದ ಪುತ್ರರನ್ನು ಪಡೆಯುವ ಒಂದು ಕ್ರಮ : ವಿಧವೆಯರ ಪುನರ್ವಿವಾಹ ಕ್ಕಾಗಲಿ ನಿಯೋಗಕ್ಕಾಗಲಿ ಅವಕಾಶವಿರಲಿಲ್ಲ (ಕರಾಇ. ೪೨೧); ನಿಯೋಗ ಎಂದರೆ ಮಡಿದ ಗಂಡನ ಸೋದರನ ಸಂಬಂಧದಿಂದ ಮಕ್ಕಳನ್ನು ಪಡೆಯುವುದು (ಕರಾಇ. ೪೨೧ ಅಡಿಟಿ).

ನಿಯೋಗಯೋಗಂಧರ = ರಾಜ್ಯತಂತ್ರದಲ್ಲಿ ಬಹಳ ನಿಪುಣನಾದವನು: ಒಂದು ಬಿರುದು: ನುಡಿದಂತ್ತೆ ಗಣ್ಡಂ ನಿಯೋಗಯೋಗಂಧರಂ ಸಮರಧುರಂಧರಂ . . . ಪಣ್ಡನಾಯಕಂ ಭೀಮಣಯ್ಯಂಗಳ ದಿನ್ನಪದಿನ್ (ಸೌಇಇ. XI-ii, ೧೩೯-೨೧ ; 1095) ; ನೀತಿಚಾಣಕ್ಯ ನಿಯೋಗ ಯೋಗಂಧರ ನಾಯ ××× (ಸೌಇಇ. XX, ೧೪೧-೧೪, .1194). **ನಿಯೋಗಯೋಗಂಧರಾಯಣ** = ನಿಯೋಗಯೋಗಂಧರ : ಚಾಳುಕ್ಯ ನಾರಾಯಣಂ ನಿಯೋಗಯೋಗಂಧರಾಯಣನ ಮೊಗಮ ನೋರ್ಪ್ಪಂದು (ಸೌಇಇ. XX, ೪೯-೧೦ ; ಸಂ. 1076). ಪ ಯೌಗಂಧರಾಯಣನು ವತ್ಸರಾಜನ ಅತಿಸಮರ್ಥನಾದ ಮಂತ್ರಿಯೆಂಬುದು ಪ್ರಸಿದ್ಧ. [ಸಂ.]

ನಿಯೋಗಕಾತಿ (ನಾ). ಊಳಿಗದವಳು; ಸೇವಕಿ: ಸರಸದ ವಿನೋದದ ವಿಳಾಸದ ವಿಚಾರದಾಭರಣದೊಡ್ಡಿನ ಬಹುನಿಯೋಗಕಾತಿಯರಿನಿಪ ತರುಣಿಯರನೊಪ್ಪಿಸಿದನಂದು ವಿಶ್ವಾಮಿತ್ರಮುನಿಗೆ ಸತ್ಯರ ದೇವನು (ಪಜಕಾ. ೯-೨). [ನಿಯೋಗ + -ಕಾತಿ$_5$]

ನಿಯೋಗಿ (ನಾ). ೧. ರಾಜಕಾರ್ಯನಿರ್ವಾಹಕ; ರಾಜಕಾರ್ಯವನ್ನು ನಿರ್ವಹಿಸುವ ಉನ್ನತಾಧಿಕಾರಿ : ಅನ್ನೆಗಂ ನಾಗಶ್ರೀಯುಂ ಪಂಡವಿಯಂದು ಮಂತ್ರಿಯರ್ಕಳ ಪೆರ್ಗಡೆಗಳ ರಾಜಶ್ರೇಷ್ಠಿಯರ ಪ್ರಧಾನರಪ್ಪ ನಿಯೋಗಿಗಳ ಪಲಂಬರುಂ ಪೆಱ್ಗೂಸುಗಳ್ಕೆರಸು . . . ನಾಗರನೆಱ್ಪಿ (ಸಶ್ವಾರಾ. ೧೨-೨೧) ; ವಾಮಣಲಕ್ಷಣದೇವರಾ ಮಹಾವಿಭವರ ಕಾರ್ಯನಿರ್ವಿಘ್ನಕ್ಕೆ ಧುರಂಧರನಾದ ನಿಯೋಗಿ ಮಾಧವ ಪಲರಂ ಮೆಚ್ಚಿಸಿದಂ ನಿಯೋಗದೊಳನೇಕೋಪಾಯಚಾಣಕ್ಯಂ (ಸೌಇಇ. XI-ii, ೧೪೭-೧೬ ; 1099); ಕರಸಿ ಮಂತ್ರಿ ನಿಯೋಗಿಗಳನಾ ಪುರಜನಂಗಳನುಮು ಗೊಜ್ಜಿಗಳಲಿ ಹಿಂದು ಮನ್ನಿಸಿ ರೋಮಶಾದಮಹಾಮಹೀಪತಿಯ ಪರಮಸತ್ಕಾರವನು ಕೈಕೊಂಡರಸ . . . ಬಂದನು (ತೊರರಾ.೧-೬-೧೧). ೨. ಸೇವಕ ; ಊಳಿಗದವನು : ದೈತ್ಯ ಹೊನ್ನಂದಣದಣ್ಣರ ಕಳುಹಿಸಂದಣಿಸಿದರಣ್ಣಗಳು ನಿಯೋಗಿಗಳ್ ಬಂದರು ರತಿಯಿವ್ವ ಬಳಿಗೆ(ಮೋಹತ. ೧೦-೪); "ಓಲೆಕಾರರು" (ಮೋಹತ.ಅಡಿಟಿ) ; ಅವಾವ ಮಾನವೇಂದ್ರರ ಯೋಗಕ್ಷೇಮಗಳೇನು ಬೆಸಗೊಂಡುಚಿತವಸ್ತುಗಳಾ ನರಾಧಿಪನೆತ್ತಿ ಕೊಟ್ಟು ನಿಯೋಗಿಜನಕೆಲ್ಲ (ಬಜ್ಜಪು. ೪೧-೩೫) ; ತನ್ನ ಆಶ್ರಿತ ಜೊರೆಗಳಿಗೆ ಶೀಘ್ರವಾಗಿ ನೆರವು ನೀಡಲು ವಿಶೇಷ ನಿಯೋಗಿಗಳನ್ನು ಅಟ್ಟಿದನು (ರಾಜ್ಯೋದ. ೨೦೯). 'ಬಾಹತ್ತರನಿಯೋಗ' ಪರಾ. ೩. ಒಬ್ಬರ ಪರವಾಗಿ ಕೆಲಸ ಮಾಡುವವನು; ಪ್ರತಿನಿಧಿ: ಗ್ರೀಕ್ ರುದ್ರನಾಟಕದ ಮೇಳ ಒಮ್ಮೊಮ್ಮೆ ಕವಿಯು ನಿಯೋಗಿಯೂ ಅವನ ಜೀವನದರ್ಶನದ ವಕ್ತಾರನೂ ಆಗಿರುತ್ತದೆ (ಸಾಹಿಸ್ಪ. ೨೪೯). ೪. ತೆಲುಗು ಮಾತನಾಡುವ ಒಂದು ಬ್ರಾಹ್ಮಣ ಪಂಗಡ : ಕರ್ನಾಟಕದಲ್ಲಿರುವ ಅನೇಕ ನಿಯೋಗಿಗಳು ಆಂಧ್ರದಿಂದ ಬಂದವರು (ರೂಢಿ). ೫. ವ್ಯಾಪಾರಿ; ವರ್ತಕ (?) : ಕೆಟ್ಟ ನಿಯೋಗಿ ಬಿತ್ತು ಮೊದಲಿಲ್ಲದೆ ಬಂದ ಕೃಷೀವಲಂ ಮೊದಲ್ಗೆಟ್ಟ ಕಿರಾತನೋಲಗಿಸಲಾರದೆ ಸೇವಕನಾಗೆ (ಎಕ. IV, ಚಾಪುರಾ. ೪೩-೨೩ ; 1117).

ನಿಯೋಗಿನಿಧಾನ = ಒಂದು ಬಿರುದು : ದಿಸಾವಳಿಯ ಪೂರಿತೋಜ್ವಳ ಕೀರ್ತ್ಯವಧಾನ ನಿಯೋಗಿನಿಧಾನಂ ಉಭಯದೇಸೀಮನೋರಂಜನಂ (ಕಾಇಇ. ೧೦೩-೪-೧೪ ; 1076). [ಸಂ. ನಿಯೋಗಿನ್]

ನಿಯೋಗಿತನ (ನಾ). ಪ್ರತಿನಿಧಿಯ ಅಧಿಕಾರ : "ನಿಯೋಗಿತನ; ಪ್ರಾತಿನಿಧ್ಯ" (Legation. ೧೦೪೩). [ನಿಯೋಗಿ + -ತನ]

ನಿಯೋಗಿಸು (ಕ್ರಿ). ೧. ನಿಯಮಿಸು ; ನಿಯೋಜಿಸು ; ನೇಮಕ ಮಾಡು : ಅವರೆಲ್ಲರೂ ಮನುವಿನ ಬಳಿ ದಾಸಿಯರಂತೆ ಇರಲು ನಿಯೋಗಿಸಲ್ಪಟ್ಟಿದ್ದರು (ಭೂರಾಚಿ. ೬೧). ೨. ಕೊಡು ; ಹಂಚು ; ವಿನಿಯೋಗ ಮಾಡು : ಅರಾರಿಗೇನೇನ ಕೊಡಬೇಕಾದುದ ತಾರತಮ್ಯದಿ ನಿಯೋಗಿಸಲು . . . ಪೂಸನಿಯರುಗಳು ಶೃಂಗಾರವ ತಾಳ್ದರುತ್ಸವದಿ (ಮೋಹತ. ೧೪-೪೦). [ನಿಯೋಗ + -ಇಸು$_5$]

ನಿಯೋಜಕ (ನಾ). ಪ್ರೇರಕ ; ವ್ಯವಸ್ಥಾಪಕ : ನಿಯೋಜಕರು ಬೇಕು ! ಈಗ ಭಾರತಕ್ಕೆ ಅಗತ್ಯವಾಗಿ ಬೇಕಾದ ಜನರೆಂದರೆ ನಿಯೋಜಕರು (ಕಸ್ತೂ. ೬೭). [ಸಂ.]

ನಿಯೋಜನ (ನಾ). ನೇಮಿಸುವುದು ; ನೇಮಕ ಮಾಡುವಿಕೆ: 'ನಿಯೋಜಿಸು' ಪರಾ.. [ಸಂ.]

ನಿಯೋಜನೆ (ನಾ). ಏರ್ಪಾಡು ; ವ್ಯವಸ್ಥೆ ; ಸಿದ್ಧತೆ : ನಸ್ಸ ನಿಯೋಜನೆ ಕಾರ್ಯರೂಪಕ್ಕೆ ಬರಲು ಕಾರಣರಾದ . . . ಡೈರೆಕ್ಟರು, ಅಸಿಸ್ಟೆಂಟ್ ಡೈರೆಕ್ಟರುಗಳ ಉಪಕಾರವನ್ನು ನಾನು ಸದಾ ಸ್ಮರಿಸುತ್ತೇನೆ (ಭಾರದ. II ಮುನ್ನುಡಿ). [ಸಂ. ನಿಯೋಜನ]

ನಿಯೋಜಿತ (ಗು). ೧. ಕೂಡಿಕೊಂಡಿರುವ ; ಸೇರಿಕೊಂಡಿರುವ : ದ್ವಾದಶರಾಜಮಂಡಲನಿಯೋಜಿತ [ಪಾಕಾಂ. ನುರಿ ನಿಯೋಗಿ] ಪ್ರಧಾನ ವಿಜಿಗೀಷುವೃತ್ತನುಂ . . . ಸುಖದಿನಿರಲ್ (ಅಜಿಪು. ೨-೯೪ ಪ). ೨. ಏರ್ಪಡಿಸಿದ ; ಗೊತ್ತುಮಾಡಿದ : ಪೂರ್ವನಿಷ್ಠತೆಯಿದ್ದರೆ . . . ನಿಯೋಜಿತಕ್ರಮದಲ್ಲಿ ಮುಂದುವರಿಯುತ್ತ ಪರ್ವದ ಪಾಕವನ್ನು ಸಕಾಲದಲ್ಲಿ ಮುಗಿಸಲು ಅನುಕೂಲವಾಗುತ್ತದೆ (ತಿಕ್ಷದ. ೨೬೩) ; ಮುಂದಿನ ಅಡಳಿತದ ಅವಧಿಗೆ ಇವರು ನಿಯೋಜಿತ ಅಧ್ಯಕ್ಷರಾಗಿದ್ದಾರೆ (ರೂಢಿ). (ನಾ). ೩. ನೇಮಕವಾದವನು ; ಗೊತ್ತುಮಾಡಲ್ಪಟ್ಟವನು : ಚಂದಾ ವಸೂಲಿಗೆ ಕೆಲವರು ನಿಯೋಜಿತರಾದರು (ಭೀಪುಕಾ. ೧೬೩)ಕ [ಸಂ.]

ನಿಯೋಜಿಸು (ಕ್ರಿ). ೧. (ಒಂದು ಕಾರ್ಯವನ್ನು ಮಾಡುವಂತೆ) ನಿಯಮಿಸು ; ನೇಮಕ ಮಾಡು : ಸಕಳಜನನಮುಮನಾಜ್ಞಾಕರಣ ವಿಧಾನದೊಳ್ ನಿಯೋಜಿಸಿ (ಅಜಿಪು. ೬-೧೦೭ ಪ) ; ತನ್ನ ತಮ್ಮನಂಯುವರಾಜನನಂತವೀರ್ಯನಂ ರಾಜ್ಯಭಾರದೊಳ್ ನಿಯೋಜಿಸಿ (ಶಾಂತಿಪು. ೨-೨೧ ಪ) ; ತದವಾದಪುದುಬಾದರನೀಯೆಡೆಗೆ ನಿಯೋಜಿಸಲಿಕೆಂಬವೊಲ್ ನೃಪವರನಿರ್ದೆಡೆಗೆ ನಿಯೋಜಿಸಿದಳ್ ಬಿಡದೆಡೆಯಾಡುವ ಬೆಸಕೆ ಕನ್ನೆ ತನ್ನಯ ಮನಸುಂ (ಕಾದಂಉ. ೪೭). ೨. ವ್ಯವಸ್ಥೆಮಾಡು ; ಏರ್ಪಡಿಸು : ಪರದಾರಾಭಿಗಮನಮಂ ನಿಯೋಜಿಸುವ ದುಷ್ಟಸೇವಿಶ್ವಾಸಭೂಮಿಯೆನಿಸಿದ ಮಿತ್ರನೆನಿಸುಗುಂ (ಕಾದಂಪೂ.೫೭೩) ; ಅಗಳರಸ ನತಿಹರ್ಷಚಿತ್ತನರ್ಘ್ಯರಮೇಶ್ವರಪೂಜಾವಿಧಿಗಳಂ ನಿಯೋಜಿಸಿ (ಪುಲ್ಲಪು. ೪-೨೭) ; ಸರಳತರೋಷ್ಣನಿಶ್ವಸಿತಮಾರುತನಿಂದೆ ನಿರ್ಜೋತ್ಪರೀಯದೊಳ್ ತರಳತೆಯಂ ನಿಯೋಜಿಪ ನೆಗಟ್ಟಿಗೆ ಕಾರಣಮೇನೊ ಕಾಮಿನೀ (ಚಂದ್ರಪು. ೩-೫೪) ; ಆ ಯೋಜನೆ ೭ನೇ ವಯಸ್ಸಿನಿಂದ ೧೪ನೆಯ ವಯಸ್ಸಿನವರೆಗೆ ಉಚಿತ, ಕಡ್ಡಾಯಶಿಕ್ಷಣವನ್ನು ನಿಯೋಜಿಸುತ್ತ (ತಿಕ್ಷದ. ೭೩೩) ; ಅದು ಲಿಂಗನಿರ್ಧಾರಕ್ರಮವನ್ನು ನಿಯೋಜಿಸುತ್ತದೆ (ಕೀಟಪ. ೧೧೦). ೩. ಗುರಿಪಡಿಸು ; ಒಳಪಡಿಸು ; ಈಡುಮಾಡು : ಆ ನಿತಂದಿನ

ಭೂಶಯ್ಯೆಗೆ ಜಾಗರಕ್ಕನಶನಕ್ಕೇಕಾಂತರಕ್ಕೇಕಭುಕ್ತಿ ನಿಯಾಮಕ್ಕೊಡಲಂ ನಿಯೋಜಿಸಿದಳ್ (ಮಲ್ಲಿಪು. ೪-೪೭). [ನಿಯೋಜನ+ -ಇಸ್ಸು$_3$]

ನಿಯೋಜ್ಯ (ನಾ). ಯಾವುದಾದರೂ ಕಾರ್ಯಕ್ಕಾಗಿ ನೇಮಕವಾದವನು : ನಿಯೋಜ್ಯವೆಂದರೆ ನಿಯೋಗವನ್ನು ನೆರವೇರಿಸುವವನು (ಹಿಂದಸಾ. ೧೬೫). [ಸಂ.]

ನಿರ್-(ಉಪ). ಆಧಿಕ್ಯ, ಅತಿಕ್ರಮ, ಅಭಾವ, ನಿಷೇಧ ಮೊದಲಾದ ಅರ್ಥಗಳನ್ನು ಕೊಡುವ ಒಂದು ಉಪಸರ್ಗ : 'ನಿರ್ಮಾಟ', 'ನಿರ್ವಯಲು' ಪರಾ. ℙ ಸಮಾಸದಲ್ಲಿ ಸ್ವರಗಳು ಮತ್ತು ಮೃದುವರ್ಣಗಳು ಪರವಾದಾಗ 'ನಿಸ್' ಎಂಬುದು 'ನಿರ್' ಎಂದಾಗುತ್ತದೆ. [ಸಂ.]

ನಿರಂಕ (ನಾ). ೧. ಲಾಂಛನವಿಲ್ಲದುದು. ೨. ಕಳಂಕವಿಲ್ಲದವನು. ೧, ೨ : ನಿರುಪಮ ನಿರಂಕನೀ ಸಸಿಯ ಪ್ರಭಾತಿಶಯ . . . ಕಂಗಳಿಗೆ ಮಂಗಳವಿತ್ತುದು (ಕುವಲ. ೧೬). [ಸಂ.]

ನಿರಂಕುಶ (ಗು). ೧. ಯಾರ ಅಂಕೆಗೂ ಒಳಪಡದ ; ಸರ್ವಸ್ವತಂತ್ರವಾದ ; ಸ್ವೇಚ್ಛೆಯ : 'ನಿರಂಕುಶಮತಿ' ಪರಾ. (ನಾ). ೨. ಯಾರ ಅಂಕೆಗೂ ಒಳಪಡದಿರುವುದು ; ಸ್ವೇಚ್ಛೆ ; ಸ್ವಚ್ಛಂದತೆ : "ಅಯಂತ್ರಿತಂ, ಉದ್ದಾಮಂ, ಉಚ್ಛೃಂಖಳಂ, ಅನರ್ಗಳಂ — ಈ ೪ ನಿರಂಕುಶಂ" (ಹಲಾಯು. ೧೨೪-೬೬) ; ಮಾಂಕರಿಸದ ಱಿವು ಗುರುವಚನಾಂಕುಶಮಂ ಪಾಱಿಯೆಡೆಗೆ ಪೊಣರ್ದರಿಬಲಮಂ ಕಿಂಕೊಳೆ ಮಾ[ಟ್ಪಿಡೆಗಣಮು] ನಿರಂಕುಶಮೆನಿಸಿದುದು ಮುನಿಸು ಭದ್ರಾಂಕುಶ[ನಾ] (ಪಂಪಭಾ. ೧-೩೨) ; ಅಜ್ಞಾನ ಆವರಣ ವಿಕ್ಷೇಪಗಳು ಕೆಡಲು ಮದಗಜದೋಪಾದಿಯಲ್ಲಿ ಸಂಚರಿಸುವದೇ ನಿರಂಕುಶವೆನಿಸುವುದು (ನಾನಾಗು. ೨೮-೨೨). ೩. ಸ್ವಚ್ಛಂದವೃತ್ತಿಯ ವ್ಯಕ್ತಿ : ಅವುಗಳ ರೂಪನಿರ್ಣಯದ ವಾದವೇಕೆ ? ಎಂದು ಪ್ರಶ್ನಿಸುವ ನಿರಂಕುಶರೂ ಇರುತ್ತಾರೆ (ಸಂಶೋಧ. ೨೩). [ಸಂ.]

ನಿರಂಕುಶಪ್ರಭು (ನಾ). ಪ್ರಜೆಗಳ ಮೇಲೆ ಅನಿರ್ಬಂಧವಾದ ಅಧಿಕಾರವನ್ನು ಉಳ್ಳ ಒಡೆಯ, —ರಾಜ ; ಶಾಸನಸಭೆ ಮೊದಲಾದುವುಗಳಿಗೆ ಒಳಪಡದ ಅಧಿಕಾರವುಳ್ಳ ಪ್ರಭು : ಪ್ರಜೆಗಳ ಮೇಲೆ ರಾಜನ ಅಧಿಕಾರವು ಅಪರಿಮಿತವಾಗಿದ್ದರೆ . . . ಅಂಥಾ ರಾಜನಿಗೆ ನಿರಂಕುಶಪ್ರಭುವೆಂದು ಹೆಸರು (ಭೂಗೋಳ. ೧೯).

[ನಿರಂಕುಶ+ಪ್ರಭು]

ನಿರಂಕುಶಪ್ರಭುತ್ವ (ನಾ). ಯಾವ ನಿರ್ಬಂಧವೂ ಇಲ್ಲದ ಒಡೆತನ : ಪರಚಕ್ರದ ಭಯವಿಲ್ಲದೆ ನಿರಂಕುಶಪ್ರಭುತ್ವವನ್ನು ನಡೆಯಿಸುತ್ತಾನೆ (ಮಂಜುಕ. ೧೩) ; ಪ್ರಜೆಗಳ ಮೇಲೆ ರಾಜನ ಅಧಿಕಾರವು ಅಪರಿಮಿತವಾಗಿದ್ದರೆ ನಿರಂಕುಶಪ್ರಭುತ್ವವೆಂದು . . . ಹೆಸರು (ಭೂಗೋಳ. ೧೯).

[ನಿರಂಕುಶ+ಪ್ರಭುತ್ವ]

ನಿರಂಕುಶಪ್ರವೃತ್ತಿ (ನಾ). ತನ್ನ ಅಪೇಕ್ಷೆಯಂತೆ ಎಲ್ಲವೂ ನಡೆಯಬೇಕೆಂಬ ಬುದ್ಧಿ ; ಸರ್ವಾಧಿಕಾರಿಯ ಮನೋಭಾವ.

[ನಿರಂಕುಶ+ಪ್ರವೃತ್ತಿ]

ನಿರಂಕುಶಮತಿ (ನಾ). ಸ್ವಚ್ಛಂದ ಮನೋವೃತ್ತಿಯುಳ್ಳವನು ; ತನ್ನ ಇಚ್ಛೆಯಂತೆ ನಡೆಯುವವನು : ನಿರಂಕುಶಮತಿಯಾದ ರಾಜನನ್ನು . . . ಶಿರಚ್ಛೇದನ ಮಾಡುವುದಕ್ಕೂ ಹೇಗೆ ಹಿಂಜರಿಯಲಿಲ್ಲವೆಂದು ಅರಿತರು (ಭಾರದ. ೪೨೭). [ನಿರಂಕುಶ+ಮತಿ]

ನಿರಂಕುಶವೃತ್ತಿ (ನಾ). ಸ್ವಚ್ಛಂದ ಮನೋವೃತ್ತಿ : ಮಾಡಲ್ತಕ್ಕ ಕೃತ್ಯವೆಲ್ಲಂ ಮಾಡಲ್ಪಟ್ಟಿತು . . . ಎಂದು ಸಹಜಪರಿತುಷ್ಟಿವಡದಿರ್ಪುದೇ ನಿರಂಕುಶವೃತ್ತಿಯೆನಿಸುವುದು (ವಿವೇಕ. ೪೩). [ನಿರಂಕುಶ+ವೃತ್ತಿ]

ನಿರಂಕುಶೆ (ನಾ). ಅಂಕೆಯಿಲ್ಲದವಳು ; ಸ್ವಚ್ಛಂದವೃತ್ತಿಯವಳು : ಮತ್ತ ಮೊರ್ವಳಭಿನವಯೌವನಾಸವಮದ ವಿಳಾಸನಿರಂಕುಶೆ . . . ಬಂದು ಚಕ್ರಧರರೂಪಾಶ್ಚರ್ಯಮಂ ನೋಡಿದಳ್ (ಆದಿಪು. ೧೦-೨೦ ವ) ; ನಿರತಿಶಯರೂಪವಿಲಾಸನಿರಂಕುಶೆಯುಂ . . . ಎನಿಸಿ (ಸುಕುಮಾ. ೧೧-೧೫ ವ).

[ಸಂ. ನಿರಂಕುಶಾ]

ನಿರಂಗ$_1$ (ಗು). ೧. ಅಂಗವಿಲ್ಲದ ; ಅವಯವವಿಲ್ಲದ ; ಆಕಾರವಿಲ್ಲದ : ಜಂಗಮವಪ್ಪ ನಿರಂಗ ಪ್ರಸಾದದಲ್ಲಿ ಬೆರದು ಅವಿರಳನಾದವಂಗೆ ಬಂಧಮೋಕ್ಷ ಕರ್ಮಂಗ ಬೆಂಬಳಿಗೆ ಸಲ್ಲ ಅದು ನಿರಂಗವಸ್ತು (ಪದಗೋ. ೪೫-೧೧೫). ೨. ಕ್ರಮಬದ್ಧವಾದ ಭೌತರಚನೆಯಿಲ್ಲದ ; ಜೀವಸಂಬಂಧವಿಲ್ಲದ ; ಜೀವವಿಲ್ಲದ : ಹೀಗೆ ಸಾಂಗ ಪದಾರ್ಥಗಳಂತೆ ಅವು ನಿರಂಗ ಪದಾರ್ಥಗಳಲ್ಲೂ ದೊರೆಯುತ್ತವೆ (ಚಾಲಪ್ರ. II, ೬೯೫). (ನಾ). ೩. [ವೀಶೈ] ಶರೀರದ ಧರ್ಮವನ್ನು ಮೀರಿದವನು ; ಶರೀರದ ಸಂಬಂಧದಿಂದ ಮುಕ್ತನಾದವನು ; ℙ ವೀರಶೈವ ಸಿದ್ಧಾಂತದಂತೆ ಶಿವಜ್ಞಾನವನ್ನು ಪಡೆದು ಪ್ರಾರಬ್ಧವಶದಿಂದ ಇನ್ನೂ ದೇಹವನ್ನು ತ್ಯಜಿಸದ ಶಿವಜ್ಞಾನಿಯು ಶರೀರವಿದ್ದರೂ ತತ್ಪ್ರಯುಕ್ತವಾದ ಕರ್ಮಗಳನ್ನು ಮಾಡುವುದಿಲ್ಲ. ಅವನು ಜೀವನ್ಮುಕ್ತನೆನಿಸುತ್ತಾನೆ. ಅವನಿಗೆ ಅಂಗಾಲೇಪನೆಂದೂ, ನಿರಂಗನೆಂದೂ ಹೆಸರು. ಅವನ ಸ್ವರೂಪವು ದೇಶ ಕಾಲಾದಿ ಪರಿಚ್ಛೇದಶೂನ್ಯ ಮತ್ತು ಚಿದಾನಂದಸ್ವರೂಪ. ಅವನ ಸ್ಥಿತಿಯೂ ನಿರಂಗವೆನಿಸುತ್ತದೆ : ಕಂಗಳು ಮುಚ್ಚಿಯಲ್ಲದೆ ಲಿಂಗವ ಕಾಣಬಾರದು ಅದು ನಿರಂಗಂಗಲ್ಲದೆ ಜಗದ ಹಂಗಿನವರಿಗಿಲ್ಲ (ಶರಚ. ೩೨೫) ; ನಿರಂಗನನಂತವಿನುತ ನಿರ್ಮಲ ನಾಮಧೇಯಂ . . . ಎಂದುಲಿವ ಪೌರಾಣೋಕ್ತಿಗಳಂ ಕೇಳ್ದು (ಪ್ರೌಢರಾ. ೨-೧). ೪. ಶರೀರಸಂಬಂಧವಾದ ಕರ್ಮವಿಲ್ಲದಿರುವಿಕೆ ; ಜೀವನ್ಮುಕ್ತಿ : ವಿಚಾರಸಂಗನನಱಿದು ಹೇಳಲಿಲ್ಲವೆನಗೆ ಬಸವಾ ಹೇ ಹೇ ಎನಲೊಂದೆ ಸಂಗ ಸಂಗ ನಿರಂಗ ನಿರಂಗ ಬಸವ ಬಸವ ಎಲೆ ಬಯಲು (ನೀಲವ. ೧೦-೨೨) ; ಹುವ್ವಿನ ಮೇಗಳ ತುಂಬಿ ಹುವ್ವ ತಿಂದು ಗಂಧವನುಳುಹಿತ್ತು ಉಳುಹಿದ ಗಂಧ ತುಂಬಿಯ ತಿಂದು ತುಂಬಿ ಗಂಧವೊಂದೆಯಾಯಿತ್ತು ಅದು ನಿರಂಗದಿರವು (ಅಱುಮಾ. ೧೩೮-೫೨೮). ೫. ನಿರಾಕಾರವಾದ ಲಿಂಗ ; ಪರಮಾತ್ಮ : ಜಂಗಮ ಜಂಗುಳಿಯಾಗಿ ಕಂಡಕಂಡವರಂಗಳಕ್ಕೆ ಜಂಘೆಯನಿಕ್ಕಲಾಗಿ ನಿರಂಗಕ್ಕೆ ಹೊಱಗು (ತಿಪಮಂ. ೭೧). ೬. ಅನುಕೂಲವಿಲ್ಲದವನು ; ಸಾಧನಸಂಪತ್ತಿಲ್ಲದವನು : (ಕಿ). ೭. [ಅದ್ವೈತ] ಬ್ರಹ್ಮಜ್ಞಾನಿ ; ಜೀವನ್ಮುಕ್ತ : ನೆಗಳಿದೀ ನಿಸ್ಸಂಗನಿರ್ಗುಣನಗಣಿತನಿಜಾನಂದ ನಿರುಪಮನಿಗಮವೇದ್ಯನಿರಂಗನೆನಗದಕೆಂತಹುದು ಸಂಗ (ಅಮೃತ. ೬-೨೩). [ಸಂ.]

ನಿರಂಗ$_2$ (ನಾ). ವಿಶೇಷವಾದ ಬಣ್ಣ, —ರಂಗು (?) : ಬಿಂಗದ ಕುಪ್ಪಿಗೆಗಿಳಿವ ಕುಂಕುಮದ ನಿರಂಗದಿ ತಾಂಬೂಲರಸವಾ ನುಂಗುವಾಗಿದಿರಿಗೆ ತೋಱುವುದರಸನ ನುಂಗೊರಳೇನ ಬಣ್ಣಿಪೆನು (ಭರಚ. ೯-೫೫). [?]

ನಿರಂಗಸ್ವರೂಪ (ನಾ). [ವೀಶೈ] ಆಕಾರವಿಲ್ಲದವನು ; ನಿರಾಕಾರನಾದವನು ; ಅಂಗರಹಿತನಾದವನು : ಭೀತಿ ನಿರ್ಭೀತಿ ಇಲ್ಲದೆ ನಿರಂಗಸ್ವರೂಪನಾದಡೆ ವೇದಾಂತಿ ಎಂಬೆ (ಉರಿಜಿ. ೨೦೭-೨೮೬).

[ನಿರಂಗ$_1$+ಸ್ವರೂಪ]

ನಿರಂಗಿ (ನಾ). ಶರೀರವಿಲ್ಲದ ವ್ಯಕ್ತಿ : ಅಂಗವಳಿದ ನಿರಂಗಿಯಾನು ಬಸವಾ (ನೀಲವ. ೨೬-೮೨). [ಸಂ. ನಿರಂಗಿನ್]

ನಿರಂಜನ (ಗು). ೧. ಕಾಡಿಗೆಯಿಲ್ಲದ ; ಕಣ್ಕಪ್ಪು ಕೂಡಿರದ : ಸುರಿವ ನಿರಂಜನಾಶ್ರುಕಣದಿಂ ಕುಚದೊಳ್ ಪೊಸಮುತ್ತಿನಾರಮಂ . . . ನಿಯೋಜಿಪ ನೆಗಟ್ತಿಗೆ ಕಾರಣಮೇನೋ (ಚಂದ್ರಪು. ೩-೫೪).

೨. ದೋಷರಹಿತವಾದ ; ನಿಷ್ಕಲಂಕವಾದ : ತಿರ್ಯಗ್ಗತಿಭ್ರಮಣ ಜನಿತ ದುಃಖವಿನಾಶಾರ್ಥ ನಿಜನಿರಂಜನ ಪರಮಾತ್ಮತತ್ತ್ವಭಾವನೆ ನಿರಂತರಂ ಮಾಡೆ ಪಡುವುದು (ತತ್ತ್ವಪ್ರ. ೧೭೭). (ನಾ). ೩. ಕಪ್ಪಿನಿಂದ ಕೂಡಿರದಂಥದು ; ಕಾಡಿಗೆ ಅಥವಾ ಅಂಜನದ ಲೇಪವಿಲ್ಲದುದು : ವೇಶ್ಯಾಜನಂ ಕಾಮನಿಧಿಗಿಟ್ಟ ವಿನುತಾಂಜನಂ ಮೋಹಜನ ರಂಜನಂ ಗತನಿರಂಜನಂ ಚೆಲ್ವಾದುದು(ಚಿಬಪು.೧೦-೧೨); ಅಂಧಕಾರ ರಾತ್ರಿ ಸಮುದ್ರದಂತೆ. ಅದು ಕಾಡಿಗೆಯಂತೆ ಕಪ್ಪು ; ಆದರೂ ನಿರಂಜನ (ಸಿಬಂಧ. II, ೧೮೧). ೪. ಅಂಗಸಂಬಂಧರಹಿತವಾದುದು ; ಶರೀರೇಂದ್ರಿಯಗಳ ಸಂಬಂಧವಿಲ್ಲದಿರುವುದು : ನಿಷ್ಕಾಯವ ಈಶ್ವರನಳವಡಿಸಿಕೊಂಡ ನಿರಂಜನವ ಸದಾಶಿವನಳವಡಿಸಿಕೊಂಡ(ಅಪಚಂ.೧೩೫-೬೨೦); "ಜ್ಞಾನತನು" (ಅಪಚಂ. ಕೋಶ) ; ಪಶು ಎಂಬುದು ಸಾಂಜನ ಮತ್ತು ನಿರಂಜನ ಎಂದು ಎರಡು ವಿಧ: ಸಾಂಜನವು ಶರೀರೇಂದ್ರಿಯಗಳ ಸಂಬಂಧ ಉಳ್ಳುದು ನಿರಂಜನವು ಅವುಗಳಿಂದ ರಹಿತ (ಭಾತತ್ತ್ವ. ೬೨೬) ; ವಚನದಲ್ಲಿ ಹೊಳಹುದೋರುವ . . . ನಿತ್ಯ ಸತ್ಯ ಪರಿಪೂರ್ಣ ನಿರ್ಮಾಯ ನಿರಂಜನದ ನೆಳಲನ್ನೂ ಕಂಡವ ನಾನಲ್ಲ (ವಚಸಂ. I, ೬೪ಗೆ ಪ್ರವೇಶ). ೫. ಪವಿತ್ರವಾದುದು : 'ನಿರಂಜನಾರತಿ' ಪರಾ. ೬. ನಿರ್ಲಿಪ್ತ ; ವಿರಕ್ತನಾದವನು : ಸಕಲಸಂಸಾರಭಾರದುಃಖಭಾರಭಂಜನನುಂ ನಿರಂಜನನುಮಾಗಿ (ಸಂರಾಮಾ. ೧೬-೮೧ ಪ) ; ನಿರಾಂಜನರಾಗಿರ್ದುಮಶೇಷ ಲೋಕನಿಹಿತಾರ್ಥಗ್ರಾಹಿಗಳ್ . . . ಉದ್ಧರಿಸುಗೆಮ್ಮಂ ಸಿದ್ಧಿಯಪ್ಪನ್ನೆಗಂ (ಪುಷ್ಪಪು. ೧-೨) ; ನಿರಾವರಣ ನಿರಂಜನನು ನೋಡಾ . . . ನಿಮ್ಮ ನಿಜಲಿಂಗೈಕ್ಯನು (ಅಖಂಡೇ. ೩೧೬-೫) ; ನೆರೆ ನಿರಂಜನನಾಗೆನುತ ಗುರು ಹರನ ಅಭಯವನಿತ್ತ (ಗಗಶಾ. ೨-೩೧). ೭. ಪರಮಾತ್ಮ ; ದೇವರು : "ನಿರಂಜನಃ—ಪರಮಶಿವಂ" (ಕಾಶಕೃ. ೨೩೭) ; ಪರಮ ನಿರಂಜನ[ನೆ] ಮಱೆದ ಕಾಲಕ್ಕೆ ತುಂಬಿದ ಹರವಿಯ ಕಲ್ಲು ಕೊಂಡಂತೆ (ಬಸವ. ೧೬೯) ; ಗಿರಿನಂದನಾವಕ್ಷೋಜಭೃಶ್ಯಣಸ್ಕಂಧತನು ಚಿನ್ಮಯ ನಿರಂಜನ ಭೂರಿಪಂಜರನ . . . ಕಂಡನಬುಜಭವ (ಕುಪ್ಯಾಕ. ೬-೧೫) ; ಎಂಜಲಸೌಂಚವು ಸಂಜೆಯೆಂದೆನಬೇಡ ಕುಂಜರವು ವನವ ನೆನೆವಂತೆ ಬಿಡದೆ ನಿರಂಜನನ ನೆನೆಯೊ (ಸರ್ವಜ್ಞ. ೨೯೬). [ಸಂ.]

ನಿರಂಜನಜಂಗಮ (ನಾ). [ವೀಶೈ] ಶಿವಾದ್ವೈತ ತತ್ತ್ವವನ್ನು ಬಲ್ಲವನು : ಚಿದ್ಘನ ಮಹಾಲಿಂಗದೇವನ ನಿರಂಜನಜಂಗಮದೋಪಾದಿಯಲ್ಲಿ ಸಗುಣನಿರ್ಗುಣ ಪೂಜೆಗಳ ಮಾಡಿ (ಮಹಾದೇ. ಬ. ೧೨೩-೨೮೪) ; ಈ ವೇದಾಂತವನ್ನು ತಿಳಿದವರಿಗೆ ವೀರಶೈವರೆಂದೂ. . .ನಿರಂಜನಜಂಗಮರೆಂದೂ ಹೆಸರಿದೆ (ಶಕ್ತಿವಿ. ೭೯). [ನಿರಂಜನ+ಜಂಗಮ$_1$]

ನಿರಂಜನತತ್ತ್ವ (ನಾ). ನಿರ್ಲಿಪ್ತತೆ ; ವಿರಕ್ತಿ : ಇದೆ ನಿರಂಜನತತ್ತ್ವ ಸಾಮ್ರಾಜ್ಯದ ಸಘಾಟಕೆ ನಾವು ಕಡುಮೂರ್ಖದಲಿ ಮೈಮಱೆದವು ಶರೀರದ ಬಂಧುಕೃತ್ಯದಲಿ (ಕುಪ್ಯಾಭೀ. ೬-೬೮). [ನಿರಂಜನ+ತತ್ತ್ವ$_1$]

ನಿರಂಜನಪದ (ನಾ). ಪರಮಾತ್ಮನ ಪದವಿ,—ಸ್ಥಾನ : ಶಾಶ್ವತ ಗೋತ್ರಪವಿತ್ರಂಗೆ ಕಟಸೂತ್ರಮಂ ಕಟ್ಟಿ ನಿರಂಜನಪದೇಚ್ಛುಗಂಜನ ಮನೆಚ್ಛು (ಚಂದ್ರಪ್ರ. ೧೨-೧೫೬ ಪ). [ನಿರಂಜನ+ಪದ$_2$]

ನಿರಂಜನಾರತಿ (ನಾ). ಪವಿತ್ರವಾದ ಆರತಿ : ನಿರಂಜನಾರತಿಯ ಲೀಲೆಯಿಂದ ನಿವಾಳಿಸುತೆ ಸುರಮೌಳಿಮಣಿಯೆನಿಸಿದ ಮುಕುಂದನ ಲಾಲಿಸಿದನಾ ಪುಷ್ಪಲಾವಕನಧಿಕಹರ್ಷದಲಿ (ಅಕ್ರೂಚಿ. ೬-೨೨).

[ನಿರಂಜನ+ಆರತಿ$_1$]

ನಿರಂತ (ಗು). ೧. ಕೊನೆಯಿಲ್ಲದ ; ಅಂತ್ಯವಿಲ್ಲದ. (ನಾ). ೨. ಅಂತ್ಯವಿಲ್ಲದುದು ; ಸತತವಾದುದು : ನೀನುಮೆನ್ನ ಕಜ್ಜದೊಳಗೆಂದು ಸ್ವೈತಚಿತನಾದಿಯ ವೇದರಹಸ್ಯದೊಳ್ನಿರಂತದ[ಪರಿಚರ್ಯೆಯಿಂ] ನೆಜ್ಜೆಯೆ ಯೋಜಿಸಿದಂ ಕದನತ್ರಿಣೇತ್ರನಂ (ಪಂಪಭಾ. ೧೦-೬೪). ೩. ಅಂತ್ಯವಿಲ್ಲದವನು ; ಮರಣವಿಲ್ಲದವನು ; ಪರಮಾತ್ಮ : ಅ ಗುಣ ಚಿಪ್ಪಿನ ಮುತ್ತಿನ ತೆಜ ಕಸ್ತುರಿಯ ಶುಕ್ಲದ ತೆಜ . . . ನಿರಂಗ ನಿರಂತ ಸುಸಂಗ ನಿಃಕಳಂಕ ಮಲ್ಲಿಕಾರ್ಜುನಾ ಇದೆಂಬಂದವ ಹೇಳಾ (ಮೋಕಮಾ. ೪-೧೨) ; ನಿರ್ಮರಣ ನಿರವಯ ನಿಷ್ಕಳಂಕ ನಿರಂತ ನಿಶ್ಚಿಂತ . . . ನಿಜನಿರ್ಮಾಯ ಚಿತ್ತೈಸು (ಬಸಪು. ೬೧-೪೪) ; ನಿರ್ಮಲಾಚರಣ ನಿರಂತ ನಿರ್ಭವ . . . ಶಾಂಭವೀಧವಾ (ಶಬಶಂ. ೫-೨೪). [ಸಂ.]

ನಿರಂತರ$_1$ (ಗು). ೧. ಎಡೆಬಿಡದ ; ಸತತವಾದ : ಬಂಡಿಗಳನೊಡ್ಡಿದರಾ ನಿರಂತರ ಶರವ ತಡೆದರು ತಕ್ಕೈವರಿಗೆಯಲಿ (ಕುಪ್ಯಾಕ. ೧೧-೫೦) ; ನಿರಂತರೋಚ್ಛ್ವಾಸದಿಂ ತಿದಿಯೊತ್ತಿದಂತೇದುತ್ತಿರ್ದಳ್ಳೆಗಳ ರವಂ ಕಿರಿದಾಗೆ (ಪ್ರಿಯಾಮಾ. ೧೦೫-೧೪೯) ; ಇದರಿಂದ ಸಕಲ ಮಾನಸಿಕ ನಿರಂತರ ವ್ಯಾಪಾರಗಳಿಗೆ ಮೆದುಳಿನ ಅವಸ್ಥಾವಿಶೇಷಗಳೇ ಕಾರಣವೆಂದು ಸಿದ್ಧವಾಗುತ್ತದೆ (ಜೀವಾತ್ಮ. ೫೮) ; ನಿರಂತರ ಸೇವೆಯ ನದಿಗಳ ಧ್ವೇಯ (ಸನದಿ. ೧೭). ೨. ಸಮೃದ್ಧವಾದ ; ಸಮೀಚೀನವಾದ ; ತೃಪ್ತಿಕರವಾದ. (ನಾ). ೩. ನಿತ್ಯವಾದುದು ; ಸತ್ಯವಾದುದು: "ಸತ(ತ)ಮವಿಚ್ಛಿನ್ನಂ . . .[ನಿರಂ]ತರಮಜಸ್ರಮೆನೆ ತಾಂ ನಿತ್ಯಂ" (ವಸ್ತುಕೋ. ೧೦೯-೬೭). ೪. ಸದಾಕಾಲವೂ ಇರುವಂಥವನು ; ಶಾಶ್ವತವಾಗಿರುವವನು : ಕಾಯವಂಚಕನಲ್ಲ ಜೀವವಂಚಕನಲ್ಲ ನಿರಂತರ ಸಹಜ ನೋಡಯ್ಯ . . . ಕೂಡಲಸಂಗನ ಶರಣನುಪಮಾತೀತ ನೋಡಯ್ಯ (ಬಸವ. ೯೪೦); ನಿರುಪಮನಿರಾಮಯನಿರಂತರನಿರವಶೇಷ . . . ಕರುಣಿಸುವುದೆಂದ (ಕುಪ್ಯಾಅ. ೬-೦೯). ೫. ದಟ್ಟವಾದುದು ; ಸಾಂದ್ರವಾದುದು : "ನಿರಂತರಂ, ಘನಂ, ಸಾಂದ್ರಂ, ಬಹುಳಂ, ವಿರಳೇತರಂ—ಈ ೫ ಮಂದಂ" (ಹಲಾಯು. ೧೧೯-೬೨) ; "ನಿರಂತರಂ ಸಾಂದ್ರಮತಿಘನಂ" (ವಸ್ತುಕೋ. ೧೦೪-೬೯). ೬. ತಣಿವು; ತೃಪ್ತಿ ; ತುಷ್ಟಿ ; ಸಮೃದ್ಧಿ (?) : 'ನೈರಂತರ್ಯ' ಪರಾ.

ನಿರಂತರಂ ಮಾಡು—ತೃಪ್ತಿಪಡಿಸು; ತುಷ್ಟಿಗೊಳಿಸು; ತಣಿಸು: ಸಿದ್ಧಾರ್ಥನ ಸಿರಿಯರಸಿ ಜಯಾವತಿಯೆಂಬೊಳ್ . . . ಒಂದು ದಿವಸಂ ವಿಜಯಭದ್ರರೆಂಬ ಭಟಾರರವಧಿಜ್ಞಾನಿಗಳ್ ಚರಿಗೆವೊಕ್ಕೊಡೆ ಕಂಡವರಂ ಜಯಾವತಿ ನಿಜಾಸಿಯಾದಮಾನುಂ ಭಕ್ತಿಯಿಂದಂ ಕೈಯಲಿಕ್ಕಿ ನಿರಂತರಂ ಮಾಡಿ ಕುಳ್ಳಿರ್ದ ಬಟಾಕ್ಕಿಂತೆಂದು ಬೆಸಗೊಂಡಳ್ (ವರ್ಧಾರಾ. ೪೩-೨೧); ಪರಮಾನುರಾಗದಿಂದಂ ನಿರಂತರಂ ಮಾಡಿ ಬಟಾಕೆ ತಾನುಂಬುದು(ಅಸಂಪು. ೧೦-೮೧). [ಸಂ.]

ನಿರಂತರ$_2$ (ಅ). ಯಾವಾಗಲೂ ; ಸದಾ ; ಎಡೆಬಿಡದೆ : ನಿಮ್ಮ ಶರಣರ ಪ್ರಸಾದದಲ್ಲಿ ನಿರಂತರ ಆಡಿ ಹಾಡಿ . . . ಪರಿಣಾಮಿಸುವಂತೆ ಮಾಡು (ಬಸವ. ೪೫೮) ; ಹಳಿವಿನಲಿ ಹೆಮ್ಮೆಯನು ಕುಂದಿನ ಕುಲದೊಳಗ್ಗಳಿಕೆಯನು ತಮದಲಿ ಬೆಳಗ ಬಣ್ಣಿಸುತಿಹೆ ನಿರಂತರವೆಂದನಾ ಚೈದ್ಯ (ಕುಪ್ಯಾಸ. ೧೦-೧೧) ; ಹರಿಸ್ಮರಣೆ ಮಾಡೋ ನಿರಂತರ ಪರಗತಿಗೆ ಇದು ನಿರ್ಧಾರ (ಪುರಂದ. ೫-೮೫ ಪಲ್ಲವಿ) ; ನಂಬಿದ ಭಕ್ತರ ಹೃದಯದಲ್ಲಿ ಹೆರೆ ಹಿಂಗದೆ ನಿರಂತರ ನೆಲೆಸಿರ್ಪನು (ಅಖಂಡೇ. ೧೬೦-೧೧); ನಿರಂತರ ಬರುವವರ್ಯಂತರೆ ಬಾರನೇ (ಗಾದೆ). [<ನಿರಂತರಂ]

ನಿರಂತರಂ (ಅ). ಯಾವಾಗಲೂ ; ಸದಾ ; ಎಡೆಬಿಡದೆ : ಪರಿದಿರೆ ರಾಗಂ ತನ್ನೊಳ್ನಿರಂತರಂ (ಕವಿಗಾ. ೧-೧೦೧) ; ಜಗತ್ಪ್ರಸಿದ್ಧ ಚಿರಂತನ ನೂತನ ಮಹಾಕವೀಶ್ವರಕೃತಿಶಾಸ್ತ್ರಾಂತರಸ್ಮಾರತೆ ನಿಲ್ಕೆ ನಿರಂತರಂ (ಜಾತಕ. ೧-೩). [ಸಂ.]

ನಿರಂತರಪಕ್ಷ (ನಾ). ಸತತವಾಗಿರುವ ಪಕ್ಷಪಾತ,—ಒಲವು : ಅಳುಕುವನೆ ಸುಕುಮಾರ ಸಾರಥಿ ಬಲುಹನುಳ್ಳವನೇ ನಪುಂಸಕನಲಿ

ನಿರಂತರಪಕ್ಷವೆಂದು ವಿರಾಟ ಖತಿಗೊಂಡ (ಕುಸ್ಯಾವಿ. ೯–೧೫).

[ನಿರಂತರ$_1$ + ಪಕ್ಷ]

ನಿರಂತರಬ್ರಹ್ಮಚರ್ಯ (ನಾ). ಅಖಂಡ ಬ್ರಹ್ಮಚರ್ಯ; ಅಖಂಡವಾದ ಇಂದ್ರಿಯನಿಗ್ರಹ : ಪೂಜ್ಯರಾದ ಕಣ್ವರು ನಿರಂತರ ಬ್ರಹ್ಮಚರ್ಯದಲ್ಲಿ ಇರುವರೆಂದು ಪ್ರಸಿದ್ಧಿ (ಶಾಕುಂಕ. ೧೩–೨೪).

[ನಿರಂತರ$_1$ + ಬ್ರಹ್ಮಚರ್ಯ]

ನಿರಂತರಶ್ಲೇಷೆ (ನಾ). [ಕಾವ್ಯವಿ] ಅರ್ಥಾಲಂಕಾರದಲ್ಲಿ ಒಂದು ಬಗೆ; ℙ ನಿರಂತರಶ್ಲೇಷೆಯಲ್ಲಿ ಅಭಿನ್ನನಿರಂತರಶ್ಲೇಷೆ (= ಪದಗಳನ್ನು ಒಡೆಯದೆ ಎರಡು ಅರ್ಥವನ್ನು ಕೊಡುವ ಪದಗಳು ಒಂದರ ಮೇಲೆ ಒಂದರಂತೆ ಸೇರಿರುವುದು) ಮತ್ತು ಭಿನ್ನನಿರಂತರಶ್ಲೇಷೆ (= ಬೇರೆ ಬೇರೆ ಪದವಿಭಾಗ ಮಾಡಿದರೆ ಬೇರೆ ಬೇರೆ ಅರ್ಥವನ್ನು ಕೊಡುವ ಪದಗಳು ಸೇರಿರುವುದು) ಎಂದು ಎರಡು ಬಗೆಗಳಿವೆ : ಪರರೂಪಕಾವ್ಯಲಂಕಾರ ರಚನೆಯೊಳ್ಮನ್ನೆ ಪೇಟ್ದಿ ಬಂದೆಂ ಕೆಲವಂ ಪೊರೆಕೊಳೆ ಬಗೆಗೀ ತೆಱದಿಂ ನಿರಂತರ ವಿರುದ್ಧ ನಿಯಮಿತಶ್ಲೇಷೆಗಳಂ (ಕವಿತಾ. ೩–೧೧೩). [ನಿರಂತರ$_1$ + ಶ್ಲೇಷೆ]

ನಿರಂತರಾಭ್ಯಾಸ (ನಾ). ಸತತವಾದ ಅಭ್ಯಾಸ; ಎಡೆಬಿಡದ ಅಧ್ಯಯನ : ಒಂದು ಆಳ್ಕ್ರಿಮವಾದ ಅನುವಾದ ಅನಾಯಾಸವಾಗಿ ಒದಗಿ ಬರುವುದಕ್ಕೆ ವಸ್ತುವಿನ ಅಬಾಧಿತವಾದ ವ್ಯಾಪಕತೆ ಎಷ್ಟು ಕಾರಣವೋ ಅನುವಾದಕರ ರಸಿಕತೆಯೂ ನಿರಂತರಾಭ್ಯಾಸವೂ ತಿದ್ದಿ ತೀಡಿ ಮಿರುಗಿಸುವ ಉತ್ಸಾಹಶೀಲತೆಯೂ ಅಷ್ಟೇ ಕಾರಣ (ವೀರಯೋ. VI, ಈ ಸಾಟಕವನ್ನು ಕುರಿತು). [ನಿರಂತರ$_1$ + ಅಭ್ಯಾಸ]

ನಿರಂತರಾಯ (ನಾ). ೧. ಅಡಚಣೆಯಿಲ್ಲದಿರುವುದು; ನಿರ್ವಿಘ್ನತೆ; ಸುಸೂತ್ರತೆ; ನಿರಾಯಾಸ : ಜಿನಧರ್ಮಮೆ ಕೆಲವು ಕಾಲಂ ನಿರಂತರಾಯಮಾಗಿ ನಡೆಯೆ (ಜಾವುಂಪು. ೪೦೪) ; ಕೃಷ್ಣನೊಡಂಬಟ್ಟೊಡೆ ವಿವಾಹ ನಿರಂತರಾಯವು ಚಿಂತೆ ಬೇಡ (ಕುಸ್ಯಾವಿ. ೧೧–೨೪) ; ಅದುದೀ ಪರಿ ಸಕಲಸೌರಂಭಾದಿವೈಭವದಿಂದಲಾ ಸುಳ್ಯತೋದಯನ ಹಯ ಸಪ್ತ ತಂತು ನಿರಂತರಾಯದಲಿ (ತೊರಣಾ. ೧–೬–೫೩). ೨. ತಡವಾಗದಿರುವಿಕೆ ; ಶೀಘ್ರತೆ ; ಬೇಗ : ಅಂತಾ ಜಗತ್ಪವಿತ್ರಚಾರಿತ್ರಪಾತ್ರಂಗೆ ಪುಷ್ಪವಿತ್ರಂ ವಿಶುದ್ಧಮುಷ್ಣಾಹಾರದಾನಮುಂ ನಿರಂತರಾಯಮಾಗಿ ಮಾಡಿದಾಗಳ್ (ಪುಷ್ಪಪು. ೧೪–೧೧ ಪ) ; ಪರಿಣತಜನದಲಧಿಕನು ನೀ ನಿಧಾನಿಸಿ ನನಗೆ ಮಾರುತ್ತರವನಿತ್ತು ನಿರಂತರಾಯದಲಿ ತನುವಿಗಾಸ್ಯಾಯನವ ಮಾಡುವುದು (ಕುಸ್ಯಾಆ. ೨೩–೩೫) ; ಮುನಿಗಳ್ಗೆ ನಿರಂತರಾಯದೊಳು ಪಂಚಾಶ್ಚರ್ಯಮಾಗೆ ಕಂಡು (ಆಗವಿ. ೯೨ ರಾಜಾಪ.). ೩. ಎಡೆಬಿಡದಿರುವಿಕೆ ; ನಡುವೆ ಅವಕಾಶವಾಗದಿರುವಿಕೆ : ನರಮ್ಯಗಾಧಮ ನಿಮ್ಮ ಭಾರತವರುಷಭೂಮಿಯೊಳೊಂದು ವರುಷಾಂತರ ನಪುಂಸಕನಾಗಿ ಹರಿಸು ನಿರಂತರಾಯದಲಿ (ಕುಸ್ಯಾಆ. ೮–೪೩). [ಸಂ.]

ನಿರಂತರಾಸ್ತ್ರ (ನಾ). ಎಡೆಬಿಡದೆ ಸುರಿಯುವ ಬಾಣ : ನಿರಂತರಾಸ್ತ್ರದ ಜಲನಿಧಿಗೆ ವಡಬಾಗ್ನಿಯಾದನು ನಗುತ ಯಮನೂನು (ಕುಸ್ಯಾಶ. ೩–೬೦). [ನಿರಂತರ$_1$ + ಅಸ್ತ್ರ]

ನಿರಂತರಾಳ (ನಾ). ಕಡಿಮೆ ಆಳವಿರುವ ಸ್ಥಳ; ಹೆಚ್ಚು ಆಳವಿಲ್ಲದ ಎಡೆ : ಕರಜಜರು ಪುಟ್ಟ ಪುಲ್ಲಿಡುಗಳಾಗೆ ಮೇಣ್ ಪುಟ್ಟುವಂಕುರಂ ಕರಮ ಕೆಂಪುಪತ್ತರೆ ತದುರ್ದಿಯಂ ತೋಡೆ ಮೇಣ್ ಸುರಕ್ತಮೆನಿಕುಂ ಬಟ್ಟುಕ್ಕೆ ಸಲೆ ಪುಟ್ಟುಗುಂ ನೀರ್ ನಿರಂತರಾಳದೊಳ್ (ಶೋಕೋಪ. ೫–೬).

[ಸಂ. ನಿರಂತರಾಲ]

ನಿರಂತರಿತ (ಗು). ಎಡೆಬಿಡದಿರುವ; ಒತ್ತಾಗಿರುವ; ನಿಬಿಡವಾದ : ಮುತ್ತಮನೇಕಳುಸುಮಕಿಸಲಯ ಫಲಪರಿಣತಫಲಾವನಮ್ರಾಸ್ರುಕನ್ನು ತರುನಿರಂತರಿತ ವನಲಕ್ಷ್ಮಿಯನೊಜಲ್ದು ನೋಡುತಿರ್ಪನ್ನೆಗಂ (ಆವಿಪು. ೫–೪೫ ಪ) ; ನಿರಂತರಿತ ಶಾಲಿಸಸ್ಯಚಯಶಾಡ್ವಲೋರ್ವೀತಳಂ (ಚಂದ್ರಪು. ೫–೧೩). [ಸಂ.]

ನಿರಂಧ (ನಾ). ಕತ್ತಲಿಲ್ಲದಿರುವಿಕೆ ; ಸಂಪೂರ್ಣ ಪ್ರಕಾಶ : ನಿರಂಧತಮಂಧವಿಲ್ಲದಂದು . . . ಬಸವಣ್ಣನೊಬ್ಬನೇ ಉದಯವಾದನು (ಚನ್ನಸ. ಕ. ೪–೧೪) [ಸಂ.]

ನಿರಂಬರೆ (ನಾ). ಬಟ್ಟೆಯಿಲ್ಲದವಳು ; ಬೆತ್ತಲೆಯಾಗಿರುವವಳು ; ದಿಗಂಬರೆ : ತನಿವೇಟದಲಿ ತಾಮಸಿ ನಿರಂ[ಪಾಶಾಂ. ನಿಶಾಂ, ದಿಗಂ]ಬರೆಯಾಗಿ ನಲಿದಪ್ಪ ದಳು ನಿಜಪತಿಯ (ತೊರಣಾ. ೫–೩–೪)

[ಸಂ. ನಿರಂಬರಾ]

ನಿರಂಬಳ$_1$ 'ನಿರುನ್ಮಳ' ನೋ.

ನಿರಂಬಳ$_2$ (ಅ). ನಿಶ್ಚಿಂತೆಯಾಗಿ : ಹೀಂಗ ಗಂಡಸರು ನಿರಂಬಳ ಇರೋದು ಛಲೋ ಅಲ್ಲ (ಹೊಸಂಸಾ. ೧೫೭) ; ಮರಗಳ ಕೊಂಬಿಗಳು ಕೊಟ್ಟ ರೂಪಕ್ಕೆ ಬಿಸಿಲು ಪಡೆಯುವ ರಂಗವಲ್ಲಿಯಂತೆಯೇ ಸದ್ಯಕ್ಕೆ ಇರಲಿ ಮನಸ್ಸು. ನಿರಂಬಳ ತೆರೆದು ಬಿಡಲಿ (ಸಂಸ್ಕಾರ. ೯೫).

[<ನಿರಂಬಳ$_1$]

ನಿರಂಶ (ಗು). ೧. ಅಂಶವಲ್ಲದ ; ಭಾಗವಲ್ಲದ : 'ನಿರಂಶಜೀವ' ಪರಾ. (ನಾ). ೨. ಅಂಶವಲ್ಲದುದು ; ಅಖಂಡವಾದುದು : ನಿರನ್ವಯ ಪ್ರತಿಕ್ಷಣವಿಶರಾರುಗಳ್ ನಿರಂಶಂಗಳಾಗಿಯುಂ ಭ್ರಾಂತಿವಶದಿಂ . . . ವಿಜ್ಞಾನಲಕ್ಷಣಂಗಳಾತ್ಮಾಭಿಧಾನಮುಂ ಪುಟ್ಟಿಸುಗುಂ (ಅದಿಪು. ೨–೯ ಪ). ೩. = ನಿರಂಶಜೀವ : ಮನುಷ್ಯಜೀವರು ನಿರಂಶರು (ಹಿಂದುಸಾ. ೨೮೩). [ಸಂ.]

ನಿರಂಶಜೀವ (ನಾ). [ದ್ವೈತ] ಜೀವರಲ್ಲಿ ಒಂದು ವಿಧ ; ತನ್ನ ಅಂಶದಿಂದ ಅವತಾರ ಮಾಡಲು ಆಗದ ಜೀವ ; ಮನುಷ್ಯ ಜೀವ ; ℙ ರುದ್ರ, ಇಂದ್ರ ಮೊದಲಾದ ದೇವತೆಗಳು ತಮ್ಮ ಅಂಶವಿಶೇಷದಿಂದ ಭೂಮಿಯಲ್ಲಿ ಅವತರಿಸುತ್ತಾರೆ. ಇಂಥ ಜೀವರಿಗೆ ಸಾಂಶಜೀವರೆಂದು ಹೆಸರು. ಮನುಷ್ಯನಿಗೆ ಅವತರಿಸುವ ಶಕ್ತಿಯಿಲ್ಲವಾದುದರಿಂದ ಅವನಿಗೆ ನಿರಂಶಜೀವನೆಂದು ಹೆಸರು : ಜೀವರಲ್ಲಿ ಸಾಂಶಜೀವರೆಂತಲೂ, ನಿರಂಶಜೀವರೆಂತಲೂ ಎರಡು ಪ್ರಕಾರ ಉಂಟು (ಹಸಾರ. ೩–೪ ವಿಶೇಷಾರ್ಥ). [ನಿರಂಶ + ಜೀವ]

ನಿರಂಹ (ನಾ). ಜಂಬವಿಲ್ಲದಿರುವವನು ; ಅಹಂಕಾರವಿಲ್ಲದಿರುವವನು ; ಅಹಂಕಾರರಹಿತನಾದವನು : ರತ್ನತ್ರಯಪ್ರಭಾಪ್ರಭಾವಿತ ನಿಜಮನೋಭವನರುಂ . . . ನಿರಂಹರುಮಪ್ಪ ಶ್ರೀ ಶ್ರೀನನ್ದಿಪಣ್ಡಿತದೇವರ್ಗ್ಗಿವಿತಾರಾಧನಾಪುರಸ್ಸರ ಮಾಸಸಲ್ಲೇಖನೆ[ಯಿಂ]. . .ಚತುರ್ವ್ವಿಧಾರಾಧ[ನೆಯಿ]ನಾರಾಧಿಸಿ (ಸೌಇಇ. XX, ೫೨–೨೪ ; 1077).

[<ಸಂ. ನಿರಹಂ]

ನಿರಕರ (ನಾ). ಕಡೆಗಣಿಸುವಿಕೆ (?).

ನಿರಕರ ಮಾಡು = ಕಡೆಗಣಿಸು ; ತುಚ್ಛೀಕರಿಸು (?) : ಈಶ . . . ಜೆನ್ನಾಗಿ ನಿಜದೋರಿ ಕತ್ತರಿಯ ಕಡೆಗಿಟ್ಟು ಚಿಣ್ಣ ನಿನಗಿಂತುಮಾಯಾಸಮೇಕೆ ಪೇಳಲಲು ಯೆನ್ನ ಭಕ್ತಿಯನು ನಿರಕರ ಮಾಡಲಾನಂತು ಗೆಯ್ದೊನೆಂದಡಿಗೆರಗಲು (ಜೋರಮು. ೮–೪೮). [<ನೀಕರ ?]

ನಿರಕು 'ನಿಕರ$_2$' ನೋ.

ನಿರಕ್ಕರ (ಗು). = ನಿರಕ್ಷರ ೧ : 'ನಿರಕ್ಕರಿ' ಪರಾ.

[<ಸಂ. ನಿರಕ್ಷರ]

ನಿರಕ್ಕರಿ (ನಾ). ಅಕ್ಷರವನ್ನು ತಿಳಿಯದಿರುವವನು ; ಅಕ್ಷರಜ್ಞಾನವಿಲ್ಲದಿರುವವನು : ಮುಂದುವಿ ಹಾಗೂ ಲಾವಣಿಗಳನ್ನು ರಚಿಸಿ

ಹಾಡಿದ ಕವಿಗಳು ತೀರ ನಿರಕ್ಕರಿಗಳಿದ್ದಂತೆ ಕಾಣುವುದಿಲ್ಲ (ಕನ್ನಜಾ. ೧೬).
[ನಿರಕ್ಕರ+-ಇ$_3$]

ನಿರಕ್ಕು 'ನಿಕರ್$_2$' ನೋ.

ನಿರಕ್ಷದೇಶ (ನಾ). ಭೂಮಧ್ಯರೇಖೆಯ ದೇಶ; ಸಮಭಾಜಕ ವೃತ್ತದ ಹತ್ತಿರದ ಪ್ರದೇಶ: (ಕ). [ಸಂ.]

ನಿರಕ್ಷರ (ಗು). ೧. ಅಕ್ಷರ ಜ್ಞಾನವಿಲ್ಲದ; ಓದು ಬರಹ ಬಾರದ. (ನಾ). ೨. ಓದು ಬರಹ ಬಾರದಿರುವವನು.

ನಿರಕ್ಷರ ಕುಕ್ಷಿ = ಓದು ಬರಹ ಬಾರದ ವ್ಯಕ್ತಿ; ಅಕ್ಷರಜ್ಞಾನ ವಿಲ್ಲದ ವ್ಯಕ್ತಿ: ಅವರು ಬಹಳ ಮಟ್ಟಿಗೆ ನಿರಕ್ಷರಕುಕ್ಷಿಗಳಾಗಿದ್ದುದರಿಂದ ಹಾಗಾಯಿತು (ಜಾನಗೀ. ೯); ನಿರಕ್ಷರಕುಕ್ಷಿಯಾಗಿದ್ದ ಪ್ರಭುಲ್ಲೆಯು ಶಾಸ್ತ್ರಪಂಡಿತಳೂ ವ್ಯವಹಾರದಕ್ಷಳೂ ಆದದ್ದು ಭವಾನೀಕಾಕೂರನ ದೀರ್ಘ ಶಿಕ್ಷಣದಿಂದ (ಬಂಕಿಮ. ೨೯೬). [ಸಂ.]

ನಿರಕ್ಷೀಕೃತ (ಗು). ಕಣ್ಣಿಗೆ ಕಾಣದಂತೆ ಮಾಡಿದ: ಗಾಳಿಯ ಪೊಯ್ಲಿಂದಂ ದ್ಯುತಿಮಾಳೆ ತೆರಳ್ದೊಡನೆ ನೆಗಟ್ಟಿ ತಮುದೊಡ್ಡೆ ನಲಾಭೀಳತೆ ವೆತ್ತುದು ನೀಳಘನಾಳಿನಿರಕ್ಷೀಕೃತಾಂಬರಂ ಘನಪಥದೊಳ್ (ಜಗವಿ. ೪-೮೭). [ಸಂ.]

ನಿರಖ್, ನಿರಖು (ನಾ). ನಿರ್ದಿಷ್ಟವಾದ ಬೆಲೆ; ನಿಖರವಾದ ಬೆಲೆ: (ರೈಸ್‌ಗೆ. II. ೫೫೭). **ನಿರಖು:** ನಿರಖು ಕಟ್ಟುವಲ್ಲಿ ಅರ್ಜಬಾಜಾರಿ ನಿರಖಿಗೆ . . . ಹಣ ಜಾಸ್ತಿ ಛಡಾಯಿಸಿ (ಮಹಾಪಂ. II, ೭೦); ೧೩೦೦೦ ರೂಪಾಯಿಯನ್ನು ಕಾಯಂ(ನಿರಖು) ಠೇವಣಿಯಾಗಿ (Fixed Deposit) ೨ ವರ್ಷಕ್ಕೆ ಬಡ್ಡಿಗೆ ಇರಿಸುತ್ತಾರೆ(ಬಾಲಪ್ರ.III,೧೫೫೬). 'ನಿಕರ್$_2$' ಪರಾ.

ನಿರಖು ಮಾಡು = ನಿರ್ದಿಷ್ಟವಾದ ಬೆಲೆಯನ್ನು ಗೊತ್ತು ಪಡಿಸು; ಭೂಮಿಯ ಮೇಲಿನ ಕಂದಾಯವನ್ನು ನ್ಯಾಯವಾಗಿಯೂ . . . ನಿರಖು ಮಾಡಿದವನು ಇಕ್ಕೇರಿ ಶಿವಪ್ಪ ನಾಯಕ (ಪಾಳಗಾ. ೫೧).
[←ಪಾರ. ಹಿಂ. ನಿರ್ಖ್; ಮರಾ. ನಿರಖ್]

ನಿರಖು 'ನಿರಖ್' ನೋ.

ನಿರಖುಪಟ್ಟೆ (ನಾ). ಬೆಲೆಯ ಪಟ್ಟೆ; ಕ್ರಯಪಟ್ಟೆ: (ಕ).
[ನಿರಖು (<ನಿರಖ್)+ಪಟ್ಟೆ$_2$]

ನಿರಗುಂಡಿ 'ನಿರ್ಗುಡಿ' ನೋ.

ನಿರಗೆ$_1$ 'ನಿಱಗೆ' ನೋ.

ನಿರಗೆ$_2$ 'ನಿಱಗ' ನೋ.

ನಿರಘ (ಗು). ೧. ಪಾಪವಿಲ್ಲದ; ದೋಷವಿಲ್ಲದ: ಬೆಳ್ಗುಳಗಿರಿಯ ಮಸ್ತಕದಲ್ಲಿ ನೆಲಸಿದ ನಿರಘ ನಿರ್ಮಲ ವಸ್ತುರಾಜಿಪ ಗೋಮಟೇಶ್ವರನು (ನಾಗಚ. ೧-೬೪). (ನಾ). ೨. ಪಾಪವಿಲ್ಲದಿರುವಿಕೆ; ದೋಷವಿಲ್ಲದಿರುವಿಕೆ: ನಿರಘದಾ ನಿರುತ್ತರಗುಣದ ನಿರ್ವಾಸನಾ ನಿರ್ವಹಾದ್ವೈತನಿಶ್ಚಲ ನಿರಂಜನನೊಳೆನ್ನ ನೋಡೆಂದನಾರ್ಯಂ (ವೀಶೈಪು. ೧-೨-೫). ೩. ಪಾಪರಹಿತನಾದವನು; ದೋಷರಹಿತನಾದವನು: ನಿರ್ಮಾಯಂ ನಿಜ ನಿತ್ಯತೃಪ್ತ ನಿರಘಂ . . . ಪ್ರಭುದೇವ ದೇವನನಿಶಂ ರಾಜೇರ್ಕೆ ಮಚ್ಚೇತ ದೊಳ್ (ಪಪ್ಮಾ. ೧-೧೧) ; ನಿರಘ ನಿರೀಹ ನಿರ್ಭಯ . . . ನಿಷ್ಕಳಂಕ ಜಯಶಂಕರ ನಿರ್ಜಡ ಶಾಂಭವೀಧವಾ (ಶಬರಂ. ೫-೨೪); ನಿರಘ ನಿರ್ಮಲ ನಿರಾವರಣಾಶ್ರಿತ ಕಲ್ಪಧರಾರುಹ ಸ್ಫುರಿತ ವಿಷ್ಣುನಯನಾರ್ಚಿತ ಪಾದ ಸರೋಜ ಮದೀಶ್ವರಾ (ಹಾಲಾಸ್ಯ. ೧-೧೧-೨೬). [ಸಂ.]

ನಿರಘತೆ (ನಾ). ಪಾಪರಹಿತವಾಗಿರುವಿಕೆ; ದೋಷವಿಲ್ಲದಿರುವಿಕೆ: ಸಪ್ತಶೌಚಾಚಾರಸತ್ಕುಲಪರಂಪರೆಗೆ ನಿತ್ಯನಿರಘತೆ ಕೀರ್ತಿ ದೇವತಾಪ್ರೀತಿ ಮತ್ತತ್ಕೃಧಿಕಸಂಪದಂ ಪತಿಸೇವೆಯಿಂದೊದಗುವುದು(ವೆಂಕಾರಾ.೨-೯-೪೫).
[ಸಂ.ನಿರಘತಾ]

ನಿರಘೆ (ನಾ). ದೋಷರಹಿತೆ; ಕಳಂಕರಹಿತೆ; ಪಾಪರಹಿತೆ: ನಿರುತೆ ನಿರ್ಮಲೆ ನಿರಘೆ ನಿರತಿಶಯೆ ನಿರ್ಭೀದ್ಯೆ (ಏಕೋಪು. ೧-೯).
[ಸಂ. ನಿರಘಾ]

ನಿರಜ (ನಾ). ೧. ನಿರ್ಮಲವಾದುದು; ಪರಿಶುದ್ಧವಾದುದು. ೨. ನಿರ್ಮಲನಾದವನು; ರಜೋಗುಣರಹಿತನಾದವನು; ಪರಿಶುದ್ಧನಾದವನು: ನಿರಜ ನಿರಹಂಕಾರ ನಿರ್ಮಳ ನಿರಾಳ ಪಂಪಾ ವಿರೂಪಾಕ್ಷ ಶರಣು (ಪಚಕಾ. ೧-೪); ನಿರಜ ನಿರಹಂಕಾರ ನಿರವಯ ನಿರಾಸಕ್ತ ಪುರಹರನೆ (ಸೋಮಪ. ೧-೫); ನಿರಜ ನಿರ್ಜರ ನಿತ್ಯನಿರ್ಮಳ . . . ನಿರ್ಮಾಯ ಚಿತ್ರೈಸು (ಬಸಪು. ೬೧-೪೪). [ಸಂ.]

ನಿರಜೆ (ನಾ). ಕಳಂಕರಹಿತೆ; ಪರಿಶುದ್ಧಳಾದವಳು: ತಮ್ಮ ನೀನಾಡಿದಂತವನಿಸುತೆ ನಿರಜೆಯಹುದು (ಜೈಮಿಭಾ. ೧೮-೫೪); ನಿರುಪಮ ನಿರಾವರಣೆ ನಿರಜೆ ನಿರಹಂಕಾರೆ (ಏಕೋಪು. ೧-೯). [ಸಂ. ನಿರಜಾ]

ನಿರಜ್ಞ (ನಾ). ಅಜ್ಞನಲ್ಲದವನು; ಬುದ್ಧಿವಂತ: ನಿರವಮಾನ ನಿರಜ್ಞ . . . ನಿರ್ವಿಕಾರಾಕಾರ ಚಿತ್ರೈಸು (ಬಸಪು. ೬೧-೪೩). [ಸಂ.]

ನಿರತ (ಗು). ೧. ಆಸಕ್ತವಾದ; ತಲ್ಲೀನವಾದ; ಮಗ್ನವಾದ: ಆಕೆಯ ಮನಸ್ಸೆಲ್ಲವೂ ಸೇವೆಯಲ್ಲಿಯೇ ನಿರತವಾಗಿರುತ್ತದೆ (ನನದಿ. ೧೪). (ನಾ). ೨. ತೊಡಗಿದವನು; ಮಗ್ನನಾದವನು: ಪರಮತತಪತ್ಪರಣ ನಿರತರು ಪರವಾದೀ [ಶರಭ]ಭೀರುಜ್ಞಾಪರನಾಮಧೇಯರಪ್ಪ ಶ್ರೀಮತ್ ಶ್ರೀನನ್ದಿಪಣ್ಡಿತದೇವರ್ಗ್ಗೆ (ಸೌಇಇ. XX, ೪೬-೨೬ ; 1072) ; ಮೂಜಗದಲ್ಲಿ ನಿರತರು ಕೂಡಲಸಂಗನ ಶರಣರು ತ್ರಿವಿಧವನಟಾಯರು (ಬಸವ. ೯೦೧) ; ಎಸೆದರ್ ವತ್ಸಪಾಲಕರ್ ಬಲಕೃಷ್ಣರ್ . . . ಮಧುರಸ್ವನ ಪತ್ರವಾದ್ಯನಿರತರ್ (ಜಗವಿ. ೩-೭೭) ; ನಿರತರ್ ಭರತರ್ ಚರತರ್ ಪರತತ್ತ್ವರತರ್ ನುತರ್ . . . ನೆಲಸಿರ್ದರ್ (ಗಿರಿಕ. ೫-೨೪) ; ಬಳಿಕ ಸ್ನಾನ ಮಾಡಿ ದೇವತಾರ್ಚನೆ ಮುಂತಾದ ಆಹ್ನಿಕಾದಿಗಳಲ್ಲಿ ನಿರತನಾಗುತ್ತಿದ್ದನು (ಕೃದೇವ. ೧೦) ; ಆಯಾ ದೇಶದ ಸ್ಥಿತಿಗತಿಗಳನ್ನು ಕೂಲಂಕಷವಾಗಿ ವಿಚಾರಿಸಿ ತೃಪ್ತಿಯಾದ ಏರ್ಪಾಡುಗಳನ್ನು ಮಾಡುವುದರಲ್ಲಿ ನಿರತರಾಗಿದ್ದರು (ಶಾಂತಲಾ. ೧೫೭). [ಸಂ.]

ನಿರತತ್ವ (ನಾ). ತೊಡಗಿರುವಿಕೆ; ನಿರತವಾಗಿರುವಿಕೆ; ತಲ್ಲೀನವಾಗಿರುವಿಕೆ: ವರ ಭಗವದ್ಭಾಗವತಸ್ಫುರದಾಚಾರ್ಯಾಂಘ್ರಿಕಿಂಕರತ್ವ ದೊಳನಿಶಂ ನಿರತತ್ವಂಬೆತ್ತಿರ್ದಾ ಚರಮದ ದಶೆಯಲ್ಲಿ ನಲಿದು ವೈಕುಂಠ ಪುರಕ್ಕಿರದೆಯ್ದಿದರ್ (ದಿವ್ಯಚ. ೫-೧೮). [ಸಂ.]

ನಿರತಿಕ್ರಮ (ನಾ). ನಿಯಮವನ್ನು ಉಲ್ಲಂಘಿಸದಿರುವಿಕೆ,— ಪಾಲಿಸುವಿಕೆ; ಶಾಸ್ತ್ರಕ್ಕೆ ಅನುಸಾರವಾಗಿರುವಿಕೆ: ವರಪಂಚಾಣು ವ್ರತಮಂ ನಿರತಿಕ್ರಮಮಾಗೆ ತಾಳ್ದಿ ಪರಮದಯಾತತ್ಪರನೆನಿಸಿದ ಶಲ್ಯ ತ್ರಯವಿರಹಿತನೆರಡನೆಯ ನೆಲೆಯವಂ ತಾಂ ವ್ರತಿಕಂ (ಸುಕುಮಾ.೬-೨೭).
[ಸಂ.]

ನಿರತಿಚಾರ (ನಾ). ಅತಿಚಾರಗಳಿಲ್ಲದಿರುವಿಕೆ: ಇಂತೀ ಸಮಾಚೀನ ಶ್ರಾವಕಾಚಾರಂಗಳಂ ನಿರತಿಚಾರನಾಗಿ ತಾಳ್ದಿದ ದೇಶವಿರತಂಗಿಚ್ಛಿವಾರ್ಥ ಪತ್ರಿ ಸ್ವಾಧ್ಯಾಯ ಸಂಯಮ ತಪಮೆಂದಾರ್ಯಕರ್ಮಮಾಜು ತೆಜನಕ್ಕುಂ (ಸುಕುಮಾ. ೬-೨೫ ಪ) ; ನಿರತಿಚಾರವೃತ್ತಿಯಿಂ ಗುಣವ್ರತ ಶಿಕ್ಷಣವ್ರತಂಗಳೆಂಬ ಸಪ್ತಶೀಲಂಗಳನುಳ್ಳನುಂ (ಪ್ರತಿಷ್ಠಾ. ೧-೧೬).
[ಸಂ.]

ನಿರತಿಶಯ (ಗು). ೧. ಅತಿ ಹೆಚ್ಚಿನ; ಶ್ರೇಷ್ಠವಾದ: ನಿರತಿಶಯ ರೂಪಯೌವನ ವಿರಾಜಿತಾಂಗಿಯರ್ . . . ನೆಗಟ್ಟಿ ವಸುಂಧರೆಯುಂ ವಸುಮತಿಯುಮೆಂಬರರಸಿಯರಾದರ್ (ಶಾಂತಿಪು. ೧-೬೨) ; ನಿರತಿಶಯ ಸುಖಸುಧಾಸಾಗರದೊಳ್ ಮನಮಾರೆ ಮೂಡಿ ಮುಟ್ಟೂಡುತ್ತುಂ

ಪರಮಾಯುವಂ ಪುನರ್ವಸು ಚರಾಮರಂ ತೀರ್ಚಿ ಬಂದು ಲಕ್ಷ್ಮಣನಾದಂ (ಪಂರಾಮಾ. ೧೪-೫೯) ; ನಿರತಿಶಯಸುಖದೊಳಗೆ ನಿಜವಾಗಿರಬಲ್ಲ ಗುಹೇಶ್ವರ ನಿಮ್ಮ ಶರಣ (ಅಪಚಂ. ೧೨೪-೫೬೭) ; ನಿರತಿಶಯತೇಜದಿಂ ಸುಂದರ ಕಾರು[ಣ್ಯ]ದಿಂ . . . ನೆಗಟ್ಟನಮಿತಗುಣ ವಸುದೇವಂ (ಬಂಹರಿ. ೧-೩೯) ; ನಿರತಿಶಯಪದಂ ಕೂರ್ತು ಪೇಳ್ವಳ್ತಿಯಿಂದಂ ಕಾವ್ಯಂ ಕಲ್ಪಾಂತರಸ್ಥಾಯಿಯೆನಿಪ ನುಡಿ ಸತ್ಯಂ ಕವೀಶಾಧಿಪತ್ಯಂ (ಗಿರಿಕ.೧-೧೬). (ನಾ). ೨. ಅತಿ ಹೆಚ್ಚಿನದು ; ಶ್ರೇಷ್ಠವಾದುದು : ನಿರತಿಶಯ ಮಕ್ಕುಮದು ಬಂಧುರಕವಿಜನತಾಪ್ರಯೋಗಸಂಬಂಧನದಿಂ(ಕವಿರಾ.೧-೭೫); ನಿರತಿಶಯಮೆನಿಪ ಧರ್ಮಾನುರಾಗಮೀ ತೋರ್ಪುದೆಂಬಿನಂ ಸುರವನಿತಾ ಕರಕಿಸಲಯದೊಳ್ . . . ಭಾಜನಂ ರಂಜಿಸುಗುಂ (ಪಂರಾಮಾ. ೧೬-೯೫) ; ನಿರತಿಶಯಮಾಗಿ ಪೆರ್ಚಿದ ಪರಿಬೋಧಾರಹಿತಮಾದ ಶಾಶ್ವತ ಸುಖದಿಂ ಪಿರಿದುಂ ತಣಿವುತ್ತಿರ್ದಂ (ಜಾಧಪು. ೧೬-೩೦೨) ; ನಿರುತವಿದು ಕೇಳಜ್ಜ ಸುಗತಿಗೆ ನಿರತಿಶಯವನಶನವು ದುರ್ಗತಿಗರಸುತನ ದುರ್ಮರಣ ವಿದು ತಾ ಶಾಸ್ತ್ರಸಿದ್ಧವಲೆ (ತೊರರಾ. ೪-೧೧-೯). ೩. ಶ್ರೇಷ್ಠತೆ ; ಅತಿಶಯತೆ : ಸುರಪುರಯುಗಪವನದ್ವಿತಯಾಕಾಶಾಂಬುಗಣಂಗಳ್ನೆರೆದಿರೆ ಯತಿ ನಿಧಿಯೊಳ್ಸಲೆ ನಿಲ್ತಾನಂದದಿನೆಂದುಂ ನಿರತಿಶಯದೊಳಿದನೋದೆಲೆ ನೀಲಾಬ್ಜಾಂಬಕಿ (ಛಂಜೋಂಬು. ೨-೧೭೦). ೪. ಶ್ರೇಷ್ಠನಾದವನು : ನಿರತಿಶಯನ ನಿಜೋನ್ನತೋನ್ನತ ಭರಿತ ಬಹಳ ಬ್ರಹ್ಮಮಯನೀಶ್ವರ ಘನಸ್ವಾತಂತ್ರ್ಯದೈವವ ಕಂಡನಸುರೇಂದ್ರ (ತೊರರಾ. ೬-೫೧-೪೯).

[ಸಂ.]

ನಿರತಿಶಯವಸ್ತು (ನಾ). [ಸಾಂಖ್ಯ] ಗುಣ, ದೋಷ ಮೊದಲಾದ ಯಾವುದೂ ಇಲ್ಲದ ನಿರ್ವಿಕಾರ ವಸ್ತು ; ಆತ್ಮ : ಈ ಆತ್ಮನೆಂಬುದು . . . ಶುದ್ಧವಾದ ಕನ್ನಡಿಯಂತಿರುವುದು, ನಿರ್ವಿಕಾರ, ಅವನು ಕೂಟಸ್ಥನು, ಮಧ್ಯಸ್ಥನು. ಇದಕ್ಕೆ ನಿರತಿಶಯವಸ್ತುವೆಂದು ಹೆಸರು (ಹಿಂದಸಾ. ೫೮). [ನಿರತಿಶಯ + ವಸ್ತು]

ನಿರತೆ 'ನಿಱತೆ' ನೋ.

ನಿರಧಿಕ (ಗು). ೧. ಅತ್ಯುತ್ತಮವಾದ ; ಶ್ರೇಷ್ಠವಾದ. (ನಾ). ೨. ತನಗೆ ಅಧಿಕರಾರೂ ಇಲ್ಲದವನು ; ಶ್ರೇಷ್ಠನಾದವನು : ನಿರುಪಮಾನ ನಿರಧಿಕ ನಿರ್ಭಯನಿರತ . . . ನಿಜನಿರ್ಮಾಯ ಚಿತ್ತೈಸು (ಬಸಪು. ೬೧-೪೪). [ಸಂ.]

ನಿರಧಿಷ್ಠಾನ(ನಾ). ಊರೆಯಿಲ್ಲದುದು ; ಆಶ್ರಯರಹಿತವಾದುದು; ಆಧಾರವಿಲ್ಲದುದು : ನಿರಧಿಷ್ಠಾನಂ ದಿವಮೆಂಬರಂತಧಿಷ್ಠಾನಮಲ್ಲವೇ ನಗವಿದು ತತ್ಸುರಸದನಕ್ಕೆ (ಜಗವಿ. ೮-೩೧). [ಸಂ.]

ನಿರನುಕ್ರೋಶ (ನಾ). ದಯೆಯಿಲ್ಲದವನು ; ಕೃಪೆಯಿಲ್ಲದವನು : ಅವಳ ದೊಡ್ಡ ಅಕ್ಷೇಪಣೆ ಅವನು ಅಷ್ಟು "ನಿರನುಕ್ರೋಶ"ನಾಗಬಹುದೇ ಎಂಬುದು (ಸಂನಾಟ. ೨೭೭). [ಸಂ.]

ನಿರನುಗ್ರಹೇಶ್ವರವಾದಿ (ನಾ). ಪರಮೇಶ್ವರನ ಅನುಗ್ರಹ ಬೇಕಿಲ್ಲವೆಂದು ವಾದಿಸುವವನು : ಸರ್ಪಭ್ರಾಂತಿಯಿಂದ ಓಡಿಹೋಗುವವನಿಗೆ ಹಗ್ಗದ ತತ್ತ್ವಜ್ಞಾನ ನಿವರ್ತಕವೇ ವಿನಾ ಪರಮೇಶ್ವರನ ಪ್ರಸಾದ ಬೇಕಿಲ್ಲವೆಂದು ಅಭಿಪ್ರಾಯ. ಆದುದರಿಂದ ಇವರನ್ನು ನಿರನುಗ್ರಹೇಶ್ವರವಾದಿಗಳೆಂದು ಕೆಲವರು ಕರೆಯುವರು (ಹಿಂದಸಾ. ೧೨೫).

[ಸಂ. ನಿರನುಗ್ರಹೇಶ್ವರವಾದಿನ್]

ನಿರನುನಾಸಿಕ (ಗು). ೧. ಅನುನಾಸಿಕ ಅಕ್ಷರಗಳಿಂದ ಕೂಡಿರದ : ಆಕೆಯ ನಿರನುನಾಸಿಕ ಮಾತುಗಳನ್ನೂ ಸೀನುಗಳನ್ನೂ ಕೇಳಿ ಕೇಳಿ ರಾಮ ಲಕ್ಷ್ಮಣರಿಗೆ ಸಾಕಾಗಿ ಹೋಗಿತ್ತು (ಪೇಕನ್ಯೆ. ೧೮). (ನಾ). ೨. [ವ್ಯಾಕ] ಮೂಗಿನ ಸಹಾಯವಿಲ್ಲದೆ ಉಚ್ಚರಿಸಬಹುದಾದ ವರ್ಣ ; ಅನುನಾಸಿಕವಲ್ಲದುದು : ಯವಲಂಗಳನುನಾಸಿಕಂಗಳುಂ ನಿರನುನಾಸಿಕಂಗಳುಮಪ್ಪುವು (ಶಮದ. ೧೬ ವೃತ್ತಿ) ; ಗಕಾರವು (ತಾನು) ಒಂದೇ ಆಗಿದ್ದುಕೊಂಡೇ ಉದಾತ್ತವೂ, ಅನುದಾತ್ತವೂ, ತ್ವರಿತವೂ, ಸಾನುನಾಸಿಕವೂ, ನಿರನುನಾಸಿಕವೂ (ಆಗಿದೆ) ಎಂದು ಒಂದೇ ಕಾಲಕ್ಕೆ ಅನೇಕ ರೂಪವುಳ್ಳದ್ದಾಗುವದು ಹೇಗೆ ತಾನೆ (ಸರಿ ಹೋದೀತು) ? (ಬ್ರಹ್ಮಭಾ. ೪೭೨). [ಸಂ.]

ನಿರನುಭವಶಾಲಿ (ನಾ). ಅನುಭವಸ್ಥನಲ್ಲದವನು : ಕವಿ ನಿರನುಭವಶಾಲಿ. ಅದರಿಂದೆ ಬೇಡಿದಪೆ ನಿನ್ನ ನಾಂ (ಚಿತ್ರಾಂಗ. ೩೧-೫೩೦).

[ಸಂ. ನಿರನುಭವಶಾಲಿನ್]

ನಿರನುಭವಿ (ನಾ). ಅನುಭವವಿಲ್ಲದವನು : ನೀನೇನ್ ನಿರನುಭವಿಯಲ್ಲಯ್, ಎನ್ನಿಂದೆ ಕಲ್ಪನ್ನನುಂ ಅಲ್ಲಯ್ (ಬದ್ಧಪ್ರ. ೨೦-೪೨೯) ; ನಾನು ನಿರನುಭವಿ. ನನ್ನ ಯಾವ ಮಾತಿಗೂ ಬೆಲೆಯಿಲ್ಲ (ಹೊಸಕ್ಷಿ.೨೪೭).

[ಸಂ. ನಿರನುಭವಿನ್]

ನಿರನ್ನವಿಕಾರ (ನಾ). ಆಹಾರವನ್ನು ಸ್ವೀಕರಿಸದೆ ಇರುವುದರಿಂದ ಉಂಟಾಗುವ ವಿಕಾರ ; ಉಪವಾಸದಿಂದ ಉಂಟಾಗುವ ತಳಮಳ; ಹಸಿವಿನಿಂದಾದ ಮನೋವೈಕಲ್ಯ,— ಭ್ರಾಂತಿ : ರಾಘವನ ಸುದ್ದಿಯನೀಕೆಗೆ ಪೇಟ್ಟುದಾಗದೇ ಕರ್ಣಪಿಶಾಚಮೀ ವಿಕಲಭಾಷೆ ನಿರನ್ನವಿಕಾರಮಾಗದೇ (ಪಂರಾಮಾ. ೧೧-೯೧). [ಸಂ.]

ನಿರನ್ವಯ (ಗು). ಮುಂದಿನ ಅನ್ವಯವಿಲ್ಲದ : ನಿರನ್ವಯ ಪ್ರತಿಕ್ಷಣವಿಶರಾರುಗಳ್ ನಿರಂಶಂಗಳಾಗಿಯುಂ ಭ್ರಾಂತಿವಶದಿಂ . . . ವಿಜ್ಞಾನ ಲಕ್ಷಣಂಗಳಾತ್ಮಾಭಿಧಾನಮಂ ಪುಟ್ಟಿಸುಗುಂ (ಆದಿಪು. ೨-೯ ವ) ; ವಸ್ತುಗಳಿಗೆಲ್ಲ ನಿರನ್ವಯವಿನಾಶ ಸಹಜವಾದುದೇ ಆಗಿದೆ (ತತ್ವಪ್ರಾ. ೧೯೮).

[ಸಂ.]

ನಿರನ್ವೇಷ (ನಾ). [ಜೈನ] ಎಂಟು ಬಗೆಯ ಧರ್ಮಗಳಲ್ಲಿ ಒಂದು; ಸುಖಸಾಧನಗಳಿಗೆ ಹಾತೊರೆಯದಿರುವಿಕೆ ; ೫ ಎಂಟು ಬಗೆಯ ಧರ್ಮಗಳು—೧. ಸತ್ಪ್ರಣೀತ—ಭಯ, ರಾಗಾದಿ ದೋಷವಿಲ್ಲದಿರುವಿಕೆ. ೨. ಸಮಾನ—ಜಾತಿ, ಕುಲ ತಾರತಮ್ಯವಿಲ್ಲದೆ ಎಲ್ಲರೂ ಪಾಲಿಸಬಹುದಾದ ಧರ್ಮ. ೩. ನಿರುಪಾದಾನ—ಯಾವ ಬಗೆಯ ಸುಖಸಾಧನಗಳನ್ನೂ ಬಯಸದಿರುವಿಕೆ. ೪. ನಿರನ್ವೇಷ-ಭೋಗೋಪಭೋಗಾದಿಗಳನ್ನು ಬಯಸದಿರುವುದು. ೫. ದುಶ್ಚರ—ಕಾಪುರುಷರಿಂದ ಒಂದು ದಿನವೂ ಮಾಡಲು ಅಶಕ್ಯವಾದುದು. ೬. ಪ್ರರೂಢ—ದೀರ್ಘಕಾಲ ಪ್ರವೃತ್ತವಾದುದು. ೭. ಅಹಿಂಸಾವ್ರತ—ಹಿಂಸೆ ಮಾಡದೆ ಇರುವಿಕೆ. ೮. ಫಲವಂತ—ಜಾತಿ, ಜರೆ, ರೋಗ, ಮರಣಗಳನ್ನು ನಾಶಪಡಿಸಿ ಪರಮ ನಿರ್ವಾಣವನ್ನು ಕೊಡುವುದು : ನಿರನ್ವೇಷವೆಂಬುದು ಭೋಗೋಪಭೋಗಪೂಜಾವಂದನಾದ್ಯೈಶ್ವರ್ಯಾದಿಗಳನಪೇಕ್ಷಿಸದೆ ಭವ್ಯವರ ಪುಂಡರೀಕರ್ ನಡೆವ ಧರ್ಮಂ (ಚಾವುಂಪು. ೬). [ಸಂ.]

ನಿರಪರಾಧ (ನಾ). ೧. ಅಪರಾಧ ಮಾಡದಿರುವುದು; ನಿರ್ದೋಷ: ನಿನ್ನ ಹೃದಯದ ಕರೆಗೆ ನಿರಪರಾಧದ ಕೂಗು ಕೇಳಿ ಬರುತ್ತದೆ (ರಕ್ತಧ್ವ. ೨೮೦). ೨. — ನಿರಪರಾಧಿ: ನಿರಪರಾಧನನನ್ನೆಯದಿಂದಮೆನ್ನ ತಂಗೆಯ ಮಗನಂ ವಿದಾರಿಸಿದನಂ ತಜಾದು . . . ಆಱಪೆಂ ಖರನ ಶೋಕಕೃಶಾನುವಂ (ಪಂರಾಮಾ. ೯-೭೨). [ಸಂ.]

ನಿರಪರಾಧಿ (ನಾ). ಅಪರಾಧ ಮಾಡದಿರುವವನು ; ನಿರ್ದೋಷಿ : ನಿರಪರಾಧಿಗಳಂ ನಿರ್ದೋಷಿಗಳಂ ನಿರರ್ಥಕಮೀ ಪಾತಕಂ ಕೊಂದನೆಂದು ತನ್ನಂತರಂಗದಲ್ಲಿ ಸೈರಿಸಲಾಱದೆ (ಪಡ್ಡಾರಾ. ೧೭೮-೯) ; ನಿರಪರಾಧಿಯನು ಬನ್ನಬಡಿಸುವುದುಚಿತವೇ (ಬಸಪು. ೩೮-೩೦) ; ನಿರಪರಾಧಿಯನು ನಾರಿ

ಯೊಬ್ಬಳನಕಟ ಸಭೆಯಲಿ ಸೀರೆಯುಡಿಯುರ್ಚುವರು ಕೆಟ್ಟೆನು . . . ಎಂದೊಱಲಿದಳು ತರಳೆ (ಕುಮಾ.ಸ. ೧೪-೧೦೭); ನಿರಪರಾಧಿಯ ಕೊಲೆಯು ತನಗಿನ್ನಿರದೆ ಅಂಗೈ ಮೇಲೆ ಮೊಳೆಯುದು ಹರಹರಾ ಕಡುಪಾಪಿ ತಾನೆಂದಳಲಿದನು ರಾಮ (ಕೌಶಾ. ೨೨-೬೨); ನಾನು ನಿರಪರಾಧಿ, ನನ್ನನ್ನೇಕೆ ಬಂಧಿಸಿ ಕಾಡುತ್ತೀರಿ ? (ಮಣಿಸ. ೭). [ಸಂ. ನಿರಪರಾಧಿನ್]

ನಿರಪರಾಧಿನಿ (ನಾ). ತಪ್ಪು ಮಾಡದವಳು ; ನಿರ್ದೋಷಿಯಾದವಳು : ನೀನು ಸಹಧರ್ಮಿಣಿ, ಧರ್ಮಶೀಲೆ . . . ಮಕ್ಕಳ ತಾಯಿ ; ಪತಿವ್ರತೆ, ನಿರಪರಾಧಿನಿ-ಇಂಥ ಹೆಂಡತಿಯನ್ನು ಕೊಡಲೆ? (ವಚಭಾ. ೪೨). [ಸಂ. ನಿರಪರಾಧಿನೀ]

ನಿರಪವರ್ತನ (ನಾ). [ಗಣಿತ] ಅಪವರ್ತನಗಳನ್ನು ಹೊಂದಿರದ ಸಂಖ್ಯೆ : ಲಕ್ಷದವರೆಗಿರುವ ನಿರಪವರ್ತನ ಸಂಖ್ಯೆಗಳ ಕೋಷ್ಟಕಗಳು ಇವೆ (ಕವಿಕೋ. I, ೩). [ಸಂ.]

ನಿರಪವಾದ (ನಾ). ಕಳಂಕರಹಿತವಾದುದು ; ನಿರ್ದೋಷವಾದುದು : ಯೌವನಸ್ತ್ರೀಯಂ ನಿರಪವಾದಮನಾರ್ ಕಳೆದಪರವರೆ ಮಹಾತ್ಮರ್ (ಶಾಂತಿಪು. ೪-೬೯ ಸ). [ಸಂ.]

ನಿರಪಾಯ (ಗು). ೧. ಅಪಾಯವಿಲ್ಲದ ; ನಾಶರಹಿತವಾದ ; ಅವಿನಾಶಿಯಾದ. (ನಾ). ೨. ಅಪಾಯವಿಲ್ಲದಿರುವಿಕೆ ; ತೊಂದರೆಗಳಿಂದ ದೂರವಾಗಿರುವಿಕೆ; ಸುರಕ್ಷಿತತೆ ; ನಿರ್ವಿಘ್ನತೆ : ಸಮುಚಿತನೃಪತುಂಗದೇವಮಾರ್ಗಕ್ರಮ[ಮುಮನ]ಭಿಮುಖರ್ಕಳಪ್ಪ[ರಾ]ಕ್ರಮಸಹಿತಮಗಮ್ಮರೂಪ ಕಾ[ವ್ಯಾ]ಶ್ರಮಮಂ ನಿರಪಾಯ[ದೆ]ಯ್ದುಲಾರ್ಪರ್ (ಕವಿರಾ. ೧-೧೪೭); ನಿರಪಾಯಂ ನಿತ್ಯಮಾತ್ಯಂತಿಕ ಸುಖಮರುಜಂ . . . ಶಿವಮಮೃತಮಯಂ ನಿರ್ವೃತಿಸ್ಥಾನಮಕ್ಕುಂ(ಸರ್ಧಮಾ. ೧೫-೩೦). ೩. ಅಪಾಯವಿಲ್ಲದವನು : ಹಾಯೆನುತ ತನ್ನವರು ಭಯದಲಿ ಬಾಯ ಬಿಡೆ ನಿಮಿಷಾರ್ಧದಲಿ ನಿರಪಾಯನೆದ್ದನು ನೋಡಿದನು ಚೇತರಿಸಿ ಕೆಲಬಲನ (ಕುವ್ಯಾಗ. ೭-೧೧); ನಿರಪಾಯಂ ಚಿನ್ಮಯಂ ತಾನೆನಿಪ ಪರಶಿವಂ ನೀನೆ ಕಾರುಣ್ಯದಿಂದಂ ಗುರುರೂಪಂ ತಾಳ್ದು ತೂಳ್ದೈ ಭವಮಂ (ವೃಷವಿ. ೨೭-೧೦). [ಸಂ.]

ನಿರಪೇಕ್ಷ (ಗು). ೧. ಅಪೇಕ್ಷೆಯಿಲ್ಲದ; ಅನ್ಯ ಸಹಾಯ ಬೇಕಿಲ್ಲದ; ಸ್ವತಂತ್ರವಾದ : ಅರ್ಥನಿರಪೇಕ್ಷವಾದ ಶಬ್ದಕ್ಕೂ ಧ್ವನನವ್ಯಾಪಾರವುಂಟೆಂದು ಸಿದ್ಧಾಂತಾಯಿತು (ಧ್ವನ್ಯಾಲೋ. ೫೦). (ನಾ). ೨. ಅಪೇಕ್ಷೆಯಿಲ್ಲದಿರುವುದು : ಈ ಸ್ಪರ್ಶವನ್ನು ಪಡೆಯಬಲ್ಲ ಹೃದಯವು ವಿಷಯ ನಿರಪೇಕ್ಷವಾದ ಆನಂದದ ಪ್ರತೀಕವಾಗುವುದು (ಪ್ರಬಂಧ.೫೨). ೩. ಅಪೇಕ್ಷೆಯಿಲ್ಲದಿರುವವನು; ಯಾವುದನ್ನೂ ಬಯಸದವನು; ನಿಸ್ಪೃಹನಾದವನು ; ವಿರಕ್ತನಾದವನು : ನಿರಪೇಕ್ಷನನೇಕೆರೆದಿರ್ ಪುರುದೇವನನಿನು ಬಯಕೆಯುಳ್ಳೊಡೆ ನಿಮ್ಮಿರ್ವರುಮಂ ಮರುಳಾಗದೆಯೂ ಭರತನನೋಲಗಿಸಿ ಪಡೆಯಿಮಭಿಮತಫಲಮಂ (ಆದಿಪು. ೯-೧೦೪); ಅಮರರಿರ್ವರುಂ ನಿರಪೇಕ್ಷರ್ (ಶಾಂತಿಪು. ೯-೩೮) ; ಮನಮುಳ್ಳೊಡೆ ಜನಿಯಿಸುವಂ ಮನಸಿಜನಾಯುಷ್ಯಮುಳ್ಳೊಡಂತಕನೆತ್ತರ್ನೆನುತ್ತವನುಟಾದಂತವರ್ಗಿನತೆಡೆಗುಡದರ್ದೆ ನೀನೆ ದಲ್ ನಿರಪೇಕ್ಷಾ (ಚಂದ್ರಪು. ೭-೯) ; ನಿರಪೇಕ್ಷ ನಿಷ್ಕಾಮಿ . . . ನಿರಾಳ ಪಂಪಾವಿರೂಪಾಕ್ಷ ಶರಣು (ಹಡಕಾ. ೧-೪). [ಸಂ.]

ನಿರಪೇಕ್ಷಕ (ನಾ). ೧. ಅಪೇಕ್ಷೆಯಿಲ್ಲದುದು : ನಿರಪೇಕ್ಷಕಮೆನಿಸಿಯುಮೇಂ ಪರಿದತ್ತಲೆ ಪರಿವ ಸುತನ ಕಣ್ಬೊಳಪಿಂದಂ ತೆರೆಮಸಗಿದುದರಸಿಯ ಮೋಹರಸಂ(ಪಂಚಾಮಾ. ೩-೧೭೧). ೨. ಅಪೇಕ್ಷೆಯಿಲ್ಲದವನು; ಬಯಸದವನು: ಮೋಕ್ಷದೊಳ್ ನಿರಪೇಕ್ಷಕನುಮಾಗಿ(ಪಂಚತಂ.೨೮-೮); ಪರವನಿತಾನಿರಪೇಕ್ಷಕನೆನಿಸಿದ ದೇವರ ದೇವಂ ಕುಡುಗೆ ಸುವ್ರತಂ ಸುವ್ರತಮಂ (ಯಶೋಧ. ೧-೧). [ಸಂ.]

ನಿರಪೇಕ್ಷಣೀಯ (ನಾ). ಬಯಸದುದು ; ಬೇಡಾದುದು ; ಅಪೇಕ್ಷಣೀಯವಲ್ಲದುದು : ತನ್ನ ತ್ಯಾಗ ನಿರಪೇಕ್ಷಣೀಯವಾದುದೆಂಬಂತೆ ತೋರುತ್ತಿದ್ದ ಅವಳ ಮಾತಿನ ಭಂಗಿ . . . ನೀತಿಗೆಟ್ಟ ಹೆಂಗಸಿನ ಹೂಟಗಳಿಂದು ಅವನು ಯೋಚಿಸಿದ್ದನು (ಪುನರು. ೪೦೪); ಭಾವಗೀತೆಯ ಸಕಲವ್ಯಾಪಾರಗಳೂ ಅನ್ಯವಸ್ತುನಿರಪೇಕ್ಷಣೀಯವಾಗಿ ಕವಿಯ ಅಂತರಂಗಜಗತ್ತಿನಲ್ಲಿಯೇ ಜನ್ಮ ತಳೆದು . . . ಪರ್ಯವಸಾನ ಹೊಂದುತ್ತವೆಯೇ ? (ಭಾವಗೀ. ೬). [ಸಂ.]

ನಿರಪೇಕ್ಷಭಾವ (ನಾ). [ಕಾವ್ಯಮೀ] ಆಲಂಬನವಿಭಾವವನ್ನು ಅಪೇಕ್ಷಿಸದಿರುವುದು ; ಈ ಕರುಣರಸದಲ್ಲಿ ಆಲಂಬನ ವಿಭಾವವು ಕಣ್ಣೆದುರಿಗಿರಬೇಕಾದ ಅವಶ್ಯಕತೆ ಇಲ್ಲ : ವಿಪ್ರಲಂಭವು "ಸಾಪೇಕ್ಷಭಾವ"ವೆಂದೂ ಕರುಣವು "ನಿರಪೇಕ್ಷಭಾವ"ವೆಂದೂ ಭರತನು ನಿರೂಪಿಸುತ್ತಾನೆ (ಭಾರಮಿ. ೪೦೫) ; ಕರುಣದಲ್ಲಿ ನಿರಪೇಕ್ಷಭಾವ ; ವಿಪ್ರಲಂಭ ಶೃಂಗಾರದಲ್ಲಾದರೆ ಸಾಪೇಕ್ಷಭಾವ (ಧ್ವನ್ಯಾಲೋ. ೧೬೯ ಅಡಿಟ). [ನಿರಪೇಕ್ಷ + ಭಾವ$_2$]

ನಿರಪೇಕ್ಷವಾದ (ನಾ). [ತತ್ತ್ವಶಾ] ವಸ್ತುವಿನಲ್ಲಿ ಸ್ವಾಭಾವಿಕವಾಗಿಯೇ ಅಡಗಿರುವ ಚೈತನ್ಯವನ್ನು ಎತ್ತಿ ಹಿಡಿಯುವವಾದ,—ತತ್ತ್ವಪ್ರತಿಪಾದನೆ : ವಸ್ತುಸ್ವಭಾವಶಕ್ತಿಯಿಂದಲೇ ಸಕಲ ಕೆಲಸಗಳೂ ನಡೆಯುತ್ತವೆಂಬುದು ನಿರಪೇಕ್ಷವಾದವು, ಸ್ವಭಾವವಾದವು. ಪುರುಷಪ್ರಯತ್ನ ಸಂಕಲ್ಪಗಳಿಂದ ನಡೆಯುತ್ತವೆಂಬುದು ಸಾಪೇಕ್ಷವಾದವು (ಹಿಂದುಸಾ. ೨೧). [ನಿರಪೇಕ್ಷ + ವಾದ$_2$]

ನಿರಪೇಕ್ಷಿ (ನಾ). ಅಪೇಕ್ಷಿಸದುದು; ಬಯಸದುದು: ಸಂಗೀತನಿರಪೇಕ್ಷಿಯಾದ ಭಾವಗೀತೆಗಳಂತೆಯೇ ಸಂಗೀತಸಾಪೇಕ್ಷಿಯಾದ ಭಾವಗೀತೆಗಳು ಇಂದಿಗೂ ರಚಿತವಾಗುತ್ತಿವೆ (ಭಾವಗೀ. ೨೨). [ಸಂ. ನಿರಪೇಕ್ಷಿನ್]

ನಿರಬಯಲು 'ನಿರ್ವಯಲು' ನೋ.

ನಿರಭಿಧಾನ (ನಾ). ಹೆಸರಿಲ್ಲದವನು : ನಿರಂಗನನಂತವಿನುತನಿರ್ಮಲ ನಾಮಧೇಯಂ ನಿರಭಿಧಾನನತುಲಗಿರಿವಾಸಂ ಸ್ಮರಾನಿಲಯಂ (ಪ್ರೌಢರಾ. ೨-೧). [ಸಂ.]

ನಿರಭಿಮಾನ (ನಾ). ಅಭಿಮಾನವಿಲ್ಲದಿರುವಿಕೆ ; ಸ್ವಪ್ರತಿಷ್ಠೆಯಿಲ್ಲದಿರುವಿಕೆ ; ನಮ್ರಭಾವ : ಕಲಿತ ವಿದ್ಯೆಗೆ ಈ ನಿರಭಿಮಾನವಲ್ಲವೆ ಕಲಶ ! (ಶಾಂತಲಾ. ೩೧೬). [ಸಂ.]

ನಿರಭಿಮಾನಿ (ನಾ). ಅಭಿಮಾನವಿಲ್ಲದವನು ; ಸ್ವಪ್ರತಿಷ್ಠೆಯಿಲ್ಲದವನು ; ಅಹಂಕಾರವಿಲ್ಲದವನು: ದೇಹೇಂದ್ರಿಯಗಳಲ್ಲಿ ಅಭಿಮಾನಿಸಿಕೊಂಡು ಪ್ರವರ್ತಿಸುವ ಜೀವನು ನಿರಭಿಮಾನಿ ಪರಮಾತ್ಮನಿಗಿಂತ ತೀರ ಭಿನ್ನವೆಂಬ ಅಂಶ ನಿರ್ವಿವಾದವಾದದ್ದು (ಶಕ್ತಿವಿ. ೧೮). [ಸಂ. ನಿರಭಿಮಾನಿನ್]

ನಿರಭ್ರ (ಗು). ೧. ಮೋಡವಿಲ್ಲದ ; ನಿರ್ಮಲವಾದ : ಅನಂತಾಕಾಶವು ನಿರಭ್ರ ನೀಲವರ್ಣದಿಂದ ಕಂಗೊಳಿಸುತ್ತಿದೆ (ಬಂಗಾಹೆ. ೧). (ನಾ). ೨. ಮೋಡಗಳಿಲ್ಲದಿರುವಿಕೆ ; ನಿರ್ಮಲತೆ : "ಮುಗಿಲ್ಗಳಿಲ್ಲದಿರವು ನಿರಭ್ರಂ" (ವಸ್ತುಕೋ.೧೧-೬೨). ೩. ಮೋಡಗಳಿಲ್ಲದುದು: ನೆಲದ ಮೇಲೆ ಕುಳಿತಲ್ಲಿಂದ ಅವನ ದೃಷ್ಟಿಯು ಮುಗಿಲೆಡೆಗೆ ಹರಿಯಿತು. ಆಗ ಮುಗಿಲು ನಿರಭ್ರವಾಗಿತ್ತು (ಸಮಜೀ. ೧೬೪) ; ನಿರಭ್ರವಾದ ಆಕಾಶದಲ್ಲಿ ಮೆರೆಯುವ ಚಂದ್ರ, ನಕ್ಷತ್ರಗಳನ್ನು ನೋಡುತ್ತ ವಾಸುದೇವ ಲೋಕವನ್ನು ಮರೆತ (ಮೂರುದಾ. ೨೦೭). [ಸಂ.]

ನಿರಮಿಸು (ಕ್ರಿ). ರಚಿಸು ; ಕಟ್ಟು : ನಿರಮಿಸಿದನ್ನೆ ಮಧುರೆಯೆಂಬ ಪುರಿಯ (ಕ್ರೀರಾಚ. ೬-೨೮). [<ನಿರ್ಮಿಸು]

ನಿರಯ (ನಾ). ೧. ನರಕ : "ನಿರಯಂ ಶ್ವಭ್ರಂ ದುರ್ಗತಿ ನರಕಂ" (ವಸ್ತುಕೋ. ೨೦-೧೧) ; ಜರಾಯುಜಾಂಡಜಪೋತಂಗಳ್ ಗರ್ಭಸಂಭವಂ ದ್ಯೌನಿರಯೋದ್ಭೂತಂ (ಸ.ಕುಮಾ. ೮-೯) ; ಆಜಿಯದೆ ಪೊಟಲಂ ಪುಗೆ ಕೆಲರಜಗುಲಿ ಋಷಿಯರ್ಗೆ ಮುನಿದು ತನ್ನಾಜ್ಞೆಗೆ ಬೆಚ್ಚುಱರೆಂದು ಕೊಂದು ಪಾತಕ ತೆಱದಿಂದ ಪುಗಲೆಂದು ನಿರಯದರೀಪುಟಮಂ (ಪಂಂಪಾ. ೯-೧೧) ; ನಿರಯಂಗಳ ದುಃಖಂಗಳ ಪರಿಣಾಮಂ ನೆನೆವೊಡಾರ್ಗಮತಿ ಭೀಕರಂ (ನೇಮಿಪು. ೧೩-೬೩) ; ನರರ ಕೀರ್ತಿಸಿದ ಕಥೆಗೇಳ್ ವ್ಯರ್ಥ ನಿರಯಕ್ಕೆಳೆವ ಕೃತಿಯಲ್ಲಿದು (ಪ್ರಭುಪು. ೨-೬) ; ಅನೇಕ ಸಾವಿರ ವರ್ಷಗಳು ನೀನು ನಿರಯದಲ್ಲಿ ಬೇಯುತ್ತಿದ್ದೆ (ಬುದ್ಧಪ. ೧೬೧). ೨. ಸಂತೋಷ ವಿಲ್ಲದಿರುವಿಕೆ ; ದುಃಖ. ೩. ಪಾಪ. [ಸಂ.]

ನಿರಯಕ್ಷೇತ್ರ (ನಾ). ನರಕದ ಪ್ರದೇಶ,—ಸೀಮೆ : ಖರಪಂಕಸಲಿಲ ಭಾಗಂ ನಿರಯಕ್ಷೇತ್ರಕ್ಕೆ ಮೂಡೆಱಂ (ಮಲ್ಲಿಪು. ೧೩-೧೨೮).

[ನಿರಯ + ಕ್ಷೇತ್ರ]

ನಿರಯಗಾಮಿ (ನಾ). ನರಕಕ್ಕೆ ಹೋಗುವ ವ್ಯಕ್ತಿ : ದಿವ್ಯಭಾಷೆಯನ್ನು ಪರಿತ್ಯಜಿಸಿ ಯಿತರ ಭಾಷೆಗಳಲ್ಲಿ ರಚಿಸಿದ ಶಾಸ್ತ್ರಂಗಳನು ಕೇಳುವವರೆಲ್ಲರೂ ನಿರಯಗಾಮಿಯಾಗುವರು (ರೇಷಫ. ೧೬-೨೦).

[ಸಂ. ನಿರಯಗಾಮಿನ್]

ನಿರಯಜ (ನಾ). ನರಕದಲ್ಲಿ ಹುಟ್ಟಿದವನು ; ನಾರಕಿ : ಕರಾಲನಕ್ರ ಚಕ್ರಚರ್ವಿತೋದ್ಗೀರ್ಣವಿಶೀರ್ಣ ನಿರಯಜನಿಕುರುಂಬಶಲ್ಯಶಕಲಪರಿಪೂರಿತ ಧವಲಪ್ಲವ ದುರ್ನಿರೀಕ್ಷ್ಯವಿಷಮಯಂ . . . ವೈತರಣಿಯಂ ಪೊಕ್ಕಾಗಳ್ (ಅದಿಪು. ೫-೮೭ ಪ) ; ತಲ್ಲಱಸಿ ತಳಮಳಗುತ್ತು ಪೆಳ್ಪಳಿಸಿ ದೆಸೆದೆಸೆಗೆ ಬಿಱುವರಿವರಿಂದಂ ಪುರಾತನ ನಿರಯಜ[ರ್ಕ]ಳ್ ಕ[ಂ]ಡು (ಸರ್ಥಮಾ. ೫-೨೮ ಪ). [ಸಂ.]

ನಿರಯನ (ನಾ). [ಜ್ಯೋತಿ] ಗ್ರಹಗಳ ಸ್ಥಾನವನ್ನು ನಿರ್ದೇಶಿಸುವಾಗ ಅಯನದ ಗತಿಯನ್ನು ಗಮನಿಸದಿರುವಿಕೆ,—ಅಯನದ ಗತಿಯನ್ನು ಅನುಸರಿಸದಿರುವುದು : 'ನಿರಯನಪದ್ಧತಿ' ಸರಾ.

[ಸಂ.]

ನಿರಯನಪದ್ಧತಿ (ನಾ). [ಜ್ಯೋತಿ] ಅಯನದ ಗತಿಯನ್ನು ಅನುಸರಿಸದೆ ಮಾಡುವ ಗಣನೆಯ ಕ್ರಮ,—ರೀತಿ ; ಅಯನಾಂಶವನ್ನು ಬಿಟ್ಟು ಲೆಕ್ಕ ಮಾಡುವ ಪದ್ಧತಿ : ಇದಕ್ಕೆ ಪ್ರತಿಯಾಗಿ ರೇಖಾಂಶಗಳನ್ನು ಒಂದು ಸ್ಥಿರದಿಂದುವಿನಿಂದ ಅಳೆಯುವ ಭಾರತೀಯ ಪದ್ಧತಿಯು ನಿರಯನಪದ್ಧತಿ (ನಕ್ಷತ್ರ. ೬೫). [ನಿರಯನ + ಪದ್ಧತಿ]

ನಿರಯನಸೌರವರ್ಷ (ನಾ). ನಿರಯನಪದ್ಧತಿಯಿಂದ ಗಣಿಸುವ ಸೌರವರ್ಷ : ನಿರಯನಪದ್ಧತಿಯಂತೆ ಸೂರ್ಯನು ರೇವತೀತಾರೆಯಿಂದ ಹೊರಟು ಪುನಃ ರೇವತೀತಾರೆಯನ್ನು ಸೇರುವ ಕಾಲವನ್ನು ಸೌರವರ್ಷವೆಂದು ಕರೆಯುತ್ತೇವೆ . . . ನಿರಯನಸೌರವರ್ಷವು ಸಾಯನಸೌರವರ್ಷಕ್ಕಿಂತ ೨೦ ನಿ. ೨೬ ಸೆ. ದೊಡ್ಡದು (ನಕ್ಷತ್ರ.೬೫).[ನಿರಯನ + ಸೌರವರ್ಷ]

ನಿರಯನಿಳಯ (ನಾ). = ನಿರಯಕ್ಷೇತ್ರ : ನಿರಯನಿಳಯದಂತೆ ಪತಿತಾಸಿಪತ್ರಭೀಷಣಪ್ರದೇಶಮುಂ . . . ಅಪ್ಪ ಸಂಗ್ರಾಮಭೂಮಿಯಂ ಪೊಱಮಟ್ಟು (ಚಂದ್ರಪ್ರ. ೧೦-೧೦೫ ಪ) ; ಮೂತಿದು ವಾಯುವಾದಡೆ ನಿರಯನಿಳಯದ ಯಾಯಿಗಳ ಗತಿಯಾಗಲೆಂದನು ನೀಡಿ ನಂಬುಗೆಯ (ತೊರರಾ. ೪-೩-೨೪). [ನಿರಯ + ನಿಳಯ(= ನಿಲಯ)]

ನಿರಯಭವ (ನಾ). ನರಕದಲ್ಲಿ ಹುಟ್ಟಿದವನು : ನಿರಯಭವರ್ಕಳ್ಗೆ ನಿರಂತರಮೆಂದುಂ ಕುಂದದೊಂದೆ ಮಾಟ್ಕೆಯೊಳಾತಂ ಪೊರೆಕೊಳ್ಗುಮಶುಭಲೇಶ್ಯಾಪರಿಣಾಮ ಶರೀರವೇದನಾದಿಕ್ರಿಯೆಗಳ್(ಸರ್ಥಮಾ. ೧೫-೮).

[ಸಂ.]

ನಿರಯಯಾತನೆ (ನಾ). ನರಕದ ಬಾಧೆ ; ನರಕಯಾತನೆ : ನಿರಯಯಾತನೆಗಳಿಂದೆ ಮೇಣೊಗುಮಿಗೆಯು ದುರ್ನೀತಿ . . . ಬಲ್ಮುನಿಸು ಪಾಪಗಳುದಿಸಿದುವು (ಚಂಪು. ೧೪-೨೪). [ನಿರಯ + ಯಾತನೆ]

ನಿರಯವಾಸ (ನಾ). ನರಕಲೋಕದಲ್ಲಿ ವಾಸಿಸುವುದು ; ನರಕವಾಸ : ರಾವಣನುಂ ಲಕ್ಷ್ಮಣನುಂ ನಿರಯವಾಸದಿಂ ಪೊಱಮಟ್ಟು ಬಂದು (ಪಂಂಪಾ. ೧೬-೬೨ ಪ). [ನಿರಯ + ವಾಸ$_2$]

ನಿರರುತಿ 'ನಿರುತಿ' ನೋ.

ನಿರರ್ಗಲ, ನಿರರ್ಗಳ (ಗು). ೧. ತಡೆಯಿಲ್ಲದ ; ಸರಾಗವಾದ : ಮೆಱೆದು ಕ್ಷೋಣಿಯೊಳು ಪೆಸರ್ವೆತ್ತ ಘನಕಲ್ಯಾಣದೊಳು ನಿತ್ಯಪ್ರಥಿತ ಕಲ್ಯಾಣಭಕ್ತಿನಿರರ್ಗಲಾ [ಪಾಪಾಂ. ಆಾ] ಲೌಲ್ಯಾಲಸತ್ವದಲಿ (ಬಸಪು. ೫೬-೧೦೦). **ನಿರರ್ಗಳ** : (ನಾ). ೨. ತಡೆಯಿಲ್ಲದುದು ; ಅಡ್ಡಿಯಿಲ್ಲದಿರುವುದು ; ಉಚ್ಛೃಂಖಲತೆ : "ಉದ್ಧುರಮುದ್ಧಟಮುನ್ಮುಖಮುದ್ಧತಮುಚ್ಛೃಂಖಲಂ ನಿರರ್ಗಳಮಕ್ಕುಂ" (ವಸ್ತುಕೋ. ೧೦೭-೫೪). ೩. ಕಟ್ಟುಗಳಿಗೆ ಒಳಪಡದವನು ; ಸ್ವತಂತ್ರನಾದವನು : ಶ್ರೀಮದ್ಭರ್ಗ ನಿರರ್ಗಳಸೋಮಜಗನ್ನೇತ್ರ ವೀತಿಹೋತ್ರಾಂಬಕ . . . ಪಾಲಿಪುದೆನ್ನಂ (ಪಮ್ಮಿರ. ೭-೧).

ನಿರರ್ಗಳವಾಗಿ = ತಡೆಯಿಲ್ಲದೆ ; ಸರಾಗವಾಗಿ : ಅವನು . . . ನಿಂತು ನಿರರ್ಗಳವಾಗಿ ಮಾತನಾಡಿದನು (ಸಮಜೀ. ೧೫೫) ; ನನ್ನ ಲೇಖನಿಗೆ ವಿರಾಮವನ್ನು ಕೊಡದೆ ನಿರರ್ಗಳವಾಗಿ ಕಾವ್ಯವನ್ನು ಹೇಳುವುದಾದರೆ ಮಾತ್ರ ನಾನು ಬರೆಯುತ್ತೇನೆ (ಭಾರದ. ೯೬) ; ನಿರರ್ಗಳವಾಗಿ ಇವನು ಹತ್ತು ಹನ್ನೆರಡು ಭಾಷೆಗಳಲ್ಲಿ ಮಾತಾಡಬಲ್ಲ (ಭಾರತಿ. ೨೭). [ಸಂ.]

ನಿರರ್ಗಳ 'ನಿರರ್ಗಲ' ನೋ.

ನಿರರ್ಗಳಿತ (ಗು). = ನಿರರ್ಗಲ ೧ : ಗೆಲವಿನ ಸುಗ್ಗಿಗಿದೆ ಮಳೆಗಾಲವೆನುತ ನಿರರ್ಗಳಿತಭುಜಶೌರ್ಯ ಸುರಿದನು ಸರಳ ಸರಿವಳೆಯ (ಕುಪ್ಪಾಕ. ೨೦-೭). [ಸಂ. ನಿರರ್ಗಲಿತ]

ನಿರರ್ಗಳೆ (ನಾ). (?) : ಇಂತಾಪ್ತಾಗಮ ತಪಸ್ವಿಗಳ ನಿರರ್ಗಳೆಯೆಂದು ನಂಬಿ ಕಬ್ಬುನಮುಂಡ ನೀರವೋಲ್ಪೊಜಪೊಣ್ಮದಿಪ್ಪುದು ನಿಶ್ಚಂಕೆ (ರತ್ನಕ. ೧-೬ ಪ). [?]

ನಿರರ್ಥ$_1$ (ಗು). ೧. ಪ್ರಯೋಜನವಿಲ್ಲದ ; ಉಪಯೋಗವಿಲ್ಲದ ; ವ್ಯರ್ಥವಾದ : ಮನೆಯೆಂದುಂ ಮಕ್ಕಳೆಂದುಂ . . . ಸಕಲವಿಷಯವಿಂತೆನ್ನದೆಂದುಂ ನಿರರ್ಥಾರ್ಥನಿಮಿತ್ತಂ ಬೆಂದು ತಾಪತ್ರಯದೊಳೆ ಕುದಿದೆಂ (ರತ್ನಾಕ. ೨೨). (ನಾ). ೨. ಪ್ರಯೋಜನವಿಲ್ಲದುದು ; ವ್ಯರ್ಥವಾದುದು : "ವೃಥೆ ನಿಷ್ಫಲಂ ಮೋಳಮೆನಲದು ನಿರರ್ಥಕ್ಕೆ ನಾಮಂ" (ಮಂಗರಾ. ೧೩೬-೩೦) ; ಕ್ರಿಯಾವಾಚಕಮಾಗಿ ಸಲ್ಲದುದು, ಸತ್ವವಿಭಕ್ತಿಗಳನಿಲ್ಲದುದು, ನಿರರ್ಥಮಾಗಿ ಸಲ್ಲದುದು ಲಿಂಗಮೆನಿಸುಗುಂ (ಶಮದ.೭೨ ವೃತ್ತಿ) ; ರಾಯತನಮೆಮಗಿಂದ್ರಲೋಕದ ಲಾಯದಲಿ ದಿಟವೆಂದು ನುಡಿವರು ಜೋಯಿಸರು ಸಾಕವರ ವಚನ ನಿರರ್ಥವಲ್ಲೆಂದ (ಕುಪ್ಪಾಸ.೧೨-೪೫).

[ಸಂ.]

ನಿರರ್ಥ$_2$ (ಅ). ಸುಮ್ಮನೆ ; ವೃಥಾ ; ವ್ಯರ್ಥವಾಗಿ : ಹೇಸಿದ್ದೈವಂಗಳ ಬೇಡಿ ಬೇಡಿ ನಿರರ್ಥ[ಪಾಠಾಂ. ನಿರರ್ಥಕ] ಕೆಡಬೇಡ (ಬಸವ. ೫೫೬) ; ನಳಿನನಾಭನ ಕೂಡೆ ವೈರವ ಬೆಳಸಿ ಕೆಟ್ಟೆ ನಿರರ್ಥ (ತೊರರಾ. ೬-೨-೩೬).

[<ಸಂ. ನಿರರ್ಥಂ]

ನಿರರ್ಥಕ (ಗು). = ನಿರರ್ಥ$_1$ ೧ : ತಾವು ತಮ್ಮಯ ಹೆಚ್ಚು ಕುಂದಿನ ಜೀವಕಳೆಯಱಯದ ನಿರರ್ಥಕ ಜೀವಿಗಳು (ಕುಪ್ಪಾಕ. ೯-೧೭) ; ಇಂತಹ ನಿರರ್ಥಕ ವಿಚಾರಗಳಿಗೆ ಕೈ ಹಾಕದಿರುವುದೇ ಶ್ರೇಯಸ್ಕರ (ಜೀವಾತ್ಮ. ೬). (ನಾ). ೨. ವ್ಯರ್ಥವಾದುದು ; ಪ್ರಯೋಜನವಿಲ್ಲದುದು :

"ಅಂತರ್ಗತಂ ನಿರರ್ಥಕಮಪ್ರಯೋಜನಂ" (ಮಂಗರಾ. ೧೩೫-೩೭); ನೀರಜಾವಲಿಯ ಚೆಲ್ವು ನಿರರ್ಥಕಮಾಗದು (ಅಪಿಪು. ೪-೯೩); ಪಿತೃಮಾತೃಗುರು ದ್ವಿಜದೇವಪೂಜೆಯಿಂ ಕಾಲಮಿದೆಯ್ದೆ ಸಲ್ಲದನ ಬಾಟ್ಕೆ ನಿರರ್ಥಕಮಲ್ತೆ ಲೋಕದೊಳ್ (ಜಗವಿ. ೬-೯೩); ಗುರುಗಳಲಿ ನಂಬುಗೆ ನಿರರ್ಥಕವಾಯ್ತೆನುತ ಕುರುರಾಯ ಬಿಸುಸುಯ್ದ (ಕುಪ್ಯಾದ್ರೋ. ೪-೫); ನಿರರ್ಥಕವಾದ ಕೆಲಸಕ್ಕೆ ಸ್ವಾರ್ಥ ಪಡೋದ್ಯಾಕೆ? (ಗಾದೆ). ೩. ಕೆಲಸಕ್ಕೆ ಬಾರದವನು; ಅಯೋಗ್ಯನಾದವನು: ಪಾರ್ಥ ಭೀಮರ ಮಱೆಯೊಳಿರ್ದು ನಿರರ್ಥಕರನಿಱಿದಿಱಿದು ಜಯವ ಸಮರ್ಥಿಸುವೆ ಫಡ ಹೋಗೆನುತ ತೆಗೆದೆಚ್ಚನಾ ಶಕುನಿ (ಕುಪ್ಯಾಗ. ೨-೨೭). ೪. [ಕಾವ್ಯಮಿಾ]ಪದದೋಷಗಳಲ್ಲಿ ಒಂದು; ಇ ಪದ್ಯದಲ್ಲಿ ಅರ್ಥ ಪರಿಪೋಷಣವೇನೂ ಇಲ್ಲದಿದ್ದರೂ ಪ್ರಾಸಕ್ಕಾಗಿ ಅಥವಾ ಪಾದಪೂರಣಕ್ಕಾಗಿ ಹಾಕುವ ಪದ. ಉದಾಹರಣೆಗೆ ಮೇಣ್, ನೆರೆ ಇತ್ಯಾದಿ: ನಿರರ್ಥಕ-ಪಾದಪೂರಣಕ್ಕೆ ಮಾತ್ರ ಹಾಕಿರುವುದು (ಕೈಪಿಡಿ. ೨೨೭). [ಸಂ.]

ನಿರರ್ಥಕಂ (ಅ). ವ್ಯರ್ಥವಾಗಿ; ವೃಥಾ: ನಿರ್ದೋಷಿಗಳಂ ನಿರರ್ಥಕಮಿಾ ಪಾತಕಂ ಕೊಂದನೆಂದು ತನ್ನಂತರಂಗದಲ್ಲಿ ಸೈರಿಸಲಾಱದೆ (ಪಡ್ಡಾರಾ. ೧೭೮-೧೦). [ಸಂ.]

ನಿರರ್ಥಕರ (ನಾ). ಅರ್ಥವಿಲ್ಲದುದು: ಪ್ರಸಿದ್ಧಾಭಿಧಾನಮಂ ಪಡೆದ ಪದಾರ್ಥಮಂ ಶಾಶ್ವತಮೆಂಬುದನುಕ್ತಸಿದ್ಧಮಲ್ಲದಂದಭಿಧಾನಂ ನಿರರ್ಥಕರಮುಮಾಧಾರರಹಿತಮುಮಕ್ಕುಮೆಂದುಮಿಲ್ಲದ ಪದಾರ್ಥಕ್ಕಭಿಧಾನಮನಿಡುವ ಮರುಳಾವೊಂ (ಶಾಂತಿಪು. ೮-೧೩೮ ಪ). [ಸಂ.]

ನಿರಲಂಕಾರ, ನಿರಳಂಕಾರ (ನಾ). ಅಲಂಕಾರ ರಹಿತವಾಗಿರುವಿಕೆ; ಆಭರಣವಿಲ್ಲದಿರುವಿಕೆ; ಚೆಲುವು ತರುವ ಸಾಧನಗಳನ್ನು ಹೊಂದದಿರುವಿಕೆ; ಸ್ವಭಾವ ಸೌಂದರ್ಯ: ನಿರಲಂಕಾರ ನಿಕಾಮ ಮಾಕೃತಿ ತದಾಕಾರಂಬೊಲಸ್ಮತ್ಪ್ರಿಯಾಧರದಂದಕ್ಷತಕೋಮಲಂ ಕಿಸಲಯಂ (ಲೀಲಾವ. ೧೪-೯೨). **ನಿರಳಂಕಾರ:** ನಿರಳಂಕಾರ ವಿರಾಜಮಾನ ಜಿನನಂಗಶ್ರೀಯ ಸಂಸಂಗದಿಂ ಪಿರಿದುಂ ಶೋಭೆಗೆ ಸಂದುವಂದು ಶಚಿ ತಂದಾನಂದದಿಂದಿಕ್ಕಿದಾಭರಣಂಗಳ್ (ಪರ್ಧಪು. ೧೪-೪೪). [ಸಂ.]

ನಿರಲಸ (ಗು). ೧. ಆಲಸ್ಯವಿಲ್ಲದ; ಚಟುವಟಿಕೆಯ: ಶಕ್ತಿಯನ್ನು ಮೀರಿ ಹೋಗುವುದು ಎಷ್ಟು ನಿರಲಸ ಪ್ರಯತ್ನದ ಮತ್ತು ಬಲದ ಕೆಲಸ (ನಿಬಂಧ. II, ೩೭೯). (ನಾ). ೨. ನಿರಾಯಾಸ; ಚಟುವಟಿಕೆ: ಜ್ಞಾನೇಶ್ವರಿಯಲ್ಲಿ ಉಗಮ ಹೊಂದಿದ ಭಕ್ತೋದ್ಧಾರ ತರಂಗಿಣಿಯು . . . ಈ ನಿರ್ಮಲೀಕರಣವನ್ನು ನಿರಲಸವಾಗಿ ಇಂದಿಗೂ ಮಾಡುತ್ತಿದೆ (ಮಸಾಹಿ. ೧೫). ೩. (ಆಲಂ) ಆಲಸ್ಯ; ಜಡತೆ: ಅವನು ತನ್ನ ಹೊದ್ದ ದೋತರವನ್ನು ಗೂಟಕಿಕ್ಕಿ; ಲೋಡಿಗೆ ಆತು, ಕಾಲು ಚಾಚಿದನು. ಕಾಲಲ್ಲಿ ಮಲೆತು ನಿಂತ ನಿರಲಸವು ಪ್ರಸರಣ ಹೊಂದಿತು (ರಕ್ತಧ್ವ. ೨೬೩). [ಸಂ.]

ನಿರವ (ನಾ). ತಿಳಿಸುವಿಕೆ; ನಿರೂಪ: "ನಿರವ-ನಿರೂಪ = ತಿಳಿಸುವಿಕೆ" (ತದ್ಭಕೋ. ೨೨); ಕೆಳೆಯಂ ಬಂದನೆನಲ್ಕಾಗಳೆ ಮುದಮಂ ತಳೆದು ತನ್ನ ನಿರವಱಿಪಲ್ಕಾ ಬಳಮಂ ಬಿಡಿಸುವ ಬಗೆಯಿಂ ಘಳಿಲನೆ ನೃಪಕಂತು ಮುನಿಪನಂ ಬೀಟ್ಕೊಂಡಂ (ಕುಸುಮಾ. ೧೫-೬೦); ನಿರೂಪ-ನಿರವ. ಪ್ರಸಾಧನ-ಹಸದನ, ಉತ್ತರೀಯ-ಉತ್ತರಿಗೆ (ಶಬ್ದಾನು. ೧೬೦ ಪ್ರಯೋ). [<ಸಂ. ನಿರೂಪ]

ನಿರವಗ್ರಹ(ನಾ). ೧. ನಿರ್ಬಂಧಕ್ಕೆ ಸಿಲುಕಿದವನು; ತನ್ನ ಇಚ್ಛೆಯಂತೆ ನಡೆಯುವವನು; ಸ್ವಚ್ಛಂದ ಪ್ರವೃತ್ತಿಯವನು; ಸರ್ವಸ್ವತಂತ್ರನಾದವನು: "ಯಥಾಕಾಮಿಾ, ಸ್ವರುಚಿಃ, ಸ್ವಚ್ಛಂದಃ, ನಿರವಗ್ರಹಃ — ಈ ೪ ತನ್ನಿಚ್ಛೆಕಾಱಂ" (ಹಲಾಯು. ೬೨-೨೨೪); "ಸ್ವರುಚಿ ನಿರವಗ್ರಹಂ ಸ್ವಚ್ಛಂದನೆಂದೆನಲ್ ತನ್ನಿಚ್ಛೆಗಾಱನಕ್ಕುಂ" (ಮಂಗರಾ. ೬೮-೯); ನಿರವಯವ ನಿರ್ಲೇಪ ನಿರವಗ್ರಹ ನಿರಾಧಾರ . . . ಕರುಣಿಸುವುದೆಂದ (ಕುಪ್ಯಾಅ. ೬-೮೯). ೨. ಅಡ್ಡಿ ಇಲ್ಲದುದು; ನಿರಾತಂಕವಾದುದು: ನಿರವಗ್ರಹಮಕ್ಕೆ ವಿಯಚ್ಚರೇಂದ್ರನಂದನೆಯೊಳೀ ಕುಮಾರಂಗೆ ಶುಭೋತ್ಕರವಿಧಿಪರಿಗ್ರಹಂ ತಾಂ ಕರಗ್ರಹಂ ಸಕಳದೇವತಾನುಗ್ರಹದಿಂ (ಪರ್ಧಮಾ. ೩-೬೬). [ಸಂ.]

ನಿರವದ್ಯ (ಗು). ೧. ದೋಷರಹಿತವಾದ; ಕಳಂಕವಿಲ್ಲದ: ಮಾನೋನ್ನತ ನಿರವದ್ಯ ಕುಲೀನ ಮಹಾಪುರುಷ ಪರಧನಂಗಳ ದತ್ತಾದಾನಂಗಳ್ ನಿನಗಾಗವಮಾನುಷಮಿಾ ರೂಪಿದಕ್ಕಮರಿಯರ ಪೆಂಡಿರ್ (ಶಾಂತಿಪು. ೩-೭೭); ನೀವೀ ನಿರವದ್ಯರೂಪಿನೊಳಿಂತು ನೆಗಟಲಾಗದೆಂದು ವನದೇವತೆಗಳು ಜಡಿದೊಡಂಜಿ . . . ತ್ರಿದಂಡಿಗಳುಮಪ್ಪ ಪರಿವ್ರಾಜಕರುಮಾಗಿ (ಚಾವುಂಪು. ೩೮); ನಿರವದ್ಯನಿಖಿಲವಿದ್ಯಾತರಂಗಿಣೀಸಂಗದಲ್ಲಿ ತೋಱುವ ಸುಟಾಯಂತಿರೆ ಸುರುಳ್ದು ಮುನಿಕುಮಾರನ ಸುರುಚಿರಗಂಭೀರನಾಭಿಮಂಡಲಮೆಸೆಗುಂ (ಕಾದಂಪೂ. ೭೩೭). (ನಾ). ೨. ಕಳಂಕವಿಲ್ಲದುದು; ಶ್ರೇಷ್ಠವಾದುದು; ಉತ್ತಮವಾದುದು: ಪದ್ಯಂಗಳ್ ನವರಸನಿರವದ್ಯಂಗಳ್ . . . ಮೆಱೆಯುತಿರ್ಪುವೀ ಸತ್ಯತಿಯೊಳ್ (ಗಿರಿಕ. ೧-೧೩); ನಿರವದ್ಯಂಗಳೆನಿಪ್ಪನೇಕವಿಧ ಪೂಜಾದ್ರವ್ಯ ಸಂಪೂರ್ಣ ಭಾಸುರಮಂ ಭಾಜನರಾಜಿಯಂ ತಳೆದ ನಾನಾವಾರನಾರೀಜನಂ ಬರೆ (ಮಹಾನೇ. ೧-೧೦೦); ನಿರವದ್ಯಂ ನಿಜಮಕಾರದೆಡೆಗಂ ವತ್ವಂ (ಶಮದ. ೧೦೪). ೩. ಪರಮಾತ್ಮ: ಜಯ ಜಯ ವಾಸುಪೂಜ್ಯ ಸುರಪೂಜ್ಯ ಜಿನೇಶ್ವರ ವೀತರಾಗ ನಿರ್ಭಯ ನಿರವದ್ಯ (ಸುಕುಮಾ. ೪-೪೮); ನಿರವ[ಪಾಠಾಂ. ವಂ, ವೇ]ದ್ಯ ನಿರ್ಭಿನ್ನ . . . ನಿರ್ಮಳ ನಿರಾಳ ಪಂಪಾವಿರೂಪಾಕ್ಷ ಶರಣು (ಪಚಕಾ. ೧-೪); ಅಂತರ್ಯಾಮಿ ಮೊದಲಾದ ಈಶ್ವರತ್ರಯಕ್ಕೆ ಅಧಿಷ್ಠಾತೃ . . . ನಿರವದ್ಯ . . . ಎಂಬಿವು ಮೊದಲಾದವೇ ಅದ್ವೈತಬ್ರಹ್ಮಪರ್ಯಾಯ ನಾಮಂಗಳಕ್ಕುಂ (ವಿವೇಕ. ೨೭); ನಿರವದ್ಯಂ ನಿಗಮಾಂತವೇದ್ಯನತುಳಂ . . . ಪೊರೆಗೆಮ್ಮಂ ಸುಂದರಾಧೀಶ್ವರಂ (ಹಾಲಾಸ್ಯ. ೨-೧೩-೪೪). ೪. ಕಳಂಕವಿಲ್ಲದವನು; ಶ್ರೇಷ್ಠ: ಉದಿತಶ್ರೀಕಟ್ಟಿಪ್ಪಿನುಳ್ಳೇ ರಿಷಿಗಿರಿಸಿಲೆ ಮೇಲ್ನೋನ್ತು ತನ್ದೇಹಮಿಕ್ಕಿ ನಿರವದ್ಯನ್ನೇಱಿ ಸ್ವರ್ಗ್ಗಂ ಶಿವನಿಲೆ ಪಡೆದಾನ್ (ಎಕ. II, ೮೪-೨; ಸು. 700); ನಿರವದ್ಯರ್ ನಿರಘರ್ ನಿರುತ್ತರಸುಖರ್ . . . ಮೆಱೆವುದೀ ಹಾಲಾಸ್ಯ ಚಾರಿತ್ರಮಂ (ಹಾಲಾಸ್ಯ. ೪-೧೭-೧೨೭).

ನಿರವದ್ಯವಿದ್ಯಾಧರ = ಶ್ರೇಷ್ಠವಾದ ವಿದ್ಯೆಗಳನ್ನು ತಿಳಿದವನು: ಚಂದ್ರಿಕಾಶ್ರೀವಿಲಾಸದೊಳ್ ನಿರವದ್ಯವಿದ್ಯಾಧರನಜಿತನಾಥಂ ವಿದ್ಯಾಧರರೋಲಗಂಗೊಟ್ಟರ್ದು ದಿಗವಲೋಕನಂಗೆಯ್ದಂ (ಅಜಿಪು. ೬-೪೫ ಪ). [ಸಂ.]

ನಿರವದ್ಯಚರಿತ (ನಾ). ಪರಮಾತ್ಮ; ನಿರವದ್ಯ: ನಿರವದ್ಯಚರಿತಂಗೆ ನರಬಾಣವರದಂಗೆ . . . ಶುಭಮಸ್ತು ಶೋಭನಂ (ಹಾಲಾಸ್ಯ. ೧-೬-೪೧). [ನಿರವದ್ಯ + ಚರಿತ]

ನಿರವದ್ಯಚರಿತ್ರ (ನಾ). ತಪ್ಪಿಲ್ಲದ ನಡವಳಿಕೆಯನ್ನುಳ್ಳವನು; ನಿಷ್ಕಳಂಕವಾದ ಶೀಲವುಳ್ಳವನು; ಶುದ್ಧಚಾರಿತ್ರ್ಯವುಳ್ಳವನು: ಸಿಂಗದ ಮಱಿಗಳ್ ಶರಭದ ಕೆಲದೊಳ್ ನಲಿದುವು ನಿರವದ್ಯಚರಿತ್ರನಿರ್ದಯಷ್ಯಾಶ್ರಮದೊಳ್ (ಮಲ್ಲಿಪು. ೧೪-೧೮). [ನಿರವದ್ಯ + ಚರಿತ್ರ]

ನಿರವದ್ಯಮಾರ್ಗ (ನಾ). ಶ್ರೇಷ್ಠವಾದ ಮಾರ್ಗ,— ಹಾದಿ; ಉನ್ನತವಾದ ಪಥ: ನಿರವದ್ಯಮಾರ್ಗದೊಳಿರ್ಪ ಭವ್ಯಜನಂಗಳ ಶೀಲದ ಮಹಿಮೆಯಂ ಬಣ್ಣಿಸಲ್ ಬಲ್ಲನಾವಂ (ಪುಣ್ಯಾಸ್ರ. ೭-೨೮ ಪ). [ನಿರವದ್ಯ + ಮಾರ್ಗ]

ನಿರವದ್ಯವಿದ್ಯೆ (ನಾ). ದೋಷರಹಿತವಾದ ವಿದ್ಯೆ ; ಉತ್ತಮವಾದ ವಿದ್ಯೆ : ಮುನಿಸಾಗರಗಿರಿಯೊಳ್ ಮತ್ತನುಜೆಯೆ ನಿರವದ್ಯವಿದ್ಯೆಯಂ ಸಾಧಿಸೆ (ಶಾಂತಿಪು. ೯-೫). [ನಿರವದ್ಯ + ವಿದ್ಯೆ]

ನಿರವದ್ಯವೃತ್ತ (ನಾ). = ನಿರವದ್ಯಚರಿತ್ರ : ಮಣಿದೀಪದಿನುದ್ಧ ಧೂಪದಿಂ ಫಳಕುಳದಿಂ ಧರಾಧಿಪತಿ ಪೂಜಿಸಿದಂ ನಿರವದ್ಯವೃತ್ತನಂ (ಚಂದ್ರಪು. ೧೪-೯). [ನಿರವದ್ಯ + ವೃತ್ತ]

ನಿರವದ್ಯಾಚಾರ (ನಾ). ದೋಷರಹಿತವಾದ ಆಚರಣೆಯುಳ್ಳವನು ; ಸಚ್ಚಾರಿತ್ರನಾದವನು ; ಆಚಾರಶೀಲ : ನಿಜಯತಂ ಸಜ್ಜನಾಧಾರನಾದಂ ನಿರವದ್ಯಾಚಾರನಾದಂ ಚತುರಕವಿಜನಾಸ್ಥಾನಂ ರತ್ನಪ್ರದೀಪಂ (ಮಲ್ಲಿಪು. ೪-೧೫೨). [ನಿರವದ್ಯ + ಆಚಾರ]

ನಿರವದ್ಯಾನ್ವಯ (ನಾ). ದೋಷರಹಿತವಾದ ವಂಶ ; ನಿಷ್ಕಲಂಕವಾದ ವಂಶ : ನಿರವದ್ಯಾನ್ವಯ[ಮು]ದ್ಧಮುದ್ಧತಮ[ಹಾಕ್ಷೀ]ರಾಬ್ಧಿ ಡಿಂಡೀರಪಾಂಡುರಂ . . . . ಸ್ತ್ರೀಬಾಲವೃದ್ಧಾಹಿತಂ ಪರಮಾನಂದಿತ ಲೋಕಮೊಪ್ಪೆ ನೆಲೆಗೊಳ್ಗಾಚಂದ್ರತಾರಂಬರಂ (ಕವಿಗಾ. ೩-೨೩೧).

[ನಿರವದ್ಯ + ಅನ್ವಯ]

ನಿರವದ್ಯಾಹಾರ (ನಾ). ಶ್ರೇಷ್ಠವಾದ ಆಹಾರ : ಪರಮತಪಶ್ಚರಣ ನಿರತ ಯತಿಸಮಿತಿಗೆಲ್ಲಂ ಪ್ರತಿಗ್ರಹಾದಿಪುರಸ್ಸರಂ ನಿರವದ್ಯಾಹಾರಾದಿ ವಿತರಣರೂಪಪಾತ್ರದತ್ತಿಯುಂ . . . ಬೆರಸಾರ್ಯಷಟ್ಕರ್ಮಂಗಳಂ ನಿಮಗಿವು ಕುಲಾಚಾರಂಗಳೆಂದಱಿಯೆ ಪೇೞ್ದು (ಆದಿಪು. ೧೫-೧೩ ಪ) ; ವಿಧಿಪೂರ್ವಕಂ ನಿರವದ್ಯಾಹಾರಮಂ ಕುಡುವುದುಮವರ್ . . . ಕೈಯೆತ್ತಿ ಕೊಂಡಕ್ಷಯಂ ದಾನಮೆಂಬುದುಂ (ಪಂಠಾಮಾ. ೯-೧೩).

[ನಿರವದ್ಯ + ಆಹಾರ]

ನಿರವದ್ಯೆ (ನಾ). ಕಳಂಕರಹಿತೆ ; ನಿರ್ದೋಷಿ : ನಿತ್ಯೆ ನಿರವದ್ಯೆ ಶರ್ವಾಣಿ ಶಾಂಭವಿ . . . ಪದ್ಮೋದ್ಭವನ ರಾಣಿ (ಉದ್ಭಟೇ. ೪-೪).

[ಸಂ. ನಿರವದ್ಯಾ]

ನಿರವಧಿ (ಗು). ೧. ಎಲ್ಲೆಯಿಲ್ಲದ ; ಸೀಮೆಯಿಲ್ಲದ ; ನಿಸ್ಸೀಮವಾದ : ಇತ್ತ ಬಲದೇವನುಂ ಪುರುಷೋತ್ತಮನುಮನೇಕವತ್ಸರಂ . . . ನಿರವಧಿಸಂಪತ್ತಿಗೆ ನೆಲೆಯೆನಿಸಿ ನಾಡೆ ನಲಿಯುತ್ತಿರ್ದರ್ (ಪಂಠಾಮಾ. ೧೬-೪೩) ; ನಿರವಧಿಸೌಷ್ಠವದಿಂ ತನ್ನಿರವಧಿಕಂ ಚೆಲ್ವುವೀಱೆ ಕಬರೀಭರದಿಂ ಪರಭಾಗಂಬೆತ್ತಾಕೆಯಪರಭಾಗಂ ಪತಿಯ ಮನಮನುಱೆ ಸೆಱೆವಿಡಿಗುಂ (ಜಗವಿ. ೧೦-೪೭) ; (ಮಲ್ಲಕಾ. ೬-೨೪೪ ನೋ) ; ನಿರವಧಿ ಸುಖಕ್ಕೆ ಪಾತ್ರಂ . . . ಉರುತರಶೋಭಾಚಿತ್ರಂ ಕರಮೆಸೆಗುಂ ರಯ್ಯ ಮಪ್ಪ ಭರತಕ್ಷೇತ್ರಂ (ಬಾಧಪು. ೧-೬೯) ; ನಿರವಧಿಸ್ಥಿತ ಲಿಂಗನಿಷ್ಠಿತ ಸುರುಚಿರೇಂದ್ರಿಯರತುಳಚಿದಮಳನಿರತರುಂ (ಬಸಪು. ೬-೧೬) ; ಮುಕ್ತಿ ಸುಖವಾಂತರಿಕವದು ನಿರವಧಿ ಸುಖ (ಮಂಕುಕ. ೮೮೮). (ನಾ). ೨. ಎಲ್ಲೆಯಿಲ್ಲದುದು ; ಸೀಮೆಯಿಲ್ಲದುದು ; ಅಪರಿಮಿತವಾದುದು : ಆ ಸತಿಯ ಮುಖಮೇನೆಂದು ನೋಳ್ಪೆ ವಿಪರೀತಕರ ದುಃಖ ನಿರವಧಿಯ ಬುಧಿಯ (ವೆಂಕಾರಾ. ೨-೬-೪೦) ; ಜೀವದ ಕಾಲ ನಿರವಧಿಯಾದ ಕಾಲ (ಸಮಜೀ. ೯೭೨). [ಸಂ.]

ನಿರವಧಿಕ (ಗು). ೧. ಎಲ್ಲೆಯಿಲ್ಲದ ; ಸೀಮೆಯಿಲ್ಲದ. ೨. ಅಧಿಕವಾದ ; ಹೆಚ್ಚಾದ ; ಅತಿಶಯವಾದ : ಕಾದಂಬರಿಗಾದಂ ಬುದ್ಧಿ ನೇೞ್ದಟ್ಟಿದೆ ನಿರವಧಿಕ ಪ್ರೇಮದಿಂ (ಕಾದಂಪೂ. ೯೮೧) ; ವಧುಗಳಾ ಪರಮೇಶ್ವರನ ನಿರವಧಿಕ ಸೌಖ್ಯದ ಸಾರತರ ನವವಿಧ ರಸೋತ್ಸವದಿಂದ ಮೆಱೆದರು ಲೋಕವಿಭ್ರಮವ (ನಿಭಾಗ. ೩-೨-೪೫). (ನಾ). ೨. ಹೆಚ್ಚಾದುದು ; ಅತಿಶಯವಾದುದು : ಅಲಂಕಾರಗಳ ವರ್ಗವೇ ಉಕ್ತಿ ವೈಚಿತ್ರ್ಯದಿಂದ ಪ್ರಯುಕ್ತವಾದಾಗ, ನಿರವಧಿಕವಾಗುವುದಲ್ಲದೆ ನೂರಾರು ಶಾಖೆಗಳನ್ನೂ ಪಡೆಯುತ್ತದೆ (ಧ್ವನ್ಯಾಲೋ. ೨೫೬). ೩. ಅಧಿಕ್ಯ ; ಅಪರಿಮಿತತೆ : ನಿರವಧಿಕದಿಂ ಭೂತಿಶಾಸನಭರಣಾದಿ ಸಮಸ್ತ ಮಾಹೇಶ್ವರರಿಗಿಷ್ಟಾರ್ಥಂಗಳಂ ಸಲಿಸುತ್ತ ಮಿರುತಿರಲು (ಬಸಪು. ೬-೩೪). ೪. ಸೀಮೆಯನ್ನು ಮೀರಿದವನು ; ಎಲ್ಲೆಗೆ ಅತೀತನಾದವನು : ನಿರವಧಿಕ ನಿರ್ಮಾಯ . . . ಕರುಣಿಸುವುದೆಂದ (ಕುಪ್ಯಾಅ. ೬-೮೯).

[ಸಂ.]

ನಿರವಮಾನ (ನಾ). ತಿರಸ್ಕಾರ ತಗಲದವನು ; ತಿರಸ್ಕಾರ ಅಂಟದವನು : ನಿರವಮಾನ ನಿರಜ್ಞ ನಿಶ್ಚಲ ನಿರಸನೇಂದ್ರಿಯ ನಿರ್ವಿಷಯ ನಿರ್ನಿರುಹರಣ ನಿರಸೂಯ . . . ನಿರ್ವಿಕಾರಾಕಾರ ಚಿತ್ತೈಸು (ಬಸಪು. ೬೧-೪೩). [ಸಂ.]

ನಿರವಯ (ನಾ). ೧. [ವೀಶೈ] ದೇಹವಿಲ್ಲದುದು ; ನಿರಾಕಾರವಾದುದು ; ಶೂನ್ಯ : ನಿರವಯ ರೂಪಾಯಿತೆಂದು ನುಡಿವರು ಬಯಲು ರೂಪಾದ ಪರಿ ಇನ್ನೆಂತೋ (ಮೋಳಿಮಾ. ೬೪-೨೬೧) ; ನಿತ್ಯ ಪರಿಪೂರ್ಣವೇ ತನ್ನಿರವೆಂದು ತಿಳಿಯೆ ಆ ತಿಳಿದ ಮಾತ್ರದಲ್ಲಿಯೇ ಅನಿತ್ಯದಾಬೆಸುಗೆ ಬಿಟ್ಟು ನಿರಾಳದಲ್ಲಿ ನಿರವಯ[ಪಾಠಾಂ. ನಿಜ]ವನೆಯ್ದಲಱಿಯದೆ (ಮಹಾದೇ. ಬ. ೧೦೨-೨೩೫) ; ಇಂತೀ ಸರ್ವಾಚಾರ ಸಂಪತ್ತು ಎನ್ನ ತನು ಮನ ವೇದ್ಯವಾಯಿತು ಇನ್ನೆಲ್ಲಿಯಯ್ಯ ಎನಗೆ ನಿಮ್ಮಲ್ಲಿ ನಿರವಯವು ಇನ್ನೆಲ್ಲಿಯಯ್ಯ ನಿಮ್ಮಲ್ಲಿ ಕೂಡುವುದು (ಮಹಾದೇ. ಬ. ೧೧೯-೨೭೬) ; ಕುಱುಹು ದೊರೆಯಿತು ದೇಹ ಅಱಿವನಱಿಯಿತು ಪ್ರಾಣ ಹರುವಾಗಿ ಹೋಯ್ತು ಭವಪಾಶ ಮುಕ್ತಿಯ ಇರವು ನಿರವಯವು (ಸರ್ವಜ್ಞ. ೧೭). ೨. ದೇಹವಿಲ್ಲದವನು ; ಆಕಾರವಿಲ್ಲದವನು ; ನಿರಾಕಾರ : ತುರೀಯ ಪರಮಾನಂದನು ನಿರವಯ . . . ಕೂಡಲಸಂಗಯ್ಯನು (ಬಸವ. ೯೫೪) ; ನಿರಹಂಕಾರ ನಿರವಯ ನಿರಾಸಕ್ತ ಪುರಹರನೆ (ಸೋಮಚ. ೧-೫) ; ನಿರ್ಮರಣ ನಿರವಯ ನಿಷ್ಕಳಂಕ . . . ನಿಜ ನಿರ್ಮಾಯ ಚಿತ್ತೈಸು (ಬಸಪು. ೬೧-೪೪) ; ಶ್ರೀ ಗುರು ಸದಾಮಳ . . . ನಿರವಯ ನಿರಾಮಯ (ಧೈರಸೂ. ೧).

ನಿರವಯವಾಗು = ನಿರಾಕಾರವಾಗು ; ಲಯವಾಗು ; ಸಕಲ ಲೋಕಂಗಳು ನಿರವಯವಾದಲ್ಲಿ ನಿಜಬೆಳಗಿನೊಳಗೆ ಒಮ್ಮೆ ಸೋಹಂ ಎನಲು . . . ಗುಹೇಶ್ವರ ನೀನೆ ಲಿಂಗ (ಅವಚಂ. ೨೭೮-೧೨೭೫).

[<ಸಂ. ನಿರವಯವ]

ನಿರವಯಲು 'ನಿರ್ವಯಲು' ನೋ.

ನಿರವಯವ (ಗು). ೧. ಅವಯವವಿಲ್ಲದ; ಶರೀರವಿಲ್ಲದ: ನಿರವಯವ ತತ್ವೈಕ ರಸವಿದೆ ನರಮನೋಹರ ರೂಪಿನಲಿ ವ್ಯವಹರಣ ಸಂಜ್ಞಾರಹಿತವಿದೆ ಕೃಷ್ಣಾಭಿಧಾನದಲಿ (ಕುಪ್ಯಾಸ. ೯-೩೫). ೨. ಭಾಗ ಮಾಡಲು ಆಗದ ; ಅಖಂಡವಾದ ; ಪರಿಪೂರ್ಣವಾದ. (ನಾ). ೩. ಶರೀರವಿಲ್ಲದುದು; ನಿರಾಕಾರವಾದುದು; ಅಮೂರ್ತವಾದುದು: ಎನ್ನಂಗವನು ಶ್ರೀಗುರು ಮಂತ್ರವ ಮಾಡಿ ತೋಱುದನಾಗಿ ಸಾವಯವಕ್ಕೆ ನಿರವಯವಕ್ಕೆ ಭಿನ್ನವಿಲ್ಲವಯ್ಯ (ಮಹಾದೇ. ಭು. ೭೩-೧೮೧) ; ಅಮೂರ್ತ ಎಂದರೆ ನಿಷ್ಕಲ, ನಿರವಯವ ಎಂದರ್ಥ (ಶಕ್ತಿವಿ. ೨೩). ೪. ವಿಭಾಗಿಸಲಾಗದುದು ; ಅವಿಭಾಜ್ಯವಾದುದು : ಕಾಣುವ ಯಾವದಾದರೂ ಹರಳನ್ನು . . . ವಿಭಜಿಸುತ್ತ ಹೋದರೆ ಯಾವ ರೀತಿಯಿಂದಲೂ ಅವಿಭಾಜ್ಯವಾದ ಒಂದಂಶವುಳಿಯುವುದು, ಇದೇ ಪರಮಾಣು. ಇದು ನಿರವಯವ (ಭಾರದ. ೨೩೦). ೫. ಶರೀರವಿಲ್ಲದವನು ; ನಿರಾಕಾರನಾದವನು : ಪರಮಾತ್ಮನೆನ್ನನೆಂದೊಡೆ . . . ನಿರವಯವನಿರಂಜನನಿರ್ದುರಿತನನಂತಪ್ರಬೋಧದರ್ಶನಸೌಖ್ಯಂ (ಯಶೋಚ. ೪-೨೭). [ಸಂ.]

ನಿರವಯವತ್ವ (ನಾ). ದೇಹವಿಲ್ಲದಿರುವಿಕೆ; ನಿರಾಕಾರತೆ: ಮೋಕ್ಷದಲ್ಲಿ ಜೀವಾತ್ಮನು ತನ್ನ ಸ್ವಾಭಾವಿಕಸ್ಥಿತಿಯಲ್ಲಿರುವನು. ಅದೆಂತೆಂದರೆ . . . ನಿರವಯವತ್ವ ನಾನಾತ್ವ ಮೊದಲಾದ ಧರ್ಮಗಳೊಡನೆ ಯಾವತ್ಕಾಲ ನಿರ್ಮುಕ್ತಿಯಾಗಿರುತ್ತಾನೆ (ಹಿಂದಸಾ. ೧೩೪).

[ಸಂ.]

ನಿರವಯವರೂಪಕ (ನಾ). [ಕಾವ್ಯಮೀ] ವಸ್ತುವಿನ ಅವಯವಗಳ ಆರೋಪಣೆಯನ್ನು ಬಿಟ್ಟು ವಸ್ತುವನ್ನೇ ಇನ್ನೊಂದು ವಸ್ತುವಿನಲ್ಲಿ ಆರೋಪಿಸಿ ಹೇಳುವುದು; ರೂಪಕಗಳಲ್ಲಿ ಒಂದು ಬಗೆ: ನಿರವಯವರೂಪಕಕ್ಕೆ—ಅರಕ್ತಕಪೋಲಂ . . . ಅಸ್ಮಾಂಭೋರುಹವಿನಾ ಸುದತಿಗಿಂತಿದೇನೊಪ್ಪಿದುದೋ (ಕಾವ್ಯಾಪ. ೬೯೧). ☞ ಮೇಲಿನ ಈ ಲಕ್ಷ್ಯದಲ್ಲಿ ಆಸ್ಯವೆಂಬ ವಸ್ತುವಿನಲ್ಲಿ ಅಂಭೋರುಹವೆಂಬ ವಸ್ತುವನ್ನು ಆರೋಪಿಸಲಾಗಿದೆ. ಆದರೆ ಆಸ್ಯದ ಅಂಗಗಳಲ್ಲಿ ಅಂಭೋರುಹದ ಅಂಗಗಳನ್ನು ಆರೋಪಿಸಿಲ್ಲವಾದುದರಿಂದ ಇದು ನಿರವಯವ ರೂಪಕ. [ನಿರವಯವ+ರೂಪಕ]

ನಿರವಯಾಂಗ (ನಾ). ಅಂಗೋಪಾಂಗಗಳಿಲ್ಲದವನು; ಶರೀರವಿಲ್ಲದವನು; ನಿರಾಕಾರನಾದವನು: ಒಡಲುವಿಡಿದು ಕಂಡಿಹೆನೆಂದಡೆ ಅಗೋಚರ ಒಡಲು ಹಬ್ಬುದು ಕಂಡಿಹೆನೆಂದಡೆ ನಿರವಯಾಂಗ (ಮೋಳಿಮಾ. ೩೫–೧೪೭) ; ನಿವರವಿಲ್ಲದ ಮಣಗೆ ದಾರದ ಹಂಗೇಕೆ ನಿರವಯಾಂಗಂಗೆ ಪರಿಚ್ಛದಮಣವೇಕೆ (ಮೋಳಿಮಾ. ೧೦೫–೪೧೯). [<ಸಂ.ನಿರವಯವಾಂಗ]

ನಿರವಲ್ 'ನೆರವಲ್' ನೋ.

ನಿರವಶೇಷ (ಗು). ೧. ಶೇಷವಿಲ್ಲದ; ಉಳಿಯದ: ನಿರವಶೇಷ ಮೋಹೋಪಶಮೋದ್ಭೂತಯಥಾಖ್ಯಾತಚಾರಿತ್ರಸಂಪನ್ನನಂತರ್ಮುಹೂರ್ತದಿಂ ಸ್ವಸ್ಥಾನಸ್ಥಿತನಾಗಿ (ಆದಿಪು. ೬–೩೩ ಪ); ವಿನಿರ್ಜಿತ ನಿರವಶೇಷ ನೀಂಪನಾಥ ವಿಭವನುಂ . . . ಆಪ್ತ ಸ್ತಿಮಿತನಾಗರಮಹೀವಲ್ಲಭಂಗೆ (ಶಾಂತಿಪು. ೧–೭೧ ಪ). (ನಾ). ೨. ಪರಿಪೂರ್ಣತೆ: ಬೇಡರಂತೆ ಪರಿಪರಿದು ನಿರವಶೇಷದಿಂ ಕಿಡಿಸಿಯುಂ (ಪಂಚತಂ. ೨೮–೧೦). [ಸಂ.]

ನಿರವಶೇಷಂ (ಅ). ಸಂಪೂರ್ಣವಾಗಿ; ಶೇಷವಿಲ್ಲದಂತೆ: ದ್ವಿಸಪ್ತತಿ ಪ್ರಕೃತಿಗಳಂ ನಿರವಶೇಷಂ ಕಿಡಿಸಿ (ಆದಿಪು. ೧೬–೪೯ ಪ); ಪ್ರಥಮಕರಣ ಚರಣಾನುಯೋಗಂಗಳಂ ನಿರವಶೇಷಂ ಕಲ್ತೊಡಲ್ಲದೆ ಜೋಯಿಸಮಂ ಕಲಲ್ಪಾರದು (ಸುಕುಮಾ. ೩–೩೫ ಪ). [ಸಂ.]

ನಿರವಸರ (ನಾ). ಆತುರವಿಲ್ಲದಿರುವಿಕೆ; ನಿಧಾನ; ಸಾವಕಾಶ: ಲಕ್ಷ್ಮೀದೇವಮ್ಮನವರು ಭಕ್ತಿಯಿಂದ ಸಾಂಗವಾಗಿ ಶಾಸ್ತ್ರೋಕ್ತವಾಗಿ ಪೂಜೆಯನ್ನು ನಿರವಸರವಾಗಿ ಮಾಡಿದರು (ಇಬಮು. ೬೬). [ಸಂ.]

ನಿರವಸ್ಥ (ನಾ). ಬಾಲ್ಯ, ಕೌಮಾರ, ಯೌವನ, ವಾರ್ಧಕಗಳೆಂಬ ಅವಸ್ಥೆಗಳಿಲ್ಲದವನು: ಸ್ವಸ್ಥ ತುರೀಯಾತೀತಾವಸ್ಥೆಯನೊಳಕೊಂಡು ತೊಳಪ ಶೃಂಗಾಟಕಪದ್ಮಸ್ಥಿತನೊಳನಘನೊಳ್ ನಿರವಸ್ಥನೊಳೊಡವೆರೆದು (ಶಬಶಂ. ೨–೧೦೩). [ಸಂ.]

ನಿರವಾಣಿ (ನಾ). ಬುದ್ಧ: ನೀರ ಪೊಕ್ಕನು ಗಿರಿಯ ನೆಗಹಿ ಧರಣಿಯ ತಂದು ನರಮೃಗ ಬಲಿಬಂಧ ಕೊರಳುಗೊಯಿಕ ಶರ ಮುಜಿಬಿದೊರಳೆಳೆದು ನಿರವಾಣಿ ಹಯ ಹತ್ತಿ ಪುರಂದರವಿಠಲ ಮನೆಗೆ ತಾ ಬಂದ (ಪುರಂದ. ೧–೪೫–೩). [<ಸಂ. ನಿರ್ವಾಣನ್]

ನಿರವಿಸು (ಕ್ರಿ). ೧. ಹೇಳು; ನುಡಿ: ಆಡವಿಯೊಳಿರುವೆದು ಬಳೆದ ಹುಲುಗಿಳಿ . . . ನಾಮಿತ್ತ ಕುಡುಮಕಂ ತೊಜೆದಿಹುದಚ್ಚರಿಯೆಂದೆನು ತುಡುಪಾನನೆ ನಿರವಿಸಲು (ಜಯಕಾ. ೨–೨೪) ; ನರಕದ ಸಗ್ಗದ ಸಂಜ್ಞೆಯೆಂದುರುತರಪಾಪಂಗಳಧಿಕಪುಣ್ಯದ ಫಲಮೇ ಸರಿಯೆಂದು ಬಲ್ಲರೆಂದುಂ ನಿರವಿಸುಗುಂ (ವಿಷ್ಣು. ೨–೧–೨೧೬) ; ಸೆರೆವಿಗಿವ ಕೊರಲುಮುಣ್ಮುವ ನವಿರುಮೊದಿರವಂ ನಿರೂಪಿಸಿ ಆಯಿಂಗಿತಂಗಳಿಂ ಮಾನಸಾರಾಧನದೊಳ್ನೆವರಮಾದುದೀ ನೀತಿಗಳಾಗುತಿರ್ಪುದೀಯಂಶಮೆಂಬುದಂ ಸಂಶಯವಿಲ್ಲದೆ ನಿರವಿಸಿದಂ (ಚಕವಂ. ೯೫–೨) ; 'ನೀನು ದುಃಖಮುಂ ನೀಗಿ ನಿನ್ನ ಸಹಜಾತರೊಡಗೂಡಿ ಸಂತಸದೋರ್ಪುದಂ ಕಂಡೆವು ಎಂದು ನಾರದಮುನೀಶ್ವರಂ ನಿರವಿಸಲಾಗಿ (ಭಾರಶಾಂ. ೧–೩) ; ಪ್ರಳಯಾಂಬುಧಿಯೊಳ್ ಪವಡಿಸಿದಳಮಯ ತೇಜನಂತಿದೆಂದು ನಿರವಿಸಿ ತಿಳಿದಾ ಪಟಿಯರ್ ಪಟುನುಡಿಯಿಂ ಗೋನಳಗುವರನ ಕವಡುನಿದ್ದೆಯಂ ಪುಸಿಗೆಯ್ದರ್ (ಗೀತಗೋ. ೪–೧೯). ೨. ವಿವರವಾಗಿ ನಿರೂಪಿಸು; ವಿವರಿಸು: ಅತ್ಮೀಯ ಪರಿ[ಜನನುಂ] ಪೆಸರ್ವೆಸರೊಳ್ ಕರೆದು ನಿರವಿಸಿ ಪೆಸಸಿದಾಗಳ್ (ವರ್ಧಮಾ. ೧೧–೫೨ ಪ) ; ಕಂತು . . . ಬಂದಿರದೆ ಪೊಣರ್ಚಿ ಸೋಲ್ತು ವಿಜಯಧ್ವಜಮುಂ ತೆಱೆದತ್ತು ಪೋದುದಂ ನಿರವಿಸ ಪುಷ್ಪದಂತಮಳರಧ್ವಜನೀಗೆ ಮನೋನುರಾಗಮುಂ (ಪುಷ್ಪಪು. ೧–೧೨) ; ನಿರವಿಸಿದ ತನ್ನಮಲಗುರುವಿಗೆ ಯೋಗದುಪಕ್ರಮವ (ಸಂಭಪ. ೩೦೪ ಪರಿ ೧) ; ಇತ್ತಲರಸಂ ನರಂಗಾಮಂತ್ರಮುಂ ನಿರವಿಸಿ ಕಳುಪಲೊಡಂ (ಚಬಪು. ೫೩–೫) ; ಹರ್ಷಚಿತ್ತರಾದಾತವಸಿಗಳುಂ ವರ್ಣಾಶ್ರಮಧರ್ಮಂಗಳಂ ರಾಳ್ಪವಂಗೆ ನಿರವಿಸುತುಮಿರ್ದರ್ (ರಾಮಾಶ್ವ. ೧೩–೧೪) ; 'ಸಾಹಿತ್ಯೋದಯ'ದ ಪ್ರಕರಣದಲ್ಲಿ . . . 'ಕವಿರಾಜಮಾರ್ಗ'ದ ವರೆಗೆ ನಿರ್ಮಾಣವಾಗಿರಬಹುದಾದ ಸಾಹಿತ್ಯವನ್ನು ಕುರಿತು ನಿರವಿಸಲಾಗಿದೆ (ಕಸಾಚ. ೪೫). ೩. ಹೇಳಿಕೊಳ್ಳು; ಬಿನ್ನವಿಸು; ಬಿನ್ನಹ ಮಾಡು: ನುರದಡಿಯಲ್ಲಿ ದೇವರಿಬ್ಬಿಯಂ ಶುಕನಾಸ ತನೂಜವಾರ್ತೆಯಂ ನಿರವಿಸಿದಪ್ಪೆವು (ಕಾಡಂಬು. ೪೩೭) ; ಮೇಣುಂ ಮೇಣುಂ ದೇವರಡಿಯೊಳ್ ಪೊರಳ್ದು ತನ್ನ ಬನ್ನವುಂ ನಿರವಿಪುದುಂ (ರಾಮಾಶ್ವ. ೧೪೭–೭). ೪. ಕೇಳು; ಪ್ರಶ್ನಿಸು: ಕೊಳರ್ವಕ್ಕಿಗಳ ಕಳಕಳಕ್ಕೆ ಬೆರ್ಚಿದಂತೆಚ್ಚತ್ತು ಬೆಳ್ಕಸಂಬಟ್ಟೆದೇನೆಂದು ನಿರವಿಸಿ (ಅರ್ಧನೇ. ೬–೧೪ ಪ). ೫. ಕೊಡು; ಒಪ್ಪಿಸು: ತರಳಕೆಯೆಂಬ ನಮ್ಮ ಮಜ್ಜುವುಲ್ಲೆಯನೊಂದು ತಪೋವನಕ್ಕೆ ನೀಂ ನಿರವಿಸು ಪಂಜರಾಂತರದ ಕನ್ನಡವಕ್ಕಿಯನೊಂದು ಬಂದ ಮಾಮರದೊಳೆ ಸಾಱುರ್ (ಕಾದಂಬು. ೫೯೪). ೬. ಅಪ್ಪಣೆ ಮಾಡು; ಆಜ್ಞಾಪಿಸು: ನೀಂ ನೆಱಿಯೆ ತನ್ನೆಡೆಗೆ ಬರ್ಪುದೆಂದಂದು ನಿರವಿಸಿದನದಱಿಂದೆಮಗೆ ಕಾತೀಪ್ರಯಾಣಮಾವಶ್ಯಕಂ (ಪದ್ಮರಾ. ೩–೧೦) ; 'ನೀನಿಳೆಯೊಳಾದರದಿನವತರಿಸಿ ಸರ್ವಮುಂಕ್ತರಪ್ಪಂತೆ ಪಿರಿದಿವಿಸುವೆನ್ನ ಭಕ್ತಿಯನುಂಟುಮಾಡು ಪೋಗೆಂದು ನಿರವಿಸಲು (ಪಾಸೋಪು. ೧–೬೧). ೭. ನೇಮಿಸು; ನೇಮಕ ಮಾಡು: ಜೀವಯಾನಿಯನಾ ಬೃಹಸ್ಪತಿಗೆ ಒಲಿದು ನಿರವಿಸಿ ತಾನು ರಾಕ್ಷಸತಿಲಕಪವಸರ ಹಾಟುತಿರ್ದನು (ಸಂಭಪ. ೫–೭೯) ; ಇವರನರಮನೆಯೊಳಗೆ ಕನ್ಯಾಧವನ ಮಧ್ಯದೊಳಿರಿಸಿ ಬಳಿಕನೊಳವರ ಪರಿಚರ್ಯಕ್ಕೆ ನಿರವಿಸಿದಾ ಸುಭದ್ರೆಯನು . . . ಪೆಸಸಿದುದ ಮಾಡುವುದೆಂದು ನೇಮಿಸಿದ (ಸಂಭಪ. ೩೬–೬೭) ; ಭಟರನು ನಿರವಿಸಿದನಜುದಜಿಸಿ ಬರಲು ವಿದೇಹನಂದನೆಯ (ತೊರರಾ. ೪–೪–೧೨) ; ಪಿರಿದು ಕಿಱುದಂಗಳ ಭೇದವನೆಣಿಸದೆ ನಿರವಿಸಿದುದನೆಸಗುವುದು (ಹದಿಬ. ೩–೩೩). ೮. ಹತೋಟಿಯಲ್ಲಿರಿಸು; ನಿಯಂತ್ರಣ ಮಾಡು: ಇರದಳುರ್ದಾವಗಂ ಬಿಡದೆ ಕೋಪಿಸುತಿರ್ದಪುದೆನ್ನ ಜನ್ಮವುಂದಿರಮನಿಪಬ್ಧಿಗರ್ಭಮನೆನುತ್ತಮೆ ತಾಂ ಮುಳಿದೌರ್ವಹ್ನಿಯಂ ನಿರವಿಪೊಡಾರ್ಪಿನಿಂದಮೊಳಪೊಕ್ಕಪನೆಂಬವೊಲಾಗಳಸ್ತ್ರಭೂಧರಮನೆ ಬಿಟ್ಟು ಪಶ್ಚಿಮಪಯೋನಿಧಿಗಂದಿಟ್ಟುದಂ ಸುಧಾಕರಂ (ಕುಸುಪಾ. ೧೧–೭೭ ; ಶಾಂತೀಶ್ವ. ೧೧–೪೯ ನೋ); ಜಗವ ನಿರವಿಸಿದ ಕೈಯೊಂದಾ ದೊಡೇಕಂತು ಬಗೆಬಗೆಯ ಜೀವಗತಿ ? (ಮುಂಕುಪ. ೬). ೯. ಪರೀಕ್ಷಿಸು; ವಿಚಾರವಮಾಡು: ಇಂತಿರ್ದಿರವಂ ನಿರವಿಸಿ ಕಲಾಧರಂ ಮನದೊಳ್ . . . ಆ ಸೊಗಸಂ ನೋಡಿ ಕದುಬುತ್ತೆ (ಚಕವಿ. ೬–೨೦೯ ಪ).

೧೦. ನೋಡು; ಕಾಣು: ಸನ್ನಿದಮಾದ ಯದೂದ್ವಹನನ್ನಿರವಿಸಿ ಮಣಿದು ಪೊಗಟ್ಟು ಪೊಡೆಮಡುವಿನೆಗಂ (ಚಿಕವಿ. ೩-೬೬); ಈ ಮಂತ್ರಮನುಚ್ಚರಿಸುತ್ತೆ ಮುಚ್ಚಿದ ಕಣ್ ಚಂದ್ರಕರಸ್ಪರ್ಶದಿಂದೆ ತಿಳಿತಳಮಪ್ಪುದುಂ ತೆಱೆದು ನಿರವಿಸೆಂದವಳನಲ್ಲಿರಿಸಿ . . . ಪೋಪನಿತಱೊಳ್ (ಚಿಕವಿ. ೬-೨೦೫ ಪ). ೧೧. ನಿರ್ಧಾರಮಾಡು; ನಿರ್ಧರಿಸು; ನಿಶ್ಚಯಿಸು: ಹರಿಸಂಕೀರ್ತನಮೊಂದೇ ಪರಗತಿಗನುಕೂಲಮೆಂದು ನಿರವಿಸಿ ನೆಗಟ್ಟಿಂ (ಗೀತಗೋ. ೧-೯). ೧೨. ಉಂಟುಮಾಡು; ಆಗಿಸು: ನಿರವಿಸಿ ನಾಡ ನೇರ್ಪ ನಿಜಮುದ್ರೆಯನೇಱಿಸಿ ಶಾಸನಂಗಳಂ ಬರಸಿ ಬುಧರ್ಗೆ ಬಿತ್ತರಿಸಿದಂ ಜಸಮಂ ಯುವರಾಜಚಂದ್ರಮಂ (ಕಾದಂಪೂ. ೬೧೩); ಶಂಭು ಜಯಮಂ ಕುಡೆ ಭಾರತಿ ಬಲ್ಮೆಯೆಲ್ಲಮಂ ನಿರವಿಸೆ ಮಂತ್ರಿ ಬಲ್ಲುಗಿಗೆ ಪುಟ್ಟಿದನೀ ನರಸಿಂಹನಳ್ಕಱಿಂ (ಸೌಇಇ. IX-1, ೩೪೩-೧೬; 1226); ಆಗಳ್ಮಾಯಾನಿದ್ರೆಯಂ ನಿರವಿಸಿ ನಿದ್ರಾಮುದ್ರಿತನೇತ್ರಶತಪತ್ರೆಯಾಗಿರ್ದೈರಾದೇವಿಯ ಮುಂದೆ ಮಾಯಾರ್ಭಕನನಿರಿಸಿ (ಶಾಂತೀಶ್ವ. ೧೪-೫೯ ಪ). ೧೩. ಇಡು; ಇರಿಸು: ಸುರಭಿಶರಂಗಳಂ ನಯನದೊಳ್ ಕುಡುವುರ್ವಿನೊಳಿಕ್ಷುಚಾಪಮಂ ಪರಿಚಿತಮೀನಕೇತನಮನಾವಗಮೊಪ್ಪುವ ಕೇಶಹಸ್ತದೊಳ್ ನಿರವಿಸಿ ಬಯ್ತು ಮೆಯ್ಗರೆದು ಶೂಲಧರಂಗಿದಿರ್ವರ್ಪನಲ್ಲಿ ಪೆಂಡಿರ ಮಱೆಯೊಳ್ ಮನೋಜನೆನೆ ಚೆಲ್ವೆಸೆವರ್ ಕಡುಗಾಡಿಕಾರ್ತಿಯರ್ (ಕಾಪ್ಯಾವ. ೯೧೩); ಆ ಸೌಧರ್ಮೇಂದ್ರಂ . . . ಆಗಸದಿನಿಱಿದು ತದೀಯ ವಿಶಾಳಶಾಳಾಬಹಿರ್ಭಾಗದೊಳ್ಸಕಳಸುರಸೇನೆಯಂ ನಿರವಿಸಿ (ಶಾಂತೀಶ್ವ. ೧೪-೫೪ ಪ); ವಜ್ರಮಯಕೇಯೂರಮಂ ಬಾಹುಯುಗಳದೊಳ್ ನಿರವಿಸಿಯುಂ (ತ್ರಿಪುವಿ. ೧೮-೪೯ ಪ). ೧೪. ಸೂಚಿಸು; ತಿಳಿಸು: ನಿರವಿಸಿದುದಸೇವ್ಯತೆಯಂ ಸೊರೆ ಭಸ್ಮ ಸ್ವಪದವೃತ್ತಿಯಂ ದಂಡು ವಿನಿಷ್ಠುರ ದಂಡಧರತೆಯಂ ತಾಂ ಧರಿಯಿಸೆ ರೌದ್ರಾಕ್ಷನೆಂಬುದಂ ರುದ್ರಾಕ್ಷಂ (ಶಬ್ದಾನು. ೧೨೧ ಪ್ರಯೋ). ೧೫. ಲಕ್ಷಿಸು; ಗಮನಿಸು: ಅಂತು ಸುತ್ತಲುಮಿರ್ದ ಲತೆ ಚೂತಲತೆ ಲಲಿತ ಸಖೀನಿಕರಮೆ ಬೆಸಗೆಯ್ವಂತಿರ್ದ ಲೀಲಾವತೀಲತೆಯ ಕಣ್ಣೆಳದುವರಿಯೆ ಕಂಡು ಮನಮೆಳದುವರಿಯೆ ನಿರವಿಸಿ (ಲೀಲಾವ. ೧೪-೯೧ ಪ). ೧೬. ಕಾಯು; ನಿರೀಕ್ಷಿಸು (?): ನಿರವಿಸಿ ನಿರವಿಸಿ ನಿಂದೆಡೆಯೊಳು ಜಾವವರಿಗೆ ನಿಲುತ ತರುಣಿಯರು ಚರಣ ಬಳಲ್ವವು ಸ್ವಾಮಿ ಪರಾಕೆನಲೆರಗಿ ಕಾಣಿಕೆಯನಿಕ್ಕಿದನು (ಗೂಮ್ಮಚ. ೬-೮೫). [<ನಿರೂಪಿಸು]

ನಿರಶನ (ನಾ). ಆಹಾರವಿಲ್ಲದಿರುವುದು; ಉಪವಾಸ: ತೆರಳುವುದು ನೀವಜಿಸುವುದು ನಿಮ್ಮರಸ ನೇಮಿಸಿದಂದದಲಿ ತಾ ನಿರಶನವ ಕೈಕೊಂಡವನು ನೀವ್ ಬಿಜಯ ಮಾಡೆಂದ (ತೊರರಾ. ೪-೧೧-೯); ಸಲ್ಲದು, ದೇವಿ, ಶಠವರ್ತನಂ ನಿನ್ನಾರ್ಯಸಂಸ್ಕೃತಿಗೆ; ಮೇಣಾತ್ಮಹತ್ಯೆಯಿಾ ನಿರಶನಂ (ತ್ರೀರಾಮಾ. ೩೨೪-೧೫೨). 'ನಿರಶನವ್ರತ' ಪರಾ. [ಸಂ.]

ನಿರಶನಮರಣ (ನಾ). ಉಪವಾಸ ಮಾಡಿ ಅವಸಾನ ಹೊಂದುವುದು,—ನಿಧನ ಹೊಂದುವುದು: ಮಾನನಿಧಿಯೇ ವಿವಿಧಗರಳವಿತಾನವನು ತರಿಸುವೆನು ನಿಶ್ಚಯವೇನು ನಿರಶನಮರಣವೇಕೆಂದಳು ಸರೋಜಮುಖಿ (ಕುಪ್ಯಾಅ. ೨೧-೧೮).

[ನಿರಶನ + ಮರಣ]

ನಿರಶನವ್ರತ (ನಾ). ಉಪವಾಸ ವ್ರತ: ನಿರಶನವ್ರತವೆಂದು ಮಂತ್ರೋಚ್ಚರಿತಸಂಕಲ್ಪದಲಿ ಕೌರವರರಸ ಪವಡಿಸಿದನು ಕೃತಪ್ರಾಯೋಪವೇಶದಲಿ (ಕುಪ್ಯಾಅ. ೨೧-೧೬). [ನಿರಶನ+ವ್ರತ]

ನಿರಶನಸತ್ಯಾಗ್ರಹ (ನಾ). ಉಪವಾಸಮುಷ್ಕರ: ಗೋಕಾಕ್ ವರದಿಯು ಜಾರಿಗೆ ಬರಲು ಕನ್ನಡ ಸಾಹಿತಿಗಳು ನಿರಶನಸತ್ಯಾಗ್ರಹವನ್ನು ಆಚರಿಸಿದರು (ಪೂಡಿ). [ನಿರಶನ + ಸತ್ಯಾಗ್ರಹ]

ನಿರಸ (ಗು). ೧. ಒಣಗಿದ; ಶುಷ್ಕವಾದ; ರಸವಿಲ್ಲದ; ನೀರಸವಾದ: "ನಿರಸ—ನೀರಸ = ಶುಷ್ಕ" (ತದ್ಭಕೋ. ೨೨); ನಿರಸಮುಖದಲಿ ಕರವನೆತ್ತಲು (ನಾಗಷ. ೯-೬೬). (ನಾ). ೨. ನೀರಸತೆ; ನಿಸ್ಸಾರತೆ: ಅಲ್ಲಮಪ್ರಭುರಾಯನಾನತರೆಲ್ಲರನು ಸಂಸಾರ ನಿರಸ [ಪಾಠಾಂ. ವಿಷಯ]ದ ಕಲ್ಲ ಕಾಱುವ ಕೋಟಲೆಯ ಮಾಣಿಸಿ . . . ಬರುತಿರ್ದನು ವಿನೋದದಲಿ (ಪ್ರಭುಲೀ. ೧೨-೨). ೩. ಗೌಣವಾದುದು; ಹೀನವಾದುದು: ಸರಸ ವಿರಸವಾಗಿ ಮೌನ ನಿರಸವಾಗಿ ಒಗಟೆಯಾಗುವ ಬಾಳು ಒಡೆಯದಿದೆ (ಸಖೀಗೀ. ೪೦-೮೧೧). [ಸಂ.]

ನಿರಸನ (ನಾ). ೧. ಹೊರದೂಡುವುದು; ದಬ್ಬುವುದು; ಅಟ್ಟುವುದು: "ಅಪಾಕರಣಂ ನಿರಸನಂ" (ಪಸ್ತುಕೋ. ೧೧೫-೨೪); ಬಳಿಯೊಳಿದೆ ಕಿಷ್ಕಿಂಧೆ, ವಾನರ ರಾಜಧಾನಿ. ವಾಲಿಯದನಾಳ್ವನವನಿಂದೆ ನಿರಸನವೊಂದಿ ನೆಲೆಗೆಟ್ಟ ಸುಗ್ರೀವನಿಹನೈ (ತ್ರೀರಾಮಾ. ೨೭೭-೩೭೦). ೨. ಧ್ವಂಸ; ನಾಶ: ದೇವಕಿ ಪಡೆದಮಳ್ಳಳನಾ ಕಂಸಂ ನಿಸ್ತ್ರಿಂಶತೆಯಿಂ ನಿರಸನಮನೆಯ್ದಿಸಿ ಋಷಿವಚನಮಂ ಪುಸಿ ಮಾಡಿದಂ (ನೇಮಿಪು. ೬-೬೪ ಪ); ಮರೆ ಹುಲಿ . . . ಎಯ್ಯಮೃಗಂ ಕಡುಕೊರ್ದಿ ಕಾನನಾಂತರದ ಕುಟೀರವಂ ಬೆಳೆದ ಕೆಯ್ಗಳನಂತಿರಲೀಯವಂತವಂ ನಿರಸನವೈದಿಸಲ್ ನೆಱೆವ ಬೇಂಟೆಗೆ ಕಾಲಮಿದು (ನಳಚಂ. ೬೫). ೩. ಹತ್ಯೆ; ಕೊಲೆ: "ಮಾರಣಂ, ನಿಶರಣಂ, ನಿಬರ್ಹಣಂ, ಸೂದನಂ, ನಿರಸನಂ . . . ಸಂಜ್ಞಪನಂ—ಈ ೨೧ ಕೊಲೆ" (ಹಲಾಯು. ೭೮-೩೨೩); "ವಿಶಸನಂ . . . ನಿರಸನಂ ಕ್ರಥನಂ ಪ್ರಮಾಪಣಂ ಕೊಲೆಗೆ ನಾಮಂ" (ಮಂಗರಾ. ೮೮-೩೯). ೪. ತಿರಸ್ಕಾರ; ಹೀಯಾಳಿಸುವಿಕೆ; ಧಿಕ್ಕಾರ: ಅಯ್ಯಾ ಸದಾಚಾರವೆಂದಡೆ ಚಿದ್ಘನಮಹಾಲಿಂಗಧ್ಯಾನಪರಧ್ರವ್ಯನಿರಸನ (ಮಡಿಮಾ. ೨೩-೩೨); ನಿರಸನಭಾಸವೃತ್ತಿ ಬಹುದೋಷ ಕುಸಂಧಿಯ ಮಾರ್ಗ . . . ಎನಿಪ್ಪುದಾ ಕುಕವಿ ಕಾವ್ಯದವೊಲ್ ಕಲಿಕಾಲಮಾವಗಂ (ದಶಾವ. ೧೧-೨೪). ೫. ನಿಗ್ರಹ; ಹತೋಟಿ. 'ನಿರಸನೇಂದ್ರಿಯ' ಪರಾ. ೬. ಪರಿಹಾರ; ಇಲ್ಲವಾಗುವುದು; ನಿವಾರಣೆ: ಅರ್ಜುನನಿಗೆ ಈ ಭ್ರಮೆಯ ನಿರಸನವೂ ಆಗುತ್ತದೆ (ಬಿದುರೆ. ೬); ಅವನ ಭ್ರಮೆ ನಿರಸನವಾದುದನ್ನು ನೋಡಿ ವಿದ್ಯಾರಣ್ಯರು ಹೇಳಿದರು (ರಾಜ್ಯೋದ. ೧೮೩). 'ಭ್ರಮನಿರಸನ' ಪರಾ. ೭. ಕೊನೆ; ಅಂತ್ಯ; ಮುಕ್ತಾಯ: ಕೂಡೆ ಮನೆಮನೆಯೊಳೊಯ್ಯನೆ ಬಾಡಿದುದೊಡನೊಡನೆ ಮಿಥುನತತಿಯಿರುಳೊಲವಿಂ ಸೂಡಿದ ಪೂಮಾಲೆಗಳುಂ ಮಾಡಿದ ಸೊಡರ್ಗುಡಿಗಳುಂ ನಿಶಾನಿರಸನದೊಳ್ (ಚಂದ್ರಪು. ೮-೯೮). [ಸಂ.]

ನಿರಸನಗೊಳ್ಳು (ಕ್ರಿ). ನಿವಾರಣೆಯಾಗು; ಪರಿಹಾರವಾಗು: ನೀರ ಗುಳ್ಳೆಯಂತೆ ಇವರ ಭ್ರಮೆ, ಇವರ ತಪ್ಪುಕಲ್ಪನೆಗಳು ಕ್ರಮೇಣ ನಿರಸನಗೊಂಡುವು (ದ್ರಾವಿವಿ. ೧೯ ಹಿನ್ನೆಲೆ).

[ನಿರಸನ + ಕೊಳ್ಳು (<ಕೊಳ್ಳ್)]

ನಿರಸನಿ (ನಾ). ಧಿಕ್ಕರಿಸುವವನು; ತಿರಸ್ಕಾರವುಳ್ಳವನು: "ಶಾ"ನ ನಾಟಕಗಳೆಂದರೆ ನಿಮಗೆ ತುಂಬ ಪ್ರೀತಿಯೇನು? ನನಗೂ ಅಷ್ಟೆ. ಆದರೆ . . . ಅದೆಲ್ಲ ಜೊಳ್ಳು. ಅದು ಬರೇ ನಗಲು ಬಲ್ಲ ಆ ನಿರಸನಿಯ ಬರವಣಿಗೆಯ ಧಾಟಿಗಾಗಿ (ಪಾತ್ಸಲ್ಯ. ೧೮೯). [←ಮರಾ. ನಿರಸನೀ]

ನಿರಸನೆ (ನಾ). = ನಿರಸನ ೬: ಮುರಾರಿ ಅಡ್ಡತಿಡ್ಡ ಪ್ರಶ್ನೆ ಮಾಡಿ, ತನ್ನ ಶಂಕೆಗಳು ಪೂರ್ಣ ನಿರಸನೆಯಾಗುವಂತೆ ಮಾಡುತ್ತಲಿದ್ದನು (ಕೃತಕೈ. ೧೮).

[ಸಂ. ನಿರಸನ]

ನಿರಸನೇಂದ್ರಿಯ (ನಾ). ಇಂದ್ರಿಯಗಳನ್ನು ನಿಗ್ರಹಿಸಿದವನು: ನಿರವಮಾನ ನಿರಜ್ಞ ನಿಶ್ಚಲ ನಿರಸನೇಂದ್ರಿಯ ನಿರ್ವಿಷಯ . . . ನಿರ್ವಿಕಾರಾಕಾರಾ ಚಿತ್ತೈಸು (ಬಸಪು. ೬೧-೪[illegible]) [ನಿರಸನ + ಇಂದ್ರಿಯ]

ನಿರಸಲ (ನಾ). ಒಂದು ಬಗೆಯ ಮರ: ನಿರಸಲ ತೊಪ್ಪಲ, ಹುಲಗಲಿ ತೊಪ್ಪಲ, ಹೊನ್ನಾವರಿ ತೊಪ್ಪಲ ಮುಂತಾದ ಬಯಲುಪನದಲ್ಲಿದ್ದ ಕಾದ ತೊಪ್ಪಲುಗಳನ್ನು ತಗ್ಗಿಗೆ ಹಾಕಿ . . . ಗೊಬ್ಬರವನ್ನು ಮಾಡಿದರೆ . . . ಹೊಲಗಳಿಗಾದರೂ ಉಪಯೋಗವಾಗುವದು (ಕೃಷಿಪ್ರ. ೪೮) ; ನಿರಸಲ–ಸುಂದರವಾದ ವೃಕ್ಷವು, ಕಟ್ಟಗೆ ಕೆಲಸಕ್ಕೆ ಬರುವುದಿಲ್ಲ. ಬೀಜಗಳ ಎಣ್ಣೆ ಔಷಧಕ್ಕೆ ಬರುತ್ತದೆ (ಕಭಾಗ. ೪೨). [?]

ನಿರಸಿತ (ನಾ). ನಿರಾಕರಣೆಗೆ ಒಳಗಾದುದು; ತೆಗೆದು ಹಾಕಿದುದು : ಈ ಸಂವಿಧಾನವು ಆರಂಭವಾಗುವುದಕ್ಕೆ ಮುಂಚಿತವಾಗಿ ತೀರ್ಣವಾಗಿದ್ದ ಅಥವಾ ರಚಿತವಾಗಿದ್ದ ಮತ್ತು ಪೂರ್ವಭಾನಿಯಾಗಿ "ನಿರಸಿತವಾಗಿಲ್ಲದಿರತಕ್ಕ ವಿಧಿಗಳು . . . ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ಜಾರಿಯಲ್ಲಿಲ್ಲದಿರಬಹುದಾಗಿದ್ದರೂ ಸೇರಿರುತ್ತವೆ (ಭಾಧಾಸ. ೭).

[<ಸಂ. ನಿರಸ್ತ]

ನಿರಸು (ನಾ). ಬಿರುಸು ; ಬಿಗಿ : ಗೋಧಿಯನ್ನು ಬಿತ್ತುವ ಹೊಲವು ಮಡಿಕಟ್ಟು ಅಥವಾ ನಿರಸಾದ ಎರಿಯಾದರೆ ಅಂಥ ಹೊಲವನ್ನು ಎರಡು ಸಾಲು ಮಡಿಕೆ ಹೊಡೆದು ಬೇಸಿಗೆಯಲ್ಲಿ ಮೂರು ಸಾಲು ಹರಗಬೇಕು (ಕೃಷಿಪ್ರ. ೮೨). [?]

ನಿರಸೂಯ (ನಾ). ಕರುಬಿಲ್ಲದವನು; ಹೊಟ್ಟೆಕಿಚ್ಚು ಇಲ್ಲದವನು: ನಿರಸೂಯ ನಿಶ್ಚಿಂತ ನಿರ್ದೋಷ . . . ನಿರಾಳ ಪಂಪಾವಿರೂಪಾಕ್ಷ ಶರಣು (ಪಚಕಾ. ೧–೪) ; ನಿರಸೂಯ ನಿರ್ವಾಣಪದ ನಿರ್ವಿಘ್ನ . . . ನಿರ್ವಿಕಾರಾಕಾರಾ ಚಿತ್ಕೃಸು (ಬಸಪು. ೬೨–೪೩) ; ನಿರ್ದೋಧಿ ನಿರಸೂಯ ನಿರ್ದೋಹಿ ನಿರ್ಮದ ನಿರಾಖ್ಯ (ಏಕೋಪು. ೬–೪೬). 'ಅನಸೂಯ' ಪರಾ. [ಸಂ.]

ನಿರಸೂಯೆ (ನಾ). ಕರುಬಿಲ್ಲದಿರುವಿಕೆ ; ಹೊಟ್ಟೆಕಿಚ್ಚು ಇಲ್ಲದಿರುವಿಕೆ : ಭರತಂ ಮಹಾತ್ಮನೆಸೆದನು ದಿವ್ಯತೇಜಸ್ವಿ . . . ಸಂಯಮದ ಸೌಂದರ್ಯದಲ್ಲಿ, ನಿರಸೂಯೆಯಲಿ (ಶ್ರೀರಾಮಾ. ೨೬–೬೫).

[ಸಂ. ನಿರಸೂಯಾ]

ನಿರಸ್ತ (ಗು). ೧. ಹೊರದೂಡಿದ ; ದೂರಗೊಳಿಸಿದ ; ನಿವಾರಿಸಿದ: ನಿರಸ್ತವಿವೇಕಂಬೊಲಿದೇಕೆ ಮೋಹಿಸಿದಪ್ಪೆ ನೀಂ (ಅಪಪು. ೧೬–೫೯) ; ಪರಹಿತಕುಲಪ್ರಸಂಗಂ ನಿರಸ್ತದೋಷಾನುಷಂಗನೆಜುವ ಬಿಡಂಗಂ (ಗದಾಯು. ೧–೨೧) ; ಇಂತು ನೆಗಟ್ಟಿ ವೆತ್ತೇಕಾದಶಸ್ಥಾನಂಗಳೊಳಾ ನಿರತಿಚಾರವ್ರತಶೀಲಸಂಪನ್ನನುಂ ನಿರಸ್ತವಿಖ್ಯಾತ್ಯನುಂ . . . ಆಗಿ (ಸುಕುಸೂ. ೬–೬೭ ಪ) ; ಸಕಳೇಳಾಪಾಳಮೌಳಾಳಿತಚಾರುಚರಣಾರವಿಂದದ್ವಂದರುಂ ನಿರಸ್ತದ್ವಂದ್ವರುಂ . . . ಅಪ್ಪ ಶ್ರೀಮತ್ಕೃಷ್ಣಚಂದ್ರತ್ರೈವಿದ್ಯಭಟ್ಟಾರಕದೇವಶ್ಚಿರಂ ಜೀಯಾತ್ (ಕಇಶ. ೯೪–೩–೧೧ ; 1124); ನಿರಸ್ತ ಜಗದಂಹಂ ದೌದ್ಧರಂಹಂ ನೃಸಿಂಹನೆನಿಪ್ಪಾಕೃತಿಯಿಂ ಹಿರಣ್ಯಕಶಿಪು ಪ್ರಧ್ವಂಸಮಂ ಮಾಡಿದೈ (ಜಗವಿ. ೧–೫೮) ; ಅಸ್ತಮಿತದುರಿತನನವಿರತ ನಿರಸ್ತದೇಹಪ್ರಾಕೃತಗುಣಸಮಸ್ತಸಂ. . .ದಂಭಿತಯಮಸಮನುದ್ದಂಡನಂ ನೋಡಿ (ಒಸಪು. ೩೯–೫೪). ೨. ಮಿಗಿದ ; ಸೋಲಿಸಿದ : ಆ ರವಮಂ ನಿರ್ಜಿತಕಂಠೀರವರವಮಂ ನಿರಸ್ತಘನರವಮಂ ಕೋಪಾರುಣನೇತ್ರಂ ಕೇಳ್ದಾ ನೀರೊಳಗಿರ್ದುಂ ಬೆಮರ್ತನುರಗಪತಾಕಂ (ಗದಾಯು. ೬–೨೨); ಕೇಳಹಿತದಿತಿಜವಲ್ಲಭಲೀಳಂ ನಿಶ್ಯಮನಿರಸ್ತಕಾಳಂ ದಿನಿಜಾಧೀಳಂ ಮಥಿತಾಖಿಳದಿಕ್ಪಾಳಂ ಶಿಶುಪಾಳನೆಂಬನೊರ್ಮಂ ದನುಜಂ (ಪಂಚತಂ. ೨೩೫–೧೫) ; ಅತಿಬಲನಪ್ಪ ಲಕ್ಷ್ಮಣಕುಮಾರನ ವೀರರಸಪ್ರವಾಹನೀಪತಿತ ಮಹಾಮಹೀರುಹಮೆನಲ್ಕತನಾದನವಂತಿವಲ್ಲಭಂ ಹತಸುಮನೋವಿಳಾಸನಪಸಾರಿತಮೂಲಬಲಂ ನಿರಸ್ತವಿಸ್ತೃತನಯನಸ್ತಸಾರಂ (ಪಂಪಾಮಾ. ೬–೬೬). (ನಾ). ೩. ಪರಿಹಾರವಾದುದು ; ನಿವಾರಣೆಯಾದುದು :"ಪ್ರ(ತ್ಯಾ) ಖ್ಯಾತಂ, ಸ್ರತಿಕ್ಷಿಪ್ತಂ. . .ನಿರಸ್ತಂ, ಅಪವಿದ್ಧಂ, ಪರಿಹೃತಂ—ಈ ೭ ಪರಿಹರಿಸಲ್ಪಟ್ಟುದು" (ಹಲಾಯು. ೧೧೭–೧೪) ; "ನಿರಸ್ತಮಪವಿದ್ಧಂ" (ಪಸ್ತುಕೋ. ೧೦೪–೩೯). ೪. ವೇಗವಾಗಿ ಉಚ್ಚಾರಣೆಯಾದುದು ; ತ್ವರಿತವಾಗಿ ಉಚ್ಚಾರಣೆ ಮಾಡಿದನುಡಿ : "ತ್ವರಿತೋಚ್ಚಾರಿತವಕ್ಕುಂ ನಿರಸ್ತವ[ದು]" (ಪಸ್ತುಕೋ. ೪೦–೩೧) ; "ಮರುಳಾಟನುದಿಯುಟ್ಟುಳಿ ನಿರಸ್ತವಕ್ಕುಂ" (ಪುಂಗರಾ. ೨೬–೨) ; ತ್ವರಿತೋಚ್ಚಾರಣೆಗೆ ಒಳಪಟ್ಟು ಎರಡು ಮೂರು ಅಕ್ಷರಗಳಿಗೆ ಒಂದೇ ಅಕ್ಷರದ ಮೌಲ್ಯ ಬಂದರೆ 'ನಿರಸ್ತ' ಎನಿಸುವುದು (ಸಂಕೋಛ. ೧೫೦). ೫. [ನಾಟ್ಯ] "ಶಬ್ದ ಮಾಡುತ್ತ ಒಂದಾವರ್ತಿ ಉಸುರು ಬಿಡುವುದು" (ಲಾಸ್ಯರಂ. ೨೬೭ ಗದ್ಯಾನುವಾದ) : ಸ್ವಸ್ಥ, ಚಲ, ಪ್ರವೃದ್ಧ, ನಿರಸ್ತ . . . ಪ್ರಸೃತ—ಈ ಒಂಬತ್ತೂ ಕೋಡಿಹನ ಮತದಂತೆ ಗಾಳಿಯ ಭೇದಂಗಳ್ (ಲಾಸ್ಯರಂ. ೩–೭೪ ಪ).

ನಿರಸ್ತಮಾನಸ್ತಂಭ = ಕೆಡೆದ ಮಾನವೆಂಬ ಸ್ತಂಭವುಳ್ಳವನು : ಎತ್ತಣದು ತನಗೀ ಮತಿಭ್ರಮೆ ಕೆತ್ತುಪಜುವಿನ ಕದವೆನುತ್ತ ನಿರಸ್ತಮಾನಸ್ತಂಭನಾದನು ನಿಮಿಷಮಾತ್ರದಲಿ (ಸಿಭಾಗ. ೧೦–೨೩–೧೫).

[ಸಂ.]

ನಿರಸ್ತವಿತ (ಗು). = ನಿರಸ್ತ ೧ : ಕೀಚಕಮಥನಂ ನಿರಸ್ತವಿತವ್ಯಂ ನಿವಹಗಜಸಿಂಹಬಲಂ (ಗದಾಯು. ೧–೫೪). [ಸಂ.]

ನಿರಸ್ತೆ (ನಾ). ಹೊರದೂಡಿಸಿಕೊಂಡವಳು ; ಪರಿತ್ಯಕ್ತೆ : ಆ ಕೋಸಲನಿರಸ್ತೆ . . . ತೊಲಗಿದಳಯೋಧ್ಯೆಯಿಂ (ಶ್ರೀರಾಮಾ. ೧೨೨–೨೬೫). [ಸಂ. ನಿರಸ್ತಾ]

ನಿರಹಂಕರ (ನಾ). = ನಿರಹಂಕಾರ ೧ : ಕರದಿ ನಿರಹಂಕರದ ಪಾತ್ರೆಯು ಧರಿಸಿಯಜರೊಳು ನಿತ್ಯತೃಪ್ತಿಯ ಭಂತ ಸಿದ್ಧರಸಾನ್ನವತ ಸೇವಿಸುತ (ಗಗತಾ. ೧೬–೫೧). [<ನಿರಹಂಕಾರ]

ನಿರಹಂಕರಣ (ಗು). ಅಹಂಕಾರವಿಲ್ಲದ ; ಹೆಮ್ಮೆಯಿಲ್ಲದ : ಈ ಯುದಾರತೆಯೊ ಸರಸಪಾಂಡಿತ್ಯವೀ ನಿರಹಂಕರಣ ಭಕ್ತಿ . . . ಅರಿಗುಂಟು (ಒಸಪು.೨–೩೧) ; ಅಹಂಕರಿಸಿದ ಸುರಾವಳಿಗಂತಕಂ ನಿರಹಂಕರಣ ಶರಣಾಂತರಂಗನು ಸಕಳಜಗದುದ್ಧರಣಕಾರಣನು (ಬಸಪು. ೫೪–೫೪).

[ಸಂ.]

ನಿರಹಂಕಾರ (ನಾ). ೧. ಗರ್ವ, ಹಮ್ಮು-ಬಿಮ್ಮುಗಳಲ್ಲದಿರುವಿಕೆ ; ನಿಗರ್ವತೆ ; ವಿನಯ : ತನುವಿನಲ್ಲಿ ನಿರ್ಮೋಹ ಮನದಲ್ಲಿ ನಿರಹಂಕಾರ ಪ್ರಾಣದಲ್ಲಿ ನಿರ್ಭಯ . . . ಜ್ಞಾನದಲ್ಲಿ ಪರಮಾನಂದವೆಡೆಗೊಂಡ ಬಳಿಕ ಸೌರಾಷ್ಟ್ರ ಸೋಮೇಶ್ವರಲಿಂಗವು ಬೇಜುಲ್ಲ ಕಾಣಿರೊ (ಅಡನ. ೨೦–೪೮) ; ಹರಿ ನಗುತೆ ಬಕುತನ ಮನದ ನಿರಹಂಕಾರ ಭಕ್ತಿಯು ನೆನೆನೆನೆದು ಪುಳಕಿಸುತೆ ಕೈವಿಡಿದಿತ್ತಿ (ಅಕ್ರೂಚ. ೪–೪೪) ; ನಿರಹಂಕಾರಮೆನಿಪ್ಪ ಬಲ್ಲುರಗಿಯಿಂ ಪೋಳ್ದುನ್ಮದೋದ್ರೇಕಸೂಕರಮಂ (ಸ್ಯಸವಿ. ೨೨–೪೪). ೨. ಅಹಂಕಾರವಿಲ್ಲದವನು : ನಿರ್ಗಹಂಕಾರ ನಿರ್ಮಳ ನಿರಾಳ ಪಂಪಾವಿರೂಪಾಕ್ಷ ಶರಣು (ಪಚಕಾ. ೧–೪) ; ನಿರಹಂಕಾರ ನಿರವಯ ನಿರಾಸಕ್ತ ಪುರಹರನೆ (ಸೋಪುಚ. ೧–೫). [ಸಂ.]

ನಿರಹಂಕಾರಿ (ನಾ). ಅಹಂಕಾರವಿಲ್ಲದವನು ; ನಿಗರ್ವಿ : ನಿರಹಂಕಾರಿ ನಿರ್ಮಮಕಾರಿ ನೀಪ್ರಪಂಚಿ ನಿರ್ದೋಷಕನಯ್ಯ (ಸಿದ್ಧೇಪ. ೧೫೫–೪೬). [ಸಂ. ನಿರಹಂಕಾರಿನ್]

ನಿರಹಂಕಾರಿ (ನಾ). ಅಹಂಕಾರವಿಲ್ಲದವಳು : ನಿರುಪಮೆ ನಿರಾವರಣೆ ನಿರಜೆ ನಿರಹಂಕಾರಿ (ಏಕೋಪು. ೧–೯).

[ಸಂ. ನಿರಹಂಕಾರಾ]

ನಿರಹಂಕೃತ (ಗು). ಸ್ವಾರ್ಥರಹಿತವಾದ ; ಸೊಕ್ಕಿಲ್ಲದ. [ಸಂ.]

ನಿರಹಂತೆ (ನಾ). = ನಿರಹಂಕಾರ ೧ : ಮನದ ನಿರಹಂತೆಯಱಿದ ಭಯವೀವುತ ಸಲಹಲನುಗ್ಗೆದು ನಿಜಮೂರ್ತಿಯಂ ತೋಱಿದನ ವಿಮಲ ಚರಣಾಂಬುಜಕ್ಕೆ ಶರಣು (ಲಶಿಚಂ. ೪-೭೧) ; ಮರೆಯುವನು ತಾನೆಂಬುದನೆ ಮಹಾವೇಶದಲಿ ನಿರಹಂತೆಯದು ಮೋಕ್ಷ (ಮಂಕುಕ. ೬೯೬). 'ಅಹಂತೆ' ಪರಾ. [ಸಂ. ನಿರಹಂತಾ]

ನಿರಹಂಭಾವ (ನಾ). = ನಿರಹಂಕಾರ ೧ : ನಿರಹಂಭಾವದಲ್ಲಿ ನಾನಿದ್ದೆನಯ್ಯ ನೋಡಿಹೆನೆಂದರೆ ನೋಡಲಿಲ್ಲ ಕೇಳಿಹೆನೆಂದರೆ ಕೇಳಲಿಲ್ಲ ಘನ ನಿರಂಜನದ ಬೆಳಗಿಂಬಾದುದು (ಅವಚಂ. ೧೫೧-೬೯). [ಸಂ.]

ನಿರಹಮ್ಮು (ನಾ). = ನಿರಹಂಕಾರ ೧ : ನಿಮ್ಮ ಮಾಡಿದವಜ್ಞೆಯನು ನಿರಹಮ್ಮಿನಲಿ ರಂಜಿಸುವ ವಿಮಲ ಬ್ರಹ್ಮರೂಪನು ಬಗೆಯಲಱಿವನೆ ಭೃತ್ಯವರ್ಗದಲಿ (ನಿಭಾಗ. ೧-೫-೪೦) ; ಗುರುಭಕ್ತಿ ನಿರಹಮ್ಮು ನಿರಪೇಕ್ಷೆ ಸ್ಥೈರಣೆ ಕರಣಾನುಕೂಲತೆ ಪರಿಣಾಮ (ಪರಮೇ. ೬-೩-೩).

[ನಿರ್+ಅಹಮ್ಮು]

ನಿರಳಂಕಾರ 'ನಿರಲಂಕಾರ' ನೋ.

ನಿರಳಂಕೃತಿ (ನಾ). = ನಿರಲಂಕಾರ : ನಿರಳಂಕೃತಿವನಿತೆ ಮನೋಹರೆಯೆನಿಸದ ತೆಱದೆ ಸರಸಕೃತಿಯುಚಿತಾಳಂಕರಣದಿನಪಗತಮಾಗುತ್ತಿರೆ ಚಡುರರ ಸರಸಹೃದಯಮಂ ಮಚ್ಚಿಕುಮೇ (ಪಾರ್ಶ್ವಪು. ೧-೭೪).

[ಸಂ. ನಿರಲಂಕೃತಿ]

ನಿರಳವ್ಯಾಧಿ (ನಾ). ಒಂದು ಬಗೆಯ ರೋಗ (?) : ಅವರಿಕೆ ಬೇರಿನ ಪಟ್ಟೆಯಂ ಅವರಿಕೆ ಕೊನೆಯನು ಸಹ ೬೦ ಗಳಿಗೆ ಮೊಸರಿಂದರೆದು ಗುಳಿಗೆಯಂ ಕಟ್ಟಿ ಸೇವಿಸೆ ನಿರಳವ್ಯಾಧಿ ಮಾಣುವುದು (ಸಕವೈ. ೩೯೧).

[ನಿರಳ ?+ವ್ಯಾಧಿ]

ನಿರಾಕ$_1$ (ನಾ). ಬೆವರು ; ಸ್ವೇದ. [ಸಂ.]

ನಿರಾಕ$_2$ (ನಾ). (?) : ಸೋರ್ಮುಡಿಯಲೊಪ್ಪುವ ಪುಷ್ಪವೃಷ್ಟಿಗಳ ಏಕರೂಪದಲಸಿಯ ಹುಬ್ಬುಗಳಾಕೃತಿಯ ಹೆರೆನೊಸಲ ತಿಲಕ ನಿರಾಕದಳಿಗಳ ಕುರುಳುಗಳ ಧ್ಯಾನಿಪುದು ಭಾವಕರು (ನಿಭಾಗ. ೧೧-೨೧-೪೧).

[?]

ನಿರಾಕರಣ (ನಾ). ೧. ಅಲ್ಲಗಳೆಯುವುದು. ೨. ತಿರಸ್ಕಾರ : "ಸೂದನೀಯಂ, ಸೂದ್ಯಂ, ಸೂದಿಃ, ೩ ನಿರಾಕರಣಂ" (ಕಾಶಕೃ. ೮೪). ೩. ನಿವಾರಿಸುವುದು ; ಹೋಗಲಾಡಿಸುವುದು : ವಿವೇಕಜ್ಞಾನ ದೀಪದಲಿ ಶೋಕ ಮೋಹಮಹಾಂಧಕಾರನಿರಾಕರಣವನು ಮಾಡಿ ಪುಣ್ಯಶ್ಲೋಕನನು ಸಂತವಿಸಿ ನಾರದನಡಱಿದನು ನಭವ (ನಿಭಾಗ. ೧-೯-೪೪). ೪. ಬಿಡುವುದು; ತ್ಯಜಿಸುವುದು. 'ನಿರಾಕರಿಸು' ಪರಾ. [ಸಂ.]

ನಿರಾಕರಣಂಗೆಯ್ (ಕ್ರಿ). ೧. ಅಲ್ಲಗಳೆ. ೨. ತಿರಸ್ಕರಿಸು : ಈ ಪೇಟ್ಟ ಮೂಱುಂ ತೆಱದೊಳ್ ನೆಗೞ್ದ ಜೈನದ್ವಿಜಂಗೆ ಹಿಂಸಾದೋಷ ಮಾಗದೆಂದು ನಿಜಪಕ್ಷದೋಷನಿರಾಕರಣಂಗೆಯ್ವುದು (ಚಾವುಂಪು. ೨೨೬); ದುರ್ಯೋಧನಂ ಹರನುಮಂ . . . ಕಂಜೋದರನುಮಂ ನಿರಾಕರಣಂಗೆಯ್ದು ನಿತಱೊಳಂ ಮಾಣ್ದು ಸ್ಥೈರಿಸಲಾಱದೆ ಸಮರೋದ್ಯೋಗಂಗೆಯ್ಯೆ (ಗದಾಯು. ೩-೪೪ ವ). [ನಿರಾಕರಣ+ಕೆಯ್$_1$]

ನಿರಾಕರಣೆ (ನಾ). ೧. = ನಿರಾಕರಣ ೧ : ಅಮೆರಿಕ ಪ್ರಾಚ್ಯಸಂಘದ ಪತ್ರಿಕೆಯ ಪ್ರಕಾಶನ ಸಮಿತಿಯ ಸದಸ್ಯರ ಅಭಿಪ್ರಾಯವೂ, ಸಂಪೂರ್ಣ ನಿರಾಕರಣೆಯಲ್ಲದಿದ್ದರೂ ಅಷ್ಟಾಗಿ ಕಾಲ್ದವೆಲ್ಲನ ಸೂಚನೆಗೆ ಪೋಷಕವಾಗಿಲ್ಲ (ದ್ರಾವಿವಿ. ೪೧) ; ಆ ನಿರಾಕರಣೆಯಲ್ಲಿ ಕೋಪ ದ್ವೇಷಗಳು ತುಳುಕುತ್ತಿದ್ದಂತೆ ನೆಕ್ಲುದೋವನಿಗೆ ಭಾಸವಾಯಿತು (ಪುನರು. ೨೫೫). ೨. ಸಂಪೂರ್ಣ ನಾಶ; ನಿರ್ಮೂಲನ : ಓಕರಿಸಿದಳು ಮೃತ್ಯುವೆನ್ನನು ಲೋಕದಲಿ ಹೊಱಗೆಂದು ಯಮನ ನಿರಾಕರಣೆಗಳ ಜೀವಜಾತಿಯೊಳಲ್ಲವಿವನೆಂದು ಲೋಕದಲಿ ಡಂಗುರವ ಹೊಯ್ಸಿದನೀ ಕಮಲನಾಭನೆ ಕಣಾ (ಕುವ್ಯಾಅ. ೧೪-೧೮). [ಸಂ. ನಿರಾಕರಣ]

ನಿರಾಕರಿಷ್ಣು (ನಾ). ತಿರಸ್ಕರಿಸುವವನು: ವ್ಯಾಕುಲರ ಬಯ್‌ಬಯ್ದು ಚಪಲಾನೀಕ ಬಂಡಿಸಿ ಚಂಡಪಾತ ನಿರಾಕರಿಷ್ಣುಗಳೊಕ್ಕಲಿಕ್ಕಿತು ದಳದ ಮಧ್ಯದಲಿ (ಕುವ್ಯಾಶ. ೨-೨೦). [ಸಂ.]

ನಿರಾಕರಿಸು (ಕ್ರಿ). ೧. ಅಲ್ಲಗಳೆ ; ಧಿಕ್ಕರಿಸು ; ಹೀಯಾಳಿಸು : ಪಾರ್ವರ ಸಭೆಯ ನಡುವಿರ್ದು ಕನಿಷ್ಠನಿಷ್ಠುರವಚನಂಗಳಿಂ ನಾನಾ ಪ್ರಕಾರದಿಂ ನಿರಾಕರಿಸಿ ನುಡಿದು ಪೊಲ್ಲದಂ ಪೇೞ್ದಟ್ಟಿ ಕಳೆಯೆ (ವಡ್ಡಾರಾ. ೭-೧೯) ; ತೆರೆಗಳ ಬಂಬಲಂ ಮಿಳಿರ್ವ ಕೇತನ[ರಾ]ಜಿಗಳ್ . . . ತೆಱಂ ಬೊಳೆವ ಮೀಂಗಳನುಳ್ಳುವ ಕೈದುಗಳ್ ನಿರಾಕರಿಸಿರೆ ಮೇರೆದಪ್ಪಿ ಕವಿದತ್ತು ನರಾಧಿಪಸೈನ್ಯಸಾಗರಂ (ಪಂಪಭಾ. ೩-೬೮) ; ಪೊಳೆವ ಮಿಂಚಿನ ಗೊಂಚಲನಂಚಿತೋತ್ತಮಾಭರಣದ ದೀಪ್ತಿ ತೋರವನಿಯಂ ಪೊಸಮುತ್ತಿನ ಲಂಬಣಂ ನಿರಾಕರಿಸೆ (ಶಾಂತಿಪು. ೭-೧೪) ; ಈ ಮಹಾಗಂಭೀರಘೋರ ನಿರ್ಘೋಷಮಂ ನೀಂ ಶಬ್ದಮಾತ್ರಮೆಂದೇಕೆ ನಿರಾಕರಿಸುವೆ (ಪಂಚತಂ. ೩೭-೫); ದಮಘೋಷಪುತ್ರಂ ವಸುದೇವಪುತ್ರನಂ ನಿರಾಕರಿಸಿ ನುಡಿಯಲ್ (ಜಗವಿ. ೧೭-೨೪ ವ) ; ತಾರಕಂ ನಯಮನೊಲ್ಲದೆ ನಿರಾಕರಿಸಿ ನುಡಿಯೆ (ಗಿರಿಕ. ೬-೨೮ ವ) ; ಲೋಕಸಮ್ಮತವಾವುದದನು ನಿರಾಕರಿಸುವವರುಗಳು ತಾವೇನಾಕೆವಾಳರೆ ಜಗಕೆ (ಕುವ್ಯಾಉ. ೪-೧೦೦) ; ತಾನು ನಿರಾಕರಿಸುತ್ತಿದ್ದರೂ, ಅವನು ತನ್ನನ್ನು ಪ್ರೋತ್ಸಾಹಿಸುತ್ತಾ ಹೇಗಾದರೂ ಕಾರ್ಯಸಾಧನೆಯನ್ನು ಮಾಡಲು ಯತ್ನಿಸುತ್ತಿದ್ದ ಆತನು ತನ್ನ ಹಿತಚಿಂತಕನೆಂದೂ ನಿರ್ಧರಿಸಿದಳು (ರಾವಿಜ. ೧೯). ೨. ಬಿಡು ; ವರ್ಜಿಸು : ಪಂಚೇಂದ್ರಿಯ ವಿಷಯಸ್ಪರ್ಶರಸಗಂಧಶಬ್ದರೂಪಂಗಳಂ ನಿರಾಕರಿಸುತ್ತುಂ (ಅಜಿಪು. ೭-೮ ವ) ; ಇಂತಪ್ಪ ಆಶೆ ಹುಸಿ ಬಾಧೆಯ ನಿರಾಕರಿಸಿ ಇರಬಲ್ಲಗುಹೇಶ್ವರ ನಿಮ್ಮ ಶರಣ (ಅವಚಂ. ೧೧೬-೫೨೭) ; ಮಹಾರಾಜನ ಈ ಮನೋವ್ಯಾಕುಲತೆಯಿಂದ ಉತ್ಸವವು ನಿರಾಕರಿಸಲ್ಪಟ್ಟಿರುವುದು (ಶಾಕುಂತ. ೮೨-೩). ೩. ಒಪ್ಪದಿರು ; ಸಮ್ಮತಿಸದಿರು : ತಿಮ್ಮನನ್ನು ಅತ್ತಿ ಹಣ್ಣು ಕೊಡೆಂದು ಕೇಳಿದರು . . . ತಿಮ್ಮನು ಕೊಡುವುದಕ್ಕೆ ನಿರಾಕರಿಸಿದ (ಚಿಂಗಾಳ್ವ. ೮೦) ; ಚೌಡಪ್ಪನವರು ತಮ್ಮ 'ಶೀವರ್‌ಲೆಟ್' ಕಾರು ಕಳುಹಿಸುತ್ತೇನೆಂದರೂ ಗೋದಿ ನಿರಾಕರಿಸುತ್ತಿದ್ದಳು (ಹಳ್ಳಿಹಾ. ೯೮) ; ಅವಳ ಸರಳಮನಸ್ಸು ಅವಳನ್ನು ಅದರ್ಶದತ್ತ ಕರೆಯುತ್ತಿತ್ತೇ ವಿನಃ ಹಿಂದಿರುಗಿ ಮತ್ತೆ ಬರಲು ನಿರಾಕರಿಸುತ್ತಿತ್ತು (ಜೀವರಂ. ೭೧) ; ಕುಪಿತಳಾದ ರಾಧೆಯು ಮೊದಲು ಕೃಷ್ಣನನ್ನು ಸ್ವೀಕರಿಸಲು ನಿರಾಕರಿಸುತ್ತಾಳೆ (ಭಾರಜಾ. ೪೫) ; ಬಡವನಾದಾಗ್ಯೂ ಸಂತುಷ್ಟನಾಗಿದ್ದ ಬ್ರಾಹ್ಮಣನು ಅವನ ಹಣವನ್ನು ನಿರಾಕರಿಸುತ್ತಿದ್ದನು (ಶಾಂಪಜೀ. ೧೮).

[ನಿರಾಕರಣ+-ಇಸು$_3$]

ನಿರಾಕಾಂಕ್ಷೆ (ನಾ). ಆಸೆಯಿಲ್ಲದಿರುವಿಕೆ ; ಆಕಾಂಕ್ಷೆಗಳಿಲ್ಲದಿರುವುದು : (ಕಿ). [ಸಂ. ನಿರಾಕಾಂಕ್ಷಾ]

ನಿರಾಕಾರ(ಗು). ೧. ಆಕಾರವಿಲ್ಲದ; ರೂಪವಿಲ್ಲದ; ಅಮೂರ್ತವಾದ: ಆ ಮೌನಮಯ ಅಂಧಕಾರದಲ್ಲಿ, ನಿಸರ್ಗ . . . ಮೌನದಲಿ ತೆಯ್ದು ಕತ್ತಲಿನಲ್ಲಿ ನಿರ್ಮಿಸಿದ, ನಿರಾಕಾರವಿಗ್ರಹದಂತಿರುತ್ತದೆ (ಬೆತಂಬಾ. ೯೩). (ನಾ). ೨. ಆಕಾರವಿಲ್ಲದುದು ; ರೂಪವಿಲ್ಲದುದು ; ದೇಹವಿಲ್ಲದುದು : ನಿರಾಕಾರವ ಮೀಱುವ ಸಾಕಾರವುಂಟೆ (ಅವಚಂ. ೨೭೦-೧೨೪೦) ; ಸಗುಣವೇ ಸಾಕಾರ ನಿರ್ಗುಣವೇ ನಿರಾಕಾರ (ಅಮೃತ. ೬-೭೮) ; ಸ್ವಪ್ನಲೋಕದೊಳು ಆಕಾರಪ್ರಳಯವಿರುವಂತೆ, ತುಂಬಿದೆ ನಿರಾಕಾರ ತಮ (ಉಯ್ಯಾಲೆ. ೪-೪) ; ನಿರಾಕಾರವಾದದ್ದು ಪ್ರತ್ಯಕ್ಷವಾದರೆ ಆಕಾರವಾದದ್ದು ಕಾಣದೆ ಹೋದೀತು (ಗಾದೆ). ೩. ಆಕಾರವಿಲ್ಲದವನು ;

ದೇಹವಿಲ್ಲದವನು ; ಅಮೂರ್ತಸ್ವರೂಪ : ಅಯ್ಯಾ ನೀನು ನಿರಾಕಾರವಾಗಿರ್ದಲ್ಲಿ ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ (ಬಸವ.೩); ನಿರಾಕಾರ ನಿರಜ . . . ಪಂಪಾವಿರೂಪಾಕ್ಷ ಶರಣು (ಹಚಕಾ. ೧-೪). ೪. [ಜೈನ] ಯಾವುದೇ ಫಲಪ್ರಾಪ್ತಿಯ ಅಪೇಕ್ಷೆಯಿಲ್ಲದೆ ಮರಣಾಂತಿಕೆವಾಗಿ ಕೈಕೊಳ್ಳುವ ಉಪವಾಸ: ಸಾಕಾರ ನಿರಾಕಾರಾಗತಮಪ್ಪನಶನಮೆಂಬ ಮೊದಲ ತಪದೊಳಂ . . . ಇಂತಪ್ಪೆಡೆಯೊಳಿಂ ತೆಂಬವರ್ ನಿಱಿಸಿದೊಡಲ್ಲದೆ ನಿಲ್ಲೆನೆಂಬಾ ನಿಯಮಂ (ಆದಿಪು. ೬-೩೦ ಪ) ; ಸಾಕಾರ ನಿರಾಕಾರ ವಿರಹಿತಮುಪವಾಸಂ (ಶಾಂತಿಪು. ೬-೪೯ ಪ) ; ಆರಯೆ ಸಾಕಾರ ನಿರಾಕಾರಮೆನಿಪ್ಪೆರಡು ಭೇದದಶನಮಂ . . . ಆಂತಂ ಮುನಿಪಂ (ಚಂದ್ರಪು. ೧೧-೮). ℙ "ಅನಶನವೆಂಬುದು ಸಾಕಾಂಕ್ಷ ಮತ್ತು ನಿರಾಕಾಂಕ್ಷ ಎಂದು ಎರಡುವಿಧವಾಗಿದೆ. ೧. ಷಷ್ಠಮ, ಅಷ್ಟಮ, ಮಾಸ ಮೊದಲಾದ ಉಪವಾಸಗಳೂ, ಕನಕಾವಳಿ, ಏಕಾವಳಿ, ಮುರಜ, ಸಿಂಹನಿಃಕ್ರೀಡಿತ ಮೊದಲಾದ ವ್ರತಗಳ ಅಂಗವಾದ ನಿಯಮಿತ ಕಾಲದ ಉಪವಾಸಗಳೂ ಸಾಕಾಂಕ್ಷ ; ಇದಕ್ಕೆ 'ಇತಿರಿಯ'ವೆಂತಲೂ 'ಅವಧೃತ'ವೆಂತಲೂ ಹೆಸರುಂಟು. ೨. ಭಕ್ತಪ್ರತ್ಯಾಖ್ಯಾನ, ಇಂಗಿನೀಮರಣ, ಪ್ರಾಯೋಪಗಮನ ಅಥವಾ ಇನ್ನಾವುದೇ ರೀತಿಯಿಂದ ಮರಣ ಪರ್ಯಂತವಾಗಿ ಆಚರಿಸುವ ಉಪವಾಸಕ್ಕೆ ನಿರಾಕಾಂಕ್ಷವೆಂದು ಹೆಸರು. ಇದಕ್ಕೆ 'ಯಾವಜ್ಜೀವ', 'ಅನವಧೃತ' ಎಂದೂ ಹೆಸರುಂಟು. 'ನಿರಾಕಾರ' ಎಂಬುದು ಇಲ್ಲಿ 'ನಿರಾಕಾಂಕ್ಷ' ಎಂಬರ್ಥದಲ್ಲಿ ಬಳಕೆಯಾಗಿದೆ. [ಸಂ.]

ನಿರಾಕುಲ, ನಿರಾಕುಳ (ಗು). ೧. ಮನಃಕ್ಲೇಶವಿಲ್ಲದ ; ಚಿಂತೆಯಿಲ್ಲದ ; ವ್ಯಾಕುಲದಿಂದ ದೂರವಾದ ; ನೆಮ್ಮದಿಯಿಂದ ಕೂಡಿದ : ನಿರಾಕುಲಶುಕಮಯಂ . . . ಆಗಿ ಕಾನನಂ ಕಣ್ಣಿಸೆದುದು (ಹಚಕಾ. ೫-೧೮) ; ನಿರಾಕುಲಾಂತಃಕರಣನಾದನು ಬಳಿಕ ಕಲಿಭೀಮ (ಕುಪ್ಯಾಅ. ೯-೮). (ನಾ). ೨. ವ್ಯಾಕುಲವಿಲ್ಲದವನು ; ದುಃಖರಹಿತನಾದವನು : ನಿರಾಕುಲ ನಿಷ್ಕಲ ನೀಲಕಂಠ . . . ಜಯ ಶಂಕರ ನಿರ್ಜಡ ಶಾಂಭವೀಧವಾ (ಶಬಶಂ. ೫-೨೪) ; ನಾನೆಂಬ ನಾದಗಳು ಇಲ್ಲದಂದು . . . ತಾನು ತಾನೆಂಬ ವಸ್ತುಗಳು ಇಲ್ಲದಂದು ಅತ್ತಿತ್ತಲೆ ನಿಶ್ಚಿಂತ ನಿರಾಕುಲನಾಗಿರ್ದನಯ್ಯ (ನಿರಾಗೋ. ೭-೪೫). **ನಿರಾಕುಳ:** ೧. ಖಚರೇಶ್ವರನೆಯ್ದಿದಂ ನಿರಾಕುಳಗತಿಲೀಲನಪ್ರತಿರಥಂ ರಥನೂಪುರ ಚಕ್ರವಾಳಮಂ (ಶಾಂತಿಪು. ೬-೨೨). ೨. ಖಳಕರ್ಮಾಷ್ಟವಿಧೋಗ್ರ ಕಂಟಕಕುಳಪ್ರಧ್ವಂಸದಿಂದಂ ನಿರಾಕುಳರುಂ ನಿಷ್ಕಳರುಂ . . . ತಾಮಾಗಿ ಲೋಕಾಗ್ರದೊಳ್ ತೊಳಗುತ್ತಿರ್ಪ ವಿಶುದ್ಧಸಿದ್ಧರೆಮಗೀಗಾತ್ಮೋದಯ ಪ್ರಾಪ್ತಿಯಂ (ಜೀವಸಂ.೧-೨) ; ನಿತ್ಯಾನಂದ ನಿಜನಿಶ್ಚಲ ನಿರಾಕುಳ ನಿರ್ವಿಕಾರ (ಪ್ರಭುಲೀ. ೨-೮). ೩. ನಿರಾಯಾಸ ; ನಿಶ್ಚಿಂತೆ ; ನೆಮ್ಮದಿ : ಈ ಸಮುದ್ರತೀರಮಪಾಯಬಹಳಮೆನಗಂ . . . ಇನ್ನಿಲ್ಲಿರಲ್ಬಾರದು ಪೆಱತೊಂದು ನಿರಾಕುಳಮಪ್ಪೆಡೆಯನೆಡೆಮಾಡಿ ಬಂದೆನ್ನನೊಡಗೊಂಡು ಪೋಗಿಮೆಂಬುದುಂ (ಪಂಚತಂ. ೧೫೦-೧೪) ; ನಿರಾಕುಳದ ಭಕ್ತಿ ನಿರ್ವಯಲಾಯಿತ್ತು ಬಸವಾ (ನೀಲಪ. ೧೧-೨೬) ; ನಿಶ್ಚಿಂತವೆಂಬಾಶ್ರಮದಲ್ಲಿ ನಿರಾಕುಳ [ಪಾಠಾಂ. ನಿರಾಳ]ವೆಂಬ ಸಿಂಹಾಸನವನಿಕ್ಕಿ ಗಗನಗಂಭೀರದ ಭಾವಿಯೊಳಗೆ ಅಗೋಚರದ ಅಗ್ಘವಣಿಯ ತಂದು (ಅಪಚಂ.೮೩-೩೭೪) ; ತಮವ ಹಿಂಗಿಸಿ ವ್ಯಾಕುಲವನಳಿದು ನಿರಾಕುಳದಲ್ಲಿ ನಿಂದು . . . ಮುಂದೆ ನೋಡಿದರೆ ಜ್ಯೋತಿಯ ಬೆಳಗ ಕಾಣಬಹುದೆಂದರು (ಲಿಂಗಪ. ೬೫-೫೬) ; ನಮ್ಮ ವಿವೇಕವನು ದಳ ನೋಡುತಿರಲಿ ನಿರಾಕುಳದಲೆಚ್ಚಾಡುವೆವು ನಿಲ್ಲೆಂದನಾ ಭೀಮ (ಕುಪ್ಯಾಕ. ೧೯-೨೯). [ಸಂ.]

ನಿರಾಕುಲಂ, ನಿರಾಕುಳಂ (ಅ). ವ್ಯಾಕುಲವಿಲ್ಲದ ಹಾಗೆ ; ನೆಮ್ಮದಿಯಿಂದ ಕೂಡಿ : ಇಳೆಯೊಳ್ ಪೆರ್ಮಳೆಯುಂ ಸಮಸ್ತ ಫಲಮುಂ ಸಂತೋಷಮುಂ ಧರ್ಮಸಂಕುಳಮುಂ . . . ಶ್ರೀಯು ಮಾಯುಂ ನಿರಾಕುಲ[ಪಾಠಾಂ.ಳ]ಮೆಂದುಂ ನೆಲಸಿರ್ಪುದೊಂದು ತೆಱನಂತಾಂ ಮಾಳ್ಕೆ (ಗಿರಿಕ. ೧೦-೧೧೫) ; ಅಲರ್ಗಂಪಿಗೆಱಗಿರ್ದ ತುಂಬಿಗಳ ಬಂಬಲ್ಕಾರ್ಮುಗಿಲ್ . . . ಪಿಕಪ್ರಕರನಾದಂ ಮೇಘನಾದಂ ನಿರಾಕುಲಮೊಂದಿರ್ಪ ಶುಕಾಳಿ ಶಕ್ರಧನುವೆಂಬಂತಾಗೆ ಮೇಘಾಗಮಂಬೊಲದೇಂ ಸೂಸಿದುದೋ ಮರಂದರಸವೃಷ್ಟಿವ್ರಾತಮಂ ಮಾಮರಂ (ರಾಜಶೇ. ೨-೬೨). **ನಿರಾಕುಳಂ :** ವೀರಲತಾಂಗಿಯ ಸೋಂಕು ಮೆಯ್ಯೊಳಂ ಕುರಿಸೆ ನಿರಾಕುಳಂ ಕಳೆದನಾಜಿಪರಿಶ್ರಮಮಂ ಗುಣಾರ್ಣವಂ (ಪಂಪಭಾ. ೧೧-೧೫೫) ; ಮಗನದೊಂದು ವೃತ್ತಾಂತಮಂ ನಿರಾಕುಳಮೆ ಪೇಟ್ದರ್ (ಕಾದಂಉ. ೬೪೦) ; ನಿರಾಕುಳಂ ಬಿಸುಟು ಹಿಂಸೆಯೊಳಾದನುಸಂಸ್ಕೃತ್ತಿಯಂ . . . ನೆಱೆಯೆ ನೋಂತುದು ನೋಂಪಿಗಳಂ ಮೃಗಾಧಿಪಂ (ವರ್ಧಮಾ. ೬-೩೨) ; ಧ್ರುವಂ ಸನಾತನಂ ನಿತ್ಯಮವಿನಶ್ವರವಪ್ರತಿಚ್ಯವ ಶಾಶ್ವತ ಸ್ಥಾನವೆಮಗಕ್ಕೆ ನಿರಾಕುಳಂ (ವಸ್ತುಕೋ. ೨೧-೨೦) ; ಮಾಯ್ದ ವಿಧಾತ್ರನೆನ್ನಣುಗಿನಗ್ರತನೂಜನನಿಂತಗಲ್ಚಿಕೊಂಡುಯ್ದನಪಾರ ಶೋಕರಸಪೂರದೊಳೀ ಸಭೆಯಂ ನಿರಾಕುಳಂ ತೊಯ್ದನಡುತ್ತ ಗುರ್ವಿದನದಲ್ತೆರ್ದೆ ನಿಚ್ಚನರಲ್ಚೆ ತನ್ನೊಳಂ ಪೊಯ್ದನದರ್ಕೆ ಕೃತ್ಯವೆನಗೇನೆ ನುತುಂ ತಳೆದಂ ಪ್ರಳಾಪಮಂ (ಚಂದ್ರಪು. ೫-೧೦) ; ಶಿವನಲ್ಲಿ ತಿರುನಾಳ್ಗೆ ಬರೆ ಕಂಡು ತರುಕುಳಂ ಶಿವನ ರೂಪಂ ಬಯಸಿ ಬೆಳೆದವು ನಿರಾಕುಳಂ (ನಂಬಿರ. ೯-೨೬) ; ಏಕ ದ್ವಿ ತ್ರಿ ಚತುಃ ಪಂಚಾಕಲಿತಾರ್ಥಂಗಳಾಗಿ ಱಟನೊಳವು ನಿಸರ್ಗಾಕೃತಿ . . . ನಿರಾಕುಳಮುಸಿರ್ವೆಂ (ಶಮದ. ೨೩); ನಿರಾಕುಳಂ ಚಪ್ಪನ್ನದೇಶಂಗಳಂ ಸಂಚರಿಸುತುಂ ಕಪ್ಪ ಕಾಣ್ಕೆಗಳಂ ಕೂಡಿ ತರ್ಪುದು (ರಾಮಾಶ್ವ. ೪೬-೨೯). [ಸಂ.]

ನಿರಾಕುಳ 'ನಿರಾಕುಲ' ನೋ.

ನಿರಾಕುಳಂ 'ನಿರಾಕುಲಂ' ನೋ.

ನಿರಾಕುಳತೆ (ನಾ). ನಿಶ್ಚಿಂತೆ ; ನೆಮ್ಮದಿ : ನಿರಾಮಯನುಮಪ್ರತಿರೂಪನುಮಾಗಿ ದೇವಕಾಂತಾದಯಿತಂ ನಿರಾಕುಳತೆಯಂ ತಳೆದು (ವರ್ಧಮಾ. ೧೧-೧). [ಸಂ. ನಿರಾಕುಲತಾ]

ನಿರಾಕುಳಿತ (ಗು). ವ್ಯಾಕುಲವಿಲ್ಲದ ; ಕ್ಲೇಶವಿಲ್ಲದ : ನಿರಾಕುಳಿತಮನಂ ಬೃಹಸ್ಪತಿ ಸಮಾಯತಮೇ ಎನಲಾಯತಂ (ಗಿರಿಕ. ೧೦-೮೮) ; ಏಕಮೇವಾದ್ವಿತೀಯಮೆಂಬ ನಿರಾಕುಳಿತ ಶೇಜೋನಿಧಿಗೆ ಮಾಯಾಕಳತ್ರದೊಳಾಯ್ತು ನಿಜಗುಣಭೇದವು (ಕುಪ್ಯಾಅ. ೧೪-೩೩). [ಸಂ. ನಿರಾಕುಲಿತ]

ನಿರಾಕುಳಿಸು (ಕ್ರಿ). (?) : ಸೋಕಿದನಿಲನನಂದಗೆಡಿಸಿದಳಾಕೃತಿಯ ಪರಿಮಳದಲಂಗನೆ ಮೂಕನಾದವು ಗಿಳಿಗಳಬಲೆಯ ಕಳರವಂಗಳಲಿ ನಾಕವನಿತೆಯ ನಯನಕಾಂತಿ ನಿರಾಕುಳಿಸೆ ಹರಿಣೀಕುಳವನಿಂತಾಕರಿಸಿದಳು ಚಾರುವನಲಕ್ಷುಮಿಯನು ಚಪಲಾಕ್ಷಿ (ನಿಭಾಗ. ೫-೨-೭).

[ℙ ಇದು 'ನಿರಾಕರಿಸು' ಎಂಬುದರ ಅಪಲಿಖಿತವಿರಬಹುದು]

ನಿರಾಕೃತ (ಗು). ೧. ನಿವಾರಿಸಿದ ; ಹೊರದೂಡಿದ : ಪಿತೃಸಂದೇಶದಿನಾ ಮಹೋನ್ನತಿಯುತಂ ಸಾರ್ದ್ರಾಂತರಂಗಂ ನಿರಾಕೃತಭೂತಾಪಭರಂ ಕುಮಾರನಧಿಕೋತ್ಸಾಹಾವಗಾಹಂ ಪ್ರಭಾವತಿಯೆಂಬಗ್ಗದ ಕನ್ನೆಯಂ ಮದುವೆನಿಂದಂ (ಚಂದ್ರಪು. ೪-೧೨) ; ಕುಳಿರ್ವಭಿಷೇಕಗಂಧಸಲಿಲಂಗಳನಾಗಳೆ . . . ಕೋಮಳಾಂಗುಳಿಗಳೊಳಟ್ಟಾಕೊಂಡೆರ್ದೆಯೊಳಂಟಿ ನಿರಾಕೃತಪಾಪತಾಪಮುತ್ಪುಳಕಕದಂಬಕಂ ನಲಿದುದಂದು ಕರಂ ದಿವಿಜಾಂಗನೋತ್ಕರಂ (ಚಂದ್ರಪು. ೧೨-೧೪೮). (ನಾ). ೨. ಕಡೆಗಣಿಸಿದುದು ; ನಿರಾಕರಿಸಿದುದು : "ಪ್ರ(ತ್ಯಾ)ಖ್ಯಾತಂ.. . . ನಿರಾಕೃತಂ, ನಿರಸ್ತಂ,

ಅಪವಿದ್ಧಂ, ಪರಿಹೃತಂ-ಈ ೩ ಪರಿಹರಿಸಲ್ಪಟ್ಟುದು" (ಹಲಾಯು. ೧೧೬-೧೪). [ಸಂ.]

ನಿರಾಕೃತಿ (ನಾ). ೧. ರೂಪವಿಲ್ಲದುದು; ಆಕಾರವಿಲ್ಲದುದು; ಆಕೃತಿಯಿಲ್ಲದುದು: ಏಕಮಾತ್ಮಾಯೆಂದು ವೇದಾನೀಕ ಕೈವಾರಿಸಲು ಮೆಜಿವ ನಿರಾಕೃತಿಯ ಪರಬೊಮ್ಮರೂಪಿನ ತಾತ ನೋಡೀತ (ಕುಮಾಳು. ೯-೫೩). ೨. ವೇದಾಧ್ಯಯನ ಮಾಡಿರದವನು; ವೇದಗಳನ್ನು ಅಭ್ಯಾಸ ಮಾಡದವನು: "ಅಸ್ಯಾಧ್ಯಾಯಃ, ನಿರಾಕೃತಿಃ —ಈ ೩ ವೇದವಿಲ್ಲದವಂ" (ಹಲಾಯು. ೬೭-೨೫೧); "ಓದಿಲ್ಲದಂ ನಿರಾಕೃತಿಯುನಧ್ಯಾಯನಕ್ಕುಂ" (ಪುಂಗರಾ. ೬೫-೬). ೩. ಹೊರದೂಡಿದುದು; ತಿರಸ್ಕೃತವಾದುದು: "ಪರಿಹೃತಂ . . . ಅಪವಿದ್ಧಮೆನೆ ನಿರಾಕೃತಿ ಪ್ರತಿಪ್ತಿಪ್ತವೆನಲು" (ಪುಂಗರಾ.೧೨೪-೯). ೪. ತಿರಸ್ಕರಿಸುವುದು; ಉಪೇಕ್ಷಿಸುವುದು: "ಪ್ರತ್ಯಾಖ್ಯಾನಂ, ನಿರಸನಂ, ಪ್ರತ್ಯಾದೇಶಃ, ನಿರಾಕೃತಿಃ — ೪ ತಿರಸ್ಕರಿಸುವಿಕೆ, ಜರಿಯುವಿಕೆ" (ಸಿದ್ಧಾಂತಿ. ೩೩೩). [ಸಂ.]

ನಿರಾಕ್ಷೇಪ (ಗು). ೧. ಆಕ್ಷೇಪವಿಲ್ಲದ; ದೂರಿಲ್ಲದ. (ನಾ). ೨. ಆಕ್ಷೇಪವಿಲ್ಲದುದು. ೩. ಆಕ್ಷೇಪವಿಲ್ಲದಿರುವಿಕೆ. [ಸಂ.]

ನಿರಾಕ್ಷೇಪಣೆ (ನಾ). ೧. ಆಕ್ಷೇಪಣೆಯಿಲ್ಲದುದು. ೨. ನಿಂದನೆಗೆ ಗುರಿಯಾಗದಿರುವಿಕೆ; ನಿಂದೆಗೆ ಗುರಿಯಾಗದ ಸ್ಥಿತಿ: (ಕ). [ಸಂ. ನಿರಾಕ್ಷೇಪಣ]

ನಿರಾಖ್ಯ (ನಾ). ಹೆಸರಿಲ್ಲದವನು; ಅನಾಮಧೇಯ: ನಿರಾಕಾರ ನಿರ್ಗುಣ ನಿರುತ್ತರ ನಿರಾಖ್ಯ ನಿರ್ಜಡ ನಿರ್ವಿಕಲ್ಪ (ಏಕೋತ್ತ. ೬-೨). [ಸಂ.]

ನಿರಾಗ (ಗು). ಆಸಕ್ತಿಯಿಲ್ಲದ; ಮೋಹವಿಲ್ಲದ; ಕಾಮವಿಲ್ಲದ. [ಸಂ.]

ನಿರಾಗಮ (ಗು). ವೇದೋಕ್ತವಲ್ಲದ; ವೇದಾಧಾರವಿಲ್ಲದ: ದೇಗುಲಕೆ ನಿಮಗಿನ್ನು ನಿಚ್ಚಂ ಹೋಗಿ ಹೊಡವಡಲೇತಕೆಂಬ ನಿರಾಗಮ ಪ್ರಶ್ನೆಗೆ ಕೊಡುವೆನುತ್ತರವನು (ಬಸ್ತು. ೫೧-೧೯). [ಸಂ.]

ನಿರಾಗಸ (ನಾ). ಪಾಪರಹಿತವಾದುದು; ತಪ್ಪಿಲ್ಲದುದು: ಇಂಥ ಸಂಬಂಧ ಮುಂಬಯಿಯಲ್ಲಲ್ಲದೆ ಮತ್ತೆಲ್ಲಿಯೂ ಇಷ್ಟು ಸರಾಗವಾಗಿಯೂ ಸರಳವಾಗಿಯೂ ನಿರಾಗಸವಾಗಿಯೂ ತಿಳಿಯಾಗಿಯೂ ಸಾಗುವದು ಶಕ್ಯವಿಲ್ಲ (ಮುಕ್ತ. ೬೩). [ಸಂ. ನಿರಾಗಸ್]

ನಿರಾಗಸೆ (ನಾ). ಪಾಪವಿಲ್ಲದವಳು; ತಪ್ಪು ಮಾಡದಿರುವವಳು: ನಿರಾಗಸೆಯ ನಿಷ್ಕಾರಣದಿ ಬಿಡುವುದುಚಿತವೆ ನರೇಶಾ (ವೆಂಕಾರಾ. ೨-೧೧-೨೩). [ನಿರಾಗಸ + -ಎ೨]

ನಿರಾಜಿ, ನೀರಾಜಿ₁ (ನಾ). ೧. ಜರತಾರಿ; ಸರಿಗೆ; ಕಲಾಬತ್ತು: ನಿರಾಜಿಯ ದುಪ್ಪಟಿ ಗುಣಶ್ರೇಷ್ಠವಾಗಿಯೂ . . . ವಾತಶ್ಲೇಷ್ಮಹರವಾಗಿಯೂ ಇರುವುದು (ಸಕನ್ಯ. ೬೩); ನಿರಾಜಿಯ ತೆರೆಯ ಮರೆಯೊಳ್ ಪ್ರಾತಃನೆಯಂಗೈಸಿ (ಸೌಗಂಧಿ. ೪೩-೭); ನಿಗಿನಿಗಿಸುತಿಹ ನಿರಾಜಿಯ ಹಾಸಿಕೆಯ ಹಾಕಿ (ಬಾಸಾಣ ೧೧೧); ಗದ್ದಿಗೇ ಮೇಲೆ ಕೂತುಕೊಳ್ಳುವಾಗ ಧರಿಸಿಕೊಳ್ಳುವುದಕ್ಕೆ ನಿರಾಜಿ ಅಂಚು ಸೆರಗು ಉಳ್ಳ ಹಳದೀ ಮುಗುಟ ಕೆಂಪಿನ ಮುಗುಟಗಳಾದವು (ಮೂಪುರಾ. ೧೩೪). **ನೀರಾಜಿ**₁: ೨. ಜರತಾರಿಯ ಬಟ್ಟೆ, —ಹಾಸು: ನೀರಾಜಿಯ ಮೇಲುಕಟ್ಟುಗಳಂ ಕಟ್ಟ. . . ನೋಡುವವರಿಗೆ ವಿಸ್ಮಯಜನಾಗುವಂತೆ ರಾಜದ್ವಾರಮಂ ರಚಿಸಿದಂ (ಮುದ್ರಾಮು. ೧೯೨); ಹಾಸಿ ನೀರಾಜಿಯನದರಲ್ಲಿ ರತ್ನದ ರಾಶಿ ರಾಶಿಗಳನು ಸುರಿದೂ ಮಾನಲೀಯದೆ ಜವಳಿಗಳ ಮೆದೆಯನಿಟ್ಟು ಲೇಸಿನ ಶಿಬ್ಬಗಳಹರು (ಸೌಗಂಪ. ೧-೧೧೧).

ನಿರಾಜಿಯ ಬಿಲ್ಲತ್ತು = ಸನ್ಮಾನಾರ್ಥವಾಗಿ ಕೊಡುವ ಜರತಾರಿ ಅಂಚಿನ ಉಡುಗೊರೆ, —ಶಾಲು: ದೊರೆಗಳವರು ಅಪ್ಪಣೆಕೊಟ್ಟು ಳಕುಹಿದ್ದ ನಿರಾಜಿಯ ಬಿಲ್ಲತ್ತು ನವರತ್ನಾಭರಣ ಮುಂತಾದ ಪದಾರ್ಥಗಳನ್ನೂ ಕುಶಲಪತ್ರಿಕೆಯನ್ನೂ ಒಪ್ಪಿಸಿದನು (ಪುಹಾಪಂ. I, ೧೪೩). [?. / ತುಳು. ನಿರಾಜಿ, ನಿರಾಸಿ; ತೆಲು. ನಿರಾಸೀ]

ನಿರಾಜಿಕಂಬಿ (ನಾ). ಕಲಾಬತ್ತಿನ ಅಂಚು: ಬೀದಿಯಲ್ಲಿ ಹಳೇ ನಿರಾಜಿಕಂಬಿಯವನು ಕೂಗಿಕೊಂಡು ಹೋಗುತ್ತಿದ್ದಾನೆ (ರೂಢಿ). [ನಿರಾಜಿ + ಕಂಬಿ₁]

ನಿರಾಜಿಗೌಸು (ನಾ). ಜರತಾರಿ ಬಟ್ಟೆಯ ಮುಸುಕು,-ಹೊದಿಕೆ: ಮುಣಿಮುಯದ ತಟ್ಟಗಳಲ್ಲಿ ಮಡಗಿ ನಿರಾಜಿಗೌಸುಗಳಿಂದೊಡಗೂಡಿ ರಾಜೇಂದ್ರನ ಮುಂದಿರಿಸಿ (ಸೌಗಂಧಿ. ೫೬೧-೨). [ನಿರಾಜಿ + ಗೌಸು (<ಗವಸು)]

ನಿರಾಜಿತೆರೆ (ನಾ). ಜರತಾರಿ ಬಟ್ಟೆಯ ಪರದೆ, —ಜವನಿಕೆ: ದೊಡ್ಡ ಉಪ್ಪರಿಗೆ . . . ಪಟ್ಟೀ ತೆರೆಗಳು, ನಿರಾಜಿತೆರೆಗಳು, ಗೋಡೆಯ ಸುತ್ತ ಲಕ್ಷಣವಾಗಿ ಕಟ್ಟಿರತಕ್ಕ ಛಾವಟ್ರಗಳೂ . . . ಕಾಣಿಸಿದವು (ಕೀಟಿಪು. ೫೫). [ನಿರಾಜಿ + ತೆರೆ₄]

ನಿರಾಜಿದುಪ್ಪಟಿ (ನಾ). (ಹಾಸಲು ಮತ್ತು ಹೊದೆಯಲು ಉಪಯೋಗಿಸುವ) ಜರತಾರಿಯ ದುಪ್ಪಟಿ: ರಂಗುವಡದ ಬೆರಳುಂಗುರ ಗೆಲಸದ ಅಂಗಿ ನಿರಾಜಿದುಪ್ಪಟಿಯು (ಸೌಂದಕಾ. ೫-೧೨೧). [ನಿರಾಜಿ + ದುಪ್ಪಟಿ]

ನಿರಾಜಿಬಟ್ಟೆ (ನಾ). ಜರತಾರಿಯ ಬಟ್ಟೆ,—ವಸ್ತ್ರ: ಬೆರಳಿಗೆ ಉಂಗುರವಾಯಿತು . . . ಪಟ್ಟೀಅಂಚಿನ ಛೋತ್ರವಾಯಿತು, ನಿರಾಜಿಬಟ್ಟೆಯಾಯಿತು (ಮೂಪುರಾ. ೧೨೮). [ನಿರಾಜಿ + ಬಟ್ಟೆ₂]

ನಿರಾಜಿವಸ್ತ್ರ (ನಾ). = ನಿರಾಜಿಬಟ್ಟೆ: ಚಿನ್ನ ಬೆಳ್ಳಿ ಪಾತ್ರೆಗಳನ್ನೂ ನಿರಾಜಿವಸ್ತ್ರಗಳನ್ನೂ . . . ಕೊಟ್ಟು (ಕೃಪಾಸ. ೫೫). [ನಿರಾಜಿ + ವಸ್ತ್ರ]

ನಿರಾಜಿಸೀರೆ, ನೀರಾಜಿಶೀರೆ, ನೀರಾಜಿಸೀರೆ (ನಾ). ಜರತಾರಿ ಸೀರೆ; ಕಲಾಬತ್ತಿನ ಸೀರೆ: ಇನ್ನು ಸ್ವಲ್ಪ ತಡವಾಗಿದ್ದಲ್ಲಿ ಆ ಧೂರ್ತರು . . . ಅವಳುಟ್ಟಿದ್ದ ನಿರಾಜಿಸೀರೆಯನ್ನು ಕೂಡಾ ದಯಾದಾಕ್ಷಿಣ್ಯವಿಲ್ಲದೆ ಸುಲಿದುಕೊಂಡು ಬಿಡುತ್ತಿದ್ದರು (ಭಾರವೀ. ೩). **ನೀರಾಜಿಶೀರೆ**: ತೇಜದಿಂ ಮೆರೆವ ಘನಕಾವರಣ ಮತ್ತು ನೀರಾಜಿಶೀರೆಯುಮೆನಿಸೆ ಯಾಜ್ಞಿಕರ ಹೋಮವಿಭ್ರಾಜಿತಾಸಿತ ಧೂಮಮುಳಕಾಳಿಯೊಗಲಾ ನಗರ ನಾರಿಯೊಲೆಸೆವುದು (ಅಜಾಗಾವಿ. ೧-೪೬). **ನೀರಾಜಿಸೀರೆ**: ಆರು ತಿಂಗಳಿಗೊಂದರಂತೆ ಕೊಂಡುಕೊಳ್ಳುವ ವರ್ಣರಂಜಿತ ನೀರಾಜಿಸೀರೆಗಳನ್ನೂ ತಂಗಿಗೆ ತೋರಿಸಿದ್ದಾಳೆ (ಬೆಳುಮು. ೫೫೩). [ನಿರಾಜಿ + ಸೀರೆ₂]

ನಿರಾಡಂಬರ (ಗು). ಆಡಂಬರವಿಲ್ಲದ; ಸರಳವಾದ: ಅವರ ನಿರಾಡಂಬರ ವ್ಯಕ್ತಿತ್ವ ಅವರ ಮನಸ್ಸನ್ನು ನೆಳೆಯಿತು (ರಂಗಕೋ. ೬೨); ವಾಯ್ವನುಗುಣಕ್ಕೆ ಅನುಗುಣವಾಗಿರುವಂತೆ ಉಡಿಗೆ ತೊಡಿಗೆಗಳು ನಿರಾಡಂಬರವಾಗಿದ್ದುವು (ದಭಾಇ. ೪೧). [ಸಂ.]

ನಿರಾತಂಕ (ಗು). ೧. ಆಡೆತಡೆಯಿಲ್ಲದ; ಸುಗಮವಾದ; ಅಡ್ಡಿಯಿಲ್ಲದ. (ನಾ). ೨. ನಿರ್ವಿಘ್ನವಾದುದು; ತೊಂದರೆಯಿಲ್ಲದುದು; ಅಡೆತಡೆಯಿಲ್ಲದುದು; ಸುಗಮವಾದುದು: ಸಾಮ್ರಾಜ್ಯಮುಂ ನಿಷ್ಕಂಟಕಮುಂ ನಿರಾತಂಕಮುಂ ನಿಜಾಯತ್ತಮುಮೆನಿಸಿದಂ (ಚಂದ್ರಪ್ರ. ೨-೬೦ ಪ); ಅಗಸದ ಗಂಟುಮೋರೆಯಲಿ ಹೊಂದಿಸಲುಂಟು ನಗೆ ಹರಿಸಿ ಹರಿದಿಹುದು ನೀರು ನೀರೇ ನಿರಾತಂಕ (ಸಿಲಸು. ೧೫-೧೪).

೩. ನಿರ್ಭೀತಿ ; ಹೆದರಿಕೆಯಿಲ್ಲದಿರುವಿಕೆ : ಇನ್ನು ನಿಮ್ಮ ಕೆಲಸಕ್ಕೆ ನಿರಾತಂಕವಾಗಿ ಕೈಯಿಕ್ಕಿರಿ (ಸವತಿ. ೩೭); ಹಿಂಡುಹಿಂಡಾಗಿ ನೊಣಗಳು ಬಂದು ಎಲೆಯ ಹತ್ತಿರ ತೊಟ್ಟಿಕ್ಕಿದ್ದ ಪಾಯಸದ ಬಿಂದುಗಳನ್ನು ನಿರಾತಂಕವಾಗಿ ಹೀರಿದ ದೃಶ್ಯವನ್ನು . . . ನೋಡಿದ್ದು ಇಂದಿಗೂ ನೆನಪಿದೆ (ನಂಟರು. ೪೩). [ಸಂ.]

ನಿರಾತ್ಮ (ನಾ). ಕೈಗೊಂಡ ವ್ರತವನ್ನು ಬಿಟ್ಟವನು : "ಆತ್ತವ್ರತ ಸಂಸ್ಕಾರನಿವರ್ತಿತನವಕೀರ್ಣನುಂ ನಿರಾತ್ಮನುಮಕ್ಕುಂ" (ವಸ್ತುಕೋ. ೫೮-೩೮). [ಸಂ. ನಿರಾತ್ಮನ್]

ನಿರಾತ್ಮಜ (ನಾ). ಮಗನಿಲ್ಲದಿರುವವನು; ಪುತ್ರಹೀನ : ದಿನಪಾಂಶದೊಳಿರೆ ಹಿಮಕರನಿನಾದಿಗಳ್ ನೋಡೆ ಪುಟ್ಟದಂ ತರದಿಂ ಕೋಪನನವನಿಪಪ್ರಿಯಂ ಬಹುಧನಾನ್ವಿತಂ ಪ್ರಭು ನಿರಾತ್ಮಜಂ ವಧಶೀಲಂ (ಜಾತತಿ. ೨೦-೧೬). [ಸಂ.]

ನಿರಾದರ (ಗು). ೧. ಆದರವಿಲ್ಲದ; ಮನ್ನಣೆಯಿಲ್ಲದ; ಗೌರವವಿಲ್ಲದ. (ನಾ). ೨. ಆದರವಿಲ್ಲದವನು ; ಆಸಕ್ತಿಯಿಲ್ಲದವನು : ಸಾರವಸ್ತುಗಳೊಳ್ ನಿಸರ್ಗದಿಂದೆ ತಾಂ ನಿರಾದರನಾಗಿ ಶುಭಭಾವನೆಯೊಳ್ ರಾಜ್ಯಕಾಲಮಂ ಸಲಿಸುತ್ತುಮಿರೆ (ಶಾಂತಿಪು. ೬-೧೧೬ ಪ) ; ಭಯವಿವರ್ಜಿತ ಹೃದಯರುಂ ಪಾಪಮೆ ಮೂರ್ತಿವಂತಮಾಗಿರ್ದು ದೆಂದಸಂಯತರೊಳ್ ನಿರಾದರರುಮಪ್ಪಲ್ಲಿ ಧರ್ಮತತ್ವಮಂ ಕೇಳ್ದು ನಿರ್ವೇಗದಿಂ ಕುಮಾರದೀಕ್ಷಿತರಾದರ್. (ಚಾವುಂಪು. ೨೮೧). [ಸಂ.]

ನಿರಾದರಣೆ (ನಾ). ಗೌರವಿಸದೆ ಇರುವಿಕೆ ; ಮನ್ನಿಸದಿರುವಿಕೆ. [ಸಂ. ನಿರಾದರಣ]

ನಿರಾದಾನ (ನಾ). ಏನನ್ನೂ ತೆಗೆದುಕೊಳ್ಳದಿರುವುದು ಅಥವಾ ಕೊಡದಿರುವುದು : ಅಂತು ಮಡಿಪಿ ಶರೀರಸಮೇತಂ ನಿರಾದಾನವಿಧಾನದಿಂ ಗಾಳಿವೆಱಗಿನೊಳಿರ್ದಮಳದೀಪಿಕೆಯಂತಿರ್ವರುಮೊಡನದೃಶ್ಯರಾಗಿ ಬಂದು (ಶಾಂತಿಪು. ೬-೮೧ ಪ). [ಸಂ.]

ನಿರಾಧಾರ (ಗು). ೧. ಆಧಾರವಿಲ್ಲದ ; ನಿರಾಲಂಬವಾದ. (ನಾ). ೨. ಆಧಾರವಿಲ್ಲದುದು ; ನೆಲೆಯಿಲ್ಲದುದು : ಬಸವನಱವು ನಿರಾಧಾರವಾಯಿತ್ತು (ನೀಲಸ. ೨೨-೬೬) ; ಭೂಮಿಯು, ಚಂದ್ರನ ಹಾಗೆ ನಿರಾಧಾರವಾಗಿ, ಅಂತರಿಕ್ಷದಲ್ಲಿ ತೇಲಾಡುತ್ತದೆ (ಭೂಗೋಳ. ೩). ೩. ನಿರಾಲಂಬನಾದವನು ; ಸ್ವತಂತ್ರ ; ನಿಶ್ಚಿಂತ ನಿರ್ಲೇಪ ನಿರ್ಗುಣ ನಿರಾಧಾರ . . . ಪುರಹರನೆ (ಸೋಮಚ. ೧-೫). [ಸಂ.]

ನಿರಾಧಾರಿ (ನಾ). ಆಧಾರವಿಲ್ಲದವನು ; ಬಡವ : ಆತ ಎಲ್ಲವನ್ನೂ ಕಳೆದುಕೊಂಡು ನಿರಾಧಾರಿಯಾಗಿದ್ದಾನೆ (ರೂಢಿ). [ಸಂ. ನಿರಾಧಾರಿನ್]

ನಿರಾನಂದ (ಗು). ಆನಂದರಹಿತವಾದ ; ದುಃಖದಿಂದ ಕೂಡಿದ : ನಿರಾನಂದಜನೋಪೇತೆಯುಮಮಾನಿತಹರ್ಷೋತ್ಕರ್ಷೆಯುಮಾಗಿರ್ದ ತನ್ನನ್ವಯರಾಜಧಾನಿಯನನುಜಸಮೇತನಪರಾಜಿತನೆಯ್ದೆವಂದು (ಶಾಂತಿಪು. ೧-೯೩ ಪ). [ಸಂ.]

ನಿರಾಪದ (ನಾ). ಆಪತ್ತಿನಿಂದ ದೂರವಾದುದು ; ಅಪಾಯರಹಿತವಾದುದು; ಸುರಕ್ಷಿತವಾದುದು: ಇಷ್ಟು ರಾತ್ರಿಯಲ್ಲಿ ಒಮ್ಮಿಂದೊಮ್ಮೆ ತಮ್ಮ ನಿರಾಪದವೂ ನಿಭೃತವೂ ಆದ ನಿವಾಸದ ಹತ್ತರ ಜನಸಮಾಗಮ ಕಂಡು ಅವು ಚಕಿತವಾಗಿ ಚೀತ್ಕರಿಸಿವೆ (ಇಪ್ಪಕ. ೧೨೭) ; ನಿರಾಪದವಾದ ಆಶ್ರಮಪ್ರಾಂತದಲ್ಲಿ . . . ಹಸುವಿನ ಕರುಗಳು, ಸೂರ್ಯದೇವ ಸಕಲ ಜೀವಿಗಳಲ್ಲೂ ಮೂಡಿಸಿದ ಹರ್ಷ; ಚಟುವಟಿಕೆಗಳಿಗೆ ರೂಪುಕೊಟ್ಟಂತಿವೆ (ಬೆತಂಬಾ. ೧). [ಸಂ.]

ನಿರಾಪರಾಧಿ (ನಾ). ನಿರಪರಾಧಿ : ಮಾರನೆಂಬ ನಿರಾಪರಾಧಿಯ ಬೇರುಗೊಲೆಯನೆಗೈದ ಲಜ್ಜೆಗೆ ನಾರಿ ಗಂಗೆಯ ಶಿರದಿ ತೊಡೆಯಲಿ ಗೌರಿಯನು ತಾಳ್ದ (ಕೌಶಿರಾ. ೨-೧) ; ರಾಪುಮಾಡದೆ ಬಿಡನು ಯಮನು ನಿರಾಪರಾಧಿಯ ನೋಡಿ ಕೀರ್ತಿಕಲಾಪವನು ನೀ ಕಾಯ್ದು ರಕ್ಷಿಸು (ಹರಿಸಾ. ೬೮) ; ತಂದೆಗೆ ಸರ್ಪದಷ್ಟಮಿರದಾದುದೆನುತ್ತ ಭುಜಂಗಯಾಗಮಂ ಕುಂದಿನಿತಿಲ್ಲದಂತೆ ರಚಿಸುತ್ತಿರುವಾಗ ನಿರಾಪರಾಧಿಗಳ್ ಬೆಂದುದಱಿಂದಲಂದು ಜನಮೇಜಯನೆಂಬ ನೃಪಂಗೆ ಕುಷ್ಠ ತಾಬಂದುದು (ಕಱಿಕಂ. ೨೮). [<ಸಂ. ನಿರಪರಾಧಿನ್]

ನಿರಾಪೇಕಂ (ಅ). ಅಪೇಕ್ಷೆಯಿಲ್ಲದೆ ; ನಿಸ್ಪೃಹವಾಗಿ (?): ಧರ್ಮಸುತನನಾಂ ನಿನಗೆ ನಿರಾಪೇಕಮೊಡಂಬಡಿಸುವೆಂ (ಪಂಪಭಾ. ೧೩-೧೩). [?]

ನಿರಾಪೇಕ್ಷ (ನಾ). ೧. ಅಪೇಕ್ಷೆಯಿಲ್ಲದಿರುವಿಕೆ ; ಬಯಕೆಯಿಲ್ಲದಿರುವಿಕೆ : ಉರ್ವರಾಸ್ಯತಿಲಕನಪ್ಪ ತಪೋಧನನುಂ ಸಿದ್ಧಗಿರಿಯೊಳಾತ್ಮಪರನಿರಾಪೇಕ್ಷಮಪ್ಪ ಪ್ರಾಯೋಪಗಮನದಿಂ . . . ಅಚ್ಯುತೇಂದ್ರಪದಮಂ ಪಡೆದಂ (ಶಾಂತಿಪು. ೪-೧೦೯ ಪ) ; ಶೃಂಗರಿಸಿಕೊಂಡಿದ್ದಂಥಾ ಕಾಂತಿಯುಳ್ಳ ಶರೀರದ ಪುರುಷನಂ ಸ್ತ್ರೀಯರು ಬಯಸಿದೊಡೆ ಅದು ನಿರಾಪೇಕ್ಷ (ಕಾಮಶಾ. ೯-೧೯೭). ೨. ಬಯಕೆಗಳಿಲ್ಲದವನು ; ಏನನ್ನೂ ಬಯಸದಂಥವನು ; ನಿರಪೇಕ್ಷ : ಕಾನನಮಧ್ಯಸ್ಥಿತರುಂದ್ರಗಿರೀಂದ್ರಶೃಂಗದೊಳ್ ಆತ್ಮಪರಪರ್ಯಷ್ಟಿ ನಿರಾಪೇಕ್ಷರಾಗಿ . . . ತದದ್ರಿಶಿಖರದೊಳೊಂದೆಡೆವೆತ್ತು (ಶಾಂತಿಪು. ೬-೬೧ ಪ) ; ಗುರೂಪರೋಧವಶದಿಂ ಸ್ನಾನಾನ್ನಪಾನಂ ಪಿಲೇಪನಮಾಲ್ಯಾದಿಗೆ ತಾನೊಡಂಬಡುವನೇಂ ದೇವಂ ನಿರಾಪೇಕ್ಷನೋ (ಅಜಿಪು. ೫-೮೬).

[<ಸಂ. ನಿರಪೇಕ್ಷ]

ನಿರಾಬಾಧ (ಗು). ೧. ಬಾಧೆಯಿಲ್ಲದ ; ಅಡ್ಡಿಯಿಲ್ಲದ ; ನಿರಾತಂಕವಾದ. (ನಾ). ೨. ಬಾಧೆಯಿಲ್ಲದಿರುವಿಕೆ ; ಅಡ್ಡಿ, ಅಡಚಣೆಗಳಿಲ್ಲದಿರುವಿಕೆ ; ಸುಗಮತೆ : ಪುಲಿಕೇಶಿಯು ಸ್ವತಂತ್ರರಾಜ್ಯವನ್ನು ನಿರಾಬಾಧವಾಗಿ ಸ್ಥಾಪಿಸಿದನೆಂದೂ ಅವನ ಮಗನಾದ ಕೀರ್ತಿವರ್ಮನು ಅದನ್ನು ಸ್ಥಿರಪಡಿಸಿದುದಲ್ಲದೆ ಹಬ್ಬಿಸಿದನೆಂದೂ ತಿಳಿಯಬಹುದು (ಕರ್ಣಾಅ. ೫೩). [ಸಂ.]

ನಿರಾಬಾಧಕ (ನಾ). ನೋಯಿಸದಿರುವವನು ; ಅಹಿಂಸಾಪರ : ಅಕುಟಿಲರಿಗೇಕಿದು ನಿರಾಬಾಧಕರಿಗೇಕಿದು ಸಕಲಸುಜನಪ್ರಕರವಂದ್ಯರಿಗೇಕೆನುತ್ತ ಸುರಾರಿ ಚಿಂತಿಸಿದ (ಕುವ್ಯಾಅ. ೨-೩). [ಸಂ.]

ನಿರಾಬಾಧೆ (ನಾ). ಅಡ್ಡಿ, ಅಡಚಣೆಗಳಿಲ್ಲದಿರುವಿಕೆ : ದನುಜೇಜ್ಯಜ್ಞ ಕುಜಾಂಗಿರರ್ ಸಮವಿಲಗ್ನಕ್ಷೇತ್ರದೊಳ್ ಬಾಲ್ಯರಾಗಿ ನಿರಾಬಾಧೆಯಿನಿರ್ದೊಡಾ ಸಕಲಶಾಸ್ತ್ರೋಪೇತೆಯುಂ ಬ್ರಹ್ಮವಾದಿನಿಯುಂ ಖ್ಯಾತೆಯುಮಕ್ಕುಂ (ಜಾತತಿ. ೨೨-೨೩). [ಸಂ. ನಿರಾಬಾಧ]

ನಿರಾಭರಣ (ನಾ). ೧. ಆಭರಣವಿಲ್ಲದಿರುವುದು ; ಆಭರಣವನ್ನು ಧರಿಸದಿರುವುದು : ಅವಳು ಬಿಳಿಯ ಸೀರೆಯುಟ್ಟಿದ್ದಾಳೆ. ನಿರಾಭರಣ ಭೂಷಿತಳಾಗಿದ್ದಾಳೆ (ಮಹಾಣ. ೨೩೭). ೨. ಆಭರಣ ಧರಿಸದೆ ಇರುವ ವ್ಯಕ್ತಿ : ನಾಲ್ವರೂ ನಿರಾಭರಣರು. ಅಚ್ಚ ಬಿಳಿಯ ರೇಶಿಮೆಗಳನ್ನು ಉಟ್ಟ ಅವರು ವೈರಾಗ್ಯದ ಮೂರ್ತಿಗಳಂತೆ ಕಂಡರು (ಸವತಿ. ೩೧). ೩. ಕಾವ್ಯಾಲಂಕಾರವಿಲ್ಲದಿರುವುದು. ೧, ೩ : ಅರುಹನ ಮೂರ್ತಿಯಂತಿರೆ ನಿರಾಭರಣಂ ಮೆಱೆಯಲ್ಕೆ ಪೇಳ್ದಪೆಂ ಚರಿತಪುರಾಣಮಂ (ಅನಂಪು. ೧-೩೬).

ನಿರಾಭರಣಸುಂದರಿ = ಆಭರಣವನ್ನು ಧರಿಸಿಕೊಂಡಿರುದ ಚೆಲುವೆ ; ಸಹಜಸೌಂದರ್ಯವನ್ನು ಹೊಂದಿರುವವಳು : ನಿರಾಭರಣಸುಂದರಿಯರು ಹೇಗಿರುತ್ತಾರೆ ಅಂತ ಇವತ್ತು ಅರ್ಥವಾಯಿತು (ದೂಪಟ್ಟ. ೩೫). [ಸಂ.]

ನಿರಾಭರಣೆ (ನಾ). ಆಭರಣವನ್ನು ಧರಿಸಿಕೊಂಡಿರದವಳು : ಪಾಳ್ಯನೆಯ ತೆರದಿನೆಸೆದಳ್ ಮಾತೆ, ನಿರ್ಜನೆ, ನಿರಾಭರಣೆ, ನಿಶ್ಚಲೆ, ರವಿಹೀನೆ (ಕ್ರೀರಾಮಾ. ೧೦೭-೧೯೮) ; ನೀನು ನಿರಾಭರಣೆಯಾಗಿ ಅನಾಥಳಂತೆ ಕಾಣುತ್ತಿದ್ದರೂ ನಿನ್ನ ಮುಖದಲ್ಲಿ ರಾಜಶ್ರೀಯು ವಿರಾಜಿಸುತ್ತಿದೆ (ಕ್ರೀರಾಯ. ೨೨೨) ; ನಾನು ನಿರಾಭರಣೆ ಇರಬಹುದು. ಆದರೆ ಸುಂದರಿ ಖಂಡಿತ ಅಲ್ಲ (ದೂಬೆಟ್ಟ. ೩೫). [ಸಂ. ನಿರಾಭರಣ]

ನಿರಾಭಾರಿ (ನಾ). [ವೀಶೈ] ವಿರಾಗಿ ; ವಿರಕ್ತ ; ಸಂನ್ಯಾಸಿ : ಸಹಜ ನಿರಾಭಾರಿಗಳ ಮೇಳದಿಂದ ನಿಸ್ಸೀಮದ ನಿಭ್ರಾಂತಿನ ಸಂಗದಲ್ಲಿ ನಿರಾಶಾಪದವೆ ಅನುಕೂಲ (ಅವಚಂ. ೮೪-೩೭೪) ; ಅಂಗದ ನಿರಾಭಾರಿಗಳೆಲ್ಲರು ಕೂಡಿ ಲಿಂಗದ ಹೊಲಬ ಬಲ್ಲೆವೆಂದು ಅನಂಗನ ಬಲೆಯೊಳಗೆ ತಾವಿಲ್ಲವೆಂದು . . . ವಿಕಳತೆಗೊಂಡವರ ನೋಡಾ (ಮೋಳಿಮಾ. ೧೭೦-೬೩೪) ; ಇಟ್ಟ ಕಬ್ಬಿನ ಜೂಜಿನೊಳಗೊಬ್ಬೊಟ್ಟನರ್ಥದೊಳಿನಿತುಳಿದಡಂ ದೃಷ್ಟಿಸಲ್ಕದು ಸೋಲವಲ್ಲಾ ಕೇಳ್ ನಿರಾಭಾರಿ (ಬಸಪು.೨೦-೨೩); ನಿಸ್ಸಂಗಿ ನಿರ್ಮಲ ನಿರಾಭಾರಿ . . . ಪ್ರಭುಜಂಗಮದ ಪಾದಮಿರ್ಕೆನ್ನ ಹೃದಯದೊಳಗೆ (ವೀಶೈಪು. ೧-೧-೫) ; ನಿಜಸುಖವಿತ್ತು ಗುರುಸಿದ್ಧದೇವ ನೆನಿಸುವ ನಿರಾಭಾರಿ ಗುರುತಿಲಕ(ಕೈಕಸ.೧-೧-೫).[ನಿರ್-+<ಆಭಾರ?]

ನಿರಾಭಾಸಿ (ನಾ). ಪರಮಾತ್ಮ : ಆಶ್ರಯವು ತನಗಿಲ್ಲ ತಾನೇ ಆಶ್ರಯವು ತನಗನ್ಯವಿಲ್ಲ ನಿರಾಶ್ರಯ ನಿರಾಭಾಸಿ ನಿತ್ಯಾನಂದಪದವೆಂದ (ಸಿಭಾಗ. ೨-೪-೮). P ಈ ಶಬ್ದಕ್ಕೆ ಅಸದೃಶ, ಅದ್ವಿತೀಯ ಎಂದೂ ಮಿಥ್ಯಾಜ್ಞಾನಕ್ಕೆ ಗೋಚರನಾಗದವನು ಎಂದೂ ಅರ್ಥವನ್ನು ಸಾಧಿಸಬಹುದು. [ಸಂ. ನಿರಾಭಾಸಿನ್]

ನಿರಾಮಯ (ಗು). ೧. ರೋಗವಿಲ್ಲದ ; ಆರೋಗ್ಯದಿಂದ ಕೂಡಿದ. ೨. ದುಃಖ, ಸಂಕಟಗಳಿಲ್ಲದ ; ಉಪದ್ರವವಿಲ್ಲದ ; ಕ್ಷೇಮಕರವಾದ. ೩. ನಿಷ್ಕಳಂಕವಾದ ; ಪರಿಶುದ್ಧವಾದ : ನಿಸದಂ ತನ್ನ ನಿರಾಮಯಾಕೃತಿ ಜಗದ್ವಿಖ್ಯಾತಮಾದತ್ತು (ಪುಷ್ಪಪು. ೧-೨೪). (ನಾ). ೪. ಸಂಕಟವಿಲ್ಲದಿರುವಿಕೆ ; ನೆಮ್ಮದಿ ; ಸಂತೋಷ : ಆ ಮುಕುಂದನ ನೆನಹು ನಮಗೆ ನಿರಾಮಯವು (ಕುಮ್ಯಾಸ. ೧೧-೨೮) ; ಇನ್ನೆತ್ತಂ ನಿರಾಮಯಂ, ನಿರಾಕುಳಂ ; ಸುಭಿಕ್ಷಂ ; ಶಾಂತಿ (ರಾಮಾಶ್ವ. ೧೬೩-೧೮). ೫. ರೋಗವರ್ಜಿತನಾದವನು ; ನಿರೋಗಿ ; ಆರೋಗ್ಯಶಾಲಿ : "ನಿರಾಮಯಂ ಪಟುವೆನಿಪ್ಪ ನಾರೋಗ್ಯಮಯಂ" (ಪಸ್ತುಕೋ. ೬೨-೩೩) ; ನಿರಾಮಯನುಮಪ್ರತಿರೂಪನುಮಾಗಿ ದೇವಕಾಂತಾದಯಿತಂ ನಿರಾಕುಳತೆಯಂ ತಳೆದು (ಪರ್ಧಮಾ. ೧೧-೧) ; ಇಂತಹ ಸಂಜೀವಿನಿಯ ಪ್ರಭಾವದಿಂದ ಜೀವನು ತನ್ನ ಸಕಲ ಆಧಿವ್ಯಾಧಿಗಳನ್ನೂ ಕಳೆದುಕೊಂಡು ನಿರಾಮಯನಾಗುವನು (ಶಕ್ತಿವಿ. ೬೩). ೬. ಮೋಕ್ಷ ; ಕೈವಲ್ಯ ; ಮುಕ್ತಿ : "ಮೋಕ್ಷಂ ಮುಕ್ತಿಪದಂ ಬ್ರಹ್ಮಂ ಕೈವಲ್ಯಪದವಿ ಶಿವಗತಿ ನಿರಾಮಯಂ ನಿರ್ವಾಣಂ" (ಪಸ್ತುಕೋ. ೨೧-೧೯) ; ಮಿಕ್ಕಭವ್ಯತೆಯ ಕೇಡಿಂದಕ್ಕುಮಕ್ಷೂಣಮೋಕ್ಷಪದಂ ಮುಕ್ತಿಪದಂ ನಿರಾಮಯಪದಂ ನಿರ್ವಾಣಸೌಖ್ಯಾಸ್ಪದಂ (ಸುಕುಮಾ. ೮-೩೩) ; ಭವ್ಯತೆ ನಿರಾಮಯ ಲಕ್ಷ್ಮಿಯ ದೂತಿಯಾಕೆಯೊಳ್ ಸಂದೊಡಗೂಡುವನ್ನಮೆಡೆಯೊಳ್ ನಿಲಲೀಗುಮೆ ಶುದ್ಧವೃತ್ತರಂ (ಚಂದ್ರಪು. ೭-೨೭). ೭. ಮುಕ್ತನಾದವನು : ನಿರುತ್ತರ ನಿರಾಮಯ ನಿರ್ವಿಕಾರಾಕಾರ ಚಿತ್ತೈಸು (ಬಸಪು. ೬೧-೪೩) ; ಆ ಮಹೇಶ್ವರಪಂಕ್ತಿಯಲ್ಲಿ ನಿರಾಮಯನು ನಿಮ್ಮಯ್ಯ ನಿಹನು ಸತೇಜದಲಿ (ಕುಮ್ಯಾಸ. ೧-೯೨) ; ನಿರಾಮಯ ನಿರ್ಗುಣ . . . ನಿಷ್ಕಳಂಕ ಜಯಶಂಕರ ನಿರ್ಜಡ ಶಾಂಭವೀಧವಾ (ಶಬಶಂ. ೫-೨೪) ; ಇನ್ನು ಮೇಲೆ ನನ್ನ ಹಾಡಿಗಿಲ್ಲವಯ್ಯ ತಾಳ ಲಯ ; ನಾ ನಿರಾಮಯ (ಭಾರಂಗ. ೫೩-೨). [ಸಂ.]

ನಿರಾಮಿಷ (ಗು). ಮಾಂಸ ತಿನ್ನದ ; ಸಸ್ಯಾಹಾರದ : ಹಾಗೆ ಸೇರುವ ಜನರು ನಿರಾಮಿಷ ಆಹಾರಿಗಳೇ ಇರುತ್ತಿದ್ದರೆಂದಲ್ಲ. ಎಷ್ಟೋ ಜನರು ಸಾಮಿಷ ಆಹಾರಿಗಳೂ ನಿರ್ಗ್ರಂಥಸಂಘದಲ್ಲಿ ಸೇರಿದರು (ಜೈನಪ. ೫೨೭) ; 'ಜೈನೆಡೆ' ಎಂದರೆ ಜೈನರ ಎಡೆ ಎಂದರ್ಥ. ಎಂದರೆ ನಿರಾಮಿಷ ನೈವೇದ್ಯ ! (ಕಾನೂರು. ೨೫೦). [ಸಂ.]

ನಿರಾಮ್ಲ (ನಾ). [ಭೌತವಿ] ಆಮ್ಲವಲ್ಲದುದು : ಜಲಜನಕದೊಡನೆ ಒಂದು ಅಥವಾ ಹೆಚ್ಚಾದ ಮೂಲದ್ರವ್ಯಗಳ ಸಂಯೋಗದಿಂದ ಹುಟ್ಟಿ . . . ಕ್ಷಾರವಸ್ತುಗಳಿಂದ ನಿರಾಮ್ಲವಾಗತಕ್ಕದ್ದಾಗಿಯೂ ಇರುವ ರಾಸಾಯನಿಕ ವಸ್ತು(Acid. ಇಂಕನಿ). [ಸಂ.]

ನಿರಾಯಸ (ನಾ). = ನಿರಾಯಾಸ : ಅನಾಯಾಸದಿಂದ ಮನೆಯ ಮಾಡಿ ನಿರಾಯಸದಿಂದ ಪರಮಸುಖಿ . . . ಕೂಡಲಸಂಗನ ಶರಣರ ನಿಲವು (ಬಸವ. ೯೧೬) ; ಪೊಡವಿಯೊಳಗಿಂತೀಗ ಬಸವಂ ಪಡೆದನಮಮ ನಿರಾಯಸದೊಳೀ ಮೃಡನ ಕರುಣಮನು (ಬಸಪು. ೪-೭೩) ; ಆಯಿತೇ ನವರಿಗೆ ಸರೋಜದಳಾಯತಾಕ್ಷನ ಚರಣಸೇವೆ ನಿರಾಯಸದ ಸಹವಾಸ ಭೋಜನವೆಂದನಾ ನೃಪನ (ಕುಮ್ಯಾಅ. ೧೪-೧೩) ; ನಿರಾಯಸದೊಳರಿಭಟನ ಕಾಲನ ಬಾಯೊಳಡಸದಡಿಂದ್ರಜಿತುವೆಂಬಸುರನಲ್ಲೆಂದ (ಶೌರರಾ. ೬-೪೦-೪). [<ಸಂ. ನಿರಾಯಾಸ]

ನಿರಾಯಾಸ (ನಾ). ಆಯಾಸವಿಲ್ಲದಿರುವಿಕೆ ; ಸುಲಭತೆ ; ಅನಾಯಾಸ: ನಿರಾಯಾಸವಾಗಿ ಪದವಿಯನ್ನು ಪಡೆಯಬಹುದು(ಚಂಗಾಳ್ವ.೩); ನಿರಾಯಾಸವಾಗಿ ಬಂದದ್ದನ್ನು ಏಕೆ ಬಿಡಬೇಕೂಂತ ಇರಬಹುದು (ವೀರಯೋ. ೨೪) ; ರೈತರ ಮೇಲೆ ಆವರ ಪ್ರೀತಿಯಿತ್ತು. ಎಂತಲೇ ಲಾವಣಿಹಣ ಅವರಿಗೆ ನಿರಾಯಾಸವಾಗಿ ಬಂದು ಬೀಳುತ್ತಿತ್ತು (ಬೆಸಂ. ೧೩೩). [ಸಂ.]

ನಿರಾಯುಧ (ನಾ). ಆಯುಧವಿಲ್ಲದವನು : ನಿರಾಯುಧನನಿಸೆಂದ ನಂತವೀರ್ಯನಂ ದಮಿತಾರಿಯಿಂತೆಂದಂ (ಶಾಂತಿಪು. ೪-೪೮ ಪ) ; ಜಲವ ಹೊಕ್ಕನ . . . ವಲ್ಮೀಕಸಂಗತನನು ನಿರಾಯುಧನ ಕೊಲುವುದನುಚಿತವೆಂಬ ಶಾಸ್ತ್ರವ ತಿಳಿದು ನಂಬಿದೆ (ಕುಮ್ಯಾಗ. ೫-೨೮) ; ಧರ್ಮವ ಬಲ್ಲೆಯಾಗಿ ನಿರಾಯುಧರನೆಸಲೊಲ್ಲೆ (ಸಿಭಾಗ. ೧೦-೪-೪೧) ; ಹರಿ ಚಕ್ರಮಂ ನೀಗಿ ಬಂದಾ ನಿರಾಯುಧಂ ಪಾಲ್ಗಡಲೊಳಿರುತಿರ್ದನು (ವೀಶೈಪು. ೨-೧೩-೩೮). [ಸಂ.]

ನಿರಾರ (ನಾ). ಆಹಾರವಿಲ್ಲದಿರುವುದು ; ಉಪವಾಸ; ನಿರಾಹಾರ : ಒಪ್ಪತ್ತು ಉಂಡ್ರ ಒಪ್ಪತ್ತು ನಿರಾರ (ಗಂಗಾಸಾ. ೧೦೧).
[<ಸಂ. ನಿರಾಹಾರ./ತುಳು. ನಿರಾರ]

ನಿರಾಲಂಬ, ನಿರಾಳಂಬ(ನಾ). ೧. ಆಶ್ರಯವಿಲ್ಲದಿರುವಿಕೆ; ದಿಕ್ಕಿಲ್ಲದಿರುವಿಕೆ : ಬಳಿಕ ಪಸುಳೆಗೆ ನಿರಾಲಂಬಮಾಗಲಾ ಪಟ್ಟಣದೊಳೆಲ್ಲರ್ಗೆ ಕಾರುಣ್ಯಕೀಡಾದನು (ಜೈಮಿಭಾ. ೨೮-೧೯); ಆದುದರಿಂದ ಆ ಆಪ್ರಧಾನ ಕರ್ತೃಳ ವಾಕ್ಯವು ನಿರಾಲಂಬವಾಗಿ ತ್ರಿಶಂಕುವಿನಂತೆ ಉಳಿದುಬಿಡುತ್ತದೆ (ಕನ್ನಇ.೧೭೪). ೨. ಯಾವುದನ್ನೂ ಅವಲಂಬಿಸದುದು ; ಸ್ವತಂತ್ರವಾದುದು : ಸಹಜದಿಂದ ನಿರಾಲಂಬವಾಯಿತ್ತು ನಿರಾಲಂಬದಿಂದ ನಿರಾಳವಾಯಿತ್ತು (ಅವಚಂ. ೧೬೪-೬೪೨) ; ನಿರ್ಮೂಲವಾಯಿತ್ತಾಹಾ ನಿರಾಲಂಬವಾಯಿತ್ತಾಹಾ ನಿರಾಕುಳವಾಯಿತ್ತಾಹಾ ಪುಣ್ಯದ ಫಲ ತೋಱ ಬಯಲನೆ ಕೂಡಿತ್ತು (ಸೀಲಪ. ೩೧-೧೦೧); ನಿರಂಜನತತ್ವ . . . ಸರ್ವಥಾ ನಿರಾಲಂಬಮೆನಿಪುದು (ಗಗತಾ. ೧೮-೪೧) ; ಸ್ವಾತ್ಮಾರಾಮ ಸ್ವಾಮಿಯು ರಾಜಯೋಗ . . . ನಿರಾಲಂಬ, ನಿರಂಜನ, ಜೀವನ್ಮುಕ್ತಿ, ಸಹಜಾವಸ್ಥಾ, ತುರೀಯಾವಸ್ಥಾ ಇವುಗಳೆಲ್ಲ ಒಂದೇ ಅರ್ಥವೆಂದು ತಿಳಿಸಿರುತ್ತಾನೆ (ಭಾರದ. ೧೬೫). ೩. ಸ್ವತಂತ್ರನಾದವನು : ನಿರುಪಮ

ನಿರಾಲಂಬ ನಿತ್ಯನಿರ್ಭಯ . . . ಪುರಹರನೆ (ಸೋಮೇಶ್ವ. ೧-೫).

ನಿರಾಳಂಬ : ೨. ವನಧಿದ್ವೀಪಕುಲಾದ್ರಿಮುದ್ರಿತಜಗಚ್ಚಕ್ರಂ ಯುಗಾಂತಪ್ರಭಂ ಜನನೀರಾವತಜಕ್ರದಂತೆ ತಿರಿವಂತಾಳ್ದಂ ನಿರಾಳಂಬಂ (ಆಜಿಪು. ೨-೩).

ನಿರಾಲಂಬನ (ಗು). ೧. ಆಧಾರವಿಲ್ಲದ; ಹುರುಳಿಲ್ಲದ: ನಿಷ್ಕಾರಣ ಕಾಯಕಂಪನನುಂ ನಿರಾಲಂಬನ ವಾಗಾಡಂಬರನುಂ ತಕ್ಕುದಲ್ತು (ಆದಿಪು. ೧೪-೪೧ ವ). (ನಾ). ೨. ಆಧಾರವಿಲ್ಲದುದು : ಪಂಜ—ಕಂತಿಯರ ಸಂವಾದವಾಕ್ಯೇಯನ್ನು ಅರ್ವಾಚೀನನಾದವನೊಬ್ಬನು ತನ್ನ ಯೋಗ್ಯತಾನುಗುಣದಿಂದ ಪ್ರಕಟಿಸುವುದು ನಿರಾಲಂಬನವಾದುದಲ್ಲ (ಕರ್ನಾಕ. ೫೮). [ಸಂ.]

ನಿರಾಲಂಬನವಾದ (ನಾ). (ವಸ್ತುವಿನ ಅವಲಂಬನೆಯಿಲ್ಲದೆ) ಜ್ಞಾನವನ್ನೇ ಮೂಲತತ್ವವನ್ನಾಗಿಟ್ಟುಕೊಂಡು, ಜ್ಞಾನಕ್ಕೆ ಪ್ರಾಧಾನ್ಯ ಕೊಟ್ಟಿರುವ ವಾದ : ಬೌದ್ಧರು ನಿರಾಲಂಬನವಾದವನ್ನು ಸ್ಥಾಪಿಸಿರುತ್ತಾರೆ, ಎಂದರೆ ವಸ್ತುವಿಲ್ಲದೆ ಜ್ಞಾನಮಾತ್ರವೇ ತತ್ವವೆಂದು ಭಾವ (ಹಿಂದಸಾ. ೨೦೯). [ನಿರಾಲಂಬನ + ವಾದ$_2$]

ನಿರಾಲಸ್ಯ (ನಾ). ಆಲಸ್ಯವಿಲ್ಲದಿರುವಿಕೆ; ಸೋಮಾರಿತನವಿಲ್ಲದಿರುವಿಕೆ; ಚಟುವಟಿಕೆ : ನಿರಾಲಸ್ಯದಿಂ ನಿರ್ಬಂಧದಿಂ ನಿರ್ವಿಕಲ್ಪದಿಂ ನೀವಿರ್ವರುಂ ನಿಶ್ಚಯಮೋದುವೊಡಾವುಮಾ ಮಾರ್ಗದಿಂದೋದಿಸಿ ಪಂಡಿತರಾಗೆ ಮಾಟ್ಪಿಂ (ಸುಳುಸೂ. ೨-೫೫ ವ). [ಸಂ.]

ನಿರಾಲೋಚಂ (ಅ). ಯೋಚನೆ ಮಾಡದೆ ; ನಿರ್ಯೋಚನೆಯಿಂದ : ಅನುರೂಪಂ ಕನ್ನೆಗೀತಂ ಕುಲಭುಜಬಲವಿದ್ಯಾಬಲಖ್ಯಾತನಿನ್ನಿಂಗೆ ನಿರಾಲೋಚಂ ಕುಡಲ್ವೇಟ್ಪುದು ಯುವತಿಯಂ (ಪಂಂಪಸೂ. ೧೦-೧೧೪). [ಸಂ.]

ನಿರಾವರಣ(ನಾ). ಭ್ರಮೆ, ಭ್ರಾಂತಿಗಳಿಲ್ಲದವನು; ಮಾಯಾರಹಿತ; ಪರಮಾತ್ಮ : ನಿತ್ಯ ನಿರ್ಭಯ ನಿರಾವರಣ . . . ಪಂಪಾವಿರೂಪಾಕ್ಷ ಶರಣು (ಹಚಿಕಾ. ೧-೪) ; ಜಯ ಜಯ ನಿರಾವರಣ ಜಯ ಪುಣ್ಯಮಯ ಚರಣ (ಚೆಒಪು. ೩೬-೧೧) ; ಜೀಯ ಶುದ್ಧಾನ್ವಯ ನಿರಂಜನ ನಿರಾವರಣ . . . ನೀನೇ ಸತ್ಯರೂಪ (ಜೈಮಿಭಾ. ೧೩-೨೮); ಪರಮಪಾವನ ನಿರ್ಗುಣ ನಿರಾವರಣ ನಿರವಯ . . . ಕೈಪಾಮ್ಯತೇಕ್ಷಣ ಪರಶಿವನುಂ(ಭೈರಸೂ.೧); ಪಾವನಪ ಗುರುಪಾದಪದ್ಮದ ಸೇವೆಯಲಿ ಸಂಸಾರವಳಿಯೆ ನಿರಾವರಣ ನಿಸ್ಸೀಮ ನಿಜ ನೀನೆಂದು ನಿಶ್ಚಯಿಸು (ಅಸ್ಮತ. ೫-೫೭). [ಸಂ.]

ನಿರಾವರಣೆ (ನಾ). ಭ್ರಮೆ, ಭ್ರಾಂತಿಗಳಿಲ್ಲದವಳು; ಪರಮೇಶ್ವರಿ: ನಿರುಪಮೆ ನಿರಾವರಣೆ ನಿರಜೆ ನಿರಹಂಕಾರೆ (ವಿಕೋಪು. ೧-೯).

[ಸಂ. ನಿರಾವರಣಾ]

ನಿರಾವಸಥ (ನಾ). ೧. ನೆಲೆಯಿಲ್ಲದವನು ; ವಸತಿಯಿಲ್ಲದವನು. ೨. ಸರ್ವವ್ಯಾಪಕ ; ಪರಮಾತ್ಮ : ರವಿಯಿಲ್ಲ ಬಿಸಿಲುಂಟೆಂಬ ದೆಸೆಯಂತೆ ನಿಷ್ಕ್ರಿಯಾತ್ಮಕ ನಿರ್ಮಳಂ ನಿರಾವಸಥ ನಿರುಪಾಧಿಕ ಜ್ಯೋತಿರ್ಮಯಾಕಾರ ಶಿವಲಿಂಗವಾದನಂದು (ಸಿದ್ಧರಾ. ೬-೧೩). [ಸಂ.]

ನಿರಾವಾಸ (ನಾ). = ನಿರಾವಸಥ ೨ : ವಿಶ್ವಾವಾಸನಂ ನಿರಾವಾಸನಂ . . . ಕೂರ್ತು ವಂದಿಸುವೆಂ (ವೀತ್ತಿಪು. ೬-೧-೩೫). [ಸಂ.]

ನಿರಾಶ (ನಾ). ೧. ಆಶಾಭಂಗ ; ನಿರುತ್ಸಾಹ ; ವಿಷಾದ : ಅವನು ನಿರಾಶದ ನಿಟ್ಟಿನಿಂದ ನಿಮಿಲೆಯನ್ನು ಗುರುತಿಸಿದನು (ರಕ್ತಧ್ವ. ೨೪೯). ೨. ಆಶಾಭಂಗವನ್ನು ಹೊಂದಿದವನು ; ನಿರಾಶೆಗೊಂಡವನು : "ಕಂಡುದ ಹಿಡಿಯಲೊಲ್ಲದೆ ಕಾಣದುದ ಹಿಡಿವೆನೆಂದು" ಅಪೇಕ್ಷಿಸಿ, ನೀಕ್ಷಿಸಿ, ನಿರಾಶರಾಗಿ ಪ್ರತಿನಿತ್ಯ ಕೊರಗುತ್ತಿದ್ದೇವೆ (ದೀಕಸ್ಮೃ. ೨).

[ಸಂ.]

ನಿರಾಶಕ (ನಾ). ೧. ಆಸೆಯಿಲ್ಲದವನು ; ಇಚ್ಛೆಯಿಲ್ಲದವನು. ೨. ಪರಮಾತ್ಮ : ಭಾಷೆಗೆ ತಪ್ಪ ನಿರ್ಗುಣ ನಿರಾಶಕ ನೀಕಳಂಕ ಮಲ್ಲಿಕಾರ್ಜುನ (ಪೋಳಸೂ. ೧೨೬-೪೧೧). [ಸಂ.]

ನಿರಾಶಾಪದ (ನಾ). ಆಸೆಯಿಲ್ಲದಿರುವ ಸ್ಥಿತಿ ; ನಿಸ್ಪೃಹ ಸ್ಥಿತಿ : ಸಹಜ ನಿರಾಭಾರಿಗಳ ಮೇಳದಿಂದ ನಿಸ್ಸೀಮದ ನಿಭ್ರಾಂತಿನ ಸಂಗದಲ್ಲಿ ನಿರಾಶಾ[ಪಾರ್ಶ್ವ. ಸಾ]ಪದವೆ ಅನುಕೂಲ (ಅಸಚಂ. ೪೪-೩೭೪).

[ಸಂ.]

ನಿರಾಶಾವಾದ (ನಾ). ಆಸೆಯೇ ಇಲ್ಲವೆಂಬ ಭಾವನೆಯನ್ನು ಹೊಂದಿರುವಿಕೆ; ಜೀವನ, ಜಗತ್ತು ಯಾವಾಗಲೂ ದುಃಖಮಯವೆಂಬ ಮನೋಭಾವ : ನಿರಾಶಾವಾದ, ತಳಬುಡವಿಲ್ಲದ ಆಶಾವಾದ . . . ಇವೇ ಮೊದಲಾದ ದರ್ಶನಗಳು ಜಿಕ್ರಮಡುವುಗಳಿದ್ದಂತೆ (ಸಸ್ಯಕಾ. ೧೧) ; ಸಾತ್ವಿಕರಿಗೆ ಮಾತ್ರ ಮೋಕ್ಷಪ್ರಾಪ್ತಿ ಎನ್ನುವ ಭೇದ ಭಾವದ ನಮ್ಮ ಮತ ನಿರಾಶಾವಾದವಲ್ಲವೆ ? (ಸಂಸ್ಕಾ.೮. ೪೦). [ಸಂ.]

ನಿರಾಶಾವಾದಿ (ನಾ). ಆಶೆಯನ್ನು ಕಳೆದುಕೊಂಡವನು ; ಭರವಸೆಯನ್ನು ತಾಳದವನು ; ನಿರುತ್ಸಾಹಿ : ಆದರ್ಶವಾದಿ ನಿರಾಶಾವಾದಿಯಾಗಲು ಈ ನಾಲ್ಕು ಹರದಾರಿಯ ಜಾಣತನವೆ ಕಾರಣ (ದೀಕಸ್ಮೃ. ೬).

[ಸಂ. ನಿರಾಶಾವಾದಿನ್]

ನಿರಾಶಾಸಂಪನ್ನ (ನಾ). ಆಸೆಯಿಲ್ಲದವನು; ನಿಸ್ಪೃಹನಾದವನು : ಈಯಾಶೆ ಎಂಬ ವಿಧಿ ಶಿವನೊಲಿದವರನು ಹೊದ್ದಲಮ್ಮದಾಗಿ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನ ಶರಣರು ನಿರಾಶಾಸಂಪನ್ನರು (ಉರಿಶ. ೯೯-೮೩). [ಸಂ.]

ನಿರಾಶೆ (ನಾ). ೧. ಆಶೆಯಿಲ್ಲದಿರುವುದು ; ಇಚ್ಛೆಯಿಲ್ಲದಿರುವುದು ; ಅನಿಚ್ಛೆ : ನಿರಾಶೆ ನಿರ್ಭಯ ಕೂಡಲಸಂಗಮದೇವಾ ನೀನೊಲಿದ ಶರಣಂಗಲ್ಲದಿಲ್ಲ (ಬಸವ. ೮೫೪) ; ದುರಾಶೆಯಂ ಬಿಟ್ಟು ನಿರಾಶೆಯಾಗಿ ಲಿಂಗವನಾಶ್ರೈಸಿದಡೆ ಪ್ರಸಾದವಪ್ಪುದು (ಉರಿಶ. ೫೧-೪೪) ; ನಿರಾಶೆಯುಳ್ಳವನಲ್ಲಿ ಆಶೆ ಮಾಡಿದರೆ ಭೋಷ ಹೋಗದೇ?(ಗಾದೆ). ೨. ಆಶಾಭಂಗ ; ಆಸೆಗೇಡು ; ಆಸೆಯು ಭಂಗವಾಗುವುದು : ನಿರಾಶೆಯ ಬಸಿರಿನಲ್ಲಿಯೇ ಆಶೆಯ ಬೀಜವಿದೆ (ಕಲ್ಲೋಲ. ೪೨-೧೧೧) ; ಮನಸ್ಸಂಕೀರ್ಣತೆ ತನ್ನ ಪ್ರಭಾವವನ್ನು ಬೀರಲು . . . ಕಾರಣ ಅವನ ಗುಪ್ತ ಮನಸ್ಸು ನಲ್ಲಡಗಿರುವ ನಿರಾಶೆ (ಶಿಕ್ಷದ. ೬೫೧). [ಸಂ. ನಿರಾಶಾ]

ನಿರಾಶೆಗೊಳಿಸು (ಕ್ರಿ). ಆಶಾಭಂಗವನ್ನುಂಟುಮಾಡು : ಹಾಗಾದರೆ ನಮ್ಮನ್ನು ನಿರಾಶೆಗೊಳಿಸದೆ . . ಇರೋ ಹಾಗೇ ಇಲ್ಲ ಅಂತ ಕಾಣೆ ಸುತ್ತೆ (ರಂಗನಾ. ೧೦೨) [ನಿರಾಶೆಗೊಳು + – ಇಸು$_5$]

ನಿರಾಶೆಗೊಳು, ನಿರಾಶೆಗೊಳ್ಳು (ಕ್ರಿ). ಆಶಾಭಂಗವನ್ನು ಹೊಂದು; ನಿರುತ್ಸಾಹಗೊಳ್ಳು : 'ನಿರಾಶೆಗೊಳಿಸು' ಪರಾ. ನಿರಾಶೆಗೊಳ್ಳು: ಒಂದು ಜಾತಿಯ ಜನರಿದ್ದಾರೆ. ಅವರು ತುಂಬ ನಿರಾಶೆಗೊಂಡಿದ್ದಾರೆ (ಪುನರು. ೨೩೬). [ನಿರಾಶೆ + ಕೊಳು (< ಕೊಳ್$_1$)]

ನಿರಾಶೆಗೊಳ್ಳು 'ನಿರಾಶೆಗೊಳು' ನೋ.

ನಿರಾಶ್ರಮವಂತ (ನಾ). ಆಶ್ರಮಗಳ ವ್ಯವಸ್ಥೆಯನ್ನು ವಿಚಾರಿದವನು ; ಆಶ್ರಮಧರ್ಮಕ್ಕೆ ಹೊರತಾದವನು : ಶರಣ ಆಶ್ರಮವಂತನಾದಡೆ ಕಿಜ್ಜುದೆಂಬರು ಶರಣ ನಿರಾಶ್ರಮವಂತನಾದಡೆ ಹಿರಿದೆಂಬರು (ಅಖಂಡೇ. ೩೧೬-೪೯). [ಸಂ. ನಿರಾಶ್ರಮವತ್]

ನಿರಾಶ್ರಯ (ಗು). ೧. ಆಶ್ರಯವಿಲ್ಲದ ; ಆಧಾರವನ್ನು ಹೊಂದಿರದ. (ನಾ). ೨. ಯಾರ ಆಶ್ರಯವೂ ಇಲ್ಲದವನು. ೩. ಪರಮಾತ್ಮ : ನಿರಳ ನಿರೀಹ ನಿರ್ಭಯ ನಿರಾಶ್ರಯ . . . ಶಂಕರ ನಿರ್ಜಡ ಶಾಂಭವೀಧವಾ (ಶಬಶಂ. ೫-೨೪). [ಸಂ.]

ನಿರಾಶ್ರಿತ (ನಾ). ಆಶ್ರಯವನ್ನು ಕಳೆದುಕೊಂಡವನು ; ನೆಲೆಗೆಟ್ಟವನು ; ಆಧಾರವಿಲ್ಲದವನು : ಒಂದೂವರೆಲಕ್ಷ ಜನ ನಿರಾಶ್ರಿತರು . . . ಜನರಲ್ಲಿ ಉದ್ರೇಕಗೊಳಿಸುತ್ತಿದ್ದಾರೆ, ಗಲಭೆ ಎಬ್ಬಿಸುತ್ತಿದ್ದಾರೆ (ದಿಲ್ಲಿಪ. ೫೦). [ಸಂ.]

ನಿರಾಸ (ಗು). ೧. ವೈರಾಗ್ಯಭಾವದಿಂದ ಕೂಡಿದ: 'ನಿರಾಸಮತಿ' ಪರಾ. (ನಾ). ೨. ತೊಲಗಿಸುವುದು ; ಅಟ್ಟುವುದು ; ತಳ್ಳುವುದು : ಭಸ್ಮಾಲೇಪನಂಗೆಯ್ದು ಭಾಸುರಭಾಳಸ್ಥಳದಲ್ಲಿ ದುರ್ಲಿಪಿ ನಿರಾಸಂಗೆಯ್ದು (ವೃಷಪಿ. ೩೪-೩೩); ಅದಿನಾಥನ ಜನ್ಮಾವಳಿಯ ಕಥೆಗಳಲ್ಲಿ ಭೋಗದ ನಿರಾಸವನ್ನು ನೋಡಿದೆವು ; ಇನ್ನು ವಿಭವದ ನಿಷ್ಫಲತೆಯನ್ನು . . . ಭರತನ ವೃತ್ತಾಂತದಲ್ಲಿ ನೋಡಬೇಕಾಗಿದೆ (ಕಸಾಚ. ೯೧). [ಸಂ.]

ನಿರಾಸಕ (ಗು). ೧. ತಿರಸ್ಕರಿಸುವ ; ಖಂಡಿಸುವ : ಬ್ರಹ್ಮನು ಸ್ವತಂತ್ರ ಎಂದು ತಿಳಿದ ಹೊರತು ಅವನ ಪೂರ್ಣತ್ವವು ಸಂಭಾವಿತವಾಗುವುದಿಲ್ಲ. ಈ ಕಾರಣದಿಂದ ಸ್ವಾತಂತ್ರ್ಯಕ್ಕೆ ಉಪಪಾದಕವಾದ ಪರಪಕ್ಷ ನಿರಾಸಕ ಮತ್ತು ಸ್ವಪಕ್ಷಸ್ಥಾಪಕವಾದ ಪ್ರಮಾಣಚಿಂತೆಯು ಪ್ರಕೃತವಾಗಿರುವುದು (ಭಾತತ್ತ್ವ. ೯೧೧). ೨. ನಿವಾರಿಸುವ ; ನಾಶಪಡಿಸುವ : ಸರಸಿರುಹಸಂಭವಕೃತ ದುರಾಕ್ಷರವಿನಿಯತ ನಿರಾಸಕಮಹಾನಿರುಪಮಿತ ಮಹಿಮಾಢ್ಯನಂ ಪ್ರೌಢನನಮೌಢ್ಯನನು . . . ಕೊಂಡಾಡಿ (ಬಸಪು. ೪೬-೭೧). ೩. ವೈರಾಗ್ಯದಿಂದ ಕೂಡಿದ ; ತ್ಯಾಗಬುದ್ಧಿಯುಳ್ಳ : ಜಗವ ಸಿಕ್ಕಿಸುವ ವೇಷಲಾಂಛನಧಾರಿ ಸೆಟ್ಟಿಯಾಗಿ ಸರ್ವಪ್ರಕೃತಿದೇಶದಲ್ಲಿ ಬೆವಹಾರವ ಮಾಡುತ್ತಿರಲಿ ನಿರಾಸಕ ಕೋಲುಕಾಱ ತನುವಿನ ಸೆಟ್ಟಿಯ ತಡೆ ಬಿಟ್ಟತ್ತು (ಸುಂಕಬಂ. ೬೫೪-೨೬). (ನಾ). ೪. ವೈರಾಗ್ಯದಿಂದ ಕೂಡಿರುವವನು : ನಿತ್ಯ ನಿಶ್ಚಿಂತ ನಿರ್ಮಲ ನಿರ್ಮಾಯ ನಿರಾಸ[ಪಾಠಾಂ. ೪]ಕಂ (ಸಿದ್ಧೇಪ. ೧-೧). [ಸಂ.]

ನಿರಾಸಕ್ತ (ಗು). ೧. ಆಸಕ್ತಿಯಿಲ್ಲದ. (ನಾ). ೨. ಆಸಕ್ತಿಯಿಲ್ಲದವನು: ನಿರಹಂಕಾರ ನಿರವಯ ನಿರಾಸಕ್ತ ಪುರಹರನೆ (ಸೋಮಚ. ೧-೫). [ಸಂ.]

ನಿರಾಸಕ್ತಿ (ನಾ). ಆಸಕ್ತಿಯಿಲ್ಲದಿರುವಿಕೆ : ಜಯಂತನ ದನಿಯಲ್ಲಿ ನಿರಾನಂದ, ನಿರಾಸಕ್ತಿ, ನಿರಾಭಯ ತುಂಬಿ ತುಳುಕುತ್ತಿದ್ದಿತು (ಜಯಂತ. ೨೩೭). [ಸಂ.]

ನಿರಾಸಮತಿ (ನಾ). ಆಸಕ್ತಿಯಿಲ್ಲದಿರುವುದು ; ವಿರಕ್ತಿ ; ವೈರಾಗ್ಯ: ಬೇಸತ್ತು ನಿರಯದನುಭವಗೈಯಲಾರದೆ ನಿರಾಸಮತಿಯಿಂ ಜನ್ಮಕರ್ಮಗಳ ನೆನೆನೆನೆದು ಕೂಸು ತನ್ನೊಳ್ ತಾನೆ ಹಂಬಲಿಪ ತೆರನದೇನೆಂಬೆನಚ್ಚರಿಯ ಪರಿಯ (ವೆಂಕಾರಾ. ೨-೩೫-೧೦). [ನಿರಾಸ + ಮತಿ]

ನಿರಾಸಮಾರ್ಗ (ನಾ). ವೈರಾಗ್ಯಮಾರ್ಗ : 'ಜಗನ್‌ಮಿಥ್ಯೆ'ಯನ್ನು ಪ್ರತಿಪಾದಿಸುವ ಶುದ್ಧಾದ್ವೈತಮಾರ್ಗ, ಮಾಯಾಮಾರ್ಗ, ಕೇವಲ ನಿವೃತ್ತಿಮಾರ್ಗ, ಸಂನ್ಯಾಸಮಾರ್ಗ, ನಿರಾಸಮಾರ್ಗ (ವಚಸಂ. XXXII ಒಳಗೆ ಪ್ರವೇಶ). [ನಿರಾಸ + ಮಾರ್ಗ]

ನಿರಾಸೆ (ನಾ). ೧. ಆಸೆಯಿಲ್ಲದಿರುವುದು ; ನಿರಿಚ್ಛೆ : ಆಶೆಯೇ ದಾಸತ್ವ ನಿರಾಸೆಯೇ ಈಶತ್ವ ದಾಸತ್ವದ ಈಶತ್ವದ ಅನುವ ವಿಚಾರಿಸಿ ನಿರಾಸೆಯಾಗಿಪ್ಪುದೆ ಈಶಪದವಯ್ಯ (ಉರಿಪ. ೯೮-೭೯) ; ಆಸೆಯನಳಿದು ನಿರಾಸೆಯಲ್ಲಿ ನಿಂದು ವೇಷವ ಮಱೆದು ಜಗದ ಹೇಸಿಯಾಟವ ತೊಱೆದು (ವಚಸಂ. ೩೭೫-೩೦). ೨. ಆಶಾಭಂಗ ; ಉತ್ಸಾಹಹೀನತೆ : ಬಾಳಿನಲ್ಲಿ ಜಿಹಾಸೆ, ನಿರಾಸೆ ಹೊಂದಿದ್ದ (ಮುನಿಮಾ. ೧೯೨) ; ನಂಜಪ್ಪಾಜಿಯು ನಿರಾಸೆಯ ನಗುವನ್ನು ನಕ್ಕು . . . ಎಂದನು (ಶ್ರೀರಾಯ. ೧೬). [<ಸಂ. ನಿರಾಶಾ]

ನಿರಾಸ್ರವ (ನಾ). [ಜೈನ] ಕರ್ಮದಿಂದ ಮುಕ್ತನಾದವನು ; ಕರ್ಮವನ್ನು ಕ್ಷಯಿಸಿದವನು : ಕಾಲಾಂತದೊಳಾ ಜಿನಂ ವೃಜಿನಮಂತವಿಸುತ್ತೆ ನಿರಾಸ್ರವಂ ತ್ರಿಲೋಕಾಂತಮನೆಯ್ದೆ ತಾಮುಮಿರದೆಯ್ದಿದ ರಾತ್ಮನಿಕೇತನಂಗಳಂ (ಶಾಂತಿಪು. ೧೨-೪೬). 'ಆಸ್ರವ' ಪರಾ. [ಸಂ.]

ನಿರಾಹಾರ (ನಾ). ೧. ಆಹಾರವನ್ನು ತೆಗೆದುಕೊಳ್ಳದೆ ಇರುವುದು; ಅನಶನ ; ಉಪವಾಸ : ಈ ನಿರಾಹಾರವು ನಿರರ್ಥಕವೇನನೆಂಬೆನು ಜೀಯ ಮುಱುದಭಿಮಾನ ಬೆಸುವುದೆ ಬಣ್ಣವಳಿವುದೆ ಬಂದ ದುರಿಯಶದ (ಕುಪ್ಯಾಅ. ೨೧-೨೦) ; ಕೋಗಿಲೆಯ ನಿಡುಸರಂ ಪಾರಿವದ ಕಲ್ಲುಣಿಸುಗೂಗೆಗಳ ಕಣ್ದೊಳಸು ಬಕನ ಮೌನದ ಬೆಱಗು ನಾಗದ ನಿರಾಹಾರಂ. . . ಅಳುವ ಶಿಶುವಂ ನೋಡಲಾಗಿ ಬಂದೆಡೆಗೊಂಡ ದುಃಖಾತಿರೇಕಮೆಂಬಂತೆ ಕಾಣಿಸುತಿರ್ದುದು (ಜೈಮಿಭಾ. ೨೮-೩೮) ; ಏಕಾದಶಿವ್ರತ ನಿರಾಹಾರವು ನಮಗೆ (ಕರ್ನಾಕ. ೨೬೮). ೨. ಆಹಾರವನ್ನು ಸ್ವೀಕರಿಸದಿರುವವನು ; ಉಪವಾಸವನ್ನಾಚರಿಸುವವನು : ನಿರಾಹಾರ ನಿಜನಿರಂಜನ ಪರಮಾತ್ಮ ಭಾವನಾನಿರತ ಪ್ರಮತ್ತ ಸಂಯತಂಗೆ ಸೂಕ್ಷ್ಮಪದಾರ್ಥಂಗಳೇನಾನುಂ ಸಂಶಯಮಾದೊಡೆ (ಪಸಾರ. ೫೩೪) ; ಅವನು ಕೋಪದಿಂದ ಒಂದು ದಿನ ಪೂರ್ತಿ ನಿರಾಹಾರನಾಗಿದ್ದನು (ರೂಢಿ). [ಸಂ.]

ನಿರಾಹಾರವ್ರತ (ನಾ). ಉಪವಾಸವ್ರತ : ದರ್ಭಶಯ್ಯೆಯಲ್ಲಿ ನಿರಾಹಾರವ್ರತ ಹಿಡಿದು ಮಲಗುತ್ತಿದ್ದಂತೆ ನಾನೂ ಬರಿಯ ಹೊಟ್ಟೆಯಲ್ಲಿ ಹೊರಳಾಡಿದೆ (ನಂಟರು. ೩೮). [ನಿರಾಹಾರ + ವ್ರತ]

ನಿರಾಹಾರಿ (ನಾ). ೧. ಆಹಾರವಿಲ್ಲದವನು ; ತಿನ್ನುವುದಕ್ಕೇನೂ ಇರದವನು. ೨. ಉಪವಾಸವಿರುವವನು ; ಆಹಾರವನ್ನು ತೆಗೆದುಕೊಳ್ಳದಿರುವವನು : ದಂಪತಿಗಳಿಬ್ಬರೂ ನಿರಾಹಾರಿಗಳಾಗಿ ನಿಯಮಸ್ತರಾಗಿ ಬಾಯಿಬೀಗ ಸಹಿತವಾಗಿ ತಿರುಪತಿಗೆ ಹೋಗಿ (ಈಶ್ವಸ್ವ. ೫-೧೨) ; ಕಡೆಕಡೆಗೆ ನಿರಾಹಾರಿಯಾಗಿ ತಪಸ್ಸಿಗೆ ಕುಳಿತರು (ರಾಜ್ಯೋದ. ೧೦೪). [ಸಂ. ನಿರಾಹಾರಿನ್]

ನಿರಾಳ (ಗು). ೧. ಪರಿಶುದ್ಧವಾದ ; ನಿರ್ಮಲವಾದ : "ನಿರಾಳ—ನಿರಾವಿಲ = ಪರಿಶುದ್ಧ" (ತದ್ಭಕೋ. ೨೨) ; ಒಡಲಿಲ್ಲದ ನಿರಾಳಕರ್ತೃ ಕೂಡಲಸಂಗಮದೇವ ಜಂಗಮಮುಖವಾದನಾಗಿ ಮತ್ತೊಂದನಱಿಯೆನಯ್ಯಾ (ಬಸವ. ೩೯೮) ; ಸಂಗಯ್ಯನಲ್ಲಿ ಕೂಡಿ ನಿರಾಳ ಪ್ರಸನ್ನಮೂರ್ತಿಯಾದ ನಮ್ಮ ಬಸವಯ್ಯನು (ನೀಲಪ.೧-೧) ; ಏಕಮೇವಾದ್ವಿತೀಯನಪ್ಪ ನಿರಾಳ ಪರವಸ್ತುವೆ (ಭೈರಸೂ. ೨) ; ಕೀಳುಸುಖಗಳ ಬಾಳು ಕಾಲಿನ ಕೋಳ ಸುಖವಿಂತೆಂಬವನಿಗೆಯು ಹೇಳಬಹುದೀ ಗಗನನಿತ್ಯ ನಿರಾಳವಚನ (ಗಗತಾ. ೪-೩). ೨. ನಿಶ್ಚಿಂತನಾದ : ನಿಸ್ಥಲವ ಸ್ಥಲವಿಡಲು ನಿರ್ಮಲಾತ್ಮಂಗೆ ಇಹವಿಲ್ಲ ಪರವಿಲ್ಲ ಅದಿಮಧ್ಯಾಂತ ನಿರಾಳಗುಹೇಶ್ವರನ ಅನುಭವಿಗೆ ಸರ್ವಾಂಗ ಲಿಂಗವು (ಅವಚಂ. ೧೩೧-೫೯೭). (ನಾ). ೩. ನಿಶ್ಚಿಂತೆ ; ಶಾಂತಿ ; ನೆಮ್ಮದಿ : ತನ್ನಲ್ಲಿ ತಾನೆಯಾಯಿತ್ತು ಭಿನ್ನವಿಲ್ಲದೆ ನಿಂದ ನಿರಾಳ ಅನಾಯಾಸದನುವ ಕಂಡು ಅನುಬೆಱಗಾದೆನು (ಅವಚಂ. ೧೯೪-೮೭೯) ; ಮತ್ತೊಂದು ಕಡೆ ಶಾಸ್ತ್ರಗತ ಪ್ರಮಾಣವನ್ನು ಬಿಟ್ಟು ನಿರಾಳವಾಗಿ ವಿಚಾರಮಾಡಲು ಹಿಂಜರಿಯುತ್ತಿದ್ದ ಹಿಂದೂಗಳು (ಬಂಕಿಮ. XXIV, ಮುನ್ನುಡಿ) ; ನಮ್ಮ ಮಕ್ಕಳ ಕಾಲಕ್ಕೆ ತಂಟೆ ತಕರಾರು ಇರಕೂಡದು. ಅದು ನಮ್ಮಿಬ್ಬರಿಗೂ ನಿರಾಳ (ಅನಾಮಿ.೬); ಭಾರತದ ಕವಿಗಳ, ಕಲೆಗಾರರ ಅಂತರಾತ್ಮ ಬಿಡುಗಡೆಯ ಸಮಾಧಾನವನ್ನು ಹೊಂದಿ ನಿರಾಳವಾಗಿ ಉಸಿರಾಡಿತು (ಶ್ರೇಷ್ಠಪ್ರ. ೧೭೫) ; ನಿರಾಳ ಎಂಬ ಪದಕ್ಕೆ ಶಾಂತಿ ಎಂಬ ಅರ್ಥವಿದೆ (ಆಳನಿ. I, ಮುನ್ನುಡಿ). ೪. ಚಿಂತೆಯಿಲ್ಲದವನು ; ನಿಶ್ಚಿಂತ : ಅಯ್ಯ ನೀನು ನಿರಾಳ ನಿರ್ಮಾಯನಾಗಿಪ್ಪೆಯಾಗಿ . . . ನಿಜದ ನಿಲವ ನೋಡಿ ಕಂಡೆನು (ಅವಚಂ. ೨-೮) ;

ನಿರಾಕಾರ ನಿರಜ . . . ನಿರಾಳ ಪಂಪಾವಿರೂಪಾಕ್ಷ ಶರಣು (ಹಚಕಾ. ೧-೪) ; ನಿರ್ವಿಕಾರ ನಿರಾಳ ನಿಶ್ಚಿಂತ . . . ರುದ್ರನಿರುತಿರ್ಪನು ವಿನೋದದಲಿ (ಪ್ರಭುಲೀ. ೨-೯) ; ಸ್ಥೂಲ ಸೂಕ್ಷ್ಮಗಳೆರಡು ಮಾಯೆಯು . . . ಬಾಲಕನೆ ನೀನೆರಡು ತನುವಿನ ಮೇಲಣಭಿಮಾನವನು ಬಿಟ್ಟು ನಿರಾಳ ನಿಜ ನೀನೆಂದು ಚಿಂತಿಸುತಿರ್ಪುದನವರತ (ಅಮೃತ. ೩-೭೩). ೫. ಅನೂಹ್ಯತೆ : ಇಹಪರ ಸ್ವರ್ಗ ನರಕಾದಿಗಳಿಲ್ಲದಂದು ಸುರಾಳ ನಿರಾಳಂಗಳೇನೂ ಇಲ್ಲದಂದು . . . ಅಂದೇನೋ ಇಂದೇನೋ (ಆದವ. ೧-೧) ; ನಿರಾಳ ಸುರಾಳವೆಂಬ ಬಯಲು ಅವಗವಿಸುವುದಕ್ಕೆ ಮುನ್ನವೆ ಬ್ರಹ್ಮಾಂಡವೆಲ್ಲಿ ಆಯಿತ್ತು (ಮೋಳಿಮಾ. ೭೯-೬೧೨) ; ಎನ್ನಭಿಮಾನದ ಕರ್ತು ನಿರಾಳದಲ್ಲಿ ನಿಂದ ಬಳಿಕ ಸಯಿದಾನ ಸುಯಿದಾನವಾಯಿತ್ತಯ್ಯಾ (ನೀಲಪ. ೧೮-೪೯). [<ಸಂ. ನಿರಾವಿಲ]

ನಿರಾಳಂ (ಅ). ನಿಶ್ಚಿಂತೆಯಿಂದ ಕೂಡಿ : ಲೋಹಕ್ಕೆ ನಿರಾಳಮಾಗಿ ಮೊಗವಿತ್ತು . . . ಮೆಱೆದರ್ ವಾಹಂಗಳಂ ವಾಹಕರ್ (ಅನಂಪು. ೨-೩೧). [<ನಿರಾಳ]

ನಿರಾಳಂಬ 'ನಿರಾಲಂಬ' ನೋ.

ನಿರಾಳತ್ವ (ನಾ). ನಿರಾವರಣ ; ಹೊದಿಕೆಯಿಲ್ಲದಿರುವಿಕೆ : ಕುಂಭಿನಿಯ ಮೊಲೆಯ ಮೇಲುದ ಸೆಳೆದ ಜಾರನಂತದ್ರಿಗಳು ಸಲೆ ನಿರಾಳತ್ವದಿಂದವನೆಯ್ದೆ ತೋರಿಸುತೆ ಹೈಮಂತರುತು ಪ್ರಾಪ್ತಿಸೆ (ಪರಶು. ೧೫-೨೭). [ನಿರಾಳ+-ತ್ವ]

ನಿರಾಳಲಿಂಗ (ನಾ). [ವೀಶೈ] (ಮಾಯಾಸಂಬಂಧವನ್ನು ಬಿಟ್ಟ) ಪರಿಶುದ್ಧವಾದ ಲಿಂಗ : ನಿರಾಳಲಿಂಗವ ಕಾಂಬುದಕ್ಕೆ ಮನ ಮತ್ತೊಂದೆಡೆಗೆ ಹರಿಯದಿರಬೇಕು (ಲಿಂಗಪ. ೭೭-೮೦) ; ಮಾನವನ . . . ಭಾವಾಂಗವೆಲ್ಲ ಚಿದಂಗವಾಗಿ, ಚಿತ್‌ಪ್ರಭಾಂಗವಾಗಿ, ನಿರಾಳ ಲಿಂಗಕ್ಕೆ ಬೆಳಗಿನ ಸೆಜ್ಜೆಯಾಗಿ . . . ಪರಿಣಮಿಸಬೇಕೆಂಬುದೇ ಶರಣರ ಅನುಭವ ವಿಚಾರ (ವಚಸಂ. XVII ಒಳಗ ಪ್ರವೇಶ); ಬಯಲೇ ಸೆಜ್ಜೆಯಾಗಿ ಬೆಳಗುವ ನಿರಾಳಲಿಂಗದ ನಿಲವನ್ನು ವೇದ ವೇಧಿಸಲಿಲ್ಲ (ಮೋಳಿಮಾ. ೧೦ ಪ್ರಸ್ತಾವನೆ). [ನಿರಾಳ+ಲಿಂಗ]

ನಿರಿ$_1$ (ಕ್ರಿ). ೧. ಕೊಲ್ಲು ; ಸಾಯಿಸು : ಮರುಳಾದಂ ಜನಪಂ ಸಮಸ್ತಹನನವ್ಯಾಸಂಗಮಂ ಸಿಂಗಮಂ ನಿರಿಯಿಂ ನೀಮದನೆಂದು ಮಕ್ಕಳ ನಿವಂ ತಾನಟ್ಟದಂ (ಪರ್ಧಪು. ೩-೪೧) ; ನಿರಿದಪ್ಪಂ ಮಗಧೇಶನಂ ನಿಱಿಸಿದಪ್ಪಂ ಚೋಟನಂ (ಸೂಕ್ತಿಸು. ೧೮-೧೪) . ೨. ಚುಚ್ಚು ; ತಿವಿ : ಮರ್ಮಮಂ ಸ್ಮರಂ ನಿರಿದಪನೆನ್ನ ಜೀವಿತಮಿದೇಕೆಯೋ ಪೋಗದು (ಲೀಲಾವ. ೧೪-೬೧). ೩. ನಿವಾರಿಸು ; ಪರಿಹರಿಸು : ಆ ಪಟುಕರ್ಮದಿನಪ್ಪ ನೋವನಾವಂ ನಿರಿಯಲ್ ಸಮರ್ಥನೆಲೆ ಜೀವನೆ ಕೇಳ್(ಶಾಂತೀಶ್ವ.೯-೧೧೯). 'ನೇರ್$_1$'ಪರಾ.[ದೇ.॥ತಮಿ. ಮಲ. ನೆರಿ]

ನಿರಿ$_2$ 'ನಿಱಿ$_2$' ನೋ.

ನಿರಿಂದ್ರಿಯ (ಗು). ೧. ಇಂದ್ರಿಯಗಳಿಗೆ ತಿಳಿಯದ,—ವೇದ್ಯವಾಗದ ; ಇಂದ್ರಿಯಾತೀತವಾದ : 'ನಿರಿಂದ್ರಿಯಸುಖ' ಪರಾ. (ನಾ). ೨. ಇಂದ್ರಿಯಗಳಿಂದ ಕೂಡಿರದವನು ; ಇಂದ್ರಿಯಗಳಿಗೆ ಅತೀತನಾದವನು : ನಿತ್ಯಂ ನಿರಿಂದ್ರಿಯಂ ಸಂಪ್ರತ್ಯಯ ನವಿನಾಶಿಜೀವನಿತರಂ ತನುವೆಂದತ್ಯಂತ ಭೇದವಿಷಯಾಪತ್ಯಾದಿಯನೆನ್ನವೆನ್ನ ನನ್ಯತ್ವವಿದಂ (ಮಲ್ಲಿಪು. ೧೪-೬೮). [ಸಂ.]

ನಿರಿಂದ್ರಿಯಸುಖ (ನಾ). ಇಂದ್ರಿಯಗಳಿಂದ ಅನುಭವಿಸಲಾಗದ ಸುಖ,—ಆನಂದ ; ಮೋಕ್ಷಸುಖ : ದುರಿಂದ್ರಿಯಸುಖಕ್ಕೆ ಕೊಕ್ಕರಿಕೆ ಪುಟ್ಟಿ ನರ್ವೇಗದಿಂ ನಿರಿಂದ್ರಿಯಸುಖಕ್ಕೆ ನಾಡೆ ಮನಮಿಟ್ಟು (ಸುಕುಮಾ. ೧೦-೩೧). [ನಿರಿಂದ್ರಿಯ+ಸುಖ]

ನಿರಿಕೆ (ನಾ). ಕಾಯುವುದು ; ನಿರೀಕ್ಷೆ : "ನಿರಿಕೆ—ನಿರೀಕ್ಷಾ=ಕಾದಿರುವಿಕೆ" (ತದ್ಭ ಕೋ. ೨೨). [<ಸಂ. ನಿರೀಕ್ಷಾ]

ನಿರಿಗೆ 'ನಿಱಿಗೆ' ನೋ.

ನಿರಿಗೆಗಟ್ಟು, ನೆರಿಗೆಗಟ್ಟು (ಕ್ರಿ). ಸುಕ್ಕುಗಟ್ಟು; ಮಡಿಕೆಯಾಗು: ಗದ್ದ . . . ಸ್ವಲ್ಪ ನಿರಿಗೆಗಟ್ಟತ್ತು ಅಜ್ಜೆ (ಮಹಾತ್ಮಾ.೧೯). **ನೆರಿಗೆಗಟ್ಟು** : ನೋವಿನ ಅಳಕ್ಕೆ ಇಳಿದ ಆತನ ಹಣೆ ನೆರಿಗೆಗಟ್ಟುತ್ತಿತ್ತು (ಬದುಜ.೧೧೯). [ನಿರಿಗೆ(<ನಿಱಿಗೆ)+ಕಟ್ಟು$_1$]

ನಿರಿಗೆಗೊಳ್ಳು (ಕ್ರಿ). ಸುಕ್ಕಾಗು ; ನಿರಿಗೆಯಾಗು : ಅವಳ ತುಟಿ ಸಂತೋಷಾರ್ಥವಾಗಿ ನಿರಿಗೆಗೊಂಡುವು (ಪುನರು. ೪೨೦). [ನಿರಿಗೆ(<ನಿಱಿಗೆ)+ಕೊಳ್ಳು$_1$(<ಕೊಳ್$_1$)]

ನಿರಿಗೆಹೊಯ್ (ಕ್ರಿ). ನಿರಿಗೆ ಹಾಕು ; ನೆರಿ ಹಿಡಿ : ತುದಿಕಾಲ್ಬೆರಳುಗಳು ಮುಚ್ಚುವಂತೆ ನಿರಿಗೆಹೊಯ್ದು ದಡೀಧೋತರವನ್ನು ಉಡುತ್ತಿದ್ದರು (ಶರೀಪ. ೬೧ ಕವಿಕಾವ್ಯ ಪರಿಚಯ). [ನಿರಿಗೆ(<ನಿಱಿಗೆ)+ಹೊಯ್$_2$(<ಪೊಯ್$_2$)]

ನಿರಿಚ್ಛೆ (ನಾ). ಇಚ್ಛೆಯಿಲ್ಲದಿರುವುದು ; ನಿರಪೇಕ್ಷವಾದುದು ; ನಿಷ್ಕಾಮವಾದುದು : ಪ್ರೇಮವು ನಿರಿಚ್ಛೆಯುಳ್ಳದ್ದು (ಸ್ಮೃತಿಚಿ. ೪೪೫). [ಸಂ. ನಿರಿಚ್ಛಾ]

ನಿರಿಡಿಬಿತ್ತ (ನಾ). ಒಂದು ಬಗೆಯ ಗಿಡ : ತಿಲೋಣ, ಶ್ರೀಕಲ, ಸೂರ್ಯಾವರ್ತ, ನಿರಿಡಿಬಿತ್ತ.(ಮೈಔಗಿ. ೪೧-೮೨೦). [ನಿರಿಡಿ ? +ಬಿತ್ತ(<ಬಿಟ್ಟು)]

ನಿರಿನಿರಿ$_1$ (ನಾ). (ಕಾಂತಿಯನ್ನು ಸೂಚಿಸುವ) ಒಂದು ಅನುಕರಣ ಶಬ್ದ : ನಿರಿನಿರಿ ಮೆರೆದುದು ನೀಲಿಯ ಸೀರೆ (ಸೌಂದಸ. ೩೪೧) ; ಕಾಮನ ಬಿಲ್ಲೇ ಕುಣಿದೊಲು ನಿರಿನಿರಿ (ಹೂಹಾದಿ. ೧೩-೫). **ನಿರಿನಿರಿ**$_2$ 'ನಿಱಿ$_2$' ಪರಾ.

ನಿರಿಬಿಗಿ (ಕ್ರಿ). ನಿರಿಗೆಗಳನ್ನು ಸೇರಿಸಿ ಬಿಗಿದು ಕಟ್ಟು : ಹುಡುಗಿಯರು ಕೊರಚಾಡುತ್ತಾ ನಿರಿಬಿಗಿಯುತ್ತಾ ಮುಂದೆ ಹೋದರು (ಕಾಲೂರ. ೯ ಕಥಾಸಾರ). [ನಿರಿ$_2$(<ನಿಱಿ$_2$)+ಬಿಗಿ$_1$]

ನಿರಿಮುಗಿಲು 'ನಿಱಿಮುಗಿಲ್' ನೋ.

ನಿರಿಯಣ 'ನಿರಿಯಾಣ' ನೋ.

ನಿರಿಯಾಣ, ನಿರಿಯಣ (ನಾ). ೧. ಸಾವು ; ಮರಣ. ೨. ಸಾಯುಜ್ಯ ; ಐಕ್ಯ : ಆ ಲಿಂಗದ ಕೂಟವೆ ನಿರಿಯಾಣ (ಮೋಳಿಮಾ. ೨೧೨) ; ಹರಣವಿದ್ದೂ ಹರಣವಿಲ್ಲ ಹರಣ ಲಿಂಗದಲ್ಲಿ ನಿರಿಯಾಣವಾಯಿತ್ತಾಗಿ (ಆದವ. ೪೭-೧೩೩). **ನಿರಿಯಣ** : ೧. ನಿರಿಯಣದ ಕಾಲದಲಿ ಗತಿಗೆಡಿಸಿ ಕೊಂಡೊಯ್ದು ವೈವಸ್ವತನು ನಾಯಕನರಕದೊಳಗದ್ದುತ ಬಹನು (ಕುವ್ಯಾಉ. ೪-೮೬). [<ಸಂ. ನಿರ್ಯಾಣ]

ನಿರಿಯಿಡು(ಕ್ರಿ). ನಿರಿಗೆ ಹಾಕು: ನಿರಿಯಿಟ್ಟು ಪಟ್ಟೆಬಟ್ಟೆಯನ್ನುಟ್ಟರು (ಕಾಲೂರ. ೧೩ ಕಥಾಸಾರ). [ನಿರಿ$_2$(<ನಿಱಿ$_2$)+ಇಡು$_1$]

ನಿರಿವಿಡಿ 'ನಿಱಿವಿಡಿ' ನೋ.

ನಿರಿಸು 'ನಿಱಿಸು$_1$' ನೋ.

ನಿರಿಹಪರ (ಗು). ೧. ಇಹ ಮತ್ತು ಪರಗಳಿಗೆ ಸಂಬಂಧಿಸದ ; ಇಹವೂ ಅಲ್ಲದ ಪರವೂ ಅಲ್ಲದ. (ನಾ). ೨. ಇಹ ಮತ್ತು ಪರಗಳೆರಡಕ್ಕೂ ಸಂಬಂಧಿಸದವನು ; ಇಹ ಮತ್ತು ಪರಗಳೆರಡನ್ನೂ ಕಳೆದುಕೊಂಡವನು: ಭ್ರಾಂತಿಯಿಂ ಭ್ರಾಂತಿಯಿಂ ಗತಿಗೆಟ್ಟು ಮತಿಗೆಟ್ಟು ಮುಂತನರಿಯದೆ ನಿರಿಹಪರನಾಗಿ . . . ಶಂಕಿಸುತ ನಿಂದಿರುವ ಕರ್ಮಸಂದೇಹಿ (ಗಣೇಶ. ೩೭-೩). [ಸಂ.]

ನಿರಿಹಿಡಿ 'ನಿಱಿವಿಡಿ' ನೋ.

ನಿರೀಕ್ಷಣ (ನಾ). ೧. ನೋಟ ; ದೃಷ್ಟಿ : ದಿವ್ಯಾಂಗನಾಭಾವಾಪಾಂಗ ನಿರೀಕ್ಷಣಾಮೃತಕೃತಾನಂಗೋತ್ಸವಂ (ಅದಿಪು. ೨-೬) ; ಪೊಸಮುತ್ತಂ ಪಾಲೊಳ್ ತೊಳೆದೆಸೆದಿರೆ ದೆಸೆದೆಸೆಗೆ ಕೆದಱದಂತಾಗೆ ನಿರೀಕ್ಷಿಸುವ ನಿರೀಕ್ಷಣಮೆ ಮನಃಪ್ರಸಾದಮಂ ಪೇಱದಱಪುಗುಂ (ಶಾಂತಿಪು. ೩-೩೮) ; ತನ್ನನೋಹರಾಂಗ ನಿರೀಕ್ಷಣತ್ಯಾಗ ಅ ಸ್ತ್ರೀಯರೆ ಮನೋಹರಮಪ್ಪ ಅವಯವಂಗಳ ನೋಟಮಂ ತೊಱೆವುದುಂ (ತತ್ತ್ವಸ್ವ. ೨೩೦) ; ಫಣಿಧರನ ಕಣ್ಣೊಳು. . . ಉಗುವಂಬುಗಳೆ ಭೂಷಣವದಾಯಿತ್ತೆಂದಡಂ ಕರುಣಾನಿರೀಕ್ಷಣದ ಪ್ರಣುತಕಂಕಣನಿಕರಮದು ತಾಂ ಗಣಿಸುವಡಾನಂದ ಕರಕಾರಣಮೆನಿಸಿದುದು ಚೋದ್ಯಮೇ (ಬಸಪು.೧೮-೭೭). ೨. ನೋಡುವುದು ; ಕಾಣುವುದು ; ದರ್ಶನ : ನೀಗಿದುದೀಗಳೆಮ್ಮ ವನವಾಸ ಪರಿಶ್ರಮಮಿಾಗಳಾಳ್ದೆವಾ ಸಾಗರಮೇಖಳಾವೃತ ಧರಿತ್ರಿಯಂ . . . ಏನಾಗದೊ ಪೇಱ್ ಭವಚ್ಛರಣಪದ್ಮನಿರೀಕ್ಷಣದಿಂ ಮುನೀಶ್ವರಾ (ಸಂಪಭಾ.೭-೬೦) ; ತನ್ನುನಿರೀಕ್ಷಣಕ್ಷಣದೊಳಲರ್ದು ಕಡವಿನ ಮರಗಳ್ ಪರಿಗತರೋಮಾಂಚತೆಯಿಂ ದೊರೆಮಾಡಿದುದೆನ್ನ ತನುವುಮಂ ನೆಱೆ ತನ್ನೊಳ್ (ಚಂದ್ರಪು. ೨-೯೯). ೩. ಪ್ರತೀಕ್ಷೆ ; ಭರವಸೆ. [ಸಂ.]

ನಿರೀಕ್ಷಣೆ (ನಾ). ೧. ನೋಡುವಿಕೆ; ವೀಕ್ಷಣೆ : ಸಾಹೇಬರ ನಿರೀಕ್ಷಣೆ ಪರೀಕ್ಷಣೆ ನಡೆದಿದ್ದರೂ ಗುರುಗಳು ತಮ್ಮನ್ನೇ ಸಾವರಿಸಿಕೊಳ್ಳುತ್ತ ಹುಡುಗರಿಗೆ ಕ್ರಮ ಹೇಳಿಕೊಡುತ್ತಿದ್ದರು (ಜಯಂತ. ೨೩). 'ನಿರೀಕ್ಷಣೆಗೆಯ್' ಪರಾ. ೨. ಪ್ರತೀಕ್ಷೆ ; ಭರವಸೆ: ಯಾರು ಯಾರಿಗೆ ವಿದ್ಯಾಪ್ರಚಾರದಲ್ಲಿ ಶ್ರದ್ಧೆಯುಂಟೋ ಅಂಥವರೆಲ್ಲರಿಗೂ ಈ ಉಪನ್ಯಾಸಗಳು ಇಷ್ಟವಾದಾವೆಂಬುದು ಪರಿಷತ್ತಿನ ನಿರೀಕ್ಷಣೆ (ಸಾಹಿಶ. ೬೨). ೩. ಯಾವುದೇ ವಸ್ತು, ವಿಷಯ ಇತ್ಯಾದಿಗಳಿಗಾಗಿ ಕಾಯುವಿಕೆ : ಮಗನ ಆಗಮನದ ನಿರೀಕ್ಷಣೆಯಲ್ಲಿ ಗೌರಿದ್ದುದನ್ನು ತಿಳಿದ ರಂಗಮ್ಮ ಕತ್ತಲಾದೊಡನೆಯೆ ಎಂದಿಗಿಂತ ಸ್ವಲ್ಪ ಬೇಗನೆ ದೀಪ ಹಾಕಿದರು (ರಂಗಮ. ೨೪೮); ಕೆಲವು ದಿನ ನಾವು ಅವರ ನಿರೀಕ್ಷಣೆಯಲ್ಲೇ ಇದ್ದೆವು (ಬಾಳಹೊ. ೫೫). [ಸಂ. ನಿರೀಕ್ಷಣಾ]

ನಿರೀಕ್ಷಣೆಗೆಯ್ (ಕ್ರಿ). ನೋಡು ; ಕಾಣು : ಭಾಳಾಕ್ಷನ ಜಡೆಗಳ ನಿಳಿದು ಮೋಕ್ಷವ ಕುಡಬಂದ ಪರಮಪಾವನೆಯ ನಿರೀಕ್ಷಣೆಗೆಯ್ದು ಮನ್ಮಥನು (ಮೋಹತ. ೬-೩೨). [ನಿರೀಕ್ಷಣೆ + ಕೆಯ್$_1$]

ನಿರೀಕ್ಷಣೆಗೊಡು (ಕ್ರಿ).(ಮದುವೆಯಲ್ಲಿ)ವಧೂವರರಿಗೆ (ಪರಸ್ಪರವಾಗಿ) ಪ್ರಥಮದರ್ಶನ ಮಾಡಿಸು : ನೆಟ್ಟನೆ ತೆರೆವಿಡಿದರು ಕ್ಷತ್ರವಿಧಿಯಿಂದೆ ಮೆಟ್ಟಕ್ಕಿಯ ಮೇಲೆ ನಿಲಿಸಿ ಶ್ರೇಷ್ಠರು ಮಂಗಳಾಷ್ಟಕದಿ ನಿರೀಕ್ಷಣೆಗೊಟ್ಟರು ದಂಪತಿಗಳಿಗೆ (ಮೋಹತ. ೧೩-೬೮).

[ನಿರೀಕ್ಷಣೆ + ಕೊಡು$_1$]

ನಿರೀಕ್ಷಿಸು (ಕ್ರಿ). ೧. ನೋಡು ; ಈಕ್ಷಿಸು ; ಅವಲೋಕನ ಮಾಡು ; ಕಾಣು : ವಿನುತಸಮಗ್ರಮಂಡಲದ ಚಂದ್ರನ ಚಂದ್ರಿಕೆ ವೊಲ್ನರೇಂದ್ರಚಂದ್ರನ ರುಚಿರೋತ್ಕರಗ್ರಹಣಶೋಭಿತೆಯಂ ಸೊಸೆಯಂ ನಿರೀಕ್ಷಿಸಲ್ (ಕಾದಂಉ.೪೯೨); ನಿರೀಕ್ಷಿಸಿ ನಿಕೃಷ್ಟದುಷ್ಟಗಣರಂ ಗತಪ್ರಜ್ಞ [ರಂ] . . . ಆಗ್ರಹಿಸಿ (ಸುಕುಮಾ. ೨-೧೮) ; ನಡುವಿರುಳಂತೆ ಕಟ್ಟಲಿಸೆ ಪಟ್ಟಪಗಲ್ ರಣಮಂ ನಿರೀಕ್ಷಿಸಲ್ ಪಡೆಯದೆ ದೇವರುಂ ದಿವಿಜಕಾಂತೆಯರುಂ ಬೆಱಗಾಗೆ (ಪಂಂರಾಮಾ.೧೩-೪೪) ; ಅಮಲ ಚಿದ್ರೂಪಕನನೊಲ್ದು ಕರುಣಾಪಾಂಗದಿಂ ನಿರೀಕ್ಷಿಸಿ (ಪದ್ಮರಾ. ೩-೪) ; ಭೂಮಿಪನಿವಹವಾ ಪುರುಷಾಮೃಗದ ಕಾಯವ ನಿರೀಕ್ಷಿಸಿ ಹೋಹುದೀ ಪರಿವಿಡಿಯಲನುದಿನವು (ಕುವ್ಯಾಸ. ೬೧೩.೭-೫೦) ; ಯುವತಿ ನಿರೀಕ್ಷಿಸುವರ ಕಣ್ಗೆರದೆ ಕೃತಾರ್ಥತೆ ಮಾಡುವಳು (ಜಯಕಾ. ೩-೫೬). ೨. ಎವೆಯಿಕ್ಕದೆ ನೋಡು ; ನಿಟ್ಟಿಸು ; ದಿಟ್ಟಿಸು : ಕಂಗಳು ತುಂಬಿ ನಿರೀಕ್ಷಿಸಿ ಶ್ರೋತ್ರ ತುಂಬಿ ಹಾರೈಸಿ . . . ಮಾಡುವುದು ಭಕ್ತಿಸ್ಥಲ (ಬಸವ. ೮೬೪) ; ಆಗಳತಿ ಕ್ರೋಧಮುಂ ತಳೆದು ಮಗಧರಾಜಂ ಚೇದಿರಾಜನಂ ನಿರೀಕ್ಷಿಸಿ (ಜಗವಿ. ೭-೪೫ ಸ) ; ಸರಳ ಹಿಳುಕಿನ ಹೊಂಗಱಯ ತುದಿವೆರಳಲೊಯ್ಯಾರಿಸುತ . . . ಕೂರಲಗ ಧಾರೆಯ ನಿರೀಕ್ಷಿಸುತ ಇರಲು (ತೊರರಾ. ೩-೪-೧೫). ೩. ಎದುರುನೋಡು ; ಕಾಯು ; ಪ್ರತೀಕ್ಷೆಯಲ್ಲಿರು ; ಹಾದಿ ನೋಡು : ಹಂದಿಯು . . . ಕೋರೆಯನ್ನು ಮಸೆಯುತ್ತಾ ಹುಲಿಯನ್ನೇ ನಿರೀಕ್ಷಿಸುತ್ತಾ ನಿಂತಿತ್ತು (ಚೆಂಗಾಳ್ವ. ೫೪) ; ಪತಿ ಎಂದಾದರೊಂದು ದಿನ ಹಿಂದಿರುಗುವರೇನೋ ಎಂದು ನಿರೀಕ್ಷಿಸುತ್ತಿದ್ದಳು(ಮೂಲಾಸ. ೨೧೪) ; ಪ್ರಮಿಾಲ ಪ್ರಕಾಶರು ಬಸ್ಸಿನಿಂದ ಇಳಿದು ಆನಂದನನ್ನು ನಿರೀಕ್ಷಿಸುತ್ತಿದ್ದರು (ಮರಳಿ. ೧೪೩) ; ರೋಗಿಗಳೆಲ್ಲ ಉತ್ಸುಕತೆಯಿಂದ ಅವಳ ಬರುವಿಕೆಯನ್ನು ನಿರೀಕ್ಷಿಸುತ್ತಿದ್ದರು (ಕುಂಕುಮ. ೮೪). ೪. ಬಯಸು; ಹಾರೈಸು : ಜನತೆ ಇವರಿಂದ ಹೆಚ್ಚಿನ ಸೇವೆಯನ್ನು ನಿರೀಕ್ಷಿಸುತ್ತದೆ (ಸಮಾಲೋ. ೧೪೨). [ನಿರೀಕ್ಷಣ + -ಇಸು$_3$]

ನಿರೀಕ್ಷೆ (ನಾ). ೧. ನೋಡುವುದು ; ಈಕ್ಷಣ : ಮಧುರತರ ಮಧುಸೂದನಾನನಸುಧೆಗೆಜಗದೀ ಜಗದ ಕಂಗಳು ವಿಧುರತೆಯನ್ನೆದುವುವು ರೂಪಾಂತರನಿರೀಕ್ಷೆಯಲಿ (ನಿಭಾಗ. ೩-೨-೪೫). ೨. ಎದುರು ನೋಡುವುದು ; ದಾರಿಕಾಯುವುದು : ತಾಂಬೂಲದ ಬಗ್ಗೆ ಯಾವ ನಿರೀಕ್ಷೆ ನಿರಾಸೆಗಳೂ ಇರಲಿಲ್ಲ (ಬಾಳಹೊ. ೧೬). [ಸಂ. ನಿರೀಕ್ಷಾ]

ನಿರೀಶ (ನಾ). ಒಡೆಯನಿಲ್ಲದವನು ; ತಾನೇ ಒಡೆಯನಾದನು : ನಿರೀಶ ನಿರಂತರಾಯ ನಿರ್ದ್ವಂದ್ವ ನಿರತ್ಯಯ ನಿಷ್ಕಷಾಯ (ಪರ್ಧಮಾ. ೧೪-೬). [ಸಂ.]

ನಿರೀಶ್ವರ (ನಾ). ೧. ಯಾವ ಒಡೆತನಕ್ಕೂ ಒಳಪಡದವನು ; ಪರಮಪುರುಷ ; ದೇವರು : ನಿರತಿಶಯ ನಿಸ್ಸೀಮ ನಿಗಮೇತರ ನಿರೀಶ್ವರ . . . ನಿರ್ವಿಕಾರಾಕಾರಾ ಚಿತ್ಕೈಸು (ಬಸಪು. ೬೧-೪೩). ೨. = ನಿರೀಶ್ವರವಾದಿ : ತನಗೆ ತಾನೇ ದೈವವೈದೆ ಶಿವನಿಲ್ಲವೆಂದಾ ನಿರೀಶ್ವರರನರೆ ಬರಮಾಡಿದಂ(ವೀಶೈಪು. ೪-೩-೧೩). [ಸಂ.]

ನಿರೀಶ್ವರವಾದ (ನಾ). ದೇವರಿಲ್ಲವೆಂಬ ವಾದ ; ನಾಸ್ತಿಕವಾದ : ಸಾಂಖ್ಯದರ್ಶನವನ್ನು ನಿರೀಶ್ವರವಾದವೆಂದೂ ನಾಸ್ತಿಕವಾದವೆಂದೂ ವೇದಾಂತದರ್ಶನಿಕರು ದೂರ ತಳ್ಳಿದ್ದಾರೆ (ಭಾರದ. ೧೧೩).

[ನಿರೀಶ್ವರ + ವಾದ$_2$]

ನಿರೀಶ್ವರವಾದಿ (ನಾ). ದೇವರಿಲ್ಲವೆಂದು ವಾದಿಸುವವನು ; ನಾಸ್ತಿಕ : ವಾದಿಗಳಲ್ಲಿ ಚಾರ್ವಾಕ ಜೈನ ಬೌದ್ಧ ಮಿಾಮಾಂಸಕ ಸಾಂಖ್ಯರೆಂಬರ್ಮೆವರೆ ನಿರೀಶ್ವರವಾದಿಗಳು (ವಿವೇಕ. ೧೨) ; ಸಾಂಖ್ಯರಿಗೂ ಮಿಾಮಾಂಸಕರಿಗೂ ಈಶ್ವರನೇ ಬೇಕಿರಲಿಲ್ಲ. ಎರಡು ಗುಂಪಿನವರೂ ನಿರೀಶ್ವರವಾದಿಗಳು (ಜುಕ್ಸಾರ. ೧೦೦ ಸೀಕಿಕೆ) ; ಶಾಶ್ವತವಾದ ಒಬ್ಬ ಈಶ್ವರನಿಲ್ಲವೆಂದು ಸಿದ್ಧಾಂತವಾದುದರಿಂದ ಇವರಿಗೆ ನಿರೀಶ್ವರವಾದಿಗಳು, ಪ್ರವಾಹೇಶ್ವರವಾದಿಗಳೆಂದು ಪ್ರಸಿದ್ಧಿ (ಹಿಂದಸಾ. ೪೯).

[ಸಂ. ನಿರೀಶ್ವರವಾದಿನ್]

ನಿರೀಶ್ವರಸಾಂಖ್ಯ (ನಾ). ಈಶ್ವರನ ಅಸ್ತಿತ್ವವನ್ನು ಅಂಗೀಕರಿಸದಿರುವ ಸಾಂಖ್ಯಮತದ ಒಂದು ಗುಂಪಿನವನು ; ☞ ಈಶ್ವರನು ಇಲ್ಲವೆಂದು ಸಾಂಖ್ಯರು ಹೇಳುತ್ತಾರೆ. ಇವರಿಗೆ ನಿರೀಶ್ವರ ಸಾಂಖ್ಯರೆಂದು ಹೆಸರು. ಕೆಲವರು ಸಾಂಖ್ಯ ವಿದ್ವಾಂಸರು ಈಶ್ವರನನ್ನು ಅಂಗೀಕರಿಸಿದ್ದಾರೆ. ಇವರು ಸೇಶ್ವರಸಾಂಖ್ಯರು : ನಿರೀಶ್ವರಸಾಂಖ್ಯನು ಈ ಆಕ್ಷೇಪವನ್ನು ತರುವದಕ್ಕೆ ಆಗುವ ಹಾಗಿಲ್ಲವಾದರೂ ಸೇಶ್ವರಸಾಂಖ್ಯನು ತರಬಹುದಾಗಿದೆ (ಬ್ರಹ್ಮಭಾ. ೫೭೬ ಅಡಿಟ).

[ನಿರೀಶ್ವರ + ಸಾಂಖ್ಯ]

ನಿರೀಷ (ನಾ). ಈಚಿಲ್ಲದ ನೇಗಿಲು; ದಂಡವಿಲ್ಲದ ನೇಗಿಲು: "ನಿರೀಷಂ, ಕೂಟಕಂ – ಈ ೨ ಮರಕ್ಕೆ ಸೇರದೇ ಇರುವ ಕಬ್ಬಿಣದ ನೇಗಲ ಹೆಸರುಗಳು" (ಸಿದ್ಧಾಂತಿ. ೨೭೭). [ಸಂ.]

ನಿರೀಹ (ಗು). ೧. ಏನನ್ನೂ ಬಯಸದ,—ಇಚ್ಛಿಸದ: ಕೊನೆಗೆ ಶಾಂತಿಪ್ರಿಯನಾದ ನಿರೀಹ ಸ್ವಭಾವದ ಶಶಿಭೂಷಣನು ಊರು ಬಿಟ್ಟು ಕಲಕತ್ತಾಕ್ಕೆ ಓಡಿಹೋಗುವ ಸಿದ್ಧತೆ ನಡೆಸಿದನು (ಇಪ್ಪಕ. ೮೮); ಇಂತಹ ಪ್ರಾತಃಸ್ಮರಣೀಯರಾದ ನಿರೀಹ ಪುರುಷರು ನಮ್ಮ ದೇಶದಲ್ಲಿರುವದೇ ನಮ್ಮ ಭಾಗ್ಯೋದಯವು (ಬೆನ್ನಬೇ. ೧೨೬). (ನಾ). ೨. ಏನನ್ನೂ ಬಯಸದುದು: ಅನಯಂ ಪೊಱಮಾಱುದುದಲ್ಲಿಯುಂ ಪ್ರಜಾನಂದಮಳುಂಬಮಾದುದು ನಿರೀ[ಹ] ನಿರಂತರಮಾದುದೊಳ್ಪುಣಂ ಕುಂದದಳುರ್ಕೆವೆತ್ತುದು (ಸರ್ಧಮಾ. ೭–೫೯). ೩. ಬಯಕೆಗಳಿಲ್ಲದವನು; ಪರಮಾತ್ಮ: ನರ್ವಿಕಾರ ನಿಶ್ಚೇಲ ನಿರೀಹ ನಿಷ್ಕ್ರಿಯ ನಿರಂಜನ (ಶಂಕಶ. ೩೪); ನಿಗಮಾಗಮವಂದ್ಯ ನಿರೀಹ . . . ನಿರಾಮಯ ಕೂಡಲಸಂಗಮೇಶ್ವರಾ (ಪ್ರಭವಿ. ೪೨–೩೯); ಭಕ್ತಜನವತ್ಸಲ . . . ಭಕ್ತಪಾಲನೋದ್ಯುಕ್ತ ನಿರೀಹ ಭಕ್ತಪರಮೋಕ್ಷದ (ಶಬಶಂ. ೫–೧೭). ೪. ಇಚ್ಛೆಯಿಲ್ಲದ ವ್ಯಕ್ತಿ; ನಿಷ್ಕಾಮಿ. ೫. ಉದಾಸೀನನಾದವನು; ಉದಾಸೀನವೃತ್ತಿಯವನು: ನಡೆಸುವೊಲೆ ನಡೆವಂಥ ಕುರಿಗಳೆ ನೀವು ಭಾರತಪುತ್ರರೇ ಪಡೆದುದನು ಪಡುವಂಥ ದುರ್ಬಲ ದೈವದೇಹ ನಿರೀಹರೇ ನಡೆಯಿರೀ ಬಳಿ, ನೋಡಿಕೊಳ್ಳಿರಿ, ಪಡನೆಳಲನೆನ್ನಿರವೊಳು (ಅಮತಂ. ೫೩–೬). ೬. ನಿರಾಶೆಹೊಂದಿರುವುದು; ಆಸೆಯಿಲ್ಲದಿರುವುದು: ಅಂದಾರ್ತಜ್ಜವಗವಾಹಿನಿ ವಿಂಧ್ಯಕಾನನದ ಬಳಿಗೆಟ್ಟು ನಿರೀಹಮಾಗಿ ಪುಕ್ಷಬಿಲಮುಖದಿ ನಿಂದವೊಲು ಧರ್ಮಗಹ್ವರಮುಖದಿ ಶಂಕಿಸುತ ನಿಂದಿರುವ ಕರ್ಮಸಂದೇಹಿ . . . ಗವಿಯ ತಮಕಂಜಿ ಹಿಂಜರಿದು ನಿಲಬೇಡ (ಗಣೇಶ. ೩೭–೫). [ಸಂ.]

ನಿರೀಹತಾವೃತ್ತಿ (ನಾ). ೧. ಆಸೆಯಿಲ್ಲದಿರುವುದು; ನಿಷ್ಕಾಮತೆ; ನಿಸ್ಪೃಹತೆ. ೨. ಚಲನೆಯಿಲ್ಲದಿರುವಿಕೆ; ನಿಶ್ಚಲತೆ. ೧, ೨: ಆತ್ತವಿರಾಗವರ್ತನೆ ದೃಢೀಕೃತಮೂಲಗುಣಂ ನಿರೀಹತಾವೃತ್ತಿ . . . ಕರಂ ವಿರಾಜಿಸೆ ವನಸ್ಥಿತಶಾಖಿನಿಕಾಯಮಾವಗಂ ಪೆತ್ತುದು ಚೆಲ್ವನಾಮುನಿಪನೊಳ್ ತಳೆದಂತೆ ತಪೋನಿಯೋಗಮಂ (ಚಂದ್ರಪ್ರ. ೨–೧೦೩). [ಸಂ.]

ನಿರೀಹಿತ (ನಾ). ಆಸೆ, ಬಯಕೆಗಳಿಲ್ಲದವನು; ನಿಷ್ಕಾಮಿ: ಶಾಂತನುಂ ನರ್ವಿಕಾರನುಂ ನಿರೀಹಿತನುಂ ನಿರ್ಮಲನುಮಾಗಿ (ಅನಂಪು. ೬–೨೨ ವ). [ಸಂ.]

ನಿರುಂಬಳ 'ನಿರುಮ್ಮಳ' ನೋ.

ನಿರುಂಬಳತೆ (ನಾ). ಶಾಂತಿ; ನೆಮ್ಮದಿ: ವ್ಯಾಸಬೀಡದ ಮೇಲೆಲ್ಲ ನಿರುಂಬಳತೆಯ ಮಂದಹಾಸವೊಂದು ಸುಳಿದು ಹೋಯಿತು (ಸಮಜೀ. ೭೨೫). [ನಿರುಂಬಳ (<ನಿರುಮ್ಮಳ) + – ತೆ$_2$]

ನಿರುಕಿಸು (ಕ್ರಿ). ೧. ನೋಡು; ಈಕ್ಷಿಸು: ಮನಸಿಜನಂತಕನ ಬಲದಂದು ಪೊಡವಂಟಂತರಿಕ್ಷದಲೆಸೆವ ಪುಷ್ಪಕವನ್ನು ನಿರುಕಿಸಿದ (ಕೌತರಾ. ೪೪–೨೬); ಜನಪನ ದೀನಾನನಮಂ ನಿರುಕಿಸಿ (ದಮಸ್ವ. ೧–೩೦ ವ); ಮರೆಯಾಗುವನ್ನೆಗಂ ಲಕ್ಷಣಂ ಪೋಪುದನೆ ನಿರುಕಿಸುತ್ತ (ಶೇಷರಾ. ೪–೧೬); ಆಡುವ ಬಾಲೆ ತನ್ನಿದಿರೊಂದು ಪುತ್ತಂ ನಿರುಕಿಸಿ (ರಾಮಾಶ್ವ. ೬೬–೧); ಅವರಂತಿಲ್ಲದ ನನ್ನನ್ನು ಎವೆಯಿಕ್ಕದೆ ನಿರುಕಿಸಿದರು (ಕಾಲಯಾ. ೪೬); ಅರುಹೋದಯ ಪ್ರಭೆಯಂ, ಗಿರಿಶೃಂಗದುನ್ನತಿಯ ವರುಣಾಲಯಾಯತಿಯ ನಿರುಕಿಸಿದೊಡಹುದೇಂ? (ಮಂಕುಕಾ. ೪೯೫); ಕವಿಗಳ ನವೋಜ್ಜ್ವಲದ ನೋಟವೊಂದು . . . ಪಂಡಿತರ ನಿಶ್ಚಯದ ನೋಟವೊಂದು ಈ ಎರಡನೂ ನೆರವುಗೊಂಡು ವಿಶ್ವವ ನಾವು ತಿರುತಿರುಗಿ ನಿರುಕಿಸುತ ಬಲು ದಣಿದೆವು (ಜಗದಾ. ೨೪). ೨. ಪರಿಶೀಲಿಸು; ಪರಿಶೀಲನೆ ಮಾಡು: ಆ ಪದ್ಯಗಳಲ್ಲಿ ವರ್ಣಿತವಾದ ಗಂಗರಾಜನ ಚರಿತ್ರೆಯನ್ನು ನಿರುಕಿಸಿದರೆ ೧ನೆಯ ಗುಣವರ್ಮನ ಕಾಲ ೯ನೆಯ ಶತಮಾನದ ಉತ್ತರಾರ್ಧವೆಂದು ತಿಳಿಯುತ್ತದೆ (ತಪನಿ. ೩೬); ನಿರುಕಿಸಲಾಗಿ ಅವು ಮೋಟರಗಾಲಿಯ ಕಲೆಗಳೆಂದು ತಿಳಿಯಿತು (ಕನಕಿ. ೩೫); ಮಹಾರಾಜನಿಗೆ ವಿಜಯವಾಗಲಿ! ಉಪವನ ಪ್ರದೇಶಗಳು ನಿರುಕಿಸಲ್ಪಟ್ಟುವು (ಶಾಕುಂತ. ೮೩–೬).

ನಿರುಕಿಸಿ ನೋಡು = ೧. ಎವೆಯಿಕ್ಕದೆ ನೋಡು: ಮೊಮ್ಮಗನನ್ನು ನಿರುಕಿಸಿ ನೋಡಲು (ಮಣ್ಣುಹ. ೨೫). ೨. ಪರಿಶೀಲಿಸು; ಗಮನಿಸು: ಆ ಹಿರಿಮೆಯ ಅಂಗಾಂಗಗಳನ್ನು ಒಂದಿಷ್ಟೂ ನಿರುಕಿಸಿ ನೋಡಲಾರದ ಜನಗಳಿಗೆ, ಈ ಸಂಸ್ಕೃತಿಯ ಸ್ಮಶಾನವನ್ನು ಕಂಡು ಏನು ತೃಪ್ತಿಯೋ? (ಅಳಿಸಿ. ೧೪೭). [<ನಿರೀಕ್ಷಿಸು]

ನಿರುಕು 'ನಿಕರ$_2$' ನೋ.

ನಿರುಕ್ತ (ಗು). ೧. ಸ್ಪಷ್ಟವಾಗಿ ಹೇಳಿದ, —ವಿವರಿಸಿದ. (ನಾ). ೨. ಸ್ಪಷ್ಟವಾಗಿ ಹೇಳಿದುದು; ವಿವರಣೆ. ೩. ಶಬ್ದದ ನಿಷ್ಪತ್ತಿ,—ವ್ಯುತ್ಪತ್ತಿ: ನಾರಾಯಣರಾಯರ 'ಕರುನಾಡು' ಎಂಬ ನಿರುಕ್ತವನ್ನು ಕುರಿತು ಹೇಳಿದ ಆಕ್ಷೇಪಣೆಗಳೇ ಇಲ್ಲಿಯೂ ಎದ್ದು ನಿಲ್ಲುತ್ತಲಿವೆ (ದ್ರಾವಿವಿ.೯೦). ೪. ಆರು ವೇದಾಂಗಗಳಲ್ಲಿ ಒಂದು; ವೇದದಲ್ಲಿರುವ ಪದಗಳ ನಿಷ್ಪತ್ತಿಯನ್ನು ಮತ್ತು ಅರ್ಥವನ್ನು ತಿಳಿಸುವ ಶಾಸ್ತ್ರ; ಯಾಸ್ಕಮುನಿಯ ನಿರುಕ್ತಶಾಸ್ತ್ರ; ☞ ಇದು ವೇದಪುರುಷನ ಶ್ರೋತ್ರರೂಪವಾದ ಅಂಗವೆಂದು ಪ್ರಸಿದ್ಧವಾಗಿದೆ. ವೇದದ ಅರ್ಥವನ್ನು ತಿಳಿಯಬಯಸುವವರಿಗೆ ನಿರುಕ್ತದ ಅಧ್ಯಯನವು ಅತ್ಯಾವಶ್ಯಕವಾಗಿದೆ. ಕ್ಲಿಷ್ಟವಾದ ಅನೇಕ ವೈದಿಕ ಪದಗಳನ್ನು ಸಂಗ್ರಹಿಸಿ ರಚಿತವಾಗಿದ್ದ ನಿಘಂಟು ಎಂಬ ಗ್ರಂಥಕ್ಕೆ ನಿರುಕ್ತವು ಭಾಷ್ಯರೂಪವಾಗಿದೆ. ಇದರಲ್ಲಿ ನೈಘಂಟುಕಕಾಂಡ, ನೈಗಮಕಾಂಡ, ದೇವತಾಕಾಂಡವೆಂಬ ಮೂರು ಕಾಂಡಗಳಿವೆ. ವೇದಮಂತ್ರಗಳಿಗೆ ಅರ್ಥಜ್ಞಾನವು ಬಹಳ ಮುಖ್ಯವೆಂದು ಯಾಸ್ಕರು ಹೇಳಿದ್ದಾರೆ. ಎಲ್ಲಾ ನಾಮಪದಗಳೂ ಧಾತುಗಳಿಂದಲೇ ಹುಟ್ಟವೆ ಎಂಬುದು ನಿರುಕ್ತದ ಸಿದ್ಧಾಂತ. [ಸಂ.]

ನಿರುಕ್ತಿ (ನಾ). ೧. ಹೇಳಿದುದು; ಹೇಳಿಕೆ: ವೇದವು ಯಾರ ನಿರುಕ್ತಿಯೂ ಅಲ್ಲ. ಅದು ಸ್ವಯಂಭು (ಭಾರದ. ೧೨೯). ೨. ವಿವರಣೆ; ವ್ಯಾಖ್ಯಾನ: ಈ ಕ್ರಮದಿಂ ಕ್ಷಾಯಿಕಮುಂ ಕ್ಷಾಯೋಪಶಮಿಕಮುಂ ಔದಯಿಕಮುಂ ಪಾರಿಣಾಮಿಕಮುಂ ಅಕ್ಕುಮೆಂದು ನಿರುಕ್ತಿಯುಂ ಮಾಟ್ಟುಡು (ತತ್ತ್ವಪ್ರ. ೭೮); ಸಂಜ್ಞಾನಂ ಸಂಜ್ಞಾ ಎಂಬೀ ನಿರುಕ್ತಿಯಿಂ ಜ್ಞಾನಮೆಂಬೊಡೆ ಎಲ್ಲಾ ಜೀವಂಗಳುಂ ಜ್ಞಾನಾತ್ಮಕಂಗಳಪ್ಪುದು (ತತ್ತ್ವಪ್ರ. ೯೯). ೩. ವೇದಾಂಗಗಳಲ್ಲಿ ಒಂದು; ವೇದದಲ್ಲಿರುವ ಶಬ್ದಗಳ ನಿಷ್ಪತ್ತಿಯನ್ನೂ ಅರ್ಥವನ್ನೂ ವಿವರಿಸುವ ಶಾಸ್ತ್ರ: ನಿರುಕ್ತಿಯೆ ವೈದಿಕಶಬ್ದನರ್ಚನಮಂ ನಿಯಾಮಿಸುತ್ತಿರ್ಕುಂ (ವಿವೇಕ. ೩). ೪. ಶಬ್ದದ ಹುಟ್ಟು,—ವ್ಯುತ್ಪತ್ತಿ: 'ನಿರುಕ್ತಿಕಾರ' ಪರಾ. ೫. [ಕಾವ್ಯಮೀ] ಒಂದು ಅರ್ಥಾಲಂಕಾರದ ಹೆಸರು; ಪ್ರಸಿದ್ಧವಾದ ಹೆಸರುಗಳಿಗೆ ಯೌಗಿಕವಾಗಿ ಬೇರೊಂದು ಅರ್ಥವನ್ನು ಹೇಳುವುದು; ಅವಯವ ಶಕ್ತಿಯಿಂದ ನಾಮಪದಗಳಿಗೆ ಬೇರೊಂದು ಅರ್ಥವನ್ನು ಕಲ್ಪಿಸುವುದು: ಪ್ರಸಿದ್ಧವಾದ ಪೆಸರ್ಗಳ್ಗೆ ಯೌಗಿಕಮಾಗಿ ಪೆಱತೊಂದರ್ಥಮಂ

ಪೇಳ್ದುದು ನಿರುಕ್ತಿಯೆನಿಪುದು (ಅಪ್ರತಿ. ೧೩೬–೨೨); ನಾಮಂಗಳಿಗೆ ಯೋಗವಶದಿಂದನ್ಯರ್ಥ ಪ್ರೇಮದಿ ಕಲ್ಪಿಸಲು ನಿರುಕ್ತಿ (ಕುವಲ. ೧೭೪–೧).

[ಸಂ.]

ನಿರುಕ್ತಿಕಾರ (ನಾ). "ಶಬ್ದವ್ಯುತ್ಪತ್ತಿ ವಿಚಾರ ಮಾಡುವವನು" (Derivationist. ಇಂಕನಿ). [ಸಂ.]

ನಿರುಕ್ತಿಸು (ಕ್ರಿ). ವಿವರಿಸಿ ಹೇಳು; ನಿರೂಪಿಸು: ಮುಕ್ತಿಯೆಂಬುದು ಮೂಱು ರತ್ನದಿಂದಹುದೆಂಬ ಯುಕ್ತಿಯುಂಟಾಗಮದಲ್ಲಿ ವ್ಯಕ್ತಾತ್ಮನೊಂದು ರೂಪನೆ ದೇವರೀಗ ನಿರುಕ್ತಿಸಲೇಕೆ (ಭರಜ. ೧೬–೯೬).

[ನಿರುಕ್ತಿ + –ಇಸು$_3$]

ನಿರುಕ್ತ್ಯಲಂಕಾರ (ನಾ). = ನಿರುಕ್ತಿ ೫: ಇದಱೊಳ್ . . . ಬಸವವಡೆಯೆಂಬ ಪೆಸರ್ಗೆ ಪುಲ್ಲರ್ಚದುದಱಿಂ ಬಸವವಡೆಯೆಂದು ಪೆಱತೊಂದರ್ಥಮಂ ಪೇಳ್ವುದಱಿಂದಿದು ನಿರುಕ್ತ್ಯಲಂಕಾರಂ (ಅಪ್ರತಿ. ೧೩೬–೯).

[ನಿರುಕ್ತಿ + ಅಲಂಕಾರ]

ನಿರುಗ (ನಾ). ಒಂದು ಬಗೆಯ ನೀರುಹಕ್ಕಿ: "ಜಳರಂಕು ದಾತ್ಯೂಹ ಮೆನಲಾ ನಿರುಗನಕ್ಕು" (ಪಂಗರಾ. ೫೨–೧೦). [?]

ನಿರುಗಮ್ಮಯ್ಯ (ನಾ). ಒಬ್ಬಾತನ ಹೆಸರು: ಕಣ್ಣಮ್ಮಯ್ಯನ ಮಗ ನಿರುಗಮ್ಮಯ್ಯನು . . . ಕೆರನೂರ ಮಹಾಜನಂ ಅಯ್ವದಿಂಬರ್ಗ್ಗಂ ಇಪ್ಪತ್ತು ಗದ್ಯಾಣ ಪೊನ್ನೊಟ್ಟು (ಎಕ. X, ಕೋಲಾರ. ೫೭–೮; ಸು. 925). [ನಿರುಗ$_0$ + ಅಮ್ಮಯ್ಯ$_1$]

ನಿರುಗೆ$_1$ 'ನಿಱುಗೆ' ನೋ.

ನಿರುಗೆ$_2$ 'ನಿಱುಗ' ನೋ.

ನಿರುಗೆಕಾರ (ನಾ). ಸ್ಥಿತಿಗೊಳಿಸುವವನು; ಆಳುವವನು; ಪಾಲಕ: ಎರಡು ತೋಳುಗಳಿಂದ ದಿಕ್ಕಿನ ನಿರುಗೆಕಾರರು ಚಂದ್ರ ಭಾಸ್ಕರರೆರಡು ಕಣ್ಣಂ ದ್ವಿಶ್ರುತಿಯಲೀ ದಿಗ್ವಿದಿಕ್ಕುಗಳು ಮೆರೆವ ನಾಸಾಪುಟದೊಳು ಸುರನ ಬರವು (ಅಧ್ಯಾರಾ. ೨–೩೬).

[ನಿರುಗೆ$_1$ (< ನಿಱುಗೆ) + –ಕಾರ$_1$ (< –ಕಾಱ)]

ನಿರುಚ್ಛ್ವಾಸ (ಗು). ೧. ಉಸಿರಿಡದ; ಉಸಿರಾಡಿಸದಿರುವ. (ನಾ). ೨. ಒಂದು ನರಕದ ಹೆಸರು: ನಿರುಚ್ಛ್ವಾಸ ಸುದೀರ್ಘ ಕೂಟ ಶಾಲ್ಮಲಿ ಅರಿಷ್ಟ ಸುಮನವೆಂಬೈದು ಮಂತ್ರಿನರಕಂಗಳೊಡನೆ ಭಯೋತ್ಕಟವೆಂಬರಸುನರಕವಿಹುದು (ವಿವೇಕ. ೧೮೦). [ಸಂ.]

ನಿರುಜ (ಗು). ೧. ರೋಗವಿಲ್ಲದ; ರೋಗರಹಿತವಾದ. (ನಾ). ೨. ರೋಗವಿಲ್ಲದುದು; ರೋಗರಹಿತವಾದುದು; ಆರೋಗ್ಯವಾದುದು: ನಿರುಜಂ ತ್ರಿಜಗದ್ಭೂಷಣ ಕರಿ ಕವಳಂಗೊಳ್ಳದೆಂದು ಸಾಹಣದ ಮಹತ್ತರರಱಿಪೆ (ಸಂರಾಮಾ. ೧೫–೩೨). ೩. ರೋಗವಿಲ್ಲದವನು; ನಿರೋಗಿ; ಆರೋಗ್ಯಶಾಲಿ: ದೊರೆಕೊಂಡಂದಧಿಯೋಗಂ ನರಪತಿ ದೀರ್ಘಾಯು ವಿಭವಸಂಯುತನಭಯಂ ನಿರುಜಂ . . . ತಾನೆನಿಸಿ ವರ್ತಿಕುಂ (ಜಾತಕಿ. ೧೪–೧೧); ಅವ್ಯಾಧಿತಚಿತ್ತನನ್ಯರಮಣೀದೂರಂ . . . ನಿರುಜಂ ಸರ್ವಜನೋಪಕಾರಿ ಶುಚಿ ಸದ್ವಾಕ್ಯಂ ನಿರಾಲಸ್ಯರಪ್ಪರ ನಾರಯ್ದುಪದೇಶಮಂ ಕುಡುವುದು (ಅಶ್ವಶಾ. ೧೦–೩); ಬದರೀಫಳ ಮಾತ್ರಾಹಾರರುಂ ವಿಗತಮಲಮೂತ್ರವಿನಿಹಾರರುಂ ನಿರುಜರುಂ ಅಶೋಕರುಂ ಅಜರರು (ರತ್ನಕ. ೩–೨೪ ಪ); ನಿರುಜಂ ನಿರ್ಮಾರಣನು . . . ಘನಗುಣ್ಗಳಮಂ ನಿನ್ನೆಣೆದೂಕಮನನುನಯದಿಂ ಸಿರಿಕೊಂಡದ ಕೆಂಡದೊಳನುದಿನಮೆನಗೀಯೆಂದುಸಿರ್ದು (ಉದ್ಧವೇ. ೩–೪೨). [ಸಂ.]

ನಿರುಜೆ (ನಾ). ಖಾಯಿಲೆಯಿಲ್ಲದಿರುವುದು; ಆರೋಗ್ಯ: ನೃಪತಿಯ ಮನೋರಥವ ಪೂರಿಸಲ್ ನಿರುಜೆಯಹುದು (ವೆಂಕಾರಾ. ೨–೮–೯).

[ಸಂ. ನಿರುಜಾ]

ನಿರುತ$_1$ (ನಾ). ೧. ದಿಟ; ಸತ್ಯ: "ನಿರುತಮೆನಲ್ ಸ[ಜಾತಾ.ನಿ]ತ್ಯಂ" (ಭಾರನಿ. ೫೪); ಇಂತಪ್ಪ ಶ್ರೀವಿಭೂತಿಯ ಧರಿಸಿರೇ ಭವವ ಪಜಿಪುದು ಮರಿತಸಂಕುಳವನೊರಸುವುದು ನಿರುತವಿದು ನಂಬು ಮನುಜ (ಮಹಾದೇ. ಬ. ೯೩–೨೧೯); ಸತ್ಯನಿಧಿ ಹರಿಶ್ಚಂದ್ರರಾಯನ ವಾಕ್ಯದೊಳು ಹುಸಿಗಳು ಮೊಳೆಯವಿದು ನಿರುತ (ಹಜಕಾ. ೨–೧೪); ಗುರುದೇವ ವಚನೋಕ್ತಿ ನಿರುತದಿಂ ರಂಜಿಸುತಮಿರಲನವರತಮುಂ ತನುಧರ್ಮವಂ ಮಱೆದರಿದೆನಲು ವರ್ತಿಸುವನದು ತಾನಾವ ಪರಿಯೆನಲು (ಬಸಪು. ೩೮–೮); ಒಡೆಯ ನೀನೆಂದಂಜಿ ನಿರುತವ ನುಡಿಯಲಮ್ಮರು (ಕುಪ್ಯಾಕ. ೯–೧೧); ನೀ ನರನೋ ನಿಶಾಚರನೋ ನಿರುತವಾವುದು ಹೇಳೆನಲು (ಕೊರರಾ. ೨–೫೫–೧೪); ಕಳುಹಿದರಾರು ನಿರುತದಿಂ ಪೇಳೆಂದು ಬೆಸಗೊಳಲ್ಕೆ (ಚಿಪು. ೨೩–೨೦). ೨. ನಿಶ್ಚಯ; ಖಂಡಿತಭಾವನೆ; ನಿಸ್ಸಂದೇಹವಾದ ನಂಬಿಕೆ: ಆ ಒಕ್ಕುಳವ ಕುಟ್ಟಿ ಮಿಕ್ಕುದ ಕೇರೆ ಮತ್ತೆ ಅದು ಒಬ್ಬಳವಾಯಿತ್ತು ಆ ಒಬ್ಬಳವ ಕುಡಿಕೆಯಲ್ಲಿ ಹೊಯಿದು ನಿರುತದಿಂದ ನೋಡೆ ಮೂಱು ಮಾನವ ನುಂಗಿ ಒಮ್ಮಾನವಾಯಿತ್ತು (ಮೋಕಿಮಾ. ೨೧೬–೧೧೮); ಮುನಿಸಂ ಮನ್ಮಥಯುದ್ಧದೊಳು ನಿರುತಮಂ ತತ್ವಾರ್ಥದೊಳು ಭಕ್ತಿಯಂ ಜಿನಪಾದಾಂಬುಜದೊಳು . . . ನಿಱಿಸಿದರು ವಾಕ್ಯಾದಿವರ್ಣಾಹ್ವಯರ್ (ಎಕ. VIII, ಸೊರಬ. ೧೪೬–೧೧; 1388); ಅವ ವೇಗದೊಳಿರಲೆಸುವನದಾವ ನಿರುತದಲೊಡ್ಡುವನು ಕೊರಳಿಂಗೆ ಕೋಲುಗಳ (ಕುಸ್ಯಾದ್ರೋ. ೫–೬); ನಿರುತವಿದು ನಿಜವೆಂದು ಬಗೆ ನಿರ್ಧರಿಸಿದೆವು ನಿಗಮಾರ್ಥದಲಿ ನಿನಗುರುತರಾನುಗ್ರಹದ ಬೀಜಾಕ್ಷರವಿದೀಗೆಂದ (ಕೊರರಾ. ೧–೨–೯). ೩. ಪ್ರಾಮಾಣಿಕ; ಸತ್ಯವಂತ: ದೊರಕಿದನು ಉಂಡುಂಡು ದೊರಕಿದನು ಉಟ್ಟುಟ್ಟು ದೊರಕಿದಲಿ ಶಯನ ಪಡೆವಾತ ಲೋಕಕ್ಕೆ ನಿರುತನಾಗಿಕ್ಕು (ಸರ್ವಜ್ಞ. ೪೦೨). ೪. ಪ್ರಾಮಾಣಿಕತೆ; ಮೋಸವಿಲ್ಲದಿರುವಿಕೆ: ಕಾಷ್ಠಾಂಗಾರನಿವ ತಾನು ನಿರುತದಿಂದಡುಗಬ್ಬ ತಂದಾ ಪುರದೊಳಗೆ ವಿಕ್ರಯಿಸಿ ತನ್ನನು ಹೊರೆದುಕೊಳುತಿಹನು (ಜೀವಂಧ. ೩–೩). ೫. ಕತ್ತರಿಸದುದು; ಒಡೆಯದುದು; ಭಾಗವಾಗದೆ ಇರುವಂಥದು: (ಕ).

ನಿರುತಮಾಗು, ನಿರುತವಾಗು = ನಿಶ್ಚಯವಾಗು; ದೃಢವಾಗು: ಭರತನ ಮನದೊಳ್ ನಿರುತಮಾದ ವೈರಾಗ್ಯವಜ್ರಲೇಪಮಂ ಕರ್ಚಿ ಕಳೆಯಲ್ಕೆಂದು ತನ್ನಂತಃಪುರದ ಪಧೂಜನನಮೇತಂ ಸೀತೆವೆರಸು ನೀಂ ಪೋಗೆಂದು ಭರತನಂ ಕಳಿಪುವುದುಂ (ಪುಣ್ಯಾಸ್ರ. ೨–೭ ಪ); ವರವೃಕೋದರನೆಂಬ ನಾಮವು ನಿರುತವಾಯ್ತವಗಂದು (ಸಂಭವ. ೧೭–೩೫); ತೊಟ್ಟು ಬಿಟ್ಟು ಹಣ್ಣಾಗಿ ಎನಗೆ ನಿಜೈಕ್ಯದ ಬಟ್ಟೆ ನಿರುತವಾಯಿತಯ್ಯ (ಘನವ. ೪೨–೩೮). 'ಋತ' ಪರಾ. [ದೇ.?॥ /ಪ್ರಾ. ಣಿರುತ್ತ]

ನಿರುತ$_2$ 'ನಿರುತಂ' ನೋ.

ನಿರುತಂ, ನಿರುತ$_2$ (ಅ). ೧. ದಿಟವಾಗಿ; ಸತ್ಯವಾಗಿ: ವಿನಮಿತ ಲಲಿತಪದೋಕ್ತಿಗಳಿಂ ಜನಹಿತಮಿಂತಿದು ಮುನಿಮತಮೆಂಬುದು ನಿನಗಱುಪಿದೆ ಕೆಳದೀ ನಿರುತಂ (ಭಂದೋಂಬು. ೨–೧೯೮); ಘಣಿನಿಳಯಂ ತಾಟಂ ತೆಂಗಿನಮರಸನಡದು(ದ)ರ್ಮನು(ದ)ದಱಿಂದಱುಗೆಯ್ಯಂತರದೊಳ್ ಬಡಗಲ್ ನಿರುತಂ ತೋಡುಗೆ ಸಾಲ್ಕು ಪುರುಪದೊಳ್ ನೀರಕ್ಕುಂ (ಲೋಕೋಪ. ೫–೨೬); ಅಧಿಗಮಶಿಷ್ಯೋತ್ಕರಾನುಗ್ರಹತ್ವಂ ನಿರುತಂ ಕೈಗಣ್ಮೆ ಪೊಣ್ಮುತ್ತಿರಲ್ (ಸುಕುಮಾ. ೧–೩); ಬಿರುದವಾದಿಮದವಿಸ್ಫಾಳಂ ನಿರುತಂ ತಾನೆನಲೆಸೆದಂ ಧರೆಯೊಳ್ (ಎಕ. VII, ಶಿವಮೊ. ೪–೬೨; 1122); ನಿರುತಂ ಸತ್ಯವಿಗೊರ್ವ ಗರ್ವಿ ಪುಸಿಯುತ್ತಂ ಲೋಭಿಯಾಗಲ್ ನಿಜಂ ಧರೆಯೊಳ್ ದಾತರು ಪುಟ್ಟರೇ (ಸೋಮೇಶ. ೨೬); ಗೆಲ್ಗೆ ನಿರುತಂ ಋತಂ! (ಶ್ರೀರಾಮಾ. ೮೪–೧೬೮). ೨. ನಿಶ್ಚಯವಾಗಿ: ನರನೊರ್ವಂ

ಪೊಱಗಾಗಲೊಂದು ದಿವಸಂ ಕೌಂತೇಯರಂ ಕಾದಿ ಗೆಲ್ ನಿರುತಂ ನೀನೆನೆ (ಪಂಪಭಾ. ೧೧–೯೮). **ನಿರುತ್ತ**: ೧. ನಿರುತ ಕೌರವನರ್ಥದಲಿ ಕಿಂಕರತೆಯೆಮಗಾಯಿತ್ತು ರಾಜ್ಯೈಶ್ವರಿಯ ಸೇವಾಪರರಿಗೀ ಸ್ವಾತಂತ್ರ್ಯವಿಲ್ಲೆಂದ (ಕುಪ್ಯಾಭೀ. ೨–೩೨) ; ನಿರುತ ಕರಣೇಂದ್ರಿಯಗಳುಪಸಂಹರಣೆಯೆನಿಸುವ ತಪದ ಪೆರ್ಚುಗೆ (ಅಪ್ಯುತ. ೧೦–೭೬) ; ನಿರುತ ಪರಿಪೂರ್ಣಗೆ ಪ್ರದಕ್ಷಿಣೆ ದಿರುಗಲೆಲ್ಲಿ (ಗಗತಾ. ೧೬–೩೮). [<ನಿರುತ್ತ]

ನಿರುತಿ, ನಿರರುತಿ (ನಾ). ೧. ನೈಋತ್ಯದಿಕ್ಕು : ನಿರುತಿಯ ಕಂಭದಿಂದಮನಿಳಾಸೆಯೊಳಿಕ್ಕುವ ಕಂಭಮಪ್ಪುದೊರ್ವೆರಲನಿತರ್ಕೆ ತಗ್ಗಿತು (ಲೋಕೋಪ. ೩–೨೮). ೨. ಅಷ್ಟದಿಕ್ಪಾಲಕರಲ್ಲಿ ಒಬ್ಬ ; ನೈಋತ್ಯದಿಕ್ಕಿನ ಒಡೆಯ : "ಮಾನಸದೇರನುಂ ಪಿಚ್ಚವುಣಗನೆಂದೊಡೆ ನಿರುತಿವೆಸರಕ್ಕು"(ಕಬ್ಬಿಕೈ.೧೪);"ಮಾನಿಸದೇರ ಕೊಂತಗಯ್ಯಂ ಪಿಚ್ಚವುಣಗನೆನಲು ನಿರುತಿವೆಸರಕ್ಕು"(ಶಬ್ದಮಂ.೧೪); ಮಱುಗಿದನು ಸುರನಾಥನಗ್ನಿ ಬಸವಳಿದ ಯಮ ಬೆಱಗಾದ ನಿರುತಿ ಹಲುಗಚ್ಚಿದನು (ಪಚಕಾ. ೫–೧೧) ; ಸುರರಾಜನಗ್ನಿ ಕಾಲಂ ನಿರುತಿ ವರುಣನಾ ಮರುತಂ ಕುಬೇರನೀಶಂ ದಿಶಾಧಿಪರು (ಮಂಗರಾ. ೧೭–೧೮) ; ಹಾಯೆನುತ ಹರಿ ವರುಣ ಶಂಕರ ವಾಯುವಿತ್ತಪ ನಿರುತಿ[ಪಾಠಾಂ. ತ] ಶಿಖಿ ಯಮರಾಯುಂಧದ ನಿರ್ಗಮಕೆ ಲಘುಸಂಧಾನ ಕೌಶಲಕೆ . . . ರಾಘವರಾಯ ಧರಣಿ ವರಾಹಯೆಂದುದು (ತೊರರಾ. ೩–೬–೪೯) ; ನಿರುತಿ ಮಾನಿಸನಂ . . . ಗಿರಿಶಂ ವೃಷೇಂದ್ರನಂ ಮಮತೆಯೊಳೇಱಿ ಪಾಲ್ಗಡಲ ಸಾರಿದರು (ದಶಾವ. ೨–೫). ೩. ರಾಕ್ಷಸ ; ದೈತ್ಯ : "ನಿಶಾಚರಂ ರಾಕ್ಷಸಂ ಕೋಣಪಂ ಯಾತುಧಾನಂ ಕೈಕಸೇಯನೆನೆ ನಿರುತಿ" (ಮಂಗರಾ.೧೫–೧೦);"ಕರ್ಬುರಃ = ನಿರುತಿಯುಂ, ಬಣ್ಣವುಂ" (ಕಾಶಕೃ. ೫೪) ; ಅರಿಗಳೈತರದಂತೆ ಕಾವಲನಿರಿಸಿದನು ಬೇತಾಳ ಜಟ್ಟಿಗ ನಿರುತಿ ಭೈರವ ಭೂತನಾಥ ಪ್ರಮುಖ ಭುಜಬಲರ (ತೊರರಾ. ೬–೪೮–೯). ೪. (?) : ಆರಾರ ಇರವಿನ ತೆಱನ ಪರಿಹರಿಸಿ ತಾ ಸರಿಸವಾಗಿ ನಿರುತಿಗಳ ನಿಜವನಱಿದು ಪೂಸರ ಆಸೆಯನಱಿದು . . . ಇಪ್ಪಾತ ತ್ರಿವಿಧದವನಲ್ಲ (ಸರ್ವವ. ೧೨೨–೬೨೪). **ನಿರರುತಿ** : ೨. ವಾಯುಸಖ ಬಾಣಸಿಗಂ ತಳವಾಱನಂತಕಂ ನಿರರು [ಪಾಠಾಂ.ರು]ತಿ ಬಾಗಿಲಾತ . . . ರಕ್ಕಸ ರಾವಣೇಂದ್ರಂಗಂ (ದಶಾವ. ೮–೧೦).

[<ಸಂ. ನಿರ್ಋತಿ]

ನಿರುತಿವಾಹನ (ನಾ). ಕತ್ತೆ : ನಿರುತಿವಾಹನದ ಮೃಂದಂ ನೆಗಳ್ಗಳ ಸಾಲ್ . . . ಗರುಡೋತ್ಕರಂ ಪುರಬಹಿರ್ವಳಯದೊಳಗೆಲ್ಲಿಯುಂ ತೀವಿರಲ್ (ಚಬಪು. ೩೦–೬). [ನಿರುತಿ + ವಾಹನ]

ನಿರುತ್ತರ (ನಾ). ೧. ಉತ್ತರವಿಲ್ಲದಿರುವಿಕೆ ; ಉತ್ತರ ಕೊಡದಿರುವಿಕೆ : ಅವಳ ನಿರುತ್ತರದಿಂದ ರಾಮಯ್ಯನಿಗೆ ಮತ್ತಷ್ಟು ರೇಗಿತು (ಚಂದತೋ. ೨೩೩). ೨. ಉತ್ತರಿಸಲಾರದವನು; ಉತ್ತರ ಕೊಡಲು ಅಸಮರ್ಥನಾದವನು : ಪ್ರತಿವಾದಿ ನಿರುತ್ತರನಾಗಿ ಪಕ್ಷಪರಿತ್ಯಾಗಂ ನಿಗ್ರಹಸ್ಥಾನಮೆಂಬುದಱಿಂ ನಿಗ್ರಹಸ್ಥಾನಮನೆಯ್ದಿಯುಂ (ಶಾಂತಿಪು. ೮–೧೪೧ ಪ) ; ಆ ನೃಪಾಳೋತ್ತಮಂ . . . ದುರ್ನೀತಿನಿರ್ಣಯನಿಪುಣರಪ್ಪ ಪ್ರತಿವಾದಿಗಳಂ ನಿರುತ್ತರರಂ ಮಾಡಿ (ಬಾಧಪು. ೫–೬೧ ಪ); ಗಂಗವ್ವ . . . ದೇಸಾಯರನ್ನು ನಿರುತ್ತರರನ್ನಾಗಿ ಮಾಡಿದಳು (ಗಂಮಾಯಿ.೫೧). ೩. ತನಗಿಂತ ಹೆಚ್ಚಿನವರಾರೂ ಇಲ್ಲದವನು ; ಶ್ರೇಷ್ಠ : ನಿಃಪಿತ ನಿರುತ್ತರ ನಿರಾಮಯ ನಿರ್ವಿಕಾರಾಕಾರ ಚಿತ್ತೈಸು (ಬಸಪು. ೬೧–೪೩). ೪. [ಕಾವ್ಯಮೀ] ಒಂದು ಬಗೆಯ ಶಬ್ದಾಲಂಕಾರ; ಉತ್ತರವಿಲ್ಲದ ಮಾತು : ಪೆ[ಜ]ನಾವಂ ಧರಾಚಕ್ರಕ್ಕೆಱೆಯಂ ಕೆಳೆಯಪ್ಪವಂ ನೆಱೆ ಯಾರೆಣೆಯೆಂಬನ್ನಂ ಕುಱುತಬ್ಧಿಗೆ ಬನ್ನಮಂ (ನಿರುತ್ತರಂ) (ಕವಿರಾ. ೨–೧೨೭) ; "ಪದ್ಯದಲ್ಲಿ ಪ್ರಶ್ನೆಗಳನ್ನು ಅಳವಡಿಸಿ, ಅದಕ್ಕೆ ಉತ್ತರವು ಹೊರಪಡದಿದ್ದರೆ ಅದು 'ನಿರುತ್ತರ'ವೆನಿಸುವುದು" (ಕವಿರಾ. ಟಿಪ್ಪಣಿ).

[ಸಂ.]

ನಿರುತ್ತರವಾದಿ (ನಾ). ಹೊಣೆಗೇಡಿ; ಬೇಜವಾಬುದಾರ: ನಿರುತ್ತರವಾದಿಯನ್ನು ನಿಸರ್ಗವೆಂದಿಗೂ ಕ್ಷಮಿಸಲಾರದು (ದೇಕನ್ಯೆ. ೪).

[ಸಂ. ನಿರುತ್ತರವಾದಿನ್]

ನಿರುತ್ತರೆ (ನಾ). ಉತ್ತರವಿಲ್ಲದವಳು ; ಉತ್ತರ ಕೊಡಲು ಅಸಮರ್ಥೆಯಾದವಳು : ಇವಂ ಕುಶಾಗ್ರಮತಿ ಕಲ್ಗುಂ ಮತ್ತಮಿವರ್ಕಳೇಗೆಯ್ದುಂ ಕಲಲಾಱರೇಗೆಯ್ವೆನೆಂದೊಡಾಕೆ ನಿರುತ್ತರೆಯಾಗಿ (ಶಾಂತಿಪು. ೬–೬೪ ಪ) ; ಅವಳು ನಿರುತ್ತರೆಯಾಗಿ ನಿಂತಿದ್ದುದನ್ನು ಕಂಡು (ಕಪಾಕುಂ. ೧೦೧). [ಸಂ. ನಿರುತ್ತರಾ]

ನಿರುತ್ಸಾಹ (ನಾ). ಉತ್ಸಾಹವಿಲ್ಲದಿರುವುದು ; ಉದಾಸೀನತೆ : ಆ ಸಾರಥಿ ನಿರುತ್ಸಾಹದಿಂದ ಉತ್ತರವಿತ್ತನು (ಮಲಿನಾ. ೧೮). [ಸಂ.]

ನಿರುತ್ಸಾಹಿ (ನಾ). ಉತ್ಸಾಹವಿಲ್ಲದ ವ್ಯಕ್ತಿ ; ಉದಾಸೀನ : ಈಗ ಅಂಥದೊಂದು ಸಂಕಟವನ್ನು . . . ನೆನೆದು ಧೈರ್ಯಗುಂದಿ ನಿರುತ್ಸಾಹಿಯಾದೆ (ಹೇಮಂತ. ೩೨). [ಸಂ. ನಿರುತ್ಸಾಹಿನ್]

ನಿರುತ್ಸುಕತೆ (ನಾ). = ನಿರುತ್ಸಾಹ : ಅನಿಲ ಮಾತ್ರ ಯಾವದೇರೀತಿಯ ಉತ್ಸುಕತೆ ತೋರಿಸದಾದ. ನಿರುತ್ಸುಕತೆಯ ಕಾರಣವನ್ನು ತಿಳಿದಿದ್ದ ಹೊಸಮನಿ ರಂಗಣ್ಣನವರ ಮೂಲಕ ಅವನ ಪರಿಸ್ಥಿತಿಯೆಲ್ಲಾ ವಿದಿತವಾಗಿತ್ತು (ಅಪನಾ. ೨೩೧). [ಸಂ. ನಿರುತ್ಸುಕತಾ]

ನಿರುದಯ (ನಾ). ಕರುಣೆಯಿಲ್ಲದಿರುವಿಕೆ; ನಿರ್ದಯೆ : ನಿರುದಯವು ನಿಷ್ಠುರವು ದುರುಳತ್ವ ಢಾಳಕವು ಪರಬಂಧಕವು ಡಂಭವಪವಾದವು (ಸುಸಾರ. ೬–೨). [<ಸಂ. ನಿರ್ದಯ]

ನಿರುದ್ಧ (ಗು). ೧. ತಡೆಹಿಡಿದ ; ಪ್ರತಿಬಂಧಿಸಿದ : ನೀಳ್ದು ಪೊದಟ್ಟು ಪರ್ಬಿ . . . ನಿರುದ್ಧೋಚ್ಛ್ವಾಸಮಪ್ಪನ್ನೆಗಂ ಪುದಿದಾದಂಪತಿಯಂ ಪುದುಂಗೊಳಿಸಿ ಲೋಕಾಶ್ಚರ್ಯಮಂ ಮಾಡಿ ಕೊಂದುದು ಕೃಷ್ಣಾಗರುಧೂಪಧೂಮನಿವಹಂ (ಆದಿಪು. ೫–೨೩); ನಿರುದ್ಧನಿಜಬಾಷ್ಪ ಮೋಕ್ಷರತಿದುಃಖದೀನಾನನರ್ ಪರಿಚ್ಯುತಮುದರ್ ಮದಾನನವಿಲೋಕನತ್ರಸ್ತರಿಂತಿರಲ್ಕೆ ಬೆಸಗೊಳ್ವುದೇಂ (ಕಾದಂಉ. ೬೪೦) ; ಬಹುಶಾಖೆಯಿಂದಮಿಂದ್ರಾಲಯಮಂ ಪಳಂಚಿ ತಮಮಂ ಸೆಱೆಗೆಯ್ದು ಹಿಮಕ್ಕೆ ಕೊಂಬುಗೊಟ್ಟಾಲಮನಗ್ರಪಲ್ಲವಕರಾಗ್ರನಿರುದ್ಧಮರುತ್ತರಂಗೀಣೇಕೂಲಮನೆಯ್ದಿದರ್ (ಪಂರಾಮಾ. ೭–೧೨೭). (ನಾ). ೨. ತಡೆಯಲ್ಪಟ್ಟುದು ; ಪ್ರತಿಬಂಧಕ್ಕೆ ಒಳಗಾದುದು : ಜ್ಞಾನವಾಗುವುದರಿಂದ ಇಂದ್ರಿಯಗಳು ನಿರುದ್ಧವಾಗುವಂತೆ ಹಾದಿಕಾರರು ಅಲ್ಲಲ್ಲಿ ತಡೆದು ನಿಲ್ಲುತ್ತಿದ್ದರು (ತುಳಸೀ. ೨೫೪) ; ಅಂತು ಪೈಥಾಗೋರಾಸಿನ ಸಂಪ್ರದಾಯ ಇಲ್ಲಿಗೆ ನಿರುದ್ಧವಾಯಿತು (ಬುಕ್ಸಾರ. ೧೭ ಪೀಠಿಕೆ) ; ಇಂಗ್ಲಿಷ್ ಶಿಕ್ಷಣ ಸಂಕುಚಿತವಾದ ಎಲ್ಲೆಯಲ್ಲಿ ನಿರುದ್ಧವಾಗಿದ್ದಾಗ, ಆ ಕ್ಷುದ್ರ ಎಲ್ಲೆಯೊಳಗೆ ಇಂಗ್ಲಿಷ್ ನಾಗರೀಕತೆಯ ತ್ಯಾಜ್ಯಾಂಶಗಳು ಕೂಡಿಕೊಂಡು ಎಲ್ಲವನ್ನೂ ಕೆಡಿಸಿ ಬಿಟ್ಟಿತು (ನಿಬಂಧ. II, ೨೯೦). ೩. ಹಿಂಸೆ ; ತೊಂದರೆ ; ಬಾಧೆ : ನಿನ್ನ ಸುತನ ದೆಸೆಯಿಂದೆ ನಮ್ಮಿ ನೆಲಂ . . . ಪಶುಪಕ್ಷಿಮೃಗಕೀಟ ತರುಗುಲ್ಮಲತೆಗಳೆಲ್ಲ ಈ ನಿರುದ್ಧಕೆ ಧನ್ಯವಾದವೇಂ ಕೃತನೊ ನೀಂ ಭಾನುರಶ್ಮಿಗೆ ಕಂದೆಱೆಯದ ಗೂಗೆಯವೊಲಜ್ಞಾನಿ ದ್ವಿಜಾಧಮಂ ತಾನಾದೆಂ (ಚೈಮಿಭಾ. ೧೨–೨). ೪. [ಯೋಗ] ನಿಗ್ರಹಿಸಿದ ಚಿತ್ತವೃತ್ತಿ : ಕ್ಷಿಪ್ತ ಮೂಢ ವಿಕ್ಷಿಪ್ತ ಏಕಾಗ್ರ ನಿರುದ್ಧವೆಂದು ಚಿತ್ತಸ್ಥಿತಿ ಐದು ವಿಧ . . . ನಿರುದ್ಧವೆಂದರೆ ಯಾವ ವಿಷಯದಲ್ಲಿಯೂ ಚಿತ್ತವನ್ನು ಬಿಡದೆ ತಡೆಯುವುದು ; ಎಂದರೆ, ತಡೆಯತಕ್ಕ ಚಿತ್ತವೃತ್ತಿ ಎಂದರ್ಥ (ಹಿಂದಸಾ. ೧೦೨). [ಸಂ.]

ನಿರುದ್ಧಕರ (ನಾ). (ಶ್ವಾಸವನ್ನು) ತಡೆದ ಕೈ; (ಉಸಿರಾಟವನ್ನು) ತಡೆದ ಹಸ್ತ : ದರನಿಮೀಲಿತದೃಷ್ಟಿನಿವಿಷ್ಟಮಾಗೆ ಮೂಗಿನ ತುದಿಯೊಳ್ ನಿರುದ್ಧಕರಮುಂ ನಿಲೆ ಮಂತ್ರಪದಾಕ್ಷರಂಗಳಂ ಜಿನುಗುತಲಿರ್ದನಾ ಪರಮಯೋಗಿಯವೋಲ್ ಫಣಿರಾಜಕೇತನಂ (ಗದಾಯು. ೬-೧೫).

[ನಿರುದ್ಧ + ಕರ್ತೃ]

ನಿರುದ್ಧಕರಣ (ಗು). ೧. ಇಂದ್ರಿಯಗಳನ್ನು ಹತೋಟಿಯಲ್ಲಿರಿಸಿಕೊಂಡ. (ನಾ). ೨. ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡವನು; ಇಂದ್ರಿಯನಿಗ್ರಹಿ : ಮಹಾಕಾಳಶ್ಮಶಾನದೊಳಗೆ ಯೋಗನಿಯೋಗಧ್ಯಾನೋಪಯೋಗದಿಂ ನಿರುದ್ಧಕರಣ ನಿಷ್ಪಂದಶರೀರನಾಗಿ ಮೆಲ್ಲನಡಕಂಬೆರಸು ಪಟ್ಟಿರ್ದ ಋಷಿರೂಪಕಮಂ ಕಂಡು (ಸುಕುಮಾ. ೧೨-೨೪ ವ). ೩. ತಡೆಯಲ್ಪಟ್ಟ ಇಂದ್ರಿಯ; ವಿಷಯಗಳ ಕಡೆಗೆ ಹೋಗದಂತೆ ನಿಗ್ರಹಿತವಾದ ಕಣ್ಣು, ಕಿವಿ ಮೊದಲಾದುವು.

[ನಿರುದ್ಧ + ಕರಣ]

ನಿರುದ್ಧಯೋಗ (ನಾ). [ಯೋಗ] ತಡೆಯಲ್ಪಟ್ಟ ಕಾಯಕ, ವಾಚಕ, ಮಾನಸಿಕ ಸಂಬಂಧವುಳ್ಳವನು : ಕೈಲಾಸಶೈಲಶಿಖರಾಲಂಕಾರ ನಿರುದ್ಧಯೋಗನುಮಪಗತಯೋಗಗುಣಸ್ಥಾನನುಂ . . . ಆಗಿ (ಅವಿಪು. ೧೬-೬೪ ವ). [ನಿರುದ್ಧ + ಯೋಗ]

ನಿರುದ್ಧೇಂದ್ರಿಯೆ (ನಾ). ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡಿರುವವಳು; ಇಂದ್ರಿಯನಿಗ್ರಹವುಳ್ಳವಳು : ಮನಮಂ ನಿಗ್ರಹಿಸುತ್ತ ಸದ್ವಿಷಯದತ್ತಲ್ ಪೊರ್ದದಂತಾಗೆ ಮಾಡಿ ನಿರುದ್ಧೇಂದ್ರಿಯೆಯಾಗಿ . . . ಆಶ್ರೈಸಿದೆಂ ಸ್ಥಾಣುವಂ (ಕಾದಂಪೂ. ೯೫೩).

[ಸಂ. ನಿರುದ್ಧೇಂದ್ರಿಯಾ]

ನಿರುದ್ಯೋಗ (ನಾ). ೧. ಜಡತನ; ಆಲಸ್ಯ; ಸೋಮಾರಿತನ : ಅಸ್ತಮಯದುದಯಕಾಲದೆ ನಿದ್ರೆಗೈವನಾತ್ಮಸ್ತುತಿಯ ಪರನಿಂದೆಯವನ ಸಾಧಿಸಿ ಪರರ ವಸ್ತುವಂ ಕಳುವನ ನಿರುದ್ಯೋಗದವನ ಸಿರಿ ತೊಲಗಿದಲ್ಲದೆ ಮಾಣ್ಬಳೆ (ಜೈಮಿಭಾ. ೫-೬೮). ೨. ನೌಕರಿಯಿಲ್ಲದಿರುವುದು; ಉದ್ಯೋಗವಿಲ್ಲದಿರುವುದು : ಒಂದೆಡೆಗೆ ನಿರುದ್ಯೋಗ . . . ಇನ್ನೊಂದೆಡೆಗೆ ಹೊಸಶಿಕ್ಷಣದಿಂದ ಬಂದ ಸ್ವಾಭಿಮಾನ, ಸ್ವದೇಶಾಭಿಮಾನಗಳ ಉರಿ-ಉಬ್ಬರ ಇವುಗಳಿಂದ ನಮ್ಮ ರಾಷ್ಟ್ರೀಯ ಆಂದೋಲನ ಆರಂಭವಾಯಿತು! (ಮಾವಾದ. ೯೫); ಇಂತಹ ನೌಕರಿಯು ಶ್ರೀಧರನ ನಿರುದ್ಯೋಗದ ಸಮಸ್ಯೆಯನ್ನು ಕೊನೆಗಾಣಿಸಿತೇ ಹೊರತು ಮತ್ತೇನನ್ನೂ ಸಾಧಿಸಿ ಕೊಡಲಿಲ್ಲ (ಅಂಬುಜಾ. ೧೦).

ನಿರುದ್ಯೋಗವೇತನ = ಉದ್ಯೋಗ ಸಿಕ್ಕಿಲ್ಲದವನಿಗೆ ತಾತ್ಕಾಲಿಕವಾಗಿ ಕೊಡಲಾಗುವ ವೇತನ,—ಸಂಬಳ : ಉದ್ಯೋಗ ದೊರೀದಿದ್ದರೆ ಅವನಿಗೆ ನಿರುದ್ಯೋಗವೇತನ ಸಿಗುತ್ತೆ (ಹೊಸಕ್ಷಿ. ೨೨೧). [ಸಂ.]

ನಿರುದ್ಯೋಗತನ (ನಾ). ನೌಕರಿಯಿಲ್ಲದಿರುವುದು; ಉದ್ಯೋಗವಿಲ್ಲದಿರುವುದು : ಈ ನಿರುದ್ಯೋಗತನದಿಂದ ನನ್ನ ಜೀವನ ಎಷ್ಟು ದಿನ ಸಾಗಬಲ್ಲದು ? (ಸ್ವಾವಲಂ. ೫); ಇತ್ತ ಉತ್ಪನ್ನ ಹೆಚ್ಚಾದಂತೆ ಕೆಲಸಗಾರರ ನಿರುದ್ಯೋಗತನ ಇನ್ನೂ ಬೆಳೆಯುವದು (ಮಾವಾದ. ೧೩೨).

[ನಿರುದ್ಯೋಗ + -ತನ]

ನಿರುದ್ಯೋಗಿ (ನಾ). ೧. ಸೋಮಾರಿ; ಜಡ; ಆಲಸಿ : ಸೆಣಸುಳ್ಳುದ್ವೃತ್ತರಂ ತಳ್ತಿಱಿಯದೆ . . . ಒರ್ವಂ ಗುಣಮುಂಟೆಂದುಂಡು ಪಟ್ಟಿರ್ದನನಣಮೆ ನಿರುದ್ಯೋಗಿಯಂ ಭೂಪನೆಂಬರ್ (ಪಂಪಭಾ. ೪-೧೧); "ನಿರುದ್ಯೋಗಿಗಳ ತಲೆ ಪಿಶಾಚಿಯ ಕಾರ್ಖಾನೆ" ಎಂಬ ಆಂಗ್ಲ ನಾಣ್ಣುಡಿ ಇದೆ (ನಾಡಿಗೇ. ೨೬೪); ಸೋಮಾರಿಗಳೇ (ನಿರುದ್ಯೋಗಿಗಳೇ) ಬಲು ಕಾಮುಕರಿರುವರೆಂದು ಜಗತ್ತಿಗೆ ಪ್ರತ್ಯಕ್ಷ ಅನುಭವವದೆ (ಬ್ರಹ್ಮಜೀ. ೧೬೧). ೨. ನೌಕರಿಯಿಲ್ಲದಿರುವವನು; ಉದ್ಯೋಗವಿಲ್ಲದವನು : ತನ್ನ ಕೆಲಸ ಕಳೆದುಕೊಂಡು . . . ಆ ಹುಡುಗ ನಿರುದ್ಯೋಗಿಯಾಗಿ ಪಟ್ಟಣದ ಬೀದಿಗಳಲ್ಲಿ ಅಲೆದಾಡುತ್ತಿದ್ದನು (ಪುನರು. ೧೫೯).

ನಿರುದ್ಯೋಗಿ ಭತ್ಯ = ನಿರುದ್ಯೋಗವೇತನ : ಇಂಗ್ಲೆಂಡಿನಲ್ಲಿ ಅವನಿಗೆ ಉದ್ಯೋಗ ದೊರಕುವವರೆಗೂ ನಿರುದ್ಯೋಗಿ ಭತ್ಯ ಸಿಗುತ್ತಿತ್ತು (ರೂಢಿ). [ಸಂ. ನಿರುದ್ಯೋಗಿನ್]

ನಿರುದ್ವಿಗ್ನ (ಗು). ೧. ಆವೇಗವಿಲ್ಲದ; ಉದ್ವೇಗವಿಲ್ಲದ; ಶಾಂತನಾದ. (ನಾ). ೨. ಉದ್ವೇಗವಿಲ್ಲದವನು; ಆವೇಗವಿಲ್ಲದವನು; ಶಾಂತವಾಗಿರುವವನು : ಅವನು ನಿರುದ್ವಿಗ್ನನಾಗಿ ನಿರ್ಭಯನಾದನು (ಪುನರು. ೧೩೧); ನೊವೋದರೋವ್ ನಿರುದ್ವಿಗ್ನನಾಗಿ ಉತ್ತರಿಸಿದನು (ಪುನರು. ೫೩೪). [ಸಂ.]

ನಿರುಪಕ್ರಮ (ನಾ). ಆರಂಭವಿಲ್ಲದುದು; ಆದಿಯಿಲ್ಲದುದು; ಅನಾದಿ : ಆ ಯತಿ . . . ಹಿಂದಿಕ್ಕಿ ಬಾಗಿಲನೇಳನಾ ನಿರುಪಕ್ರಮದ ನಿಜದೈವದಂತಃಪುರಕೆ ನಡೆತಂದ (ನಿಭಾಗ. ೯-೪-೧೯). [ಸಂ.]

ನಿರುಪದ್ರ (ನಾ). = ನಿರುಪದ್ರವ : (ಕಿ). 'ಉಪದ್ರ' ಪರಾ.

[<ಸಂ. ನಿರುಪದ್ರವ]

ನಿರುಪದ್ರವ (ನಾ). ೧. ತೊಂದರೆಯಿಲ್ಲದಿರುವುದು; ಬಾಧೆಯಿಲ್ಲದಿರುವುದು; ಕಾಟವಿಲ್ಲದಿರುವುದು : ಆ ದಾನವರ ಮರ್ದಿಸಿ ದೇವಲೋಕವನೆವಗೆ ನಿರುಪದ್ರವದಲೆಡೆಮಾಡೆಂದನಮರೇಂದ್ರ (ಕುಮ್ಯಾಅ. ೧೨-೯). ೨. ಹಾನಿ, ರೋಗ, ನಾಶ ಮೊದಲಾದ ಯಾವ ಬಗೆಯ ಪೀಡೆಗಳನ್ನೂ ಹೊಂದದವನು; ಪರಬ್ರಹ್ಮ : ಆ ಅಂತರ್ಯಾಮಿ ಮೊದಲಾದ ಈಶ್ವರತ್ರಯಕ್ಕೆ ಅಧಿಷ್ಠಾತೃ . . . ನಿರ್ಮಾಯಿ ನಿರುಪದ್ರವ . . . ಎಂಬಿವು ಮೊದಲಾದವೇ ಅದ್ವೈತಬ್ರಹ್ಮಪರ್ಯಾಯನಾಮಂಗಳಕ್ಕುಂ (ವಿವೇಕ. ೨೬). [ಸಂ.]

ನಿರುಪದ್ರವಿ (ನಾ). ೧. ತೊಂದರೆ ಕೊಡದಂತಹುದು; ಕೆಡುಕು ಮಾಡದಿರುವಂತಹುದು : ನೆಲ ಪಾತ್ರೆ ಇತ್ಯಾದಿಗಳನ್ನು ಸ್ವಚ್ಛವಾಗಿ ಮತ್ತು ತೇವವಿಲ್ಲದಂತೆ ಇರಿಸಿದರೆ ಈ ಅಣುಗಳು ಸತ್ತು ಹೋಗಿ ನಿರುಪದ್ರವಿಗಳಾಗುತ್ತವೆ (ಅಡುಸೌ. ೩೭). ೨. ತೊಂದರೆ ಕೊಡದವನು; ಕೆಡುಕನಲ್ಲದವನು : ಅವನ ಕಾಲದಲ್ಲಿ ಅವನನ್ನು ಅನುಸರಿಸಿ ಬಂದ ಜನರು, ನಿರುಪದ್ರವಿಗಳಾಗಿಯೇ ಇದ್ದರು (ಬಾಲಪ್ರ. II, ೮೦೬).

[ಸಂ. ನಿರುಪದ್ರವಿನ್]

ನಿರುಪಧಾವಿ (ನಾ). ೧. (ಅತ್ಯಾಸೆಯಿಂದ) ಯಾರ ಸಮೀಪಕ್ಕೂ ಹೋಗದವನು; ನಿಸ್ಪೃಹ. ೨. ಯಾವ ಚಿಂತೆಯೂ ಇಲ್ಲದವನು; ನಿಶ್ಚಿಂತ : ವಿಜಿತಷಡ್ವರ್ಗನು ನಿರರ್ಗಳ ನಿಜಶಿವೈಕ್ಯನು ನಿರುಪಧಾವಿ[ಪಾತಾಂ. ದಾದಿ] ಭವಿಜನಸಂಗತ್ಯಾಗಿ (ಬಸಪು. ೩೦-೩).

[ಸಂ. ನಿರುಪಧಾವಿನ್]

ನಿರುಪಪ್ಲವ (ಗು). ೧. ತೊಂದರೆಯಿಲ್ಲದ; ನಿರ್ವಿಘ್ನ : 'ನಿರುಪಪ್ಲವಾನಂದ' ಪರಾ. ೨. ತೊಂದರೆ ಕೊಡದ. (ನಾ). ೩. ಶಿವ.

[ಸಂ.]

ನಿರುಪಪ್ಲವಾನಂದ (ನಾ). ೧. ಅಡ್ಡಿ ಆತಂಕಗಳಿಲ್ಲದ ಆನಂದ; ಶುದ್ಧವಾದ ಆನಂದ; ಬ್ರಹ್ಮಾನಂದ. ೨. ಪರಬ್ರಹ್ಮ : ಆ ಅಂತರ್ಯಾಮಿ ಮೊದಲಾದ ಈಶ್ವರತ್ರಯಕ್ಕೆ ಅಧಿಷ್ಠಾತೃ . . . ಅಸಂಗಿ ನಿರುಪಪ್ಲವಾನಂದ . . . ಎಂಬಿವು ಮೊದಲಾದ ಅದ್ವೈತಬ್ರಹ್ಮಪರ್ಯಾಯನಾಮಂಗಳಕ್ಕುಂ (ವಿವೇಕ. ೨೬). [ನಿರುಪಪ್ಲವ + ಆನಂದ]

ನಿರುಪಮ (ಗು). ೧. ಹೋಲಿಸಲಾಗದ; ಅಸದೃಶವಾದ; ಉಪಮಾತೀತವಾದ : ಧರಿತ್ರೀಸ್ತುತ್ಯನತ್ಯುಜ್ವಲನಿರುಪಮದೇಹಪ್ರಭಾ

ದಿವ್ಯಸರ್ವಾವಧಿಬೋಧಂ (ಸುಕುಸೂ. ೩-೪೪); ನಿರುಪಮಕಲ್ಪನಲ್ಲಿಗೆ ಲತಾವಳಿ ಬಂದೆಱಗುತ್ತುನಿರ್ಪಪೋಲ್ ಪರಿಕರಕಾಂತೆಯರ್ವೆರಸು ತಾಂ ಕಳಭಾಷಿಣಿ ಬಂದು (ಕುಸುಸೂ. ೧೫-೧೪೩) ; ನಿರುಪಮಗುಣಾವೇಷಿಯು ಚಲಿತಸರಸನೂನ್ಯತಭಾಷಿ (ಬಸಪು. ೭-೪); ಹರಿ ತೋಱುವನು ನಿರುಪಮ ವಿಶ್ವರೂಪವನಾ ಮಹಾಸಭೆಗೆ (ಕುವ್ಯಾಭಾ. ೯-೫೭); ಪೆಣ್ಣಂಬ ತಪಕೆ ನೀಂ ನಿರುಪಮಪ್ರತಿಮೆಯೌ (ತ್ರಿಲೋಪಾ. ೫೯-೫೬೯). (ನಾ). ೨. ಅಸದೃಶವಾದುದು ; ಉಪಮಾತೀತವಾದುದು : ಪರಿಸ್ಫೃತಿಯಿಂಬುದಕ್ಕುಂ ನಿರುಪಮಮರ್ಥಸ್ವರೂಪವಿನಿಮಯವಚನಂ (ಕವಿಗಾ. ೩-೧೫೮); ನಿರುಪಮವಲೇ ಹೊಗಳುವಡೆ ಹೊಸಪರಿಯ ಬಲ ಬರುತಿರ್ದುದ್ರಿಯೆ ಹರಹುಗಳ ಪೊದೞುಗಳ ಬಲು ಹೆಮ್ಮರನ ನೆಗಪಿನಲಿ (ತೊರಾ. ೪-೭-೯). ೩. ಹೋಲಿಕೆಯಿಲ್ಲದವನು ; ಅಸದೃಶ ; ಉಪಮಾತೀತ : ನಿರುಪಮರವರಂದಿರ್ಪತ್ತೆರಡಂಬುಧಿಯುಪಮೆಯೆನಾಯುತನಗಾಗಲ್ಕಯ್ವರುಮಿರ್ದರ್ ಸುಖರತ್ನಾಕರದೊಳಗೋಲಾಡಿ ಮೂಡಿ ಮುಟುಮ್ಮಾಡುತ್ತುಂ (ನೇಮಿಪು. ೧೪-೧೨೫); ನಿರುಪಮನ ನಿರ್ಮತ್ಸರನ ನಿರ್ಮರಣ ನಿಶ್ಚಿಂತನನು . . . ಕಂಡನಸುರೇಂದ್ರ (ತೊರಾ. ೬-೫೧-೪೯); ನಿರುಪಮ ನಿರಾಳನು ನೋಡಾ ಲಿಂಗೈಕ್ಯನು(ಅಖಂಡೇ. ೩೧೬-೫); ಗಿರಿಯ ಕರದೊಳಗಾಂತವನ ನಿರುಪಮನ . . . ಗುರುತರಿವರಾರೆಂದ (ಗಗತಾ. ೧೬-೧). ೪. [ಛಂದ] ಪ್ರತಿ ಸಾಲಿನಲ್ಲಿಯೂ ಹನ್ನೆರಡು ಅಕ್ಷರಗಳು ಇರುವ ಜಗತೀಛಂದಸ್ಸಿನ ಒಂದು ವೃತ್ತ ; ℙ ಇದರ ಪ್ರತಿಸಾಲಿನಲ್ಲಿಯೂ ನಗಣ, ಭಗಣ, ಜಗಣ, ರಗಣಗಳು ಕ್ರಮವಾಗಿ ಬರುತ್ತವೆ: ಸುರಪುರೇಂದುದಿವಸಾಧಿಪಾಗ್ನಿಗಳ್ ಬರೆ . . . ಪೆಸರ್ ನೆಗೞ್ ಪಿಂಗಳೋಕ್ತಿಯೊಳ್ ನಿರುಪಮಂ ನಿರುಪಮಾನ ವಿಭ್ರಮಂ (ಛಂದೋಂಬು. ೨-೧೩೧). [ಸಂ.]

ನಿರುಪಮಚರಿತ್ರೆ (ನಾ). ಅಸದೃಶವಾದ ನಡತೆಯನ್ನುಳ್ಳವಳು ; ಉತ್ತಮವಾದ ಚಾರಿತ್ರ್ಯವನ್ನು ಹೊಂದಿರುವವಳು : ನಿರುಪಮ ಚರಿತ್ರೆ ಸೂರ್ಯಜನರಸಿಯೆನಿಪ್ಪಿಂದುಮಾಲೆ ಪೆತ್ತಳ್ ಲೋಕೋತ್ತರೆನಿಪ ವಾಲಿಸುಗ್ರೀವರುಮಂ (ಪಂರಾಮಾ. ೧೦-೧೬೫).

[ಸಂ. ನಿರುಪಮಚರಿತ್ರಾ (ನಿರುಪಮ + ಚರಿತ್ರ + -ಆ)]

ನಿರುಪಮತೇಜ (ಗು). ೧. ಅಸದೃಶವಾದ ಕಾಂತಿಯಿಂದ ಕೂಡಿದ ; ಉಪಮಾತೀತವಾದ ತೇಜಸ್ಸನ್ನು ಹೊಂದಿರುವ : ನಿರುಪಮತೇಜನಾ ಖಚರರಾಜನ ತದ್ಭುಜಶಾಖೆಯಲ್ಲಿ ಬಿತ್ತರಿಪ ನಿಶಾತ ಖಡ್ಗಲತೆ (ಕಾಂತೀಶ್ವ. ೧-೧೫೨). (ನಾ). ೨. ಅಸದೃಶವಾದ ಕಾಂತಿ,— ತೇಜಸ್ಸು : ನಿರುಪಮತೇಜದಿಂ ದಿನಪನೋಲಗದೋರಗೆ . . . ಸಂಪದಂಗಳಿಂ ಸುರಪತಿಯೋಲಗಕ್ಕೆ ಸಮನುಮಾಯ್ತು ನರೇಶ್ವರ ಚಕ್ರಿಯೋಲಗಂ (ಕುಸುಸೂ. ೩-೪೭). [ನಿರುಪಮ + ತೇಜ]

ನಿರುಪಮಸುಖ (ನಾ). ಅಸದೃಶವಾದ ಸುಖ ; ಪರಮಸುಖ : ನಿರುಪಮಸುಖ ಪಂಚಾನುತ್ತರೆಗಳೊಳಹಮಿಂದ್ರಬ್ಯಂಡವಂದ್ಯಂಗಳ್ ಮಂದರದಂತಿರೆಯ್ದೆ ಜಿನಮಂದಿರಮೆಸೆಗುಂ ನಂದನಾಳಿ ಸುಂದರವಿಭವಂ (ಪಾರ್ಶ್ವಪು. ೧೩-೩೪). [ನಿರುಪಮ + ಸುಖ]

ನಿರುಪಮಾತ್ಮ (ನಾ). ಪರಮಾತ್ಮ : ಸಚ್ಚಿದಾನಂದೈಕಘನವೆನಿಪ ನಿರುಪಮಾತ್ಮನ ನಿಲವನಱಯದೆ ನರಕಿ ಜಡನಾ ಜೀವವೆಂಬೀ ತರಳತನವೇ ಹಿಂಸೆಯಜಾವಡಹಿಂಸೆ ಕೇಳೆಂದ (ಕುವ್ಯಾಭೀ. ೩-೫೧).

[ನಿರುಪಮ + ಆತ್ಮ]

ನಿರುಪಮಾದ್ಭುತ (ನಾ). ಅಸದೃಶವಾದ ಅದ್ಭುತ : ನಮ್ಮ ವಿಶ್ವಕೆ ನಾವೆ ನಿರುಪಮಾದ್ಭುತವಯ್ಯಾ! (ಪಾಂಡವಜ. ೪೧-೧೨).

[ನಿರುಪಮ + ಅದ್ಭುತ]

ನಿರುಪಮಾನ (ಗು). ೧. ಹೋಲಿಕೆಯಿಲ್ಲದ ; ಅಸದೃಶವಾದ ; ಉಪಮಾತೀತವಾದ : ಸುರಪುರೇಂದುದಿವಸಾಧಿಪಾಗ್ನಿಗಳ್ ಬರೆ . . . ಪೆಸರ್ ನೆಗೞ್ ಪಿಂಗಳೋಕ್ತಿಯೊಳ್ ನಿರುಪಮಂ ನಿರುಪಮಾನವಿಭ್ರಮಂ (ಛಂದೋಂಬು. ೨-೧೩೨); ಗಂಗಾಧರನ ಗರುವೆ ಚಂದ್ರಧರನರಸಿಯೆನಿಪ ಗಿರಿರಾಜತನೂಜೆಯಿರ್ದ್ ನಿರುಪಮಾನ ತಪಃಪ್ರಭಾವಂ ವಿರೂಪಾಕ್ಷನ ಕರಣಂಗಳೊಳ್ ಬೆರಸಿ ಬಳೆಯೆ (ಗಿರಿಕ.೯-೪೩ ಸ). (ನಾ). ೨. ಹೋಲಿಕೆಯಿಲ್ಲದವನು ; ಅಸದೃಶ ; ಉಪಮಾತೀತ : ನಿರುಪಮಾನ ನಿರವಧಿಕ ನಿರ್ಭಯ . . . ನಿಜ ನಿರ್ವಾಯು ಚಕ್ರೇಶು (ಬಸಪು. ೬೧-೪೪).

[ಸಂ.]

ನಿರುಪಮಿತ (ಗು). = ನಿರುಪಮ ೧ : ನಿರುಪಮಿತಪ್ರದೇಶಪರಿತೋಭಿಯನಾ ಸಮುದಾಯಶೋಭಿಯಂ . . . ಅಭಕ್ಷಿಸುತಿರ್ದುವಲಂಪಿನಂ ತನೂದರಿ ಕುಸುಮಾವಳೀವಿಲುಳಿತಾಕ್ಷಿಗಳಾ ಪಟಲೇಱ್ಪುಚಿತ್ರದೊಳ್ (ಕುಸುಪೂ. ೧೨-೨೧) ; ವಾಙ್ಮನಸುಗಳಿಗೆ ಕ್ಷೀಣಪದವಲಿ ಮಿಗಿಲು ತೋಱುವ ನಿರುಪಮಿತಮೂರ್ತಿ (ಬಸಪು. ೫೦-೭೦) ; ಧರಣಿಪನ ಕಾಣಿಸುವುದಂಧನ ನಿರುಪಮಿತಶೋಕಾನಳನ ಸಂಹರಿಸುವುದು ನಯವೆಂದು ವೇದವ್ಯಾಸಮುನಿ ನುಡಿದ (ಕುವ್ಯಾಗ. ೧೧-೫೧). [ಸಂ.]

ನಿರುಪಮೆ (ನಾ). ಉಪಮಾತೀತಳಾದವಳು; ಸಮಾನರಿಲ್ಲದವಳು: ಸತತಗುಣನಿಲಯೆ . . . ನಿರುಪಮೆ ಚಿನ್ಮಯೆ ಭಾರತಿಯೆನಸುಂ ನೆಲಸುಗೆಮ್ಮ ಮುಖಸರಸಿಜದೊಳ್ (ರಸಕ. ೨-೨) ; ನಿರುಪಮೆ ನಿರಾವರಣೆ ನಿರಜೆ ನಿರಹಂಕಾರೆ (ಏಕೋಪು. ೧-೯). [ಸಂ. ನಿರುಪಮಾ]

ನಿರುಪಯುಕ್ತ (ಗು). ಪ್ರಯೋಜನವಿಲ್ಲದ ; ಕೆಲಸಕ್ಕೆ ಬಾರದ: ನಾನು ಆಗಾಗ ಹೋಗಿ ಆ 'ನಿರುಪಯುಕ್ತ' ಮುದುಕನ ಬಳಿ ಕುಳಿತು ಕೊಳ್ಳುವುದನ್ನು ಕಂಡು, ಅನೇಕರು ಆಶ್ಚರ್ಯಪಡುತ್ತಿದ್ದರು (ಜನಜೀ. ೩). [ಸಂ.]

ನಿರುಪಯೋಗ (ನಾ). ಪ್ರಯೋಜನಕ್ಕೆ ಬಾರದಿರುವಿಕೆ ; ನಿಷ್ಪ್ರಯೋಜನ : ರೋಗಪೀಡಿತವಾದ ಶರೀರಕ್ಕೆ ಎಷ್ಟು ಅಥರಣಗಳನ್ನು ಹಾಕಿದರೂ ನಿರುಪಯೋಗ (ಸ್ವಾವಲಂ. ೧೩) ; ಕರ್ತವ್ಯದೆ, ನೀತಿ ನಯಮದ ಅಂಕೆಯಿಲ್ಲದ ಮಾಧುವಿನ ನಿರುಪಯೋಗವಾದ, ಅಪೇಕ್ಷೆಯಿಲ್ಲದ, ಹುಂಬಪ್ರೇಮವಿದೆ (ಹೊಸಕ್ಷಿ. ೨೨೪). [ಸಂ.]

ನಿರುಪಯೋಗಿ (ಗು). ೧. = ನಿರುಪಯುಕ್ತ : ಇಬ್ಬರು ನಿರುಪಯೋಗಿ ಧಾಂಡಿಗ ತಮ್ಮಂದಿರು ಇರೋ ಮನೆಗೆ . . . ಕಲಿತನಳು ಬಂದು ಸೇರಿದರೆ ಖಂಡಿತ ಜಗಳವೆಬ್ಬಿಸುತ್ತಾಳೆ (ಹೊಸಕ್ಷಿ. ೨೨೫). (ನಾ). ೨. ಉಪಯೋಗಕ್ಕೆ ಬಾರದುದು ; ನಿಷ್ಪ್ರಯೋಜಕವಾದುದು : ಒಡೆದು ಅಥವಾ ನಾದುರುಸ್ತಿಯಾಗಿ ನಿರುಪಯೋಗಿಯಾಗಿ ಹೋಗುವಂಥ ಜೀನಸುಗಳನ್ನು ಹೊರ ಊರಿಗೆ ಕಳುಹಿಸುವುದು (ಮುಂಬವ್ಯಾ. ೧೫೫) ; ಮುರಗೆಣಸಿನ ಗೆಡ್ಡೆಯನ್ನು ಹೆಚ್ಚು ಸಮಯ ಹಾಗೆಯೇ ಇಟ್ಟರೆ ಅದು ನಿಷ್ಪಯೋಯವಾಗಿ ನಿರುಪಯೋಗಿಯಾಗುತ್ತದೆ (ಅಡುಸೌ. ೧೧೨). ೩. ಉಪಯೋಗಕ್ಕೆ ಬಾರದ ವ್ಯಕ್ತಿ ; ನಿಷ್ಪ್ರಯೋಜಕ : ಅವರ ಮಕ್ಕಳು ಶುದ್ಧ ನಿರುಪಯೋಗಿಗಳು (ರೂಢಿ). [ಸಂ. ನಿರುಪಯೋಗಿನ್]

ನಿರುಪಹತಿ (ಗು). ೧. ನಿರ್ವಿಘ್ನವಾದ; ಅಪಾಯವಿಲ್ಲದ : ನಿರುಪಹತಿಸ್ಥಲಂ ಮೃದುತರಾಸನಮೊಳ್ಕುಡಿಂಪುದಂಬುಲಂ . . . ಸತ್ಕಳತ್ರನಾದರತೆಯಿಸುಳ್ಳ ಸತ್ಕವಿಯುವಿನಾಸುವೊಡಾಗದೆ ಕಾವ್ಯವಾರ್ಥಿಯಂ (ಸೂಕ್ತಿಸು. ೧-೭೦). (ನಾ). ೨. ನಿರ್ವಿಘ್ನವಾದುದು ; ಅಪಾಯವಿಲ್ಲದುದು. [ಸಂ.]

ನಿರುಪಾದಾನ (ನಾ). [ಜೈನ] ಸುಖೋಪಭೋಗವಸ್ತುಗಳನ್ನು ಬಯಸದೆ ಹಾಗು ಇತರರಿಂದ ಸ್ವೀಕರಿಸದೆ ಇರುವ ಧರ್ಮ :

ನಿರುಪಾಧಾನವೆಂಬುದು ಶಯನಾಸನ ವಸ್ತ್ರ ಛತ್ರ ಪಾನಕನಕಳಶಾಜನಾದಿಗಳುಮಂಪಜವು ಸುಖಸಾಧನಂಗಳುಮನಪೇಕ್ಷಿಸದೆ ಪ್ರವರ್ತಿಸುವ ಧರ್ಮಂ (ಜಾವಂಪು. ೭). [ಸಂ.]

ನಿರುಪಾಧಿ(ಗು). ೧. = ನಿರುಪಾಧಿಕ ೧ : ಭೇದದೋರದ ನಿರುಪಾಧಿ ಭಕ್ತಿಯು ಸುಪ್ರಸಾದತೃಪ್ತಿಯೊಳಿರ್ಪನಾದಿಜಂಗಮದ ಶ್ರೀ (ಮೃಲಾರ. ೧೨೮-೭). (ನಾ). ೨. ಪರಮಸತ್ಯ ; ಪರವಸ್ತು : ಎಲ್ಲಿ ಸುಳಿದಡೆ ಅಲ್ಲಲ್ಲಿ ಉಪಾಧಿ ಬಿಡದಯ್ಯಾ ಈ ಉಪಾಧಿಗೆ ಅಪಾಯವನಿತ್ತು ನಿರುಪಾಧಿಯಲ್ಲಿ ನಿಲಿಸಯ್ಯಾ (ಅದಸ. ೧೩-೨೬) ; ಉಪಾಧಿಯನಳಿದು ನಿರುಪಾಧಿಯ ತಿಳಿದು . . . ನೂಲೋಕದೊಡೆಯನಲ್ಲಿ ಮನವಡಗಿರ್ಪ ಮಹಾಶರಣರ ಶ್ರೀಪಾದಕ್ಕೆ ನಮೋನಮಃ ಎಂದೆನಯ್ಯಾ (ಅಖಂಡೇ. ೪೭-೯೦).

[ಸಂ.]

ನಿರುಪಾಧಿಕ (ಗು). ೧. ತೊಂದರೆಯಿಲ್ಲದ ; ಉಪಾಧಿರಹಿತವಾದ: ಭಾವವಿಲ್ಲದೆ ಭಾವಿಸಿ ಮಾಯವಿಲ್ಲದೆ ಸಂಗನ ಮಾಡಿ ನಿಸ್ಸಂಗಿಯಾದನು ನಿರುಪಾಧಿಕ ನಿಃಕಳಂಕ ಮಹಾಲಿಂಗಗುರು ಶಿವ ಸಿದ್ಧೇಶ್ವರಪ್ರಭುವೇ (ನಷಸಂ. ೪೯೯-೪) ; ಜ್ಯೋತಿ ಬೆಳಗುತಿದೆ ವಿಮಲ ಪರಂಜ್ಯೋತಿ ಬೆಳಗುತಿದೆ ಮಾತು ಮನಂಗಳಿಂದತ್ತತ್ತ ವಿಾಜುವ ಸಾತಿಶಯದ ನಿರುಪಾಧಿಕ ನಿರ್ಮಲ (ಕೈವಲ್ಯ. ೮೦-೫೯ ಪಲ್ಲವ) ; ನಿರುಪಾಧಿಕಪ್ರಕಾಶಾಂತರಬಜ್ಜೋತಿಗೆ ಸಮಾನಮಲ್ತೆಂದು ಕರಂ ಪರಿಹಾಸಂಗೆಯ್ವಂತಿರೆ ತರುಣಂ ಮುಡಿದೀಪಮಂ ನಿರೀಕ್ಷಿಸಿ ನಗುವಂ (ರಾಜಶೇ. ೪-೬೩). ೨. ಭಂಗ ಬಾರದಿರುವ ; ಅವ್ಯವಚ್ಛಿನ್ನವಾದ ; ಸಮಗ್ರವಾದ. (ನಾ). ೩. ತೊಂದರೆಯಿಲ್ಲದುದು ; ಉಪಾಧಿರಹಿತವಾದುದು : ಇಷ್ಟು ದೊಡ್ಡ ರಾಜ್ಯವನ್ನು ನಿರುಪಾಧಿಕವಾಗಿ ನಡಸುತ್ತಿರುವ ನೀವುಗಳು ಇದನ್ನು ಯೋಚಿಸಬೇಡವೆ ? (ಶಾಂತಲಾ. ೧೯) ; ಆ ಬಹಿರಂಗ ದೇಶವು ನಿರುಪಾಧಿಕವಾದದ್ದು (ಜಗತ್ತು. ೨೧೯). ೪. ಸತ್ಯ ; ನಿಜ ; ಪರವಸ್ತು : ಸರಸಭಕ್ತಿಸತಿಯ ಪರವಶಾವರಣದಿಂ ನಿರುಪಾಧಿಕದ ವಿಸ್ತರದವಸ್ಥೆಯೊಳುರು ಸುಖಾಸ್ತಿವಿತೇಂದ್ರಿಯದೊಳಿಹಗೆ (ಬಸಪು. ೬೫-೬೪). ೫. ಸ್ವತಂತ್ರನಾದವನು : ಉಪಮಾತೀತ ನಿರುಪಾಧಿಕ . . . ಕೃಪಾಮೃತೇಕ್ಷಣ ಪರಶಿವನುಂ (ಭೈರಸೂ. ೧) ; ನಿರುಪಾಧಿಕರೂ ನಿಶ್ಚಿಂತರೂ ಆದ ಸಿದ್ಧಪರಮೇಷ್ಠಿಗಳಲ್ಲಿ ಕೆಲವರ ಪಾದಕ್ಕೆ ಅತ್ತಿ ಮಬ್ಬೆ ಭಕ್ತಿಯಿಂದೆರಗಿದಳು (ದಾನಚಿಂ. ೧೧೪). ೬. [ತತ್ತ್ವಶಾ] ಕಾರಣ, ಹೇತುಗಳಿಗೆ ಅಧೀನವಾಗದಿರುವುದು ; ಉಪಾಧಿರಹಿತವಾದುದು : ಭೇದವು ಪುನಃ ಸೋಪಾಧಿಕ ಎಂದೂ ನಿರುಪಾಧಿಕ ಎಂದೂ ಎರಡು ವಿಧ (ಭಾತತ್ತ್ವ. ೬೦೩) ; ತಾಯ ಪ್ರೀತಿಯು ನಿರುಪಾಧಿಕವಾದುದು (ತೀಗಮ್ಮು. ೧೬). [ಸಂ.]

ನಿರುಪಾಧಿಕಾಧ್ಯಾಸ (ನಾ). [ಅದ್ವೈತ] ಒಂದು ವಸ್ತು ಮತ್ತೊಂದು ವಸ್ತುವಿನಂತೆ ತೋರಿ ಉಂಟುಮಾಡುವ ಭ್ರಮೆ; ℙ ಒಂದನ್ನು ಮತ್ತೊಂದಾಗಿ ಭಾವಿಸುವುದು ಅಧ್ಯಾಸ. ಇದರಲ್ಲಿ ಸೋಪಾಧಿಕಾಧ್ಯಾಸ, ನಿರುಪಾಧಿಕಾಧ್ಯಾಸವೆಂದು ಎರಡು ವಿಧ. ಉಪಾಧಿ(ನಿಮಿತ್ತ)ಯಿಂದ ಆಗುವ ಅಧ್ಯಾಸ ಸೋಪಾಧಿಕಾಧ್ಯಾಸ. ಉದಾಹರಣೆಗೆ ಕೆಂಪುದಾಸವಾಳದ ಹೂವಿನ ಹತ್ತಿರದಲ್ಲಿರುವ ಬಿಳಿ ಸ್ಫಟಿಕಮಣಿಯನ್ನು ನೋಡಿ ಕೆಂಪುಮಣಿ ಎಂಬ ಭಾವನೆ ಬರುತ್ತದೆ. ಇಲ್ಲಿ ದಾಸವಾಳವು ಹತ್ತಿರದಲ್ಲಿ ಇರುವ ಕಾರಣದಿಂದಲೇ ಕೆಂಪುಮಣಿ ಎಂಬ ಭ್ರಾಂತಿ ಬರುತ್ತದೆ. ಆದರೆ ಹಗ್ಗದಲ್ಲಿ ಹಾವು ಅಥವಾ ಕಪ್ಪೆಚಿಪ್ಪಿನಲ್ಲಿ ಬೆಳ್ಳಿಯೆಂಬ ಭ್ರಮೆಯುಂಟಾದಾಗ ಹತ್ತಿರದಲ್ಲಿ ಹಾವಾಗಲೀ ಬೆಳ್ಳಿಯಾಗಲೀ ಇರುವುದಿಲ್ಲ. ಇಂತಹುದು ನಿರುಪಾಧಿಕಾಧ್ಯಾಸ : ಅಹಂ ಎಂಬುವುದುಂ ಪ್ರತ್ಯಗಾತ್ಮಾಹಂಕಾರಗಳಿಗೆ ರಜ್ಜುಸರ್ಪವೆಂಬಂತೆ ನಿರುಪಾಧಿಕಾಧ್ಯಾಸಮೆನಿಸುವುದು (ವಿವೇಕ. ೩೭).

[ನಿರುಪಾಧಿಕ + ಅಧ್ಯಾಸ]

ನಿರುಪಾಯ (ಗು). ೧. ಉಪಾಯಗಾಣದ; ನಿಸ್ಸಹಾಯಕವಾದ: ನಿರುಪಾಯಭಾವವನ್ನು ಮುಖದ ಮೇಲೆ ಮೂಡಿಸಿಕೊಂಡು ಕುಳಿತರು (ಜನಜೀ. ೧೦೨). (ನಾ). ೨. ದಾರಿಗಾಣದಿರುವಿಕೆ; ನಿಸ್ಸಹಾಯಕತೆ : ಮಲಕಪ್ಪ ಜೋಳವನ್ನು ಅಳೆಯುತ್ತಿರುವಾಗ, ಮೇಲಗಿರಿಸೆಟ್ಟರು ನಿರುಪಾಯದ ಕರುಣಾದೃಷ್ಟಿಗಳಿಂದ ನೋಡುತ್ತಿದ್ದರು (ಜನಜೀ. ೨). ೩. ಉಪಾಯಗಾಣದವನು ; ನಿಸ್ಸಹಾಯಕ : ಉಳಿದವರು ನಿರುಪಾಯರಾಗಿ ಅಲ್ಲಿಂದ ಹೋದರು (ಮೇದಿಮು. ೧೦೬) ; ತಮಗೆ ಬಿಡುವಿದ್ದರೆ ತಡೆಯಿರಿ. ಇಲ್ಲವಾದರೆ ನಾನು ನಿರುಪಾಯ (ಸ್ವಾತಿಚಿ. ೧೯೭). [ಸಂ.]

ನಿರುಪಾಯತೆ (ನಾ). ದಾರಿಗಾಣದಿರುವಿಕೆ ; ನಿಸ್ಸಹಾಯಕತೆ : ಟೆಲಿಫೋನ್ ತೆಗೆದುಕೊಂಡ ನೌಕರ ಸಮ್ಮುಖಾಸೆಯಲ್ಲೇ ತನ್ನ ನಿರುಪಾಯತೆಯನ್ನು ತಿಳಿಸಿದ (ಹೂಸಕ್ತಿ. ೧೬೩). [ಸಂ. ನಿರುಪಾಯತಾ]

ನಿರುಮ್ಮಳ, ನಿರಂಬಳ$_1$, **ನಿರುಂಬಳ** (ನಾ). ನಿಶ್ಚಿಂತೆ ; ನೆಮ್ಮದಿ ; ಶಾಂತಿ : ನಿರುಮ್ಮಳವಾಗಿ ಬಾಳುವೆ ಮಾಡಬೇಕಾದರೆ ವಿದ್ಯೆ ಇಲ್ಲದೆ ಆಗದು (ಬೆಳುಮು. ೧೦೩). **ನಿರಂಬಳ**$_1$: ಚೀನದೇಶದ ದುಃಖಗಳೆಲ್ಲ ಒಮ್ಮೆಲೆ ನಿವಾರಣೆಯಾಗಿ ನಿರಂಬಳವಾದೀತು (ಚೀನಬಾ. ೨೫೧) ; ಗಣಪ್ಪ ಎಲ್ಲಿಯೂ ಹೋಗದೆ ತುಳಸಿಕಟ್ಟೆಯ ಮೇಲೆ ಒಬ್ಬನೇ ಕಾಲಾಡಿಸುತ್ತ ನಿರಂಬಳಭಾವದಿಂದ ಕುಳಿತಿರುತ್ತಾನೆ (ಅಮುಸಿ. ೩೬). **ನಿರುಂಬಳ** : ಇನ್ನೇನು ಬಿಡು, ನಿರುಂಬಳ ಆಯ್ತಲ್ಲಾ ಇವರಿಗೆ (ಸುಲಿಮು. ೫೫೦) ; ಹಯಾತನು ಅಪ್ಪಾಜಿಯ ಬೆಂಬಲದಿಂದ ನಿರುಂಬಳವಾಗಿ ಜೀವನ ಮಾಡುತ್ತಿದ್ದ (ಜೆಂಗಾಳ್ವ. ೨೮). [ನಿರ್- + ಉಮ್ಮಳ]

ನಿರುವಾಣ (ನಾ). ನಗ್ನತೆ ; ಬತ್ತಲೆ : ಮಂದಗಮನೆಯರ ಮುಂದೆ ನಿರುವಾಣದಿ ನಿಂದ ಪೂರುತಿಗಾರತಿಯೆತ್ತಿರೆ (ನಾದಿಕೀ. ೧೫೬-೨).

[< ಸಂ. ನಿರ್ವಾಣ]

ನಿರುಹಣ (ನಾ). = ನಿರೂಹಣ : ನಿರುಹಣಮುಪ(ಮನು)ವಾಸ(ಹ)ನಮುಂ ಸೆರೆವಿಡುವುದುಮಗ್ನಿಕರ್ಮಮೂ ಸ್ವೇದಮನುತ್ತರವಸ್ತು(ಸ್ತಿ)ವಿಧಾನಮನಾವರಿಸಿದುದು (ಅಶ್ವಶಾ. ೧೦-೩೧).

[< ಸಂ. ನಿರೂಹಣ]

ನಿರುಹರಣ (ಗು). ೧. ನಿವಾರಿಸುವ ; ಪರಿಹರಿಸುವ. (ನಾ). ೨. ನಿವಾರಣೆ ಮಾಡುವುದು ; ಪರಿಹರಿಸುವುದು. ೩. ಪರಿಹರಿಸುವವನು ; ನಿವಾರಿಸುವವನು : ಧನ್ಯನಾದೆನು ಪುಣ್ಯನಾದೆನು ದೈನ್ಯನಿರುಹರಣಾ ನಿರಸ್ತಜಘನ್ಯ ಬಹಳವದಾನ್ಯ ಮಾಯಾಶೂನ್ಯ (ಬಸಪು. ೪೭-೬೧) ; ಕಲ್ಲಾದಹಲ್ಯಾಶಾಪನಿರುಹರಣಚರಣವಿದು ಕಾಳಿಂಗ ಮರ್ದನ ಚರಣವಿದು (ಕುವ್ಯಾಳ. ೧೬-೩೫). [< ಸಂ. ನಿರ್ಹರಣ]

ನಿರುಹಾದ (ನಾ). ಶಬ್ದ ; ಗಲಭೆ ; ಸದ್ದು : ಕೃಷ್ಣಾಪಸೇನಾ ಮಧ್ಯದಲಿ ವಡಬಾಗ್ನಿಯಂದದಲಿ ಕೈದುಗಳ ಬೆಳಗಿನಲಿ ಘನನಿರುಹಾದ ದಬ್ಬರಕೆಯಲಿ ಬಲು ಜಲನಾದಿಗಳ ಬಿರುದಂಕನಹನೆಲೆ ಬೇವ ನೋಡೆಂದ (ತೊರಂರಾ. ೬-೨೦-೬೮). [< ಸಂ. ನಿರ್ಹಾದ]

ನಿರೂಢ (ಗು). ೧. ಹೆಸರಾದ; ಖ್ಯಾತವಾದ; ಪ್ರಸಿದ್ಧಿ ಹೊಂದಿದ: ಚಾರುಚರಿತಂ ಮತ್ತೆಯುಂ ಬಾಹೂರ ಬೊಮ್ಮಯನೆಂಬ ಭಕ್ತ ನುದಾರಕೀರ್ತಿ ನಿರೂಢಗಾಥಮಹತ್ವತತ್ವಾರ್ಥಿ (ಬಸಪು. ೨೨-೨೩). ೨. ಬಳಕೆಗೆ ಬಂದ; ರೂಢಿಗೆ ಬಂದ; ಸಾಂಪ್ರದಾಯಿಕವಾದ: ಗಾಢ ವಿಕ್ರಯ ಸಕ್ರಯದೊಳೇ ಗೂಢಕರು ಮೂಲ್ಕೆಲಾಧನಿರೂಢಪರ

ರೊಪ್ಪಿದರು ವೈಶ್ಯರು ಧರ್ಮಕಾಲದಲಿ (ಕುವ್ಯಾಅ. ೧೪-೪೨). (ನಾ). ೩. ಬಳಕೆಗೆ ಬಂದುದು ; ಸಾಂಪ್ರದಾಯಿಕವಾದುದು : ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬೀ ನಾಲ್ಕುವರ್ಣಗಳು ಜಗದುತ್ಪತ್ತಿಯ ನಂತರ ಬಹಳ ಕಾಲ ಸಂದ ಮೇಲೆ ನಿರೂಢವಾದಂತೆ ಸಿದ್ಧವಾಗುತ್ತದೆ (ಮುಂಬಯಿ. ೬-೧೦೦). [ಸಂ.]

ನಿರೂಢಿ (ನಾ). ೧. ಖ್ಯಾತಿ ; ಪ್ರಸಿದ್ಧಿ : ನೆರೆದ ಸೇನೆಗೆ ನೆಲನಗಲ ನೆಱೆಯದು ನಿರೂಢಿಯ ಭಟರ ವಿಕ್ರಮಕೆ ಅಳವು ಕಿಱುದರಿರಾಯರಿಗೆ ದಿಗುವಳಯವಿಟ್ಟೆಡೆಯಾಗೆ ರಥಹಯ ದಳವುಳಕೆ ಕುರುಸೇನೆ ನಡೆದುದು (ಕುವ್ಯಾದ್ರೋ. ೧-೪೫) ; ಆ ನಿರೂಢಿಯ ದೊರೆಗಳಿವನ ಸಮಾನರೇ ಗುಣದಲಿ (ಕುವ್ಯಾಕ. ೨೨-೩೮). ೨. ಕಾರ್ಯ ; ವ್ಯವಹಾರ: ಆ ನರೇಂದ್ರ ಮನೋಹರದ ಮೃಗಯಾನಿರೂಢಿಯ ಬಿಸುಟು ಬಂದನು (ಕುವ್ಯಾಅ. ೨೨-೨೩). ೩. ಕೌಶಲ ; ನಿಪುಣತೆ ; ಪ್ರಾವೀಣ್ಯ. [ಸಂ.]

ನಿರೂಪ (ನಾ). ೧. ಆಕಾರವಿಲ್ಲದಿರುವುದು ; ನಿರಾಕಾರವಾದುದು: ಮಹಾಲಿಂಗಸ್ಥಾನಂಗಳು ಮಹಾಲಿಂಗದ ಹೆಸರಲ್ಲದೆ ಲಿಂಗ ಬೇಱೆ ರೂಪ ನಿರೂಪನಲ್ಲ (ಬಸವ. ೯೫೦) ; ಹೇಳುವುದಕ್ಕೆ ನುಡಿಯಿಲ್ಲ ನೋಡುವುದಕ್ಕೆ ರೂಪಿಲ್ಲ ಇಂತಪ್ಪ ನಿರೂಪದ ಮಹಾಘನವು ಶರಣರ ಹೃದಯದಲ್ಲಿ ನೆಲೆಗೊಂಬುದಲ್ಲದೆ ಈ ಜನನಮರಣಕ್ಕೊಳಗಾಗುವ ಮನುಜರೆತ್ತ ಬಲ್ಲರು (ಲಿಂಗವ. ೬೧-೪೭). ೨. ಆಕಾರವಿಲ್ಲದವನು ; ನಿರಾಕಾರ ; ಪರಮಾತ್ಮ : ಪರಮಪರ . . . ಪರಂಜ್ಯೋತಿಸ್ವರೂಪ ನಿರೂಪ ಚಿತ್ತೈಸು (ಬಸಪು. ೬೧-೪೫). ೩. ಹೇಳುವಿಕೆ ; ವಿವರಿಸುವುದು ; ವಿವರಣೆ : ಇದಕ್ಕೆ ಮಡಿವಾಳಯ್ಯಗಳ ನಿರೂಪ (ಶೂನ್ಯಸಂ. ೨೫೧-೩) ; ರುದ್ರಾಕ್ಷೆಯೆಂದು ಜನಿಸಿತ್ತು ಶರೀರದೊಳೆನಿತ ಧರಿಸಬೇಕು ಶರಣಜನ ಕಲ್ಪವೃಕ್ಷನೆ ನಿರೂಪವನಿತ್ತು ಪರಿಪಾಲಿಸು (ಸೌಂದಪು. ೬-೨೮). 'ನಿರೂಪಿಸು' ಪರಾ. ೪. ಹಿರಿಯರ ಉಪದೇಶ,—ಬೋಧನೆ: "ನಿರೂಪಂ, ನಿರೂಪಣಂ, ನಿರೂಪಿತಂ, ಈ ೩ ಗುರುವಾಕ್ಯಂ" (ಕಾಶಕೃ. ೨೯೦); ಪ್ರಭುದೇವರು ಚನ್ನಬಸವಣ್ಣನ ನಿರೂಪವ ಕೇಳಿ ಬದುಕೆಂದು ಹೇಳಲಾ ಚಂದಯ್ಯಗಳು ನಿರೂಪಕ್ಕೆ ಒಪ್ಪಿ ಒಡಂಬಟ್ಟು ತಮ್ಮ ಇಷ್ಟಲಿಂಗಮಂ ಧರಿಸಿಕೊಂಡು (ಶೂನ್ಯಸಂ. ೨೬೨-೪೯). ೫. ಸಂದೇಶ : ಕಣ್ವಮಹಾಮುನಿಗಳ ನಿರೂಪವನ್ನು ತೆಗೆದುಕೊಂಡು ಬಂದಿದ್ದಾರೆ (ಮುಂಬಯಿ. ೬-೩೮೧). ೬. ಅಪ್ಪಣೆ ; ಆಜ್ಞೆ : ನನಗೂ ನಿನಗೂ ಚೈತನ್ಯಸ್ವರೂಪನಾದ ನಿರಂಜನ ಜಂಗಮಲಿಂಗ ಲಿಂಗಜಂಗಮನೇ ಗತಿಯೆಂದು ನಿರೂಪವ ಕೊಡಲು (ಚನ್ನವ. ಕ. ೩೫೪-೭೩೮) ; ಹಿಂದೆ ಬರುತಿಹ ಸುತನನುರವಣಿಸಿ ಘನಭುಜಂಗಂ ಕಚ್ಚಲೊಡನೊಯ್ಯನೆ ನಗುತ್ತ ಶಿವನ ನಿರೂಪವಿದೆನುತ (ಬಸಪು. ೪೮-೮) ; ಕೋಪಿಸುತ ತನ್ನಯ ತೇರನಿಳಿದನು ಪಾರ್ಥನಸುರಾರಿಯ ನಿರೂಪದಲಿ (ಕುವ್ಯಾದ್ರೋ. ೮-೧೨) ; ಹರಿ ನಿರೂಪವನೀಯಲಾ ತರುಚರರು ಋಕ್ಷರದೆಲ್ಲರೇಱುತು ವರವಿಮಾನದಲನಿಬರಿಗೆ ಎಡೆಯಿರಲು (ಕೌಶಿರಾ. ೪೪-೧೨) ; ನೀಲಧ್ವಜಂ ಮನೆಯೊಳಾ ಜ್ವಾಲೆಯ ನಿರೂಪಮಂ ತಲೆಯೊಳಾಂತು ಸಲ್ಲಲಿತ ವಾಜಿಯಂ ಬಿಡೆನೆನ್ನೊಡನೆ ಕಾದಿದಲ್ಲದೆಂದಾ ಕಿರೀಟಿಗೆ ಪೇಳಿಸಿದಂ (ಜೈಮಿಭಾ. ೯-೧೨) ; ನಾಗವ್ವೆ . . . ರಾಜಮಾತೆಯ ನಿರೂಪವನ್ನು ಮುಟ್ಟಿಸಿದಳು (ಸವತಿ. ೩೧). ೭. ಬರಹದ ರೂಪದಲ್ಲಿರುವ ಆಜ್ಞೆ ; ಆಜ್ಞಾಪತ್ರ; ಶಾಸನ: ಉಂಬಳಿ ಉತ್ತಾರವ ಕೊಟ್ಟು ಪ್ರಾಕು ನಿರೂಪವಾಗಿ ಅದೇ ಗಡಿ ಕಲು ಹಾಕಿಸಿ ಕೊಡುವ ರೀತಿ ಅಪ್ಪಣೆಯಾಗಬೇಕೆಂದು (ಎಕ. VII, ತಿಕಾರಿ. ೨೧೦-೨೬ ; 1758); ಅಪ್ಪಣೆಯಾದಂತೆ ನಿರೂಪವನ್ನು ಬರೆದು . . . ಆ ನಿರೂಪಕ್ಕೆ ದೊರೆಗಳವರ ದಸ್ಕತ್ತು ಮೊಹರು ಮಾಡಿಸಿ, ಆಯಾ ಜನಗಳಿಗೆ ಕಳುಹಿಸಿಕೊಡುವಂತೆ ನಿಬಂಧನೆ ಮಾಡಿದರು (ಮಹಾವಂ. I, ೧೪೭); ಇಸ್ಲಾಂಮತವನ್ನವಲಂಬಿಸುವಂತೆ ನಾನಾದೇಶಗಳ ರಾಜರುಗಳಿಗೆ . . . ಮಹಮ್ಮದನು ನಿರೂಪಗಳನ್ನು ಕಳುಹಿಸಿದನು (ಜೈಗಂಬ. ೮೮).

ನಿರೂಪದ ಚಾವಡಿ = (ಮೈಸೂರು ಸೀಮೆಯಲ್ಲಿ ಚಿಕ್ಕದೇವರಾಜ ಒಡೆಯರು ಏರ್ಪಡಿಸಿದ್ದ ೮೪ ಜಿಲ್ಲೆಗಳ) ಪೂರ್ಣವಾದ ರಾಜಾಜ್ಞೆಗಳನ್ನು ಸಿದ್ಧಪಡಿಸುತ್ತಿದ್ದ ಇಲಾಖೆ : ನಿರೂಪದ ಚಾವಡಿ :— ಇದರಲ್ಲಿ ರಾಯಸದವರು ಗಡಿಗಳು ಮುಂತಾದ ಅಧಿಕಾರ ಸ್ಥಾನಗಳಿಂದ ಯಾರು ಯಾರು ಅರ್ಜಿಗಳನ್ನು ಬಿನ್ನವಿಸಿಕೊಂಡರೂ, ಅವುಗಳನ್ನು ಸುಲಾವಣೆ ಮಾಡಿ, ಅಪ್ಪಣೆಯಾದಂತೆ ನಿರೂಪವನ್ನು ಬರೆದು ಅದರ ನಕಲನ್ನು ಇಟ್ಟುಕೊಂಡು ಆ ನಿರೂಪಕ್ಕೆ ದೊರೆಗಳವರ ದಸ್ಕತ್ತು ಮೊಹರು ಮಾಡಿಸಿ ಆಯಾ ಜನಗಳಿಗೆ ಕಳುಹಿಸಿಕೊಡುವಂತೆ ನಿಬಂಧನೆ ಮಾಡಿದರು (ಮಹಾವಂ. I, ೧೪೭). [ಸಂ.]

ನಿರೂಪಕ (ಗು). ೧. ಹೇಳುವ ; ವಿವರಿಸುವ : ಒಂದು ವಸ್ತುವಿನಲ್ಲಿ ವಿರುದ್ಧಾಂಶಗಳಿರಬಹುದೇ ಎಂದರೆ, ಅಪೇಕ್ಷಿಕವೆಂಬ ನಿರೂಪಕಭೇದದಿಂದ ಇರಬಹುದು. ಒಂದೇ ವಸ್ತುವಿನಲ್ಲಿ ದೀರ್ಘತ್ವವೂ . . . ಕನಿಷ್ಠತ್ವವೂ ನಿರೂಪಕಭೇದದಿಂದಿರುವುವು (ಹಿಂದಸಾ. ೭೯). (ನಾ). ೨. ಗಮನಿಸುವುದು ; ಲಕ್ಷಿಸುವಿಕೆ. ೩. ಹೇಳುವುದು ; ವಿವರಿಸುವುದು. ೪. ಅಪ್ಪಣೆ; ಆಜ್ಞೆ : ಒಲ್ಲೆನೆನಬಹುದೇ ನಿಜಸ್ವಾಮಿಯ ನಿರೂಪಕವ(ತೊರರಾ. ೬-೧೯-೫೦). ೫. ನೋಡುವವನು ; ಗಮನಿಸುವವನು : ತಿಂಗಳು ಮೊಡನುರ್ಕುವ ಬೆಳ್ದಿಂಗಳುಮಕ್ಕುಂ ನಿರೂಪಕಾಂತಃಕರಣಕ್ಕಿಂಗಡಲ ಕುವರಿ ತಾಂ ಪಡೆದಂಗಜಶಿಶುಗೆಱೆಯಲಿಟ್ಟ ಪಾಲ್ಪೆಣ್ಣೆಯವೊಲ್ (ಚಕವಿ. ೬-೨೫). ೬. ಹೇಳುವವನು ; ವಿವರಿಸುವವನು ; ನಿವೇದಕ : ನಿರೂಪಕರು ವಿಷಯವನ್ನು ಚೆನ್ನಾಗಿ ಮನದಟ್ಟು ಮಾಡಿಸಿದರು (ರೂಢಿ). ೭. [ಗಣಿತ] ಒಂದು ಜ್ಞಾತ ಅಥವಾ ಅಜ್ಞಾತ ಮೊತ್ತದ ಹಿಂದೆ ಬರುವ ಮತ್ತು ಆ ಮೊತ್ತವನ್ನು ಗುಣಿಸುವ ಸಂಖ್ಯೆ ; ಗುಣಾಂಕ ; ಗುಣಕ : "ಗುಣಕ, ಅವಚ್ಛೇದಕ ನಿರೂಪಕ, ನಿರ್ಧಾರಕ" (Coefficient. ಪಾರಿಸಿ. ೧೭). [ಸಂ.]

ನಿರೂಪಕ್ರಿಯಾಪ್ರವೃತ್ತ (ನಾ). ತತ್ತ್ವೋಪದೇಶವನ್ನು ಮಾಡುವವನು,—ಬೋಧಿಸುವವನು : ನಿರೂಪಕ್ರಿಯಾಪ್ರವೃತ್ತನೆಂಬೊನಾನೆಂತು ತತ್ವಜ್ಞನಾದೆನೆನ್ನ ಪೊರ್ದಿದ ಜನಂಗಳುಮಿಂತೆ ತತ್ವಜ್ಞರಕ್ಕೆಂದು ಖ್ಯಾತಿಭೋಜನ ಪಾನೋಪಕರಣ ಪೂಜೆಗಳನಪೇಕ್ಷಿಸದೆ ತತ್ತ್ವೋಪದೇಶಂಗೆಯ್ವೊಂ (ಚಾವುಂಪು. ೫); ಪರಿಣತವಯಸ್ಕನುಂ . . . ನಿರು[ರೂ]ಪಕ್ರಿಯಾಪ್ರವೃತ್ತನುಂ ಪವಿತ್ರಚಾರಿತ್ರನುಮೆಂಬ ಅಷ್ಟವಿಧೋತ್ಯಷ್ಟಗುಣಂಗಳಿಂದಂ ನೆಱೆದನಾಚಾರ್ಯನಕ್ಕುಂ (ಆಜಿಪು. ೧೧-೨ ಪ). [ಸಂ.]

ನಿರೂಪಣ (ನಾ). ೧. ನೋಡುವುದು ; ಈಕ್ಷಣ ; ನೋಟ ; ದೃಷ್ಟಿ. ೨. ವಿವರಿಸುವುದು ; ವಿವರಣೆ : ಬರಿಪೆನಮೋಘಮಿಂದುಪವನಾಂತರದಲ್ಲಿಗೆ ನಲ್ಲನಂ ತಗುಳ್ದಿರಿಪೆನನಾರತಂ ಸುರತರಾಗನಿರೂಪಣಕಾರಣಂಗಳಂ ತರಿಪೆಂ (ಕವಿರಾ. ೨-೧೦೩) ; ಆ ಪುರಾಣಕ್ಕಂ ಲೋಕಾಕಾರಕಥನಮುಂ . . . ಚತುರ್ಗತಿಸ್ವರೂಪನಿರೂಪಣಮುಂ ತಪೋದಾನವಿಧಾನವರ್ಣನಮುಂ ತತ್ಫಲಪ್ರಾಪ್ತಿಪ್ರಕಟನಮುಮೆಂದಿಂತವಯವಂಗಳೆಂಟಕ್ಕುಂ (ಆದಿಪು. ೧-೪೨ ಪ) ; ಶ್ರೀಪದಮಂ ಸಮವೃತ್ತನಿರೂಪಣಸಮಯದೊಳೆ ತಂದು ಮೊದಲಿಟ್ಟೆಂ (ಛಂದೋಂಬು. ೨-೫೦) ; ಗುಣವಿವೇಕಂ ರೀತಿಕ್ರಮರಸನಿರೂಪಣಂ ಕವಿಸಮಯಮಿವಿಂತಯ್ದುಮಿದಱೊಳಧಿಕರಣಂಗಳ್ (ಕಾವ್ಯಾವ. ೧-೫). ೩. ನಿರ್ದಿಷ್ಟವಾಗಿ ಹೇಳುವುದು : ಸದಸದಾದಿ ವಸ್ತುಸ್ವರೂಪನಿರೂಪಣಪ್ರವೀಣ ಸಿದ್ಧಾನ್ತಾದಿ ಸಮಸ್ತಶಾ[ಸ್ತ್ರಾ]ಮೃತಪಾರಾವಾರಪಾರಗರುಂ (ಸೌಇಇ. XX, ೪೬-೨೫ ; 1072). ೪. ಹಿರಿಯರ ಮಾತು,—ಬೋಧನೆ : "ನಿರೂಪಂ,

ನಿರೂಪಣಂ, ನಿರೂಪಿತಂ, ಈ ೩ ಗುರುವಾಕ್ಯಂ" (ಕಾಶಕ್ಯ. ೨೯೦). ೫. ಸಂಗೀತರೂಪದ ಕಥೆ ; ಕಾಲಕ್ಷೇಪ : ಗಾಯನರೂಪದ ಕೀರ್ತನೆಗಳನ್ನು ಮಧ್ಯೆ ಮಧ್ಯೆ ಹಾಡಿ, ಭಗವತ್ಕಥೆಯನ್ನು ಗೋಷ್ಠಿಗೆ ಶ್ರವಣ ಮಾಡಿಸುತ್ತಾರೆ . . . ಇಂತಹ ಸನ್ನಿವೇಶ ಸಮಾರಂಭಕ್ಕೆ 'ಕಾಲಕ್ಷೇಪ' ವೆಂದೂ 'ನಿರೂಪಣ' ಎಂದೂ . . . ಹೆಸರುಗಳಿವೆ (ಸಂಗೀಚಂ. ೬೮) ; ಮಹಾದೇವಭಾಗವತರು . . . ಗೀತೆಗಳು, ಸ್ವರಜತಿಗಳು . . .ಮತ್ತು ನಿರೂಪಣಗಳು (ಸಂಗೀತ ಕಥೆಗಳು) ಇವುಗಳನ್ನು ರಚಿಸಿದ್ದಾರೆ (ಸಂಗೀತ. ೪೫). [ಸಂ.]

ನಿರೂಪಣಂಗೆಯ್ (ಕ್ರಿ). ವಿವರಿಸು ; ತಿಳಿಸು : ಕಾಲಸ್ವರೂಪ ನಿರೂಪಣಂಗೆಯ್ದವರ ಶೋಕಪ್ರತ್ಯನೀಕಮನದಿರ್ದಿದಂ (ಪಂರಾಮಾ. ೧-೪೪ ಪ) ; ತರಣಿಯುದಯಿಸುವ ಸೊಗಮಂ ನಿರೂಪಣಂಗೆಯ್ವನಲ್ತೆ ಮುಂಬರ್ಪರುಣಂ (ಪ್ರಸ್ತಪಂ. ೧-೩). [ನಿರೂಪಣ + ಕೆಯ್[1]]

ನಿರೂಪಣಾತ್ಮಕ (ನಾ). ವಿವರಣೆಗಳಿಂದ ಕೂಡಿದುದು ; ವರ್ಣನಾತ್ಮಕವಾದುದು : ಪೊಳಲ್ ಕಲೆ ನಿರೂಪಣಾತ್ಮಕವೂ, ಸಾಹಿತ್ಯಕವೂ , ವಾಸ್ತವವೂ ಆಗಿತ್ತು (ಭಾರದ. ೫೨೯). [ಸಂ.]

ನಿರೂಪಣೆ (ನಾ). ೧. ದೃಷ್ಟಿ ; ನೋಟ ; ನೋಡುವುದು. ೨. ವಿವರಣೆ : ಅವನ ಕವಿವ್ಯಾಪಾರವರ್ಣ್ಯತೆಯ ಅನೇಕ ಪ್ರಕಾರಗಳು 'ಧ್ವನ್ಯಾಲೋಕ'ದ ಮೂರನೆಯ ಉದ್ಯೋತದಲ್ಲಿ ವರ್ಣ . . .ಮೊದಲಾದ ವ್ಯಂಜಕಗಳಿಂದ ಧ್ವನಿ ಹೊರಡುವುದರ ನಿರೂಪಣೆಯನ್ನೇ ಅನುಸರಿಸಿ ಕಲ್ಪಿತವಾದಂತಿವೆ (ಭಾರಮಿ. ೪೮); ಘಟನೆಗಳ ನಿರೂಪಣೆ ಮತ್ತು ಪಾತ್ರ ಸೃಷ್ಟಿಗಳೇ ಅಲ್ಲಿನ ಮುಖ್ಯೋದ್ದೇಶ (ಭಾಪಗೀ.೫); ಅದರ ನಿರೂಪಣೆಯು ಕೆಲವು ಪ್ರಸಿದ್ಧವಾದ ಅಲಂಕಾರವಿಶೇಷಗಳ ಪ್ರತಿಪಾದನೆಗೆ ಯಾವ ಬಗೆಯಿಂದಲೂ ಸಮಾನವಲ್ಲವೆಂಬುದೂ ಮನದಟ್ಟಾಗುವುದು (ಧ್ವನ್ಯಾಲೋ. ೬೯). ೩. ಹೇಳಿಕೆ : "ಹೇಳಿಕೆ, ನಿರೂಪಣೆ"(Statement· ಪತ್ರಿನಿ. ೬೭).

[ಸಂ. ನಿರೂಪಣ]

ನಿರೂಪದಸ್ಕತ್ತು (ನಾ). ಆಜ್ಞಾಪತ್ರಕ್ಕೆ ಮಾಡಲಾಗುವ (ಅಧಿಕಾರಿಯ) ಸಹಿ : ರಾಜ್ಯದ ಆದಾಯವ್ಯಯವನ್ನು ತಾವೇ ನಡೆಸುತ್ತ ದೊರೆಯನ್ನು ಮೂಲವಿಗ್ರಹದಂತಿಟ್ಟು ನಿರೂಪದಸ್ಕತ್ತುಗಳನ್ನು ಮಾತ್ರ ಮಾಡಿಸುತ್ತಲಿದ್ದರು (ಒಡಕ. ೫೬).

[ನಿರೂಪ + ದಸ್ಕತ್ತು (<ದಸಕತ್ತು)]

ನಿರೂಪಲೇಖ (ನಾ). ಬರೆಹ ರೂಪದ ಆಜ್ಞೆ ; ಆಜ್ಞಾಪತ್ರ : ಈ ಭಾಗದಿಂದ ಕೊಡಲಾಗಿರುವ ಅಧಿಕಾರಗಳಲ್ಲಿ . . . ನಿರೂಪಲೇಖವೂ ಸೇರಿ ಯಾವ ನಿರ್ದೇಶವನ್ನಾಗಲಿ . . . ಸಾದರು ಮಾಡಲು ಶಕ್ತರಾಗಿ ಇರತಕ್ಕುದು (ಭಾಧಾನ. ೧೯). [ನಿರೂಪ + ಲೇಖ]

ನಿರೂಪಿತ (ಗು). ೧. ನೋಡಿದ ; ಈಕ್ಷಿಸಿದ. ೨. ಕಂಡುಹಿಡಿದ ; ಶೋಧಿಸಿದ. ೩. ನಿಯುಕ್ತ ಮಾಡಲಾದ ; ಆಯ್ಕೆಗೊಂಡ. ೪. ವಿವರಿಸಿದ ; ನಿರೂಪಿಸಲಾದ : ವಿಕಟವೇದಾಗಮನಿರೂಪಿತ ಸುಕರನಾನಾರ್ಥಂಗಳಂ ಗೆಲಿದಕುಟಿಲಾತ್ಮನು ಮಂಚಣಾಚಾರ್ಯನು ಮೆಱ್ಪುತಿರಲು (ಬಸಪು. ೫೩-೬೦). ೫. ಹೇಳಿದ ; ತಿಳಿಸಿದ. (ನಾ). ೬. ವಿವರಿಸಿದುದು ; ವಿವರಣೆಯಾದುದು : ಪರಮಪುರಾಣ ಕವೀಶ್ವರ ನಿರೂಪಿತಂಗಳ್ ವಿಚಿತ್ರಮಾರ್ಗಯುತಂಗಳ್ (ಕಾವ್ಯಾವ. ೪೯೯). ೭. ಹಿರಿಯರ ಮಾತು ; ಬೋಧನೆ : "ನಿರೂಪಂ, ನಿರೂಪಣಂ, ನಿರೂಪಿತಂ, ಈ ೩ ಗುರುವಾಕ್ಯಂ" (ಕಾಶಕ್ಯ. ೨೯೦). [ಸಂ.]

ನಿರೂಪಿಸು (ಕ್ರಿ). ೧. ಹೇಳು ; ವಿವರಿಸು : ಎನ್ನಯ ತೀವ್ರತಾಪವಾಜ್ಯಹಿಮೆಯಿನಾತನಂದು ಕಡಿದಿಕ್ಕಿದ ಪೆರ್ಮರನಂತೆವೋಲದೇನಹಹ ನಿರೂಪಿಪೆಂ ಕೆಡೆದು ಪೊಂದಿದನಾಯಿಳೆಯಲ್ಲಚೇತನಂ(ಕಾದಂಬಿ. ೫೭೫) ; ಸಂಸ್ಕೃತಕ್ಕೆ ಪುಟ್ಟಿದ ಕನ್ನಡಮಂ ನಿರೂಪಿಸುವೆಂ (ಶಮದ. ೨೫೩ ಪೃ ೨) ; ಮಾವೆಲ್ಲಿ ಫಲಂದೋಱುವುದೀ ಕಾಲದೊಳುಲ್ಲಸದಿಂದ ನಿರೂಪಿಸೆ ನಲ್ಮಗುತುಸಿರಿದನಿಂತೆಂದು (ಜಯಕಾ. ೨-೩೧) ; ಈ ಭವದ ಕೋಟಲೆಗೆ ತವ ಮಹಾಸ್ಥಾನದೊಳಗಿರ್ಪ ಘನಮಹಿಮರುಂ ಬಹರೊ ಪರಮಾನಂದ ನಿತ್ಯಸುಖದಿಂದಿರ್ಪರೋ ನಿರೂಪಿಸವೇಳ್ಕುಂ (ಚಿಒಪು. ೩-೧೭); ಎಲೆ ದೇವ ವಿಜಯಂಗೈದ ಕಥನವನೆನಗೆ ನಿರೂಪಿಸಬೇಹುದು (ಜೈಮಿಭಾ. ೧೪೪-೨೪) ; ಇಂದೂ ಹೇಳಲಾಗುವ ಕೆಲವು ಮಹಿಮೆಗಳನ್ನು ಮಾತ್ರ ಇಲ್ಲಿ ಸಂಕ್ಷೇಪವಾಗಿ ನಿರೂಪಿಸಿದೆ (ಜಗದಾ. ೧೬೭). ೨. ಅಪ್ಪಣೆಮಾಡು ; ಆಜ್ಞೆಮಾಡು ; ಆಜ್ಞಾಪಿಸು : ಕಟ್ಟಿದಿರೊಳಂತೊಮ್ಮೆ ಎಮ್ಮನು ಪಟ್ಟಿ ಮಂಚಪನೇಱು ಎಂದಿರಿ ನಟ್ಟ ಶೂಲವನೇಱುಯೆಂದು ನಿರೂಪಿಸಿದೀಗ (ಬಸಪು. ೩೯-೪೪) ; ಎಮಗೆ ಬೆಸನೇನುಂಟು ಜೀಯ ನಿರೂಪಿಸುವುದೆನಲು (ಕುನ್ಯಾಆ. ೬೧೩. ೨೫-೨೧) ; ನಿರೂಪಿಸು [ಪಾಠಾಂ. ಸಿ]ಜೀಯ ಸಂಗರಕೆ (ತೊರರಾ. ೩-೫೫-೧೨) ; ಬೆಸಗುಡು ದೈತ್ಯಾಧೀಶ್ವರ ನೀ ನಿರೂಪಿಸಲಾನು ಮಿತಿಯ ವಿಸಾಜುವನೆ (ನೋಹತ. ೩೩-೩೦). ೩. ಒಪ್ಪಿಸು; ನೇಮಿಸು; ವಹಿಸು : ಮಗಂ ಪುಟ್ಟದೊಡಾತಂಗೆ . . . ಪಟ್ಟಂಗಟ್ಟಿ ಸಮಸ್ತರಾಜ್ಯ ಭಾರಮೆಲ್ಲಮಂ ನಿರೂಪಿಸಿ (ಪಡ್ಡಾರಾ. ೬೫-೨೪). ೪. ರಚಿಸು ; ಕಟ್ಟು : ಮಲ್ಲಡಾಯರ್ಯಂ ನಿರೂಪಿಸಿದನೀ ಭಾವಬಂಧಾರತ್ನಮಂ (ಭಾವಚಂ. ೯-೬೦). [ನಿರೂಪ + -ಇಸು[3]]

ನಿರೂಪು (ನಾ). ೧. ರೂಪ ಅಥವಾ ಆಕಾರಗಳಿಲ್ಲದಿರುವುದು ; ನಿರಾಕಾರ : ರೂಪಿಂಗೆ ಕೇಡುಂಟು ನಿರೂಪಿಂಗೆ ಕೇಡಿಲ್ಲ ರೂಪು ನಿರೂಪು ನೊಳೊಡಗೂಡುವ ಪರಿಯೆಂತು ಹೇಳಾ (ಅಪಚಂ. ೨೭೩-೧೨೬೬) ; ಹಿಂದಕ್ಕೆ ಹಿರಿದು ಕಿಱಿದಕ್ಕೆ ಕಿಱಿದು ವಾಗ್ಮನಕ್ಕಗೋಚರ ಕೂಡಲಸಂಗಮದೇವ ಸ್ವರೂಪು ಪ್ರಸಾದ ನಿರೂಪು ಲಿಂಗೈಕ್ಯ (ಬಸವ. ೪೩೮) ; ತನುವಿಲ್ಲ ಬಸವಯ್ಯಂಗೆ . . . ಸಂಗಯ್ಯನಲ್ಲಿ ಬಸವಯ್ಯನ ರೂಪು ನಿರೂಪಾದ ಬಳಿಕ (ಶೀಲವ.೨೦-೫೯); ಪರಾತ್ಪರಮೂರ್ತಿಯ ಶರೀರ ಚಿದಾಕಾಶ ವರ್ಣ ನಿರೂಪು (ರುದ್ರಭಾ. ೪೩). ೨. ಅಪ್ಪಣೆ ; ಆಜ್ಞೆ : ಲಿಂಗಪ್ರತಿಷ್ಠೆಯ ಮಾಡೆಂದು ಎನಗೆ ನಿರೂಪಿಸುತಿರ್ದ ಕಾರಣ ಮಾಡುತ್ತಿರ್ದನಲ್ಲದೆ ಎನಗೆ ಬೇಱೆ ಸ್ವತಂತ್ರ ಉಂಟೆ ಹಿಂದೆ ನೀವು ಕೊಟ್ಟ ನಿರೂಪು ಹುಸಿಯಾದರೆ ಇನ್ನು ಮುಂದೆ ಸ್ವಯವಪ್ಪಂತೆ ನಡಿಸಾ (ಸಿದ್ಧವ. ೪.೬೨-೧೧೯). ೩. ಆಜ್ಞಾಪತ್ರ ; ನಿರೂಪ (?) : ಘಟದೊಳಪ್ಪಣೆ ನಿರೂಪುಗಳಾಗಿ ಮಡಗಿಹವು (ಕೃಷ್ಣವಿ. ೨-೪೧). [<ಸಂ. ನಿರೂಪ]

ನಿರೂಹ (ನಾ). ೧. ದೇಹದೊಳಗಿನ ದೋಷವನ್ನು ಹೋಗಲಾಡಿಸಲು ಪ್ರಯೋಗಿಸುವ ಒಂದು ವಿಧವಾದ ಬಸ್ತಿಕ್ರಿಯೆ; ವಿರೇಚಕ ಕ್ರಿಯೆ. ೨. ತರ್ಕ ; ಚರ್ಚೆ ; ವಾದವಿವಾದ. ೩. ಅಧ್ಯಾಹಾರ ಪದಗಳಿಲ್ಲದ ವಾಕ್ಯ. ೪. ನಿಶ್ಚಯ. [ಸಂ.]

ನಿರೂಹಣ (ನಾ). [ವೈದ್ಯ] ವಿರೇಚನವಾಗುವಂತೆ ಮಾಡುವಿಕೆ ; ವಿರೇಚಕ ಕ್ರಿಯೆ : ನಿರೂಹಣಂ ಮಾಟ್ಕೆ ಸರ್ವಶೂಲಾಪಹರಂ (ಅಶ್ವಶಾ. ೧೧-೫) ; (ಶೋಧನವು) ನಿರೂಹಣ, ವಮನ, ವಿರೇಳ, ನಸ್ಯ, ರಕ್ತಮೋಕ್ಷಣಂಗಳೆಂದ್ಯೆದು ತೆರನಾಗಿರುವುದು (ಸಳವೈ. ೧೮). [ಸಂ.]

ನಿರೂಹಣಕ್ರಿಯೆ (ನಾ). = ನಿರೂಹಣ : ಸರುಷಪಮಂ ಘೃತಮಂ ನಾಗರಮಂ . . . ವಿಸ್ತರದಿಂ ತ್ರಿಫಲಾರಸದೊಳ್ ನಿರೂಹಣಕ್ರಿಯೆಗೆ ಯೋಜಿಪುದು (ಅಶ್ವಶಾ. ೧೦-೧೬). [ನಿರೂಹಣ + ಕ್ರಿಯೆ]

ನಿರೂಹಣಗೆಯ್ (ಕ್ರಿ). ವಿರೇಚನವಾಗುವಂತೆ ಮಾಡು ; ಭೇದಿ ಮಾಡಿಸು : ಸರುಷಪಮಂ ಸೈಂಧವುಮುಸರೆದೆಳ್ಳೆಣ್ಣೆಯೊಳೆ ಕೂಡೆ ವೆಂಕುಳ ಕಟು(ಳೆ)ಯೊಳ್ ಬೆರಸಿ ನಿರೂಹಣಗೆಯ್ವುದು ತುರಗಕ್ಕುದು ಸರ್ವ ಶೂಲನಿರ್ಮೂಲಕರಂ (ಅಶ್ವಶಾ. ೧೧-೬). [ನಿರೂಹಣ + ಕೆಯ್[1]]

ನಿರೂಹದ್ರವ್ಯ (ನಾ). ವಿರೇಚನವಾಗುವಂತೆ ಮಾಡುವ ವಸ್ತು; ವಿರೇಚನಕ್ರಿಯೆಗೆ ಸಹಾಯಕವಾದ ಔಷಧಿ : ದಾರು= ದೇವದಾರು, ರಾಸ್ನಾ :ರಾಸ್ನೆ . . . ತ್ರಿವೃತಾ :ತಿಗಡೆ, ಎಂಬಿವು ನಿರೂಹಣಾಸ=ನಿರೂಹದ್ರವ್ಯಂಗಳು (ವೈದ್ಯವಿ. ೬೦). [ನಿರೂಹ+ದ್ರವ್ಯ]

ನಿರೋಗ (ಗು). ೧. ರೋಗವಿಲ್ಲದ; ಆರೋಗ್ಯಕರವಾದ; ಆರೋಗ್ಯದಿಂದ ಕೂಡಿದ. (ನಾ). ೨. ರೋಗನಿವಾರಣೆ,—ಪರಿಹಾರ : ಶೂಲಿ ಮಂತ್ರಪಜಪದಯಾದಡೆ ಶೂಲೆ ರೋಗ ನಿರೋಗವಹುದು (ಬಸವಪು. ೪೮-೨೪). [ಸಂ.]

ನಿರೋಗಿ(ನಾ). ೧.ರೋಗವಿಲ್ಲದುದು; ಆರೋಗ್ಯಕರವಾದುದು; ಆರೋಗ್ಯದಿಂದ ಕೂಡಿದುದು : ನಿರೋಗಿಯುಂ ಪುಷ್ಪವೂ ಆಗಿರುವ ಪಶುವಿನ ಮಾಂಸವು ಎಲ್ಲಕ್ಕೂ ಹೆಚ್ಚಗೆ ಬಲ ಪುಷ್ಟಿಕಾರಕವಿರುತ್ತದೆ (ಪುಂಬಯಿ. ೫-೧೬೫). ಪ್ರಕೃತಿ ಅಂತೂ ಎಂದಿನಿಂದಲೂ ನಿರೋಗಿ (ಆಸ್ನ. ೧೯೦); ನಿರೋಗಿಯಾದ ಮನಸ್ಸು ಇಷ್ಟವಾದ, ಯೋಗ್ಯವಾದ ಮತ್ತು ಸಮರ್ಥವಾದ ರೀತಿಯಲ್ಲಿ ವ್ಯವಹರಿಸಬಲ್ಲ ಶಕ್ತಿಯುಳ್ಳದ್ದಾಗಿದೆ (ಪುನೋರೋ. ೧೪). ೨. ರೋಗವಿಲ್ಲದವನು; ಆರೋಗ್ಯಶಾಲಿ : ಚಿರಂಜೀವಿ ಎಂದಡೆ ನಿರೋಗಿ ಚಿರಂಜೀವಿ ಎಂದಡೆ ಸಶಕ್ತ ಚಿರಂಜೀವಿ ಎಂದಡೆ ಬಹುಕಾಲ ಬದುಕುವನನು (ಸಿದ್ಧಸ. ೪. ೪೦-೧೨೬); ಮಿಗೆ ವಾತಗುಲ್ಮಪರಿವೃತರಾಗಿಯುಂ ನಿರೋಗಿಗಳು . . . ಕುಲಗೋತ್ರ ಮಧ್ಯಸ್ಥಿತಿಗಳಾಗಿಯುಂ ಸೊಗಯಿಪೇಕಾಕಿಗಳಿನಿ ಶಿವನನೊಲಿಸಿದ ಮುನೀಶ್ವರರು ಕಣ್ಣೆ ಸೆದರು (ಪಡಕಾ.೬-೩೬) ; ಜೆನ್ನಾಗಿ ನೀವನುನಯದಿ ನೋಡಲು ರೋಗಿಯಾದವನುಂ ನಿರೋಗಿಯೆನಲ್ಕೆ ಬಾಳ್ವನಲಾ (ಬಸವಪು. ೪೭-೬೫) ; ರಾಗಿಯನು ಉಂಬುವ ನಿರೋಗಿ ಎಂದೆನಿಸುವನು (ಸರ್ವಜ್ಞ. ೨೦೨೨) ; ನನ್ನ ಮಾತು ಕೇಳಿದ್ದರೆ, ಅವರು ಸಂಪೂರ್ಣ ನಿರೋಗಿಗಳಾಗುತ್ತಿದ್ದರೆಂದು ನನಗೆ ವಿಶ್ವಾಸವಿದೆ (ಪೀಕಕ್ಯೆ. ೨೮). [ಸಂ. ನಿರೋಗಿನ್]

ನಿರೋಧ್ (ನಾ). (ಸಂತಾನ ನಿಯಂತ್ರಣಕ್ಕಾಗಿ) ಸಂಭೋಗ ಸಮಯದಲ್ಲಿ ಗಂಡನರು, ಗರ್ಭನಿರೋಧಕ ಸಾಧನವಾಗಿ ಬಳಸುವ, ರಬ್ಬರಿನಿಂದ ಮಾಡಿದ ಲಿಂಗಕವಚ : ಗಂಡಸರು,ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವುದಕ್ಕಿಂತ ನಿರೋಧ್ ಬಳಸುವುದು ಹೆಚ್ಚು ಸುಲಭ (ರೂಢಿ). [<ನಿರೋಧ]

ನಿರೋಧ (ನಾ). ೧. ಕಟ್ಟು; ಬಂಧನ; ತಡೆ : ಜನನ ಮರಣ ತಾಗು ನಿರೋಧ ಉಳ್ಳನ್ನಕ್ಕರ ನೀವೆಂತು ಲಿಂಗವಪ್ಪಿರಿ ಹೇಳಿರಣ್ಣಾ (ಚನ್ನಪ. ಕ. ೧೬೯-೬೬೮). ೨. ತಡೆ ಹಿಡಿಯುವುದು; ಪ್ರತಿಬಂಧ : ಮಲಮೂತ್ರಗಳ ನಿರೋಧ, ಅತ್ಯಂತ ಆಹಾರ, ಜಾಗರಣ . ಶೋಕ, ಇವಜಿಂದಲೂ ವರ್ಷಾಕಾಲದಿಂದಲೂ ವಾತಪ್ರಕೋಪ ವಹುದು (ವೈದ್ಯಸಾ. I, ೨೧). ೩. ಮುಚ್ಚುವುದು; ಆವರಣ ವನ್ನುಂಟು ಮಾಡುವುದು. ೪. ನಿಗ್ರಹ; ಹತೋಟಿ; ಅಂಕೆ; ಅಧೀನ : ನಿರೋಧಮುಂ ನಃಪರಿಗ್ರಹಮುಂ ತಪೋನೃತ್ತಿಯೊಳ್ (ಎಇ. XIII, ೬೬೨-೪೪ ; 929); ಈ ತೆಱದಿಂದಮಿಾ ತೆಱದ ಜೀವ ಮನೋವುವೀ ನಿರೋಧದಿಂದೀ ತೆಱದಿಂದ್ರಿಯಂಗಳನಡಂಗಿಪುದೀ ಪರಿಣಾಮ ಶುದ್ಧಿಯಿಂದೀ ತೆಱದುದ್ಧತಾಳನಿಕರಂ ಕಿಡುಗುಂ (ಜೀವಸಂ. ೧೪೬-೪); ತೆರೆಯುವ ಕುಳ್ಳುಟಾಸನದ . . . ಏಕಪಾರ್ಶ್ವದುಬ್ಬರದ ನಿರೋಧಮಂ ತಳೆದು ತೀವ್ರತಪಂ ತನುವೊತ್ತು ಬಂದುದು (ಧರ್ಮನಾ. ೨-೯೪). ೫. ವಿರೋಧ; ವೈರ : ಎನ್ನಯ ಕುಮಾರಿಯರ ಮದುವೆಯಾಗೆಲ್ಲಾ ನಿರೋಧಮಂ ಬಿಡುವೆನು (ಪಚಕಾ. ೪-೨೧). ೬. ಧ್ವಂಸ ಪಡಿಸುವುದು; ನಾಶಗೊಳಿಸುವುದು; ನಾಶ : ತೊಡಗಿದರೊಂದು ಲೆಗ್ಗೆಗೆ ವಿಶೇಷ ನಿರೋಧ ನಿರೋಧ ಗಾಢದಿಂ ಕಡುದನ ಪುಟ್ಟ ನಿರ್ಕು ನಿಜುಲೆಂದು ನಿಟಲ್ನಿಳಿಲೆಂದು (ಪಮ್ಮರ. ೩ ೪೬) ; ಸ್ಕಂಧಪಂಚಕವು ಆತ್ಯಂತಿಕವಿನಾಶವಾಗುವುದಕ್ಕೆ ನಿರೋಧವೆಂದು ಹೆಸರು (ಹಂದಸಾ. ೬೨). ೭. ನಿರಾಶೆ; ಆಶಾಭಂಗ : 'ನಿರೋಧನಿಬಂಧನ' ಪರಾ. ೮. ನೋವು; ದುಃಖ; ವ್ಯಥೆ; ಸಂಕಟ : ಭೂಭಾರಮಂ ಪಿಂಗಿಸಲು ದಯಿಸಿದಂ ಚಕ್ರಿ ನವಿಷ್ಣ್ವಿ ಭರಾಕ್ರಾಂತನಿರೋಧಂ ಮಾಣ್ದುದು (ಜಗದಿ. ೬-೪) ; ಉಳ್ಳಿಯಿಂ ಕಿನ್ನರಯ್ಮುಂಗಾದ ಮುಳಿಸುವಂ ಉಳ್ಳಿಯಿಂದವೆ ತೀರ್ದ ಕಳೆವುದು ನಿರೋಧವಂ (ಒಸರ. ೧೧-೯೪) ; ಇದಜಿ ಕೆಳಗೆ ಕವಿದ ನೆಳಲೊಳಗಾವನಿರ್ದಾನಾತಂಗೆ ತಾಂ ತವಿಲೆದರು ಬಡತನ ನಿರೋಧ[ಪಾತಾಂ. ನಂ ರೋಗ, ನಂ ಲೋಭ]ವಪಕೀರ್ತಿ . . . ಹರೆವುದು(ಪಚಕಾ.೬-೧೦); ಅಡಗೆಡದನಾ ಭೀಮನಿತ್ತಲು ಕಡುನಿರೋಧವ ಹಿಡಿದು ತಾನೇ ನಡೆದು ಬಂದನು ಧರ್ಮಸುತನಾ ಕೊಳನ ಪಥವಿಡಿದು (ಕುವ್ಯಾಭ. ೨೩-೩೦). ೯. = ನಿರೋಧ್. ೧೦. = ನಿರೋಧರತಿ : ಶೃಂಗಾರಿಗೂ ರತಿಭಾವ ಮಪ್ಪುದು. ಅದು ನಾಲ್ಕು ವಿಧ. ನಿಜ ನಿರೋಧ ಪರಾಧೀನ ಸ್ವಾಧೀನ (ಕಾಮಶಾ. ೨೩೧).

ನಿರೋಧದವಳು = ನಿರೋಧವೆಂಬ ರತಿಭಾವವನ್ನುಳ್ಳವಳು : ಪುರುಷನೊಲವು ಮಿಗಲಾಲಿಂಗನಂಗೆಯ್ಯಲು ಅಲುಗಿ ಬಿಸಿ ಬಿಸಿಯತನು ಜಲಮನುಂಟಾಗಿ ಮುಂಜಲಿಸಿ ತೋರ್ಪಳೆನಿ[ಪಾತಾಂ.ವಿ]ರೋಧದವಳಲೆ (ಜನಪ. ೪-೩೮). [ಸಂ.]

ನಿರೋಧಂಗೊಳ್ (ಕ್ರಿ). ವ್ಯಥೆಪಡು; ಸಂಕಟಗೊಳ್ಳು : ಮಗನ ಕರುಣಾಸ್ಯಮುಂ ಚಂದ್ರಭೂಷಂ ಕಂಡು ನಗುತೆತ್ತಿ ಕಕ್ಕೈಸುತಂ ನಿರೋಧಂಗೊಂಡು (ಬಸರ. ೧-೫೪). [ನಿರೋಧ+ಕೊಳ್$_1$]

ನಿರೋಧಂಬಡಿಸು (ಕ್ರಿ). ಅಡ್ಡಿಪಡಿಸು; ತಡೆಯನ್ನುಂಟು ಮಾಡು; ಕಾಡು : ಒಡಲ ಹಮ್ಮಿನ ಯೋಗಿಗಳನವಗಡಿಸಿ ಕಾಡುವ ಮಾಯೆಯೆಯ್ತಿತ್ತಿ ಕಡುನಿರೋಧಂಬಡಿಸಿದನು ಖಳನಚ್ಯುತನ ಹಿಡಿದು (ನಿಭಾಗ. ೧೦-೬-೯). [ನಿರೋಧ+ಪಡಿಸು]

ನಿರೋಧಕ (ಗು). ೧. ಅಡ್ಡಿಯನ್ನುಂಟುಮಾಡುವ; ಪ್ರತಿಬಂಧಕವಾದ : ವಿಟಮಿನ್ 'ಡಿ' :–ಇದನ್ನು ರಿಕೆಟ್ಸ್ ನಿರೋಧಕ ಸತ್ವವೆಂದೂ ಸೂರ್ಯಪ್ರಕಾಶ ವಿಟಮಿನ್ (Sunshine Vitamin) ಎಂದೂ ಕರೆಯುವರು (ಗೃಪವಿ. ೬೦). (ನಾ). ೨. ಅಡ್ಡಿಯನ್ನುಂಟುಮಾಡುವಂತಹುದು; ಪ್ರತಿಬಂಧಕವಾದುದು : ಕರುಣಾರಸಕ್ಕೆ ಮಿಗೆ ಹಾಸ್ಯರಸಂ . . . ರೌದ್ರರಸಕ್ಕಮದ್ಭುತಂ ವೀರರಸಕ್ಕೆ ಭಯಾನಕಂ ನಿರೋಧಕಮು[ಪಾತಾಂ. ವಿರೋಧಿಗಳ]ಕ್ಕುಂ (ಕಾವ್ಯಾವ. ೪೩೧). ೩. ತಡೆಯುವವನು; ಅಡ್ಡಿಪಡಿಸುವವನು. ೪. ಬಂಧನದಲ್ಲಿಡುವವನು; ಸೆರೆಹಿಡಿದು ನಿರ್ಬಂಧಿಸುವವನು. [ಸಂ.]

ನಿರೋಧರತಿ (ನಾ). [ಕಾಮಶಾ] ನಿಜ, ನಿರೋಧ, ಪರಾಧೀನ ಮತ್ತು ಸ್ವಾಧೀನವೆಂಬ ನಾಲ್ಕು ಬಗೆಯ ರತಿಗಳಲ್ಲಿ ಒಂದು : ಅಲಿಂಗನ ಚುಂಬನಮಾಡದ ಮುನ್ನವೆ ನೋಡಲ್ಕೆ ಕ್ರೋಧದಿಂ ಮುನ್ನವೆ ಉಷ್ಣದಿಂ ಪರಿಪುನಾಗಿ ಸ್ರವಿಸಿದೊಡೆ ನಿರೋಧರತಿ (ಕಾಮಶಾ. ೨೩೧). [ನಿರೋಧ+ರತಿ$_1$]

ನಿರೋಧಸಮಾಧಿ (ನಾ). ಬಾಹ್ಯವಸ್ತುಗಳನ್ನು ಗಮನಿಸದಂತೆ ಮನಸ್ಸನ್ನು ನಿಗ್ರಹಿಸಿ ಧ್ಯಾನಮಗ್ನನಾಗುವಿಕೆ : ಎಂದಿಗೆ ಗಡಾ ನಿರೋಧಸಮಾಧಿಯಲಿ ವಿಹರಿಪನೊ ಸುಗತನವನ ದೇಹಕ್ಕೆ ನೆನ್ದುದಿಯಂದೆ (ವೈಶಾವಿ. ೬೬-೪೫). [ನಿರೋಧ+ಸಮಾಧಿ]

ನಿರೋಧಿಸು (ಕ್ರಿ). ನಿರ್ಬಂಧಿಸು; ನಿಗ್ರಹಿಸು; ತಡೆಹಿಡಿ; ಹತೋಟಿಯಲ್ಲಿಡು : ದಕ್ಷಿಣಾಮುನಾಸಾರಂಧ್ರನಿರ್ಗಮನಾಗಮನ

ಮುಳ್ಳ ವಾಯುಗಳಾದ ಇಡಾ ಪಿಂಗಳಗಳ ಗತಿಗಳಂ ನಿರೋಧಿಸಿ (ವಿವೇಕ. ೯೭); ಪಿರಿದಸದಳವು ಮನವ ನಿರೋಧಿಸಲು (ಗಗತಾ. ೧೩-೧೦); ಮನುಷ್ಯ, ಪಶು, ಸಕಲ ಪದಾರ್ಥಗಳೂ ಭೂಮಿಗೆ ಅಂಟಿಕೊಂಡು ಭಾರವಾಗಿರಲು ಕಾರಣವೇನು ? ನಿರೋಧಿಸಲಶಕ್ಯವಾದ ಒಂದು ಬಲವು ಅವುಗಳನ್ನು ಸಂತತವೂ ಆಕರ್ಷಿಸುತ್ತಿರುವುದೇ (ಜ್ಯೋತಿರ್ವಿ. ೨೮೨).

[ನಿರೋಧ + -ಇಸ್ಕು]

ನಿರೋಷಿ (ನಾ). ಕೋಪವಿಲ್ಲದವಳು : ದಾಸಿ ರಜಕಕ್ಷಾರಕಸ್ತ್ರೀ . . . ನಿರೋಷಿ ಸೂಚನೆಗೂಡಿ ಗುಣಮೆಚ್ಚಿ ಸತಿಯರನು ಮಾಡು ದೂತಿಯನು (ಜೀವಂಧ.೧೭-೮೫). [ಸಂ. ನಿರೋಷೀ]

ನಿರೋಷ್ಠ (ನಾ). = ನಿರೋಷ್ಠ್ಯ ೧ : ಅಕ್ಷರಬಿಂದುಚ್ಯುತಕಂ ದ್ವ್ಯಕ್ಷರಿಯೇಕಾಕ್ಷರಂ ನಿರೋಷ್ಠ [ಪಾಠಾಂ.ಷ್ಠ]ಮತಾಲವ್ಯಾಕ್ಷರಮೆನೆ ನಿಜನಾಮ ಸದೃಕ್ಷಂ ಲಕ್ಷಣಮದಾಗೆ ನೆಗಟ್ಸುಂ ಪಲವುಂ (ಕಾವ್ಯಾವ.೫೭೦).

ನಿರೋಷ್ಠಕಂದ = [ಕಾವ್ಯಮಿಾ] ಓಷ್ಠ್ಯಾಕ್ಷರಗಳನ್ನು ಬಳಸದೆ ರಚಿಸಿದ ಕಂದಪದ್ಯ ; ಚಿತ್ರಕವಿತ್ವದ ಕಂದ : ನಿರೋಷ್ಠಕಂದ॥ ಖರಕಿರಣನ ತನಯನ ಖರಕಿರಣಕರ ದಶರಥನ ನಳನ ಜಳಜಜನ ಧರಾವರನ ಶಶಧರನ ಚಕ್ರನ ಚರಿತೆಯೆ ನಿಜಚರಿತಮೆನಿಸಿದಾತನನೊಲ್ಸುಂ (ಮದತಿ. ೬-೧೩). [ಸಂ.]

ನಿರೋಷ್ಠ್ಯ (ನಾ). ೧. ಶಬ್ದವನ್ನು ಉಚ್ಚರಿಸುವಾಗ ತುಟಿಯ ಸಹಾಯವನ್ನು ಪಡೆಯದೆ ಇರುವುದು. ೨. [ಕಾವ್ಯಮಿಾ] ಚಿತ್ರಕವಿತ್ವದಲ್ಲಿ ಒಂದು ಪ್ರಕಾರ ; ಉಕಾರ ಬಕಾರ ಹಾಗೂ ಪಕಾರಗಳನ್ನು ಬಳಸದೆ ಬರೆದ ಪದ್ಯ : ನರನಾಯಕನಂ ನಿಂದಾನಿರದೀಗಳೆ ಕಾಂತನಂ ನೆರೆದೇನದಟುಂದಿಲ್ಲಾ ನೆರೆದಿರ್ದಾರ್ಗೆನಾಗೆನೆ (ನಿರೋಷ್ಠ್ಯಂ) (ಕವಿಾಾ. ೨-೧೨೫) ; ಇವುಗಳಲ್ಲಿ ನಿರೋಷ್ಠ್ಯ . . . ಹಾರಬಂಧ, ಮುರಜಬಂಧ ಮುಂತಾದ ನಾನಾವಿಧಗಳುಂಟು (ಕೈಪಿಡಿ. ೨೫೪).

[ಸಂ.]

ನಿರೋಹಣ (ನಾ). ಮರದಲ್ಲಿ ಬೆಳೆದುದು; ಹೂವು; ಪುಷ್ಪ : ನಿರ್ವ್ಯಾಕುಳವಿಾಗಳಿಲ್ಲಿ ನೆಲಸಿತ್ತ ಜಡಾತ್ಮಕರೂಪಮಾಗಿ ರತ್ನಾಕರಸಂಕುಳಂ ವಿಪಿನವೃಕ್ಷವಿವರ್ಜಿತಮೂ ನಿರೋಹಣಾನೀಕಮೆನಲ್ಕೆ ರನ್ನವಸರಂ ಬಗೆಗಚ್ಚರಿಯಂ ನೆಗಟ್ಟುಗುಂ (ಪಲ್ಲಕಾ. ೪-೬೩೭). [ಸಂ.]

ನಿರ್ಋತಿ (ನಾ). ೧. ಅಳಿವು ; ನಾಶ ; ಕ್ಷಯ. ೨. ಮೃತ್ಯುದೇವತೆ. ೩. ನೈರುತ್ಯ(ದಿಕ್ಕು). ೪. ಅಷ್ಟದಿಕ್ಪಾಲಕರಲ್ಲಿ ಒಬ್ಬ ; ನೈರುತ್ಯದಿಕ್ಕಿನ ಒಡೆಯ,—ಅಧಿಪತಿ : "ನಿರ್ಋತಿಃ-ದಿಕ್ಪಾಲಕ" (ಕಾತಕ್ಯ. ೨೪೭). ೫. ಬಡತನ; ದಾರಿದ್ರ್ಯ : "ಅಲಕ್ಷ್ಮೀಃ-ನಿರ್ಋತಿ ೨ ಅಭಾಗ್ಯದ ಹೆಸರುಗಳು, ನಿರ್ಭಾಗ್ಯತನ" (ಸಿದ್ಧಾಂತಿ. ೭೫).

[ಸಂ.]

ನಿರ್ಕಲಿಸು (ಕ್ರಿ). ಅತಿಶಯವಾಗಿ ಬೆರೆತುಕೊಳ್ಳು ; ಸಂಪೂರ್ಣವಾಗಿ ಸೇರಿಕೊಳ್ಳು : ಪೊರ್ಕಳಿಯಾಡಿದುವಲರೊಳ್ ನಿರ್ಕಲಿಸಿದವಟ್ಟು ಬಂಡಿನೊಳ್ ತನಿಗಂಪಿಂದಟ್ಟುಮೆವಟ್ಟುವು ಕುಡಿಯೊಳ್ ದರ್ಕುಂದಲೆ ವಾಯ್ದುವಲ್ಲಿ ಮದಮಧುಪಂಗಳ್ (ಪಲ್ಲಕಿ. ೧೪-೧೪೪).

[ನಿರ್- + ಕಲಿಸು (< ಕಲಸು)]

ನಿರ್ಕುಳಿಗೊಳ್ 'ನೀಳ್ಕುಳಿಗೊಳ್' ನೋ.

ನಿರ್ಗ 'ನಿರ್ಗರ' ನೋ.

ನಿರ್ಗಂಧ (ಗು). ೧. ವಾಸನೆಯಿಲ್ಲದ; ಗಂಧರಹಿತವಾದ: 'ನಿರ್ಗಂಧಕುಸುಮ' ಸರಾ. (ನಾ). ೨. = ನಿರ್ಗಂಧವಾಯು : ಬೇಳೆಯ ಕಾಳುಗಳಲ್ಲಿ ನಿರ್ಗಂಧದ ಪ್ರಮಾಣವು ಹೆಚ್ಚಿರುತ್ತದೆ (ಮುಂಬಯಿ. ೬-೨೮೯). [ಸಂ.]

ನಿರ್ಗಂಧಕುಸುಮ (ನಾ). ವಾಸನೆಯಿಲ್ಲದ ಹೂವು : ಏಕೋ ನಿರ್ಗಂಧಕುಸುಮದ ಕಲ್ಪನೆಯೇ ನನಗೆ ಸಹಿಸದು (ಆಬೋಲೀ. ೨).

[ನಿರ್ಗಂಧ + ಕುಸುಮ]

ನಿರ್ಗಂಧವಾಯು (ನಾ). ವಾಸನೆಯಿಲ್ಲದ ಅನಿಲ; ಸಾರಜನಕ; ನೈಟ್ರೋಜನ್ : ನೈಟ್ರೋಜನ್ನೆಂಬ ನಿರ್ಗಂಧವಾಯು ೩ ಪಾಲು ಆಕ್ಸಿಜನ್ನೆಂಬ ಪ್ರಾಣವಾಯು ೧ ಪಾಲು, ಈ ಪ್ರಕಾರ ಎರಡು ಮೂಲ ತತ್ವಗಳು ಕೂಡಿ ಹವೆಯುಂಟಾಗಿದೆ (ಮುಂಬಯಿ. ೫-೧೫೧).

[ನಿರ್ಗಂಧ + ವಾಯು]

ನಿರ್ಗಡಿ 'ನಿರ್ಗೇಡಿ' ನೋ.

ನಿರ್ಗಣ್ಯ (ಗು). ೧. ಮಾನ್ಯವಲ್ಲದ ; ಗಣನೆಗೆ ಬಾರದ; ಗಣ್ಯವಲ್ಲದ; ಗೌಣವಾದ : ಕೆಲವರು ಹೊಲೆಯರು ಕಾಫಿಬೀಜ ಕದ್ದು ಮಾರುವುದರಲ್ಲಿ ನಿಸ್ಸೀಮರಾಗಿದ್ದರು . . . ಹೊಲೆಯರಿಗೆ ಸಿಗುವ ಕ್ರಯ ಕಾಫಿಬೀಜದ ನಿಜವಾದ ಕ್ರಯದ ಬರೇ ಒಂದು ನಿರ್ಗಣ್ಯ ಅಂಶ ಮಾತ್ರ (ರಕ್ತರೂ. ೯೦). (ನಾ). ೨. ಮಾನ್ಯವಲ್ಲದುದು; ಗೌಣವಾದುದು : ಪುಣ್ಯವರ್ತನೆಗಾಗಿ ಮಾಳ್ಪ ಯೋಗಗಳೆಲ್ಲ ಪುಣ್ಯದಾಸ್ರವಗಳು ಮತ್ತೆ ಪುಣ್ಯವಲ್ಲದ ಕೃತ್ಯಕಾದ ಯೋಗಗಳು ನಿರ್ಗಣ್ಯ ಪಾಪಾಸ್ರವವಲ್ತೆ (ಭರತೇ. ೬೮-೯೮). [ಸಂ.]

ನಿರ್ಗತ (ಗು). ೧. ಹೊರಬಿದ್ದ; ಹೊರಬಂದ : ಮುನಿಮುಖ್ಯ ಮುಖಾಂಭೋಜೋದರ ನಿರ್ಗತಮಂತ್ರಪೂತಾಂಗಮಂ ನೃಪನೆಯ್ದಿದ ನುದ್ಯತ್ಕೃಪಾಂಗಮಂ (ಪಂಪಭಾ. ೧-೧೧೫). ೨. ಹೊರಟುಹೋದ ; ಅದೃಶ್ಯವಾದ. ೩. ಬಿಡುಗಡೆಯಾದ; ಸ್ವತಂತ್ರವಾದ; ಮುಕ್ತವಾದ. (ನಾ). ೪. (ಬಾಯಿಂದ) ಹೊರಬಿದ್ದುದು; ಹೇಳಿದುದು : ಮಾನಿತಭವ್ಯಲೋಕಮನಿಂದಂ ಭುವನತ್ರಿತಯಾಗ್ರದಲ್ಲಿಗೊಯ್ವಾನೆವದಿಂದಮಾಪ್ತಮುನಿ(ಖ)ನಿರ್ಗತಮಂ . . . ಆಗಮಮಂ ಪ್ರತಿಬೋಧಿಪರ್ (ಜೀವಸಂ. ೨-೪). [ಸಂ.]

ನಿರ್ಗತಿ (ನಾ). ಗತಿಯಿಲ್ಲದಿರುವಿಕೆ ; ಬಡತನ ; ದಾರಿದ್ರ್ಯ : ಕನಸಿನಲ್ಲಿಯೂ ಊಹಿಸದೆ ಇದ್ದ ನಿರ್ಗತಿ ಹೇಗೆ ಉಂಟಾಯಿತೋ ಹಾಗೇ ಮಾಯವಾಯಿತು (ರೂಢಿ). [ಸಂ.]

ನಿರ್ಗತಿಕ (ನಾ). ಗತಿಯಿಲ್ಲದವನು; ಕಡುಬಡವ : ಈಗಲೆ ನಾವು ನಿರ್ಗತಿಕರಾಗಿದ್ದೇವೆ. ಅದು ನಮ್ಮನ್ನು ಸಂಪೂರ್ಣವಾಗಿ ತೊಳೆದು ಬಿಡುತ್ತದೆ (ಪುನರು. ೨೯೩); ಬಟ್ಟೆಗಳಿಲ್ಲದ ನಿರ್ಗತಿಕರಿಗೆ ಬಟ್ಟೆಯನ್ನು ಕೊಡುವ ಮಹಮ್ಮದೀಯ (ಶೈಮುಹ. ೪೪) ; ನೀನು ದಿಕ್ಕಿಲ್ಲದವ, ನಿರ್ಗತಿಕ . . . ಒಂದೆರಡು ಕಾಸು ಗಿಟ್ಟಿಸಿಕೊ (ಹಸುಹೊ. ೩೮೦).

[ಸಂ.]

ನಿರ್ಗಮ (ನಾ). ೧. ಹೊರಡುವಿಕೆ ; ಹೋಗುವಿಕೆ ; ಗಮನ : ಚಕೋರಿಗೆ ತಳರ್ದೂಪ್ಪಲೊಪ್ಪಿದುದು ನೀರದಶಾರದನಿರ್ಗಮಾಗಮಂ (ಪುಷ್ಪಪು. ೪-೮೮) ; ಅಡಿಗೆ ಯೋಜನ ಯೋಜನವ ಮೆಲ್ಲಡಿಗೆ ಬೆಳವುತ ಬಂದನಿಳೆ ಕೆಳಕಡೆಗೆ ಯೋಜನಯೋಜನವ ತಗ್ಗಿದುದು ನಿರ್ಗಮಕ್ಕೆ (ತೊರರಾ. ೪-೧೨-೧೯). ೨. ಹೊರಹೋಗುವ ದಾರಿ.

ನಿರ್ಗಮವಾಗು = ಹೊರಟುಹೋಗು ; ಗಮಿಸು : ಆ ಸರ್ವಮಂಗಳೆ ಜನಸಲಭಕುಲಗರ್ವ ನಿರ್ಗಮವಾಯ್ತು (ತಿಭಾಗ. ೧೦-೫-೫).

[ಸಂ.]

ನಿರ್ಗಮನ (ನಾ). ಹೊರಡುವಿಕೆ ; ಗಮನ : ಅರ್ಜುನ ಮುನ್ನವೆ ಇಲ್ಲ ಗಮನ ನಿರ್ಗಮನವಾಯಿತ್ತು (ಬಸವ. ೩೯೨); ನೆಜ್ಜೆ ನರಂ ಸಂತೈಸೆ ಬಳಿಕ ದುಶ್ಶಳೆ ಶೌರಿಗೆಯಿಗಿ ಭಕ್ತರ ಬೆಳವಿಗೆಗಳನೊಸೆದಾವಾವ ತೆಱದಿಂದೆ ಮಾಡುವಂತೆನ್ನನುದ್ಧರಿಸೆಂದು ನಿರ್ಗಮನಕನುವಾದಳು (ಜೈಮಿಭಾ.

೩೨–೫೬) ; ದಿನಗಳು ಕಳೆದಂತೆ ಅವನ ಆಗಮನ ನಿರ್ಗಮನಗಳನ್ನು ಗಮನಿಸದೆ ಕಳೆದುದುಂಟು (ಹೇಮಂತ. ೪೫). [ಸಂ.]

ನಿರ್ಗಮನಿ (ನಾ). ಪ್ರಾಪಂಚಿಕ ವ್ಯವಹಾರಗಳ ಕಡೆ ಗಮನವಿಲ್ಲದವನು ; ಸಂಸಾರದಲ್ಲಿ ಅಲಿಪ್ತನಾದವನು ; ವಿರಕ್ತ : ಗಮನವಿಲ್ಲದೆ ಸುಳಿಯಬಲ್ಲಡೆ ನಿರ್ಗಮನಿಯಾಗಿ ನಿಲಬಲ್ಲಡೆ ಅದು ಪರ್ಮ ಅದು ಸಂಬಂಧ (ಅಪಡಂ. ೧೨೬–೨೭೩) ; ಶರಣ ಗಮನಿಯಾದಡೆ ಕಿಱುದೆಂಬರು ಶರಣ ನಿರ್ಗಮನಿಯಾದಡೆ ಹಿರಿದೆಂಬರು (ಅಖಂಡೇ. ೩೦೬–೫). [ಸಂ. ನಿರ್ಗಮಿನ್]

ನಿರ್ಗಮನಿರತ (ನಾ). ಹೊರಡುವ ಆಸಕ್ತಿಯುಳ್ಳವನು : ಹೊರಡಲು ಉತ್ಸುಕನಾದವನನು : ಮಱುದಿವಸ ಮಂಗಳಮಯಮುಹೂರ್ತದ ಜೋಯಿಸರ ಜೋಕೆಯಲಿ ನಿರ್ಗಮನಿರತನಾದನು ಕೃಷ್ಣನೊಲವಿನಲಿ (ಕುಪ್ಯಾಖ್ಯಾ. ೩–೪). [ನಿರ್ಗಮ + ನಿರತ]

ನಿರ್ಗಮಿಸು (ಕ್ರಿ). ಹೊರಟುಹೋಗು ; ಹೊರಹೋಗು : ಕೆಲಸಕ್ಕೆ ರಾಜೀನಾಮೆ ಸಲ್ಲಿಸಿ ನಿರ್ಗಮಿಸುತ್ತಾರೆ (ಪಸುಪೊ. ೩೨೩). [ನಿರ್ಗಮನ+–ಇಸು$_3$]

ನಿರ್ಗರ (ನಾ). ವಿಷರಹಿತ ಮನಸ್ಸಿನವನು ; ನಿರ್ಮಲಾಂತಃಕರಣದವನು : ತಲೆ ನೀಡುಂ ಜಡಯುಕ್ತಮಾಗಿವೆ ಶರೀರಂ ನೋಡೆ ವಾತಕ್ಕೆ ತಾಂ ನೆಲೆಗೊಂಡಿರ್ದಬಲಾಂಗಮಾಯ್ತು ; ಪಸಿವಿಲ್ಲೆಂದುಂ ಜಲಾಪೇಕ್ಷೆಯುಜ್ಜಲಿಸುತಿರ್ದಪುದಾವಗಂ ನಿನಗ ನಿನ್ನಂ ಜಾನಿಸುತ್ತಿರ್ಪರೀ ನೆಲದೊಳ್ನಿರ್ಗರರಪ್ಪರಿಂತರಿದಲಾ (ತ್ರಿಸೋಚ. ೩೭). [ಸಂ.]

ನಿರ್ಗರ್ವ (ಗು). ೧. ಅಹಂಕಾರವಿಲ್ಲದ ; ಗರ್ವವಿಲ್ಲದ. (ನಾ). ೨. ವಿನಯ ; ನಮ್ರತೆ. [ಸಂ.]

ನಿರ್ಗರ್ವತೆ (ನಾ). ಗರ್ವವಿಲ್ಲದಿರುವಿಕೆ ; ನಮ್ರತೆ : ಗಮಿಸಲು ಬಾರದಂತಾ ನಿರ್ಗರ್ವತೆ[ಪಾಠಾಂ. ನಿರ್ಗಮನಪವನು]ನೆಲೆಗೆ ನೆಲೆಯಾಗಿಪ್ಪಂ . . . ಮನದ ಕೊನೆಯಲಿ ಹೊಳೆವುತಿಪ್ಪವನು (ಬಸಪು. ೫೧–೪೭). [ಸಂ. ನಿರ್ಗರ್ವತಾ]

ನಿರ್ಗರ್ವಿ (ನಾ). ಸೊಕ್ಕಿಲ್ಲದವನು ; ವಿನಯಶೀಲ ; ನಮ್ರತೆಯುಳ್ಳವನು : ಸರ್ವಜೀವದಯಾಪರಂ ನಿರ್ಗರ್ವಿ ಕಿನ್ನರಬೊವಿಮ್ಮಿದೇವನ ಪೂರ್ವವೀರವ್ರತ ಸದಾಚಾರಾನುಪಾಲಕನು (ಬಸಪು. ೨೮–೩). [ಸಂ. ನಿರ್ಗರ್ವಿನ್]

ನಿರ್ಗಲಿತ, ನಿರ್ಗಳಿತ (ಗು). ಸುರಿದುಹೋದ ; ಹರಿದುಹೋದ ; ಹೊರಟುಹೋದ : ನಿರ್ಗಲಿ[ಪಾಠಾಂ. ಳಿ]ತ ಸರಾಗಭಾವಮೆನಿಸುತ್ತುರದಚ್ಛದಂ (ಚಂದ್ರಪ್ರ. ೪–೭೬). **ನಿರ್ಗಳಿತ :** ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಸಂ.]

ನಿರ್ಗಹನ (ನಾ). ಕ್ಲೇಶವಿಲ್ಲದಿರುವಿಕೆ ; ಸುಲಭತೆ ; ಅನಾಯಾಸ : ದುರ್ಗಮಮನುಪ್ಪಾ ಪಥದೊಳ್ ನಿರ್ಗಹನದಿನಂದು ಪೋಗಿ ಕಂಡಂ . . . ಸಮಭೂತಳಮಂ (ಸೀವಿ.ಪು. ೪–೧೦೦) ; ಸ್ವರ್ಗಫಲಮಂ ಸ್ವಕೀಯ ಭುಜಾರ್ಗಳದಿಂ ಸೃಷ್ಟಿ ಕಳೆದುಕೊಂಡಪರೀತಂ ನಿರ್ಗಹನದಿನೆನೆ ಗಹನಾಂತರ್ಗತನೆನಿದಿರ್ದನೂರ್ಧ್ವಬಾಹುವದೊರ್ವಂ (ಜಗವಿ. ೧೬–೫೯). [ಸಂ.]

ನಿರ್ಗಹನವೃತ್ತಿ (ನಾ). ಆಯಾಸವಿಲ್ಲದಿರುವಿಕೆ ; ಸುಲಭವಾದ ರೀತಿ ; ಅನಾಯಾಸ : ಅಂತು ಮುತ್ತಿ ಕಾದುತಿರ್ದ ಸೇನಾಮಹೋದಧಿಯಂ ಮುಂದರಾಚಲದಂತೆ ಪೊಕ್ಕು ನಿರ್ಗಹನವೃತ್ತಿಯಿಂ ಪುರಮಂ ಪುಗಲ್ ಪೋಪಾಗಳ್ (ಚಂದ್ರಪ್ರ. ೫–೧೦೬ ಸಿ). [ನಿರ್ಗಹನ+ವೃತ್ತಿ]

ನಿರ್ಗಳಿತ 'ನಿರ್ಗಲಿತ' ನೋ.

ನಿರ್ಗಾವಿಲ (ನಾ). ಗಾಂಪನಲ್ಲದವನು ; ಜಾಣ ; ಚತುರ : ಏರಿದೀವಂ ಕಲಿ ಕೂರೆ ಕೂರ್ಪನುಜುವಂ ನೀಜಂ ಕರಂ ಭಾವಕಂ ಬೆರಸಲ್ಕಕ್ಕನುದಾತ್ತನಿತ್ತು ನೆರೆವಂ ನಿರ್ಗಾವಿಲಂ ಭೋಗಿ ನಾಟ್ಯರಸಂ ನೀತದ ಗೊಟ್ಟಗೊಲ್ಮನಿಯಂ ತೋಳ್ಸೂಪುವಂ (ಲೀಲಾವ. ೨–೬೧). [ನಿರ್–+ಗಾವಿಲ]

ನಿರ್ಗಾಳಿ (ನಾ). ಗಾಳಿಯಿಲ್ಲದ ಜಾಗ; ನಿರ್ವಾತಸ್ಥಳ: ನಿರ್ಗಾಳಿಯಲ್ಲಿ (ವ್ಯಾಕ್ಯುಮ್) ನೀರ್ಗಳೆಯುವ ನೀರ್ಗಲ್ಲಾಗಿಸಿ ಒಣಗಿಸುವ ತಂತ್ರದಿಂದ ಅಂಗಾಂಶಗಳು ಆಹ್ಲಾಗಿ ಬದಲಾಗವು (ಕವಿಕೋ. I, ೩೧). [ನಿರ್–+ಗಾಳಿ$_1$]

ನಿರ್ಗುಂಡಿ$_1$ (ನಾ). ಒಂದು ಬಗೆಯ ಚಿಕ್ಕ ಗಿಡ ; ಲೊಕ್ಕಿಗಿಡ ; ಸಿಂಧುವಾರ : "ನಿರ್ಗುಂಡೀ, ಸಿಂಧುವಾರಃ–ಈ ೨ ಲೊಕ್ಕಿ" (ಹಲಾಯು. ೩೩–೪೭); ಪಾಕಕುಶಕಾಶವಿಶದಂ ಕಾಕಾಂಡೋಲಾತ್ಮಗುಪ್ತಲಾಬೂ ನಿರ್ಗುಂಡೀ ಕೃಷ್ಣಲಾಮಂರೀ ಬಿಂಬಾಕೀರ್ಣಂ ಪನ್ನಗೀತಟುಂ ಕಡು ರಮ್ಯಂ (ಲೀಲಾವ. ೫–೪೦); ಮರುಗ ಮಲ್ಲಿಗೆ ಜಾಜಿ ಮದಯಂತಿ ಮಾಗಧಿ ತರಣಿ ನಿರ್ಗುಂಡಿ ಸಪ್ತಲಪ (ಜ್ಞಾನಚ. ೨೫–೬೧). 'ನಿರ್ಗುಡಿ' ಪರಾ. [ಸಂ. ನಿರ್ಗುಂಡೀ]

ನಿರ್ಗುಂಡಿ$_2$ (ನಾ). [ಜೈನ] ಮುನಿಗಳ ಒಂದು ಸಮಯ,—ಪದ್ಧತಿ : ಪಿಂಛ ಕಮಂಡಲಾದಿ ವ್ಯವಹರಣ ವಿಲೋಪಮುಮೆಂಬಿವು ಮೊದಲಾದ ಸತ್ಕಲ್ಪಮುಂ ಕಲ್ಪಿಸಿ ಪೇಟ್ಟ ಶ್ವೇತಪಟಯಾಪನೀಯ ಕಾಷ್ಠ ದ್ರಾವಿಡ ನಃಪಿಂಛ ನಿರ್ಗುಂಡಿ ಸಂಘಂ ಮೊದಲಾದಿಂದ್ರಸಮಯ ಸಮುಚ್ಚಯಮಪ್ಪ ಸಂಶಯ ಮಿಥ್ಯಾತ್ವಮುಂ (ಪಸಾರ. ೫). [?]

ನಿರ್ಗುಂದ 'ನೀರ್ಗುಂದ' ನೋ.

ನಿರ್ಗುಡಿ, ನಿರಗುಂಡಿ, ನೀರ್ಗುಂಡಿ (ನಾ). ಒಂದು ಬಗೆಯ ಗಿಡ ಮೂಲಿಕೆ (?) : ದ್ರಮ್ಮ ಸಾಸಿರದ ಮೂನುಪೊಬಲ ನಿರ್ಗುಂಡಿ ಆಡ ದೊಳೆರಡು ದ್ರಮ್ಮ ಮಾವಮಿಲ್ಲಾದ ಮಣಿಯೊಳ್ಮೂರು ಪಣ (ಕಇಆ. ೪೬–೧೪೮–೨೧ ; 932) ; ಬಿಚ್ಚ (ನಿರ್ಗುಡಿ) . . . ಸೂರ್ತಿ ಮಣ (ಮುಂಬಪ್ಯಾ. ೧೬೭). **ನಿರಗುಂಡಿ :** ಸೂರ್ತಿ ಮಣದ ಮೇಲೆ ಕಿಮ್ಮತ್ತು ಆಗತಕ್ಕ ಜೀನಸುಗಳು ೧, ಅಕ್ಕಲಖಾರ . . . ೧೬, ಬಿಡವಾ (ನಿರಗುಂಡಿ) (ಮುಂಬಪ್ಯಾ. ೧೨೨). **ನೀರ್ಗುಂಡಿ :** ನೀರ್ಗುಂಡಿ, ನೋಚ್ಚಿ, ನೀರ್ಲಕ್ಕಿ (ಮೈಬಿಗಿ. ೭೮–೧೬೧). 'ನಿರ್ಗುಂಡಿ$_1$' ಪರಾ. [?]

ನಿರ್ಗುಣ (ಗು). ೧. ಸೂತ್ರವಿಲ್ಲದ ; ಹೆದೆಯಿಲ್ಲದ. ೨. ಗುಣರಹಿತವಾದ; ಗುಣವಿಲ್ಲದ: 'ಸಃ ಆತ್ಮಾ ಸ ನಿತ್ಯಃ ಶುದ್ಧಃ ಕೇವಲೋ ನಿರ್ಗುಣಶ್ಚ' ಎಂಬ ಈ ವಾಕ್ಯದಲ್ಲಿ ನಿರ್ಗುಣ ಎಂದು ಹೇಳಲ್ಪಟ್ಟ ವಸ್ತುವಿನಲ್ಲಿಯೇ ಅತ್ಯತ್ವ, ನಿತ್ಯತ್ವ, ಶುದ್ಧತ್ವ, ಕೇವಲತ್ವ ಮುಂತಾದ ಗುಣಗಳು ಹೇಳಲ್ಪಟ್ಟಿರುವುವು (ಭಾತತ್ವ. ೫೨೦). (ನಾ). ೩. ಹೆದೆ ಇಲ್ಲದುದು. ೪. ಆಕಾರರಹಿತವಾದುದು : ದೈವೀಸಂಪತ್ತನ್ನು ವಶಪಡಿಸಿಕೊಳ್ಳಬಯಸುವ ಅಸ್ತಿಕನಿಗೆ ನಿರ್ಗುಣವಾದ ದೈವೀತೇಜಸ್ಸು ಸಗುಣರೂಪದಲ್ಲಿ ಮೂರ್ತೀಭವಿಸಿದಾಗ ಆಗುವ ಆನಂದ ಬ್ರಹ್ಮಾನಂದವೆನಿಸುವುದು (ಭಾರದ. ೪೦). ೫. ನಿಷ್ಠುರ ಸ್ವಭಾವದವನು ; ನಿಷ್ಕರುಣಿ : ಅನುರರುಮುಂ ನೋಡವನೇಂ ಜಡಂ ನಿರ್ಗುಣನೋ (ಪುಲ್ಲಪು. ೧೩–೧೧೮). ೬, ೫ : ಆ ಬಾಲಕರ್ ಬಾಲ್ಯದಿಂ ತೊಟ್ಟು . . . ಸುರಶರಾಸನದಂತೆ ನಿರ್ಗುಣರುಂ ತೀಕ್ಷ್ಣಕೌಕ್ಷೇಯದಂತೆ ನಿಸ್ತ್ರಿಂಶಭಾವರುಂ . . . ಎನಿಸಿ (ಸುಶುಪಾ. ೨–೫ ಸಿ). ೬. ಸತ್ವ, ರಜಸ್ಸು ಮತ್ತು ತಮಸ್ಸುಗಳೆಂಬ ಮೂರುಗುಣಗಳಿಗೆ ಅತೀತನಾದವನು; ಪರಮಾತ್ಮ : ಮುರಾಂತಕನಗಣಿತೋಪಮಮಹಿಮನಲಾ ಸಗುಣ ನಿರ್ಗುಣನಾ ಮಹಾತ್ಮನನಂತ ರೂಪವನು ಪಿಗಡಿಸಲು ಜಯಪಹುದೆ (ಕುವ್ಯಾಭೇ. ೧–೩೧) ; ಆ ಅಂತರ್ಯಾಮಿ ಮೊದಲಾದ ಈಶ್ವರತ್ರಯಕ್ಕೆ ಅಧಿಷ್ಠಾತೃ . . . ನಿರ್ಗುಣ

. . . ಎಂದಿವು ಮೊದಲಾದವೇ ಅಪ್ರೈತಬ್ರಹ್ಮಪರ್ಯಾಯನಾಮಂಗಳಕ್ಕುಂ (ವಿವೇಕ. ೨೭); ನಿತ್ಯನಿರಂಜನ ಪರಮಪಾವನ ನಿರ್ಗುಣ ನಿರಾವರಣ . . . ನಿಃಕಳಂಕ ಮಹಿಮಾನಂದಾರ್ಣವ ಕೃಪಾಮೃತೇಕ್ಷಣ ಪರಿಪಿವನುಂ (ಭೈರವೇ.೧). ೭. [ಯೋಗ] ಸಮಾಧಿಯಲ್ಲಿ ಒಂದು ವಿಧ; ನಿರಾಕಾರ ಬ್ರಹ್ಮೋಪಾಸನೆ; ನಿರ್ವಿಕಲ್ಪ ಸಮಾಧಿ; ☞ ಸಗುಣೋಪಾಸನೆಯಿಂದ ಸಾಲೋಕ್ಯ ಮೊದಲಾದ ಮುಕ್ತಿಗಳು ದೊರಕುತ್ತವೆಯೆಂದೂ ನಿರ್ಗುಣೋಪಾಸನೆಯಿಂದ ಶಾಶ್ವತ ಮುಕ್ತಿ ದೊರಕುವುದೆಂದೂ ಹೇಳಲಾಗಿದೆ : ಸಗುಣ ನಿರ್ಗುಣವೆಂದು ಯೋಗದ ಬಗೆಗಳಿರಡಾಗಿರ್ಪುವದಱೊಳು ಸಗುಣವೇ ಸಾಕಾರ ನಿರ್ಗುಣವೇ ನಿರಾಕಾರ . . . ನಿರ್ಗುಣದಿಂದಲಾ ಸಾಯುಜ್ಯವಹುದೆಂದ (ಅಮೃತ. ೬-೭೪). [ಸಂ.]

ನಿರ್ಗುಣತತ್ವ (ನಾ). ತ್ರಿಗುಣಗಳಿಗೆ ಅತೀತವಾದ ತತ್ತ್ವ; ಪರಮಾತ್ಮ: ಅಳಟೆ ನಿರ್ಗುಣತತ್ವವಿದೆ ನಾಟಕದ ಬಹುರೂಪಿನಲಿ ವಿಶ್ವಾತ್ಮಕ ಪರಾನಂದೈಕರಸವಿದೆ ಮನೆಯ ಕೇರಿಯಲಿ (ಅಮೃತ. ೯-೭೪). [ನಿರ್ಗುಣ + ತತ್ತ್ವ]

ನಿರ್ಗುಣತೆ (ನಾ). ಗುಣಹೀನತೆ : ಕೇವಲ ಆಡಿಯ ಕೆಳಗೆ ಇರುವುದರಿಂದಲೆ ಮೆಟ್ಟಿಗೆ ಈ ಮರ್ಯಾದೆ ಬಂದಿತೆ? ಹಾಗೆನ್ನಿಸುವುದಿಲ್ಲ. ಅದಕ್ಕೊಂದು ದುರ್ಗುಣವಿದೆ ಅಥವಾ ನಿಷ್ಕೃಷ್ಟವಾದ ನಿರ್ಗುಣತೆಯಿದೆ ಎನ್ನೋಣ (ದೇಕನ್ಯೆ. ೧೪೭). [ಸಂ. ನಿರ್ಗುಣತಾ]

ನಿರ್ಗುಣತ್ವ (ನಾ). ೧. ದಾರ ಇಲ್ಲದಿರುವಿಕೆ. ೨. ಗುಣಹೀನತೆ. ೧, ೨ : ನಿರ್ಗುಣತ್ವಂ ಬಿದುವೊಗಳೊಳ್ . . . ಪಂಕ್ತಿಭೇದಂ ಲಿಪಿಗಳೊಳ್ ಅಕ್ಕುಮಲ್ಲದೆ ಜನಪದದ ಜನಂಗಳೊಳಿಲ್ಲ (ಜಗವಿ. ೨-೧ ಪ). ೩. [ದ್ವೈತ] ಪರಮಾತ್ಮನು ಗುಣರಹಿತನೆಂದು ಹೇಳುವುದು,—ನೆಂಬುವುದು : ಜೀವಾಭೇದ, ನಿರ್ಗುಣತ್ವ, ಅಪೂರ್ಣಗುಣತ್ವ, ಇತರಸಾಮ್ಯ, ಇತರಾಧಿಕ್ಯ, ಬ್ರಹ್ಮನಾನಾತ್ವ, ಅವತಾರನಿಂದೆ, ಭಕ್ತನಿಂದೆ, ತತ್ತ್ವಮಾನನಿಂದೆ ಈ ಒಂಬತ್ತೂ ಹರಿದ್ವೇಷಗಳು (ಹಿಂದಸಾ.೨೯೩). [ಸಂ.]

ನಿರ್ಗುಣಬ್ರಹ್ಮ (ನಾ). ಶುದ್ಧಬ್ರಹ್ಮ; ಪರಮಾತ್ಮ: ಧಾರಿಸುತ್ತಿಹ ಪ್ರತ್ಯಗಾತ್ಮನ ಹೇಳುವರು ಸಚ್ಚಿತ್ಸುಖೈಕ ನಿರಾಳ ನಿರ್ಗುಣಬ್ರಹ್ಮವೆಂದದಬಲ್ಲ ಯೋಗಿಗಳು (ಅಮೃತ. ೩-೫೨); ನಿನ್ನ ನಿನ್ನದು ನಿನಗೆ ನೀನೆಲ್ಲ ಎನ್ನುವಿರೆ, –ನಿರ್ಗುಣಬ್ರಹ್ಮವೇ ನೀವು? (ದೀಪಸು. ೩೦-೪); "ಬ್ರಹ್ಮತತ್ತ್ವವು ಅಸತ್ಯವಲ್ಲ, ಜಡವಲ್ಲ, ಅವಧಿಯುಳ್ಳದಲ್ಲ (ಸತ್ಯಂ ಜ್ಞಾನಮನಂತಂ ಬ್ರಹ್ಮ)" ಎಂಬ ವಾಕ್ಯವು ನಿರ್ಗುಣಬ್ರಹ್ಮಸ್ವರೂಪವನ್ನು ತಿಳಿಸುವುದು (ಘಾತತ್ವ. ೭೫). [ನಿರ್ಗುಣ + ಬ್ರಹ್ಮ]

ನಿರ್ಗುಣಬ್ರಹ್ಮವಾದಿ (ನಾ). ನಿರ್ಗುಣಬ್ರಹ್ಮತತ್ತ್ವವನ್ನು ಪ್ರತಿಪಾದಿಸುವವನು : ಬ್ರಹ್ಮವಾದಿಗಳಾದ ವೇದಾಂತಿಗಳಲ್ಲಿ ಕೆಲವರು ನಿಷ್ಕಪಂಚಬ್ರಹ್ಮವಾದಿಗಳು . . . ಕೆಲವರು ನಿರ್ಗುಣಬ್ರಹ್ಮವಾದಿಗಳು (ಭಾರದ. ೧೩೧). [ಸಂ. ನಿರ್ಗುಣಬ್ರಹ್ಮವಾದಿನ್]

ನಿರ್ಗುಣಬ್ರಹ್ಮವಿದ್ಯೆ (ನಾ). ಶುದ್ಧಬ್ರಹ್ಮನನ್ನು ತಿಳಿಸುವ ವಿದ್ಯೆ: ವಿಶುದ್ಧಾದ್ವೈತ ಸಂಪ್ರದಾಯದವರು ಶೂದ್ರರಿಗೆ ನಿರ್ಗುಣ ಬ್ರಹ್ಮವಿದ್ಯೆಯಲ್ಲಿ ಅಧಿಕಾರವನ್ನೂ ಅನುಗ್ರಹಿಸಿರುವರು (ಹಿಂದಸಾ. ೧೬೧). [ಸಂ. ನಿರ್ಗುಣಬ್ರಹ್ಮವಿದ್ಯಾ]

ನಿರ್ಗುಣಭಕ್ತ (ನಾ). ನಿರಾಕಾರನೂ ಗುಣಾತೀತನೂ ಆದ ಪರಮಾತ್ಮನಲ್ಲಿ ಇರುವ ಭಕ್ತ,—ನಿಷ್ಠೆ : ಕಬೀರರು ಹಿಂದೂ ಮಹಮ್ಮದೀಯರಿಬ್ಬರಿಗೂ ಪ್ರಿಯವಾಗುವಂತೆ ನಿರ್ಗುಣಭಕ್ತಿಯ ಕಬೀರಪಂಥವನ್ನೇ ನಿರ್ಮಿಸಿದರು (ಕರ್ನಾಕ. ೩೯). [ನಿರ್ಗುಣ + ಭಕ್ತಿ]

ನಿರ್ಗುಣವಾಯು (ನಾ). [ವಿಜ್ಞಾ] ಬಣ್ಣ, ರುಚಿ ಮತ್ತು ವಾಸನೆಗಳಿಲ್ಲದ ಒಂದು ಅನಿಲ; ಸಾರಜನಕ; ನೈಟ್ರೋಜನ್: ಈ ವಾತಾವರಣವು ಎರಡು ವಾಯುರೂಪವದಾರ್ಥಗಳಿಂದ ಆಗಿರುತ್ತದೆ. ಅವುಗಳಿಗೆ "ನೈಟ್ರೋಜನ" (ನಿರ್ಗುಣವಾಯು)ವೆಂತಲೂ "ಆಕ್ಸಿಜನ" ವೆಂತಲೂ ಹೆಸರುಗಳುಂಟು (ಸುಬೋಧ. ೫-೭೪). [ನಿರ್ಗುಣ + ವಾಯು]

ನಿರ್ಗುಣಶ್ರುತಿ (ನಾ). [ವೇದಾಂತ] ಪರಮಾತ್ಮನು ಗುಣಾತೀತನೆಂದು ಹೇಳುವ ಶ್ರುತಿ: ಎಂಟನೆಯದಾದ ನಿರ್ಗುಣಶ್ರುತಿ ನಾರಾಯಣನಲ್ಲಿ ಸಗುಣಶ್ರುತಿಯಿಂದ ವಿಧಿಸಲ್ಪಟ್ಟ ಕಲ್ಯಾಣಗುಣಗಳಿಗೆ ವಿರುದ್ಧವಾದ ಸತ್ವರಜಸ್ತಮಸ್ಸೆಂಬ ಹೇಯಗುಣಗಳು ಯಾವಾಗಲೂ ಅವಕಾಶವನ್ನು ಪಡೆಯಲಾರವೆಂದೂ ಬೋಧಿಸುವುದರ ಮೂಲಕ ಕಲ್ಯಾಣಗುಣಗಳಿಗೆ ಹೇಯಗುಣಗಳ ಸಂಬಂಧದಿಂದುಂಟಾದ ಕೊರತೆಯಿರಬಹುದೆಂಬ ಶಂಕೆಯನ್ನು ಹೋಗಲಾಡಿಸಿ ಕಲ್ಯಾಣಗುಣಗಳ ಸರ್ವೋತ್ಕರ್ಷವನ್ನು ತೋರಿಸುವುದಕ್ಕೋಸ್ಕರ ಹೊರಟಿರುವುದು (ತತ್ತ್ವಪ್ರ. ೧). [ನಿರ್ಗುಣ + ಶ್ರುತಿ]

ನಿರ್ಗುಣಾರಾಧನೆ (ನಾ). ನಿರ್ಗುಣನಾದ ಪರಮಾತ್ಮನನ್ನು ಆರಾಧಿಸುವಿಕೆ: ಭವರಹಿತಯೋಗಿಗಳ ಭರಿತೆಯು ಸುವಿಮಲಾತ್ಮಕ ನಿರ್ಗುಣಾರಾಧನೆಯು ನಿರ್ಣಯವ. . . ಅಜುಯಲು ಬೇಕು ಮೊದಲಲಿ (ಅಮೃತ. ೧-೧೭). 'ಸಗುಣಾರಾಧನೆ' ಪರಾ. [ನಿರ್ಗುಣ + ಆರಾಧನೆ]

ನಿರ್ಗುಣಾಷ್ಟಾಂಗ (ನಾ). [ವೇದಾಂತ] ಬ್ರಹ್ಮಜ್ಞಾನವನ್ನು ಪಡೆಯಲು ಸಾಧಕವಾದ ಎಂಟು ಅಂಗಗಳು; ಯಮ ನಿಯಮಾದಿ ಯೋಗದ ಎಂಟು ಅಂಗಗಳು : ನಿರ್ಗುಣಾಷ್ಟಾಂಗವನು ಸಾಧಿಸುವಗ್ಗಳಿಕೆಯುಳ್ಳವರಿಗಾಮಗ ಭರ್ಗನಲ್ಲಿಯೆ ಭಕ್ತಿಭಾವವ ಮಾಳ್ಪ ಸುಜನರಿಗೆ . . . ಉಸುರೀ ಅನುಭವಾಮೃತವ (ಅಮೃತ. ೬-೩). 'ಅಷ್ಟಾಂಗಯೋಗ' ಪರಾ. [ನಿರ್ಗುಣ + ಅಷ್ಟಾಂಗ]

ನಿರ್ಗುಣಿ (ನಾ). ೧. ಒಳ್ಳೆಯ ಗುಣವಿಲ್ಲದ ವ್ಯಕ್ತಿ; ನೀಚವ್ಯಕ್ತಿ: ಗುಣಮಂ ಕಿನಿಸುವೊಡಜು ನಿರ್ಗುಣಯಂ ನೀನನ್ಯಚಿತ್ತದವಳಿಂದವಳಂ (ಪುಪಚ. ೧೧-೪೦). ೨. ಗುಣಾತೀತನಾದವನು; ಗುಣರಹಿತ; ಪರಮಾತ್ಮ: ಓವಿ ನಿರ್ಗುಣಯಾಗಿ ಸಗುಣವನೀವನಂ ಪ್ರಣವಾತ್ಮನಾಗಿ ಸದಾವಯವದಿಂದೊಂದಿದವನಂ ಕಂಡು (ಚಸಪು. ೬-೧೩). [ಸಂ. ನಿರ್ಗುಣಿನ್]

ನಿರ್ಗುಣೋಪಾಸಕ (ನಾ). ಗುಣಾತೀತನಾದ ಪರಮಾತ್ಮನನ್ನು ಆರಾಧಿಸುವವನು : ಭಕ್ತಿಯುಗದಲ್ಲಿ ಎರಡು ವಿಧವಾದ ಕವಿಗಳು ನಮಗೆ ಕಾಣಬರುತ್ತಾರೆ. ಮೊದಲನೆಯವರು ನಿರ್ಗುಣೋಪಾಸಕರು (ಭಾರದ. ೪೫೮). [ನಿರ್ಗುಣ + ಉಪಾಸಕ]

ನಿರ್ಗುಣೋಪಾಸನೆ (ನಾ). = ನಿರ್ಗುಣಾರಾಧನೆ : ಹೈಪುವತಿಸುತ ಕೇಳು ಸಾಮರಸ್ಯದಿ ಸಗುಣೋಪಾಸನಧಾಮವನು ತರುವಾಯ ನಿರ್ಗುಣೋಪಾಸನವನೆಂದ (ಜ್ಞಾಸಸಾ. ೨೦-೧೬). [ಸಂ.]

ನಿರ್ಗುಣೋಪಾಸನೆ (ನಾ). = ನಿರ್ಗುಣಾರಾಧನೆ : ಅದರ ಅಂಗವಾಗಿ ನಡೆಯುವ ಹೋಮ, ಹವನ . . . ನಿರ್ಗುಣೋಪಾಸನೆಯ ಕಡೆಗೆ ಮನಸ್ಸನ್ನು ಸ್ಥಿಮಿತಗೊಳಿಸಲು ಸಹಾಯಕಗಳಾದವು (ಭಾರದ.೪೧೧). [ಸಂ. ನಿರ್ಗುಣೋಪಾಸನ]

ನಿರ್ಗೇಡಿ, ನಿಗ್ಗಡಿ, ನಿಗ್ಗೆಡಿ, ನಿರ್ಗಡಿ (ನಾ). ಅವಿವೇಕಿ: ಮತ್ತೊರ್ವನಗಡಿನ ಪೆಂಡಿರೊಳ್ ವ್ಯವಹಾರಮಲ್ಲದೆ ,ಬೇಟಮಿಲ್ಲೆಂದ ನಿರ್ಗೇಡಿಬೊಜಗಂಗೆ ಸೊಬಗುಬೊಜಂಗನಿಂತೆಂದಂ (ಲೀಲಾವ. ೨-೯೩ ಪ).

ನಿಗ್ಗಡಿ : ಮೃಡನಿಂ ತನ್ನಯ ತಲೆಯಂ ಕಡಿಪಡೆದಂ ಮರೆಯ ರೂಪಿನಿಂ ತನುಜೆಗೆ ಸೋಲ್ತೊಡವರ್ದಂ ನಾಣಿಲಿ ನಿಗ್ಗಡಿ [ಪಾತಾಂ. ಗುರ್ಣಿ] ನಿಜ ದಿನಪೂಜ್ಯನಾಪ್ತನೆನಲಾಗಱಿವಂ (ಸಸುಪ. ೮-೧೬೧) ; ದುರ್ಮ್ಮಾರ್ಗ್ಗಮಂ ಗೆಡೆಗೊಂಡಾಚರಣಂ ಗಡಂ ತಮಗೆನಲ್ ಚೀಯಂಬಿನಂ ಬಾಳ್ದ ನಿಗ್ಗಡಿಗಳ್ ಮತ್ತಿನ ಭೂಭುಜರ್ದ್ದೊರೆಯೆ ಪೇಳ್ ಬಲ್ಲಾಳಭೂಪಾಳನೊಳ್ (ಎಕ. V, ಪಾಸನ. ೭೧-೨೧ ; 1173 ?) ; ಪಿಂತೆ ಬಾಳ್ವ ನಿಗ್ಗಡಿ ಸಚಿವರ್ಕ್ಕಳಂ ನಗುವವೋಲೆಸೆದಿರ್ಪ್ಪುದು ವೀರಶಾಸನಂ (ಎಕ. V, ಬೇಲೂರು. ೧೧೨-೧೦೧ ; ಸು. 1220). **ನಿಗ್ಗೆಡಿ** : ಸುಡು ಪೊಲ್ಲಳನೆನ್ನದೆ ತನ್ನೊಡಮೆಯ ಕೇಡಿಂಗಮವಳ ಪೋಗಿಂಗಂ ನಿಗ್ಗೆಡಿ [ಪಾತಾಂ. ಗ್ರಡಿ, ಗ್ರಡೆ, ಳ್ದಡಿ] ಬೆನ್ನೊಳಱಸಿ ಪೋದಂ ಕಡುಮೋಹಿತರಾರುಮುಚಿತಮಂ ನೆನೆದಪರೇ (ಪಂರಾಮಾ. ೬-೩೫). **ನಿರ್ಗಡಿ** : ಮೇಲಿನ 'ಪಂರಾಮಾ' ಪ್ರಯೋಗದ ಪಾಠಾಂತರವನ್ನು ನೋಡಿ. [ನಿರ್- + ಕೇಡಿ$_1$]

ನಿರ್ಗೋತ್ರ (ನಾ). ೧. ದೇಶ ಅಥವಾ ರಾಜ್ಯವನ್ನು ಕಳೆದುಕೊಂಡವನು. ೨. ಬಳಗ ಮತ್ತು ಮಕ್ಕಳನ್ನು ಬಿಟ್ಟವನು. ೧, ೨ : ನಿಶಾಂತವಿರಕ್ತನಪ್ಪ ನಿರ್ಗೋತ್ರನೆನಿಪ್ಪ ಸತ್ಕುವಳಯೋದ್ಗತ ಲಕ್ಷ್ಮಿಯನೊಕ್ಕು ಪೋಗಲಿರ್ಪತ್ರಿಜನಂದು ಕನ್ನಡಿಸಿದಂ ಸುವಿಧೀಶನ ಚಿತ್ತವೃತ್ತಿಯಂ (ಪುಷ್ಪಪು. ೧೩-೫೯). [ಸಂ.]

ನಿರ್ಗ್ರಂಥ (ನಾ). ೧. ಬತ್ತಲೆ; ನಗ್ನತೆ : ಕುಟಿಲಾನೀಲಾಳಕಂಗಳ್ ನಿಮಿರ್ದಿರೆ . . . ವಿಟವೃತ್ತಂ ಮೆಯ್ಯೊಳೆತ್ತಂ ಪಸರಿಸಿರೆ ವಿಟಂ ಬೀಸೆ ನಿಂದಿರ್ದಳೊರ್ವಳ್ ಸ್ಫುಟತೋರೋಮಧ್ಯೆ ಭಿನ್ನಾವಟುತಟವಿಹಟದ್ಗ್ರಂಥಿ ನಿರ್ಗ್ರಂಥದಿಂದಂ (ಕಾಸ್ಯಾಮ. ೮೦೨). ೨. ಕಟ್ಟುಗಳನ್ನು ಕಳಚಿಕೊಂಡವನು ; ಸಂಸಾರಬಂಧನದಿಂದ ಹೊರತಾದವನು : ನಿರ್ಗ್ರಂಥರೆಂದರೆ ಯಾವ ತೊಡಕೂ ಇಲ್ಲದವರು (ಭಾರದ. ೧೮೫). ೩. ಜೈನ ಅಥವಾ ಬೌದ್ಧ ಮುನಿ: "ನಗ್ನಾಟಃ . . . ಮಲಧಾರೀ, ನಿರ್ಗ್ರಂಥಃ, ಸಾಧುಃ – ಈ ೧೦ ಸವಣರ ಪೆಸರ್" (ಹಲಾಯು. ೫೬-೧೮೯) ; ನೀಮರ್ಧಗಪ್ಪಡಮಂ ಬಿಸುಟ್ಟು ನಿರ್ಗ್ರಂಥಮಪ್ಪ ರಿಸಿರೂಪಂ ಕೈಕೊಂಡು ಬಱಿಯೆ ತಪಂಗೆಯ್ವುದು (ವಡ್ಡಾರಾ. ೯೩-೧೩); ನಿರ್ಗ್ರಂಥಂ ಸಮಂತದಂ ನೆಱೆ ತಾಳ್ದಿರ್ಪುದು ದಿವ್ಯಮಪ್ಪ ತಪಮಂ (ಧರ್ಮಾಸ್ಯು. ೯-೭೩); ಇಲ್ಲಿ ನಿರ್ಗ್ರಂಥರು ಬಿದ್ದರು (ಬುದ್ಧಪ. ೧೩೧); ಆಗಿನ ಅನೇಕ ಪ್ರವ್ರಜಿತರಲ್ಲಿ ನಿರ್ಗ್ರಂಥರಿಗೆ ವಿಶೇಷಸ್ಥಾನ ಕೊಡುವುದನ್ನು ಪಿಟಕಗಳಲ್ಲಿಯೂ ಕಾಣಬಹುದು (ತೀರ್ಥಕ. ೨೮). ೪. ಜೈನರಲ್ಲಿ ಒಂದು ಪಂಗಡ: ಈ ಕಾಲದಲ್ಲಿ ಜೈನರಲ್ಲಿ ಯಾಪನೀಯ, ನಿರ್ಗ್ರಂಥ, ಕೂರ್ಚಕ, ಶ್ವೇತಪಟ, ಆಹರಿಷ್ಟಿ ಸಂಘಗಳೆಂಬ ಪಂಗಡಗಳಿದ್ದುವು (ಕರ್ಣಾಅ. ೪೦); ಮುನಿಗಳಲ್ಲಿ ಪುಲಾಕ, ಬಕುಶ, ಕುಶೀಲ, ನಿರ್ಗ್ರಂಥ, ಸ್ನಾತಕ ಎಂದು ಐದು ಪ್ರಕಾರಗಳು (ಜೈನಧ. ೮೯). ೫. ನಿರ್ಮಲವಾದುದು; ದೋಷರಹಿತವಾದುದು : ನೆಲಂ ನಿರ್ಗ್ರಂಥಮಾದೊಡೆ ಬಿತ್ತುವಂಗೆ ರಾಗಂ ಗಗನಂ ನಿರ್ಗ್ರಂಥಮಾದೊಡೆ ಮದುವೆಗುತ್ಸವಂ ನೀರ್ ನಿರ್ಗ್ರಂಥಮಾದೊಡೆ ಕುತ್ತದ ಕೇಡು ಕಿರ್ಚು ನಿರ್ಗ್ರಂಥಮಾದೊಡೆ ಆಡುಗೆಯ ಕಾರ್ಯಂ ಅಕ್ಕಿ ನಿರ್ಗ್ರಂಥಮಾದೊಡೂಟದ ರುಚಿಪಾಲ್ ನಿರ್ಗ್ರಂಥಮಾದೊಡಳೆಯ ಸವಿ . . . ಅಂತೆ ಜಿನೇಶ್ವರನ ತಪದ ನಿರ್ಗ್ರಂಥದಿಂದಮೆ ಲೋಕದ ಕಾರ್ಯಂಗಳೆಲ್ಲಂ ಸಿದ್ಧಿಯಕ್ಕು (ಧರ್ಮಾಸ್ಯು. ೯-೭೪). [ಸಂ.]

ನಿರ್ಗ್ರಂಥತ್ವ (ನಾ). ದಿಗಂಬರತೆ ; ಬತ್ತಲಾಗಿರುವಿಕೆ : ಜಯಂಧರಯೋಗಿ ನಿರ್ಗ್ರಂಥತ್ವದಲಿ ನೆಗಳಿ ಕೇವಲಿಯು ತಾನಾಗಿ ನಿಜತತ್ವಾವಿಚಾರವ ತಾಳಿ ಪ್ರತಿಮಾಭಾವನೆಯ ಯೋಗೀಂದ್ರನಾದನು (ನಾಗಷ. ೩೦-೧೮). [ಸಂ.]

ನಿರ್ಗ್ರಂಥಧರ್ಮ (ನಾ). ಜೈನಧರ್ಮ : ಈಗ ಜೈನಧರ್ಮವೆಂದು ಯಾವ ಆಚಾರ-ವಿಚಾರಗಳಿಗೆ ತಿಳಿಯಲಾಗುತ್ತಿದೆಯೊ ಅದಕ್ಕೆ ಭಗವಾನ್ ಪಾರ್ಶ್ವನಾಥ ಹಾಗೂ ಮಹಾವೀರರ ಕಾಲಗಳಲ್ಲಿ 'ನಿಗ್ಗಂಥಧಮ್ಮ' ಅಂದರೆ 'ನಿರ್ಗ್ರಂಥಧರ್ಮ' ಎಂದು ಕರೆಯಲಾಗುತ್ತಿದ್ದಿತು(ಜೈನಪ. ೩).

[ನಿರ್ಗ್ರಂಥ + ಧರ್ಮ]

ನಿರ್ಗ್ರಂಥನ (ನಾ). ಕೊಲೆ ; ಹಿಂಸೆ ; ಪೀಡನೆ : "ಮಾರಣಂ, ನಿಶರಣಂ . . . ನಿರ್ಗ್ರಂಥನಂ, ಆಳಂಭಃ, ಪ್ರಮಯಾ, ಹಿಂಸಾ, ಸಂಜ್ಞಪನಂ—ಈ ೨೧ ಕೊಲೆ" (ಹಲಾಯು. ೭೮-೩೨೩). [ಸಂ.]

ನಿರ್ಗ್ರಂಥಯತಿ (ನಾ). ಜೈನಸಂನ್ಯಾಸಿ ; ಸವಣ : ಮತ್ತೊಂದು ದಿವಸಮೊರ್ವ ನಿರ್ಗ್ರಂಥಯತಿ ಭೈಕ್ಷಭಾಜನಮಂ ಕೊಂಡು . . . ಭೈಕ್ಷಂ ಬೇಡಿ (ವಡ್ಡಾರಾ. ೯೨-೯). [ನಿರ್ಗ್ರಂಥ + ಯತಿ]

ನಿರ್ಗ್ರಂಥರೂಪ (ನಾ). ದಿಗಂಬರ ರೂಪ : ನಿಜತನೂಭವರಯ್ಯಾ ಸಿರ್ವರ್ ಪದಿನಾಱುಸಾಸಿರ್ವರ್ ಮಕುಟಬದ್ಧರ್ . . . ಬೆರಸಾಗಳ್ ವಜ್ರನಾಭಿ ನಿಜದ ರೂಪಮಂ ನಿರ್ಗ್ರಂಥರೂಪಮಂ ಕಯ್ಕೊಂಡು ನೆಗೞ್ದ ನಿಂತೀ ಮಾೞ್ಕೆಯಿಂ (ಆದಿಪು. ೬-೨೭); ಸುಭದ್ರಸೂರಿಸನ್ನಿಧಾನದೊಳ್ ನಿರ್ಗ್ರಂಥರೂಪಮಂ ತಾಳಿ (ಶಾಂತಿಪು. ೯-೧೧ ಪ). [ನಿರ್ಗ್ರಂಥ + ರೂಪ]

ನಿರ್ಗ್ರಂಥರೂಪು (ನಾ). = ನಿರ್ಗ್ರಂಥರೂಪ : ವಜ್ರನಾಭಿ ನಿಜದ ರೂಪುಮಂ ನಿರ್ಗ್ರಂಥರೂಪು[ಪಾತಾಂ. ಪ]ಮಂ ಕೈಕೊಂಡು (ಆದಿಪು. ೬-೨೭). [ನಿರ್ಗ್ರಂಥ + ರೂಪು]

ನಿರ್ಗ್ರಂಥಸಾಧು (ನಾ). = ನಿರ್ಗ್ರಂಥಯತಿ : ಎಲ್ಲ ಪ್ರಕಾರದ ವಸ್ತ್ರಗಳನ್ನು ತ್ಯಜಿಸಿದವನೇ ನಿರ್ಗ್ರಂಥಸಾಧುವೆನಿಸುತ್ತಾನೆ (ಜೈನಪ. ೪೮೦).

[ನಿರ್ಗ್ರಂಥ + ಸಾಧು$_2$]

ನಿರ್ಗ್ರಂಥಾಚಾರ್ಯ (ನಾ). ಜೈನರ ಗುರು : ನಿರ್ಗ್ರಂಥಾಚಾರ್ಯರಪ್ಪ ಮದೀಯ ಗುರುಗಳ್ ಬರೆದರ್ (ತತ್ತ್ವಪ್ರ. ೨).

[ನಿರ್ಗ್ರಂಥ + ಆಚಾರ್ಯ]

ನಿರ್ಗ್ರಂಥಾವಸ್ಥೆ (ನಾ). ದಿಗಂಬರತ್ವದ ಸ್ಥಿತಿ : ಈತನ ನಿಷ್ಠೆಯನ್ನು ಕಂಡ ಗುರುವು ಈ ಕೌಪೀನಪರಿಗ್ರಹವನ್ನೂ ತೊರೆಯಿಸಿ ದಿಗಂಬರದೀಕ್ಷೆಯನ್ನು ಕೊಡುತ್ತಾನೆ. ಸಾಧುವಿನ ಈ ಅವಸ್ಥೆಗೆ ನಿರ್ಗ್ರಂಥಾವಸ್ಥೆಯೆಂದು ಹೆಸರು (ಭಾರದ. ೧೮೫).

[ನಿರ್ಗ್ರಂಥ + ಅವಸ್ಥೆ]

ನಿರ್ಗ್ರಂಥೆ (ನಾ). ಬತ್ತಲೆಯಾದವಳು ; ನಗ್ನೆ : ಅವಳ ಕೈಯೊಳಿರ್ದ ಧನಮನಾಭರಣಂಗಳನಾ ಪುಷ್ಕಳೆಯುಟ್ಟಿರ್ದ ಮುತ್ತಿನ ಸೆಱಗಿನ ಪಟ್ಟೆಯದೆಱಕದ ಚೀನಾಂಬರದ ಸೀರೆಯೊಳ್ ಪೊಱೆಯಂ ಕಟ್ಟ ನಿರ್ಗಂಥೆ [ರ್ಗ್ರಂಥೆ] ಯಾಗಿರ್ದವಳಂ ನೀರೊಳ್ ಕುಳ್ಳಿರಿಸಿ . . . ಆ ಶೌಂಡಿಕಂ ಹೊಳೆಯಂ ಹಾಯ್ದು . . . ಪೋಗುತ್ತಿರೆ (ನನ್ನಚಾ. ೩-೧೧೩ ಪ) ; ಪೋಗೆಂದು ಪೋದನವನತಿಬೇಗದೊಳಂ ಶೌಂಡನತ್ತ ಪುಷ್ಕಳೆ ಜಲಮಿಂಬಾಗಿ ನಿರ್ಗಂಥೆ [ರ್ಗ್ರಂಥೆ] ಯಾಗಿರ್ದಾ ಗಾದೆಯಾದುದೀಗ ಭಾವಕಿನಿನಗಂ (ನನ್ನಚಾ. ೩-೧೧೭ ಪ). [ನಿರ್ಗ್ರಂಥ + -ಎ$_2$]

ನಿರ್ಘಾತ (ನಾ). ೧. ಬಿರುಗಾಳಿ; ಝಂಝಾವಾತ. ೨. ಭೂಮಿಯ ಅದಿರುವಿಕೆ ; ಭೂಕಂಪ : ನಡುಗಿತಿಳೆ ನಿರ್ಘಾತದಲಿ ಬಱಸಿಡಿಲು ಸುಳಿದುದು . . . ಕೌರವೇಂದ್ರನ ಪತನಕಾಲದಲಿ (ಕುಸ್ಯಾಗ. ೮-೩). ೩. ಸಿಡಿಲು : ಕಾಲಾಂತಪವನಹತಕಲ್ಲೋಲಾವಿಲಜಲಧಿನಿನದಮೋ ನಿರ್ಘಾತಾಭೀಳಖರರುದಿತಮೋ ಲಯಕಾಲಾಂಬುದಘೋಷಮೋ ನೆಲಂ ಮೊಱಗಿದುದೋ (ಆದಿಪು. ೧೨-೬೭); ಇದು ನಿರ್ಘಾತಮೊ ಮೇಣ್ ನೆಲಂ ಮೊಱಗಿತೋ (ಪಂಚತಂ. ೨೬-೫). ೪. ಬಿರುಸಿನ ಹೊಡೆತ; ಬಲವಾದ ಪೆಟ್ಟು; ಜೋರಾದ ಏಟು: ಪ್ರಳಯಕಾಲ ಜಾತೋತ್ಪಾತ

ವಾತನಿರ್ಘಾತದಿಂದಮುಳ್ಳಾಡಿ ತಳ್ಳಂಕಂಗುಟ್ಟುವ ಜಲನಿಧಿಗಳಂತೆ ಮೇರೆ ದಪ್ಪಲ್ ಬಗೆವುಭಯಸೈನ್ಯಂಗಳಂ ಕಂಡು (ಪಂಪಭಾ.೧೦-೬೫ ಪ); ಅಶ್ರಮ ದೊಳಲ್ಲಿಂದೊಳಗೊಗೆದ ನಿರ್ಘಾತತರ್ಜಿತವೇದಸ್ವಾದಮಂ ಮುಟ್ಟಲೀಯದೆ ಸೇನಾಪತಿರತ್ನಂ ತುರಂಗರತ್ನಮನವಯವದೊಳಿನಿಸಾನುಂ ಕಣ್ಕೆತ್ತಿದಂತೆ (ಶಾಂತಿಪು. ೧೧-೪೧ ಪ); ಆ ತೆಲುಗಬೊಮ್ಮಯ್ಯನ ಶರನಿರ್ಘಾತ ಪಾತಕೆ ತೊಡರ್ದು ಮಡಿಯಲು (ಬಸಪು. ೩೪-೨೫). ೫. ಉತ್ಪಾತ. ೬. ಖಡ್ಗಯುದ್ಧದ ಒಂದು ಪಟ್ಟು,—ವರಸೆ: ಆಗಳೆರ್ಮಲದ ಕಡಿತಲೆ ಕಾಜರಲಗಲಗಿನೊಳ್ ಪಳಂಚೆ ತಾಗಿ ನಿರ್ಘಾತವುಪ್ಪರಂ ತಾಳಪಟ್ಟ ಮನಿತ ಮುಟಿತಮೆಂಬ ಪಲವುಂ ತೆಜಿಡಿಱಿವ ಬಿನ್ನಣದೊಳ್ ನೆಜೀದು ತಾಳುಂತಟ್ಟುಂ ಪೊಯ್ಕೆ (ಪಂರಾಮಾ. ೧೩-೫೪ ಪ). [ಸಂ.]

ನಿರ್ಘಾತನ (ನಾ). ಹೊಡೆತ ; ಪೆಟ್ಟು : 'ನಿರ್ಘಾತನಂಗೆಯ್' ಪರಾ. [ಸಂ.]

ನಿರ್ಘಾತನಂಗೆಯ್ (ಕ್ರಿ). ಹೊಡೆ ; ಬಡಿ : ಕಡುಕೈದು ದುರ್ಗಿ ನಿರ್ಘಾತನಂಗೆಯ್ಯೆ ಕೋಡುಂದಿದ ಮಹಿಷಾಸುರನೊ ಎಂದೆಂಬ ಸಂದೇಹ ಕೆಡೆಯಾದ ಸೊಕ್ಕಿದಕ್ಕಳನನೊಂದಂ ಕಂಡೆನರಸ (ಹಚಕಾ. ೬-೨೦).

[ನಿರ್ಘಾತನ + ಕೆಯ್$_1$]

ನಿರ್ಘಾತವಾತ (ನಾ). ಪ್ರಬಲವಾದ ಬಿರುಗಾಳಿ : ಪರವಾಜಾಳ ನೃಪಾಳಜಾಳಕುಳನಾಶೋತ್ಪಾತನಿರ್ಘಾತವಾತರವಂ ವಿಕ್ರಮನಾಟಕಾಭಿನಯನಾಂದೀಮಂಗಳಾತೋದ್ಯಹೃದ್ಯರವಂ ತಾನೆನೆ ಘೂರ್ಣಿಸಿತ್ತು . . . ಭೇರೀರವಂ (ಪುಷ್ಪಪು. ೫-೬). [ನಿರ್ಘಾತ + ವಾತ]

ನಿರ್ಘಾತಾಪಾತ (ನಾ). ಸಿಡಿಲು ಬೀಳುವಿಕೆ; ಸಿಡಿಲಿನ ಹೊಡೆತ: ಇಂದಿಂಗೇಱುದಿವಸದಂದಿಗೆ ಪೌದನಪುರಾಧೀಶಮಸ್ತಕದೊಳ್ ನಿರ್ಘಾತಾಪಾತಮಕ್ಕುಮೆಂದಾದೇಶಂಗೆಯ್ವುದುಂ (ಶಾಂತಿಪು. ೬-೨೪ ಪ).

[ನಿರ್ಘಾತ + ಆಪಾತ]

ನಿರ್ಘಾತಿಸು(ಕ್ರಿ). ಬಲವಾಗಿ ಹೊಡೆ: ಜೋರಾಗಿ ಪೆಟ್ಟು ಕೊಡು: ನಿಮ್ಮವನಾದಡೆ ಮಾತನಾದಡೆ ಹಗೆಯಪೊಲು ನಿರ್ಘಾತಿಸುವನೇ (ನಿಭಾಗ. ೬-೨-೨೬). [ನಿರ್ಘಾತ + -ಇಸು$_3$]

ನಿರ್ಘೃಣ (ನಾ). ೧. ಕ್ರೂರವಾದುದು : ನಡುವೆ ಕಬ್ಬಿಣದ ಸಲಾಕೆಗಳು ನಿರ್ಘೃಣವಾಗಿ ನಿಂತಿದ್ದರೂ . ಅವಳು ನರಹರಿಯನ್ನು ಕಣ್ತುಂಬ ನೋಡಿ ಹಿಗ್ಗಿದಳು (ಸನುಜೀ. ೬೬೧). ೨. ಕರುಣೆಯಿಲ್ಲದವನು ; ದಯಾಹೀನ ; ಕ್ರೂರ : ಜೀವಡೆಗಳ ಪುಣ್ಗಳಿಂ ತೊರೆವ ನೆತ್ತರ ಕೆಯ್ಯಡುಗಲ್ಲೆ ನೀಡಿ ಕೀಳಿಡೆಯಿಡೆ ಗಂಟಲಂ ಮುಱಿದನೊರ್ಮೆಯೆ ನಿರ್ಘೃಣನೆನ್ನಯ ತಂದೆಯಂ (ಕಾದಂಪೂ. ೧೮೩); ಪಾಪಿ ಕೈವಲ್ಯಲಕ್ಷ್ಮಿಯಂ ಬಿಡುವಂತಿರೆ, ನಿರ್ಘೃಣನಾಂ ಭಾಗ್ಯಲಕ್ಷ್ಮಿಯಂ ಬಿಡುವೆಂ (ರಾಮಾಶ್ವ. ೨೬-೧೪) ; ಶಾಸ್ತ್ರಿ ಇಷ್ಟು ನಿರ್ಘೃಣನಾಗಬಹುದೆಂದು ಸುಬ್ಬ ಒಂದು ಕ್ಷಣವೂ ಯೋಚಿಸಿರಲಿಲ್ಲ (ಅನಾಥೆ. ೨೬೬). [ಸಂ.]

ನಿರ್ಘೃಣಾತ್ಮಕ (ನಾ). ದಯವಿಲ್ಲದವನು ; ನಿಷ್ಕರುಣಿ : ಪುತ್ರನನು . . . ನಿರ್ಘೃಣಾತ್ಮಕರಾಗಿ ಹೊಡೆವಂದದೆಂತವರ ತೋಳು ಬೀಳದೆ ನಿಂದುವು ? (ಭಾಸನಾ. ೬೬). [ಸಂ.]

ನಿರ್ಘೋಷ (ನಾ). ಏರುದನಿ ; ದೊಡ್ಡಧ್ವನಿ ; ಜೋರಾದ ಧ್ವನಿ : ವಿಬುಧವಂದಿವ್ರಾತಮಾಂಗಲ್ಯಸಾಧರವಂ ಭೋಂಕನೆ ಕೇಳಲಾಯ್ತು ಗೆಲವಂದಂಭೋಧಿನಿರ್ಘೋಷಮುಂ (ಜಗವಿ. ೧-೪೬); ನೇವುರದದನಿ ದಟ್ಟಿಸಿತು ವೇದಾವಳಿಯ ನಿರ್ಘೋಷವನು ನಾನಾವಿಭೂಷಣಕಾಂತಿ ಕೆಣಕಿತು ಮುನಿಸಮಾಧಿಗಳ(ಕುಮ್ಯಾಅ.೧೮-೬); ನೀರುಬ್ಬುಗಳ ನಿರ್ಘೋಷ ದಬ್ಬರದ ಬಿಱುಬು ತೆರೆಗಳ . . . ತೂಳುವ ಭೇನಸಿಂಡದ ಗುಱುಬಿನಲಿ ಗಾಡಿಸಿತು ಗೋದಾವರಿ ಕಕುತ್ಸ್ಥಜನ (ತೊರರಾ. ೩-೧-೪೬). [ಸಂ.]

ನಿರ್ಘೋಷಣ(ನಾ). = ನಿರ್ಘೋಷ: ಘನಘಂಟಾಘೋರನಿರ್ಘೋಷಣ ಚಕಿತದಿಶಾಸಿಂಧುರಂ (ಮಲ್ಲಿಪು. ೮-೧೩೫) : ಚಾತಕೋದಕಕೇಳೀಕೃತ ತೂರ್ಯನಾದಮೆಸೆದತ್ತಂಭೋದನಿರ್ಘೋಷಣಂ (ಚಂದ್ರಪು. ೪-೩೫).

[ಸಂ.]

ನಿರ್ಘೋಷಿಸು (ಕ್ರಿ). ದೊಡ್ಡಧ್ವನಿ ಮಾಡು ; ಉದ್ಗಾರಿಸು : ಭಾಸುರಾಸೆಯೊಳು ನಿರ್ಘೋಷಿಸುವ ಪ್ರಣಮಸ್ವರೂಪಿಯಾದವ ಶಿವಗೆ (ಕರಿಕ. ೧೪೩-೩). [ನಿರ್ಘೋಷ + -ಇಸು$_3$]

ನಿರ್ಜಂತುಕ (ಗು). ಜೀವಿಗಳಿಲ್ಲದ; ಜನರಹಿತವಾದ; ನಿರ್ಜನವಾದ : ವಿಶಾಳ ನಿರಾಕುಳ ನಿರ್ಜಂತುಕ ನಿರ್ಮಲಶಿಲಾಪಟ್ಟದೊಳ್ . . . ಪೂರ್ವಾಭಿಮುಖನುಮಾಗಿರ್ದಾಗಳ್ (ಅದಿಪು. ೧೦-೧೩ ಪ) ; ನಿರ್ಜಂತುಕ ಪ್ರದೇಶದೊಳರ್ದ ಶಿಲಾಪಟ್ಟಕದ ಮೇಲೆ ಪೂರ್ವಾಭಿಮುಖನಾಗಿ . . . ನಿಂದಂ (ಸುಕುಮಾ.೮-೫೮ ಪ); ಸೀತೆಯನೊಡಗೊಂಡು ಪೋಗಿ ಭೀಮಾಟವಿಯೊಳ್ ನಿರ್ಜಂತುಕ [ಪಾಠಾಂ. ನಿರ್ಜನ]ಪ್ರದೇಶದೊಳ್ ಬಿಟ್ಟು ಬಳ್ಗುದು (ಪಂರಾಮಾ. ೧೫-೭೩ ಪ). [ಸಂ.]

ನಿರ್ಜಡ (ಗು). ೧. ಆಲಸ್ಯವಿಲ್ಲದ; ಲವಲವಿಕೆಯ; ಉಲ್ಲಾಸದ; ಉತ್ಸಾಹದ. (ನಾ). ೨. ಆಲಸ್ಯವಿಲ್ಲದವನು ; ಲವಲವಿಕೆಯುಳ್ಳವನು ; ಉತ್ಸಾಹಿ : ನೀತಿಜ್ಞಂ ನಿಜ ನಿತ್ಯತತ್ತ್ವನಿಪುಣಂ ನಿಸ್ಸಾರಪರಂ ನಿರ್ಜಡಂ ಪೂತಾತ್ಮಂ ಪರಿತೋಷಪಂಡಿತವರಂ (ಹಮ್ಮೀರ. ೧-೨೬) ; ನಿಷ್ಕಳಂಕ ಜಯಶಂಕರ ನಿರ್ಜಡ[ಪಾಠಾಂ. ರ]ಶಾಂಭವೀಧವಾ (ಶಬಶಂ. ೫-೨೪). [ಸಂ.]

ನಿರ್ಜಣಿಸು ? (ಕ್ರಿ). (?) : ಬಜ್ಜಿ ತಾಳಿದಗಳಂ ಕೆಲಬಲದಿ ಬಡಿಸುತಂ ಕಜ್ಜಳಮನಳಿದು ಬೆಳ್ಪಿಸೆವ ಗೋಧಿಯನೌಚ ನಿರ್ಜಣಿಸಿ ತುಯ್ಯಲಂ ಕಾಸಿ ಗೋಕ್ಷೀರಮಂ ಪರ್ಜಳಿಸುತಿನಿದುಗೂಡಿ ಸರ್ಜುಕದ ಪಂಚಧಾರೆಯನೆಜದು ಪರಿಮಳದೊಳುರ್ಜುಗಿಸಿ ಪಚನದಿಂ ಚೆಲ್ವಾಗಿ ರಸ ಬಸವ ಸೊರ್ಜಗೆಯ ಪರಮಾನ್ನಮಂ ಸವಿದು ಕರುಣಿಪುದು ಮಜ್ಜೀವಿತೇಶಬಲರು (ಲಿಂಗಪು. ೮-೪). 'ಜಣಿಸು' ಪರಾ. [? + -ಇಸು$_3$]

ನಿರ್ಜನ (ಗು). ೧. ಜನರಹಿತವಾದ ; ಜನವಿಲ್ಲದ : ಬಿಟ್ಟು ಬಂದೈ . . . ರಾಜಪುತ್ರರ ನಟ್ಟಡವಿಯಲಿ ನಿರ್ಜನಾರಣ್ಯಪ್ರದೇಶದಲಿ (ತೊರರಾ. ೨-೫-೪) ; ನಿರ್ಜನಾಟವಿಯೊಳೆಂತೊರ್ವಳೆಯೆ ಬರ್ದುಕುತಿಹೆ? (ತ್ರೀರಾಮಾ. ೨೪೪-೪೪೪). (ನಾ). ೨. ಜನರಹಿತವಾದ ಜಾಗ; ಏಕಾಂತವಾದ ಸ್ಥಳ : ಆಭರಣವನು . . . ಪಾಂಡುಪುತ್ರರ ಮಾನಿನಿಗೆ ಕೊಡಿ ನಿರ್ಜನದೊಳಬುಜಾನನೆಯ ಸೇರಿಸುವುದೆಮಗೆಂದಟ್ಟೆದನು ಚರರ (ಕುಮ್ಯಾಅ. ೨೨-೭) ; ಆ ಪ್ರದೇಶವು ನಿರ್ಜನವಾಗಿ ತೋರುತ್ತಿದ್ದಿತು (ಹೇಮಂತ. ೩೭). [ಸಂ.]

ನಿರ್ಜರ$_1$ (ನಾ). = ನಿರ್ಝರ : ನಿರ್ಜರದ ನಿಱಿಸು ನಿಡು ಜಂಝೂಸಮೀರನ ಬಿಱಿಸು . . . ಕೇಳ್ ನಮಮೇಳಕಾಲದಲಿ (ತೊರರಾ. ೪-೬-೬): ಹರಿದ ನಿರ್ಜರವಾರಿಗಳ . . . ತರುನಿಕರ ಪಲ್ಲವ ಪಲಾಶೋತ್ಕರ ಫಲಚ್ಛಾಯಾನಿವಾರಿತ ಕರಮರೀಚಿ ಮರೀಚಿಗಳಲೊಪ್ಪಿದುದು ವನಭೂಮಿ (ನಿಭಾಗ. ೧೦-೧೮-೫) ; ಪಂಚಬಾಣ ರಕ್ತಕಿರಣೆ ಮನ್ಮಥಸತಿ ಅಲಕ್ತಚರಣೆ ಜೀರ್ಕೋವಿಯ ಓಕಳಿಯೆಣೆ ಚಮ್ಮುವಳೀ ನಿರ್ಜರಾ! (ಅನಿಕೇ. ೧೮-೮).

[<ಸಂ. ನಿರ್ಝರ]

ನಿರ್ಜರ$_2$ (ಗು). ೧. ಪ್ರಾಯವಳಿಯದ ; ಮುಪ್ಪಾಗದ. ೨. ಶಾಶ್ವತವಾದ; ಅಮರವಾದ. ೩. ದೇವಲೋಕಕ್ಕೆ ಸಂಬಂಧಿಸಿದ : 'ನಿರ್ಜರಕರಿ' ಪರಾ. (ನಾ). ೪. ಶಾಶ್ವತವಾದುದು ; ನಿರಂತರವಾದುದು. ೫. ಮುಪ್ಪಿಲ್ಲದವನು ; ದೇವತೆ; ಅಮರ : ಭುಜಬಲರೆನಿಪ್ಪ ನಿರ್ಜರರ ಮೊತ್ತಂಗಳಂ ಪರಿಪರಿಯ ವಾಹನದಿ ನಡೆವ

ದಿಗಧೀಶರಂ. . . ನೋಡುತಂ (ಸಂಜಿರ.೧೯–೯೬); ನುಡಿಯನಾಲಿಸಿದನಾರೈ ನೀನು ನಿನಗಾಗಸದಲಿರವೇನಸುರನೋ ಕಿನ್ನರನೊ ನಿರ್ಜರನೊ ಉಸುರೆನಲು (ಕುಸ್ಯಾಅ.೨೩–೩೬); ಸೊಗಯಿಪುದು . . . ಗುರ್ಜರದೇಶಂ ನಿರ್ಜರರಾವಾಸದವೊಲ್ (ಉದ್ಯದೇ. ೨–೧೦) ; ವಡಬನುಪಟಳವೆಂದು ನಿರ್ಜರರೊಡೆಯ ಪಥವನು ಬೇಡೆ (ಸುದಾಸು. ೨–೨೫). ೬. = ನಿರ್ಜರೆ ೩ : ಇದನ್ನು ಕರ್ಮದ ಬಿದ್ದುಹೋಗುವಿಕೆ (ನಿರ್ಜರ) ಎಂದು ವರ್ಣಿಸಿದ್ದಾರೆ (ಕರಾಅ. ೬೮) ; ಭಾವ–ಕರ್ಮಗಳ ನಿರ್ಜರ (ಕ್ಷಯ) (ಜೈನಸ. ೩೩೯).

ನಿರ್ಜರರ ನಗರಿ = ನಿರ್ಜರನಗರಿ : ಕೈದುಕಾಜರ ಗುರು ಛಡಾಳಿಸಿ ಮೈದೆಗೆದು ನಿರ್ಜರರ ನಗರಿಗೆ ಹಾಯ್ದನು (ಕುಸ್ಯಾದ್ರೋ. ೧–೩). [ಸಂ.]

ನಿರ್ಜರಕಟಕ (ನಾ). ದೇವತೆಗಳ ಸಮುದಾಯ ; ಅಮರರ ಗುಂಪು : ರೂಢಿಗಗ್ಗಪ ರಾಜಸೂಯದಲೂಡಿ ನಿರ್ಜರಕಟಕವನು ಖಯ ಖೋಡಿಯಿಲ್ಲದೆ ನಿಲಿಸಿದೈ ತ್ರಿದಿವದಲಿ (ಕುಸ್ಯಾಸ. ೧೫–೬೧).

[ನಿರ್ಜರ$_2$ + ಕಟಕ$_3$]

ನಿರ್ಜರಕರಿ (ನಾ). ದೇವಲೋಕದ ಆನೆ ; ಐರಾವತ : ನಿರ್ಜರಕರಿ ಪಾಂಸುಕೇಳಿಯನೊಡರ್ಚುಗುಮಲ್ಲಿ ಜಯಪ್ರಯಾಣದೊಳ್ (ರಾಜಶೇ. ೩–೮). [ನಿರ್ಜರ$_2$ + ಕರಿ$_4$]

ನಿರ್ಜರಗುರು (ನಾ). ದೇವತೆಗಳ ಗುರು ; ಬೃಹಸ್ಪತಿ : ನಿರ್ಜರ ಗುರುವ ಪೋಲ್ವ ವಿಬುಧರ್ಕಳಿಂ ವರಮುನಿಯ ಸಭೆಯಂತೆ . . . ಮೆಱೆದುದಾ ರಾಯನೊಡ್ಡೋಲಗಂ ಸೈಪಿನಿಂದೆ (ಭಾವಚಿಂ. ೭–೫).

[ನಿರ್ಜರ$_2$ + ಗುರು$_2$]

ನಿರ್ಜರಣ (ನಾ). [ಜೈನ] ಕರ್ಮವು ಕ್ಷಯಿಸುವುದು : 'ನಿರ್ಜರಣ ಕರಣ' ಪರಾ. [ಸಂ.]

ನಿರ್ಜರಣಕರಣ (ನಾ). [ಜೈನ] ಕರ್ಮವು ಕ್ಷಯಿಸುವಂತೆ ಮಾಡುವಿಕೆ : ಸಕಳಮಳನಿರ್ಜರಣ[ಪಾಠಾಂ. ನಿರ್ಜರಾ]ಕರಣಕಾರಣಮಂ ತಪಶ್ಶ್ರೀಯಂ ಕೈಕೊಳಲ್ಪಗೆದು (ಅಪಿಪು. ೧–೮೦ ಪ). [ನಿರ್ಜರಣ + ಕರಣ]

ನಿರ್ಜರತತಿ (ನಾ). = ನಿರ್ಜರಕಟಕ : ನಿರ್ಜರತತಿ ಮೊಱೆವುತ್ತಿರೆ ದುರ್ಜನಗಿರಿವಜ್ರನೆನಿಪ ಗಣನಾಥಂಗತ್ಯೂರ್ಜಿತ ಗಣಪದವಿತ್ತು (ತ್ರಿಪುವಿ. ೩೯–೧೩). [ನಿರ್ಜರ$_2$ + ತತಿ$_2$]

ನಿರ್ಜರಧೇನು (ನಾ). ದೇವಲೋಕದ ಹಸು ; ಕಾಮಧೇನು : ಪರುಷದಂತಾ ವೇದದಳತೆಗೋಲಂತೆ ನಿರ್ಜರಧೇನುವಂತೆ ಪತಿಭಕ್ತಿಯಂತೆ . . . ರಂಜಿಸುವ ಕರಮಾ ಪ್ರವಾಳದಿಂದೆಸೆವ ದಂಡಿಗೆವಿಡಿದು [redacted] ಗಾಣಂ ಪಾಡಿದಂ (ಭಾವಚಿಂ. ೭–೭). [ನಿರ್ಜರ$_2$ + ಧೇನು]

ನಿರ್ಜರನಗರಿ (ನಾ). ದೇವತೆಗಳ ಪಟ್ಟಣ; ಅಮರಾವತಿ: ಕುಶಲವೇ ದೇವೇಂದ್ರನಾತನ ಶಶಿವದನೆಯರು ಸುಖಿಗಳೇ . . . ನಿರ್ಜರನಗರಿ ನಿಳಯವೇ (ಕುಸ್ಯಾಅ. ೧೧–೨೬). [ನಿರ್ಜರ$_2$ + ನಗರಿ]

ನಿರ್ಜರನದೀಧಾರ (ನಾ). ಗಂಗೆಯನ್ನು ಧರಿಸಿದವನು ; ಶಿವ ; ಈಶ್ವರ : ನಿರ್ಜರನದೀಧಾರನಂತತಿಶಶಲನಂದದಿಂ ಮದುವೆಯಾಗಾರದಂತಾ ಮುಸಲಿಯಂತೆ . . . ಮುಂಗಾರ್ ಬಂದುದು (ಭಾವಚಿಂ. ೬–೨). [ಸಂ.]

ನಿರ್ಜರನಾರಿ (ನಾ). ದೇವತಾಸ್ತ್ರೀ : ನಿರ್ಜರನಾರಿಯರು ತೊತ್ತಾದರ ಮಾರಾರಿಗಳ ಮನೆಗಳಿಗೆ (ಕುಸ್ಯಾಕ. ೬–೧೧). [ನಿರ್ಜರ$_2$ + ನಾರಿ$_2$]

ನಿರ್ಜರಪರ (ನಾ). ದೇವತೆಗಳ ಶತ್ರು; ರಾಕ್ಷಸ: 'ನಿರ್ಜರಪರಭಂಗ' ಪರಾ. [ಸಂ.]

ನಿರ್ಜರಪರಭಂಗ (ನಾ). ರಾಕ್ಷಸರನ್ನು ನಾಶಮಾಡಿದವನು ; ಶಿವ : ನಿರ್ಜರಪರಭಂಗ ತುಂಗಮಹಿಮಾಕರ . . . ನಿತ್ಯಜಯಕಿಂಕರ ಶಂಕರ ಚಂದ್ರಶೇಖರಾ (ರಾಜಶೇ. ೧೩–೫೩). [ನಿರ್ಜರಪರ + ಭಂಗ]

ನಿರ್ಜರಾತತ್ತ್ವ (ನಾ). [ಜೈನ] ಏಳು ತತ್ತ್ವಗಳಲ್ಲಿ ಒಂದು : ಜೀವತತ್ತ್ವಮಜೀವತತ್ತ್ವಮಾಸ್ರವತತ್ತ್ವಂ ಬಂಧತತ್ತ್ವಂ ಸಂವರಾತತ್ತ್ವಂ ನಿರ್ಜರಾತತ್ತ್ವಂ ಮೋಕ್ಷತತ್ತ್ವಮೆಂಬ ಸಪ್ತತತ್ತ್ವರೂಪಮುಮಂ . . . ಕೈಕೊಂಡು (ಸುಕುಮಾ. ೩–೫೯ ಪ). 'ಸಪ್ತತತ್ತ್ವ' ಪರಾ. [ಸಂ.]

ನಿರ್ಜರಾಧಿಪ (ನಾ). ದೇವತೆಗಳ ಒಡೆಯ ; ಇಂದ್ರ : ನಿರ್ಜರಾಧಿಪ ಮುಖ್ಯ ದಿಕ್ಪಾಲನಮಿತೆಶರಣಾರ್ಜವಸುಮಿತ್ರ ಸಿತದೀಪ್ತಿಯುಷಿ ದೂರ್ಯಗೋ ಅರ್ಜುನಂಗೊಲಿದು ಶರವಿತ್ತಭವ ಸಂಗಮೇಶ್ವರ ರಕ್ಷಿಸೆನ್ನ (ಪ್ರಾಢರಾ. ೬–೧). [ನಿರ್ಜರ$_2$ + ಅಧಿಪ]

ನಿರ್ಜರಾಧೀಶ (ನಾ). = ನಿರ್ಜರಾಧಿಪ : ಸಲೆ ನಿರ್ಜರಾಧೀಶ ವೃದ್ಧ ಶ್ರವಂಗೆಯೊಪ್ಪಲು ಜೀವನಾಗಿ ಚಿತ್ರಶಿಖಂಡಿಜಂ ಮಂತ್ರಿತಿಲಕಂ ಗಣಾ (ಭಾವಚಿಂ. ೨–೧೯). [ನಿರ್ಜರ$_2$ + ಅಧೀಶ]

ನಿರ್ಜರಾನುಪ್ರೇಕ್ಷೆ (ನಾ). [ಜೈನ] ಹನ್ನೆರಡು ಅನುಪ್ರೇಕ್ಷೆಗಳಲ್ಲಿ ಒಂದು ; ೧ ಕರ್ಮವನ್ನು ಕ್ಷಯಿಸುವ ಅನಶನವೇ ಮೊದಲಾಗಿ ಹನ್ನೆರಡು ಪ್ರಕಾರವಾದ ತಪಸ್ಸನ್ನು ಕುರಿತು ವಿಚಾರ ಅಥವಾ ಚಿಂತನೆ ಮಾಡುವಿಕೆ : ವಿಭಾವಪರಿಣತಿಯಿಂ ಜೀವಪ್ರದೇಶಂಗಳಂ ಕ್ಷೀರನ್ಯಾಯದಿಂ ಬಂದು ಪೊರ್ದಿದ ಕರ್ಮಮಲಕಲಂಕಪಂಕಮುಂ ವ್ರತ ಗುಣಚಾರಿತ್ರಮುಂ ಭೇದವಿಜ್ಞಾನಮೆಂಬ ಜಲದಿಂ ತೊಳೆದು ಕಳೆವುದು ನಿರ್ಜರಾನುಪ್ರೇಕ್ಷೆ (ಶ್ರಾವಕಾ. ೧೪೭–೨೨) ; ನಿರ್ಜರಾನುಪ್ರೇಕ್ಷೆ— ಕರ್ಮನಿರ್ಜರೆಯುಂ ಏತರಿಂದಾದೀತೆಂದು ಭಾವಿಸುವುದು (ಜೈನಧ. ೮೩).

[ನಿರ್ಜರ$_2$ + ಅನುಪ್ರೇಕ್ಷೆ]

ನಿರ್ಜರಾರ್ಯ (ನಾ). = ನಿರ್ಜರಗುರು : ನಿರ್ಜರಾರ್ಯಹಿತೆ ಹೈಮ ಕ್ಷ್ಮಾಧ್ರಸಂಜಾತೆಯಾಕ್ರಮಿತಸ್ಥಾಣು ಮೃಡಾನಿ ಕಲ್ಪಲತೆಯಂತೀ ಗೆಮ್ಮಭೀಷ್ಟಾರ್ಥಮಂ (ರಾಜಶೇ. ೧೪–೧೮೩). [ನಿರ್ಜರ$_2$ + ಆರ್ಯ]

ನಿರ್ಜರಾವಿಧಿ (ನಾ). [ಜೈನ] ಕರ್ಮಗಳನ್ನು ನಾಶಪಡಿಸುವ ಕ್ರಮ (?) : ಯಥಾಪ್ರಯೋಗಸಮಯಪ್ರತಿಸಮಯಂಗಳನಂತಗುಣ ಹಾನಿರೂಪ ನಿರ್ಜರಾವಿಧಿಯಿನಾಯುಃಕರ್ಮಮುಟಾಯಲುಟಾದ ಕರ್ಮಂಗಳ ಪ್ರಕೃತಿಸ್ಥಿತ್ಯನುಭಾಗಂಗಳಂ ಕಟಲ್ಪಿ ಕಳೆಯುತ್ತುಂ (ಸುಕುಮಾ. ೮–೬೨ ಪ). 'ನಿರ್ಜರೆ' ಪರಾ. [ಸಂ.]

ನಿರ್ಜರಿಸು (ಕ್ರಿ). ೧. [ಜೈನ] ಕರ್ಮವು ಕ್ಷಯಿಸು,— ನಾಶ ಹೊಂದು,—ಸವೆ : ಇಂತೀ ಪ್ರಕಾರದಿಂ ಅಗೃಹೀತಗ್ರಹಣಶಲಾಕಾ ನಿಚಯಂ ಅನಂತವಾರಂ ಪೋಗಿ ಪುದ್ಗಲಪರಿವರ್ತನಪ್ರಥಮಸಮಯ ಗೃಹೀತನೋಕರ್ಮಸಮಯ ಪ್ರಬಂಧಪುದ್ಗಲಂಗಳ್ ದ್ವಿತೀಯಾದಿ ಸಮಯದೊಳ್ ನಿರ್ಜರಿಸಿದುವು (ತತ್ತ್ವಪ್ರ. ೮೮); ಕರ್ಮಂ ತನ್ನುದಯ ಮಂತಾನೆ ಕೊಟ್ಟು ನಿರ್ಜರಿಸುಗುಂ (ಪಸಾರ.೩೪) ; ಏಕಾದಶ ನಿರ್ಜರೆಗಳಸಂಖ್ಯಾತಗುಣತಕ್ರಮದಿಂ ಕರ್ಮ ನಿರ್ಜರಿಸುಗುಂ (ಶ್ರಾವಕಾ.೭೫–೨೦). ೨. (ಕರ್ಮವನ್ನು) ಕ್ಷಯಿಸುವಂತೆ ಮಾಡು,—ಹೋಗಲಾಡಿಸು: ಕರಣಮನುಪಶಮಿಸುವ ನಿರ್ಜರಿಸುವ ಕರ್ಮಂಗಳಂ ಶುಭಧ್ಯಾನಮನುದ್ಧರಿಸುವ ಬಗೆಯಿಂ ತಳೆದಂ . . . ಅನಶನಮಂ (ಮಲ್ಲಿಪು. ೧೧–೨೨) ; ಸರಸದೊಳಗೆ ಸವಿಮಾತಿನೊಳಳ್ಪವ ನಿರ್ಜರಿಸುವ ಸಾಮರ್ಥ್ಯವುಳ್ಳ ಪರಮ ನೀನೆನ್ನಂತರಂಗದೊಳಿರು (ಭರಡ. ೩೩–೯೧). [ನಿರ್ಜರ$_2$ + –ಇಸು$_3$]

ನಿರ್ಜರೀಭವೆ (ನಾ). ದೇವತಾಸ್ತ್ರೀಯ ಮಗಳು : ಅವಳನದೇಪರಿವರಿಸಿ ನಿರ್ಜರೀಭವೆಯಲಾ ಸುಂದರಿ ನವರಸಲಹರಿ (ಶಾಕುಂತ. ೨೪ ಅಡಿಟಿ). [ಸಂ. ನಿರ್ಜರೀಭವಾ(ನಿರ್ಜರೀ + ಭವ + –)]

ನಿರ್ಜರೆ (ನಾ). ೧. ಮುಪ್ಪು ಇಲ್ಲದುದು ; ಅಮರತೆ ; ಶಾಶ್ವತತೆ: ಪಂಪ ಹುಟ್ಟಿ ಭಾರತನ ಕಟ್ಟಿ ಹಿರಿ ಸಿದ್ಧಪದವ ಮುಟ್ಟಿ ನಿರ್ಜರೆಯ ಪಡೆದ (ಮುಕ್ತಕಂ. ೨೪–೧೦). ೨. ದೇವಲೋಕದ ಹೆಂಗಸು :

ದೇವತಾಸ್ತ್ರೀ : ಮನ್ಮಥಸೃಷ್ಟಿಯಂತೆಸೆವ ಮಾಹೇಂದ್ರಾಗ್ರದಿಂ ಬಂದ ನಿರ್ಜರನಾ ನಿರ್ಜರೆಯರ್ಜಯಾವತಿಯುಮಂತಾ ಸೀತೆಯುಂ ಪೆಂಡಿರಾಗಿರೆ . . . ಧರೆಯನಾಳ್ದಂ ಸಂದ ಸೋಮಪ್ರಭಂ (ಅಸಂಪು. ೧೨-೪೪). ೩. [ಜೈನ] ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರ ಮತ್ತು ಮೋಕ್ಷಗಳೆಂಬ ಸಪ್ತತತ್ತ್ವಗಳಲ್ಲಿ ಒಂದು ; ಸಂಚಿತ ಕರ್ಮಗಳು ತಪಸ್ಸಿನಿಂದ ನಾಶವಾಗುವಿಕೆ ; ಕರ್ಮಕ್ಷಯ : ಯಥಾಕಾಲಾನುಭವನ ತಪೋನಿಮಿತ್ತಮಾಗಿ ಸವಿಪಾಕಾವಿಪಾಕರೂಪದಿಂ ಪೂರ್ವಾರ್ಜಿತಕರ್ಮನಿರ್ಜರಣಂ ನಿರ್ಜರೆಯೆಂಬುದು (ಆದಿಪು. ೧೦-೬೩ ಪ); ಪೂರ್ವೋಪಾರ್ಜಿತ ಪರುಷಕರ್ಮನಿರ್ಜರಣಾಕಾರಣಂ ನಿರ್ಜರೆಯೆಂಬುದಕ್ಕುಂ (ಶಾಂತಿಪು. ೧೨-೫೫ ಪ) ; ತರದಿಂ ಜೀವಮಜೀವಮಾಸ್ರವಮುಳ ವ್ಯಾಪಾರಬಂಧಂ ಸುಸಂವರಮಾ ನಿರ್ಜರೆ ಮೋಕ್ಷಮೆಂದು ಸಲೆ ತತ್ತ್ವಂ ಸಪ್ತಭೇದಂ (ಸುಕುಮಾ. ೮-೪) ; ಹೊಸತಾಗಿ ಬರ್ಪುದ ತಡೆವುದೆ ಸಂವರೆ ಕಿಸುರದೆ ಹಳೆಯ ಕರ್ಮಗಳ ಕುಸಿಗುಟ್ಟುವುದೆ ತಾನೆ ನಿರ್ಜರೆ (ಭರಜ. ೬೮-೬೧). ೪. = ನಿರ್ಜರಾನುಪ್ರೇಕ್ಷೆ : ಎಂದಿಂತಧ್ರುವಮಶರಣಮೇಕತ್ವ ಮನ್ಯತ್ವಮಶುಚಿತ್ವಂ ಸಂಸಾರಂ ಲೋಕಮಾಸ್ರವ ಸಂವರೆ ನಿರ್ಜರೆ ಬೋಧಿ ದುರ್ಲಭಧರ್ಮಸ್ವಾಖ್ಯಾತಮೆಂಬುವ ಪನ್ನೆರಡುಮನುಪ್ರೇಕ್ಷೆಯಂ ಕ್ರಮದಿನನುಸ್ಮರಿಸುತ್ತುಮಿರ್ಪನ್ನೆಗಂ (ಅಜಿಪು. ೬-೬೧ ಪ). 'ದ್ವಾದಶಾನುಪ್ರೇಕ್ಷೆ' ಪರಾ. ೫. (?) : ಋಜುಮತಿಯ ಜಘನ್ಯಂ ದ್ರವ್ಯದಿಂ ಔದಾರಿಕಶರೀರನಿರ್ಜರೆಯಂ ಉತ್ಕೃಷ್ಟದಿಂ ಚಕ್ಷುರಿಂದ್ರಿಯನಿರ್ಜರೆಯಂ ಅಱಿಗುಂ (ತತ್ತ್ವಪ್ರ. ೬೯). [ಸಂ. ನಿರ್ಜರಾ]

ನಿರ್ಜರೇಂದ್ರ (ನಾ). = ನಿರ್ಜರಾಧಿಪ : ನಿರ್ಜರೇಂದ್ರನ ಸೂನು ಪೊನಲಿಡಲ್ಬಿಸಿಯನೆತ್ತರ್ಜೋಂಪಿಸುತೆ ಮೈಮಱೆದು ಬಿದ್ದನಿಳೆಯೊಳ್ (ಜೈಮಿಭಾ. ೨೫-೩೫). [ನಿರ್ಜರ್ಮ + ಇಂದ್ರ]

ನಿರ್ಜಲ, ನಿರ್ಜಳ (ಗು). ೧. ನೀರಿಲ್ಲದ ; ಒಣಗಿದ. (ನಾ). ೨. ನೀರಿಲ್ಲದುದು : ದೂರವಾದುದು ನಳಯವೀ ಕಾಂತಾರ ನಿರ್ಜಲವೈದ ಲಂಘ್ರಿಗೆ ಭಾರ ಪಥವಿನ್ನೇನು ಹದನು (ಕುಮಾಸಂ. ೨೩-೧೨). **ನಿರ್ಜಳ** : ೨. ಆತಪತಾಪದಿಂದಮಿದು ನಿಸ್ತೃಣ ನಿರ್ಜಳ ನಿಷ್ಪ್ರವಾಳವಲ್ಲೀತರು ವಾದುದೀಯೆಡೆಯೊಳಿನ್ನಿರವಾಗದು ಪೋಪುದುತ್ತಮಂ (ಜಗವಿ. ೩-೬೫). [ಸಂ.]

ನಿರ್ಜಳ 'ನಿರ್ಜಲ' ನೋ.

ನಿರ್ಜಾಡಿಸು 'ನಿರ್ಧಾಟಿಸು' ನೋ.

ನಿರ್ಜಾತ (ಗು). ೧. ಕಾಣಿಸುವ ; ವ್ಯಕ್ತವಾಗುವ ; ಗೋಚರವಾಗುವ. (ನಾ). ೨. ಹುಟ್ಟಿಲ್ಲದವನು ; ಜನ್ಮರಹಿತನಾದವನು : ಸಸಿ ಫಲವ ಬಲ್ಲುದೆ ನಿರ್ಜಾತರ ಜಾತ ಬಲ್ಲನೇ ಅವನೇತಕ್ಕೂ ಸಿಕ್ಕ (ಮೋಳಿಮಾ. ೮೭-೩೪೪) ; ನಿರ್ಜಾತ ನಿರ್ಮಯಲನೆಯ್ದುದ ಮಹಾಂತ ಕೂಡಲಚನ್ನಸಂಗಮ (ಪದಗೋ. ೭೦೦-೫) ; ನಿರ್ಲೇಪ ನಿರ್ಜಾತ ನಿರ್ಲಯ ನಿರಾಕಾರ ನಿರ್ಲಕ್ಷ್ಯ (ವಿಕೋಪು. ೫-೭೫). [ಸಂ.]

ನಿರ್ಜಿತ (ಗು). ಜಯಿಸಿದ ; ಗೆದ್ದ : ಅದನಾಳ್ವಂ . . . ಅನೇಕಸಮರ ಸಮುದ್ಭಟನನಿರ್ಜಿತೋರ್ಜಿತಾರಾತಿಬಲನತಬಲನೆಂಬಂ (ಆದಿಪು. ೧-೭೧ ಪ); ಶ್ರೀನಾರೀಕಾನ್ತಂ ನಿರ್ಜ್ಜಿತವೈರಿವ್ರಜನೆನಿಸಿ ಪಿಟ್ಟುಗಂ ಸಲೆ ನೆಗಳ್ದಂ (ಸೌಇಇ. XX, ೧೮-೧೨ ; 980) ; ಆ ರವಮಂ ನಿರ್ಜಿತಕಂಠೀರವರವಮಂ ನಿರಸ್ತಶೂರರವಮಂ ಕೋಪಾರುಣನೇತ್ರಂ ಕೇಳ್ದಾ ನೀರೊಳಗಿರ್ದುಂ ಬೆಮರ್ತನುರಗಪತಾಕಂ (ಗದಾಯು. ೬-೨೨) ; ದಂದಶೂಕಪತಾಕನ ಸೆರಗಿಲ್ಲದ ಮೆಯ್ಯಲಿತನಕ್ಕೆ ಮೆಚ್ಚಿ ತಲೆಯಂ ತೂಗಿ ನಿಜಭುಜಪ್ರತಾಪ ನಿರ್ಜಿತ ನಿಖಿಲಭೀಮಸೇನಂ ಭೀಮಸೇನಂ ಕೌರವನಿದಿರ್ಗೆ ವಂದು (ಗದಾಯು. ೬-೩೦ ಪ). [ಸಂ.]

ನಿರ್ಜಿತಕಾಮ (ನಾ). ೧. ಕಾಮವನ್ನು ಗೆದ್ದವನು. ೨. ಶಿವ : ನಿರ್ಜಿತಕಾಮಂ ಮನದಿಷ್ಟವನತಿಶಯದಿಂದೀಯಲೆಂದು ಬಂದಂ ಬೇಗಂ (ಹರಿಹರ. ೨-೮). [ನಿರ್ಜಿತ + ಕಾಮ]

ನಿರ್ಜಿತಮಾಯೆ (ನಾ). ೧. ಮಾಯೆಯನ್ನು ಗೆದ್ದವನು. ೨. ವಿಷ್ಣು : ಪಾಂಡವರಾಯ ಜಂಗಮಜೀವ ನಿರ್ಜಿತಮಾಯ ನಿಜವನು ತೋಱೆ ಪಾರ್ಥನನೊಲಿದು ಬೋಧಿಸಿದ (ಕುಮಾಭೇ. ೩ ಸೂಚನೆ). [ನಿರ್ಜಿತ + ಮಾಯೆ]

ನಿರ್ಜಿತಮಾರ (ನಾ). ೧. = ನಿರ್ಜಿತಕಾಮ ೨. ೨. ಮನ್ಮಥನನ್ನು ಮಾರಿಸಿದ ಸುಂದರ ; ಕೃಷ್ಣ : ಭುವನಾಧಾರ ನಿರ್ಜಿತಮಾರ ಮುರಹರ ಸಲಹಬೇಕೆಂದ (ಕುಸ್ಯಾಭೇ. ೩-೮೭). [ನಿರ್ಜಿತ + ಮಾರ]

ನಿರ್ಜಿತಸುರ (ನಾ). ೧. ದೇವತೆಗಳನ್ನು ಸೋಲಿಸಿದವನು. ೨. ದೇವತೆಗಳೆಲ್ಲರಿಗಿಂತಲೂ ಶ್ರೇಷ್ಠ : ಶಿವ : ನಿರ್ಜಿತಸುರ ನಿಟಲಾಕ್ಷ ಮಹೋರ್ಜಿತ ಮಹಿಮಾಭಿರಾಮ . . . ಜಯ ಭವನಾಶ (ತ್ರಿಪುವಿ. ೭-೬೦). [ನಿರ್ಜಿತ + ಸುರ]

ನಿರ್ಜಿತೇಂದ್ರಿಯ (ನಾ). ಇಂದ್ರಿಯಗಳನ್ನು ಗೆದ್ದವನು : ಸೋಟದಲಿ ಮದನಾಸ್ತ್ರವೆದೆಯಲಿ ನಾಟಿದವು ವಿಟರುಗಳ ಹುಬ್ಬಿನ ಬೇಟದಲಿ ಬೆಂಡಾದರಗ್ಗದ ನಿರ್ಜಿತೇಂದ್ರಿಯರು (ತೊರರಾ. ೧-೧೪-೨೪). [ನಿರ್ಜಿತ + ಇಂದ್ರಿಯ]

ನಿರ್ಜೀರ್ಣ (ಗು). ೧. ಕ್ಷಯವಾಗದ ; ಕ್ಷೀಣಿಸದ ; ಕುಗ್ಗದ. (ನಾ). ೨. ಕ್ಷೀಣಿಸದಂತಹುದು ; ಕ್ಷಯಿಸದುದು : ಸಮಯಾಧಿಕಾವಲಿಕಾಲಾತಿಕ್ರಾಂತಾನಂತರ ದ್ವಿತೀಯಾದಿ ಸಮಯಂಗಳೊಳ್ ನಿರ್ಜೀರ್ಣಮುಂ ಅಪ್ಪ ಪುದ್ಗಲಚಯಂ ಕರ್ಮಪುದ್ಗಲಪರಿವರ್ತನಮಕ್ಕುಂ (ತತ್ತ್ವಪ್ರ. ೮೭). [ಸಂ.]

ನಿರ್ಜೀವ (ಗು). ೧. ಜೀವವಿಲ್ಲದ ; ಜಡವಾದ ; ಅಚೇತನವಾದ : ಧರಣಿಗರಸುಂಟಾದಡರ್ಥೋತ್ಕರ ಸಕಲವುಂಟಹವದಿಲ್ಲದಡರಸ ಕೇಳ್ ನಿರ್ಜೀವ ದೇಹವಿದೆಂದನಾಂಗಿರಸ (ತಿಮ್ಮಶಾಂ. ೨-೩೯). (ನಾ). ೨. ಜೀವರಹಿತವಾದುದು ; ಜೀವವಿಲ್ಲದುದು : ಗರ್ಜನೆಯ ದನಗಿಳಿ ಲೋಕದ ಜನಂ ಬೆರ್ಚ ನಿರ್ಜೀವಮಾಯ್ತು (ಚಿಪು.೪೭-೨೦) ; ಪೃಥಿವಿಪತಿ ಮಂಕುಗಣ್ಣಂ ದಿಟ್ಟಿಸಿರ್ದನು ಶವಾಕ್ಷಿಯೋಲ್, ನಿರ್ಜೀವನೆನೆ ನಿಶ್ಚಲಂ (ಶ್ರೀರಾಮಾ. ೧೦೧-೩೪). [ಸಂ.]

ನಿರ್ಜೀವತತ್ತ್ವ (ನಾ). [ಜೈನ] ಜೀವ, ಅಜೀವ, ಆಸ್ರವ, ಬಂಧ, ಸಂವರೆ, ನಿರ್ಜರೆ, ಮೋಕ್ಷಗಳೆಂಬ ಸಪ್ತತತ್ತ್ವಗಳಲ್ಲಿ ಎರಡನೆಯದು : ಅಜೀವ ಪದಾರ್ಥ ; ಚೈತನ್ಯರಹಿತ ವಸ್ತು ; ☞ ಈ ಸಿದ್ಧಾಂತದಂತೆ ಅಜೀವತತ್ತ್ವದಲ್ಲಿ ಪುದ್ಗಲ (ಪ್ರಾಣಿಗಳ ಶರೀರ), ಧರ್ಮ, ಅಧರ್ಮ, ಆಕಾಶ, ಕಾಲ ಎಂಬ ಐದು ಭೇದಗಳಿವೆ. ಪುದ್ಗಲದಲ್ಲಿ ಮೂರ್ತನಿರ್ಜೀವ (ಕಣ್ಣಿಗೆ ಕಾಣುವ ವಸ್ತು) ಅಮೂರ್ತ ನಿರ್ಜೀವ (ಕಣ್ಣಿಗೆ ಕಾಣದ ವಸ್ತು) ಎಂಬ ಎರಡು ಭಾಗಗಳಿವೆ : ನಿರ್ಜೀವತತ್ತ್ವವನಿನ್ನು ಕೇಳು ಜೀವತತ್ತ್ವದ ಕಳೆದುಳಿದೈದುವಸ್ತು ನಿರ್ಜೀವಗಳೆಲೆ ಭವ್ಯಜೀವಾ (ಭರಜ. ೬೮-೩೦). 'ಅಜೀವತತ್ತ್ವ' ಪರಾ. [ನಿರ್ಜೀವ + ತತ್ತ್ವ]

ನಿರ್ಜೀವತೆ (ನಾ). ಅಚೇತನಸ್ಥಿತಿ ; ಜೀವವಿಲ್ಲದಿರುವಿಕೆ : 'ನಿರ್ಜೀವತೆವೆಱು' ಪರಾ. [ಸಂ. ನಿರ್ಜೀವತಾ]

ನಿರ್ಜೀವತೆವೆಱು(ಕ್ರಿ). ಜೀವರಹಿತವಾದ ಸ್ಥಿತಿಯನ್ನು ಹೊಂದು : ಜೀವವಿವಾದಮೆತ್ತ ಪರಲೋಕಫಲೋದಯಮೆತ್ತದರ್ಕೆ ಮೆಯ್ಯೋವದೆ ಪೂಣ್ದು ಕೊಳ್ವ ತಪಮೆತ್ತಡದುಣ್ಣದ ಮಾಯದಂಗ ನಿರ್ಜೀವತೆವೆತ್ತುದೆತ್ತ (ಶಾಂತಿಪು. ೮-೧೨೯). [ನಿರ್ಜೀವತೆ + ಪೆಱು$_1$]

ನಿರ್ಜೀವಿ (ನಾ). ೧. ಜೀವವಿಲ್ಲದುದು ; ಅಜೀತನವಾದುದು ; ಮರಗಟ್ಟಿದುದು : ನಿರ್ಜೀವಿಯ ತೆಱದೊಳಿರ್ದಂತಿರುತ್ತಳುಗು ದಟ್ಟಿಸುಗು ತೊಪ್ಪನೆ ಕೆಡೆಗು (ಬಸಪು. ೧೪-೧೪) ; ಸಮುದ್ರಾಂಬೆ . . . ನೋಳ್ಪಳಾ ತನ್ನ ಪೊಸ ಪೆತ್ತ ಸಿಸುದೀವಿಯಂ ತಾಯ್ಮಳಲ ಬರುನೆಲದ ಬತ್ತಲೆಯ ಬೇಸರದ ನಿರ್ಜೀವಿಯಂ (ಶ್ರೀರಾಮಾ. ೧೩೫-೩೬೬). ೨. ಬದುಕಿದ್ದೂ ಸತ್ತಂತೆ ಇರುವ ವ್ಯಕ್ತಿ ; ಜೀವಚ್ಛವ.

[ಸಂ. ನಿರ್ಜೀವಿನ್]

ನಿರ್ಝರ (ನಾ). ಬೆಟ್ಟದಿಂದ ಕೆಳಕ್ಕೆ ಹರಿಯುವ ಪ್ರವಾಹ; ಬೆಟ್ಟದ ಹೊಳೆ : "ನಿರ್ಝರಮೆಂಬುದು ಬೆಟ್ಟದ ತಪ್ಪಲೊಳ್ ಪುಟ್ಟ(ದ) ಪರಿವ ತೊಜಿ" (ಹಲಾಯು. ೨೭-೧೨) ; ಉಚ್ಚಮಪ್ಪ ಬೆಟ್ಟುಗಳ ತಟಂಗಳಿಂ ಸುರಿವ ನಿರ್ಝರಮುಂ ಪೊಸ ಕಾರೊಳಿಂತು ಬೆಳ್ಪಗೆ ಪಥಿಕಾಂಗನಾಜನ ಮನಂಜಿಸುಪಂತಿರೆ ತೋಜಿ ಸುತ್ತಲುಂ (ಕವಿರಾ.೧-೧೨೪); ನಿರ್ಝರೋಚ್ಛಳಿತ ಶೀಕರಶೀತಳವಾತನರ್ತಿತೋನ್ಮದ ಶಬರೀಜನಾಳಕಮ[ದಾ]ಯತ ವೇತ್ರಲತಾವಿತಾನಕಂ (ಪಂಪಭಾ. ೩-೧೦); ಆ ಮಹಾಗಹನಮಂ ಪೊಕ್ಕು ತನ್ಮಧ್ಯ ನಿರ್ಝರವಾರಿಧಾರಾಪರೀತಗಿರಿದರೀಪ್ರದೇಶದೊಳ್ ಮಹಾ ಸತಿಯಂ ರಥದಿಂದಿಟ್ಟಾಪಿ (ಪಂರಾಪಾ. ೧೫-೭೫ ಪ). [ಸಂ.]

ನಿರ್ಝರಜಲ (ನಾ). ಬೆಟ್ಟದ ರಭರಿಯ ನೀರು : ಗಿರಿದರೀವನಕ್ಕೆ ನಿರ್ಝರಜಲಾಭಿಷವಣಮನೊಡರ್ಚಿಯುಂ (ಮಲ್ಲಿಪು. ೪-೧೦೩).

[ನಿರ್ಝರ+ಜಲ$_2$]

ನಿರ್ಝರಪ್ಲವ (ನಾ). ಬೆಟ್ಟದ ರಭರಿಯ ಪ್ರವಾಹ : ಬಿದಱ್ ಮನಂ . . . ಮದಪ್ಲವಮಲ್ಲಿದು ನಿರ್ಝರಪ್ಲವಂ ಮದಗಜವಲ್ಲಿದಿಂದ್ರ ನೊಳಿದಿರ್ದ ನೀಲನಗೇಂದ್ರಮೆಂಬಿನಂ (ಪಂರಾಪಾ. ೧೦-೧೫೯).

[ನಿರ್ಝರ+ಪ್ಲವ]

ನಿರ್ಝರಿಣಿ (ನಾ). ಹೊಳೆ ; ತೊರೆ ; ನದಿ : "ಸಿಂಧೂ, ಸ್ರವಂತೀ, ತಟಿನೀ, ತರಂಗಿಣೀ, ನದೀ; ಧುನೀ, ನಿರ್ಝರಿಣೀ, ನಿಮ್ನಗಾ . . . ರೋಧೋವಕ್ತ್ರಾ— ಈ ೨೧ ತೊಜಿ" (ಹಲಾಯು. ೧೧೦-೧೩) ; ಪುಮುಂಕುತಿದೆ ಆ ತಪೋವನದ ನೇಮಿಯೊಳೊಂದು ನಿರ್ಝರಿಣಿ (ಶ್ರೀರಾಪಾ. ೧೩೨-೨೦೪) ; ಆನಂದದ ನಿರ್ಝರಿಣಿಯ ಜಲ ಧುಮ್ಮಿಕ್ಕಿ! (ಕೋಗಿಲೆ. ೩೬-೧೭). [ಸಂ. ನಿರ್ಝರಿಣೀ]

ನಿರ್ಝರೋದಕ (ನಾ). = ನಿರ್ಝರಜಲ : ಪಸಿದಾಗಲ್ ಪಣ್ಪಲಂಗಳಂ ತಿಂದು ನೀರಡಿಸಿದಾಗಳ್ ನಿರ್ಝರೋದಕಮಂ ಕುಡಿದು ಬಟಲ್ದಾಗಳ್ ರಮ್ಯಮಪ್ಪೆಡೆಗಳೊಳ್ ವಿಶ್ರಮಿಸುತ್ತುಂ (ಜೀಪಸಂ. ೫೬-೩೫ ಪ).

[ನಿರ್ಝರ+ಉದಕ$_2$]

ನಿರ್ಣಯ (ನಾ). ೧. ತೆಗೆದು ಹಾಕುವಿಕೆ. ೨. ತೀರ್ಮಾನ ; ತೀರ್ಪು ; ನಿರ್ಧಾರ : ಫಲುಗುಣನ ನಾವಿತ್ತಲೊಯ್ದರೆ ಬಳಿಕ ನಿರ್ಣಯವೆಂದು ಮನದಲಿ ತಿಳಿದು ಪಾರ್ಥಂಗೆಂದನಸುರಾರಾತಿ ಸಸುನಗುತ (ಕುಪ್ಯಾದ್ಯೋ. ೪-೨೭) ; ಈ ಬಗೆಯ ಉಚ್ಚಭಿನ್ನಾಭಿಪ್ರಾಯದಲ್ಲಿ ಯಾವುದೇ ನಿರ್ಣಯವನ್ನು ಕೊಡುವುದು ಕಠಿಣವಾಗುವುದು (ಧರ್ಮಸಾ. ೧೪೯) ; ನಾನು ಬಿಟ್ಟು ಬಂದಿದ್ದ ಜಗತ್ತಿನ ಅಭಿಪ್ರಾಯಗಳೂ ನಿರ್ಣಯಗಳೂ ನನ್ನ ಮನಸ್ಸಿನಲ್ಲಿ ಇನ್ನೂ ಹೊಸದಾಗಿದ್ದವು (ಸುಲೆನಾ. ೧೭೪). ೩. ಗೊತ್ತುವಳಿ ; ಠರಾವು : ಸಾರ್ವಜನಿಕ ಸಭೆಯಲ್ಲಿ ಸದಸ್ಯರು ಮಂಡಿಸಿದ ನಿರ್ಣಯವನ್ನು ಎಲ್ಲರೂ ಒಪ್ಪಬೇಕೆಂದು ಅಧ್ಯಕ್ಷರು ಸೂಚಿಸಿದರು (ರೂಢಿ). ೪. ನ್ಯಾಯಾಸ್ಥಾನ ಮೊದಲಾದುವುಗಳಲ್ಲಿಯ ವ್ಯಾಜ್ಯದ ತೀರ್ಪು. ೫. ನಿರ್ದಿಷ್ಟವಾದುದು; ನಿರ್ಧಾರವಾದುದು : ಅರ್ಜುನ ಜಾತನನೆ ಸಂಪೂರ್ಣತೆಯಿಂ ಸರ್ವವಿಷಯಭಾಷಾದಿಗಳಂ ನಿರ್ಣಯಮಾಗಱಿಪಿದೆನಿಂ ಕರ್ಣಾಟಕವಿಷಯಜಾತಿಯಂ ಕೇಳ್ ಪೇಟ್ಕೆಂ (ಭಂದೋಂಬು.೫-೨); ನೀಮೀ ಯತಿಸ್ವರೂಪಮಂ ಕೈಕೊಂಡ ವಾರ್ತೆಯಂ ನಿಮ್ಮ ಮುನ್ನಿನ ಧರ್ಮಪತ್ನಿಯಪ್ಪ ಸೋಮದತ್ತೆ ನಿರ್ಣಯಮಾಗಿ ಕರ್ಣಾಪರಂಪರೆಯಿನಱಿಪು (ಸುಕುಸಾ. ೫-೬ ಪ). ೬. ನಿಶ್ಚಿತಜ್ಞಾನ ; ನಿಶ್ಚಯಾತ್ಮಕವಾದ ಜ್ಞಾನ : ಶೀಲ ಶೀಲವೆಂದು ನುಡಿವ ಉದ್ದೇಶಿಪ್ರಾಣಿಗಳೆಲ್ಲರು ಅನಂತಶೀಲರು ಅಜಿನಿನ ನಿರ್ಣಯವನಱಿಯರು(ಚನ್ನ.ಪ.ಕ. ೪೦೨-೪೪೯). ೭. ವಿವರಣೆ ; ಸಮಜಾಯಿಷಿ : ನಂದ ಹೊನ್ನಿಂಗೆ ನಿರ್ಣಯಮಂ ಕೊಡುವುದು ಎಂದು ನಿರೋಧಮಂ ನುಡಿಯೆ ಬಸವಂ ಕೇಳ್ದು (ಬಸಪು. ೪-೧೧೬) ; ಪ್ರತಿಕೋಶಗಳ ನಿರ್ಣಯವರುಹಿದನು ಸುತಗೇ (ಗಗತಾ. ೧೪ ಸೂಚನೆ). ೮. [ನ್ಯಾಯ] ನ್ಯಾಯಶಾಸ್ತ್ರ ಕಾರರು ಹೇಳಿರುವ ಹದಿನಾರು ಬಗೆಯ ಪದಾರ್ಥಗಳಲ್ಲಿ ಒಂದು; ಪಕ್ಷ ಪ್ರತಿಪಕ್ಷಗಳಿಂದ ಚರ್ಚೆ ಮಾಡಿ ವಿಷಯವನ್ನು ತೀರ್ಮಾನಿಸುವುದು : ಗೌತಮೋಕ್ತ ನ್ಯಾಯವು ಪ್ರಮಾಣ ಪ್ರಮೇಯ ಸಂಶಯ ಪ್ರಯೋಜನ ದೃಷ್ಟಾಂತ ಸಿದ್ಧಾಂತ ಅವಯವ ತರ್ಕ ನಿರ್ಣಯ ವಾದ ಜಲ್ಪ ವಿತಂಡಾ ಹೇತ್ವಾಭಾಸ ಛಲ ಜಾತಿ ನಿಗ್ರಹಸ್ಥಾನಂಗಳೆಂಬ ಷೋಡಶ ಪದಾರ್ಥಂಗಳಂ ನಿರೂಪಿಸುತ್ತ (ವಿವೇಕ. ೧೨) ; ನ್ಯಾಯದರ್ಶನದಲ್ಲಿ ಪ್ರಮಾಣ ಪ್ರಮೇಯ ಸಂಶಯ ಪ್ರಯೋಜನ ದೃಷ್ಟಾಂತ ಸಿದ್ಧಾಂತ ಅವಯವ ತರ್ಕ ನಿರ್ಣಯ ವಾದ ಜಲ್ಪ ವಿತಂಡಾ ಹೇತ್ವಾಭಾಸ ಛಲ ಜಾತಿ ನಿಗ್ರಹಸ್ಥಾನ ಎಂದು ಹದಿನಾರು ಪದಾರ್ಥಗಳನ್ನು ನಿರೂಪಿಸಿರುವರು (ಹಿಂದುಸಾ. ೧೧೨).

ನಿರ್ಣಯ ಮಾಡು = ತೀರ್ಮಾನ ಮಾಡು ; ನಿರ್ಧರಿಸು : ಅದಪ್ಪು ಬೇಗನೇ, ಅವನಿಗೆ ಅದನ್ನು ದಾನಪತ್ರವೋ, ಉಯಿಲೋ ಮಾಡಿಕೊಡಬೇಕು—ಎಂದು ನಿರ್ಣಯ ಮಾಡಿದ್ದೇನೆ (ಬೆಟ್ಟಜೀ. ೧೪೧).

ನಿರ್ಣಯವಾಗು = ೧. ನಿರ್ಧಾರವಾಗು : ಅಹುದೋ ಅಲ್ಲವೋ ಎಂಬುದು ಮಾತ್ರ ಇನ್ನೂ ನಿರ್ಣಯವಾಗಬೇಕು (ಕುರುಕಾ. ೨೪). ೨. ಕ್ರಮಬದ್ಧವಾಗು ; ಆಯವರಿ ; ನಿಯಮಬದ್ಧವಾಗು : ಅಲ್ಲಿನ ಬೆಟ್ಟದ ಮೇಲೂ ಅದರ ಸುತ್ತಲೂ ನಿರ್ಣಯವಾಗಿ ಕಟ್ಟಿದ ಕೋಟೆ ಕೊತ್ತಲಗಳೂ, ಎಣ್ಣೆ ತುಪ್ಪವನ್ನು ತುಂಬುವ ಭಾವಿಗಳೂ . . . ನೋಡಲಾಗಿ, ಅಲ್ಲಿ ಅಳುತ್ತಿದ್ದ ದೊರೆಗಳ ಐಶ್ವರ್ಯ ಎಂಥಾದ್ದಾಗಿರಬಹುದೆಂದು ಆಶ್ಚರ್ಯ ಹುಟ್ಟಿತು (ಚಕ್ರಪಾ. ೪ ಪೀಠಿಕೆ). [ಸಂ.]

ನಿರ್ಣಯಂಬಡೆ (ಕ್ರಿ). ನಿಶ್ಚಯಿಸು; ನಿರ್ಧಾರಮಾಡು; ತೀರ್ಮಾನಿಸು : ಕಡುಬೆಲುವೊಪ್ಪೆ ಸಾರ್ದ ಪೊಸವೆಣ್ಣ ದನಾರಯೆ ಮುನ್ನಮೇಂ ಕರಂಬಿಡಿದನೊ ಮೇಣ್ ಕರಂಬಿಡಿಯೆನೋ ಎನುತಂ ಮನದಲ್ಲಿ ನಿರ್ಣಯಂಬಡೆಯದೆ . . . ಭೋಗಿಸಲ್ಕಮುಳಿಯಲ್ಕಮಣಂ ಬಗೆದಪೋಡಾರೆ ನಾಂ (ಶಾಕುಂತ. ೬೬-೧೧೯). [ನಿರ್ಣಯ+ಪಡೆ$_1$]

ನಿರ್ಣಯಕಾರ (ನಾ). ಸಾಧಿಸುವವನು ; ನಿರ್ಣಯಿಸುವವನು : "ಸಾದ್ಧಾ, ಸಾಧನ್, ಸಾಧಕಃ, ಸಾದ್ಧಃ, ಸಾಧವಾನ್, ಈ ೫ ನಿರ್ಣಯಕಾರಂ" (ಕಾಶಕೃ. ೧೪೬). [ಸಂ.]

ನಿರ್ಣಯಪ್ರಮಾಣ (ನಾ). ಅಂತಿಮ ತೀರ್ಮಾನ : ಪ್ರತಿಯೊಂದು ವ್ಯವಹಾರವೂ ನಾಲ್ಕು ಹಂತಗಳನ್ನು ಹೊಂದಬೇಕಾಗಿತ್ತು. ಅವು ಕ್ರಮವಾಗಿ . . . ಸಂಶಯಹೇತು ಪರಾಮರ್ಶ (Weighing of evidence) ಮತ್ತು ನಿರ್ಣಯಪ್ರಮಾಣ (Final conclusion) ಎಂದು ವಿಭಾಗಿಸಲ್ಪಟ್ಟಿದ್ದವು (ಭಾರದ. ೫೬). [ನಿರ್ಣಯ+ಪ್ರಮಾಣ]

ನಿರ್ಣಯವಿಹೀನ (ಗು). ನಿಶ್ಚಯವಾಗದ ; ತೀರ್ಮಾನವಾಗದ : "(ವಾದ, ನಿದರ್ಶನ, ಕ್ರಿಯೆ, ಮೊ.) ಒಂದು ಗೊತ್ತಿಗೆ ಬರದ, ತೀರ್ಮಾನವಾಗದ ; ನಿರ್ಣಯವಿಹೀನ" (Inconclusive. ಇಂಕನ್ನಿ).

[ನಿರ್ಣಯ + ವಿಹೀನ]

ನಿರ್ಣಯಾರ್ಥ (ನಾ). ನಿರ್ಧಾರವಾದ ಅರ್ಥವನ್ನುಳ್ಳುದು : ಪುರಜನಪದಶೈಲಾದಿತ್ಯಚಂದ್ರೋದಯಾಸ್ತಾಂತರ ಸಮ್ಯಗಗಣವ್ಯಾವರ್ಣನಾ ನಿರ್ಣಯಾರ್ಥಂ (ಕವಿರಾ. ೩-೨೧೧). [ನಿರ್ಣಯ + ಅರ್ಥ]

ನಿರ್ಣಯಿಸು, ನಿರ್ಣೈಸು, ನಿರ್ನೇಸು (ಕ್ರಿ). ೧. ಗೊತ್ತುಪಡಿಸು ; ತೀರ್ಮಾನಿಸು ; ನಿಶ್ಚಯಿಸು : ಜಯವನಿನ್ನಾಹವದೊಳಗೆ ನಿರ್ಣಯಿಸಬಹುದೆಮಗೆನುತ ಗುರು ಪಾಳಯಕೆ ನೇಮವ ಕೊಟ್ಟನು (ಕುಮ್ಯಾದ್ರೋ. ೨-೧೨); ಸೀರೆಯ ಬೆಲೆಯನು ಜನರು ನಿರ್ಣಯಿಪರು ಸೆರಗಿನ ಝರಿಯನು ನೋಡಿ (ಇಂಚಾಪ. ೨೦೮-೨೯); ಕರ್ಣಾಟಕ-ಕರ್ನಾಟಕಗಳಲ್ಲಿ ಕೊನೆಗೆ ಯಾವುದು ನಿಲ್ಲಬೇಕೆಂಬುದನ್ನು ಕಾಲಪುರುಷನು ನಿರ್ಣಯಿಸಲಿ (ದ್ರಾವಿವಿ. ೮೬). ೨. ವಹಿಸು; ಧರಿಸು : ಅರ್ಣವವೃತ ಭೂಭರಮಂ ನಿರ್ಣಯಿಸುವ ಪುತ್ರನಲ್ಲಿ ಗತಿವಡೆಯದೆ ಪೋಪರ್ (ಅರ್ಧನೇ. ೧-೧೧೯). ೩. ಪೂರೈಸು; ಮುಗಿಸು; ಕೊನೆಮುಟ್ಟಿಸು : ಹೇಮಸಂಪುಟದಲ್ಲಿ ವಿಷ್ಣುವಿಗ್ರಹ ಸಾಲಗ್ರಾಮದೇವರ ಪೂಜೆಗೆಯ್ದು ಪ್ರೇಮದಿ ನಿಖಿಲೋಪಚಾರವನರ್ಪಿಸಿ ನೇಮವ ನಿರ್ಣಯಿಸಿದರು (ಮೋಹತ. ೩-೪೭). **ನಿರ್ಣೈಸು** : ೧. ನಿಜತತ್ಸಾಯದ ಬೀಯದೊಂದು ಪರಿಯಂ ನಿರ್ಣೈಸಲಿತ್ತಂ ನೃಪಂ (ಮೈಸೂಮೆ. ೫-೬೦). ೨. ಈ ಸಕಲಸಾಮ್ರಾಜ್ಯಭಾರವನೀ ಸುಬಾಹುಧ್ವಂಸಿಯಲಿ ನಿರ್ಣೈ[ಪಾಠಾ.ನಿರ್ನೈ]ಸಿದಡೆ ನಿಶ್ಚಿಂತರಾವೆಂದರಸ ನೇಮಿಸಿದ (ತೊರರಾ. ೨-೧-೧೨). ೪. ವಿವರಿಸು; ವಿಶದಪಡಿಸು; ಸಿದ್ಧಾಂತೀಕರಿಸು: ಬಂಧುರವಹ ತರ್ಕಶಬ್ದಗಳ ನೆರೆದು ನಿರ್ಣೈಸಿ ತೋಱಿಸುವ ವಿದ್ವಾಂಸರ ಪರಿವಿಡಿ ಮೆಱೆದುದೇನೆಂಬೆ (ಕಂಸವಿ. ೮-೩೫). ೫. ತೀರಿಸು; ಸಲ್ಲಿಸು; ಸಂದಾಯಮಾಡು : ಅವಧಿಯಂ ಕೊಟ್ಟು ಚಿತ್ತವಿಟ್ಟನುಸರಿಸಿ ಕೊಂಬಿರಾದಡೆ ತಂದು ನಿರ್ಣೈಸಿ ಕೊಡುವೆನು (ಹಚಕಾ. ೮-೫೫). ೬. ನಾಶಪಡಿಸು; ಹಾಳುಮಾಡು : ಎದ್ದಿದಾರೋಯೆಂಬವರನೊಳಗುದ್ದಿನಲಿ ನಿರ್ಣೈಸಿ ಮೆಲ್ಲನೆ . . . ಸೀತೆಯ ಕದ್ದ ಕಳ್ಳನ ಖಳನ ಸೆಜ್ಜೆಯ ಸದನಕೈತಂದ (ತೊರರಾ. ೫-೨-೬೬); ನಿಂಬೆಯಂಬಟೆಮಾತುಳಂಗ ವಿಳಂಗನಾರಂಗ ಎಂಬ . . . ತರುನಿಕುರುಂಬವನು ನಿರ್ಣೈಸಿದನು ನಿಶ್ಶೇಷವೆನೆ ಹನುಮ (ತೊರರಾ. ೫-೪-೬). **ನಿರ್ನೇಸು** : ೪. [ಹೇ]ಮದೇವಾಚಾರ್ಯ್ಯರಿಗೆ ನಿರ್ನೇಸಿ ಕೊಟ್ಟ ಜಯಪತ್ರದ ಕ್ರಮವೆಂತೆಂದೊಡೆ (ಸೌಇಇ. XX, ೨೩೨-೧೧ ; 1412).

ನಿರ್ಣೈಸಿಕೊಳ್ = ತಡೆದುಕೊಳ್ಳು; ನಿಭಾಯಿಸಿಕೊಳ್ಳು : ಈ ಬಾಣವ ನಿರ್ಣೈಸಿಕೊಂಬಾತನ ಕಾಜೆನೆಂದೀಶ್ವರ ನುಡಿದು ಲಾಭಹತಿಯ ಮುಂಚಿ ತೆಗೆದುಕೊಳ್ಳೆನುತಬ್ಜನಾಭನನೆಚ್ಚು ಬೊಬ್ಬಿಱಿದ (ಮೋಹತ. ೩೯-೨೫). [ನಿರ್ಣಯ + -ಇಸು$_3$]

ನಿರ್ಣಾಮ (ನಾ). ಹೆಸರಿಲ್ಲದುದು ; ಸಂಪೂರ್ಣ ನಾಶ : ಅರ್ಣವೋಪಮ ಯೌವನಾಶ್ವ ಚತುರಂಗಮಂ ನಿರ್ಣಾ[ಪಾಠಾಂ. ನಾರ್]ಮವೆನಿಸಿ ವಾಜಿಗ್ರಹಣಕಾರ್ಯಮಂ ನಿರ್ಣಯಿಸಿ ಕೊಡುವೆನು (ಜೈಮಿಭಾ. ೨-೪೨); ಈ ಮೈಸೂರ ರಾಜ್ಯದ . . . ಹೆಸರೂ ನಿರ್ಣಾಮವಾಗಿ ಹೋಗುವುದು (ಸುಗುಗಂ. ೪೮-೨೨). [<ಸಂ. ನಿರ್ನಾಮನ್]

ನಿರ್ಣಾಮೋದಕ (ನಾ). = ನಿರ್ನಾಮೋದಕ : ಆ ಜರಗಮಕ್ಕೆ ನಮಸ್ಕರಿಸುವಂತಹದೇ ನಿರ್ಣಾಮೋದಕವೆನಿಸುವುದು (ಚನ್ನವ. ಕ. ೬೮-೧೭೩). [<ನಿರ್ನಾಮೋದಕ]

ನಿರ್ಣಾಯಕ (ಗು). ೧. ನಿರ್ಣಯ ಮಾಡುವ; ನಿರ್ಧಾರ ಮಾಡುವ; ಬಗೆಹರಿಸುವ : ರಾಮಾವತಾರದಲ್ಲಿ ತಾನು ಅರ್ಜಿಸಿದ್ದ ಪುಣ್ಯರಾಶಿಯನ್ನೆಲ್ಲ ಅರ್ಜುನನ ಆ ನಿರ್ಣಾಯಕ ಬಾಣಕ್ಕೆ ಎರೆದು ತೋಳು ಹೊಯ್ದು (ಬಿದುರೆ. ೬೨) ; ಸಾಮುದ್ರಿಕ ಹಾಗು ಸಂಸಾರ ಎರಡರಲ್ಲಿ ಒಂದನ್ನು ಉಳಿಸಿಕೊಳ್ಳುವ ಈ ನಿರ್ಣಾಯಕ ಪ್ರಸಂಗದಲ್ಲಿ, ಹೃದಯ-ಬುದ್ಧಿಗಳ ಹೋರಾಟದಲ್ಲಿ ನಾನು ಸೋತು ಸಂಸಾರವುಳಿಸಿಕೊಂಡೆ (ಗಾಳಿಪ. ೧೨೪); ನಿರ್ಣಾಯಕ ಅಂಶಗಳಿಲ್ಲದಿರುವಾಗ ಸಾಮಾನ್ಯವಾಗಿ ಒಂದು ಅಳಿಕೆಗೆ ಇಪ್ಪತ್ತೈದುವರ್ಷಗಳ ಕಾಲವನ್ನು ಕೊಡುವ ಸಂಪ್ರದಾಯವುಂಟು (ಕರ್ಣಾಅ. ೧೩) ; ಖಾಸನೀಸರ 'ತಬ್ಬಲಿಗಳು' ಕೆಲವು ತಬ್ಬಲಿಜೀವಗಳ ಅಂತಿಮವೆನ್ನಬಹುದಾದ ಒಂದು ನಿರ್ಣಾಯಕ ಕ್ಷಣದ ಕತೆ (ಹೊಸಕ್ಷಿ. ೨೯೩). (ನಾ). ೨. ನಿರ್ಧಾರಿತವಾದುದು; ಖಚಿತವಾದುದು : ನಿರ್ಣಾಯಕವಾದ ಘಳಿಗೆ ಸಮೀಪಿಸುವುದರಲ್ಲಿತ್ತು (ಪುನರು. ೧೮೯); ಮೇಲೆ ನಿರ್ದೇಶಿಸಿದ ಅಂಡಯ್ಯನ ಕಾಲವು ನಿರ್ಣಾಯಕವೆಂದು ತಿಳಿದುಕೊಳ್ಳಲು ಬರುವಂತಿಲ್ಲ (ಸಾಹಿಸ. ೧೫೧). ೩. ತೀರ್ಮಾನಿಸುವವನು ; ನಿರ್ಧರಿಸುವವನು : ಗುರುಸೂನು ಮೊದಲಾದ ನಾಯಕರು ದುಷ್ಕೀರ್ತಿನಾರಿಯ ನಾಯಕರು ಸುಪಲಾಯನದ ನಿರ್ಣಾಯಕರು ಮಝು ಪೂತುರೆಂದುದು ನಿಖಿಳಪರಿವಾರ (ಕುಮ್ಯಾಕ. ೧೩-೪೭); ದೊರೆತ ಸತ್ಯದಿಂದ ನಿರ್ಣಾಯಕರಿಗೇನೋ ಸಮಾಧಾನವಾಯಿತು (ಗ್ರಾಮಾಯ. ೮೭). [ಸಂ.]

ನಿರ್ಣಾಯಕತನ (ನಾ). ನಿರ್ಧರಿಸುವಿಕೆ ; ನಿಷ್ಕರ್ಷಿಸುವಿಕೆ ; ನಿರ್ಣಯಿಸುವಿಕೆ : ನಿರ್ಣಾಯಕತನವೇ ಕ್ರಿಯಾಶಕ್ತಿಯಾಗಿ, ಮೋಡವು ಭೂಮಿಯನ್ನಪ್ಪಿತ್ತು (ವಂಶವೃ. ೧೬೫). [ನಿರ್ಣಾಯಕ + -ತನ]

ನಿರ್ಣಾಯಕಮತ (ನಾ). (ಅಂತಿಮವಾಗಿ) ನಿರ್ಧರಿಸುವ ಮತ; ನಿರ್ಧಾರಕ ಅಭಿಮತ : ಉಭಯ ಪಕ್ಷಗಳ ಮತಗಳ ಸಮತೆಯು ಕಂಡುಬಂದ ಸಂದರ್ಭದಲ್ಲಿ ಅವರು ನಿರ್ಣಾಯಕಮತ ಕೊಡಲು ಅವರಿಗೆ ಅಧಿಕಾರವಿರತಕ್ಕುದು (ಭಾಧಾನ. ೪೮). [ನಿರ್ಣಾಯಕ + ಮತ]

ನಿರ್ಣಾಯಕಶಕ್ತಿ (ನಾ). ನಿರ್ಧಾರಮಾಡುವ ಸಾಮರ್ಥ್ಯ : ಸರಿಯಾದ ಪಾಠವನ್ನು ಆರಿಸಿಕೊಳ್ಳುವುದರಲ್ಲಿ ಇವನ ಉತ್ತಮ ಅಭಿರುಚಿಯೂ ನಿರ್ಣಾಯಕಶಕ್ತಿಯೂ ಮಿಗಿಲಾಗಿದ್ದುವು (ಕನ್ನಸಂ. ೨೬). [ನಿರ್ಣಾಯಕ + ಶಕ್ತಿ]

ನಿರ್ಣಿಕ್ತ (ಗು). ೧. ತೊಳೆದ ; ಶುಚಿಮಾಡಿದ ; ನಿರ್ಮಲವಾದ : ವರುಣಮಂತ್ರಾಕ್ಷರದ ಜಪಪರಿಕರಣದಲ್ಲಿ ನಿರ್ಣಿಕ್ತ ಚೇತಃಸ್ಫುರಣ ಸಲಿಲಸ್ತಂಭನವನವನೀಶ ಮಂತ್ರಿಸಿದ (ಕುಮ್ಯಾಗ. ೩-೪೨). ೨. (ಪಾಪ) ಪರಿಹಾರ ಮಾಡಿಕೊಂಡ ; ಪ್ರಾಯಶ್ಚಿತ್ತ ಮಾಡಿಕೊಂಡ. ೩. ನಿರ್ಧಾರಗೊಂಡ : ಸಕಳಕಳಾಭಾಷಾಲೌಕಿಕಸಾಮಯಿಕಾದಿವರ್ಣನಾನಿರ್ಣಿಕ್ತ ಪ್ರಕಟತರವಸ್ತುವಿಸ್ತರವಿಕಲ್ಪ(ವಿ)ದನಲ್ಲದಾಗದಾಗದು ಪೇಟಲ್ (ಕವಿರಾ. ೧-೨೮) ; ಅವನೀಪಾಳಾನತ ಶ್ರೀಪಾದಕಮಳಯುಗಂ ತತ್ವನಿರ್ಣಿಕ್ತರಾದ್ಧಾನ್ತವಿದಂ (ಸೌಇಇ. XX, ೫೦-೨೯; ?). [ಸಂ.]

ನಿರ್ಣೀತ (ಗು). ೧. ಗೊತ್ತುಮಾಡಿದ ; ನಿಶ್ಚಯಿಸಿದ ; ಒಪ್ಪಿತವಾದ : ಜಿನಚರಿತಮೆ ನಿರ್ಣೀತ[ಪಾಠಾಂ. ನಿರಕ್ತ]ಚಾರಿತ್ರಮಾದತ್ತೆನಸುಂ ವಿದ್ವಜ್ಜನಂ ಬಣ್ಣಿಸೆ (ಸುಕುಮಾ. ೧-೪೯). (ನಾ). ೨. ಗೊತ್ತಾದುದು ; ಖಚಿತವಾದುದು ; ನಿಶ್ಚಯಿಸಿದುದು ; ನಿರ್ಧರಿಸಿದುದು : ಆತತಸತ್ಕವಿಸಮಯಂ ಜಾತಿದ್ರವ್ಯಕ್ರಿಯಾಗುಣಾಶ್ರಯಮಸದಾಖ್ಯಾತಿ ಸದಕೀರ್ತನಂ ನಿರ್ಣೀತಂ ನಿಯಮಾರ್ಥಮೈಕ್ಯಮೆನೆ ನಾಲ್ಕುತೆಱಂ (ಕಾವ್ಯಾವ. ೮೪೫) ; ಮಹಾವೀರ ನಿರ್ವಾಣವು ಕ್ರಿ.ಪೂ. ೫೨೭ರಲ್ಲಿ ಆಯಿತೆಂದು ನಿರ್ಣೀತವಾಗಿದೆ (ತೀರ್ಥಕ. ೩೨) ; ಶತಕತ್ರಯಿಯ ಭರ್ತೃಹರಿಯ ಕಾಲವು ಇನ್ನೂ ಕಂಡಿತವಾಗಿ ನಿರ್ಣೀತವೂ ಆಗಿಲ್ಲ (ಮೂರುಉ. ೧೧೪). [ಸಂ.]

ನಿರ್ಣೀತಿ (ನಾ). ನಿರ್ಧಾರ ; ನಿರ್ಣಯ : ನೀತಿನಿರಂತರಾನುಗತವೃತ್ತಿವಿಕಲ್ಪಿತಮಂ ತದೀಯ ನಿರ್ಣೀತಿಯನೀತೆಱತ್ತು ತಱಿಸಲ್ಗೆ

ಬುಧೋತ್ತಮರುಕ್ತಿಪೂರ್ವಕಂ (ಕವಿರಾ. ೨-೧೦೧); ರೀತಿ ವಿನೂತವಸ್ತು ಕೃತಿಗೊಪ್ಪುವ ಮೆಯ್ ರಸಭಾವವೃತ್ತಿನಿರ್ಣೇತಿಯೆ ಜೀವಂ (ಕಾವ್ಯಾನ. ೬೮೦). [ಸಂ.]

ನಿರ್ಣೇಜಕ (ನಾ). (ಬಟ್ಟೆಗಳನ್ನು) ಮಡಿ ಮಾಡುವವನು ; ಮಡಿವಾಳ ; ಅಗಸ : "ನಿರ್ಣೇಜಕಃ, ರಜಕಃ — ಈ ೨ ಅಗಸಂ" (ಹಲಾಯು. ೯೭-೪೫೯). [ಸಂ.]

ನಿರ್ಣೇಜನ (ನಾ). ತೊಳೆಯುವಿಕೆ ; ಪ್ರಕ್ಷಾಳನ : ಆರು ತೊಳೆದರು ದೇವ ನಿನ್ನೀ ಚಾರುಚರಣನಖಾಗ್ರವನು ಮತ್ತಾರು ಧರಿಸಿದರಮಳ ನಖನಿರ್ಣೇಜನದ ಜಲವ (ನಿಭಾಗ. ೧೦-೬೮-೪೧). [ಸಂ.]

ನಿರ್ಣೇಜಿತ (ಗು). ತೊಳೆದ ; ಶುಭ್ರಮಾಡಿದ : ಸರಭಸೋನ್ಮಥಿತೋರು ಮಂದರ ಗಿರಿನಿಕರನಿರ್ಣೇಜಿತಾಂಗದ ಕರಕಮಲಕಂಕಣದ ಮಣಿಮುದ್ರಿಕೆಯ ಬೆರಳುಗಳ . . . ಸುಭೂರಿಭಾಗ್ಯದ ಲಕ್ಷಣದ ಮೂರ್ತಿಯನು ನೆನೆ (ನಿಭಾಗ. ೩-೧೩-೩೪). [ಸಂ.]

ನಿರ್ಣೇಯ (ನಾ). ನಿರ್ಣಯಿಸಬಹುದಾದುದು ; ನಿಶ್ಚಯಿಸಬಹುದಾದುದು : ಕಾಯ ನಿರ್ಣೇಯವದರೊಳು ಮನವನಿರ್ಣೇಯ (ಮಂಕುಕ. ೧೦೨). [ಸಂ.]

ನಿರ್ಣೈಸು 'ನಿರ್ಣಯಿಸು' ನೋ.

ನಿರ್ದಂಭ (ಗು). ಜಂಬವಿಲ್ಲದ ; ವಿನಯಶಾಲಿಯಾದ : ಕುಂಭಜನೀತೆಱದಿಂ ನಿರ್ದಂಭ ತಪಸ್ವಿಗಳ ಮೊಗ್ಗರಕ್ಕಂ ಸುಂದರ ಶಂಭುಚರಿತ್ರಮನೊರೆದಾರಂಭಿತ ಶಿವಭಕ್ತಿಯಿಂದಮೊಪ್ಪಿರ್ದನಣಂ (ಹಾಲಾಸ್ಯ. ೧-೩-೩೧). [ಸಂ.]

ನಿರ್ದಗ್ಧ (ಗು). ೧. ಸುಡದಿರುವ ; ಬೇಯದ. ೨. ಸಂಪೂರ್ಣವಾಗಿ ಸುಟ್ಟುಹೋದ ; ಪೂರ್ತಿಯಾಗಿ ಬೆಂದ : ಏಳು ತಂದೆ ಮುಕುಂದ ಕದನವ್ಯಾಳವಿಷನಿರ್ದಗ್ಧ ಧರಣೀಪಾಲವರ್ಗವ ತೋಱಿಸೆಂದಳು ತರಳೆ ಕೈಮುಗಿದು (ಕುಸ್ಯಾಗ. ೧೨-೧). [ಸಂ.]

ನಿರ್ದಯ (ಗು). ೧. ದಯೆಯಿಲ್ಲದ ; ಕರುಣೆಯಿಲ್ಲದ : ಸ್ವರ್ಗಲಕ್ಷ್ಮಿಯ ಮೇಲಟ್ಕಱೊಳಂದದೇಂ ನಲಿದನೋ ಸಂಭೋಗಸಮ್ಮರ್ದ ನಿರ್ದಯನಿಷ್ಪೀಡಿತದೇವವಾರವನಿತಾಬಿಂಬಾಧರಂ ಶ್ರೀಧರಂ (ಅದಿಪು. ೫-೭೧). (ನಾ). ೨. = ನಿರ್ದಯೆ ೧ : ಸಮಾಜವಾದದ . . . ಸಿದ್ಧಾಂತಗಳನ್ನೂ ಧೋರಣಗಳನ್ನೂ ಮಾರ್ಕ್ಸನು ನಿರ್ದಯವಾಗಿ ನಿರಂತರವಾಗಿ ಖಂಡಿಸಿ ಬರೆಯಬೇಕಾಗುತ್ತಿತ್ತು (ಮಾನಾವ. ೩೧). ೩. ದಯೆಯಿಲ್ಲದ ವ್ಯಕ್ತಿ ; ದಯಾಹೀನ : ತೊಟಲ್ವಂ ನಿರ್ದಯಂ ಮಾತುಗೇಳ್ವನುಮಲ್ಪಾಂಗನೆ ವೃದ್ಧೆಯೆಂಬಿವರೊಳೋತಿರ್ಪಂ ಮೃಗಪ್ರೋದ್ಭವಂ (ಜಾತತಿ. ೧೭-೧೦) ; ಏನು ಬರೆದೆಯೊ ಬ್ರಹ್ಮ ಎಂತು ನಿರ್ದಯನು (ಪುರಂದ. ಧಾ. ೨-೧ ಪಲ್ಲವಿ) ; ರಕ್ಕಸರನಿಬರೆಲ್ಲರುಂ . . . ಮಾಯಾವಿಗಳ್ನಿರ್ದಯಕೊಲೆಗಡಿಕರು ಹೊಕ್ಕ ಸಮರಕ್ಕೆ ಹಿಮ್ಮೆಟ್ಟರು (ಜೈಮಿಭಾ. ೧೬-೨೨). [ಸಂ.]

ನಿರ್ದಯತನ (ನಾ). ಅನುಕಂಪೆಯಿಲ್ಲದಿರುವಿಕೆ ; ಕರುಣೆಯಿಲ್ಲದಿರುವಿಕೆ ; ಕಠಿನಸ್ವಭಾವ : ಪಟ್ಟಣದ ಕ್ಷೇತ್ರ ದೊಡ್ಡದು, ಜನವಸತಿ ಬಹಳ. ಆದರೆ ವ್ಯಕ್ತಿ-ವ್ಯಕ್ತಿಗಳು ಸ್ವತಂತ್ರತೆಯ ನಿರ್ದಯತನವನ್ನು ಪ್ರದರ್ಶಿಸುತ್ತಿದ್ದರು (ಜಯಂತ. ೩೪೨); ಅವನ ನಿರ್ದಯತನಕ್ಕಾಗಿ ಕೋಪಗೊಂಡಿದ್ದ ಅವಳೇ ಮುಂದೆ . . . ಉಜ್ವಲವಾದ ಹೊಗಳಿಕೆಯ ಮಾತುಗಳನ್ನು ಬರೆದಿದ್ದಾಳೆ (ದೂರಸ. ೬೩). [ನಿರ್ದಯ + -ತನ]

ನಿರ್ದಯೆ (ನಾ). ೧. ಕಠಿಣತೆ ; ಉಗ್ರತೆ : ತರ್ದುಗಳಱಿಗುಂ ಬಱಟಿಯೊಳುರ್ದಿ ನೆಲಾವರೆಯ ಬೇರನಾಮಳಕಮುಮಂ ಬರ್ದಿಲಿಮಿಂಚಿಯ ರಸದೊಳ್ ನಿರ್ದಯೆಯಿಂದೊರೆಸಿ ಪೂಸೆ ದಿನಪಂಚಕದೊಳ್ (ಶಮದ. ೨೬೧ ಪ್ರಯೋ). ೨. ದಯೆಯಿಲ್ಲದವಳು ; ದಯಾಹೀನೆ : ಅಯಶಕ್ಕೀಡಾದ ನಿರ್ಲಕ್ಷಣೆಯನಶುಭೆಯಂ ನಿಷ್ಫಲೋತ್ಪನ್ನೆಯಂ ನಿರ್ದೆಯೆಯಂ . . . ಪಾಪೆಯಂ ನೀಂ ಬೆಸಗೊಳೆ ಫಲಮೇಂ ಪೇಟ್ ಮಹೀಪಾಲಚಂದ್ರಾ (ಕಾದಂಪೂ. ೯೫೭). [ಸಂ. ನಿರ್ದಯಾ]

ನಿರ್ದಲನ (ನಾ). ೧. ಒಡೆಯುವಿಕೆ ; ಸೀಳುವಿಕೆ. ೨. ನಾಶಗೊಳಿಸುವಿಕೆ. [ಸಂ.]

ನಿರ್ದಹಿಸು (ಕ್ರಿ). ೧. ಚೆನ್ನಾಗಿ ಸುಡು. ೨. ನಾಶಮಾಡು : ಬಹ ವಿಪತ್ತಿನ ಶರಕೆ ಜೋಡೆಂದಿಹುದಲಾ ಸುವಿವೇಕಗತಿ ನಿರ್ದಹಿಸದೇ ಶೋಕಾಗ್ನಿ ಧರ್ಮದ್ರುಮದ ಬೇರುಗಳ (ಕುಸ್ಯಾಗ. ೧೧-೧೨). [ನಿರ್- + ದಹಿಸು]

ನಿರ್ದಳಿತ (ಗು). ನಾಶಪಡಿಸಿದ ; ನಾಶಗೊಳಿಸಿದ : ಜಯಜಯ ಜನಾಧಾರ ನಿರ್ದಳಿತ ಸಂಸಾರ (ಅಜಿಪು. ೬-೧೫ ರಗಳೆ). [ಸಂ. ನಿರ್ದಲಿತ]

ನಿರ್ದಾಕ್ಷಿಣ್ಯ (ನಾ). ದಾಕ್ಷಿಣ್ಯವಿಲ್ಲದಿರುವಿಕೆ ; ನಿಸ್ಸಂಕೋಚ ಪ್ರವೃತ್ತಿ ; ಖಡಾಖಂಡಿತ : ಈ ಎರಡು ಸಂಗತಿಗಳಿಂದಲೂ ನಿರ್ದಾಕ್ಷಿಣ್ಯವಾಗಿ ಯುದ್ಧ ಮಾಡುವುದೇ ನಿಶ್ಚಿತವಾದಂತಾಯಿತು (ಭಾರವೀ. ೧೬) ; ಏನೂ ತಿಳಿಯದಿದ್ದರೂ ಎಲ್ಲವನ್ನೂ ತಿಳಿದವನಂತೆ ಮಾತನಾಡುವ ಪಾರ್ಥನ ಸ್ವಾರ್ಥಸ್ವಭಾವವನ್ನು ನಿರ್ದಾಕ್ಷಿಣ್ಯವಾಗಿ ಶ್ರೀಕೃಷ್ಣನು ಖಂಡಿಸುತ್ತಾನೆ (ಭಾರದ. ೧೧೨). [ಸಂ.]

ನಿರ್ದಾಟಿಸು 'ನಿರ್ಧಾಟಿಸು' ನೋ.

ನಿರ್ದಾಯ (ನಾ). ೧. ಅಖಂಡತೆ ; ಸಂಪೂರ್ಣತೆ : ಧೂರ್ಜಟಿಯ ಶರ . . . ನಿರ್ದಾಯದಲಿ ವಶವರ್ತಿಯಾಯ್ತೆನಗೆಂದನಾ ಪಾರ್ಥ (ಕುಸ್ಯಾಅ. ೧೧-೨೮) ; ಆ ಮಾಯೆಯಲಿ ನಿರ್ದಾಯದಿಂದೊಳಬಿದ್ದು ತೊಳಲುವ ಜೀವರಾಶಿಗಳ (ನಿಭಾಗ. ೧-೪-೩). ೨. ನಿರ್ಧಾರ ; ನಿಶ್ಚಯ : ಬೊಬ್ಬಿಱಿದು ವಿಪ್ರನಿಕಾಯ ಕುಣಿದುದು ಕಮಲಮುಖಿ ನಿರ್ದಾಯದಲಿ ಸೇರಿದಳು ಹಾರುವಗೆನುತ ಹರುಷದಲಿ (ಕುಸ್ಯಾಅ. ೧೫-೩೦) ; ಕಾಯಬಲ್ಲವನೊಬ್ಬನೇ ತಾನಾಯುವನು ನೀಗಾಡದಿರು ನಿರ್ದಾಯದಲಿ ನುಡಿ ಬೇಗ ಭಯ ಬೇಡೆಂದನಸುರೇಂದ್ರ (ತೊರರಾ. ೬-೪೯-೪೦) ; ಜೀಯ ಸಂದೇಹಮೇಕುಜ್ಜುಗಿಸು ಮಖಮಂ ಸಹಾಯಮಂ ಧನಮಂ ತುರಂಗಮಂ ನಿನಗೆ ನಿರ್ದಾಯದಿಂ ತೋಱಿಸಿದನೀ ಮುನಿಪನು (ಜೈಮಿಭಾ. ೨-೩೬). [ಸಂ.]

ನಿರ್ದಾಯಕ (ನಾ). ಪರಿಪೂರ್ಣನಾದವನು ; ಅಖಂಡನಾದವನು : ಬೀಯವಾಗುವ ತನುವಿನಲಿ ನಿರ್ದಾಯಕನು ನೀನಿರ್ದು ಅತಿಹಿರಿದಾಯಸಂಬಡಿಸುವರೆ (ಹರಿಸಾ. ೯೪). [ಸಂ.]

ನಿರ್ದಾಯವಱಿ (ಕ್ರಿ). ಕ್ರಮವನ್ನು ತಿಳಿ ; ರೀತಿಯನ್ನು ಗ್ರಹಿಸು ; ವಿಧಾನವನ್ನು ತಿಳಿ : ಪ್ರಾಯದೆ ಹಣ ತೆಗೆಯದ ಸೂಳೆ ಕೃಷಿಯ ನಿರ್ದಾಯವಱಿಯದ ಪಾದಜರು ಕಾಯವಿಡಿದ ಮೃತಜೀವಿಯಂದದೆ ಬಹುಳಾಯಸಗೊಳ್ವರು (ಕಂನವಿ. ೬-೧೫೪). [ನಿರ್- + ದಾಯ್ಯ + ಅಱಿ]

ನಿರ್ದಾಯಾದ್ಯ (ನಾ). ದಾಯಾದಿಗಳಿಲ್ಲದುದು : ಈಗಳಾಯ್ತು ಧರೆ ನಿರ್ದಾಯಾದ್ಯಮೆಂದಾ ಸುಯೋಧನನಾಳುತ್ತಿರೆ (ಪಂಪಭಾ. ೩-೩೨). [ಸಂ.]

ನಿರ್ದಾರಕ (ನಾ). ೧. ಒಡೆಯುವವನು ; ಸೀಳುವವನು. ೨. ಹಾಳು ಮಾಡುವವನು : ಶಂಭುವೆಂಬ ದಾರಕನುಂ ಜಿನಧರ್ಮನಿರ್ಧಾ[ರ್ದಾ]ರಕನುಮಾಗಿ ಮದ್ಯಮಧುಮಾಂಸಸೇವನೆಗೆಯ್ದು ನರಕತಿರ್ಯಗಾದಿ ಗತಿಗಳೊಳ್ ಪಲಕಾಲಂ ತಿರಿತಂದು (ಪಂರಾಮಾ. ೧೬-೩೮ ವ). [ಸಂ.]

ನಿರ್ದಾರಣ (ನಾ). ಒಡೆಯುವುದು ; ಸೀಳುವುದು : ಸಂತಸದಿಂದಂ ಮದಮುಣ್ಮೆ ವೈರಿಜನತಾ ನಿರ್ದಾರಣಂ ವಾರಣಂ(ಲೋಕೋಪ.೧೨–೨೧). [ಸಂ.]

ನಿರ್ದಾರಿತ (ಗು). ಒಡೆದ ; ಸೀಳಿದ : ರಣಕ್ಷಿತಿಹತಕ್ಷತ್ರಂ ಹತಕ್ಷತ್ರ ನಿರ್ದ್ದಯನಿರ್ದ್ದಾರಿತದೇಹಲೋಹಿತಪಯಶ್ಶಾತಾಸಿ ಶಾತಾಸಿ ದುರ್ಜ್ಜಯ ಧಾರಾಚಕಿತಾರಿರಕ್ಷಣ ಭುಜಾದಂಡಂ (ಎಕ. VI, ಚಿಕ್ಕಮ. ೧೬೧–೫೬ ; 1137). [ಸಂ.]

ನಿರ್ದಾರಿಸು (ಕ್ರಿ). ಒಡೆ ; ಸೀಳು : ಕೂರಿದರಪ್ಪ ಧನುರ್ಧರಬೀರರ ನಿದಿರೊಳ್ ನಿಶಾತಶರಹತಿಯಿಂ ನಿರ್ದಾರಿಸೆ ಸಮರಪ್ರಥಮಪ್ರಾರಂಭಂ ಪೋಲ್ತುದಂತಕಾಪೋಶನಮಂ (ಶಾಂತಿಪು. ೪–೧೦) ; ತಗರಾಗಿ ಪಳಂಚುವ ಪಂದಿಯಾಗಿ ನಿರ್ದಾರಿಪ . . . ಮಾಭೈರವನಾಗಿ ನುಂಗುವ ಮಹಾಸ್ತ್ರದಿ ನೆಚ್ಚು ಕಿರೀಟಿ ಕಾದಿದಂ (ಜಗವಿ. ೧೫–೨೧). [ನಿರ್ದಾರಣ + –ಇಸ್ಸು$_3$]

ನಿರ್ದಾಲನ, ನಿರ್ದಾಳನ (ನಾ). ೧. ನಿವಾರಣೆ ; ಪರಿಹಾರ : ಭೂತಗಳ ಪಾಲನೆಗೂ ಕಂಟಕಗಳ ನಿರ್ದಾಲನಕ್ಕೂ ದಯೆ ಎಂದು ಹೆಸರು (ಬ್ರಹ್ಮಬೇ. ೨೫೫). **ನಿರ್ದಾಳನ :** ೨. ನಾಶ : 'ನಿರ್ದಾಳಿಸು' ಪರಾ. [ಸಂ.]

ನಿರ್ದಾವ (ನಾ). ಬೆಂಕಿ ಇಲ್ಲದಿರುವ ಸ್ಥಳ ; ಕಿಚ್ಚಿಲ್ಲದಿರುವ ಸ್ಥಳ: ಕೊಂಡೊಯ್ದೆನ್ನನೊಂದು ನಿರ್ದಾವದಲ್ಲಿ [ಪಾಠಾಂ. ನಿವ್ವಾದಲ್ಲಿ] ನಿಱಿಸು ಮಹೀಶಾ (ನಳಚಂ. ೫೯೫). [ಸಂ.]

ನಿರ್ದಾಹ (ನಾ). ೧. ಉರಿಯುವಿಕೆ ; ಉರಿಯುವ ಕ್ರಿಯೆ. ೨. ಬಾಯಾರಿಕೆ ಇಲ್ಲದಿರುವಿಕೆ : "ಬಾಯಾರಿಕೆಯೇ ಇಲ್ಲದಿರುವುದು ; ಅತೃಷ್ಣೆ ; ನಿರ್ದಾಹ" (Adipsia. ಇಂಕನಿ). [ಸಂ.]

ನಿರ್ದಾಳನ 'ನಿರ್ದಾಲನ' ನೋ.

ನಿರ್ದಾಳಿಸು (ಕ್ರಿ). ೧. ನಾಶಮಾಡು ; ಹಾಳುಮಾಡು. ೨. ಕೊಲ್ಲು ; ಸಂಹರಿಸು : ಕಾವನನು ನಿರ್ದಾಳಿಸಾತನ ಭಾವಕೆಯ ಪ್ರಾರ್ಥನೆಗೆ ಮೆಚ್ಚುತ್ತಾವನವನನು ಮರಳಿ ಬದುಕಿಸಿದ (ಪಾರ್ವಪ. ೩–೫೨). [ನಿರ್ದಾಳನ (= ನಿರ್ದಾಲನ) + – ಇಸ್ಸು$_3$]

ನಿರ್ದಿಗಂತ (ನಾ). ಕ್ಷಿತಿಜವೆ ಇಲ್ಲದುದು ; ದಿಕ್ಕುಗಳನ್ನು ಮೀರಿದುದು : ಎಲ್ಲ ತತ್ತ್ವದೆಲ್ಲೆ ಮೀರಿ, ನಿರ್ದಿಗಂತವಾಗಿ ಏರಿ, ಓ ನನ್ನ ಚೇತನ, ಆಗು ನೀ ಅನಿಕೇತನ ! (ಅನಿಕೇ. ೬೦–೧೦). [ಸಂ.]

ನಿರ್ದಿಗ್ಧಿಕೆ (ನಾ). ಒಂದು ಬಗೆಯ ಸಸ್ಯ ; ಕರಮರಿಕೆಗಿಡ : "ಕರವಂದಂ ಕರವಂದಿಗೆ ಬಱುವಣೆ ನಿರ್ದಿಗ್ಧಿಕಾಖ್ಯೆ" (ವಸ್ತುಕೋ. ೩೭–೨೮). [ಸಂ. ನಿರ್ದಿಗ್ಧಿಕಾ]

ನಿರ್ದಿಶ (ನಾ). ದಿಕ್ಕಿಲ್ಲದಿರುವವನು ; ದೆಸೆಗೆಟ್ಟರುವವನು ; ನಿರ್ಗತಿಕ ; ಪರದೇಶಿ : ಹರಹರ ನಿರ್ದಿಶನು ತಾನಾದೆನಾವುದೊ ತನಗೆ ಗತಿಯಿನ್ನು (ನಿಭಾಗ. ೬–೨–೩೩) ; ಕೈಗಾವರಾರೋ ಹರ ಮಹಾದೇವ ನಿರ್ದಿಶರಿಗಿನ್ನೇನು ಗತಿ (ನಿಭಾಗ. ೮–೧೦–೨೮). [ಸಂ. ನಿರ್ದಿಶ್]

ನಿರ್ದಿಷ್ಟ (ಗು). ೧. ತೋರಿಸಿದ ; ನಿರ್ದೇಶಿಸಿದ ; ಗೊತ್ತಾದ : ಮೆಲ್ಲಗೆ ಎದ್ದು, ನಿರ್ದಿಷ್ಟವಾದ್ಯವನ್ನು ತಂದುಕೊಂಡು, ಸುಖೋಪವಿಷ್ಟೆಯಾಗಿ, ಮೀಂಟತೊಡಗುವಳು (ಬೆಟ್ಟಅ. ೧೧–೬) ; ಯಾವ ಪ್ರಶ್ನೆಯೇ ಆಗಲಿ, ನಿರ್ದಿಷ್ಟ ಉತ್ತರ ಬಯಸಿ ಮಕ್ಕಳ ಆಲೋಚನಾಶಕ್ತಿಯನ್ನು ಪ್ರಚೋದಿಸುವಂತಿರಬೇಕು (ಶಿಕ್ಷದ. ೨೭೯) ; ಈ ಮನೆ ಎಷ್ಟು ಸರ್ವಸಂಪನ್ನವಾಗಿದೆಯೆಂದರೆ ಕಸಪೊರಕೆಯನ್ನು ಇರಿಸುವುದಕ್ಕೆ ಕೂಡ ಅದರಲ್ಲಿ ಉಚಿತವಾದ ನಿರ್ದಿಷ್ಟವಾದ ಸ್ಥಾನವಿದೆ (ನಂಟರು. ೧೯). ೨. ನಿಶ್ಚಿತವಾದ; ನಿರ್ಧರಿಸಿದ; ಖಚಿತವಾದ : ಗುರುಲಘುರಚನೆಗೆ ನಿರ್ದಿಷ್ಟರೂಪಹೀನಾಧಿಕಾಕ್ಷರಂ ಛಂದದೊಳೊಂದಿರೆ ಭಿನ್ನವೃತ್ತಮೆಂಬುದು ದುರುಕ್ತಮತ್ಯಂತದೋಷಮಕ್ಕುಂ ಕೃತಿಯೊಳ್ (ಕಾವ್ಯಾವ. ೪೮೨). ೩. ವಿವರಿಸಿದ ; ವಿಶದೀಕರಿಸಿದ ; ಹೇಳಿದ. (ನಾ). ೪. ನೆಪ ; ನಿಮಿತ್ತ : "ಕೈತವಂ, ಕಪಟಂ . . . ನಿರ್ದಿಷ್ಟಂ, ವ್ಯಪದೇಶಃ – ಈ ೧೦ ನೆವಂ" (ಹಲಾಯು. ೧೧೬–೨೪) ; "ಕಪಟಂ ನಿಭಂ ಕೈತವಂ ಮೃಷಂ ನಿರ್ದಿಷ್ಟಮುಪಧಿ . . . ವ್ಯಪದೇಶಮೆನೆ ವ್ಯಾಜಮಕ್ಕುಂ" (ಪುಂಗರಾ. ೧೨೮–೧೦).

ನಿರ್ದಿಷ್ಟಪಡಿಸು = ಖಚಿತವಾಗಿ ಗೊತ್ತುಪಡಿಸು ; ನಿರ್ಧಾರಗೊಳಿಸು : ಮೇಲೆ ಹೇಳಿದ ಹದಿನಾಲ್ಕು ಭಾಷೆಗಳಲ್ಲೆಲ್ಲ ಉಪಯೋಗಿಸಬೇಕಾದ ಶಬ್ದಗಳನ್ನು ನಿರ್ದಿಷ್ಟಪಡಿಸಿದ ಒಂದು ಶಬ್ದಕೋಶವನ್ನೂ ಭಾರತಸರ್ಕಾರದವರು ಗೊತ್ತುಮಾಡಿದರು (ಭಾಧಾನ. ಪೀಠಿಕೆ). [ಸಂ.]

ನಿರ್ದಿಷ್ಟಕಾಲ (ನಾ). ಖಚಿತವಾದ ಕಾಲ ; ನಿರ್ಧಾರಿತವಾದ ಕಾಲ : ಈ ಶಾಸನಬದ್ಧಕಾಲಕ್ಕೆ ಆ ದೇಶದ ನಿರ್ದಿಷ್ಟಕಾಲವೆಂದು ಹೆಸರು (ನಕ್ಷತ್ರ. ೫೬). [ನಿರ್ದಿಷ್ಟ + ಕಾಲ]

ನಿರ್ದಿಷ್ಟತೆ (ನಾ). ಖಚಿತತೆ : ಪ್ರಕೃತವಿಷಯದ ವಿವರಣೆಯ ನಿರ್ದಿಷ್ಟತೆಗಾಗಿ, ಬಾಹ್ಯವಸ್ತುವನ್ನು ನಿರ್ದೇಶಿಸಿದೆವು (ಭಾವಗೀ. ೫). [ಸಂ. ನಿರ್ದಿಷ್ಟತಾ]

ನಿರ್ದಿಷ್ಟಿತ (ಗು). = ನಿರ್ದಿಷ್ಟ ೨ : ಇಷ್ಟಮಾಗಿರಲನ್ಯಕವಿನಿರ್ದಿಷ್ಟಿತಾರ್ಥಮನೊರೆವುದೊಂದುತೃಷ್ಟಮತಿಯ ನವೋಪಮೆಗಳಂ ತನ್ನೊಳಾಪನಿತ ಸೃಷ್ಟಿಸುತ್ತಿರವೇಳ್ಕು (ಬಸಪು. ೧–೧೩). [<ನಿರ್ದಿಷ್ಟ ?]

ನಿರ್ದುರಿತ (ನಾ). ಪಾಪರಹಿತನಾದವನು ; ಪುಣ್ಯಸ್ವರೂಪ : ನಿರವಯವಂ ನಿತ್ಯಂ ನಿರ್ದುರಿತನನಂತಪ್ರಬೋಧದರ್ಶನಸೌಖ್ಯಂ (ಯಶೋಚ. ೪–೨೦). [ಸಂ.]

ನಿರ್ದುಷ್ಟ (ಗು). ೧. ದೋಷರಹಿತವಾದ ; ಕಳಂಕವಿಲ್ಲದ ; ತಪ್ಪಿಲ್ಲದ. (ನಾ). ೨. ದೋಷರಹಿತವಾದುದು ; ತಪ್ಪಿಲ್ಲದುದು : ಮೇಲಿನ ವರ್ಗೀಕರಣವು ಶಾಸ್ತ್ರದೃಷ್ಟಿಯಿಂದ ನಿರ್ದುಷ್ಟವೂ ಆಗಿಲ್ಲ ಸರ್ವಗ್ರಾಹಿಯೂ ಆಗಿಲ್ಲ (ಭಾಷಾಶಾ. ೩೨) ; ನಿರ್ದಿಷ್ಟವೂ ಮತ್ತು ನಿರ್ದುಷ್ಟವೂ ಆದ ಪಾಂಡಿತ್ಯ ಮತ್ತು ಅನುಭವ ದೊರಕಿ . . . ಶಿಕ್ಷಣಕ್ಕೆ ಪಠ್ಯವಸ್ತುವನ್ನೂ ರೂಪಿಸಬೇಕಾಗುತ್ತದೆ (ಶಿಕ್ಷದ. ೧೭೯) ; ಒಂದು ವಾಕ್ಯವನ್ನು ಕನ್ನಡದಲ್ಲಿ ಪ್ರಾರಂಭಿಸಿ ಕನ್ನಡದಲ್ಲೇ ಮುಗಿಸಿದ ಬಳಿಕ ಮುಂದಿನ ವಾಕ್ಯಕ್ಕೆ ಇಂಗ್ಲೀಷನ್ನು ಶರಣುಹೊಕ್ಕರೆ ಅದು ನಿರ್ದುಷ್ಟವೆಂದೇ ಒಪ್ಪಿಕೊಳ್ಳಲಾಯಿತು (ನಂಟರು. ೨೩). [ಸಂ.]

ನಿರ್ದುಷ್ಟತನ (ನಾ). ದೋಷರಹಿತತೆ ; ಕಳಂಕವಿಲ್ಲದಿರುವಿಕೆ ; ತಪ್ಪಿಲ್ಲದಿರುವಿಕೆ : ರತ್ನಗಳ ತೇಜಸ್ಸು, ಆಕಾರ ಹಾಗೂ ನಿರ್ದುಷ್ಟತನಗಳಿಂದಲೇ ಅವುಗಳ ಬೆಲೆಯೆಷ್ಟೆಂಬುದನ್ನು ನಿರ್ಧರಿಸಲು ಸಾಧ (ರತ್ನಗೋ. ೨೫). [ನಿರ್ದುಷ್ಟ + – ತನ]

ನಿರ್ದುಷ್ಟತೆ (ನಾ). = ನಿರ್ದುಷ್ಟತನ : ಟೆನಿಸನ್ನನ ಪ್ರಕೃತಿನಿರೂಪಣೆಯಲ್ಲಿ ವಿಶಿಷ್ಟವಾಗಿ ಕಂಡುಬರುವ ವಿವರಗಳ ನಿರ್ದುಷ್ಟತೆಯನ್ನು ನಾವು ಗಮನಿಸಬಹುದು (ಸಾಹಿಪ್ರ. ೭೭). [ಸಂ. ನಿರ್ದುಷ್ಟತಾ]

ನಿರ್ದೆಶೆ (ನಾ). ದಿಕ್ಕಿಲ್ಲದಿರುವಿಕೆ.

ನಿರ್ದೆಶೆಯ ಮಾಡಿಕೊಳ್ಳು = ಬಯಲಾಗು : ಗುರುಲಿಂಗಜಂಗಮ ತಾನೆಯಾಗಿ ಮತ್ತೆ ತಾನೆಂಬುದೇನೂ ಇಲ್ಲದ ಪರಿಯ ನೋಡಾ ತನ್ನ ತಾ ನಿರ್ದೆಶೆಯ ಮಾಡಿಕೊಂಡು ನಿಜಪದವನೆಯ್ದಿಪ್ಪ ಪರಿಯ ನೋಡಾ (ಚನ್ನವ. ಕ. ೬೯೪–೮೩೬). **ನಿರ್ದೆಶೆಯಾಗು** = ಕಾಣದಂತೆ ಆಗು ; ಕಾಣದಾಗು : ರೌದ್ರವನು ವನದೊಳಗೆ ಹರಿ ಬಲಭದ್ರರಿಂತೆಸಗಿರಲು ತಾವರೆ ನಿದ್ರೆಗಭಿಮುಖವಾಯ್ತು ನಿರ್ದೆಶೆಯಾಯ್ತು ರವಿದೀಪ (ನಿಭಾಗ. ೧೦–೧೫–೩೬). [ನಿರ್ – + ದೆಶ್$_2$ (<ದೆಸ್$_2$)]

ನಿರ್ದೆಸೆ (ನಾ). ಒಂದು ಬಗೆಯ ಚರ್ಮರೋಗ : ನಿರ್ದಸೆಗೆ:— ಕಕ್ಕೇಬೇರ ತಿಗಡ ಶರ್ಕರೆ ಬೆರೆಸಿ ಮೆಲ್ಲಲು ನಿರ್ದೆಸೆ ಮಾಣ್ಗುಂ (ವೈದ್ಯವಿ. ೧೯೪). [?]

ನಿರ್ದೇಶ (ನಾ). ೧. ತೋರಿಸುವಿಕೆ ; ಸೂಚಿಸುವಿಕೆ ; ಗುರುತಿಸುವಿಕೆ. ೨. ಆಜ್ಞೆ ; ಅಪ್ಪಣೆ ; ನಿರ್ದೇಶನ : "ಆಪವಾದ, ಶಾಸನಂ, ಶಿಷ್ಟಿ, ನಿರ್ದೇಶಃ, ಆಜ್ಞಾ—ಈ ಆಜ್ಞೆಗೆ ಹೆಸರುಗಳು, ಹೀಗೆ ನಡಕೊಳ್ಳಬೇಕೆಂದು ಅಧಿಕಾರದಿಂದ ವಿಧಿಸಿ ಹೇಳುವಿಕೆ" (ಸಿದ್ಧಾಂತಿ. ೨೦೯) ; ನಾಮಾದಿ ನಿರ್ದೇಶಾದಿ ಸದಸದಾದಿಗತ್ಯಾದಿ ಪ್ರಮಾಣ ನಯ ನಿಕ್ಷೇಪ ಮಾರ್ಗಣಾವಿಷಯನುಮೆಂದಿವು ಮೊದಲಾಗೆ ಚೇತನಸ್ವಭಾವಾನು ಚಿಂತನಂ ತೃತೀಯಧರ್ಮ್ಯಂ (ಜಾವುಂರಾ. ೪೪೪) ; ಯೋಜನೆಗೆಳೂ . . . ಕಾರ್ಯಗತವಾಗುವಂತೆ ಮಾಡಲು ಕೇಂದ್ರ ಆದೇಶ ನಿರ್ದೇಶನಗಳ ಮೂಲಕವೂ . . . ಪ್ರೋತ್ಸಾಹಿಸಬೇಕು (ತಿಕ್ಷದ. ೭೬೪). ೩. ಹೇಳುವಿಕೆ ; ನಿರೂಪಣೆ : ಉಪಮಾನಾರ್ಥಾಪತ್ತ್ಯಾದಿಗಳಲ್ಲಿಯೆ ಅಂತರ್ಭಾವಮುಪ್ಪುದಱಂ ಪ್ರಮಾಣಾಂತರಸಂಖ್ಯಾನಿಯತ್ಯರ್ಥಂ ದ್ವಿವಚನ ನಿರ್ದೇಶಂ ಪ್ರಮಾಣಕ್ಕೆ ಮಾಡೆ ಪಟ್ಟತ್ತು (ತತ್ತ್ವಪ್ರ. ೫೩). ೪. ಘೋಷಿಸುವಿಕೆ. ೫. ವಿವರಣೆ ; ವಿಶದೀಕರಿಸುವಿಕೆ. ೬. ಮಾರ್ಗದರ್ಶನ. [ಸಂ.]

ನಿರ್ದೇಶಕ (ಗು). ೧. ಸೂಚನೆ ನೀಡುವ : "ನಿರ್ದೇಶಿಸುವ, ನಿರ್ದೇಶಕ" (Directive. ಪಕ್ಷಿನಿ. ೬೨). (ನಾ). ೨. ಕಾರ್ಯನಿರ್ವಾಹಕ ; ನಿಯಂತ್ರಕ ; ಆಡಳಿತಗಾರ : "ನಿರ್ದೇಶಕ, ನಿಯಂತ್ರಕ, ಡೈರೆಕ್ಟರ್" (Director. ಪಕ್ಷಿನಿ. ೬೨). ೩. ನಾಟಕ, ಚಲನಚಿತ್ರ ಮೊದಲಾದುವುಗಳಿಗೆ ಮಾರ್ಗದರ್ಶನ ನೀಡುವ ವ್ಯಕ್ತಿ ; ದಿಗ್ದರ್ಶಕ : ಅವಳು ನಿರ್ದೇಶಕರ ಮುಖ್ಯ ಕಾರ್ಯದರ್ಶಿನಿಯಾಗಿ ನೇಮಕಗೊಂಡಳು (ರೂಢಿ). [ಸಂ.]

ನಿರ್ದೇಶಕಮಂಡಲ (ನಾ). ಆಡಳಿತಗಾರರ ಸಮಿತಿ ; ನಿರ್ದೇಶಕರ ಸಮಿತಿ : ಅನೇಕ ಪಾಲುಗಾರರು ಒಂದೆಡೆ ಸೇರಿ, ತಮ್ಮ ಸಂಸ್ಥೆಯ ಆಡಳಿತವನ್ನು . . . ಕಾಯಲು ನಿರ್ದೇಶಕಮಂಡಲವೊಂದನ್ನು ಆರಿಸುತ್ತಾರೆ (ತಕ್ಕಪಿ. ೪೭). [ನಿರ್ದೇಶಕ+ಮಂಡಲ]

ನಿರ್ದೇಶಚಿಹ್ನೆ (ನಾ). ಸೂಚನೆ ಕೊಡುವ ಗುರುತು : ಇಂಗ್ಲೀಷ್ ಭಾಷೆಯು ಮೇಲ್ತುಟ್ಟೆಯಲ್ಲಿ ದೊಡ್ಡಕ್ಷರಗಳು . . . ಸಯುಕ್ತಾಕ್ಷರಗಳು, ನಿರ್ದೇಶಚಿಹ್ನೆಗಳು . . . ಅಡ್ಡಗೀಟುಗಳೂ ಇರುತ್ತವೆ (ಮುದ್ರಕ. ೨೩). [ನಿರ್ದೇಶ+ಚಿಹ್ನೆ]

ನಿರ್ದೇಶನ (ನಾ). ೧. ತಿಳಿಯಪಡಿಸುವಿಕೆ ; ಸೂಚಿಸುವಿಕೆ : ಮೂರುಬೆರಳನ್ನು ಮೂರು ಸಲ ತೋರಿಸಿದರೆ ಅವರಿಗೆ ಉತ್ತರ ಹೊಳೆಯುವುದು. ಹಾಗೆ ನೀಡುವ ಸಹಾಯವೇ ನಿರ್ದೇಶನ (ತಿಕ್ಷದ. ೪೩೧). ೨. ಮಾರ್ಗದರ್ಶನ : ಆ ಕಾಲದಲ್ಲಿ ಮಕ್ಕಳು ವಿವೇಚನೆಯ ನಿರ್ದೇಶನಗಳಿಗೆ ಅಷ್ಟಾಗಿ ಮಣಿಯಲಾರರು (ತಿಕ್ಷದ. ೬೧೮) ; ಮನೋವಿಜ್ಞಾನ ಎಂದರೆ . . . ವ್ಯಕ್ತಿ ಸಮಾಜಜೀವನದಲ್ಲಿ ಸುರಕ್ಷತೆ ಮತ್ತು ತೃಪ್ತಿಗಳಿಂದ ಭಾಗವಹಿಸಲು ನೆರವಾಗುವಂತೆ ನಿರ್ದೇಶನ ನೀಡಲು . . . ನೆರವಾಗುವ ಜ್ಞಾನ (ತಿಕ್ಷದ. ೪೦೪). ೩. ನಾಟಕ, ಚಲನಚಿತ್ರ ಮೊದಲಾದುವುಗಳಿಗೆ ನೀಡುವ ಮಾರ್ಗದರ್ಶನ ; ದಿಗ್ದರ್ಶನ : ಆ ಚಿತ್ರದ ನಿರ್ದೇಶನ ಯಾರದು ? (ರೂಢಿ). [ಸಂ.]

ನಿರ್ದೇಶಾರ್ಥಕ (ನಾ). ಅದು ಅಲ್ಲಿಯದು ಎಂದು ತೋರಿಸುವುದು,—ಸೂಚಿಸುವುದು ; ನಿರ್ದೇಶ ಮಾಡುವುದು : ನಿರ್ದೇಶಾರ್ಥಕವಾದ ಆಕಾರಕ್ಕೆ ಅಳ ಪದವಾದಾಗ—ಉದಾ :- ಆ ಅರಸಂ, ಆ ಆಳ್ (ಕ್ರಿವಿ. ೯). [ಸಂ.]

ನಿರ್ದೇಶಿಸು (ಕ್ರಿ). ೧. ತೋರಿಸು ; ಸೂಚಿಸು : ಹರಿದಾಸವಾಙ್ಮಯದಲ್ಲಿ ಅವರಿಗಿರುವ ಹಿರಿಯ ಸ್ಥಾನವನ್ನು ನಿರ್ದೇಶಿಸುವುದು (ಜಗವಾ. ೬) ; ಮುದ್ದೆಯಾಗಿ ಬಿದ್ದ ಅವಳ ಅವಸ್ಥೆ, ಅವಳ ಮನಸ್ಸಿನ, ಅವಳ ದೇಹದ ಅವಸ್ಥೆಯನ್ನು ನಿರ್ದೇಶಿಸುವಂತಿತ್ತು (ಕಮಸಿ. ೬೨೧) ; ಮನುಷ್ಯನಿಗೆ ಕೆಲವು ಸಾಮಾನ್ಯಗಳನ್ನು ಕೆಲವು ಸ್ವರಗಳಿಂದ ನಿರ್ದೇಶಿಸಿ ಹೇಳುವುದು ಸಾಧ್ಯವಾಗಿರಬೇಕು (ಪಪ್ಪುಸು. ೨೯). ೨. ಗುರುತಿಸು ; ಹೆಸರಿಸು : ಕನ್ನಡದಲ್ಲಿ ಹೊಸಕವಿತೆ ಸೊಂಪಾಗಿ ಬಿಗುರಿ ಫಲಿಸಿದ್ದನ್ನು ನೆನೆದರೆ "ಅಧುನಿಕಕರ್ನಾಟಕವಿಜೂತವನಜೈತ್ರ" ಎಂದು ಅವರನ್ನು ನಿರ್ದೇಶಿಸಬೇಕೆನ್ನಿಸುತ್ತದೆ (ಸಮೂಲೋ. ೨೬). ೩. ಅಪ್ಪಣೆ ಮಾಡು ; ಆಜ್ಞಾಪಿಸು : ಮಾಣಿಗೆ "ಎರಡು ಇಡ್ಲಿ ತಾ" ಎಂದು ನಿರ್ದೇಶಿಸಿದ ಯಜಮಾನ ದಿನಪತ್ರಿಕೆಯ ತಲೆಬರಹಗಳೆಡೆ ಕಣ್ಣೋಟಿಸುತ್ತಿದ್ದಾಗ ಪಕ್ಕದ ಕುರ್ಚಿ ಎಳೆದ ಸದ್ದಾಯಿತು (ಸಾಸ್ವಸ್ಮೃ. ೨೦೨). ೪. ವಿವರಿಸು : ಇಂತು ಮೋಹನೀಯಂ ಸತ್ವಸ್ಥಾನಂಗಳು ಪದಿನಯ್ದಪ್ಪುದೆಂದು ನಿರ್ದೇಶಿಸಲ್ಪಟ್ಟುವು (ಗೊಮ್ಮಸಾ. ೧೩೦-೯) ; ಅವುಗಳನ್ನು ಪರೀಕ್ಷಿಸಿದರೆ ಅವುಗಳಿಂದ ಬರುವ ಕೀಟಗಳ ಬಗೆಗಳನ್ನು ನಿರ್ದೇಶಿಸಬಹುದು (ಕೀಟಜೆ. ೯೬). ೫. ಮಾರ್ಗದರ್ಶನ ಮಾಡು,— ನೀಡು : ಹೆಚ್ಚು ಲಾಭಪ್ರದ ವಾಗುವಂತೆ ನಿರ್ದೇಶಿಸುವ ಎಂಜಿನಿಯರು ಬೇಕು (ತಿಕ್ಷದ. ೧೯೫). ೬. ನಾಟಕ, ಚಲನಚಿತ್ರ ಮೊದಲಾದುವುಗಳಿಗೆ ಮಾರ್ಗದರ್ಶನ ನೀಡು,— ಸೂಚನೆಕೊಡು ; ದಿಗ್ದರ್ಶನ ನೀಡು : ಆತನಿಗೆ ವಿಪರೀತ ತಲೆನೋವಿನಿಂದಾಗಿ ಮತ್ತೆ ಸ್ಟುಡಿಯೋಕ್ಕೆ ಹೋಗಿ ಚಿತ್ರವನ್ನು ನಿರ್ದೇಶಿಸುವುದು ಸಾಧ್ಯವಿಲ್ಲವೆನಿಸಿತ್ತು (ರೂಢಿ).

[ನಿರ್ದೇಶನ+— ಇಸು$_3$]

ನಿರ್ದೇಹ (ಗು). ೧. ದೇಹವಿಲ್ಲದ ; ಶರೀರರಹಿತವಾದ ; ಕಾಯವಿಲ್ಲದ : ಭಕ್ತನಧಿ ನಿರ್ದೇಹದೇಹಿ ವಿರಕ್ತಗತಿ ನಿರ್ನಾಮಿನಾಮಿ ಚದುಕ್ತಮತಿ ನಃಶಬ್ದಶಬ್ದ ವಿಭಾವಭಾವಿತನು (ಬಸವ. ೬-೫). (ನಾ). ೨. ದೇಹವಿಲ್ಲದಿರುವಿಕೆ ; ನಿರಾಕಾರ : ದೇಹವೆಂದಜುಯೆ ನಿರ್ದೇಹವೆಂದಜುಯೆ ಜಂತ್ರದ ಸೂತ್ರದಂತಿರ್ಪ ನಿಚ್ಚಟಗಿನ ಮೂರ್ತಿಯ ಪೋಡಾ (ಬಸಹೆ. ೨೪-೨೫೩). [ಸಂ.]

ನಿರ್ದೇಹಿ (ನಾ). ದೇಹವಿಲ್ಲದವನು ; ಕಾಯವಿಲ್ಲದವನು : ನಡ ಭೂಮಿರ್ನಡೆ ಜಲಂ ನಡ ತೇಜೋ ನಡ ವಾಯುರ್ನಡಾಕಾಶಃ ಇನೆಲ್ಲವು ಘಟಕ್ಕೆ ಸಂಬಂಧವಾಗಿ ಘಟ ಕೆಡುವುದು ಇಂತಹ ನಿರ್ದೇಹಿ ಶರಣಂಗಲ್ಲದೆ ಅಜುಯವಾರದು (ಚನ್ನಪ. ಕ. ೫೪೧-೧೨೯೩) ; ದೇಹಿಯೆನಬೇಡ ನಿರ್ದೇಹಿ ಜಂಗಮಲಿಂಗ ದೇಹಗುಣದಾಸೆಯಳಿದಡೆ ಅತ ನಿರ್ದೇಹಿ ಕಾಣಾಯ್ಯಾ (ಸರ್ವಜ್ಞ. ೧೪೯) ; ಶರಣ ದೇಹವಿದಿದು ಚರಿಸಿದಡೆಯೂ ಎಲ್ಲಾ ದೇಹಿಗಳಂತೆ ದೇಹಿಯಲ್ಲ ಶರಣನು ನಿರ್ದೇಹಿ (ಬಚಸಂ. ೫೩೬-೧೬ ಟೀಕು). [ಸಂ. ನಿರ್ದೇಹಿನ್]

ನಿರ್ದೈವ (ನಾ). ೧. ಅದೃಷ್ಟವಿಲ್ಲದವನು ; ದೈವಗೇಡಿ ; ದುರ್ದೈವಿ : ದೈವಬಲವೇ ಬಲವಲಾ ನಿರ್ದೈವರಂಗೈತಳಕೆ ಬಂದರೆ ಪರುಷ ಪಾಷಾಣ (ಕುವ್ಯಾದ್ರೋ. ೧೪೪-೪೬) ; ನಿರ್ದೈವರೇ ನಿಮ್ಮಂತೆ ನಾವೆನುತ . . . ಎಜಗಿದನು (ತೊರಂರಾ.೬-೧೪೪-೩೬). ೨. ನಾಸ್ತಿಕ : ಶಿವಭಕ್ತರಲ್ಲಿಯತಿವಿಶ್ವಾಸಿಗಳು ಯಜೋಮಾನಿಯ ನಲ್ಲರುಂಟಲ್ಲದಾ ದೇಶದೊಳು ನಿರ್ದೈವರಿಲ್ಲ ನೋಳ್ಪೆಡೆ ಭಾವಿಸಿ (ರಾಘಚ. ೧-೩೩). [ಸಂ.]

ನಿರ್ದ್ಯವಿ (ನಾ). ಅದೃಷ್ಟಹೀನ ; ದುರ್ದೈವಿ : ಈ ನೀಚ ನಿರ್ದ್ಯವಿಯನ್ ಎಂದುಂ ಜಗಿ ಜಗುಬಪ ವಜ್ರಸಮಸಂಕಲೆಗಳಿಕ್ಕಿ ಬೆಟ್ಟದೆಬ್ಬರದ ಮುಡಿಗೆ ಕಟ್ಟುವುದು (ಬಡ್ಡಸ್ಮ. ೧-೪). [ಸಂ. ನಿರ್ದ್ಯವಿನ್]

ನಿರ್ದೋಷ (ಗು). ೧. ದೋಷರಹಿತವಾದ; ಕಳಂಕವಿಲ್ಲದ. (ನಾ). ೨. ದೋಷರಹಿತವಾದುದು; ಕಳಂಕವಿಲ್ಲದುದು: ಸಭಾಸದರೆಲ್ಲಂ ಶ್ರೋತೃಗಳಾಗಿರೆ ನಿರ್ದೋಷಮಪ್ಪ ಬೀಣೆಯಂ ತಪ್ಪುದೆನೆ ಗಾಂಧರ್ವದತ್ತೆ ನಾಲ್ಕಯ್ದು ಬೀಣೆಯಂ ತಂದು ಮುಂದಿಕ್ಕೆ (ಚಾವುಂಪು. ೪೧೩); ಎರಡುಂ ವಿರುದ್ಧರಸಮೊಡವೆರಸಿರೆ ತದವಾಂತರಸ್ಥಮೊಂದನ್ಯರಸಂ ಪರಿಪುಷ್ಟಮಾಗೆಯುಂ ವ್ಯತಿಕರಣಂ ಮೇಣ್ ತಾಮವಾಗೆಯುಂ ನಿರ್ದೋಷಂ (ಕಾವ್ಯಾವ. ೮೩೩); ಯುಗಳಂಗಳೊಳೆ ಹ್ರಸ್ವಕ್ಕೆ ಹ್ರಸ್ವಂ ಪರಮಾದೊಡಂ, ದೀರ್ಘಕ್ಕೆ ದೀರ್ಘಂ ಪರಮಾದೊಡಂ, ನಿರ್ದೋಷಮಾಗಿ ಸವರ್ಣಸಂಜ್ಞೆ ವರ್ತಿಸುಗುಂ (ಶಮದ. ೬ ವೃತ್ತಿ); ಸಮರದಲಿ ಹೂಸಕದ ಛಲವೀಯಹಂಕೃತಿ ವಿಸಾಸಲಳಿದುದೆ ಶಿವಶಿವಾ ನಿರ್ದೋಷದಲಿ ಬಹುದೋಷವಿದು ವಿಪರೀತವಾಯ್ತೆಂದ (ಕುಮ್ಯಾಕ. ೨೬-೩೧); ಪ್ರತಿಪಾದಿಸಬೇಕಾಗಿರುವ ವಿಷಯ ನಿರ್ದೋಷವಾಗಿಯೂ ನಿರ್ವಿವಾದವಾಗಿಯೂ ಇರಬೇಕು (ಶಿಕ್ಷದ. ೨೬೮). ೩. ದೋಷವಿಲ್ಲದವನು; ಕಳಂಕರಹಿತನಾದವನು: ನಿರ್ದೋಷಂ ತಾಯುದರದೊಳಿರ್ದುಮುಪದ್ರವಮನೇನುಮಂ ಮಾಡನೆ (ಪಾರ್ಶ್ವಪು. ೧೪-೯); ಜಯಮಂಗಳಂ ನಿತ್ಯಶುಭಮಂಗಳಂ ಸಚ್ಚಿದಾನಂದ ಸರ್ವಗುಣಪೂರ್ಣಗೆ . . . ನಿತ್ಯಕಲ್ಯಾಣ ನಿರ್ದೋಷಗೆ (ಪುರಂದ. ೨-೨೩೧-೧). ೪. ರಾತ್ರಿಯಿಲ್ಲದವನು; ಕತ್ತಲೆಯಿಲ್ಲದವನು. ೨, ೪: ದಿವಾಕರನಂತೆ ನಿರ್ದೋಷಂ . . . ಎಂದು ಧರ್ಮಜನ ಧರೆ ಪೊಗಳುತಿರೆ (ಜೈಮಿಭಾ. ೨-೧೩). [ಸಂ.]

ನಿರ್ದೋಷತೆ (ನಾ). ೧. ದೋಷರಹಿತತೆ; ಕಳಂಕರಾಹಿತ್ಯ: ಸುಘೋಷೆಯೆಂಬ ಬೀಣೆಯಂ ತನ್ನಮೆನೆ ತಾನದಱ ನಿರ್ದೋಷತೆಯುಮನದಱ (ಬಂದ) ಸಂಬಂಧಮುಮನಱಿಪಳಪ್ಪುದಱಿಂ ತರಿಸಿ ಕುಡೆ (ಚಾವುಂಪು. ೪೧೪). ೨. ಕತ್ತಲೆಯಿಲ್ಲದಿರುವಿಕೆ. ೧, ೨: ಅತಿಶಯ ಪದಾರ್ಥನಿಕರಪ್ರತೀತಿಯಂ ಪಡೆದ ಪಾದವಿನ್ಯಾಸಂ ಭೂನುತಮಾಗದಲ್ತೆ ನಿರ್ದೋಷತೆಯಿಂದಲ್ಲದೆ ಸಮಂತು ಕವಿಗಂ ರವಿಗಂ (ಚಂದ್ರಪು. ೧-೪೭). [ಸಂ. ನಿರ್ದೋಷತಾ]

ನಿರ್ದೋಷಿ (ನಾ). ದೋಷವಿಲ್ಲದವನು; ಕಳಂಕರಹಿತನಾದವನು; ಪರಿಶುದ್ಧನಾದವನು: ಪಾಂಡುತನಯರ್ ನಿರ್ದೋಷಿಗಳ್ (ಪಂಪಭಾ. ೧೩-೯೦); ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ ಜೀವಜಾಲವಲ್ಲವೇ ಚರಾಚರವೆಲ್ಲಾ ಅದು ಕಾರಣ ಕೂಡಲಸಂಗನ ಶರಣರು ಲಿಂಗಕ್ಕರ್ಪಿಸಿ ಪ್ರಸಾದವ ಕೊಂಡು ನಿರ್ದೋಷಿಗಳಾಗಿ ಬದುಕಿದರು (ಒಸವ. ಕ. ೧೧೨೨); ತುಡುಕಿದ ದೋಷಿಯನಲ್ಲದೆ ಸಿಡಿಯದು ಘಟಸರ್ಪನಂತುಟಲ್ಲದೆ ತನ್ನಂ ತುಡುಕದ ನಿರ್ದೋಷಿಯುಮಂ ಸಿಡಿವುದು ಖಳಮುಖ ಘಟೋಗ್ರಜಿಹ್ವಾಸರ್ಪಂ (ಜಗವಿ. ೧-೧೨); ಸತತಂ ಶರಣಜನಪರಿತೋಷಿ ಕಾಲದ್ವೇಷಿ ನಿರ್ದೋಷಿ (ಒಸಪು. ೬-೪). [ಸಂ. ನಿರ್ದೋಷಿನ್]

ನಿರ್ದ್ರವ (ಗು). ೧. ತೇವವಿಲ್ಲದ; ಒಣಗಿದ: 'ನಿರ್ದ್ರವಜಿಹ್ವೆ' ಪರಾ. (ನಾ). ೨. ತೇವವಿಲ್ಲದಿರುವಿಕೆ; ದ್ರವವಿಲ್ಲದಿರುವಿಕೆ; ಒಣಗಿರುವಿಕೆ: ಮಣಿಮಕುಟದೊಲಹಿನ ನಾಲಗೆಯ ನಿರ್ದ್ರವದ ಮಾದ್ರಾಧೀಶನಿಂತೆಂದ (ಕುಮ್ಯಾಕ. ೫-೨೦); ಬಿಸಿಲ ಬೇಗೆಗೆ ಕಂದಿ ಕುಂದಿದ ಮುಸಡ ಮಸುಳಿಸಿದಂಗರೋಚಯ ಮುಸುಕುಕೆಂಪಿನ ಲೋಚನದ ನಿರ್ದ್ರವದ ನಾಲಿಗೆಯ . . . ಅಸಮವೀರರ ದೇವ ಧೈರ್ಯವಿಸಂಚ ಮನನಾದ (ತೊರರಾ. ೩-೮-೬೧). [ಸಂ.]

ನಿರ್ದ್ರವಕರಣ (ನಾ). ದ್ರವವನ್ನು ಹೋಗಲಾಡಿಸುವಿಕೆ,—ಇಂಗಿಸುವಿಕೆ; ಒಣಗಿಸುವಿಕೆ: "ನಿರ್ದ್ರವ[ಪಾಠಾಂ. ವೀ]ಕರಣ ತಂತುಗಳೊಳು ಪುರಿ" (ಶಬ್ದಮಂ, ೧೦೭). [ಸಂ.]

ನಿರ್ದ್ರವಜಿಹ್ವೆ (ನಾ). ಒಣಗಿದ ನಾಲಗೆ: ಉರು ಪರಾಕ್ರಮತೇಜ ಪಡುವಣತರಣಿಯಾದುದು ಧಟ್ಟಣೆಯ ಧರಧುರಕೆ ನಿರ್ದ್ರವಜಿಹ್ವೆಯಾದುದು ನಿಮಿಷನಿಮಿಷದಲಿ (ಕುಮ್ಯಾಸ. ೨-೧೧೩). [ನಿರ್ದ್ರವ + ಜಿಹ್ವೆ]

ನಿರ್ದ್ರುಮ (ನಾ). ಗಿಡ, ಮರಗಳು ಇಲ್ಲದಿರುವಿಕೆ: ಆ ಶಿಲೋಚ್ಚಯ ಕೊತ್ತಲಿಕ್ಕಿದ ಬಲದ ಬೊಬ್ಬೆಗೆ ಕಿತ್ತು ಹಾಱಿದವದ್ರಿ ನಿರ್ದ್ರುಮ[ಪಾಠಾಂ. ನಿರ್ದ್ರವ]ವಾಗಲಭ್ರದಲಿ ಹತ್ತಿದುದು ಕೆಂಧೂಳಿ (ತೊರರಾ. ೬-೪೨-೧೮). [ಸಂ.]

ನಿರ್ದ್ವಂದ್ವ (ಗು). ೧. ಎರಡಿಲ್ಲದ; ಒಂದೇ ಆದ: 'ನಿರ್ದ್ವಂದ್ವಭಾವ' ಪರಾ. ೨. ಅಸಮಾನವಾದ; ಅಪ್ರತಿಮವಾದ: ನಿಖಿಳ ನಿರಾಕುಳ ನಿರ್ದ್ವಂದ್ವ ನಿಳಿಂಪ ನಿರತಿಶಯ ಪರಮಾನಂದನಿಳಯಮುಮಪ್ಪ ಶ್ರೀನಿಲಯವಿಮಾನದೊಳಗೆ ಪಲ್ಯೋಪಮ ಪಂಚಕಾವಸಾನದೊಳಱುದಿಂಗಳಾಯುಷ್ಯಮುಂಟೆನೆ (ಶಾಂತಿಪು. ೬-೩೬ ವ). (ನಾ). ೩. ಸುಖ-ದುಃಖ, ಶೀತ-ಉಷ್ಣ, ಜನನ-ಮರಣ ಮೊದಲಾದ ದ್ವಂದ್ವಗಳಿಗೆ ಅತೀತವಾದುದು: ನಿರ್ದ್ವಯವೂ, ನಿರ್ದ್ವಂದ್ವವೂ ಆದ ಏಕಮೇವ ಅದ್ವಿತೀಯ ಬ್ರಹ್ಮವೊಂದೇ ವೇದವೇದಾಂತಗಳ ಅರ್ಥವೆಂಬುದು ಅದ್ವೈತ ಸಿದ್ಧಾಂತ (ಭಾರದ. ೧೩೧). ೪. ಸುಖ-ದುಃಖಗಳಿಗೆ ಅತೀತನಾದವನು; ನಿರ್ಲಿಪ್ತ: ನಿರವದ್ಯ ನಿರ್ಭಿನ್ನ ನಿರ್ದ್ವಂದ್ವ ನಿರ್ದೋಷ ನಿರಪೇಕ್ಷ ನಿಷ್ಕಾಮಿ ನಿಷ್ಕಳ ನಿರಾಕಾರ . . . ಪಂಪಾವಿರೂಪಾಕ್ಷ ಶರಣು(ಹಚಕಾ. ೧-೪); ನಿರವಧಿಕ ನಿರ್ಮಾಯ ನಿಸ್ಪೃಹ ನಿರುಪಮಿತ ನಿರ್ದ್ವಂದ್ವ . . . ನಿಷ್ಕಳ ಮಹೇಶ್ವರ ಕರುಣಿಸುವುದು (ಕುಮ್ಯಾಅ. ೬-೮೯); ನಾನೂ ದುಃಖಪಡಲಾರೆ, ನೋಡು. ಈಗ ನಾನೂ ನಿನ್ನಂತೆ ನಿರ್ದ್ವಂದ್ವನಾಗಿರುವೆ (ಜಯಂತ. ೩೧೬). ೫. ಏಕೈಕನಾದವನು; ಅಪ್ರತಿಮನಾದವನು; ಅದ್ವಿತೀಯ. [ಸಂ.]

ನಿರ್ದ್ವಂದ್ವಕ (ನಾ). ಸಾಂಸಾರಿಕ ದ್ವಂದ್ವಗಳನ್ನು ಮೀರಿದವನು: ಕಂದು ಕಲೆ ತನಗೆತ್ತಣದು ನಿರ್ದ್ವಂದ್ವಕನು ಮೃತಜಾತ ತಾನಲ್ಲೆಂದು ಕಂಡರವಂಗೆ ಪಾಪವಿಲೇಪವಿಲ್ಲೆಂದ (ಕುಮ್ಯಾಭೀ. ೩-೪೯). [ಸಂ.]

ನಿರ್ದ್ವಂದ್ವಭಾವ (ನಾ). ಎರಡಿಲ್ಲದ ಮನಸ್ಸು; ಏಕಚಿತ್ತ: ಆ ಕನ್ನೆ ತನ್ಮುನೀಂದ್ರಪಾದಾರವಿಂದದ್ವಂದ್ವದೊಳ್ ನಿರ್ದ್ವಂದ್ವಭಾವದಿಂ ವಿನೀತೋತ್ತಮಾಂಗೆ ಕೆಲದೊಳ್ ಕುಳ್ಳಿರ್ಪುದುಂ (ಸುಕುಮಾ. ೬-೩೯ ವ). [ನಿರ್ದ್ವಂದ್ವ + ಭಾವ್ಯ]

ನಿರ್ದ್ವಯ (ನಾ). ಯಾವಾಗಲೂ ಒಂದೇ ಆಗಿರುವುದು: ನಿರ್ದ್ವಯವೂ ನಿರ್ದ್ವಂದ್ವವೂ ಆದ ಏಕಮೇವ ಅದ್ವಿತೀಯ ಬ್ರಹ್ಮವೊಂದೇ ವೇದವೇದಾಂತಗಳ ಅರ್ಥವೆಂಬುದು ಅದ್ವೈತ ಸಿದ್ಧಾಂತ (ಭಾರದ. ೧೩೧). [ಸಂ.]

ನಿರ್ಧನ (ನಾ). ೧. ಏನೂ ಇಲ್ಲದಿರುವಿಕೆ; ಬಡತನ; ದಾರಿದ್ರ್ಯ: ೨. ಬಡವ; ದರಿದ್ರ; ನಿರ್ಗತಿಕ: ದಿನನಾಥಂ ಜನನೋದಯಕ್ಕೆ . . . ಐದಱೊಳಿರಲ್ ನಿರ್ನಂದನಂ ನಿರ್ಧನಂ (ಜಾತತಿ. ೧೮-೨); ಕೇಣದಿಂ ನಾಣೊಡೆಯನನೆಡೆಯೊಳ್ನಿರ್ಧನಂ ಮಾಟ್ಪಳ್ (ಲೀಲಾವ. ೨-೯೬). [ಸಂ.]

ನಿರ್ಧನತ್ವ (ನಾ). ಬಡತನ; ದಾರಿದ್ರ್ಯ: ಹಾಳೆನಿಸಿದುದು ಜೀಶವು ನಿರ್ಧನತ್ವವದಾದುದು (ತಿಮ್ಮಅ. ೧-೧೯). [ಸಂ.]

ನಿರ್ಧನಿಕ (ನಾ). ಹಣವಿಲ್ಲದಿರುವವನು; ಬಡವ; ದರಿದ್ರ: ನಿರ್ಧನಿಕ ಧನದ ಬಯಕೆಯಲ್ಲಿ ನಡೆವುತ್ತ ಎಡಹಿದ ಕಲ್ಲು ಪರುಷವಾದಂತಾಯಿತ್ತು (ಅವಚಂ. ೨೦೯-೯೪೦); ನಿರ್ಧನಿಕನಾಗಿಯು ಮತ್ತೆ ಬಿಡದೇ ದ್ಯೂತ ದುರ್ವ್ಯಸನ (ಕುಮ್ಯಾಸ. ೧೪-೨೪); ಮೃತನ ನಿರ್ಧನಿಕನ ನಡುವಿರುವಂತರ ವಾವುದೊ ಕಾಣೆನು ನಾನು (ಇಂಚಾವ. ೧೫೨-೫೦). [ಸಂ.]

ನಿರ್ಧರ (ನಾ). ದೃಢವಾದುದು ; ಸ್ಥಿರವಾದುದು : ಅಂಗದ ಮೇಲೆ ಲಿಂಗ ಸಂಬಂಧವಾದ ಬಳಿಕ ಪ್ರಾಣನ ಮೇಲೆ ಜ್ಞಾನ ನಿರ್ಧಾರವಾಯಿತ್ತು ನೋಡಾ (ಅಪಚಂ. ೧೬೮-೭೫೬) ; ಅನಿರುದ್ಧನ ತಹೆನೆಂದು ನಗುತ ನಿರ್ಧರವಾಗಿ ನಂಬುಗೆಯಿತ್ತು ಬೀಳುಕೊಂಡೆದ್ದಳು (ಮೋಹತ. ೩೧-೧೧). [ಸಂ.]

ನಿರ್ಧರಂಗೈ (ಕ್ರಿ). ತೀರ್ಮಾನಿಸು ; ದೃಢಪಡಿಸು : ರಾಜೇಂದ್ರ ನುಕ್ತಿಯನೆಂತಾನುಂ ಮನದೆಗೊಂಡು ನಿಜಮಹತ್ವದರ್ಶನಾರ್ಥಮಿದು ಶಿವಕೃತಮಕ್ಕುಮೆಂದು ನಿರ್ಧರಂಗೈದು (ರಾಜಶೇ. ೧೩-೨೬ ಪ). [ನಿರ್ಧರ+ಗೈ(<ಕೆಯ್$_1$)]

ನಿರ್ಧರಿಸು(ಕ್ರಿ).೧. ತೀರ್ಮಾನಿಸು; ನಿಶ್ಚಯಿಸು ; ನಿರ್ಣಯಿಸು : ಹರಿಯೆನೆ ಶಂಖ ಚಕ್ರಗಳಿಲ್ಲ ಸ್ಮರನೆನೆ ಆಲರಂಬಿಲ್ಲಿಂದ್ರನೆನಲು ಶರೀರದಿ ಕಣ್ಣುಗಳಿಲ್ಲವಾ ಜೀವಂಧರನೆಂದು ನಿರ್ಧರಿಸಿದಳು (ಜೀವಂಸಾಂ.೧೨-೩೪); ನರಚರಿತ್ರದ ರಾಮಚಂದ್ರಗೆ ಪರಿಣಯವ ಮಾಳ್ಪುಜ್ಜುಗವ ನಿರ್ಧರಿಸಿ ಪಯಣೋದ್ಯೋಗಮನನಾದನು ಸರಾಗದಲಿ (ತೊರರಾ. ೧-೧೨-೩) ; ಅರಮನೆಯೊಳಗಾದುದೆಂದರಾರೆಂದು ನಿರ್ಧರಿಸಬಹುದು ಹೊಸಕೃತಿಯ ವಿರಚಿಸಿದಾಕೆಯ ಹೆಸರ ಹೇಳೆಂದನು ದರಹಾಸದಿಂದ ಭೂವರನು (ಭರಚ. ೬-೬). ೨. ಸ್ವೀಕರಿಸು ; ಭುಜಿಸು : ಇಂತು ಸರ್ವದ್ರವ್ಯವನು ಲಿಂಗಕ್ಕಿತ್ತು ಲಿಂಗಕಾಯದಿಂದ ಭೋಗಿಸಿ ಲಿಂಗಕ್ಕೆ ಭೋಗಿಸಲಿತ್ತು ಆ ಪ್ರಸಾದವ ತಾ ನಿರ್ಧರಿಸಿ . . . ಪ್ರಸಾದಿಯಾದೆನಯ್ಯಾ (ಚನ್ನಪ. ೬೦-೧೩). [ನಿರ್ಧರ+-ಇಸು$_3$]

ನಿರ್ಧರ್ಮಿ (ನಾ). ಧರ್ಮಾಚರಣೆಯಿಲ್ಲದವನು ; ಧರ್ಮವಿಲ್ಲದವನು ; ಧರ್ಮಬಾಹಿರ : ಧರ್ಮಿ ನೀಂ ನಿರ್ಧರ್ಮಿ ನಾಂ ನಿಃಕರ್ಮಿ ನೀಂ ದುಷ್ಕರ್ಮಿ ನಾಂ ನೀಂ ಪಶುಪ ನಾಂ ಪಶುವು (ಒಸಪು. ೨೨-೬೦); ಮರ್ಮಭಕ್ತರನೇ ಕೊಲುವ ನಿರ್ಧರ್ಮಿಯಾತನು ಸೂನೆಗಾಱನು (ಒಸಪು. ೨೫-೩೧). [ಸಂ. ನಿರ್ಧರ್ಮಿನ್]

ನಿರ್ಧಾಟಣ (ನಾ). ೧. ಸೋಲಿಸುವಿಕೆ ; ಹಿಮ್ಮೆಟ್ಟಿಸುವಿಕೆ : 'ನಿರ್ಧಾಟಿಸು' ಪರಾ. ೨. ಸೋಲಿಸಿದವನು ; ಗೆದ್ದವನು : ಏಕಾಂಗವೀರ ಸಂಗ್ರಾಮಧೀರ ಪೊಂಬುಚ್ಚನಿರ್ದ್ಧಾಟಣ ಸಾವಿಮಲೆ ನಿರ್ಲೋಟಣ ವೈರಿಕಾಳಾನಳ (ಎಕ. II, ೧೪೩-೩೭ ; 1131). [ಸಂ.]

ನಿರ್ಧಾಟಿಸು, ನಿಜ್ಜಾಡಿಸು, ನಿರ್ಜಾಡಿಸು, ನಿರ್ದಾಟಿಸು, ನೀರ್ಜಾಡಿಸು (ಕ್ರಿ). ೧. ಹಿಮ್ಮೆಟ್ಟಿಸು ; ಪರಾಜಯಗೊಳಿಸು; ಸೋಲಿಸು : ರತಿಯಂ ನಿರ್ಧಾಟಿಪರ್ ಯೋಗಿಪುಂಗವರೆಂದಾ ಜಿನ ಮಂದಿರಕ್ಕೆ ಮಜ್ಜಿದುಂ ಪೋಗಂ ಪ್ರಸೂನಾಯುಧಂ (ಧರ್ಮನಾ. ೨-೧೦೬). ೨. ಧಿಕ್ಕರಿಸು ; ತಿರಸ್ಕರಿಸು ; ಅವಮಾನಿಸು : ಚೇದಿ ನಾಥಂ ಜಗನ್ನಾಥನಂ ನಿರ್ಧಾಟಿಸಿ ನುಡಿದ ಸಮಯದೊಳ್ (ಜಗವಿ. ೧೭-೪೬ ಪ). ೩. ಬಿಸುಡು ; ಎಸೆ : ಕಾಪಿನವರಂ ಕೊಂದು ನಿರ್ಧಾಟಿಸಿ ಕಳೆದು (ವರ್ಧಮಾ. ೨-೩೦ ಪ). **ನಿಜ್ಜಾಡಿಸು** : ೨. ಬಿಡು ಬಿಡು ಬೇಡ ಬೇಡಾಡಿತನದಿ ಬಂದು ಹಿಡಿದ ಸೆಱಗನೆಂದೆನುತ ನುಡಿದು ನಿಜ್ಜಾಡಿಸಿ ನಿಲ್ಲದಲ್ಲಿಂ ಪೊಱಮಡಲಡಿಯಿಡುವೆನೆಂಬಾಗ (ನೇಮಿಸಂ. ೧೯-೮೯). ೪. ಮೀರು ; ಅತಿಕ್ರಮಿಸು : ವೈರಿಜಜ್ಜಾರನಾ ಕವಾಟವನು ಜಜ್ಜರಿ ಮಾಡಲಾಗಳೆ ಕಿಚ್ಚು ಜಿಹ್ವೆಯ ನಿಜ್ಜಾಡಿಸುತ ಹಬ್ಬಿತೊಡನೆ (ಭರಚ. ೨೯-೭೬). **ನಿರ್ಜಾಡಿಸು** : ೧. ಪಕ್ಷಿವಾಹನನಂ ಗಜಾಸುರ ರಾಕ್ಷಸರು ನಿರ್ಜಾಡಿಸಿದಪುದನೀ ಕ್ಷಿತಿಯೆ ಬಲ್ಲುದು (ಒಸಪು. ೫೪-೩೭). **ನಿರ್ದಾಟಿಸು** : ೧. ದುರ್ಧರವೆನಿಪ ಕರ್ಮಾರಾತಿಗಳನ್ನು ನಿರ್ದಾಟಿಸಿ . . . ವರ್ಧಮಾನರಿಗೆಱಗುವೆನು (ತ್ರಿಪುಸಾಂ. ೧-೫) ; ನಿನ್ನ ತಂದೆ ಸೂರ್ಯಜಂಗೆ ವೈರಿಯಾಗಿರ್ದ ಯಮನೆಂಬನಂ ನಿರ್ದಾಟಿಸಿಯಾತನ ರಾಜ್ಯಮಂ ನಿನಗೆ ಕೊಟ್ಟು ಮಾಡಿದುಪಕಾರಮಂ ನೆನೆದು (ಪುಣ್ಯಾಸ್ರ. ೫-೫೩ ಪ) ; ತೋಟಿಗೆ ನಡೆದನು ತುರುಕಬಲವನು ನಿರ್ದಾಟಿಪಶೌರ್ಯ ಗರ್ವದೊಳು (ಕುರಾಸಾಂ. ೪೩-೬೭). ೨. ನೀಂ ಶ್ರೀಷೇಣನಾದಂದು ಸತ್ಯಭಾಮೆಯಂ ಮದುವೆನಿಂದೊಡೆ ತನ್ನಂ ನಿರ್ದಾಟಿಸಿ ಕಳೆಯೆ ಪೋಗಿಸತ್ತು (ಶಾಂತಿಪು. ೭-೪೨ ಪ) ; ಶಿವನೊಳ್ ದ್ವೇಷಮನುಚಿತಮೆಂದುಸಿರ್ದ ಮಾತ್ಯನಂ ನಿರ್ದಾಟಿಸುವುದಕೃತ್ಯಂ (ವೀರವಿ. ೭-೭೮) ; ನಿಮ್ಮ ಬೆಸದಿಂ ಮಧುರೆಗೆ ಪೋಗಿ ಜೈನಸಮಯಮಂ ನಿರ್ದಾಟಿಸಿ ಸವಣರಂ ಸಂಹರಿಸಿ . . . ಬರ್ಪಲ್ಲಿ (ತ್ರಿಪುವಿ. ೩೩-೧೫೦ ಪ). ೪. ಚಂದ್ರಸೂರ್ಯರನಿರದೆ ನಿರ್ದಾಟಿಪ ನಾಲ್ವತ್ತೆಂಟು ಕೋಟಿ ಪತಾಕೆಗಳಾ ಸೇನೆಯೊಳು ಸಘಾಟಿಯಿಂದೆತ್ತಿ ನಡೆದುದು (ಶ್ರೀಪಾಲ. ೧೩-೧೮೫). ೫. ಪೀಡಿಸು ; ಹಿಂಸಿಸು : ಎಮಗೆ ತಾಯೊಡಹುಟ್ಟಿದನು ನಿರ್ಮಮತೆಯಲಿ ನಿರ್ದಾ [ಪಾಠಾಂ. ದ್ರಾಂ, ರ್ಧಾ]ಟಿಸಿದನಾ ಕ್ರಮದಲೇ ಕಂಸಂಗೆ ಹಿಂಸಾಕೃತಿಯ ರಚಿಸಿದೆವು (ಕುಪ್ಯಾಗ. ೫-೧೦). ೬. ತಡೆ ; ಅಡ್ಡಿಪಡಿಸು : ಊಟದ ನೆವದಿಂದೆದ್ದು ದಾಟ ನೀ ಪೋಗಲು ಬಿಡೆನೆನುತಲಿ ನಿರ್ದಾಟಿಸಿ ಪಿಡಿದಳು ಸೆರಗ (ಜಿನರಾ. ೪-೭೧). **ನೀರ್ಜಾಡಿಸು** : ೪. ಇದುಮದಲ್ಲದೆ ಹರಿಯಜೇಂದ್ರತ್ರಿದಶರಂ ನೀರ್ಜಾಡಿಸು [ಪಾಠಾಂ. ನೀಚಾಡಿಸು]ವ ರೆಂಬುದು ವಿಚಿತ್ರಮೆ . . . ನೀ ನೋಡು ತತ್ ಪ್ರಮಥರ ಮಹತ್ವವನು (ಒಸಪು. ೮-೫೧). [ನಿರ್ಧಾಟಣ+-ಇಸು$_3$]

ನಿರ್ಧಾಮಧೂಮ (ನಾ). ೧. ಕಿಂಚಿತ್ತೂ ಹೊಗೆಯಾಡಲು ಅವಕಾಶವಿಲ್ಲದಿರುವಿಕೆ. ೨. ಸರ್ವನಾಶವಾಗುವಿಕೆ; ಸರ್ವನಾಶ : ಆ ಮಹಾಭೂತದ್ವಯದ ಸಂಗ್ರಾಮದಲಿ ನಿಜಬಲವನಧಿ ನಿರ್ಧಾಮಧೂಮವೆನಲ್ಕೆ ಕೆಡುವುದ ಕಂಡು ಕಳನೊಳಗೆ (ನಿಭಾಗ. ೧೦-೫೯-೧೦). 'ನಿರ್ಧೂಮಧಾಮ' ಹೋ. [ಸಂ.]

ನಿರ್ಧಾಮಧೂಮಂ (ಅ). ೧. ಕಿಂಚಿತ್ತೂ ಹೊಗೆಯಾಡಲು ಅವಕಾಶವಿಲ್ಲದಂತೆ. ೨. ಸರ್ವನಾಶವಾಗುವಂತೆ : ಅರಸನಜಾದಾಳ್ವ ನಗರದ ತರುಣಿಯರುಡೆಯುರ್ಚಿದೊಂ . . . ಏಂ ಸೂರನೊ ಚೇಕಃಪುರಮಂ ನಿರ್ಧಾಮಧೂಮಮಾಗಿರೆ ಸುಟ್ಟಂ (ಅರ್ಧನೇ. ೫-೨). [<ನಿರ್ಧಾಮಧೂಮ]

ನಿರ್ಧಾರ (ನಾ). ನಿಶ್ಚಯ ; ತೀರ್ಮಾನ : ನಿರ್ಧಾರವಾಗಿ ಎನ್ನಯ ಸೌಮನಸಿನೊಳಿರ್ದ ಸೂತನಯುಕ್ತಿಯಿಂದ ಮುದ್ದಾಗಿ ಪೇಳುವೆ ಶ್ರೀಕೃಷ್ಣಮೊಮ್ಮನಿರುದ್ಧನ ಚಾರಿತ್ರಗಳನು (ಮೋಹತ. ೧-೩೫) ; ತದ್ದಿನ ದೊಳಣುಗನಂ ತಂದಬ್ಧಿಯೊಳು ಬಿಸುಟೆ ನಿರ್ಧಾರಮೆನಲು ನಾರದನೆಂದ (ನಸಮೋ. ೧೨-೨೯) ; ನಾನಿಂತು ನಿರ್ಧಾರ ಮಾಡಿಹೆನೀ ದಿನ ಹಣವಿಲ್ಲದವನೇ ದೀನ (ಇಂಚಾಪ. ೧೫೬-೬೭) ; ಮುಖವು ಸಾಹಸದ ಕೆಲಸ ಮಾಡುವೆನೆಂಬ ನಿರ್ಧಾರ ಸೂಚಿಸುವಂತಿತ್ತು (ಜೀವರಂ. ೨೨). [ಸಂ.]

ನಿರ್ಧಾರಕ (ಗು). ೧. ನಿರ್ಧರಿಸುವ. (ನಾ). ೨. ನಿರ್ಧರಿಸುವವನು. [ಸಂ.]

ನಿರ್ಧಾರಣ (ನಾ). ೧. ನಿರ್ಣಯ ; ನಿಶ್ಚಯ. ೨. ವಿವರಣೆ ; ಸ್ಪಷ್ಟೀಕರಣ: "ಸಮಾಧಾನ, ನಿರ್ಧಾರಣ, ವ್ಯಾಖ್ಯೆ" (Explanation ಪಾರಿಸಿ. ೪೦). ಪುದಿಗುಂ ನಿರ್ಧಾರಣದಲ್ಲದೆಯೆಂಬ ದೆಕಾರದೆಡೆಗೆ ಪಿರಿದುಂ ಲೋಪಂ (ಶಮದ. ೪೭). ೩. [ವ್ಯಾಕ] ಅನೇಕ ವ್ಯಕ್ತಿ, ವಸ್ತು ಮುಂತಾದುವುಗಳಲ್ಲಿ ಒಬ್ಬನನ್ನು ಅಥವಾ ಒಂದನ್ನು ಪ್ರತ್ಯೇಕಿಸಿ ಹೇಳುವುದು : ಕಾರಕಮಾಱು ಕರ್ಮಕರಣಾದಿಕದಿಂ ಪ್ರಥಮಾದಿಭೇದ ನಿರ್ಧಾರಣ[ಪಾಠಾಂ.ನಿರ್ಧಾರ]ದಿಂದದಂ ಪಿಡಿದು ನಿಲ್ವ ವಿಭಕ್ತಿಗಳೇಟ್ ನಿಕ್ಕುಂ (ಕವಿರಾ. ೧-೧೧೪) ; ಸಜಾತೀಯಂಗಳಾದವುಗಳಲ್ಲಿ ಕ್ರಿಯೆಯಿಂದಲಾಗಲಿ ಗುಣದಿಂದಾಗಲಿ ಯಾವದು ನಿರ್ಧರಿಸಲ್ಪಡುತ್ತದೊ ಅದು ನಿರ್ಧಾ

ರಣವು. ಅದರಲ್ಲಿ ಷಷ್ಠೀ ಸಪ್ತಮೀ ವಿಭಕ್ತಿಗಳೆರಡೂ ಪ್ರಯೋಗಿಸಲ್ಪಡುವವು (ಭಾಷಾಭೂ. ೮೯ ತಾತ್ಪರ್ಯ). [ಸಂ.]

ನಿರ್ಧಾರಣೆ (ನಾ). ತೀರ್ಮಾನ; ನಿಶ್ಚಯ; ನಿರ್ಧಾರ : ತಮ್ಮ ಎಡಗಣ್ಣನ್ನು ಕಿತ್ತು ಲಿಂಗಕ್ಕಿಡುವದಕ್ಕೆ ನಿರ್ಧಾರಣೆ ಮಾಡಿಕೊಂಡವರಾಗಿ, ತಮ್ಮ ಕಣ್ಣನ್ನು ಕಿತ್ತು (ಪುರಾವಿ. ೮೮); ಆದರೂ ಅಂತಹ ಅಜ್ಞೇಯ ವಸ್ತುಗಳ ಚರ್ಚೆ – ವಿಮರ್ಶನೆಯು ವ್ಯರ್ಥವಲ್ಲ. ಕರ್ತವ್ಯ ನಿರ್ಧಾರಣೆಗೆ ತುಂಬ ಸಹಕಾರಿ (ಜೀವಾತ್ಮ. ೮). [ಸಂ. ನಿರ್ಧಾರಣ]

ನಿರ್ಧಾರಿತ (ಗು). ೧. ನಿಶ್ಚಿತವಾದ; ಸ್ಪಷ್ಟವಾದ; ನಿರ್ದಿಷ್ಟವಾದ: ನಿರ್ಧಾರಿತಕ್ರಮದೆ ಪೇಳ್ವೆನುದಾಹರಣಂಗಳಂ (ಕವಿರಾ. ೧–೧೨೫); ನಿಷ್ಕೃಷ್ಟ ಅಥವಾ ನಿರ್ಧಾರಿತ ಕಾಲಮಾನ (Standard Time)– ಸ್ಥಳೀಯ ಕಾಲಮಾನ ರೀತ್ಯಾ ಒಂದೊಂದು ಊರಿಗೆ ಒಂದೊಂದು ಕಾಲ ಏರ್ಪಡುತ್ತಾ ಬಂದಲ್ಲಿ ಬಹಳ ರಗಳೆಗಿಡುತ್ತದೆ (ಭೂವಿಸ. ೨೦). (ನಾ). ೨. ನಿರ್ದಿಷ್ಟವಾದುದು; ನಿಶ್ಚಿತವಾದುದು; ಸ್ಪಷ್ಟವಾದುದು : ಇತರೇತರ ಕಾರಕ ಸಂಪ್ರತಿಪತ್ತಿ ಪರಸ್ಪರಂ ಸಮೂಹದೊಳೆಸೆವೊಂದತಿಶಯ ಗುಣದಿಂ ನಿರ್ಧಾರಿತಮಪ್ಪುದು ಸಾರಮೆಂಬ ಸದಲಂಕಾರಂ (ಕಾಪ್ಯಾಸ. ೬೫೮). [ಸಂ.]

ನಿರ್ಧಾರ್ಯ (ಗು). ೧. ಗೊತ್ತುಮಾಡಬೇಕಾದ. ೨. ನಿರ್ಣಯಿಸಲಾಗುವ. ೩. ದಿಟ್ಟತನದಿಂದ ವರ್ತಿಸುವ; ನಿರ್ಧಾರ ವೃತ್ತಿಯ. (ನಾ). ೪. ದಣಿವಿಲ್ಲದುದು; ನಿರಾಯಾಸವಾದುದು. ೫. ಅಳುಕಿಲ್ಲದೆ ಕೆಲಸ ಮಾಡುವವನು; ದಿಟ್ಟತನದಿಂದ ಕೆಲಸ ಮಾಡುವವನು : "ನಿರ್ಧಾರ್ಯಃ, ಸತ್ವಸಂಪದಾ, ಆಪತ್ಸಂಪದಗಳಲ್ಲಿ ಒಂದೇ ರೀತಿಯಾಗಿರುವ ಧೈರ್ಯಸಂಪತ್ತುಗಳ ಸಂಗಡ, ಸಂಪನ್ನಃ – ಕೂಡಿಕೊಂಡಿದ್ದವನಾಗಿ, ಯಃ – ಯಾವನು, ಕಾರ್ಯಕರ್ತಾ–ಕಾರ್ಯವನ್ನು ಮಾಡುವನೋ ಅವನ ಹೆಸರುಗಳು" (ಸಿದ್ಧಾಂತಿ. ೩೨೫). [ಸಂ.]

ನಿರ್ಧಾವನ (ನಾ). ೧. ಮುನ್ನುಗ್ಗಿ ಹರಿಯುವಿಕೆ; ಹೊರ ಹೊಮ್ಮುವಿಕೆ. ೨. ಶುದ್ಧೀಕರಣ; ನಿರ್ಮಲಗೊಳಿಸುವಿಕೆ [ಸಂ.]

ನಿರ್ಧಾಸ್ತ (ಗು). ೧. ನಿರಾಳವಾದ; ನಿಶ್ಚಿಂತವಾದ; ನಿರಾತಂಕವಾದ. (ನಾ). ೨. ನಿಶ್ಚಿಂತ ವ್ಯಕ್ತಿ; ನಿರಾಳ ಮನಸ್ಕ : ವಾಡೆಯ ಕ್ಷೇಮ ತನಗೆ ಹತ್ತಿತೆಂದು ರಾಚಪ್ಪ ಹೇಳಿದ್ದರಿಂದ, ಕಾಕಾ ನಿರ್ಧಾಸ್ತರಾದರು (ವೀಸಹ. II,೯); ರಾಹು ಮನೆಗೆ ಬಂದ ಬಳಿಕ ಅವರೆಲ್ಲರೂ ನಿರ್ಧಾಸ್ತರಾಗಿ ಮಲಗಿದರು (ನೋಜೀಸ. ೧೨೯); ಅಣ್ಣನ ಪತ್ತೆ ಹತ್ತಿತೆಂದರೆ, ನಾನು ನಿರ್ಧಾಸ್ತಳಾಗುವೆನು (ಹಂಸಾ. ೧೪೪).

[←ಮರಾ. ನಿರ್ಧಾಸ್ತ]

ನಿರ್ಧಾಸ್ತತನ (ನಾ). ನಿರ್ಭಯತೆ; ನಿಶ್ಚಿಂತತೆ : ಬಸ್ತಾನ ಶೀಕ . . . ಕೂತ ನಿರ್ಧಾಸ್ತತನ ಬಂದ ಮೇಲೆ, ಒಂದು ರವಿವಾರ ತಯ್ಯಬ್ಜೀ ಮಂಡಳಿಗೆ ನನ್ನ ಗೆಳೆಯನನ್ನು ಕಾಣುವ ಕಾರಣ ತಿಳಿಸಿ . . . ಬಾಗಿಲ ಮೇಲೆ ಟಕ್ . . . ಟಕ್ ಟೇಂಕಾರ ಮಾಡಿದೆ (ವೀಸಹ. II, ೬೫೬). [ನಿರ್ಧಾಸ್ತ + – ತನ]

ನಿರ್ಧೂತ (ಗು). ೧. ಮೇಲಕ್ಕೆದ್ದ : ಹರಡಿದ; ವ್ಯಾಪಿಸಿದ : ಕಂಪಿಸಿದ ಚಾತುರಂಗದ ಚರಣಹತಿನಿರ್ಧೂತ ಧೂಳೀಮಯವಖಿಳ ದಿಗು ಜಾತವನೆ ಥಟ್ಟಣೆಯಲೇಱಿತು . . . ಸೇನೆ (ಕುಸ್ಯಾಪ್ರೋ. ೧೮–೨೫); ದೂತರಹುದೇಯೆಂದು ರಿಪುನಿರ್ಧೂತಧೂಳೀಪಟಲ ರಿಪುಸಹಜಾತನನು ಬೆಸಗೊಳಲು (ತೊರರಾ. ೬–೬–೨೯). ೨. ಹೋಗಲಾಡಿಸಿದ; ಪರಿಹರಿಸಿದ; ನಿವಾರಿಸಿದ : ಅಂಭೋಧಿಯಂತೆ ಗಂಭೀರಾಶಯರು ಮಾದಿತ್ಯನಂತೆ ನಿರ್ಧೂತತಮಸ್ತಮರುಂ (ಅವಿಪು. ೪–೯೫ ಪ); ಆಸ್ತಮಿತ ಲೌಕಿಕನು ಗುರುಭಕ್ತಿಸ್ತವನಪಾತ್ರೋತ್ತಮಂ ಮಾತೃಸ್ತವಸ್ತನ್ಯಾಹಿತಂ ನಿರ್ಧೂತಷಡ್ವರ್ಗಂ (ಬಸಪು. ೬–೨); ದ್ಯೂತದಲಿ ಮುನ್ನೇನನೊಡ್ಡಿದ ಸೋತನೇನನು ಶಿವ ಶಿವಾ ನಿರ್ಧೂತಕಿಲ್ಪಿಷನರಸನೆಂದಳು ದ್ರೌಪದಾದೇವಿ (ಕುಸ್ಯಾಸ. ೧೪–೫೨) : ನಿಜರುಚಿ ನಿರ್ಧೂತಯಮಿಹೃದಯತಮಸಂಪ್ರೀತಿಯೊಳೆಮಗೀಗೆ ಸೌಖ್ಯಮಂ ಶಿವಲಿಂಗಂ (ರಾಜಕೇ. ೩–೧). ೩. ಸ್ವಚ್ಛಗೊಳಿಸಿದ; ತೊಳೆದ. [ಸಂ.]

ನಿರ್ಧೂನನ (ನಾ). ೧. ಹೆಚ್ಚಾಗಿ ಅಲುಗಾಡಿಸುವುದು; ಕೊಡಹುವುದು; ನಡುಗಿಸುವುದು. ೨. ತೊಳೆಯುವಿಕೆ; ಶುದ್ಧಗೊಳಿಸುವಿಕೆ. ೩. ಹೋಗಲಾಡಿಸುವವನು; ಪರಿಹರಿಸುವವನು: ಅನತಜನಕಲ್ಮಷನಿರ್ಧೂನನನೀ ಸಕಲಚಕ್ರವರ್ತಿಯ ಕೋಶಕ್ಕೇನೆಂಬೆಂ (ವಸ್ತವಂ. ೧೦–೬೬). [ಸಂ.]

ನಿರ್ಧೂಮ (ಗು). ೧. ಹೊಗೆಯಿಲ್ಲದ. (ನಾ). ೨. ಹೊಗೆಯಿಲ್ಲದುದು : ಮನುಜತನದ ವಿಕಾರಗಳ ತೊಱೆದನು ಬಳಿಕ ನಿರ್ಧೂಮವಾಗಿದ್ದನಲನಂದದಿ ಉಜ್ವಲಿಸಿದನು ದಿವ್ಯತೇಜದಲಿ (ತಿಮ್ಮಸ್ವ. ೧–೪೬). ೩. ನಾಶವಾದುದು; ಹಾಳಾದುದು : ಈ ಕ್ಷಣದಿ ಲಂಕೆ ನಿರ್ಧೂಮವನು ಮಾಳ್ಪೆ ಭೂತ (ಪುರಂದ. ೪–೬೪–೬).

ನಿರ್ಧೂಮ ಮಾಡು = ನಾಶಪಡಿಸು : ಕಾಲನ ತೆತ್ತಿಗರ ನಿರ್ಧೂಮ ಮಾಡಿದ ಧ್ಯಾನಪೂರ್ವಕದಿ (ನಾಗಷ. ೩೨–೧೦೮). [ಸಂ.]

ನಿರ್ಧೂಮಧಾಮ (ನಾ). ೧. ಹೊಗೆಯೇಳದಂತಾದ ಮನೆ; ಸಂಪೂರ್ಣ ನಾಶವಾದ ಗೃಹ; ಪಾಳುಮನೆ : ಸೋಮಯಾಜಿಗಳಾಲಯಂ ನಿರ್ಧೂಮಧಾಮವದಾಯ್ತು (ಬಸಪು. ೫೪–೩೬). ೨. ಸಂಪೂರ್ಣ ನಾಶಪಡಿಸುವವನು; ಪೂರ್ಣವಾಗಿ ಹಾಳುಮಾಡುವವನು: ಪರಮಶೈವೋದ್ಧರಣಕರಣರು ಪರಸಮಯನಿರ್ಧೂಮಧಾಮರು ಪರಸಮಯಕೋಳಾಹಳರು (ಬಸಪು. ೫೮–೫೨). 'ನಿರ್ಧಾಮಧೂಮ' ಹೋ. [ಸಂ. ನಿರ್ಧೂಮಧಾಮನ್]

ನಿರ್ಧೌತ (ಗು). ಚೆನ್ನಾಗಿ ತೊಳೆದ; ಚೆನ್ನಾಗಿ ಶುಚಿಗೊಳಿಸಿದ : ನಿರ್ಧೌತಜಟಾಕಳಾಪನುಂ ಪೂರ್ಣಕಮಂಡಳಾಕಲಿತ ಕರತಳನುಮಾಗೆನ್ನಂ ಪರ್ಣಪುಟದೊಳ್ ತಳೆದು . . . ಮುನಿಕುಮಾರರ್ ಬೆರಸು ನಿಜಾಶ್ರಮಕ್ಕೆ ಪೋಗೆವೋಗೆ (ಕಾದಂಪೂ. ೨೧೧). [ಸಂ.]

ನಿರ್ನಂದನ (ನಾ). ಮಗನಿಲ್ಲದವನು; ಪುತ್ರಹೀನ : ದಿನನಾಥಂ ಜನನೋದಯಕ್ಕೆ ಐದಱೊಳಿರಲ್ ನಿರ್ನಂದನಂ ನಿರ್ಧನಂ (ಜಾತಕಿ. ೧೮–೨). [ಸಂ.]

ನಿರ್ನಯ (ನಾ). ತೀರ್ಮಾನ; ಕೊನೆ : ಜಯವಹುದೆ ನಿರ್ವೇದದಲಿ ನಿರ್ಭಯವಹುದೆ ಬಿಸುಸುಯ್ಲಿನಲಿ ನಿರ್ನಯವಹುದೆ ರಿಪುನೃಪರಿಗಿದು ತಾ ನೀತಿಮಾರ್ಗದಲಿ (ಕುಸ್ಯಾಸ. ೧೬–೭); ಶ್ರೀಮತು ಹರಿಯಪಗಳೂ ಮಾಡಿದ ನಿರ್ನಯ (ಎಕ. X(8), ಮುಳಬಾ. ೫–೧ ; 15ನೆಯ ಶತ).

[<ಸಂ. ನಿರ್ಣಯ].

ನಿರ್ನವಿಸು, ನಿರ್ಬನಿಸು, ನಿರ್ಬಿನಿಸು, ನಿರ್ವನಿಸು, ನಿರ್ವಿನಿಸು (ಕ್ರಿ). ೧. ಚೆನ್ನಾಗಿ ಬಾಗು; ಹೆಚ್ಚು ಬಾಗು : ಅಮರರದಂತಿ ನಿರ್ನವಿಸೆಯುಂ ಶಚಿ ನೀಡೆಯುಮಿಂದ್ರನಾಂತು ಸಂಭ್ರಮಮನನಾಗಿ ಬಾಗಿಕೊಳೆಯುಂಜಿನಬಾಲಕನೇಱೆಯುಂ . . . ಉತ್ಸವಂ ಮನೋರಮ ಹೃದಯಂಗಮಾನುಷಮುಮೊದುದು ಜನ್ಮದೊಳಿಂದ್ರವಂದ್ಯನಾ (ಶಾಂತಿಪು. ೧೦–೧೨). **ನಿರ್ಬನಿಸು** : ೨. ಕುಗ್ಗು; ಕುಂದು : ಧನುವುಂ ಕರ್ಬಿನ ಬಿಲ್ ಗಡಂ ಗೊಣೆಯಮುಂ ನೀರೇಜಸೂತ್ರಂ ಗಡಂ ನನೆಗಳ್ ಬಾಣಚಯಂ ಗಡಂತತನು ತಾಂ ಮತ್ತಂ ಮನಂ ನೊಂದು

ನಿರ್ಬ [ಪಾಠಾಂ. ರ್ಬಿ]ನಿಪಂತಾರ್ದಿಸುತಿರ್ಪನುರ್ಚಿದೆರ್ದೆಯೊಳ್ ಪುಣ್ಣೆತ್ತರೆಂದಿಂತಿದಿಲ್ಲಿನಿಸುಂ ಮನ್ಮಥಶಸ್ತ್ರಕಲ್ಪಮಿದು ದಲ್ ಬೇಱೊಂದು ಶಿಕ್ಷಾಕ್ರಮಂ (ಕಾವ್ಯಾವ. ೭೫೨). **ನಿರ್ಬಿನಿಸು :** ೨. ಮೇಲಿನ 'ಕಾವ್ಯಾವ.' ಪ್ರಯೋಗದ ಪಾಠಾಂತರವನ್ನು ನೋಡಿ. **ನಿರ್ವನಿಸು :** ೧. ದಿನಕರನ ಮುಂದೆ ಧಾತ್ರೀತನಯಂ ಕುಜನಿಂದೆ ಮುಂದೆ ಭೃಗುತನಯಂ ನಿರ್ವನಿಸದೆ ನಡೆದೊಡೆ ಮಱೆ ಬೇಱ್ಪಿನಿತುಂ ತಪ್ಪಿಲ್ಲದಕ್ಕುಂ (ಉಟ್ಟಮ. ೬-೯೬). **ನಿರ್ವಿನಿಸು :** ೨. ಅನಿತಿನಿತೆನಿಸದೆ ರಿಪುಬಲಮೆನಗಿನಿಸಂ ನೆಱೆಯದೆಂಬ ಬಗೆ ಬಳೆದಿರೆ ನಿರ್ವಿನಿಸಿದನಾ ಜಿನಚಂದ್ರಂ (ಶಾಂತಿಪು. ೪-೮) ; ಜಂಕರಿಸಂ ಕಾತರಿಸಂ ಮಾಂಕರಿಸಂ ಬೆಕ್ಕಸಂಬಡಂ ಬೆಕ್ಕರಿಸಂ ಹೂಂಕರಿಸಂ ನಿರ್ವಿನಿಸಂ ಜೀಂಕರಿಸಂ ಜಿನುಗನವನಿಸಂ (ಅಜಿಪು. ೫-೮೯) ; ನಿರ್ವಿನಿಸಿ ಕಿನಿಸಿದಳವಳ್ ದಿನಪನುದಯದೊಳ್ ಕಾಯ್ದುಳರ್ಕ ಮಣಿಪುತ್ರಿಕೆವೋಲ್ (ಲೀಲಾವ. ೧೪-೨೪).

[<ನಿರ್ನಮನ್ $_0$ + -ಇಸು$_3$]

ನಿರ್ನಾಮ (ಗು). ೧. ಹೆಸರಿಲ್ಲದ ; ಹೆಸರಳಿದ : ಚರಿತ್ರೆಯಲ್ಲಿ ನಿರ್ನಾಮ ವ್ಯಕ್ತಿಗಳು ಎಷ್ಟು ಜನ ಆಗಿ ಹೋಗಿಲ್ಲ (ರೂಢಿ). ೨. ಹೆಸರಿಸಲಾಗದ : ಭಕ್ತನಿಧಿ ನಿರ್ದೇಹ ದೇಹಿ ವಿರಕ್ತಗತಿ ನಿರ್ನಾಮ [ಪಾಠಾಂ. ನಿರ್ನಾಮಿ] ನಾಮಿ ಚಿದುಕ್ತಮತಿ ನಿಃಶಬ್ದ ಶಬ್ದಿ ವಿಭಾವ ಭಾವಿತನು (ಒಸಪು. ೮-೫). (ನಾ). ೩. ನಾಶ ; ಅಳಿವು ; ಕೊನೆ : "ನಿರ್ನಾಮಮೆನಲ್ ನಾಶಂ" (ಭಾರನಿ. ೨೮) ; ಶ್ಯಾಮರಾಯನ ನಿರ್ನಾಮಕ್ಕೆ ಹೊಸಕತ್ತಿ ಮಸೆಯಿತು (ವೀಪಹ II, ೨೬೯). ೪. ಹೆಸರಿಲ್ಲದುದು : ಸತ್ತುವೆನಿಸಿದ ಶಬ್ದ ನಿಃಶಬ್ದಕ್ಕೆ ಬಾರದ ನಿಶ್ಶೂನ್ಯಲಿಂಗವೇ ಪ್ರಾಣವಾಗಿ ಚಿತ್ತುವೆನಿಸಿ ನಾಮ ನಿರ್ನಾಮಕ್ಕೆ ಬಾರದ ಸ್ವರೂಪು ನಿರೂಪಿಲ್ಲದ ಶರಣನೇ ಅಂಗವಾಗಿ ಉಭಯಸಂಪುಟದಿಂದ ಸಕಲನಿಷ್ಕಲವೆನಿಸಿತ್ತು (ಉರಿಜೆ. ಕ. ೨೦೭-೨೮೬). ೫. ಹೆಸರಿಲ್ಲದವನು ; ಹೆಸರಳಿದವನು ; ನಾಶವಾದವನು ; ಸತ್ತವನು : ಇಂದಿನಲಿ ಕಡೆ ತನಗೆ ಮೇಣು ಪುರಂದರನು ನಿರ್ನಾಮನೈಸಲೆಯೆಂದು ಬಿಟ್ಟನು ಚೂಣಿಯನು ಪಟುಭಟರ ಬೊಬ್ಬೆಯಲಿ (ಕುವ್ಯಾಅ. ೧೨-೧೮) ; ತಾಮಸದ ಕೈದುಗಳಿನಿಂದಾ ರಾಮಲಕ್ಷ್ಮಣರೆಂಬ ನರರನು ಭೂಮಿಯೊಳು ನಿರ್ನಾಮರೆನಿಸುವೆನಿಂದಿನಿರುಳಿನಲಿ (ಕೌಶಿರಾ. ೩೯-೨೬).

ನಿರ್ನಾಮ ಮಾಡು = ನಾಶಗೊಳಿಸು : ರಣದಲಿ ರಾಮಸೇನೆಯ ಹೊಕ್ಕು ಸಲೆ ನಿರ್ನಾಮ ಮಾಡುವೆನು (ಕೌಶಿರಾ. ೨೦-೬). ನಿರ್ನಾಮವಾಗು = ಅಳಿದುಹೋಗು ; ನಶಿಸಿಹೋಗು ; ನಾಶವಾಗು : ನಿರ್ನಾಮವಾಯಿತ್ತು ನಿಷ್ಪತ್ತಿಯಾಯಿತ್ತು . . . ಕೂಡಲ ಚನ್ನಸಂಗಮದೇವರಲ್ಲಿ ಶಬ್ದ ಮುಗ್ಧವಾಯಿತ್ತು (ಚನ್ನವ. ಕ. ೬೬೦-೧೪೯೩) ; ನಿರ್ನಾಮವಾದುದೆ ಬಿರುದು ಪಾಂಡವತಿಮಿರರವಿಯೆಂಬ (ಕುಮ್ಯಾಗ. ೫-೨೬) ; ಈ ಮರುಳುತನವೇಕೆ ಬಲ ನಿರ್ನಾಮವಾಯ್ತೆಂದುಬ್ಬಿ ವಚಿಸುವ ಕೈಮೆಗಿದ ಕೋಯೆನುತ ಕವಿದೆಚ್ಚನು ಕಕುತ್ಸ್ಥಜನ (ತೊರರಾ. ೩-೬-೫೪). [ಸಂ. ನಿರ್ನಾಮನ್]

ನಿರ್ನಾಮಿಕೆ (ನಾ). ಹೆಸರಿಲ್ಲದವಳು : ತಾಮಿರ್ಬರುಂ ತಿರಿದು ತಂದಿಕ್ಕಿದೆಂಜಲೆವುಟುಮುಂ ತಿಂದು ಪೆಸರುಮಿಲ್ಲದೆ ನಿರ್ನಾಮಿಕೆಯೆಂದು ಪೆಸರಾಗಿ ಬಳೆಯೆ (ಅಪಿಪು. ೩-೩೪ ಪ) ; ತಿರಿದು ತಂದಿಕ್ಕಿದೆಂಜಲುಮಗುಟುಮುಂ ತಿಂದು ಪೆಸರುಮಿಲ್ಲದೆ ನಿರ್ನಾಮಿಕೆಯಾಗಿ ಬಳೆವನ್ನೆಗಂ (ಚಾವುಂಪು. ೧೮).

[ಸಂ. ನಿರ್ನಾಮಿಕಾ]

ನಿರ್ನಾಮೋದಕ (ನಾ). [ವೀಶೈ] ದಶವಿಧ ಪಾದೋದಕಗಳಲ್ಲಿ ಒಂದು ; ಅವರ್ಣನೀಯವಾದಂಥ ತೀರ್ಥ : ಆ ಪಾದೋದಕವನ್ನು ಅಂತಿಂತೆಂದು ಹೆಸರಿಡಲಿಲ್ಲವಾಗಿ ನಿರ್ನಾಮೋದಕ (ಕರ್ನಾಕ. ೧೩೭). 'ದಶವಿಧ ಪಾದೋದಕ', 'ನಿರ್ಣಾಮೋದಕ' ಪರಾ.

[ನಿರ್ನಾಮ + ಉದಕ$_2$]

ನಿರ್ನಾಯಕ (ಗು). ೧. ನಾಯಕನಿಲ್ಲದ ; ಮುಂದಾಳು ಇಲ್ಲದ. (ನಾ). ೨. ನಾಯಕನಿಲ್ಲದುದು ; ಅನಾಯಕವಾದುದು : ನೀವಿರಲು ನಿರ್ನಾಯಕವೆ ಸೇನಾವಳಿ ಮಹಾದೇವ (ಕುಮ್ಯಾಭೀ. ೯-೩೧) ; ಅಕಟಕಟ ಕುರುಸೇನೆ ನಿರ್ನಾಯಕವಲಾ ಹಾ ಎನುತ ಮಂತ್ರಿಪ್ರಕರ ಮಱುಗಿತು (ಕುಮ್ಯಾಕ. ೧೮-೩೦). [ಸಂ.]

ನಿರ್ನಾಳ (ಗು). ನಾಳವಿಲ್ಲದ ; ನಾಳರಹಿತವಾದ : 'ನಿರ್ನಾಳಗ್ರಂಥಿ' ಪರಾ. [ಸಂ. ನಿರ್ನಾಲ]

ನಿರ್ನಾಳಗ್ರಂಥಿ (ನಾ). ನಾಳವಿಲ್ಲದ ಗ್ರಂಥಿ ; ಒಳಗೇ ರಸ ಸ್ರವಿಸುವ ಗ್ರಂಥಿ : ಕೆಲವರು ಈ ಸ್ಥಿತಿಗೆ ನಿರ್ನಾಳಗ್ರಂಥಿಗಳ ಆಂತರಿಕ ಬದಲಾವಣೆಗಳು ಕಾರಣವೆಂದು ತಿಳಿಸಿರುತ್ತಾರೆ (ನಿಮ್ಮದೃ. ೬೬) ; ಒಳ ಸ್ರವಿಸುವ ನಿರ್ನಾಳಗ್ರಂಥಿಗಳು (endocrine glands) ಇವುಗಳ ಚೋದಕ ಸ್ರವಣಗಳು–"ಹಾರ್ಮೋನ್ಸ್" ರಕ್ತದ ಹರಿವಿಗೆ ಪ್ರಸರಿಸುತ್ತವೆ (ಕೀಟಬಿ. ೪೧) ; ನಮ್ಮ ಕುತ್ತಿಗೆಯ ತಳದಲ್ಲಿ ಶ್ವಾಸನಾಳದ ಮುಂದೆ ಒಂದು ಬಹುಮುಖ್ಯವಾದ ನಿರ್ನಾಳಗ್ರಂಥಿ ಇದೆ (ಗೃಹವಿ. ೨೪)

[ನಿರ್ನಾಳ + ಗ್ರಂಥಿ]

ನಿರ್ನಿಕ್ತ (ಗು). ೧. ತೊಳೆದ ; ಮಡಿ ಮಾಡಿದ ; ಶುಚಿಗೊಳಿಸಿದ. ೨. ವಿಶದವಾದ ; ಸ್ಪಷ್ಟವಾದ : ಮಿಹಿರಪ್ರದ್ಯೋತಿಸಂಧ್ಯಾಭವನ ಸಮಯದೊಳ್ ಪದ್ಮಿನೀಷಂಡದೊಳ್ ಪೊದಟ್ಟು ಹಬಿರ್ವೆರ್ದುಂಗುರಂ(?) ನೀರೊಳಗಣ ಮುಗುಳೊಳ್ ಸಿಲ್ಕಿ ನಿರ್ನಿಕ್ತ ಸತ್ಯಂ ಸಹಕೃತ್ಯಂ ಸೂರ್ಯಮಿತ್ರಾಹ್ವಯದಿನೆನಗೆ ತಾನೆಂದು ಪೇಱ್ವಂತಿರಿರ್ದತ್ತು (ಸುಕುಮಾ. ೩-೧೫) ; ಅಂತು ಮಂತ್ರಿಗಳ್ವೆರಸು ನಿರ್ನಿಕ್ತಕಾರ್ಯನಾಗಿ ಮಱುದಿವಸ ಮವಸರಂಗೊಟ್ಟು ಗಜಕರ್ಣದೂತನ ಮುಖಾವಲೋಕನಂ ಮಾಡಿ(ಪುಷ್ಪಪು- ೭-೫೨ ಪ). (ನಾ). ೩. ತೊಳೆದುದು ; ಮಡಿ ಮಾಡಿದುದು : "ನಿರ್ನಿಕ್ತಂ, ಪ್ರಕ್ಷಾಳಿತಂ, ಧೌತಂ– ಈ ೩ ತೊಳೆಯಲ್ಪಟ್ಟುದು" (ಹಲಾಯು. ೬೮-೨೫೪). ೪. ಸ್ಪಷ್ಟವಾಗಿ ಕಾಣುವವನು : ಮೂಗರುಂ ಮೃದುಮಧುರನಿನಾದದಿಂ ನುಡಿಗುಂ ಕುರುಡರುಂ ನಿರ್ನಿಕ್ತರುಮಾಗೆ ಕಾಣ್ಗುಂ (ಪಸಾರ. ೫೬೮).

ನಿರ್ನಿಕ್ತಮಾಗು = ತಿಳಿಯಾಗು ; ಸ್ಪಷ್ಟವಾಗು ; ವ್ಯಕ್ತವಾಗು : ಮುನ್ನೋದಿದೋದಿಂದೆನಗಿದು ಪಿರಿದಲ್ತೆಂದು ಪೂಣ್ದೋದಿದಂ ಗ್ರಂಥಾರ್ಥಂ ನಿರ್ನಿಕ್ತಮಾಗಲ್ (ಸುಕುಮಾ. ೩-೩೬). [<ಸಂ. ನಿರ್ಣಿಕ್ತ]

ನಿರ್ನಿದ್ರತೆ (ನಾ). ನಿದ್ರೆ ಬಾರದಿರುವಿಕೆ ; ನಿದ್ರಾಹೀನತೆ : "ನಿದ್ದೆ ಹತ್ತದಿರುವುದು ; ನಿದ್ದೆಬಾರದ ಸ್ಥಿತಿ ; ನಿರ್ನಿದ್ರತೆ" (Insomnia. ಇಂಕನಿ). [ಸಂ. ನಿರ್ನಿದ್ರತಾ]

ನಿರ್ನಿದ್ರೆ (ನಾ). = ನಿರ್ನಿದ್ರತೆ : ಭೇದಿ, ರಕ್ತಭೇದಿ, ಹೊಟ್ಟೆನೋವು, ನಿರ್ನಿದ್ರೆ, ನೂತಿ, ಬಾಯಿಹುಣ್ಣು, ಗಂಟಲುಹುಣ್ಣು, ಕಾವುಗಣ್ಣುಗಳಿಗೆ ಇದು ಸಂಜೀವನ (ಬಿಚಿಕಿ. ೪). [ಸಂ. ನಿರ್ನಿದ್ರಾ]

ನಿರ್ನಿಮಿತ್ತ (ಗು). ೧. ಕಾರಣವಿಲ್ಲದ ; ಉದ್ದೇಶವಿಲ್ಲದ ; ಅಕಾರಣವಾದ : ಸೊಲ್ಲೊಳ್ ಕ್ರಿಯಾತ್ಮಕಾವ್ಯಯಮಿಲ್ಲೆಂಬುದು ಕೀಱಿದೆಂಬುದಾಕೀರ್ಣಾರ್ಥಂ ಬಲ್ಲರ್ಗೆ ನಿರ್ನಿಮಿತ್ತಾರ್ಥೋಲ್ಲಸಿತಂ ನಿರ್ನಿರೆಂಬುದುಂ ನಿರ್ನೆರಮುಂ (ಶಮದ. ೩೦೧). (ನಾ). ೨. ಕಾರಣವಿಲ್ಲದಿರುವಿಕೆ ; ನಿಷ್ಕಾರಣ : ಅಕ್ಕಟಾ ಮರುಳ್ದುಂಬಿಗಳೇಕೆ ಸಂಪಗೆಗಳೊಳ್ ಪಗೆಗೊಂಡುವೊ ನಿರ್ನಿಮಿತ್ತದಿಂ (ಶಮದ. ೧೧೭ ಪ್ರಯೋ). ೩. ಸ್ವಚ್ಛಂದತೆ : "ಸ್ವಚ್ಛಂದಃ, ನಿರ್ನಿಮಿತ್ತಂ, ಯದೃಚ್ಛಾ — ಈ ೩ ತನ್ನಿಚ್ಛೆ" (ಹಲಾಯು. ೧೩೭-೮೯). [ಸಂ.]

ನಿರ್ನಿಮಿತ್ತಂ (ಅ). ನಿಷ್ಕಾರಣವಾಗಿ ; ಅಕಾರಣವಾಗಿ : ಎಸೆವ ದರಹಾಸಪ್ರಭಾಸಪ್ರಸರವೆನ್ನಂ ನಿರ್ನಿಮಿತ್ತಂ ಮುಸುಕಿತೆನುತುಂ ಲಜ್ಜೆಯುಂ ನಾಚಿಕೆಯು ಮೊಳೆವುತಿರೆ (ಬಸಪು. ೪೩-೧೧) ; ಕೌಸಲೆಗೆ ರಾಮನೆ ಮರಳ್ದು ಬಂದಂತೆವೋಲ್ ನಿರ್ನಿಮಿತ್ತಂ ತೋರ್ದುದೆರ್ದೆಗೆ ಧೈರ್ಯಜ್ಯೋತಿ ಭೀಷಣನಿರಾಶಾ ತಮದ ಮಧ್ಯೆ (ಶ್ರೀರಾಮಾ. ೧೧೬-೧೧೫).

[<ನಿರ್ನಿಮಿತ್ತ]

ನಿರ್ನಿಮಿತ್ತಹಸಿತ (ನಾ). ನಿಷ್ಕಾರಣವಾದ ನಗು : ಮೊಳೆವಲ್ ಶೋಭಿಸೆ ನಿರ್ನಿಮಿತ್ತಹಸಿತಂ ಚೆಲ್ವಾಗೆ ಲಾಲಾಜಲಂ ತುಳುಕಲ್ ಬರ್ಪ ತೊದಲ್ ಮನಂಗೊಳಿಸಲಂಕಾರೋಹಕಿಚ್ಛೈಪ ಮಕ್ಕಳಕ್ಕೈಗಳಿನೆತ್ತಿ ಕೊಂಡು (ಶಾಕುಂತ. ೧೦೫-೧೫). [ನಿರ್ನಿಮಿತ್ತ + ಹಸಿತ]

ನಿರ್ನಿಮೇಷ (ಗು). ೧. ಎವೆಯಿಕ್ಕದ ; ರೆಪ್ಪೆ ಬಡಿಯದ : 'ನಿರ್ನಿಮೇಷಾಕ್ಷಿ' ಪರಾ. (ನಾ). ೨. ಎವೆಯಿಕ್ಕದವನು : ಆದಿತ್ಯಬಿಂಬಕ್ಕೆ ಯೋಗೀಂದ್ರನತಂದ್ರಂ ನಿರ್ನಿಮೇಷಂ ನಗನಿಕಟಹಟದ್ರತ್ನ ಕೂಟಂಬೊಲಿರ್ದಂ (ಪಂರಾಮಾ. ೨-೧೪) ; ನಿರ್ನಿಮೇಷನಾ ದೃಶ್ಯಮಂ ಮನಶ್ಚಕ್ಷುವಿಂ ನೋಳ್ಪವೊಲ್ ದಾನವೇಶ್ವರಂ ದೂರಗತದೃಷ್ಟಿಯಾದನ್ (ಶ್ರೀರಾಮಾ. ೭೪೬-೩೨೬). ೩. ದೇವತೆ : 'ನಿರ್ನಿಮೇಷದ್ವೇಷಿ' ಪರಾ. [ಸಂ.]

ನಿರ್ನಿಮೇಷದ್ವೇಷಿ (ನಾ). ದೇವತೆಗಳ ಶತ್ರು ; ರಾಕ್ಷಸ ; ದೈತ್ಯ : ಅಂತನೇಕ ದುರ್ಣಯಂ ನಿರ್ನಿಮೇಷ[ಪಾಠಾಂ. ಅನಿಮಿಷ]ದ್ವೇಷಿ ಪುರದೊಳಾಗೆ ಸುವರ್ಣಕೇತು ಜೀಮೂತಪಥದಿಂದತಿವೇಗದಿಂ ಪೋಗೆವೋಗೆ (ಜೈವಿ. ೧೨-೪ ಪ). [ಸಂ. ನಿರ್ನಿಮೇಷದ್ವೇಷಿನ್]

ನಿರ್ನಿಮೇಷಾಕ್ಷಿ (ನಾ). ಎವೆಯಿಕ್ಕದ ಕಣ್ಣು ; ಬಿಡುಗಣ್ಣು ; ಬಿಚ್ಚುಗಣ್ಣು : ಮಾನವೇಶ್ವರಂ ಮಾನಸಪೂಜೆಯಂ ರಚಿಸಿ ಬಾಹ್ಯಪೂಜೆಗೆ ಮನಂದಂದು ನಿಜೇಷ್ಟಲಿಂಗಮಂ ಕರಾಬ್ಜಪೀಠದೊಳ್ನೆಲೆಗೊಳಿಸಿ ನಿರ್ನಿಮೇಷಾಕ್ಷಿಯಿಂ ನಿರೀಕ್ಷಿಸಿ (ರಾಜಶೇ. ೧೩-೪೭ ಪ).

[ನಿರ್ನಿಮೇಷ + ಅಕ್ಷಿ]

ನಿರ್ನಿರುಹರಣ (ಗು). ೧. ನಿವಾರಿಸುವ. (ನಾ). ೨. ನಾಶವಿಲ್ಲದವನು ; ಅಳಿವಿಲ್ಲದವನು : ನಿರ್ವಿಷಯ ನಿರ್ನಿರುಹರಣ ನಿರಸೂಯ ನಿರ್ವಾಣಪದ ನಿರ್ವಿಘ್ನ ನಿರತಿಶಯ ನಿಸ್ಸೀಮ . . . ನಿರ್ವಿಕಾರಾಕಾರ ಚಿತ್ತೈಸು (ಬಸಪು. ೬೧-೪೩). [<ಸಂ. ನಿರ್ನಿರ್ಹರಣ]

ನಿರ್ನೀತ (ಗು). ತೀರಿಸಿದ ; ಮುಗಿಸಿದ ; ಪೂರೈಸಿದ : ತನ್ನಿಕಟದೊಳ್ ನಿಂದು ನಿರ್ನೀತವೇತನಮಣರುಂ ಶಸ್ತ್ರಾಘಾತಮರಣರುಮಾದ ಬಂಧುನೃಪಾಲರ ನಿಜಸಂಬಂಧಿಗಳ ಶರೀರದಹನ ಲೌಕಿಕಮಂ ನಿರ್ಬಂಧದೆ ಮಾಡಿಸಿದಂ ದಯೆಯಿಂ ಧರಣಿಪಂ (ಚಂದ್ರಪು. ೧೦-೧೦೫ ಪ).

[<ಸಂ. ನಿರ್ಣೀತ]

ನಿರ್ನೀರದ (ಗು). ಮೋಡವಿಲ್ಲದ ; ಮೇಘವಿಲ್ಲದ : ನೀರದಮಾರ್ಗಂ ನಿರ್ನೀರದ ತುಷಾಪಾಂಸುಪಟಳಮಾಗೆಯುಂ . . . ನಿರಂತರಮಿರೆಯಿರೆ (ಶಾಂತಿಪು. ೧೨-೧೪ ಪ). [ಸಂ.]

ನಿರ್ನೆರ್ 'ನಿರ್ನೆರಂ' ನೋ.

ನಿರ್ನೆರ (ನಾ). ಆಧಾರವಿಲ್ಲದುದು ; ಆಶ್ರಯವಿಲ್ಲದುದು : ಮುಗಿಲಂತಸ್ಥಿರಮಪ್ಪ ಗಾಳಿಯಂತೆ ನಿರ್ನೆರಮಪ್ಪ . . . ಸಂಸಾರಮಂ ನಂಬಿ (ಧರ್ಮಾಮೃ. ೩-೧೮೬). [ನಿರ್- + ನೆರ್$_2$]

ನಿರ್ನೆರಂ, ನಿರ್ನೆರ್ (ಅ). ಕಾರಣವಿಲ್ಲದೆ ; 'ನಿಷ್ಕಾರಣವಾಗಿ ; ನಿರ್ನಿಮಿತ್ತವಾಗಿ : ನಿಚ್ಚಲುಮಿಂದ್ರನೋಲಗದೊಳಂತಾ ಪಾಂಡುರಾಜಂಗೆ ನಿರ್ನೆರಮಪ್ಪೊಂದಪಮಾನದಿಂದಮಿನಿತೊಂದೂನತ್ವಮಪ್ಪಂತುಟೇ (ಪಂಪಭಾ. ೬-೧೭) ; ಈ ದಿಗ್ವಿಜಯಪ್ರಘಟ್ಟಕದೊಳುರ್ವೀಭೃತ್ಸಮಾಜಕ್ಕೆ ನೋಯಿಸಿದಂ ನಿರ್ನೆರಮೆನ್ನನೆಂದು ಮೋಜಿಯಿಟ್ಟಂತಾಯ್ತು ರೂಪ್ಯಾಚಳಂ (ಶಾಂತಿಪು. ೧೧-೪೦) ; ನಿರ್ನೆರಂ ಬಂದನೆಂಬಲ್ಲಿ ನಿರ್ನಿಮಿತ್ತಂ ಬಂದನೆಂಬ ಪ್ರಥಮೆಯನಱಿವುದು (ತಮದ. ೯೦ ಪ್ರಯೋ) ; ಬಾಯ್ವಿಡದಿರೆಲೆ ಚಾದಗೆಯೆ . . . ನಿರ್ನೆರಮಟಲದಿರ್ (ರಾಮಾಶ್ವ. ೧-೧೫). **ನಿರ್ನೆರ್** : ಬಿದಿಯೆಂಬಾರಡಿಗಳ್ಳನೆನ್ನನುಜನಂ ಗೋವಿಂದನಂ ನಿರ್ನೆರುಯ್ವುದುಂ(ಆದಿಪು. ೩-೫೨) ; ನಿರ್ನಿಮಿತ್ತಾರ್ಥೋಲ್ಲಸಿತಂ ನಿರ್ನೆ[ಪಾಠಾಂ. ನಿರ್]ರೆಂಬುದುಂ ನಿರ್ನೆರಮುಂ (ಶಮದ. ೩೦೧ ಪ್ರಯೋ). [<ನಿರ್ನೆರ]

ನಿರ್ನೆಲಯ (?). (?) : ಬಡಗಲ್ಸೇತು ನಿರ್ನೆಲಯ ತೆಂಕಣೇರಿಯ ಮೇಗಣ ಕವಿಲೆಯ ಕಲ್ಸರಂ (ಎಕ. VIII, ಸಾಗರ. ೧೦೮-೪೩ ; 1042). [ಇದು 'ನೀರ್ನೆಲೆ' ಎಂಬುದರ ಅಪಲಿಖಿತವಿರಬಹುದು]

ನಿರ್ನೇಸು 'ನಿರ್ಣಯಿಸು' ನೋ.

ನಿರ್ಬಂಕೆ (ನಾ). (?) : ಭರದುಣ್ಮುವಿಂದ್ರಿಯದ್ರವದಿರವದು ನಿರ್ಬಂಕೆ ಪುಟ್ಟಿ ಸಿತವರ್ಣಂ ಬಂಧುರಮಧುರಾಮ್ಲ ಕಷಾಯೋತ್ಕರರುಚಿಯೋರ್ವ ಸತಿಯರೊಳ್ ದೊರೆಕೊಳ್ಗುಂ (ಪುನ್ಮವಿ. ೧೦-೨೦). [?]

ನಿರ್ಬಂಧ (ನಾ). ೧. ಪಟ್ಟುಹಿಡಿಯುವಿಕೆ ; ದೃಢಸಂಕಲ್ಪ : ನಿರಾಲಸ್ಯದಿಂ ನಿರ್ಬಂಧದಿಂ ನಿರ್ವಿಕಲ್ಪದಿಂ ನೀಮಿರ್ವರುಂ ನಿಶ್ಚಯಮೋದು ವೊಡಾವುಮಾ ಮಾರ್ಗದಿಂದೋದಿಸಿ ಪಂಡಿತರಾಗೆ ಮಾಟ್ಟಿಂ (ಸುಕುಮಾ. ೨-೫೫ ಪ). ೨. ಮೊಂಡುತನ ; ಹಠ ; ಛಲ : ಇದಿರುಗಾಣದೆ ಕೊಲೆಗೆ ನಿರ್ಬಂಧದಲಿ ಬೆಸಸುವ ಕೃಷ್ಣನಕಟಾ ಮದಮುಖನೊ ದುರ್ಬೋಧಕನೊ ವಂಚಕನೊ(ಕುಪ್ಯಾಭೀ. ೩-೨೮). ೩. ಬಲಾತ್ಕಾರ ; ಬಲವಂತ ; ಒತ್ತಾಯ : ಬಂಧುವಿಯೋಗದಿನೆನಗನುಬಂಧಿಸಿದ ಮಹೋಪತಾಪಮದು ನೀಂ ಬರೆ ನಿರ್ಬಂಧದಿನನಳಱಿದತ್ತದಱಿಂ ಬಂಧುಗಳಿಂ ನೀನೆ ಬಂಧು ಜಗತೀಬಂಧೂ (ಚಂದ್ರಪು. ೫-೨೮) ; ವೃಥಾ ಪಾತಕವಿದೇಕೈ ಹೇಳು ಜಯಕಾಮುಕರು ನಾವೊಲ್ಲದಡೆ ನಿಮಗೇಕೀಸು ನಿರ್ಬಂಧ (ಕುಪ್ಯಾಕ. ೨೬-೩೫) ; ಐಸಲೇ ವೈದೇಹಿ ನೀನಿಂದೀಸು ನಿರ್ಬಂಧದಲಿದಿಟ ಬಿನ್ನೈಸಲೇನಿದು ದೊಡ್ಡಿತೇ ತನಗೆ (ತೊರರಾ. ೩-೮-೩೪). ೪. ಬಂಧನವಿಲ್ಲದಿರುವಿಕೆ ; ಬಿಡುಗಡೆ ; ಸ್ವಾತಂತ್ರ್ಯ ; ಮೋಕ್ಷ : ನಿನ್ನಱಿಕೆಯ ನರಕವೆ ಮೋಕ್ಷ ನೋಡಯ್ಯಾ ನಿನ್ನನಱಿಯದ ಮುಕ್ತಿಯೆ ನರಕ ಕಂಡಯ್ಯಾ . . . ನೀ ಕಟ್ಟಿ ಕೆಡಹಿದ ಬಂಧನವೆ ನಿರ್ಬಂಧವೆಂದಿಪ್ಪೆನು (ಮಹಾದೇ. ಕ. ೫೧-೧೩೨). ೫. ಅಡ್ಡಿ ; ತಡೆ ; ಆತಂಕ : ನಿರ್ಬಂಧ ಮಾಡಿದವನ ಸ್ವಬಂಧ ಹೋದೀತೆ ? (ಗಾದ). ೬. ವಿರೋಧ ; ವೈಮನಸ್ಯ ; ಜಗಳ : ಅನಾಮಿಕರೊಡನೆ ಕೆಳೆ ಗೋಷ್ಠಿ ಬಲದೊಡನೆ ನಿರ್ಬಂಧ ಧರ್ಮದ ನೆಲೆಯನಱಿಯದ ದಾನಿಗಳ ಸಿರಿ ಸುಳಿವ ಗಾಳಿಗೆ ಮಲೆವ ದೀಪವು ಕೇಳು ಧೃತರಾಷ್ಟ್ರ (ಕುಪ್ಯಾಉ. ೩-೭೦). [ಸಂ.]

ನಿರ್ಬಂಧಗೊಳಿಸು(ಕ್ರಿ). ಬಲಾತ್ಕಾರಮಾಡು ; ಒತ್ತಾಯಪಡಿಸು : ಪ್ರಸಭಂ, ಬಲಾತ್ಕಾರಃ ; ಹಠಃ – ೩ ಬಲಾತ್ಕಾರದ ಹೆಸರು ; ಬಲವಂತ ಮಾಡುವಿಕೆ ; ನಿರ್ಬಂಧಗೊಳಿಸುವಿಕೆ(ಸಿದ್ಧಾಂತಿ. ೨೩೨).

[ನಿರ್ಬಂಧ + ಕೊಳ್$_1$ + –ಇಸ್$_3$]

ನಿರ್ಬಂಧನ (ನಾ). ೧. ಬಿಡುಗಡೆ : ಚನ್ನಮಲ್ಲಿಕಾರ್ಜನಯ್ಯಾ ನೀ ಕಟ್ಟಿ ಕೆಡಹಿದ ಬಂಧನವೆ ನಿರ್ಬಂಧನ[ಪಾಠಾಂ. ನಿರ್ಬಂಧ]ವೆಂದಿಪ್ಪೆನು (ಮಹಾದೇ. ಕ. ೫೧-೧೩೨). ೨. ಮೊಂಡುತನ ; ಹಠಮಾರಿತನ ; ಛಲ : ಎಲೆ ಸುಯೋಧನ ಕೃಷ್ಣರಾಯನ ಅಳಲಿಸುವರೇ ಲೋಭವೀ ವೆಗ್ಗಳದ ನಿರ್ಬಂಧನವು ಪ್ರಾಜ್ಞರಿಗುಚಿತವಲ್ಲ (ಕುಪ್ಯಾಉ. ೯-೯). [ಸಂ.]

ನಿರ್ಬಂಧಿಕ (ನಾ). ಒತ್ತಾಯ ಮಾಡುವವನು : ಪೀನಗ್ರಹಣದಿಂದೆ ಕೆಲವಱೊಳ್ ವತ್ವಮಿಲ್ಲ—ಅಚ್ಚಮಲ್ಲಿಕಾ—ಅಚ್ಚಮಲ್ಲಿಗೆ. . .ನಿರ್ಬಂಧಿಕ –ನಿಬ್ಬಂದಿಗ (ಶಮದ. ೨೯೨ ಪ್ರಯೋ). 'ನಿಬ್ಬಂದಿಗ' ಪರಾ. [ಸಂ.]

ನಿರ್ಬಂಧಿಗ (ನಾ). ಬಲವಂತಮಾಡುವವನು ; ನಿರ್ಬಂಧಪಡಿಸುವವನು : ಅಂದಳದ ಮುಂದೆ ವಂದಿಸಿಕೊಂಡಿಹೆನೆಂದು ತ್ರಿವಿಧವ ಹೆಱೆ ಹಿಂಗಿ ಮಾಡುವ ನಿರ್ಬಂಧಿಗನ ನೋಡಾ (ವೋಳಿಮಾ. ೧೬-೫೯).

[ನಿರ್ಬಂಧ+-ಇಗ]

ನಿರ್ಬಂಧಿಸು (ಕ್ರಿ). =ನಿರ್ಬಂಧಗೊಳಿಸು : ಭೂವಧೂವರ ಕೇಳಿದ್ಯೆ ಸಂಭಾವನೋಚಿತವಿನಿತಲೇ ಮತ್ತಾವದಕೆ ನಿರ್ಬಂಧಿಸುವವರಲ್ಲೆಂದನಾ ಮುನಿಪ (ತೊರರಾ. ೧-೯-೨೬) ; ತಂದೆಯ ಕೂಡ ಈಗವನು ರಾಘುವನ್ನು ತೆಗೆದುಹಾಕಬೇಕೆಂದು ನಿರ್ಬಂಧಿಸಿದನು (ಮೂಲಾನ. ೧೪೬).

[ನಿರ್ಬಂಧನ+-ಇಸು$_3$]

ನಿರ್ಬದ್ಧ (ಗು). ೧. ಕಟ್ಟುಹಾಕಿದ; ಬಿಗಿಯಾಗಿ ಬಂಧಿಸಿದ. ೨. ಬಲಾತ್ಕಾರಕ್ಕೆ ಒಳಪಟ್ಟ. [ಸಂ.]

ನಿರ್ಬನಿಸು 'ನಿರ್ನವಿಸು' ನೋ.

ನಿರ್ಬಯಲು 'ನಿರ್ವಯಲು' ನೋ.

ನಿರ್ಬಲ, ನಿರ್ಬಳ (ನಾ). ೧. ಬಲವಿಲ್ಲದುದು : ವಾತವಿಕಾರದಿಂದ ಅವರ ಕಾಲುಗಳು ನಿರ್ಬಲವಾದುವು (ಜನಜೀ. ೪). ೨. ಕಸುವು ಕಳೆದುಕೊಂಡವನು ; ಶಕ್ತಿಹೀನ ; ದುರ್ಬಲ. **ನಿರ್ಬಳ** : ೨. "ನಿರ್ಬಳನೆನೆ ತಾಂ ಕ್ಷೀಣಮಾಂಸಂ" (ವಸ್ತುಕೋ. ೭೪-೪೧). [ಸಂ.]

ನಿರ್ಬಲೆ (ನಾ). ಬಲಹೀನೆ ; ಅಬಲೆ : ನಿನ್ನ ಬಲದಿ ನಾ ಬಾಳುತಿಹೆನೆ ನಿರ್ಬಲೆಯು ಸಬಲೆಯಂತೆ (ಕರ್ನಾಕ. ೪೨೭). [ಸಂ. ನಿರ್ಬಲಾ]

ನಿರ್ಬಹಣ (ನಾ). ನಡೆಸುವಿಕೆ ; ನಿರ್ವಹಣೆ : ಇಬ್ಬರಂಧಕರದ ಱೊಳಗೆ ಪುರನಿರ್ಬಹಣವಹುದೊಬ್ಬನಿಂ ಮತ್ತೊಬ್ಬನಿಂದಲೆ ಕರ್ಮವಹುದವು ಪಾದಪಾಣಿಗಳು (ನಿಭಾಗ. ೪-೧೭-೧೯). [<ಸಂ. ನಿರ್ವಹಣ]

ನಿರ್ಬಳ 'ನಿರ್ಬಲ' ನೋ.

ನಿರ್ಬಾಣ 'ನಿಬ್ಬಾನ' ನೋ.

ನಿರ್ಬಾಧ (ಗು). ೧. ತಡೆಯಿಲ್ಲದ ; ವಿರೋಧವಿಲ್ಲದ. (ನಾ). ೨. ಬಾಧೆಯಿಲ್ಲದಿರುವಿಕೆ ; ತೊಂದರೆಯಿಲ್ಲದಿರುವಿಕೆ; ನಿರಾತಂಕವಾಗಿರುವಿಕೆ : ನಿರ್ಬಾಧವಾಗಿ ಪ್ರವೇಶಿಸಿದೆನು (ಕಳ್ಳಕಾ. ೬೧). ೩. ವಿರೋಧವಿಲ್ಲದುದು ; ಎದುರಿಲ್ಲದುದು : ಸಾಧುಸಮಾಧಿ ಪರೇಂಗಿತಬೋಧಂ ನಿರ್ಬಾಧ[ಪಾಠಾಂ.ನಿರ್ವಾದ]ಮಪ್ಪುದಂತದು ಸೂಕ್ಷ್ಮಂ (ಕಾನ್ಯಾಪ. ೬೩೪). [ಸಂ.]

ನಿರ್ಬಾಧಂ (ಅ). ಅಡ್ಡಿಯಿಲ್ಲದೆ ; ಆತಂಕವಿಲ್ಲದೆ : ತನ್ಮಧ್ಯದೊಳ್ ಸೊಡರಿರ್ಪಂತಿರೆ ಚಕ್ರರತ್ನಮದಱೊಳ್ ನಿರ್ಬಾಧಮಿರ್ದತ್ತು ಪೆರ್ವಡೆ ವಾರಾಶಿಯೊಳರ್ದ ಭೈತ್ರದೊಳಗೆಂದತ್ತಂ ತೆರಳ್ದಿರ್ದವೊಲ್ (ಆದಿಪು. ೧೩-೬೦). [<ನಿರ್ಬಾಧ]

ನಿರ್ಬಾಧಕ (ನಾ). ತೊಂದರೆ ಕೊಡದಂತಹುದು ; ಅಡ್ಡಿ ಮಾಡದುದು ; ನಿರುಪದ್ರವಿಯಾದುದು : ಮಕರಕೇತನನಸ್ತ್ರ ನಿರ್ಬಾಧಕವೆಯಕಟಕಟೈಹಿಕಾಮುಷ್ಮಿಕಕೆ ಸಲ್ಲದ ಮತಿಯ ಮನದಲಿ ನೆನೆದನೇ (ತೊರರಾ. ೬-೨೬-೬೩) ; ಅವನನ್ನು ನಿರ್ಬಾಧಕವಾದ ಕ್ರೀಡಾಸಾಧನವನ್ನಾಗಿ ಉಪಯೋಗಿಸಿಕೊಳ್ಳುತ್ತಿದ್ದೆನು (ರಾವಿಜ. ೩೦). [ಸಂ.]

ನಿರ್ಬಾಧಿತ (ಗು). ೧. ತೊಂದರೆಗೊಳಗಾಗದ ; ನಿರಾತಂಕವಾದ. (ನಾ). ೨. ಕಾನೂನಿಗೆ ಸಂಬಂಧಿಸಿದಂತೆ ಒಬ್ಬನನ್ನು ಅಪರಾಧದಿಂದ ಮುಕ್ತಗೊಳಿಸುವಿಕೆ,—ಮಾನ್ಯಗೊಳಿಸುವಿಕೆ : ಇತರ ಯಾವನೊಬ್ಬನನ್ನೇ ಆಗಲಿ, ಭಾರತ ರಾಜ್ಯಕ್ಷೇತ್ರದೊಳಗೆ ಸೇನಾ ವಿಧಿಯು ಜಾರಿಯಲ್ಲಿದ್ದ ಪ್ರದೇಶದಲ್ಲಿ ವ್ಯವಸ್ಥೆಯನ್ನು ರಕ್ಷಿಸುವುದಕ್ಕಾಗಿ . . . ಆತನು ನಡೆಯಿಸಿದ ಯಾವುದಾದರೂ ಕೆಲಸದ ಸಲುವಾಗಿ ನಿರ್ಬಾಧಿತ ಮಾಡಬಹುದು (ಭಾಧಾನ. ೨೦). [ಸಂ.]

ನಿರ್ಬೀಜ (ನಾ). ೧. ನಪುಂಸಕನಾದವನು; ಪುಂಸತ್ವವಿಲ್ಲದವನು. ೨. [ಯೋಗ] ಸಮಾಧಿಯ ಎರಡು ಪ್ರಕಾರಗಳಲ್ಲಿ ಒಂದು; ನಿರ್ವಿಕಲ್ಪ ಸಮಾಧಿ; ಇ ಸಬೀಜಸಮಾಧಿಯಲ್ಲಿ ಧ್ಯಾನ ಮಾಡಲ್ಪಡುವ ವಸ್ತುವಿನಲ್ಲೇ ಚಿತ್ತವು ಲಯವಾಗುವುದು. ನಿರ್ಬೀಜ ಸಮಾಧಿಯಲ್ಲಿ ಯಾವ ವ್ಯಾಪಾರವೂ ಇಲ್ಲದೆ ಚಿತ್ತವು ಲಯಾಭಿಮುಖವಾಗಿರುವುದು : ಸಮಾಧಿಯೆಂಬ ಯೋಗವು ಸಂಪ್ರಜ್ಞಾತ ಅಸಂಪ್ರಜ್ಞಾತ ಅಥವಾ ಸಬೀಜ ನಿರ್ಬೀಜ, ಸಾಲಂಬ ನಿರಾಲಂಬ ಅಥವಾ ಸವಿಕಲ್ಪ ನಿರ್ವಿಕಲ್ಪವೆಂದು ಎರಡು ಪ್ರಕಾರವು (ಹಿಂದಸಾ. ೧೦೭).

[ಸಂ.]

ನಿರ್ಬುದ (ನಾ). [ಗಣಿತ] ಒಂದು ದೊಡ್ಡ ಸಂಖ್ಯೆ ; ಹತ್ತು ಅರ್ಬುದ : ಅರ್ಬುದಹಸ್ತದೊಳರ್ಚಿಸಿ ನಿರ್ಬುದನೇತ್ರದಿಂ ನೋಡಿ ಶಿವ ನಿಮ್ಮಡಿಯಂ ಖರ್ವಜಿಹ್ವೆಯೊಳು ಕೀರ್ತಿಸಿ ಕೊರ್ಬುವೆನು (ಶಂಕಕಂ. ೩೦-೧೧೬) ; ಐದರ್ಬುದದೊಳಗ್ನಿಯದನು ಬಳಸಿಕೊಂಡೈದುನಿರ್ಬುದದೊಳಂ ವಾಯುವದ ಬಳಸಿಕೊಂಡೈದುಕರ್ಬದೊಳಗಾಕಾಶವದ ಬಳಸಿಕೊಂಡಾ ಮಹಾಕರ್ಬವೈದಹಂಕಾರಮಂತದ ಬಳಸಿಯೈದು ಪದ್ಮ (ವೀಶೈಪು. ೪-೧೩-೮) ; ಹರಿಯ ಪಿಡಿತಂದು ಮನೆಯೊಳಗೆ ಘೋರದಿಂ ಮೂಱುನಿರ್ಬುದವರ್ಷಪರಿಯಂತರಂ ಸೆಱೆಯನಿಟ್ಟುದಱಿಯಾ (ಚಿಬಪು. ೫೨-೧೬) ; ಕೋಟಿ ದಹಕೋಟಿ ಶತಕೋಟಿ ಅರ್ಬುದ ನಿರ್ಬುದ ಖರ್ವ ಮಹಾಖರ್ವ . . . ಇವು ೩೨ ವುಘಡಣೆ ಹೆಸರುಗಳು (ಭಾಸ್ಕರ. ೧೧-೭).

[<ಸಂ. ನ್ಯರ್ಬುದ]

ನಿರ್ಬುದ್ಧ (ನಾ). ತಿಳಿಗೇಡಿ ; ದಡ್ಡ ; ಮಂದಮತಿ : ಬುದ್ಧರಿರಲಿ ನಿರ್ಬುದ್ಧರಿರಲಿ, ಅನ್ಯಾಯಿ ನ್ಯಾಯಿ ಇರಲಿ . . . ಇದು ಒಂದೆ ದೇವನಾಟ ಬೇಲೂರ ಕಲ್ಲು ಕನ್ನಡಿಸಿದಂತೆ ನಡೆದೀತು ಎಂದು ಮಾಟ ? (ಸೂರ್ಯಪಾ. ೫೯-೧). [ಸಂ.]

ನಿರ್ಬುದ್ಧಿ (ಗು). ತಿಳಿಗೇಡಿಯಾದ ; ದಡ್ಡತನದಿಂದ ಕೂಡಿದ ; ಅಜ್ಞಾನದಿಂದಿರುವ : ಒಬ್ಬರಿಗಾಳಾಗಿ ಒಬ್ಬರನೋಲೈಸುವ ನಿರ್ಬುದ್ಧಿ ಮನುಜರನೇನೆಂಬೆ (ಬಸವ. ಕ. ೬೧೮) ; ವೇದದಲುಳ್ಳೊಡೆ ಪ್ರಾಣವಧೆಯಪ್ಪುದೆ . . . ಪರ್ವತದಲ್ಲಿ ಉಳ್ಳೊಡೆ ಹೋದವರು ಮರಳಿ ಬಪ್ಪರೇ ನಿರ್ಬುದ್ಧಿ ಮಾನವರನೇನೆಂಬೆನು ಮನ ವಚನ ಕಾಯ ಶುದ್ಧವಾಗಿರ್ಪಾತನ ಹೃದಯದಲ್ಲಿ ನಿಮ್ಮ ಕಂಡೆ (ವಚಸಂ. ೨೨೦-೬೯). [ಸಂ.]

ನಿರ್ಬುದ್ಧಿಗೊಳ್ (ಕ್ರಿ). ಏನೂ ತಿಳಿಯದಾಗು ; ದಿಗ್ಭ್ರಮೆಗೊಳ್ಳು : ಜೀವಾತ್ಮ ಅಂತರಾತ್ಮನ ಸುದ್ದಿಯ ಬೆಸಗೊಂಬಡೆ ಹೇಳಿಹೆ ಕೇಳಿ ಭೋ ಹುಸಿಯ ಸಂಕಲೆಯಾಗಿದ್ದಲ್ಲಿ ಕಾದುಕೊಂಡಿದ್ದನೊಬ್ಬ ಕಥೆ ಕನಸ ಮಾಡಿ ಹೇಳುತ್ತಿದ್ದನೊಬ್ಬ ಪರಾಪರಕ್ಕೆ ಹೋಗಿ ಪರಮನ ಸುದ್ದಿಯ ಕೊಂಡುಬರುತ್ತಿಪ್ಪ ಅವರಿಬ್ಬರನೂ ಕೆಡೆ ಮೆಟ್ಟಿ ಹೋಹಾಗಲೋಕ ನಿರ್ಬುದ್ಧಿಗೊಂಡತ್ತು (ಬಸವ.ಕ. ೯೨೬). [ನಿರ್ಬುದ್ಧಿ + ಕೊಳ್$_1$]

ನಿರ್ಬುದ್ಧಿತನ (ನಾ). ದಡ್ಡತನ; ಮೂರ್ಖತನ : ಲೋಗರಂ ಮನೆಯಂ ಕಾದಿರಿಮೆಂಬಂತೆ ನಿರ್ಬುದ್ಧಿತನದಿಂ ಪೇರೆನಗೆಂದಿರ್ದೊಡೆ ಶಾಶ್ವತಸುಖಂ ದೊರೆಕೊಳ್ಳದು (ಧರ್ಮಾಮೃ. ೭-೯೭).

[ನಿರ್ಬುದ್ಧಿ+ -ತನ]

ನಿರ್ಬೇಗ, ನಿಬ್ಬೆಗ (ನಾ). ೧. ವಿರಕ್ತಿ ; ವೈರಾಗ್ಯ : ಉಸಿರ್ದೌ ನೀಂ ನಿನ್ನ ನಿರ್ಬೇ[ಪಾಠಾಂ. ರ್ವೇ]ಗಮನಱಿದೆನಿದಂ ಶಕ್ತಿಯೊಳ್ ಮುಕ್ತಿಯಂ ಸಾಧಿಸಲಕ್ಕುಂ (ಆದಿಪು. ೩-೪೪) ; ಗಂಧತೈಲದಿಂ ಶಿರೋಭ್ಯಂಗನಂ ಗೆಯ್ಯುತ್ತು ಮೊಂದು ನರೆಯಂ ಕಂಡು ನಿರ್ಬೇಗದಿಂ ಸ್ವಯಂಬರಗಮನ ನಿರಾದರನಾಗಿರ್ಪುದುಂ (ಚಾವುಂಪು. ೨೮೪). **ನಿಬ್ಬೆಗ** : ೨. ದುಃಖ; ಚಿಂತೆ : ಸುಖವ ಹಡೆದೆನೆಂದು ಹಡೆದಡೆ ನಿಬ್ಬೆಗ [ಪಾಠಾಂ. ನಿಬ್ಬೆಱಗ]

ದಿಂದ ಕೈಕೊಂಬುದೀ ದುಃಖವ (ಸಿದ್ಧವ. ಕ. ೨೦-೫೯). ೩. ಮನಸ್ಸು ಕದಡುವಿಕೆ ; ಉದ್ವೇಗ : ನಿಬ್ಬೆಱಗುವಟ್ಟು ಸೌಂದರಿಯೊಬ್ಬುಳಿ ಗೊಂಡಳದುಣ್ಮದೀಕ್ಷಿಸಿ ನೃಪನಂ ಬಿಬ್ಬೋಕಂ ಕುಡಿವರಿಯಲ್ ನಿಬ್ಬೆಗದೆ ನಿನಗಕಾರಣಹಸನಮದೆಂದಳ್ (ಉದ್ಭಟ.೧೧-೨೩). [<ಸಂ. ನಿರ್ವೇಗ]

ನಿರ್ಬೈಲು 'ನಿರ್ವಯಲು' ನೋ.

ನಿರ್ಬೋಧೆ (ನಾ). ವಿಶೇಷವಾದ ಉಪದೇಶ,—ಬೋಧೆ : ಬೋಧೆಯ ಬೋಧಿಸಿ ಉಂಬವರೆಲ್ಲರು ಸಾಧಾರಣಕ್ಕೀಡಾದರು ನಿರ್ಬೋಧೆಯ ಹೇಳುವ ಹಿರಿಯರೆಲ್ಲರು ಬಾಗಿಲ ಕಾವುದಕ್ಕೊಳಗಾದರು (ಮೋಳಿಮಾ. ೧೦೨-೪೦೬). [ಸಂ. ನಿರ್ಬೋಧ]

ನಿರ್ಬ್ಯಾಜ (ನಾ). ಸಹಜತೆ ; ಸ್ವಾಭಾವಿಕತೆ : ದುಷ್ಟರಂ ದುರ್ಜ್ಜನರಂ ಸಿಂಹಾಸನದ್ರೋಹರನುಱದಿಱುದುತ್ತುಂಗಮಂ ವೀರಸಿಂಹಾಸನಮಂ ನಿರ್ಬ್ಯಾಜದಿಂನ್ದೇಱುದನತುಳಬಳಂ ರಾಯಬೆಂಕೊಳ್ವದೇವಂ (ಸೌಇಇ. XX, ೯೩-೨೧ ; ?). [<ಸಂ. ನಿರ್ವ್ಯಾಜ]

ನಿರ್ಭಂಗ (ನಾ). ನಾಶವಿಲ್ಲದವನು ; ಅಂತ್ಯವಿಲ್ಲದವನು : ತುಂಗ ತರಂಗಗಂಗಾಜಲಸಂಗಕುರಂಗಧರೋತ್ತಮಾಂಗ ನಿರ್ಭಂಗ ನಿರಂಗ . . . ಚಿದಂಗನಾಪ್ರಿಯಾ (ಶಬಶಂ. ೫-೨೬). [ಸಂ.]

ನಿರ್ಭಯ (ಗು). ೧. ಹೆದರಿಕೆಯಿಲ್ಲದ ; ಭಯವಿಲ್ಲದ ; ಭೀತಿಯಿಲ್ಲದ : ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು (ಮಹಾದೇ. ಕ.೧೦೮-೨೫೦) ; ಈ ವಿಕಲ್ಪವ ಬಿಟ್ಟು ನಿರ್ಭಯಭಾವಭರದಲಿ ಹೊಡೆದು ನೋಡು (ಪ್ರಭುಲೀ. ೧೯-೨೭). (ನಾ). ೨. ಭಯವಿಲ್ಲದಿರುವಿಕೆ ; ನಿರ್ಭೀತಿ ; ಧೈರ್ಯ : ಧನದಲ್ಲಿ ಶುಚಿ ಪ್ರಾಣದಲ್ಲಿ ನಿರ್ಭಯ ಇದಾವಂಗಳವಡುವುದಯ್ಯಾ : . . ನಿರಾಶೆ ನಿರ್ಭಯ ಕೂಡಲ ಸಂಗಮದೇವಾ ನೀನೊಲಿದ ಶರಣಂಗಲ್ಲದಿಲ್ಲ (ಬಸವ. ೮೫೪) ; ತನುವಿನಲ್ಲಿ ನಿರ್ಮೋಹ ಮನದಲ್ಲಿ ನಿರಹಂಕಾರ ಪ್ರಾಣದಲ್ಲಿ ನಿರ್ಭಯ ಚಿತ್ತದಲ್ಲಿ ನಿರಪೇಕ್ಷೆ . . . ಜ್ಞಾನದಲ್ಲಿ ಪರಮಾನಂದವೆಡೆಗೊಂಡ ಬಳಿಕ ಸೌರಾಷ್ಟ್ರ ಸೋಮೇಶ್ವರಲಿಂಗವು ಬೇಱಿಲ್ಲ ಕಾಣಿರೊ (ಅದನ. ೨೦-೪೮). ೩. ಭಯವಿಲ್ಲದಿರುವವನು : ನಿರುಪಮಾನ ನಿರಧಿಕ ನಿರ್ಭಯ . . . ನಿಜ ನಿರ್ಮಾಯ ಚಿತ್ತೈಸು (ಬಸಪು. ೬೧-೪೪) ; ಈತ ಶುಚಿ ರುಜುವೀತ ನಿಸ್ಪೃಹನೀತ ನಿರ್ಭಯನೀತ ನಿರ್ಮಳನೀತ ರಾಗದ್ವೇಷರಹಿತನು ಪಾರ್ಥ ನೋಡೆಂದ (ಕುಸ್ಯಾಅ. ೬-೭೬) ; ನಿರಘ ನಿರೀಹ ನಿರ್ಭಯ ನಿರಾಶ್ರಯ ನಿಶ್ಚಲ . . . ಜಯಶಂಕರ ನಿರ್ಜಡ ಶಾಂಭವೀಧವಾ (ಶಬಶಂ. ೫-೨೪). ೪. ಕ್ಷೇಮ ; ಸುರಕ್ಷತೆ ; ಸುಭದ್ರತೆ ; ಅಪಾಯರಹಿತತೆ. [ಸಂ.]

ನಿರ್ಭಯತೆ (ನಾ). = ನಿರ್ಭಯ ೨ : ಈತನು ಶತ್ರುವೇ ಆಗಿದ್ದರೆ. . . ನಿರ್ಭಯತೆಯಿಂದ ಮನೆಯೊಳಗೆ ಹೇಗೆ ಬರುತ್ತಿದ್ದ (ಜಮಿನಾ. ೯೩). [ಸಂ. ನಿರ್ಭಯತಾ]

ನಿರ್ಭಯತ್ವ (ನಾ). = ನಿರ್ಭಯ ೨ : ಶೌರ್ಯವಾವುದು ನಿನಗೆ ದಾನವವರ್ಯ ಹೇಳೈ ನಿರ್ಭಯತ್ವವಿದಾರ್ಯ ಜನ ಮೆಚ್ಚುವವೊಲಿದೆ ನೀನೆನಲು ಬಲಿ ನುಡಿದ (ತಿಮ್ಮಶಾಂ. ೬-೮೨). [ಸಂ.]

ನಿರ್ಭರ (ಗು). ೧. ಹೆಚ್ಚಾದ ; ಅಧಿಕವಾದ ; ಅತಿಶಯವಾದ : ಜಾತಕರ್ಮೋತ್ಸವದೊಳ್ ಪರಿಜನಮುಂ ಪುರಜನಮುಮೊಸಗೆ ಮರುಳ್ಗೊಂಡು ನಿರ್ಭರಕ್ರೀಡಾರಸಪರವಶರಾದಾಗಳ್ (ಆದಿಪು. ೬-೧೧೧ ಪ) ; ಧರ್ಮಂ ನಿರ್ಭರಸಾರ್ವಭೌಮಪದಮಂ ಧರ್ಮಂ ಸುರೇಂದ್ರತ್ವಮಂ . . . ಧರ್ಮಂ ಧಾರ್ಮಿಕನಪ್ಪವಂಗೆ ಕುಡುಗುಂ ನಿರ್ವಾಣಕಲ್ಯಾಣಮಂ (ಸುಕುಮಾ. ೬-೪೨) ; ಚತುರ್ದಶಲೋಕಮನೆಯ್ದೆ ಗರ್ಭದೊಳ್ ಧರಿಯಿಸಿದಚ್ಯುತಂ ಬಳೆಯೆ ತನ್ನುದರಾಂತರದೊಳ್ ತದೀಯ ನಿರ್ಭರಭರದಿಂದವಾದ ಗಮನಾಲಸವೃತ್ತಿಯನೇನನೆಂದಪೆಂ (ಜಗವಿ. ೨-೯೮). ೨. ತುಂಬಿದ ; ಪೂರ್ಣವಾದ : ತರಳತರಲೋಚನಂ ನಿರ್ಭರರಾಗರಸಂ ಮುಖಾರವಿಂದಂ ನಿನ್ನಾ ದೊರೆಕೊಳಿಸಿದೊಸಗೆಯೇಂ ಬಂಧುರಂ (ಕವಿರಾ. ೩-೧೬). (ನಾ). ೩. ರಭಸ ; ಜೋರು ; ವೇಗ ; ತೀವ್ರತೆ : ಆದಿತ್ಯೇಂದುಗಳನಾವರಿಸಿತಾ ಪರಿವೇಷವತಿನಿರ್ಭರದೊಳನಿಲಂ ಬೀಸಿದನು (ಬಸಪು. ೬೧-೧೧) ; ಕ್ರೋಧಶಿಖಿ ಕರಣೇಂದ್ರಿಯಾದಿಗಳ ತುಱುಗಿದಂತಃ ಖೇದಮಂತ್ರಾಕ್ಷರಕೆ ಜವನಿಕೆಯಾದುದ್ಯೆ ನಿರ್ಭರದ ವೀರಾವೇಶದಲಿ ಪಲ್ಲಟಿಸಿದನು ಭೂಪ (ಕುಸ್ಯಾಗ. ೫-೩೧) : ಕೆಂಗಣ್ಣಳಿಂ ನೋಡಿ ನಿರ್ಭರದಿಂ ಗರ್ಜಿಸಿ ಕೋಡೊಳೀಡಿಱಿಯಲಾರ್ಪಿಂ ಬರ್ಪಸಂದೃಪ್ತ ಸಿಂಧುರಮಂ ಪಾಯ್ದು ಪಳಂಚಿ ಪೊಯ್ದನಸಿಯಿಂ ಧೀರೋತ್ತಮಂ ಧೀವರಂ (ಶಬಶಂ. ೩-೫೭). ೪. ಕ್ರೌರ್ಯ ; ಕಠೋರತೆ : ನಿಲ್ಲದೆ ನಿಬ್ಬರಕೆ ಓಡಿಸುವುದು ನಿರ್ಭರವೆನಿಸಿಕೊಂಬುದು (ಅಶ್ವಟೀ. ೨೫-೯). ೫. ತುಂಬಿದುದು ; ಪೂರ್ಣವಾದುದು : ಪ್ಯಾಮೋಹವಿಲ್ಲದ ಪ್ರೇಮ ನಿರ್ಭರವಿರಲಿ (ಮಂಕುಕ. ೭೫೭) ; ಆನಂದವರ್ಧನನ ಜೀವನ ಸರ್ವಾಂಗಸುಂದರವೂ ತತ್ವಾನುಭವಬಂಧುರವೂ ಭಕ್ತಿನಿರ್ಭರವೂ ಆಗಿತ್ತು (ಧ್ವನ್ಯಾಲೋ. XXVII ಪೀಠಿಕೆ). ೬. ಎಡೆಬಿಡದ ಪ್ರಯತ್ನ ; ಛಲದಿಂದ ಮಾಡುವ ಸಾಧನೆ. [ಸಂ.]

ನಿರ್ಭರಂ (ಅ). ಹೆಚ್ಚಾಗಿ ; ಅಧಿಕವಾಗಿ ; ಅತಿಶಯವಾಗಿ : "ಅತಾಂತವತ್ಯಂತಮತೀವಬಾಢಂ . . . ನಿರ್ಭರಮಿಂತಿವೆಲ್ಲಂ ಕೃತಕ್ರಿಯಾಭೂಮವಿಶೇಷಣಂಗಳ್" (ವಸ್ತುಕೋ. ೧೧೬-೩೪) ; ಸ್ಮರನಸ್ತ್ರ ಸಮಿತಿಯದು ನಿರ್ಭರಮಂಗಮನುರ್ಚಿ ಪೋಗೆಯುಂ ಪೋಬಱಿಯಂ ದೊರೆಕೊಳಿಸಲಾಗದು (ಕವಿರಾ. ೩-೧೮೫) ; ಆ ಕೊಳನಂ ಬಳಸಿ ಬಂದು ನಿರ್ಭರಮಾಗಿ ಬೊಬ್ಬಿಱಿದಬ್ಬರಂಗೆಯ್ದು (ಗದಾಯು. ೭-೧ ಪ). [ಸಂ.]

ನಿರ್ಭರಗರ್ಭ (ನಾ). ತುಂಬಿದ ಬಸಿರು ; ಪೂರ್ಣವಾದ ಬಸಿರು : ಅಂತು ನಿರ್ಭರಗರ್ಭ[ಪಾಠಾಂ. ಗರ್ಭನಿರ್ಭರ]ಪ್ರದೇಶದೊಳರಾತಿಗಳ್ಗಂತ ಕಾಲಂ ದೊರೆಕೊಳ್ವಂತೆ ಪ್ರಸೂತಿಕಾಲಂ ದೊರೆಕೊಳೆ (ಪಂಪಭಾ. ೧-೧೨೬ ಪ) ; ಬಂಬಲ ಬಾಡಿದ ರೂಪು ಗಾಡಿಯಂ ನೂರ್ಮಡಿ ಮಾಡೆ ಮೇಳದವಳಂ ಸತಿ ನಿರ್ಭರಗರ್ಭಭಾರದಿಂ ನೆರ್ಮಿ ನಿಮಿರ್ಚುವಳ್ ಪುರುಳಿಯೊಳ್ಪರಿಹಾಸವಚೋವಿಳಾಸಮಂ (ಮಲ್ಲಿಪು.೪-೧೧೦). [ನಿರ್ಭರ+ಗರ್ಭ]

ನಿರ್ಭರತೆ (ನಾ). ಹೆಚ್ಚಳ ; ಅತಿಶಯತೆ ; ಗಾಢತೆ : ಮೌನದ ನಿರ್ಭರತೆ ಹೆಚ್ಚಾಗಿ . . . ಅನಿರೀಕ್ಷಿತವಾದ ಸ್ಫೋಟಕ್ಕಾಗಿಯೇ ಕಾದು ನಿಂತಿದೆ (ಸ್ವದರ್ಶಿ. ೪) ; ಕೊರಳ ನಗುವಿನಲ್ಲಿ ಕೃತ್ರಿಮ ಕೋಮಲತೆಯೂ ನಿರ್ಭರತೆಯೂ ಒಟ್ಟುಗೂಡಿದ್ದವು (ರಕ್ತಧ್ವ. ೩೦೭). [ಸಂ. ನಿರ್ಭರತಾ]

ನಿರ್ಭರಭಕ್ತಿ (ನಾ). ಅತಿಶಯವಾದ ಭಕ್ತಿ ; ಅಧಿಕವಾದ ಭಕ್ತಿ : ಜಿನ ನಿನಗಶೋಕಲಾಂಭನಮಾಯ್ತಾ ಜವನಂ ಗೆಲ್ದುದಱಿಂದೆಂಬವೊಲುಲಿದುದು ಚಂಚರೀಕರವದಿನಶೋಕಂ ಎಂದು ನಿರ್ಭರಭಕ್ತಿಯಿಂ ಸ್ತುತಿಯಿಸಿ (ಮಲ್ಲಿಪು. ೧೪-೨೨೭) ; ಮತಿಯೊಳ್ ನಿರ್ಭರಭಕ್ತಿ ಕಣ್ಮಲರೊಳಾನಂದಾಶ್ರು ಮೆಯ್ಯೊಳ್ ಸಮುದ್ಗತರೋಮಂ ಮುಖದೊಳ್ ವಿಲಾಸಮೆಸೆಯುತ್ತಿರ್ಪನ್ನಮಿಂತೆಂದರಾನತಮೂರ್ಧರ್ (ಜಗವಿ. ೩-೫) ; ಪುರದ ತೆಲ್ಲಿಗರಯ್ವತೊಕ್ಕಲುಗಳು ನಿರ್ಭರಭಕ್ತಿಯಿಂ . . . ಸೊಂಟಗೆಯೆಣ್ಣೆಯಂ ಪ್ರತಿದಿನಮಾಚಂದ್ರಾರ್ಕ್ಕತಾರಂ ಕೊಟ್ಟರು (ಸೌಇಇ. XX, ೧೯೧-೨೫ ; 1215). [ನಿರ್ಭರ + ಭಕ್ತಿ]

ನಿರ್ಭರಯೌವನ (ನಾ). ತುಂಬುಹರೆಯ ; ಪೂರ್ಣಯೌವನ : ಒದವಿದ ನಿರ್ಭರಯೌವನ [ಪಾಠಾಂ. ಯವ್ವನ]ಮದದಿಂ ಮೆಯ್ಮಱಿದು ಕಂಭಮೆಂದು ಮಣಿಸ್ತಂಭದ ರುಚಿಯನಲಘುಕುಚಭಾರದೆ ಜೋಲ್ದು ಮಲಂಗಿ ನಗಿಸಿದರ್ ಕೆಳದಿಯರಂ (ಕಾದಂಪೂ. ೧೦೦೭).

[ನಿರ್ಭರ + ಯೌವನ]

ನಿರ್ಭರರಾಗ (ನಾ). ಅತಿಶಯವಾದ ಪ್ರೀತಿ,— ಅನುರಾಗ : ನಿರ್ಭರರಾಗದಿನಂದು ನಿಜಾರ್ಭಕನಂ ಜಾತಕರ್ಮಮಂ ನಿರ್ಮಿಸಿದಂ . . . ಸುಪುಣ್ಯನಿಭ್ಯವಂಶವರೇಣ್ಯಂ (ನೇಮಿಪು. ೪-೨೩). [ನಿರ್ಭರ + ರಾಗ]

ನಿರ್ಭರವಿಲಾಸ (ನಾ). ಅತಿಶಯವಾದ ಶೋಭೆ,—ವೈಭವ : ಪೂಜೆಯಲ್ಲಿ ಮೈಮರೆದೊರಗಿ ಲಿಂಗವಶವಾಗಿರುವ ಷಣ್ಮುಖಸ್ವಾಮಿಗಳ ಶಿವಾದ್ವೈತಭಕ್ತಿಯ ನಿರ್ಭರವಿಲಾಸವನ್ನು ನೋಡಿ.. (ವಚಸಂ. LXXI, ಒಳಗೆ ಪ್ರವೇಶ). [ನಿರ್ಭರ + ವಿಲಾಸ]

ನಿರ್ಭರಸ್ವೇದ (ನಾ). ಅತಿಯಾದ ಬೆವರು : ನಿರ್ಭರಸ್ವೇದಸಲಿಲ ಸೇಚನದಿಂ ನಯಂಬಡೆದ . . . ನಿಶ್ವಾಸಪವನನಿಂ ಪರಿಮಳಮಂ ಬೀಱುವ ವಧೂವರರಾಗವಿಷಯವಲ್ಲರಿ ಫಲಿತಮಾದುದು (ಜಗವಿ. ೨-೫೨ ಪ). [ನಿರ್ಭರ + ಸ್ವೇದ]

ನಿರ್ಭರಾನಂದ (ನಾ). ೧. ಅಧಿಕವಾದ ಆನಂದ ; ಅತ್ಯಾನಂದ : ಮೀಱುವರಾರೆಮ್ಮುಮನೆಂಬ ದೋರ್ಬಲದಗುರ್ವಿಂ ನಿರ್ಭರಾನಂದದಿಂ [ಪಾಠಾಂ. ದಿರ್ಪರಾನಂದದಿಂ]ದವರಿರ್ವರ್ ಮನುಜರ್ ತನೂಭವನುಮಂ ಕೊಂದೆನ್ನನಾದಂ ಪರಾಭವಮಂ ಪೊರ್ದಿಸಿ ನಿರ್ದಯರ್ ಬಗೆಯದಿರ್ದರ್ ದಂಡಕಾರಣ್ಯದೊಳ್ (ಪಂರಾಮಾ. ೯-೪೬). ೨. ಅತ್ಯಾನಂದವುಳ್ಳ ವ್ಯಕ್ತಿ. [ನಿರ್ಭರ + ಆನಂದ]

ನಿರ್ಭರಾನಂದೆ (ನಾ). ಅತ್ಯಾನಂದವನ್ನುಳ್ಳವಳು : ಈ ದೇಹ ಲಾವಣ್ಯವಾದಂ ಮಿಗುತಿರ್ಕುಂ ತನ್ಮಹಾಭಾಗನ ನುಡಿಯಿದಱಿಂ ಸತ್ಯವಾಗಿರ್ದುದಲ್ತೇ ಎಂದು ನುಡಿದ ಮದಲೇಖೆಯ ಮಾತಿನೊಳ್ ನಿರ್ಭರಾನಂದೆಯಾಗಿ ಕಾದಂಬರಿ ಮಹಾಶ್ವೇತೆಗಂ . . . ಪ್ರಿಯತಮಾಕೃತಿಯಂ ತೋಱಲ್ (ಕಾದಂಉ. ೬೩೧). [ಸಂ. ನಿರ್ಭರಾನಂದಾ]

ನಿರ್ಭರಾಲೋಕ(ನಾ). ಕ್ರೂರವಾದ ನೋಟ ; ಕ್ರುದ್ಧವಾಗಿ ನೋಡುವಿಕೆ ; ತೀವ್ರದೃಷ್ಟಿ : ಲಿಂಗಣ್ಣ :—(ಕಿಂಚಿತ್ಕಾಲದ ಬಳಿಕ, ತೆಪ್ಪತ್ತು, ಎದ್ದು ಕುಳಿತು, ಹುಚ್ಚನಂತೆ ಸುತ್ತ ನೋಡಿ ವಿಕ್ರಮರಾಯನಿಗೆ ನಿರ್ಭರಾಲೋಕವನ್ನು ನಟ್ಟುಕೊಂಡಿರುವನು) (ಬೆಟ್ಟಅ. ೫೭-೨೦). [ನಿರ್ಭರ + ಆಲೋಕ]

ನಿರ್ಭರಾಲೋಕನ (ನಾ). = ನಿರ್ಭರಾಲೋಕ : ಚಂಡನುದ್ದಂಡ ಕೋದಂಡಮಂ ಜೇವೊಡೆಗೆಯ್ದು ಕಾಯ್ದುಬ್ಬರಿಸಿ ನಿರ್ಭರಾಲೋಕನಂಗೆಯ್ದು ಘೂರ್ಣಿಸಿ . . . ಮುಂದಕ್ಕೆ ಸಾಗಿದಾಗಳ್ (ಹಮ್ಮೀರ. ೩-೪೨ಪ). [ನಿರ್ಭರ + ಆಲೋಕನ]

ನಿರ್ಭರಿತ(ನಾ). ಬಯಲಾದುದು; ಇಲ್ಲವಾದುದು; ಶೂನ್ಯಸ್ಥಿತಿ : ನೀನು ಪರಿಣಾಮಿಯಾದೆ ಬಸವಾ ರೂಪು ನಿರೂಪುವಿಡಿದೆ ಬಸವಾ ಸಂಗಯ್ಯನಲ್ಲಿ ಮನಃಪ್ರೀತಿಯ ಬಸವಾ ಭರಿತ ನಿರ್ಭರಿತವಾಯಿತ್ತೇ (ನೀಲವ. ೧೧-೨೬). [ನಿರ್- + ಭರಿತ]

ನಿರ್ಭರೋಕ್ತಿ (ನಾ). ಬಿರುಸಿನ ಮಾತು; ರಭಸದ ನುಡಿ ; ಕಠಿಣವಾದ ಮಾತು : ಅವನ ಗರ್ವಗರ್ಭಂಗಳಪ್ಪ ನಿರ್ಭರೋಕ್ತಿಗಳಂ ಕೇಳ್ದು ಕುಮಾರಂ ಪರ್ಜನ್ಯಗರ್ಜನಮಂ ಕೇಳ್ದ ಕೇಸರಿಕುಮಾರನಂತು ಕೆಳರ್ದು (ಚಂದ್ರಪು. ೫-೭೪ ಪ). [ನಿರ್ಭರ + ಉಕ್ತಿ]

ನಿರ್ಭರ್ತ್ಸನ (ನಾ). ೧. ಬೆದರಿಸುವಿಕೆ ; ಗದರಿಸುವಿಕೆ ; ಜಬರಿಸುವಿಕೆ. ೨. ನಿಂದನೆ ; ದೂಷಣೆ ; ಜರೆಯುವಿಕೆ : ನಿರ್ಭರ್ತ್ಸನ (Invective) ದಲ್ಲಿ ಹಾಸ್ಯವು ಬಹುತೇಕ ಮಾಯವಾಗಿ ಹೋಗಿರುತ್ತದೆ (ಗೊತ್ತುಗು. ೪೭). [ಸಂ.]

ನಿರ್ಭರ್ತ್ಸನೆ (ನಾ). = ನಿರ್ಭರ್ತ್ಸನ ೨ : ಗಂಗವ್ವ ಹಟ ಹಿಡಿದರೆ . . . ಎಲ್ಲರ ಕಡೆಯಿಂದ ಆಕೆಯ ನಿರ್ಭರ್ತ್ಸನೆ ಮಾಡಿಸತಕ್ಕದ್ದು (ಗಂಮಾಯಿ. ೧೪೦). [ಸಂ. ನಿರ್ಭರ್ತ್ಸನ]

ನಿರ್ಭರ್ತ್ಸಿತ (ಗು). ಹೀಯಾಳಿಸಿದ ; ಧಿಕ್ಕರಿಸಿದ : ನಿಜತೇಜೋ ನಿರ್ಭರನಿರ್ಭರ್ತ್ಸಿತ ರವಿಗ್ರಹನುಂ ಜನ್ಮಾಂತರಾಭ್ಯಾಸಜನಿತಾವಧಿ ಬೋಧೋದಯವಿದಿತಕಾಲನಿಯೋಗನುಂ . . . ಪ್ರತಿಶ್ರುತಿಯೆಂಬಂ (ಆದಿಪು. ೬-೫೨ ಪ). [ಸಂ.]

ನಿರ್ಭವ (ಗು). ೧. ಹುಟ್ಟುಗೆಟ್ಟ ; ಜನ್ಮವಿಲ್ಲದ. (ನಾ). ೨. ಹುಟ್ಟಿಲ್ಲದವನು ; ಜನ್ಮವಿಲ್ಲದವನು ; ಭವರಹಿತನಾದವನು : ನಿರಜ ನಿರ್ಜರ . . . ನಿರ್ಭವ ನಿರ್ವಿರಳ ನಿಸ್ತರಣ ನಿರ್ವೃದ್ಧಾಂಗ ನಿಜ ನಿರ್ಮಾಯ ಚಿತ್ತೈಸು (ಬಸಪು. ೬೧-೪೪) ; ನಿರಂತ ನಿರ್ಭವ ನಿರಾಮಯ ನಿರ್ಗುಣ ನಿಸ್ತುಳಪ್ರಭಾವರಣ ನಿರಂಗ . . . ಜಯಶಂಕರ ನಿರ್ಜಡ ಶಾಂಭವೀಧವಾ (ಶಬಶಂ. ೫-೨೪). [ಸಂ.]

ನಿರ್ಭವ್ಯ (ನಾ). [ಜೈನ]ಮುಕ್ತಿಗೆ ಸಲ್ಲದ ಜೀವ ; ಮೋಕ್ಷವನ್ನು ಹೊಂದಲಾಗದ ಜೀವ : ಭವ್ಯರೆಂದುಂಟು ನಿರ್ಭವ್ಯರೆಂದುಂಟೆಲೆ ಭವ್ಯ ಕೇಳವರ ಭೇದವನು ಭವ್ಯರೆಂಬವರು ಮುಕ್ತಿಗೆ ಸಲುವವರು ನಿರ್ಭವ್ಯರಲ್ಲಿಗೆ ಸಲ್ಲದವರು (ಭರಚ. ೬೪-೧೨). 'ಅಭವ್ಯ' ಪರಾ. [ಸಂ.]

ನಿರ್ಭಾಗಧೇಯ (ನಾ). ೧. ದುರ್ದೈವಿ; ಅದೃಷ್ಟಹೀನ : ಪೂತು ಮಝು ನಿರ್ಭಾಗಧೇಯನು ರಾಯನಕಟಾ . . . ಎನುತ ಮಱುಗಿದನು ಕಲಿಕರ್ಣ (ಕುಪ್ಕಾಕ. ೨೬-೧೪); ನಿರ್ಭಾಗಧೇಯನ ಮುಂದೆ ಸಿರಿ ತಾನಾಗಿ ಸುಳಿವುದೆ (ತೊರರಾ. ೬-೧೬-೧೨). ೨. ದರಿದ್ರ ; ನಿರ್ಧನ ; ಏನೂ ಇಲ್ಲದವನು: ಆ ಗಯಾಳರ ಗಾವಿಲರ ನಿರ್ಭಾಗಧೇಯರ ಮಾಡಿಯುತ್ತರ ಭಾಗದಲಿ ತಿರುಗಿತ್ತು ಪಾಳೆಯವು (ಕುಪ್ಕಾಸ. ೩-೨೪). [ಸಂ.]

ನಿರ್ಭಾಗಿನಿ(ನಾ).ನತದೃಷ್ಟೆ; ಅಭಾಗಿನಿ;ಅದೃಷ್ಟಹೀನೆ:ಗಂಡನನ್ನು ಕಳೆದುಕೊಂಡ ನಿರ್ಭಾಗಿನಿ ಈರಮ್ಮನ ದುಃಖಕ್ಕೆ ಮಿತಿಯೇ ಇರಲಿಲ್ಲ (ಪಂಜಪಂ. ೩೫). 'ಅಭಾಗಿನಿ' ಪರಾ. [ಸಂ. ನಿರ್ಭಾಗಿನೀ]

ನಿರ್ಭಾಗ್ಯ (ಗು). ೧. ಅದೃಷ್ಟಹೀನವಾದ ; ದುರ್ದೈವಿಯಾದ : ನಿರ್ಭಾಗ್ಯ ಮಗುವೊಂದಿದೆ. ನಾಲ್ಕು ತಿಂಗಳು (ನಿರಾತೆ. ೧೧). (ನಾ). ೨. ದರಿದ್ರ ; ನಿರ್ಗತಿಕ ; ನತದೃಷ್ಟನಾದ ವ್ಯಕ್ತಿ : ಭಕ್ತಿಯಿಲ್ಲದ ಬಡವ ನಾನು ನಿಮ್ಮ ನೆನಹವಿಲ್ಲದೆ ನಿರ್ಭಾಗ್ಯನಾದೆ ಎನಗೆ ನೀ ಕರುಣಿಸಾ (ಬಸವ. ೨೫೭) ; ಸಿರಿಯ ಕರವಿಡಿದಾತ ನೀ ನಿರ್ಭಾಗ್ಯನಾದೆಯಲ (ಕೌತಿರಾ. ೨೯-೧೫); ಇಲ್ಲಿ ಸಭಾಸದರಾಗಿರುವ ಕೌರವರಾಜರು ನಿನ್ನ ದುಃಖವನ್ನು ಕಂಡೂ ಕಂಡೂ ಸುಮ್ಮನಿರುವುದು ಪಾಂಡವರು ನಿರ್ಭಾಗ್ಯರೆಂದು ತಿಳಿದಿರುವುದರಿಂದ ! (ವಚಭಾ. ೧೦೨).

ನಿರ್ಭಾಗ್ಯದಾಮೋದರು = ನಿರ್ಗತಿಕ; ದಟ್ಟದರಿದ್ರ : (ಕಿ). [ಸಂ.]

ನಿರ್ಭಾಗ್ಯೆ (ನಾ). = ನಿರ್ಭಾಗಿನಿ : ಓ ಕೈಕೆ, ಮತಿಗೇಡಿ, ನಿರ್ಭಾಗ್ಯೆ, ಇನ್ನುಮೇನೀ ನಿದ್ದೆ ನಿನಗೆ ? (ತ್ರೀರಾಮಾ. ೬೦-೧೭೭) ; ಹೌದು ನಾನೇ -ನಿರ್ಭಾಗ್ಯೆ ತುಳಸಿ (ನಿರಾತೆ. ೧೧). [ಸಂ. ನಿರ್ಭಾಗ್ಯಾ]

ನಿರ್ಭಾವ (ನಾ). ೧. ಭಾವವಿಲ್ಲದುದು ; ನಿರ್ವಿಕಾರವಾದುದು : ಕನ್ನಡಿಯಲ್ಲಿ ಮೋರೆ ನೋಡಿಕೊಂಡಳು. ಮೋರೆ ನಿರ್ಭಾವವಾಗಿತ್ತು (ಮೂರುದಾ. ೨೩೦). ೨. ನಿರ್ವಿಕಾರಚಿತ್ತ ; ಭಾವರಹಿತವಾದ ಮನಸ್ಸು : ತನುಗುಣಸಂಬಂಧವ ತಾನೆಂದು ತೋಱಲೀಯದೆ ನಿಶ್ಚಯವ ಮಾಡಿ ತಾತ್ಪರ್ಯವ ಕಳೆಯಾಗಿರಿಸಿ ಸಕಲದಲ್ಲಿ ನಿಃಕಲದಲ್ಲಿ ರೂಪಿನಲ್ಲಿ ಅರೂಪಿನಲ್ಲಿ ಭಾವದಲ್ಲಿ ನಿರ್ಭಾವದಲ್ಲಿ ಅವೆ ಆವಾಗಿ ತೋಱಬಲ್ಲಾತಗುರು (ಸಿದ್ಧವ. ೪-೨೬) ; ಭಾವನಿರ್ಭಾವಪ್ರಸಿದ್ಧಕಳಾವಿರುದ್ಧ ವಿಶುದ್ಧ ಮೂರ್ತಿಗೆ ಜೀವಬದ್ಧಾಶುದ್ಧಬುದ್ಧಿಗಳೆಂತು ಸರಿಯಹರು (ಬಸಪು. ೫೪-೨೧) ; ಈ ವಿಧಿಯಲೇನುಂಟು ನೆಱೆ ನಿರ್ಭಾವದಂಗವನಱಿಯದನ್ನಕ ಸಾವುದಾದರೆ ಮಾಣದೈ ಗೊಗ್ಗಯ್ಯ (ಪ್ರಭುಲೀ. ೧೧-೧೫). ೩. ಜನ್ಮವಿಲ್ಲದವನು ; ಸಂಸಾರವಿಲ್ಲದವನು : ಭವಸಾಗರದ ಸಮಯದಲ್ಲಿದ್ದ

ವಂಗೆ ನಿರ್ಭಾವನ ಭಾವವನೆತ್ತ ಬಲ್ಲರು (ಪಚಸಂ. ೭೨-೬೬). ೪. [ವೀಶೈ] ಇಂದ್ರಿಯಗೋಚರವಲ್ಲದುದು; ಇಂದ್ರಿಯಾತೀತವಾದುದು: ಭಾವ ಭ್ರಮೆಗಳು ಸಹ್ಯವಾಗಿ ಅನುಭಾವದಲ್ಲಿ ಲೀನವಾಗಿ ಭಾವ ಸದ್ಭಾವ ನಿರ್ಭಾವವೆಂಬ ಭಾವತ್ರಯಂಗಳಲ್ಲಿ ಭರಿತವಾಗಿ ಭಾವ ಬ್ರಹ್ಮವೆಂಬ ಭೇದವಿಲ್ಲದೆ ಸನ್ನಿಹಿತ ಭಾವದಿಂದಿಪ್ಪುದೆ ಭಾವಲಿಂಗ (ಅದನ. ೧೩೯-೨೩೫); ಹುಸಿಯಿಂದಲಿ ಲಿಂಗವ ಹೆಸರುಗೊಂಡು ಕರೆದೆನಯ್ಯಾ ಅದು ಎನಗೆ ಭಾವವೂ ಅಲ್ಲ ನಿರ್ಭಾವವೂ ಅಲ್ಲದೆ ನಿಂದಿತ್ತಯ್ಯಾ ಅದಱ ಅವಯವಂಗಳೆಲ್ಲ ಜಂಗಮವಯ್ಯಾ (ಬಸವ. ೯೪೩). [ಸಂ.]

ನಿರ್ಭಾವಿ (ನಾ). ಇಂದ್ರಿಯಗೋಚರನಲ್ಲದವನು: ನಿನಗೆ ಸುಜ್ಞನವ ಮಾಡುವಲ್ಲಿ ನಾನು ಮಲದೇಹಿ ನೀನು ನಿರ್ಮಲದೇಹಿ . . . ನಿನಗೆ ಭೂಪವನಿಕ್ಕುವಲ್ಲಿ ನಾ ಭಾವಿ ನೀ ನಿರ್ಭಾವಿ (ಮೋಳಸಾ. ೬೭-೧೫೧). [ಸಂ. ನಿರ್ಭಾವಿನ್]

ನಿರ್ಭಾವಿಕ (ನಾ). = ನಿರ್ಭಾವಿ: ತನ್ನ ಭಾವದ ಬಗೆಗೆ ಬಣ್ಣವಿಟ್ಟು ಕೊಂಡರೆ ಆ ನಿರ್ಭಾವಿಕಂಗೆ ಸಹಜವೆ ಬಂದವರ ಅನುವರಿಯಬೇಳುವರಯೋಗಿ (ಸಿದ್ಧಪು. ೨೬-೬೨). [ಸಂ.]

ನಿರ್ಭಿಡೆ (ನಾ). ನಿಸ್ಸಂಕೋಚ; ನಿರ್ದಾಕ್ಷಿಣ್ಯ: ಗೋಪಾಲ ಎಷ್ಟು ನಿರ್ಭಿಡೆಯಿಂದ ಅವಳ ಮುಖಸ್ತುತಿ ಮಾಡುತ್ತಾನಲ್ಲ (ಮುಕ್ತಿ. ೬೯); ಸಿಡ್ನಿಯಿಂದ "ವಿಮಾನದಲ್ಲಿ ಹೋಗಿದ್ದರೆ ಚೆನ್ನಾಗಿತ್ತಲ್ಲ?" ಮುಂದಾಕಿನ ನಿರ್ಭಿಡೆಯಿಂದ ಕೇಳಿದಳು (ಕ್ರಿತಿಜ. ೪); ನನಗೆ ಇಷ್ಟು ನಿರ್ಭಿಡೆಯಿಂದ ಕಟ್ಟಪ್ಪಣೆ ಮಾಡುವ ನೀವಾರು? (ಗೌರಾಂಗ. ೧೧೪). [←ಮರಾ. ನಿರ್ಭೀಡ]

ನಿರ್ಭಿನ್ನ (ಗು). ವಿ. ಬಹುವಾಗಿ ಭಗ್ನಗೊಂಡ; ಚೂರು ಚೂರಾದ: ಲಕುಟಿಹತನಿರ್ಭಿನ್ನ ಭಾಂಡಪ್ರಕರವೋ ನಿನ್ನಾಳುಕುದುರೆಯೊಳ ಸಕಲಸುಭಟರನೊಕ್ಕಲಿಕ್ಕಿದನೊಂದುನಿಮಿಷದಲಿ (ಕುವ್ಯಾಕ. ೨೦-೬). ೨. ಚೆನ್ನಾಗಿ ಅರಳಿರುವ,—ವಿಕಸಿಸಿರುವ: ನಿರ್ಭಿನ್ನತಾಮರಸಂ ಶ್ರೀಮೊಗಮಾಗೆ ವಿಮಾನ್ ನಯನಮಾಗೊರ್ವಳ್ ಮನೋಜ್ಞಾಂಬುಜಾಕರದಂತಾ ನೃಪನಂದನಂಗೆ ಪಡೆದಳ್ ಬೇಜಮೊಂದತಿಪ್ರೀತಿಯಂ (ಶಾಂತಿಪು. ೪-೭೬); ಸನ್ನುತಾಕಲಿತಾಪ್ಯದಳನಿರ್ಭಿನ್ನಮಧ್ಯಸ್ಥಿತಕನದ್ವಿಲಸನ್ನವಕರ್ಣಿಕೆಯೊಳಿಸವೀಶ್ವರನೊಳದಗಿರಲು (ಬಸಪು. ೩೫-೬). ೩. ಭೇದಿಸಲಾಗದ; ತಿಳಿಯಲಾಗದ; ರಹಸ್ಯವಾದ: ದುರ್ಭವಕ್ಷಯಕರನ ಗರ್ಭಾವಿರ್ಭವಂ ನಿರ್ಭಿನ್ನಭಾವಂ ನಿರ್ಭರಾಶಾಪಾಶಮೋಚನಕರ್ಮ ಕರ್ಮಠನು (ಬಸಪು. ೫೩-೩). ೪. ಹೊರಹೊಮ್ಮಿದ; ತೂರಿಬಂದ: ವಿನತಬ್ರಾಹ್ಮಸುಧಾಂಶುಬಿಂಬಮುಖಿಯಂ ಚೀನೋತ್ತರೀಯಾವಗುಂಠನ ನಿರ್ಭಿನ್ನಕಪೋಲಪಾಂಡುರುಚಿಯಂ ಸಾರ್ದಂ ತದುರ್ವೀಶ್ವರಂ (ಅನಂಪು. ೧೧-೮೬). (ನಾ): ೫. ಕೂಡಿಕೊಂಡವನು; ಸೇರಿಕೊಂಡ ವ್ಯಕ್ತಿ: ತನ್ನ ಸುಖದುಃಖಂಗಳಿಗೆ ನಿರ್ಭಿನ್ನರಹ ಬಾಂಧವರ ವರ್ಜಿಸಿ ಗನ್ನಗತಕದಲುಂಡು ಜಾಜುವ ಗಾವಿಲರು ಕೂಡಿ ಅನ್ಯರನು ಪತಿಕರಿಸಿ ಬಹುಮಾನೋನ್ನತಿಕೆಯನು ವಿರಚಿಸುವುದಿದು ತನ್ನ ತಾನೇ ಕೊಂದುಕೊಂಬುದು (ಕುವ್ಯಾಳು. ೩-೩೬). ೬. ಅಖಂಡನಾದವನು; ಪರಿಪೂರ್ಣನಾದವನು; ಅಭಿನ್ನನಾದವನು: ನಿರ್ಭಿನ್ನ ನಿರುಜ ನೀರಜಗರ್ಭಪ್ರಿಯ ನಿಖಿಳಲೋಕಸಂಸ್ತುತ ನಿತ್ಯ ಸ್ವಯಂಭವಪೂಜಿತ . . . ಜಯ ಭವನಾಶ (ತ್ರಿಪುವಿ. ೭-೬೦). [ಸಂ.]

ನಿರ್ಭಿನ್ನತೆ (ನಾ). ಭಿನ್ನಭಾವವಿಲ್ಲದಿರುವಿಕೆ; ಹೊಂದಿಕೊಂಡಿರುವಿಕೆ; ವಿಳಿತವಾಗುವಿಕೆ: ಸನ್ನುತದಿ ನೀವೆ ಪಿತ ಮಾತೆಯರುಯೆಂದು ನಿರ್ಭಿನ್ನತೆಯೊಳಿರುತಿರ್ದನು (ಸನಪೊಚ. ೯-೪೮). [ಸಂ. ನಿರ್ಭಿನ್ನತಾ]

ನಿರ್ಭಿನ್ನೆ (ನಾ). ಜೊತೆಯಲ್ಲಿರುವವಳು; ಜೊತೆಗಾತಿ; ಮೇಳದವಳು: ನಿರ್ಭಿನ್ನೆಯರ ಕನ್ನೆಯರ ಚೆನ್ನೆಯರ ನಡುವೆ ಭಾನತೇಜದಿಂದೋಹೆಯಿಂ ಪೂಜೆಯಿಂ ಪಿಡಿದ ಪಲ್ಲಕ್ಕಿಯೊಳು ಬಂದಳು ಭವಾನಿ (ಗುಭಪ. ೩-೪೫). [ಸಂ. ನಿರ್ಭಿನ್ನಾ]

ನಿರ್ಭೀತ (ಗು). ವಿ. ಭಯವಿಲ್ಲದ; ಹೆದರಿಕೆಯಿಲ್ಲದ. (ನಾ). ೨. ಅಂಜಿಕೆಯಿಲ್ಲದವನು; ದಿಟ್ಟ; ಧೈರ್ಯಶಾಲಿ: ಧಾತು ಪೊಳ್ಳಿತು ದಿಟ್ಟನ್ಯೆ ನಿರ್ಭೀತ ಗರ್ವಿತನಿವನೆನುತ ಭಟರೀತನನು ಹೊಗಳಿದರು ಸಾತ್ಯಕಿ ಸೋಮಕಾದಿಗಳು (ಕುವ್ಯಾಕ. ೩-೨೬); ಭರದಿಂ ಸುವೇಗನೆಂಬಾ ಯೌವನಾಶ್ವಭೂವರನ ತನುಜಾತನಾಹವಕೆ ನಿರ್ಭೀತನುಬ್ಬರದ ಬಿಲ್ದೆರುವಿನಬ್ಬರದ ಕೋಳಾಹಳಕೆ ಧರೆ ಬಿರಿಯೆ ನಡೆತಂದನು (ಜೈಮಿಭಾ. ೪-೨೬); ಬಿಡಿ ಮೂಗುಗಳನ್ನು ತಯಾರಿಸಿ ಮನುಷ್ಯರಿಗೆ ಅಂಟಿಸುವ ಚಿಕಿತ್ಸೆ ಯಶಸ್ವಿಯಾಗುವವರೆಗಾದರೂ ನಮ್ಮ ಮೂಗು ನಮಗೇ ಎಂದು ನಾವು ನಿರ್ಭೀತರಾಗಿ ಇರೋಣ (ದೇಕಸ್ಮೃ. ೨೨). [ಸಂ.]

ನಿರ್ಭೀತಚಿತ್ತ (ನಾ). ಹೆದರಿಕೆಯಿಲ್ಲದ ಮನಸ್ಸುಳ್ಳವನು; ಧೈರ್ಯಶಾಲಿ; ಅಳುಕಿಲ್ಲದವನು: ಅನುಮಾನವನ್ನು ಪರಿಹರಿಸಿ ಕೊಳ್ಳೋಣವೆಂದು ನಿರ್ಭೀತಚಿತ್ತನಾಗಿ ಬೆಳಕಿನ ಕಡೆ ನೋಡುತ್ತ ನಡೆದನು (ಕಪಾಳಂ. ೧೩). [ನಿರ್ಭೀತ+ಚಿತ್ತ]

ನಿರ್ಭೀತವರ್ತನೆ (ನಾ). ದಿಟ್ಟತನದ ನಡವಳಿಕೆ; ಹೆದರದ ವ್ಯವಹಾರ: ಡಾರ್ಟಾನಾನನ ನಿರ್ಭೀತವರ್ತನೆಯ ಪರಿಣಾಮವಾಗಿ ಅವನನ್ನು ಕೂಡಲೆ . . . ರಾಜರಕ್ಷಕದಳದಲ್ಲಿ ತರಬೇತಿಗಾಗಿ ಸೇರಿಸಿದರು (ಯೋಧರು. ೩೭). [ನಿರ್ಭೀತ+ವರ್ತನೆ]

ನಿರ್ಭೀತಹೃದಯ (ನಾ). ಹೆದರದವನು; ಭಯಪಡದ ಚಿತ್ತವುಳ್ಳವನು: ನಿರ್ಭೀತಹೃದಯವುಳ್ಳವರಾಗಿ ಅಮಾನುಷ ಸಹಾಯದಿಂದ ಆ ಅಸ್ತ್ರವೃಷ್ಟಿಯ ಮೇಲೆ ಸಿಡಿಲು ಬಿದ್ದ ಹಾಗೆ . . . ಶತ್ರುಗಳನ್ನು ನಿಪಾತ ಮಾಡುತ್ತಿದ್ದರು (ಕೋಹಿನೂ. ೧೪). [ನಿರ್ಭೀತ+ಹೃದಯ]

ನಿರ್ಭೀತಿ (ನಾ). ಅಂಜಿಕೆಯಿಲ್ಲದಿರುವಿಕೆ; ಧೈರ್ಯ: ಕುರುಪತಿಯ ಬಿಜ್ಜನುಡಿಯ ಕೇಳಿದು ಕರಣದಲಿ ಕೋಪಾಗ್ನಿಯುಳ್ಕಲು ಕೆರಳಿ ನಿರ್ಭೀತಿಯಲಿ ನುಡಿದನು ವಿದುರನರಸಂಗೆ (ಕುವ್ಯಾಳು. ೪-೬೬); ಹುಲಿಯೂಹ ತಾನು ಕುಳಿತಿದ್ದ ಸ್ಥಳವನ್ನು ನಿರ್ಭೀತಿಯಿಂದ ಬಿಟ್ಟು . . . ನಡುದಾರಿಯಲ್ಲಿ ಕುಳಿತುಬಿಟ್ಟಿತು (ಕಳಹು. ೫). [ಸಂ.]

ನಿರ್ಭುಗ್ನ (ಗು). ವಿ. ಬಾಗಿಲ್ಲದ; ಸಮತಲವಾದ. (ನಾ). ೨. [ನಾಟ್ಯ] ಸಮ, ಆಭುಗ್ನ, ನಿರ್ಭುಗ್ನ, ಕಂಪಿತ ಮತ್ತು ಉದ್ವಾಹಿತ ಎಂಬ ಐದು ವಕ್ಷೋಭೇದಗಳಲ್ಲಿ ಒಂದು; ☞ "ಬೆನ್ನಿನಲ್ಲಿ ಹಳ್ಳ ಬೀಳಿಸಿ ಎದೆಯನ್ನು ಉಬ್ಬಿಸುವುದು" (ಲಾಸ್ಯರಂ. ೨೫೬ ಗದ್ಯಾನುವಾದ); ಸಮುಮಾಭುಗ್ನಂ ನಿರ್ಭುಗ್ನಮುಸುತವಿಲಸತ್ಪ್ರಕಂಪಮುದ್ವಾಹಿತಮುಂ ಕ್ರಮದಿಂ ವಕ್ಷೋಭೇದಂ ಸಮುನಿಸುಗುಂ ನೃತ್ತದಲ್ಲಿ ಸರಸಿಜಗಂಧೀ (ಲಾಸ್ಯರಂ. ೨-೮೫); ಬೆನ್ನು ಗುಳಿಯಾಗಲೆದೆ ಕೇಳುನ್ನತಿಯಿಂದಿರ್ದೊಡಂತದೇ ನಿರ್ಭುಗ್ನಂ (ಲಾಸ್ಯರಂ. ೨-೮೭). [ಸಂ.]

ನಿರ್ಭೂತ (ನಾ). ಇಲ್ಲದಂತಾದುದು; ನಷ್ಟವಾದುದು: ಈ ತನುವನೀ ಪರಿಯಲೇ ನಿರ್ಭೂತವನೆ ಮಾಡುವೆನು ನನ್ನನುಜಾತನಲಿ ಭೂವಧುವ ಸೇರಿಸಿ ಬದುಕಿ ನೀವೆಂದ (ಕುವ್ಯಾಆ. ೩೧-೫೦). [ಸಂ.]

ನಿರ್ಭೇದ (ಗು). ವಿ. ಭೇದವನ್ನರಿಯದ; ಅಭಿನ್ನವಾದ: ಯುಕ್ತಿಯುಜ್ಞಾದು ಧ್ಯಾನದಭ್ಯಾಸದೊಳು ಭೇದಭಕ್ತಿಯ ಮಾಡಿ ಧ್ಯಾನದೊಳು ಶಕ್ತನಾದವನು ಮತ್ತದ ಬಿಟ್ಟು ನಿರ್ಭೇದ ಭಕ್ತಿಯೊಳಿರೆ

ಮುಕ್ತಿಯುರಿದೆ (ಭರಜ. ೬೪–೭೬). (ನಾ). ೨. ಸೀಳುವಿಕೆ : ಅವುದಚ್ಚರಿ ಹೊಲಿವೆಡುವ ವಸುದೇವನಂಘ್ರಿಯ ನಿಗಳಮೋಕ್ಷಪದಾವುದ್ಯೆ ನೃಪ ಚಿತ್ರಬಂಧಕವಾಟ ನಿರ್ಭೇದ (ಶಿಭಾಗ. ೧೦–೪–೧೧). [ಸಂ.]

ನಿರ್ಭೇದತೆ (ನಾ). ಭೇದಿಸಲು ಅಸಾಧ್ಯವಾಗಿರುವಿಕೆ; ಅಭೇದ್ಯತೆ: ವಿಷಾಗ್ನಿಪಾಷಾಣ ಶೀತಾತಪವೃಷ್ಟಿ (ಕಾಷ್ಠ) ನಿರ್ಭೇದತೆಯುಂ . . . ತನಗನುಸಂಗತಮಾಗೆ ಯೌವನಪ್ರಾಪ್ತನಾಗಿ (ಶಾಂತಿಪು. ೧೦–೪೪ ಪ). [ಸಂ. ನಿರ್ಭೇದತಾ]

ನಿರ್ಭೇದಿ (ನಾ). ಸೀಳುವವನು ; ಭೇದಿಸುವವನು ; ನಾಶಗೊಳಿಸುವವನು : ಅಂತುಂ ಪ್ರಕೃತಿಯೊಳ್ ನಿತ್ಯೋದಯಸುಂ ನಿಸರ್ಗದೊಳ್ ರಿಪುವರ್ಗದುರ್ಗನಿರ್ಭೇದಿಯುಂ . . . ಆಜೇಯನುನುಪ್ಪ ದವಿಶಾಂಗೆ . . . ಉಪಾಯಚತುಷ್ಟಯದೊಳ್ ದಂಡಮುಮನುಳ್ಳದುಬಾದ ಗುಣಪಂಚಕಮುಮುಪಾಯತ್ರಯಮುಂ ದೊರೆಯಲ್ಲವು (ಶಾಂತಿಪು. ೨–೫೧ ಪ). [ಸಂ. ನಿರ್ಭೇದಿನ್]

ನಿರ್ಭೇದಿಸು (ಕ್ರಿ). ಇಲ್ಲವಾಗಿಸು; ನಾಶಪಡಿಸು; ಹಾಳುಮಾಡು: ವಾದಿನಗ ವಾದಿಗಜ ಪರವಾದಿತಮಸ್ತಮಮನೊಡೆವ ಬಿಡೆ ಬೆದಱಿಪ ನಿರ್ಭೇದಿಪೆಡೆಗಳಿ ಹರಿದಿನಪೋದಯಮೆನಿಸಿದುದು ವಿದ್ಯೆಯೊಂದುರ್ಕಾವರಾ (ಆದಿಪು. ೩–೬೫). [ನಿರ್ಭೇದ+–ಇಸು$_3$]

ನಿರ್ಭೇದ್ಯ (ಗು). ೧. ಅಖಂಡವಾದ ; ಭೇದಿಸಲಾಗದ : ನಿರುಪಮ ನಿರ್ಭೇದ್ಯ ನಿರಾಳ ನಿಷ್ಕಾಮ್ಯ ಪರಮಪ್ರಸಾದಿಗಳಿಗೆ ಸಂಸಾರಿಗಳೆಂದು ನುಡಿವರು ಅಜ್ಞಾನಿ ಸಂದೇಹಿಗಳು (ಪಚಸಂ. ೬೧೬–೨೭) ; ನಿರ್ಭೇದ್ಯ ಚಿತ್ತನಿದ್ರಾಹವಿರ್ಭಾಗಪ್ರದನಮೋಳ್ವಾಜ್ಯನಿಷಿಷ್ಯಂ ದರ್ಭೇಂಧನಕ್ಕೆ ಪೋಗುತ್ತರ್ಭಕನಂ ತಳೆದ ವೃದ್ಧಸತಿಯಂ ಕಂಡಂ (ದಶಕು. ೨–೭೮). (ನಾ). ೨. ಭೇದಿಸಲು ಅಸಾಧ್ಯನಾದವನು ; ಅಖಂಡ ; ಪರಮಾತ್ಮ : ಶ್ರೀಗುರು ಸದಾಮಳ ನಿತ್ಯನಿರಂಜನ ಪರಮಪಾವನ ನಿರ್ಗುಣ ನಿರಾವರಣ ನಿರವಯ ನಿಷ್ಕಾಮಯ ನಿರ್ದ್ವಂದ್ವ ನಿರ್ಭೇದ್ಯ (ಭೈರಸೂ. ೧). [ಸಂ.]

ನಿರ್ಭೋಗಿ (ನಾ). ಭೋಗವನ್ನು ಬಿಟ್ಟವನು ; ವಿಷಯರಹಿತನಾದವನು ; ಭೋಗಕ್ಕೆ ಹೊರತಾದವನು : ಶರಣ ಸಕಲ ಭೋಗೋಪಭೋಗಿಯಾದಡೆ ಕಿಱಿಯೆಂಬರು ಶರಣ ನಿರ್ಭೋಗಿಯಾದಡೆ ಹಿರಿದೆಂಬರು ನಾವಿದನಱಿಯೆವನಯ್ಯಾ (ಅಖಂಡೇ. ೫೦–೪೯). [ಸಂ. ನಿರ್ಭೋಗಿನ್]

ನಿರ್ಭ್ರಾಂತ (ನಾ). ಭ್ರಮೆಯಿಲ್ಲದವನು ; ಅಜ್ಞಾನವನ್ನು ಕಳೆದುಕೊಂಡವನು ; ಜ್ಞಾನಿ : ಇಂತಪ್ಪ ರುದ್ರಾಕ್ಷಿಯ ಎನ್ನಂತರಂಗಶುದ್ಧವಾಗಿ ಅವಿರಳಭಕ್ತಿಯಿಂದ ಧರಿಸಿ ನಿಶ್ಚಿಂತ ನಿರ್ಭ್ರಾಂತನಾಗಿರ್ದನಯ್ಯಾ (ಅಖಂಡೇ. ೪೮–೭). [ಸಂ.]

ನಿರ್ಮಂಥ (ನಾ). ೧. ಕಡೆಯುವುದು ; ಮಥನಮಾಡುವುದು. ೨. ಯಾಗದಲ್ಲಿ ಬೆಂಕಿಯನ್ನು ಉತ್ಪತ್ತಿಮಾಡಲು ಬನ್ನಿಕೊರಡುಗಳನ್ನು ಉಜ್ಜುವುದು. ೩. ಯಾಗದಲ್ಲಿ ಬೆಂಕಿಯನ್ನು ಉತ್ಪತ್ತಿಮಾಡಲು ಉಪಯೋಗಿಸುವ ಬನ್ನಿಯ ಕೊರಡು; ಶಮೀಕಾಷ್ಠ. ೪. ಹಾಳುಮಾಡುವುದು : ನಾಶಪಡಿಸುವುದು. [ಸಂ.]

ನಿರ್ಮಂಥಕಾಷ್ಠ (ನಾ). ಯಜ್ಞಯಾಗಗಳಲ್ಲಿ ಅಗ್ನಿಯನ್ನು ಹುಟ್ಟಿಸಲು ಉಪಯೋಗಿಸುವ ಬನ್ನಿಯ ಕೊರಡು,—ಶಮೀಕಾಷ್ಠ. [ನಿರ್ಮಂಥ+ಕಾಷ್ಠ$_2$]

ನಿರ್ಮಂಥ್ಯ (ಗು). ೧. ಕಡೆಯಬೇಕಾದ ; ಮಥಿಸಬೇಕಾದ. ೨. ಉಜ್ಜುವ; ತಿಕ್ಕುವ. [ಸಂ.]

ನಿರ್ಮಜ್ಜ (ಗು). ೧. ಕೊಚ್ಚಿಲ್ಲದ ; ಬೊಜ್ಜಿಲ್ಲದ ; ಬಡಕಲಾದ. (ನಾ). ೨. ಒಂದು ಬಗೆಯ ಸಸ್ಯ : "ನಿರ್ಮಜ್ಜಮನೆ ಗೊದ್ದ ವಕ್ಕುಂ" (ಮಂಗರಾ. ೩೫–೧೪). [ಸಂ.]

ನಿರ್ಮತ್ಸರ (ಗು). ೧. ಹೊಟ್ಟೆಕಿಚ್ಚಿಲ್ಲದ; ಮಾತ್ಸರ್ಯವಿಲ್ಲದ; ಅಸೂಯಾರಹಿತವಾದ. (ನಾ). ೨. ಮತ್ಸರವಿಲ್ಲದವನು ; ಹೊಟ್ಟೆಕಿಚ್ಚಿಲ್ಲದವನು: ಸುಕವಿಯತೋನಿರ್ಮತ್ಸರನಮೃತಮಯೋಕ್ತಿ ಶರತ್ಸಮಯಸುಧಾಂಶುವಿಶದಕೀರ್ತಿವಿತಾನಂ . . . ಜಿನವರಣಕಮಲ ಭೃಂಗಂ ದಂಡಂ (ಆದಿಪು. ೧–೩೦) ; ಬಹುಶ್ರುತನ ಮಂತ್ರನಿಶ್ಚಯಮುಮುಂ . . . ಪ್ರಜ್ಞರುಂ ನಿರ್ಮತ್ಸರರುಂ ಗುಣಗ್ರಾಹಿಗಳುಮಪ್ಪ ದೞಂ ಸಚಿವಸಮೂಹಂ ಮಚ್ಚ (ಶಾಂತಿಪು. ೨–೬೦ನ); ಈತ ನಿರ್ಮತ್ಸರನಸೂಯಾತೀತನಿವನತಿವಿಪ್ರಪೂಜಕನೀತ ಮಾತಾಪಿತರಭಕ್ತನು (ಕುವ್ಯಾಖ. ೬–೬೫). [ಸಂ.]

ನಿರ್ಮಥನ (ನಾ). ೧. ಕಡೆಯುವುದು; ಮಥಿಸುವುದು : ಪರ್ಜನ್ಯಮಾನಮೆಂಬುದು ಅರಣಿ ನಿರ್ಮಥನೋತ್ಪನ್ನಹುತ್ಯಪತ್ರೋಪಜೀಯಮಾನೇಂಧನಸಚಯಸಮಿದ್ಧ ಪಾವಕದಂತೆ . . . ಪುಟ್ಟತ್ತು (ತತ್ತ್ವಪ್ರ. ೬೮). ೨. ನಾಶ; ಧ್ವಂಸ : ಶಾಂತಿಜಿನೇಂದ್ರಪಾದಕಮಲದ್ವಯಮಂ ಪ್ರತಿಮಾಸ್ವರೂಪದಿಂ ಚಿಂತಿಸಿದೊಂಗೆ ಕರ್ಮಮಲನಿರ್ಮಥನಂ ದೊರೆಕೊಳ್ಗುಂ (ಶಾಂತಿಪು. ೧೨–೪೮). ೩. ಉಜ್ಜುವುದು; ತಿಕ್ಕುವುದು. [ಸಂ.]

ನಿರ್ಮಥಿತ (ಗು). ೧. ಚೆನ್ನಾಗಿಕಡೆದ,— ಮಥನಮಾಡಿದ. ೨. ನದೆಬಡಿಯಲ್ಪಟ್ಟ ; ನಾಶಗೊಳಿಸಲ್ಪಟ್ಟ : ರಥವ ಬಿಟ್ಟನು ಸೂತಿಯಲಿ ನಿರ್ಮಥಿತರಿಪುಬಲನೆಟ್ಟದನು (ಕುವ್ಯಾದ್ರೋ. ೨–೩೧). [ಸಂ.]

ನಿರ್ಮಥಿತರಿಪು (ನಾ). ವೈರಿಗಳನ್ನು ನಾಶಮಾಡಿದವನು: ಪೃಥೆಯ ಮಕ್ಕಳ ಕರೆ ಮಹೀಸಂಪ್ರಥಿತಬಲರನು ಕರೆಯೆನುತ ನಿರ್ಮಥಿತರಿಪು ಪರಬಲವ ಹೊಕ್ಕನು ಬಿಟ್ಟ ಸೂಟಿಯಲಿ (ಕುವ್ಯಾದ್ರೋ. ೧೭–೨೬). [ನಿರ್ಮಥಿತ+ರಿಪು]

ನಿರ್ಮಥಿಸು (ಕ್ರಿ). ೧. ಚೆನ್ನಾಗಿ ಕಡೆ,—ಮಥನಮಾಡು ; ೨. ಪರ್ಯಾಲೋಚಿಸು : ಧರ್ಮಸಂಕಟದಿ ಮನ ತಲ್ಲಣಿಸುತಿರುವಂದು ನಿರ್ಮಥಿಸು ನಿನ್ನಾತ್ಮನೆ ಸುಮತೆ ಬಿಟ್ಟು (ಪುಂಕುಳ. ೫೫೫). ೩. ನಾಶಪಡಿಸು ; ಧ್ವಂಸಗೊಳಿಸು. [ನಿರ್ಮಥನ+–ಇಸು$_3$]

ನಿರ್ಮದ (ಗು). ೧. ಸೊಕ್ಕಿಲ್ಲದ ; ಹಮ್ಮು, ಬಿಮ್ಮುಗಳಿಲ್ಲದ : ನಿರ್ಮದಗುಣೇಶ್ವರರಿಂಗಾವಾಸಮೆನಿಸಿ ಶಿವಧರ್ಮಕಾರ್ಯಯಮಾಗಿ ಶಿವಪುರಂ ರಂಜಿಸುಗುಂ (ಕುಮಾಪು. ೧–೪೬). ೨. ಅಮಲೇರದ ; ಮತ್ತೇರದ. (ನಾ). ೩. ಸೊಕ್ಕಿಲ್ಲದವನು ; ನಿಗರ್ವಿ : ಹದುಳವಿಟ್ಟನು ಭೀಮನನು ನಿರ್ಮದನು (ಕುವ್ಯಾವಿ. ೧–೧೬). [ಸಂ.]

ನಿರ್ಮಧ್ಯಂ (ಅ). ಬೇರೆಯವರ ಸಂಬಂಧವಿಲ್ಲದೆ; ನೇರವಾಗಿ : ಶ್ರೀಮನ್ನೃಪಾಲ್ವರ್ಗ್ಗೆ ಪಾದಪೂಜೆ[ಗೆ] ಱಂ ಗದ್ಯಾಣ[ಮಂ]ಪೊನ್ನವಂ ಕೊಟ್ಟ ಧರ್ಮ್ಮಮಂ ರಕ್ಷಿಸುವುದೆಂದು ನಿರ್ಮ್ಮಧ್ಯಮೊಪ್ಪಿಸಿದರ್ (ಎಇ. XIX, ೨೨೪–೧೮ ; 1033). [ಸಂ.]

ನಿರ್ಮನ (ನಾ). ಮನಸ್ಸಿಲ್ಲದಿರುವುದು ; ನಿರಾಸಕ್ತಿ : ನೀ ಬರದಿರೆ ಈ ಜಗವೇ ನಿರ್ಜನ ನೀರವ ನಿಶ್ಚಲ ನಿಷ್ಕ್ರಿಯ ನಿರ್ಮನ ಸಂಸಾರವೆ ಶೂನ್ಯ (ಕಬಾಶ್ರಾ. ೧೬–೨೨). [ಸಂ. ನಿರ್ಮನಸ್]

ನಿರ್ಮಮ (ನಾ). ೧. ತನ್ನದು ಎಂಬ ಭಾವವಿಲ್ಲದಿರುವಿಕೆ ; ನಿರಹಂಕಾರ. ೨. ವಿರಕ್ತಿ ; ವೈರಾಗ್ಯ. ೧, ೨ : ಸಂಜೆ ಬೆಳಗುಗಳಿಲ್ಲ ಸುಜ್ಞಾನಾಂಜನಜ ಬಲುಹಿಂದೆ ಶೋಕದ ನಂಜು ಮೋಹಗಳಿಲ್ಲ ನಿರ್ಮಮದಾಳುತನದಿಂದೆ (ಗಗತಾ. ೧೬–೪೮) ; ನಿರ್ಮಮದ ಸದ್ವಿವೇಕದ

ದೀಪಕಿಂತ ನೀಂ ನೆಮ್ಮಲಿನ್ನೇನಿಹುದೋ ? (ಮಂಕುಕ. ೫೫೫). ೨. ವಿರಕ್ತಿಯಿಂದ ಕೂಡಿದುದು ; ಅನಾಸಕ್ತವಾದುದು : ತನ್ನ ಸ್ಥಿತಿಯನ್ನು ಭಾರಗ್ರಸ್ತವೂ ನೀರಸವೂ ನಿರ್ಮಮವೂ ಅಸುಂದರವೂ ಆಗಿ ಮಾಡಿಕೊಳ್ಳುತ್ತಾನೆ (ನಿಬಂಧ. II, ೨೦೫). ೩. ನಿರಾಸಕ್ತ ; ವಿರಕ್ತ : ನಿರ್ಮಮನೂ ಧೀಮಂತನೂ ಧೀರನೂ ಆದ ಈ ಮಹಾನುಭಾವರು. . . ಕಲ್ಯಾಣಮಂಟಪಕ್ಕೆ ಬಿಜಯಮಾಡಿದರು (ಶಾಂತಲಾ. ೧೦೭). [ಸಂ.]

ನಿರ್ಮಮಕಾರ (ನಾ). ತನ್ನದು ಎಂಬ ಭಾವನೆಯಿಲ್ಲದಿರುವುದು ; ಸ್ವಾರ್ಥವಿಲ್ಲದಿರುವುದು : ಇಲ್ಲಿ ಮುಖ್ಯವಾದುದು ವಸ್ತುಸ್ಥಿತಿಯ ಅಂಕಿಅಂಶಗಳ ಆಧಾರದಿಂದ ನಿರ್ಮಮಕಾರದಿಂದ ನಡೆಸುವ ವಿವೇಚನೆ (ದ್ರಾವಿವಿ. ೪೯). [ಸಂ.]

ನಿರ್ಮಮತೆ (ನಾ). ೧. ಆಸಕ್ತಿಯಿಲ್ಲದಿರುವುದು ; ಅನಾಸಕ್ತಿ : ಕರ್ಮ ತಾನೇನಾದಡಾಗಲಿ ನಿರ್ಮಮತೆಯಲಿ ಮಾಡಿ ನಮ್ಮಲಿ ನಿರ್ಮಿಸಲು ಕಲಿ ಪಾರ್ಥ ನೀ ನಿರ್ಲೇಪನಹೆಯೆಂದ (ಕುಸ್ಯಾಭೀ. ೩-೫೩) ; ಈ ಗಟ್ಟಭಿತ್ತಿಯೇ ಸಂಯಮ . . . ಅದರಲ್ಲಿ ನಿರ್ಮಮತೆಯ ದಾರ್ಢ್ಯವಿದೆ (ನಿಬಂಧ. II, ೨೭೪). ೨. ಪ್ರೀತಿಯಿಲ್ಲದಿರುವುದು ; ವಾತ್ಸಲ್ಯವಿಲ್ಲದಿರುವುದು : ಎಮಗೆ ತಾಯೊಡಹುಟ್ಟದನು ನಿರ್ಮಮತೆಯಲಿ ನಿರ್ದಾಟಿಸಿದನಾ ಕ್ರಮದಲೇ ಕಂಸಂಗೆ ಹಿಂಸಾಕೃತಿಯ ರಚಿಸಿದೆವು (ಕುಸ್ಯಾಗ. ೫-೧೦). [ಸಂ. ನಿರ್ಮಮತಾ]

ನಿರ್ಮರಣ (ನಾ). ಸಾವಿಲ್ಲದವನು ; ಅಂತ್ಯವಿಲ್ಲದವನು ; ಅಮರ ; ಪರಮಾತ್ಮ : ನಿರ್ಮರಣ ನಿರವಯ ನಿಷ್ಕಳಂಕ . . . ನಿರ್ಮಾಯ ಚಿತ್ತೈಸು (ಬಸಪು. ೬೧-೪೪). [ಸಂ.]

ನಿರ್ಮಲ, ನಿರ್ಮಳ (ಗು). ೧. ಶುದ್ಧವಾದ ; ಸ್ವಚ್ಛವಾದ : ನಿರ್ಮಲದಿವ್ಯಮೌಕ್ತಿಕ ಶಿಲಾಲಿಂಗಂ ಚತುರ್ಮಕ್ತಸುಂದರಮಲ್ಲಿರ್ದುದು ರತ್ನಪೀಠಘಟಿತಂ ದೇದೀಪ್ಯಮಾನಪ್ರಭಂ (ಕಾದಂಪೂ. ೬೫೭) ; ಮಲಿನ ದೇಹಕ್ಕೆ ಮಜ್ಜನವಲ್ಲದೆ ನಿರ್ಮಲದೇಹಕ್ಕೆ ಮಜ್ಜನವೇಕೋ (ಅವಚಂ. ೯೫-೪೨೩), ನಿರ್ಮಲಶರಚ್ಚಂದ್ರಕಿರಣಗಳಿನಂಬರಂ ಪ್ರೋಲ್ಲಾಸಗೊಳ್ವಂತೆ ದಶರಥಂ ಬಗೆಯುರ್ಬಿ (ಶ್ರೀರಾಮಾ. ೧೪-೩೭೦). ೨. ಪವಿತ್ರವಾದ ; ಪುಣ್ಯಕರವಾದ : 'ನಿರ್ಮಲಾಕ್ಷತೆ' ಪರಾ. (ನಾ). ೩. ಶುದ್ಧತೆ ; ಸ್ವಚ್ಛತೆ ; ನೈರ್ಮಲ್ಯ : "ಶುಕ್ತಂ . . . ಶೌಚಂ, ಶೌಚ್ಯಂ, ಈ ೭ ನಿರ್ಮಲಂ" (ಕಾಶಕೃ. ೨೦೪) ; ಎನ್ನ ಮಲತ್ರಯದಲ್ಲಿ ಹೊದಕುಳಿಗೊಂಬ ಮನದ ಮೈಲಿಗೆಯ ತಂದು . . . ತನ್ನ ಪಾದದೊಳಗೆ ಮೆಟ್ಟ ಅಲುಬಿ ಸೆಳೆದನಯ್ಯ ತನ್ನ ನಿರ್ಮಲವ ಕೊಟ್ಟನೆನಗೆ (ಬಸವ. ಕ. ೧೨೮೧) ; ಮನ ಮುಟ್ಟದ ಪೂಜೆ ಮಣ್ಣ ಗೋಡೆಯ ತೊಳೆದು ನಿರ್ಮಲವನಱಸುವಂತೆ (ಮೆಱೆರ. ೬೦-೬೦) ; ಎನ್ನ ನಿರ್ಮಲವೆ ದರ್ಪಣವಯ್ಯಾ ನಿಮಗೆ ಎನ್ನ ಸತ್ಯವೆ ಘಂಟೆಯಯ್ಯಾ ನಿಮಗೆ (ಅಖಂಡೇ. ೨೪೧-೮೭). ೪. ನೆಮ್ಮದಿ ; ನಿರಾಳ : ತಮ್ಮ ತಾಯ್ಗಳ ಕಂಡು ಕರುಗಳು ಅಮ್ಮನೆಂದೂ ಕೂಗಿ ನಲಿಯುತ ಸುಮ್ಮಾನದೊಳು ಮೊಲೆಯನುಂಡು ನಿರ್ಮಲದೊಳು ಇದ್ದವು (ಗೋಪಾಡು. ೫-೨೩). ೫. ಹೊಳಪು ; ಉಜ್ವಲತೆ ; ಕಾಂತಿ : "ಬೆಳ್ಪಳಿಯೆ ನಿರ್ಮಲಂ" (ಕಬ್ಬಿಕೃ. ೮೫) ; "ನಿರ್ಮಲಕೆ ಬೆಳ್ಪಳಿಯಕ್ಕು" (ಶಬ್ದಮಂ. ೬೦). ೬. ದೋಷಲೇಪವಿಲ್ಲದವನು ; ಪರಿಶುದ್ಧನಾದವನು ; ಕಳಂಕರಹಿತ : ನಿರ್ಮಲರ ಸಂಗತಿ ಮಾಟ್ಕು ಮಪಾಯನಾಶಮಂ (ಜಗವಿ. ೧೬-೨೯) ; ಗಿರಿಯ ಕರದೊಳಗಾಂತವನ ಸುರಗಿರಿಯ ಶಿಖರದೊಳ್ ಇರುತಿಹನ ನಿರ್ಮಲನ ನಿತ್ಯನ . . . ಗುರುತರವರಾರು (ಗಗತಾ. ೧೩-೧). **ನಿರ್ಮಳ** : ೧. ವೃಷಭನಾಥನುಂ . . . ಅಲದ ಮರನ ಕೆಟಗೆ ನಿರ್ಮಳ ಶಿಳಾಪಟ್ಟದೊಳಷ್ಟ ಮೋಪವಾಸದಿಂ . . . ಶುಕ್ಲಧ್ಯಾನದಿಂ ಘಾತಿಗಳಂ ಕಿಡಿಸಿ (ಚಾವುಂಪು. ೪೦) ; ಆ ಕುತ್ಕೀಲಂ ಸೊಗಯಿಪುದಾಕಾಶೋರಗವಿಮುಕ್ತನಿರ್ಮಳತರನಿರ್ಮೋಕಂ ತಾನೆನೆ ರಜತಾಳೋಕಸಹಸ್ರಾಂಶುಧವಳಿತಾಶಾವಳಿಯಂ (ಚಂದ್ರಪು. ೬-೩) ; ತಿಳಿದು ನೋಡಿರೆ ರಾಮ ಧರ್ಮಸ್ಥಳಕೆ ನೀವು ಸಹಾಯವಿನಿಬರಗೆಲವು ನಿರ್ಮಳ ಧರ್ಮಮೂಲವೊ ಧರ್ಮವಿರಹಿತವೊ (ಕುಸ್ಯಾಗ. ೬-೫). ೩. ಮಹದಾಕಾಶವೆ ಅಕ್ಷತೆ ಪರಾಪರವೆ ಪತ್ರೆಪುಷ್ಪ ನಿರ್ಮಳವೆ ಲಿಂಗಾರ್ಚನೆ ಮಹಾಪ್ರಕಾಶವೆ ಪೂಜೆ (ಅವಚಂ. ೮೪-೩೭೪). ೫. "ಪಳಕನೆ ಜಳಕನೆಯೆನೆ ನಿರ್ಮಳಾರ್ಥಂ" (ಚತುನಿ. ೩೦). ೬. ಈತ ನಿಸ್ಪೃಹನೀತ ನಿರ್ಭಯನೀತ ನಿರ್ಮಳನೀತ ರಾಗದ್ವೇಷರಹಿತನು (ಕುಸ್ಯಾಅ. ೭-೬೭). ೭. ಶುದ್ಧವಾದುದು : ಕುಲವ ನಾಲಗೆಯಱುಹಿತೆಂಬ ನಾಣ್ಣುಡಿಗಿಂದು ನೆಲೆಯಾಯ್ತಲಾ ಬ್ರಹ್ಮಯಷಿಯಾದಡೊಳಗು ನಿರ್ಮಳವಪ್ಪುದಯ್ಯ (ಪಚಕಾ. ೨-೩೨) ; ಎನ್ನ ಮಾನಸಂ ನಿರ್ಮಳಮಪ್ಪ ಮೋಕ್ಷಸುಖಮಂ ಪಿರಿದುಂ ಬಯಸುತ್ತುಮಿರ್ದೊಡಂ ಪೆರ್ಮೆಯೊಳೊಂದುವಾತ್ಮಭವಲಾಭಮದಿಲ್ಲದೆ ಮಾಣ್ದು ಬಳ್ಳಪೆಂ (ಬಾಧಪು. ೩-೫೬). [ಸಂ.]

ನಿರ್ಮಲಕರ್ಮ (ನಾ). ೧. ಶುದ್ಧವಾದ ಕೆಲಸ. ೨. ಪವಿತ್ರಕಾರ್ಯ. ೩. ಗೃಹಸ್ಥನ ಐದು ಬಗೆಯ ಕರ್ಮಗಳಲ್ಲಿ ಒಂದು ; ಚಿತ್ತಶುದ್ಧಿಯನ್ನುಂಟುಮಾಡುವ ಕರ್ಮ : ಗೃಹಸ್ಥನಿಂದನುಷ್ಠಿಸಲ್ತಕ್ಕ ಕರ್ಮವಾದೊಡೆ ನಿತ್ಯನೈಮಿತ್ತಿಕ ಪ್ರಾಯಶ್ಚಿತ್ತ ಕಾಮ್ಯ ನಿರ್ಮಲವೆಂದು ಪಂಚವಿಧವಾಗಿಹುದದಱಲ್ಲಿ . . . ಈಶ್ವರೋಪಾಸನೆಯೇ ನಿರ್ಮಲಕರ್ಮವೆಂದು ತಿಳಿಯಲಕ್ಕುಂ (ವಿವೇಕ. ೧೩೮). 'ನಿತ್ಯಕರ್ಮ' ಪರಾ. [ನಿರ್ಮಲ + ಕರ್ಮ]

ನಿರ್ಮಲಚರಿತ್ರ (ನಾ). ಶುದ್ಧವಾದ ನಡೆವಳಿ,—ಆಚಾರ : ನಿರ್ಮಲಚರಿತ್ರವೆಂತಧಿಕವೆಲ್ಲಾ ಗುಣಂಗಳೊಳು . . . ವರಶಿವಾಗಮ ಶಾಸ್ತ್ರದ ಸೂತ್ರವೆಂತಧಿಕನಿಗಮಾಗಮದೊಳೆಂತು ಸರ್ವತ್ರ ಮೇಳದೊಳಧಿಕವಾಯ್ತು . . . ಮಂಗಲೆಯ ಪುತ್ರಿಕೆಯ ಮಧುರಗಾನ (ಸೌಂದಪು. ೮-೮) [ನಿರ್ಮಲ + ಚರಿತ್ರ]

ನಿರ್ಮಲಚಿತ್ತ, ನಿರ್ಮಳಚಿತ್ತ (ನಾ). ಪರಿಶುದ್ಧವಾದ ಮನಸ್ಸುಳ್ಳವನು : ನೀನೇ ದಯಾಳು ನಿರ್ಮಲಚಿತ್ತ ಗೋವಿಂದ (ಪುರಂದ. ಧಾ. ೧-೯೨ ಪಸ್ಲವಿ). **ನಿರ್ಮಳಚಿತ್ತ** : ಕಳಕಂಠವಾಣಿಯರುಸುರಿದರದಕೆ ನಿರ್ಮಳಚಿತ್ತ ತಾನೊಡಂಬಟ್ಟ (ಭರಚ. ೧೪-೯). [ನಿರ್ಮಲ + ಚಿತ್ತ]

ನಿರ್ಮಲತೆ, ನಿರ್ಮಳತೆ (ನಾ). ಸ್ವಚ್ಛತೆ ; ಶುದ್ಧತೆ ; ನೈರ್ಮಲ್ಯ : ಭಸಿತ ರುದ್ರಾಕ್ಷಾದಿ ಮುದ್ರೆಗಳ ನಿರ್ಮಲತೆಯಿಂ ಧರಿಸಿ ಚಲಿಸುತ (ಬಸಪು. ೩-೪೮). **ನಿರ್ಮಳತೆ** : ಶ್ರಾವಕಧರ್ಮದ ನಿರ್ಮಳತೆಯಂ ತೋರ್ಪಂತೆ ಧೌತಸಿತಸಾಧಕ ಮುಂಗಂಡುಡಿಸುತ್ತುವುದೂರುಲಿಂಗಂ (ಚಾವುಂಪು. ೨೧೫). [ಸಂ. ನಿರ್ಮಲತಾ]

ನಿರ್ಮಲತೆವೆಱು (ಕ್ರಿ). ತಿಳಿಯಾಗು ; ಸ್ವಚ್ಛವಾಗು : ಸದಮಳ ಬೋಧದಿಂದೆಸೆವ ಸಾಧುಜನಾಶಯದಂತೆ ಪದ್ಮಷಂಡದ ವರವಾರಿ ನಿರ್ಮಲತೆವೆತ್ತುದು (ಕುಸುಮಾ. ೫-೪೫). [ನಿರ್ಮಲತೆ + ಪೆಱು]

ನಿರ್ಮಲತ್ವ, ನಿರ್ಮಳತ್ವ (ನಾ). ೧. ಪರಿಶುದ್ಧತೆ ; ಸ್ವಚ್ಛತೆ. ೨. [ವೇದಾಂತ] ಸತ್ವಗುಣದ ಸ್ವಭಾವ ; ತಮೋಗುಣದ ಕಾರ್ಯವಾದ ಆವರಣವಿಲ್ಲದಿರುವುದರಿಂದ ಪರಬ್ರಹ್ಮಸಾಕ್ಷಾತ್ಕಾರಕ್ಕೆ ಸಾಧಕವಾದುದು : ಶ್ರೀ ಮಧುಸೂದನಸರಸ್ವತಿಯವರು, ನಿರ್ಮಲತ್ವ ಎನ್ನುವುದು 'ಚಿದ್ಬಿಂಬಗ್ರಹಣಯೋಗ್ಯತ್ವ'ವೆಂದು ವ್ಯಾಖ್ಯಾನಿಸುತ್ತಾರೆ (ಸೌಂದಸ. ೧೧೧). ℙ ಇದನ್ನು 'ಚಿದ್ಬ್ರಹ್ಮಗ್ರಹಣಯೋಗ್ಯತ್ವ' ಎಂದು ರೂಢಿಯಲ್ಲಿ ಪ್ರಯೋಗಿಸುತ್ತಾರೆ. **ನಿರ್ಮಳತ್ವ** : ೧. ಇನಿವಿರಿದೊಂದು ದರ್ಪಮೆನಗಾದುದು ತನ್ನಯ ನಿರ್ಮಳತ್ವದಿಂ (ಕಾದಂಪು. ೧೯೩). [ಸಂ.]

ನಿರ್ಮಲಯಶ(ನಾ). ಪರಿಶುದ್ಧವಾದ ಯಶಸ್ಸು ; ಕಳಂಕರಹಿತವಾದ ಕೀರ್ತಿ : ಶಶಿಖಂಡ ನಿರ್ಮಲಯಶೋವಿವಿಧಾನತಂಸಂ (ಕವಿಕಾ. ೬-೩೨೯). [ನಿರ್ಮಲ+ಯಶ]

ನಿರ್ಮಲಹೃದಯ (ನಾ). =ನಿರ್ಮಲಾಂತಃಕರಣ ೨ : ಓಜರು ನಿರ್ಮಲಹೃದಯರು ಸದಯರು ಚದುರರು ಶಿಷ್ಯವತ್ಸಲರು (ಇಂಚಾಪ. ೨೫-೧೫). [ನಿರ್ಮಲ+ಹೃದಯ]

ನಿರ್ಮಲಾಂತಃಕರಣ, ನಿರ್ಮಳಾಂತಃಕರಣ (ನಾ). ೧. ಪರಿಶುದ್ಧವಾದ ಮನಸ್ಸು ; ಒಳ್ಳೆಯ ಮನಸ್ಸು. ೨. ಪರಿಶುದ್ಧವಾದ ಹೃದಯವನ್ನು ಹೊಂದಿರುವವನು : ಶ್ರೀಜಗಾಧಿಪತಿಯ ನೇಮದೊಳು ಕಮಲೋದ್ಭವಂ . . . ಸೃಜಿಸಿದಂ ನಿರ್ಮಲಾಂತಃಕರಣರಂ ವಿಮಲಸದ್ಗುಣಗಣಾವರಣರಂ (ವೀರೇಶ. ೬-೧-೬). **ನಿರ್ಮಳಾಂತಃಕರಣ** : ೧. ನಿರ್ಮಳಾಂತಃಕರಣಕೃತ ಪರಿಕರ್ಮವಿಳಸಿತೆ ತಾಯೆ ಸ್ಥಿರಿಪುದುಮ್ಮಳವು ಬೇಡೆಂದು ಮೆಯ್ಯಿಕ್ಕಿದನು ಕಲಿ ಧೀಮ (ಕುವ್ಯಾಗ. ೧೧-೫೬). [ನಿರ್ಮಲ+ಅಂತಃಕರಣ]

ನಿರ್ಮಲಾಕ್ಷತೆ (ನಾ). ಪವಿತ್ರವಾದ ಅಕ್ಷತೆ : ಪ್ರಥಮಲೋಕಾಮರೇಶನುಮಾಶಾನೇಶನುಂ ಜಂಜತ್ಪಂಜರತ್ನ ಗೋಕೀರ್ಷ ಚಂದನ ನಿರ್ಮಲಾಕ್ಷತಾರ್ಘ್ಯಮನೆತ್ತಿದಿಂ ಬಟುಯಿಂ (ಕಾಂತಿಪು. ೧೦-೩೬ ಪ). [ನಿರ್ಮಲ+ಅಕ್ಷತೆ]

ನಿರ್ಮಲಾಚಾರ, ನಿರ್ಮಳಾಚಾರ (ನಾ). =ನಿರ್ಮಲಚರಿತ್ರ : ಮನವ ಶೋಧಿಸಬೇಕು ನಿಚ್ಚ . . . ನಿರ್ಮಲಾಚಾರದಿ ಚರಿಸಿ (ಪುರಂದ. ಧಾ. ೨-೩೯-೧). **ನಿರ್ಮಳಾಚಾರ** : ನಿರ್ಮಳಾಚಾರಪುರಸ್ಸರಮಾಮುನೀಂದ್ರನಾರ್ತನಗಿ ರಸಪರಿತ್ಯಾಗಮೆಂಬ ತಪಮಂ ತಳೆದಂ (ಸುಕುಮಾ. ೪-೭). [ನಿರ್ಮಲ+ಆಚಾರ]

ನಿರ್ಮಲಿತ (ಗು). ಶುದ್ಧವಾದ; ಸ್ವಚ್ಛವಾದ: ಶಕ್ತ ನಿರ್ಮಲಿತಾಂಗ ಲಿಂಗನಿಯುಕ್ತ ಸತ್ಕ್ರಿಯೆಗಳನಲರ್ದನುರಕ್ತಿಸಲು . ಸದ್ಯಃಪ್ರಸಾದ ಶರೀರಿಯಂ ಮಾಡಿ (ಬಸಪು. ೪೯-೩೪); ನಿಜನಿರ್ಮಲಿತರೂಪನಂ . . . ದೇವದೇವನಂ ಭಜಿಸಿದಳಗಜೆ (ಜೈಮಿಭಾ. ೧೫-೨೩). [ಸಂ.]

ನಿರ್ಮಲಿನ, ನಿರ್ಮಳಿನ (ಗು). ೧. ಮಲಿನವಾಗದಿರುವ; ನಿರ್ಮಲವಾದ ; ಶುದ್ಧವಾದ. (ನಾ). ೨. ಶುದ್ಧವಾದುದು ; ಸ್ವಚ್ಛವಾಗಿರುವುದು : ನಿರ್ಮಲಿನಮಪ್ಪ . . . ದೀರ್ಘಿಕೆಯು ವಿಚಿತ್ರಾ[ತ್ರೋತ್ರ]ಮ್ಮಿಕೆಗಳ ಸಂಚಲಿಸುವ ನೀರ್ಮಾನಸ ಲಹರಿ ಸರ್ವದೋಷಾಪಹರಂ (ಅಶ್ವಶಾ. ೭-೬೦); ತಿಳಿವೊದೀತನ ಬುದ್ಧಿಯೇ ನಿರ್ಮಲಿನ ವಹುದು (ಕುವ್ಯಾಸ. ೧೨-೬೫). **ನಿರ್ಮಳಿನ** : ೧. ನಿರ್ಮಳಿನಾದ್ಯಾಸನದ ಚತುರ್ಮುಖತಳದಲ್ಲಿ ನೆಲಸಿ ಯಕ್ಷಕುಮಾರರ್ ಕೂರ್ಮೆಯೊಳ್ ಧರ್ಮಚಕ್ರಮನೊರ್ಮೆಯುಮಾತ್ಮೀಯಪೌಳಿಯೊಳ್ ತಳೆದಿರ್ದರ್ (ಪಾರ್ಶ್ವಪು. ೧೬-೬೧). [ಸಂ.]

ನಿರ್ಮಲಿಸು (ಕ್ರಿ). ೧. ಸ್ವಚ್ಛಮಾಡು ; ಶುದ್ಧಿಪಡಿಸು : ಕೋಣೆಯ ಒಳಗಿರುವ ಜೇಡನ ಬಲೆಯನ್ನೆಲ್ಲಾ ನಿರ್ಮಲಿಸಿ ಬಣ್ಣದ ಕಾಗದ ಹಚ್ಚಿ ಶೃಂಗಾರ ಮಾಡಿದರು (ಕಾವೇರಿ. ೧೧೬). ೨. ಹೊಳೆ ; ಥಳಥಳಿಸು : ನಿರ್ಮಲಿಪ ಭೂಷಣಕಾಂತಿಯಿಂ ಪಸರಿಸುತ ಸುರಧನುವ . . . ಅಮರಿಯರು ಸೊಗಯಿಪರು (ಸಾಳ್ವಭಾ. ೩೨-೧೬). [ನಿರ್ಮಲ+-ಇಸು$_3$]

ನಿರ್ಮಲೀಕರಣ (ನಾ). ಶುದ್ಧಗೊಳಿಸುವುದು ; ಸ್ವಚ್ಛಮಾಡುವಿಕೆ : ಮಂದಗಾಮಿಯಾಗಿ ಪ್ರವಹಿಸುತ್ತಿದ್ದ ಆಂತರಿಕಜೀವನಕ್ಕೆ ತಡೆಯೊಡಗಿ ನಿಂತು ಕಸ ಕೊಳೆ ತುಂಬಿ ನಾರುವಂತಾದಾಗ ಮತ್ತೆ ತಾನು ಕೈಗೊಳ್ಳುತ್ತಿದ್ದ ನಿರ್ಮಲೀಕರಣಕಾರ್ಯಕ್ಕೆ-ಅವನು ಹೆಸರು ಕೊಟ್ಟಿದ್ದನು (ಪುನರು. ೧೩೩). [ಸಂ.]

ನಿರ್ಮಲೀಕೃತ, ನಿರ್ಮಳೀಕೃತ (ಗು). ೧. ಮಲಿನತೆಯಿಂದ ದೂರವಾದ; ಶುದ್ಧವಾದ; ಸ್ವಚ್ಛವಾದ. ೨. ಥಳಥಳಿಸುವಂತೆ ಮಾಡಿದ; ಪ್ರಜ್ವಲಿತಗೊಳಿಸಿದ. (ನಾ). ೩. ಮಲಿನತೆಯಿಲ್ಲದುದು; ಸ್ವಚ್ಛವಾದುದು. ೪. ಕಾಂತಿಮಯವಾದುದು: ಆ ಪಾರ್ವತಿಯ ನವಯೌವನಂ . . . ಶಶಿಕಾಂತಕೃತಶಿಲಾಚಳದಂತೆ ನಿರ್ಮಲೀ[ವಾಚಾಂ. ೪೬]ಕೃತಂ . . . ಪ್ಪೋಮದಂತೆ ಘನಚಿತ್ರಮೆನಿಸಿದ್ದುದು (ಗಿರಿಕ. ೪-೧೨ ಪ). **ನಿರ್ಮಳೀಕೃತ** : ೨. ನಿಜಾ ಪೊನ್ಮದ ಸರ್ವೇಶನಿಜಪ್ರಕಾಶನಿಧಿಯೋ ಪೇಳೆಂದಿನಂ ತೋಱುತಿರ್ದುದು ದಿಕ್ಸಂಕುಳ ನಿರ್ಮಳೀಕೃತವಿರೂಪಾಕ್ಷಪ್ರಭಾಪುಂಡರಂ (ಗಿರಿಕ. ೫-೬೧). [ಸಂ.]

ನಿರ್ಮಲೆ, ನಿರ್ಮಳೆ (ನಾ). ಕಳಂಕವಿಲ್ಲದವಳು ; ಪರಿಶುದ್ಧೆ : ಪ್ರಿಯೆ ನಿನಗೆ ಪರಿಶುದ್ಧೆ ಕುಲಕೆ ಮುಂಗಳೆ ಸುತೋದಯಕೆ ನಿರ್ಮಳೆ ತನಗೆ ಗತಿಗುಡುವ ಸೊಸೆಯೆಂದು ಬಯಸಿದೊಡೆ ಬಂದಯ್ಯನಾಡನೆ ಸುರಾಸುರರೆ ಮುಂಡೆ ಕಪಿಳಟಿಕಮುಜಾಯೆ (ಜೈಮಿಭಾ. ೧೪೪-೫೨). **ನಿರ್ಮಳೆ**: ಅತಿಗಂಭೀರೆಯನೂರ್ಜಿತಮತಿಯಂ ನಿರ್ಮಳೆಯಂ . . . ದೃಢಪಾಶುಪತವ್ರತೆಯಂ ಕನ್ಯಕೆಯನಂದು ಕಂಡಂ ಕ್ಷಿತಿಪಂ(ಕಾಪಂಪು. ೬೮೨). [ಸಂ. ನಿರ್ಮಲಾ]

ನಿರ್ಮಳ 'ನಿರ್ಮಲ' ನೋ.

ನಿರ್ಮಳಚಿತ್ತ 'ನಿರ್ಮಲಚಿತ್ತ' ನೋ.

ನಿರ್ಮಳತೆ 'ನಿರ್ಮಲತೆ' ನೋ.

ನಿರ್ಮಳತ್ವ 'ನಿರ್ಮಲತ್ವ' ನೋ.

ನಿರ್ಮಳಮೌಕ್ತಿಕ (ನಾ). ಶುದ್ಧವಾದ ಮುತ್ತು ; ಜೊಕ್ಕ ಮುತ್ತು : ಶರದದ ಬೆಳ್ಳಗಿಲ್ವೊಜೆಯಿನುಣ್ಮುವ ನಿರ್ಮಳಮೌಕ್ತಿಕಕ್ಕೆ ತಾಂ ದೊರೆಯೆನೆ ಪುಟ್ಟಿದಂ . . . ನಮೇರುಶೇಖರಧರಂ (ಚಂದ್ರಪು. ೪-೬೧). [ನಿರ್ಮಳ(=ನಿರ್ಮಲ)+ಮೌಕ್ತಿಕ]

ನಿರ್ಮಳಾಂತಃಕರಣ 'ನಿರ್ಮಲಾಂತಃಕರಣ' ನೋ.

ನಿರ್ಮಳಾಂಭ(ನಾ). ಸ್ವಚ್ಛವಾದ ನೀರು ; ತಿಳಿನೀರು : ಸುಮನೋಭೂಭೃದ್ಧರೀಸುಂದರತರವನದೊಳ್ ನಿರ್ಮಳಾಂಭಸ್ಸ್ವಯಂಭೂರಮಣಾಕೂಪಾರದೊಳ್ . . . ಮನಃಪ್ರಹ್ಲಾದಮಂ ತಾಳ್ದುವನನವರತಂ ಶ್ರೀಧರಂ (ಚಂದ್ರಪು. ೪-೭೬). [ಸಂ. ನಿರ್ಮಲಾಂಭಸ್]

ನಿರ್ಮಳಾಚಾರ 'ನಿರ್ಮಲಾಚಾರ' ನೋ.

ನಿರ್ಮಳಿ, ನಿರ್ಮಳ$_2$, ನಿರ್ಮಳಿ$_1$ (ನಾ). ೧. ಒಂದು ಬಗೆಯ ವೃಕ್ಷ ; ಚಿಲ್ಲದ ಮರ ; ಕತಕ : ನಿರ್ಮಳಿ-ದೊಡ್ಡ ಮರ ; ಹೂವಿಗೆ ಸುಗಂಧವಿರುತ್ತದೆ. ರಾಡಿನೀರೊಳಗೆ ಬೀಜಗಳನ್ನು ಜಲ್ಲಿದರೆ, ಆ ನೀರು ನಿರ್ಮಲವಾಗುತ್ತದೆ (ಕಭಾಗೆ. ೪೨). **ನಿರ್ಮಳ$_2$** : ೧. ದಾಳಂಬರಿಬೀಜ, ನಿರ್ಮಳದ ಬೀಜ, ಬಚಲಿಯದ ಬೀಜ (ಮುಂಬಸ್ಯಾ. ೧೬೭). **ನಿರ್ಮಳಿ$_1$** : ೧. ನಿರ್ಮಳಿ (ನೆರ್ಮಳಿ) . . . ಇದರ ಬೀಜವನ್ನು ಪುಡಿಮಾಡಿ ರಾಡಿನೀರೊಳಗೆ ಜಲ್ಲಿದರೆ ನೀರು ತಿಳಿಯಾಗುತ್ತದೆ (ಕಭಾಗೆ. ೪೨). ೨. ಕತಕದ ಮರಗಳಿರುವ ಭೂಮಿ (?) : ಆ ಕೋಡಿಯಿಂದೊಳಗಾದ ದೋಂಟಸ್ಥಳದ ನಿರ್ಮಳಿಯಲು ಬೆದ್ದಲುಗಳೆಯ ಮತ್ತರು ೬ (ಎಕ. VII,ಶಿವಮೊ. ೫೨-೬೬; 1115). [←ಮರಾ. ನಿರ್ಮಳೀ, ನಿರ್ಮಳೀ]

ನಿರ್ಮಳಿಕೆ (ನಾ). ೧. ಶುದ್ಧತೆ : ಉಪಾದೇಯಂಗಳಪ್ಪ ರತ್ನತ್ರಯದ ನಿರ್ಮಳಿಕೆಯಂ ಕೆಡಿಸುವುದೆಂದವಜ ಮೇಗಣ ಮಮತ್ವಮನುಬುದು ನಿರ್ಮಮತ್ವರತನುಂ ಸ್ವಸ್ಥನುಂ ಸಂತೋಷಪರನಾಗಿ ನೆಗಟ್ಟು ಗೃಹಸ್ಥಂ ಪರಿಗ್ರಹದಿರತನೆಂಬೊಂಬತ್ತನೆಯ ಶ್ರಾವಕಂ (ಪಸಾರ. ೩೪೭). ೨. ಕಾಂತಿ : "ಬೆಳ್ಪಳಿಯೆಂದು ನಿರ್ಮಳಿಕೆ" (ಕಬ್ಬಿಕೈ. ೫). [ನಿರ್ಮಳ(=ನಿರ್ಮಲ)+-ಇಕೆ]

ನಿರ್ಮಳಿನ 'ನಿರ್ಮಲಿನ' ನೋ.

ನಿರ್ಮಳೀಕೃತ 'ನಿರ್ಮಲೀಕೃತ' ನೋ.

ನಿರ್ಮಳೆ 'ನಿರ್ಮಲೆ' ನೋ.

ನಿರ್ಮಾಂಸ (ಗು). ೧. ಮಾಂಸವಿಲ್ಲದ ; ಕೃಶವಾದ : ಪೇರುರಂ ನಿಡುಕೊರಳು ನಿರ್ಮಾಂಸ ಜಂಘೆಗಳು (ಮಂಗರಾ.೮೪-೨೨); ನಿಡುವೊಡಲ ನಿರ್ಮಾಂಸ ಜಂಘೆಯ ಕೆಂಪಿನಾಲಿಗಳ . . . ನಾಯ್ ನೂಕಿದವು ಹಾಸದ ವಿಳಾಸದಲಿ (ಕುಮ್ಯಾಆ. ೧೩-೨೦). (ನಾ). ೨. ಮಾಂಸವಿಲ್ಲದುದು ; ಕೃಶವಾದುದು ; ಬತ್ತಿದುದು : ಅವಾಕೆಯ ಹಸ್ತಪಾದ ನಿರ್ಮಾಂಸವಾಗಿರೆ ಅಂಗ ಒಣಗಿರೆ ಆಕೆ ಅಮಂಗಲೆಯಹಳು (ಸಾಮುಲ. ೨೯-೧೬). [ಸಂ.]

ನಿರ್ಮಾಟ (ನಾ). ಕ್ರಿಯೆಯಿಲ್ಲದಾಗುವಿಕೆ; ನಿಷ್ಕ್ರಿಯ ಸ್ಥಿತಿ : ಬಸವನಜೀವು ನಿರಾಧಾರವಾಯಿತ್ತು ಬಸವನ ಮಾಟ ನಿರ್ಮಾಟವಾಗಿತ್ತು (ಕೀಲವ. ಕ. ೨೨-೬೬). [ನಿರ್-+ಮಾಟ$_1$]

ನಿರ್ಮಾಣ (ನಾ). ೧. ಅಳೆಯುವುದು ; ಅಳತೆ ಮಾಡುವಿಕೆ. ೨. ಅಳತೆ; ಮಾನ. ೩. ಕಟ್ಟುವುದು; ರಚಿಸುವುದು; ರಚನೆ : ಚೈತ್ಯ ಚೈತ್ಯಾಲಯನಿರ್ಮಾಣನಿರ್ಮಾಪಣಶಾಸನಾರೋಪಿತಗ್ರಾಮ ಕ್ಷೇತ್ರವಿತರಣಮುಂ (ಆದಿಪು. ೧೫-೧೩ ಪ); ಪ್ರಾಚೀನಯುಗದಲ್ಲಿ ನಿರ್ಮಾಣವಾದ ಕೆಲವು ಲೇಖನಗಳು . . . ಲಭಿಸಿವೆ (ದ್ರಾವಿವಿ. ೪೫). ೪. ಸೃಜನ; ಸೃಷ್ಟಿ. ೫. [ಜೈನ] ಒಂದು ಬಗೆಯ ನಾಮಕರ್ಮ; ೫ ಯಾವ ನಾಮಕರ್ಮದ ಉದಯದಿಂದ ಶರೀರದಲ್ಲಿ ಅಂಗೋಪಾಂಗಗಳ ರಚನೆಯುಂಟಾಗುವುದೋ ಅದಕ್ಕೆ ನಿರ್ಮಾಣನಾಮಕರ್ಮವೆಂದು ಹೆಸರು. ಇದರಲ್ಲಿ ಸ್ಥಾನ ನಿರ್ಮಾಣ, ಪ್ರಮಾಣನಿರ್ಮಾಣಗಳೆಂದು ಎರಡು ಬಗೆ. ಸ್ಥಾನ ನಿರ್ಮಾಣಕರ್ಮವು ಕಣ್ಣು, ಕಿವಿ, ಮೂಗು ಮೊದಲಾದ ಅಂಗಗಳು ನಿಯಮಿತ ಸ್ಥಳದಲ್ಲಿಯೇ ಇರುವಂತೆ ಮಾಡುತ್ತದೆ. ಪ್ರಮಾಣನಿರ್ಮಾಣವು ಮೂಗು, ಕಣ್ಣು ಮೊದಲಾದ ಅಂಗಗಳು ನಿಯಮಿತ ಪ್ರಮಾಣದಲ್ಲಿ ಉದ್ದ, ಅಗಲಗಳಿರುವಂತೆ ಮಾಡುತ್ತದೆ : ಅಗುರುಲಘುಚತುಷ್ಕವಿಹಾಯೋಗತಿ . . . ಸುಸ್ವರ ದುಸ್ವರಸುಭಗದುರ್ಭಗಪ್ರತ್ಯೇಕಶರೀರಾಯಶಸ್ಕೀರ್ತ್ಯನಾದೇಯನಿರ್ಮಾಣ ಪರ್ಯಾಪ್ತನೀಚೈರ್ಗೋತ್ರಂಗಳೆಂಬ ದ್ವಿಸಪ್ತತಿಪ್ರಕೃತಿಗಳಂ ನಿರವಶೇಷಂ ಕಿಡಿಸಿ (ಆದಿಪು. ೧೬-೪೯ಪ); ಸುಸ್ವರ ದುಃಸ್ವರ ಅದೇಯ ಅನಾದೇಯ ಯಶೋಯಶಸ್ಕೀರ್ತಿ ನಿರ್ಮಾಣ ತೀರ್ಥಕರನಾಮಮೆಂದಿಂತಲ್ಲಿ ಗತಿನಾಮಕರ್ಮಂ ಚತುರ್ವಿಧಮಕ್ಕುಂ (ಗೊಮ್ಮಸಾ. ೩-೬). [ಸಂ.]

ನಿರ್ಮಾಣಕಾಯ (ನಾ). ೧. ಅವತಾರಸ್ಥಿತಿಯಲ್ಲಿ ಕಾಣಿಸಿಕೊಳ್ಳುವ (ಪರಮಾತ್ಮನ) ಶರೀರ, —ಆಕಾರ : ಈಶ್ವರನಿಗೆ ಶುದ್ಧಸತ್ತ್ವಪ್ರಧಾನವಾದ ನಿರ್ಮಾಣಕಾಯವೆಂಬ ಅವತಾರಶರೀರವಿರುವುದು (ಹಿಂದಸಾ. ೯೬). ೨. [ಬೌದ್ಧ] (ಬುದ್ಧನು) ಲೀಲೆಗೋಸ್ಕರವಾಗಿ ಹೊಂದಿದ ದೇಹ : ಮಹಾಯಾನದ ಪ್ರಕಾರ, ಬುದ್ಧನು ಮನುಷ್ಯಮಾತ್ರನಲ್ಲ, ದೇವತೆಗಳನ್ನು ಮೀರಿಸಿದ ದೇವ, ದೇವಾಧಿದೇವ . . . ಲೋಕದ ಮೇಲಿನ ಅನುಗ್ರಹಕ್ಕಾಗಿ 'ನಿರ್ಮಾಣಕಾಯ'ದಿಂದ ಕಾಣಿಸಿಕೊಂಡು ತನ್ನ ಲೀಲೆಗಳನ್ನು ನಡಸುತ್ತಾನೆ (ಭಾರದ. ೨೦೫). [ನಿರ್ಮಾಣ+ಕಾಯ]

ರ್ಮಾಣತಂತ್ರ (ನಾ). ರಚನೆಯ ವಿಧಾನ; ಕೃತಿರಚನೆಯ ಪ್ರಕ್ರಿಯೆ: ಕುಂಚವನ್ನಾಡಿಸುವುದರಲ್ಲಿ ಅಜಂತಾ ಕಲಾಕಾರರ . . . ನಿರ್ಮಾಣತಂತ್ರ ವಿಶ್ವದ ಎಲ್ಲ ಕಲಾವಿಮರ್ಶಕರನ್ನೂ ದಿಗ್ಭ್ರಮೆಗೊಳಿಸಿದೆ (ಭಾರದ. ೫೨೫). [ನಿರ್ಮಾಣ+ತಂತ್ರ]

ನಿರ್ಮಾಣಶಕ್ತಿ (ನಾ). ರಚಿಸುವ ಸಾಮರ್ಥ್ಯ; ರಚನಾತ್ಮಕ ಶಕ್ತಿ : ಗ್ರಹಣಶಕ್ತಿಗಿಂತ ನಿರ್ಮಾಣಶಕ್ತಿಯು ಹೆಚ್ಚಿನದೆಂದು ಅವನ ಅಭಿಪ್ರಾಯವಿದ್ದ ಹಾಗೆ ಕಾಣುತ್ತದೆ (ನವ್ಯಕಾ. ೧೦೬). [ನಿರ್ಮಾಣ+ಶಕ್ತಿ]

ನಿರ್ಮಾತೃ (ನಾ). ಮಾಡುವವನು ; ರಚಿಸುವವನು : ಆ ಮಂಚವನ್ನು . . . ಅಲಂಕರಿಸಲು ಆದರ ನಿರ್ಮಾತೃವಾದ ಕಲಾವಿದನು ಅದೆಷ್ಟು ಕಾಲ ವ್ಯಯ ಮಾಡಿದ್ದನೆಂದು ನನ್ನಿಂದ ಹೇಳಲಿಕ್ಕೆ ಸಾಧ್ಯವಿಲ್ಲ (ಕಂಬಹು. ೭೭). [ಸಂ.]

ನಿರ್ಮಾತೃಸ್ಥಾನ (ನಾ). ಸೃಷ್ಟಿಯಾಗುವ ಸ್ಥಳ; ಉಗಮಸ್ಥಾನ: ಸಕಲಭೂತಗಳಿಗೂ ನಿರ್ಮಾತೃಸ್ಥಾನವಾದ ಅಂತರಿಕ್ಷದಲ್ಲಿ ಆದಿತ್ಯನು . . . ಉದಕವನ್ನು ಧರಿಸಿದ್ದಾನೆ (ಋಕ್ಸಾರ. ೨೭೬). [ನಿರ್ಮಾತೃ+ಸ್ಥಾನ]

ನಿರ್ಮಾತ್ಸರ್ಯ (ನಾ). ಅಸೂಯೆಯಿಲ್ಲದಿರುವುದು ; ನಿರ್ಮತ್ಸರತೆ : ಸಮಸ್ತ ಜನರೂ ನಿರ್ಮಾತ್ಸರ್ಯದಿಂದ ಶ್ಲಾಘಿಸುತ್ತಿದ್ದರು (ಅಂಬಿಕೆ. ೧೮). [ಸಂ.]

ನಿರ್ಮಾನುಷ (ನಾ). ಜನರು ಇಲ್ಲದಿರುವುದು; ನಿರ್ಜನವಾದುದು : ಹಾದಿಯಲ್ಲಿ ಅತನಿಗೊಂದು ನಿರ್ಮಾನುಷವಾದ ಆಶ್ರಮವು ಕಣ್ಣಿಗೆ ಬಿದ್ದಿತು (ತುಳಸೀ. ೬೨). [ಸಂ.]

ನಿರ್ಮಾನುಷ್ಯ (ನಾ). = ನಿರ್ಮಾನುಷ : ಶ್ರೀನಾಗದತ್ತಂ . . . ಪಲಾಶಪುರಮನೆಯ್ದಿ ನಿರ್ಮಾನುಷ್ಯಮಪ್ಪುದಂ ಕಂಡು (ಚಾವುಂಪು. ೩೯೯); ಭರತನಂ ತಂದಿಟ್ಟು ದುಷ್ಕಾರ್ಯಕರಣಗಳನೊರಸಿ ನಿರ್ಮಾನುಷ್ಯವೆನಿಪೆನೀ ಧರಣಿಯಂ (ವೆಂಕಾರಾ. ೨-೯-೧೨). [ಸಂ.]

ನಿರ್ಮಾಪಕ (ಗು). ೧. ಸೃಜನಾತ್ಮಕ; ಸೃಜನಕ್ರಿಯೆಗೆ ಸಂಬಂಧಿಸಿದ: 'ನಿರ್ಮಾಪಕಶಾಸ್ತ್ರ' ಪರಾ. (ನಾ). ೨. ಕಟ್ಟುವವನು; ಸೃಷ್ಟಿಮಾಡುವವನು : ಸಕಲಜಗತ್ತಿಗೂ ನಿರ್ಮಾಪಕನೂ ಮನಸ್ಸಿನಂತೆ ವೇಗವುಳ್ಳವನೂ ಆದ ವಿಶ್ವಕರ್ಮನನ್ನು ಈಗ ಯಜ್ಞದಲ್ಲಿ ರಕ್ಷಣಾರ್ಥವಾಗಿ ಪ್ರಾರ್ಥಿಸಿ ಕರೆಯುತ್ತೇವೆ (ಋಕ್ಸಾರ. ೨೨೬). ೩. ಚಲನಚಿತ್ರ, ನಾಟಕ ಮುಂತಾದುವುಗಳ ನಿರ್ಮಾಣಕ್ಕೆ ಹಣವನ್ನು ಒದಗಿಸುವವನು,—ಬಂಡವಾಳ ಹಾಕುವವನು : ಚಿತ್ರ ತಯಾರಿಸುವಾಗ ನಿರ್ಮಾಪಕರಿಗೆ ತಾವು ಹಾಕಿದ ಹಣ ಹಿಂದಕ್ಕೆ ಬಂದರೆ ಸಾಕು ಎಂಬ ದೃಷ್ಟಿಯೇ ಮುಖ್ಯವಾಗಿದ್ದರೆ ಕಲಾತ್ಮಕಚಿತ್ರಗಳ ನಿರ್ಮಾಣ ಸಾಧ್ಯವಿಲ್ಲ (ರೂಢಿ). [ಸಂ.]

ನಿರ್ಮಾಪಕಶಾಸ್ತ್ರ (ನಾ). ಕಲಾನಿರ್ಮಿತಿಗೆ ಉಪಯುಕ್ತವಾದ ಶಾಸ್ತ್ರ : ಅರಿಸ್ಟಾಟಲನ ಶಾಸ್ತ್ರಗಳು ಮೂರುಭಾಗಗಳಾಗಿ ವಿಂಗಡವಾಗಿವೆ. ಅವುಗಳಲ್ಲಿ ಗಣಿತ, ಭೌತಶಾಸ್ತ್ರ, ಅಧಿಭೌತಶಾಸ್ತ್ರಗಳು ಕೇವಲ ಜ್ಞಾನಾತ್ಮಕ ಶಾಸ್ತ್ರಗಳು; ರಾಜನೀತಿ, ನೀತಿಶಾಸ್ತ್ರಗಳು ಪ್ರಾಯೋಗಿಕ ಶಾಸ್ತ್ರಗಳು ; ಭಾಷಣಶಾಸ್ತ್ರ, ಕಾವ್ಯಮೀಮಾಂಸೆಗಳು ನಿರ್ಮಾಪಕಶಾಸ್ತ್ರಗಳು (ಅರಿಕಾ. ೧೦). [ನಿರ್ಮಾಪಕ+ಶಾಸ್ತ್ರ]

ನಿರ್ಮಾಪಕಿ (ನಾ). ಚಲನಚಿತ್ರ, ನಾಟಕ ಮುಂತಾದುವುಗಳ ನಿರ್ಮಾಣಕ್ಕೆ ಹಣವನ್ನು ಹಾಕುವವಳು : ಈ ಚಿತ್ರಕ್ಕೆ ಆಕೆಯೇ ನಿರ್ಮಾಪಕಿ (ರೂಢಿ). [ನಿರ್ಮಾಪಕ+-ಇ$_2$]

ನಿರ್ಮಾಪಣ (ನಾ). ಕಟ್ಟಿಸುವುದು ; ರಚನೆ ಮಾಡಿಸುವುದು : ಚೈತ್ಯಚೈತ್ಯಾಲಯನಿರ್ಮಾಣ ನಿರ್ಮಾಪಣಶಾಸನಾರೋಪಿತಗ್ರಾಮ ಕ್ಷೇತ್ರವಿತರಣಮುಂ (ಆದಿಪು. ೧೩-೧೫ ಪ) ; ಅತುಳಚೈತ್ಯಾಲಯಾನೀಕ ನಿರ್ಮಾಪಣಮರ್ಹತ್ಸೂಕ್ತಯುಕ್ತಿಶ್ರವಣಮಿವೆ ದಲೆಂದಿಂತವಂ ತನ್ನ ಚಿತ್ತಂ ತಣವನ್ನಂ ಮಾಡಿ (ಚಂದ್ರಪು. ೨-೭೧). [ಸಂ.]

ನಿರ್ಮಾಯ (ನಾ). ಮಾಯೆಗೆ ಸಿಲುಕದವನು ; ಮಾಯಾತೀತ; ಭ್ರಮಾರಹಿತ ; ಭ್ರಮೆಗೆ ಸಿಲುಕದವನು : ಆಯ್ಯಾ ನೀನು ನಿರಾಳ

ನಿರ್ಮಾಯನಾಗಿಪ್ಪೆಯಾಗಿ . . . ನಿಜದ ನಿಲವ ನೋಡಿ ಕಂಡೆನು (ಅಪಚಂ. ೨-೮); ನಿರಘ ನಿರ್ಭವ ನಿರ್ವಿರಳ ನಿಸ್ತರಣ ನಿರ್ಮದ್ಯಾಂಗ ನಿಜ ನಿರ್ಮಾಯ ಚಕ್ರೇಸು (ಬಸಪು. ೬೧-೪೪) ; ಅವನೀಶ್ವರಂ ನಿರ್ಮಾಯನಂ ಮಗುಳೆ ತಕ್ಕೈಸಲಾಗಳವುರರ್ಮಹೀಪಾಲಕನ ಪೂರ್ವಕೃತಪುಣ್ಯಮಂ ಬಣ್ಣಿಸಿದರ್ (ಜೈಮಿಭಾ. ೭-೧೪). [ಸಂ.]

ನಿರ್ಮಾಲ್ಯ (ನಾ). ೧. ನಿರ್ಮಲತೆ ; ಶುದ್ಧತೆ. ೨. ದೇವರಿಗೆ ಅರ್ಪಿಸಿ ತೆಗೆದ ಹೂವು, ಪತ್ರೆ ಮುಂತಾದುವು : "ಪ್ರಸಾದಾ-ಬ್ಧಿಂಗಳುಂ, ನಿರ್ಮಾಲ್ಯಮುಂ" (ಕಾಶಕ್ಯ. ೧೪೯) ; ಪಾವನಪ್ರದವೆನಿಸಿದ ಮಹಾದೇವನಿರ್ಮಾಲ್ಯವನೆ ಮೆಲಿದಾಚರಿಸುವನುದಿನವ (ಬಸಪು. ೪೭-೬೫) ; ಕರ್ಣಾ ಗೀತಂಗಳ ಕೇಳಲಿ ನಿನ್ನ ನಿರ್ಮಾಲ್ಯ ನಾಸವಾಘ್ರಾಣಿಸಲಿ ಹರಿಯೆ (ಪುರಂದ. ೧-೩೧-೧) ; ನಿಮ್ಮ ಪಾದಾಂಬುಜನಿರ್ಮಾಲ್ಯವ ಕೊಡು (ಭೈರಸಾ. ೧೧೧) ; ಒಮ್ಮೊಮ್ಮೆ ಶಾಲಿಗ್ರಾಮದ ನಿರ್ಮಾಲ್ಯ ತುಳಸಿಯ ಪತ್ರವನ್ನು ತನ್ನ ಕಿಸೆಯಲ್ಲಿ ಇಟ್ಟುಕೊಳ್ಳುವನು (ಗಂಪಾಯು. ೧೪೧). ೩. ಹಳೆಯದಾದುದು ; ವಿನಾಸಲು ಮುರಿದುದು ; ಮಾಸಿದುದು : ಅನನ್ಯ ಸಾಧಾರಣ ದಿವ್ಯಭಾವದ ಕಡೆಗಿನ ಆಕರ್ಷಣದ ಕೋಲ್ಮಿಂಚು ಸೋಂಕಿದ ಜೀವಕ್ಕೆ, ಸುತ್ತಲಿನ ಬೇರಾವ ಸುಖ ಸೊಬಗು ನಿರ್ಮಾಲ್ಯದಂತೆ ತ್ಯಾಜ್ಯವೆನಿಸತೊಡಗುತ್ತದೆ (ಕರ್ಣಾಟ. ೨೯೨) ; ದೇವರಿಗೆ ಸಲ್ಲತಕ್ಕ ಹೂವು ನಿರ್ಮಾಲ್ಯವಾಯಿತು (ಗಂಪಾಯು. ೨೬೯). ೪. ಮಾಸುವಿಕೆ ; ಮಲಿನವಾಗುವಿಕೆ : ಪರುಷಕ್ಕೆ ಬೆಲೆಯಿಲ್ಲ ಪ್ರಾಣಕ್ಕೆ ನಿರ್ಮಾಲ್ಯವಿಲ್ಲ ರುಚಿಗೆ ಎಂಜಲಿಲ್ಲ (ಅಪಚಂ. ೧೦೦-೪೫೫). ೫. ಮುಡಿದು ತೆಗೆದ ಹೂವು ; ಬಾಡಿದ ಹೂವು : ತಳಿರ್ಗಳ್ ಬೀಟುಡೆ ಹಸ್ತಪಾದ ತಳರಾಗಶ್ರೀಗೆ ಕಹ್ಲೊಳ್ವ ಕಣ್ಗಳ ನಿರ್ಮಾಲ್ಯದ ಮಾಲೆ ಕೈರವವನಂ ಸ್ಮೇರಾಸ್ಯಬಿಂಬಕ್ಕೆ ಮಂಗಳನೀರಾಜನಭಾಜನಂ ವಿಧು ಮರಾಳಂ ಮುಂದಯಾನ ಕ್ರಮಂಗಳ ಕಾಲ್ಗಾಪೆನೆ ಬಣ್ಣಿಸಲ್ಪವಣೆ ರೂಪಂ ಭೂಪ ನರ್ಥಾಂಗಿಯಾ (ಅಸಂಪು. ೨-೧೬). ೬. ಒಂದು ಬಗೆಯ ಸಸ್ಯ : ಧೂಪ – ಲೊಕ್ಕಸೊಪ್ಪು, ಬೇವಿನ ಸೊಪ್ಪು . . . ಬಿಳಗರುಕೆ, ನಿರ್ಮಾಲ್ಯ, ಕೊಡಸಿಗೆದೀಜ ಇವಂ ಚೂರ್ಣಿಸಿ ಧೂಪವಿಕ್ಕಲು ಸನ್ನಿಪಾತ ಗುಣವಹುದು (ಸಕವೈ. ೧೪೧). [ಸಂ.]

ನಿರ್ಮಿತ (ಗು). ೧. ಅಳೆಯಲ್ಪಟ್ಟ ; ಅಳೆದ. ೨. ರಚಿಸಿದ ; ರಚಿತವಾದ. (ನಾ). ೩. ರಚಿತವಾದುದು ; ಕಟ್ಟಲ್ಪಟ್ಟುದು : ಸುರನಗಮಂ ನಿಮಿರ್ಚಿ ತೆರೆಸುತ್ತಿದನಲ್ತೆ ಸರೋಜಸಂಭವಂ ಪುರಕೆನೆ ಬೆಲ್ವನಪ್ಪ ನವಹಾಟಕನಿರ್ಮಿತವಪ್ಪ ಕೋಂಟೆ ಮುಟ್ಟರಿ ನುಗಿಲಂ (ಚಂದ್ರಪು. ೧-೧೧೪) ; ಶ್ರೀಪರಂಜ್ಯೋತಿಸ್ವರೂಪಿಗೆ ದೀಪವೊಂದಂ ಪೊತ್ತಿಸುವವೊಲುಮಾಪನಿರ್ಮಿತವಪ್ಪ ಪತ್ರಪ್ರಸರವಿಸರವನು ಆ ಪರಮಶಿವಗರ್ಪಿಸುವೆನು (ಬಸಪು. ೧-೬೫). ೪. ಸೃಷ್ಟಿ ; ನಿರ್ಮಾಣ : ಪಾಪಿಷ್ಠ ಜೆಂಗಳನೇಕೆ ನಿರ್ಮಿತವ ಮಾಡಿದನೋ (ಮೋಹತ. ೧೦-೬೧). [ಸಂ.]

ನಿರ್ಮಿತಿ (ನಾ). ರಚನೆ ; ನಿರ್ಮಾಣ : ನಾಟಕಸಂಸ್ಥೆಯೂ ಕಲಾಮಂಡಿತ ಸಮಾಜವೂ ತಮ್ಮ ಮಹಾಧ್ಯೇಯವನ್ನು ಆರಿತುಕೊಂಡು ನವ ಮಾನವನಿರ್ಮಿತಿಯ ದಿವ್ಯಯಜ್ಞದಲ್ಲಿ ತಮ್ಮ ಕರಭಾರವನ್ನು ಸಾದರ ಪಡಿಸುವುದು ಪ್ರಾಪ್ತವಾಗಿರುವುದಲ್ಲವೆ? (ಪ್ರಒಂಥ. ೨೬) ; ಶಾಸ್ತ್ರ ನಿರ್ಮಿತಿಯಾಗುವವರೆಗೆ ಪ್ರಯೋಗವೇ ಶಾಸ್ತ್ರದ ನಿರ್ಣಯಕ್ಕೆ ಆಧಾರ (ಸಂಕೋಥ. III, ೪೨೬). [ಸಂ.]

ನಿರ್ಮಿತ್ರ (ಗು). ೧. ಮಿತ್ರನಿಲ್ಲದ ; ಒಂಟಿಯಾದ. (ನಾ). ೨. ಮಿತ್ರನಿಲ್ಲದವನು ; ಏಕಾಕಿ : ಒರ್ವನೇ ನಿಲುವೆ ನೀನುತ್ಕಟ ಕ್ಷಣಗಳಲಿ . . . ನಿರ್ವಾಣದೀಕ್ಷೆಯಲಿ, ನಿರ್ಯಾಣಘಟ್ಟದಲಿ ನಿರ್ಮಿತ್ರ ನಿರಲು ಕಲಿ (ಮಂಕುಕ. ೬೮೯). [ಸಂ.]

ನಿರ್ಮಿಸು$_1$ (ಕ್ರಿ). ೧. ಕಟ್ಟು ; ರಚಿಸು : ಸುರಪತಿ ಸೂತ್ರಧಾರ ನಮರಾವಳಿ ಶಿಲ್ಪಿಗಣಂ ಧನೇಶ್ವರಂ ಬರೆದು ಪವಣ್ಗ ಜಾಣ್ಗೆವರೆ ನಿರ್ಮಿಸಿದಂ ಪುರಮಂ ನೃಪಂ (ಶಾಂತಿಪು. ೯-೧೫೮) ; ನಮ್ಮ ಮನೆಗಳದೊಳರೆ ಮನೆಯನಿರದಾಗಿಸೆನಲವರ್ ಭಯಭರಿತ ಭಕ್ತಿಯಿಂ ನಿರ್ಮಿಸಿದರ್ (ಚಬಪು. ೫-೪೭) ; ನಿರ್ಮಲಸತಿಯರ ಧರ್ಮವ ಕೃತಿಯಾಗಿ ನಿರ್ಮಿಸಿ ನೆಗಳಿಪೆ (ಹರಿಚಿ. ೧-೪೮) ; ಕರ್ಮವೆಂಬುದು . . . ಶ್ರೀಂಖಲೆಗಳನ್ನು ನಿರ್ಮಿಸಿ ನಮ್ಮನ್ನು ಸಂಸಾರಕ್ಕೆ ಕಟ್ಟುತ್ತದೆ (ಧರ್ಮಸಾ. ೧೧೭). ೨. ಉಂಟು ಮಾಡು ; ಸೃಷ್ಟಿಸು ; ಸೃಜಿಸು : ಸುರಸಂದೋಹದ ತೀವಿ ತಂದ ಘಟಸಂಘಾತಂಗಳಾನಲ್ಕೆರ್ಬ್ಬುರದಿಂ ಬಾರದೆ ಮಾಣೆ ನಿರ್ಮಿಸಿದ ದೋರ್ದಂಡಂಗಳೊಳ್ ಭೂಪಜೋತ್ಕರವಿಂದಾಗಿರೆ (ಆದಿಪು. ೬-೪೬) ; ಉರಗ ನರ ದಿವಿಜಾದಿಗಳಿಗಿದು ಪರಿಹರಿಸಲಳವಲ್ಲ ದೈವದ ಪರುಷವಣೆ ಮುನ್ನಾದಿಯಲಿ ನಿರ್ಮಿಸಿತು ಮೃತ್ಯುವೆನು (ಕುಸ್ಯಾದ್ರೋ. ೬-೨೯) ; ಸುರಪನಾ ಸವನಜನ ಪರಿಯನು ಪರಿಕಿಸಲು ನಿರ್ಮಿಸಿದನಾಕ್ಷಣ ಸುರಸೆಯನು (ತೊರರಾ. ೫-೧-೧) ; ವಿಪ್ರರು ಕಪಟದ ಗೋವ ನಿರ್ಮಿಸಿದರು ಕ್ಷಣದೆ (ಕಂನವಿ. ೫-೧೬) ; ನಿಜ್ಞಾನಿಗಳು . . . ಕೃತ್ರಿಮಹೃದಯ ನಿರ್ಮಿಸಿ ಜೋಡಿಸಿದ್ದಾರೆ (ವೇಕಸ್ಮೃ. ೨೨). ೩. ಏರ್ಪಡಿಸು ; ನೆರವೇರಿಸು : ನಿಜತನುಜಂಗಾಗಳ್ ಜಾತಕರ್ಮಮಂ ನಿರ್ಮಿಸಿದಳ್ (ಸುಕುಮಾ. ೧೦-೨೫) ; ಕುಮಾರನಂ ಪಡೆವುದುಮಾಗಳ್ . . . ಅರಸಂ ಬೇಡುವ ವರ್ಗ ಬೇಡಿದುದಂ ಬೇಡಿದಾಗಳೆ ಕೈಮಡಗದೆ ಕೊಟ್ಟು ಜಾತಕರ್ಮಮಂ ನಿರ್ಮಿಸಿ (ಬಾಧಪು. ೪-೨೮ ಪ). [ನಿರ್ಮಾಣ + – ಇಸು$_3$]

ನಿರ್ಮಿಸು$_2$ (ಕ್ರಿ). ಆಶ್ರಯಿಸುವಂತೆ ಮಾಡು ; ಆಧಾರ ದೊರೆಕೆನು : ಅತಿಭಕ್ತಿಗೆಯ್ದು ತತ್ಪುರುಷರನೆಯ್ದಿ ಧರ್ಮ್ಮದೊಳೆ ನಿರ್ಮಿಸಿದಾನಗಳಾಗಿ ಸನ್ದ ತತ್ಪುರುಷ ಮಹಾಮುನೀಶ್ವರೆ (ಪೌಇಇ. XI-೧, ೧೧೬-೨೧ ; 1075).

[ℙ ಇದು 'ನೆರ್ಮಿಸು' ಎಂಬುದರ ಅಪಲಿಖಿತವಿರಬಹುದು]

ನಿರ್ಮುಕುತ (ನಾ). ಮುಕ್ತನಾದವನು ; ಬಿಡುಗಡೆ ಹೊಂದಿದವನು : ಅಕುಟಿಲತೆಯಿಂದೆನ್ನನರ್ಚಿಸಿ ಭಕ್ತರೊಡನಾಡುವ ನರನು ನಿರ್ಮುಕುತನಹ ಕ್ರಮದಿಂದಲ್ಲದ್ರಿಯನೇಱುವಂದದಲಿ (ನಿಭಾಗ. ೧೧-೧೭-೨). [<ಸಂ. ನಿರ್ಮುಕ್ತ]

ನಿರ್ಮುಕ್ತ (ಗು). ೧. ಬಂಧನದಿಂದ ಬಿಡಿಸಿಕೊಂಡ ; ಬಿಡುಗಡೆಯಾದ ; ಬಿಟ್ಟ : ನಿರ್ಮೋಕ ನಿರ್ಮುಕ್ತ ನಿರ್ವಾಲಸಪ್ಪ ಘಣಿಯೆಂತಂತೀ ಸೀತೆಯಂ ತೊಱೆದೇಸೊಗಂ ಬಾಬ್ಕಿಂ (ರಾಮಾಶ್ವ. ೨೫-೨೯). (ನಾ). ೨. ಸಂಸಾರಬಂಧನದಿಂದ ಬಿಡುಗಡೆ ಹೊಂದಿದವನು ; ಮುಕ್ತ : ಚಿತ್ತವ ಸುಯಿಧಾನವ ಮಾಡಿ ಮೊತ್ತಾದೆ ಹೆಣ್ಣು ಹೊನ್ನು ಮಣ್ಣು ಗೆದ್ದರೆ ನಿರ್ಮುಕ್ತ (ವಚಸಂ. ೨೨೨-೭೪). ೩. ಸಮರಸತೆಯನ್ನು ಹೊಂದಿದ ವ್ಯಕ್ತಿ ; ಐಕ್ಯಹೊಂದಿದ ವ್ಯಕ್ತಿ : ನಿಮ್ಮಲ್ಲಿ ನಿರ್ಮುಕ್ತನಾದ ಬಳಿಕ ಈ ಜಗದೇನಾದರೇನಯ್ಯ (ವಚಸಂ. ೩೫೧-೧೦೩); ಸಚ್ಚಿದಾನಂದದಲ್ಲಿ ಐಕ್ಯವಾಗಿ ಸತ್ಯಶರಣರ ಪಾದದಲ್ಲಿ ನಿರ್ಮುಕ್ತಳಾದೆನಯ್ಯಾ (ವಚಸಂ. ೫೦೧-೧೪೮). ೪. ಸದಾಕಾಲವೂ ಮುಕ್ತಸ್ಥಿತಿಯಲ್ಲಿಯೇ ಇರುವವನು ; ಪರಮಾತ್ಮ : ಮುಕ್ತನಪ್ಪನು ಜೀವನುಂ ನಿರ್ಮುಕ್ತನಪ್ಪನು ಶಿವನು (ಬಸಪು. ೫೧-೨೮). ೫. ಅದೇ ತಾನೆ ಪೊರೆ ಬಿಟ್ಟ ಹಾವು. [ಸಂ.]

ನಿರ್ಮುಕ್ತಿ (ನಾ). ಬಿಡುಗಡೆ ; ಮುಕ್ತಿ : ಶ್ರೀಪ್ರಭವಮುನಿಪ್ರಭುವ ಪಾದಮೂಲದೊಳ್ ನಿಷ್ಕೃತದಿಗಂಬರಶ್ರೀಕನಾಗೆ ನಿಖಿಲಕರ್ಮನಿರ್ಮುಕ್ತಿಯಿಂ ಪ್ರಾಪ್ತ ಸಪ್ತಪರಮಸ್ಥಾನನಾದಂ (ಚಂದ್ರಪು. ೪-೨೪ ಪ). [ಸಂ.]

ನಿರ್ಮುಕ್ತೋಷ್ಮ (ನಾ). ಉಷ್ಣತೆಯಿಲ್ಲದುದು ; ತಂಪಾದುದು: ಮುಕ್ತಜ್ವರದಂತೆ ನಿರ್ಮುಕ್ತೋಷ್ಮಮುಂ ಮೂರ್ಛಾಪ್ರಾಪ್ತನಂತೆ ತಮೋಮಯಮುಮಪ್ಪ ತಮಿಸ್ರಗುಹೆಯನೆಯ್ದಿದಾಗಳ್ (ಅಪಿಪು. ೧೩-೪೬ ಪ). [ನಿರ್ಮುಕ್ತ + ಊಷ್ಮ]

ನಿರ್ಮೂಢ. (ನಾ). ಕಡುಮೂರ್ಖ : ರೂಢಿಗಚ್ಚರಿಯಾಯ್ತಲಾ ಪರಿಗೂಢಮೃಗಗಣವಿಲ್ಲವಿದೆ ನಿರ್ಮೂಢರನು ಹಿಡಿತರಿಸುಯೆಂದನು ದೂತ ನೊಡೆಯಂಗೆ (ಕುಪ್ಯಾಅ. ೧೨-೧೬). [ಸಂ.]

ನಿರ್ಮೂಲ, ನಿರ್ಮೂಳ (ಗು). ೧. ಬೇರಿಲ್ಲದ ; ಬುಡವಿಲ್ಲದ. ೨. ಬೇರುಸಹಿತ ಕಿತ್ತ ; ಬುಡಸಹಿತ ಕಿತ್ತ. (ನಾ). ೩. ಬೇರು ಸಹಿತ ಕಿತ್ತುದು ; ಸಂಪೂರ್ಣ ನಾಶವಾದುದು : ಶ್ರುತಿರಹಿತರಾಗಿ ಚರಿಸುತಿಹ ಜಿನ ಬೌದ್ಧ ಚಾರ್ವಾಕರ ಕುಪಥಸಮಯತ್ರಯಂ ನಿಷ್ಕುರದಿ ನಿರ್ಮೂಲಂಗಳಾಗಲ್ಕೆಂದು ನಿಶ್ಚಯಿಸಿ (ಬಸಪು. ೫೦-೬೫). **ನಿರ್ಮೂಳ:** ೩. ನಿರ್ಮೂಳಂ ಮಾಡರಿಯಂ (ಬಂಹರಿ. ೧೦-೨೦).

ನಿರ್ಮೂಲಂ ಮಾಡು, ನಿರ್ಮೂಲ ಮಾಡು = ಬೇರು ಸಹಿತ ಕೀಳು ; ಪೂರ್ಣವಾಗಿ ನಾಶಗೊಳಿಸು : ಎಮ್ಮೊಳಾವನೊರ್ವಂ ನಮ್ಮ ಪಗೆಯನಿಱಿಯಲುಂ ನಂದನವಂಶಮಂ ನಿರ್ಮೂಲಂ ಮಾಡಿ ಕಿಡಿಸಲು ಮಾರ್ಕುಂ (ಪಡ್ಡಾರಾ. ೧೮೨-೧೫) ; ನಂದನರನ್ನು ನಿರ್ಮೂಲ ಮಾಡಿದ ಈ ನನ್ನ ಬುದ್ಧಿ ಒಂದು ಮಾತ್ರ ಹೋಗದಿರಲಿ ! (ರಾಕ್ಷಮು. ೨೮). **ನಿರ್ಮೂಲಮಾಗು, ನಿರ್ಮೂಲವಾಗು** = ಬೇರು ಸಹಿತ ಕಿತ್ತು ಹೋಗು ; ಸಂಪೂರ್ಣ ನಾಶವಾಗು : ಆ ಮೂಲದ ಕಡೆಯ ಮಾವಸೆಯ ದಿವಸದೊಳಂ ನಿರ್ಮೂಲಮಾಯ್ತು ಕೌರವವಂಶಂ (ಗದಾಯು. ೯-೩೭) ; ಸೌಂದರಿಯ ವಶರಾಗಿ ಭೂವರನಂದನರು ನಿರ್ಮೂಲವಾದರು (ಬಸಪು. ೩೧-೨೨) ; ನಂದವಂಶವು ನಿರ್ಮೂಲವಾದರೂ ಅವನ ಸ್ವಾಮಿ ಭಕ್ತಿ ಸ್ವಲ್ಪವೂ ಚಲಿಸಿಲ್ಲ (ರಾಕ್ಷಮು. ೧೧). [ಸಂ.]

ನಿರ್ಮೂಲಕ (ನಾ). ಬುಡಸಹಿತ ಕೀಳುವವನು ; ನಾಶಮಾಡುವವನು ; ಹುಟ್ಟು ಅಡಗಿಸುವವನು : ಆಕಟ ಗುರುಹತ್ಯಾಮಹಾಪಾತಕಕೆ ತಂದೈ ಮನವ ಭರತಪ್ರಕಟಕುಲನಿರ್ಮೂಲಕನೆ ನೀನೊಬ್ಬನುದಿಸಿದಲ (ಕುಪ್ಯಾಕ. ೧೭-೫). [ಸಂ.]

ನಿರ್ಮೂಲನ, ನಿರ್ಮೂಳನ (ನಾ). ಬೇರುಸಹಿತ ಕೀಳುವುದು ; ಸಂಪೂರ್ಣವಾಗಿ ನಾಶಗೊಳಿಸುವುದು : ತದುಭಯಕರ್ಮನಿರ್ಮೂಲನಂ ಮೋಕ್ಷವೆಂಬುದು (ಶಾಂತಿಪು. ೧೨-೫ ಪ) ; ನೀವಿಂತಿರಾನನ್ನೆಗಂ ಮುನಿಸಂ ತೀರ್ಚೆ ನರೇಂದ್ರವೈರಿತರುವಂ ನಿರ್ಮೂಲನಂ ಮಾಡುವೆಂ (ಗದಾಯು. ೬-೨೪) ; ಲೋಲನಾಪರಿಕರ್ಮ ತರುನಿರ್ಮೂಲನೈಕಕ್ಷಮ ಸುಧಾಕರಮೌಳಿ (ಕುಪ್ಯಾಕ. ೬-೧). **ನಿರ್ಮೂಳನ :** ಮಱುಭವದೊಳ್ ಸಗರವಂಶಮಂ ನಿರ್ಮೂಳನಂ ಮಾಟ್ಪಿನಕ್ಕೆಂ(ನೆಂ)ದು ನಿದಾನಂಗೆಯ್ದು (ಚಾವುಂಪು. ೨೮೬). [ಸಂ.]

ನಿರ್ಮೂಲನಂಗೆಯ್ (ಕ್ರಿ). ಪೂರ್ಣವಾಗಿ ನಾಶಮಾಡು : ನಿನ್ನ ಮಗಂ ಪಗೆಯಂ ನಿರ್ಮೂಲನಂಗೆಯ್ದು ನಿನ್ನ ಶೋಕಮಂ ಪಿಂಗಿಸುಗುಂ (ಚಾವುಂಪು. ೪೧೦) ; ದನುಜಕ್ಷತ್ರಾಧಮಾನೀಕಮನಗಣಿತಮಂ ಕೂಡೆ ನಿರ್ಮೂಲನಂಗೆಯ್ದನಿತುಂ ಭೂಭಾರಮಂ ಪಿಂಗಿಸಲುದಯಿಸಿದಂ ಚಕ್ರಿ (ಜಗವಿ. ೩-೪). [ನಿರ್ಮೂಲನ + ಕೆಯ್$_1$]

ನಿರ್ಮೂಲನಕರ (ನಾ). ಸಂಪೂರ್ಣ ನಾಶ ಮಾಡುವವನು : ಸಕಳ ಕರ್ಮನಿರ್ಮೂಲ[ಪಾಠಾಂ.ಳ]ನಕರನುಂ ತ್ರಿಲೋಕಶಿಖರಿಶೇಖರನುಮಪ್ಪ ಜೀವನುಂಟೆಂದು . . . ತಿಳಿಪಿ (ಅಪಿಪು. ೨-೧೦ ಪ). [ಸಂ.]

ನಿರ್ಮೂಲಿತ (ಗು). ಬೇರು ಸಹಿತ ಕಿತ್ತ ; ಬುಡ ಸಹಿತ ತೆಗೆದು ಹಾಕಿದ ; ಸಮಗ್ರವಾಗಿ ನಾಶಗೊಳಿಸಿದ : ಚಿತ್ತದೊಳ್ ಲಿಂಗಾಭಿಮಾನಿ . . . ನಿರ್ಮೂಲಿತೋಭಯಕರ್ಮಸಂಚಯನು (ಬಸಪು. ೨೯-೧). [ಸಂ.]

ನಿರ್ಮೂಲಿಸು, ನಿರ್ಮೂಳಿಸು (ಕ್ರಿ). ೧. ಬೇರುಸಹಿತ ಕೀಳು ; ಸಂಪೂರ್ಣವಾಗಿ ನಾಶಮಾಡು : ಇಂತಪ್ಪ ಪಗೆವರಂ ನಿರ್ಮೂಲಿಸುವುದು ಭೇದನಮೆಂಬುದಕ್ಕುಂ (ಪಂಚತಂ. ೨೧೪-೨೦) ; ಸಕಲದುರಿತ ತಿಮಿರಪಟಲಮಂ ನಿರ್ಮೂಲಿಸುವ ಸಹಸ್ರಕರಪ್ರಭಾವಕರಮಾವುದು (ಅನಂಪು. ೩-೬೧ ಪ) ; ಅಪಯಶಸ್ಸಿನ ಅಂಕುರವನ್ನೇ ನಿರ್ಮೂಲಿಸಿಬಿಡುವೆನು (ಗುರುಣೆ. ೯೯). ೨. ದೂರಮಾಡು ; ತೊಲಗಿಸು : ತ್ರಿವಿಧಮಪ್ಪ ದರ್ಶನಮೋಹನೀಯಮಂ ನಿರ್ಮೂಲಿಸಿ (ಶಾಂತಿಪು.೧೧-೧೧೧ ಪ). **ನಿರ್ಮೂಳಿಸು :** ೧. ನಮ್ಮ ಪಗೆಯನಿಱಿಯಲುಂ ನಂದನವಂಶಮಂ ನಿರ್ಮೂಳಿಸಲಾನಾರ್ಪೆಂ (ಪಡ್ಡಾರಾ. ೧೮೨-೧೬) ; ಆಳೆಟ್ಟಾ ಬಸನಂಗ ಕೇಳುಮನೇಟ್ಟು ನಿರ್ಮ್ಮೂಳಿಸಿ ಪರಿದನರಿಷಡ್ವರ್ಗ್ಗ × × × ಕಾಲಾಗ್ನಿಯಲ್ತೆ ಗುಣಗಳ್ಳ (ಎಕ. VII, ತಿಕಾರಿ. ೧೨೯-೩೧ ; 1071) ; ರವಿಗದಣ್ಡಾಧಿಪನಂ ಮಾಳವವೇಳುವ ನೆಱೆ ನಿರ್ಮೂಳಿಸಿ ನಿಜನಾಥನಾಜ್ಞೆಯಂ . . . ಸುಮನೋಮಾಳಿಕೆಯಂ ನಿಲಿಸುವನ್ತೆ ನಿಲಿಸಿದನದಟಂ (ಸೌಇಇ. IX-i, ೧೫೮-೨೪; 1128). [ನಿರ್ಮೂಲನ + -ಇಸು$_3$]

ನಿರ್ಮೂಳ 'ನಿರ್ಮೂಲ' ನೋ.

ನಿರ್ಮೂಳನ 'ನಿರ್ಮೂಲನ' ನೋ.

ನಿರ್ಮೂಳಿಸು 'ನಿರ್ಮೂಲಿಸು' ನೋ.

ನಿರ್ಮೇಘ (ನಾ). ಮೋಡವಿಲ್ಲದುದು ; ಮುಗಿಲಿಲ್ಲದುದು ; ನಿರಭ್ರ : ನಿರ್ಮೇಘಮೆನಿಪ ದಿನದೊಳ್ ನಿರ್ಮಳಮೆನಿಪೊಂದು ಠಾವಿನೊಳ್ ನಿಂದಿನಿಸುಂ ನಿರ್ಮಲಚಿತ್ತದೆ ನೋಡಲು ಘಮ್ಮನೆ ತಾಂ ತೋರ್ಕುಮಲ್ಲಿ ಛಾಯಾಪುರುಷಂ (ಪಸಾರ. ೩೬೩) ; ಮಿತಚಲನವಿಲ್ಲದೆ ಮೆಱೆವ ಮಾರುತನವೊಲು ನಿರ್ಮೇಘವಾಗಿಹ ವಿತತ ನಭದವೊಲಿಂದ್ರಿಯಂಗಳ ಗಜಬಜೆಯನುಡುಗಿ (ಬಸಪು. ೩೪-೧೦). [ಸಂ.]

ನಿರ್ಮೋಕ (ನಾ). ೧. ಬಿಡುವುದು; ಬಿಡುಗಡೆ ಮಾಡುವುದು. ೨. ಹಾವಿನ ಪೊರೆ : "ನಿರ್ಲಯನೀ, ನಿರ್ಮೋಕಂ, ಕಂಚುಕಂ – ಈ ೩ ಹಾವಿನ ಹೆರೆ" (ಹಲಾಯು. ೧೦೬-೨೨); "ನಿರ್ಮೋಕಮಾ ನಿರ್ಲಯಿನಿಯುರಗಮುಕ್ತಮೆನಲ್ಕೆ ಹೆರೆಯಕ್ಕು" (ಮಂಗರಾ. ೧೧೮-೨) ; ತರುಣೋರಗ ನವನಿರ್ಮೋಕರುಚಿರಮೆನಿಸಿರ್ದ ಧೌತಧವಳಾಂಬರದಿಂ ಕರಮೆಸೆದಂ (ಕಾದಂಪೂ. ೭೮); ರವಿಹಯಲಾಲಾಪಿಂಡಂ ದಿವಿಜನದೀಫೇನಮಾಲೆ ರಾಹುವ ನಿರ್ಮೋಕವಿದೆಂಬಿನಮಲ್ಲಲ್ಲಿಗೆ ಧವಳಾಂಬುದಪಟಲಮೆಸೆದುದು (ಜಗವಿ. ೪-೬೧). ೩. ಚರ್ಮ; ತೊಗಲು. ೪. ಯುದ್ಧಕವಚ. ೫. ಆಕಾಶ. [ಸಂ.]

ನಿರ್ಮೋಕನಿರ್ಮುಕ್ತ (ಗು). = ನಿರ್ಮೋಕಮುಕ್ತ : ನಿರ್ಮೋಕನಿರ್ಮುಕ್ತ ನಿರ್ಮಲನಪ್ಪ ಫಣಿಯೆಂತಂತೀ ಸೀತೆಯಂ ತೊಱೆದೇಸೊಗಂ ಬಾಟ್ವೆಂ (ರಾಮಾಶ್ವ. ೨೫-೨೯). [ನಿರ್ಮೋಕ + ನಿರ್ಮುಕ್ತ]

ನಿರ್ಮೋಕಮುಕ್ತ (ಗು). ಪೊರೆಯನ್ನು ಬಿಟ್ಟ : ಹರನ ಕೋಮಲ ಪಾಣಿಕಮಲಸ್ಪರುತಪೀಯೂಷದಲಿ ಮುಳುಗಿದ ನರನ ತನು ನಿರ್ಮೋಕಮುಕ್ತಭುಜಂಗನಂದದಲಿ . . . ಚಾರುಸ್ಫುರಣದಲಿ ಬೋಳೈಸಿದುದು ಸುರ ನರರ ಕಣ್ಮನವ (ಕುಪ್ಯಾಅ. ೬-೧೦೧). [ನಿರ್ಮೋಕ + ಮುಕ್ತ]

ನಿರ್ಮೋಕಿ (ನಾ). ತುಂಬೆಗಿಡದಲ್ಲಿ ಒಂದು ಬಗೆ : "ನಿರ್ಮೋಕಿ [ಪಾಠಾಂ. ನಿರ್ನಾಕಿ, ನಿರ್ನೋಕಿ, ನಿರ್ಮೆಕಿ, ನಿರ್ಮೋಖಿ]ಯೆನೆ ಕಾಡ ತುಂಬೆಯದಕ್ಕು" (ಮಂಗರಾ. ೪೦-೩೨). [?]

ನಿರ್ಮೋಹ (ನಾ). ೧. ಮೋಹವಿಲ್ಲದಿರುವುದು; ಭ್ರಾಂತಿಯಿಲ್ಲದಿರುವುದು : ದೇಹಸುಖಹೇತುಗಳುಮಂ ದೇಹಮುಮಂ ತನ್ನವೆಂದು

ಪಂಬಲಿಸದೆ ನಿರ್ಮೋಹದಿನಿರೆ (ಮಲ್ಲಿಪು. ೧೧-೪೪) ; ತನುವಿನಲ್ಲಿ ನಿರ್ಮೋಹ ಮನದಲ್ಲಿ ನಿರಹಂಕಾರ ಪ್ರಾಣದಲ್ಲಿ ನಿರ್ಭಯ . . . ಎಡೆಗೊಂಡ ಬಳಿಕ ಸೌರಾಷ್ಟ್ರಸೋಮೇಶ್ವರನೆಂಬ ಲಿಂಗವು ಬೇಱಿಲ್ಲ ಕಾಣೆರೊ (ಅದಪ. ೧೬೬-೧೧). ೨. ನಿಷ್ಠುರತೆ ; ನಿರ್ದಯೆ : ಆ ಹೊಗುವಳೀ ಹೊಗುವಳದೆಯಿದೆ ಹೋಹಳೆಂದತಿಶೀಘ್ರದಲಿ ನಿರ್ಮೋಹದಲಿ ಪಿತನೆಯ್ದು ಚಂಡಿಕೆಯುಂ ಪಿಡಿಯಲು (ಬಸಪು. ೧೪-೩೩). ೩. ಮೋಹವಿಲ್ಲದವನು : ಅಳಮಂ ಗೆಲ್ದು ನಿರ್ಮೋಹನಾದಂ (ಶಾಂತಿಪು. ೯-೧೪). [ಸಂ.]

ನಿರ್ಮೋಹಿ (ನಾ). ಮೋಹವಿಲ್ಲದಿರುವ ವ್ಯಕ್ತಿ ; ಭ್ರಾಂತಿಯಿಲ್ಲದವನು : ತನ್ನೊಡನಾತಂ ನಿರ್ಮೋಹಿಯಾಗಿ ಬಾರದಿರೆ (ಚಾವುಂಪು. ೬೩) ; ಲಿಂಗವ ಮುಟ್ಟಿ ಮತ್ತೊಂದೇನುವ ಮುಟ್ಟದ ನಿರ್ಮೋಹಿಯನು ಮಾಹೇಶ್ವರನೆಂಬೆನು (ಸಿದ್ಧೇಸ. ೧೦೧-೩೧೫) ; ರತಿರಾಜನಂದಿಗೆರ್ದೆಗೊಡದತಿನಿರ್ಮೋಹಿಗಳಾರಿಹಪರದೊಳ್ (ಹಮ್ಮೀರ. ೬-೩೨). [ಸಂ. ನಿರ್ಮೋಹಿನ್]

ನಿರ್ಮೋಹೆ (ನಾ). ೧. ಮೋಹವಿಲ್ಲದಿರುವವಳು ; ಭ್ರಾಂತಿಯಿಲ್ಲದವಳು. ೨. ಕಠಿಣಚಿತ್ತವುಳ್ಳವಳು ; ನಿರ್ದಯೆ : ಇರಿಸಿ ಹೋದವಳಾವಳೋ ಶಿಶುವರನ ತಾಯ್ ನಿರ್ಮೋಹೆಯ್ಯೆ (ಕುಸ್ಮಾಅ. ೬-೩೪). [ಸಂ. ನಿರ್ಮೋಹಾ]

ನಿರ್ಯಂತ್ರಣ (ಗು). ೧. ಅನಿರ್ಬಂಧವಾದ ; ನಿಯಂತ್ರಣವಿಲ್ಲದ ; ಸ್ವತಂತ್ರವಾದ. (ನಾ). ೨. ಅನಿರ್ಬಂಧತೆ; ಸ್ವೇಚ್ಛಾವೃತ್ತಿ. ೩. ಮೃಗಪಕ್ಷಿಗಳನ್ನು ಹಿಡಿಯಲು ಬಳಸುವ ಬಲೆ, ಬೋನು ಮುಂತಾದುವು ; ಕೂಟಯಂತ್ರ : "ಉನ್ಮಾಥಃ, ಕೂಟಯಂತ್ರಂ, ನಿರ್ಯಂತ್ರಣಂ-ಈ ೩ ತಗವುದು [ಬಲೆ, ಬೋನು]" (ಹಲಾಯು. ೧೨೯-೯೭). [ಸಂ.]

ನಿರ್ಯದ್ದಾನಗಜ (ನಾ). ಮದೋದಕವನ್ನು ಸುರಿಸುತ್ತಿರುವ ಆನೆ ; ಉನ್ಮತ್ತವಾದ ಆನೆ : ಪಿಗಳನ್ನಿರ್ಝರಹರಿನೀಳಗಿರೀಂದ್ರಮನೊಳಗುಮಾಡಿದುಜ್ಜ್ವಳತಾರಾನಗಮನಿಪುದು ನಿರ್ಯದ್ದಾನಗಜಂಗಳ ಸೌಧಶಾಲೆ ನೃಪಮಂದಿರದೊಳ್ (ಚಂದ್ರಪು. ೧-೧೪೦). [ಸಂ.]

ನಿರ್ಯಾಣ (ನಾ). ೧. ಬಿಟ್ಟು ಹೋಗುವುದು ; ಹೊರಡುವುದು; ನಿರ್ಗಮನ. ೨. ಮಾಯವಾಗುವಿಕೆ ; ಅದೃಶ್ಯವಾಗುವಿಕೆ. ೩. ಸಾವು ; ಮರಣ : 'ನಿರ್ಯಾಣಪ್ರಾಪ್ತಿ' ಪರಾ. ೪. ಹಾಲು ಕರೆಯುವಾಗ ದನದ ಕಾಲಿಗೆ ಕಟ್ಟುವ ಹಗ್ಗ; ದಳೆ. ೫. ಆನೆಯ ಕಡೆಗಣ್ಣು : "ಅಪಾಂಗದೇಶಃ, ನಿರ್ಯಾಣಂ-ಈ ೨ ಆನೆಯ ಕಡೆಗಣ್" (ಹಲಾಯು. ೩೬-೬೪) ; ಯಥಾರ್ಥಂ ಸ್ತುತಿಗೆಯ್ದು ರತ್ನಮಕುಟಂ ನಿರ್ಯಾಣಮಂ ತಾಗೆ ದಂತಿಯ ಮೇಗಿರ್ದು ವಿನಮ್ರನಾಗೆ ದಿವಿಜೇಂದ್ರಂ (ಶಾಂತಿಪು. ೧೦-೧೦); ಕರ್ಣಜಾಲಾಂತರಮಂ ನಿರ್ಯಾಣಮಂ ಸೃಕ್ಕಮನುದರಮನುದ್ಭೂತಮಂ ಘಾಟಮಂ ಪುಷ್ಕರಮಂ . . . ಕೂಡೆ ತೀರೀ ಶರಸಂಘಾತಂಗಳುಚ್ಚುತ್ತಿರೆ ಕೆಡೆದು ವಿಘಾನೀಕಂ (ಸಭಮಾ. ೪-೬೯); ಆ ಪುರಂದರನ ಸತಿ ನಿಜಪತಿಯ ಕೆಯ್ಯೊಳ್ . . . ಜಿನಬಾಳಕನಂ ನೀಡೆ ನಿಜರುಚಿರಮೌಳಿ ಸುರಮದಗಜನಿರ್ಯಾಣಪ್ರಲಗ್ನಮಾಗಲ್ ಪೊಡೆವಟ್ಟು ಜಯಸ್ವಾಮಿಯೆನುತ್ತುಂ ಭುಜಯುಗಮಂ ನೀಡಿ ತಳೆದುಕೊಂಡು ಮಹೇಂದ್ರಂ (ಸೇಮಿಪು.೮-೧೧೬). ೬. ಮೋಕ್ಷ ; ಮುಕ್ತಿ. ೭. ಬೀಡು ತೆಗೆಯುವುದು; ಪಾಳೆಯ ಎತ್ತುವುದು: "ಮೃತೋಪಯಾಣಂ ವಿಭಾಗ ನಿರ್ಯಾಣಸಮಾಹ್ವಯಂ" (ನಾನಾರ್ಥ. ೯೧). ೮. ಊರಿನಿಂದ ಹೊರಹೋಗುವ ಮಾರ್ಗ. ೯. ಕಬ್ಬಿಣ. [ಸಂ.]

ನಿರ್ಯಾಣಘಟ್ಟ (ನಾ). ಸಾಯುವ ಸಮಯ ; ಕೊನೆಯ ಗಳಿಗೆ ; ಮರಣಕಾಲ : ಒರ್ವನೇ ನಿಲುವೆ ನೀನುತ್ಕಟಕ್ಷಣಗಳಲಿ ಧರ್ಮಸಂಕಟಗಳಲಿ ಜೀವಸಮರದಲಿ ನಿರ್ವಾಣದೀಕ್ಷೆಯಲಿ, ನಿರ್ಯಾಣಘಟ್ಟದಲಿ ನಿರ್ಮಿತ್ರನಿರಲು ಕಲಿ (ಮಂಕುಶ. ೬೮೯). [ನಿರ್ಯಾಣ+ಘಟ್ಟ]

ನಿರ್ಯಾಣದೀಕ್ಷಿತ (ನಾ). ಮರಣದೀಕ್ಷೆಯನ್ನು ಪಡೆದವನು ; ಪ್ರಾಣತ್ಯಾಗಕ್ಕೆ ಸಿದ್ಧನಾದವನು : ದ್ರೋಣನೆಂಬರೆ ಮುನ್ನವೇ ನಿರ್ಯಾಣದೀಕ್ಷಿತನಾದನಾತನ ಕಾಣೆನೈ ಗುರುಸುತನದೃಶ್ಯಾಂಜನವೆ ಸಿದ್ಧಿಸಿತು (ಕುಮ್ಯಾದ್ರೋ. ೧೬-೧೮). [ನಿರ್ಯಾಣ+ದೀಕ್ಷಿತ]

ನಿರ್ಯಾಣಪ್ರಾಪ್ತಿ (ನಾ). ಮರಣ ಹೊಂದುವುದು ; ಮರಣಪ್ರಾಪ್ತಿ : ಮನುಜರ ನಿರ್ಯಾಣಪ್ರಾಪ್ತಿ ನಷ್ಟಜಾತಕಮೆನಿಪ್ಪ ಭೇದದನಳಿಕಾವನಿಯೊಳ್ ನೆಗೞ್ದರ್ಹಿಪ್ರಾಪ್ತನಾಲ್ಕುಮಧಿಕಾರದಿಂದೆ ಜಾತಕತಿಲಕಂ (ಜಾತಕ. ೨೪-೩೫). [ನಿರ್ಯಾಣ+ಪ್ರಾಪ್ತಿ]

ನಿರ್ಯಾಣಮಂಗಳ (ನಾ). ಚರಮಗೀತೆ : ಪರಾಂತಃಕರಣಪ್ರವೇಶವುಳ್ಳ ಕವಿಯು ತನ್ನ ಕಾವ್ಯನಾಯಿಕೆಯ ನಿರ್ಯಾಣಮಂಗಳವನ್ನಿಂತು ಹಾಡಿದನು (ಕೃಷ್ಣಾಕು. ೧೧-೧೧). [ನಿರ್ಯಾಣ+ಮಂಗಳ (=ಮಂಗಲ)]

ನಿರ್ಯಾಣಹೊಂದು (ಕ್ರಿ). ಸಾವನ್ನು ಹೊಂದು ; ಸಾಯು : ಆತನು . . . ಈಗ ಶ್ರವಣಬೆಳ್ಗೊಳವಿರುವ ಸ್ಥಳದಲ್ಲಿ ಜೈನಸಂನ್ಯಾಸಿಯಾಗಿ ತಪಸ್ಸು ಮಾಡಿ ನಿರ್ಯಾಣಹೊಂದಿದನು (ಭಾರಪ. ೧೭೬). [ನಿರ್ಯಾಣ+ಹೊಂದು$_1$ (<ಪೊರ್ದು$_1$)]

ನಿರ್ಯಾತ (ಗು). ೧. ಹೊರಬಿದ್ದ ; ಹೊರಟುಹೋದ : ಅಂತು ಪರಿತ್ರಾಸ ನಿರ್ಯಾತ ಕಿರಾತಸಂಜಾತಮೊಡವರೆ ಪನ್ನತಿಕೆಯಿಂ ಬರ್ಪಾಗಳ್ (ರಾಜಶೇ. ೫-೧೨೦ ಪ). (ನಾ). ೨. ಹೊರದೇಶಕ್ಕೆ ಕಳಿಸುವ ಸರಕು ; ರಫ್ತು. 'ಆಯಾತ' ಪರಾ. [ಸಂ.]

ನಿರ್ಯಾತಗೊಳಿಸು (ಕ್ರಿ). ಒಂದು ದೇಶದಲ್ಲಿ ತಯಾರಾದ ವಸ್ತುವನ್ನು ಹೊರದೇಶಗಳಿಗೆ ಕಳುಹಿಸು ; ರಫ್ತುಮಾಡು : ವಿದೇಶಗಳಿಗೆ ೩ ಕೋಟಿ ಟನ್ ಆಕ್ಕಿಯನ್ನು ನಿರ್ಯಾತಗೊಳಿಸಲು ಸಾಕೆಂದು ತಜ್ಞರು ಲೆಕ್ಕ ಹಾಕಿದರು (ಪ್ರಹಾರ. ೭೪). [ನಿರ್ಯಾತ+ಕೊಳ್$_1$+-ಇಸು$_3$]

ನಿರ್ಯಾತನ (ನಾ). ೧. ನ್ಯಾಸವಾಗಿಟ್ಟುಕೊಂಡಿದ್ದ ವಸ್ತುವನ್ನು ಅದರ ಒಡೆಯನಿಗೆ ಮರಳಿ ಒಪ್ಪಿಸುವುದು. ೨. ಉಡುಗೊರೆ ; ಕೊಡುಗೆ. ೩. ಸೇಡು ತೀರಿಸಿಕೊಳ್ಳುವಿಕೆ : "ನಿರ್ಯಾತನಂ—ಹಗೆ ತೀರಿಸಿಕೊಳ್ಳುವಿಕೆ, ದಾನ, ಬಚ್ಚಿಟ್ಟುಕೊಂಡದ್ದನ್ನು ಹಿಂದಕ್ಕೆ ಕೊಡುವಿಕೆ, ಸಾಲ ತೀರಿಸುವಿಕೆ" (ಸಿದ್ಧಾಂತಿ.೪೦೩). ೪. ಕೊಲ್ಲುವುದು; ವಧೆ. ೫. ಬೆಲೆ ; ಶುಲ್ಕ : "ನಿರ್ಯಾತನಂ=ಬೆಲೆ" (ಕಾಶಕೃ. ೨೬೬). [ಸಂ.]

ನಿರ್ಯಾತವ್ಯಾಪಾರ (ನಾ). ಒಂದು ದೇಶದಲ್ಲಿ ತಯಾರಾದ ವಸ್ತುವನ್ನು ಹೊರದೇಶಗಳಿಗೆ ಕಳುಹಿಸುವುದು ; ರಫ್ತು ವ್ಯಾಪಾರ : ನಮ್ಮಣ್ಣ . . . ಬೇರೊಬ್ಬ ಪಾರ್ಟನರ್ ಸಂಗಡ ತೆಂಗಿನ ಕಾಯಿಯ ನಿರ್ಯಾತವ್ಯಾಪಾರ ಮಾಡುತ್ತಾರೆ (ಪಂಶಸ್ಯ. ೧೦೨) ; ಈ ಸ್ಥಾಪಕರು . . . ಆಯಾತ—ನಿರ್ಯಾತ ವ್ಯಾಪಾರವನ್ನು ಮತ್ತಿತರ ಆರ್ಥಿಕಸಂಸ್ಥೆಗಳನ್ನು ಆರಂಭಿಸುವ ಕೆಲಸವನ್ನು ಮಾಡಿದರು (ತಕ್ಕಡಿ.೭೧). [ನಿರ್ಯಾತ+ವ್ಯಾಪಾರ]

ನಿರ್ಯಾತಶುಲ್ಕ (ನಾ). ರಫ್ತಾಗುವ ಸರಕಿಗೆ ಕೊಡಬೇಕಾದ ಸುಂಕ : ಸೆಣಬಿನ ಮೇಲಿನ ಮತ್ತು ಸೆಣಬಿನ ವಸ್ತುಗಳ ಮೇಲಿನ ನಿರ್ಯಾತಶುಲ್ಕದ ನಿವ್ವಳಉತ್ಪತ್ತಿಯ ಯಾವುದಾದರೂ ಭಾಗವನ್ನು

. . . ಭಾರತದ ಸಂಚಿತನಿಧಿಯಿಂದ ಕೊಡತಕ್ಕುದು (ಭಾಧಾನ. ೧೫೫).
[ನಿರ್ಯಾತ + ಶುಲ್ಕ]

ನಿರ್ಯಾಪಕಾಚಾರ್ಯ (ನಾ). [ಜೈನ] ಸಲ್ಲೇಖನವ್ರತವನ್ನು ಉಪದೇಶಿಸುವ ಗುರು,—ಆಚಾರ್ಯ : ಆಗಳಾ ಸ್ವಯಂಬುದ್ಧಂ ನಿರ್ಯಾಪಕಾಚಾರ್ಯನಾಗಿ . . . ಮಹಾಬಲನಂ ಜಾತರೂಪಧರನಂ ಮಾಡಿ (ಆದಿಪು. ೨-೫೧ ಪ); "ಸಲ್ಲೇಖನವ್ರತವನ್ನು ಅಂಗೀಕರಿಸುವ ಮುನಿಗಳಿಗೆ ಸಲ್ಲೇಖನವನ್ನು ಉಪದೇಶಮಾಡುವ ಮತ್ತು ಅದನ್ನು ಸಾಧಿಸಿ ಕೊಡುವವರಿಗೆ ನಿರ್ಯಾಪಕಾಚಾರ್ಯರೆಂದು ಹೆಸರು" (ಆದಿಪು. ಕೋಶ). [ಸಂ.]

ನಿರ್ಯಾಮ (ನಾ). ೧. ನಾವಿಕ; ಅಂಬಿಗ. ೨. ಹಡಗಿನ ಚಾಲಕ; ಕರ್ಣಧಾರ : "ನಿರ್ಯಾಮಃ, ಕರ್ಣಧಾರಕಃ—ಈ ೨ ಕೂವಕಂಬಿಗಂ" (ಹಲಾಯು. ೧೦೮-೩೩). [ಸಂ.]

ನಿರ್ಯಾಮಕ (ನಾ). ೧. ಸಹಾಯ ಮಾಡುವವನು; ಸಹಾಯಕ. ೨. = ನಿರ್ಯಾಮ ೨ : "ಪೋತ ನಿರ್ಯಾಮಕಂ ಕರ್ಣಧಾರನೆನಲ್ಕಾ ತುದಿಯ ಕೂಕಂಭದವನಕ್ಕು" (ಮಂಗರಾ. ೧೨೦-೪). [ಸಂ.]

ನಿರ್ಯಾಸ (ನಾ). ೧. ಮರದಿಂದ ಒಸರುವ ಅಂಟು; ಮರದ ರಸ; ಗೋಂದು : ಪರಿರಾಜತ್ಸಹಕಾರಸಾಂದ್ರರಸಮುಂ ಸಪ್ತಚ್ಛದೋದ್ಗಂಧಿಬಂಧುರನಿರ್ಯಾಸಮುಮಾಸ್ರವತ್ಸರಳಸಾರಾಸಾರಮುಂ ಹೇಮತಾಮರಸಾಂಭಃಕಣಮುಂ ನಿವರ್ತನೆ ವರಂ ತಾನಾ ಮದಂ ಸೀಧುಸೀಕರಮಾದುಗ್ರವಸಂತದಂತಿ ಬೆಣಜುತ್ತೊಲ್ದಿರ್ದಗಲ್ದಿರ್ದೊರಂ (ಶಾಂತಿಪು. ೬-೧೩೬); ಕೆಲಬಲದ ಮಾಮರದೊಳಿಪ್ಪ ನಿರ್ಯಾಸಮಂ ತೆಗೆದು ಕಿಱುವೆರಳುಗುರ್ಗೊನೆಯಿಂದೆ ತಿದ್ದಿ ಬರೆದು . . . ಮಂತ್ರಿಸುತೆ ತೊಲಗಿ ಬರುತಿರ್ದಳು (ಜೈಮಿಭಾ. ೩೦-೨೯). ೨. ಮಂದವಾದ ದ್ರವಪದಾರ್ಥ : ತಳಿರಂ ತೂಗಿ ಪರಾಗಮಂ ಪೊರೆದು ಪೂನೀರಂ ತಡಂಗೂಡಿ ಗುಗ್ಗುಳ ನಿರ್ಯಾಸಮನಾಂತು . . ಏಂ ಗಂದಿಗರಂತೆ ಬಂದೊಲೆದುದೋ ಮತ್ತೊಂದು ಮಂದಾನಿಲಂ (ಅರ್ಥನೇ. ೫-೯೭). ೩. ಕುದಿಸಿ ತೆಗೆದ ಅರ್ಕ; ಸಾರ; ಕಷಾಯ. [ಸಂ.]

ನಿರ್ಯೂಹ (ನಾ). ೧. ಏನನ್ನಾದರೂ ತೂಗುಹಾಕುವುದಕ್ಕಾಗಿ ಗೋಡೆಯಲ್ಲಿ ಮಾಡಿದ (ಆನೆಯ ಕೋರೆಗಳಂತಿರುವ) ಗೂಟ ಮೊದಲಾದ ಸಾಧನ. ೨. ತಲೆಯಲ್ಲಿ ಧರಿಸುವ ಆಭರಣ; ಶಿರೋಭೂಷಣ; ಬಾಸಿಂಗ. ೩. ಬಾಗಿಲು; ದ್ವಾರ. ೪. ಸಾರ; ಕಷಾಯ : "ನಿರ್ಯೂಹಃ—ಬಾಗಿಲು, ಮಂಡೆಯೊಳು ಮುಡಿದ ಪೂಸರ, ಕಷಾಯ, ಗಜದಂತ" (ಸಿದ್ಧಾಂತಿ. ೪೨೮). [ಸಂ.]

ನಿರ್ಯೋಗ (ನಾ). ೧. ಸಂಬಂಧವಿಲ್ಲದಿರುವುದು; ಸಂಬಂಧ ತಪ್ಪಿರುವುದು. ೨. ಶೃಂಗಾರ; ಅಲಂಕಾರ. ೩. ದನಗಳನ್ನು ಕಟ್ಟುವ ಹಗ್ಗ. [ಸಂ.]

ನಿರ್ಯೋಚನೆ (ನಾ). ಯೋಚನೆಯಿಲ್ಲದಿರುವಿಕೆ; ನಿಶ್ಚಿಂತೆ : ನಾಗಣ್ಣ ನಿರ್ಯೋಚನೆಯಿಂದಲೇ ಹೇಳಿದ (ಜನಜೀ. ೫೧).
[ನಿರ್- + ಯೋಚನೆ]

ನಿರ್ರನೆ (ಅ). ಒಂದು ಅನುಕರಣಾವ್ಯಯ : ಬರ್ರನೆ ಬೆರೆಯುತ ನಿರ್ರನೆ ನಿಲ್ಲುತ ಚಿರ್ರನೆ ಚೀರುತಲಿ (ಹಮಚ. ೧೯). [ನಿರ್ರ್ + -ಅನೆ]

ನಿರ್ಲಕ್ಷ (ನಾ). ಅನಾದರ; ಉಪೇಕ್ಷೆ : ಯಾವ ಕೆಲಸವೇ ಆದರೂ ನಿರ್ಲಕ್ಷದಿಂದ ಮಾಡಬಾರದು (ರೂಢಿ). 'ನಿರ್ಲಕ್ಷಿಸು' ಪರಾ.
[<ನಿರ್ಲಕ್ಷ್ಯ]

ನಿರ್ಲಕ್ಷಿಸು (ಕ್ರಿ). ಕಡೆಗಣಿಸು; ಲಕ್ಷ್ಯ ಕೊಡದಿರು; ಉಪೇಕ್ಷಿಸು: ಪಶ್ಯವಸ್ತುವಿನ ಹಲವು ಭಾಗಗಳಿಗೆ ಹೆಚ್ಚಿನ ಗಮನವನ್ನೂ ಕಾಲವನ್ನೂ ವಿನಿಯೋಗಿಸಿ ಇತರ ಭಾಗಗಳನ್ನು ನಿರ್ಲಕ್ಷಿಸಬಹುದು (ಶಿಕ್ಷದ. ೨೫೬); ಅವರನ್ನು ನಿರ್ಲಕ್ಷಿಸಿದ್ದೆವು, ಕೊಟ್ಟಿಗೆಗೆ ನಮ್ಮನ್ನು ದೂಡಿದವನು ಇವನೇ ಎಂಬುದು ಎಲ್ಲರ ಅರಿವಿಗೂ ಬಂದಿತ್ತು (ಹಸುಹೊ. ೩೮೭).
[ನಿರ್ಲಕ್ಷ + -ಇಸು]

ನಿರ್ಲಕ್ಷ್ಯ (ಗು). ೧. ಗಮನಕ್ಕೆ ಬಾರದ; ಕಣ್ಣಿಗೆ ಬೀಳದ. (ನಾ). ೨. ಅಸಡ್ಡೆ; ಅನಾದರ; ಉಪೇಕ್ಷೆ : ಹಿಡಿದ ಕಾರ್ಯದಲ್ಲಿ ನಿರ್ಲಕ್ಷ್ಯ ತೋರಿಸುವುದು ಸರಿಯಲ್ಲ(ರೂಢಿ). ೩. ಉದಾಸೀನವಾಗಿರುವ ವ್ಯಕ್ತಿ; ಲಕ್ಷ್ಯವಿಲ್ಲದಿರುವ ವ್ಯಕ್ತಿ : ಮಾತು ಮಾತಿಗೂ ನೀನು ನಿರ್ಲಕ್ಷ್ಯಳಾಗಿ ವರ್ತಿಸುವಿ (ಹಳ್ಳಹಾ. ೧೦೦). ೪. ಕಾಣದಿರುವವನು; ಅಗೋಚರನಾದವನು : ನಿರ್ಲೇಪ ನಿರ್ಜಾತ ನಿರ್ಲಯ ನಿರಾಕಾರ ನಿರ್ಲಕ್ಷ್ಯ (ವಿಕೋಪು. ೫-೭೫).

ನಿರ್ಲಕ್ಷ್ಯಮಾಡು ಕಡೆಗಣಿಸು; ಅಸಡ್ಡೆಮಾಡು : ನನ್ನನ್ನು ತಾವು ನಿರ್ಲಕ್ಷ್ಯ ಮಾಡಿದರೂ ನಾನು ತಮ್ಮ ಆಚಾರ್ಯತ್ವವನ್ನು ಗೌರವಿಸಿದೆನು (ಭೀಷ್ಮಚ. ೨೩). [ಸಂ.]

ನಿರ್ಲಜ್ಜ (ಗು). ೧. ನಾಚಿಕೆಯಿಲ್ಲದ; ಲಜ್ಜೆಯಿಲ್ಲದ. (ನಾ). ೨. ನಾಚಿಕೆಯಿಲ್ಲದವನು; ಲಜ್ಜೆಗೇಡಿ; ನಾಚಿಕೆಗೇಡಿ: ಎಂತುಮಾ ನಿರ್ಲಜ್ಜಂ ಬತ್ತಲಿಗನಪ್ಪ ಸವಣನಲ್ಲಿಗೆವೋಗಿ ಕಂಡು ನುಡಿದು ಕಾಡಿಬರ್ಪಂ ಬಾ ಮಗಳೆ (ವಡ್ಡಾರಾ. ೨೭-೨೧); ಗೋವಳರು ನಿರ್ಲಜ್ಜರದಱೊಳು ನೀವು ಗರುವರು ರಾಜಪುತ್ರರು ಸಾವ ಬಯಸುವನೊಡನೆ ಬಂದಿರಿ (ಕುಪ್ಯಾಸ. ೨-೮೩); ನಿನ್ನನ್ನು ಇದೇ ಕಂಬಕ್ಕೆ ಕಟ್ಟಿಸಿ ಬೆತ್ತದಿಂದ ಹೊಡೆಸುವೆ, ನಿರ್ಲಜ್ಜ (ಶ್ರೀಕಾಂತ. ೩೮). [ಸಂ.]

ನಿರ್ಲಜ್ಜಕ (ನಾ). = ನಿರ್ಲಜ್ಜ ೨ : ಇನಜಂ . . . ವೃಷರಾಶಿಯೊಳ್ ನೆಲಸೆ ವರ್ಜ್ಯಂ . . . ಒಂದಿ ನಿಲೆ ಸೌಮ್ಯಕ್ಷೇತ್ರದೊಳ್ ದುಃಖಿತಂ ಧನಹೀನಂ ಸ್ಖಲಿತಾಂತರಂಗನಸುತಂ ನಿರ್ಲಜ್ಜಕಂ ರಕ್ಷಕಂ (ಚಾತತಿ. ೧೭-೩೨). [ಸಂ.]

ನಿರ್ಲಜ್ಜಿಕೆ (ನಾ). = ನಿರ್ಲಜ್ಜೆ : ಬಿಸುಡಿರೆ ನೀವಜ್ಜ ನಿಮ್ಮ ನಿರ್ಲಜ್ಜಿಕೆಯಂ (ಆಜಿಪು. ೨-೧೦೦). [ನಿರ್ಲಜ್ಜ + -ಇಕೆ]

ನಿರ್ಲಜ್ಜೆ (ನಾ). ನಾಚಿಕೆಯಿಲ್ಲದಿರುವುದು; ಲಜ್ಜೆಗೇಡಿತನ : ದಿಸೆಗಳೇ ವಾಸಸ್ಸು ರಾಜ್ಯಪ್ರಸರಣವು ನಿರ್ಲಜ್ಜೆ ಜಟೆ ರಂಜಿಸುವ ಧೂಳೀ ದೂಸರದ ಗಂಗಾಧರನವೋಲು ಎಸೆವ ಸುತರುಗಳಿಲ್ಲದಿರೆ ಶೋಭಿಸುವುದೇ ಸಂಸಾರವೆಂಬುದು (ಕುಪ್ಯಾಉ. ೪-೧೧೧); ಲಜ್ಜೆಯೆ ಗಣಿಕೆಗೆ ನಾಶ ನಿಮಿತ್ತವು ನಿರ್ಲಜ್ಜೆ ಸತಿಯರಿಗಳಿವು (ಇಂಚಾಪ.೧೮೩-೨). [ಸಂ.ನಿರ್ಲಜ್ಜ]

ನಿರ್ಲಪಿತ (ಗು). ಮಾತಿಲ್ಲದ; ಮೌನದಿಂದ ಕೂಡಿದ : ವಿಫಲವಾದುದೆ ಜನಕಭೂಪನ ತಪದ ಫಲವೆಂದಿಷ್ಟಜನ ನಿರ್ಲಪಿತಚಿಂತಾಭರದ ಲಿರ್ದುದು ಬೆರಳ ಬೆಱಗಿನಲಿ (ತೊರರಾ. ೧-೧೫-೧೭). [ಸಂ.]

ನಿರ್ಲಯ (ನಾ). ಅಂತ್ಯವಿಲ್ಲದವನು; ಲಯವಿಲ್ಲದವನು : ನಿರ್ಲಯ ಲಯಕಾಲ ಸಾಯುಧಕರಾಲ ಕರಾಲ ಕರಾಲಸದ್ಭುಜಾ(ರಾಜಶೇ.೧೩-೫೨).
[ಸಂ.]

ನಿರ್ಲಿಂಗ (ಗು). ಯಾವ ಲಿಂಗಕ್ಕೂ ಸೇರದ; ಪುಲ್ಲಿಂಗ, ಸ್ತ್ರೀಲಿಂಗ ಜಾತಿಗಳೆರಡಕ್ಕೂ ಸೇರದ; ಲಿಂಗರಹಿತ : "ಪುಂಸ್ತ್ರೀತ್ವರಹಿತ; ಲಿಂಗರಹಿತ; ನಿರ್ಲಿಂಗ" (Asexual. ಇಂಕಸಿ). 'ನಿರ್ಲಿಂಗ ಹೂವು' ಪರಾ. [ಸಂ.]

ನಿರ್ಲಿಂಗಜನನ (ನಾ). ಪುರುಷಲಿಂಗ ಸಂಪರ್ಕವಿಲ್ಲದೆ ಆಗುವ ಹುಟ್ಟು,—ಉತ್ಪತ್ತಿ : ಹಲವು ಕೀಟಗಳಲ್ಲಿ ಹಾಗೆ ಗರ್ಭಾಧಾನವಿಲ್ಲದೆ ಹೆಣ್ಣುಕೀಟ ಮರಿಗಳನ್ನು ಉತ್ಪತ್ತಿಮಾಡುತ್ತದೆ. ಇದು ನಿರ್ಲಿಂಗಜನನ (ಕೀಟಬೆ. ೯೫). [ನಿರ್ಲಿಂಗ + ಜನನ]

ನಿರ್ಲಿಂಗಹೂವು (ನಾ). ಲಿಂಗರಹಿತವಾದ ಹೂವು ; ಪುಂಕೇಸರವಾಗಲೀ ಸ್ತ್ರೀಕೇಸರವಾಗಲೀ ಇಲ್ಲದ ಹೂವು : ಎರಡು ಲಿಂಗಗಳಿಲ್ಲದ ಹೂವುಗಳನ್ನು ನಿರ್ಲಿಂಗಹೂವುಗಳೆಂದು (Neuter flower) ಕರೆಯುತ್ತಾರೆ (ಸಸ್ಯಶಾ. ೫೩). [ನಿರ್ಲಿಂಗ + ಹೂವು (<ಪೂ$_2$)]

ನಿರ್ಲಿಖಿತ (ಗು). (ವಿಧಿ) ಬರಹವಿಲ್ಲದ ; ಲಿಖಿತವಿಲ್ಲದ : ನಿರ್ಲಿಖಿತ ಭಾಲ ಕೈವಲ್ಯಕಾಂತಾಲೋಲ ನಿರ್ಲೇಪ ನಿರ್ಜಾತ ನಿರ್ಲಯ (ಏಕೋಪು. ೫-೭೫). [ಸಂ.]

ನಿರ್ಲಿಪ್ತ (ಗು). ೧. ಯಾವುದಕ್ಕೂ ಅಂಟದ ; ಅನಾಸಕ್ತವಾದ: ನಿರ್ಲಿಪ್ತ ಯೋಗಿನಯಂತೆ ಸುಶೀಲೆಯು ಬೆಳೆಯುತ್ತಿದ್ದಳು. (ಸಮಜೀ. ೯೬೬) ; ಬಹುಮಂದಿಗೆ ಆ ದೃಢಸಂಕಲ್ಪವಾಗಲಿ, ನಿರ್ಲಿಪ್ತಜೀವನ ದರ್ಶನವಾಗಲಿ ನಿಲುಕಲಾರದ ಆದರ್ಶವೆಂಬುದರಲ್ಲಿ ಸಂಶಯವಿಲ್ಲ (ಶಿಕ್ಷದ. ೬೬೪) ; ಆ ವಸ್ತು ನಮ್ಮ ನಿರ್ಲಿಪ್ತ ಪರಿಭಾವನೆಯ ಫಲವಾಗಿ ಒಂದು ರೀತಿಯ ಸಂತೋಷವನ್ನು ನೀಡುವುದರಿಂದ ಸುಂದರವಾಗುತ್ತದೆ (ಸೌಂದಸ. ೬೩). (ನಾ). ೨. ಯಾವ ಬಗೆಯ ಸಂಬಂಧವನ್ನೂ ಹಚ್ಚಿಕೊಳ್ಳದವನು ; ಅನಾಸಕ್ತಿಯಿಂದ ಕೂಡಿದವನು ; ಅನಾಸಕ್ತ : ಆಳದಲಿ ನಿರ್ಲಿಪ್ತ ಮೇಲೆ ನಿಯತಿಕ್ಲುಪ್ತ ಲೀಲಾಪ್ರಿಯಂ ಬ್ರಹ್ಮ (ಮಂಕುಕ. ೯೪) ; ಇದನ್ನು ನೀವುಗಳು, ಸೂಕ್ಷ್ಮವಾಗಿ ಹಾಗೂ ನಿರ್ಲಿಪ್ತರಂತೆ ಇದ್ದುಕೊಂಡು ಗಮನಿಸಬೇಕು (ಶಾಂತಲಾ. ೨೨). [ಸಂ.]

ನಿರ್ಲಿಪ್ತತೆ (ನಾ). ಯಾವುದರ ಬಗೆಗೂ ಆಸಕ್ತಿಯನ್ನು ಇಟ್ಟುಕೊಳ್ಳದಿರುವುದು ; ನಿರಪೇಕ್ಷತೆ ; ಅನಾಸಕ್ತಿ : ಲೋಕವ್ಯಾಮೋಹಗಳ ನಡುವೆ ಮಾನವ ನೆಲಸಿದ್ದರೂ ನಿರ್ಲಿಪ್ತತೆ ನಿರಭಿಮಾನಗಳಿಂದ ಬಾಳುತ್ತ, ಕೊನೆಗೆ ಮಹಾದೇವನೊಡನೆ ಸಮರಸವಾಗಿ ಬೆರೆಯುವನು (ಶಕ್ತಿವಿ. ೨) ; ಎಡ್ವಿನ್‌ನ ವ್ಯಕ್ತಿತ್ವದಲ್ಲಿ ಕತೆಯ ಬೌದ್ಧಿಕತೆಯನ್ನು ತೂಗಿಸಿಕೊಂಡು ಹೋಗುವ ನಿರ್ಲಿಪ್ತತೆಯಿಲ್ಲ (ಹೊಸಕ್ತಿ. ೨೬೧). [ಸಂ. ನಿರ್ಲಿಪ್ತತಾ]

ನಿರ್ಲಿಪ್ತವೃತ್ತಿ (ನಾ). ಯಾವುದಕ್ಕೂ ಅಂಟಿಕೊಳ್ಳದಂತೆ ಇರುವ ವೃತ್ತಿ ; ಅನಾಸಕ್ತವಾಗಿರುವಿಕೆ : ಮಾನವನಿಗೆ ನಿರ್ಲಿಪ್ತವೃತ್ತಿಯಿಂದ ಅವನ ಅಂತರಂಗದ ವಿಚಾರ-ಭಾವನೆಗಳ ಸಮೀಕ್ಷೆ ಶಕ್ಯವಾಗಕೊಡಗುತ್ತದೆ (ಕರ್ಣಾಟ. ೮). [ನಿರ್ಲಿಪ್ತ + ವೃತ್ತಿ]

ನಿರ್ಲೇಪ (ಗು). ೧. ಯಾವುದಕ್ಕೂ ಅಂಟಿಕೊಳ್ಳದ : ಅಯ್ಯಾ ನಿಮ್ಮ ಶರಣರ ನಿಲವ ಸ್ವರ್ಗ ಮರ್ತ್ಯ ಪಾತಾಳದೊಳಗೆ ಬಲ್ಲವರಿಲ್ಲವಯ್ಯಾ ಅಘಟಿತಘಟಿತರು ಅಖಂಡಮಹಿಮರು ನಿಜದಲ್ಲಿ ನಿರ್ಲೇಪ ಭಾವುಕರು (ಬಸಹೆ. ೬೯-೧೯೮). (ನಾ). ೨. ಯಾವುದಕ್ಕೂ ಅಂಟಿಕೊಳ್ಳದವನು ; ಬಂಧಗಳಿಂದ ದೂರನಾದವನು : ಕರ್ಮ ತಾನೇ ನಾದಡಾಗಲಿ ನಿರ್ಮಮತೆಯಲಿ ಮಾಡಿ ನಮ್ಮಲಿ ನಿರ್ಮಿಸಲು ಕಲಿಪಾರ್ಥನೀ ನಿರ್ಲೇಪನಹೆಯೆಂದ (ಕುಮ್ಯಾಭೀ. ೬-೫೩) ; ಕಲ್ಲ ರಾಶಿಯ ಮೇಲೆ ನಿಂದನು ಮತ್ತೆ ತನ್ನಯ ಲೀಲೆಯಲಿ ನಿರ್ಲೇಪನಿದ್ದನು ನಗುತ ಪ್ರಭುರಾಯ (ಪ್ರಭುಲೀ. ೧೩-೧೮) ; ಪಾದರಸ ಕರತಳದಲ್ಲಿರುತದನಂಟದಂದದಿ ತಿಳಿವಿಗರು ಸಂಸೃತಿಯಲಿರೆ ನಿರ್ಲೇಪರು (ಗಗತಾ. ೧೫-೨೫). [ಸಂ.]

ನಿರ್ಲೇಪಕ (ನಾ). ಯಾವುದಕ್ಕೂ ಅಂಟಿಕೊಳ್ಳದವನು ; ಯಾವುದರಲ್ಲೂ ಆಸಕ್ತಿಯಿಲ್ಲದವನು : ಸಂಚಲವಿಲ್ಲದೆ ನಿರೀಕ್ಷಿಸಲು ಪಂಚ ಪಂಚೀಕೃತಿಯ ಪ್ರಪಂಚ ಪರಿಹರವಾಗಿ ನಿಷ್ಪ್ರಪಂಚ ನಿರ್ಲೇಪಕನಾದೆನು ಕಾಣಾ (ಸಿದ್ಧೇವ. ೩೩-೮೫). [ಸಂ.]

ನಿರ್ಲೇಪಗೈ (ಕ್ರಿ). ಯಾವುದಕ್ಕೂ ಅಂಟಿಕೊಳ್ಳದಂತೆ ಇರು ; ದೂರಮಾಡು : ಈ ಪರಿಯನರಿದೆರಡನೂ ನಿರ್ಲೇಪಗೈದನೆ ಮುಕ್ತನು (ಬಿಜ್ಜಪು. ೮೬-೪೭). [ನಿರ್ಲೇಪ + ಗೈ (<ಕೆಯ್$_1$)]

ನಿರ್ಲೇಪಿ (ನಾ). ೧. ಯಾವ ಲೇಪವೂ ಇಲ್ಲದವನು ; ಪರಮಾತ್ಮ. ೨. ಪರಮಾತ್ಮನಲ್ಲಿ ಒಂದಾಗುವವನು,—ಐಕ್ಯವಾಗುವವನು; ಸಾಯುಜ್ಯ ಹೊಂದುವವನು: ಗೊಹೇಶ್ವರಲಿಂಗದಲ್ಲಿ ನಿರ್ಲೇಪಿಯಾದಲ್ಲದಿಲ್ಲ ಕಾಣಾ (ಅವಚಂ. ೨೩೬-೧೦೭೪). [ಸಂ. ನಿರ್ಲೇಪಿನ್]

ನಿರ್ಲೋಟಣ (ನಾ). ಕೆಡಹುವವನು ; ನಾಶಮಾಡುವವನು : ಏಕಾಂಗವೀರ ಸಂಗ್ರಾಮಧೀರ ಪೊಂಬುಚ್ಚ ನಿರ್ದ್ಧಾಟಣ ಸಾವಿಮಲೆ ನಿರ್ಲ್ಲೋಟಣ ವೈರಿಕಾಳಾನಳ (ಎಕ. II, ೧೪೩-೩೮ ; 1131). [<ಸಂ. ನಿರ್ಲೋಟನ]

ನಿರ್ಲೋಟಿಸು (ಕ್ರಿ). ಸೀಳು ; ಖಂಡತುಂಡು ಮಾಡು ; ನಾಶಮಾಡು : ಆ ಚಪಳಂ ಲಪನಕರತಳ ವಿಕೃತಿಸಂಜ್ಞೆಗಳಿಂ ಗೌತಮಾಖ್ಯಾನ ಮನವಜ್ಞೆಗೆಯ್ದು ಮತ್ತಂ ವಚನನಿಚಯದಿಂ ನಿರ್ಲೋಟಿಪ ಪಾಟವ ಮನವಳಂಬಿಸಿ (ವರ್ಧಪು. ೧೬-೯ ವ) ; ಬೇಟದಲಿ ಮೂವಣ್ಣ ದಾಬೆಯ ಕೂಟದಲಿ ಕುಱುಹಾಗಿ ಮಿಗೆ ನಿರ್ಲೋಟಿಸುವ ನಿಜದಿಟ್ಟಿಬೊಮ್ಮವಿದು (ಕುಮ್ಯಾಸ. ೯-೧೭); ಕೂಟಸ್ಥ ನಾನು ನಿರ್ಲೋಟಿಸುವೆ ಕಲ್ಪಶತಕೋಟಿ ಪ್ರಳಯಯುಗಂಗಳನು ಲೀಲೆಯಲಿ (ಲಕ್ಷ್ಮಭಾ. ೬-೨-೩೬). [ನಿರ್ಲೋಟಣ + -ಇಸು$_3$]

ನಿರ್ಲೋಭ (ನಾ). ೧. ಆಸೆಯಿಲ್ಲದಿರುವುದು; ಲೋಭರಹಿತತೆ. ೨. ಆಸೆ ಮಾಡದ ವ್ಯಕ್ತಿ ; ಲೋಭಕ್ಕೆ ಒಳಗಾಗದವನು. [ಸಂ.]

ನಿರ್ಲೋಭಿ (ನಾ). ಲೋಭವಿಲ್ಲದವನು. [ಸಂ. ನಿರ್ಲೋಭಿನ್]

ನಿರ್ಲ್ವಯನಿ (ನಾ). ಹಾವಿನ ಪೊರೆ. [ಸಂ. ನಿರ್ಲ್ವಯನೀ]

ನಿರ್ವಂಗ (ನಾ). (?) : "ಉರದಿಂದ ಮೇಲಿಪ್ಪ ಸುಟಿ ರೋಚಮಾನ ನಡುಗೊರಲ ಸುಟಿ ದೇವಮಣಿ ತಳಹೀನನೇ ಕಾಂಡ ಖುರ ಕಂಠಕಟಿಯಡಿಸ್ತನಿ ಶೃಂಗಿಯಹ ಕಷ್ಟ ತೊಲಗೆ ನಿರ್ವಂಗನಕ್ಕುರ್" (ಮಂಗರಾ. ೮೩-೨೦). [?]

ನಿರ್ವಂಚಕ (ಗು). ೧. ವಂಚನೆಯಿರದ ; ನಿಷ್ಕಪಟವಾದ : ಭಕ್ತನಾದಡೆ ನಿರ್ವಂಚಕಭಾವದಿಂದ ತ್ರಿವಿಧಕ್ಕೆ ತ್ರಿವಿಧಪದಾರ್ಥವನರ್ಪಿಸಬೇಕು (ಅಖಂಡೇ. ೮೦-೬೮). (ನಾ). ೨. = ನಿರ್ವಂಚನೆ : ನಾವು ಶರಣರೆಂದು ಒಪ್ಪವಿಟ್ಟು ನುಡಿವ ಅಣ್ಣಗಳಿರಾ . . . ಸತಿ ಸುತರಿಗೆ ಸದಾಚಾರ ಸನ್ಮಾರ್ಗವ ತೋಱಿ ನಿರ್ವಂಚಕದಿಂದ ಅಱಿದಾಚರಿಸಬಲ್ಲಾತನೇ ಅಚ್ಚಶರಣ ನೋಡಾ (ಮಡಿಮಾ. ೬-೬); ಪಂಚವದನನ ಭಕ್ತರಿಗೆ ನಿರ್ವಂಚಕದೊಳರ್ಥಂಗಳೆಲ್ಲವನಂಚಿತಪ್ರಿಯದಿಂದವಾರಾಧಿಸಿ (ಬಸಪು. ೨೮-೫). ೩. ವಂಚನೆ ಮಾಡದವನು; ಪ್ರಾಮಾಣಿಕ; ನಿಷ್ಕಪಟ: ವಂಚಿಸುವ ಸತಿ ಸುತ ಬಂಧುಗಳು ಮೊದಲಾದ ಲೋಕವ ನಂಬಿ ನಿರ್ವಂಚಕರಪ್ಪ ಗುರುಲಿಂಗ ಜಂಗಮವ ವಂಚಿಸಿ ನರಕಕ್ಕಿಳಿವರನೇನೆಂದೆನಯ್ಯ (ಉರಿಜಿ. ೧೧೨-೯೮); ಸಾಮಾನ್ಯರಿಗೆ ಭಾವಿಸುವಡತಿನಿರ್ವಂಚಕನು ಸಕಲಪ್ರಮಥರೊಳಗೆ (ಬಸಪು.೧-೩೧). [ಸಂ.]

ನಿರ್ವಂಚಕತ್ವ (ನಾ). = ನಿರ್ವಂಚನೆ : ಸತ್ಯಶುದ್ಧಕಾಯಕವ ಮಾಡಿ ನಿರ್ವಂಚಕತ್ವದಿಂದ ಸಮರ್ಪಿಸಿ ಅತಿಭೃತ್ಯನಾಗಿ ಆಚರಿಸುವರೇ ಲಿಂಗಾಂಗಿಗಳು ನೋಡಾ (ಮಡಿಮಾ. ೧೧-೧೩); ನಿರುತದಲಿ ಮಾಡುವ ಬಸವವಿಭುಗರರೆ ತನ್ನೊಡಲೆಯ್ದೆ ಭಕ್ತಿಯೆ ಪರಿಕಿಪಡೆಯಿನ್ನಾರೊಳರು ನಿರ್ವಂಚಕತ್ವದಲಿ (ಬಸಪು. ೮-೨೨). [ಸಂ.]

ನಿರ್ವಂಚನೆ (ನಾ). ವಂಚನೆಯಿಲ್ಲದಿರುವುದು ; ನಿಷ್ಕಪಟತೆ : ಎಮ್ಮ ನಲ್ಲನಪ್ಪ ನಲ್ಲರಿಗೆ ನಲ್ಲನು ವಂಚನೆಗೆ ನೆರೆಯನು ನಿರ್ವಂಚನೆಗೆ ನೆರೆವನು (ಉರಿವ. ೧-೧) ; ವಿಶ್ವಾಸವೇ ಭಕ್ತಿ ಗುರುಲಿಂಗಜಂಗಮ ಒಂದೆಂದಱಿವುದೇ ಜ್ಞಾನ ತ್ರಿವಿಧದಲ್ಲಿ ನಿರ್ವಂಚನೆಯೇ ವೈರಾಗ್ಯ ಪ್ರಸಾ

ದವೇ ಮುಕ್ತಿ (ಉರಿಶೆ. ೧೨೪-೧೧೪); ಗೊತ್ತಿದ್ದರೆ ನಿರ್ವಂಚನೆಯಿಂದ ಉತ್ತರ ಕೊಡ್ತೀನಿ (ವೀರಯೋ. ೮೩). [ಸಂ. ನಿರ್ವಂಚನಾ]

ನಿರ್ವಂದ (ನಾ). ೧. ಬಲಾತ್ಕಾರ; ಒತ್ತಾಯ; ನಿರ್ಬಂಧ: ಮದಾಂಧಗಂಧಸಿಂಧುರದ ಬಟಾಯಂ ನಿರ್ವಂದದಿಂ ತಗುಳ್ಳುದುಂ (ಪಂಪಭಾ. ೮-೩೭ ಪ); ತಂದೆ ಕಡಂಗಿ ಕಲ್ಪಿಸುವ ಕಲ್ಪಿಯನೊಲ್ಲದೆ ತಾಯ್ಮಗುಟ್ಟು ನಿರ್ವಂದದಿನೆಯ್ದೆ ಬಗ್ಗಿಸುವ ಬಗ್ಗಣೆಗಳ್ಳದೆ . . . ದಕ್ಕುಂದಲೆವಾಯ್ವರ್ (ಸುಕುಮಾ. ೨-೮). ೨. ಹಟ; ಛಲ: ಒಂದು ಪರ್ವದ ಶಿಳಾತಳದೊಳಿರ್ವರುಂ ಕರ್ವಂ ಬಿತ್ತಿ ನಿರ್ವಂದದೆ ನೀರ್ಪೊಯ್ಯುತ್ತಿರೆ (ಸೇಮಿಪು. ೧೪-೧೦೩ ಪ). ೩. ಅತಿಶಯವಾದ ಪ್ರಯತ್ನ: ಸರ್ವಾರ್ಥಸಿದ್ಧಿಗಿದು ದಲಗುರ್ವಿನ ನಿಶ್ರೇಣಿಯೆಂಬ ತೆಱದೇಱಿದನಂದುರ್ವುಗಿಡೆ ಮೋಹನೀಯಂ ನಿರ್ವಂದದೆ ಬಟಾಯಮುಪಶಮಶ್ರೇಣಿಯುಮಂ (ಚಂದ್ರಪು. ೧೧-೨೫). [<ಸಂ. ನಿರ್ಬಂಧ]

ನಿರ್ವಂದಿ (ನಾ). ಅಗುಳಿ; ಕೀಲು (?): ತಂಕುವೆಂದುಕೊಱಡುಂ ನಿ(ಗಿ)ರ್ವಂದಿ ಯುಮಕ್ಕುಂ (ಶಪುದ. ಪು. ೨೬೭ ಅಡಿಟಿ) 'ಗಿರ್ವಂದಿ' ಪರಾ. [?]

ನಿರ್ವಂಶ (ಗು). ೧. ಮಕ್ಕಳಿಲ್ಲದ; ಸಂತಾನರಹಿತ. (ನಾ). ೨. ಸಂತಾನವಿಲ್ಲದುದು; ವಂಶವೇ ಇಲ್ಲದಂತಾದುದು: ಹಂಸಡಿಬಿಕರ ಪೌಂಡ್ರಕರ ನಿರ್ವಂಶವೆನೆ ಸವಱಿದೆವು (ಕುಪ್ಯಾಸ. ೨-೨೪); ತನಗಿದಿರಾದ ಮನ್ನೆಯರ ಕೊತ್ತಳಂದುಳಿದು ನಿರ್ವಂಶಮಂ ಮಾಡುವೆನೆನುತ್ತ . . . ದಾಳಿಯಿಟ್ಟು (ಸಮ್ಯಕಾ. ೨-೯). ೩. ಸಂತಾನವಿಲ್ಲದ ವ್ಯಕ್ತಿ; ವಂಶವೇ ಉಳಿಯದಂತೆ ಸಂಪೂರ್ಣವಾಗಿ ನಾಶಹೊಂದಿದ ವ್ಯಕ್ತಿ: ಮಹಾಕಾಳನೆನ್ನ ವೈರಿಯಪ್ಪ ಸಾಕೇತಪತಿಯಂ ನಿರ್ವಂಶಂ ಮಾಟ್ಪಲ್ಲಿಗೀತನೆನಗೆ ಸಹಾಯನಾ(ವಾ)ಗಲ್ತಕ್ಕಂ (ಚಾವುಂಪು. ೨೯೦); ನಿನಗೆ ಮಕ್ಕಳೇ ಆಗದೆ ನಿರ್ವಂಶಳಾಗಿ ಹೋಗು . . . ಎಂದು ಮುಂತಾಗಿ ಕರ್ಣಕಠೋರವಾಗಿ ಶಪಿಸಿದನು (ಮಂಜುಕ. ೩೨). [ಸಂ.]

ನಿರ್ವಕ್ರ (ಗು). ೧. ಕೊಂಕಿಲ್ಲದ; ನೇರವಾದ. ೨. ಕಡುಮೋಸಗಾರಿಕೆಯ; ಮಹಾಕಪಟದ: ಸಂತತಾಘಸಹಾಯಿಂಗ ನನತ್ರಾಂತ ದುರಹಂಕಾರಯಾತನನನಂತನಿರ್ವಕ್ರಾಪರಾಧಿಯನಧಿಕಕೋಪಿಯನು . . . ಎನ್ನಂ ಸಲಹು (ಬಸಪು. ೨೨-೫೦); ಕೊಡದಿರ್ ತಪಿಪಂಬನಿಂದು ನಿರ್ವಕ್ರಪರಕ್ರಮಾಕ್ರಮಿತ ವಿಕ್ರಮವಿಕ್ರಮ ರಾಜಶೇಖರಾ (ರಾಜಶೇ. ೬-೧೧೧). (ನಾ). ೩. ನೇರವಾಗಿರುವಿಕೆ; ನಿಷ್ಕಪಟತೆ; ಪ್ರಾಮಾಣಿಕತೆ: ಅವನಿಯೆಲ್ಲವನಾಳನೇ ನಿರ್ವಕ್ರದಿಂದಾತ (ಬಸಪು. ೫-೮). [ಸಂ.]

ನಿರ್ವಚನ (ನಾ). ೧. ಮಾತು; ನುಡಿ. ೨. ಸಾರವತ್ತಾದ ಮಾತು,—ನುಡಿ; ಸಾರೋಕ್ತಿ: ಪ್ರಭುದೇವರ ಹತ್ತುವಚನಕ್ಕೆ ಅಜಗಣ್ಣನ ಐದುವಚನ ಅಜಗಣ್ಣನ ಐದುವಚನಕ್ಕೆ ಕೊಡಲ ಚನ್ನಸಂಗಮದೇವಾ ಮಹಾದೇವಿಯಕ್ಕಗಳ ಒಂದು ನಿರ್ವಚನ [ಪಾಠಾಂ. ಒಂದೇ ವಚನ] (ಚನ್ನವ. ಕ ೨೬೧-೫೬೩). ೩. ವಿಶೇಷವಾದ ವಿವರಣೆ; ಸಾರವತ್ತಾದ ವರ್ಣನೆ: ವಿಮಲಸೂರಿಯ ಈ ಪಾತ್ರಕಲ್ಪನೆಯನ್ನು ನಾಗಚಂದ್ರನು ತನ್ನವಾಗಿ ಮಾಡಿಕೊಂಡು ಅದರ ನಿರ್ವಚನ ಮಾಡಿದ್ದಾನೆ (ಕಸಾಚ. ೧೨೯); ವೈದ್ಯಕ ಈ ನಿರ್ವಚನ ನನ್ನ ಉತ್ತಮ ಮಸ್ತಿಷ್ಕಾರ್ಧಗೋಲಗಳನ್ನು ಬಡಿದಬ್ಬಿಸಿತು (ಧೇಕನ್ಯ. ೯); ಜೀವ, ಬ್ರಹ್ಮ . . . ಪ್ರಪಂಚ ಈ ಪದಾರ್ಥಗಳ ನಿರ್ವಚನ ಅದರಲ್ಲಿದೆ ಎಂಬದೆ ಎರಡೂ ಗ್ರಂಥದ ಸೋದರಸಾದೃಶ್ಯ ಬಲ್ಲವರಿಗೆ ತಾನೇ ಹೊಳೆಯುವುದು (ಮಸಾಹಿ. ೬). ೪. ನಿಷ್ಪತ್ತಿ; ನಿರುಕ್ತಿ: ಪೂರ್ವಪಕ್ಷ, ಉತ್ತರಪಕ್ಷ . . . ನಿರ್ವಚನ, ನಿದರ್ಶನ, ಅನಾಗತವೀಕ್ಷಣ ಇವುಗಳ ಅರ್ಥಪ್ರಯೋಗಗಳು ಶಾಸ್ತ್ರಗ್ರಂಥಗಳಲ್ಲಿ ವಿಧವಿಧವಾಗಿವೆ (ಭಾರದ. ೩೬೯). ೫. ಸೂತ್ರೀಕರಣ: ಈ ಭಾಗದಲ್ಲಿ, ಪ್ರಸಂಗೋಚಿತವಾಗಿ ಅನ್ಯಥಾ ನಿರ್ವಚನ ಮಾಡಬೇಕಾಗಿದ್ದ ಹೊರತು (ಭಾಧಾನ. ೧೫೦). ೬. ಲಕ್ಷಣ ನಿರೂಪಣೆ. ೭. ಸುಮ್ಮನಿರುವುದು; ಮೌನ. [ಸಂ.]

ನಿರ್ವಚಿಸು (ಕ್ರಿ). ೧. ಹೇಳು; ವಿವರಿಸು: ಸರ್ವೋವೈ ರುದ್ರ ಎನುತ್ತುರ್ವುತೆ ವಿಶ್ವಾಧಿಕಃ ಪಶೂನಾಂ ಪತಿಯೆಂದೊರ್ವಂಗೆರಡುಂ ಬಗೆಯಂ ನಿರ್ವಚಿಪಾಗಮದ ನುಡಿಗಿದೇ ತಾತ್ಪರ್ಯಂ (ವೃಷಪಿ. ೩೫-೨೫). ೨. ಸೂತ್ರೀಕರಿಸು. [ನಿರ್ವಚನ+-ಇಸ್ಸು]

ನಿರ್ವದಿಸು (ಕ್ರಿ). ಚೆನ್ನಾಗಿ ತಿಳಿಯುವಂತೆ ಹೇಳು,—ಬೋಧಿಸು: ಪೂರ್ವಾಪರವೈರವಿಲ್ಲದ ಶಾಸ್ತ್ರದಪೂರ್ವಾರ್ಥವ ಭಸ್ಮತತಿಗೆ ನಿರ್ವದಿಪಂತುಸುರ್ವುಪದೇಶಕರಾದ ಸರ್ವರನಭಿನುತಿಸುವೆನು (ಪ್ರಭಂಜ. ೩-೪). [ನಿರ್ವದ್ಯ (P ←ಸಂ. ನಿರ್ವದ್)+-ಇಸ್ಸು]

ನಿರ್ವನಿಸು 'ನಿರ್ನವಿಸು' ನೋ.

ನಿರ್ವಪಣ (ನಾ). ೧. ಸುರಿಯುವುದು. ೨. ಚಿಮುಕಿಸುವುದು. ೩. ದಾನವಾಗಿ ಕೊಡುವುಮ. ೪. ಕೊಡುಗೆ; ದಾನ: "ತ್ಯಾಗಃ . . . ನಿರ್ವಪಣಂ, ಅಪವರ್ಜನಂ, ಅಂಹತಿಃ—೧೩ ಕೊಡುವುದಕ್ಕೆ ಹೆಸರುಗಳು" (ಸಿದ್ಧಾಂತಿ. ೨೨೨). ೫. ಪಿಂಡದಾನ. [ಸಂ.]

ನಿರ್ವಯಲು, ನಿರಬಯಲು, ನಿರವಯಲು, ನಿರ್ಬಯಲು, ನಿರ್ಬೈಲು (ನಾ). ರೂಪಿಲ್ಲದಿರುವುದು; ಆಕಾರವಿಲ್ಲದಿರುವುದು; ನಿರಾಕಾರ; ಶೂನ್ಯ: ನಿಜವಡಗಿದ ರೂಪು ನಿರ್ವಯಲ ಸ್ಥಾನ ನಡೆಲಿಂಗ ಜಂಗಮ (ಬಸಪೆ. ೪೧೫); ಪರಮಾರ್ಥದಲಿ ತಾನೇಕೈಕನಾದ ಹೆನೆಂದೆನುತಲಜಗಣ್ಣ ನಿರ್ವಯಲ ಸ್ವೀಕರಿಸಿದೊಡೆ (ಪ್ರಭುಲೀ. ೧೨-೧೧); ಬಯಲ ಪುರುಷ ಬಯಲಾಕಾರ . . . ಬಯಲಾಧಾರನೆ ಮತಿದೋಱಿ ನಿಚ್ಚ ನಿರ್ವಯಲ ನಿರಂಜನಸಿದ್ಧ (ಭರಚ. ೩೭-೧). **ನಿರಬಯಲು**: ನಿದ್ದಿಗಣ್ಣಲಿ ಕಂಡ ಸುದ್ದಗುರುವಿನ ಪಾದ ಎದ್ದು ನೋಡಿದರ ನಿರಬಯಲ ಗುರುರಾಯ ರುದ್ದರನ ಮಯಿಮೆ ತಿಳಿಯಾವ (ಗರತಿ. ೪೦). **ನಿರವಯಲು**: ನಿತ್ಯನಜ್ . . . ಚರಲಿಂಗ ಹಸ್ತದೊಳು ನಿರವಯಲ ನಿಜಸಮಾಧಿ (ಪ್ರೌಢರಾ. ೨-೨೧); ಶಿಖಿ ಕರ್ಪುರ ಸಂಯೋಗದಂತೆ ಪರತತ್ವವನೊಡಗೂಡಿದ ಮಹಾತ್ಮನ ಕಾಯ ನಿರವಯಲಪ್ಪುದು (ಅಖಂಡೇ. ೧೧೦-೫೨). **ನಿರ್ಬಯಲು**: ಅರ್ಥದಲ್ಲಿ 'ನಿರ್ಬಯಲು' ಎಂಬುದು ಅಭಾವಾತ್ಮಕ ಮಾತು (ಪರಪ. ೧೬). **ನಿರ್ಬೈಲು**: ಪರವಸ್ತುವಿನಲ್ಲಿ ಬೆರೆತು, ತಮ್ಮ ಪ್ರತ್ಯಕ್ತಿತ್ವವನ್ನು ಕಳೆದುಕೊಳ್ಳುವದೇ 'ಶೂನ್ಯ' ಇಲ್ಲದೆ 'ನಿರ್ಬೈಲು' ಎಂಬುದು ಅವರ ಹೇಳಿಕೆ (ಪರಪ. ೧೬). ನಿರ್ವಯಲಾಗು, ನಿರವಯಲಾಗು = ಐಕ್ಯವಾಗು; ಲೀನವಾಗು; ಸೇರು: ಇಂದಿನಲ್ಲಿ ಎನ್ನನೆಡೆಗೊಂದ ಅಹಂಕಾರ ನಿರ್ವಯಲಾಯಿತ್ತು (ಬಸಹೆ. ೭೯-೨೭೭); ಗೊತ್ತಳಿದು ಲಿಂಗದೊಳ್ ನಿಬ್ಬೆಱಗಿ ನಿಂದ ನಿರ್ವಯಲಾದನು (ಪ್ರೌಢರಾ. ೨-೨೦); ಮಿಡಿವಿಲ್ಲಿನೊಳಗೆ ಲಿಂಗವ ನೆಚ್ಚು ಆ ಲಿಂಗದೊಡನೆ ನಿರವಯಲಾದರು (ಘನವ. ೩೨-೨೩). ಗ್ರಾ 'ಬಯಲು' ಎಂಬುದು 'ಶೂನ್ಯ'ವನ್ನು ಸೂಚಿಸುವ ಒಂದು ಪದ. ವೀರಶೈವ ಸಾಸಹಿತ್ಯದಲ್ಲಿ ಈ ಶಬ್ದದ ಪ್ರಯೋಗ ಅನೇಕ ಕಡೆಗಳಲ್ಲಿ ಬರುತ್ತದೆ. 'ನಿರ್-' ಎಂಬ ಉಪಸರ್ಗವು 'ವಿಶೇಷವಾಗಿ' ಎಂಬ ಅರ್ಥದಲ್ಲಿ ಈ ಪದಕ್ಕೆ ಸೇರಿ ಈ ರೂಪವಾಗಿರುವಂತೆ ಕಂಡು ಬರುತ್ತದೆ – 'ಬಟ್ಟಬಯಲು' ಎಂಬರ್ಥ ಬರುವಂತೆ. [ನಿರ್-+ಬಯಲು(<ಬಯಲ್$_2$)]

ನಿರ್ವರ (ನಾ). ಬಿರುಸು; ಜೋರು; ತೀವ್ರತೆ: ಒರ್ವರ ದೇಹಂಗಳ ದುರ್ವಹ ಸಂಘಟ್ಟನಂಗಳಂ ಹಾರಂಗಳ್ ನಿರ್ವರದೆ ಪಱಿದು

ಬೀಟ್ಟೊಡೆ ಸರ್ವಗ್ರಂ ಚರಿಸಬಾರದಿರ್ದುದು ಮಾರ್ಗಂ (ಬಾಧಪು. ೩-೨೩). 'ನಿಬ್ಬರ' ಪರಾ. [<ಸಂ. ನಿರ್ಭರ]

ನಿರ್ವರಂ (ಅ). ರಭಸವಾಗಿ ; ಜೋರಾಗಿ : 'ನಿರ್ವರಂಪೊಯ್' ಪರಾ. [<ನಿರ್ವರ]

ನಿರ್ವರಂಪೊಯ್ (ಕ್ರಿ). ರಭಸವಾಗಿ ಹೊಡೆ ; ಬಿರುಸಾಗಿ ಬಡಿ: ಮಿಟ್ಟುದೇವತೆಯಮೊತ್ತರಿಸುವ ಮಾರಿಯುಮೆಕ್ಕೆಕ್ಕೆಯಿನಿಕ್ಕುವ ಮುಸಲದಂಡದಂತೆ ತೊತ್ತಟದುಟಿದು ಸುತ್ತಿ ಸುಟಿದೊಗೆದೊರಸುವ ಕಾಲಕಂಭಂಗಳೊಳಮುಬ್ಬರಮೆತ್ತಿ ನಿರ್ವರಂ ಪೊಯ್ವ ತಾಳವಟ್ಟದೊಳಂತಿವಳಿವಟ್ಟಮಾದ ತೇರ ತೆಕ್ಕೆಗಳ್ . . . ನುರ್ಗುನುಜಿಯಾಗಿರ್ದುವು (ಅನಂಪು. ೧೪-೬ ಪ). [ನಿರ್ವರಂ + ಪೊಯ್$_1$]

ನಿರ್ವರ್ಣ (ಗು). ಬಣ್ಣವಿಲ್ಲದ ; ವರ್ಣರಹಿತವಾದ : "ನಿರ್ವರ್ಣ, ವರ್ಣಶೂನ್ಯ" (Achromatic. ಪಾರಿಸಿ. ೧). [ಸಂ.]

ನಿರ್ವರ್ಣನ (ನಾ). ೧. ನೋಡುವುದು ; ನೋಟ. ೨. ಲಕ್ಷ್ಯವಿಟ್ಟು ಗಮನಿಸುವುದು ; ಸೂಕ್ಷ್ಮವಾಗಿ ನೋಡುವುದು: "ನಿರ್ವರ್ಣನಂ . . . ಈಕ್ಷಣಂ—ಇ ನಿರೀಕ್ಷಿಸುವಿಕೆ, ಚೆನ್ನಾಗಿ ನೋಡುವಿಕೆ" (ಸಿದ್ಧಾಂತಿ. ೩೬೬). ೩. ವಿವರಿಸುವುದು. 'ನಿರ್ವರ್ಣಿಸು' ಪರಾ. [ಸಂ.]

ನಿರ್ವರ್ಣಿಸು (ಕ್ರಿ). ೧. ಚೆನ್ನಾಗಿ ನೋಡು ; ಗಮನವಿಟ್ಟು ಈಕ್ಷಿಸು : ಅದನ್ನು ನಿರ್ಮಿಸುವವರ ಮನೋವೃತ್ತಿಯನ್ನು ನಾವು ಲೆಕ್ಕಿಸಬೇಕು . . . ಚಿತ್ರಲೇಖನಲಾಲಸೆಯಲ್ಲಿಯೂ ಅದನ್ನು ನಿರ್ವರ್ಣಿಸುವಾಗಲೂ ಅವರು ಸ್ಥಿರರಿರುವರೇ, ಅಸ್ಥಿರರಾಗುವರೇ ? ಇದನ್ನೂ ನಾವು ಯೋಚಿಸಬೇಕು (ನಿಂಭ. ೩೮). ೨. ಚೆನ್ನಾಗಿ ವಿವರಿಸು ; ವರ್ಣಿಸು : ಪ್ರಾಕೃತಕರ್ಣಾಟಕವಾಕ್ಯಾರ್ಥತತ್ವನಿಶ್ಚಿತ್ತಿಯಾಗೆ ನಿರ್ವರ್ಣಿಸಿದಂ (ಕವಿಚ. I. ೨೮೬, ಪಂಚಾಸ್ತಿಕಾಯ ಪ್ರಾಭೃತವೃತ್ತಿ). [ನಿರ್ವರ್ಣನ + -ಇಸು$_3$]

ನಿರ್ವರ್ತಕ (ಗು). ೧. ಕರ್ತವ್ಯವನ್ನು ನೆರವೇರಿಸುವ,—ಮುಗಿಸುವ : ಈತಂ ಹೀನಾಂಗನಾದೊಂ ಇವರಿಂದ ಶಕುನಾದಿಗಳು ಮುನ್ನು ಪಾರ್ಜಿತಶುಭಾಶುಭಕರ್ಮಪರಿಪಾಕಪ್ರಕಾಶನಸಾಧನಂಗಳಲ್ಲದೆ ನಿರ್ವರ್ತಕಸಾಧನಂಗಳಲ್ಲವೆಂದು ಎಲ್ಲರುಂ ಮೆಚ್ಚೆ (ಚಾವುಂಪು. ೬೩). (ನಾ). ೨. =ನಿರ್ವರ್ತನ. ೩. ಕರ್ತವ್ಯವನ್ನು ಮುಗಿಸುವವನು,—ಪೂರ್ಣಗೊಳಿಸುವವನು. [ಸಂ.]

ನಿರ್ವರ್ತನ (ನಾ). ಕರ್ತವ್ಯವನ್ನು ಮುಗಿಸುವುದು,—ಪೂರೈಸುವುದು : ತನ್ಮುನಿಯುಗಳಂ ವೃಕ್ಷಮೂಲನಿಯೋಗನಿರ್ವರ್ತನಾನಂತರಂ ಯೋಗ್ಯಕಾಲಾಪೇಕ್ಷೆಯಿಂ ಕಾಂತಾರಭಿಕ್ಷೆಗೆ ಬರುತಿರೆ (ಸಂರಾಮಾ. ೨-೫೨ ಪ). [ಸಂ.]

ನಿರ್ವರ್ತನಾಧಿಕರಣ (ನಾ). [ಜೈನ]ಅಜೀವಾಧಿಕರಣಾಸ್ರವದ ಭೇದಗಳಲ್ಲಿ ಒಂದು ; ℙ ಕರ್ಮದ ಆಸ್ರವಕ್ಕೆ ಅಜೀವವೂ (ಶರೀರಾದಿಗಳು) ಆಧಾರವಾಗುತ್ತದೆ. ಇವು ಒಟ್ಟು ಹನ್ನೊಂದು ಭೇದಗಳನ್ನು ಹೊಂದಿವೆ. ಇದರಲ್ಲಿ ನಿರ್ವರ್ತನಾಧಿಕರಣವು ಮೊದಲನೆಯದಾಗಿ ಪರಿಗಣಿತವಾಗಿದೆ. ಕಾರ್ಯವನ್ನು ಮುಗಿಸುವುದು ಅಥವಾ ನಿಷ್ಪಾದಿಸುವುದು. ಇದರಲ್ಲಿ ಎರಡು ಬಗೆಗಳಿವೆ. ೧. ಮೂಲಗುಣನಿರ್ವರ್ತನಾಧಿಕರಣ. ೨. ಉತ್ತರಗುಣನಿರ್ವರ್ತನಾಧಿಕರಣ. ಮೂಲಗುಣನಿರ್ವರ್ತನಾಧಿಕರಣದಲ್ಲಿ ಶರೀರ, ವಾಕ್ಕು, ಮನಸ್ಸು, ಪ್ರಾಣ, ಅಪಾನ—ಈ ಐದರಿಂದ ಕಾರ್ಯವು ನಿಷ್ಪನ್ನವಾಗುವುದು. ಉತ್ತರಗುಣನಿರ್ವರ್ತನಾಧಿಕರಣದಲ್ಲಿ ಮರದ ಬೊಂಬೆ ನಿರ್ಮಾಣ, ಚಿತ್ರಕರ್ಮಗಳು ಸೇರುತ್ತವೆ (ಸರ್ವಾರ್ಥಸಿದ್ಧಿಯ ಆಧಾರದಿಂದ) : ಅಜೀವಾಧಿಕರಣಾಸ್ರವ ಭೇದಗಳು ೧೧ ; (೧) ನಿರ್ವರ್ತನಾಧಿಕರಣ, ಇದರಲ್ಲಿ ದೇಹದು ಪ್ರಯುಕ್ತ ನಿರ್ವರ್ತನಾಧಿಕರಣ (ಶರೀರದಿಂದ ಕುಕೃತಿ ಮಾಡುವುದು), ಉಪಕರಣ ನಿರ್ವರ್ತನಾಧಿಕರಣ (ಶಸ್ತ್ರಾದಿ ಹಿಂಸೋಪಕರಣಗಳನ್ನು ಮಾಡುವುದು) ಎಂಬ ಎರಡು ಪ್ರಕಾರಗಳು (ಜೈನಧ. ೬೪). [ನಿರ್ವರ್ತನ + ಅಧಿಕರಣ]

ನಿರ್ವರ್ತನೆ (ನಾ). ಚಟುವಟಿಕೆಯಿಲ್ಲದಿರುವಿಕೆ ; ನಿಷ್ಕ್ರಿಯೆ ; ನಿರ್ವ್ಯಾಪಾರ : ವರ್ತನೆ ನಿರ್ವರ್ತನೆ ಇಲ್ಲದಂದು ಉಮಯ ಕಲ್ಯಾಣವಿಲ್ಲದಂದು ಇವರಾರೊಬ್ಬರ ನಾಮ ಸೀಮೆ ಇಲ್ಲದಂದು ನೀನುಲುಹಡಗಿದ್ದಯಲ್ಲಾ (ಮಡಿಸೂ. ೧-೧). [ಸಂ. ನಿರ್ವರ್ತನ]

ನಿರ್ವರ್ತಿತ (ಗು). ಮುಗಿಸಿದ ; ತೀರಿಸಿದ ; ನೆರವೇರಿಸಿದ : ಅನೇಕಪ್ರಕಾರ ದೇವಾಂಗವಸ್ತ್ರವಿಸ್ತಾರಿತ ರತ್ನಸಂಚಿತಮಣಿವಿತಾನಂಗಳಿಂದ ಮನುಕ್ರಮಂದಪ್ಪ ದರ್ಚಿಸಿ ನಿರ್ವರ್ತಿತದೇವತಾರ್ಚನನಾಗಿ(ಅಪಿಪು.೨-೩೨ಪ); ಆಗಳ್ ಮಹಾಶ್ವೇತೆಯುಂ ನಿರ್ವರ್ತಿತಾನುಷ್ಠಿತೆಯಾಗಿ (ಕಾದಂಪೂ. ೯೮೭); ಸೂರ್ಯಮಿತ್ರಂ ನಿರ್ವರ್ತಿತ ಸಂಧ್ಯಾನಿಯಮಕ್ರಿಯಾಯೋಗನಾಗಿ (ಸುಕುಮಾ. ೩-೪ ಪ). [ಸಂ.]

ನಿರ್ವರ್ತಿಸು (ಕ್ರಿ). ೧. ಮುಗಿಸು ; ಪೂರೈಸು ; ನೆರವೇರಿಸು : ತದ್ದಂಪತಿಗಳ್ಗೆ ಶರೀರತೋಭೆಯಂ ಮಾಡಿ ಚಂದನಹರಿಚಂದನೇಂಧನಂಗಳೊಳ್ ದಹನಕ್ರಿಯೆಯಂ ನಿರ್ವರ್ತಿಸಿ (ಅಪಿಪು.೫-೨೭ ಪ); ನಿಷ್ಪ್ರಾಲಿಂಗನವಿಮುಖನಾಗಿ ಸೆಜ್ಜೆಯಿಂದೆಟ್ಟು ಪ್ರತ್ಯೂಷಕೃತ್ಯಮಂ ನಿರ್ವರ್ತಿಸಿ (ಶಾಂತಿಪು. ೮-೧೧೪ ಪ) ; ಜಿನಪೂಜಾಪ್ರಧಾನಪ್ರಭಾತಸಮಯನಿತ್ಯನಿಯಮಂಗಳಂ ನಿರ್ವರ್ತಿಸಿ (ಸುಕುಮಾ.೯-೧೧೧ಪ); ಬೆರಳ ಸಮಿಧೆಯಲಾಭಿಚಾರಾಧ್ವರವ ನಿರ್ವರ್ತಿಸಿದನೈ (ತೊರರಾ. ೬-೩೫-೬). ೨. ಮಾಡು : ಅಕ್ಷಯತ್ರಿತೀಯ ಪರ್ವ್ವನಿಮಿತ್ತಂ ಪಲವುಂ ಮಹಾದಾನಂಗಳಂ ನಿರ್ವರ್ತ್ತಿಸುವಲ್ಲಿ (ಸೌಇಇ. XI-i, ೧೧೬-೧೬ ; 1975). ೩. ರಚಿಸು ; ನಿರ್ಮಿಸು ; ಕಟ್ಟಿಸು : ಕನಕರಜತಮಣಿಮಯಘಂಟಾಜಾಲಪ್ರದೀಪಮಾಲೆಗಳಂ ನಿರ್ವರ್ತಿಸಿಯುಂ (ಅಜಿಪು. ೧೨-೪ ಪ) ; ಸರ್ವತೋಭದ್ರವೆಂದೆಂಬ ದೇಗುಲವ ಸುಪರ್ವಲೋಕವ ಸೋಂಕುವಂತೆ ನಿರ್ವರ್ತಿಸಿದನು (ನಾಗಕು. ೧-೪೭). [ನಿರ್ವರ್ತನ + -ಇಸು$_3$]

ನಿರ್ವರ್ತ್ಯ (ಗು). ೧. ಮುಗಿಸಬೇಕಾದ; ಪೂರ್ಣಗೊಳಿಸಬೇಕಾದ; ನೆರವೇರಿಸಬೇಕಾದ. (ನಾ). ೨. ಪೂರೈಸಬೇಕಾದುದು ; ನೆರವೇರಿಸಬೇಕಾದದು: ಸಮಯಾದಿ ಕ್ರಿಯಾವಿಶೇಷಂಗಳ್ಗಂ ಸಮಯಾದಿ ನಿರ್ವರ್ತ್ಯಂಗಳಪ್ಪ ಪಾಕಾದಿಗಳ್ಗಂ ಸಮಯಪಾಕಮೆಂಬಿವು ಮೊದಲಾಗೊಡೆಯ ನಿಜಾಭಿಧಾನರೂಢಿಯಾದೊಡಂ (ತತ್ತ್ವಪ್ರ. ೨೪೧). ೩. [ವ್ಯಾಕ] ಕರ್ಮದ ನಾಲ್ಕು ಭೇದಗಳಲ್ಲಿ ಒಂದು: ಪ್ರವಿದಿತ ತತ್ಕರ್ಮಂ ಕರ್ತೃವಿನೀಪ್ಪಿತತಮಪದಾರ್ಥಮದು ನಾಲ್ಕುಂ ಭೇದವನಾಳ್ದಿರ್ಕುಂ ನಿರ್ವರ್ತ್ಯವಿಕಾರ್ಯಂ ಪ್ರಾಪ್ಯಮೆತ್ತಲುಂ ವೈಷಯಿಕಂ (ಶಮದ. ೧೨೬) ; ನಿರ್ವರ್ತ್ಯಕ್ಕೆ—ಮನೆಯಂ ಮಾಡಿದಂ, ಕಾವ್ಯಮಂ ಪೇಟ್ದಂ (ಶಮದ. ೧೨೬ ಪ್ರಯೋ). ℙ ನಿರ್ವರ್ತ್ಯ ಎಂದರೆ ಕಾರ್ಯಮಾಡುವುದು. ವಿಕಾರ್ಯ ಎಂದರೆ ರೂಪವನ್ನು ವ್ಯತ್ಯಾಸಮಾಡುವುದು. ಪ್ರಾಪ್ಯ ಎಂದರೆ ಒಂದು ಕಡೆಗೆ ಹೋಗಿ ಸೇರುವುದು. ವೈಷಯಿಕ ಎಂದರೆ ಇಂದ್ರಿಯಗಳಿಗೆ ವಿಷಯವಾದುದು. [ಸಂ.]

ನಿರ್ವಸ್ತುಕ (ನಾ). ವಸ್ತುವಲ್ಲದುದು ; ಭಾವಾತ್ಮಕವಾದುದು : ಇಂಗ್ಲಿಷಿನಲ್ಲಿ 'ಆ್ಯಬ್‌ಸ್ಟ್ರಾಕ್ಟ್' ಎನ್ನುತ್ತಾರೆ . . . ಬಂಗಾಳಿಯಲ್ಲಿ ಇದಕ್ಕೆ ಒಂದು ಹೊಸ ಪ್ರತಿಶಬ್ದದ ಅವಶ್ಯಕತೆ ಇದೆ. 'ನಿರ್ವಸ್ತುಕ' ಎಂದರೆ ಕೆಲಸ ನಡೆಯುತ್ತದೆ (ನಿಬಂಧ. II, ೨೩೯). [ಸಂ.]

ನಿರ್ವಹಣ (ನಾ). ೧. ಕೊನೆ ; ಅಂತ್ಯ ; ಮುಕ್ತಾಯ ; ಉಪಸಂಹಾರ : ಕಾದಂಬರಿಯ ರಚನೆಯಲ್ಲಿ ನಾಲ್ಕನೆಯ ಹಾಗೂ ಐದನೆಯ ಸ್ಥಾನಗಳಾದ ಶ್ರಾಂತಸ್ಥಾನ ಹಾಗು ನಿರ್ವಹಣ (Catastrophe) ಇಲ್ಲಿ ಬಂದಿದೆ (ಸಮಜೀ. ೩೪ ಪೀಠಿಕೆ) ; ಕಥೆಯ ಪ್ರಾರಂಭದಿಂದ ಹಿಡಿದು ನಾಯಕನ ಪರಿಸ್ಥಿತಿಯ ಬದಲಾವಣೆಗೆ ಸ್ವಲ್ಪ ಮೊದಲಿನವರೆಗೆ ಇರುವುದೆಲ್ಲವೂ ಸಂಗ್ರಥನವೆಂದೂ ಬದಲಾವಣೆಯ ಪ್ರಾರಂಭದಿಂದ ಹಿಡಿದು ಮುಕ್ತಾಯದವರೆಗೆ ಇರುವುದೆಲ್ಲವೂ ನಿರ್ವಹಣವೆಂದೂ ನನ್ನ ಅರ್ಥ (ಅರಿಕಾ.೧೧೦). ೨. ಸಾಗಿಸಿಕೊಂಡು ಹೋಗುವಿಕೆ ; ನಿಭಾಯಿಸುವಿಕೆ : ಇತರ ಸಂಘಸಂಸ್ಥೆಗಳು ಇವೆಲ್ಲವನ್ನೂ ರಚಿಸಿ, ಅವುಗಳ ನಿರ್ವಹಣವನ್ನು ಬಾಲಕರೇ ವಹಿಸಿಕೊಂಡು ನಡೆಸುವುದನ್ನು ಕಲಿಸಬೇಕು (ಶಿಕ್ಷದ. ೨೧). [ಸಂ.]

ನಿರ್ವಹಣಲೇಖೆ (ನಾ). [ಚಿತ್ರಶಾ] ಚಿತ್ರಣದ ಕೊನೆಯ ಘಟ್ಟದಲ್ಲಿ ಹೊಂದಿಸುವ ರೇಖೆ,—ಮುಕ್ತಾಯದ ಗೆರೆ: ನಿರ್ವಹಣಲೇಖೆಯಲಕ್ತಕದಣ್ಕೆ ಪತ್ತಿ ಕೈಯುಗುರ್ಗೆಸೆಯಲ್ ಸಚಿತ್ರಪಟಧಾರಿಣಿ ಬಂದಳತಿಪ್ರಮೋದದಿಂ (ಜಗವಿ. ೧೭-೧೧೫). [ನಿರ್ವಹಣ+ಲೇಖೆ]

ನಿರ್ವಹಣಸಂಧಿ (ನಾ). [ಕಾವ್ಯಮೀ]ನಾಟಕರಚನೆಯಲ್ಲಿ ಹೇಳಿರುವ ಐದು ಸಂಧಿಗಳಲ್ಲಿ ಕೊನೆಯದು ; ℙ ನಾಟಕದ ಮೊದಲು ಸೂಚಿಸಿದ್ದ ಕಥಾಂಶವು ಬೆಳೆದು ನಾನಾಮುಖವಾಗಿ ಹರಡಿಕೊಂಡಿರುತ್ತದೆ. ಅವೆಲ್ಲವೂ ಪ್ರಧಾನನಾಯಕನ ಕಾರ್ಯಸಿದ್ಧಿಯೆಂಬ ಮುಖ್ಯಾಂಶದಲ್ಲಿ ಏಕಮುಖವಾಗಿ ಸೇರುತ್ತವೆ. ಅದು ನಾಟಕದ ಕೊನೆಯ ಘಟ್ಟ. ಈ ಹಂತಕ್ಕೆ ನಿರ್ವಹಣಸಂಧಿಯೆಂದು ಹೆಸರು : 'ಉಪಸಂಹೃತಿ (ಉಪಸಂಹಾರ, ನಿರ್ವಹಣ) ಸಂಧಿ'ಯಲ್ಲಿ ಹಿಂದೆ ನಾನಾ ಮುಖವಾಗಿದ್ದ ಕಾರ್ಯವೆಲ್ಲವೂ ಏಕಮುಖವಾಗಿ ಮುಗಿಯುತ್ತದೆ (ಕೈಪಿಡ. ೨೦೮) ; (ನಾಟಕ, ಮೊ. ಗಳ) ಅಂತ್ಯ, ಮುಕ್ತಾಯ, ಸಮಾಪ್ತಿ. ನಾಟಕದ ನಿರ್ವಹಣಸಂಧಿ(Final. ಇಂಕನಿ). [ನಿರ್ವಹಣ+ಸಂಧಿ]

ನಿರ್ವಹಣಸ್ಥಿತಿ (ನಾ). ಕೊನೆಯ ಘಟ್ಟ ; ಮುಕ್ತಾಯ : ಪುನ್ನಮ್ಮನುಮಟ್ತಿಯಿಂ ಗುರುಸಮಕ್ಷಪರೋಕ್ಷವಿನೇಯವೃತ್ತಿಯಿಂದಮ್ಮನದುಕ್ಕೆವಂ ತಗುಟೆ ನಿರ್ವಹಣಸ್ಥಿತಿಗುಯ್ದರೀ ಪುರಾಣಮ್ಮಹಿರತ್ನಮಿಂತಿದೆಯಳಂಕೃತಿ ತಾಂ ಕವಿಚಕ್ರವರ್ತಿಯಾ (ಶಾಂತಿಪು. ೧೨-೬೧). [ನಿರ್ವಹಣ+ಸ್ಥಿತಿ]

ನಿರ್ವಹಣೆ (ನಾ). ನಿಭಾಯಿಸುವುದು ; ನಡೆಸುವುದು ; ಸಾಗಿಸಿಕೊಂಡು ಹೋಗುವುದು: ರಾಜ್ಯಭಾರನಿರ್ವಹಣೆಯಲ್ಲಿ ನನಗೆ ಸಹಾಯ ಮಾಡಬೇಕೆಂದು ಅವರನ್ನು ಕೇಳಿಕೊಳ್ಳುತ್ತೇನೆ (ಪ್ರತಾಪ. ೯೦); ಶಾಲೆಯ ಕಾರ್ಯಕ್ರಮಗಳಿಗೂ ಅವುಗಳ ನಿರ್ವಹಣೆಗೂ ಆಧಾರವೆನಿಸುವ ನೀತಿ ನಿಷ್ಠೆಗಳಿಗೆ ಅವರ ಸಹಕಾರ ದೊರಕಬಲ್ಲದು (ಶಿಕ್ಷದ. ೩೧೯) ; ಅವನ ಪಾತ್ರದ ನಿರ್ವಹಣೆಯಲ್ಲಿ ಒಂದು ಸಾರಿಯಾಗಲಿ ಅಸಹಜತೆಯಾಗಲಿ ಅತಿಯಾಗಲಿ ಕಾಣಲಿಲ್ಲ (ಅಲಪೂ. ೧೮). [ಸಂ. ನಿರ್ವಹಣ]

ನಿರ್ವಹಿಸು (ಕ್ರಿ). ೧. ಮಾಡು; ನೆರವೇರಿಸು : ವಿಹಿತಚರಿತರು ನೀವಲಾ ನಿರ್ವಹಿಸುವೆನು ಶುಶ್ರೂಷೆಯನು (ಕುಪ್ಯಾಅ. ೧೯-೩೧); ವಕಾರವೇ ಬಕಾರದ ಕೆಲಸವನ್ನು ನಿರ್ವಹಿಸುತ್ತಿತ್ತೆಂದು ಹೇಳುವುದಕ್ಕೆ ಆಧಾರಗಳಿವೆ (ದ್ರಾವಿವಿ. ೩೬೪). ೨. ನಿಭಾಯಿಸು; ನಡೆಸು; ಸಾಗಿಸಿಕೊಂಡು ಹೋಗು : ಅಂಘವಣೆಯನು ನೋಡು ನೀನೇಕಾಂಗದಲಿ ನಿರ್ವಹಿಸುವೆನು (ಕುಪ್ಯಾಅ. ೨೦-೧೮); ಕಲಹಮಂ ನಿರ್ವಹಿಸಲಾಪಿರೇ ಮದ್ವಸ್ತುವಂ ಕೊಟ್ಟು ಸರ್ವಥಾ ಕಂಡು ಬದುಕುವುದು (ಚಿಬಪು. ೨೩-೨೨); ಆ ಕಾಲದಲ್ಲಿ ಅವರು ದಕ್ಷತೆಯಿಂದ ಪೋಲೀಸ್‌ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರಂತೆ (ಮೂಲಾನ. ೧೧). ೩. ಹೊರು; ಜವಾಬ್ದಾರಿಯನ್ನು ವಹಿಸು; ಹೊಣೆಯಾಗು : ಅಭರಣಗಳನ್ನೆಲ್ಲ ಮಾರಿ ಮಕ್ಕಳ ವಿದ್ಯಾಭ್ಯಾಸದ ವೆಚ್ಚವನ್ನು ನಿರ್ವಹಿಸುತ್ತಿದ್ದಳು (ರಂಗವ. ೨೩೮). ೪. ಅನುಭವಿಸು : ಪೂರ್ವೋಕ್ತಭವನಿಕರದೊಳು ಮಿಥ್ಯೋದಯ ಸರ್ವಸ್ವಫಲದುಃಖಚಯವ ನಿರ್ವಹಿಸಿದೆಯಿನ್ನು ಪುಗುಪುಗು ಸತ್ಪಥನಿರ್ವಾಣಗುಹೆಯ ಮೃಗೇಂದ್ರ (ವರ್ಧಚ. ೮-೬೩). ೫. ನಾಶಮಾಡು: ಧ್ವಂಸಪಡಿಸು : ಅಹಿತಕುಲವನು ಸಮರದಲಿ ನಿರ್ವಹಿಸಿ ಶರಣಾಗತರ ಪಾಲಿಸುತಿಹಡವನು ಮಗನೆನಿಸುವನು (ಕುಪ್ಯಾಉ. ೩-೮೨). ೬. ಪೂರೈಸು ; ಮುಗಿ ; ತೀರು : ವನಜಾಕ್ಷ ಭವದ್ದೋರ್ವಳದ ಬಳದಿನಲ್ಲದೆ ನಿರ್ವಹಿಸದು ಯಾಗಂ (ಜಗವಿ. ೧೭-೬). ೭. ಸಾಗು; ನಡೆತರು : ಮಿಹಿರಸುತ ಪರಿಯಂತ ಕಥೆ ನಿರ್ವಹಿಸಿ ಬಂದುದು (ಕುಪ್ಯಾಶ. ೧-೬). ೮. ಮುಂದುವರಿಯುವಂತೆ ಮಾಡು; ಮುಂದುವರಿಸು: ದಮಿತಾರಿ ಮಹಾರಾಜಾಧಿರಾಜವಂಶಕ್ಕಮನಂತವೀರ್ಯಸಂಬಂಧಮುಂಟೆದನಱಿದು ತದೀಯ ಕುಲವೃದ್ಧರ್ ನಿಮಿರ್ಚಲುಂ ನಿರ್ವಹಿಸಲುಂ ಪೇಟ್ವುದುಭಯಕುಲ ಸಹಾಯತ್ವಮಿತರೇತರೋಪಕಾರದಿಂ . . . ಇನಿಸೆಡೆಯಾಗಿರ್ದ ಸಂಬಂಧಮಂ ನೀನಿರ್ದು ಪೊಸಯಿಸುವುದು (ಶಾಂತಿಪು. ೨-೬೬ ವ). ೯. ಸಮರ್ಥವಾಗು; ಶಕ್ಯವಾಗು : ಉರ್ವಿಯೊಳ್ಕೌಸಲ್ಕೆ ಪಡೆದ ಕುವರಂ ರಾಮಂ . . . ಆತನ ಯಜ್ಞತುರಗಮಿದು ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ (ಚೈಮಿಭಾ. ೨೦-೭). ೧೦. ಗೆಲ್ಲು; ವಿಜಯಿಯಾಗು : ಕರ ಹರಿಯೊಳ್ ಸೆಣಸಿ ಪೋರ್ದು ನಿರ್ವಹಿಸುಗುಮೇ (ಶಾಂತಿಪು. ೩-೮೫). ೧೧. ಉಳಿ; ಬದುಕು : ಅಹಿತಾಲಯಮೆನಿಪಷ್ಟಮಗೃಹದೊಳ್ ಸೌಮ್ಯೇತರಗ್ರಹಂ ನಿಲೆ . . . ಏಕಹಾಯನದಿನತ್ತಲರ್ಭಕಂ ನಿರ್ವಹಿಸಂ (ಜಾತತಿ. ೬-೧೭); ಕೊರಲುಱುಗೆಡದೆಸೆಯೊಳ್ ನೆತ್ತರ ಧಾರೆಗಳುಣ್ಮೆ ಪೊಣ್ಮೆ ವಾಜಿಗೆ ತೋರ್ಕುಂ ಮರಣಭಯಮೊಂದೆ ತಿಂಗಳ್ವರೆಗಂ ನಿರ್ವಹಿಸದು (ಅಶ್ವಶಾ. ೬-೫೧). ೧೨. ತಾಳು ; ಹೊಂದು ; ಪಡೆ : ಮನೋವಾಕ್ಕಾಯ ಬಳದಿಂ ಮಹಾಪುರುಷರು ನಿರ್ವಹಿಸುವ ಮೂಲೋತ್ತರಗುಣಂಗಳಂ ತದ್ಬಲಹೀನರುಮಲ್ಪಸತ್ವರುಂ ನಿರ್ವಹಿಸಲಾಱದೆ ಗುರುಕುಳಮಂ ದೂಷಿಸುವರು (ಚಾವುಂಪು. ೫೩). [ನಿರ್ವಹಣ+-ಇಸು$_3$]

ನಿರ್ವಳಿತ (ನಾ). ನಿಶ್ಚಲತೆ ; ಸ್ಥಿರತೆ ; ದೃಢತೆ : ನಿರ್ವಳಿತದಲ್ಲನವರತ ಕರ್ತವ್ಯವಿತರವಿರಕ್ತಿಮುನಿಜನಸೇವ್ಯನಂತದಱಿಂದ ಮಹದೈಶ್ವರ್ಯಸಿದ್ಧಿಗಳ ಭವ್ಯಸುಖದೌಪಾಧಿಕವಿದೆಂದವ್ಯಯನು ಮೈಗೊಡದೆ ವಿಸ್ರಸ್ತವ್ಯವಿದೆಯೆನುತಾಡುತಿರ್ದನು ಸೌಖ್ಯನಿಷ್ಠೆಯಲಿ (ನಿಭಾಗ. ೫-೪-೨೮). [ಸಂ. ನಿರ್ವಲಿತ]

ನಿರ್ವಾಚಕ (ನಾ). ಚುನಾಯಿಸುವ ಹಕ್ಕುಳ್ಳವನು; ಮತದಾರ: 'ನಿರ್ವಾಚಕಗಣ' ಪರಾ. [ಸಂ.]

ನಿರ್ವಾಚಕಗಣ (ನಾ). ಮತದಾರರ ಸಂಘ, —ಸಂಸ್ಥೆ : ರಾಷ್ಟ್ರಪತಿಯವರನ್ನು . . . ನಿರ್ವಾಚಕಗಣದ ಸದಸ್ಯರು ನಿರ್ವಾಚಿಸತಕ್ಕುದು (ಭಾಧಾನ. ೨೬). [ನಿರ್ವಾಚಕ+ಗಣ]

ನಿರ್ವಾಚಕನಾಮಾವಳಿ (ನಾ). ಮತದಾರರ ಹೆಸರಿನ ಪಟ್ಟಿ,—ದಾಖಲೆಯಿರುವ ವಿವರ : ಪ್ರತಿಯೊಂದು ರಾಜ್ಯದ ವಿಧಾನಮಂಡಲಕ್ಕೂ ಸಂಬಂಧಪಟ್ಟ ನಿರ್ವಾಚಕನಾಮಾವಳಿಗಳನ್ನು ತಯಾರಿಸುವುದರ ಸಂಬಂಧದ . . . ಏವಾದಗಳನ್ನೂ ಇತ್ಯರ್ಥ ಪಡಿಸುವುದಕ್ಕಾಗಿ (ಭಾಧಾನ. ೧೯೦). [ನಿರ್ವಾಚಕ+ನಾಮ+ಅವಳಿ$_1$(=ಅವಲಿ)]

ನಿರ್ವಾಚನ (ನಾ). ಚುನಾಯಿಸುವುದು; ಚುನಾವಣೆ; ಆಯ್ಕೆ : ಸಂಸತ್ತಿಗೂ . . . ರಾಜ್ಯಗಳ ವಿಧಾನಮಂಡಲಗಳಿಗೂ ನಡೆಯತಕ್ಕ

ನಿರ್ವಾಚನಗಳಿಂದ ಅಥವಾ ನಿರ್ವಾಚನಗಳ ಸಂಬಂಧದಲ್ಲಿ ಹುಟ್ಟುತಕ್ಕ ಸಂದೇಹಗಳನ್ನೂ ವಿವಾದಗಳನ್ನೂ ಇತ್ಯರ್ಥಪಡಿಸುವುದಕ್ಕಾಗಿ (ಭಾಧಾನ. ೧೯೦).

ನಿರ್ವಾಚನ ಆಯೋಗ = ಚುನಾವಣಾಸಮಿತಿ ; ಮತದಾನದ ಸಮಿತಿ: ರಾಷ್ಟ್ರಪತಿಯವರು ನಿರ್ವಾಚನ ಆಯೋಗದ ಅಭಿಪ್ರಾಯವನ್ನು ಪಡೆದು ಆ ಅಭಿಪ್ರಾಯಕ್ಕನುಸಾರವಾಗಿ ವರ್ತಿಸತಕ್ಕುದು (ಭಾಧಾನ. ೫೦). [ಸಂ.]

ನಿರ್ವಾಚನಕ್ಷೇತ್ರ (ನಾ). ರಾಜಕೀಯವಾದ ಆಡಳಿತಸಭೆಗಳಿಗೆ ತಮ್ಮ ಪ್ರತಿನಿಧಿಯಾಗಿರಲು ಸದಸ್ಯರನ್ನು ಚುನಾಯಿಸುವ ಹಕ್ಕುಳ್ಳ ಮತದಾರರ ಕ್ಷೇತ್ರ; ಮತದಾರರು ಇರುವ ಸ್ಥಳ : ಯಾವುದೊಂದು ಸದನಕ್ಕೆ ನಿರ್ವಾಚನ ನಡೆಯಿಸಲು ಪ್ರತಿಯೊಂದು ಪ್ರಾದೇಶಿಕ ನಿರ್ವಾಚನಕ್ಷೇತ್ರಕ್ಕೂ ಒಂದು ಸಾಧಾರಣ ನಿರ್ವಾಚಕ ನಾಮಾವಳಿಯು ಇರತಕ್ಕುದು (ಭಾಧಾನ. ೧೯೧). [ನಿರ್ವಾಚನ+ಕ್ಷೇತ್ರ]

ನಿರ್ವಾಚನನಮನವಿ (ನಾ). ಚುನಾವಣೆಯ ಅರ್ಜಿ : ವಿಧಿಯ ಮೇರೆಗೆ ವಿಧಾಯಕವಾಗಿರಬಹುದಾದಂಥ ಪ್ರಾಧಿಕಾರಿಗೆ . . . ಒಪ್ಪಿಸಲಾದ ನಿರ್ವಾಚನನಮನವಿಯು ಮೂಲಕವಾಗಿ ಹೊರತು, ಪ್ರಶ್ನೆ ಮಾಡಿ ಶಂಕಿಸಲು ಅವಕಾಶವಿರತಕ್ಕುದಲ್ಲ (ಭಾಧಾನ. ೧೯೩)

[ನಿರ್ವಾಚನ+ಮನವಿ]

ನಿರ್ವಾಚನಾಧಿಕಾರ (ನಾ). ಚುನಾಯಿಸುವ ಅಧಿಕಾರ ; ಮತದಾನ ಮಾಡುವ ಹಕ್ಕು. [ನಿರ್ವಾಚನ+ಅಧಿಕಾರ]

ನಿರ್ವಾಚನಾಧಿಕಾರಿ (ನಾ). ಚುನಾವಣೆಯ ಕಾರ್ಯವನ್ನು ನಿರ್ವಹಿಸುವವನು ; ಚುನಾವಣಾಧಿಕಾರಿ : ಈ ಸಲದ ಚುನಾವಣೆಗೆ ನಮ್ಮ ಕಡೆಯಿಂದ ಇಬ್ಬರನ್ನು ನಿರ್ವಾಚನಾಧಿಕಾರಿಗಳನ್ನಾಗಿ ನೇಮಿಸಿದ್ದರು (ಡೂಢಿ). [ನಿರ್ವಾಚನ+ಅಧಿಕಾರಿ]

ನಿರ್ವಾಚಿತ (ಗು). ಆರಿಸಿದ; ಚುನಾಯಿಸಿದ : 'ನಿರ್ವಾಚಿತ ಸದಸ್ಯ' ಪರಾ. [ಸಂ.]

ನಿರ್ವಾಚಿತಸದಸ್ಯ (ನಾ). ಚುನಾಯಿತನಾದ ಸದಸ್ಯ : ಸಂಸತ್ತಿನ ಉಭಯಸದನಗಳ . . . ರಾಜ್ಯಗಳ ವಿಧಾನಸಭೆಗಳ ನಿರ್ವಾಚಿತಸದಸ್ಯರಿಂದ ಕೂಡಿದ ನಿರ್ವಾಚಕಗಣದ ಸದಸ್ಯರು ನಿರ್ವಾಚಿಸತಕ್ಕುದು (ಭಾಧಾನ. ೨೬).

[ನಿರ್ವಾಚಿತ+ಸದಸ್ಯ]

ನಿರ್ವಾಚಿಸು (ಕ್ರಿ). ಆರಿಸು ; ಚುನಾಯಿಸು : ನಿರ್ವಾಚಿತಸದಸ್ಯರಿಂದ ಕೂಡಿದ ನಿರ್ವಾಚಕಗಣದ ಸದಸ್ಯರು ನಿರ್ವಾಚಿಸತಕ್ಕುದು (ಭಾಧಾನ. ೨೬).

[ನಿರ್ವಾಚನ+-ಇಸು]

ನಿರ್ವಾಣ (ನಾ). ೧. ನಂದುವುದು ; ಆರುವುದು ; ಶಾಂತವಾಗುವುದು : "ನಿರ್ವಾಣ . . . ಶಾಂತವ್ಯಾಸಾರನಾದ ಯೋಗಿಗೂ ಆರಿಹೋದ ಬೆಂಕಿ ಮೊದಲಾದ್ದಕ್ಕೂ ಹೆಸರು" (ಸಿದ್ಧಾಂತಿ. ೩೪೯) ; ನಿರ್ವಾಣವೆಂದರೆ ಶಾಂತವಾಗುವುದು (ಹಿಂದಸಾ. ೩೮). 'ನಿರ್ವಾಣ ಹೊಂದು' ಪರಾ. ೨. ಮರೆಯಾಗುವುದು; ಕಾಣದಾಗುವುದು. ೩. ಸಾವು ; ಮರಣ : ನರೇಂದ್ರನಾಥರು . . . ಶ್ರೀರಾಮಕೃಷ್ಣರ ನಿರ್ವಾಣಾನಂತರ ಸ್ವಾಮಿವಿವೇಕಾನಂದರಾಗಿ ಭರತಖಂಡದಲ್ಲೆಲ್ಲಾ ಸಂಚರಿಸಿದರು (ಭಾರದ. ೩೫೩). ೪. ಮುಕ್ತಿ ; ಮೋಕ್ಷ : "ಕೈವಲ್ಯಂ, ನಿರ್ವಾಣಂ . . . ಮೋಕ್ಷಃ, ಮಹಾನಂದಃ — ಈ ೧೧ ಮೋಕ್ಷದ ಪೆಸರ್" (ಹಲಾಯು. ೫೧-೧೨೪) ; ಇಂತೀ ಕಲ್ಯಾಣಚತುಷ್ಕಂ ಪ್ರಾಕಟ ಕಲ್ಯಾಣವಿದುರ್ದಿಂ ನಿರ್ವಾಣಂ (ಆಜಿಪು. ೮-೧೪) ; ಕಾಣದಗೆ ಕನ್ನಡಿಯದೇತಕೆ . . . ನೀರ್ವಾಣಭಾಷೆಯದೇಕೆ ಗೊರವಗೆ ಕೇಣವಿಲ್ಲದ ವಿಷಯಲಂಪಟಗೇಕೆ ನಿರ್ವಾಣ (ಅಪ್ಪ. ೧-೪೦) ; ಮಹಾವೀರನು . . . ಎಪ್ಪತ್ತೆರಡನೆಯ ವಯಸ್ಸಿನಲ್ಲಿ ನಿರ್ವಾಣ ಪಡೆದಾಗ ಬುದ್ಧನಿಗೆ ಎಪ್ಪತ್ತೈದು ವರುಷವಾಗಿತ್ತು (ತೀರ್ಥಕ. ೩೩). ೫. ಪರಮಸುಖ ; ಅತ್ಯಾನಂದ. ೬. ಸಂಪೂರ್ಣ ; ಪೂರ್ತಿ : ಅಶೇಷಮಹಾಜನ ಮೂನೂರ್ವ್ವರುಂ ನೇಡಿಂಬದಲು ಬಸದಿಯ ನಿರ್ವ್ವಾಣವಾಗಿ ಮಾಡಿಸಿ ಶಾಂತಿನಾಥದೇವರಂ ಪ್ರತಿಷ್ಠೆಯಂ ಮಾಡಿ . . . ಬ್ರಹ್ಮಜಿನಾಲಯಮೆಂದು ಪೆಸರನಿಟ್ಟು (ಕಇಶ. ೯೫-೩-೩೭ ; 1124). ೭. ಮುಗಿವು ; ಕೊನೆ ; ಅಂತ್ಯ : ಶಾಂತಿಪುರಾಣದ ನಿರ್ವಾಣಂ ತಕ್ಕುದೆ ಮಲ್ಲಪಯ್ಯನಿಂ ತದನುಜನಿಂ ಶಾಂತಿಧನ ಪುಣ್ಯನುಯ್ಯನಿನೇಂ ತಮ್ಮುತ್ತಿರ್ದರುಂ ಕೃತಾರ್ಥರೊ ಜಗದೊಳ್ (ಶಾಂತಿಪು. ೧-೫೨). ೮. ಶೂನ್ಯ; ಬರಿದು : ಮನ ನಿರ್ವಾಣವಾಗಿ ವಿವೇಕಜ್ಞಾನ ಪರಮಾರ್ಥದಲ್ಲಿ ಪರಿಣಾಮಿಯಾಗಿ ಸುಳಿದು ಸೂತಕಿಯಲ್ಲದೆ ನಿಂದು ಬದ್ಧನಲ್ಲದೆ ಸುಜ್ಞಾನದಲ್ಲಿ ಸುಳಿದು ನಿರ್ಮಲದಲ್ಲಿ ನಿಂದವರು ಅವರು ಪರದೇಶಾಂತರಿಗಳು (ಉರಿಕ. ೯೦-೬೮). ೯. ಬತ್ತಲೆ ; ದಿಗಂಬರತ್ವ : ನಿಂದನೇಕಾಂತನಿವಾಸಂ ಬೆಳ್ಳವಾಸಂ ನಿಶೆಯೊಳಿಸೆಯೆ ನಿರ್ವಾಣದೊಳ್ ಯೋಗಿನಾಥಂ (ಸುಳುಪಾ. ೪-೧೧) ; ಮಂಡೆ ಬೋಳಾದರೇನು ಹುಟ್ಟು ಬೋಳಾಗದನ್ನಕ್ಕ ತನು ನಿರ್ವಾಣವಾದರೇನು ಆಶೆ ನಿರ್ವಾಣವಾಗದನ್ನಕ್ಕ (ಅದಸ. ೨೧-೫೪) ; ಉಟ್ಟಂತ ಉಡಿಗೆ ಕೊಡಿಗೆಯನೆಲ್ಲ ಸೆಳೆದುಕೊಳಬಹುದಲ್ಲದೆ ಮುಚ್ಚಿ ಮುಸುಕಿರ್ದ ನಿರ್ವಾಣವ ಸೆಳೆದುಕೊಳಬಹುದೇ (ಮಹಾದೇ. ಬ. ೫೧-೧೨೪). ೧೦. ತಪಸ್ಸು. ೧೧. ಸಾಯಂಕಾಲ ; ಸಂಜೆ. ೧೨. ಆನೆ ; ಗಜ. ೧೩. ವಿವಾಹ ; ಮಜ್ಜನ ; ಸ್ನಾನ. ೧೪. ಆನೆಯ ಸ್ನಾನ. ೧೫. ಕಾರ್ಯ. ೧೬. ಜಿನ ; ಅರ್ಹಂತ : "ಪಪುಸಿದ್ಧಿಯೊಳು ಮಜ್ಜನನೊಳು ಜಿನನೊಳು ಜನ್ಮದಪಹರಣೆಯೊಳು ಗಜದೊಳಸ್ತಮಯದೊಳ್ ಪ್ರವರ್ತಿಪುದು ನಿರ್ವಾಣನಾಮಂ"(ಮಂಗಂತಾ.೧೪೪-೪೩); "ಕಾರ್ಯ ಜೀವಾಸ್ತಮಯಸಮಯ ಜನ್ಮಾಂತ್ಯ ದೇಹೋತ್ತರಕರ್ಮಂ ಸಾಮಜಂ ವೈರಿದಶನ ತಪಮಿಂತೈದೆ ನಿರ್ವಾಣಮಕ್ಕುಂ" (ನಾಸಾರ. ೨೦). ೧೭. [ವೀರಶೈ] ವೀರಶೈವದಲ್ಲಿ ಒಂದು ಪ್ರಭೇದ : ಶುದ್ಧ ವಿಶೇಷ ನಿರ್ವಾಣ ಎಂದು ವೀರಶೈವವು ಮೂರು ತೆರನಾಗಿರ್ಪುದು ಮೂರು ತೆರ ತಾನೆ ಆಜು ತೆರನಾಗಿ ತೋಟುತ್ತದಂತೆಂದೊಡೆ ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ ಎಂದು (ಸಿದ್ಧೇಶ. ೪-೯). ೧೮. [ಬೌದ್ಧ] ಸಂಸಾರಕ್ಲೇಶಗಳ ನಿವೃತ್ತಿ ; ದೇಹಾತ್ಮಗಳ ಅಂತಿಮವಾದ ಅಳಿವು ; ℙ ಬೌದ್ಧರು ಮೋಕ್ಷವೆಂಬ ಅರ್ಥದಲ್ಲಿ 'ನಿರ್ವಾಣ' ಎಂಬ ಪದವನ್ನು ಬಳಸುತ್ತಾರೆ. ದೇಹಾತ್ಮಗಳ ನಂದಿಹೋಗುವಿಕೆಯೇ ಎಂದರೆ ಸಂಪೂರ್ಣವಾದ ಅಳಿವೇ ನಿರ್ವಾಣ. ಸರ್ವಂ ಕ್ಷಣಿಕಂ, ಸರ್ವಂ ದುಃಖಂ, ಸರ್ವಂ ಸ್ವಲಕ್ಷಣಂ, ಸರ್ವಂ ಶೂನ್ಯಂ ಎಂಬ ಭಾವನಾ ಚತುಷ್ಟಯವನ್ನು ಅತಿಶಯವಾಗಿ ಅಳವಡಿಸಿಕೊಳ್ಳಬೇಕು; ಇದರಿಂದ ಸಂಸಾರದುಃಖಕ್ಕೆ ಕಾರಣವಾದ ಆಶೆ ಮೊದಲಾದ ಎಲ್ಲ ವಾಸನೆಗಳೂ ನಾಶವಾಗುತ್ತವೆ. ಆಗ ವಾಸನಾರಹಿತವಾದ, ವಿಶುದ್ಧವಾದ ವಿಜ್ಞಾನವೊಂದೇ ಉಳಿದಿರುತ್ತದೆ. 'ನಾನು' ಎಂಬ ಅಹಂಕಾರವೂ 'ನನ್ನದು' ಎಂಬ ಮಮಕಾರವೂ ಇರುವುದಿಲ್ಲ. ನಾನೇ ಇಲ್ಲವೆಂಬ ನೈರಾತ್ಮತಾ ಭಾವನೆಯು ಬಂದು, ನಾನೇ ಇಲ್ಲದಿರುವಾಗ ನನಗೆ ಯಾವುದು ಬೇಕು ಎಂಬ ಮಮಕಾರ ನಿವೃತ್ತಿಯು ಬರುತ್ತದೆ. ಬೌದ್ಧಮತದಲ್ಲಿ ಈ ಅಹಂಕಾರ ಮಮಕಾರ ನಿವೃತ್ತಿಗೆ ನೈರಾತ್ಮ್ಯದರ್ಶನವೆಂದು ಹೆಸರು. ಇದೇ ನಿರ್ವಾಣ, ಮೋಕ್ಷಕ್ಕೆ ದ್ವಾರ. ಎಣ್ಣೆ ತೀರಿಹೋದರೆ ದೀಪ ಆರಿಹೋಗುವಂತೆ ರಾಗವೆಂಬ ಆಶೆಯು ತೀರಿಹೋದರೆ ವಿಜ್ಞಾನ

ರೂಪವಾದ ಆತ್ಮವು ಆರಿಹೋಗುತ್ತದೆ. ಆದುದರಿಂದ ಮೋಕ್ಷಕ್ಕೆ ನಿರ್ವಾಣವೆಂದು ಹೆಸರು : ಬುದ್ಧನ ನಿರ್ವಾಣಾನಂತರ ಎರಡು ಮೂರು ಶತಮಾನಗಳಾದ ಮೇಲೆ . . . ವಿದ್ವಾಂಸರು ಬುದ್ಧನ ಉಪದೇಶಗಳನ್ನೆಲ್ಲಾ ಸಂಗ್ರಹಿಸಿದರು (ಹಿಂದಸಾ. ೨೩) ; ಇವರೆಲ್ಲರೂ ಸರ್ವಕಾಮಗಳನ್ನೂ ಬುಡಸಹಿತ ಕಿತ್ತು . . . ನಿರ್ವಾಣವೊಂದರಲ್ಲಿಯೇ ಅಭಿರಮಿಸಿ, ವಿಮುಕ್ತಿಯನ್ನು ಸಾಧಿಸಿದವರು (ರಾಮಂಗ. ೨೩). [ಸಂ.]

ನಿರ್ವಾಣಕ್ಷೇತ್ರ (ನಾ). [ಜೈನ] ತೀರ್ಥಂಕರರೇ ಮೊದಲಾದವರು ಮೋಕ್ಷವನ್ನು ಪಡೆದ ಸ್ಥಳ. [ನಿರ್ವಾಣ+ಕ್ಷೇತ್ರ]

ನಿರ್ವಾಣಗೊಡು (ಕ್ರಿ). ಸಂಸಾರವನ್ನು ನಡೆಸಿಕೊಂಡು ಹೋಗಲು ಸಹಾಯ ಮಾಡು ; ಸಂಸಾರವನ್ನು ನಿಭಾಯಿಸಲು ಅನುವು ಮಾಡಿಕೊಡು : ಸರ್ವಜ್ಞ ಸರಸಿಜೋದರ ಕಂಠು ರತಿಗೆ ಗಾಂಧರ್ವವಿವಾಹವ ಮಾಡಿ ನಿರ್ವಾಣಗೊಟ್ಟು ಬೇಱಿರಿಸೆಂದು ಮುನಿ ನಿರ್ಗರ್ವದಿಂ ಬಿನ್ನಯಿಸಿದನು (ಮೋಹತ.೧೩-೬೨) ; ಸರ್ವರ ಬೀಳ್ಕೊಟ್ಟು ಪಿಚುಮಂದರಸವೀಂಟ ತರ್ವಾಯ ಭರದಿ ತಂಬುಲವ ಚರ್ವಣಗೆಯ್ದು ದಾದಿಯರಿಂಗೆ ಸುತರಕ್ಷೆ ನಿರ್ವಾಣಗೊಟ್ಟಳುತ್ಸವದಿ (ಮೋಹತ. ೧೬-೨೬). [<ನಿರ್ವಹಣ + ಕೊಡು$_1$]

ನಿರ್ವಾಣಧಾತು (ನಾ). ಮೋಕ್ಷಸತ್ವ : ಭಗವಂತನು ಅನುಪಾದಿಶೇಷವಾದ ನಿರ್ವಾಣಧಾತುವಿನಲ್ಲಿ ಪರಿನಿರ್ವಾಣ ಪಡೆದನು (ಬುದ್ಧಪ. ಮಿಲಿಂದ. ೧೦೧). "ರಾಗರಹಿತವಾದ ಸ್ಥಿತಿ" (ಬುದ್ಧಪ. ಮಿಲಿಂದ. ಕೋಶ). [ನಿರ್ವಾಣ+ಧಾತು]

ನಿರ್ವಾಣನಾಥ (ನಾ). ಜಿನ ; ಅರ್ಹಂತ : ಜಿನೇಂದ್ರಃ . . . ನಿರ್ವಾಣನಾಥಃ, ಸರ್ವಜ್ಞಃ, ತ್ರಿಲೋಕೇಶಃ, ತ್ರಿಕಾಲವಿತ್-ಈ ಆ ಜಿನೇಶ್ವರನ ಪೆಸರ್" (ಹಲಾಯು. ೧೫-೮೬); "ಆ ನಿರ್ವಾಣನಾಥನರುಹಂ ಶೌದ್ಧಂ ತ್ರಿಕಾಲವಿದ್ವೀತರಾಗಂ ಜ್ಞಾನವರ್ಧನಂ ಸರ್ವಜ್ಞನೆನೆ ಜಿನೇಂದ್ರಂ"(ಮಂಗರಾ. ೭-೨೩). [ನಿರ್ವಾಣ+ನಾಥ]

ನಿರ್ವಾಣಪದ (ನಾ). ಮೋಕ್ಷ ; ಕೈವಲ್ಯಪದವಿ : ನಿರ್ವಾಣಪದಸ್ಥಿತನಂ . . . ಸರ್ವೇಶ್ವರನಂ ಪೊಗಟ್ಟುದಪೂರ್ವಗುಣಸ್ತುತಿಶತಂಗಳಿಂ ಮತಿವಂತಂ (ಸಮಪ. ೧-೫೩); ನಿರ್ವಾಣಪದಕ್ಕೆ ಕಾಮಿತನಾಗಿ ಸಕಲಪ್ರಪಂಚನ ಗರ್ವಮಂ ನೆಗ್ಗಲೊತ್ತಿ . . . ಆಚರಿಸುವ ಪರಮವಿರಕ್ತರ ಉಪಾಧಿಕೆಯಿಲ್ಲದ ಕ್ರೀಗಳಾವುವಯ್ಯಾ (ಘನಮ. ೨೫-೨೧). [ನಿರ್ವಾಣ+ಪದ$_2$]

ನಿರ್ವಾಣಪೂಜೆ (ನಾ). ನಿರ್ವಾಣಕ್ಷೇತ್ರದ ಪೂಜೆ : ಅಂತು ನಿರ್ವಾಣಪೂಜೆಗೆ ನಿಖಿಲಗೀರ್ವಾಣಪತಿಗಳೇಟ್ಟಿರ್ಪಾಗಳ್ (ಪಂಠಾಮಾ. ೧೬-೮೫ ಪ). [ನಿರ್ವಾಣ+ಪೂಜೆ]

ನಿರ್ವಾಣಪ್ರಾಪ್ತಿ (ನಾ). ಮೋಕ್ಷವನ್ನು ಪಡೆಯುವುದು; ಕೈವಲ್ಯಪ್ರಾಪ್ತಿ : ಸಾಧನೆಯಿಂದಲೂ ಆತ್ಮವಿಕಾಸದಿಂದಲೂ ನಿರ್ವಾಣಪ್ರಾಪ್ತಿ (ಭಾರದ. ೬೭೫). [ನಿರ್ವಾಣ +ಪ್ರಾಪ್ತಿ]

ನಿರ್ವಾಣಭೂಮಿ (ನಾ). = ನಿರ್ವಾಣಕ್ಷೇತ್ರ : ನಿರ್ವಾಣಭೂಮಿಯ ನನೇಕಸುರಭಿಸುರತರುಕುಸುಮಗಂಧಾಕ್ಷತಂಗಳಿಂ ದಮರ್ಚಿಸಿ (ಅದಿಪು. ೧೬-೫೧ ಪ). [ನಿರ್ವಾಣ+ಭೂಮಿ]

ನಿರ್ವಾಣರೇಖೆ (ನಾ). (ಆಲಂ) ಕೊನೆಯ ಹಂತ ; ಸೀಮಾರೇಖೆ; ಪರಾಕಾಷ್ಠೆ : ಸ್ಮರವಿಜಯಕ್ಕಿದೆ ನಿರ್ವಾಣರೇಖೆಯೆನೆ ಮಸಗಿ ಮದನ ಮದಕರಿ ವಿಸಟಂಬರಿದುದೆನೆ ಕಾಮನೇಸಿನ ಪರಿಣತಿಯೆನೆ ತರುಣಿ ಬಹುವಿಧಂ ನರ್ತಿಸಿದಳ್ (ಮಲ್ಲಿಪು. ೮-೫೬). [ನಿರ್ವಾಣ+ರೇಖೆ]

ನಿರ್ವಾಣರೇಖೆಗೊಳ್ (ಕ್ರಿ). ಚಿತ್ರಣಕ್ಕೆ ಕೊನೆಯ ಸ್ವರೂಪವನ್ನು ಕೊಡು : ಆಗಸದೊಳಡರ್ದು ಪರೆದಿರದೀಗಡೆ ನಿರ್ವಾಣರೇಖೆಗೊಂಡನೊ ಬಿದಿಯೆಂಬೀ ಗಮನಿಕೆಯಂತಾ ದೇವಾಗಮ[ನ]ದ ಚೆಲ್ವುವಾಗಗೋಚರಮಲ್ತೇ (ಶಾಂತಿಪು. ೧೦-೫). [ನಿರ್ವಾಣರೇಖೆ+ಕೊಳ್$_1$]

ನಿರ್ವಾಣರೇಖೆವಡೆ (ಕ್ರಿ). ಅಲಂಕರಣದಲ್ಲಿ ಅಂತಿಮಸ್ವರೂಪವನ್ನು ಕೊಡು : ನೇತ್ರಪುತ್ರಿಕೆಗೆ ನಿರ್ವಾಣರೇಖೆವಡೆವಂತೆ ನಗೆಗಣ್ಗಳೊಳ್ ಕಜ್ಜಳರೇಖೆಯನಳಂಕರಿಸಿಯುಂ (ಚಂದ್ರಪು. ೬-೬೩ ಪ). [ನಿರ್ವಾಣರೇಖೆ+ಪಡೆ$_1$]

ನಿರ್ವಾಣಸಂಚಾರಿ (ನಾ). ಮುಕ್ತಿಮಾರ್ಗದಲ್ಲಿ ನಡೆಯುವವನು; ವಿರಕ್ತ; ಯೋಗಿ : ಗರ್ವಪಡದುಪಕಾರಿ . . . ನಿರ್ವಾಣಸಂಚಾರಿ ಉರ್ವರೆಗೆ ಗುರುವವನು (ಮಂಕುಕ. ೮೦೬). [ನಿರ್ವಾಣ+ಸಂಚಾರಿ]

ನಿರ್ವಾಣಸಮಾಧಿ (ನಾ). [ವೀಶೈ] ಎಂಟು ಬಗೆಯ ಸಮಾಧಿಗಳಲ್ಲಿ ಒಂದು ; ಮೋಕ್ಷಸಮಾಧಿ : ಆ ಲಿಂಗವನೆ ಸರ್ವಾಂಗದಲ್ಲಿ ವೇಧಿಸಿಕೊಂಡನೊಬ್ಬ ಶರಣ ಆ ಸರ್ವಾಂಗವನೆ ನಿರ್ವಾಣಸಮಾಧಿಯಲ್ಲಿ ನಿಲಿಸಿದನೊಬ್ಬ ಶರಣ ನಾನು ನಿರ್ವಾಣದಲ್ಲಿ ನಿಂದು ಆಗಮ್ಯನಾದೆನೆಂದರೆ ಭಕ್ತಿಕಂಪಿತನೆನಿಸಿ ಎನ್ನ ತನ್ನಲ್ಲಿಗೆ ಬರಿಸಿಕೊಂಡನೊಬ್ಬ ಶರಣ (ಅಪಚಂ. ೨೨೬-೧೦೨೭). 'ಕಾಯಸಮಾಧಿ' ಪರಾ. [ನಿರ್ವಾಣ+ಸಮಾಧಿ]

ನಿರ್ವಾಣಸ್ಥಾನ (ನಾ). ತಪೋಪ್ರದೇಶ : ನಿರ್ವಾಣಸ್ಥಾನದೊಳೇಳು ದಿವಸ ಮನಃಪೂರ್ವಕಮುಪವಾಸಮಿರ್ದು ಸರ್ವಶಕ್ತಿಯೊಳ್ಳು ಪ್ರಜ್ಞಪ್ತಿ ವಿದ್ಯೆಯನಂದುರ್ವೀಶ ಲಕ್ಷ್ಮಣ ಪಡೆಯೆ (ರಾಮವಿ. ೧೬-೧೫). [ನಿರ್ವಾಣ+ಸ್ಥಾನ]

ನಿರ್ವಾಣಹೊಂದು (ಕ್ರಿ). ೧. ಮೋಕ್ಷವನ್ನು ಪಡೆ. ೨. ಆರಿಹೋಗು ; ತಣ್ಣಗಾಗು ; ನಂದು : ಅವನ ದುಸ್ಸಹವಾದ ಜ್ವಲಂತ ಅಗ್ನಿಯು ಎಂದಿಗೂ ನಿರ್ವಾಣ ಹೊಂದದು (ಇಪ್ಪಕ. ೧೯೪). [ನಿರ್ವಾಣ+ಹೊಂದು$_1$ (<ಪೊರ್ದು)]

ನಿರ್ವಾಣಿ (ನಾ). ೧. ಬತ್ತಲೆ ಇರುವವನು ; ದಿಗಂಬರ. ೨. ವಿರಕ್ತ; ಮುಕ್ತ : ಕತ್ತೆ ಬತ್ತಲೆ ಇದ್ದಡೆ ನೆಟ್ಟನೆ ನಿರ್ವಾಣಿಯೆ (ಮೋಳಿಮಾ. ೨೩-೯೦); ಉಟ್ಟುದ ತೊಱೆದು ಊರ ಹಂಗಿಲ್ಲದೆ ನಿರ್ವಾಣಿಯಾಗಿ ನಿಜಮುಕ್ತಿಸೋಪಾನವಾಗಿಪ್ಪ ಕರಪಾತ್ರೆಯೆಂಬ ಬಿರಿದು (ಘನವ. ೧೯-೧೬) ; ನಿರ್ಮಾಯ ನಿತ್ಯ ನಿರ್ವಾಣಿ ಶ್ರೀಪ್ರಭುರಾಯ ಧರ್ಮಸ್ವರೂಪ ಸಂಗನ ಬಸವರಾಯ (ಸವನೋ. ೧-೧೪). [ಸಂ. ನಿರ್ವಾಣಿನ್]

ನಿರ್ವಾಣೋರ್ವಿ (ನಾ). = ನಿರ್ವಾಣಕ್ಷೇತ್ರ : ವಂದನಾಭಕ್ತಿಯಿ ನನವರತಂ ಬಂದು ಬಂದಾಗಳುಂ ಕುಂದದೆ ನಿರ್ವಾಣೋರ್ವಿಯಂ ಪೂಜಿಸುವಖಿಳವಿನೇಯೋತ್ಕರಾಶೇಷಲೋಕಂ (ಸುಕುಮಾ. ೪-೪೬). [ನಿರ್ವಾಣ+ಉರ್ವಿ]

ನಿರ್ವಾತ (ಗು). ೧. ಗಾಳಿಯಿಲ್ಲದ ; ಶೂನ್ಯವಾದ. ೨. ಸ್ಥಿರವಾದ ; ಪ್ರಶಾಂತವಾದ : 'ನಿರ್ವಾತದೀಪ' ಪರಾ. (ನಾ). ೩. ನಿಶ್ಚಲವಾದ ಗಾಳಿ; ನಿಂತುಹೋಗಿರುವ ಗಾಳಿ : "ನಿರ್ವಾತಃ . . . ನಿಂತು ಹೋದ ಗಾಳಿಯ ಹೆಸರು" (ಸಿದ್ಧಾಂತಿ. ೩೪೯). [ಸಂ.]

ನಿರ್ವಾತದೀಪ (ನಾ). ಗಾಳಿಯಿಂದ ಅಲುಗದಿರುವ ದೀಪ ; ಹೊಯ್ದಾಡದೆ ನಿಶ್ಚಲವಾಗಿ ಉರಿಯುತ್ತಿರುವ ದೀಪ : ನಿರ್ವಾತದೀಪದ ಕೆಂಪುಕುಡಿಯಂತೆ ಹಣೆ ತುಂಬ ಪ್ರಭೆ ಬೀರಿದ ಉದ್ದ ಕುಂಕುಮ (ನಿರಾಭ. ೩೧). [ನಿರ್ವಾತ+ದೀಪ$_2$]

ನಿರ್ವಾತವಲಯ (ನಾ). ಗಾಳಿಯಿಲ್ಲದ ಪ್ರದೇಶ. [ನಿರ್ವಾತ+ವಲಯ]

ನಿರ್ವಾದ (ನಾ). ೧. ವಾದಕ್ಕೆಡೆಯಾಗದುದು ; ನಿರ್ವಿವಾದವಾದುದು; ಆಕ್ಷೇಪವಿಲ್ಲದುದು. ೨. ಅಪವಾದ; ನಿಂದೆ; ದೂಷಣೆ:

"ಅಪವಾದಃ, ಉಪಕ್ರೋಶಃ, ನಿರ್ವಾದಃ . . . ಜುಗುಪ್ಸಾ – ಈ ೮ ಅಪವಾದದ ನಾಮಂ" (ಹಲಾಯು. ೨೪-೧೪೭); "ಅಪವಾದಂ ಜುಗುಪ್ಸೆ ನಿರ್ವಾದಮುಪಕ್ರೋಶಃ ಪರಿವಾದಮುದಪವರ್ಣವಾದಮುದುಪಕ್ರೋಶಮೆನೆ ನಿಂದೆಯಕ್ಕುಂ" (ಸುಂಗರಾ. ೨೬-೪). [ಸಂ.]

ನಿರ್ವಾಧೆ (ನಾ). ಬಾಧೆಯಿಲ್ಲದಿರುವುದು; ನಿರಾತಂಕ : ತದೀಯ ದೇಶಮನದಂ ನಿರ್ವಾಧೆಯಿಂದಾಳ್ದು (ಎಇ. XVI, ೩೮-೧೫; 1102).

[<ಸಂ. ನಿರ್ಬಾಧ]

ನಿರ್ವಾಹ (ನಾ). – ನಿರ್ವಾಪಣ. [ಸಂ.]

ನಿರ್ವಾಪಣ (ನಾ). ೧. ಹೊರಸುರಿಯುವುದು; ಚೆಲ್ಲುವುದು; ಸೂಸುವುದು. ೨. (ದಾನವಾಗಿ) ಕೊಡುವುದು; ಅರ್ಪಿಸುವುದು. ೩. ಪಿತೃಗಳಿಗೆ ಪಿಂಡವನ್ನರ್ಪಿಸುವುದು. ೪. ದಾನ; ಕೊಡುಗೆ. ೫. ಕೊಲ್ಲುವುದು; ಕೊಲೆ: "ಮಾರಣಂ, ನಿಶರಣಂ . . . ನಿರ್ವಾಪಣಂ . . . ಪ್ರಮಯಾ, ಹಿಂಸಾ, ಸಂಜ್ಞಪನಂ–ಈ ೨೧ ಕೊಲೆ" (ಹಲಾಯು. ೭೮-೬೨೪). ೬. ಕಳೆಯುವುದು; ನೀಗುವುದು; ಪರಿಹರಿಸುವುದು : ಮುನಿಸೆಂಬ ಕಿಚ್ಚನೊಳೆ ಬೆಂದು ನಿಲ್ಲದಂಬುಧಿಯ ನೋಡಿ ಪೊಕ್ಕರಿನ್ಯಪಸಾಧನದಿರವಿನಿಂದಮೆಂತೆನೆ ತನುನಿರ್ವಾಪಣನಿಮಿತ್ತ ದಿರವಂ ಪೋಲ್ಕುಂ (ಶಾಂತಿಪು. ೯-೧೫೬); ಲೇಸು ಮಾಡಿದೆ ನಾಳವನು ಖಂಡಿಸು ದಿವಸ ವಿಭಾಡಿಸಿದರೆ ಸುರೇಶನಾಪತ್ತಾಪನಿರ್ವಾಪಣವ ರಚಿಸಿದೆಲ (ಕುವ್ಯಾಅ. ೧೫-೬೧); ತಾಯೆ ಕೇಳವಧರಿಸಿ ಮೋಕ್ಷೋಪಾಯವನು ಸಂಸಾರದುಃಖನಿಕಾಯನಿರ್ವಾಪಣನೆನಿಪ್ಪ ಧ್ಯಾತ್ಮಯೋಗವನು (ನಿಭಾಗ. ೬-೧೨೨-೬೨). ೭. ನಾಶಗೊಳಿಸುವವನು; ವಿಧ್ವಂಸಕ : ಅಂಜನಾ ಸೂನು ರೂಪುದೋಜಾದನೊಡನೆ ಸಮರಾಟೋಪದಲಿ ರಿಪುಬಲಕೆ ಕಲಿ ನಿರ್ವಾಪಣನು ಕಲಿಸ್ಯಪಥ ಬೇಡಿದನಾ ಮಹಾಹವವ (ತೊರಂರಾ. ೬-೩೨-೪೭). [ಸಂ.]

ನಿರ್ವಾಪಿತ (ಗು). ಶಮನವಾದ; ಶಾಂತವಾದ : ಆ ಪುರೋಹಿತ ವಚನದಲಿ ನಿರ್ವಾ[ರ್ವಾ]ಪಿತಾಂತರ್ಮಥೆಯಲನಿಪನಾ ಪುರಪ್ರಾಂತ್ಯದಲಿ ಸುತ್ತಲು ಮೂಜುಯೋಜನದ ತೋಪಿನಲಿ ಕಟ್ಟಿಸಿದನಗ್ಗಪ ಭೂಪರಿಗೆ ಭವನವನು (ಕುವ್ಯಾಅ. ೧೧-೧೬). [ಸಂ.]

ನಿರ್ವಾಯ್ (ನಾ). ನೆಪವಿಲ್ಲದುದು : ತಾಯೆ ಕೇಳ್ಕುಂತಿಯು ಕುಮಾರಕರ ನೇರಿ ನಿರ್ವಾಯದಲಿ ಜೀವನೋಪಾಯಮಂ ಮಾಡಿ ವ್ಯಥಾಯುದಿಂ ಸಾವೆನೆಂದೆನುತ ಪೊರಡಲ್ (ತುಭಂಗ. ೨೬-೩೦). [<ನಿರ್ವ್ಯಾಜ]

ನಿರ್ವಾಯ್ (ನಾ). ಒಂದು ಬಗೆಯ ಬಾಣ (?) : ನೆಜ್ಜಿದು ನಿರ್ವಾಯಂ ನರುವಾಯಂ . . . ಕವಲ[ಂಬುವೆಂ]ಬಂಕದಂಬೆತ್ತ[ಲುಂ] ತುಜುಗಿ ನಡುವಿನಂ ಸಾರ್ದು ಸಾರ್ದಟ್ಟಿಚ್ಚು ಕಾದಿದರತಿರಥರ್ (ಪಂಪಭಾ. ೧೩-೬೯); "ನಿರ್ವಾಯಂ–ಬಾಯಿಲ್ಲದಿರುವ ಬಾಣ ಎಂದರೆ ಅಲಗಿಲ್ಲದ ಬಾಣ ?" (ಪಂಪವಿ. ೫೨೪). [?]

ನಿರ್ವಾಯು (ಗು). ಪ್ರ ನಿರ್ವಾತ ೧. 'ನಿರ್ವಾಯುಸ್ಥಳ' ಪರಾ. [ಸಂ.]

ನಿರ್ವಾಯುಸ್ಥಳ (ನಾ). ವಾಯುವಿಲ್ಲದ ಸ್ಥಳ; ಶೂನ್ಯಪ್ರದೇಶ : ನೀರನ್ನು ನಿರ್ವಾಯುಸ್ಥಳ (Vaccum)ಕ್ಕೆ ಬಿಟ್ಟು ಈ ಯಂತ್ರಗಳನ್ನು ನಡೆಸುತ್ತಿದ್ದನು (ತಿಲ್ಪನಾ. ೭೪); ನಿರ್ವಾಯುಸ್ಥಳ(Vaccum)ದಲ್ಲಿಯೂ ಅನಿಲಗಳಲ್ಲಿಯೂ ಶಾಖವು ವಿಕಿರಣ (Radiation)ದ ಮೂಲಕ ಹರಡುತ್ತದೆ (ತಿಲ್ಪನಾ. ೧೨೧). [ನಿರ್ವಾಯು+ಸ್ಥಳ(=ಸ್ಥಲ)]

ನಿರ್ವಾರಿಸು (ಕ್ರಿ). ತೊಲಗಿಸು; ಪರಿಹರಿಸು: ನಿವಾರಿಸು: ತಮವ ನಿರ್ವಾ[ಪಾಪಾಂ. ವ್ಯಾ]ರಿಸಿದ ಹರನಂಘ್ರಿಗಂ ಮಣಿದು ಹರುಷಿಸಿದಳದ್ರಿಜಾತೆ (ನೆಂಕಾರಾ. ೪-೭-೩೨). [ನಿರ್ವಾರಣ್+–ಇಸು]

ನಿರ್ವಾರ್ಯ (ಗು). ೧. ತಡೆಯಲಾಗದ; ಸಹಿಸಲಾಗದ. ೨. ನಿರ್ಭಯದಿಂದ ವರ್ತಿಸುವ; ಧೈರ್ಯವಾಗಿರುವ. [ಸಂ.]

ನಿರ್ವಾಸನ(ನಾ). ೧. ವಾಸಕ್ಕೆ ಅವಕಾಶವಿಲ್ಲದಂತೆ ಮಾಡುವುದು; ದೇಶದಿಂದ ಹೊರದೂಡುವುದು; ಗಡೀಪಾರು ಮಾಡುವಿಕೆ : ಭಾರತದೊಳಕ್ಕೆ ಪ್ರವೇಶ ಮತ್ತು ಅಲ್ಲಿಂದ ಉತ್ಕ್ರಮಣ ಮತ್ತು ನಿರ್ವಾಸನ (ಭಾಧಾನ. ೨೬೯). ೨. ನಾಶಮಾಡುವುದು; ಕೊಲ್ಲುವುದು; ಕೊಲೆ : "ಮಾರಣಂ, ನಿಶರಣಂ . . . ನಿರ್ವಾಸನಂ, ಕದನಂ . . . ಸಂಜ್ಞಪನಂ—ಈ ೨೧ ಕೊಲೆ" (ಹಲಾಯು. ೭೮-೬೨೪). [ಸಂ.]

ನಿರ್ವಾಸನೆ (ನಾ). ವಾಸನೆಯಿಲ್ಲದಿರುವಿಕೆ ; ನಿರ್ಗಂಧ.

[ಸಂ. ನಿರ್ವಾಸನಾ]

ನಿರ್ವಾಸಿತ (ಗು). ೧. ಹೊರದೂಡಲ್ಪಟ್ಟ : ಅವಳ ಮರಣವಿಚಾರದಲ್ಲಿ ಅಥವಾ ಅವಳ ಚಿರನಿರ್ವಾಸಿತ ವಿಚಾರದಲ್ಲಿ ಆ ಕೆಟ್ಟ ಆಲೋಚನೆಯು ನಡದಿರಬೇಕು (ಕಪಾಳು. ೧೦೮). (ನಾ). ೨. ಹೊರದೂಡಲ್ಪಟ್ಟವನು; ನಿರಾಶ್ರಿತ : ನಾನು ಅಲೆಅಲೆಯುತ್ತ ಈಗ ಈ ನಿರ್ವಾಸಿತರ ಕ್ಯಾಂಪಿಗೆ ಬಂದೆ (ಹೊಸಬೆ. ೪೩); ನಿರ್ವಾಸಿತನೂ ನಿರಾಶ್ರಿತನೂ ಆದ ಮಾರ್ಕ್ಸ್‌ನಿಗೆ ಲಂಡನ್‌ಪಟ್ಟಣವು ಆಶ್ರಯವನ್ನು ಕೊಟ್ಟಿತು (ಮೂವಾದ. ೨೭). [ಸಂ.]

ನಿರ್ವಾಹ (ನಾ). ೧. ನಿವಾರಣೋಪಾಯ; ಬೇರೆಯ ದಾರಿ; ಗತ್ಯಂತರ : ಇಂತು ಗುರುವಚನ ತರ್ಕಪ್ರಶ್ನೆಗಳ್ಗೆ ಸೊದಲಿಂದಮುಂ ನಿರ್ವಾಹಮುಂ ಪೇಳೆ (ಪಪ್ರರಾ. ೧೧-೨೮೬); ಇತ್ತಲು ಮಹೀಶನ ಹೊರೆಯಲಾಯುತ್ತಾಪತಿತ . . . ಕರೆಸಿ ಧೌಮ್ಯಂಗಜುಹಲಿದು ನಮ್ಮರಸು ಗಳಿಗಸಘಾತಸೂಚಕವರಿದಿದಱ ನಿರ್ವಾಹವೆಂದೊಡೆ ನೃಪತಿ ಚಿಂತಿಸಿದ (ಕುವ್ಯಾಅ. ೧೩-೨೭); ಆ ಜ್ವರದಲ್ಲಿ ಅವನು ಸಂಪೂರ್ಣ ಕ್ಷೀಣವಾಗಿ ಹೋಗಿದ್ದ . . . ಆದರೂ ಕೆಲಸ ಮಾಡದೆ ನಿರ್ವಾಹವಿಲ್ಲ (ರಕ್ತರೂ. ೨೯). ೨. ವಾಸದ ಏರ್ಪಾಟು,—ವ್ಯವಸ್ಥೆ : ನಿರ್ವಾಹವಾಯಿತ್ತು ಬಸವಣ್ಣಂಗೆ ಕಪ್ಪಡಿಯ ಸಂಗಯ್ಯನೆಲ್ಲಿ (ಸುಡಿಪೂ. ೨೬-೨೭); ಮೆಚ್ಚಿದಳಾ ವಿರಾಟನ ಪಟ್ಟಕೆ ವೀರರ ವಧುವನಾ ಸಖಿಜನದೊಳಗೆ ನೇಮಿಸಿದಳ ನಿಬರಿಗಾಯ್ತು ನಿರ್ವಾಹ (ಕುವ್ಯಾವಿ. ೧-೩೨). ೩. ನಡೆಸಿಕೊಂಡು ಹೋಗುವುದು; ನಿಭಾಯಿಸುವುದು; ನಿರ್ವಹಿಸುವಿಕೆ : ಭೂಮಿಪತಿ ಭುಲ್ಲನಿಸಿದನು ನಿಸ್ಸೀಮಸಂತೋಷದಲಿ ಸುಜನಸ್ತೋಮ ರಕ್ಷಣಕಾಪ ನಿರ್ವಾಹದ ರೂಢಿಯಲಿ (ಕುವ್ಯಾಅ. ೧–೧೦); ಉರ್ವಸಂತಾನಮುಂ ಕಾಣದಿರ್ಪ್ಪುದುಕುಶಲನಿರ್ವಾಹಮುಂ ನೆನೆದು ರಕ್ಷಿಪುವರಂ ಸುಡಿದನೇಕಾಂತ ಜೊಳ್ ಜಾನಕಿಯೊಳು (ಜೈಮಿಭಾ. ೧೪-೧೫೫). ೪. ಬದುಕು; ಬಾಳುವೆ : ಇನ್ನೆನ್ನ ನಿರ್ವಾಹಮುಮರಸನ ದೆಸೆಯೊಳಾದ ಸೋಹ ಮುಮನುಬಾದುದೆಂದು ನುಲಮಲಮಜುಗುತ್ತುಂ (ಸುಕುಪಾ. ೬–೫ ಪ); ಬೀಸಿದರೆ ಸಿಲುಕುವರು ಮಾಯಾಪಾಶದೊಳಹಂಕಾರಿಗಳು ತದ್ದೇಶಕಾಲ ಕ್ರಿಯೆಗಳಲಿ ನಿರ್ವಾಹವನು ಬೆದಕಿ ಬೇಸಱುವರು (ಕುವ್ಯಾಭೀ. ೬–೫೮); ಸೀತಾರಾಮುಲಕ್ಷ್ಮಣರು . . . ಫಲಗಳ ಮೇಲೆ ನಿರ್ವಾಹ ಸಾಗಿಸುತ್ತ (ತುಳಪೀ. ೧೭೫). ೫. ಸಮಾಪ್ತಿಗೊಳಿಸುವುದು; ಮುಕ್ತಾಯ; ಉಪಸಂಹಾರ : ಚೆನ್ನಬಸವರಾಜದೇವರು ನಿರ್ವಾಹವಾಗಿ ನಿರೂಪಿಸಿದ ಪ್ರಸ್ತಾವದ ಪಡಿನ (ನಚಸಂ. ೨೬೧–೧೨); ಪಂಚಾಕ್ಷರಿ ಮುಂತಾದ ಪದಕ್ಷರಿಯೊಳಗಾದ ಐವತ್ತೊಂದನೆಯ ಅಕ್ಷರದಲ್ಲಿ ನಿರ್ವಾಹ ವೇದ ಮುಂತಾದ ಶಾಸ್ತ್ರದೊಳಗಾದ ಪುರಾಣಾಗಮುಂಗಳೆಲ್ಲವೂ ತಾನಾರೆಂಬುದ ತಿಳಿಯುವುದಕ್ಕಿಕ್ಕಿದ ಭಿತ್ತಿ (ಸರ್ವಜ್ಞ. ೧೩೫–೬೬). ೬. ಆಂತ್ಯ; ಕೊನೆ : ಅವಳು ಬಂದಾಗಿನಿಂದ ಮನೆಗೆ ಹೋಗುವವರೆಗೂ ಕೊಚ್ಚಿ ಕೊಂಡ ಜಂಬಕ್ಕೆ ನಿರ್ವಾಹವೇ ಇಲ್ಲ (ರೂಢಿ). [ಸಂ.]

ನಿರ್ವಾಹಕ (ಗು). ೧. ನಡೆಸುವ ; ನಿರ್ವಹಿಸುವ : "ಕಾರ್ಯ ನಡಸುವ ; ನಿರ್ವಾಹಕ. ಕಾರ್ಯನಿರ್ವಾಹಕ ಶಾಖೆ ; ಕಾರ್ಯಾಂಗ" (Executive. ಪತ್ರಿಕಾ. ೩೬). (ನಾ). ೨. ನಿರ್ವಹಿಸುವವನು ; ಮುನ್ನಡೆಸುವವನು : ಭರತಕುಲನಿರ್ವಾಹಕನೆ ಬಾ ಕುರುಕುಲಾನ್ವಯ ದೀಪ . . . ಬಾಯೆಂದಪ್ಪಿದನು ಮಗನ (ಕುಪ್ಯಾಸ. ೧೨-೨೪). [ಸಂ.]

ನಿರ್ವಾಹರೇಖೆ (ನಾ). = ನಿರ್ವಹಣಲೇಖೆ : ಅಬ್ಬಱಂ ಚಿನ್ನಪೂವಿನ ಚೆಂಬೊನ್ನ ಮಯೂಖಲೇಖೆಗಳಿನಂತಾ ಚಿತ್ರ ನಿರ್ವಾಹರೇಖೆ ನೆರಂಬೆತ್ತಿರೆ ನೋಡಿ ನೋಡಿ ತಲೆದೂಗಿತ್ತಂಗನಾಸಂಕುಲಂ (ಜಾವಿ. ೧೭-೧೧೭).

[ನಿರ್ವಾಹ+ರೇಖೆ]

ನಿರ್ವಾಹಸಂಗತಿ (ನಾ). ಪರಿಹಾರ ; ನಿವಾರಣೆ : ವಾರಕದ ವಿವಿಧಾ ಭರಣಶೃಂಗಾರವಂತಿರಲೀಕೆಯೊಡಿದ ಸಾರಭಾಷೆಗೆ ನೆನೆಯಿರೇ ನಿರ್ವಾಹ ಸಂಗತಿಯ (ಕುಪ್ಯಾಸ. ೧೪-೮೪). [ನಿರ್ವಾಹ + ಸಂಗತಿ$_2$]

ನಿರ್ವಾಹಸಾಧನ (ನಾ). ನೆರವೇರಿಸಲು ಬೇಕಾಗುವ ಸಾಮಗ್ರಿ,— ಸಾಧನ : ಸರ್ವಹಿತವೊಂದುಂಟೆ ? ಅದಕೆ ಪಥ ನಮಗುಂಟೆ ? ನಿರ್ವಾಹಸಾಧನಗಳೆತ್ತ ? ಗುರುವೆತ್ತ ? (ಮಂಕುಕ. ೮೫೪).

[ನಿರ್ವಾಹ + ಸಾಧನ]

ನಿರ್ವಾಹಸೂತ್ರ (ನಾ). ಚಲಿಸುವಂತೆ ಮಾಡುವ ಸೂತ್ರ,— ದಾರ : ಹೂಹೆಗಳು ಹೊಯ್ದಾಡವೇ ನಿರ್ವಾಹಸೂತ್ರದ ಕುಣಿಕೆಗಾಱನ ಗಾಹಿನಲಿ (ಕುಪ್ಯಾಸ. ೯-೯). [ನಿರ್ವಾಹ + ಸೂತ್ರ]

ನಿರ್ವಾಹಿಸು (ಕ್ರಿ). ೧. ನಡೆಯುವಂತೆ ಮಾಡು ; ನಡೆಸು ; ನಿಭಾಯಿಸು : ತೊಡಗಿದೀತನ ರಾಜಕಾರ್ಯವ ಕೆಡಿಸದಿರು ನಿರ್ವಾಹಿಸಲಿ ನೀ ಬಿಡುಬಿಡೆನೆ ಜಱೆದನು ಮುರಾಂತಕನಿಂದ್ರನಂದನನ (ಕುಪ್ಯಾಕ. ೧೭-೪). ೨. ಮುಗಿಸು ; ನೆರವೇರಿಸು ; ಈಡೇರಿಸು : ಅಸುರರಿಪು ಕೃಪೆಯಿಂದ ನಿರ್ವಾಹಿಸಿದನೀ ಯಜ್ಞವನು (ಕುಪ್ಯಾಸ. ೧೧-೨೬).

[ನಿರ್ವಾಹ + – ಇಸು$_3$]

ನಿರ್ವಿಕಲ್ಪ (ನಾ). ೧. ಬದಲಾಗದಿರುವಿಕೆ; ಮಾರ್ಪಾಡಿಲ್ಲದಿರುವಿಕೆ; ಸ್ಥಿರತೆ ; ದೃಢತೆ : ನಿರಾಲಸ್ಯದಿಂ ನಿರ್ಬಂಧದಿಂ ನಿರ್ವಿಕಲ್ಪದಿಂ ನೀಮಿರ್ವರುಂ ನಿಶ್ಚಯಮೋದುವೊಡಾವುಮಾ ಮಾರ್ಗದಿಂದೋದಿಸಿ ಪಂಡಿತರಾಗೆ ಮಾಟ್ಪೆಂ (ಸುಕುಮಾ. ೨-೫೫ ಪ) ; ಮುಕುಳನನಿಮಿಳನಂಗಳ್ ವಿಕಾಸಹಾಸಪ್ರಬೋಧನೋನ್ಮೇಷಂಗಳ್ ಪ್ರಕಟಿಸುಗುಮ್ಮೆಕ್ಯಮಂ ನಿರ್ವಿಕಲ್ಪದಿಂ ಗೌಣಮುಖ್ಯವೃತ್ತಿಕೃತಂಗಳ್ (ಕಾವ್ಯಾವ. ೯೧೪) ; ಹೀಗೆ ಬ್ರಹ್ಮವಸ್ತು . . . ತನಗೆ ತಾನು ನಿರ್ಗುಣ ನಿರಾಕಾರ ನಿರ್ವಿಕಾರ ನಿರ್ವಿಕಲ್ಪ ಕಾಲದೇಶರಹಿತ ಸಚ್ಚಿದಾನಂದದಂತಿರುತ್ತದೆ (ನಿಶೆಉ. ೨೩೫). ೨. ಭೇದಭಾವವಿಲ್ಲದಿರುವಿಕೆ; ಅಭಿನ್ನತೆ: ಸ್ಥಾನದಾಚಾರ್ಯ್ಯರ್ಗ್ಗಂ ಎರಡುಂ ಕೇರಿಯ ಸಾಸಿರ್ವ್ವರ್ಗ್ಗಂ ನಿರ್ವಿಕಲ್ಪದಿಂ ಸಖಾಯರಾಗಿ ಬಳಿವನ್ನು ಬಾಳ್ವುದು (ಸೌಇಇ. XI-1, ೬೪-೩೬ ; 1028). ೩. = ನಿರ್ವಿಕಲ್ಪಸಮಾಧಿ : ನಿರ್ವಿಕಲ್ಪ [ಪಾಠಾಂ. ನಿರ್ವಿಕಲ್ಪಿತ]ವೆಂಬ ನಿಜದೊಳಗಯ್ಯ ನಿರಹಂಭಾವದಲ್ಲಿ ನಾನಿದ್ದೆನಯ್ಯ ನೋಡಿಹೆನೆಂದರೆ ನೋಡಲಿಲ್ಲ ಕೇಳಿಹೆನೆಂದರೆ ಕೇಳಲಿಲ್ಲ ಘನ ನಿರಂಜನದ ಬೆಳಗಿಂಬಾದುದೇನೆಂಬೆ (ಅವಚಂ. ೧೫೧-೬೪೨) ; ಸಮಾಧಿಯೆಂಬ ಯೋಗವು ಸಂಪ್ರಜ್ಞಾತ ಅಸಂಪ್ರಜ್ಞಾತ . . . ಸವಿಕಲ್ಪ ನಿರ್ವಿಕಲ್ಪವೆಂದು ಎರಡು ಪ್ರಕಾರವು (ಹಿಂದಸಾ. ೧೦೭). ೪. ಬದಲಾಗದಿರುವವನು ; ಒಂದೇ ರೀತಿಯಾಗಿರುವವನು ; ನಿಶ್ಚಲ : ಜಯಜಯ ವಾಸುಪೂಜ್ಯ ಸುರಪೂಜ್ಯ . . . ನಿರ್ಮಮ ನಿರ್ವಿಕಲ್ಪ ನಿಷ್ಕ್ರಿಯ (ಸುಕುಮಾ. ೪-೪೮) ; ನಿರಾವರಣ ನಿರ್ಮಾಯ ನಿರ್ಮಳ ನಿರ್ವಿಕಲ್ಪ . . . ನಿರಾಳ ಪಂಪಾವಿರೂಪಾಕ್ಷ ಶರಣು (ಹಚಶಾ. ೧-೪) ; ನಿರ್ವಿಕಲ್ಪಾಕಲ್ಪ ಕೇಳು ಚತುರ್ವಿಧದ ಪದವಿಗಳು ಮೊದಲಹ ಸರ್ವಭೋಗಸುಖಂಗಳಂ ಕೊಡುವೆಂ ಬಯಸು ನಿನಗೆ (ಬಸಪು. ೧೮-೧೦೦) ; ನಿರುಪಾಧಿಕ ನಿರ್ವಿಕಾರ ನಿರ್ವಿಕಲ್ಪ . . . ಕೃಪಾಮೃತೇಕ್ಷಣ ಪರಶಿವನುಂ (ಭೈರಸೂ. ೧). [ಸಂ.]

ನಿರ್ವಿಕಲ್ಪಕ (ನಾ). = ನಿರ್ವಿಕಲ್ಪಸಮಾಧಿ : ಧ್ಯಾನ ನಿಶ್ಚಲವೇ ಸಮಾಧಿಯದೇ ನಿದಾನಿಸಲಾಱು ಭೇದವು ಮಾನನಿಧಿ ಸವಿಕಲ್ಪಕವು ತಿಳಿ ನಿರ್ವಿಕಲ್ಪಕವು (ಅಮೃತ. ೬-೫೫) ; ನಿರ್ವಿಕಲ್ಪಕವು ವಿಶೇಷಣ ವಿಶೇಷ್ಯ ಸಂಬಂಧವನ್ನು ಗ್ರಹಿಸದಿರುವ ಜ್ಞಾನ (ಭಾತತ್ತ್ವ. ೫೮೮); ಪ್ರತ್ಯಕ್ಷಜ್ಞಾನ ನಿರ್ವಿಕಲ್ಪಕ, ಸವಿಕಲ್ಪಕವೆಂದು ಎರಡು ಪ್ರಕಾರ (ಹಿಂದಸಾ. ೨೦೨).

[ಸಂ.]

ನಿರ್ವಿಕಲ್ಪನೆ (ನಾ). ಏಕಾಗ್ರತೆ; ದೃಢಚಿತ್ತತೆ: ಎನ್ನ ನಿರ್ವಿಷಯವೇ ತಾಂಬೂಲ ಎನ್ನ ಮೌನವೇ ಘಂಟೆ ಎನ್ನ ನಿರ್ವಿಕಲ್ಪನೆಯೇ ಪ್ರದಕ್ಷಿಣೆ ಎನ್ನ ಶುದ್ಧಿಯೇ ನಮಸ್ಕಾರ (ಅವಚಂ. ೨೦೬-೯೨೭).

[ಸಂ. ನಿರ್ವಿಕಲ್ಪನ]

ನಿರ್ವಿಕಲ್ಪಭೂಮಿ (ನಾ). ನಿರ್ವಿಕಲ್ಪಸಮಾಧಿಯ ಸ್ಥಿತಿ : ದೇಶಕಾಲ ಆಕಾರಗಳಿಗೆ ಒಳಪಟ್ಟಿರುವುದೆಲ್ಲಾ ವಿಕಲ್ಪವೆಂದೂ ಅದಿಲ್ಲದ ಸ್ಥಿತಿಯು ನಿರ್ವಿಕಲ್ಪವೆಂದೂ ಹೇಳುತ್ತಾರೆ . . . ಹಾಗೆಯೇ ಅಭೇದ ದೃಷ್ಟಿಯಿಂದ ನಿರ್ವಿಕಲ್ಪಭೂಮಿಯನ್ನು ಸಾಧಿಸಬೇಕು (ಭಾರದ. ೨೧೬).

[ನಿರ್ವಿಕಲ್ಪ + ಭೂಮಿ]

ನಿರ್ವಿಕಲ್ಪಸಮಾಧಿ (ನಾ). [ಯೋಗ] ಯಾವ ವ್ಯಾಪಾರವೂ ಇಲ್ಲದೆ ಚಿತ್ತಲಯಾಭಿಮುಖವಾಗಿರುವ ನಿಶ್ಚಲಸಮಾಧಿ ; ೫ ಸಮಾಧಿಯ ಧ್ಯಾತೃ, ಧ್ಯಾನ ಮತ್ತು ಧ್ಯೇಯವೆಂಬ ತ್ರಿಪುಟಿಯಲ್ಲಿ ಧ್ಯಾತೃ, ಧ್ಯಾನಭಾವಗಳು ಹೋಗಿ ಧ್ಯೇಯ ಮಾತ್ರ ಉಳಿದಿರುವ ಜ್ಞಾನ ; ಚಿತ್ತವು ಧ್ಯೇಯವಸ್ತುವಿನಲ್ಲೇ ಲಯ ಹೊಂದುವಿಕೆ : ನಿರ್ವಿಕಲ್ಪಸಮಾಧಿಯೊಂದನಿರ್ವಚನೀಯಮೌನಮಂಕರುವಿಟ್ಟ ಶಾಂತಿಯ ನಿಜಾಕೃತಿಯೊ ಪೇಳೆನಲ್ಕೈತಂದನಾ ಸನಾತನ ಯೋಗಿ (ತ್ರೀರಾಮಾ. ೧೭೭-೩೭). [ನಿರ್ವಿಕಲ್ಪ + ಸಮಾಧಿ]

ನಿರ್ವಿಕಲ್ಪಿತ (ನಾ). ಬದಲಾಗದಿರುವುದು ; ನಿಶ್ಚಲವಾದುದು ; ಸ್ಥಿರವಾದುದು : ನಿರ್ವಿಕಲ್ಪಿತದ ಅದ್ವೈತವ ನೋಡಿರೇ ಬೆಳಗಿನೊಳಗಣ ಬೆಳಗು ಅಡಗಿತ್ತು ನೋಡಿರೇ (ಅವಚಂ. ೨೨೧-೧೦೦೪). [ಸಂ.]

ನಿರ್ವಿಕಳತೆ (ನಾ). ಪರಿಪೂರ್ಣವಾಗಿರುವುದು ; ಪೂರ್ಣತೆ : ನಿರ್ಘಟದಲ್ಲಿ ಘಟ ಹುಟ್ಟಿ ಪ್ರಕಟಿಸುವುದ ಕಂಡೆ ನಿರ್ವಿಕಳತೆಯಲ್ಲಿ ವಿಕಳತೆಯು ಹುಟ್ಟಿ ಉಭಯಗತಿ ಆ ಉಭಯದ ಗತಿಗೆಟ್ಟವರ ಕಂಡೆ (ಮೋಳಿಮಾ. ೧೦-೩೬). [ಸಂ. ನಿರ್ವಿಕಲತಾ]

ನಿರ್ವಿಕಾರ (ಗು). ೧. ಬದಲಾವಣೆ ಹೊಂದದ ; ವಿಕಾರಗೊಳ್ಳದ; ಸ್ಥಿರಭಾವದ : ನಿಃಪಿತ ನಿರುತ್ತರ ನಿರಾಮಯ ನಿರ್ವಿಕಾರಾಕಾರ ಚಿತ್ತೈಸು (ಬಸಪು. ೬೧-೪೩) ; ಅದನ್ನು ಅವರು ಈವರೆಗೂ ನಿರ್ವಿಕಾರ ಭಾವದಿಂದ ಸಾಗಿಸುತ್ತಲೇ ಇದ್ದರು (ರಂಗರೋ. ೯೭) ; ಸರ್ವವನು ತನ್ನಾತ್ಮವೆಂದು ಬದುಕುವನು ನಿರ್ವಿಕಾರಾಂತರಂಗದಿ ಜಗವ ಧರಿಸುವನು ಸರ್ವಮಂಗಳನವನು (ಮಂಕುಕ. ೮೦೫). (ನಾ). ೨. ಬದಲಾವಣೆಗೊಳ್ಳದವನು ; ಸಮಭಾವದಿಂದಿರುವವನು ; ಪರಮಾತ್ಮ : ಉರ್ವಿಯೊಳು ಸೈಗೆಡೆದು ಸವಿನಯಪೂರ್ವಕದಿ ವಂದಿಸುತ ದಸರಯ ನಿರ್ವಿಕಾರನು ಮತ್ತೆ ಅಡಿಗಳಿಗೆಱಗಲು (ಬಸಪು. ೩೮-೨೭) ; ಸರ್ವಸಂಸಾರ ಕಾರಣಭಕ್ತಿಗಮ್ಯನಂ ನಿರ್ವಿಕಾರನ ಲಿಂಗವರ್ಜಿತನುದಾರನಂ ಸರ್ವಾಂಗವೊಂದಿ ವಂದಿಸುವೆಂ (ವೀಶೈಪು. ೬-೧-೩೫) ; ಉಪಮಾತೀತ ನಿರುಪಾಧಿಕ ನಿರ್ವಿಕಾರ ನಿರ್ವಿಕಲ್ಪ . . . ಕೃಪಾಮೃತೇಕ್ಷಣ ಪರಶಿವನು (ಭೈರಸೂ. ೧).

[ಸಂ.]

ನಿರ್ವಿಕಾರತೆ (ನಾ). ಬದಲಾಗದಿರುವಿಕೆ; ಸ್ಥಿರತೆ: ಆ ತಪಸ್ವಿ ನಿಸ್ಸಂಪ ನಿರ್ವಿಕಾರತೆಯಿಂ ರಂಜಿಸಿರ್ಪನ್ನೆಗಂ (ಕಬಚಂ. ೨-೧೦೫ ಪ); ಸ್ವರೂಪ ಬದಲಾಯಿಸದೆ ಸರ್ವವು ಋಜು ಕುಂಡಲ ವಕ್ರಭಾವಗಳನ್ನು ಹೊಂದುವ ರೀತಿಯಲ್ಲಿ ಆಗುವ ಪರಿಣಾಮವೊಂದು. ಎರಡನೆಯ ಪರಿಣಾಮ ವಿಕಾರವಲ್ಲ, ನಿರ್ವಿಕಾರತೆಗೆ ಬಾಧಕವಿಲ್ಲ ಎಂದು ಪ್ರಾಚೀನರ ಹೃದಯ (ಹಿಂದಸಾ. ೬೪). [ಸಂ. ನಿರ್ವಿಕಾರತಾ]

ನಿರ್ವಿಕಾರಿ (ಗು). ೧. =ನಿರ್ವಿಕಾರ ೧: ಕೇವಲ ನಿರ್ವಿಕಾರಿ ಚೈತನ್ಯಕ್ಕೆ ಈಶ್ವರತ್ವ ಜಗತ್ಸೃಷ್ಟ್ಯಾದಿಗಳ ಕೂಡದಾಗಿಯೂ ಅದಕ್ಕೆ ಈಶ್ವರತ್ವವ ಹೇಳಕೂಡದು (ಈಶ್ವಸ್ವ. ೨-೭). (ನಾ). ೨. ವಿಕೃತಿಯನ್ನು ಹೊಂದದಿರುವಂತಹುದು; ಬದಲಾವಣೆ ಹೊಂದದಿರುವುದು: ನಿರ್ವಿಕಾರಿಗಳಪ್ಪ ಎ ಬಿ ಒ ಹಿ ಎಂಬಿವು ಕಡೆಯಾದ ನಿಪಾತಮುಂ ಅವಧಾರಣೆಯುಂ ವಿಶಂಕೆಯುಂ ಎಂದಿವರ್ಕೆ ಸ್ವರಂ ಪರಮಾಗೆ ಸಂಧಿಯಿಲ್ಲ (ಕಬಾದ. ೫೬ ವೃತ್ತಿ). [ಸಂ. ನಿರ್ವಿಕಾರಿನ್]

ನಿರ್ವಿಘ್ನ (ಗು). ೧. ಅಡ್ಡಿಯಿಲ್ಲದ; ತೊಡಕುಂಟಾಗದ; ಸರಾಗವಾದ. (ನಾ). ೨. ಅಡ್ಡಿಯಿಲ್ಲದಿರುವಿಕೆ; ತೊಡಕುಂಟಾಗದಿರುವುದು; ಸರಾಗ: ಯಜ್ಞ . . . ಮತ್ಯತಿಗೆ ಮಾಟಿಕ್ಕೋರಂತೆ ನಿರ್ವಿಘ್ನಮಂ (ಪಸ್ಪಪು. ೧-೧೦); ನಾನೆ ಬಹೆನತಿಬಲಸಮನ್ವಿತಂ ನಿರ್ವಿಘ್ನಮೆಸಗೆ (ತ್ರೇರಾಮಾ. ೨೯-೪೪). ೩. ವಿಘ್ನಗಳನ್ನು ಹೊಂದದಿರುವವನು: ನಿರಸೂಯ ನಿರ್ವಾಣಪದ ನಿರ್ವಿಘ್ನ ನಿರತಿಶಯ ನಿಸ್ಸೀಮ . . . ನಿರ್ವಿಕಾರಾಕಾರ ಚಿತ್ಕೃಸು (ಬಸಪು. ೬೧-೪೬).

ನಿರ್ವಿಘ್ನಮಾಗಿ, ನಿರ್ವಿಘ್ನವಾಗಿ =ತೊಡಕಿಲ್ಲದೆ; ಸರಾಗವಾಗಿ: ಸರ್ವಸಂಪತ್ಸಮೃದ್ಧಿಗಳಿಂ ಸ್ವಧರ್ಮದಿಂ ನಿರ್ವಿಘ್ನಮಾಗಿ ಸಕಲಪ್ರಕೃತಿಡಾತಿ ಚಾತುರ್ವರ್ಣ್ಯಮುಂ ಬಿಡದೆ ಪೊರೆವಲ್ಲಿ (ಜೈಮಿಭಾ. ೧೪-೧೫೫); ತಮ್ಮೆಲ್ಲರ ಅನುಗ್ರಹದಿಂದ ಸಕಲವೂ ನಿರ್ವಿಘ್ನವಾಗಿ ನಡೆದಿದೆ(ಚೆತಂಬಾ.೪). [ಸಂ.]

ನಿರ್ವಿಘ್ನತೆ (ನಾ). ಅಡ್ಡಿಯುಂಟಾಗದಿರುವುದು; ತೊಡಕಾಗದಿರುವುದು: ಸಮಸ್ತಸಿದ್ಧಿಪ್ರದಾಯಕ ವಿನಾಯಕ ಮಾಳ್ಪುದೆಮಗೆ ನಿರ್ವಿಘ್ನತೆಯನು (ಜೈಮಿಭಾ. ೧-೩). [ಸಂ. ನಿರ್ವಿಘ್ನತಾ]

ನಿರ್ವಿಘ್ನದಾಯಕ (ನಾ). ೧. =ನಿರ್ವಿಘ್ನತೆ: ಕರಿಭಾಕೃತಿಯೆನಿಪ ವದನದ ಕರದ ಪಾಶದ ಮೋದಕದ ವಿಸ್ತರದ ಗಣಪತಿ ಮಾಡೆಮಗೆ ನಿರ್ವಿಘ್ನದಾಯಕವ (ಕುಸ್ಯಾಳ. ೧-೩). ೨. ಗಣಪತಿ; ವಿಘ್ನೇಶ್ವರ: ಕಾಯಕವಿದು ನಿನ್ನದು ಕೇಳು ನಿರ್ವಿಘ್ನದಾಯಕ ಎನಗೆ ಸತ್ಯವೆಯ ಜೀಯ ಕಾರುಣ್ಯದಿ ಕುಡು (ಮೋಹತ. ೧-೧೨). [ಸಂ.]

ನಿರ್ವಿಚಾರ(ನಾ). ವಿಚಾರಮಾಡದಿರುವುದು; ಯೋಚಿಸದೆ ಇರುವುದು: ಆ ದೇವಕಿ . . . ಕಂಸಕ್ಕ ತಾಪಚಾರದಿಂ ನಿರ್ವಿಚಾರದೆ ಪೊಲ್ಲಮೆಯಾದುದೆಂದು ಪೇಳಿದನುತ್ತಿರಲ್ (ಜಗವಿ. ೨-೬೧ ಪ). [ಸಂ.]

ನಿರ್ವಿಚಿಕಿತ್ಸೆ (ನಾ). ೧. ಸಂದೇಹವುಂಟಾಗದಿರುವಿಕೆ; ನಿಸ್ಸಂದಿಗ್ಧತೆ. ೨. [ಜೈನ]ಸಮ್ಯಗ್ದರ್ಶನದ ಎಂಟು ಅಂಗಗಳಲ್ಲಿ ಮೂರನೆಯದು; ಜುಗುಪ್ಸೆ ಹೊಂದದಿರುವಿಕೆ; ☞ ಇದರಲ್ಲಿ ದ್ರವ್ಯನಿರ್ವಿಚಿಕಿತ್ಸೆ, ಭಾವನಿರ್ವಿಚಿಕಿತ್ಸೆ ಎಂಬ ಎರಡು ಭೇದಗಳಿವೆ: ೧. ದ್ರವ್ಯನಿರ್ವಿಚಿಕಿತ್ಸೆಯೆಂದರೆ ಸಾಧುಗಳ ಶರೀರದಲ್ಲಿ ಮಲ, ಮೂತ್ರ, ವಸಾಂಸ, ಕಫ ಮೊದಲಾದ ಅಸಹ್ಯ ವಸ್ತುಗಳಿವೆಯೆಂದು ಭಾವಿಸಿ ಹೇಸಿಗೆಪಡದಿರುವಿಕೆ. ಧರ್ಮಾತ್ಮರ ಶರೀರವು ರತ್ನತ್ರಯದಿಂದ ಪವಿತ್ರವಾಗಿದೆ. ೨. ಅರ್ಹಂತರು ಹೇಳುವ ಉಪದೇಶಗಳು ಬಹಳ ಕಷ್ಟ ಮುಂತಾಗಿ ಅಶುಭ ಭಾವನೆಯನ್ನು ಮಾಡದಿರುವುದು ಭಾವ ನಿರ್ವಿಚಿಕಿತ್ಸೆ: ನಿಶ್ಶಂಕಿತ ನಿಷ್ಕಾಂಕ್ಷಿತ ನಿರ್ವಿಚಿಕಿತ್ಸಾ ಅಮೂಢದೃಷ್ಟಿತಾ ಉಪಬೃಂಹಣ ಸ್ಥಿತಿಕರಣ ವಾತ್ಸಲ್ಯ ಪ್ರಭಾವನಾ ಎಂಬೆಂಟಱೊಳ್ . . . ಘೋರಕಷ್ಟವಿದಂ ಪೊರ್ದಲಾಗದೆಂಬ ಪೆ(ಪ)ಸುಗೆಯುಂ ಪತ್ತುವಿಡುವುದುಂ ದ್ರವ್ಯಭಾವ ಭೇದ ನಿರ್ವಿಚಿಕಿತ್ಸೆ (ಜಾತ್ಮಂಪು. ೨೪೧); ನಿರ್ವಿಚಿಕಿತ್ಸೆಯೊಳಱಿದಾರ್ತುರ್ವರೆ ಕೈಕೊಂಡು, ಬಣ್ಣಿಸಲ್ಕೆಗಬ್ಬಿ ನರಂ ನಿರ್ವಾಣಪದದೊಳಿರಿಸುವ ಸರ್ವಜ್ಞಶ್ರೀಗೆ ಸೊತ್ತ ಮೊದಲಿಗನಕ್ಕುಂ (ಧಸಾರಾಸ್ತು. ೪-೩); ಶರೀರಾದ್ಯಶುಚಿಸ್ವಭಾವಮನಱಿದು ಶುಚಿಯೆಂಬ ವಿಪರ್ಯಾಸಂಕಳ್ಪೋಪನಯನಮುಂ ಅರ್ಹತ್ಪ್ರವಚನದೊಳ್ ಇದಯುಕ್ತಂ ಘೋರಂ ಕಷ್ಟಂ ಇದಲ್ಲದೊಡೆಲ್ಲಂ ಉಪಪನ್ನಮೆಂಬ ಅಶುಭಭಾವನಾವಿರಹಮುಂ ಮೇರ್ತಾ ನಿರ್ವಿಚಿಕಿತ್ಸೆ (ತತ್ತ್ವಸ್ವ. ೨೬೫); ನಿರ್ವಿಚಿಕಿತ್ಸಾ: ರೋಗಿಯೂ, ಕುರುಪಿಯೂ ದುಃಖಿಯೂ ಆದ ದೇಹಿಯನ್ನು ಕಂಡು ಹೇಸಕೂಡದು . . . ಮನುಷ್ಯನ ವೈಭವ ಹಾಗೂ ದೈಹಿಕಸ್ಥಿತಿಯನ್ನು ನೋಡದೆ ಅವನ ಗುಣಗಳನ್ನು ನೋಡುವುದು (ಜೈನಸ. ೪೬೦). [ಸಂ. ನಿರ್ವಿಚಿಕಿತ್ಸಾ]

ನಿರ್ವಿಣ್ಣ (ಗು). ೧. ನಿರಾಶೆಗೊಂಡ; ನಿರುತ್ಸಾಹದ: ನಿರ್ವಿಣ್ಣ ಭಾವದೊಳಂದು ಲಕ್ಷ್ಮಣಂ ತುರಗ ಸಾರಥಿ ಕೇತನಂಗಳಿಂದೆ ಪಡ್ಡದ ವರೂಥಮಂ ತರಿಸಿ ಪೊಱಗಿರಿಸಿ (ಜೈಮಿಭಾ. ೧೪-೬೦); ನಿರ್ವಿಣ್ಣ ರಾಷ್ಟ್ರದ ಕವಿಗಳಿಂದ ವೀರಗಾಥಗಳ ಸೃಷ್ಟಿಯಾಗುವುದು ಸಾಧ್ಯವಿರಲಿಲ್ಲ (ಭಾರದ. ೪೫೮). (ನಾ). ೨. ನಿರಾಶೆಯಿಂದ ಕೂಡಿದುದು: ಕಣ್ಣು ತೆಱದರೆ ಕೆಳದಿ ಕೇಳಾ ಕಣ್ಣು ಮುಚ್ಚುವುದೀ ಪ್ರಪಂಚದ ಬಣ್ಣಗೆಯ ಭುವನಾವಳಿಗಳಿವು ತಾಮಸಾಂಗದಲಿ ಗಣ್ಯವೇ ತಾನಿದಱೊಳಗೆ ನಿರ್ವಿಣ್ಣವೆನಿಸಿದಡಂಳಿವಳೊಬ್ಬಳೆ ಹೆಣ್ಣು ಕಡೆಗಾವನಲಿ ಲಯಿಸುವಳಾತ ನೋಡೆಂದ (ನಿಭಾಗ. ೧-೬-೨೯); ಭೀತಿಯಿಂದ ನಿರ್ವಿಣ್ಣವಾದ ಮೋರೆಯ ಬಣ್ಣ. ಇನ್ನೂ ಮರುಕಳಿಸಿರಲಿಲ್ಲ (ಸೂರುದಾ. ೨೫೬). ೩. ನಿರುತ್ಸಾಹದಿಂದ ಕೂಡಿದ ವ್ಯಕ್ತಿ; ನಿರಾಶೆಗೊಂಡ ವ್ಯಕ್ತಿ: ಈ ಕೆಲಸೊಳ್ ಮೂರ್ಛೆಗೆ ಸಂದ ರಾಯನೆಂತಾನುಂ ಬೇಗದಿಂ ಸೋದರರ ಶೈತ್ಯೋಪಚಾರದತ್ತಣಿಂ ತೆಪ್ಪತ್ತನಾಗೆ ಮುನಿಪಂ ನಿರ್ವಿಣ್ಣನಾಗಿ ನೋಟ್ಪುದುಂ (ರಾಮಾಶ್ವ. ೧೩-೨೨); ಭಾಗೀರಥಿ ನಿರ್ವಿಣ್ಣಳಾಗತೊಡಗಿದಳು (ಭಾರಥಿ. ೧೫೨); ಎಲ್ಲರೂ ಬಂತಿಸಿ ನಿರ್ವಿಣ್ಣರಾದರು (ಕುರುಣಾ. ೨೩). [ಸಂ.]

ನಿರ್ವಿಣ್ಣತೆ (ನಾ). ೧. ಕುಗ್ಗಿದ ಸ್ಥಿತಿ; ಸೋಲಿನ ಭಾವ; ಅಸಹಾಯಕತೆ: ನಿಂಱು ಮಾತನಾಡುತ್ತಿದ್ದ ಅವರ ನಿರ್ವಿಣ್ಣತೆ . . . ಅವರು ಅನುಭವಿಸುತ್ತಿರುವ ಯಾತನೆಯನ್ನು ಸಾರಿ ಸಾರಿ ಹೇಳುವಂತಿತ್ತು (ಹೊಸಕ್ತಿ. ೪೪); ನಾನು ನನ್ನ ನಾಡಿನಲ್ಲಿರುವವರನ್ನು ಸ್ಮರಿಸುವುದು . . . ಅವರ ನಿರ್ವಿಣ್ಣತೆಗಾಗಿ (ಪ್ರವಾತೋ. ೧೨೩); ಮನದ ಮಾಮರಕೆ ಹಿಡಿದಿಹುದು ನನಗೆ ನಿರ್ವಿಣ್ಣತೆಯ ಬಂದಿಳಿಕೆ (ತ್ರೇರಾಪಾಸಾ. ೯-೨೧೯). ೨. ದುಃಖ; ಅಳಲು: ನಿರ್ವಿಣ್ಣತೆಯುಂ ಇಂದು . . . ನಿರ್ಜನತೆಯು ಒತ್ತಡಕ್ಕೆ ಬಡ್ಡೊಡೆದು ಉಬ್ಬಸಬಟ್ಟು ಹೊರಬೀಳಹತ್ತಿದೆ (ಇಪ್ಪಕ. ೧೪೨). [ಸಂ. ನಿರ್ವಿಣ್ಣತಾ]

ನಿರ್ವಿಣ್ಣಮನ (ನಾ). ೧. ನಿರುತ್ಸಾಹದಿಂದ ಕೂಡಿದ ಮನಸ್ಸು. ೨. ನಿರುತ್ಸಾಹಿಯಾದ ಮನಸ್ಸಿನವನು: ಮುದದಿನೆಲ್ಲರ ಕುಶಲವನು ಕೇಳಿದನು ದುರಿಯೋಧನಗೆ ಸಲುಕಿದ ಹದನನೆಲ್ಲವ ಹೇಳಿದನು ನಿರ್ವಿಣ್ಣಮನನಾಗಿ (ಕುವ್ಯಾಳು. ೨-೧೪). [ನಿರ್ವಿಣ್ಣ + ಮನಸ್]

ನಿರ್ವಿಣ್ಣತ್ವ, ನಿರ್ವಿಣ್ಣ್ಯ (ನಾ). ೧. =ನಿರ್ವಿಣ್ಣತೆ ೨: ಪುಣ್ಯದಿಂ ಮಡಿದು ಮುಕ್ತಿಗೆ ಸಂದನದಕೆ ನಿರ್ವಿಣ್ಣತ್ವನೆಮಗಿಲ್ಲ [ಸಾಕಾಂ. ನಿರ್ವಿಣ್ಣರಹುದಿಲ್ಲ] (ಜೈಮಿಭಾ. ೧೪-೧೦). **ನಿರ್ವಿಣ್ಣ್ಯ**: ೨. =ನಿರ್ವಿಣ್ಣಮನ ೨: ಪತಿತರು ಪಾಪಾತ್ಮರೆಂಬ ನಂಬಿಕೆಯಿಂದ ನಿರ್ವಿಣ್ಣ್ಯರಾಗಿ (ಶರಚ. ii, ಮುಮ್ಮಾತು). [<ಸಂ. ನಿರ್ವಿಣ್ಣ]

ನಿರ್ವಿದ್ಯ (ಗು). ೧. ವಿದ್ಯೆಯಿಲ್ಲದ; ಏನನ್ನೂ ಕಲಿಯದೆ ಇರುವ. (ನಾ). ೨. ವಿದ್ಯೆಯಿಲ್ಲದವನು; ಓದು ಕಲಿಯದವನು. ೩. ವಿದ್ಯೆಗಳನ್ನು ಕಳೆದುಕೊಂಡವನು; ವಿದ್ಯಾಬಲ ನಷ್ಟವಾದವನು: ಅಂತಶ್ವಗ್ರೀವಂ ನಿರಾಯುಧಂ ನಿರ್ವಿದ್ಯನುಮಾಗಿ ಕೆಲನಂ ನೋಡಿ (ಶಾಂತಿಪು. ೫-೬೨ ಪ). [ಸಂ.]

ನಿರ್ವಿಧಿ (ನಾ). ಆಗಿಯೇ ತೀರಬೇಕೆಂಬ ನಿಯಮವಿಲ್ಲದಿರುವುದು; ಕಟ್ಟಳೆಯಿಲ್ಲದಿರುವುದು: ಮುದ್ದನ ಹರಸಲು ಗಣಪನ ಕರೆದೆ ನಿರ್ವಿಧಿಯಾದರು ಕಡುಬನು ಮಾಡಿ ಪೂಜಿಪುದೊಳ್ಳಿತು ಸುತನಂ ಕೂಡಿ (ಗಣೇಶ. ೩-೬೯). [ಸಂ.]

ನಿರ್ವಿನಿಸು 'ನಿರ್ನವಿಸು' ನೋ.

ನಿರ್ವಿಭವ (ನಾ). ಸಂಪತ್ತಿನಿಂದ ಕೂಡಿರದುದು; ವೈಭವಹೀನವಾದುದು: ಸರ್ವಮಯವದು ಪರಿಕಿಪಡೆ ಸಂಕೀರ್ಣಪದವಲ್ಲ ನಿರ್ವಿಭವವಂತಲ್ಲ ಕೇಳಿರೆ ಪಾರ್ವತೀಶಾದ್ವೈತವೆಂಬುದದು (ಬಸಪು. ೫೧-೧೮). [ಸಂ.]

ನಿರ್ವಿರಲ, ನಿರ್ವಿರಳ (ಗು). ೧. ವಿರಳವಲ್ಲದ; ಪೂರ್ಣವಾದ ಅಖಂಡ. (ನಾ). ೨. ಪೂರ್ಣಸ್ವರೂಪಿ; ಅಖಂಡನಾದವನು ನಿರಜ ನಿರ್ಜರ ನಿತ್ಯ ನಿರ್ಮಳ ನಿರಘ ನಿರ್ಭವ ನಿರ್ವಿರಲ[ಪಾಠಾಂ. ೪೨] ನಿಸ್ತರಣ ನಿರ್ವೃದ್ಧಾಂಗ ನಿಜನಿರ್ಮಾಯ ಚಿತ್ತೈಸು (ಬಸಪು. ೬೧-೪೪) **ನಿರ್ವಿರಳ**: ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಸಂ.]

ನಿರ್ವಿರಳ 'ನಿರ್ವಿರಲ' ನೋ.

ನಿರ್ವಿವಾದ (ನಾ). ವಿವಾದಕ್ಕೆ ಎಡೆಗೊಡದಿರುವುದು; ಚರ್ಚಾಸ್ಪದವಲ್ಲದುದು: ಗುರುದೇವನ ಕಾವ್ಯಗಳಲ್ಲಿರುವ ಒಂದು ಹೆಚ್ಚಿನ ಮೇಲ್ಮೆ ಅವನ ನಾಟಕ, ಕಾದಂಬರಿ, ಕಥೆಗಳಲ್ಲಿ ಕಾಣಬರುವದಿಲ್ಲವೆಂಬ ಮಾತು ನಿರ್ವಿವಾದ (ಧರ್ಮಸಾ. ೮೦); ಪ್ರತಿಪಾದಿಸಬೇಕಾಗಿರುವ ವಿಷಯ ನಿರ್ದೋಷವಾಗಿಯೂ ನಿರ್ವಿವಾದವಾಗಿಯೂ ಇರಬೇಕು (ಶಿಕ್ಷದ. ೨೬೮); ಪ್ರಾಚೀನ ಗ್ರೀಕ್‌ವಿಜ್ಞಾನಿಗಳಿಗೆ ವಿಶ್ವದ ರಹಸ್ಯವನ್ನರಿಯಬೇಕೆಂಬುದೇ ಮುಖ್ಯಗುರಿಯಾಗಿತ್ತೆಂಬುದು ನಿರ್ವಿವಾದ (ಯಕ್ಸಾರ. ೫ ಪೀಠಿಕೆ). [ಸಂ.]

ನಿರ್ವಿಶಿಷ್ಟ (ಗು). ೧. ಅನನ್ಯವಾದ; ಪರಮ: ವಿಶ್ವಚಿತ್ತಿಗೆ ಪ್ರಪಂಚ ಹೇಗೆ ಗೋಚರವಾಗುತ್ತದೆಯೋ ಅದೇ ನಿರ್ವಿಶಿಷ್ಟ ಸತ್ಯವಾಗಿರಬೇಕು . . . ವಿಶ್ವಚಿತ್ತಿಗೂ ಒಂದು ಇರವು ಮಾತ್ರ ಗೋಚರವಾಗಬೇಕು. ಅಂದರೆ ಕೇವಲ ಸತ್ಯಪ್ರಜ್ಞಾಮಯವಾದ ಒಂದು ನಿರ್ವಿಶಿಷ್ಟ ಇರವು (ನಿಶೆಉ. ೨೩೫). ೨. ವಿಶೇಷವಲ್ಲದ; ಸಾಧಾರಣವಾದ; ಸಾಮಾನ್ಯವಾದ. [ಸಂ.]

ನಿರ್ವಿಶೇಷ (ಗು). ೧. ಅನಿರ್ದಿಷ್ಟವಾದ; ವಿಶಿಷ್ಟವಲ್ಲದ: ಅನಿತು ಇನಿತು ಎನಿತು ಎಲ್ಲವು ಎಂದು ಪವಣಂ ಪೇಟ್ವ ನಿರ್ವಿಶೇಷ ಶಬ್ದಂಗಳ್ [ಪಾಠಾಂ. ನಿರ್ವಿಶೇಷದಿಂ] ಸಂಖ್ಯೆಯಂ ಪೇಟ್ವ ಎಲ್ಲವು ಕೆಲವು ಪಲವು ಎಂಬ ಶಬ್ದಂಗಳ್ . . . ಅಂತ್ಯಲೋಪಮಂ ಪಡವುವು (ಶಮದ. ೧೨೦ ವೃತ್ತಿ). ೨. ಅತ್ಯಧಿಕವಾದ; ಅತಿಶಯವಾದ: ಸುರನಿರ್ವಿಶೇಷಸುಖಸರ್ವಸ್ವಂ ಕುರೂರ್ವೀತಳಂ (ಶಾಂತಿಪು. ೬-೧೨೨). (ನಾ). ೩. ಅಭೇದ; ಏಕರೂಪತೆ; ಸಮಾನತೆ: ಪರಲೋಕವೆಂಬುದು ಖರವಿಷಾಣನಿರ್ವಿಶೇಷಂಗಳುಂ . . . ಅಕ್ಕುಂ (ಶಾಂತಿಪು. ೮-೧೩೨ ಪ); ಶಶಧರಲಕ್ಷ್ಮದೊಳಕ್ಕುಂ ಶಶಹರಿಣಂಗಳ್ಗನನ್ಯಭಾವಂ ಸುಮನೋವಿಶಿಖಧ್ವಜಾಂಕದೊಳ್ ನಿರ್ವಿಶೇಷದಿಂ ಮತ್ಸ್ಯ ಮಕರಯುಗಳಕ್ಕೈಕ್ಯಂ (ಕಾಪ್ಯಾವ. ೯೦೧); ಉಂಟಲ್ಲೆಂಬೀಯೆರಡಱ ಗೆಂಟಂ ಪರಿಹರಿಸಿ ಮೂಱನೆಯ ಪೊಸವಗೆಯಂ ಗಂಟಕ್ಕಿ ನಿರ್ವಿಶೇಷದೊಳಂಟಪುದೀ ಜಗಮನಮರೆ ತಿಮಿರಾದ್ವೈತಂ (ಚಿಕವಿ. ೬-೧೪). ೪. ಬೇರೆಯಲ್ಲದವನು; ಸಮಾನನಾದವನು: ಮದವದರಿಹಸ್ತಿ ಮಸ್ತಕಭಿದುರಂ [ಭಯ]ವಿದುರನಸ್ಯಬಾಣಚ್ಛಿದುರಂಮದ ಪತ್ಯನಿರ್ವಿಶೇಷಂ[ಮದವದ್ದೋರ್ಲಲಿತನೆತ್ತಣಂ] ವೈಷಸೇನಂ(ಗದಾಯು. ೪-೬೩). ೫. = ನಿರ್ವಿಶೇಷಬ್ರಹ್ಮ: ನೆರೆದೂರ್ಧ್ವರೇತನೊಳ್ ಪುರುಹಿರಣ್ಯರೇತೋತಿ ತೀವ್ರನೊಳ್ ಮುನಿವರನೊಳ್ ಪರಮಭಗಸಹಿತೆ ಮುದದಿರೆ ಪರಿಶ್ರಮಕ್ಕೆನ್ನ ನಿರ್ವಿಶೇಷನೊಳಾಗಳ್ (ಕಮಾ. ೧-೬೩); ಅಂತರ್ಯಾಮಿ ಮೊದಲಾದ ಈಶ್ವರತ್ರಯಕ್ಕೆ ಅಧಿಷ್ಠಾತೃ . . . ನಿರ್ಗುಣ ನಿರ್ವಿಶೇಷ . . . ಎಂಬಿವು ಮೊದಲಾದವೇ ಅದ್ವೈತಬ್ರಹ್ಮಪರ್ಯಾಯನಾಮಂಗಳಕ್ಕುಂ (ವಿನೇಕ. ೨೯). [ಸಂ.]

ನಿರ್ವಿಶೇಷಬ್ರಹ್ಮ (ನಾ). [ಅದ್ವೈತ] ತ್ರಿಗುಣಾತೀತವಾದ ಶುದ್ಧಬ್ರಹ್ಮ; ಪರಮಾತ್ಮ; ನಿರ್ಗುಣಬ್ರಹ್ಮ: ಈ ಆತ್ಮನೆಂಬುದು ಬೇರೆ ವಸ್ತುವಾದರೂ ಅದರಲ್ಲಿ ಯಾವ ವಿಧವಾದ ಗುಣವೂ ಇಲ್ಲ . . . ಇದಕ್ಕೆ ಬೌದ್ಧರ ಸ್ವಲಕ್ಷಣವಸ್ತುವನ್ನೂ ವೇದಾಂತಿಗಳ ನಿರ್ವಿಶೇಷಬ್ರಹ್ಮನನ್ನೂ ಹೋಲಿಸಬಹುದು (ಹಿಂದಸಾ. ೫೮). [ನಿರ್ವಿಶೇಷ+ಬ್ರಹ್ಮ]

ನಿರ್ವಿಷ (ಗು). ೧. ವಿಷವಿಲ್ಲದ; ನಂಜಿಲ್ಲದ. (ನಾ). ೨. ವಿಷರಹಿತವಾದುದು; ನಂಜಿಲ್ಲದಿರುವುದು: ಉರಗಂ ಕೊಂಡಲ್ಲಿಂ ನಾಲ್ವೆರಲನಿತಂ ಕಳೆದು ಕಟ್ಟ ಮೇಗಂ ಬೇಗಂ ಸೆರೆವಿಡುಗೆ ಸುಡುಗೆ ಕಡಿಗಿರದರಿದಿಕ್ಕುಗೆ ನೀವಿ ಕಳೆಗೆ ನಿರ್ವಿಷಮಕ್ಕುಂ (ಶಮದ. ೧೮೯ ಪ್ರಯೋ); ವಿಷಮಂ ದೆಸೆಗಿಡಿಪುದದುವೆ ನಿರ್ವಿಷಂ (ಖಮದ.೩-೭); ನಿರ್ವಿಷವಾಗಲಿಕ್ಕೆ: ಎಲೆ ಹೊನ್ನೆಯ ಬೇರಂ ಅಂಬಿಲದಲ್ಲಿ ಅರೆದು ಮಂತ್ರಿಸಿ ಕುಡಿಯೆ ನಿರ್ವಿಷ. ವಿಳಂಗ ಎರಡಂ ನೀರಲ್ಲಿ ತೇದು ಮೂಗಿನ ನಸ್ಯಂಗೈಯೆ ನಿರ್ವಿಷ (ವಿನೈವಿ. ೯೩). ೩. ನಂಜನ್ನು ಕಳೆದುಕೊಂಡಿರುವವನು; ವಿಷವಿಲ್ಲದಿರುವವನು: ವಿಷಯಾಮಿಷಲಂಪಟತೆಯೆ ವಿಷಧರನೆನಿಸಿದುದು ನಿನ್ನನೆಲೆ ವಿಷಧರನಿಂ ವಿಷಧರನಾಗದೆ ಬೇಗಂ ವಿಷಯಾಮಿಷ ವಿಷಮನುಗುಟ್ಟು ನಿರ್ವಿಷನಾಗಾ (ಅವಿಪು. ೨-೧೭); ನೀಮೊಂದುಪಾಯದಿಂ ಬಂದು ನೀರನಭಿಮಂತ್ರಿಸಿ ತಳಿಯಲೊಡಂ ನಿರ್ವಿಷಮಪ್ಪೆಂ (ಪಂಚತಂ. ೧೧೩-೫). ೪. ವಿಷವನ್ನು ಪರಿಹಾರ ಮಾಡುವಂಥ ಒಂದು ಬಗೆಯ ಔಷಧಿ ಸಸ್ಯ ಮತ್ತು ಅದರ ಬೇರು: "ವಿಷಹಾ—ನಿರ್ವಿಷ, ಬಾಗೆ, ದೇವದಾಳಿ" (ಓಷಧಿ. ೧೫೫); ನಿರ್ವಿಷ, ಚಂಗಲ್ವ—ಕೋಷ್ಟ, ಶುಂಠಿ . . . ಇವನ್ನೆಲ್ಲಾ ಕೂಡಿ . . . ಮಂದಾಗ್ನಿಯಿಂದ ಎಣ್ಣೆ ನಿಲುವತನಕ ಅಟ್ಟು ಒಂದು ಗದ್ಯಾಣ ತೂಕವಂ ತೆಗೆದುಕೊಂಡು ದೇಹಕ್ಕೆ ಲೇಪವಂ ಮಾಡಿಸಲು . . . ಅಷ್ಟಾದಶಕುಷ್ಠ ಸಹಮಾಣ್ಗುಂ (ಸಕವೈ. ೧೭೯).

ನಿರ್ವಿಷಂಮಾಡು = ವಿಷವಿಲ್ಲದಂತೆ ಮಾಡು; ವಿಷವನ್ನು ಪರಿಹರಿಸು: ಪದ್ಮೋತ್ತಮೆಯಂ ಪಾವು ಕೊಳೆ ನಿರ್ವಿಷಂಮಾಟ್ಪಾತಂಗೆನ್ನ ಮಗಳುಮನರ್ಧರಾಜ್ಯಮುಮಂ ಕೊಡುವೆನೆಂದು ಗೋಸನೆಗಳೆಯೆ (ಚಾಪುಂಪು. ೪೧೫). [ಸಂ.]

ನಿರ್ವಿಷಯ (ನಾ). ೧. ಇಂದ್ರಿಯ ವಿಷಯದಿಂದ ದೂರವಾಗಿರುವುದು; ವಿರಕ್ತಿ: ವಿಷಮವಿಷಂಗಳ್ಗಂ ಪ್ರತಿವಿಷಮೆನಿಸುವ ಮಂತ್ರ ನಿಚಯದೊಳಮಾರ್ಗೆಂದುಂ ವಿಷಯಮೆ ಮಾಣಿಸಲಿಂತೀ ವಿಷಯವಿಷಾಸ್ವಾದಮೋಹಮಂ ನಿರ್ವಿಷಯಂ (ಕಾದಂಪೂ. ೫೩೨); ಎನ್ನ ನಿಭ್ರಾಂತಿಯೇ ನೈವೇದ್ಯ ಎನ್ನ ನಿರ್ವಿಷಯವೇ ತಾಂಬೂಲ ಎನ್ನ ಮೌನವೇ ಘಂಟೆ (ಅವಚಂ. ೨೦೬-೧೨೭); ಧರೆಯು ಸತಿಸುತರ ಭೋಗಭಾಗ್ಯವನು ತೃಣೀಕರಿಸಿ ನಿರ್ವಿಷಯಪರನಾಗಿ (ನವಮೋ. ೩೨-೪೫);

ನಾನಿಹೆನು ಇಹೆನೆಂಬ ನಿರ್ವಿಷಯದರಿವಿನೊಳು ಏಕನಾಗಿ (ಪುಲಿದೇ. ೫೨-೯). ೨. ಇಂದ್ರಿಯ ವಿಷಯಗಳಿಂದ ದೂರವಾದವನು; ವಿಷಯಾತೀತನಾದವನು; ಪರಮಾತ್ಮ : ನಿರಸನೇಂದ್ರಿಯ ನಿರ್ವಿಷಯ ನಿರ್ನಿರುಹರಣ . . . ನಿರ್ವಿಕಾರಾಕಾರ ಚಿತ್ತೈಸು (ಬಸಪು. ೬೧-೪೩). [ಸಂ.]

ನಿರ್ವಿಷಯಿ (ನಾ). ವಿಷಯಾಸಕ್ತಿ ಇಲ್ಲದಿರುವವನು; ವಾಸನಾರಹಿತನಾದವನು; ವಿರಾಗಿ: ದೇವ ನಿರ್ವಿಷಯಿಯಾನಾದೆನವಧರಿಸೆಂದು ದೇವ ಭವಬಂಧಮಂ ಬಿಡಿಸು ಬಿಡಿಸಿನ್ನೆಂದು ಬೇಡಿಕೊಂಬಂದದಿಂ ಮಯ್ಯಿಕ್ಕಿ ನಡೆವುತುಂ (ನಂಬರ. ೧೭-೮೧). [ಸಂ. ನಿರ್ವಿಷಯಿನ್]

ನಿರ್ವಿಷಸಿದ್ಧ (ನಾ). ವಿಷದಿಂದ ತನಗೆ ಕೆಡುಕುಂಟಾಗದ ಸಿದ್ಧಿಯನ್ನು ಪಡೆದ ವ್ಯಕ್ತಿ : ವಿಷಯವಿಷವನುಂಡು ದಕ್ಕಿಸಬಲ್ಲ ನಿರ್ವಿಷಸಿದ್ಧ ನೀನವನೀಶ (ಭರಚ. ೨-೬೧). [ನಿರ್ವಿಷ + ಸಿದ್ಧ]

ನಿರ್ವಿಷೀಕರಣ (ನಾ). ವಿಷವಿಳಿಯುವಂತೆ ಮಾಡುವಿಕೆ; ನಂಜನ್ನು ಕಳೆಯುವಿಕೆ: ಮದನಫಣಿ ನಿರ್ವಿಷೀಕರಣದಿವ್ಯಮಂತ್ರಸ್ವನಂ ಜರಾಮರಣ ಶಿಲಾವಿದಳನ ಟಂಕಧ್ವನಿ ಪೊಣ್ಮಿದತ್ತು ಮುನಿ ಪರಸೆ ಧರ್ಮವೃದ್ಧಿನಿನಾದಂ (ಪಂರಾಮಾ. ೬-೨೮). [ಸಂ.]

ನಿರ್ವಿಷೀಕರಣಂಗೆಯ್ (ಕ್ರಿ). ವಿಷಪರಿಹಾರ ಮಾಡು; ನಂಜಿಲ್ಲದಂತೆ ಮಾಡು : ಗರಳೇಂದೀವರವಾಸಿತೋಗ್ರವಿಷಮಂ ಪುಣ್ಯಾಮೃತಂ ನಿರ್ವಿಷೀಕರಣಂಗೆಯ್ವವೊಲ್ (ಶಾಂತಿಪು. ೬-೧೨೩). [ನಿರ್ವಿಷೀಕರಣ + ಕೆಯ್$_1$]

ನಿರ್ವಿಷ್ಟ (ನಾ). ಆಶ್ರಯಿಸಿರುವವನು; ಸೇರಿಕೊಂಡಿರುವವನು : ಸೃಷ್ಟಿವಿಲಯಸ್ಥಾನವಾವನಭೀಷ್ಟಮಾಯಾಗುಣಗಳಲಿ ನಿರ್ವಿಷ್ಟನೆನಿಸುವನಾವನೀ ಸಚರಾಚರಂಗಳಲಿ (ನಿಭಾಗ. ೧೦-೭೪-೧೩). [ಸಂ.]

ನಿರ್ವೀಜ (ನಾ). ಎಲ್ಲಕ್ಕೂ ಮೂಲವಾದುದು; ಆದಿಮೂಲ : ಆತ್ಮಂಗೆ ಕಾಯವೆ ರೂಪು ಆ ಕಾಯಕ್ಕೆ ಆತ್ಮನೆ ಹಾಹೆ ಆ ಹಾಹೆಗೆ ಅಱಿವೆ ಬೀಜ ಆ ಬೀಜಕ್ಕೆ ಗೋಪತಿನಾಥ ವಿಶ್ವೇಶ್ವರಲಿಂಗವೆ ನಿರ್ವೀಜ (ತುಯಿಗಾ. ೭-೩೧) ; ಭಕ್ತಿಸ್ಥಲ ಮಹೇಶ್ವರನ ನಿರ್ವೀಜ ಆ ನಿರ್ವೀಜ ಪ್ರಸಾದಿಯ ಪ್ರಣಮ ಆ ಪ್ರಣಮ ಪ್ರಾಣಲಿಂಗಿಯ ಎರಡಳಿದ ಅಱಿವು (ಮೋಳಿಮಾ. ೧೪೬-೫೫೭). [ಸಂ.]

ನಿರ್ವೀಣ್ಯ 'ನಿರ್ವಿಣ್ಣ್ಯ' ನೋ.

ನಿರ್ವೀರೆ (ನಾ). ಗಂಡ ಮತ್ತು ಮಕ್ಕಳು ಇಲ್ಲದವಳು. 'ಅವೀರೆ' ಪರಾ. [ಸಂ. ನಿರ್ವೀರಾ]

ನಿರ್ವೀರ್ಯ (ಗು). ೧. ಬಲವಿಲ್ಲದ; ಅಶಕ್ತ. ೨. ಗಂಡಸುತನವಿಲ್ಲದ. (ನಾ). ೩. ಬಲವಿಲ್ಲದಿರುವುದು; ಶಕ್ತಿಗುಂದಿದುದು. ೪. ಷಂಡ. ೫. ಬಲವನ್ನು ಕಳೆದುಕೊಂಡವನು; ಶಕ್ತಿಗುಂದಿದವನು : ಈ ವಿಶಿಷ್ಟ ಸನ್ನಿವೇಶದಲ್ಲಿ ಅರ್ಜುನನು ವೀರೋಚಿತವಾಗಿ ವರ್ತಿಸದೆ ನಿರ್ವೀರ್ಯನಾಗಿ ನಿರ್ವಿಣ್ಣನಾಗಿ ಹೇಡಿಯಂತೆ ನಡುಗುತ್ತಿದ್ದಾನೆ (ಭಾರದ. ೧೧೧) ; ಈ ಜನ ಪ್ರಪಂಚದ ಪ್ರಗತಿಗೆ ಏನೂ ಕಾಣಿಕೆ ನೀಡಲಾರದ ನಿರ್ವೀರ್ಯರು (ದ್ರಾವಿವಿ. V, ಮುನ್ನುಡಿ) ; ಇಂಥ ಪಶ್ಯವಿಷಯ ನಮ್ಮ ಮುಂದಿನ ಜನತೆಯನ್ನು ನಿರ್ವೀರ್ಯರನ್ನಾಗಿ ಮಾಡಿತು! (ಶಿಕ್ಷದ. ೧೩೧).

ನಿರ್ವೀರ್ಯವಾಗು = ೧. ಬಲವಿಲ್ಲವಾಗು; ಶಕ್ತಿಗುಂದು : ಕಲಿಯುಗದ ಪ್ರಾಬಲ್ಯದಿಂದ ಶ್ರುತಿಮಾರ್ಗಗಳು ನಿರ್ವೀರ್ಯವಾಗುತ್ತಾ ಬಂದಾಗ . . . ಆಗಮೋಕ್ತ ಕರ್ಮಾನುಷ್ಠಾನವೇ ಪ್ರಶಸ್ತವೆನಿಸುವುದು (ಭಾರದ. ೬೮) ; ಸೃಷ್ಟಿಯ ಪ್ರಾಥಮಿಕಶಕ್ತಿಯನ್ನು ಪ್ರೇಮದ ಬಲದಿಂದ ಚೇತರಿಸುವುದು ಮಾತ್ರ ಒಳಿತಿನ ಕೆಲಸ. ಆಗ ಕೆಡುಕು ನಿರ್ವೀರ್ಯವಾಗುತ್ತದೆ (ಬದ್ಧಪ್ರ. lxxviii, ಪೀಠಿಕೆ) ; ವಸಿಷ್ಠನ ಬ್ರಹ್ಮದಂಡಕ್ಕೆ ತಗುಲಿ ನಿರ್ವೀರ್ಯವಾಗಿ ಕೆಳಕ್ಕೆ ಬಿದ್ದ ಕೌಶಿಕನ ಅಸ್ತ್ರದಂತೆ ರೋಗಗಳು ಇದನ್ನು ಸೋಕಿದ ಕೂಡಲೇ ನಿರ್ವೀರ್ಯವಾಗುತ್ತವೆ (ಭೇಮಾತೀ. ೮೪). ೨. ಪುಂಸತ್ತ್ವವಿಲ್ಲದಾಗು. [ಸಂ.]

ನಿರ್ವೀರ್ಯೆ (ನಾ). = ನಿರ್ವೀರೆ : "ಪತಿ ಪುತ್ರರಿಲ್ಲದಳು ನಿರ್ವೀರ್ಯೆಯಕ್ಕು" (ಮಂಗರಾ. ೯೦-೩). [ಸಂ. ನಿರ್ವೀರ್ಯಾ]

ನಿರ್ವೃತ (ಗು). ೧. ಸಮಾಧಾನ ಹೊಂದಿದ; ತೃಪ್ತಿಯನ್ನು ಪಡೆದ : ಚಂಡಾಲಕನ್ನಿಕೆ . . . ಪಡಿಯಂ ಕೆತ್ತಗುಟಿಯನಿಕ್ಕಿ ನೀನಿಂತಿರೆಂದು ನಿರ್ವೃತಾಂತರಾತ್ಮೆಯಂತೆ ನುಡಿದು (ಕಾದಂಉ. ೭೫೨). (ನಾ). ೨. ಸಮಾಧಾನ ಹೊಂದಿದ ವ್ಯಕ್ತಿ; ತೃಪ್ತನಾದ ವ್ಯಕ್ತಿ; ಸುಖಿ : ನಿನ್ನನ್ನಂ ಪ್ರತಿಭಾಸಂಪನ್ನಂ ನಂಬುಗುಮೆ ಮೆಯ್ಗೆ ಮಚ್ಚಿದ ತೆಜದಿಂದನ್ನಂಬಿ ವಿಷಯಸುಖದೊಳ್ ತನ್ನಿಷ್ಟನೆಯಾಗಿ ಮರುಳೆ ನಿರ್ವೃತನಾಗಾ (ಶಾಂತಿಪು. ೮-೧೩೩) ; ಕುರುಪತಿಯ ಸೋದರರು ಮಕ್ಕಳು ಸರಸಿಜಾನನೆ ಭಾನುಮತಿ ಮಿಕ್ಕರಸಿಯರು ಕರ್ಣಾದಿಗಳು ನಿರ್ವೃತರೆ ಹೇಳು (ಕುಪ್ಯಾಉ. ೨-೩೪). ೩. ಮನೆ; ನಿವಾಸ : "ಗೇಹಂ, ನಿಕೇತನಂ, ಅಗಾರಂ, ನಿಶಾಂತಂ, ನಿರ್ವೃತಂ, ಗೃಹಂ" (ಧನಂನಿ. ೧೩೪ ಟೀಕೆ). [ಸಂ.]

ನಿರ್ವೃತಿ (ನಾ). ೧. ಆನಂದ; ಸುಖ; ಸಂತೋಷ : ಕಾದಂಬರಿಯ ಮನಃಪ್ರಿಯಸಮಾಗಮನ ನಿರ್ವೃತಿಯುಂ ಸಮನಿಸಿತಿಲ್ಲೆಂದು ಮನಂನೊಂದು (ಕಾದಂಉ. ೫೪೬). 'ನಿರ್ವೃತಿಕರ' ಪರಾ. ೨. ಮೋಕ್ಷ; ಮುಕ್ತಿ : ನಿರಪಾಯಂ ನಿರ್ವಿಕಲ್ಪಂ . . . ನಿರುತಶ್ರೀ ನಿರ್ವೃತಿಶ್ರೀ (ಸುಕುಮಾ. ೧೧-೭೬) ; ಎನಗೆ ದಯೆಗೆಯ್ವುದು ನೀಮಿರದೆ ಜಿನದೀಕ್ಷೆಯಂ ಬಿತ್ತರಿಸುಗುಮೆನಗದುವೆ ಬಟಿಕೆ ನಿರ್ವೃತಿಸುಖಮಂ (ಚಂದ್ರಪು. ೯-೩೭); ಒಡಲಂ . . . ಸುಖಮುಖಮುದ್ರೆಯ ಹೊಡಲಂ ಬಿಡಲಱಿಯದಂಗೆ ನಿರ್ವೃತಿಯುಂಟೇ (ಪುಷ್ಪಪು. ೧೭-೩೩). 'ನಿರ್ವೃತಿಪದ' ಪರಾ. ೩. ಬಿಡುಗಡೆ : ಜೀವಜೀವದ ನಡುವೆ ಹರಿದನ್ನ ಜೀವವಿದು ಪಡೆಯುತಿಹ ನಿರ್ವೃತಿಯ ಚಿತ್ರಚಿತ್ರದೊಳು (ಮಲಿದೇ. ೫೩-೮). ೪. ಮರಣ; ಸಾವು. ೫. [ಜೈನ] ಅಯ್ವತ್ತುಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು : ದ್ವಾದಶಾಂಗದೊಳ್ ಪೇಟ್ದ ಆಧಾನ . . . ನಿರ್ವೃತಿಯೆಂಬಯ್ವತ್ತುಮೂಱು ಗರ್ಭಾದಿ ನಿರ್ವಾಣಪರ್ಯಂತಗಳಪ್ಪ ಗರ್ಭಾನ್ವಯಕ್ರಿಯೆಗಳುಂ (ಅದಿಪು. ೧೫-೧೫ ವ). [ಸಂ.]

ನಿರ್ವೃತಿಕರ (ಗು). ಸಂತೋಷಕರವಾದ; ಆನಂದಕರವಾದ : ಕ್ಷಿತಿವಧು ತಾಳ್ದಲಂಕೃತಿಯಿದೆಂದೆನಿಸಿರ್ಪುದು ಸಾರವಸ್ತುಸಂಗತಿ ಮಣಿಹರ್ಮ್ಯಸಂಹತಿ ಸುರೇಂದ್ರಪುರಾಕೃತಿ ಲೋಕನೇತ್ರನಿರ್ವೃತಿಕರ ರಾಜಪದ್ಧತಿ . . . ಧರ್ಮವತಿಯೆಂಬ ಪುರಂ ವಿಶತಪ್ರಭಾವದಿಂ (ರಾಜಶೇ. ೨-೩೨). [ಸಂ.]

ನಿರ್ವೃತಿಪದ (ನಾ). ಮೋಕ್ಷಪದ; ಮುಕ್ತಿಪದವಿ : ನಿರ್ವೃತಿಪದಾಸ್ಪದೇ ಚತುರ್ವಿಧಫಲಪ್ರದೇ ಸಶರ್ವತನು ಪಾಲಿಪುದು ಪರ್ವತತನೂಜೇ (ರಾಜಶೇ. ೮-೧೨೭). [ನಿರ್ವೃತಿ + ಪದ$_2$]

ನಿರ್ವೃತಿವಿದೂರ (ನಾ). ಮೋಕ್ಷಪ್ರಾಪ್ತಿಯಾಗದವನು; ಮುಕ್ತಿಯಿಂದ ದೂರವಾದವನು : ಸೋಮನಾಮಧೇಯ ತಾಪಸಂಗಂ ಶ್ರೀದತ್ತೆಗಂ ಸೋಮಿಲನೆಂಬೊಂ ಮಗನಾಗಿ ತಾಪಸವೃತ್ತಿಯೊಳ್ ನೆಗಟ್ದು ನಿರ್ವೃತಿವಿದೂರನಾಗಿಯುಂ ನಿರ್ವೃತಿನಾಮನದೀತೀರದ ಕಾಶ್ಯಪಾಶ್ರಮದೊಳ್ ಮುಡಿಪಿ . . . ದೇವನಾಗಿರ್ದು (ಶಾಂತಿಪು. ೯-೯೧ ವ). [ನಿರ್ವೃತಿ + ವಿದೂರ]

ನಿರ್ವೃತಿಸೌಖ್ಯ (ನಾ). ಮುಕ್ತಿಸೌಖ್ಯ ; ಮೋಕ್ಷ ಸುಖ : ದೇವೇಂದ್ರಂ ನಿರ್ವೃತಿಸೌಖ್ಯವಾಪ್ತಿಗೆ ಬಯಸಿ ಬಲ್ಮೆಯಂ ನೆಱೆ ಮೆಱೆದಾ ದೇವನ ಮುಂದಾಡಿದನೆನಲೇವೇಟ್ಟುದೊ ನೃತ್ಯಳಮುಮಂ ನೃತ್ಯಮುಮಂ (ಪುಲ್ಲಿಪು. ೧೩-೪೯). [ನಿರ್ವೃತಿ + ಸೌಖ್ಯ]

ನಿರ್ವೃತ್ತ (ಗು). ೧. ಪೂರ್ತಿಯಾಗಿ ಮಾಡಿ ಮುಗಿಸಿದ ; ಮುಕ್ತಾಯ ಮಾಡಿದ. (ನಾ). ೨. ಮುಗಿಸಿದುದು ; ನೆರವೇರಿಸಿದುದು : "ನಿಷ್ಠಿ, ನಿರ್ವೃತ್ತಿ, ನಿಷ್ಪನ್ನ – ಈ ನೆರವೇರಿಸಲ್ಪಟ್ಟರುವದು" (ಸಿದ್ಧಾಂತಿ. ೩೫೧). [ಸಂ.]

ನಿರ್ವೃತ್ತಿ (ನಾ). ೧. ಉಂಟಾಗುವುದು. ೨. ಕಾರ್ಯವು ಮುಕ್ತಾಯ ಹೊಂದುವುದು. ೩. ಈಡೇರುವುದು ; ನೆರವೇರುವುದು. ೪. [ಜೈನ] ಕರ್ಮದ ನಿಮಿತ್ತದಿಂದ ಪುದ್ಗಲ ಕಣಗಳು ಇಂದ್ರಿಯಗಳ ಆಕಾರ ಅಥವಾ ರೂಪವಾಗಿ ರಚನೆಯಾಗುವುದು: ಕರ್ಮನಿಮಿತ್ತದಿಂದ ವಿಶಿಷ್ಟಪ್ರಕಾರದ ರಚನೆಯಾಗುವುದು ನಿರ್ವೃತ್ತಿಯು (ಜೈಸಧ. ೩೧). [ಸಂ.]

ನಿರ್ವೃದ್ಧ (ಗು). ಮುಪ್ಪಿಲ್ಲದ ; ಚಿರಯೌವನದಿಂದ ಕೂಡಿದ. 'ನಿರ್ವೃದ್ಧಾಂಗ' ಪರಾ. [ಸಂ.]

ನಿರ್ವೃದ್ಧಾಂಗ (ನಾ). ಮುಪ್ಪುಂಟಾಗದ ದೇಹವುಳ್ಳವನು ; ಪರಮಾತ್ಮ : ನಿರ್ವಿಕಲ್ಪ ವಿಸ್ತರಣ ನಿರ್ವೃದ್ಧಾಂಗ ನಿಜನಿರ್ಮಾಯ ಚಿತ್ಕೃಸು (ಬಸಪು. ೩೧–೪೪). [ನಿರ್ವೃದ್ಧ + ಅಂಗ್ಗ]

ನಿರ್ವೇಗ (ನಾ). ೧. ವೇಗವಿಲ್ಲದುದು ; ಮಂದಗತಿಯುಳ್ಳುದು. ೨. ಜುಗುಪ್ಸೆ ; ಬೇಸರ ; ಬೇಜಾರು : ನವೋತ್ಪಳದಳೇಕ್ಷಣೆ ಮನದೊಳಾಪ ನಿರ್ವೇಗಮೊಂದವಶ್ಯಮದು ಕೂರ್ಪರೊಳ್ ನುಡಿದಲ್ಲದೇಂ ಪೋಕುಮೇ(ಆದಿಪು. ೩–೩೧); ಆ ಪುರುಷನತಿಪರುಷಪಶಸಂಗಳಿಂ ತಿರಸ್ಕರಿಸಿ ನುಡಿಪೊಡದುವೆ ನಿರ್ವೇಗದಿಂ ಸಂವೇಗರ ಪುಟ್ಟ (ಸುಕುಪು. ೫–೭ ಪ) ; ಪ್ರಸಾದಮನೊಲ್ಲದೆ ಬಸವಂ ಮುಸುಂಕಿಟ್ಟು ಪರುಪತಿಯ ಪದದ ಕೆಳಗೆ ನಿರ್ವೇಗದಿಂ ಪಟ್ಟರ್ದಿರೆ (ಬಸರ. ೪–೪೪). ೩. ವೈರಾಗ್ಯ ; ವಿರಕ್ತಿ : ಇದೇಂ ಪಾಪದ ಫಲಮೋ ಎಂದು ಸಂಸಾರ ನಿರ್ವೇಗಮಾಗೆ (ಪಡ್ಡಾರಾ. ೯–೩೧); ಪಾಂಡುರಾಜಂಗೆ ಜಳದಾನಾದಿ ಕ್ರಿಯೆಗಳಂ ನಿರ್ವರ್ತಿಸಿ ತದನಂತರದೊಳಾದುವೆ ನಿರ್ವೇಗಮಾಗೆ . . . ಮುನಿನನಮುನಾಶ್ರಯಿಸಿದರ್ (ಪಂಪಭಾ. ೨–೨೯ ಪ) ; ಪಾಯುರಥನೊಮ್ಮೆ ಮುಂಗಿಲ್ ಕರಗಿ ಪುದಂ ಕಂಡದುವೆ ನಿರ್ವೇಗದಿಂ ಮನೋರಥನೆಂಬ ಮಗಂಗೆ ರಾಜ್ಯಮುಂ ಕೊಟ್ಟು ತಪಂಬಡುವುದುಂ (ಜಾವುಂಪು. ೬೫); ಧರೆಯಂ ರಾಮಂಗಿತ್ತಂ ಗುರುವಾನಳಿಪಿಂದಮಿರ್ದೊಡೆನಗಕ್ಕುಂ ತಿಂಳರಭಾವನೆಯೆಂಬ ಬಗೆಯಿಂ ಭರತಂಗೊಡಂಬಿಸಿದುದಕ್ಕುವಿಂ ನಿರ್ವೇಗಂ (ಪಂರಾಮಾ. ೬–೪೯) ; ಭರತಂ ಮಹಾತ್ಮನೆಸೆದನು ದಿವ್ಯತೇಜಸ್ಸಿ, ತ್ಯಾಗಬುದ್ಧಿಯಲಿ, ನಿರ್ವೇಗದಲಿ, ತಪದಲ್ಲಿ (ಶ್ರೀರಾಮಾ. ೨೬–೬೫೪). [ಸಂ.]

ನಿರ್ವೇಗರಸ (ನಾ). ೧. ವೈರಾಗ್ಯಭಾವನೆ ; ವಿರಕ್ತಿ : ಮುನ್ನಾದ ಶೋಕರಸಮೆಲ್ಲಂ ಪೋಗಿ ನಿರ್ವೇಗರಸಂ ಪುಟ್ಟಿ ಸಿದ್ಧರಸಮಂ ಮುಟ್ಟಿದ ಲೋಹದಂತೆ ಶುದ್ಧಾಂತರಂಗನಾಗಿ (ಆದಿಪು. ೩–೫೬ ಪ). ೨. ವೈರಾಗ್ಯಭಾವನೆಯುಳ್ಳವನು ; ವಿರಕ್ತ : ಅದಂ ಕಂಡಪಗತಮೋಹರಸನು ಮುಪಗತನಿರ್ವೇಗರಸನುಮಾಗಿ ಹೇಯಂ ಸಾಮ್ರಾಜ್ಯಮುಪಾದೇಯಂ ಪ್ರವ್ರಜ್ಯಮೆಂದು ಮಾಣದೆ ರಾಜ್ಯಶ್ರೀಯಂ ಕೊಟ್ಟುಂ(ಆದಿಪು.೧೬–೬೫ಪ).

[ನಿರ್ವೇಗ + ರಸ]

ನಿರ್ವೇದ (ನಾ). ೧. ಅತ್ಯ ಜುಗುಪ್ಸೆ ; ತನ್ನ ಬಗೆಗೇ ಉಂಟಾಗುವ ಜಿಗುಪ್ಸಾಭಾವ ; ವೈರಾಗ್ಯ ; ವಿರಕ್ತಿ : ಸದಾ ದುಃಖ ದುಃಖವೆಂಬ-ಭಾವನೆ ಮಾಡುತ್ತಿದ್ದರೆ ನಿರ್ವೇದ ಬರುತ್ತದೆ.ನಿರ್ವೇದವೆಂದರೆ ಅಯ್ಯೋ, ಇದುವರೆಗೆ ವಿವೇಕವಿಲ್ಲದೆ ಕೆಟ್ಟನಲ್ಲಾ ಎಂಬ ಅತ್ಮನಿಂದೆ (ಹಿಂದಸಾ. ೧೧೫). ೨. ಖೇದದಿಂದ ಎದೆಗುಂದುವುದು ; ನಿರಾಶಾಭಾವ ; ನಿರುತ್ಸಾಹ : ಜಯವಹುದೆ ನಿರ್ವೇದದಲಿ ನಿಭೃಯವಹುದೆ ದಿಸುಸುಯ್ಲಿನಲಿ (ಕುವ್ಯಾಸ. ೧೬–೬) ; ಹೀಗೆ ತಿಳಿದವಗೆ ಐದು ಸ್ಕಂಧಗಳಲ್ಲಿಯೂ ನಿರ್ವೇದ ಹುಟ್ಟುತ್ತದೆ. ನಿರ್ವೇದದಿಂದ ವಿರಾಗ ಜನಿಸುತ್ತದೆ (ತೀರ್ಥಕ. ೧೨). ೩. ಖೇದ ; ಸಂಕಟ ; ದುಃಖ : "ನಿರ್ವೇದಃ, ಖೇದಃ—ಈ ೨ ಉನ್ಮ(ಳಂ)ಳಿ" (ಹಲಾಯು. ೧೨೪–೬೯); ಅದಱಾನಾನೀ ನಿಶ್ಯಸ್ಪದಾಸೆಯಂ ಕೆಯ್ಕೊಂಡು ನಿರ್ವೇದಮಂ ಪೆಱಗಿಕ್ಕಿ (ಶಾಂತಪು. ೪–೭೯ ಪ) ; ನಿಜಸಖಿಯ ನಿರ್ವೇದೋಕ್ತಿಯಂ ಕೇಳಲಾಜದವಳಿಯ ನರ್ದೊಡೆಗೆ ಪರಿತಂದು ವಿನಯದಿಂದಿಂತೆಂದಳ್ (ರಾಜಪೇ. ೧೧–೧೩೪ ಪ) ; ಸಂಸಾರವನ್ನು ತೊರೆಯುವ ತೀವ್ರ ಮನೋವೇದನೆಗೆ ನಿರ್ವೇದಕ್ಕೆ ಕಾರಣವಾಗುವ ಸಂಗತಿಗಳು ಎರಡು ಬಗೆಯವು (ಕರ್ನಾಟ. ೬೨). ೪. [ಕಾವ್ಯಮೀ] ಮೂವತ್ತುಮೂರು ಸಂಚಾರಿಭಾವಗಳಲ್ಲಿ ಒಂದು ; ಶಾಂತರಸಕ್ಕೆ ಸ್ಥಾಯಿಭಾವ ; ತತ್ತ್ವಜ್ಞಾನ, ಆಪತ್ತು, ಅಸೂಯೆ ಮೊದಲಾದುವುಗಳಿಂದ ತನ್ನಲ್ಲಿ ಉಂಟಾಗುವ ತುಚ್ಛಭಾವನೆ : ಮತಿನಿರ್ವೇದಾವಹಿತ್ಥಶ್ರಮಮದಜಡತಾಗ್ಲಾನಿ . . . ಚಿತ್ತಭ್ರಂಶ ಮೋಹಾಮಯಮೃತಿಗಳಿವಿಂತೆಯ್ದೆ ಸಂಚಾರಿಭಾವಂ (ಕಾವ್ಯಾಪ. ೭೯) ; ದಾರಿದ್ರ್ಯ, ಆಪತ್ತು, ತತ್ತ್ವಜ್ಞಾನ ಈ ಮೊದಲಾದವುಗಳಿಂದ ಒದಗುವ ಶಾಶ್ವತಮಾನವೇ, ತನ್ನ ವಿಷಯದಲ್ಲಿ ಇಳಿಕೆಯ ಭಾವವೇ ನಿರ್ವೇದ (ಭಾರಮೀ. ೩೪೬) ; ಸಂಚಾರಿಭಾವಗಳು ಮೂವತ್ತು ಮೂರು:—೧. ನಿರ್ವೇದ (ಬೇಸರ), ೨. ಗ್ಲಾನಿ (ಬಳಲಿಕೆ) . . . ೩೦. ತ್ರಾಸ (ಭಯ), ೩೧. ವಿತರ್ಕ (ವಿಚಾರ) (ಕೈಪಿಡಿ. ೧೪೮). 'ನಿರ್ವೇಗ' ಪರಾ. [ಸಂ.]

ನಿರ್ವೇದಂಗೊಳ್ (ಕ್ರಿ). ದುಃಖಪಡು ; ಖೇದಗೊಳ್ಳು : ಆಪೂರ ಅಂತ್ಯಜರ್ ಸಾರಮೇಯಂಗಳಿನೆಯ್ತಂದು ಸತ್ತಿರ್ದನಡ್ಡಾಹನಂ ಕಂಡದಱ ಪೊಡೆಯಂ ಡಾಹದಿಂ ಪೊಯ್ಕಳ್ದೆಯಾ ಕ್ರೋಶ್ಯ ನಿರ್ವೇದಂಗೊಂಡೊಂದುಪಾಯಮುಂ ಕಂಡು (ಪಂಚತಂ. ೧೯–೧೪). [ನಿರ್ವೇದ + ಕೊಳ್]

ನಿರ್ವೇದನಿ (ನಾ). [ಜೈನ] ನಾಲ್ಕು ಬಗೆಯ ಧರ್ಮಕಥೆಗಳಲ್ಲಿ ಒಂದು ಬಗೆ ; ಪಾಪಫಲವನ್ನು ನಿರೂಪಿಸುವ ಕಥೆ : ಧರ್ಮಕಥೆಯೆಂಬುದು ಆಕ್ಷೇಪಣಿಯುಂ ವಿಕ್ಷೇಪಣಿಯುಂ ಸಂವೇದನಿಯುಂ ನಿರ್ವೇದನಿಯುಮೆಂದು ಚತುರ್ವಿಧಮಕ್ಕುಮವಱೊಳ್ ಆವುದೊಂದಱೊಳ್ ಜೀವಾದಿಪದಾರ್ಥಂಗಳನವಱ ಭಾ(ಗಂ)ವಂಗಳಂ ಯಥಾತ್ಮಸ್ವರೂಪಣಂಗೆಯ್ವುದು ಆಕ್ಷೇಪಣಿಯೆಂಬುದು ನಿಜಮುತನಿರೂಪಣದೊಳ್ ಪರಮತ ದೂಷಣಂಗೆಯ್ವುದುಮೆಂಬರ್ ಮತಳಥನದೊಳ್ ನಿಜಮತಪ್ರಕಾಶನಂಗೆಯ್ವುದು ವಿಕ್ಷೇಪಣಿಯೆಂಬುದು ಜಿನಧರ್ಮಫಲಭೂತಯಂ ಪೇೞ್ವುದು ಸಂವೇದನಿಯೆಂಬುದು ದರ್ಪದಿಂ ಪ್ರಮಾದದಿಂದಾದ ಪಾಪಫಲಮುಂ ಪೇೞ್ವುದು ನಿರ್ವೇದನಿಯೆಂಬುದು (ಜಾವುಂಪು. ೬೮೦).

[ಸಂ. ನಿರ್ವೇದನೀ]

ನಿರ್ವೇಧನ (ನಾ). ನಾಶ ; ಅಳಿವು : ಧನ ದುಷ್ಯತಬಳ ನಿರ್ವೇಧನಕರ (ಜಸಾಲಿ. ೫–೫). [ಸಂ.]

ನಿರ್ವೇಶ (ನಾ). ೧. ಲಾಭ ; ಗಳಿಕೆ. ೨. ಕೂಲಿ ; ಸಂಬಳ; ವೇತನ : "ಕರ್ಮಣ್ಯಾ . . . ನಿರ್ವೇಶಃ, ಪಣಃ—೧೧ ಕೂಲಿಯ ಹೆಸರುಗಳು" (ಸಿದ್ಧಾಂತಿ. ೩೧೪). ೩. ಪ್ರಾಯಶ್ಚಿತ್ತ. ೪. ಸುಖ ; ಭೋಗ : "ನಿರ್ವೇಶಃ, ಉಪಭೋಗಃ—ಈ ೨ ಉಪಭೋಗಂ" (ಹಲಾಯು. ೧೨೪–೬೦) ; "ಉಪಭೋಗಮೆನಲು ನಿರ್ವೇಶಮನೆ ಭೋಕ್ತವ್ಯಮದು" (ಜಾವುಂಪು. ೧೩೫–೬೫). ೫. ಮದುವೆ ; ವಿವಾಹ. [ಸಂ.]

ನಿರ್ವೈಕಾರ (ಗು). = ನಿರ್ವಿಕಾರ ೧ : ವಿರತ ಪದನೇಕುತತ್ಕಾರ ಸೂಕ್ಷ್ಮ ತತ್ಪೂರೆಯಲವಿಕೃತಿಕಾರಣಾತ್ಮನಿಸಾ ಮೂರನುಂ ಪರಿಕಿಸಿದ ರಂದಿರಂಪುರುಷ ನಿರ್ವೈಕಾರ ಭೋಗಿಗಳ್ತನುಗಳಲ್ಲೆ (ನಂಕಾರಾ.೨-೯-೨೬). [<ಸಂ. ನಿರ್ವಿಕಾರ]

ನಿರ್ವೈರ (ನಾ). ೧. ವೈರವಿಲ್ಲದಿರುವುದು; ಮೈತ್ರಿ : ಕುಶಲ ಮುಪ್ಪುದು ಹರುಷ ಕಾಮಧುಗ್ಭೇಡಿದುದ ವಶಗೈವುದಾ ಕ್ರಮದಿ ನೋಡಿದರೆ ನಿರ್ವೈರ ವಿಶದಮನೆ ಕಾಣ್ಪುದುಗುಮಾನಂದ ತ್ಮಿಂದ ತಾನೆ ಸಂಭೂತಮುಹುದು (ನಂಕಾರಾ. ೨-೯-೨೯). ೨. ವೈರವಿಲ್ಲದಿರುವವನು; ಮಿತ್ರ : ಸೇಣ್ ಪ್ರೀತಿ ಪಶ್ಚಾತ್ತಾಪದಿಂ ಭ್ರಾತೃಮೈತ್ರಿಯಿಂ ಶುದ್ಧನೆಂ, ನಿರ್ವೈರನೆಂ (ಕ್ರೀರಾಮಾ. ೩೧೪-೩೧೧). [ಸಂ.]

ನಿರ್ವೈಸು (ಕ್ರಿ). ಬೇಸರಗೊಳ್ಳು ; ಜುಗುಪ್ಸೆಗೊಳ್ಳು ; ಹೇಸು : ಸಂಜಯನ ನುಡಿಗೆ ಮುರ್ಯೋಧನಂ ನಿರ್ವೈಸಿ (ಗದಾಯು. ೩-೪೫ ನ); "ಪ್ರತಿಕೂಲಿಸು" (ಪ್ರಭಣ್ಣ). [<ನಿರ್ವೇಗ+-ಇಸು]

ನಿರ್ವ್ಯಗ್ರ (ಗು). ೧. ಹೊಯ್ದಾಟವಿಲ್ಲದ; ಚಂಚಲತೆಯಿಲ್ಲದ : ನಿರ್ವ್ಯಗ್ರಪದವಿಸ್ಥಿತಿಪರಚಿತ್ತಗ್ರಹಣ ಸಮರ್ಥಮುಪ್ಪುದಂತದು ಕಾಂತಂ (ಕಾವ್ಯಾವ. ೫೦೯). ಚಂಚತ್ಕಾಂಚನಸ್ಥಾನದೀಪಿಕಾಗ್ರನಿರ್ವ್ಯಗ್ರದೇದೀಪ್ಯಮಾನದೀಪಪ್ರಭಾಧಿಭೂತತಮಸ್ತೋಮಮುಮಪ್ಪ ಗರ್ಭಗೃಹಮನಭುಕ್ಷಿ ತೋಜ್ವಲನಾಗಿ ಪೊಕ್ಕಾಗಳ್ (ಚಂದ್ರಪ್ರ. ೩-೧೭ ವ). ೨. ಆತಿಯಾದ ಆಸಕ್ತಿಯಿಲ್ಲದಿರುವ; ತಲ್ಲೀನತೆ ಇಲ್ಲದಿರುವ. [ಸಂ.]

ನಿರ್ವ್ಯಗ್ರತೆ (ನಾ). ನಿಶ್ಚಿಂತೆ ; ನಿರ್ವ್ಯಾಕುಲತೆ : ಆಗ್ರಹಮಂ ಬಿಸುಟದುವೆ ನಗಾಗ್ರಣಯಂದಿದನೆ ನೋಡಿ ಬಲಗೊಳ್ವುವು ನಿರ್ವ್ಯಗ್ರತೆಯಿಂ ಚಂದ್ರಾದಿತ್ಯಗ್ರಹನಕ್ಷತ್ರತಾರಕಾನಿಕರಂಗಳ್ (ಅದಿಪು. ೨-೩೦). [ಸಂ. ನಿರ್ವ್ಯಗ್ರತಾ]

ನಿರ್ವ್ಯಥನ (ನಾ). ೧. ಕುಳಿ ; ಗುಳಿ ; ಕುಣಿ : "ನಿಮ್ನಂ . . . ನಿರ್ವ್ಯಥನಂ, ರಂಧ್ರಃ, ರೋಕಃ, ಕುಹರಃ, ದರಃ—ಈ ೧೫ ಕುಟಿಲಾ (ಹಲಾಯು. ೧೦೩-೩); "ವಿವರಂ ಬಿಲಂ ಛಿದ್ರಮಂತರಂ ನಿರ್ವ್ಯಥನಂ . . . ಶ್ವಭ್ರಮೆಂದೆನಲು . . . ಗುಬ್ಬಿಗಕ್ಕು ನಾಮಂ" (ನುಂಗರಾ. ೧೧೩-೨). ೨. ವ್ಯಸನದಿಂದ ಬಿಡುಗಡೆಯಾದುದು ; ನೋವು ಪರಿಹಾರವಾದುದು. ೩. ಅತ್ಯಧಿಕವಾದ ನೋವು ; ಯಾತನೆ. [ಸಂ.]

ನಿರ್ವ್ಯಭಿಚಾರ (ನಾ). ಅಪೋಹವಿಲ್ಲದಿರುವಿಕೆ; ತಪ್ಪದಿರುವಿಕೆ; ಸ್ಥಿರವಾಗಿರುವಿಕೆ : ಆಚಾರಂ ನಿಸದಾಗಿ ಸದ್ಗುಣಗಣಂ ಮುಂತಾಗಿ ಮಂತ್ರಕ್ರಿಯಾಕೋಶಂ ನಿರ್ವ್ಯಭಿಚಾರವಾಗಿ ಜಿನರಾಜಪ್ರಾಜ್ಯಸಾಮ್ರಾಜ್ಯದೊಳ್ . . . ಆಚಾರ್ಯರ್ ನಮಗೀವರಕ್ಕೆ ನಯನಿಕ್ಷೇಪಪ್ರಮಾಣಂಗಳಂ (ಅರ್ಥನೇ. ೧-೪). [ಸಂ.]

ನಿರ್ವ್ಯಯ (ಗು). ೧. ವ್ಯಯವಾಗದ ; ಅಕ್ಷಯವಾದ. (ನಾ). ೨. ಶಾಶ್ವತವಾದ ಸ್ಥಾನ ; ಮೋಕ್ಷ : ಜಯ ವಿಮಳಕೇವಳಾಕೋದಯಗಿರಿವರ ಜಯ ದಯಾರಸಾರ್ಣವ ಜಯ ನಿರ್ವ್ಯಯಲಕ್ಷ್ಮೀನಿಳಯಾಂಬುಜ. (ಚಂದ್ರಪ್ರ. ೭-೬). [ಸಂ.]

ನಿರ್ವ್ಯಸನ (ನಾ). ಚಿಂತೆಯಿಲ್ಲದಿರುವಿಕೆ ; ವ್ಯಸನವಿಲ್ಲದಿರುವಿಕೆ. [ಸಂ.]

ನಿರ್ವ್ಯಸನಿ (ನಾ). ವ್ಯಸನವಿಲ್ಲದವನು; ಸುಖಿ : ಇಂತೀ ಅಸ್ಯ ಭೋಗದೈಶ್ವರ್ಯದಲ್ಲಿಪ್ಪ ರಾಜಯೋಗಿ ಜರಲಿಂಗ ನಿಶ್ಚಿಂತ ನಿರ್ವಾಣಿ ನಿರಂಜನ ನಿರ್ಮಾಯ ನಿರ್ವ್ಯಸನಿ ಪರಮಜಂಗಮ (ಅಪಚಂ. ೨೫೮-೧೧೬೨). [ಸಂ. ನಿರ್ವ್ಯಸನಿನ್]

ನಿರ್ವ್ಯಾಕುಲ, ನಿರ್ವ್ಯಾಕುಳ (ಗು). ೧. ದುಃಖವಿಲ್ಲದ; ಚಿಂತೆಯಿಲ್ಲದ. ೨. ಭೀತಿಯಿಲ್ಲದ; ಅಂಜಿಕೆಯಿಲ್ಲದ. (ನಾ). ೩. ದುಃಖವಿಲ್ಲದಿರುವುದು ; ನಿಶ್ಚಿಂತತೆ ; ಸಂತೋಷ : ಶೋಕ ಶತಾಕುಲಮುಂ ದುಃಖಾಕರಮುಮೆನಿಪ್ಪ ಮಾಯ್ದುಮತ್ಯಾಯಮನಿನ್ನೇಕೆ ಗಡ ಪಿಡಿದಪೆಂ ನಿರ್ವ್ಯಾಕುಲದಿಂ ಬಿಡುವೆನೆಂದು ಚಿಂತಿಸುವಿನೆಗಂ (ಕಾದಂಬ. ೬೦೯); ಅನಂತದರ್ಶನಮುಮನಂತವ್ಯಾಬಾಧಶೋಭಾಕರಾಕ್ಷರ ನಿರ್ವ್ಯಾಕುಲಮಪ್ಪನಂತಸುಖಮುಂ ಪೆಯ್ವುತ್ತು ನಿನ್ಮೊಳ್ಕರಂ ದೊರೆವೆತ್ತಿರ್ದುದು (ಸುಕುಮಾ. ೪-೫೨). ೪. ಅಂಜಿಕೆಯಿಲ್ಲದವನು ; ನಿರ್ಭೀತ : ಸಾಕು ಪೂರ್ವದ ರೂಪಿನಲಿ ನಿರ್ವ್ಯಾಕುಲನ ಮಾಡೆನಲು ಪವನಜನಾ ಕಪೀಶ್ವರ ನಗುತ ಮುನ್ನಿನ ರೂಪ ಕೈಕೊಂಡ (ಕುವ್ಯಾಚ. ೧೧-೩೯). **ನಿರ್ವ್ಯಾಕುಳ** : ೧. ದ್ರವ್ಯತಪದಿಂದಮಲ್ಲದೆ ನಿರ್ವ್ಯಾಕುಳ ಭಾವತಪಮುಮಂ ತಳೆಯಂ ತಾಂ ನಿರ್ವ್ಯಾಜವಿನಿತಂ (ಸುಕುಮಾ. ೩-೩೫). ೩. ಆ ಕಳಮಥಾತ್ರಿ ಕಣಿತಕುಚಾಕಲಿತಪಯಃ ಪ್ರತಾನದಿಂ ಬಳಯಿಸೆ ನಿರ್ವ್ಯಾಕುಳಮೆನೆ ರಾಜಶುಕಾನೀಕಶಿಶುಪ್ರತತಿ ಬಳೆವುದುಚಿತ ಸ್ಥಿತಿಯಿಂ (ಚಂದ್ರಪ್ರ. ೧-೧೩). [ಸಂ.]

ನಿರ್ವ್ಯಾಕುಳ 'ನಿರ್ವ್ಯಾಕುಲ' ನೋ.

ನಿರ್ವ್ಯಾಜ (ಗು). ೧. ಕಪಟವಿಲ್ಲದ ; ಮೋಸವಿಲ್ಲದ. ೨. ನೆವವಿಲ್ಲದ. (ನಾ). ೩. ಕಪಟವಿಲ್ಲದಿರುವುದು; ನಿಷ್ಕಪಟತೆ : ಧರ್ಮರಾಜಂ ರಾಜರಾಜನಲ್ಲಿಗೆ ನಿರ್ವ್ಯಾಜದಿಂ ದಿತಿಜಕುಳವಿಜಯಿಯಪ್ಪ ಜಿತನನೆ ದೂತಕಾರ್ಯಕ್ಕಟ್ಟಿದೊಡಸುರವಿಜಯಿಯುಂ ಕತಿಪಯಪ್ರಯಾಣಂಗಳಿಂ ಮದಗಜೇಂದ್ರಪುರಮನೆಯ್ದಿ (ಪಂಪಭಾ. ೯-೩೬ ವ). ೪. ಕಾರಣವಿಲ್ಲದುದು; ನೆಪವಿಲ್ಲದಿರುವುದು. ೫. ಮೋಸವಿಲ್ಲದಿರುವವನು ; ನಿಷ್ಕಪಟಿ. ೬. ನಿಸ್ಸಂದೇಹ ; ನಿಸ್ಸಂಶಯ : ಅಜುಯಂ ಸೋದರನೆಂದು ಧರ್ಮತನಯಂ ನಿರ್ವ್ಯಾಜದಿಂ ನಿನ್ನನಾಣಿವೆಂ (ಪಂಪಭಾ. ೧೩-೫); ಶಿವೆಯಂ . . . ಶಿಲಾಜಿತುವಂ ಲೋಹವುಮಂ ಸಜ್ಜಿಸಿ ತನೆ ಬೇಱಿವೇಱಿ ನಿರ್ವ್ಯಾಜದಿಂ ಪ್ರಮೇಹಂ ಕಿಡುಗುಂ (ಲೋಕೋಪ. ೯-೧೩೬); ರಾಜಮಂದಿರದೊಳಗೆ ನೀತಿಗಳೋಜೆಯಿಲ್ಲದ ಸಚಿವರಿಂ ನಿರ್ವ್ಯಾಜದಲಿ ಕೇಡಹುದು ತಪ್ಪದು ಲೋಕವಾರ್ತೆಯಿದು (ಕುವ್ಯಾವಿ. ೪-೧೬). [ಸಂ.]

ನಿರ್ವ್ಯಾಜಂ (ಅ). ೧. ನಿಷ್ಕಾರಣವಾಗಿ; ಸುಮ್ಮನೆ : ದ್ರವ್ಯತಪದಿಂದಮಲ್ಲದೆ ನಿರ್ವ್ಯಾಕುಳಭಾವತಪಮುಮಂ ತಳೆಯಂ ತಾಂ ನಿರ್ವ್ಯಾಜಮಾತನೆಂದಾ ದಿವ್ಯಾವಧಿಬೋಧರಜಾದು ತಪಮಂ ಕೊಟ್ಟರ್(ಸುಕುಮಾ. ೩-೩೫); ನಿರ್ವ್ಯಾಜಮಸಗನೊರ್ವಂ ತೆಗೆಟ್ಟನೆಂದಬಲೆಯನಿಂತು ಕಾರಡವಿಯೊಳ್ ಬಿಡುವರೇ ! (ರಾಮಾಶ್ವ. ೩೫-೨೯). ೨. ನಿಜವಾಗಿ ; ಯಥಾರ್ಥವಾಗಿ : ನಿನ್ನೀ ಲೀಲೆಗೆ ನಿರ್ವ್ಯಾಜಂ ಎದೆ ಒಲಿದಿಹುದೈ ಮುದವಾನುತಲೀಗ (ಗಸೇಶ. ೭೮-೧೬). [<ನಿರ್ವ್ಯಾಜ]

ನಿರ್ವ್ಯಾಜತೆ (ನಾ). ಕಪಟವಿಲ್ಲದಿರುವಿಕೆ ; ಪ್ರಾಮಾಣಿಕತೆ : ಸೇಟರ ಮೋರೆಯ ಮೇಲಿನ ನಿರ್ವ್ಯಾಜತೆಯನ್ನು ನೋಡಿದರೆ ಇವರ ಬಿನ್ನಹವನ್ನು ಮನ್ನಿಸದಿರುವುದೇ ಅಪರಾಧವೆಂದೆನಿಸುವ ಹಾಗಿತ್ತು (ಸಸುಜೀ. ೨೯೮). [ಸಂ. ನಿರ್ವ್ಯಾಜತಾ]

ನಿರ್ವ್ಯಾಜಶೌರ್ಯ (ನಾ). ಸ್ವಾಭಾವಿಕ ಶೌರ್ಯ ; ಸಹಜವಾದ ಪರಾಕ್ರಮ: ಅಂತು ಹೊಗಟ್ಟು ರಾಜರಾಜನ ನಿರ್ವ್ಯಾಜಶೌರ್ಯಕ್ಕೆ ಸಂಕರ್ಷಣನಾಶ್ಚರ್ಯಂಬಟ್ಟು (ಗದಾಯು. ೭-೭೦ ವ). [ನಿರ್ವ್ಯಾಜ+ಶೌರ್ಯ]

ನಿರ್ವ್ಯಾಜಸೇವೆ (ನಾ). ನಿಷ್ಕಪಟವಾದ ಪರಿಚರ್ಯೆ ; ನಿಸ್ವಾರ್ಥ ಸೇವೆ : ಶಾಶ್ವತ್ಕಪಂಡಿತಪಂಕ್ತಿಯೊಂದು ನಿರ್ವ್ಯಾಜಸೇವೆಯನ್ನು ಸಲ್ಲಿಸಿತು (ದ್ರಾವಿವಿ. ೧೩ ಹಿನ್ನೆಲೆ). [ನಿರ್ವ್ಯಾಜ+ಸೇವೆ]

ನಿರ್ವ್ಯಾಜಸ್ನೇಹ (ನಾ). ಅನಿಮಿತ್ತವಾದ ಸ್ನೇಹ ; ಸ್ವಾರ್ಥವಿಲ್ಲದ ಮಿತ್ರತ್ವ : ಒಂದೇ ಬೀಡಿಯನ್ನು ಪಾಲುಗಾರಿಕೆಯಿಂದ ಇವರು ಸೇದುತ್ತಾರೆಂದು ಕೇಳಿದ್ದೇನೆ. ಇದು ನಿರ್ವ್ಯಾಜಸ್ನೇಹವೆಂದು ನಾನು ಹೇಗೆ ನಂಬಲಿ ? (ದೇಕನ್ಯ. ೩೫). [ನಿರ್ವ್ಯಾಜ+ಸ್ನೇಹ]

ನಿರ್ವ್ಯಾಧಿತ (ಗು). ರೋಗವಿಲ್ಲದ; ನಿರೋಗವಾದ : ದಂಡಕರಿಸಿಯರ ಮೆಯ್ಯ ತೊಗಲ್ ಪಾವಿನ ಪೆರೆ ಸುಲಿವಂತೆ ಸುಲಿದು ಪೋಗಿ ನಿರ್ವ್ಯಾಧಿತದೇಹರಾಗಿ ಮೆಯ್ಯ ತೇಜಂ ತೊಳಗುತ್ತಿರ್ದುದಂ ವಿಷ್ಣು ಕಂಡು ವ್ಯಾಧಿ ಕೆಟ್ಟುದೆಂದಱಿದು (ಪಡ್ಡಾರಾ. ೧೭೨-೨). [ಸಂ.]

ನಿರ್ವ್ಯಾಪಾರ (ನಾ). ೧. (ಜಗತ್ತಿನ ಚಟುವಟಿಕೆಗಳಿಗೆ) ನಿಷ್ಕ್ರಿಯನಾದವನು. ೨. ಪರಮಾತ್ಮ : ಶ್ರೀಪಾರ್ವತೀನಾಥ ಕಾಪಾಲಕರತಳ ಸದಾಪಾವನಾಂಗ ನಿರ್ವ್ಯಾಪಾರ ಘನಮೇರು ಚಾಪಾಗಮಜ್ಞ ನಿರ್ಲೇಪಾತ್ಮ ಭೂವಿಷ್ಣು (ವೀಶೈಪು. ೬-೧-೧). [ಸಂ.]

ನಿರ್ವ್ಯಾಪಾರಿ (ನಾ). ಪ್ರಪಂಚವ್ಯವಹಾರದಲ್ಲಿ ಆಸಕ್ತಿಯಿಲ್ಲದಿರುವ ವ್ಯಕ್ತಿ ; ನಿಶ್ಚಿಂತ ; ವಿರಕ್ತ : ಶರಣ ಸರ್ವವ್ಯಾಪಾರಿಯಾದಡೆ ಕಿಱಿದೆಂಬರು ಶರಣ ನಿರ್ವ್ಯಾಪಾರಿಯಾದಡೆ ಹಿರಿದೆಂಬರು (ಅಖಂಡೇ. ೩೦೬-೮೯). [ಸಂ. ನಿರ್ವ್ಯಾಪಾರಿನ್]

ನಿರ್ವ್ರಣ (ಗು). ೧. ಗಾಯವಿಲ್ಲದ. ೨. ನಿರ್ದೋಷವಾದ ; ಚೊಕ್ಕ : ಜಳಧಿಯೊಳಾದ ಮುತ್ತುಗಳವೇಂ ಪೊಸತಾದುವೆ ನಿನ್ನ ತೋಳ ಬಾಳೊಳ ಬಲಗರ್ವದಿಂ ತೆಗೆದುದಗ್ರವಿರೋಧಿಮದೇಭಮಸ್ತಕ ಸ್ಥಳಜಳರಾಶಿಯೊಳ್ ಬಳೆದ ನಿರ್ಮಳನಿರ್ವ್ರಣ ವೃತ್ತಮೌಕ್ತಿಕಾವಳಿಯನೆ ತರ್ಪುದೆಂದು ನುಡಿದಟ್ಟಿಱೊಳಾಱಿಸಿದಳ್ ನಿಜೇಶನಂ (ಪಂಪಭಾ. ೧೦-೪೬). [ಸಂ.]

ನಿರ್ಹರಣ (ನಾ). ಹೋಗಲಾಡಿಸುವುದು; ನಾಶಮಾಡುವುದು : ಅಖಿಳವಿನತಜನಕರ್ಮಾಂಧಕಾರನಿರ್ಹರಣಸೂರಂ . . . ಸಲಹುಗನುದಿನಂ ಶ್ರೀಮಹೇಶಂ ಸದಾ ಕೈಲಾಸವಾಸಂ ಕೃಪಾಳು ನಂದಿಗಿರೀಶನು (ಭಿಕ್ಷಾಚ. ೧-೧). [ಸಂ.]

ನಿರ್ಹಾರ (ನಾ). ೧. ಎಳೆದು ತೆಗೆಯುವುದು; ಹೊರದೆಗೆಯುವುದು : "ನಿರ್ಹಾರಃ, ಅಭ್ಯವಕರ್ಷಣಂ—೨ ಈಚೆಗೆ ತೆಗೆದುಹಾಕುವಿಕೆ, ಮೇಲಕ್ಕೆ ಎಳೆದು ಹಾಕುವಿಕೆ" (ಸಿದ್ಧಾಂತಿ. ೩೬೧). ೨. ಇಲ್ಲದಂತೆ ಮಾಡುವುದು ; ನಾಶ ; ಹಾಳು. ೩. ಮೂಲೋತ್ಪಾಟನ ; ಸರ್ವನಾಶ. [ಸಂ.]

ನಿರ್ಹಾರಿ (ನಾ). ೧. ಒಂದು ಬಗೆಯ ಸುಗಂಧ,—ಸುವಾಸನೆ : ೨. ಒಂದು ಬಗೆಯ ಸುಗಂಧದ್ರವ್ಯ : "ಸಮಾಕರ್ಷೀ, ನಿರ್ಹಾರೀ—೨ ದೂರವಾಗಿ ವ್ಯಾಪಿಸುವ ಗಂಧವುಳ್ಳ ದ್ರವ್ಯದ ಹೆಸರುಗಳು" (ಸಿದ್ಧಾಂತಿ. ೪೬). [ಸಂ. ನಿರ್ಹಾರಿನ್]

ನಿರ್ಹಾಸ (ನಾ). ಅರಳದಿರುವಿಕೆ : ನಿರ್ಹಾಸಂ[ಪಾಠಾಂ. ನಿರಹಾಸಂ] ಕುಚಕಂಜಕುಟ್ಮಲಯುಗಂ ಮುಗ್ಧಾನನಂ ವರ್ಜಿತಾಂತರ್ಹಾಸಂ ಕುಸುಮಚ್ಯುತಂ ಕಚಭರಂ (ಅರ್ಧನೇ. ೧-೭೨). [ಸಂ.]

ನಿರ್ಹೇತುಕ (ನಾ). ಕಾರಣವಿಲ್ಲದುದು : ಚಿಂತಾತರಳತ್ವಮಂ ತೊಱೆವುದೆಂತದಱಿಂ ತರಳಾಯತಾಕ್ಷಿ ನಿರ್ಹೇತುಕಮಪ್ಪ ಖೇದಮನಿದಲ್ತು ಕೃಪಾವತಿಯರ್ಗೆ ಚೇಷ್ಟಿತಂ (ಚಂದ್ರಪು. ೩-೬೫); ಉಪನಿಷತ್ತುಗಳಿಂದಲೇ ಬೌದ್ಧದರ್ಶನವು ಪ್ರಚೋದಿತವಾಗಿರಬೇಕು ಎಂಬ ಮಾತು ನಿರ್ಹೇತುಕವಲ್ಲ (ಭಾರದ. ೧೨೧). [ಸಂ.]

ನಿರ್ಹ್ರಾದ (ನಾ). ಶಬ್ದ ; ಸದ್ದು ; ಧ್ವನಿ : "ಶಬ್ದಃ . . . ನಿರ್ಹ್ರಾದಃ . . . ವಿರಾವಃ—೧೭ ಧ್ವನಿಯ ಹೆಸರುಗಳು" (ಸಿದ್ಧಾಂತಿ. ೫೬). [ಸಂ.]

ನಿಲ್, ನಿಲ್ಲು, ನಿಲ್ಲು (ಕ್ರಿ). ನಿಂತ, ನಿಂದ, ನಿತ್ತ, ನಿಲ್ತ, ನಿಲ್ದ (ಭೂತಕೃ), ನಿಂತು, ನಿಂದು, ನಿಲ್ತು (ಭೂತನ್ಯೂ). ೧. ಚಲಿಸದಿರು ; ನಡೆಯದಿರು ; ಮುಂದುವರಿಯದಿರು : "ನಿಲ್—ಗತಿಮುಕ್ತೌ" (ಶಮಧಾ); ನಿಲ್ತೋಳಂ ಬರ್ಪುದು (ಕವಿರಾ. ೧-೬೨); ಉಗ್ರಸೂತಹಯಸಂಘಾತಂಗಳಂ ತಿಣ್ಣಮೆಚ್ಚಿದಿರೊಳ್ ನಿಲ್ಲಿದಿರೋಡು ಸತ್ತೆ (ಪಂಪಭಾ. ೧೨-೨೨); ನೊಂದವರು ನಿಲಿ ಸ್ವಾಮಿಕಾರ್ಯಕೆ ಹಿಂದುಗಳೆವರು ಮರಳಿ (ಕುಪ್ಯಾಕ. ೮-೨೯). ೨. ಕಾಲೂರಿ ಇರು; ಸ್ಥಿತವಾಗಿರು : ಮುನ್ನೆ ನಿನ್ನು ಕೂಟಾ ತೊಱದು (ಸೌಇಇ. XI-1, ೧೧-೧೭ ; 665) ; ಅನಂಗಜಂಗಮಲತೆಪೊಲ್ ನಿಲ್ತು ಜವನಿಕೆಯ ಮಱೆಯೊಳ್ ಪೋಲ್ತಳವಳ್ ಮುಗಿಲ ಮಱೆಯ ವಿದ್ಯುಲ್ಲತೆಯಂ (ಆದಿಪು. ೯-೨೦); ಕಟ್ಟದಿರೊಳ್ ನಿಂದನಂ ಪಿಂಗಳಕಂ ಕಂಡು (ಪಂಚತಂ. ೩೩-೯) ; ಊರೊಳ್ ಕಂಡು ನಿಂದಿರ್ದರ್ನಿಂದಿರ್ದಲ್ಲಿಯೆ ಕುಳ್ಳಿರ್ದರ್ಕುಳ್ಳಿರ್ದಲ್ಲಿಯೆ ಕಂಪಿತರಂತೆ ಬಿಟ್ಟೋಡದಿರೆ ಸೂಳೆಗೇರಿಯಂ ಪೊಕ್ಕು (ಧರ್ಮಾಮೃ. ೨-೩೯). ೩. ಇರು ; ಉಳಿ : ಈಶಾನದ ಮುಕೂಡಲೊಳ್ ಕೂಡಿ ನಿನ್ನತ್ತು (ಇಆ. XII, ೧೬-೨೦; 735) ; ದಿವಿಜನೋ ಫಣಿನಾಯಕನೋ ಮನೋಭವನಿವಂ ಕರಮೊಪ್ಪಿದನೆಂಬುದಂ ಕವಿಗಳಿಟ್ಟ ವಿಶಂಕೆಯ ಪಾಟಿಯಂ ತವಿಸಿ ನಿಲ್ಕೆ ಮನೋಹರಕಾವ್ಯದೊಳ್ (ಕವಿರಾ. ೧-೧೪೦) ; ತಪದಿಂ ಸ್ಮರರಿಪು ದೇಹಾರ್ಥಪಥದೊಳಾ ಗೌರಿ ನಿಂದ ಪೊಲ್ನಿಲ್ವೈ ನೀಂ ತಪದಿಂದಿನಿಯನ ತೊಡೆಯೊಳ್ (ಕಾದಂಉ. ೬೨೬) ; ಕೊಂಬಿನ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು ನಿಂದಲ್ಲಿ ನಿಲ್ಲಲೀಯದೆನ್ನ ಮನವು (ಬಸವ. ೩೨); ಇಲ್ಲಿ ನಿಲ್ಲರ್ಜುನ ತಪೋವನಕಿಲ್ಲಿ ನೆಲೆ (ಕುಪ್ಯಾಅ. ೪-೪೦). ೪. ಚಿರಸ್ಥಾಯಿಯಾಗಿರು ; ಸ್ಥಿರವಾಗಿರು ; ಶಾಶ್ವತವಾಗಿ ನೆಲಸು : ಶ್ರೀರೂಪಲೀಲಾಧನವಿಭವಮಹಾರಾಶಿಗಳ್ನಿಲ್ಲವಾರ್ಗ್ಗಂ (ಎಕ. II, ೮೮-೨; ಸು. 700) ; ಆತಂ ಭರತೇಶ್ವರನಿಂತೀ ತೆಱದಿಂ ನೆಗಟ್ಟಿ ತನ್ನ ಕೀರ್ತಿಯನೀ ವಿಖ್ಯಾತವೃಷಭಾದ್ರಿಯೊಳ್ ಸುರಗೀತಯಶಂ ನಿಱಿಸಿದಂ ನೆಲಂ ನಿಲ್ವಿ ನೆಗಂ (ಆದಿಪು. ೧೩-೭೭) ; ನಿಲ್ವೊಡೆ ಗುಣಂ ನಿಲ್ಕುಂ ಪಣಂ ನಿಲ್ಕುಮೇ (ಅಜಿಪು. ೧-೯೧) ; ಮೊಗದೊಳ್ ವಾಗ್ವಧು ಸಂತತಮಗಲದೆ ನಿಲೆ (ಸಮಪ. ೧-೨೦) ; ಪಾಲಿಸಮ್ಮ ಮುದ್ದು ಶಾರದೆ ಎನ್ನ ನಾಲಿಗೆಯಲಿ ನಿಲ್ಲಬಾರದೆ (ಪುರಂದ. ೧-೧೯೦ ಪಲ್ಲವಿ). ೫. ತಂಗು ; ಇಳಿದುಕೊಳ್ಳು : ತಡೆದಿಲ್ಲಿ ನಿಂದೆನಪ್ಪೊಡೆ ಮಡಿವಾದಪುದುಟಿವೆನಪ್ಪೊಡೆಲ್ಲೆಡೆ ಮುಂದೊಂದಡಿಯುಂ ತೆಱಪಣಮಿಲ್ಲೀಯೆಡೆಗಾವುದುಪಾಯಂ (ಧರ್ಮಾಮೃ. ೬-೯೧) ; ಭೂತಂಗಳಾವಾಸದೊಳ್ ಸಲೆ ಬಲ್ಲರ್ ನಿಲೆ ಸಲ್ಲದ್ಯೆ (ಸೋಮೇಶ. ೧೫). ೬. ಭಿಕ್ಷಾಸ್ವೀಕಾರಕ್ಕಾಗಿ ಸ್ವಲ್ಪ ಕಾಲ ಇರು,—ತಡೆ : ಧರ್ಮಧರಸಾಗರಸೇನರೆಂಬ ಗಗನಚಾರಣರ್ ಕಾಂತಾರಚರ್ಯಾಮಾರ್ಗದೊಳ್ ತಮ್ಮಾವಾಸಕ್ಕೆ ಬರ್ಪರಂ ಶ್ರೀಮತಿಯುಂ ತಾನುಂ ಕಂಡು ಸಸಂಭ್ರಮಂ ಬೆರಸಿದಿರಂ ನಡೆದು ಬದ್ಧಾಂಜಳಿಪುಟಘಟಿತನಿಟಲರಾಗಿ ನಿಲ್ಕೆಂದು ನಿಲಿಸಿ (ಆದಿಪು. ೪-೯೫ ಪ). ೭. ಎದುರಿಸು ; ಪ್ರತಿಭಟಿಸು ; ಹೋರಾಡು : ಕದನದೊಳಿದಿರಂ ಮಿಾಱಿ ಮಾಱಿಂತು ನಿಂದಾಂತರಿಭೂಪರ್ ಭಸ್ಮಮಾದರ್ (ಕಾವ್ಯಸಾ. ೨೧೫ ಶೂದ್ರಕ) ; ಬೂತುಗಸುಂ ಮನಾಲರಂ ತನ್ನ ಮುನ್ನೆ ನಿನ್ನಿಱಿದುದಕ್ಕೆ ಮೆಚ್ಚಿ ಆತುಕೂರ್ಪನ್ನೆರಡುಂ ಬೆಳ್ವೊಲದ ಕಾದಿಯೂರಮಂ ಬಾಳ್ಗೆ ಮೆಚ್ಚುಗೊಟ್ಟ (ಎಕ. III, ಮಂಡ್ಯ. ೪೧-೨೨ ; 950) ; ನಿಲಲುಂ ನೂಂಕಲುಮರಿಯಂ ಗೆಲಲುಂ ಪೆಱರೊಳರೆ ಕರ್ಣನಲ್ಲದೆ (ಗದಾಯು. ೩-೬೪) ; ಮರುಳೆಲ್ಲೆ ಹನುಮಂತ ದಾನವನಱಿತು ಮಾಡುವುದೇನು ಮರ್ಮವನೊರೆದು ಮಾಡುವದೇನು ನಿತ್ತರೆ ಕೊಲುವೆ ಸಮರದಲಿ (ಕೌತಿರಾ. ೧೭-೯). ೮. ಅಣಿಯಾಗು; ಸಿದ್ಧವಾಗು : ಅವರೊಳಗಲಕೆ

ನಿಂದ ರಿಪುಗಳ ಜವನ ಬೋನವ ಮಾಡದಿದ್ದರೆ . . . ದಿವಿಜಪತಿ ತನಯಂಗೆ ತಾ ಜನಿಸಿದವನಲ್ಲ (ಕುಪ್ಯಾದ್ರೋ. ೪-೩೯). ೯. ತೊಡಗು ; ಆರಂಭಿಸು : ಮುಂತೆ ಕಿನ್ನರರು ನವರಸದಿ ಪಾಡಲ್ಕಾಗ ನಂತರಂ ಭೃಂಗೀಶ ನರ್ತನಕೆ ನಿಂದಾಗ ಹೊಸಪರಿಯ ಗತಿಗಳಂ ನಟಿಸಿ ತೋಱುತ್ತಮಿರೆ (ಬಸರ. ೧-೨೪). ೧೦. ಕಾಯು ; ಎದುರು ನೋಡು : ಇರ್ಬರೊಳೊರ್ಬ ಮುನಿಕುಮಾರಂ ಭೂಭೃನ್ನಿಳಯದ ಬಾಗಿಲೊಳಕ್ಷಾವಳಿಯಂ ಬೇಡಲ್ಕೆ ಬಂದು ನಿಂದಿರ್ದಪ್ಪಂ (ಕಾದಂಪೂ. ೮೧೧) ; ಇದಾವ ಗಹನಮಿಾಗಳಾಂ ಪೋಗಿ ಬರ್ಪನ್ನೆವರಮಿಲ್ಲಿಯೇ ನಿಲ್ಲಿಮೆಂದು ವಾಯುವೇಗದಿಂ ವಾಯಸಂ ಪೋಗಿ ಬಂದು (ಪಂಚತಂ. ೪೦-೨೨). ೧೧. ಗೋಚರವಾಗು ; ಕಾಣಿಸಿಕೊಳ್ಳು : ಇದಿರೊಳ್ ನಿಂದೊಡೆ ವಜ್ರಿ ಸೈರಿಸನಿರಲ್ವೇಡೆಮ್ಮೊಳೊಳ್ವೊಕ್ಕು ನಿಲ್ವುದು ನೀಂ (ಪಂಪಭಾ. ೪-೨೪). ೧೨. ಸೈರಿಸು ; ನಿತ್ತರಿಸು ; ಸಹಿಸು : ತಲೆಯಂ ಬಲು ದಡಿಗರ್ಕಿಟ್ ನಿಲಲಾಱದೆ ಸುಂಟದಿಂದ ಕೋಡಗದಂತುಮ್ಮಳಿಸಿ (ಧರ್ಮಾಮೃ. ೧-೧೪೧) ; ಗಿರಿಯುಂ ಕರಿಯುಂ ನಿಲ್ಲವು ಪವಿಮುಖದ ಕೋಟ್ಗಮಾತನ ಬಾಳ್ಗಂ (ಶಮದ. ೨೪೪ ಪ್ರಯೋ). ೧೩. ತಡೆ : ಕಾಯ್ದುಕೊಳ್ಳೈ ಕೌರವಾನುಜ ಹೊಯ್ದುಹೋಗಲುಬಹುದೆ ಹರನಡ ಹಾಯ್ದುಡೆಯು ಗೆಲುವೆನು ಕಣಾ ನಿಲ್ಲೆನುತ ತೆಗೆದೆಸಲು (ಕುಪ್ಯಾದ್ರೋ. ೫-೫೦). ೧೪. ತಾಳು ; ಧರಿಸು ; ಪಡೆ : ಕೂಡಲಸಂಗನ ಶರಣರು ಬಂದ ಭರವ ನಿಂದ ನಿಲವ ಅನಂಗಸಂಗಿಗಳೆತ್ತ ಬಲ್ಲರು (ಒಸವ. ೧೨೫). ೧೫. ಸುಮ್ಮನಿರು ; ತಟಸ್ಥವಾಗು : ಇಂದೆ ಕಡಂಗಿ ಸಾರ್ಚಿ ಬಿಟ್ಟುಸಿರದೆ ನಿಲ್ವ ಕಾರಣಮದಾವುದೊ ನೆಟ್ಟನೆ ನಾಳೆ ಕಾಳಗಂ (ಪಂಪಭಾ. ೧೦-೩೨) ; ಗುರುಗಳಾಡಿದ ಭಾಷೆ ಪರಬಲದರಸ ಕಟ್ಟುವದದು ನಿಲಲಿ . . . ಎಂಬಬ್ಬರದೊಳಗೆ ಭಗದತ್ತ ಮೇಳೈಸಿದನು ನಿಜಗಜವ (ಕುಪ್ಯಾದ್ರೋ. ೩-೧). ೧೬. ಅಲುಗಾಡದೆ ಇರು ; ಇದ್ದಂತೆ ಇರು ; ನಿಶ್ಚಲವಾಗಿರು : ಬೆಳ್ಗೊಡೆ ನೋಡೆ ನೋಡೆ ನಿಂದುರಿದುವು ಸಾಲಭಂಜಿಕೆಗಳಟ್ಟುವು ವೈರಿನರೇಂದ್ರಗೇಹದೊಳ್ (ಪಂಪಭಾ. ೬-೨೯) ; ಎನಿಸಿದುದ್ಧತಿಯೊಳುದ್ದಂ ಬಂದು ದಳ್ಳೆಂದು ನಿಂದುರಿದಂದಿನೇಟನೆಯ ದಿವಸಕ್ಕೆ (ಸುಕುಮಾ. ೫-೧೦ ಪ); ಉದಕಕ್ಕೆ ಉರಿ ಹುಟ್ಟಿ ಮತ್ತಾ ಉದಕ ವಸಱಸುವದ ಕಂಡೆ ಮಡಕೆ ನಿಂದುರಿದು ಅಕ್ಕಿ ಉಳಿಯಿತ್ತು (ಮೋಳಿಮಾ. ೧೯೬-೭೩೧). ೧೭. ಸಮಾಧಾನದಿಂದಿರು ; ಶಾಂತಿಯಿಂದಿರು ; ನೆಮ್ಮದಿಯಿಂದಿರು : ಪೊಸತೆನೆ ಪೇಟ್ವ ತಿರ್ದುವಱುವೆನ್ನೊಳೆ ಸನ್ನಿದ ಮಾದೊಡಂ ಕರಂ ರಸಿಕರಿನೆಯ್ದೆ ತಿರ್ದಿಸಿದೊಡಲ್ಲದೆ ನಿಲ್ಲದು ಚಿತ್ತಂ (ಜಗವಿ.೧-೧೫). ೧೮. ತಲ್ಲೀನವಾಗು: ಭಾವ ನಿರ್ಭಾವದೊಳ್ನಿಂದು ನೋಟ ನಟ್ಟು . . . ಆಱುವು ಕರಿಗೊಂಡು ತಾನೆಂಬುದು ತರಹರಮಾಗಿ (ಶಾಸ್ತ್ರಸಂ. ೧೦-೨೯). ೧೯. ಬದ್ಧವಾಗಿರು ; ಅಂಟಿಕೊಂಡಿರು : ಬಂದಿರೇ ಮಾಚಯ್ಯ ಕುಳ್ಳಿರಿ ಸಂದ ಶರಣನ ಹಿಂದೆ ಬಸವಂ ಸಂದ ಪರಿಯಂ ನೋಡು ಭಾಷೆಗೆ ನಿಂದು ಸಂದನಲಾ (ಬಸಪು. ೩೭-೨೭). ೨೦. ಹೆಸರುವಾಸಿಯಾಗು ; ಪ್ರಸಿದ್ಧಿಯಾಗು : ಮುಂದೆ ಅವ ಸಾಲೆ ಸರ್ವಜ್ಞನೆಂದೆನಿಸಿ ನಿಂದವನು ನಾನೆ ಸರ್ವಜ್ಞ (ಸರ್ವಜ್ಞ. ೪). ೨೧. (ಹೆಚ್ಚುಕಾಲ) ಉಳಿದಿರು : ಚೆಲ್ವಹ ಮೃಧುವಪ್ಪ ಗಂಧಂ ನಿಲ್ವ ಕೋಮಲವಾದ ನುಣ್ಪಂ ತಾಳ್ವ ಶೋಭಿತವೆನಿಪ ಛಿದ್ರಿತವಾಗಿರದಖಂಡ ಬಿಲ್ವಪತ್ರೆಯನೆಯ್ದೆ ಕೊಯ್ದು (ಬಸಪು. ೪೩-೨೬). ೨೨. ನೆರವೇರು ; ಆಗು : ನಿಜಕೂಟಾಗ್ರದೊಳ್ ಪಾಯ್ವ ಗಂಗಾಜಲದಿಂ ಮೂರ್ಧಾಭಿಷೇಕೋನ್ನತಿ ನಿಲೆ . . . ಚಕ್ರೇಶತ್ವಮಂ ತಾಳ್ದಿದುದಖಿಳ ಧರಾರಮ್ಯಹೈಮಾಚಳೇಂದ್ರಂ (ಪಂಪಭಾ. ೪-೧೪). ೨೩. ಕೈಗೊಳ್ಳು ; ಗ್ರಹಿಸು : ಅಂತು ಕುಂಭಸಂಭವನ ಬೆಸನಂ ಪಿಡಿದು ಅಶ್ವಮೇಧಮಂ ಕೈಗೊಂಡ ರಾಘವಂ ಸ್ವರ್ಣಸೀತಾಸಮೇತಂ ದೀಕ್ಷೆನಿಂದಂ (ರಾಮಾಶ್ವ. ೪೬-೨೫). ೨೪. ಜೀವಿಸು ; ಬದುಕು : ಸುರಲೋಕಭ್ರಷ್ಟನೆಂ ಮರ್ತ್ಯರೊಳುದಯಿಪ ತಿರ್ಯಕ್ತ್ವದೊಳ್ ನಿಲ್ವ ಚಂಡಾಲರ ಕಯ್ಯೊಳ್ ಬೀಟ್ವ ತೋಲ್ ಪಂಜರದ ಪಡಿಯೊಳ್ ನಿಲ್ವ ದುರ್ವಾರದುಃಖೋತ್ಕರ ಮೆಲ್ಲಂ ನೋಡಲೆನ್ನಿಂದ್ರಿಯನಿವಹದ ದೋಷಂ ದಲ್ (ಕಾದಂಉ. ೭೫೪) ; ಬಾಲಕರಂತೆ ಕಂದಮೂಲಫಲಂಗಳಂ ಪೆಱರ್ ತಂದಿಕ್ಕೆ ತಿಂದಾನಂದಮನಸ್ಕರಾಗಿ ನಿಂದ ತಪೋಧನರುಮಂ (ಪಂಚತಂ. ೧೧೯-೧೧). ೨೫. ನೆಡು ; ನಿಲ್ಲಿಸು : ಇದಂ ಕಿಡಿಪ್ಪೋನ್ ಬಾರಣಾಸಿಯನಟಿಪ ಪಞ್ಚಮಹಾ ಪಾತಕನಕ್ಕುಂ ಶ್ರೀರಾಚಮಲ್ಲ ಪೆರ್ಮ್ಮಾನಡಿ ರಾಜ್ಯಂಗೆಯೆ ನಿಲ್ತೋದು (ಎಕ. IX, ಬೆಂಗಳೂ. ೪೨-೪ ; ಸು. 820). ನಿಲ್ಲು : ೧. ನಿಲು ನಿಲ್ಲೆಲವೊ ಹೋಗದಿರೆನುತ ಬೆಂಬತ್ತಿದನು ಕಲಿಕರ್ಣ (ಕುಪ್ಯಾಕ.೧೪-೩೫); ಉರಿಯುದಕ ಮಾರುತವು ಉರಗ ಹರಿನಾಗವು ಗುರುವಾಜ್ಞೆಗಂಜಿ ನಿಲುವವು ಇದನು ನರರಱಿಯದಲೆ ಕೆಡುಗು (ಸರ್ವಜ್ಞ. ೫೪). ೩. ಹೊಂಗಱಿಯ ಗಾಳಿಯ ಸರಳ ಸೋನೆಯಲಿ ನಿಲುವ ಹಂಸವ್ಯೂಹವೆಲ್ಲಿಯದು (ಕುಪ್ಯಾದ್ರೋ. ೧೦-೨೦) ; ನೆಟ್ಟನೋರ್ವನೆ ಬೈಗಿನಿಂ ರವಿ ಪುಟ್ಟುವನ್ನೆಗ ಜಾನ ಜಪವಳವಟ್ಟು ನಿಲುವಾ ಪಾಲಕೀರ್ತಿನಮೋಸ್ತು[ಗೆ]ಱಗುವೆನು (ಸಾಳ್ವಭಾ. ೧-೨೨). ೪. ದೇಹ ಕೀರ್ತಿಗಳೊಳಗೆ ನಿಲುವುದು ದೇಹವೋ ಕೀರ್ತಿಯೊ ಮುರಾಂತಕ ಬೇಹುದನು ಬೆಸಸಿದಡೆ ಮಾಡೆನು (ಕುಪ್ಯಾದ್ರೋ. ೧೯-೪೩) ; ನಿಲ್ಲಬೇಕಯ್ಯಾ ನೀ ಮಲ್ಲಮರ್ದನ ಸಿರಿವಲ್ಲಭ ಎನ್ನ ಹೃದಯದಲ್ಲಿ ಸತತ (ಪುರಂದ. ಧಾ. ೧-೧೧೭ ಪಲ್ಲವಿ). ೫. ಅಷ್ಟ ದಿಕ್ಪಾಳರು ತಮ್ಮಯ ಪಟ್ಟಣಗಳಿಗಟ್ಟುಳಿಯಾಗೆ ರಕ್ಕಸರ ನೆಟ್ಟನೆ ನಿಲುವ ತಾಣಗಳೆನೆ ಕೊತ್ತಳ ಕಟ್ಟಿಸಕದೊಳೊಪ್ಪಿದುವು (ಕಂನವಿ. ೨-೬೨). ೮. ಭುಜಶಿಥಿಲಸಾಹಸರೇನ ನಿಲುವರು ದ್ರೋಣನುರವಣೆಗೆ (ಕುಪ್ಯಾದ್ರೋ. ೨-೩೧). ೧೫. ಏನಿದೇನೈ ಭೀಮ ನಿಲು ಯಮಸೂನು ಶಿವಶಿವ ಗುರುವಲಾ ನಮಗೆ (ಕುಪ್ಯಾಸ. ೧೪-೮೯). ೧೮. ಸರಕುದೆಗೆದುದು ಬೊಮ್ಮಚರಿಯದ ಬೆರಳ ಜಪಗಳ ತಾಪಸರು ತರಹರಿಸಿ ನಿಲುವವನಾವನೈ ತರುಣೀಜನಂಗಳಲಿ (ತೊರರಾ. ೧-೫-೩೬). ನಿಲ್ಲು : ೧. ಬಳ್ಳದ ಬಾಯಂತೆ ಒಂದೇ ಮನವ ಮಾಡಿ ನಿಲ್ಲೆಂದು ನಿಲ್ಲಿಸಯ್ಯಾ (ಒಸವ. ೭೩೫) ; ಇನ್ನೆಲ್ಲಿ ಹೊಗುವೈ ಕಂದ ಕುಂತಿಯ ಜಠರವಲ್ಪವಲೆ ನಿಲ್ಲು ನಿಲ್ಲೆನುತೈದಿ ಬರಲಲ್ಲಲ್ಲಿ ಮಱುಗಿತು ಸೇನೆ ಸಾಹಸಮಲ್ಲನಡಹಾಯಿದನು (ಕುಪ್ಯಾದ್ರೋ. ೨-೪೭); ನಡೆ ಪಜ್ಜೆವಿಡಿ ಪೋಗು ತಡೆ ನಿಲ್ಲು ಜಡಿ ಬೊಬ್ಬೆಗುಡು . . . ಕೆಡಪೆಂಬ ನುಡಿಗಳಡಿಗಡಿಗೆ ಕಿವಿಗಿಡಿದುದು (ಜೈಮಿಭಾ. ೨೮-೪೫) ; ನಿಲ್ಲು, ನೋಡು, ಕಾಣ್ ! ಗಮನಿಸು, ಬಾಗು . . ಧ್ಯಾನಿಸು ! ಒಂದಾಗು ! (ಅನಿಕೇ. ೧೮-೯). ೨. ಕಾಲನಡ್ಡಲುವೊಡ್ಡಿ ನಿಲ್ಲು[ಪಾಠಾಂ.ಲು]ತ ಜೋಲಿ ನಡೆವುತ ಕೊಡಲಿ ಗಡಿಗೆಯು ಕೋಲುವಿಡಿದಾಡಿನ ಮಱುಗಳಂ ಕೌಂಕುಳೊಳಗಮರ್ಚಿ (ಬಸಪು. ೨೦-೧೩) ; ನಿಲ್ಲುವ ನಿಱುವಸನವ ಮೆಟ್ಟ ನಲಿದಾಡಿ ಕೊಲ್ಲುವ ಪುಟ್ಟ ಕೈಗಳಲಿ ಜೊಲ್ಲು ಸುರಿವ ಮುದ್ದುಮೊಗದಲ್ಲಿ ನಗೆಯಾಂತು ಸೊಲ್ಲಿಸುವನು ತೊದಳ್ನುಡಿಯ (ಮೋಹತ. ೧೩-೬೯). ೪. ದುರ್ಲಭವು ಮಾನುಷಶರೀರವು ನಿಲ್ಲದೀ ಕ್ಷಣದಲ್ಲಿ ಕೆಡುವುದು (ನಿಭಾಗ. ೧೧-೨-೩೩). ೧೦. ಗಣಿಸದದನು, ತರುವೆ, ನಿಲ್ಲು ; ಮೌನದಿಂದೆ ಮನವ ಗೆಲ್ಲು, ಹೇ ಸ್ವತಂತ್ರವಶಮತಿ ! (ಅನಿಕೇ. ೧೭-೫).

ನಿಂತ ಕಾಲ ಮೇಲೆ = ಆಗಿಂದಾಗಲೆ ; ಇದ್ದುದಿದ್ದ ಹಾಗೆ ; ಕೂಡಲೆ : ಈಗ ನಿಂತ ಕಾಲ ಮೇಲೆ ಈ ವಿಷಯದ ಚರ್ಚೆಯಾಗಬೇಕೆ ? (ಮೂರುದಾ. ೩೭); ಯಾವಳಾದರೂ ಹುಡಿಗೆ ವಿನಾಕಾರಣ ನಿಂತ ಕಾಲಮೇಲೆ ನನ್ನನ್ನೇಕೆ ಮದುವೆಯಾಗಬೇಕೋ ನನಗೆ ತಿಳಿಯದು (ಇಪ್ಪಕ. ೪೭೭).

ನಿಂತ ಪಟ್ಟು = ನಿಂತ ಸ್ಥಿತಿ : ಈಗಿಂದೀಗಲೇ ನಿಂತ ಪಟ್ಟನ ಮೇಲೆಯೇ ನಮಗೆ ಪ್ರಾಂತವನ್ನು ಕೊಡಲೇಬೇಕು (ಹನ್ನೊಂದ.೧೦೧). **ನಿಂತು ಹೋಗು** = ೧. ಬರದಿರು : ಬೆಳಗ್ಗೆಯಿಂದ ನೀರು ನಿಂತುಹೋಗಿ ಬಹಳ ತೊಂದರೆಯಾಗಿದೆ (ರೂಢಿ). ೨. ನಿಲ್ಲು ; ಚಲಿಸದಿರು ; ಸ್ಥಗಿತಗೊಳ್ಳು : ಗಡಿಯಾರ ನಿಂತು ಹೋಗಿದೆ (ರೂಢಿ). ೩. ಫಲ ಬಿಡದಿರು : ನಮ್ಮ ತೋಟದ ಮಾವಿನ ಮರದಲ್ಲಿ ಕಾಯಿ ಬಿಡುವುದು ನಿಂತು ಹೋಗಿದೆ (ರೂಢಿ). ೪. ಸಂಚಾರನಿಯಂತ್ರಣಕ್ಕಾಗಿ ನಿಂತು ಮುಂದೆ ಹೋಗು : ರಸ್ತೆಗಳಲ್ಲಿ 'ನಿಂತು ಹೋಗಿ' ಎಂಬ ಫಲಕವಿದ್ದರೂ ಅದರಂತೆ ನಡೆಯುವವರು ಬಹಳ ಕಡಮೆ ಜನ (ರೂಢಿ). **ನಿಂದಿರಿಕೆ, ನಿತ್ತಿರಿಕೆ** = ನಿಂತ ನಿಲುವು : ಅರಸ ಹಿಡಿಯಲಿ ದಾನವರು ನಿಂದಿರಿಕೆಯಲಿ ನುಂಗಲಿ ಕೃತಾರ್ಥರು ಧರೆಯೊಳಾವೆಂದೊದಱುದರು ಮಾದ್ರೀಕುಮಾರಕರು (ಕುವ್ಯಾಅ. ೯-೨) ; ನಿನ್ನನು ನಿಂದಿರಿಕೆಯಲಿ ಸುಟ್ಟುರುಹುವೆನು (ನಿಭಾಗ. ೯-೧೩-೧೦) ; ಧರ್ಮಜಂ ಶೀಘ್ರದಿಂದರ್ಜುನನ ನಿತ್ತಿರಿಕೆಯಿಂ ಕಳುಪೆ (ತುರಂಗ. ೩೯-೧೦). **ನಿಂದಿರಿಸು** = ನಿಲ್ಲಿಸು ; ಇರುವಂತೆ ಮಾಡು : ವೃದ್ಧಮಾಹೇಶ್ವರನಂ ಮುತ್ತಿಕೊಂಡತ್ತಲನುವಾಗಿ ಮೆಲ್ಲನೆ ನೆಗಪಿ ನಿಂದಿರಿಸಲ್ (ನಂಬಿರ. ೬-೪೪) ; ಭವಿಷ್ಯದತ್ತನಂ ಬರಿಸಿ ಸಭಾಜನದ ಮುಂದೆ ನಿಂದಿರಿಸಲ್ (ಪುಣ್ಯಾಸ್ರ. ೪-೧೩ ವ) ; ಅಂದಿನಿರುಳೋಲಗ ದೊಳವನನು ಹಿಂದೆ ಸಿಕ್ಕಿದ ಶುಕನನಿಬ್ಬರ ನಿಂದಿರಿಸಿದರು ಹಿಡಿದು ಬಳಿಯಲಿ ರಾಘವೇಶ್ವರನ (ತೊರರಾ. ೬-೬-೨೮); ಮುಂದೇನೂ ಮಾತನಾಡಲಾಗದೆ ಅವನು ಅರ್ಧಕ್ಕೆ ನಿಂದಿರಿಸಿದ (ಎರಸೆ. ೭೫). **ನಿಂದಿರು** = ನಿಲ್ಲು ; ಚಲಿಸದಿರು : ಅಹಗೆ ಹೋಗದೆ ನಿಂದಿರೆನುತವಗಡಿಸಿಯಾತನು ತನ್ನ ಕರವಾಳ ಮುಂದೆ ಕೊರಳಿಗೆ ಮೋಹಿಸಲು (ಒಸಪು. ೨೭-೩೧). **ನಿಂದು ನಿತ್ತರಿಸು** = ಸಮರ್ಥವಾಗಿ ಎದುರಿಸು : ಒತ್ತಂಬದಿಂದ ರಿಪುಭೂವರನ ಪಡೆ ನಿಂದು ನಿತ್ತರಿಸಬಾರದೆಂಬಂತಿರೋಡಿದುದು (ಸಮ್ಯಕೌ. ೮-೪೬). **ನಿತ್ತ ಕಲ್ಲು** = ನಿಲ್ಲಿಸಿದ ಕಲ್ಲು : ತತ ನಿತ್ತ ಕಲ್ಲು (ಇಅ. VI, ೯೩-೩೩ ; 693). **ನಿಲುವಱುಕೆಗ** = ನಿಲ್ಲುವ ಅಪೇಕ್ಷೆಯುಳ್ಳವನು ; ನಿಲ್ಲ ಬಯಸುವವನು : ಮಱುಕೊಳಿಸಿ ಮತ್ತೇಳ್ವವನ ಗೋಣುಱುಗೆ ತಿವಿದನು ಪಡಿಬರಿಸಿ ನಿಲುವಱುಕೆಗನನಿಕ್ಕಿದನು ಮಗುಳೆ ಮಡಪ್ರಹಾರದಲಿ (ತೊರರಾ. ೬-೩೦-೪೦). **ನಿಲ್ಪಡು, ನಿಲೆವಡು** = ೧. ನಿಲ್ಲಿಸಲ್ಪಡು ; ಸ್ತಂಭಿತವಾಗು : ಕಲ್ಪನಾಕುಶಲತೆಯ ಶಿಲ್ಪಕೆ ಮನಂ ಮೆಚ್ಚಿ ನಿಲ್ಪಟ್ಟು ತಲೆ ತೊನೆದನು (ತ್ರೀರಾಮಾ.೪೪೮-೯೦). ೨. ಭಿಕ್ಷೆಗಾಗಿ ನಿಲ್ಲಿಸಲ್ಪಡು : ಭಟ್ಟಾರರ್ ನಿಲೆವಟ್ಟುದೆಯೆಂದು ಬೆಸಗೊಂಡೊಡೆ (ವಡ್ಡಾರಾ. ೮೯-೯). **ನಿಲ್ಲಗೊಡಿಸು** = ನಿಲ್ಲುವುದಕ್ಕೆ ಅವಕಾಶ ಕೊಡು : ಅವರ ಮನೆಯಲ್ಲಿ ಮಕ್ಕಳು ನನ್ನನ್ನು ಒಂದು ಕ್ಷಣವೂ ನಿಲ್ಲಗೊಡಿಸದೆ ಮನೆಗೆ ಕರೆದುಕೊಂಡು ಬಂದು ಬಿಟ್ಟರು (ರೂಢಿ). **ನಿಲ್ಲದಿಕೆ, ನಿಲ್ಲದಿಕ್ಕೆ** = ೧. ಅಶಾಶ್ವತತೆ : ಜೋಳಕ್ಕೆ ತಪ್ಪಿಯುಮಿಂ ಬಾಟ್ಟುದೆ ಪೂಣ್ದು ನಿಲ್ಲದಿಕೆಯಿಂ ಬಾಟ್ಟಂತು ವಿಖ್ಯಾತಕೀರ್ತಿಯವೋಲೀಯೊಡಲಬ್ಬೆ ಪೇಟುಮೆನಗೇಂ ಕಲ್ಪಾಂತರಸ್ಥಾಯಿಯೇ (ಪಂಪಭಾ. ೯-೮೪). ೨. ಚಂಚಲತೆ : ಬಯ್ಯೆ ಬೇಟಕಾಱನ ಬಗೆ [ನಿಲ್ಲದಿ]ಕ್ಕೆಗೊಳಗಪ್ಪುದು (ಪಂಪಭಾ. ೪-೧೦೩). **ನಿಲ್ಲದೆ** = ೧. ಎದುರಿಸದೆ ; ಪ್ರತಿಭಟಿಸದೆ : ಅವಧಿಯ ಲೆಕ್ಕಮಂ ನೆಱಪಿ ನನ್ನಿಗೆ ಮಾಣದೆ ಕಾದಲೆಂದು ಬಂದವನಿವನರ್ಜುನಂ ತೊಡರ್ದು ನಿಲ್ಲದೆ ನೀನೊಡಗೊಂಡು ಪೋಗು ಗೋನಿವಹನುಂ (ಪಂಪಭಾ.೮-೧೦೨). ೨. ತಡೆಯದೆ ; ನಿಧಾನಿಸದೆ : ನಿಲ್ಲದೊಡ್ಡೈಸೆನುತ ಸಾಹಸಮಲ್ಲ ಸಾರಥಿಗಱುಹೆ . . . ದ್ರೋಣ ಹೊಕ್ಕನು ರಾಯಮೋಹರವ (ಕುವ್ಯಾದ್ರೋ. ೨-೩೪) ; ನಿಲ್ಲದಾಕ್ಷಣ ಕೃಷ್ಣ ಬಿಗಿಯಪ್ಪಿ . . . ಗಲ್ಲವ ಪಿಡಿದು ಮುದ್ದಿಸಿದ (ಮೋಹತ. ೪-೯೨); ನಿಲ್ಲದನುರಾಗದಿಂದಾರ ಸುತನೀ ತರುಣನೆಲ್ಲಿಂದೆ ಬಂದನೆಂದು . . . ಕೇಳ್ದೊಡೆ (ಜೈಮಿಭಾ. ೨೮-೨೬). ೩. ಬಿಡದೆ ; ತೊರೆಯದೆ : ಬಲ್ಲಿದ ಕರ್ಣಾಟಕವಿಗಳೆಲ್ಲರ ಗೆಲ್ದು ಬಲ್ಲಾಳಭೂಮೀಶ್ವರನನಿಲ್ಲದೆ ಮಚ್ಚಿಸಿಕೊಂಡ ಜನ್ನನ ಪಾದಪಲ್ಲವಗಳಿಗೆಱಗುವೆನು (ಕುರಾಸಾಂ. ೧-೩೨). ℙ 'ನಿಲ್' ಎಂಬ ಶಬ್ದವನ್ನು ನಡುಗನ್ನಡದಲ್ಲಿ ಕವಿಗಳು ವ್ಯಂಜನಾಂತವಾಗಿಯೂ ಸ್ವರಾಂತವಾಗಿಯೂ ಪ್ರಯೋಗಿಸಿದ್ದಾರೆ.

[ದೇ.॥ತಮಿ. ಮಲ. ನಿಲ್ ; ತುಳು. ನಿಲ್, ನಿಲಿ ; ಕೊಡ. ನಿಲ್ ; ತೆಲು. ನಿಲುಚು ; ಕೋಲಾ ನಾಯ್ಕಿ. ಇಲ್ ; ಪರ್ಜಿ. ಗಡಬ. ಕುಇ. ನಿಲ್ ; ಕುರುಖ್. ಇಲ್ನಾ ; ಮಲ್ತೊ. ಇಲೆ]

ನಿಲ 'ನಿಲವು' ನೋ.

ನಿಲಂಬನ (ನಾ). ತಾತ್ಕಾಲಿಕವಾಗಿ ರದ್ದುಮಾಡುವುದು : ಅಧಿಕಾರವನ್ನು ಈ ಸಂವಿಧಾನದಲ್ಲಿ ಅನ್ಯಥಾ ಕಾಣಿಸಿರುವ ಮೇರೆಗಲ್ಲದೆ ನಿಲಂಬನ ಮಾಡತಕ್ಕುದಲ್ಲ (ಭಾಧಾನ. ೨೦). [ಸಂ.]

ನಿಲಂಬನಗೊಳಿಸು (ಕ್ರಿ). ತಾತ್ಕಾಲಿಕವಾಗಿ ರದ್ದುಗೊಳಿಸು : ಗಣಪೂರ್ತಿ ಸಂಖ್ಯೆಯಷ್ಟು ಜನ ಸದಸ್ಯರು ಹಾಜರಿರುವಂತಾಗುವವರೆಗೂ ಸಭೆಯನ್ನು ನಿಲಂಬನಗೊಳಿಸುವುದು ಅಧ್ಯಕ್ಷರ . . . ಕರ್ತವ್ಯವಾಗಿರತಕ್ಕುದು (ಭಾಧಾನ. ೧೦೦). [ನಿಲಂಬನ + ಕೊಳ್$_1$ + -ಇಸು$_3$]

ನಿಲಕಾಲಂ (ಅ). ಯಾವಾಗಲೂ ; ನಿರಂತರ ; ಸತತ ; ಸದಾ : ತುಲವನೇಜಲು ಗುರುವು ನೆಲೆಯಾಗಿ ಮಳೆಯಕ್ಕು ಫಲ ಧಾನ್ಯ ಬೆಳಸು ಪ್ರಜೆಗೆಳಿಗೆ ಇಳೆಯಲ್ಲಿ ನಿಲಕಾಲಮಕ್ಕು (ಸರ್ವಜ್ಞ. ೧೫೮೬).

[<ನಿಲಗಾಲ]

ನಿಲಕು 'ನೀಳ್ಕು' ನೋ.

ನಿಲಗಾಯಿಸು (ಕ್ರಿ). (ನೀರು ಆವಿಯಾಗಿ, ಹಾಲು ಮಾತ್ರ ನಿಲ್ಲುವಂತೆ) ಒಂದೇ ಸಮನೆ ಕಾಯಿಸು : ಭದ್ರಮುಸ್ತೆ ಲಾಮಂಚ ಇಂತಿವರೊಳು ಹಾಲನೆರೆದು ತದರ್ಧ ನೀರನೆರೆದು ಹಾಲ ನಿಲಗಾಯಿಸಿ ಮಧುವಂತುಪ್ಪವನೆರೆದು ಮಗ್ಗಾರೆ . . . ಯಷ್ಟಿಮಧುಕ ಇವನಿಕ್ಕಿ ಅಟ್ಟ ತೈಲದಿಂದ ವಸ್ತಿಯಂ ಮಾಡಲೆಲ್ಲ ಜ್ವರದೋಷಂಗಳುಂ ಸಹ ಮಾಣ್ಗುಂ (ಸಕವೈ. ೧೨೯). [<ನಿಲ್$_2$+ಕಾಯಿಸು$_2$]

ನಿಲಗಾಲ (ನಾ). ಬಿಡುವು ; ವಿರಾಮ : ಅಂದಿನಿಂದ ಅವರಿಗೆ ನಿಲಗಾಲ ದೊರಕಿತು (ದಕಚ. ೩೩) ; ಯೂಸೂಫ್‌ಖಾನನು ಹಿಮ್ಮೆಟ್ಟಿ ತನ್ನ ತಲೆ ಮೈ ಕಾಲುಗಳ ಮೇಲೆ ಗುರಿಯಾಗಿ ನಿಲಗಾಲವಿಲ್ಲದೆ ಬೀಳುತ್ತಿದ್ದ ಪೆಟ್ಟುಗಳನ್ನೆಲ್ಲಾ . . . ತಪ್ಪಿಸಿಕೊಳ್ಳುತ್ತ ನಿಂತನು (ಭಾರವೀ. ೧೨೪).

[ನಿಲ(<ನಿಲವು)+ಕಾಲ]

ನಿಲಗುದುರೆ (ನಾ). ಎತ್ತರವಾದ ನಿಲುವಿನ ಕುದುರೆ; "ನಿಲುವಿಕೆಯುಳ್ಳ ಕುದುರೆ" (ಮಲ್ಲಿಗೆ. ಟೀಕೆ) : ನಿಲಗುದುರೆಂಬೋ ತೇಜಿಯನೇರಿ ಮದನಾರಿ ಬಂದು ಬಾಗಿಲ್ಗಿ ನಿಂತ (ಮಲ್ಲಿಗೆ. ೭೬).

[ನಿಲ(<ನಿಲವು) + ಕುದುರೆ]

ನಿಲಪು 'ನಿಲಿಪು' ನೋ.

ನಿಲಬಾಕಿ (ನಾ). ಬಹುದಿನಗಳಿಂದ ಉಳಿದ ಬಾಕಿ ; ನಿಂತ ಬಾಕಿ : ನಿಲಬಾಕಿ ಕೇಳಲಿಕ್ಕೆ ಹೋಗಿ, ಗೊಲ್ಲಮಿಂಡನಿಂದ ಪೆಟ್ಟು ತಿಂದ (ಗಾಬೆ).

[ನಿಲ(<ನಿಲವು)+ಬಾಕಿ]

ನಿಲಯ, ನಿಳಯ (ನಾ). ೧. ಮನೆ ; ಬೀಡು ; ವಾಸಸ್ಥಳ : "ಆವಾಸಃ . . . ನಿಲಯಃ . . . ಆಲಯಃ— ಈ ೩೧ ಮನೆ" (ಹಲಾಯು. ೪೯-೧೩೬) ; ಅಂತಖಿಳಭುವನತಲತಿಲಕ(ವಿಲಾಸ)ವಿಲಸಿತನಿಲಯನುಂ . . . ಜಿತಾಖಂಡಭೂಮಂಡಲನುಮಪ್ಪ ಸ್ತಿಮಿತಸಾಗರಮಹೀವಲ್ಲಭಂಗೆ (ಶಾಂತಿಪು. ೧-೭೧ ವ); ಮನಸಿಜನಾಯುದನಿಲಯಂ ಮನಸಿನಜನ

ಸಮಗ್ರರಾಜ್ಯಲಕ್ಷ್ಮೀಸದನಂ . . . ಎನೆ ಸೊಗಯಿಸುವುವು ಮನೋಹರೇಕ್ಷುವನಂಗಳ್ (ಸುಕುಮಾ. ೯-೫೫) ; ಕುಲಕಮಲಖರಕಿರಣಪಾಂಡವ ಬಲಕೆ ಶರಣಾಗತಜಲಧಿ ವರನಿಲಯವೆನೆ ರಂಜಿಸಿತು ಗಂಗಾಸುತನ ಶರಶಯನ (ಕುವ್ಯಾಭೀ. ೧೦ ಸೂಚನೆ). ೨. [ಜೈನ] ಶ್ರಾವಕರು ಆಚರಿಸಬೇಕಾದ ಹನ್ನೊಂದು ವ್ರತಸ್ಥಿತಿಗಳು : 'ಪ್ರತಿಮೆ' ಪರಾ. **ನಿಳಯ** : ೧. "ಭುವನಂ ಸದನಂ ಸದ್ಮಂ ನಿವಾಸಮಾವಸಥಮಾಸ್ಪದಂ ನಿಳಯಂ . . . ಗೃಹಮುಟಜಂ" (ವಸ್ತುಕೋ. ೪೬-೮); ನೆರೆದಿರ್ವರಿರ್ದ ಕೃತಕಾಚಲಂ ಚೆಲ್ವನಪ್ಪಿದೇಂ ಕನಕಪದ್ಮಿನೀನಿಳ [ಪಾಠಾಂ. ಲ]ಯಮೆನ್ನ ಲೀಲಾಸರಂ (ಆದಿಪು. ೪-೮) ; ನಿಳಯಕ್ಕೋರೊಂದು ಕೇಳೀವನಮುಮಮೃತಕಾಸಾರಮುಂ ವಾಟಮುಂ (ಜಗವಿ. ೯-೯೬) ; ಇಳಿದು ರಥವನು ದಿವಿಜರಾಯನ ನಿಳಯವನು ಹೊಕ್ಕನು (ಕುವ್ಯಾಅ. ೬-೮೩) ; ಬಳಿಕ ಪಸಿದು ಪಾರ್ವರ ಬೀದಿಯೊಳೊಂದು ನಿಳಯವ ಪೊಕ್ಕು (ಹದಿಬ. ೨-೩೬). ೨. 'ಏಕಾದಶನಿಳಯ' ಪರಾ. [ಸಂ.]

ನಿಲಯಕಾಣು (ಕ್ರಿ). ಆಶ್ರಯವನ್ನು ಪಡೆ ; ನೆಲೆಗಾಣು : ಬಲುಕಾಲಗಳಿಂದ ನಿಲಯ ಕಾಣದೆ ನಿನ್ನ ಚಲುವ ಚರಣದ್ವಂದ್ವನೆಳಲ ನಾಶ್ರೈಸಿದೆ (ವಿದಾಕೃ. ೨೬-೧). [ನಿಲಯ + ಕಾಣು (<ಕಾಣ್)]

ನಿಲಯನಕ್ರೀಡೆ(ನಾ). ಅವಿತುಕೊಳ್ಳುವ ಆಟ; ಕಣ್ಣುಮುಚ್ಚಾಲೆಯಾಟ : ಚಂದದಿಂದಲಿ ನಿಲಯನಕ್ರೀಡೆಯ ಸುಂದರರಾಡಿದರು (ಪ್ರಸಭಾ. ೫೪-೧). [<ಸಂ. ನಿಲಾಯನಕ್ರೀಡಾ]

ನಿಲಯೈಕವೃತ್ತಿ (ನಾ). ಮನೆಯಲ್ಲಿಯೇ ಇರತಕ್ಕವನು; ಏಕಾಂತವಾಸಪ್ರಿಯ : ಕುಲಜಾತಿದೇಶವಿಶದಂ ವಿನಯೋಪಚಾರಂ ನಿಲಯೈಕವೃತ್ತಿ [ಕೃತಿಬಿಂಬಿತ ಸತ್ತ್ವಸಾರಂ] (ಕವಿರಾ. ೩-೨೨೬). [ಸಂ.]

ನಿಲವರ, ನೆಲವರ$_1$ (ನಾ). ನಿಜ ; ಸತ್ಯ ; ಯಥಾರ್ಥ : ನಿಲವರ ಪೇಳು ಎನ್ನಾಮಲ ಮನಸಿಗೆಯಿಂದು ಬಲುಧಾವಂತಿಬಟ್ಟರು ಸಲುವದೆ ಗತಿಮಾರ್ಗ (ಮೋಕ್ಷದೀ. ೬೧-೫). **ನೆಲವರ$_1$** : ಟೀಪುಸುಲ್ತಾನರು . . . ನಾನಾಪ್ರಕಾರ ವಿರುದ್ಧಮಾಡುವ ಮತಲಪ್ಪಿನಲ್ಲಿ ಇದ್ದಾರೆ ಎಂಬ ಸಮಾಚಾರ ಮಹಾರಾಜರವರು ಕೇಳಿದರಿಂದ, ಅದನ್ನು ನೆಲವರ ತಿಳಿಯಬೇಕೆಂಬದಾಗಿ ಒಂದು ಜೋಡಿಹರಿಕಾರರನ್ನು ಶ್ರೀರಂಗಪಟ್ಟಣಕ್ಕೆ ಕಳುಹಿದಲ್ಲಿ (ರಾಜೇಂದ್ರ. ೧೦೨).

[ದೇ.॥ ತಮಿ. ನಿಲವರ, ನಿಲೈವರ ; ತೆಲು. ನಿಲವರ, ನಿಲುವರ, ನಿಲ್ವರ]

ನಿಲವು, ನಿಲ, ನಿಲು$_2$, ನಿಲುವು$_2$ (ನಾ). ೧. ನಿಂತಿರುವಿಕೆ; ನಿಂತುಕೊಳ್ಳುವಿಕೆ : "ನಿಲವೆನೆ ನಿಲ್ಕೆಯೊಳ್" (ಕರ್ಣಾನಿ. ೫೮) ; ಅವನಾದ ಗತಿಯ ನಾನಪ್ಪೆನು ಅವ ನಿಂದ ನಿಲವ ನಿಲುವೆನು (ಸಿದ್ಧಪ. ಕ. ೧೮೮-೬೨೯); ಸದಮಲಾಭರಣ ಮುಸುಕಿದ ಮೆಯ್ ವಿಳಾಸ ಮುಸುಕಿದ ನಿಲವು ಮೋಹನಂ ಮುಸುಕಿದಾಕಾರವೆಸೆವಬಲೆಯರು ಕಣ್ಗೆಸೆದರು (ಹಚಕಾ. ೪-೩೪); ದುರಾತ್ಮನ ನಿಲವ ತೆಗೆತೆಗೆಯೆನುತ ಚಾಪವನಿಳುಹಿದನು ರಥದೊಳಗೆ ಗಂಗಾಸೂನು ವಹಿಲದಲಿ (ಕುವ್ಯಾಭೀ. ೧೦-೩); ಗತಿಗೆ ಗತಿ ಮುಂಚುವುದು ನಿಲವಿನ ಗತಿಗೆ ನಿಲುವುದು ಮುರಿಯೆ ಮುರಿವುದು. . . ಆತುಳಮಾಯಾಮಹಿಮ ಮಾರೀಚಪ್ರತಾಪಮೃಗ (ತೊರರಾ. ೩-೮-೪೪). ೨. ನೆಲಸುವಿಕೆ ; ತಂಗುವಿಕೆ : ನೇತ್ರದ ಬಗೆ ಮನದೊಳ್ ತನ್ಮನಂ ಬುದ್ಧಿಯೊಳ್ ಬುದ್ಧಿ ನಿತಾಂತಂ ಚಿತ್ತದೊಳ್ ಚಿತ್ತದ ನಿಲವ ದಹಂಕಾರದೊಳ್ ಸಂದಹಂಕಾರನಿಯೋಗಂ ಜೀವನೊಳ್ ಜೀವನೆ ಪರಮನೊಳಾಳ್ದೈಕ್ಯಮಂ ನಿಲ್ವಿನಂ . . . ಸಾಲ್ವನಿರ್ದಂ ಮುನೀಂದ್ರಂ (ಶಒಶಂ. ೨-೧೦೧). ೩. ನೆಲೆ ; ನಿವಾಸ; ಸ್ಥಳ : "ಸಂಸ್ಥಾನಂ, ಸನ್ನಿವೇಶಃ —ಈ ೨ ನಿಲವು" (ಹಲಾಯು. ೧೨೮-೯೩) ; ಆನತನಲ್ಲದಂಗೆ ಪದುಳಂ ನಿಲವಿಲ್ಲ ನಿಜಾನ್ವಯಾಗತಸ್ಥಾನದೊಳಾನತಂಗೆ ಭಯಮಿಲ್ಲ (ಪಂರಾಮಾ. ೧೧-೩೭) ; ಒಂದೆಡೆಯೊಳುಂ ತನಗೆ ನಿಲವಿಲ್ಲದತಿವೇಗದಿಂದೆ ನಿರತಂ ಪ್ರಬಲಮಾಗಿ ಬೀಸುವ ಗಾಳಿ (ಜೈಮಿಭಾ. ೮-೨). ೪. ಇರುವಿಕೆ; ಸ್ಥಿತಿ; ಅವಸ್ಥೆ : ಭಾವದ ಮಱೆಯ ಬ್ರಹ್ಮವಾಗಿಪ್ಪ ಚೆನ್ನಮಲ್ಲಿ ಕಾರ್ಜುನನ ನಿಲವನಾರೂ ಅಱಿಯಬಾರದು (ಮಹಾದೇ. ಬ. ೧೦-೨); ಯೋಗಿಪ್ರವರನ ನಿಲವೀಯದಾರ್ಗೆ ಪೆರ್ಚಿದ ನಲವಂ (ವರ್ಧಪು. ೧೫-೬೩); ಕಿಚ್ಚನುರಿಗೋಲಲ್ಲಿ ಬಚ್ಚಿಟ್ಟಂತಿರಬೇಕು ಅಚ್ಚಳಿದು ಐಕ್ಯಸ್ಥಲವಾದ ಶರಣಂಗೆ ನಿಚ್ಚಟದ ನಿಲವು (ಸರ್ವಜ್ಞ. ೧೫೨) ; ಪಿತನು ರತ್ನಾಕರ ಲಕ್ಷ್ಮಿ ಸಹೋದರಿ ಆದರು ಶಂಖದ ನಿಲವು ಭಿಕ್ಷೆಯೊಳೂಳುವುದು (ಇಂಚಾಪ. ೮೯-೩೩). ೫. ಉಳಿದುದು; ಉಳಿತಾಯ; ಶಿಲ್ಕು: ಕುಳ್ಳಿರ್ದು ತನ್ನ ಲೆಕ್ಕಂಗಳಂ ಕೇಳುತಿರೆ ಒಳ್ಳಿತೆನೆ ಗಣಕರ್ಕಳೆಲ್ಲರುಂ ನೋಡುತಿರೆ ಆಯದೊಳು ಬೀಯಮಂ ಕಳೆದು ನಿಲವಂ ಕಂಡು . . . ಮನಂಗೊಂಡು (ಬಸರ. ೫-೭೫) ೬. ಆಕಾರ ; ಸ್ವರೂಪ : ಕಾಣಬಾರದ ಕಾಯ ನೋಡಬಾರದ ತೇಜ ಉಪಮಿಸಬಾರದ ನಿಲವು (ಆಪಚಂ. ೨೦೭-೯೩೩); ಈ ಸುಕುಮಾರತೆಯಿಾ ನಿಲವು . . . ಈ ಸುಖದೊಳ್ ತಪಮಿದೆಂತು ಬಂದುದು ಮುಗ್ಧೆ (ಗಿರಿಕ. ೯-೧೦೦); ಅದೆ ಶಿಖಾಳಿಯ ನುಗುಳ್ವ ಸರಳಿನ ಹೊದಱ ಹೋರಟೆ ನೋಡಿ ಮೂರುತಿಯದೆ ಜಗದ್ವ್ಯಾಪಕನ ನಿಲವಿನ ನಿಗರದವೊಲೆಂದ (ತೊರರಾ. ೩-೬-೩೩). ೭. ರೀತಿ; ಸ್ವಭಾವ: ಸವಿವಾತುಗಳ ಸೋನೆಯ ಸೊಗಸುಕಾಱರು ನಿಂದ ನಿಲವನು ಕರ್ಣ ನೋಡು (ಕುವ್ಯಾದ್ರೋ. ೧೬-೨೪); ಮೌನದಾಭರಣವು ಜಗದೊಳ ಮೂಲ್ಯವು ಪೆಣ್ಗಳಿಗಿದು ಕಡುಚೆಲುವು. ಆದರು ಅವರಿದನಿಡುವುದಪೂರ್ವವು ಚೋದ್ಯವು ಸತಿಯರ ನಿಲವು (ಇಂಚಾಪ. ೨೦೨-೯೬). ೮. ಘನತೆ ; ಮಹತಿ ; ಔನ್ನತ್ಯ : ಮಹಾದೇವಿಯಕ್ಕಗಳ ನಿಲವ ಬಸವಣ್ಣನ ಕೃಪೆಯಿಂದಲಱಿದೆನಯ್ಯ (ಪುಡಿಮಾ. ೧೫-೧೮); ಹರನನೊಂದಿನವಾದಡಂ ತಾಂ ಧರಿಸಲಾಱದ ಮಾನಸೋತ್ತಮಗಿರಿಯ ನಿಲವೆನಿತೀಶ್ವರಂ ತನ್ನುವನಗಲಿ ಪೋದ ಸುರಪಕೀಲದ ಧೈರ್ಯವೆನಿತು (ಬಸಪು. ೧೯-೨೯); ಪಡೆವೊಡೀ ಪರಿ ಬೇಹ ಮಕ್ಕಳ ಪಡೆದು ಪರಿಣಮಿಸುವುದು ತಪದಲಿ ನಡೆವುದೀ ಪರಿ ನಿಜಸಮಾಧಿಯ ನಿಲವ ನಿಲುಕುವುದು (ಪ್ರಭುಲೀ. ೬-೪೧); ಈ ಮನುಷ್ಯತ್ವವೇ ಅವನಿಗೂ ನಮಗೂ ಇರುವ ಸ್ನೇಹಸಂಬಂಧದ ಗಂಟು— ಅವನ ಬಾಳು ನಮ್ಮ ನಿಲವಿಗೆ ಎಟಕುವಂತೆ ಮಾಡುವ ಆಕರ್ಷಣೆ (ರಾಮಾನೆ. ೧೦೬). ೯. ಅಭಿಪ್ರಾಯ; ಮತ ; ನಿಟ್ಟು : ಶಿಕ್ಷಣ ಸಂಬಂಧವಾಗಿ ಮನಶ್ಶಾಸ್ತ್ರಭಾವನೆಯ ನಿಲವನ್ನೂ ಸಮಾಜಶಾಸ್ತ್ರ ಭಾವನೆಯ ನಿಲವನ್ನೂ . . . ಆತನು ಸ್ಪಷ್ಟವಾಗಿ ರೂಪಿಸಿದನು (ಕ್ರಿಯಾತಿ. ೩೬); ಪಂಡಿತರೆಲ್ಲರು ಒಂದೆಡೆ ಸೇರಲಿ ಬೇರೊಂದು ನಿಲವಿಗೆ ಬರಲಿ (ಇಂಚಾಪ. ೧೫೬-೬೭). ೧೦. ಉದ್ದ; ನೀಳ; ಎತ್ತರ: ನಿಲವ ನೋಡವನಂಜನಾದ್ರಿಯ ನಿಲವಿಗೊಮ್ಮೊಳ ಮಿಗಿಲು (ತೊರರಾ. ೬-೮-೪) ; ತೋಳ ಸುಮಾರು ಎರ್ಡುವರೆ ಘೂಟ ನಿಲವಾಗಿಯೂ ಮೂರೂವರೆ ಘೂಟ ನಿಡಿದಾಗಿಯೂ ಇರುತ್ತದೆ (ಮುಂಬಯಿ. ೫-೨೫೨). ೧೧. ದೃಢತೆ: ಧರೆಗೆಲ್ಲಂ ತನ್ನ ಬಾಹಾಬಳದ ನೆಱವು ತನ್ನಣ್ಮು ತನ್ನುಗ್ರ ತೇಜಸ್ಫುರಿತಂ ತನ್ನಾರ್ಪ್ಪು ತನ್ನೊರ್ನ್ನುಡಿಯ ನಿಲವು ತನ್ನೂರ್ಜ್ಜಿತಖ್ಯಾತಿಯೊಳ್ಪಚ್ಚರಿಯಾಗುತಿರ್ಪ್ಪಿನಂ ರಂಜಿಸಿ (ಎಕ. VII, ಶಿಕಾರಿ. ೧೨೪-೧೮; 1077). ೧೨. ಬಾಗಿಲು, ತೊಲೆ ಮುಂತಾದುವುಗಳಿಗೆ ಆಧಾರವಾಗಿ ನಿಲ್ಲಿಸುವ ಮರದ ಚೌಕಟ್ಟು : ಹರಿನೀಲದ ಪಳುಕಿನ ನೆಲ ನಿಂಗದಿರ್ವರಲ ಮಿಸುಪ ವೇದಿಕೆ ಪವಳದ ನಿಲವರುಣಮಣಿಯ ಕೆಲಸದ ಬೋದಿಗೆ . . . ಒಪ್ಪಿದುದು (ಜಯಕಾ. ೮-೩) ; ರಂಗೈಯ್ನಾ ಗುಡಿಯಾ ಬಾಗಿಲಗೆ ನಿಲವಾದೊ ರಂಗೈಯ್ನ ಗುಡಿಯಾ ಬಾಗಿಲಗೆ ಕದವಾದೋ (ಹುಟ್ಟಹ. ೫೦) ; ನೆಕ್ಲುದೋವ್ ಟೋಪಿಯನ್ನು ಕೈಗೆ

ತೆಗೆದುಕೊಂಡು ತಗ್ಗು ನಿಲವಿನ ಮೂಲಕ ಹಾದು ಹೋಗುವ ಸಲುವಾಗಿ ಬಾಗಿ . . . ಗುಡಿಸಲನ್ನು ಪ್ರವೇಶಿಸಿದನು (ಪುನರು. ೨೭೪). ೧೩. ಶೀವಿ; ಗತ್ತು : ದಂಡಾಯುಧದ ನಿಲವಿನಲಿ ಸುಭಟರ ದಾಯಗೆಡಿಸಿದನೊಂದು ನವಿಷಮೊಳೊರಸಿದನು ಬಲದ (ಕುಸ್ಯಾದ್ರೋ.೧೬-೪). ೧೪. ವಿಶ್ರಾಂತಿ; ಬಿಡುವು : (ಕ). ೧೫. ಮಲ್ಲಯುದ್ಧದ ಒಂದು ವರಸೆ;— ಪಟ್ಟು : ನಿಲವಂ ನಿಲವಳವನಿಂ ಗೆಲೆ ಗೆಲಲರಿದಾಯ್ತು ತಮ್ಮೊಳ್ಗಾರ್ ನೊರ್ವರೊ (ಜಗವಿ. ೯-೭೬). ೧೬. [ಛಂದ] ಪದ್ಯವನ್ನು ಹೇಳುವಾಗ ಮಧ್ಯೆ ಕೊಡುವ ವಿರಾಮ,— ನಿಲುಗಡೆ : ಶತಮುಖೇಂದು ರವಿತೋಯಮುಮಾಗಲ್ ಯತಿಪದಂ ನಿಲವು ದಂತಿಯೊಳಕ್ಕುಂ (ಛಂದೋಂಬು. ೨-೧೩೨). ೧೭. [ನಾಟ್ಯ] ಭಂಗಿ; ಪ್ರಕಾರ; ರೀತಿ : ಒರ್ಮೆಯೆ ನಿಲವುಗಳನಿತುಮನೊರ್ಮೆಯೆ ಪದಗತಿಗಳನಿತುಮಂ ವಿಕ್ರಿಯೆಯಿಂದೊರ್ಮೆಯೆ . . . ಹರಿ ಮೆಚ್ಚಿದಂ (ಚಂದ್ರಪ್ರ. ೧೨-೧೪೬); ನಿಲವಿನ ವಗತಿಗಳಿವಾಸನಕುಲವಿವು ಚಾರಿಗಳಿವೆಂದು ತಾನಭಿನಯಿಸುತ್ತಿರಲಿಂದೆ ಭದ್ರಚಂಡಂ ಪಲವಂದದೆ ನೃಪಸುತಂಗೆ ತೋಱುತ್ತಿರ್ದಂ (ಕುಸುಬಾ. ೭-೬೨); ನಿಲವಿನ ಭಂಗಿ ಸುರೇಖಾವಿಲಸಿತಮುಂದಿಟ್ಟ ಹಸ್ತಗತಿಸಂಗತಿಗಳ್ ನಲಿ ನೊಗಯಿಸೆ ರಸಭಾವಂ ನಲವಿಂ ನರ್ತಿಸುತುಮಿರ್ದರಮರಾಂಗನೆಯರ್ (ಶಾಂತೀಶ್ವ. ೧೪-೬೨). **ನಿಲ** : ೫. ನೆರೆವರಿ ನರಾಜ ಕಡಮಸವರಿ ವಂಜನೆ ಪಟ್ಟ ಲಂಜ ಹೊರನಿಲ ಹಸ್ತಾಂತರಸಂಜಾಯಿತ ನಿಲಗಳ ಪರಿನಿಡಿಯಂ ನಿಲಿಸಿ ಸೀಮೆಯಂ ರಕ್ಷಿಸಿದಂ (ಕಳಸ್ಯ. ೭-೨೯); ನಿಲವಿಲ್ಲದೆ ಹಲದಿಂದ ಹೊಲದ ಉಕ್ಕೆ, ನಿಲ ನೋಡಿ ಸಂಸಾರ (ಗಾದೆ). ೧೮. ಎತ್ತರವನ್ನು ಅಳೆಯುವ ಒಂದು ಸಾಧನ; ಅಳತೆಗೋಲು : ಒಂದು ಮೂಲೆಯಲ್ಲಿ ಖೈದಿಗಳ ಎತ್ತರವನ್ನ ಕೆಯುವ ಸಲುವಾಗಿ ಕಪ್ಪು ನಿಲಪೊಂದನ್ನಿಟ್ಟಿದ್ದರು (ಪುನರು. ೨೭೭). **ನಿಲು**$_2$: ೧೫. ನಾಲ್ಕುದಿಕ್ಕುಗಳಲ್ಲಿಯೂ ಪಟ್ಟಿಗಳಿಂ ನಿರ್ಮಿತಂಗಳಾದ ನಿಲುಗಳಿಂದಲು (ಸೌಗಂಧಿ. ೧೦೫-೭); ಆಧಾರವು ನದಿಯ ಎರಡು ದಂಡೆಗಳಲ್ಲಿರುವ ಮರದ ಬುಡಗಳೋ ಗಟ್ಟಿಯಾದ ಇನ್ನಿತರ ನಿಲುಗಳೋ ಇರಬಹುದು (ಬಾಲಪ್ರ. ೫, ೧೭೪). **ನಿಲುವು**$_2$: ೪. ದರ್ಪಣದೊಳೆಸೆವ ಪ್ರತಿಬಿಂಬದಂತಾಗಸದೊಳಿರ್ಪ ಸುರಚಾಪದಿರ ವೆಂತಂತೆ ದಗ್ಧಪಟ ತೋರ್ಪಂತೆ ಘನಮರೀಚಯ ಜಲದ ನಿಲುವಿನಂತೆ . . . ಮೆಱೆದು ಕಂದರ್ಪನಂ ಸುಟ್ಟ ತುಳನಿರ್ಮಾಯನಲ್ಲಮಪ್ರಭುರಾಯ ಸಲಹೆಮ್ಮನು (ಚಿಬಪು. ೧-೧೧); ಸತ್ಯದ ಸಾರದಂತೆ ನಿತ್ಯತೆಯ ನಿಲು [ಪಾಠಾಂ.ಲ] ವಿನಂತೆ . . . ಒಪ್ಪುತಿರ್ದಂ (ಶಬಶಂ. ೧-೪೧ ಪ). ೫. ಜೀವನದ ನೋವನ್ನೆಲ್ಲ ಅನುಭವಿಸಿ ಇರುವಿಕೆಯ ಮೂಲವನ್ನೇ ಕೆದಕಿ ನೋಡಲು ಪ್ರಯತ್ನಿಸುವಂತಿದೆ ಕತೆಯ ನಿಲುವು (ಹೊಸಕ್ತಿ. ೨೯೪). ೭. ಲುಕಾಸ್ಯನ ಮುಖವೂ ನಿಲುವೂ ಗಂಭೀರವಾಗಿದ್ದುವು (ಮಲಸಾ. ೨೦೪). ೮. ಚೆನ್ನಮಲ್ಲಿಕಾರ್ಜುನನ ಧ್ಯಾನ ಮನನ ನಿದಿಧ್ಯಾಸವೇ ಅಕ್ಕನ ಅನಂದ. ಮತ್ತೆ ಚೆನ್ನಮಲ್ಲಿಕಾರ್ಜುನನ ನಿಲುವನು ಯಾರೂ ಅರಿಯಲಾಗದು ಎಂದು ಹೇಳುತ್ತಾಳೆ (ಅಸಾಗಳ. ೬೬); ಈ ವಚನಗಳು ಅಲ್ಲಮ ಏರಿ ನಿಂತ ನಿಲುವನ್ನು, ಆ ನಿಲುವನ್ನು ಮುಟ್ಟಲು . . . ಜೀವನದ ಅದಿಭಾಗದಲ್ಲಿ ಪಟ್ಟ ಶ್ರಮವನ್ನೂ ಕನ್ನಡಿಸುತ್ತವೆ (ಕೂಸ್ಯಕು. ೮೧). ೯. ಅವನ ಹೇಳಿಕೆಯಲ್ಲಿ ಏಕರೂಪದ ಖಚಿತತೆಯಿಲ್ಲ, ಸ್ಪಷ್ಟವಾದ ನಿಲುವಿಲ್ಲ (ದ್ರಾವಿವಿ. ೨೧೫); ನಾನು ಅವರ ನಿಲುವಿಗೆ ಮರುಳಾದೆ (ವೀಕಪದ. ೧೯೬). ೧೦. ಹುಲಿಗಳ ನಿಲುವು ಸಾಧಾರಣವಾಗಿ ಎರಡುಎರಡುವರೆ ಮೊಳ ಇರುತ್ತದೆ (ಮುಂಬಯಿ. ೪-೬೫); ಅಡುಗೆಮನೆಗಳಲ್ಲಿ ಅಡುಗೆ ಮಾಡುವವರ ನಿಲುವಿಗೆ ಸರಿಯಾದ ಎತ್ತರದಲ್ಲಿ ಒಲೆ . . . ಇತ್ಯಾದಿ ಸೌಕರ್ಯಗಳಿರುತ್ತವೆ (ಅಡುಸಾ. ೨೬). ೧೨. ಚಲುವಾಂಬೇಶ್ವರ ದೇವಸ್ಥಾನಕ್ಕೆ ಚಾಮಪ್ಪಾಚೀಯವರಿಂದ ಹಿತ್ತಾಳೆ ಚೌಕಟ್ಟು ಗುಬ್ಬೀ ಕದ ಸಹಿತವಾಗಿ ಮಾಡಿಸಿ ಪಟ್ಟಿಸಿದ ನಿಲುವಿನ ಸೇವಾರ್ಥ (ಎಕ.XIV, ಚಾಮಗಾ. ೨೦೬-೩; 1868). ೧೩. ಅವನ ಉದಿಗೆ ತೊಡಿಗೆಗಳು, ನಿಲುವು ಶ್ರೀಮಂತರದಾಗಿದ್ದವು (ಮೋಹರು. ೫); ಮೂರ್ತಿ ಸಣ್ಣದಾದರೂ ನಿಂತ ಆ ನಿಲುವಿನಲ್ಲಿ ಒಂದು ತೇಜಸ್ಸಿತ್ತು (ಹೊಸಕ್ತಿ. ೩೭). ೧೫. ನಿಲುವಿನಲಿ ಸ್ವಸ್ಥಾನದಲಿ ಕೈಚಳಕದಲಿ . . . ಶಸ್ತ್ರಾವಳಿಯ ಸಾಂಗೋಪಾಂಗಶ್ರಮವನು ತೋಱುದನು ಪಾರ್ಥ (ಕುಸ್ಯಾಆ. ೬-೪೧.). ೧೯. ಎಡೆ; ಅವಕಾಶ; ಆಸ್ಪದ : ಭೀಷ್ಮನು . . . ಪರಶುರಾಮನ ಮೇಲೆ ನಿಲುವಿಲ್ಲದ ಬಾಣಗಳನ್ನು ಬಿಟ್ಟನು (ಭೀಷ್ಮಚ. ೨೪). ೨೦. ನೇರವಾಗಿರುವಿಕೆ; ನೆಟ್ಟಗಿರುವಿಕೆ: ವ್ಯಸನ ಇರುವವರಿಗೆ ಹಸುವಿನ ಹಾಲು ಸಕ್ಕರೆಯಲ್ಲಿ ಎಂಟು ದಿನ ಕೊಳ್ಳಲು ವ್ಯಸನ ಉಂಟಾಗದು. ನಿಲುವಿಗೆ ಜೀನುತುಪ್ಪದಲ್ಲಿ ಕೊಡಲು ನಿಲುವು ಸ್ತಂಭನ (ವೈದ್ಯವಿ. ೪೨).

ನಿಲವಿನ ಸೂಡು = ನೆಟ್ಟಗೆ ಉರಿಯುತ್ತಿರುವ ಜ್ವಾಲೆ ; ಏರಿಳಿತಗಳಿಲ್ಲದ ಒಂದೇ ಸಮವಾದ ಉರಿ : ಅಸನದಿಂ ಬಾಯಿಂ ಪೊಯ್ದ ಸಾಸವೆ ಮೆಣಸುಪ್ಪು ಕೂಡೆ ನಿಲವಿನ ಸೂಡಿಂ ಲೇಸಾಗಿ ಬೆಂದ ಬಾಡಂ ಬಾಸಣಿಸಿಟ್ಟದನೆಯಮೃತಮತಿಗಟ್ಟಿಸಿದಂ (ಯತೋಚ. ೩-೭೦). **ನಿಲುವು ಬೀಳು** = ಎತ್ತರವಾಗಿ ಬೆಳೆದ ಪೈರಿನ ಮಧ್ಯೆ ನುಗ್ಗು,—ಪ್ರವೇಶಿಸು : ತುಡುಗ ಅವು ಗಪಗಪ ತಿಂದು, ಹೊಲ ಕಾಯುವವರ ಸುಳಿವು ಕಂಡ ಕೂಡಲೆ ಜೋಳದ ನಿಲುವು ಬಿದ್ದು ಓಡ ಹೋಯಿತು (ಮುಂಬಯಿ. ೩-೨೨).

[ದೇ.ಗೌ ತಮಿ. ನಿಲುವೈ ; ಮಲ. ನಿಲವು, ನಿಲ ; ತುಳು. ನಿಲುವು, ನಿಲಾವು, ನಿಲೆವು ; ತೆಲು. ನಿಲವ, ನಿಲುವ, ನಿಲುವು, ನಿಲ್ವ]

ನಿಲವುಗನ್ನಡಿ, ನಿಲುಗನ್ನಡಿ, ನಿಲುವುಗನ್ನಡಿ (ನಾ). ನಿಂತು ಇಡೀ ದೇಹವನ್ನು ನೋಡಿಕೊಳ್ಳುವುದಕ್ಕೆ ಅನುಕೂಲವಾದ ಉದ್ದನೆಯ ಕನ್ನಡಿ; ದೊಡ್ಡ ಕನ್ನಡಿ : ತರುಣಿ ಕೇಳ್ನಿನ್ನಯ ನಿವಾಹಸಮಯಂಗೊಳಲಂಕರಿಸಿ ರನ್ನದ ನಿಲವುಗನ್ನಡಿಯೊಳ್ನಿನ್ನ ಸೌಂದರಿಯಮಂ ನೋಡಿ ಮೋಹಿಸಿ ಜೀವಕಳೆಯನಾ ಮಾರ್ಪೊಳಸಿನೊಳು ಪುದಿದೆನು (ಸೌಂದಪು. ೧-೪೭); ಜೆಲುವೆಗೆ ತಕ್ಕ ಸಿಂಗರವ ನಿರ್ಮಿಸಿ ಮನದೊಲವಿಂದೆ ನೋಡಿ ದಾದಿಯರು ಉಲುಹಿಂಗೆ ಹರಳುದುಂಬಿದ ರತ್ನಮಯ ಹೊನ್ನ ನಿಲವುಗನ್ನಡಿಯ ತೋಱುವರು (ಮೋಹತ. ೨೩-೫೩). **ನಿಲುಗನ್ನಡಿ** : ಕಾಂತೆಗೆ ನೋಡೆಂದು ತೋರಿಸುವಂತೆ ನಿಲುಗನ್ನಡಿಯ ತಂದು ನಿಲ್ಲಿಸಲು (ಸೌಗಂಧಿ. ೨೧೩-೨) ; ತುರುಬುಗಳಿಗೆ ಹುವ್ವುಗಳನ್ನು ಮುಡಿಸುವುದಕ್ಕೂ ನಿಲುಗನ್ನಡಿಗಳಿಗೆ ಮಿರುಗಿಳ್ಕುವುದಕ್ಕೂ ನನ್ನಲ್ಲಿರುವ ಕರಕೌಶಲಗಳು ಮಿಕ್ಕ ಸ್ತ್ರೀಜನಂಗಳಲ್ಲಿರಲಾರವು (ಕೃಪಾವಿ. ೧೬) ; ನಿಲುಗನ್ನಡಿಯ ಎದುರನಲ್ಲಿ ನಿಂತುಕೊಂಡು ಕ್ಯಾಪು ಬಾಚಿಕೊಳ್ಳುತ್ತಿದ್ದ (ಪಂಡಿ. ೯). **ನಿಲುವುಗನ್ನಡಿ** : ಎರಡು ದೊಡ್ಡ ನಿಲುವುಗನ್ನಡಿಗಳನ್ನು ಅಲ್ಲಿ ಗೋಡೆಗೆ ತಂಗಿಸಲಾಗಿತ್ತು (ಹೇಮಂತ. ೪೦೬).

[ನಿಲವು + ಕನ್ನಡಿ$_1$]

ನಿಲವುಗೆಡಿಸು (ಕ್ರಿ). (ಆಲಂ) ಕೀರ್ತಿಯನ್ನು ಕಡಮೆ ಮಾಡು; ಹೀಗಳೆ ; ಕೀಳುಮಾಡು : ಅಮಲಧರ್ಮಜನ ಕೀರ್ತಿ . . . ಮಥನಾಗೇಂದ್ರಧರನ ಜಾತೆಯ ನಿಲವುಗೆಡಿಸಿ ನೆಲೆ ರಾಜಿಸಿತು (ಜೈಮಿಭಾ. ೨-೧೨). [ನಿಲವು + ಕೆಡಿಸು$_1$]

ನಿಲಹ (ನಾ). ಉಳಿದುದು; ಶೇಷ ; ಬಾಕಿ : ಕಳಮಂಜದ ಲೆಕ್ಕಗುತ್ತಿಗೆಗಳ ನಿಲಹದ ನಾನಿಯಡ್ಡಣಂತೆ ನಾನಾಸುಲಿಗೆ ಲಾವಣಿಗೆಯೆಂಬೀ ಗಳಬಳಮಂ ನಿಲಿಸಿ ಸುಂಕಮಂ ಬಾಳಿಸಿದಂ (ಕಳಸ್ಯ. ೭-೩೦).

[ನಿಲ (<ನಿಲವು)+-ಹ$_2$(<-ಪ$_2$)]

ನಿಲಹಾಸ (ನಾ). ಮಂಕು; ಕಾಂತಿಹೀನತೆ : ನಿಲಹಾಸ [ಪಾಠಾಂ. ಸ್ಯ]ವಿರದೆ ಸೋಮಯ್ಯನಂ ತಂದಿಲ್ಲಿ ನಿಲಿಸು ದೂಷಕರ ಮೂದಲಿಸು (ಸೋಮಚಿ. ೨-೧೨೦). [<ಸಂ. ನಿರ್ಹಾಸ]

ನಿಲಾಭಿ (ನಾ). ಒಂದು ಬಗೆಯ ಗಿಡ : ಮುಡುಬುಶೂಲೆಗೆ :— ಹೊಸತರುತುಂಬಿಯ ನಿಲಾಭಿಯ ಹಣ್ಣಿನ ರಸದಲ್ಲಿ ಅರೆದು ಕಟ್ಟುವುದು (ವಿನೈವಿ. ೧೯೬). [?]

ನಿಲಿಂಪ, ನಿಳಿಂಪ (ನಾ). ಸುರ; ದೇವತೆ : ಉರಗನಿಕಾಯ ದಿಕ್ಪತಿ ನಿಕಾಯ ನಿಲಿಂಪನಿಕಾಯಮೆಲ್ಲಮಾದರದೊಳೆ ತಮ್ಮತಮ್ಮ ನಿಳಯಕ್ಕಿರ ದೊಯ್ದಪರೊಲ್ದು ಕನ್ನೆಯಂ (ಕಾದಂಪೂ. ೧೦೧೪); ನಿಲಿಂಪರ್ ಕಾವು ದೆನುತೆ ತುತಿಸುತಿರ್ದರ್ (ಅದ್ಭುತ. ೪೮-೨೮). **ನಿಳಿಂಪ :** "ಅಮರರ್ . . . ಸುಮನರ್ ಗೀರ್ವಾಣರ್ ಸುರರಮೃತಾಶರ್ ಕ್ರತುಭುಜರ್ ನಿಳಿಂಪರ್ ತ್ರಿದಶರ್" (ವಸ್ತುಕೋ. ೬-೩೧); ಮದಿರೋನ್ಮತ್ತನಿಳಿಂಪ ಕಿಂಪುರುಷಕಾಂತಾರಬ್ಧಸಂಗೀತಮೊಪ್ಪಿದುದಲ್ತೇ (ಪಂಪಭಾ. ೭-೭೨); ಪ್ರಮಥರಾನಂದಿಸೆ ನಿಳಿಂಪರು ನಮಿಸಲುಮೆ ಬೆಜಗಾಗುತಿರಲಾ ವಿಮಳ ಮೂರ್ತಿಯನಾಗ ಕಾಣುತ (ಬಸಪು. ೧೦-೩೮); ಜಯತು ಜನನದೂರಾ ಯೆಂದು ನಿಳಿಂಪಸಂಚಯವೆಯ್ದುತು ತಮ್ಮ ನೆಲೆಗೆ (ತ್ರೀಪಾಲ. ೧೪-೧೦೨). [ಸಂ.]

ನಿಲಿಂಪನಿಲಯ, ನಿಳಿಂಪನಿಳಯ (ನಾ). ದೇವತೆಗಳ ನಿವಾಸ; ಸ್ವರ್ಗ: "ಬರ್ದಿಲಮೆನಲ್ ನಿಲಿಂ [ಪಾಠಾಂ. ಳಿಂ]ಪನಿಲಯಕ್ಕೆ ನಾಮಂ" (ಚತುನಿ. ೬೫). **ನಿಳಿಂಪನಿಳಯ :** ಸಲೆ ದೇವಾಂಗನೆಯರ್ ನಿಳಿಂಪ ನಿಳಯಪ್ರೋದ್ಭೂತಸದ್ವಸ್ತುಸಂಕುಳದಿಂ ಶೋಧಿಸಿ ತನ್ನ ಗರ್ಭಮಂ . . . ಚೆಲ್ವಿನೊಳೊಂದಿ ಕಂಡರಿಸಿದಂತಾ ಕಾಂತೆ ಕಣ್ಗೊಪ್ಪಿದಳ್ (ಪರ್ಧಮಾ. ೧೧-೫೫); ಕಳವಿಂಗೆಜಗಿದ ಮನುಜರ ಕಳೇಬರಂಗಳುಮವರ್ಗೆ ಬಸಮ ಲ್ಲೆಂತುಂ ಕಳವಿಂಗೆಜಗದ ನರರ್ಗಾ ನಿಳಿಂಪನಿಳಯಮುಮಧೀನಮಲ್ಲದು ದಲ್ಲಂ (ನೀತಿಮಂ. II, ೨೪೦). [ನಿಲಿಂಪ + ನಿಲಯ]

ನಿಲಿಂಪೇಶ (ನಾ). ದೇವತೆಗಳ ಒಡೆಯ; ದೇವೇಂದ್ರ : ಈ ನಿಲಿಂಪೇಶನಂ ಹಿಂದಿಕ್ಕಿಕೊಂಡ ರುಜೆಗಾನರೆವೆನೌಷಧಿಯಂ (ಚಿಬಪು. ೨೫-೧೫). [ನಿಲಿಂಪ + ಈಶ]

ನಿಲಿಕು 'ನೀಳ್ಕು' ನೋ.

ನಿಲಿಕೆ 'ನಿಲ್ಕೆ' ನೋ.

ನಿಲಿಗೆ 'ನಿಲ್ಕೆ' ನೋ.

ನಿಲಿಪು, ನಿಲಪು, ನಿಲುಪು (ಕ್ರಿ). ೧. ಸ್ಥಾಪಿಸು; ಪ್ರತಿಷ್ಠೆಗೊಳಿಸು : ಇಂತಿವನರ್ಥಿಯಿಂ ನಿಲಿಪುವೆಂ[ಪಾಠಾಂ.ಪೆನೆಂ]ದು ಮುನಿ ಶ್ವರರೇಬುಲಿಂಗಮಂ ತಂದಿರೆ (ಸಮಪ. ೨-೬೨); ನಿಲಿಪಿ ಪೂಜಿಸಿ ನೆಲಸಿನ ಕಾಲಂ ಕೊಯ್ಯಲಣ್ಮದೇಱುತ್ತುಮಿಱಿಯುತ್ತುಮಿರ್ಪನಂ ಕಂಡು (ಧರ್ಮಾಮೃ. ೨-೧೨೯). **ನಿಲಪು :** ೧. ವೀರಗಲ್ಲ ನಿಲಪಿದಕೆ ××× (ಎಕ. XI, ಚಳ್ಳಕೆ. ೩೯-೩; 1553). **ನಿಲುಪು :** ೨. ಇಡು; ಇರಿಸು : ಕಿನ್ನರನ ಮುನಿಸನಾ ಪರ್ಬದಿಂಪಂ ತಿಳಿಪಿ ಮನ್ನಿಸುತಲವರ ಪದದೊಳು ಚಿತ್ತಮಂ ನಿಲುಪಿ (ಬಸರ. ೧೧-೨೧೨). ೩. ಶಾಶ್ವತ ವಾಗಿರು; ಸ್ಥಿರವಾಗಿ ನಿಲ್ಲು : ಉಡುಪತಿ ರವಿ ಜಲಧಿ ಧಾತ್ರಿ ನಿಲುಪ ನ್ನೆವರ[ಂ] (ಇಅ. XVIII, ೩೯-೨೭; ಸು. 1076). ೪. ತಡೆ; ನಿಗ್ರ ಹಿಸು : ನಿಡುಸುಯ್ಯುಂ[ಯ್ಲಂ] ತನ್ನನೊತ್ತಂಬರಿಸೆ ನಿಲುಪುತುಂ ನೀಳ್ದ ನಲ್ಕೇಶದಿಂದಂ ತೊಡೆಯುತ್ತುಂ ತೊಂಡೆವಾಯಂ ಶ್ರಮಜಲ ಕಣಮಂ ಮೇಲುದಿಂ ಪಾರಿಸುತ್ತುಂ . . . ಪಾಣ್ಟಿಯೊರ್ವಳ್ ನಿಜಮಣಿ ಭವನದ್ವಾರದೊಳ್ ಬಂದು ನಿಂದಳ್ (ಸೂಕ್ತಿಸು. ೮-೧೬೭).

[<ನಿಲ್ + -ಪು]

ನಿಲಿಸು, ನಿಲ್ಲಿಸು (ಕ್ರಿ). ೧. ಸ್ಥಾಪಿಸು; ಪ್ರತಿಷ್ಠೆಗೊಳಿಸು : ವಿಲಸಿತ ರತ್ನನಿರ್ಮಿತದಿವ್ಯಪ್ರತಿಮೆಯ ನಿಲಿಸಿದ ಮಯನ ಕೀರ್ತಿಸಿದ (ಪೋಹತ.೨೨-೧೧). ೨. ನಡಿಗೆಯನ್ನು ತಡೆ; ಗತಿಭಂಗ ಮಾಡು; ಚಲಿಸದಂತೆ ಮಾಡು : ಲೀಲೆಯೊಳೆ ಪಿಡಿದು ನಿಲಿಪಂ ವ್ಯಾಳೇಭಮ ನೊಂದು ಪೊಯ್ಲಿನಿಂದಮೆ ಕಡಿವಂ ತಾಳಂಗಳನುರ್ಜಿಸುವಂ ಶೈಲಶಿಳಾತಳ ಮನೆಳವೆಯೊಳ್ ನೃಪತನಯಂ (ಕಾದಂಪೂ. ೪೩೮); ಪೊಟ್ಟಿನಂತೆ ನಿಲಿಸಲರಿದಪ್ಪುದು ತೊಱೆಯಂತೆ ಪಾಯಲರಿದಪ್ಪುದು (ಧರ್ಮಾಮೃ. ೪-೧೬೫); ಪುಟ್ಟಿನಲಿ ನಿಲಿಸಿದನು ಪವನಜನುಬ್ಬಟೆಯನರ್ಜುನನ ವಿಕೃತಿಯ ನಿಬ್ಬರಾಲಾಪವನು ಧರ್ಮರಹಸ್ಯನಿಷ್ಠೆಯಲಿ (ಕುಮಾ.ಸ. ೧೪-೭೬). ೩. ಭದ್ರಗೊಳಿಸು; ಭದ್ರವಾಗಿಸು : ಬನ್ನಿಯೂರ ಕೆಱೆಯಂ ಮುನ್ನಿರ್ದ್ದರಸುಗಳ್ ಪಲವು ಸೂಱೆ ಕಟ್ಟಿಸಿಯುಂ ನಿಲಿಸಲಾರ್ತರಿಲ್ಲ (ಮೈಅರಿ. ೧೯೩೦, ೭೬-೪೦; 1080). ೪. ಇಲ್ಲದಂತೆ ಮಾಡು; ಅಡಗಿಸು : ಪರಸಮಯದ ಗರ್ವಮಂ ನಿಲಿಸಿ . . . ಪರಮ ಸುಖ ದಿಂದಿರ್ಪುದು (ಬಸರ. ೪-೫೪); ಜಲರುಹದಳಲೋಚನ ಮಮಕಾರದ ಲಲನೆಯರುಗಳ ಸಾಲ್ಗೊಳಿಸಿ ಗಲಭೆಯ ನಿಲಿಸುವ ಕಟ್ಟಿಗೆಗಾರ್ತಿಯರುಲು ಹೆಸೆದುದು ಸಭೆಯೊಳಗೆ (ಪೋಹತ. ೪-೫). ೫. ತಂಗುವಂತೆ ಮಾಡು; ನೆಲಸುವಂತೆ ಮಾಡು; ಬಿಡಾರ ಮಾಡಿಸು : ಅತಿಪ್ರತಾಪನಿಳಯ ನೆನಿಪ್ಪುದ್ಭಟದೇವನಾಲೋಕನಂಗೈದು ಎಲ್ಲರುಮನಂಜದಿರೆಂದಭಯಂ ಗೊಟ್ಟು ಸಂತವಿಸಿ ನಿಲಿಸಿ . . . ಅಧ್ವರಶಾಲೆಯಂ ಪೊಜಮಟ್ಟು (ಉದ್ಭಟ. ೪-೬೬ ಪ); ಕಾನನಾಂತರನಿಳಯದಲಿ ನಿಲಿಸೆಮ್ಮನೆಂದುದು ಸಕಲಮುನಿನಿಕರ (ಕುಮಾ.ಅ. ೧೮-೧೮); ಅವರ ಒಂದುಗೂಡಿ ಕೃತಾರ್ಥ ರಿವರಿನ್ನೆಂದು ಕೌಶಿಕನವರನಾ ದಳಮಂದಿರದಲೇ ನಿಲಿಸಿ ಬಂದರು ಮಿಥುಳೆ ಗೊಲವಿನಲಿ (ತೊರರಾ. ೧-೧೨-೨೩). ೬. ಭಿಕ್ಷಾಸ್ವೀಕಾರಕ್ಕಾಗಿ ಸ್ವಲ್ಪಕಾಲ ತಂಗುವಂತೆ ಮಾಡು,—ವಿರಮಿಸುವಂತೆ ಮಾಡು : ನಾಗಸೇನರುಮೆಂಬ ಚಾರಣರ್ಕಾಂತಾರದ ಚರ್ಯಾಮಾರ್ಗದೊಳ್ಪರ್ಸರಂ ತಾನುಂ ಶ್ರೀಮತಿಯುಂ ಕಂಡು ನಿಲಿ[ಪಾಠಾಂ.ಱಿ]ಸಿ ನವವಿಧಪುಣ್ಯ ಸಪ್ತಗುಣಸಂಪನ್ನರಾಗಿ ಚರಿಗೆಯಂ ಮಾಡಿ (ಚಾವುಂಪು. ೨೪); ಒಂದು ದಿವಸಂ ಜಂಘಚಾರಣರ್ಕರಿಗೆಗೆವರೆ ಕುಬೇರಕಾಂತನುಂ ಪ್ರಿಯದತ್ತೆಯುಂ ಇದಿರ್ಗೊಂಡು ನಿಲಿಸುವುದುಂ (ಚಾವುಂಪು. ೬೧). ೭. ಉಳಿಸಿಕೊಳ್ಳು; ಇರುವಂತೆ ಮಾಡು : ಇಂತಪ್ಪಪರಾಧಂಗೆಯ್ದುಂ ತಾನಲ್ಲದನೊಲೆಸೆ ವುದೀ ಶುಕನೊಳ್ಕತ್ತಂ ತೊಡರ್ದು ನಿಂದುದಪ್ಪೊಡಿದಂ ತೊಱೆಯದೆ ನಿಲಿಸಲಕ್ಕುಮೇ ಸಾರಿಕೆಯಂ (ಕಾದಂಉ. ೭೧); ಕೌಶಿಕಯಾಜ್ಞವಲ್ಕ್ಯ ಪ್ರಮುಖಮುನಿಜನರ ನಿಲಿಸಿದನು ಋತ್ವಿಕ್ಪ್ರಪೂತಸ್ಥಳದ . . . ಸ್ನಾನಕ ದಲಜಸೂನು ಹರುಷದಲಿ (ತೊರರಾ. ೧-೭-೩೭); ವಿಸಮಚಿತ್ತವನಾತ್ಮ ನೊಳು ನಿಲಿಸಿದ ರಾಜಋಷಿಯಲ್ತೆ ರಾಜನೆ ನೀನು (ಭರಚಿ. ೨-೬೧). ೮. ಇರಿಸು; ಮಡಗು : ಗಾಯಿಕೆಯರನಿರಿಸಿ ನೃಪಾಸ್ಥಾಯಿಕೆಯಿಂ ಪೊಱಗೆ ದೂತನೊಳಪುಗೆ ವರವೇತ್ರಾಯತಕರರ್ ಸಸಂಭ್ರಮಮಾಯೆಡೆ ಯೊಳ್ ತಂದು ನಿಲಿಸಿಯೆಡೆವಿಡಿಸುವುದುಂ (ಶಾಂತಿಪು. ೩-೩೦); ಶೀತವಾತಾ ತಪವರ್ಷಾದಿ ಸರ್ವದ್ವಂದ್ವದೋಷರಹಿತಮಪ್ಪದೊಂದು ರತ್ನಶಿಲಾತಲ ದೊಳ್ ಚಂದ್ರಾಪೀಡದೇವನಂ ನಿಲಿಸಿ (ಕಾದಂಉ. ೬೨೯); ಕಿಚ್ಚು ಸವಿ ರುಡೆಗಳಂ ಕಾವಲ್ಗೆ ನಿಲಿಸಿ ಹುಚ್ಚನಿಂ ತಪ್ಪೊಪ್ಪೆ ಬಾಯ್ಕೈಗಳಂ ಬಿಗಿದು (ಕಾಲೂರ. ೭೬-೧೪೦). ೯. ನೆಲೆಗೊಳ್ಳುವಂತೆ ಮಾಡು; ಶಾಶ್ವತ ಗೊಳಿಸು; ಸ್ಥಿರವಾಗಿರಿಸು : ವಿಶ್ವಸಂಸಾರಗುಹಾಗಹ್ವರಮಂ ಪೊಱ ಮಡಲ್ಕೆ ಬಗೆಯುಳ್ಳಾತಂ ಪ್ರಹ್ವಪರನಾಗಿ ನಿಲಿಪುದು ಜಿಹ್ವಾಗ್ರದೊಳರುಹ ನೆಂಬ ಮೂಱಕ್ಕರಮಂ (ಸಮಪ. ೧-೯೬); ಸಂಶುದ್ಧರ್ ಸಿದ್ಧರ್ ನಿತಾಂತಂ ನಿಲಿಸುಗೆ ನಿಜಶ್ರೇಯಸಶ್ರೀಯೊಳೆಮ್ಮಂ (ಅಸಂಪು. ೧-೨);

ಇನ್ನುಂ ಧರಣಿಯೊಳೈವತ್ತು ಬರಿಸದ ವರ್ತನಂ ನೆಱೆವುದದನೆಮ್ಮ ಬಸವಾದಿಗಳ್ ಭಕ್ತಿಯಂ ನಿಲಿಸಲೆಂದು ಕಲ್ಯಾಣದೊಳ್ ಬಂದಿರ್ಪರವರೊಡನೆ ಕಳೆ (ಪದ್ಮರಾ. ೨-೨೨); ನಾರಾಯಣ ನಿನ್ನ ನಾಮಾಮೃತವನು ನಾಲಿಗೆಯಲ್ಲಿ ನಿಲಿಸಯ್ಯ (ಪುರಂದ. ೧-೧೬೬ ಪಲ್ಲವಿ). ೧೦. ಪದವಿ, ಸ್ಥಾನ ಮುಂತಾದುವಕ್ಕೆ ಕೂರಿಸು : ಅವರಂ ಮಾಂಡಳಿಕ ಪದದೊಳ್ನಿಲಿಸಿ ಚತುಸ್ಸಹಸ್ರಮಕುಟಬದ್ಧಪರಿವೃತರಂ ಮಾಡಿ (ಜಾವಂಪು. ೩೬); ಧರಣಿಪತಿ ಸಪ್ರಾಣನೇ ಗಜಪುರದ ರಾಜ್ಯಕೆ ನಿಲಿಸುವೆನು ಮೇಣ್ ಸುರರೊಳಗೆ ಸಮ್ಮೇಳವೇ ಕುಂತೀಕುಮಾರಂಗೆ (ಕುವ್ಯಾಕ. ೧೪-೧೨). ೧೧. ನಿಲ್ಲುವಂತೆ ಮಾಡು : ಸಿದ್ಧರ್ಕಳಾಗಿರ್ಪರೆಮ್ಮಾನಿಲಭಾವಂ ಪಿಂಗೆ ಕೈವಲ್ಯದೊಳೆ ನಿಲಿಸಿ ರಕ್ಷಿಕ್ಕೆ ಸದ್ಭಾವದಿಂದಂ (ಸಮಪ. ೧-೨); ಹತ್ತಿರಾತನ ನಿಲಿಸಿ ಬಟ್ಟಲಲಿತ್ತು ವೀಳೆಯವನು ಸುಯೋಧನ ಕೆತ್ತುಕೊಂಡಿರೆ ನುಡಿಸಿದನು ಕಲಿಕರ್ಣನವನಿಪನ (ಕುವ್ಯಾದ್ರೋ. ೧-೧೫); ಸಮಸ್ತಸುರಜನಮುನಿಜನವ್ರಜವ ತಂದು ನಿಲಿಸಿದನಬುಜನಾಭನ ಮುಂದೆ (ತೊರರಾ. ೧-೮-೫೫); ಹುಚ್ಚಿನಿಂ ತಪ್ಪೊಪ್ಪೆ ಬಾಯ್ಕೈಗಳಂ ಬಿಗಿದು ಎಚ್ಚರವನೊರೆಯುತಿದೆ ಬಿಸಿಲಲ್ಲಿ ನಿಲಿಸಿ (ಶಾಲೂರ. ೭೬-೧೪೦). ೧೨. ರಚಿಸು; ನಿರ್ಮಿಸು ; ಕಟ್ಟು : ಜಲರುಹಬೀಜರಾಜಿಗಳನಾಜ್ಞಾಪಣ್ಣಕುಟೀರಕಂಗಳಂ ನಿಲಿಸುವ . . . ವ್ಯವಸಾಯಮೆತ್ತಲುಂ (ಕಾದಂಪು. ೨೨೨); ಬಲಿದರೊಡ್ಡನು ಮಂಡಳಾಕೃತಿಗೊಳಿಸಿ ಕೌರವರಿವರು ಛಟ್ಟನು ನಿಲಿಸಿದರು ಚಂದ್ರಾರ್ಧಸದೃಶದಲಖಿಳಮೋಹರವ (ಕುವ್ಯಾದ್ರೋ. ೧-೪೯). ೧೩. ಕಾಪಾಡು ; ರಕ್ಷಿಸು ; ಉಳಿಸು : ಯತ್ನದಿಂ ನಿಜಶರೀರಮಂ ನಿಲಿಸವೇಟ್ಟುದಿಂ ದೇವಿಯರ್ (ಕಾದಂಉ. ೪೦೫) ; ನೀನೆ ಸಂತಂ ನಿಲಿಸಿದನೊಲವಿಂದಂ ವಿರೂಪಾಕ್ಷಲಿಂಗಾ (ಪಂಪಾಶ. ೧೪) ; ಅಖಿಳಜೀವವ್ರಾತವನು ನಿರ್ಮಿಸುವ ನಿಲಿಸುವ ಘಾತಿಸುವ ಲೀಲಾವಿನೋದವನಱುವರಾರು (ನಿಭಾಗ. ೬-೩-೩೭). ೧೪. ಹಿಂದಕ್ಕೆ ಸರಿಸು,—ತಳ್ಳು : ತಾಯ ನಿಲಿಸಿಯೆ ಪರಶುಗೊಡಲಿಯ ಬಾಯ ಮಸೆವುತ ಬಂದು ಭೂಪನ ದಾಯಿಗರ ಹರೆಗಡಿದು ಹಿಡಿದನು ಕಾರ್ತವೀರ್ಯಕನ (ಸಂಭಪ. ೨೬-೨೧). ೧೫. ತಡೆ ; ನಿಗ್ರಹಿಸು ; ನಿರೋಧಿಸು : ಶತ್ರು ಬಲವಂತನಾದುದನಱಿದಂ ಬಟಾಕ್ಕಂ ಅದರ್ಕೆ ತಕ್ಕುದಂ ನೆಗೆಟ್ಟೆನೆಂದು ಪಲವುಮುಪಾಯದಿಂ ತಿಳಿಸಿ ನಿಲಿಸಿ (ಸಂಚಕಂ. ೩೯-೧೯) ; ನೆಲಸದ ಯೋನಿ ಮುಟ್ಟದೆಡೆ ಕಾಣದ ಕಾಲಮತತ್ವದೊಳ್ ಮನಂ ನಿಲಿಸದ ಭಾವಮಳ್ಕಿಸದ ಪುದ್ಗಳಮಿಲ್ಲ (ಸುಕುಮಾ. ೫-೩೨) ; ನಿಲಿಸಿರೈ ತಂಗಿಯನು ತನ್ನಯ ಕೊಲೆಗೆ ಮಗನಳವೊಂದು ಸಾಲದೆ ತನ್ನ ನುಡಿಯೋಕೆ (ಕುವ್ಯಾದ್ರೋ. ೭-೧೯) ; ಮನವ ನಿಲಿ[ಪಾಕಾಂ.ಬಲಿ]ಸಿಹೆನೆಂದು ನುಡಿವ ಅಣ್ಣಗಳ ಕಣ್ಣ ಗೆಡಿಸಿ ಬಣ್ಣಗುಂದಿಸಿ ಬಂಧನಕ್ಕೊಳಗುಮಾಡಿ ಭವದಲ್ಲಿ ಸೆಱೆಹಿಡಿದಿರ್ಪುದು ನೋಡಾ ಮನವು (ಅಖಂಡೇ.೨೫೭-೧). ೧೬. ಮುಗಿಸು ; ಮುಕ್ತಾಯಮಾಡು ; ಪೂರೈಸು : ನಿಲಿಸಿ ಬೇಂಟೆಯನಲ್ಲಿ ಬಳಲಿದ ಬಲಸಮೇತದಿ ಬಂದು ತತ್ಪುರವಳೆಯದುದ್ಯಾನವನು ಹೊಕ್ಕನು(ಸಳಚ.೨-೧೪). ೧೭. ತ್ಯಜಿಸುವಂತೆ ಮಾಡು; ಬಿಡಿಸು; ತೊರೆಯಿಸು: ಅಂಗವಿಕಾರದ ಸಂಗವ ನಿಲಿಸಿ ಲಿಂಗವ ನಂಗದ ಮೇಲೆ ಸ್ಥಾಪ್ಯವ ಮಾಡಿದನೆನ್ನ ಗುರು (ಮಹಾದೇ. ಬ. ೨೩-೪೪); ಹಮ್ಮಂ ನಿಲಿಸಿ ಶಿವಭಕ್ತಸಂತತಿಯ ಕಡುಮನದ ಮೈಲಿಗೆಯ ತೊಳೆದ ಮಡಿವಳತಂದೆ ಕೊಡು ಮತಿಗೆ ಮಂಗಳವನು (ಚೆಬಪು. ೧-೧೬). ೧೮. ಕಳೆ ; ಪರಿಹರಿಸು ; ನಿವಾರಿಸು : ನೀರಂ ತೋಱದೆ ಪಸಿದುದನಾರಯ್ಯದೆ ಸೇದೆಯಱಿದು ನಿಲಿಸದೆ ಪಿರಿದುಂ ಭಾರಮನೇಱಿಸಿ ಪಸುವಂ ದೂರಾಂತರಮೊಯ್ಯದೋಡಿ ನೆಗೆಟ್ವರ್ ಜೈನರ್ (ಸಮಪ. ೫-೧೨) ; ರಾಯಕಟಕವ ಬೆದಱಿಸಿದ ನಾರಾಯಣಾಸ್ತ್ರದ ಬಾಧೆಯನು ಕಮಲಾಯತಾಂಬಕ ನಿಲಿಸಿ ಸಂತೈಸಿದನು (ಕುವ್ಯಾದ್ರೋ. ೧೯ ಸೂಚನೆ) ; ಹರಿಯ ಕೋಪಜ್ವಾಲೆಗಾ ಶಂಕರ ವಿರಂಚಿಸುರೇಂದ್ರಮುಖ್ಯರು ತರಹರಿಸಲಾರದೆ ಮಹೋಗ್ರವ ನಿಲಿಸು ನೀನೆನುತಾ ಸಿರಿಯ ಮರೆಯೊಗಲ್ (ಅಸಂರಾ. ೧-೫-೭೬). ೧೯. ಭಂಗಗೊಳಿಸು ; ನಾಶಮಾಡು : ಗುರುಸುತನನೊಟ್ಟೈಸಿ ಶಲ್ಯನ ಭರವಸವ ನಿಲಿಸಿದನು ಕೃಪನುಬ್ಬರದ ಗರ್ವವ ಮುಱುಮಟ್ಟ ಕೃತವರ್ಮಕನ ನೋಯಿಸಿದ (ಕುವ್ಯಾದ್ರೋ.೫-೨೬). ೨೦. (ಆಲಂ) ಉಡುಗೊರೆಯನ್ನಾಗಿಸು ; ಕಾಣಿಕೆಯನ್ನಾಗಿ ಮಾಡು : ರಾಯ ಜನಕನುದಗ್ರಹರಚಾಪಾಯುಧವನೊಡ್ಡಿದನು ಕಮಲದಳಾಯತಾಕ್ಷಿಯ ನಿಲಿಸಿದನು ಬರಿಸಿದನು ಭೂಭುಜರ (ತೊರರಾ. ೧-೧೪ ಸೂಚನೆ). **ನಿಲ್ಲಿಸು** : ೧. ೬೦ ವರಹದ ಭೂಮಿಯಂನು ಕಂಲು ನೆಟ್ಟು ಫಲಿಸಿ ಕೊಟದರಿಂದ ಸೊಸ್ತಿಯಲಿ ಕೆಳುವನು ಕಲುಕಟದು ನಿಲ್ಲಿಸಿ ಆ ಹೊಲವ ಮೇರೆಯಲ್ಲಿ ನಿಂದಿರಿಸಿ (ಎಕ. VII. ೩ಪೊ. ೧೦೮-೨೩; 1558). ೯. ಬಳ್ಳದ ಬಾಯಂತೆ ಒಂದೇ ಮನವ ಮಾಡಿ ನಿಲ್ಲೆಂದು ನಿಲ್ಲಿಸಯ್ಯಾ (ಬಸವ. ೭೩೫). ೧೬. ಓದುಗಾರಿಕೆ ಪ್ರಾರಂಭವಾಯಿತು. "ಶ್ರೀ"ಎಂದು ಸಿಗರದ ಗೌಡರು ರಾಗ ಎಳೆದರು. ಗದುಗಿನ ವೀರನಾರಾಯಣ ಎಂದು ನಿಲ್ಲಿಸಿದರು (ಚಂಗಾಳ್ವ. ೨೦). ೨೧. ಬಿಡು ; ತೊರೆ ; ತ್ಯಜಿಸು : ನನ್ನೂರ ಹೊಲೆಯರು ಆಗಾಗ್ಗೆ ಬಡಿಯುವುದನ್ನು ನಿಲ್ಲಿಸಿ ಅವರದೇ ಆದ ಮಟ್ಟನಲ್ಲಿ ಹಾಡುತ್ತಾರೆ (ನನ್ನೂರು. ೫೦); ಏನಾದರೂ ಆ ನಿರ್ಧಾರವನ್ನು ನಿಲ್ಲಿಸುವುದಿಲ್ಲ (ಚಂಗಾಳ್ವ. ೪೮೫).

[ನಿಲ್ + —ಇಸು$_3$]

ನಿಲೀನ (ಗು). ೧. ಚೆನ್ನಾಗಿ ಕೂಡಿಕೊಂಡಿರುವ ; ಸರಿಯಾಗಿ ಹೊಂದಿಕೊಂಡಿರುವ : ಅನೆಗಳ ಸಾಲೆಗಳ್ ಪರಮಾನಂದಮನೆಯ್ದೆ ಮಾಟ್ಟುವಖಿಳಜನಕ್ಕಂ ದಾನಪರಿಮಳವಿಲೋಭನಲೀನಾಳಿಕುಳ ಪ್ರಣಾದದಿಂ ಮುಖರಂಗಳ್ (ಬಾಧಪು. ೧-೧೫೦). ೨. ಚೆನ್ನಾಗಿ ಅಡಗಿರುವ.

[ಸಂ.]

ನಿಲು$_1$ 'ನಿಲ್' ನೋ.

ನಿಲು$_2$ 'ನಿಲವು' ನೋ.

ನಿಲುಂಬಿಸು (ಕ್ರಿ). ಒಟ್ಟುಗೂಡಿಸು ; ರಾಶಿಮಾಡು : ನಂಬುಗೆವಂತರ ಕರೆದು ನೂತನದ ನಿತಂಬಿನಿಯರು ಬೆಸಸಿದುದಾ ಇಂಬಿನೊಳೆಮಗಱುಹುತ ಬಹುದೆಂದು ನಿಲುಂಬಿಸಿ ಮನ್ನಣೆಯಿತ್ತ (ಭರಚ. ೩೨-೫). 'ನಿಗುಂಬಿಸು' ಪರಾ. [ನಿಲುಂಬು + —ಇಸು$_3$]

ನಿಲುಂಬು, ನಿಲುವು$_1$ (ಕ್ರಿ). ೧. ಒಟ್ಟುಗೂಡಿಸು ; ಒಟ್ಟು ಸೇರಿಸು : "ನಿಲುಂಬು—ಪುಂಜೀಕರಣೇ (ಒಟ್ಟುಗೂಡಿಸು)" (ಶಮಧಾ); ಕೋಟಿಕೋಟಿ ಪ್ರಭೆಗಳ ತುಂಬಿಗುರುಳ್ಗಳೊಳ್ ನಿಲುಂಬಿ ಮೆಱೆವ ಚಿನ್ನಪೂದುಱುಗಲ ರತ್ನಕೆನ್ನಕೆಂಪುಗಳ ಬೆರಕೆವೆಳಗು . . . ನಿಂದು (ಅನಂಪು. ೧೪-೬೮ ಪ); ದಳಗೃಹಮುಂ ನಿಯಾಮಿಪ ಸುಮೌಂಜಿಯ ತೀಡುವ ಪುಷ್ಪ ದರ್ಭೆಯಂ ದಳಫಳಮುಂ ನಿಲುಂಬುವ ಮೃಗಾಜಿನಮುಂ ಸರಿಮಾಳ್ಪ . . . ಮುನೀಂದ್ರರನೊಪ್ಪುಗುಮಾ ತಪೋವನಂ (ಚಂದ್ರಪ್ಪ. ೧-೧೩೪). ೨. ಗುಂಪುಗೂಡು ; ಒಟ್ಟಾಗು : ವನಿತಾರೂಪದ ಕಾಮಕಲ್ಪಲತೆಯೋ . . . ಲಲನಾಸ್ವರೂಪದತನುಶ್ರೀರೂಪಮೋ ಬರ್ಪುದೆಂಬಿನೆಗಂ ಮೆಲ್ಲನೆ ಬಂದು ಕಾಲ್ಗೆಱಗೆ ಲೀಲಾಲಂಬಿಲಂಬಾಲಕಾಳಿ ನಿಲುಂಬಿರ್ದುವು ಚಕ್ರವರ್ತಿಯ ಪದಾಂಭೋಜಂಗಳೊಳ್ ಕನ್ನೆಯಾ (ಅಪಿಪು. ೩-೪೭); ಸಾರಿ ಬರ್ಪ ಭೇರುಂಡಂಗಳಿಂ ನಲಿವ ಪುಲಿಗಳಿಂ ನಿಲುಂಬಿದ ಮೊಲಂಗಳಿಂ. . . ಸರ್ವಪರ್ವತಸಾರ್ವಭೌಮನಖರ್ವಸಂಪದಂ ವಿಂಗೆ ಮೆಱೆಸುತಿರ್ದುದು (ರಾಜಶೇ. ೧-೧೩೫ ಪ). ೩. ಮುತ್ತು ; ಅವರಿಸು : ತುಂಬಿ ಪರಿಮಳಕೆ ಬಳಸಿ ನಿಲುಂಬಿರೆ ನಿರ್ದಂಡಚಂದ್ರಕಚ್ಛತ್ರಮನಾಲಂಬಿಸಿದುದನ ಸೇಸೆ ತುಱುಂಬಿನ ಮಂದಾರಪಾರಿಜಾತಪ್ರಸನಂ

(ಅಸಂಪು.೨-೪೩). ೪. ಗೊಂಚಲಾಗು ; ಜೊಂಪೆಯಾಗು : ಕೊಂಬು ಕೊಂಬುಗಳೊಳೊಂದೊಂದಜೊಳ್ಸಂದಣಿಸಿ ನಿಲುಂಬಿದ ರಸಾಲಪನಸ ಕದಳೀಕಪಿತ್ಥ . . . ತಿಂತ್ರಿಣೀಪರಿಪಕ್ವಫಲಂಗಳಂ ತಳೆದು ನಿಂದ ಕುಜ ಪ್ರಜಾತಮುಂ (ಪ್ರಸವಿ. ೧೧-೪೨ ಪ). ೫. ಏರು ; ಮೇಲೆ ಬರು : ಕಮಳಿನಿ ಘನಮೋಹಂಬಡೆದು ಮುಳುಗಿದಂತೆ ನಿಲುಂಬಿದ ತೆರೆ ಪೊಯ್ಯೆ ಮುಳುಗುತುಂ ಮೋಹಿಸುಗುಂ (ರಾಜಶೇ. ೨-೬೮). ೬. ನೆಗೆ ; ಹಾರು; ಕುಪ್ಪಳಿಸು : "ನಿಲುಂಬಿತು = ಕುಪ್ಪಳಿಸಿತ್ತು" (ಶಮದ.ಪರಿ.೨).

೭. ನೆಟ್ಟಗೆ ನಿಲ್ಲು ; ಮೇಲೇಳು : ಪೂಗೊಯ್ವ ಪೂಂದಿ ಪಾಡುವ ಸಂಗೀತದಿಂಚರಕ್ಕೆ ಕ್ರುತಿಗುಡುವಂತೆಸೆವ ಪವನಪೂರಿತಕೀಚಕರಂಧ್ರ ನಿನದಕ್ಕೆ ಪೆಡೆಯೆತ್ತಿ ನಿಲುಂಬಿ ನಲಿವ ಫಣಗಳಿಂ (ರಾಜಶೇ. ೫-೫೫ ಪ).

ನಿಲುವು₁ : ೬. ಚವುಡರಾಯನು ಮುಂದೆ ನಡೆಯಲು ಶಿವಗಣಾವಳಿ ನಲಿದು ಪರಮೋತ್ಸವದೊಳುಬ್ಬುತ್ತಲ್ಲಿಗಲ್ಲಿಗೆ ನಿಲುವುತಾರುತ್ತ ತವಕದಿಂ ಪಾರ್ಗುಪ್ಪೆಯಾಡುತ . . . ನಡೆಯಲು (ಒಸಪು. ೬೨-೩೬).

ನಿಲುಂಬಿ ನಿಲ್ = ಒಟ್ಟಾಗಿರು ; ಗುಂಪುಗೂಡು : ಸಾಂಪ್ರ ಮರಂದರಸಭರಭರಿತ ಸುರಭಿಯುತ ವಿಕಚಕುಸುಮಮಂಜುಮಂಜರಿಪುಂಜ ದೊಳಿರದೆಱಿಗೆ ಪೊಜಮಡದೆ ನಿಲುಂಬಿ ನಿಂದು ನಿಬಿಡಮೆನೆ ಮುಸುಂಕಿದ ಮಧುಮುದಿತಮಧುಕರಪ್ರತಾನದಿಂ ಶ್ಯಾಮಳತೆವೆತ್ತು (ಶಬಶಂ.೨-೪೨ ಪ). 'ನಿಗುಂಬು' ಪರಾ. [<ನಿಲ್]

ನಿಲುಕಡೆ 'ನಿಲ್ಕಡೆ' ನೋ.

ನಿಲುಕಿಸು 'ನಿಲ್ಕಿಸು' ನೋ.

ನಿಲುಕು₁ 'ನೀಳ್ಕು' ನೋ.

ನಿಲುಕು₂ (ನಾ). ೧. ಚಾಚುವಿಕೆ : ಪಡಿತಳವ ಬೀಸಿದರೆ ಕಾಲಿಕ್ಕಡಿ ನಡುವ ತಾಗಿದರೆ ಮಂಡಲವುಡಿದು ಬಿದ್ದುದು ನಿಲುಕಿನುಪ್ಪರ ಶಿರವ ಮನ್ನಿಸದು (ಕುಮಾಭೀ. ೪-೩೬). ೨. ಬಿಡುವು ; ವಿರಾಮ : ನಿಲುಕಿ ಲ್ಲಿದೆ ಪೊತ್ತು ತಂದುತಂದಂದುತಿರೆ ಖಳರಾಯ ಸಾವಿರಕರಂಗಳಿಂದೊಂದು ಜಲಕುಂಭಮುಮನಾಂತು ಮೇರುಶಿಖರಕ್ಕೆ ಕುಂಭದ್ರೋಣಮಳೆಗರೆವೊಲು ಅಲಸದೆಯೆರೆವುತಿರೆ (ನಮೋ. ೨೧-೨೫). ೩. ಆರಂಭ ; ತೊಡಗು ವಿಕೆ : 'ಯಕ್ಷಗಾನ'ದ ನಿಲುಕು (ದೊರೆತ ಸಾಕ್ಷಿಗಳಿಂದ) ಹನ್ನೊಂದನೆಯ ಶತಮಾನದ ತನಕವೂ ಹೋದೀತೆಂದೂ ಊಹಿಸಬಹುದು (ಯಕ್ಷಬ. ೩೪).

[<ನಿಲುಕು₁./ತೆಲು. ನಿಲಕ]

ನಿಲುಕುಗಾಲ್, ನಿಲುಕುಗಾಲು (ನಾ). ಹಮ್ಮಡಿಯನ್ನೆತ್ತಿ ಮುಂಗಾಲಿನ ಮೇಲೆ ನಿಂತುಕೊಳ್ಳುವಿಕೆ ; ಮೆಟ್ಟಂಗಾಲು ; ತುದಿಗಾಲು : ನೀಡುಂಗೊರಲು ನಿಲುಕುಗಾಲುಡಿದೆದೆಗೂಡು ವಿರಾಜಿಸು ತಿರಲು (ನೇಮಿಸಂ. ೨-೪೭) ; ಒಳಸುತ್ತನೊತ್ತಿ ಬಿಗಿವನಿತಜೊಳ್ಬಾಗಿ ಲಿಂದೊಳಹೊಗುವುದಂ ಕಂಡು ಹಿಡಿವ ನಿಜಾಯಂ ಮಜೀದು ತಳುವ ದಂಗಣಕೆಯ್ದು ನಿಲುಕುಗಾಲೊನ್ನಿಂದು ನಿಗುರಿ . . . ಬಿಗಿಯಪ್ಪಿ (ಸಮ್ಯಕ್ಕೌ. ೩-೧೨). **ನಿಲುಕುಗಾಲು** : ಸಲೂನು ತುಂಬಿ ಹೊರ ಚಲ್ಲಿದ್ದ ಗಿರಾಕಿಗಳು ಬಾಗಿಲಿಂದೀಚೆಗೆ ನಿಲುಕುಗಾಲಲ್ಲಿ ನಿಂತು ಒಳಗಿನವ ರನ್ನು ಕೆಕ್ಕಳಿಸುತ್ತಿದ್ದರು (ಗಾಳಿಪ. ೭೯).

[ನಿಲುಕು₁ (<ನೀಳ್ಕು)+ಕಾಲ್₁]

ನಿಲುಕುಗಾಲು 'ನಿಲುಕುಗಾಲ್' ನೋ.

ನಿಲುಗಂಬ (ನಾ). ಧ್ವಜ, ಚಪ್ಪರ, ಮಾಳಿಗೆ ಮುಂತಾದುವು ಗಳಿಗೆ ಆಧಾರವಾಗಿ ನಿಲ್ಲಿಸುವ ಕಂಬ ; ಊರೆಗಂಬ : ಚಲುಮೆಯ ಭೂಮಿಯೊಳು ನಿಲುವುದೇ ನಿಲುಗಂಬ ಒಲೆಯುವದು ನಿಲದೆ ಎಳೆದತ್ತ ಹೆಣ್ಣಿನ ನೆಲೆಯನಾರ್ಬಲ್ಲ (ಪರ್ಸಜ್ಞ. ೧೭೬೩).

[ನಿಲು₁ (<ನಿಲ್)+ಕಂಬ₁ (<ಕಂಭ)]

ನಿಲುಗಂಬಳಿ (ನಾ). ಉದ್ದವಾದ ಕಂಬಳಿ :(ತ). 'ತುಂಡುಗಂಬಳಿ' ಪರಾ. [ನಿಲು₂ (<ನಿಲವು)+ಕಂಬಳಿ]

ನಿಲುಗಡೆ 'ನಿಲ್ಕಡೆ' ನೋ.

ನಿಲುಗನ್ನಡಿ 'ನಿಲುವುಗನ್ನಡಿ' ನೋ.

ನಿಲುಗಾಲು (ನಾ). (ಆಲಂ) ಬಿಡುವು; ವಿರಾಮ: ಕೆಲವರು ಆಹಾರ ಸಾಮಗ್ರಿಗಳನ್ನು ಕೂಡಿಸಿಕೊಳ್ಳುವ ಸಲುವಾಗಿ ನಿಲುಗಾಲಿಲ್ಲದೆ ಓಡಾಡು ತಿದ್ದರು (ಪುನರು. ೪೫೬). [ನಿಲು₁(<ನಿಲ್)+ಕಾಲು₁(<ಕಾಲ್₁)]

ನಿಲುಗೊಳವೆ (ನಾ). ಉದ್ದವಾದ ಕೊಳವೆ,—ನಳಿಕೆ: ನಿಲುಗೊಳವೆ, ಲಂಬನಾಳ (Stand-pipe. ಇಂಕಸಿ).

[ನಿಲು₂ (<ನಿಲವು)+ಕೊಳವೆ (<ಕೊಟವಿ)]

ನಿಲುನೇಸರು (ನಾ). ನಿಂತಲ್ಲಿಯೇ ಇರುವ ಸೂರ್ಯ ; ಸ್ಥಿರ ವಾಗಿರುವ ರವಿ : ಯೇಸುವಿನಾತ್ಮಮೊಡನೆ . . . ನಿಲುನೇಸರುಗಳೆಡೆ ಗಯ್ದೆ, ಕಣ್ಮುಗಿದು ತಲೆವಾಗಿ, ತನ್ನ ಪಡೆದೆರವನೊಡೆಯಂಗೆ ಮರಳೀವಂತೆ ತನ್ನ ತಂದೆಗೆ ಯೇಸುವಸುವನೊಪ್ಪಿಸಿದಂ (ಗೂಲ್ಗೊಥಾ. ೧೩-೩೩೬).

[ನಿಲು₁ (<ನಿಲ್)+ನೇಸರು (<ನೇಸಱ್)]

ನಿಲುಪಯಣ (ನಾ). ಪ್ರಯಾಣ ಮಧ್ಯದಲ್ಲಿ ತಂಗುವುದು,— ನಡುವೆ ಬೀಡು ಬಿಡುವುದು ; "ನಿರ್ಯಾಣ, ಉಪ್ಪಯಣ" (ನಾನಾರ. ೫. ೯೦). [ನಿಲು₁ (<ನಿಲ್)+ಪಯಣ]

ನಿಲುಪು 'ನಿಲಿಪು' ನೋ.

ನಿಲುಬಗೆ (ನಾ). ನಿಲ್ಲುವ ರೀತಿ,—ಭಂಗಿ : ನಡುತೋಳೋ . . . ನಿಲುಬಗೆಯೋ ನಗುಮೊಗವೋ ತಹ ಸೊಗವೋ ಕನಸಿಗು ಇಂಥವ ಸುಳಿವೊಲ್ಲ (ಗೋಕುನಿ. ೧೩-೧೧). [ನಿಲು₁ (<ನಿಲ್)+ಬಗೆ₃]

ನಿಲುಬಟ್ಟಲು (ನಾ). ದೊಡ್ಡ ಬಟ್ಟಲು : ಅವನು ಟೆನ್ನಿಸ್ ಸಂದ್ಯ ಗಳಲ್ಲಿ ಗೆದ್ದಿದ್ದ ಹಲವು ಬೆಳ್ಳಿಯ ನಿಲುಬಟ್ಟಲುಗಳಿದ್ದವು (ಮಹಾಗ.೧೧೩).

[ನಿಲು₂ (<ನಿಲವು)+ಬಟ್ಟಲು (<ಬಟ್ಟಲ್)]

ನಿಲುಮನೆ 'ನಿಲ್ಮನೆ' ನೋ.

ನಿಲುಮೆ (ನಾ). ೧. ರೀತಿ ; ಸ್ವಭಾವ : "ಕಾಲುಚೀಲದ ತೂತನ್ನು ಬೇರೆ ಯಾರಾದರೂ ನೋಡುವುದು ಸಾಧ್ಯವೇ ?" ಎಂದು ವಾದಿಸುವ ನಿಲುಮೆ ಅವರದು (ವಾತ್ಸಲ್ಯ. ೨೯) ; ಶರಣನು ಮಾನವರಂತೆ ಕಂಡರೂ ಅವನು ಮಾನವನಲ್ಲ. ಅವನ ನಿಲುಮೆ ಬೇರೆ (ಬಾಳಬ. ೧೨). ೨. ಗುರಿ; ಲಕ್ಷ್ಯ : ಸೊಸೈಟಿಯ ನಿಲುಮೆ ಮತ್ತು ಮುನ್ನಡೆಗಳನ್ನು ಅಡಳಿತದ ವರದಿಯ ಮುಖಾಂತರ ನಿರೂಪಿಸಲಿಕ್ಕಾದರೂ ಜನರಲ್‌ಬಾಡಿ ಮೀಟಿಂಗ್ ನಡೆಸುವುದು ಮುಖ್ಯವಾಗಿತ್ತು (ಮರಳಿ.೧೦೪) ; ಕಲ್ಯುಡನನ್ನು ಬೆದರಿಸುವ ನಿಲುಮೆ ಗಳಿಸುತ್ತದೆ ಅವನ ಮನಸ್ಸು ಒಮ್ಮೊಮ್ಮೆ (ಕುದಿಕೂ. ೯). ೩. ಅಭಿಪ್ರಾಯ ; ಮತ ; ನಿಲವು ; ಧೋರಣೆ : ಈ ದೀರ್ಘ ಓಲೆಯ ಮುಖಾಂತರ ನಾನು ನನ್ನ ನಿಲುಮೆ ಸ್ಪಷ್ಟೀಕರಿಸುತ್ತಿದ್ದೇನೆ (ನಿರೀಕ್ಷೆ. ೧೦೧) ; ನಿನ್ನ ಈ ನಿಲುಮೆಯನ್ನು ಬದಲಿಸಿಕೊಂಡರೆ ಎಲ್ಲರಿಗೂ ಒಳ್ಳೆಯದಾಗುತ್ತದೆ (ರೂಢಿ).

[ನಿಲು₁ (<ನಿಲ್)+-ಮೆ₁./ತಮಿ. ನಿಲ್ಮೆಮೆ ; ಮಲ. ನಿಲಮ]

ನಿಲುವಂಗಿ (ನಾ). ಮೊಳಕಾಲವರೆಗೆ ಇರುವ ಉದ್ದವಾದ ಅಂಗಿ: ನಿಲುವಂಗಿ ಮುಂಡಾಸು ಮೂಲೆಗೊಂದಿ ಮತ್ತೆ ತಲೆಯ ಮೇಲ್ಮುತ್ತಿನ ತುರಾಯಿ (ಸಿದ್ಧಕಾ. ೧೧-೧೨) ; ವೆಂಕಟಪ್ಪನಾಯಕನು . . . ಬಳಿಯ ಸುರುವಾಲು ಧರಿಸಿ ಬಳಿಯ ನಿಲುವಂಗಿಯನ್ನು ತೊಟ್ಟಿದ್ದನು (ಕ್ರೀರಾಯ. ೨೩೪) ; ಅವನು ಪ್ರಾರ್ಥನೆ ನಿಲ್ಲಿಸಿ ರೇಷ್ಮೆಯಂಚಿನ ನಿಲು ವಂಗಿಯನ್ನು ಮೇಲೆತ್ತಿಕೊಂಡು ಒಂದೇ ಒಂದು ಮಂಡಿಯೂರಿ ನೆಲಕ್ಕೆ ಬಾಗಿದನು (ಪುನರು. ೧೭೮). [ನಿಲುವು₂ (<ನಿಲವು)+ಅಂಗಿ₂]

ನಿಲುವಳಿ (ನಾ). ೧. ಉಳಿದುದು; ಬಾಕಿ; ಶಿಲ್ಕು : ಚಕ್ರವರ್ತಿಯು ತನ್ನ ಬೊಕ್ಕಸದಲ್ಲಿ ನಿಲುವಳಿಯಾಗಿ ಐದುವರ್ಷಗಳಿಂದ ಶೇಖರವಾಗಿದ್ದ ಧನರಾಶಿಯನೆಲ್ಲವನ್ನೂ . . . ವಿದ್ವಾಂಸರಿಗೂ ಬಡಬಗ್ಗರಿಗೂ ದಾನ ಮಾಡಿದನು (ಭಾಇಸ್ರ. ೩೪೨). ೨. ತಡೆಯುವುದು : "ನಿಲುವಳಿ ; ನಿಲುಗಡೆ ; ಮುಂದಕ್ಕೆ ತಳ್ಳುವುದು" (Adjournment. ಇಂಕನ).

ನಿಲುವಳಿ ಸೂಚನೆ = ಸಭೆಯನ್ನು ಮುಂದುವರಿಸಲು ನೀಡುವ ಸೂಚನೆ. [ನಿಲು$_2$ (<ನಿಲವು)+-ವಳಿ$_3$]

ನಿಲುವಾಭರಣ (ನಾ). ತಲೆಯಿಂದ ಕಾಲಿನವರೆಗೂ ಧರಿಸಿರುವ ಒಡವೆ ; ಮೈ ತುಂಬ ತೊಟ್ಟ ಆಭರಣ : ಸವಿರಾದ ಸೀರೆ ; ನಿಲುವಾಭರಣ ; ಮುಡಿಯಲ್ಲಿ ಹೂವು (ಪಚಭಾ. ೩೮) ; ಇನ್ನೊಂದು ಆತಂಕ ವೆಂದರೆ ಅವರ ಮೈಮೇಲೆ ನಿಲುವಾಭರಣ. ಆಗಿನ ಕಾಲಕ್ಕೂ ಒಬ್ಬೊಬ್ಬರ ಮೈಮೇಲೂ ಒಂದು ಸಾವಿರಕ್ಕೆ ಕಡಿಮೆಯಿಲ್ಲದಷ್ಟು ವಡವೆಗಳು (ಅನಾಮಿ. ೬೦). [ನಿಲುವು$_2$ (<ನಿಲವು)+ಆಭರಣ]

ನಿಲುವು$_1$ 'ನಿಲುಂಬು' ನೋ.

ನಿಲುವು$_2$ 'ನಿಲವು' ನೋ.

ನಿಲುವು$_3$ 'ನೆಲುವು' ನೋ.

ನಿಲುವುಗನ್ನಡಿ 'ನಿಲವುಗನ್ನಡಿ' ನೋ.

ನಿಲೆ$_1$ 'ನೆಲೆ$_1$' ನೋ.

ನಿಲೆ$_2$ (ಅ). ೧. ಶಾಶ್ವತವಾಗಿ ; ಸ್ಥಿರವಾಗಿ : ಗಾಡಿಯಮ್ಮನಾ ಬಾಟಂ ಪ್ರತಿಪಾಳಿಸಿ ನಿಲೆ ಪಡೆದೆಂ (ಎಇ. VII, ೨೧೩-೧೬ ; 874) ; ಅಲರ್ಗಳನಾಂತ ಪಾದರಿಗಳೊಳ್ ತರದಿಂದೆಱಗಿರ್ದ ತುಂಬಿಗಳ್ . . . ರೂಢಿಯ ಬರ್ದುವೆಂಡಿರಂ ನಿಲೆ ಸೆಱೆಗೆಯ್ವೆನೆಂದು ಪಲವಾಗಿರೆ ಮಾಡಿದ ತನ್ನ ಬಳ್ಳಿಸಂಕಲೆಗಳವೆಂಬಿನಂ ಬಗೆಯನಿರ್ಕುಱಗೊಂಡುವದೊಂದು ತಾಣ ದೊಳ್ (ಕಬ್ಬಿಕಾ. ೫೬). ೨. ದೃಢವಾಗಿ ; ಗಟ್ಟಿಯಾಗಿ ; ಭದ್ರ ವಾಗಿ : ಕೂರ್ತಂಗನೆಯರ್ ನೀತಿಯ ವಾರ್ತೆಯುಮಂ ಬಿಸುಟು ಪತ್ತುವರ್ ಪತ್ತಲೊಡಂ ಧೂರ್ತೆಯಿವಳೆಂಗುಮೋ ಎಂತಾರ್ತಪೆನಿಲ್ಲಾವ ತೆಱದೊಳಂ ನಿಲೆ ಪಿಡಿಯಲ್ (ಕಾದಂಪೂ. ೭೫೦) ; ಇರುಳುಂ ಪಗಲುಂ ಮಿಸುಕದೆ ನಿಲೆ ನಿಂದೆನೆವಂ ಪಸರಿಸಿದರ್ಪೋಕದೊಳ್ ಚತುರ್ಮುಖ ದೇವರ್(ಸಮಪ. ೧-೧೬) ; ಕಾಮೋತ್ಕಂಠೆಯುಂ ಕಂಠತಟಪ್ರತಿಷ್ಠಾನುವಾದ ನಲ್ಲಳಸುವನಾಂ ಸಾಹಸದೊಳ್ ತಗುಳ್ಚಿ ನಿಲೆ ಪಿಡಿದ ನಯಮಂ ಬಗೆದು (ವರ್ಧಪು. ೪-೮೪).

ನಿಲೆ-ನಿಲ್ = ಸ್ಥಿರವಾಗಿ ನಿಲ್ಲು ; ಅಚಲವಾಗಿ ನಿಲ್ಲು : ನಿಲೆ ನಿಂದಂ ಜಿನಚಂದ್ರಭಾನುಪರಮಂ ಸಮ್ಮೋದಕೈಲಾಗ್ರದೊಳ್ (ಅನಂಪು. ೧೪-೪೯). **ನಿಲೆ ನುಡಿ** = ನಿರ್ಧಾರವಾಗಿ ನುಡಿ ; ದೃಢವಾಗಿ ಹೇಳು ; ಭಾಷೆ ಕೊಡು : ಆ ಮಾತಂ ನಿಲೆ ನುಡಿದುದರ್ಕೆ ಮೆಚ್ಚಿ (ಪಂಪಭಾ. ೬-೧೯ ವ) ; ನಿಲೆ ನುಡಿವೀವ ಕಾವ ಧರೆಯಂ ಪ್ರತಿಪಾಲಿಪ ಧರ್ಮ ವೀಥಿಯಂ ತೊಲಗದ ಪೆರ್ಮೆಯಂ ತಳೆದ ಪೆರ್ಮಗನಂ ಭುವನಾಧಿಪತ್ಯ ದೊಳ್ ನಿಲಿಸಿ (ಪಂಂಪಾಪು. ೬-೭೯) ; ಪಿರಿದೀವಂ ನಿಲೆ ನುಡಿವಂ (ಶಮದ. ೭೨ ಪ್ರಯೋ). **ನಿಲೆ ನುಡಿಯಿಸು** = ಪ್ರತಿಜ್ಞೆ ಮಾಡಿಸು : ಎನಗಾದ ತನುಜರಂ ದ್ಯುನದಿಯೊಳಾಂ ಬಿಡುವುದರ್ಕಂ ಕಡೆಯೊಳಾಂ ತಪಂಬಡುವುದ ರ್ಕಮೊಡಂಬಡುವುದೆಂದು ನಿಲೆ ನುಡಿಯಿಸಿ (ನೇಮಿಪು. ೩-೧೮ ವ). **ನಿಲೆದೇ** = ಒಂದೇ ಸಮವೆ ಉರಿ ; ನಿರಂತರವಾಗಿ ಬೇಯು : ಸಲೆ ನಿಲೆ ಬೇವ ಗುಗ್ಗುಳದ ಕರ್ಪೂರೆಯಿಂದಮುಗುರ್ವನಾಳ್ದು ಕತ್ತಲಿಸುವ ಚಂಡಿಕಾಭವನದೊಳ್ . . . ವಸುಧಾತಳೇಶಯನಸುವ್ರತಮಂ ಲಲಿತಾಂಗಿ ತಾಳ್ದಿದಳ್ (ಕಾದಂಪೂ. ೩೬೫). **ನಿಲೆವಿಡಿ** = ಸ್ಥಿರವಾಗಿ ನಿಲ್ಲುವ ಹಾಗೆ ಮಾಡು ; ಶಾಶ್ವತವಾಗಿರುವಂತೆ ಮಾಡು : ತನುವಿಂದಂ ಪೋಗೆ ಜೀವಂ ನಿ [ಪಾಶಾಂ.ನಿ] ಲೆವಿಡಿಯದಣಂ ಬಾರದೆಂಬನ್ನೆಗಂ ತನ್ನುನಿಗಂತ ಪ್ಪೊಂದು ಕಾಮಾತುರತೆ ಸಮನಿಸಿತ್ತೇತಱಂ (ಕಾದಂಉ. ೬೯೭).

[ದೇ.॥ ತಮಿ. ನಿಲೈ,=ಸ್ಥಿರತೆ ; ತುಳು. ನಿಲೆ ದೃಢವಾದ]

ನಿಲ್ಕಡೆ, ನಿಲುಕಡೆ, ನಿಲುಗಡೆ (ನಾ). ೧. ನಿಲ್ಲುವ ಜಾಗ; ಇರುವ ಸ್ಥಳ,—ನೆಲೆ. ೨. ಬಿಡುವು ; ವಿರಾಮ : ನಿಲ್ಕಡೆವೆತ್ತಂದಿ ನಾಯುಷ್ಯವೆಂಭತ್ತನಾಲ್ಕು ಲಕ್ಷಾಂಕಪೂರ್ವಗಳು (ಧರಚ.೭೬-೭) ; ಕಡಲ ಮಧ್ಯದ ವಡಬಶಿಖಿಗೆ ಘನಘೋರವಾದಡವಿಯೊಳಗೊಗೆದ ದಾವಾಗ್ನಿಗಂ ದಕ್ಕಾರಿ ಪಿಡಿದ ಖಡ್ಗಕೆ ನಿಮಿಷಮುಂಟೆ ನಿಲ್ಕಡೆಯೆನಲ್ ಸವಱದಂ ಪರಬಲವನು (ಚಿಬಪು. ೪೩-೪೧) ; ಬಾಣಗಳಿಂದ ನಿಲ್ಕಡೆಗಳಿಲ್ಲದಲೆ ತೂರು ತಿರೆ (ಮಲ್ಲಾರಿ. ೮-೮). **ನಿಲುಕಡೆ** : ೧. ವೇದ ಬಲ್ಲಿತ್ತೆಂಬೆನೆ ನಾನಾ ಮುಖದಲ್ಲಿ ಸ್ತುತಿಯಿಸಿತ್ತಲ್ಲದೆ ಲಿಂಗದ ನಿಲುಕಡೆಯ ಕಾಣದು (ಬಸವ. ೫೫೨) ; ಜಂಗಮದ ನಿಲುಕಡೆಯನಱಯಬೇಕು ಪ್ರಸಾದದಲ್ಲಿ ಪರಿಪೂರ್ಣ ನಾಗಿರಬೇಕು (ಚನ್ನಬ. ಕ. ೪೩೮-೯೩೧). ೩. ಕೊನೆ ; ಅಂತ್ಯ ; ಮುಕ್ತಾಯ : ಇಷ್ಟಮಹಾಲಿಂಗದೇವಂಗೆ ಕೊಟ್ಟು ಕೊಂಬುವಂತಹದೆ ಇದಿರಿಟ್ಟು ಜಂಗಮಪಾದೋದಕಪ್ರಸಾದವ ಕೊಂಬ ಆಚರಣೆಯ ನಿಲುಕಡೆ ನೋಡಾ (ಮಹಾದೇ. ಕ. ೭೭-೧೯೨) ; ಕೆಲಸವಿದು ಲೇಸಾಗಿ ತೋಱುತು ಸಿಲುಕು ರಾಮನ ರಾಜಕಾರ್ಯಕೆ ನಿಲುಕಡೆಯದೇನೆಂದು ಚಿಂತಿಸಿದನು ವಿರಂಚಸುತ (ತೊರರಾ. ೪-೧೧-೧೦) ; ಶಾಂತಿಪರ್ವವೆಂಬ ಮಹಾಫಲ ವುಳ್ಳದ್ದಾಗಿ ಆಶ್ರಮವಾಸಪರ್ವವೆಂಬ ನಿಲುಕಡೆಯುಳ್ಳದ್ದಾಗಿ (ಕೃಪಾಅ. ೩) ; ಊಹೆಯ ಮೇಲೆ ಬುದ್ಧಿ ಓಡಿಸುತ್ತಾ ಹೋದರೆ ಎಲ್ಲಿ ನಿಲುಕಡೆ ಉಂಟು ? (ತಪಸ. ೧೨೩). ೪. ಸ್ಥಿತಿ ; ಇರವು ; ಅವಸ್ಥೆ ; ಸ್ವರೂಪ : ಇಂತು ಪ್ರಭುದೇವರು ನಿರ್ವಾಣದ ನಿಲುಕಡೆಯ ನಿರೂಪಿ ಸಲು (ಶೂನ್ಯಸಂ. ೬೭-೧೩೧) ; ಗುರುವಿನ ನಿಲುಕಡೆಗೆ ಬೆಜಗಾಗು ತಿರ್ದನು ಬಳಿಕ ಗೋರಕ್ಷ (ಪ್ರಭುಲಿಂ. ೧೯-೫೩) ; ತೋಱುಕೆಯಲಿದು ನಿಂದ ತುರ್ಯಾತೀತದಿಂ ತೊಲಂಗಿ ದೂರಮಾದ ಸರ್ವಸಾಕ್ಷಿಕಮಾಗಿ ನಿಂದ ನಿಲುಕಡೆಯ ಸಹಜಾವಸ್ಥೆಯೆನಿಪುದಭಿಪ್ರಾಯ (ಶಿವಪ್ರ. ೫೭-೩) ; ವಿಮರ್ಶೆಗೆ ಹೊಸ ನಿಲುಕಡೆ ಬಂದಿದೆ (ಕಸಾಚ. ೧೨೮). ೫. ಅಭಿ ಪ್ರಾಯ ; ನಿಲುವು : ಧರಣೀಶ ಪರನಾರಿಯರ ಮನದ ನಿಲುಕಡೆಯ ನರಿಯದೆ ಮನದಿ ಭ್ರಮಿಸಲು ಬರ್ಪುದತಿಬಾಧೆ (ಸಮೋ. ೮-೪೯). ೬. ನಿರ್ಣಯ ; ತೀರ್ಮಾನ ; ನಿರ್ಧಾರ : ಮೊದಲು ನಿಲುಕಡೆ ಯಾದ ಬಳಿಕವೆ ತುದಿಗೆ ಬಡ್ಡಿಯ ಮಾತು (ಕೋಗಯ. ೨೭-೨೦). ೭. ಎತ್ತರ ; ಉದ್ದ : ಬಲವೆತ್ತ ಕೃತಯುಗದವರ ಅಳತೆಗೊಂದೆ ಮೂರು ಪುರುಷಪ್ರಮಾಣದ ನಿಲುಕಡೆಯವರ ದೇಹಗಳು (ಧರಚ. ೫೧-೬೨). ೮. ತಡೆ ; ಅಡ್ಡಿ : ನೆಲದೊಳ್ ಜಲವೆಂಬ ಭ್ರಾಂತಿಯಿಂ ನಿಲುಕಡೆಗಳೆಲ್ಲಿ ಬಾಗಿಲೆಂದು ಭ್ರಾಂತಿಯಿಂ ತನಗೆ ಆದ ಅಪಮಾನವಂ ನೋಡಿ (ಕೃಷ್ಣಕ. ೧೦-೧೭೧). ೯. [ಸಂಗೀತ] ಸ್ವರಗಳು ನಿಲ್ಲುವ ನಿರ್ದಿಷ್ಟವಾದ ಸ್ಥಾನ ; ಸ್ಥಾಯಿ : ಎಸೆವ ಪಂಚಮ ಮಧ್ಯ . . . ಮಂದ್ರ ತಾರಮೆಂಬಿವಱ ನಿಲುಕಡೆಯನಱಂದು (ಚಿಬಪು. ೨-೨೮). **ನಿಲುಗಡೆ** : ೧. ನಮ್ಮ ನೆಲವಿದು, ನಮ್ಮ ಹೊಲವಿದು ನಮ್ಮ ನೆತ್ತರು ಬಿಡುಗಡೆ ; ನಮ್ಮ ತಾಯಿಯ ಪಾದಧೂಳಿಯು ನಮ್ಮ ಪ್ರಾಣದ ನಿಲುಗಡೆ (ನೆಲಮು. ೪೭-೨೪). ೨. ಉಭಯಸೈನ್ಯಗಳಿಗೆ ನಡುವೆ ನದಿ ಯೊಂದು ಅಡ್ಡವಾಗಲು, ಎರಡು ಬಣಕ್ಕೂ ನಿಲುಗಡೆ (ಅಳೌಕ. ೨೪). ೩. ಮುಖ್ಯಕೃತಿಯ ಕೊನೆಯ ಸಂಪುಟ ಹೊರಬಿದ್ದದ್ದು ೧೯೨೮ರಲ್ಲಿ. ಈ ನಿಲುಗಡೆಯನ್ನು ಕಾಣುವುದಕ್ಕೆ ಎಷ್ಟೋ ಮುಂಚೆಯೇ ಈ ನಿಘಂಟನ ಪ್ರವರ್ತಕರೆಲ್ಲರೂ . . . ತಮ್ಮ ದೀರ್ಘಜೀವನಗಳನ್ನು ಮುಗಿಸಿದ್ದರು (ಸಮಾಲೋ. ೨೬೫) ; ಬಿಡುಗಡೆಯೋ ಹೋ ಬಿಡುಗಡೆ

ಎಲ್ಲ ತಪಕೂ ನಿಲುಗಡೆ (ಗೋಕರ್ಣ. ೩೬-೧೬); ತಾನೇ ಅನೇಕವಾಗುವುದರಲ್ಲೇನೂ ಅರ್ಥವಿಲ್ಲವೆಂದೂ ಅಂಥ ಅನೇಕವಾಗುವ ವ್ಯಾಪಾರಕ್ಕೆ ನಿಲುಗಡೆಯೊಂದನ್ನು ಯೋಚಿಸುವುದಕ್ಕಾಗುವುದಿಲ್ಲವೆಂದೂ ಮಾಧ್ವಮಿಕನು ಪ್ರಭಾವಶಾಲಿಯಾಗಿ ವಾದಿಸುತ್ತಾನೆ (ತತ್ವಪ್ರಾ. ೨೧೨). ೪. ಈಗ ಅವಳ ಜೀವನ ಒಂದು ನಿಲುಗಡೆಗೆ ಬಂದಿತು (ಮುಂಚಿಕ. ೫೦); ದುಸ್ಥಿತಿಗೆ ಇಳಿಯುತ್ತಿದ್ದ ರಾಷ್ಟ್ರೀಯಪಕ್ಷದ ಪರಿಸ್ಥಿತಿಯನ್ನು ಸುಧಾರಿಸಿ ಉತ್ತಮಗೊಳಿಸಿ ಸ್ಥಿತ್ಯಾ ನಿಲುಗಡೆಗೆ ಮುಟ್ಟಿಸುವ ಸಾಹಸದಲ್ಲಿ ಅವರು ಕೃತಕೃತ್ಯರಾದರು (ರಾಜಸ. ೨೦). ೧೦. ನಿಂತಿರುವ ರೀತಿ; ಠೀವಿ : ನಲಿಸಿ ಸಾಸಾಗ್ರದೊಳೆಡಗೈಯ ಬೆರಲೊಂದ ಬಲಗೈಯ ಜಾನುವಿಗಿಟ್ಟು ಚಲುವನೆಸೆದನು ಕಂಭವ ನೆಮ್ಮಿ ತಾ ನಿಂದ ನಿಲುಗಡೆ ಜಗವ ಸೋಲಿಸುತ (ಭರತ. ೩-೨೦). ೧೧. ನಿಲ್ಲುವಿಕೆ; ನಿಂತುಕೊಳ್ಳುವಿಕೆ : ಬೆಂಗಳೂರಿನಿಂದ ಮೈಸೂರಿಗೆ ಅನೇಕ ನಿಲುಗಡೆರಹಿತ ಬಸ್ಸುಗಳು ಓಡಾಡುತ್ತವೆ (ರೂಢಿ).

[ನಿಲ್+ಕಡೆ$_3$./ತುಳು. ನಿಲಗಡೆ, ನಿಲ್ಗಡೆ ; ತೆಲು. ನಿಲುಕಡ]

ನಿಲ್ಕಿಸು, ನಿಲುಕಿಸು (ಕ್ರಿ). ೧. ಎಟುಕಿಸು; ಮುಟ್ಟು ; ಹಿಡಿದುಕೊಳ್ಳು : ಪಾತಾಳದಿಂ ನಿಲ್ಕಿಸಲ್ಮುನಿಪಾಂಪ್ರಿದ್ವಯಮಂ ಫಣೀಂದ್ರನೊಲವಿಂ ಸದ್ಭಕ್ತಿಯಿಂದೊಲ್ದು . . . ಕೂರ್ತು ನೋಡಿದಪನೋ ಪೇಟೆಂಬ ಭ್ರಾಂತಿಯಂ ಪುಟ್ಟಿಸಿ ತೊಳತೊಳಗುವ ಬಾಲಾರ್ಕನಂತಪ್ಪ ಶಿಶುವಂ ಕಂಡು (ಧರ್ಮಾಮೃ. ೮-೧೦೪). **ನಿಲುಕಿಸು : ೨.** ಚಾಚು ; ನೀಡು : ತನು ಮುರಿಮುರಿದು ನಿಲು[ಪಾಣಾಂ. ಲಿ]ಕಿಸುತ್ತಂ ಮನವಲರಿಸುತ್ತಾಗಳಿಸುತುಸುರನುಗೊಳಿಸುತಂ ಕಣ್ದೆಱೆದು ನೆಱೆ ಚಕ್ಕಮಾದಣ್ಣ ಅನಘ ಮಾದರಸಯ್ಯನಂ ಕಂಡು (ಬಸವು. ೪೭-೫೯). **೩.** ಸಿಕ್ಕುವಂತೆ ಮಾಡು ; ದೊರಕಿಸು: ಮಹಾತ್ಮರು . . . ಮಾನವಕುಲಕ್ಕೆ ಒಂದೇ ಪರಮಸತ್ಯವನ್ನು ಬೇರೆಬೇರೆ ನಿಟ್ಟುಗಳಿಂದ ನಿಲುಕಿಸಬಹುದೆಂಬುದನ್ನು ಸಾರಿ ಹೇಳುವರೆಂದೂ ಭವಿಷ್ಯ ನುಡಿಯಬಹುದಾಗಿದೆ (ತತ್ವಪ್ರಾ. ೫೯೭).

[ನಿಲ್ಪು (<ನೀಳ್ಪು) +-ಇಸು$_3$]

ನಿಲ್ಪು 'ನೀಳ್ಪು' ನೋ.

ನಿಲ್ಕೆ, ನಿಲಿಕೆ, ನಿಲಿಗೆ, ನಿಲ್ಗೆ (ನಾ). ೧. ನಿಲ್ಲುವಿಕೆ ; ನೆಲೆಗೊಳ್ಳುವಿಕೆ ; ನೆಲಸುವಿಕೆ : "ನಿಲವೆನೆ ನಿಲ್ಕೆಯೊಳ್" (ಕರ್ಣಾಸಿ. ೫೮); ನೀತಿಯ ನಿಲ್ಕೆ ಜಾನದ ನೆರಂ ಪಳವಾತಿನ ಗಾದೆ (ಸಂಸಪ. ೪-೧). ೨. (ಸಂಖ್ಯೆಯ) ನಿಲುಗಡೆ : ನಾಲ್ಕುತತ್ತ್ವದ ಸಿಡಿ ಮೂಱು ತತ್ತ್ವಗಳಲ್ಲಿ ಸಿಲ್ಕದಿರೆಂಬ ಶಿಕ್ಷಕರು ನಾಲ್ಕುಸಾವಿರದ ನೂಱೈವತ್ತುಯೆಂಬೊಂದು ನಿಲ್ಕೆಯೊಳಿಹರಲ್ಲಿ ಕೇಳು (ಭರತ. ೬೬-೬೯). **ನಿಲಿಕೆ : ೩.** ಶಾಶ್ವತವಾದುದು : ಬಾಗ್ವತ × × × ರುಗೂಡಿ ನಿಲಿಸಿದ ನಿಲಿಕೆಯ ಧರ್ಮ್ಮಕಾವನಾನೊರ್ಬ್ಬನರಸು ತಪ್ಪಿದಡೆ ಸಾಯಿರ ಕವಿಲೆಯ ಬಾಣರಾಸಿಯಲು ಅಳಿದ ದೋಸವು (ಎಕ. VI, ಮೂಡಗೆ. ೩೭-೧೩ ; 1154 ?). ೪. ಧಾನ್ಯವನ್ನು ಅಳೆಯುವಾಗ ಸೇರಿನಲ್ಲಿ ನಿಲ್ಲಿಸಿ ತುಂಬುವುದು : ನಾಗಂಡುಗದಲು ನಿಲಿಕೆ ಬತ್ತದ ಹಾನೆಯಲು (ಸೌಇವಿ. 1932, ಉಡುಪಿ. ೩೧೮-೨೩ ; 1293). 'ತೇಕೆ' ಪರಾ. **ನಿಲಿಗೆ: ೪.** ಶ್ರೀಕಳಸನಾಥದೇವರಿಗೆ ಮಾಡಿದ ಸೋಮವಾರದ ಧರ್ಮ್ಮ . . . ಸಂಕ್ರಮಣದ ನಿಲಿಗೆತ್ತಿಂಗಳು ಎಕ್ಕೆ ಸೋಮವಾರ ೧ಕ್ಕೆ ಅಮೃತ ಪಡಿ ಖ ೩ ೧/೨ (ಎಕ. VI, ಮೂಡಗೆ. ೪೦-೧೪; 1552). **ನಿಲ್ಗೆ : ೧.** ನಿಲ್ಕೆ, ನಿಲ್ಗೆ (ಶಬ್ದಾಸು. ೪೭೨ ಪ್ರಯೋ). [ನಿಲ್+-ಕೆ./ತುಳು.ನಿಲಿಕೆ]

ನಿಲ್ಗಡಿ (ನಾ). (ನೀರನ್ನು ತಡೆದು ನಿಲ್ಲಿಸುವ) ಏರಿ; ದಡ : ಮುರುತಜನ ಕಣ್ಬುರಿಗೆ ಗುಡಿಯಾಗಿ, ಕಡಲ ನೀರ್ನಡೆಗೆ ನಿಲ್‌ಗಡಿಯಾಗಿ . . . ಕುಳ್ತುದೆಲೆವನೆವಕ್ಕೆ (ಶ್ರೀರಾಮಾ. ೪೮೨-೨೧೨). [ನಿಲ್+ಗಡಿ$_1$]

ನಿಲ್ಗಲ್ಲು (ನಾ). (ಎತ್ತರವಾಗಿ) ನಿಂತಿರುವ ಕಲ್ಲು ; ಎತ್ತರವಾದ ಶಿಲೆ : ಆ ಪುರದ ಸೀಮೆ ಎನ್ತೆಂದಡೆ ಮೂಡಲು ಹೆನ್ಮಾಡಿಯ ಬಸದಿಯ ಕೆಯ್ಯ ಹಡುವಣ ನಿಲ್ಗಲ್ಲು ಮೇರೆ ತೆಂಕಲು ಭಗವತಿಯ ಕೆಯ್ಯ ಬಡಗಣ ಸೀಮೆ (ಎಕ. VII, ತೀರಾರಿ. ೧೨೩-೭೮; 1159).

[ನಿಲ್+ಕಲ್ಲು(<ಕಲ್$_3$)]

ನಿಲ್ಗೆ 'ನಿಲ್ಕೆ' ನೋ.

ನಿಲ್ದಾಣ (ನಾ). ೧. ಸ್ಥಿರವಾದ ಆವಾಸಸ್ಥಾನ ; ನೆಲೆ : ಆನಂದದ ನಿಲ್ದಾಣವೇ ಸೌಂದರ್ಯ (ಸೌಂದಸ. ೧೬). **೨.** ಪ್ರಯಾಣಿಕರು ಹತ್ತಿ ಇಳಿಯುವುದಕ್ಕೆ ಅವಕಾಶವಿರುವಂತೆ ವಾಹನಗಳು ನಿಲ್ಲುವ ಸ್ಥಳ ; ನಿಲ್ಮನೆ ; ಸ್ಟೇಷನ್ನು : ರೈಲುನಿಲ್ದಾಣದಲ್ಲಿ ನಿಂತು ಒಂದುದಿನ ಅಲ್ಲಿಗೆ ಬಂದ ಹೊಸಮುಖಗಳನ್ನೆಲ್ಲ ನೋಡಿದಾಗ ಯಾರಿಗೇ ಆಗಲಿ ಆ ಜನರ ಬಗ್ಗೆ ಯಾವ ಭಾವನೆಯೂ ಬರಲಾರದು (ಅಪನಾ. ೨೪೪); ನಿಲ್ದಾಣದಲ್ಲಿ ರೈಲು ಬಂದು ನಿಂತ ಕೂಡಲೇ . . . ಸಾಮಾನುಗಳನ್ನು ಗಾಡಿಯಲ್ಲಿಡಲು ಓಡಿಹೋದನು (ಸುಂದರ. ೧೦) ; ಪ್ರತಿಯೊಂದು ನಿಲ್ದಾಣದಲ್ಲಿಯೂ ಜೀವರುಗಳು ಬಂದು ನಿಂತು ಏನಾದರೂ ಸ್ವಲ್ಪ ವಿಕಾಸಪಡೆದು ಹೋಗುತ್ತಿರುತ್ತಾರೆ (ಜೀವಾತ್ಮ. ೨೫೬). [ನಿಲ್+ತಾಣ]

ನಿಲ್ನೀರು (ನಾ). ನಿಂತ ನೀರು ; ದಡದ ಬಳಿಯಿರುವ ನೀರು : ಲಕ್ಷ್ಮಣನದಂ ದಡದೆಡೆಯ ತೆಳ್ಳೆ ನಿಲ್‌ನೀರಿಂದೆ ಹರಿನೀರ್ಗೆ ನೂಂಕಿದನ್ ನೀಳ್ಗಳುಗಳಿಂ (ಶ್ರೀರಾಮಾ. ೧೩೯-೩೮೧). 'ಪರಿನೀರ್' ಪರಾ.

[ನಿಲ್+ನೀರು (<ನೀರ್$_1$)]

ನಿಲ್ಪು (ನಾ). ನಿಲ್ಲಿಸುವಿಕೆ ; ತಡೆ : ಕೋಡಿ ಗಂಗೆಯಾ ನಿಲ್ಪು ಮಾಡ[ಡಿ]ದೆಯೆಂದರವನಿಪನ ನುಡಿಗೇಳ್ದು ಬಲ್ಪಿನಿಂದೂರುವಂ ನಖದೊಳುಂ ಶೀಳ ಬಿಡೆ ವೊಲ್ಪಿನಿಂ ಜಾಹ್ನವಿಯೇಂ ನಿಶಾನಂದಕಾನನದಿ ನಡೆಗೊಂಡಳು (ಪರಶು. ೩೪-೨೨). [ನಿಲ್+-ಪು$_2$]

ನಿಲ್ಮನೆ, ನಿಲುಮನೆ, ನಿಲ್ಲುಮನೆ, ನಿಲ್ಲುವನೆ (ನಾ) ೧. ನಿಲ್ದಾಣ ೨. ದೇಶದ ಮೂಲೆಮೂಲೆಗಳಿಂದ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆಂದು ಬಂದ ದೇಶಭಕ್ತರು ನಿಲ್ಮನೆಯಲ್ಲಿ ನೆರೆದಿದ್ದಾರೆ (ಪ್ರಣಸ. ೨೩); ರೈಲು ನಿಲ್ಮನೆಯನ್ನು ಬಿಟ್ಟು ಒಂದು ಫರ್ಲಾಂಗು ಮುಂದೆ ಬಂದಿದೆ (ತೇಮೋಡ. ೬೫) ; ಇಲ್ಲಿದೋ ! ಗಂಧರ್ವಲೋಕಕಹಿ ಮುಗಿಲುಗಾಡಿ ! ಓಡುತಿದೆ ರೈಲಿಲ್ಲದೆ ! ಅದಕೆ ನಿಲ್ಮನೆಯಿಲ್ಲ ನಿಯಂತ್ರಕನಿಲ್ಲ (ದ್ಯಾವಾಪೃ. ೪೫-೧೫). **ನಿಲುಮನೆ : ೧.** ನೆಕ್ಲುದೋವ್ . . . ರೈಲ್ವೆ ನಿಲುಮನೆಯ ಕಡೆಗೆ ಹೊರಟನು (ಪುನರು. ೪೪೯); ಮನ್ನಾರ್‌ಪರ್ಯಾಯದ್ವೀಪದ ತುದಿಯಲ್ಲಿ ಸಿಲೋನ್ ಗವರ್ನ್‌ಮೆಂಟ್ ರೈಲ್ವೆ ತುದಿಯ ನಿಲುಮನೆಯಾದ ತಲೈಮನ್ನಾರ್ ಇದೆ (ಭೂವಿನ. ೪೦೪). **ನಿಲ್ಲುಮನೆ : ೧.** ಇಂದಿರಾ—ಜಯರಾಯರು ಪ್ರವಾಸಮಾಡಿ ಬೆಂಗಳೂರಿಗೆ ಮರಳಿ ಬಂದರು ; ಶ್ರೀಕಂಠನು ಅವರನ್ನು ಬರಮಾಡಲೆಂದು ನಿಲುಮನೆಗೆ ಹೋಗಿದ್ದನು (ಇಂದಿಕೆ. ೨೪). **ನಿಲ್ಲುವನೆ : ೨.** ನೆಲೆ ; ನೆಲೆವೀಡು : ಈ ಪ್ರತೀತಜೀವನಪರ್ವತದ ಉತ್ತುಂಗಶಿಖರದಲ್ಲಿ ಆತ್ಮವಿದ್ಯೆಯ ನಿಲ್ಲುವನೆಯಿದೆ(ಸಾಜಿವಿ. ೫೩).

[ನಿಲ್+ಮನೆ]

ನಿಲ್ಮಾನಸ (ನಾ). ನಿಂತಿರುವ ಮನುಷ್ಯ : ನಿಲ್ಮಾನಸನೆಂಬರೆ ನಿಲ್ವಲ್ಮೀಕೋರಗನನಪ್ರತೀಕಾರಶ್ರೀ ಗುಲ್ಮವ್ಯಾಧಿಯನೀ ವನಶಾಲ್ಮಲಿಯಂ ಲುಬ್ಧನೆಂಬ ಗೃಹಲುಬ್ಧಕನಂ (ಲೀಲಾವ. ೧-೪೭).

[ನಿಲ್+ಮಾನಸ$_1$]

ನಿಲ್ಲಿಸು 'ನಿಲಿಸು' ನೋ.

ನಿಲ್ಲು 'ನಿಲ್' ನೋ.

ನಿಲ್ಲುಮನೆ 'ನಿಲ್ಮನೆ' ನೋ.

ನಿಲ್ಲುವನೆ 'ನಿಲ್ಕನೆ' ನೋ.

ನಿಲ್ಲೆಡೆ (ನಾ). ೧. ರೈಲು ಮುಂತಾದ ವಾಹನಗಳು ನಿಲ್ಲುವ ಸ್ಥಳ : "ಸ್ಥಳೀಯ ಅನುಕೂಲಕ್ಕಾಗಿ (ಕಟ್ಟಡ, ಮೊ.ಗಳಿಲ್ಲದ) ರೈಲ್ವೆಯ ನಿಲ್ಲೆಡೆ" (Halt. ಇಂಕಾ). ೨. ತಾತ್ಕಾಲಿಕವಾಗಿ ತಂಗುವ ಸ್ಥಳ; ಬಿಡಾರ ಮಾಡುವ ಸ್ಥಳ : "(ದಾರಿಯಲ್ಲಿ)ನಿಲ್ಲೆಡೆ, ನಿಲ್ದಾಣ, ಮಜಲು, ಟಪ್ಪಾ ; ಎರಡು ಮಜಲುಗಳ ನಡುವಣ ದೂರ" (Stage. ಇಂಕಾ). [ನಿಲ್+ಎಡೆ$_3$]

ನಿವಟ (?). (?) : ಧರ್ಮಾನುನೆ ಮುಖ್ಯಮಾಡಿದತ್ತ ನಾಳುವ ದೇಶ ಹಳ್ಳಿವುರ ನಿವಟ ಹಿರಿಯ ಕಬ್ಬಾಡಿಗಳು (ಕಾ. IV, ೩೮–೪೬; 1187).

[?]

ನಿವಡ (ನಾ). ಅಯ್ಕೆ ; ಆರಿಸುವಿಕೆ : ನಿವಡ ಏನು ಹರಕತ್ತ ಇಲ್ಲ ಅಂಧಾಂಗಾತು (ದೀಪಹ. I, ೧೩೧); ನಿನ್ನ ಯಜಮಾನರ ನಿವಡ ಏನು ಹರಕತ್ತ ಇಲ್ಲ ಅನ್ನು (ದೀಪಹ. II, ೩೨).

[←ಮರಾ. ನಿವಡ. / ಪ್ರಾ. ಣಾವ್ವಡ = ಆರಿಸಿದ]

ನಿವಡಿಕೆ (ನಾ). ಅಯ್ಕೆಮಾಡಿ ಅಳವಡಿಸಿದ ಶೈಲಿ; ಉತ್ತಮವಾದ ಜೋಡಣೆ : ವಿಧಿ ಮುಂಬಗೆದು ನಿನ್ನುದಯಂ ಚನ್ನೆಯಿವಳಿಗೆ ಮೂರನೆಯ ಮೊಲೆಯನ್ನವಾಯಿಸಲದರಿನೊದವಿದ ವಿನ್ನಣಮಿದೇಂ ನಿನ್ನ ನುಡಿಯ ನವೀನನಿವಡಿಕೆಗೆ ? (ಗಿಳಿವಿಂ. ೯೬–೫); "ವಿಶಿಷ್ಟತೆ; ಪ್ರಸಿದ್ಧಿ" (ಗಿಳಿವಿಂ. ಟಿಪ್ಪಣಿ). [ನಿವಡ+–ಇಕೆ]

ನಿವಡಿಸಾರೆ. (ನಾ). ಮಲ್ಲಯುದ್ಧದ ಒಂದು ಪಟ್ಟು : ಲವುಡಿಸಾರದ ಲೌಕಿ ಗಳಹತ್ತದಲಿ ಮುಟ್ಟಿಸುವ ಬವರಿವರಿದುಪ್ಪರಿಸಿ ಲಂಘಿಸಿ ನಿವಡಿಸಾರದಲೆಜಿಗಿ ಜಾಜುವ ಜವಳಿವಿನ್ನಾಣದಲಿ ಕಾದಿದರೊಬ್ಬರೊಬ್ಬರಲಿ (ಆಕ್ರೋಜ. ೭–೬೫). [?]

ನಿವಡಿಸು (ಕ್ರಿ). ೧. ಆಯ್ಕೆಮಾಡು ; ಗೊತ್ತುಮಾಡು : ನಿವಡಿಸಿದ ಸುಮುಹೂರ್ತದಲಿ ವೈಭವದೊಳಾಯ್ತುಭಿಷೇಕವಾ ರಾಜೇಂದ್ರಶರಣಂಗೆ (ತೊರಠಾ. ೬–೩–೩೯); ಅವನಿಗಿಳಿದನು ಕುಸುಮಮಿಯತುಭೂಪಾಲನವನಿಂದ ನಿವಡಿಸಿದವಖಿಳಾವನೀರುಹ ನವವಿಧದಿ ನೆರೆ ಹೂತು ಕಾತಿಹ ನರವಿಚಿತ್ರವ ನೋಡಲಚ್ಚರಿಯಾಗಿ ತೋರುವುದು (ಕೋಗಯ. ೩–೫೪). ೨. ಎದ್ದು ಕಾಣು ; ಪ್ರಮುಖವಾಗಿ ತೋರು ; ಸ್ಫುಟವಾಗು : ಕವಿ ಗಮಕಿ ವಾದಿ ವಾಗ್ಮಿಕಮಾಗತೇಯರುಂ ನಿವಡಿಸಿದ ಸಿದ್ಧ ಪ್ರಸಿದ್ಧ ಕೋವಿದರುಗಳು . . . ಶಿಷ್ಟರಗಣತರುವೊಪ್ಪೆ (ಲಕಚಂ. ೩೧–೩೮); ಬಿಸುಟಳೊದಜುತ ಶೂರ್ಪನಖಿ ನಿವಡಿಸಿದ ಕಟ್ಟುಭಮಾನ ವಿಲಸಿತ ಬೆಸುಗೆಗಳಚಿದ ನಾಸಿಕವ ನಿದಿರಲಿ ಖರಾಸುರನೆ (ತೊರಠಾ. ೩–೫–೩) ; ನೀವ್ ಕ್ಷತ್ರಿಯರು ಮಾಗಧನ ನಿವಡಿಸಿದ ರಣದಲ್ಲಿ ನಿಲ್ಲದೆಯವನಿಯಲಿ ಚೌಶೀತಿದುರ್ಗದ ಗವಿಗಳೊಳ್ ಹೊಕ್ಕಡಗಿ ಜೀವಿಸಿದವರಹುದು (ಕೋಗಯ. ೨೨–೩೩). ೩. ಪಡೆ ; ಹೊಂದು : ನವರತುನಮಣಿಮಯದ ಪುಷ್ಪಕದೊಳನಬರುಂ ನಿವಡಿಸಿದ ನರದಿವ್ಯಮಂಗಳಶರೀರದಿಂ ಕವಿವ ಸೂರ್ಯಪ್ರಭೆಯನೇಳಿಸುವ ಕಾಂತಿಯಿಂ (ಲಕಚಂ. ೪೦–೪೦) ; ನಿವಡಿಸಿದ ವಿದ್ಯಕ್ಕೆ ಸಮಬಂಧುವನು ರೋಗಾವಳಿಗೆ ಸಮಶತ್ರುವನು ಸಂತಾನಕ್ಕೆ ಸಮಸಂತೋಷದುದಯವನು . . . ಕಾಣೆ ನಾನು (ಕುವಾಳು. ೩–೩೩). ೪. ನೆರವೇರಿಸು; ಈಡೇರಿಸು : ತಿನಿಯಮಂ ಮಾಳ್ಪರ ಲವಲವಿಕೆಯಿಂ ಸದಾ ಸೇವೆಯಂ ಮಾಡಲಾತವಕದಿಂ ಮೆಚ್ಚಿ ವರವೀವೆನವರಿಷ್ಟಮಂ ನಿವಡಿಸಿದ ಬುದ್ಧಿ ನಿಮಗೆಂದನು (ಲಕಚಂ. ೭–೧೪). ೫. ನಿರ್ಣಯ ಕೊಡು ; ತೀರ್ಮಾನಿಸು ; ನಿರ್ಧರಿಸು : ರವಿಕುಲೇಂದ್ರನ ಚಿತ್ತ ವೃತ್ತಿಯ ಹವಣಜುದು ಬಳಕಾ ಭವಾನಿಯ ನಿವಡಿಸಿದ ನುಡಿಗಗ್ನಿದೇವರು ನಡುಗಿ ದೇವಿಯರ ದಿವಿಜತತಿ ಜಯಯೆನಲು ತಂದರು . . . ಪೂರ್ಣಗೋವಿನಿಯ (ತೊರಠಾ. ೬–೫೩–೨೯). ೬. ಆವರಿಸು ; ಕವಿ : ದಿವದೊಳವನೀಜನಂ ವ್ಯಾಪ್ತಿ ಹಲವಂ ಬಳಸಿ ನಿವಡಿಸಿದ ನಿದ್ರೆಯಿಂ ರಾತ್ರಿವಿಶ್ರಾಂತಿಯಂ ಹವಣಿಸಿದ ತೆರದಿ ಭವಭವದಿ ಬಹರೆಂಬವನ ಚರಣಾಂಬುಜಕ್ಕೆ ಶರಣು (ಲಕಚಂ. ೨೫–೪). ೭. ಬೀಸು; ಎಸೆ: ವಿಪ್ರನ ಕುವರನನು ತಹೆನೆಂದು ನಚೆಯಲ್ಲಿಪನು ವನ ಮಧ್ಯದಲಿ ಪುಷ್ಪಂಗಳನು ಕೊಯ್ತುತಿರೆ ತವಕದಲಿ ಕಂಡಾಗ ಪಾಶವ ನಿವಡಿಸಲು ಹೆರೆದೆಗೆದು ನಿಕ್ಕದೆ ಭವನ ಭವನವ ಪೊಗಲು ಬೆಂಟ್ತಿದೆವು ಬಿಡದವನ (ಅಂಬಿಕಾ. ೪–೪೯). ೮. ಒದಗು; ಉಂಟಾಗು ; ಸಂಭವಿಸು : ಬವರ ಬಲಿದುದು ಬಳಿಕ ಕಲಿಜಾಂಬವನೊಳಗ್ಗದ ವೀರಕುಂಭಗೆ ಪವನ ಸುತ ಕುಂಭೋದರಂಗಾ ವಾಲಿಸುತನೊಡನೆ ನಿವಡಿಸಿತ್ತು ನರಾಂತಕಂ ಗುತ್ಸವದ ರಣವು (ತೊರಠಾ. ೬–೧೯–೪೧). ೯. ಸಂತೋಷಪಡಿಸು ; ಮೆಚ್ಚಿಸು : ವರರತ್ನಖಚಿತಮಂಚದೊಳ್ ಕುಳ್ಳಿರ್ದು ನವಯುವತಿ ನೃಪನೋರ್ವರೋರ್ವರ್ ನವಿನುದಿಯ ಬೀರಿ ನಿವಡಿಸುತ ತಾಂಬೂಲಮಂ ನವಿವುತ (ಯಶ್ಕಾಂಗ. ೧೫–೨೮). ೧೦. ರಚಿಸು ; ನಿರ್ಮಿಸು : ರವಿತನೂಭವನಾಜ್ಞೆಯಲಿ ನಳ ನಿವಡಿಸಿದ ಸಾಳೆಯವನಾ ಸಿಂಧುವಿಗೆ ಶ್ರುತಿ ಸಿಂಧುವೆನೆ ಬಳಸಿತು ಮೂರು ವಲಯದಲಿ (ಅಸಂಂತಾ. ೫–೧–೧೮); ನವರುಚಿರ ಸಿಲೆ ಪಚ್ಚೆ ನಿಚ್ಚಳ ವಿವಿಧಕೆಲಸದ ಟಾಳುವಿನಾಟನ ಕವಕವಿಪ ಕಾಂತಿಗಳೊಳೊಪ್ಪಿಹ ಕಲಶಗೋಪುರದ ನವರತುನಪ್ರೊಂಗಂಟಿಕದಗಳು ನಿವಡಿಸಿದ ನೆಲೆಗಟ್ಟು ತೋರಣಂ (ಅಂಬಿಕಾ. ೩–೩೬).

[ನಿವಡ + –ಇಸು$_3$]

ನಿವರ್ತಕ (ಗು). ೧. ಮುಗಿಸುವ ; ಪೂರೈಸುವ. ೨. ಹಿಂದಿರುಗುವ ; ಮರಳುವ. ೩. ವಿಮುಖವಾಗುವ ; ಹಿಂಜರಿಯುವ. ೪. ವಿಮುಖಗೊಳಿಸುವ ; ಪ್ರವರ್ತಿಸದಂತೆ ಮಾಡುವ. 'ನಿವರ್ತಕಧರ್ಮ' ಪರಾ. (ನಾ). ೫. ನಿವೃತ್ತಿಮಾರ್ಗವನ್ನು ಅನುಸರಿಸುವವನು : ಆದಿಶಿವಸಂಸ್ಕಾರದಾತನು ಮೇದಿನಿಯೊಳು ನಿವರ್ತಕ ಶ್ರುತಿ ವೇದಿತಾರ್ಥ ಚರಿತೆಗಳರುತಿರೆ ಮೊನ್ನೆ ಹುಟ್ಟಿರ್ದ ಆ ಕುಲಂಗಳ ಮಾತವೇತಕೆ (ಬಸಪು. ೫೫–೧೯). [ಸಂ.]

ನಿವರ್ತಕಧರ್ಮ (ನಾ). ನಿವೃತ್ತಿಯನ್ನು ಬೋಧಿಸುವ ಧರ್ಮ ; ಇಹ, ಪರಲೋಕಗಳ ಸುಖಕ್ಕಾಗಿ ಮಾಡುವ ಕರ್ಮಾನುಷ್ಠಾನದಿಂದ ವಿಮುಖಗೊಳಿಸುವ ಧರ್ಮ ; ವೈರಾಗ್ಯವನ್ನು ಬೋಧಿಸುವ ಧರ್ಮ : ನಾವು ಭಾರತೀಯಸಂಸ್ಕೃತಿಯನ್ನು ನಿರೀಕ್ಷಿಸಿದಾಗ, ಆತ್ಮವಾದಿದರ್ಶನಗಳಲ್ಲಿ ವಿನಾಮಾಂಸಕದರ್ಶನವೊಂದನ್ನು ಬಿಟ್ಟು ಉಳಿದೆಲ್ಲ ದರ್ಶನಗಳೂ ನಿವರ್ತಕಧರ್ಮವಾದಿಗಳಾಗಿವೆ (ಜೈಸಸ. ೫೧೭).

[ನಿವರ್ತಕ + ಧರ್ಮ]

ನಿವರ್ತನ (ನಾ). ೧. ನೆರವೇರಿಸುವಿಕೆ ; ಪೂರೈಸುವಿಕೆ. ೨. ಹಿಂದಕ್ಕೆ ತಿರುಗುವಿಕೆ ; ಹಿಂದಿರುಗುವಿಕೆ ; ಮರಳುವಿಕೆ ; ವಾಪಸ್ಸು ಬರುವಿಕೆ. ೩. ಆಗದಿರುವಿಕೆ ; ಸಂಭವಿಸದಿರುವಿಕೆ ; ನಿಲ್ಲುವಿಕೆ. ೪. ದೂರ ಉಳಿಯುವಿಕೆ ; ಪ್ರವರ್ತಿಸದಿರುವಿಕೆ ; ನಿವೃತ್ತಿ. ೫. ಪಶ್ಚಾತ್ತಾಪ ಪಡುವಿಕೆ. ೬. ಹಿಂದಿರುಗಿಸುವಿಕೆ ; ಮರಳಿಸುವಿಕೆ. ೭. ಮಲ್ಲಯುದ್ಧದಲ್ಲಿ ಒಂದು ಕ್ರಮ,—ಭಂಗಿ ; ಹಿಂದಕ್ಕೆ ಹೋಗಿ ತಪ್ಪಿಸಿಕೊಳ್ಳುವ ಒಂದು ವರಸೆ : ನಿವರ್ತನಾವರ್ತನ ಭ್ರಮಣ ವಲ್ಗನ ಪ್ಲವನಾವಸ್ಥಾನಾದಿ ಕ್ರಿಯಾಪರಿಣತಂ (ಜಾಪುಂಪು. ೩೪೧). ೮. ಹಿಡಿಯುವಿಕೆ : 'ತಾಳ ನಿವರ್ತನ' ಪರಾ. ೯. ಭೂಮಿಯನ್ನು ಅಳೆಯುವ ಒಂದು ಪ್ರಮಾಣ ; ಸುಮಾರು ಐದು ಎಕರೆ : ರಾಜಮಾನೇನ ಮಾನೇನ ಕ್ಷೇತ್ರಮೇಕನಿವರ್ತನಂ (ಮೈಆರಿ. ೧೯೩೩, ೧–೧೪ ; ಸು. 530) ; ರಾಜ ಮಾನೇನ ಶತಾರ್ಧ ನಿವರ್ತನಪ್ರಮಾಣಕ್ಷೇತ್ರಂ ಸರ್ವಬಾಧಾಪರಿಹಾರಂ

ದತ್ತಂ (ಸೌಇಇ. XX, ೭-೧೬ ; 735) ; ಅಲ್ಲಿ ದೀಪಗಳನ್ನುರಿಸಲು ಹನ್ನೆರಡು ನಿವರ್ತನಗಳಪ್ಪು (ಸುಮಾರು ಅರವತ್ತು ಎಕರೆ ?) ಭೂಮಿಯನ್ನು ಬಿಟ್ಟುಕೊಟ್ಟಿದ್ದರು (ಕಶಾಅ. ೨೧೯). ೧೦. ಚಿಕ್ಕದಾಗುವಿಕೆ ; ಆಕುಂಚನ ; ಸಂಕೋಚವಾಗುವಿಕೆ : ವಸ್ತುತಃ, ವಿಶ್ವದ ಆಕುಂಚನ—ವಿಕಾಸಗಳ ಇಲ್ಲವೆ ನಿವರ್ತನ—ವಿವರ್ತನ (Involution and evolution)ಗಳ ಪೂರ್ಣವಿಧಾನವೊಂದು ಪರಮಾತ್ಮನ ನಿತ್ಯಯೋಗವೇ ಆಗಿವೆ (ಪುಹಾಯೋ. ೧೮೪). [ಸಂ.]

ನಿವರ್ತನೆ (ನಾ). ಕುದುರೆಸವಾರಿಯಲ್ಲಿ ಒಂದು ಬಗೆ ; ಕುದುರೆಯನ್ನು ಹಿಂದಕ್ಕೆ ಬರುವಂತೆ ಮಾಡುವಿಕೆ : ಪಸುಗೆ ನೆಲಂ ಜಲಂ ಹಯದೊಡಂಬಡು ವಂಜನೆ ಕೇಣಮಾಸನಂ ಕೊಸೆ ದೆಸೆ ದಿಟ್ಟಿ ಮುಟ್ಟಿ ಕೆಲಜಂಕೆ ನಿವರ್ತನೆ ಕಾಣ್ಕೆ ಪರ್ದಿದೇರ್ವೆಸನದೊಳಾದ ಬಲ್ಮೆಯೊಳೊಡಂಬಡೆ ತತ್ತಿಱಱಲ್ಲಿ ಮಿಂಚಿನೊಳ್ ಮುಸುಕಿದ ಮಾಟ್ಕೆಯಾಯ್ತು ಸಮರಾಂಗಣ ಮುಳ್ಳುವ ಬಾಳ್ಗಳುಳ್ಕದಿಂ (ಸಂಪಭಾ.೧೦-೭೭) ; "ಹಿಂದಿರುಗುವಿಕೆ" (ಪಂಪನಿ) ; "ಮರುಳುವುದು" (ಪಂಪದೀ. ೩೬೬) ; ದಾರೆ ಗತಿ ಲಯ ಪೊಯ್ದು ಕಾಯಕ್ಷಂ ತಿತಿಕ್ಷೆ ಪಿತನೆರಿತುರ(ಗ ?) ಸಮಾನಂ ಭಾರಿ ಕೊಸಿ ಮುಷ್ಟಿಭಾಗಂ ವ್ಯೂಹಂ ನಿವರ್ತನೆ ಪದಂ ಯತಿ ಗಾತ್ರವೆ ವಿಮಾರ್ಗಂ . . . ವಹಳಿ ಸತ್ಯಂ ದಾರಿಮೆಂಬ ಭೇದಂಗಳಿಂದಶ್ವಮನೇಱಲು ರೇಟಿಗ ನೃಪತಿ ತಾನೆ ಬಲ್ಲಂ (ಮದತಿ. ೧-೨೧). [ಸಂ. ನಿವರ್ತನ]

ನಿವರ್ತಿ (ನಾ). ನಿವೃತ್ತಿ ; ನಿವಾರಣೆ : ಶಿವಭಕ್ತಿಯುಕ್ತರಾದ ಮೂರ್ತಿನಾಥರ ಕೈಂಕರ್ಯವನ್ನು ನಿವರ್ತಿ ಮಾಡಿಸಲೋಸುಗ ಕರ್ನಾಟಕಜೈನ ರಾಜನು ಎಲ್ಲಿಯೂ ಯಾರೂ ಚಂದನಕಟ್ಟಿಗೆಯನ್ನು ಕೊಡಕೂಡದೆಂದು ಆಜ್ಞಾಪಿಸಿದನು (ಪುರಾವಿ. ೯೮). [<ಸಂ. ನಿವೃತ್ತಿ]

ನಿವರ್ತಿತ (ಗು). ೧. ಹಿಂದಕ್ಕೆ ತಿರುಗಿದ ; ವಿಮುಖವಾದ. (ನಾ). ೨. [ನಾಟ್ಯ] ತೊಡೆಯ ಐದು ಭಂಗಿಗಳಲ್ಲಿ ಒಂದು ; "ಹಿಮ್ಮಡಿಗಳೆರಡನ್ನೂ ಸೇರಿಸಿ ಅಡಿಗಳನ್ನು ಅಡ್ಡಲಾಗಿಡುವುದು. ಸಂಭ್ರಮದಿಂದ ಸುತ್ತುವಾಗ ಇದನ್ನು ವಿನಿಯೋಗಿಸಬೇಕು" (ಲಾಸ್ಯರಂ. ೨೬೩ ಗದ್ಯಾನುವಾದ) : ಸಲೆ ಕಂಪಿತಮುಂ ವಲಿತಮು ಮೊಲವಿಂ ಸ್ತಬ್ಧಂ ಪೊಗಳ್ದವುದ್ವರ್ತಿತಮುಂ ವಿಲಸನ್ನಿವರ್ತಿತಮುಂ ಲಲನೆ ಕೇಳ್ ತೊಡೆಗೆ ಭೇದವೈದೆನಿಸರ್ಕುಂ (ಲಾಸ್ಯರಂ. ೨-೧೩೮). [ಸಂ.]

ನಿವರ್ತಿಸು (ಕ್ರಿ). ೧. ನಿವಾರಿಸು ; ಪರಿಹರಿಸು ; ದೂರಮಾಡು: ಅನಂಗನೆಂಬ ದುರಾಚಾರನಂ ನಿವರ್ತಿಸಲ್ವೇಟ್ಟುಂ (ಕಾದಂಪೂ. ೮೪೮). ೨. ಓಡಿಹೋಗು ; ಮರೆಯಾಗು ; ಇಲ್ಲವಾಗು : ದೆಸೆಯಿಂ ಕಾಳಿಗೆ ತೂಳ್ದು ಪೋಗೆ ನಭದಿಂ ದೇವೇಂದ್ರಚಾಪಂ ನಿವರ್ತಿಸೆ . . . ಕಣ್ಗೆಸೆದಿರ್ದತ್ತು ವಿನಿರ್ಮಳಪ್ರಕೃತಿರೋದಂ ಕಾರದಂ ಶಾರದಂ (ಪರ್ಧಮಾ. ೯-೪೮). [ನಿವರ್ತನ+-ಇಸು$_5$]

ನಿವರ್ಹಣ (ನಾ). ನಾಶಮಾಡುವಿಕೆ ; ಧ್ವಂಸಗೊಳಿಸುವಿಕೆ. [ಸಂ.]

ನಿವಸ (ನಾ). ವಾಸಸ್ಥಾನ ; ಮನೆ ; ನಿವಾಸ : ಆರೆಲವೊ ನೀವಿದ ಱೊಳಗೆ ನಿರ್ಮೈರ ವೈಷ್ಣವನಿವಸದೊಳು ದುರ್ವಾರ ದುರಿತಾತ್ಮಕರು (ನಿಭಾಗ. ೬-೫-೧೪). [<ಸಂ. ನಿವಾಸ]

ನಿವಸತಿ (ನಾ). = ನಿವಸ : ಓರ್ವ ಸಿದ್ಧನಿಹ ನಿವಸತಿಯ ಮುಂದೆ ಭಿಕ್ಷಾಎನಲು ಘೋರತರ ವಿಷವ ತಂದೆಱೆಯಲು (ಗುರುಚಾ. ೬-೬) ; ನಿವಸತಿಯಂ ತೇಗುಮರಂ ಕವಿದೆಡೆಯೊಳ್ ಮಾಡಿಕೊಂಡ ಕಾರಣದಿಂದಂ ಅವರೇ ಶಾಕ್ಯರೆನಿಪ್ಪರುಮವನಿಯೊಳಿಕ್ಷ್ವಾಕುವಂಶ್ಯರಾಗಿರೆಯುಂ ತಾಂ (ಸೌನಂದ. ೧-೨೪). [ಸಂ.]

ನಿವಸನ (ನಾ). ೧. = ನಿವಸ : ಆವಾಸಃ, [ಅ]ವಸಥಂ, ಗೃಹಂ . . . ಅಗಾರಂ, ನಿವಸನಂ, ಆಲಯಃ—ಈ ೩೧ ಮನೆ" (ಹಲಾಯು. ೪೯-೧೩೭). ೨. ಉಡುಪು ; ಬಟ್ಟೆ ; ವಸ್ತ್ರ : "ಉಪಸಂವ್ಯಾನಂ, ಪರಿಧಾನಂ, ಅಂತರೀಯಂ, ನಿವಸನಂ—ಈ ೪ ಉಟ್ಟುದು" (ಹಲಾಯು. ೯೦-೩೯೨) ; ಶಿಲಾಸ್ತಂಭವಿಭ್ರಮನಿತಂಬಶಿಖರತರಂಗಿತಚತುರಂಗುಳಾಗ್ರ ಪಲ್ಲವನಿವಸನಂ (ಆದಿಪು. ೧೩-೪೫ ಪ) ; ಖಳನ ಗದಾಯುಧದ ಗಾಡಿಕೆಗೆ ದೈತ್ಯನಿಕಾಯ ನಿರುಪಮನಿವಸನವನು ನಿವಾಳಿಸಿತು ರಣಕೆ (ತೊರಂರಾ. ೬-೧೪-೧೮). ೩. ಒಳ ಉಡುಪು. [ಸಂ.]

ನಿವಹ (ಗು). ೧. ಉಂಟುಮಾಡುವ ; ತರುವ. (ನಾ). ೨. ತಂಡ ; ಗುಂಪು ; ಸಮೂಹ : "ನಿಕುರುಂಬಂ ನಿವಹಂ ವ್ರಜಂ ಸಮುದಯಂ ಬೃಂದಂ ನಿಕಾಯಂ . . . ಸಮೂಹಂ ವ್ರಾತಮೇ ಕಾರ್ಥಕಂ" (ವಸ್ತುಕೋ. ೧೦೨-೨೬) ; ಪ್ರತಿಮೆಗಳಟ್ಟುವು . . . ಭೂತ ಪ್ರತತಿಗಳಾಡಿದುವೊಳಱುದುವತಿರಮ್ಯಸ್ಥಾನದೊಳ್ ಶಿವಾನಿವಹಂಗಳ್ (ಪಂಪಭಾ. ೧-೧೩೨) ; ಸತ್ಯವಿನಿವಹಂ ಪೊಗಟೆ ಚಮತ್ಕೃತಿಯಂ ಪಡೆದು ಸೊಬಗುವಡೆದತ್ತು (ಕಾದಂಪೂ. ೫) ; ಸಕರಣೇಂದ್ರಿಯನಿವಹವರ್ಕನ ಕೂಡೆ ರಶ್ಮಿಗಳಸ್ತವಿಸಿದಂತೆ ಶಿವನೊಳಸ್ತವಿಸಲು (ಬಸಪು. ೩೫-೬) ; ಅವಯವದೊಳು ಗಂಧವಡೆದ ಚಂದನವೃಕ್ಷನಿವಹವೊಪ್ಪಿರ್ದುದಾ ವನದಿ (ಮೋಹತ. ೨೪-೫೦). ೩. ಸಪ್ತವಾಯುಗಳಲ್ಲಿ ಒಂದು. ೪. ಅಗ್ನಿಯ ಏಳು ಜ್ವಾಲೆಗಳಲ್ಲಿ ಒಂದು. ೫. ಕೊಲೆ ; ವಧೆ. [ಸಂ.]

ನಿವಳ$_1$, ನಿವ್ವಳ (ಗು). ೧. ಒಳ್ಳೆಯ ; ಉತ್ತಮವಾದ ; ಹದವಾದ: ಬಿಳಿಯ ತಿಲ ನಿವಳ ತಂಡುಲ ತಿಳಿಗೋದುಮೆ ಚಣಕದೊಡಕುಮುದ್ದಿನ ವಿದಳಂ ಮಿಳಿತಮಾದಕ್ಷತೆಯ ಕರನಳಿನಸ್ಥಳದಿಷ್ಟಲಿಂಗದ ಪಣಿಗಾಂ ನೀಡುವೆಂ (ಮೈಲಾರ. ೨೧೩-೪೧) ; ಹವಳ ಮಲ್ಲಿಗೆ ನಿವಳ ಪತ್ತರಿ ಹಳಕಟ್ಟೆ ವೀರಭದ್ರನಿಗೆ (ಕಜಾಗೀ. ೪೪). (ನಾ). ೨. ಚೆಲುವಾದುದು ; ಅಂದವಾದುದು : ಏನವಳ ಚಿತ್ತರದ ಚೆಲುವು ! ಮುಪ್ಪಿರದ ಒಲವು ! ಇದು ಹವಳ ಇದು ನಿವಳ (ದ್ಯಾವಾಪೃ. ೪೮-೧೧). **ನಿವ್ವಳ** : (ಗು). ೩. (ಖರ್ಚನ್ನು ಕಳೆದ ಬಳಿಕ) ಉಳಿಯುವ; ಉಳಿತಾಯವಾಗುವ : ಆ ಹಣದ ಜೊತೆಗೆ ಬ್ಯಾಂಕುಗಳವರು ಹೊಸದಾಗಿ ನಿರ್ಮಾಣ ಮಾಡಿದ ಡಿಪಾಸಿಟ್ ಮೊಬಲಗೂ ವಿಶೇಷವಾಗಿ ಅವರ ಚಾಲ್ತಿ ಡಿಪಾಸಿಟ್ಟು ಮಾಡಿರುವ ಒಟ್ಟು ನಿವ್ವಳ ಕೆಲಸದ ಮೊತ್ತವೂ ಸೇರುವುವು (ಹಣಪ್ರ. ೬೬).

ನಿವ್ವಳ ಆದಾಯ = ಖರ್ಚು ಕಳೆದು ಉಳಿಯುವ ಲಾಭ : ಇದೀ ಇಂಡಿಯಾದಿಂದ ನಮಗೆ ಬರುವ ನಿವ್ವಳ ಆದಾಯ ೧೫೪೯೧೩ ಪೌಂಡುಗಳು (ಪ್ರಪಾಇ. II, ೪೮೫). **ನಿವ್ವಳ ಉತ್ಪತ್ತಿ** = ನಿವ್ವಳ ಆದಾಯ : ಅಂಥ ಯಾವುದಾದರೂ ಕರದ ನಿವ್ವಳ ಉತ್ಪತ್ತಿಯ ಪೈಕಿ, ಗೊತ್ತುಮಾಡಬಹುದಾದಷ್ಟು ಸೇಕಡಾವಾರು ಮೊಬಲಗು . . . ಭಾರತದ ಸಂಚಿತನಿಧಿಗೆ ಸೇರತಕ್ಕುದಲ್ಲ (ಭಾಧಾನಿ. ೧೫೩). **ನಿವ್ವಳ ನಫೆ** = ನಿವ್ವಳ ಆದಾಯ : "ವೆಚ್ಚ ಕಳೆದುಳಿದ ನಿಜವಾದ ಲಾಭ; ನಿವ್ವಳ ನಫೆ" (Net-Profit. ಇಂಕನಿ). **ನಿವ್ವಳ ಲಾಭ** = ನಿವ್ವಳ ಆದಾಯ : ಪ್ರತಿವರ್ಷವೂ ಕಂಪೆನಿಗೆ ಲಕ್ಷಾಂತರ ರೂಪಾಯಿಗಳ ನಿವ್ವಳ ಲಾಭ ಬರುತ್ತದೆ (ಭಾಗೃತಿ. ೧೨೮). **ನಿವ್ವಳ ಹುಟ್ಟುವಳಿ** = ನಿವ್ವಳ ಆದಾಯ : ಕೆಲವು ಕರಗಳ ಮತ್ತು ಶುಲ್ಕಗಳ ನಿವ್ವಳ ಹುಟ್ಟುವಳಿಯನ್ನು ಪೂರ್ತಿಯಾಗಿ . . . ರಾಜ್ಯಗಳಿಗೆ ಹಂಚುವುದಕ್ಕೆ ಸಂಬಂಧಪಟ್ಟ ಈ ಆಧ್ಯಾಯದ ಉಪಬಂಧಗಳಿಗೆ ಒಳಪಟ್ಟು . . . ಒಂದು ನಿಧಿಯಾಗಿ ಏರ್ಪಡತಕ್ಕುದು (ಭಾಧಾನಿ. ೧೫೦). [←ಮರಾ. ನಿವಳ]

ನಿವಳ$_2$ 'ನಿರ್ಮಳಿ' ನೋ.

ನಿವಳಿ₁ 'ನಿರ್ಮಳಿ' ನೋ.

ನಿವಳಿ₂ (ನಾ). ಸುತ್ತಾಡುವಿಕೆ : ಆ ಮಾಯದಶ್ವವನು ತಂದು ತೋಱಿ ನೃಪಾಲನದನಾನಂದದಿಂದಿರದೇಱಲೊಡನಲ್ಲಿಂದ ನಿವಳಿಯ ನೆವದೆ ಗಗನಕ್ಕೊಯ್ದುದದು (ಕುಮುಬಾ. ೩-೬೪). [?]

ನಿವಳಿತ (ಗು). (ಮುಂಡಲಾಕಾರವಾಗಿ) ಎತ್ತಿದ ; ಚಲಿಸಿದ : ಲಲನಾನಿಕಾಯನಿವಳಿತನೀರಾಜನದೀಪಕಳಿಕಾಪ್ರತಿಫಳಿತಮೌಳಿಮಾಣಿಕ್ಯನುಂ . . . ಆಗಿ (ಚಂದ್ರಪ್ರ. ೮-೨೪ ಪ). [ಸಂ. ನಿವಲಿತ]

ನಿವಳಿವಟ್ಟೆ, ನಿವಾಳಿವಟ್ಟೆ, ನಿವಾಳಿವಟ್ಟು, ನೀವಳಿವಟ್ಟೆ (ನಾ). ಸಂಪೂರ್ಣನಾಶ ; ನಿರ್ನಾಮ : ಜವಂ ನೇಱಾ ಬರ್ಚಿದಂತೆ ಪೆಂಡಿರ್ಮಕ್ಕಳೆನ್ನದೆ ನಿವಳಿವಟ್ಟಮಪ್ಪಿನನೊಂದಕ್ಕೋಹಿಣೀಬಲಮಿಲ್ಲಮಂ ಪೇಱಿಪೆಸರಿಲ್ಲವೆಂಬಂತೆ ಕೊಂದು (ಗಜಾಯು. ೯-೩೨ ಪ) ; "ನಿವಳಿವಟ್ಟಂ ಅಪ್ಪಿನಂ-ಬಲಿಗೊಟ್ಟು ನಿವಾಳಿಸಿ ಎಸೆದಂತೆ (?)"(ಗದಾಸಂ. ೨೦೨ ಟಿಪ್ಪಣಿ) ; ಅರುಹಸಮಯವಡಗಿರ್ದುದು ಸವಣಕುಲಂ ನಿವಳಿವಟ್ಟ ಮಾದುದು (ನಾಚರ. ೧೭೯-೪) ; ಅಂತೂರೆಲ್ಲಂ ನಿವಳಿವಟ್ಟಮಾಗಿ ಬೆಂದು ಸೋಮಶರ್ಮನ ಮನೆಯೊಂದುಟಾದಿರೆ (ಪುಣ್ಯಾಸ್ರ. ೧೨-೩೪ ಪ).

ನಿವಾಳಿವಟ್ಟೆ : ಲೋಯಿಸರದ ಮೇಲೆ ಬಂಡಿ ಪರಿದಂತೆ ಪೊಱಲೆಲ್ಲಮಂ ನಿವಾಳಿವಟ್ಟಮಂ ಮಾಡಿದಯಾ ದೊಡೇನಾಯ್ತು (ಧರ್ಮಾಮೃ. ೨-೮೯).

ನಿವಾಳಿವಟ್ಟು. ನೀವಳಿವಟ್ಟೆ : 'ನೀವಳಿವಟ್ಟಂಗೆಯರ್' ಪರಾ.

ನಿವಳಿವಟ್ಟಂ ಮಾಡು, ನಿವಾಳಿವಟ್ಟಂ ಮಾಡು, ನಿವಾಳಿವಟ್ಟು ಮಾಡು = ಸಂಪೂರ್ಣನಾಶ ಮಾಡು ; ನಿರ್ನಾಮಗೊಳಿಸು : ತಮ್ಮನುಂ ನಿಜಾಗ್ರಜನೊಳ್ ಕೂಡಿ ದನಿತಾರಿಗಿರ್ದಿ ತಳವರ್ಗಮಂ ನಿವಳಿವಟ್ಟಂ ಮಾಟ್ಟುಗಳ್ (ಶಾಂತಿಪು. ೪-೩೪ ಪ); ಈತನಿನ್ನು ನಾಡೆಲ್ಲಮಂ ನಿವಾಳಿವಟ್ಟಂ ಮಾಡಿ ಕಳದೆ ಮಾಣಂ (ಧರ್ಮಾಮೃ. ೨-೧೪೯) ; ಮುಳಿದು ಮೇಲೆರ್ದು ಚತುರಂಗಬಲಂಬೆರಸು ಕಾದುವುದುಂ . . . ಬಲಮಂ ನಿವಾಳಿವಟ್ಟು ಮಾಡೆ (ಚಾವುಂಪು. ೧೪೮). [?]

ನಿವಳಿಸು 'ನಿವಾಳಿಸು' ನೋ.

ನಿವಾಂತ (ಗು). ೧. ಸದ್ದುಗದ್ದಲಗಳಿಲ್ಲದ ; ಶಾಂತವಾದ : ಲಬ್ಧದ ಈ ನಿವಾಂತ ಜಾಗಾ ನನ್ನ ಕೆಲಸಕ್ಕೆ (ನಾಧಾರಿ. ೪೮). (ನಾ). ೨. ಸದ್ದುಗದ್ದಲಗಳಿಲ್ಲದಿರುವುದು ; ನಿಶ್ಶಬ್ದವಾಗಿರುವುದು : ಸ್ಥಳವು ನಿವಾಂತವಲ್ಲವೆಂಬುದಿಷ್ಟೇ ನಾನಿಲ್ಲಿ ಹೇಳಬೇಕಾದುದು (ಬೆಳಗು.೫೭). ೩. ನಿಶ್ಚಿಂತತೆ ; ನೆಮ್ಮದಿ: ಗುರುಭಟ್ಟ ಒತ್ತಾಯದಿಂದ ನನ್ನನ್ನು ಗಣಪತಿಪ್ರಸಾದದ ಪಂಕ್ತಿಗೆ ಎಳೆದುಕೊಂಡು ಹೋದ. ಇಬ್ಬರದೇ ಪ್ರಸಾದ ನಿವಾಂತವಾಗಿ ನಡೆದಾಗ . . . ವಿಚಿತ್ರವಾಗಿ ನಕ್ಕ (ದೀಪಹ. II, ೧೬೦) ; ಇಬ್ಬರೂ ನಿವಾಂತವಾಗಿ ಕುಳಿತೆವು (ದೀಪನಿ. ೧೬೫).

[←ಮರಾ. ನಿವಾಂತ./ಸಂ. ನಿವಾತ]

ನಿವಾಟ (ನಾ). ೧. ಚೆದರುವಿಕೆ ; ಚೆಲ್ಲಾಪಿಲ್ಲಿ : ಒಲೆಯಂಡಿಯಂ ನುರುಹಿದಡೆ ಹೊಗೆ ಗೋಳಕನಾಥನ ಕೊರಳ ಸುತ್ತಿತ್ತು . . . ರುದ್ರನ ಹಾವುಗೆ ಉರಿಯಿತ್ತು ದೇವಗಣಂಗಳು ನಿವಾಟವಾದರು (ಬಸವ. ೯೩೦). ೨. ತೆರೆದುದು ; ಅಡೆತಡೆಯಿಲ್ಲದುದು ; ಬಯಲಾದುದು : ವಾರಣದ ಉದರ ಬೆಂದಿತ್ತು ಮಾರಿ ಸತ್ತಳು ದಾರಿ ನಿವಾಟವಾಯಿತ್ತು (ಸಿದ್ಧೇಸ. ೩೭-೯೯). [ಸಂ.]

ನಿವಾಡ (ನಾ). ೧. ಉಪಾಯ ; ಹಂಚಿಕೆ : ಏನು ಮಾಡುವೆನಿದಕೆ ಹೇಳವ್ವಾ ನಿವಾಡವನೆನುತವಳಲುತನೂನಶೋಕದಿ ಬೀಳ್ವನೇಳ್ವನು ನಿಂದು ನೋಡುವನು (ಬಸಪು. ೪೫-೨೬) ; ವಾದ್ಯಪ್ರಬಂಧಂಗಳಲ್ಲಿ ತನ್ನ ಸೇರುವೆಯನಾರೈವುತ್ತೆ ನಿವಾಡದಿಂ ನಿಗುರಿಸುತ್ತೆ ಚಾಳಿಯಿಂ ಚಳಿಸುತ್ತ . . . ಬಾಜಿಸುತಿರ್ದಂ (ವಿರೂಪಾ. ೮೧ ಪ) ; ರೂಢಿಪತಿ ಸರಿದ ಸುರನಗರಿಗಂ ಬಾಲಕರು ಹೇಡರಾದರು ರಾಜ್ಯಮನ್ನಾಳಲಾರದೆ ನಿವಾಡವಿಲ್ಲದೆ ಕ್ಷಾತ್ರಧರ್ಮ ಕಿರಿದಾಗಿ ಬೆಳೆ ಬಿತ್ತುಗಳ್ ಕಿರಿದಾದುದು (ತುರಂಗ. ೧೨-೯). ೨. ನಿರ್ಣಯ ; ತೀರ್ಮಾನ : ನೋಡಬೇಕುದು ಮೂಜು ಬಾರಿ ನಿವಾಡವ [ಪಾಠಾಂ.ಬ]ಹುದೆಂದಿಂದುಲೇಖಾಷೂಡಮಂತ್ರದ ಲೇಖೆಯಂ ಜಿನಮಂತ್ರಲೇಖೆಯನು ಕೂಡೆ ಕಾವೇರಿಯಲಿ ಹಾಯ್ಕಲು ರೂಢಿದೊಱೆಯಲಿ ಹೋದಡಪಜಯ ಓಡದಿದಿರೇಱಾದಡೆ ಜಯ (ಒಸಪು. ೫೦-೩೮). ೩. ಗುರಿ ; ಲಕ್ಷ್ಯ : ಇನಿತು ಸುಖದ ಸುರಾಡವನು ಕೊಂಡೆಯರ ಸುಡಿಗೆ ನಿವಾಡವನು ಮಾಡಿದರು (ತೊರಬಾ. ೩-೭-೩೯). (ಗು). ೪. ಆಯ್ದು ತೆಗೆದ ; ವಿಶಿಷ್ಟವಾದ : ಮಾಡದ ಮಾಟವ ಮಾಡಿ ನೀ ಮುನ್ನೊಂದು ಕೋಡಗವನು ಬೇಳಲೆಟ್ಟ ಪಾಡನೆನ್ನೊಳು ತೋಱಿಸೆಂದು ಕವರ್ದಿ ನಿವಾಡ ಕೂರ್ಗಱೆಯೊಳಿಕ್ಕಿದನು (ಮೋಹತ. ೩೯-೩೦).

[←ಮರಾ. ನಿವಾಡ]

ನಿವಾಡಿಸು (ಕ್ರಿ). ಲಕ್ಷ್ಯದಲ್ಲಿಟ್ಟುಕೊಳ್ಳು ; ಗಮನಿಸು : ಜಂಗುಳಿಯ ಕಾವ ಗೋವ ಹಲವು ಹಸುವ ನಿವಾಡಿ[ಪಾಠಾಂ. ರಿ] ಸುವಂತೆ ತನು ಭಕ್ತನಾಯಿತ್ತು ಎನ್ನ ಮನ ಭವಿ (ಒಸವ. ೨೮೪).

[ನಿವಾಡ+-ಇಸು₃]

ನಿವಾತ (ಗು). ೧. ಗಾಳಿ ಬೀಸದ ; ಗಾಳಿಯಿಲ್ಲದ : ನಿರ್ಮಾಯ ನಿಷ್ಕಾಮಿ ನಿಸ್ಕಂಪ ನಿವಾತ ಜ್ಯೋತಿರೂಪಂ ನಿರುಪಮನೆನಿಸಿರ್ದಂ ವಿರೂಪಾಕ್ಷಲಿಂಗಂ (ಗಿರಿಕ. ೫-೩೩). (ನಾ). ೨. ಗಾಳಿಯ ಹೊಡೆತವಿಲ್ಲದಿರುವಿಕೆ ; ಗಾಳಿ ಬೀಸದ ಸ್ಥಿತಿ : ನಡುಗಿತಿಳೆ ನಿರ್ಘಾತದಲಿ . . . ಸಿಡಿದವಜ್ರಗಳು ಕೆಜ್ಜಗಳುಕ್ಕಿದವಡಿಗಡಿಗೆ ಹೆಮ್ಮರ ನಿವಾತದಲುಡಿದು ಬಿದ್ದವು ಕೌರವೇಂದ್ರನ ಪತನಕಾಲದಲಿ (ಕುಮ್ಯಾಗ. ೮-೩). ೩. ಶಾಂತನಾದ ವ್ಯಕ್ತಿ : ಪರಮಸುಖದಿಂದಂ ನಿವಾ[ಪಾಠಾಂ. ರ್ವಾ]ತ ನಿಶ್ಚಿಂತನಾಗಿರುತಿಪ್ಪೆನೋ ಹೇಳು ಹೇಳು ಅಯ್ಯಯ್ಯ (ಸಿದ್ಧರಾ. ೪-೨೯). ೪. ಅಭೇದ್ಯವಾದ ಉಕ್ಕಿನ ಕವಚ : "ನಿವಾತಃ . . . ಗಾಳಿ ಸುಳಿಯದ ಸ್ಥಳ. ಆಯುಧಗಳಿಂದ ಕತ್ತರಿಸಕೊಡದ ಕವಚ" (ಸಿದ್ಧಾಂತಿ. ೩೯೫).

ನಿವಾತವಾಗು = ನೆಮ್ಮದಿ ಹೊಂದು ; ಶಾಂತವಾಗು : ಉಪಾಧಿಕ ಮನವು ಉಪಾಧಿಕರಹಿತ ಮನವು ನಿಂದಲ್ಲಿಯೆ ನಿವಾತವಾಯಿತ್ತು ಆನಂದ ಭಾವವು ಬಿಂದು ತಾನುಳಿದು ನಿಂದಲ್ಲಿಯೆ ನಿವಾತವಾಯಿತ್ತು (ಅವಚಂ. ೧೪೭-೬೬೯). [ಸಂ.]

ನಿವಾಪ (ನಾ). ೧. ನೆಲದಲ್ಲಿ ಕಾಳುಗಳನ್ನು ಬಿತ್ತುವಿಕೆ. ೨. ಕಾಳು ; ಬೀಜ. ೩. ಪಿತೃಗಳಿಗೆ ಬಿಡುವ ತರ್ಪಣ ; ತಿಲೋದಕ; ಎಳ್ಳುನೀರು ಬಿಡುವುದು : ನಿವಾಪಃ, ಪಿತೃತರ್ಪಣಂ-ಈ ೨ ನೀರ್ಗುಡುವುದು" (ಹಲಾಯು. ೧೦೫-೧೬); "ಪ್ರೇತತರ್ಪಣಮೆನೆ ನಿವಾಪಮೆಂದೆನೆ ಕರ್ಮದಾ ತಿಲೋದಕಮಕ್ಕುಂ" (ಮಂಗರಾ. ೧೧೬-೨೪). [ಸಂ.]

ನಿವಾರ (ಗು). ೧. ತಡೆಯುವ ; ನಿರೋಧಿಸುವ ; ಅಡ್ಡಿಪಡಿಸುವ: ಚಕ್ರವೈತಂದುದು ತತುಕ್ಷಣಕೆ ವೈರಿಭೀಕರಪಾಂಚಜನ್ಯೋದಾರಶಂಖ ಪ್ರವರಸಹಿತ ನಿವಾರಕೌಮೋದಕಿಯೆನಿಪ ಗದೆಯಿಳಿದುದೊಂದೆಸೆಗೆ (ನಿಭಾಗ. ೧೦-೪೭-೨೧). (ನಾ). ೨. ಪರಿಹಾರ ; ನಿವಾರಣೆ : ನಿಖಿಳ ಮಾಹೇಶಪ್ರಸಾದಸುಖ ಸೇರಿದೊಡೆ ನಾಂ ಕಾಲು ನಿಲ್ಲದನಾರತಂ ತೊಳಲುವ ಬಳಲ್ಕೆ ನಿವಾರವಹುದಿನ್ನೆಂಬವೊಲು ಬಂದಿನನುದಯವಾದ (ಬಸಪು. ೧೨-೪೭). 'ಅನಿವಾರ' ಪರಾ. [ಸಂ.]

ನಿವಾರಕ (ಗು). ೧. ಕಳೆಯುವ ; ಹೋಗಲಾಡಿಸುವ ; ಪರಿಹರಿಸುವ. (ನಾ). ೨. ದೂರಮಾಡುವವನು ; ಪರಿಹರಿಸುವವನು:

ವಿಘ್ನನಿವಾರಕ ಗಣಾಧಿನಾಯಕ (ಗಣೇಶ. ೧-೯); ಇತಂದಿರಂ ಸಂಕಟನಿವಾರಕರನಿತ್ತಿ ತಪೋಧನರ್ . . . ಉಪಚರಿಸಿದರ್ (ಕ್ರೀಂರಾಮಾ. ೩೫-೧೪೬). [ಸಂ.]

ನಿವಾರಣ (ನಾ). ೧. ದೂರಮಾಡುವಿಕೆ; ಕಳೆಯುವಿಕೆ; ನಿವಾರಿಸುವಿಕೆ. ೨. ಪರಿಹಾರ : ಮೊದಲಲಿದು ಸುದ್ಖೂತವಮಸಾನದಲಿ ವಿಷಮ ದ್ಖೂತದಲಿ ನಿಲುವುದು ನಿವಾರಣವುಂಟೆ (ಕುನ್ಯಾಸ. ೧೨-೬೯). 'ಭವನಿವಾರಣ' ಪರಾ. ೩. ತಡೆಯುವಿಕೆ ; ನಿರೋಧ ; ಪ್ರತಿಬಂಧ : ಸವನಿಪುದೋಹೋ ಹೋ ಎನೆ ನಿವಾರಣಾರ್ಥಂ (ಶಪುದ. ೩೦೯); ಗೋಧೆ = ಕರತಲದಲ್ಲಿ ಜ್ಯಾಘಾತನಿವಾರಣಾರ್ಥಂ ಆಗಿ ಕಟ್ಟಿದ ಚರ್ಮ (ನಾಚಂಾ. ೬). ೪. ನಿಷೇಧಿಸುವಿಕೆ. ೫. [ಬೌದ್ಧ] ಪರಿಹಾರದ ಆಲೋಚನೆ,—ಚಿಂತನೆ: 'ಪಂಚನಿವಾರಣ' ಪರಾ. [ಸಂ.]

ನಿವಾರಣಹೇತು (ನಾ). ಪರಿಹಾರಕ್ಕೆ ಕಾರಣವಾದುದು ; ನಿವಾರಕ : ಯಕ್ಷನೊ ರಕ್ಷನೊ ಜೌಳದ ಭೂತವೊ ಮುಗ್ಧರ ಭೀತಿ ನಿವಾರಣಹೇತುವೋ (ಗಣೇಶ. ೬-೧೪೬). [ನಿವಾರಣ + ಹೇತು$_2$]

ನಿವಾರಣೆ (ನಾ). = ನಿವಾರಣ ೨ : ಇಡೀ ಪತ್ರವನ್ನು ಓದಿದಾಗ ನಮ್ಮ ಸಂದೇಹ ನಿವಾರಣೆಯಾಗಬಹುದು (ಮುಂಗಾಮು. ೧೬) ; ದಿ.ಪ್ರೊ. ಮೆಹತಾ ಭಾರತದಲ್ಲಿ ಸಸ್ಯಗಳಿಗೆ ತಗಲುವ "ರಸ್ಟ್" (rust = ಕುಂಕುಮ) ಎಂಬ ರೋಗದ ನಿವಾರಣೆಗೆ ಜೀವಮಾನವೆಲ್ಲ ದುಡಿದವರು (ಸಸ್ಯಕ. ೧೨೧). [ಸಂ. ನಿವಾರಣ]

ನಿವಾರಣೋಪಾಯ (ನಾ). ಪರಿಹಾರ ಮಾಡುವ ಉಪಾಯ : ಕೇಡು ಒದಗಿದ ಮೇಲೆ ನಿವಾರಣೋಪಾಯವನ್ನು ಹುಡುಕತೊಡಗುವುದಕ್ಕಿಂತ ಕೇಡಿನ ಸೂಚನೆ ಮಿಂಚಿ ಕಾಣಿಸಿದ ಕೂಡಲೇ ಮಾಡಬೇಕಾದ್ದನ್ನು ಮಾಡಿದರೆ ಕೇಡು ಬೆಳೆಯಲು ಅವಕಾಶವಿಲ್ಲವಾಗುತ್ತದೆ (ಹಣಪ್ರ. ೧೯೩). [ನಿವಾರಣ + ಉಪಾಯ]

ನಿವಾರಿತ (ಗು). ೧. ತಡೆಹಿಡಿದ ; ನಿರ್ಬಂಧಿಸಿದ ; ಪ್ರತಿಬಂಧಿಸಿದ. (ನಾ). ೨. ಪರಿಹರಿಸಿದುದು ; ನಿವಾರಿಸಿದುದು : ಧರಣೀತಳಕೆಲ್ಲಂ ಭೀತಿ ನೆಟ್ಟನೆ ನಿವಾರಿತಮಕ್ಕುಂ (ಜಿಬ್ಬಪು. ೬-೭೪) ; ಈ ಬಗೆಯ ಗೊಂದಲ ಜಿ. ಎ. ಗ್ರಿಯರ್ಸನ್ನನ ವಿವರಣೆಯಿಂದ ಸ್ವಲ್ಪ ನಿವಾರಿತವಾಯಿತು (ದ್ರಾವಿವಿ. ೧೪೧). ೩. ತಡೆ ಹೊಂದಿದವನು ; ಅಡ್ಡಿ ಹೊಂದಿದವನು : ಒರ್ವಂ ದ್ವಾರಪಾಲನಿವಾರಿತಂ ವೇತ್ರಧರನಿವೇದಿತನಾ ಮಹಾಸ್ಥಾನಮಂ ಪೊಕ್ಕು ಮೈಯಿಕ್ಕಿ ಕೈಯಂ ಮುಗಿದು ನಿಂದು (ರಾಜಶೇ. ೧೦-೧೧ ಪ). [ಸಂ.]

ನಿವಾರಿಸು (ಕ್ರಿ). ೧. ನೀಗು ; ಹೋಗಲಾಡಿಸು ; ಪರಿಹರಿಸು : ಸಸಿಯ ಕೆಲಗೆಲದೊಳೊದವಿದ ಕಸವಮಂ ಕಿಬ್ಬು . . . ಮೊಸಗರ್ಗೂಬಂ ವಿಧಿಯಿಂದೆ ಸೂಸೆ ಭರದಿಂ ಬೀಜ್ಯಾಳಿಕಲ್ಲಂ ನಿವಾರಿಸುಗುಂ (ಲೋಕೋಪ. ೬-೧೦) ; ಸೌಂದರಸಟ್ಟಿಯುಂ ಸೋಮಶರ್ಮನುಮೀ ಗೆಯ್ದುಂ ದುಷ್ಟತನಮಂ ನಿವಾರಿಸಲಾಜದೆ (ಧರ್ಮಾಸ್ಯ. ೨-೧೬೧) ; ಅವರುಗಳ ತದ್ಭಯವನ್ನಿವಾರಿಸಲೆಂದು ಬಗೆದು (ಬಸಪು. ೨-೨೦) ; ಕನಕ ಮೃಗವನು ತಾರನೆಂಬೀ ಮುನಿಸದೊಂದಿದೆ ತಮ್ಮ ತನ್ನಯ ಮನದ ಸಂಶಯವನು ನಿವಾರಿಸು ಹೊಗು ಗೃಹಾಂತರವ (ತೊರಂರಾ. ೩-೧೧೧-೧೩); ಘೋರಸಂಸಾರದೊಳ್ಮುಸುಕುವ ಮಜವೆಯಂ ನಿವಾರಿಸಿ ಮಹಾಯೋಗಿ ಜೀವ ಪರಮಾತ್ಮರ ವಿಚಾರಿಸುವ ತೆಜದಿಂದೆ ರಿಪುಮೋಹರದೊಳೊತ್ತಿ ಕವಿವ ಭಟರಂ ಗಣಿಸದೆ ವೀರಸುರಥಂ ಕೃಷ್ಣ ಫಲ್ಗುಣರನಜಿಸಿದನು (ಜೈಮಿಭಾ. ೧೪-೭). ೨. ತಡೆ ; ನಿಗ್ರಹಿಸು ; ತರುಬು : ಅತಿ ಬಹುಳರಜದೊಳ್ಪೊರೆದ ಪೊನಲ್ಗಳಂತುನ್ಮಾರ್ಗದಿಂ ಪರಿವಿಂದ್ರಿಯಂಗಳಂ ನಿವಾರಿಸದೆಯುಂ ಕದಡಿದ ಮನಮುಂ ನಿಯಾಮಿಸದೆಯುಂ ಇಂತಿಪ್ಪುದುಚಿತಮಲ್ಲಂ (ಕಾದಂಪೂ. ೪೪೮) ; ಈ ಗುಹೆಯತ್ತ ಸಾರದಂತಿರಲಿವನಂ ನಿವಾರಿಸುಬಾದಂದೆನಸುಂ ಬಬುಸಂದು ಪೊರ್ದುಗುಂ (ಕಾದಂಉ.೫೫೭); ಪುದಾರಿಯ ದೆಸೆಯನೀಕ್ಷಿಸಿ ಸಾಳು ಹೋ ಎನುತಂ ನಿವಾರಿಸಲು (ಬಸಪು. ೨೮-೬೧); ತನ್ನ ಹೆಬ್ಬಯಕೆಯ ಇಂದ್ರನೇ ಇವನೆಂದು ಗೊತ್ತಾದಾಗಲೂ ಅವನನ್ನು ನಿವಾರಿಸುವಮ್ಮ ವಿವೇಕ ಅವಳಿಗುಂಟು (ಸಮೂಲೋ. ೭೬). ೩. ಕಳೆ ; ಬಿಸುಡು ; ತೆಗೆ : ಸೂಡಿರ್ದ ಕುಸುಮ ಸೌರಭವ ನಾಘ್ರ್ರಾಣಿಸಿ ಮಾಡಿ ಮುಂದಣ ತಿರಸ್ಕರಿಸಿ ಊಡಿರ್ದ ಗಂಧ ಕಸ್ತೂರಿಯ ನಿವಾರಿಸಿ ನೋಡಿದ ಪರಮಾತ್ಮಕನ (ಮೋಹತ. ೨೧-೨೩) ; ಇಕ್ಕಡಿವಡೆದ ಕಾರ್ಮುಗಿಲ ನಿವಾರಿಸಿ ತೆಕ್ಕೊಂಡು ಭಾರಿಯ ಹಲವ ಒಕ್ಕಯ್ಯೋಳಾಂತ ಪೇರೊನಕೆಯಿಂದಿಕ್ಕಿದ ಸೊಕ್ಕಾನೆದಲೆಗನ ಮೇಲೆ (ಮೋಹತ. ೩೮-೫೯). ೪. (ಕಾಲವನ್ನು) ತಳ್ಳು ;—ನೂಕು ; ಕಾಲಹರಣ ಮಾಡು : ನೆತ್ತ ಪಗಡೆ ಚತುರಂಗವ ಗೆಲುವಳು ಮತ್ತೇಭಗಮನೆ ಮಂತ್ರಿಜೆಯ ಚತ್ತವೈಕಲ್ಯವಾಗಲು ಸೋಲ್ವಳು ಸೋತು ಹೊತ್ತ ನಿವಾರಿಸುವುದಕೆ . . . ಕೇಳಿದಳಿತಿಹಾಸ ಪೌರಾಣಗಳನು (ಮೋಹತ. ೨೭-೧೨೫). ೫. ಅಲ್ಲಗಳೆ ; ನಿರಾಕರಿಸು : ಎನ್ನ ಮೆಲ್ನುಡಿಯ ನಿವಾರಿಸಬೇಡೆಂದು ಬಿನ್ನಹ ಗೈದಳು ರತಿಗೆ (ಮೋಹತ. ೧೦-೨೫). ೬. ಬಿಡು ; ರದ್ದುಪಡಿಸು ; ನಿಲ್ಲಿಸು : ಹೆಚ್ಚಿನ ಶಿಕ್ಷಣಕ್ಕೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ ಈ ಸಾರ್ವತ್ರಿಕ ಪರೀಕ್ಷೆಗೆ ಕೂಡುವ ಅವಶ್ಯಕತೆಯನ್ನು ನಿವಾರಿಸಲಾಗಿತ್ತು (ಶಿಕ್ಷಪ.೧೪೯). ೭. ಅರಿಸು ; ನಂದಿಸು ; ಶಮನಗೊಳಿಸು : ತನ್ನ ಕೋಪ ನಿವಾರಿಸಲೆಂದು ಹಾಗೇ ಕೂತಳು (ಹಳ್ಳಹಾ. ೧೧೯). **ನಿವಾರಿಸಿಕೊಳ್ಳು** = ಹೋಗಲಾಡಿಸಿಕೊಳ್ಳು ; ಪರಿಹರಿಸಿಕೊಳ್ಳು : ಇಟ್ಟಾದ ಮೇಲೆ ಎರಡು ತೋಳುಗಳನ್ನೂ ನಿಗುರಿಸಿಕೊಂಡು ನೋವು ಹೋಗು ನಿವಾರಿಸಿಕೊಂಡೆ (ಚಿಂಗಾಳ್ವ. ೮೨). [ನಿವಾರಣ + -ಇಸು$_5$]

ನಿವಾಸ (ನಾ). ೧. ವಾಸಸ್ಥಾನ ; ಮನೆ : "ಭವನಂ ಸದನಂ ಸದ್ಮಂ ನಿವಾಸಮಾವಸಥಮಾಸ್ಪದಂ ನಿಳಯಂ . . . ನಿಕೇತನಂ ಗೃಹಮುಟಜಂ" (ಪಸ್ತು.ಕೋ. ೪೬-೪) ; ಭೌಮಮೆಂಬುದು . . . ಪೂರ್ವಾದಿ ದಿಕ್ಸೂತ್ರ ನಿವಾಸದಿಂದಂ ಹಾನಿ ವೃದ್ಧಿ ಜಯಾಪರಾಜಯಾದಿ ವಿಜ್ಞಾಪಮುಂ ನೆಲ ದೊಳಿರ್ದ ಸುವರ್ಣರಜತಾದಿಗಳಿಂದಂ ಸೂಚಿಸುವುದು (ಜಾವುಂಪು. ೧೪೬), ಆತ್ಮಲಿಂಗ ಪರಮಾತ್ಮ ಜಂಗಮ ತನುಮಧ್ಯೆ ಪ್ರಸಾದವಾಯಿತ್ತು ನಿಶ್ಚಿಂತ ನಿವಾಸವಾಯಿತ್ತು (ಬಸವ. ೪೩೭) ; ಕವಿ ಕವಿರಾಜಂ ವಚಸ್ಸುಂದರೀ ನೃತ್ಯನಿವಾಸಂ . . . ರುದ್ರಾಂಕನೆ ಪೇಟ್ಟಂ (ಜಗನಿ. ೧-೨೨) ; ಸದಯವಿಲ್ಲದ ಜಾಗಿ ಸೊದರಿಲ್ಲದ ನಿವಾಸಂ . . . ಪ್ರವರ್ಧಿಸವಹುದೆ ಲೋಕದೊಳು (ಬಸಪು. ೩೭-೩೪). ೨. ಆಶ್ರಯಸ್ಥಾನ ; ನೆಲೆವೀಡು : ಇಂತತಿಶಯನಿಲಾಸಕ್ಕೆ ನಿವಾಸಮುಂ ವಿಧೂತಿಗೆ ನಿಕೇತನಮುಂ ಪೆರ್ಮೆಗೆ ತವರ್ಮನೆಯುಂ ಧರ್ಮಕ್ಕಾರ್ಮಮುಮೆನಿಸಿದ ರಾಜಗೃಹಪುರವರಶ್ರೀಯನ[ಟ್ಟಾ]ವಟ್ಟು ನೋಡಿ (ಸುಕುಮಾ. ೨-೪೭ ವ) ; ದೇಶವೆಲ್ಲವನನ್ಯತ ಹೊದ್ದದಂದದಿ ಕೊಟ್ಟು ಕಾಶಿಯ ನಿವಾಸದೊಳು ಸತಿಸುತರ ಮಾಡಿ ಭುವನವನುತ್ತರಿಸಿದ ಹರಿಶ್ಚಂದ್ರನು (ಹಜಕಾ. ೧೧ ಸೂಚನೆ); ವಾಜಶ್ರವಸನ ಕುಟೀರ . . . ಹರ್ಷಕ್ಕೆ ನಿವಾಸವಾಯಿತು (ಚಿತಂಬಾ. ೧೦೫). [ಸಂ.]

ನಿವಾಸಕ (ನಾ). = ನಿವಾಸ ೨ : ಹೊಗಳುಭಟ್ಟೆದಿದರಾಲಯಕೆ ಪೂಜಗದ ಜನ . . . ಪಾಂಡುಕುಮಾರಕರ ನಿರಿಯ ಮಿಗೆ ಚತುರ್ದಶಭುವನದಲಿ ಕೀರ್ತಿಗೆ ನಿವಾಸಕವಾಯ್ತು (ನಿಭಾಗ. ೧೧-೪೦-೪೫). [ಸಂ.]

ನಿವಾಸಸ್ಥಾನ (ನಾ). ವಾಸಿಸುವ ಸ್ಥಳ ; ಆವಾಸ ; ನೆಲೆ : ಶಿವಾತ್ಮ ಶರಣನ ಹೃದಯವೇ ಪರಮೇಶ್ವರಂಗೆ ನಿವಾಸಸ್ಥಾನ (ನೆಲೆವನೆ)ಯಾಗಿ

ಪ್ಪುದಯ್ಕೆ (ಸಿದ್ಧೇ. ೪೫–೨೫೩); ಹರಿಗಿರ್ಕೆಯಾಗಿ ಕಾಲ್ಗಡಲಲ್ಲ ಶಿವಿ ನಿವಾಸಸ್ಥಾನಮಾಗಿ ದಿಗ್ಯಾಗಮುಲ್ಲ . . . ಎನಿಸಿರ್ದುದಾಶ್ಚರ್ಯಸಾಂದ್ರ ಮಜಲೇಂದ್ರನೆಸೆದು (ಜೈಮಿಭಾ. ೧೦–೬). [ನಿವಾಸ+ಸ್ಥಾನ]

ನಿವಾಸಿ (ಗು). ೧. ಇರುವ; ವಾಸಿಸುವ; ನೆಲಸುವ. (ನಾ). ೨. ಇರುವವನು; ವಾಸಿಸುವವನು; ನೆಲಸಿರುವವನು: ಭಾವದಲ್ಲಿ ಪ್ರತಿಗೆಟ್ಟುದಾಗಿ ಆ ಭಾವದಲ್ಲಿ ಜೀವಸಂಹಾರಿ ಕೂಡಲಸಂಗಮದೇವ ಸರ್ವನಿವಾಸಿಯಾಗಿ (ಬಸಪು. ೯೪೫); ಭೋಜನನಿವಾಸಿಗಳಿಂದಮಾಯ್ತು ಳಳಳನಿದಂ (ಜಗವಿ. ೪–೮೦); ಅಂತರಂಗದ ನಿಳಯದಲ್ಲಿ ನಿಜವ ಕಂಡು ನಿವಾಸಿಗಳಾಗಿ . . . ಚಿಪ್ಪ್ರಹ್ಮವೇ ಸ್ಥಲಕುಳವೆಂದಱಿದು ಸುಳಿಯ ಬಲ್ಲರೆ ಸ್ಥಲಜ್ಞರೆಂಬೆ (ಸಿದ್ಧೇ. ೧೫೬–೪೬೬); ತೊದವರು ಸಾಮಾನ್ಯ ವಾಗಿ ಪರ್ವತದ ನಿವಾಸಿಗಳು (ರೂಢಿ). [ಸಂ. ನಿವಾಸಿನ್]

ನಿವಾಸಿನಿ (ನಾ). ವಾಸಿಸುವವಳು: ಅನ್ಯನಗನಿವಾಸಿನಿಗಳಪ್ಪ ಮರ ಕಾಂತೆಯರುಮಂ ಮರುದೇವಗೆ ಪರಿಚಾರಕೆಯರಾಗಿರಲುಂ . . . ಸೌಧರ್ಮೇಂದ್ರಂ ಬೆಸಸೆ (ಜಾವುಂಪು. ೩೧). [ಸಂ. ನಿವಾಸಿನೀ]

ನಿವಾಸಿಸು (ಕ್ರಿ). ಇರು; ವಾಸಮಾಡು; ನೆಲಸು: (೫). [ನಿವಾಸ+ಇಸು೩]

ನಿವಾಳಿ, ನಿವಾಳೆ, ನೀವಳಿ, ನೀವಾಳಿ, ನೈವಾಳಿ (ನಾ). ೧. ದೃಷ್ಟಿ ಪರಿಹಾರಕ್ಕಾಗಿ ಉಪ್ಪು, ಮೆಣಸಿನಕಾಯಿ, ಅಕ್ಕಿ, ಕುಂಕುಮದ ಕದಡು ಮೊದಲಾದುವುಗಳಿಂದ ಇಳಿ ತೆಗೆಯುವುದು; ನೀವಳಿಸುವುದು; ದೃಷ್ಟಿ ತೆಗೆಯುವುದು: ವಿಡಾಯದಿಂದೈತಂದು ದಂಡಿಗೆಯನಿಳಿದ ನಾರತಿಗಳ ನಿವಾಳಿಯಿಂ ಚಂದ್ರಹಾಸಂ ಭದ್ರಮಂಟಪಮಂ ಪೊಕ್ಕು (ಜೈಮಿಭಾ. ೩೧–೧೪); ರಕ್ಕಸತಿಲಕಮಹಿಷಾಮೌಳಿ ಪಾಪಕರುಲುಹಿನಿಂದೆಡಬಲ ನಿವಾಳಿಯ ಪಸುರುಗೊಳ್ಗಳಿ ಲಲನೆಯರ ಶೇಷಾಕ್ಷತೆಯೊಳು . . . ಬಂದನು ಮಗಳ ಮಂದಿರಕೆ (ಅಂಬಿಕಾ. ೧೯–೨೮); ಪಡೆದ ಶಿಶುವ ಕಾಣುತಾಗಲು ಸ್ತ್ರೀಯರು ಬಿಡದೆ ನಿವಾಳಿಯ ಹಾಕಿ (ಅಬ್ಬಲೂ. ೨–೪೪). ೨. ಆರತಿ; ನೀರಾಜನ: ಅಗ್ರವಣಿ ಪತ್ರೆ ಧೂಪ ದೀಪ ನಿವಾಳಿಯಲ್ಲಿ ಪೂಜಿಸಿ ಪೂಜಿಸಿ ಬಳಲುತ್ತೈದಾರೆ (ಅವಪಂ.೨೮–೧೧೮); ವನಲಕ್ಷ್ಮಿಯಾಗಳೆ ನಿವಾಳಿಗೆ ತೀವಿದ ರತ್ನದೀಪಮಾಲಿಕೆಯಿನಿಸಿತ್ತು ಕುಟ್ಮಲಿತ ಚಂಪಕ ಸಂಚಯಮಾ ವನಾಂತದೊಳ್ (ಕುಸುಸಾ. ೧–೯೪); ಸೋಮವಾರದಲು ನಿವಾಳಿಗೆ ಗಾಣಕ್ಕೆ ಯೆಂಣ್ಣೆ ಸೊಳಸಗೆ ಯೆರಡು ದೇವರಿಗೆ ನಡೆವ ಗಾಣ ವೊಂದು (ಕಳ. I, ೩೦–೪೭; ಸು. 1222); ಬಾಲೆಯರ ಬರಹೇಳು ರತುನನಿವಾಳಿಗಳ ತರಹೇಳನುತ . . . ಬಂದನಿದಿರಾಗಿ(ಕುವ್ಯಾಅ.೧೫–೫೭); ಅವಳೇ ತಾರಕ್ಕನಿಗೆ ನಿವಾಳಿ ತಂದು ಇಳಿಸಿ ಸ್ವಾಗತಿಸಿದಳು(ನಿಸರ್ಗ.೨೫೧). ೩. ಆರತಿಯನ್ನೆತ್ತುವ ಉಪಕರಣ: ಶಚಿ ಸುರಪತಿಯ ನೇಮುಪಲಿ ಇರುಳಿನಗ್ರದಲಮಳಮಣಿಬಂಧುರದ ಹೊಂದಳಿಗೆಯ ನಿವಾಳಿಯ ಧರಿಸಿದಳೊ ದರಹಾಸ ವಿಗಲೆನಲೆಸೆದುದಿನದಿಂಬ (ತೊರಂತಾ. ೨–೨–೯); ಅನುಜನಂ ತಕ್ಕೈಸಿ ಬೀಳುಕೊಡಲರಸಿಯರ ತಂಡದಾರತಿಗಳ ನಿವಾಳಿಗಳ ಸಡಗರ ದೊಳರಮನೆಗೆ ಬಂದು (ಜೈಮಿಭಾ. ೪–೬೨). ೪. ದೃಷ್ಟಿದೋಷ ಪರಿಹಾರಕ್ಕಾಗಿ ಇಳಿದೆಗೆದು ಬಿಸುಡುವ ವಸ್ತು: ಶರ್ವಂ ಸರ್ವಸಂಭ್ರಮದಿಂ ಬರೆ ನಡೆತಂದಿದಿರ್ಗೊಳ್ಳ ಸುವಾಸಿನಿಯರೊಯ್ಯಾರದಿಂ ನಿವಾಳಿಗಳಂ ಪಿಡಿದು ನಿವಾಳಿಸಲ್ (೧೦೪.೧೦–೬೯ ಪ). ೫. ಕಾಣಿಕೆ; ಉಪಹಾರ: ಪೊಂಬೆಳಸಾಗಿ ಪಲವು ಪರಿಯಿಂ ನೆಲ್ಲ ಗರ್ದುಗಳೊಪ್ಪಿದುವು ಮುಂದ ದೆಂತೆನಲ್ ತಲ್ಲಕ್ಷ್ಮೀ ಪದ್ಮಕಾರ್ಯನ ಪದಾಂಬುಜಕೆ ಪರಮೋಲ್ಲಾಸದಿಂ ನಿವಾಳಿಯನಿಟ್ಟು ಬಹುವರ್ಣದಂಬರಂಗಳೊಯೆಂದಿನಂ (ಪದ್ಮರಾ. ೪–೧೬); ಬಂದು ನಿವಾಳಿಯನಿಟ್ಟು ರಾಮನ ಕಂಡಂದವನನು ಕೂಡಿಕೊಂಡು ಬಂದನು ರಾಯನ ಪದವ ಕಾಣಿಸುವಾನಂದ ಕೈವಿಂಗೆ ಜಾವಡಿಗೆ (ಕುರಾಸಾಂ.೪೦–೫೪); ವರರತ್ನಂಗಳ ಪುಂಜವನಿಕ್ಕಿ ಮೇಲಿರಿಸಿ ಚತ್ರದ ಪಟ ವೊಂದ ಇರದಿಟ್ಟು ದಿವ್ಯದುಕೂಲನಿವಾಳಿಯ ದೊರೆಗೆ ಕೈಮುಗಿದನಾ ವಣಿಜ (ನಾಗಕು. ೩–೨) ; ನಿವಾಳಿಯನ್ನಿಟ್ಟು ಜಿನಚಂದ್ರರನ್ನು ಭಕ್ತಿ ಯಿಂದ ಸ್ವಾಗತಿಸಿದರು (ಧಾನಚಂ. ೨೭). **ನಿವಾಳೆ**: ೧. ರಾಜಪುತ್ರನು . . . ಬಾಗಿಲಿಗೆ ಬರಲು, ಅಲ್ಲಿ ಸುಮಂಗಲೆಯರು ಆರತಿಗಳನ್ನು ಮಾಡಿ ನಿವಾಳಿಗಳನ್ನು ತೆಗೆದರು(ಕುಸುಚಿ.೧೬೮). ೨. ಅಗ್ರವಣಿ ಪತ್ರ ಪುಷ್ಪ ಧೂಪ ದೀಪನಿವಾಳೆ[ಪಾಠಾಂ.೪]ಯಲ್ಲಿ ಪೂಜಿಸಿ ಪೂಜಿಸಿ ಬಳಲುತ್ತಿದ್ದಾರೆ (ಪಚರ. ೬೫–೬೫೦; ಅಪಚಂ. ೨೮–೧೧೫ ನೋ). **ನೀವಳಿ**: ೪. 'ನೀವಳಿಗರೆ' ಪರಾ. **ನೀವಾಳಿ**: ೨. 'ನೀವಾಳಿತೆಗೆ', 'ನೀವಾಳಿಯೆತ್ತು' ಪರಾ. **ನೈವಾಳಿ**: ೪. ಪಟ್ಟ ದೇವಾಂಗ ದುಕೂಲ ವಸನಗಳನಿಟ್ಟರು ನೈವಾಳಿಗಳ ಮುಟ್ಟಿ ತಳಿದು ಮುತ್ತಿನಕ್ಷತೆಗಳ ಪಣಗಿಟ್ಟರು ಮುತ್ತೈದೆ ಯರು (ಕುರಾಸಾಂ. ೧೯–೪೧); ಆರತಿಗಳೆತ್ತಿ ನೈವಾಳಿಗಳ ತೆಗೆದಿಡುತ ಸೂರೆಗೈವುತ ಈ ಪರಹ ರೂಪಾಯ್ಗಳಂ (ಕೃಷ್ಣವಿ. ೫–೧೧೩).

ನಿವಾಳಿಯಂ ತೆಗೆ = ಇಳಿದೆಗೆ; ನಿವಾಳಿಸು: ಹಿಡಿಯೊಳು ತೆಗೆದು ಮೇಲಕ್ಕೆ ನೆಗಹಿ ರಾಜೇಂದ್ರ ಕೃಷ್ಣೇಂದ್ರಂಗೆ ನಿವಾಳಿಯಂ ತೆಗೆದು ಯಿಡುವಾ (ಕೃಷ್ಣವಿ. ೫–೧೦೦). **ನಿವಾಳಿಯಂ ತೆಗೆಸು** = ದೃಷ್ಟಿ ತೆಗೆ ಯಿಸು; ನಿವಾಳಿಸುವಂತೆ ಮಾಡು: ಛಿನ್ನವಿಲ್ಲದೆ ಸಮೀಕಳವಿಳಾಸಿನಿ ಯರಿಂದೆ ಬಣ್ಣ ಪಸುಗೊಳ ನಿವಾಳಿಯಂ ತೆಗೆಸುತ್ತೆ ಚೆನ್ನಾಗಿ ಸೊಡ ಗೊಳ ನಿವಾಳಿಸಿ ವರಚಿತ್ರಲೇಖೆ ಪ್ರದ್ಯುಮ್ನಸುತನ (ನಸೋ. ೨೬–೫೪). **ನಿವಾಳಿಯನೆತ್ತು** = ಆರತಿ ಎತ್ತು: ಆ ಜಂಗಮಕ್ಕೆ ದೀಪಾರತಿಯನೆತ್ತಿ ತಾನೆ ಎತ್ತಿ ಕೊಂಡಡೆ ಸತ್ತ ಹೆಣಕ್ಕೆ ನಿವಾಳಿಯನೆತ್ತಿದ ಸಮಾನ (ಚನ್ನವ. ೧೦–೬); ಶಿವನ ಪೂಜಿಸಿ ಪುಷ್ಪದಿಂ ನಿವಾಳಿಯನೆತ್ತುವ ವಿರಳದ ನೇಮ ವಿರಲಾ ನಿವಾಳಿಗೆ ಪುಷ್ಪ ಸವನಿಸದೆ ' ಶಿರವ ಕೊಯ್ದುಂ ನಿವಾಳಿಸಲೀಶ ಪ್ರತ್ಯಕ್ಷನಾಗಿ ಮುದದಿಂ (ಗುರುಚಾ. ೬–೩೫). **ನಿವಾಳಿಯ ವಸ್ತ್ರ** = ದೃಷ್ಟಿ ತೆಗೆದು ಬಿಸುಟ ಬಟ್ಟೆ; ನಿವಾಳಿಸಿ ಒಗೆದ ವಸ್ತ್ರ: ಇಟ್ಟ ನಿವಾಳಿಯ ವಸ್ತ್ರವಿಕ್ಕೆಲದೊಳಗೊಟ್ಟದವೆಂತೆನೆ ಕಜ್ಜ ಬೆಟ್ಟಗಳಂತೆ ಮೆಲಿತಿ ದವು (ರಾಸುವಿ. ೮–೯೬). **ನಿವಾಳಿಯ ನೀರೆ** = ನಿವಾಳಿಯ ವಸ್ತ್ರ: ಆರತಿ ಕುಸುಮೋಪಹಾರ ನಿವಾಳಿಯ ನೀರೆ ರತ್ನಾಂಬುಗಳಿಂದ ವೀರ ರಾಮನನುಪಚರಿಸಿ ನಾರಿಯರು ಕಣ್ಣಾರೆ ದಣಿಯ ನೋಡಿದರು(ಕುರಾಸಾಂ. ೨೦–೯೨). **ನಿವಾಳಿಯಾಗು** = ಬಿಸುಡು; ದೂರ ಹಾಕು: ಸನಾಯಿ ಕವಿಯ ಮೌಢ್ಯದ ನಿವಾಳಿಯಾಗಿ ಒಂದು ಬಟ್ಟಲು ಹೆಂಡವನ್ನು ಕೊಡಯ್ಯಾ ಎಂದನಂತೆ (ಉದುಸಾ. ೧೯೪).

[ದೇ.॥ಕುಳು. ನಿವಾಳ; –ತೆಲು. ನಿವಾಳಿ, ನಿವ್ವಾಳಿ]

ನಿವಾಳಿಕಾಣಿಕೆ (ನಾ). ನಿವಾಳಿಸುವಾಗ ಒಪ್ಪಿಸುವ ಕಾಣಿಕೆ,—ನೆಜರು: ರತ್ನಭೂಷಾಳಿ ಮುಕುಟದ ಪ್ರಕಾಶ ಧಾಳಿಸೆ ಹಿಮವಂತ ದೇವನೆಯ್ತಂದು ನಿವಾಳಿಕಾಣಿಕೆಯನಿಕ್ಕಿದನು (ಭರಚ. ೩೬–೭).

[ನಿವಾಳಿ+ಕಾಣಿಕೆ(<ಕಾಣ್ಕೆ)]

ನಿವಾಳಿತೆಗೆ 'ನಿವಾಳಿದೆಗೆ' ನೋ.

ನಿವಾಳಿದೆಗೆ, ನಿವಾಳಿತೆಗೆ, ನೀವಾಳಿತೆಗೆ (ಕ್ರಿ). ೧. ದೃಷ್ಟಿತೆಗೆ; ನಿವಾಳಿಸು; ಇಳಿದೆಗೆ: ನೀಲಗಿರಿಯಂಬಾನೆಯಿಂದು ವಿಶಾಲನೇತ್ರದ ಮದನನೈತರೆ ಲೀಲೆಯಿಂ ಸ್ವಪಜಾಲ ದುಗುಲನಿವಾಳಿದೆಗೆದರೆಗೆ (ನಾಗಚ. ೬–೬೦). **ನಿವಾಳಿತೆಗೆ**: ೧. ನಿವಾಳಿತೆಗೆದ ಮೇಲೆ ವಧುವು ಮುಂದಕ್ಕೆ ಕಾಲಿಟ್ಟಳು(ಸುಪಸಂ. ೫೪); ಚಂದ್ರಹಾಸನನ್ನು ಆರತಿಗಳ ನಿವಾಳಿತೆಗೆದು ಭದ್ರಮಂಟಪಕ್ಕೆ ಕರೆದೊಯ್ದರು (ಬಿಡುರ. ೧೭೪). **ನೀವಾಳಿತೆಗೆ**: ೨. (ಆಲಂ) ಹೀಗಳೆ; ಕಡೆಗಣಿಸು; ತಿರಸ್ಕರಿಸು: ನಿನ್ನ ಮುಂದೆ ಅವಳ್ನ ನೀವಾಳಿತೆಗೀಬೇಕು (ಸರ್ವಮಂ. ೧೪೦); ಮೂವತ್ತು

ಮೂರ್ಕೋಟಿ ದೇವತೆಗಳನಾಳೆ ನೀವಾಳಿತೆಗೆವಳು ಪತಿಗೆ (ಮೂಗುತಿ. ೪-೧೮). [ನಿವಾಳಿ + ತೆಗೆ$_1$]

ನಿವಾಳಿಯೆತ್ತು, ನೀವಾಳಿಯೆತ್ತು (ಕ್ರಿ). ೧. = ನಿವಾಳಿಸು ೧ : ಹಕ್ಕಿಯ ವೇತಾಳಕರು . . . ರೌದ್ರಮುಖರಿರಲು ತಲೆಯನರಿದು ನಿವಾಳಿಯೆತ್ತುವ ಬಲಿದು ಶೂಲವನೇಱಿ ಕೂಗುವ ಒಲಿದು ಕೆಂಡದ ನೀರ ಮೀವುದ ಕಂಡನಿಂದ್ರಾರಿ (ಕೌಶಿಕಾ. ೧೯-೩೫); ಕಡಿದ ತಲೆಯ ನಿವಾಳಿಯೆತ್ತುವರುಡಿದ ಕೈಗಳ ಮೃತ್ಯುದೇವಿಗೆ ಕೊಡುವ ಹರಕೆಯ ಕಂಡು ರಾಮಣ ನೋಡಿ ಮೆಚ್ಚಿರ್ದ (ಕೌಶಿಕಾ. ೨೧-೧೨). **ನೀವಾಳಿಯೆತ್ತು** : ೧. ಬಿಸಿಯ ರಕ್ತಜಲಾಭಿಷೇಕವನೆಸೆವ ಕರುಳಿನ ಕುಸುಮದಿಂದರ್ಚಿಸುವ ತಲೆಗಳನರಿದರಿದು ನೀವಾಳಿಯೆತ್ತುತಿಹ ಬಸಿವ ಶೂಲವನಸುಳಕದೇಱುವ . . . ಒಸೆದು ಕೆಂಡದ ನೀರ ಮೀವರ ಕಂಡ ಕಪಿರುದ್ರ (ಕೌಶಿಕಾ. ೩೮-೩೩); ಅರುತಿಯ ನೀವಾಳಿಯೆತ್ತುತ . . . ಮೋರೆದೊಳದು ಕಸ್ತೂರಿಯ ಗಂಧ ಬಾಸಿಂಗ ಧರಿಸಿದರು (ಸಂದಿಲೀ. ೩-೫೬). ೨. ಆರತಿ ಎತ್ತು.

[ನಿವಾಳಿ + ಎತ್ತು$_1$]

ನಿವಾಳಿವಟ್ಟ 'ನಿವಳಿವಟ್ಟ' ನೋ.

ನಿವಾಳಿವಟ್ಟು 'ನಿವಳಿವಟ್ಟ' ನೋ.

ನಿವಾಳಿಸು, ನಿವಳಿಸು, ನೀವಾಳಿಸು (ಕ್ರಿ). ೧. ದೃಷ್ಟಿದೋಷ ಪರಿಹಾರಕ್ಕಾಗಿ ಉಪ್ಪು, ಅನ್ನ, ಬಟ್ಟೆ, ಕುಂಕುಮದ ಕದಡು ಮೊದಲಾದುವುಗಳನ್ನು ಮುಖದೆದುರು ಮೇಲಿನಿಂದ ಕೆಳಗೆ ಸುಳಿದಾಡಿಸಿ ಚೆಲ್ಲು ; ಇಳಿದೆಗೆ ; ದೃಷ್ಟಿತೆಗೆ : ಮಾತೃ ಪಿತೃದೃಷ್ಟಿಯುಂ ಸಮಸ್ತ ದೃಷ್ಟಿಯುಂ ನಿವಾಳಿಸುವ ಮಂತ್ರಮಂ ಅಂಬಿಲಮಂ ಮಂತ್ರಿಸಿ ಮುಖದಲ್ಲಿ ತಳಿವ ಮಂತ್ರಮಂ . . . ಬೇಱೇಬೇಱೆ ನಿವರಿಸಿ ಬೇವೇಂದ್ರ ಮುನೀಂದ್ರರು ಪೇಟ್ಟಿಪರು (ಬಾಲಚಿ. ೧೨೪-೯); ವೀರಂ ವೀರವುರುಷನ ಶಿರೋಂಬುರುಹಮಂ ಧಾರಿಣೀಪತಿಗೆ ನಿವಾಳಿಸಿ (ಅನಂಪು. ೧೧-೭೬ ವ); ಶಿಶುವ ತೂಸಿಱುದಳು ನಿವಾಳಿಸಿ ಬಿಸುಟು ರಜವನು ಮಂತ್ರರಕ್ಷಾಪ್ರಸರವನು ಮುನಿಗಳಲಿ ಮಾಡಿಸಿದಳು ಕುಮಾರಂಗೆ (ಕುಸ್ಯಾಆ. ೪-೫೮); ಲಲನೆಯರು ಸಿಂಗಾರದಾರತಿ ಸುಳಿದರೈ . . . ಹಲವು ಕಾಲದಲುಳ್ಳ ಭಾಗ್ಯವ ಬಳಿದು ಬಿಸುಡುವ ಪರಿ ನಿವಾಳಿಸೆ (ಕೌಶಿಕಾ. ೨೧-೧೧). ೨. (ದೃಷ್ಟಿ ಪರಿಹಾರಾರ್ಥವಾಗಿ) ಆರತಿ ಎತ್ತು,—ಬೆಳಗು : ಆ ಕುಮಾರಂ. . . ಬರ್ಪುದಂ ಕಂಡು ಸೌಭಾಗ್ಯಕಾರ್ತಿಯರ್ ಸೌಭಾಗ್ಯಮಂ ಸೇಸಿಕ್ಕಿಯುಂ ಚಲ್ಲಕಾರ್ತಿಯರ್ ಚಲ್ಲದಿಂ ನಿವಾಳಿಸಿ ನಾಣಂ ಬಟಾಬಿಡಾಡಿಯುಂ (ಅರ್ಧನೇ. ೫-೨ ವ); ಕರ್ಪೂರದೆಸೆವಾರತಿಯ ನಿವಾಳಿಸುತಾಡಿ ಹಾಡಿ ಮೆಚ್ಚಿಸಿ . . . ಕೈಮುಗಿದನು (ಹಚಕಾ. ಪರಿ. ೨೦೭-೬೭); ಈ ರಮಣೀಕುನಿರ್ಮಲಮುಖೇಂದುಗೆ ಪಾಸಟಯಿಲ್ಲೆನುತ್ತೆ ನೀಹಾರಮಯೂಖಬಿಂಬಮೆನೆ ತಂದು ನಿವಾಳಿಸುವಂತೆ ಕಾಂತೆಯರ್ . . . ಮಂಜುಳತಾರಪಾತ್ರೆಯಿಂದಾರತಿಯೆತ್ತಿದರ್ ನೃಪಕುಮಾರಿಗೆ (ಉದ್ಭಟ. ೮-೨೪); ವನಿತೆಯರು ಸಲಿನಲಿ ಜಯಜಯವೆನುತ ಕರನಖನಯನಗಳ ಬೆಳಗನೆ ನಿವಾಳಿಸುತ್ತೆತ್ತುತರ್ದರು ಮಂಗಳಾರತಿಯ (ಪ್ರಭುಲೀ. ೨೨-೪೧). ೩. ಮೇಲೆ, ಕೆಳಗೆ ಆಡಿಸು; ತೂಗಾಡಿಸು : ಮೂಗಂ ಪತ್ತಿಸಿ ಕೊಡಕೆಯನಾಡಿಸಿ . . . ಕೊರಲಂ ತೂಗಿಸಿ ತಲೆಯ ನಿವಾಳಿಸಿ ಕರವಂ ಬಾರಿಸಿ (ಭೃಂಗೀರ. ಹ. ೪೭೪-೮). ೪. ಬೆಳಗಿಸು : ಕರಸ್ಥಲದ ಬೆಳಗಿನೊಳಗೊಂದು ಘನಲಿಂಗದ ಬೆಳಗ ಕಂಡೆ . . . ಸಂಗನ ಬಸವಣ್ಣನ ನಿವಾಳಿಸುತ್ತಿದ್ದಿತ್ತು (ಅಪಚಂ. ಕ. ೩೫೭-೯೭೪). ೫. (ಅಲಂ) (ನಿವಾಳಿಸಿದ ವಸ್ತುವಿನಂತೆ) ಬಿಸುಡು; ಎಸೆ: ಪೊಯ್ದಾಡಿ ತಲೆಯಂ ನಿವಾಳಿಸಿದರಾಳ್ದಂಗೆ (ಜೈಮಿಭಾ. ೨೨-೬); ಅವನ ಹೊಲಿಗೆಯ ಮುಂದೆ ಇದನ್ನೆಲ್ಲ ನಿವಾಳಿಸಬೇಕು! (ಬಾಗಿನ. ೬೬). **ನಿವಳಿಸು** : ೧. ಅಱುಕೆಯ ಕೀರನಾಂ ಪರೆಸೆ ಪುಟ್ಟಿದುದೀ ಶುಕಶಾಬಮಿಂದು ಕಣ್ಣೆಱೆದುದು ಸಂಜೆಯೊಳ್ ನಿವಳಿಸಾದರದಿಂ ಸೊಡರಕ್ಕೆಯಿಟ್ಟು ತೂಸಿಱು (ಲೀಲಾವ. ೧೪-೧೧೯); ಇಭಕುಂಭದ ಮೇಲೆ ಬರ್ಸನಂ ಪರಿದಿದಿರ್ಗೊಂಡಣುಗನನ ದೆಂತು ನಿವಳಿಸಿದಪೆನೋ (ಅನಂಪು. ೧೨-೫೬); ಹಸುಗೂಳ ಹರಿವಾಣಗಳೊಳು ತುಂಬಿ ರಂಜಿಸುವ ರತ್ನಾರತಿವೆಳಗಿ ದಸರಿ ಪಟ್ಟಾವಳಿ ಚಿತ್ರವಸ್ತ್ರವ ನಿವಳಿಸಿದರಚ್ಯುತನಂಘ್ರಿಗಳಲಿ (ಮೋಹತ. ೪೨-೨೭); ಖಡ್ಗದ ಕೂರ್ಮೊನೆಯನ್ನು ಮಹಾರಾಜನ ಮುಖದ ಸುತ್ತವೂ ಭುಜಕೀರ್ತಿಗಳನ್ನು ಬಳಸಿಯೂ ಮೂಮೂರ್ಮೆ ನಿವಳಿಸಿ (ಬಿರುಗಂ. ೩೨-೩). ೨. ಮಕುಡಮಣಿ ಸೊಡರ್ಗಳೆನೆ ಮಸ್ತಕ ಸಹಿತಮೆ ನೆಗೆದು ತಿರುಗುವಾ ಪರಿಯಣಮೇಂ ಪ್ರಕಟಿಸಿದುದೊ ಕೃಷ್ಣನ ವಿಜಯಕಾಂತೆಗಾಕಾಶಲಕ್ಷ್ಮಿ ನಿವಳಿಪ ತೆಱದಿಂ (ಜಗವಿ. ೧೭-೫೨); ದಿಟ್ಟವೆಳಗಿನಿಂ ನಿವಳಿಸುವಂತೆಯುಂ . . . ಪುತ್ರಸಂಗಪ್ರತ್ಯಂಗಂಗಳಂ ನೀಡುಂ ಭಾವಿಸಿ ಸೋಡಿ (ಚಂದ್ರಪ್ರ. ೩-೧೦೨ ವ); ಮೇರುನಗೇಂದ್ರಂ ನಿನ್ನ ರಾಜ್ಯೋದ್ಭವವಿಜಯಾವಳಿಃ ಕೀರ್ತಿಲಕ್ಷ್ಮೀಸದೃಕ್ಷಾಂಗನೆಯರ್ ಕಣ್ಸೋಲಮಂ ಸಾಲಿಡೆ ನಿವಳಿಪ ದೀಪಾವಳೀ ಚಾರುನೀರಾಜನಮಾಂಗಲ್ಯಕ್ಕೆ ಮಾಂಗಲ್ಯಮನೆಸಗುಗು (ಅನಂಪು. ೭-೫೮). **ನೀವಾಳಿಸು** : ೧. ಮಗು ಸಾಯಂಕಾಲದಿಂದ ಒಂದೇ ಸಮನೆ ರಚ್ಚೆಹಿಡಿದಿದೆ. ಉಪ್ಪು ಮೆಣಸಿನಕಾಯಿ ನೀವಾಳಿಸಿ ಹಾಕು (ರೂಢಿ). 'ನಿವಾರಿಸು' ಪರಾ.

ನಿವಾಳಿಸಿ ಒಗೆ = ೧. ದೃಷ್ಟಿತೆಗೆದು ಚೆಲ್ಲು; ಇಳಿದೆಗೆದು ಬಿಸುಡು: ಅನ್ನ ಮೊಸರು ಕಲಸಿ ತಂದು ಕೂಡಲೆ ಗೊಂಬೆಯ ಮೇಲೆ ನಿವಾಳಿಸಿ ಒಗೆಯಬೇಕಾಗಿತ್ತು (ಸ್ಮೃತಿಚಿ. ೮೪). ೨ = ನಿವಾಳಿದೆಗೆ ೨ : ಇವಳ ಮುಂದೆ ಆ ಮಲ್ಲವ್ವ ಸುಂದರವ್ವ ಎಲ್ಲರನ್ನೂ ನಿವಾಳಿಸಿ ಒಗೆಯಬಹುದು (ನಾಪೂಲೀ. ೨೨೨). **ನಿವಾಳಿಸಿ ಚಲ್ಲು** = ೧. ನಿವಾಳಿಸಿ ಒಗೆ ೧ : ನಾನು . . . ಹೋಗಿ ಮೊಸರನ್ನ ನಿವಾಳಿಸಿ ಚಲ್ಲಿದೆ (ಸ್ಮೃತಿಚಿ. ೮೫). ೨. = ನಿವಾಳಿದೆಗೆ ೨ : ಉಳಿದ ಹುಡಿಗೆಯರನ್ನು ನಿನ್ನ ಮುಂದೆ ನಿವಾಳಿಸಿ ಚಲ್ಲಬೇಕು (ರಂಗರೋ. ೧೭೨). [ನಿವಾಳಿ + -ಇಸು$_3$]

ನಿವಾಳಿಸುಹ (ನಾ). ಇಳಿದೆಗೆಯುವಿಕೆ ; ನಿವಾಳಿಸುವಿಕೆ : ಲೋಹಾಭಿಸಾರ = ಶಸ್ತ್ರಧರರಹ ಅರಸುಗಳಿಗೆ ಪರಿವಾರ ಕೆಯ್ಯುಗಳ ನಿವಾಳಿಸುಹಂ (ನಾಚರಿ. ೬). [ನಿವಾಳಿಸು + -ಹ(<-ಪ)]

ನಿವಾಳಿಹಾಕು (ಕ್ರಿ). = ನಿವಾಳಿಸು ೧ : ಅನೇಕರು ಆ ಬುರುಡೆಗಳನ್ನು ಕೈಯಲ್ಲಿ ಹಿಡಿದು ಬಾಯಲ್ಲಿ ಕಚ್ಚಿಕೊಂಡು ಸಹ ಬಂದು ದೊರೆಗೆ ನಿವಾಳಿಹಾಕುತ್ತಿದ್ದರು (ಚಿತ್ರಪಾ. ೬೮).

[ನಿವಾಳಿ + ಹಾಕು (<ಪಾಯ್ಕು$_1$)]

ನಿವಾಳೆ 'ನಿವಾಳಿ' ನೋ.

ನಿವಾಳೆಯಿಡು (ಕ್ರಿ). ಕಾಣಿಕೆ ಕೊಡು : ಪುರಜನ ಪರಿಜನವನಿಶಂ ನೆರೆ ದೊಡನೆ ನಿವಾಳೆಯಿಟ್ಟು ಪೊಡವಡಲಾಗಳ್ ಧುರಧೀರಶಂಟೆಸ್ಥಪತಿಗೆ ತರುಣಿಯರಾರತಿಯನೆತ್ತಿದರ್ ಸಂತಸದಿಂ (ಬೀಳವಂ. ೧-೬೨).

[ನಿವಾಳೆ (<ನಿವಾಳಿ) + ಇಡು$_1$]

ನಿವಿಡ (ಗು). ೧. ಒತ್ತಾದ; ನಿಬಿಡವಾದ; ಸಾಂದ್ರವಾದ. (ನಾ). ೨. ಹೇರಳ; ಅತಿಶಯ : ನಿವಿಡವಾಗಿವೆ ಸಾಧನಂಗಳು ಪವನಜನೆ ನೀಂ ನೋಡು (ರಾಮಾಸಂ. ೫-೨-೩೨). 'ನಿಬಿಡ' ಪರಾ. [ಸಂ.]

ನಿವಿಡೀಕ (ಗು). = ನಿವಿರೀಶ. [ಸಂ.]

ನಿವಿರೀಶ (ಗು). ಒತ್ತಾದ; ದಟ್ಟವಾದ. [ಸಂ.]

ನಿವಿಷ್ಟ (ಗು). ೧. ಒಳಹೊಕ್ಕ; ಪ್ರವೇಶಿಸಿದ. ೨. ಕುಳಿತ ; ಆಸೀನವಾದ. ೩. ಇರುವ; ಬೀಡು ಬಿಟ್ಟ : ಕೃತೀಯದ್ವೀಪದಂತೆ ನಿವಿಷ್ಟೇಷ್ಟಾಕಾರಮಾನುಷೋತ್ಕರಮುಂ . . . ಅಪ್ಪ ಸಂಗ್ರಾಮ

ಭೂಮಿಯಂ ಪೊಱಮಟ್ಟು (ಚಂದ್ರಪ. ೧೦–೧೫ ಪ). ೪. ತತ್ಪರವಾದ; ತೀವ್ರವಾದ ಆಸಕ್ತಿಯುಳ್ಳ. (ನಾ). ೫. ಕುಳಿತಿರುವುದು: ಅಜಾಂಡತತಿ ನಿಜತನುರೋಮನಿವಿಷ್ಟವೆನಿಪ ಕೃಷ್ಣಂ ಬಿನದದೆ ಸಮಸತ್ತ್ವನಂತೆ ಕಾದಿದನವನೊಳ್ (ಜಗವಿ. ೯–೮೦). ೬. ಸ್ಥಿರವಾಗಿ ನೆಲೆಗೊಳಿಸಿರುವುದು; ನೆಟ್ಟಿರುವುದು: ನೆತ್ತಿಯೊಳ್ದರನಿಮಿಲಿತ ದೃಷ್ಟಿ ನಿವಿಷ್ಟಮಾಗೆ ಮೂಗಿನ ತುದಿಯೊಳ್ನಿರುದ್ಧಕರಮುಂ ನಲೆ . . . ಮಿನುಗುತುಮಿರ್ದನಾ ಪರಮಯೋಗಿಯವೋಲ್ಪಣಿರಾಜಕೇತನಂ (ಗದಾಯು. ೬–೧೫). ೭. ಕುಳಿತಿರುವವನು: ಅವತರಿಸಿ ಚಕ್ರಿಯಂ ಕಂಡವನತಮಣಿಮಕುಟನುಚಿತಪೀಠನಿವಿಷ್ಟಂ ಭುವನೇಶಂ ಬೆಸಗೊಳೆ . . . ನುಡಿದಂ (ಅದಿಪು. ೧೩–೨೪). [ಸಂ.]

ನಿವಿಸ 'ನಿಮಿಸ' ನೋ.

ನಿವೀತ (ನಾ). ೧. ಜನಿವಾರವನ್ನು ಕೊರಳಲ್ಲಿ ಹಾರದಂತೆ ಹಾಕಿಕೊಳ್ಳುವುದು: "ಜನ್ನವಿರಮಂ ಬಲಂದೊಡುವುದು ಉಪವೀತಮೆಂಬುದು . . . ಕೊರಲೊಳಗೆ ಇಱಿಯಲಿಕ್ಕುವುದು ನಿವೀತಮೆಂಬುದು" (ಹಲಾಯು. ೬೭–೨೫೩); ಪೀನಜಘನನಿವೀತವಿಮಳನವೀನಪೀತಾಂಬರದ ಯೋಗಿಧ್ಯಾನಮಂಗಳಚರಣಕಮಲನ ಮೂರ್ತಿಯನು ಕಂಡ (ಸಿಭಾಗ. ೩–೯–೧೧). ೨. ಕೊರಳಲ್ಲಿ ಹಾರದಂತೆ ಧರಿಸಿರುವ ಜನಿವಾರ. ೩. ಹೊದಿಕೆ; ಆಚ್ಛಾದನ: "ಪ್ರಾವೃತ, ನಿವೀತ–ಹೊದಕೆಯ ಸೀರೆ" (ನಾಚಿರಾ. ೬); "ನಿವೀತಂ, ಪ್ರಾವೃತಂ – ೨ ಹೊದಿಯುವ ಬಟ್ಟೆ, ಅಂಗವಸ್ತ್ರ" (ಸಿದ್ಧಾಂತಿ. ೨೦೩). [ಸಂ.]

ನಿವೀತಿ (ನಾ). ೧. = ನಿವೀತ ೧: ಬರುತ ಕಂಡನು ದೂರದಲಿ ಮುರಹರನ ಮಂಗಳಮೂರ್ತಿಯನು . . . ಗರುಡಭುಜಮೂಲಾಂತರಿತ ಮೇದುರನಿತಂಬನಿವೀತಿಪೀತಾಂಬರವಿಲಂಬಿತ ರತ್ನಕಾಂಚೀಗುಣಮಣಿದ್ಯುತಿಯ (ಸಿಭಾಗ.೧೦–೬೨–೨೦); ಚಿತ್ರದಲ್ಲಿ ರಾಯರು ತಲೆಯನ್ನು ಕೆದರಿಕೊಂಡು, ಜನಿವಾರವನ್ನು ನಿವೀತಿ ಹಾಕಿಕೊಂಡು ಕುಳಿತಿದ್ದ ಹಾಗೆ ಬರೆದಿತ್ತು (ತುರಾಯು. ೧೧೫). ೨. = ನಿವೀತ ೨: (ಕ). ೩. ಜನಿವಾರವನ್ನು ಕೊರಳಿನಲ್ಲಿ ಹಾರದಂತೆ ಹಾಕಿಕೊಂಡಿರುವವನು.

[ಸಂ. ನಿವೀತಿನ್]

ನಿವುಚು 'ನಿಮಿರ್ಚು' ನೋ.

ನಿವುದಿ (ನಾ). ಒಂದು ಊರಿನ ಹೆಸರು: ಸಕ ವರ್ಷ ಎಣ್ಬತ್ತೂಱ ಅಯ್ದನೆಯ ವರ್ಷಂ ಪ್ರವರ್ತಿಸುತ್ತಿರೆ ಕಿಡಲೆಗಧಿಪಾಣ್ಣನ್ ಎಱೆಯಮ್ಮಂ [ನಿ]ವುದಿ ತೊಱುಗೊಳೊಳ್ಳಾದಿ ಸತ್ತೋನ್ (ಸೌಇಇ. XI–1, ೧೯–೬; 883). [?]

ನಿವುರು 'ನಿಮಿರ್$_1$' ನೋ.

ನಿವೃತ (ಗು). ೧. ಸುತ್ತುವರಿದ; ಆವರಿಸಿಕೊಂಡ: ನಿವೃತಾಖಿಳರಾಜನ್ಯಕನಿವಹಂ ನೃಪಮೇರು ಮೇಘರಥನೊಲ್[ದದಜೋಳ್]ಸವಿಳಾಸದಿನರೆಯುಂ (ಶಾಂತೀಶ್ವ. ೧೩–೩೫). (ನಾ). ೨. ಸುತ್ತುವರಿದುದು; ಆವರಿಸಿದುದು: "ನಿವೃತಂ, ವೇಷ್ಟಿತಂ, ಪರಿವಿಷ್ಟಂ, ವಳಯಿತಂ, ಪರಿಕ್ಷಿಪ್ತಂ—ಈ ೫ ಸುತ್ತಲ್ಪಟ್ಟುದು" (ಹಲಾಯು. ೧೧೮–೨೬); ಸಚಿತ್ತಾಚಿತ್ತಶೀತೋಷ್ಣನಿವೃತಸಂವೃತಾದಿಭೇದದಿಂ ಚತುರಶೀತಿಲಕ್ಷಪ್ರಮಾಣಯೋನಿಮುಖಂಗಳೊಳಾವರ್ತನಪರಿವರ್ತನದಿಂ ದುರಿತವರ್ತಿಯಾಗಿ ನಮಿಪ ಸಂಸಾರಿ ಜೀವಕ್ಕೆ . . . ಮುನಿಪುಂಗವಂ ಪ್ರಸಾದಂಗೆಯ್ದಂ (ಸುಕುಮಾ. ೫–೬೨ ಪ). ೩. = ನಿವೀತ ೩. [ಸಂ.]

ನಿವೃತ್ತ (ಗು). ೧. ಹಿಂದಿರುಗಿದ; ಮರಳಿದ. ೨. ಹೋದ; ಅದೃಶ್ಯವಾದ; ಮರೆಯಾದ. ೩. ನಿಲ್ಲಿಸಿದ; ಕೊನೆಗೊಳಿಸಿದ; ಮುಗಿಸಿದ. ೪. ವಿಮುಖವಾದ. ೫. ಇಹಲೋಕ ಮತ್ತು ಲೌಕಿಕವ್ಯಾಪಾರಗಳಿಂದ ದೂರ ಸರಿದ. ೬. ನಿರ್ದಿಷ್ಟಕಾಲದ ಸೇವೆಯಿಂದ ಮುಕ್ತನಾದ; ಕೆಲಸದಿಂದ ವಿಶ್ರಾಂತಿ ಪಡೆದ. (ನಾ). ೭. ಬಿಡುಗಡೆಹೊಂದಿದ ವ್ಯಕ್ತಿ: ಕ್ರೂರರತ್ಯಧಮರು ದ್ರೇಕಿಗಳು . . . ಶರಣೆನಲು ನಿಜವೈರಮಂ ಬಿಡುವರೆಂಬಾಗಳೀ ಸರ್ವಸಂಗನಿವೃತ್ತರೆನಿಪ ನಿಮಗೆ ಓರಂತೆ ಬೇಡಿಕೊಳುತಿಪ್ಪೆನ್ನ ಮೇಲಿನತು ಕಾರುಣ್ಯವೇಕಿಲ್ಲ (ಹಚಕಾ. ೮–೨೧). ೮. ಸೇವೆಯಿಂದ ಮುಕ್ತನಾದವನು; ನಿವೃತ್ತಿ ಹೊಂದಿದವನು: ಟಸ್ಲರ್ . . . ೩೦ ವರ್ಷಗಳು ಅವಿರತವಾಗಿ ಸೇವೆ ಸಲ್ಲಿಸಿದನು. ೧೯೫೧ ರಲ್ಲಿ ಅಲ್ಲಿಯೇ ಸೇವೆಯಿಂದ ನಿವೃತ್ತನಾದನು (ಸಸ್ಯಕ. ೬೮). ೯. [ನಾಟ್ಯ] ಒಂಬತ್ತು ಬಗೆಯ ಕೊರಳಿನ ಭಂಗಿಗಳಲ್ಲಿ ಒಂದು; "ನೆಟ್ಟಗಿರುವ ಕತ್ತನ್ನು ತಿರುಗಿಸುವುದು" (ಲಾಸ್ಯರಂ. ೨೫೯ ಗದ್ಯಾನುವಾದ): ಸಮಮುಂ ನಿವೃತ್ತಮುಂ ವಲಿತಮುಮೊಪ್ಪುವ ರೇಚಿತಾಖ್ಯಮಾಕುಂಚಿತಮುಂ ಕ್ರಮದಂಚಿತಮುಂ ತ್ರ್ಯಸ್ರಮುಮಮಿತ[ದ]ನತಮುನ್ನತಂಗಳೊಂಬತ್ತು ಕೊರಲ್ (ಲಾಸ್ಯರಂ. ೨–೧೧೪); ಕೊಂಕಿಲ್ಲದೆ ಸಾಜದಿ ನೀ ಟಂಕಿಸೆ ಸಮಮದುವೆ ತಿರುಗಲೊಡನೆ ನಿವೃತ್ತಂ (ಲಾಸ್ಯರಂ. ೨–೧೧೫). ℙ "ನಿವೃತ್ತ—ಪಕ್ಕಕ್ಕೆ ತಿರುಗಿರುವ ಕತ್ತನ್ನು ಸಮಸ್ಥಿತಿಗೆ ತರುವುದು. ವಲಿತ—ಕತ್ತನ್ನು ಪಕ್ಕಕ್ಕೆ ತಿರುಗಿಸುವುದು" ಎಂದು ಭರತನಾಟ್ಯ ಮತ್ತು ಸಂಗೀತರತ್ನಾಕರ ಇವುಗಳಲ್ಲಿದೆ (ಲಾಸ್ಯರಂ.) ೨–೧೧೫ ಅಡಿಟಿ). [ಸಂ.]

ನಿವೃತ್ತಿ (ನಾ). ೧. ಹಿಂತಿರುಗುವಿಕೆ; ಮರಳುವಿಕೆ. ೨. ಮರೆಯಾಗುವಿಕೆ; ಕಣ್ಮರೆ; ಅದೃಶ್ಯವಾಗುವಿಕೆ. ೩. ನಿಲ್ಲಿಸುವಿಕೆ. ೪. ಕರ್ಮ ಮಾಡದೆ ಇರುವಿಕೆ; ಕರ್ಮದಿಂದ ವಿಮುಖವಾಗುವಿಕೆ; ಲೌಕಿಕವ್ಯವಹಾರ ಮತ್ತು ಐಹಿಕಸುಖಗಳಲ್ಲಿ ಆಸಕ್ತಿ ಇಲ್ಲದಿರುವಿಕೆ: "ವ್ಯಾವೃತ್ತಿ ನಿವೃತ್ತಿ" (ಸುಸ್ತುಕೋ. ೧೧೩–೧೬); ಧರ್ಮಾಧರ್ಮ ವಿವೇಕ, ಪ್ರವೃತ್ತಿನಿವೃತ್ತಿಮಾರ್ಗಗಳ ಸಮನ್ವಯ . . . ಮಾನವಧರ್ಮದ ವಿವೇಚನೆಯೇ ಈ ಕಥೆಗಳ ತತ್ವವಾಗಿದೆ (ಭಾರದ.೧೦೨); ವೇದಾಂತವು . . . ಪ್ರವೃತ್ತಿ—ನಿವೃತ್ತಿಗಳ ಸಾಮರಸ್ಯವನ್ನು ಸೂಚಿಸಿ ನಮ್ಮ ಕರ್ತವ್ಯ ಹೊಣೆಗಾರಿಕೆಗಳ ಎಚ್ಚರಮಾಡಿಕೊಡುತ್ತದೆ (ಧರ್ಮಸಾ. ೫೨). ೫. ಮುಕ್ತಿ; ಪರಮಸುಖ: ನಮ್ಮ [ನವ್ವ]ಚೋವೃತ್ತಿಯನೀ ನಿವೃತ್ತಿ ದೊರೆಕೊಂಡತ್ತು (ಸುಕುಮಾ. ೧೨–೧೫); ಉತ್ಕೃಷ್ಟನರೇಂದ್ರಪದವಿಯಂ ಬಿಸುಟ್ಟು ತಪೋಭಿಮುಖರಾಗಿ ನಿವೃತ್ತಿಯನೆಯ್ದಿದರ್ (ಜೀವಸಂ. ೨೬–೫೦ ಪ); ದ್ವೈತಲಯವೆನಿಪುದೆ ನಿವೃತ್ತಿ ನಿವೃತ್ತಿಯೆಂದೆನಿಪುದೇ ವಿಶ್ರಾಂತಿಯೆಂದೆನಿಪುದು (ಲಕಿಂ. ೫೨–೨೧). ೬. ಬಿಡುಗಡೆ: ಪೂರ್ವಜನ್ಮ ನಿವೃತ್ತಿಯಾಗಿ ಗುರುಕರುಣವಿದಂಗೆ ಬಂಧನವೆಲ್ಲಯದೂ (ಬಸವ. ೮೭೦). ೭. (ನಿಗದಿಯಾದ ಅವಧಿ ಮುಗಿದ ನಂತರ) ನೌಕರಿ ಅಥವಾ ಸೇವೆಯಿಂದ ಹೊಂದುವ ಬಿಡುಗಡೆ: ಅವರ ನಿವೃತ್ತಿಯ ಕುರಿತ ಇತ್ಯರ್ಥವು . . . ತಡವಾಗುತಿರುವಾಗ ಬಂದಿತು ಮೃತ್ಯು ಇದಕೆ ತಡೆಬೆಯಿಲ್ಲವಾಗಿ (ಇಂಚಾಸ. ೨೧–೯೬). ೮. [ನಾಟ್ಯ] 'ಭಾಣಿಕಾ' ಎಂಬ ಉಪರೂಪಕದ ಏಳು ಅಂಗಗಳಲ್ಲಿ ಒಂದು; ℙ ಭಾಣಿಕಾ ಎಂಬುದೊಂದು ಉಪರೂಪಕ. ಒಂದು ಅಂಕದ ದೃಶ್ಯ. ಇದರಲ್ಲಿ ಏಳು ಅಂಗಗಳಿವೆ. ೧. ಉಪನ್ಯಾಸ—ಪ್ರಸಂಗವಶದಿಂದ ಪ್ರಕೃತ ಕಾರ್ಯವನ್ನು ತಿಳಿಸುವುದು. ೨. ವಿನ್ಯಾಸ—ಬೇಸರಿಕೆಯ ಮಾತುಗಳನ್ನು ಹೇಳುವುದು. ೩. ವಿಬೋಧ—ಭ್ರಾಂತಿಯು ಪರಿಹಾರವಾಗುವುದು. ೪. ಸಾಧ್ವಸ—ಇಲ್ಲದುದನ್ನು ಹೇಳುವುದು. ೫. ಸಮರ್ಪಣ—ಕೋಪಪರವಶತೆಯಿಂದ ಮಾತನಾಡುವುದು. ೬. ನಿವೃತ್ತಿ—

ದೃಷ್ಟಾಂತಗಳನ್ನು ಕೊಡುವುದು. ೭. ಸಂಹಾರ ಕಾರ್ಯವು ಮುಕ್ತಾಯವಾಗುವುದು : ಭಾಣಿಕಾ—ಇದರಲ್ಲಿಯೂ ಒಂದೇ ಅಂಕ . . . ಉಪನ್ಯಾಸ, ವಿನ್ಯಾಸ, ವಿಬೋಧ, ಸಾಧ್ವಸ, ಸಮರ್ಪಣ, ನಿವೃತ್ತಿ, ಸಂಹಾರ ಎಂಬ ಏಳು ಅಂಗಗಳು (ಸಂನಾಟ. ೩೬). [ಸಂ.]

ನಿವೃತ್ತಿಗೊಳಿಸು (ಕ್ರಿ). ನಿಗದಿಯಾದ ಕೆಲಸದಿಂದ ಬಿಡುಗಡೆ ಮಾಡು : ಪ್ರಭಾಕರನು ಮಿತ್ರಪಾಲನನ್ನು ತಾನು ಕೊಟ್ಟಿದ್ದ ಅಧಿಕಾರದಿಂದ ನಿವೃತ್ತಿಗೊಳಿಸಿದನು (ಕವಿಕ. ೪೦).

[ನಿವೃತ್ತಿ + ಕೊಳ್$_1$ + –ಇಸು$_3$]

ನಿವೃತ್ತಿಧರ್ಮ (ನಾ). ೧. ವೈರಾಗ್ಯವನ್ನು ಬೋಧಿಸುವ ಧರ್ಮ; ನಿವರ್ತಕ ಧರ್ಮ : ಸಂಜೀವಕನುಂ . . . ಸಂಸಾರಿಯುಂ ಪರಾಕ್ರಮಿಯುಮಪ್ಪ ನಿನಗೆ ದಿವ್ಯಮುನಿಗೆ ಪೇಳ್ವಂತೆ ನಿವೃತ್ತಿಧರ್ಮಮಂ ಪೇಳ್ದೊಡೆ (ಪಂಚತಂ. ೯೭–೧೫). ೨. (ತಾರ್ಕಿಕ ದರ್ಶನದ ಮೇರೆಗೆ) ಜೀವಿಗೆ ಹಿಂದಿನಿಂದ ಕೂಡಿಕೊಂಡು ಬಂದ ಧರ್ಮಾಧರ್ಮಗಳ ನಿವೃತ್ತಿ : ಪ್ರಾಚೀನ ಸಂಚಿತ ಧರ್ಮಾಧರ್ಮಗಳು ನಿವೃತ್ತಿಯಾಗಿ ನಿವೃತ್ತಿಧರ್ಮ ಉದಯಿಸುವುದು (ಹಿಂದಸಾ. ೧೨೩). [ಸಂ.]

ನಿವೃತ್ತಿಪರ (ನಾ). ಸಂಸಾರಬಂಧನದಿಂದ ನಿವೃತ್ತಿಯನ್ನು ಪಡೆಯುವುದೇ ಗುರಿಯಾಗಿರುವುದು; ಲೌಕಿಕಜೀವನದಿಂದ ಬಿಡುಗಡೆ ಹೊಂದುವುದೇ ಧ್ಯೇಯವಾಗಿರುವುದು : ಭಕ್ತಿಯ ಮಾರ್ಗ ನಿವೃತ್ತಿಪರ. ಶಕ್ತಿಯ ಮಾರ್ಗ ಪ್ರವೃತ್ತಿಪರ (ಭಾರದ. ೧೧೮).

[ಸಂ.]

ನಿವೃತ್ತಿಪರಿಣತಿ (ನಾ). (ಸಂಸಾರದಿಂದ) ಮುಕ್ತಿಯನ್ನು ಹೊಂದುವ ಪರಿಪಕ್ವಸ್ಥಿತಿ : ಮನಕ್ಕೆಂತಾನುಂ ಕಾಲಲಬ್ಧಿವಶದಿಂ ನಿವೃತ್ತಿಪರಿಣತಿಯೊಳ್ ಪರಿಣಮಿಸಿದ ಸುಸ್ಥಿತಿಯಂ ವ್ಯರ್ಥಂ ಮಾಡದೆ ತಪೋವನಾಭಿಮುಖನಾದೆನ್ನ ಪರಿನಿಷ್ಕ್ರಮಣದೊಳ್ ಪರಿಪಂಥಿಭಾವಮಂ ಪೊರ್ದದೊಡಂಬಡುವುದೆ ನಿನಗೆ ವಿನಯಂ (ಚಂದ್ರಪು. ೪–೧೮ ಪ).

[ನಿವೃತ್ತಿ + ಪರಿಣತಿ]

ನಿವೃತ್ತಿಮಾರ್ಗ (ನಾ). ಲೌಕಿಕಸುಖಕ್ಕಾಗಿ ಆಚರಿಸುವ ಕರ್ಮಗಳಿಂದ ವಿಮುಖವಾಗುವಿಕೆ; ವಿರಕ್ತಿ; ℗ ಹಿಂದೂಧರ್ಮದಲ್ಲಿ ಪರಲೋಕಸಾಧನೆಗಾಗಿ ಎರಡು ಮಾರ್ಗಗಳು ಪ್ರತಿಪಾದಿತವಾಗಿವೆ. ಮೊದಲನೆಯದು ಪ್ರವೃತ್ತಿಮಾರ್ಗ. ಎರಡನೆಯದು ನಿವೃತ್ತಿಮಾರ್ಗ. ಸಾಧಕನು ಪ್ರಪಂಚ ವ್ಯವಹಾರವನ್ನು ಬಿಡದೆ ದೇವತಾರಾಧನೆ, ಜಪ ಮೊದಲಾದ ಪುಣ್ಯಕರ್ಮಗಳನ್ನು ಮಾಡಿದರೆ ಆ ಪುಣ್ಯದಿಂದ ಪರಲೋಕಸಾಧನೆಗೆ ಪ್ರಯತ್ನಿಸುವುದೇ ಪ್ರವೃತ್ತಿಮಾರ್ಗ. ಈ ಪ್ರವೃತ್ತಿಮಾರ್ಗದಿಂದ ಉಂಟಾಗುವ ಪುಣ್ಯವು ಸಂಚಿತವಾದುದರಿಂದ ಕೆಲ ಕಾಲಾನಂತರ ಆ ಪುಣ್ಯವು ಮುಗಿದುಹೋಗುತ್ತದೆ. ಆಗ ಭೂಮಿಯಲ್ಲಿ ಮತ್ತೆ ಹುಟ್ಟಬೇಕಾಗುವುದು. ಆದುದರಿಂದ ಸರ್ವಕರ್ಮಸಂನ್ಯಾಸ ಅಥವಾ ವಿರಕ್ತಿಯನ್ನು ತಳೆದು 'ತಾನು ಯಾರು' ಎಂಬ ಸಮಸ್ಯೆಯನ್ನು ಬಿಡಿಸುವ ಆತ್ಮಜ್ಞಾನವನ್ನು ಪಡೆದರೆ ಶಾಶ್ವತ ಮುಕ್ತಿಯುಂಟಾಗುತ್ತದೆ ಎಂದು ನಂಬಿ ನಡೆಯುವುದೇ ನಿವೃತ್ತಿಮಾರ್ಗ : ಸ್ಥಲಗಳಲ್ಲಿ—ಭಕ್ತಾದಿಯಿಂದ ಐಕ್ಯಾಂತವಾಗಿ ಹೇಳುವುದು ನಿವೃತ್ತಿಮಾರ್ಗವೆಂದೂ ಸ್ಥಲಜ್ಞರು ಹೇಳುವರು (ಶಿವಾಸಾ. ೫೯–೪೩ ವಿಜಾರ) ; ನಿವೃತ್ತಿಮಾರ್ಗಕ್ಕಿಂತ ಪ್ರವೃತ್ತಿಮಾರ್ಗವನ್ನು ಅನುಸರಿಸುವುದು ಅಗತ್ಯವೂ ಅನಿವಾರ್ಯವೂ ಆದುದೆಂದು ಅವನು ಬೋಧಿಸಿದ (ಭಾರದ. ೪೬೧) ; ದಾಸರದು ಮುಖ್ಯವಾಗಿ ನಿವೃತ್ತಿಮಾರ್ಗ (ಧರ್ಮಸಾ. ೮೮). [ನಿವೃತ್ತಿ + ಮಾರ್ಗ]

ನಿವೃತ್ತಿವೇತನ (ನಾ). (ಸರಕಾರಿ) ಸೇವೆಯಿಂದ ವಿಶ್ರಾಂತಿ ಹೊಂದಿದ ಮೇಲೆ ಪಡೆಯುವ ವೇತನ; ವಿಶ್ರಾಂತಿವೇತನ; ಪಿಂಚಣಿ; ಪೆನ್‌ಷನ್ನು : ನ್ಯಾಯಾಲಯದ ನ್ಯಾಯಾಧೀಶರುಗಳಿಗೆ . . . ಪಾವತಿಯಾಗಬೇಕಾದ ವೇತನಗಳು . . . ಮತ್ತು ನಿವೃತ್ತಿವೇತನಗಳು (ಭಾಧಾನ. ೫೮) ; ನಿವೃತ್ತಿವೇತನದ ರೂಪದಲ್ಲಿ ಅವನು ವರ್ಷಂಪ್ರತಿ ಹತ್ತಾರು ಸಾವಿರ ರೂಬಲ್ ವರಮಾನ ಪಡೆಯುತ್ತಿದ್ದನು (ಪುನರು. ೩೩೪).

[ನಿವೃತ್ತಿ + ವೇತನ]

ನಿವೇದಕ (ಗು). ೧. ತಿಳಿಸುವ; ಹೇಳುವ : ಸುತಲಾಭ ನಿವೇದಕ ವಾರ್ತೆ ತೀವೆ ಪುಳಕಮನಾಂತಳ್ (ಜನಪಿ. ೨–೮೬). (ನಾ). ೨. ಹೇಳುವವನು; ತಿಳಿಸುವವನು : ಆ ನೃಪನೋಲಗಕ್ಕೆ ಋಷಿಯಾಗ ನಿವೇದಕನೊರ್ವನೆಯ್ದಿ ಬಂದಾನತನಾಗಿ . . . ಎಂದು ಬಿನ್ನವಿಪುದುಂ (ಚಂದ್ರಪು. ೯–೧೬). 'ಋಷಿನಿವೇದಕ' ಪರಾ. [ಸಂ.]

ನಿವೇದನ (ನಾ). ೧. ತಿಳಿಯಪಡಿಸುವಿಕೆ; ಮಾಹಿತಿ ಕೊಡುವಿಕೆ : ಸಭೆ ಸಮಾಜ ಭಾಷಣ ನಿರ್ಣಯ ಅವೇದನ ನಿವೇದನ ಸಮುವೇದನ —ಇತ್ಯಾದಿ ನನಗೆ ಅದು ಒಪ್ಪುವುದಿಲ್ಲ (ಬಂಕಿಮ. ೧೧೦) ; ಕಾವ್ಯ ಎಂದರೇನು ಎಂಬುದನ್ನು ವಿಚಾರಮಾಡುತ್ತಾ ಅದು "ಅನ್ಯವಿಧದಿಂದ ಅಸಾಧ್ಯವಾದ, ಕೆಲವು ಅನುಭವಗಳ ವಾಗ್ರೂಪದ ನಿವೇದನ" . . . ಎನ್ನುತ್ತಾನೆ (ಭಾಪಗೀ. ೨೭). ೨. ಸಮರ್ಪಣೆ; ದೇವರು, ಗುರು, ಹಿರಿಯರು ಮೊದಲಾದವರಿಗೆ ಕಾಣಿಕೆ ಮೊದಲಾದುವನ್ನು ಅರ್ಪಿಸುವಿಕೆ; ನೈವೇದ್ಯ : ಗಿಡದ ಮೇಲೆಯೇ ಹಣ್ಣಾದ ಎರಡು ಖರ್ಜೂರವನ್ನು ನಿತ್ಯವೂ ತಂದು ನಿವೇದನಕ್ಕಾಗಿ ಅದನ್ನು ತೆಗೆದು ಇರಿಸುತ್ತಿದ್ದನು (ನೀತಿಚಿಂ. VI, ೮). 'ಆತ್ಮನಿವೇದನ' ಪರಾ. ೩. ಹೇಳಿಕೆ; ನಿರೂಪಣೆ. ೪. ಅರಿಕೆ; ಬಿನ್ನಹ; ವಿಜ್ಞಾಪನೆ.

[ಸಂ.]

ನಿವೇದನೆ (ನಾ). = ನಿವೇದನ ೪ : ನನ್ನ ದುಃಖವನ್ನು ತಮ್ಮಲ್ಲಿ ನಿವೇದನೆ ಮಾಡಿಕೊಂಡಿದ್ದೇನೆ (ರೂಢಿ). [ಸಂ. ನಿವೇದನ]

ನಿವೇದಿತ (ಗು). ೧. ತಿಳಿಯಪಡಿಸಿದ; ಹೇಳಿದ : ಗುಣಧರರೆಂಬ ದಿವ್ಯಜ್ಞಾನಿಗಳನಲ್ಲಿರ್ದರಂ ಕಂಡು ನಿವೇದಿತ ನಿಜಜನಕವೃತ್ತಾಂತಮನವರವಚನದಿಂ ತಮ್ಮಯ್ಯನ ಸಾವುಮಂ ನರಕಕ್ಕೆ ಪೋಪುದುಮನಱಿದು (ಜಾವುಂಪು. ೧೪). ೨. ಅರ್ಪಿಸಿದ; ಸಮರ್ಪಿಸಿದ : ಸಂಗತ ನಿವೇದಿತಪದಪದಾರ್ಥಂಗಳಂ ಮುನ್ನಂಬಿಕಾನಾಥಂಗೆ ತನ್ನ ಪ್ರಾಣಪದಮಂ ತಾ ಸಮರ್ಪಿಸಲು (ಬಸಪು. ೩೩–೮). (ನಾ). ೩. ಹೇಳಲ್ಪಟ್ಟವನು; ತಿಳಿಸಲ್ಪಟ್ಟವನು : ಉದ್ಭವನೆಂಬ ದೂತಮುಖ್ಯನನಟ್ಟಿದೊಡಾತಂ ಬಂದು ದೌವಾರಿಕ ನಿವೇದಿತಂ ಸಭಾಭವನಮಂ ಪೊಕ್ಕು ಸಮುಚಿತಾಸನದೊಳ್ ಕುಳ್ಳಿರ್ದು (ಚಂದ್ರಪು. ೬–೧೮ ಪ) ; ಅಂತುಮಾಯುವರಾಜಂ ರಾಜಸುತ್ತಿರ್ನಮೊರ್ವಂ ದ್ವಾರಪಾಲನಿವಾರಿತಂ ವೇತ್ರಧರನಿವೇದಿತನಾ ಮಹಾಸ್ಥಾನಮಂ ಪೊಕ್ಕು ಮೆಯ್ಯಿಕ್ಕಿ ಕಯ್ಯಂ ಮುಗಿದು ನಿಂದು (ರಾಜಶೇ. ೧೦–೧ ಪ). [ಸಂ.]

ನಿವೇದಿಸು (ಕ್ರಿ). ೧. ಹೇಳು; ತಿಳಿಸು : ಅರಸಿಗಮೋಘಂಗಳಪ್ಪ ಕನಸಿನ ಫಲಂಗಳುಮಂ ನಿವೇದಿಸುವುದುಂ (ಶಾಂತಿಪು. ೯–೨೧೨ ಪ); ನೀನು ಮಿಾತನ ವೃತ್ತಾಂತಮನವರಯ್ಯನಪ್ಪ ಶ್ವೇತಕೇತುವಿಂಗೆ ನಿವೇದಿಸು (ಕಾದಂಬಾ. ೬೧೨) ; ಹರಿತಾಳದೊಳ್ ನಖಾಗ್ರದೆ ಬರೆದ ನಿಜಾವಸ್ಥೆಯಂ ನಿವೇದಿಸೆ ಬನದಿಂದರಗಿಳಿ ತಳರ್ಪುವು ದೇಶಾಂತರಕ್ಕೆ ಸಂದೇಶಹರರೋಲ್ ಬಿರಯಿಗಳಾ (ಅಜಿಪು. ೨–೯) ; ಪುಷ್ಪಕವಿಮಾನದ ರತ್ನವಿಚಿತ್ರಪುತ್ರಿಕಾ ಸಂಕುಳ . . . ಅಟ್ಟುವು . . . ಆ ಲಂಕೆಯ ಸೂಡನುನ್ನತಿಯ ಕೇಡನವಂಗೆ ನಿವೇದಿಪಂತೆವೋಲ್ (ಪಂರಾಮಾ. ೯–೧೦೯). ೨. ಒಪ್ಪಿಸು;

ಕೊಡು ; ಸಮರ್ಪಿಸು : ಸುನಂದೆಯೆಂಬೆಂ ಸನತ್ಕುಮಾರಂಗೆ ಗರ್ಭದೊಳಿರ್ದಂತೆ ನಿವೇದಿಸಿಪಟ್ಟೆಂ (ಪಡ್ಡಾರ. ೫೯-೬) ; ತನ್ನೊಡವುಟ್ಟಿದರ್ ಪೆಸರ ನಾಲ್ವರೊಳೋರ್ವರುಮಿಲ್ಲದಿರ್ದೋಡಂ ತನ್ನಸುವಂ ನಿವೇದಿಸುವನಗ್ನಿಗೆ ಧರ್ಮತನುಜಂ (ಗದಾಯು. ೪-೯) ; ತನುಲೋಭ ಮನಲೋಭ ಧನಲೋಭ ಮುಂದುಗೆಡಿಸಿ ಕಾಡಿಹುವೆನ್ನಾ ತನುಮನಧನವ ನಿವೇದಿಸಿದವರ ಮಗ ನಾನಯ್ಯಾ (ಬಸವ. ೩೧೫) ; ತಂದ ಭಿಕ್ಷಾಶನವನ್ನೆವರು ನಂದನರು ತಾಯಿಗೆ ನಿವೇದಿಸಲು (ಕುಮಾಹ. ೧೦-೪) ; ಕಾದಿಹೆನು ಹದಿನಾಲ್ಕುವರುಷ ಮೇದಿನಿಯ ನೀವ್ ಬಾರದಿರಲು ನಿವೇದಿಸುವೆನೀ ತನುವನನಲಂಗೆಂದನಾ ಭರತ (ತೊರಾ. ೨-೬-೩೩). ೩. ನಿರೂಪಿಸು : ಇಲ್ಲಿಯ ದೇಸಿ ಭೀಷ್ಮನ ಅದ್ಭುತತ್ಯಾಗವನ್ನು ಅಚ್ಛೋತ್ತಿದಂತೆ ನಿವೇದಿಸುತ್ತದೆ (ತಪಸಿ. ೬೯). ೪. ಬಿನ್ನವಿಸು ; ವಿಜ್ಞಾಪಿಸು : ನನಗೆ ಇರುವ ತೊಂದರೆಗಳನ್ನೆಲ್ಲಾ ನಿಮ್ಮ ಹತ್ತಿರ ನಿವೇದಿಸಿದ್ದೇನೆ (ಕೂಥಿ).

[ನಿವೇದನ+-ಇಸು$_3$]

ನಿವೇದ್ಯ (ಗು). ೧. ತಿಳಿಸಬೇಕಾದ ; ಹೇಳಬೇಕಾದ. (ನಾ). ೨. ದೇವರಿಗೆ ಅರ್ಪಿಸುವ ಫಲ, ಅನ್ನ ಇತ್ಯಾದಿ ; ನೈವೇದ್ಯ : ಶ್ರೀಮೂಲಸ್ಥಾನದೇವರ್ಗ್ಗೆ . . . ನಿವೇದ್ಯಕ್ಕೆ ಬಿಟ್ಟ ಹರಳ ಮತರು ೬ (ಸೌಇಇ. XI-i, ೬೮-೧೪; 1036); ಲಕ್ಷ್ಮೀಶ್ವರದೇವರ ಅಂಗಭೋಗಕ್ಕಂ ನಿವೇದ್ಯಕ್ಕಂ ಚೈತ್ರಪವಿತ್ರಾದಿಗಳ್ಗಂ . . . ಆಯಂ ಮಾಡಿ ಬಿಟ್ಟರು (ಕಇಅ. ೧-೧-೮ ; 1092) ; ಅಕ್ಷಯಾಣಕನಕಪಾತ್ರೋದ್ಧೃತನಿವೇದ್ಯದಿಂ . . . ಪೂಜಿಸಿ (ಚಂದ್ರಪು. ೬-೧೦೧ ರಗಳೆ) ; ಸುರುಚಿರಸುಧಾನಿವೇದ್ಯವನಿತ್ತು ಕಾಪಾಲಿಗೆಸೆವ ಕರ್ಪೂರವೀಳೆಯಂಗೊಟ್ಟು (ಹಚಕಾ. ೫-೮೧).

[ಸಂ.]

ನಿವೇದ್ಯಂಗೊಡು (ಕ್ರಿ). ನೈವೇದ್ಯವನ್ನು ಸಮರ್ಪಿಸು : ಹೊಂಬಾಯಣದೊಳೊಸೆದು ಬಿಡಿಸಿದ ಸುಳ್ಳುತದಿನ್ನಾನ್ನಮಂ ನಿವೇದ್ಯಂಗೊಟ್ಟು (ಹಚಕಾ. ಪರ. ೨೦೭-೬೬). [ನಿವೇದ್ಯ+ಕೊಡು$_1$]

ನಿವೇಶ (ನಾ). ೧. ಪ್ರವೇಶಿಸುವಿಕೆ. ೨. ನೆಲೆಯಾಗಿ ನಿಲ್ಲುವಿಕೆ ; ನೆಲಸುವಿಕೆ. ೩. ನೆಲೆ ; ನಿವಾಸ ; ಮನೆ : ದೇಶಂ ವರರಾಷ್ಟ್ರಾದಿ ನಿವೇಶಾಂತಂ ತದ್ವಿರುದ್ಧ ಪಶನಂ ಮಿಗೆ ಸಂಕ್ಲೇಶಕರಂ (ಕವಿರಾ. ೧-೧೦೯); ಮುನಿತತಿಗಳ ಮನವೆಯ್ದುದ ಮನುಗಳ ಬಗೆಪುಗದ . . . ಘನತೇಜೋರಾಶಿ ನಿಜನಿವೇಶದೊಳಿರ್ದಂ (ಗಿರಿಕ. ೫-೩೭). ೪. ಬಿಡಾರ ; ಪಾಳೆಯ ; ಶಿಬಿರ : "ನಿವೇಶಃ, ಶಿಬಿರಂ–ಈ ೨ ಬೇಡಿಕೆ" (ಹಲಾಯು. ೭೪-೨೯೮). ೫. [ನಾಟ್ಯ]ನೂರೆಂಟು ಕರಣಗಳಲ್ಲಿ ಒಂದು ; "ಮಂಡಲಸ್ಥಾನಕವನ್ನು ಮಾಡಿ ನಿರ್ಭುಗ್ನ ವಕ್ಷಸ್ಸಿನಲ್ಲಿ ಕಟಕಾಮುಖ ಹಸ್ತಗಳೆರಡನ್ನೂ ಹಿಡಿಯುವುದು" (ಲಾಸ್ಯರಂ. ೩೦೩ ಗದ್ಯಾನುವಾದ) : ತಲಪುಷ್ಪಪುಟ, ಲೀನ, ವಿವರ್ತಿತ . . . ಅವಹಿತ್ಥ, ನಿವೇಶ . . . ನಾಗಾಪಸರ್ಪಿತ, ಗಂಗಾವತರಣ—ಈ ನೂಱೆಂಟು ಕರಣಂಗಳ್ (ಲಾಸ್ಯರಂ. ೪-೪೨ ಪ). 'ದಿಕ್ಸ್ವಸ್ತಿಕ' ಪರಾ. [ಸಂ.]

ನಿವೇಶಕ (ನಾ). ಪ್ರವೇಶವನ್ನುಂಟುಮಾಡುವವನು : ಜ್ಞಾನಮಾರ್ಗನಿವೇಶಕನೆ ತತ್‌ಜ್ಞಾನಸಾಧನವಿಗ್ರಹನೆ ಅಜ್ಞಾನಹರಗುಣನಾಮಧೇಯನೆ ಜಯ ಸಮೋ (ನಿಘಾಗ. ೧೦-೬೩-೪). [ಸಂ.]

ನಿವೇಶಕರಣ (ನಾ). = ನಿವೇಶ ೫: ಬಿಡಿದ ಮಂಡಲ ತಾಣವಪಡಂಗಳೆಸಗಲ್ಕೆ ಹಸ್ತಮೆರಡುಂ ಕಟಕಾಸ್ಯದ ನಿರ್ಭುಗ್ನಾಸ್ಥಿತವಕ್ಷದೊಳಿರೆಸತಿ ಕೇಳ್ ನಿವೇಶಕರಣಮೆನಿಕ್ಕುಂ (ಲಾಸ್ಯರಂ. ೪-೧೫೫). [ಸಂ.]

ನಿವೇಶಣ, ನಿವೇಸಣ, ನೆವೇಸಣ, ನೆಸಣ, ನೇಸಣ (ನಾ). ಮನೆ ಮೊದಲಾದ ಕಟ್ಟಡಗಳನ್ನು ಕಟ್ಟುವುದಕ್ಕಾಗಿ ಇರುವ ಜಾಗ,—ಖಾಲಿ ಸ್ಥಳ: ನಿವೇಶನ : ಕೇರಿಯ ತೆಂಕಣ[ದ]ಲು ಹದಿನೆಂಟು ಕಂಯಿ ಮನೆಯ ನಿವೇಶಣಮಂ (ಕಇಅ. ೪೬-೪-೨೧ ; 1152). **ನಿವೇಸಣ :** × × × ಯ ನಿವೇಸಣ × × × (ಸೌಇಇ. XX, ೮೫-೪೫ ; 1124). **ನೆವೇಸಣ :** ಮನೆಯ ನೆವೇಸಣ ಮೂಡ ಸೋಮನಥದೇವರ ಗದ್ದೆಯಿಪಡುವ ತೆಂಕ ಮುಖವಾಗಿ ಬಂದ ಕೈ ೪೮ (ಸೌಇಇ. XV, ೪೩-೩೩; ?). **ನೆಸಣ :** ದೇವಂಗೇರಿಯೊಳೇಟ್ಟಯ್ಯೊಳಂ ಅಯ್ಯನ್ಯೊಳಂ ಮನೆಯ ನೆಸಣವಿರ್ಪ್ಪತುನಾಲ್ಕು (ಎಇ. XIV, ೩೬೫-೧೯ ; 945). **ನೇಸಣ :** ಪಸರಿಸೆ ಸಮ್ಮತಿ ತನ್ನಯ ದಸವಂದದ ನೇಸಣಂಗಳೊಳ್ ಕೆಲವನದರ್ಕ್ಕಸದೃಶನಿತ್ತುದನೀ ವಸುಧೆಗೆ ನೆಗಟ್ಟಿಯಂತು ಶಾಸನಂ ಬರೆಯಿಸಿದೊಂ (ಎಇ. IV, ೬೪-೨೪ ; 945) ; ದೇವರ್ಗ್ಗೆ ಪುರವರ್ಗ್ಗದ ಪನ್ನೆರಡು ಮನೆಯ ನೇಸಣಮುಮಂನೊನ್ದುಗಾಣಮುಮಂ ಬಿಟ್ಟರ್ (ಕಇ. V, ೬-೧೩ ; 1032 ?). [<ಪ್ರಾ. ನಿವೇಸಣ./ಸಂ. ನಿವೇಶನ]

ನಿವೇಶನ (ನಾ). ೧. ಹೊಗುವಿಕೆ ; ಪ್ರವೇಶಿಸುವಿಕೆ. ೨. ನಿವಾಸ; ಮನೆ : "ಅವಾಸಃ . . . ಶಾಲಾ, ವೇಶ್ಮ, ನಿವೇಶನಂ, ಉಟಜಸಿತಂ, ಸದ್ಮ, ಓಕಃ, ಶರಣಂ, ಅಗಾರಂ, ನಿವಸನಂ, ಆಲಯಃ—ಈ ೩೦ ಮನೆ" (ಹಲಾಯು. ೪೯-೧೩೬). ೩. = ನಿವೇಶಣ : ಊರೊಡೆಯರ್ಗ್ಗೆ ಮಾನ್ಯದ ಕೆಯ್ಯತ್ತರನ್ನೂಱು ಮನೆಗೆಣ್ಣಯ್ಯಗಲಿವರ್ಪ್ಪತ್ತೈಗೈನೀಲದ ನಿವೇಶನಂ ಮೂರು (ಎಇ. XX, ೬-೩೩ ; 1012) ; ರೇವದಾಸಭಟ್ಟರ ಕೆಯ್ಯಂಬಡಗ ಬಿಟ್ಟ ಸಿರಿಯ ಕೋಲ ಮತ್ತ [೫] ಮನೆಯ ನಿವೇಶನ ೧ (ಸೌಇಇ. XX, ೭೨-೧೨ ; 1111) ; ದೇವರಿಗೆ ಬಿಟ್ಟ ಮನೆಯ ನಿವೇಶನವೆರಡು ಬಣಂಬೆಯ ನಿವೇಶವೊಂದುವರೆ (ಸೌಇಇ. XX, ೯೩-೬೧ ; ?) ; ಮಸೀದಿಗೆ ಬೇಕಾದ ನಿವೇಶನವನ್ನು ತಾಯಿ ತಂದೆಗಳಿಲ್ಲದ ಇಬ್ಬರು ಬಾಲಕರು ಮಹಮ್ಮದನಿಗೆ ಸಮರ್ಪಿಸಿದರು (ಶೃಗಂಬ. ೪೩). [ಸಂ.]

ನಿವೇಶಿತ (ಗು). ೧. ಒಳಗೆ ಇರಿಸಿದ ; ಒಳಹೊಕ್ಕ ; ಒಳಗಿಟ್ಟ : ಅದುದಭಿಷೇಕದ ಮಹಾಸಂಪಾದನದ ಮಂಗಳತೆ ಮಿಗೆ ದಾಮೋದರಗೆ ಬ್ರಹ್ಮಾಂಡನಿಕರನಿವೇಶಿತೋದರಗೆ (ನಿಘಾಗ. ೧೦-೨೩-೪೧). ೨. ಇರಿಸಿದ ; ಇಟ್ಟ ; ಸೇರಿಸಿದ : ವಿಜೃಂಭಮಾಣ ಸವನಳಿನಪರಿಕರಾಕೃಷ್ಟ ಮಧುಕರರಮಣೀಯಪೂನಪರಿಸರಪ್ರದೇಶನಿವೇಶಿತವಿರಹಿಜನಘಟಯನಿಚಿತ ಮಾನಸ . . . ಮತ್ತ ಕೋಕಿಲೋಲ್ಲಾಸಿತ ಶೀಕರೋದ್ದಾಮ ದುರ್ದಿನ ವನಮನೆಯ್ದುವಂದು (ಗಂಪಭಾ. ೫-೧೦ ಪ) ; ನರ್ಮಸಚಿವಪ್ರಕೋಷ್ಠ ನಿವೇಶಿತಸವ್ಯಪಾಣಿಪಲ್ಲವನುಂ . . . ಅಗಿ ಬರ್ಪಾಗಳ್ (ಚಂದ್ರಪು. ೬-೮೩ ಪ). [ಸಂ.]

ನಿವೇಶ್ಯ (ನಾ). ಇರಲು ಯೋಗ್ಯವಾದುದು ; ವಾಸಯೋಗ್ಯವಾದುದು : ಎಲೆ ಎಲೆ ಭೂಸುರಾಧಮರಿರಾ ಹರಭಕ್ತನಿವೇಶ್ಯಮಪ್ಪ ಮನ್ನಿಲಯಮಶಕ್ಯಮೊರ್ಮೆ ನಿಮಗಂ ಪುಗಲ್ (ಸೃಷಸಿ. ೩೯-೯). [ಸಂ.]

ನಿವೇಸಣ 'ನಿವೇಶಣ' ನೋ.

ನಿವ್ವಳ 'ನಿವಳ$_1$' ನೋ.

ನಿವ್ವಳ್ಳಿ (ನಾ). ಒಂದು ಬಗೆಯ ಭೂಮಿ (?) : ವಕ್ಕಾಣಭಟಾರರ ಶಿಷ್ಯರ್ ಚಿಲ್ಲಾಕಭಟಾರರ ಕಾಲಂ ಕಚ್ಚರ್ ಕೊಟ್ಟ ಮುಯ್ಯಾದೆಯೊಳಗೆ ನಿವ್ವಳ್ಳಿ ಕಿಱೆಜಕ್ಕೆ ಮೂನೂಱುಂಗಣ್ಣುಗಂ ರಾಜಮಾನವಂ ಕೊಟ್ಟಂ (ಎಕ. XII, ೩೦೨. ೨೮-೪೩ ; 943). [?]

ನಿಶಠ (ಗು). ೧. ಸರಳಸ್ವಭಾವದ ; ಕಪಟವಿಲ್ಲದ ; ಪ್ರಾಮಾಣಿಕವಾದ. (ನಾ). ೨. ಪ್ರಾಮಾಣಿಕತೆ ; ನಿರ್ವಂಚನೆ. ೩. ಯಾದವರಲ್ಲಿ ಒಬ್ಬ ; ಬಲರಾಮನ ಮಗ : ಪ್ರದ್ಯುಮ್ನ ಗದ ಸಾಂಬನನಿರುದ್ಧ ನಿಶಠ ಶತನಕ್ರೂರ ಸಾತ್ಯಕಿಪ್ರಮುಖಯಾದವರೆಮ್ಮ ಕೂಡೆ ಬರಲಿ (ಹೈಮಿಭಾ. ೬-೨). [ಸಂ.]

ನಿಶಮನ (ನಾ). ೧. ನೋಟ ; ದೃಷ್ಟಿ : "ನಿಭಾಳನಂ, ನಿಶಮನಂ, ನಿಧ್ಯಾನಂ, ಅವಲೋಕನಂ, ಲಕ್ಷಣಾ, ದರ್ಶನಂ, ದೃಷ್ಟಿಃ, ದ್ಯೋತನಂ—ಈ ೮ ನೋಟಂ" (ಹಲಾಯು. ೯೩-೪೧೨). ೨. ಕೇಳುವುದು ; ಶ್ರವಣ. [ಸಂ.]

ನಿಶರಣ (ನಾ). ಕೊಲೆ ; ವಧೆ : "ಮಾರಣಂ, ನಿಶರಣಂ, ನಿಬರ್ಹಣಂ . . . ಹಿಂಸಾ, ಸಂಜ್ಞಪನಂ—ಈ ೨೧ ಕೊಲೆ" (ಹಲಾಯು. ೭೮-೩೨೩). [ಸಂ.]

ನಿಶಾ 'ನಶೆ' ನೋ.

ನಿಶಾಂತ (ಗು). ೧. ಶಾಂತವಾದ ; ನಿಶ್ಶಬ್ದವಾದ. (ನಾ). ೨. ಆವಾಸ ; ನೆಲೆ ; ಮನೆ : ಅವಿರಳಧೂಪಾಮೋದಸಂಸಂಗಿಭೃಂಗಾನ್ವಿತಮುದಿತಮ್ಯದಂಗಧ್ವಾನಸ್ಯತ್ಕನ್ಯಯೂರಾಂಚಿತಮೆಸೆದುದು ಕಾಂತಂ ದೇವಪೂಜಾನಿಶಾಂತಂ (ಚಂದ್ರಪು. ೧-೧೫೦) ; ಇಂತು ಕೃತಳಕುಟ್ಮಿಳ ಕೇಳೀಸರಸ್ಸಂತತಿಗಳಿಂ ಸಮಂತು ತೋಭ್ಯಾಶಾಂತಮಾದ . . . ಜಗತ್ಪಾವನ ವನವನಳಿವಿಳಾಸಭವನವನವನಜಾತಪೂರ್ವಮೆನೆ ಮಾಡಿಸಿದಂ (ವರ್ಧಪು. ೨-೨೨ ಪ) ; ಜಯಜಯ ಮಹಾಮಹಿಮಗಿರಿಸುತಾಶಾಂತ ಜಯಜಯ ಸುಧಿಷ್ಣಾಟನೇಕ್ಷಿತೇಂದ್ರನಿಶಾಂತ (ರಾಜಶೇ. ೧೪೪-೧೬೯ ಗದ್ಯ) ; ನೀಂ ಮನುಜೇಶನತಿದಯಾಪಂತನಾರ್ತಸ್ಯಾಂತವಿನಯದಿಂದಖಿಳರಂ ರಕ್ಷಿಸುವ ನಿಶ್ಚಿಂತ ಸದ್ಗುಣನಿಶಾಂತನಲ್ತೆ (ವೆಂಕಾಂಪ್ರಾ. ೨-೧೪೪-೧೭). ೩. ರಾತ್ರಿಯ ಕೊನೆ ; ಮುಂಜಾವ ; ಅರುಣೋದಯದ ಸಮಯ : ಒಂದು ಬಾಳರವಿ ತನ್ನಯ ಸೋಗಿಲ ಮೇಗೆ ರಾಗದಿಂ ಪೊದವ್ದುದಸಂತೆ ದಿಕ್ಕರಿಗಳಂಬುಜಪತ್ರಪುಟಾಂಬುವಿಂ ಬೆಡಂಗಡಸಿರೆ ಮಜ್ಜನಂಬುಗಿಪುದಂ ಸತಿ ಕಂಡೊಸೆದಳ್ ನಿಶಾಂತದೊಳ್ (ಪಂಪಭಾ. ೧-೧೪೦) ; ಆ ಪುರಂ ಪದ್ಮರಾಗಾರುಣೇಕ್ಷತ ನಿಶಾಂತಮಾಗಿಯುಂ ಅಸ್ತಮಿತರಾಜಲೀಲಾವಿಲಾಸಮಲ್ತು (ಚಂದ್ರಪು. ೧-೧೩೬) ; ಅತುಳಸಿಂಹಾಸನಮಂ ಬಿಡದಡರ್ದ ಕಪಿಯನ್ನಾಗಳು ಪೊದವೀಶಂ ಕನಸಿನೊಳ್ ನಿಶಾಂತಂ ಕಂಡಂ (ಪುಣ್ಯಾಸ್ರ. ೯-೧೪) ; ಹಲವು ಕಪ್ಪಡಿಗಳು ನಿಶಾಂತವ ಕಳೆಯೆ ದೇಗುಲದಡೆಗೆ ಹರಿಯವೆ (ಕಾತಿರಾ. ೧೪-೪೧). [ಸಂ.]

ನಿಶಾಂತವಿರಕ್ತ (ನಾ). ೧. ಅತ್ಯಂತ ಶಾಂತನಾದ ವಿರಾಗಿ; ಶಾಂತ ಮನಸ್ಸಿನ ವಿರಕ್ತ. ೨. ಮುಂಜಾವದಲ್ಲಿ ಕಾಂತಿಹೀನನಾದವನು. ೧, ೨ : ಮಿತ್ರಸಮಾಗಮಕ್ಕೆ ಸೆಡೆದಂಬರಮಂ ಬಿಡು(ತಿರ್ಪತೇಷ)ನಕ್ಷತ್ರ ಗಣಂ ಕಲಿಲ್ವಿನಮಗಲ್ದಿ ನಿಶಾಂತವಿರಕ್ತನಪ್ಪ ನಿರ್ಗೋತ್ರನೆನಿಪ್ಪ ಸತ್ಕುವಳಯೋದ್ಗತಲಕ್ಷ್ಮಿಯನೊಕ್ಕು ಪೋಗಲಿರ್ಪತ್ರಿಜನಂದು ಕನ್ನಡಿಸಿದಂ ಸುವಿಧೀಶನ ಚಿತ್ತವೃತ್ತಿಯಂ (ಪುಷ್ಪಪು. ೧೩-೫೯). [ನಿಶಾಂತ+ವಿರಕ್ತ]

ನಿಶಾಂಧ (ನಾ). ರಾತ್ರಿಯಲ್ಲಿ ಕಣ್ಣು ಕಾಣದವನು ; ಇರುಳುಗಣ್ಣಿನ ದೋಷವುಳ್ಳವನು : ಉದಯಸ್ಥಂ ದಿನನಾಥನಾಗೆ ವಿಕಲಾಕ್ಷಂ ನಿರ್ಭಯಂ ನಿರ್ದಯಂ ಸದನಂ ಸಿಂಹವಿಲಗ್ನದೊಳ್ ನಿಲೆ ನಿಶಾಂಧಂ ಮೇಷಲಗ್ನಕ್ಕೆ ಪೊರ್ದಿದೊಡಾಢ್ಯಂ ತಿಮಿರಾಕ್ಷಂ (ಜಾತಕ. ೧೪-೧). [ಸಂ.]

ನಿಶಾಕರ (ನಾ). ರಾತ್ರಿಯನ್ನುಂಟುಮಾಡುವವನು ; ಚಂದ್ರ : ಪರಿತಾಪಮನೆನಗೆ ನಿಶಾಕರನಾಗಿಸುಗುಂ ವಸಂತಸಮಯಾನುಗತಂ (ಕವಿಕಾ. ೩-೩೬) ; ಇನಿಯನಗಲ್ದು ಪೋಗಿ ಪರದೇಶದೊಳಿರ್ದಪಂ . . . ನೀನುಮನ್ನನೆ ನಡೆನೋಡುತುಂ ನಭದೊಳಿರ್ದಪೆಯಪ್ಪುದಱಿಂದೆ ನಿನ್ನ ನಾನನುವಿಪೆನೆನ್ನ ಮೆಯ್ಯಡವೊ ನಲ್ಲನ ಮೆಯ್ಯಡವೋ ನಿಶಾಕರಾ (ಅಧಿಪು. ೧೨-೪೧) ; ಅಂಗಜನೆನ್ನ ಪಕ್ಕದೊಳ್ಪರುತಿರೆ ಲಜ್ಜೆ ಪಿಂದೆ ನಿಲೆ ಮುಂದೆ ಮದಿಂದ್ರಿಯವರ್ಗವಾವಗಂ ಪರಿಯೆ ನಿಶಾಕರಂ ನಿಜಕರೋತ್ಕರದಿಂ ಪಿಡಿದೊಯ್ಯ ಬೇಜಿಪೇಟ್ಗೆ ಪರಿಜನಮೇವುದು(ಕಾದಂಪೂ.೪೯೩); ಪುಣ್ಯಕಥೆಯಂದದೆ ಧಾವಿಸಿ ಕೇಳ್ದುದಾ ಧರಾಧಿಪನ ಶರನ್ನಿಶಾಕರಕಳೋಜ್ಜ್ವಳನುಂ ಜಸಮುಂ ಜಗಜ್ಜನಂ (ಚಂದ್ರಪು. ೨-೬). [ಸಂ.]

ನಿಶಾಕರವಿಳಂಬಿ(ನಾ).ಚಂದ್ರನವರೆಗೂಬೆಳೆದುದು,–ಹಬ್ಬಿದುದು: ಕೊಳೆ ನೋಡುವ ಕಣ್ಣಳಸುಂಗೊಳೆ ದಿವ್ಯಕರೀರಮಂತುಮಲ್ಲದೆಯುಂ ತಾಂ ತೊಳ[ತೊಳತೊಳಗೆ] ನಿಶಾಕರವಿಳಂಬಿಯಾಯ್ತು ಮಿತವಿಕ್ರಮಪ್ರಭೆ ದಿವದೊಳ್ (ಪಾಂಡಪು. ೯-೩೫). [ನಿಶಾಕರ+ವಿಳಂಬಿ(=ವಿಲಂಬಿ)]

ನಿಶಾಕರವೀಥಿ (ನಾ). ಪಟ್ಟಣದಲ್ಲಿರುವ ದಕ್ಷಿಣೋತ್ತರವಾದ ಮಾರ್ಗ ; ಚಂದ್ರವೀಥಿ : ಅಲ್ಲಿ ನಿರಂತರಂ ಮೆಱೆವುದು . . . ಸಲ್ಲಲಿತಪ್ರಭಾಕರನಿಶಾಕರವೀಥಿಯು ಗೋಪುರಂಗಳಲ್ಲಲ್ಲಿಯ ಚಿತ್ರದಿಂ ವಿಮಳಪಟ್ಟಣಮೆಂಬುದು (ನಳಚಂ. ೧೩). [ನಿಶಾಕರ+ವೀಥಿ]

ನಿಶಾಕರಸುತ (ನಾ). ಚಂದ್ರನ ಮಗ ; ಬುಧ : ಸುರಗುರುವಿಂದೆ ಧರ್ಮ ದಶಮಾಪ್ಯಮುಲಾಭ ತನೂಜದೊಳ್ ನಿಶಾಕರಸುತನಿಂದೆ ಸಪ್ತ ನವ ಪಂಚಮಲಾಭ ತೃತೀಯರಾಶಿಯೊಳ್ . . . ಒಳ್ಳಿದಂ ಸಿತಂ (ಜಾತಕ. ೧೦-೧೩). [ನಿಶಾಕರ+ಸುತ]

ನಿಶಾಕಾಂತ (ನಾ). ಇರುಳಿನ ಒಡೆಯ ; ಚಂದ್ರ : ಎಂತೀಗಳೆನ್ನ ನೊಯ್ದಪನಂತೋನದೆ ಕರಕಜಗ್ರಹಂಗೆಯ್ದು ನಿಶಾಕಾಂತಂ ತಡೆಯದೆ ನಮಗಿದಿರೇಂ ತರ್ಕುಮೆ ಜೀವಿತೇಶನಂ ತರಳಾಕ್ಷೀ (ಕಾದಂಪೂ. ೪೯೪); ಇನವಿರಹಿಣಿ ಪದ್ಮಿನಿ . . . ನಿಶಾಕಾಂತನ ಕರಕೆ ಬೆರ್ಚ ಮುಚ್ಚಿದಳೆನೆ ಮೋಗಮಂ ಮುಗಿವ ಪಂಕಜಂ ಕರಮೆಸೆಗುಂ (ರಾಜಶೇ. ೧೧೧-೧೧೦). 'ನಿಶಾನಾಥ' ಪರಾ. [ಸಂ.]

ನಿಶಾಹೋರ, ನಿಷಾಹೋರ (ನಾ). ಮಾದಕಪಾನೀಯ ಅಥವಾ ಮಾದಕದ್ರವ್ಯವನ್ನು ಸೇವಿಸುವ ಚಟವಿರುವವನು : (ಕ). **ನಿಷಾಹೋರ** : ಪ್ರಸನ್ನ ಗೌಳಿತ್ತಿಯು ಆರಜುತ್ತಿದ್ದಾಳೆ—"ನಿಷಾ ಹೋರ, ನಿರ್ಲಜ್ಜ, ತಿಂಡಿಪೋತ" ಇತ್ಯಾದಿ (ಕಮಕ. ೧೨೯).

[ನಿಶಾ(<ನಶೆ)+–ಹೋರ (<–ಹೋರ್ಕ)]

ನಿಶಾಗಂಧಿ (ನಾ). ರಾತ್ರಿಯಲ್ಲಿ ಸುಗಂಧವನ್ನು ಬೀರುವ ಹೂವುಗಳನ್ನು ಬಿಡುವ ಒಂದು ಬಗೆಯ ಬಳ್ಳಿ ಮತ್ತು ಅದರ ಹೂವು ; ರಾತ್ರಿರಾಣಿ : ಪಾರಿಜಾತ, ಮಲ್ಲಿಗೆ, ಗುಲಾಬಿ, ನಿಶಾಗಂಧಿ ಮೊದಲಾದವುಗಳ ಅರಳ ಮೊಗ್ಗೆಗಳ ಪಕಳೆಗಳಲ್ಲಿ ಗಾಳಿಯು ಸೇರಿ . . . ಭಿಮುಳಮಿ ಸುತ್ತಲಿದೆ (ಕುಮುವಿ. ೧೧೬). [ಸಂ. ನಿಶಾಗಂಧಿನ್]

ನಿಶಾಚರ (ಗು). ೧. ರಾತ್ರಿಯಲ್ಲಿ ಓಡಾಡುವ : ದೂರದಲ್ಲಿ ನಿಶಾಚರಪಕ್ಷಿಯೊಂದು ವಿಕಟವಾಗಿ ಕೂಗಿದಂತಾಗಿ ರವಿಕೀರ್ತಿ ಎಚ್ಚರಗೊಂಡನು (ರೂಲೀಪಾ. ೧೦೧). (ನಾ). ೨. ರಾತ್ರಿಯಲ್ಲಿ ಸಂಚರಿಸುವ ದೆವ್ವ, ಭೂತ, ಪಿಶಾಚಿ ಮೊದಲಾದುವು : ಈಗಳಿನ ಪೊತ್ತಪ್ಪುದು ಪೇಚರನಿಶಾಚರದ್ಯುಚರಸಂಚಾರಮಲ್ಲದ ಭೂಚರಗೋಚರಮಲ್ಲೆಂದು ಮುಟ್ಟಿವರ್ಪುದುಂ (ಸುಕುನೂ. ೭-೧೪೪ ಪ). ೩. ರಾಕ್ಷಸ: "ನಿಶಾಚರಂ ರಾಕ್ಷಸಂ" (ಸುಂಗರಾ. ೧೫೫-೧೦) ; ಕಿಡೆ ಕೊಲ್ವ ರಾಮ ಬಾಣದಿ ಕೆಡೆದ ನಿಶಾಚರರ ನೆತ್ತರೊಳ್ಬೆಳೆದುವೆನಲ್ಕಡುಗೆಂಪುವೊರೆದ ತಳರ್ಗಳನೆಡೆವಿಡದಿಡದಡವಿ . ಸುತ್ತಿ ಸೊಗಯಿಸಿ ತೋರ್ಕುಂ (ಕಾದಂಪೂ. ೧೧೧) ; ಸುಗಿರ್ಪನಿಶಾಚರವನಸಂಹಾರಂ ಸೀತಾದುಃಖವಿನಾಶನಕಾರಂ (ಕಸಕ. ೬-೨) ; ಯಮಭಯಂಕರಿಯಾಗಿ ಘೋಕ ಮೂರಕೆ ಶೋಕವಾಗಿಹ ನಿಶಾಚರರ ನಿಸ್ಕರ ನೀಚಕುಲಕೆ (ಶ್ರೀರಾಮಾ. ೧೯೩-೧೭೩). 'ನಿಶಾಚರಬಲ' ಪರಾ. ೪. ಚಂದ್ರ. ೫. ಕಳ್ಳ ; ಚೋರ. ೬. ಗೂಗೆ; ಗೂಬೆ. ೭. ಹಾಲಕ್ಕಿ; ಶಕುನದ ಹಕ್ಕಿ. ೮. ಉಗ್ರವಾದ ಸರ್ಪ. ೯. ಒಂದು ಬಗೆಯ ಮಿಾನು : "ಉಗ್ರಾಹಿ ತಸ್ಕರ ಪಾಲ್ವಕ್ಕಿ ಮೃಗಾಂಕ ಭೂಷ ದನುಜಂ ಪಾತಿನ

ಮಿಂತು ನಿಶಾಚರಮಕ್ಕುಂ" (ನಾನಾರ. ೨೪). ೧೦. ಬಾವಲಿ; ಕಣ್ಣು ಕಪ್ಪಡೆ. [ಸಂ.]

ನಿಶಾಚರಬಲ (ನಾ). ೧. ರಾತ್ರಿಯಲ್ಲಿ ಚರಿಸುವ ಭೂತ, ಪಿಶಾಚಿ ಮೊದಲಾದ ದುಷ್ಟಶಕ್ತಿಗಳ ಸಮೂಹ : ಓಡೆ ತಮೋಬಳಮಾಗಿದ ಳ್ಳಾಡೆ ನಿಶಾಚರಬಲಂ ರಥಾಂಗಯುಗಂಗಳ್ ಕೂಡೆ ಬಗೆ ಕೂಡೆ ನೇಸಱ್ಱ್ ಮೂಡಿದುದು ಬಕಂಗೆ ಮಿಟ್ಟು ಮೂಡುವ ತೆಱದಿಂ (ಪಂಪಭಾ. ೩-೨೬). ೨. ರಾಕ್ಷಸರ ಸೇನೆ. [ನಿಶಾಚರ+ಬಲ]

ನಿಶಾಚರಿ (ನಾ). ರಾತ್ರಿಯಲ್ಲಿ ಸಂಚರಿಸುವವಳು ; ರಕ್ಕಸಿ; ರಾಕ್ಷಸಿ : ಖೇಚರಿಯೋ ಭೂಚರಿಯೊ ನಿಶಾಚರಿಯೋ ರೂಪು ಬಣ್ಣ ಸಲ್ಕಾರ್ಗಮವಾಗ್ಗೋಚರಂ (ಪಂಪಭಾ. ೩-೧೪); ನೀತಿಗಳ ಗತಿಯನಱಿ ದೊಡೆ ನಿಶಾಚರಿಯನಿವನಾಳ್ವನೇ ರಾಣಿಯೊಂದರಮನೆಯೊಳು (ಜೈಮಿಭಾ. ೨-೫೮). [ಸಂ. ನಿಶಾಚರೀ]

ನಿಶಾಚರೀಜನ (ನಾ). ಹೆಣ್ಣು ಪಿಶಾಚಿಗಳ ತಂಡ : ಆರ್ವ ಪಿಶಾಚಿ ಯರ್ಕಳನಸುಂಗೊಳೆ ಬೇವ ಪೆಣಕ್ಕೆ ಕೋಪದಿಂ ಪೋರ್ವ ಮರುಳ್ಗಳಂ ಪಿಶಿತಭೋಜನದಲ್ಲಿಗೆ ನಿಲ್ಲದೆಕ್ಕೆಯಿಂ ಸಾರ್ವ ನಿಶಾಚರೀಜನಮನಂತದನಿಕ್ಕು ವುದಂ ನಿರಂತರಂ ಪಾರ್ವ ಪುರಾಣ ರಾಕ್ಷಸರನೀಕ್ಷಿಸಿದಂ ಪ್ರತಿರೂಪಶೂದ್ರಕಂ (ಕಾವ್ಯಸಾ. ೫೩೪). [ಸಂ.]

ನಿಶಾಚೂರ್ಣ (ನಾ). ಅರಿಸಿನದ ಪುಡಿ : ತಿಳಜಾಭ್ಯಂಗಮನಳ್ಳಱಂ ರಚಿಸಿ ಮಂದೋಷ್ಣಾಂಬುವಿಂ ಮಜ್ಜನಂಗೊಳಿಸುತ್ತಂಕದೊಳಿಟ್ಟು ಕಣ್ಣ ವಿಗಳಂ ಸೈತೂದಿ ದಿವ್ಯಾಂಬರಾಂಚಳದಿಂ ಮೈಯೊರಸುತ್ತೆ ಮೈದಿಗುರ ನಿಟ್ಟಾಗಳ್ ನಿಶಾಚೂರ್ಣದಿಂದಳಕಂದೀವಿ ಸುರಕ್ಷೆಯಂ ಪೊರೆದಳಾ ಮಾದೇವಿ ತದ್ಬಾಲನಂ (ವೃಷವಿ. ೯-೧೧೦). [ಸಂ.]

ನಿಶಾಜೀವಿತೇಶ್ವರ (ನಾ). = ನಿಶಾಕಾಂತ : ನಮ್ಮ ಗೆಲ್ಲನೆ ಸೂಚಿ ಸುವ ಹೊನ್ನ ಲೇಪಮಂ ತಳದೆಸೆವ ಹೊನ್ನವೆಳ್ಳೆಯಂ ಗುರಾಣಿಯೆನಲ್ಕೆ ಶೋಭಿಸುತ್ತಿಹನೀ ನಿಶಾಜೀವಿತೇಶ್ವರಂ ! (ಚಂದ್ರಸ. ೫೧-೧೦). [ಸಂ.]

ನಿಶಾಟ (ನಾ). ೧. ರಾಕ್ಷಸ : "ರಕ್ಷಃ ಕೋಣಪ ನೈಋತ ರಾಕ್ಷಸ ಪುಣ್ಯಜನಯಾತುಧಾನಕ್ರವ್ಯಾದ ಕ್ಷಣದಾಚರರೆಂದು ಸದೃಕ್ಷಾರ್ಥಂಗಳ್ ನಿಶಾಟಪರ್ಯಾಯಂಗಳ್" (ವಸ್ತುಕೋ. ೮-೪೨) ; ಪ್ರತಿವಿಷಮಗ್ನಿಗಗ್ನಿ ವಿಷಕಂ ವಿಷಮೆಂಬವೊಲಾ ನಿಶಾಚರಂಗತಿಬಲರೀ ನಿಶಾಟ[ರಿವ]ರಕ್ಕೆನುತುಂ ಬೆಸವೇಟ್ಟ (ಪಂಪಭಾ. ೧೨-೯); ಮಾರುತಿಯನ್ನರಿಲ್ಲಿ ಸಾಸಿರ್ವರಖರ್ವ ದೋರ್ವಲಯುತರ್ ಖಚರಾಧಿಪರಿರ್ದಪರ್ . ನಿಶಾಟರ್ವಯಲಿಂಗೆ ಬಂದಪರೆ ನಿಂದಪರೇ ರಣರಂಗಭೂಮಿಯೊಳ್ (ಪಂರಾಮಾ. ೧೧-೧೭೫). 'ನಿಶಾಟದಲ್ಲಣ' ಪರಾ. ೨. ಮರುಳು; ಪಿಶಾಚಿ : ವ್ರಣದ ಬಂಧದ ಜಗಿಯ ದಾಡೆಗೆ ಕುಣಿದು ಕವಿವ ವಿಹಂಗತತಿಗಳಿನಣಲೊಳಡಸಿದ ತಲೆಗೆ ಕೈಗುತ್ತುವ ನಿಶಾಟರಲಿ ಹೆಣನ ಬೀಸುವ ಕೈಗಳಲಿ . . . ಚಂಡಿ ಯಾದುವು ಸೊಕ್ಕಿದಾನೆಗಳು (ಕುವ್ಯಾಭೀ. ೪-೮೧). ೩. ಇರುಳಲ್ಲಿ ಸಂಚರಿಸುವವನು ; ಇರುಳುಗಳ್ಳ : ಆ ನಿಶಾಟರು ಮೆಚ್ಚರಗ್ಗದ ಭಾನುರಶ್ಮಿಯನಂಧಕಾರಜ್ಞಾನನಿಷ್ಠರು ನಿಪುಣರೈಸಲೆಯೆಂದನಾ ಭೀಷ್ಮ (ಕುವ್ಯಾಸ. ೮-೫೧). ೪. ಗೂಗೆ ; ಗೂಬೆ : ಪಿಕ ಪಿಂಗಲಿ ನಿಶಾಟ ಧ್ವಾಂಕ್ಷ ಚಾತಕಿ . . . ಶಿಖಿ ಮಡಗೊಳಲೆ ಮುಖ್ಯವಿಹಂಗವಿವೆ ವೈದೇಹಿ ನೋಡು (ತೊರರಾ. ೩-೧-೩೩). [ಸಂ.]

ನಿಶಾಟಕೋಟಿ (ನಾ). ರಾಕ್ಷಸರ ಗುಂಪು ; ರಾಕ್ಷಸಸೈನ್ಯ : ಮುನಿಜನಂಗಳ ಬೇಳ್ವೆಗಳ್ಗು ಪದ್ರವಂಗೆಯ್ವ ನಿಶಾಟಕೋಟಿಯಂ ನಿಶಿತ ಶರಕೋಟಿಯಿಂದಮುಚ್ಚಾಟಿಸಿ (ಪಂಪಭಾ. ೪-೧೫ ಪ) ; ಮುಸಕಂಗುಂದೆ ನಿಶಾಟಕೋಟಿ ಕಿಡೆ ಶುಕ್ರಾಲೋಕಸಂಪತ್ತಿ ಪುಟ್ಟೆ ಸುರೇಂದ್ರಾಶೆಗೆ ರಾಗಂ . . . ಚಕ್ರಸಹಾಯನಾಕ್ರಮಿಸಿದಂ ಭೂಚಕ್ರಮಂ ಪಾದದಿಂ (ಪುಷ್ಪಪು. ೮-೨೩). [ನಿಶಾಟ+ಕೋಟಿ]

ನಿಶಾಟದಲ್ಲಣ (ನಾ). ೧. ರಾಕ್ಷಸರಿಗೆ ಭಯವನ್ನುಂಟುಮಾಡುವ ವನು; ವಿಷ್ಣು : ಕೋಟಿಸಿಡಿಲೊಮ್ಮೆ ಗರ್ಜಿಸುವೊಲೂದಿದನಾ ನಿಶಾಟ ದಲ್ಲಣನತುಳಪಾಂಚಜನ್ಯವಂ (ಜೈಮಿಭಾ.೧೩-೪೩). ೨. ಶಿವ; ಈಶ್ವರ : ಕೋಟಿರವಿಶಶಿತೇಜಗಾತ್ರ ತ್ರಿನೇತ್ರ ಶ್ರುತಿಘೋಟಕಂ ಗೂಢಪದಭರಣ ಸುರಪತಿನತ ನಿಶಾಟದಲ್ಲಣ ಕಾಳಹಸ್ತೀಶ ಲಿಂಗದೋಲಗಕವಳನಿರಿಸಿ ಪೋಗೆ (ಪ್ರಾಢರಾ. ೧೦-೩). [ನಿಶಾಟ+ತಲ್ಲಣ (<ತಲ್ಲಟ)]

ನಿಶಾಟನ (ನಾ). ಗೂಗೆ ; ಗೂಬೆ : "ಉಲೂಕಃ, ಕೌಶಿಕಃ, ಧ್ವಾಂಕ್ಷಾ ರಾತಿಃ, ನಿಶಾಟನಃ – ಈ ೪ ಗೂಗೆ" (ಹಲಾಯು. ೪೧-೯೩); ಏನು ಗುರುಸುತ ಕಾರ್ಯದನುಸಂಧಾನವೇನೆನೆ ವಾಯುಸಂಗಳನಾ ನಿಶಾಟನನಿಱು ಪುತದೆ ಗೂಡುಗಳನಟ್ಟರಿಸಿ ಈ ನಿದರುಶನದಿಂದ ಪಾಂಡವಸೇನೆಯನು ಕಗ್ಗೊಲೆಯೊಳಗೆ ಕೊಲಲೇನು ಹೊಲ್ಲೆಹ ಮಾವ ಎಂದನು ಗುರುಸುತನು ಕೃಪಗೆ (ಕುವ್ಯಾಗ. ೯-೭) ; ಚಾತಕ ಬಕ ಖಂಜನ ದ್ರುಪರಿ ಘೂಟ ನಿಶಾಟನ ಪತ್ರಿ ಕಂಕ ವರ್ತಕ ಕುರರೀಪ್ಲವಪ್ರಕರದಿಂದೆ ವಿರಾಜಿಕು ಮುನ್ನತಂ ವನಂ (ಹಮ್ಮೀರ. ೪-೬೨). [ಸಂ.]

ನಿಶಾಟಿ (ನಾ). ಹೆಣ್ಣು ಪಿಶಾಚಿ : ನೆಣದ ಬಣಂಬೆ ಪೆರ್ವ್ವೆಣದ ಬೆಟ್ಟ . . . ನೆತ್ತರನೀಂಟಿ ರಾಗದಿಂ ಕುಣಿಕುಣಿದಾಡಿ ಪಾಡುವ ನಿಶಾಟಿಯ ರೆಂಬವರಿಂದೆ ಸಂಗರಾಂಗಣವತಿ ರೌದ್ರವಾಗಿಱುದು ಕೊಲ್ವುದು ಬಪ್ಪನ ಗನ್ಧವಾರಣಂ (ಎಕ. V, ಬೇಲೂರು. ೧೯೩-೫೫ ; 1161). [ಸಂ. ನಿಶಾಟಾ]

ನಿಶಾತ (ಗು). ಹರಿತವಾದ ; ಮಸೆದ ; ಚೂಪಾದ : ಮತ್ಸ್ಯ ಕೋಟಿಯಂ ಸ್ಫುರಿತನಿಶಾತಹೇತಿಯುತಸದ್ಭಟಕೋಟಿ ನಿರಂತರಂ ತಿರಸ್ಕರಿ ಸಿರೆ ಘೂರ್ಣಿತಾರ್ಣವಮನೊತ್ತರಿಸಿತ್ತು ಚತುರ್ಬಲಾರ್ಣವಂ (ಪಂಪಭಾ. ೧೦-೨೮); ಪರಭೂಮಿಶ್ವರಭೀಕರಂ ಕರನಿಶಾತೋಗ್ರಾಸಿಶತ್ರುಕ್ಷಿತೀಶ್ವರ ವಿಧ್ವಂಸಪರಂ . . . ಭುಜಬಲಂ ಶ್ರೀರಾಜಮಾರ್ತ್ತಾಣ್ಡನ (ಎಕ. II, ೧೩೩-೯ ; 982) ; ಮಾಲಿ ಮುಳಿಸಿಂದಮಿಂದ್ರನ ಮೇಲೆ ನಿಶಾತಾಸ್ತ್ರ ವರ್ಷಮಂ ಕಱೆವುದುಂ (ಪಂರಾಮಾ. ೧೦-೧೩೬) ; ಮುರಮಥನ ಕೆಲ್ಲೈಸಿ ನೋಡಿದನುರುಭಯಂಕರಚಕ್ರವನು ದುರ್ಧರುಪಧಾರಾ ಲೂಯಮಾನ ನಿಶಾತಚಕ್ರವನು (ಕುವ್ಯಾಭೀ. ೬-೩೧). [ಸಂ.]

ನಿಶಾದರ್ಶಿ (ನಾ). ರಾತ್ರಿಯಲ್ಲಿ ನೋಡಬಲ್ಲುದು ; ಗೂಗೆ ; ಗೂಬೆ. [ಸಂ. ನಿಶಾದರ್ಶಿನ್]

ನಿಶಾನ 'ನಿಶಾನಿ' ನೋ.

ನಿಶಾನಾಥ (ನಾ). ರಾತ್ರಿಯ ಒಡೆಯ ; ಚಂದ್ರ : ನಿಶಾನಾಥನುಂ ಶನಿಯುಂ ಭಾಸ್ಕರನುಂ ವಿಲಗ್ನದೊಳಿಳಾಜಂ ದ್ಯೂನದೊಳ್ ಕೂಡೆ ಯಂತ್ರನಿರೋಧೋತ್ಥಿತಬಾಧೆಯಿಂದೆ ಪರಲೋಕಪ್ರಾಪ್ತನಕ್ಕುಂ ನರಂ (ಜಾತಕ. ೨೩-೧೫). [ಸಂ.]

ನಿಶಾನಾಥಾಂಶಕ (ನಾ). [ಜ್ಯೋತಿ] ಚಂದ್ರನ ನವಾಂಶ ; ಕರ್ಕಾಟಕ ನವಾಂಶ : ರಜನೀವಲ್ಲಭವಾರಮಶ್ವಿನಿ ನಿಶಾನಾಥಾಂಶಕಂ ಕೂಡೆ . . . ಪುಟ್ಟದಳ್ ನಿಜವರ್ಗೋತ್ತಮೆಯತ್ತಿಮುಟ್ಟೆ ಕವಿರತ್ನಾಂ ಭೋಧಿಯೊಳ್ ಲಕ್ಷ್ಮೀವೋಲ್ (ಅಜಿಪು. ೧೨-೫೨). 'ನವಾಂಶ' ಪರಾ. [ನಿಶಾನಾಥ+ಅಂಶಕ]

ನಿಶಾನಿ, ನಿಶಾನ, ನಿಶಾನು, ನಿಶಾನೆ, ನಿಷಾನಿ, ನಿಸಾನಿ (ನಾ). ೧. ಗುರುತು ; ಚಿಹ್ನೆ ; ಲಾಂಛನ : ದೊರೆಗಳವರು ಸುಮ್ಮನೆ ಸರಕಾರಕ್ಕೆ ವರ್ಷವರ್ಷಕ್ಕೆ ಒಂದು ನಿಶಾನಿ ಕೊಡಬೇಕು ಎಂತಾ ಬರದು ಇದ್ದರು (ರಾಚೇಂದ್ರ. ೨೦೪) ; ಬಿರುದಿನ ಬಳಿಗೆ ನಾಮ—ಬಿರುದಿನ

ನಿಶಾನಿಗೆ ಹೆಸರು (ಶಬ್ದಮಂ. ೪೧ ಟೀಕು); ಮೇಲೆ ಬರದ ತರದ ಮೂಲವನ್ನು ಕಳಿಸುವದಕ್ಕೋಸ್ಕರವಾಗಿ ಭಾವ (ಧಾರಣೆ) ಕಟ್ಟಿ ನಮಗೆ ಬರಿಯುತ್ತಿರುವದರಿಂದ ಅದೇ ನಿಶಾನಿಯ ಮೂಲವನ್ನು ನಮಗೆ ತಗೋಬೇಕಾಗುತ್ತದೆ (ಮುಂಬಸ್ಯಾ. ೬೪). ೨. ಬಾವುಟ; ಧ್ವಜ: ಎಸೆದೊಪ್ಪುವೆತ್ತ ಸಿಂಹನ ಪಿಸುನಯ . . . ಹಸುರುನಿಶಾನಿಯ ಮತ್ತಂ ಪೊಸರನ್ನ[ದ] ಸಿಂಹವಿಷ್ಪರಂಗಳನಿತ್ತರ್ (ಬೀಳವಂ. ೧-೧೧೦); ವಿಮಾನ ಮುಕರಾಂಕಿತದ ಮೇಲು ನಿಶಾನಿಗಳು ಮುಂಬರಿಯೆ (ಅಸಂಂರಾ. ೧-೧೯-೧೩); ಪಿಸುನಿ ರಜತದ ಹವುದವರಸಿದಾನೆಗಳು ಮುಂದೆಸೆಯೊಳು ನಿಶಾನಿಗಳು (ಕೃಷ್ಣವಿ. ೨-೨೮); ಒಂಟಿಯ ಮೇಲೆ ಹಸುರು ನಿಶಾನಿಯನ್ನು ಹಿಡಿಸಿಕೊಂಡು ಸಂಚಾರ ಮಾಡಬೇಕೆಂಬ ಮಯೂರವರ್ಮನ ಆಜ್ಞೆಯನ್ನು . . . ಸಮರ್ಪಿಸಿದನು (ಕಳವಿ. I, ೧೧೩). ೩. ಗುರಿ; ಲಕ್ಷ್ಯ. **ನಿಶಾನೆ**: ೨. ಜಿನಚಂದ್ರರ ಮಹದಾಶೆಯ ನಿಶಾನ ಹಾರಾಡಿದಂತೆ ಭಾಸವಾಯಿತು! (ಪಾಸಚಂ. ೩೭). **ನಿಶಾನು**: ೧. ಸ್ವಲ್ಪದೂರದಲ್ಲೇ ಹೊಸದಾಗಿ ತೋಡಿ ಮುಚ್ಚಿದ ನಿಶಾನು . . . ದಶಿ ಸಹ ಕಂಡುಬಂದುವು (ಕಲಸಿ. ೧೭೪). **ನಿಶಾನೆ**: ೧. ಗರಡಿಯ ಎದುರು ಅವರ ನಿಶಾನೆಯುಗಿ ಹನುಮಾನ್ ರುಂಡಾ ಸ್ಥಾಪನೆ (ಭೀಮಶಾ. ೩೭). ೨. ಆ ಹಡಗುಗಳು ತೀರ ಹತ್ತಿರ ಬಂದ ಬಳಿಕ ಅವುಗಳ ಮೇಲಿನ ನಿಶಾನೆಗಳನ್ನು ಕಂಡು . . . ಎಲ್ಲರು ಬಹಳ ಹೆದರಿದರು (ಮುಂಬಯಿ. ೫-೧೩೨); ಕುಣಿಯಲ್ಲಿ ನೆಟ್ಟ ನಿಶಾನೆಯು ದೂರ ಆಟಗಾರರಿಗೆ ತನ್ನ ಇರವನ್ನು ತಿಳುಹಿ ಕೊಡುತ್ತಿತ್ತು (ರಕ್ತಧ್ವ. ೧೩೦). **ನಿಷಾನಿ**: ೨. ಇಲ್ಲಿಂದ ಒಂದು ಕಂಪನಿ ಶಿಪಾಯಿಗಳು, ನಿಷಾನಿ ಸಹ ಕೂಡಿಸಿ, ಕರ್ನಿತಾನ್ ಬ್ರೋನ್ ಸಾಹೇಬ ಎಂಬ ಸರದಾರರನ್ನು ಕಳುಹಿಸಿ ಇದ್ದೇವೆ (ರಾಜೇಂದ್ರ. ೫೬). **ನಿಸಾನಿ**: ೨. ರಾಮಗೆದುರೇ ನೀನು ಧ್ವಜವಭರಾಮಗೊಳಿಸುವೆನೆಂದು ರಣನಿಸ್ತೀಮನೆತ್ತೆ ನಿಸಾನಿಯಂ[ಯೊಂ]ದನು ಚರರನೀಕ್ಷಿಸುತ (ಪಶುಭಾ. ೨೩-೪೦).

ನಿಶಾನೆ ಆನೆ = ಪತಾಕೆ ಕಟ್ಟಿದ ಆನೆ: ೧೦೦೦ ನಿಶಾನೆ ಆನೆಗಳೂ ೨೦೦೦ ಬಜಾಯಿ ಆನೆಗಳೂ ಇದ್ದುವು (ಬಪ್ಪೈರು. ೧೩).

[←ಪಾರ. ನಿಶಾನ್; ಹಿಂ. ನಿಶಾನ್, ನಿಶಾನಾ; ಮರಾ. ನಿಶಾಣ, ನಿಶಾಣೇ, ನಿಶಾನ, ನಿಶಾನೀ]

ನಿಶಾನಿಕಲ್ಲು (ನಾ). ಗುರುತಿಗಾಗಿ ನೆಟ್ಟ ಕಲ್ಲು: ಕೊಡಗರಹಳ್ಳಿಯೆಂಬಲ್ಲಿ ಕೊಡಗಿನ ನಿಶಾನಿಕಲ್ಲು ನಟ್ಟುಯಿದೆ (ರಾಜೇಂದ್ರ. ೩); ಸರಹದ್ದಿನಲ್ಲಿ ಅಲ್ಲಲ್ಲಿ ನಿಶಾನಿಕಲ್ಲುಗಳು ಇಲ್ಲದ್ದರಿಂದಾ ಮರದ ಗೂಟಗಳನ್ನಿಲ್ಲಿಸಿ ಇದ್ದೇವೆ (ರಾಜೇಂದ್ರ. ೨೬೦). [ನಿಶಾನಿ+ಕಲ್ಲು (<ಕಲ್ಲ್)]

ನಿಶಾನಿರಸನ (ನಾ). ರಾತ್ರಿಯ ಕೊನೆ; ಬೆಳಗಿನ ಜಾವ; ಮುಂಜಾವ: ಕೂಡೆ ಮನೆಮನೆಯೊಳೊಯ್ಯನೆ ಬಾಡಿದುದೊಡನೊಡನೆ ಮಿಥುನತತಿಯಿರುಳೊಲವಿಂ ಸೂಡಿದ ಪೂಮಾಲೆಗಳುಂ ಪಾಡಿದ ಸೊಡರ್ಗುಡಿಗಳುಂ ನಿಶಾನಿರಸನದೊಳ್ (ಚಂದ್ರಪ್ರ. ೮-೯೪). [ಸಂ.]

ನಿಶಾನು 'ನಿಶಾನಿ' ನೋ.

ನಿಶಾನೆ 'ನಿಶಾನಿ' ನೋ.

ನಿಶಾಪ (ನಾ). = ನಿಶಾನಾಥ. 'ನಿಶಾಪಮುಖಿ' ಪರಾ. [ಸಂ.]

ನಿಶಾಪತಿ (ನಾ). = ನಿಶಾನಾಥ: "ಹಿಮಾಂಶುಃ . . . ಓಷಧೀಶಃ, ನಿಶಾಪತಿಃ . . . ಕ್ಷಪಾಕರಂ—೨೦ ಚಂದ್ರನ ಹೆಸರುಗಳು" (ನಿಘಂ೦ಕಿ. ೨೯). 'ನಿಶಾಪತಿಸುತ' ಪರಾ. [ಸಂ.]

ನಿಶಾಪತಿಸುತ (ನಾ). ಚಂದ್ರನ ಮಗ; ಬುಧ: ಕ್ಷಿತಿಜನೊಳಾಂದಿದ ಗುರುವಿಂ [ನೇತಾರಂ] ಮಿತ್ರಪುತ್ರನಿಂ ಪುಃಖಿ ನಿಶಾಪತಿಸುತನಿಂ ಮಲ್ಲಂ ಧೃಗುಸುತನಿಂ ಪರದಾರಶೀಲನೆನಿಕುಂ ಪುನುಜಂ (ಜಾತಕ. ೧೫-೩). [ನಿಶಾಪತಿ+ಸುತ]

ನಿಶಾಪಮುಖಿ (ನಾ). ಚಂದ್ರಮುಖಿ: ನೀರಜಾಂಬಕಿಯು ನೀಲಾಳಕಿ ನಿಶಾಪಮುಖಿ ವಾರಣಾರಿಸೂಕ್ಷ್ಮಮಧ್ಯೆ (ಸನಮೋ. ೩-೧೩). [ಸಂ. ನಿಶಾಪಮುಖೀ]

ನಿಶಾಪರಿಯಟನ (ನಾ). ರಾತ್ರಿಯ ಓಡಾಟ; ರಾತ್ರಿಯ ಸಂಚಾರ: 'ನಿಶಾಪರಿಯಟನಪಟು' ಪರಾ. [<ಸಂ. ನಿಶಾಪರ್ಯಟನ]

ನಿಶಾಪರಿಯಟನಪಟು (ನಾ). ರಾತ್ರಿಯ ಓಡಾಟದಲ್ಲಿ ಕುಶಲನಾದವನು: ಕುಟಿಲ ಭಾರದ್ವಾಜನಿವನುಬ್ಬಟಿಗೆ ಪುದ್ದರಿವೆನು ನಿಶಾಪರಿಯಟನಪಟುಗಳು ಬರಲಿ ಕಾಳೆಗಕೆಂದನಸುರಾರಿ (ಕುಸ್ಯಾದ್ರೋ. ೧೫-೪೨). [ನಿಶಾಪರಿಯಟನ+ಪಟು]

ನಿಶಾಪ್ರವೇಶ (ನಾ). ರಾತ್ರಿಯ ಪ್ರಾರಂಭ: ನಳನದಳಂಗಳಲ್ಲಿ ಪುಳಿನ ಸ್ಥಳದಲ್ಲಿ ಲತಾವಿತಾನದೊಳ್ ತಿಳಿಗೊಳದಲ್ಲಿ ತನ್ನ ಮನದನ್ನೆಯನೊಲ್ದಜಸುತ್ತೆ . . . ತೊಳಲ್ದಳಲ್ದು ಮೇಣ್ಮಳವಸಿತ್ತು ಕಾಂತೆಯನಗಲ್ದೆಣೆವಕ್ಕಿ ನಿಶಾಪ್ರವೇಶದೊಳ್ (ರಾಜಶೇ. ೧೧೧-೧೬). [ಸಂ.]

ನಿಶಾಮಧ್ಯ (ನಾ). ನಟ್ಟಿರುಳು; ಮಧ್ಯರಾತ್ರಿ: ಶ್ರಾವಣ ಕೃಷ್ಣಪಕ್ಷಾಷ್ಟಮಿರೋಹಿಣೀನಕ್ಷತ್ರದೊಳ್ ಮಹೋತ್ಸವಪ್ಪನುಪ್ಪ ಮುಹೂರ್ತದಿಂ ಸನಾಥವಾದ ನಿಶಾಮಧ್ಯಸಮಯದೊಳ್ . . . ಶಾಶ್ವತನವತರಿಸಿರ್ದಂ (ಜಗವಿ. ೨-೪೯ ಪ). [ಸಂ.]

ನಿಶಾಮನ (ನಾ). ೧. ನೋಡುವಿಕೆ; ದೃಷ್ಟಿಸುವಿಕೆ. ೨. ನೋಟ; ದೃಷ್ಟಿ. ೩. ಕೇಳುವಿಕೆ; ಶ್ರವಣ: "ಚಾಯ್ಯ—ಪೂಜಾನಿಶಾಮನಯೋಃ, ಅರ್ಚನೆಯೊಳಂ, ಕೇಳ್ವಿಯೊಳಂ . . . ಚಾಯ್ಯ್, ಚಾಯಂ, ಚಾಯನಂ, ಚಾಯನೀಯಂ, ಚಾಯ್ಯಂ, ಈ ೫ ಪೂಜನವುಂ, ನಿಶಾಮನವುಂ" (ಕಾಶಕ್ಯ. ೧೫೫). [ಸಂ.]

ನಿಶಾಮುಖ (ನಾ). = ನಿಶಾಪ್ರವೇಶ: ನಿಶಾಮುಖದೊಳ್ ನೆಗೆದ ತಾರೆಗೆಗಳೋರಗೆಗಳೆನಿಪ ಪೊಚ್ಚ ಪೊಸಮುತ್ತಿನ ಪಚ್ಚದೊಡವಿನೊಳಂ . . . ಆಳಂಕರಿಸೆ (ಪುಪ್ಪಪು. ೪-೪೧ ಪ). [ಸಂ.]

ನಿಶಾರ (ನಾ). ಎರಡು ಮಡಿಕೆಯ ಬಟ್ಟೆ; ಹಚ್ಚಡ; ದುಪ್ಪಟಿ: "ಶೀತವಾತಗಳ ನಿವಾರಿಸಲೆಂದು ಮಾಡಿದ ಹೊದಿಕೆಯಲ್ಲಿ ನಿಶಾರ ಯೆನಿಸುಗು" (ನಾಚರಾ.೧೨೪); "ನಿಶಾರಃ . . . ಮುಂಜು, ಗಾಳಿ ಇವುಗಳ ಬಾಧೆಯನ್ನು ಪರಿಹರಿಸುವ ಹಚ್ಚಡ ಮುಂತಾದ ವಸ್ತ್ರವಿಶೇಷದ ಹೆಸರು" (ನಿಘಂ೦ಕಿ. ೨೦೪). [ಸಂ.]

ನಿಶಾರಣ (ನಾ). ಕೊಲ್ಲುವಿಕೆ; ಕೊಲೆ: "ಪ್ರಮಾಪಣಂ, ನಿಬರ್ಹಣಂ, ನಿಕಾರಣಂ, ನಿಶಾರಣಂ . . . ವಧಃ—ಈ ೩೦ ಕೊಲ್ಲುವದಕ್ಕೆ ಹೆಸರುಗಳು" (ನಿಘಂ೦ಕಿ. ೨೬೧). [ಸಂ.]

ನಿಶಾರಮಣ (ನಾ). ಚಂದ್ರ: ನಗೆ ಸುಧೆಯೊಳ್ ನಿಶಾರಮಣನೊಳ್ ಪದನಂ . . . ಸುರದ್ರುಮದ ಪಲ್ಲವದೊಳ್ ಪದಪಲ್ಲವಂ ತಳರ್ದೊಗೆದವೆನಿಪ್ಪ ಪಟ್ಟದ ಮಹಾಸತಿ ಲಕ್ಷ್ಮಿಗೆ (ಎಕ. V, ಬೇಲೂರು. ೧೬೧-೬೧; ಸು. 1160). [ಸಂ.]

ನಿಶಾವಸಾನ (ನಾ). ಇರುಳಿನ ಕೊನೆ; ಬೆಳಗು: ನಿಶಾವಸಾನ ಸಮಯದೊಳ್ . . . ಅತಿಮಧುರಮಾಗೆ ಪೃಥ್ವಂ ಪಾಡೆ (ಜಾಪುಂಪು. ೪೨೩). [ಸಂ.]

ನಿಶಾಸ (ನಾ). ಅಂಕೆಯಿಲ್ಲದುದು; ಹತೋಟಿಗೆ ಒಳಪಡದುದು: ಮಾನಾವಸಾನದಗ್ರದ ವಾಸರಮೊಳ್ ಚಂದ್ರಗತಿಯಿನಾ ಯತಿ ಬರುತಿರ್ಪ ಸಮಯದೊಳವನೀಶ ನಿಶಾಸದ ಗಜಮೊಂದು ಬಿಟ್ಟು ಕೊಂಡು ಮದಾಂಧಂ ಗೋಬುಡಿಸೆ (ಪುಹಾನೇ. ೫-೧೧೯). [ಸಂ.]

ನಿಶಿ$_1$, ನಿಸಿ, ನಿಸೆ (ನಾ). ೧. ಇರುಳು; ರಾತ್ರಿ: ನಿಶಿ ಬಿಟ್ಟೋಡೆ ಶಶಾಂಕನುನ್ನತಕರಂಗಳ್ ಬಾಡೆ . . . ಪೂರ್ವಾದ್ರಿ ಕೆಂಬಿಸಿಲಿಂದೊಪ್ಪಿರೆ

ಮೂಡಿದಂ ಭಗಣಶೋಭಾತಸ್ಕರಂ ಭಾಸ್ಕರಂ (ಸೂಕ್ತಿಸು. ೯-೭೫); ಪಶ್ಚಿಮಾಂಬುಧಿಯೊಳು ಜೀವವ ತೊಜೆಸಿದ ಚಂದ್ರಮನು ಪೋಗಲಾಣ್ಮನ ಕೂಡೆ ನಕ್ಷತ್ರ ನಿಶಿವೆಣ್ಣು ಸಾಗಮನವನೆ ಮಾಡಿದುವು(ಮೋಹನ.೧೮-೧೦೭); ಏಳಿ, ಎಚ್ಚರಗೊಳಿರಿ ನಿಶಿಯು ಅಳಿದಿಹುದು (ವಿಸೀಗೀ. X, ೧೨); ವರ್ಷದ ನಿಶಿಯೊಳು ಮುಗಿಲಿನ ಮರೆಯೊಳು ಇಣಿಕುವ ಚಂದ್ರನ ಜೊನ್ನದೊಲು . . . ಅಂಡಾಳಿನ ನಗೆಯು (ಮಾಂದಳಿ. ೧೬-೧); ಜೀವನವನದಲಿ ಕವನಮಯೂರಂ . . . ಕುಣಿವುದಾವೇಶದಲಿ, ದಿನದಿನ ನಿಶಿನಿಶಿ ಮಾಯಾರೂಪಸಿ ಮೆರೆಯಲು ನವನವವೇಷದಲಿ (ನವಿಲು. ೧-೫). ೨. ಕಪ್ಪನೆಯ ಸ್ವರೂಪ: ಕಲಿ ಬಭ್ರುವಾಹನಂ ಪಾರ್ಥನೊಳ್ ಕಲಹಕಂ ಕಲಿಯಾಗಿ ನಿಶಿಯಾಗಿ ತೋರಿದಂ ಕಾಯದೋಳ್ಪಾರ್ಥನೂನು (ತುರಂಗ. ೮೨-೨೩). ನಿಸಿ: ೧. ನಿಶಾ-ನಿಸಿ; ವಿಷ-ಬಿಸ (ಶಮದ. ೨೭೧ ಪ್ರಯೋ.); ಅತಿ ನಿಸಿ[ಪಾಠಾಂ. ಶಿ]ಯೊಳಾ ಗುರುಗಳನು ಕೊಲ ಬಂದನಾ ಬಲಿಯು (ಪಾರ್ಶ್ವಭಾ. ೧೮-೧೪); ನಿಸಿಯ ಬೆಸಲಿಗೆ ಸುಸಿಲ್ಮಿಸುಕು ವಂತೊಲ್ಲದೇಕೆನ್ನ ಮಟ್ಟೆದಿಗೆ ಮೂಡೆ 'ಆತ್ಮಾನಂ ವಿದ್ಧಿ' ಎಂಬೀ ಸತ್ಯ ದರಿಮೆಯ ಮ್ಲಾನಂ? (ಗಿಳಿವಿ. ೫೬-೯). ೩. ಕಪ್ಪು; ಕರಿದು: ಒಂದೆಸೆಯೊಳಬ್ಜಜಂ ಸರಸತಿಯ ಮೇಲೆ ತಾನೊಂದೆಸೆಯ ಕತ್ತುರಿಯ ಜಲಂಗಳಂ ನಿಸಿ ಬಳಸಿ ನಿಂದೆಸೆಯಲೆಸೆವ ಸಸಿಗಲ್ಲ ಪುತ್ತಳಿಯೊಲಾ ವಾಣಿ ಜೀರ್ಕೊಳವಿಯೊಳಗೆ ಒಂದಿಸಿದ ಮಲಯಜಜಲಂ ಬೊಮ್ಮನಂಗದೊಳ್ ಸಂದಿಸಿದೊಡೆ . . . ಕನಕಾದ್ರಿಯಂತೆ ಕಣ್ಗಳ್ಗದೇಂ ರಾಜಿಸಿದನೋ (ಚಿಬಪು. ೩೭-೭೦). ನಿಸೆ: ೧. ಪಗಲೆಂದುಂ ತಲೆಯೆತ್ತಲಣ್ಮಳೆನಸುಂ ಚಂದ್ರಂಗೆ ಕೂರ್ತಂತೆ ಪತ್ತುಗೆಗುಂದಳ್ ನಿಸೆಯಪ್ಪುದುಂ ಪರಿದು ದುಗ್ಧಾಂಭೋಧಿಯೊಳ್ ಕೂಡುವಳ್ . . . ಕೌಮುದಿಯೆಂಬ ಪೊಚ್ಚ ಪೊಸವೆಣ್ಣೇನೆಂಬೆ ನಾಣ್ಮೋಡೆಯೋ (ಲೀಲಾವ. ೨-೫೨).

ನಿಶಿರಾತ್ರಿ = ನಡುರಾತ್ರಿ; ಮಧ್ಯರಾತ್ರಿ; ಸರಿರಾತ್ರಿ: ನಿಶಿರಾತ್ರಿಯಲ್ಲಿ ನಿಮ್ಮನ್ನು ನಡಸಿಕೊಂಡು ಕರೆದುಹೋದೆ (ಮನೋನಂ. ೧೨೮); ರಾಜಒಡೆಯನು . . . ಈಶ್ವರಪ್ರಸಾದವನ್ನು ಸ್ವೀಕರಿಸಿ ಆ ನಿಶಿರಾತ್ರಿಯಲ್ಲಿ ತನ್ನರಮನೆಗೆ ಹಿಂತಿರುಗಿದನು (ಕ್ರೀಂರಾಯ. ೭).

[<ಸಂ. ನಿಶಾ]

ನಿಶಿ$_2$ (ಅ). ಒಡಗೂಡಿ; ಸಹಿತವಾಗಿ: ಒಂದು ನಕಲನ್ನು ಸಮನಿನ ಒಂದು ನಕಲು ನಿಶಿ ಇನ್ನು ಮುಂದೆ ಹೇಳಿರುವ ರೀತಿಯಲ್ಲಿ ಕೊಡತಕ್ಕದ್ದು (ಗ್ರಾಮಾಕ. ೨೪). [←ಮರಾ. ನಿಶೀ]

ನಿಶಿಕರ (ನಾ). = ನಿಶಾಕರ: "ಇಂದು ಜೈವಾತೃಕಂ ನಿಶಿಕ[ಪಾಠಾಂ.ವ]ರಂ ಹಿಮಕರಂ ಚಂದ್ರಂ . . . ದ್ವಿಜರಾಜನೆನೆ ಸುಧಾಂಶುವೆನಿಕ್ಕು" (ಪಂಗರಾ. ೧೧-೪). [ಸಂ.]

ನಿಶಿಚರ (ನಾ). ೧. ರಾತ್ರಿಯಲ್ಲಿ ಸಂಚರಿಸುವವನು; ರಾಕ್ಷಸ: ನಿಶಿಚರ ಶಕಟಾಸುರನ ಶಿಶುಗಾಲಲೊರಸಿದೆನಂತೆ (ಪುರಂದ. ೨-೧೯-೨); ಬಿಸಿಗಂಜಿದವನಂತೆ ಹನುಮನಂಗವಿಕಾರಮೆಸಗಲಸುರೇಶ ಗಹಗಹಿಸಿ ನಗುತಲೆ ನಗರ ರಸೆಯೊಳಗೆ ಮೆರೆಸಿ ಬಿಟ್ಟಪುದೆಂದು ನಿಶಿಚರರಿಗೊರೆದನುಲ್ಲಾಸದಿಂದ (ವೆಂಕಾರಾ. ೫-೧೮-೨೩). ೨. ಕಳ್ಳ; ಚೋರ: "ನಿಶಿಚರಂ ಕನ್ನಗಳ್ಳಂ" (ಪಂಗರಾ. ೬೬-೫). [ಸಂ.]

ನಿಶಿತ$_1$ (ನಾ). ಮಧ್ಯರಾತ್ರಿ: ರಕ್ಷಿಸುಗೆ ನೆಜಿ ಪದುಮನಾಭನು ರಕ್ಷ ಮೂರುತಿ ನಿಶಿತದಲಿ ನೆಜಿ ರಕ್ಷಿಸುಗೆ ಸಿರಿವತ್ಸಲಾಂಛನನಪರರಾತ್ರಿಯಲಿ (ನಿಭಾಗ. ೬-೮-೧೬). [<ಸಂ. ನಿಶೀಥ]

ನಿಶಿತ$_2$ (ಗು). ೧. ಹರಿತವಾದ; ಮಸೆದ; ಚೂಪಾದ: ಮುನಿಜನಂಗಳ ಬೇಳ್ವೆಗಳ್ಗುಪದ್ರವಂಗೆಯ್ವ ನಿಶಾಟಕೋಟಿಯಂ ನಿಶಿತ ಶರಕೋಟಿಯಿಂದಮುಚ್ಚಾಟಿಸಿ (ಪಂಪಭಾ. ೪-೧೫ ಪ); ಖರನಖರಂಗಳಿಂ ನಿಶಿತಚಂಚುಗಳಿಂದಿಜಾಯಲ್ಕರುತ್ತು ಸಾರ್ತರೆ ನಸುನಕ್ಕು ಪೊಯ್ಕೆ ಕರದಿಂ . . . ಕೆಡೆದತ್ತು ವಜ್ರದಿಂ ಸುರಪತಿ ಪೊಯ್ಕೆ ಬೆಟ್ಟು ಕೆಡೆದಂತೆ ಜಟಾಯು ನಭೋವಿಭಾಗದಿಂ (ಪಂರಾಮಾ. ೯-೧೦೪); ಸಂತವಿಸಿಕೊಂಡರ್ಜುನನು ದ್ರೋಣನ ನವನಿಶಿತಬಾಣೌಘದಲಿ ಹೂಳಿದನು ನಿಮಿಷದಲಿ (ಕುವ್ಯಾದ್ರೋ. ೯-೪೬); ಆತನಂ ಮಗುಬ್ಬುಪೊಡೆಂದು ಕುಶಂ ನಿಶಿತವಿಶಿಖವಿಸರವಿಲಾಸಿ ಬೆಂಗೊಂಡುದನಿನ್ನುಂ ಬಾರದೆ ತಡೆದುದಂ ಬಿನ್ನಯಿಸಿದಳ್ (ರಾಮಾಶ್ವ. ೧೬೧-೧೨); ನಿಷಂಗದಿಂ ತೆಗೆ, ನಿಶಿತನಾರಾಚಮೃತ್ಯುವಂ! (ಕ್ರೀಂರಾಮಾ. ೧೫೬-೧೫೬). (ನಾ). ೨. ಹರಿತವಾದುದು; ಚೂಪಾಗಿರುವುದು: "ನಿಶಾತಂ, ನಿಶಿತಂ, ಧೌತಂ, ತೇಜಿತಂ—ಈ ೪ ಮಸೆದುದು" (ಹಲಾಯು. ೭೮-೩೨೦). ೩. ಚುರುಕಾದುದು; ತೀಕ್ಷ್ಣವಾದುದು: ಹಿರಿದೆನ್ನ ಮತಿ ಮೇಣೆದು ನಿಶಿತ (ಗಣೇಶ. ೭-೧೬೩). 'ನಿಶಿತಮತಿ' ಪರಾ.

[ಸಂ.]

ನಿಶಿತಕೋಪ (ನಾ). ಉಗ್ರವಾದ ಕೋಪ; ತೀಕ್ಷ್ಣವಾದ ಸಿಟ್ಟು: ಪೂರ್ವದಿಶಾನಿತಂದಿನಿ ನಿಶಿತಕೋಪದ ಕಿಡಿಯನುಗುಳಿದಳೆನಲು ರವಿ ಮೆಜೆದ (ಕುವ್ಯಾದ್ರೋ. ೨-೧೩). [ನಿಶಿತ$_2$+ಕೋಪ]

ನಿಶಿತಗೊಳಿಸು (ಕ್ರಿ). ಹರಿತಗೊಳಿಸು; ತೀಕ್ಷ್ಣಗೊಳಿಸು: ಈ ದೃಷ್ಟಿಯಿಂದ ಕಾವ್ಯಪ್ರಜ್ಞೆಯನ್ನು ಖಚಿತ, ನಿಶಿತಗೊಳಿಸುತ್ತ ಕಾವ್ಯ ಬರೆಯದೇ ಕೆಲವು ಕಾಲ ಇರುವುದೇ ಒಳ್ಳೆಯ ಕಾವ್ಯನಿರ್ಮಿತಿಗೆ ನಾಂದಿಯಾಗುತ್ತದೆ (ಚಂದ್ರಮಾ. ೦೪೫). [ನಿಶಿತ$_2$+ಕೊಳ್$_1$+-ಇಸು$_3$]

ನಿಶಿತಧಾರೆ (ನಾ). ಹರಿತವಾದ ಅಲಗು,— ಚೂಪಾದ ಬಾಯಿ: ನಿಶಿತಧಾರೆಯ ಹೊಳಹು ಸೂರ್ಯನ ಮುಸುಕಿಹುದು (ಕುವ್ಯಾಭೀ. ೬-೩೨). [ನಿಶಿತ$_2$+ಧಾರೆ]

ನಿಶಿತಪರಿಮಳ (ನಾ). ತೀಕ್ಷ್ಣವಾದ ಸುವಾಸನೆ: ನಿಶಿತಪರಿಮಳ ಮೋದದಿಂ ಮೋದಿಸುವ ಗಂಧದ್ರವ್ಯದಲಿ ಪಂಠಿಸಿದ ಜೀವನ ಜೀವ ತನ್ನಯ ಜೀವನವೆಯೆಂದು ವಸುಮತೀಶರಿಗಿತ್ತು ತಾ ಭೋಗಿಸದೆ ಬಳಸದೆ ರಾಜನನೋಲಗಿಸುವವನೆ ಪಾನೀಯಧಾರಕನು (ಕುವ್ಯಾಉ. ೩-೯೩).

[ನಿಶಿತ$_2$+ಪರಿಮಳ (=ಪರಿಮಲ)]

ನಿಶಿತಮತಿ (ನಾ). ೧. ತೀಕ್ಷ್ಣವಾದ ಬುದ್ಧಿಶಕ್ತಿ: ಅನೇಕ ಸಮಸ್ಯೆಗಳು ಇನ್ನೂ ಅಪರಿಹಾರ್ಯವಾಗಿ, ವಿಜ್ಞಾನಿಗಳ, ನಿಶಿತಮತಿಗೆ ಮತ್ತು ವಿಚಾರಬುದ್ಧಿಗೆ ಸವಾಲಾಗಿ ಉಳಿದಿವೆ (ದ್ರಾವಿವಿ. V, ಮುನ್ನುಡಿ). ೨. ತೀಕ್ಷ್ಣವಾದ ಬುದ್ಧಿಯುಳ್ಳವನು; ಕುಶಾಗ್ರಮತಿ: ನಿಶಿತ ಮತಿ ಮಹಾಸತ್ತ್ವವೃತ್ತಂ ತ್ರಿವರ್ಗೋಪೇತಂ ಪಾಡ್ಗುಣ್ಯಶೀಲಂ ವರ ಬುಧನಿವಹಸ್ತೋತ್ರಪಾತ್ರಂ ಪ್ರಶಸ್ತಂ (ಕಾದಂಪೂ. ೩೧೫); ಅದು ನಿಮ್ಮನ್ನರಪ್ಪ ನಿಶಿತಮತಿಗಳ್ಗೆ ಪಂಚರಾತ್ರಿಯೊಳ್ ಪ್ರತೀತಿಯಕ್ಕುಂ (ಸುಕುಮಾ. ೩-೩೭ ಪ); ನಿಶಿತಮತಿ ಸೊಚ್ಚದನು ಬೇಡಿನ್ನಸುವನೊಬ್ಬಂಗಿತ್ತೆನು (ಕುವ್ಯಾಅ. ೨೩-೪೭); ಬೇರೆ ನುಡಿದನಲ್ಲೊಂದುಮಂ ಆ ನಿಶಿತ ಮತಿ, ಮಿತಭಾಷಿ, ಯೋಗಿಗಳ ಯೋಗಿ, ಪವನಾತ್ಮಜಂ (ಕ್ರೀಂರಾಮಾ. ೩೩೧-೫೭೭). [ನಿಶಿತ$_2$+ಮತಿ]

ನಿಶಿತವಿಶಿಖ (ನಾ). ಹರಿತವಾದ ಬಾಣ,—ಶರ: ನಿಶಿತವಿಶಿಖಂ ಗ[ಳಿಂ]ದೊಂದೆಶನಿಯೆ ಗಿರಿಕುಲಮನಳಜುವಂತೆ ಮದೇಭಪ್ರಸರಸಹಸ್ರಂ ಕೆಡೆದುವು ವಿಸಸನದೊಳ್ ದ್ರೋಣನಿದಿರ್ಗೆ ಮೂರ್ವಲಮೊಳವೇ(ಪಂಪಭಾ. ೧೨-೨೬). [ನಿಶಿತ$_2$+ವಿಶಿಖ]

ನಿಶಿತಾಸ್ತ್ರ (ನಾ). = ನಿಶಿತವಿಶಿಖ: ಬಿಗಿದ ತವದೊಣೆಗೆ ಕೆಯ್ಯಂ ನೀಡಿ ನಿಶಿತಾಸ್ತ್ರಮನೊಂದನುರ್ಚಕೊಂಡು (ಶಾಂತಿಪು. ೪-೪ ಪ); ನಿಶಿತಾಸ್ತ್ರ ಹತಿಯಿನಾ ಮುನಿಯ ಶರೀರಂ ಕೂಡೆ ಜಾಳರಂಬೋಗಿರೆ (ಪಾರ್ಶ್ವಪು. ೧೨-೮೫). [ನಿಶಿತ$_2$+ಅಸ್ತ್ರ]

ನಿಶಿದಿ 'ನಿಸಿದಿ' ನೋ.

ನಿಶಿದ್ದಿ 'ನಿಸಿದಿ' ನೋ.

ನಿಶಿಧಿ$_1$ 'ನಿಸಿದಿ' ನೋ.

ನಿಶಿಧಿ$_2$ (ನಾ). ದಾಖಲೆ; ನಮೂದು; ನಿರೂಪಣೆ : ಯೂ ಹೆಣ್ಣಾಳು ಹುಡುಗಿಯನ್ನು ನಿಮಗೆ ಕ್ರಯ ಮೂಲಕ್ಕೆ ಕೊಟ್ಟೆನಾಗಿ ಯೀ ಹೆಣ್ಣಿಗೆ ಆದಿ ಅಡಮು ಆಡ್ಡಿಸಡ್ಡಿಯೇನು ಉಂಟಾಡ್ದನ್ನು ನಾನೇ ನೋಡಿ ಕೊಂಡೇನುಯೆಂದು ಬರೆಸಿಕೊಟ್ಟ ಕ್ರಯಚೀಟು ಹಣ ಸಂದ ನಿಶಿಧಿಯಾಗಿದೆ (ಮೈಆರಿ. ೧೯೨೪, ೬೭–೧೩ ; 1808).

[←ಪಾರ. ನಿಶ್ರ, ನಿಶಾ]

ನಿಶಿಧಿಗೆ 'ನಿಸಿದಿಗೆ' ನೋ.

ನಿಶಿವಗೆಯ, ನಿಸಿವಗೆಯ (ನಾ). ರಾತ್ರಿಯ ಹಗೆ ; ಸೂರ್ಯ : "ನಿಶಿವಗೆಯನೆಂಬಭಿಧಾನ ತಾಳುನಂ ದಿನಕರಂ" (ಕಶರ. ೫೪). **ನಿಸಿವಗೆಯ :** "ಬಿಸಿಗದಿರ ನಿಸಿವಗೆಯ ಕೆಂಗದಿರ . . . ಪಗಲ ಬೊಜಂಗನೆಂದು ಸಪ್ತಾಶ್ವಂಗೆ ನಾಮಮುಕ್ಕುಂ" (ಕಬ್ಬಕೈ. ೪೪) ; "ನಿಸಿವಗೆಯ ತಾವರೆಗೆಳೆಯ . . . ಜಗನುನೆಯಯ್ಯನೆನಲ್ಕೆ ಸೂರ್ಯನಾಮಂ" (ಶಬ್ದಮಂ. ೧೫೫). [ನಿಶಿ$_1$ + ಪಗೆಯ]

ನಿಶಿವರ (ನಾ). = ನಿಶಾಕಾಂತ : "ಇಂದು ಜೈವಾತೃಕಂ ನಿಶಿವ[ಪಾಠಾಂ. ಕ]ರಂ ಹಿಮಕರಂ ಚಂದ್ರಂ . . . ದ್ವಿಜರಾಜನೆನೆ ಸುಧಾಂಶುವೆನಿಕ್ಕುಂ" (ಮಂಗರಾ. ೧೧–೪). [ಸಂ.]

ನಿಶಿವೈರಿ (ನಾ). = ನಿಶಿವಗೆಯ : "ನಿಶಿವೈರಿ ನಿಃಹಿರಂ ವಿರೋಚನಂ ಭಾಸ್ಕರಂ . . . ಪೂಷ್ಣನೆನೆ ಸೂರ್ಯನಕ್ಕುಂ" (ಮಂಗರಾ. ೧೦–೨). [ಸಂ.]

ನಿಶೀಥ (ನಾ). ೧. ರಾತ್ರಿ ; ಇರುಳು. ೨. ನಡುರಾತ್ರಿ ; ಮಧ್ಯರಾತ್ರಿ : "ನಿಶೀಥಃ, ಮಹಾನಿಶಾ – ಈ ೨ ನಡುವಿರುಳ್" (ಹಲಾಯು. ೧೪–೧೦೯) ; ಅದೇಂ ಮೊಬಗಿತೋ ಮೇಘಂ ನಿಶೀಥಂಗಳೊಳ್ (ಜಗವಿ.೪–೨೮); ನಿನ್ನಯ ಪಿಂತೆ ಕಾಂತಿಯಂ ಕಾಣದ ಭಾರತಂ ಬರಬರುತ್ತ ನಿಶೀಥಕೆ ಕಂದಿ ಬಂದುದ್ದೆ (ಗಳವಿಂ. ೫೩–೧೨) ; ರಾತ್ರಿ ಮಹಾನಿಶೀಥದಲ್ಲಿ ಕಾಲಿಟ್ಟತ್ತು (ನೂರಜ. ೩೮). [ಸಂ.]

ನಿಶೀಥಿನಿ (ನಾ). ಇರುಳು ; ರಾತ್ರಿ : "ತಮಿಸ್ರಾ, ತಮಿಸ್ರಾ . . . ನಿಶೀಥಿನೀ, ನಿಶಾ . . . ಶ್ಯಾಮಾ, ರಾತ್ರಿಃ–ಈ ೧೪ ಇರುಳಿನ ಪೆಸರ್" (ಹಲಾಯು. ೧೪–೧೦೬); ನಿಶೀಥಿನಿಯೊಳ್ ಖಳ ರಾಹು ಬಂದು ಸಂಪೂರ್ಣ ಸುಧಾಂಶುವಂ ಪಿಡಿಯಲೆಂದನುಗೆಯ್ಕೆ (ಬಾಧಪು. ೪–೩೪) ; ಮಲಗುವು ದೊಲ್ದು ನಿಶೀಥಿನಿಯೊಳ್ ನಿರ್ಮಲಮನಸ್ಕನೆನಿಸುವುದು (ವಿಷ್ಣುಪು. ೧೨–೫೮) ; ಆಂಜನೇಯನ ಬರವಿಗಂಜಿ ಲಂಕಾರಾತ್ರಿ ವಿಕಂಪಿಸುತೆ ಬೆಳ್ಪೇರ್ದುದಂ ತೋರ್ಪ ಮಾಳ್ಕೆಯಿಂ ಶ್ವೇತಮಾದುದು ಮುಖಂ ಶೀತಲ ನಿಶೀಥಿನಿಗೆ ನಾಥನ್ಮೈತಹ ನಾಣಿಗೆಂಬಂತೆ (ಶ್ರೀರಾಮಾ. ೪೨೦–೩). [ಸಂ. ನಿಶೀಥಿನೀ]

ನಿಶೀಥಿನೀನಾಥ (ನಾ). ರಾತ್ರಿಯ ಒಡೆಯ ; ಚಂದ್ರ : "ಇಂದುಃ . . . ನಿಶೀಥಿನೀನಾಥಃ, ಜೈವಾತೃಕಃ, ಮೃಗಾಂಕಃ, ವಿಧುಃ, ದಾಕ್ಷಾಯಣೀರಮಣಃ—ಈ ೨೧ ಚಂದ್ರನ ಪೆಸರ್"(ಹಲಾಯು.೪–೪೩). [ಸಂ.]

ನಿಶೀಥೆ (ನಾ). ನಡುರಾತ್ರಿ ; ನಟ್ಟಿರುಳು :"ಅರ್ಧರಾತ್ರೆ ನಿಶೀಥೆಯೆನೆ ಮಧ್ಯರಾತ್ರಿಯಕ್ಕುಂ" (ಮಂಗರಾ. ೨೦–೭). [ಸಂ. ನಿಶೀಥ]

ನಿಶೀಧಿ 'ನಿಸಿದಿ' ನೋ.

ನಿಶೀಧಿಕೆ 'ನಿಸಿದಿಗೆ' ನೋ.

ನಿಶೀಧಿಗೆ 'ನಿಸಿದಿಗೆ' ನೋ.

ನಿಶುಂಭನ (ನಾ). ಕೊಲ್ಲುವಿಕೆ ; ನಾಶಗೊಳಿಸುವಿಕೆ : "ಮಾರಣಂ, ನಿಶರಣಂ, ನಿಬರ್ಹಣಂ, ಸೂದನಂ, ನಿರಸನಂ, ನಿಶುಂಭನಂ . . .ಸಂಜ್ಞಪನಂ—ಈ ೨೧ ಕೊಲೆ" (ಹಲಾಯು. ೭೮–೩೨). [ಸಂ.]

ನಿಶುಂಭಿತ (ನಾ). [ನಾಟ್ಯ] ನೂರೆಂಟು ಕರಣಗಳಲ್ಲಿ ಒಂದು ; ☞ "ಬಲಗಾಲನ್ನು ಕುಂಚಿತ ಮಾಡಿ, ಎಡಗಾಲಿನ ಹಿಮ್ಮಡಿಯ ಹತ್ತಿರಕ್ಕೆ ತಂದು ಅಥವಾ ಚೇಳಿನ ಬಾಲದಂತೆ ಹಿಂದಕ್ಕೆತ್ತಿ ಎದೆಯನ್ನು ಮುಂದಕ್ಕೆ ಚಾಚಿ, ಕಟಕಾಮುಖಹಸ್ತದ ಮಧ್ಯ ಬೆರಳನ್ನು ತಿಲಕವಿಡುವಂತೆ ಹಣೆಯ ಮೇಲೆ ಚಲಿಸುವುದು" (ಲಾಸ್ಯರಂ. ೨೯೪ ಗದ್ಯಾನುವಾದ): ತವೆ ಕುಂಚಿತಮುಂ ಡೋಲಂ ವಿವೃತ್ತ ವಿನಿವೃತ್ತ ಮೆಸೆವ ಪಾರ್ಶ್ವಶ್ಯಾಂತಂ ಯುವತೀ ನಿಶುಂಭಿತಂ ಕೇಳವಿರಳಗುಣ ರಂಜಿಸಿರ್ಪ ವಿದ್ಯುದ್ವ್ಯಾಪ್ತಂ (ಲಾಸ್ಯರಂ. ೪–೩೪). [ಸಂ.]

ನಿಶೆ$_1$ (ನಾ). ೧. ಇರುಳು ; ರಾತ್ರಿ ; ರಜನಿ : "ತಮಿಸ್ರಾ, ತಮಿಸ್ರಾ. . . ನಿಶಾ, ದೋಷಾ . . . ರಾತ್ರಿಃ—ಈ ೧೪ ಇರುಳಿನ ಪೆಸರ್"(ಹಲಾಯು. ೧೪–೧೦೬) ; ಒದವಿದವಶ್ಯಾಯದೊಳ್ ನಿಂದನೇಕಾಂತನಿವಾಸಂ ಬೆಳ್ಪವಾಸಂ ನಿಶೆಯೊಳಿಸೆಯೆ ನಿರ್ವಾಣದೊಳ್ ಯೋಗಿನಾಥಂ (ಸುಕುಮಾ. ೪–೧೧); ಪರಿಪೂರ್ಣಚಂದ್ರನಂ . . . ದರವಿಕಸದ್ವಾರಿರುಹಮನಾ ಕಾಂತೆ ನಿಶೆಯ ಕಡೆಯೊಳ್ ಕಂಡಳ್ (ಪುಷ್ಪಪು. ೩–೧೩೦); ಲಂಕಿಣಿಯ ಮರ್ದಿಸಿ ನಿಶೆಯೊಳಾ ಧರಾನಂದನೆಯ ನೋಡಿ (ನೆಳ್ಕಾರಾ. ೫–೧–೨) ; ಮಂಥರೆಯ ಬಾಳ್ನಿಶೆಗೆ ಶಶಿಯುದಿಸಿದಂತಾಯ್ತು (ಶ್ರೀರಾಮಾ. ೨೩–೬೦೯). ೨. ಕತ್ತಲೆ ; ಅಂಧಕಾರ. ೩. ಅರಿಸಿನ ; ಹರಿದ್ರ : "ನಿಶಾವಾಸ್ಯಾ, ಕಾಂಡನೀ, ಪೀತಾ, ಹರಿದ್ರಾ, ವರವರ್ಣನೀ—೫ ಅರಿಸಿನದ ಪೆಸರುಗಳು" (ಏಡ್ಡಾಂತಿ. ೨೮೫) ; ಸವನಾಗಿ ಕೊಂಡು ಧೂಪಿಸುಗೆ ವಿಳಂಗಂ ಮಹಿಷಿ ಮತ್ಸ್ಯಮಾಂಸಂ ನಿಶೆ ಸಾಸಿವೆಯುಂ ಮತ್ತಿಯ ಪೂವೆಂಬಿವೞುಂ ತರು ನಿರುಜಮಾಗಿ ಫಳದೊಳ್ ನೆರೆ(ಜೆ)ಗುಂ (ಲೋಕೋಪ. ೬–೧೨) ; ನಿಶಾ, ಅರಸಿನ (ಶ್ರುತಿಪ್ರಾ. ೭–೨೬). [ಸಂ. ನಿಶಾ]

ನಿಶೆ$_2$ 'ನಸೆ' ನೋ.

ನಿಶೇಶ (ನಾ). ರಾತ್ರಿಯ ಒಡೆಯ ; ಚಂದ್ರ : ಸುತೆಯರ್ ಪುಟ್ಟುವ ರಂತಾತ್ರಿತರೊಳ್ ಬಲ್ಲಿದರೊಳೊಂದುಗುಂ ವೈರಂ ನಿಸ್ಯತೆ ಕೀರ್ತಿಹಾನಿ ಬಹುನಿದ್ರತೆ ದೊರೆಕೊಳ್ಗುಂ ನಿಶೇಶನವರೋಹಿಣಿಯೊಳ್(ಜಾತಕ.೯–೨೦).

[ಸಂ.]

ನಿಶೇಶಶೇಖರ (ನಾ). ಚಂದ್ರನನ್ನು ಮುಡಿಯಲ್ಲಿ ಧರಿಸಿದವನು ; ಚಂದ್ರಶೇಖರ ; ಶಿವ : ಆ ಸಮಯದಂಧಕಾಸುರನ ನೀಳ್ದ ಪಟುತರ ನಿಶೇಶಶೇಖರನು ಬೆಳಬೆಳಗುತ್ತ ಬಂದಂತೆ (ಸಪನೋ. ೧೪–೨೬).

[ನಿಶೇಶ + ಶೇಖರ]

ನಿಶ್ಚಂಚಲ (ಗು). ಸ್ಥಿರವಾದ ; ಅಚಲವಾದ; ದೃಢವಾದ. [ಸಂ.]

ನಿಶ್ಚಂಚಲಿತ (ಗು). = ನಿಶ್ಚಂಚಲ : ನಿಚ್ಚ ಸಾವಿರಜಂಗಮಂಗಳಿಗೆ ಸಂಚವಿಧ ಪಕ್ವಾನ್ನಪಾನಾದ್ಯಂಚಿತಾರ್ಥಂಗಳಂ ನಿಶ್ಚಂ[ಪಾಠಾಂ.ನಿಃಸಂ] ಚಲಿತಮತಿಯಿಂದೆ ನೀಡುತ ವರ್ತಿಸುತ್ತಿರಲು (ಬಸಪು. ೨೪–೩).

[ಸಂ.]

ನಿಶ್ಚಕ್ರನಿರಾಹಾರ (ನಾ). ಸಂಪೂರ್ಣವಾದ ಉಪವಾಸ ; ಒಂದು ತೊಟ್ಟು ನೀರೂ ಕುಡಿಯದೆ ಮಾಡುವ ಉಪವಾಸ ; ನಿಟ್ಟು ಪವಾಸ: ಅಂದು ಏಕಾದಶೀ ಆದ್ದರಿಂದ ನನಗೆ ನಿಶ್ಚಕ್ರನಿರಾಹಾರವೆಂದು ಗುಳಿಗೆ ಉರುಳಿಸಿದೆ (ಡೀಕಸ್ಕೆ. ೧೦೪). [ಸಂ.]

ನಿಶ್ಚಟ 'ನಿಚ್ಚಟ್ಟ' ನೋ.

ನಿಶ್ಚಯ (ನಾ). ೧. ನಿಜ ; ಸತ್ಯ ; ದಿಟ : [ಪರಿ]ಕ್ಷಿಸಿದೀ ಸ್ಥಾನ ಕ್ಕೆರಡಂ ಬಗೆದಳ್(ಬು)ದವಂಗೆ ನಿಶ್ಚಯದಿಂ ಕೇಳಿರೆ ವಾರಣಾಸಿಯೊಳ್

ಪಾ ××× ಕವಿಲೆಯುಮನಟಿದ ಪಾಪಂ ಸಾರ್ಗುಂ (ಎಇ. XXVIII, ೫–೬೩ ; ಸು. 1082) ; ಅನ್ಕರ ಮನೆಗೆ ಹೋಗಿ ತನ್ನುದರವ ಹೊರೆಯುವ ಅಚ್ಚರಶರಣರ ಕಂಡರೆ ನಿಶ್ಚಯವಾಗಿ ಕೂಡಲಸಂಗಯ್ಯನೆಂಬೆನು (ಬಸವ. ೬೫೮) ; ಮತ್ತೆ ಕೇಳ್ನಿಶ್ಚಯವುಯೋಳದು ಪುತ್ರ ಅರಿ ಮೌನವದು ಯೆಂಟದು ಅತ್ಯಧಿಕಮಹಕ್ಷಮವುಯೆಂದೆನಿಸುವದು (ಜ್ಞಾನಸಿಂ. ೨೬–೫) ; ದೇವರಿಗೆ ಕನಿಕರ ಹುಟ್ಟ ಆತನು ತಮ್ಮ ಅಪರಾಧಗಳನ್ನು ಕ್ಷಮಿಸುವ ನೆಂದು ನಿಶ್ಚಯವಾಗಿ ತಿಳಿದುಕೊಳ್ಳಿರಿ (ಮುಂಬಯಿ. ೪–೮೬) ; ನಿಶ್ಚಯಕ್ಕೆ ಪಕ್ಷಪಾತವೇ ? (ಗಾದೆ). ೨. ದೃಢವಾದ ಭಾವನೆ ; ಖಚಿತವಾದ ಅಭಿಪ್ರಾಯ ; ಸ್ಥಿರವಾದ ನಿರ್ಣಯ : "ನಿಶ್ಚಿಂತ ನಿಯತಮೆನೆ ನಿಶ್ಚಯಮದು" (ಮಂಗರಾ. ೧೨೯–೧೩) ; ನಚ್ಚು ಮಚ್ಚಿಂಗೆ ಪೂಜಿಸಿ ನಿಶ್ಚ[ಪಾಠಾಂ. ಚ್ಚ]ಯವೆಂದೆನಲಿಲ್ಲ . . . ಅಂಗದಲ್ಲಿ ಸಂಗಿಯಲ್ಲ ಸಂಗದಲ್ಲಿ ವ್ಯಸನಿಯಲ್ಲ ಅಂಗವಿಲ್ಲದ ಸಂಗ ಗುಹೇಶ್ವರ ನಿಮ್ಮ ಶರಣ (ಅವಚಂ. ೮೧–೩೬೬). ೩. ಮನೋವೃತ್ತಿಯ ನಾಲ್ಕು ವಿಧ ಗಳಲ್ಲಿ ಒಂದು : ಜೀವಾತ್ಮ ಪರಮಾತ್ಮರನ್ನು ಆಶ್ರಯಿಸಿಕೊಂಡಿರುವ ದ್ರವ್ಯವು ಜ್ಞಾನ. ಇದು . . . ವಿಷಯಸಂಬಂಧದಿಂದ ಸಂಶಯ ನಿಶ್ಚಯ ಪ್ರತ್ಯಕ್ಷ ಪರೋಕ್ಷ ಮೊದಲಾದ ವಿಭಾಗವನ್ನು ಹೊಂದುವುದ ರಿಂದ ದ್ರವ್ಯವೆಂದೂ ಕ್ಷಣಿಕವೆಂದೂ ಹೇಳಲ್ಪಡುವುದು (ಹಂದಸಾ. ೨೩೯); ವೃತ್ತಿಯು ಸಂಶಯ, ನಿಶ್ಚಯ, ಗರ್ವ ಮತ್ತು ಸ್ಮರಣ ಎಂದು ನಾಲ್ಕು ವಿಧ (ಭಾತತ್ತ್ವ. ೫೮೮). ೪. = ನಿಶ್ಚಯತಾಂಬೂಲ.

ನಿಶ್ಚಯಪಡಿಸು = ದೃಢಪಡಿಸು ; ಸ್ಥಿರೀಕರಿಸು : ಕಾಲ್ಡವೆಲ್ಲನು . . . ಪೋಪನ ಹೇಳಿಕೆಗಳಲ್ಲಿದ್ದ ಒಂದೆರಡು ಮಾತುಗಳನ್ನು ಇನ್ನೂ ನಿಶ್ಚಯಪಡಿಸಿದನು (ದ್ರಾವಿವಿ. ೧೯). **ನಿಶ್ಚಯ ಮಾಡು** = ನಿಶ್ಚಯಿಸು ; ನಿರ್ಧರಿಸು : ನೆಂಟರಲ್ಲಿಗೆ ಹೋಗಿದ್ದ ಕಾಳು ಮದುವೆಯ ದಿನವನ್ನು ನಿಶ್ಚಯ ಮಾಡಿ ಅದೇ ದಾರಿಯಲ್ಲಿ ಬರುತ್ತಾ ಬಿದ್ದ ಬೋಳನನ್ನು ಕಂಡು . . . ಕರೆದು ತಂದನು (ಕಾಲೂರ. ೧೧ ಕಥಾಸಾರ). **ನಿಶ್ಚಯ ಹಾಕು** = (ಮದುವೆಯನ್ನು) ನಿರ್ಧರಿಸು,—ನಿರ್ಣಯ ಮಾಡು ; ನಿಶ್ಚಿ ತಾರ್ಥ ಮಾಡು : ಭೀಮ್ಮನ ಹೆಂಡತಿ ಸತ್ತು ಇನ್ನೂ ಒರ್ಡುದಿನ ಆಗಿಲ್ಲ. ಆಗಲೆ ನಿಶ್ಚಯ ಹಾಕಿದರಂತ (ತಿಡುಗು. ೬೨). [ಸಂ.]

ನಿಶ್ಚಯಂಗೆಯ್ (ಕ್ರಿ). ನಿರ್ಣಯಿಸು ; ಖಚಿತವಾಗಿ ನಿರ್ಧಾರ ಮಾಡು : ಚಿಚ್ಚರಮನ್ನೀ ಪ್ರಾಣಮಂ ತಾಂ ಬಿಡದಿರೆನೆನುತಂ ನಿಶ್ಚಯಂಗೆಯ್ದುಳ್ (ಕಾದಂಬಾ. ೯೭೮) ; ಬರವೇಟ್ಟಾತ್ಮೀಯ ಮಂತ್ರಿ ಪ್ರಮುಖರನವರೊಳ್ ನಿಶ್ಚಯಂಗೆಯ್ದು ಧಾತ್ರೀಭರಮಂ ಕೊಟ್ಟಾ ತ್ಮಜನ್ಮಂಗಧಿಕವಿಭವದಿಂ ಪಟ್ಟಮಂ ಕಟ್ಟ (ಅಜಿಪು. ೨–೧೧೬) ; ಜೀವಾದಿ ಪದಾರ್ಥತತ್ವಂಗಳಂ . . . ಪಿರಿದುಮಟ್ಟಿಱೊಳ್ ನಿಶ್ಚಯಂಗೆಯ್ದು ನೆಂಬುವುದು ಸಮ್ಯಗ್ದರ್ಶನಮೆಂಬುದಕ್ಕುಂ (ಸುಕುಮಾ. ೬–೮ ಪ).

[ನಿಶ್ಚಯ + ಕೆಯ್$_1$]

ನಿಶ್ಚಯಂಬಡೆ (ಕ್ರಿ). ನಿರ್ಧಾರವನ್ನು ಹೊಂದು ; ನಿರ್ಧಾರಕ್ಕೆ ಬರು ; ಸ್ಥಿರತೆಯನ್ನು ಪಡೆ : ಪರಿಣಾಮತೆಯನೆಯ್ದು ನಿಶ್ಚಯಂ ಬಡೆವುದು ಮಹಾಲಿಂಗದ ವಿಷಯ (ಅದನ. ೧೯೩–೩೫೧).

[ನಿಶ್ಚಯ + ಪಡೆ$_1$]

ನಿಶ್ಚಯಗುಣ (ನಾ). ೧. ನಿರ್ಧಾರವಾದ ಗುಣ ; ವ್ಯತ್ಯಾಸಕ್ಕೆ ಒಳಗಾಗದ ಸ್ವಭಾವ. ೨. ನಿರ್ಧಾರವಾದ ಗುಣವುಳ್ಳವನು : ನಿಶ್ಚಯಗುಣರೊಳರೆಂಬುದಿದಾಶ್ಚರ್ಯಂ ಭರತಭೂಮಿಯೊಳ್(ಧರ್ಮಾಮೃ. ೪–೭೨). [ನಿಶ್ಚಯ + ಗುಣ]

ನಿಶ್ಚಯಗುಣಿ (ನಾ). ನಿರ್ಧಾರವಾದ ಗುಣವುಳ್ಳವನು : ನಿಶ್ಚಯ ಗುಣರೊಳರೆಂಬುದಿದಾಶ್ಚರ್ಯಂ ಭರತಭೂಮಿಯೊಳ್ ಸುರಪತಿ ತಾಂ ನಿಶ್ಚಲ[ಯ]ಗುಣಿಗಳನಲ್ಲದೆ ದುಶ್ಚರಿತರನಭಸಮೇತರಂ ಪೊಗಟ್ಟಪನೇ (ಧರ್ಮಾಮೃ. ೪–೭೨). [ಸಂ. ನಿಶ್ಚಯಗುಣಿನ್]

ನಿಶ್ಚಯತಾಂಬೂಲ (ನಾ). ಮದುವೆಯನ್ನು ನಿರ್ಧಾರ ಮಾಡಿದ ಮೇಲೆ ಮಾಡುವ ಶಾಸ್ತ್ರ ; ನಿಶ್ಚಿತಾರ್ಥ ; ಕಡಲೆಬೆಲ್ಲ ; ಗಟ್ಟಿ ಗಡುಬು (ಕರಾ) ; ಸಕ್ಕರೆಕಾರಣ (ಉಕ) : ದೇವ ಕೇಳ್ನಿಮ್ಮ ನಂದನ ಸೌಂದರೇಶಗೆ ನಾವಿತ್ತೆವೆಮ್ಮ ಪುತ್ರಿಯನೆನೆ ಆ ವೇಳೆಯೊಳೆ ನಿಶ್ಚಯ ತಾಂಬೂಲವ ನಾ ವಿನಯದೊಳಿತ್ತು ಬೀಳ್ಕೊಂಡೆ (ತ್ರಿಭುತಿ. ೨೧–೫೮).

[ನಿಶ್ಚಯ + ತಾಂಬೂಲ]

ನಿಶ್ಚಯನಯದೃಷ್ಟಿ (ನಾ). [ಜೈನ] ದಾರ್ಶನಿಕರ ಎರಡು ದೃಷ್ಟಿಕೋನಗಳಲ್ಲಿ ಒಂದು ; ಜೀವಸ್ವರೂಪದ ಗುಣಗಳನ್ನು ವಿಮರ್ಶಿಸುವ ದೃಷ್ಟಿ ; ಉ ಸುವರ್ಣವು ಒಂದು ಮೂಲದ್ರವ್ಯ. ಅದರ ಗುಣ, ಸ್ವರೂಪಗಳನ್ನು ವಿವರಿಸುವ ದೃಷ್ಟಿ ನಿಶ್ಚಯ ದೃಷ್ಟಿ. ಸುವರ್ಣದಿಂದ ನಿರ್ಮಿತವಾದ ಆಭರಣಗಳ ಗುಣ, ಸ್ವರೂಪಗಳ ವಿವೇಚನೆಯೆ ವ್ಯವಹಾರದೃಷ್ಟಿ. ಹೀಗೆಯೇ ಆತ್ಮ ತತ್ವದಲ್ಲಿ ಮೂಲದ್ರವ್ಯದ ವಿಚಾರ ಹೇಳುವುದು ನಿಶ್ಚಯನಯ ದೃಷ್ಟಿ. ಆತ್ಮ ಕರ್ಮಗಳ ಸಂಯೋಗದಿಂದ ಜೀವ ಪರ್ಯಾಯಗಳ ವಿಷಯವನ್ನು ಹೇಳುವುದು ವ್ಯವಹಾರನಯ ದೃಷ್ಟಿ : ಜೀವದ ಸ್ವರೂಪವನ್ನು ವಿವರಿಸುವಾಗ ಜೈನದಾರ್ಶನಿಕರು ಎರಡು ದೃಷ್ಟಿಕೋನ ಗಳನ್ನು ಇಟ್ಟುಕೊಂಡಿದ್ದಾರೆ. ಒಂದು ನಿಶ್ಚಯನಯದೃಷ್ಟಿ, ಇನ್ನೊಂದು ವ್ಯವಹಾರನಯ ದೃಷ್ಟಿ (ಜೈನಪ. ೨೮೪). [ಸಂ.]

ನಿಶ್ಚಯಬುದ್ಧ (ನಾ). ಬುದ್ಧಿವಂತ ; ಜ್ಞಾನಿ ; ಪ್ರತಿಭಾವಂತ : ದಿವಿಜೇಜ್ಯಂ ನಿಲೆ ಜನ್ಮಲಗ್ನಗೃಹದೊಳ್ ಪ್ರಾಜ್ಞಂ . . . ತನೂಭವ ದೊಳ್ ನಿಶ್ಚಯಬುದ್ಧಂ (ಜಾತತಿ. ೧೮–೧೧). [ನಿಶ್ಚಯ + ಬುದ್ಧ]

ನಿಶ್ಚಯಬುದ್ಧಿ (ನಾ). ದೃಢವಾದ ಬುದ್ಧಿ : ಇಂತಪ್ಪ ನಿಶ್ಚಯ ಬುದ್ಧಿಯೊಳಪಗತಚಿಂತಾತುರ ತನ್ನ ತಾನೆ ಸಂತವಡಿಸಿ ನಾಲ್ದೆಸೆಯ ನೋಡುತ ಕಂಡನಂತಲ್ಲಿರ್ದ ದೇಗುಲವ (ತ್ರೀಪಾಲ. ೬–೪೯) ; ನಿಶ್ಚಯ ಬುದ್ಧಿಯುಳ್ಳವನು ಎಂದಿಗೂ ಅಳಿಯುವುದಿಲ್ಲ (ಶಕ್ತಿವಿ. ೧೦೩).

[ನಿಶ್ಚಯ + ಬುದ್ಧಿ]

ನಿಶ್ಚಯಶಕ್ತಿ (ನಾ). ನಿರ್ಧಾರಕ ಶಕ್ತಿ ; ನಿರ್ಣಯಿಸುವ ಸಾಮರ್ಥ್ಯ : ಬೆಟ್ಟದ ಮೇಲೆ ಹೊಗೆಯನ್ನು ನೋಡಿ ಅಲ್ಲಿ ಬೆಂಕಿ ಪುಂಟೆಂದು ತಿಳಿಯುವುದೇ ನಿಶ್ಚಯಶಕ್ತಿ (ಅನಂಶ. ೧೬–೬೫).

[ನಿಶ್ಚಯ + ಶಕ್ತಿ]

ನಿಶ್ಚಯಿಸು, ನಿಶ್ಚಯ್ಸು, ನಿಶ್ಚೈಸು (ಕ್ರಿ). ೧. ತೀರ್ಮಾನಿಸು ; ನಿರ್ಧರಿಸು ; ದೃಢವಾದ ಅಭಿಪ್ರಾಯಕ್ಕೆ ಬರು ; ಖಚಿತವಾದ ತೀರ್ಮಾನಕ್ಕೆ ಬರು : ತನ್ನಯ ತಂದೆಯೆಂದುದನೆ ಕೊಟ್ಟು ವಿವಾಹ ಮನಿಂದೆ ಮಾಡುವೆಂ ಎಂದು ನಿಶ್ಚಯಿಸಿ ಗಾಂಗೇಯಂ ದಾಶರಾಜನಲ್ಲಿಗೆ ವಂದು (ಪಂದಭಾ. ೧–೭೨ ಪ) ; ಈಗಳ್ . . . ಪಿಂಗಳಕನಲ್ಲಿಗುಯ್ದೆ ನೆಂಬುದನೆ ನಿಶ್ಚಯಿಸಿ ಸಂಜೀವಕಂಗಿಂತೆಂದಂ (ಪಂಚತಂ. ೫೪–೬) ; ಉಳಿದ ಚತುರ್ವಿಧಾಹಾರಂ ಕೇವಲಿಗಿಲ್ಲೆಂದು ನಿಶ್ಚಯಿಸುವುದು (ಶಾಸ್ತ್ರಚೇ. ೯೭–೬) ; ಧರಣಿಪನ ನಿಜಾಗೆಯಲಿ ಕಂದನ ಮರಣವನು ನಿಶ್ಚಯಿಸಿ ಪ್ರಳಯದ ಹರನ ಕೋಪವ ಕೇಣಗೊಂಡನು ತನ್ನ ಚಿತ್ತದಲಿ (ಕುಮಾದ್ರೋ. ೮–೧೪) ; ದೇವರೊಬ್ಬನಿದ್ದಾನೆಂದು ಬಲ್ಲವರು ನಿಶ್ಚಯಿಸಿ ದ್ದಾರೆ (ಮುಂಬಯಿ. ೪–೫೯). ೨. ಗೊತ್ತುಪಡಿಸು ; ಖಚಿತ ಪಡಿಸು : ಮಾಯಾವಿ ನುಡಿದ ನಸುಮಾತಿಗೆ ನಿಶ್ಚಯಿಸಿದ ಪಯಣವ ನುಸೆಯ ತಾತ್ಪರ್ಯದುಬ್ಬಸಲಿ ಸಂತಸವಡೆದು ತಮ್ಮವರನ ಮೂರ್ತಿಯ ನಾಂತಳು ಬೆನ್ನ ಭಾಗದಲಿ (ಸೋಕಥ. ೩೧–೨೫) ; ಆ ದಾನಗಳನ್ನು

ಕೊಟ್ಟುದೇತಕ್ಕೆ. . .ನಿಶ್ಚಯಿಸಿದ್ದ ಪ್ರಯಾಣವು ಸುಗಮವಾಗಿ ನಡೆಯ ಲೆಂದು (ಚಿಂಗಾಳ್ವ. ೧೪೧). ೩. ನಂಬು ; ನಚ್ಚು : ಮಹಾದಾನಿ ಕೂಡಲಸಂಗಮದೇವನ ಪೂಜಿಸಿ ಬದುಕುವೋ ಕಾಯವ ನಿಶ್ಚಯಿಸದೆ (ಬಸವ. ೧೬೨). **ನಿಶ್ಚಯ್ಸು :** ೧. ರಕ್ಕಸಮಣಿಯ ಕೋಣೆಯ ಗಂಗನ ಕಾಳೆಗದೊಳ್ತನ್ನ ಸಾವಂ ನಿಶ್ಚಯ್ಸಿ (ಎಕ. II, ೧೩೮-೪ ; ಸು. 940). **ನಿಶ್ಚೈಸು :** ೧. ತಲೆಯಂ ಬಾಗಿ ನೆಲನಂ ಬರೆಯುತ್ತು ಮಿರ್ದ ವೀರಭಟರುಮಂ ಕಂಡು ಮಗನ ಸಾವಂ ನಿಶ್ಚೈ[ಪಾಠಾಂ.ನಿಶ್ಚಯಿ]ಸಿ ರಾಜ ಮಂದಿರಮಂ ಪೊಕ್ಕು (ಪಂಪಭಾ. ೧೧-೧೧೫ ವ) ; ಬಲ್ಪಿನಿಂ ದೇವಿಯ ಪಾದಮೂಲಮನೆಯ್ದಿಸಲುಂ ಸಾಲ್ವುವೆಂದು ನಿಶ್ಚೈಸಿ(ಕಾದಂಉ.೪೦೪) ; ಭರದಿಂ ಸುಜ್ಞನೆ ಸುಯ್ಯೆ ಸೂಗುಜುಸೆ ಕಣ್ದಕ್ಕಾಲಿಗಳ್ ಬೀಟೆ ಮೆಯ್ ಮರವಟ್ಟಂತಿರೆ ನೋ(ಡಿ)ಡೆ ಪೇಟೆ ನರಡಿದಾಯ್ತೆಂದಂದು ನಿಶ್ಚೈಸಿ (ಲೋಕೋಪ. ೯-೨೦೭) ; ಧೌಮ್ಯಾದಿ ಸುಜನವ್ರಾತ ನಿಶ್ಚೈಸಿದರು ಮನದಲಿ ಧರ್ಮನಿರ್ಣಯವ (ಕುಸ್ಯಾಅ. ೨೨-೩೯). ೨. ಪುಂಡರೀಕಿಣಿಗೆ ಪಯಣಂಬೋಗಲ್ ನಿಶ್ಚೈಸಿದಂ ಧರಣೀಶ್ವರಂ (ಅದಿಪು. ೪-೯೦) ; ಮಱು ದಿವಸಂ ಪಯಣಮೆಂಬುದನಲ್ಲಿಯೆ ನಿಶ್ಚೈಸಿ ನಿಜರಾಜಭವನಕ್ಕೆ ಬಿಜಯಂ ಗೆಯ್ದು (ಕಾದಂಉ. ೪೯೯). ೪. ನಿರ್ಧಾರಗೊಳ್ಳು : ಜ್ಞಾತೃ ಜ್ಞಾನ ಜ್ಞೇಯ ಸಂಪುಟವಾಗಿ ಅಱಿವು ನಿಶ್ಚೈಸಿ [ಪಾಠಾಂ. ನಿರ್ಣಯ, ನಿರ್ಣಯಿಸಿ] ನಿಷ್ಪತ್ತಿಯಾಗಿ ಕುಱುಹುಗೆಟ್ಟಲ್ಲಿ ಲಿಂಗಕ್ಕೆ ಆ ಅಱಿವೆ ಅರ್ಪಿತ (ಚನ್ನವ. ಕ. ೬೪೧-೧೪೩೯). [ನಿಶ್ಚಯ + -ಇಸು$_3$]

ನಿಶ್ಚಯ್ಸು 'ನಿಶ್ಚಯಿಸು' ನೋ.

ನಿಶ್ಚರತೆ (ನಾ). ಸ್ಥಿರತೆ ; ನಿಶ್ಚಲತೆ : ಹರಸಿದರು ಲೇಸಾಗಲೋ ನಿಶ್ಚರತೆಯಲಿ ದೀರ್ಘಾಯುವಾಗೆಂದು (ಕೊರಂಗ. ೫-೮-೭೨).

[ಸಂ. ನಿಶ್ಚರತಾ]

ನಿಶ್ಚಲ, ನಿಶ್ಚಳ (ಗು). ೧. ಚಲಿಸದೆ ಇರುವ ; ದೃಢವಾದ ; ಸ್ಥಿರವಾದ. 'ನಿಶ್ಚಲಪ್ರದೀಪ' ಪರಾ. (ನಾ). ೨. ಚಲನೆಯಿಲ್ಲದುದು ; ಸ್ಥಿರವಾದುದು : ಮುತ್ತಿಗೆಯ ಜಂಬುಕ ಖಗಾಳಿಯ ಚಿತ್ತ ನಿಶ್ಚಲವಾಯ್ತು (ಕುಸ್ಯಾಭೀ. ೫-೨೯) ; ನೀವು ಭಕ್ತದೇಹಿಕನೆಂಬುದು ಎನಗೆ ನಿಶ್ಚಲವಾಗಿ ಕಾಣಬಂದಿತ್ತು (ಅಖಂಡೇ. ೧೪೯-೧೪೭) ; ಭೀಷ್ಮನ ನಿಶ್ಚಲವಾದ ಮನಸ್ಸನ್ನು ತಿರುಗಿಸುವುದಕ್ಕಾಗುವುದಿಲ್ಲವೆಂದು ಅಂಬೆಗೆ ಹೇಳಿ ಪರಶುರಾಮರು ತಪಸ್ಸಿಗೆ ಹೊರಟುಹೋದರು (ನೀತಿಚೆಂ. XIV, ೨೭); ಪೃಥಿವಿಪತಿ ಮಂಕುಗಣ್ಣಿಂ ದಿಟ್ಟಿಸಿರ್ದನು ಶವಾಕ್ಷಿಯೋಲ್ ನಿರ್ಜೀವವೆನೆ ನಿಶ್ಚಲಂ (ಶ್ರೀರಾಮಾ. ೧೦೧-೩೪). ೩. ಅಲುಗಾಡದುದು ; ಕದಲದುದು ; ಗಿರಿ ; ಪರ್ವತ. ೪. ಭೂಮಿ. ೫. ಅಲುಗಾಡದೆ ಇರುವ ವ್ಯಕ್ತಿ; ಚಂಚಲತೆಯಿಲ್ಲದ ವ್ಯಕ್ತಿ : ಅಲಘುಭುಜನಾಗಿಯುಂ ನಿಶ್ಚಲನಾಗಿಯುಮಖಿಳಭೂಭೃದುತ್ತುಂಗತೆಯೊಳ್ ನೆಲಸಿಯುಮೆಯ್ದುದು ನಿನ್ನಾ ವಿಲಸಿತಮಂ ಮೇರು ಕಠಿನಭೋಗಾಧಾರಂ (ಕವಿಂಾ. ೩-೪೩) ; ನೆಲವನ್ನೇ ದಿಟ್ಟಿಸುತ್ತ ನಿಶ್ಚಲಳಾಗಿ ಕುಳಿತಿದ್ದಳು (ಪುನರು. ೧೩೭). ೬. ಚಂಚಲತೆಯಿಲ್ಲದವನು ; ಮನೋನಿಗ್ರಹಿ ; ತಪಸ್ವಿ; ಸಂಯಮಿ: ಚಲದಿಂದಂ ನಗರಾಜಪುತ್ರಿ ಹೃದಯಾಬ್ಜಾವಾಸದೊಳ್ ಭಾಪು ನಿಶ್ಚಲನಂ ನಿರ್ಮಳನಂ . . . ನಿಲಿಸುತ್ತೆ (ಗಿರಿಕ. ೯-೧೧) ; ನಿಗಮ ವಿಶಾಲನುತ ನಿಶ್ಚಲ ನಿಜಾತ್ಮ . . . ಶೂಲಧರ ಶ್ರೀಮಲ್ಲಿಕಾರ್ಜುನ ಸಲಹು ಮೂಜಗವ (ಅಮೃತ. ೧-೫೪); "ಇಳಾಚಲ ಸಂಯಮಿ ನಿಶ್ಚಲಾಂಕಿತಂ" (ನಾನಾರ. ೪೭). **ನಿಶ್ಚಳ :** ೫. ಬಿಳಿಯ ಮುಗಿಲ್ಗಳ ಪಟಳಾವಳಿಯೊಳ್ ದಿಕ್ಪಾಳರುಂ ಸುರೇಂದ್ರರುಮೇಂ ನಿಶ್ಚಳರಾಗಿರ್ದರೆನಲ್ಕಾ ಕಳ ಧೌತವಿಶಾಳಮಪ್ಪ ಚೌಪಳಿಗೆಗಳೊಳ್ ಬಂದಿರ್ಪುದುಂ (ನೇಮಿಪು. ೯-೭೯). ೬. ನಿಶ್ಚಳರುಂ ಪ್ರಣೂತಬಲರುಂ ತಾಮಾಗಿ ಲೋಕಾಗ್ರದೊಳ್ ತೊಳಗುತ್ತಿರ್ಪ ವಿಶುದ್ಧಸಿದ್ಧರೆಮಗೀಗಾತ್ಮೋದಯಪ್ರಾಪ್ತಿಯಂ(ಜೀವಸಂ. ೨-೨) ; ನಿಶ್ಚಳ[ಪಾಠಾಂ. ಲ] ನಿರಾಕುಳ . . . ರುದ್ರನಿರುತಿರ್ಪನು ವಿನೋದದಲಿ (ಪ್ರಭುಲೀ. ೨-೯). [ಸಂ.]

ನಿಶ್ಚಲತೆ, ನಿಶ್ಚಳತೆ (ನಾ). ಅಚಲವಾಗಿರುವಿಕೆ ; ದೃಢತೆ ; ಸ್ಥಿರವಾಗಿರುವಿಕೆ : ಇದೇಂ ಕಳಕಳಮೆನ್ನ ಭಕ್ತನಿವನೀತನೊಳಾಂಪ ವಿನೋದ ಮುಂಟು ನಿಶ್ಚಲ[ಪಾಠಾಂ.ಳ]ತೆಯೊಳಿರ್ಪುದೆಂದವರ್ಗೆ ನೇಮಿಸಿದಂ ಕರುಣಾಬ್ಧಿ ಶಂಕರಂ (ಶಬಶಂ.೪-೪೬) ; ಅರ್ಚ್ಯರೂಪದಿ ಮುಚ್ಚಿ ಮಹಿಮೆಯ ನಿಶ್ಚಲತೆಯಿಂದಿರುವೆಯಾದರು ನೆಚ್ಚಲಾರೆನು ಕೃಷ್ಣ ನಿನ್ನನು (ನೀಸಾರಾ. ೮೬-೧). **ನಿಶ್ಚಳತೆ :** ದಿಗಿಭಕುಂಭಮಿದೆಂದು ಧರಿತ್ರಿ ಬಂದು ನಿಶ್ಚಳತೆಯಿನಿರ್ಪಳಲ್ತೆ ಭುಜಮಂಡಳದೊಳ್ ವಸುಧಾಧಿನಾಥನಾ (ಚಂದ್ರಪು. ೨-೨೧). [ಸಂ. ನಿಶ್ಚಲತಾ]

ನಿಶ್ಚಲತ್ವ(ನಾ). = ನಿಶ್ಚಲತೆ : ನಿಶ್ಚಲತ್ವವು ಚಲನೆಯ ಒಂದು ಸಂದರ್ಭ ಅಥವಾ ಉದಾಹರಣೆ ಮಾತ್ರ (ಭೌತವಿ. ೨೬). [ಸಂ.]

ನಿಶ್ಚಲನೆ (ನಾ). = ನಿಶ್ಚಲತೆ : ನೀವು ವಿಕಳತೆಯಿಂದ ಭ್ರಮಿಸಲಿನಿತಾಯ್ತು ನಿಶ್ಚಲನೆಯಿಡಿ ಮನದೊಳೀಗ (ನವಮೋ. ೮-೫೦).

[ಸಂ. ನಿಶ್ಚಲನಾ]

ನಿಶ್ಚಲಪ್ರದೀಪ (ನಾ). ಚಲನೆಯಿಲ್ಲದ ಜ್ಯೋತಿ ; ಅಲುಗಾಡದ ದೀಪ : ಆ ಭುವನತ್ರಯವಿಜಯಿಯಪ್ಪ ರೂಪಾತಿಶಯದೊಡನಮಳ್ಬಳೆದಂತೆ ಬಳೆದ ನಿಸರ್ಗ ಶೌಚಾದಿ ಗುಣಂಗಳಿಂ ಬಿಣ್ಗುಂಡಿಕ್ಕಿದ ಭೈತ್ರಮುಮಂ ನಿಶ್ಚಲಪ್ರದೀಪಪವಿತ್ರಪ್ರದೀಪಮುಮಂ ಪೋಲ್ತು (ಶಾಂತಿಪು. ೧೦-೯೨ ವ). [ನಿಶ್ಚಲ+ಪ್ರದೀಪ]

ನಿಶ್ಚಲಾಂಗ, ನಿಶ್ಚಳಾಂಗ (ನಾ). ೧. ಮಿಸುಕಾಡದ ದೇಹ ; ಅಚಲವಾದ ಶರೀರ : ಅರೆಮುಗುಳ್ದಕ್ಷಿಗಳ್ ಮಿಡುಕುಗುಂದದ ಚೆಂದುಟಿ ನಿಶ್ಚಲಾಂ[ಪಾಠಾಂ.ಳಾಂ]ಗಮುರ್ವರೆಯೊಳೆ ತಳ್ತ ಕಾಲ್ದುದಿ . . . ಒಪ್ಪೆ ಪೊಸವೇಷದ ತಾಪಸನೊಪ್ಪಿ ತೋಱುದಂ (ಶಬಶಂ. ೨-೭೯). ೨. ಚಲಿಸದೆಯಿರುವ ಅವಯವಗಳನ್ನು ಹೊಂದಿರುವವನು. **ನಿಶ್ಚಳಾಂಗ :** ೧. ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ನಿಶ್ಚಲ + ಅಂಗ$_2$]

ನಿಶ್ಚಲಿತ, ನಿಶ್ಚಳಿತ (ಗು). ಚಲಿಸದೆಯಿರುವ ; ಅಚಲವಾದ ; ಸ್ಥಿರವಾದ ; ದೃಢವಾದ : ಪೊಡವಿಯೊಳು ಮುನ್ನಿಂದು ಕಾಣಲ್ವಡೆದುದೀ ವೈಜಾಂಬಿಕೆಯ ನಿಶ್ಚಲಿತ ಶಿವಭಕ್ತಿ (ಬಸಪು. ೫೨-೨೭). **ನಿಶ್ಚಳಿತ :** ಮಳವಿಳಯನರೆನಿಸಿದ ಕೇವಳಿಗಳ . . . ನಿಶ್ಚಳಿತ ಶ್ರುತಕೇವಳಿಗಳ ಚಳನಂ ನಮಗಚಳಸುಖಮನೀಗನವರತಂ (ಚಂದ್ರಪು. ೧-೧೩) ; ಪಶ್ಚಿಮದಿಙ್ಮೇಚ್ಛನೃಪತಿಗಳನೆಱಗಿಸಿದಂ ನಿಶ್ಚಳಿತಧೈರ್ಯಮೇರುವಿಪಶ್ಚಿನ್ನುತ ಕೀರ್ತಿ ಚಕ್ರಿಚರಣಾಂಬುಜದೊಳ್ (ಪಾರ್ಶ್ವಪು. ೧೧-೧೦೯) ; ಇಭಯೂಥಂ ಪರಿದತ್ತು ನಿಶ್ಚಳಿತಕರ್ಣಂ ಕ್ಷಿಪ್ರಹಸ್ತಂ ರದಪ್ರಭೆ ಚೆಲ್ವಾಗೆ ಮದಾಂಬು ಸೂಸೆ ಸಮರಕ್ರೀಡಾಮಹೋತ್ಸಾಹದಿಂ (ರಾಜಶೇ. ೬-೭೦).

[ಸಂ.]

ನಿಶ್ಚಲಿತಚಿತ್ತೆ (ನಾ). ದೃಢವಾದ ಮನಸ್ಸುಳ್ಳವಳು ; ಸ್ಥಿರವಾದ ಮನಸ್ಸುಳ್ಳವಳು : ಸಕಳಕಳೆಗಳನೊಚ್ಚತಂಗೊಂಡು ನಿಶ್ಚಲಿತಚಿತ್ತೆಯುಚ್ಚಾಸನಮನೇಱಿ ವಿಲಾಸಿನಿಯರ್ ಕೆಲಬಲದೊಳ್ ನೆಲನುಗ್ಗಡಿಸೆ ಪುರಾಭಿಮುಖಿಯಾಗಿ ಬರುತ್ತುಮಿರೆ (ಗಿರಿಕ. ೪-೩೩ ವ).

[ಸಂ. ನಿಶ್ಚಲಿತಚಿತ್ತಾ]

ನಿಶ್ಚಲೆ (ನಾ). ಚಂಚಲೆಯಲ್ಲದವಳು ; ಸ್ಥಿರವಾಗಿರುವವಳು : ಭಾಸುರತೇಜಂ ಕಂಚುಕಿಯಂತಿರೆ ನಿಶ್ಚಲೆ ಮಾಡಿತಾ ನೃಪಶ್ರೀವಧುವಂ (ಚಂದ್ರಪು. ೩-೨೩). [ಸಂ. ನಿಶ್ಚಲಾ]

ನಿಶ್ಚಳ 'ನಿಶ್ಚಲ' ನೋ.

ನಿಶ್ಚಳಚಿತ್ತ (ನಾ). ೧. ದೃಢವಾದ ಮನಸ್ಸು. ೨. ದೃಢವಾದ ಮನಸ್ಸುಳ್ಳ ವ್ಯಕ್ತಿ : ಆದಿದೇವರ ಕುಂತಳಂಗಳುಂ ಬೆಳೆದು ಜೆಡೆಗಳಾಗೆ ನಿಶ್ಚಳಚಿತ್ತನಿರ್ಪನ್ನೆಗಂ (ಜಾವುಂಪು. ೩೮).

[ನಿಶ್ಚಳ (=ನಿಶ್ಚಲ) + ಚಿತ್ತ]

ನಿಶ್ಚಳತನು (ನಾ). = ನಿಶ್ಚಲಾಂಗ ೨ : ಲಲಿತಮುಖಸರಸಿಜಂ ನಿಶ್ಚಳಪಕ್ಷ್ಮಂ ಸ್ತಿಮಿತತಾರಕಂ ಭುಜಬಲಿ ಕಣ್ಗಳೊಳೆ ತವೆ ಪೀರ್ವವೊಲ್ನಿಶ್ಚಳತನು ನಡೆನೋಡೆ ಭರತರಾಜಂ ಸೋಲ್ತಂ(ಆದಿಪು. ೧೪-೧೦೫).

[ನಿಶ್ಚಳ(=ನಿಶ್ಚಲ) + ತನು]

ನಿಶ್ಚಳತೆ 'ನಿಶ್ಚಲತೆ' ನೋ.

ನಿಶ್ಚಳಪಕ್ಷ್ಮ (ನಾ). ೧. ಅಲುಗಾಡದ ಕಣ್ಣೆವೆ ; ಚಲನೆಯಿಲ್ಲದ ರೆಪ್ಪೆ. ೨. ಅಲುಗಾಡದ ಕಣ್ಣೆವೆಯುಳ್ಳ ವ್ಯಕ್ತಿ : ಲಲಿತಮುಖಸರಸಿಜಂ ನಿಶ್ಚಳಪಕ್ಷ್ಮಂ ಸ್ತಿಮಿತತಾರಕಂ ಭುಜಬಲಿ ಕಣ್ಗಳೊಳೆ ತವೆ ಪೀರ್ವವೊಲ್ನಿಶ್ಚಳತನು ನಡೆನೋಡೆ ಭರತರಾಜಂ ಸೋಲ್ತಂ (ಆದಿಪು. ೧೪-೧೦೫). [ನಿಶ್ಚಳ (=ನಿಶ್ಚಲ) + ಪಕ್ಷ್ಮ]

ನಿಶ್ಚಳಲಕ್ಷ್ಮಿ (ನಾ). ನೆಲೆಯಾಗಿ ನಿಂತ ಲಕ್ಷ್ಮಿ : ಮೈಲ[ಮಯಾ]ಕಮಾಂಬಿಕಾಸುತ ತದಮಾತ್ಯ [ಬೇ]ತ [ಹೃ]ದಯೇಶ್ವರಿ ನಿಶ್ಚಳಲಕ್ಷ್ಮಿ ಭಾವಿಸಲು (ಕಇಅ. ೮೧-೧೫-೫೫ ; 1117).

[ನಿಶ್ಚಳ (=ನಿಶ್ಚಲ) ಲಕ್ಷ್ಮಿ]

ನಿಶ್ಚಳಾಂಗ 'ನಿಶ್ಚಲಾಂಗ' ನೋ.

ನಿಶ್ಚಳಿತ 'ನಿಶ್ಚಲಿತ' ನೋ.

ನಿಶ್ಚಿಂತ (ಗು). ೧. ಚಿಂತೆಯಿಲ್ಲದ ; ಸ್ವಸ್ಥ ಮನಸ್ಸಿನ ; ಶಾಂತ ಮನದ ; ನಿರ್ವಿಕಾರದ : ಆತ್ಮ ಲಿಂಗ ಪರಮಾತ್ಮ ಜಂಗಮ ತನುಮಧ್ಯೆ ಪ್ರಸಾದವಾಯಿತ್ತು . . . ಕೂಡಲಸಂಗನ ಶರಣರ ಸಂಗದಿಂದ ನಿಶ್ಚಿಂತನಿವಾಸವಾಯಿತ್ತು (ಬಸವ. ೮೩೭) ; ಇಂತು ವರ್ತಿಸುತಿರ್ಪುದಿದು ನಿಶ್ಚಿಂತಗುರುಭಕ್ತಿಪ್ರಯುಕ್ತಿಯದಂತುಮಲ್ಲದುದರನಿಮಿತ್ತಕ್ಕೆ ಭಾಷೆಯಂ ನೀಗಿ (ಬಸಪು. ೩೯-೧೭). (ನಾ). ೨. ಆತಂಕದಿಂದ ಮುಕ್ತವಾದುದು; ಚಿಂತೆಯಿಂದ ದೂರವಾದುದು ; ನಿರಾತಂಕವಾದುದು : ಕಾಯದಲ್ಲಿ ಕಾಯ ಸವೆದು ನಿಶ್ಚಿಂತವಾದ ಬಳಿಕ ಹಸಿವು ತೃಷೆಗಳೆಂಬವು ಅಳಿದು ಹೋದವು ಕೇಳಾ (ಅವಚಂ. ೨೪೫-೧೧೧೭); ನಿಶ್ಚಿಂತ ನಿರಾಳದಲ್ಲಿ ಆಡುವ ಮಹಾದೇವನ ಕರ್ತೃವೆಂದಱಿದ ಕಾರಣದಿಂದ ತತ್ವವೆಂಬುದನಱಿದು ಮನವ ನಿಶ್ಚಿಂತವ ಮಾಡಿ . . . ಮುಂದೆ ನೋಡಿದಡೆ ಜ್ಯೋತಿಯ ಬೆಳಗ ಕಾಣಬಹುದೆಂದರು (ಲಿಂಗವ. ೬೫-೫೬೨). ೩. ಶಾಂತಮನಸ್ಸಿನವನು ; ಸ್ವಸ್ಥಚಿತ್ತ : ನಿರಂತ ನಿಶ್ಚಿಂತ ನಿರಜ ನಿರ್ಜರ . . . ನಿಜ ನಿರ್ಮಾಯ ಚಿತ್ತೈಸು (ಬಸಪು. ೬೧-೪೩); ನಿರವದ್ಯ ನಿಸ್ಸಂಗ ನಿಶ್ಚಿಂತ ನಿಖಿಲೇಶ ಇರದೆ ನೀ ಸಲಹೆಂದನು (ಪುರಂದ. ಧಾ. ೩-೯೮-೬) ; ಶಂಕರಪ್ರಸನ್ನವಾಕ್ಯವಂ ನೆನೆದು ನಿಶ್ಚಿತ ನಿಶ್ಚಿಂತರಾಗುತೆ ಸಂತಸಂಬಡೆದಿರ್ದ ರಾಜದಂಪತಿಗಳ್ (ಹಮ್ಮೀರ.೨-೧೬೮); ಹೊಱಗೆ ಹೊನ್ನ ಬಿಟ್ಟೆನೆಂದು ನುಡಿವುತಿರ್ಪೆನಲ್ಲದೆ ಒಳಗೆ ಬಿಟ್ಟು ನಿಶ್ಚಿಂತನಲ್ಲವಯ್ಯ ನಾನು (ಅಖಂದೇ. ೯೫-೧೨); ತಮ್ಮಾ ಇನ್ನು ಮೇಲೆ ನೀನು ನಿಶ್ಚಿಂತನಾಗಿರು (ಮುಂಬಯಿ. ೪-೬೮). ೪. ಶಾಂತಿ ; ನಿರಾಳ ; ನಿಶ್ಚಿಂತೆ : ಕಾರುಣ್ಯ ಸಾಗರನೆ ನಿಶ್ಚಿಂತದಿಂದಾರೋಗಣಂಗೆಯ್ದೆಮ್ಮುವಂ ಪೊರೆ (ಬಸಪು. ೨೪-೩೪); ಸಂದೆಗಂಗಳ ವರಿಸಿ ತಿಳಿವೆನಿತು ಸರಿದರೂ ಅರಕೆಗೊಳದರಿವಿನೊಳು ನಿಶ್ಚಿಂತವಾಗೆ (ಮಲೆದೇ. ೨೪-೮). [ಸಂ.]

ನಿಶ್ಚಿಂತಂ (ಅ). ೧. ನಿರಾತಂಕವಾಗಿ ; ನಿರಾಳವಾಗಿ ; ನಿಶ್ಚಿಂತೆಯಾಗಿ : ನಯಮಂ ಪಿಡಿದರಸುಗಳಾಳೋಚನಕಾಲದೊಳ್ ಮಂತ್ರಶಾಲೆಯೊಳ್ ಮಂತ್ರಿಗಳುಂ ತಾನುಂ ನಿಶ್ಚಿಂತಮಿರ್ದಾಳೋಚಿಸುವರ್(ಪಂಚತಂ. ೨೦೪-೧೪); ಇಂತೋರೊರ್ವರನೊರ್ವರ್ ಸಂತೈಸುತ್ತುಂ ನೃಪೇಂದ್ರ ತನುಜಾತರ್ ನಿಶ್ಚಿಂತಂ ಪೊಕ್ಕರ್ ಪಸಿದ ಕೃತಾಂತನ ಬಾಣಸುವೊಲಿರ್ದ ಮಾರಿಯ ಮನೆಯಂ (ಯಶೋಚ. ೧-೫೩). ೨. ಅನುಮಾನವಿಲ್ಲದೆ; ನಿರ್ಧಾರವಾಗಿ ; ಖಂಡಿತವಾಗಿ : ಇಂತು ಪೇಟ್ದೊಡಿದು ಗೌರವ ದೋಷದ ಮಾಟ್ಕೆ ನಿಶ್ಚಿಂತಮೀ ತೆಱದವಂ ಕಳೆಗಾ ಕೃತಿಯತ್ತಣಿಂ (ಕವಿರಾ. ೧-೧೨೯). [<ನಿಶ್ಚಿಂತ]

ನಿಶ್ಚಿಂತತೆ (ನಾ). ಚಿಂತೆ ಇಲ್ಲದಿರುವಿಕೆ ; ನಿರಾತಂಕವಾಗಿರುವಿಕೆ; ಸ್ವಸ್ಥವಾಗಿರುವಿಕೆ : ಸುತನೊಳಜಿತಂಜಯಂ ವಿಸ್ತೃತಮಂ ಭೂಭರ ಮನೆಯ್ದೆ ಯೋಜಿಸಿ ನಿಶ್ಚಿಂತತೆಯನೊಳಕೆಯ್ದಂ (ಚಂದ್ರಪು. ೬-೩).

[ಸಂ. ನಿಶ್ಚಿಂತತಾ]

ನಿಶ್ಚಿಂತವಾಸಿ (ನಾ). ಚಿಂತೆಯಿಲ್ಲದಿರುವವನು ; ಶಾಂತಮನಸ್ಸಿನವನು : ದಾಸೋಹದಲ್ಲಿ ತನ್ನ ಮಱೆದು ನಿಶ್ಚಿಂತವಾಸಿ [ಪಾಠಾಂ. ನಿವಾಸಿ] ಯಾಗೈದಾನೆ (ಅವಚಂ. ೧೬೯-೩೬೨ ; ವಚಸಂ. ೫೯೩-೫೫ ನೋ).

[ಸಂ. ನಿಶ್ಚಿಂತವಾಸಿನ್]

ನಿಶ್ಚಿಂತೆ (ನಾ). ಚಿಂತೆಯಿಲ್ಲದಿರುವಿಕೆ ; ನಿರಾತಂಕವಾಗಿರುವಿಕೆ ; ನೆಮ್ಮದಿ : ಆನಂದೆ ಸಂದೆನು ಮೃತ್ಯುವಿನ ವಶಕೆಂದು ನಿಶ್ಚಿಂತೆಯಲಿ ನೃಪನಿವಹ ಮತ್ತರಾದರು ಮೈಮಱೆದು ದುರ್ವೃತ್ತತನದಲಿ (ನಿಭಾಗ. ೧೦-೫೪-೨೬); ಮುತ್ತಿದರ್ ಕೆಳದಿಯರವಳ ಸುತ್ತಿ, ನಿರ್ಜನತೆ ನಿಶ್ಚಿಂತೆ ನಿರ್ಮಲತೆಗಳ ತಪಸ್ವಿನಿ, ರಾಣಿ, ಅರಮನೆಗೆ ಇರುಳೊಳೊರ್ವಳೆ ಬಂದುದ ಕ್ಕಕ್ಕಜಂ ತಾಳ್ದು (ಚಿತ್ರಾಂಗ. ೮೪-೨೩೧೮) ; ನಿತ್ಯದರಿದ್ರನಿಗೆ ನಿಶ್ಚಿಂತೆ (ಗಾದೆ) ; ಅವರು ಮಾಡಬೇಕಾದುದನ್ನೆಲ್ಲಾ ಮಾಡಿ ನಿಶ್ಚಿಂತೆಯಿಂದಿದ್ದಾರೆ (ರೂಢಿ). [ಸಂ. ನಿಶ್ಚಿಂತಾ]

ನಿಶ್ಚಿತ (ಗು). ೧. ಗೊತ್ತಾದ ; ನಿರ್ಧಾರವಾದ ; ನಿರ್ಣಯಿಸಿದ ; ನಿಶ್ಚಯಿಸಿದ : ಅತಿಶಯಮಾಗಿರೆ ಗುಣಸಂತತಿಯಂ ದೋಷಮನೆ ಪೇಟ್ದವೋಲ್ಪೇಟ್ವುದು ನಿಶ್ಚಿತ ಶಬ್ದಾರ್ಥಂ ವ್ಯಾಜಸ್ತುತಿಯೆಂಬುದುಂ (ಕವಿರಾ. ೩-೧೬೦); ನಿಶ್ಚಿತಮಂತ್ರ ಚಮೂಪತಿ ಪಶ್ಚಿಮದಿಙ್ಮೇಚ್ಛ ನೃಪತಿಗಳನೆಱಗಿಸಿದಂ . . . ಚಕ್ರಿ ಚರಣಾಂಬುಜದೊಳ್ (ಪಾರ್ಶ್ವಪು. ೧೧-೧೦೯). (ನಾ). ೨. ನಿರ್ಧರಿಸಿದುದು; ನಿರ್ಣಯಿಸಿದುದು: "ನಿಶ್ಚಿತಂ, ನಿಯತಂ—ಈ ೨ ನಿಶ್ಚಯಿಸಲ್ಪಟ್ಟುದು" (ಹಲಾಯು.೧೧೮-೨೫). ೩. ಖಂಡಿತವಾದುದು; ದಿಟ ; ನಿಜ; ಸತ್ಯ : ನಿಶ್ಚಿತಮಿದೆನಗೆ ಸಕಲವಚಶ್ಚತುರಜನೋಪದೇಶದಿಂ ಪಿಶುನವಚೋವೃಶ್ಚಿಕವಿಷಹರಮಖಿಳ ವಿಪಶ್ಚಿನ್ನುತಿಮಂತ್ರಮೆಂಬುದಿನ್ನುಂ ಮುನ್ನುಂ (ಲೀಲಾವ. ೧-೧೪) ; ಈ ಹಿಂದು ಮುಂದಿನ ಪರಿಮಿತಿಗಳಲ್ಲಿ ಹಿಂದಿನದು ನಿಶ್ಚಿತ ಮುಂದಿನದು ಅನಿಶ್ಚಿತ (ಸಾಹಿಸ. ೧೫೩). ೪. [ಅದ್ವೈತ] ಮೋಕ್ಷಕ್ಕೆ ಸಾಧನವಾದ ಆರು ಬಗೆಯ ಸಮಾಧಿಗಳಲ್ಲಿ ಎರಡನೆಯದು ; ಜೀವಭ್ರಾಂತಿಯನ್ನು ತೊಡೆದುಹಾಕುವ ಸಮಾಧಿ ; ೫ ಆರು ಬಗೆಯ ಸಮಾಧಿಗಳು ಈ ರೀತಿ ಉಕ್ತವಾಗಿವೆ. ೧. ವ್ಯಷ್ಟಿಸಮಾಧಿ = ಮಿಥ್ಯೆಯನ್ನು ದೂರೀಕರಿಸಿ ಸತ್ಯವನ್ನು ತೋರಿಸುವುದು. ೨. ನಿಶ್ಚಿತಸಮಾಧಿ = ಆತ್ಮನಲ್ಲಿ ಜೀವಭ್ರಾಂತಿಯನ್ನು ಬಿಡಿಸುವುದು. ೩. ವಿಲಕ್ಷಣಸಮಾಧಿ = ಸಾಕ್ಷಿಚೈತನ್ಯದರ್ಶನವನ್ನು ಮಾಡಿಸುವುದು. ೪. ನಿರ್ವಿಷಯಸಮಾಧಿ = ಅಂತಃಸುಖಾನುಭವವನ್ನು ಹೊಂದುವುದು. ೫. ಸಮಷ್ಟಿಸಮಾಧಿ = ಭೇದಭಾವನೆಗಳೆಲ್ಲವನ್ನೂ ಬಿಟ್ಟು ಸಾಮರೂಪವಿಕಾರಗಳನ್ನು ಹರಿದು ಏಕತೆಯನ್ನು ನೆಲೆಗೊಳಿಸುವುದು. ೬. ಪೂರ್ಣಸಮಾಧಿ = ನಿರ್ವಿಕಲ್ಪಕ ಸಮಾಧಿ, ಬ್ರಹ್ಮಾನಂದಾನುಭವದಿಂದ ಶರೀರಮೋಹ

ವನ್ನು ಬಿಡುವುದು : ವೇದದಧಿಸರಣಿಗಳಲಾರು ಸಮಾಧಿಯುಂಟು . . . ಮೊದಲು ನಷ್ಟಿಸಮಾಧಿಯೆರಡನೆಯುದಕೆ ನಿಶ್ಚಿತವೆಸರು (ಗಗತಾ. ೧೩-೨೮). [ಸಂ.]

ನಿಶ್ಚಿತನಾಮ (ನಾ). ರೂಢಿಯಲ್ಲಿ ಸ್ಥಿರವಾಗಿ ನಿಂತ ಹೆಸರು; ರೂಢನಾಮ : ಕ್ಷಿತಿಯೊಳ್ ರೂಢಾಸ್ವರ್ಥಾಂಕಿತಮೆಂದಾ ನಾಮಮುಱಗೆ ಮೂಡೆಜನಸಮಾಸತೆಯೊಳ್ ನೆಲಸಿರ್ಪುದು ನಿಶ್ಚಿತನಾಮಂ ಪಂಚವರ್ಣ ಕೃತಪರಿಮಾಣಂ (ಶಸುಪ. ೬೬). [ನಿಶ್ಚಿತ+ನಾಮ]

ನಿಶ್ಚಿತಮನೆ (ನಾ). ೧. ದೃಢವಾದ ಮನಸ್ಸು. ೨. ದೃಢವಾದ ಮನಸ್ಸುಳ್ಳವನು : ನಿಶ್ಚಿತಮನರಲ್ಲದರಂ ದುಶ್ಚಿಂತರನೆಯ್ದೆ ಪಡೆದ ದೋಷಕಂ ದ್ರಾಯಶ್ಚಿತ್ತಮೆಂದು . . . ದುರ್ಗನಂ ಬಿದಿ ಪಡೆದಂ (ಪಂಚತಂ. ೧೧-೯). [ನಿಶ್ಚಿತ+ಮನಸ್]

ನಿಶ್ಚಿತಾರ್ಥ (ನಾ). ೧. ನಿರ್ಧಾರವಾದ ವಿಷಯ; ನಿರ್ಣಯಿಸಿದ ವಿಷಯ. ೨. ಮದುವೆಯ ಮುನ್ನ ನಡೆಸುವ ನಿಶ್ಚಯಕಾರ್ಯ; ವೀಳೆಯಶಾಸ್ತ್ರ : 'ನಿಶ್ಚಿತಾರ್ಥದ ಕುರುಹಿದು' ಎಂಬಂತೆ ರಾಜಮಾತೆಯವರು ತಾಂಬೂಲಫಲಾದಿಗಳನ್ನು ತರಿಸಿದರು (ಶಾಂತಲಾ. ೯೮); ಉಪಾಧ್ಯಾಯರ ಮನೆಯಲ್ಲಿ ನಿಶ್ಚಿತಾರ್ಥ ನಡೆಯುತ್ತಿದ್ದಿತು (ಮಲಿನಾ. ೧೫೨). ೩. ಬಯಸಿದುದನ್ನು ಹೊಂದುವೆನೆಂಬ ದೃಢವಾದ ನಂಬಿಕೆಯಿರುವವನು : ರಿಪುಜಯಕಾರಣ ಶರಮಂ ಪ್ರಸಕ್ತಿಯಿಂ ಪಡೆವೆನೆಂದು ಬಯಸುತ್ತೆವ್ಮಂ ತಪಮಿರ್ದಪನಾ . . . ನಿಶ್ಚಿತಾರ್ಥಂ ಪಾರ್ಥಂ (ಶಬಶಂ. ೨-೧೧೭). [ನಿಶ್ಚಿತ+ಅರ್ಥ]

ನಿಶ್ಚೇತನ (ಗು). ೧. ಚೇತನವಿಲ್ಲದ; ಜಡವಾದ; ಉತ್ಸಾಹವಿಲ್ಲದ. (ನಾ). ೨. ಉತ್ಸಾಹರಹಿತವಾಗಿರುವಿಕೆ; ಜಡವಾಗಿರುವಿಕೆ; ಮೂಢ್ಯತೆ : ಚೇತನಂ ತಾನಾಗಿಯುಂ ನಿಶ್ಚೇತನದ ಪರಿಣಾಮಿ . . . ನೆನಹುಗಳಗೆಯತೀತನಪ್ಪ ಮಹಾನುಭಾವ ಸ್ರಜ್ಞಮಾನಸನು (ಬಸಪು. ೮-೧೨). ೩. ಉತ್ಸಾಹವಿಲ್ಲದವನು; ಜಡಸ್ವಭಾವದವನು : ಏತೆಱದಿಂ ಮೃಗಾಕ್ಷಿ ದನುಯಂತಿಯ ಸಂಗಮದಪ್ಪುದೆಂದು ನಿಶ್ಚೇತನನಾಗಿ ರಾಜ್ಯಸುಖಮಂ ಬಗೆಗೊಳ್ಳದೆ . . . ನವ ಚಿತ್ರಪಟಂಬೊಲಿರ್ಪನಾ ಭೂತಳವಲ್ಲಭಂ (ನಳಚಂ. ೬೩). ೪. ಅವಿವೇಕ; ವಿಚಾರಶೂನ್ಯ : ಅತಿಕ್ಷಣಕಂ ಶರೀರಮೆನಿಪೀ ಮಾನುಷ್ಯಮುಂ ದೂಷ್ಯಮುಂ ಚಿರಮೆಂದಾಟಪನಾವನಾತನೆ ವಲಂ ನಿಶ್ಚೇತನಂ ಲೋಕದೊಳ್ (ಜಂದ್ರಪು. ೪-೫೩); ನಿಶ್ಚೇತನರೆಂದು ಪರಗಣಿತರಾದ ಭಾರತೀಯರು ಸಚೇತನರೆಂದು ಸ್ವಸಾಕ್ಷಾತ್ಕಾರ ಮಾಡಿಕೊಳ್ಳಲು ಈ ಎಲ್ಲಾ ಮಹಾಮಹಿಮರ ಪ್ರಭಾವದಿಂದ ಎಚ್ಚರಗೊಂಡರು (ಜುಶ್ಯಾರ.೧೨೦ ಪೀಠಿಕೆ).

[ಸಂ.]

ನಿಶ್ಚೇಷ್ಟ (ಗು). ೧. ಚಲನೆಯಿಲ್ಲದ; ಅಲುಗಾಟವಿಲ್ಲದ; ಅಚೇತನವಾದ. ೨. ತ್ರಾಣವಿಲ್ಲದ; ಶಕ್ತಿಯಿಲ್ಲದ; ಅಸಹಾಯಕವಾದ. (ನಾ). ೩. ಚಲಿಸಲು ಅಸಮರ್ಥನಾಗಿರುವವನು; ಮರಗಟ್ಟಿದಂತೆ ಆದವನು; ಜಡತ್ವ ಹೊಂದಿದವನು : ಜಂಗಮವೆತ್ ಸ್ಥಾಣವೆಂಬಾ ಸಾಂಗಭಾಷೆಯನಿಂದು ಮಜ್ಜಿದನೆ ಅಂಗಲಾಚುತ್ತಳಲುವುದು ನಿಶ್ಚೇಷ್ಟನಾಗಿಹುದು . . . ಜಂಗಮಪ್ರಾಣಿಗಳ ಗುಣವೇನಲ್ಲವೋ (ಬಸಪು. ೩೩-೧೪); ಭೀಮಸೇನನು . . . ಹೆಬ್ಬಾವಿನಿಂದ ಹಿಡಿಯಲ್ಪಡುತ್ತಾನೆ, ಸ್ವಸಾಮರ್ಥ್ಯದಿಂದ ಬಿಡಿಸಿಕೊಳ್ಳಲಾರದೆ ನಿಶ್ಚೇಷ್ಟನಾಗಿ ಬೀಳುತ್ತಾನೆ (ಭಾರದ. ೧೦೩). [ಸಂ.]

ನಿಶ್ಚೇಷ್ಟಸ್ಥಿತಿ (ನಾ). ಅಲುಗಾಡದಿರುವಿಕೆ; (ಮರಗಟ್ಟು) ಸೆಟೆದು ಕೊಂಡಿರುವಿಕೆ; (ಶೀತದಿಂದ) ಚಲನೆಯಿಲ್ಲದಿರುವಿಕೆ : ಸಸ್ಯಹೇನುಗಳಲ್ಲಿ . . . ಗಂಡುಗಳು ಮಾಗಿಕಾಲದಲ್ಲಿ ಮಾತ್ರ ಬಂದು, ಬೆಳಗಾಲದ ನಿಶ್ಚೇಷ್ಟಸ್ಥಿತಿ (Over wintering) ಮೊಟ್ಟೆಗಳಿಗೆ ಗರ್ಭಾದಾನ ಮಾಡುತ್ತವೆ (ಕೀಟಪ. ೯೫). [ನಿಶ್ಚೇಷ್ಟ+ಸ್ಥಿತಿ]

ನಿಶ್ಚೇಷ್ಟಿತ (ನಾ). ೧. ಚಲನೆಯಿಲ್ಲದಿರುವಿಕೆ; ಮರಗಟ್ಟಿರುವ ಸ್ಥಿತಿ; ಜಡವಾಗಿರುವಿಕೆ; ಚೈತನ್ಯಹೀನತೆ; ವಿತತ ಲಿಂಗಧ್ಯಾನ ನಿಶ್ಚೇಷ್ಟಿತಮನವಸ್ಥೆಯನೊಂದಿದಂತಪ್ಪ ತಿಮಿ ನಂದೀಶಾವತಾರನು ಬೇಗನೆರೆದಿಹನು (ಒಸಪು. ೩-೩೫). ೨. ಮರಗಟ್ಟಿದಂತೆ ಆದವನು; ಜಡತ್ವ ಹೊಂದಿದವನು: ನಿಂತವರು ನಿಂತಂತೆಯೇ ನಿಶ್ಚೇಷ್ಟಿತರಾದರು (ಕಳಭಿ. II, ೪೫೧). [ಸಂ.]

ನಿಶ್ಚೇಷ್ಟಿತೆ (ನಾ). ಚೈತನ್ಯವನ್ನು ಕಳೆದುಕೊಂಡವಳು; ಚೈತನ್ಯಶೂನ್ಯೆ : ಒರ್ಮೊದಲೊಳೆ ದೇವರನಾಡಿದ ಪರುಷವರನಾಕ್ಯಮಾರ್ಗಣಂ ಕರ್ಣಕೋಟರಮಂ ನಾಂಟಿ ಮೊಗಂಗುಂದಿ ದುಃಖಾವೇಶದಿಂ ನಿಶ್ಚೇಷ್ಟಿತೆಯಾಗಿ ಮೇಣೊರ್ಮೆ ಹನ್ಮುದಂಬೋದಳ್ (ರಾಮಾಶ್ವ. ೩೫-೮).

[ಸಂ. ನಿಶ್ಚೇಷ್ಟಿತಾ]

ನಿಶ್ಚೇಷ್ಟೆ (ನಾ). ೧. ಚಲನವಲನವಿಲ್ಲದಿರುವಿಕೆ. ೨. ಮೂರ್ಛೆ; ಮರವೆ. [ಸಂ. ನಿಶ್ಚೇಷ್ಟಾ]

ನಿಶ್ಚೈತನ್ಯ (ನಾ). ಚೈತನ್ಯಹೀನತೆ; ಬಲಹೀನತೆ : ಯಜ್ಞ ಸೂತ್ರದ ತ್ರಿನಾಡಿಯು ತ್ರಿಸರೆ ಹರಿದು ಚೈತನ್ಯ ನಿಶ್ಚೈತನ್ಯವಾದಲ್ಲಿ ಸೌರಾಷ್ಟ್ರ ಸೋಮೇಶ್ವರಲಿಂಗ ನಿರುತಭರಿತ (ಆದಮ. ೧೩೨-೨೩೦).

[ಸಂ.]

ನಿಶ್ಚೈಸು 'ನಿಶ್ಚಯಿಸು' ನೋ.

ನಿಶ್ಚಿದ್ರ (ನಾ). ಬಿರುಕಿಲ್ಲದುದು; ತೂತಿಲ್ಲದುದು; ರಂಧ್ರವಿಲ್ಲದುದು : ಅರಸುಗಳಾಳೋಚನಕಾಲದೊಳ್ ನಿಸ್ತಂಭಮುಂ ನಿರ್ಗವಾಕ್ಷಮುಂ ನಿಶ್ಚಿದ್ರಭಿತ್ತಿಯುಂ ನಿರಾಶ್ರಯಮುಂ . . . ಆಪ್ತ ಮಂತ್ರಶಾಲೆಯೊಳ್ ಮಂತ್ರಿಗಳುಂ ತಾನುಂ ನಿಶ್ಚಿಂತಮಿರ್ದಾಕೋಚಿಸುವರ್ (ಪಂಚತಂ. ೨೦೪-೧೨); ದೇವತೆ ರಕ್ಷಸಂಗೆ ಮುಳಿದು . . . ಪಿರಿಯ ಬಿಲದೊಳಗೊಯ್ದಿರಿಸಿ ಬಿಲದ ಬಾಗಿಲೊಳ್ ಪಿರಿಯದೊಂದು ಶಿಲೆಯಂ ಕವಿದಿರಿಸಿ ನಿಶ್ಚಿದ್ರಮಾಗಿ ಮುಚ್ಚ ... ಪೋದಳ್ (ಜೀಸಂ.೪೦-೩೯ ಸ); ಕುದಿರೊಳಗಿರ್ದೂದಿದ ಶಂಖದ ದನಿ ನಿಶ್ಚಿದ್ರಮಾದೊಡಂ ಪೊಣ್ಮದೆ ಶಂಖದಿನನ್ಯವಲ್ಲದೇಂ ಪೊಣ್ಮದ ನಾದಂ ಕಾಯ್ದುದಿಂದೆ ಜೀವನುಮನ್ಯಂ (ಯಶೋಚಿ. ೪-೩೪). [ಸಂ.]

ನಿಶ್ಚಿ 'ನಿಸಿದಿ' ನೋ.

ನಿಶ್ರಾವ (ನಾ). "ಅನ್ನದ ಗಂಜಿಯ ಕೆನೆ" (ಸಡ್ಡಾರಾ. ೨೪೦ ಟಿಪ್ಪಣಿ): ಚಾಣಾಕ್ಯಂಗಂ ಯಶೋಮತಿಗೆಂದಿರ್ಪರ್ಗಂ ನಿಶ್ರಾವಮಂ ತನ್ನ ಭಾರ್ಯೆಯಪ್ಪ ನಂದವತಿಯ ಕೆಯ್ಯೊಳಟ್ಟದೊಡೆ ಆಕೆಯುಂ ಕೊಂಡು ಪೋಗಿ ನಿಮಗಿರ್ವರ್ಗಂ ನಿಶ್ರಾವಮೆಂದು ಪೇಟ್ದು (ಪಡ್ಡಾರಾ. ೧೪೪-೩೦).

[<ಸಂ. ನಿಸ್ರಾವ]

ನಿಶ್ರೇಣಿ (ನಾ). ಏಣಿ; ನಿಚ್ಚಣಿಕೆ : "ನಿಶ್ರೇಣಿಃ, ಅಧಿರೋಹಿಣೀ—ಈ ೩ ನಿಚ್ಚಣಿಗೆ" . (ಹಲಾಯು. ೫೦-೧೪೬); ಪೊಂಗಿ ಪೇಚರಂಟ್ಟು ನಿಶ್ರೇಣಿಯೋ ಕದುಬೆದಂಗಿನಿಂ ಜಲದೇವತೆಯರಾಡಲೆಂದೊಲ್ದು ಸಿಂಗರಿಸಿ ನಿಲಿಸಿದುಯ್ಯಲೆಯು ಕಂಬಂಗಳೋಯೆನಿಸಿ ಮುಂಬೇಂ ಮೆಜ್ಜಿದುದೋ (ಪದ್ಮರಾ. ೬-೩೧); ತಿಳಿಯೆ ಭುನಸತ್ಯಕ್ಷಮಾದಮೆಗಳು ಪರಮ ಪದಕೇಱುವಡೆ ಮಿಗೆ ವಿಲಸಿತದ ನಿಶ್ರೇಣಿಯಾಗಿಯೆ ಸತ್ಪುರುಷರೆಲ್ಲ ಲಲಿತ ಸತ್ಸಂಗತಿಯಲದಱಿಂದಿಳೆಯೊಳಾವಗೆ ಮುಖ್ಯಕಾರ್ಯದ ನೆಲೆಯೆನಿಪುದೀ ನಡವಳಿಯು ತಾ ಲೇಸ ಕೊಡದಿಹುದೆ (ತಿಮ್ಮಶಾಂ. ೪-೩೦); ಇಹಪರದ ನಡುವೆ ನೆಟ್ಟನೆಯು ನಿಶ್ರೇಣಿಯೆನೆ ನಿಂದಿಹನ ನೋಡ ! (ಗೂಳ್ಮೋಥಾ. ೩-೭೮). [ಸಂ.]

ನಿಶ್ರೇಯಸ (ನಾ). ೧. ಅತಿಶಯವಾದ ಅಭಿವೃದ್ಧಿಯನ್ನುಂಟು ಮಾಡುವುದು; ಅತಿ ಶ್ರೇಷ್ಠವಾದುದು; ಅತ್ಯುತ್ತಮವಾದುದು : ಲೌಕಿಕಸಾಮಯಿಕೋರುವಿವೇಕಮುಮಭ್ಯುದಯಪರಮನಿಶ್ರೇಯಸಮುಂ ಪ್ರಾಕಟಮಕ್ಕುಂ ವಿದಿತಾನೇಕ ಕವೀಶ ಪ್ರಯೋಗ ಪದಪದ್ಧತಿಯೊಳ್ (ಕವಿರಾ. ೧-೧೯). ೨. ಶ್ರೇಷ್ಠಪದವಿ ; ಮೋಕ್ಷ ; ಮುಕ್ತಿ : "ಕೈವಲ್ಯಂ, ನಿರ್ವಾಣಂ, ನಿಶ್ರೇಯಸಂ . . . ಮಹಾನಂದಃ —ಈ ೧೧ ಮೋಕ್ಷದ ಪೆಸರ್" (ಹಲಾಯು. ೨೧-೧೨೪) ; ವಿದುರ ಕೇಳ್ಳೆ ಸಕಲ ಲೋಕಾಭ್ಯುದಯ ನಿಶ್ರೇಯಸದ ಗತಿಗೀ ಮೊದಲ ಸಾಧನವೆನಿಪ ಮನು ವಂಶದ ಪರಂಪರೆಯ (ನಿಭಾಗ. ೪-೬-೧) ; ಇದೇ ಪರಮಪುರುಷಾರ್ಥ ವೆಂದೂ ಅಪವರ್ಗವೆಂದೂ ನಿಶ್ರೇಯಸವೆಂದೂ ಸಿದ್ಧಾಂತಪಡಿಸುವರು (ಹಿಂದಸಾ. ೧೨೦). [ಸಂ.]

ನಿಶ್ರೇಯಸ್ಸು (ನಾ). ಮುಕ್ತಿ ; ಮೋಕ್ಷ : ಮಂತ್ರಸಿದ್ಧಿಯಿಂದ . . . ಪರಲೋಕದಲ್ಲಿ ನಿಶ್ರೇಯಸ್ಸನ್ನು ಪಡೆಯಬಹುದು (ಭಾರದ. ೧೫೪). [ಸಂ. ನಿಶ್ರೇಯಸ್]

ನಿಶ್ರೋತ್ರ (ನಾ). ರೈತರಿಗೆ ಗುತ್ತಿಗೆಯ ಮೇಲೆ ಹಾಕುತ್ತಿದ್ದ ತೆರಿಗೆಯು ಇಲ್ಲದಿರುವಿಕೆ : ಬೆಂಣಯಹಳಿಯ ಗುರುದೇವರು ಹಂನಿರ್ಬ್ಬರು ಮಹಾಜನಂಗಳ ಕೈಯ್ಯಲು ಅವ[ರಿ]ಕ್ಕುವ ಶ್ರೋತ್ರದೊಳಗೆ ಗದ್ಯಾಣಂ ಎಂಟನು ಇಳಿಹಿಕೊಟು ರಮಾಬಾಯಿ ಧ(ಂ)ರ್ಮಕೆ ಸಂಭೆ ಯೊಳಗಳ[ಅ]ಱವಟಿಗೆಗೆ ಮತರು ॥೨॥ ಕಲಜೀಯಂಗೆ ಧಾರೆಯನೆಱದು ನಿಶ್ರೋತ್ರವಾಗಿ ಕೊಟರು (ಸೌಇಇ. IX-i, ೩೭೯-೧೪ ; 1280). 'ಶ್ರೋತ್ರ' ಪರಾ. [ಸಂ.]

ನಿಶ್ವಸಿತ (ನಾ). ೧. ಉಸಿರು : ವಿಶ್ವಪರಿಧಿಯದೆಲ್ಲೊ ಸೂರ್ಯ ಚಂದ್ರರಿನಾಚೆ ವಿಶ್ವಕೇಂದ್ರವು ನೀನೆ ನೀನೆಣಿಸಿದೆಡೆಯೆ ನಿಶ್ವಸಿತಸಂಬಂಧ ನಿನಗಂ ದಿಗಂತಕಂ ಪುಷ್ಪವಾಗಿರು ನೀನು (ಮಂಕುಕ. ೧೩೬). ೨. ನಿಟ್ಟುಸಿರು : ಸರಳತರೋಷ್ಣನಿಶ್ವಸಿತಮಾರುತನಿಂದೆ ನಿಜೋತ್ತರೀಯ ದೊಳ್ ತರಳತೆಯಂ ನಿಯೋಜಿಪ ನೆಗಟ್ಟಿಗೆ ಕಾರಣಮೇನೋ (ಚಂದ್ರಪು. ೩-೫೪). [ಸಂ.]

ನಿಶ್ವಾಸ (ನಾ). ೧. ಉಸಿರು ಬಿಡುವಿಕೆ ; ಉಸಿರನ್ನು ಹೊರ ಬಿಡುವಿಕೆ : ಅಂತು ಸಾರ್ದ ಪಂಚದಶಮಾಸನಿಶ್ವಾಸನುಮೇಕತ್ರಿಂಶದಂಭೋ ನಿಧಿಮಿತಜೀವಿತನುಮಾಗಿ ಸಹಾಯೋತ್ತಮನಮಿತವಿಕ್ರಮನುಂ ತಾನುಂ ಆಗಲದಿರೆ(ಶಾಂತಿಪು. ೯-೩೨ ಪ); ಅಮರರ್ಗೆ ದೇವಪ್ರಾಣಾಯುಷ್ಯಪ್ರವಿಚಾ ರೋಚ್ಛ್ವಾಸ ನಿಶ್ವಾಸಲೇಪ್ಯ ಭೇದಂಗಳುಮಕ್ಕುಂ (ಚಂದ್ರಪು. ೩-೩೨ ಪ); ರಭಸದಿಂದೈದುವ ಸುಪರ್ಣನಂ ಹಿಂದಣ ವೃಷಭನ ಮುಖದುಚ್ಛ್ವಾಸ ನಿಶ್ವಾಸಮಾರುತಂ ತಡದತ್ತಲಿತ್ತಲೆಳೆಯೆ (ಜೈಮಿಭಾ. ೧೪-೨೨); ಜಗತ್ತಿನ ಎಲ್ಲ ವ್ಯಾಪಾರಗಳಲ್ಲಿಯೂ ನಿಶ್ವಾಸ, ಪ್ರಶ್ವಾಸ . . . ನಿದ್ರೆ, ಜಾಗರಣೆ ಗಳ ಸರದಿ ಒಂದು ಇದೆ (ನಿಬಂಧ.I,೯೪). ೨. ನಿಟ್ಟುಸಿರು : ತಾಯಿ-ಮಗಳು ಒಬ್ಬರನ್ನೊಬ್ಬರು ನೋಡುತ್ತ ನಿಶ್ವಾಸ ಬಿಟ್ಟರು (ಮೂರುದಾ. ೧೩೦). ೩. ಶ್ವಾಸಕ್ಕೂ ಉಚ್ಛ್ವಾಸಕ್ಕೂ ನಡುವಿನ ವಿರಾಮ ಕಾಲ : ಶ್ವಾಸದಲ್ಲಿ ಶ್ವಾಸ, ಉಚ್ಛ್ವಾಸ, ನಿಶ್ವಾಸಗಳೆಂದು ಮೂರು ವಿಧ ಗಳುಂಟು. ಶ್ವಾಸವೆಂದರೆ ಮೂಗಿನಿಂದ ಗಾಳಿಯನ್ನು ಹೊರಗೆ ಬಿಡುವುದು. ಉಚ್ಛ್ವಾಸವೆಂದರೆ—ಗಾಳಿಯನ್ನು ಒಳಗೆ ಶೆಳೆದುಕೊಳ್ಳುವುದು. ನಿಶ್ವಾಸ ವೆಂದರೆ—ಮಧ್ಯಮವಾದ ವಿರಾಮಕಾಲ (ಹಸಾರ. ೧-೪ ಟೀಕೆ). ೪. [ವೀಶೈ] ಇಪ್ಪತ್ತೆಂಟು ಶೈವಾಗಮಗಳಲ್ಲಿ ಒಂದು : ನಿಶ್ವಾಸ, ಉತ್ತರನಿಶ್ವಾಸ, ನಿಶ್ವಾಸಮುಖೋದಯ, ನಿಶ್ವಾಸನಯನ, ನಿಶ್ವಾಸ ಕಾರಕ, ಘೋರಸಂಹಿತೆ, ಸುಸಾಂಖ್ಯಾಗುಹ್ಯಂಗಳೆಂದು ನಿಶ್ವಾಸಾಗಮ ದೆಂಟು ಭೇದಂಗಳು (ವಿವೇಕ.೭೦); ಕಾಮಿಕ, ಯೋಗಜ . . . ನಿಶ್ವಾಸ, ಕಿರಣ, ವಾತುಲಗಳೆಂಬ ಇಪ್ಪತ್ತೆಂಟು ಶಿವಾಗಮಗಳು (ಭಾರದ. ೭೨). 'ದೀಪ್ತ' ಪರಾ. [ಸಂ.]

ನಿಶ್ವಾಸಾಗಮ (ನಾ). = ನಿಶ್ವಾಸ ೪ : ನಿಶ್ವಾಸ, ಉತ್ತರನಿಶ್ವಾಸ, ನಿಶ್ವಾಸಮುಖೋದಯ, ನಿಶ್ವಾಸನಯನ, ನಿಶ್ವಾಸಕಾರಕ, ಘೋರ ಸಂಹಿತೆ, ಸುಸಾಂಖ್ಯಾಗುಹ್ಯಂಗಳೆಂದು ನಿಶ್ವಾಸಾಗಮದೆಂಟು ಭೇದಂಗಳು (ವಿವೇಕ. ೭೦). [ನಿಶ್ವಾಸ+ಆಗಮ]

ನಿಶ್ಶಂಕ (ನಾ). ೧. ಸಂಶಯವಿಲ್ಲದಿರುವಿಕೆ; ಶಂಕೆಯಿಲ್ಲದಿರುವಿಕೆ; ನಿರ್ಭಯ ; ನಿರ್ಭೀತಿ : ಹೇಳಿ ಕೇಳಿ ಬಂದಿರುವ ಹಾಡು, ನೆರಳಲ್ಲಿ, ನಿಶ್ಶಂಕವಾಗಿ, ನಿಶ್ಚಿಂತೆಯಿಂದ ಕುಳಿತಿರುವ ಹಕ್ಕಿಯ ಕಂಠದಿಂದ . . . ಹೊರಹೊಮ್ಮುತ್ತದೆ (ಕರ್ನಾಸಂ. ೭೧). ೨. ಸಂಶಯವಿಲ್ಲದಿರು ವವನು ; ಶಂಕೆಯಿಲ್ಲದಿರುವವನು ; ಭೀತಿಯಿಲ್ಲದವನು : ನಿಶ್ಶಂಕನು ನಿಸ್ಸಹಾಯನುಮಾಗಿ ನುಡಿದಮೋಘಜಿಹ್ವನ ಸ್ಥಿರತ್ವಕ್ಕೆ ಮೆಚ್ಚಿ (ಶಾಂತಿಪು. ೬-೨೫ ಪ) ; ಉಡಿಯುತ್ತುಂ ನಂದನಂಗಳಂ ನೀರ್ನೆ ಲನಂ ಕಿಡಿಸುತ್ತುಂ ಲಂಕೆಗವರ್ ಪಡೆದರ್ ನಿಶ್ಶಂಕರಳವಿಗಟಿಂದೆರ್ದೆವಟಲಂ (ಪಂರಾಮಾ. ೧೪-೮೯) ; ಪ್ರಾಣಭಾವವಳಿದು ಶಂಕೆ ತಲೆದೋಱದೆ ನಿಶ್ಶಂಕ ನಾಗಿ ನಿಜೈಕ್ಯನಾಗಿಪ್ಪನು ನೋಡಾ ಬಸವಣ್ಣನು (ಅವಚಂ. ೧೯೮-೧೯೮): ಶಿವಲೆಂಕ ಮಂಚಯ್ಯಂ ಕುಸಮಯಗಜಾಂಕುಶಂ ನಿಶ್ಶಂಕನಹಿತ ಭಯಂಕರಂ (ಬಸಪು. ೫೩-೫೫).

ನಿಶ್ಶಂಕಪ್ರತಾಪ = ಒಂದು ಬಿರುದು : ಚಲದಂಕರಾಮ ನಿಶ್ಶಂಕ ಪ್ರತಾಪಭುಜಬಳ ಚಕ್ರವರ್ತ್ತಿ ಹೊಯ್ಸಳ ವೀರಬಲ್ಲಾಳದೇವರು (ಎಕ. III(R), ಗುಂಡ್ಲುಪೇ. ೩-೫ ; 1196). ನಿಶ್ಶಂಕಪ್ರತಾಪ ಚಕ್ರವರ್ತಿ = ಒಂದು ಬಿರುದು : ಚಲದಂಕರಾಮನೇಕಾಂಗವೀರ ನಿಶ್ಶಂಕಪ್ರತಾಪಚಕ್ರವರ್ತ್ತಿ ಹೊಯ್ಸಣ ವೀರಬಲ್ಲಾಳದೇವರು (ಎಕ. III (R), ಹೆಗ್ಗಡ. ೭೪-೭ ; 1211) ; ಪಾಣ್ಡ್ಯಕುಲಸಮುದ್ಧರಣ ನಿಶ್ಶಂಕ ಪ್ರತಾಪಚಕ್ರವರ್ತಿ ಶ್ರೀ ವಿಷ್ಣುವರ್ದನ ಹೊಯ್ಸಳ ಶ್ರೀ ವೀರನಾರಸಿಂಹ ದೇವರ್ (ಎಕ. III (R), ನಂಜನ. ೩೨೧-೯ ; 1222). [ಸಂ.]

ನಿಶ್ಶಂಕತೆ (ನಾ). ನಿಸ್ಸಂಶಯ ಸ್ಥಿತಿ ; ನಿರ್ಭಯತೆ : ಭೋಂಕೆನಲು ತೆನೆತೆನೆಗೆ ತಪ್ಪದವುಂಕಿ ಪಲವಾಗಿಪ್ಪವೊಲು ನಿಶ್ಶಂಕತೆ[ಪಾಠಾಂ.ನಿಃಶಂಕತೆ] ಯೊಳೊಬ್ಬನೆ ಬಳಸುತಾಳ್ವರಿಯ ಮೇಲಿರ್ದು (ಬಸಪು. ೧೬-೧೮). [ಸಂ. ನಿಶ್ಶಂಕತಾ]

ನಿಶ್ಶಂಕತೆವೆಱು (ಕ್ರಿ). ನಿಸ್ಸಂಶಯವನ್ನು ಹೊಂದು ; ಶಂಕೆಯಿಂದ ದೂರವಾಗು ; ನಿರ್ಭೀತಿಯನ್ನು ಹೊಂದು : ಜಯೋದ್ಯಮಕ್ಕೆ ನಿಶ್ಶಂಕತೆ[ಪಾಠಾಂ. ನಿಃಶಂಕತೆ]ವೆತ್ತು ನಿರ್ಭರದೆ ಗರ್ಜಿಸಿ ಮುಂಬರಿದೆತ್ತಿ ಚಾಪದಿಂದಂ ಕಲಿಪಾರ್ಥನಪ್ಪಳಿಸಿದಂ ಪಳಿಪೊರ್ದದೆ ಚಂದ್ರಮೌಳಿಯಂ (ಶಬಶಂ. ೪-೫೮). [ನಿಶ್ಶಂಕತೆ+ಪೆಱು$_1$]

ನಿಶ್ಶಂಕಮಲ್ಲ (ನಾ). ೧. ಶಂಕೆಯಿಲ್ಲದ ಭಟ ; ನಿರ್ಭೀತನಾದ ಸೈನಿಕ ; ಕೆಚ್ಚೆದೆಯ ಕಲಿ : ಉಲಿವ ಬಿರುದಿನ ಕಹಳೆಗಳ ಕಳಕಳಿಕೆ ಮಿಗೆ ನಿಶ್ಶಂಕಮಲ್ಲರು ಕಳನೊಳಗೆ ತಲೆದೋಱಿದರು (ಕುವ್ಯಾಭೀ.೪-೪೦); ಅಂಥ ಸಂಕಟ ಸಮಯದಲ್ಲಿ ತುರುಕರೊಡನೆ ಹೋರಾಡಿ, ಅವರನ್ನು ಗಡಿಯಾಚೆ ಹೊಡೆದಟ್ಟಿದ ನಿಶ್ಶಂಕಮಲ್ಲ (ನಂಜುಂಡ. ೩೨). ೨. ಒಂದು ಬಿರುದು : ಕದನಪ್ರಚಣ್ಡನಸಹಾಯಶೂರನೇಕಾಂಗವೀರ ನಿಶ್ಶಂಕ ಮಲ್ಲ ಶ್ರೀಮತ್ ಪ್ರತಾಪ ಚಕ್ರವರ್ತ್ತಿ ಶ್ರೀ ವೀರಬಲ್ಲಾಳದೇವರು (ಎಕ. IV (R), ಎಳಂದೂ. ೮೬-೩ ; 1193). [ನಿಶ್ಶಂಕ+ಮಲ್ಲ]

ನಿಶ್ಶಂಕಿ (ನಾ). ಶಂಕೆಯಿಲ್ಲದವಳು ; ಸಂಶಯವಿಲ್ಲದವಳು : ಕೇಳ್ದೆಯೇನ್ ದೇವಿ ಸಾರಣನೆಂದ ರಣವರದಿಯಂ ? ನಿಶ್ಶಂಕಿಯಾಗಿನ್ನಾ ದೊಡಂ (ಶ್ರೀರಾಮಾ. ೬೫೯-೩೮೨). [ಸಂ. ನಿಶ್ಶಂಕೀ]

ನಿಶ್ಶಂಕಿತ (ನಾ). ೧. ಸಂಶಯವಿಲ್ಲದಿರುವಿಕೆ; ಶಂಕೆಯಿಲ್ಲದಿರುವಿಕೆ. ೨. ಸಂಶಯಗ್ರಸ್ತನಲ್ಲದವನು; ನಿರ್ಭಯನಾದವನು; ನಿರ್ಭೀತ: ಹುತ್ತದ ನೋಲಣ ರಜ್ಜು ಮುಟ್ಟದೆಯೂ ಸಾಪರು ಶಂಕಿತರಾದನರು ಸರ್ಪದಷ್ಟವಾದರೆಯೂ ಸಾಯರು ನಿಶ್ಶಂಕಿತರಾದವರು (ಒಸಗ. ೬೬೧). ೩. [ಜೈನ] ಜಿನಮತದಲ್ಲಿ ಸಂಶಯ ಪಡದಿರುವಿಕೆ; ಸಮ್ಯಗ್ದರ್ಶನದ ಎಂಟು ಅಂಗಗಳಲ್ಲಿ ಮೊದಲನೆಯದು: ಮೊದಲ ದರ್ಶನವಿಶುದ್ಧಿಯೆಂಬುದು ನಿಶ್ಶಂಕಿತ ನಿಷ್ಕಾಂಕ್ಷಿತ ನಿರ್ವಿಚಿಕಿತ್ಸಾ . . . ವಾತ್ಸಲ್ಯ ಪ್ರಭಾವನಾ ಎಂಬೆಂಟಜಿಂಗಳರ್ಹದುಪದಿಷ್ಟಮುಪ್ಪ ನೂರ್ಗಮನಿದಕ್ಕುಮಾಗದೆಂಬ ಸಂಶಯಮುಂ ಪತ್ತು ವಿಡುವುದು ನಿಶ್ಶಂಕೆ (ಚಾವುಂಪು. ೨೪೧). 'ನಿಶ್ಶಂಕೆ' ಪರಾ. [ಸಂ.]

ನಿಶ್ಶಂಕಿತತ್ವ (ನಾ). = ನಿಶ್ಶಂಕಿತ ೩: ನೀನಿಲ್ಲಿ ಪುಟ್ಟಿದುದನಜಂದು ಮೋಕ್ಷಕ್ಕೆ ಮುಖ್ಯಕಾರಣಮುಪ್ಪ ಸಮ್ಯಕ್ತ್ವಮುಂ ಕೈಕೊಳಿಸಲು ಬಂದೆ ಮೆಂದು ನಿಶ್ಶಂಕಿತತ್ವಾದಿಯುಕ್ತಮುಪ್ಪ ಸಮ್ಯಕ್ತ್ವಮುಂ ಕೈಕೋಳಿಸಿ (ಚಾವುಂಪು. ೭೪). [ಸಂ.]

ನಿಶ್ಶಂಕೆ (ನಾ). ೧. ಸಂಶಯವಿಲ್ಲದಿರುವಿಕೆ; ಶಂಕೆಯಿಲ್ಲದಿರುವಿಕೆ: ನಿಶ್ಶಂಕೆಯಿಂ ನೃಪನ ಪೇಟೆ (ಶಮದ. ೧೩೪ ಪ್ರಯೋ); ಗೋಪರಿರಾ ನಿಶ್ಶಂಕೆಯಲಿ ಹೊಜಿಪಡುವುದಂಜದೆ ಗುಹಾಂತರವ (ಸಿಭಾಗ.೧೧-೭೩-೮); ರಾಮನಂ ಕಳುಹು ನಿಶ್ಶಂಕೆಯಿಂ (ಕ್ರೀರಾಪಾ.೩೨-೭೧). ೨. [ಜೈನ] ಜಿನಮತದಲ್ಲಿ ಸಂಶಯವನ್ನು ಪಡದಿರುವಿಕೆ; ಸಮ್ಯಗ್ದರ್ಶನದ ಎಂಟು ಅವಯವಗಳಲ್ಲಿ ಮೊದಲನೆಯದು; ☞ ಅವಯವಗಳ ವಿವರಣೆ ಈ ರೀತಿ ಇದೆ: "ಅವಯವ—೮ : ಸಮ್ಯಗ್ದರ್ಶನದ : ನಿಶ್ಶಂಕೆ, ನಿಷ್ಕಾಂಕ್ಷೆ, ನಿರ್ವಿಚಿಕಿತ್ಸೆ, ಅಮೂಢದೃಷ್ಟಿತ್ವ, ಉಪಗೂಹನ, ಸ್ಥಿತಿಕರಣ, ವಾತ್ಸಲ್ಯ, ಪ್ರಭಾವನೆ; ಎಂದರೆ ಕ್ರಮವಾಗಿ ಜಿನಮತದಲ್ಲಿ ಸಂಶಯಪಡದಿರುವುದು, ಭೋಗಗಳನ್ನು ಬಯಸದಿರುವುದು, ದೇಹವನ್ನು ಪ್ರೀತಿಸದೆ ದ್ವೇಷಿಸದೆ ಸಮಭಾವದಿಂದಿರುವುದು, ಮೂರು ಮೂಢತೆಗಳನ್ನು ಬಿಡುವುದು, ಪೂರ್ಣಶ್ರದ್ಧೆಯಿಲ್ಲದವರ ದೋಷಗಳನ್ನು ತಿದ್ದುವುದು, ಸಮ್ಯಗ್ದರ್ಶನದಲ್ಲಿ ಜೀವಿಗಳನ್ನು ನೆಲೆಗೊಳಿಸುವುದು, ಸಾಧುಗಳಲ್ಲಿ ವಾತ್ಸಲ್ಯವಿಡುವುದು, ಜೈನಧರ್ಮದ ಪ್ರಭಾವವನ್ನು ಬೆಳಗುವುದು (ಆದಿಪು. ೫-೫೫-೫೮)" (ಕ್ರೀಪತ್ರ. ೪೦): ಮೊದಲ ದರ್ಶನ ವಿಶುದ್ಧಿಯೆಂಬುದು ನಿಶ್ಶಂಕಿತ ನಿಷ್ಕಾಂಕ್ಷಿತ . . . ಪ್ರಭಾವನಾ ಎಂಬೆಂಟಜಿಂಗಳರ್ಹದುಪದಿಷ್ಟಮುಪ್ಪ ನೂರ್ಗಮನಿದಕ್ಕುಮಾಗದೆಂಬ ಸಂಶಯನುಂ ಪತ್ತು ವಿಡುವುದು ನಿಶ್ಶಂಕೆ (ಚಾವುಂಪು. ೨೪೧); ಈ ದರ್ಶನಸಾಮ್ಯಕ್ಕಷ್ಟಾಂಗಮುಂ ಶರೀರಕೃನಯವಮುಂ ಮರಕ್ಕೆ ಶಾಖೆಯುಮೆಂತಂತೆ ನಿಶ್ಶಂಕೆಯುಂ ನಿಷ್ಕಾಂಕ್ಷೆಯುಂ ನಿರ್ವಿಚಿಕಿತ್ಸೆಯುಂ ಅಮೂಢದೃಷ್ಟಿತ್ವಮುಂ ಉಪಗೂಹನಮುಂ ಸ್ಥಿತಿಕರಣಮುಂ ವಾತ್ಸಲ್ಯಮುಂ ಧರ್ಮಪ್ರಭಾವನೆಯುಮೆಂದು ಎಸೆವಂಗಮೆಂಟಜುಂ (ಧಪ್ರಾಮೃ. ೧-೭೮); ಇದು ದೈವಮಿಂತುಟಾಗಮಮಿದು ತಪವೆಂದುದು ನಂಬಿ ತಳರದೆ ಮನಮಂ ಪದಿನಾಜಿಡೆಗೆಸಪುತ್ತಿರದೆ ನಿಲ್ವುದು ನಿರಾಕುಳಂ ನಿಶ್ಶಂಕೆ (ಜ್ಞಾನಶಾ.೪೧-೬). [ಸಂ. ನಿಶ್ಶಂಕಾ]

ನಿಶ್ಶಕ್ತ (ನಾ). ಶಕ್ತಿಹೀನನಾದ ವ್ಯಕ್ತಿ: ಬಳಲಿದ ಹೆಂಗಸು, ನಿಶ್ಶಕ್ತಳಾದ ಹೆಂಗಸು, ಹೆಚ್ಚು ಮಾತಾಡುವುದು ಸರಿಯಲ್ಲ ಎಂಬ ಅರಿವು ಶೀನಪ್ಪನಿಗೆ ಬಹು ಬೇಗ ಮೂಡಿತು (ಅನಾಹೆ. ೧೪). [ಸಂ.]

ನಿಶ್ಶಕ್ತಿ (ನಾ). ಶಕ್ತಿಹೀನತೆ; ದುರ್ಬಲತೆ: ತಂದೆಯ ಆರೋಗ್ಯ ಮತ್ತೊಮ್ಮೆ ಕೆಟ್ಟತು ನಿಶ್ಶಕ್ತಿ ಹೆಚ್ಚಿತು ಮುಂದೆ (ಇಂಚಾಸ. ೧೪೮-೬೬); ಈಗ ಅವರಿಗೆ ಮೈ ಚೆನ್ನಾಗಿಲ್ಲ. ಯಾವಾಗಲೂ ನಿಶ್ಶಕ್ತಿ (ಬಸಕಂ. ೨೩೮); ಆ ನಾಲ್ವರ ಕೃಪಾಶಕ್ತಿ ಚೇತಂಸಿತೆನೆ ತನ್ನ ಚೇತನದಿ, ಜಾನಕಿಗೆ ಮೂಡ್ಡತ್ತು ನಿರಶನವ್ರತಜನ್ಯ ನಿಶ್ಶಕ್ತಿ (ಕ್ರೀರಾಪಾ. ೪೮೬-೩೦).

[ಸಂ.]

ನಿಶ್ಶತ್ರು (ನಾ). ಶತ್ರುವಿಲ್ಲದವನು; ಹಗೆಯಿಲ್ಲದವನು: ವನಜದ್ವಿಟ್ಪ್ರತಮೊಂದಿದಂದುದಯದೊಳ್ ಪ್ರಾಜ್ಞಂ . . . ರಿಪುವೊಳ್ ನಿಶ್ಶತ್ರು (ಜಾತಕ.೧೧೪-೧೧). [ಸಂ.]

ನಿಶ್ಶಬ್ದ (ನಾ). ೧. ಶಬ್ದವಿಲ್ಲದಿರುವಿಕೆ; ನೀರವತೆ; ಮೌನ: ಶಬ್ದವೇದಿಗಳೆಂದು ನುಡಿದು ನಡೆವರು ನೋಡಾ ನಿಶ್ಶಬ್ದ ವೇದಿಸದಿದ್ದರೆ ಗುಹೇಶ್ವರ ನೋಡಿ ನೋಡಿ ನಗುತ್ತಿಪ್ಪ ನೋಡಾ (ಅಮಚಂ.೧೧೬-೪೪೩); ನಿಶ್ಶಬ್ದವಿರ್ದುದಾ ಮಂದಿರಂ (ಕ್ರೀರಾಪಾ. ೫೭೨-೫೫೨); ನಿಶ್ಶಬ್ದ ನಿಶ್ಶಬ್ದ ಶಬ್ದದಾಚೆಯ ಶಬ್ದ ನಿಶ್ಶಬ್ದವಿದ್ದರೂ ಮೌನವಲ್ಲ (ಸನಲ್ಲ. ೧೩-೧). ೨. ಪರಮಾತ್ಮ. [ಸಂ.]

ನಿಶ್ಶಬ್ದತೆ (ನಾ). ನಿಶ್ಶಬ್ದವಾಗಿರುವಿಕೆ; ನೀರವತೆ; ಮಂದ್ರಗಂಭೀರ ದುಂದುಭಧ್ವನಿ ಸಭಾನಿಶ್ಶಬ್ದತೆಯ ಮಥಿಸಿ ಪೊಕ್ಕ (ಕ್ರೀರಾಪಾ. ೧೩-೩೫೨); ಕೆಲವು ನಿಮಿಷಗಳು ನಿಶ್ಶಬ್ದತೆಯಲ್ಲಿ ಕಳೆದವು (ಹೇಸುಂತ. ೧೯). [ಸಂ. ನಿಶ್ಶಬ್ದತಾ]

ನಿಶ್ಶಬ್ದವೇದಿ (ನಾ). ಆತ್ಮಜ್ಞಾನಿ: ಲಿಂಗಜಂಗಮದ ಮಾಟ ಸಮರ್ಪಿತವಾಯಿತ್ತಲ್ಲ ಬಸವಣ್ಣ ನಿಶ್ಶಬ್ದವೇದಿಯಾದೆಯಲ್ಲ ಬಸವಣ್ಣ (ಸುತಿಪಾ. ೫೫-೬೮). [ಸಂ. ನಿಶ್ಶಬ್ದವೇದಿನ್]

ನಿಶ್ಶಬ್ದಿ (ನಾ). ೧. ಶಬ್ದದಿಂದ ತಿಳಿಯದುದು; ಶಬ್ದಕ್ಕೆ ಅತೀತವಾದುದು: ನಿಶ್ಶಬ್ದಿಯೆ ಈಶ್ವರಕೃಪಾದ್ಧಿ (ಕ್ರೀರಾಪಾ.೩೯೦-೭೭೩). ೨. ಮಾತನಾಡದಿರುವವನು; ಮೌನಿ: ಶಬ್ದಯಾದಾತ ತರುಗಳ ಹೋತ ನಿಶ್ಶಬ್ದಿಯಾದಾತ ಪಾಷಾಣನ ಹೋತ . . . ಅಜುವಿನ ಕುಜುಹ ನಳದುಳಿದು ಗುಹೇಶ್ವರನೆಂಬ ಲಿಂಗವ ಹೋತವರನಾರನೂ ಕಾಣೆ (ಅಮಚಂ. ೧೨೮-೪೯೧). [ಸಂ. ನಿಶ್ಶಬ್ದಿನ್]

ನಿಶ್ಶರಣಯುದ್ಧ (ನಾ). ಶರಣಾಗದ ಯುದ್ಧ: ಈ ನಿಷ್ಕಾರ ನಿಶ್ಶರಣಯುದ್ಧಕ್ಕೆ ಬೇಕಾದ ಸಾಹಾಯ್ಯಸಾಮಗ್ರಿಗಳ ಆಣೆಯನು ಕೂಲತೆಗಳ ಸತ್ತ್ವಶಕ್ತಿಗಳ ಐಶ್ವರ್ಯವು ನನಗೆ ಉಳ್ಳಷ್ಟು ಪ್ರೌಢೆಯರಾಗಿದ್ದರೂ ಈ ಭೂತಗಳಿಗೆ ದಿಟವಾಗಿ ಇಲ್ಲ (ಪಟ್ಟಅ. ೨೫-೪).

[ಸಂ.]

ನಿಶ್ಶಲಾಕ, ನಿಶ್ಶಳಾಕ (ನಾ). ರಹಸ್ಯಸ್ಥಳ; ಏಕಾಂತ: "ವಿವಿಕ್ತಃ, ವಿಜನಃ, ಛನ್ನಃ, ನಿಶ್ಶಲಾಕಃ, ರಹಃ, ರಹಸ್, ಉಪಾಂಶು—೭ ಏಕಾಂತಕ್ಕೆ ತಕ್ಕ ವಿಜನವಾದ ರಹಸ್ಯಸ್ಥಳಕ್ಕೆ ಹೆಸರುಗಳು" (ನಿಘಂಶಿ. ೨೪೩). **ನಿಶ್ಶಳಾಕ**: "ರಹಃ, ಪ್ರಚ್ಛನ್ನಂ, ವಿಕಾಂತಂ, ನಿಶ್ಶಳಾಕಂ . . . ಗುಹ್ಯಂ—ಈ ೯ ಏಕಾಂತಂ" (ಹಲಾಯು. ೧೧೬-೨೩). [ಸಂ.]

ನಿಶ್ಶಲ್ಯ (ನಾ). ೧. ಬಾಣದಿಂದ ದೂರವಾದುದು; ಕಣೆಯಿಂದ ಬೇರಾದುದು. ೨. ಮನಸ್ಸಿನಲ್ಲಿ ಕೊರಗಿಲ್ಲದಿರುವಿಕೆ. ೩. [ಜೈನ] ಮಾಯಾ (ಕಪಟ), ಮಿಥ್ಯಾ (ಶ್ರದ್ಧೆಯ ಅಭಾವ), ನಿದಾನ (ಭೋಗಾಕಾಂಕ್ಷೆ)ಗಳೆಂಬ ಶಲ್ಯಗಳಿಲ್ಲದಿರುವುದು; ☞ ಶಲ್ಯವೆಂದರೆ ವ್ರತಗಳನ್ನಾಚರಿಸುವವರಿಗೆ ಉಂಟಾಗುವ ದೋಷ ಅಥವಾ ವಿಘ್ನಗಳು. ವ್ರತಗಳನ್ನಾಚರಿಸುವವರು ಮಾಯೆ, ಮಿಥ್ಯಾತ್ವ, ನಿದಾನ ಎಂಬ ಮೂರು ಬಗೆಯ ಶಲ್ಯಗಳಿಲ್ಲದವರಾಗಿರಬೇಕು. ಮನಸ್ಸಿನಲ್ಲೊಂದು ಕ್ರಿಯೆಯಲ್ಲೊಂದು ಈ ತರದ ಸ್ಥಿತಿಯು ಮಾಯಾಶಲ್ಯ. ತತ್ತ್ವಾರ್ಥದಲ್ಲಿ ಶ್ರದ್ಧೆಯಿಲ್ಲದಿರುವುದು ಮಿಥ್ಯಾತ್ವಶಲ್ಯ. ಭವಿಷ್ಯತ್ಕಾಲದಲ್ಲಿ ಇಂತಹ ವಿಷಯೋಪಭೋಗಗಳು ದೊರೆಯಬೇಕೆಂದು ಬಯಸುವುದು

ನಿದಾನಶಲ್ಯ : ಪೋದ ಭವಾಯತ್ತಂ ವಿರೋಧಂ ಮನದೊಳಗೆ ನಿಶ್ಶಲ್ಯಮಿನ್ನೆಂದು ನಾಕಪ್ರಭವೋದ್ಯನ್ಮಾಲೆಯಂ ಭೂಪತಿಯನೆಸೆದೊಜಿ ಲ್ದರ್ಚಿಸಿರ್ದಂ ಸುರೇಂದ್ರಂ (ಶಾಂತಿಪು. ೯-೯೩). ೪. ಮಾಯಾ, ಮಿಥ್ಯಾತ್ವ ಮತ್ತು ನಿದಾನವೆಂಬ ಶಲ್ಯಗಳಿಲ್ಲದಿರುವವನು : ದಶಾನನಂ . . . ಇಂದ್ರನಂ ಬರಿಸಿ ನಿಷ್ಕಷಾಯಂ ನಿನ್ನ ರಾಜ್ಯದೊಳ್ ಸುಖಮಿರೆಂದು ಕಟಿಪುವುದುಂ ರಾವಣಂಗೆ ನಿಶ್ಶಲ್ಯನಾಗಿ ತನ್ನ ಪೊಟಲ್ಗೆ ವಂದು . . . ದೀಕ್ಷೆಗೊಂಡು ಮೋಕ್ಷಕ್ಕೆವೋದಂ (ಪಂರಾಮಾ. ೧೦-೨೧೨ ಪ) ; ಪ್ರತೀಂದ್ರಂ ನಿಶ್ಶಲ್ಯಂ ನಿಯಮಿತಮನೋವೃತ್ತಿಸುಭಗಂ ಮಿತತ್ಯಾಗೋದ್ಯೋಗಂ ದೃಢತರ ಮಹಾಸಂಯಮಸುಖಂ (ಮಲ್ಲಿಪು. ೧೧-೩೬). 'ಅಶಲ್ಯ', 'ಶಲ್ಯ$_2$' ಪರಾ. [ಸಂ.]

ನಿಶ್ಶಲ್ಯಂಗೆಯ್ (ಕ್ರಿ). [ಜೈನ] ಮಾಯಾ, ಮಿಥ್ಯಾತ್ವ ಮತ್ತು ನಿದಾನವೆಂಬ ಶಲ್ಯಗಳನ್ನು ನಿವಾರಿಸು ; ಶಲ್ಯಗಳಿಲ್ಲದಿರುವಂತೆ ಮಾಡು : ಎಲ್ಲರುಮಂ ಕ್ಷಮೆಗೊಳಿಸಿ ನಿಶ್ಶಲ್ಯಂಗೆಯ್ದು ವಿದ್ಯುದಂಗ ನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ರಾಜ್ಯಾಭಿಷೇಕಂಗೆಯ್ದು (ಪಡ್ಡಾರಾ. ೧೩೩-೧೪); ಅನುಮೆನ್ನ ಜನ್ಮಾಂತರಮನಱಿದೆನೆಂಬುದುಮದಂ ಕೇಳ್ದು ನೀವುಂ ಕೊಲೆ ಸತ್ತವರೆ ನಾಮೆಂದಱಿಸಿ ನಿಶ್ಶಲ್ಯಂಗೆಯ್ದು ಬಂದಿಸಿ ಪೋದರೆಂದು ಸುಲೋಚನೆ ಜಯಕುಮಾರಂಗೆ ಪೇಟ್ದು (ಚಾವುಂಪು.೬೧); ರಾಮಂ . . . ಲಕ್ಷ್ಮಣಾದಿಗಳ್ವೆರಸು ನಿಶ್ಶಲ್ಯಂಗೆಯ್ದು ದಿವ್ಯಮುನಿಯ ಸಭಾಮಂಡಲಮಂ ಪೊಱಮಟ್ಟು (ಪಂರಾಮಾ. ೧೬-೪೧ ಪ).

[ನಿಶ್ಶಲ್ಯ + ಕೆಯ್$_1$]

ನಿಶ್ಶಸ್ತ್ರ (ಗು). ಆಯುಧಗಳಿಲ್ಲದಿರುವ ; ನಿರಾಯುಧವಾದ : ಹೊಟ್ಟೆಯ ಹೆಸರಿನಲ್ಲಿ ನಿಶ್ಶಸ್ತ್ರ ಸ್ತ್ರೀಪುರುಷರ ಮೇಲೆ ಗುಂಡು ಹಾರಿಸುವುದೇನು ? (ಬಾಳಿಗಿ. ೧೯೩). [ಸಂ.]

ನಿಶ್ಶಸ್ತ್ರೀಕರಣ (ನಾ). ಆಯುಧವಿಲ್ಲದಂತೆ ಮಾಡುವಿಕೆ ; ಶಸ್ತ್ರತ್ಯಾಗ : ವಿಶ್ವದಲ್ಲಿ ಈಗೀಗ ನಿಶ್ಶಸ್ತ್ರೀಕರಣದ ಬಗ್ಗೆ ಇರುವ ಆಗತ್ಯವು ಹೆಚ್ಚು ಸ್ಪಷ್ಟವಾಗಿ ರೂಪುಗೊಳ್ಳುತ್ತಿದೆ (ರೂಢಿ). [ಸಂ.]

ನಿಶ್ಶಳಾಕ 'ನಿಶ್ಶಲಾಕ' ನೋ.

ನಿಶ್ಶಾಠ್ಯ (ನಾ). ಕಪಟವಿಲ್ಲದುದು ; ವಂಚನೆಯಿಲ್ಲದುದು ; ಪ್ರಾಮಾಣಿಕವಾದುದು ; ದಿಟ : "ಅನವಸ್ಕರಂ ನಿಶ್ಶಾಠ್ಯಮೆ ಅತಿ ದಿಟಮದಕ್ಕು" (ಮಂಗರಾ. ೧೩೩-೩೧). [ಸಂ.]

ನಿಶ್ಶಿಖರ (ನಾ). ಶಿಖರವಿಲ್ಲದಿರುವುದು ; ಶಿಖರದ ತುಟ್ಟತುದಿ : ಅನಂತತೆಯನಾಕ್ರಮಿಸೆ ನಿಶ್ಶಿಖರಮೆನಲೇರ್ದ ಗಿರಿಯ ಸಾಹಸಗರ್ವ ಗೋಪುರ ಶಿಲ್ಪಕೃತಿಯಂತೆ ನಿಮಿರಿ ! ರೋಮಾಂಚಿಸಿತು ಸೃಷ್ಟಿ (ಶ್ರೀರಾಮಾ. ೪೦೫-೬೬). [ಸಂ.]

ನಿಶ್ಶಿಥಿಲ (ನಾ). ಸ್ಪಷ್ಟವಾದುದು ; ವ್ಯಕ್ತವಾದುದು ; ನಿರ್ಧಾರವಾದುದು ; ನಿಶ್ಚಯವಾದುದು : ಪಥವನಂಬುಧಿ ತೋಱದಿರೆ ಸುರಮಥನ ಸೀತೆಯನೀಯದಿರೆ ನಿಶ್ಶಿಥಿಲವಲ್ಲಾ ಮೇಲೆ ನೆಗಳುವ ದಾಯದೇವರಿಗೆ (ತೊರಾ. ೬-೪-೧೯). [ಸಂ.]

ನಿಶ್ಶೂನ್ಯ (ನಾ). [ವೀಶೈ] ಸೂಕ್ಷ್ಮತಮ ಶೂನ್ಯ ; ಮಹಾಶೂನ್ಯ ; ಪರಮಾತ್ಮ ; ಶೂನ್ಯಾತೀತ : ಅನುಪಮದ ನಿಶ್ಶೂನ್ಯವೇ ವಿಶ್ರಾಮ ನಿರಾಕಾರವೆ ಗಮನ ನಿರಂತರ ಪಾತಾಳ ಊರ್ಧ್ವಪವನ ತ್ರಿಭುವನಗಿರಿಯೆಂಬ ಪರ್ವತವನೇಱಿ . . . ಸುಳಿದಾಡುವ ಮಹಾಮಹಿಮಂಗೆ ಇಹಲೋಕವೇನು ಪರಲೋಕವೇನು (ಅವಚಂ. ೮೪-೩೭೪) ; ನಿಮ್ಮಂತರಂಗವೆಂಬ ಚಿದಂಬರದಲ್ಲಿ ನಿಶ್ಶೂನ್ಯವಾಗಿರಿಸೆನ್ನ (ಅದಪ. ೧೩-೨೬) ; ಇಂತೀ ತ್ರಿವಿಧಪ್ರಸಾದ ಏಕಾರ್ಥವಾಗಿ ಮಹಾಘನ ಪರಿಪೂರ್ಣ ಪ್ರಸಾದ ವಳವಟ್ಟ ಶರಣನು ಜ್ಞಾನಿ ಅಲ್ಲ ಅಜ್ಞಾನಿ ಮುನ್ನವೇ ಅಲ್ಲ ಶೂನ್ಯನಲ್ಲ ನಿಶ್ಶೂನ್ಯನಲ್ಲ (ಮಹಾದೇ. ಒ. ೧೦೪-೨೩೫). 'ನಿರ್ವಯಲು' ಪರಾ. [ಸಂ.]

ನಿಶ್ಶೇಷ (ಗು). ೧. (ಉಳಿದ ಎಲ್ಲವನ್ನೂ) ಮುಳುಗಿಸುವ ; ಅಡಗಿಸುವ : ನಿಸ್ಸಾಳಧ್ವನಿಗಳ್ ಧಳಧಳಮೆನೆ ನಿಶ್ಶೇ[ಪಾಠಾಂ. ಸ್ಸೇ]ಷ ಧ್ವನಿ ಭರದಿಂ ಭೋರೆನೆ (ತಿರುನಾ. ದೇ. ೨೨೨-೨). (ನಾ). ೨. ಉಳಿಯದುದು ; ಶೇಷವಿಲ್ಲದುದು ; ಸಂಪೂರ್ಣ ಮುಗಿದುದು : "ನಿಶ್ಶೇಷಂ, ನ್ಯಕ್ಷಂ - ಈ ೨ ಉಟಿಯದುದು" (ಹಲಾಯು.೧೨೭-೮೫), ಲಬ್ಧಕಷಾಯವೈರಿಜಯನಂ ವಿಜ್ಞಾತನಿಶ್ಶೇಷವಾಙ್ಮಯನಂ ಸ್ವೀಕೃತ ಸತ್ತಪಃ ಪ್ರಚಯನಂ . . . ವಂದಿಪೆನಟ್ಟಿಯಿಂದೆ (ಚಂಬ್ರಪು. ೧-೨೧) ; ತತ್ಕಾನನಾಂತರದೊಳ್ ಪೆರ್ಬುಲಿಯಿರ್ದುದೇಣಕುಲಮಂ ನಿಶ್ಶೇಷಮಂ ಮಾಡುತಂ (ಸಳಚಂ. ೬೬) ; ಕುವರನನ್ನು ಯುವರಾಜಪದವಿಗೆ ತಂದು ಕೊಳ್ಳೋಣವೆಂದು ನೀವು ಹೇಳಿದ ಮೇಲೆ ನನ್ನ ಸಂಕಟ ನಿಶ್ಶೇಷವಾಯಿತು (ಶಾಂತಲಾ. ೩೯೧). ೩. ಸಂಪೂರ್ಣನಾಶ,—ಅಳಿವು : ನಿಯತವಿದು ನಿಶ್ಶೇಷ ನಿಮ್ಮನ್ವಯಕೆ ನಿರ್ವಾಹವನು ಗಾಂಧಾರಿಯಲಿ ನಿಮ್ಮಯ್ಯನಲಿ ಬೆಸೆಗೊಳ್ಳೆಂದನಾ ಶಕುನಿ (ಕುವ್ಯಾಸ. ೧೬-೭). [ಸಂ.]

ನಿಶ್ಶೇಷಂ (ಅ). ಸಂಪೂರ್ಣವಾಗಿ ; ಏನೂ ಉಳಿದದಂತೆ : ಭವದೇಕ ಶೇಷಮಾದುದು ಯುವರಾಜಾದಿಗಳ ಸಾಯೆ ನೀಂ ಕಾದದೆ ಕೌರವ ನಾಯಕ ನಿಶ್ಶೇಷಂ ಭುವನಮಶೇಷಂ ಬಟಿಕ್ಕೆ ಶೇಷಂಗೆ ಭರಂ (ಗದಾಯು. ೩-೮೩). [ಸಂ.]

ನಿಶ್ಶೇಷಿಸು (ಕ್ರಿ). ಸ್ವಲ್ಪವೂ ಉಳಿಯದಂತೆ ಮಾಡು ; ಸಂಪೂರ್ಣವಾಗಿ ನಾಶಮಾಡು ; ಪೂರ್ಣವಾಗಿ ಅಳಿಸು : ಶತ್ರು ವಿಷ ಋಣ ರೋಗ ವಹ್ನಿಗಳೆತ್ತಲಾದರೂ ಸ್ವಲ್ಪವುಳಿದರು ಮತ್ತೆ ಬೆಳೆದಾವರಿಸುವುವು ಯಿವ ಕಿತ್ತು ನಿಶ್ಶೇಷಿಸುವುದುತ್ತಮ (ನೀಸಾರಾ. ೨೪೧).

[ನಿಶ್ಶೇಷ + -ಇಸು$_3$]

ನಿಶ್ಶೇಷೀಕರಣ (ನಾ). ೧. ಸಂಪೂರ್ಣವಾಗಿ ನಾಶಮಾಡುವಿಕೆ. ೨. ಪಂಚಶಕ್ತಿಮಂತ್ರಗಳಲ್ಲಿ ಒಂದು : ಜೃಂಭಕ ಪ್ರಸ್ವಾಪನ ಅಪ್ರತಿಹತ ನಿಶ್ಶೇಷೀಕರಣ ಜೀವಗ್ರಾಹಗಳೆಂಬ ಪಂಚಶಕ್ತಿಮಂತ್ರಂಗಳಂ . . . ಬೇಱೆ ಬೇಱೆ ಉಪದೇಶ ಅನುಷ್ಠಾನ ಪರೀಕ್ಷೆಗಳಿಂ ವಿವೇಕಿಸಿ ತಿಳಿದಿರಲಕ್ಕುಂ (ವಿವೇಕ. ೮೬). [ಸಂ.]

ನಿಶ್ಶೋದ್ಯ (ನಾ). ಕಲ್ಮಷವಿಲ್ಲದ ಹಾಗೆ ಶುದ್ಧಮಾಡಿದುದು : "ನಿರ್ಣಕ್ತಂ, ಶೋಧಿತಂ, ಮೃಷ್ಟಂ, ನಿಶ್ಶೋಧ್ಯಂ, ಅನವಸ್ಕರಂ - ೫ ಕಲ್ಮಷವಿಲ್ಲದ ಹಾಗೆ ಶುದ್ಧಗೊಳಿಸಲ್ಪಟ್ಟದ್ದು" (ಸಿದ್ಧಾಂತಿ. ೩೩೮).

[ಸಂ.]

ನಿಶ್ರೇಣಿಕ (ನಾ). = ನಿಶ್ರೇಣಿ : ಜೀವಹಿಂಸಾವಿರತಿ . . . ಬಹ್ವಾರಂಭಾಕಾಂಕ್ಷೆಯೆಂದಿಂತಿವು ಜಿನಗದಿತಾಣುಬ್ರತಂಗಳ್ ವಿನೇಯಾಧಾರಂಗಳ್ ಭಾಗಧೇಯಪ್ರಕೃತಿಗಳಮೃತಾವಾಸ ನಿಶ್ರೇಣಿಕಂಗಳ್ (ಸುಕುಮಾ. ೬-೯). [ಸಂ.]

ನಿಶ್ರೇಯಸ (ನಾ). ಶಾಶ್ವತ ಸುಖ ; ಮೋಕ್ಷ ; ಮುಕ್ತಿ : ಗುರು ಷಷ್ಠಾಷ್ಟಮ ಕಂಟಕಂಗಳೆನಿಪಾಜುಂ ಗೇಹದೊಳ್ ಸ್ವೋಚ್ಚದಲ್ಲಿರೆ . . . ನಿಶ್ರೇಯಸಲಕ್ಷ್ಮಿಯೊಳ್ ನೆರೆದು [ತಾಂ] ಸತ್ಸೌಖ್ಯನಕ್ಕುಂ ನರಂ (ಜಾತತಿ. ೨೩-೨೮) ; ನಿಶ್ಶೇಷವಾಗಿ ಶ್ರೇಯಸ್ಸಾಗುವುದು ನಿಶ್ರೇಯಸವು ಅಂದರೆ ಮೋಕ್ಷವು (ಅರ್ಯಧ. ೧೬). [ಸಂ.]

ನಿಷಂಗ (ನಾ). ೧. ಸಂಗ ; ಸಂಪರ್ಕ ; ಸಂಬಂಧ. ೨. ಬತ್ತಳಿಕೆ ; ತೂಣೀರ : "ತೂಣೀರಮುಪಾಸಂಗಂ ಬಾಣಧಿ ಬಾಣಾಶ್ರಯಂ ನಿಷಂಗಂ ಡೊಣೆಗಳ್" (ವಸ್ತುಕೋ. ೮೫-೧೯) ; ನಿಜಾಗ್ರಸ್ಕಂಧದೊಳ್ ಕೇದಗೆ ಯೆಸೆವರಲೆಂದೆಂಬ ಕೂರಂಬು ತೀವಿರ್ದ ನಿಷಂಗಂ ಕಣ್ಗೊಳಲ್ಮೊಲ್ಲೆಯ

ನನೆಗಣೆಯಂ ತೂಗುತುಂ ಕಂತುವೀ ಬಂದನೆನುತ್ತುಂ ಗರ್ಜಿಪಂತಾದುದು ವಿರಹಿಗಳಂ ಕೇಕಿಭೀಕಪ್ರಣಾದಂ (ಜಗವಿ. ೪-೨೧) ; ಅಗ್ನಿಯಿತ್ತನು ಹರ್ಗೆ ಧನಂಜಯರಿಗೆ ರಥಂಗಳ . . . ವರತನುತ್ರ ನಿತಾಶ್ವವಕ್ಷಯಂ ಶರ ನಿಷಂಗಾದಿಗಳ (ಕುವ್ಯಾಳ. ೨೦-೨೦) ; ಆ ವನಂ . . . ನೀರಜದಂತೆ ನಿಷಂಗ ದಂತೆ ನಿಬಿಡಶೀಮುಖಮುಂ . . . ಎನಿಸಿದುದು (ರಾಜಶೇ. ೨-೭೪ ಪ) ; ಸರದಿಗೆಯದಿರ್ಪುವು ಕೋಗಿಲೆಗಳ್ ನಿಷಂಗದಿಂದರೆಯುಗಿದಂಬನಂಜುತುಪ ಸಂಹರಿಪಂ ಸ್ಮರಂ (ಶಾಕುಂತ. ೪೧-೧೩೫). ೩. ಖಡ್ಗ. [ಸಂ.]

ನಿಷಂಗಿ (ನಾ). ಬತ್ತಳಿಕೆಯನ್ನು ಧರಿಸಿದವನು ; ಬಿಲ್ಲುಗಾರ : "ಧನ್ವೀ, ಧನುಷ್ಮಾನ್, ಧಾನುಷ್ಕಃ, ನಿಷಂಗೀ, ಅಸ್ತ್ರೀ, ಧನುರ್ಧರಃ – ೬ ಬಿಲುಗಾರನ ಹೆಸರು" (ಸಿದ್ಧಾಂತಿ. ೨೫೭). [ಸಂ. ನಿಷಂಗಿನ್]

ನಿಷಣ್ಣ (ಗು). ೧. ಕುಳಿತುಕೊಂಡಿರುವ ; ಆಸನಸ್ಥ : ಆ ಕುಮಾರೋತ್ತಮಂ ನಿರವಧಿ ಚತುರುದಧಿವನನಿಷಣ್ಣ ಕಿನ್ನರೀಜನಸಂಗೀಯಮಾನ ಮಾನನೀಯ ವಿಶದತರನಿಜಯಶಸ್ತೋಮದಿಂ ಧವಳೀಕೃತನಿಖಿಲ ದಿಕ್ಪಾಳಕನಿಳಯನಪ್ಪುದುಂ (ಬಾಭಪು. ೯-೪೮ ಪ). (ನಾ). ೨. ಕುಳಿತಿರುವವನು ; ಕುಳಿತುಕೊಂಡವನು : ಅಂತರ್ದನಂ ತ್ರಿಪ್ರದಕ್ಷಿಣಂಗೆಯ್ದು ವಿವಿಧಪೂಜಾಪುರಸ್ಸರಂ ಗುರುಭಕ್ತಿಯಿಂ ವಂದಿಸಿ ತದಾಶೀರ್ವಚನಾಮೃತಭರಿತಕರ್ಣಕುಹರನುಂ ಪಾದಪ್ರದೇಶನಿಷಣ್ಣನುಮಾಗೆ (ಜಂಪ್ರಪು. ೩-೨ ಪ). [ಸಂ.]

ನಿಷದ್ಯಾಕ್ರಿಯೆ (ನಾ). [ಜೈನ] ಐವತ್ತುಮೂರು ಗರ್ಭಾನ್ವಯ ಕ್ರಿಯೆಗಳಲ್ಲಿ ಒಂಬತ್ತನೆಯದು ; ℙ ಶಿಶುವನ್ನು ಉತ್ತಮವಾದ ಆಸನದ ಮೇಲೆ ಕುಳ್ಳಿರಿಸಿ ಸಿದ್ಧಾರ್ಚನೆ ಮೊದಲಾದ ವಿಧಿಗಳನ್ನು ನೆರವೇರಿಸುವುದು : ಮಂಗಳಾಳಂಕೃತಮಪ್ಪ ವಿಸ್ತೀರ್ಣತ ತಲ್ಪದೊಳ್ ಸಿದ್ಧಾರ್ಚನಾವಿಧಿಪೂರ್ವಕಂ ದಿವ್ಯಾಸನಾರ್ಹತ್ವಮುಂ ಮುವುತ್ತೋತ್ತರಮುಮಕ್ಕೆಂದು ಬಾಲಕನನಿಜಿಸುವುದು ನಿಷದ್ಯಾಕ್ರಿಯೆ (ಚಾವುಂಪು. ೭೧೪). 'ದೀಕ್ಷೆ' ಪರಾ. [ಸಂ. ನಿಷದ್ಯಾಕ್ರಿಯಾ]

ನಿಷದ್ಯಾಪರೀಷಹ (ನಾ). [ಜೈನ] ಇಪ್ಪತ್ತೆರಡು ಪರೀಷಹಗಳಲ್ಲಿ ಹತ್ತನೆಯದು ; ℙ ಜೈನಮುನಿಗಳು ನಿಯಮಿತಕಾಲದ ವ್ರತವನ್ನು ಕೈಕೊಂಡು ನಿರ್ಜನವಾದ ಸ್ಥಳದಲ್ಲಿ ಕುಳಿತಿದ್ದು, ಆ ಕಾಲದಲ್ಲಿ ವ್ಯಾಘ್ರಾದಿಗಳ ಗರ್ಜನೆ ಮೊದಲಾದುವುಗಳಿಂದ ಅವರಿಗೆ ಆಗುವ ಉಪಸರ್ಗ : ಅನನುಭೂತಪೂರ್ವಪರೇತವನೋದ್ಯಾನಶೂನ್ಯಾಯತನಗಿರಿಗುಹಾಗಹ್ವರಾದಿ ನಿವಾಸಿಯುಂ ಸಹಸ್ರಕರಣ ಸ್ವೇಂದ್ರಿಯಜ್ಞಾನಪ್ರಕಾಶಪರೀಕ್ಷಿತಪ್ರದೇಶದೊಳ್ ನಿಯಮಕ್ರಿಯೆಯಂ ಸೂಡಿ ಕಾಲನಿಯಮದಿಂ ಕುಳ್ಳಿರ್ದನುಂ ಸಿಂಹ ವ್ಯಾಘ್ರಾದಿ ನಿವಿಧಭೀಷಣ ಧ್ವನಿಶ್ರವಣನಿವೃತ್ತಭಯನುಂ ಚತುರ್ವಿಧೋಪಸರ್ಗಸಹಿಷ್ಣುತ್ವದಿಂ ಅಪ್ರಚ್ಯುತಮೋಕ್ಷವಾರ್ಗನುಂ ವೀರಾಸನೋತ್ಕುಟಿಕಾಸನಾದಿಗಳಿಂ ಅಚಲಿತನಿಗ್ರಹನುಮಪ್ಪ ಯನಿಗೆ ತತ್ಕೃತಬಾಧಾಸಹನಂ ನಿಷದ್ಯಾಪರೀಷಹಜಯಮೆಂದು ನಿಶ್ಚಯಿಸೆ ಪಡುಗುಂ (ತತ್ತ್ವಪ್ರ. ೫೭೫). [ಸಂ.]

ನಿಷದ್ಯೆ (ನಾ). ೧. ಹಾಸುಗೆ; ಸುಪ್ಪತ್ತಿಗೆ; ಮೆತ್ತೆ. ೨. ವ್ಯಾಪಾರದ ಸ್ಥಳ; ಮಾರುಕಟ್ಟೆ; ಅಂಗಡಿಬೀದಿ: "ಆಪಣಃ, ನಿಷದ್ಯಾಯಾಂ . . . ದೊಡ್ಡ ಅಂಗಡಿಗಳಿರುವ ಸ್ಥಳದ ಹೆಸರು" (ಸಿದ್ಧಾಂತಿ. ೪೮). ೩. = ನಿಷದ್ಯಾಕ್ರಿಯೆ : ಆಧಾನ ಪ್ರೀತಿ ಸುಪ್ರೀತಿ ಧೃತಿ ಮೋದ ಪ್ರಿಯೋದ್ಭವ ನಾಮಕರ್ಮ ಬಹಿರ್ಯಾನ ನಿಷದ್ಯಾನ್ನ ಪ್ರಾಶನ . . . ತ್ಯಾಗ ನಿರ್ವೃತಿಯೆಂಬಯ್ವತ್ತುಮೂಱು ಗರ್ಭಾದಿ ನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳುಂ (ಆದಿಪು. ೧೫-೧೫೫ ಪ). 'ದೀಕ್ಷೆ' ಪರಾ. ೪. = ನಿಷದ್ಯಾಪರೀಷಹ : ನಿಷದ್ಯಾ—ಕುಳ್ಳಿರ್ಪುದುಂ. ಜಯ್ಯಾ—ಒಲಗುವುದುಂ . . . ಅದರ್ಶನಾನಿ ಕ್ಯಾಯಿಕದರ್ಶನಮುಂ ಪಡೆಯದುದುವೆಂದು ಪರೀಷಹಂ ದ್ವಾವಿಂಶತಿ ವಿಧಮಕ್ಕುಂ (ತತ್ತ್ವಪ್ರ. ೫೭೫). [ಸಂ. ನಿಷದ್ಯಾ]

ನಿಷದ್ವರೆ (ನಾ). ಕೆಸರು ; ಪಂಕ : "ಪಂಕಃ, ಸಾದಃ, ನಿಷದ್ವರಃ, ಜಂಬಾಳಃ, ಕರ್ದಮಃ, ಅವಕಿಲಃ – ೪ ಕೆಸರು" (ಹಲಾಯು. ೧೧೨-೫೬) ; "ಕರ್ದಮಮೆನಲ್ ಪರಿದಂ ನಿಷದ್ವರಂ ಜಂಬಾಲಮವಕಿಳಂ ಪಂಕಮೆನೆ ಕೆಸಱ್ನಿಳ್ಕುಂ" (ಪುಂಗರಾ. ೧೨೩-೧೫). [ಸಂ.]

ನಿಷಧ (ನಾ). ೧. ಒಂದು ಪರ್ವತದ ಹೆಸರು ; ℙ ಮೇರು ಪರ್ವತದ ಸುತ್ತಲೂ ಇರುವ ಪರ್ವತಗಳಲ್ಲೊಂದು ; ಹರಿಕ್ಷೇತ್ರ ಮತ್ತು ವಿದೇಹಕ್ಷೇತ್ರಗಳ ಮೇರೆಯಲ್ಲಿರುವ ಈ ಪರ್ವತವು ನಾನೂರು ಯೋಜನ ಎತ್ತರವಾಗಿದೆಯೆಂದೂ ಇದರ ಬಣ್ಣವು ಕಾಸಿದ ಬಂಗಾರದಂತೆ ಇದೆಯೆಂದೂ ನಂಬಲಾಗಿದೆ : "ಹಿಮವಾನ್, ನಿಷಧಃ, ವಿಂಧ್ಯಃ, ಮೂಲ್ಯವಾನ್, ಪಾರಿಯಾತ್ರಕಃ, ಗಂಧಮಾದನಂ . . . ಮುಂತಾದವುಗಳೆಲ್ಲ ಪ್ರಸಿದ್ಧಗಳಾದ ಆಯಾ ಬೆಟ್ಟಗಳ ಬೇರೆ ಬೇರೆ ಹೆಸರುಗಳು" (ಸಿದ್ಧಾಂತಿ. ೧೧೩) ; ಆಗಳಿರ್ವರುಂ ನೀಲ ನಿಷಧ ಗಿರಿಗಳೊಂದೊಂದಜಿರ್ಂಳ್ ಬಂದು ಪೊಣರ್ವಂತೆ ನಿಂದೊರ್ವರೊರ್ವರೆಮೆಯಿಲ್ಕ್ಕದೆ ನೋಡುವಲ್ಲಿ (ಆದಿಪು. ೧೪-೧೦೪ ಪ) ; ತ್ರಿಕೂಟ ಕುರುವಿಂದ ಪತಂಗ ರುಜಕ ನಿಷಧವೆಂಬೈದು ಗಿರಿಗಳೇ ಟೆಂಕಣ ಗಂಧಮಾದನ ಶೈಲದ ಪಡುವಲ ವಿಪುಲಾದ್ರಿಯು ಮಧ್ಯಭಾಗದೊಳಗಿಹವು (ವಿನೇಕ. ೨೨೯). ೨. ನಳ ಮಹಾರಾಜನು ಆಳಿದ ಒಂದು ರಾಜ್ಯದ ಹೆಸರು : ಉತ್ತಮೋತ್ತಮ ಚತುರ್ವಿಧ ನಾಯಕನಾಯಿತಾಮನಃಪ್ರೇಮದಿ ನೊಪ್ಪುಗುಂ ನಿಷಧಮೆಂಬ ಮಹಾವಿಷಯಂ ಧರಿತ್ರಿಯೊಳ್ (ನಳಚಂ.೯); ಕುರು ನೇಪಾಳ ನಿಷಧ ವಿದರ್ಭ ಧರಣೀಪಾಲಕತಿ ನಂದನಸಿದುದು ಸಾಕೇತ ನಗರಿಯಲಿ (ತೊರರಾ. ೧-೭-೧೪೪) ; ನಿಷಧವಸುಧಾಪರಿವೃಢಗರ್ವನಿರ್ವಾಪಣ ಪರಾಕು (ಯಾದಪಂ. ೩-೧೦ ಪ). ೩. ನಿಷಧರಾಜ್ಯವನ್ನು ಆಳಿದವನು ; ನಳಮಹಾರಾಜ : ಸೃಜಿಸಿದನು ಸುದ್ದಿಯನು ನೃಪ ಭೂಭುಜರ ನಗರಂಗಳಲಿ ನಿಷಧನ ನಿಜವನಿತೆಗೆ ಪುನಃ ಸ್ವಯಂವರವೆಂದು (ತೊರರಾ. ೩-೨-೧೭). ೪. [ನಾಟ್ಯ] ನಂಯುತಹಸ್ತಗಳಲ್ಲಿ ಒಂದು : ನಾಟ್ಯಶಾಸ್ತ್ರದಲ್ಲಿ ಹೇಳಿರುವ ಸಂಯುತಹಸ್ತಗಳು ಯಾವುವೆಂದರೆ—೧. ಅಂಜಲಿ . . . ೬. ಉತ್ಸಂಗ, ೭. ನಿಷಧ (ಅಭಾನೃ.೪೮). ೫. = ನಿಷಾದ ೪. ೬. ಒಂದು ರಾಗದ ಹೆಸರು : "ಮೇಳ ಕರ್ತರಾಗಗಳು — ೭೨ . . . (೪) ಅಸಂಪೂರ್ಣಷಡ್ಜಿತಯ : ಕನಕಾಂಬರಿ, ಫೇನದ್ಯುತಿ . . . ಧಾಮವತಿ, ನಿಷಧ, ಕುಂತಳ, ರತಿಪ್ರಿಯ . . . ಕುಸುಮಾಕರ, ರಸಮಂಜರಿ (ಕರ್ನಾಟಕ ಸಂಗೀತ ತರಂಗಿಣಿ. II, -೪)" (ಶ್ರೀರಸ್ತ. ೬೫೪).

ನಿಷಧಿ 'ನಿಸಿದಿ' ನೋ.

ನಿಷಾ 'ನಶೆ' ನೋ.

ನಿಷಾಖೋರ 'ನಿಶಾಖೋರ' ನೋ.

ನಿಷಾದ (ನಾ). ೧. ಬೇಟೆಯಾಡುವವನು ; ಕಿರಾತ ; ಬೇಡ : ಏಕಲವ್ಯಾಹ್ವಯ ನಿಷಾದಾನೀಕಪತಿಯ ಸಹಾಯವನು ಮತ್ತಾ ಕುಮತಿ ಗಾಚರಿಸುತ್ತೆಂಭತ್ತೆಂಟುಸಾವಿರದ ಭೀಕರಾಕಾರದ ನಿಷಾದಾನೀಕದಲಿ ನಡೆತಂದನರುಳು ನಿರಾಕುಳನು ದಸೆಗೆಸೆವ ಕೈದೀವಿಗೆಯ ಬೆಳಕಿನಲಿ (ನಿಭಾಗ. ೧೦-೬೪-೬) ; ಮಾಣ್, ನಿಷಾದನೆ, ಮಾಣ್ ! ಕೊಲೆ ಸಾಲ್ದುಮಯ್ಯೊ ಮಾಣ್ ! (ತ್ರಿಪುರಾಮಾ. ೨-೨೬) ; ಕ್ರೌಂಚವಿಥುನದಲಿ ಒಂದರ ಕೊಲೆಗೆ ವಾಲ್ಮೀಕಿ ಶಪಿಸಿದ ನಿಷಾದ ರಾವಣನಾಗಿ ಭೂವಿಯಲಿ ಹುಟ್ಟಿ, ಕಾಡಿದನು ಸೀತೆಯನು (ದೀಪನು. ೪೦-೧೨). ೨. ಬೆಸ್ತ. 'ನಿಷಾದಪತಿ' ಪರಾ. ೩. ಹೊಲೆಯ : "ಅಂತಾವಸಾಯಿ, ನಿಷಾದ

ಚಂಡಾಳಃ, ನಿಷಾದಃ, ಜನಂಗಮಃ — ಈ ೪ [ಪೊಲೆಯಂ]" (ಹಲಾಯು. ೯೪–೪೪೪); ಪಂದಿ . . . ಅನವರಿದು ದುಃಖದೊಳ್ ನಮೆದು ನಾರುಗಿದು ಪೊಗೆದು ಸತ್ತಲ್ಲಿ ನಿಷಾದನ ಮನೆಯೊಳ್ಪೆಣ್ಣಾಯಾಯ್ತು (ಸುಕುಮಾ. ೫–೧೯). ೪. [ಸಂಗೀತ] ಸಪ್ತಸ್ವರಗಳಲ್ಲಿ ಕಡೆಯದು : "ಷಡ್ಜಮಾ ಋಷಭಮಾ ಗಾಂಧಾರಮಾ ಮಧ್ಯಮಂ ವಿಸಾಜಿಪ್ಪ ಪಂಚಮಂ ಧೈವತಂ ಸುನಿಷಾದಮೋರಂತೆ ಸಪ್ತಸ್ವರಂಗಳಕ್ಕುಂ" (ನುಂಗವಾ.೨೩–೩); ಷಡ್ಜ ವೃಷಭ ಗಾಂಧಾರ ಮಧ್ಯಮ ಪಂಚಮ ಧೈವತ ನಿಷಾದಂಗಳೆಂಬ ಸಪ್ತಸ್ವರಮುಮುಂ . . . ದಶರೂಪಲಕ್ಷಣಮುಮುಂ ಪಾತ್ರಸಂಕ್ರಮಣದೊಳ್ ನೆಲೆಯೆ ತೋಱುಂ (ಅಜಪು. ೫–೬೦ ಪ); ಸಪ್ತಸ್ವರಂಗಳುತ್ಪತ್ತಿಕ್ರಮದಲ್ಲಿ ಪರಶಿವನ ಈಶ್ವರ, ಸದ್ಯೋಜಾತ . . . ನರೆಂಗವೆಂಬೇಳು ಮುಖಂಗಳ ಕ್ರಮವಿಡಿದು ಷಡ್ಜ ಋಷಭ ಗಾಂಧಾರ ಮಧ್ಯಮ ಪಂಚಮ ಧೈವತ ನಿಷಾದವೆಂಬ ಸಪ್ತಸ್ವರಂಗಳುದಿಸಿದವು (ವಿವೇಕ. ೨೪೭); ಕ್ರಮವಾಗಿ ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ ಮತ್ತು ನಿಷಾದ ಎಂದು ಸಪ್ತಸ್ವರಗಳ ಹೆಸರುಗಳು (ಸಂಗೀಚಂ. ೧೫). ೧, ೪ : ಅ ಮಹಾವನಂ . . . ಸ್ವರ ಸಮುದಯದಂತೆ ನಿಷಾದನಿಷೇನ್ಯಮುಂ ಆರಾಧಕನಂತಕ್ಷನೂಲಾಗಣಿತ ಜಪೋಪೇತಮುಂ (ಚಂದ್ರಪು. ೫–೫೨ ಪ). ೫. ಮಣ್ಣು ; ಅರಲು : ನಾದಬಿಂದುಗಳಡ್ಡ ಪಲಿಗೆಗಳಾದಿಶಕ್ತಿಯೆ ತಿಗುರಿ . . . ವೇದಿಸಲು ಬ್ರಹ್ಮಾಂಡ ಖಾಂಡ ನಿಷಾದ ಭಾಂಡಾವಳಿಗಳಂ ಸಮ್ಮೋದದಿಂದಂ ವಿರಚಿಸುವ ಕುಂಬಾಟಿನುಂ ತಾನೆ (ಬಸಪು. ೨೧–೨೭). [ಸಂ.]

ನಿಷಾದಕರ್ಮ (ನಾ). ಚಂಡಾಲರ ಕೆಲಸ; ಕ್ರೂರಕಾರ್ಯ : ಭೃಗುಶಾಪೋಪಗತರಾಗಿ ವೇದನಾವಸ್ಥೆಗಳೊಳಿಪ್ಪ ನಿಷಾದಕರ್ಮಶ್ವಪಚರೊಡನೆಯನಾದರದಿ ಪಶುವಂ ಕೊಲುವ ಪಶುಕರ್ಮಿಗಳ ಕೂಡೆ . . . ನಿಂದು ನುಡಿದಡೆ ದೋಷವೊಂದುವುದು (ಬಸಪು. ೫೭–೭೭).

[ನಿಷಾದ + ಕರ್ಮ]

ನಿಷಾದಪಡೆ (ನಾ). ಬೇಡರ ಸೈನ್ಯ : ನಿಷಾದಪಡೆ ಮುಸುಕಿತ್ತು ಹಲಧರನ (ನಿಭಾಗ. ೧೦–೬೪–೩೯). [ನಿಷಾದ + ಪಡೆ$_2$]

ನಿಷಾದಪತಿ(ನಾ). ಬೆಸ್ತರ ಒಡೆಯ,—ಮುಖಿಂಡ: ನಾವೆಯಿಂದಿಳಿದು ಬೀಳ್ಕೊಂಡು ಗುಹನಂ ನಿಷಾದಪತಿಯಂ . . . ತಾಂ ಮುಂತೆ ನಡೆಗೊಂಡಂ (ತ್ರಿರಾಮಾ. ೧೨೬–೫೧). [ನಿಷಾದ + ಪತಿ$_2$]

ನಿಷಾದಿ (ಗು). ೧. ಕುಳಿತುಕೊಂಡ; ಆಸೀನವಾದ. (ನಾ). ೨. ಕುಳಿತುಕೊಳ್ಳುವಿಕೆ; ಸ್ಥಿರವಾಗಿರುವಿಕೆ. ೩. ಆನೆಯನ್ನು ನಡೆಸುವವನು; ಮಾವಟಿಗ; ಮಾವುತ : "ನಿಷಾದೀ, ಗಜಾರೋಹಃ —ಈ ೩ ಆನೆಯನೇಱುವಾತಂ" (ಹಲಾಯು. ೬೫–೨೬೬); ವಿರೋಧಿಸಾಧನಘಟಾಳಿಯನೋಡಿಸಲಾಗಳಾರ್ದುಬಿಟ್ಟಕ್ಕಿದರುಗ್ರಸಿಂಧುರ ಘಟಾವಳಿಯಂ ಮುಳಿಸಿಂ ನಿಷಾದಿಗಳ್ (ಪಂಪಭಾ. ೧೦–೯೨); ಆಯಸಮುಣಮಲ್ತು ಪರರದನಿಯನಿಕ್ಕುವುದಂತುಮಾನೆಯೊಳ್ ಕಾದೆ ನಿಷಾದಿಯನುರುಳಿಚ್ಚು ಗಜಸ್ತ್ರಿಯತೆಯನಹಿತರ್ ಪೊಗಟೆ ಸೀರಹಸ್ತಂ ಮೆಜಕೆದಂ (ಶಾಂತಿಪು. ೪–೧೯); ಮೊಗವಡಮಂ ನಿಷಾದಿ [ಪಾಠಾಂ. ಬಿಸುಟ್ಟು] ಕಳೆದಂಕುಶದಿಂದಣೆದಾರ್ದು ನೂಂಕೆ ಗಾಳಿಗೆ ಗಜಂ ಮುಂದಿದಂತೆ ಪರಿದಾನೆಗಳಾನೆಗಳೊಳ್ ಕಡಂಗಿ . . . ಪೋರ್ದುವು (ಪಂಡಾನಾ. ೧೩–೬೪). [ಸಂ. ನಿಷಾದಿನ್]

ನಿಷಾದಿನಿ (ನಾ). [ಸಂಗೀತ] ಒಂದು ರಾಗದ ಹೆಸರು : ಧೈವತ ನಿಷಾದಿನಿ ಷಡ್ಜ ಕೇಸರಿ ಷಡ್ಜದಿವ್ಯವತಿ ಷಡ್ಜ ಮಾಧ್ಯಮವೆಂಬೈದು ರಾಗಂಗಳು ಷಡ್ಜ ಗ್ರಾಮದಿಂ ಪುಟ್ಟುವುವು (ವಿವೇಕ. ೨೪೯).

[ಸಂ. ನಿಷಾದಿನೀ]

ನಿಷಾದಿವ್ರಜ (ನಾ). ಮಾವಟಿಗರ ಸಮೂಹ; ಮಾವುತರ ಗುಂಪು : ವಿಸಟಂಬರ್ಬಾನೆಯಂ . . . ಕೂರಂಕುಸದಿಂದಂಗುಷ್ಠದಿಂ ಪಾರ್ಷ್ಣಿಯನಳವಡಿಸುತ್ತುಂ ನಿಷಾದಿವ್ರಜಂ ಬೆಕ್ಕಸಮುತ್ಪರ್ಷಂತು ಬಂಬಲ್ವರಿಯಿಸಿ ದೆಸೆಗೆಟ್ಟುಂ ಬಟುಳಕ್ಕುಯ್ದು ನೀರೂಡಿಸಿದಂ ಕಂಭಕ್ಕೆ ತಂದಂ ಮಗುಟಿ ಗಜಕಳಾಖಂಡಲಂ ಪದ್ಮನಾಭಂ (ಚಂದ್ರಪು. ೯–೯೫).

[ನಿಷಾದಿ + ವ್ರಜ]

ನಿಷಾನಿ 'ನಿಶಾನಿ' ನೋ.

ನಿಷಾನಿಖಲು (ನಾ). ಪಾಳೆಯಗಾರರ ಕಾಲದ ಒಂದು ಚಿನ್ನದ ನಾಣ್ಯ : ಇದಲ್ಲದೆ ಇನ್ನೂ ಇತರ ಬಂಗಾರದ ನಾಣ್ಯಗಳು ವಿಶೇಷವಾಗಿದ್ದವು. ಯಾವವೆಂದರೆ :— ೧. ಗಬರು . . . ೧. ನಿಷಾನಿಖಲು (ಚತ್ರಪಾ. ೧೦೪). [?]

ನಿಷಾವಸ್ತು (ನಾ). ಮತ್ತನ್ನು ಬರಿಸುವ ವಸ್ತು; ಮಾದಕ ಪದಾರ್ಥ : ಸಾರಾಯಿಯಲ್ಲಿ ಉದ್ರೇಕ ಬರುವಂತಹ ನಿಷಾವಸ್ತು ಹುಟ್ಟುವಂತೆ ಪಂಚಭೂತಗಳ ಸಂಯೋಗದಿಂದ ಚೈತನ್ಯ ಅಥವಾ ಜ್ಞಾನ ಹೊರಹೊಮ್ಮುವುದು (ಜೀವಾತ್ಮ. ೫೯). [ನಿಷಾ (<ನಶೆ) + ವಸ್ತು]

ನಿಷಿಕ್ತ (ಗು). ೧. ಎರಚಿದ; ಸಿಂಪಡಿಸಿದ; ಚಿಮುಕಿಸಿದ. (ನಾ). ೨. ಸಿಂಪಡಿಕೆ ಹೊಂದಿದವನು; ಸಿಂಚನವನ್ನು ಪಡೆದವನು : ಗುರುಪದಾಂಬುಜ ಸರಳಭಕ್ತಾ ಗುರುದಯಾಮೃತರಸನಿಷಿ [ಪಾಠಾಂ. ಯು]ಕ್ತಾ (ಒಸಪು. ೩೮–೩೮). [ಸಂ.]

ನಿಷಿದಿ 'ನಿಸಿದಿ' ನೋ.

ನಿಷಿದಿಗೆ 'ನಿಸಿದಿಗೆ' ನೋ.

ನಿಷಿದ್ದಿ 'ನಿಸಿದಿ' ನೋ.

ನಿಷಿದ್ಧ (ಗು). ೧. ನಿಷೇಧಿಸಿದ; ಬಹಿಷ್ಕೃತವಾದ; ಮಾಡಬಾರದ : ಮಾನವನ ಕಾಯಿಕ, ವಾಚಿಕ, ಮಾನಸಿಕ, ನಿತ್ಯ, ನೈಮಿತ್ತಿಕ, ಕಾಮ್ಯ, ನಿಷಿದ್ಧ, ವಿಹಿತ, ಕೃತಿಗಳೆಲ್ಲ 'ಕರ್ಮ' ಪದದಲ್ಲಿಯೇ ಆಡಕವಾಗುತ್ತವೆ (ಧರ್ಮಸಾ. ೧೩೦). 'ನಿಷಿದ್ಧಕರ್ಮ', 'ನಿಷಿದ್ಧ ಫಲ' ಪರಾ. (ನಾ). ೨. ಬಹಿಷ್ಕರಿಸಿದುದು; ಮಾಡಬಾರದುದು : ಅನಭ್ಯಸ್ತಶಸ್ತ್ರನೊಳ್ ಯುದ್ಧವಿತನಿಷಿದ್ಧಮುಂ (ಜಗವಿ. ೫–೬೧ ಪ); ನಿತ್ಯನೈಮಿತ್ತಿಕವ ಕಳೆದಾ ಪ್ರತ್ಯವಾಯಕೆ ಮಾಡಿ ಪ್ರಾಯಶ್ಚಿತ್ತವನು ಜಪತಪದಿ ಕಾಮ್ಯನಿಷಿದ್ಧಗಳ ಬಿಟ್ಟು . . . ಮೋಕ್ಷವರ್ಥಿಸುತ್ತಿಹ ಸಾಧುಗಳೆ ತತ್ತ್ವಾಧಿಕಾರಿಗಳು (ಅಸ್ಮತ. ೧–೩೧); ನಾಟಕ ಆಡುವುದಾಗಲಿ, ನೋಡುವುದಾಗಲಿ ನಿಷಿದ್ಧವೆಂದು ಅನೇಕರು ಭಾವಿಸಿದ್ದರು (ತ್ಸದ. ೫೪). [ಸಂ.]

ನಿಷಿದ್ಧಕರ್ಮ (ನಾ). ಧರ್ಮಬಾಹಿರವಾದ ಕರ್ಮ; ಧರ್ಮವಿರುದ್ಧವಾದ ಕಾರ್ಯ; ಮಾಡಬಾರದ ಕೆಲಸ : ವೇದೋಕ್ತ ಕರ್ಮಗಳನ್ನು ಕಾಮ್ಯಕರ್ಮ, ನಿಷಿದ್ಧಕರ್ಮ, ನಿತ್ಯಕರ್ಮ ಎಂದು ಮೂರು ತೆರನಾಗಿ ವಿಂಗಡಿಸಿದ್ದಾರೆ . . . ನಿಷಿದ್ಧಕರ್ಮಗಳನ್ನು ಮಾಡದಿರಬೇಕು (ಭಾರದ. ೧೭೯). [ನಿಷಿದ್ಧ + ಕರ್ಮ]

ನಿಷಿದ್ಧಕಾಲ (ನಾ). ನಿಷೇಧಿತವಾದ ಕಾಲ; ಸೂಕ್ತವಲ್ಲದ ಸಮಯ : ನಿಷಿದ್ಧಕಾಲ ವೈಧುನಾದಿ ಪ್ರಯುಕ್ತವಾದ ದೋಷವೇ ವೈಜಿಕದೋಷ (ಭಾರದ. ೫೫). [ನಿಷಿದ್ಧ + ಕಾಲ]

ನಿಷಿದ್ಧಗುರು (ನಾ). ಯೋಗ್ಯನಲ್ಲದ ಗುರು; ಶಿಷ್ಯರಿಗೆ ಕೆಟ್ಟ ಸಾಧನೆಯನ್ನು ಹೇಳಿಕೊಟ್ಟು ದುಃಖಕ್ಕೆ ಈಡು ಮಾಡುವ ಗುರು : ವಶ್ಯಾಕರ್ಷಣಾದಿಗಳಿಂ ಇಹಲೋಕದಲ್ಲಿ ಸುಖವಂ ಪರಲೋಕದಲ್ಲಿ ದುಃಖಂಗಳನೀವಾತನೇ ನಿಷಿದ್ಧಗುರು (ವಿವೇಕ. ೧೮೮).

[ನಿಷಿದ್ಧ + ಗುರು$_2$]

ನಿಷಿದ್ಧಗೊಳ್ (ಕ್ರಿ). ಬಹಿಷ್ಕಾರ ಹೊಂದು ; ತಿರಸ್ಕೃತವಾಗು : 'ನಿಷಿದ್ಧಗೊಳಿಸು' ಪರಾ. [ನಿಷಿದ್ಧ + ಕೊಳ್[1]]

ನಿಷಿದ್ಧಗೊಳಿಸು (ಕ್ರಿ). ಬಹಿಷ್ಕರಿಸು ; (ಕಾನೂನಿಗೆ) ವಿರುದ್ಧವೆಂದು ಸಾರು : ಅಸ್ಪೃಶ್ಯತೆಯನ್ನು ತೆಗೆದುಹಾಕಲಾಗಿದೆ ಮತ್ತು ಯಾವ ರೂಪದಲ್ಲೂ ಅದರ ಆಚರಣೆಯನ್ನು ನಿಷಿದ್ಧಗೊಳಿಸಲಾಗಿದೆ (ಭಾಷಾನ. ೯). [ನಿಷಿದ್ಧಗೊಳ್ + -ಇಸು[3]]

ನಿಷಿದ್ಧಪ್ರೇಮ (ನಾ). ಸಮಾಜದಲ್ಲಿ ನೀತಿವಿರುದ್ಧವಾದ ಪ್ರೇಮ; ನಿಯಮಬಾಹಿರವಾದ ಪ್ರೇಮ : ಈ ನಿಷಿದ್ಧಪ್ರೇಮದ ಸಹವಾಸದಿಂದ ದೂರಾಗುವುದಕ್ಕಾಗಿಯೇ, ನಾನು ಕೆಲವು ದಿವಸಗಳ ಮಟ್ಟಿಗೆ ದೂರದ ಪ್ರವಾಸ ಕೈಕೊಳ್ಳಲು ಸಿದ್ಧನಾದುದು (ಹೇಮಂತ. ೨೯೯). [ನಿಷಿದ್ಧ + ಪ್ರೇಮ]

ನಿಷಿದ್ಧಫಲ (ನಾ). ಬಹಿಷ್ಕರಿಸಿದ ಫಲ ; ಸೇವಿಸಬಾರದೆಂದು ವಿಧಿಸಿದ ಫಲ ; ℙ ಆದಮನೆಂಬ ಆದಿಮಾನವನು ತಿನ್ನಬಾರದೆಂದು ನಿಷೇಧಿತವಾಗಿದ್ದ ಹಣ್ಣನ್ನು ತಿಂದುದರಿಂದಲೇ ಕ್ಷುಪ್ತಿ ಪಾಸಾ ಮರಣಗಳಿಗೆ ಪಕ್ಕಾದನೆಂಬ ಸಂಗತಿಯು ಬೈಬಲ್ ಗ್ರಂಥದಲ್ಲಿ ಉಕ್ತವಾಗಿದೆ : ಆದಮನು ಬೇಡವೆಂದರೂ ತಿಂದು ಸ್ವರ್ಗದಿಂದ ತಳ್ಳಲ್ಪಟ್ಟು ಮರ್ತ್ಯಕ್ಕೆ ಬಂದ ನಿಷಿದ್ಧಫಲ(Forbidden fruit)ವೇ ಇದಾಗಿರಬಹುದಲ್ಲವೆ ? (ಶರಚ. ೬೩೫). [ನಿಷಿದ್ಧ + ಫಲ[1]]

ನಿಷಿದ್ಧವಾಕ್ಯ (ನಾ). ಇಂತಿಂತಹುದನ್ನು ಮಾಡಕೂಡದೆಂದು ವಿಧಿಸುವ ಮಾತು; ಬೇಡವೆಂದು ಹೇಳುವ ನಿಯಮ ; ℙ 'ಇಂಥದನ್ನು ಮಾಡು' ಎಂದು ಹೇಳುವ ವಾಕ್ಯ ವಿಧಿವಾಕ್ಯ. 'ಹೀಗೆ ಮಾಡಬೇಡ' ಎಂದು ತಿಳಿಸುವ ವಾಕ್ಯ ನಿಷಿದ್ಧವಾಕ್ಯ. ಹೀಗೆ ವೇದಗಳಲ್ಲಿ ಎರಡು ಬಗೆಯ ವಾಕ್ಯಗಳು ಕಂಡುಬರುತ್ತವೆ. ವೇದವಾಕ್ಯವಿಚಾರವೆಂತೆನೆಲಾದಿಯಲಿ ವಿಧಿವಾಕ್ಯವಾ ಬಳಿಕಾದುದೈಸೆ ನಿಷಿದ್ಧವಾಕ್ಯವು (ಗಗತಾ. ೨೨-೫). [ನಿಷಿದ್ಧ + ವಾಕ್ಯ]

ನಿಷಿದ್ಧಿ 'ನಿಸಿದಿ' ನೋ.

ನಿಷಿದ್ಧಿಕ್ರಿಯೆ (ನಾ). [ಜೈನ] ಸಮಾಧಿಯ ಬಳಿಯಲ್ಲಿ ಮಾಡಬೇಕಾದ ಕರ್ಮ : ಚಂದ್ರಗುಪ್ತಮುನಿಗಳು ವಿಶಾಖಾಚಾರ್ಯರ್ಗಿದಿರೆದ್ದು ವಂದಿಸಿ ಇವರು ಕಂದಮೂಲಫಲಾಹಾರಿಗಳು ಕ್ಷಾರದೊಳು ಚಾರಿತ್ರಂಗೆಟ್ಟಪ್ಪರೆಂದು ಪ್ರತಿವಂದನೆಗೆಯ್ದಿ ನಿಷಿದ್ಧಿಕ್ರಿಯೆಯಂ ಮಾಡಿ(ಕಗವಿ. ೯೮ ರಾಜಾವಳೀಕಥೆ). [ನಿಷಿದ್ಧಿ (<ನಿಸಿದಿ) + ಕ್ರಿಯೆ]

ನಿಷಿದ್ಧಿಸ್ಥಾನ (ನಾ). [ಜೈನ] ಸಮಾಧಿಯಾದ ಸ್ಥಳ; ಸಮಾಧಿ; ನಿಸಿದಿಗೆ : ಭಾಸ್ಕರನೆಂಬರಸಂ ಗುರುವಂದನಾರ್ಥ _ಬಲಸಹಿತಂ ಬಂದು ಭದ್ರಬಾಹುಸ್ವಾಮಿಗಳ ನಿಷಿದ್ಧಿಸ್ಥಾನಮಂ ಪೂಜಿಸಿ (ಕಗವಿ. ೯೯ ರಾಜಾವಳೀ.) [ನಿಷಿದ್ಧಿ (<ನಿಸಿದಿ) + ಸ್ಥಾನ]

ನಿಷಿಧಿ 'ನಿಸಿದಿ' ನೋ.

ನಿಷಿಧಿಗೆ 'ನಿಸಿದಿಗೆ' ನೋ.

ನಿಷೀಧಿ 'ನಿಸಿದಿ' ನೋ.

ನಿಷೂದನ (ನಾ). ೧. ಕೊಲ್ಲುವಿಕೆ ; ಕೊಲೆ : "ಪ್ರಮಾಪಣಂ, ನಿಬರ್ಹಣಂ . . . ನಿಷೂದನಂ, ನಿಹಿಂಸನಂ, ನಿರ್ವಾಪಣಂ . . . ಉನ್ಮಂಥಃ, ವಧಃ—ಈ ೩೦ ಕೊಲ್ಲುವುದಕ್ಕೆ ಹೆಸರುಗಳು, ಸಂಹಾರ ಮಾಡುವಿಕೆ . . . ಸಾಯುಗೊಳಿಸುವಿಕೆ" (ಸಿದ್ಧಾಂತಿ. ೨೬೭); ದುರ್ವಿನೀತ ದುಷ್ಟಮಧುಕರಗಳು ಹಿಂಡುಗಟ್ಟಿ ಅಂಡಲೆವ ಈ ನಾಡಿನಲ್ಲಿ . . . ಅಕಸ್ಮಾತ್ತಾಗಿ ಹೊರಬಿದ್ದಾಗ ಸಟ್ಟದನಿಷೂದನ ಮಾಡುವ ದುಷ್ಕಂತ ಎಂತಹೆ ನಳಕೂಬರನೋ ಯಃರು ಬಲ್ಲರು ? (ಗಾಶಾ. ೨೧೧). ೨. ಕೊಲ್ಲುವವನು ; ನಾಶಮಾಡುವವನು. [ಸಂ.]

ನಿಷೇಕ (ನಾ). ೧. ಸುರಿಯುವಿಕೆ. ೨. ಸಿಂಪಡಿಸುವಿಕೆ : ಚೆಮು ಕಿಸುವಿಕೆ : ದುತ್ತಮಲ್ಲಿ . . . ವನದೇವತಾನಯನಾಂಶುತ್ತೀರರಸ ನಿಷೇಕದಿಂ ಮುಕ್ಕುಳಿಸದ ವಕುಳವಿಲ್ಲ (ಪುಷ್ಪಪು. ೯-೨೧ ಸ). ೩. ಫಲ ಪೋಷನ ; ಪೈಸ್ತ ; ಗರ್ಭಾಧಾನ : ಪುಣ್ಯಕರವೂ ವೇದೋಕ್ತವೂ ಆದ ನಿಷೇಕಾದಿ ಸಂಸ್ಕಾರಗಳು ಮಾನವನ ಇಹಪರ ಸುಖಸಾಧನೆಗೆ ಅತ್ಯಾವಶ್ಯಕ (ಭಾರದ. ೫೫) ; ಈಗ ಮದುವೆಯಾದರೂ ಬೀನಿಯ ಬಿ.ಎಸ್ಸಿ. ಆಗುವವರೆಗೆ ನಿಷೇಕಮಾಡುವುದು ಬೇಡವೆಂದು ಶ್ರೋತ್ರಿಯರೂ ಹೇಳಿದರು (ಸಂಶಪ್ರ. ೪೮೫) ; ಆ ನಲ ಗೌರಿಹಬ್ಬಕ್ಕೆ ಹೋದಾಗ ನಿಷೇಕವನ್ನು ಮಾಡಿಕೊಟ್ಟರು (ಮೂರಸ. ೬೪).. ೪. (ಆಲಂ) ಸಾವು ; ಅಳಿವು ; ಅಂತ್ಯ ; ನಾಶ : ವನಿತಾಹೇತುವೆ ಕೇತುವಾಯ್ತು ನಿಮಗಂ ಗಾಂಧರ್ವರಿಂದಿಂದು ನಿಮ್ಮ ನಿಷೇಕಂ ನೆಜಿದತ್ತು ಸತ್ತಿರೆನುತುಂ ಪೊಕ್ಕಾರ್ದುರ್ . . . ಪೊಯ್ದುನಿಸುಂ ಮಾಣದೆ ನೀಚಕೀಚಕನಿಕಾಯ ಧ್ವಂಸನಂ ಮಾಡಿದಂ (ಪಂಪಭಾ. ೮-೮೦); "ತಕ್ಕ ಶಾಸ್ತಿಯು ಅಥವಾ ಶಿಕ್ಷೆಯು" (ಪಂಪವಿ. ೨೯೨) ; ಇತ್ತ ನಿಷೇಕಮಾಗೆ ಗುರುಗತ್ತಭಿಷೇಕ ವಿಭೂತಿಗೊಂದುಗುಂ ತತ್ತ ಸಯಂಕ್ಕೊಳ್ ಮೃತಕತೂರ್ಯಮೆ ಮಂಗಳ ತೂರ್ಯಮಂಕ್ಕುಮಾಸತ್ತವರೆತ್ತ ನೀರಿಬಾವರೆತ್ತ ಜನಂ ನೆರದಿಂದೆಯಾಡಿ ಪಾಡುತ್ತಿರೆದಿರ್ಪರಿಂತು ಮೃತರಾಜವಿಡಂಬಮನೇಕೆ ಕಾಣ್ಬೆರೇ (ಅಜಪು. ೨-೧೦೫) ; ತವೆ ಕೈಲಂ ದೀಪಂ ನಂದುವಂತೆ ಗಟುಯಿಸೆ ನಿಷೇಕಮಟು ವರ್ಮುನ್ನಂ ಪವನಪ್ರಹಾರದಿಂ ಕೈಲವುಕ್ಕೊಡಂ ನಂದುವಂತೆ ಪೊಂದುವರೀಗಳ್ (ಪಂಬಾಪು. ೧-೮೨) ; "ಆಯುಃನ್ಸು" (ಪಂಬಾಪು. ಕೋಶ) ; ನೆಜಿದುದು ನಿನ್ನ ನಿಷೇಕಂ ನೆಜಿಗೊಳ್ಳದೆ ಮಾಣದೆನ್ನ ಬಾಣಾವಳಿಗಳ್ ಗಜು ಸೋಂಕದೆ ಪೋಗೆನುತುಂ ಗಜು ಗಜುಯಂ ಸೋಂಕಿ ಪರಿಯೆ ಲಕ್ಷ್ಮಣನೆಚ್ಚಂ (ಪಂಬಾಪು. ೧೪-೧೫೫). 'ನಿಸೇಕ' ಪರಾ. [ಸಂ.]

ನಿಷೇಕಪ್ರಸ್ತ (ನಾ). = ನಿಷೇಕ ೩ : ಬಂದು ಶುಭಮುಹೂರ್ತದಲ್ಲಿ ನಿಷೇಕಪ್ರಸ್ತ ಮಾಡಿ ಕಳಿಸಿಕೊಟ್ಟರು (ಬೆಂದಜೀ. ೪೨) ; ನಿಷೇಕಪ್ರಸ್ತವಾದುದೂ ಇದೇ ಮನೆಯಲ್ಲಿ (ಜಾಳಗಿ. ೫೦). [ನಿಷೇಕ + ಪ್ರಸ್ತ]

ನಿಷೇಧ (ನಾ). ೧. ನಿರಾಕರಣೆ ; ಅಲ್ಲಗಳೆಯುವಿಕೆ ; ಇಲ್ಲವೆಂದು ಹೇಳುವಿಕೆ : ಗಗನಕುಸುಮಮನಸ್ಕಾಂತಾಭಾವಮಂ ನಿಷೇಧಮಾತ್ರದಿಂದಮುಂಟುಮಾಡಲಕ್ಕುಮೆ (ಶಾಂತಿಪು. ೮-೧೩೮ ಪ). ೨. ಕೂಡದು ಎಂಬ ನಿಯಮ ; ನಿಷಿದ್ಧವಾದುದು : ಪುರುಷತ್ರಯದೊಳ್ ದತ್ತ ನಿಷೇಧಂ (ಶಪು. ೨೪೫) ; ವಿಧಿ ನಿಷೇಧವು ನಿನ್ನವರಿಗೆಂತೊ ಹರಿಯೇ ವಿಧಿ ನಿನ್ನ ಸ್ಮರಣೆಯು ನಿಷೇಧವಿಸ್ಮೃತಿಯೆಂಬ ವಿಧಿಯನೊಂದನೆ ಬಲ್ಲರಲ್ಲದೇ ಮತ್ತೊಂದು (ಪುರಂದ. ಧಾ. ೧-೧೪೦ ಸಪ್ಪಲಿ) ; ಮುನ್ನಮೊಂದರ್ಥಮಂ ಪೇಳ್ದ ಬಳಿಕ್ಕೆ ವಿಚಾರಿಸಿ ಅಂತಲ್ಲ ದೊಡಂ ಕೊರತೆಯಿಲ್ಲೆಂದು ನಿಷೇಧಮಂ ಗೆಯ್ಕೆ ಆಕ್ಷೇಪಮೆನಿಪುದು (ನಡಚ. ೧೫೬ ಸ್ವತ್ತಿ) ; ನಿಷೇಧ (Taboo) ಗಳು ಆಸುರವನ್ನು ಕೆರಳಿಸುತ್ತವೆ (ಬಾಲಸ್ರ. III, ೧೨೫೫). ೩. (ವೇದ, ಸ್ಮೃತಿ ಮುಂತಾದುವುಗಳಲ್ಲಿ) ಮಾಡಬಾರದೆಂದು ಹೇಳಿರುವ ಕರ್ಮ : ವಿಧಿ ನಿಷೇಧಗಳೆರಡು ಮರಿಯದೆ ಮಧುನಿರೋಧಿಯ ಪಾದಕರ್ಪಸು (ಹಸಾರ. ೧೪-೩೧) ; ನಿಷೇಧವೆಂದರೆ ಶಾಸ್ತ್ರದಲ್ಲಿ ಮಾಡಬಾರದೆಂದು ಹೇಳಿರುವ ಕರ್ಮಗಳು (ಹಸಾರ. ೧೪-೩೧ ಶಾತ್ಪರ್ಯ); ವಚನಗಳನ್ನು ವಿಧಿ ನಿಷೇಧ ಅರ್ಥವಾದಗಳೆಂದೂ . . . ವಿಂಗಡಿಸಿಕೊಂಡು ನಡೆಯಬೇಕು (ಅರ್ಥಧ. ೩೪) ; ವೈದಿಕಜ್ಞಾನವು ವಿಧಿ, ನಿಷೇಧ, ಮಂತ್ರ, ನಾಮಧೇಯ, ಅರ್ಥವಾದವೆಂದು ವಿಭಜಿತವಾಗಿದೆ (ಭಾರದ. ೧೫೯). ೪. [ವ್ಯಾಕ]ಧಾತುವಿನ ಒಂದು ರೂಪ ; ಕ್ರಿಯೆ ನಡೆಯದೆ ಇರುವುದನ್ನು ಸೂಚಿಸುವ ರೂಪ : ವಿಧಿ, ನಿಷೇಧ, ಸಂಭಾವನೆ—ಇವು ಒಂದು ಕ್ರಿಯೆಯ

ವಿಷಯದಲ್ಲಿ ಮಾತಾಡುವಾತನ ಅಭಿಪ್ರಾಯವೇನು ಎಂಬುದನ್ನು ತಿಳಿಸುತ್ತವೆ (ಮಧ್ಯಮ. ೭೩); ನಿಷೇಧವೆಂಬುದು ದ್ರಾವಿಡಭಾಷೆಗಳಲ್ಲಿ ಒಂದು ವ್ಯವಸ್ಥಿತವಾದ ಕ್ರಿಯಾರೂಪವೆಂದು . . . ತೀರ್ಮಾನಿಸಬಹುದು (ದ್ರಾವಿವಿ. ೨೯೮). 'ನಿಷೇಧರೂಪ', 'ನಿಷೇಧಾರ್ಥ' ಪರಾ.

ನಿಷೇಧ ಮಾಡು = ನಿಷೇಧಿಸು : ಕವಿಯು 'ಸಮಾಗಮದ' ಎಂದರೆ ಕಲ್ಪಿತವಸ್ತುವಿನ ನಿಷೇಧ ಮಾಡುವುದನ್ನು 'ನಿಷೇಧಾಭಾಸ'ವೆಂದೇಕೆ ಭಾವಿಸಬಾರದು ? (ಧ್ವನ್ಯಾಲೋ. ೩೧ ಅಡಿಟಿ). [ಸಂ.]

ನಿಷೇಧಕ (ಗು). ಪ್ರತಿರೋಧಿಸುವ; ಅಡ್ಡಿಪಡಿಸುವ; ತಡೆಯುವ; ಬಹಿಷ್ಕರಿಸುವ : "ನಿಷೇಧಕ, ಪ್ರತಿಬಂಧಕ" (Prohibitory. ಪತ್ರಿನಿ. ೬೫). 'ನಿಷೇಧಕಗುರು' ಪರಾ. [ಸಂ.]

ನಿಷೇಧಕಗುರು (ನಾ). = ನಿಷಿದ್ಧಗುರು : ಆಕರ್ಷಣ ವಶ್ಯಾದಿಗಳಿಂದಿಹ ಸುಖವ ಮೇಲೆ ಶೋಕವನೈದಿಸುವವನೆ ನಿಷೇಧಕಗುರುವಹನು (ಕೈವಲ್ಯ. ೫೬-೧-೧). [ನಿಷೇಧಕ + ಗುರು$_2$]

ನಿಷೇಧಕ್ರಿಯೆ (ನಾ). [ವ್ಯಾಕ] ಕ್ರಿಯೆ ನಡೆಯದುದನ್ನು ಸೂಚಿಸುವ ಕ್ರಿಯಾಪದ; ನಿಷೇಧಾರ್ಥಕ ಕ್ರಿಯಾಪದ : ಈ ಅಭಿಪ್ರಾಯದ ಪ್ರಕಾರವಾಗಿ ನಿಷೇಧಾರ್ಥ ಸೂಚಕವಾದ ಪ್ರತ್ಯಯವಾವುದೂ ಸೇರದೆಯೇ ನಿಷೇಧಕ್ರಿಯೆಯಾಗುತ್ತದೆ (ಕೈಪಿಡಿ. ೪೮); ಧಾತುವಿನ ಮೂಲರೂಪವನ್ನು ತಿಳಿದುಕೊಳ್ಳಲು ಈ 'ನಿಷೇಧಕ್ರಿಯೆ'ಯನ್ನು ಹುಡುಕುವುದಕ್ಕಿಂತ, 'ವಿಧ್ಯರ್ಥ'ವನ್ನು ಗಮನಿಸುವುದು ಹೆಚ್ಚು ಸುಲಭವೆಂದು ಕಾಣುತ್ತದೆ (ಭಾಷಾಶಾ. ೨೬೯). [ನಿಷೇಧ + ಕ್ರಿಯೆ]

ನಿಷೇಧನ್ಯೂನ (ನಾ). [ವ್ಯಾಕ] "ಒಂದು ಕ್ರಿಯೆಯ ನಿಷೇಧವನ್ನು ತಿಳಿಸಿ, ಅರ್ಥಪೂರ್ತಿಗಾಗಿ ಬೇರೊಂದು ಕ್ರಿಯೆಯ ಸಹಾಯವನ್ನು ಅಪೇಕ್ಷಿಸುವ ಕ್ರಿಯಾರೂಪಕ್ಕೆ ನಿಷೇಧನ್ಯೂನರೂಪವೆಂದು ಹೆಸರು . . . ಉದಾಹರಣೆ :— ನನಗೆ ತಿಳಿಸದೆ ನಳಮಹಾರಾಜನು ಎಲ್ಲಿಗೆ ಹೋದನು ?" (ಮಧ್ಯಮ. ೧೦೩).

[ನಿಷೇಧ + ನ್ಯೂನ]

ನಿಷೇಧಮಾರ್ಗ (ನಾ). [ತತ್ತ್ವಶಾ] (ಪ್ರಪಂಚವು) ಇಲ್ಲ ಎಂದು ಹೇಳುವ ಮಾರ್ಗ : ಬ್ರಹ್ಮನ ಇರುವಿಕೆಯಿಂದಲೇ ಪ್ರಪಂಚಕ್ಕೆ ಇರುವಿಕೆಯಾದುದರಿಂದ ಪ್ರಪಂಚವಿಲ್ಲವೆಂದು ನಿಷೇಧಮಾರ್ಗವು (ಹಿಂದಸಾ. ೨೩೫). [ನಿಷೇಧ + ಮಾರ್ಗ]

ನಿಷೇಧರೂಪ (ನಾ). ೧. ನಕಾರಾತ್ಮಕವಾದ ರೂಪ ; ನಿಷೇಧವನ್ನು ಸೂಚಿಸುವ ರೂಪ : "ಆಕ್ಷೇಪ"ವೆಂಬ ಅಲಂಕಾರದಲ್ಲಿಯೂ . . . ವಿಶೇಷವನ್ನು ಸೂಚಿಸುವ ಇಚ್ಛೆಯಿಂದಲೇ ನಿಷೇಧರೂಪವಾದ ಅಂಶವು ಶಬ್ದತಃ ಹೇಳಲ್ಪಟ್ಟಿರುತ್ತದೆ (ಧ್ವನ್ಯಾಲೋ. ೩೦). ೨. [ತತ್ತ್ವಶಾ] ಆತ್ಮನ ಸ್ವರೂಪವನ್ನು ಇದಲ್ಲ, ಇದಲ್ಲ ಎಂಬ ನೇತಿ ಮಾರ್ಗದ ಮೂಲಕ ನಿರೂಪಿಸುವಿಕೆ : ಆತ್ಮಸ್ವರೂಪವನ್ನು ಶ್ರುತಿಗಳೂ ಗುರುಗಳೂ ಹೇಗೆ ಉಪದೇಶಿಸುವರು ಎಂದರೆ ದೇಹೇಂದ್ರಿಯಾದಿಗಳನ್ನೂ ಆತ್ಮನನ್ನೂ ಒಂದೆಂದು ಭ್ರಮಿಸಿರುವವರಿಗೆ ದೇಹವೂ ಆತ್ಮಸ್ವರೂಪವಲ್ಲ, ಇಂದ್ರಿಯಗಳೂ ಆತ್ಮಸ್ವರೂಪವಲ್ಲ ಎಂದು ಪರಿಶುದ್ಧಾತ್ಮಸ್ವರೂಪವನ್ನು ನಿಷೇಧರೂಪದಿಂದ ತಿಳಿಯಪಡಿಸುತ್ತಾರೆ (ಹಿಂದಸಾ. ೧೬೧). ೩. = ನಿಷೇಧ ೪ : ಧಾತುಗಳ ಆದಿ ಇಕಾರ ಉಕಾರ ವಿಕಾರಂ, ತರ್, ಬರ್ ಧಾತುಗಳ ನಿಷೇಧರೂಪವಿಚಾರಂ (ಶಮದ. ಮ. ೨೪೯ ವಿವರಣೆ); ಕ್ರಿಯಾನಿಷೇಧ ತೋರುವಾಗ ನಿಷೇಧರೂಪವಾಗುವುದು (ಕೈಪಿಡಿ. ೪೯.) [ನಿಷೇಧ + ರೂಪ]

ನಿಷೇಧರೂಪಪರಿವರ್ತನೆ (ನಾ). [ತರ್ಕಶಾ] ವಿಧಿರೂಪವನ್ನು ನಿಷೇಧಾರ್ಥಕವಾಗಿ ಪರಿವರ್ತಿಸುವಿಕೆ : ವಿಧಿರೂಪದಲ್ಲಿದ್ದರೂ ವಿರುದ್ಧಾರ್ಥವನ್ನು ಸೂಚಿಸುವಿಕೆ : "(ತರ್ಕ) ಒಂದು ತೆರದ ಪರಿವರ್ತನೆ ; ನಿಷೇಧರೂಪಪರಿವರ್ತನೆ" (Contraposition. ಇಂಕನಿ).

[ನಿಷೇಧರೂಪ + ಪರಿವರ್ತನೆ]

ನಿಷೇಧವಚನ (ನಾ). ಅಲ್ಲ ಅಥವಾ ಇಲ್ಲ ಎಂದು ಹೇಳುವ ಮಾತು : ಮತ್ತಮೆತ್ತಾನುಮುಳ್ಳುದನಲ್ಲದಿಲ್ಲೆನಲ್ಬಾರದು ಎಂಬ ನಿಷೇಧವಚನಮನೆ ಪಿಡಿದು ಜೀವಸಿದ್ಧಿಗೆಯ್ವೊಡೆ (ಶಾಂತಿಪು. ೮-೧೩೮ ಪ).

[ನಿಷೇಧ + ವಚನ]

ನಿಷೇಧವ್ರಾತ (ನಾ). ಮಾಡಬಾರದ ಕಾರ್ಯಗಳ ಸಮುದಾಯ: ಜನನೀಗರ್ಭಾಂಡದಿಂ ಬರ್ಪತಿವಿಷಮತರ ಕ್ಲೇಶಮಂ ಬಾಲ್ಯದೊಳ್ ಮಾಳ್ಪ ನಿಷೇಧವ್ರಾತಮಂ . . . ಸಾವ ನಿರೋಧ ಸ್ತೋಮಮಂ ಕಂಡಲಸಿದೆನದಿರ್ದೆಂ ಪೇಸಿದೆಂ (ರಕ್ಷಾಶ. ೪೨). [ನಿಷೇಧ + ವ್ರಾತ]

ನಿಷೇಧಶ್ರುತಿ (ನಾ). [ಅದ್ವೈತ] ಜೀವ ಹಾಗೂ ಬ್ರಹ್ಮರಲ್ಲಿ ಅಭೇದವನ್ನು ನಿರೂಪಿಸುವ ವೇದವಾಕ್ಯ ; ಜೀವಾತ್ಮ ಪರಮಾತ್ಮರಿಗೆ ಭೇದವಿಲ್ಲವೆಂದು ಹೇಳುವ ಶ್ರುತಿ; ಅಭೇದಶ್ರುತಿ: ನಿಷೇಧಶ್ರುತಿ ಪರಮಾರ್ಥದಶೆಯನ್ನುಪದೇಶಿಸುವುದೆಂದು ನಿರ್ಣಯ (ಹಿಂದಸಾ. ೨೨೩). [ನಿಷೇಧ + ಶ್ರುತಿ]

ನಿಷೇಧಾಜ್ಞೆ (ನಾ). ಪ್ರತಿಬಂಧಕಾಜ್ಞೆ ; ಮಾಡಬಾರದೆಂಬ ಅಪ್ಪಣೆ ; ಅಡ್ಡಿ ; ತಡೆ : "ನಿರೋಧ, ನಿಷೇಧ, ತಡೆ, ನಿಷೇಧಾಜ್ಞೆ : ಪ್ರತಿಬಂಧಕಾಜ್ಞೆ" (Prohibition. ಇಂಕನಿ); ಭಾರತ ಸರ್ಕಾರ . . . ಭಾರತದ ಪತ್ರಿಕೆಗಳ ಮೇಲೆ, ಬಿಗಿಯಾದ ಮತ್ತು ಭೀತಿ ಹುಟ್ಟಿಸುವ ನಿಷೇಧಾಜ್ಞೆಯನ್ನು ಜಾರಿ ಮಾಡಿತು (ಕವಿಕೋ. I, ೧೬೬).

[ನಿಷೇಧ + ಆಜ್ಞೆ]

ನಿಷೇಧಾತ್ಮಕ (ನಾ). ನಿಷೇಧದಿಂದ ಕೂಡಿದುದು ; ಅಲ್ಲ, ಇಲ್ಲ ಎಂದು ಹೇಳುವುದು ; ನಕಾರವನ್ನು ಸೂಚಿಸುವುದು : ಇಂತಹ ನಿಷೇಧಾತ್ಮಕವಾದ ಯುಕ್ತಿಯು ಯುಕ್ತಿಯಲ್ಲ (ಜೀವಾತ್ಮ. ೯೪).

[ಸಂ.]

ನಿಷೇಧಾಧಿಕಾರ (ನಾ). ನಿಷೇಧಿಸುವ ಅಧಿಕಾರ ; ಪ್ರತಿಬಂಧಿಸುವ ಅಧಿಕಾರ ; ತಡೆ ಮಾಡುವ ಹಕ್ಕು : "ನಿಷೇಧ ; ನಿರೋಧ ; ವೀಟೋ (ಪಾರಿ) ನಿಷೇಧಾಧಿಕಾರ" (Veto. ಪತ್ರಿನಿ. ೮೬).

[ನಿಷೇಧ + ಅಧಿಕಾರ]

ನಿಷೇಧಾಭಾಸ (ನಾ). [ಕಾವ್ಯಮೀ] ಆಕ್ಷೇಪಾಲಂಕಾರದಲ್ಲಿ ಒಂದು ಬಗೆ ; ಮೇಲುನೋಟಕ್ಕೆ ಮಾತ್ರ ನಿಷೇಧಾತ್ಮಕವಾಗಿ ತೋರುವಿಕೆ ; ವಿಮರ್ಶೆ ಮಾಡಿ ನೋಡಿದಾಗ ನಿಷೇಧವಿಲ್ಲದಿರುವಿಕೆ : ಆವ ನಿಷೇಧಂ ತಾಂ ಅವಾಸ್ತವಮಾಗುವುದರಿಂ ಪೆರತೊಂದರ್ಥದೊಳ್ಪರ್ಯವಸಾನಮಂ ಪಡೆದು, ಒಂದಾದರ್ಥವಿಶೇಷಮಂ ಆಕ್ಷೇಪಗತಿಯಿಂ ತೋರಿಸುವುದೋ ಆ ನಿಷೇಧಾಭಾಸಮೇ ಆಕ್ಷೇಪಮೆಂದು ಕೆಲಂಬರೆ ಮತಂ (ನರಚ. ೧೩೫ ವೃತ್ತಿ); 'ವ್ಯಂಗ್ಯಾರ್ಥ'ವನ್ನು ಮನಸ್ಸಿನಲ್ಲಿಟ್ಟುಕೊಂಡು, ಅದರ ಪ್ರಕಟನೆಗೆ ನಿಷೇಧಾಭಾಸರೂಪವಾದ ವಾಕ್ಯವನ್ನು ಆಶ್ರಯಿಸುವುದು ಭಾಮಹ ಸಮ್ಮತವಾದ 'ಆಕ್ಷೇಪ' (ಧ್ವನ್ಯಾಲೋ. ೩೧ ಅಡಿಟಿ). [ನಿಷೇಧ + ಆಭಾಸ]

ನಿಷೇಧಾರ್ಥ (ನಾ). [ವ್ಯಾಕ] ಒಂದು ಕ್ರಿಯೆ ನಡೆಯದುದನ್ನು ಸೂಚಿಸುವ ಅರ್ಥ : ಈ ಅಭಿಪ್ರಾಯದ ಪ್ರಕಾರವಾಗಿ ನಿಷೇಧಾರ್ಥ ಸೂಚಕವಾದ ಪ್ರತ್ಯಯವಾವುದೂ ಸೇರದೆಯೇ ನಿಷೇಧಕ್ರಿಯೆಯಾಗುತ್ತದೆ (ಕೈಪಿಡಿ. ೪೮); ಹೊರಡು, ಹೊರಡನು, ಹೊರಟಾನು ಎಂಬ ರೂಪಗಳು ಕ್ರಮವಾಗಿ ವಿಧ್ಯರ್ಥನಿಷೇಧಾರ್ಥಸಂಭಾವನಾರ್ಥಗಳಿಗೆ ಸೇರಿದುವು (ಮಧ್ಯಮ. ೭೩). [ನಿಷೇಧ + ಅರ್ಥ]

ನಿಷೇಧಾರ್ಥಕ (ಗು). ೧. [ವ್ಯಾಕ] ಒಂದು ಕ್ರಿಯೆ ನಡೆಯದುದನ್ನು ಸೂಚಿಸುವ : ಅ ಎಂಬ ನಿಷೇಧಾರ್ಥಕ ಪ್ರತ್ಯಯವು ಧಾತುವಿಗೆ ಸೇರಿ ಅದರ ಮುಂದೆ ಬರುವ ಪುರುಷವಾಚಕ ಆಖ್ಯಾತಪ್ರತ್ಯಯದ ಸ್ವರ ದೊಡನೆ ಬೆರೆತುಹೋಗುವುದೆಂಬುದು ಇನ್ನೊಂದು ಮತ (ಕೃಪಿಡಿ. ೪೮). (ನಾ). ೨. ಒಂದು ಕ್ರಿಯೆ ನಡೆಯದುದನ್ನು ಸೂಚಿಸುವುದು : ಕ್ರಿಯಾಪದಗಳನ್ನು ಸಾಮಾನ್ಯಾರ್ಥಕ, ವಿಧ್ಯರ್ಥಕ, ನಿಷೇಧಾರ್ಥಕ ಎಂದು ಮೂರು ಪಂಗಡಗಳಾಗಿ ವಿಭಾಗಿಸಬಹುದು (ಕೃಪಿಡಿ. ೪೩). [ಸಂ.]

ನಿಷೇಧಿತ (ನಾ). ಬಹಿಷ್ಕೃತವಾದುದು ; ತಿರಸ್ಕೃತವಾದುದು : ಕಡಲೆ . . . ವಿಜ್ಞಾನೇಶ್ವರನ (ಸು.ಕ್ರಿ.ಶ. ೧೧೦೦) ಪ್ರಕಾರ ಈ ಧಾನ್ಯ ಸ್ಮೃತಿಶಾಸ್ತ್ರಗಳಲ್ಲಿ ನಿಷೇಧಿತವಾಗಿದೆ (ಶಾಸಗಿ. ೨೧). [ಸಂ.]

ನಿಷೇಧಿಸು (ಕ್ರಿ). ತಡೆ : ಅಡ್ಡಿಪಡಿಸು : ಬಹಿಷ್ಕರಿಸು : ಅಚೇತನನ ಅಸರ್ವಜ್ಞನೆಂಬಿದು ಮೊದಲಾದ ಧರ್ಮಮಂ ನಿಷೇಧಿಸುವೆಂಬತ್ತೆಂಟು ಭೇದಮುಳ್ಳ ಸೂತ್ರಮುಂ (ತಾಸ್ತ್ರಟೀ. ೧೦೭-೧) : ತಂತಮ್ಮ ಬಂಧುಗಳಿಗಂತ್ಯಸಂಸ್ಕಾರಮಂ ಬಿಡಿಬಿಡಿಯೆ ಮಾಳ್ಪುದಂ ನಿಷೇಧಿಸಿದೆ ರಾಜಾಜ್ಞೆ (ತ್ರೀರಾಮಾ. ೬೯೯-೪೫); ಅಭೇದಶ್ರುತಿಗಳು ಭೇದವನ್ನು ನಿಷೇಧಿಸುತ್ತವೆ (ಹಿಂದಸಾ. ೨೨೩). [ನಿಷೇಧ + -ಇಸ್ಸು]

ನಿಷೇಧ್ಯ (ಗು). ೧. ನಿಷೇಧಿಸ ಬೇಕಾದ ; ಬಹಿಷ್ಕರಿಸಬೇಕಾದ : 'ನಿಷೇಧ್ಯಾಂಶ' ಪರಾ. (ನಾ). ೨. ನಿಷೇಧಿಸಬೇಕಾದುದು ; ಪ್ರತಿರೋಧಿಸಬೇಕಾದುದು; ಬಹಿಷ್ಕರಿಸಬೇಕಾದುದು : ನಿಷೇಧ್ಯವನ್ನು ತಿಳಿಯಿಸುವುದಕ್ಕಾಗಿ ಭೇದಶ್ರುತಿಗಳು ವ್ಯವಹಾರವಿಚಾರಪರವು (ಹಿಂದಸಾ. ೨೨೩). [ಸಂ.]

ನಿಷೇಧ್ಯಾಂಶ (ನಾ). ನಿಷೇಧಿಸಬೇಕಾದ ಅಂಶ ; ಬಹಿಷ್ಕರಿಸಬೇಕಾದ ವಿಚಾರ : ನಿಷೇಧಕ್ಕೆ ಪ್ರಸಕ್ತಿ ಬೇಕು ಎಂದರೆ ನಿಷೇಧ್ಯಾಂಶವು ತಿಳಿದಿರಬೇಕು (ಹಿಂದಸಾ. ೨೨೩). [ನಿಷೇಧ್ಯ + ಅಂಶ]

ನಿಷೇವಕ (ನಾ). ಆರಾಧಿಸುವವನು ; ಆರಾಧಕ : ಜೀವನ್ಮುಕ್ತಂ ಸಕಲಗುಣಾವಹ ವಿಶ್ವಾವಬೋಧ ಪರಮಾನಂದಂ ಪಾವನನಿಜಪದಪದ್ಮ ನಿಷೇವಕ ರಕ್ಷೈಕದಕ್ಷನಕ್ಷಯನರ್ಹಂ (ಉಸಾರ. ೩೮೫) ; ಆ ವಿದುರನಾದಂಪತಿಗಳನುಭಾವವನು ತದ್ಯೋಗನಿಷ್ಠೆಯ ಜೀವನಿರ್ಮೋಕ್ಷವನು ಕಾಣುತ ಹರುಷ ಶೋಕವನು ಲಾವಣಿಗೆಗೊಂಡಿರದೆ ತೀರ್ಥನಿಷೇವಕನು ತಾನಾಗಿ ಹೋದಪನು (ನಿಭಾಗ. ೧-೯-೪೩). [ಸಂ.]

ನಿಷೇವಣ (ನಾ). ೧. ಸೇವೆ ; ಪರಿಚರ್ಯೆ. ೨. ಪೂಜೆ ; ಅರ್ಚನೆ; ಆರಾಧನೆ. ೩. ಉಪಯೋಗಿಸುವುದು; ಸೇವಿಸುವುದು: ಮದೀಯರ ಪಾದಾಬ್ಜ ಪಯೋನಿಷೇವಣದಿನಸ್ಮತ್ಕೀರ್ತನಂಗೆಯ್ಯಲಾಂ ಪರವಶ್ಯತ್ವಮನೆಯ್ದಿದೆಂ (ಯಾದಚಂ. ೧೨-೪೨) ; ಲಲಿತಚಿಂತಾಮಣಿಯ ಮಾತ್ರೆಯ ಫಲವು ಪದ್ಯನಿಷೇವಣದೊಳುಜ್ವಲಿಸುವದದೀಶಮಸುಖಂ ದೊರಕುವುದು ಅದರಿಂದ (ವಿವೇಭ. ೧೧-೩೦). [ಸಂ.]

ನಿಷೇವಣೀಯ (ನಾ). ಪೂಜೆಯನ್ನು ಹೊಂದುವವನು; ಆರಾಧನೆಯನ್ನು ಪಡೆಯುವವನು : ತದ್ದೇವಂ ದೇವನಿಷೇವಣೀಯನಣಿ ಮಾದ್ಯೈಶ್ವರ್ಯಯುಕ್ತರ ತ್ರಿದಶದ್ದೇವೇಂದ್ರಂ ಮಣಿಚೂಳನೆಂಬ ಪೆಸರಿಂ ಪೆತ್ತಂ ದಿವ್ಯೈಶ್ವರ್ಯಮಂ (ಶಾಂತಿಪು. ೭-೭೩). [ಸಂ.]

ನಿಷೇವಿತ (ಗು). ೧. ಆರಾಧಿಸಿದ ; ಪೂಜಿಸಿದ : ಹೋದರವರಂತೊಂದುದಿನ ಜಗದಾದಿ ತತ್ವಾವಳಿನಿಷೇವಿತ ಪಾದಪೀಠನ ಯೋಗಮಾಯಾಧೀಶ್ವರೇಶ್ವರನ . . . ವಿಷ್ಣುವಿನ ವೈಕುಂಠಪುರವರಕೆ (ನಿಭಾಗ. ೩-೪-೨೫); ಪರಮ ಹರುಷವ ಮಾಡುತಿರ್ದನು ಶರಣಜನ ಸಂಸಾರಿಕನು ಸುರವರನಿಷೇವಿತಮೂರ್ತಿ ನಿತ್ಯಾತುಮನು ನಿಜಜನಕೆ (ನಿಭಾಗ. ೧೦-೫೦-೪೩). (ನಾ). ೨. ಗೌರವ ಹೊಂದಿದುದು ; ಆರಾಧಿತವಾದುದು : ಈ ರೂಪೆಂಬುದು ಭುವನಜನಾರಾಧ್ಯಂ ಚಕ್ರಿಜನ ನಿಷೇವಿತಮಿದಱೊಳ್ ಸಾರದಳಿವೆಂದು ಪೆಳ್ಳನೆ ಬಾರಿಸಿದುವು ಬಿಡದೆ ಜಡಿದು ವನದೇವತೆಗಳ್ (ಅಪಿಪು. ೯-೯೩). ೩. ಸೇವ್ಯವಾದುದು ; ಯೋಗ್ಯವಾದುದು : ವಿಪಿನಂ ಕ್ರೂರವ್ಯಾಳವೃಕಸೂಕರಚಮೂರ ಕಂಠೀರವನಿಷೇವಿತಂ (ರಾಮಾಶ್ವ. ೨೮-೧೩). ೪. ಸೇವೆ ಹೊಂದಿದವನು ; ಪೂಜೆಗೊಂಡವನು : ಈರೈದು ದೆಸೆಗಳಲಾ ಗಿರಿಯ ಹೊಱಗಿಹರು ಸುರಜನಯೋಗಿಸಿದ್ಧನಿಷೇವಿತರು ತಾವಾಗಿ ವಿಭವದಲಿ (ಕುಸ್ಯಾಅ. ೭-೪೦). [ಸಂ.]

ನಿಷೇವೆ (ನಾ). ಸೇವೆ ; ಪರಿಚರ್ಯೆ ; ಕೈಂಕರ್ಯ : ಧರೆಯೆಂಬ ತರುಣಿ ನರಪನ ವಿರಹದ ಸಂತಾಪದೇಟ್ಗೆಯಂ ಮಟ್ಗಿಸಿದಳ್ ಪಿರಿದಾದ ದಾನಧಾರಾಪರಿಷೇಕನಿಷೇವೆಯಿಂ ಕುಮಾರಾಗ್ರಣಿಯಾ (ಜಾಧಪು. ೧೨-೧೬೯). [ಸಂ. ನಿಷೇವಾ]

ನಿಷೇವ್ಯ (ನಾ). ೧. ಯೋಗ್ಯವಾದುದು ; ಸೇವ್ಯವಾದುದು ; ಉಪಯುಕ್ತವಾದುದು : ಅದು . . . ಕ್ಷಾಯೋಪಶಮಿಕ ಭಾವೋಪೇತಾರ್ಥವ್ಯಂಜನಯೋಗಸಂಕ್ರಮಣಮುಂ ಚತುರ್ದಶನವಪೂರ್ವಧರಯತಿವೃಷಭನಿಷೇವ್ಯಮುಂ ಅಪ್ಪುದಱಿಂ . . . ಸ್ವರ್ಗಾಪವರ್ಗ ನಿಮಿತ್ತಮಕ್ಕುಂ (ತತ್ತ್ವಪ್ರ. ೩೫೨) ; ವಾಯಸನಿವಹನಿರ್ಮಿತತೀರ್ಥ ಹಂಸ ನಿಷೇವ್ಯವಲ್ಲೆಂದ (ನಿಭಾಗ. ೧-೩-೨೩). ೨. ಕೂಡಿರುವುದು ; ಹೊಂದಿರುವುದು. ೧, ೨ : ಮತ್ತಮಾ ಮಹಾವನಂ ಯೌವನದಂತೆ ಮದನೋತ್ಕಳಿಕಾಕಮನೀಯಮುಂ . . . ಸ್ವರಸಮುದಯದಂತೆ ನಿಷಾದ ನಿಷೇವ್ಯಮುಂ (ಚಂದ್ರಪು. ೫-೫೨ಪ). ೩. ಕೂಡಿರುವವನು ; ಹೊಂದಿರುವವನು : ಕುಸುಮದಾಮದಿನುದ್ದಾಮಕೀರ್ತಿಯುಂ ಭವ್ಯಮಧುಕರ ನಿಷೇ[ಪಾಠಾಂ.ಸೇ]ವ್ಯನುಂ . . . ಎನಿಸಿ (ಅಜಿಪು. ೩-೧೪ಪ). [ಸಂ.]

ನಿಷ್ಕ (ನಾ). ೧. ಚಿನ್ನ ; ಸುವರ್ಣ : "ಹೇಮ, ಸ್ವರ್ಣಂ, ಜಾತರೂಪಂ . . . ಕಲ್ಯಾಣಂ, ನಿಷ್ಕಂ, ಅಷ್ಟಾಪದಂ . . . ಕರ್ಬುರಂ, ತಪನೀಯಂ—ಈ ೨೫ ಹೊನ್ (ಪೊನ್)" (ಹಲಾಯು. ೨೯-೧೯) ; "ಗೈರಿಕಂ ಕರ್ಬುರಂ . . . ನಿಷ್ಕಮೆನೆ ಹೇಮವಾ ಸ್ವರ್ಣಮೆನೆ ಹೊನ್ನಿಂಗೆ ನಾಮಮಕ್ಕುಂ" (ಮಂಗರಾ. ೩೦-೪). ೨. ಒಂದು ಚಿನ್ನದ ನಾಣ್ಯ ; ಗದ್ಯಾಣ ; ℙ ಮೂವತ್ತೆರಡು ಅಥವಾ ಅರುವತ್ತು ನಾಲ್ಕು ಗುಂಜಿ ತೂಕದ ನಾಣ್ಯ : ಹತ್ತು ನಿಷ್ಕಮಂ ನಿರುತಮೆ ಕೊಟ್ಟಂ (ಸೌಜಂ. XI-11, ೧೫೯-೪೧; 1111); ವಿರೋಧಿಸೇನೆಗಿದು ಸೂಸುವ ಜೀವನಮೂಲ್ಯ ನಿಷ್ಕರಾಜಿಗಳೆನೆ ವಿಸ್ಫುಲಿಂಗಮಲಗಿಂ ಕೆದಱುತ್ತಿರೆ ಪಾಯ್ದುವಂಬುಗಳ್(ಜಗವಿ. ೭-೭೮); ಬಳಿಕ ಯಮತನುಜನು ಸದಸ್ಯಾವಳಿಗೆಯೊಬ್ಬೊಬ್ಬರಿಗೆ ಮಿಗೆ ವೆಗ್ಗಳವೆನಿಪವೊಲ್ ಕೊಟ್ಟನಾಗ ಸಹಸ್ರನಿಷ್ಕಗಳ (ತಿಮ್ಮಅ. ೮-೨೭) ; ನಿನಗೆ ಅಚ್ಚಬಂಗಾರದ ನೂರು ನಿಷ್ಕಗಳನ್ನು ಕೊಡುತ್ತೇನೆ (ಪಚಭಾ. ೨೦೫). ೩. ಒಂದು ಬಗೆಯ ಚಿನ್ನದ ಆಭರಣ,—ಕಂಠಹಾರ : ಮಹಾಹಾರಮಂ ತೊಡಿಸಿದನು ಕಂಠಕೆ, ಸತೋಯನೀಲಾಂಬುದಕೆ ಸುರಧನುಸ್ ಶೋಭೆಯಂ ನೀಳ್ಪ ರವಿಕರದಂತೆ, ರತ್ನರಮಣೀಯ ವಜ್ರದ್ಯುತಿಯ ನಿಷ್ಕಮಂ (ತ್ರೀರಾಮಾ. ೬೭೬-೪೦೯). ೪. ಚಿನ್ನ ಮೊದಲಾದುವನ್ನು ತೂಗುವ ಒಂದು ತೂಕದ ಪ್ರಮಾಣ : ಅಳತೆ ವಿವರಾ ॥ ಭತ್ತ ನಾಲ್ಕಕೆ ವಂದಂ ಕಾಕಣ್ಯಮೆನಿಪುದದು ಮತ್ತೆ ಪಂಚಕಕೊಂದು ಪಣಮಕ್ಕುಮಾ ಪಣ ಮೂವತ್ತೆನಿಸಲದು ನಿಷ್ಕ (ಭಾಸ್ಕರ. ೭೪-೭). [ಸಂ.]

ನಿಷ್ಕಂಟಕ (ನಾ). ೧. ಮುಳ್ಳುಗಳಿಲ್ಲದುದು. ೨. ಪೀಡೆಯಿಲ್ಲದಿರುವುದು ; ತೊಂದರೆಯಿಲ್ಲದಿರುವುದು ; ಶತ್ರುರಹಿತವಾಗಿರುವುದು:

ನಿಷ್ಕಂಟಕಂ ಮಾಡಿದನಖಿಲಮಹೀಚಕ್ರಮಂ ವಜ್ರಜಂಘಂ (ಆಜಿಪು. ೫-೨೧) ; ಮದವದ್ವೈರಿಯನಿಕ್ಕಿ ಭೂವಳಯಮಂ ನಿಷ್ಕಂಟಕಂ ಮಾಟ್ಟಿಂ (ಗದಾಯು. ೭-೬೮) ; ಎಂಟುದೆಸೆಯ ತನುವನು ಕೆಡಿಸುವಡೆ ನಿಷ್ಕಂಟಕರವಿ ಮೂಡುವಂತೆ ತುಂಟ ಕಾವನ ಬಲಗಳನಿಜುದೊಡೆ ತಪದೊಂಟತೇರನು ನೂಂಕಿದನು (ಸರ್ಧಾಚ.೧೩-೬) ; ರಾಜ್ಯವನ್ನು ನಿಷ್ಕಣ್ಟಕ ಮಾಡಿ ಕುಡುವುದಕ್ಕೋಸ್ಕರವಾಗಿ ವಿಜಯ ಮಾಡಿದ್ದಾರೆ (ಬೆಟ್ಟಅ. ೩೩-೨೬). ೧,೨ : ಪರಕ್ಷ್ಮಾಪರನಿಕ್ಕಿ ಕೆಯ್ಯ ಬೆಸಗೊಳ್ವಾರಂಭಿಗಂಬೋಲ್ ಪಯೋಧಿಪರೀತಾವನಿಯಂ ನಿಮಿರ್ಚಿ ನಿನಗಾಂ ನಿಷ್ಕಂಟಕಂ ಮಾಡುವೆಂ (ಶಾಂತಿಪು. ೭-೫೫). [ಸಂ.]

ನಿಷ್ಕಂಟಕಂಗೆಯ್ (ಕ್ರಿ). ೧. ಮುಳ್ಳು ಇಲ್ಲದಂತೆ ಮಾಡು. ೨. ಪೀಡೆ ಇಲ್ಲದಂತೆ ಮಾಡು ; ಶತ್ರುರಹಿತವಾಗಿ ಮಾಡು : ದುಷ್ಟಮತಿ ಬಂದನಾ ಭರತಂ ದುರುದ್ದೇಶದಿಂ, ತನ್ನ ರಾಜ್ಯಮಂ ನಿಷ್ಕಂಟಕಂಗೆಯ್ಯಲೋಸುಗಂ (ಶ್ರೀರಾಮಾ. ೧೫೮-೧೭೮).

[ನಿಷ್ಕಂಟಕ + ಕೆಯ್$_1$]

ನಿಷ್ಕಂಟಕತ್ವ (ನಾ). ಪೀಡೆಯಿಲ್ಲದಿರುವಿಕೆ : ಶತ್ರುರಹಿತವಾಗಿರುವಿಕೆ : ತ್ಯಾಗಕ್ಕೆ ಬುಧರು ತಣಿವವಧಿ . . . ವಿಪುಳ ಭೋಗಕ್ಕೆ ಸರ್ವಸುಖವವಧಿ ವೀರಕ್ಕೆ ಭೂಭಾಗದೊಳು ನಿಷ್ಕಂಟಕತ್ವವೇ ಅವಧಿ ತಾನಾಗಿ ಪಿರಿಯರಸುತನಮಂ ಮಾಡುತಿರ್ದನು ಹರಿಶ್ಚಂದ್ರ ಭೂನಾಥನು (ಹಚಕಾ. ೧-೪೮) ; ಹೋದುದೊಂದೇ ಕಣ್ಣಹರಳುಗಳೀ ದುರಾತ್ಮಕನಳಿವಿನಲಿ ಸಂಪಾದಿಸಿತು ಸದ್ಧರ್ಮಪಥ ನಿಷ್ಕಂಟಕತ್ವದಲಿ (ನಿಭಾಗ. ೩-೮-೪೨). [ಸಂ.]

ನಿಷ್ಕಂಟಕಿತ (ನಾ). ಪೀಡೆಯಿಲ್ಲದಂತೆ ಮಾಡಿದುದು ; ಶತ್ರುರಹಿತವಾಗಿ ಮಾಡಿದುದು : ರಾಜ್ಯಮಿದು ನಿಷ್ಕಂಟಕಿತಮಾಗಲೋಸುಗಂ ಕೌಸಲ್ಯೆಯಾತನಂ ಕಳುಹು ವಿಪಿನಾಂತರಕೆ (ಶ್ರೀರಾಮಾ. ೬೯-೪೨೧). [ಸಂ.]

ನಿಷ್ಕಂಟಕೀಕೃತ (ಗು). ಪೀಡೆಯಿಲ್ಲದಂತೆ ಮಾಡಿದ ; ಶತ್ರುರಹಿತವಾಗಿ ಮಾಡಿದ : ನಿಷ್ಕಂಟಕೀಕೃತಾಶೇಷ ಜಗದಕಾಂಡೋತ್ಥಿತ ಪ್ರಚಂಡವಿಪಕ್ಷೋತ್ಪಾತಪ್ರಶಮನಶಾಂತ್ಯುದಕಧಾರಾಕಾರತತ್ಕ್ಷಣಕ್ಷರದ ಜಸ್ರದಾನಜಲಧಾರಾಭಿರಾಮಕರಟಘಟಾಚಕ್ರನುಂ (ಆದಿಪು. ೧೪-೯೧ ವ). [ಸಂ.]

ನಿಷ್ಕಂಪ (ನಾ). ೧. ಕಂಪನವಿಲ್ಲದಿರುವಿಕೆ ; ನಿಶ್ಚಲತೆ ; ಸ್ಥಿರತೆ : ಅರ್ಕಕರಂಗಳತ್ತಮಿತ್ತಂ ಪುದಿದುಷ್ಣರಶ್ಮಿ ಪುರುಷಾಕೃತಿಯಂತಿರೆ ನಿತ್ಯಯೋಗ ನಿಷ್ಕಂಪಮನಂಗೆ ಶಾಂತಮನುತಾಪಮನಾಜುಸಿ ತಂ[ದುದಂ]ದು ಬರ್ದೊಂ ಪರೆದಿರ್ದವೋಲ್ ಮುನಿಗೆ ಕಲ್ನೆಲೆ ಬಲ್ನೆಲೆಯಂ ನಿದಾಘದೊಳ್ (ಶಾಂತಿಪು. ೯-೧೦೮). ೨. ಕಂಪಿಸದೆ ಇರುವವನು ; ನಿಶ್ಚಲನಾಗಿರುವವನು ; ಸ್ಥಿರವಾಗಿರುವವನು : ಪಂಪಂ ಧಾತ್ರೀವಳಯನಿಳಿಂಪಂ ಚತುರಂಗಬಳಭಯಂಕರಣಂ ನಿಷ್ಕಂಪಂ ಲಲಿತಾಲಂಕರಣಂ (ಪಂಪಭಾ. ೧೪-೪೯) ; ಕನಕಮಹಾದ್ರೀಂದ್ರದಂದದಿಂ ನಿಷ್ಕಂಪಂ ವನನಿಧಿಯಂತಕ್ಷೋಭಂ ಘನಮಾರ್ಗದವೋಲ್ ಮುನೀಶ್ವರಂ ನಿಂದಿರ್ದಂ(ಆಜಿಪು.೬-೫); ಜಲಧಿಯವೋಲ್ ಗಂಭೀರಂ ಬಲವೈರಿಯವೋಲ್ ಸಮಗ್ರವಿಭವಸನಾಥಂ ಕುಲಗಿರಿವೋಲ್ ನಿಷ್ಕಂಪಂ ಬಲಿಯಂತೆವೊಲಧಿಕದಾನಿ (ಶಮದ. ೨೧೪ ಪ್ರಯೋ). [ಸಂ.]

ನಿಷ್ಕಂಪಪಕ್ಷ್ಮ (ನಾ). ಅಲುಗಾಡದ ರೆಪ್ಪೆ ; ನಿಶ್ಚಲವಾದ ಎವೆ : ಗೂಡುವಾಯ್ವೆರ್ದೆಯನೊತ್ತಿ ನಿಷ್ಕಂಪಪಕ್ಷ್ಮಮಾಂತು ತರಳಾಕ್ಷಿ ವಿಸ್ಮಯದೆ ಚಕ್ರಿಯಂ ನೋಡಿದಳ್ (ಆದಿಪು. ೧೧-೨೦).

[ನಿಷ್ಕಂಪ + ಪಕ್ಷ್ಮ]

ನಿಷ್ಕಂಪಿತ (ಗು). ೧. ಕಂಪಿಸದೆ ಇರುವ ; ಅಲುಗದೆ ಇರುವ : ಸ್ಥಿರವಾಗಿರುವ : ಪುಷ್ಕಳಾವತಿ ಪುಂಡರೀಕಿಣಿ ಪುರಮಾವಿಷ್ಕೃತವಿಭವ ಸುಮಿತ್ರ ನಿಷ್ಕಂಪಿತಾಸೆಯ ಸುವ್ರತೆ ಪುಷ್ಪಧನುಷ್ಕನ ರಾಣಿಸಮಾನೆ (ಸರ್ಧಾಚ. ೯-೪೫). 'ನಿಷ್ಕಂಪಿತಾಂಗ' ಪರಾ. (ನಾ). ೨. ಅಚಲವಾದುದು ; ಸ್ಥಿರವಾದುದು : ದೇಹಂ ಸುವರ್ಣಾದ್ರಿಯವೊಲ್ ನಿಷ್ಕಂಪಿತಂ ಕೆಣ್ಗೆಸೆಯೆ ಕುಸಿಯೆ ಬಾಹ್ಯೇಂದ್ರಿಯಂ ಬಾಹ್ಯಸಾಮಗ್ರಿಯೊಳೆವ್ಯಗ್ರ ಪ್ರತಿಷ್ಠಾಪರನೆನಿಸಿದನೇಕಾಂತದೇಶಂ ಮುನೀಶಂ (ಮಲ್ಲಿಪು. ೧೪-೫೭). [ಸಂ.]

ನಿಷ್ಕಂಪಿತಾಂಗ (ನಾ). ಕಂಪಿಸದೆ ಇರುವ ಅಂಗವುಳ್ಳುದು ; ಅಲುಗದೆ ಇರುವ ಶರೀರವುಳ್ಳುದು : ಅಗಾಧಸ್ರವಂತೀಹ್ರದಾಂತರ್ಜಲದೊಳ್ ನಿಷ್ಕಂಪಿತಾಂಗಂ ಮುಟುಗಿದುದು ಬಹಿಃಪುಷ್ಕರಂ ಹಸ್ತಿಯೂಧಂ (ಚಂದ್ರಪು. ೯-೧೮). [ನಿಷ್ಕಂಪಿತ + ಅಂಗ$_2$]

ನಿಷ್ಕಪಟ (ಗು). ೧. ಕಪಟವಿಲ್ಲದಿರುವ ; ಮೋಸವಿಲ್ಲದ ; ಪ್ರಾಮಾಣಿಕವಾದ : ನಿಷ್ಕಪಟವಿನಯವಿನಮಿತಜನಚಿಂತಾಮಣಿ (ಜಿನಾಲಿ.೧-೧) ; ಕಪಟದಲಿ ಭೀಮಾರ್ಜುನರು ಸಹಿತುಪಚಿತ ದ್ವಿಜವೇಷದಲಿ ನಿಷ್ಕಪಟ ಮಗಧನ ಮನೆಯನದ್ವಾರದಲಿ ಹೊಕ್ಕರಲ (ಕುಮ್ಯಾಸ.೧೦-೨೧). (ನಾ). ೨. ಕಪಟವಿಲ್ಲದಿರುವುದು ; ಮೋಸವಿಲ್ಲದುದು : ಸರಳವಾದ ಉಡಿಗೆ, ನಿಷ್ಕಪಟವಾದ ಮುಖ (ದೂಬೆಟ್ಟ. ೨೧). [ಸಂ.]

ನಿಷ್ಕಪಟತನ (ನಾ). ಕಪಟವಿಲ್ಲದಿರುವಿಕೆ ; ಮೋಸವಿಲ್ಲದಿರುವಿಕೆ; ಪ್ರಾಮಾಣಿಕತೆ : ನಿಷ್ಕಪಟತನದಿಂದ ರೋಗಿಯನ್ನು ಆತ್ಮಪೂರ್ವಕವಾಗಿ ದೈವೀಸಂಭೂತವಾಗಿ ಉಪಚರಿಸಬೇಕು (ಕೆಲರೋ. ೪೬).

[ನಿಷ್ಕಪಟ + – ತನ]

ನಿಷ್ಕಪಟಸ್ಥ (ನಾ). ಕಪಟವಿಲ್ಲದವನು ; ಮೋಸವಿಲ್ಲದವನು ; ಪ್ರಾಮಾಣಿಕ. [ಸಂ.]

ನಿಷ್ಕಪಟಿ (ನಾ). = ನಿಷ್ಕಪಟಸ್ಥ : ಅವನು ಯಾವ ವಿಚಾರವೂ ತಿಳಿಯದ ನಿಷ್ಕಪಟಿ (ರೂಢಿ). [ಸಂ. ನಿಷ್ಕಪಟಿನ್]

ನಿಷ್ಕರ$_1$ (ನಾ). = ನಿಷ್ಕರ್ಷ ೩ : ಪುಷ್ಕರನೆ ಕೇಳೊ ನೀನೀಗ ಪೇಳ್ವೆ ನಿಷ್ಕರದ ಮಾತ ನಾನೀಗ (ಯನಳ. ೧೫೫). [<ಸಂ. ನಿಷ್ಕರ್ಷ]

ನಿಷ್ಕರ$_2$ (ನಾ). ೧. ಹೊರತೆಗೆಯುವಿಕೆ; ಕಳಚುವಿಕೆ. ೨. ಸಿದ್ಧಪಡಿಸುವಿಕೆ ; ತಯಾರಿಸುವಿಕೆ ; ಪೂರೈಸುವಿಕೆ ; ನಿರ್ವಹಣೆ. ೩. ಕಾರ್ಯ ಮಾಡದವನು ; ಸೋಮಾರಿ ; ಮೈಗಳ್ಳ : ಒಬ್ಬ ಮಾಸ್ತರರು ನಿಷ್ಕರರೆಂದು ಇಡೀ ಸಾಲೆಯನ್ನು ದೂಷಿಸಲು ಬರುವುದಿಲ್ಲ (ರಂಗರೋ. ೨೨). [ಸಂ.]

ನಿಷ್ಕರಿಸು$_1$ (ಕ್ರಿ). ನಿರ್ಧಾರ ಮಾಡು ; ನಿರ್ಣಯಿಸು : ತಸ್ಕರರುಪದ್ರದಿಂ ಭೂಸುರರ ಕಳಕಳವ ನಿಷ್ಕರಿಸಿ ಕೇಳ್ದರ್ಜುನಂ ಪೋಗಿ ಧನುಸರಳಿಗೋಸ್ಕರಂ ರಾಯ ರಮಣಿಯರೊಂದೆಯೆಡೆಯಿದ್ದುದಂ ಕಂಡು ಭೂಪ್ರದಕ್ಷಿಣೆಗೈದನು (ತುರಂಗ. ೧೫ ಸೂಚನೆ) ; ಬಾಜೀರಾಯನ ವೇತನವಾದರೋ "ಅವನ ಮತ್ತು ಅವನ ಕುಟುಂಬಕ್ಕಾಗಿ" ನಿಷ್ಕರಿಸಲ್ಪಟ್ಟಿದ್ದಿತು (ಝಾರಾಣಿ. ೩೦). [ನಿಷ್ಕರ$_1$ + – ಇಸು$_3$]

ನಿಷ್ಕರಿಸು$_2$ (ಕ್ರಿ). ಕಾಂತಿಗುಂದು ; ನಿಸ್ತೇಜವಾಗು (?) : ನಿಷ್ಕಲಾನ್ವಿತನಾಗಿ ಕಳೆಗೊಂಬನಮೃತಾಂಶು ಪುಷ್ಕರದೆ ಭಾಸ್ಕರಪ್ರಭೆಯುಣ್ಮೆ ದಿನದಿನಕೆ ನಿಷ್ಕರಿಸಿ ದೂರಸ್ಥನಾದಪಂ ಸತ್ಯಮೆಲ್ಲಿದ್ದಪುದು ಸಿರಿಯೊದಗಲು (ಪರಶು. ೬-೨೩). [?]

ನಿಷ್ಕರುಣ (ಗು). ೧. ದಯೆಯಿಲ್ಲದ ; ಕನಿಕರವಿಲ್ಲದ ; ಕ್ರೂರ : ಕಂದಿದಳುಟಿದೊಡೆ ಬೆಳ್ಪಿನೊಳೊಂದಿದಳೊಂದದೊಡೆ ಬಂದೊಡತಿರಾಗಕ್ಕಂ ಸಂದಳಿವಳ್ ಮೂವಣ್ಣಂ ಬಂದಳ್ ನಿಷ್ಕರುಣ ತರುಣಿ ನಿಷ್ಕಾರಣದಿಂ

(ಚಂದ್ರಪ್ರ. ೪-೭೪) : ತನ್ನ ಶಿಷ್ಯಾಳಿಯೊಳು ನೋಡಿ ಹುಸಿಯಸೂಯಾ ನೀಚವೃತ್ತಿ ನಿರ್ದಾಕ್ಷಿಣ್ಯ ನಿಷ್ಕರುಣನೀತಿಗಳಲಿ ಹೆಸರುಳ್ಳ ಹಿರಿಯ ನಕ್ಷತ್ರಕ ನೆನಿಪ್ಪ ಮಾನಸನ . . . ಕಳುಹಲು (ಹಚಕಾ. ೯-೧೫). (ನಾ). ೨. ಕರುಣೆಯಿಲ್ಲದಿರುವುದು ; ನಿಷ್ಕರುಣೆ ; ನಿರ್ದಯೆ : ದೊರೆ ಮಗಳು ಜರೆದು ನಿಷ್ಕರುಣದಲಿ ಮೂಕಿಬಿಡಲು, ಆಡವಿಯೊಳಗಾ ನೀರ ಚೆನ್ನಿಗನು ಹುಚ್ಚುಹಿಡಿದೆಡೆಬಿಡದೆ ಹಗಲಿರುಳು ತೊಳಲಿದುದನು (ಇಂಗೀತ. ೪೫-೧೭). ೩. ಕರುಣೆಯಿಲ್ಲದ ವ್ಯಕ್ತಿ ; ನಿರ್ದಯ ವ್ಯಕ್ತಿ : ಅಲೆತದಲಿ ಈ ಹುಚ್ಚು ನಿನಗೆ ಬಂದುದದೆಂತು ? ನಿಷ್ಕರುಣ ! ಹೇಳೇಕೆ ಬಹುದೂರನಾದೆ ? (ಫ್ಯಾನ್ಯಾಲೋ. ೬೨). [ಸಂ.]

ನಿಷ್ಕರುಣತೆ (ನಾ). ಕರುಣೆಯಿಲ್ಲದಿರುವಿಕೆ: ದಯೆಯಿಲ್ಲದಿರುವಿಕೆ: ಕ್ರೌರ್ಯ : ಪರಿಜನಕೆ ದಯೆಯನು ಪರಸ್ತ್ರೀಯರಲಿ ಭೀತಿಯ ಹಗೆಗಳಲಿ ನಿಷ್ಕರುಣತೆಯ . . . ವಿಸುಣರ ನುಡಿಗಳಲಿ ಮೂರ್ಖತೆಯ ನೀ ವಿರಚಿಪೆಯೊ ಬೇಸಜುವೆಯೊ (ಕುಮಾಸ. ೧-೫೬). [ಸಂ. ನಿಷ್ಕರುಣತಾ]

ನಿಷ್ಕರುಣಿ (ನಾ). ಕರುಣೆಯಿಲ್ಲದವನು : ನಿರ್ದಯ ; ಕ್ರೂರಿ : ಪಾಪಿ ನಿಷ್ಕರುಣಿ ನಿರ್ದಯ . . . ಅಳಲ ಬೇಗೆಯ, ಬೆಂಕಿಯುರಿ ನಿನ್ನ ನಿಜಾಯದೇ ಹೇಳು ವಿಶ್ವಾಮೃತ್ಯುವಾದೆ ವಿಶ್ವಾಮಿತ್ರ (ಹಚಕಾ. ೯-೭) ; ಸಿಂಧುಭೂಪನಲಾ, ಭುಜಾಗ್ರದ ಬಂಧನವ ಬಿಡು ಭೀಮ ಶಿವಶಿವ ನೊಂದನೈ ನಿಷ್ಕರುಣಿಗಳು ನೀವೆಂದನವನೀಶ (ಕುಮಾಸ. ೨೨-೬೭) ; ತಮ್ಮ ನೀ ನಿಷ್ಕರುಣಿಯೈ ನೆಳಲಿಂಗೆ ಕೊಂಡೊಯ್ದೆನ್ನನುಳುಹಂದ (ತೊರಾ. ೩-೧೧-೫೦) ; ತಾನು ನಿಷ್ಕರುಣಿ ಎಂದು ಆ ಎಳೆಯರು ಭಾವಿಸಿದ್ದಿರಬೇಕು (ಬನಶಂ. ೨೯೪). [ಸಂ. ನಿಷ್ಕರುಣಿನ್]

ನಿಷ್ಕರುಣೆ (ನಾ). ನಿಷ್ಕರುಣ ೨ : ನಿಷ್ಕರುಣೆಯಿಂದ ವರ್ತಿಸಿದರೆ ಯಾವ ಕೆಲಸವೂ ಆಗುವುದಿಲ್ಲ (ರೂಪ). [ಸಂ. ನಿಷ್ಕರುಣಾ]

ನಿಷ್ಕರ್ಮ (ಗು). ೧. ಕರ್ಮರಹಿತವಾದ : ನಿಷ್ಕ್ರಿಯವಾದ : ಚಾರುಕುಲಗೋತ್ರಮನ್ನೀಗಿ ನಿಷ್ಕರ್ಮೋಪಚಾರಕ್ಕೆ ಪಕ್ಕಾಗಿಯಧಿಕ ಪಟ್ಕರ್ಮಗಳ ನೀರುಗೂಡಿ . . . ವಿಕಾರವರ್ತನೆಗೆ ನೆಲೆವನೆಯಾಗಿ ಬಾಳುವ ವಿಕಾರಸಚಿವರ್ಗಳೆಲ್ಲಕ್ಕೊಡೆಯರಾಗಿರಲ್ಕೆಲ್ಲಿಯದು ಧನವು ನಿಮಗೆ (ಸಂಗಿರಾ. ೨೨-೬). (ನಾ). ೨. ಕರ್ಮರಹಿತತೆ : ನಿಷ್ಕ್ರಿಯತೆ : ಕಾರ್ಯ ಮಾಡದಿರುವುದು : ಅಕರ್ಮದಲ್ಲಿ—ನಿಷ್ಕರ್ಮದಲ್ಲಿ ಆಸಕ್ತಿ ವಹಿಸದಿರು (ಧರ್ಮಸಾ. ೧೬೪). ೩. ಪಾಪರಹಿತನಾದವನು: ಪಾಪವಿಲ್ಲದವನು. ೪. ಕರ್ಮರಹಿತನಾದವನು : ಯಾವ ಕರ್ಮಫಲಕ್ಕೂ ಒಳಪಡದವನು : ಪರಮಾತ್ಮ : ನಿಷ್ಕರ್ಮ ನಿತ್ಯನಿರಂಜನ ನಿರುಪಲೇಪ ನಿಜಶುದ್ಧಾತ್ಮನೆಯೆನಗೆ ಸಾಕ್ಷಾನ್ಮೋಕ್ಷಕ್ಕೆ ಕಾರಣಂ (ಪಸಾರ. ೧೧೯).

[ಸಂ. ನಿಷ್ಕರ್ಮನ್]

ನಿಷ್ಕರ್ಮಿ (ನಾ). ೧. ಕರ್ಮರಹಿತನಾದವನು : ಯಾವ ಕರ್ಮಕ್ಕೂ ಒಳಪಡದವನು : ಪರಮಾತ್ಮ : ವಿಷ್ಣು ಕರ್ಮಿ ರುದ್ರ ನಿಷ್ಕರ್ಮಿ ಕ್ರಮವನಜಾಯದೆ ನುಡಿವಿರೋ (ಬಸವ. ೫೪೫) ; ನೀನಿಲ್ಲದಾನೇನ್ ? ನಿರಂಜನಂ, ನಿಷ್ಕರ್ಮಿ ! (ಶ್ರೀರಾಮಾ. ೬೭೯-೮೧). ೨. ಪಾಪರಹಿತನಾದವನು : ಪಾಪವಿಲ್ಲದವನು.

[ಸಂ. ನಿಷ್ಕರ್ಮಿನ್]

ನಿಷ್ಕರ್ಷ (ನಾ). ೧. ಹೊರತೆಗೆಯುವುದು : ಹೊರಕ್ಕೆ ಎಳೆಯುವುದು. ೨. ವಸ್ತುವಿನ ಮೂಲಸತ್ವ,—ಸಾರ ; ಮುಖ್ಯತತ್ವ. ೩. ನಿಶ್ಚಯ : ನಿರ್ಣಯ : ನಿರ್ಧಾರ : ಗೊತ್ತುವಳಿ. ೪. [ನಾಟ್ಯ] ಎಂಟು ಬಗೆಯ ದಂತವಿನ್ಯಾಸಗಳಲ್ಲಿ ಒಂದು : ಇ "ಕಚ್ಚಿರುವ ಹಲ್ಲುಗಳನ್ನು ಬಿಡಿಸುವುದು" (ಭಾಷ್ಯರಂ. ೨೮೦ ನಾಟ್ಯಶಾಸ್ತ್ರ). ಕುಟ್ಟಿನ ಖಾದನ ಭಿನ್ನ . . . ನಿಷ್ಕರ್ಷ— ಈ ಎಂಟು ಹಲ್ಲಿನ ಭೇದಂಗಳ್ (ಭಾಷ್ಯರಂ. ೩-೮೮ ನಾ) ; ಪಲ್ಲಂ ಗೆಲೆ ಬಿಡುವ ಪರಿಯ ನೊಲವಿಂ ನೆಲೆಗೊಳೆ ನಿಷ್ಕರ್ಷಮೆಂಬ ದಂತಮೆನಿಕ್ಕುಂ (ಭಾಷ್ಯರಂ. ೩-೯೧). [ಸಂ.]

ನಿಷ್ಕರ್ಷಿಸು (ಕ್ರಿ). ನಿರ್ಣಯ ಮಾಡು : ಗೊತ್ತು ಮಾಡು : ನಿರ್ಧಾರ ಮಾಡು : ಭಾವನಾಪರವಶನಾಗದೆ ಚೇತನಸ್ವಭಾವವನ್ನು ಶಾಸ್ತ್ರವಿಮರ್ಶೆಯಿಂದ ನಿಷ್ಕರ್ಷಿಸಿ ಅದಕ್ಕೆ ತಕ್ಕಂತೆ ಮನಸ್ಸನ್ನು ಪರಿಪಾಕಗೊಳಿಸುವುದು ತತ್ವಶಾಸ್ತ್ರ ವಿಮರ್ಶಕನ ಆದ್ಯ ಕರ್ತವ್ಯ (ಭಾಂದ. ೨೮೦) ; ಅಕ್ಷರಗಳನ್ನು "ಲಘು", "ಗುರು" ಎಂದು ವಿಂಗಡಿಸಿ, ಲಘುವಿನ ಉಚ್ಚಾರಕ್ಕೆ ಒಂದು ಮಾತ್ರೆಯ ಕಾಲವೆಂದೂ ಗುರುವಿನ ಉಚ್ಚಾರಕ್ಕೆ ಎರಡು ಮಾತ್ರೆಯ ಕಾಲವೆಂದೂ ನಿಷ್ಕರ್ಷಿಸಿದ್ದಾರೆ (ಸನಾಲೋ. ೧೮೬).

[ನಿಷ್ಕರ್ಷ ೨-ಇಸ್ಸು]

ನಿಷ್ಕರ್ಷೆ (ನಾ). ನಿಷ್ಕರ್ಷ ೩ : ಇನ್ನೂ ನಿಷ್ಕರ್ಷೆಯಾಗದಿರುವ ಹಲವು ಆಧಾರಗಳನ್ನು ಒಂದೊಂದು ಪಂಥವೂ ಒಂದೊಂದು ರೀತಿಯಲ್ಲಿ ಸೃಷ್ಟಿಸಿಕೊಂಡಿದೆ (ಶಿಕ್ಷದ. ೪೧೦) ; ದಶಮಿಯ ದಿನವೇ ಸುಮುಹೂರ್ತವೆಂದು ನಿಷ್ಕರ್ಷೆಯಾಯಿತಲ್ಲವೆ ? (ಕವಿಕ. ೪೯).

ನಿಷ್ಕರ್ಷೆ ಮಾಡು . ನಿಷ್ಕರ್ಷಿಸು : ಕಂಠೀರವನರಸರಾಜಒಡೆಯರವರ ಶೌರ್ಯವಂ ತಿಳಿದು, ಅವನು ಖಂಡಣೆಹಣವನ್ನು ಕೊಡುತ್ತೇನೆಂದು ನಿಷ್ಕರ್ಷೆ ಮಾಡಿಕೊಂಡನು (ಮಹಾವಂ. I. ೭೨) ; ಹುಡುಗಿಯನ್ನು ನೀನು ಒಪ್ಪಿಲ್ಲದಿದ್ದರೆ ಹಾಗೆ ಹೇಳಿಬಿಡು. ಬೇರೆ ಕಡೆ ನಿಷ್ಕರ್ಷೆ ಮಾಡೋಣ (ಮಹಾಗ. ೫೦) ; ಬ್ರಹ್ಮನೇ ಅದನ್ನು ನಿಷ್ಕರ್ಷೆ ಮಾಡಬೇಕು (ಬೀಸದ. ೧೧೬). [ಸಂ. ನಿಷ್ಕರ್ಷ]

ನಿಷ್ಕಲ, ನಿಷ್ಕಳ (ಗು). ೧. ಪರಿಪೂರ್ಣವಾದ : ನಿರ್ಗುಣವಾದ: ಅಂತರಂಗ ಬಹಿರಂಗ ಪರಮಾಕಾಶಮಧ್ಯದಲ್ಲಿ ಪರಮಾತ್ಮನು ಪರಬ್ರಹ್ಮ ಸ್ವರೂಪನು . . . ಕೇವಲ ನಿಷ್ಕಲ ಸ್ವರೂಪನು (ವಚಸಂ. ೪೧೦-೭೪) ; ನಿಷ್ಕಲವಸ್ತು ತಾನೊಂದೆಯಲ್ಲದೆ ಅನ್ಯವಾಗಿ ತೋಱುವ ತತ್ವಂಗಳೇನೂ ಇಲ್ಲದೆ . . . ತನ್ನ ನಿಜಸ್ವಭಾವದಲ್ಲಿಪ್ಪ ನಿಶ್ಶೂನ್ಯವಸ್ತುವನು ನಿಷ್ಕಲ ಲಿಂಗಸ್ಥಳವೆಂದು ಹೇಳಲಾಯಿತ್ತು (ಲಿಂಗಲೀ. ೬-೧) ; ಜೀವನಿಗೆ ಆಕಾರದಿಂದ ಆಕಾರದ ಅರ್ಚನೆ ; ನಿರಾಕಾರ ಮನಸ್ಸಿನಿಂದ ನಿಷ್ಕಲ ಪರಮಾತ್ಮನ ಧ್ಯಾನ ಇವೆರಡೂ ಸಹಜವಾಗಿ ಅನ್ವಯಿಸುತ್ತವೆ (ಶಕ್ತಿವಿ. ೨೫). (ನಾ). ೨. ಪರವಸ್ತು : ತನು ಪೃಥ್ವಿಯಿಂದಲಾಯಿತ್ತು . . . ಕಲ್ಲು ಕಾಷ್ಠ ಸಲಿಲ ನಿಷ್ಕಲದಿಂದಲಾಯಿತ್ತು (ಅವಚಂ. ೧೮೯-೮೫೪). ೩. ಅಖಂಡ : ಪರಿಪೂರ್ಣ : ಪರಮಾತ್ಮ : ಆದಿಯೇ ಸಕಲ ಅನಾದಿಯೇ ನಿಷ್ಕಲ (ಮಹಾದೇ. ೩. ೧೨೧-೨೫೫) ; ಸಕಲ ನಿಷ್ಕಲ [ಪಾಕಾಂ. ೪]ವ ಕೂಡಿಕೊಂಡಿಪ್ಪೆಯಾಗಿ ಸಕಲ ನೀನೇ ದೇವಾ ನಿಷ್ಕಲ ನೀನೇ (ಬಸವ. ೫೫೬) ; ಪರಮಾತ್ಮನು ನಿಷ್ಕಲನಾಗಿದ್ದರೂ ಸಕಲನೂ ಆಗಿರುವನೆಂದು ಶ್ರುತಿ ಸ್ಪಷ್ಟವಾಗಿ ತಿಳಿಸುತ್ತದೆ (ಶಕ್ತಿವಿ. ೨೫). ೪. ಶಕ್ತಿಗುಂದಿದುದು : ದುರ್ಬಲವಾದುದು : ನಿರ್ವೀರ್ಯವಾದುದು. ನಿಷ್ಕಳ : ೧. ಮುಗಿದೆತ್ತುಗೈಯಿದನು ಕೊಂಡೆತ್ತಿ ಸೆಳೆವರಾರ್ ಸುಮನಸ್ಕರಾಲಯಕೆ ನಿಷ್ಕಳಮಿದಾಗೆ (ಮಲೆದೇ. ೨೪-೬). ೩. ಜಯ ನಿಷ್ಕಳ ನಿಶ್ಚಲ ನಿರ್ವಿಭೇದ ಸರ್ವಜ್ಞ (ಅಜಪು. ೬-೧೫ ಇಳೆ) ; ನಿಷ್ಕಳ ನಿಜೈಕ್ಯ ತ್ರಿವಿಧನಿರ್ಣಯ ಕೂಡಲಸಂಗಮದೇವಾ (ಬಸವ. ೭೬೯) ; ನಿಷ್ಕಳ ನಿರಾಕಾರ ನಿರಜ ನಿರಹಂಕಾರ ನಿರ್ಮಳ ನಿರಾಳ ಪಂಪಾವಿರೂಪಾಕ್ಷ ಶರಣು (ಹಚಕಾ. ೧-೪) ; ನಿರುಪಮಾನ ನಿರಧಿಕ ನಿರ್ಭಯ ನಿರತ ನಿಷ್ಕಳ . . . ನಿಜನಿರ್ಮಾಯ ಚಿತ್ತೈಸು (ಬಸಪು. ೬೧-೪೪) ; ಸುಲಭವಂತ ನಿರ್ಷ್ಠರಿಗೆ ನಿಷ್ಕಳ ನಿರೂಪನನಂತ ನಿಜನಿರ್ಮಳವೆನಿಪ ಪರಮಾತ್ಮ ಚಿನುಮಯರೂಪ ತಾನೆಂದ (ಕುಮಾಸ್ತ್ರೋ. ೩-೬೬). ೫. [ಸಂಗೀತ]

ವೀಣೆ ನುಡಿಸುವುದರಲ್ಲಿ ಒಂದು ರೀತಿ: ಅತಿ ಸೂಕ್ಷ್ಮವಾದ ನಾದವನ್ನು ಹೊರಡಿಸುವುದು. 'ನಿಃಕಳ' ಪರಾ. ೬. ಷಡ್ಜದ ಎರಡನೆಯ ಶ್ರುತಿ. 'ನಿಷ್ಕಲೆ' ಪರಾ. [ಸಂ.]

ನಿಷ್ಕಲಂಕ, ನಿಷ್ಕಳಂಕ (ಗು). ೧. ಕಲೆಗಳಿಲ್ಲದ: ಕಪ್ಪು ಗುರುತುಗಳಿಲ್ಲದ; ಕಳಂಕವಿಲ್ಲದ. 'ನಿಷ್ಕಲಂಕೇಂದು' ಪರಾ. ೨. ದೋಷವಿಲ್ಲದ: ಪಾಪರಹಿತವಾದ: ಶುದ್ಧವಾದ. (ನಾ). ೩. ಕಳಂಕರಹಿತನಾದವನು: ಪಾಪರಹಿತನಾದವನು; ದೋಷಗಳಿಲ್ಲದವನು: ಸರ್ವಕಾರಣಕಾರಣನ ನಿಷ್ಕಲಂಕನಂ ಪರ್ಮತಾಕಾರನಂ . . . ಸರ್ವಾಂಗವೊಂದಿ ವಂದಿಸುವೆನು(ವೀರೇಶ. ೬-೧-೬೪). **ನಿಷ್ಕಳಂಕ:** ೨. ಪ್ರಾಚೀನ ನಕ್ಷತ್ರ ನಿಷ್ಕಳಂಕ ಕೋಸಲ ಕಾಶಿಯಾದ ಭೂಮಿತಳ ದೊಳುದಿತಜಾವಿಕಧನವನು ಶಂಕಿಸದೆ ಕೊಟ್ಟಪೆನು . . (ದೇಸಾಂಪ. ೬-೬-೧೪); ಪುಟ್ಟ ಯೋಗಿನಿಯ ನಿರ್ಮಲ, ನಿಷ್ಕಳಂಕ, ಪವಿತ್ರ, ಸ್ನೇಹಪ್ರೇಮಗಳು ಅವಳನ್ನು ಆರಿಯದ ಮತ್ತೊಂದೆಡೆಗೆ ಕೊಂಡೊಯ್ದು ಹಗುರಗೊಳಿಸುತ್ತಿದ್ದುವು (ಕಪುಕಾ. ೧೧೫). ೩. ನಿಷ್ಕಳಂಕ ನಿರಂಕ ನಿಶ್ಚಿಂತ . . . ನಿಜ ನಿರ್ಮಾಯ ಚಿತ್ತೈಸು (ಜಸಪು. ೬೧-೪೪); ನಿಷ್ಕಲ ಸೀಲಕಂಡ ನಿರ್ಜರನತ ನಿಷ್ಕಳಂಕ ಜಯ ಶಂಕರ ನಿರ್ಜಡ ಶಾಂಭವೀಧವಾ (ರಬರಂ. ೫-೨೪); ಜಂಗಮವೆಂದಡೆ ನಿಷ್ಕಳಂಕನು ನೋಡಾ ಜಂಗಮವೆಂದಡೆ ನಿರಪೇಕ್ಷನು ನೋಡಾ (ಅಖಂಡೇ. ೧೨೪-೪೨). 'ಅಕಲಂಕ' ಪರಾ. [ಸಂ.]

ನಿಷ್ಕಲಂಕೇಂದು, ನಿಷ್ಕಳಂಕೇಂದು (ನಾ). ಕಳಂಕರಹಿತನಾದ ಚಂದ್ರ: ಕಪ್ಪುಕಲೆಗಳಿಲ್ಲದ ಚಂದ್ರ: ನಿಷ್ಕಲಂ[ಪಾಠಾಂ. ಳಂ]ಕೇಂದು ಮಂಡಲಸದೃಶವದನದಿಂ . . . ಎನೆವ ನಿನ್ನ ರೂಪರ್ದೆಯೊಳಿರೆ ದುಷ್ಕಂಟಿಕದ ಭೀತಿಯೆನಗದೇಕೆಲೆ ದೇವ (ಜೈಮಭಾ. ೧೫-೨೬). **ನಿಷ್ಕಳಂಕೇಂದು:** ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ.

[ನಿಷ್ಕಲಂಕ+ಇಂದು]

ನಿಷ್ಕಲಲಿಂಗ (ನಾ). ಚೈತನ್ಯ ರೂಪನಾದ ಪರಮಾತ್ಮ: ನಿರಾಕಾರ ಪರಮಾತ್ಮನು ನಿಷ್ಕಲಲಿಂಗವೆನಿಸಿದರೆ ಸಾಕಾರ ಪರಮಾತ್ಮನು ದಿವ್ಯ ಮಂಗಳವಿಗ್ರಹನಾಗಿ ಶಿವನೆನಿಸಿ ಮಹಾಕೈಲಾಸದಲ್ಲಿ ನೆಲಸಿರುವನು. ನಿಷ್ಕಲಲಿಂಗವೆಂದರೆ ಸರ್ವಾಧಾರನಾದ ಚೈತನ್ಯ . . . ಮಹಾಪ್ರಕಾಶ (ಶಕ್ತಿವಿ. ೨೫೫); ಅಲ್ಲಿಂದ ಮುಂದೆ ಹೋಗಲು ನಿಷ್ಕಲಲಿಂಗವು ತೋರುವದು. ಅದು ನಿರುಪಾಧಿಕ ಜ್ಯೋತಿಯು (ವಿವಿಕೋ. ೬೮). [ನಿಷ್ಕಲ+ಲಿಂಗ]

ನಿಷ್ಕಲಾನ್ವಿತ (ನಾ). ಕಳೆಯನ್ನು ಕಳೆದುಕೊಂಡವನು; ನಿಸ್ತೇಜನಾದವನು: ನಿಷ್ಕಲಾನ್ವಿತನಾಗಿ ಕಳೆಗೊಂಬನಮೃತಾಂಶು ಪುಷ್ಕರದಿ ಭಾಸ್ಕರಪ್ರಭೆಯುಣ್ಮ ದಿನದಿನಕೆ ನಿಷ್ಕರಿಸಿ ದೂರಸ್ಥನಾದಪಂ ನಷ್ಟಮೆಲ್ಲಿದ್ದ ಪುದು ನಿರಿಯೊದಗಲು (ಪರಮ. ೬-೨೬). [ಸಂ.]

ನಿಷ್ಕಲಾಪ (ನಾ). ನಿಷ್ಕ್ರಿಯನಾದವನು: ಯಾವ ಕರ್ಮಕ್ಕೂ ಒಳಪಡದವನು: ಶರಣು ನಿಷ್ಕ್ರಿಯ ನಿಷ್ಕಲಾಪನೆ (ಗಗತ್ರಿ. ೧-೪೬). [ಸಂ.]

ನಿಷ್ಕಲಿತ, ನಿಷ್ಕಳಿತ (ಗು). ೧. ಅಖಂಡವಾದ: ಪರಿಪೂರ್ಣವಾದ: ಝಳಪಿಸಿದುದೆರಡಂಕದಲಿ ನಿಷ್ಕಲಿತ ತೇಜಃಪುಂಜದಿಬ್ಬರ ಹಳ ಹಳಿಕೆ ಹಬ್ಬಿದುದು (ಕುಪ್ಯಾಕ. ೭೪-೫೩). ೨. ಬಿಟ್ಟ: ಕಳೆದ: ತ್ಯಜಿಸಿದ: ತ್ಯಕ್ತ: ಜನನಲಯನಿಷ್ಕಲಿತ ವಿಮಲಬ್ರಹ್ಮಜೂಡಾರತ್ನ ನಡೆತಂಪ (ತೊಪರಾ. ೬-೫೩-೧೦೭). **ನಿಷ್ಕಳಿತ:** ೨. ವಿನೀತನ ವಿನುತವನಿತಾನತನುಮಿಷನ ನಿಷ್ಕಳಿತರೋಪಕನ . . . ವಿಶೇಷ ಕಳಾಪ್ರವೀಣನ ಜನಪ ಚಿತ್ತೈಸುವುದೆಲ್ಲೆ ತಾಂಬೂಲಧಾರಕನ (ಕುಪ್ಯಾಳು. ೬-೯೧). [ಸಂ.]

ನಿಷ್ಕಳೆ, ನಿಷ್ಕಳೆ (ನಾ). ೧. ಮುಟ್ಟು ನಿಂತುಹೋದವಳು: ವಯಸ್ಸಾದವಳು. **ನಿಷ್ಕಳೆ:** ೧. "ಪುಷ್ಪಿಣಿ, ನಿಷ್ಕಳೆ—ಈ ೨ ಮುಟ್ಟಿನ ಪೂರ್ವಾವಳ್" (ಪಲಾಮಂ. ೪೨-೨೩); "ಹೊಲೆ ಕೆಡಲು ನಿಷ್ಕಳೆಯೆನಿಕ್ಕುಂ" (ಮೂಗರಾ. ೮೯-೨). ೨. ನಿಷ್ಕಲ ೬: ಗಹ್ವರಿ ನಿಷ್ಕಳೆ ಗೂಢೆ ಸಕಲೆಯರೆಂಬ ನಾಲ್ಕು ಶ್ರುತಿಗಳೇ ಪಡ್ಜಸ್ವರದಿಂ ಪುಟ್ಟಿದವು (ವಿನೋ. ೨೩೨). [ಸಂ. ನಿಷ್ಕಲಾ]

ನಿಷ್ಕವಚ (ಗು). ಕವಚವಿಲ್ಲದ: ಒರೆಯಿಂದ ಹೊರಕ್ಕೆ ಹಿರಿದ; ಒರೆಗಳಚಿದ: ಉದ್ವೀಚಿ ಮರುಮರೀಚಿನಿಚಯಚಂಚಲೋದ್ದಾಮ ಬಲಬಹುಲನಿಸ್ಯನಭಸ್ಯಾಸಾನಿ ವಾರಾಶ್ಚಿಕಂ (ಅನಿಸ್ತ. ೧೩-೪೫ ಪ). [ಸಂ.]

ನಿಷ್ಕಶ್ಯಂಖಲೆ (ನಾ). ಚಿನ್ನದ ಸರಪಳಿ: ನಿಷ್ಕಶ್ಯಂಖಲಾಚತುಷ್ಕ ಘಟಿತ ನಿರ್ಯೂಹದಂತಪರ್ಯಂಕಿಕಾಪಟ್ಟದೊಳಮಳವಟ್ಟು ನುದನ ಮಂಗಳಾಗಾರದ್ವಾರಮಳತತೋರಣದಂತಿರ್ ನವಿಲುಯ್ಯಲ ಕೆಲಕ್ಕೆ ವಂದು(ಚಂದ್ರಪ್ರ. ೪-೪೫ ಪ). [ನಿಷ್ಕ+ಶ್ಯಂಖಲೆ]

ನಿಷ್ಕಷಾಯ (ನಾ). [ಜೈನ] ಕ್ರೋಧ, ಮಾನ, ಮಾಯೆ, ಲೋಭ ಎಂಬ ನಾಲ್ಕು ಬಗೆಯ ದೋಷಗಳಿಂದ ಮುಕ್ತನಾದವನು; ಕಷಾಯರಹಿತನಾದವನು: ಕರ್ಮಫಲವನ್ನು ಬೆಳಸುವ ಭಾವನೆಗಳಿಗೆ 'ಕಷಾಯ'ವೆಂದು ಹೆಸರು. "ಕರ್ಮ ಕ್ಷೇತ್ರಂ ಕಷಂತೀತಿ ಕಷಾಯಾಃ" ಎಂಬುದು (ಪಸಾರ. ೫೮೨) ರಲ್ಲಿಯ ವಾಕ್ಯ. ಕಷಾಯಗಳಲ್ಲಿ ಅನೇಕ ಉಪಭೇದಗಳಿವೆ: ನೆಗಜ್ಜಿ ವತ್ತೈಕಾದಶಸ್ಥಾನಂಗಳೊಳಾ ನಿರತಿಚಾರವ್ರತಶೀಲಸಂಪನ್ನನುಂ ನಿರಸ್ತಮಿಥ್ಯಾತ್ವನುಂ ನಿಷ್ಕಷಾಯನುಮಾಗಿ ಸಮಾಚರಿಸಿ ಚರಮಕಾಲದೊಳ್ (ಸುಕುಮಾ. ೬-೨೬ ಪ); ಆ ಭೋಗಭೂಮಿಯೊಳ್ . . . ವ್ಯಪಗತ ನೇಹಾರದುಂ ದ್ವಿಚತುಸ್ಪಟ್ಟಿಸಹಸ್ರಚಾಪೋತ್ಸೇಧರಂ ನಿಷ್ಕಷಾಯರುಮಾರ್ಯಾಖ್ಯಿಧಾನರುಮಾಗಿ ದಂಪತಿಸ್ವರೂಪದಿಂ ಪುಟ್ಟ (ಚಂದ್ರಪ್ರ. ೬-೩೬ ಪ). . . [ಸಂ.]

ನಿಷ್ಕಷಾಯಂ (ಅ). ಕಷಾಯಗಳಿಲ್ಲದವನಾಗಿ: ದಶಾನನಂ ಮಹಾಪ್ರಸಾದಮುಂತೆಗೆಯ್ವನೆಂದಿಂದ್ರನಂ ಬರಿಸಿ ನಿಷ್ಕಷಾಯಂ ನಿನ್ನ ರಾಜ್ಯದೊಳ್ ಸುಖನಿರೆಂದು ಕಟುಪುವುದುಂ (ಪಂರಾಪಾ. ೧೦-೨೧೫ ಪ). [ಸಂ.]

ನಿಷ್ಕಷಾಯತ್ವ (ನಾ). [ಜೈನ] ಕಷಾಯಗಳಿಲ್ಲದಿರುವಿಕೆ; ರಾಗದ್ವೇಷಗಳಿಂದ ಮುಕ್ತವಾಗಿರುವಿಕೆ; ದೋಷರಾಹಿತ್ಯ: ಕುಂಭಕರ್ಣಾದಿಗಳ್ ರಾಮಲಕ್ಷ್ಮಣರ ನಿಷ್ಕಷಾಯತ್ವಮುಮಂ ಸಂಸಾರ ಭೀರುತ್ವಮುಮಂ . . . ಮೆಚ್ಚಿ ಪೊಗಟ್ಟು (ಪಂರಾಪಾ. ೧೪-೨೮೪ ಪ). [ಸಂ.]

ನಿಷ್ಕಳೆ 'ನಿಷ್ಕಲ' ನೋ.

ನಿಷ್ಕಳಂಕ 'ನಿಷ್ಕಲಂಕ' ನೋ.

ನಿಷ್ಕಳಂಕಿನಿ (ನಾ). ಕಳಂಕವಿಲ್ಲದವಳು; ಕಳಂಕರಹಿತಳಾದವಳು: ಅವಳು ನಿರಪರಾಧಿನಿ. ನಿಷ್ಕಳಂಕಿನಿಯೆಂಬ ವಿಷಯದಲ್ಲಿ ಸ್ವಲ್ಪವೂ ಸಂದೇಹವಿರಲಿಲ್ಲ (ರೂಢಿ). [ಸಂ. ನಿಷ್ಕಲಂಕಿನೀ].

ನಿಷ್ಕಳಂಕೇಂದು 'ನಿಷ್ಕಲಂಕೇಂದು' ನೋ.

ನಿಷ್ಕಳತತ್ವ (ನಾ). ಪರಮಾತ್ಮತತ್ವ: ಸಕಲಸಿದ್ಧಿಗಳ ಸಾಕಾರ ತಪದಾಕಾರದ ಮುಖದಿ ಮೂರ್ತಿಸಿತೋ ನಿಷ್ಕಳತತ್ವ ಬ್ರಹ್ಮಸಾಕ್ಷಿಕ ವಾದುದೋ (ಸಿಂಗಿರಾ. ೩-೩೩). [ಸಂ. ನಿಷ್ಕಲತತ್ವ]

ನಿಷ್ಕಳಿತ 'ನಿಷ್ಕಲಿತ' ನೋ.

ನಿಷ್ಕಳೆ 'ನಿಷ್ಕಲೆ' ನೋ.

ನಿಷ್ಕಳೋಪಾಸನೆ (ನಾ). ನಿರಾಕಾರವಾದ ಪರಮಾತ್ಮನ ಉಪಾಸನೆ. ಆರಾಧನೆ : ಪರಶಿವನ ನಿಷ್ಕಳೋಪಾಸನೆಯು ಲಿಂಗದ ಮೂಲಕವೂ, ಸಕಳೋಪಾಸನೆಯು ಮೂರ್ತಿಪೂಜೆಯ ಮೂಲಕವೂ ವ್ಯಕ್ತವಾದಂತೆ ವಿಷ್ಣುವಿನ ಉಪಾಸನೆಯು . . . ಐದು ವಿಧವಾಗಿದ್ದು ಸಾಧಕನ ಯೋಗ್ಯತೆಗೆ ಅನುಸಾರವಾಗಿದ್ದು ಆಚರಿಸಲು ಮಾರ್ಗವಾಯಿತು (ಚಾರದ. ೮೧). [ನಿಷ್ಕಳ (= ನಿಷ್ಕಲ) + ಉಪಾಸನೆ]

ನಿಷ್ಕಾಂಕ್ಷಿತ (ಗು). ೧. ಬಯಸದ ; ಅಪೇಕ್ಷಿಸದ. (ನಾ). ೨. [ಜೈನ] ಸಮ್ಯಗ್ದರ್ಶನದಲ್ಲಿ ವ್ರತಗಳನ್ನು ಆಚರಿಸುವವರು ಭೋಗಗಳನ್ನು ಬಯಸದೆ ಇರುವುದು ; ಸಮ್ಯಗ್ದರ್ಶನದ ಎಂಟು ಅಂಗಗಳಲ್ಲಿ ಎರಡನೆಯದು : ಮೊದಲ ದರ್ಶನವಿಶುದ್ಧಿಯೆಂಬುದು ನಿಶ್ಶಂಕಿತ ನಿಷ್ಕಾಂಕ್ಷಿತ ನಿರ್ವಿಚಿಕಿತ್ಸಾ . . . ವಾತ್ಸಲ್ಯ ಪ್ರಭಾವನಾ ಎಂಬೆಂಟರೊಳರ್ಹದುಪದಿಷ್ಟಮಪ್ಪ ಮಾರ್ಗಮನಿದಕ್ಕುಮಾಗದೆಂಬ ಸಂಶಯಮಂ ಪತ್ತುವಿಡುವುದು ನಿಶ್ಶಂಕೆ (ಚಾವುಂಪು. ೨೪೧). 'ನಿಶ್ಶಂಕೆ', 'ನಿಷ್ಕಾಂಕ್ಷೆ' ಪರಾ. [ಸಂ.]

ನಿಷ್ಕಾಂಕ್ಷೆ (ನಾ). ೧. ಬಯಕೆಯಿಲ್ಲದಿರುವುದು ; ಅಪೇಕ್ಷೆಯಿಲ್ಲದಿರುವುದು. ೨. [ಜೈನ] ಸಮ್ಯಗ್ದರ್ಶನದ ಎಂಟು ಅವಯವಗಳಲ್ಲಿ ಎರಡನೆಯದು ; ವ್ರತಗಳನ್ನು ಆಚರಿಸುವವರು ಭೋಗಾಕಾಂಕ್ಷೆಗಳನ್ನು ಬಯಸದೆ ಇರುವುದು : ಇಹಲೋಕ ಪರಲೋಕ ವಿಷಯೋಪಭೋಗಕಾಂಕ್ಷೆಯುಮಂ ಪರಶ್ರುತಿಕಾಂಕ್ಷೆಯುಮಂ ಪತ್ತುವಿಡುವುದು ನಿಷ್ಕಾಂಕ್ಷೆ (ಚಾವುಂಪು. ೨೪೧); ಈ ದರ್ಶನ ಸೌಖ್ಯಕಷ್ಟಾಂಗಮುಂ ಶರೀರಕ್ಕವಯವಮುಂ ಮರಕ್ಕೆ ಶಾಖೆಯುಮೆಂತಂತೆ ನಿಶ್ಶಂಕೆಯುಂ ನಿಷ್ಕಾಂಕ್ಷೆಯುಂ ನಿರ್ವಿಚಿಕಿತ್ಸೆಯುಂ ಅಮೂಢದೃಷ್ಟಿತ್ವಮುಂ ಉಪಗೂಹನಮುಂ ಸ್ಥಿತಿಕರಣಮುಂ ವಾತ್ಸಲ್ಯಮುಂ ಧರ್ಮಪ್ರಭಾವನೆಯುಮೆಂದು (ಧರ್ಮಾಮೃ. ೧-೭೮); ಸಂಸಾರಮುಮಂ ಬಯಸದೆಯುಂ . . . ಮೋಕ್ಷಮಂ ಬಯಸುವುದು ನಿಷ್ಕಾಂಕ್ಷೆಯೆಂಬುದು' (ಪಸಾರ. ೪೭೯). 'ನಿಶ್ಶಂಕೆ', 'ನಿಷ್ಕಾಂಕ್ಷಿತ' ಪರಾ. [ಸಂ. ನಿಷ್ಕಾಂಕ್ಷಾ]

ನಿಷ್ಕಾಪಟ್ಯ (ನಾ). = ನಿಷ್ಕಪಟತನ : ಹಾಗೆ ಮಾತಾಡುವಾಗ ಅವನ ನಿಷ್ಕಾಪಟ್ಯ ಸೌಜನ್ಯಗಳು, ಪ್ರಶಾಂತವಾದ ಅವನ ನೀಲಿಗಣ್ಣುಗಳಲ್ಲಿ . . . ಸದಾ ಮಿನುಗುತ್ತಿದ್ದ ಸ್ನೆಹಹಾಸದಲ್ಲಿ ಮಾರ್ಪೊಳೆಯುತ್ತಿದ್ದುವು (ಪುನರು. ೪೭೩). [ಸಂ.]

ನಿಷ್ಕಾಮ (ಗು). ೧. ಪ್ರತಿಫಲದ ಆಸೆಯಿಲ್ಲದ ; ನಿಸ್ಸ್ವಾರ್ಥವಾದ ; ನಿರಾಸಕ್ತವಾದ : ಸರ್ವರಂ ಸರ್ವಮಂ ನಿಷ್ಕಾಮ ದೃಷ್ಟಿಯಿಂ ವೀಕ್ಷಿಸುತೆ ವಿಗ್ರಹಂಬೋಲುನ್ನತಾನತಂ ನಿಂದಿರ್ದ ಮನದನ್ನ ನೆಡೆಗೆಯ್ದಿ (ಶ್ರೀರಾಮಾ. ೮೪೫-೪೮೮); ಹೊಗೆಯ ಗೋಪುರವೇಳುತಿದೆ ಬಂಡೆಗಳ ಮುಂದೆ, ತರಗೆಲೆರಾಸಿಗಾಗುತಿದೆ ನಿಷ್ಕಾಮದಹನ (ತಿಲಾಲ. ೪೧-೧೪). 'ನಿಷ್ಕಾಮಕರ್ಮ' ಪರಾ. ೨. ಕಾಮವಾಸನೆಯಿಲ್ಲದ ; ಲೈಂಗಿಕಭಾವನೆಯಿಲ್ಲದ. (ನಾ). ೩. ಕಾಮವಿಲ್ಲದುದು ; ಆಸೆಯಿಲ್ಲದುದು ; ನಿಸ್ವಾರ್ಥವಾದುದು ; ಪರವಸ್ತು : ನಿಷ್ಕಾಮನ ಕಾಮಿಸುವ ಮಹಾಕಾಮಿಯೇ ಶಿವಭಕ್ತನು (ಉರಿಪಿ. ೧೯-೩೬). ೪. ಕಾಮವಿಲ್ಲದವನು; ನಿಸ್ಸ್ವಾರ್ಥಿ : ಶ್ರೀಮನ್ನಾಕಾಧಿನಾಥಾನತ ಮಕುಟಮಣಿದ್ಯೋತಿತಾಂಘ್ರಿದ್ವಯಂ ನಿಷ್ಕಾಮಂ . . . ತ್ರೈಲೋಕ್ಯನಾಥಂ ಕುಡುಗೆಮಗಮೃತಾವಾಸಮಂ (ಸುಕುಮಾ. ೧-೧) ; ಅವಗುಣನೆನಿಪ್ಪ ಕಾಮಂಗವಸಾನಮನೀಯೆ ರತಿಯುಮೊಡನಟಿಯೆ ಮುನಿಪ್ರವರಂ ನಿಷ್ಕಾಮಂ ಕರ್ಮಮೆಂಟುಮಂ ನೆಱಿಯೆ ಕಿಡಿಸಲುದ್ಯತನಾದಂ (ಮಲ್ಲಿಪು. ೧೪-೫೫); ಗುರುವೆ ನಿಮ್ಮ ಕೃಪಾವಲೋಕನದಿ ನಾನು ಸಲೆ ನಿಷ್ಕಾಮನಾದೆ (ಗಗತಾ. ೨-೨೮). [ಸಂ.]

ನಿಷ್ಕಾಮಕರ್ಮ (ನಾ). ಪ್ರತಿಫಲಾಪೇಕ್ಷೆಯಿಲ್ಲದೆ ಮಾಡುವ ಕರ್ಮ : ನಿಸ್ವಾರ್ಥ ಕಾರ್ಯ : ಪೂರ್ಣ ಚಿತ್ತಶುದ್ಧಿಯಾಗುವುದಕ್ಕೆ ನಿಷ್ಕಾಮಕರ್ಮವೆನಬೇಕು (ನಿಗಮ. ೧-೪-೧) ; ಗೀತೆಯಲ್ಲಿ . . . 'ಲೋಕಸಂಗ್ರಹ' ರೂಪವಾದ ಈಶ್ವರಸೇವೆಯನ್ನೂ ನಿಷ್ಕಾಮಕರ್ಮದಿಂದ ಲಭಿಸುವ ಆತ್ಮಪ್ರಶಾಂತಿಯ ಸ್ವರೂಪವನ್ನೂ ಸಾಧಾರಣಮತಿಗೂ ಅರ್ಥವಾಗುವಂತೆ ವಿವರಿಸಿದೆ (ಸುಕ್ಸಾರ. ೧೦೨, ವೀಶಿಕೆ) ; ಕರ್ತವ್ಯಕ್ಕಾಗಿ ಕರ್ತವ್ಯ-ಅಂತಾರಲ್ಲ ಹಾಗೆ, ನಿಷ್ಕಾಮಕರ್ಮ (ವೀರಯೋ. ೨೦). [ನಿಷ್ಕಾಮ + ಕರ್ಮ]

ನಿಷ್ಕಾಮಭಾವನೆ (ನಾ). ಪ್ರತಿಫಲಾಪೇಕ್ಷೆಯಿಲ್ಲದ ಮನೋಭಾವ ; ಅನಾಸಕ್ತ ಮನಃಸ್ಥಿತಿ : ಕೈಗಳಿಂದ ಮಾಡಬೇಕಾದುದೆಲ್ಲವನ್ನೂ ಭಗವಂತನ ಸೇವೆಯೆಂದು ನಿಷ್ಕಾಮಭಾವನೆಯಿಂದ ಮಾಡುತ್ತಾ ಭಗವದನುಗ್ರಹದಿಂದ ಸುಖಶಾಂತಿಗಳನ್ನು ಅನುಭವಿಸಬೇಕಾಗಿದೆ (ಶಕ್ತಿವಿ. ೧೦೩). [ನಿಷ್ಕಾಮ + ಭಾವನೆ]

ನಿಷ್ಕಾಮಯೋಗ (ನಾ). ನಿಷ್ಕಾಮಕರ್ಮದಿಂದ ಸಾಧಿಸುವ ಯೋಗ : ಜನಕ ಮಹಾರಾಜನ ನಿಷ್ಕಾಮಯೋಗ ಸುಪ್ರಸಿದ್ಧವಿದೆ (ಧರ್ಮಸಾ. ೧೩೫). [ನಿಷ್ಕಾಮ + ಯೋಗ]

ನಿಷ್ಕಾಮಿ (ನಾ). ಕಾಮವಿಲ್ಲದ ವ್ಯಕ್ತಿ ; ಕಾಮವನ್ನು ಜಯಿಸಿದ ವ್ಯಕ್ತಿ : ಜಿತೇಂದ್ರಿಯಂ ನಿಷ್ಕಾಮಿ ದೇಹಗುಣವಾವರಿಸದಮಲ ನಿರ್ಲೇಪನು . . . ಹಂಪೆಯ ಶಂಕರಪ್ರಭು ಮದೀಯ ಮತಿಗೀಗೆ ಪ್ರಸನ್ನತೆಯನು (ಹಚಕಾ. ೧-೯); ಅಕ್ಕಮಹಾದೇವಿಯಂತೆ ನಿಷ್ಕಾಮಿಯೆಂದೆನಿಸಯ್ಯ ಎನ್ನ (ಅಖಂಡೇ. ೭೩-೪೫). [ಸಂ. ನಿಷ್ಕಾಮಿನ್]

ನಿಷ್ಕಾರಣ (ಗು). ೧. ಕಾರಣವಿಲ್ಲದ ; ನಿಮಿತ್ತವಿಲ್ಲದ : ಉದಾರವೀರಚರಿತನಿರತಕದನಕರ್ಕಶಕ್ಷತ್ರಿಯಂಗೆ . . . ನಿಷ್ಕಾರಣಕಾಯಕಂಪನಮುಂ ನಿರಾಲಂಬನವಾಗಾಡಂಬರಮುಂ ತಕ್ಕುದಲ್ತು (ಆದಿಪು. ೧೪-೮೧ ವ). (ನಾ). ೨. ಕಾರಣವಿಲ್ಲದುದು ; ಅನಿಮಿತ್ತವಾದುದು : ದವನಕ ನೀನೆಂದೊಡಮವಶ್ಯವಾಂ ಮುಳಿವುದಿಲ್ಲ . . . ಸಂಜೀವಕಂಗೆ ನಿಷ್ಕಾರಣದಿಂ (ಪಂಚತಂ. ೯೯-೭); ಕೊಂದೆನೆಂದೋ ಎನ್ನ ಸಾರಿಯನಿಂದು ದುಗುಣವನಿಕ್ಕಿ ಗೆಲಿದಪೆನೆಂದೊ ನಿಷ್ಕಾ [ಪಾಠಾಂ. ನಿಃಕಾ]ರಣದ ಹಾಸ್ಯವದಾವುದು (ಬಸಪು. ೪೩-೧೫); ಕುಳಿರ್‌ದಿಂಗಳಾ ಮುನ್ನೆಳಗು . . . ಅಲರ ತುರುಗಲಿನ ಶೋಭೆಯಂ ಪೆರ್ಜಸುತೆ, ನಿಷ್ಕಾರಣಮೆನಲ್ಕೆ, ಮೈಥಿಲಿಯ ಮನಕೊಂದು ತಂದುದಿಂಪಂ (ಶ್ರೀರಾಮಾ. ೪೮೭-೪೭). [ಸಂ.]

ನಿಷ್ಕಾರಣಂ (ಅ). ವಿನಾಕಾರಣವಾಗಿ ; ಕಾರಣವಿಲ್ಲದೆ ; ನಿಮಿತ್ತವಿಲ್ಲದೆ : ಧೋಃಪರಿಘಂ ದುರ್ಧರಮೆಂದು ಸಾಧುಜನಮಂ ನಿಷ್ಕಾರಣಂ ಕೊಂದನೇ (ಪಂರಾಮಾ. ೯-೧೨); ಶಿವಂ ಕೌತುಕಂಬಟ್ಟು ನಿಷ್ಕಾ [ಪಾಠಾಂ. ನಿಃಕಾ]ರಣಂ ಮುನಿದ ಕಾರಣಮಂ ಪೇಳ್ದು ಬಳಿಕ್ಕ ಮುನಿವುದೆನೆ (ನಂಬಿರ. ೧೨-೬೯) ; ನಾನೆನ್ನಿಚ್ಛೆಯಿಂ ದುರುಳತನದಿಂ ನಡೆದ ಸತ್ಯಮಂ ನುಡಿದು ಹೊಲೆಯರ ಸಂಗಮಂ ಮಾಡಿ ನಿಷ್ಕಾರಣಂ ಘೋರನರಕಾಳಿಯೊಳು ಬಿದ್ದು ಹೊರಳುವವನಲ್ಲ (ಹಚಕಾ. ೮-೨೭). [ಸಂ.]

ನಿಷ್ಕಾರುಣಿಕತೆ (ನಾ). = ನಿಷ್ಕಾರುಣ್ಯ ೧ : ಕೊರಚಾಟವು, ಬಯ್ಗಳು, ನಿಷ್ಕಾರುಣಿಕತೆಯು, ಕಕ್ಕಸಮೂದಲೆಯು . . . ಆ ನಿನ್ನ ಮೃದುಮಧುರಸ್ವರದಲ್ಲಿ . . . ಮೆಯ್ನುಲಿತದಲ್ಲಿ, ಪರಮತಾಣ್ಡವದಿಂದ ನಿಜವಾಗಿ ಧನ್ಯವಾದುವು ! (ಬೆಟ್ಟಅ. ೧೩-೭). [ಸಂ. ನಿಷ್ಕಾರುಣಿಕತಾ]

ನಿಷ್ಕಾರುಣ್ಯ (ನಾ). ೧. ಕರುಣೆಯಿಲ್ಲದಿರುವಿಕೆ ; ನಿರ್ದಯತೆ ; ಕ್ರೌರ್ಯ : ಇದಱೊಳಾತಂಗಿಲ್ಲ ಕರುಣಾಸ್ಪದತೆ ನಿಷ್ಕಾರುಣ್ಯ ಭೂಯಂತ್ರದ ವಿನೋದಕ್ರೀಡೆ ಕೃಷ್ಣನದೆಂದನಾ ದ್ರೋಣ

(ಕುಸ್ಕಾಸ್ತ್ರೋ. ೮-೬೨). ೨. ಚಿನ್ನದಿಂದ ಉಂಟಾದ ಕೆಂಪು ಹೊಳಪು,— ಕಾಂತಿ. ೧, ೨ : ವಂಶಚ್ಛೇದಂ ಮೇದರೊಳ್ ನಿಷ್ಕಾರುಣ್ಯಂ ಭೂಷಣಂಗಳೊಳ್ . . . ಪಂಕ್ತಿಭೇದಂ ಲಿಪಿಗಳೊಳ್ ಅಕ್ಕುಮಲ್ಲದೆ ಜನಪದದ ಜನಂಗಳೊಳಿಲ್ಲ (ಜಗವಿ. ೨-೧ ಪ).

[ಸಂ. (ನಿಷ್ + ಕಾರುಣ್ಯ ; ನಿಷ್ಕ + ಅರುಣ್ಯ)]

ನಿಷ್ಕಾಸ (ನಾ). ೧. ಹೊರಬರುವಿಕೆ ; ಪ್ರಕಟವಾಗುವಿಕೆ ; ಆವಿರ್ಭವಿಸುವಿಕೆ : ವೈಶಾಖಮಾಸದ ಸಿತದಶಮಿಯೊಳು ನಿಷ್ಕಾಸದ ಹಸ್ತತಾರೆಯೊಳು ಆ ಶುಭ ಸಕಲವಿಮಲಬೋಧದಿಂದ ಜಿನೇಶನೊಪ್ಪಿದ ದೀಪ್ತಿಪುಂಜ (ವರ್ಧಚ. ೧೨-೬೧). ೨. ಹೊರಕ್ಕೆ ಹೋಗುವಿಕೆ ; ಬಹಿರ್ಗಮನ : "(ಆವಿಯ ಎಂಜಿನಿನ ಅಥವಾ ಮೋಟಾರು ಎಂಜಿನಿನ) ನಾಳಿಯಲ್ಲಿ ನೀರಾವಿಯ ಅಥವಾ ಚಾಲಕಪ್ರವಹಿನಿಯ ಕಾರ್ಯ ಮುಗಿದ ನಂತರ ಅದರ ಹೊರಡುವಿಕೆ : ಬಹಿರ್ಗಮನ ; ನಿಷ್ಕಾಸ" (Exhaust. ಇಂಕನಿ). ೩. ಮನೆಯ ಅಂಗಳ ; ಮನೆಯ ಮುಖ ಮಂಟಪ. [ಸಂ.]

ನಿಷ್ಕಾಸಿತ (ಗು). ೧. ದೂಷಿತವಾದ ; ನಿಂದಿತವಾದ ; ತಿರಸ್ಕೃತ ವಾದ. ೨. ಹೊರಹಾಕಿದ ; ದೂರೀಕರಿಸಿದ ; ಹೊರದೂಡಿದ. ೩. ಹೊರಬಿದ್ದ ; ಹೊರಹೊರಟ. ೪. ವಿಸ್ತರಿಸಿದ ; ಹರಡಿದ. ೫. ಇಟ್ಟ ; ಇರಿಸಿದ. ೬. ನೇಮಿಸಿದ : ನಿಯೋಜಿಸಿದ. (ನಾ). ೭. ಕುಗ್ಗಿದುದು ; ಸಂಕೋಚ ಹೊಂದಿದುದು : "ಅವಕುಂಚಿತಂ ಮೇಣವರೂಪಿತಮವಲೀನಮವನೀತ ನಿಷ್ಕಾಸಿತಂ ಅವಕೃಷ್ಟಮೆನೆ ಹರಹುಗೆಟ್ಟುದೆನಿಸಿರ್ಕು" (ಮಂಗರಾ. ೧೩೩-೨೯). ೮. ದೂರೀಕೃತ ನಾದವನು ; ಹೊರದೂಡಿಸಿಕೊಂಡವನು : "ಅವಕೃಷ್ಟಂ ನಿಷ್ಕಾ ಸಿತಂ" (ಪಸ್ತುಕೋ. ೧೦೬-೫೦) ; "ನಿಷ್ಕಾಸಿತಃ, ಅವಕೃಷ್ಟಃ— ಹೊರಗೆ ಹಾಕಲ್ಪಟ್ಟವನು" (ಸಿದ್ಧಾಂತಿ. ೨೮೮). [ಸಂ.]

ನಿಷ್ಕಾಳಜಿ (ನಾ). ಗಮನವಿಲ್ಲದಿರುವಿಕೆ ; ನಿರ್ಲಕ್ಷ್ಯ ; ಅಸಡ್ಡೆ : 'ನಿಷ್ಕಾಳಜಿತನ' ಪರಾ.

ನಿಷ್ಕಾಳಜಿ ಮಾಡು ಉಪೇಕ್ಷಿಸು ; ನಿರ್ಲಕ್ಷಿಸು : ನಿಮ್ಮ ಎದುರಿಗೆ ವಿಶಾಲ ಕರ್ಮಕ್ಷೇತ್ರ, ಜೀವನ, ಅಸೀಮ ಕರ್ತವ್ಯ ಉಂಟು— ನಿಷ್ಕಾಳಜಿ ಮಾಡಿ ಅವನ್ನು ಕೆಡಿಸಿಕೊಳ್ಳಬೇಡಿರಿ (ಕೊಂದಯಾ. ೪೫).

[←ಮರಾ. ನಿಷ್ಕಾಳಜೀ]

ನಿಷ್ಕಾಳಜಿತನ (ನಾ). ಅಲಕ್ಷ್ಯ ; ಎಚ್ಚರಗೇಡಿತನ ; ಅಜಾಗರೂ ಕತೆ : ಇಂಥ ಸಾಧನವು ನಿಷ್ಕಾಳಜಿತನದಿಂದಲೂ ಹುಡುಗಾಟಿಕೆ ಯಿಂದಲೂ ಉಪಯೋಗಿಸಲ್ಪಡುವುದು ತರವಲ್ಲ (ಪ್ರಬಂಧ. ೨೪).

[ನಿಷ್ಕಾಳಜಿ + -ತನ]

ನಿಷ್ಕಾಳಿಸು (ಕ್ರಿ). ೧. ಕಾಂತಿಗುಂದು ; ತೇಜೋಹೀನವಾಗು. ೨. (ಆಲಂ) ಬಡವಾಗು : ಹೇಳು ನಿನ್ನಯ ಮನದ ಚಿಂತೆಗೆ ಮೂಲ ಕಾರಣವೇನು ತನು ನಿಷ್ಕಾಳಿಸಿತಲಾ ತಾಯೆ ಜೀವಿಸುವಂದವೆಂತೆನುತ (ನಿಭಾಗ. ೧-೧೧-೨೧). [ನಿಷ್ಕಾಳ್ಯ + -ಇಸು]

ನಿಷ್ಕಿಂಚನ (ನಾ). ಏನೂ ಇಲ್ಲದಿರುವವನು ; ದರಿದ್ರ : ಧನವಲಾ ನಿರವಧಿಕ ನಿಷ್ಕಿಂಚನರಿಗೆ (ನಿಭಾಗ. ೧-೧೫-೧೦). [ಸಂ.]

ನಿಷ್ಕಿಂಚನತ್ವ (ನಾ). ೧. ಏನೂ ಇಲ್ಲದಿರುವಿಕೆ ; ಬಡತನ ; ದಾರಿದ್ರ್ಯ. ೨. [ಜೈನ] ಯಾರಿಂದಲೂ ಏನನ್ನೂ ದಾನವಾಗಿ ತೆಗೆದುಕೊಳ್ಳದಿರುವಿಕೆ ; ಅಪರಿಗ್ರಹ : ಬಯಸುವ ಬಯಸದ ಪಂಚೇಂದ್ರಿಯವಿಷಯಂಗಳನತಿಪ್ರಿಯಂ ಸಂತತಮಪ್ರಿಯಮೆಂಬಿವ ನುಟಾದ ತಪೋನಿಯಮಂ ನಿಷ್ಕಿಂಚಿ[ಚ]ನತ್ವಮರ್ಹನ್ಮತದೊಳ್ (ರಾಂತಿಪು. ೬-೫೬). [ಸಂ.]

ನಿಷ್ಕುಂಡಲೆ (ನಾ). ಕರ್ಣಾಭರಣಗಳಿಲ್ಲದವಳು : ಕುಂಡಲಗಳನ್ನು ಕಳೆದುಕೊಂಡವಳು : ಸಾನೀಗ ಕಳ್ಳರ ಕೈಗೆ ಸಿಲುಕಿ ನಿಷ್ಕುಂಡಲೆ ಯಾಗಿದ್ದೇನೆ ; ಅವರೆನ್ನ ಮೈಮೇಲಿದ್ದ ಕುಂಡಲಾದಿ ಆಭರಣಗಳನ್ನು ತೆಗೆದುಕೊಂಡು ಹೋದರು (ಕಪಾಕುಂ. ೪೧). [ಸಂ. ನಿಷ್ಕುಂಡಲಾ]

ನಿಷ್ಕುಟ (ನಾ). ೧. ಮನೆಯ ಬಳಿಯಿರುವ ತೋಟ : "ಗೃಹವಾಟ ನಿಷ್ಕುಟಂ ರಮಣಹೇತುವದು ಪುಷ್ಪವಾಟ ತಾಂ ಪೂದೋಟಂ" (ಪಸ್ತುಕೋ. ೩೨-೧೨) ; ನಿಷ್ಕುಟಾಂಭೋರುಹನಿಲಯಜಲಾರ್ದ್ರಂ ರತಿ ಶ್ರಾಂತಿನಿರ್ಯಲ್ಲಳನಾನಿಶ್ವಾಸಪುಷ್ಪಪ್ರಸರದಗುರುಸೌರಭ್ಯಸಂದೋಹಭಾರಾ ಕಳಿತಂ ಬಂದೊಯ್ಯನೇನೂದಿದುದೊ ಪಣವಧೂಗೇಹದಿಂ ಗಂಧವಾಹಂ (ಚಂದ್ರಪು. ೮-೪೫). ೨. ಮರದ ಪೊಟರೆ,—ಪೊಳ್ಳು : "ನಿಷ್ಕುಟಃ, ಕೋಟರಃ — ಈ ೨ ಮರದ ಪೋಟಿಲ್" (ಹಲಾಯು. ೩೦-೨೬). ೩. ಹೊಲ ; ಕ್ಷೇತ್ರ. ೪. ಬಾಗಿಲು ; ದ್ವಾರ. ೫. ಅರಸನ ಅಂತಃಪುರ : ಜನಾನಾ. ೬. = ನಿಷ್ಕುಟಕ್ಷೇತ್ರ. [ಸಂ.]

ನಿಷ್ಕುಟಕ್ಷೇತ್ರ (ನಾ). [ಜೈನ] ಲೋಕಶಿಖರದಲ್ಲಿ ಕೋಣಭಾಗ : ಸಿದ್ಧಶಿಲೆಗೆ ಕೆಳಗಿನ ಲೋಕಾಕಾರದ ಇಳುಕಲು ಭಾಗ : ಪ್ರಾಣವು ಒಂದು ದೇಹವನ್ನು ಬಿಟ್ಟು ಇನ್ನೊಂದು ದೇಹವನ್ನು ಸೇರುವ ಮುನ್ನ ತ್ರಿವಿಗ್ರಹಗತಿಯ ಮೂಲಕ ಕ್ಷೇತ್ರವನ್ನು ಹಾದುಹೋಗಬೇಕು. ನಿಷ್ಕುಟಕ್ಷೇತ್ರ ಮೂರು ವಕ್ರಗತಿಗಳನ್ನು ಉಳ್ಳುದು : ಸರ್ವೋತೃಷ್ಟವಿಗ್ರಹನಿಮಿತ್ತಂ ನಿಷ್ಕುಟಕ್ಷೇತ್ರದೊಳ್ ಪುಟ್ಟುವ ಜೀವಕ್ಕೆ . . . ನಿಷ್ಕುಟಕ್ಷೇತ್ರಪ್ರಾಪಣನಿಮಿತ್ತಂ ತ್ರಿವಿಗ್ರಹ ಗತಿಯಕ್ಕುಮೆಂದಱಿವುದು (ತತ್ತ್ವಪ್ರ. ೧೦೧). [ನಿಷ್ಕುಟ + ಕ್ಷೇತ್ರ]

ನಿಷ್ಕುಟಿ (ನಾ). ದೊಡ್ಡ ಏಲಕ್ಕಿ : "ಪೃಥ್ವಿಕಾ, ಚಂದ್ರಬಾಲಾ, ಏಲಾ, ನಿಷ್ಕುಟಿಃ, ಬಹುಲಾ—೫ ದೊಡ್ಡಯಾಲಕ್ಕಿಃ ಹೆಸರುಗಳು" (ಸಿದ್ಧಾಂತಿ. ೧೪೧) [ಸಂ.]

ನಿಷ್ಕುಟಿಲ (ನಾ). ಅಪ್ಪಟವಾದುದು : ಶುದ್ಧವಾದುದು : ಪುಟ ವಿಟ್ಟರಾಜೀಳು ಬಣ್ಣದ ಚಿನ್ನ ನಿಷ್ಕುಟಿಲದ ಮಿಸುನಿಯಪ್ಪುದಂತೆ ಘಟಿತ ಕರ್ಮವ ಸುಟ್ಟರೆಲ್ಲರು ಮುಕ್ತರು (ಭರಚ. ೬೮-೨೬). [ಸಂ.]

ನಿಷ್ಕುಹ (ನಾ). ನಿಷ್ಕುಟ ೨ : "ನಿಷ್ಕುಹಃ, ಕೋಟರಂ—೨ ಮರದ ತೊರ್ರೇ ಹೆಸರು. ಮರದ ಡೊರ್ರೆ, ಗಿಡದ ತೊರಲು, ಮರದ ಪಟ್ರೆ, ಮರದ ಬೊಕ್ಕೆ" (ಸಿದ್ಧಾಂತಿ. ೧೧೩). [ಸಂ.]

ನಿಷ್ಕೂಜಿತ (ನಾ). ೧. ಪಕ್ಷಿಗಳ ವಿಶೇಷವಾದ ಕೂಗು,— ಅತಿ ಯಾದ ಕಿರುಚಾಟ. ೨. ಪಕ್ಷಿಗಳ ಕೂಗಿಲ್ಲದುದು : ಪಕ್ಷಿ ನಿಷ್ಕೂಜಿತಂ ನೀರವಂ ಝಿಲ್ಲಿಕಾನಾದ ಘರ್ಘರಘೋರಕರ್ಕಶಂ (ಶ್ರೀರಾಮಾ. ೧೮೦-೧೦೮). [ಸಂ.]

ನಿಷ್ಕೃತ (ಗು). ೧. ಬಿಟ್ಟ ; ತ್ಯಜಿಸಿದ. ೨. ಹೊಂದಿಸಿದ : ಅಳವಡಿಸಿದ : ಶ್ರೀಷೇಣಭೂಪತಿ . . . ಶ್ರೀಪ್ರಭವಮುನಿಪ್ರಭುವ ಪಾದಮೂಲದೊಳ್ ನಿಷ್ಕೃತದಿಗಂಬರಶ್ರೀಕನಾಗಿ ನಿಖಿಲಕರ್ಮನಿರ್ಮುಕ್ತಿ ಯಿಂ ಪ್ರಾಪ್ತಸಪ್ತಪರಮಸ್ಥಾನನಾದಂ (ಚಂದ್ರಪು. ೪-೨೪ ಪ). (ನಾ). ೩. ತನ್ನ ಅಪರಾಧಕ್ಕಾಗಿ ಪ್ರಾಯಶ್ಚಿತ್ತ ಮಾಡಿಕೊಂಡವನು. [ಸಂ.]

ನಿಷ್ಕೃತಿ (ನಾ). ೧. ಯಾವ ಕರ್ಮವನ್ನೂ ಮಾಡದಿರುವುದು : ಕ್ರಿಯಾರಹಿತವಾಗಿರುವುದು. 'ನಿಷ್ಕೃತಿತನ' ಪರಾ. ೨. ಬಿಡು ಗಡೆ ; ವಿಮೋಚನೆ : ರಕ್ಕಸನು ಲಲನಾಹತಿಗೊಡಂಬಟ್ಟಿಜಗುವನಿತ ಜೊಳವನ ಮಂತ್ರಿಗಳು ಮತವಿದಲ್ಲೆಂದಡ್ಡವಿಸಿ ದೂಹತಿಯ ಹಸ್ತವ ಹಿಡಿದು ರಣನಿಷ್ಕೃತಿಗೆ ರಂಜಕವಾವುದನಿತಜೊಳೆಂದರವರಂದು (ತೊರರಾ. ೬-೪೫-೩೨) ; ಆರಸ ನಿಷ್ಕೃತಿಯುಂಟು ವಿಪ್ರಘ್ನರಿಗೆ ತಿಳಿಯೆ ಕೃತಘ್ನರಿಗೆ

ತಾ ನರಕನಲ್ಲದೆ ಬೇಱೆ ನಿಷ್ಕೃತಿಯಿಲ್ಲ ಕೇಳೆಂದ (ತಿಸ್ಮೃತಾಂ. ೪-೧೫೧) ; ಎಂತಾದುದೋ ಈ ವಿಪತ್ತಿದಕೆ ನಿಷ್ಕೃತಿಯನೆಂತೊ ಶಿವನೇ ಬಲ್ಲಂ(ಚಿಪು. ೪೬-೩೧) ; ಪರಸೇವನಾಪರರಿಗೆಲ್ಲಿಯದು ಗತಿ ನಿರಯದಿಂದಂ ನಿಷ್ಕೃತಿ (ನೆಂಕಾಂಪಾ. ೫-೪-೩೯). ೩. ಪ್ರಾಯಶ್ಚಿತ್ತ ; ಪರಿಹಾರ : ಅರಸಿಯನು ಪತಿಸಹಿತ ಮಂಚದೊಳಿರಲು ಕಾಬುದು ಸಲ್ಲದದು . . . ಆರು ಕೆಂಡರು ಆತನೊಬ್ಬನೆ ಧಾರುಣಿಯಲಿ ಸುತೀರ್ಥಯಾತ್ರಾಧಾರದಲಿ ತಿರುಗುವುದು ಸುತ್ತಲು ವರುಷವೊಂದಜಲಿ ಚಾರು ನಿಷ್ಕೃತಿಯೆನಿಲು (ಕುವ್ಯಾಪ. ೧೪-೨೩) ; ಮಜಹಿನಲಿ ಕರ್ಣನನು ಕೊಂದವು ತಿಳಿವಡೀಯಣ್ಣನ ವಧಿಸಿ ದಳುತತಿಗೆ ನಿಷ್ಕೃತಿಯೆಂತುಟನಗೆಂದ (ತಿಸ್ಮೃಕ್ರ. ೩-೧೪) ; ಪತಿವಚನಕೆ ಮಾರ್ಸುಡಿವುದುಂಟಾದೊಡಾ ಸತಿಗೆ ನಿಷ್ಕೃತಿಯಿಲ್ಲ (ಮೋಹತ. ೬-೪) ; ಶ್ರುತಿ ಧರ್ಮಶಾಸ್ತ್ರಾಗಮಸ್ಮೃತಿವಿಚಾರದಿಂ ಗತಿಗೆಟ್ಟ ಬ್ರಹ್ಮಹತ್ಯಾದಿ ಪಾತಕಕೆ ನಿಷ್ಕೃತಿ ತವ ಸ್ಮರಣಮಾತ್ರದೊಳಪ್ಪುದು (ಜೈವಿಭಾ. ೬-೧೪). ೪. (ಋಣವನ್ನು) ತೀರಿಸುವುದು. ೫. ಪೂರ್ವಸ್ಥಿತಿಗೆ ಬರುವುದು ; ಮೊದಲಿನ ಸ್ಥಿತಿಗೆ ಬರುವುದು. [ಸಂ.]

ನಿಷ್ಕೃತಿತನ (ನಾ). ಯಾವ ಕರ್ಮವನ್ನೂ ಮಾಡದಿರುವಿಕೆ ; ಕೈಯಾರಾಹಿತ್ಯ ; ಕರ್ಮರಹಿತತೆ : ರೂಪುನಾಮಾಶ್ರಯವೆನಿಪ ಪರಮಾತ್ಮತತ್ತ್ವನನು ತಾ ಪರಮನಾಗಜಂದು ನಿಷಯನಿರೂಪವನು ಬಿಟ್ಟತುಳ ಸುಖದಲಿ ಸ್ಥಾಪವಡದವನಂತೆ ನಿಷ್ಕೃತಿತನದಲಿರುತಿಹುದು (ನಿಧಾಗ. ೧೧-೨೦-೪೨). [ನಿಷ್ಕೃತಿ+-ತನ]

ನಿಷ್ಕೃಪ (ನಾ). ಕೃಪೆಯಿಲ್ಲದವನು ; ನಿಷ್ಕರುಣಿ ; ಕ್ರೂರಿ : ಆಪದೋಷನನೇಳಿ ಕೊಂದ ಪಾಪಿಯಂ ಪಲವು ತೆಜದ ಕೊಲೆಗಳಿನೀ ನಿಷ್ಕೃಪನಂ ಕೊಲ್ಲೆನುತಂ ಬರ್ಪ ಪುರಜನಂಗಳ ರವಂಗಳಂ ಸತಿ ಕೇಳ್ದಳ್ (ಸುಕುಮಾ. ೬-೫೩) ; ಈ ಪೊಟಲನಾಳ್ವ ನೃಪಂ ನಿಷ್ಕೃಪಂ ನಿಷ್ಕಾರುಣಮನೇಕ ಋಷಿಯರಂ ಘಾತಿಸಿದಂ (ಪಂಂಪಾಮಾ. ೯-೧೧೧ ಸ). [ಸಂ.]

ನಿಷ್ಕೃಪೆ (ನಾ). ಕೃಪೆಯಿಲ್ಲದಿರುವಿಕೆ ; ನಿರ್ದಯತೆ ; ಕ್ರೌರ್ಯ : ಕೈತವದ ಅಪದಸೆಗೆ ಭಯಗೊಳ್ಳದಿರು ನಿಷ್ಕೃಪೆಯಲಿರು (ಕುವ್ಯಾಸ. ೧೨-೧೯) ; ಕೃಪನು ಧೃಷ್ಟದ್ಯುಮ್ನನುಂ ನಿಷ್ಕೃಪೆಯನಾಂತು (ಸಾಳ್ವಭಾ. ೪೭-೪೨) ; ಎತ್ತ ನೆಂದ್ಯೆತಂದುದಿಂದ್ರ ಜಾಲೋಪಮಿತ ವಿಭ್ರಮ ಕೈಕಾವಜನ ರೂಪಾಂತು ಕಾಲಳುಲವೆತ್ತುದಂ ನೃಪ ಕೇಳಿ ಬನಕಪ್ಪೆಯನಿತ್ತು ನಿಷ್ಕೃಪೆಯೋಳೀವುತ್ತಮಂ ಎತ್ತಲಾದುದು (ವೆಂಕಾವಿ. ೨-೯-೯).

[ಸಂ. ನಿಷ್ಕೃಪಾ]

ನಿಷ್ಕೃಷ್ಟ (ಗು). ೧. ನಿರ್ದಿಷ್ಟವಾದ ; ನಿಖರವಾದ ; ಕರಾರುವಾಕ್ಕಾದ ; ಖಚಿತವಾದ : "ಸರಿಯಾದ ; ಹೆಚ್ಚು ಕಡಿಮೆಯಿಲ್ಲದ ; ಯಥಾರ್ಥವಾದ; ನಿಷ್ಕೃಷ್ಟವಾದ" (Accurate. ಇಂಕಸಿ). ೨. ಗೊತ್ತುಪಡಿಸಿದ; ನಿಷ್ಕರ್ಷೆಯಾದ: ನಿಷ್ಕೃಷ್ಟ ಅಥವಾ ನಿರ್ಧಾರಿತ ಕಾಲಮಾನ (ಭೂವಿಸ. ೨೦). 'ನಿಷ್ಕೃಷ್ಟಕಾಲಮಾನ' ಪರಾ. ೩. ಸೆಳೆದ ; ಎಳೆದ. (ನಾ). ೪. ನಿರ್ದಿಷ್ಟವಾದುದು ; ನಿಖರವಾದುದು ; ಕರಾರುವಾಕ್ಕಾದುದು : ಒಂದು ಕೃತಿಯ ಕಾವ್ಯಗುಣವನ್ನು ನಿಷ್ಕೃಷ್ಟವಾಗಿ ಅಳೆದು ವಿಂಗಡಿಸುವುದು ಸಮಕಾಲೀನಕೃತಿಗಳ ವಿಷಯದಲ್ಲಿ ಕಷ್ಟ (ಕಾವ್ಯಳು. ೧೩) ; ತಾತಾ ಅವರು . . . ಯಾವ ವಿಚಾರವನ್ನು ತೆಗೆದುಕೊಂಡರೂ ಅದನ್ನು ತೂಕ ಹಾಕಿ ಅದರ ಸಾಧಕ ಬಾಧಕಗಳನ್ನು ಪರಿಗಣಿಸಿ ತಮ್ಮ ನಿಷ್ಕೃಷ್ಟವಾದ ಅಭಿಪ್ರಾಯವನ್ನು ಕೊಡುತ್ತಿದ್ದರು (ಭಾಗ್ಯಶ್ರೀ. ೧೧೬); ಪ್ರೌಢವಾದ ವಿಜ್ಞಾನವಿಷಯವನ್ನು ಕನ್ನಡದಲ್ಲಿ ಎಷ್ಟು ಲಲಿತವಾಗಿ ಸರಾಗವಾಗಿ ನಿಷ್ಕೃಷ್ಟವಾಗಿ ಲೀಲಾಜಾಲವಾಗಿ ಬರೆಯಬಹುದೆಂಬುದಕ್ಕೆ ಈ ಕೃತಿ ಅನೂಲ್ಯ ನಿದರ್ಶನವಾಗಿದೆ(ಪ್ರಾವಿವಿ. VII, ಮುಕ್ಕುಪಿ). [ಸಂ.]

ನಿಷ್ಕೃಷ್ಟ ಕಾಲ (ನಾ). ಕರಾರುವಾಕ್ಕಾದ ಕಾಲ ; ನಿರ್ದಿಷ್ಟವಾಗಿ ಗೊತ್ತುಪಡಿಸಿದ ಕಾಲ : "ಒಂದು ಗಂಟೆಯ ೧ ೬೦ ಭಾಗ : ನಿಮಿಷ; ಕ್ಷಣ (ಕಾಲ); ನಿಷ್ಕೃಷ್ಟಕಾಲ" (Minute. ಇಂಕಸಿ). [ನಿಷ್ಕೃಷ್ಟ+ಕಾಲ]

ನಿಷ್ಕೃಷ್ಟ ಕಾಲಮಾನ (ನಾ). ನಿಖರವಾಗಿ ಗೊತ್ತುಪಡಿಸಿದ ಕಾಲ ಪ್ರಮಾಣ ; ನಿರ್ದಿಷ್ಟವಾಗಿ ನಿರ್ಣಯಿಸಿದ ಕಾಲದ ಗಣನೆ ; ನಿಷ್ಕರ್ಷೆ ಮಾಡಿದ ಕಾಲಮಾನ : ಕಲ್ಕತ್ತೆಯಲ್ಲಿ ಸಾಮಾನ್ಯ ಕೆಲಸ ಕಾರ್ಯಗಳಿಗೆ . . . ಕಲ್ಕತ್ತಾ ಸ್ಥಳೀಯ ನಿಷ್ಕೃಷ್ಟಕಾಲಮಾನವನ್ನು ಅನುಸರಿಸುತ್ತಾರೆ (ಭೂವಿಸ. ೫೧). [ನಿಷ್ಕೃಷ್ಟ+ಕಾಲಮಾನ]

ನಿಷ್ಕೃಷ್ಟತೆ (ನಾ). ನಿರ್ದಿಷ್ಟತೆ ; ನಿಖರತೆ ; ಕರಾರುವಾಕ್ಕು ; ಸ್ವಲ್ಪವೂ ಹೆಚ್ಚು ಕಡಮೆ ಇಲ್ಲದಿರುವಿಕೆ : "ನಿಷ್ಕೃಷ್ಟತೆ, ಸೂಕ್ಷ್ಮತಾದೃಷ್ಟಿ" (Accuracy. ಇಂಕಸಿ); ಇದರ ರಚನೆಯಲ್ಲಿ ಕಂಡುಬರುವ ಶಿಲ್ಪಶಾಸ್ತ್ರದ ನಿಷ್ಕೃಷ್ಟತೆಯೂ (accuracy) ಆಶ್ಚರ್ಯಕರವಾದುದು (ಗಣಿಚ. ೫). [ಸಂ. ನಿಷ್ಕೃಷ್ಟತಾ]

ನಿಷ್ಕೃಷ್ಟ ಮಾಪನ (ನಾ). [ತರ್ಕಶಾ] "(ಒಂದು ಭಾವನೆಗೆ ಅಥವಾ ಕಲ್ಪನೆಗೆ, ಅದರ ಮುಖ್ಯಲಕ್ಷಣಗಳನ್ನು ಕೊಟ್ಟು) ವ್ಯಾಪ್ತಿನಿರ್ಧಾರ ಮಾಡುವುದು, ಲಕ್ಷಣ ಹೇಳುವುದು. ಮೊತ್ತ, ಮೊ. ನ್ನು ಕರಾರುವಾಕ್ಕು ತಿಳಿದುಕೊಳ್ಳುವುದು : ನಿಷ್ಕೃಷ್ಟ ಮಾಪನ" (Determination. ಇಂಕಸಿ). [ನಿಷ್ಕೃಷ್ಟ+ಮಾಪನ]

ನಿಷ್ಕೃಷ್ಟ ವಿಜ್ಞಾನ (ನಾ). ಯಥಾರ್ಥವಾದ ವಿಜ್ಞಾನ : ನಿಷ್ಕೃಷ್ಟ ವಿಜ್ಞಾನಗಳ (Exact Sciences)ಲ್ಲಿ ಭೌತಶಾಸ್ತ್ರವು ಅಗ್ರಸ್ಥಾನವನ್ನು ಪಡೆದಿದೆ (ಭೌತವಿ. ೧೯). [ನಿಷ್ಕೃಷ್ಟ+ವಿಜ್ಞಾನ]

ನಿಷ್ಕೇವಲ, ನಿಷ್ಕೇವಳ (ಗು). ೧. ಶುದ್ಧವಾದ ; ಅಪ್ಪಟವಾದ. ೨. ವಿಶೇಷವಾದ ; ವಿಶಿಷ್ಟವಾದ. **ನಿಷ್ಕೇವಳ** : ೨. ಅವುದಶೇಷಲೋಕವಿಷಯಸ್ಥಿತಿಯಲ್ತುಖಿಳಾಗಮಾರ್ಥಮುಂ ಭಾವಿಪೊಡಲ್ತು ಸತ್ಕವಿಪರಂಪರೆಯಿಂ ಪರಿಗೀತಮಾಗಿ ನಿಷ್ಕೇವಳವಾದ ರೂಢಿವಶದಿಂ ಸಲೆ ಸಲ್ವುದಿದಲ್ತೆ ಶಿಷ್ಟಸಂಭಾವಿತಮಪ್ಪ ಕಾವ್ಯಸಮಯಂ ಭುವನತ್ರಯವನ್ತು ಗೋಚರಂ (ಕಾವ್ಯಾಪ. ೪೪೪). [ಸಂ.]

ನಿಷ್ಕೇವಳ 'ನಿಷ್ಕೇವಲ' ನೋ.

ನಿಷ್ಕೈತವ (ನಾ). ಮೋಸವಿಲ್ಲದುದು ; ಕಪಟವಿಲ್ಲದುದು : ವಿವಂಸುವೆನಿದಜಕೂಳಗೆ ನಿಷ್ಕೈತವವೆನಿಪ ನಿಜಧರ್ಮವನು ವಾಸ್ತವವೆನಿಪ ವಸ್ತುವನು (ನಿಧಾಗ. ೧೦-೪-೮). [ಸಂ.]

ನಿಷ್ಕ್ರಮ (ನಾ). ೧. ಹೊರಕ್ಕೆ ಹೋಗುವಿಕೆ ; ಬಹಿರ್ಗಮನ. ೨. ಬುದ್ಧಿಶಕ್ತಿ ; ಬುದ್ಧಿನುತ್ತೆ ; ಬುದ್ಧಿಸಾಮರ್ಥ್ಯ : "ನಿಷ್ಕ್ರಮಃ, ಧೀಶಕ್ತಿಃ—ಗ್ರಹಣಧಾರಣಸ್ಮರಣಾದಿ ಬುದ್ಧಿಸಾಮರ್ಥ್ಯದ ಹೆಸರು" (ಸಿದ್ಧಾಂಶಿ. ೩೧೩). [ಸಂ.]

ನಿಷ್ಕ್ರಮಣ (ನಾ). ೧. = ನಿಷ್ಕ್ರಮ ೧ : "ತೋಡುಃ=ನೆರವುಂ, ನಿಷ್ಕ್ರಮಣವುಂ" (ಕಾಶಕ್ಯ. ೨೨೯). ೨. ಹೋಡಶಸಂಸ್ಕಾರಗಳಲ್ಲಿ ಒಂದು ; ಶಿಶುವು ಹುಟ್ಟಿದ ನಾಲ್ಕನೆಯ ತಿಂಗಳಿನಲ್ಲಿ ಮೊದಲ ಬಾರಿಗೆ ಮನೆಯಿಂದ ಹೊರಗಡೆ ಕರೆದು ತಂದು ಸೂರ್ಯದರ್ಶನ ಮಾಡಿಸುವ ಒಂದು ಸಂಸ್ಕಾರ : ನಾಲ್ಕನೆಯ ತಿಂಗಳಲ್ಲಿ ಶಿಶುವನ್ನು ಮನೆಯಿಂದ ಹೊರಗೆ ಕರೆತಂದು ಸೂರ್ಯದರ್ಶನವನ್ನು ಮಾಡಿಸಿ . . . ಈ ನಿಕ್ಷೇಪವನ್ನು ರಕ್ಷಿಸಿ ಎಂದು ಪ್ರಾರ್ಥಿಸುವುದು ನಿಷ್ಕ್ರಮಣವು (ಆರ್ಯಧ. ೧೨೩). [ಸಂ.]

ನಿಷ್ಕ್ರಮಿಸು (ಕ್ರಿ). ೧. ಹೊರಕ್ಕೆ ಹೋಗು ; ತೆರಳು ; ಹೊರಡು : ತಲೆವಾಗಿ, ನಿಷ್ಕ್ರಮಿಸುವಳು (ಪಟ್ಟಅ. ೧೩-೧೯) ; ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತ ನಿಷ್ಕ್ರಮಿಸಿದರು (ದಾಸಸಾ. ೧೬).

೨. [ರಾಜನೀ] (ಪರದೇಶಗಳಿಗೆ) ಹೋಗಿ ಶಾಶ್ವತವಾಗಿ ನೆಲಸು ; ವಲಸೆಹೋಗು : ಈ ಮುಂದೆ ರಾಜ್ಯವು . . . ನಿಷ್ಕ್ರಮಿಸಿದವರ ಸ್ವತ್ತೆಂಬುದಾಗಿ ವಿಧಿಯ ಮೂಲಕ ಸಾರಿರುವ ಸ್ವತ್ತಿನ ಸಂಬಂಧವಾಗಿ . . . ಪ್ರಭಾವವುಳ್ಳುದಾಗಿರತಕ್ಕುದಲ್ಲ (ಭಾಧಾನ. ೧೯).

[ನಿಷ್ಕ್ರಮಣ+–ಇಸ್ಕು]

ನಿಷ್ಕ್ರಯ (ನಾ). ೧. ಬೆಲೆ ; ಕಿಮ್ಮತ್ತು ; ಮೌಲ್ಯ. ೨. ಪಡೆದುದಕ್ಕೆ ಪ್ರತಿಯಾಗಿ ಕೊಡುವುದು ; ಪ್ರತಿಫಲ ; ಋಣ ಪರಿಹಾರ : ಅಂತು ಕೈತವಮಿಲ್ಲದೆ ವಿಧೇಯತ್ವದ ತುದಿಯನೆಯ್ದೆ ಮಣಿಯೆಂಬ ಪಸುರ್ಮಣಿಯಂ . . . ತಂದುರ್ವರಾಸ್ಯತಿಲಕನಪ್ಪ ದೇವದೇವಂಗವಟಯ್ಸಿ ತತ್ಪರಮಪ್ರಸಾದ ನಿಷ್ಕ್ರಯಕ್ಕೆ ತಲೆಯೆಂದು ಪೂಣ್ದಾಳಾದರ್ (ಶಾಂತಿಪು. ೧೧–೫೫ ಪ). ೩. ನಷ್ಟವನ್ನು ಸರಿದೂಗಿಸುವಿಕೆ ; ಪರಿಹಾರವನ್ನು ನೀಡುವಿಕೆ : "ಕ್ಷತಿಪೂರ್ಣ, ನಿಷ್ಕ್ರಯಂ" (Compensation. ಪಾರಿಸಿ. ೧೮). ೪. ಇನಾಮು ; ಬಕ್ಷೀಸು. ೫. ವಿನಿಮಯ. ೬. ವಿನಿಮಯದ್ರವ್ಯ. [ಸಂ.]

ನಿಷ್ಕ್ರಾಂತ (ಗು). ೧. ಮನೆಯಿಂದ ಹೊರಕ್ಕೆ ಹೊರಟಿರುವ. (ನಾ). ೨. (ನಾಟಕದಲ್ಲಿ) ರಂಗಸ್ಥಳದಿಂದ ಹೊರಟವನು,—ಒಳಕ್ಕೆ ಹೋಗುವವನು. ೩. ಮೇಲಕ್ಕೇರಿದವನು ; ಒಂದರಿಂದ ಮತ್ತೊಂದಕ್ಕೆ ಹೋಗುವವನು : ಅನಂತಗುಣಶಕ್ತಿಕಚೈತ್ಯೇಕಪರಿಣಾಮಮಪೂರ್ವಕರಣಗುಣಸ್ಥಾನ ನಿಷ್ಕ್ರಾಂತಂ . . . ದರ್ಶನಾವರಣಚತುಷ್ಕಮುಮಂತರಾಯಪಂಚಕಮುಮಂ ನಿರ್ಮೂಲಮಪ್ಪಂತೊರ್ಮೊದಲೊಳೆ ಕಿಡಿಸಿದಾಗಳ್ (ಸುಕುಮಾ. ೮–೬೨ ಪ). [ಸಂ.]

ನಿಷ್ಕ್ರಾಂತಿ (ನಾ). ೧. ಹೊರಗಡೆ ಹೋಗುವುದು. ೨. [ಜೈನ] ಐವತ್ತುಮೂರು ಗರ್ಭಾನ್ವಯಕ್ರಿಯೆಗಳಲ್ಲಿ ನಲವತ್ತೆಂಟನೆಯದು ; ಸಂಸಾರವನ್ನು ಬಿಟ್ಟು ತಪಸ್ಸಿಗೆ ಹೊರಡುವಿಕೆ ; ℙ ರಾಜ್ಯವನ್ನು ಬಹುಕಾಲ ಪರಿಪಾಲಿಸಿದ ನಂತರ ಯಾವುದೋ ಒಂದು ಕಾಲದಲ್ಲಿ ವಿರಕ್ತಿಯುಂಟಾಗಿ, ಜ್ಯೇಷ್ಠಪುತ್ರನಿಗೆ ರಾಜ್ಯಭಾರವನ್ನು ವಹಿಸಿ, ಹೇಳಬೇಕಾದುದನ್ನು ಹೇಳಿ ಮನೆಯನ್ನು ತ್ಯಜಿಸಿ ಹೊರಡುವುದು : ಆಧಾನಮುಂ . . . ನಿಷ್ಕ್ರಾಂತಿಯುಂ ಯೋಗಸನ್ನಾಹಮುಂ . . . ನಿರ್ವಾಣಪರ್ಯಂತಮಪ್ಪಯ್ವತ್ತುಮೂಱು ಗರ್ಭಾನ್ವಯಕ್ರಿಯೆಯೊಳ್ (ಚಾವುಂಪು. ೨೧೨). [ಸಂ.]

ನಿಷ್ಕ್ರಾಮ (ಗು). ೧. ಹೊರಕ್ಕೆ ಬರುತ್ತಿರುವ,—ಹೊರಡುತ್ತಿರುವ. (ನಾ). ೨. [ನಾಟ್ಯ] ಕಣ್ಣುಗಳ ಒಂಬತ್ತು ಬಗೆಯ ಅಭಿನಯಗಳಲ್ಲಿ ಒಂದು ; ℙ "ಹೊರಹೊರಡುವಂತೆ ಆಲಿಯನ್ನು ಕಣ್ಣಿನ ಮಧ್ಯದಲ್ಲಿ ನಿಲ್ಲಿಸುವುದು" (ಲಾಸ್ಯರಂ. ೨೬೪ ಗದ್ಯಾನುವಾದ) : ಭ್ರಮಣ, ವಲನ, ಪಾತ, ಚಲನ, ಪ್ರವೇಶ, ವಿವರ್ತ, ಸಮುದ್ವೃತ್ತ, ನಿಷ್ಕ್ರಾಮ, ಪ್ರಾಕೃತ ಈ ಒಂಬತ್ತು [ಸ್ವನಿಷ್ಠ] ಆಲಿಯ ಭೇದಂಗಳ್ (ಲಾಸ್ಯರಂ. ೩–೫೪ ಪ) ; ಆಲಿ . . . ಪೊಱಮಡೆ ತೋಱಲ್ ಮಧ್ಯದಲ್ಲಿ ನಿಷ್ಕ್ರಾಮಾಖ್ಯಂ (ಲಾಸ್ಯರಂ. ೩–೫೭). [ಸಂ.]

ನಿಷ್ಕ್ರಿಯ (ನಾ). ೧. ಯಾವ ಕರ್ಮಕ್ಕೂ ಒಳಪಡದವನು ; ನಿಷ್ಕರ್ಮಿ : ನಿಷ್ಕ್ರಿಯ ನಿರಪೇಕ್ಷ ನಿನ್ನ ಚರಣಂ ಶರಣಕ್ಕೆಮಗಿಂ ಜಿನೇಶ್ವರಾ (ಸುಕುಮಾ. ೪–೪೮) ; ಶರಣು ನಿಷ್ಕ್ರಿಯ ನಿಷ್ಕಲಾಪನೆ (ಗಗತಾ. ೧–೪೩). ೨. ಯಾವ ಕಾರ್ಯವನ್ನೂ ಮಾಡದವನು : ಸುಮ್ಮನೆ ಕೂರುವವನು ; ಕ್ರಿಯಾಹೀನ : ಇಲ್ಲದ ಪ್ರತಿಷ್ಠೆಗೆ ಬಿದ್ದು ನಿಷ್ಕ್ರಿಯನಾಗಿ ಕೂಡದೆ ಕೇಶವನು ಈ ಕೆಲಸಕ್ಕಾದರೂ ಕೈಹಾಕಿದ್ದ (ಸಮಚೀ. ೬೩೦) ; ಪಿಂಟೋ ತನ್ನ ಪ್ರಭಾವದ ಕುರಿತು ಪೂರ್ಣ ನಿಷ್ಕ್ರಿಯನಾಗಿರಲಿಲ್ಲ (ಭ್ರಮಾನ. ೮೩). ೧, ೨ : ಹರಿಯೆಂಬಂತೆಯೆ ಕೃಷ್ಣ ನದಾವನೊ ಚತುರಾತ್ಮನು ಸಲೆ ನಿಷ್ಕ್ರಿಯನು ಆ ಅರಿಮಥನನ ಚಕ್ರವ ಪಿಡಿದನ ನಮಿಸಿರಿ ಸರ್ವರು ಸಂಪದಕೆ (ಧ್ವನ್ಯಾಲೋ. ೯೬). [ಸಂ.]

ನಿಷ್ಕ್ರಿಯತೆ (ನಾ). ಕ್ರಿಯಾಶೂನ್ಯತೆ ; ಯಾವ ಕಾರ್ಯವನ್ನೂ ಮಾಡದಿರುವಿಕೆ : ನೈಷ್ಕರ್ಮ್ಯ ಬೇರೆ, ನಿಷ್ಕ್ರಿಯತೆ ಬೇರೆ ಎಂಬುದನ್ನು ತಿಳಿಯುವ ಶಕ್ತಿ ಜನಸಾಮಾನ್ಯರಲ್ಲಿ ಉಳಿದಿರಲಿಲ್ಲ. ಆ ಸಂದರ್ಭದಲ್ಲಿ ಭಕ್ತಿಮಾರ್ಗವು ಬಹುದೊಡ್ಡ ಆಶ್ರಯವನ್ನು ಕಲ್ಪಿಸಿಕೊಟ್ಟಿತು (ಕರ್ನಾಕ. ೩೮) ; ಮತ್ತೆಂಥದೇನೋ ವಿಚಿತ್ರವಾಗಿರುವ ಹೃದಯ, ಪಿತ್ಥಕೋಶಗಳ ಜೊತೆ ಎಗರಾಡದಿದ್ದರೆ ಮಾತ್ರ ಸಫಲತೆ, ಮೈಪರಿವೆಯಿರದ ನಿಷ್ಕ್ರಿಯತೆಯಲ್ಲಿ ಸಂಭವಿಸುವ ಸಫಲತೆ (ಪ್ರಶ್ನೆ. ೩೬). [ಸಂ. ನಿಷ್ಕ್ರಿಯತಾ]

ನಿಷ್ಕ್ರಿಯತ್ವ (ನಾ). ನಿಷ್ಕ್ರಿಯತೆ : ಆ ಹಂಸನ ನಿಷ್ಕ್ರಿಯತ್ವವನ್ನು ಹೇಳುವ ಚಾತುರ್ಯವನ್ನು ನೋಡಿರಿ (ಕರ್ನಾಸಂ. ೭೫). [ಸಂ.]

ನಿಷ್ಕ್ರಿಯವೃತ್ತಿ (ನಾ). ಯಾವ ಕಾರ್ಯವನ್ನೂ ಮಾಡದಿರುವ ಸ್ವಭಾವ ; ಕ್ರಿಯಾಶೂನ್ಯ ಮನೋಭಾವ : ಅವನ ನಿಷ್ಕ್ರಿಯವೃತ್ತಿಯು . . . ದಿನಂಪ್ರತಿಯ ದುರ್ಬೋಧನೆಯ ಮಂತ್ರ ಊದಿ ಪ್ರೇರೇಪಿಸುತ್ತಿದ್ದಿತು (ಜಯಂತ. ೨೦೪). [ನಿಷ್ಕ್ರಿಯ + ವೃತ್ತಿ]

ನಿಷ್ಕ್ರಿಯಾತ್ಮಕ (ನಾ). ನಿಷ್ಕ್ರಿಯೆಯಿಂದ ಕೂಡಿದುದು ; ಕ್ರಿಯಾಶೂನ್ಯತೆಯಿಂದ ಕೂಡಿದುದು : ನಿಷ್ಕ್ರಿಯಾತ್ಮಕವಾದ ಧರ್ಮದಿಂದಾಗಲೀ ಧರ್ಮವಿರೋಧವಾದ ಕರ್ಮದಿಂದಾಗಲೀ ಕಲ್ಯಾಣವಿಲ್ಲ (ಭಾರದ. ೧೧೦). [ಸಂ.]

ನಿಷ್ಕ್ರಿಯಾವಾದಿ (ನಾ). ಎಲ್ಲವೂ ದೈವೇಚ್ಛೆಯಿಂದಲೇ ನಡೆಯುತ್ತದೆ, ಅದೃಷ್ಟವಿದ್ದರೆ ತಾನಾಗಿಯೇ ಆಗಿ ಹೋಗುತ್ತದೆ ಎಂದು ವಾದಿಸುವವನು ; ಕಾರ್ಯಸಿದ್ಧಿಗೆ ಅದೃಷ್ಟವೇ ಕಾರಣ, ಪೌರುಷವಲ್ಲ ಎಂದು ಹೇಳುವವನು : ನನ್ನ ಪಾಲಿನ ರಾಸಿ, ಗ್ರಹ, ನಕ್ಷತ್ರಗಳು ಹೀಗೆ ಒಳಸಂಚು ಮಾಡಿ ನನ್ನ ಭಾಗ್ಯಚಕ್ರವನ್ನು ನಡಿಸಹತ್ತಿದ ಮೇಲೆ ಈ ನಿಷ್ಕ್ರಿಯಾವಾದಿಯು ಸಕ್ರಿಯಾವಾದಿಯಾಗುವ ಮಾತು ದೂರ ಉಳಿಯಿತು (ಜಯಂತ. ೮೦).

[ಸಂ. ನಿಷ್ಕ್ರಿಯಾವಾದಿನ್]

ನಿಷ್ಕ್ರಿಯೆ (ನಾ). ಯಾವ ಕೆಲಸವನ್ನೂ ಮಾಡದಿರುವಿಕೆ ; ತೂಷ್ಣೀಂಭಾವ ; ℙ ಬುದ್ಧನ ಸಮಕಾಲೀನನಾದ ಪೂರಣಕಸ್ಸಪನೆಂಬುವನು ಆತ್ಮೋದ್ಧಾರಕ್ಕೆ ನಿಷ್ಕ್ರಿಯೆಯೇ ಸರಿಯಾದ ಮಾರ್ಗವೆಂದು ಹೇಳಿದ್ದಾನೆ. ಇವನ ವಾದಕ್ಕೆ 'ಅಕ್ರಿಯಾವಾದ' ವೆಂದು ಹೆಸರು : ಈಶ್ವರನ ಕೃತಿಯಾದ ಪ್ರಕೃತಿಯಲ್ಲಿ ನಿಷ್ಕ್ರಿಯೆಗೆ ಸ್ಥಾನವಿಲ್ಲ (ಭಾರದ. ೧೧೫) ; ಯಾವುದನ್ನೂ ಮಾಡದ ನಿಷ್ಕ್ರಿಯೆಯೇ ಸರಿಯಾದ ಮಾರ್ಗ ಎಂಬುದು ಇವನ ತತ್ವ (ಕವಿಕೋ. I, ೧೫೯).

[ಸಂ. ನಿಷ್ಕ್ರಿಯಾ]

ನಿಷ್ಕ್ರೋಧಿ (ನಾ). ಕ್ರೋಧವಿಲ್ಲದವನು ; ಶಾಂತಚಿತ್ತ : ನಿರವದ್ಯ ನಿಷ್ಕಾಮಿ ನಿಷ್ಕ್ರೋಧಿ ನಿರ್ಲೋಭಿ ನಿರಸೂಯ (ಏಕೋಪು. ೬–೮೬).

[ಸಂ. ನಿಷ್ಕ್ರೋಧಿನ್]

ನಿಷ್ಪಲಿತ (ನಾ). ದೋಷವಿಲ್ಲದುದು ; ಸ್ಖಾಲಿತ್ಯವಿಲ್ಲದುದು ; ನಿರ್ದೋಷವಾದುದು : ನೀಲಾಳಕಿಯನೊಡ್ಡುವೆನು ಬಾಲಕಿಯ ಉಳಿದ ಧನವೆಮ್ಮೈವರಿಗೆ ನಿಷ್ಪಲಿತವಿದು ಹೂಡೆನಲು ಹರುಷದ ಲಳಿಯ ಚೌಪಟಮಲ್ಲ ಸಾರಿಯ ಸಾಲ ಜೋಡಿಸಿದ (ಕುಪ್ಯಾಸ. ೧೪–೨೬). [ಸಂ.]

ನಿಷ್ಪಪ್ತ (ಗು). ೧. ಚೆನ್ನಾಗಿ ಕಾಯಿಸಿದ ; ತಪ್ತವಾದ : ಸುತಪ್ತಾಯೋರಸಪಾಯನ ನಿಷ್ಪಪ್ತಾಯಸ್ತಂಭಾಲಿಂಗನ . . . ಯಂತ್ರ ನಿಷ್ಪೀಡನಾದಿಗಳಿಂ ನಾರಕರ್ಗೆ ಸಂಕ್ಲಿಷ್ಟಾಸುರರ್ ದುಃಖಮಂ ಪುಟ್ಟಿಸಿದೊಡಂ (ತತ್ತ್ವಪ್ರ. ೧೨೩). ೨. ಅಗ್ನಿಯಿಂದ ಶುದ್ಧಗೊಳಿಸಿದ ;

ಪುಟಕ್ಕಿಟ್ಟ : ಸಮುಚಿತುರಸ್ರಸಂಸ್ಥಾನನುಂ ನಿಷ್ಪ್ರಕನಕವರ್ಣನುಂ . . . ಅಪ್ರತಿಹತತಾನನನುಮಾಗಿ (ಆದಿಪು. ೧೫-೩೫); ನಿಷ್ಪ್ರಸುವರ್ಣಕಾಂತಿ ಕಮುನೀಯಂ ನಾಲ್ಕೆರಲುಟ್ಟಿದಿರ್ಪುದು ನಿಂಹಾನನದೇಶಮಂ ಚರಮ ದೇಹಂ ದೇವದೇವೇಶನಾ (ಸುಲ್ಲಿಪು. ೧೪-೧೯೪); ಆ ದೇವಂ . . . ನಿಜಮಂದಿರಪುರೋಭಾಗದ ಚಂಚತ್ಪಂಚರತ್ನಮಯಮಂಡಪಮಧ್ಯಾಧಿಷ್ಠಿತ ನಿಷ್ಪ್ರಕಾಂಚನ ಪಂಚಾನನನಿಷ್ಪರದೊಳ್ ಎನೆವ ಜಿನೇಂದ್ರಬಿಂಬಮನಳುಂಬವಿದೆಂದಿನಮಬ್ಬುಯಿಂ ಪ್ರತಿಷ್ಠಿಸಿ (ಚಂದ್ರಪು. ೪-೬೪ ವ). ೩. ಜೆನ್ನಾಗಿ ಬೇಯಿಸಿದ,—ಕುದಿಸಿದ. [ಸಂ.]

ನಿಷ್ಪುರ 'ನಿಟ್ಟುರ' ನೋ.

ನಿಷ್ಪುರಬ್ರಹ್ಮಚಾರಿ (ನಾ). ಬ್ರಹ್ಮಚರ್ಯವನ್ನು ಕಟ್ಟುನಿಟ್ಟಾಗಿ ಪಾಲಿಸುವವನು,—ನಿಷ್ಠೆಯಿಂದ ಅನುಸರಿಸುವವನು : ನಿನ್ನಂತ ನಿಷ್ಪುರಬ್ರಹ್ಮಚಾರಿ ನಾನಲ್ಲ (ಜಯಂತ. ೬೯೯).

[ನಿಷ್ಪುರ (<ನಿಟ್ಟುರ)+ಬ್ರಹ್ಮಚಾರಿ]

ನಿಷ್ಪೂರ 'ನಿಟ್ಟುರ' ನೋ.

ನಿಷ್ಪ್ಲವ (ನಾ). ಬೇಡ, ಬೆಸ್ತ ಮುಂತಾದ ಕೀಳುಜಾತಿ ಮತ್ತು ಆ ಜಾತಿಗೆ ಸೇರಿದವನು : "ಕಿರಾತಃ, ಶಬರಃ, ನಿಷ್ಪವಿಃ . . . ಮ್ಲೇಚ್ಛಃ—ಈ ೮ ಬೇಡರ್ಮೊದಲಾಗುಳ್ಳಂತ್ಯಜಾತಿಗಳ್" (ಹಲಾಯು. ೯೪-೪೪೫); "ಈರ್ಮಕಾಜಂ ಕೀಲಿಗನೆನಿಕ್ಕುವಿವಾ ಜಾತಿಧರ್ಮದಿಂ ಶ್ರೀಷ್ಮನಹ ಕಬ್ಬಿಲಂ ನಿಷ್ಪ್ಲವನಕ್ಕುಂ" (ಮುಂಗರಾ. ೧೧೨-೬). [ಸಂ.]

ನಿಷ್ಪ್ಲ (ಗು). ೧. ಇರಿಸಿದ ; ಇಟ್ಟ ; ಮಡಗಿದ ; ನೆಲೆಗೊಳಿಸಿದ : ಕೃಷ್ಣದ್ವೈಪಾಯನನಂ ಕಂಡಜಾತಶತ್ರು ತನ್ನೇಜುವ ಸ್ಫಟಿಕಶಿಲಾತಳದ ಪಟ್ಟಕದಿಂದಿಟ್ಟುದು ನಿಜಾನುಜಸಹಿತಮಿದಿರ್ವಂದು ಧರಾತಳನಿಷ್ಪಲಾಟ ಪಟ್ಟಂ ಸಾಷ್ಟಾಂಗವೆಜಿಗಿ ಪೊಡವಟ್ಟು (ಪಂಪಭಾ. ೭-೫೯ ಪ). ೨. (ಧರ್ಮ ಮೊದಲಾದ ವಿಚಾರಗಳಲ್ಲಿ) ಶ್ರದ್ಧೆಯುಳ್ಳ,—ಆಸಕ್ತಿಯುಳ್ಳ. (ನಾ). ೩. (ಧರ್ಮ ಮೊದಲಾದ ವಿಚಾರಗಳಲ್ಲಿ) ಶ್ರದ್ಧೆಯುಳ್ಳವನು ; ಆಸಕ್ತಿಯುಳ್ಳವನು ; ದೃಢವಾದ ನಂಬಿಕೆಯುಳ್ಳವನು : ಈತ ಕ್ಷತ್ರಿಯಯೋಧರಿಗೆ ಸಲ್ಲುವ ಸಕಲ ಅಸ್ತ್ರಶಸ್ತ್ರ ವಿದ್ಯೆಗಳನ್ನು ಬಹುಕಾಲ ಸಾಧಿಸಿ ಸಿದ್ಧಿಸಿಕೊಂಡಿದ್ದ ನಿಷ್ಠ (ಶಾಂತಲಾ. ೧೧೭). [ಸಂ.]

ನಿಷ್ಠತೆ (ನಾ). ನಿಷ್ಠೆಯಿಂದ ಕೂಡಿರುವಿಕೆ ; ಶ್ರದ್ಧೆಯಿಂದ ಕೂಡಿರುವಿಕೆ : ಪತಿಭಕುತಿಯುನ್ನತಿಕೆಯಲಿ ನಿಷ್ಠತೆಯಲಾ ಸಾವಿತ್ರಿಯಾಕೆಯ ನುತಚರಿತ್ರದವೋಲು ನಿನ್ನು ದ್ರೌಪದಾದೇವಿ ಹಿತವನಾಚರಿಪಪಳು (ಕುಪ್ಯಾಅ. ೨೩-೨). [ಸಂ. ನಿಷ್ಠ+ತಾ]

ನಿಷ್ಠಾಗರಿಷ್ಠ (ನಾ). ನಿಷ್ಠೆಯಿಂದ ಶ್ರೇಷ್ಠನಾದವನು ; ಶ್ರದ್ಧಾಸಕ್ತಿಗಳಿಂದ ಉತ್ತಮನಾದವನು ; ಶ್ರದ್ಧಾಳು : ದಂಡಿಭಕ್ತರವರು ಕೆಲಕಾಲಪರಿಯಂತ ಶಿವಯೋಗ ನಿಷ್ಠಾಗರಿಷ್ಠರಾಗಿದ್ದು ತರುವಾಯ ಪರಮಶಿವಸಾಯುಜ್ಯವನ್ನು ಪಡೆದರು (ಪುರಾವಿ. ೧೯೧). [ಸಂ.]

ನಿಷ್ಠಾತ್ಮ (ನಾ). ನಿಷ್ಠೆಯುಳ್ಳವನು ; ಶ್ರದ್ಧೆಯುಳ್ಳವನು : ವನ ವನದೊಳಾಶ್ರಮದೊಳಗೆ ಕುಲವನಿತೆಸಹಿತ . . . ತಪೋನ್ನತಾದಿಗಳನಿತಲಿ ನಿಷ್ಠಾತ್ಮನಾದೊಡೆ ವಿನುತ ವಾನಪ್ರಸ್ಥನೆಂಬರು (ಕುಪ್ಯಾಅ. ೧೪-೪೬).

[ಸಂ.]

ನಿಷ್ಠಾದೀಕ್ಷೆ (ನಾ). [ವೀಶೈ] ಒಂದು ಬಗೆಯ ದೀಕ್ಷೆ : ಆದಿದೀಕ್ಷೆಯ ವಿದ್ಯೆಯಂ ಕರ್ಮಮಂ ತೀರ್ಚಿ ಸಾದರದ ಮೋಕ್ಷವೀವುದವೆರಡನೆಯದೆ ನಿಷ್ಠಾದೀಕ್ಷೆ ಸಂಚಿತಾಗಾಮಿಗಳ ಬಿಡಿಸಿ ತತ್ಕಾರ್ಬುಮುಂ ಭೋಗದಿಂ ಪೋದುದೆನಿಸುತ ಮೋಕ್ಷವೀವುದು (ವೀಶೈಪು. ೬-೬-೬೩).

[ಸಂ. ನಿಷ್ಠಾದೀಕ್ಷಾ]

ನಿಷ್ಠಾನ (ನಾ). ೧. ಊಟದೊಂದಿಗೆ ನಂಜಿಕೊಳ್ಳುವ ಗೊಜ್ಜು, ಪಳಿದ್ಯ ಮುಂತಾದ ವ್ಯಂಜನಪದಾರ್ಥ : "ವ್ಯಂಜನವುದು ನಿಷ್ಠಾನಂ" (ಸಮ್ಯಕ್ತ್ವಕೌ. ೯೨-೪); "ತೇನುನಂ, ನಿಷ್ಠಾನಂ—ತೇವನ ವೆಂಬ ಮಜ್ಜಿಗೆಪಳಿದ್ಯ, ಹಸೀಮಜ್ಜಿಗೆ, ಹಸೀಯೊಳಿ, ಮಸರುಜಟ್ಟ (ಸಿದ್ಧಾಂತಿ. ೨೪೬). ೨. ಅಂಬಲಿ ; ಗಂಜಿ : "ನಿಷ್ಠಾನಮೆನಲಂಬಲಿಗೆ ಪೆಸರೆನಿಕ್ಕುಂ" (ಸುಂಗರಾ. ೬೪-೨). [ಸಂ.]

ನಿಷ್ಠಾಪರ (ನಾ). = ನಿಷ್ಠಾತ್ಮ ; ನಿಷ್ಠಾಪರಂ ಪ್ರಭಾತಾನುಷ್ಠಾನ ನಿಮಿತ್ತ ಮೆಟ್ಟನಲ್ಲಿಂದಂ ತದ್ಗೋಷ್ಠಿಯನುಟುಮದು ಮುನೀಂದ್ರಗರಿಷ್ಠಂ ಜಾಬಾಲಿನಾಮಧೇಯ ಮುನೀಂದ್ರಂ (ಶಾದಂಬು. ೬೦೫); ಅಂತ ವಿಶ್ರಾಂತನಿಯಮನಿಷ್ಠಾಪರನಾಗಿ ಮೂಲಗುಣಂಗಳಿಂದೆ ದಶಧರ್ಮಮು ನೇಜುಸಿಕೊಂಡು . . . ಆ ಮುನೀಶ್ವರಂ ಮೇಳಿಸೆ ಕೀರ್ತಿ ಕೀರ್ತಿ ಮುಖದಂತೆ ದಿಶಾರದನೀರದಂಗಳಂ (ಸುಲ್ಲಿಪು. ೧೧-೫೩) ; ಶ್ರೀಷ್ಮನಳ ಸಂಹಾರಿ ಭಕ್ತ ಶ್ರೀಷ್ಮನರಿಪಡ್ವರ್ಗದೂರಂ ನಿಷ್ಠಿತೇಂದ್ರಿಯ ಲಿಂಗಸುಖ ನಿಷ್ಠಾಪರಂ (ಬಸಪು. ೫೧-೪). [ಸಂ.]

ನಿಷ್ಠಾಪರತ್ವ (ನಾ). ನಿಷ್ಠೆಯಿಂದಿರುವಿಕೆ ; ಶ್ರದ್ಧೆಯಿಂದ ಕೂಡಿರುವಿಕೆ : ನಿಷ್ಠಾಪರತ್ವದಿಂ ಪರಮೇಷ್ಠಿಸ್ತವನಮನನೂನಮಂ ಮಾಡಿ ಗುಣಜ್ಯೇಷ್ಠ ನೆನಿಸಿದರ್ ಕವಿಪರಮೇಷ್ಠಿಗುಣಸ್ತವನಮೆಮಗೆ ದಲ್ ಈರ ಣೇಯಂ (ಪಾರ್ಶ್ವಪು. ೧-೧೬). [ಸಂ.]

ನಿಷ್ಠಾಪಿಸು (ಕ್ರಿ). ಶ್ರದ್ಧೆಯಿಂದ ಆಚರಿಸು,—ಮಾಡು ; ನೆರವೇರಿಸು : ಶ್ರುತಪಂಚಮಿಯೊಳು ಸಿದ್ಧ ಶ್ರುತಭಕ್ತಿಗೆಯ್ದುಚ್ಚರಿಸಿ ಶ್ರುತಭಕ್ತಿ ಆಚಾರ್ಯಭಕ್ತಿಯಂ ಸ್ವಾಧ್ಯಾಯಮಂ ನಿಷ್ಠಾಪಿಸಿ ಶಾಂತಿ ಭಕ್ತಿಯಂ ಮಾಟ್ಟಿ (ಶಾಸ್ತ್ರಕಾ. ೫೨-೭); ಅಸಂಕ್ಷೇಪಾದ್ಧಿಯವಶೇಷವಾಗುತ್ತಿರ ಲುತ್ತರ ಭವಾಯುಸ್ಸ ನಿಷ್ಠಾಪಿಸಲ್ಪಡುಗುಂ (ಸೊಮ್ಮಸಾ. ೩೦-೧); ನೆನವುತ್ತಂ ಮುನಿಯ ಸಮಿಾಪಕ್ಕೆ ಬರೆ ಅವರು ಆತ್ಮಧ್ಯಾನಮಂ ನಿಷ್ಠಾಪಿಸಿ ಕುಳ್ಳಿರ್ದು ತದನಂತರಂ ತಾವು ಮನಃಪರಿಯ ಜ್ಞಾನಿಗಳು ಅಪ್ಪುದಱಂ (ನೋಂಪಿಕ. ೨೫-೭).

[ನಿಷ್ಠಾಪನ+ಇಸು]

ನಿಷ್ಠಾಭಕ್ತಿ (ನಾ). [ವೀಶೈ] ಶ್ರದ್ಧೆ, ನಿಷ್ಠೆ, ಅವಧಾನ, ಅನುಭವ, ಆನಂದ ಮತ್ತು ಸಮರಸ ಎಂಬ ಭಕ್ತಿಯ ಆರು ಮೆಟ್ಟಿಲುಗಳಲ್ಲಿ ಎರಡನೆಯದು ; ಸ್ಥಿರವಾದ ನಂಬುಗೆಯಿಂದ ಕೂಡಿದ ಭಕ್ತಿ ; ಶ್ರದ್ಧೆಯಿಂದ ಕೂಡಿದ ಭಕ್ತಿ : ಮೂಲವಾದ ಧ್ಯೇಯವಸ್ತು ವಿನ ವಿನಾ ಬೇರೆಡೆಗೆ ಮನವನ್ನು ಹೋಗಗೊಡಲೀಯದೆ, ಆ ವಸ್ತು ವಲ್ಲದೆ ಬೇರೆ ಆಧಾರವಿಲ್ಲವೆಂದು ತಿಳಿಯುವುದೇ ನಿಷ್ಠಾಭಕ್ತಿ (ಮಹಾಸಾ. ೫೨ ಪ್ರಸ್ತಾವನೆ) ; ಆ ಶ್ರದ್ಧಾಭಕ್ತಿಯೇ ನಿಷ್ಠಾಭಕ್ತಿಯಾಗಿ ಆ ಮಹೇಶ ಸ್ಥಲದ ಕ್ರಿಯಾಚರಣೆಗೆ ಸಹಾಯವನ್ನು ನೀಡುವುದು (ಭಾರದ. ೨೫೪).

[ಸಂ.]

ನಿಷ್ಠಾವಂತ (ಗು). ೧. ಶ್ರದ್ಧೆಯಿಂದ ಕೂಡಿದ ; ಸ್ಥಿರವಾದ ನಂಬಿಕೆಯುಳ್ಳ : ಹೊಸದಾಗಿ ಕಾಂಗ್ರೆಸ್ಸಿಗೆ ಸೇರಿದ್ದ ನಿಷ್ಠಾವಂತ ಜನರೂ ಸಹ ರಂಗನಾಥಮಿತ್ರಮಂಡಳಿಯವರ ಉಪಟಳವನ್ನು ತಡೆಯಲಾರದೆ ನಿಸ್ಸಹಾಯಕರಾಗಿ ಸುಮ್ಮನಿದ್ದರು (ಪಂಜಪಂ. ೧೫೦). ೨. (ಧಾರ್ಮಿಕ ವಿಚಾರಗಳಲ್ಲಿ) ಶ್ರದ್ಧೆಯುಳ್ಳ ; ಆಚಾರನಿಷ್ಠನಾದ: ಗಂಗಾಧರಶಾಸ್ತ್ರಿಗಳಂಥ ನಿಷ್ಠಾವಂತ ಬ್ರಾಹ್ಮಣಜ್ಞರಿಗೆ ಒಬ್ಬ ಸಚ್ಛಿಷ್ಯ ದೊರೆತಂತಾಗಿತ್ತು (ಹೂಸಕ್ಷಿ. ೬೬). (ನಾ). ೩. ಶ್ರದ್ಧೆಯಿಂದ ಕೂಡಿದವನು ; ಸ್ಥಿರವಾದ ನಂಬಿಕೆಯುಳ್ಳವನು : ಅಗಾಗ್ಗೆ ಅವಳು ತನ್ನ ಮನೆಯಲ್ಲಿ ನಿಷ್ಠಾವಂತರಾದ ಭಕ್ತರನ್ನು ಸಭೆ ಸೇರಿಸುತ್ತಿದ್ದಳು (ಪುಸರು. ೩೨೯) ; ಈ ಮನುಷ್ಯನು ಮಹಾನಿಷ್ಠಾವಂತನಾದ

ಹಾಗೂ ಉತ್ಸಾಹಿಯಾದ ಕೆಲಸಗಾರರು (ಸೀಕಲ್ಯ. ೩೩). ೪. ಆಚಾರ ನಿಷ್ಠನಾದವನು : ಯಾವುದಾದರೂ ನಿಷ್ಠಾವಂತರ ಮನೆಯ ಹುಡುಗಿಯನ್ನು ನೋಡಿ ನಿನ್ನ ಅಪೂರ್ವನ ಮದುವೆ ಮಾಡಿ ಸುಖಿಸಿರು (ಭಾರತ. ೧).

[ಸಂ. ನಿಷ್ಠಾವತ್]

ನಿಷ್ಠಾವಂತೆ (ನಾ). ಶ್ರದ್ಧೆಯಿಂದ ಕೂಡಿದವಳು : ನನ್ನ ಹೆಂಡತಿ ನಿಷ್ಠಾವಂತೆ (ಪುಸಮು. ೪೭೧). [ನಿಷ್ಠಾವಂತ + -ಎ೨]

ನಿಷ್ಠಿತ (ಗು). ೧. ಸ್ಥಿರವಾಗಿ ಕೂಡಿಕೊಂಡಿರುವ ; ಚೆನ್ನಾಗಿ ಸೇರಿಕೊಂಡಿರುವ, ಹೊಂದಿಕೊಂಡಿರುವ. ೨. ಗೊತ್ತಾದ ; ವ್ಯವಸ್ಥಿತವಾದ ; ನಿರ್ದಿಷ್ಟಪಡಿಸಿದ : 'ನಿಷ್ಠಿತಕಾರ್ಯ' ಪರಾ. ೩. ನಂಬಿಕೆಯಿಂದ ಕೂಡಿದ : ಶ್ರದ್ಧೆಯುಳ್ಳ. ೪. ಚೆನ್ನಾಗಿ ತಿಳಿದಿರುವ ; ಪರಿಣತ. (ನಾ). ೫. ಸ್ಥಿರವಾಗಿ ಕೂಡಿಕೊಂಡಿರುವುದು ; ಚೆನ್ನಾಗಿ ಹೊಂದಿಕೊಂಡಿರುವುದು : ಶಬ್ದಾಲಂಕಾರ ನಿಷ್ಠಿತಮಪ್ಪಲಂಕಾರದೊಳಂ ವ್ಯಾಸವಾಲ್ಮೀಕಿಕಶ್ಯಪಪ್ರಭೃತಿವಿರಚಿತಂಗಳಪ್ಪ ಮಹಾಕಾವ್ಯಂಗಳೊಳಂ . . . ಅತಿಪ್ರವೀಣ[ನು]ಮಾಗೂಢ ಸರ್ವಜ್ಞ ಮಹೇಂದ್ರಜಾಣ (?)[ನು]ನಾಗಿ (ಸಂಭಧಾ. ೫-೩೪ ಪ) ; ನಿರವಧಿಸ್ಥಿತ ಲಿಂಗನಿಷ್ಠಿತ ಸುರುಚಿರೇಂದ್ರಿಯರತುಳ ಚಿದಮಳಸಿದಪರುಂ (ಬಸಪು. ೬ ೧೬) : ಈ ಸಂಸ್ಕಾರಕಾರ್ಯ . . . ಇತರರ ಅನುಭವಗಳನ್ನು ಪರೀಕ್ಷಿಸಿ ತನ್ನದರೊಡನೆ ಹೋಲಿಸುವುದರಿಂದಲೋ ಅಥವಾ ಕೃತಿರೂಪದಲ್ಲಿ ನಿಷ್ಠಿತವಾಗಿರುವ ಅನ್ಯರ ಅನುಭವದ ಅಧ್ಯಯನದಿಂದಲೋ ಆಗಬಹುದು (ಸೌಂದಸ. ೫). ೬. ಹೊಂದಿಕೊಂಡಿರುವವನು ; ಸೇರಿಕೊಂಡಿರುವವನು : ಆ ಮುನೀಂದ್ರಂ ತಪೋನುಷ್ಠಾನದೊಳ್ ನಿಷ್ಠಿತನಾದನೀ ನರೇಂದ್ರಂ ರಾಜ್ಯಾನುಷ್ಠಾನದೊಳ್ ನಿಷ್ಠಿತನಾದಂ (ಅಪು. ೬-೨೪ ಪ). [ಸಂ.]

ನಿಷ್ಠಿತಕಾರ್ಯ (ನಾ). ಗೊತ್ತುಪಡಿಸಿದ ಕಾರ್ಯ ; ನಿಗದಿ ಮಾಡಿದ ಕಾರ್ಯ : ಯುಧಿಷ್ಠಿರಂ ನಿಷ್ಠಿತಕಾರ್ಯಮನನುಷ್ಠಿಸೆ ನಿಜಪರಿಜನಮೆಲ್ಲಮನೀಯೊಂದು ವರುಷಮುಂ ನಿಮ್ಮ ನಿಮ್ಮ ಬಲ್ಲಂದ ದೊರೆನೆಂದು ಧೌಮ್ಯಸಮೇತಂ ಪೋಗಲ್ಯೇಱುಂ (ಪಂಪಭಾ. ೮-೫೦ ಪ).

[ನಿಷ್ಠಿತ + ಕಾರ್ಯ]

ನಿಷ್ಠಿತಾತ್ಮ (ನಾ). ೧. ನಿಷ್ಠೆಯಿಂದ ಕೂಡಿದ ಮನಸ್ಸುಳ್ಳವನು ; ದೃಢಮನಸ್ಸಿನವನು : ಪರಮಾನಂತಶಚಮತ್ಕೃಯ್ಯೆಕನಿಳಯರ್ ಲೋಕೈಕಪೂಜ್ಯರ್ ಪ್ರಸಿದ್ಧರಮೂರ್ತರ್ ನಿರಪಾಯಚಕ್ಷರರಜೀಯರ್ ನಿಷ್ಠಿತಾತ್ಮರ್ . . . ದಯೆಗೆಯ್ವರಕ್ಕೆಮಗನಂತೋದಾತ್ತ ಸಂಸಿದ್ಧಿಯಂ (ಸುಳುಪಾ. ೧-೩); ಪರಮಾತ್ಮಂ ನಿಷ್ಠಿತಾತ್ಮಂ ಜನಪತಿ ಪರಮಸ್ವಾಮಿ . . . ವ್ಯತಿಪತಿ ಸುಳುಮಾರಂ ಕಥಾನಾಯಕಂ (ಸುಳುಪಾ. ೧ ೩೭).

[ಸಂ. ನಿಷ್ಠಿತಾತ್ಮನ್]

ನಿಷ್ಠೀವ (ನಾ). ಉಗುಳುವಿಕೆ ; ತುಪ್ಪಿಕ್ಕುವಿಕೆ : ಥೂಕರಿಸುವಿಕೆ. [ಸಂ.]

ನಿಷ್ಠೀವನ (ನಾ). = ನಿಷ್ಠೀವ : "ನಿಷ್ಠೇವಃ. ನಿಷ್ಠ್ಯೂತಿ . ನಿಷ್ಠೀವನಂ, ನಿಷ್ಠೇವನಂ — ೪ ಕೇಳರಿಕೆ, ಉಗುಳುವಿಕೆ, ಥೂಕರಿಸುವಿಕೆ" (ನಿಘಂ೨ತಿ. ೩೩೮) ; ದೇವ ಕಂಸಿರೆ ಕುರುಪತಿಯ ಮಾಯಾವಿಡಂಬನ ವಿದ್ಯೆಯನು ನಿಷ್ಠೀವನಾವಿರ್ಭೂತ ಸಲಿಲಪ್ರಭ ಡಂಬರದ (ಕುಪಾಸ್ವ. ೫-೫). [ಸಂ.]

ನಿಷ್ಠುರ (ಗು). ೧. ಕಠಿಣವಾದ ; ಬಿರುಸಾದ ; ಒರಟಾದ : ತನ್ನ ನಿಷ್ಠುರಚರಣಸಂಘಟ್ಟದೊಳ್ ಪಡಲ್ಬಟ್ಟ ವೀರಭಟರ ಮಕುಟಂಗಳೊಳ್ ತಲೆಗರೆದಿರ್ದನೆ ಗೆತ್ತು ಸೋದಿಸಿ ನೋಡಿಯುಂ . . . ಕುರುಕ್ಷೇತ್ರ ದೊಳ್ಲಯುಂ ದುರ್ಯೋಧನನನಜಸಿ ಕಾಣದೆ ನಿಸ್ಸಯಂಬಟ್ಟು (ಗದಾಪ. ೬ ೪೯ ಪ) : ಅಸ್ಮತ್ಪಕ್ಷದ್ವಿಷ್ ಮುರ್ಧಾಭಿಷಿಕ್ತಾಧರಪೀಠದ ಜವನ ಬಾಯೊಳ್ ತೂಂಕಿದಂ ತನ್ನ ನಿಷ್ಠುರ ಶಾಣಾಪತಿಯಿಂ ಪ್ರಭಂಜನಸುತಂ ಹಸ್ತಪ್ರಹಾರಂಗಳಂ (ಕರ್ಣಾಪ. ೧೫-೧೦೭). ತುರಗ ಗರ್ಜನೆ ರಥದ ಚೀತ್ಕೃತಿ ಸಂಧಸುಸ್ಸಂಕಾರ ಕಲಿಯಬ್ಬರದೆ ಸಾರ್ಥನ ಮೊಜ್ಜೆ ನಿಷ್ಠುರ ದೇವದತ್ತರವ ಆರರೆ ಹೊಜಜಿಸ್ತವು (ಕ.ಭಾ.ಪಿ. ೬ ೬೩) ; ಶಾಪದಿನಹಲ್ಯೆ ತಾಂ ಸರ್ವ ರತನೂನಂಗಳಿಂದೆ ಜಡಮೂಪದಿಂ ನಿಷ್ಠುರಶಿಲಾತಪಸ್ವಿನಿಯಾಗಿ . . . ಒರಗಿರ್ದ ಸುಕ್ಷೇತ್ರಂ (ತ್ರಿಪುರಾ. ೩೩ ೨೩೭). ೨. ಕ್ರೂರವಾದ ; ನಿರ್ದಯವಾದ : 'ನಿಷ್ಠುರ ಚರಿತ್ರ' ಪರಾ. ೩. ಕಠೋರವಾದ ; ಕರ್ಕಶವಾದ : (ರಂಯ್ಯನೆ ಹೋಗಿ, ದೀಕ್ಷಿತನ ರಟ್ಟೆಯನ್ನು ತಡುಕಿ ಹಿಡಿದೇದುಕೊಂಡೊಯ್ದು . . . ನಿಷ್ಠುರಕಳ್ಳರಿಂದ) ಸನಿ ! ನೀನಾಳ್ವ ಅಳಿಚೂರಿಕೆಯು ಕುತ್ತಿಸಿಂದ. ಬಿಚ್ಚರುಬಸಿರಿಗೆ ಇತ್ತ ಸುಳಿಯಬೇಡ ! (ಹೆಬ್ಬ. ೩೭-೬). (ನಾ). ೪. ಕಠಿಣವಾದುದು ; ಬಿರುಸಾದುದು ; ಒರಟಾದುದು : "ಕಠಿನಂ ನಿಷ್ಠುರಂ ಕಠೋರಂ" (ಸಪ್ತಕಾ. ೧೦೫-೨೫) : "ನಿಟ್ಟುರ ನಿಷ್ಠುರಂ" (ಕವಿಕ. ೨೦೩) ; ತೆಗೆದತಿ ನಿಷ್ಠುರತೆಯಿಲಾ ಕಮಠಂ ವಿಷವಕ್ತ್ರನಾಗಿ ನಾಲಗೆಯರಡಾದ ಪಾಸುಗಿ ಕರಂ ತಲೆವಾಗಿಯುಂ (ಸಪ್ತಪು. ೭-೪) ; ಕೊಟ್ಟ ಧನಿಕರು ಬಂದು ನಿಷ್ಠುರದ ಮಾತಾಡಿ, ಕೆಟ್ಟ ಬೈ ಬೈಯುವರು (ಕಂಪು. ೨೨-೧). ೫. ಕ್ರೂರವಾದುದು : ನಿರ್ದಯವಾದುದು : ಮಾತಂಗನಾಗಿರ್ದುಮೇಂ ನಿಷ್ಠುರಮಿಲ್ಲಾ ಕಾರಮಿತಂಗೆನಿಸಿ ಧನರ ವಾನೋನ್ನಿತಂ ಮತ್ತಮೊರ್ವಂ ಬರುತಿರ್ದಂ (ಕಾದಂಪೂ. ೭೬) : ಇರು ಕೊಳುಂ ಭೋರಾಂಧ ಮದ್ಯಮಂ ಪೀರ್ದು ಮೂರ್ಛೆಗೆ ಸಂದ ಮೌನ ಮತಿನಿಷ್ಠುರಂ, ಕಠಿನಂ, ಭಯಾನಕಂ, ಹೃದಯಭಾರಂ, ಮಹಾ ಕ್ರೂರಂ ! (ತ್ರಿಪುರಾ. ೨೯-೨೯೪) ; ರಂಗ ಶಾರದೆಯನ್ನು ನಿಷ್ಠುರವಾಗಿ ನೋಡಿದ (ಪ್ರಶ್ನೆ. ೪೨). ೬. ಆಕ್ಷೇಪಣೆ : ಅಪವಾದ : ದೂರು : ನಿಂದೆ : ನಾನು ನಾಮುಕರಣಕ್ಕೆ ಬರುತ್ತೇನೆ ; ಆದರೆ ತಾಯಿ ಅಡ್ಡ ಬರುತ್ತಾಳೆ ಎನ್ನುವ ಹಾಗೆ ನಟನೆ ಮಾಡುತ್ತೀಯಲ್ಲ, ನನ್ನನ್ನು ನಿಷ್ಠುರಕ್ಕೆ ಸಿಕ್ಕಿಸಿದ್ದೀಯಲ್ಲ ! (ಸುಪಾಗ. ೧೫೭) ; ನಿಜವಾಡಿದರೆ ನಿಷ್ಠುರ (ಗಾದೆ). ೭. ಒರಟುತನ ; ಕಠಿಣತೆ : ಬಂದು ಗಣಮುಖಕೇಳಗಲವರು ನಿಷ್ಠುರಗೂಡಿ ಬಂದ ವಾಕ್ಯಗಳೆತ್ತಿ ಲಿಂಗಚಲ್ಯಕಬಸವನೆಂದ ಸುದಿ ಸಿದ್ಧಿ ನಿಜ ನೋಡೆಂದು ತೋಜಲು (ಸಿಂಗಿರಾ. ೧೧೧-೧೮೭). ೮. ಕ್ರೌರ್ಯ ; ದುಷ್ಟತನ : ಅಳುಕಿದನೆ ಸುಡಲವನ ನೋಲುಜ ನೆಳೆದನುನ್ನತ ಕುಜವ ನಳತೋಳ್ಗಳಲಿ ಮುಚ್ಚಿದಳಬಲೆ ಬೆಚ್ಚಿದಳವನ ನಿಷ್ಠುರಕೆ (ಕುಪಾಸ್ವ. ೧೪೪-೧೦೩). ೯. ಕಠಿಣನಾದವನು : ಇರೆ ಲಗ್ನಕ್ಕೆ ಚತುರ್ಥದೊಳ್ ಹಿಮಕರಂ ಸಪ್ತಮಸ್ಥಿತ್ಯಾಢ್ಯಂ . . . ಅದಾತಿಸ್ಥಾನದೊಳ್ ಕೂಡೆ ನಿಷ್ಠುರನಾಲಸ್ಯಸಮಸ್ವಿತಂ ಮೃದುಪದುಃಖಾಪಾಸ್ಥಿನಾನಾರಿ (ಜಾತಕ. ೧೪-೭). ೧೦. ನಿರ್ದಯ : ಕ್ರೂರಿ : ನಿಷ್ಠುರಿಣಿ : ಕೃಷ್ಣಕಾಂತನು ತಾನೆಂತಹ ನಿಷ್ಠುರ, ಪಕ್ಷಪಾತ ! ಎಂತಹ ಅಪರಾಧಿ !! ಎಂದುಕೊಂಡನು (ಕಾಮಕು. ೧೬೭) ; ತುಂಬುಗರ್ಭಿಣಿ ಸೀತೆಯನ್ನು ನಿಷ್ಠುರನಾದ ರಾಮಚಂದ್ರ ಲೋಕಾಪವಾದಭೀತಿಯಿಂದ ಲಕ್ಷ್ಮಣನೊಡನೆ ಕಾಡಿಗಟ್ಟಿದ ಸಂದರ್ಭ (ಅನಾಕ. ೧೭) ; ಯಮುನೆ (ಕಣ್ಣೀರು ಸುರಿಸುತ್ತ) ನೀನು ಅದನಿಗೆ ಇಷ್ಟು ನಿಷ್ಠುರನಾಗಬೇಡ (ಮುಕ್ತಾಯ. ೪-೧೧೬). ೧೧. [ಸಂಗೀತ] ಹದಿನೈದು ಸ್ವರಪೋಷಗಳಲ್ಲಿ ಒಂದು : ಕಂಪಿತ ಚಂತಿತ ಅನುನಾಸಿಕ ಶಿರೋನ್ಮಿಶ್ರ ಕಂಪಿತುಂಜನ ವಿಕ್ಷಿಪ್ತ ನೀರಸ ನಿಷ್ಠುರ ದುಶ್ಚಾಸ್ಥ ಚತ್ಯಾಂತ ಸರಿಪ ಪ್ರತಿಪಿನ ಪ್ರಯಾಣ ಅಸಮಾನ ತಾಲಹೀನವೆಂಬ ಹದಿನೈದು ಸ್ವರದೋಷಗಣಂಗಳಂ ತೊಜಿದು ನಿಜಹೃದಯಕ್ಕಪ್ರಿಯಂ . . . ಪಾಡಿ (ಹೇಚ. ೨೦೭)

ನಿಷ್ಠುರ ಮಾಡಿಸು = ನಿಷ್ಠುರವಾಗುವಂತೆ ಮಾಡು: ನನ್ನನ್ನು ಏಕೆ ನಿಷ್ಠುರ ಮಾಡಿಸುತ್ತೀಯೆ ? ನನ್ನ ಬೀಗಿತ್ತಿಯ ಬಾಯಿಂದ ನನಗೇಕೆ ವಿವೇಕ ಹೇಳಿಸುತ್ತೀಯೆ ? (ಮಹಾಗ. ೧೫೩). ನಿಷ್ಠುರ ಮಾಡು = ಕಠೋರವಾಗಿ ವರ್ತಿಸು : ನಾಯಕನು ಆ ಮಾತಿಗೆ ತಾಳ್ಮೆಗೊಳ್ಳದೆ ಈಗಲೆ ತಂದುಕೊಡು, ಇಲ್ಲವಾದರೆ ಇಟ್ಟಿರುವ ಸ್ಥಳವನ್ನಾದರೂ ತೋರಿಸೆಂದು ನಿಷ್ಠುರ ಮಾಡಿದನು (ಕಭವಿ. ೧೮೨). [ಸಂ.]

ನಿಷ್ಠುರಗಾಧೆ (ನಾ). ಬಿರುನುಡಿ ; ಕೆಟ್ಟಮಾತು : ನಿಷ್ಠುರಗಾಧೆಯೊಳಗಿಹರಿಂಗೆ ಪೇಳದಿರಾದಿಗಗನಬೋಧೆಯಿಂದ (ಗಗತಾ. ೩-೨).

[ನಿಷ್ಠುರ + ಗಾಧೆ (<ಗಾದೆ)]

ನಿಷ್ಠುರಗುಣ (ನಾ). ಕಠಿಣಸ್ವಭಾವ ; ಕೆಟ್ಟ ಮನೋಭಾವ : ದುಷ್ಟನಿಗೆ ಕಷ್ಟ ಬಂದರೂ ನಿಷ್ಠುರಗುಣ ಬಿಡಲಾರ (ಗಾದೆ).

[ನಿಷ್ಠುರ + ಗುಣ]

ನಿಷ್ಠುರಚರಿತ್ರ (ನಾ). ಕ್ರೂರವಾದ ನಡೆವಳಿಕೆ : ನೀನತ್ಯಂತ ಕರುಣಿ ನಾಂ ಮಾಳ್ಪುದತಿನಿಷ್ಠುರಚರಿತ್ರಂ (ನಂಬರ. ೩-೧೧).

[ನಿಷ್ಠುರ + ಚರಿತ್ರ]

ನಿಷ್ಠುರಜಿಹ್ವ (ನಾ). ೧. ಕಠೋರವಾಗಿ ಮಾತನಾಡುವವನು ; ನಿರ್ದಯವಾಗಿ ಮಾತನಾಡುವವನು. ೨. ತೀಕ್ಷ್ಣವಾದ ಜ್ವಾಲೆಯುಳ್ಳದು. ೧, ೨ : ಪರಿಕಿಪೊಡವಿಚಾರಿ ಸಿತೇತರಗತಿಯಾದಂ ಪ್ರಭಂಜನಪ್ರಿಯನತಿನಿಷ್ಠುರಜಿಹ್ವನುಪರ್ಬುಧನಂತಿರೆ ದುರ್ಬುಧನಾರೊಳೊಂದಿ ಪಡೆಯಂ ನೋವಂ (ಚಂದ್ರಪು. ೧-೪೨). [ಸಂ.]

ನಿಷ್ಠುರತನ (ನಾ). ೧. ಒರಟುತನ ; ಕಠೋರತೆ : ತಂದೆಯ ಮುಖ ಅವನೆದುರು ನಿಂತರೂ ಕಮಲಕ್ಕನ ನಿಷ್ಠುರತನ ಅವನಿಗೆ ಅಸಹ್ಯವೆನಿಸಿತು (ಜೀವರಂ. ೪೧). ೨. ಕ್ರೂರತೆ ; ನಿರ್ದಯತೆ : ಖಳನ ನಿಷ್ಠುರತನದ ನಿಂದೆಗಳ್ಕಿ ನವರಸಾಲಂಕಾರಭರಿತಮಾಗಿರ್ಪ ಕಬ್ಬವನೊಲ್ದು ಕಥಿಸದುಳಿದಪುದು ನೀತಿಯೆ (ಚಿಒಪು. ೧-೩೨). [ನಿಷ್ಠುರ + -ತನ]

ನಿಷ್ಠುರತೆ (ನಾ). ೧. ಕಠೋರತೆ; ಉಗ್ರತೆ ; ತೀಕ್ಷ್ಣತೆ : ನಿದಾಘ ನಿಷ್ಠುರತೆಯೊಳಂ ಮಳೆಗಾಲದ ಪ್ರಳಯಜಲದೊಳಂ . . . ಗಿರಿರಾಜತನುಜೆಯಿರ್ದ ನಿರುಪಮಾನ ತಪಃಪ್ರಭಾವಂ ವಿರೂಪಾಕ್ಷನ ಕರಣಂಗಳೊಳ್ ಬೆರಸಿ ಬಳೆಯೆ (ಗಿರಿಕ. ೯-೮೩ ಪ) ; ನಿಷ್ಠುರತೆಗಲ್ಲದೆ ಮನವನೀಯದು ಮಹಿಯ ಮೂಢಜನ (ಕುಮ್ಯಾಉ. ೯-೪೫) ; ಮಲ್ಲಿಪಯ್ಯ ಜೈನಧರ್ಮದ ನಿಷ್ಠುರತೆಯನ್ನು ಕಂಡು ಔಡುಗಟ್ಟಿದನು (ವಾನಚಿಂ. ೨೫). ೨. ಕ್ರೌರ್ಯ ; ನಿರ್ದಯತೆ : ಹಿರಿದು ಮುನಿಸಿಲ್ಲವನಿಜೆಗೆ ನಿಷ್ಠುರತೆ ಜನ್ಮದೊಳಿಲ್ಲ ಗರ್ವದ ಗರಗರಿಕೆ ಮುನ್ನಿಲ್ಲ (ತೊರರಾ. ೩ ೧೧-೧೨) ; ಹಾ ಜೀವನದುರಂತತೆಯೆ, ತಂದೆತಾಯಂದಿರಂ ನಲ್ಲರಂ ಮಕ್ಕಳಂ ಪೂಜ್ಯರಂ ಮೇಣರ್ದೆಯೊಲಿದರಂ ಕಳೇಬರಂ ಮಾಡಿ ತೋರುವ ನಿನ್ನ ನಿಷ್ಠುರತೆಯಂ ಸುಡಲಿ ! (ತ್ರೀರಾಮಾ. ೧೧೮-೧೬೪).

[ಸಂ. ನಿಷ್ಠುರತಾ]

ನಿಷ್ಠುರತ್ವ (ನಾ). = ನಿಷ್ಠುರತೆ. [ಸಂ.]

ನಿಷ್ಠುರನಿನಾದ (ನಾ). ಕಠೋರವಾದ ಶಬ್ದ ; ಘೋರವಾದ ಧ್ವನಿ ; ಕರ್ಕಶವಾದ ಧ್ವನಿ : ಮೊಜಿದು ಮಿಗೆ ತಲೆಯೊತ್ತಿ ತೆರೆ ಮೈಮುರಿದು ಘುಳುಘುಳುಘುಳಿತ ಘನನಿಷ್ಠುರನಿನಾದದ ಗಜಜು ಗಾಢಿಸಿ ಬಹಳ ಲಹರಿಯಲಿ (ಕುಮ್ಯಾಉ. ೧-೧೯). [ನಿಷ್ಠುರ + ನಿನಾದ]

ನಿಷ್ಠುರವಚನ (ನಾ). ಕಠಿಣವಾದ ಮಾತು ; ಬಿರುನುಡಿ : ಅತಿಕಠೋರನಿಷ್ಠುರವಚನಂಗಳಿಂ ಗಜಜು ಗರ್ಜಿಸುತ್ತುಂ ಸುತ್ತಿ ಮುತ್ತಿ ಪತ್ತಿದಾಗಳ್ ದೆಸೆಗಳೆ ನುಂಗುವಂತಾಗೆ (ಸುಕುಮಾ. ೧೧-೪೨ ಪ).

[ನಿಷ್ಠುರ + ವಚನ]

ನಿಷ್ಠುರವಾದಿ (ನಾ). ಕಠಿಣವಾಗಿ ಮಾತನಾಡುವವನು ; ನಿರ್ದಾಕ್ಷಿಣ್ಯವಾಗಿ ಮಾತಾಡುವವನು : ಈ ಗುಲಗಂಜಿ ಕಣ್ಣಿನ ಕೊರಡು—ಮರಾಠಿ ವಿಚಿತ್ರಹಿಂದಿ ಮಾತಾಡುವ ನಿಷ್ಠುರವಾದಿಯಾದ ವಿಕ್ಷಿಪ್ತನು ಬ್ಯಾಂಕಿನಲ್ಲಿ ಪರಿಚಿತ ವ್ಯಕ್ತಿಯಾಗಿರಬೇಕು (ಗಂಮಾಯಿ. ೨೬೦).

[ಸಂ. ನಿಷ್ಠುರವಾದಿನ್]

ನಿಷ್ಠುರವೃತ್ತಿ (ನಾ). ೧. ಉಗ್ರಸ್ವಭಾವವುಳ್ಳದು ; ತೀಕ್ಷ್ಣವಾದುದು. ೨. ವ್ಯವಹಾರದಲ್ಲಿ ಬಿಗುವಾಗಿರುವವನು ; ಕಟ್ಟುನಿಟ್ಟಾಗಿ ವ್ಯವಹರಿಸುವವನು. ೧, ೨ : ಪರಿಕಿಪೊಡತಿವೃದ್ಧಂ ನಿಷ್ಠುರವೃತ್ತಿ ಸದಾನುವರ್ತಿ ನೀತಿಯುತಂ ಭಾಸುರತೇಜಂ ಕಂಚುಕಿಯಂತಿರೆ ನಿಶ್ಚಲೆ ಮಾಡಿತಾ ನೃಪಶ್ರೀವಧುವಂ (ಚಂದ್ರಪು. ೩-೨೩).

[ನಿಷ್ಠುರ + ವೃತ್ತಿ]

ನಿಷ್ಠುರಸ್ವಭಾವ (ನಾ). ಕಟ್ಟುನಿಟ್ಟಿನ ಮನೋಭಾವ : ಮುಖದ ಮೇಲೆ ನಿಷ್ಠುರಸ್ವಭಾವವು ಒಡೆದು ಕಾಣುತ್ತಿತ್ತು (ಯೋಧರು. ೫).

[ನಿಷ್ಠುರ + ಸ್ವಭಾವ]

ನಿಷ್ಠುರಾಕ್ಷರ (ನಾ). ಕಠಿಣವಾದ ಅಕ್ಷರ ; ಕರ್ಕಶವಾದ ಅಕ್ಷರ : ಅತಿರೂಢಾರ್ಥಮಗೂಢಂ ಪ್ರತೀತಿಸುಭಗಂ ಪ್ರಸನ್ನಮೆನೆ ಪಡೆಗು ಮಪಾಕೃತನಿಷ್ಠುರಾಕ್ಷರಂ ಲಾಲಿತಲಲಿತಪದಪ್ರಕಾರಮದು ಸುಕುಮಾರಂ (ಕಾವ್ಯಾವ. ೫೧೨). [ನಿಷ್ಠುರ + ಅಕ್ಷರ]

ನಿಷ್ಠುರಾಲಾಪ (ನಾ). = ನಿಷ್ಠುರವಚನ : ದವನಕನ ನಿಷ್ಠುರಾಲಾಪಂಗಳ್ಗೆ ಪಿಂಗಳಕಂ ಕರಂ ಮುಳಿದಿಂತೆಂದಂ (ಪಂಚತಂ. ೯೯-೨).

[ನಿಷ್ಠುರ + ಆಲಾಪ]

ನಿಷ್ಠುರಿ (ನಾ). ನಿಷ್ಠುರತೆಯುಳ್ಳವನು ; ಕಟ್ಟುನಿಟ್ಟಾಗಿ ಇರುವವನು : 'ನ್ಯಾಯನಿಷ್ಠುರಿ' ಪರಾ. [ಸಂ. ನಿಷ್ಠುರಿನ್]

ನಿಷ್ಠೂರ 'ನಿಟ್ಟುರ' ನೋ.

ನಿಷ್ಠೂರತನ (ನಾ). = ನಿಷ್ಠುರತನ ೨ : ಚೋರನನು ಕಾಣುತ್ತ ಮರಳಿದು ಚೋರನೆಂದೊಡೆ ಪತಿತನನು ನಿಷ್ಠೂರತನದಿಂ ಪತಿತನೆಂದೊಡೆ ಸಾಮ್ಯದೋಷವದು ಸಾರುವುದು (ಕುಮ್ಯಾಉ. ೪-೯೧).

[ನಿಷ್ಠೂರ(<ನಿಟ್ಟುರ) + -ತನ]

ನಿಷ್ಠೂರವಾದಿ (ನಾ). ಅಪ್ರಿಯವಾಗಿ ಮಾತನಾಡುವವನು ; ನಿರ್ದಾಕ್ಷಿಣ್ಯವಾಗಿ ಮಾತನಾಡುವವನು : "ದುರ್ಮುಖಃ, ಮುಖರಃ, ಅಬದ್ಧಮುಖಃ—೩ ಅಪ್ರಿಯವಾಗಿ ಮಾತನಾಡುವವನ ಪೆಸರು, ತಡೆಯಿಲ್ಲದ ನಿಷ್ಠೂರವಾದಿ" (ಸಿದ್ಧಾಂತಿ. ೩೩೨).

[<ಸಂ. ನಿಷ್ಠುರವಾದಿನ್]

ನಿಷ್ಠೆ (ನಾ). ೧. ದೃಢತೆ ; ಸ್ಥಿರತೆ : "ನಿಟ್ಟೆಯೆನೆ ನಿಷ್ಠೆಯಕ್ಕುಂ" (ಕವಿಕಂ. ೨೨೮). ೨. ನಿಯಮಕ್ಕೆ ಬದ್ಧವಾಗಿರುವಿಕೆ,—ಒಳಪಟ್ಟಿರುವಿಕೆ : ಗ್ರಹದ ನಿಷ್ಠೆಯನೇಕೆ ನಿಷ್ಠೆಮಾಡುವೆ ರವಿಗೆ (ತ್ರೀರಾಮಾ. ೩೨೮-೨೩೮). ೩. ಶ್ರದ್ಧೆ ; ದೃಢವಾದ ನಂಬಿಕೆ : ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ ಇದ್ದರೇನೊ ಶಿವಶಿವಾ ಹೋದರೇನೊ (ಬಸವ.೧೦೯) ; ಮಗನೆ ನಿನ್ನಯ ಮನದ ನಿಷ್ಠೆಗೆ ಸೊಗಸಿದೆನು ಪಿರಿದಾಗಿ (ಕುಮ್ಯಾಅ. ೪-೪೭) ; ಆ ಕಾಲದಲ್ಲಿ ಚಿತ್ರಕಲೆಯನ್ನು ಜನ ಬಹುನಿಷ್ಠೆಯಿಂದ ಅಭ್ಯಸಿಸುತ್ತಿದ್ದರು (ಭಾರದ. ೫೨೪) ; ಸೌಂದರ್ಯದ ಅನುಭವವು ಸತ್ಯದೃಷ್ಟಿ ಮತ್ತು ನಿಷ್ಠೆಗಳನ್ನು ಅಪೇಕ್ಷಿಸುತ್ತದೆ (ಶಕ್ತಿವಿ. ೨) ; ನಿಷ್ಠೆ ಇದ್ದವನಿಗೆ ನಷ್ಟವಿಲ್ಲ (ಗಾದೆ). ೪. ಧಾರ್ಮಿಕ ಶ್ರದ್ಧೆ ; ಮತೀಯವಾದ ಆಚಾರ ವಿಚಾರಗಳಲ್ಲಿರುವ ದೃಢತೆ : ಅಂಧನೃಪನೈದನೆ ಸಮಾಧಿನಿಬಂಧನದ ನಿಷ್ಠೆಯಲಿ (ನಿಭಾಗ. ೧-೯-೪೨). ೫. ಬುನಾದಿ ; ತಳ

ಹದಿ ; ಅಡಿಪಾಯ. ೬. ಇರುವಿಕೆ ; ಸ್ಥಿತಿ ; ಅವಸ್ಥೆ. ೭. ಕೌಶಲ್ಯ ; ನೈಪುಣ್ಯ ; ಪರಿಣತಿ. ೮. ವಿನಾಶ ; ಮರಣ ; ಸಾವು : "ನಿಧನಂ, ನಾಶಃ . . . ನಿಷ್ಠಾ, ಅಂತಃ, ನಿಮೀಳನಂ, ದೀರ್ಘನಿದ್ರಾ—ಈ ೧೨ ಸಾವು" (ಹಲಾಯು. ೧೦೩-೬) ; "ನಿಷ್ಠಾ—೧ ನಿಷ್ಪತ್ತಿಃ, ಕಾರ್ಯವಾಗುವಿಕೆ, ನಾಶಃ, ಕಾಣದೇ ಹೋಗುವಿಕೆ. ಅಂತಃ, ಕೆಟ್ಟು ಹೋಗುವಿಕೆ" (ಸಿದ್ಧಾಂತಿ. ೩೮೩) ೯. ಕ್ಲೇಶ ; ಸಂಕಟ ; ನೋವು. ೧೦. ಸ್ಪಷ್ಟವಾದ ತಿಳಿವಳಿಕೆ ; ನಿಸ್ಸಂದೇಹವಾದ ಅರಿವು ; ನಿಶ್ಚಿತವಾದ ಜ್ಞಾನ. ೧೧. [ಕಾವ್ಯಮೀ] ನಾಟಕದಲ್ಲಿಯ ಕೊನೆಯ ಸಂಧಿ,—ಮುಕ್ತಾಯಸಂಧಿ ; ನಿರ್ವಹಣ ಸಂಧಿ : "ನಿಷ್ಠಾ, ನಿರ್ವಹಣಂ—೨ ನಾಟಕ ಕಥೆಯನ್ನು ಮುಗಿಸುವುದಕ್ಕೆ ಹೆಸರು" (ಸಿದ್ಧಾಂತಿ. ೬೧). ೧೨. [ವೀಶೈ] ಷಡ್ವಿಧಭಕ್ತಿಗಳಲ್ಲಿ ಒಂದು : ಶ್ರದ್ಧೆ, ನಿಷ್ಠೆ, ಅವಧಾನ, ಅನುಭವ, ಆನಂದ, ಸಮರಸ (ಇವು ಆರು ಷಡ್ವಿಧಭಕ್ತಿಗಳು) (ಶಿವಾಸೂ. ೨ ಅಡಿಟಿ).

ನಿಷ್ಠೆ ಮಾಡು = ನಿಯಾಮಿಸು : ಗ್ರಹದ ನಿಷ್ಠೆಯನೇಕೆ ನಿಷ್ಠೆ ಮಾಡುವೆ ರವಿಗೆ (ಶ್ರೀರಾಮಾ. ೬೨೮-೨೩೮). [ಸಂ. ನಿಷ್ಠಾ]

ನಿಷ್ಠೆಗೆಡು (ಕ್ರಿ). ಶ್ರದ್ಧೆಯನ್ನು ಕಳೆದುಕೊಳ್ಳು ; ನಂಬಿಕೆಯನ್ನು ಕಳೆದುಕೊಳ್ಳು : ದೇವರು ಅತ್ಯಂತ ಸಂದಿಗ್ಧಸನ್ನಿವೇಶಗಳಲ್ಲಿ ನಮ್ಮನ್ನು ಪರೀಕ್ಷಿಸುತ್ತಾನೆ. ಆಗಲೂ ನಾವು ನಿಷ್ಠೆಗೆಡದಿದ್ದರೆ, ಅಂದು ಆತ ಮೆಚ್ಚಾನು ! (ನಿಶಿಉ. ೧೪೮). [ನಿಷ್ಠೆ + ಕೆಡು$_1$]

ನಿಷ್ಠೆ ವಿಡಿ(ಕ್ರಿ). ನಂಬಿಕೆಹೊಂದು ; ಶ್ರದ್ಧೆಯಿಡು : ಇಂದುಶೇಖರಂಗೆ ಮಜ್ಜನಕ್ಕೆ ಕೊಟ್ಟು ನಿಷ್ಠೆವಿಡಿದು ತಂದೆ ತವರೆ ಬಂಧು ನೀವೆ ಎಂದು ನೇಹದಿಂದೆ ನುಡಿದು (ನಮರ. ದೇ. ೧೯೫-೧೫).

[ನಿಷ್ಠೆ + ಪಿಡಿ$_1$]

ನಿಷ್ಠೇವ (ನಾ). ಉಗುಳುವಿಕೆ ; ಥೂಕರಿಸುವಿಕೆ ; ತುಪ್ಪಿಕ್ಕುವಿಕೆ : "ನಿಷ್ಠೇವಃ, ನಿಷ್ಠ್ಯೂತಿಃ, ನಿಷ್ಠೀವನಂ, ನಿಷ್ಠೇವನಂ—೪ ಕೇಕರಿಕೆ, ಉಗುಳುವಿಕೆ, ಥೂಕರಿಸುವಿಕೆ" (ಸಿದ್ಧಾಂತಿ. ೩೬೮). [ಸಂ.]

ನಿಷ್ಠೇವನ(ನಾ). = ನಿಷ್ಠೇವ : "ನಿಷ್ಠ್ಯೂತಿ ನಿಷ್ಠೇವನಮಾಸ್ಯಪ್ಲೋಷಂ" (ವಸ್ತುಕೋ. ೧೧೪-೨೨) ; "ನಿಷ್ಠೇವಃ, ನಿಷ್ಠ್ಯೂತಿಃ, ನಿಷ್ಠೀವನಂ, ನಿಷ್ಠೇವನಂ—೪ ಕೇಕರಿಕೆ, ಉಗುಳುವಿಕೆ, ಥೂಕರಿಸುವಿಕೆ" (ಸಿದ್ಧಾಂತಿ. ೩೬೮). [ಸಂ.]

ನಿಷ್ಠೈಕಭಕ್ತ (ನಾ). ಏಕನಿಷ್ಠೆಯುಳ್ಳ ಭಕ್ತ ; ಅನನ್ಯಭಕ್ತಿಯುಳ್ಳವನು : ಸಂಗನೊಳಗೆ ಸಂದಂ ಬಸವ ನಿಷ್ಠೈಕಭಕ್ತರಿಗೆ ಪೇಳದೊಲವಿಂ ಬಸವ (ಬಸರ. ೯-೧೫೩). [ಸಂ.]

ನಿಷ್ಠ್ಯೂತ (ನಾ). ೧. ಉಗುಳಿದುದು ; ಥೂಕರಿಸಿದುದು ; ತುಪ್ಪಿದುದು. ೨. ಎಸೆದುದು ; ನೂಕಿದುದು ; ತಳ್ಳಿದುದು : "ನುತ್ತಃ, ನುನ್ನಃ, ಅಸ್ತಃ, ನಿಷ್ಠ್ಯೂತಃ, ವಿದ್ಧಃ, ಕ್ಷಿಪ್ತಃ, ಈರಿತಃ—೭ ನೂಕಲ್ಪಟ್ಟದ್ದು, ತಳ್ಳಲ್ಪಟ್ಟದ್ದು" (ಸಿದ್ಧಾಂತಿ. ೩೪೬). [ಸಂ.]

ನಿಷ್ಠ್ಯೂತಿ (ನಾ). = ನಿಷ್ಠೇವ : "ನಿಷ್ಠ್ಯೂತಿ ನಿಷ್ಠೇವನಮಾಸ್ಯಪ್ಲೋಷಂ" (ವಸ್ತುಕೋ. ೧೧೪-೨೨) ; "ನಿಷ್ಠೇವಃ, ನಿಷ್ಠ್ಯೂತಿಃ, ನಿಷ್ಠೀವನಂ, ನಿಷ್ಠೇವನಂ—೪ ಕೇಕರಿಕೆ, ಉಗುಳುವಿಕೆ, ಥೂಕರಿಸುವಿಕೆ" (ಸಿದ್ಧಾಂತಿ. ೩೬೮). [ಸಂ.]

ನಿಷ್ಣಾತ (ಗು). ೧. ಚೆನ್ನಾಗಿ ತಿಳಿದ ; ನುರಿತ. ೨. ಉತ್ಕೃಷ್ಟವಾದ ; ಶ್ರೇಷ್ಠವಾದ ; ಪರಿಪೂರ್ಣವಾದ. (ನಾ). ೩. ಚೆನ್ನಾಗಿ ತಿಳಿದವನು ; ನಿಪುಣ ; ಪರಿಣತ : "ಚತುರಃ, ಕ್ಷೇತ್ರಜ್ಞಃ . . . ನಿಷ್ಣಾತಃ, ಶಿಕ್ಷಿತಃ, ಪ್ರವೀಣಃ—ಈ ೧೧ ಬಲ್ಲವಂ" (ಹಲಾಯು. ೫೫-೧೮೦) ; "ಚತುರಂ ಪ್ರವೀಣಂ ಕುಶಲನಭಿಜ್ಞಂ . . . ನಿಷ್ಣಾತನಾ ಕ್ಷೇತ್ರಜ್ಞನೆನಲು ಬಲ್ಲವಗೆ ನಾಮಂ" (ಮಂಗರಾ. ೬೬-೩) ; ಅವುಗಳೆಲ್ಲದರಲ್ಲೂ ನಿಷ್ಣಾತರಾಗುವುದು ಯಾರಿಂದಲೂ ಶಕ್ಯವಿಲ್ಲ (ಕ್ರಿಯಾತಿ. ೧೯೮) ; ಷಡಕ್ಷರಿ ಬಾಲ್ಯದಿಂದ ಜೀವನರಸಿಕನೂ ಕವಿತಾರಚನೆಯಲ್ಲಿ ನಿಷ್ಣಾತನೂ ಆದನು (ಕಸಾಚ. ೩೪೯). [ಸಂ.]

ನಿಷ್ಣಾತತೆ (ನಾ). ಪ್ರಾವೀಣ್ಯ ; ಪರಿಣತಿ ; ನೈಪುಣ್ಯ : ಏಟ್ಗೆಯ ಚಂದ್ರನ ತೆಱದಿಂ ಕೃಷ್ಣನೆಯ್ದೆ ನಿಷ್ಣಾತತೆಯಂ (ಮಹಾನೇ. ೬-೮).

[ಸಂ. ನಿಷ್ಣಾತತಾ]

ನಿಷ್ಪಂಕ (ನಾ). ಕೆಸರಿಲ್ಲದುದು ; ರಾಡಿಯಿಲ್ಲದುದು : ಬಿಂಕ ಬೀತುದು ಮಳೆಗಳಿಗೆ ನಿಷ್ಪಂಕವಾಯ್ತಿಳೆ ಗೋಪರಿರಾ ನಿಶ್ಶಂಕೆಯಲಿ ಹೊಱವಡುವುದಂಜದೆ ಗುಹಾಂತರವ (ನಿಭಾಗ. ೧೦-೨೩-೮).

[ಸಂ.]

ನಿಷ್ಪಂದ (ಗು). ೧. ಸ್ಪಂದಿಸದ ; ಅಲುಗದ : ನಿಶ್ಚಲವಾದ : ಕದನಕರ್ಕಶಕ್ಷತ್ರಿಯಂಗೆ . . . ನಿಷ್ಪ್ರಯೋಜನಸ್ವೇದಜಲೋದ್ಗಮಮುಂ ನಿಷ್ಪಂದ ನಾಸಾಸ್ಫುರಿತಮುಂ ನಿಷ್ಕಾರಣಕಾಯಕಂಪನಮುಂ ನಿರಾಲಂಬನವಾಗಾಡಂಬರಮುಂ ತಕ್ಕುದಲ್ತು (ಆದಿಪು. ೧೪-೮೧ ಪ) ; ಪಂದಿಯಿದಂದಿನಗ್ಗದ ಗಜಾಸುರನಿಂ ಮದವತ್ತರಕ್ಷು ಸಂಕ್ರಂದನವೈರಿಯಿಂ ಬಲದೊಳುಗ್ರತರಾಕೃತಿಯೊಳ್ಪೊದಳ್ದ ನಿಷ್ಪಂದ ಪರಾಕ್ರಮಸ್ಥಿತಿಯೊಳಿರ್ಮಡಿವೆಗ್ಗಳಮಪ್ಪುದು (ಶಬಶಂ. ೪-೨೦). (ನಾ). ೨. ಚಲಿಸದೆ ಇರುವುದು ; ಅಲುಗದೆ ಇರುವುದು ; ನಿಶ್ಚಲವಾಗಿರುವುದು : ತಿರುಗುವೀ ಗದೆಯೇಕೆ ನಿಷ್ಪಂದವಾಗಿಹುದು ? (ಕೋಗಿಲೆ. ೪೦-೧) ; ಆ ನಿಬಿಡ ಕೇಶರಾಶಿಧಾರಿಣಿಯಾದಾ ಅರಣ್ಯದೇವಿಯ ಮೂರ್ತಿ ! ಮೊದಲಿನಂತೆ ನಿಶ್ಶಬ್ದ ! ನಿಷ್ಪಂದ ! (ಕಪಾಕುಂ. ೨೩). ೩. ಚಲಿಸದೆ ಇರುವ ವ್ಯಕ್ತಿ ; ಅಲುಗದೆ ಇರುವ ವ್ಯಕ್ತಿ : ಈ ಬಾಧೆಯೊಳ್ ಮೆಯ್ಯನೊಡ್ಡಿಸೆ ಮೆಯ್ಯೊಳ್ ಮಿಡುಕುಳ್ಳ ತಾಣಮಣಮಿಲ್ಲೆಂಬಂತು ನಿಷ್ಪಂದನಾಗಿ (ಆದಿಪು. ೬-೩೪) ; ಕೆಲರ್ಪಲವುಂ ಭಂಗಿಯಿನಿರ್ದು ಜಾನಕಿಯ ರೂಪಾಶ್ಚರ್ಯಮಂ ನೋಡಿ ಕಣ್ಮಲರಂ ಚಿತ್ತಮನಿತ್ತು ಚಿತ್ರಿಸಿದವೋಲ್ ನಿಷ್ಪಂದರಾಗಿರ್ಪುದುಂ (ಪಂರಾಮಾ. ೫-೬೫) ; ಅದಾರವಂ ದೇವವಂದಿತ ಮೋಹನಾಕೃತಿಯ ರುಕ್ಮರಾಗಾತಪಸ್ನಾತ ಮಾನವಮೂರ್ತಿ ? ಕಂಡು ನಿಷ್ಪಂದಳಾದಳು ಕನ್ಯೆ (ಚಿತ್ರಾಂಗ. ೭-೧೬೯). [ಸಂ.]

ನಿಷ್ಪಂದಂ (ಅ). ಚಲಿಸದೆ ; ಅಲುಗದೆ ; ನಿಶ್ಚಲವಾಗಿ : ಮೇಡ್ ಜಡಂ, ಜೀವವನಣಕಿಪಂತೆ, ನಿಷ್ಪಂದಮಿರ್ದತ್ತು ಸಾರ್ವಭೌಮಿಕ ಮಹೌದಾಸೀನ್ಯಮಂ ಮೆರೆದು ಕ್ರೂರದರ್ಪದಲಿ (ಶ್ರೀರಾಮಾ. ೧೧೮-೧೮೪).

[ಸಂ.]

ನಿಷ್ಪಂದಕಾರಿತ್ವ (ನಾ). ಚಲಿಸದೆ ಇರುವಿಕೆ ; ಅಲುಗದೆ ಇರುವಿಕೆ ; ನಿಶ್ಚಲತೆ : ಕಪೋಲನ್ಯಸ್ತಹಸ್ತಪ್ರವರ್ತನೆ ಚಿತ್ರಾರ್ಪಿತಕಾಂತೆಯಂತೆ ತಳೆದಳ್ ಸ್ವಾತೀವಚಿಂತಾವಿಚೇತನೆಯಂ ನಿನ್ನ ವಿಯೋಗದುಃಖದಿನವಳ್ ನಿಷ್ಪಂದಕಾರಿತ್ವಮಂ (ಚಂದ್ರಪು. ೮-೮೫). [ಸಂ.]

ನಿಷ್ಪಂದದೃಷ್ಟಿ (ನಾ). ಅಲುಗಾಡದ ಕಣ್ಣು ; ನಟ್ಟ ಕಣ್ಣು : ನಿಷ್ಪಂದದೃಷ್ಟಿಯಿಂ ಸುಖಬಾಷ್ಪಾಂಬು ತುಟುಂಕೆ ದಶನರುಚಿ ಹರ್ಷಲತಾಪುಷ್ಪದವೋಲ್ ಪಸರಿಸಲೇಂ ಪುಷ್ಪೋದ್ಭವ ಸುಖಮೆ ಎಂದು ನರಪತಿ ಕೇಳ್ದಂ (ದಶಕು. ೪-೮). [ನಿಷ್ಪಂದ+ದೃಷ್ಟಿ]

ನಿಷ್ಪಂದಪ್ರಕಾಶ (ನಾ). ಕುಗ್ಗದೆ ಇರುವ ಪ್ರಕಾಶ ; ಸ್ಥಿರವಾದ ಬೆಳಕು : ವಿಕಾಸಾಬ್ಜಕಾಸಾರದೊಳ್ ನಿರ್ಮಳನಿಷ್ಪಂದಪ್ರಕಾಶಸ್ಥಳದೊಳಮಳಲಿಂಗಾರ್ಚನಾಸಕ್ತ ಚಿತ್ತೋಜ್ಜ್ವಳನಾಗಿರ್ಪಂತೆ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ (ರಕ್ಷಾಶ. ೬೩).

[ನಿಷ್ಪಂದ + ಪ್ರಕಾಶ]

ನಿಷ್ಪಂದಶರೀರ (ನಾ). ೧. ಚಲನೆಯಿಲ್ಲದ ಶರೀರ; ನಿಶ್ಚೇಷ್ಟಿತವಾದ ದೇಹ: ನವಕುಮಾರನು ಅಂತಹ ದುರ್ಗಮಮಧ್ಯದಲ್ಲಿ ಆ ದೇವಿಯ ಮೂರ್ತಿಯನ್ನು ಅಕಸ್ಮಾತ್ತಾಗಿ ನೋಡಿ ನಿಷ್ಪಂದಶರೀರವುಳ್ಳವನಾಗಿ ನಿಂತುಕೊಂಡನು (ಕಪಾಕುಂ. ೧೯). ೨. ಸ್ಥಿರವಾಗಿರುವವನು; ನಿಶ್ಚಲಶರೀರಿ: ಪೆಣ್ಣಾರಿಯಾಗಿ . . . ಯೋಗನಿಯೋಗಧ್ಯಾನೋಪಯೋಗದಿಂ ನಿರುದ್ಧಕರಣನಿಷ್ಪಂದಶರೀರನಾಗಿ ಮೆಲ್ಲನಡಕಂಬೆರಸು ಪಟ್ಟದ ಬುಸಿರೂಪಳಕಮುಂ ಕಂಡು ಶಬಮೆಂದೆ ಸಾರ್ದುರ್ (ಸುಕುಮಾ. ೧೨-೨೪ ವ). [ನಿಷ್ಪಂದ+ಶರೀರ]

ನಿಷ್ಪಂದಾವಯವ (ನಾ). ೧. ಚಲಿಸದೆ ಇರುವ ಅವಯವ; ಅಲುಗದೆ ಇರುವ ಶರೀರ. ೨. ಚಲಿಸದೆ ಇರುವವನು; ನಿಶ್ಚಲನಾಗಿರುವವನು: ಆಗಳಾ ಭೋಜರಾಜಂ . . . ಭಯನಿಷ್ಪಂದಾವಯವಂ ಪರ್ಯಾಕುಲಜೀವಂ ಜಾವಡರ್ದ ಪಂದಯಂತೆವೊಲಿರ್ದಂ (ಜಗ್ಗಿ. ೫-೫೭). [ನಿಷ್ಪಂದ ಅವಯವ]

ನಿಷ್ಪಂದಿತೆ (ನಾ). ಅಲುಗಾಡದವಳು; ಕಂಪನಕ್ಕೊಳಗಾಗದವಳು (?): ಕುಂದಲತೆ ಪುಷ್ಪಮಂ ನಿಷ್ಪಂದಿತೆ ಸೊಗಯಿಸಳೆ ಮಧುಪನಿಕರಕ್ಕೆ ಜರತ್ಸಂಪದಿ ಸೊಗಯಿಸುಗುಮೆ ವಿಟಸಂದೋಹಕ್ಕೆನಿತು ನಯಸುನಳವಡಿಸಿದೊಡಂ (ಶಾಂತಿಪು. ೭-೧೩೯). [ಸಂ. ನಿಷ್ಪಂದಿತಾ]

ನಿಷ್ಪಕ್ವ (ನಾ). ಜೆನ್ನಾಗಿ ಬೇಯಿಸಿದುದು; ಪಕ್ವವಾದುದು: "ನಿಷ್ಪಕ್ವಂ, ಕ್ವಥಿತಂ—ತಿ ಎಂಟನೇ ಭಾಗ ಉಳಿಯುವಂತೆ ಕಾಯಿಸಲ್ಪಟ್ಟದ್ದು, ಅಷ್ಟಮಾಂಶಾವಶಿಷ್ಟವಾಪ ಕಷಾಯಾದಿಗಳ ಹೆಸರುಗಳು" (ಸಿದ್ಧಾಂತಿ. ೩೮೮). [ಸಂ.]

ನಿಷ್ಪಕ್ಷಪಾತ (ನಾ). ಯಾವ ಪಕ್ಷವನ್ನೂ ವಹಿಸದಿರುವಿಕೆ; ಸಮಭಾವವನ್ನು ಹೊಂದಿರುವಿಕೆ; ಸಮದೃಷ್ಟಿ: ವಿಶ್ವಕರ್ತೃವಿನಾಜ್ಞೆ; ತರಗೆಲೆಯಂನೆಂತಂತು ಸುಗ್ಗಿಯ ಮುಗುಳ್ಗಳಂ, ಶವವನೆಂತಂತೆ ಜೀವಿಪ ಹಸುಳೆಯಂ, ಪಹಿಸಿ ತೋರ್ದಪುದು ನಿಷ್ಪಕ್ಷಪಾತಮಂ (ಚತ್ರಾಂಗ. ೩೮-೧೦೪೪); ಬೋಧಿಸುತ್ತಿರುವಾಗ ಮಕ್ಕಳು ನಿಷ್ಪಕ್ಷಪಾತದಿಂದ ಆಲೋಚಿಸಿ ತೀರ್ಮಾನಗಳಿಗೆ ಬರುವಂಥ ಸನ್ನಿವೇಶಗಳನ್ನು ತರಬೇಕು (ಶಿಕ್ಷಪ. ೨೧೭); ಅಧಿಕಾರಾಕಾಂಕ್ಷೆಯಿಲ್ಲದ ರಾಷ್ಟ್ರಕನು ರಾಜಕೀಯದಲ್ಲಿ ಜಡ್ಡಿಯಂತೆ ನಿಷ್ಪಕ್ಷಪಾತವಾಗಿ ನ್ಯಾಯನಿರ್ಣಯ ಮಾಡತಕ್ಕವನು (ರಾಜಶ್ಯಾಂಗ. ೧೩೯). [ಸಂ.]

ನಿಷ್ಪತಿ (ನಾ). ೧. ಪರಿಪೂರ್ಣತೆ; ಏಕತೆ: ಆಜಿವಿನ ಭಾವ ಪರತಂತ್ರವಿಲ್ಲದ ನಿಷ್ಪತಿ[ಪಾತಾಂ. ತ್ರಿ] ಮಜಹಿನ ಭಾವ ಪರತಂತ್ರವಿಲ್ಲದ ನಿಷ್ಪತಿ [ಪಾತಾಂ. ತ್ರಿ] (ಅವಚಂ. ೨೯೧-೧೩೦೪); ಭಾವ ನಿರ್ಭಾವ ನಿಷ್ಪತಿಯಾದಲ್ಲಿ ಮಹಾದಾನ ಸೊಡ್ಡಳಂಗೆ ಸರ್ವನಿರ್ವಾಣವಾಯಿತ್ತು (ಪಡಸಂ. ೫೧೯-೧೦೩); ಲಿಂಗವೆಂಬ ಎಲೆಯ ಮೇಲೆ . . . ನಿಷ್ಪತಿ[ಪಾತಾಂ.ತ್ರಿ] ಯೆಂಬ ಹಣ್ಣಾಯಿತ್ತು ನಿಷ್ಪತಿ [ಪಾತಾಂ. ತ್ರಿ] ಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ (ಬಸವ. ೫೨೬). ೨. ತನ್ಮಯ; ಏಕ್ಯ: ಜಪಸಮಾಧಿ ಹೋಮನೇಮದುಪಮೆಗಳಿಗತೀತನು ನಿಷ್ಪತಿ ನಿರಂಜನ ಸೂಕ್ಷ್ಮದಪರಿಮಿತನಕಲ್ಪಿತ (ತಿಪಗೀ. ೫೦-೨೬೬); ಕ್ರೀಯಳಿದು ನಿಃಕ್ರಿಯಲ್ಲಿ ನಿಂದನು ನಿಃಕ್ರಿಯ ವಿಮಾಜಿ ನಿಷ್ಪತಿಯಾದ (ತಿಪಗೀ. ೧೧೧-೫೪೫).

[<ಸಂ. ನಿಷ್ಪತ್ತಿ]

ನಿಷ್ಪತಿತ (ನಾ). ತಾಗಿದುದು; ತಗುಲಿದುದು: ಸತಿ ಸತ್ಕಳಾಮೆ ವಿಕಸಿತಶತಪತ್ರಪರಾಗಮಾತ್ಮನಾಸಾಪುಟ ನಿಷ್ಪತಿತಂ ಕೊಳೆ ಮಡಿದಳ್ ಮಹಿಪತಿಯೋಳಮರಸಿಯರೊಳಂ ಪೊದಟ್ಟುರೆ ಮೋಹಂ (ರಾಂತಿಪು.೬-೮೫). [ಸಂ.]

ನಿಷ್ಪತಿಪದ (ನಾ). ಪರಿಪೂರ್ಣತೆಯ ಪಟ್ಟ; ಏಕ್ಯಪದವಿ: ಸಂಗವಾಯಿತ್ತು ನಿಷ್ಪತಿಪದವೆ ತಾನಾಗಿ ಸಂಗವಾಯಿತ್ತು ಚಿದ್ಘನ ಬೆಳಗಿನ ಬೆಳಗಿನೊಳಗೆ (ತಿಪಗೀ. ೧೦೬-೫೨೪). [ನಿಷ್ಪತಿ+ಪದ$_2$]

ನಿಷ್ಪತ್ತಿ (ನಾ). ೧. ಹುಟ್ಟು; ಉತ್ಪತ್ತಿ: ಶಾಳಿ ವ್ರೀಹಿಯವ ಗೋಧೂಮಾದಿ ಪ್ರಕೃಷ್ಟ ಸಸ್ಯನಿಷ್ಪತ್ತಿಯುಂ (ಜಾವುಂಪು.೮೩); ಲೊಲ್ಲಟ ಶಂಕುಕರು ಅನಂದವರ್ಧನನಿಗಿಂತ ಹಿಂದೆ ಇದ್ದವರು; ಇವರು ನಾಟ್ಯರಸದ ನಿಷ್ಪತ್ತಿಯನ್ನೇ ವಿಚಾರಮಾಡಿದರು (ಭಾವಪೂ. ೩೬೫); ವಸ್ತು ವ್ಯಕ್ತಿಗಳ ಸಂಯೋಗದಿಂದ ನಿಷ್ಪತ್ತಿಯಾಗುವ ಸೌಂದರ್ಯಾನುಭವವೆಂಬ ಆನಂದ ವಿಶೇಷ (ಸೌಂದಸ. ೧೧). ೨. ಪರಿಪೂರ್ಣತೆ; ಸಮಾಪ್ತಿ; ಮುಕ್ತಾಯ. ೩. ಪರಿಪಾಕ; ಸಿದ್ಧಿ: ಎನಗೊಂದು ನಿಜವಿಲ್ಲ ಎನಗೊಂದು ನಿಷ್ಪತ್ತಿಯಿಲ್ಲ ಲಿಂಗವ ತೋಜು ಉದರವ ಹೊರೆವ ಭಂಗಗಾಣಿ ನಾನು (ಬಸವ. ೩೦೬). ೪. ಏಕ್ಯವಾಗುವಿಕೆ; ಅದೃಶ್ಯವಾಗುವಿಕೆ; ಇಲ್ಲವಾಗುವಿಕೆ: ಕೆಂಡ ಕೆಟ್ಟಲ್ಲಿ ಹೊರೆ ನಿಂದಿತ್ತು ಅವಾಸಕ್ಕೆ ನಂದಿಲ್ಲ ನೀಳಿಳಂಕಮಲ್ಲಿಕಾರ್ಜುನನಲ್ಲಿ ನಿಷ್ಪತ್ತಿಯಾದ ಶರಣಂಗೆ (ಪೋಳಪೂ. ೧೨೪-೪೧೪); ಅಖಂಡೇಶ್ವರನೆಂಬ ಮಹಾಘನ ಪರಾತ್ಪರಪರಿಪೂರ್ಣಪ್ರಸಾದದೊಳಗೆ ಮನವಡಗಿ ನೆನಹು ನಿಷ್ಪತ್ತಿಯಾಗಿ ಏನೆಂದಱಯದಿರ್ದನಯ್ಯಾ (ಅಖಂಡೇ. ೧೦೬-೬೫); ಲೋಕಾದಿ ಲೋಕಂಗಳೇನೂ ಇಲ್ಲದಂದು ನೆನಹು ನಿಷ್ಪತ್ತಿಯಾಗಿತ್ತು ನೋಡಾ (ಪಡರ.೧೦-೫೧). ೫. ತೀರ್ಮಾನ; ನಿರ್ಣಯ; ಸಿದ್ಧಾಂತ: ಶ್ರೀಪತಿಯು ದೀಪಾಲಿಯನ್ನು ಮದುವೆ ಆಗಲು ಆಗ್ರಹ ಹಿಡಿದು ಸಮಾಜವನ್ನೂ ತೊರೆದುಹೋಗಲು ಸಿದ್ಧ . . . ಈ ಬಗ್ಗೆ ತರ್ಕ ನಡೆದಿದೆ. ಏನು ಮಾಡಿದರೂ ಇದರ ನಿಷ್ಪತ್ತಿಯೇ ಆಗುತ್ತಿಲ್ಲ (ಇಪ್ಪಕ. ೪೮೪). ೬. [ವ್ಯಾಕ] ಶಬ್ದದ ಹುಟ್ಟು;—ವ್ಯುತ್ಪತ್ತಿ; [ಪ್ರ ಪ್ರಕೃತಿ ಪ್ರತ್ಯಯಗಳ ಕೂಡುವಿಕೆಯಿಂದಾಗುವ ರೂಪಸಿದ್ಧಿ: ಒಂದು ಪದದ ಮೂಲವನ್ನು ಕಂಡು ಹಿಡಿದು ಅದರಿಂದ ಪ್ರಕೃತ ಪದವನ್ನು ಸೂಚಿಸುವುದು: ಅನ್ಯಭಾಷೆಯ ಶಬ್ದಗಳು ಸಂಸ್ಕೃತದಲ್ಲಿ ಕಾಣಿಸಿಕೊಂಡಾಗ ಅವುಗಳ ನಿಷ್ಪತ್ತಿಯನ್ನು ಹೇಗೆ ಹೇಳಬೇಕು? (ದ್ರಾವಿ. ೨೫೮). [ಸಂ.]

ನಿಷ್ಪನ್ನ (ಗು). ೧. ಉತ್ಪತ್ತಿಯಾದ; ಹುಟ್ಟಿದ: 'ನಿಷ್ಪನ್ನರೂಪ' ಪರಾ. (ನಾ). ೨. ಹೊರಬಂದುದು; ಹುಟ್ಟಿದುದು; ಉಂಟಾದುದು: "ನಿಷ್ಪನ್ನಂ ಸಿದ್ಧಂ" (ಪಸ್ತುಕೋ. ೧೦೪-೪೦); ಇಂದ್ರನಿಂ ಮಾಡಿಪಟ್ಟುದು ಇಂದ್ರಿಯಂ ನೇರ್ ಇಂದ್ರನೆಂಬುದು ನಾಮಕರ್ಮಂ ಅದಱಿಂ ನಿಷ್ಪನ್ನಮಪ್ಪುದು ಇಂದ್ರಿಯಂ (ತತ್ತ್ವಪ್ರ. ೫೫); ಬೇರೆ ರೀತಿಯಾಗಿ ಆಗಲೇ ನಿಷ್ಪನ್ನವಾಗಿರುವ ರಸವನ್ನು ಆ ಶಬ್ದಗಳು ಹೆಸರಿಸುತ್ತವೆಯೇ ಹೊರತು, ರಸಪ್ರತೀತಿಯೇ ಆ ಶಬ್ದಗಳಿಂದ ಹುಟ್ಟುತ್ತೆನ್ನಲಾಗದು (ಧ್ವನ್ಯಾಲೋ. ೧೫). ೩. ನೆರವೇರಿದುದು; ಈಡೇರಿದುದು; ಪೂರೈಸಿದುದು: ನಿನ್ನ ಕೈಪಯಲಿ ರಾಜಮುಖ ನಿಷ್ಪನ್ನವಾದರೆ ಬೊಪ್ಪನಿಂದ್ರನ ಮನ್ನೆಯ ಮೈಸೋಂಕನೋಲಗ ಸುಲಭವಹುದೆಂದ (ಕುವ್ಯಾಸ. ೬-೧೯). ೪. ಸಿದ್ಧವಾದುದು; ನಿರ್ಣಯವಾದುದು; ತೀರ್ಮಾನವಾದುದು. ೫. ಪರಿಪೂರ್ಣವಾದುದು. ೬. ಹುಟ್ಟಿದವನು; ಉತ್ಪನ್ನನಾದವನು: ಅತಿಸೌಮ್ಯಾಕೃತಿಯು ಮನುಗ್ರತಪಸ್ತೇಜಮುಮನಾದಮೊಳಕೆಯ್ದಂತಾ ಪ್ರತಿಪತಿ ಶಶಿಸೂರ್ಯಸಮೂಹ್ಯತಿಯಿಂ ನಿಷ್ಪನ್ನನಾದ ತೆಜದಿಂದಿರ್ದಂ (ಚಂದ್ರಪು. ೨-೪೩). ೭. ಪರಿಪೂರ್ಣಜ್ಞಾನವನ್ನು ಹೊಂದಿದವನು; ಸಿದ್ಧಿಯನ್ನು ಪಡೆದವನು: ತುಪ್ಪವಾದಾ ಬಳಿಕ ಹೆಪ್ಪನೆಜಿದವರುಂಟೆ ನಿಷ್ಪನ್ನನಾದ ಗುರುವಿನುಪದೇಶದಿಂ ತಪ್ಪದಪು ಮುಕ್ತಿ (ಸರ್ವಜ್ಞ. ೬೫). [ಸಂ.]

ನಿಷ್ಪನ್ನತೆ (ನಾ). ಘನತೆ ; ಗೌರವ : ನಿನ್ನ ನಿಮ್ಮಯ ನುಡಿಯ ಕೈಕೊಂಡೆನ್ನ ಭೂಮಿಯನೀಯೆನಯ್ಯನ ಬನ್ನತೆಯ ಮಾತಿನ್ನು ಕೊಳ್ಳದು ನಾಳು ಸಂಧಿಯನು ನುನ್ನಿಸುತ ಮರುಳಾದಿನೀ ನಿಷ್ಪನ್ನತೆಯ ಬೇಳ್ಕೊಂಡ ಪಾಂಡವಗನ್ನಗಳ ಗದುವಾಯ ಮಾಡುವಿರೆಂದು ಖಳ ನುಡಿದ (ಕುಮ್ಯಾವಿ. ೪-೧೪). [ಸಂ. ನಿಷ್ಪನ್ನತಾ]

ನಿಷ್ಪನ್ನಯೋಗ (ನಾ). [ಜೈನ]ಮೂರು ಪ್ರಕಾರವಾದ ಯೋಗಗಳಲ್ಲಿ ಒಂದು ; ಪ್ರಾರಬ್ಧಯೋಗ, ಧನಮಾನಯೋಗ ಮತ್ತು ನಿಷ್ಪನ್ನಯೋಗ ಎಂಬ ಮೂರು ಬಗೆಯ ಧ್ಯಾನಾಭ್ಯಾಸಗಳಲ್ಲಿ ಒಂದು ; ಈ ಯೋಗದಲ್ಲಿ ಧ್ಯಾನವು ಪೂರ್ಣತೆಯ ಪ್ರಾಪ್ತಿಯನ್ನು ಹೊಂದುತ್ತದೆ : ಯೋಗದಲ್ಲಿ ಪ್ರಾರಬ್ಧಯೋಗ ವೆಂದು, ಧನಮಾನಯೋಗವೆಂದು, ನಿಷ್ಪನ್ನಯೋಗವೆಂದು ಮೂರು ಪ್ರಕಾರವಹುದು (ಸಾಗಾಧ. ೩೦-೭). [ನಿಷ್ಪನ್ನ + ಯೋಗ]

ನಿಷ್ಪನ್ನರೂಪ (ನಾ). ಉತ್ಪನ್ನವಾದ ರೂಪ ; ಪಡೆದ ರೂಪ ; ಸಾಧಿತವಾದ (ಶಬ್ದ)ರೂಪ : ಕುಜಃ. ಗುರುತು ಮಾಡು ಎಂಬ ಅರ್ಥದ ಬೇರು . . . ಕುರಿತು ಎಂಬ ಪದದಲ್ಲಿ ಆದರೆ ಒಂದು ನಿಷ್ಪನ್ನ ರೂಪ ಉಳಿದು ಬಂದಿದೆ (ನಸ್ಮತಾ. ೯೨). [ನಿಷ್ಪನ್ನ + ರೂಪ]

ನಿಷ್ಪನ್ನಶಬ್ದ (ನಾ). [ವ್ಯಾಕ] ಮೂಲಶಬ್ದದಿಂದ ಉತ್ಪತ್ತಿಯಾದ ಇನ್ನೊಂದು ಶಬ್ದ ; ಸಾಧಿತ ಶಬ್ದ ; (ಒಂದು ಮೂಲದಿಂದ) ಹೊಸದಾಗಿ ಹುಟ್ಟಿಕೊಂಡ ತದ್ಧಿತ ಮೊದಲಾದ ಶಬ್ದ : ದೇಶ್ಯ ಶಬ್ದಗಳನ್ನು ಮೂಲಶಬ್ದಗಳು, ನಿಷ್ಪನ್ನ (Derivative) ಶಬ್ದಗಳು, ಸಮಾಸಶಬ್ದಗಳು ಎಂದು ಮೂರು ಪಂಗಡಗಳಾಗಿ ವಿಭಾಗಿಸಬಹುದು . . . ಕಲ್ಕುಟಗಂ, ಪೂವಡಿಗಂ ಮೊದಲಾದುವು ನಿಷ್ಪನ್ನಶಬ್ದಗಳು (ಕೃಪಿ. ೧೪). [ನಿಷ್ಪನ್ನ + ಶಬ್ದ]

ನಿಷ್ಪಾಕ್ಷಿಕ (ಗು). ಯಾವ ಪಕ್ಷಕ್ಕೂ ಸೇರದ ; ನಿಷ್ಪಕ್ಷಪಾತದೃಷ್ಟಿಯುಳ್ಳ ; ಸಮದೃಷ್ಟಿಯುಳ್ಳ : ಸ್ವತಂತ್ರನಾದ ನಿಷ್ಪಾಕ್ಷಿಕ ರಾಷ್ಟ್ರಕನೇ ರಾಜ್ಯಕ್ಕೆ ರಕ್ಷಾಮಣಿ (ರಾಜ್ಯಾಂಗ. ೧೩೯). [ಸಂ.]

ನಿಷ್ಪಾಕ್ಷಿಕತೆ (ನಾ). ಯಾವ ಪಕ್ಷಕ್ಕೂ ಸೇರದಿರುವಿಕೆ ; ಪಕ್ಷಪಾತ ವಿಲ್ಲದಿರುವಿಕೆ : ಅವರ ನಿಷ್ಪಾಕ್ಷಿಕತೆಯೇ ಅವರನ್ನು ಉನ್ನತಮಟ್ಟಕ್ಕೇರಿಸಿದೆ (ರೂಢಿ). [ಸಂ. ನಿಷ್ಪಾಕ್ಷಿಕತಾ]

ನಿಷ್ಪಾದನ (ನಾ). ಉಂಟುಮಾಡುವಿಕೆ ; ಸೃಷ್ಟಿಸುವಿಕೆ : ಏಂ ಜಾಣನೊ ಧಾತ್ರಂ ರೂಪನಿಷ್ಪಾದನವಿಧಿಯೊಳ್ (ಆದಿಪು. ೩-೧೧೧) ; ವಿಷಯಸುಖಾಸ್ವಾದನಂ ದೋಷನಿಷ್ಪಾದನಮಲ್ತೆಂಬಂತೆ ಚಿತ್ತಕ್ಕೊಡವಿಸೆ ಪದೆಪಂ ಭಾರತೀಹಂಸಿ ವಕ್ತ್ರಾಬ್ಜ ನಿಯೊಳ್ ನಾನಾವಿಧಂ ನರ್ತಿಸೆ (ಪಂರಾಮಾ. ೩-೧೬೧) ; ಅವಳ್ಗನಿತಾನಿಷ್ಪಾದನಕ್ಕುಜ್ಜವಡೆದಡೋ ಪದ್ಮಜಂಗೆ (ವೀಲಾವ. ೪-೨೯). [ಸಂ.]

ನಿಷ್ಪಾದಿತ (ಗು). ಉತ್ಪತ್ತಿಮಾಡಿದ ; ಹುಟ್ಟಿಸಿದ ; ಉಂಟುಮಾಡಿದ : ಬಹುಶ್ರುತ ಮಂತ್ರಿ ಮಂತ್ರರೂಪನಿಷ್ಪಾದಿತ ಮಾಯಾಗಾಣತಿಯರನನಿತಂಗೆ ತರಿಸಿ ಕೊಟ್ಟು (ಶಾಂತಿಪು. ೨-೪೧ ಸ). [ಸಂ.]

ನಿಷ್ಪಾದ್ಯ (ಗು). ೧. ಉತ್ಪತ್ತಿಯಾಗುವ ; ಸಿದ್ಧವಾಗುವ. ೨. ಪರಿಪೂರ್ಣವಾಗುವ. [ಸಂ.]

ನಿಷ್ಪಾಪ (ಗು). ೧. ಪಾಪವಿಲ್ಲದ ; ಪಾಪರಹಿತ : ಇನಿತು ನೀನಜ್ಞಾಯದೆ ದುರಾಗ್ರಹವನೆ ಬಲಿದು ಧರ್ಮಜಗೆ ಶಾಪವನನುವಿಸಲು ನಿಷ್ಪಾಪ ಧರ್ಮಜನಿಂಗೆ ಹೊದ್ದುವುದೆ (ತಿಮ್ಮಭ್ಯು. ೨-೬೯). (ನಾ). ೨. ಪಾಪವಿಲ್ಲದವನು ; ಶುದ್ಧನಾದವನು : ಫಲುಗುಣಂ ಕೃಷ್ಣನ ನಿರೂಪಮಂ ಕೈಕೊಂಡು ಹರ್ಷದಿಂದಾಗ ನಿಷ್ಪಾಪನಾಗಿಹ ಚಂದ್ರಹಾಸನಂ ಬಂದು ಗಾಢಾಲಿಂಗನಂಗೈಯಲು (ಜೈಮಿಭಾ. ೩೨-೧೬) ; ನಾವು ನಿಷ್ಪಾಪರಾಗದೆ ಭಗವಂತನ ದರ್ಶನವನ್ನು ಪಡೆಯಲರಿಯೆವು ; ಮತ್ತು ಭಗವಂತನ ದರ್ಶನವನ್ನು ಪಡೆಯದೆ ನಿಷ್ಪಾಪರಾಗಲರಿಯೆವು (ಪರಪ. ೧೭೩). ೩. ಏನೂ ತಿಳಿಯದವನು ; ಮುಗ್ಧ. [ಸಂ.]

ನಿಷ್ಪಾಪತೆ (ನಾ). ಪಾಪವಿಲ್ಲದಿರುವಿಕೆ ; ಶುದ್ಧವಾಗಿರುವಿಕೆ ; ಪಾಪರಾಹಿತ್ಯ : ನಿಷ್ಪಾಪತೆ ಹಾಗೂ ಭಗವದ್ದರ್ಶನ ಇವುಗಳಲ್ಲಿಯ ಸಂಬಂಧವು ಅದೆಂತಹುದು ? (ಪರಪ. ೧೭೩). [ಸಂ. ನಿಷ್ಪಾಪತಾ]

ನಿಷ್ಪಾಪಿ (ನಾ). ಪಾಪವಿಲ್ಲದ ವ್ಯಕ್ತಿ : ಪುಣ್ಯಪಾಪವಿರಹಿತನಾಗಿ ನಿಷ್ಪಾಪಿಯಯ್ಯಾ ಭಕ್ತನು (ಸಿದ್ಧೇಶ. ೩೫೪-೩೪) ; ನನ್ನ ಮಗೂನ ಆಯುಷ್ಯ ಹಾಳು ಮಾಡಬೇಡಿರೇ. ಅವಳು ನಿಷ್ಪಾಪಿ (ಸೂರುದಾ. ೨೫೩). [ಸಂ. ನಿಷ್ಪಾಪಿನ್]

ನಿಷ್ಪಾರದರ್ಶಕ (ಗು). ೧. ಪಾರದರ್ಶಕವಲ್ಲದ ; "ಬೆಳಕನ್ನು ಪ್ರತಿಫಲಿಸದ; ತನ್ನಲ್ಲಿ ಬೆಳಕನ್ನು ಹಾಯಿಸದ; ನಿಷ್ಪಾರದರ್ಶಕ" (Opaque. ಇಂಕಸಿ). (ನಾ). ೨. ತನ್ನ ಮೂಲಕ ಬೆಳಕನ್ನು ಹರಿಯಬಿಡದುದು ; ಅಪಾರದರ್ಶಕವಾದುದು : ಬೀಟಿನಲ್ಲಿಯೇ ಜೇಡಿಮಣ್ಣು ಸೇರಿಸಿ ತಯಾರಾದ ಕಾಗದದಲ್ಲಿರಬಹುದಾದ ರಂಧ್ರಗಳು ಮುಚ್ಚುವಂತೆಯೂ ಬಣ್ಣವು ಸರಿಯಾಗುವಂತೆಯೂ ಕಾಗದವು ನಿಷ್ಪಾರದರ್ಶಕ (Opaque) ವಾಗುವಂತೆಯೂ ಮಾಡಲಾಗುತ್ತದೆ (ಮುದ್ರಕ. ೮೦). [ಸಂ.]

ನಿಷ್ಪಾವ (ನಾ). ೧. (ಧಾನ್ಯ ಮೊದಲಾದುವನ್ನು) ಗಾಳಿಯಲ್ಲಿ ತೂರಿ ಶೋಧಿಸುವಿಕೆ : "ಲವಮಥಲಾವಂ ಲವನಂ ಪವನಂ ನಿಷ್ಪಾವ ಮಂತೆ ಪವಂ" (ನಸ್ತಕೋ. ೧೧೪-೨೧) ; "ನಿಷ್ಪಾವಃ, ಪವನಂ, ಪವಃ – ೩ ಧಾನ್ಯಾದಿಗಳನ್ನು ಗಾಳಿಗೊಡ್ಡುವಿಕೆ, ತೂರುವಿಕೆ" (ಸಿದ್ಧಾಂತಿ. ೩೭೪). ೨. = ನಿಷ್ಪಾವಕ : "ನಿಷ್ಪಾವ ವಲ್ಲ ಸಂಜ್ಞಿಕವದವರೆ" (ನಸ್ತಕೋ. ೯೪-೧೩) ; ಕುಲತ್ಥ ಮುದ್ಗ ಮಾಷ ರಾಜಮಾಷಾಢಕೀ ನಿಷ್ಪಾವ ಚಣಕ ಕುಸುಂಭ ಕಾರ್ಪಾಸ ಸರ್ಷಪ ಜೀರಕ ಧಾನ್ಯಕಾದಿ ನಿವಿಧ ಧಾನ್ಯಭೇದಂಗಳುಂ (ಅಪು. ೬-೭೨ ಪ); ಬಾವುಜಿಗೆಯನೆಳ್ಳಂ ನಿಷ್ಪಾವಮನಗಸೆಯುಮನಿಕ್ಕಿಪಂದೆರ್ಮಗೆ ಮೇಣಾವಿಂಗೆ ಬಸಿಜಿ ಕಜು ಸತ್ತಾವದಿ (ದಿ)ಗೊಳಿಸುತ್ತುಮಿರ್ದೊಡದು ಪೊಲಿಮಡುಗುಂ (ಲೋಕೋಪ. ೯-೧೯೦). [ಸಂ.]

ನಿಷ್ಪಾವಕ (ನಾ). ಒಂದು ಬಗೆಯ ಧಾನ್ಯ ; ಅವರೆ : "ವಲ್ಲಃ, ನಿಷ್ಪಾವಕಃ —ಈ ೨ ಅವರೆ" (ಹಲಾಯು. ೪೬-೪೩೦); "ನಿಷ್ಪಾವಕಮೆನೆ ವಲೆಯೆನಲ್ಕವರೆ" (ಪುಂಗರಾ. ೧೧೦-೫). [ಸಂ.]

ನಿಷ್ಪಿಷ್ಟ (ಗು). ೧. ಕುಟ್ಟಿ ಪುಡಿಮಾಡಿದ ; ಅರೆದು ಹಿಟ್ಟು ಮಾಡಿದ. ೨. ಗಾಯಗೊಂಡ ; ಹಿಂಸೆಗೆ ಗುರಿಯಾದ : ಗುರು ಪಾದಾಂ[ಬುರುಹಕ್ಕೆ] ಮುಗ್ಗಿ ಪೊಡೆವಟ್ಟಿಂಗುಂ ಭುಜಂಗೇಂದ್ರ ಭೀಕರ ಬಾಹಾಭ್ರಮಿತಾಭ್ರವಿಭ್ರಮಗದಾನಿರ್ಘಾತನಿಷ್ಪಿಷ್ಟ ಸಿಂಧುರಮೇ [ದೋಸ್ತರ] ಸಾರ್ದ್ರವಾರಣರಣಕ್ಕೋರ್ವೀತಳಂ ಕೌರವೇಶ್ವರಚೂಡಾಮಣಿ ಚೂರ್ಣಕಲ್ಕಕುಲದಿಕ್ಕಕ್ರಂ ಹಿಡಿಂಬಾಂತಕಂ (ಗದಾಯು. ೪-೬೩); ನಷ್ಟವಾದುದು ಸತ್ವದಾತನನಿಷ್ಟವೈರಿಯ ಕರಹತಿಗೆ ನಿಷ್ಪಿಷ್ಟಗಾತ್ರನು ಜಾಂಬವಂತನು ಬಳಲುತಿಂತೆಂದ (ನಿಭಾಗ. ೧೦-೬೬-೧೫). [ಸಂ.]

ನಿಷ್ಪೀಡನ (ನಾ). ಹಿಂಡುವಿಕೆ ; ಹಿಸುಕುವಿಕೆ : ಯಂತ್ರ ನಿಷ್ಪೀಡನಾದಿಗಳಿಂ ನಾರಕರ್ಗೆ ಸಂಕ್ಲಿಷ್ಟಾಸುರರ್ ದುಃಖಮುಂ ಪುಟ್ಟಿಸಿದೊಡಂ (ತತ್ತ್ವಪ್ರ. ೧೨೩); ಕುಚಯುಗಳ ನಿಷ್ಪೀಡನದ . . . ದೃಢಾಲಿಂಗನದ ಮನುಮಥಚರಿತೆಗಳ ಚಾತುರಿಯನಿಧಿ ರವಿಸಿದನು ರಮಣಿಯರ (ನಿಭಾಗ. ೧೦-೩೬-೮); ಕಾವ್ಯಾತ್ಮಕ ಶಬ್ದದ ನಿಷ್ಪೀಡನದಿಂದಲೇ ಅಲ್ಲೆಲ್ಲ ಹರ್ಷಣ ಕಾಣುತ್ತದೆ (ಧ್ವನ್ಯಾಲೋ. ೫೦ ಅಡಿಟಿ). [ಸಂ.]

ನಿಷ್ಪೀಡನಂಗೈ (ಕ್ರಿ). ಹಿಂಡು : ಉದ್ದಾಲಕಂ ಎಂಬ ರುಷಿಯೊಂದು ದಿನಂ ಗಂಗೆಯೊಳ್ ಸ್ನಾನಂ ಮಾಡಿ ಕೌಪೀನವಂ ಪ್ರಕ್ಷಾಲಿಸಿ ಕಮಳಕರ್ನಿಕೆಯೊಳು ನಿಷ್ಪೀಡನಂಗೈಯಲ್ (ಪ್ರಾಕ್ಕಾವ್ಯ. ೧೫೯೨ ಶಾಸ್ತ್ರಸಾರ).
[ನಿಷ್ಪೀಡನ+ಗೈ (<ಕೆಯ್)]

ನಿಷ್ಪೀಡನೆ (ನಾ). = ನಿಷ್ಪೀಡನ : ಅಶ್ರು, ಸಂತೋಷ ತೀಕ್ಷ್ಣತೆಯ ನಿಷ್ಪೀಡನೆಗೆ ಬಿಡದೆ ಆತ್ಮೀಕ್ಷು ಸೋರ್ನ ಅನವರತ ರಸಧಾರೆಯೋಲ್, ತೊರೆಯೊಳ್ಳಿದುದು ಹನುಮನಸ್ಸಿಯ ಕೃತಜ್ಞತಾಶತಪತ್ರದಿಂ (ಕ್ರೀರಾಮಾ. ೪೭೮-೧೦೦). [ಸಂ. ನಿಷ್ಪೀಡನ]

ನಿಷ್ಪೀಡಿತ (ಗು). ಪೀಡಿಸಿದ ; ಹಿಸುಕಿದ ; ಒತ್ತಿದ : ಸ್ವರ್ಗಲಕ್ಷ್ಮಿಯ ಮೇಲಬ್ಧಿಜೊಳಂದದೇಂ ನಲಿದನೋ ಸಂಭೋಗಸಮ್ಮರ್ದನಿರ್ದಯನಿಷ್ಪೀಡಿತ ದೇವವಾರವನಿತಾಬಿಂಬಾಧರಂ ಶ್ರೀಧರಂ (ಆದಿಪು. ೫-೭೧). [ಸಂ.]

ನಿಷ್ಪುರುಷೆ (ನಾ). ಮದುವೆಯಾಗದವಳು ; ಏವಾಹವಿಲ್ಲದವಳು : ಅರಸ ವಿಸ್ಮಯಬಟ್ಟು ಸತಿ ನಿಷ್ಪುರುಷೆಯೆಂದನ್ಯಾಯವಾಡಿದ ಪರಿಯ ತನ್ನಜ್ಞೆಕೆಯನು ನೆನೆದವಗರಸನಿಂತೆಂದ (ಜೀವಂಧ. ೧೨-೩೬).
[ಸಂ. ನಿಷ್ಪುರುಷಾ]

ನಿಷ್ಪೇಷಣ (ನಾ) ೧. ಉಜ್ಜುವಿಕೆ. ೨. ಅರೆಯುವಿಕೆ. ೩. ಪುಡಿಮಾಡುವಿಕೆ. [ಸಂ.]

ನಿಷ್ಪೇಷಿತ (ನಾ). ಅಜಿಗಿಜಿಯಾದವನು ; ಪುಡಿಪುಡಿಯಾದವನು : ಪರ್ವತದ ಕಿಬ್ಬದಿಯಲ್ಲಿ ವಾಸ ಮಾಡುವವರ ಮೇಲೆ ಶಿಖರವು ಬಿದ್ದರೆ ಹೇಗೆ ನಿಷ್ಪೇಷಿತರಾಗುವರೋ . . . ನವಕುಮಾರನ ಹೃದಯವು ಹಾಗೆ ಜರ್ಝರಿತವಾಗಿ ಹೋಯಿತು (ಕಪಾಕುಂ.೧೧). [ಸಂ.]

ನಿಷ್ಪಕಂಪ (ಗು). ಅಲುಗದೆ ಇರುವ ; ನಿಶ್ಚಲವಾದ ; ಸ್ಥಿರವಾದ : ಸೌಮನಸ್ಯನು ನಿಷ್ಪಕಂಪಸನಾಮನರ್ಜುನದೇವನಿದಿರಲಿ ಭೂಮಿಯಲಿ ಬಿಲ್ಲಾಳದಾವವನೆಂದನಾ ಶಕುನಿ (ಕುನ್ಯಾಅ. ೮-೧೪). 'ನಿಷ್ಪಕಂಪಸಲಿಲ' ಪರಾ. [ಸಂ.]

ನಿಷ್ಪಕಂಪನ (ನಾ). ಚಲಿಸದೆ ಇರುವಿಕೆ ; ಅಲುಗದೆ ಇರುವಿಕೆ ; ನಿಶ್ಚಲತೆ : ತುದಿಗಾಲುಗಳ ಹೊಜ್ಜುಗೆಯ ತಪದ ನಿಜ್ಜುಗೆಯ ನಿಷ್ಪಕಂಪನದ ಬಿಗಿದ ಬಿಲ್ಲಿನ ಬೆನ್ನ ಬತ್ತಳಿಕೆಗಳ . . . ಹೊಸ ತಪಸಿ ತೊಡಗಿದನು ಬಲುತಪವ (ಕುನ್ಯಾಅ. ೪-೪೩). [ಸಂ.]

ನಿಷ್ಪಕಂಪಸಲಿಲ (ನಾ). ೧. ಅಲ್ಲಾಡದೆ ಇರುವ ನೀರು. ೨. ನೀರು ಚಲಿಸದಿರುವುದು ; ಶಾಂತವಾದ ನೀರುಳ್ಳದು : ಹೇಮಾಚಲೇಂದ್ರಂ ಜಗಕ್ಕಿದು ಬೇಜೊಂದತಿನಿಷ್ಪಕಂಪಸಲಿಲಂ ಗಂಭೀರಕೂಪಾರಮೆಂಬುದನೆಂದರ್ಚಿಸೆ ಪೇಚರಾಮರಗಣಂ ನಿಂದಂ . . . ಆದಿ ಭಟ್ಟಾರಕಂ (ಆದಿಪು. ೯-೧೨೩). [ನಿಷ್ಪಕಂಪ+ಸಲಿಲ]

ನಿಷ್ಪತಿ (ಗು). ಪ್ರತಿಯಿಲ್ಲದ ; ಎಣೆಯಿಲ್ಲದ ; ಅದ್ವಿತೀಯ : ನೀಲಗಿರಿಯಿಕ್ಕೆಲಕೆ ವಾರಿಧಿ ಮೇಲೆ ನಿಷ್ಪತಿಶೃಂಗವಿವು ಮೈನೀಳದಲಿ ಪೂರ್ವಾಪರದ ಜಲನಿಧಿಯ ಮುಟ್ಟಿಹವು (ಕುನ್ಯಾಅ. ೭-೪೬). [ಸಂ.]

ನಿಷ್ಪತ್ಯೂಹ (ಗು). ೧. ಅಡ್ಡಿ ಇಲ್ಲದಿರುವ ; ತೊಡಕಿಲ್ಲದಿರುವ ; ನಿಷ್ಕಂಟಕವಾಗಿರುವ : ನಿಷ್ಪತ್ಯೂಹಮೋಹರಸಪರವಶತೆಯಿಂ ನೆರೆವ ನಗರದಂಪತೀಶತೋತ್ತಾರರಣತಕುಹರಣಸೂತ್ರಮಂ ಕಲ್ತು ಪರಿವಿಡಿಗೆಯ್ವ ಪಾರಾವತಪ್ರಕರಕ್ಕೆ ಮಕರಕೇತು ಶಾಸ್ತ್ರಾಭ್ಯಾಸಪ್ರಾಸಾದಂಗಳಾದ ಮಣಿಮಯಕೃತಕಗಿರಿಗಳುಂ . . . ಮನೋಹರಂಗಳೆನಿಸಿರ್ದುವು(ಚಂದ್ರಪು. ೧-೧೦೬). (ನಾ). ೨. ಅಡ್ಡಿ ಇಲ್ಲದಿರುವಿಕೆ ; ಅಡಚಣೆಯಿಲ್ಲದಿರುವಿಕೆ ; ನಿಷ್ಕಂಟಕವಾಗಿರುವಿಕೆ ; ನಿರಾತಂಕ ಸ್ಥಿತಿ : ಸಮರಜಯವಿನ್ನಾಯ್ತು ಯಜ್ಞೋದ್ಯಮಕೆ ನಿಷ್ಪತ್ಯೂಹವಿನ್ನು ಭ್ರಮೆಯ ಮಾಡದಿರು (ಕುನ್ಯಾಸ. ೨-೩೨) ; ಆಹ ಲೇಸಾಯ್ತಮನು ನಿಷ್ಪತ್ಯೂಹದಲಿ ನಾವ್ ಬಂದ ಕಾರ್ಯಂ ಮಹಾಹವವ ಜೈಸಿದೆವು (ತೊರರಾ. ೫-೮-೪೬) ; ತಾವಾಗಿ ನಿಷ್ಪತ್ಯೂಹದಲಿ ಜೀವಿಸುವುದು (ಸಿಭಾಗ. ೪-೩-೫೭). [ಸಂ.]

ನಿಷ್ಪಪಂಚ (ನಾ). ೧. ಸಂಸಾರಬಂಧಕ್ಕೆ ಅತೀತವಾದುದು : ಮಾಯಾತೀತವಾದುದು : ಕಿನ್ನರಯ್ಯನನೊಡನೆ . . . ತೆಗೆದು ಬಿಗಿದಪ್ಪಿ ಜಡವಿರಹಿತಂ ನಿಷ್ಪ [ಪಾಶಾಂ. ನಿಃಪ್ರ]ಪರೆಚದ ಬೆಡಗಿನೊಳ್ಪಿನ ಮತಿಯಂ ಕೀಲಂ ಪಿಡಿಸಿ ಲಿಂಗಪ್ರಾಣಮಥನ ಸದನುಭವವನಱುಹಿ (ಬಸಪು. ೨೯-೩೩); ನಿಷ್ಪಪಂಚವೂ ನಿರ್ಗುಣವೂ ಆದ ಬ್ರಹ್ಮನನ್ನೇ ಹಿಡಿದುವಾದಿಸುವವರು ಅದ್ವೈತಿಗಳು (ಭಾರದ. ೧೩೧). 'ನಿಷ್ಪಪಂಚಬ್ರಹ್ಮವಾದಿ' ಪರಾ. ೨. ಸಂಸಾರವನ್ನು ಬಿಟ್ಟವನು ; ಪ್ರಪಂಚವನ್ನು ತೊರೆದವನು ; ಯೋಗಿ : ಪಂಚಗುರುಚರಣಸರಸಿರುಹಂ ಚಿತ್ತದೊಳಲಿಳಮಳಹರಂ ನಾಲಗೆಯೊಳ್ ಪಂಚಪದಂ ನೆಲಸಿರೆಯಿರೆ ಪಂಚತೆಯಂ ನಿಷ್ಪಪಂಚನೆಯ್ದಿದನಮರಂ (ಚಂದ್ರಪು. ೪-೬೮) ; ಪಂಚಪಂಚೀಕೃತಿಯ ಪ್ರಪಂಚ ಪರಿಹರವಾಗಿ ನಿಷ್ಪಪಂಚ ನಿರ್ಲೇಪಕನಾದೆನು(ಸಿದ್ಧೇಶ. ೩೩-೮೫).
[ಸಂ.]

ನಿಷ್ಪಪಂಚಬ್ರಹ್ಮವಾದಿ (ನಾ). ನಿಷ್ಪಪಂಚಬ್ರಹ್ಮನು ಇರುವನೆಂದು ಪ್ರತಿವಾದಿಸುವವನು ಮತ್ತು ಆ ಗುಂಪಿಗೆ ಸೇರಿದವನು ; ಇ ಬ್ರಹ್ಮವೊಂದೆ ಸತ್ಯ ಜಗತ್ತೆಲ್ಲವೂ ಮಿಥ್ಯ ಎಂಬ ಅರ್ಥದಲ್ಲಿ ನಿಷ್ಪಪಂಚನೆಂದು ಪರಬ್ರಹ್ಮನಿಗೆ ಹೆಸರು : ಬ್ರಹ್ಮವಾದಿಗಳಾದ ವೇದಾಂತಿಗಳಲ್ಲಿ ಕೆಲವರು ನಿಷ್ಪಪಂಚಬ್ರಹ್ಮವಾದಿಗಳು (ಭಾರದ. ೧೩೦).
[ಸಂ. ನಿಷ್ಪಪಂಚಬ್ರಹ್ಮವಾದಿನ್]

ನಿಷ್ಪಭ (ನಾ). ೧. ಕಳೆಗುಂದಿರುವುದು ; ಕಾಂತಿಹೀನವಾಗಿರುವುದು ; ಮಂಕಾಗಿರುವುದು : "[ವಿಗತಶ್ರಿ ನಿಷ್ಪಭಮದು]" (ಪಸ್ತುಕೋ. ೧೦೬-೫೨); "ನಿಷ್ಪಭಃ, ವಿರತಃ, ಅರೋಕಃ—ಕಳೆ ಕುಂದಿ ಕಾಂತಿ ಇಲ್ಲದೇ ಇರುವದು" (ಸಿದ್ಧಾಂತಿ. ೩೫೦) ; ಸೋತು ಬೆಂಡಾಗಿ ನಿಷ್ಪಭವಾಗಿದ್ದರೂ ಜಗತ್ತಿನ ಕಾರುಣ್ಯವನ್ನೆಲ್ಲ ಉಕ್ಕಿಸುವಂಥ ಕೋಮಲ ಮುಖ (ಅನಾಥ. ೧೫). ೨. ಕಳೆಗುಂದಿದವನು ; ಕಾಂತಿಹೀನ : ತರಣಿ ನಿಷ್ಪಭನಾದ ನಭದಿಂದುರಿವ ಕೊಳ್ಳಿಗಳುದುರೆ ದಿವಸದೊಳಿರದೆ ತಾರೆಗಳುರಿಯೆ ಕವಿದುವು ಹದ್ದು ಕಾಗೆಗಳು (ಕಾತಿರಾ. ೨೫-೩). [ಸಂ.]

ನಿಷ್ಪಭತನು (ನಾ). ಕಾಂತಿಹೀನವಾದ ದೇಹವುಳ್ಳವನು : ಉಟಿದರ್ ನಿಲೆ ಕಲ್ಪಲತಾಶ್ರಯಕ್ಕೆ ನಿಷ್ಪಭತನುವುಳ್ಳರಂ ದೊರೆಗೆವಾರದ ಪೂಲ್ ದೊರೆಯಾಗಲಾರ್ಕಮೇ (ಶಾಂತಿಪು. ೫-೨೮). [ನಿಷ್ಪಭ+ತನು]

ನಿಷ್ಪಯೋಜಕ (ನಾ). ೧. ಉಪಯೋಗಕ್ಕೆ ಬಾರದುದು ; ಅಪ್ರಯೋಜಕವಾದುದು ; ಕೆಲಸಕ್ಕೆ ಬಾರದುದು : ನನ್ನ ಜೊತೆಯಲ್ಲಿನ ಬಾಳ್ವೆ ಬಿಟ್ಟು ಉಳಿದದ್ದೆಲ್ಲ ಅಸಂಗತ, ನಿಷ್ಪಯೋಜಕ ಎಂಬ ಹೆಣ್ಣಿನ ತಿರಸ್ಕಾರದ ಭಾವ (ಪ್ರಶ್ನೆ. ೧೧೨) ; ಈ ಖಂಡಕ್ಕೆ ವಿರೋಧವಾಗಿ ರಚಿತವಾದ ಯಾವುದೇ ವಿಧಿಯು ಹಾಗೆ ವಿರುದ್ಧವಾಗಿರುವ ಮಟ್ಟಿಗೆ ನಿಷ್ಪಯೋಜಕವಾಗಿರತಕ್ಕುದು (ಭಾಧಾನ. ೬). ೨. ಉಪಯೋಗಕ್ಕೆ ಬಾರದವನು ; ಕೆಲಸಕ್ಕೆ ಬಾರದವನು ; ಅಪ್ರಯೋಜಕ : ಅವನೊಬ್ಬ ನಿಷ್ಪಯೋಜಕ (ರೂಢಿ). [ಸಂ.]

ನಿಷ್ಪಯೋಜನ (ಗು). ೧. ಪ್ರಯೋಜನವಿಲ್ಲದ; ಉಪಯೋಗಕ್ಕೆ ಬಾರದ : ಕದನಕರ್ಕಶಕ್ಷತ್ರಿಯಂಗೆ . . . ನಿಷ್ಪಯೋಜನಸ್ವೇದಜಲೋದ್ಗಮಮುಂ ನಿಷ್ಪಂದ ನಾಸಾಸ್ಫುರಿತಮುಂ ನಿಷ್ಕಾರಣ ಕಾಯಕಂಪನಮುಂ ನಿರಾಲಂಬನವಾಗಾಡಂಬರಮುಂ ತಕ್ಕುದಲ್ತು (ಆದಿಪು. ೧೪-೮೧ ವ). (ನಾ). ೨. ಉಪಯೋಗಕ್ಕೆ ಬಾರದುದು ; ನಿರುಪಯುಕ್ತ

ವಾದುದು : ಈ ನಿಷ್ಪ್ರಯೋಜನವಾದ ದೇಹವನ್ನು, ಸಾಗರರಾಜನೆ, ನಿನಗೆ ಸಮರ್ಪಿಸುವೆನು (ನಿಷ್ಕಾಮ. ೧೭೫). [ಸಂ.]

ನಿಷ್ಪ್ರಯೋಜನಂ (ಅ). ಪ್ರಯೋಜನವಿಲ್ಲದೆ ; ಸುಮ್ಮನೆ; ವ್ಯರ್ಥವಾಗಿ : ಆ ಕೃತಘ್ನನನ್ ನಿಷ್ಪ್ರಯೋಜನಮಿಂತು ನೆನೆನೆನೆದು, ಬೇಳ್ವೆಯೇನ್ (ತ್ರೀರಾಮಾ. ೪೯೨–೧೭೮). [ಸಂ.]

ನಿಷ್ಪ್ರವರ (ನಾ). ಅಪೌರುಷೇಯನಾದವನು ; ಪರಮಾತ್ಮ : ನೆನೆಯುತೆ ದೇವಿ ನಿಷ್ಪ್ರವರನಂ ವರನಂ ವರನಂ ಮಹೇಶನಂ (ಗಿರಿಶ. ೯–೧೨). [ಸಂ.]

ನಿಷ್ಪ್ರವಾಣಿ (ನಾ). ಮಗ್ಗದಿಂದ ಆಗ ತಾನೇ ಹೊರಬಂದ ಬಟ್ಟೆ ; ಇನ್ನೂ ಚೆಲುವೆ ಮಾಡದ ಹೊಸಬಟ್ಟೆ : "ನವವಸ್ತ್ರಂ ಪೊಸತದು ನಿಷ್ಪ್ರವಾಣಿ ತಾಂತ್ರಿಕವೆನಿಕ್ಕುಂ" (ವಸ್ತುಕೋ. ೬೬–೧೬) ; "ಅನಾಹತಂ, ನಿಷ್ಪ್ರವಾಣಿ, ತಂತ್ರಕಂ—ಕ್ಷ ನವಾಂಬರ, ಹೊಸ ಬಟ್ಟೆ" (ಸಿದ್ಧಾಂತಿ. ೨೦೨). [ಸಂ.]

ನಿಷ್ಪ್ರವಾಳ (ಗು). ಚಿಗುರದೆ ಇರುವ ; ಕೊನರದೆ ಇರುವ : ಆತಪ ತಾಪದಿಂದಮಿದು ನಿಸ್ತೃಣ ನಿರ್ಜಳ ನಿಷ್ಪ್ರವಾಳವಲ್ಲೀತರುವಾದುದೀಯೆಡೆಯೊಳಿನ್ನಿರವಾಗದು ಪೋಪುದುತ್ತಮಂ (ಜಗವಿ. ೩–೬೪). [ಸಂ. ನಿಷ್ಪ್ರವಾಲ]

ನಿಷ್ಪ್ರವೀಚಾರ (ನಾ). ೧. [ಜೈನ] ಸಂಭೋಗವಿಲ್ಲದಿರುವಿಕೆ ; ರತಿಕ್ರೀಡೆಯಿಲ್ಲದಿರುವಿಕೆ: ಒದವುವುದು ನಿಷ್ಪ್ರವೀಚಾರದಿನರ್ಗೆ ಮನೋಜ ಪರಮಸುಖಮಿನ್ನವರಭ್ಯುದಯಮನದನಿನ್ನೇವೇಟ್ಟುದೊ ದೇವರ ದೇವರಪ್ಪ ಭವಸಂಭವದಿಂ (ಶಾಂತಿಪು. ೯–೧೨೮). ಸಮಧಿಗತ ಮಾನಸಾಮೃತಾಹಾರರುಂ ಸಪ್ರವೀಚಾರಾನಂತಗುಣ ನಿಷ್ಪ್ರವೀಚಾರಸುಖರುಂ . . . ಆಗಿ ಸುಖಮಿರ್ಪಿನಂ (ಚಾವುಂಪು. ೩೧) ; ಮಱುಮೆಯ್ಯೊಳ ತೀಂದ್ರಿಯಸುಖದೆಱೆವಟ್ಟುದಪ್ಪನೆಂಬುದರ್ಕಿದುವೆ ವಲಂ ಕುಱುಪೆಂಬ ತೆಱದಿನೆಸೆದುದು ನೆಱೆದಹಮಿಂದ್ರಂಗೆ ನಿಷ್ಪ್ರವೀಭಾಗ[ಚಾರ]ಸುಖಂ (ಚಂದ್ರಪು. ೧೧–೩೬). ೨. ಸಂಭೋಗ ಮಾಡದವನು ; ಸುರತದಲ್ಲಿ ತೊಡಗದವನು ; ಮೈಥುನವಿಲ್ಲದವನು : ನೆನೆವಂ ಮೂವತ್ತು ಮೂಸಾಸಿರಬರಿಸದೊಳಾಹಾರಮಂ ನಿಷ್ಪ್ರವೀಚಾರನಸಾರಂ ತನ್ನೊಳಾದಭ್ಯುದಯಂ ಸಕಳಸೌಖ್ಯಂ ತ್ರಯಸ್ತ್ರಿಂಶದಂಭೋಧಿ ನಿಜಾಯುಸ್ಸಂಖ್ಯೆ ಪಕ್ಷಾಧಿಕಮೆನೆ ಪದಿನಾಱಾದ ಮಾಸಕ್ಕುಸಿರ್ಪತ್ತೆನೆ ಮೋಸಂಗೊಳ್ಳದೇನಂ ಪೊಗೞ್ದೆನಹಮಿಂದ್ರಂಗೆ ಕೈಸಾರ್ದ ಸೈಪಂ (ಮಲ್ಲಿಪು. ೧೧–೬೮). [<ಸಂ. ನಿಷ್ಪ್ರವಿಚಾರ]

ನಿಷ್ಪ್ರವೀಚಾರತೆ (ನಾ). = ನಿಷ್ಪ್ರವೀಚಾರ ೧ : ನಿಷ್ಪ್ರವೀಚಾರತೆಯಿಂ ನೆಱೆದ ಸುಖಾಂಭೋಧಿಯೊಳವಱೆಸುಱುದವಗಾಹಮಿರ್ದನಿಂತಹಮಿಂದ್ರಂ (ಚಂದ್ರಪು. ೧೧–೩೯). [<ಸಂ. ನಿಷ್ಪ್ರವಿಚಾರತಾ]

ನಿಷ್ಪ್ರಾಣ (ಗು). ೧. ನಿರ್ಜೀವವಾದ ; ಜೀವವಿಲ್ಲದ. ೨. ಬಲವಿಲ್ಲದ; ನಿರ್ಬಲವಾದ. (ನಾ). ೩. ಪ್ರಾಣವಿಲ್ಲದುದು; ನಿರ್ಜೀವವಾದುದು : ಬಲದೇವಾಕೃತಿಯಂ ಸರಾಗನಮರಂ ನಿಷ್ಪ್ರಾಣಮಂ ನಿಕ್ರಿಯಾಬಲದಿಂ ನಿರ್ಮಿಸಿ ಕಂಡು ಲಕ್ಷ್ಮಣಂ . . . ಬಿಟ್ಟಂ ಧರಾತಲದೊಳ್ (ಪಂರಾಮಾ. ೧೬–೪೯). [ಸಂ.]

ನಿಷ್ಪ್ರೇಮ (ಗು). ೧. ಆಸಕ್ತಿಯಿಲ್ಲದ ; ಅನಾಸಕ್ತವಾದ : ಕಾಮಿಸಿ ಭೋಗಿಸುವಗೆ ಕರ್ಮಬಂಧ ನಿಷ್ಪ್ರೇಮಭೋಗಿಗೆ ಬಂಧವುಂಟೆ (ಭರಜ. ೨–೩೨). (ನಾ). ೨. ಪ್ರೇಮವಿಲ್ಲದಿರುವಿಕೆ ; ನಿರಾಸಕ್ತಿ. [ಸಂ.]

ನಿಷ್ಫಲ, ನಿಷ್ಫಳ (ಗು). ೧. ಫಲವನ್ನು ಕೊಡದಿರುವ ; ಹಣ್ಣುಬಿಡದ. ೨. ವ್ಯರ್ಥವಾದ ; ನಿರರ್ಥಕವಾದ: ಮುಕ್ಕಳನೀಯದೆ ನೋಡೆ ನಾಡೆ ನೋಯಿಸಿದಪುದಿಕ್ಷುಪುಷ್ಪದವೊಲೆನ್ನಯ ನಿಷ್ಫಲ ಪುಷ್ಪದರ್ಶನಂ (ಸಂಪಭಾ. ೧–೧೧೭) ; ನಿಷ್ಫಲಪ್ರಾಣಿಯನಾದಂ ಕ್ರೂರೆಯಂ ಬ್ರಾಹ್ಮಣಹನನ ಮಹಾಪಾಪಮಂ ಗೆಯ್ದು ನಿಸ್ತ್ರಿಂಶೆಯನೆನ್ನಂ ಪಾಪೆಯಂ ನೀಂ ಬೆಸಗೊಳೆ ಫಲಮೇಂ (ಕಾದಂಪೂ. ೯೫೭). ೩. ನಪುಂಸಕವಾದ ; ಪುಂಸತ್ವವಿಲ್ಲದ. (ನಾ). ೪. ನಿರರ್ಥಕವಾದುದು ; ವ್ಯರ್ಥವಾದುದು; ಉಪಯೋಗವಿಲ್ಲದುದು;ಅಪ್ರಯೋಜಕವಾದುದು: "ವೃಥೆ ನಿಷ್ಫಲಂ ಮೋಳಮೆನಲದು ನಿರರ್ಥಕ್ಕೆ ನಾಮಂ" (ಮಂಗರಾ. ೧೩೬–೪೦) ; ಅನ್ನವನಿಕ್ಕಿದರೇನು ಹೊನ್ನ ಕೊಟ್ಟರೇನು . . . ಸದಮಳ ಶಾಶ್ವತ ಮಹಾಭಗಲಿಂಗವನಱಯದೆ ಇವೇನ ಮಾಡಿದರು ಕಡೆಗೆ ನಿಷ್ಫಲ (ಪಚಸಂ. ೩೬೭–೧) ; ಕಟ್ಟಾಸೆವಟ್ಟೆಯ್ತಂದು ಬೇಡಿ ನಿಷ್ಫಲವಾಗದಂತೆ. . . ನೀನೆಮಗೆ ವಲ್ಲಭನಾಗಿ ಚಿತ್ತದುಮ್ಮಳಿಕೆಯಂ ಕಳೆ (ಹಚಕಾ. ೭–೧೫) : ಶ್ರೀಗುರುಸ್ಥಿರಭಕ್ತಿಯಿದು ಹೊಜಗಾಗಿ ಕೋಟಿವಿಧಂಗಳಲಿ ಶ್ರುತಿಯೋಗದಲಿ ಹರಭಕ್ತಿಯಂ ಮಾಡಿದಡೆ ನಿಷ್ಫಲವು (ಬಸಪು. ೩೯–೨೪) ; ನಡೆವೆಣನೇ ದರಿದ್ರನು ಸಾಲದೆನಿಸಿದ ದಕ್ಷಿಣೆಯ ಯಜ್ಞಾಳಿ ನಿಷ್ಫಲವು (ಕುಮಾಸ. ೨೩–೪೪); ತೋರಿಕೆಯ ಪೂಜೆಯೆಲ್ಲವೂ ನಿಷ್ಫಲವಾದವು (ಶಮಸಾಂ. ೧೨೦). ೫. [ಜೈನ] ಉದಯಕರ್ಮದ ಹದಿನಾಲ್ಕು ಭೇದಗಳಲ್ಲಿ ಒಂದು : ಉದಯಿಪ ಕರ್ಮಮಂ ಸಫಲ ನಿಷ್ಫಲಯುಗ್ಮದ . . . ಚತುರುಕ್ತಭೇದದಿನೆಂದಱಯಿಂ ಪದಿನಾಲ್ಕು ಭೇದಮಂ (ಚಾವುಂಪು. ೩೯೪). **ನಿಷ್ಫಳ : ೪.** ಅಱಯುತ್ತಂ ಕಲ್ಲೋಳ್ ನಾರಱಸುವುದುಂ . . . ಇವರೊಳಕ್ಕರಮಱಸುವುದುಂ ಭಾವಿಪಂದು ನಿಷ್ಫಳಮಲ್ತೇ (ಸುಕುಮಾ. ೨–೨೩). [ಸಂ.]

ನಿಷ್ಫಲದಾಯಕ (ನಾ). ಫಲವನ್ನು ಕೊಡದೆ ಇರುವವನು ; ಆಸೆಯನ್ನು ನೆರವೇರಿಸದೆ ಇರುವವನು : ಹಂಗುಹಱಯಿಲ್ಲದ ಕಾರಣ ಕೂಡಲಸಂಗಮದೇವ ನಿಷ್ಫಲದಾಯಕನಾಗಿ ಆನು ಮಾಡಿ ಶುದ್ಧನಯ್ಯಾ (ಬಸವ. ೫೦೮). [ಸಂ.]

ನಿಷ್ಫಲವಿಧಾನ (ನಾ). ೧. ಪ್ರಯೋಜನಕ್ಕೆ ಬಾರದ ಕ್ರಮ ; ನಿರುಪಯುಕ್ತ ರೀತಿ. ೨. ಪ್ರಯತ್ನಕ್ಕೆ ಫಲವನ್ನು ಪಡೆಯಲಾರದವನು ; ವ್ಯರ್ಥ ಪ್ರಯತ್ನದವನು : ಖಳರು ಕೌರವರು . . . ದೌರ್ಜನ್ಯಮುಖದೀಕ್ಷಿತನು ಕಲಿಕರ್ಣ ಉಳಿದ ಭೀಷ್ಮ ದ್ರೋಣರೇ ನಿಷ್ಫಲವಿಧಾನರು (ಕುಮಾಸ. ೧೨–೯೦). [ನಿಷ್ಫಲ+ವಿಧಾನ]

ನಿಷ್ಫಲಾಕಾಂಕ್ಷೆ (ನಾ). ಫಲಾಪೇಕ್ಷೆ ಇಲ್ಲದಿರುವಿಕೆ ; ಮಾಡುವ ಕರ್ಮದಲ್ಲಿ ಪ್ರತಿಫಲಾಪೇಕ್ಷೆ ಇಲ್ಲದಿರುವಿಕೆ : ನಿರಪೇಕ್ಷ ದೃಷ್ಟಿಯಿಂದ ನಿಷ್ಫಲಾಕಾಂಕ್ಷೆಯಿಂದ ಮಾಡುವ ಕರ್ಮದ ರಹಸ್ಯ–ಧರ್ಮವನ್ನು ಶ್ರೀಕೃಷ್ಣನು ಹೇಳುತ್ತಾನೆ (ಭಾರದ. ೧೧೮). [ಸಂ. ನಿಷ್ಫಲಾಕಾಂಕ್ಷಾ]

ನಿಷ್ಫಲಾರಂಭ (ನಾ). ಬೆಳೆಯನ್ನು ನೀಡದ ವ್ಯವಸಾಯ,—ಬೇಸಾಯ : ಕೇಳು ಶುಕಯೋಗೀಂದ್ರ ಸಂಸೃತಿ ಹಾಳುವಾದವಲಾ ವಿಚಾರಿಸೆ ಹೇಳಲೇನದು ಬಯಲ ಬಳಲಿಕೆ ನಿಷ್ಫಲಾರಂಭ (ಅನುಭ. ೨–೪). [ನಿಷ್ಫಲ+ಆರಂಭ]

ನಿಷ್ಫಲೆ (ನಾ). ಮುಟ್ಟು ನಿಂತವಳು ; ಮಕ್ಕಳನ್ನು ಹಡೆಯುವ ವಯಸ್ಸು ಮೀರಿದವಳು. [ಸಂ. ನಿಷ್ಫಲಾ]

ನಿಷ್ಫಲೋತ್ಪನ್ನೆ (ನಾ). ವ್ಯರ್ಥವಾಗಿ ಹುಟ್ಟಿದವಳು ; ನಿಷ್ಪ್ರಯೋಜಕವಾಗಿ ಜೀವಿಸುವವಳು : ನಿಷ್ಫಲೋತ್ಪನ್ನೆಯಂ ನಿರ್ದಯೆಯಂ . . . ಪಾಪೆಯಂ ನೀಂ ಬೆಸಗೊಳೆ ಫಲಮೇಂ (ಕಾದಂಪೂ. ೯೫೭). [ಸಂ. ನಿಷ್ಫಲೋತ್ಪನ್ನಾ]

ನಿಷ್ಫಲೋದ್ಯೋಗ (ನಾ). ಪ್ರಯೋಜನವಿಲ್ಲದ ಕೆಲಸ ; ವ್ಯರ್ಥ ಪ್ರಯತ್ನ : ಶಿಲೆಯೊಳ್ ಧಾನ್ಯಂಗಳಂ ಬಿತ್ತಿಯುಮೊಣಗಿದ ಭೂಜಕ್ಕೆ

ನೀರ್ವೊಯ್ವುದುಂ ಕೋಟಲೆವಟ್ಟೇ ನಿಷ್ಫಲೋದ್ಯೋಗಮನೊಡರಿಪುದೇಂ (ಪಂಠಾಮಾ. ೧೬-೫೫). [ನಿಷ್ಫಲ+ಉದ್ಯೋಗ]

ನಿಷ್ಫಳ 'ನಿಷ್ಫಲ' ನೋ.

ನಿಷ್ಫಳಕುಜ (ನಾ). ಹಣ್ಣು ಬಿಡದಿರುವ ಮರ; ಫಲ ಬಿಡದಿರುವ ವೃಕ್ಷ: "ನಿಷ್ಫಳಕುಜಮವಕೇಶಿ" (ವಸ್ತುಕೋ. ೩೦-೨).

[ನಿಷ್ಫಳ (=ನಿಷ್ಫಲ)+ಕುಜ]

ನಿಷ್ಯಂದ (ನಾ). ೧. ಒಸರುವಿಕೆ; ಸೋರುವಿಕೆ; ಸ್ರವಿಸುವಿಕೆ. ೨. ಪ್ರವಾಹ; ಧಾರೆ: ವಂದ್ಯಮಾನಸುರಾಸುರೋರಗವೃಂದ ಮಣಿಮಕುಟ ಪ್ರಭಾನಿಷ್ಯಂದ ಭೂಯಸ್ತಿಮಿತಕಾಯನ ಕಂಡನಬುಜಭವ (ಕುವ್ಯಾಕ. ೬-೧೫). [ಸಂ.]

ನಿಷ್ಯಂದಿ (ಗು). ೧. ಸ್ರವಿಸುತ್ತಿರುವ; ಒಸರುತ್ತಿರುವ; ಜಿನುಗುತ್ತಿರುವ: ಸಪ್ತಧಾತುಮಯಮುಂ ಅವಸ್ಕರದವೋಲ್ ಮೂತ್ರಪುರೀಷಾದಿ ಮಲಭಾಜನಮುಂ ಅಲ್ಲಿ ಪೂತಿರಸನಿಷ್ಯಂದಿ ಶ್ರವಣಾದಿ ನವರಂಧ್ರಪರೀತಮುಂ . . . ಅಪ್ಪ ಶರೀರಮುಂ (ತತ್ತ್ವಪ್ರ. ೩೨೯). (ನಾ). ೨. ಸೂಸುವುದು; ಬೀರುವುದು; ಹೊರಬರುವುದು: ಅಂ ದಯೆಗೈದು ಕಾದನುಜೆಯಂ ವಸುದೇವಸಮೇತಮುಂದು ಮನ್ಮಂದಿರ ಮಧ್ಯಕೇಳಿಗೃಹದೊಳ್ ಸೆಱೆಗೆಯ್ದು ತದೀಯ ಗರ್ಭನಿಷ್ಯಂದಿಗಳಪ್ಪ ಕೂಸುಗಳನಿಂ ಕೊಲಲಿರ್ದೆಂ (ಜಗವಿ. ೨-೫೧); ಕುಂಜಸ್ಫುರಿತಕುಟಜ ಕುಂದಾಮೋದನಿಷ್ಯಂದಿ ತೀಡುತ್ತಿರದೆ ಮುದಿತವಿಶ್ವಂ ನಾಭಸಂ ಮಾತರಿಶ್ವಂ (ಚಂದ್ರಪು. ೪-೩೦); ರಸಕ್ಲಿನ್ನಹಂಸಸಂಸೇವಿತಂ, ಸಮನ ಆಮೋದನಿಷ್ಯಂದಿ, ಮೇಣಾವಿಷ್ಟಹೃಷ್ಟನಭಸಂಗಮಾರಾವಮಿಾ ಬಿಲಮುಖಂ (ಗಣೇಶ. ೩೬-೧೦). [ಸಂ. ನಿಷ್ಯಂದಿನ್]

ನಿಷ್ಯಂದಿಸು (ಕ್ರಿ). ಒಸರು; ಸೋರು; ಜಿನುಗು: ಮಾಂದಳಿರ ತೊಂಗಲ ಕರ್ದುಂಕಿಯಲ್ಲಿಂದ ನಿಷ್ಯಂದಿಸುವ ರಸಕೆ ಬಾಯ್ದೆಱೆದು (ಸೌಂದಪು. ೫-೯೦). [ನಿಷ್ಯಂದ+-ಇಸ್ಸು]

ನಿಷ್ಯೂತ (ಗು). ಸೇರಿಕೊಂಡ; ಹೆಣೆದುಕೊಂಡ; ಕೂಡಿಕೊಂಡ. 'ನಿಷ್ಯೂತಚೈತನ್ಯ' ಪರಾ.' [ಸಂ.]

ನಿಷ್ಯೂತಚೈತನ್ಯ (ನಾ). ಕೂಡಿಕೊಂಡ ಚೇತನ; ಹೆಣೆದುಕೊಂಡಿರುವ ಚೈತನ್ಯ: ಇಂದುಶೇಖರನಗ್ನಿಯಮನರವಿಂದಸಖ ಕಾಲಾಗ್ನಿಮೂರ್ತಿಯರೊಂದುಮೂರುತಿ ವಿಶ್ವದೊಳು ನಿಷ್ಯೂತಚೈತನ್ಯ (ಕುವ್ಯಾದ್ರೋ. ೩-೬೮). [ನಿಷ್ಯೂತ+ಚೈತನ್ಯ]

ನಿಸಂಗಿ (ನಾ). ಎಲ್ಲ ಸಂಗಗಳನ್ನೂ ಬಿಟ್ಟವನು; ಸಾಂಸಾರಿಕ ಜಂಜಾಟವನ್ನು ತೊರೆದವನು; ವಿರಕ್ತ: ಹಾವಿನ ಹಾಳ ಕಲ್ಲಯ್ಯಂ ನಿಸಂಗಿ ನಿರಾಳದೇವನು ಸಿಗುರೆ ಚಂದಯ್ಯಂ ಮುರುಘದೇವ (ಬಸಪು. ೫೮-೬). [<ಸಂ. ನಿಸ್ಸಂಗಿನ್]

ನಿಸಟು, ನಿಸುಟು (ಕ್ರಿ). ೧. ನುಣುಚಿಕೊಳ್ಳು; ಜಾರಿಕೊಳ್ಳು; ತಪ್ಪಿಸಿಕೊಳ್ಳು: ಈಗಲೇ ಪ್ರಸಂಗ ಕೈ ನಿಸಟಬಾರದೆಂದು ಚಟ್ಟನೇ . . . ಸೂಚನೆ ಕೊಟ್ಟು ಜಾಗರಿಸಿದ (ದೀಪಹ. II, ೨೬೪). **ನಿಸುಟು:** ೨. ಹೊರಹೊಮ್ಮು; ಹೊರಬೀಳು; ಸ್ಥಳ ಬಿಟ್ಟು ಹೊರಡು: ಆಗಿನ ಕಾಲದ ಕವಿಗಳ ಆಡಂಬರ ಬಹಳ. ಅವರಿಗೆ ಬೇಕು—ಉಪವನ, ಚಂದ್ರ, ಮಲಯಾನಿಲ, ಕೋಕಿಲ. ಅನಂತರ ಎಲ್ಲಿಯೋ ಪಂಚಶರಗಳು ನಿಸುಟಬೇಕು (ಕುರಿಹಿಂ. ೧೧೫).

[←ಮರಾ. ನಿಸಟಣೇ]

ನಿಸದ, ನಿಸದು (ನಾ). ದಿಟ; ನಿಶ್ಚಯ; ಸತ್ಯ; ನಿಜ: "ನನ್ನಿ, ನಿಕ್ಕುವಂ, ನಿಸದಂ, ಸಾಜಂ, ನನಸು, ದಿಟಂ—ಈ ೬ ಸತ್ಯಂ" (ಕಶಸಾ. ೫೬-೨೫೪); ನಿಸದಮೆನಿಪ್ಪ ಪುಟ್ಟಿಸೆವ ಜನ್ವನದಿಂದೆ. . .ನಲವಿಂದೆ ದಂಪತಿಪ್ರಸರಮೆ ನಾಡೆ ಮೂಡಿ ಮುಟುಗಾಡುವುದೀಡಿತ ಭೋಗಭೂಮಿಯೊಳ್ (ಚಂದ್ರಪು. ೩-೩೬); ಎಸೆವ ಪ್ರಸಾದವಿರ್ದಲ್ಲಿ ಪರಿಣಾಮವದು ನಿಸದದಿಂದಿಪ್ಪುದು (ಸಿದ್ದೇಪು. ೨೩-೪೮); ಅಶನ ದೊರಕದೆಯವಳ್ಗುಪವಾಸಮೊದಗಿತ್ತು ನಿಸದದಿಂ ಬಿಲ್ವಪತ್ರೆಯನೆಯ್ದೆ ಲಿಂಗಕರ್ಪಿಸಿದ ಫಲವಾದುದೆಂದೊಯ್ದರಾ ಕೈಲಾಸಗಿರಿಗೆ (ಪಾಸೋಪು. ೧೩-೫೩); ಇಹುದೊ ಇಲ್ಲವೊ ತಿಳಿಯಗೊಡದೊಂದು ವಸ್ತು ನಿಜಮಹಿಮೆಯಿಂ ಜಗವಾಗಿ ಜೀವವೇಷದಲಿ ವಿಹರಿಪುದೊಳ್ಳಿತೆಂಬುದು ನಿಸದವಾದೊಡಾ ಗಹನತತ್ವಕೆ ಶರಣೊ (ಮಂಕುಕ. ೩). **ನಿಸದು:** ಆಚಾರಂ ನಿ[ಪಾಠಾಂ.ಬ]ಸದಾಗಿ ಸದ್ಗುಣಗಣಂ ಮುಂತಾಗಿ ಮಂತ್ರಕ್ರಿಯಾಳೋಚಂ ನಿರ್ವ್ಯಭಿಚಾರಮಾಗೆ ಜಿನರಾಜಪ್ರಾಜ್ಯ ಸಾಮ್ರಾಜ್ಯದೊಳ್ ಸಾಚಿವೋಚಿತ ಭಾಗ್ಯಲಕ್ಷ್ಮಿ ತಮಗೇಕಚ್ಛತ್ರಮಾಯ್ತೆಂದುಮೆಂಬಾಚಾರ್ಯರ್ ನಮಗೀವರಕ್ಕೆ ನಯನಿಕ್ಷೇಪಪ್ರಮಾಣಂಗಳಂ (ಅರ್ಧನೇ. ೧-೪). [?]

ನಿಸದಂ (ಅ). ದಿಟವಾಗಿ; ನಿಜವಾಗಿ; ಖಂಡಿತವಾಗಿ: ಮೃಗದ ಮೈಯ್ಯೊಳ್ ನಿಸದಮೆಸೆವುದು ಬಲ್ಲಾಳ ಬಿಲ್ಬಲ್ಮೆ (ಪಂಪಭಾ. ೫-೪೬); ನಿಸದಂ ಕಪಿಂಜಲಂ ಜೀವಿಸುತಿರೆ ನಿನ್ನಲ್ಲಿಗೆಯ್ದದಿರಂ (ಕಾದಂಪೂ. ೯೪೭); ವಸುಧೇಶ ಚರ್ಮರತ್ನದ ದೆಸೆಯಿಂದೀ ವರಪುರಾಂತದೊಳ್ ಪದೆಪಿಂ ಜೀವಿಸಿದಪೆನದಱ ಕ್ಷೇಮಂ ನಿಸದಂ ನಿಮ್ಮಡಿಯದು (ದಶಕು. ೮-೧೫೦); ಅಜನಜಗರಗರದಿಂದಭ್ರಜಶಿಖಿರವದಿಂದೆ ಪುಲಿಯ ಕಾಯ್ಪಿಂ ನಿಸದಂ ವೃಜಿನ ಘನಕುಜನಜನಮಂ ಸೃಜಿಸಿದನಲ್ಲದೊಡವಂಗೆ ಜಗಮಂಜುವುದೇ (ರಾಜಶೇ. ೧-೩೮); ಎಲೆ ದುಟ್ಟಬಿದಿ, ನಿಸದಮಿಂ ಜಲಜೋದರನಾಣೆ! ಪೆಣ್ಗಳಂ ಸೃಷ್ಟಿಸದಿರ್ (ಸುಗುಗಂ. ೬೮-೧೬).

[<ನಿಸದ]

ನಿಸದಿ 'ನಿಸಿದಿ' ನೋ.

ನಿಸದಿಗೆ 'ನಿಸಿದಿಗೆ' ನೋ.

ನಿಸದು 'ನಿಸದ' ನೋ.

ನಿಸರ್ಗ (ನಾ). ೧. ಕೊಡುವಿಕೆ; ನೀಡುವಿಕೆ. ೨. ಕೊಟ್ಟುದು; ಕೊಡುಗೆ; ದಾನ: 'ಶ್ರೀನಿಸರ್ಗ' ಪರಾ. ೩. ತ್ಯಜಿಸುವುದು; ಬಿಟ್ಟುಬಿಡುವುದು. ೪. ಸೃಷ್ಟಿ; ಉತ್ಪತ್ತಿ. ೫. ಸಹಜವಾದುದು; ಸ್ವಾಭಾವಿಕವಾದುದು: "ಸರ್ಗ ಸ್ವಭಾವವಾಚಿ ನಿಸರ್ಗಂ" (ವಸ್ತುಕೋ. ೧೨೫-೪೨); ಸುಮತಿ . . . ಅಂತು ನಿಸರ್ಗದೊಳ್ ದೇವಗುರುಭಕ್ತೆಯುಂ ಮಾತಾಪಿತೃಶಿಕ್ಷಾನುರಕ್ತೆಯುಮಾಗಿ (ಶಾಂತಿಪು. ೪-೮೬ ವ); ತನ್ನ ನಿಸರ್ಗವತ್ಸಲತ್ವದಿನೆನಗಾ ಪ್ರಸಾದಪದಮಂ ದಯೆಗೆಯ್ದು ಮಹಾನುಭಾವೆಗಾ ಸುದತಿಗೆ ಪೇಟ್ದು ಬರ್ಪನಿತು ಗೌರವಮಂ ಮೊದಲಾಗಿ ಮಾಡಲಾಱದೆ ಖಳರೋಳಿಯೊಳ್ ದೊರೆಗೆವಂದನನೆನ್ನನದೇನನೆಂದಪೆಂ (ಕಾದಂಉ. ೪೦೦); ಕಿಱಿಯಾತಂ ನಿಸರ್ಗದಿಂ ವಕ್ರಗತಿ ಪರಿಣಾಮದಿನುದ್ವೃತ್ತಚಿತ್ತದಿನುನ್ಮತ್ತನಾದಂ (ಸುಕುಮಾ. ೨-೫೭); ಕಪಿವಂಶಕ್ಕೆ ನಿಸರ್ಗಂ ಚಪಲತೆ (ಪಂಠಾಮಾ. ೧೩-೧೩೬). ೬. ಪ್ರಕೃತಿ: ತದ್ಭೂಮಿ ಗರ್ಭಿತದ ಶ್ರೀಕರಾಲಯವಿದು ನಿಸರ್ಗಪುರಾಕೃತಿಯಲಿರಲೆಂಬ ಸಮಯಕೆ ನಾಕಮುನಿ ನಡೆತಂದು ಬಳಿಕಿಂತೆಂದು ನೇಮಿಸಿದ (ತೊರರಾ. ೧-೧೬-೨೮); ಗಾಳಿಯ ಮಂಡಲ ಸ್ಫಟಿಕದವೋಲಿದೆ . . . ಅಲ್ಲಲ್ಲಿಯೇ ಮುಗಿಲಿನ ಪಟ ತೇಲಿದೆ ವೈಕುಂಠವಿದೆ ನಿಸರ್ಗದಲಿ (ಪಕ್ಷಿಠಾ. ೨೧-೧೬); ಮೊದಲನೆಯ ಯುದ್ಧದ ಅನಂತರ ಪ್ರಕೃತಿ ಪಾಠ ಬೋಧನವಿಷಯವಾಯಿತು . . . ಪರಿಚಿತ ಮರಗಿಡಗಳು, ಪ್ರಾಣಿಗಳು, ನಿಸರ್ಗದ ಆಗುಹೋಗುಗಳು ಇವು ಆ ವಿಷಯದಲ್ಲಿ ಸೇರಿದ್ದುವು (ಶಿಕ್ಷದ. ೬೩೮); ನಿಸರ್ಗದಲ್ಲಿ ಕೂಡ ಕಾರ್ಯವು ಎಂದಿನಂತೇ ಅವಿರತವಾಗಿ ಸಾಗಿದೆ (ಧರ್ಮಸಾ. ೧೩೦). ೭. [ಜೈನ] ಪಂಚವಿಂಶತಿಕ್ರಿಯೆಗಳಲ್ಲಿ ಒಂದು; ಕೆಟ್ಟ

ಕೆಲಸವನ್ನು ಸರಿಯೆಂದು ತಿಳಿಯುವುದು ಮತ್ತು ಪಾಪಕಾರ್ಯವನ್ನು ಮಾಡಲು ಅನುಮತಿ ನೀಡುವುದು : ೧. ಸಮ್ಯಕ್ಕ್ರಿಯೆ (ದೇವಗುರು ಶಾಸ್ತ್ರಾದಿ ಪೂಜೆ) . . . ೧೭. ನಿಸರ್ಗ (ಪಾಪೋತ್ಪಾದಕ ಕ್ರಿಯೆಯನ್ನು ತಾನು ಸಾಧುವೆಂದು ತಿಳಿವುದೂ ಪರರಿಗೆ ಮಾಡಲಪ್ಪಡಿಯಿವುದೂ) (ಜೈನಧ. ೬೩). 'ಪಂಚವಿಂಶತಿಕ್ರಿಯೆ' ಪರಾ. [ಸಂ.]

ನಿಸರ್ಗಂ (ಅ). ಸಹಜವಾಗಿ ; ಸ್ವಾಭಾವಿಕವಾಗಿ ; ಸ್ವಭಾವಸಿದ್ಧವಾಗಿ : ಪ್ರತಿಭೆ ನಿಸರ್ಗಮುಂಟು ಕಿಱುದೋದುಗಳೊಳ್ಕಿಱುದುಂಟು ಬಲ್ಮೆ (ಗದಾಯು. ೧-೫೦). [<ನಿಸರ್ಗ]

ನಿಸರ್ಗಗುಣ (ನಾ). ಸಹಜಗುಣ; ಹುಟ್ಟುಗುಣ ; ಸ್ವಭಾವಸಿದ್ಧವಾದ ಗುಣ : ಎಂತಪ್ಪ ಬುದ್ಧಿವಂತನುಂ ಸಂಸರ್ಗವಶದಿಂದ ನಿಸರ್ಗಗುಣನುಂ ಪತ್ತುವಿಡುವುದು ಕಡುದಿಟಂ (ಪಂಚತಂ. ೧೫೧-೨೧). [ನಿಸರ್ಗ+ಗುಣ]

ನಿಸರ್ಗತತ್ವ (ನಾ). ಪ್ರಕೃತಿಯೇ ಎಲ್ಲ ಲೌಕಿಕವ್ಯಾಪಾರಗಳಿಗೆ ಮೂಲವೆನ್ನುವ ತತ್ವ : ನಿಸರ್ಗತತ್ವ ದೃಷ್ಟಿ . . . ನಿಸರ್ಗತತ್ವವಾದಿಗಳು ಲೌಕಿಕಕ್ಕೆ ಹೆಚ್ಚಿನ ಸ್ಥಾನ ಕೊಟ್ಟರು (ಶಿಕ್ಷಪ. ೨೯). [ನಿಸರ್ಗ+ತತ್ವ]

ನಿಸರ್ಗತತ್ವವಾದಿ (ನಾ). ಪಾರಮಾರ್ಥಿಕ ದೃಷ್ಟಿಯನ್ನು ಒಪ್ಪದೆ, ಲೌಕಿಕ ಪ್ರಯೋಜನದ ದೃಷ್ಟಿಯಿಂದಲೇ ಎಲ್ಲವನ್ನೂ ನೋಡುವವನು ; ಲೌಕಿಕವಾದಿ ; ಪ್ರಯೋಜನವಾದಿ : ಭಾವಪ್ರಧಾನವಾದಿಗಳು ಅಧ್ಯಾತ್ಮಿಕಜ್ಞಾನಾರ್ಜನೆಗೆ ಹೆಚ್ಚಿನ ಸ್ಥಾನ ಕೊಟ್ಟಿದ್ದರೆ, ನಿಸರ್ಗತತ್ವವಾದಿಗಳು ಲೌಕಿಕಕ್ಕೇ ಹೆಚ್ಚಿನ ಸ್ಥಾನ ಕೊಟ್ಟರು(ಶಿಕ್ಷಪ.೨೯). [ಸಂ. ನಿಸರ್ಗತತ್ವವಾದಿನ್]

ನಿಸರ್ಗದತ್ತ (ನಾ). ಸಹಜವಾಗಿ ದೊರೆತುದು ; ಸ್ವಭಾವಸಿದ್ಧವಾದುದು : ಇರುವಷ್ಟನ್ನೇ ಆದಷ್ಟು ಉಪಯುಕ್ತ ರೀತಿಯಲ್ಲಿ ಘೋಷಿಸಿ, ವ್ಯವಸ್ಥೆಗೊಳಿಸಿಕೊಂಡರೆ ನಿಸರ್ಗದತ್ತವಾಗಿ ಬಂದಪ್ಪದನ್ನು ಭಂಗಾರ ಮಾಡಿಕೊಂಡ ಹಾಗಾಗುತ್ತದೆ (ಶಿಕ್ಷಪ. ೬೪೧).[ನಿಸರ್ಗ+ದತ್ತ]

ನಿಸರ್ಗದುರ್ಗ (ನಾ). ಪ್ರಕೃತಿ ನಿರ್ಮಿಸಿದ ಕೋಟೆ : ರತಿಪತಿಯ ಧಾರಾಗೃಹದಂತಿರ್ದ ಮಾಧವೀಲತೆಯ ಜೊಂಪಂಗಳೊಳಂ ಮನ್ಮಥ ನಿಸರ್ಗದುರ್ಗದಂತಿರ್ದ ಕೃತಕಗಿರಿಗಳೊಳಂ . . . ಸೊಗಯಿಪ ತಪ್ಪು ರೋದ್ಯಾನವಂಡಂ (ಮಲ್ಲಿಪು. ೨-೩೩). [ನಿಸರ್ಗ+ದುರ್ಗ]

ನಿಸರ್ಗನಿಯಮ (ನಾ). ಪ್ರಕೃತಿನಿಯಮ ; ಸ್ವತಃಸಿದ್ಧವಾದ ವಿಧಿ : ನಾವು ಮಾಡಿದ ತಪ್ಪಿಗೆ ಫಲ ಅನುಭವಿಸಲೇ ಬೇಕು. ಇದು ನಿಸರ್ಗನಿಯಮ (ಶಿಕ್ಷಪ. ೩೧೪). [ನಿಸರ್ಗ+ನಿಯಮ]

ನಿಸರ್ಗಪ್ರಿಯ (ನಾ). ಪ್ರಕೃತಿಯನ್ನು ಪ್ರೀತಿಸುವವನು ; ನಿಸರ್ಗಪ್ರೇಮಿ : ಸೃಷ್ಟಿಯಲ್ಲಿ ಸೊಳ್ಳೆಯೆಂಬ ಪ್ರಾಣಿಗಳು ಉಂಟು. ಹೀಗೆ ಹೊರಗೆ ಒರಗಿದ ನಿಸರ್ಗಪ್ರಿಯರನ್ನೆ ಅವು ಹುಡುಕುತ್ತಿರುತ್ತವೆ. (ಸತಿವಾ. III, ೨೦೭೪). [ನಿಸರ್ಗ+ಪ್ರಿಯ]

ನಿಸರ್ಗಪ್ರೇಮ (ನಾ). ಪ್ರಕೃತಿಯ ಬಗೆಗೆ ಇರುವ ಒಲವು,-ಪ್ರೀತಿ : ಕವಿಯ ನಿಸರ್ಗಪ್ರೇಮದ ಉತ್ಕರ್ಷತೆಯನ್ನು ಈ ಕವನ ಸೂಚಿಸುತ್ತದೆ (ರೂಢಿ). [ನಿಸರ್ಗ+ಪ್ರೇಮ]

ನಿಸರ್ಗಬಲ (ನಾ). ಸ್ವಾಭಾವಿಕವಾಗಿರುವ ಶಕ್ತಿ ; ಸಹಜವಾದ ಶಕ್ತಿ : ಪ್ರಬಲಮೆನಿಕುಂ ಗ್ರಹಂ ಸ್ಥಾನಬಲಂ ಚೇಷ್ಟಾಬಲಂ ನಿಸರ್ಗಬಲಂ . . . ದೃಷ್ಟಿಬಲಮೆನಿಪ್ಪಾಜ್ಞ ಬಲಮುಮುಂ ಪಡೆದಾಗಳ್ (ಜಾತಕ. ೨-೧೩). [ನಿಸರ್ಗ+ಬಲ]

ನಿಸರ್ಗಭೀರು (ನಾ). ಸ್ವಭಾವತಃ ಪುಕ್ಕಲುಸ್ವಭಾವವುಳ್ಳವನು ; ಭೀರುವಾದವನು : ಸತ್ಪುರುಷನಾತ್ರಿತರಂ ನಿಸರ್ಗಭೀರು ಪ್ರಾಣಂಗಳಂ . . . ಮನಸ್ವಿ ಮಾಸಮಂ ರಕ್ಷಿಸುವವೊಲ್ (ಪಂಚತಂ. ೭೨-೫). [ನಿಸರ್ಗ+ಭೀರು]

ನಿಸರ್ಗಮನೋಹರ (ನಾ). ಸಹಜ ಸುಂದರವಾದುದು ; ನೈಜ ಸೌಂದರ್ಯವನ್ನು ಹೊಂದಿದುದು : ಸೊಗಯಿಪ ಜನ್ವನಂ ನೆಱೆದ ರೂಪು ನಿಸರ್ಗಮನೋಹರಂ ಮುಗುಳ್ನಗೆ ಸವಿಳಾಸನೋದಮೊಡವುಟ್ಟುದುವು (ಶಾಂತಿಪು. ೯-೩೫). [ನಿಸರ್ಗ+ಮನೋಹರ]

ನಿಸರ್ಗಮಿತ್ರ (ನಾ). ಸಹಜ ಮಿತ್ರ,—ಸ್ನೇಹಿತ : ದಿನನಾಥಂಗೆ ಹಿಮಾಂಶು ಭೌಮುಗುರುಗಳ್ . . . ಭೃಗುಜಂಗೆ ಸೌಮ್ಯ ರವಿಜರ್ ಮಂದಂಗೆ ಶುಕ್ರೇಂದುನಂದನರಾರಯ್ಕೆ ನಿಸರ್ಗಮಿತ್ರರೆನಿಕ್ಕುಂ (ಜಾತಕ. ೨-೧೪). [ನಿಸರ್ಗ+ಮಿತ್ರ]

ನಿಸರ್ಗಮೂಢಾತ್ಮ (ನಾ). ಸ್ವಭಾವದಿಂದ ದಡ್ಡನಾಗಿರುವವನು; ಹುಟ್ಟುದಡ್ಡ : ಪಕ್ಷಸೆಂಬ ನಿಸರ್ಗಮೂಢಾತ್ಮನು ನಿರೋಧಿಸಲಿದಿರೆ ನಿನಗೆ (ಶಿಭಾಗ. ೪-೩-೪೭). [ನಿಸರ್ಗ+ಮೂಢಾತ್ಮ]

ನಿಸರ್ಗರಾಗಿ (ನಾ). ಸ್ವಾಭಾವಿಕವಾಗಿ ಅನುರಾಗವುಳ್ಳ ವ್ಯಕ್ತಿ : ನಿಸರ್ಗರಾಗಿಗಳಪ್ಪ ಪೆಂಡಿರ ಪರಿಣಾಮಮೆಲ್ಲಿವರಂ ನಡೆದಪ್ಪುದು (ಪಂಂಪಾ. ೯-೧೪೪ ಪ). [ಸಂ. ನಿಸರ್ಗರಾಗಿನ್]

ನಿಸರ್ಗವಂತಿಕೆ (ನಾ). ನೈಸರ್ಗಿಕತೆ ; ಸಹಜತೆ ; ಸ್ವಭಾವಿಕತೆ: ಭರತೇಶವೈಭವವು . . . ನಿಸರ್ಗವಂತಿಕೆಯು ಮಹಾಕಾವ್ಯವಲ್ಲ, ಕಲಾವಂತಿಕೆಯ ಮಹಾಕಾವ್ಯ (ಸಪ್ಯಕಾ. ೯೭). [<ನಿಸರ್ಗ]

ನಿಸರ್ಗವಾದ (ನಾ). ಯಥಾರ್ಥವಾದ ; ಭೌತಪ್ರಪಂಚದೃಷ್ಟಿ : ಆರ್ಥಿಕ ಪ್ರಪಂಚದ ವ್ಯವಹಾರಗಳಲ್ಲಿ ಸ್ಮಿತ್‌ನ ನಿಸರ್ಗವಾದವನ್ನು (ನ್ಯಾಜುರಲಿಸಮ್) ನಂಬಿದವ (ಕವಿಕೋ. I, ೭೨೩). [ನಿಸರ್ಗ+ವಾದ]

ನಿಸರ್ಗವಿಕ್ರಮ (ನಾ). ೧. ಸ್ವಾಭಾವಿಕ ಸಾಹಸ ; ಶೌರ್ಯ. ೨. = ನಿಸರ್ಗಶೂರ : ದುರ್ಗದ ಕಾವಲಿಗಿಕ್ಕೆಮನ್ನೆಯರ ನಿಸರ್ಗವಿಕ್ರಮ ನಾಬಲವ ನುರ್ಗೇಳೆ ಕೊಲ್ವೆನೆನುತ ಬಗೆದನು (ಕುರಾಸಾಂ. ೪೩-೫೬). [ನಿಸರ್ಗ+ವಿಕ್ರಮ]

ನಿಸರ್ಗವಿಜ್ಞಾನ (ನಾ). ಪ್ರಾಣಿವಿಜ್ಞಾನ ಮತ್ತು ಸಸ್ಯವಿಜ್ಞಾನ ಇವುಗಳಿಗೆ ಸಂಬಂಧಿಸಿದ ಜ್ಞಾನ ; ☞ ಇದು Natural Science ಎಂಬುದರ ಕನ್ನಡ ಅನುವಾದ ರೂಪ : ನಿಸರ್ಗತತ್ವವಾದಿಗಳು ಲೌಕಿಕಕ್ಕೇ ಹೆಚ್ಚಿನ ಸ್ಥಾನ ಕೊಟ್ಟರು . . . ಅವರ ತತ್ವದೃಷ್ಟಿಯಿಂದ ಶಿಕ್ಷಣರಂಗದಲ್ಲಿ ವಿಜ್ಞಾನಕ್ಕೆ ಹಾಗೂ ನಿಸರ್ಗವಿಜ್ಞಾನಕ್ಕೆ ಹೆಚ್ಚಿನ ಪುರಸ್ಕಾರ ದೊರೆಯಿತು (ಶಿಕ್ಷಪ. ೨೯). [ನಿಸರ್ಗ+ವಿಜ್ಞಾನ]

ನಿಸರ್ಗಶೂರ (ನಾ). ಜನ್ಮತಃ ಶೂರ ; ಮೈಗಲಿ ; ಸಹಜ ಪರಾಕ್ರಮಿ : ಧನುರ್ಧರನ ಶರವರ್ಷಂ ನವಪಯೋದಪ್ರಮೋದಬಿಂದು ವರ್ಷದಂತೆ ಕಳೆಯೆ ನಿಸರ್ಗಶೂರನುಂ ಕಟ್ಟಾಯಕಾಜಿನುಂ ಅಪ್ಪ ದಜುಂ ಪಾಪೇಭ ಕಂಠೀರವನಂತೆ ಮಾಣ್ದು ಮುನ್ನೆರನನವರ್ಗಿತ್ತು . . . ಪೆಱಿದಂ ಕೋದಂಡನೈಪುಣ್ಯಮುಂ (ಶಾಂತಿಪು. ೪-೮ ಪ). [ನಿಸರ್ಗ+ಶೂರ]

ನಿಸರ್ಗಸುಂದರ (ನಾ). ಅಲಂಕಾರವಿಲ್ಲದೆಯೂ ಸುಂದರನಾಗಿರುವವನು ; ಸಹಜಸೌಂದರ್ಯವನ್ನು ಹೊಂದಿದವನು ; ಸ್ಫುರದ್ರೂಪಿ : ತೀರ್ಥಕರ ಕುಮಾರಂಗೆ . . . ಪ್ರಸಾಧನ ಪ್ರಾರಂಭಂಗೆಯ್ಯೆ . . . ಅಲಂಕೃತನಾಗಿಯುಂ ನಿಸರ್ಗಸುಂದರನಪ್ಪ ದಜುಂದಮಲಂಕಾರಕ್ಕೆ ತಾನಲಂಕಾರಮಾದೊಡಂ (ಶಾಂತಿಪು. ೧೦-೫೮ ಪ). [ನಿಸರ್ಗ+ಸುಂದರ]

ನಿಸರ್ಗಸುಭಗ (ನಾ). ೧. ಸ್ವಭಾವ ಸುಂದರವಾದುದು ; ಸಹಜ ರಮಣೀಯವಾದುದು ; ನೈಜ ಸೌಂದರ್ಯವನ್ನು ಹೊಂದಿದುದು : ಕಲಿಸಿದೊಡಂ ಬರ್ಕುಮೆ ಸಲ್ಲಲಿತಕವಿತ್ವಂ ನಿಸರ್ಗಸುಭಗಂ ರಮಣೀವಿಲಸಿತ ರತಿರಸರಸಿಕತೆ ತಲೆದೋರ್ಪುದು ತಾನೆ ಕಲಿಸಲೇಂ ಬಂದ

ಬಂದಪುದೇ (ರಾಜಶೇ. ೧-೩೦). ೨. = ನಿಸರ್ಗಸುಂದರ ; ದಿನ ದಿನಕ್ಕೇಱುಂಬೆಱೆಯಂತೆ ಕಳೆವೆರ್ಚುತೆ ಬಳೆಯುತಿರ್ಪಾ ನಿಸರ್ಗಸುಭಗರ್ ಪೆತ್ತಬ್ಬೆಗಂ . . . ಮತ್ತಮೆಲ್ಲರ್ಗಂ ಮುದ್ದು ಮುದ್ದಾದರ್(ರಾಮಾಶ್ವ. ೧೫೦-೨೪). [ನಿಸರ್ಗ + ಸುಭಗ]

ನಿಸರ್ಗಸ್ನೇಹಿತೆ (ನಾ). ಹುಟ್ಟಿನಿಂದಲೇ ಸ್ನೇಹವನ್ನು ಹೊಂದಿದವಳು : ನಿಮ್ಮಡಿಗಂ ಕೈಯ್ಯನೊಡ್ಡಿ ಪುರುಷಭೈಕ್ಷೆಯಂ ಬೇಡಿದೀಕೆಯುಮಂ ನಿಸರ್ಗಸ್ನೇಹಿತೆಯಾದ ಕಾರಣಮುಮನಿದನಱಿಯೆ ಬೆಸಸುವುದೆನೆ ಮೇಘನಿನಾದದಿಂ ಮೇಘರಥಾವನೀನಾಥನಿಂತೆಂದು ಪೇಳ್ದಂ (ಶಾಂತಿಪು. ೯-೮೩ ವ). [ನಿಸರ್ಗ + ಸ್ನೇಹಿತೆ]

ನಿಸರ್ಗಾಧಿಕರಣ (ನಾ). [ಜೈನ] ಅಜೀವಾಧಿಕರಣಾಸ್ರವಭೇದಗಳಲ್ಲಿ ಒಂದು ; ೫ ಆಸ್ರವಕ್ಕೆ ಜೀವ ಮತ್ತು ಅಜೀವ-ಇವೆರಡೂ ಅಧಿಕರಣ (ಆಧಾರ, ಆಶ್ರಯ) ಗಳಾಗುತ್ತವೆ. ಅಜೀವಾಧಿಕರಣಾಸ್ರವದಲ್ಲಿ ೧೧ ಭೇದಗಳಿವೆ. ಅವುಗಳ ವಿವರಣೆ ಹೀಗಿದೆ. ೧. ನಿವರ್ತನಾಧಿಕರಣ : (ಅ). ಶರೀರದಿಂದ ಕೆಟ್ಟ ಕೆಲಸಮಾಡುವುದು. (ಆ). ಆಯುಧಗಳಿಂದ ಹಿಂಸೆ ಮಾಡುವುದು. ೨. ನಿಕ್ಷೇಪಾಧಿಕರಣ : (ಅ). ಭಯ, ಆತುರ ಮೊದಲಾದ ಕಾರಣಗಳಿಂದ ಪುಸ್ತಕ ಮೊದಲಾದ ಉಪಕರಣಗಳನ್ನು ತಟ್ಟನೆ ಎಸೆಯುವುದು. (ಆ). ಅಂಥ ಕಾರಣವಿಲ್ಲದಿದ್ದರೂ ಅಲಕ್ಷ್ಯದಿಂದ ಎಸೆಯುವುದು. (ಇ). ದುಷ್ಟತನದಿಂದ ಇಲ್ಲವೆ ಎಚ್ಚರಗೇಡಿತನದಿಂದ ಉಪಕರಣಗಳನ್ನು ಇಡುವುದು. (ಈ). ಸ್ವಲ್ಪವೂ ನೋಡದೆ ಉಪಕರಣಗಳನ್ನು ಇಡುವುದು. ೩. ಸಂಯೋಗಾಧಿಕರಣ : (ಅ). ಉಪಕರಣಗಳನ್ನು ಬಿಸಿಲಿನಲ್ಲಿ ಕಾಯ್ದು ನವಿಲುಗರಿಯಿಂದ ಒರೆಸುವುದು ಇತ್ಯಾದಿ. (ಆ). ಅನ್ನಪಾನಗಳಲ್ಲಿ ಬೇರೆ ಬೇರೆ ವಿಧದ ಅನ್ನಪಾನಗಳನ್ನು ಬೆರಸುವುದು. ೪. ನಿಸರ್ಗಾಧಿಕರಣ : (ಅ). ಮನೋನಿಸರ್ಗಾಧಿಕರಣ (ಕೆಟ್ಟ ಕೆಲಸಗಳಲ್ಲಿ ಮನಸ್ಸನ್ನು ತೊಡಗಿಸುವುದು). (ಆ). ವಾಙ್ನಿಸರ್ಗಾಧಿಕರಣ (ಕೆಟ್ಟ ಮಾತುಗಳನ್ನು ಹೇಳುವುದು. (ಇ). ಕಾಯನಿಸರ್ಗಾಧಿಕರಣ (ಅಯೋಗ್ಯವಾದ ರೀತಿಯಲ್ಲಿ ಶರೀರದ ಅಂಗೋಪಾಂಗಗಳ ಚಲನವಲನ) : ನಿಸರ್ಗಾಧಿಕರಣ-ಇದರಲ್ಲಿ ಮನೋನಿಸರ್ಗ(ದುಷ್ಕೃತ್ಯಗಳಲ್ಲಿ ಮನಸ್ಸನ್ನು ತೊಡಗಿಸುವುದು), ವಾಗ್ನಿಸರ್ಗ (ಅಭದ್ರವಚನ), ಕಾಯನಿಸರ್ಗ (ಅಯೋಗ್ಯವಾಗಿ ಶರೀರ ಚಲನವಲನ) ಎಂಬ ಮೂರು ಪ್ರಕಾರಗಳು (ಜೈನಧ. ೬೫).

[ನಿಸರ್ಗ + ಅಧಿಕರಣ]

ನಿಸರ್ಗೋಪಾಸನೆ (ನಾ). ಪ್ರಕೃತಿಯನ್ನು ಪೂಜಿಸುವಿಕೆ ; ಪ್ರಕೃತಿಯಾರಾಧನೆ ; ಪ್ರಕೃತಿಪೂಜೆ : ನಿಸರ್ಗೋಪಾಸನೆಯ ಮಹತ್ವವನ್ನೂ ತನಗಿಂತ ಹಿಂದೆ ಹಸನಾದ ಬದುಕು ನಡೆಸಿ, ಅಮೂಲ್ಯವಾದ ಆಲೋಚನಾಪರಂಪರೆಯನ್ನು ಬಿಟ್ಟು ಹೋಗಿದ್ದ ಕವಿ ತತ್ವಜ್ಞಾನಿಗಳನ್ನು ಆರಾಧಿಸುವುದರಿಂದೊದಗುವ ಪರಮಪ್ರಯೋಜನವನ್ನೂ ಹಿಂದವನು ಮನಗಂಡಿದ್ದನು (ಪುನರು. ೫೯). [ನಿಸರ್ಗ+ಉಪಾಸನೆ]

ನಿಸಳ ? (ನಾ). (?) : ಅರಿಯರ ದಳವಾಯ ಕೂಚರಸನು ಎತ್ತಿ ಬಂದು ಎಣಿಕಲನುಯಿಱಿದು ಸೆಱೆ ಸೂಱೆಗೊಣ್ಡು ಹೋಹಲ್ಲಿ ಹಡಪದ ಮಲಯ್ಯನು ಒದೆ ನಿಸಳ ಕುದುರೆ ಸಿಂದ ಸಳುಗವ ಹಿಡಿವಲಿ ಕಂಟಾದ ಸೆಟಿಯ ಮಗ ಕಟ್ಟಯಪ್ಪನು ಆ ದಳಕೆ ಎದಿರಾಗಿ ಹೊದ್ದು ಹೋಗಿ ಕೊಂದು ಬಿದ್ದು ಸ್ವರ್ಗ್ಗವ ಸೂಱೆಗೊಣ್ಡು ಕವಿಳಾಸಕೆ ಸನ್ದನು (ಎಕ. XII, ಪಾವುಗ. ೪೮-೨ ; ಸು. 1285 ?) .

[೫ ಇದು 'ನಿಸ್ಸಾಳ' ಎಂಬುದರ ಅಪಲಿಖಿತವಿರಬಹುದೆ ?]

ನಿಸಾದಿ (ನಾ). ಗಜಾರೋಹಿ ; ಮಾವುತ ; ಮಾವಟಗ : "ನಿಸಾದಿ ಗಳೆನಲ್ ಜೋದರ್ಕಳೊಳ್ ಮಾವತರ್" (ಕರ್ಣಾನಿ. ೪೯).

[<ಸಂ. ನಿಷಾದಿನ್]

ನಿಸಾನಿ 'ನಿಶಾನಿ' ನೋ.

ನಿಸಿ 'ನಿಶಿ$_1$' ನೋ.

ನಿಸಿತ (ಗು). ಹರಿತವಾದ ; ತೀಕ್ಷ್ಣವಾದ ; ಕ್ರೂರವಾದ : ಲಸಿತದಿವ್ಯೋನ್ನತಶರೀರಂ ನಿಸಿತಶೂಲಶ್ಯೂಕನಿಹತಿಗೆ ಕುಸಿಯದೆ (ಬಸಪು. ೩೯-೬೪). 'ನಿಸಿತವಿಷ', 'ನಿಸಿತಾಸ್ತ್ರ'ಪರಾ. [<ಸಂ. ನಿಶಿತ]

ನಿಸಿತಕಟಾಕ್ಷ (ನಾ). ತೀಕ್ಷ್ಣವಾದ ನೋಟ,—ದೃಷ್ಟಿ : ನಿಸಿತಕಟಾಕ್ಷಮೆಂಬ ಶರಮಂ ನಖಮೆಂಬ ಕಠಾರಮಂ . . . ತಳೆದ ದೇವಿಯ ನಂಗಜಚಕ್ರವರ್ತಿ ಪೂಜಿಸುವಂ (ಬಾಧಪು. ೨-೬೧). [ನಿಸಿತ + ಕಟಾಕ್ಷ]

ನಿಸಿತವಿಷ (ನಾ). ತೀಕ್ಷ್ಣವಾದ ವಿಷ ; ಕ್ರೂರವಾದ ನಂಜು : ಖಂಡಪರಶುಗೆ ನಿಸಿತವಿಷವನಖಂಡಸದ್ಭಕ್ತಿಯೊಳಲರ್ದು ಸಮರ್ಪಣಂಗೆಯ್ದು (ಒಸಪು. ೫೮-೬೬). [ನಿಸಿತ + ವಿಷ]

ನಿಸಿತಾಸ್ತ್ರ (ನಾ). ಹರಿತವಾದ ಅಸ್ತ್ರ ; ತೀಕ್ಷ್ಣವಾದ ಅಸ್ತ್ರ ; ಕ್ರೂರವಾದ ಆಯುಧ : ಧುರದೊಳ್ಗೋನುಗಭೂಪ ನಿಂನ ನಿಸಿತಾಸ್ತ್ರಾಘಾತದಿಂ ಸತ್ತ ಭೂಪರ್ (ಎಕ. VIII, ಸಾಗರ. ೧೦೯-೩೪ ; 1042).

[ನಿಸಿತ + ಅಸ್ತ್ರ]

ನಿಸಿದಿ, ನಿಶಿದಿ, ನಿಶಿದ್ದಿ, ನಿಶಿಧಿ$_1$, ನಿಶೀಧಿ, ನಿಶ್ಧಿ, ನಿಷಧಿ, ನಿಷಿದಿ, ನಿಷಿದ್ದಿ, ನಿಷಿದ್ಧಿ, ನಿಷಿಧಿ, ನಿಷೀಧಿ, ನಿಸದಿ, ನಿಸಿದ್ದಿ, ನಿಸಿದ್ಧಿ, ನಿಸಿಧಿ, ನಿಸೀಧಿ (ನಾ). ೧. [ಜೈನ] (ಸಂನ್ಯಸನವಿಧಿಯಿಂದ ಮರಣಹೊಂದಿದವರ) ಸಮಾಧಿ : ಸ್ವಸ್ತಿಶ್ರೀಗುಣಭೂಷಿತಮಾದಿ ಉಳಾಡಗ್ಡೇರಿಸಿದಾ ನಿಸಿದಿಗೆ ಸದ್ಧಮ್ಮಗುರು ಸಂತಾನಾನ್ ಸಂದ್ವಿಗಗಣತಾನಯಾನ್ ಗಿರಿತಲದಾ ಮೇಲತಿ×××ಸ್ಥಲಮಾನ್ ತೀರದಾಣಮಾ ಕೆಳಗೆ ನೆಲದಿ ಮಾನದಾ ಸದ್ಧಮ್ಮದಾಗೇಟಿ ಸಸಾನದಿಪತಾನ್ (ಎಕ. II, ೨೯-೧; ಸು.700); ಮಾವಣ್ಣನ ಸಿಷ್ಯರುಂ ಸನ್ಯಸನಗೆಯ್ದು ಮುಡಿಹಿದ ನಿಸಿದಿ (ಎಕ. IV, ಚಿಕ್ಕಮ. ೫೧-೮ ; 1117) ; ಇಂತು ಬಲವಂದು ಭಕ್ತಿಯಿಂನಿಂದು ನಿಸಿದಿಯೆಂದು ನಿವೇದಿತ ಚೈತ್ಯನಿವಾಸನುಮಾಗಿ ನಾನಾವಿಧಾರ್ಚನೆಗಳಿಂ ಪೂಜಿಸಿ ಪರಮಜಿನರಾಜನಂ ನುತಿಸಿ (ಶಾಂತೀಶ್ವ. ೨-೩೭ ವ). ೨. ಸಮಾಧಿ ; ಗದ್ದುಗೆ : ಪೆಣಮ್, ಅಲ್ಲಿ ಕಜ್ಜೆ ಮಱೆಯಾದತ್ತು ; ನಿಸಿದಿಯೊಳಗಲ್ಲ (ಅಂತಿಗೊ. ೧೨-೨೩೫). **ನಿಶಿದಿ :** ೧. ಮಂಗಳಮಹಾಶ್ರೀಯವರಿಗೆ ನಿಶಿದಿಯ ಮಾಡಿಸಿದವರ ಕೋಟಿಯ ಮೇಘಚಂದ್ರದೇವರ ಶಿಷ್ಯರು (ಎಕ. III (R), ನಂಜನ. ೧೭೧-೧೭ ; 1371) ; ರವುದ್ರಿ ಸಂವತ್ಸರದ ಆಷಾಢ ಶುಲೂ ಸಿನನಹ ಸೆಟಿಯರ ××× ನಿಶಿದಿ (ಎಕ. XVI, ಗುಬ್ಬಿ. ೬೮-೩ ; ?) ; ಆಯರ ಮಾಚಂಣ . . . ಶ್ರೀಬಳರ ನಾಯ್ಕುತ್ತಿಗೆ × × × ನಿಲಿಸಿ ನಿಶಿದಿ ಚಯಿತ್ರ ಬಹುಳ ೧೦ (ಎಕ. VII, ಶಿವಮೊ. ೧೧೦-೮ ; ?). **ನಿಶಿದ್ದಿ :** ೨. ಶ್ರೀ ಸಂಗಿರಾಯವೊಡೆಯ ತಂನೊಸ ಬಾಂಧವ[ಮ]ಲ್ಲಿ ದೇವರ[ಸರ್ಗ್ಗನು] ಸ್ವರ್ಗ್ಗಸ್ಥನಾದಲ್ಲೆಬಟಕಳದೊಳಗೆ ಪಟ್ಟಣ ಸಮುದಾಯಮಂ ಮಾಡಿಸಿದ ನಿಶಿದ್ದಿ ಶಾ[ಸ]ನಕ್ಕೆ ಮಂಗಳಮಹಾಶ್ರೀ (ಕಇ. I, ೩೮-೧೮ ; 1408). **ನಿಶಿಧಿ$_1$:** ೧. ಮಾಳವ್ವೆಯುಂ ಚೌಡಿಯಕ್ಕನುಮೆಂಬಿರ್ಬ್ಬರ ನಿಶಿಧಿ (ಎಕ. XII, ಗುಬ್ಬಿ. ೫-೧೬ ; ಸು. 1200) ; ಮಾಳವ್ವೆಯ ಮಗ ಬಾಮಿಸೆಟ್ಟಿಯ ಮದವಳಿಗೆ ಬೂಚವ್ವೆಯ ನಿಶಿಧಿ (ಎಕ. XII, ಗುಬ್ಬಿ. ೬-೨೨ ; ಸು. 1200) ; ಮಾರಗಾವುಣ್ಡ ಸರ್ವ್ವ ನಿವ್ರಿ(ವ್ಹಿ)[ತ್ತಿ]ಯಂ ಕೈಯಿಕೊಣ್ಡು ಸಮಾಧಿಯಿಂ ಮುಡಿಪಿ ಸ್ವರ್ಗ್ಗ[ರ್]ಪ್ರಾಪ್ತನಾದ ನಿಶಿಧಿಯ ಸ್ತಮ್ಭ (ಇಆ. XII, ೧೦೨-೮ ; 1267). **ನಿಶೀಧಿ :** ೧. ಐಚಿಸೆಟ್ಟಿಯವರ

ಮಗ ಯೆರಮ್ಬರಗೆನಾಡ ಸೆಟ್ಟಿಗುತ್ತ ರಾಮಸೆಟ್ಟಿಯವರ ನಿಷೀಧಿ (ಇಆ. VII, ೪೯–೨ ; 13ನೆಯ ಶತ). **ನಿಷ್ಠಿ** : ೧. ಶ್ರೀಜಯಕೀರ್ತಿದೇವರ ಗುಡ್ಡ ಕೇತಯ ನಿಷ್ಠಿ (ಎಕ. XI, ಚತ್ರದು. ೧೪–೨ ; ?). **ನಿಷಧಿ** : ೨. ಕಾಮಗವುಡವೂರ ಹುಯಲಲಿ ಪಲರನಿಜುದು ತಾನುಂ ಸುರಲೋಕಗತನಾದಂ ಆತನ ತಂದು ನಿಲಿಸಿದ ನಿಷಧಿಯ ಕಲ್ಲು (ಮೈಆರ್. ೧೯೩೪, ೬೦–೯ ; ಸು. 1450). **ನಿಸಿದಿ** : ೧. ಭಟ್ಟಾರರ ನಿಸಿದಿ [ಪಾಠಾಂ. ನಿಸಿದಿಗೆ]ಯಂ ಬಂದಿಸಿ ಪೋಪನೆಂದು ವಿಶಾಖಾಚಾರ್ಯರ್ . . . ಬಂದು ಭಟ್ಟಾರರ ನಿಸಿದಿ[ಪಾಠಾಂ. ನಿಸಿದಿಗೆ]ಯನೆಯ್ದಿದಾಗಳ್ (ಪಡ್ಡಾರಾ. ೯೦–೧೬) ; ದೇವರಸರ ಹಿರಿಯ ಹೆಂಡತಿ ಸೋಮಾಯಿಯ ನಿಸಿದಿಯ ಕಲ್ಲು (ಎಕ. IV (R), ಚಾಮರಾ. ೩೮೯–೪ ; 1486). **ನಿಸಿದ್ದಿ** : ೧. ಚಂದ್ರಗುಪ್ತಮುನಿಯುಂ ಭಟ್ಟಾರರ ನಿಸಿದ್ದಿ[ಪಾಠಾಂ. ನಿಸಿದಿಗೆ]ಯಂ ಬಂದಿಸುತ್ತಮಾ ದೇವತೆ ಬಿಸಕೆಯ್ಯೊ ಚಂಗೆ ಮಾಡಿ . . . ಇರ್ಪನ್ನೆಗಂ (ಪಡ್ಡಾರಾ. ೯೦–೧೩). **ನಿಸಿದ್ದಿ** : ೧. ಜಿನ ಭವನಮುಂ ಶ್ರೀಪ್ರದಕ್ಷಿಣಂಗೆಯ್ದು ನಿಸಿದ್ದಿ[ಪಾಠಾಂ. ನಿಸಿದಿ]ಯೊಳಗಂ ಪೊಕ್ಕು . . . ಮುನಿವರರಂ ಬಂದಿಸಿ ಕುಳ್ಳಿರ್ದು (ಧರ್ಮಾಮೃ. ೫–೭೮); ಶ್ರೀಮನ್ನಯಕೀರ್ತಿಸಿದ್ಧಾತಚಕ್ರವರ್ತ್ತಿಗಳ್ಗೆ ಪರೋಕ್ಷವಿನೆಯಾರ್ತ್ಥವಾಗಿ ಮುಡಿಜನುಮುಂ ನಿಷಿದ್ಧಿಯುಮುಂ . . . ಮಾಡಿಸಿದ ತದನಂತರ (ಎಕ. II (R), ೪೫೬–೪೭ ; 1195) ; ಭದ್ರಬಾಹುಸ್ವಾಮಿಗಳು . . . ಬೆಟ್ಟದ ಕಿರುಗುಹೆಯಂ ನಿಷಿದ್ಧಿಯಿಂ ಪುಗುವಾಗಳೊಂದು ವಚನಮಾದುದು ನಿಮಗಿಲ್ಲಿಯೆ ನಿಷಿದ್ಧಿಯಕ್ಕುಂ (ಕಗವಿ. ೯೩ ರಾಜಾವಳೀಕಥೆ). **೩.** (?) : ಸಂಗೀತವಾದ್ಯನೃತ್ಯಸಹಿತಂ ಬಸದಿಯಂ ಬಲಗೊಂಡು ಪಾದಪ್ರಕ್ಷಾಲನಾನಂತರಂ ನಿಸಿದ್ಧಿ[ಪಾಠಾಂ. ನಿಸ್ಸಹಿ]ಯೆಂದುಚ್ಚಾರಣಂಗೆಯ್ಯುತ್ತುಂ ಪೊಳಗಂ ಪೊಕ್ಕು . . . ಸಾಷ್ಟಾಂಗಪ್ರಣತನಾಗಿ (ಬಾಧಪು. ೫–೪೭ ವ). **ನಿಷಿಧಿ** : ೧. ಬೀಮಸೆಟ್ಟಿಯ ಹೆಂಡತಿ ಚಂದವೆಯ ನಿಷಿಧಿ (ಎಕ. XII, ಪಾವುಗ. ೫೬–೪ ; ಸು. 1450 ?). **ನಿಷೀಧಿ** : ೧. ನಾಕಸೆಟ್ಟಿಯ ಮಗ ಪ××ಟ್ಟಣಸ್ವಾಮಿ ಪಾಯ[ಕ][ನ್ನ]ನ ನಿಷೀಧಿ (ಕಇಆ. ೭೧–೫–೬ ; ಸು. 13ನೆಯ ಶತ). **ನಿಸದಿ** : ೧. "ನಿಸದಿ—ನಿಷಧಿ = ಜೈನಸಮಾಧಿ" (ಕದ್ವಕೋ. ೨೨). **ನಿಸಿದ್ದಿ** : ೧. ಸಂಸ್ಕೃತದಲ್ಲಿ 'ನಿಷೀದಿಕಾ', ಪ್ರಾಕೃತದಲ್ಲಿ 'ನಿಸೀಹಿಯಾ' ಎಂಬ ರೂಪಗಳುಂಟು. (ಈಗಲೂ ಉತ್ತರಕರ್ನಾಟಕದಲ್ಲಿ ನಿಸಿದ್ದಿ ಎಂದು ಕರೆಯುತ್ತಾರೆ) (ಕಶಾಇ. ೯೭). **ನಿಸಿದ್ಧಿ** : ೧. ವಾಸುಪೂಜ್ಯಭಟ್ಟಾರರ ನಿಸಿದ್ಧಿಗೆ [ಪಾಠಾಂ. ನಿಸಿದ್ದಿಗೆ, ನಿಸಿಧಿಗೆ] ಸಂದ ತೀರ್ಥಸ್ಥಾನಮನಾದ ಪೂವಾನುಂ ಶುದ್ಧಪರಿಣಾಮದಿಂದಂ ವಂದಿಸುತ್ತಿರ್ದ ಸೂರ್ಯಮಿತ್ರಾಚಾರ್ಯರ್ಗವಧಿಜ್ಞಾನಂ ಪುಟ್ಟಿತ್ತು (ಪಡ್ಡಾರಾ. ೯–೧೨) ; ಶ್ರೀಕೊಪಣದ ಚಂದ್ರಸೇನದೇವರ ಗುಡ್ಡ ಗುರುಗಳ ಭಂಡ[ಪ್ಪ]ನ ನಿಸಿದ್ಧಿ (ಕಇಆ. ೭೧–೨–೪; ಸು. 13ನೆಯ ಶತ) ; ಎಲವಟ್ಟೆಯ ದಾಸೆಯನಾಯಕನ ನಿಸಿದ್ಧಿಯಪ್ಪ ಭೂಮಿಯಿದು (ಎಕ. VII, ಶಿವಮೊ. ೫೮–೫ ; ?). **ನಿಸಿಧಿ** : ೧. ಶ್ರೀಮಲ್ಲಿಸೆಟ್ಟಿಯ ಮಗಳಾದ ರ × ಯಿಗಳ ನಿಸಿಧಿ (ಎಕ. II (R), ೬೫೪–೨ ; 13ನೆಯ ಶತ) ; ಶುಭಚಂದ್ರದೇವರ ಪ್ರಿಯಾಗ್ರಶಿಷ್ಯರುಮಪ್ಪ ಪ್ರಭಾಚಂದ್ರದೇವರ ನಿಸಿಧಿ (ಎಕ. IX, ಕೊಡಗು. ೫೬–೪ ; 1044 ?). **ನಿಸೀಧಿ** : ೧. ಪಾಯಕಣ್ಣನ ನಿಸೀಧಿ (ಕೊಪ್ಪಶಾ. ೪–೬ ; 1300).

[<ನಿಸಿದಿಗೆ]

ನಿಸಿದಿಕಲ್ಲು 'ನಿಸಿದಿಗಲ್ಲು' ನೋ.

ನಿಸಿದಿಗಲ್ಲು, ನಿಸಿದಿಕಲ್ಲು (ನಾ). [ಜೈನ] ಸಮಾಧಿಯ ಬಳಿ ನೆಟ್ಟ ಕಲ್ಲು,— ಸ್ಮಾರಕಶಿಲೆ : ಸಲ್ಲೇಖನವಿಧಿಯಿಂದ ಮುಡಿಪಿದವರ ಸ್ಮಾರಕಗಳಿಗೆ ನಿಸಿದಿಗಲ್ಲುಗಳೆನ್ನುವರು (ಸಾಹಿಸ. ೧೨) ; ಸನ್ಯಸನವಿಧಿಯಿಂದ ಮುಡಿದವರ ಸ್ಮಾರಕವಾಗಿ . . . ಕೆಲವು ಸ್ಮಾರಕಗಳನ್ನು ನಿಲ್ಲಿಸುತ್ತಿದ್ದರು. ಇವುಗಳನ್ನು 'ನಿಸಿದಿಗಲ್ಲು'ಗಳೆಂದು ಕರೆಯುತ್ತಾರೆ (ಕಶಾಇ. ೯೬). **ನಿಸಿದಿಕಲ್ಲು** : ಇದನ್ನು 'ಪ್ರಶಸ್ತಿಶಾಸನ'ವೆಂದು ಕರೆಯಬಹುದಾದರೆ ಅನೇಕ ನಿಸಿದಿಕಲ್ಲುಗಳಲ್ಲೂ ವೀರಗಲ್ಲು, ಮಾಸ್ತಿಗಲ್ಲುಗಳನ್ನೂ ಅದೇ ಹೆಸರಿನಿಂದ ಕರೆಯಬೇಕಾಗುತ್ತದೆ (ಕಶಾಇ. ೨೯).

[ನಿಸಿದಿ + ಕಲ್ಲು (<ಕಲ್ಲ್)]

ನಿಸಿದಿಗೆ, ನಿಶಿಧಿಗೆ, ನಿಷೀಧಿಕೆ, ನಿಷೀಧಿಗೆ, ನಿಷಿದಿಗೆ, ನಿಷಿಧಿಗೆ, ನಿಸದಿಗೆ, ನಿಸಿಧಿಗೆ, ನಿಸೀಧಿಕೆ, ನಿಸ್ತಿಕೆ, ನಿಸ್ತಿಗೆ (ನಾ). ೧. = ನಿಸಿದಿ ೧ : ಚಂದ್ರಗುಪ್ತಮುನಿಯುಂ ಭಟ್ಟಾರರ ನಿಸಿದಿಗೆ [ಪಾಠಾಂ. ನಿಸಿದ್ದಿ]ಯಂ ಬಂದಿಸುತ್ತಂ (ಪಡ್ಡಾರಾ. ೯೦–೧೨) ; ಅವರ ಶಿಷ್ಯರ್ ಪಟ್ಟದೇವಾ×××ನಿ ಭಟಾರ ಕುಮಾ×××ಳ ನಿಷ್ಯನ×××ಸಲೆ ಮುನಿವ್ರ್ಯನೆ ದುಂಡಿ×××ಮುಮಮ್ಮ ನಿಸಿದಿಗೆ (ಎಕ. II, ೬೨–೭ ; ಸು. 900). **೨.** = ನಿಸಿದಿಗಲ್ಲು : ಸಮಾಧಿಮರಣವನ್ನು ಹೊಂದಿದ ಜೈನಸನ್ಯಾಸಿಗಳ, ಜೈನಗೃಹಸ್ಥರ ಸ್ಮಾರಕವಾಗಿ ನಿಲ್ಲಿಸುವ ಕಲ್ಲುಗಳೇ "ನಿಸಿದಿಗೆ"ಗಳು (ಸಂಶೋಕ. ೭೦ ಅಡಿಟಿ) ; ನಾಗದೇವನು ಕಮಠಪಾರ್ಶ್ವಬಸದಿಯ ನೃತ್ಯಶಾಲೆ, ಜಗತಿ, ನಯಕೀರ್ತಿಯ ನಿಸಿದಿಗೆ (೧೧೭೬), ನಾಗಸಮುದ್ರವೆಂಬ ಕೆರೆ (ಜಿಗಳೆಕಟ್ಟೆ) ಮಾಡಿಸಿದನು (ಹೊಯ್ಸಪಾ. ೨೧೪). **೩.** = ನಿಸಿದಿ ೨ : ಏಕೆನ್ನ ನಿಸಿದಿಗೆಯ ಬಳಿ ಬಾಗಿ ಬಾಡಿ ನಿಂದಿಪಳೀ ನನ್ನರಸಿ ? (ಪಾರಸಿ. ೨೬–೨೮೦). **ನಿಶಿಧಿಗೆ** : ೨. ಶುಭಚಂದ್ರಸಿದ್ಧಾಂತದೇವರ್ಗೆ ಪರೋಕ್ಷವಿನಯಕ್ಕೆ ನಿಶಿಧಿಗೆಯಂ ನಿಲಿಸಿ (ಎಕ. II (R), ೧೩೫–೧೩೯ ; 1123); ಹೆಗ್ಗಡಿತಿ ಬಾಗಣಬ್ಬೆಯುಂ ಪರೋಕ್ಷವಿನಯಂ ಕಾರಣಮಾಗಿ ನಿಶಿಧಿಗೆಯಂ ಮಾಡಿಸಿದರು (ಎಕ. II (R), ೮೧–೧೦೬ ; 12ನೆಯ ಶತ). **ನಿಷೀಧಿಕೆ** : ೨. ಶ್ರೀಮದ್ವಾದೀಭಸಿಂಹಸ್ಯಜಿತಸೇನಮಹಾಮುನೇಃ ಅಗ್ರಶಿಷ್ಯೇಣ ಕೃತಾಸೇಯಂ ನಿಷೀಧಿಕಾ (ಎಕ. VI, ಕೊಪ್ಪ. ೩–೨ ; ಸು. 1090 ?). **ನಿಷೀಧಿಗೆ** : ೧. ಬೋಧಿಸವೆ ಪೆಜ್ಜೆವು ಜಿನಗೃಹಕ್ಕಾಧಿಕ್ಯಮದಿಲ್ಲೆನಿವ್ವುದಂ ಸನ್ಯಸನಾರಾಧನೆಯು . ಜವದಿ ಸನ್ದ ನಿಷೀಧಿಗೆಯಂದ್ದಣಿಗೆ ತಳಿಗೆ ಪಟ್ಟ ಮಿನಿತುಂ (ಸೌಇಇ. XI–i, ೫೨–೬೯ ; 1007). **೨.** ನಿಜಗುರುಗೆ ನಿಷೀಧಿಗೆಯಿಂ ಮಾಂಕಬ್ಬೆಗಂತಿಯಮ್ಮಾರ್ಡಿಸಿದರ್ (ಎಕ. II (R), ೪೮೪–೪೩ ; 1119). **ನಿಷಿದಿಗೆ** : ೧. ಗುರುಗಳ ನಿಸಿದಿಗೆಯ ಪ್ರತಿಮೆಯ ಪೂಜೆಗೆ ಪುರುಷೋತ್ತಮದೇವನು ಕೊಟ್ಟಪು (ಎಕ. III (R), ನಂಜಸ. ೧೩೭–೪೪ ; 1351). **ನಿಷಿಧಿಗೆ** : ೧. ಕಟ್ಟೆಯಂಜಬ್ಬೆ ಸೆಟ್ಟಿ[ಟ್ಟಿ]ಯು ಮಗ ಚನ್ನಯನ ನಿಷಿಧಿಗೆಯ ಕಲು[ಲ್ಲು] (ಇಆ. XII, ೧೦೧–೪; 12 ನೆಯ ಶತ). **೨.** ಪರೋಕ್ಷವಿನೆಯಕ್ಕೆ ನಿಷಿಧಿಗೆಯುಂ ಶ್ರೀಪುದ್ದಣ್ಣನಾಯಕ ಗಂಗರಾಜಂ ನಿಲಿಸಿ . . . ಮಹಾಪೂಜೆಗಳಂ ಮಾಡಿದರು (ಎಕ. II (R), ೧೫೭–೭೦ ; 1121). **ನಿಸದಿಗೆ** : ೨. ಕಲ್ಕಾಟಿಸಿದ ವೀರರಾಡಿದಾಡುಂಬೊಲವು, ಮಾಸತಿಯು ನಿಸದಿಗೆಯ ಭೂಮಿ, ಪಾಳ್, ಪಡು, ಬರಡು (ಅಯ್ಕೂಲಿ. ೬೫–೧೫). **ನಿಸಿಧಿಗೆ** : ೧. ಶ್ರೀಪುಷ್ಪದಣ್ಡಿನಿಸಿಧಿಗೆ (ಎಕ. II, ೮೫ ; ಸು. 750); ಸ್ವಸ್ತಿ ಶ್ರೀಮಹಾವೀರ XX ಅಟ್ಟುಅ ತಮ್ಮಡಿಗಳ ಸನ್ಯಸನದಿನ ಮಜ್ಜಯಾ ನಿಸಿಧಿಗೆ (ಎಕ. II, ೧೫–೨; ಸು. 800); ಮಾಳಬ್ಬೆಗಂತಿಯು ಮಡಿಬಡ ಬೀಚಗವುಡ ಪರೋಕ್ಷವಿನಯಂ ನಿಸಿಧಿಗೆಯ ಕಲ್ಲ ನಿಜಾಸಿದಂ (ಮೈಆರ್. ೧೯೪೨ ; ೭೪–೯ ; 1013), ಅವರ ಶಿಷಿತ್ತಿಯರಪ್ಪ ಮಾದೇವಿಕಂತಿಯನ್ನಿಸಿಧಿಗೆಯ ಕಮ್ಮಮುಂ ನಿಜಾಸಿದ ಮುಜ್ಜಳಂ (ಎಕ. XIV, ಮಂಡ್ಯ. ೧೫೧–೧೧೧ ; ?). **೩.** ಆಷ್ಟೋಪವಾಸದೆ ಕಲ್ಲೆಲೆಯ ದೇವರ್ ತಮ್ಮ ಗುರುಗಳೇಳಾಚಾರ್ಯ್ಯದೇವರ್ಗೆ ಪರೋಕ್ಷವಿನಯ ನಿಸಿಧಿಗೆಯಂ ನಿಜಾಸಿದರ್ (ಎಕ. XIV, ಎಡತೊ.

೮೪-೨೨, ಸು. 919) ; ಶ್ರೀಮನ್ಮಹಾಪ್ರಧಾನದಂಡನಾಯಕ ಗಂಗರಾಜಂ ತಮ್ಮ ಗುರುಗಳ್ . . . ಶುಭಚಂದ್ರಸಿದ್ಧಾಂತದೇವರ್ಗ್ಗೆ ಪರೋಕ್ಷವಿನಯಕ್ಕೆ ನಿಸಿಧಿಗೆಯ ನಿಲಿಸಿ ಮಹಾಪೂಜೆಯಂ ಮಾಡಿ ಮಹಾದಾನಮಂಗೆಯ್ದರು (ಎಕ. II, ೧೧೭-೧೩೯; 1123). **ನಿಸೀಧಿಕೆ :** ೧. ಶ್ರೀ ಅತಿಶಯ ಪುಷ್ಪಣನ್ದಿಮುನಿ ಮುಕ್ತಿಯನೆಯ್ದಿದೊಡಾ ನಿಸೀಧಿಕಾ ಪ್ರತಿಬ[ದ್ಧ]ದೆ ಪವಿತ್ರಮಿದನಾನಗಲೆ[ನ್ಧು]ವಮೆನ್ದು ನಿಶ್ಚಯಂ (ಎಕ. IV (R), ಕೊಳ್ಳೇಗಾಲ. ೯೨-೧ ; ?). **ನಿಸ್ತಿಕೆ :** ೧. ಕೇ[ಷ]ಪ್ಪನು ಸ್ವರ್ಗಸ್ತನಾದ ನಿಸ್ತಿಕೆಯ ಕಲ್ಲ ನಿಲಿಸಿದರು (ಸೌಇಇ. XV, ೬೬೬-೯ ; 1420). **ನಿಸ್ತಿಗೆ :** ೧. ಬಾಚಂಣಗಳ ನಿಸ್ತಿಗೆ (ಮೈಆರಿ. ೧೯೩೯, ೨-೩ ; 1472); ಆಕಿಯ ಮಂಗಿಸೆಟ್ಟಯ ಮಗ ಗುಂಮಿಸೆಶಿಯರ ನಿಸ್ತಿಗೆ (ಮೈಆರಿ. ೧೯೩೯, ೧-೩ ; 1483).

[<ಪ್ರಾ. ಣಿಸೀಹಿಆ, ಣಿಸೇಹಿಆ = ಶ್ಮಶಾನಭೂಮಿ]

ನಿಸಿದ್ದಿ 'ನಿಸಿದಿ' ನೋ.

ನಿಸಿದ್ಧಿ 'ನಿಸಿದಿ' ನೋ.

ನಿಸಿಧಿ 'ನಿಸಿದಿ' ನೋ.

ನಿಸಿಧಿಗೆ 'ನಿಸಿದಿಗೆ' ನೋ.

ನಿಸಿವಗೆ (ನಾ). ರಾತ್ರಿಯ ಶತ್ರು ; ಸೂರ್ಯ : "ತಾವರೆಗೆಳೆಯಂ . . . ಬಾನ್ಮಣಿ, ನಿಸಿವಗೆ, ಬಿಸುಗದಿರಂ, ತಾವರೆಗೈಯಂ, ಗರಂಗಳಾಣ್ಮಂ – ಈ ೧೧ ಸೂರ್ಯನ ಪೆಸರ್" (ಕಶಸಾ. ೪೮-೨೮).

[ನಿಸಿ (<ನಿಶಿ$_1$) + ಪಗೆ$_2$]

ನಿಸಿವಗೆಯ 'ನಿಶಿವಗೆಯ' ನೋ.

ನಿಸೀಧಿ 'ನಿಸಿದಿ' ನೋ.

ನಿಸೀಧಿಕೆ 'ನಿಸಿದಿಗೆ' ನೋ.

ನಿಸು (ನಾ). (?) : ಆ ವಿಶ್ವನಂದಿಮುನಿ ಸಂಭಾವಿತತತ್ತ್ವಂ ತದೀಯ ವಿರಸೋಕ್ತಿಗಳಿಂ ದೇವಂ ಪುದಿದಿರೆ ಮುನಿ ಸಂಭಾವಿಸಿ ಕಳೆದಂ ನಿಜಾಸುವಂ ನಿಸುವಿಂದಂ (ವರ್ಧಮಾ. ೨-೪೮) ; ಒಸಯಿಸಿದಾತನ ವಸುವಂ ವಸುಮತಿಯುಮನೆಂದು ಪೊದವಿಪಳು ಬೆಸಯಿಸಲಾ ವಸು ವಸುಮತಿಯಸುನಿಸುಗಳನಸಮಜಸೆ ಕಾಳಿಕಾಂಬೆ ಕುಂದಿಸುತಿರ್ಪ್ಪಳು (ಶಾಸಪ. ೮೯, 1179).

[?]

ನಿಸುಟು 'ನಿಸಟು' ನೋ.

ನಿಸೂದನ (ನಾ). ಕೊಲ್ಲುವಿಕೆ; ನಾಶಮಾಡುವಿಕೆ; ಸಂಹರಿಸುವಿಕೆ.

[ಸಂ.]

ನಿಸೂರು (ನಾ). ೧. ನಿಶ್ಚಿಂತೆ ; ನಿರ್ಯೋಚನೆ ; ಆರಾಮ : ದೊಡ್ಡ ಬಾಬು ಬಂದಿದ್ದರಿಂದ ಭೂತನಾಥನಿಗೂ ಸ್ವಲ್ಪ ನಿಸೂರೆನ್ನಿಸಿತು (ಸಾಹೇಬ್. ೫೯೨); ಇದು ನನಗೆ ಕಿಸಿಯದ ಕೆಲಸ ತಸ್ತಿ ಹೋಗಲಿ, ಹತ್ತು ವರ್ಷ ಮುಂಚೆ ಸಾಯಬೇಕಾದರೆ ಅದೇ 'ನಿಸೂರು' ಎಂದು ನಿಶ್ಚಯಿಸಿ ಸುಮ್ಮನಾಗಿ ಬಿಟ್ಟದ್ದೀನಿ (ಬಾಳಹೊ. ೫೦). ೨. ಸ್ವಾತಂತ್ರ್ಯವನ್ನು ವಹಿಸಿಕೊಳ್ಳುವಿಕೆ ; ಸ್ವೈರವೃತ್ತಿ ; ಸ್ವಚ್ಛಂದ ವರ್ತನೆ : ಹೇಳದೆ ಕೇಳದೆ ಯಾವ ನಿಸೂರಿನಿಂದ ತೆಂಗಿನ ಕಾಯನ್ನು ಬಾಗಿನಕ್ಕೆಲ್ಲಾ ಇರಿಸಿದೆಯೆ ? (ಮಾಮರಾ. ೮೨) ; ನೋಡಿದಿರಾ ಇವಳ ನಿಸೂರನ್ನ ? (ಕಾಮಿಕಾಂ. ೩೦). [←ಮರಾ. ನಿಸೂರ್]

ನಿಸೂರುಗಾರ (ನಾ). ನಿರ್ದಾಕ್ಷಿಣ್ಯ ಸ್ವಭಾವದವನು ; ಅಡ್ಡಿ ಆತಂಕಗಳನ್ನು ಲೆಕ್ಕಿಸದವನು ; ನಿಶ್ಚಿಂತ : 'ನಿಸೂರುಗಾರಿಕೆ' ಪರಾ. [ನಿಸೂರು+-ಗಾರ (<-ಕಾಱ)]

ನಿಸೂರುಗಾರಿಕೆ (ನಾ). ನಿರ್ದಾಕ್ಷಿಣ್ಯ ಪ್ರವೃತ್ತಿ; ಅಡೆತಡೆಗಳನ್ನು ಲೆಕ್ಕಿಸದ ಸ್ವಭಾವ : ಮಗಳ ಸಂಕೋಚ ತುಂಬಿದ ಸುಕುಮಾರವಾದ ಹೃದಯ ಅವನಿಗೆ ಅರ್ಥವಾಗಲಿಲ್ಲ ; ಅವನ ದರ್ಪದ ನಿಸೂರುಗಾರಿಕೆ ಇವಳಿಗೂ ಸರಿದೋರಲಿಲ್ಲ (ಸಮಾಲೋ. ೯೦).

[ನಿಸೂರುಗಾರ+-ಇಕೆ]

ನಿಸೂರುಮಾರ್ಗ (ನಾ). ಸಲೀಸಾದ ಮಾರ್ಗ ; ಅಡ್ಡಿ ಆತಂಕಗಳಿಲ್ಲದ ದಾರಿ : ನಂದೊಂದು ನಿಸೂರುಮಾರ್ಗ ಹೇಳ್ತೀನಿ, ಹಂಗೆ ಮಾಡಿದರೆ ಒಬ್ಬರಿಗೂ ತಂಟೆ ಇರೋದಿಲ್ಲ (ವೈದ್ಯವಿ. ೬೦).

[ನಿಸೂರು + ಮಾರ್ಗ]

ನಿಸೃತ (ಗು). ೧. ಸುರಿದ ; ಸ್ರವಿಸಿದ ; ಪ್ರವಹಿಸಿದ : ಚಂದಿರಮಣಿ ನಿಸೃತಾಂಭಃಪ್ಲವಂ ಪರ್ಚನೋಲಾಡುವ ದಿವ್ಯಸ್ತ್ರೀಸಮೂಹಂ ಸಿರಿಯ ನೆರವಿಯಂ ಪೋಲೆ ತಾನೊಂದು ದುಗ್ಧಾರ್ಣವಮೆಂಬೀ ಮಿಕ್ಕ ಮಾತಂ ಕಿಱಿದೆನಿಸುವುದಾ ಸಿಂಧುಶುಭ್ರಾಂಬುಶೋಭಂ (ಲೀಲಾವ. ೮-೪೯). (ನಾ). ೨. [ನಾಟ್ಯ] ಹತ್ತುಬಗೆಯ ಜಂಘಾಭೇದಗಳಲ್ಲಿ ಒಂದು ; ℙ "ಜಂಘೆಯನ್ನು ಮುಂದಕ್ಕೆ ನೀಡುವುದು" (ಲಾಸ್ಯರಂ. ೨೬೪ ಗದ್ಯಾನುವಾದ) ; ಆವರ್ತಿತ, ನತ, ಉತ್ಕ್ಷಿಪ್ತ, ಉದ್ವಾಹಿತ, ಪರಿವರ್ತಿತ, ನಿಸೃತ, ಪರಾವೃತ್ತ, ತಿರಶ್ಚೀನ, ಬಹಿರ್ಗತ, ಕಂಪಿತ— ಈ ಹತ್ತು ಜಂಘಾಭೇದಂಗಳ್ (ಲಾಸ್ಯರಂ. ೨-೧೪೪ ವ). [ಸಂ.]

ನಿಸೃಷ್ಟ (ನಾ). ೧. ಕೊಟ್ಟುದು ; ದಾನ ; ಕೊಡುಗೆ. ೨. ಬಿಟ್ಟುದು; ಹೊರಪಡಿಸಿದುದು : "ನಿಸೃಷ್ಟ–ಬಿಟ್ಟದ್ದು" (ಗಂಗಾಮ. ೧೮೭). ೩. ಇಟ್ಟುದು ; ನ್ಯಾಸ : "ನ್ಯಸ್ತಂ, ನಿಸೃಷ್ಟಂ–೨ ಇರಿಸಲ್ಪಟ್ಟದು" (ಸಿದ್ಧಾಂತಿ. ೩೪೬). ೪. ರಾಜದೂತ ; ರಾಜಪ್ರತಿನಿಧಿ: ಒಂದುದೆವಸಮೋಲಗದೊಳೊರ್ವನಪೂರ್ವಂ ನಿಸೃಷ್ಟಂ. . . ಸಪ್ತೋಪಾಯ ಪರಿಗೋಚರಂ ಖೇಚರಂ ಬಂದು (ಶಾಂತಿಪು. ೨-೧೮ ವ). ℙ ಈ ಪ್ರಯೋಗದಲ್ಲಿ ಬಳಕೆಯಾಗಿರುವ ಈ ರೂಪ 'ನಿಸೃಷ್ಟಾರ್ಥ'ದ ಸಂಕ್ಷಿಪ್ತರೂಪ. [ಸಂ.]

ನಿಸೃಷ್ಟಾರ್ಥ (ನಾ). ೧. ಒಬ್ಬ ರಾಜನು ಮತ್ತೊಬ್ಬ ರಾಜನ ಬಳಿಗೆ ರಾಜಕಾರ್ಯನಿಮಿತ್ತವಾಗಿ ಕಳುಹಿಸುವ ಪ್ರತಿನಿಧಿ ; ರಾಜದೂತ; ರಾಯಭಾರಿ; ℙ ಈ ದೂತರಲ್ಲಿ ಮೂರು ಹಂತದವರಿರುತ್ತಾರೆಂದು ಕೌಟಿಲ್ಯನ ಅರ್ಥಶಾಸ್ತ್ರದ ಮೊದಲನೆಯ ಅಧಿಕರಣದಲ್ಲಿ ಹೇಳಿದೆ. ೧. ನಿಸೃಷ್ಟಾರ್ಥ : ಇವನಿಗೆ ಹೆಚ್ಚು ಅಧಿಕಾರವೂ ಸ್ವಾತಂತ್ರ್ಯವೂ ಇರುತ್ತದೆ. ಮಂತ್ರಿಗೆ ಸಮಾನವಾದ ಸ್ಥಾನಮಾನವನ್ನು ಹೊಂದಿರುತ್ತಾನೆ (ಅಮಾತ್ಯ ಸಂಪದೋಪೇತಃ ನಿಸೃಷ್ಟಾರ್ಥಃ). ೨. ಪರಿಮಿತಾರ್ಥ : ಇವನ ಅಧಿಕಾರ ಪರಿಮಿತವಾಗಿರುತ್ತದೆ. ರಾಜನು ವಹಿಸಿರುವಷ್ಟು ಮಟ್ಟಿಗೆ ಸೀಮಿತವಾಗಿರುತ್ತದೆ. ನಿಸೃಷ್ಟಾರ್ಥನಿಗಿಂತ ಕಾಲು ಭಾಗದಷ್ಟು ಕಡಿಮೆ ಅಧಿಕಾರ ಇವನದು (ವಾದಿಗುಣಹೀನಃ ಪರಿಮಿತಾರ್ಥಃ). ೩. ಶಾಸನಹರ : ಇವನ ಕೆಲಸವು ರಾಜಸಂದೇಶವನ್ನು ತಿಳಿಸುವುದು ಮಾತ್ರ (ಅರ್ಧಗುಣಹೀನಃ ಶಾಸನಹರಃ) : ನರಪತಿಗೆಱಗೆ ವಿಭು ನಿಸೃಷ್ಟಾರ್ಥನವಾಸನದೊಳ್ ಕುಳ್ಳಿರಿಮೆನೆ (ಶಾಂತಿಪು. ೩-೭೪) ; ವಿಯಚ್ಚರೇಶ್ವರಂ ಜಯವರ್ಮಜನೇಶ್ವರನಲ್ಲಿ ಗನ್ವಯಾಗತನುಂ ನಿಸೃಷ್ಟಾರ್ಥನುಂ . . . ವಚನಚತುರನುಮಪ್ಪುದ್ಧವನೆಂಬ ದೂತಮುಖ್ಯನನಟ್ಟದೊಡೆ (ಚಂದ್ರಪು. ೬-೧೮ ವ). ೨. ಈಡೇರಿಸುವಂತಹುದು ; ಕಾರ್ಯಸಾಧಕವಾದುದು : ಕಯ್ಯಂ ಪಿಡಿದಾಂ ತಂದಿನಿಯನನೀ ಪಾಸೊಳ್ ತಂದೆಳದಳಿರಿಂದೆ ತೋರಣಂಗಟ್ಟಿಸುವೆಂ ಎಂದು ಕಿವಿವುಗೆ ನುಡಿದೊಡಂಗೊಂಡು ಪೋಪುದುಂ ದಕ್ಷಿಣನವಳ ದೂತೀಜಲ್ಪಂ ನಿ[ಷಾಠಾಂ. ವಿ]ಸೃಷ್ಟಾರ್ಥಮಾದುದೆಂದುಮಲ್ಲಿಂ ತಳರ್ದು (ಚಂದ್ರಪು. ೮-೯೧ ವ). ೩. [ಕಾವ್ಯಮಿಾ] ನಾಯಕ ಮತ್ತು

ನಾಯಿಕೆಯರಿಗೆ ಪರಸ್ಪರ ಸಮಾಗಮವನ್ನು ಏರ್ಪಡಿಸುವ ಕಾರ್ಯಸಾಧಕರಲ್ಲಿ ಒಬ್ಬ ; ಮುಖ್ಯದೂತರಲ್ಲಿ ಒಬ್ಬ ; ೫ ಶೃಂಗಾರ ಸಹಾಯಕರಾದ ದೂತ-ದೂತಿಯರಲ್ಲಿ ಮೂರು ಬಗೆಯವರಿದ್ದಾರೆ. ೧. ನಿಸೃಷ್ಟಾರ್ಥ : ನಾಯಿಕಾ ನಾಯಕರ ಮನಸ್ಸಿನ ಇಂಗಿತವನ್ನು ಊಹಿಸಿ ತಿಳಿದು ತಾನೆ ಸಮರ್ಪಕವಾಗಿ ಉತ್ತರವನ್ನು ಕೊಡುತ್ತಾನೆ. ತಾನು ವಹಿಸಿಕೊಂಡ ಕಾರ್ಯವನ್ನು ಚೆನ್ನಾಗಿ ಸಾಧಿಸುತ್ತಾನೆ. ೨. ಮಿತಾರ್ಥಕ : ಇವನು ನಿಸೃಷ್ಟಾರ್ಥನಂತೆ ಸಂಪೂರ್ಣಸ್ವಾತಂತ್ರ್ಯವನ್ನು ವಹಿಸುವುದಿಲ್ಲ. ಆದರೂ ಮಿತವಾಗಿ ಮಾತನಾಡುತ್ತ ಕಾರ್ಯವನ್ನು ಸಾಧಿಸುತ್ತಾನೆ. ೩. ಸಂದೇಶಹಾರಕ : ಇವನು ಹೇಳಿ ಕಳುಹಿಸಿದ ಸಂದೇಶವನ್ನು ಮಾತ್ರ ಉಭಯತ್ರರಿಗೂ ತಿಳಿಸುತ್ತಾನಲ್ಲದೆ ಮತ್ತಾವ ಸ್ವಾತಂತ್ರ್ಯವನ್ನೂ ವಹಿಸುವುದಿಲ್ಲ. ಈ ಕಾರ್ಯಸಾಧಕರು ಹೆಂಗಸರೂ ಆಗಬಹುದು. [ಸಂ.]

ನಿಸೃಷ್ಟಿ (ನಾ). ಕೊಡುಗೆ; ದಾನ: 'ನಿಸೃಷ್ಟಿಲೇಖ' ಪರಾ. [ಸಂ.]

ನಿಸೃಷ್ಟಿಲೇಖ (ನಾ). (ದಾನ, ದತ್ತಿ ಮೊದಲಾದುವುಗಳನ್ನು ಕುರಿತ) ಅಪ್ಪಣೆಯ ಬರಹ ; ಪರವಾನಿಗೆ ಲೇಖ ; ದಾನಶಾಸನ: ಪರೀಹಾರಲೇಖಗಳು, ನಿಸೃಷ್ಟಿಲೇಖಗಳು (Writs of license), ಪ್ರಾವೃತ್ತಿಕ ಲೇಖಗಳು . . . ಇವು ಇನ್ನೂ ಕೆಲವು ಶಾಸನ ಪ್ರಭೇದಗಳಾಗಿವೆ (ಕಶಾಅ. ೪೫). [ನಿಸೃಷ್ಟಿ + ಲೇಖ]

ನಿಸೆ 'ನಿಶ್ಶಿ' ನೋ.

ನಿಸೆಕ 'ನಿಸೇಕ' ನೋ.

ನಿಸೇಕ, ನಿಸೆಕ (ನಾ). ೧. ಚಿಮುಕಿಸುವಿಕೆ ; ಸಿಂಪಡಿಸುವಿಕೆ. ೨. ಫಲಶೋಭನ ; ಪ್ರಸ್ತ ; ಗರ್ಭಾಧಾನ : "ನಿಸೇಕ-ನಿಷೇಕ= ಗರ್ಭಾಧಾನ, ಸುರಿಯುವಿಕೆ" (ತದ್ಭ ಕೋ. ೨೨). ೩. (ಆಲಂ)ಸಾವು; ಅಳಿವು ; ನಾಶ ; ಅಂತ್ಯ : ಸೀತೆ ಕಡಂಗಿ ಕಾಯ್ದು ಕಡೆಗಣ್ಣಿದಳ ಪ್ಪೊಡೆ ಧಾತ್ರನಿಂ ತೊದಳ್ವಾತಿನೊಳೇನೊ ಪಾಂಡವರ ಕೆಯ್ಯೊಳೆ ನಿನ್ನ ನಿಸೇಕಮಾಗದೇ (ಪಂಪಭಾ. ೯-೪೯) ; ಅದಟಿನಳುರ್ಕೆಯಂ ನಿಱಿಸಿ ನಿನ್ನ ನಿಸೇಕದ ಪೊಟ್ಟು ತಪ್ಪಲೀಯದೆ ಪೊಱವಟ್ಟು ಬಾ ತಡೆಯದೀಗಳೆ (ಪಂಪಭಾ. ೧೩-೮೦). ೪. ಕೂಡುವಿಕೆ ; ಸೇರುವಿಕೆ ; ಹೊಂದುವಿಕೆ : ತನ್ನವಳ ಮಾನವನು ತಾನು ಕಾಪಿಡಲೆಂದು ಮಚ್ಚ ಮೇಲೆತ್ತಿದನು ; ಅರ್ಜುನನ ಮೈದುನಗೆ ರಕ್ತಾಭಿಷೇಕಮಾಯ್ತು—ಯಮನೊಡನೆ ನಿಸೇಕಮಾಯ್ತು (ಶಕಾರ. ೯೨). **ನಿಸೆಕ** : ೫. ಉಳಿದಿರುವ ಜೀವಮಾನ,—ಆಯುಷ್ಯಾವಧಿ : ನಿಸೆ[ಪಾಠಾಂ. ಸ]ಕಂಗಳ್ನೆಱೆ ವನ್ನಮುತ್ಪ್ಲುತದಿನಾಯುಃಪ್ರಾಣಮಂ ಬೆನ್ನನೇಱಿಸಿಕೊಂಡೋಡುವ ಕಾಲಮೆಂಬೆರಲೆಯಂ ಬೆಂಬತ್ತಿ ಬೀಟ್ಟಂದ ದೇಹಸಮೂಹಂಗಳೊಳಾಪುದಂ ನೆನೆದು ಮೋಹಂಗೆಯ್ದನೇನೆಂದು ಭಾವಿಸಿದಂ ದೇಹದನಿತ್ಯಮಪ್ಪ ನಿಲವಂ ಸಾಹಿತ್ಯವಿದ್ಯಾಧರಂ (ಸುಲ್ಲಿಪು. ೯-೬೬). ೫ ಇದು ಛಂದಸ್ಸಿಗಾಗಿ ಮಾಡಿಕೊಂಡ ರೂಪ. [<ಸಂ. ನಿಷೇಕ]

ನಿಸೇವಣೆ (ನಾ). ಉಪಭೋಗ ; ಸೇವಿಸುವಿಕೆ ; ಮೋಹ : ಭೂವಿಬುಧರನು ಕೊಲುವ . . . ಕನಕವನು ಕಳುವ ನಿಸೇವಣೆ[ಣೆ] ಗುರುಸ್ತ್ರೀಯರಲಿ ಕಾಮುಕನು ಸಂಗಿಸುವ ಭಾವಿಸದೆ ಪಾತಕಗಳಿವು ನಾಲ್ಕಾವ ಮರ್ತ್ಯರೊಳವರೊಡನೆ ಸಂಜೀವಿಸುವರವರೈವರತಿಪಾತಕಿಗಳು (ನಿಭಾಗ. ೫-೧೧-೧೦). [<ಸಂ. ನಿಷೇವಣ]

ನಿಸೇವಿತ (ಗು). ಪೂಜಿಸಲ್ಪಟ್ಟ : ಕಾಲಕರ್ಮವಿದೂರ ದುಸ್ತರ ಕಾಲಶಕ್ತಿ ನಿಸೇವಿತಾಂಘ್ರಿಯೆ ಕಾಲರೂಪನೆ ದೇವ ಶರಣಾಗೆಂದುದಮರಗಣ (ನಿಭಾಗ. ೪-೩-೩೪). [<ಸಂ. ನಿಷೇವಿತ]

ನಿಸ್ಖಲಿತ (ಗು). ಸ್ಖಾಲಿತ್ಯವಿಲ್ಲದ ; ದೋಷವಿಲ್ಲದ ; ಶುದ್ಧವಾದ : ವಾಯವ್ಯಾಸ್ತ್ರದಲಿ ನಿಸ್ಖಲಿತ ಮೇಘವ್ರಜವನೆಚ್ಚನು ಪಾರ್ಥ ವಹಿಲದಲಿ (ಕುಪ್ಯಾಅ. ೨೦-೩೫) ; ಪವನಾಹಾರದಲಿ ನಿಸ್ಖಲಿತ ಶಿವಪದಭಕ್ತಿಸುಧೆಯಲಿ . . . ಸತ್ವೋಜ್ಜ್ವಲಿತ ಚಿತ್ತದ ಸುಪ್ರಭಾವದ ಬಳವಿಗೆಯಲುತ್ಕೋಚವಾಯಿತು ತಪ ಧನಂಜಯನ (ಕುಪ್ಯಾಅ. ೫-೪). [ಸಂ.]

ನಿಸ್ತಂತು (ಗು). ೧. ಸಂತಾನವಿಲ್ಲದ ; ಮಕ್ಕಳಿಲ್ಲದ. (ನಾ). ೨. ತಂತುವಿಲ್ಲದಿರುವುದು ; ತಂತಿರಹಿತವಾದುದು : (ನಿಸ್ತಂತುವಾಗಿ ಕಳುಹಿಸಬಹುದಾದ) ವಿದ್ಯುತ್ತರಂಗಗಳು (Hertzian waves, ಇಂಕನಿ) ; ಅಂಚೆ, ತಂತಿ, ಟೆಲಿಫೋನ್ ಮತ್ತು ನಿಸ್ತಂತು (Wireless) ಸಂಪರ್ಕಮಾರ್ಗಗಳು ಅಂಚೆ ಮತ್ತು ತಂತಿ ಇಲಾಖೆಯ ಅಧೀನದಲ್ಲಿವೆ (ಶಿಲ್ಪನಾ. ೫೧೦) : ವಿಖ್ಯಾತರೂ ಮತ್ತು ಭೌತಶಾಸ್ತ್ರಜ್ಞರೂ ಆದ 'ಎ. ಎಸ್. ಪೊಪೋವ್' ಎಂಬುವರು "ನಿಸ್ತಂತುವಿನ ತಾರಾಯಂತ್ರ" (Wireless Telegraphy)ವನ್ನು ಸಂಶೋಧಿಸಲು ದುಡಿದಿದ್ದಾರೆ (ಸಸ್ಯಕ. ೧೧೧). ೩. ಬ್ರಹ್ಮಚಾರಿ. [ಸಂ.]

ನಿಸ್ತಂದ್ರ (ಗು). ೧. ಜಡನಲ್ಲದ ; ಸೋಮಾರಿಯಲ್ಲದ : ಕಾರ್ಯನಿರತನಾದ : ಸುರಗಿ ಚೌಡಯ್ಯಗಳು . . . ವರಲಿಂಗದೇವನುಣಲೊಲ್ಲದಿರೆಯೊಂದುದಿನ ಸುರಗಿಯಿಂದಿಱಿದುಕೊಳಲೀಶ ನಿಜದೋಱುತ್ತ ಪರಮಕೈಲಾಸಪುರಕೊಯ್ದನೆಂದೊರೆದನಾ ನಿಸ್ತಂದ್ರ ದೇಶಿಕೇಂದ್ರಂ (ಗುರುಚಾ. ೬-೬೪). (ನಾ). ೨. ಜಡನಲ್ಲದವನು ; ಪರಮಾತ್ಮ : ನಿಶ್ಶೂನ್ಯ ನಿರುತ ನಿತ್ಯಾನಂದ ನಿಸ್ತಂದ್ರ ನೀನೆನ್ನ ಪೊರೆ ಗುರುಕುಲೋತ್ತುಂಗ ಮುದವೆರಸಿ (ಕುಮಾಪು. ೨-೫೫). [ಸಂ.]

ನಿಸ್ತಂಭ (ಗು). ೧. ಕಂಭವಿಲ್ಲದ : ನೀಲದಲಿ ನಿಸ್ತಂಭ ತೋರಣ ತೇಲ್ದುದೆನೆ ಚಲಿಸಿತು ವಿಹಂಗಸಂಘಂ (ಪಕ್ಷಿಕಾ. ೭೭-೧೯). (ನಾ). ೨. ಕಂಭವಿಲ್ಲದುದು : ಅರಸುಗಳಾಳೋಚನಕಾಲದೊಳ್ ನಿಸ್ತಂಭಮುಂ ನಿರ್ಗವಾಕ್ಷಮುಂ ನಿಶ್ಚಿದ್ರಭಿತ್ತಿಯುಂ . . . ಅಪ್ಪ ಮಂತ್ರಶಾಲೆಯೊಳ್ ಮಂತ್ರಿಗಳುಂ ತಾನುಂ ನಿಶ್ಚಿಂತಮಿರ್ದಾಳೋಚಿಸುವರ್ (ಪಂಚತಂ. ೨೦೪-೧೨). [ಸಂ.]

ನಿಸ್ತಪ (ನಾ). ತಪಸ್ಸನ್ನು ಮಾಡದವನು ; ತಪೋರಹಿತ : ಮಾಯ್ದ ಮಾಯಾತಪದೊಳ್ ಮಿಥ್ಯಾಪ್ರಪಂಚಪ್ರಬಳನೆನಿಸಿ ಸಂದಿರ್ದೆನಾನಿನ್ನೆಗಂ ನಿಸ್ತಪನೆಂದುಂ ಮಾರ್ಗಮಂ ಪೊರ್ದಿದೆನೆನಗೆ ಶರಣ್ ಧರ್ಮದಿಂದತ್ತ ಮತ್ತಿಲ್ಲ ಪುನರ್ದೀಕ್ಷಾಪ್ರಸಾದಂ (ಸುಕುಮಾ. ೩-೪೫). [ಸಂ.]

ನಿಸ್ತಬ್ಧ (ನಾ). ೧. ಚಲಿಸದೆ ಇರುವುದು ; ಅಚಲವಾದುದು : ಆ ಅಭ್ರಭೇದಿಯೂ ಉದಯರವಿರಶ್ಮಿಸಮುಜ್ವಲವಾದ ತುಷಾರಕಿರೀಟವನ್ನು ಧರಿಸಿಯೂ ಇರುವ ಶೈಲಚಕ್ರವರ್ತಿಯು ನಾಲ್ಕುದಿಕ್ಕಿನಲ್ಲಿಯೂ ನಿಸ್ತಬ್ಧವಾಗಿರುವ ಗಿರಿಪರಿವಾರಕ್ಕಿಂತ ಎಷ್ಟು ಮೇಲೆ ತಲೆಯೆತ್ತಿ ನಿಂತಿದೆ (ಬಂಕಿಷು. XXI, ಕವಿಕಾಣಿಕೆ). ೨. ಚಲಿಸದೆ ಇರುವವನು ; ನಿಶ್ಚಲ ; ಅಚಲ : ನಿಶ್ಶಂಕೆಯೊಳು ನೆರೆವ ಹಕ್ಕಿಗಳ ತೆರದಿ ನಿಸ್ತಬ್ಧನೆನ್ನೆಡೆಗೆ ಬಹ ಭೀರುಭಾವಗಳ ಕೆಳೆಯ ನೋನೋಡೆಂದು ಸರಸಕೌತುಕದಿ (ಮಲೆದೇ. ೫೩-೩). [ಸಂ.]

ನಿಸ್ತರಂಗ (ಗು). ೧. ತರಂಗಗಳಿಲ್ಲದ ; ಅಲೆಗಳಿಲ್ಲದ ; ಪ್ರಶಾಂತವಾದ : ಒಳಗೆ ತಳತಳಿಪ ರತ್ನಂಗಳಿನೊಪ್ಪುವ ನಿಸ್ತರಂಗಮಿಂಗಡಲೆಂ ಬಗ್ಗಳಿಕೆಗೆಡೆಯಾಗಿ ತೊಳಗುವ ಪಳಿಕಿನ ಮಾಣಿಕ್ಯಕೋಶಮಂದಿರಮೆಸೆಗುಂ (ಚಂದ್ರಪು. ೧-೧೪೮) ; ಶೀತಕಾಲದಲ್ಲಿ ಪದ್ಮಾನದಿಯ ನಿಸ್ತರಂಗ ನೀಲಕಾಂತ ಜಲಸ್ರೋತ ಹಳದಿ ಹೊಳಪಿನ ಮರಳ ದಡದ ನಿಶ್ಶಬ್ದ ನಿರ್ಜನತೆಯ ನಡುವೆ ಕಾಣದಾಗುತ್ತದೆ (ನಿಬಂಧ. 1, ೧೬೩).

(ನಾ). ೨. ತರಂಗಗಳಿಲ್ಲದುದು ; ಅಲೆಯಿಲ್ಲದುದು. ೩. (ಆಲಂ) ಶಾಂತವಾದುದು ; ನಿಶ್ಚಲವಾದುದು : ಚಂದಯ್ಯಗಳು . . . ಇಷ್ಟ ಲಿಂಗಮಂ ಧರಿಸಿಕೊಂಡು ಚಿತ್ತ ನಿಸ್ತರಂಗವನ್ನೆದಿ ಬಸವಣ್ಣ ಮೊದಲಾದ ಶರಣರ ಸಮ್ಯಜ್ಞಾನ ಎನಗಾಯಿತ್ತೆಂದು ಬಿನ್ನೈಸಿದ ಪ್ರಸ್ತಾವದ ವಚನ (ಶೂನ್ಯಸಂ. ೨೬೨-೪೯) ; ಚಿತ್ತವನ್ನು ಎಲ್ಲ ಕ್ರಿಯೆಯಿಂದ ಮುಕ್ತ ಗೊಳಿಸಿ ಅದನ್ನು ನಿಸ್ತರಂಗವನ್ನಾಗಿ ಮಾಡುವದರಲ್ಲಿ ಸಾಧ್ಯವಿದ್ದ ಎಲ್ಲ ಪ್ರಯತ್ನವನ್ನು ಇಷ್ಟರಲ್ಲಿ ಅವರು ಮಾಡಿದ್ದರು (ಮಹಾಯೋ. ೨೦೧).

[ಸಂ.]

ನಿಸ್ತರಂಗಿತ (ಗು). ಅಲೆಯಿಲ್ಲದ ; ಪ್ರಶಾಂತವಾದ : ಮುಖಂ ಸುರ್ಕಳಿದು, ನಿಸ್ತರಂಗಿತ ಸರೋವರದಂತೆ, ಶಾಂತವಾದುದು (ಶ್ರೀರಾಮಾ. ೩೭೮-೧೧೧). [ಸಂ.]

ನಿಸ್ತರಣ (ನಾ). ೧. ಹೊರಬರುವಿಕೆ. ೨. ದಾಟುವಿಕೆ. ೩. ಪಾರಾಗುವಿಕೆ. ೪. ಹಂಚಿಕೆ ; ಯೋಜನೆ ; ಉಪಾಯ. ೫. ಕಾಲವನ್ನು ಕಳೆಯುವಿಕೆ ; ಅವಧಿಯನ್ನು ಪೂರೈಸುವುದು, —ಕೊನೆ ಮುಟ್ಟಿಸುವುದು. ೬. ನೆರವೇರಿಸುವಿಕೆ ; ಸಿದ್ಧಿ.

[ಸಂ.]

ನಿಸ್ತರಿಸು (ಕ್ರಿ). ೧. ದಾಟಿಸು : ಮುಂದೊತ್ತೆ ಗೋದಾವರಿ ಭೂಪಂ ತೈಲಪಂ ನಿಸ್ತರಿಸು ಕಟಕಮಂ ಬೇಗಮಿನ್ನಬ್ಬ ನೀನೆಂದೆರೆಯಲ್ಸರ್ವಜ್ಞನಂ ಪೊತ್ತಗಿಯದೆ ನದಿಯಂ ಪೊಕ್ಕಡಾ ವಾರಿಪೂರಂ ಬಿರಿದತ್ತು (ಸಮಪ.೧-೩೯). ೨. ಕಾಲವನ್ನು ಕಳೆ ; ಅವಧಿಯನ್ನು ಮುಗಿಸು. ೩. ತಾಳಿ ಕೊಳ್ಳು ; ತಡೆದುಕೊಳ್ಳು ; ಸಹಿಸು ; ಸೈರಿಸು : ಮಂಡೋದರಿ ಲಯಸಮಯದ ಚಂಡಿಕೆಯಂತೆ . . . ಕೈಗಳನ್ನೆತ್ತಿ ಪೊಯ್ಯಲೆಟ್ಟೂ ಸಮ ಯಕ್ಕೆ ತೆಕ್ಕನೆಡೆವೊಕ್ಕನರಿಂಜಯನಂಜನಾಸುತಂ ಅದರ್ಕೆ ನಿಸ್ತ[ಪಾಠಾಂ. ತ್ತ]ರಿಸದಾಕೆ ಸಭೆಯಿನೆಟ್ಟು ರಾವಣನ ಕೆಲಕ್ಕೆ ಪೋದಳ್ (ಪಂರಾಮಾ. ೧೧-೧೦೭ ಪ) ; ಸರಸಿಜೋದ್ಭವನ ಪುಸಿಯಿಂ ಭೂಮಿ ಕರಗಿ ನಿಸ್ತರಿಸ ಲಾಜಿದೆ ಮಹಾಪ್ರಳಯಾರ್ಣವದೊಳು ಜರ್ಜ್ಜರಿತವಾಗುತ ಮಹಾತಳ ಕಿಳಿಯಲು (ಲಕಿಚಂ. ೫-೧) ; ಮಸ್ತಕ ಮೊದಲಾದ ದಿವ್ಯದೇಹವ ಹೊತ್ತು ನಿಸ್ತರಿಸಿದ ಪಾದಯುಗವ ಕುಸ್ತರಿಸುವರುಂಟೆ ಕುವರಿ (ಮೋಹತ. ೩೧-೪೧) ; ವಾರಣಗಳು . . . ಪಾಂಥಜನರನ್ನು ಹಿಂಸೆಗೈದ್ದರಿಂದಲು ಭವನೋಪದ್ರಗೊಳಿಸಿದ್ದರಿಂದ ಸಹ ಇಂತಪ್ಪ ಬಾಧೆಗಳಿಂದ ನಿಸ್ತರಿಸಲಾರ ವೆಂದು ಪ್ರಜೆಗಳು ಬಿನ್ನೈಸಲಾಗಿ (ಎಕ. XII, ಕೊಡಗು. ೨೫-೧೦; 1824). ೪. ನಿಭಾಯಿಸು ; ನಡಸಿಕೊಂಡು ಹೋಗು : ದೈತ್ಯದಾನವ ರುರವಣೆಯ ಯದುನಾಯಕರು ನಿಸ್ತರಿಸಲಱಿಯರು ಕೃಷ್ಣನಿಲ್ಲದೆ ಭೀತಿ ದ್ವಾರಕಿಗೆ (ಕುವ್ಯಾಸ. ೧೧-೨೭) ; ನನ್ನ ಅಪ್ತರಿಷ್ಟರು ಅಗ್ರಹ ಮಾಡಿ ಈ ನೂತನಸಂಸಾರವನ್ನು ನನ್ನ ಕೊರಳಿಗೆ ಕಟ್ಟಿದರು ! ವಾರ್ಧಕ್ಯದಲ್ಲಿ ನಾನು ಇದನ್ನು ಹ್ಯಾಗೆ ನಿಸ್ತರಿಸಿಕೊಳ್ಳಬೇಕು ? (ಮೋಹಿನೀ. ೧೪). 'ನಿತ್ತರಿಸು' ಪರಾ. [ನಿಸ್ತರಣ + – ಇಸು$_3$]

ನಿಸ್ತರುಣನಿರ್ವೃದ್ಧಾಂಗ(ನಾ)ಪರಮಾತ್ಮ : ನಿರಘ ನಿರ್ಭವ ನಿರ್ವಿರಳ ನಿಸ್ತರು[ಪಾಠಾಂ.ರ]ಣ ನಿರ್ವೃದ್ಧಾಂಗ ನಿಜನಿರ್ಮಾಯ ಚಿತ್ತೈಸು (ಒಸಪು. ೬೧-೪೪). [ಸಂ.]

ನಿಸ್ತರ್ಹಣ (ನಾ). ಕೊಲ್ಲುವಿಕೆ; ನಾಶಮಾಡುವಿಕೆ: "ಪ್ರಮಾಪಣಂ . . . ನಿರ್ಗ್ರಂಥನಂ, ಅಪಾಸನಂ, ನಿಸ್ತರ್ಹಣಂ . . . ವಧಃ—ಈ ೩೦ ಕೊಲ್ಲುವದಕ್ಕೆ ಹೆಸರುಗಳು. ಸಂಹಾರ ಮಾಡುವಿಕೆ" (ಸಿದ್ಧಾಂತಿ.೨೭೨).

[ಸಂ.]

ನಿಸ್ತಲ (ಗು). ೧. ಚಪ್ಪಟೆಯಲ್ಲದ ; ವರ್ತುಲವಾದ ; ಗೋಳಾ ಕಾರವಾದ. (ನಾ). ೨. ಗೋಳಾಕಾರವಾದುದು ; ವರ್ತುಲಾ ಕೃತಿ : "ನಿಸ್ತಲಂ, ವರ್ತುಳಂ, ವೃತ್ತಂ—ಈ ೩ ಬಟ್ಟತ್ತು" (ಹಲಾಯು. ೧೨೪-೬೮) ; "ವರ್ತುಲಂ ನಿಸ್ತಲಂ ವೃತ್ತಮೆನೆ ಬಟ್ಟಕ್ಕು" (ಮಂಗರಾ. ೧೩೨-೨೫). [ಸಂ.]

ನಿಸ್ತಾರ (ನಾ). ೧. ದಾಟುವುದು. ೨. ಪಾರಾಗುವುದು : ವಿಮೋಚನೆ ; ಬಚಾವು : ಯಮದಣ್ಡದ ಗರ್ಭದೊಳಗೆ ಹೊಕ್ಕು ಅವಿತಡಗಿದರೂ ನಮ್ಮ ಕಣ್ಕಯ್ಗಳ ನಿಳ್ಕಿನಿಂದ ನಿಮಗೆ ನಿಸ್ತಾರವಿಲ್ಲ (ಬೆಟ್ಟಅ. ೫೩-೪); ಬರುವನಗೋ ಅತ್ತ ಮಹಾಧೀರ ; ಬಂದು ಮರುಕ ವೆರೆವನಹುದು ಸತಿಗೆ, ನಿಸ್ತಾರ (ಅಹಲ್ಯೆ. ೬೯-೧೬) ; ಅಕ್ಬರಬಾದಶಹನ ರಾಜ್ಯದಲ್ಲಿ ಅವನ ಮಕ್ಕಳಾದರೂ, ಪರರ ಪ್ರಾಣವನ್ನು ನಷ್ಟಮಾಡುವು ದಾದರೆ ಅವರಿಗೆ ನಿಸ್ತಾರವಿಲ್ಲ (ಕಪಾಕುಂ. ೬೭). ೩. ಸಾಧನೋ ಪಾಯ : ಧಾತ್ರೀನಾಥರ್ಕಳ ಚಿತ್ತವೃತ್ತಿಗಳನಿಚ್ಛಾಮಾತ್ರದಿಮ್ ಬಲ್ಲನೆಮ್ಬಿ ನಿಸ್ತಾರದ ಕುಂಜನಮ್ಬಿ ನೆಗಟ್ಟಿಮ್ . . . ಮಲೆಯಾಳ ಶ್ರೀಕುಳೋಧಾರಕಮ್ (ಎಕ. V, ಅರಸೀ. ೧೦೨-೩೦ ; 1254) ; ಆ ಪೈಪೋಟಿಯಲ್ಲಿ ತೇರ್ಗಡೆಯಾದ ಹೊರತು ನಿಸ್ತಾರವಿಲ್ಲ (ಹಣಪ್ರ. ೧೯೮). ೪. ಮೋಕ್ಷ ; ಮುಕ್ತಿ. ೫. ಉದ್ಧಾರ : 'ಗೋತ್ರ ನಿಸ್ತಾರ' ಪರಾ. [ಸಂ.]

ನಿಸ್ತಾರಕ (ನಾ). ೧. ದಾಟುವಿಕೆ : ಕರುಣಿಸೈ ಮುನಿನಾಥ ಕರುಣಾ ಕರನ ಕೀರ್ತಿವರಾಮೃತವ ದುಸ್ತರಭವಾಬ್ಧಿಸಮಗ್ರನಿಸ್ತಾರಕವನೆನಗೊ ಲಿದು (ನಿಭಾಗ.೨-೨-೨). ೨. ದಾಟಿಸುವವನು; ದಡ ಸೇರಿಸುವವನು. ೩. ಮೋಕ್ಷವನ್ನು ಕೊಡಿಸುವವನು ; ಮುಕ್ತಿದಾಯಕ : ಭೂರಿಕಳಾವಿಬೋಧಿತ ಸುಧಾಕರರೂರ್ಜಿತಸಾಧುಸಂಘನಿಸ್ತಾರಕರ್. . . ಚಂದ್ರಕೀರ್ತಿಭಟ್ಟಾರಕರೆಂದು ಬಣ್ಣಿಪುದು ವಾರಿಧಿವೇಷ್ಟಿತ ಭೂರಿಭೂತಳಂ (ಸುಕುಮಾ. ೧-೨೨). ೪. ಉದ್ಧರಿಸುವವನು ; ಉದ್ಧಾರಕ : ಕ್ಷಿತಿಯಂ ನಯವಿಕ್ರಮದಿಂ ಪ್ರತಿಪಾಳಿಸಿ ಪಡೆದು ಗೋತ್ರನಿಸ್ತಾರಕನಂ ಸುತನಂ ಬಟಿಕ್ಕಮೆಮ್ಮಿ ಸ್ಥಿತಿಯಂ ಪ್ರವ್ರಜಿತನಪ್ಪುದುಚಿತಂ ಮಗನೇ (ವರ್ಧಮಾ. ೨-೩೯) ; ಕೊಲಲೆಂದುಯ್ದ ನಿಶಾಚರಂ ಖಚರ ರಾಜಂಗುಯ್ದು ಕೊಟ್ಟಂ ಗಡಂ ಕುಲನಿ[ಪಾಠಾಂ.ವಿ]ಸ್ತಾರಕನೆನ್ನ ದಾರಕನಂ (ಪಂರಾಮಾ. ೬-೪೫) ; ಎಲ್ಲವನು ತನಗೆ ವಿದಿತವೆನೆ ವಿಸ್ತರಿಸಿ ಕಾರುಣ್ಯದಲಿ ಕರುಣಿಪುದಾರು ನೀವಲ್ಲದೆ ಮಹಾಬ್ಧಿ ನಿಮಗ್ನನಿಸ್ತಾರಕರ ದಾರೆಂದ (ನಿಭಾಗ. ೧೦-೧-೮). ೫. ಗೆಲ್ಲುವವನು ; ಜಯಿಸು ವವನು : ಅನುಪಮರಣನಿಸ್ತಾರಕನನೂನಶಕ್ತ್ಯನ್ವಿತಂ ವಿಚಾರಕ್ಷಮನೆಂಬ ನೆಗಟ್ತಿಯಿಂದೆ ಬಲ್ಲಾಳನ್ರಿಪಾಳಂ ಕಾರ್ತ್ತಿಕೇಯನಂತೊಪ್ಪಿಪ್ಪಂ (ಎಕ. V, ಅರಸೀ. ೩೮-೧೬ ; ಸು. 1200). [ಸಂ.]

ನಿಸ್ತಾರಿಸು (ಕ್ರಿ). ೧. ದಾಟಿಸು ; ದಡ ಸೇರಿಸು. ೨. ರಕ್ಷಿಸು ; ಕಾಪಾಡು : ಬ್ರಹ್ಮಾಣರಂ ಕೊನ್ದ ಪತಕನಪ್ಪೊನ್ ಇದನಟಿಪ್ಪೊನ್ ಇದನ್ನಾದವನ್ನೆ ಎನೆತುಮನ್ನಿಸ್ತಾರಿಸಿದ ಪಲಮಕ್ಕು (ಎಕ. X (S), ಚಿಕ್ಕಬ. ೬೬-೨೭ ; ಸು. 850). [ನಿಸ್ತಾರಣ$_0$ + – ಇಸು$_3$]

ನಿಸ್ತಿಕೆ 'ನಿಸಿದಿಗೆ' ನೋ.

ನಿಸ್ತಿಗೆ 'ನಿಸಿದಿಗೆ' ನೋ.

ನಿಸ್ತೀರ್ಣ (ಗು). ದಾಟಿದ : ಈ ಮೇದಿನಿಯ ರಾಜ್ಯವಿದು ನಿಸ್ತೀರ್ಣೋದಕಾಹಿತಸೇತುವೆಂದನು ಡಿಬಿಕನಳವಳಿದು (ನಿಭಾಗ. ೧೦-೫೭-೬). [ಸಂ.]

ನಿಸ್ತುಲ, ನಿಸ್ತುಳ (ಗು). ಸರಿಸಾಟಿಯಿಲ್ಲದ ; ಅದ್ವಿತೀಯ ವಾದ; ಅಪ್ರತಿಮವಾದ: ತರುಣಮೃಣಾಲಗರ್ಭರುಚಿವೆತ್ತ ರಘೂದ್ವಹ ದೇಹದೀಪ್ತಿಮಂಜರಿಯನುಪಾಶ್ರಯಂಬಡೆದು ನಿಸ್ತುಲಮೌಕ್ತಿಕಹಾರ ಯಷ್ಟಿ ಪೇರುರದೊಳದೇಂ ವಿರಾಜಿಸಿದುದೋ (ಪಂರಾಮಾ. ೧೨-೧೫) ;

ಜಿತತ್ರಿಪುರ ನಿಸ್ತುಲಮಹಾಮಹಿಮ ಭೂಮ ಸುರನಾಯಕ+ತನೂದ್ಭವ ವರಪ್ರದಾತಾ (ಕಿರೀಟೇ. ೫-೧) ; ಗುಣದೊಳ್ಸತ್ವಮೆ ನಿರ್ಮಲೋಜ್ವಲ ಸುಖಜ್ಞಾನೈಕದಂ ನಿಸ್ತುಲಂ ಕಣಿಯೇಂ ರಾಗಮಯಂ ರಜಂ ನೆಜೆಯಿಕುಂ ತತ್ಕರ್ಮಬಂಧಂಗಳಂ (ಮೈಸೂಮೆ. ೫-೧೬೧). **ನಿಸ್ತುಳ :** ತನ್ನ ಕೇಸಡಿಯ ಕೆಂಪಿನೊಳುಜ್ಜ್ವಲ ಚಿತ್ರಭಿತ್ತಿ ನಿಸ್ತುಳನಿಜಮೌಕ್ತಿಕಾಭರಣ ದೀಧಿತಿಯಿಂ ತೆರೆಸುತ್ತಿದಂತೆ ಕಣ್ಗೊಳಿಸೆ ಲತಾಂಗಿ ಪೋಲ್ತಳಸಮಾಯುಧಮೋಹನಮಂತ್ರಶಕ್ತಿಯಂ (ಮಲ್ಲಿಪು. ೩-೯೬) ; ನಿರಂತ ನಿರ್ಭವ ನಿರಾಮಯ ನಿರ್ಗುಣ ನಿಸ್ತುಳ ಪ್ರಭಾವರಣ (ಶಬಶಂ. ೫-೨೪).

[ಸಂ.]

ನಿಸ್ತುಲಗಾಂಭೀರ್ಯ (ನಾ). ೧. ಅಸಮಾನವಾದ ಗಾಂಭೀರ್ಯ ; ಅದ್ವಿತೀಯವಾದ ಗಂಭೀರತೆ. ೨. ಅನುಪಮವಾದ ಆಳವುಳ್ಳುದು. ೩. ಅಸಮಾನವಾದ ಗಾಂಭೀರ್ಯವುಳ್ಳವನು. ೨, ೩ : ವಿದ್ಯುದುದ್ಯಜ್ಜಲದಂ ವ್ಯಾಘ್ರಾಜಿನಂ ರಾಜಿಸೆ ಭೃತಭುವನಂ ಭೂರಿಸತ್ತ್ವಾಶ್ರಯಂ ನಿಸ್ತುಲಗಾಂಭೀರ್ಯಂ ಕರಂ ಕಣ್ಗೊಳಿಸಿದನಭವಾಕಾರಮುದ್ರಂ ಸಮುದ್ರಂ (ಶಬಶಂ. ೧-೩೦).

[ನಿಸ್ತುಲ+ಗಾಂಭೀರ್ಯ]

ನಿಸ್ತುಷ (ಗು). ೧. ಹೊಟ್ಟು ಕಳೆದ,—ತೆಗೆದ. (ನಾ). ೨. ಹೊಟ್ಟು ಕಳೆದುದು ; ತುಷರಹಿತವಾದುದು. ೩. (ಆಲಂ) ನಿರ್ದೋಷತೆ ; ಪರಿಶುದ್ಧಿ : ಎರವು ಸಯಮೆನಿಸಲಾರ್ಕುಮೆ ಪರಮಾತ್ಮಂ ದಿಟದಿನಾಗಲಱಿಗುಮೆ ಮನದೊಳ್ ಪರಿಭಾವಿಸಿ ನಿನ್ನೊಳ್ ನೀಂ ಸ್ಥಿರನಾಗು ಬಿಡನ್ಯವಸ್ತುವಂ ನಿಸ್ತುಷದಿಂ (ಉಸಾರ. ೩೨೯). ೪. ಪರಿಶುದ್ಧನಾದವನು ; ನಿಷ್ಕಳಂಕನಾದವನು : ವಿಷಧರ ಧರಾಧಿಪತಿ ವಿಷಧರಕಿರಣಮೌಳಿ ವಿಷಯವಿಹ್ವಲದೂರ ವಿಶದಾಮೃತವನು ನಿಸ್ತುಷನಾಗಿ ಕರುಣಿಸುವುದು (ಸಿದ್ಧರಾ. ೬-೪೦). [ಸಂ.]

ನಿಸ್ತುಳ 'ನಿಸ್ತುಲ' ನೋ.

ನಿಸ್ತೂಕ (ನಾ). ೧. ತೂಕವಿಲ್ಲದಿರುವುದು ; ಹಗುರವಾದುದು : ಮುಂ ಷಡ್ಬಳಮಷ್ಟದಳಗಳಿಂ ತೋರ್ಪುದೋರಂತದಂ ತಿಳಿ ಕಾಕಮತಿ ವಿಸ್ತೀರ್ಣ ನಿಸ್ತೂಕಮಿರೆ ನಾಶವು (ರತ್ನಶಾ. ೪-೩). ೨. ತೂಕವಿಲ್ಲದವನು ; ದುರ್ಬಲನಾದವನು ; ಅಶಕ್ತ : ನಿಸ್ತೂಕನಾದವನು ಪುಸ್ತಕವನ್ನು ಎತ್ತಲಾರ (ಗಾದೆ). ೩. (ಆಲಂ) ಭಾರಿ ಮನುಷ್ಯ ; ದೊಡ್ಡ ವ್ಯಕ್ತಿ : ಆ ನಿಸ್ತೂಕಮನುಷ್ಯನಿಂದ ಈ ಕೆಲಸ ಸಾಧ್ಯವಾಗದೆ ಇದ್ದೀತೇ ? (ರೂಢಿ). [←ತುಳು. ನಿಸ್ತೂಕ]

ನಿಸ್ತೃಣ (ಗು). ೧. ಹುಲ್ಲಿಲ್ಲದ; ತೃಣವಿಲ್ಲದ. (ನಾ). ೨. ಹುಲ್ಲು ಇಲ್ಲದುದು : ಆತಪತಾಪದಿಂದಮಿದು ನಿಸ್ತೃಣ ನಿರ್ಜಳ ನಿಷ್ಪ್ರವಾಳವಲ್ಲೀತರುವಾದುದೀಯೆಡೆಯೊಳಿನ್ನಿರವಾಗದು ಪೋಪುದುತ್ತಮಂ (ಜಗವಿ. ೩-೬೪). [ಸಂ.]

ನಿಸ್ತೇಜ (ನಾ). ೧. ಕಾಂತಿಹೀನವಾದುದು ; ಕಳೆಗುಂದಿದುದು ; ಮಂಕಾದುದು : ಮಸುಳೆ ದಿನಕರನ ತೇಜಃಪ್ರಸರಂ ನಭಮೆಣ್ಣೆ ದೊಡೆದ ಕನ್ನಡಿಯೊಲ್ ತಾಂ ಮಸಮಸನಾಗಿರ್ದುದು ದೂಳಿಸಂಜೆಯೊಳ್ ದೈನ್ಯಮೇನೊ ನಿಸ್ತೇಜದವೊಲ್ (ಮಲ್ಲಿಪು. ೭-೨೦) ; ಈಗ ಒಂದೆರಡು ಶತಮಾನಗಳಲ್ಲಿದ್ದ ಕಲೆಯ ಹಿನ್ನೆಲೆಯಿಂದ ನೋಡಿದಲ್ಲಿ ಇಂದಿನ ಕಲೆಯು ಸ್ವಲ್ಪ ನಿಸ್ತೇಜವೆನ್ನಿಸುತ್ತದೆ (ಭಾರದ. ೫೪೫). ೨. ಕಾಂತಿಹೀನನಾದವನು ; ನಿರುತ್ಸಾಹಿಯಾದವನು : ಶಾಲೆಗಳಿಂದಲೂ ಕಾಲೇಜುಗಳಿಂದಲೂ ಉನ್ನತೋನ್ನತ ದರ್ಜೆಯಲ್ಲಿ ತೇರ್ಗಡೆಯಾಗಿ ಹೊರಬೀಳುತ್ತಿರುವ ನಮ್ಮ ಯುವಕರನೇಕರು ನಿಸ್ತೇಜರಾಗಿ ಕಾಣುತ್ತಾರೆ (ಶಿಕ್ಷದ. ೩೮೨). [ಸಂ.]

ನಿಸ್ತೇಜಂಬೆಱು (ಕ್ರಿ). ಕಾಂತಿಹೀನವಾಗು ; ಕಳೆಗುಂದು : ಮಂಕಾಗು : ತೇಜಂ ಪುದುವಿಲ್ಲೆನಿಸಿ ವಿರಾಜಿಸೆ ಪರರಾಜಮಂಡಲಂ ತನ್ನಿಂ ನಿಸ್ತೇಜಂಬೆತ್ತಿರೆ ಬೆಳಗಿದನೀ ಜಗಮಂ ಭಾನುವೆಂಬಿನಂ ಭಾನುರಥಂ (ಪಂರಾಮಾ. ೨-೬೬). [ನಿಸ್ತೇಜ+ಪೆಱು]

ನಿಸ್ತೇಜಿತ (ನಾ). = ನಿಸ್ತೇಜ ೨ : ಹರಿದಾಸರು ಮಾತ್ರ ನಿಸ್ತೇಜಿತರಾಗಿದ್ದರು (ಕಾವೇರಿ. ೧೩೨). [ಸಂ.]

ನಿಸ್ತೋಯ (ಗು). ನೀರಿಲ್ಲದ ; ಒಣಗಿದ ; ಶುಷ್ಕವಾದ : ನಿಸ್ತೋಯಕಾಸಾರದೊಲ್ ರಿಕ್ತಮಾನಸಂ . . . ಕೋಸಲಧರಾವಲ್ಲಭಂ ಮಗನನಪ್ಪಲ್ಕೆಳಸಿ ಮೇಲೆಳ್ದುಮಿರದೆ ಕುಸಿದನು ಧರೆಗೆ (ಶ್ರೀರಾಮಾ. ೯೧-೩೫೨). [ಸಂ.]

ನಿಸ್ತ್ರಪ (ಗು). ನಾಚಿಕೆಯಿಲ್ಲದ ; ಲಜ್ಜೆಯಿಲ್ಲದ. [ಸಂ.]

ನಿಸ್ತ್ರಪಂ (ಅ). ನಾಚಿಕೆಯಿಲ್ಲದೆ ; ಲಜ್ಜೆಯಿಲ್ಲದೆ ; ನಿಸ್ಸಂಕೋಚವಾಗಿ : ಕುಡುವೊಡೆ ನಿಸ್ತ್ರಪಂ ಕುಡುವುದೇಱಿಸಿದಂ ಬೆಸಕೋಲನೆಂದು ಪೇಟ್ ಕುಡುವುದೆ ಕನ್ನೆಯಂ ದ್ವಿಜಕುಲಂಗಿದು ವಿಶ್ವನರೇಂದ್ರವೃಂದದೊಳ್ ತೊಡರ್ದ ಪರಾಭವಂ ದ್ರುಪದನಂ ತಱಿದೊಟ್ಟದೆ (ಪಂಪಭಾ. ೩-೬೬). [ಸಂ.]

ನಿಸ್ತ್ರಪೆ (ನಾ). ನಾಚಿಕೆಗೆಟ್ಟವಳು ; ಲಜ್ಜೆಯಿಲ್ಲದವಳು : ನಿರ್ದಯೆಯಂ ನಿಸ್ನೇಹೆಯಂ ನಿಸ್ತ್ರಪೆಯನಸುಖೆಯಂ . . . ಪಾಪೆಯಂ ನೀಂ ಬೆಸಗೊಳೆ ಫಲಮೇಂ ಪೇಟ್ (ಕಾದಂಪೂ. ೯೫೭).

[ಸಂ. ನಿಸ್ತ್ರಪಾ]

ನಿಸ್ತ್ರಾಣ (ಗು). ತ್ರಾಣವಿಲ್ಲದ ; ಬಲವಿಲ್ಲದ: 'ನಿತ್ರಾಣ' ಪರಾ.

[ಸಂ.]

ನಿಸ್ತ್ರಾಣಿ (ನಾ). ತ್ರಾಣವಿಲ್ಲದವನು ; ಬಲವಿಲ್ಲದವನು; ಅಶಕ್ತ.

[ಸಂ. ನಿಸ್ತ್ರಾಣಿನ್]

ನಿಸ್ತ್ರಿಂಶ (ಗು). ೧. ನಿರ್ದಯವಾದ ; ಕ್ರೂರಿಯಾದ. (ನಾ). ೨. ಮೂವತ್ತನ್ನು ಮೀರಿದ ಅಳತೆ ; ಮೂವತ್ತು ಬೆರಳುಗಳ ಪ್ರಮಾಣವನ್ನು ಮೀರಿದ ಅಳತೆ. ೩. ನಿರ್ದಯನಾದವನು ; ಕ್ರೂರಿ ; ನಿಷ್ಕರುಣಿ : "ಕ್ರೂರನವನೆನಿಪನುಂ ನಿಸ್ತ್ರಿಂಶನೆನಿಸುಗುಂ" (ವಸ್ತುಕೋ. ೧೩೯-೧೨೫); ಉರಿದೆಂ ಬೆಂದೆನಿದೇನನಿಂತು ನೆಗೞ್ದೈ ನಿಸ್ತ್ರಿಂಶ ಪುಷ್ಪಾಸ್ತ್ರ ನಿಷ್ಠುರ ಪೇಟ್ ಪೊಲ್ಲದನೇನನಾಚರಿಸಿದಳ್ ನಿನ್ನೊಳ್ ಮಹಾಶ್ವೇತೆ (ಕಾದಂಪೂ. ೯೦೦); ಸಂಜೀವಕನಪ್ಪೊಡೆ ನೀಚನುಂ ನಿಸ್ತ್ರಿಂಶನುಮಾಗಿರ್ದಂ (ಪಂಚತಂ. ೧೦೭-೩); ಸ್ತ್ರೀವಧಂಗೆಯ್ಯೆ ಮಾಣಹಹಿನ್ನೆತ್ತದಿರೀ ನಿಜಾನುಜೆಗೆ ನೀಂ ನಿಸ್ತ್ರಿಂಶ ನಿಸ್ತ್ರಿಂಶಮಂ (ಜಗವಿ. ೨-೪೯). ೪. ಕತ್ತಿ ; ಖಡ್ಗ : "ಅಸಿ ಖಡ್ಗಂ . . . ಕೃಪಾಣಾಹ್ವಂ ಮತ್ತಸಿ ನಿಸ್ತ್ರಿಂಶಂ ಕರವಾಲ ಸಾಯಕಂ ರಿಷ್ಟಿಮಂಡಲಾಗ್ರಂ ಖಳ್ಗಂ" (ವಸ್ತುಕೋ. ೮೪-೧೬); ಪರಭೂಪಾಳಸಮುದ್ರದೊಳ್ ನಿಜಕರ ಪ್ರೋತ್ಸಾತ ನಿಸ್ತ್ರಿಂಶ ಮಂದರಮಂ ಸಂಧಿಸಿ ವಿಕ್ರಮದ್ಭುಜಫಣೇಂದ್ರಾವೇಷ್ಟಿತ ಪ್ರಾನ್ತಮಂ ಭರದಿಂದಂ ಕಡೆದುಗ್ರವಂಶತಿಳಕಂ ಶ್ರೀಕಾನ್ತೆಯಂ ತನ್ನ ಪೇರುರದೊಳ್ ತಾಳ್ದೆ (ಎಕ. VIII, ನಗರ.೩೭-೭೨; 1147); ಸ್ತ್ರೀವಧಂಗೆಯ್ಯೆ ಮಾಣಹಹಿನ್ನೆತ್ತದಿರೀ ನಿಜಾನುಜೆಗೆ ನೀಂ ನಿಸ್ತ್ರಿಂಶ ನಿಸ್ತ್ರಿಂಶಮಂ (ಜಗವಿ. ೨-೪೯) ; ಧುರದೊಳ್ನಿನ್ನ ಕರಾಗ್ರದೊಳ್ಮಿಸುಪ ನಿಸ್ತ್ರಿಂಶಕ್ಕೆ ಮೈಗೊಟ್ಟು ಬಿದ್ದರಿಭೂಪಾಲಕರ ನಿರೀಕ್ಷಿಸಿ ಜಯಂತಂ ತಾಂ ಪಿತಾನ್ವೇಷಣಾತುರನಾದಂ (ಬೀಳವಂ. ೨-೨೮೩). [ಸಂ.]

ನಿಸ್ತ್ರಿಂಶಕ (ನಾ). ಕತ್ತಿ ; ಖಡ್ಗ : ಈ ನಿಶಿತ ನಿಸ್ತ್ರಿಂಶಕವು ತಾನೇನದಾರಿಗೆ ಹೋಗಲದಕಿಂದೇನು ನಮ್ಮಯ ಕೊಡುವ ಸಾಲವ ಕೊಟ್ಟು ಹೋಗೆಂದ (ತೊರರಾ. ೬-೨೪-೨೭). [ಸಂ.]

ನಿಸ್ಕ್ರಿಂಶಕರ್ಮ (ನಾ). ನಿರ್ದಯವಾದ ಕಾರ್ಯ; ಘಾತಕ ಕೃತ್ಯ: ಅರುಣಿಂದಂ ಕುರುನಿಂಜನಂ ಕರೆದುತ್ತನ್ನ ನಿಧಂಗಜ್ಞಾನದಿಂ ಮೃಗಂಗಳರ್ದೆಡೆಯನಜುದು ನಿಸ್ಕರುಣನವರುಣಜಲದೊಳಗನಗೆ ಲೀಲಾ ಸರೋವರಮಂ ನೀಡಿಲ್ಲದೆ ಮಾಡೆಂದು ಪೇಬ್ಳೊಡವನಾ ನಿಸ್ಕ್ರಿಂಶಕರ್ಮಕ್ಕೆ ಕೊಕ್ಕರಿಸಿ (ಆದಿಪು. ೨-೧೪೫); ಅರುಣಜಳದೊಳಗನಗೆ ಕ್ರೀಡಾಸರೋವರಮಂ ಮಾಡೆಂದು ಪೇಬ್ಳೆ ನಿಸ್ಕ್ರಿಂಶಕರ್ಮಕ್ಕೆ ಕೊಕ್ಕರಿಸಿ (ಜಾವುಂಪು. ೧೪). [ನಿಸ್ಕ್ರಿಂಶ+ಕರ್ಮ]

ನಿಸ್ಕ್ರಿಂಶತೆ (ನಾ). ಕ್ರೂರತನ; ನಿರ್ದಯತೆ: ಒಡವುಟ್ಟದಂ ಕೊಂದ ವರಡಗಂ ತಿಂದವರ ನೆತ್ತರಂ ಬೆಲಗಸೆಯೊಳ್ ಕುಡಿವೀ ನಿಸ್ಕ್ರಿಂಶತೆಯಂ ಪಿಡಿಂದಿಯಂ ಪೊರ್ದಿ ಕಲ್ಪನಾಗನೆ ಭೀಮಂ (ಗದಾಯು. ೩-೨೪).

[ಸಂ. ನಿಸ್ಕ್ರಿಂಶತಾ]

ನಿಸ್ಕ್ರಿಂಶಭಾವ (ನಾ). ೧. =ನಿಸ್ಕ್ರಿಂಶತೆ. ೨. ಕ್ರೂರಸ್ವಭಾವವುಳ್ಳವನು; ನಿರ್ದಯಿ; ಕ್ರೂರಿ. ೩. ಮೂವತ್ತು ಅಂಗುಲ ಕ್ಕಿಂತಲೂ ಹೆಚ್ಚು ಉದ್ದವಾಗಿರುವಿಕೆ. ೨, ೩: ಆ ಬಾಲಕರ್ ಬಾಲ್ಯದಿಂ ತೊಟ್ಟು . . . ಸುರಶರಾಸನದಂತೆ ನಿರ್ಗುಣರುಂ ತೀಕ್ಷ್ಣ ಕೌಕ್ಷೇಯದಂತೆ ನಿಸ್ಕ್ರಿಂಶಭಾವರುಂ . . . ಎನಿಸಿ (ಸುಕುಮಾ. ೨-೫ ಸ).

[ನಿಸ್ಕ್ರಿಂಶ+ಭಾವ]

ನಿಸ್ಕ್ರಿಂಶೆ (ನಾ). ಕ್ರೂರತನವುಳ್ಳವಳು; ಕಠೋರಸ್ವಭಾವವುಳ್ಳವಳು; ನಿರ್ದಯೆ: ಕ್ರೂರಿಯಂ ಬ್ರಾಹ್ಮಣಹನನಮಹಾಪಾಪಮಂಗೆಯ್ದ ನಿಸ್ಕ್ರಿಂಶೆಯೆನ್ನಂ ಪಾಪೆಯಂ ನೀಂ ಬೆಸಗೊಳೆ ಫಲಮೇಂ(ಕಾದಂಪು. ೧೫೬). [ಸಂ. ನಿಸ್ಕ್ರಿಂಶಾ]

ನಿಸ್ತ್ರಿಗುಣ (ನಾ). ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳೂ ಇಲ್ಲದವನು; ತ್ರಿಗುಣಾತೀತ; ನಿರ್ಗುಣ; ಪರಮಾತ್ಮ: ನಿರುಪಮಾನ ನಿರವಧಿ ನಿರ್ಭಯನಿರತ ನಿಸ್ಪೃಳ ನಿಸ್ತ್ರಿಗುಣ ನಿರ್ಮರಿಣ . . . ನಿಜನಿರ್ಮಾಯ ಚಿತ್ಕೃಸು (ಬಸಪು. ೬೧-೪೪). [ಸಂ.]

ನಿಸ್ತ್ರೀ (ನಾ). ಸ್ತ್ರೀ; ಹೆಂಗಸು: ನಿಸ್ತ್ರೀ ತನ್ನಯ ಕೆಲಸ ಕೋಣೆಯೊಳತ್ತ ನೋಡುತ್ತಿರಲು ಬಸವನು ಇತ್ತ ಕರಡರಣಾದಿ ಜಿಹ್ವೆಯ ತೊಳೆದು ಒಳ ಪೊಕ್ಕು (ಶರಭೀ. ೨೦೪-೯); ಹೂವಿನ ನೆರಿಗ್ಹೋಳೆ ಜಾಲಹೂವಿನ ಜಡೆಯೋಳೆ ಅಂತರಗಟ್ಟಿ ನಿಸ್ತ್ರೀ ನಮು ಮ್ಯಾಲೆ ದಯವಿರಲೆ (ನಾಪದ. ೧೩೯); ಹತ್ತು ಕೊಪ್ಪರಿಗೆ ನೀರ ಉಕ್ಕುಕ್ಕಿ ಕಾಯ್ಸಿದರು ನಿಸ್ತ್ರೆ ಪುಷ್ಪಾಂಜಣ ಜಳಕಕ್ಕೆ . . . ಆಲ್ಲಿರ್ದ ನಿಸ್ತ್ರೀರಗ್ಗಣಿಯ ಎರೆದಾರೆ (ಜೀಸಂ. ೧೦೦). [<ಸಂ. ಸ್ತ್ರೀ ?]

ನಿಸ್ತ್ರೈಗುಣ್ಯ (ನಾ). ಸತ್ವ, ರಜ, ತಮಗಳೆಂಬ ತ್ರಿಗುಣಾತೀತವಾದುದು; ನಿರ್ಗುಣವಾದುದು. [ಸಂ.]

ನಿಸ್ಥಲ (ನಾ). [ವೀಶೈ] ಸ್ಥಲವಿಲ್ಲದುದು; ಸ್ಥಲಗಳನ್ನು ಮೀರಿದುದು; ಸ್ಥಲಾತೀತವಾದುದು: ನಿಸ್ಥಲಸ್ಥಲನಿಡಲು ನಿರ್ಮಲಾತ್ಮಂಗೆ ಇಹವಿಲ್ಲ ಪರವಿಲ್ಲ ಆದಿ ಮಧ್ಯಾಂತ ನಿರಾಳಗುಹೇಶ್ವರನ ಅನುಭವಿಗೆ ಸರ್ವಾಂಗಲಿಂಗವು (ಅನಜಂ. ೧೩೧-೫೯೭). [<ಸಂ. ನಿಸ್ಕಲ]

ನಿಸ್ಥಲೆ (ನಾ). [ವೀಶೈ] ಸ್ಥಲಗಳನ್ನು ಮೀರಿದವಳು; ಸ್ಥಲಾತೀತಳಾದವಳು: ಶರಣ ಸತಿ ಲಿಂಗ ಪತಿಯೆಂಬ ಭಾವವ ನಾನ ಜರಿಯೆ . . . ಪರ್ವಸ್ಥಲದಲ್ಲಿ ನಿಸ್ಥಲೆಯಾಗಿಪ್ಪೆ (ಮಹಾದೇ. ಬ. ೯೦-೩೧೧). [<ಸಂ. ನಿಸ್ಕಲಾ]

ನಿಸ್ಪಟ್ಟಗೇಗಿಡ (ನಾ). ಒಂದು ಬಗೆಯ ಗಿಡ: ಕರೀ ಉಪ್ಪಗಿಡ, ನಿಸ್ಪಟ್ಟಗೇಗಿಡ, ಕರೀರ (ಮೈಔಗಿ. ೧೬-೩೦೩). [?+ಗಿಡ(<ಗಿಡು)]

ನಿಸ್ಪತ್ತಿ (ನಾ). ತೀರ್ಮಾನ; ಸಿದ್ಧಾಂತ; ನಿರ್ಣಯ: ಪೂರ ತಳವಾರ ಸೋಮನಾಯಿಂಕ ನಾಡ ತಳವಾರ ಹಾಬನಾಯಿಂಕನವರು ಆ ಕಳತನವನು ಬೇದಿಸಿ ನಿಜ ನಿಸ್ಪತ್ತಿಮಾಡಿ ಆ ಸತ್ಪನನ ಮೇಲೆ ಹೊರಿಸಿ (ಎಕ. XI, ಮೊಳಕಾ. ೨೫-೯೭; 1665). [<ಸಂ. ನಿಷ್ಪತ್ತಿ]

ನಿಸ್ಪೃಹ (ನಾ). ೧. ಆಸೆಗಳನ್ನು ಬಿಟ್ಟವನು; ವಿರಕ್ತ; ವಿರಾಗಿ: ಆಸುಗೆಯು ನಾಗಕೇಸರದ ಬಲ್ಮುಗುಳಂ ಬಿರಿಯೊತ್ತಿ ತುಂಬಿ ಝಂಬಿಸೆ ರಜದಿಂ ತೊಪರ್ದ ಕೋರಲ್ ಸವಿಯಂ ತರೆ ಪಾಡಿ ಕೂಡಿಯಂಜಿಸುವುವು ಪೊಕ್ಕ ನಿಸ್ಪೃಹನನೆಂಬ ಪೊಗಟ್ರಿಗೆ ವಿಸ್ಮಯಂದಿ ಮಾಡಿಸಿದನದೊಂದು ನಂದನಮನಂಗಜಮಂಗಳಗೇಯಶೋಛೆಯಂ (ಶಾಂತಿಪು. ೭-೫೩); ಜಗನ್ಮಹನೀಯತ್ವಮನೆಯ್ದೆ ತಾಳ್ದಿದ ಮಹಾಪ್ರಭಾತಿಯಂ ಕೇಳ್ದು ನಿಸ್ಪೃಹರುಂ ಬಣ್ಣಿಪರಲ್ತೆ ನಿನ್ನ ಗುಣಮಂ (ಅಜಪು. ೧೩-೧೨); ವಿಕನಾತ್ಮನ ನಂತನಜಲನಶೋಕನದ್ವಯನಮಲನಭವನ ಲೋಕನಿಸ್ಪೃಹನಮಿತನಕ್ರಿಯನಹತನಭ್ರಮನು (ಕುವ್ಯಾಭೀ. ೩-೫೯). ೨. ನಿರಾಪೇಕ್ಷ; ಪರಮಾತ್ಮ: ನಿಸ್ಪೃಹ ನಿರ್ಮನು ನಿರ್ಮಿಕಲ್ಪ ನಿಷ್ಕ್ರಿಯ ನಿರಪೇಕ್ಷ ನಿನ್ನ ಚರಣಂ ಶರಣಕ್ಕೆಮಗಿಂ ಜಿನೇಶ್ವರಾ (ಸುಕುಮಾ. ೪-೪೮).

[<ಸಂ. ನಿಸ್ಪೃಹ]

ನಿಸ್ಪೃಹಾತ್ಮಕ (ನಾ). ಆಸಕ್ತಿಯಿಲ್ಲದವನು; ಅನಾಸಕ್ತ: ಪೆನೆಯದೆ ತಮ್ಮ ವತ್ಸಲತೆಯಂ ಪರಿಭಾವಿಸದೊಳ್ಪಟ್ಟುಜಂ ಮನದೊಳಗಣಂ ವಿಚಾರಿಸದೆ ನಿಸ್ಪೃಹಾತ್ಮಕನೆಂಬೀಕಭಕ್ತನುಂ . . . ನುಡಿಯೊಂದು ಮಾಟವೊಂದೆನಿಸಿದ ಮಾನನಂಗೆನಗೆ ದೇವಿ ಹಸಾದಮನೀಕೆ ಮಾಡಿದಳ್ (ಕಾದಂಪು. ೨೬೧). [<ಸಂ. ನಿಸ್ಪೃಹಾತ್ಮಕ]

ನಿಸ್ಪೃಹತೆ (ನಾ). ಆಸೆಯಿಲ್ಲದಿರುವಿಕೆ; ನಿರಾಸಕ್ತಿ; ವೈರಾಗ್ಯ: ಪರಮನಿಶ್ಚಲಭಕ್ತಿ ಸಕಳೇಶ್ವರನ ಕೃಪೆಯಿಂದಲ್ಲದಹುದೇ ದೊರಕುವುದೆ ನಿಸ್ಪೃಹತೆ ಎನಗತಿಕರ್ಮಗಳಟಿಕಟ (ಬಸಪು. ೨೦-೨೬); ಶಿಷ್ಯನ ಸ್ವಾನುಭವ ನಿಸ್ಪೃಹತೆಗೆಯು ಕೃಚಿತ್ತಾನು ಶಿರದೂಗುತಲಿ (ಗಗಶಾ. ೨-೨೯); ಬಡತನಕ್ಕೆ ಆಮಂತ್ರಣ ಕೊಟ್ಟು ಕುಟೀರವಾಸಿಯಾದ ಮಹಮ್ಮದನ ನಿಸ್ಪೃಹತೆಯು ಎಷ್ಟು ಮಹತ್ತ್ವವಾದುದೆಂಬುದನ್ನು ಹತ್ತು ಬಾಯಿಂಗಳಿಂದ ಹೊಗಳಿದರೂ ಸಾಲದು (ಕೃಗಂಬ. ೧೫೩).

[<ಸಂ. ನಿಸ್ಪೃಹತಾ]

ನಿಸ್ಪೃಹಸ್ವಾಂತ (ನಾ). ಆಸೆಯಿಲ್ಲದ ಮನಸ್ಸುಳ್ಳವನು; ನಿರಾಸಕ್ತ: ಭೂಭುಜಂ . . . ಅಂತು ನಿಸ್ಪೃಹಸ್ವಾಂತನಾಗಿ ತಪೋವನ ಕ್ಕಂದೇ ಪೋಗಲೆಂದ ನಿಶ್ಚಯಿಸಿ (ಮಲ್ಲಿಪು. ೧೦-೨೪).

[ನಿಸ್ಪೃಹ+ಸ್ವಾಂತ]

ನಿಸ್ಪೃಹೆ (ನಾ). ೧. =ನಿಸ್ಪೃಹತೆ: ಎಹಗೆ ಸ್ಮೆರಸಿ ನಿಂದರೋ ಪ್ರಜಮಹಿಳೆಯರು ಕೃಷ್ಣಾಂಘ್ರಿವಿರಹದ ದಹನದಾಪಸ್ತಂಭಕೌಷಧದಾನ ಕೌಂಡರಿಗೆ ಅಹಹ ಕೊಡುವೆನು ನನ್ನನೆನುತುಮ್ಮುಹದ ಮೊನೆ ಮುಱುದವನಿಪತಿ ನಿಸ್ಪೃಹೆಯಲಿದ್ದನು .ರಾಜಕಾರ್ಯವಿಹಾರಲೀಲೆಗಳ (ಕುಸ್ಯಾಭ. ೧೭-೬). ೨. ಆಸಕ್ತಿಯನ್ನು ಕಳೆದುಕೊಂಡವಳು; ವಿರಕ್ತೆ: ಆ ಕಳನುಲಲೋಚನೆಯ ಚಿತ್ತದ ಜೋಕೆಯನು ಹರಿಯಱಿದು ನಿಸ್ಪೃಹೆಯಾಳೆ ಹದುಳಿಸಲಱಿಯಳೆನುತ (ಆಕಥ್ರಾಚ. ೪-೮೧).

[<ಸಂ. ನಿಸ್ಪೃಹಾ]

ನಿಸ್ಮೃತ (ನಾ). ಹೆಣೆದುಕೊಂಡಿರುವುದು; ಓತಪ್ರೋತವಾಗಿ ಸೇರಿಕೊಂಡಿರುವುದು: ಪ್ರಣವದೊಂದಾ ವರ್ಣ ಮೂಱಱು ಗುಣ ವಿಡಿದು ತೋಱುವ ಚರಾಚರವೆಸೆಬಾರದು ವಿಶ್ವದಲಿ ನಿಸ್ಮೃತವಾಗಿ ಹುದು (ಕುವ್ಯಾಭೀ. ೪-೧೬). [<ಸಂ. ನಿಷ್ಮೃತ]

ನಿಸ್ರಾವ (ನಾ). ೧. ಹರಿಯುವಿಕೆ; ಪ್ರವಹಿಸುವಿಕೆ. ೨. ಅನ್ನದ ಕೆನೆ,—ಗಂಜಿ: "ಮಾಸರಃ, ಆಚಾಮಃ, ನಿಸ್ರಾವಃ— ೩ ಭಕ್ತಸಮುದ್ಭವೇ. ಮಂಡೇಬೋನದ ಕೆನೆ ಗಂಜಿ" (ಸಿದ್ಧಾಂತಿ. ೨೪೪). [ಸಂ.]

ನಿಸ್ವ (ನಾ). ಬಡವ ; ದರಿದ್ರ ; ನಿರ್ಧನ : ಇರೆ ಧಾತ್ರೀತನಯಂ ದಿನೇಶಗೃಹದೊಳ್ ಸ್ವಲ್ಪಾಂಗನಾಸೂನು ದುರ್ಗರತಂ ಕ್ಲೇಶಸಹಿಷ್ಣು ನಿಸ್ವನೆನಿಕುಂ (ಜಾತತಿ. ೧೭-೨೦). [<ಸಂ. ನಿಸ್ವ]

ನಿಸ್ವತೆ (ನಾ). ಬಡತನ ; ದಾರಿದ್ರ್ಯ : ರಾಜಗುಪ್ತನೆಂಬೊಂ . . . ಕೆಲವು ದೆವಸದಿಂ ತನ್ನ ನಿಸ್ವತೆ ಕಾರಣಮಾಗೆ ಸಮಾಧಿಗುಪ್ತ ಮುನೀಂದ್ರ ಪಾದಪದ್ಮೋಪಕಂಠದೊಳ್ ಪರಮದೀಕ್ಷಾವಿಲಕ್ಷಿತಾಕ್ಷೂಣಪ್ರಮೋದನಾಗಿ (ಶಾಂತಿಪು. ೯-೮೩ ಪ) ; ಸುತೆಯರ್ ಪುಟ್ಟುವರಂತಾಶ್ರಿತರೊಳ್ ಬಲ್ಲಿದರೊಳೊಂದುಗುಂ ವೈರಂ ನಿಸ್ವತೆ ಕೀರ್ತಿಹಾನಿ ಬಹುನಿದ್ರತೆ ದೊರೆಕೊಳ್ಗುಂ ನಿಶೇಶನವರೋಹಿಣಿಯೊಳ್ (ಜಾತತಿ. ೯-೨೦). [<ಸಂ. ನಿಸ್ವತಾ]

ನಿಸ್ವನ (ನಾ). ಶಬ್ದ ; ಧ್ವನಿ ; ಸ್ವನ : ಖರಖುರಟಂಕಪರಿಸ್ಖಲನಕಳಿತ ವಿಷಮ ಸಮರಭೇರೀನಿಸ್ವನ[ಪಾಠಾಂ. ಸ್ತುಳ, ಸ್ಥಳ]ಮುಂ (ಪಂಪಭಾ. ೧೩-೫೧ ಪ) ; ದೆಸೆಯೊಳ್ ಕೂಡಿರೆ ಪಟುಪಟಹನಿಸ್ವನಂ ಶುಭದಿನದೊಳ್ ನಾಡಾಡಿಗಳುಂಬಮೆನಲ್ ಮಾಡಿದನಂತಾತ್ಮಜಂಗೆ ಮದುವೆಯಂ(ನೇಮಿಪು. ೪-೩೯) ; ಜಡಿವ ಖಡ್ಗದ . . . ರೌದ್ರರವಭಟಭಟತನಿಸ್ವನದ ಇಡಿದ ಧೂಳಿಯ ಧೂಮರಾಶಿಯ ಪಡೆ ವಿರಾಟನ ಮಗನ ಕಂಗಳಿಗೊಡನೊಡನೆ ದಾವಾಗ್ನಿಯಂತಿರೆ ತೋಱುತಿದಿರಿನಲಿ (ಕುಮ್ಯಾವಿ. ೬-೩) ; ಐರಾವತಂ ದೇವೇಂದ್ರನಂ ಪೊತ್ತು ದಿಕ್ಪಾಲಪುರಗಳಿಗೆ . . . ಮತ್ತೆ ತೆರಳುತಲ್ಲಿಂ ಮರಳಿ ಬರ್ಪುದಮರಾವತಿಗೆ ಸುರವಾದ್ಯನಿಸ್ವನಕೆ ಬಿಂಕದಿಂ ಬೀಗಿ (ಶ್ರೀರಾಮಾ. ೪೮-೫೪೭). [ಸಂ.]

ನಿಸ್ವಾನ (ನಾ). = ನಿಸ್ವನ : "ನಿನಾದಃ . . . ನಿಸ್ವಾನಃ, ನಿಸ್ವನಃ, ಆರವಃ, ಆರಾವಃ, ಸಂರಾವಃ, ವಿರಾವಃ—೧೭ ಧ್ವನಿಯ ಹೆಸರುಗಳು" (ಸಿದ್ಧಾಂತಿ. ೫೬). [ಸಂ.]

ನಿಸ್ವಾರ್ಥ (ಗು). ೧. ಸ್ವಾರ್ಥವಿಲ್ಲದ ; ಸ್ವಪ್ರಯೋಜನಾಪೇಕ್ಷೆಯಿಲ್ಲದ : ನಿನ್ನ ನಿಸ್ವಾರ್ಥ ವಿಚಾರದಲ್ಲಿ ಅರ್ಥವಾದರೂ ಏನಿದೆ? (ಹೇಮಂತ. ೧೬೪). (ನಾ). ೨. ಸ್ವಾರ್ಥವಿಲ್ಲದಿರುವಿಕೆ ; ನಿಷ್ಕಾಮತೆ : ತ್ಯಾಗಮೂಲವೂ ನಿಸ್ವಾರ್ಥಪರವೂ ಆದ ಪ್ರೇಮಕ್ಕೆ ನಳ ಸಂಕೇತವಾಗಿದ್ದಾನೆ (ನಳಚಿ. ೨೮ ಪೀಠಿಕೆ). [<ಸಂ. ನಿಸ್ವಾರ್ಥ]

ನಿಸ್ವಾರ್ಥಿ (ನಾ). ಸ್ವಾರ್ಥಿಯಲ್ಲದ ವ್ಯಕ್ತಿ ; ಸ್ವಪ್ರಯೋಜನಾಪೇಕ್ಷೆಯಿಲ್ಲದ ವ್ಯಕ್ತಿ. [<ಸಂ. ನಿಸ್ವಾರ್ಥಿನ್]

ನಿಸ್ವೇದ (ನಾ). ಬೆವರಿಲ್ಲದಿರುವಿಕೆ ; ಬೆವರದಿರುವಿಕೆ : ಗೋಕ್ಷೀರ ಕ್ಷತಜತ್ವಮುಂ ನಿಸ್ವೇದಮುಂ ಸಮಚತುರಶ್ರಮಪ್ಪ ಸಂಸ್ಥಾನಸಂಹನನಮುಂ . . . ತನಗನುಸಂಗತಮಾಗೆ (ಶಾಂತಿಪು. ೧೦-೯೪ ಪ).

[<ಸಂ. ನಿಸ್ವೇದ]

ನಿಸ್ವೇದತ್ವ (ನಾ). = ನಿಸ್ವೇದ : ನಿಸ್ವೇದತ್ವಮುಂ ನಿರ್ಮಳತ್ವಮುಂ . . . ಪ್ರಿಯಹಿತವಾದಿತ್ವಮುಮೆಂಬ ದಶವಿಧ ಸ್ವಭಾವತಿಶಯ ಸಮುತ್ಪನ್ನಮುಂ (ಚಾವುಂಪು. ೩೫). [<ಸಂ. ನಿಸ್ವೇದತ್ವ]

ನಿಸ್ಸಂಕ (ನಾ). ಶಂಕೆಯಿಲ್ಲದಿರುವುದು ; ಸಂಶಯವಿಲ್ಲದಿರುವುದು : ನಿಶ್ಶಂಕ—ನಿಸ್ಸಂಕ, ನಿಶಾದಿ—ನಿಸಾದಿ (ಶಮದ. ೨೫೩ ಪ್ರಯೋ).

ನಿಸ್ಸಂಕಪ್ರತಾಪ = ನಿಸ್ಸಂಕಮಲ್ಲ : ನಿಸ್ಸಂಕಪ್ರತಾಪ ವೀರಬಲಾಳ ದೇವರು ದೋರಸಮುದ್ರದ ವೀಡಿನೊಳು ನಿಲೆ (ಎಕ. III (R), ನಂಜನ. ೧೫೬-೩ ; 1198) ; ಸ್ವಸ್ತಿಶ್ರೀ ಅಸಹಾಯಶೂರ ನಿಸ್ಸ[ಂಕಪ್ರ]ತಾಪ ಪೊಯ್ಸಳ ಶ್ರೀ ವೀರ ಬಲಾ[ಳ ದೇ]ವರ್ (ಎಕ. IV, ಚಾಮರಾ. ೧೮೭-೧ ; 1207). **ನಿಸ್ಸಂಕ ಪ್ರತಾಪಚಕ್ರವರ್ತಿ** = ನಿರ್ಭೀತ ವೀರನಾದ ಚಕ್ರವರ್ತಿ ; ಒಂದು ಬಿರುದು : ಹೊಯ್ಸಳ ಭುಜಬಳ ನಿಸ್ಸಂಕಪ್ರತಾಪಚಕ್ರವರ್ತ್ತಿ ವೀರಬಲ್ಲಾಳ ದೇವರಸರು ××× ಪ್ರಿಥ್ವೀ ರಾಜ್ಯಂಗೆಯ್ಯುತ್ತವಿರೆ (ಎಕ. III (R), ನಂಜನ. ೧೩೮-೧೪ ; 1332).

ನಿಸ್ಸಂಕಮಲ್ಲ = ಶಂಕೆಯಿಲ್ಲದ ವೀರ : ನಿರ್ಭೀತ ; ಒಂದು ಬಿರುದು : ಶ್ರೀಮನ್ಮಹಾಮಂಡಳೇಸ್ವರಂ ಹಾಸಿವರ ಸೂಲಂ ಗಂಡರ ದಾವಣಿ ನಿಗಳಂಕಮಲ್ಲ ಚಲದಂಕರಾಮ ನಿಸ್ಸಂಕಮಲ್ಲರುಮಪ್ಪ . . . ಬೊಮ್ಮಿದೇವರಸರುಂ (ಕಾ. IV, ೪೮-೩೮ ; 1247). **ನಿಸ್ಸಂಕ ಹೊಯಿಸಣ** = ನಿಶ್ಶಂಕನಾದ ಹೊಯ್ಸಳವಂಶದವನು ; ಒಂದು ಬಿರುದು : ಶ್ರೀಮತು ವಿಷ್ಣುವರ್ದ್ಧನ ಪ್ರತಾಪಚಕ್ರವರ್ತಿ ನಿಸ್ಸಂಕ ಹೊಯಿಸಣ ಶ್ರೀ ವೀರನಾರಸಿಂಹದೇವರಸರು ದೋರಸಮುದ್ರದ ನೆಲೆವೀಡಿನೊಳು ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಿರೆ (ಎಕ. XVI, ಚಿಕ್ಕನಾ. ೫೮-೯ ; 1260). [<ಸಂ. ನಿಶ್ಶಂಕ]

ನಿಸ್ಸಂಕಲ್ಪ (ನಾ). ಯಾವ ಬಯಕೆಯೂ ಇಲ್ಲದವನು : ಆಶಾರಹಿತನಾದವನು ; ಪರಮಾತ್ಮ : ಶರಣು ನಿಸ್ಸಂಕಲ್ಪ ನಿತ್ಯಾನಂದ ನಿಗಮನುತ (ಗಗತಾ. ೧-೪೩). [ಸಂ.]

ನಿಸ್ಸಂಕುಚಿತ (ಗು). ಚಿಕ್ಕದಾಗದ ; ಸಂಕೋಚಗೊಳ್ಳದ ನಿರಹಂಕಾರಭಾವದಲ್ಲಿ ನಿಸ್ಸಂಕುಚಿತ ವಿಕಸಿತ ಸ್ವಭಾವದಲ್ಲಿ ಈ ಜೀವಿಯೇ ಸಮಷ್ಟಿರೂಪಿ (ಭಾರದ. ೧೧೩). [ಸಂ.]

ನಿಸ್ಸಂಕೆ (ನಾ). ೧. ನಿಶ್ಶಂಕೆ ; ಅಳುಕಿಲ್ಲದಿರುವಿಕೆ ; ನಿರ್ಭೀತಿ. ೨. ಅವಜ್ಞೆ : "ನಿಸ್ಸಂಕೆ = ಅವಜ್ಞೆ" (ಶಮದ. ಸಂ. ೨).

[<ಸಂ. ನಿಶ್ಶಂಕಾ]

ನಿಸ್ಸಂಕೋಚ (ನಾ). ಸಂಕೋಚವಿಲ್ಲದಿರುವಿಕೆ ; ಅಳುಕಿಲ್ಲದಿರುವಿಕೆ ; ಹಿಂಜರಿಯದಿರುವುದು : ಮಂಕಾಗಿದ್ದರೆ, ಅದನ್ನು ನಿಸ್ಸಂಕೋಚದಿಂದ ಹೇಳಿಕೊಳ್ಳುವುದು—ಅದೇ ನಿಜವಾದ ಮಂಕುತನದ ಲಕ್ಷಣವೆಂದು ಕೆಲವರ ಅಭಿಪ್ರಾಯ (ರಾಮರಾ. ೬೫) ; ಆಕೆ . . . ನಿಸ್ಸಂಕೋಚವಾಗಿ ಒಳಗಿನ ಅಡುಗೆಮನೆಯನ್ನು ಪ್ರವೇಶಿಸುತ್ತಿದ್ದಳು (ಮುಂಗಾಮು. ೭೬). [ಸಂ.]

ನಿಸ್ಸಂಖ್ಯ (ಗು). ಲೆಕ್ಕವಿಲ್ಲದ ; ಅಸಂಖ್ಯವಾದ : ನಿಸ್ಸಂಖ್ಯ ಶಂಖ ಪ್ರಪಟುಪಟಹಸತ್ಕಾಹಳಾ ಭೂರಿಭೇರೀಧ್ವನಿಯುಂ ಭೋರೆಂದು ತಾನೊರ್ಮೊದಲೊಳೆ ಪಿರಿದುಂ ಘೂರ್ಣಿಸಲ್ . . . ತಳರ್ದನಲ್ಲಿಂದಮಾ ಧರ್ಮನಾಥಂ (ಬಾಧಪು. ೧೦-೩೩). [ಸಂ.]

ನಿಸ್ಸಂಗ (ನಾ). ೧. ಒಡನಾಟ ಇಲ್ಲದಿರುವಿಕೆ ; ಬಂಧನಗಳನ್ನು ಬಿಟ್ಟಿರುವಿಕೆ ; ನಿರ್ಲಿಪ್ತತೆ : ಕಾಮಸಂಗ ನಿಸ್ಸಂಗವಾಗಿ ಇನ್ನಾವ ಸಂಗವನಱಿಯೆನೆಯ್ಯಾ (ಬಸವ. ೪೮೮) ; ಸಂಸಾರಿಯಲ್ಲದ ಸಂಗ ವೈರಾಗಿಯಲ್ಲದ ನಿಸ್ಸಂಗ ಇಂತೀ ಉಭಯಸಂಗದಿಂದ ಮಹತ್ತನೈದಿಪ್ಪನಾಗಿ . . . ನಿಮ್ಮ ಶರಣ ಕ್ಷೀಣನಲ್ಲ (ಚನ್ನಪ. ಕ. ೬೧೨-೧೩೬೨) ; ಮೊದಲ ಭೂಮಿ ಸುಖೇಚ್ಛೆಯೆರಡನೆಯದು ಸದಾತ್ಮವಿಚಾರ ಮೂಱನಿಪುದು ಕಣಾ ನಿಸ್ಸಂಗ ನಾಲ್ಕದು ವಾಸನಾಕ್ಷಯವು (ಅಮೃತ. ೬-೬). ೨. ಎಲ್ಲ ಸಂಬಂಧವನ್ನು ಬಿಟ್ಟವನು ; ನಿರ್ಲಿಪ್ತನಾದವನು ; ವಿರಾಗಿ : ಅಂತು ನಿಸ್ಸಂಗನಂ ಸಂಗೀತಪ್ರಸಂಗದೊಳಮರಪುಂಗವನೋಲಗಿಸಿ ಮುನ್ನ ಮಾದಿದೇವಂಗೆ ಮಾಡಿದಂದದೊಳ್ ಮಂದರಾಚಲದೊಳಜಿತದೇವಂಗೆ ಜನ್ಮಾಭಿಷೇಕಕಲ್ಯಾಣಮಂ ಮಾಡಿ (ಅಜಿಪು. ೫-೨೨ ಪ) ; ನಿಸ್ಸಂಗನಾದ ಆದಿನಾಥನೇ ಆ ಸೊಗಸಿಗೆ ಮನ ಸೋತು ನೋಡುತ್ತಿದ್ದನು (ಕಸಾಚಿ. ೨೪). [ಸಂ.]

ನಿಸ್ಸಂಗತೆ (ನಾ). = ನಿಸ್ಸಂಗತ್ವ : ಅದು ನಿಸ್ಸಂಗತೆಯಿಂದಲ್ಲದಾಗದದು ಜಾತರೂಪದಿಂದಲ್ಲದೆ ತೀರದು (ಶಾಂತಿಪು. ೬-೧೦೫).

[ಸಂ. ನಿಸ್ಸಂಗತಾ]

ನಿಸ್ಸಂಗತ್ವ (ನಾ). ಯಾವ ಸಂಬಂಧವೂ ಇಲ್ಲದಿರುವಿಕೆ ; ನಿರ್ಲಿಪ್ತತೆ : ಮಾಡಿ ಮೂಟವನಱಿಯದ ಭಕ್ತ ಕೂಡಿ ಕೂಟವನಱಿಯದ

ಭಕ್ತ ಮಾಟ ಕೂಟವೆಂಬ ಕೋಟಲೆಯಳದು ನಿಸ್ಸಂಗತ್ವ ನಿರಾಭಾರಿ [ಪಾಶಾಂ. ನಿಸ್ಸಂಗ ನಿರಾಭಾರಿ] ನಿಸ್ಸೀಮನು ನಿರ್ದೇಹಿ ನಿಜದಲ್ಲಿ ಅಡಗಿದ ನಿತ್ಯಮುಕ್ತನಯ್ಯ ಭಕ್ತನು (ಸಿದ್ಧೇಸ. ೨೦೫-೧೩೫); ಈ ಬಗೆಯ ನಿರ್ಮಲತ್ವ ಲಭಿಸುವುದು ನಿಸ್ಸಂಗತ್ವದಿಂದ (ಸೌಂದಸ. ೧೧೧). [ಸಂ.]

ನಿಸ್ಸಂಗತ್ವಾತ್ಮಭಾವನೆ (ನಾ). [ಜೈನ] ಐವತ್ತ್ತುಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು; ಯೋಗ್ಯನಾದ ಶಿಷ್ಯನನ್ನು ಪರಿಗ್ರಹಿಸಿ ತನ್ನ ಕರ್ತವ್ಯಭಾರವನ್ನು ಆತನಿಗೆ ವಹಿಸಿ ತಾನು ನಿಸ್ಸಂಗನಾಗಿ ತನ್ನ ಆತ್ಮವು ಎಲ್ಲಾ ಬಗೆಯ ಪರಿಗ್ರಹದಿಂದಲೂ ಬಿಡುಗಡೆ ಹೊಂದಿದೆ ಎಂಬ ಭಾವನೆಯನ್ನು ಸಾಧಿಸುವುದು : ದ್ವಾದಶಾಂಗದೊಳ್ ಪೇಟ್ದ ಅಧಾನ ಪ್ರೀತಿ ಸುಪ್ರೀತಿ . . . ನಿಸ್ಸಂಗತ್ವಾತ್ಮಭಾವನಾಯೋಗನಿರ್ವಾಣಸಂಪ್ರಾಪ್ತಿ ಯೋಗನಿರ್ವಾಣ ಸಾಧನ . . . ಅಗ್ರನಿರ್ವೃತಿಯೆಂಬುನ್ತ್ತುಮೂಜು ಗರ್ಭಾದಿ ನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳುಂ (ಆದಿಪು. ೧೫೫-೧೫೫ ಪ). 'ದೀಕ್ಷೆ' ಪರಾ. [ಸಂ. ನಿಸ್ಸಂಗತ್ವಾತ್ಮಭಾವನಾ]

ನಿಸ್ಸಂಗಪರಿಭಾವಕತ್ವ (ನಾ). ನಿರ್ಲಿಪ್ತತೆಯಿಂದ ವಿಚಾರ ಮಾಡುವಿಕೆ : ಉಳಿದವರಿಗಿಂತ ಮಿಗಿಲಾದ ಈ 'ನಿಸ್ಸಂಗಪರಿಭಾವಕತ್ವ' ಶಕ್ತಿಯಿಂದ ಕಳೆಗಾರ ಚೆಲುವನ್ನು ಕಾಣುತ್ತಾನೆ (ಸೌಂದಸ. ೬).

[ನಿಸ್ಸಂಗ + ಪರಿಭಾವಕತ್ವ]

ನಿಸ್ಸಂಗಪರಿಭಾವನೆ (ನಾ). = ನಿಸ್ಸಂಗಪರಿಭಾವಕತ್ವ : ಕಲಾದೃಷ್ಟಿ ಎಂದರೆ ವಸ್ತುಗಳ ಚೆಲುವನ್ನು . . . ಒಂದು ರೀತಿಯ ನಿಸ್ಸಂಗ ಪರಿಭಾವನೆಯಿಂದ ಒಲಿಯುವುದು ಎಂದು ಅರ್ಥ (ಸೌಂದಸ. ೬).

[ನಿಸ್ಸಂಗ+ಪರಿಭಾವನೆ]

ನಿಸ್ಸಂಗಿ (ನಾ). ಯಾವ ಒಡನಾಟವೂ ಇಲ್ಲದವನು; ನಿರ್ಲಿಪ್ತನಾದವನು; ವಿರಕ್ತ : ಐವರ ಸಂಗದಿಂದ ಬಂದೆ ನೋಡಯ್ಯ . . . ಐವರೂ ತಮ್ಮ ತಮ್ಮ ಬಟ್ಟೆಯಲ್ಲಿ ಹೋದರು ನಾನೊಬ್ಬನೆ ನಿಸ್ಸಂಗಿಯಾಗಿ ಉಳಿದೆನಲ್ಲಾ (ಅವಚಂ. ೪೯-೩೯೭); ಈಶ್ವರೇಶ್ವರನು ಜಂಗಮಾಕೃತಿಯಂ ಧರಿಸಿ ನಿಸ್ಸಂಗಿಯಾಗೆಯ್ತಂದು ಭಕ್ತಗೃಹಾಂಗಣದೊಳಾಡುತ್ತ (ಬಸಪು. ೨೭-೪೨); ಮಾಯವಿಲ್ಲದೆ ಸಂಗವ ಮಾಡಿ ನಿಸ್ಸಂಗಿಯಾದೆನು (ಸಿದ್ಧೇಸ. ೧೩೩-೩೯೩); ನಿರುಪಾಧಿ ನಿಸ್ಸಂಗಿ ನಿರ್ಮಲ ನಿರಾಭಾರಿ . . . ಪ್ರಭುಜಂಗಮದ ಪಾದವಿರ್ಕೆನ್ನ ಹೃದಯದೊಳಗೆ (ವೀರೇಪು. ೧-೧-೫). [ಸಂ. ನಿಸ್ಸಂಗಿನ್]

ನಿಸ್ಸಂಜ್ಞ (ಗು). ೧. ಪ್ರಜ್ಞೆ ಇಲ್ಲದಿರುವ; ಪ್ರಜ್ಞಾಹೀನವಾದ: ನಂದಗೋಪನುಂ ಯಶೋದೆಯುಂ . . . ಚಂಡಾಹಿತುಂಡಖಂಡಿತ ಪುಂಡರೀಕಾಕ್ಷವದನನಿನ್ಯಸ್ತತರಳತಾರನೇತ್ರರುಂ ನಿಸ್ಸಂಜ್ಞ ತ್ರಿಸಂಜ್ಞಗಾತ್ರರುಮಾಗೆ (ಜಾವಿ. ೩-೯೫ ಪ). (ನಾ). ೨. ಪ್ರಜ್ಞೆ ಇಲ್ಲದ ವ್ಯಕ್ತಿ; ಪ್ರಜ್ಞಾಶೂನ್ಯ. [ಸಂ.]

ನಿಸ್ಸಂತತಿ (ನಾ). = ನಿಸ್ಸಂತಾನ : ಮಕ್ಕಳಿಲ್ಲದಿದ್ದಡೆ ಮಗಳು ಮಗಳ ಮಕ್ಕಳು ದಾಯಾದ್ಯರುನಿಲ್ಲದೆ ನಿಸ್ಸನ್ತತಿಯಾದವ [ರೆ]ಲ್ಲವನರಸು ಕಾ[ಣಕೆ] . . . ಕುಡುವುದು (ಕಇಪ. ೨೬-೩೯-೪೧; 1110). [ಸಂ.]

ನಿಸ್ಸಂತಾನ (ನಾ). ಮಕ್ಕಳಿಲ್ಲದಿರುವುದು; ವಂಶವೃದ್ಧಿಯಾಗದಿರುವುದು : ಆ ನರಾಧಿಪ ಬಿಜ್ಜಳನ ಸಂತಾನವೆಲ್ಲಂ ಕಡೆಗೆ ನಿಸ್ಸಂತಾನವಾಯಿತು (ಬಸಪು. ೬೧-೩೮); ಅವರ ಸಂತಾನ ನಿಸ್ಸಂತಾನ ಆಗಲಿ (ಜನಜೀ. ೧೫೧). [ಸಂ.]

ನಿಸ್ಸಂತಾನಿ (ನಾ). ಮಕ್ಕಳಿಲ್ಲದವನು; ಸಂತಾನವಿಲ್ಲದವನು : ನಾರಾಯಣಶಾಸ್ತ್ರಿಯು ನಿಸ್ಸಂತಾನಿಯೆಂದೂ . . . ಹೇಳಿರುವರು (ಅಂಬಿಕೆ. ೪೯). [ಸಂ. ನಿಸ್ಸಂತಾನಿನ್]

ನಿಸ್ಸಂದಿಗ್ಧ (ಗು). ೧. ಸಂಶಯವಿಲ್ಲದ; ಅನುಮಾನವಿಲ್ಲದ : ನಿಶ್ಚಿತವಾದ : "ನಿಶ್ಚಯವಾದ, ನಿಶ್ಚಿತ, ದೃಢ, ನಿಸ್ಸಂದೇಹವಾದ, ನಿಸ್ಸಂಧಿಗ್ಧ . . . ಖಾತ್ರಿಯಾದ, ಗಟ್ಟಿಯಾದ, ತಪ್ಪದ" (Sure.-ಜಂಶಾ). (ನಾ). ೨. ಸಂಶಯವಿಲ್ಲದಿರುವಿಕೆ; ಖಚಿತತೆ : ಇಷ್ಟರಿಂದಲೇ ಆ ಎರಡು ಕೃತಿಗಳ ಪರಸ್ಪರ ಸಂಬಂಧ ನಿಸ್ಸಂದಿಗ್ಧವಾಗಿ ವ್ಯಕ್ತವಾಗುತ್ತದೆ (ಸಳಚ. ೨೯ ಪೀಠಿಕೆ). ೩. ಸಂಶಯವಿಲ್ಲದವನು; ಅನುಮಾನವಿಲ್ಲದವನು; ನಿರ್ದಿಷ್ಟಭಾವನೆಯುಳ್ಳವನು : ತನಗೇನಾಗಬೇಕೆಂಬುದರ ಬಗ್ಗೆ ಅನಿಶ್ಚಿತನಾಗಿದ್ದರೂ ಪರರಿಗೆ ತಾನೇನು ಮಾಡಬೇಕೆಂಬುದರ ಬಗ್ಗೆ ಅವನು ನಿಸ್ಸಂದಿಗ್ಧನಾಗಿದ್ದನು (ಪುಸರು. ೨೯೮). [ಸಂ.]

ನಿಸ್ಸಂದೇಹ (ನಾ). ೧. ಸಂದೇಹವಿಲ್ಲದುದು; ಅನುಮಾನವಿಲ್ಲದುದು; ಖಚಿತವಾದುದು : ಇನರು ಪಾರ್ಥಿವರೊಳಗೆ ಕೇಳ್ ಪಾಂಡವರು ನಿಸ್ಸಂದೇಹವು (ಕುಸ್ಯಾಪ. ೧೬-೨೫); ಕ್ರಿ.ಪೂ.ದ ಇತರ ಬ್ರಾಹ್ಮಣಗಳಲ್ಲಿ ಸಿಗುವ ನೀರ್, ವಿಾನ ಎಂಬ ಎರಡು ಪದಗಳೂ ನಿಸ್ಸಂದೇಹವಾಗಿ ದ್ರಾವಿಡಪರಿವಾರಕ್ಕೆ ಸೇರಿದ ಪದಗಳೆಂದು ವಿದ್ವಾಂಸರು ತಿಳಿಸಿದ್ದಾರೆ (ದ್ರಾವಿವಿ. ೩೫). ೨. ಸಂದೇಹವಿಲ್ಲದ ವ್ಯಕ್ತಿ : ನಿಸ್ಸಂದೇಹಿ : ಭವಿಭವಿ ಎಂಬ ಸಂದೇಹ ಕೀಲ ಕಳೆದು ನಿಸ್ಸಂದೇಹ ನಿರ್ದೇಪಕನಾಗಿ ಇರಬಲ್ಲರೆ ಶೀಲಸಂಪನ್ನರೆಂಬೆ (ಸಿದ್ಧೇಸ. ೧೦೦-೩೦೯).

ನಿಸ್ಸಂದೇಹಂ ಮಾಡು = ಸಂಶಯವಿಲ್ಲದಂತೆ ಮಾಡು; ಅನುಮಾನವಿಲ್ಲದ ಹಾಗೆ ಮಾಡು; ನಿರ್ದಿಷ್ಟಪಡಿಸು : ವಸ್ತುವಂ ನಿಸ್ಸಂದೇಹಂ ಮಾಡಿ ಬೆಸಸೆ ತಿರ್ಯಗ್ಗಣಮುಂ ತಂದಜಿಗಂ ದಲೆನಲ್ ಗಣಬ್ಯಂದಂ ಪನ್ನೆರಡುಮಜಿಪುದೊಂದಚ್ಚರಿಯೇ (ಶಾಂತಿಪು. ೧೨-೬). **ನಿಸ್ಸಂದೇಹಮಾಗು** = ಸಂಶಯವಿಲ್ಲದಾಗು : ಪದಾರ್ಥಂಗಳೊಳ್ ತಮಗೆ ಸಂದೇಹಮಾಗೆ ಬಂದು ತೀರ್ಥಕರಕುಮಾರನಂ ಕಾಣಲೊಡಂ ನಿಸ್ಸಂದೇಹಮಾಗೆ (ಚಾವುಂಪು. ೩೮೬). [ಸಂ.]

ನಿಸ್ಸಂದೇಹಿ (ನಾ). ಸಂಶಯವಿಲ್ಲದವನು; ಖಚಿತಭಾವನೆಯುಳ್ಳವನು : ಒಳಗೊಂದು ಅನಿಮಿಷಲಿರಗವ ಕಂಡು ಎನ್ನ ಮನೋಪುಷ್ಪದಲ್ಲಿ ಪೂಜೆಯ ಮಾಡಿದಡೆ ನಾಚಿಕೆ ಮಾದು ನಿಸ್ಸಂದೇಹಿಯಾದೆನು ಗುಹೇಶ್ವರ (ಅಪಚಂ. ೯೪-೪೧೭); ಸಂದೇಹಿ ತಜ್ಜೀವ ದೇವ ನಿಸ್ಸಂದೇಹಿಯಾಗಿಹನಾವಗಂ ತಾನಿದು ನಿಮಿತ್ತಂ ಜೀವನುಂ ಶಿವನಲ್ಲ ಕೇಳರೆ (ಬಸಪು. ೫೧-೩೯). [ಸಂ. ನಿಸ್ಸಂದೇಹಿನ್]

ನಿಸ್ಸಂಶಯ(ನಾ) ೧. = ನಿಸ್ಸಂದೇಹ ೧: ನಿಸ್ಸಂಶಯವಾಗಿ ಆದೊಂದು ಡಂಭಾಚಾರದ ಪ್ರದರ್ಶನ (ಹೇಸುಂತ. ೩೩೩); ನಿಸ್ಸಂಶಯವಾದ ಜ್ಞಾನ, ಸ್ಥೈರ್ಯ, ಭಗವಂತನು ರಕ್ಷಿಸುವನೆಂಬ ಮಹಾವಿಶ್ವಾಸ – ಇವೇ ಮೊದಲಾದ ಯೋಗ್ಯತೆಗಳು ಬೇಕು (ಭಾರದ. ೨೬೪). ೨. ಸಂದೇಹವಿಲ್ಲದ ವ್ಯಕ್ತಿ; ನಿಸ್ಸಂದೇಹಿ: ಸಮಸ್ತವಸ್ತುಸ್ಥಿತಿಯಂ ಬೆಸಗೊಂಡು ನಿಸ್ಸಂಶಯನಾಗಿ ಸಮವಸರಣಮಂಡಳದಿಂ ಪೊಜಮಟ್ಟು (ಚಾವುಂಪು. ೪೮). [ಸಂ.]

ನಿಸ್ಸಂಶಯಂ (ಅ). ಸಂದೇಹವಿಲ್ಲದಂತೆ; ಅನುಮಾನವಿಲ್ಲದ ಹಾಗೆ : ಅಪ್ರತಿಹತನಿಜಾಜ್ಞಾರೂಢ ತ್ರೈಲೋಕ್ಯಶೇಖರಂ ತನಗೆ ನಿಸ್ಸಂಶಯಮಾಗಿಯುಂ[ಮು]ವನಪ್ರತಿಕೂಲ ಪ್ರಿಯಹಿತವಾದಿಯಪ್ಪುದಜಿನಂತೆಗೆಯ್ವೆನೆಂಬುದುಂ (ಶಾಂತಿಪು. ೧೦-೧೨೩ ಪ). [ಸಂ.]

ನಿಸ್ಸಂಸಾರ (ನಾ). ಸಂಸಾರಕ್ಕೆ ಅಂಟಿಕೊಳ್ಳದಿರುವಿಕೆ; ವೈರಾಗ್ಯ : ದ್ವೈತವ ಹೇಳುವ ಹಿರಿಯರೆಲ್ಲರು ದ್ವೈತಕ್ಕೊಳಗಾದರು ನಿಸ್ಸಂಸಾರವ ಹೇಳುವ ಹಿರಿಯರೆಲ್ಲರೂ ಸಂಸಾರದ ಸಾರವ ಚಪ್ಪರಿದು ಕೆಟ್ಟರು (ವೀಳಪಾ. ೧೪-೫೧). [ಸಂ.]

ನಿಸ್ಸತ್ವ (ಗು). ೧. ಸತ್ವವಿಲ್ಲದ ; ಹುರುಳಿಲ್ಲದ : ಮುಂಜಾವಿನಿಂದ ಸಂಜೆಯವರೆಗೆ ಯಾಂತ್ರಿಕಪುರುಷರಂತೆ ಕಾಗದಗಳನ್ನು ಗೀಚಿ ಹೋಗುವ ನಿಸ್ಸತ್ವ ಜೀವಿಗಳೆಂದೆಣಿಸಿದವರಲ್ಲಿ ಮಾನವತೆಯೂ ಇದೆ (ಹೇಮಂತ. ೧೮೦). (ನಾ). ೨. ಸತ್ವವಿಲ್ಲದಿರುವಿಕೆ ; ಅಶಕ್ತಿ ; ದುರ್ಬಲತೆ : ದ್ರಾಕ್ಷಿಹಣ್ಣು, ಯಷ್ಟಿಮಧುಕ . . . ಕಷಾಯ ಕಾಯಿಸಿ ಸಕ್ಕರೆ ಮತ್ತು ಜೇನುತುಪ್ಪ ಬೆರಸಿ ಕೊಡಲು ವಾತಪಿತ್ತಜ್ವರ, ನಿಸ್ಸತ್ವ, ವಾಂತಿ . . . ಕಾಮಾಲೆ ಇವಿಷ್ಟು ರೋಗಗಳೂ ಪರಿಹಾರವಾಗುವುವು (ಸಕವೈ. ೯೪). ೩. ಸತ್ವವಿಲ್ಲದವನು ; ಶಕ್ತಿ ಇಲ್ಲದವನು ; ನಿರ್ಬಲ : ನಿಸ್ಸಾಣಧ್ವನಿ ತಂಬಟಸ್ಫುಟ ಧಡಂ ಧಂ ನಾದ ಭೀತರ್ಪ್ಪಲರ್ನಿಸ್ಸತ್ವರ್ವಿಸುಟೋಡಿ ನಾಡ ನಗರೀ ಭಂಡಾರಮಂ ಪೆಂಡಿರಂ (ಎಕ. VIII, ಸಾಗರ. ೧೫–೨೬ ; 1218); ನಾವು ವಾನರರಡವಿಯಲಿ ಫಲಜೀವಿಗಳು ನಿಸ್ಸತ್ವರಿಲ್ಲಿಯ ಠಾವ ಬಿಡಲನ್ಯತ್ರ ಗಮನತ್ರಾಣವಿಲ್ಲೆಮಗೆ (ಕುಪ್ಯಾಅ. ೧೦–೨೩). ೪. ಸತ್ವವಿಲ್ಲದುದು ; ಸಾರವಿಲ್ಲದುದು ; ಹುರುಳಿಲ್ಲದುದು. [ಸಂ.]

ನಿಸ್ಸತ್ವಗೊಳಿಸು (ಕ್ರಿ). ಶಕ್ತಿಯಿಲ್ಲದಂತೆ ಮಾಡು ; ನಿರ್ಬಲಗೊಳಿಸು : ಆಗಾಗ್ಗೆ ಹೀರುವ ಮೊದಲು ಕೊಳ್ಳೆಯನ್ನು ನಿಸ್ಸತ್ವಗೊಳಿಸಿ (Paralyse) ಜೀರ್ಣಿಸುವ ದ್ರವವನ್ನು ಕೊಳ್ಳೆಯ ಶರೀರದೊಳಕ್ಕೆ ಪಂಪು ಮಾಡುತ್ತದೆ (ಕೀಟಬೆ. ೮೩).

[ನಿಸ್ಸತ್ವ + ಕೊಳ್$_1$ + –ಇಸು$_3$]

ನಿಸ್ಸಪತ್ನ (ಗು). ೧. ಶತ್ರುವಿಲ್ಲದ. (ನಾ). ೨. ಶತ್ರುಗಳಿಲ್ಲದಿರುವಿಕೆ : ನಿರ್ಭಯದ ನಿಗುರಿಸಿದ ಹರುಷದ ನಿಸ್ಸಪತ್ನದಿನಸುರಕುಲವಿದ್ದುದು ಸುನಿದ್ರಾಭರದ ಭಾರದಲಿ (ತೊರರಾ. ೬–೩೭–೧). ೩. ಶತ್ರುಗಳಿಲ್ಲದವನು ; ಹಗೆಯಿಲ್ಲದವನು : ನಿಸ್ಸಪತ್ನನಾಗಿ ಈ ಭೂಮಿಯನ್ನೆಲ್ಲ ಗೆದ್ದು ಆಳುವಂತೆ . . . ಕೀರ್ತಿಯನ್ನು ಸಂಪಾದಿಸಬೇಕು (ಮಹಾಣ. ೯೨). [ಸಂ.]

ನಿಸ್ಸಮ (ಗು). ಅಪ್ರತಿಮವಾದ ; ಅಸಮಾನವಾದ : ಇರ್ದಂ ಕೆಲದೊಳ್ ನಿಜಾನುಜರಿರಲ್ ಸದ್ವಾದ್ಯ ಸದ್ಗೇಯದೊಂದೊದವಿಂ ನಿಸ್ಸಮವೈಭವಂ ಕುರುಕುಳಕ್ಷ್ಮಾಪಾಳನೀತಂ (ನೇಮಿಪು. ೯–೯೩). [ಸಂ.]

ನಿಸ್ಸರಡೆ (ನಾ). [ಸಂಗೀತ] ಒಂದು ಬಗೆಯ ಸ್ವರವಿನ್ಯಾಸ (?) : ಗಾಂಧರ್ವಸರ್ವಜ್ಞನೆಂಬ ದಿವಿಜನಾಯಕಗಾಯಕಂ . . . ಗಮಕಂ ಗಾರವಂಬಡೆಯೆ ಗಹಗಹಿಕೆ ಗೊಂಡಂ ಗೊಂಡಿ ಚಡಂ ಬಾಹಟಂ ಲಾಲಂಗಿ ತನ್ನೆವಣೆ ನಿಸ್ಸರಡೆ ರಂಗರಕ್ತಿ ಬೇಗವಣಿತು ತರಹರಂ ಸುಠಿವಟ್ಟಜಿ ದಾಳವಾಳಂ ಪದಿರ್ಪೊಜೆ ಕೊಂಕು ಕಮ್ಮಣಿ ಪೆಸರಂ ಭೆಡಂಗುವಡೆಯೆ ಪಾಡುತ್ತಿರೆಯುಂ (ಶಾಂತೀಶ್ವ. ೧೬–೬೭ ಪ). 'ಸರಳೆ' ಪರಾ. [?]

ನಿಸ್ಸರಣ (ನಾ). ೧. ನಿರ್ಗಮನ ; ಹೊರಗೆ ಹೋಗುವಿಕೆ. ೨. ತಲೆಬಾಗಿಲ ಮುಂಭಾಗ ; ಅಂಗಳ : "ಪ್ರತೋಳೀಮುಖ ನಿಸ್ಸರಣಂ" (ವಸ್ತುಕೋ. ೪೬–೭) ; "ಮುಖಂ, ನಿಸ್ಸರಣಂ—೨ ಮನೇ ತಲಬಾಗಿಲ ಮುಂದೇ ಇರುವ ಬೈಲು, ಅಂಗಳ" (ಸಿದ್ಧಾಂತಿ. ೧೦೪). [ಸಂ.]

ನಿಸ್ಸಹ (ಗು). ೧. ಸಹಿಸಲಾರದ ; ಅಸಹನೀಯವಾದ ; ತಡೆಯಲಾಗದ : ಸಮರಭರನಿರ್ಭರಭೀಮಸೇನಘನಗದಾಪ್ರಹರಣನಿಸ್ಸಹಮದವದನೇಕಮತ್ತಮಾತಂಗಪದನಖಖರ್ವಿತೋರ್ವೀತಳಮುಂ (ಪಂಪಭಾ. ೧೩–೪೧ ಪ). (ನಾ). ೨. ಸಹಿಸಲಾರದವನು ; ಎದುರಿಸಲಾರದವನು. [ಸಂ.]

ನಿಸ್ಸಹಣ 'ನಿಸ್ಸಾಳ' ನೋ.

ನಿಸ್ಸಹಾಯ (ಗು). ೧. ನೆರವಿಲ್ಲದ; ಅಸಹಾಯಕವಾದ : ದಾರುಣಯಾತನೆಯ ಆ ನಿಸ್ಸಹಾಯ ಚೀತ್ಕಾರವನ್ನು ಕೇಳಿ ಶೀನಪ್ಪನ ಹೃದಯವನ್ನು ಹಿಂಡಿದಂತಾಯಿತು (ಅನಾಥ. ೧೨). ೨. ಇತರರ ನೆರವನ್ನು ಅಪೇಕ್ಷಿಸದ,–ನೆರವಿನ ಅಗತ್ಯವಿಲ್ಲದ: ಸಂಕ್ರಂದನ ನಂದನನ ನಿರರ್ಗಳ ನಿಸ್ಸಹಾಯಪರಾಕ್ರಮೋಕ್ತಿಗೇಳ್ದು ನೆರೆದ ಗಣಸಂದೋಹಮುಮಂದಾಶ್ಚರ್ಯಮಂ ತಾಳ್ದು ನಲವೆರ್ಚಿ ಪೊಗಳುತ್ತಿರೆ (ಶಬಶಂ. ೪–೬೫ ಪ). (ನಾ). ೩. ಸಹಾಯವಿಲ್ಲದ ವ್ಯಕ್ತಿ ; ಅಸಹಾಯಕ : ತಾಯಿ ಮಗಳು ಇಬ್ಬರೂ ನಿಸ್ಸಹಾಯಕರಾಗಿ ಮೌನ ತಳೆದರು (ಮೂರುದಾ. ೧೩೦). ೪. ನೆರವಿನ ಅಗತ್ಯವಿಲ್ಲದವನು ; ಅಸಹಾಯಶೂರ ; ಏಕಾಂಗವೀರ : ನಿಶ್ಶಂಕನುಂ ನಿಸ್ಸಹಾಯನುಮಾಗಿ ನುಡಿದಮೋಘಜಿಹ್ವನ ಸ್ಥಿರತ್ವಕ್ಕೆ ಮೆಚ್ಚಿ (ಶಾಂತಿಪು. ೬–೨೫ ಪ) ; ಅನ್ನಿಸ್ಸಹಾಯನೊಳೆನೆನಗಿನ್ನೇನೆಂದಂದು ನಂದನಾನಂದದಿಂ . . . ತುಱುಪಟ್ಟಿಯಲ್ಲಿ ಬಂದೊಸೆದಿರ್ದೆಂ (ನೇಮಿಪು. ೬–೧೨೩). [ಸಂ.]

ನಿಸ್ಸಹಾಯಕ (ಗು). ೧. = ನಿಸ್ಸಹಾಯ ೧ : ಜೀವನವೆಲ್ಲ ಪೂರ್ತಿಯಾಗಿ ಅದೇ ಒಂಟಿತನದಲ್ಲಿ, ಅದೇ ನಿಸ್ಸಹಾಯಕ ನಿರಾನಂದಸ್ಥಿತಿಯಲ್ಲೇ ಮುಂದುವರಿಯಬೇಕಾಗುವುದೆಂದು ಭಾವಿಸಿದೆ (ಕುಟುಂಸೌ. ೩). (ನಾ). ೨. = ನಿಸ್ಸಹಾಯ ೩ : ಹೊಸದಾಗಿ ಕಾಂಗ್ರೆಸ್ಸಿಗೆ ಸೇರಿದ್ದ ನಿಷ್ಠಾವಂತಜನರೂ ಸಹ ರಂಗನಾಥಮಿತ್ರಮಂಡಳಿಯವರ ಉಪಟಳವನ್ನು ತಡೆಯಲಾರದೆ ನಿಸ್ಸಹಾಯಕರಾಗಿ ಸುಮ್ಮನಿದ್ದರು (ಪಂಜಪಂ. ೧೮೦). [ಸಂ.]

ನಿಸ್ಸಳ 'ನಿಸ್ಸಾಳ' ನೋ.

ನಿಸ್ಸಾಣ 'ನಿಸ್ಸಾಳ' ನೋ.

ನಿಸ್ಸಾಣಧ್ವನಿ 'ನಿಸ್ಸಾಳಧ್ವನಿ' ನೋ.

ನಿಸ್ಸಾರ (ಗು). ೧. ಸಾರವಿಲ್ಲದ ; ಸತ್ವವಿಲ್ಲದ ; ನೀರಸವಾದ : 'ನಿಸ್ಸಾರಹೃದಯ' ಪರಾ. (ನಾ). ೨. ಸಾರವಿಲ್ಲದುದು ; ಸತ್ವವಿಲ್ಲದುದು ; ನೀರಸವಾದುದು : ಮಗಳಲ್ಲಿಗಟ್ಟಿದಳಿಟಾಕೆಯ ನಿಸ್ಸಾರಮಪ್ಪ ವಸ್ತುವನಾಗಳ್ (ನೇಮಿಪು. ೪–೬೧) ; ಆ ಪ್ರಸಾದಕ್ಕೆ ಶರಣೆಂದೆನಯ್ಯಾ ಅದು ಸಾರವೂ ಅಲ್ಲ ನಿಸ್ಸಾರವೂ ಅಲ್ಲಾ ಆ ಪ್ರಸಾದದಲ್ಲಿ ನಾನೇ ತದ್ಗತನಾದೆ ಕಾಣಾ (ಬಸವ. ೯೪೩); ಸರಸಿರುಹವದನೆಯರಂಗಕಳೆಗಳು ಶರಣರಿಗೆ ನಿಸ್ಸಾರವಲ್ಲದೆ ಸಾರತರವಹುದೆ (ಬಸಪು. ೪೦–೭೯). ೩. = ನಿಸ್ಸಾರರಸ: ಕಾರಣಾಂತರ್ಯಾಮಿ ಸ್ಥೂಲವತಾರವ್ಯಾಪ್ತಾಂಶಾದಿರೂಪಕ ಸಾರಶುಭಪ್ರವಿವಿಕ್ತಾನಂದ ಸ್ಥೂಲ ನಿಸ್ಸಾರ ಆರು ರಸಗಳ ನರ್ಪಿಸು (ಹಸಾರ. ೧೩–೨೭). [ಸಂ.]

ನಿಸ್ಸಾರತೆ (ನಾ). ಸಾರವಿಲ್ಲದಿರುವಿಕೆ ; ನೀರಸತೆ : ನಾವು . . . ನಮ್ಮ ಮಕ್ಕಳು, ಬೇಡನ್ನಿನ ಜೀವನದ ನಿಸ್ಸಾರತೆ–ಇವನ್ನು ಕುರಿತು ಆಡುತ್ತಿದ್ದೆವು (ಕುಟುಂಸೌ. ೧೪೪). [ಸಂ. ನಿಸ್ಸಾರತಾ]

ನಿಸ್ಸಾರರಸ (ನಾ). [ದ್ವೈತ] ದೈವಿಕವಾದ ಆರು ರಸಗಳಲ್ಲಿ ಒಂದು ; ℙ ೧. ಸಾರರಸ = ಸಾತ್ವಿಕ ಪದಾರ್ಥಗಳು. ಇವುಗಳನ್ನು ತ್ರಿಗುಣರೂಪ ಕಾರಣವಾದ ಭಗವದ್ರೂಪಕ್ಕೆ ಅರ್ಪಿಸಬೇಕು. ೨. ಶುಭರಸ = ಮಂಗಳಕರವಾದ ಪದಾರ್ಥಗಳು. ಇವುಗಳನ್ನು ಅಂತರ್ಯಾಮಿಯಾದ ಭಗವದ್ರೂಪಕ್ಕೆ ಅರ್ಪಿಸಬೇಕು. ೩. ಪ್ರವಿವಿಕ್ತರಸ = ಏಕಾಂತ ಸ್ಥಳ ; ಪುಣ್ಯಕರವಾದ ತೀರ್ಥಕ್ಷೇತ್ರ. ಇದನ್ನು ವಿರಾಡ್ರೂಪನಾದ ಪರಮಾತ್ಮನಿಗೆ ಅರ್ಪಿಸಬೇಕು. ೪. ಆನಂದರಸ = ನಾವು ಮಾಡುವ ಊಟ, ನಿದ್ರೆ ಮೊದಲಾದುವುಗಳಿಂದ ಉಂಟಾಗುವ ಆನಂದ. ಇದನ್ನು ರಾಮಕೃಷ್ಣಾದ್ಯವತಾರರೂಪನಾದ ಭಗವಂತನಿಗೆ ಅರ್ಪಣೆಮಾಡಬೇಕು. ೫. ಸ್ಥೂಲರಸ = ನಮ್ಮ ಸ್ಥೂಲದೃಷ್ಟಿಗೆ ಯಾವುದು ಸಾರವೆಂದು ಕಾಣುವುದೋ ಆ ಜಲ. ಇದನ್ನು

ವ್ಯಾಪ್ತರೂಪನಾದ ಪರಮಾತ್ಮನಿಗೆ ಅರ್ಪಿಸಬೇಕು. ೬. ನಿಸ್ಸಾರ ರಸ = ಹುಲ್ಲು, ಕಡ್ಡಿ ಮೊದಲಾದುವು. ಇದನ್ನು ಅಂಶ (ಪಶು, ಪಕ್ಷಿ, ಮೃಗಾದಿ)ರೂಪನಾದ ಭಗವಂತನಿಗೆ ಅರ್ಪಿಸ ಬೇಕು. ಹೀಗೆ ಷಡ್ರೂಪಿಯಾದ ಪರಮಾತ್ಮನಿಗೆ ಈ ಷಡ್ರಸ ಗಳನ್ನು ಅರ್ಪಿಸಿ ಕೃತಾರ್ಥನಾಗಬೇಕೆಂದು 'ಹರಿಕಥಾಮೃತ ಸಾರ'ದ ಟೀಕೆಯಲ್ಲಿ ವಿವರಿಸಲಾಗಿದೆ: ಭಗವದ್ರೂಪಗಳಲ್ಲಿ . . .ಆರು ವಿಧಗಳುಂಟು. ಇದರಂತೆ ರಸಗಳಲ್ಲಿಯೂ ಸಾರರಸ, ಶುಭ್ರರಸ, ಪ್ರವಿಕ್ತ ರಸ, ಆನಂದರಸ, ಸ್ಥೂಲರಸ, ನಿಸ್ಸಾರರಸಗಳೆಂದು ಆರು ವಿಧಗಳುಂಟು (ಹರಿಸಾರ. ೧೩-೩೭ ಟೀಕು). [ನಿಸ್ಸಾರ+ರಸ]

ನಿಸ್ಸಾರಹೃದಯ (ನಾ). ೧. ಸಾರವಿಲ್ಲದ ಮನಸ್ಸು ; ನೀರಸವಾದ ಅಂತರಂಗ. ೨. ಸಾರವಿಲ್ಲದ ಹೃದಯವುಳ್ಳವನು ; ಭಾವಾನುಕಂಪಗಳಿಲ್ಲದವನು ; ಕ್ರೂರಿ : ನಿಸ್ಸಾರಹೃದಯನು ಕಂಕ ನೀ ಜುಷ್ಟಾತ್ಮ ಹೋಗು (ಕುಮ್ಯಾವಿ. ೯-೧೬) ; ಮಾರಿಮುಖದವ ಕಠಿನ ಮನ ನಿಸ್ಸಾರಹೃದಯನು ಭೀಮನವನೊಳು. ಹೋರಿದನರೇನಹರು (ಕುಮ್ಯಾದ್ರೋ. ೧೩-೪೬). [ನಿಸ್ಸಾರ+ಹೃದಯ]

ನಿಸ್ಸಾರಿ (ನಾ). ಒಂದು ಬಗೆಯ ವೀಣೆ; ಸಾರಿ ಅಥವಾ ಮೆಟ್ಟಲುಗಳು ಇಲ್ಲದ ವೀಣೆ : ಇನೇ ಶತಮಾನದ ಪೂರ್ವಾರ್ಧದವರೆಗೂ ವೀಣೆಗೆ ಮೆಟ್ಟಲುಗಳಿದ್ದುದು ಕಾಣಬರುವುದಿಲ್ಲ. ಈ ರೀತಿಯ ಮೆಟ್ಟಲು (Fret) ಇಲ್ಲದ ವೀಣೆಗೆ 'ನಿಸ್ಸಾರಿ' ವೀಣೆಯೆಂದು ಹೆಸರು (ಸಂಗೀಚಂ. ೩೧೧).

[?]

ನಿಸ್ಸಾಹಣ 'ನಿಸ್ಸಾಳ' ನೋ.

ನಿಸ್ಸಾಹಳ 'ನಿಸ್ಸಾಳ' ನೋ.

ನಿಸ್ಸಾಹಳಧ್ವನಿ 'ನಿಸ್ಸಾಳಧ್ವನಿ' ನೋ.

ನಿಸ್ಸಾಳ, ನಿಸ್ಸಹಣ, ನಿಸ್ಸಳ, ನಿಸ್ಸಾಣ, ನಿಸ್ಸಾಹಣ, ನಿಸ್ಸಾಹಳ, ನಿಸ್ಸಾಳಯ, ನಿಸ್ಸಾಳಿ (ನಾ). ತಾಮ್ರದಿಂದ ರಚಿತವಾಗಿ ತಳ ಭಾಗ ಕಿರಿದಾಗಿ, ಮುಖಭಾಗ ವಿಸ್ತಾರವಾಗಿದ್ದು ಮಹಾಧ್ವನಿ ಯನ್ನುಂಟುಮಾಡುವ ಒಂದು ಬಗೆಯ ಚರ್ಮವಾದ್ಯ,—ರಣವಾದ್ಯ : "ಯಶಃ, ಪಟಹಃ, ಢಕ್ಕಾ—ಈ ೩ ನಿಸ್ಸಾಳದ ಪೆಸರು" (ನಾಚರಾ. ೯೬); ಪೊಯ್ದ ನಿಸ್ಸಾಳ ತಮ್ಮಟದ ಭೇರಿಗಳಲ್ಲಿ ಬಯ್ದ ಬಿರುದಿನ ಕಹಳೆ ತಿತ್ತಿರಿಗಳಲ್ಲಲ್ಲಿ (ಇಹರ. ಪೀ. ೩೭-೨೧) ; ಮೊಳಗಿದವು ನಿಸ್ಸಾಳ ಕೋಳಾಹಳಿಸಿದವು ಕಹಳೆಗಳು (ಕುಮ್ಯಾದ್ರೋ. ೯-೨೭) ; ಡೋಳು ನಿಸ್ಸಾಳಗಳಬ್ಬರ ತುಂಬಿತಾಕಾಶಮಂಡಲವ (ಕಂಪವಿ. ೧೪-೨) ; ಭೇರಿ ನಿಸ್ಸಾಳಗಳು ಭರದಿಂದ ಮೊಳಗಿದವು (ರಾಜಸೂ. ೨). **ನಿಸ್ಸಹಣ :** ಜಟುಲತರ ನಿಸ್ಸಹಣ ಭೇರೀ ಪಟಹದಿಂದಿಮಭೋಷ . . .ಅಳ್ಳಿಜಯುಲು ಜಗತ್ರಯವ (ಉತ್ತರಾ. ೧೪-೩೧). **ನಿಸ್ಸಳ :** ಪಟಹ ನಿಸ್ಸಳ ಭೇರಿ ಪಣ್ಣಿ ಬಜಿಸಿದಿಲಿನಂತಾಯ್ತು (ಕೌತಂಭಾ. ೧೯-೧೧) ; ಮೊಳಗಿದವು ಭೇರಿಗಳು ಘನನಿಸ್ಸಳದೊಡನೆ ಕೋಸಲನೃಪಾಲನ ನಿಳಯದಲಿ (ನಿಭಾಗ. ೧೦-೬೪-೫೩). **ನಿಸ್ಸಾಣ :** ಮಾಜಾಂತ್ಯ ಸಾಮಂತರಂ ತುರಗಂ ಬೆಳ್ಕೊಡೆಯಂಬಳಂ ಚಮರಜಂ ನಿಸ್ಸಾಣಮಂ ಪ್ರಾಣಮಂ . . . ಕೊಂದನಶ್ರಮದೆ ಕೇಳ್ ಶ್ರೀಪುಲ್ಲ ಸಂಗ್ರಾಮದೊಳ್ (ವಿಕ. VI, ಕಡೂರು. ೩೫-೪೩ ; 1156), ವಾಜಿಪದ ಪ್ರೋದ್ಯತ್ಖಟತ್ಕಾರದಿನನುಗತನಿಸ್ಸಾಣಭಾಂಕಾರದಿಂ ವಿಸ್ಪಷ್ಟಮಂ ಶಬ್ದಾತ್ಮಕಂ ಮಾಡಿದುದುಭಯಮಹೀಭೃಚ್ಚಮೂಚಕ್ರವಾಳಂ (ಚಂದ್ರಪ್ರ. ೧೦-೬೭); ಪಟಹ ನಿಸ್ಸಾಣ ತಮ್ಮಟ ಭೇರಿಗಳ ಸಮುತ್ಕಟನಾದಂ . . . ಪಟುಭಟರ ಬೊಬ್ಬೆಯಾರ್ಭಟಿಗಳೊಂದಾಗಿ ಸಂಘಟಿಸಿತೀ ಬ್ರಹ್ಮಾಂಡಘಟನಿಂದೊಡೆಯಂದಿರದೆನೆ (ಜೈಮಿಭಾ. ೪-೧೪). **ನಿಸ್ಸಾಹಣ :** ಮನ್ಮಥಂ ಸೇನೆಗಂ ಕೈವೀಸೆ ದನಿಮಾಡಿದವು ತುಂಬಿಯುಂಬು ನಿಸ್ಸಾಹಣಂ ವಿನುತ ಕೋಕಿಲರಾವವೆಂಬ ಹೆಗ್ಗಾಳೆಗಳು ಬಿರಿದೆತ್ತಿ ಕರೆದವಲ್ಲಿ (ವೀತ್ಕೃಪು. ೨-೪-೧೭). **ನಿಸ್ಸಾಹಳ :** 'ನಿಸ್ಸಾಹಳ ಧ್ವನಿ' ಪರಾ. **ನಿಸ್ಸಾಳಯ :** ಸುಚಾಯಲಂಬರುಣಾಂಬುಗಳ ನದಿ ಹೊಜಮಜಾಯೆ ಬೊರೆಗಿಕ್ಕಿದರು ಬೊಬ್ಬಿಜಾದಿಜಾವ ದನಿ ಪಟ್ಟಸಿತು ನಿಸ್ಸಾಳಯದ[ಪಾತಾಂ.ಹತಿ] ದನಿಯ (ಕುಮ್ಯಾಅ. ೧೯-೧೨). **ನಿಸ್ಸಾಳಿ :** ಹೀಗಾಗಲು ಕಾರಣವನ್ನೂ ಅವನು ಯೋಚಿಸುತ್ತಿದ್ದ. ಕಾರಣ ಸುಲಭವಾಗಿಯೇ ಕವಿಯಲ್ಲಿ ನಿಸ್ಸಾಳಯಂತೆ ಮೊಳಗುತ್ತಿತ್ತು (ಭೀಮಕಾ.೧೬೦). [<ಪ್ರಾ. ಣಿಸ್ಸಾಣ./ಕಮಿ. ನಿಜಾಳ : ತೆಲು. ನಿಸ್ಸಾಣಿ, ನಿಸ್ಸಾನ, ನಿಸ್ಸಾಹಣ]

ನಿಸ್ಸಾಳ ಕೋಟಿ (ನಾ). ನಿಸ್ಸಾಳವಾದ್ಯಗಳ ಸಮೂಹ : ಪಿಡಿಲ ಕುಡುಹುಗಳಿಂದ ಕಮಲಜ ಹೊಡೆಯಲಬುಜಭವಾಂಡಭೇರಿಯ ಕಡುದನಿ ಗಳಿನಲೊದಜಾದವು ನಿಸ್ಸಾಳಕೋಟಿಗಳು (ಕುಮ್ಯಾದ್ರೋ. ೧-೪೭) ; ಸೂಳ ವಿಸಿಪುವು ಲಗ್ಗೆಯಲಿ ನಿಸ್ಸಾಳಕೋಟಿಗಳದರ ರಭಸಕೆ ಕೇಳಲಾರದೆ ಕಿವುಡು ಗೊಂಡುವು ಲೋಕ ಪದಿನಾಲ್ಕು (ಸುಧಾಮ. ೩-೧). [ನಿಸ್ಸಾಳ+ಕೋಟಿ$_1$]

ನಿಸ್ಸಾಳತತಿ (ನಾ). = ನಿಸ್ಸಾಳಕೋಟಿ : ಮನಸಗಿದುದು ಬಹು ವಾದ್ಯರವ ನಿಪ್ಪಸರದಲಿ ನಿಸ್ಸಾಳತತಿ ಗರ್ಜಿಸಿದವಾವರ್ಜಿಸುವವೋಲ್ ಘನಯಂತ್ರಭೇದಿಗಳ (ಕುಮ್ಯಾಅ. ೧೪-೪) ; ಸೂಳವಿಸಿದವು ಲಗ್ಗೆಯಲಿ ನಿಸ್ಸಾಳತತಿ ಸಿದಿಲೆಜಗಿತೆನಲು (ಕುಮ್ಯಾದ್ರೋ. ೪-೫೨). [ನಿಸ್ಸಾಳ+ತತಿ$_2$]

ನಿಸ್ಸಾಳಧ್ವನಿ, ನಿಸ್ಸಾಣಧ್ವನಿ, ನಿಸ್ಸಾಹಳ ಧ್ವನಿ (ನಾ). ನಿಸ್ಸಾಳದ ಶಬ್ದ : ಸೀಗುರಿ ಚಾಮರಂ ರಾಗದಿಂ ಕುಣಿಯೆ ನಿಸ್ಸಾಳಧ್ವನಿ ದಿಕ್ಕಟಕ್ಕೆ ಧೀಂಕಿಜೆ ಭೇರೀರವಂ ಬೊಮ್ಮಾಂಡವನಡರೆ (ಸಂಬಿರ. ೧೪-೨೪). **ನಿಸ್ಸಾಣಧ್ವನಿ :** ನಿಸ್ಸಾಣಧ್ವನಿ ತಂಬಟಸ್ಫುಟ ಧಡಂ ಧಂ ನಾದ ಭೀತಪ್ಪರ್ಜನ್ಯಸ್ವತ್ವರ್ವಿಸುಟೋಡಿ ನಾಡ ನಗರೀಭಂಡಾರಮಂ ಪೆಂಡಿರಂ (ವಿಕ. VIII, ಸಾಗರ. ೧೫-೨೭ ; 1218). **ನಿಸ್ಸಾಹಳಧ್ವನಿ :** ತುಂಬಿಗಳ ದನಿಯೆಂಬ ನಿಸ್ಸಾಹಳಧ್ವನಿಕದಂಬ ದಾಂಧಳ ಧಳಂಧಳವೆಂಬ ರವದಲ್ಲಿ ತುಂಬಲಾಹಾಹ ಕೇಳ್ದಲ್ಲಿ ನೆರೆದುದು ಮದನಭೂಮಿಪನ ಸೇನೆಯಾಗ (ವೀತ್ಕೃಪು. ೨-೪-೧೨). [ನಿಸ್ಸಾಳ+ಧ್ವನಿ]

ನಿಸ್ಸಾಳನಿಸ್ವನ (ನಾ). = ನಿಸ್ಸಾಳ ಧ್ವನಿ : ನಿಸ್ಸಾಳನಿಸ್ವನದ ಘುಳು ಘುಳಿಪ ಬೊಗ್ಗುಗಳ ರಿಪುಗಳ ಮುಳಿಯಿಸುವ ಕಹಳೆಗಳ ತುರಗಾವಳಿಯ ಗಜಜಬ್ಬರಣೆ ಮಿಗೆ ಕೈಕೊಂಡರತಿಬಳರು (ಕುಮ್ಯಾಭೀ. ೪-೫೮).

[ನಿಸ್ಸಾಳ+ನಿಸ್ವನ]

ನಿಸ್ಸಾಳಬಡಿಕ (ನಾ). ನಿಸ್ಸಾಳವನ್ನು ಬಡಿಯುವವನು,—ಬಾರಿಸುವವನು : ವಂದಿಗಳ ನಿಸ್ಸಾಳಬಡಿಕರ ಮುಂದೆ ಹಡಪಿಗ ಚಾಹಿ ಸೂತರ ಸಂದಣಿಗಳೌಷಧಿಳ ಹಯಗಜಸಂವಿಧಾಯಕರು ನಿಂದುದು(ಕುಮ್ಯಾಗ.೩-೨).

[ನಿಸ್ಸಾಳ+ಬಡಿಕ$_1$]

ನಿಸ್ಸಾಳಯ 'ನಿಸ್ಸಾಳ' ನೋ.

ನಿಸ್ಸಾಳರವ (ನಾ). = ನಿಸ್ಸಾಳಧ್ವನಿ : ಡಿಂಡಿಮರವಂಗಳಾನಕದ ರವಂ ಕರಡಿಗಳ ರವಂ ನಿಸ್ಸಾಳರವಂ ಭೇರೀರವಂ ಮೃದಂಗರವಂಗಳ್ (ಗಿಂಕ. ೩-೬೦). [ನಿಸ್ಸಾಳ+ರವ]

ನಿಸ್ಸಾಳಾರವ (ನಾ). = ನಿಸ್ಸಾಳಧ್ವನಿ : ದಾರುಕನು ನಿಜರಥವನೆಸಗಲುದಾರಸಾತ್ಯಕಿ . . . ನಿಸ್ಸಾಳಾರವದ ಘಟ್ಟನೆಯಲಿದಿರಾದನು ರಿಪು ವ್ರಜಕೆ (ಕುಮ್ಯಾದ್ರೋ. ೧೧-೪). [ನಿಸ್ಸಾಳ+ಆರವ]

ನಿಸ್ಸಾಳಿ 'ನಿಸ್ಸಾಳ' ನೋ.

ನಿಸ್ಸೀಮ (ಗು). ೧. ಎಲ್ಲೆಯಿಲ್ಲದ ; ಅಪರಿಮಿತವಾದ ; ಅನಂತವಾದ : ಭೂಮಿಪತಿ ಭುಲ್ಲವಿಸಿದನು ನಿಸ್ಸೀಮಸಂತೋಷದಲಿ (ಕುಮ್ಯಾಅ. ೧-೧೦) ; ಶ್ರೀಮದಮಲಗುಣನಿಧಿಗೆ ನಿತ್ಯನಿಗೆ ನಿಸ್ಸೀಮ

ಕೃಪಾವಾರಿಧಿಗೆ ರಾಮಣೀಯಕರಾಶಿಗೆ ಪಶ್ಚಿಮರಂಗಧಾಮನಿಗಾನೆಜಗುವೆನು (ಹದಿಬ. ೧-೧) ; ಪರಿವಾರದಾ ಸಂಸಾರಭಾರಬಂಧನವಿಹುದೆ ದುರ್ದಮ್ಯ, ನಿಸ್ಸೀಮ, ವಿಶ್ವಸಂಚರಶಕ್ತಿಯುಕ್ತ, ಕವಿವೈನತೇಯನ ಮಹಾಪಕ್ಷವಿಸ್ಫಾಲನೆಗೆ ? (ಶ್ರೀರಾಮಾ. ೧೨೬-೨೫) ; ರೋಮರಂಧ್ರಗಳರಳೆ ಶತಕೋಟಕಣ್ಣುಗಳು ಆ ಮಹಾರೂಪ ಕಂಡಾ ಕಣಿಯನುಸಿರುವೆನು ಸಾಮಗಾನದ ಸರಿಯ ನಿಸ್ಸೀಮಛಂದದೊಳು (ಗರಿ. ೧೧-೧೯). 'ನಿಸ್ಸೀಮಕಲೆ', 'ನಿಸ್ಸೀಮಚೆಲುವ' ಪರಾ. ೨. ಶೂರನಾದ ; ಪರಾಕ್ರಮಿಯಾದ : ಬಭ್ರುವಾಹನ ಸುವೇಗ ನಿಸ್ಸೀಮ ನೀಲಧ್ವಜ ಮರಾಳಧ್ವಜಾದಿಗಳ್ಪಡೆವೆರಸಿ ನಡೆದರೊಡನೆ (ಜೈಮಿಭಾ. ೨೭-೧). (ನಾ). ೩. ಎಲ್ಲೆಯಿಲ್ಲದುದು ; ಪರಿಮಿತಿಯಿಲ್ಲದುದು ; ಅನಂತವಾದುದು : ಸಹಜನಿರಾಭಾರಿಗಳ ಮೇಳದಿಂದ ನಿಸ್ಸೀಮದ ನಿಭ್ರಾಂತಿನ ಸಂಗದಲ್ಲಿ ನಿರಾಶಾಪದವೆ ಅನುಕೂಲ ನಿಶ್ಶಬ್ದವೆ ಅನುಭಾವ (ಅವಚಂ. ೮೪-೩೭೪) ; ನಿಸ್ಸೀಮ ನಿಸ್ಸೀಮ ಸೀಮದಲೆ ನಿಸ್ಸೀಮ ನಿಸ್ಸೀಮವೆಂದರೂ ಶೂನ್ಯವಲ್ಲ (ನನಲ್ಲಿ. ೧೩-೧). ೪. ಅತ್ಯಧಿಕನಾದವನು ; ಸೀಮಾತೀತನಾದವನು : ತನುಮನಧನವ ಮೀಱಿ ಮಾತಾಡಬಲ್ಲರೆ ಆತ ನಿಸ್ಸೀಮನು ಆತ ನಿಜೈಕ್ಯನು (ಬಸವ. ೨೧೬) ; ನೆರೆದ ನೆರವಿಯೆಲ್ಲಂ ಪರಿದು ಬಂದು ಸುತ್ತಿ ಮುತ್ತಿ ಬಂಡಿಯೊಳಿರ್ದ ನಿಸ್ಸೀಮನಂ ಕಂಡು . . . ಇದಾವ ಭಕ್ತಿಯ ಬೆಳೆಯೊ ಎಂದು ಕೊಂಡಾಡುತಿರೆ (ನಂಬಿರ. ೨-೩೧) ; ಪ್ರೇಮದಿಂ ಶ್ರೀಕುಡಿಯೊಳಿಹ ಕಲಿಕಾಮದೇವನು . . . ಭಕ್ತಿಯಲಿ ನಿಸ್ಸೀಮನಿಂತೆಂದ (ಬಸಪು. ೨೬-೫೬) ; ಸೀಮೆಯ ಮೀಱಿ ನಿಸ್ಸೀಮನಾದೆನು (ಸಿದ್ಧೇವ. ೧೨೭-೩೮೦). ೫. ಅತಿಶೂರ ; ಪರಾಕ್ರಮಿ : ಸಾಮದಲಿ ಸೊಗಸಿಲ್ಲ ನೀವ್ ನಿಸ್ಸೀಮರಾದೊಡೆ ಜೋಡಿಸುವುದುದ್ದಾಮಕುರುಭೂಮಿಯಲಿ ಕುಳವಱಿದವರ ಪತಿಕರಿಸಿ (ಕುವ್ಯಾಉ. ೧೧-೫). ೬. ಅತ್ಯಂತ ಸಮರ್ಥ ವ್ಯಕ್ತಿ : ವ್ಯಾಸನ ಸಾವಿತ್ರಿ, ದಮಯಂತಿ, ದ್ರೌಪದಿ . . . ಇವರೆಲ್ಲ ಪತಿಗಾಗಿ ಸರ್ವಸ್ವವನ್ನು ತ್ಯಾಗಮಾಡುವ, ದುರ್ಭರದೀಕ್ಷೆಯಲ್ಲಿ, ದಾರುಣವಾದ ಯಾತನೆಯನ್ನು ನುಂಗಿ ಜಯಿಸುವ ಧೀರಯಾತ್ರೆಯಲ್ಲಿ ನಿಸ್ಸೀಮರು (ಧರ್ಮಸಾ. ೭೮) ; ಇಲ್ಲದ ಕಿರುಕುಳ ಕೊಡೋದರಲ್ಲಿ ಖೈದಿಗಳು ನಿಸ್ಸೀಮರು (ವೀರಯೋ. ೩೫). ೭. ಎಲ್ಲಕ್ಕೂ ಆಚೆಗೆ ಇರುವವನು ; ಸರ್ವಾತೀತನಾದವನು ; ಪರಮಾತ್ಮ : ಹೊಲಬುದೋಱದಿಹ ನಿಸ್ಸೀಮನ ಹೊಲಬನಱಿದು ಕೂಡಿದಾತನೆ ಮೃಡನು (ದೇದಾವ. ೧೦-೧೬) ; ನಿರತಿಶಯ ನಿಸ್ಸೀಮ ನಿಗಮೇತರ ಗಿರೀಶ್ವರ ನಿಃಪಿತ ನಿರುತ್ತರ ನಿರಾಮಯ ನಿರ್ವಿಕಾರಾಕಾರ ಚಿತ್ತೈಸು (ಬಸಪು. ೬೧-೪೩) ; ನಿಸ್ಸೀಮಂಗೆ ನಿರ್ವಿಕಲ್ಪಿತಂಗೆ ಕಲ್ಪಿತ ಉಂಟೇ (ಸಿದ್ಧೇವ. ೧೬೭-೫೦೦) ; ನಿರುಪಮ ನಿರಾಳನು ನೋಡಾ ಲಿಂಗೈಕ್ಯನು ನಿಸ್ಸೀಮ ನಿರ್ಜಡನು ನೋಡಾ ಲಿಂಗೈಕ್ಯನು (ಅಖಂಡೇ. ೩೧೬-೫).

[ಸಂ.]

ನಿಸ್ಸೀಮಕಲೆ (ನಾ). ಅತ್ಯಂತ ಸಮರ್ಥವಾದ ಕಲೆ : ಜನಪದ ಕಾವ್ಯಕಲೆ . . . ವಸ್ತುವಿನ ಸಮಗ್ರಸೌಂದರ್ಯಕ್ಕಿಂತ, ವಿವರ ವಿವರವಾದ ಬಣ್ಣನೆಗಿಂತ ಆ ಕ್ಷಣದಲ್ಲಿ ಹೊಳೆದ ಅಂಶಸೌಂದರ್ಯವನ್ನು ಬಣ್ಣಿಸುವುದರಲ್ಲಿ ಇದು ನಿಸ್ಸೀಮಕಲೆ (ಸೌಂದಸ. ೨೬೫).

[ನಿಸ್ಸೀಮ+ಕಲೆ$_3$]

ನಿಸ್ಸೀಮಚೆಲುವ (ನಾ). ಅತಿಶಯವಾದ ಚೆಲುವನ್ನುಳ್ಳವನು ; ಅಪರಿಮಿತ ಸೌಂದರ್ಯವುಳ್ಳವನು : ಭವವಿಲ್ಲದ ಭಯವಿಲ್ಲದ ಚೆಲುವಂಗಾನೊಲಿದೆ ಕುಲಸೀಮೆಯಿಲ್ಲದ ನಿಸ್ಸೀಮಚೆಲುವಂಗಾನೊಲಿದೆ (ಮಹಾದೇ. ಬ. ೧೨೨-೨೮೩). [ನಿಸ್ಸೀಮ+ಚೆಲುವ$_1$ (<ಚೆಲ್ವ)]

ನಿಸ್ಸೀಮತನ (ನಾ). ಎಲ್ಲೆಯಿಲ್ಲದಿರುವಿಕೆ ; ಎಲ್ಲ ಸೀಮೆಗಳನ್ನೂ ಮೀರಿ ನಿಂತಿರುವ ಸ್ಥಿತಿ : ರೋಮರೋಮದೊಳಖಿಲಭುವನ ಸ್ತೋಮ ನಲಿದಾಡುವುದು ಗಡ ನಿಸ್ಸೀಮತನ ಗಡ ನಾವು ವೈರಿಗಳೆಂದು ಕೋಪಿಸುವ ಈ ಮರುಳುತನವೆತ್ತಲೀ ರಣತಾಮಸಿಕೆ ತಾನೆತ್ತಣದು (ಕುವ್ಯಾಭೀ. ೬-೪೦) ; ವಿಷಯವನ್ನು ನಿರ್ದಾಕ್ಷಿಣ್ಯವಾಗಿ ವಿಮರ್ಶಿಸಿ ನೋಡುವ, ಒಟ್ಟಿನಲ್ಲಿ ಸತ್ಯಾಂಶವನ್ನು ಹುಡುಕುವ ನಿಸ್ಸೀಮತನವೂ ಅವರಲ್ಲಿ ಬೆಳೆಯಬೇಕು (ಶಿಕ್ಷದ. ೩೮೭). [ನಿಸ್ಸೀಮ+ -ತನ]

ನಿಸ್ಸೀಮನಿರ್ವೇಗ (ನಾ). ಅಪರಿಮಿತವಾದ ವೈರಾಗ್ಯ : ಮಾನವರೆಮ್ಮಂದಿಗರಾತ್ಮಜನ್ಮವದೇನೆಂದು ಜ್ಯೋತ್ಸ್ನೆಯಿಂ ಲೋಚನೋತ್ಸವಮಂ ತಾಳ್ದದೆ ಬಾಟ್ಟಿ ಬಾಟಿ ಪಡೆಗುಂ ನಿಸ್ಸೀಮನಿರ್ವೇಗಮಂ (ಮಲ್ಲಿಪು. ೩-೧೦೬). [ನಿಸ್ಸೀಮ+ನಿರ್ವೇಗ]

ನಿಸ್ಸೀಮಭಕ್ತಿ (ನಾ). ಅತಿಶಯವಾದ ಭಕ್ತಿ ; ಅಪರಿಮಿತವಾದ ಭಕ್ತಿ : ನನ್ನ ಅಂತರ್ಲೋಕದಲ್ಲಿ ನನ್ನ ನವೋದಿತತಾರುಣ್ಯದ ನವೋನವಪ್ರೇಮ, ನಿಸ್ಸೀಮಭಕ್ತಿ, ಅಖಂಡವಿಶ್ವಾಸ ಇವುಗಳೊಂದಿಗೆ ಕುಳಿತಿದ್ದೇನೆ (ಇಪ್ಪಕ. ೨೧೧). [ನಿಸ್ಸೀಮ+ಭಕ್ತಿ]

ನಿಸ್ಸೀಮಶೋಕ (ನಾ). ೧. ಅಪರಿಮಿತವಾದ ಶೋಕ ; ವಿಪರೀತವಾದ ದುಃಖ. ೨. ಅತಿಯಾದ ಶೋಕವುಳ್ಳವನು ; ಅತ್ಯಂತ ದುಃಖಿಯಾದವನು : ಬಲದೇವಾಕೃತಿಯಂ ಸರಾಗನಮರಂ ನಿಷ್ಪ್ರಾಣಮಂ ವಿಕ್ರಿಯಾಬಲದಿಂ ನಿರ್ಮಿಸೆ ಕಂಡು ಲಕ್ಷ್ಮಣನದಂ ನಿಸ್ಸೀಮಶೋಕಂ ಭಯಾಕುಲಿತಂ . . . ಜೀವಂ ಪೋಗೆ ಬಿಟ್ಟಂ ಧರಾತಲದೊಳ್ (ಪಂರಾಮಾ. ೧೬-೪೯). [ನಿಸ್ಸೀಮ+ಶೋಕ]

ನಿಸ್ಸೀಮೆ (ನಾ). ಮೇರೆ ಇಲ್ಲದುದು ; ಎಲ್ಲೆಯನ್ನು ಮೀರಿದುದು ; ಸೀಮಾತೀತವಾದುದು : ಭಾವದಲ್ಲಿ ಭ್ರಮಿತರಾದವರ ಸೀಮೆಯೇನು ನಿಸ್ಸೀಮೆಯೇನು ವಚನದ ರಚನೆಯ ರಂಜನೆಯ ಲೀಲೆಯನಾಡುವರು ಗುಹೇಶ್ವರನಿಪ್ಪ ಗುಪ್ತವೆಂತೆಂದಱಿಯರು (ಅವಚಂ. ೧೦೯-೪೯೭) ; ಆಚಾರ ಅನಾಚಾರವಿಲ್ಲದಂದು ಸೀಮೆ ನಿಸ್ಸೀಮೆ ಇಲ್ಲದಂದು ಗಮನ ನಿರ್ಗಮನ ಇಲ್ಲದಂದು . . . ಇಹ ಪರ ಇಲ್ಲದಂದು ಪರಾಪರವಸ್ತು ನೀನೊಬ್ಬನೇ ಇದ್ದೆಯಯ್ಯಾ (ಸಿದ್ಧೇವ. ೭-೨೦).

[ಸಂ. ನಿಸ್ಸೀಮ]

ನಿಸ್ಸ್ಪೃಹ (ನಾ). ಆಸೆಯನ್ನು ಬಿಟ್ಟವನು ; ವಿರಕ್ತ ; ಸ್ವಾರ್ಥವಿಲ್ಲದವನು : ಯೋಗಸಿದ್ಧಿಯ ಬಯಸ ದಿವಿಜರ ಭೋಗವನು ತಾನೊಲ್ಲ ಸಕಲವದಾಗಿ ಕೆಡುವದಿದೆಂದು ನಿಸ್ಸ್ಪೃಹನಾಗಿ ನಿಮಿಷದಲಿ. . . ಸುಖೇಚ್ಛೆಯ ಯೋಗಿಯೆನಿಸುವನು (ಅಮೃತ. ೬-೯). [ಸಂ.]

ನಿಸ್ಸ್ವಾರ್ಥ (ಗು). ೧. ಸ್ವಾರ್ಥವಿಲ್ಲದ; ಪ್ರತಿಫಲಾಪೇಕ್ಷೆಯಿಲ್ಲದ: "ಸ್ವಾರ್ಥತೆಯ ಒಲವಿಲ್ಲದ; ನಿಷ್ಪಕ್ಷಪಾತವಾದ; ನಿಸ್ಸ್ವಾರ್ಥ; ಅಸ್ವಾರ್ಥ; ಅನಾಸಕ್ತ ; ನಿಷ್ಕಾಮ" (Disinterested. ಇಂಕನಿ). (ನಾ). ೨. ಸ್ವಾರ್ಥವಿಲ್ಲದಿರುವಿಕೆ ; ಸ್ವಪ್ರಯೋಜನಾಕಾಂಕ್ಷೆ ಇಲ್ಲದಿರುವಿಕೆ ; ನಿಷ್ಕಾಮತೆ. [ಸಂ.]

ನಿಹಂಚಿತ (ನಾ). [ನಾಟ್ಯ] ನೃತ್ಯದ ಒಂದು ಭಂಗಿ ; ℙ "ಭುಜವನ್ನು ಮೇಲಕ್ಕೆತ್ತಿ ಅದರ ಮೇಲೆ ತಲೆಯನ್ನಿರಿಸುವುದು. ವಿಲಾಸ, ಲಲಿತ, ಗರ್ವ, ಬಿಬ್ಬೋಕ, ಕಿಲಕಿಂಚಿತ, ಮೊಟ್ಟಾಯಿತ, ಕುಟ್ಟಮಿತ, ಮಾನ, ಸ್ತಂಭ, ಇವೇ ಮೊದಲಾದ ಪ್ರಣಯಚೇಷ್ಟೆಗಳನ್ನು ಸೂಚಿಸುವಾಗ" (ಲಾಸ್ಯರಂ. ೨೨೨ ಗದ್ಯಾನುವಾದ) : ಕೆಲದೊಳೊಂದಿನಿತು ಬಾಗಿದ ತಲೆಯಂಚಿತವೆಂಬ ನಾಮಮೆತ್ತಿದ ಭುಜದೊಳ್ ಸಲೆ ಕುಸಿದ ಕೊರಲುಮೊಪ್ಪುವ ತಲೆಯುದು ಪೆಸರಾಯ್ತು ಕೇಳ್ ನಿಹಂಚಿತಮೆಂದುಂ (ಲಾಸ್ಯರಂ. ೧-೮೩). [ಸಂ.]

ನಿಹಟದಂಶು (ನಾ). ಪ್ರಕಾಶಮಾನವಾದ ಕಾಂತಿ: ನಿಹಟದಂಶು ಜಾಳಜಟಿಳ ವಿವಿಧರತ್ನರಾಶಿಯಂ ದಿಶಾಮುಖಪ್ರಕಾಶಿಯಂ ಗಗನತಳ ಮನೆಯ್ದಿ ನೆಗೆವ ಶಿಖಿನಿಭಾಕಳಾಪಮಂ ನಿರುಪಮಧೂಮಲೇಪಮಂ ಕಂಡನಂತರಂ[ಗ]ವಿವಿಧವನಜವದನರಾಗದಿಂ (ಪಧರಪಾ. ೧೧-೫೮).

[ಸಂ.]

ನಿಹತಾರ್ಥ (ನಾ). ೧. [ಕಾವ್ಯಮೀ]ಮಾಪದದೋಷಗಳಲ್ಲಿ ಒಂದು; "ನಿಹತಾರ್ಥ-ಪ್ರಸಿದ್ಧವಾದ ಅರ್ಥವನ್ನು ಬಿಟ್ಟು ಬೇರೆ ಅರ್ಥದಲ್ಲಿ ಉಪಯೋಗಿಸಲ್ಪಟ್ಟರುವುದು" (ಕೃಒಡಿ. ೨೨೬). ೨. ಈ ದೋಷದಿಂದಕೂಡಿದ ಪದ; ℙ ಒಂದು ಪದದ ಅರ್ಥಗಳಲ್ಲಿ ಒಂದು ಪ್ರಸಿದ್ಧಾರ್ಥವಾಗಿದ್ದು ಮತ್ತೊಂದು ಅಪ್ರಸಿದ್ಧಾರ್ಥವಾಗಿದ್ದರೆ, ಅಪ್ರಸಿದ್ಧಾರ್ಥದಲ್ಲಿ ಆ ಪದವನ್ನು ಪ್ರಯೋಗಿಸಬಾರದು. ಹಾಗೆ ಪ್ರಯೋಗಿಸಿದರೆ ಆ ಪದವು ನಿಹತಾರ್ಥತಾದೋಷಗ್ರಸ್ತವಾಗುತ್ತದೆ. ಇಂಥ ಪದಕ್ಕೆ ನಿಹತಾರ್ಥವೆಂದು ಹೆಸರು. [ಸಂ.]

ನಿಹನನ (ನಾ). ಕೊಲ್ಲುವುದು; ಕೊಲೆ; ವಧೆ: "ಪ್ರಮಾಪಣಂ, ನಿಬರ್ಹಣಂ . . . ನಿಸ್ತರ್ಹಣಂ, ನಿಹನನಂ . . . ವಧಃ—ಈ ೩೦ ಕೊಲ್ಲುವದಕ್ಕೆ ಹೆಸರುಗಳು" (ನಿದ್ಧಾಂತಿ. ೨೬೨). [ಸಂ.]

ನಿಹಾಕೆ (ನಾ). ಹಲ್ಲಿಯ ಜಾತಿಗೆ ಸೇರಿದ ಒಂದು ಬಗೆಯ ದೊಡ್ಡ ಪ್ರಾಣಿ; ನೀರುಡು: "ನಿಹಾಕಾ, ಗೋಧಿಕಾ—೨ ನೀರಲ್ಲಿರುವ ಉಡುವಿನ ಹೆಸರು, ಅಂದರೆ . . . ನೀರುಡಜಂತು" (ನಿದ್ಧಾಂತಿ. ೪೩); ಸಾರಂಗ ನಿಹಾಕೆ ರೋಹಿತ ತರಕ್ಷು . . . ಮೃಗೇಂದ್ರಮುಖ್ಯ ಮೃಗ ಸಂಚಯದುಂಜಗಾಡಿಯಿಂ ಕಂಗೆಸೆದತ್ತು ತುಂಗಬಹುಶೃಂಗವಿರಾಜಿತ ವಿಂಧ್ಯಭೂಧರಂ (ಉದ್ಭಟ. ೨-೪೩). [ಸಂ. ನಿಹಾಕಾ]

ನಿಹಾರ$_1$ (ನಾ). ಹೆಚ್ಚಾದ ಶಬ್ದ; ಅಧಿಕವಾದ ಧ್ವನಿ: ಮುಜಿದ ಜೂಜೆಯ ಭಟರು ತಂದರು ಬಿಜಿಸಿನರೆನೆಲೆಗಿದು ನಿಹಾರದೊಳಿಜಿದು ನೆಜಿ ಸೊಪ್ಪಾಗಿ ಸಾರಿತು ಸರಿದು ಹಿನ್ನೆಲೆಗೆ (ಕುವ್ಯಾಆ. ೧೯-೧೨); ಮೇಲುದ್ದಿಕರವ ನಿಹಾರದಲಿ ಭೊಬ್ಬಿಜಿದು ಹಾಜಿದನಾರೆ ಸುರರನುಪಮಮಹಾ ಕೈಲಾಸಪರ್ವತಕೆ (ತೊರಠಾ. ೬-೫-೨೮); ನಿಹಾರದಲಿ ಸಿಡಿದು ಬೊಬ್ಬಿಜಿದುಬ್ಬಿ ಕಂಗಳ ಕಿಡಿಯ ಕೋಪದಲಸುರಹಯ ನೆಲಕಡಿಮಗುಜಲೆಜಗಿದನು ವಾಲಿಜನುಗ್ರಮುಷ್ಟಿಯಲಿ (ತೊರಠಾ. ೬-೩೦-೨೯).

[<ಸಂ. ನಿರ್ಹ್ರಾದ]

ನಿಹಾರ$_2$ (ನಾ). ೧. ಮಂಜು; ಇಬ್ಬನಿ. ೨. ಮಬ್ಬು; ಮಸುಕು: ಜಾಜಿಪುಬ್ಬಿನ ಹೊತ್ತ ದುಗುಡದ ಮೋಜಿಗಳ ಮೋನದ ನಿ[ವಾತಾಂ. ದು]ಹಾರದ ದೂಜುಗಂಗಳ ದೇವನಿಕರವ ಕಂಡು (ಕುವ್ಯಾಕ. ೬-೨೫). ೩. ಅಜ್ಞಾನ; ತಾಮಸಿಕೆ: ನಿಹಾರದ [ವಾತಾಂ. ವಿಘಾತಿಯ] ದಜಿಗದಾನವರ್ಕೈದಿ ಕವಿದುದು ಕೆದಜಿ ಸುರ ಬಲವ (ಕುವ್ಯಾಆ. ೧೨-೩೨). ೪. ಮಲಮೂತ್ರವಿಸರ್ಜನೆ: ಧರೆಯೊಳ್ಳಿವ ಸುಟ್ಟರುಂಟಲ್ಲಿ ಭಸ್ಮ ಕರ್ಪೂರವ ಸುಟ್ಟರೆ ಭಸ್ಮವುಂಟೆ ನರತತಿಗಾಹಾರ ನಿಹಾರವುಂಟೆಮ್ಮ ಧರತೇಶಗಿಲ್ಲ ನಿಹಾರ (ಧರಚ. ೧-೨೪). 'ನೀಹಾರ' ಪರಾ. [ಸಂ.]

ನಿಹಿಂಸನ (ನಾ). = ನಿಹನನ: "ಪ್ರಮಾಪಣಂ, ನಿಬರ್ಹಣಂ . . . ನಿಹಿಂಸನಂ, ನಿರ್ವಾಪಣಂ . . . ವಧಃ – ಈ ೩೦ ಕೊಲ್ಲುವದಕ್ಕೆ ಹೆಸರುಗಳು" (ನಿದ್ಧಾಂತಿ. ೨೬೨). [ಸಂ.]

ನಿಹಿತ (ಗು). ೧. ಇರಿಸಿದ; ಇಟ್ಟ: ಮಹಾಶ್ವೇತೆಯುಂ ಚಂದ್ರಾಪೀಡಮುಖನಿಹಿತನಿಶ್ಚಲಸ್ತಬ್ಧದೃಷ್ಟಿಯಾಗಿ ಮುರಣಸಮಾಸಾದಿತೆಯಾದಂತೆ ಮೂರ್ಛೆಗೆ ಸಂದಳ್ (ಕಾದಂಉ. ೫೭೮); ಮಾರುತಿಗಂ ಪಾಂಚಾಲೀಕುಂಚಿತಕೇಶಪಾಶಾಕೃಷ್ಟಿಸಾತಕಪ್ರಧಾನನಿಹಿತ ಹಿತನೆನಿಸಿದ ಫಣಿರಾಜಕೇತನಂಗಂ ಧರ್ಮನಂದನಾದಿಗಳಿರ್ದು ಧರ್ಮಯುದ್ಧ ಮನೆ ಸಮಕಟ್ಟದಾಗಳ್ (ಗದಾಪಉ. ೭-೬೨ ನ); ಭರತಾಗಮಭವನಿಹಿತಮಹನೀಯ ಮತಿಪ್ರದೀಪೆಯುಂ (ವಿಕ. V, ಪೀಲೂಪು. ೫೮-೩; ೧೧೭): ಕುಂಭಿ ಕುಂಭಸ್ಥಳನಿಹಿತನಿಶಾತಾಂಕುಶಂ ಭೂಭುಜಂ (ಚಂದ್ರಪು. ೬-೯೯). ೨. ಸಂಗ್ರಹವಾದ; ತುಂಬಿದ: ನಿಹಿತ[ವಾತಾಂ. ಯತ, ಖಿಳ]ಭಕ್ತಿ ಮಹಾಮಹಿಮೆಯಿಂದೊಪ್ಪಿತಿಪ್ಪ ಭರಾನುಪುರವೇ ರಾಜಧಾನಿಯೆನಲ್ಕೆ (ಬಸಪು. ೧೯-೪). (ನಾ). ೩. ಇರಿಸಿದುದು; ಇಟ್ಟುದು: "ಆಹಿತಂ, ನಿಹಿತಂ, ನ್ಯಸ್ತಂ, ಆರೋಪಿತಂ—ಈ ೪ ಪಜುಸಲ್ಬಟ್ಟುದು" (ಪಲಾಯು. ೧೩೪-೬೨); ಈಚೆಯಡಿಯ ಬಿಟ್ಟು ಆಚೆಯಡಿಯ ಮೆಟ್ಟದೆ ನಿಹಿತದಡಿಯ ಮಡ ಮುಟ್ಟದೆ ಉಂಗುಷ್ಠ ಊಜದೆ ದಾಟಬೇಕು ಆತನಡಿಗೆ (ನೋಳಿಮಾ. ೧೫೦-೫೭೪). ೪. ಒಳಗಿರುವುದು; ಗರ್ಭೀಕೃತವಾದುದು: ಮಾತುಗಂಟಿತನದಿಂದ ವಸ್ತುಭಾವದ ನಿಹಿತವನಜಿಯದೆ ವಾಗ್ವಾದಕ್ಕೆ ಗೆಲ್ಲಸೋಲಕ್ಕೆ ಹೋರುವಲ್ಲಿ ಇಹಪರ ಉಭಯದಲ್ಲಿಗೆ ದುಃಖ (ನೋಳಿಮಾ. ೧೩೮-೫೭೭). [ಸಂ.]

ನಿಹಿತಾಚಾರ (ನಾ). ಸರಿಯಾಗಿ ರೂಪಿಸಿದ ನಡವಳಿಕೆ; ವ್ಯವಸ್ಥೆಗೊಳಿಸಿದ ಆಚಾರ: ಘಟದಲ್ಲಿ ವೈಭವ ಆತ್ಮನಲ್ಲಿ ನಿರೋಧ ಆಚಾರದಲ್ಲಿ ಕರ್ಕಶ ಇಂತೀ ನಿಹಿತಾಚಾರಂಗಳಲ್ಲಿ ನಿರತನಾಗಿ ಕಾಯದ ಕರ್ಮ ಜೀವದ ಭಾವ ಜ್ಞಾನದ ಒಳಗನಜಿಯಬೇಕು (ನೋಳಿಮಾ. ೧೦-೩೭). [ನಿಹಿತ + ಆಚಾರ]

ನಿಹೀನ (ಗು). ೧. ಕೀಳಾದ; ತುಚ್ಛವಾದ; ಅಲ್ಪವಾದ. ೨. ಕೀಳುಕುಲದ. (ನಾ). ೩. ಅತ್ಯಂತ ಕ್ಷುಲ್ಲಕವಾದುದು; ಬಲು ಕೀಳಾದುದು: ಇಂಥವರನ್ನು ಆಶ್ರಯಿಸಿದರೆ ತಮ್ಮ ಕೆಲಸವಾದೀತೆಂದು ನಂದಿ ಅಂಥವರನ್ನು ಆಶ್ರಯಿಸಿ ಅವರ ಬಳಿ ನಿಹೀನವಾದ ಸೇವಾವೃತ್ತಿಯನ್ನು ಮಾಡುವರು (ರಾಜಾಪು. ೧೦೩). [ಸಂ.]

ನಿಹ್ನವ (ನಾ). ೧. (ಜ್ಞಾನವನ್ನು) ಮರೆಮಾಚುವುದು,—ಅಲ್ಲಗಳೆಯುವುದು; ಅಪಹ್ನುತಿ. ೨. ಗುಟ್ಟು; ರಹಸ್ಯ. ೩. ಅಪನಂಬಿಕೆ; ಸಂಶಯ; ಅವಿಶ್ವಾಸ: "ಅವಿಶ್ವಾಸ, ನಿಹ್ನವ" (ನಾಚರಾ. ೪). ೪. ಮೋಸ; ವಂಚನೆ. ೫. ಪ್ರಾಯಶ್ಚಿತ್ತ. ೬. ಅಸತ್ಯ; ಅಪಲಾಪ; ಮೋಸಗೊಳಿಸುವ ಮಾತು: "ಅಪಲಾಪ, ನಿಹ್ನವ" (ನಾಚಿಂತಾ. ೪); "ಅಪಲಾಪಃ, ನಿಹ್ನವಃ—ಮೋಸಗೊಳಿಸುವ ಮಾತಿನ ಹೆಸರುಗಳು" (ನಿದ್ಧಾಂತಿ. ೫೬). ೭. [ಜೈನ]ಪ್ರದೋಷ, ನಿಹ್ನವ, ಮಾತ್ಸರ್ಯ, ಅಂತರಾಯ, ಆಸಾದನ, ಉಪಘಾತ ಗಳೆಂಬ ಆರುಬಗೆಯ ಆಸ್ರವಗಳಲ್ಲಿ ಒಂದು; ಯಾವುದಾದರೊಂದು ಕಾರಣದಿಂದ ತನಗೆ ಗೊತ್ತಿಲ್ಲವೆಂದು ಜ್ಞಾನವನ್ನು ಮರೆಮಾಚುವುದು: ನಿಹ್ನವ—ಮಜಿಸುಗೆಯುಂ (ತತ್ತ್ವಪ್ರ. ೨೫೯); ನಿಹ್ನವ (ನಾನರಿಯೆನೆಂದು ತನ್ನ ಜ್ಞಾನವನ್ನು ಮರೆಮಾಡಿಕೊಳ್ಳುವುದು) (ಜೈನಪ. ೬೫). ೮. ತಿಳಿವಳಿಕೆಯನ್ನು ಗೋಪ್ಯವಾಗಿಡುವವನು; ಅಜ್ಞಾನಿಯ ಸೋಗು ಹಾಕುವವನು: ಭಗವಾನ್ ಮಹಾವೀರನ ಶಾಸನದಲ್ಲಿ ಆದ ನಿಹ್ನವರ (ವಿಷಯ ಗೊತ್ತಿದ್ದೂ ಇಲ್ಲವೆಂದು ಹೇಳುವವರು—ಜ್ಞಾನಿಗಳಾಗಿಯೂ ಅಜ್ಞಾನಿಯ ಸೋಗು ಹಾಕಿದವರು) ವರ್ಗಾನವು ಸ್ಥಾನಾಂಗದಲ್ಲಿದೆ (ಜೈಸಪ. ೧೬೧). [ಸಂ.]

ನಿಹ್ರಾದ (ನಾ). ಶಬ್ದ; ಧ್ವನಿ. [ಸಂ.]

ನಿಳಯ 'ನಿಲಯ' ನೋ.

ನಿಳಯವೇದಿ (ನಾ). ಮನೆಯ ಜಗಲಿ: ಸಮರಶ್ರಮವ ಸಮಿಪಕೆ ನಿಳಯವೇದಿಯಲಿದ್ದು ಕಳೆದುದು ಕೂಡೆ ಪರಿವಾರ (ಕುವ್ಯಾಕ. ೫-೩).

[ನಿಳಯ (= ನಿಲಯ) + ವೇದಿ$_2$]

ನಿಳಯೇಶ (ನಾ). ೧. ಮನೆಯ ಒಡೆಯ. ೨. [ಜ್ಯೋತಿ] ರಾಶಿಯ ಅಧಿಪತಿ : ನಿಳಯಂ ತನ್ನಿಳಯೇಶನಿಂದುವಿನಿತುಂ ವೀರ್ಯಾಢ್ಯಮಾದಂದು ತತ್ಫಲಮೆಲ್ಲಂ ದೊರೆಕೊಳ್ಳುಂ (ಜಾತತಿ. ೧೭-೧೩).

[ನಿಳಯ (=ನಿಲಯ)+ಈಶ]

ನಿಳಿ (ನಾ). ಒಂದು ಬಗೆಯ ಜಲಚರ (?) : ಮುನ್ನ ಶರಧಿಯೊಳೊಬ್ಬ ನಿಳಿವರನುನ್ನತದ ವಿಸ್ತಾರ ಹುಬ್ಬಿನ ತನ್ನ ಮಧ್ಯದ ಯೋಜನಂಗಳು ಮೇಲೆ ಮುನ್ನೂಱು ಭಿನ್ನವಿಲ್ಲದೆ ನಿಳಿಯ ನುಂಗುವ ತನ್ನ ಪುಚ್ಛದ ಮಧ್ಯಯೋಜನದುನ್ನತಿಯು ತಾನಾದುದ್ವೆಯಱುನೂಱು ಯೋಜನವು (ಸಂಭಪ. ೪-೨೪). [?]

ನಿಳಿಂಪ 'ನಿಲಿಂಪ' ನೋ.

ನಿಳಿಂಪಕಾಂತೆ (ನಾ). ದೇವತಾಸ್ತ್ರೀ ; ದೇವಾಂಗನೆ : ತುಂಬಿಗಳುಂ ನಭದಲ್ಲಿ ಮಂಡಳೀಕರಿಸಿ ನಿಳಿಂಪಕಾಂತೆಯರಿಗೆತ್ತಿದ ಹೀಲಿಯ ಚೆಲ್ವುವೆತ್ತ ಝುಲ್ಲರಿಗಳಿವೆಂಬಿನಂ ಬಿಡದೆ ಬಂದುವು ಲೀಲೆಯನಂದು ಮಾಡುತುಂ (ಬಾಧಪು.೬-೨೩); ಪೊಂಬರಿಯಣಂಗಳೊಳಾರತಿಯೆತ್ತಿ ಪಾಡಿದರ್ ವಿಳಸಿತ ಭಾರ್ಗವೀವಿಧಿವಧೂರತಿಮುಖ್ಯನಿಳಿಂಪಕಾಂತೆಯರ್ (ಶಬಕಂ. ೩-೨೨).

[ನಿಳಿಂಪ (=ನಿಲಿಂಪ)+ಕಾಂತೆ]

ನಿಳಿಂಪಕುಜ (ನಾ). ಸ್ವರ್ಗಲೋಕದ ಮರ ; ಕಲ್ಪವೃಕ್ಷ : ಬೇಡಿದಡಲ್ಲದೀಯದು ನಿಳಿಂಪಕುಜಂ (ಎಕ. VII, ಶಿಕಾರಿ. ೧೮-೧೫; 1154).

[ನಿಳಿಂಪ (=ನಿಲಿಂಪ)+ಕುಜ]

ನಿಳಿಂಪಗಣ (ನಾ). ದೇವತೆಗಳ ಸಮುದಾಯ : ತ್ರಿಗುಣಿಸಿ ಬಲವರ್ಪ ನಿಳಿಂಪಗಣಂ ಮಂದರಕುಭೃನ್ನಿತಂಬಸ್ಥಲದೊಳ್ ಸೊಗಯಿಸಿತು ಕನಕರುಚಿಯಿಂ ತ್ರಿಗುಣಕನತ್ಕನಕಘಟಿತ ಕಟಸೂತ್ರದವೋಲ್ (ಅಜಿಪು. ೪-೩೧). [ನಿಳಿಂಪ (=ನಿಲಿಂಪ)+ಗಣ]

ನಿಳಿಂಪಚಕ್ರಿ (ನಾ). ದೇವತೆಗಳ ಚಕ್ರವರ್ತಿ ; ಇಂದ್ರ : ಈಯದೊಡೆ ಪಾರಿಜಾತಮನೀಯದಮೋಘಂ ಸಿತಾತಪತ್ರಪ್ರಕರಚ್ಛಾಯೆಯನಸ್ತ್ರಪ್ರಕರಚ್ಛಾಯೆಯನೀಗುಂ ನಿಳಿಂಪಚಕ್ರಿಗೆ ಶಾರ್ಙ್ಗಂ (ಜಗವಿ. ೧೩-೩೦).

[ನಿಳಿಂಪ (=ನಿಲಿಂಪ)+ಚಕ್ರಿ]

ನಿಳಿಂಪದಂಪತಿ (ನಾ). ದೇವದಂಪತಿ : ಅನ್ಯೋನ್ಯಪ್ರೇಮಸಂಜಾತ ಸಂಪತ್ಪರಂಪರಾಪರಿಗತಮಾಗಿ ನಿಳಿಂಪದಂಪತಿಯನೆ ಪೋಲ್ವ ತದ್ದಂಪತಿಯಿಂದಂ ಪವಿತ್ರೀಭೂತಮಾದ ಭೂತಳೋದ್ದೇಶದೊಳುತ್ಪತ್ಸ್ಯಮಾನ ಭಾವಿತೀರ್ಥಕರಪುಣ್ಯದೂತಾಹೂತಂ ಪುರುಹೂತಂ ಬಂದು (ಆದಿಪು. ೬-೮೮ ವ) ; ಸಾರಸಹಂಸಕೋಕಿಳಕುಳಧ್ವಾನೋತ್ಕರಂ ಚೆಲ್ವನಾಯ್ತುಕರಂ ಸ[ಕ್ತ] ನಿಳಿಂಪದಂಪತಿಗಳಿಂದಾ ನಂದನಂ ನಂದನಂ (ಪಂಪಭಾ. ೫-೮೦). [ನಿಳಿಂಪ (=ನಿಲಿಂಪ)+ದಂಪತಿ]

ನಿಳಿಂಪನಗ (ನಾ). ದೇವತೆಗಳ ಬೆಟ್ಟ ; ಮೇರುಪರ್ವತ : ಮನದೊಳ್ . . . ಸೆಡೆಯದೆ ನಿಳಿಂಪನಗನಿಭಧೈರ್ಯಂ ತನುವಿನ ಮೇಲಣ ಮೋಹಂ ತನಗಿಲ್ಲದೆ ತಳರದಿರ್ದನುನ್ನತಚಿತ್ತಂ (ಧರ್ಮಾಮೃ. ೧೨-೪೦).

[ನಿಳಿಂಪ (=ನಿಲಿಂಪ) +ನಗ್ಗ]

ನಿಳಿಂಪನಾಥ (ನಾ). =ನಿಳಿಂಪನಾಯಕ : ಉಪಹಸಿತಸನತ್ಕುಮಾರನಳಕೂಬರ ಮಕರಕೇತುಸೌಂದರ್ಯನುಂ ವಿನಿರ್ಜಿತ ನಿರವಶೇಷ ನಿಳಿಂಪನಾಥವಿಭವನುಂ (ಶಾಂತಿಪು. ೧-೭೧ ವ).

[ನಿಳಿಂಪ(=ನಿಲಿಂಪ)+ನಾಥ]

ನಿಳಿಂಪನಾಯಕ (ನಾ) ದೇವತೆಗಳ ಒಡೆಯ ; ಇಂದ್ರ : ನಿಳಿಂಪನಾಯಕಂಗಾದುದಾಗಳಾಸನಕಂಪಂ (ಅಜಿಪು. ೩-೩) ; ದಶರಥಮಹೀನಾಯಕನುಚ್ಚೈಶ್ರವದಿನಿಟಾವ ನಿಳಿಂಪನಾಯಕನಂತೆ ವಾಹನದಿನಿಟಾದು (ಸಂರಾಮಾ. ೩-೮೯ ವ). [ನಿಳಿಂಪ (=ನಿಲಿಂಪ)+ನಾಯಕ]

ನಿಳಿಂಪನಿವಹ (ನಾ). =ನಿಳಿಂಪಗಣ : ನಿಳಿಂಪನಿವಹಸ್ತುತ ಜಯ ಜಯಧ್ವನಿಸ್ತನಿತಸಕಳದಿಗಂತರಾಳನುಂ (ಸುಕುಸೂ. ೮-೭೦ ವ).

[ನಿಳಿಂಪ(=ನಿಲಿಂಪ)+ನಿವಹ]

ನಿಳಿಂಪನಿಳಯ 'ನಿಲಿಂಪನಿಲಯ' ನೋ.

ನಿಳಿಂಪವಧು (ನಾ). =ನಿಳಿಂಪಕಾಂತೆ : ನಿಳಿಂಪವಧೂವಕ್ತ್ರಸರೋಜಮಿತ್ರನೆನೆ ಚಿತ್ತೋದ್ಯತ್ಪ್ರವೀಚಾರಸಾರವಿನೋದಂಗಳಿನಂದದೇಂ ನಲಿದನೋ ಕಲ್ಪಾಮರಂ ಕಲ್ಪದೊಳ್ (ಸುಕುಸೂ. ೯-೩೫).

[ನಿಳಿಂಪ (=ನಿಲಿಂಪ)+ವಧು]

ನಿಳಿಂಪವ್ರಜ (ನಾ). = ನಿಳಿಂಪಗಣ : ನಾನಲಾ ದ್ರೌಪದಿಯ ಮದುವೆಯೊಳಾ ನರೇಂದ್ರರ ಗೆಲಿದವ ಬಳಿಕಾ ನಿಳಿಂಪವ್ರಜವ ಮುಱಿದುರುಪಿದೆನು ಖಾಂಡವವ (ಕುವ್ಯಾಕ. ೧೭-೩೭).

[ನಿಳಿಂಪ (=ನಿಲಿಂಪ)+ವ್ರಜ]

ನಿಳಿಂಪೆ (ನಾ). = ನಿಳಿಂಪಕಾಂತೆ : ಕಂಪಿನ ಜೊಂಪೆಯ ಹಿಡಿದ ನಿಳಿಂಪೆಯ ತೆರ ಬರುವೆಲರೆಸಳೇನಮಮ (ಹಂಸದ. ೧೬೯-೨).

[ನಿಳಿಂಪ (=ನಿಲಿಂಪ)+-ಎ$_2$]

ನಿಳಿಕೆ (ನಾ). (?) : ಆವಾಕೆಯ ಬೆನ್ನಿನಲ್ಲಿ ಸುಳಿಯಿರಲು ಹೊಕ್ಕಳ ಮೇಲೆ ಸುಳಿಯಿರಲು . . . ಆಕೆಯು ನಿಳಿಕೆಯೆಂದರಿವುದು (ಸಾಮುಲ. ೨೭-೧೨). [?]

ನಿಳಿಲ್ (ನಾ). ಒಂದು ಅನುಕರಣ ಶಬ್ದ : ಬೀದಿವರಿದಾಱಿಗೊಂಡು ಸಿಕ್ಕಿದ ರೂಪಿನ ತಲೆಯೊಳ್ ನಿಳಿಲ್ ನಿಕ್ಕೆಂದು ತರ್ಗಿ ನುರ್ಗಿ ಕರ್ಬೆ ಕೊಡಹುವ ನಚ್ಚಿನ ಗೋವಂ ದನಿದೋಱೆ (ಗಿರಿಕ. ೨-೧೦೫ ವ); ಖಣಲೆಂಬ ಖಟಲೆಂಬ ನಿಳಿಲೆಂಬ ನೆರ್ಕೆಂಬ . . . ಕೂರಸಿಗಳುರವಣೆಯ ದನಿಯಡಸುತಂ ಪುಟ್ಟೆ (ಇಹರ. ದೇ. ೪೧-೨೧).

ನಿಳಿನಿಳಿಲು (ದ್ವಿರುಕ್ತಿ) : ನಿಳಿನಿಳಿಲು [ಪಾಠಾಂ. ನಿಳಿನಿಟಲು] ಭುಗಿಲೆಂಬ ಛಿಳಿಛಿಳಿಛಿಳಿಛಿಟಲು ಭೋರೆಂಬ ಖಣಿಖಟಖಳಿಲು ಖಳಿಲೆಂಬಂಬುಗಳ ದನಿ ತುಂಬಿತಂಬರವ (ಕುವ್ಯಾದ್ರೋ. ೧೮-೪). **ನಿಳಿನಿಟಲು** = ಒಂದು ಅನುಕರಣ ಶಬ್ದ : ಹುಂಕೃತಿ ಮಸಗೆ ಹೂಡಿದನಹಿಪನೆದೆ ನಿಳಿನಿಟಲೆ [ಪಾಠಾಂ. ನಿಳಿನಿಟೆಲೆ, ನಿಱಿನಿಳಿಲೆ]ನಲು ಧನುವ (ತೊರರಾ. ೩-೬-೬). **ನಿಳಿಲ್ನಿಟಲ್** = ಒಂದು ಅನುಕರಣ ಶಬ್ದ : ಬೆರಸಿ ಪದಾತಿ ನೆಕ್ಕು ನೆರಿಲೆಂಬ ನಿಳಿಲ್ನಿಟ [ಪಾಠಾಂ. ನೆಳಿಲ್ ನೆಳಿ]ಲೆಂಬ . . . ನಿಷ್ಠುರರವಂ ಮಿಗೆ ತಳ್ತಿಱಿದತ್ತು ಯುದ್ಧದೊಳ್ (ಗಿರಿಕ. ೬-೬೮).

ನಿಳಿವಳಿ (ನಾ). ಬೇಗ ಬೇಗ ಚಲಿಸುವಿಕೆ ; ಸಂಚಲತೆ ; ಚಂಚಲತೆ (?) : ಪನ್ನಗನ ಜಿಹ್ವೆಯ ನಿಳಿ[ಪಾಠಾಂ. ನಳಿ]ವಳಿಯಂತೆ ಚಮತ್ಕಾರದ ಅಸಿಯ ಗುಣಮೊನೆಯಂತೆ . . . ಆತ್ಮನ ಉಚಿತವನಱಿತುರಸ ಬೆಂಕಿಯಲ್ಲಿ ಬೆರೆದಂತಾಗಬೇಕು (ದಾಸೋಸಂ. ಕ. ೪೦೮-೯೫).

[?./ತುಳು. ನೆಳಿ=ನಡುಗು]

ನಿಳ್ಕು 'ನೀಳ್ಕು' ನೋ.

ನಿಳ್ಳ (?) (ನಾ). (?) : ನಿಳ್ಳಂಗಳಿಂಗೊಡದೆ ತಲ್ಲಣಿಸಿ ನೃಪನನುಜರುಳ್ಳಂಗಳಿಂ ಸೂರಸೇನನುಂ ಪ್ರವರಸೇನಳ್ಳಂಕಕೊದಗಿ ಸಿಂಹಧ್ವಜನ ಶಸ್ತ್ರಗಳ ಖಡಿದು ಮೂದಲಿಸಲಿಂತು (ಜಿನಮು. ೧೯-೩೨). [?]

ನಿಳ್ಳುಲಿ (ನಾ). ಗಟ್ಟಿಯಾದ ಧ್ವನಿ ; ದೊಡ್ಡ ಧ್ವನಿ (?) : ಎಳೆ ಮಕ್ಕಳ ಕರ್ಣ ಹೊಳಪಲಿ ಮೊಗದರಳಲಿ, ಕೈಚಪ್ಪಳೆ ನಿಳ್ಳುಲಿಯಲಿ (ನಿಮ್ಮದೃ. ೪). [<ನೀಳ್+ಉಲ್ಲಿ$_2$]

ನಿಱತೆ, ನಿರತೆ (ನಾ). ಸೊಬಗು ; ಮನೋಹರತೆ ; ಸುಭಗತೆ : "ದೇಸೆಯೆಂದುಂ, ಗಾಡಿಯೆಂದುಂ, ನಿಱತೆಯೆಂದುಂ ಸೊಬಗು"

(ಕಶಸಾ. ೬೬-೪೭೯) ; "ನಿಱತೆ ಗಾಡಿ ಸೊಬಗೆನಲ್ಕೆಸೆವ ಸುಭಗತೆಯಕ್ಕು" (ಕಬ್ಬಿಕೈ. ೫೩). **ನಿರತೆ :** "ನಿರತೆಯೆನೆ ಸುಭಗತೆಯೆನಿಕ್ಕು" (ಕಶರ. ೫೫); ಮೃದುಗೀತೆ ತಿಳಿನೀರ ನಿರತೆ ನೇಸರಿನ ಚೆಂಗದಿರ ಪೊಳೆಪಿನ ಚೆಲ್ವು ! (ಚಿತ್ರಸ್ಯ. ೪೬) ; ಏನೆನಲಿ ಮದುವೆಯಾಗುವರಿಬ್ಬರದು ನಿರತೆ (ಕಾಲೂರ. ೭೪-೧೩೫) ; "ಯೋಗ್ಯ" (ಕಾಲೂರ. ಅಡಿಟಿ) ; ಕೊನೆ ಮುಳ್ಗಳಂತಾಗೆ ಹಿಂದುಮುಂದುಗಳೆಲ್ಲ ಕೊನೆದು ಬಾಡಿದ ನಿರತೆಯಂ ಮಾಲಿಸುವಳು (ಕಾಲೂರ. ೧೧೪-೨೩೫) ; "ಆನಂದ, ಸುಭಗತೆ" (ಕಾಲೂರ. ಅಡಿಟಿ). 'ನೀಱತೆ' ಪರಾ. [<ನಿಱು$_2$ + -ತೆ$_3$]

ನಿಱಸು$_1$ 'ನಿಱುಸು$_1$' ನೋ.

ನಿಱಸು$_2$ 'ನಿಱುಸು$_2$' ನೋ.

ನಿಱು$_1$ (ಕ್ರಿ). ೧. ಜೋಡಿಸು ; ಸೇರಿಸು ; ಕೂಡಿಸು : ಎಱಗುವ ಮಕುಟಂಗಳ್ ಚೋದ್ಯಮೆಂದತ್ತಮಿತ್ತಂ ನಿಱುವ ಕರಯುಗಂಗಳ್ ಪೊಯ್ವ ದೇವಾನಕಂಗಳ್ . . . ಬೆಡಂಗಂ ಮೆಱೆಯೆ ದಿವಿಜವೃಂದಂ ತಂದುದಂದೊಂದು ಚೆಲ್ವಂ (ಆದಿಪು. ೬-೫೧). 'ಕೆಯ್ನಿಱು' ಪರಾ. ೨. ಅಂಕುಡೊಂಕಾಗು ; ಕೊಂಕುಕೊಂಕಾಗು : ನಿಱುನಿಱುದು ತೆಱೆಯಿಱುದು ಕಿಱುಮಟಲ ದಿಣ್ಣೆಯೊಳ್ ಪರಿವ ಬರಿವೊನಲೆಸೆದುವು (ಅನಂಪು. ೯-೧೬ ರಗಳೆ). ೩. ಮಡಿಕೆ ಬೀಳು ; ನಿರಿಗಟ್ಟು : ಮಿಱ ಮಿಱನಾದ ಮೈ ಹೊಳಹಿಂದ ತೆರೆಗಟ್ಟ ನಿಱುದೇಳ್ವ ಹೊಂಗಾಸೆಯಿಂದ . . . ಹೊಳೆವರು (ಭರಚ. ೧೩-೧೦೧). 'ನಿಱುಗಾಸೆ' ಪರಾ.

[ದೇ. ॥ ತಮಿ. ನೆಱು]

ನಿಱು$_2$, ನಿರಿ$_2$, ನೆರಿ$_2$, ನೆರೆ$_9$, ನೆಱು$_2$ (ನಾ). ೧. ಧೋತ್ರ, ಸೀರೆ ಮೊದಲಾದುವುಗಳನ್ನು ಉಡುವಾಗ ಪಾದಗಳ ಬಳಿಗೆ ಇಳಿಯುವಂತೆ ಓರಣವಾಗಿ ಜೋಡಿಸಿದ ಮಡಿಕೆ : ತಾಳದ ಲಯಮಂ ನಿಱು ನೀಳಾಳಕಹಾರದ ಪೊದಟ್ಟ ಮುತ್ತೆಂಬವು ಮುಮ್ಮೇಳಿಸಿ ಕೈಕೊಂಡುವು ಲುಳಿತಾಳಕಿ ಕೈಕೊಂಡಳೆಂಬುದೊಂದಚ್ಚರಿಯೇ (ಆದಿಪು. ೯-೨೪) ; ಬಿಗಿದೊಗೆದಪ್ಪಿ ತೋರ್ಪ ಕುಚಮಂಡಳಮಂ ರುಚಿರಾಂಚಳಂಗಳಿಂ ಬಿಗಿದಮರ್ವಂತಿಱುಂಕಿ ನಿಱುಯಂ . . . ಒಪ್ಪಿದರಂದು ಕಾಂತೆಯರ್ (ಕಾದಂಪೂ. ೭೧) ; ತುಱುವಂ ಕಳಿಸುವ ಕೃಷ್ಣೆಯ ನಿಱುಯಂ ಪಿಡಿದುರ್ಚವೇಟ್ಟ ಕೊಳನಂ ಪಿಂದುಂ ಪೆಱಗಾಗಿ ಪುಗುವ ದುರ್ನಯ ಮಱುಪವೆ ಕೌರವನ ರಾಜ್ಯದಾಯದ [ಕುಂ]ದಂ (ಗದಾಯು. ೬-೧೦) ; ನಿನ್ನೊಡನೆ ನಾಂ ಬಪ್ಪೆನೆಂದೆನುತ ನಿಱುಯ ಸೆಳೆದಪ್ಪಿ ಬಾಯ್ಬಿಡುವ ಸುತನ ಮುಂಡಾಡಿ (ಹಚಕಾ. ೧೦-೨೨) ; ನಿಱುಯಂ ಬಲಗೈಯಿಂ ಪಿಡಿದು ವಾಮಕರದಿಂ ಪತಿಯ ಬಲಗೈಯ ಬೆರಳಂ ಪಿಡಿದು ನಡೆವ ಗಾಡಿ ರೂಢಿವಡೆಯೆ (ಧರ್ಮಪ. ೩-೬೮ ಪ). ೨. ಮಡಿಕೆಯುಳ್ಳುದು ; ಮಡಿಕೆ ಹಾಕಿ ಉಡುವುದು ; (ನಿರಿ ಹಿಡಿದು ಉಟ್ಟ) ಸೀರೆ : ನಿಱು ಸೋಂಕಲು ಮುನಿಯಿಲ್ಲ (ಬಸವ. ೧೧೨) ; ನಿಱುಯ ಸೆಱಂಗ ನೋಸರಿಸಿ . . . ನುಣ್ಪೆರಲಂ ಮೊಲೆಗಿತ್ತು ಪೀರ್ದು ಕಣ್ದೆಱೆಯದ ಕಂದನೆಂದನಗೆ ಕಣ್ದೆಱೆಯಿಪ್ಪನೊ ಮಂದಹಾಸಮಂ (ಅರ್ಧನೇ. ೧-೧೦೦) ; ನಿಱುಯ ಸೆಱಂಗನೆತ್ತಿ ನಿಜನೀವಿಯೊಳುಯ್ದು ತೊಡರ್ಚ . . . ಏಱೆ ನೂಂಕಿಯುಂ ನೆಱೆ ಮಣಿಕಂಕಣದ್ವಿತಯಮಂ ಕರಪಲ್ಲವದಿಂದೆ ಮಾಡಿದರ್ ಮೊಱೆವಿನಮೊಲ್ದು ಬಾಳವತಿಗಂದಭಿಷೇಕಮನಿಂತು ಕಾಂತೆಯರ್ (ಕುಸುಮಾ. ೬-೭೮) ; ಉಟ್ಟ ನಿಱು ದಾಂಟದಡೆ ಕಚ್ಚುವುದೆ (ಹಚಕಾ. ೪-೨೫) ; ಕೊಡಹಿ ಮೊಲೆಗಳ ಮೇಲುದಿನ ನಿಱುಯ ಕೆಲರು ಹೂಗೊಂಚಲಿನ ತುಂಬಿಯ ಬಳಗವನು ಬೆಂಕೊಂಡರು (ಕುಮ್ಯಾಆ. ೧೮-೪) ; ಧರೆಯ ಹೊಯ್ದೂರೆ ನುಂಗುವುದೆ ದೇವರ ನಿಲುಕೆ ಹತ್ತುವುದೆ ಕರತಳ ನಿಱುಯ ದಾಂಟಲು ಕಚ್ಚುವುದೆ (ಜೀವಂಚ. ೧೭-೫೭). ೩. ಮಡಿಕೆ; ಮಡಿಸಿ ಹಾಕಿದ ಗಂಟು : ಮುಱುಯಿ ಕುನಿಕಿಲನಪಱ ಮೇಲಣ ನಿಱುಯನೊಡನೊಡ ಸೀಳ್ದು . . . ಬಂಡಿಯಂ ಕುಸಿಕಿಱುದು ಬರಲೀಸದಿರು (ಬಸಪು. ೫೬-೨೯). ೪. ಕ್ರಮ ; ಜೋಡಣೆ : (ಕಿ). ೫. ಸೊಬಗು ; ಅಂದ ; ಲಾವಣ್ಯ : ನಿಱುನಿಱುಗನ ನಿಱುದಳಿರ ನಿಱುಯನಱುಯೆಂ ಪೊಗಟಲ್ (ಆದಿಪು. ೬-೯೮). 'ನಿಱುದಳಿರ್', 'ನಿಱುಮುಗಿಲ್' ಪರಾ. ೬. ಸಂಪ್ರದಾಯ ; ವ್ಯವಸ್ಥೆ ; ರೀತಿ : ನೇರ್ಮೆಯನ್ ನೆನೆದು, ನಿಱುಯುಮನ್, ಅಱಮುಮನ್ ಎತೆಯೊಕ್ಲೇಸ್ ಅಣ್ಣನನ್ ಮಣ್ ಮಾಡಿ ಕಿಟರ್‌ನೆಲದೆ ಕಟುದರೊಳ್ ಪುಗಿಸಿ ಮನ್ನಿಸಿದನೆಂಬರ್ (ಅಂತಿಗೊ. ೨-೧೯) ; ಬಲ್ಲೆನವನ ಗಡಸು ಗಾಱತನಮನಂತೆ ನಿಱುಯುಮವನ ಕಯ್ಯ ಅಡಿಯ ಪಿಡಿಯೊಳಿರ್ಪುದನ್ (ಬದ್ಧಪ್ರ. ೧೨-೨೨೯). ೭. ಅಲೆ ; ತೆರೆ : 'ನಿಱುಗೊಳ್' ಪರಾ. ೮. ಗುಂಗುರು ; ಸುರುಳಿ : 'ನಿಱುಗುರುಳ್' ಪರಾ. **ನಿರಿ$_2$:** ೧. "ನಿರಿ ಯುಗ್ಮ ನೀವಿಯಕ್ಕು" (ನಾನಾರ. ೧೦೬) ; ಉತ್ತಮ ದುಕೂಲಮಂ ನಿರಿಯ ಪಸರಿಸಿವುಟ್ಟ ಚಿತ್ರಬಣ್ಣದ ರವಿಕೆ ಬಿಗಿದು (ನವಮೋ. ೧೦-೨೪) ; ಚಮ್ಮುತ ನಿರಿಯನು ಬನದಲಿ ಬಂದಳು ಬಿಂಕದ ಸಿಂಗಾರಿ (ಇಂಗೀತ. ೪೯-೧). ೬. ಆರಸಿಗಿದು ಗುಣ್ಪೆ ದಲ್ ಆ ಅಳ್ಕು ಉಸಿರ ನಡೆ ಪೆಣ್ಗೆ ಮೇಣಾ ನುಣ್ಪು ನಿರಿ ಗರಿಯಾದೊಳ್ಗೆ (ಶ್ರೀರಾಮಾ. ೫೨೨-೫೯೩). **ನೆರಿ$_2$:** ೧. ವಿಮಲಾಂಗಿಯರು ಬಿಳಿದಾದ ಚೀನಾಂಬರಗಳಂ ನೆರಿಗಳಂ ಪಿಡಿಯುವರು (ಸೌಗಂಧಿ. ೨೯-೧೫) ; ಹಾಗೆಲ್ಲಾ ನೆರಿ ಚಿಮುಕಿಸಿಕೊಂಡು ಬೀದಿ ಬಾಗಿಲಿನಲ್ಲಿ ನಿಂತಿರಬಾರದು (ಅಷಾಭೂ. ೧೬). ೫. ನೆರಿಯು ಅಸ್ಥಿರ ಎಂಬುದರ ಬದಲು, ಕವಿಯು ತಿಂಗಳಿನ ನೆರಿಯಂತೆ ಅಸ್ಥಿರ ಎನ್ನುತ್ತಾನೆ (ಕನ್ನನು. I, ೧೮೪). **ನೆರೆ$_9$:** ೧. ಕಡುಬೆಡಗೆ ರುಡಿಯಿಂದ ನೆರೆಗಳನಡರಿ ಮುಂಗುರುಳ್ವಿಡಿದು ಪುಟ್ಟಂಚ್ಚಡರಿದಂತಾ ಪುಳಿನತಳದಿಂದ ಚಲಕಂತಾಯ್ತು (ಜಿರಾಮಾ. ೧೧೧-೨೨) ; ಸೀರೆ ಉಡಿಸಿ ಅದರ ನೆರೆಯನ್ನು ಕಾಲ ಬಳಿ ಚೆಲ್ಲಿದ್ದರೆ, ಅವಳಿನ್ನೂ ಕನ್ನೆ . . . ಎನ್ನುವುದಕ್ಕೆ ಯಾರಿಗೂ ತೋರದು (ಮಲ್ಲಿ. ೧೦೦). **ನೆಱು$_2$:** ೧. ನೆ[ಪಾಠಾಂ. ನಿ]ಱುಯನೊಯ್ಯಾರಿಸುತ . . . ಬಂದಳು ರಾಮನಿದ್ದೆಡೆಗೆ (ತೊರರಾ. ೩-೪-೮) ; ನೆ[ಪಾಠಾಂ. ನಿ]ಱುಯಂ ಮಱೆದು ತಳುವದಂಗಣ ಕೆಯ್ದು ನಿಲುಕುಗಾಲೊಳ್ನಿಂದು (ಸಮ್ಯಕೌ. ೩-೧೨) ; ಸಣ್ಣಸಾಲಿಯ ಸೀರೆಯ ನೆಱುಯಾ ಬಾಲಕಿಯೊರ್ವಳು ಬಹುಸಿಂಗಾರದ ಜಾಲವ ಬೀಸಿದಳ್ವಿಟಗೆ (ಕಂನವಿ. ೨-೯೫).

ನಿಱುನಿಱು (ದ್ವಿರುಕ್ತಿ): ನಿಱುನಿಱುಯನಂತರಂತರಕೈದು ಮೊನೆಯ ಮುಂಜೆಱಗೆಳೆಯ ಪುಲಿಯ ಚರ್ಮವನುಟ್ಟು . . . ಭಿಕ್ಷುವೇಷವ ತಾಳ್ದನಳ್ತಿವಟ್ಟು (ಭಿಕ್ಷಾಚ. ೧-೧೨) **ನಿಱುನಿಱುಗೊಳ್** = ೧. ಉಂಗುರುಂಗುರವಾಗು ; ಗುಂಗುರಾಗಿರು : ನಿಱುನಿಱುಗೊಂಡ ಗುಣಾರ್ಣವನ ತಲೆನವಿರ್ಗಳ್ ಲಾವಣ್ಯರಸಮನಿಡಿದಿಡಿದು ತೀವಿದ ಕಮಲಾಸನನ ಬೆರಲಚ್ಚುಗಳನ್ನವಾದುವು (ಪಂಪಭಾ. ೨-೩೯ ವ). ೨. ಒಪ್ಪವಾಗು ; ಚೆಲುವಾಗು : ಬಸಂತರಾಜನ ಬರವಿಂಗೆ ಗುಡಿಗಟ್ಟದಂತೆ ಬಳ್ವಳ ಬಳೆದ ಮಿಳಿರ್ಪ ತೋಕೆಯ ತಳಿರ್ಗಳುಮಾತನ ಬರವಿಂಗೆ . . . ವನವನಿತೆ ಮೆಚ್ಚ ನೆಱೆಯೆ ಕೆಯ್ಗಯ್ದಂತೆ ನಿಱುನಿಱುಗೊಂಡು ಸೊಗಯಿಸುವ ನಿಱುಗನ ನಿಱುದಳಿರ ಗೊಂಚಲ್ಗಳುಂ (ಪಂಪಭಾ. ೨-೧೨ ಪ) ; ನಿಱುನಿಱುಗೊಂಡ ಕೆಂದಳಿರ ಕೆಂದಳಿರ್ಗಳ್ ಪಱುವನ್ನಮುರ್ಬಿನಿಂ ಪೊಱ ಮಡುತಿರ್ಪ ಕೋರಕದ ಕೋರಕದೊಳ್ ನನೆ ಕೂಡಿಕೊಳ್ವಿನಂ ತುಱುಗಿ ಪೊದಟ್ಟ ಪೂಗೊನೆಯ ಬಂಬಲ ಬಲ್ಪೊಱೆಯಿಂದಮೇಂ ಬಟಲ್ದೊಱಗಿದುದೋ ಪುಕಸ್ತುತಿ ವಿನಮ್ರತೆವೆತ್ತವೊಲಾಮ್ರಭೂರುಹಂ (ಲೀಲಾವ. ೧೩-೩೮).

[<ನಿಱಿ$_1$. / ತಮಿ. ನೆಱಿ ; ತುಳು. ನೆರಿ ; ತೆಲು. ನೆಱಿ, ನೆರಿ. ಮರಾ. ನಿರೀ]

ನಿಱಿಕೆ (ನಾ). ಕ್ರಮಬದ್ಧವಾದ ಜೋಡಣೆ (?) : ಕಟ್ಟು ವರ್ನಿಱಿಕೆಯ ನೀವಿಯೊಳಗೆ ಕೈಗಟ್ಟುವರ್ಕಂಕಣಗಳನು ಕಟ್ಟುವರ್ಧಮ್ಮಿಲ್ಲ ವೆಲೆಯ ಮುಂಡಿಗೆಯನು ಕಟ್ಟು ಕುಟ್ಟೆಂಬುದಲ್ಲಿಲ್ಲ (ಮೋಹತ. ೨-೨೩).

[ನಿಱಿ$_2$ + -ಕೆ]

ನಿಱಿಗ, ನಿರಗೆ$_2$, ನಿರುಗೆ$_2$ (ನಾ). ಸಿಹಿಯಾದ ಮಾವು ; ಇನಿ ಮಾವು ; ಇಮ್ಮಾವು : "ನಿಱಿಗಂ = ಒಂದು ಮಾವು" (ಶಸುದ. ಸಂ.೨) ; "ನಿಱಿಗಮೆಂದಿಮ್ಮಾವು" (ಕಶಸಾ. ೫೪-೧೭೩) ; ಬಸಂತರಾಜನ . . . ಬರವಿಂಗೆ ವನವನಿತೆ ಮೆಚ್ಚಿ ನೆಱೆಯೆ ಕೆಯ್ಗೆಯ್ದಂತೆ ನಿಱಿನಿಱಿ ಗೊಂಡು ಸೊಗಯಿಸುವ ನಿಱಿಗನ ನಿಱಿದಳಿರ ಗೊಂಚಲ್ಗಳುಂ (ಪಂಪಭಾ. ೨-೧೨ ಸ) ; ಅರಸಂ ನಿಱಿಗನ ತಣ್ಣೆಟಲೊಳ್ ಕುಳಿತು . . . ರಂಜಿಸಿದಂ (ಉದ್ಭಟ. ೨-೧೦೪) ; ನಿಱಿಗದ ಮರಂಗಳೊಂದು ಪೊದೆಯಿಂ ಪುದಿದ ಬನಗಟ್ಟಲೆಯೆ ಕಾರ ಕರ್ಮುಗಿಲೊಡ್ಡಾಗೆ (ರಾಮಾಶ್ವ. ೫೪-೧೧). **ನಿರಗೆ$_2$** : "ನಿರಗೆಯೆನೆ ನಿರುಗೆಯೆನೆ ಮಾಕಂದಮಕ್ಕು" (ಕಶರ. ೫೫). **ನಿರುಗೆ$_2$** : ಮೇಲಿನ 'ನಿರಗೆ$_2$' ಉಲ್ಲೇಖದ ಪ್ರಯೋಗವನ್ನು ನೋಡಿ. [?]

ನಿಱಿಗಂಡಯ್ಯ (ನಾ). ಒಬ್ಬಾತನ ಹೆಸರು : ಸ್ವಸ್ತಿಶ್ರೀ ಕಣ್ಣಪ್ಪ ಯ್ಯನ ಮಗ ಜಟಿಗರಬಿಪಕ ನಾಗಾರ್ಜ್ಜುನಯ್ಯನು ನಿಱಿಗಣ್ಡಯ್ಯನು ಪೆರಯ್ಯನ್ ಆಳ್ದರವ (ಮೈಅರಿ. ೧೯೨೩, ೧೭-೧ ; ?).

[? + ಅಯ್ಯ$_1$]

ನಿಱಿಗಟ್ಟು (ಕ್ರಿ). ಅಲೆಯಲೆಯಾಗು ; ಗೆರೆಗೆರೆಯಾಗಿರು (?) : ತೆರೆಗೊನೆಯೊಳ್ ತೆರಳ್ದು ನಿಱಿಗಟ್ಟಿದ ಕತ್ತುರಿಯೊಳ್ಗೆ ಸರ್ಕಮಲ್ವರಿ ಯೊಳುದಿರ್ಪುತಿರ್ಪ ಕುಸುಮದ್ರುತಿಯೊಳ್ವೊನಲೊಳ್ ಕಳಲ್ವ ಕಪ್ಪುರದ ಪುಳಿಲ್ ಪಗಿಲ್ತಲರ ಬಂಡಿನ ಸಣ್ಣ ಮಣಲ್ ಮನಕ್ಕೆ ಬಂದಿರೆ ಕೃತಕ ಪ್ರವಾಹಿನಿಯ ತಣ್ಮಳಲಂ ಬಿಡದಿರ್ಪ ನಲ್ಲಳಂ (ವರ್ಧಪು. ೪-೭೩).

[ನಿಱಿ$_2$ + ಕಟ್ಟು$_1$]

ನಿಱಿಗಡ್ಡ (ನಾ). ಒಪ್ಪವಾದ ಗಡ್ಡ ; ಓರಣವಾದ ಗಡ್ಡ : ನೂಱಾಳು ಸಹ ಪೊಳೆಗೆ ಬಂದು ಕಂಡರು ಅವನ ಏಱುಜವ್ವನವನಿದಿ ರೇಳ್ದ ರೋಮದ ಹೊಮ್ಮ ಕೋಱೆದಾಡೆಯೊಳೆಸೆವ ಹುರಿಮೀಸೆಗಳ ನಾಭಿಯೊಳಗೆಳಲ್ವ ನಿಱಿಗಡ್ಡದ ನೀಱತೆಯೊಳುಂ (ಪ್ರಭುಪು. ೭-೭೯).

[ನಿಱಿ$_2$ + ಗಡ್ಡ$_1$]

ನಿಱಿಗರುಳ್, ನಿಱಿಗರುಳು (ನಾ). ನಿರಿಗೆ ನಿರಿಗೆಯಾದ ಕರುಳು: ಸರಳ ಸೊಂಪಿನ ಸೋಹಿನಲಿ ನಿಱಿಗರುಳ ದಾವಣಿವಲೆಗಳಲಿ . . . ಅರಿ ಮೃಗವ್ರಾತವನು ಭೀಮ ಕಿರಾತ ಕೈಕೊಂಡ (ಕುವ್ಯಾದ್ರೋ. ೧೨-೩೧); ಕಂಡನು ದೂರದಲಿ ನಿಱಿಗರುಳ ಕಾಲ್ದೊಡಕುಗಳ . . . ಜಾಱುತ ಬೀಳುತೇಳುವನ (ಕುವ್ಯಾಗ. ೩-೮). **ನಿಱಿಗರುಳು** : ಹೊಟ್ಟೆಯ ನಿಱಿಗರುಳನೊಳಗಿಕ್ಕಿ ಹೊಲಿಸುವ ಮದ್ದುಗಳಿನಿಡಿವ . . . ತುರಗದ ವೈದ್ಯತತಿಯೆಚ್ಚಱಿಕೆಯಲಿ ಸಂತೈಸಿದರು ವಾಜಿಗಳ ವೇದನೆಯ(ಕುವ್ಯಾಭೀ. ೫-೩೯) ; ಸಿಡಿದ ತೊಡೆಗಳಿಂದ ನಿಱಿಗರುಳುಗಳಿಂದ ಜಡಿದುದು ರಣಭೂಮಿ ಯಾಗ (ಕಂನವಿ. ೧೫-೬೨). [ನಿಱಿ$_2$ + ಕರುಳ್]

ನಿಱಿಗರುಳು 'ನಿಱಿಗರುಳ್' ನೋ.

ನಿಱಿಗಳಚು (ಕ್ರಿ). ನಿರಿಗೆ ಬಿಚ್ಚಿಕೊಳ್ಳು,—ಸಡಿಲವಾಗು : ನಿಱಿಗಳಚುವುದು ನಾಣೊಸರ್ವುದು ರೋಮಾಳಿ ತುಱುಗಿರ್ಪುದವಯವ ದೊಳಗೆ (ಮೋಹತ. ೧೮-೭೧).

[ನಿಱಿ$_2$ + ಕಳಚು(<ಕಟಿಲ್ಚು$_1$)]

ನಿಱಿಗಳೆ (ಕ್ರಿ). = ನಿಱಿಗಳಚು : ನೆಟ್ಟನೆ ನಿಱಿಗಳೆದುದು ಚಂದ್ರ ಗಾವಿಯ ಬಟ್ಟಪಾವುಡೆ ಸಹವಾಗಿ (ಮೋಹತ. ೧೬-೩೮).

[ನಿಱಿ$_2$ + ಕಳೆ$_1$]

ನಿಱಿಗಾಸೆ (ನಾ). ನಿರಿಗೆಯುಳ್ಳ ಕಚ್ಚೆ : ಕನಕಕಾಂತಿಯ ಪಸರಿಸುತಿಹ ನಿಱಿಗಾಸೆ ಮಿನುಗುವ ಮಣಿಭೂಷಣದ ವನಿತೆಯರಧಿಕ ಸಂಭ್ರಮದೆ ಕೋಲಾಟವ ಜನಪನೋಲಗದೊಳಾಡಿದರು (ಕಂನವಿ. ೮-೩೧) ; ದುಗುಲ ದೊಳ್ಳೆದಿದ ನಿಱಿಗಾಸೆಯಿಂದ ಐದಂಬನ ಮದದಾನೆಗಳಂದದೊಳ್ಳೆದಿ ದರ್ಜಲಕೇಳಿಗಾಗ (ಕಂನವಿ. ೨೫-೧೧೮). 'ನಿಱಿಚಲ್ಲಣ' ಪರಾ.

[ನಿಱಿ$_2$ + ಕಾಸೆ$_1$]

ನಿಱಿಗುರುಳ್, ನಿಱಿಗುರುಳು, ನಿಱುಗುರುಳ್, ನೆರಿಗುರುಳು (ನಾ). ೧. ಒಪ್ಪವಾದ ಕುರುಳು ; ಓರಣವಾದ ಕೂದಲು : ನಿನ್ನ ವಿರಹದಿಂ ಪೊರಳುತಿರೆ ನಿಱಿಗುರುಳ್ಗಳ ಸಾಲು ಕೆದರ್ದುದು (ಚೆಬಪು. ೧೦-೬೪) ; ನಿಱಿಗುರುಳ್ಗಳ ನೇವರಿಸುತ . . . ಸಿರಿ ನೊಸಲೊಳು ಕಸ್ತುರಿಯ ತಿದ್ದುತ ಹೆಂಗಳರಸಿಯರೆಸೆದರರ್ತಿಯಲಿ (ಕಂನವಿ. ೨೪-೪೬). ೨. ಗುಂಗುರುಕೂದಲು ; ಸುರುಳಿಕೂದಲು; ಕೊಂಕಿದ ಕುರುಳು : ದೇವಿಯ ನಿಱಿಗುರುಳೋಳಿಗೆ ಮುತ್ತಿನೆಸೆವ ಮಂಜರಿಯಂ ಬಿತ್ತರಿಸುವ ತೆಱದಿಂದೊತ್ತಿದನರಸಂ ಜೀರ್ಕೊಟವೆಯಿಂದೆ ಚಂದನಜಲಮಂ (ಕುಸುಮಾ. ೪-೧೩೭) ; ಆ ಕುವರನ ಸುತ್ತಿ ನಿಱಿ ಗುರುಳಿಂದುಮುಖಿಯರು ಒಪ್ಪಿದರು (ಶ್ರೀಪಾಲ. ೬-೨೨) ; ಮಱಿದುಂಬಿ ಕಮ್ಮೆಲರ್ದೂಳಿಯೊಳ್ ಬಿದ್ದೆದ್ದು ಗಱಿ ಬೆಳರ್ವಣ್ಣವಾದಂತೆ ತುಱು ಬೊಂದಾಕಾರವಳಿದು ಭಸ್ಮಾಂಕಿತ ನಿಱಿಗುರುಳ್ ಮೊಗವ ಮುಚ್ಚಿದುವು (ಮೋಹತ. ೮-೨೩). **ನಿಱಿಗುರುಳು** : ೨. ನಿಱಿಗುರುಳ ಬಾಲೆ ಯರ ಮುಂದೆ ತಿರುಗುತ್ತಿಪ್ಪ ಬಱಿವಾಯ ಭುಂಜಕರುಗಳು ತಾವು ಅಱಿವುಳ್ಳವರೆಂದು ಬೀಗಿ ಬೆಱೆಯುತ್ತಿಪ್ಪರು (ಮೋಳಿಮಾ.೧೮೮-೭೦೯); ತುಂಬಿಗಳೊ ನಿಱಿಗುರುಳುಗಳೊ ಮಣಿಗಣವೊ ಸದನವೊ (ಕುವ್ಯಾಅ. ೧೩-೧೮) ; ನಿಱಿಗುರುಳಬಲೆ ನಿನ್ನಯ ದಿವ್ಯದೇಹವ ಬಱಿನೆಲದೆಡೆಯಲ್ಲಿ ಹರಹಿ . . . ಹೊರಳ ಬೇಡ (ಮೋಹತ. ೩೩-೪೮) ; ಮಡಕಿಳಿದ ಕುರುಳ ನಿಱಿಗುರುಳ ಸುಕ್ಕುಂಗುರುಳ . . . ಕೋಮಲೆಯರೆಡೆವಿಡದೊದಗಿ ಬರುತಿರ್ದರು (ಚೆಬಪು.೩೭-೪೬). **ನಿಱುಗುರುಳ್**: ೨. ನಿಱು[ಪಾಶಾಂ. ಱಿ]ಗುರುಳ್ಗಳ ತುಂಬಿಗಳ ಪೊಳೆವ ಲೋಚನದ ಮಱಿಮೀನ . . . ಮೆಱೆವ ಮಧ್ಯದ ಮೃಣಾಳದ ಬಗೆಯ ಭೇದಮಂ ಕುಱುಪಿಡುವೊಡರಿದೆ ನಲ್ಸರಸಿಯೊಳ್ತರಳೆಯರ ಜಲಕೇಳಿ ಕಣ್ಗೆಸೆದುದು (ಜೈಮಿಭಾ. ೩೦-೬). **ನೆರಿಗುರುಳು** : ೨. ಪದದುಂಗುಟದ ತುದಿಯಿಂದ ಬರೆವುತಿಳೆಯ ನಿರೀಕ್ಷಿಸುತ ನೆರಿಗುರುಳನಂಗಕೆ ಪೊಡಿಸಿಕೊಳುತುತ್ತರಕೆ . ಬದಲುತ್ತರವ ನೀಯದೆ ನಿಂದಳರೆಘಳಿಗೆ (ಅನಂರಾ. ೨-೧-೩೬).

ನಿಱಿಗುರುಳಳ್ = ಗುಂಗುರು ಕೂದಲುಳ್ಳವಳು : ನಿಱಿ ಗುರುಳಳೆ ನಿಡಿಗಣ್ಣಳೆ ಕೆಂಬಾಯಿದೆಱೆಯಳೆ (ವರ್ಧಚ. ೩-೧೮).

[ನಿಱಿ$_2$ + ಕುರುಳ್$_1$]

ನಿಱಿಗುರುಳು 'ನಿಱಿಗುರುಳ್' ನೋ.

ನಿಱಿಗೆ, ನಿರಗೆ$_1$, ನಿರಿಗೆ, ನಿರುಗೆ$_1$, ನಿಱುಗೆ, ನೆರಿಗೆ, ನೆಱಿಗೆ (ನಾ). ೧. (ಸೀರೆ, ದೋತ್ರ ಮೊದಲಾದವುಗಳ) ಮಡಿಕೆ : ನಿಱಿಗೆಗಳ ಪಸರಿಸುತ ಉರದೋಱೆ ಸೆಱಗ ಹೊಱುತಿಹಳು ಹಾದರದ ನೆರಳು ಕಾಣಯ್ಯ (ಸರ್ವಜ್ಞ. ೧೮೩೮). ೨. ಪದರ ; ಮಡಿಕೆ : ಗಿರಿ ಪಾಱೆ ಭಾಗಮಿಕ್ಕಿದ ನಿಱಿಗೆವೊಲಸುರೇಂದ್ರನಳ್ಕಿ ಬೆಳ್ಳುರ್ತಿರದಂಬರದ ನಿಱಿಮುಗಿಲ ತೆರೆಗಳ ಪೊರೆಯೊಳಗಣ ನಿಜವಿಮಾನದೊಳಗಂ ಪೊಕ್ಕಂ (ಶಾಂತಿಪು. ೮-೫೨). ೩. ವಿನ್ಯಾಸ ; ರಚನೆ : ಹೊಗೆಯ

ಹೊದಱುನ ನಿಱುಗೆಯಿಂದು ವಹ್ನಿಗೆ ಸುನಿಶ್ಚಯವೆಂಬವೊಲು ಮೇಲಗಿವ ಶೋಕಕೃಶಾನುವಿನ್ನೀ ಮನದ ಹೊಗೆಯೆಂದ (ಕುಪ್ಯಾದ್ರೋ. ಓರಿಇ. ೮-೧೦ ಅಧಿಕಪದ್ಯ) ; ಅದು ವೇದಗಳನೆಯಾಜ್ಞೆಯನುಳ್ಳ ಸರ್ವತತ್ವದ ಸಮೂಹವನುಳ್ಳ ಬಹುಭುವನವೆಂದೆಂಬ ಸದನನಿರ್ಮಾಣಕ್ಕೆ ನಿಱುಗೆಗಂ ನಾಡೆ ಮೂಲಸ್ಥಂಭಯಷ್ಟಿ (ವೀಶೈಪು. ೫-೩-೯); ಏತಱೊಂದು ಪೊಚ್ಚಱದ ಮಾತಿನೊಂದು ನಿಱುಗೆಯೊ ! (ರಾಮಾಶ್ವ. ೮೫-೨೬). ೪. ರೀತಿ ; ಕ್ರಮ ; ಪದ್ಧತಿ : ಅಱುವತ್ತು ಮತ್ತೆ ತೊಂಬತ್ತಱುಕೆಯದಯ್ವತ್ತು ಮತ್ತೆ ನಾಲ್ವತ್ತಕ್ಕುಂ ನೆಱೆಯೆಂಭತ್ತೆಪ್ಪ(ತ್ತುಂ)ತ್ತೆನೆ ನಿಱುಗೆಯ ಮೂವತ್ತುಮಿ(ಮ)ವಱ ಘಱುಗೆಗಳಕ್ಕುಂ (ಖಮದ. ೩-೩೮) ; ಅಱುವ ಪರವಸ್ತುವೊಂದೇ ರೂಪು ಸದ್ಭಕ್ತಿವೆಱಗಿನಿಂದೆರಡಾಗಿ ಸಹಜದ ನಿರೀಕ್ಷಣೆಯ ನಿಱುಗೆಯಿಂದೊಂದಾದುದು (ಲಶಿಚಂ. ೫೪-೨೦) ; ಕಪಟದ ನಿಱುಗೆಯನು ಬಲ್ಲನೆ ಯುಧಿಷ್ಠಿರನು (ಕುಪ್ಯಾಅ. ೧೬-೧೦). ೫. ಇರುವಿಕೆ ; ನಡವಳಿಕೆ ; ವ್ಯವಹಾರ : ಧರಣಿಪನ ನಿಱುಗೆಯಲಿ ಕಂದನ ಮರಣವನು ನಿಶ್ಚಯಿಸಿ ಪ್ರಳಯದ ಹರನ ಕೋಪವ ಕೇಣಿಗೊಂಡನು ತನ್ನ ಚಿತ್ತದಲಿ (ಕುಪ್ಯಾದ್ರೋ. ೮-೧೪) ; ನೇರ್ ನಿಱುಗೆ ದಟದೊಳಗೆ ಕಟ್ಟಳೆಯೆ ಪಲರನ್ ಕಾಪಿಟ್ಟು ಬರ್ದುಕಿಪುದು (ಅಂತಿಗೊ. ೩೧-೬೩೦). ೬. ಪರಿಣಾಮ : ನಿತ್ಯಾನಂದಪದವಿಯ ನಿಱುಗೆಯನು ನಿಯಮಿಸಿದನಾ ಪ್ರಭುಲಿಂಗ ಭಕ್ತರಿಗೆ (ಪ್ರಭುಲೀ. ೨೦-೫) ; ಮೋಕ್ಷ ಶಾಸ್ತ್ರಾರ್ಥದ ನಿಱುಗೆಯನಾರ್ ಪೇಳ್ವರ್ (ಪಾಪ್ರಾಶ. ೪೩). ೭. ಸೊಬಗು ; ಬೆಡಗು; ವಿಲಾಸ : ರೇಖೆಯ ನಿಱುಗೆ ಬಣ್ಣದ ಜಾತಿ ಭಾವದ ನೆಱವಣಿಗೆಯಿಂ ಬಲಿದ ನಿಪುಣತೆ ಕಣ್ಗೆ ಸೊಗಯಿಸಲು (ಕುಮುಂಾ. ೩-೫೧) ; ಕಂಕಣಗಳ ಝಣತ್ಕಾರದಲಿ ಮಾಯಾಲಲನೆ ರಂಗಂಬೊಕ್ಕು ನಿಂದಳು ನಿಜದ ನಿಱುಗೆಯಲಿ (ಪ್ರಭುಲೀ. ೪-೫೪). ೮. ಪ್ರದರ್ಶನ ; ಆಡಂಬರ : (ಕಿ). ೯. "ಸಡಗರ ; ಡಂಭ" (ಪ್ರಭಣ್ಣ). ೧೦. ನಿಲವು ; ಸ್ವರೂಪ : ಅಱುದಱುವಿನ ಕುಱುಹಿನಲ್ಲಿ ನಿಱುಗೆಯ ನಿಜದ ಕುಱುಹ ಕಂಡ ಮತ್ತೆ ಮಱೆದರೆಂಬುದಕ್ಕೆ ಸೂಚನೆ (ಮೋಳಿಮಾ. ೧೭೫-೬೬೨) ; ಅಱುವು ತಲೆಕೆಳಗಾಯ್ತು ಧೈರ್ಯದ ನಿಱುಗೆ ನಗೆಗೆಡೆಯಾಯ್ತು (ಕುಪ್ಯಾವಿ. ೨-೧೨) ; ನೆಱೆ ನಿರಂತರ ನಿರ್ವಿಕಾರದ ನಿಱುಗೆಯಮಲಜ್ಞಾನವನು ಕಣ್ಡಱಸುವಾ ಪ್ರಭುರಾಯನನು ಕಂಡಳು ಮಹಾದೇವಿ (ಪ್ರಭುಲೀ. ೧೭-೪); ನಿಜದ ನಿಱು[ಪಾಠಾಂ. ಱು]ಗೆಯ ಭಕ್ತಿಯಲಿ ಭೂಮಿಜೆಯ ಮೈದುನನಮಲಪದಪಂಕಜಕೆ ವಿನಮಿತನಾಗಿ ತಂದನು ರವಿಜನರಮನೆಗೆ (ತೊರರಾ. ೪-೬-೨೧). ೧೧. "ಕ್ರಮಪಡಿಸುವಿಕೆ ; ತಿದ್ದುವಿಕೆ ; ಸರಿಪಡಿಸುವಿಕೆ" (ಪ್ರಭಣ್ಣ). ೧೨. ಸ್ಥಾಪನೆ ; ಪ್ರತಿಷ್ಠೆ : ಸದಭಿಮತ ದೇವತಾನೀಕದ ನಿಱುಗೆಗೆ ನೆಗಟ್ಟ ಮಾರ್ಗಶಿರಮುಂ ಮಾಘಂ ಮೊದಲಾದಱುದಿಂಗಳುಮಿಷ್ಟದಾಯಕಂ (ಲೋಕೋಪ. ೨-೪೯). **ನಿರಗೆ$_1$:** ೧. ಕಟ್ಟೀಯ ನೆಳ್ಳೀಲಿ ಬುಟ್ಟಿಯ ಹೆಣೆಯೂನ ದಿಕ್ಕಿನ ಧೂಳ ಎದಿ ಮ್ಯಾಗ ಬಿದ್ದರ ನಿರಗಿಲ ಓರಸಿ ಇರುವೇನ (ಲೋಕಗೀ. ೧೫೭) ; ಹಾಲಗೋಳಿಯ ಮ್ಯಾಲ ನೀರಗೋಳಿಯ ತಂದ ನೀರಾಗ ನಿರಗೆ ಒದೆಯೂವ ಹೆಣ್ಣೀನ ಹ್ಯಾಂವಕ ತಂದ ಶಿವರಾಯ (ಕನ್ನಜಾ. ೧೦೬) ; ಒಂದ ಪಾಟುಣಗಿಳಿದಾಳ ಒಂದ ನಿರಗೆ ಉಚ್ಚ್ಯಾಳ (ಮಲ್ಲಿಗೆ. ೩೬). **ನಿರಿಗೆ :** ೧. ಹೆಂಣಿನ ನಿರಿಗೆ ಗಂಡಿನ ತಲೆಗೆ (ಸೌಇಎ. ೧೯೨೯, ಉಡುಪಿ. ೪೮೭-೧೩ ; 1533) ; ನೀನುಟ್ಟ ಸೀರೆಯ ನಿರಿಗೆ ಕಳಚುವುದು . . . ಆಗ ನಾನು ಲಿಂಗೈಕ್ಯನಾದೆನೆಂದು ತಿಳಿ (ಶರಚ. ೩೫೫) ; ಹೆಣ್ಣುಮಕ್ಕಳು ದುಂಡಗೆ ನಿಂತು, ಬಲಗೈಯಿಂದ ಉಟ್ಟ ಸೀರೆಯ ನಿರಿಗೆಗಳನ್ನು ಎತ್ತರಿಸಿ ಹಿಡಿದು . . . ಆಡುವರು (ಕನ್ನಜಾ. ೩೯); ಉಟ್ಟದ್ದ ಕಚ್ಚೆಪಂಚೆಯ ನಿರಿಗೆಯನ್ನು ತಿರುಗಿಸಿ ಹೊಟ್ಟೆಯ ಸುತ್ತ, ಸೊಂಟದ ಸುತ್ತ ಕಟ್ಟಿರುತ್ತಿದ್ದ (ಸಾಹೇಬ್. ೧೬). ೧೩. ಸುಕ್ಕು : ಗಂಡಕದ ಕಾಲುಗಳ ತೊಗಲಿಗೆ ದೊಡ್ಡದೊಡ್ಡ ನಿರಿಗೆಗಳಿರುತ್ತವೆ ; ಕೆಲವುಗಳಿಗೆ ಎರ್ಡೂ ಹೆಗಲ ಮೇಲೆ ಒಂದು ಸಣ್ಣ ನಿರಿಗೆ ಇರುತ್ತದೆ (ಮುಂಬಯಿ. ೫-೨೪೯). **ನಿರುಗೆ$_1$:** ೪. ತರಹರಿಸಿದರು ಮುನ್ನಿನ ಸ್ವರೂಪದ ನಿರುಗೆಯನು ಕೈಕೊಂಡು ಪೇಳೌ ತರುಣಿಯೆನೆ ಮನ ನಲಿದು ಬಿನ್ನಹ ಮಾಡಿದಳು ತರಳೆ (ಉತ್ತಕ. ೩೪-೨೯). ೧೦. ಪರಮ ಪೂರ್ಣಾಖಂಡತತ್ವದ ನಿರುಗೆ ನೀನಾಗೈ (ಗಗತಾ. ೨೨-೧೦೩). ೧೪. ಕ್ರಮಬದ್ಧವಾದ ಜೋಡಣೆ, — ಜೋಡಿಕೆ : "ಣಿದ್ಯ, ಣೇದ್ಯ ಕುತ್ಸಾ, ಸನ್ನಿಕರ್ಷಣಯೋಃ, ಹಳಿತದೊಳಂ, ನಿರುಗೆಯೊಳಂ" (ಕಾಶಕೃ. ೧೫೩). ೧೫. ಸೇರುವಿಕೆ ; ಹೊಂದಾಣಿಕೆ : ಕೃಷ್ಣ ಶುಕ್ಲವೆಂಬ ಪಕ್ಷದ್ವಯಗಳ ನಿರುಗೆಯ ತಾಣವಿವರಗಳನ್ನು ಮನ್ಮಥ ಕ್ರೀಡಾಸಮೇತನಾದ ಪುರುಷನು ತಿಳಿದೆಸಗುವುದು (ಸಕವೈ. ೬೦). ೧೬. ವಸ್ತುಸ್ಥಿತಿ ; ಇರವು : ಸಾರಿದೆನು ರಕ್ಕಸಿಯ ಕೊಲುತಿಹದೂರು ನಿರುಗೆಯುಯೆನುತ (ಕರಿಕ. ೧೧೫-೧೧). **ನಿಱುಗೆ :** ೩. ಪ್ರಾಸದ ಭಂದದ ಅನ್ವಯದ ನಿಱುಗೆಯಿಂ ಶಬ್ದಂಗಳ್ ವ್ಯತ್ಯಯಮಾಗಿರ್ಪುವು (ಶಮದ. ಪೀಠಿಕೆ. ೬ ವೃತ್ತಿ). ೪. ಪರೇತಕೃತ್ಯವ ಪರಮವೈದಿಕದ ನಿಱುಗೆಯಲಿ ಮಾಡಿಸಿದನಗ್ನಿಯಲೊಱಗಿತೈನೂಱರಸಿಯರು (ತೊರರಾ. ೨-೬-೬). ೭. ಏನನೆಂಬೆನು . . . ಆ ನಿತಂಬಿನಿಯರ ಸುರೇಖಾಸ್ಥಾನಕದ ನಿಱುಗೆಯ ಸುಢಾಳದನೂನ ಸಮ್ಮೋಹನದ ತೂಕದ ಭಾವಭಂಗಿಗಳ (ಕುಪ್ಯಾಅ. ೭-೯೨). ೧೦. ನೆಲನಂ ನಿಱುಗೆಯಂ ನಡೆವೊಂದು ಪದಮುಮಂ . . . ಬಲ್ಮೆಗೆ ಬೆರಲೆತ್ತಿ ಪಜ್ಜೆಯಂ ನೆಲೆಗಳಂ ಕಿಡಲೀಯದೆ ಸಿಲೆಯ ಮೇಲಾದೊಡಂ ಶಕುನಮಂ ನಿಱುಪಂತೆ ನಿಱುಸುವೆಂ ಪಂದಿಯಂ ನೀ ಮೆಚ್ಚಲುಂ (ಪಂಪಭಾ. ೫-೪೬) ; ವಿವಿಧಪ್ರಭಾವೋತ್ಕರದ ನಿಱುಗೆಯ ತೋಱುದನು (ಕುಪ್ಯಾಅ. ೬-೬೮) ; ನಿನ್ನ ಮೂರ್ತಿಯ ನಿಱುಗೆಯಿದಿರಲಿ ಹರಣವಳಿವೆನು (ಕೌಶಿರಾ. ೮-೩೩) ; ಅಱುವರಾರೆಲೆ ದೇವ ನಿನ್ನೀ ನಿಱುಗೆಯನು ನಿಗಮಾಂತ್ಯವೇದ್ಯನನಱಸಿ ಯೋಗಾಧೀಶರಱುಯರು ಯೋಗನಿಷ್ಠೆಯಲಿ (ನಿಭಾಗ. ೯-೭-೪೨). ೧೭. ನಿರೂಪಣೆ ; ವಿವರಣೆ: ಸನ್ಯಾಸವಿಧಾಯಕಂಗಳಾದ ಶಾಸ್ತ್ರಂಗಳ ನಿಱುಗೆಯಂ ಕೇಳ್ಳೆ (ಭಾರಶಾಂ. ೧೨೮-೧೯). ೧೮. ನಿಶ್ಚಯ; ದೃಢತೆ (?) : ನಿಱುಗೆಯಿಂ ಪಚ್ಚೆವೆಣ್ಬಂಜೆಯೆನಿಸುಗುಂ (ಶಬ್ದಮಂ. ೭೪) ; ಬೋಧೆಯ ನಿಱುಗೆಯೆಂಬಸಿಯಿಂದ ಕಡಿದಜ್ಞಾನಪಾಶಗಳ ಪರಮನೇ ನೀನಾಗಿ ಶಾಸ್ತ್ರವ ತೊಱೆವುದು (ನಿಭಾಗ. ೧೧-೧೯-೧೯). ೧೯. (?) : ನಿಱು[ಪಾಠಾಂ. ಱು]ಗುಱೆಗಂಟವೇಟಮಮರ್ದೊಪ್ಪಿರೆ ನಲ್ಲನೊಳೊಂದಿದ ಟ್ಕಱಂ[ದುಱೆ] ಮಱಸಲ್ಕೆ ಪೋಗುತಿರೆ (ಬಂಹರಿ. ೩-೫೩). **ನೆರಿಗೆ :** ೧. ಜಡೆಯು ಅಲ್ಲಾಡುತ್ತಿರಲು ಚಂದಕಾವೀ ಸೀರೆಯ ನೆರಿಗೆಗಳು ಜೋಲಾಡುತ್ತಿರಲು (ಕೃಪಾವಿ. ೬೬); ಬಿತ್ತಾರಿ ನೆರಿಗೇ ಬಿಗಿದೂಡೆ ಸೈಯ್ಯ (ಹುಟ್ಟಹ. ೪೫). ೨. ಅವನ ಬಾಯಿಯ ಎರಡೂ ಕಡೆ ಎರಡು ಗೆರೆಗಳು ಬಿದ್ದಿದ್ದವು, ನೆರಿಗೆಗಳಲ್ಲ. ಬಳಕೆಯಿಂದ ಬಿದ್ದ ಗೆರೆಗಳವು (ಮಹಾತ್ಮಾ. ೧೯). **ನೆಱುಗೆ :** ೧೦. ತಾನಿರದ ನೆಱುಗೆಯಲ್ಲಿ ಸಂದ ಮತ್ತೆ ಸಂದಣಿಗಾಱರ ಬಂದದ ಮಾತೇತಕ್ಕೆ ಇದು ಪ್ರತಾಚಾರದ ನಿಂದ ನೆಱುಗೆ(ಏಲೇಶ್ವ. ೧೬೮). ೧೪. ಅಱುವಿನ ಅಱುಕೆ ಕುಱುಹಿನ ಪೂಜೆ ನೆಱುಗೆಯಾಗಬೇಕು (ಕಲ್ಯಾಶಾಂ. ೧೫). ೨೦. ಸಂಬಂಧ ; ವಾವೆ (?) : ಮೊಱೆ ಧರ್ಮಕಂಜಿದೊಡರ್ಜುನ ಪಾಂಚಾಲಿಗೆಱೆಯನಾಗಿಹನೆ ಮೆಯ್ಮಱೆದು ನೆಱುಗೆಯಲ್ಲಿವನೆನ್ನ ಬಿಟ್ಟನೆಂಬೀ ನುಡಿ ನೆಱೆ ಜಾಣೆ ಭಾವಿಸಿ ನೋಡು (ಕುರಾಸಾಂ. ೬-೧೦೭). [ನಿಱು$_2$ + -ಗೆ./ತುಳು.ನೆರಿಗೆ]

ನಿಱುಗೆಗಾಣು, ನಿಱುಗೆಗಾಣು (ಕ್ರಿ). ಸ್ಥಿತಿಯನ್ನು ತಿಳಿ ; ಇರುವಿಕೆಯನ್ನು ಕಾಣು : ಅಱುವಿನ ನಿಱುಗೆಗಾಣದ ಗಿರಿಯ ಕೋಡುಗಲ್ಲ

ಮೇಲೆ ತಲೆಯೂಜಿ ತಪಸ್ಸು ಮಾಡಿದದಿಲ್ಲ (ಅನಘಂ. ೨೫೭–೧೧೭೧).
ನಿಜುಗೆಗಾಣು : ಕುಜುಹಳಿದು ನಿಜುಗೆಗಂಡು ಬೆಜಗುವಡೆದು ಹೃದಯಾಕಾಶದ ಬಟ್ಟ ಬಯಲೊಳಗೆ ಭರತವಾಗಿರ್ದ ಮಹಾಶರಣರ ತೋಜು ಬದುಕಿಸಾ (ಅದಪ. ೪೮–೧೩೪).

[ನಿಜುಗೆ + ಕಾಣು(< ಕಾಣ್)]

ನಿಜಂಗೆಗೆಯ್ (ಕ್ರಿ). ೧. "ಮಡಿಕೆಮಾಡು, ಜೋಡಿಸು" (ಪ್ರಭಣ್ಣ). ೨. ಕ್ರಮಪಡಿಸು ; ವ್ಯವಸ್ಥೆಮಾಡು : ನಿಜುಗೆಗೆಯ್ದು ಸಂತಸವಿರ್ಪನಂ (ಚಿಕವಿ. ೬–೨೬೨ ವ).

[ನಿಜುಗೆ + ಕೆಯ್$_1$]

ನಿಜಂಗೆದಳೆ (ಕ್ರಿ). ಸುರುಳಿಗೊಳ್ಳು ; ಗುಂಗುರಾಗು : ಮೆಲ್ನುಡಿಯ ಮೋಹನಾತ್ಮಕಿ . . . ದ್ವಿರೇಫರುಚಿವೊಲ್ನಿಜುಗೆದಳೆದ ಚಕುರದ ಜಿನ್ನೆ (ಸಂದಿಮಾ. ೬–೧೦). [ನಿಜುಗೆ + ತಳೆ$_1$]

ನಿಜಂಗೆವಡೆ (ಕ್ರಿ). ೧. ಕ್ರಮವಾಗು ; ವ್ಯವಸ್ಥೆ ಹೊಂದು ; ನೇರವಾಗು : ಪರಮಪದಭಾವದಿಂ ನೂಲ್ದೆಗೆದಂತೆ ನಿಜುಗೆವಡೆದ ಬಾಹ್ಯ ಸಾಮಗ್ರಿಯೊಳ್ ನ್ಯಗ್ರನಾಗಿ (ಅನಂಪು. ೯–೧೧೪೪ ವ). ೨. ಸೊಬಗನ್ನು ಹೊಂದು ; ಅಂದವಡೆ ; ಚೆಲುವಾಗು : ಜೈತ್ಯಂಗಳ ಪೊಜಗಡಂ ನಿಜುಗೆವಡೆದ ಶಾತವಾಸಹಸ್ರಂಗಳೊಳ್ ಮುಂಗಳೋತ್ಸವಮನಪ್ಪು ಕೆಯ್ದು (ಅನಂಪು. ೧೦–೨೩ ವ). [ನಿಜುಗೆ + ಪಡೆ$_1$]

ನಿಜಂಗೊಳ್ (ಕ್ರಿ). ೧. ಪದರ ಪದರವಾಗು : ಕರಮೆಸೆದುದು ನಿಜುಯಂಗಜಶಬರಂ ಸರಸವಿಟರ ನಿಡುಗಜ್ಜೇಂಗಳನುರು ಭರದಿಂ ಬೀಸಿ ತೆಗೆದ ಬಲೆ ನಿಜುಗೊಂಡಂದಮನನುಕರಿಸಿ (ಜಯಕಾ. ೫–೫). ೨. ಸುಕ್ಕುಗಟ್ಟು ; ನಿರಿಗೆಯಾಗು ; ಮಡಿಕೆ ಬೀಳು : ಬಟ್ಟು ನಿಜುಗೊಂಡ ಕುಜಂ ನಜುಗೊಂಡ ಪೆರ್ಬಸಿಜ್ಞ ಬಿಟ್ಟಪುಗೆಟ್ಟ ತೋಳ್ ತೊಡೆ (ಸೂಕ್ತಿಸು. ೪–೩೪೪). ೩. ತೆರೆತೆರೆಯಾಗು ; ಅಲೆಅಲೆಯಾಗು : ಮೇದಿನಿ ಬೆಂಗೆ ಬಿಟ್ಟ ಮುಡಿಯಂತೆಸೆದಿರ್ಪುದು ಪುಷ್ಪಿತಂ ತಟೀಪಾದಪವೀಧಿ ಪಂತಿಗಳುಳಂತಿರೆ ಸಂಜೆಳ ವಿಾನಸಂಚಯಂ ಪೂದುಜುಗಲ್ ತಡಂ ತೊಡರ್ದು ತೋರ್ಪವೊಲೊಪ್ಪಿರೆ ಕೊಂಕುವೆತ್ತ ಸೀತೋದೆ ಸಡಿಲ್ದು ನೀಳ್ದ ಶರದಿಂ ನಿಜುಗೊಂಡು ಬಟಲ್ದ ಭಂಗಿಯಿಂ (ಅಧ್ಯಾನೇ. ೧–೬೧); ನಿಜುಗೊಂಡ ಶರದ್ಪನಾಳಯಿಂ ಪುದಿದನಿಳಾಧ್ವದೊಳ್ ಪೊಳೆಯುತಿರ್ದುದು ಚಂಡಮರೀಚಿಮಂಡಲಂ (ಜಗವಿ. ೪–೭೧). ೪. ಸುರುಳಿಗೊಳ್ಳು ; ಗುಂಗುರಾಗು : ಪೊದಟ್ಟಿ ಧರಮೊತ್ತದೆಯುಂ ನಿಜುಗೊಂಡ ಚುಂಚು ಸೋರ್ಮುಡಿ . . . ಕರಮೆ ರಂಜಿಸೆ ಬಂಪರಿಳೇಶ ಕಾಂತೆಯರ್ (ಕಾವ್ಯಾವ. ೯೩೪); ನಿಜುಗೊಳ್ವ ಸುನೀಲಕುಂತಳಂ ಗಾಡಿಯುನೀವ ನಕ್ಷತ್ರಶಿ . . . ಬೆನ್ನೊಳಂದಾಡುವ ವೇಣಿ ತಾಂ ಸೊಗಸೆ ಸೌಂದರಿ ರಂಜಿಸಿದಳ್ (ಉದ್ಭವ.೬–೫೮). ೫. ಚೆಲುವಾಗು; ಮನೋಹರತೆಯನ್ನು ಹೊಂದು ; ಅಂದವಾಗು : ಕಿಜುನಿಜುಯೊಳೆ ಕಿಜುದೆಲೆಗಳ ತುಜುಗಿದ ಚೆಲ್ವೆಳಸಿ ಬಳಸಿ ವನವನಿತೆಯ ಕಣ್ಣುಜುಯೆನೆ ನಿಜುಗೊಂಡಿರೆ ನಿಜುನಿಜುಗನ ನಿಜುದಳರ ನಿಜುಯನಜುಯಂ ಪೊಗಟಲ್ (ಅಪಪು. ೬–೯೮) ; ನಿಜುಗೊಂಡು ತಳರ್ದವಿಲ್ಲಿ ಕೊಪ್ಪಿನೊಳ್ ಪಬಯಿಗೆಯಾಯ್ತು ಕಂತುಗೆನಲೇವುದೊ ವಿಳ್ಳ ತಳವಿರಿಯೋಗಿಯಂ ಕಳಕುಳವಾಗೆ ಮಾಟ್ಪಿಡೆಗತೋಕೆಯ ಕೆಂದಳಿರೊಂದೆ ಸಾಲದೇ (ಪುಲ್ಲಿಪು. ೫–೨೦) ; ಪೆಜಕೆದೊರೆ ನೊಸಲೊಳ್ ವಿಜುಗುವ ಕಜುಗೆಜಕೆ ತಾನೆಂಬ ನಂಬುಗೆಯನೆಸಗುವಿನಂ ನಿಜುಗೊಂಡಲಸುವ ಪುರ್ಬಿಂ ಜಜುದು (ಚಿಕವಿ. ೬–೬೧). [ನಿಜು$_2$ + ಕೊಳ್$_1$]

ನಿಜುಚಲ್ಲಣ (ನಾ). ನಿರಿಗೆಯುಳ್ಳ ಚಲ್ಲಣ : "ಚಂಡಾತಮೆನೆ ನಿಜುಚಲ್ಲಣಂಗಳಕ್ಕುಂ" (ಸುಂಗರಾ. ೧೦೧–೨೯). [ನಿಜು$_2$ + ಚಲ್ಲಣ]

ನಿಜುದಪ್ಪು (ಕ್ರಿ). ಕ್ರಮತಪ್ಪು ; ನೀತಿಯನ್ನು ಮಾರು : ನೀನಿರುಳ್ ನಿಜುದಪ್ಪಿ ಪೋಗಯ್ : ಘೋರಕರ್ಮಮನ್ ಎಸಗೆ ಪೋಗಯ್ (ಅತ್ತತ್ತಾ. ೪–೧೬೪). [ನಿಜು$_2$ + ತಪ್ಪು$_1$]

ನಿಜುದಲೆ (ನಾ). ಗುಂಗುರುಕೂದಲುಳ್ಳ ತಲೆ; ಸುರುಳಿಗೂದಲುಳ್ಳ ತಲೆ : ಸಲೆ ಮಾಂಸಿ ನೆಲ್ಲಿ ನೀಲೋತ್ಪಲಕಂಜಂ ಕೋಷ್ಣ ಮೆಂಬಿವಂ ಕಜುಯಿಂದಂ ತಲೆಯುಂ ಪೂಸಲೊಡಂ ನಜುದಲೆ ನಿಜುದಲೆಯಕ್ಕುಂ (ಲೋಕೋಪ. ೯–೫೨) ; ಆ ಮಹೀಪಾಲನ ಲೋಲಲೋಚನಂಗಳಾಕೆಯ . . . ನಿಜುದಲೆಯೊಳ್ಕೈನಿಜುದಾಡಿಯುಂ (ಪುಲ್ಲಿಪು. ೩–೪೪) ; ಕಿಜುನೆಲೆ ನಿಜುದಲೆ ಬೆಳವಾಯಿ ತುಜುನೆಮೆಗಣ್ (ಕಾಂ. I, ೨೫–೫೦ ; 1186) ; ನಿಜುದಲೆಯ ಜೊಲ್ಲೆಯದ ತುಂಬಿಯ ಮುಜುಗುರುಳ . . . ನಳತೋಳುಗಳ ನೀಜುಯೆರೈದಿತೊಗ್ಗಿನಲಿ (ಕುವ್ಯಾಳ. ೧೩–೩೦).

[ನಿಜು$_2$ + ತಲೆ$_1$]

ನಿಜುದಳಿರ್ (ನಾ). ಸೊಗಸಾದ ಚಿಗುರು ; ಮನೋಹರವಾದ ತಳಿರು : ನಿಜುನಿಜುಗನ ನಿಜುದಳಿರ ನಿಜುಯನಜುಯಂ ಪೊಗಟಲ್ (ಅಪಪು. ೬–೯೪) ; ಬಸಂತರಾಜನ . . . ಬರವಿಂಗೆ ವನವನಿತೆ ಮೆಚ್ಚಿ ನೆಜುಯೆ ಕೆಯ್ಗೊಯ್ದಂತೆ ನಿಜುನಿಜುಗೊಂಡು ಸೊಗಯಿಸುವ ನಿಜುಗನ ನಿಜುದಳಿರ ಗೊಂಚಲ್ಗಳುಂ (ಸಂಸಭಾ. ೨–೧೨ ವ) ; ಆರಲ್ದೊಂಗಲ ನಿಜುದಳಿರೊಳಗೆ ಜಿನುಂಗುವ ಪೆಣ್ದುಂಬಿಗಳುಮಳುಂಬಂ ಬನದೊಳ್ (ಕಾವ್ಯಾವ. ೨೫೦) ; ಪಸುರನಾಳ್ದಂಕುರದಿಂದೆಳದಳಿರಿಂ ನಿಜುದಳಿರಿಂ ಸೆಳೆಗೊಂಬುಗಳೊಜಗೆ ತುಜುಗಿ ಬಂದುದು ಜೂತಂ (ಲೀಲಾವ. ೯–೯೦) ; ಪೂತ ಚೂತದ ಕಿಜುಗೊಂಬಿನೊಳ್ ನಿಜುದಳಿರ್ ಮೆಜುದತ್ತು ಬಸಂತ ವಿಾಸದೊಳ್ (ಅನಂಪು. ೬–೮೨) : [ನಿಜು$_2$ + ತಳಿರ್$_2$]

ನಿಜುದಳಿರ್ದೊಂಗಲ್ (ನಾ). ಅಂದವಾದ ಚಿಗುರುಗಳ ಗೊಂಚಲು ; ಸುಂದರವಾದ ತಳಿರುಗಳ ಗುಚ್ಛ : ನಿಜುದಳಿರ್ದೊಂಗಲುಂ ತಳದಶೋಕೆ (ಎಕ. XI, ದಾವಣ. ೩೫–೩೭ ; ಸು. 1160) ; ನಿಜುದಳಿರ್ದೊಂಗಲಿಂದೆಸೆವತೋಳವನಂ . . . ಒಪ್ಪುಗುಂ (ಚಂದ್ರಪು. ೧೫–೪೮) ; ನಿಜುದಳಿರ್ದೊಂಗಲುಂ ತೆಗೆಯೆ ಬಾರುಳಿಯುಂ ದನಿಗೆಯ್ದು ಶೋಕೆಯೊಳ್ . . . ಗಾಳುವಣ್ಣಳೇಂ ಮೆಜುದರೊ ಕೇಳಿಶೈಲಶಿಖರಾವಳಿಯೊಳ್ ಶಬರೀವಿಲಾಸಮಂ (ಅನಂಪು. ೬–೧೭).

[ನಿಜುದಳಿರ್ + ತೊಂಗಲ್]

ನಿಜುದುಂಬಿ (ನಾ). ಮನೋಹರವಾದ ತುಂಬಿ,—ಭ್ರಮರ : ಬರಿಮುಗುಳ ಪರಿಮಳಮನೆಸೆಜುಗೊಳ್ವ ನಿಜುದುಂಬಿಗಳ ಗಜುಯು ಗಾಳಿಯನುಜುಕೆ ಸೆಜುವಿಡಿದುಂ (ಲೀಲಾವ. ೬–೨೦ ವ).

[ನಿಜು$_2$ + ತುಂಬಿ$_1$]

ನಿಜುದುಪ್ಪುಟಿ (ನಾ). ಮನೋಹರವಾದ ತುಪ್ಪುಳು : ಅಂಚೆವಿಂಡಿನ ನಿಜುದುಪ್ಪುಟಿಯೊಳ್ ಸುಸುಳ್ದು . . . ತಣ್ಣನೆ ತಣ್ಣನೆ ಬಂದುದಂದು . . . ಮಾರುತಂ (ಶಬ್ದಾಸು. ೩೯೪ ಪ್ರಯೋ).

[ನಿಜು$_2$ + ತುಪ್ಪುಟಿ]

ನಿಜುದುಜುಂಬು (ನಾ). ಒಪ್ಪವಾದ ತುರುಬು : ನೂಲ ತೊಂಗಲ ತಲಾರದ ಮೆಲ್ಲುಲಿ ಪೆರ್ಜೆ ಮೆಲ್ಪು ಮತ್ತೊಜಗೆ ಕರಂಗಳಿಂ ನಿಜುದುಜುಂಬೆದೆವಾದ್ಯದೊಳೊಂದಿ ನಿಂದು ನುಂದೆಜುಗಿ ಲಯಂಗಳೊಳ್ ತಗುಳಿ ನರ್ತಿಸಿದಾಕೆಯರೊಪ್ಪಿ ತೋಜುದರ್ (?) (ಸೂಕ್ತಿಸು. ೧೩–೧೪೪).

[ನಿಜು$_2$ + ತುಜುಂಬು$_2$]

ನಿಜುನಿಂಬಿ (ನಾ). ಸೊಗಸಾದ ನಿಂಬೆಯ ಹಣ್ಣು : ಬಂದ ಮಹಾಸಾಹಸಿಗಂಗತ್ಯಾನಂದದಿ ನಿಜುನಿಂಬೆಯ ತನಿವಣ್ಣಂ ತಂದು ಕೊಡುವೆಂ (ಜಯಕಾ. ೬–೨೯). [ನಿಜು$_2$ + ನಿಂಬಿ]

ನಿಱಿನಿಱಿಗ (ನಾ). ಸೊಗಸಾದ ಇಮ್ಮಾವು : ಕಿಱಿನಿಱಿಯೊಳೆ ಕಿಱಿದೆಲೆಗಳ ತುಱುಗಿದ ಚೆಲ್ವೆಳಸಿ ಬಳಸಿ ವನವನಿತೆಯ ಕಣ್ಣುಱಿಯೆನೆ ನಿಱಿಗೊಂಡಿರೆ ನಿಱಿನಿಱಿಗನ ನಿಱಿದಳಿರ ನಿಱಿಯನಱಿಯೆಂ ಪೊಗಟಲ್ (ಆದಿಪು. ೬-೯೮). [ನಿಱಿ$_2$ + ನಿಱಿಗ]

ನಿಱಿಮಱೆ (ನಾ). ೧. ನೆರಿಗೆಯ ಮರೆ. ೨. ಸೀರೆಯ ಮರೆ ; ಸ್ತ್ರೀಯ ಆಶ್ರಯ (?) ಒಱೆಯುಗಿದ ಕೂರಸಿಯ ಮೊನೆಯಿಂದಱಿಸಿಯುಂಬುದೆ ಕ್ಷತ್ರಿಯರ ಗುಣ ನಿಱಿಮಱೆಯಲುಂಬುಣಿಸು ನಮಗಿದು ಧರ್ಮವಲ್ಲ (ಸಾಳ್ವಭಾ. ೧೬-೧). [ನಿಱಿ$_2$ + ಮಱೆ$_2$]

ನಿಱಿಮುಗಿಲ್, ನಿರಿಮುಗಿಲು, ನಿಱಿಮುಗಿಲು (ನಾ). ಪದರ ಪದರವಾಗಿ ಕೂಡಿಕೊಂಡ ಮೋಡಗಳ ಗುಂಪು,—ಸಮೂಹ : ಅಂಬರದ ನಿಱಿಮುಗಿಲ ತೆರೆಗಳ ಪೊರೆಯೊಳಗಣ ನಿಜವಿಮಾನದೊಳಗಂ ಪೊಕ್ಕಂ (ಶಾಂತಿಪು. ೮-೫೨); ಕಾರ ನಿಱಿಮುಗಿಲೊಡ್ಡಂ ನೆನೆಯಿಪುವವಳ ಬಟಲ್ಮುಡಿ ನೆನೆಯಿಪುದಚ್ಚರಿಯೆ ಸೋಗೆ ನವಿಲ ಬೆಡಂಗಂ (ಮಲ್ಲಿಪು. ೬-೮೪); ಕಡಲಂ ಸುರಾಸುರರ್ ಕಡೆವೆಡೆಯೊಳ್ ತೆರೆತೆರೆಗಳೊಳಗೆ ಪುಟ್ಟದ ಚೆಲ್ವಿಂ ಗೆಡೆಗೊಂಡು ನಿಱಿಮುಗಿಲ್ಗಳ ನಡುವೆ ಕರಂ ಮಿಱುಗಿದತ್ತು ಹಿಮಕರ ಬಿಂಬಂ (ಜಗವಿ. ೪-೬೩); ಬಳೆದಿರ್ದ ಬಳ್ಳಿಮಾಡಂಗಳೆ ದಾಂಗುಡಿವಿಟ್ಟು ವೆನಿಸಿ ಕಟ್ಟಿದ ಗುಡಿಗಳ್ ಮಿಳಿರ್ದೆಸೆದುವು ನಭದೊಳ್ ಗೊಂದಳಿಸಿ ತೆಱಂಬೊಳೆವ ನಿಱಿಮುಗಿಲ್ಗಳ ಪುದುವಿಂ (ಪರ್ಧಪು. ೫-೩೪). **ನಿರಿಮುಗಿಲು** : ಆಗಸದ ಮಧ್ಯದೊಳಗೆ ನಿ[ಪಾಠಾಂ.ಗಿ]ರಿಮುಗಿಲ ಬಳಗದಂತುರುನಿಬಿಡಕರಮಾಗಿ ಬರುವ ರಕ್ಕಸರಂ . . . ಈಕ್ಷಿಸುತ ಲಕ್ಷ್ಮಣನೊಳಿಂತೆಂದಂ (ವೆಂಕಾರಾ. ೧-೧೩-೧೮). **ನಿಱಿಮುಗಿಲು** : ಅಟ್ಟ ಹೊಯ್ದುದು ನಿಱಿಮುಗಿಲನಱೆಯಟ್ಟ ಕೊಡಹಿತು ತಳಿತಮೇಘದ ಥಟ್ಟು ಮುಱಿದುದು ಬೀಸಿದವು ಬಿಱುಗಾಳಿ (ಕುಮ್ಯಾಕ. ೨೩-೩೫).

[ನಿಱಿ$_2$ + ಮುಗಿಲ್]

ನಿಱಿಮುಗಿಲು 'ನಿಱಿಮುಗಿಲ್' ನೋ.

ನಿಱಿಯಿಂಗಲು (ನಾ). ಒಂದು ಸ್ಥಳದ ಹೆಸರು (?) : ಕಗ್ಗಿ ಮುವತ್ತಱ ಸೀಮೆ×ಲ್ಲಿನ್ದವೆಂದಡೆ ಹೊಂನ್ನೆದೆಱೆ ಅಳಗನ ಹಳ್ಳ ಎತ್ತುರುಳಿ ನರಿಗನ ಗಟ್ಟ ಮತ್ತರನಱೆ ನಿಱಿಯಿಂಗಲು ಎಱೆಯಮ×ಡಿಗರ ಪಳ್ಳ ಪೆಂಪುಳಿಯ ಕೆಱೆ (ಎಕ. VI, ತರೀಕೆ. ೬೭-೧೩ ; 888). [?]

ನಿಱಿಯುಡಿಗೆ (ನಾ). ಅಂದವಾದ ಉಡುಗೆ : ಅಂದವೇಱಿದ ಗಡ್ಡ ದರ್ಭೆಗಳಿಂದ ನಿ[ಪಾಠಾಂ. ವೆ]ಱಿಯುಡಿಗೆಗಳ ನಾಟಕದಿಂದ ಮಟ್ಟಿಯ ಥಟ್ಟು ನೊಸಲಲಿ ದೇಶಿಪರಿ ಮೆಱೆಯೆ (ಕುಮ್ಯಾಅ. ೧೦-೨) ; ನಿಱಿಯುಡಿಗೆಯಲಿ ಮಲ್ಲಗಂಟನ ಸೆಱಗ ಮೋಹಿಸಿ ಬೆರಳ ದರ್ಭೆಯ ಹಱಿದು ಬಿಸುಟನು (ಕುಮ್ಯಾದ್ರೋ. ೯-೧೫); ಪರಿಪರಿಯ ನಿಱಿಯುಡಿಗೆಗಳ ನೂಪುರದ ತೊಡರಿನ ದೇಸಿ ಮಿಗೆ ಬಳಸಿರಲು ತರುಣಿಯ[ರಂದು] ಸತಿಯನು ಕಂಡುದಾ-ಹಂಸೆ (ನಳಚ. ೨-೩೧).

[ನಿಱಿ$_2$ + ಉಡಿಗೆ$_1$ (<ಉಡುಗೆ)]

ನಿಱಿಯುಡಿದಾರ (ನಾ). ಅಂದವಾದ ಡಾಬು ; ಸೊಗಸಾದ ಒಡ್ಯಾಣ : ನಿಱಿಯುಡಿದಾರ ನೇವುರ ವೀರಮುದ್ರಿಕೆ ಮೆಱೆಯೆ ನಡೆದಳೊಲವಿಂದ (ಕುರಾಸಾಂ. ೨೧-೩೬).

[ನಿಱಿ$_2$ + ಉಡಿದಾರ (<ಉಡೆದಾರ)]

ನಿಱಿಲು$_1$ (ನಾ). ಒಂದು ಅನುಕರಣ ಶಬ್ದ : ನಿಱಿನಿಱಿಲು ನಿಱಿಲೆನುತ ಹೆಮ್ಮರ ಮುಱಿದುದು (ಕುಮ್ಯಾಅ. ೧೧-೧೪ ಒಳಿಇ).

ನಿರಿನಿಟಲು, ನಿಱಿನಿಟಲು, ನಿಱಿನಿಳಿಲು = ಒಂದು ಅನುಕರಣ ಶಬ್ದ : ನಿರಿನಿಟಲು ನಿಟಲೆಂದು ಮುದಿಮೂಳೆ ಮುರಿಯುತಿದೆ (ಕೋಗಿಲೆ. ೪೧-೫); ಒರ್ವನ ಕಾಲ ಮುಱಿದಿಟ್ಟ ನಿಟ್ಟೆಲುಗಳನು ನಿಱಿನಿಟಲೆಂಬಂತೆ ಕಿತ್ತು ಮಸ್ತಕವನು ತಿಱಿಕಲ್ಲನಾಡಿ ಬೊಬ್ಬಿಱಿದ (ಮೋಹತ. ೧೨-೩೭); ಘಮ್ಮು ಘಲಿಲೆನೆ ನಿಱಿನಿಳಿಲುಗರೆದೊಱಲಿದವು ಫಲುಗುಣನ ಶರಜಾಲ (ಕುಮ್ಯಾದ್ರೋ. ೧೦-೧೯). **ನಿಱಿಲುನಿಟಲೆನ್** = ಮುರಿಯುವಂತೆ ಸದ್ದುಮಾಡು ; ಲಟಲಟವೆನ್ನು : ಮುಂಡಿಯ ಪಡಿಯ ಪದಪದ್ಧತಿಗೆ ಫಣಿಪನ ಹೆಡೆ ನಿಱಿಲುನಿಟಲೆಂ[ಪಾಠಾಂ. ನಿಳಿಲುನಿಳಿಲೆಂ, ನಿಱಿಲುನಿಳಿಲೆಂ] ದುದೇನದ್ಭುತವೊ ರಣರಭಸ (ತೊರರಾ. ೪-೩-೮).

ನಿಱಿಲು$_2$ (ನಾ). ಒಂದು ಬಗೆಯ ಮೀನು : ಹಿರಿಯ ಷಡುಸಕ್ಕರಿಗ ನಿಱಿಲು ಹಂದೆಗನಾನೆಮೊಗನೆಂಬ ಪರಿಪರಿಯ ಮೀನ್ಗಳಂ ಗುದಿಗೆಯ್ದರು (ಹಚಶಾ. ೫-೪೫). [?]

ನಿಱಿವಸನ (ನಾ). = ನಿಱಿಯುಡಿಗೆ : ನಿಲ್ಲುವ ನಿಱಿವಸನವ ಮೆಟ್ಟನಲಿದಾಡಿ . . . ಸೊಲ್ಲಿಸುವನು ತೊದಳ್ನುಡಿಯ (ಮೋಹತ. ೧೬-೬೯).

[ನಿಱಿ$_2$ + ವಸನ]

ನಿಱಿವಿಡಿ, ನಿರಿವಿಡಿ, ನಿರಿಹಿಡಿ, ನೆರಿಪಿಡಿ, ನೆರಿಹಿಡಿ, ನೆಱಿವಿಡಿ (ಕ್ರಿ). ೧. ನಿರಿಗೆ ಹಾಕು ; ನಿರಿಗೆ ಹೊಯ್ಯು : ಜಲದೇವತೆಗಳ್ ನಿಱಿವಿಡಿದುಡಲ್ ನಿಮಿರ್ಚಿದ ಕುಱುವಡಿಯ ತರಂಗದಂತೆ ಬಂಬಲ್ದೆರೆಗಳ್ . . . ಒಪ್ಪುಗುಂ(ಪಂಪಭಾ. ೫-೫೭); ಬಹುವಿಧದಿಂದಂ ನಿಱಿವಿಡಿದಹಿಕಂಬು [ಚು]ಕ ಸದೃಶಮಂ ದುಕೂಲಮನೊರ್ವಳ್ ಮಹಿಳೆಗುಡಲೆಂದು ನೀಡುವ ಸಹಚರಿ ವಸನಾಂಗಭೂರುಹಕ್ಕೆಣೆಯಾದಳ್ (ಸುಕುಮಾ. ೧೦-೧೮); ಪೊಸದುಗುಲಮಂ ನಿಱಿವಿಡಿದುಡಿಸಿಯುಂ (ಚಂದ್ರಪು. ೬-೬೩ ವ) ; ಪರಿವಿಡಿಯ ನಿಱಿವಿಡಿದು ನಾಭಿಯ ಸರಿಸದಲಿ ಪಸರಿಸುತ . . . ವಿರಚಿಸಿದಳುಡಿಗೆಯನು ಮಾಯಾತರುಣಿ (ಪ್ರಭುಲೀ. ೪-೨೧) ; ಕಟ್ಟಿದ ಪೊಂಬಟ್ಟೆಯ ವಿತಾನದ ಪರಿಸರದೊಳ್ನಿಱಿವಿಡಿದೆಳಲೆವಿಟ್ಟ ತಳಿರ್ವಟ್ಟೆಯ ಚಿತ್ರಾವಳಿಯ ಮೇಲ್ಕಟ್ಟಿನ ಲಂಬಣಂಗಳ . . . ಗಾಡಿವಡೆದ ಮಂಟಪದ ಮಧ್ಯದಲ್ಲಿ (ರಾಜಶೇ. ೮-೫ ವ). ೨. ನಿರಿಗೆಯನ್ನು ಹಿಡಿದುಕೊಳ್ಳು : ತಾಯನಪ್ಪುತ್ತೆ ಮೊಲೆಗೆ ಲಲ್ಲೈಸಿ ನಿಱಿವಿಡಿದು ಮೊಗಮಂ ನೋಡುವ ತೂಗಾಡುವ ಮಗನ ಮುದ್ದುತನವಂ ಬಸವರಾಜಂ ಕಂಡು (ಬಸರ. ೧೦-೧೨೧); ನಾಣ್ಚೆ ಹೊಂಗುತೆ ಬಂದು ನಿಱಿವಿಡಿದು ಅಜ್ಜ ಅಜ್ಜಪ್ಪಪ್ಪ ಅಮ್ಮಮ್ಮೆಂಬುಜ್ಜುಗದ ಸುಕುಮಾರಕನ ಮಿಗೆ ಪಜ್ಜಳಿಪ ಮೊಗ ನೋಡಿ (ಸಾಳ್ವಭಾ. ೩-೧೪); ಕೈಗಳಿಂದಪ್ಪಿ ನಿಱಿವಿಡಿದು ಕುಣಿವಂ (ಏಕೋಪು. ೨-೬೧). ೩. ತೆರೆತೆರೆಯಾಗು ; ಅಲೆಅಲೆಯಾಗು : ನಿಱಿವಿಡಿದು ನಿಮಿರ್ವ ಪೆರ್ದೆರೆಗಳಿಂ ನೆಗೆವ ತುಂತುಱುಗಳಿಂದೇಳ್ವ ಬೆಳ್ನೊರೆಗಳಿಂ . . . ಎಸೆದುದಬುಧಿ (ನಂದಿಮಾ. ೨-೪). ೪. ಗುಂಗುರಾಗು ; ಕೊಂಕು : ಅಡಿಯನೂಡದೆ ಕೆಚ್ಚನಿಹ ಕೇಸಡಿಗಳೊತ್ತದೆ ನಿಱಿವಿಡಿದ ಕುರುಳು . . . ಪೊಡರ್ವ ಕಜ್ಜಳವೆಚ್ಚದಸಿತತೆವಡೆದ ದಿಟ್ಟಗಳೊಪ್ಪೆ ಅನಿಮಿಷಮಡದಿಯರು ಕೆಲಸಕ್ಕೆ ಬಂದರು (ಸಾಳ್ವಭಾ. ೩೨-೧೭). **ನಿರಿವಿಡಿ** : ೧. ನವಪರಿಯ ದಿವ್ಯದುಕೂಲಮಂ ನಿರಿವಿಡಿದುವುಡಿಸಿ (ನವಮೋ. ೧೩-೪೫); ಪೊಸ ಮಿಸುನಿವಟ್ಟೆಯ ನಿರಿವಿಡಿದುಡಿಸಿಯುಂ (ದಮಸ್ವ. ೪-೧೩ ವ) ; ಮುಂಜೆರಗ ನಿರಿವಿಡಿದು ಪೆಗಲೆರಡ ಸುತ್ತಿ . . . ದೊಡ್ಡನಿಳ್ಕುಳಿಯ ಮದುಮಗನಾದನಂದು (ಕಾಲೂರ.೧೪೮-೩೨೪). **ನಿರಿಹಿಡಿ**: ೨. ನಿರಿಹಿಡಿದು, ನಡುವೇರಿ, ತೊದಳು ಮಾತನು ಬೀರಿ, ಕೊರಗ ನಗಿಸಲು ಬಲ್ಲ ಮಗುವಿಲ್ಲವೇನೋ ? (ಇಂಗೀತ. ೬೨-೨೩). **ನೆರಿಪಿಡಿ** : ೧. ಕೆಲರು ರಾಜಕುಮಾರರು ನೆರಿಪಿಡಿದ ರುಮಾಲುಗಳಿಂ ಸುಮಾನದಿಂದ ಪಿಡಿದು (ಸೌಗಂಧಿ. ೨೧೩-೨೧). **ನೆರಿಹಿಡಿ**: ೧. ತನ್ನ ಹಳೆಯ ಬಟ್ಟೆಗಳನ್ನೆಲ್ಲಾ ಬದಲಾಯಿಸಿ ನೆರಿಹಿಡಿದಿದ್ದ ಒಂದು ಹೊಸ ಪಂಚೆಯನ್ನುಟ್ಟನು (ನಿಬಂಧ. II, ೧೦೮). **ನೆಱಿವಿಡಿ**: ೧. ನೆಱಿ[ಪಾಠಾಂ. ನಿಱಿ]ವಿಡಿದು ದಿವ್ಯಾಂಬರವನುಟ್ಟು (ನಿಭಾಗ. ೧೦-೬೨-೨೮). [ನಿಱಿ$_2$ + ಪಿಡಿ$_1$]

ನಿಱುವಿಣಿಲ್, ನಿಱುವಿಣಿಲು (ನಾ). ಅಂದವಾದ ಜಡೆ : ನಿಱುವಿಣಿಲೆಸೆದುದಮೃತಮಧುರಾಧರೆಯಾ (ಲೀಲಾವ. ೭-೭೬) ; ಬೆಳರ್ವಣ್ಣಂ ಬಡೆದ ತುಟಿದಳಿರ್ಪರೆದಳಕಂ ಮಿಳಿರ್ವ ನಿಱುವಿಣಿಲುಮೆಸೆದುದು ತಳರ್ವೆಳೆವೆಣ್ಗಳ್ಗೆ ಕುಳಿರ್ವ ಕೊಳದಿಂದಾಗಳ್ (ರಾಜಶೇ. ೧೦-೧೦೧). **ನಿಱುವಿಣಿಲು** : ಆ ಪೆಣ್ಣ ಚೆಲುವೆತ್ತ ನಿಱುವಿಣಿಲೊಳು ನೋಟಕರಕ್ಷಿ ನಲಿದಾಡುತಿರ್ದುವು (ನಾಗಕು. ೧೨-೩೮). [ನಿಱು$_2$ + ಪಿಣಿಲ್$_2$]

ನಿಱುವಿಣಿಲು 'ನಿಱುವಿಣಿಲ್' ನೋ.

ನಿಱುವೊಗರ್ (ನಾ). ಅತಿಶಯವಾದ ಕಾಂತಿ ; ಹೆಚ್ಚಾದ ಹೊಳಪು (?) : ನಿಱುವೊಗರ ಕಬ್ಬೊಗೆಯ ಕಿಡಿಯಲಿ ನೆಱೆದ ವಂತ್ಯದ ಮೇಘವೆನೆ ಝುಗಝುಗಿಸಿತಮಳಾಸ್ತ್ರ (ಕುವ್ಯಾದ್ರೋ. ೧೯-೧೬). [ನಿಱು$_2$ + ಪೊಗರ್]

ನಿಱುಶ್ರಾವಕಿ (ನಾ). [ಜೈನ] ನಿಯಮಾಚರಣೆಯುಳ್ಳ ಗೃಹಿಣಿ,—ಶ್ರಾವಕಿ : ಮತ್ತಮೇನುಮಿಲ್ಲದ ನಿಱುಶ್ರಾವಕಿ ಕಂಡು (ಇಂತೆಂದಳ್) (ಧರ್ಮಾಮೃ. ೪-೧೧೭). [ನಿಱು$_2$ + ಶ್ರಾವಕಿ]

ನಿಱುಸು$_1$, ನಿರಿಸು, ನಿಱಿಸು$_1$, ನೆಱೆಸು (ಕ್ರಿ). ೧. ಇಡು; ಇರಿಸು: ಮೊದಲೊಳ್ ಸಮಾಸಪದಮುಮನೊದವಿಸಿ ಪೇಟ್ಟಿದಱ ತುದಿಯೊಳ ಸಮಾಸಪದಾಸ್ಪದಮಾಗಿ ನಿಱುಸೆ ಕಬ್ಬಿನ ತುದಿಯಂತಿರೆ ವಿರಸಮಕ್ಕುಂ (ಕವಿಾ. ೨-೮೬) ; ಅತಿಬಳಖೇಚರೇಂದ್ರನಿವರಮ್ಮನುಮಿಾತನನೂರ್ಜಿ ತಾತ್ಮಸಂತತಿಯೊಳನಾಕುಳಂ ನಿಱುಸಿ (ಆದಿಪು.೨-೨೧); ಅರಿಗಳನಾತ್ಮೀಯ ಪದಸ್ಫುರಿತ ನಖಚ್ಛಾಯೆಗಳೊಳ್ ನಿಱುಸಿ ನಿಂದ ಗಂಡಂ ಹರಿಗಂ (ಪಂಪಭಾ. ೩-೧) ; ನವಶಶಿಕಳೆಗಳನಮೃತದ್ರವಂಗಳೊಳ್ ತೀವಿ ತೀವಿ ನಿಱುಸಿದರ್ (ಶಾಂತಿಪು. ೧-೬೨) ; ವನನಿಧಿಯಂ ಕಡೆಯಲ್ಕಾ ಕನಕಾದ್ರಿಯನಾ ಜನಾರ್ದನಂ ನಿಱುಸಿದವೋಲ್ (ನೇಮಿಪು. ೧-೫೮). ೨. ನೆಟ್ಟಗೆ ನಿಲ್ಲುವಂತೆ ಮಾಡು; ಸ್ಥಾಪಿಸು: ಸಿಯಗೆಲ್ಲರ್ ಸೂಟ್ಗರ ಪೊಳ್ಳ ನಿಱುಸಿ ಪೊವಾಡಲ್ಗಿಳೆಗ × ನಿಸ × × × ದೆಕೊ × × × (ಎಕ. XVI, ತುಮಕೂ. ೮೮-೧೨ ; ಸು. 775) ; ಈ ಕಲ್ಲ ಪುಟುದೆಗಾವುಣ್ಡ ತಮ್ಮ ಗುಱೆಯಮ್ಮ ನಿಱುಸಿದೊ (ಎಇ. XXI, ೩೫-೪ ; 883) ; ಪಟಯಿಗೆ ಬಿಟ್ಟೊಡೆ ಬೀರದ ಪಟವಿಗೆಯಂ ನಿಱುಸಲೆಂದೆ . . . ನರನ ಬಿಲ್ಲಗೊಣೆಯುಮನೆಚ್ಚಂ (ಪಂಪಭಾ. ೧೨-೨೦೯) ; ಜೋಗಿಮಯ್ಯಂ ಶಿವಪದಪಂಕಜಭ್ರಮರನೀಸ್ವರದಾಸಿ ಸಾಸನಮ ನಿ[ಱು]ಸಿದಂ (ಸೌಇಇ. XX, ೩೮-೩೮ ; 1058). 'ಕಲ್ನಿಱುಸು' ಪರಾ. ೩. ಸ್ಥಿರಪಡಿಸು ; ನೆಲೆಗೊಳಿಸು ; ನಿಯಾಮಿಸು : ಆ ಎಱಮ್ಮನುಂ ಆಯ್ವದಿಮ್ಬರುಂ ನಕರಮುಂ ಸೇಣಿಯುಂ ಬಟಸುವಿಟ್ಟು ಗೆಲ್ವಲ್ಲಿ ಮೂಲವ್ವೇಡಿಯಕ್ಕೆ ಒರ್ವಳ್ಳ ನೆಯ್ನಿಱುಸಿದಂ (ಎಕ. VI, ಕಡೂರು. ೧೪೫-೭ ; ಸು. 750) ; ಕನ್ನಡದೊಳೊಲ್ದು ಪೂರ್ವಾಚಾರ್ಯರ್ದೇಸಿಯನೆ ನಿಱುಸಿ ಖಂಡಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್ (ಕವಿಾ. ೧-೭೪) ; ನಂದನ ರಾಜ್ಯಸ್ಥಾನದೊಳ್ ಪೆಱನೊರ್ವನಂ ಚಂದ್ರಗುಪ್ತನೆಂಬೊನಂ ನಿಱುಸಿದೊಡೆ (ಪಡ್ಡಾರಾ. ೭೫-೯) ; ತನ್ನ ಕೀರ್ತಿಯಂ ನಿಱುಸಿದಳ್ (ಎಕ. VII(S), ತಿಕಾರಿ. ೩೬೮-೨೨ ; 902) ; ಇಂತೀ ತೆಱದಿಂ ನೆಗಟ್ಟಿ ತನ್ನ ಕೀರ್ತಿಯನೀ ವಿಖ್ಯಾತವೃಷಭಾದ್ರಿಯೊಳ್ ಸುರಗೀತಯಶಂ ನಿಱುಸಿದಂ ನೆಲಂ ನಿಲ್ವಿನೆಗಂ (ಆದಿಪು. ೧೩-೭೭) ; ಕಾಶ್ಯಪಂಗೆ ಮಗಧನಾಮಮನಿಟ್ಟು ಉಗ್ರವಂಶಲಲಾಮಂ ಮಾಡಿ . . . ಕಚ್ಛಮಹಾಕಚ್ಛಪ್ರಮುಖರಂ ಅಧಿರಾಜಪದವಿಯೊಳ್ ನಿಱುಸಿ [ಪಾಠಾಂ. ನಿಲಿಸಿ] (ಚಾವುಂಪು. ೩೬) ; ಎಮಗಿರ್ಪುದು ಸೂಟಲ್ತೆಂದು ಮಕ್ಕಳಂ ನಿಱುಸಿ ನೆಲೆಗಳೊಳ್ (ಸುಕುಮಾ. ೮-೫೫). ೪. ನಿಲ್ಲುವಂತೆ ಮಾಡು; ನಿಲ್ಲಿಸು : ದಂತಿಯಂ ನಿಱುಸಿ ಮರಲ್ದು ನೋಡುವುದುಂ (ಪಂಪಭಾ. ೪-೭೬) ; ಅನೇಕಾಯುಧಶರಭರಿತಂಗಳಪ್ಪ ರಥಂಗಳಂ ದ್ರೋಣಾಚಾರ್ಯರ ಪೆಱಗೆ ನಿಱುಸಿ (ಪಂಪಭಾ. ೧೨-೨೦ ವ) ; ಸ್ಯಂದನಾಶ್ವಂಗಳನೊಂದೆ ದೊರೆಯೊಳ್ ಪರಿಯೆ ಪರಿಚೋದಿಸಿ ಬಾಣಪಾತಪ್ರಮಾಣದೊಳ್ ನಿಱುಸುವುದುಂ (ಶಾಂತಿಪು. ೪-೧೦ ವ). ೫. ತಡೆ ; ನಿರೋಧಿಸು: ತೊಱೆಯೊಳ್ಪೋಗುತ್ತಮಿರ್ದಂ ತಡಿಯ ಗಿಡುವನಾಶ್ರಯ್ಸಿ ಕಾಯಲ್ಕದೆತ್ತಾನಱುಯದು ಪೋಗೆನ್ನದೆಂತುಂ ನಿಱು[ಪಾಠಾಂ. ಲಿ]ಸುಗುಂ (ಸಮಪ. ೭-೩೯) ; ಈವಗೆಯೊಳ್ ಕರಣಂಗಳ ಗಾವಳಿಯಂ ಕಳೆದು ನಿಱುಸಿ ನೆಗಟ್ ವಿವೇಕಂ ಭಾವದೊಳಾಱುಂ ಪಗೆಗಳ್ ತೀವದವೋಲ್ ದೊಡ್ಡದೇವನೋವಿದನೆಳೆಯಂ (ಚಿಕವಿ. ೩-೧೩). ೬. ರಚಿಸು ; ನಿರ್ಮಿಸು ; ಸಿದ್ಧಗೊಳಿಸು : ಮರುದೇವಿಯೆಂಬಳಂಬರಚರನರಸುರಯುವತಿರೂಪಸರ್ವಸ್ವಮನಾದರದೆ ಬಿದಿ ನೆಱಪಿ ಲಲನಾಸ್ವರೂಪದಿಂ ನಿಱುಸಿತೆನ್ನದಿನ್ನೆವೋಗಟ್ಟೆಂ (ಆದಿಪು. ೬-೮೦) ; ವಿನುತಕ್ರಿಯಾತ್ಮಕಂಗಳು ಮೆನಿಸುವ ಸಂಸ್ಕೃತದ ಭಾವವಚನಂಗಳನಾಯ್ದನಿತರ್ಕಮಿಸುಪ್ರತ್ಯಯವನೆ ಪತ್ತಿಸಿ ನಿಱುಸೆ ಬರ್ಕುಮಾ ಕೃಲ್ಲಿಂಗಂ (ಶಮದ. ೭೪). ೭. ಕೊಂಕಿಸು; ವಕ್ರಗೊಳಿಸು ; ಗಂಟುಹಾಕು : ಅಱುಪಿದುದು ರೌದ್ರರಸಮಂ ನಿಱುಸಿದ [ಪಾಠಾಂ. ಕಿರಿಪಿದ, ತಿಱುಪಿದ] ಕುಡುವುರ್ವು ಕರ್ಚದೌಡುರ್ಚದ ಬಾಳ್. . . ಬಿಟ್ಟ ಕಣ್ಗಳಾರೋಹಕರಾ (ಗದಾಯು. ೪-೨೭). ೮. ನೆಡು ; ನಾಟು : ಪೊಱುಸಿದ ಗಾಲಿಯೊಳಂ. ನಿಱುಸಿದ ಬಸಿಯೊಳಂ ಪೂಸಿದ ಡೆಂಕಣಿಯೊಳಂ . . . ಮೊನೆಯಂ ಪೂಣಿಸಿದ ಕೊಂತದೊಳಂ ಕೈಗೆಯ್ದು (ಅನಂಪು. ೧೧-೮೨ ವ). ೯. [ಜೈನ] ಚರಿಗೆಗಾಗಿ ನಿಲ್ಲಿಸು,—ತಡೆ ; ಅನ್ನದಾನಕ್ಕಾಗಿ ನಿಲ್ಲಿಸಿಕೊಳ್ಳು : ಅರಸಂ ಶಿವಗುಪ್ತಭಟ್ಟಾರಕರ್ಗಾಂ ಪಾರಣೆಯಂ ಮಾಡುವೆಂ ಪೆಱರಾರುಂ ನಿಱುಸಲ್ ಸಲ್ಲೆಂದು ಪೊಟಲೊಳಗೆಲ್ಲಂ ಗೋಸನೆಯಂ ತೊಟಲ್ಚಿದೊಡೆ (ಪಡ್ಡಾರಾ. ೬೮-೪) ; ಮಹಾನಗರಕ್ಕೆ ಚರಿಗೆವೋಗೆ ಕನಕವರ್ಣನಪ್ಪ ಸೌಂದರನೆಂಬರಸಂ ನಿಱುಸೆ[ಪಾಠಾಂ. ನಿಲಿಸೆ] ನಿಂದು (ಚಾವುಂಪು. ೧೪೬) ; ದೇವಕಿ ಸರಾಗದಿದಿರೆಟ್ಟಘವೇತಂಡ ಹರಿಶಿಶುಗಳಂ ಭೂಮಂಡಳವಂದ್ಯರನನಿಂದ್ಯೆ ನಿಱುಸಿದಳಾಗಳ್ (ನೇಮಿಪು. ೬-೫). ೧೦. (?) ಸ್ವಸ್ವಿಶ್ರೀ ಅರಿಉರ ಪನ್ನಿರ್ವ್ವರು ಮೂ× × ×ಯ್ಯನ್ತಲ ಮೊಱಮು ನಿಱುಸಿದಾಕಾರೆಯರುಂ ಪೊರಳನ್ವಯರುಂ ಗುಣಸಾಗರ ತಮ್ಮಡಿಗಳ್ಗೆ ಕೊಟ್ಟ ಮ× (ಎಕ. IV, ಗುಂಡ್ಲುಪೇ. ೮೯-೧೪ ; ಸು. 750) ; ಕೆಳೆಯ ವಾಳೆಱೆಯಂ ನಿಱುಸಿದ (ಎಇ. IX, ೨೦-೧೩ ; ಸು. 800). **ನಿರಿಸು** : ೨. ಮ[ತ್ತ]ರಾಟುಮಂ ಕೊಟ್ಟು ನಿರಿಸಿದಳೀ ಶಾ[ಸ]ನಗಂಭ (ಕಇಅ. ೮೨-೧೫-೮೭ ; 1117). ೩. ಸಂಸ್ಕೃತ ಛಂದೋನಿಯಮದಲ್ಲಿಯ ಯತಿಯನ್ನು ವಿಾರಿ ಕನ್ನಡಕ್ಕೆ ವಿಶಿಷ್ಟವಾದ ಖಂಡಪ್ರಾಸವನ್ನು ಪೂರ್ವಾಚಾರ್ಯರು ನಿರಿಸಿದರಂತೆ (ಕಸಾಚ. ೫೯). ೧೧. ಗೊತ್ತುಪಡಿಸು ; ಗೊತ್ತುಮಾಡು : ಮಹಾರಾಜಂಗೆ ರಾಜಯೋಗ್ಯವಿದ್ಯಾಭ್ಯಾಸಂಗೆಯಿಸಲ್ಕೆ ನಿರವದ್ಯಪ್ರಜ್ಞಾಶಾಲಿಯಪ್ಪ ಮಾಲೀಸನ್ನೆಂಬಾಂಗ್ಲೇಯೋಪಾಧ್ಯಾಯನಂ ನಿರಿಸುವುದುಂ (ಮರಾಚ. ೫-೩೯ ವ). **ನಿಱಿಸು$_1$** : ೨. ಸಿಯವಲ್ಲವರಸ ಶ್ರೀಕಾಮ ನಿಱಿಸಿದನ್ (ಎಕ. IX, ಹೊಸಕೋ. ೨೧-೮ ; ಸು. 750). **ನೆಱೆಸು** : ೨. ಜೀಯ ಸನುತನ್ನು ಕಲ್ಲ ನೆಱೆಸಿದ (ಎಕ. VII, ತಿಕಾರಿ. ೧೯೫-೭ ; 1007).

ನಿಱುಸೆಪಡು = ನೆಲೆಗೊಳ್ಳು ; ಸ್ಥಾಪಿತವಾಗು : ಅವನ್ ಅಯ್ಯನ ಪಟ್ಟದಲ್ ನಿಱುಸೆಪಟ್ಟುದೆ ತಡಂ . . . ಬೇಱೆವೇಱಾದಿವಿಜರ್ಗೆ ಪಲವಗೆಯ ಪದವಿಗಳನೀಯಲ್ಕೆ ತೊಡಗಿದನ್ (ಬದ್ಧಪ್ರ. ೧೩-೨೭೦). [ನಿಱು$_2$ + – ಸು$_1$]

ನಿಱುಸು$_2$, ನಿಱಿಸು$_2$ (ನಾ). ೧. ನಿಲ್ಲುವ ಒಂದು ರೀತಿ,—ಭಂಗಿ : ಗತಿ ಭಾವಂ ಚಾರಿ ಸೂತ್ರಂ ನಿಱುಸಳವಿ ಬಳಂ ಕಾಣ್ಕೆ . . .

ಎನಿಪ ಭೃಗುಪ್ರೌಢಿಯಿಂ ಕೊಲ್ವನುಗ್ರಾಹಿತನಂ ಮಾಱಂಕನಂ ಮಾರ್ಮ್ಮಲೆದಡೆ ಚಲದಿಂದೆಕ್ಕಲಕ್ಷೋಣಿಪಾಳಂ (ಎಕ. VIII, ಸೊರಬ. ೧೪೦-೩೪; 1198; ಶಾಸಮಂ. ೧೦೯೭ ನೋ); "ಪೊರ್ದುಗೆ" (ಶಾಸಮಂ.೨೯೨ ಕೋಶ). ೨. ತೋರಿಕೆ; ಪ್ರದರ್ಶನ: ಮುಱುಕದಲಿ ಮಾಯಾವಿಲಾಸದ ನಿಱುಸುಗಳ ನೋಟದಲಿ . . . ಮಹಿಳಾಜನ ವಿರಾಜಿಸಿತು (ತೊರರಾ. ೧-೫-೨೯). ೩. ಸೊಗಸು: ಮೆಱೆದು ದಿದಿರಲಿ ನಿಖಿಳನದಿಗಳ ಮುಱುಕವನು ಮಸುಳಿಸುವ ಮಸಕದ ನಿಱುಸಿನಲಿ . . . ಫೇನಪಿಂಡದ ಗುಱುಬಿನಲಿ ಗಾಡಿಸಿತು ಗೋದಾವರಿ ಕಕುತ್ಸ್ಥಜನ (ತೊರರಾ. ೩-೧-೪೭); ನಿರ್ಜರದ ನಿಱುಸು ನಿಡುಜಂಝಾಸಮೀರನ ಬಿಱುಸು ಬೇಸಱನಿತ್ತವು . . . ನವಮೇಘಕಾಲದಲಿ (ತೊರರಾ. ೪-೬-೭). **ನಿಱಸು$_2$**: ೩. ಭಾವಾನುಭಾವವಿಭಾವಂಗಳ್ ರಸಮನು ದ್ಭಾವಿಸೆ ನಿಂದ ನಿಱಸು ವಿಚಿತ್ರಶೋಭಾವಹಮಾಗೆ (ಮಲ್ಲಿಪು. ೧೩-೩೭); "ಸೊಬಗು" (ಮಲ್ಲಿಪು. ಕೋಶ). [<ನಿಱುಸು$_1$]

ನಿಱುಸುಂಗಲ್ಲು (ನಾ). (ಮೇರೆಯನ್ನು ಸೂಚಿಸುವುದಕ್ಕಾಗಿ) ನಿಲ್ಲಿಸಿದ ಕಲ್ಲು; ಗಡಿಕಲ್ಲು; ಸೀಮೆಯ ಕಲ್ಲು: ಅದಕ್ಕೆ ಸೀಮೆ ಮೂಡಲು ನಿಟ್ಟೂರ ಪಡುವಣ ಪೊಲದ ಮೇರೆಯ ನಿಱುಸುಂಗಲ್ಲು (ಸೌಇಇ. XX, ೭೪-೩೪; 1111). [ನಿಱುಸು$_1$ + ಕಲ್ಲು(<ಕಲ್$_3$)]

ನಿಱುಸುಕೆಯ್ 'ನಿಱುಸುಗೆಯ್' ನೋ.

ನಿಱುಸುಗೆ (ನಾ). ಇರಿಸುವುದು; ಸ್ಥಾಪನೆ. 'ಕಂಭನಿಱುಸುಗೆ' ಪರಾ. [ನಿಱುಸು$_1$ + -ಗೆ]

ನಿಱುಸುಗೆಯ್, ನಿಱುಸುಕೆಯ್ (ಕ್ರಿ). ಸಿದ್ಧ ಮಾಡಿಕೊಳ್ಳು; ತಯಾರಾಗು: ಕಳಂಬೊಕ್ಕು ನಿಱುಸುಗೆ[ಪಾಠಾಂ. ಕೆ]ಯ್ದು . . . ಎಣ್ಬತ್ತುನಾಲ್ಕು ಬಿನ್ನಣದೊಳಂ ಪಲತೆಱದ ಪಾತಂಗಳೊಳಂ ನೆಱೆದು (ಚಂದ್ರಪು. ೫-೭೭ ವ). **ನಿಱುಸುಕೆಯ್**: ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ನಿಱುಸು$_2$ + ಕೆಯ್$_1$]

ನಿಱುಂಗಲ್ಲು 'ನಿಱುಗಲ್' ನೋ.

ನಿಱುಕಲ್ಲು 'ನಿಱುಗಲ್' ನೋ.

ನಿಱುಗಲ್, ನಿಱುಂಗಲ್ಲು, ನಿಱುಕಲ್ಲು, ನಿಱುವುಂಗಲ್ (ನಾ). = ನಿಱುಸುಂಗಲ್ಲು: ಪಡುವಣ ಮೇರೆ ಆಲದ ಮರ ಮೂಡಣ ಮೇರೆ ನಿ[ಱು]ಗಲ್ಲೆ (ಕಇ. II, ೫-೫; 859); ಪಡುವ ನಿಱುಗಲ್ ಮೇರೆ (ಎಇ. VIII, ೨೦೧-೧೨; 865); ಮೂಱು ನಿಱುಗಲ್ಲನ್ನಿಱುಸಿ ಕಲ್ಲೊಱ್ಟೆಯನ್ತಾಗೆ ಕಿಸುಕಾಡನೆತುಂ ಕೊಟ್ಟತ್ತು (ಎಕ. XII, ನಂಜನ. ೨೬೯-೯೪; 904). **ನಿಱುಂಗಲ್ಲು**: ಪಾರ್ತ್ಥದ ಮೇಳೆಯಲ್ಲಿ ನಿಱುಂಗಲ್ಲು (ಎಇ. XV, ೯೮-೨೨; 1074). **ನಿಱುಕಲ್ಲು**: ತೊಱೆಯು ಆಲರೆ ಮೇರೆ ದುವೆಟ್ಟಗೆ ನಿಱುಕಲ್ಲು ಕೊವಳ್ಳದಾ ಪೆರಿಯ ಎಲವು ಅಲ್ಲಿಂ ಕುಡಿತ್ತು (ಎಕ. II, ೩೫-೬; ಸು. 800). **ನಿಱುವುಂಗಲ್**: ಅದರ್ಕ್ಕೆ ಮೂಡಲು ಹೊಲದ ಮೇರೆಯ ನಿಱುವುಂಗಲ್ಲೇ ಮೇರೆ (ಸೌಇಇ. XI-II, ೧೮೨-೫; 1098). [<ನಿಱುಸು$_1$ + ಕಲ್$_3$]

ನಿಱುಗುರುಳ್ 'ನಿಱುಗುರುಳ್' ನೋ.

ನಿಱುಗೆ 'ನಿಱುಗೆ' ನೋ.

ನಿಱುಗೆಗಾಣ್ 'ನಿಱುಗೆಗಾಣು' ನೋ.

ನಿಱುವಗಲು (ನಾ). ಒಂದು ಊರಿನ ಹೆಸರು: ಪೊಱೆಯ ನಾಯಕ ಜೆಡಕೆದರ ಬಂದು ನಿಱುವಗಲ ಮುತ್ತಿದಲಿ (ಎಕ. XVI, ಚಿಕ್ಕನಾ. ೬೧-೩; ?). [?]

ನಿಱುವುಂಗಲ್ 'ನಿಱುಗಲ್' ನೋ.

ನೀ 'ನೀನ್' ನೋ.

ನೀಂ 'ನೀನ್' ನೋ.

ನೀಂಟಾಡು (ಕ್ರಿ). ಸೇವಕನಾಗು (?): ಬಂಟಪ್ಪುದು ತುರುಗಾಯ್ವುದು ತೋಂಟವ ಮಾಡುವುದುಮಂತುಟಲ್ಲದೆ ಮತ್ತಾ ನೀಂಟಾಡಿ ಹೋಹುದಲ್ಲದೆ ನಂಟನ ಸಾರುವವನೆಗ್ಗ (ನೀತಿಸಾ. ೫೭೪).

[. ? / ತಮಿ. ನೀಟ್ಟಾಳ್ = ಸೇವಕ]

ನೀಂಟಿಸು$_1$ (ಕ್ರಿ). ೧. ಚಾಚು; ಮುಂದಕ್ಕೆ ನೀಡು: ಪುಲ್ಲೆಯ ಹಿಂಡನೊಂದು ಪುಲಿ ಗೆಂಟಱೊಳೊಯ್ಯನೆ ಕಂಡು . . . ತಲ್ಲಣದಿಂ ಕುನುಂಗಿ ನೆಱೆ ನೀಂಟಿಸಿ ನೀಳ್ದ ಕೊರಲ್ಗೆ ಪಾಯ್ದು ತಳ್ವಲ್ಲದೆ ನೆತ್ತರಂ ಪದೆದು ಪೀರ್ದೆಱೆದಿಕ್ಕಿದುದಿಕ್ಕೆ ದಾಣದೊಳ್ (ದಶಕು. ೨-೧೧೩); ಅಲ್ಲಲ್ಲಿ ನಿಂದುವು ಗೋವ್ಗಳು ಪುಚ್ಛವ ನೆಗಹಿ ನೀಂಟಿಸಿ ಅಚ್ಯುತನಾಕೃತಿ ನೋಡಲು (ಪುರಂದ. ೪-೧೬೩-೪). ೨. "ಕುಪ್ಪಳಿಸು" (ಪ್ರಭಣ್ಣ). 'ನೀಟು$_1$' ಪರಾ. [<ನೀಟು$_1$ + -ಇಸು$_3$]

ನೀಂಟಿಸು$_2$ (ಕ್ರಿ). ಎವೆಯಿಕ್ಕದೆ ನೋಡು; ಒಂದೇ ಸಮನೆ ನೋಡು: ಲೀಲೆಯಿಂ ನೀಂಟಿಸುತ ಮತ್ತೆ ಸಂಭ್ರಮದಿ ಬಾಲೆಯರು ತಾ ಬಂದು ಶಾಸೆಯನಿಡಲು (ಯನಳ. ೫೫); ನಗುವಂ ನಿಷ್ಕಾರಣಂ ನೀಣ್ಟಿಸಿ ಪರಿಕಿಸುವಂ (ಸಂಸಪ. ೩೬-೫); (ಬಿರುದಿಟ್ಟಿಯಿಂದ ನೀಣ್ಟಿಸುತ್ತ,) (ಬೆಟ್ಟಅ. ೬೧-೧೫). 'ನಿಟ್ಟಿಸು' ಪರಾ. [<ನಿಟ್ಟಿಸು]

ನೀಂಟು$_1$ (ಕ್ರಿ). ೧. ಎಸೆ; "ಬಿಸುಡು" (ಚತುನಿ. ಕಿ.I, ೪೨): ಸುಗ್ಗಿಯಲರ ಬೆಂಕೆಯಲಿ ಎದೆಗುದಿಯ ಕಂಬಳಿಯ ನೀಂಟಶಂಕೆಯಲಿ (ಗಿಳಿವಿಂ. ೧೧೭-೬). ೨. ನೀಗು; ಕಳೆ; ಹೋಗಲಾಡಿಸು: ಉಂಟೆಂಬವರಲ್ಲಿ ಇಲ್ಲವೆನಲೇಕೆ ಇಲ್ಲವೆಂಬವರಲ್ಲಿ ಉಂಟೆಂದೆನಲೇಕೆ ಈ ಉಭಯದ ಕಂಟಕವ ನೀಂಟಿಯಲ್ಲದೆ ನಿಜವಿಲ್ಲ (ಮೋಳಿಮಾ. ೪೮-೧೯೯); ರಾಧೇಯನೆಂಬ ಸೂತಂ ಕಂಡನು ಆಸರನು ನೀಂಟಿ ಶಿಶುವನ್ನೋಡಿ ಮಾನುಗಳ ರಾಶಿಯಂ ಬಿಟ್ಟು ಸಂತೋಷದಿಂ ಬಾಲಕನ ಪೋಷಿಸುವೆನಿವನ ತನಗಿನ್ನು ಸುತನೆಂದು ಸಾಕಿದನು ಮನೆಗೆ ತಂದು (ತುರಂಗ. ೧೦-೧೩).

[ದೇ.॥ ತೆಲು. ನೆಟ್ಟು = ನೂಕು, ದೂಡು]

ನೀಂಟು$_2$ (ಕ್ರಿ). ಕುಡಿ; ಪಾನಮಾಡು (?): ಸರಸಿಯೊಳಗೆಲ್ಲ ಕರಚರಣಂಗಳಂ ತೊಳೆದು . . . ಬಗಸಿಯಲ್ಲಿ ದ್ರೌಪದಿ ಸಹಿತ ನೀಂಟದರು (ತುರಂಗ. ೯೪-೧೨). [<ಈಂಟು]

ನೀಂಟು$_3$ (ನಾ). ಬಾಯಾರಿಕೆ; ಸೇದೆ: ಬ್ಯಾಂಟಿಗಾರರೆಲ್ಲಾ ತಾವೂ ನೀಂಟನಿಂದಾ ಬಳಲಿ ಬಂದೂ (ಯನಳ. ೬೩). [<ನೀಂಟು$_2$]

ನೀಕರ (ನಾ). ೧. ತೊಲಗಿಸುವಿಕೆ; ನಿವಾರಿಸುವಿಕೆ. ೨. ತಿರಸ್ಕಾರ; ಉಪೇಕ್ಷೆ. 'ನೀಕರಿಸು' ಪರಾ. ೩. ತೊಲಗಿಸುವವನು; ನಾಶಮಾಡುವವನು: ಆ ಕೊಮರಯ್ಯಂಗವನಿತಳಾಕಾಶವ್ಯಾಪ್ತ ಕೀರ್ತಿ ನಿಜಗುಣಮಣಿರತ್ನಾಕರನಜ್ಞಾನತಮೋನೀಕರನಭಿರಾಮದೇವರಾಯಂ ತನಯಂ (ಪಂಪಭಾ. ೧೪-೪೭). [<ಸಂ. ನೀಕಾರ]

ನೀಕರಿಸು, ನೀಳ್ಕರಿಸು$_2$, ನೀಟ್ಕರಿಸು$_2$, ನೇಕರಿಸು (ಕ್ರಿ). ೧. ಕಡೆಗಣಿಸು; ಉಪೇಕ್ಷಿಸು; ತಿರಸ್ಕರಿಸು: ಪಾಪಪುಣ್ಯವಿಲ್ಲ ಎಂದು ನೀಕರಿಸಿ ನಡೆಯಬಹುದೆ ದಿವರಾತ್ರೆ ಉಳ್ಳನ್ನಕ್ಕ (ಡಬೊಸ್ಟು. ೨೩೫-೬೬); ಕುಂಟಣಿಯರ್ ಸೋಲ್ತ ಸವಿಗಂಡು ಬೇಟಕ್ಕೆ ಕಂಟಕರಾದೆವೆಂದು ನೀ[ಪಾಠಾಂ. ನಿರಾ]ಕರಿಸೆಯುಂ (ಅರ್ಧನೇ. ೫-೨ ವ); ಪಿನಾಕಿಭವನವ ನೊಬ್ಬ ಜೈನನು ಕೆರಹುಗಾಲ್ವೆರಸಿ ನೀಕರಿಸಿ ಹುಗಲೊಳಗೆ (ಬಸಪು. ೪೯-೮); ಮಲ್ಲಿಕಾರ್ಜುನನ ನೀಕರಿಸಿದವ ತಂದೆಯೇ (ಲತಿಚಂ. ೩೭-೬); ಮೊನೆಗಾತಿ ಮುಗುದೆ ಮುಸುಂಡಿಯಾಗಲಿ ನೆರೆವನೆಗರತಿಯ ನೀಕರಿಸದೆ . . . ಅನುವಱುತಾದರಿಸುವುದು (ಹದಿಬ. ೪-೩೭). ೨. ಬಿಡಿಸು; ನಿವಾರಿಸು: ಎನ್ನ ಭವಬಂಧನವ ನೀ[ಪಾಠಾಂ. ನಿಃ, ನಿ]ಕರಿಸಿದೆಯಾಗಿ

ಶಿವನೆ ಗತಿಮತಿಯೆಂದು ನಂಬಿದೆನಯ್ಯಾ (ಬಸವ. ೪೮೧). **ನೀಳ್ಕರಿಸು₂ :** ೧. ಕಂದರ್ಪನಂದವ ನೀಳ್ಕರಿಸುವ . . . ರಸಿಕರ ದೇವನಿರವಂ ವರ್ಣಿಸಲಸದೃಶಾತಿಶಯಮಾಗಿರ್ದುದು (ಹಮ್ಮೀರ. ೬–೧೯ ಪ); ಚೆಂದಳಿರಿನಂದವನು ನಿಂದಿಸುತ್ತಿರುವ ಪೊಂದಾವರೆಗಳ ಚೆಲ್ವನು ನೀಳ್ಕರಿಸುವ . . . ಇಂದಿರೆಯ ಮೆಲ್ಲಡಿಯ ಪೊಗಳಿದರು (ಕರ್ನಾಕ. ೨೩೦). **ನೀಟ್ಕರಿಸು₂ :** ೧. ಗಟ್ಕನೆ ಕೊಳೆ ಕಡುಗಂಪಿನೊಳಟ್ಕಮೆಗೊಳಗಪ್ಪೆವೆಂದು ಮಧುಪಂಗಳ್ ತಮ್ಮಟ್ಕಮೆಯೆ ಚೌತಮಾಗಿರೆ ನೀ[ಪಾಠಾಂ. ನಿ]ಟ್ಕರಿಸಿದುವುಂತು ಚಂಪಕಕ್ಕೆಱಗದುವೇ (ಅದಿಪು. ೧೧–೧೧೫); 'ಮುಳಿಯಲ್ವೇಡೆನ್ನನೇ ನೀಟ್ಕರಿ[ಪಾಠಾಂ. ಲಿ]ಸದೆ ತಿಳಿಯೆಂದೆನ್ನನೇ ಬಾರನೇ ಮೇಣ್ ತಿಳಿಪಲ್ ಬೋಳ್ಳೆಸನೇ (ಸೂಕ್ತಿಸು. ೮–೩೬೦; ಅನ:ಪು. ೮–೧೨ ನೋ.); ಒರ್ಕುಡಿತೆ ನೀರ್ಗೆ ಪಱಿಪಟ್ಟೆರ್ಕೆಯ ಪಣ್ಣೆಲೆಯ ಮುಱಿಗೆ ದೇಸಿಗರಂ ದೇವರ್ಕಳ್ಗೊಡೆಯರ್ ಮಾಟ್ಪಾರೆ ನೀ[ಪಾಠಾಂ. ನಿ]ಟ್ಕರಿಸದೆ ನಿಮ್ಮದೊರೆಗೆ ಬೋಟಿಯರೊಳರೇ (ಶಮದ. ೨೪ ಪ್ರಯೋ); ಇವರ ನೇಹಮಂ ನೀಟ್ಕರಿಸಿಯವನನಿದಿರ್ಗೊಂಡುಪಚರಿಸಿಯೆರವಿಲ್ಲದೆ ಬೆರಸಿ ಬೇಟ್ಪಿ ಕಜ್ಜಮಂ ಸಾಧಿಸಿಕೊಂಬುದೇ ಜಾಣ್ಮೆ (ಚಿಕವಂ. ೩೧–೧೮); ಬೇಡ,ನಲ್ ಮಗುವೆ, ಆ ದೇವಶಯ್ಯೆಯನ್ ನೀಟ್ಕರಿಸದಿರು ನೀನ್ (ಬದ್ಧಪ್ರ. ೩೪–೭೪೧). ೩. ಬೆರೆತುಕೊಳ್ಳು ; ಸೆಟೆ : ಬೇರಂ ಬಿಟ್ಕಿಯುಮಂತಿಂದು ವನದೊಳಡಗಿರೆ ನೀವುಂ ನೀಟ್ಕರಿಸಿ ನಿಂದುಮಿಾಗಳ್ ಪೇಟ್ಕಮ್ಮೈಸುವರೆ ಬಿರುದುಮಂ ಬೀರಮುಮಂ (ಗದಾಯು. ೭–೩೫). **ನೇಕರಿಸು:** ಸಾಕುಸಾಕಿನ್ನಿದಕೆ ಬೇರೊಂದು ಸುಖಮುಂಟೇ ನೇಕರಿಸಬಾರ ದಾತ್ಮಾನುಭವರತಿಯೇ (ಕೈಕವ. ೪–೧೦ ಪಲ್ಲವಿ).

[ನೀಕರ + –ಇಸು₃]

ನೀಕಾಶ (ಗು). ೧. ಹೋಲುವ ; ಸಮಾನವಾದ. (ನಾ). ೨. ಹೋಲಿಕೆ ; ಸಾದೃಶ್ಯ : ಎರಡುಂ ದೆಸೆಗಳೊಳಂ ಮನೋಜರಾಜದ್ರಾಜಧಾನೀನೀಕಾಶಮಪ್ಪುದ್ಯಾನಂಗಳೊಳ್ (ಶಾಂತಿಪು. ೧–೬೨ ಪ).

[ಸಂ.]

ನೀಕ್ಷಿಸು (ಕ್ರಿ). ೧. ನೋಡು ; ಈಕ್ಷಿಸು : ನಿನ್ನ ಕರವನಜದಿಂದ ಮ್ಯಾರೆಯಿಲ್ಲದೆ ಸದಾ ಹೇಮವರುಷಧಾರೆ ಎಡೆಬಿಡದೆ ಸುರುವುತಿರೆ ನೀಕ್ಷಿಸಿ (ಮೋಕ್ಷದೀ. ೮೫–೧); ಚಿನುಮಯವಾಗಿಪ್ಪ ವಿಜಯವಿಠ್ಠಲನ್ನ ಮನದಣಿಯ ನೀಕ್ಷಿಸುವಾಲೋಚನಿಯ ಮಾಡು ಬಿಡದೆ (ವಿಸಾಸು. ೨–೧); ಕೀಲಿಸಿದ ಪುಷ್ಪಕಕೆ ವಿಸ್ಮಯದಾಳಿ ಕೆಳಗೇನಿಹುದೊಯಂದು ವಿಶಾಲದೊಳು ನೀಕ್ಷಿಸುತದೊಂದೆಡೆ . . . ಬಾಲಕಿಯು ನಿಂದಿರ್ದ ತೆರನನು ಕಂಡ ಪದ್ಮರಥ (ಜಿನಭಾ. ೫೦–೨೦). [<ಈಕ್ಷಿಸು]

ನೀಗಾಡು (ಕ್ರಿ). ೧. ಕಳೆದುಕೊಳ್ಳು ; ಇಲ್ಲದಂತೆ ಮಾಡಿಕೊಳ್ಳು : ಹೊಱಗಣ ಮಲತ್ರಯಕ್ಕೆ ಒಳಗಣ ಅಱಿವ ನೀಗಾಡಲೇಕೆ (ವಚಸಂ. ೭೫–೮೪); ಕೊಟ್ಟ ಕುದುರೆಯನು ಮನಮುಟ್ಟ ನೋಡದೆ ನನ್ನೊಱಟ್ಟ ತನದಿಂದಮಿಾ ವಂಚಕನನೊಳಗೆ ತಂದಿಟ್ಟು ಕುದುರೆಯನು ನೀಗಾಡಿ (ಸಮ್ಯಕೌ. ೧೧–೬೯); ಹದಿನಾಡವ ಮೈಸೂರ ಭೂಪರೊಳ್ ಕಲಹವ ನಿತ್ತು ಗಂಟಕ್ಕಿ ತಲೆಯ ನೀಗಾಡಿ ದೇಶವನೊಪ್ಪಿಸಿ ಕೊಟ್ಟು ಚಲಗೆಟ್ಟುದ ಕೇಳ್ಗಱಿಯ (ಕಂನವಿ. ೧೮–೧೩೧). ೨. ತಿರಸ್ಕರಿಸು ; ಕಡೆಗಣಿಸು; ಧಿಕ್ಕರಿಸು : ಸಮರದ ಜಯವನವರಿಗೆ ಮಾಡಿ ನಮ್ಮಭಿಮತವ ನೀಗಾಡಿ ನಯವ ನೀವೊಡ್ಡುವರೆ ನಿಮ್ಮನು ನಿಯಮಿಸುವರಾರುಂಟು (ಕುವ್ಯಾಭೀ. ೧–೨೪). ೩. ತೊರೆ ; ಬಿಡು ; ತ್ಯಜಿಸು : ಏಣಿಗಳಿಗೆ ಕವೆಗೋಲುಗಳನು ಸಂದಾನಿಸಿ ಕೆಡೆ ಸೂಕಲಾಗ ಗೋಣಡಿಯಲಿ ಬಿದ್ದು ತುರುಕರ ಮಾರ್ಬಲ ಪ್ರಾಣವ ನೀಗಾಡಿದುದು (ಕಂನವಿ. ೧೪–೬೦), ಅಬಲೆಯಾದರೂ ಅಂಜದೆ . . . ತನ್ನ ಪ್ರಾಣಗಳನ್ನು ನೀಗಾಡಿ ಹಗೆಗಳಿಂದಲೂ ವಿಧವಿಧವಾಗಿ ಹೊಗಳಿಸಿಕೊಂಡು ವೀರಸ್ವರ್ಗವನ್ನು ಸೇರಿದಳು (ಕವಿಕ. ೪೩). ೪. ಪೋಲುಮಾಡು ; ಅಪವ್ಯಯ ಮಾಡು : ಇದ್ದ ಆಸ್ತಿಯನ್ನೆಲ್ಲಾ ಅವನು ನೀಗಾಡಿ ಈಗ ದರಿದ್ರನಾಗಿದ್ದಾನೆ (ರೂಢಿ).

ನೀಗಾಡಿಕೊಳ್ಳು = ಕಳೆದುಕೊಳ್ಳು : ರಾಮವೆಸರಿಂದೆ ದಶರಥನರಸಿ ಗುದಿಸಿ ತಾಂ ಭೂಮಿಸುತೆಯಂ ಮದುವೆಯಾಗಿ ವನವಾಸದೊಳ್ ಕಾಮಿನಿಯ ನೀಗಾಡಿಕೊಂಡು . . . ಮಹಾದುಃಖದಿಂ ಶರಧಿಯೊಳ್ ಬಿದ್ದಳಿದ ಕಥೆಯ ನೀಂ ಕೇಳ್ದಱಿಯೆಲಾ (ಚಿಬಪು. ೫೨–೨೯).

[ನೀಗು + ಆಡು₁]

ನೀಗಿಸು (ಕ್ರಿ). ೧. ನಾಶಮಾಡು ; ಧ್ವಂಸಮಾಡು : ತಾಗಿ ಕಡಿದೊಟ್ಟದನು ಕೊಡಲಿಯ ಬಾಗಿನಲಿ ಬಹುಚಾತುರಂಗವ ನೀಗಿಸಿತು ನೆಱೆ ಕೇತುವೀರ್ಯನ ಕೊಂದ ನಿಮಿಷದಲಿ (ಸಂಭಪ. ೨೬–೬೮); ಮುಟ್ಟಿದ್ದೆಲ್ಲಾ 'ಬೂದಿ' ಮಾಡಿದಾ ಭಸ್ಮಾಸೂರಾ ಅವನ ನೀಗಿಸಿ ಬಿಟ್ಟತ್ತಣ್ಣಾ ಮೋಹಿನಿ ಅವತಾರಾ (ಅರಳು. ೨೭೭–೮). ೨. ಕಳೆ ; ಬಿಡಿಸು : ಈ ಮಹಾಸೃಷ್ಟಿಯ ಸೊಬಗಿನಲ್ಲಿ ಅಸಡ್ಡೆಯನ್ನುಂಟುಮಾಡಿ ಅದರ ಮೇಲಣ ಪ್ರೀತಿಯನ್ನು ನೀಗಿಸುವುದೋ (ಚ್ಯೋತಿರ್ವಿ. ೭೯).; ತೊರೆಯನು ದಾಟಿಪ ಹರುಗೋಲು ಗಡ್ಡೆಯನೇರಿಸಿ ಕಷ್ಟವ ನೀಗಿಸಿ ಕರೆಯನು ಕಾಣಿಪ ಸಾಧನವು (ಕವಿಸೋ. ೫೯–೭). ೩. ಸಾಧ್ಯವಾಗು ; ಶಕ್ಯವಾಗು. ೪. ನಿಭಾಯಿಸು ; ಸಾಗಿಸಿಕೊಂಡು ಹೋಗು : ಅಷ್ಟೆಲ್ಲ ಜಾನುವಾರುಗಳನ್ನು ಅವನೊಬ್ಬನಿಂದ ನೀಗಿಸಿಕೊಂಡು ಹೋಗಲಿಕ್ಕೆ ಆಗುವುದಿಲ್ಲ (ದಂಬನಾ. ೧೮); ಮನೆಯಲ್ಲಿ ಎಲ್ಲರೂ ನೀಗಿಸಿಕೊಂಡು ಹೋದರೆ ಎಲ್ಲವೂ ಸರಿಯಾಗುವುದು (ಕಮನೆ. ೩೯). [ನೀಗು + –ಇಸು₃]

ನೀಗು (ಕ್ರಿ). ೧. ಪರಿಹರಿಸಿಕೊಳ್ಳು ; ನಿವಾರಿಸಿಕೊಳ್ಳು ; ಹೋಗಲಾಡಿಸಿಕೊಳ್ಳು : ಎನ್ನ ಸಹೋದರನೆಂತುಂ ಶ್ರಮಮಂ ನೀಗಿ ಸುಖದಿಂ ತಣಿದೊನಕ್ಕುಂ (ವಡ್ಡಾರಾ. ೫೫–೧೬); ಅವಧರಿಸದೆ ನಿನ್ನೊಳ್ ಪಿರಿದವಿನಯಮಂ ನೆಗಟ್ಟ ದೋಷಮಂ ತಪದೊಳ್ ನೀಗುವೆಂ (ಅದಿಪು. ೧೪–೧೩೧); ತಲೆವೇಸಱನೆಂತು ನೀಗುವೆಂ (ಪಂಪಭಾ. ೪–೯೮); ಬಸವಂ ಜನ್ಮದುರಾಶೆಯಂ ಕಳೆದು ಕರ್ಮಾರಂಭವಂ ನೀಗಿ ಸಂತಸದಿಂದಂ ಪೊಱಮಟ್ಟು (ಒಸರ. ೩–೧); ಮನದಲ್ಲಿ ದೃಢವಿರಬೇಕು ಪಾಪಿಜನರ ಸಂಸರ್ಗವ ನೀಗಲು ಬೇಕು (ಪುರಂದ. ೧–೧೩೪–೧). ೨. ಕಳೆದುಕೊಳ್ಳು ; ನಾಶಮಾಡಿಕೊಳ್ಳು : ನಷ್ಟಮಾಡಿಕೊಳ್ಳು : ಪಾದರದೊಳ್ ಪುಟ್ಟಿ ಕಳವಿನೊಳ್ ಸತ್ತತಿಚಾರದರಸುತನಂ [ತನಮಂ] ವ್ಯಭಿಚಾರದೊಳ್ ನೀಗಿದೆ (ಅನಂಪು. ೧೧–೫೧ ಪ); ಸೈಂಧವನೊಡಲು ನೀಗಿತು ತಲೆಯನು (ಕುವ್ಯಾದ್ರೋ. ೧೪–೪೭); ಘನಗಿರಿಯಲ್ಲಿ ಸಂದರಸುಗೆಯ್ವಿನಮಂದೆರದಿಮ್ಮ ರಾಜನಾತನ ತನುಜಾತಂ . . . ಚಾಮರಾಜನೊಳಿದಿರಾಗಿ ತನ್ನ ಗಜವಾಜಿ ಬಲಂಗಳ ನೀಗಿ ಸಾಗಿದಂ (ಚಿಕವಿ. ೨–೨೦); ವಿಚಾರವನ್ನು ನೀಗಿಕೊಂಡ ಬರೀ ವಯಸ್ಸಿಗಾಗಲಿ ಅನುಭವಕ್ಕಾಗಲಿ ಬೆಲೆ ಏನು (ದೂರಸ. ೧೬೮). ೩. ಬಿಡು ; ತೊರೆ ; ತ್ಯಜಿಸು : "ನೀಗು–ತ್ಯಜನೇ" (ಶಮಧಾ); ಮದನಂ ದೇಹವ ನೀಗಿದಂ (ಸೋಮೇಶ. ೨೩); ಅಭಿಮಾನವಂ ನೀಗಿದೆ . . . ನಿನಗೆ ಅತಿಶಿವದ್ರೋಹವಾಯಿತ್ತು (ಬಸಪು. ೨೧–೪೭); ಕೌರವೇಂದ್ರನ ನೀಗಿದಳೆ ಜಯಲಕ್ಷ್ಮಿ (ಕುವ್ಯಾಗ. ೪–೨೧); ಎಳವಸಿಱಂತಾಳಿದ ಪೆಣ್ಗಳಿ ಕಾಯಜನುಪಹತಿಯಿಂದಸುವಂ ನೀಗುವುದು (ಜಯಕಾ. ೨–೩೪); ನೀಗಲ್ ಸಂಧ್ಯಾರಾಗರಹೋಗುಣಮುಮನಳುರ್ವ ತಮಮುಮಂ ದ್ವಿಜರಾಜಂ ಬೇಗದೆ ನಿರ್ಮಲವಿಷ್ಣುಪದಾಗಮದಿಂ ಪಡೆದ ಸತ್ತ್ವಮೆನಿಸಿತು ಹೊನ್ನಂ (ಚಿಕವಿ. ೬–೨೧). ೪. ನಿವಾರಿಸು ; ಪರಿಹರಿಸು; ಹೋಗಲಾಡಿಸು: ಶಾಪಂಗೊಟ್ಟೊಡಾತನುಮದಂ ನೀಗಲ್ವೇಡಿ ರಾಜಗೃಹಕ್ಕೆ ವಂದು (ವಡ್ಡಾರಾ. ೧೫೮–೬); ಪರಿಭವಮನಿದಂ ನೀಗು

ನೀಂ ಭೀಮಸೇನಾ (ಪಂಪಭಾ. ೮-೭೧); ಅನುಜನ ನೆತ್ತರನೀಂಟಿದವನ ನೆತ್ತರ ಜೀವಸಹಿತಮಿಂಟದೆ ದುರ್ಯೋಧನನೆಂಬ ಪೆಸರ್ಗೆ ಮುಯ್ಯಾಂ ಪೆನೆ ದುಶ್ಶಾಸನನ ಬನ್ನಮಂ ನೀಗುವೆನೇ (ಗದಾಯು. ೫-೮); ಕಿಚ್ಚನಿಕ್ಕಿ ಜಲಮಂ ಮೇಣಕ್ಕೆ ಪಾಯ್ದುಣ್ಮ ಸತ್ತೀ ದುಃಖಾಗ್ನಿಯನೋವೊ ನೀಗ ದಿರಲಿಂದೀ ಮಾಟ್ಕೆ ಮೇಣ್ಪಟ್ಟಮೋ (ಭರ್ಮಾಮ್ಯ. ೪-೮೨); ಬಸಿಱಳಿದು ತದ್ದುಃಖಮಂ ನೀಗಿ ಜೀವಿಸಿದರಸುರಾರಿಮುಖ್ಯಸುರರದಱಿನಜರಾಮರ ರೆನಿಸಿದರ್ (ಪದ್ಮರಾ. ೧೦-೨೨೭); ಘನಸಾರಮೃಗಮದಪಟೀರಸೀತಳ ಮಾಂತು ಮಿನುಗಿದಂ ಮಂದಮಾರುತ ಮಾರುತಿಯ ತಾಪಮಂ ನೀಗಿ ಸುಖಗೊಳಿಸಲು (ವೆಂಕಾರಾ. ೫-೫-೨೫). ೫. ಕೊಪೆಗಾಣು ; ನಿವಾರಣೆಯಾಗು ; ಪರಿಹಾರವಾಗು : ನೀಗಿದುದೀಗಳೆಮ್ಮ ವನವಾಸ ಪರಿಶ್ರಮಂ (ಪಂಪಭಾ. ೬-೬೦); ನೀಗದಾಲೋಚನೆ ರೋಗೋಪದ್ರದ ಲೊಮ್ಮೆ ಕೃಷ್ಣ ಎನಬಾರದೆ (ಪುರಂದ. ೧-೭೦-೬); ಮಾಡಿದ ತಪ್ಪನ್ನು ನೇರ್ಪಡಿಸಲು ಹದಿನೈದು ವರ್ಷಗಳು ಬೇಕಾದುವು. ಆದರೂ ಅದ ನಷ್ಟ ವೆಲ್ಲ ನೀಗಿಲ್ಲ (ಹಾಹುತ್ತ. ೧೦೮); ಈ ನಿಗ್ಗರ ಒಂದು ನೀಗಿ ಹೋಗಲಿ (ನಿಸರ್ಗ. ೧೬೫). ೬. ತೀರಿಸು ; ಹಿಂದಿರುಗಿಸು : ಎಮಗೆ ಸಕಳ ರಾಜ್ಯಶ್ರೀಯುಂ ನಿನ್ನ ಬಲದಿಂದೆ ಸಾರ್ದುದು ನಿನ್ನುಪಕಾರಮನದೇತ ಱೊಳ್ ನೀಗುವೆನೋ (ಪಂಪಭಾ. ೧೪-೩೭); ಅಖಿಳಶಾಸ್ತ್ರಾಗಮಮಂ ನಿಮ್ಮಿಂದಮಱಿದೆವದಱಿಂ ನಿಮ್ಮುಪಕಾರಮನದೇತಱಿಂ ನೀಗುವೆಮೋ (ಸುಕುಮಾ. ೨-೫೮); ಜಜ್ಜಾರ ಮಾಸಾಳುಗಳು ನಿಜದಾತಾರನವಸರ ಕೊದಗಿ ಹಣವಿನ ಋಣನ ನೀಗಿದರು (ಕುಪ್ಯಾದ್ರೋ. ೧-೫೦). ೭. ತೊಲಗು; ನಾಶವಾಗು ; ಹಾಳಾಗು : ಅವಧಿ ತಪ್ಪಿದುದಾಱೆನೆ ಪತ್ತುತಿಂಗಳಾದುವು ಬರಲಾತನಾಱದೊಡೆ ಸಾಯಲುಮಾಱೆನೆ ಸತ್ತು ನೀಗೆನೇ ಎಂದು ಪಂಬಲಿಸುತ್ತಿರ್ದಳ್ (ಅದಿಪು. ೧೨-೪೩); ಪಗೆ ನೀಗೆಯುಂ ಮುಳಿಸುಪೋಗೆಯುಮಾಯತಿ ಪೆರ್ಚೆಯುಂ ಜಗಂ ಪೊಗಟೆಯುಮಾಂತ ರಾತಿ ನೃಪರಂ ತವೆ ಕೊಲ್ವುದಹೀಂದ್ರಕೇತನಾ (ಪಂಪಭಾ. ೮-೮೮). ೮. ಕೊಲ್ಲು ; ಸಂಹರಿಸು : ಹೋಗು ಪಾಂಡವರಾಯರಿಹ ವನಕಾಗಿ ನೀನವರೈವರನು ನೆಱೆ ನೀಗಿ ನೀನಾಹುತಿಯನಿಂದನುವಾಗಿ ಭಕ್ಷಿಪುದು (ಕುಪ್ಯಾಅ. ಓರಿಇ. ೨೫-೧೭); ಎಚ್ಚನವರವರೆಚ್ಚ ಬಾಣವ ಕೊಚ್ಚಿದನು ಕೋಲಳವಿಗೊಡ್ಡಿದ ನಿಚ್ಚಟರ ನೀಗಿದನು (ಕುಪ್ಯಾಕ. ೧೫-೨೨); ಬಾಗಿ ಲೊಳು ತಪಗೈವ ಬ್ರಹ್ಮನ ನೀಗಲೆಂದೇ ಬಂದ ಖಳರನು ತಾಗಿ ಯುದ್ಧವ ಮಾಡಿದನು ಭರದಿಂದ ಮುರವೈರಿ (ದೇವೀಮ. ೧-೬೫). ೯. ತೆಗೆ ; ತೆಗೆದುಹಾಕು : ನಾಗವಲ್ಲಿಯ ಹಿಂದುಮುಂದನು ನೀಗಿ ಕಳೆಯದೆ ಚೂರ್ಣಪರ್ಣತ್ಯಾಗವಿಲ್ಲದೆ ದಂತಧಾವನಪರ್ಣವನು ಸವಿದು ಭೋಗಿಸು ವೊಡಮರೇಂದ್ರನಾಗಲಿ . . . ಅವನನು ನೀಗಿ ಕಳೆವಳು ಭಾಗ್ಯವಧು (ಕುಪ್ಯಾಉ. ೩-೫೯). ೧೦. ಅಟ್ಟು ; ತೊಲಗಿಸು : ಲಲನೆ ತನ್ನೋಪ ನಿಂದಾದ ಬೇಸಱಂ ನಿಜಸಖಿಗೆ ಪೇಳುತಿರ್ದಳದೆಂತೆಂದೊಡೆ . . . ಪೋದೊಡೆ ಪೋಗನಿರ್ದೊಡಿರನೀ ಶನಿಯಂ ಸಖಿಯೆಂತು ನೀಗುವೆಂ (ಗಿರಿಕ. ೪-೧೫೭); ವಿಚಾರಿಸದೆ ನೀಗುವರೆ ಮಾನವನು (ಬಸಪು. ೪೦-೪೮). ೧೧. ಮುಕ್ತನಾಗು ; ಪಾರಾಗು : ಭವರೋಗವೈದ್ಯನಂ ಸಾರ್ದು ಬರ್ದುಕುವೆವೆಂದು ಭವಘೋರಶರಧಿಯಂ ದಾಂಟಿ ನೀಗುವೆವೆಂದು ನೆನೆವುತಿರಲ್ (ಸಾನಂಚ. ೪-೮೨). ೧೨. ಸಾಧ್ಯವಾಗು ; ಶಕ್ಯ ವಾಗು : ಇವನಿಂದ ಈ ಕದನ ನೀಗೀತೋ ನೀಗದೋ ಎಂದು ಯೌವ ನಾಶ್ವ ತಾನೂ ಬಂದ (ಬಿದುರೆ. ೧೬); "ಶಾಂತಿನಿಕೇತನ" ನನಗೆ ನೀಗದ ಸಾಹಸವೆನ್ನುವಿರೇನು ? ಮಾನವಯತ್ನಕ್ಕೆ ನೀಗದ್ದು ಯಾವುದೂ ಇಲ್ಲ (ಹೇಮಂತ. ೩೦೪). ೧೩. ನಿಭಾಯಿಸು ; ಸಂಭಾಳಿಸು ; ಸಾಗಿಸು: ನಮ್ಮ ಸಂಸಾರ ನಮಗೆ ನೀಗದಂತಾಗಿದೆ ! (ಪ್ರಣಸ. ೯); ನೀವುಗಳು . . . ಯಾರಾದರೂ ರಾಜರ ಸೇವೆಯಲ್ಲಿ ಸೇರಿ ಸಂಸಾರ ನೀಗಿಕೊಳ್ಳಿರಿ (ತ್ರೀರಾಯ. ೧೭೦). ೧೪. ಸಾಯು ; ಮರಣಹೊಂದು : ನೀಗು ವವನಿಗೆ ಭಾಗ ಸಿಕ್ಕಿದರೂ ಭೋಗಕ್ಕೆ ಬಾರದು (ಗಾದೆ); ನೀಗಿದರೂ ಬಡತನ ಬಿಡದು (ಗಾದೆ). ೧೫. ನಾಶಗೊಳಿಸು ; ಧ್ವಂಸಮಾಡು; ಹಾಳುಮಾಡು : ಎಂದು ಕೊಟ್ಟೆಹೆನಿನ್ನು ಸಾಲವನೆಂದು ತಿದ್ದುವೆ ವಕ್ಕಟಕಟೀ ಸೌಂದರಿಯ ಭಂಡಾರವೆಲ್ಲವನಿಂತು ನೀಗಿದೆವು(ಬಸಪು.೪೨-೧೩); ಮಱುಗಿದಳು ಕೈಕಸೆಯು ಮಗನನು ಕರೆದು . . . ನಿನ್ನಯ ಮರುಳುತನ ದಲಿ ಪಡೆಯ ನೀಗದಿರೆಂದು ಹೇಳಿದಳು (ಕೌತಿರಾ. ೨೩-೨೭); ಅವನು ಇದ್ದ ಅಸ್ತಿಯನ್ನೆಲ್ಲಾ ನೀಗಿದ (ರೂಢಿ). ೧೬. ಬಿಚ್ಚು ; ಕಳಚು : ಪಿತ್ತವೇಱಿತೊ ಮಂತ್ರಿವುಟ್ಟ ತೊಟ್ಟುದ ನೀಗಿ ಸುತ್ತ ನೋಡುತ ನಿಂದ ನೆನಿಸಿ ಎತ್ತಿದ ಜಿನಬಿಂಬ ಸಿದ್ಧಬಿಂಬಕೆ ಹೊಸಮುತ್ತ ಚೆಲ್ಲಿದನು ಭಾವ ದೊಳು (ಭರಚ. ೧೩-೧೭೧). ೧೭. (ಕಾಲಾವಧಿ ಮೊದಲಾದು ವನ್ನು) ಕಳೆ,—ದಾಟು : ಅಜ್ಞಾತವಾಸಕ್ಕೆ ಚಿಂತಿಪೊಡಿನ್ನನ್ನವು ತಾಣ ಮಿಲ್ಲದಱಿನುಂತಾರ್ಗಪ್ಪೊಡಂ ಮಿಕ್ಕ ರೂಪಪರಾವರ್ತದಿಂ ವಿರಾಟ ಪುರಮಂ ಪೊಕ್ಕಿರ್ದದಂ ನೀಗೆಮೇ (ಪಂಪಭಾ. ೮-೫೦); ನೀಗಿದರು ವನ ವಾಸವನು (ಕುಪ್ಯಾಉ. ೯-೨೮). ೧೮. ಮರೆಯಾಗು ; ಕಾಣ ದಾಗು ; ಇಲ್ಲವಾಗು : ಆಗಳಿವನಧಿಕಾಕ್ಷಿ ಬಾಹುವು ನೀಗಿದೊಡನಿವನವ್ವೆ ಕಂಡು . . . ಅಭಯವನು ಬೇಡಿದಳು (ಕುಪ್ಯಾಸ. ೧೦-೩೫).

[ದೇ.॥ ತಮಿ. ನೀಕ್ಕು, ನೀಙ್ಕು ; ಮಲ. ನೀಕ್ಕು, ನೀನ್ನು ; ಕೊಡ. ನೀಂಗ್, ನೀಕ್ ; ತೆಲು. ನೀಗು, ಈಗು]

ನೀಗ್ರೋ (ನಾ). ಆಫ್ರಿಕಾಖಂಡದ ಒಂದು ಬುಡಕಟ್ಟು ಮತ್ತು ಆ ಬುಡಕಟ್ಟಿಗೆ ಸೇರಿದವನು : ನೀಗ್ರೋ ಅಥವ ಆಫ್ರಿಕದವರು . . . ಆಫ್ರಿಕಾದಲ್ಲಿಯೂ, ಪೆಸಿಫಿಕ್‌ಸಾಗರದ ಕೆಲವು ದ್ವೀಪಗಳಲ್ಲಿಯೂ ವಾಸ ಮಾಡುತ್ತಾರೆ (ಭೂಗೋಳ. ೧೮) ; ಹೊಲೆಯರಲ್ಲಿ ಕೆಲವರು . . . ನೀಗ್ರೋ ಜನಗಳಂತೆ ನರ್ತನ ಮಾಡುತ್ತಿದ್ದರು (ಹುಟ್ಟಹ. ೬೪).

[←ಇಂ. Negro]

ನೀಚ (ಗು). ೧. ಕೆಳಗಡೆಯಲ್ಲಿರುವ ; ತಳಭಾಗದಲ್ಲಿರುವ ; ಕೆಳ ಮಟ್ಟದ : ಅತಿಶೀತವಲಯ, ಅತ್ಯುಷ್ಣವಲಯ, ಅತಿನೀಚಭೂಮಿ, ಅತಿ ಉನ್ನತಭೂಮಿ ಎಲ್ಲೆಲ್ಲೂ ಒಂದಲ್ಲ ಒಂದು ಜೀವಿಯ ವಾಸವನ್ನು ಕಾಣಬಹುದು (ಬಾಲಪ್ರ. III, ೧೨೦೫). ೨. ಕುಳ್ಳಗಿರುವ ; ಗಿಡ್ಡ ನೆಯ. ೩. (ಸಂಗೀತದಲ್ಲಿ) ಮಂದ್ರವಾದ ಧ್ವನಿಯ ; ತಗ್ಗಾದ ಧ್ವನಿಯ. ೪. ಕೀಳಾದ ; ತುಚ್ಛವಾದ : ನೀಚಮಾನವರಿಗೆ ಸಿರಿ ಬಂದರೇನು ಈಚಲ ಮರ ದಟ್ಟ ನೆರಳಾದರೇನು (ಪುರಂದ. ಧಾ. ೫-೧೩೭ ಪಲ್ಲವಿ). ೫. ದುಷ್ಟತನದಿಂದ ಕೂಡಿದ ; ಕೆಟ್ಟ. ೬. ಮುಖ್ಯ ವಲ್ಲದ ; ಪ್ರಮುಖವಲ್ಲದ. (ನಾ). ೭. ಕುಳ್ಳಾಗಿರುವುದು ; ಗಿಡ್ಡಾಗಿರುವುದು : "ನೀಚಮವಾಗ್ರಂ ಖರ್ವಂ ಕುಬ್ಜಮಾನತಂ ತಾನದೆಂಬುದಕ್ಕುಂ ಹ್ರಸ್ವಂ" (ವಸ್ತುಕೋ. ೧೦೪-೩೭); ಪವನಂ ಪೆರ್ಚಿದ ಮಹಾವೃಕ್ಷಂಗಳಂ ಕೀಟ್ಟುದಲ್ಲದೆ ಮೃದುವಪ್ಪ ತೃಣಂಗಳಂ ಕೀಟದು ಅದೆಂತೆನೆ ನೀಚಂಗಳಾಗಿ ತಲೆವಾಗಿರ್ಪ ಕಾರಣಂ (ಪಂಚತಂ. ೪೭-೧೦). ೮. ಕೀಳಾದುದು ; ಕ್ಷುದ್ರವಾದುದು : ಅಚಾರವಿಹು ದೆಂದು ಲೋಚಗುಂಡಿಗೆವಿಡಿದು ಭೂಚರದಿ ಸತ್ತ ನವಿಲ ಗಱಿ ಪಿಡಿಯು ವುದು ನೀಚವಲ್ಲೇನು (ಸರ್ವಜ್ಞ. ೧೦೧೯) ; ಆ ಸಮದರ್ಶಿ ತಾಂ ಜನ್ಮ ಕುಲಧನಜಾತಿವರ್ಣಪ್ರಭೇದಮಂ ಗಣಿಸದೆಯೆ . . . ನೀಚೋಚ್ಚ ಭಿನ್ನಮಂ ಸ್ಪರ್ಧೆವೈರಂಗಳಂ ತೊಡೆದು(ತ್ರೀರಾಮಾ. ೬-೧೮೨). ೯. ಚಾಡಿ ಕೋರ ; ನಿಂದಕ : "ನೀಚಂ ಕ್ಷುದ್ರಂ ಪಿಶುನಂ ಸೂಚಕನೆಂದಱಿದು ಕೊಳ್ಗೆ ಕರ್ಣೇ ಜಪನಂ" (ವಸ್ತುಕೋ. ೧೦೦-೧೩) ; "ದುರ್ಜನಃ,

ಪಿಶುನಃ, ಕ್ಷುದ್ರಃ, ನೀಚಃ, ಕರ್ಣೇಜಪಃ, ಖಳಃ—ಈ ೬ ಪಿಸುಣಂ" (ಹಲಾಯು. ೫೭-೧೯೧). ೧೦. ಕ್ಷುಲ್ಲಕ ವ್ಯಕ್ತಿ ; ಕ್ಷುದ್ರ ವ್ಯಕ್ತಿ ; ಅಧಮ : ಸತ್ವಾಧಿಕರುಂ ತಮ್ಮ ಪರಾಕ್ರಮಮನಧಿಕಬಲನೊಳಲ್ಲದೆ ನೀಚರಲ್ಲಿ ಮಾಡರ್ (ಪಂಚತಂ. ೪೭-೧೧). ೧೧. ದುರುಳ; ದುಷ್ಟ : ನೀಚನ ಕೃತ್ಯವ ದ್ರೌಪದಿ ಬಂದು ಸೂಚಿಸಲು ನೀ ಕೋಪದಿ ಸರ್ವ ಕೀಚಕ ಮೊದಲವನನುಜರನೆಲ್ಲ ಹೀಚಿ ಬಿಸಾಡಿದ ಮಹಿಮನೆ (ಪುರಂದ. ೪-೩೮-೨) ; ನೀಚರ ಸಂಗ ಅಭಿಮಾನ ಭಂಗ (ಗಾದೆ). ೧೨. ಒಂದು ಬಗೆಯ ಸುಗಂಧದ್ರವ್ಯ ; ಕಚೋರ : "ಪಟು-ನೀಚ, ಖಚೋರ" (ಓಷಧಿ. ೯೨). ೧೩. [ಜ್ಯೋತಿ] ನೀಚರಾಶಿ : ದಿನಪಾದಿಗಳುಬ್ಬ ಕ್ಕೇಟನೆಯ ಗೃಹಂ ನೀಚಮವರ್ಗೆ (ಜಾತತಿ. ೧-೪೨) ; ಸೂರ್ಯನಿಗೆ ತುಲಾ ನೀಚಸ್ಥಾನ (ಭಾಸ್ಕರ. ೫೩-೬). 'ಉಚ್ಚ' ಪರಾ. [ಸಂ.]

ನೀಚಕಿ (ನಾ). ೧. ತುದಿ ; ಅಗ್ರಭಾಗ. ೨. (ಎತ್ತಿನ) ಹಣೆ : "ನೀಚಕೀ, ಶಿರೋದೇಶಃ—ಈ ೨ ಹಣೆ" (ಹಲಾಯು. ೪೪-೧೧೨).

[ಸಂ. ನೀಚಕಿನ್]

ನೀಚಕುಲ (ನಾ). ಕೀಳಾದ ಕುಲ ; ಹೀನವಂಶ ; ಕೆಟ್ಟ ಸಂತತಿ : ಮಗಳೆ, ಸೀತಾದೇವಿ . . . ಲೋಕಶಂಕರಿಯಾಗು ; ಮೇಣ್ ಯಮಭಯಂಕರಿಯಾಗು ಲೋಕ ಮೂರಕೆ ಶೋಕವಾಗಿಹ ನಿಶಾಚರರ ನಿಷ್ಠುರ ನೀಚಕುಲಕೆ ! (ಶ್ರೀರಾಮಾ. ೧೯೩-೪೭೪). [ನೀಚ+ಕುಲ]

ನೀಚಗುಣ (ನಾ). ಕೆಟ್ಟತನ ; ದುಷ್ಟಬುದ್ಧಿ : ಆಚಾರವಿಲ್ಲದ ನಾಲಗೆ ನಿನ್ನ ನೀಚಗುಣವ [ಪಾಠಾಂ. ಬುದ್ಧಿಯ] ಬಿಡು ನಾಲಗೆ (ಪುರಂದ. ಧಾ. ೫-೭೬ ಪಲ್ಲವಿ) ; ಈ ಕೀಚಕನಲ್ಲಿ ನೀಚಗುಣಗಳು ಬಹಳವಾಗಿದ್ದವು (ನೀತಿಚಂ. IX, ೬). [ನೀಚ+ಗುಣ]

ನೀಚಗೋತ್ರಕರ್ಮ (ನಾ). [ಜೈನ] ಜೀವನಿಗೆ ಅಂಟಿಕೊಳ್ಳುವ ಎರಡು ಬಗೆಯ ಗೋತ್ರಕರ್ಮಗಳಲ್ಲಿ ಒಂದು ; ಹೀನಕುಲದಲ್ಲಿ ಹುಟ್ಟುವುದಕ್ಕೆ ಕಾರಣವಾದ ಕರ್ಮ : (೧೪೨) ಉಚ್ಚಗೋತ್ರ ಕರ್ಮ (೧೪೩) ನೀಚಗೋತ್ರಕರ್ಮ : ಇವೆರಡು ಗೋತ್ರಕರ್ಮಪ್ರಕೃತಿ ಗಳು. ಇವುಗಳ ಉದಯದಿಂದ ಉಚ್ಚ ಹಾಗು ನೀಚಕುಲಗಳಲ್ಲಿ ಜೀವದ ಜನ್ಮವಾಗುವುದು (ಜೈನಪ. ೨೭೬). 'ಉಚ್ಚಗೋತ್ರಕರ್ಮ' ಪರಾ.

[ಸಂ.]

ನೀಚಜಾತಿ (ನಾ). ೧. ಕೀಳುಜಾತಿ ; ಹೀನಕುಲ. ೨. ಕೀಳು ಜಾತಿಯಲ್ಲಿ ಹುಟ್ಟಿದವನು : ನೀಚಜಾತಿಗಳುಂ ಬಡವರುಂ ಸದ್ಧರ್ಮ ಮಂ ಕೈಕೊಂಡು ನೆಗಟ್ವರ್ (ವಡ್ಡಾರಾ. ೮೭-೫). [ನೀಚ+ಜಾತಿ]

ನೀಚತನ (ನಾ). ೧. ಕೀಳುತನ ; ಅಲ್ಪತನ : "ನಿಕರ್ಷ=ನೀಚ ತನ" (ಗಂಗಾಮ. ೧೮೨) ; ಯಾವತ್ತೂ ಪ್ರಕಾರದ ಅಪರಾಧಗಳಿಗೆ ಪಾತ್ರ ರಾದ ನರಜೀವಿಗಳು ನಾವು ಒಬ್ಬರನ್ನೊಬ್ಬರು ಕ್ಷಮಿಸದೆ ಇರುವುದು ಕೇವಲ ನೀಚತನವು (ಮುಂಬಯಿ. ೪-೮೬). ೨. ಕೆಟ್ಟತನ ; ದುಷ್ಟ ತನ : ಅವನು ಈಚೀಚೆಗೆ ವಿಪರೀತ ನೀಚತನ ಮಾಡುತ್ತಾನೆ (ರೂಢಿ).

[ನೀಚ+ – ತನ]

ನೀಚತೆ (ನಾ). ೧. ಕೆಳಗಿರುವಿಕೆ ; ತಳಭಾಗದಲ್ಲಿರುವಿಕೆ. ೨. ಕೀಳುತನ ; ಅಲ್ಪತೆ : ವಸ್ತು (plot)ವಿನ ಅಸಂಭವನೀಯತೆ ಯಾಗಲೀ ಅಥವಾ ಪಾತ್ರದ ನೀಚತೆ(Depravity)ಯಾಗಲೀ ಅನಾವಶ್ಯಕ ವಾಗಿಯೂ ಮತ್ತು ಉಪಯೋಗವಾಗದೆಯೂ ಇದ್ದರೆ ಅವುಗಳಿಗೆ ಯಾವ ಬಗೆಯ ಸಮರ್ಥನೆಯೂ ಸಾಧ್ಯವಿಲ್ಲ (ಆರಿಕಾ. ೧೪೬). ೩. ಕೃಶತೆ ; ತೆಳುವು : ತನ್ನ ಮದಾಳಿನೀಳಕುಂತಳದೊಳ್ ಕುಟಿಲ ಸ್ವಭಾವಮಂ . . . ಪೂಗಣೆಯ ದೊಣೆಗೆ ಮೆಯ್ದೊಣೆಯೆನಿಪ ಕಿಱು ದೊಣೆಯೊಳ್ ನೀಚತೆಯಂ ತಳೆದು (ಮಲ್ಲಿಪು. ೩-೫೪). [ಸಂ. ನೀಚತಾ]

ನೀಚದೈವ (ನಾ). ಕೀಳಾದ ದೈವ ; ಕ್ಷುದ್ರದೇವತೆ : ಲಜ್ಜೆಗೆಟ್ಟು ಕಿಱುಕುಳ ನೀಚದೈವಂಗಳ ಸಂಗ ಬೇಡಮ್ಮ ಎಲ್ಲ ದೇವರೊಡೆಯ ಲಿಂಗ ದೇವನೆ ನಿನ್ನ ಮನದೈವ ಕುಲದೈವವಮ್ಮ (ಮಹಾದೇ. ಬ. ೧೭೦-೩).

[ನೀಚ+ದೈವ]

ನೀಚಪಂಥಿ (ನಾ). ಕೆಟ್ಟಮಾರ್ಗದಲ್ಲಿ ಹೋಗುವವನು ; ದುಷ್ಟ : ಅಂತುಮಾ ನೀಚಪಂಥಿಗಳೆಲ್ಲರ್ ಒರ್ವರೊರ್ವರ ನೆರಂಬಡೆದು . . . ಬೀಡುಬಿಟ್ಟಿಹರಲ್ಲಿ (ಶ್ರೀರಾಮಾ. ೫೫೫-೯೩). [ನೀಚ+ಪಂಥಿ]

ನೀಚಪಾತ್ರ (ನಾ). (ನಾಟಕದಲ್ಲಿಯ) ಕೀಳುಪಾತ್ರ; ℙನಾಟಕವೇ ಮೊದಲಾದ ರೂಪಕಗಳಲ್ಲಿ ಬರುವ ದಾಸ, ದಾಸಿ, ಚೇಟ, ಚೇಟ, ದ್ವಾರಪಾಲಕ, ಉದ್ಯಾನಪಾಲಕ, ಬೆಸ್ತ ಮೊದಲಾದ ಅಪ್ರಧಾನಪಾತ್ರಗಳಿಗೆ ನೀಚಪಾತ್ರವೆಂದು ಹೆಸರು : ಕಡೆಯ ದಾಗಿ ಅತ್ಯಂತ ನೀಚಪಾತ್ರವೆನಿಸುವ ಮಂಥರೆಯನ್ನು ನೋಡೋಣ (ಭಾರದ. ೯೨). [ನೀಚ+ಪಾತ್ರ]

ನೀಚಪ್ರವೃತ್ತಿ (ನಾ). ಹೀನವರ್ತನೆ ; ಕೆಟ್ಟನಡತೆ ; ದುರಾ ಚಾರ : ಗೋವರ್ಧನನು ಮಲಗಿದಲ್ಲಿಯೇ ಕೇಳಿ, "ಎಲಾ ! ಪುನಃ ವಿಧವೆಯ ವಿವಾಹವೆ ? ಎಂತಹ ನೀಚಪ್ರವೃತ್ತಿ !" ಎಂದು ಮನಸಿನೊಳಗೇ ಎಂದುಕೊಂಡ (ಎರಸೆ. ೩೦). [ನೀಚ+ಪ್ರವೃತ್ತಿ]

ನೀಚಬುದ್ಧಿ (ನಾ). = ನೀಚಗುಣ : ಆಚಾರವಿಲ್ಲದ ನಾಲಿಗೆ ನಿನ್ನ ನೀಚಬುದ್ಧಿಯ [ಪಾಠಾಂ. ಗುಣವ] ಬಿಡು ನಾಲಿಗೆ (ಪುರಂದ. ೧-೧೮೩ ಪಲ್ಲವಿ). [ನೀಚ+ಬುದ್ಧಿ]

ನೀಚಮಾರ್ಗ (ನಾ). ಕೆಟ್ಟ ಮಾರ್ಗ ; ಹೀನವಾದ ನಡವಳಿಕೆ ; ಕೀಳುರೀತಿ : ಮಂದಮತಿಯೆ ನೀನನ್ಯರಲಿ ಬಯಸುವ ನೀಚಮಾರ್ಗವ ಬಿಟ್ಟು ಕಂದರ್ಪಜನಕನ ಕಿಂಕರನೆಂಬುವ ಕಲಸೋಗರ ಕಟ್ಟು (ಪುರಂದ. ಧಾ. ೨-೯೬-೧). [ನೀಚ+ಮಾರ್ಗ]

ನೀಚರಾಶಿ (ನಾ). [ಜ್ಯೋತಿ] ಸೂರ್ಯಾದಿಗ್ರಹಗಳಿಗೆ ಹೇಳಿರುವ ಅವುಗಳ ಉಚ್ಚರಾಶಿಯಿಂದ ಏಳನೆಯ ರಾಶಿ ; ℙ ಗ್ರಹಗಳ ಹಾಗೂ ಅವುಗಳ ಉಚ್ಚನೀಚರಾಶಿಗಳು ಕೆಳಗಿನಂತಿವೆ :

ಗ್ರಹ		ಉಚ್ಚರಾಶಿ	ನೀಚರಾಶಿ
೧.	ರವಿ	ಮೇಷ	ತುಲಾ
೨.	ಚಂದ್ರ	ವೃಷಭ	ವೃಶ್ಚಿಕ
೩.	ಕುಜ	ಮಕರ	ಕರ್ಕಾಟಕ
೪.	ಬುಧ	ಕನ್ಯಾ	ಮೀನ
೫.	ಗುರು	ಕರ್ಕಾಟಕ	ಮಕರ
೬.	ಶುಕ್ರ	ಮೀನ	ಕನ್ಯಾ
೭.	ಶನಿ	ತುಲಾ	ಮೇಷ
೮.	ರಾಹು	ವೃಷಭ	ವೃಶ್ಚಿಕ
೯.	ಕೇತು	ವೃಶ್ಚಿಕ	ವೃಷಭ

ಉಚ್ಚರಾಶಿಯಲ್ಲಿರುವ ಗ್ರಹವು ಶುಭವನ್ನೂ ನೀಚರಾಶಿಯಲ್ಲಿ ರುವ ಗ್ರಹವು ಅಶುಭವನ್ನೂ ಉಂಟುಮಾಡುತ್ತದೆ ಎಂದು ಜ್ಯೋತಿಶ್ಶಾಸ್ತ್ರದಲ್ಲಿ ಹೇಳಿದೆ : ಇರೆ ನೀಚದೊಳರ್ಥಮನಪಹರಿಸು ಗುಮಾ ನೀಚರಾಶಿಯಿಂದಂ ಪೂರ್ವಾಪರದೊಳನುಪಾತದಿಂ ಪರಿಹರಿಸುಗು ಮಖಿಳಗ್ರಹಾ[ಯು] ಪಿಂಡಾಯುವಿನೊಳ್ (ಜಾತತಿ. ೮-೧೨) ; ಸೂರ್ಯಾದಿ ಗ್ರಹಗಳ ಉಚ್ಚರಾಶಿಗೆ ಏಳನೆಯದು ಆಯಾ ಗ್ರಹಗಳಿಗೆ ನೀಚರಾಶಿ (ಜಾತತಿ. ೧-೪೨ ಆಡಿಟ). [ನೀಚ+ರಾಶಿ]

ನೀಚವಾಕ್ಯ (ನಾ). ಕೆಟ್ಟ ಮಾತು ; ಬಯ್ಗುಳು ; ದೂಷಣೆ : ಕೂಗಿದನ್ ಪೆಸರಿಂ ಸುಮಂತ್ರನಂ ಪೇಳೆ ಬರಲಿಲ್ಲೆಂದು ಶಪಿಸಿದನ್

ಸರ್ವರಂ ನೀಚವಾಕ್ಯಂಗಳಿಂ ಬಾಯ್ಗೆ ಬಂದಂತೆವೋಲ್ (ತ್ರೀರಾಮಾ. ೧೦೦-೧೭). [ನೀಚ + ವಾಕ್ಯ]

ನೀಚವೃತ್ತಿ (ನಾ). ೧. ಕೆಟ್ಟ ನಡತೆ ; ದುರಾಚಾರ: ಛೀಛೀಛೀಛೀ ಕಂಡೆಯ ಮನವೆ ಇಂಥ ನೀಚವೃತ್ತಿಗಳನು ಬಿಡು ಕಂಡೆಯ ಮನವೆ (ಪುರಂದ. ಧಾ. ೫-೯೫ ಪಲ್ಲವಿ) ; ಯಾಚಿಸಲು ಕೈಯೊಡ್ಡುವಾಗಲೇ ನಾಚಿಕೆಯು ಮನುಜನನು ಬರೆವುದು ಗೋಚರಿಸದಡಗುವುವು ಗುಣಗಳು ನೀಚವೃತ್ತಿಗು ನೀಚತರವಿದು (ನೀಸಾರಾ. ೧೮೮). ೨. ದೈನ್ಯವೃತ್ತಿ ; ದೀನಭಾವ : ಸಾಮಂತ ಮಹಾಸಾಮಂತರ್ಗೆ ಸ್ವಾಮಿಯಪ್ಪೀ ಪೃಥ್ವೀಶ್ವರಂ ಬಂದೆನ್ನುಮನರ್ಚಿಸಿ ಬಂದಿಸಿ ನೀಚವೃತ್ತಿಯಿಂ ತಿಂಕುರ್ವಾಣಂಗೆಯ್ದುಪ್ಪಂ (ಪಡ್ಡಾರಾ. ೭೯-೨೧). [ನೀಚ + ವೃತ್ತಿ]

ನೀಚವ್ಯವಹಾರ (ನಾ). ೧. ಕೆಟ್ಟ ಕೆಲಸ ; ದುರ್ವ್ಯಾಪಾರ : ಅವನದೆಲ್ಲ ಬರಿಯ ನೀಚವ್ಯವಹಾರವೇ (ರೂಢಿ). ೨. ಹೀನಕೆಲಸವನ್ನು ಮಾಡುವವನು ; ಅಲ್ಪ : ರವಿ ಚಾಪಕ್ಷೇತ್ರದೊಳ್ ನಿಂದೊಡೆ ಧನಪತಿ . . . ಮಕರದೊಳಿರೆ ಮೂರ್ಖಂ ಬಳಂ ಬೋಧಿ ನೀಚವ್ಯವಹಾರಂ ಸ್ವಲ್ಪ ವಿತ್ತಂ ಪರವಿಭವಯುತಂ (ಜಾತಕ. ೧೭-೧೭).

[ನೀಚ + ವ್ಯವಹಾರ]

ನೀಚವ್ಯಾಪಾರ (ನಾ). = ನೀಚಪ್ರವೃತ್ತಿ : ನೀಚವ್ಯಾಪಾರದಲಿ ಗುಹ್ಯಾಲಂಪಟಾದಿಯಲಿ ಶೋಕ ಮೋಹಂಗಳಲಿ ಬಳಲಿ ವಿವೇಕಶೂನ್ಯತೆಯಾದವನಿಗೆಯು ಏಕನಾಥನ ಚಿಂತನತಿದುರ್ಲಭವು ತಿಳಿ (ಗಗತಾ. ೧೮-೩೪). [ನೀಚ + ವ್ಯಾಪಾರ]

ನೀಚಾಟ (ನಾ). = ನೀಚಪ್ರವೃತ್ತಿ : ಪೇಚಾಟದಲ್ಲಿ ಬಿದ್ದರೆ ನೀಚಾಟವೇ ಸರಿ (ಗಾದೆ). [ನೀಚ + ಆಟ]

ನೀಚಾತ್ಮ (ನಾ). ಹೀನವಾದ ಮನಸ್ಸುಳ್ಳವನು ; ದುರಾತ್ಮ ; ದುಷ್ಟ. [ನೀಚ + ಆತ್ಮ]

ನೀಚಾಭಿಲಾಷಿ (ನಾ). ೧. ಕೀಳಾದುದನ್ನು ಬಯಸುವವನು. ೨. [ಜ್ಯೋತಿ] ನೀಚಕ್ಷೇತ್ರವನ್ನು ಪ್ರವೇಶಿಸಲು ಪ್ರಯತ್ನಿಸುತ್ತಿರುವವನು ; ಉಚ್ಚರಾಶಿಯಿಂದ ಏಳನೆಯ ಸ್ಥಾನವನ್ನು ಪ್ರವೇಶಿಸಲು ಮುಂದಾಗುತ್ತಿರುವವನು ; ☞ ಗ್ರಹವು ತನ್ನ ನೀಚಕ್ಷೇತ್ರದಿಂದ ಹನ್ನೆರಡನೆಯ ರಾಶಿಯ ಕೊನೆಯ ನವಾಂಶದಲ್ಲಿದ್ದರೆ (ಅಂದರೆ ನೀಚರಾಶಿಯ ಹಿಂದಿನ ರಾಶಿಯ ಕೊನೆಯ ನವಾಂಶದಲ್ಲಿದ್ದರೆ) ಅದಕ್ಕೆ ನೀಚಾಭಿಲಾಷಿಯೆಂದು ಹೆಸರು : ಸ್ವಗೃಹಾತ್ಮ ನವಾಂಶಕ ಮಿತ್ರಗೃಹ ನಿಜೋಚ್ಚಂಗಳೊಳ್ ದಶಾಪತಿ ನಿಲೆ ಮಾಡುಗೆವೊಳ್ಪಂ ತದ್ವಿಪರೀತಗನುಂ ನೀಚಾಭಿಲಾಷಿಯುಂ ಪೊಲ್ಲಮೆಯುಂ (ಜಾತಕ. ೯-೫). [ಸಂ. ನೀಚಾಭಿಲಾಷಿನ್]

ನೀಚಾಸನ (ನಾ). ೧. ಕೆಳಗಿನ ಆಸನ. ೨. ಕೆಳಗೆ ಕುಳಿತುಕೊಂಡಿರುವವನು ; ನೆಲದ ಮೇಲೆ ಕುಳಿತಿರುವವನು : ಬಸವರಾಜಂ . . . ಪನ್ನಿಚ್ಛಾಸಿರಮಕುಟವರ್ಧನಮಾಹೇಶ್ವರರ ನಡುವೆ ನೀಚಾಸನನಾಗಿ ಭಯಭಕ್ತಿಯಿಂದಿಪ್ಪಲ್ಲಿ (ಒಸರ. ೧೨-೩೯). [ನೀಚ + ಆಸನ]

ನೀಚೈರ್ಗತ (ಗು). ೧. ಕೆಳಮುಖವಾಗಿ ಹೋದ,—ಚಲಿಸಿದ : ಅವ್ಯಯಸಮಾಸಕ್ಕೆ—ಅಂತರ್ಮುಖ, ಬಹಿರಂಗ, ಉಚ್ಚೈರ್ಧ್ವಾಸ, ನೀಚೈರ್ಗತ (ಶಮಿದ. ೮೧ ಪ್ರಯೋ). (ನಾ). ೨. ಕುದುರೆಯ ನಡಗೆಗಳಲ್ಲಿ ಒಂದು ಪ್ರಕಾರ : ಅತಂ ಬೇಗಂ ಸುಶಿಕ್ಷಿತಮಪ್ಪ ಕುದುರೆಯ ಬೆಂಗೆವಾಯ್ದೊಡೆ ಅದು ಲಂಘನ ಪಲ್ಗನ ನೀಚೈರ್ಗತಾದಿಗಳೊಳಪ್ಪ ಕ್ರಿಯೆಗಳೊಡಂಬಡೆ ಬಲ್ಲರಚ್ಚರಿವಡೆ ಪರಿದೊಡೆ (ಜೀವಸಂ. ೫೩-೩೦ ಪ). [ಸಂ.]

ನೀಚೈರ್ಗೋತ್ರ (ನಾ). = ನೀಚಗೋತ್ರಕರ್ಮ : ಗಂಧದ್ವಿಕಂ ಸ್ಪರ್ಶಾಷ್ಟಕಂ ಅಗುರುಲಘುಚತುಷ್ಕವಿಹಾಯೋಗತಿ ದ್ವಿಕಸ್ಥಿರಾಸ್ಥಿರ ಶುಭಾಶುಭಸುಸ್ವರದುಸ್ವರಸುಭಗದುರ್ಭಗ ಪ್ರತ್ಯೇಕ ಶರೀರಾಯಶಸ್ಕೀರ್ತ್ಯನಾದೇಯ ನಿರ್ಮಾಣಪರ್ಯಾಪ್ತ ನೀಚೈರ್ಗೋತ್ರಂಗಳೆಂಬ ದ್ವಿಸಪ್ತತಿಪ್ರಕೃತಿಗಳಂ ನಿರವಶೇಷಂ ಕಿಡಿಸಿ (ಅಪಪು. ೧೬-೪೯ ಪ) ; ಉಚ್ಚೈರ್ಗೋತ್ರ ನೀಚೈರ್ಗೋತ್ರ ಭೇದದಿಂ ದ್ವಿವಿಧಮಪ್ಪ ಗೋತ್ರಮುಮಾಂ (ಸುಕುಮಾ. ೩-೩೯ ಪ). 'ಉಚ್ಚೈರ್ಗೋತ್ರ' ಪರಾ. [ಸಂ.]

ನೀಚಿಕಬ್ಬರಸಿ (ನಾ). ಒಬ್ಬಾಕೆಯ ಹೆಸರು : ಪತಿಭಕ್ತಿಯೊಳೊಂದಿ ಸಜ್ಜನಿಕೆಗೆ ನೆಲೆಯಾದ ಮಾಂತನದ ಪೆಂಪು ಸಮಂತಳವಟ್ಟ ನೀಚಿಕಬ್ಬರಸಿಗೆ ಸಂದರುನ್ನತಿ ಪೆಱರ್ದ್ದೊರೆಯೆಂದಡೆ ದೋಸವಲ್ಲದೇ (ಸೌಇಇ. XX, ೧೮-೧೬ ; 980). [? + ಅರಸಿ]

ನೀಟಿ$_1$ (ನಾ). ೧. ಉದ್ದ ; ನೀಳ : "ನೀಳಮೆನಲ್ ನೀಟಂ" (ಭಾರನಿ. ೪೦) ; ಇದು ಮಂತ್ರಿಯಟ್ಟದ ಕಾಣಿಕೆ . . . ಪದೆದವಧರಿಸೆಂದು ಕೊಟ್ಟು ಮತ್ತೊಮ್ಮೆ ನೀಟದೊಳಡ್ಡ ಬಿದ್ದೆದ್ದನವನು (ಭರಚ. ೫೭-೧೬) ; ತಿಳಿಯೆ ಮಾನುಷಲೋಕದಿಂದಾ ಜವನೂರ ಬಳಗೈದುವ ಪೆರ್ಬಟ್ಟೆ ಉಳಿಯದೆಂಬತ್ತೆಂಟುಸಾಸಿರಗಾವುದದಳತೆಯ ನೀಟವೆನಿಪುದು (ಹದಿಬ.೯-೧೯) ; ರಕ್ಕಸನಡೆ ಕಣ್ಗೆಟ್ಟು ಕಣ್ಮಾಯಮಾಗಲೊಡಂ ತಡೆಗೊಂಡ ನಡೆಮಾಡದೊಳ್ ಪಲ್ಗಳೆಡೆಯೆಡೆಯ ಕಲ್ಲಳಾಗೆ . . . ಅಕೊಬ್ಬೆಯ ನೀಟದ ತಳರ್ನಾಲಗೆ ಕೀಟಲಾಗೆ (ರಾಮಾಶ್ವ. ೧೧೧-೨೯) ; ತೊಟ್ಟಿನ ನೀಟ ಎರಡು ಮೂರಡಿ (ಹಸುಹೊ. ೩೩೪). ೨. ನೀಡಿರುವುದು ; ಚಾಚಿರುವುದು : "ಅಂಛತಿ = ಕಾಲಂ ನೀಡಿಕೊಂಡಪಂ ; ಅಂಛಾ = ನೀಟಂ" (ಕಾಶಕ್ಯ. ೧೨). ೩. ಎತ್ತರ : ಬೇಟೆಯಾಡುತ ಬೇಡರೇರ್ಮೆತಂದೊಂದು ನೀಟವಹ ಸ್ಥಳದಲ್ಲಿ ತರುಣಿರತ್ನವು ಬಹಳ ಕೋಟಲೆಯೊಳಳುತಲಿಹ ಪರಿಯನೆಲ್ಲವ ಕೇಳಿ (ಪ್ರೌಢರಾ. ೧೦-೩). (ಗು). ೪. ಉದ್ದವಾದ ; ನೀಳವಾದ : ಈ ನೀಟ ಬಿದಿರುಗಳಿಗೆ ಬಿದಿರಿನ ಸಲಿಕೆಗಳನ್ನು ಅಡ್ಡಹೊಡೆದಿರುವರು (ಬಾಳಿ. ೩೯). 'ನೀಳ$_1$' ಪರಾ.

ನೀಟಾಗಿಸು = ಉದ್ದವಾಗಿ ಚಾಚು,—ನೀಡು : ಬಲಗಾಲನ್ನು ಮೂರಡಿ ಮುಂದಿಟ್ಟು ಮಂಡೆಯಲ್ಲಿ ಮಡಿಚಿ, ಎಡಗಾಲನ್ನು ಹಿಂದೆ ನೀಟಾಗಿಸಿ . . . ಹಾಗೂ ಬಲಗಾಲನ್ನು ಹಿಂದೆ ನೀಟಾಗಿಸಬೇಕು (ಬ್ರಹ್ಮಜೀ. ೨೩೭).

[ದೇ.॥ ತಮಿ. ನೀಟ್ಟ ; ಮಲ. ನೀಟ್ಟ, ನೀಡು ; ತುಳು. ನೀಟ, ನೀಟು]

ನೀಟಿ$_2$ 'ನೀಟು$_2$' ನೋ.

ನೀಟತಂತಿ (ನಾ). ಚೊಕ್ಕಟವಾದ ತಂತಿ; ಸೊಗಸಾಗಿ ಅಳವಡಿಸಿದ ತಂತಿ : ನೋಟ ರಾಯನ ಮೇಲೆ ನೆನಹು ರಾಗದ ಮೇಲೆ ನೀಟ ತಂತಿಯ ಮೇಲೆ ಬೆರಳು (ಭರಚ. ೫-೫೮). [ನೀಟಿ$_2$(< ನೀಟು$_2$) + ತಂತಿ]

ನೀಟಪಡಿಸು (ಕ್ರಿ). ನೇರಗೊಳಿಸು ; ಸರಿಪಡಿಸು : ಹೊತ್ತಿನ ಕೊರತೆ, ಹಣದ ಕೊರತೆ . . . ಇವೆಲ್ಲವೂ ನೀಟಪಡಿಸಬಹುದಾದ ಡೊಂಕುಗಳು (ಹಸುಹೊ. ೧೧೯). [ನೀಟಿ$_2$(< ನೀಟು$_2$) + ಪಡಿಸು]

ನೀಟಸಾಲು (ನಾ). ಉದ್ದವಾದ ಸಾಲು,—ಪಂಕ್ತಿ : (ಕ).

[ನೀಟಿ$_1$ + ಸಾಲು$_2$(< ಸಾಲ್$_2$)]

ನೀಟಾಳು (ನಾ). ಸುಂದರವಾಗಿರುವವನು; ಚೆಲುವ : (ಜಾನಕೋ. ೧೧). [ನೀಟು$_2$ + ಆಳು$_3$(< ಆಳ್$_3$)]

ನೀಟಿಸು (ಕ್ರಿ). (?) : ಹಿಂದುಗೊಂಡಡಗಿಯಾ ವರಜನಾಹುತಿಗೆ ಮುಂದೊಂದಿ ಸುಳಿಯಲು ಬಿಡುವನಲ್ಲೆಂದು ಕಡೆಯ ಸಮ್ಮಂಧ ಮಪಹರಗೈದು ತಾಟಸಿದ ನೀಟಸಿದ ಬಾರೆಂದು ಹೀರಲೆಂದು (ಜಿನಮು. ೨೭-೩೪). [? + -ಇಸು$_3$]

ನೀಟು₁ 'ನೀಡು₁' ನೋ.

ನೀಟು₂, ನೀಟ್₂ (ನಾ). ೧. ನೇರ; ಕೊಂಕಿಲ್ಲದಿರುವುದು: ಕೋಟೆಯು ತೆನೆಯೆಡೆಗಂದಿಯೊಳ್ ತಲೆಯಿಟ್ಟು ನೀಟಲಿ ನೋಡುವರುಗಳ . . . ಜೀವವ ದಾಟಿಸಿದರು ಯಮಪುರಿಗೆ (ಕಂಸವಿ. ೧೪-೭೬); ಊರಿಂದ ಊರಿಗೆ ಪೋಗುವದೆ ಲೀಲಿ ದಾರಿ ಒಕ್ಕರವಲ್ಲದೆ ನೀಟು ಉಂಟೆ (ನೋಕ್ಷದೀ. ೨೪-೪); ಆಡಿನ ಕೋಡುಗಳು ಮೇಲುಗಡೆಗೆ ನೀಟಾಗಿರುತ್ತವೆ (ಮುಂಬಯಿ. ೫-೨೩); ಮನಸ್ಸನ್ನು ಹತ್ತಿರ ಸೆಳೆಯುವ ಆಕರ್ಷಣೆಗೆ! ನೀಟಾದ ಮೂಗು (ಅಲಹೂ. ೧೦). ೨. ಋಜುಮಾರ್ಗ; ಸರಳತೆ; ನಿಷ್ಕಾಪಟ್ಯ: ನೀಟಂಗೆಜ್ಜದ ಜೈತಜಿಕಾಟಕನಂ ಕಡಿದು ಬಿಸುಡೆ ಚಕದೇವೇಂದ್ರಂ (ಅಸ್ಪತಿ. ೬೧-೫೯); ಕೋಟಜನ್ಮವು ದೇವದ್ವಿಜರನು ಭಕ್ತಿಪೂರ್ವಕದಿ ವಿಸಿಟಿನಿಪ ಪೂಜೆಯಲಿ ಸೆಚ್ಚಿಸಿದಾಟವಿಳರುಗಳಿಂಗೆ ಫಲಿಪುದು ನೀಟಿನಲಿ ನಿಮ್ಮಂಘ್ರಿದರುಶನವು (ಕೋಗಯ. ೯-೬೯); ನೀಟಾಗಿ ನಡೆದರೆ ಕಾಟ ಬಾರದು (ಗಾಪ). ೩. ಜೆಲುವು; ಅಂದ; ಸೊಗಸು: ನೀಟಾದ ಪೆಣ್ಣ ಸಿಂಗರಿಸಿಯತ್ಯಂತ ಕೈಮಾಟದ ಹೆಂಗಳ ಕರೆಸಿ (ಪೋಹತ. ೩೧-೪); ಕುಡಿತೆಗಂಗಳ ಗರುವೆಯರ್ ನೆಲಕ್ಕಳೆವ ನಿಡುಜಡೆಯ ನೀಟಿನ ನೀಜಿಯರ್ . . . ನಡೆತಂದರು (ಚಿಪು. ೪೫-೩೩); ನೀಟಾದ ಹೆಣ್ಣು ಕರಲೇಸು ಸುಜನರೊಡನಾಟವೇ ಲೇಸು (ಸರ್ವಜ್ಞ. ೭೨೦). ೪. ಜೆನ್ನು; ಉತ್ತಮ: ತೋಟದ ಕಬ್ಬಿಂದ ಹೋಟೆಯ ಜೇನಿಂದ ನೀಟಾಗಿ ಕುಪ್ಪಿವ ಹಯನಿಂದ ಬಲ್ಲವಳ ಕೂಟವೇ ಲೇಸು (ಸರ್ವಜ್ಞ. ೧೭೦೦). ೫. ಜೊಕ್ಕತನ; ನಾಜೂಕು: ಹಾಟಕದ ಬೆತ್ತ ಕೋಟಿ ಸಾಟ ಇಲ್ಲದೆ ಪಿಡಿದು ನೀಟಾದ ಓಲಗದವರ ಕೂಟಗಳ ಮಧ್ಯದಲ್ಲಿ (ಪುರಂದ. ೧-೨೧೪-೨); ನೀಟಿನ ಮನೆ ತಂಗಿಲ್ಲಾ ಸೊಳು ಪಂಚನೆ ಕೂಟದ ಹೆಂಗಳೊಪ್ಪಿದರು (ಕಂಸವಿ. ೬-೧೨೮); ಕನ್ನಡಿಯೊಳ್ ಮೇರು ಕಾಣಬರುವಂತೆ ನಾಟಕರೂಪದಿಂ ನಾಲ್ವರಿರವಂತೆ ನೀಟಾಗಿ ರಚಿಸಿಪ್ಪುದೀ ಕೃತಿ (ಸೌಗಂಧಿ. ೫-೨). ೬. ರಕಾರ; ರೇಫ: (ಕ). ೭. ವಿಲಾಸಿ(?): ಪಾತಳಾಂಗದ ಬಟ್ಟಿಯ ನೀಟುಗಳ್ ಚಾಟುಗಳ್ ನೀತಿಯಿಲ್ಲದ ಪರಮನೀಚುಗಳ್ ಕೋಚುಗಳ್ ಲೋಚುಗಳ್ ವಾಚಾಳರು . . . ಸತಿಯರು (ಪತಿಲ. ೨-೫೯).

(ಗು). ೮. ನೇರವಾದ; ನೆಟ್ಟಗಿರುವ: ಬಲಶಾಲಿಗಳಾದ ಅನೆಗಳ ಗುಂಪೊಂದು ಹೊರಟಿತು . . . ಉದ್ದನೆಯ ನೀಟು ತೂಗುದಿಮ್ಮಿಗಳೆರಡನ್ನು ಅವು ಸೊಂಡಿಲುಗಳಲ್ಲಿ ಹಿಡಿದು ತಂದವು (ಶಾಂತಲಾ. ೨೩೧).

ನೀಟ್₂ : ೧. ಒಬ್ಬ ಬಡಿಗನಿಂದ ಅವುದಾನೊಂದು ಗಳೆಯ ಹಾಸಿಕೊಂಡೊಯಿದು ಹೋಗಿ ಭೂಮಿಯಲ್ಲಿ ಹೂಡಿ ಹೂಡಿದರೆ ನೀಟಾಗಿ ನಡೆದರೆ ಹೂಡುವರು (ವಚನ. ೧೨೭-೧೦೭). ೩. ಅಟವಿಕರೊಡಗಿದರು ಘನಶ್ಯಂಗಾಟಕಾಖ್ಯೋಹವನು ರವಿಕೋಟಿಯಲಿ ಕಾಲೂಲಿ ಲುದಯಾಚಲದ ಮುಸ್ತಕವ ನೀಟದಲಿ ನಿಲೆ ರಥಗಜಾವಳಿ ಘೋಟಕವ್ರಜ ಪತ್ಸಿಗಳ ಕಾಲಾಟವೆಸೆಯಲು ಹಂಸಡಿಬಿಕರು ರಚಿಸಿದರು ಬಲವ (ನೀಭಾಗ. ೧೦-೫೫-೩೫). 'ನೀಟು₃' ಪರಾ.

ನೀಟಾಗು = ನೇರವಾಗು; ನೆಟ್ಟಗಾಗು: ಲೇಸಾಗಿ ನಾಯಿಬಾಲಕೆ ನಾರಾಯಣತೈಲಾ ಏಸು ಬಾರಿ ತೀಡಿದರೆ ನೀಟಾಗುವದೆ (ಪಾದಿತೀ. ೮೧-೨); ಹಾಸುದಿಂಬನು ನೆಮ್ಮಿ ನೀಟಾಗುತೆಲ್ಲರುಂ ಒರಗಿದರ್ (ಕಾಲೂರ. ೬೪-೧೧೨).

[ದೇ.॥ ತುಳು. ನೀಟೊ; ತೆಲು. ನೀಟು./ಮರಾ. ನೀಟ್]

ನೀಟು₃ (ನಾ). ಅಚ್ಚುಕಟ್ಟು; ಒಪ್ಪ; ಓರಣ: ಕುಳಿತುಕೋ ಮತ್ತೆ. ಬೈತಲೆ ತೆಗೆದು ನೀಟಾಗಿ ಜಡೆಹಾಕಿಕೊಡುತ್ತೇನೆ (ನಿಶಿಲು. ೪); ಅವರ ಮನೆ ತುಂಬ ನೀಟಾಗಿದೆ (ರೂಢಿ). [←ಇಂ. Neat]

ನೀಟುಗ (ನಾ). ಜಾಜುವವನು; ನೀಡುವವನು: "ಡವಕಃ, ಡವಮಾನಃ, ಈ ೨ ನೀಟುಗಂ" (ಕಾಶಕ್ಯ. ೧೨೭).

[ನೀಟು₁(<ನೀಡು₁)+ -ಗ₂]

ನೀಟುಗಾತಿ (ನಾ). ೧. ಜೆಲುವೆ; ಸುಂದರಿ: ನೀಟುಗಾತಿಯರೊಲುಮೆ ಬೂಟಕವೆಂದು ತಿಳಿಯಿರೊ (ಪುರಂದ. ೨-೧೬೯); ಪೊಸ ಕೊಂಡವಣ್ಣ ದುಂಟಿಯ ನೀಟುಗಾತಿ (ಜಂಪ್ರಸಾಂ. ೯-೫೯); ವಿಸಾಟುತಿಹ ಸಾರಂಗಿನಾಡಕೆ ನೀಟುಗಾತಿಮ್ಮೆಳು ನಾಟ ಮನವನು ನಲಿನಿ ನೋಡುತಿಹ ಕೂಟದಿಂದಿಹರು (ಶರಲೀ. ೧೪೦-೬). ೨. ಜೊಕ್ಕಟವಾಗಿರುವವಳು; ಶುಭ್ರವಾಗಿರುವವಳು: (ಕ). [ನೀಟು₂+-ಕಾ₅]

ನೀಟುಗಾರ 'ನೀಟುಗಾಜು' ನೋ.

ನೀಟುಗಾರಿಕೆ 'ನೀಟುಗಾಜುಕೆ' ನೋ.

ನೀಟುಗಾಜು, ನೀಟುಗಾರ (ನಾ). ಜೆಲುವ; ಸುಂದರ: ನೀಟುಗಾಜುನ ನೋಡುವ ನೋಟವೆ ರತಿಯೂಟದಾನಂದವನೆದೆಗೆ ನಾಟಗೋಸುತವೆ (ಜಂಪ್ರಸಾಂ.೯-೭೦). 'ನೀಟುಗಾಜುಕೆ' ಪರಾ. **ನೀಟುಗಾರ:** ವಾರೆನೋಟಗಳ ಯೇಟುಗಳು ನೀಟುಗಾರರ ಮನಸುಗಳ್ಲಿ ನಾಟುವಂತೆ ಮಾಡಿ (ಸೌಗಂಧಿ. ೧೪೧-೧); ನೀಟುಗಾರರನೆಲ್ಲ ನಾಡೆ ನಾಟಿಸುವಂಥ ನೂಟ ಮಾಡುವ ಕಣ್ಣು (ಉಯ್ಯಾಲೆ. ೭೧-೯). 'ನೀಟುಗಾರಿಕೆ' ಪರಾ. [ನೀಟು₂+-ಗಾಜ(<—ಕಾಜು)]

ನೀಟುಗಾಜುಕೆ, ನೀಟುಗಾರಿಕೆ (ನಾ). ಜೆಲುವು; ಅಂದ; ಸೊಗಸು: ಹರಿಗೆಯ ನಿಶ್ಚಯದ ನೀಟುಗಾಜುಕೆಯ ನಿಶ್ಚಟದ . . . ಕನಕ ಮಣಿ ಖಚಿತಪೇಟಕದುಬ್ಬಟಿಯಬ್ಬರದ ಹರಿಗೆಕಾಜರ ಮೊತ್ತ ದೊತ್ತಿನುಭಯ ಪಾರ್ಶ್ವದೊಳಿಂಬುಗೊಂಡು (ಹವಿಸ್ಸಾರ. ೩-೩೩ ಪ). **ನೀಟುಗಾರಿಕೆ:** ಅಂದಚೆಂದದ ನೀಟುಗಾರಿಕೆಯ ಕಾವ್ಯವು ನಮಗಷ್ಟು ಬೇಕಾಗಿಲ್ಲ (ಸಾಹವಿ. ೨೧). [ನೀಟುಗಾಜು+-ಇಕೆ]

ನೀಟುತನ (ನಾ). ಜೆಲುವು; ಸೊಗಸು; ಅಂದ: ತಮ್ಮ ನೋವು-ದುಃಖ ಎಲ್ಲವನ್ನೂ ಮರೆತು . . . ನೀಟುತನ ಎಲ್ಲಿರುವ ದೆಂಬುದನ್ನು ಮೊದಲ ಬಾರಿ ಅರಿತುಕೊಂಡರು (ಪೋಡಕಿ. ೩೪).

[ನೀಟು₂+-ತನ]

ನೀಟುದಾರಿ (ನಾ). ನೇರವಾದ ದಾರಿ,—ಮಾರ್ಗ: ಆ ಊರಿಂಗೆ ನೀಟುದಾರಿಯಿದೆ (ರೂಢಿ). [ನೀಟು₂+ದಾರಿ]

ನೀಟುದೋರು (ಕ್ರಿ). ಸೌಂದರ್ಯವನ್ನು ಹೊಮ್ಮಿಸು; ಜೆಲುವನ್ನು ಸೂಸು: ನೀಟುದೋರುತ ವಿಸಾರಿಯರೊಲಿಸುತ ಚಾಟು ಮಾತುಗಳಾಡಿ ನಗುತ (ಸೌಂದಕಾ. ೩-೧೦೧).

[ನೀಟು₂+ತೋರು(<ತೋಜು)]

ನೀಡ (ನಾ). ೧. ಹಕ್ಕಿಯ ವಾಸಸ್ಥಾನ; ಗೂಡು: "ಗೂಡು ನೀಡಂ ಕುಲಾಯಂ" (ಪಸ್ತು ಕೋ. ೪೧-೧೧); ಸುಖಸಾನಂದಂಗಳಪ್ಪ ಚಂದನಂಗಳೊಳಂ ಶುಕ್ಲನಿಳದಾಪ್ಯತಂಗಳಪ್ಪ ಫಲಭರಿತ ದಾಡಿವಿಮಾನೀಡಂಗ ಸೊಳಂ (ಕಾದಂಪೂ. ೬೫೫); ವಿಕ್ವಾಸಘಾತಂ ವನದ್ರುಮ ನೀಡದೊಳ್ . . . ಅಕ್ಕುಮುಲ್ಲದೆ ಜನಪದದ ಜನಂಗಳೊಳಿಲ್ಲ (ಜಗವಿ. ೨-೧೧ ಪ); ಬಿರುದಿನ ಸಾಳ್ವನ ನೀಡವನುಜ್ ಗಿಳಿವಜುಗಳು ತುಡುಕುವಂದದಲಿ ದುರಗಲಿ ಕಂಠೀರವೇಂದ್ರನ ದುರ್ಗವನಿರದೆ ಮುತ್ತಿತು ರಿಪುವಿತತಿ (ಕಂಸವಿ. ೧೪-೪೫); ಕಟ್ಟಿದಿರೊಳೊಂದು ಚಟಕೆ ನೀಡದೊಳಿರ್ದುಂ ಕಿಜುಮಜುಂಯುಂ . . . ಲಲ್ಲೆಗೆಯ್ವುದಂ ನಟ್ಟಾಲಿಯೊಳಭೀಷ್ಟಿಸಿ (ರಾಮಾಶ್ವ. ೧೪೮-೧); ನೀಡದೊಳ್ ಬಳೆದು, ಕಾಡಿನಲಿ ಹಾರಾಡಿದಾ ಗರುಡಶಿಶು ಗರಿ ಬಲಿತ ಮೇಲಲ್ಲ ದೇಶಂಗಳಂ ಜರಿಸಿ ತಣಿವುದೆ? (ತ್ರಿಂಶಾಮಾ. ೪-೯೧). ೨. ಆಶ್ರಯ ಸ್ಥಾನ; ನೆಲೆ; ಬೀಡು: ಗಂಧಿಳವಿಷಯದ ನಡುವೆ ತನ್ನಹೀವಿಳಾಸಿನಿ

ಮೇಲ್ಕೊಂಡ ದುಕೂಲಮುಮಂ ಅರ್ಚ್ಚಕರಮೇಶ್ವರನ ವಿಶದಯಶಃ ಪುಂಜಮುಮನನುಕರಿಸಿ ವಿವಿಧವಿದಗ್ಧವಿದ್ಯಾಧರ ಜನಕ್ರೀಡಾನೀಡಂಗಳಾಗಿ (ಆದಿಪು. ೧-೬೨ ಸ); ಸುರತಸುಖದ ಬಳ್ಳವಳ್ಳಿಯೆನಿಪ ಬಳ್ಳಿ ಮಾಡದಿಂ ಮಹಾನಿನೋದನೀಡದಿಂ (ಪಂಪಭಾ. ೧-೫೮ ರಗಳೆ); ಸಿರಿದೊಂದೌತ್ಸುಕ್ಯದಿಂದಾಗಳಾ ವಿದಲತ್ ಪಂಕಜನೇತ್ರೆ ಮಾಡಿಸಿದಳ್ . . . ಚಿತ್ತಭಿತ್ತಿ ಪರಿಶೋಭಾನೀಡಮಂ ಮಾಡಮಂ (ಸುಕುಮಾ. ೧೦-೪೩).

[ಸಂ.]

ನೀಡಜ (ನಾ). ಗೂಡಿನಲ್ಲಿ ಹುಟ್ಟಿದುದು; ಪಕ್ಷಿ: "ಪತತ್ . . . ನೀಡಜಃ, ವಾಜೀ, ದ್ವಿಜಃ—ಈ. ೨೬ ಹಕ್ಕಿ" (ಹಲಾಯು. ೪೦-೮೫); "ಶಕುನಿ ವಿಹಗಂ . . . ನೀಡ[ಪಾಠಾಂ.ಳ]ಜಮುಂಡಜಂ ಶಕುನಂ ಶಕುಂತಂ ಶಕುಂತಿಯೆನೆ ಪಕ್ಷಿ" (ಪಂಗರಾ. ೫೦-೧). [ಸಂ.]

ನೀಡಡಿ (ನಾ). ೧. ಮುಂದಕ್ಕೆ ಚಾಚಿದ ಕಾಲು; ಮುಂಚಾಚಿದ ಹೆಜ್ಜೆ: ಪಸರಂಬೆತ್ತೆಡೆಯಾದ ನೀಡಡಿ ಪೊದಳ್ದಾಕರ್ಣವಾಕುಂಚಿತಾಸ್ತ್ರ ಸಮೇತೋಚ್ಚಕರಾಗ್ರಂ . . . ತಾನಿಸಲೊಂದೊಂದು ಕುರಂಗಮಂ ಶಬರನಿಂತಿರ್ದಂ ಮಹಾರಣ್ಯದೊಳ್ (ಗಿರಿಕ. ೧-೮೯). ೨. ದಾಪುಗಾಲು; ದೊಡ್ಡ ಹೆಜ್ಜೆ: ತಿರುಕಾಳತ್ತಿಮಲೆಯ ತಪ್ಪಲೊಳೆಲ್ಲ ನೆರೆನೆರೆದು ನೋಳ್ಪ ಕಾರಣಿಕಮೃಗಮುಮನೆಲ್ಲ ಕಂಡು ನೀಡಡಿಯಿಟ್ಟು ಕುನಿದು (ಕಣ್ಣರ. ದೇ. ೧೨೭-೨೩); ನೀಡಡಿಯಿಟ್ಟು ತಳ್ವಿ ಬಿಡದೆತ್ತಿ ಭುಜಾಗ್ರಮನೈದೆ ಲಕ್ಷ್ಯಮಂ ನೋಡಿ . . . ಶರಾಳಿಯಂ ಕಱಿದರಾಹವದೊಳ್ ಕಡುಬಿಲ್ಲ ಬಿತ್ತಿಗರ್ (ಉದ್ಭಟ. ೪-೬೮). [ನೀಡು$_2$+ಅಡಿ$_1$]

ನೀಡಡಿಗೊಳ್ (ಕ್ರಿ). ಕಾಲನ್ನು ಮುಂಚಾಚು: ನೀಡಡಿಗೊಂಡು ನಿಂದು ಡೊಣೆಯಿಂ ಕಣೆಯಂ ತೆಗೆದಾರ್ದುಂ ಬಿಲ್ಗದಂ ಪೂಡಿ . . . ಮೃಗವೃಂದಮನಿಕ್ಕಿದರಲ್ಲಿ ಭಿಲ್ಲಿಯರ್ (ಶಬಶಂ. ೩-೫೨).

[ನೀಡಡಿ+ಕೊಳ್$_1$]

ನೀಡಾಡು (ಕ್ರಿ). ೧. ಚಾಚು; ಮೇಲಕ್ಕೆ ಎತ್ತು: ಮಲ್ಲರೆಲ್ಲರುಗಂಡು ಹೆಣ್ಣು ಒಂದಾಗಿ ಕಡುಮುಮ್ಮನದಿಂದ ಕೂದಲು ಕೆದರಿ ತೋಳ್ಗಳಂ ನೀಡಾಡಿ (ನೈಶಾಖಿ. ೭೯-೪೦೫). ೨. ಒಗೆ; ಬಿಸಾಡು; ಈಡಾಡು: ಹೆಮ್ಮೆಯಾಡಲು ಬೇಡಿ ಹೆಮ್ಮೆ ನೀಡಾಡುವುದು ಹೆಮ್ಮೆಯಿಂದಲಿ ನೀವು ಕೆಡಬೇಡಿರಯ್ಯ (ಪುರಂದ. ೧-೧೪೧ ಪಲ್ಲವಿ); ಕಾರೆ ಮುಳ್ಳುಗಳಿಂದ ಬೀರಿದ ಮಾರ್ಗವ ತೋರಿಸಿ ಕಡೆಸಾರಿ ನೀಡಾಡುವರು (ಸಾಸಂಗ. ೧೬); ಬರ್ಮಳ್ ಗಾಡಿಯ ಸಿಂಗಾಡಿಯ ಪುರ್ಬನ ಗರುವೆ ಮೊಲೆಯ ಚೊಲ್ಲೆಯಮುಂ ನೀಡಾಡಿ . . . ಕೊಳನಂ ಪುಗುತಂದಳ್ (ರಾಮಾಶ್ವ. ೧೨೬-೧೮). 'ಈಡಾಡು' ಪರಾ. [ನೀಡು$_1$+ಆಡು$_1$]

ನೀಡಿಕೆ (ನಾ). ಪೂರೈಕೆ; ಒದಗಿಸುವಿಕೆ: ಇಂಡಿಯದ ಅಮುದುದಾರರು ಕೊಡುವ ರೂಪಾಯಿ ಮತ್ತು ಅಮೆರಿಕದ ಅಮುದುದಾರರು ಕೊಡುವ ಡಾಲರು ಇವು ವಿನಿಮಯ ಮಾರುಕಟ್ಟೆಯ ವಿವಿಧ ಹಣಗಳ 'ನೀಡಿಕೆ' (Supply)ಗೆ ಸೇರುತ್ತದೆ . . . ಹೀಗೆ ವಿವಿಧ ಹಣಗಳ 'ನೀಡಿಕೆ — ಬೇಡಿಕೆ'ಗಳಿಗನುಸಾರವಾಗಿ ವಿನಿಮಯದರವು ನಿರ್ಣಯವಾಗುವುದು (ಅಂತಸಂ. ೫೮). [ನೀಡು$_1$+-ಇಕೆ]

ನೀಡಿಸು (ಕ್ರಿ). ೧. ಕೊಡುವಂತೆ ಮಾಡು; ಕೊಡಿಸು: ಕಿರೀಟ ತನ್ನನಜಿಪುತ್ತೆ ಕಮಿಾದ್ರುಮದಲ್ಲಿಗಾತನಂ ನೀಡಿರದುಯ್ದು ನೀಡಿ [ಪಾಠಾಂ. ತೋಜಿ]ಸಿದನಾತ[ನ]ನಲ್ಲಿಯ ಕೈದುವೆಲ್ಲಮಂ (ಪಂಪಭಾ. ೪-೧೦೦); ಕಿರೀಟಿಯ ಕೈ[ಲಿ] ಸೈಂಧವನ ಶಿರವ ಕೆಡಹಿಸಿ ಅವನ ತಂದೆಯ ಕರತಲಕೆ ನೀಡಿಸಿದೆ (ಹರಿಹಾ. ೩೪). ೨. ಬಡಿಸುವಂತೆ ಮಾಡು; ಊಟಕ್ಕೆ ಹಾಕಿಸು: ನಾನು ಸಕಲಪದಾರ್ಥವ [ಸ್ವೀಕರಿಸುವುದಕ್ಕೆ] ಮುನ್ನವೇ ಜಂಗಮಕ್ಕೆ ಮಿಷ್ಟಾನ್ನವ ನೀಡಿಸು [ಪಾಠಾಂ. ನೀಡು]ವೆ (ಮಹಾದೇ. ಬ. ೮೯-೨೧೫); ಹಸಿದನ್ನೆ ನೀನಾದಡಂ ವಂಚಿಸದಡಿಸಿ ನೀಡಿಸಿದಡಾರೋಗಿಸುವೆಂ (ಬಸಪು. ೫೭-೩೫); ಪರಿಮಳಿಪ ರಾಜಾನ್ನ . . . ದುಗ್ಧ ಮುಂತಾದ ಭೋಜ್ಯಪರಿಕರಮನುಜಿಃ ನೀಡಿಸಿದನಾ ಮಹಾಚರಕೊಲ್ದು ಚೆನ್ನಬಸವೇಶನಂದು (ಚೆಬಪು. ೫-೬೦).

ನೀಡಿಸಿಕೊಳ್ = ಪಡೆದುಕೊಳ್ಳು; ಈಸಿಕೊಳ್ಳು: ನೀಡಿಸಿಕೊಳ್ವ ಕೈಗಳುಮನಿತ್ತೆ ಸುರಾಳಿಗೆ ಕುಂಭಕೋಟಿಯಂ ನೀಡುತುಮಿರ್ಪ ಕೆಯ್ಗಳುಮನಿತ್ತೆ ಜಿನಂಗಭಿಷೇಕಕೋಳಿಯಂ ಮಾಡುವ ತನ್ನ ಕೆಯ್ಗಳುಮನಿತ್ತೆ ಸಮಸ್ಯತಿಗಗ್ರಭಾಗದೊಳ್ ಕೂಡುತುಮಿರ್ಪ ಕೆಯ್ಗಳುಮನಿತ್ತೆ ವಿಚಿತ್ರಮೊ ಶಕ್ತಿ ಶಕ್ರನಾ (ಚಂದ್ರಪ್ರ. ೧೨-೧೩೭). [ನೀಡು$_1$+-ಇಸು$_3$]

ನೀಡಿಱಿ (ಕ್ರಿ). ವಿಶೇಷವಾಗಿ ಅಂತರಂಗವನ್ನು ಹೊಗು,—ಒಳಗನ್ನು ಪರೀಕ್ಷಿಸು: ಪವನನಿಸ್ವನಸರ್ಣರವ ಪ್ರಸ್ರವಣಧಾರಾಧ್ವಾನಭಗ ಮೃಗನಿವಹ ನಾಡೊಳು ನೀಡಿಱುದು ಹುಡಿಕಿದರು ಜಾನಕಿಯ [ಪಾಠಾಂ. ನಿನದದಲಱಸಿ ನೋಡಿದರಿವರು ಜಾನಕಿಯ] (ತೊರರಾ. ೩-೧೧-೩೨). 'ಈಡಿಱಿ' ಪರಾ. [ನೀಡು$_2$+ಇಱಿ$_1$]

ನೀಡು$_1$, ನಿಟ್ಟು$_1$, ನೀಟು$_1$ (ಕ್ರಿ). ೧. ಚಾಚು; ಒಡ್ಡು: "ನೀಡು-ಪ್ರಸಾರಣೇ" (ಶಬಧಾ); ಕೈಯುಂ ಕಾಲ್ಗಳುಮನುಡುಗದೆ ನೀಡದೆ ಬಾಟ್ಟನ್ನೆಗಂ ಪಟ್ಟರ್ದು ಪಂಚನಮಸ್ಕಾರಮಂ ಮನದೊಳೋದುತ್ತಿರಮೆಂದು ಕಲ್ಪಿಸಿ (ವಡ್ಡಾರಾ. ೮೩-೧); ಕುಂಭಸಂಭವಂ . . . ದ್ರುಪದನಂ ತನ್ನ ಮಂಚದ ಕಾಲೊಳ್ ಕಟ್ಟವೇಟ್ಟು ತಲೆಯ ಮೇಲೆ ಕಾಲನವಷ್ಟಂಭದಿಂ ನೀಡಿ (ಪಂಪಭಾ. ೨-೬೨ ಸ); ತಾಳಮರಕ್ಕೆ ಕೈಯ ನೀಡಿ ಮೇಲೆ ನೋಡಿ ಗೋಣು ನೊಂದುದಯ್ಯ (ಬಸಸ. ೨೩); ಕೈಯ ಬಟ್ಟಲ ಹಾಲಿಗಂ ತಾಂ ಕೈಯ ನೀಡುತ್ತೀಂಟೆ ಬಾಲಕಿ ಅಯ್ಯನಂ ಬಿಟ್ಟೋಡಲು (ಬಸಪು. ೧೪-೩೨); ನೀಡಿ ಬರಿಕ್ಕೆಗಳಲಿ ಸೆಳೆದೀಡಾಡಿದವು ಬಂದಿಗಳನು . . . ಹಿಂದಣೊಡ್ಡನು ಝಾಡಿಸಿದವೀ ಕ್ಷೇಮಧೂರ್ತಿನೃಪಾಲನಾನೆಗಳು (ಕುಸ್ಯಾಕ. ೨-೧೨); ಪದಾಬ್ಜಂಗಳಿಗೆ ತಲೆಯ ನೀಡಿದವನೇ ಸುಕೃತಿ ಸಮ್ಮುಖದೊಳೊಮ್ಮೆ ಮಾತಾಡಿದವನೇ ಶೈವಮಾರ್ಗಿ (ಚೆಬಪು. ೧-೨೨). ೨. ಕೊಡು; ಈಯು: ಮಡಲ್ತು ಪೂತ ಲತೆಗಳ್ ಕಯ್ಗೆಯ್ದು [ಪೂ] ನೀಡಲ್ಕರ್ಥ್ಯಮನೀವಂತೆವೊಲಾದುದದ್ರಿ ಹರಿಗಂಗಿಷ್ಟಾರ್ಥ ಸಂಸಿದ್ಧಿಯಂ (ಪಂಪಭಾ. ೭-೭೭); ಕೊಡಬಲ್ಲಂಗೆ ದರಿದ್ರಮಂ . . . ಸುಕೃತಿಗಲ್ಪಾಯುಷ್ಯಮಂ ನೀಡುವಂ ಸುಡು ಪಾಪಿಷ್ಠನ ಬೊಮ್ಮನಂ (ಸೋಮೇಶ್ವ. ೩೩); ಹೊನ್ನ ಬಟ್ಟಲು ತೀವಿ ಪಾಲಂ ಕಱಿದು ಮತ್ತೆಯು ಜೀವಿಸೆನುತಂ ನೀಡಿ ಶಿವೆ ಶಿವನಲ್ಲಿಗೆಯ್ದಿದಳು (ಬಸಪು. ೫೦-೪); ಗುರುಸುತಾದಿ ಮಹಾಪ್ರಧಾನರು ದರುಶನವ ನೀಡಿದರು (ಕುಸ್ಯಾಕ. ೨-೨೯). ನಲ್ಲರ ಶಿಖೆಗಾಗ ಪೂಮಾಲೆಗಳ ಸುತ್ತಿ . . . ಮಡಿವರ್ಗವ ನೀಡಿ ಚಳ್ಲವಾಡುತಲೊಪ್ಪಿದರು (ಕಂಸವಿ. ೨೫-೧೩೫); ಲೋಕಮಾನ್ಯ ಟಳಕರು 'ಗೀತಾರಹಸ್ಯ'ವೆಂಬ ಅದ್ಭುತಗ್ರಂಥವನ್ನು ವಿಶ್ವಸಾಹಿತ್ಯಕ್ಕೆ ನೀಡಿದ್ದಾರೆ (ಧರ್ಮಸಾ. ೧೨೮). ೩. (ಕಾಣಿಕೆ, ಉಡುಗೊರೆ ಮುಂತಾದುವನ್ನು) ಸಲ್ಲಿಸು; ಅರ್ಪಿಸು; ಸಮರ್ಪಿಸು: ದಿವ್ಯವಸ್ತ್ರಾಭರಣ ಕುಸುಮಗಂಧಂಗಳಂ ಚಕ್ರಿಗಾಗಳ್ ನೀಡಿತ್ತತ್ಯಂತರಾಗೋತ್ಥಿತಕರತಳದಿಂ ತದ್ವನಸ್ತ್ರೀಸಮೂಹಂ (ಆದಿಪು. ೧೧-೯೦); ಮಾರುತಸಖಂ ಪ್ರತ್ಯಕ್ಷಸೂಕಾರಮಾಂತು ತದೀಯಾಧ್ವರಕುಂಡದೊಳ್ ನೆಗೆದು ನೀಡುತ್ತಿರ್ಪ ಸರ್ಮಾರ್ಮಯಾಹುತಿಯಂ ಕೈಕೊಳುತಿರ್ದನೀಕ್ಷಿಪ ನೃಪಂಗಾಶ್ಚರ್ಯಮಪ್ಪಂದದಿಂ (ಕುಸುಮಾ. ೪-೧೩೩); ನೃಪಪರಿವಾರವೆಲ್ಲವು ಬಂದು ಕಂಡುದು ಕಾಣಿಕೆಯ ನೀಡಿ (ಕುಸ್ಯಾಭೇ. ೧-೩೨); ಸಾಟಗಾಣದೆ ಲಕ್ಷ್ಮಿ ಉರಸ್ಥಳವಾಗಿರೆ ಲೋಕ್ಕಕಾಸು ಎಂತು ಕಾಣಿಕೆ ನೀಡಲೊ (ಪುರಂದ. ೨-೬೭-೩). ೪. ದಾನಮಾಡು: ಪೊನ್ನ ಸಟ್ಟುಗಮಂ ತೀವಿ

ಭೈಕ್ಷಮಂ ಪಿಡಿಯೆಂದು ನೀಡಿದ ಕೈಯನತನೆ ಕಂಡು (ನಡ್ಡಾರಾ. ೪೯–೪); ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ (ಬಸವ. ೨೩೩); ಬೇಡಿದವರಿಗೆ ಧರ್ಮಕ್ಕಿಲ್ಲ ಇದ್ದು ನೀಡದಿರಲು ನರಕಕೆ ನೂಕ್ಕರಲ್ಲಿ (ಪುರಂದ. ೨–೩೯–೩); ಅಶ್ವಯಜ್ಞಂಗಳ ಸಹಸ್ರಕೋಟಿ ಮಾಡಿದ ಫಲವು ಒಬ್ಬ ಜಂಗಮಕ್ಕೆ ತುತ್ತು ಭಿಕ್ಷವ ನೀಡಿದ ಫಲಕ್ಕೆ ಸರಿಯಿಲ್ಲ ನೋಡಿರೋ (ಅಮಂದೇ., ೫೯–೯); ಬಿಡುಕುವ ಮನಕ್ಕಿಂತ ನುಡಿಯುವ ತುಟಿಗಿಂತ ನೀಡುವ ಕೈ ಮೇಲು (ಇಂಚಾಸ. ೧೫೫–೬೧); ನೀಡದವನಲ್ಲಿ ಹೋಗಿ ಬೇಡಿಕೊಳ್ಳುವವ ಮೂಢನು (ಗಾದೆ). **೫.** ದಯಪಾಲಿಸು; ಅನುಗ್ರಹಿಸು: ನೀಡಿದ ಕಯ್ಯಿ ನೀಡಿರದೆ ಬೇಡಿದ ಭೋಗವನುನೇನಾದೊಡಂ ನೀಡುವ ಕಲ್ಪವೃಕ್ಷನಿಕರಂಗಳ ಭೋಗದಲಂಪನಾವಗಂ ಮಾಡೆ (ಆದಿಪು. ೫–೪೧); ಸೈಪಭರಾಜಂ ಮುಖಮಂಡಲಮಂ ಬಸವನ ಮಸ್ತಕದೊಳಿಟ್ಟು . . . ನೇಹದಿಂ ನೋಡಿ ಕಾರುಣ್ಯಮಂ ನೀಡಿ (ಬಸರ. ೪–೯೪); ಸುರರಿಂಗಭಯವ ನೀಡ ಕಲಿತರು ಬೆಳೆವುತಿರ್ದರು ರಾಮ ಲಕ್ಷ್ಮಣರು (ಕೌತಾ. ೧–೭೭); ತಂದೆಯ ಕೋಪಕ್ಕೆ ಬಲಿಯಾಗುವ ಅನುಗ್ರಹವನ್ನು ನೀಡಿದೆ (ಹಾಹುತ್ರ. ೪೪). **೬.** ಆಹಾರವನ್ನು ಬಡಿಸು; ಅನ್ನವಿಕ್ಕು: ಜಂಗಮಕ್ಕೆ ನೀಡಿ ಜಂಗಮ ಪ್ರಸಾದವ ಕೊಂಡರೆ ನಿನಗರ್ಹಿತ ಕಾಣಾ (ಬಸವ. ೭೭೭); ಮನೆಗಳಲ್ಲಿದ್ದ ಬೋನವೆ ತೋಡಿ ತನ್ನಿಯೆನಲ್ಕೆ ಪುನರಪಿ ನೀಡತೊಡಗಿದರೆಂಟುದೆಸೆಯಲಿ ಬಸವ ನೇಮಿಸಲು (ಪ್ರಭುಲೀ. ೨೩–೧೩); ಸದ್ಭೃತ ಪಳಿದ್ಯವನೆಸರುಗಳ ನಿತಿಯಿಲ್ಲದಡಿಗೆ ಗಾರ್ತಿಯರು ನೀಡಲ್ಕೆಯಚ್ಚುತ ಹೆಂಗಳೊಡನೆ ಭುಂಜಿಸಿದ (ನೋಡಕ. ೧೪–೧೧); ಮೆಜೀವ ಸಣ್ಣಕ್ಕಿಯ ಪಾಯಸ . . . ಪಿರಿದು ಗೌಲೆಯ ಪಾಯಸಗಳ ತಂದಾಗ ಸರಸಿಜಾಕ್ಷಿಯರು ನೀಡಿದರು (ಕಂನವಿ. ೪–೪೦). **೭.** ಹೆಬ್ಬು; ಹರಡು: ಕಾಡುಗಿಚ್ಚಿದ್ದು . . . ಕಿಡಿ ಹೊಗೆ ಮಸಗಿ ನೀಡುವ ದಳ್ಳುರಿಗಳ ದಾವದಿಂ ವನ ಕೂಡೆ ಭೀಕರವ ಪುಟ್ಟಿಸಿತು (ಕಂನವಿ. ೧೪–೪೬). **೮.** ಹಬ್ಬುವಂತೆ ಮಾಡು; ಹರಡುವಂತೆ ಮಾಡು; ಹಬ್ಬಿಸು: ತುಜುಂಬಿದ ತೋರ ಮಲ್ಲಿಗೆಯ ಮುಗುಳ ಕಂಪುಮಂ ತಳೆದ ಪುಡಿಗತ್ತುರಿಯ ಸೊಪಡುಮಂ ಚಾಮರದ ಗಾಳಿ ದೆಸೆದೆಸೆಗೆ ನೀಡೆಯುಂ (ಮಲ್ಲಿಪು. ೪–೬). **೯.** ವಿಸ್ತಾರವಾಗು; ದೊಡ್ಡದಾಗು: ಲಾಯ ನೀಡಿತು ಮುಂಬೆ ರಾವುತ ಸಾಯಕರಿಗೆಡ ವಂಕ ಮಂತ್ರಿ ಪಸಾಯತರು ಕರ್ಣಾದಿಗಳಿಗೆಡೆಯಾಯ್ತು ಬಲವಂಕ (ಕುಸ್ಯಾಪ. ೧೪–೨); ಈದುದಾಸುರಬಾಣ ಘನಶಸ್ತ್ರೋದಧಿಯ ನೀಡಿತು [ಪಾಠಾಂ. ನಿಡಿದುದು, ನೆಂಧನೆ] ಜಗತ್ರಯ ಕೈಪುಗಳ ಕಾಲಾಟದಲಿ ಕನಿದಿಱವ ರಕ್ಕಸರ ಬೀದಿವರಿಗಳಲಡಗೆಡೆದುದಿಂದ್ರಾದಿ ದೇವಕದಂಬ ಕಪಿಬಲ ಸಾಧಿಸಿತು ಕೈವಲ್ಯವನು ಕನುಲಾಕ್ಷನಿದಿರನಲಿ (ತೊರಾ. ೬–೪೦–೬೪). **೧೦.** ತೋರಿಸು; ಪ್ರದರ್ಶಿಸು: ರೂಪು ರೇಖೆ ರಸಂಬಡೆವ ನೃತ್ಯನಾಯಕಿಯರಿಂ ನವೀನಗತಿಯಂ ನೀಡುವ ನರ್ತಕರಿಂ (ಗಿರಿಕ. ೨–೧೦೫ ಪ). **೧೧.** ಚಚ್ಚು; ಬಡಿ; ತೀಡು: ನೀಡಿದು ಪ್ಪರವೊಯ್ಲಿಂ ಪೊಡವಿಗೆ ಬೀಟ್ಟರೆ ತಲೆ ಸೊರ್ಕಡಗದೆ ಕೆಲರಿಱದು ಬೀರ ಸಿರಿಯೊಳ್ ನೆರೆದರ್ (ಕಬ್ಬಿಕಾ. ೨೬೩). **ನೀಟ್ಟು**₁ : ೧. ಯಾವನೊ ಒಬ್ಬ ರಾಜಾಧಿರಾಜನು ಅವನಂ ನೋಡಬೇಕೆಂದು ನೂರುಮುಡಿಯಾದ ಸಂಭ್ರಮದಿಂದ ಮುಂದೆ ಮುಂದೆ ನಿಂತಿರುವರ ಮೇಲೆಯೆಲ್ಲ ಹಿಂದೆ ನಿಂತಿರುವವರು ಮುನಿಸುಗೊಳುತ ಅಟ್ಟಣೆಗಳಲ್ಲಿ ಆಡಿಗಳನ್ನಿಟ್ಟು ನಿಟ್ಟ ನಿಟ್ಟ ಮೊಗಂಗಳಂ ಯತ್ತ ನೋಡುವರು (ಸೌಗಂಧಿ. ೨೦೩–೪). **ನೀಟು**₁ : ೧. ಘಟಪಳಕು ಫಲಕೆಂಬ ಭುಜ ನೀಟ [ಪಾಠಾಂ. ಸಾಟಿ, ಸಾರ] ನಟಿಸಿ ಮೇಗೆತ್ತಿ ಕುಕ್ಕುಱುಸಿ ನೆಲನಂ ಟೊಣೆದು . . . ಮೈದೆಗೆದು ನಿಂದ ನಿಚ್ಚಟಕಲಿಗಳ್ (ಸೋಮಚ. ೫–೧೬); ನಾನು ಅದರ ಒಂದು ತುದಿಯನ್ನು ಬಲವಾಗಿ ಹಿಡಿದುಕೊಂಡು ಇನ್ನೊಂದು ತುದಿಯನ್ನು ಮೇಲೇರಿ ಬರುವವರಿಗೆ ನೀಟುವುದೆಂದೂ . . . ಯೋಚಿಸಿ ಹಾಗೆಯೇ ಮಾಡಿದೆ (ಹಸುಹೊ. ೧೭೬).

ನೀಡಿಕೊಳ್ಳು = ಚಾಚಿಕೊಳ್ಳು : ಅತ್ತೆಯು ಕಾಲು ನೀಡಿಕೊಂಡು ಗಂಡನ ತಲೆಯ ಬಿಳಿಯ ಕೂದಲನ್ನು ತೆಗೆದುಹಾಕುತ್ತಿದ್ದಳು (ದೇವೀಚೌ. ೬).

[ದೇ.॥ ತಮಿ. ಮಲ. ನೀಟು, ನೀಟ್ಟು ; ತುಳು. ನೀಡು, ನೀಟು; ಕೊಡ. ನೀರ್]

ನೀಡು₂ (ನಾ). ೧. ಉದ್ದ ; ನೀಳ : ನೀಡಗಲದ ಜವನಿಕೆ ತೊಲಗಿತು ಮತ್ತೆ ಹೋಡಶಪಾತ್ರದೋಜುದುವು (ಭರಜ. ೧೩–೪೬). **೨.** ದೀರ್ಘಕಾಲ; ಬಹುಕಾಲ : ಮಧು ಮದ್ಯ ನೂಂಪಂಗಳಂ ಭಕ್ಷಿಸಿ ನರಕ ತಿರಿಕ ಮನುಷ್ಯಭವಂಗಳೊಳಪ್ಪ ದುಃಖಂಗಳನಂತನಂತಕಾಲಮನುಭವಿಸಿ ನೀಡ ಱಂದೆತ್ತಾನುಮಲ್ಲದೆ ಮನುಷ್ಯಭವಮಂ ಪಡೆದು ಪೆತ್ತೊಡನಿಂತಾಗಿ ಪುಟ್ಟುಗುಂ (ಜಡ್ಡಾರಾ. ೧೧–೧೭) ; ಅಂತು ಮೂರ್ಧತನಾಗಿ ನೀಡಱನೆಬ್ಬಿತ್ತು ರಜಕ್ರೀಡಾಸಕ್ತಂ ಸರಕ್ತಲೋಚನನಿವಂ ನಾಡಾಡಿಯ ಕೈದುಗಳಂ ಕೂಡದು ಗೆಲಲೆಂದು ಚಕ್ರಿ ಚಕ್ರಮನಿಟ್ಟಂ (ಸಂಂಶಾಮೂ. ೧೬–೧೫); ಮರದಿಂ ಪಡ್ ಪಱುದಂದದು ಧರೆಯಂ ಮುಟ್ಟುವುದದೆನಿತು ನೀಡಜಿದ ದಜಿಂತರದನಿತೆ ಪುಟ್ಟು ಮರಣಂ ದೊರೆಕೊಳ್ವೊಡೆ (ಜೀವನಂ. ೧೨–೧೪) ; ಈಗಲೆದ್ದೋಡಿ ಹೋಗುವೆವೆನುತ್ತೀರ್ವರುಂ ಪೊಜಮಟ್ಟು ನೀಡಿಲ್ಲದೆಯ್ತಂದರ್ (ವೀತ್ಪ. ೪–೯–೨೧). **೩.** ಸಮಯ ; ಹೊತ್ತು ; ಕಾಲ ; ವೇಳೆ : ಮೃಗಧರಂಗೆ ನಿಶಾಸತೀ ವರಮಾಲೆ ಸೂಡುವ ನೀಡ ಜೊಳ್ [ಪಾಠಾಂ. ನೀಳದೊಳ್] ದಿಗಧಿವಾಳಿ ಘನಾವಳೀನವಪಾಟ ಕರ್ಮವಿತಾನಮಂ ನೆಗಸಿದಂತೆ (ಅನಂಪು. ೭–೭೪). **೪.** ತಡ ; ಸಾವಕಾಶ : 'ನೀಡುಂಮಾಡು' ಪರಾ. **೫.** ದೂರವಾದುದು ; ದೂರ : ಆ ನಾಡು ದಿವಕ್ಕೆ ತೋಡು ಕುಸುಮೇಷುಗೆ ಬೀಡು . . . ಸುಖಾಮೃತಕ್ಕೆ ನೀರ್ಗೋಡು ತಮಕ್ಕೆ ನೀಡು (ಪುಷ್ಪಪು. ೯–೧೪). **೬.** ಆಧಿಕ್ಯ ; ಹೆಚ್ಚಳ : "ನೀಡೆನಲ್ ಪೆರ್ಚು" (ಕಶರ. ೫೫). **೭.** ವಿಸ್ತಾರ ; ವ್ಯಾಪ್ತಿ : (ಕ). **೮.** ದಾನ ; ಉಂಬಳಿ (?) : ಕನ್ನಳ್ಳಿಯ ರಾಜಗದೊಳ್ತ × × ಚ್ಚನ್ ಕವಿತ್ರೋರನ್ ಪಸುವಳಿ ಧನವೆಟ್ಟಿ ಕೊನ್ದು ಬಿಟ್ಟಾರ್ ಅವರ್ಗೆ ಕೊಟ್ಟೂದು ತಿಜಣಿಯೂರ ನೀಡು ಇದ ನಟುವೊ × × (ಎಕ. XI (S). ಹೊಳಲ್ಕ. ೧೬೯–೪ ; ಸು. ೪೦೦). (ಗು). **೯.** ಉದ್ದವಾದ; ದೀರ್ಘವಾದ : 'ನೀಡುಂದೋಳ್', 'ನೀಡುಂ ಪೊಟ್ಟು' ಪರಾ.

ನೀಡಾಗು = ತಡವಾಗು ; ವಿಳಂಬವಾಗು : ನೀಡಾಗದೆ ಮದನ ಶರಂ ನಾಡೆಯುಮಿರದೆಯ್ದಿ ಹರನ ಹತ್ತಿರೆ ಬೀಳುತ್ತೋಡಿ ಬರೆ ಕಂಡು ಕಾಮಂ ಹೂಡಿದನುಣ್ಮುನ್ನೆನುತ್ತೆ ಮೋಹನಶರಮಂ (ಗಿರಿಕ. ೪–೨೯); ಶಿವಾರ್ಚನೆಗರ್ಘ್ಯಜಲಂಗಳೀವ ನೀಡಾಗದೆ ಸಾಧನಂಗುಡುವ . . . ತಾಪಸೇಂದ್ರರ ಕುಮಾರಿಯರೊಪ್ಪುಗುಂ (ಶಬರಂ. ೨–೬೪). **ನೀಡಿರದೆ** = ತಡ ಮಾಡದೆ ; ವಿಳಂಬ ಮಾಡದೆ : ನೀಡಿರದೀವುದೀ ನಿಜತನೂಜೆಯನೀ ಪಧುಗಾದ ಪುತ್ರರೊಳ್ ಕೂಡುಗೆ ರಾಜ್ಯಲಕ್ಷ್ಮಿ (ಪಂಪಭಾ. ೧–೭೩) ; ಆಹಾರಾಚ್ಛಾದನಂಗಳಂ ನಿಮ್ಮ ಮೆಚ್ಚಿದೆಡೆಯೊಳ್ ಎಡೆಮಾಡಿಕೊಂಡು ನೀಡಿರದೋದಿಂ (ಸುಕುಮಾ. ೨–೫೫ ಪ) ; ನಾಡವರೆಲ್ಲಂ ನೆರೆದುಂ ನೀಡಿರದಬ್ಬರ್ತು ಭಕ್ತಿಪೂರ್ವಕದಿಂ ಕೊಂಡಾಡೆ ಗುರುವೆಂದು (ಧರ್ಮಾಸ್ಯ. ೪–೧೯೨) ; ಏಟ್ಗಾ, ನೀಡಿರದೆ ತುಡಿಸು ಸಂಕಲೆಗಳನ್ (ಬದ್ಧಪ್ರ. ೩–೬೦). **ನೀಡಿಲ್ಲದೆ** = ನೀಡಿರದೆ ; ವಜ್ರಕಾಂಡಮೆಂಬ ನಿಜವಿಜಯ ಕಾರ್ಮುಕಕ್ಕೆ ಸುರಕರಿಕರಾನುಕಾರಿಯಪ್ಪ ನಿಜಭುಜಾದಂಡಮಂ ನೀಡಿ

ನೀಡಿಲ್ಲದೇಱುಂ ನೀವಿ ಜೇವೊಡೆದಾಗಳ್ (ಆದಿಪು. ೧೨-೮೭ ಪ) ; ಮುನಿ ಜನಕ್ಕಿಷ್ಟವಿಳ್ಪಂಗಳಂ ದಾರುಣದೈತ್ಯರ್ ಮಾಡೆ ನೀಡಿಲ್ಲದೆ ಸಲೆ ಚಲದಾಟಂದು ಕೊಂದಿಕ್ಕದೊರ್ವಂ ಗುಣಮುಂಟೆಂದುಂಡು ಪಟ್ಟರ್ಜನನಣಮೆ ನಿರುದ್ಯೋಗಿಯಂ ಭೂಪನೆಂಬರ್ (ಪಂಪಭಾ. ೪-೧೧).

[ದೇ.॥ ತಮಿ. ನೀಟ್ಟ, ನೀಟ್ಟು ; ಮಲ. ನೀಟ್ಟ ; ತುಳು. ನೀಟ, ನೀಟು]

ನೀಡು$_3$ 'ನೀಡುಂ' ನೋ.

ನೀಡುಂ, ನೀಡು$_3$ (ಅ). ೧. ಅಧಿಕವಾಗಿ ; ಹೆಚ್ಚಾಗಿ ; ವಿಶೇಷವಾಗಿ : "ನಾಡೆಯೆಡೆಯಾವಗಂ ನೆಱೆ ನೀಡುಂ ಕರಮಾದಮೆಯ್ದೆ ನೂಳದು ಪಿರಿದುಂ ನೀಡು . . . ಇವನ್ಯಯದೊಳಧಿಕಾರ್ಥಂ" (ಶಪಮ. ೩೦೪) ; ವಿನಿಹಿತಸಮಸ್ತರಿಪುಕುಳನನಿಮಿಷಲೋಚನದೆ ನೋಡಿ ನೀಡುಂ ಪ್ರಿಯೆಯುಂ ವಿನಿಮೀಳಿತಲೋಚನೆಯುಂ ಜನಪತಿ ನಿಜಬಾಹುಯುಗದಿ ನಾಶ್ಲೇಷಿಸಿದಂ (ಕವಿಗಾ.೨-೭೪); ಲಾಕ್ಷಪ್ರವಾದಿಕಾರಿತ ಮಾಯಾರುಣಜಲ ಪರಿಪೂರ್ಣವಾಪಿಯಂ ಸಮೆಯಿಸಿದೊಡದಂ ಕಂಡು ರಾಗಿಸಿ ಪೊಕ್ಕು ನೀಡು ಮೋಲಾಡಿ (ಆದಿಪು. ೨-೧೪ ಪ) ; ಸದ್ಭೃತ್ಯರ ಲಕ್ಷಣಂಗಳ್ ನಿನಗೆ ನೀಡು ಮೊಳವು (ಪಂಚತಂ. ೪೩-೧) ; ನಡು ನೀಡುಂ ಪೊಂಗೆ ಮೇಸೆಗೆಸೆದುದು ಗರ್ಭಂ (ಗಿರಿಕ. ೨-೩೮) ; ತನ್ನರುಣಜಲದಿಂ ವಿಶುದ್ಧಾನ್ಯತದೆ ಭಕ್ತಿಯಿನ್ನೀಡುಮಭಿಷವಂಗೆಯ್ದು (ಪದ್ಮರಾ. ೧೧-೬೧); ಪರೋಪಕಾರಾರ್ಥಂ ಫಲಂಗಳಂ ಪೊತ್ತು ಫಲಭಾರದಿಂ ಬಾಗಿ ಕೈಕೊಳ್ವುದೆಂದೆಮಗೀಯಲ್ ನೀಡುಂ ನೀಡಿ ನಿಲ್ವಂತಿರ್ಪುವು ಮರಂಗಳ್ (ರಾಮಾಶ್ವ. ೮-೧೬). ೨. ಬಹಳಕಾಲದ ವರೆಗೆ ; ದೀರ್ಘಕಾಲದ ತನಕ : ಈತನಂ ನೀಡು ಮಱಸಿ ಕಾಣದೆ ದೆಸೆಗೆಟ್ಟು ಬೇಸತ್ತು (ಪಡ್ಡಾರಾ. ೧೨೯-೬); ಏಗೆಯ್ದುಂ ನೆನೆಯಳು ನೋಡಳು ನುಡಿಗೇಗೊಳ್ಳಳು ಜಾನಕಿ ತನ್ನೆರ್ದೆಯಂ ತಾಗುತ್ತಿರೆ ನೀಡುಂ ನೆನೆದಳು ರಾಮನನು (ಕುಮುಂಬಾ. ೪-೨೯) ; ಕಟ್ಟೊಲ್ಮೆಯೊಳೆವೆಯಲುಗದೆ ನೀಡುಂ ನಿಟ್ಟಿಪ ನೀಱನ ಬಗೆ ಬಾಸೆಯ ಪುಲ್ವಟ್ಟೆ ವಿಡಿದು ನಡೆಯುತ್ತಿರೆ (ಜಯಕಾ. ೪-೧೦). ೩. ಚೆನ್ನಾಗಿ ; ಸರಿಯಾಗಿ : ಮುನ್ನಂ ವಿಚಿತ್ರಚಿತ್ರವಿದ್ಯಾಕೌಶಲಮನತಿಕುತೂಹಲೋತ್ತಾರಿತಲೋಚನನಾಗಿ ನೀಡುಂ ಭಾವಿಸಿ ನೋಡಿ (ಆದಿಪು. ೪-೪ ಪ); ಪಟಳನಿಹಿತಪರಾರ್ಥ್ಯರತ್ನಾಭರಣಮುಂ . . . ಕೊಳ್ವುದೆಂದು ನಿಜಕರಪಲ್ಲವದಿಂ ದೂತನ ಹಸ್ತಕಿಸಲಯಕ್ಕೆ ನೀಡುವುದುಮಾತನದಂ ಕೆಯ್ಕೊಂಡು ನೀಡುಂ ಭಾವಿಸಿ ನೋಡಿ (ಶಾಂತಿಪು. ೩-೭೧ ಪ) ; ಕೊಳ್ ನಿನ್ನ ನಟ್ಟಿನ ಪಾಂಡವರ ತಲೆಗಳಿವೆಯೆಂದು ದುರ್ಯೋಧನನ ಮುಂದಿಕ್ಕಿದೊಡಾ ಮಹಾನುಭಾವನಾ ತಲೆಗಳಂ ನೀಡುಂ ಭಾವಿಸಿ ನೋಡಿ (ಗದಾಯು. ೯-೩೨ ಪ) ; ಅಕ್ಷೂಣಲಕ್ಷಣಲಕ್ಷಿತಂಗಳಪ್ಪ ಪುತ್ರಸಂಗಪ್ರತ್ಯಂಗಂಗಳಂ ನೀಡುಂ ಭಾವಿಸಿ ನೋಡಿ (ಚಂಪ್ರಪು. ೩-೧೦೨ ಪ) ; ಸರ್ವಮಂಗಳಾದೇವಿ ತನ್ನಂದನದೊಳ್ ನಡೆತಂದು ಕಾಸಾರತೀರದ ನುಣ್ಬಸಲೆಯನಲಂಕರಿಸಿ ನಿಂದು ನೀಡುಂ ನಿರೀಕ್ಷಿಪಾಗಳ್ (ರಾಜಶೇ. ೧೦-೬೧ ಪ). ೪. ದೂರದವರೆಗೆ : ಲಲನಾಮಂಜೀರನಾದಕ್ಕೆಳಸುವ ಕಳಹಂಸಗಳ್ಗಂ ಕಂಡು ಬೆಂಬೆನ್ನೊಳೆ ನೀಡುಂ ಪೋಪ ಕಾಂತಾಭವನಹರಿಣಶಾಬಂಗಳೆಟ್ಟಂದು ಚಂದ್ರೋಪಳಭಿತ್ತಿಪ್ರಾಂತದೊಳ್ ನೂರ್ಪೊಳೆಯಲ್ (ಕಾದಂಪು. ೩೫೮). **ನೀಡು$_3$** : ೨. ಮಲರೊಳ್ ಸಾರ್ದನನ ಮೇಲಡಿಯ ಸೇರ್ದವರ್ ನೆಲದೊಳ್ ನೀಡು ಬಾಟ್ಟರ್ (ಕುಚೇ. ೧-೧-೫). [<ನೀಡು$_2$]

ನೀಡುಂಗಯ್ 'ನೀಡುಂಗೈ' ನೋ.

ನೀಡುಂಗೈ, ನೀಡುಂಗಯ್, ನೀಡುಗೈ (ನಾ). ೧. ಚಾಚಿದ ಕೈ ; ನೀಡಿದ ಕೈ : ಹೊಯ್ಸಳದೇವ ವಿಷ್ಣುವರ್ಧನನು ನಡೆದಾಗ . . . ಜನ ನೀಡುಂಗೈಗಳಿಂದ ವಂದಿಸಿತು (ಸಮಿ. ೨). **ನೀಡುಂಗಯ್** : ೧. ಆಕೆಗೆ ಬಾಗಿ ಮುಗಿದ ನೀಡುಂಗಯ್ಗಳಿಂದ ವನ್ದಿಸುವರು (ಬೆಟ ಅ. ೧೨-೧೦). **ನೀಡುಗೈ** : ೨. ಈಯುವ ಕೈ ; ಕೊಡುಗೈ : ಗಂಡನ ಔದಾರ್ಯದ ನೀಡುಗೈ, ಹೇಗೆ ಸಾಲಧ ಕೊಳ್ಳುಗೈಯಾಯಿತು ಎಂಬುದನ್ನು ಆಕೆ ಒಂದೊಂದಾಗಿ ನೆನೆದಳು (ಮುಗಿಯು. ೨೯೬).

[ನೀಡು$_1$+ಕೈ$_2$(<ಕೆಯ್$_2$)]

ನೀಡುಂದೋಳ್ (ನಾ). ಉದ್ದವಾದ ತೋಳು ; ದೀರ್ಘಬಾಹು : ಮುಕ್ಕುಱುವಲ್ ಮುದಮೊಗ ನೀಡುಂದೋಳಿಕ್ಕಲವಂ ಪೊದಮೆಯ್ಯೊಳೆಸೆವ ಪಲರಕ್ಕಸಿಯರ ತಂಡಂ ನಡೆತಂದುದು (ಜಯಕಾ. ೭-೨೭).

[ನೀಡು$_2$+ತೋಳ್]

ನೀಡುಂಪೊಟ್ಟು (ನಾ). ಬಹಳ ಹೊತ್ತು ; ದೀರ್ಘಕಾಲ : ಪುಷ್ಪಾಯುಧನ ಕೊಂದ ಕೊಳ್ಗೊಳ ಪೂಲ್ತು ಪೂಗೊಳದೊಳ್ ಸೌಜನ್ಯ ಕಂದಾಂಕುರನುಮಪ್ಪ ವಜ್ರಾಯುಧಂ ಪ್ರಮತ್ತನುಮೇಕರಸನುಮಾಗಿ ನೀಡುಂಪೊಟ್ಟು ಜಳಕ್ರೀಡಾವಿನೋದದೊಳಿರೆ (ಶಾಂತಿಪು ೪೭ ಪ).

[ನೀಡು$_2$+ಪೊಟ್ಟು]

ನೀಡುಂಮಾಡು, ನೀಡುಮಾಡು (ಕ್ರಿ). ೧. ತಡಮಾಡು ; ನಿಧಾನಿಸು : (ಕ). **ನೀಡುಮಾಡು** : ೨. ನೀಳವಾಗಿಸು ; ಎತ್ತರಿಸು : ಪೊಂದೇರನಳವಡಿಸಿ ತುರಗಂಗಳಂ ಪೂಡಿ ಸಿಂಧಮಂ ನೀಡು [ಪಾಠಾಂ. ನಿಡಿದು]ಮಾಡಿ . . . ಬಂದಡರ್ದಂ ಜಯರವದೊಳಾ ಸುಧನ್ವಂ (ಜೈಮಿಭಾ. ೧೩-೪). [ನೀಡು$_2$+ಮಾಡು$_1$]

ನೀಡುಗೈ 'ನೀಡುಂಗೈ' ನೋ.

ನೀಡುನಾಲಗೆ (ನಾ). ಉದ್ದವಾದ ನಾಲಗೆ ; ಚಾಚಿದ ನಾಲಗೆ : ಕೂಡಿದವು ಪುರ ಮೂಱು ನಿಮಿಷದೊಳೀಱುದುರಿ . . . ಹೊಗೆಯ ಜೋಡಿಯ ನೀಡುನಾಲಗೆ ಪುರದ ಸುತ್ತಲು ಕೂಡೆ ವೇಢಯವಾಯ್ತು (ಕುಮ್ಮಾಕ. ೭-೪೦). [ನೀಡು$_2$+ನಾಲಗೆ]

ನೀಡುಮಾಡು 'ನೀಡುಂಮಾಡು' ನೋ.

ನೀಡುಮೊನೆ (ನಾ). ೧. ಚಾಚಿದ ತುದಿ,—ಅಗ್ರಭಾಗ : ಜಾಡಿಸುವ ಮಣಿಮಯದ ಗದೆಯಲಿ ತೋಡುವೊಯ್ಲಿನ ತುಡುಕುಗಾಯದ ನೀಡುಮೊನೆಗಳ ವಿಗಡನಿಕ್ಕಿದನದಟರಕ್ಕಸರ (ಕುಮ್ಮಾಅ. ೧೦-೫೨). ೨. ಉದ್ದವಾದ ಅಲಗು,—ಧಾರೆ : ಜೋಡನೊಡೆದವಯವದ ರಕುತವ ತೋಡಿದವು ಕೊರಂಬು ಸಬಳದ ನೀಡುಮೊನೆ ನಿಱಗರುಳನೆಂಜಲಿಸಿದವು ಪಟುಭಟರ (ಕುಮ್ಮಾಕ. ೧೦-೧೦). [ನೀಡು$_1$+ಮೊನೆ$_1$]

ನೀಡೋದ್ಭವ(ನಾ). = ನೀಡಜ:"ಖಗಃ, ವಿಹಂಗಃ. . . ನೀಡೋದ್ಭವಃ, ಗರುತ್ಮಾನ್, ಪಿತ್ಸನ್, ನಭಸಂಗಮಃ — ೨೭ ಸಾಮಾನ್ಯವಾಗಿ ನಾನಾ ಬಗೇ ಪಕ್ಷಿಗಳೆಲ್ಲಕ್ಕೂ ಹೆಸರುಗಳು" (ಸಿದ್ಧಾಂತಿ.೧೬೩). [ನೀಡ+ಉದ್ಭವ]

ನೀತ (ಗು). ೧. ಮಾರ್ಗದರ್ಶನ ಮಾಡಿದ ; ಮುನ್ನಡೆಸಲ್ಪಟ್ಟ. ೨. ತಂದ ; ತರಲ್ಪಟ್ಟ. (ನಾ). ೩. ಸರಿಯಾದುದು ; ಯೋಗ್ಯವಾದುದು ; ವಿಹಿತವಾದುದು : ಈ ಸತಿಸುತರಿಗೆ ಹೊನ್ನೆಷ್ಟು ಜೇಳೆನೆ ಮಾತನಾದಿದನು ಭೂಪಾಲ ದಾತ ನೀ ಪಾಲಿಸು ನಿನ್ನ ಚಿತ್ತದೊಳುಳ್ಳ ನೀತವಾಗಿಹ ಹೊಸ ಹೊನ್ನ (ಹರಿಸಾಂ. ೩-೧೧೨); ಅನುಚಿತ ಕಾರ್ಯಮನೆವನೊಡರಿಸೆ ಕಂಡು ನಿನಗಿದು ನೀತವಲ್ಲೆಂದು . . . ಬಿನ್ನವಿಪುದು (ಹದಿಬ. ೩-೨೯) ; ಉತ್ತಮಾಂಗವನೆತ್ತಿ ಮೊಗ ನೋಡುತ್ತ ಸರಸೋಕ್ತಿಗಳ ನುಡಿಯದೆ ಹೊತ್ತುಗಳೆವುದು ನೀತವೇ ಪೇಳು (ಅಸಂಂಾ. ೨-೧-೩೫). ೪. = ನೀತವಿಭೂತಿ : ಶ್ರೀತರುಣವಲ್ಲಭನ ಪರನು ವಿಭೂತಿರೂಪವ ಕಂಡಕಂಡಲ್ಲೇ ತೆರದಿ ಚಿಂತಿಸುತ ಮನದಲಿ ನೋಡು ಸಂಭ್ರಮದಿ ನೀತ ಸಾಧಾರಣ ವಿಶೇಷ ಸಜಾತಿ . . . ಬಗೆಗಳನರಿತು ಬುಧರಿಂದ (ಹಸಾರ. ೫-೧). [ಸಂ.]

ನೀತದೇಶ (ನಾ). ಒಳ್ಳೆಯ ಮಾರ್ಗದರ್ಶನ ಹೊಂದಿದ ನಾಡು ; ಚೆನ್ನಾದ ಆಡಳಿತ ಹೊಂದಿರುವ ನಾಡು : ನೀತದೇಶದ ಮಧ್ಯೆ ನೀತಿಯ ಮನೆಯಿಹುದು ಪಾತಕರಿಗಹುದು ಸೆಱೆಮನೆಯು ಅರಮನೆ ಪುನೀತರಿಗೆ (ಸರ್ವಜ್ಞ. ೧೨೩೬). [ನೀತ+ದೇಶ]

ನೀತವಿಭೂತಿ (ನಾ). [ದ್ವೈತ] ಹತ್ತುಬಗೆಯ ವಿಭೂತಿಗಳಲ್ಲಿ ಒಂದು ; ಭಗವಂತನಿಗೆ ಹೇಳಿರುವ ಈಶ್ವರತ್ವ ಧರ್ಮಗಳಲ್ಲಿ ಒಂದು ; ದೇವರ ವಿಶೇಷಸಾಮರ್ಥ್ಯಗಳಲ್ಲಿ ಒಂದು; ೫ ಗಂಡಕೀ ನದಿಯಲ್ಲಿ ಸ್ವಯಮುದ್ಭೂತವಾದ ಹಾಗೂ ಭಗವದ್ರೂಪವೇ ಎಂದು ಭಾವಿಸಲ್ಪಟ್ಟಿರುವ ಸಾಲಿಗ್ರಾಮಶಿಲೆಗೆ ಈ ಹೆಸರಿದೆ : ಈ ವಿಭೂತಿಗಳಲ್ಲಿ ೧೦ ವಿಧಗಳುಂಟು. ಸಾಮಾನ್ಯವಾಗಿ ಸ್ವಭಾವದಿಂದಲೂ ಸ್ವಯಂವ್ಯಕ್ತವಾಗಿ ಭಗವದ್ರೂಪಗಳೆಂದು ಪ್ರಸಿದ್ಧಿ ಪಡೆದ ಸಾಲಿಗ್ರಾಮ ಗಳು ನೀತವಿಭೂತಿಯೆಂದು ಹೇಳಬೇಕು (ಹಸಾರ. ೫-೧ ತಾತ್ಪರ್ಯ).

[ಸಂ.]

ನೀತಿ (ನಾ). ೧. ಒಯ್ಯುವಿಕೆ. ೨. ಮಾರ್ಗದರ್ಶನ ; ಮುನ್ನಡೆಸು ವಿಕೆ. ೩. ಒಳ್ಳೆಯ ನಡತೆ ; ಸಚ್ಚಾರಿತ್ರ್ಯ ; ಶಿಷ್ಟಾಚಾರ : ಅದಱಿಂ ನೀತಿಯೆ ಸಾಧನಂ ಸಕಲಲೋಕಕ್ಕಾಗಬೇಕೆಂದು ಪೇಱುದ ಸೋಮಂ ಸುಜನರ್ಕಳೀ ಶತಕದೊಳ್ ತಪ್ಪಿರ್ದೊಡಂ ತಿದ್ದಿ ತೋರ್ಪುದು (ಸೋಮೇಶ. ೨); ನೀತಿಯನೊಳ್ಕು ವಿಜಾತಿಯ ಮಾತನೆ ಮನ್ನಿಪ ವಸಂತನೃಪನಿಂ ಕಿಡುಗುಂ ಜಾತಿಯ ಸಿರಿಯುಱಿದುದ್ದು ಕುಜಾತ ಕುಲದ ಲಕ್ಷ್ಮಿ ಬಳಿವುದೇಂ ವಿಸ್ಮಯಮೇ (ಪಾರ್ಶ್ವಪು. ೯-೭೦); ನೀತಿಯೆ ರೂಪುಗೊಂಡ ತೆಱದಿಂ ನೆಲಸಿರ್ಪ ಮಹಾಪ್ರಧಾನರಿಂ . . . ಪ್ರಭೂತಮಾಂಧಾತನ ರಾಜ್ಯದಂತಿಳೆಗೆ ದಕ್ಷಿಣಚಕ್ರಿಯ ರಾಜ್ಯಮೊಪ್ಪುಗುಂ (ಸೂಕ್ತಿಸು. ೫-೨೧); ನೀತಿಯುಳ್ಳವನ ಮನೆದೀಪದಲ್ಲಿ ಜಾತಿಭೇದವೇನು? (ಗಾದೆ). ೪. ಧರ್ಮ ; ನ್ಯಾಯ : ನೀತಿಯೆ ತಾಯೆ ಪೈತ್ರಿಕಮಾ ದೊಡಮಾಡಲಮೋಳುಮೆನ್ನೊಳೀ ಮಾತಂ (ನೇಮಿಪು. ೭-೧೪೫); ನೀತಿ ಬಲಿದುದೊ ಶಾಂತಿ ರೂಪಾಯ್ತೊ . . . ಎಂಬ ಚಾತುರ್ಯದಿಂದರ್ ಮುನಿನಾಥನಂ ಕಂಡು (ಪಚಕಾ. ೫-೬೭); ಗೋಪವಾಹನ ಭಕ್ತಹಿಂಸೆ ಯನೀ ಪರಿಯೊಳೆಲೊ ಕೇಳುತಿರ್ದುಂ ಪಾಪವೆನ್ನದೆ ಸುಮ್ಮನಿಹುದಿದು ನೀತಿಯೇ ನಿನಗೆ (ಬಸಪು. ೬೧-೧೮); ನೀತಿಯುಲಿ ನೀವಿನ್ನು ಪಾಲಿಸಿ ಭೂತಳವನುಱೆ ಕಳಿದ ಬಂಧುವ್ರಾತಕುದಕವನೀವುದು (ಕುವ್ಯಾಗ. ೧೧-೬೯); ಬರೆಗಲ್ಲಿನಂತೆ ವಿಧಿಯಿರಲು ನೀತಿಯ ಇರವು ಬೇಱೆಂದ (ಸರ್ವಜ್ಞ. ೧೧೬೬); ಸತತ ಬಿನದಮೇ ಸಮ್ಮಯ ನೀತಿ ! (ಅಹಲ್ಯೆ. ೩-೭). ೫. ಒಳ್ಳೆಯ ಉಪದೇಶ ; ಹಿತೋಕ್ತಿ : ಇನಿತು ನೀತಿಯ ಕೇಳಿ ಮನದಲಿ ನೆನೆಯನಕಟಾ ಪಾಪಿರಕ್ಕಸನೆನಿತು ಮೂರ್ಖನೊ.(ಶೌಕಾ. ೧೪-೨೪). ೬. ರಾಜನೀತಿ ; ಅರ್ಥನೀತಿ ; ರಾಜ್ಯಾಡಳಿತ ತಂತ್ರ : ಸಾಮವೆಂಬುದು ರಾಜನೀತಿಗೆ ತಾ ಮನೋಹರರೂಪು . . . ಸಾಮ ತಪ್ಪಿದ ಬಳಿಕ ನೀತಿ ವಿರಾಮವಾಗದೆ ಬಿಡದು (ಕುವ್ಯಾಉ. ೯-೫). ೭. ವಿವೇಕ ; ಸಾರಾಸಾರವಿಚಾರ ; ವಿವೇಚನೆ : ನೀವಿಂತತ್ಯಾತುರರುಂ ಕೋಪಾತುರರುಮಾಗಿ ನುಡಿವುದು ನೀತಿಯಲ್ಲ (ಪಂಚತಂ. ೨೦೯-೧೩); ಬಳೆಯಿಸುವುದು ನೀತಿಯೆ ವಿರೋಧಿಯಂ ವ್ಯಾಧಿಯುಮಂ (ಜಗವಿ. ೩-೨೨). ೮. ತಂತ್ರ ; ಯುಕ್ತಿ. ೯. ಕಾರ್ಯನೀತಿ ; ಧೋರಣೆ: ಪತ್ರಿಕೆಯ ನೀತಿಯನ್ನು ನಿಯಂತ್ರಣ ಮಾಡುವವ ಮುಖ್ಯಸಂಪಾದಕ (ಕವಿಕೋ. 1, ೧೮೬).

ನೀತಿನಿಧಾನ = ರಾಜನೀತಿಗೆ ಆಶ್ರಯನಾದವನು ; ಒಂದು ಬಿರುದು : ತತ್ವಾದಪದ್ಮೋಪಜೀವಿ ಸಮಧಿಗತಪಂಚಮಹಾಶಬ್ದಂ ಮಹಾಸಾಮಂತಾಧಿಪತಿ . . . ನೀತಿನಿಧಾನಂ (ಸೌಇಇ. XX, ೬೦-೬ ; 1088). ನೀತಿಸಾರಾಯಣ = ರಾಜ್ಯನೀತಿವಿಶಾರದ ; ರಾಜ ನೀತಿಜ್ಞ ; ಒಂದು ಬಿರುದು : ಸಮಧಿಗತಪಂಚಮಹಾಶಬ್ದ ಮಹಾ ಸಾಮಂತಾಧಿಪತಿ ಮಹಾಪ್ರಚಣ್ಡದಣ್ಡನಾಯಕಂ . . . ನೀತಿಸಾರಾ ಯಣಂ ಸ ರ್ಯ್ಯನಾರಾಯಣಂ (ಸೌಇಇ. XX, ೪೬-೩೫ ; 1072).

[ಸಂ.]

ನೀತಿಕಥೆ (ನಾ). ಬಾಳಿಗೆ ಮಾರ್ಗದರ್ಶನವನ್ನು ನೀಡುವ ಕಥೆ ; ನೀತಿಯನ್ನು ಬೋಧಿಸುವ ಕಥೆ : ಈ ಕಥೆಗಳನ್ನು ಸ್ಪರ್ಧಿಸಿ ಅನೇಕ ನೀತಿಕಥಾಸಂಗ್ರಹಗಳು ಹುಟ್ಟಿದವು (ನೀತಿಚಂ. II, ಅರಿಕೆ) ; ಮಕ್ಕಳಿಗೆ ನೀತಿಕಥೆಗಳನ್ನು ಓದಲು ಹೇಳಬೇಕು (ರೂಢಿ). [ನೀತಿ + ಕಥೆ]

ನೀತಿಕಾಱ (ನಾ). ನೀತಿಯಿಂದ ಕೂಡಿರುವವನು ; ಸಚ್ಚರಿತ್ರ : ನೀತಿಕಾಱನ ಮಾತದೇಕೆ ತಪ್ಪುಗುಂ . (ಪಂಚತಂ. ೧೩೬-೧೨); ಸಿರಿಯ ಮದವೆಂಬಧಿಕತಾಮಸ ದೊರಕಿದಪ್ಪೆಗೆ ನೀತಿಕಾಱರ ಪರಮಪಚನಾಂಜನದಿ ಪ್ರಜ್ವಲಿಸುವುದು ನಯವೆಂದ (ಕುವ್ಯಾಉ. ೯-೨).

[ನೀತಿ + -ಕಾಱ]

ನೀತಿಕೆ (ನಾ). [ಛಂದ] ಪ್ರತಿಪಾದದಲ್ಲಿ ಹನ್ನೊಂದು ಅಕ್ಷರಗಳಿ ರುವ ಒಂದು ವರ್ಣವೃತ್ತ : ನೀತಿಕೆ-ನರರಲಗಂ (ಛಂದೋಂಬು. ೨-೧೨೮ ಅಡಿಟಿ). 'ಮಾಣಿಕ್ಯ' ಪರಾ. [ಸಂ. ನೀತಿಕಾ]

ನೀತಿಕೋವಿದ (ನಾ). ನೀತಿಯನ್ನು ಆಳವಾಗಿ ಅರಿತವನು ; ನೀತಿಜ್ಞ : ಆರು ಹಿತವರು ನೀತಿಕೋವಿದರಾರು ಸುಜನರು ಬಹುಪರಾ ಕ್ರಮಾರಾವರ ಹೊಱಬೀಸಿ ಕಾಬುದು ನಿನ್ನ ಮತ (ಕುನ್ಯಾದ್ರೋ. ೧-೬); ಲೋಕಮಾನ್ಯಟಿಳಕರ ಗೀತಾರಹಸ್ಯದಲ್ಲಿ ಐರೋಪ್ಯ ನೀತಿಕೋವಿದರ ಅಭಿಪ್ರಾಯಗಳು ಬಂದಿವೆ (ಧರ್ಮಸಾ. ಪರಿ. ೧೪೪).

[ನೀತಿ + ಕೋವಿದ]

ನೀತಿಕ್ಷತಿ (ನಾ). ನೀತಿಯ ನಾಶ ; ಧರ್ಮಕ್ಕೆ ಒದಗುವ ಹಾನಿ,— ಕೇಡು : ವಿತತಾಭಿಮಾನ ನೀತಿಕ್ಷತಿಗಂ ಶಿವಭಕ್ತಿಧರ್ಮ ನಿರ್ಮಳಕೀರ್ತಿ ಚ್ಯುತಿಗಘಟನಪ್ಪೊಡಂ ಭೂಪತಿಯಳ್ಕಲ್ವೇಳ್ಕುಂ (ರಾಜಶೇ. ೧೩-೨೨).

[ನೀತಿ + ಕ್ಷತಿ]

ನೀತಿಗಳೆ (ಕ್ರಿ). ಧರ್ಮವನ್ನು ಕೆಡಿಸು ; ನ್ಯಾಯಮಾರ್ಗವನ್ನು ಬಿಡು : ರಾಜ್ಯಪದವಿಯಲ್ಲಿ ಸೋತ ಮನದವನಲ್ಲ ಭುವನಖ್ಯಾತನೆನಿ ಪೊಂದಾಶೆಯನು ದಿಟ ನೀತಿಗಳೆದರೆ ಬಳಿಕ ನಮ್ಮಯ ಮೊಮ್ಮನಲ್ಲೆಂದ (ಕುವ್ಯಾಭೀ. ೧೦-೩೨). [ನೀತಿ + ಕಳೆ$_1$]

ನೀತಿಗಾಮಿ (ನಾ). ನೀತಿಮಾರ್ಗದಲ್ಲಿ ನಡೆಯುವವನು : ಸ್ವಾಮಿ ಕಾರ್ಯವೆ ಮುಖ್ಯವಾಗಿ ನಡೆಯುವ ಮನುಜ ನೇಮಿಸಲು ನೂರರೊಳ ಗೋರ್ವನಾತನು ನೀತಿಗಾಮಿಯೆನ್ನಿಸಲವನ ಜನಪದಂ ನಂಬುವದು (ಕೃಷ್ಣವಿ. ೪-೨೫). [ಸಂ. ನೀತಿಗಾಮಿನ್]

ನೀತಿಗೆಡಿಸು (ಕ್ರಿ). ೧. ಧರ್ಮಮಾರ್ಗವನ್ನು ತಪ್ಪಿಸು. ೨. ನಡೆ ಗೆಡಿಸು ; ಸೋಲಿಸು : ಆತನನು ಗೆಲಿದನು ಸುನಾಭನ ನೀತಿಗೆಡಿಸಿ . . . ಮಹಾತಿಬಲನವನೊಡನೆ ಬಲುಹಾಯ್ತರ್ಜುನನ ಸಮರ (ಕುವ್ಯಾಸ. ೩-೧೮). [ನೀತಿಗೆಡು + -ಇಸು$_3$]

ನೀತಿಗೆಡು (ಕ್ರಿ). ಧರ್ಮಮಾರ್ಗವನ್ನು ಬಿಟ್ಟು ನಡೆ; ಅಪಮಾರ್ಗ ವನ್ನು ಹಿಡಿ ; ಶೀಲಗೆಡು : ದುರ್ಜನೋಪಗತೋದ್ದೇಶದೊಳಂ ಪಣ್ಯವರ್ಮವೀಥಿವ್ರಾತದೊಳ್ ಮಾವಗಂ(?)ತಗುಣಾತ್ಮರ್ ವಿನಯ ಪ್ರಹೀಣರವಿನೀತರ್ ನೀತಿಗೆಟ್ಟಾಡುವರ್ (ಸುಕುಮಾ. ೨-೩) ; ಸಲೆ ಮಾಯಾಮೋಹವಾಚ್ಛಾದಿಸೆ . . . ನೆಲೆಗೆಟ್ಟಿಂ ನೀತಿಗೆಟ್ಟಿಂ (ರತ್ನಾಶ. ೫೩); ಅಂಧಕಾಸುರನು ನೀತಿಗೆಡೆ ಬಳಿಕವರ ರಾಜ್ಯದ ಭೂತಳದ ಸಪ್ತಾಂಗವೆಲ್ಲ ವನಾತನಾಳಿದ ಬಹೆಳದಿನ ವೃಷಪರ್ವನೆಂಬಸುರ (ಸಂಭಪ. ಪರಿ. ೨-೨) ;

ಗಗನಕೆದುರು ನಿಂತಿದೆ ತರು ಮಸಿಯ ಚಿತ್ತಿನಂದದಿ ಹೃದಯವಶದ ನೀತಿಗೆಟ್ಟು . . . ಅನಾಥೆಯಂದದಿ ! (ಅನಿಕೇ. ೧೪-೫).

[ನೀತಿ+ಕೆಡು$_1$]

ನೀತಿಚಾಣಕ್ಯ (ನಾ). ರಾಜ್ಯತಂತ್ರದಲ್ಲಿ ಚಾಣಕ್ಯನಂತಿರುವವನು ; ರಾಜ್ಯನೀತಿಯಲ್ಲಿ ಕುಶಲನಾದವನು : ಮಂತ್ರಿಮಾಣಕ್ಯ ನೀತಿಚಾಣಕ್ಯ ನಿಯೋಗಯೋಗಂಧರಂ . . . ಅಗಣಿತಪುಂಣ್ಯಗಾತ್ರನೆನಿಸಿದ ಸೋಮದೇವದಣ್ಡಾಧೀಶ್ವರ (ಎಕ. VIII, ಸೊರಬ. ೨೭೬-೯೯ ; 1070). [ನೀತಿ+<ಚಾಣಕ್ಯ]

ನೀತಿಜಡ (ನಾ). ಧರ್ಮವನ್ನು ತಿಳಿಯದವನು : ಮಂದಬುದ್ಧಿಯ ನೀತಿಜಡನಾದ ವ್ಯಕ್ತಿಗೆ ಮಾತ್ರ ಮುಡಿಪಾದ ಸ್ಥಾನವದು (ಪುನರು. ೩೯೨).

[ನೀತಿ+ಜಡ]

ನೀತಿಜ್ಞ (ನಾ). ೧. ನಯನೀತಿಗಳನ್ನು ತಿಳಿದವನು ; ವ್ಯವಹಾರ ಕುಶಲ : ತನ್ನ ಕಾರಿಯಕಾರಣವನುಳಿದನ್ಯಥಾಚಿಂತೆಯನು ಮಾಡುವುದುನ್ನತಿಕೆ ತಾನಲ್ಲ ನೀತಿಜ್ಞರಿಗೆ ಭಾವಿಸಲು (ಕುವ್ಯಾಉ. ೩-೭). ೨. ರಾಜ್ಯತಂತ್ರನಿಪುಣ; ರಾಜ್ಯನೀತಿಯಲ್ಲಿ ಕುಶಲನಾದವನು : ನಿಮ್ಮ ನಿಮ್ಮೊಂದು ಚೇತನದೊಳ್ ಪುಟ್ಟಿದ ಕಾರ್ಯಬೀಜಮನದಂ ನೀತಿಜ್ಞರಿರ್ ಪೇಟುರೇ (ಶಾಂತಿಪು. ೨-೩೦) ; ಈ ನಪುಂಸಕರುಗಳನಂಬಿದ ನಾನು ನೀತಿಜ್ಞನೆ (ಕುವ್ಯಾಭೀ. ೮-೩೭) ; ನೀತಿಜ್ಞಂ ನಿಜನಿತ್ಯತತ್ತ್ವನಿಪುಣಂ . . . ರಾಜೇಂದ್ರಚಕ್ರೇಶ್ವರಂ (ಹಮ್ಮೀರ. ೧-೨೭) ; ಬಾಹ್ಯವಾದ ಉಪಪ್ಲವ ಒದಗಿದಾಗ ಕೌಟಿಲ್ಯಾದಿ ನೀತಿಜ್ಞರು ರಾಜರಿಗೆ ಮಾರ್ಗದರ್ಶಿಗಳಾಗಿದ್ದಾರೆ (ಪುಕ್ಸಾರ. ೧೦೬ ಪೀಠಿಕೆ). [ಸಂ.]

ನೀತಿದಪ್ಪು (ಕ್ರಿ). = ನೀತಿಗೆಡು : ವಿಘಾತಿಸಿತು ಸುಪ್ರೀತಗಿತ್ತಿಹ ಮಾತಿದಿಂದುವಿರದೆ ನುಡಿ ಪ್ರಖ್ಯಾತಮಾಗಿದು ನೀತಿದಪ್ಪಿದ ಪಾತಕದಿ ನೆರೆದೇತಱದು ಸುಖಮಾತುರದೊಳು ನಡೆದೆ (ಛಂದೋಂಬು. ಕಿ. ೮೬).

[ನೀತಿ+ತಪ್ಪು$_1$]

ನೀತಿದೂರ (ನಾ). = ನೀತಿಬಾಹಿರ ೨ : ಅರಿಗೆ ದೂರುವೆನಾರೊಳು ಹೋರುವೆ ಭೂರಮಣನೆ ನೀತಿದೂರನೆಂದನಿಸೆ (ಶಾಕುಂತ. ೭೩ ಅಡಿಟ).

[ನೀತಿ+ದೂರ]

ನೀತಿನಿಪುಣ (ನಾ). = ನೀತಿಜ್ಞ ೧ : ನೀತಿನಿಪುಣ ಸುಜಾಣ ವಿತರಣವ್ರಾತ ಚೂಡಾರತ್ನ . . . ಭುವನಕೆ ದಾತಾರ ಮಱು ಭಾಪು ಭಾಪೆಂದಾತುರದಿ ಕೈಯೆತ್ತಿ ಪೊಗಳ್ದರು ನೃಪರು ಪಾಠಕರು (ನಾಗಚ. ೬-೮೧) ; ನಿಂದಿಸಲಿ ಮಿಗೆ ನೀತಿನಿಪುಣರು ಬಂದು ನೆಲಸಿಹ ಸಿರಿಯು ತೊಲಗಲಿ ಇಂದೆ ಮರಣವು ಬರಲಿ ಸುಜನರದೆಂದಿಗೂ ಸತ್ಯವನು ಮೀರರು (ನೀಸಾರಾ. ೩೨). [ನೀತಿ+ನಿಪುಣ]

ನೀತಿನಿಪುಣತೆ (ನಾ). ನಯನೀತಿಗಳನ್ನು ತಿಳಿದಿರುವಿಕೆ ; ವ್ಯವಹಾರಕೌಶಲ : ನೀತಿನಿಪುಣತೆಗಾದಿಗುರು ವಿಖ್ಯಾತಿ ವಿತರಣಶೀಲ (ನಾಗಚ. ೯-೮೭). [ನೀತಿ+ನಿಪುಣತೆ]

ನೀತಿನಿಯಂತ್ರಣ (ನಾ). ಧೋರಣೆಯನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ; ನಿಶ್ಚಿತವಾದ ನೀತಿಯನ್ನು ಪರಿಪಾಲಿಸುವುದು: ನೀತಿನಿಯಂತ್ರಣ ಅಂದರೆ ತನ್ನ ನಿಶ್ಚಿತನೀತಿಯನ್ನು ಆಚರಣೆಗೆ ತರುವ ರೀತಿ ಪದ್ಧತಿಯೆ ಇಡೀ ಜೀವನವನ್ನೆಲ್ಲ ಆವರಿಸಿರುತ್ತದೆ (ಕವಿಕೋ. I, ೧೮೬). [ನೀತಿ+ನಿಯಂತ್ರಣ]

ನೀತಿಪಥ (ನಾ). = ನೀತಿಮಾರ್ಗ ೧ : ಈತಂಗೆ ಸಚಿವಂ ಸುಬುದ್ಧಿಯೆಂಬವನೊರ್ವಂ . . . ನೀತಿಪಥಮಂ ಬಿಡದೆ . . . ಪರಿಜನಕೆ ಪದುಳಿಗನಾಗಿ ಭೂಪನಂ ಪೋಷಿಸುವನು (ಜೈಮಿಭಾ. ೧೭-೧೩).

[ನೀತಿ+ಪಥ]

ನೀತಿಪಾಠ (ನಾ). ನೀತಿಯನ್ನು ಬೋಧಿಸುವುದು ; ವ್ಯವಹಾರ ಕುಶಲತೆಯನ್ನು ಹೇಳಿಕೊಡುವುದು : ಹಿಂದಿನ ಕಾಲದಲ್ಲಿ ಶಾಲೆಗಳಲ್ಲಿ ನೀತಿಪಾಠವಿತ್ತು (ರೂಢಿ). [ನೀತಿ+ಪಾಠ$_2$]

ನೀತಿಪೌಷ್ಕಲ್ಯ (ನಾ). ಧರ್ಮದ ಆಧಿಕ್ಯ,—ಹೆಚ್ಚಳ : ವ್ಯಾವಹಾರಿಕವಾದ ನೀತಿಪೌಷ್ಕಲ್ಯಕ್ಕೂ ಆಧ್ಯಾತ್ಮಿಕವಾದ ತೃಪ್ತಿ—ಆನಂದಕ್ಕೂ ಈ ಜ್ಞಾನವೇ ಸಾಧಕ (ಪುಕ್ಸಾರ. ೪ ಪೀಠಿಕೆ).

[ನೀತಿ+ಪೌಷ್ಕಲ್ಯ]

ನೀತಿಬಾಹಿರ (ನಾ). ೧. ನೀತಿಯಿಂದ ಹೊರತಾದುದು ; ಧರ್ಮದಿಂದ ದೂರವಾದುದು : ಈ ಕಳ್ಳರ ಜ್ಞಾನಸಂಗ್ರಹದ ರೀತಿ ನೀತಿಬಾಹಿರವಾಗಿರುತ್ತದೆ (ಗ್ರಂಥಾಲ. ೬೫) ; ನಾಚಿಕೆಗೇಡಿನ ಮತ್ತು ನೀತಿಬಾಹಿರವಾದ ಹುದ್ದೆಯಲ್ಲಿದ್ದ ಮಾತ್ರಕ್ಕೆ ಮಾಸ್ಲೆನಿಕೋವ್ ತಾನೊಬ್ಬ ಪ್ರಮುಖವ್ಯಕ್ತಿಯೆಂದು ತಿಳಿದುಕೊಂಡಿರಬೇಕೆಂದೂ . . . ನೆಕ್ಲುದೋವ್ ಆಲೋಚಿಸಿದನು (ಪುನರು. ೨೫೩). ೨. ಧರ್ಮಮಾರ್ಗವನ್ನು ಬಿಟ್ಟು ನಡೆಯುವವನು ; ನೀತಿಗೆಟ್ಟವನು : ಅರು ಕುಹಕಿಗಳು . . . ನೀತಿಬಾಹಿರರಾರು ದುರ್ಬಲರವರು ನಿನ್ನರಮನೆಯ ಮಂತ್ರಿಗಳು (ಕುವ್ಯಾದ್ರೋ. ೧-೬) ; ನಾನೇನಾದರೂ ನೀತಿಬಾಹಿರನಾದ ರಾಕ್ಷಸನೆ ? (ಮಲಿನಾ. ೧೧). [ನೀತಿ+ಬಾಹಿರ]

ನೀತಿಬಾಹಿರತೆ (ನಾ). ನ್ಯಾಯಮಾರ್ಗದಿಂದ ದೂರವಾಗಿರುವಿಕೆ: ಗೋವಿಂದರಾಯರ ಧರ್ಮಬಾಹಿರತೆ – ನೀತಿಬಾಹಿರತೆಯನ್ನು ಶ್ರೀಗಳವರ ನಿದರ್ಶನಕ್ಕೆ ತರಬೇಕು (ಸಮಜೀ. ೩೭). [ಸಂ. ನೀತಿಬಾಹಿರತಾ]

ನೀತಿಬಾಹ್ಯ (ನಾ). = ನೀತಿಬಾಹಿರ ೨ : ಆತಂ ನೀತಿಬಾಹ್ಯನಪ್ಪುದಱಂ ಪೂರ್ವಾಪರವಿಚಾರವಿಕಳನಾಗಿ . . . ಅನೇಕರ ವೃತ್ತಿಪ್ರಪತ್ತಿಗಳಂ ಕಳೆದುಕೊಂಡು (ಪಂಚತಂ. ೨೮-೧) ; ಪೂತ ಕುಂಭೀಪಾಕಕರ್ಹರು ಆತಗಳು . . . ನೀತಿಬಾಹ್ಯರು ದಿತಿಜರಱುವತ್ತಾಱುಕೋಟಿಗಳು (ಸಂಭವ. ೫-೨೦). [ನೀತಿ+ಬಾಹ್ಯ$_1$]

ನೀತಿಬೋಧಕ (ಗು). ನೀತಿಯನ್ನು ಉಪದೇಶಿಸುವ,—ಕಲಿಸುವ: ಲೋಕದಲ್ಲಿ ಜನರು ಹೇಗೆ ಬಾಳಬೇಕೆಂಬ ವಿಷಯವಾಗಿ ಉತ್ಕೃಷ್ಟವಾದ ನೀತಿಬೋಧಕ ಪದ್ಯಗಳು ವೇಮನನ ಪದ್ಯಗಳು (ಭಾರದ. ೪೦೩).

[ನೀತಿ+ಬೋಧಕ]

ನೀತಿಬೋಧೆ (ನಾ). = ನೀತಿಪಾಠ : ಮಕ್ಕಳಿಗೆ ನೀತಿಬೋಧೆಯುಳ್ಳ ಕಥೆಗಳನ್ನು ಹೇಳಬೇಕು (ರೂಢಿ). [ನೀತಿ+ಬೋಧೆ]

ನೀತಿಭಿಕ್ಷೆ (ನಾ). ನ್ಯಾಯವನ್ನು ಯಾಚಿಸುವುದು,—ಬೇಡುವುದು : ಆಕಟಿಮ್ಮ ಧರ್ಮಶಾಸ್ತ್ರದಿ ಮರಣದಂಡಕೆಡೆಯಿರೆ, ಪರರ ಭಾಗಲಿಗೆ ನೀತಿಭಿಕ್ಷೆಗೆ ಬರುವವೇನಿಂತು ನಿಮ್ಮ ನೀತಿಯುನೆಮ್ಮ ಧರ್ಮವಂ ಕಾಯೆಂದು (ಗೂಳ್ಳೋಥಾ. ೩-೧೬೩). [ನೀತಿ+ಭಿಕ್ಷೆ]

ನೀತಿಭ್ರಷ್ಟ (ಗು). ೧. ನೀತಿಗೆಟ್ಟ ; ಧರ್ಮದೂರವಾದ : ನೀತಿಭ್ರಷ್ಟ ಜೀವನದ ಮಂಜುಮರೆಯಲ್ಲಿ ಆ ನೆನಪುಗಳನ್ನೆಲ್ಲ ಮುಚ್ಚಿಟ್ಟು ಮನಸ್ಸನ್ನು ಹಗುರಗೊಳಿಸಲು ಪ್ರಯತ್ನಿಸಿದಳು (ಪುನರು. ೧೯೩). (ನಾ). ೨. = ನೀತಿಬಾಹಿರ ೨ : ಅವನೇ ಇಂದು ನೀತಿಭ್ರಷ್ಟನಾದ ಸ್ವಾಭಿಮಾನಿಯಾಗಿ ಸ್ವಾರ್ಥಸುಖವೇ ಜೀವನದ ಉಚ್ಚಾದರ್ಶವೆಂದು ತಿಳಿದುಕೊಂಡಿದ್ದನು (ಪುನರು. ೫೯). [ನೀತಿ+ಭ್ರಷ್ಟ]

ನೀತಿಭ್ರಷ್ಟತೆ (ನಾ). ೧. ದುರಾಚಾರ ; ಅನೀತಿ : ತಮ್ಮ ನೀತಿಭ್ರಷ್ಟತೆಯ ಬಗ್ಗೆ ಹೆಮ್ಮೆಪಟ್ಟುಕೊಳ್ಳುವ ವೇಶ್ಯೆಯರು . . . ಆ ಮಿತ್ರಮೇಳದ ಸದಸ್ಯವರ್ಗವೆಂದರೆ ಯಾರಿಗಾದರೂ ವಿಸ್ಮಯವಾಗದಿರದು (ಪುನರು. ೧೯೭). ೨. "ಭ್ರಷ್ಟಾಚಾರ ; ಲಂಚಗುಳಿತನ ; ನೀತಿಭ್ರಷ್ಟತೆ" (Corruption. ಪತ್ರಿನಿ. ೨೩). [ನೀತಿ+ಭ್ರಷ್ಟತೆ]

ನೀತಿಮತ್ತೆ (ನಾ). ನೀತಿಯುಕ್ತವಾದ ನಡವಳಿಕೆ; ಧರ್ಮ: ಇಂಥ ನಿಶ್ಚಲ ಬುದ್ಧಿಪ್ರಧಾನತೆಯ ಪರಿಣಾಮವಾಗಿ ವ್ಯಕ್ತಿತ್ವದ ಬುಡದಿಂದಲೇ ಅರಳಿ ಬಂದ ನೈಸರ್ಗಿಕನೀತಿಮತ್ತೆಯೊಂದು ಜಾರ್ಜಿಯ ವೈಶಿಷ್ಟ್ಯ (ಗಂಜಾಬಿ. ೬೬). [ಸಂ. ನೀತಿಮತ್ತಾ]

ನೀತಿಮಾರ್ಗ (ನಾ). ೧. ಒಳ್ಳೆಯ ನಡತೆ; ಸಚ್ಚಾರಿತ್ರ್ಯ: ಗೋತ್ರದಲಿ ಬ್ರಹ್ಮನೇ ಸೂತ್ರದಲಿ ಕೌಶಿಕನೆ . . . ಜ್ಯೋತಿಯಲಿ ಬೃಹಸ್ಪತಿಯೆ ನೀತಿಮಾರ್ಗದಲಿ ಸಹದೇವನೇ ನೀನು (ಕನಕ. ೧೪೦–೪). ೨. ಒಳ್ಳೆಯ ನಡತೆಯುಳ್ಳವನು; ಸಚ್ಚಾರಿತ್ರ್ಯವಂತ: ಅನುಶಯ ನೀತಿಮಾರ್ಗನನೂನಕವಿತಾವಿಲಾಸನಂ ಭೂತಳದೊಳ್ ಮನುಗಂ ವ್ಯಾಸಂಗಂ ಮಿಗಿಲೆನಿಸಿದ ಕವಿತಾವಿಲಾಸನಂ ಪೊಗಟಬದರಾದ್ (ಪಂಚತಂ. ೬–೩). ೩. ಒಬ್ಬ ರಾಷ್ಟ್ರಕೂಟರಾಜನ ಬಿರುದು: ಶ್ರೀಮತ್ ನೀತಿಮಾರ್ಗ್ಗ ಪೆರ್ಮ್ಮನಿಗಳ ಪಟ್ಟಂಗಟ್ಟಿದ ಪ್ರಥಮವರಿಷ (ಎಕ. IV (R). ಚಾಸಿಂತಾ. ೨೫೬–೪; ಸು. ೩೩೮ನೆಯ ಶತ); ನೀತಿಮಾರ್ಗ್ಗ ಪೆರ್ಮ್ಮಾ × × × ಡಿಗಳ ಕೊಱ್ಗುಣವರ್ಮ್ಮ ಧರ್ಮ್ಮರಾಜ ಶ್ರೀಮತ್ ಪೆರ್ಮ್ಮನ[ಡಿ]ಗಳ[ಪಟ್ಟಂಗಟ್ಟಿ]ದ ೯ನೆಯ ಸಂವತ್ಸರವಾದ × × × ಸಂವತ್ಸರದಲು (ಎಕ. III(R), ನಂಜನ. ೨೧೦–೨; ೨೩ನೆಯ ಶತ); ಸ್ವಸ್ತಿ ಶ್ರೀ ನೀತಿಮಾರ್ಗ್ಗ ಕೊಱ್ಗುಣವರ್ಮ್ಮಧರ್ಮ್ಮಮಹಾರಾಜಾಧಿರಾಜ ಕೊವಳಾಲಪುರವರೇಸ್ವರ . . . ದಣ್ಣಾಯಕನಾಗೆ ನೀ[ತಿ]ಮಾರ್ಗ್ಗನ ನಿಸದೊಳ್ ಕಾದಿ (ಎಕ. XIV, ನಾಗಮಂ. ೧೩೭–೧; ಸು. ೯೦೦).

[ನೀತಿ + ಮಾರ್ಗ]

ನೀತಿಯುತ (ಗು). ೧. ನೀತಿಯಿಂದ ಕೂಡಿದ; ಧರ್ಮದಿಂದ ಕೂಡಿದ: ನೀತಿಯುತ ಕಲ್ಪನವ ಕೇಳಿಸು (ಪುದೇಪು. ೨೬–೨೬). (ನಾ). ೨. ಧರ್ಮದಿಂದ ಕೂಡಿದುದು: ನೀತಿಯುತಮಾಗಿಯುಂ ಬಲ ನೀತಿಸಮನ್ವಿತಮುಮಾಯ್ತು ಸುಖಭಾಜನಕಂ ಭೂತಿಯುತಮಾಗಿಯುಂ ತದಭೂತಿಸಮನ್ವಿತಮುಮಾಯ್ತು ಧರ್ಮನ ರಾಜ್ಯಂ (ಬಾಭಪು. ೧೨–೧೭೨); ತಮ್ಮ ಸಂಸಿದ್ಧಿಗಳನ್ನು ನೀತಿಯುತವಾದ ಮಾರ್ಗದಲ್ಲಿ ಪ್ರಯೋಗಿಸುವ ಸ್ವಾತಂತ್ರ್ಯ ವಿಜ್ಞಾನಿಗಳಿಗಿಲ್ಲವಾಗಿದೆ (ಪುಶ್ವಾರ. ೪೨ ಪೀಠಿಕೆ). ೩. = ನೀತಿವಂತ: ಮಾತಱಿವವರೊಳ್ ನೀತಿವಿದರಮಳಕವಿತಾ ನೀತಿಯುತರ್ಕೆಲರೆ ಪರಮಕವಿವ್ಯಸಭರ್ಕಳ್ (ಕವಿರಾ. ೧–೧೭); ನೀತಿಯುತಂ ನಮ್ಮೊಳತಿಪ್ರೀತಿಯುತಂ (ಬಂಹರಿ. ೭–೨). [ನೀತಿ + ಯುತ]

ನೀತಿಯುತೆ (ನಾ). ಒಳ್ಳೆಯ ನಡವಳಿಕೆಯುಳ್ಳವಳು; ಸುಶೀಲೆ: ಭೂತಳಕೆಲ್ಲಂ ಸಂದುದಿದೆತ್ತಂ ನೀತಿಯುತೇ ಮುಂದಾನಿಲವೃತ್ತಂ (ಭಂದೋಂಬು. ೨–೧೦೪). [ಸಂ. ನೀತಿಯುತಾ]

ನೀತಿವಂತ (ನಾ). ಸನ್ಮಾರ್ಗದಲ್ಲಿ ನಡೆಯುವವನು; ಸಜ್ಜನ: ನಿರುತಸುಖವನು ಪುಣ್ಯವನು ತಾನೆರಡ ಗಳಿಸುವ ನೀತಿವಂತನು (ಳಾಶಾ. ೩೮–೧೨); ನೀತಿವಂತರು ಕೇಳಿರೆಲ್ಲ ನಮಗೀತನೆ ಗತಿಯಾನ ಪುರಂದರವಿಠಲ (ಪುರಂದ. ಧಾ. ೨–೩೯–೩); ನೀತಿವಂತನು ಸೋತು ನಡೆವನು (ನೀಸಾಶಾ. ೧೨); ನೂತು ಮಾತಿಗೆ ತಪ್ಪುವವನು ನೀತಿವಂತನಲ್ಲ (ಗಾದೆ). [ಸಂ. ನೀತಿವತ್]

ನೀತಿವಂತೆ (ನಾ). ಸನ್ಮಾರ್ಗದಲ್ಲಿ ನಡೆಯುವವಳು; ಸಚ್ಚಾರಿತ್ರ್ಯವುಳ್ಳವಳು: ಆಕೆ ನೀತಿವಂತೆಯಾಗಿ ಬಾಳಿದಳು (ರೂಢಿ).

[ನೀತಿವಂತ + –ಎ$_2$]

ನೀತಿವಚನ (ನಾ). ಉಪದೇಶದ ಮಾತು; ವಿವೇಕದ ನುಡಿ: ಮಾತನಾಡೆಂದೆನಲು ದೇವಿಯು ಮಾತನಾಡಿದಳಾ ಬಿಡಾಲಗೆ ನೀತಿವಚನವ ಕೇಳು ಶಪ್ತ ಹುಡೆಂದಳಾ ದೇವಿ (ದೇವೀಮ. ೬–೧೮೮); ಯಾರು ಹೇಳಿದ ನೀತಿವಚನವನಾರಿಸುತ ರಚಿಸುವೆನು (ನೀಸಾಶಾ. ೪). [ನೀತಿ + ವಚನ]

ನೀತಿವರ್ಧನ (ನಾ). ರಾಜನೀತಿಯ ಕ್ರಮವನ್ನು ಅನುಸರಿಸುವಿಕೆ,—ಪಾಲಿಸುವಿಕೆ: ಸುಮತಿಯ ನಯಕ್ಕೆ ಪದನಟ್ಟು ಪಲಿತಾರಿ ನೀತಿವರ್ಧನನಿಮಿತ್ತಂ ಪ್ರೀತಿವರ್ಧನನೆಂಬ ದೂತಮುಖ್ಯನನಟ್ಟಿದೊಡೆ (ಶಾಂತಿಪು. ೩–೬೬ ಪ). [ನೀತಿ + ವರ್ಧನ]

ನೀತಿವಾಕ್ಯ (ನಾ). = ನೀತಿವಚನ: ರಾಮನಿಂ ಧೀರರುಮಾರುಮಿಲ್ಲ ಸ್ತ್ರೀಹರಣದಿಂ ಪರಾಭವಮಾವುದುಮಿಲ್ಲ . . . ಎಂಬ ನೀತಿವಾಕ್ಯ ಮುಂಟು (ಪಂಚತಂ. ೨೦೯–೨೩). [ನೀತಿ + ವಾಕ್ಯ]

ನೀತಿವಾದಿ (ನಾ). ನೀತಿಯನ್ನು ಸಮರ್ಥಿಸುವವನು: ಸೌಂದರ್ಯ . . . ಉದಾತ್ತಳಾನಗಳನ್ನು ಪ್ರಚೋದಿಸಬೇಕೆಂದು ನೀತಿವಾದಿಗಳು ಹೇಳುತ್ತಾರೆ (ಸೌಂದನ. ೬೪). [ಸಂ. ನೀತಿವಾದಿನ್]

ನೀತಿವಿಡಿ (ಕ್ರಿ). ರಾಜನೀತಿಯನ್ನು ಅನುಸರಿಸು: ನೀತಿವಿಡಿದರಸಂಗೆ ಬಹಳ ಖ್ಯಾತವದು ಜನರಾಗೆ ರಾಗವ್ಯಾತದಿಂ ಧನ ಧನದಿ ಪರಿಕರ ಪರಿಕರದಿ ಜಯವು (ಕುನ್ಯಾಸ. ೧–೪೮); ಒಡನೆ ಭೀಮನು ಧರ್ಮಾಜನ ವೈರಾಗ್ಯದ ನುಡಿಯನಾಲಿಸಿ ಕೋಪವೆರಸಿ ಸಿಡಿಸಿಡಿಗೊಳುತಳಲುತೆ ನೋವುತೆ ನೀತಿವಿಡಿದು ನಿಷ್ಕಾರವನಾಡಿದನು (ಕರ್ಣಾಪ. ೧೧–೧). [ನೀತಿ + ಪಿಡಿ$_1$]

ನೀತಿವಿದ (ನಾ). ೧. = ನೀತಿವಂತ: ನೀತಿವಿದರಮಳಕವಿತಾನೀತಿಯುತರ್ಕೆಲರೆ ಪರಮಕವಿವ್ಯಸಭರ್ಕಳ್ (ಕವಿರಾ. ೧–೧೭); ಇಂತಿವನೋದಿ ಕೇಳ್ದ ಮನುಜಾಳಿಯ ದುಃಖಜಯಂಗಳಿಂಗಿ ಮೇಣ್ ಸಂತರುಮಾಗಿ ನೀತಿವಿದರಾಗಿ ನಿರ್ಗರ್ವಿಗಳಾಗಿ ಲೋಕದೊಳ್ ಸಂತತ ಪೂಜ್ಯರಾಗಿ ಸುಖದಿಂದಿರುತಿರ್ಪರ್ (ಕಬೀಕಂ. ೧೦೭). ೨. = ನೀತಿಜ್ಞ ೨: ಚಂದ್ರಗುಪ್ತಂಗೆ ಸಮಸ್ತಧಾರಿಣಿಯನಿತ್ತು ನೆಗಟ್ಟಿತ್ತಿಯನಾಂತ ವಿಷ್ಣುಗುಪ್ತಂ ಗೆನೆಯೂರೊ ನೀತಿವಿದರ್ಣವನೇಷ್ಟಿತ ವಿಶ್ವಧಾತ್ರಿಯೊಳ್ (ಪಂಚತಂ. ೩–೧೨); ನೀತಿವಿದರ್ ನಿಮ್ಮಂದಿಗರೀ ತೆಱದಿಂ ನುಡಿವುದಪನಯಂ (ಪಾರ್ಶ್ವ. ೪–೪೬); ನೀತಿವಿದಂ . . . ಭೂತಳವಲ್ಲಭಂ ನಳನೃಪಂ ಸಲೆ ಮತ್ಪ್ರತಿಯಾತನೆಂದು ಸಂಪ್ರೀತಿಯಿನಾಪ್ತರೊಳ್ ಮಿಗೆ ವಿಚಾರಿಪಳ್ (ನಳಚಂ. ೪೦); ನೀತಿವಿದನಲ್ಲದ ಕುಮಂತ್ರಿ ವಿನೀತಪರನಲ್ಲದ ಪುರೋಹಿತ ನೇತಳವರಿಂದಾವ ಪುರುಷಾರ್ಥಂಗಳೆಯ್ದುವುವು (ಕುನ್ಯಾಉ. ೪–೪೩).

[ಸಂ. ನೀತಿವಿದ್]

ನೀತಿವಿಭವ (ನಾ). ನೀತಿಯ ಆಧಿಕ್ಯದಿಂದ ಕೂಡಿರುವವನು; ನೀತಿವಿಭವಂ . . . ಉತ್ಪುಂಗಳಲಾವ್ಯಾತಂ ಮೂರ್ತಿಯನಾಂತವೊಲಾತಪನಾನ್ವಯಸುಧಾಬ್ಧಿ ಚಂದ್ರಮನೆಸೆವಂ (ಉದ್ಭಟ. ೧೨–೭೧).

[ನೀತಿ + ವಿಭವ]

ನೀತಿವಿರುದ್ಧ (ನಾ). ಧರ್ಮವಿರುದ್ಧವಾದುದು; ನೀತಿಬಾಹಿರವಾದುದು: ಪೂರ್ವಪುರುಷರಿಂದಾದ ಮಹಾಟವಿಯಂ ಬಿಡಲಾಗದೆಂದು ನೀತಿವಿರುದ್ಧಂಗಳಪ್ಪ ಮಾತುಗಳಂ ನುಡಿದಯೂದೊಡೆಯಿಂತೀಯವಸರಕ್ಕೆ ತಕ್ಕುದೊಂದು ಕಥೆಯುಂಟು (ಪಂಚತಂ. ೩೭–೧೭). [ನೀತಿ + ವಿರುದ್ಧ]

ನೀತಿವಿಷಯಕ (ಗು). ನೀತಿಗೆ ಸಂಬಂಧಿಸಿದ: ನಾವು ಸದ್ಗುರುಗಳ ನೀತಿವಿಷಯಕ ಕಾರ್ಯಗಳನ್ನು ವಿವರಿಸುವೆವು (ಪರಪ. ೭೧).

[ನೀತಿ + ವಿಷಯಕ]

ನೀತಿವಿಹಾರಿ (ನಾ). ನೀತಿಯಲ್ಲಿ ಸಂತೋಷಪಡುವವನು; ನೀತಿವಂತ: ನೀತಿವಿಹಾರಿಗಳ್ ಸಕಲಧರ್ಮವಿಚಾರಿಗಳ್ . . . ಅರವಿಂದಕರೋಪಮರೂಪರೊಪ್ಪಿದರ್ (ದಿವ್ಯಚ. ೧–೫೫).

[ಸಂ. ನೀತಿವಿಹಾರಿನ್]

ನೀತಿವಿಹೀನ (ನಾ). ನೀತಿಯನ್ನು ಬಿಟ್ಟವನು; ನೀತಿಬಾಹಿರ: ಶಿಷ್ಟಜನದೂರನೆ ವಿಚಾರಭ್ರಷ್ಟನೇ ಗರ್ವಿತನೆ ಸುಜನಾರಿಷ್ಟನೇ ತಾಮಸನೆ ನೀತಿವಿಹೀನನೇ ಖಳನೆ (ಒಸಪು. ೪೫–೨೧). [ನೀತಿ + ವಿಹೀನ]

ನೀತಿವಿಳಾಸ (ನಾ). = ನೀತಿವಿಹಾರಿ : ನೀತಿವಿಳಾಸ ಕೇಳ್ ಪೆಗಲೊಳಾಂತ ಮದೀಶನ ಹಸ್ತಪಾದಮಂ ಘಾತಕನಾರ್ಜಿನಿಂ ಕಡಿದ ಪಾತಕನಿಲ್ಲಿಗೆ ಬಂದಂ (ದಶಕು. ೧೨-೯೪). [ನೀತಿ + ವಿಳಾಸ (= ವಿಲಾಸ)]

ನೀತಿಶಾಸ್ತ್ರ (ನಾ). ೧. ಆಚಾರ, ನಡವಳಿಕೆ, ಲೋಕವ್ಯವಹಾರ, ಧಾರ್ಮಿಕವೃತ್ತಿ ಮೊದಲಾದುವುಗಳನ್ನು ತಿಳಿಸುವ ಶಾಸ್ತ್ರ : ಅತ್ಯಾರ್ಥಂ ಪೃಥಿವೀಂ ತ್ಯಜೇತ್-ತನ್ನ ನಿಮಿತ್ತಮಾಗಿ ಭೂಮಿಯಂ ಬಿಡುವುದೆಂಬ ನೀತಿಶಾಸ್ತ್ರಮುಂಟು (ಪಂಚತಂ. ೩೯-೯); ಬಿಸುಟು ಕಳೆವುದು ನೀತಿಶಾಸ್ತ್ರವನುಸುರದಾಚಾರಿಯನ ವೇದಪ್ರಸರವಿಲ್ಲದ ಋಷಿಜನವ ರಕ್ಷಿಸದ ಭೂಭುಜನ (ಕುವ್ಯಾಉ. ೩-೪೩). ೨. ರಾಜ್ಯನೀತಿಯನ್ನು ಕುರಿತ ಶಾಸ್ತ್ರ ; ಆಡಳಿತಶಾಸ್ತ್ರ : ನೀತಿಶಾಸ್ತ್ರಂಗಳೊಡನನೇಕ ಶಾಸ್ತ್ರಂಗಳುಂ (ಆದಿಪು. ೧೫-೩ ಪ); ತತಾರ್ಯವೃತ್ತಕಮಪ್ಪ ನಾಟ್ಯವಿದ್ಯೆಯುಮುಂ ಯೋಗಕ್ಷೇಮಾಧೀನಮಪ್ಪ ನೀತಿಶಾಸ್ತ್ರಮುಮಂ . . . ತ್ರಿದಶವರ್ಗಕ್ಕುಪದೇಶಂಗೆಯ್ಯುತ್ತುಂ (ಶಾಂತಿಪು. ೧೦-೯೦ ಪ); ರಾಜಶಾಸ್ತ್ರವನ್ನು 'ನೃಪಶಾಸ್ತ್ರ' ಮತ್ತು ದಂಡನೀತಿ ಎಂದೂ 'ದಮ' ದಂಡವೆಂದೂ, ನೀತಿಶಾಸ್ತ್ರವೆಂದೂ ಕರೆದಿದ್ದಾರೆ (ಭಾರದ. ೩೭೦). [ನೀತಿ + ಶಾಸ್ತ್ರ]

ನೀತಿಸಂದೇಶ (ನಾ). ನೀತಿಯನ್ನು ಹೇಳುವ ಮಾತು; ಉಪದೇಶದ ಮಾತು : ರಾಮಾಯಣದ ನೀತಿಸಂದೇಶ ಪೃಥ್ವಿಯಲ್ಲಿ ಶಾಶ್ವತವಾಗಿ ನಿಲ್ಲುವ ಶಕ್ತಿಯುಳ್ಳದ್ದು (ಚುಕ್ಸಾರ. ೧೦೪ ಪೀಠಿಕೆ). [ನೀತಿ+ಸಂದೇಶ]

ನೀತಿಸಮ್ಮತ (ನಾ). ಧರ್ಮಕ್ಕೆ ಅನುಸಾರವಾದುದು ; ನ್ಯಾಯಬದ್ಧವಾದುದು : ದುರಿಯೋಧನನನೀಕ್ಷಿಸುತಲಳುಭುಜಬಲ ಭಾನುನಂದನನಳುಕದೀ ಮಾತುಗಳನೆಂದನು ನೀತಿಸಮ್ಮತವ (ಕುವ್ಯಾದ್ರೋ. ೨-೩೧); ನೀತಿಸಮ್ಮತದಿಂ ವಿವೇಕನಿಂತೆನೆ ಕೇಳ್ದು ಶಾತಕುಂಭಾಲಂಕೃತಾಸನವನಿಳಿದು ಹರ್ಷಾತಿಶಯದಿಂದೆ ಮದನಂ ಚಂದ್ರಹಾಸನನಿರ್ದಂದು ಕಂಡು (ಜೈಮಿಭಾ. ೩೦-೪೮). [ನೀತಿ + ಸಮ್ಮತ]

ನೀತಿಸೂತ್ರ (ನಾ). ನಿರ್ದಿಷ್ಟವಾದ ನಡವಳಿಕೆಯ ನಿಯಮ : ಅವನ ವೈಯಕ್ತಿಕ ವಿಷಯದಲ್ಲಾಗಲೀ, ಆಡಳಿತಕ್ಷೇತ್ರದಲ್ಲಾಗಲೀ ಯಾವೊಂದು ನಿರ್ದಿಷ್ಟವಾದ ನೀತಿಸೂತ್ರವನ್ನವಲಂಬಿಸಿರಲಿಲ್ಲ (ಪುನರು. ೩೩೩). [ನೀತಿ + ಸೂತ್ರ]

ನೀತಿಹೀನ (ನಾ). = ನೀತಿವಿಹೀನ: ನೀತಿಹೀನನು ಜಾತಿಧರ್ಮಸಮೇತ ದೈವದ್ರೋಹಿಯೆಂಬುದು ಭೂತಲದೊಳೇ ನರಕ ಚಿತ್ತೈಸು (ಕುವ್ಯಾಉ. ೪-೪೧). [ನೀತಿ + ಹೀನ]

ನೀಧ್ರ (ನಾ). ಸೂರಿನ ಅಂಚು ; ಛಾವಣಿಯ ಕೊನೆ,—ತುದಿ ; ಸೂರುಕಟ್ಟು. 'ನೀವ್ರ' ಪರಾ. [ಸಂ.]

ನೀನ್, ನೀ, ನೀಂ, ನೀನು (ಸ). ಮಧ್ಯಮಪುರುಷ ಏಕವಚನ ಸರ್ವನಾಮ ; ಒಬ್ಬ ವ್ಯಕ್ತಿಯೊಂದಿಗೆ ಮಾತನಾಡುವಾಗ ಆ ವ್ಯಕ್ತಿಯನ್ನು ನಿರ್ದೇಶಿಸುವ ಮಾತು. ☞ ಕ್ರಮವಾಗಿ ಏಳು ವಿಭಕ್ತಿಗಳು : ನೀನ್, ನಿನ್ನಂ, ನಿನ್ನಿಂ, ನಿನಗೆ, ನಿನ್ನತ್ತಣಿಂ, ನಿನ್ನ, ನಿನ್ನೊಳ್ ; (ಬಹುವ) ನೀಮ್, ನಿಮ್ಮಂ, ನಿಮ್ಮಿಂ, ನಿಮಗೆ, ನಿಮ್ಮತ್ತಣಿಂ, ನಿಮ್ಮ, ನಿಮ್ಮೊಳ್ : ಕುಲಮುದ್ದ ನೀನೀ ಕಯ್ಯ ಪೊಕ್ಕು. ಕಾದೆನ್ದು ಬೆಸಸೆ (ಎಕ. VIII, ಸೊರಬ. ೧೧-೬; ಸು. 800); ಕುಣಾಳನುಮನೆಂದಂ ಮಗನೆ ಬೇಡು ನೀನೆಂದೊಡಾತನುಂ ಕಾಕಿಣೀರತ್ನಮಂ ಬೇಡಿದೊಡೆ (ವಡ್ಡಾರಾ. ೬೫-೨೬); ನೀನಾರ್ಗೆ ನಿನ್ನಂ ಪಳಯಿಸುವವರಾರ್ಗೇಕೆ ಶೋಕಿಪ್ಪೆ (ಆದಿಪು. ೩-೫೫); ನೀನುಳ್ಳೊಡುಂಟು ರಾಜ್ಯಂ ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟೈ . . . ನೀನಿಲ್ಲದಿವೆಲ್ಲಮೊಳವೆ ಅಂಗಾಧಿಪತೀ (ಗದಾಯು. ೫-೨೦); ನೀನಿಲ್ಲದಿನಿಬರುಂ ಲಂಕಾನಗರಿಗೆ ಪೋಗಿ (ಪಂರಾಪು. ೧೧-೪೨); ನೀನಿತ್ತ ಜೀವಮಿದು ಧರಣೀನುತ ನೀನಿಲ್ಲದಂದು ಸಾವದು ಪುಸಿಯೇ (ಧರ್ಮಾಮೃ. ೧೨-೧೮೦); ಬದುಕು ಜಟಕಾಬಂಡಿ ವಿಧಿಯದರೆ ಸಾಹೇಬ ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು (ಮಂಕುಶ. ೬೦೦). **ನೀ** : ಭಕ್ತಿದಾಯಕ ನೀ ಕರುಣಿಸು ಲಿಂಗತಂದೇ (ಬಸವ. ೪೮೩); ವೈರಿಯ ಕೈದುವನು ನೀ ಗೆಲಿದೆಯಿನ್ನುಱೆ ಕಾದುವವರಾವಲ್ಲ ಸಾರಥಿತನವೆ ಸಾಕೆಮಗೆ (ಕುವ್ಯಾದ್ರೋ. ೩-೬೪); ನೀ ತಂದೆ ನಾ ಬಂದೆ ನೀ ಎನ್ನ ತಂದೆ (ಪುರಂದ. ೩-೨೦ ಪಲ್ಲವಿ); ನೀ ನಿಟ್ಟಸೆ ನಿನ್ನ ಸ್ಮರನೀರನುರವಣಿಸುತ ಬಾಧಿಸುವನು (ಕಂಸವಿ. ೯-೪೮); ನೀ ಕಪಟಯಾದರೆ ನಿನಗೆಲ್ಲರೂ ಕಪಟಿಗಳೇ ! (ಗಾದೆ). **ನೀಂ** : ಅರಿನೃಪಬಲಮಂ ಗೆಲ್ದುರುಪರಾಕ್ರಮಕ್ರಮದೆ ಶೌರ್ಯಮಂ ಪ್ರಕಟಿಸು ನೀಂ (ಕವಿಗಾ. ೧-೮೨); ಕಾಷ್ಠಕೂಟಂ ತನ್ನ ಪೆಂಡತಿ ಜಯಘಂಟೆಯೆಂಬೊಳನಿಂತೆಂದು ಕಲ್ಪಿಸಿದನೀತಂಗೆ ನೀಂ ಬಸಿಱ್ಱ ತೀವೆ ಬಡ್ಡಿಸದಿರ್ (ವಡ್ಡಾರಾ. ೭೭-೫); ತಳಿರೊಳ್ ನೀನೆ ಬೆಡಂಗನ್ನೆ ನನೆಗಳೊಳ್ ನೀಂ ನೀಱನ್ನೆ ಪುಷ್ಪಸಂಕುಳದೊಳ್ ನೀನೆ ವಿಳಾಸಿಯ್ಯೆ ಮಿಡಿಗಳೊಳ್ ನೀಂ ಚೆಲ್ವನ್ನೆ ಪಣ್ತ ಪಣ್ಗಳಿನೋವೋ ಪೆಜತೇನೊ ನೀನೆ ಭುವನಕ್ಕಾರಾಧ್ಯನ್ನೆ (ಆದಿಪು. ೧೧-೯೬); ನೀಂ ಬಾ ಪೋಪಂ (ಪಂಪಭಾ. ೧-೭೦); ನೀಂ ಮುಟ್ಟಮಿರೆಂದಾ ಭಟ್ಟನಂ ಮುಟ್ಟುಗಿಡೆ ನುಡಿದುಂ ಮಾಣದೆ (ಪಂಚತಂ. ೧೮-೮); ಸಂಸಾರಕ್ಕೆ ಪೇಸೊಳ್ಪನರ್ಜಸು ನೀಂ ದರ್ಶನಶುದ್ಧನಾಗು (ಅರ್ಧನೇ. ೧-೫). **ನೀನು** : ಅಂದಿಂಗೆಯ ನೀನು ಹಳೆಯ ನಾನು (ಬಸವ. ೨); ನೀನು ನೆರಹಿದ ಸುಕೃತಫಲವದನೇನ ಹೇಳುವೆನು (ಕುವ್ಯಾದ್ರೋ. ೪-೧); ಹನುಮಗನೇ ನೀನು ಮೋಸದಿ ಬಂದು ನುಸುಳದೆ ತೆರೆಯ (ಪುರಂದ. ೩-೨೦೩-೧); ಅಂತಾದದಿರು ನೀನು ಬೇಱೆ ನಾ ಬೇಱೆಯೇನು (ಭರಶ. ೫೨-೧೪); ಮುದಿವಿಟನಬಲೆಯ ಸಂದಿಸಿಯೊತ್ತೆಗೊಳ್ಳೆನಲು ತಂದೆ ನೀನೆನಗೆನೆ ನಿನಗೀಗೆ ಹಣಗಳ ತಂದೆಯೆಂದುಱೆ ನಗಿಸಿದನು (ಕಂಸವಿ. ೨-೧೦೨); ನೀನು ನಾನು ಎಂಬ ಭೇದ ಜ್ಞಾನಿಗುಂಟೆ ? (ಗಾದೆ).

ನೀಂ, ನೀಂಗಳ್, ನೀಮ್, ನೀವ್, ನೀವು, ನೀವುಗಳು (ಬಹುವ) : ತಿಳಿ ತಾಂ ನೀನಾನೆಂಬರ್ಥಳಂಬಿಗಳ್ ಪ್ರಥಮ ಮಧ್ಯಮೋತ್ತಮ ಪುರುಷಂಗಳವೇಕವಚನಮೊರ್ವನ ಬಳಕೆಗೆ ಬಹುವಚನಮೆಲ್ಲರಂ ಪೇಱ್ವೆಡೆಯೊಳ್ (ಶಮದ. ೨೨೪); ನೀಂ ಎಂಬುದರ್ಕೆ . . . ನೀಂ ಪೇಱ್ವಿರ್, ನೀಂ ಬಂದಿರ್ . . . ದೇವಾಸುರಮಂ ಕೇಳಿರೆ ನೀಂ ದೇವಾ (ಶಮದ. ೨೨೪ ಪ್ರಯೋ); ಆ ಸಿದ್ಧವಧು ಕಲಿಗಳಿರ ನೀಂಗಳಾರು . . . ಪೇಳಿರೀ ಯಾಗಹಯಮಾವ ಭೂಪನದೆಂದು ಬೆಸಗೊಳ್ಳುದುಂ (ಶೇಷರಾ. ೧೫-೫೧); ನೀಮುಂ ಜಾತಿಜರಾಮರಣಂಗಳೆಂಬೆಮ್ಮ ಕುತ್ತಮಂ ಕಿಡಿಸಲಾರ್ಪೊಡೆ (ವಡ್ಡಾರಾ. ೬೯-೨೯); ಅಱಿಯಿರೆ ನೀಮುಮಾಮುಮೊಡನೋದಿದೆವೆಂಬುದನಣ್ಣ (ಪಂಪಭಾ. ೨-೪೮); ನೀಂ ಬಾ ಪೋಪಮೆಂದಂಗೆ ಮೆಲ್ಲಗೆ ತತ್ಕನ್ಯಕೆ ನಾಣ್ಚೆ ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ ಎಂಬುದುಂ (ಪಂಪಭಾ. ೧-೭೦); ದಿನಕರಕಾಂತಿಯುಮಂ ನೀವಿಂ ಪರಿಕಿಸಿ ನೋಡಿಮೆಂದು ಸೂರ್ಯನೊಡನೆ ಕಯ್ವಾಯ್ದು ಮಧ್ಯಸ್ಥರಲ್ಲಿಗೆ ಬರ್ಪಂತೆ ಪೋಳಿವ ಪೊಂಗಾಲಿಗಳಿಂದೊಪ್ಪುವ ರದಂಗಳಿಂ (ಧರ್ಮಾಮೃ.೮-೧೯೬); ಗುರುವೆಮಗೆ ನೀವ್ ನಿಮಗೆ ನಾವ್ ಡಿಂಗರಿಗರು (ಕುವ್ಯಾದ್ರೋ. ೧೩-೯); ಪಡೆದಂ ಬ್ರಹ್ಮಂ ಜಗಮಂ ಪಡೆಯಲ್ ತಾನಾರ್ತನಿಲ್ಲ ಪೆಂಪಂ ನಿಮ್ಮಂ ಪಡೆದಲ್ತೆ ಪಡೆದನೆನಿಸಿದ ಕಡುಪೆಂಪಿನ ಪೊಱೆಗೆ ನೀವು ನೊದಲಿಗರಾದಿರ್ (ಪಂಪಭಾ. ೬-೧೨); ಪರಮಣ್ಣಾಳಕರ್ಕಳ ನಮ್ಮ ನೀವು ಈ ಯೋಳಿಗೆ ನಿಮ್ಮ ಪನ್ದಲೆಗಳಂ ಬರಲೀಯದೆ (ಎಕ. II, ೫೯-೮೮; 974); ಚಲಿಮಿಲಿ ಎಂದೋದುವ ಗಿಳಿಗಳಿರಾ ನೀವು ಕಾಣಿರೇ ನೀವು ಕಾಣಿರೇ . . . ಚೆನ್ನಮಲ್ಲಿಕಾರ್ಜುನದೇವನೆಲ್ಲಿದ್ದಾನೆಂ

ಬುದಂ ಬಲ್ಲಡೆ ನೀವು ಹೇಳಿರೇ (ಮಹಾದೇ. ಬ. ೩೩-೭೩) ; ನಾವು ಭಂಡರು ಗರುವರಾಯರು ನೀವಲೇ ಭುವನದಲಿ ಜಾಹಿರರಾವು ನೀವತಿ ಚತುರರಾದಿರಲಾ ಮಹಾದೇವ (ಕುಮ್ಯಾಕ. ೯-೧೭) ; ನೀವು ದಯವಿಟ್ಟು ನನ್ನನ್ನು ಬಹುವಚನದಲ್ಲಿ ಮಾತಾಡಿಸಬಾರದು (ರಾಗಿಣಿ. ೧೬೩) ; ನೀವುಗಳು ನಿಮ್ಮ ನಿಮ್ಮ ಮನೆಗಳಿಗೆ ಹೋಗಿ ಸೇರಿಕೊಳ್ಳಿರಿ (ಕ್ರೀರಾಯ. ೧೭೦). **ನಿನಗೆ ಮಾಡು** = ಸ್ವಂತದ್ದನ್ನಾಗಿ ಮಾಡಿಕೊಳ್ಳು ; ಹೊಂದು ; ಪಡೆ : ಮುರಾರಿಯ ತಂಗೆಯನಪ್ಪುಕೆಯ್ದು ಚಚ್ಚರಮೊಳ ಪೊಯ್ದು ನೀಂ ನಿನಗೆ ಮಾಡುವುದು (ಸಂಪಭಾ. ೪-೩೪). **ನಿಮ್ಮಡಿ** = ೧. ನಿಮ್ಮ ಸಾದ,—ಅಡಿ : ದೇವಾ ನಿಮ್ಮಡಿಗೆಱಗಿದ ಮಡಿವಾಳ ಮಾಚಯ್ಯ ನಿಮ್ಮಡಿಯಾದ (ಬಸವ. ೬೦೬) ; ನಿಮ್ಮಡಿಗಳ ಕೆರ್ಪಂ ಪಿಡಿದವನ ಚರಣವಾರ ಮಕುಟದೊಳು ಬೀಳದು (ಬಸರ. ೬-೧೦೩). ೨. ಗೌರವಾರ್ಹರಾದವರನ್ನು ಸಂಬೋಧಿಸುವಾಗ ಬಳಸುವ ಮಾತು ; 'ತಾವು' ಎಂಬರ್ಥ : ಅಮುಂ ಪೋಗಲೊಲ್ಲೆವು ನಿಮ್ಮಡಿಗಳ್ಗೆ ವಿನಯಂಗೆಯ್ಯುತ್ತಮಿರ್ದಪ್ಪೆಂ (ವಡ್ಡಾರಾ. ೮೮-೨೫) ; ನಾಮೆಲ್ಲ ನೊಂದೆ ಗರುಡಿಯೊಳೋದಿದ ಮಾನಸರೆವೆಮ್ಮಂ ನಿಮ್ಮಡಿ ಕೆಮ್ಮನೆ ಬಟಲಿ ಸಲ್ವೇಡ (ಸಂಪಭಾ. ೯-೪೮ ಪ) ; ನಿಮ್ಮಡಿಯ ಪ್ರಸಾದದಿಂದೆನಗೆ ಮಹಾಪಾತಕಂ ಸಿಂಗಿ ಪೋದುದು (ಧರ್ಮಾಮೃ. ೨-೨೧೧) ; ಮಂಗಳಾತ್ಮಕ ಕೇಳು ನಿನ್ನಯ ಹಂಗನೊಲ್ಲೆನು ಮುಕುತಿಪಥದೊಳಭಂಗಪೆಂಡೆಯದಾಳಲ್ಕೆ ನಿಮ್ಮಡಿಯ ಸಿರಿನಾಮ (ಕುಮ್ಯಾಭೀ. ೬-೪೪).

[ದೇ.॥ ತಮಿ. ಮಲ. ಕೊಡ. ಬ್ರಾಹೂಈ. ನೀ ; ಕೋಕ. ತೊದ. ನಿ ; ತುಳು. ಈ ; ತೆಲು. ನೀವು, ಈವು ; ಕೊಲಾ. ನಾಯ್ಕಿ. ನೀವ್ ; ಪರ್ಜಿ. ಗಡಬ. ಈನ್ ; ಗೊಂಡಿ. ಈಮ್ಮಾ, ನಿಮಾ, ನಿಮೆ ; ಕುಇ. ಈನು ; ಕುವಿ. ನೀನು ; ಕುರುಖ್. ಮಲ್ತೊ. ಕೊಂಡ. ನೀನ್]

ನೀನು 'ನೀನ್' ನೋ.

ನೀಪ (ಗು). ೧. ಆಳವಾದ ; ತಗ್ಗಾದ ; ಕೆಳಗಿನ. (ನಾ). ೨. ಬೆಟ್ಟದ ಕೆಳಪ್ರದೇಶ ; ತಪ್ಪಲು ; ಸಾನು. ೩. ಕೇಸರಿಬಣ್ಣದ ಸುವಾಸನೆಯ ಹೂವುಗಳನ್ನು ಬಿಡುವ ಒಂದು ಬಗೆಯ ಮರ ; ಕಡಹ : "ಕದಂಬದ್ರುಮಮದು ನೀಪಂ" (ವಸ್ತುಕೋ. ೩೪-೯) ; ನೀಪಾರ್ಜುನಾವಳಿಗಳ್ ಪೂಗಳಿನೊಪ್ಪಿ ತೋಱೆ ಜಗಮಂ ಪರ್ವಿತ್ತು ಮೇಘಾಗಮಂ (ವರ್ಧಮಾ. ೯-೩೯) ; ಪಸುರ್ಗವಿಲನಾದ ನೀಪದ ಕುಸುಮಮುಮಂ ದೆಸೆಗೆ ಕಂಪನೆತ್ತುವ ಲೋಧ್ರಪ್ರಸವಮುಮಂ . . . ಮುಸುಱ ಮುತ್ತಿದುವಳಿಗಳ್ (ಪಂರಾಮಾ. ೭-೧೪೧). ೪. ಒಂದು ರಾಜ ವಂಶದ ಹೆಸರು : 'ನೀಪಕುಲ' ಪರಾ. [ಸಂ.]

ನೀಪಕುಲ (ನಾ). ಒಂದು ರಾಜವಂಶ ಮತ್ತು ಆ ವಂಶಕ್ಕೆ ಸೇರಿದವನ ಹೆಸರು : ನೀಪಕುಲನಾಗಿ ಸ್ವಪತಿಲಕೋಪಮನೀತನನೆ ಸಾರ್ದು (ಶಾಂತಿಪು. ೫-೧೨೭). [ನೀಪ + ಕುಲ]

ನೀಪಪ್ರಸವ (ನಾ). ಕದಂಬಪುಷ್ಪ ; ಕಡಹದ ಹೂವು : ಇವು ಕಂಕೆಲ್ಲದಳ್ತಸೂನನಿವು ಮಲ್ಲೀಸ್ಮೇರಪುಷ್ಪಂ ಪೊದಟ್ಟುವು ನೀಪಪ್ರಸವಂ (ಚಂದ್ರಪ್ರ. ೨-೬೭). [ನೀಪ + ಪ್ರಸವ]

ನೀಪವ್ರಜ (ನಾ). ಕದಂಬವೃಕ್ಷಗಳ ಗುಂಪು,—ಸಮೂಹ : ಅಲ್ಲಲ್ಲಿ ಕರಂ ಬರ್ಜುರವೃಂದಂ ಕ್ರಮುಕಸಮಿತಿ ನೀಪವ್ರಜಂ (ಪುಷ್ಪಪು. ೯-೧೫). [ನೀಪ + ವ್ರಜ]

ನೀಮಾಜಾಮ (ನಾ). ಅರ್ಧ ತೋಳಿನ ಅಂಗಿ : ತಲೆಗೆ ವಿಜಾತೀಯವಾಗಿ ಸುತ್ತಿದ ಹಸರುಪೇಟಾ, ಮೈಗೆ ತೊಟ್ಟ ಅಚ್ಚ ಬಿಳುಪಿನ ನೀಮಾಜಾಮ . . . ಇವುಗಳೆಲ್ಲಾ ಸಭೆಯ ಮನಸ್ಸನ್ನು ಆಕರ್ಷಣೆ ಮಾಡಿತು (ಮುಸುಗ. ೧೧). [←ಮರಾ. ನೀಮಜಾಮಾ]

ನೀಮುಖಾ (ನಾ). ಒಂದು ಬಗೆಯ ಸಸ್ಯ : ನೀಮುಖಾ, ಪರೇರಾ ಬೇರು, ಪದ್ಮಲಿ, ಪಾತ, ಕಾಡುಬಳ್ಳಿ (ಮೈಔಗಿ. ೨೧-೩೯೪).

[?]

ನೀಮ್ತಾನ್ (ನಾ). ಬೆಳೆಯ ಅಂದಾಜು ; ಪಹಣಿ : (ಶೈಸ್‌ಗಿ. II, ೫೫೭) ; (ಮೈಗಜೆ. IV, ೭೮೧).

[←ಪಾರ. ನೀಮ್‌ತಾನ್, ನಿಮತಾನಾ ; ಮರಾ. ನಿಮತಾನಾ]

ನೀಮ್ತಾನದಾರ (ನಾ). ಮೋಜಣಿದಾರನ ಮೇಲಿನ ಅಧಿಕಾರಿ.

[<ನೀಮ್ತಾನ್ + -ದಾರ್]

ನೀಯತ್ತು 'ನಿಯತ್ತು' ನೋ.

ನೀರ್, ನೀರು$_1$ (ನಾ). ೧. ಜಲ ; ಉದಕ : "ಅಪಃ(ಪ್), ತೋಯಂ . . . ಜೀವನಂ, ಜೀವನೀಯಂ—ಈ ೨೬ ನೀರ್" (ಹಲಾಯು. ೧೦೭-೨೬) ; ಪರಪಕ್ಷಮುಳ್ಳಿನಂ ತನಗಿರವುಬ್ಬಸಮದಜಿನಟುವುದದನೇಗೆಯ್ದುಂ ಪರೆದು ಪುಡಿಯೆಲ್ಲಮಂ ನೀರ್ನೆರೆದು ಕೆಸರ್ಮಾಡದನ್ನೆಗಂ ನೆಲಸುಗುಮೇ (ಕವಿಗಾ. ೬-೧೫೧) ; ಮಿನಾಂಬುಟುವುಮಂ ನೀರಿಲ್ಲದ ಕೆಜೀಯ ನಡುವುಮಂ . . . ಕಂಡೆಂ (ವಡ್ಡಾರಾ. ೮೫-೨೬) ; ಒಂದರಣಿಯ ನೀರ ಬಯಗಿದ ವರಸ ಪೆತ್ತೊನ್ದಿ ಎರಡನೆಯ ವರಸಮೆಟಳವಿ . . . ಎಲ್ಲಿಟ್ಟುಟಲು ಸಳ್ಸುಂ (ಎಕ. III, ಕ್ರೀರಂಗ. ೧೪೮-೧೫ ; 904 ?) ; ಮಾಜಾಂತ ಮಾರ್ಪಡೆಯೆಲ್ಲಮಂ ಜವನೊಕ್ಕಲಿಕ್ಕಿ ತನ್ನೊಳ್ ಪೋಗದೆ ಪೆಣೆದ ಬಾಹ್ಲೀಕ ಸೋಮದತ್ತ ಭೂರಿಶ್ರವರನಾನೆ ಮೆಟ್ಟಿದ ಕುಳುಂಪೆಯ ನೀರಂತೆ ದೆಸೆದೆಸೆಗೆ ಸೂಸುವನ್ನೆಗಂ (ಪಂಪಭಾ. ೧೧-೧೩೬ಪ) ; ನೀರುಂ ಪುಳ್ಳಿಯು ಕಿಚ್ಚುಮದಾರಯ್ವಂದಡುವ ಲಲನೆಯುಂ ಮಡಕೆಯು ವಿಸ್ತಾರದೊಳೊಲೆಯುಮಿವೆಲ್ಲಮದೋರಂತೊಡಗೂಡೆ ಕೂಟ ನಡುವಂತೆ ವಲಂ (ಧರ್ಮಾಮೃ. ೫-೮೩) ; ಶಿವಪದಾಂಬುವನುತ್ತಮಾಂಗದಲಿ ತಳೆದು ಭುವಿಗಳ ಕಾಲ ನೀರಂ ತಳೆದುಕೊಳುವರೆ (ಬಸಪು. ೬೦-೮) ; ನೀರಟಿಯದ ಗಂಟಲೊಳ್ ಕಡುಬರ ತುಱುಕಿದಂತಾಯ್ತು (ರಾಮಾಶ್ವ. ೬-೮). ೨. ಕಡಲು ; ಸಮುದ್ರ : 'ನೀರಣುಗ' ಪರಾ. ೩. ಬೆವರು ; ಸ್ವೇದ : 'ನೀರಾಡು' ಪರಾ. ೪. ಸ್ನಾನ ; ವಿಾಹ : 'ನಾಲ್ನೀರ್' ಪರಾ. ೫. ಶುಕ್ಲ ; ವೀರ್ಯ ; ರೇತಸ್ಸು : 'ನೀರ್ನಿಲ್' ಪರಾ. ೬. (ವಜ್ರ, ಮುತ್ತು, ರತ್ನ ಮುಂತಾದುವುಗಳಲ್ಲಿರುವ) ಕಾಂತಿ,—ಹೊಳಪು : ಆ ಪುಣ್ಯನದಿಯನೆಯ್ದೆವಂದು ತನ್ನ ಬಾಳ ನೀರಂತೆ ಕಱಂಗಿ ಕರ್ಗಿದ ನೀರಂ ನೋಡಿ (ಪಂಪಭಾ. ೫-೫೩ ಪ) ; ಉಪ್ಪಿನ ನೀರಿಂಗೆ ಪುನರ್ನಾಮ ಬಪ್ಪುದಲ್ಲದೆ ಮುತ್ತಿನ ನೀರಿಂಗೆ ಪುನರ್ನಾಮವುಂಟೆ (ಡಚೊಮ್ಮ. ೨೩೪-೬೧). 'ನೀರೋಟ' ಪರಾ. **ನೀರು**$_1$: ೧. ಎನಿಸು ಕಾಲ ಕಲ್ಲು ನೀರೊಳಗಿರ್ದರೇನು ನೆನೆದು ಮೃದುವಾಗಬಲ್ಲುದೇ (ಬಸವ. ೯೯) ; ಎನ್ನ ಪಂಚೇಂದ್ರಿಯಂಗಳೂ ಕಬ್ಬುನ ಉಂಡ ನೀರಿನಂತೆ [ಪಾಠಾಂ. ಉರಿಯಂತೆ] ನಿಮ್ಮಲ್ಲಿ ಬೆರಸುಗೆ (ಮಹಾದೇ. ೬. . ೩೧-೬೬) ; ನರನ ಖಾತಿಗೆ ದ್ರೌಪದಿಯ ತೊತ್ತಿರುಗಳುಪಹಾಸ್ಯಕ್ಕೆ . . . ಭಾಜನವಾದೆನ್ನೆ ಹರಹರ ಮಹಾದೇವ ಎನುತ ತುದಿವೆರಳಲಾಲಿಯ ನೀರ ಮಿಡಿದಳಲಿದನು ಕಲಿ ಭೀಮ (ಕುಮ್ಯಾಕ. ೧೨-೮) ; ಬರಬರಲು ತತ್ಕೋಸಲದ ರುಂಜರಿ ವಿರಾಜಿಸಿತಮಮ ಹರಹಿನ ಹರಿವ ಹೊಳೆಗಾಲುವೆಯ ಕೆಜೀದುಂಬುಗಳ ನೀರುಗಳ ತೆರಳಿಕೆಯ (ತೊರಂಗಾ. ೧-೯-೫) ; ರಾಮಚಂದ್ರ ಒಂದು ತೊಟ್ಟು ನೀರು ಕುಡಿಸಿದನು (ಕಳಹು. ೮೬) ; ನೀರು ಇದ್ದರೆ ಊರು, ನಾರಿ ಇದ್ದರೆ ಮನೆ (ಗಾದೆ). ೩. ಬಿಸಿಲಿನಲ್ಲಿ ಬಂದುದರಿಂದ ಅವನ ಮುಖದಲ್ಲಿ ನೀರಿಳಿಯುತ್ತಿದೆ (ರೂಢಿ). ೪. ಅವಳ ಓಲೆಯ ವಜ್ರಗಳಲ್ಲಿ ನೀರು ಚೆನ್ನಾಗಿದೆ (ರೂಢಿ).

೭. ಶಕ್ತಿ ; ಕಸುವು ; ಸಾಮರ್ಥ್ಯ : ಬಸವಂತಿಗೆ ಯಾಕೆಂದು ಕೇಳುವುದು ತಮ್ಮ ನೀರಲ್ಲವೆಂದು ಸುಮ್ಮನಿದ್ದುಬಿಟ್ಟರು (ದೀಪಹ. II, ೧೪೪), ಒಮ್ಮೆ ಚೆನ್ನಾಗಿ ಏಟು ತಿನ್ನದವರೆಗೆ ನನ್ನ ನೀರು ನಿನಗೆ ಗೊತ್ತಾಗದು (ಚೀನಬಾ.೨೪೧) ; ಆ ಹುಡುಗಿ ಏನು ಮಾಡಿದರೂ ಸಿಟ್ಟು ಮಾಡುವ ನೀರು ಒಬ್ಬರಲ್ಲೂ ಇಲ್ಲ (ಮೂರುದಾ. ೧೫೫). ೮. ತೆಳ್ಳನೆಯದು ; ತುಂಬ ತಿಳಿಯಾದುದು : ಈವತ್ತಿನ ಸಾರು ತುಂಬಾ ನೀರು (ರೂಢಿ). ೯. ಒದ್ದೆ ; ಹಸಿ ; ತೇವ : "ನೀರು, ಈರು, ಇರ್ಪು, ರಸ, ಹಸಿ" (ಕಂನುಹು. ೪೭).

— **ನೀರ ಕಂಡಿ** = ಕೋಟೆಯೊಳಗೆ ಇರುವವರು ಹೊರಗಿನಿಂದ **ನೀರುತರಲು** ಹೋಗಲು ರಚಿತವಾದ **ಚಿಕ್ಕಬಾಗಿಲು** **ನೀರದಿಡ್ಡಿ**: ಪುಗುವ ಪೊಜಮಡುವ ನೀರ ಕಂಡಿಯ ಕುದುರೆಗಂಡಿಯ ತೆಜಪುಗಳುಮಂ ವಸುಷೇಣಂ ಬಳಸಿ ನೋಡುತ್ತುಂ ಬರ್ಪನ್ನಂ (ಆಸಂಭ. ೧೧-೪೨ ಪ). **ನೀರ ಕಡೆಗೆ ಹೋಗು** = (ಮಲವಿಸರ್ಜನೆಗಾಗಿ) ನೀರಿರುವ ಜಾಗಕ್ಕೆ ಹೋಗು ; ಬಹಿರ್ದೆಸೆಗೆ ಹೋಗು : ಆ ಊರಿನಲ್ಲಿ ನೀರ ಕಡೆಗೆ ಹೋಗಲು ಬಹಳ ದೂರ ನಡೆಯಬೇಕು (ರೂಢಿ). **ನೀರ ಕಾಳು** = ನೀರಿನ ಹನಿ,—ಕಣ : ನನಗೆ ಅವರ ಮಾರೀ ನೋಡದ ನೀರ ಕಾಳು ಗಂಟಲದಾಗ ಇೞದ್ಹಾಂಗ ಆಗೇದ (ಗ್ರಾಸೂಯಾ. ೪೩೭). **ನೀರ ಕೊಂಬು** = ಭೇದಿ ; ವಿರೇಚನೆ : ನೀರ ಕೊಂಬಿಗೆ :—ನರಗುಂಜಿ ಸೊಪ್ಪು ತಂದು ನೀರ ಬಿಟ್ಟುಕೊಂಡು ತುಳಿದು ಸೊಲ್ಲಗೆ ರಸವ ತೆಗೆದು ಅದನ್ನು ಹಸುವಿನ ಮಜ್ಜಿಗೆ ಬೆರಸಿ ಕೊಳ್ಳಿ ನೀರ ಕೊಂಬಿನ ವ್ಯಾಧಿ ಮಾಣ್ಗುಂ (ವಿನ್ವೈವಿ. ೬೧) ; ಮಲವಿಲ್ಲದ ನೊರೆಸಹಿತವಾಗಿ ಬರಿಯ ನೀರೇ ಪ್ರವಾಹಿಕವಾಗಿ ಸುರಿವುದೆ ನೀರ ಕೊಂಬೆನಿಸಿಕೊಂಬ ರೋಗವೆಂದರಿವುದು (ಸಕವೈ. ೩೫೯). **ನೀರ ಗಂಟೆ** = ನೀರ್ಗಂಟೆ : ತೋಟ ತಳವಾರ ನೀರ ಗಂಟೆ . . . ಆ ಮುದ್ರಕೋಲನ್ನು ತೆಗೆದುಕೊಂಡು ಹೋಗಿ ಮುದ್ರೆ ಹಾಕುವಂತೆ ನಿಬಂಧನೆ ಮಾಡಿದರು (ಜಾನುವಂ. ೧೧೯) ; ತಳವಾರ ತ್ಯಾಂಪಣ್ಣ ಒಳ್ಳೆ ಸ್ವಾಮಿನಿಷ್ಠ ಸೇವಕನಾಗಿದ್ದಂತೆ, ದಕ್ಷನಾದ ನೀರ ಗಂಟಯೂ ಆಗಿದ್ದನು (ಊರುಕ. ೭೭). **ನೀರ ಗಂಟು** = ಪ್ಲೀಹರೋಗ; ಗಡ್ಡೆರೋಗ : ಪ್ಲೀಹ (ನೀರ ಗಂಟು) (ಮುಂಬಯಿ. ೬-೩೦೯). **ನೀರಗಿಚ್ಚು** = ನೀರ್ಗಿಚ್ಚು : ಕಾಡುಗಿಚ್ಚು ಎದ್ದರೆ ಅಡವಿಯ ಗುರಿಯಯ್ಯ ಕಡು ನೀರಗಿಚ್ಚಿಗೆ ಸಾಗರವೆ ಗುರಿಯಯ್ಯ (ಸಿದ್ಧಪು. ೨೨-೪೭). **ನೀರಗಿಚ್ಚು ಅನ್ನ** = ಗಿಂಜಲಾದ ಅನ್ನ ; ನೀರುನೀರಾದ ಅನ್ನ : ನಾನು 'ನೀರಗಿಚ್ಚು ಅನ್ನ' ಈ ಶಬ್ದ ಕೇಳಿದ್ದೆ. ಆದರೆ 'ಗಂಜಿಯನ್ನ' ಎಂದರೇನೆಂಬುದು ನನಗೆ ತಿಳಿಯದಾಯಿತು (ಸ್ವೃತಿಚಿ. ೫೩). **ನೀರ ಘಟ್ಟ** = ನೀರು ತುಂಬಿದ ಕೊಡ (?) : ಆ [ಪ]ದ ದೊಳು ನೀರ ಘಟ್ಟಯಂ ತಳದೊಳು ತಪ್ಪಾ ಪತಿಹಿತೆಯರ್ಸ್ವರ್ತಿಯರ್ (ಕೊಲ್ಹಾಶಾ. ೧೭-೧೧ ; 1196). **ನೀರ ಜಲ್ಲಿ** = ನೀರು ಜಿನುಗುವಿಕೆ,—ಸುರಿಯುವಿಕೆ : "ಸ್ರಾ . . . ಸ್ರೋತವ್ಯಂ, ಸ್ರವಣೀಯಂ, ಈ ಆ ನೀರ ಜಲ್ಲಿ" (ಕಾಶಕೃ. ೬೫). **ನೀರ ಜೇಬು** = ಕೋಟೆಯೊಳಕ್ಕೆ ನೀರನ್ನು ತರುವ ಹಾದಿ ; ದಿಡ್ಡಿಬಾಗಿಲು : ಶಾದುಲ್ಲಖಾನನ ಪೌಜುವೆರಸು ಸುಬೇದಾರ ಲಿಂಗಪ್ಪನಂ ಮಾಯಾವಿಗಳ ಸೀಮೆಯ ಮೇಲೆ ದಾಳಿವರಿಸಲಾತಂ ಪಟ್ಟಣದ ಕೋಂಟೆಯ ಸವಿಾಪಮಂ ಸಾರ್ದು ನೀರ ಜ[ಜೇ]ಬಿಯಂ ಕಟ್ಟಲವರ್ಗಳ್ ಭಯಸ್ಥರಾಗಿ (ಕಳವೈ. ೧೧-೭೧). **ನೀರ ತಾವರೆ** = ನೀರಿನಲ್ಲಿರುವ ಕಮಲ : ಲೋಕವಿದಿದು ಲೋಕದ ಸಂಗದಿಂದಿಪ್ಪೆನು . . . ಹತ್ತಜಿಯೊಳಗೆ ಹನ್ನೊಂದಾಗಿ ನೀರ ತಾವರೆಯಂತಿಪ್ಪೆನು (ಪುಪಾವೇ. ಬ. ೯೯-೩೩೦). **ನೀರ ತೇರ್** = ನೀರ್ದೇರ್ : "ಮುಗಿಲೆಂದು ನೀರ ತೇರೆಂದು ಘನಂ" (ಕವಿಕಂ. ೪೩) ; ಭೋಂಕನೆ ನೂಂಕಿ ಬರ್ಪ ಮಣಿಮಯವಪ್ಪ ತೇರ್ಗಳಿಂದ್ರಚಾಪಂಬೆತ್ತ ನೀರ ತೇರ್ಗಳಿಗಿಂದು ತಳರ್ವಂತೆಯುಂ (ರಾಜಶೇ. ೧೩-೭೭ ಪ). **ನೀರ ಥಳಿ** = ನೀರಿನ ಚಳೆಯ,—ಸೇಚನ : ಅಂಟಿಸಿಕೊಂಡ ಎಲ್ಲ ನೀರನ್ನು ಗಾಳಿಯ ಚಪಲದಿಂದ ಬೀಳಿಸುವ ಗಿಡಗಳ ನೀರ ಥಳಿ (ಬಾಬಲ. ೧೧೪). **ನೀರ ದಿಡ್ಡಿ** = ನೀರ ಕಂಡಿ : ನೀರ ದಿಡ್ಡಿಯ ಚೋರಕಂಡಿಯ ತೆಜಪನು ಧೀರ ಕಾಣುತ ವಸುಷೇಣ (ಆಸಂಭ. ೧೪-೭೭). **ನೀರ ದೆವ್ವ** = ನೀರಿನಲ್ಲಿ ವಾಸಿಸುವ ದೆವ್ವ : ತೂರುಗಾಳಿಗೆ ಕಡಲು ಕುದಿಯಿತು, ನೀರ ದೆವ್ವಗಳರಚಿಕೊಂಡುವು (ಇಂಗೀತ. ೬೭-೨). **ನೀರ ದೆಸೆ** = ನೀರಿರುವ ದಿಕ್ಕು : ಧರ್ಮಪುತ್ರಂ ನೀರಡಿಸಿ ಸಹದೇವನನೆಲ್ಲಿಯೂದೊಡಂ ನೀರಂ ಕೊಂಡು ಬೇಗಂ ಬಾಯೆಂದು ಪೇಟ್ಟುದುಂ . . . ತೀಡುವ ಮುಂದಾಳಿನಿಂ ನೀರ ದೆಸೆಯನಜುಂದು ಪೋಗೆಪೋಗೆ (ಪಥಪಭಾ. ೪-೩೭ ಪ). **ನೀರ ದೇವತೆ** = ನೀರಿನ ಅಭಿಮಾನಿದೇವತೆ ; ಜಲದೇವತೆ : ಎಲ್ಲರ ಮ್ಮಗೆ ಕೋಣಬೀವೆ ; ಬನದೇವತೆಗೆ, ನೀರ ದೇವತೆಗೆ ಕಳ್ಳಿರೆವೆ (ಹಬ್ಬೆರ. ೬-೪೨). **ನೀರ ದೋಣಿ** = ನೀರು ತುಂಬುವ ತೊಟ್ಟಿ : "ಅವಗಾಹಃ, ಜಲದ್ರೋಣೀ—ಈ ೨ ನೀರ ದೋಣಿ" (ಹಲಾಯು. ೧೨೪-೬೯). **ನೀರ ನಡು** = ನೀರಿನ ಮಧ್ಯದಲ್ಲಿರುವುದು ; ನಡುಗಡ್ಡೆ : "ನೀರ ನಡು ಕುಱುವಮೆನಿಸಿಕ್ಕುಂ" (ಮುಂಗರಾ. ೧೨೩-೧೩). **ನೀರ ನಿಲಯ** = ನೀರಿಗೆ ಆಶ್ರಯವಾಗಿ ಇರುವವನು ; ವರುಣ : ಮಾರಜನಕಂ ಎಱುಳಸಾರಸಭವಂ ದಿವಿಜವಾರವರನುಂ ದಹನನಾ ರವಿತನೂಜಂ ಧೀರದಿತಿಜಂ ವಿನುತನೀರ ನಿಲಯಂ . . . ಸೇರಿ ನೆರೆದೊಪ್ಪಿರೆ (ರಾಜಶೇ.೧೪೪-೮೪). **ನೀರ ನೆಜ್ಜಿ** = ೧. ನೀರನ್ನು ಸುರಿ,—ಹೊಯ್ಯು : ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರನೆಜ್ಜಿದರೆ ಮೇಲೆ ಪಲ್ಲನಿಸಿತ್ತು ನೋಡಾ (ಬಸವ. ೪೨೦) ; ಗಿಡವೃಕ್ಷಂಗಳಿಗಾರು ನೀರನೆಜ್ಜುವರ್ ನಿತ್ಯಂ ಮಹಾರಣ್ಯದೊಳ್ (ಸೋಮೇಶ. ೩೪). ೨. ಹಾಳುಮಾಡು ; ನಾಶಗೊಳಿಸು : ಪೈಶೂನ್ಯೋಕ್ತಿಯಿಂ ದ್ರೋಹಮಂ ಎಣಿಸುತ್ತೆಲ್ಲರ ಬಾಟ್ಗಿ ನೀರನೆಜ್ಜಿದಾರುಂ ಕಾಣದೇ ಭಕ್ಷಿಪಾ ಗಣಕಂ ಹೆಗ್ಗಣಕಂ ಸಮಂ (ಸೋಮೇಶ. ೬೩). **ನೀರ ಪಂಚೆ** = ನೀರ್ಪಂಚೆ: ಹಗ್ಗದ ಮೇಲೆ ಅವರ ಉತ್ತರೀಯ, ನೀರ ಪಂಚೆ ಜೋತಾಡುತ್ತ ಇರುತ್ತಿದ್ದವು (ಇಪ್ಪಕ. ೩೦೪). **ನೀರ ಪಡೆ** = ನೀರಿನ ಮೇಲೆ ಸಂಚರಿಸುವ ಸೈನ್ಯ ; ನೌಕಾಪಡೆ : ನೆಲದ ಪಡೆ, ನೀರ ಪಡೆ, ಗಾಳಿಪಡೆಗಳ್—ಕೋಟಿಕೋಟಿಗಳ್ —ಸಿದ್ಧವಾಗಿಹವೆಂದು ಯುದ್ಧಲೀಲಾವಿಲಯಕಲೆಗೆ (ತ್ರಿಂಶಾಮೂ. ೫೫೭-೧೫೨). **ನೀರ ಪೊಟ್ಟಣ** = ಮೋಡ; ಮೇಘ; "ಕಾರ ಮುಗಿಲ್" (ಚತುನಿ. ೪. ೧,೪೭). **ನೀರ ಪೊಟೆ, ನೀರ ಹೊಳೆ** = ನೀರಿಗೆ ಹೋಗುವ ದಾರಿ,—ಮಾರ್ಗ : ಮತ್ತೊಂದು ದಿವಸಂ ಬೆಸಕೆಯ್ವ ತೊಟ್ಟು ನೀರಂ ತರಲ್ ಪೋದಲ್ಲಿ ನೀರ ಪೊಟೆಯೊಳಾಕೆಯ ಕೆಳದಿ ನಾಗಬ್ಬೆಯೆಂಬೊಳಾಕೆಯಂ ಕಂಡಿಂತೆಂದು ಬೆಸಗೊಂಡಳ್ (ಪಡ್ನಾರಾ. ೪೪-೬) ; ನಾಗಲಾಂಬಿಕೆ. . . ಗರ್ಭಮಂ ತಳೆದಳ್ಳದೇಂ ಚತ್ರಮೆಂದು ಮನೆಮನೆ ನೀರ ಹೊಳೆ ಬೀದಿಬೀದಿಯೊಳಗೀ ವಾರ್ತೆ ಪುರಜನದ ಕರ್ಣಂಗಳೊಳಗಿಡಿದುದು (ಚಿಒವು. ೪-೧೩). **ನೀರ ಬಟ್ಟಿ** = ೧. ಕೆರೆ, ಕಟ್ಟೆಗಳಲ್ಲಿ ಹೆಚ್ಚಿನ ನೀರು ಹರಿದು ಹೋಗಲು ಮಾಡಿರುವ ದಾರಿ; ಕೋಡಿ : "ಕೋಡಿಯೆನಲ್ ನೀರ ಬಟ್ಟೆ" (ಭಾರಸಿ. ೫). ೨. ನೀರಿನ ದಾರಿ ; ಸಮುದ್ರಮಾರ್ಗ : ಆ ಮಗಧನ ಸಾಧಿಸಿ ನೀರ ಬಟ್ಟೆಯೊಳಾ ಮಹೀಪತಿ ತೇರ ನಡೆಸಿ (ತ್ರಿಪಾಲ. ೧೩-೧೩೧). **ನೀರ ಬಾಗಿಲು** = ನೀರ ಕಂಡಿ (?) : ಅಂಗದಲ್ಲಿ ಲಿಂಗ ವೇಧಿಸಿ ಪ್ರಾಣಕ್ಕೆ ಸಂಬಂಧವ ಮಾಡಬೇಕೆಂದಲ್ಲಿ ಅಂಗಕ್ಕೂ ಪ್ರಾಣಕ್ಕೂ ಲಿಂಗ ವೇಧಿಸುವುದಕ್ಕೆ ಹಾದಿಯ ಹೊಲಬು ಅದಾವ ಠಾವಿನಲ್ಲಿ ವೇಧಿಸುವುದು ಹೇಳಯ್ಯಾ ಆ ಅಂಗ ನೀರ ಬಾಗಿಲ ನೆಲನೆ ಮೆಳೆಯು

ಸಪರಿನೆ ಹಾದಿಯೆ (ಸುದೇಪ. ೨೬೯-೩). ನೀರ ಬಿರಾಡ = ನೀರಿನ ಮೇಲೆ ಹಾಕುವ ತೆರಿಗೆ : ಗ್ರಾಮಗಳ ನೀರ ಬಿರಾಡ ಅನುಪುಹಾರಿಕಾಯಿ ಮೊದಲಾದಯೇನುಂಟಾದನು ಸರ್ವಮಾನ್ಯವಾಗಿ ನಂಮ ತಂದೆ ನರಸಣನಾಯಕಪ್ಪೊಡೆಯರಿಗೂ ನಂಮ ತಾಯಿ ನಾಗಾಜಿಅಂಮನವರಿಗೂ . . . ಸಮರ್ಪಿಸಿದೆಳು (ಸೌಇ. IV, ೨೫೩-೭ ; 1513). ನೀರ ಬೆರೆ = ವ್ಯರ್ಥವಾಗು; ಹಾಳಾಗು: ಹರುಷದಿಂದಿರ್ದನೆನ್ನಯ ಮನೋಬಯಕೆಯೆಲ್ಲಿರದ್ಯೆದಿ ನೀರ ಬೆರೆದುದೊಯೆಂದು ಪುತ್ರಶೋಕೆಗ್ಗಳಿಸಿ ರೋದಿಸುತಿರೆ (ಸಪಸೋ.೧೧೧-೪೯). ನೀರ ಬೇಂಟಿ = ನೀರ್ವೇಂಟೆ : ರಾಜಪುತ್ರನಿಜಯಂ . . . ವನಾಂತದೊಳ್ ತೆರೆಯು ತೋಪಿನ ಸೋಹಿನ ನೀರ ಬೇಂಟಿಯುರ್ವರೆಗಳನೀಕ್ಷಿಸುತ್ತೆ ಬರೆ (ಅಸಂಪು.೧೧-೪೦). ನೀರ ಬೊಬ್ಬುಳಿಕೆ = ನೀರುಗುಳ್ಳೆ ; ಬುದ್ಬುದ : ನೀರ ಬೊಬ್ಬುಳಿಕೆಗೆ ಕಟ್ಟುನವ ಕಟ್ಟಿ ಕೊಟ್ಟು ಸುರಕ್ಷಿತವ ಮಾಡುವ ಭರವ ನೋಡಾ (ಬಸವ. ೧೬೨). ನೀರ ಮನೆ = ನೀರುಮನೆ; ಸ್ನಾನ ಗೃಹ : ಅಡಿಗೆಯ ಮನೆಯಿಂದಲೂ ಇತ್ತ ನೀರ ಮನೆಯಿಂದಲೂ ಹಿಂಬದಿಗೆ ಹೋಗಲು ಬಾಗಿಲುಗಳಿದ್ದುವು (ರಂಗಳ.೧೨೨). ನೀರ ಮುರುಹು = ನೀರಿನ ಸುಳಿ,—ಚಕ್ರ: "ಚಕ್ರಾದಿಯೆನೆ ನೀರ ಮುರುಹಕ್ಕು" (ಪುಂಗರಾ. ೧೨೬-೧೩). ನೀರ ಮುಳುಗು = ನೀರಿನಲ್ಲಿ ಮುಳುಗುವಿಕೆ : "ಮುಂಡನಂ, ಮುಂಡನೀಯಂ, ಮುಂಡಿಃ, ಮುಂಡುಃ, ಮುಂಡ್ಯಂ, ಈ ೫ ನೀರ್ಮುಳುಗು" (ಕಾಶಕ್ಕ. ೧೧೦). ನೀರಲಿ ನೆರಹು = ನೀರಲ್ಲಿ ಹಾಕು : ಸಕಲಶಾಸ್ತ್ರಶ್ರವಣ ವೇದಪ್ರಕರ ಧರ್ಮವಿಚಾರ ಪೌರಾಣಿಕಕಥಾಪ್ರಾಗಲ್ಭ್ಯವಿನಿತಱ ಸಾರ ಸಂಗತಿಯ ಅಳಟ ನೀರಲಿ ನೆರಹಿ ಪಶುಪಾಲಕನ ಪೂಜಾಸಾಧನಾರ್ಥ ಪ್ರಕಟನಾದೈ ಭೀಷ್ಮ ಮೂರ್ಖಾಧಮನು ನೀನು (ಕುವ್ಯಾಸ. ೮-೧೯). ನೀರ ಲಿಪಿ = ನೀರಕ್ಕರ ೧ : ಅತಿಶಾಂತಸತ್ಪುರುಷರಿಗೆಯಾವರಿಸಿದ ಕೋಪ ನೀರಲಿಪಿಯಿಂದ್ರಜಾಪಾದಂತೆ ತೋರದಗುವವು (ಸಸಮೋ. ೯-೪೭). ನೀರಲ್ಲಿ ಹಾಕು = ಹಾಳು ಮಾಡು ; ವ್ಯರ್ಥಗೊಳಿಸು : ಅವನು ಅಷ್ಟು ದುಡ್ಡನ್ನೂ ನೀರಲ್ಲಿ ಹಾಕಿಬಿಟ್ಟ (ರೂಢಿ). ನೀರವೆಣ್ = "ನದಿ" (ಪ್ರಭಣ್ಣ). ನೀರ ಸರದಿ = ವ್ಯವಸಾಯಕ್ಕಾಗಿ ನೀರನ್ನು ಹಾಯಿಸುವ ಸರತಿ,—ಪಾಳಿ : ಹದಿನೈಯಿದು ಕೊಳಗ ದೇವದಾಯ ಮಾನ್ಯದ ಗದ್ದೆಯನೂ ಯಿಂ ಅರಭ್ಯವಾಗಿ ಪ್ರತಿನರುಷ ಪ್ರತಿಫಲದಲ್ಲೂ ನೀರ ಸರದಿಯಲಿ ಕೊಟ್ಟು ಬಹೆಉ (ಎಕ. XII, ಚಿಕ್ಕನಾ. ೨೨-೧೨೦ ; 1379). ನೀರ ಹಾದಿ = ಹಳ್ಳ ; ಕಾಲುವೆ (?) : ಕೇಶವದೇವಂಗೆ ಅಮ್ರುತಪಡಿಗೆ ಸಲುವ ಗದ್ದೆ ಅಡ್ಡ ನೀರ ಹಾದಿಯ ಹಳುಗು ಜಕ್ಕ ಗಳುಡನವರ ನಡುವಣ ಕೊಡಗಿಗೆ ಪಡುವಣ ದೆಸೆಯಲಿ (ಎಕ. XI, ಹೊಳಲ್ಕೆ. ೧೨೬-೧೪ ; 1387). ನೀರಾಗು = ೧. ಕರಗು ; ದ್ರವರೂಪವಾಗು : ಮಳೆಗೆ ಬೆಲ್ಲ ತುಂಬ ನೀರಾಗಿ ಹೋಯಿತು (ರೂಢಿ). ೨. ಮರುಕಗೊಳ್ಳು ; ಕನಿಕರಪಡು : ಪುಗಳ ಕಣ್ಣೀರನ್ನು ಕಂಡೊಡನೆ ತಂದೆಯೂ ನೀರಾಗುತ್ತಿದ್ದ (ಒಡ್ಡಿಆ.೧೦೪). ೩. ಮುಟ್ಟಾದವಳು ನಾಲ್ಕನೆಯ ದಿನ ಸ್ನಾನವನ್ನು ಮಾಡು : ಆಕೆಗೆ ಈವತ್ತು ನೀರಾಯಿತು (ರೂಢಿ). ನೀರಿನ ಗಡಿಯಾರ = ನೀರ್ಗಡಿಯಾರ : (Clepsydra. ಪಾಂನಿ. ೧೬). ನೀರಿನಲ್ಲಿ ಹೋಮ ಮಾಡು = ನೀರಿನಲ್ಲಿ ಹಾಕು ; ವ್ಯರ್ಥಮಾಡು : ನಾವು ಇದುವರೆಗೆ ಮಾಡಿದ್ದೆಲ್ಲಾ ನೀರಿನಲ್ಲಿ ಹೋಮ ಮಾಡಿದಂತಾಗಿದೆ (ಪಂಜಪಂ. ೧೭೩). ನೀರಿನವ = ನೀರನ್ನು ಹೊತ್ತು ತರುವವನು; ನೀರು ತರುವ ಆಳು: (ಕ). ನೀರಿನವಳು = ನೀರನ್ನು ಹೊತ್ತು ತರುವವಳು : (ಕ). ನೀರು ನಿಡಿ = ನೀರು ಮತ್ತು ಗಂಜಿ : ಅವರು . . . ಒಂದು ಪ್ರದೇಶಕ್ಕೆ ಬಂದರು; ಅಲ್ಲಿ ಗೆಡ್ಡೆಗೆಣಸು ಹಣ್ಣು ಹಂಪಲು ನೀರು ನಿಡಿ ಏನೂ ಇರಲಿಲ್ಲ (ನಚಿಭಾ. ೩೫). 'ನಿಡಿ3'

ಪರಾ. ನೀರು ನೀರಾಗು = ಕಸುವನ್ನು ಕಳೆದುಕೊಳ್ಳು ; ಸತ್ತ್ವಹೀನವಾಗು : ಈಚೆಗೆ ಇಂಗ್ಲಿಸ್ ವಿದ್ಯಾಭ್ಯಾಸ ನೀರುನೀರಾಗಿದೆ (ರೂಢಿ). ನೀರು ಪಾಲಾಗು, ನೀರ ಪಾಲಾಗು = ಹಾಳಾಗು ; ನಾಶವಾಗು : ಅವನು ಮಾಡಿದ ಕಾರ್ಯವೆಲ್ಲ ಕ್ಷಣದಲ್ಲಿ ನೀರುಪಾಲಾಯಿತು (ರೂಢಿ) ; ಅವನ ಅವಿವೇಕದಿಂದ ಮನೆಯ ಮರ್ಯಾದೆಯೆಲ್ಲ ನೀರ ಪಾಲಾಯಿತು (ರೂಢಿ). ನೀರುಪಾಲು ಮಾಡು, ನೀರ ಪಾಲು ಮಾಡು = ಹಾಳುಮಾಡು ; ನಾಶ ಪಡಿಸು : ನನ್ನ ಮಾನ ನೀರುಪಾಲು ಮಾಡಿದೆ ಜಂಜ (ಹೂಸಕ್ತಿ. ೯೪) ; ಇಪ್ಪತ್ತೊಂದು ಶತಮಾನಗಳ ಕಾಲ ಯೂರೋಪಿನಲ್ಲಿ ಪ್ರಚಾರದಲ್ಲಿದ್ದ ಅರಿಸ್ಟಾಟಲಿನ ರಾಸಾಯನಿಕ ಊಹೆಗಳನ್ನು ನೀರ ಪಾಲು ಮಾಡಿದ ಮಹಾನೀಯ ಈತ (ತಿಲ್ಲಣ.೧೩೪). ನೀರು ಸೋಕದ ವಸ್ತ್ರ = ಟಾರು ಬಳಿದು ನೀರಿಳಯದಂತೆ ಮಾಡಿರುವ ಬಟ್ಟೆ ; ಟಾರ್ಪಾಲಿನ್ : ಲಾರಿಯು ಸಾಮಾನು ಹಾಕುವ ಭಾಗವನ್ನು ತೆರವು ಮಾಡಿ . . . ಪುನಃ ನೀರು ಸೋಕದ ವಸ್ತ್ರವನ್ನು ಮುಚ್ಚಿದರು (ರಕ್ತರಾ. ೫೯). ನೀರು ಹಾಕು = ೧. (ಗಿಡ ಮುಂತಾದುವುಗಳಿಗೆ) ನೀರನ್ನು ಹಾಕು ; ನೀರೆರೆ : ಬೇಸಗೆಯಲ್ಲಿ ಸರಿಯಾಗಿ ನೀರು ಹಾಕದಿದ್ದರೆ ಗಿಡಗಳು ಒಣಗಿ ಹೋಗುತ್ತವೆ(ರೂಢಿ). ೨. (ಎಣ್ಣೆಯು) ಸ್ನಾನ ಮಾಡಿಸು ; ಎರೆ : ಮಗುವಿಗೆ ನೀರು ಹಾಕಬೇಕು (ರೂಢಿ). ನೀರೊಳದ್ದು, ನೀರಲದ್ದು = ೧. ನೀರಿನಲ್ಲಿ ಮುಳುಗು : ದ್ವಾರಾವತಿ ನೀರೊಳದ್ದುದು ಸುರಪುರ ಸೇರಿತು ಖಳರುಪಟಳಕೆ (ಕಂಸವಿ. ೧೪೮-೫೭). ೨. ನೀರಿನಲ್ಲಿ ಮುಳುಗಿಸು : ತಂದೆ ನೀನು ತಾಯಿ ನೀನು . . . ಕೂಡಲಸಂಗಮದೇವಾ ಹಾಲಲದ್ದು ನೀರಲದ್ದು (ಬಸವ. ೪೭೯). ೩. ಹಾಳು ಮಾಡು ; ನಾಶಗೊಳಿಸು : ನಿಮ್ಮ ನಂಬಿ ಭಂಡಾರಮಂ ಕೊಟ್ಟಡೆನ್ನನಿಂತು ಕೆಡಿಸುವರೆ ಶಿವಭಕ್ತರ್ಗಿತ್ತು ರಾಜ್ಯಮಂ ನೀರೊಳದ್ದುವರೆ (ಬಸರ. ೮-೧೧೬). ನೀರೊಳಿಟ್ಟಕ್ಕರ = ೧. ನೀರಿನಲ್ಲಿ ಬರೆದ ಅಕ್ಷರ; ಜಲಲಿಪಿ. ೨. ಕ್ಷಣಿಕವಾದುದು ; ಶಾಶ್ವತವಲ್ಲದುದು : ಕುವರಲಕ್ಷ್ಮೆಯನಾಡಿದ ಮಾತು ಕಲ್ಲೊಳಿಟ್ಟಕ್ಕರದಂತೆ. . . ಪೆಜಿರ ಮಾತು ವಿಚಾರಿಸಿ ನೋಡೆ ನೀರೊಳಿಟ್ಟಕ್ಕರದಂತೆ (ಎಕ. V, ಬೇಲೂರು. ೧೧೩-೬೩. ಸು. 1220 ?). ನೀರೊಳು ಕಲಕು ೩. ೧. ನೀರಿನಲ್ಲಿ ಹಾಕು. ೨. ಹಾಳುಮಾಡು ; ನಾಶಗೊಳಿಸು ; ವ್ಯರ್ಥಗೊಳಿಸು ; ಎಲೆ ಸವಿಸಾರಕುಮಾರ ಸಂಪ್ರತಿಗೆಳಸಿದ್ಯೆ ಕಲಿತನವ ನೀರೊಳು ಕಲಕಿದ್ಯೆ (ಕುವ್ಯಾಉ. ೬-೧೯). ನೀರ್ನಿಡಿಯ ನೇಮ = ನೀರಾದ ಆಹಾರವನ್ನು ಮಾತ್ರ ಸ್ವೀಕರಿಸುವ ವ್ರತ,—ನಿಯಮ : ವ್ರತ ನೇಮ ಸಪ್ಪೆ ಒಜತೆ ಮುಂತಾದ ನೀರ್ನಿ[ರ್ನಿ]ಡಿಯ ನೇಮವಂ ತಾಳ ಅಂಗನೆಯರ ಸಂಗಸುಖದ ಮುಚ್ಚಿ ಲಿಂಗವ ಕೊಂಡಾಡುವ ಬಾಯಲ್ಲಿ ಹೆಂಗಳ ಅಧರವಂ ಚುಂಬಿಸಿ ಲಿಂಗಜಂಗಮದ ಪ್ರಸಾದ ಹೋಯಿತ್ತು (ಸಸಗಪ. ೧೪೩-೪೩೭). ನೀರ್ಮಾಡು, ನೀರ ಮಾಡು = ೧. ನೀರನ್ನು ತೆಗೆ : ಮೇರುವಂ ಭರದಿಂದಂ ಪಿಡಿದೆತ್ತುವರ್ ಮುಳಲೊಳಂ ನೀರ್ಮಾಡುವರ್ ಹೋಡೆಯರ್ (ಧನಞ್ಜಯ್ಯ. ೩-೧೩೪). ೨. ದ್ರವವನ್ನಾಗಿ ಮಾಡು : (ಕ). ೩. ನಿಸ್ಸತ್ತ್ವಗೊಳಿಸು : ಅಂಧಕಾರವೆಂಬ ಗಡ್ಡರದೊಳಗೆ ನಿದ್ರೆಯೆಂಬ ರಾಕ್ಷಸಿ ವೀರರ ನಿಗ್ರಹಿಸಿ ನೀರ ಮಾಡಿ . . . ನಿಚ್ಚನಿಚ್ಚ ಜೀವನಾಶ ಮಾಡುತ್ತಿದ್ದಾಳೆ(ಬಸಪು.೨೮-೭೭). ℙ ಇದರೊಂದಿಗೆ ಬೇರೆಬೇರೆ ಶಬ್ದಗಳು ಸೇರಿ ದಿನನಿತ್ಯದ ಬಳಕೆಯ ಅನೇಕ ನುಡಿಗಟ್ಟುಗಳು ಸಿದ್ಧವಾಗುತ್ತವೆ.

[ದೇ.॥ ತಮಿ. ಮಲ. ತುಳು. ಪರ್ಜಿ. ಗಡಬ. ನೀರ್ ; ಕೊಡ. ನೀರೀ ; ತೆಲು. ಕುಇ. ನೀರು ; ಕೊಲಾ. ನಾಯ್ಕಿ. ಈರ್ ; ಬ್ರಾಹೂಈ. ದೀರ್./ ಸಂ. ನೀರ]

ನೀರ$_1$ 'ನೀಱ' ನೋ.

ನೀರ$_2$ (ನಾ). ೧. ನೀರು ; ಜಲ : "ಅಪಃ(ಪ್), ತೋಯಂ . . . ನೀರಂ, ಭುವನಂ, ಅಮೃತಂ, ಜೀವನಂ, ಜೀವನೀಯಂ–ಈ ೨೬ ನೀರ್" (ಹಲಾಯು. ೧೦೭–೨೬) ; ರಂಗತ್ತುಂಗತರಂಗಭಂಗುರಲಸದ್ಗಂಗಾಜಳಂ . . . ಸಾರಯಮುನಾನೀಳೋರ್ಮಿನೀರಂ ಭುಜೋತ್ತುಂಗಂಗೀಗರಿಗಂಗೆ ಮಂಗಳಮಹಾಶ್ರೀಯಂ (ಪಂಪಭಾ. ೧೪–೭೧) ; ಸೂಂದಿಗೆಜೆಂಯ ನೀರತಟವೋಭ್ಯಾ(ಬ್ಭ್ಯಾ)ರ್ಗದಿಂ (ಇಅ. XVIII, ೭೧೨–೨೦ ; ಸು. 11ನೆಯ ಶತ) ; ಉಗ್ರಕೇಸರಿಗಳತಕರಿಶಿರನರ್ಗತಾರುಣ ನೀರ [ಪಾಶಾಂ. ನಿಕರ]ದಲಿ ನೆನೆದು ಬಳಸಿ ಸೂಸುವ ನವ್ಯಮುಕ್ತಾವಳಿಯಲಿ (ಉತ್ತರಾ. ೧೧–೧೯). 'ನೀರ್' ಪರಾ. ೨. ಒಂದು ಬಗೆಯ ಮದ್ಯ,— ಸಾರಾಯಿ : ಬಗನಿಯ ಕಾಂಡವನ್ನು . . . ಕಡಿದಾಗೆ ಹೊಮ್ಮುವ ದ್ರವವೇ ನೀರ. ನೀರದಿಂದ ಸಕ್ಕರೆ, ಕಾಕಂಬಿ, ಇಲ್ಲವೆ ಹೆಂಡ (ಹಸುಹೊ. ೨೬೯). 'ನೀರಾ' ಪರಾ [ಸಂ.]

ನೀರ$_3$ (ನಾ). ನಿರ್ಣಯ ; ಇತ್ಯರ್ಥ : ನಿನ್ನ ಸಾರದಲ್ಲದೆ ಸಂಸಾರದ ಭೀತಿಪ್ರಾಸಾರವೆಂಬುದು ನೀರವಾಗದು ಕಾಣೊ (ಮೋಕ್ಷದೀ. ೨೧–೫). [←ಮರಾ. ನೀರ]

ನೀರಂಗಿ (ನಾ). ಒಂದು ಬಗೆಯ ಸಸ್ಯ : ಸರ್ಕಕತ್ತಿ, ಸಂಕೇಶ್ವರಿ, ವಾತನಾರಾಯಣ, ಕೆಂಪುಕೆಂಜಗ, ನೀರಂಗಿ (ಮೈಔಗಿ. ೨೯–೫೬೩) ; ಸಣಕತ್ತಿ, ಸಂಕೇಶ್ವರಿ, ವಾತನಾರಾಯಣ, ನೀರಂಗಿ, ಕೆಂಪುಕೆಂಜಗ (ಸಸ್ಯಸಿ. ೪೭). [ಸಂ. ನೀರಂಗೀ = ಅರಿಸಿನ]

ನೀರಂಚು (ನಾ). ದಡ ; ತೀರ : ಯೀ ಬಿಟ್ಟ ಕುಳಸ್ಥಳಂಗಳ ನೀರಂಚು ನೆಲನಜಕಲು ನಟ್ಟ ಕಲ್ಲು ತೆಗದಗಳು ಗಡಿಯಿಂದೊಳಗಾದ ಚತುಸ್ಸೀಮೆಗೆ ಬಂದ ಮಕ್ಕಿ ಹಕ್ಕಲು (ಎಕ. VIII, ಸಾಗರ. ೧೬೪–೪೭ ; 1491). [ನೀರ್ + ಅಂಚು$_2$]

ನೀರಂಜನಿ (ನಾ). ಒಂದು ಬಗೆಯ ಸಸ್ಯ : (ಮೈಔಗಿ. ೩೯–೭೭೪); (ಸಸ್ಯಸಿ. ೬೪). [?]

ನೀರಂಜಿ 'ನೀರುವಂಜಿ' ನೋ.

ನೀರಂಜಿಸು (ಕ್ರಿ). ಹೊಳಪನ್ನುಂಟುಮಾಡು ; ಒಪ್ಪ ಕೊಡು : ಹಾರಾದ್ಯಾಭರಣಂಗಳಿನಾ ರೂಪಾಶ್ಚರ್ಯಮಾಗೆ ಮಾಣಿಕಚಟ್ಟಂ ನೀರಂಜಿಸಿ[ವಾಶಾಂ. ವಿರಂಚಿಸಿ] ದಳಿವಿಡಿದ ಮಹಾರತ್ನದ ದೊರೆಗೆವಂದುದಾಸ್ತ್ರೀರತ್ನಂ (ಅದಿಪು. ೪–೪೨) ; ಆ ರಮಣಿಯ ತನುಲತೆಯಿಂ ವಾರಿಕಣ ಪ್ರಚಯಮಂ ದುಕೂಲಾಂಚಲದಿಂ ವಾರಾಂಗನೆಯರ್ ತೊಡೆದರ್ ನೀರಂಜಿಸುವಂತೆ ಮಣಿಶಲಾಕೆಯನಾಗಳ್ (ಪಂರಾಮಾ. ೫–೪೧) ; ಬಗೆವುಗೆ ತೊಡೆದರ್ ಕುಡಿಮಿಂಚುಗಳಿಂ ನೀರಂಜಿಪಂತೆ ನೀರಜಮುಖಿಯರ್ ಮಿಗೆ ಕುಂಕುಮವದಣ್ಪಿಂ ಸಂಪಗೆವಣ್ಣಂ ಮುಗುಳ್ದ ಮೆಯ್ಯಳೊಳ್ ಮಳಯಜಮಂ (ಲೀಲಾವ. ೯–೮೧). [ಸಂ. ನೀರಂಜನ + –ಇಸು$_3$]

ನೀರಂಡೆ (ನಾ). ಜೀರ್ಕೊಳವೆ ; ಪಿಚಕಾರಿ : ವಾರಿಜಮುಖಿ ಚೆಲ್ಲುವೆ ನೆಂದೆತ್ತಿದ ನೀರಂಡೆಯ ನೀಲದ ರುಚಿಯುಂ ಲಲಿತಾರುಣಕರವಲ್ಲವದ ಸುರಂಗುಂ ಸೂಸಲ್ (ಜಯಕಾ. ೧೧–೪೯). [ನೀರ್ + ಅಂಡೆ$_2$]

ನೀರಂಧ್ರ (ಗು). ೧. ರಂಧ್ರವಿಲ್ಲದ; ಎಡೆಯಿಲ್ಲದ. ೨. ಒತ್ತಾದ; ದಟ್ಟವಾದ : ಆಂಧ್ರೀನೀರಂಧ್ರಬಂಧುರಸ್ತನಹಾರನುದಾರಂ ಸರಸ್ವತೀ ಮಣಿಹಾರಂ (ಅದಿಪು. ೧–೩೨) ; ಪಡುವಣ ಕಡಲಿಂದೊಗೆದುದು ಬಡಬಾಗ್ನಿಯ ಪೊಗೆ ಪೊದಟ್ಟು ಕಿಡಿವರ್ಷನಲೇಂ ಕುಡಿಮಿಂಚುವೆರಸು ಗಗನ ಮನಡರ್ದುದೊ ನೀರಂಧ್ರನೀಲನೀರದನಿವಹಂ (ಪಂರಾಮಾ. ೬–೧೪೩) ; ನೀರಂ ನೀರಂಧ್ರಮೇಘಂ ಸುರಿಯೆ . . . ಕೆರಳಿಸಿದತ್ತೋವಿ ಕಾರಂ ವಿಕಾರಂ (ಅರ್ಧನೇ. ೮–೨). ೩. ಒರಟಾದ ; ನಾಜೂಕಲ್ಲದ. (ನಾ). ೪. ದಟ್ಟವಾದುದು : ಗಾಢವಾದುದು : ಅಂಧ್ರಕನಾಕಾಶಂ ನೀರಂಧ್ರಮನಲ್ ಸುರಿದು ಸರಲ ಸರಿಯಂ ಜವನೀತಂ ಧ್ರುವಮೆಂಬಿನಮಮರಪುರಂಧ್ರಿಯರಂ ವಿಜಯಿ ವಿಜಯಸಿಂಹಂಗಿತ್ತಂ (ಪಂರಾಮಾ. ೧೦–೧೨೬). [ಸಂ.]

ನೀರಂಬಲಿ, ನೀರಂಬಲ (ನಾ). ತಿಳಿಯಾಗಿರುವ ಗಂಜಿ ; ನೀರಾಗಿರುವ ಗಂಜಿ ; ತಿಳಿಗಂಜಿ : ಒಂದು ಮಾನ ಹೋಳದ ಬಿಟ್ಟಂ ನೀರಂಬಲಿಯಂ ಪ್ರತಿದಿನಂ ಕುಡುವುದು (ಕಗವಿ. ೯೧ ರಾಜಾವಳೀಕಥೆ). **ನೀರಂಬಿಲ** : ಬಿಸಿಲಕ್ಕಿಯಂ ತೊಳೆದು ನೀರಂಬಿಲದಯೆಸರನೊಸೆದುಪೊಲೆ ಗೆತ್ತಿಯಕ್ಕಿಯ ಹಾಕಿ . . . ಪಲವು ಪರಿಮಳಗಳನಿಡುವುದು (ಸೂಪಶಾ. ೩–೩೭). [ನೀರ್ + ಅಂಬಲಿ$_1$]

ನೀರಂಬಿಲ 'ನೀರಂಬಲಿ' ನೋ.

ನೀರಕಿಚ್ಚು 'ನೀರಗಿಚ್ಚು' ನೋ.

ನೀರಕೆಸವು (ನಾ). ಒಂದು ಬಗೆಯ ಸಸ್ಯ : "ಅಲೂಪಂ–ನೀರಕೆಸವು" (ಓಷಧಿ. ೧೦). [<ನೀರ್ + ಕೆಸವು]

ನೀರಕ್ಕರ (ನಾ). ೧. ನೀರಿನ ಮೇಲೆ ಬರೆದ ಅಕ್ಷರ ; ಜಲಲಿಪಿ. ೨. (ಅಲಂ) ಸ್ಥಿರವಲ್ಲದುದು ; ಅಶಾಶ್ವತವಾದುದು : ಕನಕಂ ನೀರಕ್ಕರಂ ಪೆಂಡತಿ ಕನಸು . . . ಗೃಹವಚರವೆನಿಪ್ಪಿಂತಿವಂ ಬಿಟ್ಟು ನಮ್ಮಂ ನೆನೆಯುತ್ತಿರ್ಪಂತೆ ಪಂಪಾಪುರದರಸ ವಿರೂಪಾಕ್ಷ ರಕ್ಷಿಪುದೆನ್ನಂ (ರಕ್ಷಾಶ. ೩೧). [ನೀರ್ + ಅಕ್ಕರ$_2$]

ನೀರಕ್ಕಿ 'ನೀರ್ವಕ್ಕಿ' ನೋ.

ನೀರಕ್ಕಿಅನ್ನ (ನಾ). (ಕರಾ) ಊಟ ಮಾಡಿ ಮಿಗುವ ಅನ್ನವನ್ನು ಕೆಡದಂತೆ ನೀರಿನಲ್ಲಿ ಹಾಕಿದ್ದು, ಬಡಿಸುವಾಗ ನೀರನ್ನು ಹಿಂಡಿ ತೆಗೆಯುವ ಅನ್ನ : ಈ ದರಿದ್ರ ಮಳೆಗಾಳಿ ಬೀಸುವಾಗ ನೀರಕ್ಕಿ ಅನ್ನ ಬಾಯಿಗೆ ಹಾಕಿದರೆ, ಕರುಳು ಕತ್ತರಿಸಿ ಬಿದ್ದ ಹಾಗೆ ಆಗುತ್ತದೆ. ಸೆಕೆ ದಿನವಾದರೆ ನೀರಕ್ಕಿ ಅನ್ನ ತಂಪು ನಿಜ (ಮರಮ. ೨೮). [ನೀರ್ + ಅಕ್ಕಿ$_1$ + ಅನ್ನ$_3$]

ನೀರಕ್ಷೀರ (ನಾ). ೧. ನೀರು ಮತ್ತು ಹಾಲು : ನೀರಕ್ಷೀರದಂತೆ ಕೂಡಿದ ಭೇದವನಾರಿಗು ಹೇಳಲಿಲ್ಲ ಕೇಳಲಿಲ್ಲ (ಅಸಚಂ. ೨೨೭–೧೦೨೯) ; ನೀರಕ್ಷೀರಂಗಳನೊಂದೇ ರೀತಿಯೊಳಱುವರಱುಗೆ ಬೇರ್ಕೆಯ್ದುದಱೊಳ್ ನೀರಸಮನುಱುದು ಸಾರಮನಾರೈದುಱೆ ರಾಜಹಂಸನೊರ್ವನೆ ಸವಿಗುಂ (ಚಕವಿ. ೧–೪೬). ೨. (ನೀರು, ಹಾಲುಗಳಂತೆ) ಬೆರೆತುಕೊಂಡಿರುವಿಕೆ ; ಸಾಮರಸ್ಯ : ನೀರಕ್ಷೀರದಂತೆ ನೀನಪ್ಪೆಯಾಗಿ ಅವುದು ಮುಂದು ಅವುದು ಹಿಂದು ಎಂದಱಿಯೆನು (ಮಹಾದೇ.ಬ. ೧೩–೧೧). [ನೀರ$_2$ + ಕ್ಷೀರ]

ನೀರಕ್ಷೀರನ್ಯಾಯ (ನಾ). ನೀರು ಮತ್ತು ಹಾಲುಗಳಂತೆ ಬೆರೆತುಕೊಂಡಿರುವ ರೀತಿ ; ಬೇರೆಬೇರೆ ಗುರುತು ಹಿಡಿಯಲಾಗದಂತೆ ಒಂದಾಗಿ ಸೇರಿಕೊಂಡಿರುವಿಕೆ ; ಒಂದು ಬಗೆಯ ಲೌಕಿಕ ನ್ಯಾಯ : 'ಕ್ಷೀರನೀರನ್ಯಾಯ' ಪರಾ. [ನೀರಕ್ಷೀರ + ನ್ಯಾಯ]

ನೀರಕ್ಷೀರಪರೀಕ್ಷೆ (ನಾ). ಬೆರೆತಿರುವ ನೀರು ಮತ್ತು ಹಾಲನ್ನು ಬೇರ್ಪಡಿಸಿ ಕಂಡುಹಿಡಿಯುವಿಕೆ : ನೀರಕ್ಷೀರಪರೀಕ್ಷಾಧೀರತೆಗಾನಲ್ಲದಿಲ್ಲೆನುತೆ ಮುಡಿಗಿಕ್ಕಿತ್ತಾ ರಾಜಹಂಸನೆನೆಗೆ ಖಗವಾರದೆ ಗಱುಗೆದಱೆ ಜಱುದ ಗಱು ನೆಱೆ ಮೆಱೆಗುಂ (ರಾಜದೇ. ೨–೬೬). [ನೀರಕ್ಷೀರ + ಪರೀಕ್ಷೆ]

ನೀರಗಸೆಬಾಗಿಲು (ನಾ). ಹೊರಗಿನಿಂದ ಕೋಟೆಯ ಒಳಭಾಗಕ್ಕೆ ನೀರನ್ನು ತರುವುದಕ್ಕಾಗಿ ನಿರ್ಮಿಸಿದ ಬಾಗಿಲು ; ನೀರು ಬಾಗಿಲು : ಅಗಸೆ–ನೀರಗಸೆಬಾಗಿಲುಗಳೂ ಸಂಪೂರ್ಣನಷ್ಟವಾಗಿ

ಹೋಗಿದ್ದು, ಈಗ ಅವುಗಳ ಗುರುತು ಕೂಡ ಉಳಿದಿಲ್ಲ (ಕರ್ಣಾಜ. ೩ ಮುಮ್ಮಾತು). 'ನೀರ್ಗಂಡಿ' ಪರಾ.

[ನೀರ್+ಅಗಸೆಬಾಗಿಲು (<ಅಗಸೆಬಾಗಿಲ್)]

ನೀರಗಳು (ನಾ). ಕೋಟೆಯ ಸುತ್ತಲೂ ಇರುವ ಕಂದಕ,—ಅಗಳು : ವಡಬಾಗ್ನಿಗಗಿದು ಕನಕಶೈಲವ ಶರಣ್ಬಡೆದುದು ಶರನಿಧಿಯೆನಲು ಕಡುರಯ್ಯಮಾದುದಾ ಪೊಳಲ ಪೊಂಗೋಂಟೆಯನಡರ್ದು ಮೆಱೆವ ನೀರಗಳು (ಕುರಾಸಾಂ. ೩-೫೭); ಸಲೆ ತೀವಿ ತುಳುಕುವ ಜಲವ ಸಲೆ ಸೂತ್ರದಿಂ ಬಱಿಕೆಯ್ದು ಹೆಣನ ತೀವಿ ನೆಲಸಮ ಮಾಡಿ ನೀರಗಳ (ನಾಗಕು. ೧೬-೩೪). [ನೀರ್+ಅಗುಳ್ಳು (<ಅಗುಱ್ಱ್)]

ನೀರಗಿಚ್ಚು, ನೀರಕಿಚ್ಚು (ನಾ). ಒಂದು ಬಗೆಯ ಸಸ್ಯ : "ಬ್ರಹ್ಮ ಸೋಮಾ—ಚಿಕ್ಕಕಲ್ಲುರಿ, ನೀರಗಿಚ್ಚು" (ಓಷಧಿ. ೧೦೬). **ನೀರಕಿಚ್ಚು** : "ಕೇವುಕಿ ? —ಅಂಕೋಲೆ, ನೀರಕಿಚ್ಚು, ಬದ(ನೆ)ಣೆ ?" (ಓಷಧಿ. ೪೦).

[?]

ನೀರಗೋಣೆ 'ನೀರುಗೋಳಿ' ನೋ.

ನೀರಜ$_1$ (ಗು). ೧. ಧೂಳಿಲ್ಲದ; ಹುಡಿಯಿಲ್ಲದ. ೨. ಕಳಂಕರಹಿತವಾದ; ದೋಷರಹಿತವಾದ. ೩. ಮುಟ್ಟಾಗದಿರುವ. (ನಾ). ೪. ಧೂಳಿಲ್ಲದುದು : ನೀರಜಮಾದುದು ಮೇದಿನಿ (ಪಂರಾಮಾ. ೩-೧೧೦); ನೀರಜಮಾಯ್ತು ಕೂಡೆ ಕೊಳನಂತಿರುಪಪ್ಲವದೇಳ್ಗೆಯಾಯ್ತು ಮಭ್ರೋರಗನಂದದಿಂ . . . ಕಂಜಾರಿಯ ಮಾಳ್ಕೆಯಿಂ ಕುಮುದವರ್ಧನಮಾಯ್ತುರು ಮೇಘಕಾಲದೊಳ್ (ತ್ರಿಪುವಿ. ೮-೪೩). ೫. ದೋಷವಿಲ್ಲದುದು ; ಕಳಂಕರಹಿತವಾದುದು : ನೀರಜಮಾದುದು ಮೇದಿನಿ ನೀರಜಮಾತ[ಸಾಕಾಂ. ಮಿತ್ರ]ನ ಚರಿತ್ರಮೆಂದಱಿಪುವವೋಲ್ ನೀರಚ್ಛಮಾದುದೀ ವಸುಧಾರಮಣಂ ಸ್ವಚ್ಛಹೃದಯನೆಂದಱಿಪುವವೋಲ್ (ಪಂರಾಮಾ. ೩-೧೧೦). ೬. ರಜೋಗುಣವಿಲ್ಲದುದು. ೪, ೬ : ಪರಮಪವಿತ್ರನಂತೆ ಧರೆ ನೀರಜಮಾದುದು (ಅನಂಪು. ೫-೩); ನೀರಜಮಾಯ್ತು ಭೂಮಿ ಸುಜನೋತ್ಕರದಂತೆ ಸರೋವರಂಗಳುಂ ಸಾರತೆವೆತ್ತು ಕೂಡೆ ತಿಳಿದಿರ್ದುವು ಲಾಲಿತಸನ್ಮನಂಗಳಂತೆ (ಬಾಧಪು. ೭-೩೦). ೭. ರಜೋಗುಣವಿಲ್ಲದವನು ; ಪರಮಾತ್ಮ : ನೀರಜನ ಚಿನ್ಮಯನ ಜಿನಪನ ಚಾರುಕಥೆ ಸತ್ಕಥೆ . . . ಜಾರಚೋರವಿಟಾದಿ ಕಥೆಗಳು ಸಾರಕಥೆಗಳೆ (ಸಾಳ್ವಭಾ. ೧-೩೭). [ಸಂ. ನೀರಜಸ್]

ನೀರಜ$_2$ (ಗು). ೧. ನೀರಿನಲ್ಲಿ ಹುಟ್ಟಿದ. (ನಾ). ೨. ಒಂದು ಬಗೆಯ ಮರ ; ಚಂಗಲಕೋಷ್ಠ ; "ಪುಷ್ಕರಮೂಲ" (ಪಂಡಿತ. ೨೪೪) ; "ನೀರಜಮೆನಲು ಕೋಷ್ಠಮಕ್ಕುಂ" (ಮಂಗರಾ. ೪೩-೪೧). ೩. ನೀರಿನಲ್ಲಿ ಹುಟ್ಟಿದುದು ; ತಾವರೆ ; ಕಮಲ : ನಾನಾನೀರಜರಜಃಪಿಂಜರಿತ ಜಲಜಲಾಶಯಂಗಳೊಳಂ ನೆಱೆದು (ಅದಿಪು. ೬-೧೦೧ ಪ); ಸೀತಾಧುನಿ ರಂಜಿಕುಂ ನಿಭೃತನೀರಜಕೈರವ ಮಿಾನಜಾರವಂ (ಚಂದ್ರಪು. ೧-೮೨). ೪. ಮುತ್ತು ; ಮೌಕ್ತಿಕ. [ಸಂ.]

ನೀರಜಜಾತ (ನಾ). (ವಿಷ್ಣುವಿನ ನಾಭಿ)ಕಮಲದಲ್ಲಿ ಹುಟ್ಟಿದವನು ; ಬ್ರಹ್ಮ : ನೀರಜಜಾತ ವಿಸ್ತರಿಸಿದಂಡಮುಮಂ ಮಣಿಮಾಲೆಯಾಗಿ ವಿಸ್ತಾರಿಸಿ ಹಸ್ತದಿಂ ಪಿಡಿದು ತನ್ನ ಸರಣ್ಬುಗುವರ್ಗೆ ಲೇಸುಮಂ ಪ್ರೇರಿಸಲೋಸುಗಂ ಜಪಿಸುತಿಪ್ಪಳಿರುಳ್ಪಗಲಾವಳೊರ್ವಳಾ ಭಾರತಿನಮ್ಮ ಜಿಹ್ವದಲನಾವಿಳದಿಂದಿರುತಿರ್ಕ್ಕೆ ಸಂತತಂ (ಎಕ. XI, ದಾವಣ. ೫೯-೯ ; 1280). [ನೀರಜ$_2$+ಜಾತ]

ನೀರಜನೇತ್ರ (ನಾ). ಕಮಲದಂತೆ ಕಣ್ಣುಗಳುಳ್ಳವನು ; ವಿಷ್ಣು : ಸಕಲಸಾರಸರ್ವಸ್ವನೆನಿಪ್ಪಾ ನೀರಜನೇತ್ರನ ಲೀಲಾನುಷ್ಠಿತ ಬಾಲಕೇಳಿ ಬಣ್ಣಿಪರಳವೇ (ಜಗವಿ. ೩-೫೮). [ನೀರಜ$_2$+ನೇತ್ರ]

ನೀರಜನೇತ್ರೆ (ನಾ). ಕಮಲದಂತೆ ಕಣ್ಣುಗಳುಳ್ಳವಳು ; ಚೆಲುವೆ: ನೀರಜನೇತ್ರೆಗೆ ಪುಳಕಂ ಗೌರಿಗೆ ತಳ್ಪೊಯ್ಯೆ ಕೇಳ್ದು ತನ್ನಯ ಭವಮಂ (ಪುಣ್ಯಾಸ್ರ. ೧೨-೧೦). [ಸಂ. ನೀರಜನೇತ್ರಾ (ನೀರಜ+ನೇತ್ರ+-)]

ನೀರಜಬಂಧು (ನಾ). ಕಮಲದ ಸ್ನೇಹಿತ,—ಆಪ್ತ ; ಸೂರ್ಯ : ನೀರಜಬಂಧು ಗುಟುಮ್ಮನೆ ರಸೆಗಜಾಂಡದಿಂದಿಟಿದನಾರನಟಿಯದೊರಾಗಂ (ಶಾಂತಿಪು. ೮-೬೧). [ನೀರಜ$_2$+ಬಂಧು]

ನೀರಜಭವ (ನಾ). = ನೀರಜಜಾತ : ತಾರಕಜಿನ್ನಾಗೇಶ್ವರ ನೀರಜಭವದಶಕರಱಿದು ನುತಿಸಲಶಕ್ಯಂ (ಹವ್ಮಾರ. ೧-೨೮) ; ನೀರಜಭವನ ಮಾನಸಪುತ್ರ ನೀನಲ್ಲದಾರಾದೊಡೀ ಮಾತುಗಳ ಭಾರಾಂಕನಾಗಿಯೆನ್ನೊಡನೆ ಪೇಳ್ದೊಡೆ ಸೀಳಿ ತೋರಣಗಟ್ಟಪೆನು (ಮೋಹತ. ೧೨-೩೧). [ಸಂ.]

ನೀರಜವನ (ನಾ). ಕಮಲಗಳ ಸಮೂಹ,—ಗುಂಪು : ಮಾರಿಮಲಯಾನಿಲಂ ನವನೀರಜವನಮೆಂಬ ಕೆಂಡದೊಳ್ ದಂಡನಮಸ್ಕಾರಂ ಬಂದಪಂ (ಜುಶೋಚ. ೧-೩೮). [ನೀರಜ$_2$+ವನ]

ನೀರಜಶರ (ನಾ). ತಾವರೆಯನ್ನೇ ಬಾಣವಾಗುಳ್ಳವನು ; ಕಾಮ; ಮನ್ಮಥ : 'ನೀರಜಶರಾಹವ' ಪರಾ. [ನೀರಜ$_2$+ಶರ]

ನೀರಜಶರಾಹವ (ನಾ). ಮನ್ಮಥನ ಕಾಳಗ ; ರತಿಕ್ರೀಡೆ : ನೀರಜಶರಾಹವದೊಳೊದಗುವೊಡೆ ಕಡುಚದುರೆ ನೀರಣದೊಳಾಳ್ತನವನೆನ್ನೊಡನೆ ತೋಱಿದೊಡೆ ನೀರಸವೆನಿಸದೆ ಪೇಳು (ಜೈಮಿಭಾ. ೧೬-೧೦).

[ನೀರಜಶರ+ಅಹವ]

ನೀರಜಸಖ (ನಾ). = ನೀರಜಬಂಧು. [ನೀರಜ$_2$+ಸಖ]

ನೀರಜಸಮುದ್ಭವ (ನಾ). = ನೀರಜಜಾತ : ಸತ್ವರಜಸ್ತಮೋಗುಣಾಧಾರತೆಯಿಂ ಜಗಸ್ಥಿತಿ ಸಮುದ್ಭವಸಂಹೃತಿಹೇತುವದ ನೀರೇರುಹನಾಭ ನೀರಜಸಮುದ್ಭವ ಶಂಕರರೀಗಭೀಷ್ಟಮಂ (ಕಇಅ. ೧-೨-೪ ; 1058).

[ನೀರಜ$_2$+ಸಮುದ್ಭವ]

ನೀರಜಾಕ್ಷ (ನಾ). = ನೀರಜನೇತ್ರ : ನಿಂದೆಯಲಿ ನೊಂದೆನ್ನೆ ನೀರಜಾಕ್ಷ (ಪುರಂದ. ೧-೯೩-೧). [ಸಂ. (ನೀರಜ+ಅಕ್ಷಿ+-)]

ನೀರಜಾಕ್ಷಿ (ನಾ). = ನೀರಜನೇತ್ರೆ : ಅವನ ಕಾಣುತ ಹರ್ಷದಿಂ ಬ್ರಹ್ಮರಾಕ್ಷಸನು ಬಾಯ್ದೆಱೆದು ನುಂಗುವನಿತಕೆ ನೀರಜಾಕ್ಷಿ ತಾಂ ಪತಿಭಿಕ್ಷೆಯಂ ದೇಹಿ ಎಂದೊದಱೆ (ಪ್ರೌಢರಾ. ೮-೪೮). [ಸಂ. ನೀರಜಾಕ್ಷೀ]

ನೀರಜಾತ (ನಾ). ನೀರಿನಲ್ಲಿ ಹುಟ್ಟಿದುದು ; ಕಮಲ : ನೀರಿನೊಂದು ನೀರಜಾತ ಬೆಳಕಿಗಾಗಿ ಕೆರಳಿತು ಈ ಕಿರಣಕರಳಿತು (ಗಂಗಾತ. ೧೫-೧೩). [ನೀರ$_2$+ಜಾತ]

ನೀರಜಾಲಯೆ (ನಾ). ೧. ಕಮಲವೇ ಮನೆಯಾಗಿರುವವಳು ; ಲಕ್ಷ್ಮಿ : ನೀರಜಾಲಯೆ ತಾನಡಿಗಳನೊತ್ತಲು ಉದಾರದೇವರ ದೇವನೊಲುಮೆಯಿಂದ ಕಾರುಣ್ಯಸುಧೆಯನು ಸುರಿಯೆ ಭಕ್ತರ ಮೇಲೆ (ಪುರಂದ. ಧಾ. ೩-೧೩೫-೧). ೨. ಸರಸ್ವತಿ : ನೀರಜಾಲಯೆ ಬ್ರಹ್ಮಚಾರಿಣಿ ವಾರಿಜಾಸನೆಯೆನ್ನ ಜಿಹ್ವೆಯ ಸಾರಿ ಸಲೆ ಉದ್ಧರಿಸು ಕಾವ್ಯವ (ಬಿಜ್ಜಪು. ೧-೧೧).

[ಸಂ. ನೀರಜಾಲಯಾ (ನೀರಜ+ಆಲಯ+-)]

ನೀರಜಾಸನ (ನಾ). ಕಮಲಾಸನ ; ಬ್ರಹ್ಮ : ಅರನುಜ್ಞೆಯ ಶಿರದಿ ಧರಿಸಿಯೆ ನೀರಜಾಸನ ಜಗವ ಸೃಷ್ಟಿಪನಾರನುಜ್ಞೆಯನನುವಿಡಿದು ಹರಿ ಜಗವ ಪಾಲಿಸುವ (ಗಗತಾ. ೯-೧). [ನೀರಜ$_2$+ಆಸನ]

ನೀರಟ್ಟು (ನಾ). "ನೀರೋಟ ; ಪ್ರವಾಹ" (ಪ್ರಭಣ್ಣ) : ಬೆಟ್ಟನ ನೀರಟ್ಟನವೋಲಟ್ಟುಳಿಗಳ್ ಬೆಟ್ಟತಾದೊಡಂ ಮುನ್ನೆಲೆಯೊಳ್ ನೆಟ್ಟನೆ ನಡುಗದೆ ಕದಡದೆ ಕಟ್ಟದಟಂ ದೊಡ್ಡದೇವನೆಸೆದಂ (ಚಿಕವಿ. ೩-೧೮).

[ನೀರ್+ಅಟ್ಟು$_4$]

ನೀರಡಕ (ನಾ). ನೀರನ್ನು ಹೊತ್ತು ತರುವವನು ; ನೀರು ತುಂಬುವವನು : 'ನೀರಡಕಿ' ಪರಾ.

[ನೀರ್+ಅಡಕು$_1$ (<ಅಡುಕು)+ -ಅ$_7$]

ನೀರಡಕಿ (ನಾ). ನೀರನ್ನು ಹೊತ್ತು ತರುವವಳು ; ನೀರು ತುಂಬುವ ದಾಸಿ : "ನೀರಡಿ[ಡ]ಕಿ[ಪಾಣಾಂ. ಕೆ] ಪೋಟೆಯೆನಿಸಿಕ್ಕು" (ಮಂಗರಾ. ೯೦-೪). [ನೀರಡಕ+ -ಇ$_2$]

ನೀರಡಕು 'ನೀರಡುಕು' ನೋ.

ನೀರಡಕೆ 'ನೀರಟಕ್ಕೆ' ನೋ.

ನೀರಡಸು, ನೀರಡಿಸು (ಕ್ರಿ). ನೀರನ್ನು ಬಯಸು ; ಬಾಯಾರು ; ತೃಷೆಯಾಗು : ಧರ್ಮಪುತ್ರಂ ನೀರಡಸಿ ಸಹದೇವನನೆಲ್ಲಿಯಾದೊಡಂ ನೀರಂ ಕೊಂಡು ಬೇಗಂ ಬಾಯೆಂದು ಪೇಟ್ವುದಂ (ಪಂಪಭಾ. ೮-೩೬ ಪ) ; ಅಂಗೈಯೊಳಗಣ ಹಂಸೆ ಹಾಲನೊಲ್ಲದೆ ನೀರ ಕುಡಿಯಿತ್ತು ನೀರು ಬಾಯಾಱಿ ನೀರಡಸಿ ಅಱಕೆಗೊಂಡಿತ್ತು (ಅದಪ. ೫೯-೧೦೪) ; ನೀರಡಸಿರ್ದ ಹೊತ್ತಾಜ್ಯ ದೊರಕಿ ಫಲವೇನು (ಹಚಕಾ. ೭-೮) ; ತುರಗ ನೀರಡಸಿದರೆ ರಣದಲಿ ಸರಸಿಯನು ತೋಡಿದನು (ಕುವ್ಯಾದ್ರೋ. ೧೦-೪೩) ; ಸುರನದಿಯ ತೋಯಮಿರೆ ನೀರಡಸಿ ಹಿಮಜಲಕೆ ಪರಿವಂತೆ ನಿನ್ನ ದರ್ಶನಮಿರ್ದುಮಿಾ ಮಹಾಧ್ವರಕೆಳಸುವವನಲ್ಲ (ಜೈಮಿಭಾ. ೨೬-೭೬) ; ನೀರಡಸಿ ಬಂದ ಸೋದರಗೆ ನೀರನು ಕೊಡಲು ಮನು ಧರ್ಮಶಾಸ್ತ್ರವೆನಗೊರೆಯಬೇಕೇನು? (ಕೋಗಿಲೆ. ೨೪-೫). **ನೀರಡಿಸು :** ಸಿರಿದೊಂದು ಕಾಜಿನ ಬಟ್ಟಲೊಳ್ ಕಮ್ಮಿತಪ್ಪ ನೀರಂ ತೀವಿ ಚಂದ್ರ ಬಿಂಬಮಂ ನೀರೊಳ್ ಕಾಣ್ಬಂತಿರೆ ಮಾಡಿಯರಸಿಯಂ ತೃಷ್ಣಾಭಿವೃದ್ಧಿ ಯಪ್ಪಾಹಾರಮನೂಡಿ ನೀರಡಿಸಿದೊಡೆ ಚಾಣಾಕ್ಯನಿಂತೆಂದಂ (ಪಡ್ಡಾರಾ. ೧೮೬-೧೭) ; ಹಸಿದು ಎಕ್ಕೆಯ ಕಾಯ ಮೆಲಬಹುದೆ ನೀರಡಿಸಿ ವಿಷವ ನೀಂಟಬಹುದೆ (ಬಸವ. ೧೨೦) ; ಆಸಗ. ನೀರಡಿಸಿ ಸತ್ತಂತಾಯಿತ್ತು (ಮೋಳಿಮಾ. ೭೨-೨೮೫) ; ಉದಕದ ಬಾಣವಕ್ಕುಡಿಸೆ ಒಱತೆಯಾಱಿತು ವರುಣಶರ ಬಾಯಱತು ನೀರಡಿಸಿದುದು (ಕುವ್ಯಾದ್ರೋ. ೧೯-೪೮) ; ಕವಿದು ಕಾಡಾನೆಗಳು ಮಡುವಿಗೆ ತವಕದಿಂ ನೀರಡಿಸಿ ಬಂದುದು ಗಿರಿ ಗಳಂದದಲಿ (ನಳಚ. ೫-೪೪) ; ನೀರಡಿಸಿ ಬಂದಿದ್ದ ಬಿಸಿಲಿನ ಹೊತ್ತಿಗೆ ಇಷ್ಟು ಮಜ್ಜಿಗೆ ಕೊಟ್ಟೆ (ಅಬೋಲೀ. ೩೬).

[ನೀರ್+ಅಡಸು?./ತೆಲು. ಡಪ್ಪಿ, ದಪ್ಪಿ = ಬಾಯಾರಿಕೆ ; ಕೊಲಾ. ಅಡ್ಡ್ = ಬಾಯಾರು ; ನಾಯ್ಕಿ. ಅಡ್ = ಬಾಯಾರಿಕೆ ; ಪರ್ಜಿ. ಅಂಡ್ = ಹಸಿವಾಗು ಅಥವಾ ಬಾಯಾರು ; ಕೋತ ನೀರ್ ಅರ್ಪ್ = ಬಾಯಾರಿಕೆ ; ತೊದ. ಅಟ್ಟ್ = ಬಾಯಾರು]

ನೀರಡಿಕೆ 'ನೀರಟಕ್ಕೆ' ನೋ.

ನೀರಡಿಸು 'ನೀರಡಸು' ನೋ.

ನೀರಡುಕು, ನೀರಡಕು (ಕ್ರಿ). ನೀರನ್ನು ತಂದು ತುಂಬು : ಸಂಗತ ಜಿನಧರ್ಮಮತಿಗೆ ನಾಂಗಳ್ ನಿನಗಱಿಯೆ ತೆಱಿಯೆ ಬಣ್ಣಿಸೆ ಮಾದಿತ್ಯಂಗೆ ಸೊಡರೆತ್ತುವೀ ಗಾಂಪಿಂಗಾಗರಮಾಗಿ ತೊಱೆಗೆ ನೀರಡುಕುವ ವೋಲ್ (ಅಜಿಪು. ೬-೭೯). **ನೀರಡಕು :** ನೀನೆಂದಂತು ತೊಱೆಗೆ ನೀರಡಕಲುಮಾದಿತ್ಯಂಗೆ ಸೊಡರಿಡಲುಮಿಂದ್ರಂಗೆ ದೇವಲೋಕಮಂ ಬಣ್ಣಿಸುವಂತೆಯುಂ ನಿನಗೇನೆಂದು ಕಜ್ಜಂಬೇಟ್ವುದು (ಪಂಪಭಾ. ೯-೧೮ ಪ); ತಿರುಕೊಳವಿನಾಚಿಯೆಂಬಂಗನೆ . . . ತಾಂ ನೀರಡಕುವ ಲಿಂಗವಂತರ ಮನೆಯ ಪೊಕ್ಕು (ಭಾವಚಿಂ. ೮-೧೭) ; ಅಮಳ ಗಂಗಾಧರನೆ ಅಸಮ ಭಕ್ತರಿಗೆ ನೀರಡಕು (ನನವೋ. ೧೫-೨). [ನೀರ್+ಅಡುಕು]

ನೀರಣುಗ (ನಾ). ಸಮುದ್ರದಲ್ಲಿ ಹುಟ್ಟಿದವನು ; ಚಂದ್ರ : "ಚಳಿಗದಿರ . . . ತಾರಗೆಯಾಣ್ಮ ನೀರಣುಗನು . . . ಬಿದುವೆನಲ್ ಚಂದ್ರನಾಮವು" (ಶಬ್ದಮಂ. ೧೬) ; "ನೀರಣುಗನೆನೆ ಚಂದ್ರನಭಿಧಾನ ಮಕ್ಕು" (ಕಶರ. ೫೬). 'ಕಡಲಣುಗ' ಪರಾ.

[ನೀರ್+ಅಣುಗ (<ಅಣುಂಗ)]

ನೀರತೃಣ (ನಾ). ನೀರಿನಲ್ಲಿ ಬೆಳೆಯುವ ಒಂದು ಬಗೆಯ ಜೊಂಡು ಹುಲ್ಲು ; ಆಪು : "ಆಪಃ = ನೀರತೃಣಂ" (ಕಾಶಕೃ. ೪೨).

[ನೀರ$_2$+ತೃಣ]

ನೀರತ್ತಿ (ನಾ). ಒಂದು ಬಗೆಯ ಅತ್ತಿಮರ : ನೀರುವಾಟಿ, ನೀರತ್ತಿ (ಮೃಟಿಗಿ. ೩೬-೭೧೧). 'ಕಲ್ಲತ್ತಿ$_1$', 'ಕಾಡತ್ತಿ' ಪರಾ.

[ನೀರು$_1$ (<ನೀರ್)+ಅತ್ತಿ$_1$]

ನೀರದ (ನಾ). ೧. ಮೋಡ ; ಮೇಘ ; ಮುಗಿಲು : ಶಾರದನೀರದ ನಿಕಾಶ ವಿಶಾಲಧವಳದುಕೂಲಾಂಬರವಿರಾಜಮಾನನುಂ (ಆದಿಪು. ೧೧-೧೦ ಪ) ; ತೇರೊಡ್ಡು ಗಾಳಿಗೊಡ್ಡಿದ ನೀರದದೊಡ್ಡಿನವೊಲಾಗೆ (ಪಂರಾಮಾ. ೧೩-೭೩) ; ನೀರದಸ್ಥಾನದೊಳಿರ್ದ ಬೆಳ್ಮುಗಿಲ ಮಕ್ಕಳ ವೋಲ್ ನಿಜಪಾಂಡುದೇಹ ಸಂತಾನಕವಭ್ರದೊಳ್ ಮಿಱುಗೆ ಬಂದೆಱಗಿತ್ತು . . . ಮರಾಳಮಂಡಳಂ (ಜಗವಿ. ೪-೬೪) ; ತೀರದ ನೀರದಂ ನೆಗೆದು ಗರ್ಜಿಪುದೆಂದು ಪಯೋಧಿಕೇಳಿಯಂ ಸಾರಮರಾಳನೇನುಳಿದುದೇ (ರಾಜಶೇ. ೧೩-೧೯). ೨. ಹಲ್ಲಿಲ್ಲದುದು ; ಬೋಡುಬಾಯಿ ಯುಳ್ಳುದು. ೧, ೨ : ಎನ್ನ ಸಹಾಯದಿಂ ನೆರೆದು ತಾಳ್ದು ಘನತ್ವ ಮನಸ್ಮದೀಯ ಮಿತ್ರೋನ್ನತತೇಜಮಂ ತವಿಪನೆಂದನಿಲಂ ಮುಗಿಲಂ ಕನಲ್ದು ಪೊಯ್ದನ್ನೆಗಳಲ್ ಘನಧ್ವನಿ ಕಳಲ್ದುದಿರ್ದತ್ತು ಘನೋಪಳಾ ಚ್ಛದಂ. ತನ್ನಿಜಮಲ್ಲದಿರ್ದೊಡಿಳೆಯಲ್ಲಿದು ನೀರದ ನಾಮಮಾಂಪುದೇ (ರಾಜಶೇ. ೮-೧೦೬). [ಸಂ.]

ನೀರದಜಾಲ (ನಾ). ಮೋಡಗಳ ಗುಂಪು,—ಸಮೂಹ : ಮೇಲನ ಱಿಯದ ನೃಪನ ಬಾಳಿಕೆ ಗಾಳಿಗೊಡ್ಡಿದ ಸೊಡರು ನೀರದಜಾಲದೊಡ್ಡಣೆ (ಕುವ್ಯಾಸ. ೧-೫೧). [ನೀರದ+ಜಾಲ$_1$]

ನೀರದಪಥ (ನಾ). ಮೋಡಗಳ ಮಾರ್ಗ ; ಆಕಾಶ : ತ್ರಿದಶಾನಕ ಲಯದಿಂ ನೀರದಪಥದೊಳ್ ನಾರದಂಗೆ ತಾಂಡವದ ತಗುಳ್ಪೊದವಿದುದು (ಶಾಂತಿಪು. ೪-೫೭) ; ನೀರದಪಥದೊಳ್ . . . ನಾರದನೀಶ್ವರನ ಮುಂದೆ ನರ್ತಿಸುತಿರ್ದಂ (ತ್ರಿಪುವಿ. ೨೪-೩೮೭). [ನೀರದ+ಪಥ]

ನೀರದಮಾರ್ಗ (ನಾ). = ನೀರದಪಥ : ಬೆಳಗುಗಳೆಲ್ಲಮೊಂದುರುಳಿ ಯಾಗಿ ನಭಸ್ಥಳದಿಂದಮಿಾ ಮಹೀತಳಕಿಱಿತರ್ಪುದೆಂದು ಮನುಜಾಕೃತಿ ಯೆಂದು . . . ನೋಟಕರೆ ತಳವೆಳಗಾಗೆ ಸಾರೆವರೆ ನೀರದಮಾರ್ಗದಿನಂದು ನಾರದಂ (ಪಂಪಭಾ. ೬-೬); ದಶರಥಕ್ಷೋಣೀಶನಾಸ್ಥಾನಭೂಮಿಯನಾ ನೀರದಮಾರ್ಗದಿಂದಿಱಿದು ಸನ್ಮಾರ್ಗಕ್ಕೆ ಮೆಯ್ದಾರದಂ ನಯಮಂ ಸಾರದನಾವ ಕಾಳೆಗದೊಳಂ ಕಣ್ಣಾಱದಂ ನಾರದಂ (ಪಂರಾಮಾ. ೩-೧೮).

[ನೀರದ+ಮಾರ್ಗ]

ನೀರದಮಾಲಿಕೆ (ನಾ). = ನೀರದಜಾಲ : ನೀರದಮಾಲಿಕೆಯಿಂ ತೊಲಗಿದ ಶಶಿ ಕಾಲಿಕೆಯಿಂ ಬೇರ್ಪಟ್ಟ ಕನಕಮಿರ್ಪಂತಿರ್ದಂ (ಪಂರಾಮಾ. ೧೬-೮೧). [ನೀರದ+ಮಾಲಿಕೆ]

ನೀರದರಥ (ನಾ). ಮೋಡವನ್ನೇ ವಾಹನವಾಗುಳ್ಳವನು ; ಇಂದ್ರ : "ಪುರುಹೂತಂ ಮಘವಂ . . . ಶತಮನ್ಯು ನೀರದರಥಂ ಶಕ್ರಂ ವೃಷಂ ವಾಸವಂ" (ವಸ್ತುಕೋ. ೬-೩೩). [ನೀರದ+ರಥ]

ನೀರದರವ (ನಾ). ೧. ಮೋಡಗಳ ಶಬ್ದ ; ಮೇಘನಿನದ ; ಗುಡುಗು. ೨. ಒಂದು ಬಗೆಯ ಸೊಪ್ಪು ; ಚಿಲಕವರೆ : "ನೀರದರವಂ ತಂಡುಲೀಯಕಂ ಮುದಿಷ್ಟಮೆನೆ ಕಿಱುಕುಸಾಲೆಯಕ್ಕುಂ" (ಮಂಗರಾ. ೪೨-೪೦). [ನೀರದ+ರವ]

ನೀರದರುಚಿ (ನಾ). ಮೋಡದ ಬಣ್ಣ ; ಶ್ಯಾಮಲ ವರ್ಣ : ನೀರದ ರುಚಿಯಂ ಪೋಲ್ವ ಶರೀರದ ವನಚರಿ ತಮಾಳಲತೆವನೆಯೊಳ್ಪೊಕ್ಕು (ಶ್ರೀಪುವಿ ೨೭-೩೯). [ನೀರದ+ರುಚಿ]

ನೀರದಸಂಕುಳ (ನಾ). = ನೀರದಜಾಲ : ನೀರದಸಂಕುಳಂ ನೆರೆದು ಬಂದು ಘನಾತುರದಿಂ ಪ್ರತೀಚಿಕಾ ನೀರಧಿನೀರನೀಂಟುವೆಡೆಯೊಳ್ ಬಡಬಾಗ್ನಿಯನೀಂಟ ಪೋಗಿ ತನ್ನೀರದಮಾರ್ಗದೊಳ್ ಪಸರಿಸಿರ್ದುದು (ಬಾಧಪು. ೨೬-೩೯). [ನೀರದ+ಸಂಕುಳ(=ಸಂಕುಲ)]

ನೀರದಸ್ಥಿತಿ (ನಾ). ೧. ಮೋಡಗಳ ಇರುವಿಕೆ,—ನೆಲಸುವಿಕೆ. ೨. ಹಲ್ಲಿಲ್ಲದಿರುವ ಸ್ಥಿತಿ,—ಇರವು. ೧, ೨ : ಗತಬಲನಾಗಿ ವಜ್ರಧರನಲ್ತು ವಯೋಧಿಕನಾಗಿ ತಾರ್ಕ್ಷ್ಯನಲ್ತು . . . ನೀರದಸ್ಥಿತಿಗವಕಾಶನಾಗಿ ಗಿರಿಯಲ್ತೆನೆ ವೃದ್ಧನಿದೇಂ ವಿರುದ್ಧನೋ (ಪುಷ್ಪಪು. ೧೩-೩೫). [ನೀರದ+ಸ್ಥಿತಿ]

ನೀರದಾಧ್ವ (ನಾ). = ನೀರದಪಥ : ಬಣಿತೆಯ ವಿಧಾವಂತ ಮಾವಂತ ಸಾವಂತಗಣದಿನೊಪ್ಪುವ ಸಭೆಗೆ ನಾರದಂ ನೀರದಾಧ್ವದಿನಿಳಿದು ನಡೆತಂದನು (ಚಿಬಪು. ೪೭-೧೫). [ನೀರದ+ಅಧ್ವ]

ನೀರದಾವಳಿ (ನಾ). = ನೀರದಜಾಲ : ಮುಸುಕಿದ ನೀರದಾವಳಿಗಳಂ ಕಿರಣಂಗಳೊಳೊತ್ತಿ ತೇಜಮರ್ವಿಸುವಿನಮಾಗಳೊರ್ಮೊದಲೆ ಮೂಡುವ ಬಾಳದಿನೇಶಬಿಂಬದೊಂದೆಸಕದಿನಾ ದ್ವಿಜನ್ಮ ಸಭೆಯಂ ಪೊಱಮಟ್ಟೊಡೆ ಮಾಸಿದಂದಮುಂ ಪಸದನದಂತೆ . . . ಕಣ್ಗೆಸೆದು ತೋಱುದುದಾ ಕದನ ಕ್ರಿಣೇತ್ರನಾ (ಪಂಪಭಾ. ೩-೬೧). [ನೀರದ+ಅವಳಿ₁(=ಅವಲಿ)]

ನೀರದೋತ್ಪಲವರ್ಣ (ನಾ). ಮೋಡದಂತೆ ಹಾಗು ಕನ್ನೈದಿಲೆಯಂತೆ ನೀಲವರ್ಣವಾದವನು : ನೀರದೋ[ಪಾಠಾಂ.ಜೋ]ತ್ಪಲವರ್ಣನಾಡಿದನಾಡಿದಂ . . . ಸಂಸಾರನಾಟಕಸೂತ್ರಧಾರಿ ಮುರಾರಿ ಕೈಪಱಿಗಾಡಿದಂ (ಜಗವಿ. ೩-೫೩). [ನೀರದ+ಉತ್ಪಲ+ವರ್ಣ]

ನೀರದೋಪಳ (ನಾ). ಆಲಿಕಲ್ಲು; ಘನೋಫಲ : ನೀರದೋಪಳಮಂ ಪೂವಲಿ ತಳ್ತ ಕಾರ್ಮುಗಿಲನುದ್ಯದ್ಧೂಪಧೂಮಂ ನಿರಾಕುಳದಿಂ ಪೋಲ್ತು . . . ಕೇಕಿಸಂಕುಳಮಾಡಿತ್ತು ನಟೇಕದಂಬದೊಡವಂದಭ್ರಾಗಮಭ್ರಾಂತಿಯಿಂ (ಪುಷ್ಪಪು. ೪-೩೭). [ನೀರದ+ಉಪಳ(=ಉಪಲ)]

ನೀರದೌಘ (ನಾ). = ನೀರದಜಾಲ : ಎತ್ತೆತ್ತಲುಂ ಕಾಟ್ಪುರಮಾದಂ ಕೊರ್ವೆ ಬಿರ್ದಂ ಕಱಿದುದು ಬಹಳಾಸಾರಮಂ ನೀರದೌಘಂ (ಚಂದ್ರಪು. ೪-೪೧). [ನೀರದ+ಓಘ]

ನೀರಧರ (ನಾ). ನೀರನ್ನು ಹೊಂದಿರುವುದು ; ಮೋಡ : ಉತ್ಕಂಠವಿಯೋಗಿನೀಜನತೃಷಾತ್ಯುಷ್ಣಾಂಗಸಂಸಂಗದಾಱುದುವಾದಂ ನವನೀಲ ನೀರಧರಮುಕ್ತವ್ಯಕ್ತವಾರ್ಬಿಂದುಗಳ್ (ಚಂದ್ರಪು. ೪-೪೦) ; ತಾರಕಾಸಿತನೀರಧರ ಕಸ್ತೂರಿಕಾಂಜನಸೂರತನಯಾ . . . ಘೋರಗರಳಾಹಾರ ಬಸವಕುಮಾರ ಶರಣಾಗು (ಬಸಪು. ೬೧-೮೫). [ಸಂ.]

ನೀರಧಿ (ನಾ). ಕಡಲು ; ಸಮುದ್ರ ; ಜಲಧಿ : ನೀರಧಿಯ ನೀರ್ಗೆ ಪೋಪಾ ಕಾರಮುಗಿಲ್ ಮರಳವೆಂದು ಶರದಭ್ರಂಗಳ್ ಸಾರಿರ್ದ ಗಗನಗಂಗೆಯ ನೀರನೆ ಕಱಿವಂತಿರೆಱಗಿದವು ಬೆಳ್ಸರಿಗಳ್ (ಜಗವಿ. ೪-೬೯) ; ಆ ನೀರಧಿಪರಿವೃತಭೂಮಧ್ಯದೊಳೇನೆಸೆದತ್ತೊ ಸುವರ್ಣನಗೇಂದ್ರಂ (ಉದ್ಭದೇ. ೨-೯). [ಸಂ.]

ನೀರಪಾವಡಿ (ನಾ). ಒಂದು ಬಗೆಯ ಸಸ್ಯ : "ಕಲಿರಂ—ನೀರಪಾವಡಿ" (ಓಷಧಿ. ೨೦). [<ನೀರ್+ಪಾವಡಿ ?]

ನೀರಬಳ್ಳೆ 'ನೀರುಬಳ್ಳೆ' ನೋ.

ನೀರಬೊಮ್ಮಿ (ನಾ). ಒಂದು ಬಗೆಯ ಸಸ್ಯ : ನೀರಬೊಮ್ಮಿಸೊಪ್ಪು, ನೀರಗೋಣಿಸೊಪ್ಪು, ಇವು ಎರಡು ಬಗೆಯನ್ನು ಪಿಟ್ಟನಿಕ್ಕಿ . . . ಆ ರಸದಲ್ಲಿ ಅರೆದು ಕದಡಿ ಕುಡಿಯಲು ಎರಡು ವೇಳೆ ಮೂಱು ವೇಳೆ ವಿರೇಕಮಕ್ಕುಂ (ವಿನೃವಿ. ೧೧೩). [<ನೀರ್+ಬೊಮ್ಮಿ]

ನೀರರಣಿ (ನಾ). ನೀರೊಡ್ಡು ; ಏರಿ ; ಕಟ್ಟೆ (?) : ಧಾರಾಪೂರ್ವ್ವಕಂ ಶ್ರೀಮದಗ್ರಹಾರಂ ಮುಗಳಿಯಲಿ ಬಿಟ್ಟ ವೃತ್ತಿಯ ಸೀಮಾಸಂಬಂಧಿ ಹಿರಿಯ ಕೆಱೆಯ ಕೆಳಗೆ ಗದ್ದೆ ಮಹ ××× ಭೂಮಿಯ ಕೆಲದ ಹಡುವಣ ನೀರರಣಿ (ಎಕ. V, ಹಾಸನ. ೧೩೦-೪೫ ; 1147 ?). [ನೀರ್+ ?]

ನೀರರುಹ (ನಾ). ನೀರಲ್ಲಿ ಹುಟ್ಟಿದುದು ; ಜಲರುಹ ; ತಾವರೆ ; ಕಮಲ : ಕಾಮಂಗೆ ಮಜ್ಜನಕೆಂದೆತ್ತಿದ ಚಂದ್ರಕಾಂತಘಟದೊಳ್ ತಂದಟ್ಟಿಯಿಂ ಪುಷ್ಪವಾಸನೆಗೆಂದಿಕ್ಕಿದ ನೀಳನೀರರುಹಮಂ ಪೋಲ್ದಸ್ತು ಕಟ್ಟುಂದುವಾ (ಪಂಪಭಾ. ೪-೫೧) ; ನೀರರುಹಂಗಳನೊಲ್ಲದೆ ಚಂಚರೀಕತತಿ ಗಂಧಹಸ್ತಿಯೊಳ್ ನೆಲಸುವವೋಲ್ (ಶಾಂತಿಪು. ೫-೯೬) ; ನೀರರುಹಂ ಮಲಯರುಹಂ ಹಾರಂ ಕಲ್ಹಾರಮಮಲವಾಃಪೂರಂ ಕರ್ಪೂರಂ ತಾಪಮನುಡುಗಿಪೊಡಾರಾಧಿಸುಗವನ ತೋಳ ತಳ್ಪಿನ ತಣ್ಪಂ (ಚಂದ್ರಪು. ೮-೮೯). [ಸಂ.]

ನೀರಲ 'ನೇಱಲ್' ನೋ.

ನೀರಲಿ 'ನೀರಿಲ್ಲಿ' ನೋ.

ನೀರವ (ಗು). ೧. ನಿಶ್ಶಬ್ದವಾದ ; ಮೌನದಿಂದ ಕೂಡಿದ : ನಗಂ ಶತಗುಹಾಧ್ವನಿಗಳಿಂ ಪ್ರತಿಘರ್ಜಿಪೋಲಂತೆ, ನೀರವಮಹಾರಣ್ಯಮನುರಣಿತಮಪ್ಪಂತೆ . . . ಘರ್ಜಿಸಿದುದಾ ಅದ್ವೈತಿ ತಾಂ ದ್ವೈತಿಯಪ್ಪಂತೆ (ಶ್ರೀರಾಮಾ. ೧೪೩-೪೮) ; ನಿಬಿಡನೀರವಕಾನನಾಂತರಂ ನಡುವಗಲ ಮಾರ್ತಾಂಡನುರವಣಿಯನಡಗಿಸುತೆ . . . ಮೆರೆದತ್ತು ಚಿತ್ರಗತವಾದಂತೆ ಪೋಲ್ ನಿಶ್ಚಲಂ (ಚಿತ್ರಾಂಗ. ೩-೫೫). (ನಾ). ೨. = ನೀರವತೆ : ದಂಪತಿಗಳಿಬ್ಬರೂ ಸ್ವಲ್ಪ ಹೊತ್ತು ನೀರವವಾಗಿ ಸುಮ್ಮನಿದ್ದರು (ತುರಾಯಿ. ೬೨) ; ನೀರವದ ಇರುಳಿನಲ್ಲಿ, ಆಗೊಮ್ಮೆ ಈಗೊಮ್ಮೆ ಎಚ್ಚರಿಕೆಯ ಕೂಗು . . . ಹೋಷಿಯೊರ್ (ಆತ್ಮಾರ್ಪ. ೧). [ಸಂ.]

ನೀರವಂಜಿ 'ನೀರುವಂಜಿ' ನೋ.

ನೀರವತೆ (ನಾ). ನಿಶ್ಶಬ್ದವಾಗಿರುವಿಕೆ ; ಮೌನ : ನೀರವತೆಯೆ ಸಂಗೀತಂ ಬೊಬ್ಬಿರಿಯುವ ಮಂದೆಗಿಂ (ಅನಿಕೇ. ೧೪-೧೭). [ಸಂ. ನೀರವತಾ]

ನೀರವತ್ತಿಗೆ 'ನೀರ್ವತ್ತಿಗೆ' ನೋ.

ನೀರವಲಕ್ಕಿ (ನಾ). ನೀರಿನಲ್ಲಿ ನೆನೆಸಿದ ಅವಲಕ್ಕಿ : ಸರಸೋತಿಯು . . . ಆಕೆ ತಂದುಕೊಟ್ಟ ನೀರವಲಕ್ಕಿಗೆ ಉಪ್ಪಿನಕಾಯಿರಸವನ್ನು ಸೇರಿಸಿ, ಹೊಟ್ಟೆ ತುಂಬ ತಿಂದಳು (ಮರಮ. ೬೨). [ನೀರು₁(<ನೀರ್)+ಅವಲಕ್ಕಿ]

ನೀರವಳ (ನಾ). ಒಂದು ಬಗೆಯ ಗಿಡ ; ಜಾಪಾಳದ ಗಿಡ : ಮರಗಳು : ಹೆಸವ . . . ಚಡಲೆ, ನಾರವಳ್ಳಿ, ನೀರವಳ (ನಮ್ಮನು. ೨೩೬). [←ತಮಿ. ನೀರ್ವಳ]

ನೀರವಾಳಿ (ನಾ). ಒಂದು ಬಗೆಯ ಸಸ್ಯ : "ತೋಯಲಕ್ಷ್ಮೀ—ನೀರವಾಳಿ" (ಓಷಧಿ. ೬೩). [?]

ನೀರಸ (ಗು). ೧. ರಸವಿಲ್ಲದ ; ಒಣಗಿದ ; ನಿರ್ದ್ರವವಾದ. ೨. ಸ್ವಾರಸ್ಯವಿಲ್ಲದ ; ನಿಸ್ಸಾರವಾದ ; ಸತ್ತ್ವರಹಿತವಾದ : ನೀರಸವಸ್ತುವನಿಕ್ಕಲ್ ಸಾರಾಮೃತಮಯಮೆನಿಪ್ಪ ರಸರಿದ್ಧಿಯನಾ ಸೂರಿವರಂ ತಳೆದಂ ಕೈಸಾರದು ನೋಟ್ಪರ್ಗೆ ಮತ್ತೆ ಪಸಿವುಂ ತೃಷೆಯುಂ (ಬಾಧಪು. ೧೬-೧೧೪). ೩. ದುರ್ಬಲವಾದ ; ಶಕ್ತಿಹೀನವಾದ. ೪. ರುಚಿಯಿಲ್ಲದ ; ಸವಿಯಿಂದ ಕೂಡಿರದ. (ನಾ). ೫. ಒಣಗಿದುದು ;

ನೀರಸವಾಗೆ ಬಳ್ಕಿ ಗಿಡು ಪೆರ್ಮಾರಗಳ್ . . . ಕರಯಂತ್ರನಾಳದಿಂ ಭೂರಸ ಮೆಲ್ಲಮುಂ ತೆಗೆಯೆ ಭಾನು . . . ಬಂದುದು ಬೇಸಗೆಗಾಲಂ (ಪಂಂಪಾಸಾ. ೭-೮೫); ನೀರಸಮಾದೆಲೆಯುಂ ಸಲೆ ಸೈರಿಸದಿವೆ ನೂಂಕಿ ಕಳೆದುವೆನೆ ಕಳಿಕೆಗಳುಂ ಕೋರಕದ ತುಜಿಗಲುಂ ಸಹಕಾರದ ಕೊಂಬುಗಳೊಳೊಡದದೇಂ ಮೂಡಿದುವೋ (ಲೀಲಾವ. ೯-೮೯); ರಾಹುವೆತ್ತಲು ಲಲಿತತಾರಾವ್ಯೂಹ ವೆತ್ತಲು ದಳ್ಪಿಸುವ ದವದಾಹವೆತ್ತಲು ನೀರಸದ ಶೃಂಗಾರಿ ತಾನೆತ್ತ (ಶುಷ್ಕಾದ್ರ್ಯಾ. ೧೬-೨೪). ೩. ಸ್ವಾರಸ್ಯವಿಲ್ಲದುದು ; ನಿಸ್ಸಾರವಾದುದು : ಪುದಿದ ತಜಗೆಲೆಗಳಂ ಕಂಡುದಜುಂದಂ ಧಾನ್ಯಸಮಿತಿ ನೀರಸಮಕ್ಕುಂ ತುದಿಯೊಳ್ ಮನುಜಪ್ರತತಿಗಮದೆ ದಲ್ ಭೋಗೋಪಭೋಗ ಕಾರಣಮಕ್ಕುಂ (ಆದಿಪು. ೧೫-೮೩) ; ಪೋದೊಲವೆಯ್ದೆ ಮುತ್ತ ಪೊಸತಾದುವು ನೀರಸವಾಗಿ ಗಡ್ಡೆಯಂಬೋದ ಮನಂ ಕೊನರ್ತುವು (ಚಂದ್ರಪು. ೭-೩೬); ಕಡುಚದುರೆ ನೀ ರಣದೊಳಾಳ್ಪನವನೆನ್ನೊಡನೆ ತೋಜಾದೊಡೆ ನೀರಸವೆನಿಸದೆ ಪೇಳು (ಜೈಮಿಭಾ. ೧೬-೧೦); ನೀರಸವಾದ ಸತ್ವಹೀನವಾದ ಆಹಾರದಿಂದ ಒಬ್ಬ ಮನುಷ್ಯನಿಗೆ ಒಂದು ಜನಾಂಗಕ್ಕೆ ಆಗುವ ಹಾನಿ ಅಷ್ಟಿಷ್ಟಲ್ಲ (ಗೃಹವಿ. ೪೯); ವ್ಯಕ್ತಿಗಳ ಮನಸ್ಸಿನಲ್ಲಿ ಕಲಾಧಿರುಚಿಯಿಲ್ಲದಿದ್ದರೆ ಜೀವನ ನೀರಸವಾಗುತ್ತದೆ (ತಿಕ್ಷದ. ೩೮೪). ೪. ರಸವನ್ನರಿಯದವನು ; ಅರಸಿಕನಾದವನು : ನೀರಸನಪ್ಪ ತಾಪಸನ ತೋಟಯೊಳೋಪಸದೃಶ್ಯಮಾಗೆ ಸಂಸಾರಮಸಾರಮಾದುದು (ಪುಲ್ಲಪು. ೧೪-೫೦); ರಸಮುಂ ಭಾವಿಸದರ್ಥಮುಂ ಬಗೆಯದಜ್ಞರ್ ಭಾವದೊಳ್ ರೂಢಿವೆತ್ತೆಸೆವಂ ತಾರ್ದ್ದಿ ಶಾಸ್ತ್ರದೊಳ್ ವಿಕಳರುದ್ಯತ್ಕಾವ್ಯದೊಳ್ ನೀರಸರ್ ಬೆಸಿದರ್ಸುರ್ (ಸೂಕ್ತಿಸು. ೧-೬೪). ೬. [ಕಾವ್ಯಮಿಮಾ] ಹದಿನೆಂಟು ಬಗೆಯ ಕಾವ್ಯದೋಷಗಳಲ್ಲಿ ಒಂದು ; ರಸವ್ಯಂಜಕ ಗುಣವಿಲ್ಲದಿರುವುದು ; ರಸಾಭಾವ : ಅಸದರ್ಥಂ ವಿಪರೀತಕಲ್ಪನೆಯಭವ್ಯಂ ದುಷ್ಕರಂ ಗ್ರಾಮ್ಯ ನೀರಸಮಪ್ರಾಧಿತೆಯಪ್ರತೀತಿವಚನಂ . . . ಎಂಬಿವಿನಿತುಂ ದೋಷಂಗಳಷ್ಟಾದಶಂ (ಛಂದೋಂಬು. ೧-೪೬ ಅನಿಬ), ಅಸಮರ್ಥಮಪ್ರತೀತಂ ವಿಸಂಧಿ ವಿಪರೀತಕಲ್ಪನಂ ಕಷ್ಟಂ ನೀರಸಮೆಂದು ದೋಷಮಿವು ಸಮನಿಸುಗುಂ ಪದದೊಳ್ ಪದವಾಗಮಜ್ಞರ ಮತದಿಂ (ಕಾವ್ಯಾವ. ೪೩೫); ವೈರಿಪದವಪಶಬ್ದವು . . . ನೀರಸಂ ಶೈಥಿಲ್ಯವರ್ಣಂ ಕಾರಕವಿರಹಿತಂ ಕ್ರಿಯಾಲಂಕಾರಹೀನವೆನಿಪ್ಪ ಪೊಳ್ಕಂ ತೂಜಿ ಕಳೆದು (ಒಸಪು. ೧-೧೪); ಹೀಗೆ ನಾವು ಒಪ್ಪುವುದೇ ಆದರೆ ರಸಕ್ಕೆ ಅಗರವಾಗಿರುವ ಮಜ್ಜಾಶಾವ್ಯರಾಶಿಯನ್ನೇ ನೀರಸವೆಂದು ಕರೆದಂತಾಗುತ್ತದೆ (ಧ್ವನ್ಯಾಲೋ. ೬೭); ವ್ಯರ್ಥ ಆಡಂಬರದ, ಶುಷ್ಕ ನೀರಸದ ಶೈಲಿ ಮಕ್ಕಳಿಗೆ ಬೇಸರ ಹಿಡಿಸಿಬಿಡುತ್ತದೆ (ತಿಕ್ಷದ. ೨೬೯). ೯. [ಸಂಗೀತ] ಗಾಯನದ ಹದಿನೈದು ಸ್ವರದೋಷಗಳಲ್ಲಿ ಒಂದು ; ರಸಪ್ರಸರಣವಿಲ್ಲದಿರುವುದು : ಕಂಪಿತ . . . ನೀರಸ . . . ಕಾಕಸ್ವರ ತಾಳವಿಹೀನವೆಂಬ ಪದಿನೈದು ಸ್ವರದೂಷಣಂ ಪೊರ್ದದೆ (ವಿವೇಕ. ೧೯೦). [ಸಂ.]

ನೀರಸಂಗೆಯ್ (ಕ್ರಿ). ಕಾಂತಿಹೀನವನ್ನಾಗಿ ಮಾಡು ; ಕಳೆಗುಂದಿಸು : ಸುಲಿಪಲ್ ವಜ್ರಮಂ ಕದವು ಕೈಪಿಡಿಯನೆಲೆ ನೀರಸಂಗೆಯ್ಕೆ ನಾಸಿಕಂ ಚಂಪಕಮನಾಶ್ರಿತಧ್ವಂಸಿಯೆನಿಸೆ (ಪದ್ಮರಾ. ೩-೨೯).

[ನೀರಸ+ಕೆಯ್[1]]

ನೀರಸತ್ವ (ನಾ). ರಸವಿಲ್ಲದಿರುವಿಕೆ ; ರಸಹೀನತೆ : ಕವಿಗೆ ವಿವಕ್ಷೆಯಿಲ್ಲದಿರುವಾಗಲೂ ಅರ್ಥದ ಸಾಮರ್ಥ್ಯದಿಂದಲೇ ಚಿತ್ರಕಾವ್ಯದಲ್ಲಿ ಕೂಡ ರಸಾದಿ ಪ್ರತೀತಿ ಬರಬಹುದು. ಆದರೆ ಅದು ಅತ್ಯಂತ ಸಣ್ಣ ಪ್ರಮಾಣದಲ್ಲಿರುತ್ತದೆ. ಈ ರೀತಿಯಿಂದಲೂ ಅದಕ್ಕೆ ನೀರಸತ್ವವನ್ನು ಕಲ್ಪಿಸುತ್ತೇವೆ (ಧ್ವನ್ಯಾಲೋ. ೨೨೭). [ಸಂ.]

ನೀರಸಧ್ವನಿ (ನಾ). ಶುಷ್ಕವಾದ ಧ್ವನಿ ; ಭಾವಹೀನವಾದ ಧ್ವನಿ : "ನಾನು ಕ್ಷಮಾಯಾಚನೆಗಾಗಿ ಬಂದಿದ್ದೇನೆ" ಎಂದವನು ಗಿಳಿಪಾಠವೊಪ್ಪಿಸುವಂತೆ ನೀರಸಧ್ವನಿಯಲ್ಲಿ ಗಟ್ಟಿಯಾಗಿ ನುಡಿದನು (ಪುನರು. ೧೯೧).

[ನೀರಸ+ಧ್ವನಿ]

ನೀರಸನಿ, ನೀರಸನ್ನಿ (ನಾ). ಒಂದು ಬಗೆಯ ಮರ ; ತಿಗಡೆ : "ಕುಟನ್ನಟಮೆನಲ್ ನೀ [ಪಾಠಾಂ. ನೀ]ರಸನಿ" (ಮಂಗರಾ. ೪೨-೪೦) ; ನೀರಸನಿಯನೊಪ್ಪಿ ಕೊಂಡು ಕಟುಯಿಂದೀಂಟಲ್ ಭೋರನೆ ತೂರ್ಯಾನ ವಿಸದ ನಿವಾರಣಮಕ್ಕುಂ (ಪಾಪು. ೧೦-೬೬). **ನೀರಸನ್ನಿ** : "ಕಾರ್ಪಟಕಾ-ನೀರಸನ್ನಿ" (ಓಷಧಿ. ೩೧). [?]

ನೀರಸನ್ನಿ 'ನೀರಸನಿ' ನೋ.

ನೀರಸಿಂಬಿ (ನಾ). ಒಂದು ಬಗೆಯ ಸಸ್ಯ : "ಕಾಕಲೋಡಃ—ನೀರಸಿಂಬಿಯ ಭೇದ" (ಓಷಧಿ. ೩೦). [<ನೀರ್+ಸಿಂಬಿ]

ನೀರಸೋಕ್ತಿ (ನಾ). ಸಾರವಿಲ್ಲದ ಮಾತು ; ನಿಸ್ಸತ್ತ್ವವಾದ ಮಾತು ; ಒಣಮಾತು : ಪೊಸಮುತ್ತಿನ ಸಿಪ್ಪುಗಳಂತೆಸೆದಪುವೆಂಬವರ ನೀರಸೋಕ್ತಿಯ ಪುರುಳೇಂ ವಸುಧೆಗಿಟ್ಟುದಿಂದುಳಕೆಗಳ ಪೊಸ ಬೆಳಸಿನಪುವು ಪೊದಟ್ಟು ಬೆಳ್ಪಿದಿವೆಗಳ್ (ಪುಷ್ಪಪು. ೨-೮೧). [ನೀರಸ+ಉಕ್ತಿ]

ನೀರಹಬ್ಬೆ 'ನೀರುಹಬ್ಬೆ' ನೋ.

ನೀರಹಿಪ್ಪಲಿ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಬೇರು : "ಶಾರದಿ-ನೀರಹಿಪ್ಪಲಿ" (ಗಂಗಾಮ. ೬೦೫); ಗೋಮೂತ್ರ, ಸೊಜ್ಜಿಗೆ, ದಂತಿ, ನೀರಹಿಪ್ಪಲಿಯು ಬೇರು, ಚಿತ್ರಮೂಲ, ಇವನ್ನರೆದು ಗುದಕ್ಕೆ ಪೂಸಲು ಮೂಲವ್ಯಾಧಿ ತೀವದು (ವೈದ್ಯವಿ. ೮೨); ಗೋಮೂತ್ರ, ಸಜ್ಜಿಗೆ, ದಂತಿ, ನೀರಹಿಪ್ಪಲಿ ಬೇರು, ಚಿತ್ರಮೂಲ ಇವನರೆದು ಗುದಕ್ಕೆ ಪೂಸಲು ಮೂಲವ್ಯಾಧಿ ಹರ (ಸಳವೈ. ೨೯೩). [<ನೀರ್+ಹಿಪ್ಪಲಿ]

ನೀರಳಗೆ (ನಾ). ನೀರು ತುಂಬಿರುವ ಪಾತ್ರೆ,—ಗುಡಾಣ,—ದೊಡ್ಡಮಡಕೆ: ತಜುಪಿನೆಮ್ಮೆಯ ಹಾಲನಾಲ್ಕೊಂದೆನಿಸಿ ಕಾಸಿ ಕಟುಯು ಸೊಜ್ಜಿಗೆಯನುಪ್ಪಿಕ್ಕಿಯದುಱೊಳು ಕಲಸಿಯಜುವೆಯಂ ಕಾಯ್ದು ನೀರಳಗೆಯೊಳು ಕಟ್ಟಿ (ಸೂಸಶಾ. ೧-೧೭). [ನೀರ್+ಅಳಗೆ[1]]

ನೀರಳ್ಕೆ 'ನೀರಟ್ಕಿ' ನೋ.

ನೀರಜಕೆ (ನಾ). = ನೀರಟ್ಕಿ : ಅರೆವಸುರಾಯುತ್ತು ಹುಲ್ಲೆಸೆಯೆ ನಿಂದುವು ಕಾಯ್ ಪೊಡೆ ಕೊಯ್ಯಲಾಯುತ್ತು ಬಂಧುರತರ ಶಾಕಿ ನೀರಜಕೆ ತೊಟ್ಟನೆ ಮಾಣ್ದುದು ಚಂದನಕ್ಕೆ ಮೆಯ್ಯರಸಿದುದಂಗರೇಖೆ ಹೊಜಹಕ್ಕಗ ಕೋವರಿವಕ್ಕವಾನಗಂ ಶರದದ ಮಾತು ಸಿಂಗಿದುದು ಪೊಕ್ಕುದು ಮಾಗಿ ಮಹೀವಿಭಾಗದೊಳ್ (ಸೂಕ್ತಿಸು. ೧೦-೨೩೭); ಮೊಜಿಯ ಕೇಳುತ್ತ ಲೈತಂದು ನೀರೇಶ್ವರಂ ಮುಜುದು ದೇವಾಸುರ ಮುನೀಶರಂ ನುಂಗಿ ನೀರಜಕೆಯಾಗಲು ವಾರಿಧಿಯ ಕುದಿದು ಕೊಬ್ಬಿ ನಿದ್ದೆಯೊಳಿಪ್ಪ ಪನುಜ ಕುಲದ ಎಜಿಯನಂ ನೋಡಿ (ವೀಶ್ವಪು. ೩-೪೮-೨೬) ; ತಳುವದ ನೀರಜಕೆಯನೆಸಗುತ ಬಂದು ತಲೆದೋಜುತಂದು ಬೇಸಗೆಯು (ಜಂಶ್ರಸಾಂ. ೨೦-೩). 'ನೀರಟ್ಕಿ' ಪರಾ. [ನೀರ್+ಅಜಿಕೆ[2]]

ನೀರಟ್ಕಿ, ನೀರಡಕೆ, ನೀರಡಿಕೆ, ನೀರಳ್ಕೆ (ನಾ). ಬಾಯಾರಿಕೆ ; ದಾಹ ; ತೃಷೆ : "ಉದನ್ಯಾ, ತರ್ಷಃ, ತೃಟ್, ತೃಷ್ಣಾ, ಪಿಪಾಸಾ —ಈ ೫ ನೀರಟ್ಕಿ" (ಪಲಾಯು. ೬೦-೨೦೪); ಭದ್ರಬಾಹುಭಟ್ಟಾರರ್ . . . ಪಲವು ದಿವಸದಿಂದಂ ಪಸಿವುಂ ನೀರಟ್ಕಿಯುಮುಂ ಸೈರಿಸಿ(ಪಡ್ದಾರಾ. ೧೦-೯) ; ಆ ದಿನ್ಮವಜನಮನುಲ್ಲಂಘಿಸಿ ನೀರಟ್ಕಿ ಪೋಪಿನಂ ನೀರಂ ಕುಡಿದು (ಪಂಪಭಾ. ೮-೩೯ ಪ) ; ನಟ್ಟಡವಿಯ ನಡುವೆ ಪಸಿವುಂ ನೀರಟ್ಕಿಯುಂ ತಿಣ್ಣಮಾಗೆ (ಧರ್ಮಾಮೃ. ೨-೧೯೧) ; ಬಿಸಿಲಿಂ ಬೆಂಡಾದವರ್ ತತ್ಕೃಪೆಗೆ ಪರಿದು ನೀರಟ್ಕಿಯಂ ನೀರ್ಗೆ ಕೈಮಟ್ಟುಸಿರಂ ನುಂಗಿರ್ದ

ನಾಸಾವುಟಮರಿಕೆ . . . ಪಾಂಥರ್ ಕುಳಿರ್ಮ ಸಲಿಲವುಂ ಪೀರ್ದು ತೇಗುತ್ತೆ ಪೋಪರ್ (ದಶಕು.೬-೭) ; ದಿನಲಕ್ಷ್ಮಿ ನಡೆಯೊಂದು ಸೇದೆಯಿಂ ಬಬಲ್ದು ಪಯಣಂಬರ್ಪ ತನ್ನಿನಿಯನ ನೀರುಟ್ಕಿಗೆಂದೀಯುತ್ತಿ ನೀಡಿದ ತಣ್ಣೀರ ಪೊಸ ಪೊಂಗಳಸಮಿದೆನೆ . . . ತೋರ್ಪ ತೆಂಗಿಂ (ರಾಮಾಶ್ವ. ೫೬-೯). **ನೀರಡಕೆ** : ನೀರಡಕೆ ಪಿರಿದಾಗೆ ಪೆಱೊಂಪಿನೆ ನಿಡುಸುಯ್ಯೆ ಹಯುಂ ಕರಂ ಜ್ವರಾರ್ತನೆನಿಕ್ಕುಂ (ಲೋಕೋಪ.೯-೨೬೪); ಹಸಿವು ನೀರಡ[ಪಾತಾಂ. ಡಿ]ಕೆ ನಿದ್ರಾಲಸ್ಯವಾಗಿ ನಂದಿಸಿ ಹೋಗಿ . . . ಹುಸಿಗೆ ಹೂಂಕೊಳಿಸುವೆಂ (ಪಚಕಾ. ೯-೧೮); ಹಸಿವು ನೀರಡಕೆ ಸಂತಾಪವ ನೆಜಪ ವಾರಿಸಿಕೊಂಡು ಬಲಗೂಡಿ ತೆರಳ್ದು (ಪೋಪಚ. ೧೯-೬೦). **ನೀರಡಿಕೆ** : "ನೀರಡಿಕೆ ತರ್ಪಂ ಪಿಪಾಸೆಮೆನಿಸಿಕ್ಕುಂ" (ಸುಂಗರಾ. ೭೦-೧೪); ಬಿಜು ವಿಸಿಲುಂ ಸುಡುತಿರೆ ನೀರಡಿಕೆ ತಿಣ್ಣಮಾದತ್ತಾಗಳ್ (ಶಾಡಂಪೂ. ೧೯೬); ಮಾರ್ತಂಡಮಂರೀಚ ಸುತ್ತಿ ಮುತ್ತೆ . . . ಬೆನ್ನೊಣಗಿ ಚರ್ಮಂ ಹೊಸ್ಪಳಿಸಿ ಸೀಳ್ದು ಬಿಡೆ ನಾಡೆ ನೋಯಿಸಿ ನೀರಡಿಕೆ ನೆರೆದೊಳಗುದೋಜೆ (ಗಿರಿಕ. ೯-೨೬ ವ); ನೀರಡಿಕೆಗೆ ಮುರೀಃಕೆಯಿಂದ ತಣಿವಹುದೇ(ಕೌಶಾ. ೩೮-೧೧); ಅಡಿಗಡಿಗೆ ಹಸಿವೌಳುವುದು ನೀರಡಿಕೆ ನರ್ಬಂಧಿಸಿತು . . . ಅವನಿಪನೆ (ತೊಡರಾ. ೩-೪-೬೧) ; ನೀರಡಿಕೆಗೆಂದನುತೆ ಚಂತೆಗೊಳುತ ಅಂಬುಧಿಯ ಪೊರೆಗ್ಯೆದಲೆಂದು ರವಿ ವೇಗದಿಂ ಸಂಭ್ರಮದೊಳ್ಕೆದಿ ಪಶ್ಚಿಮ ಗಿರಿಯಂ ಸಾರುವನು (ಪಂಕಾರಾ. ೫-೨-೧೬) ; ಹರಿಕುಲಿಶನು . . . ಹಣ್ಣು ಹಂಪಲುಗಳನ್ನು ತಿಂದು ಹಸಿವು ನೀರಡಿಕೆಗಳನ್ನು ಕಳೆದುಕೊಳ್ಳ ಬೇಕಾಗಿತ್ತು (ಮುಸಸ. ೭೪). **ನೀರಳ್ಕೆ** : ಹಸಿವಿಲ್ಲದವಗೂಟವೇಕೆ ನೀರಳ್ಕೆಯು ಗಸಣಿಯಿಲ್ಲದರೆ[ಗೇ]ಕೆ ಪಾನ (ಭರಚ. ೬೬-೧೧೭). 'ನೀರಜಿಕೆ' ಪರಾ. [<ನೀರಡಸು]

ನೀರುಟ್ಕಿಗೊಳ್ (ಕ್ರಿ). ಬಾಯಾರು ; ನೀರಡಸು : ಒಳಗಿರ್ದ ಭೂರಿಗಳನಿಬರುಂ ಕಡುವಿಸಿಲೊಳ್ ಪರಿತಂದು ಪಸಿದಿರ್ದುದಜಂ ನೀರುಟ್ಕಿಗೊಂಡು ಬಾವಿಯನಜಸಿ . . . ಪೋದರ್ (ಚಕವಿ. ೪೭-೧೧). [ನೀರುಟ್ಕಿ + ಕೊಳ್[1]]

ನೀರಾ (ನಾ). ತಾಳೆ ಅಥವಾ ಈಚಲು ಮರದಿಂದ ತೆಗೆದು ಇನ್ನೂ ಹುಳಿ ಹಿಡಿಯದಿರುವ ರಸ : ಸೇಂದಿ ಕಂಟ್ರಾಕ್ಟು ಮಾಡುವಾಗ ಗೌಡರು ನಂಗನಿಗೆ ನೀರಾ ತರಿಸಿ ಹತ್ತು ದಿವಸ ಕುಡಿಸಿದರು (ಸಸ್ನೂರು. ೨೯೩); ತಾಳೆಮರದ . . . ಎಳೆಯ ಹೂಗೊಂಚಲನ್ನು ಕತ್ತರಿಸಿದಾಗ ಧಾರೆಧಾರೆಯಾಗಿ ಸುರಿಯುತ್ತದೆ 'ನೀರಾ' ; 'ನೀರಾ'ವಿನ ರಸಳ್ಟುಯೇ 'ತಾಟಬೆಲ್ಲ'; ಹುಳಿಹಿಂದಿದ 'ನೀರಾ' ವೇ ಕಳ್ಳು. 'ನೀರಾ' ಮೈಗೆ ಬಹಳ ಒಳ್ಳೆಯದಂತೆ (ಹಸುಹೊ. ೩೩೭). [ಸಂ. ನೀರ]

ನೀರಾಂಜನ, ನೀಲಾಂಜನ (ನಾ). ೧. ದೀಪ ; ನೀರಾಜನ : ವರ್ಧಮಾನದಿಂ ಸ್ವಸ್ತಿಕದಿಂತಾರಾರ್ತಿಸೆ ವಿರಚಿಸಿದನಗಾರಾತಿ ನಿರಂಜನಂಗೆ ನೀರಾಂಜನಮುಂ (ವರ್ಧಮಾ. ೧೨-೨೬); ಬೆಳೆಯ ನೀರಾಂಜನದ ಹಲಿಗೆ ೯ ಹಿರಿಯ ಆರತಿ ೪ . . . ಯಿಂ ಆರತಿ ನೀರಾಂಜನಕುಂ ದೀಪಾರಾಧನೆಗೂ ಸಮುಚ್ಚಸ್ತ ಹಸುವು ೩೦೦ (ಸೌಇಇ. IV, ೨೭೩-೪೦ ; 1513); ವಿಶ್ವೇಶ್ವರನೆದುರು ಗೋಪುರಾರತಿ ನಡೆದಾಗ ನೀರಾಂಜನಗಳ ಸಾಕ್ಷಿಯಾಗಿ ತನ್ನ ಯಾಚನೆಯನ್ನು ದೇವರೆದುರು ಇಟ್ಟು ಅಂಗಲಾಚಿದಳು (ಗಂಮಾಯಿ. ೨). ೨. ದೀಪವನ್ನು ಹಚ್ಚಿಡುವ ಸಾಧನ : ಹವೆತುಂಬಿದ ಕುಪ್ಪಿಯ ಬುಡದಲ್ಲಿ ಸ್ವಲ್ಪ ನೀರು ಇಟ್ಟು ಆ ನೀರೊಳಗೆ ಒಂದು ನೀರಾಂಜನವಿಟ್ಟು (ಮುಂಬಯಿ. ೬-೧೧). **ನೀಲಾಂಜನ** : ೧. ಪಿಡ್ಡಿಬತ್ತಿಗಳ ನೀಲಾಂಜನವ ಸರ್ಪನೇಣಿಯರು ಸರಸೋಕ್ತಿಯಿಂ ಪಿಡಿದು ನಿಂದಿರ್ದರುಮದೇಪೇಳ್ವೆನು (ನಮೋ. ೧೯-೨೮); ಅಚ್ಚೆತ . . . ಚಾವಡಿಗೆ ಬಂದರೆ, ಅಲ್ಲಿ ನರಸಿಂಹಯ್ಯ ನುಲಗಿದ ಚತ್ರವಿಲ್ಲ. ಬದಲೊಂದು ನೀಲಾಂಜನ ಉರಿಯುತ್ತಿತ್ತು (ಮುಗಿಯು. ೩೩೧); ಕಣ್ಣು ನೀಲಾಂಜನ, ಕರಗಿಸಿದ ನಕ್ಷತ್ರ (ನೆಲಸು. ೫-೪). ೨. ಎಳ್ಳೆಣ್ಣೆ ಮೊದಲಾದ ಎಣ್ಣೆಗಳಿಂದ, ಹಣತೆ ಇಲ್ಲವೆ ಕಂಚಿನ ನೀಲಾಂಜನಗಳಲ್ಲಿ ದೀಪ ಉರಿಸುವ ರೂಢಿಯಿತ್ತು (ಬಾಲಪ್ರ. I, ೩೫೦) ; ಒಂದು ಸಣ್ಣ ಪೊಟ್ಟಣದಲ್ಲಿ ಕಲ್ಲುಸಕ್ಕರೆ ಚೂರುಗಳು, ಕರ್ಪೂರ, ಒಂದು ಸಣ್ಣ ನೀಲಾಂಜನ—ಇವೇ ಮೊದಲಾದ ಪದಾರ್ಥಗಳು (ಇಬದು. ೧). [<ಸಂ. ನೀರಾಜನ]

ನೀರಾಕರ (ನಾ). ನೀರಿಗೆ ಆಶ್ರಯವಾಗಿರುವುದು ; ಕಡಲು ; ಸಮುದ್ರ : ಗಗನಮುಂ ಮಾರ್ಪೊಯ್ಕೆ ಕಣ್ಮೊಸ್ಪಿ ತೋರ್ಪುದಿದುತ್ಪೇಂ ಖದಸಂಖ್ಯಶಂಖಭವಳಂ ಗಂಭೀರನೀರಾಕರಂ (ಪಂಪಭಾ. ೪-೨೪); ಆಂತು ಗಂಭೀರನೀರಾಕರದಿರ್ಪಂತಿರ್ದ ಕಮಲಾಕರಮುಂ ನೋಟ್ಪಲ್ಲಿ (ಗದಾಯು. ೬-೧೧೨) ; ವಾರಿಯೊಳಿರೆ ಪದ್ಮರಾಗಮಬ್ಜಾಕರಮಾ ನೀರಾಕರಮನೆ ಕಣ್ಗೇಂ ರಾರಾಜಿಸಿದುದೊ ನಿತಾಬ್ಜಮುಕ್ತಾಳಿಗಳಿಂ (ರಾಜಶೇ. ೧೨-೨೪). [ನೀರ$_2$ + ಆಕರ$_3$]

ನೀರಾಗ (ಗು). ೧. ಶಾಂತವಾದ ; ವಿರಕ್ತಿಭಾವದಿಂದ ಕೂಡಿದ : ಅಪಗತಕಾಲುಷ್ಯನೀರಾಗಲೋಚನನಂ ಭಕ್ತಿಧರಾನತರೋಲಗಿಸುತ್ತಿರ್ಪನ್ನೆಗಂ (ಶಾಂತಿಪು. ೬-೪೨ ಪ). (ನಾ). ೨. ಆಸಕ್ತಿಯಿಲ್ಲದಿರುವಿಕೆ ; ಪ್ರೀತಿಯಿಲ್ಲದಿರುವಿಕೆ ; ವಿರಕ್ತಿ : ತ್ಯಾಜ್ಯರಾಗೀಯಂ ತನ್ನನಗಲ್ದೊಡಂ ನೆರೆದೊಡಂ ನೀರಾಗಮುಂ ರಾಗಮುಂ (ಪಂರಾಮಾ. ೬-೫). ೩. ವೈರಾಗ್ಯದಿಂದ ಕೂಡಿದವನು ; ವಿರಕ್ತ : ಆ ತಪಸ್ವಿಗಳ್ ನೀರಾಗರಾಗಿಯುಂ ಕಥಾರಸವಿಸ್ಮೃತಗುರೂಚಿತಪ್ರತಿಪತ್ತಿಗಳುಂ . . . ಪರವಶರುಮೆನಿಸಿ ಕೆಲ್ಲುದು ಬೇಗಮಿರ್ದಲ್ಲಿಂದಮೆಬ್ಬು (ಕಾದಂಬಿ. ೭೦೬) ; ನೀರಾಗರೆನಿಸಿದೆಮಗಮಕಾರಣದಿಂದೊಲವು ನಿನ್ನ ಳಾದತ್ತು (ಚಂದ್ರಪ್ರ.೬-೧೧) [ಸಂ.]

ನೀರಾಗಿ (ನಾ). ರಾಗದಿಂದ ದೂರನಾದವನು ; ವಿರಾಗಿ; ವಿರಕ್ತ : ನೀವು ಸುಹೃದಯರಿಂದು ದುರ್ಜನರಾವು ನೀವ್ ನೀರಾಗಿಗಳು ರಾಗಾವಲಂಬರು [ಪಾತಾಂ. ನೀವ್ ರಾಗಿಗಳು ಮೇಣ್ ರಾಗಾವಲಂಭರು] ನಾವಲೇ (ಕುವ್ಯಾಸ. ೧೩-೩೬). [ಸಂ. ನೀರಾಗಿನ್]

ನೀರಾಜ (ನಾ). ಆರತಿ : ವಿತತಗೋಸ್ಪರ್ಶಹಸ್ತಂ . . . ಉನ್ನತ ಸುಜನನೀರಾಜ [ಪಾತಾಂ. ಸತಿನಿರಂಜನಾ] ಕಾಂತಿಮಯೆಂಕಾಯನಂದುಪ್ಪವಡಿಸಿದನರಸನು (ಪಚಕಾ. ೪-೫೪). [ಸಂ.]

ನೀರಾಜನ (ನಾ). ೧. (ದೇವರ ಮುಂದೆ) ಜ್ಯೋತಿಯನ್ನು ಎತ್ತುವುದು ; ಮಂಗಳಾರತಿಯನ್ನು ಮಾಡುವುದು : ಆ ಮಂಗಲ ಸವನಸಮಯಾನಂತರಂ ಜಾನಕಿ ನೀರಾಜನವಿರಾಜಮಾನೆ ಧಾರಾನಳಯು ಜಲಯಂತ್ರಪುತ್ರಿಕೆಯಂತೆ . . . ಪೆಟ್ಟ ನಿಲ್ದುದುಂ (ಪಂರಾಮಾ. ೫-೪೦ ಪ) ; ಸ್ಫುರದ್ವರ್ಣಪೂರ್ಣಾಕನನ್ಮೂರ್ತಿಗೆ ವರ್ಣಪೂರವಿಳಸನ್ನೀರಾಜನಂ ಮಾಟ್ಟುಮೇ (ಪಪ್ಪು. ೧೧-೪೩) ; ಬಳಿಕ್ಕಾ ರಸವಧಿಕವಾಗಿ ಮೆಗ್ಗಳಿಪ ನೀರಾಜನಪ್ರಭೆ ಕುಗ್ಗಿ ಸುಸುಳಿಸಿತೋ ಮಜ್ಜೆದು ನೀ ಮುಗ್ಗಿಸಿದೊ ವಿಕಾರತಿಯನಯ್ಯಂಗೆ ಕೊಡುವಾಗ (ಒಸಪು. ೪೭-೧೬) ; ಬಹಳ ವರ್ತಿಗಳ ಕರ್ಪೂರನೀರಾಜನದ ಕಂಪಿನ . . . ಅಮಲತಾಂಬೂಲದ ಪರಿಕ್ರಮದ ಸೊಗಸಿನ ಕೃತೋಪಚಾರಂಗಳಿಂದಮರ್ಚಿಸಿದಳಭವನಂ ಕಾತ್ಯಾಯನಿ. (ಜೈಮಿಭಾ. ೧೫-೨೪). ೨. ಆರತಿಯನ್ನು ಬೆಳಗುವಾಗ ತಟ್ಟೆಯಲ್ಲಿಡುವ ದೀಪಾರತಿ ; ನೀಲಾಂಜನ : ಪರಿಪರಿಯ ಕರ್ಪೂರಸೊಡರ್ಗಳಿಂ ಭೂಪದಿಂ ಗುರುತರದ ನೀರಾಜನಂಗಳಿಂ . . . ತಾಂಬೂಲದಿಂ ಭೂನಿಪಂ ಗಿರಿಜಾಧವನನರ್ಚಿಪನಿತಜಸಿಂಹಗೆ (ಚಬಪು. ೫೧-೨೨) ; "ಆರತಿ" (ಚಬಪು. ಕೋಶ) ; ನೀರಾಜನಂಗಳಂ ತಂದೋರಂತೆ ಸುವಾಸಿನೀಜನಂಗಳ್ ಜವದಿಂ ಚಾರುತರಮೆನಿಸಿ ಬೆಳಗಿ ನಿವಾರಿಸಿದರ್ ನೂತ್ನ ವಸ್ತ್ರಮುಮನೆಡಬಲಕಂ (ಹಾಲಾಸ್ಯ. ೧-೧೫-೫೧). [ಸಂ.]

ನೀರಾಜನಂಗೆಯ್ (ಕ್ರಿ). ಆರತಿಯನ್ನು ಎತ್ತು ; ಮಂಗಳಾರತಿಯನ್ನು ಮಾಡು : ಆ ತ್ರಿಲೋಕತಿಲಕನ ಜನ್ಮೋತ್ಸವದೊಳ್ . . . ಕರ್ಮಭೂತಳೋಪಸರ್ಗವಿಧ್ವಂಸನನಿಮಿತ್ತಮಾಗಿ ನೀರಾಜನಂಗೆಯ್ವಂತೆ, ತದ್ಧರಾತಲಂ ದಕ್ಷಿಣಾಪರ್ವತಮಾಗಿ ಪಚ್ಚಳಿಸೆ (ಆದಿಪು. ೭-೩೬ ಪ).

[ನೀರಾಜನ + ಕೆಯ್[1]]

ನೀರಾಜನವಿಧಿ (ನಾ). ಆರತಿಯನ್ನೆತ್ತುವ ಕ್ರಿಯೆ ; ಆರತಿ ಬೆಳಗುವಿಕೆ : ಮೇರುನೃಪಂಗೆ ನಭಃಶ್ರೀ ನೀರಾಜನವಿಧಿಯನೊಸೆದು ಮಾಟ್ಪಂತೆಸೆದತ್ತು . . . ತಾರಾಚಕ್ರಂ (ಆಜಪು. ೨-೫); ನೀರಾಜನ ವಿಧಿಯಂ ವಿಸ್ತಾರದೆ ಮಾಡುವುದರಾತಿಸಂಕುಲಮಂ ಸಂಹಾರಿಸಲುಂ ವಿಜಯನನವಧಾರಿಸಲುಂ ನೃಪತಿ ಬಗೆವೊಡುದಿತೋದಿತಮುಂ (ಅತ್ಯಶಾ. ೪-೧). [ನೀರಾಜನ + ವಿಧಿ]

ನೀರಾಜಿ[1] 'ನಿರಾಜಿ' ನೋ.

ನೀರಾಜಿ[2] (ನಾ). ನೀರೆ ; ಚೆಲುವೆ (?) : ಠಾವಾಜೀ ಮೆಟ್ಟಾಲಾ ಹಾಕಯ್ಯೋ ನೀರಾಜೀ ನಿನ್ನ ಗಂಡಾನ ತಲೆಯಾ ಕಡಿದವ್ಳೇ (ಹುಟ್ಟಹ. ೯೨) ; ಮೂಗಿಗೆ ಮೇಲೆ ಮಲಗಿರ್ವೋ ನೀರಾಜಿ ನಾಡ್ನಿ ಬಂದವ್ಳೆ ನುಸುಖ ತೋರೆ (ಹಳ್ಳಿಪ. ೧೧೩). [?]

ನೀರಾಜಿತ (ಗು). ಆರತಿ ಎತ್ತಿದ,—ಬೆಳಗಿದ : ಅರ್ಚಿತಸಮಸ್ತ ಶಸ್ತ್ರರ್ ನೀರಾಜಿತತುರಗರೊಪ್ಪಿದರ್ (ಸಂಪಭಾ. ೧೦-೩೭) ; ಆ ಪುರಮಂ ತರುಣೀಕೇಕರಮರೀಚಿನೀರಾಜಿತಾಕ್ಷತಾಂಗಂ ಪೊಕ್ಕಂ (ಚಂದ್ರಪು. ೬-೪೨).

[ಸಂ.]

ನೀರಾಜಿಶೀರೆ 'ನಿರಾಜಿಸೀರೆ' ನೋ.

ನೀರಾಜಿಸೀರೆ 'ನಿರಾಜಿಸೀರೆ' ನೋ.

ನೀರಾಜಿಸು (ಕ್ರಿ). ಆರತಿಯನ್ನು ಬೆಳಗು,—ಎತ್ತು : "ನೀರಾಜಿಸು-ಆರಾತ್ರಿಕಕ್ರಿಯಾಯಾಂ" (ಶಮುಧಾ) ; ರಾಜಿಪ ಮುಖಿಲಲ್ಲಿಗೆ ನೀರಾಜಿಪ ಮಣಿಪಾತ್ರೆಯುಗಳಮೆನೆ ಸೊಗಯಿಸುಗುಂ . . . ಆವತಂಸ ಕರ್ಣಯುಗಂಗಳ್ (ಜಗವಿ. ೧೦-೩೯) ; ಸೂಜಿಸುವುದು ನಿಚ್ಚಂ ನೀರಾಜಿಸುವುದು ಪರ್ವದಂದು (ಅತ್ಯಶಾ. ೭-೭೨) ; ಉರು ಮಣಿಮಯ ಖಚಿತಾವತಂಸಂಗಳಿಂ ತರುಣಿಯ ಕರ್ಣಯುಗಂಗಳು ವರಮುಖಿ ಲಕ್ಷ್ಮಿಗೆ ನೀರಾಜಿಪ ಪಾತ್ರೆಯಿರವೆನೆ ಕಜ್ಜ ರಾಜಿಸಿದವು (ತ್ರಿಭುತ್ರಿ. ೭೨-೫೮) ; ಭಾನುಮತಿಯೆಂಬವಳ್ ಸಾರ ನೀರಾಜಮನೆತ್ತಿ ನೀರಾಜಿಸಿಯುಂ (ಪೃಷವಿ. ೯-೨೧ ಪ). [ನೀರಾಜನ + -ಇಸು[3]]

ನೀರಾಟ (ನಾ). ನೀರಿನಲ್ಲಿ ಆಡುವ ಆಟ ; ಜಲಕೇಳಿ : "ನೀರಾಟ ಮೆಂದು ಜಲಕ್ರೀಡೆ" (ಕಶಸಾ.೬೯-೫೬೦); ಅಂತು ಜಗುನೆಯ ಮಡುವಂ ತಮ್ಮರಸಿಯರ ನಿಕಟನಿತಂಬಬಿಂಬಂಗಳ ಛಟ್ಪಟೆಯೊಳ್ . . . ತಳ್ಕಂಕಗುಟ್ಟ ನೀರಾಟಮಾಡುವಾಗಳ್ (ಪಂಪಭಾ. ೫-೬೨ ಪ) ; ವನಿತೆಯರ್ ನೀರಾಟದಿಂದಾದ ಕಣ್ಮಲರ್ಗೆಂಪಿಂದಧರೋಷ್ಠಪಲ್ಲವದ ಬೆಳ್ಪಂ ನಾಡೆ ಕಪ್ಪೊಪ್ಪಿದರ್ (ಜಗವಿ. ೧೪-೧೧೩) ; ಮರನಂ ಗಾಳಿಯ ಧೂಳಿಯಂ ರಜನಿಯಂ ನೀರಾಟಮಂ [ಪಾಪಾಂ. ಭೈರಾಜಿಯಂ] . . . ಕೊಂಡಾಡಿ ಬೆಂಡಾಗದೀ ಧರೆಯೊಳ್ (ಪಾಸುಪ. ೧-೬೩) ; ತೊಯ್ದಾರು ನೀರಾಟವನಾಡಿ ಸೊಬಗಾಂತು ಐದೆಯರುಗಳು ಸಂತಸದಿ (ಮೋಹಕ. ೪-೫೯) ; ನೀರಾಟಕೆಳಸಿ ತೀರದೇಶದೊಳ್ ನಿಂದ . ವಾರನಾರಿಯರ ನಿಡುಜಡೆಯ ಪಡಿನೆಳಲನೊಳಕೊಂಡು . . . ಪೌರಸಿತಂಬಿನಿಯರ್ ಕರ ಛಟಿತಛಟಿಪಟಿಳಮಂ ಕಂಡು (ರಾಜಶೇ. ೨-೪೪ ವ) ; ಅನೆ ನೀರಾಟದಲಿ ವಿಮಾನ ಕಂಡಂಜುವುದೆ ಹೀನ ಮಾನವರ ಬಿಜನುಡಿಗೆ ತತ್ಪದ ಜ್ಞಾನಿ ಯಂಜುವನೆ (ಸರ್ವಜ್ಞ. ೬೬೩) ; ನೀರಾಟಕ್ಕೆ ಹೋಗಿ ಹೇರಾಟ ಕಳಕೊಂಡ (ಗಾಪಡಿ). [ನೀರ್ + ಆಟ]

ನೀರಾಟಗೊಳ್ (ಕ್ರಿ). = ನೀರಾಟವಾಡು : ಜಂಭಾರಿ ತನ್ನೈರಾವತ ನೀರಾಟಗೊಂಬುದ ನೋಡಬೇಕೆಂದು ಪೊಂಬಳ್ಳಿಗಂಟೆಯ ಬಲಿದಂತೆ ಸುರಚಾಪ ಸಂಭ್ರಮವಾಯ್ತು ಕಣ್ಮಾನಕೆ (ಮೋಹಕ. ೪-೬೫).

[ನೀರಾಟ + ಕೊಳ್[1]]

ನೀರಾಟವಾಡು (ಕ್ರಿ). ನೀರಿನಲ್ಲಿ ಆಟವಾಡು ; ಜಲಕೇಳಿಯಾಡು : ಕರಿನೇಗಡಾನ್ವಿತಂ ವನಕರಿಪತಿ ನೀರಾಟವಾಡಲೊಯ್ಯನೆ ಬರ್ಪಂತಿರೆ ಗಜಗಮನದ ಸತಿಯರ್ ಬರೆ ಬಂದಂ ಜಲಧಿಗಲಸಗತಿಯಿಂ ಕೃಷ್ಣಂ (ಜಗವಿ. ೧೪-೮೯) ; ನೀರಾಟವಾಡಿ ಪೊಜಮಡುವೈರಾವತದಂತೆ ದಿವಿಜದೀರ್ಘಿಕೆಯಿಂ ಕಾಸಾರದಿನೇಂ ಪೊಜಮಟ್ಪನೊ ವಾರವಧೂಸಹಿತ ಮನವನಿಪತಿದಿಗ್ಮಾಗಂ (ಅನಂಪು. ೭-೫೦) ; ವಾರಿಗೆ ಹೆಂಗಳರು ನಾವು ನೀರಾಟವಾಡಲಿಕೆ ಪೋಗಿ . . . ಸರೋವರ ಧುಮುಕಿದೇವೆ (ಕನಕ. ೧೨೬-೪) ; ನೀರಾಟವಾಡುತ್ತಿರುವಾಗ ಪತ್ತು ಹುಡುಗರ ಹೆಗಲನ್ನು ಹಿಡಿದು ನೀರೊಳಗೆ ಅಮುಕಿಕೊಂಡಿದ್ದು ಅಸ್ಸಾವಸ್ಥೆಪಡಿಸಿಬಿಡುವನು (ಪಚಭಾ. ೧೬). [ನೀರಾಟ + ಆಡು[1]]

ನೀರಾಡು (ಕ್ರಿ). ೧. = ನೀರಾಟವಾಡು : ಅಸಂಖ್ಯಾತ ಯಾದವ ವಿಟವಿಟೀಜನಕ್ಕಂ ನೀರಾಡುವೊಡೆ ಸರೋವರಂ ನೆಜಕಿಯುವು (ಜಗವಿ. ೧೪-೮೮ ಪ) ; ಈಸಾಡುತಿರ್ಪರಸುವಕ್ಕಳ ಮೈಗುಂಕುಮದಿಂದ ಬೆರಸಿ ಹೊಂಬಣ್ಣ ದಿನೆಸೆದಿಹುದಾ ನದಿ ಸ್ಮರಗೆ ನೀರಾಡ ಸಮೆದವೊಲು (ಸೂಬಸೋ. ೧-೩೪) ; ನೆಟ್ಟನೆ ನೀರಾಡುವ ನೃಪಸುತರಳವಟ್ಟು ರಂಟಿಸುತಿರ್ದರಲ್ಲಿ (ಪ್ರಭಂಜ. ೨-೧೩೪) ; ಪ್ರೇಮದಿಂ ಬಂದು ನೀರಾಡುತಿಹ ಸಿರಿವಂತ ಕೋಮಲಾಂಗಿಯರ ಕುಚಯುಗದ ಕುಂಕುಮಸಾರ ಭೀಮರಥಿಯೊಳು ಕೂಡಿ (ಗುಭಚ. ೧-೨೨) ; ಬಂಡೆ ಬಂಡೆಯು ನಡುವಣನವರತ ಜಲಗದ್ದ ದ ಶ್ರುತಿಗೆ ಉಪನಿಷತ್ತಿನ ಶ್ರುತಿಯ ಮಂತ್ರಘೋಷಂ ಬೆರಸಿ ನೀರಾಡಿದನ್ (ತ್ರೀರಾಪಾ. ೧೫೦-೨೬೬). ೨. ನೀರು ಬರು ; ನೀರೂರು : ಪತಿಯ ಆ ಮಾತನ್ನು ಕೇಳಿದ ಚಂದ್ರಿಯ ಕಣ್ಣಲ್ಲಿ ನೀರಾಡಿತು (ನಿಶಿ. ೧೫೬). ೩. ಬೆವರು ಬರು ; ಬೆವರಿಡು : ನೀರಾಡುವ ಮೊಗ ನಿಡುಸುಯ್ವ ನಾಸಿಕ ತೇರ್ಕೆಸುವ ತಳ್ಕಂಕ . . . ಒಪ್ಪಿತವಗಾ ನೀರಜಮುಖಿಯನು ಕಾಣುತವೆ (ತ್ರೀರಾಪಾ. ೪-೪೫). ೪. (ಕಾಂತಿಯು) ಹಬ್ಬು ; ಹರಡು ; ಹೊಮ್ಮು : ಲಾವಣ್ಯವೆಂದರೆ ಅಂಗಾಂಗದಲ್ಲಿ ನೀರಾಡುವ ಒಂದು ಬಗೆಯ ಬೆಳಕು (ಪೌಂಡಸ. ೧೨೯). [ನೀರ್ + ಆಡು[1]]

ನೀರಾಣಿವರಿ (ನಾ). ನೀರಿನ ಮೇಲೆ ಹಾಕುವ ಒಂದು ಬಗೆಯ ತೆರಿಗೆ : ಕಟ್ಟಗೇವರ್ತನ್ಯೆ ಕರಣಕೇ ಜೋಡಿ ನೀರಾಣಿವರಿ ಸಾಟ್ಟು ಕಣಕ್ಕು[ವ]ರಿ ಅಂಗಸಾಲೇವರಿ (ಎಇ. XVIII, ೧೪೬-೫೬ ; 1434). 'ನೀರುಣಿಸುಂಕ', 'ನೀರುವರಿ[2]', 'ನೀರೋಣಿ' ಪರಾ.

[ನೀರಾಣಿ[0] + ವರಿ[1]]

ನೀರಾನ್ (ಕ್ರಿ). ನೀರನ್ನು ತೆಗೆದುಕೊಳ್ಳು : ಅಬುಜಾಪ್ತಯರು ಕಳಧೌತಘಟಿಪೊಳು ನೀರಾಂತು ಪೋಪರು ಪೊಳಲಧಿದೇವಿಯರಂತೆ (ಕಂಪವಿ. ೨-೫೬). [ನೀರ್ + ಆನ್[1]]

ನೀರಾನೆ (ನಾ). ಒಂದು ಬಗೆಯ ಜಲಚರ ಪ್ರಾಣಿ: ಪೆಸೆದೆಸೆಗೀಡಾಡಿದ ಕರಿ ಪೆಸೆಯಾನೆಗಳಬ್ಧಿಯೊಳಗೆ ನೀರಾನೆಗಳಾಗಸದೊಳಮವಬ್ಧಗಜಮೆನೆ ಪೊಸತಾಗಿರೆ ಭಿನ್ನಸೃಷ್ಟಿವಡೆದನೊ ಭೀಮಂ (ಗದಾಯು. ೩-೧೪) ; ನೀರಾನೆಯಿಂ ಕೆಂಬುವಿಂ ವರರತ್ನನ್ಯಜದಿಂ ಪ್ರವಾಳಲತೆಯಿಂದೊಪ್ಪುತ್ತು ನೀರಾಕರಂ (ಗಿರಿಕ. ೧-೪೭) ; ಸೊಂಡಿಲ ನೆಗಹಿ ಭೋರ್ಗರೆವ ನೀರಾನೆಯು ತಂಡ (ಮೋಹಕ. ೬-೬೬) ; ತಾವರೆ ಮೊಗ ಮಿನಾನ್ ಕಣ್ಣು ನೀರಾನೆಗಳ್ತನಿದ ನಡೆ ಸುಳಿನಾಳಿ . . . ಎನೆ ಭಾವಕಿ ಮೆಜ್ಜಿದರ್ತಿಯಲಿ (ಕಂಪವಿ. ೫-೪೭). [ನೀರ್ + ಆನೆ[1]]

ನೀರಾಮೆ (ನಾ). ಒಂದು ಬಗೆಯ ಜಲಚರಸ್ಯಾಣಿ ; ಆಮೆ ; ಕೂರ್ಮ : (೫). [ನೀರು$_1$(<ನೀರ್)+ಆಮೆ$_1$]

ನೀರಾಮೆಬಳ್ಳಿ (ನಾ). ಒಂದು ಬಗೆಯ ಔಷಧಿಸಸ್ಯ : "ವಾರ್ಷಿಕಂ, ತ್ರ್ಯಾಯಮಾಣಾ, ತ್ರಾಯಂತೀ, ಬಲಭದ್ರಿಕಾ—೪ ನೀರಾಮೆಬಳ್ಳಿ" (ಸಿದ್ಧಾಂತಿ. ೧೪೬). [ನೀರಾಮೆ ? +ಬಳ್ಳಿ]

ನೀರಾರಂಬ (ನಾ). ನೀರಾವರಿಯ ಬೇಸಾಯ; ತರಿ ವ್ಯವಸಾಯ : ಕಾಡಾರಂಬ ನೀರಾರಂಬ ಸಕಲ (ಪ್ಯಲ) ಸುವರ್ಣಾದಾಯುಂಟಾದ ಅಪ್ಪಭೋಗತೇಜಸ್ಸ್ವಾಮ್ಯವನು ಸಮರ್ಪಿಸಿದೆವು (ಎಕ. IX, ಬೆಂಗಳೂ. ೩೦–೧೯ ; 1544) ; ಆ ಗ್ರಾಮಕೆ ಸಲುವ ಚತುಸೀಮೆವೊಳಗಾದ ಕಾಡಾರಂಬ ನೀರಾರಂಬಕೆ ಸಲುವ ಕೆಜಿ ಕುಂಟೆ ಕೊಣನು (ಎಕ. X (S), ಕೋಲಾಸ. ೩೦೪–೧೪ ; ಸು. 17ನೆಯ ಶತ). [ನೀರ್+ಆರಂಬ]

ನೀರಾರಂಭ, ನೀರುಆರಂಭ (ನಾ). = ನೀರಾರಂಬ : ಆ ದಂಡಾಯಕಪುರಕೆ ಸಲುವ ಚತುಃಸೀಮೆಯೊಳಗುಳ್ಳ ತೊಟ ತುಡಿಕೆ ಗದ್ದೆ ಬೆದ್ದಲು ಏತ ಏರಿಕಲು ನೀರಾರಂಭ ಕಾಡಾರಂಭ (ಎಕ. VII, ಶಿವಮೊ. ೭೧–೨೭ ; 1431) ; ಆ ಚತುಸೀಮೆವೊಳಗಣ . . . ಕಾಡಾರಂಭ ನೀರಾರಂಭ ಕಾಡಕೆ ಬೇಡಿಗೆಯೇನುಂಟಾದ ಸರ್ವಸ್ವಾಮ್ಯವನು ಆಗು ಮಾಡಿ(ಮೈಆರ. ೧೯೪೬, ೨೯–೧೧ ; 1530); ಈ ಗ್ರಾಮಕೆ ಸಲುವ ಗೃಹಾರಾಮಕ್ಷೇತ್ರ ಗದ್ದೆ ಬೆದ್ದಲು ಕಾಡಾರಂಭ ನೀರಾರಂಭ (ಮೈಆರ. ೧೯೪೦, ೪೭–೧೭ ; 1669); ಯಾ ಗ್ರಾಮಕೆ ಕಾಡಾರಂಭ ನೀರಾರಂಭ (ಎಕ. XI, ಚಿತ್ರದು. ೩೧–೧೯ ; 1714 ?). **ನೀರುಆರಂಭ** : ತೋಟ ತುಡಿಕೆ ಕಾಡು ಆರಂಭ ನೀರುಆರಂಭ (ಎಕ. III (R), ಗುಂಡ್ಲು ೫೯. ೧೭೦–೧೧ ; 1607). [ನೀರ್+ಆರಂಭ]

ನೀರಾವರಿ (ನಾ). ೧. ನೀರಿನ ಸೌಲಭ್ಯ;—ಅನುಕೂಲ,—ಪೂರೈಕೆ: (ಮೈಗಜೆ. IV, ೭೮೧). (ಗು). ೨. ತರಿ ವ್ಯವಸಾಯಕ್ಕೆ ತಕ್ಕುದಾದ; ನೀರು ಸಮೃದ್ಧಿಯಾಗಿರುವ: 'ನೀರಾವರಿ ಪ್ರದೇಶ' ಪರಾ. [<ನೀರ್ವರಿ]

ನೀರಾವರಿಕೆ (ನಾ). ೧. = ನೀರಾವರಿ ೧ : (೫). ೨. ನೀರು ಸಮೃದ್ಧಿಯಾಗಿರುವ ಪ್ರದೇಶ; ತರಿ ವ್ಯವಸಾಯಕ್ಕೆ ತಕ್ಕುದಾದ ಭೂಮಿ : (೫). [ನೀರಾವರಿ+–ಇಕೆ]

ನೀರಾವರಿಪ್ರದೇಶ (ನಾ). = ನೀರಾವರಿಕೆ ೨ : ಸಮ್ಮ ದೇಶದಲ್ಲಿ ನೀರಾವರಿಪ್ರದೇಶಗಳು ಅಪ್ಪ ಹೆಚ್ಚಾಗಿಲ್ಲವಾದ್ದರಿಂದ ಖುಷ್ಕಿಸ್ಯೆರುಗಳನ್ನೇ ಹೆಚ್ಚಾಗಿ ಬೆಳೆಯಬೇಕಾಗಿದೆ(ಸ್ಯವಮು.೫೩). [ನೀರಾವರಿ+ಪ್ರದೇಶ]

ನೀರಾವರಿಬೆಳೆ (ನಾ). ತರಿ ಜಮೀನಿನಲ್ಲಿ ಬೆಳೆಯುವ ಬೆಳೆ : ಭತ್ತ, ಕಬ್ಬು ಮುಂತಾದುವು ನೀರಾವರಿ ಬೆಳೆಗಳು (ರೂಢಿ).

[ನೀರಾವರಿ+ಬೆಳೆ$_2$]

ನೀರಾವರಿಭೂಮಿ (ನಾ). = ನೀರಾವರಿಕೆ ೨ : "ಪ್ರಮೇಯಂ, ಶಾಲೇಯಂ—ಈ ೨ನ್ನು ಸ್ತ್ರೀಹಿಶಾಲ್ಯುದ್ಭವೋಚಿತಂ, ಭತ್ತ, ಕಳವೆ ಮುಂತಾದ್ದು ಬೆಳೆಯುವದಕ್ಕೆ ತಕ್ಕ ಗದ್ದೆ ಮೊದಲಾದ ನೀರಾವರೀ ಭೂಮಿಗೆ ಪೆಸರು" (ಸಿದ್ಧಾಂತಿ. ೨೬೫). [ನೀರಾವರಿ+ಭೂಮಿ]

ನೀರಾವಳಿ (ನಾ). ನೀರಿನ ಮೊತ್ತ ; ಜಲರಾಶಿ : ರಂಭಾಳಿಗಳ್ ತಮ್ಮ ನೀರಾವಳಿಯಂ ಪುಂಡ್ರೇಕ್ಷುವಾಟಾವಳಿಗೆ ಸುರಿಯೆ . . . ಚೆಲ್ವಾದುದು ಪುರಬಹಿರುದ್ಯಾನಕೇದಾರಜಾಳಂ (ರಸರ. ಪರಿ. I, ೧೦೯).

[ನೀರ್$_2$+ಆವಳಿ$_1$ (=ಆವಲಿ)]

ನೀರಾಹಾರ (ನಾ). ದ್ರವರೂಪದಲ್ಲಿರುವ ಆಹಾರ : ನೀರಾಹಾರ (Fluid diet) ಹೆಚ್ಚಿಗೆ ಜೀವಸತ್ವವಿರುವ ಮೆದುವಾದ ಆಹಾರವನ್ನು ಕೊಡಬೇಕು (ಕಲತೋ. ೨೫). [ನೀರು$_1$(<ನೀರ್)+ಆಹಾರ]

ನೀರಾಹಿ (ನಾ). ನೀರುಹಾವು ; ವಿಷವಿಲ್ಲದ ಹಾವು ; ಒಳ್ಳೆ : ಮಚ್ಛ ಮಕರಿಯು ಭೇಳ ಕರ್ಕಟಕ ನೀರಾಹಿ ಕಚ್ಛಪಂ ಮುಮ್ಮು ಜಲಚರಕೆಯಾಸ್ಪದಮಾಗಿ (ಸನಮೋ. ೨–೬). [ನೀರ್$_2$+ಅಹಿ]

ನೀರಾಳಿ (ನಾ). ನೀರನ್ನು ತರುವವಳು ; ದಾಸಿ : ಅರಸಿಯರಿಗಾಳಿಯರು ಭೂಸುರರಿರವಿಗೆತ್ತರದಲ್ಲಿ ನೀರನು ಹೊರಲು ಬೇಕಮ್ಮಾಜಿ ನೀರಾಳಿಯರಿಗಾಳಿಯರೇ ಇರುವರಲ್ಲರಭಳಿಗೆ ನಿನ್ನೊಳು ತೆರಳುವನು ನೋಡು (ಜಿನಭಾ. ೨೦–೬೬).

[ನೀರು$_1$ (<ನೀರ್)+ಆಳ್$_4$ (=ಆಲಿ$_4$)]

ನೀರಿ 'ನಿಜ್ಞಾ$_2$' ನೋ.

ನೀರಿಡು (ಕ್ರಿ). ನೀರನ್ನು ಎರೆ,—ಹೊಯ್ಯು : ಚಮರೀರಾಜಿರಜಂಗಳಂ ಕಳೆಗುನುಮ್ಮದ್ದಂತಿ ನೀರಿಟ್ಟು ಸಂಭ್ರಮದಿಂ ಸಾರಣೆಗೆಯ್ವುದಲ್ಲಿ (ಕಬಚಂ. ೨–೬೨). [ನೀರ್+ಇಡು$_1$]

ನೀರಿಪ್ಪೆ, ನೀರುಹಿಪ್ಪೆ (ನಾ). ಇಪ್ಪೆಯ ಮರದಲ್ಲಿ ಒಂದು ಬಗೆ; "ಮಧೂಲಕ" (ನಾಚಂ. ೬) : "ಮಧೂಳಿಕಾ–ಹೆಗ್ಗುರುಟಿಗೆ, ನೀರಿಪ್ಪೆ, ಮದ್ಯ, ಸಬ್ಬಸಿಗೆ" (ಓಷಧಿ. ೧೨೦). **ನೀರುಹಿಪ್ಪೆ** : "ಮಧೂಲಕಃ, ಜಲಜೇಅತ್ರ, ನೀರುಹಿಪ್ಪೆಮರ, ಪೀಲುಃ, ಗುಡಫಲಃ, ಸ್ರಂಸೀ, ಗೋನುಮರ, ಗೋಗಿನಾರು ಪ್ರಸಿದ್ಧ, ಗೋಣಮರವೆಂದು ಕೆಲವರನ್ನುವರು" (ಸಿದ್ಧಾಂತಿ. ೧೧೮). [ನೀರು$_1$ (<ನೀರ್)+ಇಪ್ಪೆ$_1$ (<ಇರ್ಪ್)]

ನೀರಿಲಿ 'ನೀರಿಲ್ಲಿ' ನೋ.

ನೀರಿಲ್ಲಿ, ನೀರಲಿ, ನೀರಿಲಿ (ನಾ). ಒಂದು ಊರಿನ ಹೆಸರು : ನೀರಿಲ್ಲಿಯೂ ನಿನ್ದೆಜಗಾಮಿಗಱುಂ ಮುಖವಾಗೆ ಎರಡುಂ ನಾಟ್ಕ್ ರಾಜಶ್ರಾವಿತಮಾಗೆ ಪ್ರಶಾದಂಕೆಯ್ದಾರ್ (ಇಆ. XIX, ೧೪೫–೧೦ ; ಸು. 680). **ನೀರಲಿ** : ನೀರಲಿಯ ಮಹಾಜನಂಗಳುಂ . . . ಅನೆಬಾಳ ಪ್ರಜೆ ಸಿ(ಹಿ?)ಟ್ಟುಕಾರರುಂ ಇನ್ತಿವರ ಸಮಕ್ಷದಲ್ಲಿ ಅನೆಬಾಳ (ಅನೆ ಪೊಳಲ?) ಗೌಡಿಕೆಯ ವೃತ್ತಿಯ ಅಪ್ಪಭೋಗಕೆ ತೇಜಸಾಮ್ಯಸಹಿತವಾಗಿ ಬೊಮ್ಮಗೌಂಡನು ಪಡೆದನು (ಕಕುಲ. ೧೭–೧೧ ; 1050). **ನೀರಿಲಿ** : ಶ್ರೀಮದಗ್ರಹಾರಂ ನೀರಿಲಿಯ ಮಹಾಜನಂ ಮೂನೂರ್ವರಿಗೆ ಬಳಿಯನಟ್ಟಿ ಬರಿಸಿ . . . ಬಿಟ್ಟರ್ (ಎಇ. XVI, ೬೭–೧೨ ; 1053). [?]

ನೀರಿಸ್ಹುಳು (ನಾ). ನೀರಿನಲ್ಲಿ ವಾಸಿಸುವ ಒಂದು ಬಗೆಯ ಹುಳು : ನೀರಿಸ್ಹುಳುವು ಸಮುದ್ರದಲ್ಲಿ ಜೀವಿಸುವ ವಲಯವಂತ ಪ್ರಾಣಿ (ಪ್ರಾಣಿಶಾ. ೨೦೯).

[ನೀರಿಸ್$_0$(P←ಇಂ. Nereis)+ಹುಳು (<ಪುಟು)]

ನೀರಿಳಿ 'ನೀರಿಟಿ' ನೋ.

ನೀರಿಳಿಸು 'ನೀರಿಟಿಯಿಸು' ನೋ.

ನೀರಿಜಗ (ನಾ). ಒಂದು ಪ್ರದೇಶದ ಹೆಸರು (?) : ಪಡಗಣ್ಣಾ ಸೀಮೆ ಪೆರಮಟಿ ಪಡುವಣ್ಣಾ ಸೀಮೆ ತಣ್ಣಳ್ಳಿಗಾರ ಪಾಟಿ ತೆಜ್ಮಣ್ಣಾ ಸೀಮೆ ನೆಯ್ದಿಲ್ಲೇಜಿಯಾ ನಿಜ ಮೂಡಣ್ಣಾ ಸೀಮೆ ಇಡೆವಟ್ಟದಾ ವಡೆಗಣ್ಣಾ ನೀರಿಜಗ (ಎಇ. XXI, ೨೯–೧೪ ; ಸು. ೩ನೆಯ ಶತ). [?]

ನೀರಿಟಿ, ನೀರಿಳಿ (ಕ್ರಿ). ೧. ಸ್ನಾನ ಮಾಡು; ವಿಾಯು. ೨. ಸೂತಕಸ್ನಾನವನ್ನು ಮಾಡು ; ಸತ್ತವರಿಗಾಗಿ ಅಪರ ಕರ್ಮಗಳನ್ನು ಮಾಡಿದ ನಂತರ ವಿಾಯು : ತನ್ನ ಮುನ್ನಿನ ಸ್ವಾಭಾವಿಕಮಪ್ಪ ರೂಪಂ ಕೈಕೊಂಡು ತಮ್ಮಣ್ಣನಂ ಸಂಸ್ಕರಿಸಿ ನೀರಿಟಿದು (ಪಡ್ಡಾರಾ. ೬೦–೧೬) ; ಸುತಶೋಕದ ಪೊಂಪುಟಾಯೊಳ್ ಮೆಯ್ಮಜ್ಜಾಯದೆ ನೀರಿಟಿವಂತೆವೊಲಿಟಿದನಪರಜಳಧಿಗೆ ದಿನಪಂ (ಪಂಪಭಾ. ೧೫–೨೨೦) ; ಮುನ್ನಂ ಪರಶುರಾಮನೀ ನೆಲದೊಳುಳ್ಳ ರಸುವಕ್ಕಳೆಲ್ಲರುಮಸರ್ಪತ್ತೊಂದುಸೂಬ್ಬರೆಗಂ ಪಿಳ್ಳೆಪಸರಿಲ್ಲದಂತು

ಕೊಂದವಂದಿರ ನೊರೆನೆತ್ತರೊಳ್ ತೀವಿ ತನ್ನ ತಾಯ್ಗೆ ನೀರಿಟಾಯಲುಂ ತಂದೆಗೆ ನೀರ್ಗುಡಲುಮೆಂದು ಮಾಡಿದ . . . ಪೆರ್ಮಡುಗಳೊಳಗೆ ಮೂಡಿ ಮುಟ್ಟೂಡಿ (ಗದಾಯು. ೬-೨೮ ಪ); ಸತ್ತಿರ್ದ ಮಗನ ಪೆಣನಂ ಕಂಡು ಮಹಾದುಃಖಿತನಾಗಿ . . . ಮಱುದಿವಸಂ ಸಂಸ್ಕರಿಸಿ ನೀರಿಟಾದು ಲೌಕಿಕ ಕ್ರಿಯೆಯೆಲ್ಲಮಂ ನೆಱೆಯೆ ತೀರ್ಚಿ (ಧರ್ಮಾಮೃ. ೧೦-೧೯೨); ತುಟಾಲಾಳ್ಮದ್ಗೋತ್ರಭವಂ ಕಟಾದಂ ಕಲಿಸಿಂಹಚೂಡನೆಂದವಯವ ದೊಂದಟಲಿಂದೆ ಕೆಂಪು ಮಿಗೆ ನೀರಿಟಾವಂತಿರೆ ಸೂರ್ಯನಪರಜಲನಿಧಿ ಗಿಟಾದಂ (ಅನಂಪು. ೧೧-೭೯). ತದ್ವೃತ್ತಾಂತಮಂ ಬಿನ್ನವಿಸುವುದುಂ ಗಾಂಗೇಯಾದಿಗಳ್ ಪಿರಿದುಂ ದುಃಖಮನೆಯ್ದಿ ನೀರಿಟಾದರ್ (ಮಹಾಸೇ. ೯-೫೭ ಪ). **ನೀರಿಳಿ :** ೧. ಭಿಕ್ಷುಗಳನೊಡಗೂಡಿ ಬುದ್ಧಂ ಕಕುತ್ಥಾ ನದಿಯನಯ್ದಿ ನೀರಿಳಿದು (ವೈಶಾಖಿ. ೬೩-೨೩೭). ೨. ಚಂದ್ರಸೂರ್ಯರಿಬ್ಬರೂ ನೀರಿಳಿದರಲ್ಲಾ ವಾಯುದೇವ ವಿಮಾನವ ಹೊತ್ತ ವಾಸುದೇವ ತಲೆಗೊಳ್ಳಿಯನಿಱಿದ (ಅವಚಂ. ೧೯೧-೮೬೪); ಉರುತರೋಪಾಯವು ಫಲಿಸಿತೆಂದಿರೆ ಮನದಲುಬ್ಬಿದನು ನೀರಿಳಿದರು ಬಳಿಕ್ಕವರು (ಸಾಳ್ವಭಾ. ೩೫-೧೨).

ನೀರಿಳಿಯದ ಬಟ್ಟೆ = ಎಣ್ಣೆ, ಮೇಣ ಮೊದಲಾದುವುಗಳಿಂದ ಪರಿಷ್ಕರಿಸಿ ಒದ್ದೆಯಾಗದಂತೆ ಮಾಡಿದ ಬಟ್ಟೆ ; ಮೇಣಗಪ್ಪಡ : ನೀರಿಳಿಯದ ಬಟ್ಟೆ ತೊಟ್ಟು, ತಲೆಗೆ ಅಂಚಿಲ್ಲದ ಟೋಪಿಯನ್ನು ಧರಿಸಿದ್ದ ಅಗ್ರಫೇನಾ ಪೆತ್ರೋವ್ನಾಳ ಕಡೆಗೆ ತೋರ್‌ಬೆರಳು ನೀಡಿದಳು (ಪುನರು. ೪೫೯). **ನೀರಿಟಾದವನು** = ಸೂತಕದ ಸ್ನಾನವನ್ನು ಮಾಡಿದವನು : "ಅಪಸ್ನಾತ, ಮೃತಸ್ನಾತ = ನೀರಿಟಾದವನು" (ಸಾಚಿರಾ. ೬).

[ನೀರ್+ಇಟಾ]

ನೀರಿಟಾಪು (ಕ್ರಿ). ಸೂತಕಸ್ನಾನಮಾಡಿಸು ; ಮೈಲಿಗೆ ಕಳೆಯಲು ಸ್ನಾನ ಮಾಡಿಸು : ಮುನ್ನೆ ಪರಶುರಾಮನೀ ಲೋಕದೊಳುಳ್ಳರಸು ಮಕ್ಕಳೆಲ್ಲರುಮನಿರ್ಪತ್ತೊಂದುಸೂಟ್ಟರಂ ಪೇಟೆ ಪೆಸರಿಲ್ಲದಂತೆ ಕೊಂದು . . . ಅವರ ನೆತ್ತರ ಧಾರೆಯೊಳ್ ತೀವಿ ತನ್ನ ತಾಯಂ ನೀರಿಟಾಪಲುಂ ತಾನುಂ ಮಿಂದು ತನ್ನ ತಂದೆಗೆ ನೀರ್ಗುಡಲುಮೆಂದು ಮಾಡಿದ ಶಮಂತಪಂಚಕಂಗಳೆಂಬಯ್ದು ಪೆರ್ಮಡುಗಳ ಕೆಲದೊಳೆಡೆಯಱಿದು ಬೀಡಂ ಬಿಡಿಸಿ (ಪಂಪಭಾ. ೯-೧೦೪ ಪ).

[ನೀರ್+ಇಟಾಪು]

ನೀರಿಟಾಯಿಸು, ನೀರಿಳಿಸು (ಕ್ರಿ). = ನೀರಿಟಾಪು : ಅಟುವೆನ್ನರಿ ತರಳಿಕೆ ಮೆಯ್ವಟಾಯಿಂ ಪಿಡಿದೊಯ್ಯನೆತ್ತಿ ಮೆಲ್ಲನೆ ತಡಿಗಾಗಿಟಾತಂದೀ ಕೊಳದೊಳ್ ನೀರಿಟಾಯಿಸೆ ನೀರಿಟಾದೆಂ (ಕಾದಂಪೂ. ೯೫೦). **ನೀರಿಳಿಸು :** ಬಾಯಿಬಡಿಕನಲಾ ವೃಥಾ ರಾಧೇಯ ಮದವೇಕಿನ್ನು ನಿನಗಹಿಸಾಯಕದ ಸಾವಿನಲಿ ನೀರಿಳಿಸುವೆನು ನೆತ್ತರಲಿ(ಕುನ್ಯಾಕ. ೨೬-೭).

[ನೀರಿಟಾ+ -ಇಸು$_3$]

ನೀರಿಟಾವು (ನಾ). ಜಲಪಾತ ; ನೀರ್ಬೀಳು : ಅನ್ತೆ ಬನ್ದು ಮೂಡಾಯಿನ್ನೀಟ್ಟನ್ದ ನೀರಿಟಾವೆ (ಮೈಅರಿ. ೧೯೩೬, ೫೩-೨೮; ಸು. 550); ಕೊಳ್ತಾಲೆಯುಳ್ ಕುಡಿತ್ತು ಎರಟ್ಟೆಪುಣುಸೆ ಎ ಮೂಡಾಯ್ನೋಡಿ ನೀರಿಟಾವೆ ತಾಱೆ ಎ (ಎಕ. XVI, ಗುಬ್ಬಿ. ೭೫-೫೨; 733).

[ನೀರ್+ಇಟಾವು]

ನೀರಿಟಾಹ (ನಾ). ಸತ್ತವರಿಗಾಗಿ ಮಾಡುವ ಸ್ನಾನ ; ಸೂತಕ ಸ್ನಾನ : "ಅಪಸ್ನಾನಂ, ಮೃತಸ್ನಾನಂ — ಈ ೨ ನೀರಿ[ಟಾ]ಹ" (ಹಲಾಯು. ೧೦೫-೧೭). [ನೀರ್+ಇಟಾಹ]

ನೀರೀಂಟು (ಕ್ರಿ). ನೀರನ್ನು ಕುಡಿ, —ಪಾನಮಾಡು : ಕರಗಳ ನೀಡಿ ನೀರೀಂಟುವ ಪಥಿಕರು (ಅಬ್ಬಲೂ. ೩-೬೩). [ನೀರ್+ಈಂಟು]

ನೀರೀಸು$_1$ (ಕ್ರಿ). ನೀರಿನಲ್ಲಿ ಚಲಿಸು ; ಈಜು : "ಬಿಸ್ತಯತಿ = ನೀರೀಸಿದಪಂ" (ಕಾಶಕೃ. ೨೬೦). [ನೀರ್+ಈಸು$_1$]

ನೀರೀಸು$_2$ (ನಾ). ನೀರಿನಲ್ಲಿ ಚಲಿಸುವಿಕೆ ; ಈಜುವಿಕೆ : "ಬಿಸ್ತ— ಜಲೋತ್ತರಣೇ, ನೀರೀಸಿನೊಳ್" (ಕಾಶಕೃ. ೨೬೦). [ನೀರ್+ಈಸು$_4$]

ನೀರು$_1$ 'ನೀರ್' ನೋ.

ನೀರು$_2$ 'ನೀಱು' ನೋ.

ನೀರು ಆರಂಭ 'ನೀರಾರಂಭ' ನೋ.

ನೀರುಂಬಳಿ (ನಾ). ಸಾರ್ವಜನಿಕ ಸೌಕರ್ಯಕ್ಕಾಗಿ ಕೆರೆ, ಬಾವಿ, ಕಾಲುವೆ ಮೊದಲಾದುವುಗಳನ್ನು ಕಟ್ಟಿಸಿದವರಿಗೆ ಸರ್ಕಾರವು ಕೊಟ್ಟ ಉಂಬಳಿ, —ಕೊಡುಗೆ : (ಕಿ). [ನೀರ್+ಉಂಬಳಿ]

ನೀರುಕಂದಾಯ 'ನೀರುಗಂದಾಯ' ನೋ.

ನೀರುಕಕ್ಕೆ (ನಾ). ಒಂದು ಬಗೆಯ ಸಸ್ಯ : ನೀರುಜಪ್ಲೆ, ನೀರುಕಕ್ಕೆ (ಮೈಡಿಗಿ. ೨೯-೫೫೬). [ನೀರು$_1$ (<ನೀರ್)+ಕಕ್ಕೆ]

ನೀರುಕಟ್ಟು (ಕ್ರಿ). ೧. ನೀರು ನಿಲ್ಲುವಂತೆ ಮಾಡು ; ನೀರನ್ನು ನಿಲ್ಲಿಸು : ಚೌಕಮಾಳಗಳನ್ನು ಮಾಡಿ, ಅವುಗಳಲ್ಲಿ ಸಮುದ್ರ ಉಕ್ಕೇರಿದಾಗ ನೀರುಕಟ್ಟುತ್ತಾರೆ (ಮುಂಬಯಿ. ೪-೧೯೮); ಭೂಮಿಗೆ ನೀರು ಕಟ್ಟುವದರಲ್ಲಿ ಬಹು ಚಮತ್ಕಾರವನ್ನು ತೋರಿಸುತ್ತಾರೆ (ಭೂಗೋಳ. ೩೯). ೨. ನೀರೂರು ; ನೀರು ಬರು : ಮನಶ್ಶಾಸ್ತ್ರವೇತ್ತರೂ ಚಿಕಿತ್ಸಕರೂ ಆದ ಅವರ ಕಣ್ಣುಗಳಲ್ಲಿ ನೀರುಕಟ್ಟಿತ್ತು (ಹೊಸಕ್ತಿ. ೧). ೩. ಸಸ್ಯದ ಮಡಿಗಳಿಗೆ ನೀರನ್ನು ಬಿಡು, —ಹಾಯಿಸು : (ಕಿ).

[ನೀರು$_1$ (<ನೀರ್)+ಕಟ್ಟು$_1$]

ನೀರುಕಟ್ಟೆ (ನಾ). ಒಂದು ಬಗೆಯ ಸಸ್ಯ : "ಕರ್ಕೋಟಃ — ಮಡುವಾಗಲು, ನೀರುಕಟ್ಟೆ" (ಓಷಧಿ. ೨೨).

[ನೀರು$_1$ (<ನೀರ್)+ಕಟ್ಟೆ?]

ನೀರುಕಣಿಗಲು 'ನೀರುಗಣಿಗಲು' ನೋ.

ನೀರುಕಣಿಗಿಲೆ 'ನೀರುಗಣಿಗಲು' ನೋ.

ನೀರುಕಾಗೆ 'ನೀರ್ಗಾಗೆ' ನೋ.

ನೀರುಕಾರು (ನಾ). ಅಕ್ಕಸಾಲಿಗರು ಬಳಸುವ ಬಂದು ಬಗೆಯ ಇಕ್ಕುಳ : (ಕಿ). [←ತೆಲು. ನೀರುಕಾಱು]

ನೀರುಕಾಲುವೆ 'ನೀರ್ಗಾಲುವೆ' ನೋ.

ನೀರುಕುಟಿಗ 'ನೀರ್ಗುಟಿಗ' ನೋ.

ನೀರುಕುಡಿ 'ನೀರ್ಗುಡಿ' ನೋ.

ನೀರುಕುಡಿಸು 'ನೀರ್ಗುಡಿಸು$_1$' ನೋ.

ನೀರುಕುದುರೆ (ನಾ). ಒಂದು ಬಗೆಯ ಜಲಚರಪ್ರಾಣಿ : ನೀರು ಕುದುರೆ, ನೀರಾನೆ, ನೀರುವಂಟೆ . . . ನೀರುಯಮ್ಮೆ ಮುಂತಾದ ಅನೇಕ ಜಾತಿಗಳುಂಟು (ಸಿದ್ಧಾಂತಿ. ೮೩).

[ನೀರು$_1$ (<ನೀರ್) +ಕುದುರೆ]

ನೀರುಕೂಲಿ (ನಾ). ನೀರಿನ ಮೇಲೆ ಹಾಕುವ ಒಂದು ಬಗೆಯ ತೆರಿಗೆ : ಯೀ ದೇವರಿಂಗೆ ನೀರುಕೂಲಿ ನಿಚಂಡಿ ಬೆಡುಗೆ . . . ಸರ್ವಮಾನ್ಯವಾಗಿ ಬಿಟ್ಟ ದತ್ತಿ. (ಎಕ. IV (R), ಚಾಮರಾ. ೩-೧೪, 1279). [ನೀರು$_1$ (<ನೀರ್) +ಕೂಲಿ$_1$]

ನೀರುಕೊಕ್ಕರೆ (ನಾ). ನೀಳವಾದ ಕತ್ತುಳ್ಳ ಒಂದು ಬಗೆಯ ಜಲಪಕ್ಷಿ ; ಕ್ರೌಂಚಪಕ್ಷಿ : ಕ್ರುಙ್, ಕ್ರೌಂಚಃ— ೨ ಕೀಚಕ್ಕಿ, ನೀರುಕೋಳಿಗೂ ಹೆಸರಾಗುವದು, ನೀರುಕೊಕ್ಕರೆ" (ಸಿದ್ಧಾಂತಿ. ೧೫೯).

[ನೀರು$_1$ (<ನೀರ್) + ಕೊಕ್ಕರೆ$_1$]

ನೀರುಕೊಡು 'ನೀರ್ಗೊಡು' ನೋ.

ನೀರುಕೋಟಲೆ (ನಾ). (ಕರಾ) ಒಂದು ಬಗೆಯ ಸಿಡುಬುರೋಗ : ಮಗುವಿನ ಮೈ ತುಂಬಾ ನೀರುಕೋಟಲೆ ಎದ್ದಿದೆ (ರೂಢಿ).
[ನೀರು$_1$ (<ನೀರ್) + ಕೋಟಲೆ]

ನೀರುಕೋಳಿ 'ನೀರುಗೋಳಿ' ನೋ.

ನೀರುಗಂಗಾಳ (ನಾ). ನೀರನ್ನು ತುಂಬಲು ಉಪಯೋಗಿಸುವ ಅಗಲವಾದ ದುಂಡನೆಯ ಲೋಹದ ಪಾತ್ರೆ : (ಕಿ).
[ನೀರು$_1$ (<ನೀರ್) + ಗಂಗಾಳ]

ನೀರುಗಂಟಿ 'ನೀರ್ಗಂಟಿ' ನೋ.

ನೀರುಗಂಟಿಗ (ನಾ). = ನೀರ್ಗಂಟಿ : (ಕಿ).
[ನೀರು$_1$ (<ನೀರ್) + ಕಂಟಿಗ]

ನೀರುಗಂಡಿ 'ನೀರ್ಗಂಡಿ' ನೋ.

ನೀರುಗಂದಾಯ, ನೀರುಕಂದಾಯ (ನಾ), ನೀರಿಗಾಗಿ ಸರ್ಕಾರಕ್ಕೆ ತೆರುವ ನಿಗದಿಯಾದ ಹಣ : (ರೈಸ್‌ಗ. II, ೫೫೭). **ನೀರುಕಂದಾಯ :** (ಮೈಗಜೆ. IV, ೭೮೧).
[ನೀರು$_1$ (<ನೀರ್) + ಕಂದಾಯ]

ನೀರುಗಣಿಗಲು, ನೀರುಕಣಿಗಲು, ನೀರುಕಣಿಗಿಲೆ, ನೀರುಗಣಿಗಿಲ್, ನೀರುಗಣಿಗಿಲು, ನೀರ್ಗನಿಗಲು (ನಾ). ಒಂದು ಬಗೆಯ ಗಿಡ : ಹೊಳೆ, ಕೌವಮರ, ಧಾತ್ರೀಫಲ, ನೀರುಗಣಿಗಲು (ಮೈಔಗಿ. ೧೨-೨೦೦). **ನೀರುಕಣಿಗಲು :** ನೀರುಕಣಿಗಲು, ತಕ್ತರೋಹಿತ, ನೀರುಸಣ್ಣೆಸೊಪ್ಪು (ಮೈಔಗಿ. ೬೩-೧೨೯೧). **ನೀರುಕಣಿಗಿಲೆ :** ಆ ಹೊಳೆಯ ಮರಳಲ್ಲಿ ಕೆಲವು ನೀರುಕಣಿಗಿಲೆ ಗಿಡಗಳು ಬೆಳೆದಿದ್ದವು (ಕಿಂಕಥೆ. ೩೩). **ನೀರುಗಣಿಗಿಲ್ :** (ಕಿ). **ನೀರುಗಣಿಗಿಲು :** (ಕಿ). **ನೀರ್ಗನಿಗಲು :** ಹೊಳೆನಗೆ, ನೀರ್‌ಗನಿಗಲು (ಮೈಔಗಿ. ೪೪-೮೭೨).
[ನೀರು$_1$ (<ನೀರ್) + ಗಣಿಗಲು$_1$ (<ಕಣಗಿಲೆ$_1$)]

ನೀರುಗಣಿಗಿಲ್ 'ನೀರುಗಣಿಗಲು' ನೋ.

ನೀರುಗಣಿಗಿಲು 'ನೀರುಗಣಿಗಲು' ನೋ.

ನೀರುಗಣ್ಣಿ 'ನೀರ್ಗಣ್ಣಿ' ನೋ.

ನೀರುಗಣ್ಣು (ನಾ). ೧. ನೀರು ತುಂಬಿರುವ ಕಣ್ಣು ; ನೀರೂರಿರುವ ಕಣ್ಣು : ಆರಿಗು ಜಿನಸಭೆಯೊಳು ಶೋಕ ಹುಟ್ಟಿದ ಕಾರಣ ತಾಳ್ದನಾ ನೃಪತಿ ನೀರುಗಣ್ಣೊಳು ಮೂರ್ಛೆವೋಗನೆ ತಾಯನ್ಯಧಾರಿಣಿಯೊಳು ದೀಕ್ಷೆಗೊಳಲು (ಭರಚ. ೫೯-೫೦). ೨. ಒಂದು ಬಗೆಯ ನೇತ್ರರೋಗ : ಕಣ್ಣಿನಿಂದ ಯಾವಾಗಲೂ ನೀರು ಸೋರುವುದು : ಕಾವುಗಣ್ಣು, ಉಷ್ಣಗಣ್ಣು, ನೀರುಗಣ್ಣು, ಜಾರುಗಣ್ಣು, ಸಂಜೆಗಣ್ಣು (ಶುಕಸ. ೬೨೮). ೩. ನೀರು ಜಿನುಗುವ ಸ್ಥಳ ; ಒರತೆ : (ಕಿ).
[ನೀರು$_1$ (<ನೀರ್) + ಕಣ್ಣು (<ಕಣ್)]

ನೀರುಗರಗ (ನಾ). ಒಂದು ಬಗೆಯ ಗರುಗ : (ಕಿ).
[ನೀರು$_1$ (<ನೀರ್) + ಗರಗ (<ಗರುಗ)]

ನೀರುಗಾಗೆ 'ನೀರ್ಗಾಗೆ' ನೋ.

ನೀರುಗಾಯಿ 'ನೀರ್ಗಾಯ್' ನೋ.

ನೀರುಗಾರಕ (ನಾ). ಒಂದು ಬಗೆಯ ತೆರಿಗೆ (?) : ಕಾನತ್ತೆರಿನಿಂದ ಗ ೧ ॥ ೦ ನೀರುಗಾರಕದಿಂದ ಗ ೧ ಅಂತ್ತು . . . ವಿವರ ಮಹಾಜನಂಗಳಿಗೆ . . . ಉತ್ತಿ (ಎಕ. VIII, ಕೀರ್ಥಹ. ೨೦೮-೫೬ ; 1702).
[?]

ನೀರುಗಾಳಿ (ನಾ). ನೀರಿನ ಮೇಲಿಂದ ಬೀಸಿ ಒರುವ (ತಂಪಾದ) ಗಾಳಿ : (ಕಿ). [ನೀರು$_1$ (<ನೀರ್) + ಗಾಳಿ$_1$]

ನೀರುಗಿಚ್ಚು 'ನೀರ್ಗಿಚ್ಚು' ನೋ.

ನೀರುಗಿಳಿ (ನಾ). ಒಂದು ಬಗೆಯ ಜಲಪಕ್ಷಿ : ಜಲಸಸ್ಯಗಳಿಂದಾವೃತವಾದ ಕೆರೆಗಳಲ್ಲಿ ನೀರುಗಿಳಿಗಳು ವಾಸಿಸುತ್ತವೆ (ಪಕ್ಷಿ. ೧೪೫).
[ನೀರು$_1$ (<ನೀರ್) + ಗಿಳಿ]

ನೀರುಗು (ಕ್ರಿ). ನೀರನ್ನು ಹೊರಚೆಲ್ಲು,—ಸ್ರವಿಸು ; ನೀರುಗುವ ಜಲಕಲಶಗಳನ್ನು ಎತ್ತಿಕೊಂಡು ಒಯ್ಯುತ್ತಿರುವಂತೆ ಇವರನ್ನು ಶಿಲ್ಪದಲ್ಲಿ ಕಂಡರಿಸಲಾಗಿದೆ (ಬದ್ಧಪ್ರ. VIII, ಪೀಠಿಕೆ).
[ನೀರು$_1$ (<ನೀರ್) + ಉಗು$_1$]

ನೀರುಗುಂದ 'ನೀರ್ಗುಂದ' ನೋ.

ನೀರುಗುಡಿ 'ನೀರ್ಗುಡಿ' ನೋ.

ನೀರುಗುಳ್ಳೆ 'ನೀರ್ಗುಳ್ಳೆ' ನೋ.

ನೀರುಗುಳ್ಳೆಗಿಡ (ನಾ). ಒಂದು ಬಗೆಯ ಗಿಡ : ನೀರುಗುಳ್ಳೆಗಿಡ, ಸೀತಾಶ್ರುಬೀಜ (ಮೈಔಗಿ. ೬೬-೧೫೬೬).
[ನೀರು$_1$(<ನೀರ್) + ಗುಳ್ಳೆ ? + ಗಿಡ (<ಗಿಡು)]

ನೀರುಗೇಡಿ (ನಾ). ನೀರನ್ನು ಪಡೆಯಲಾರದವನು ; ನೀರು ದೊರೆಯದವನು : ಮೊಗಲರನ್ನು ದಿಕ್ಕುಪಾಲಾಗಿ ಚದರಿಸಿ ಅವರನ್ನು ಕೂಳುಗೇಡಿ ನೀರುಗೇಡಿಗಳನ್ನು ಮಾಡಿದನು (ಹಿಂಮುಸ. ೫೫).
[ನೀರುಗೇಡು + —ಇ$_3$]

ನೀರುಗೇಡು (ನಾ). ನೀರು ದೊರೆಯದೆ ಹೋಗುವಿಕೆ ; ನೀರಿನ ಅಭಾವ : 'ನೀರುಗೇಡಿ' ಪರಾ. [ನೀರು$_1$ (<ನೀರ್) + ಕೇಡು]

ನೀರುಗೈ (ನಾ). ನೀರಿನಿಂದ ಒದ್ದೆಯಾದ ಕೈ ; ತೇವದಿಂದ ಕೂಡಿದ ಕೈ : ಯುಧಿಷ್ಠಿರನು ನೀರುಗೈಯಿಂದ ಧೃತರಾಷ್ಟ್ರನ ಮೈಯೆಲ್ಲವನ್ನೂ ತಡವಿದನು (ನಚಭಾ. ೩೬೯).
[ನೀರು$_1$ (<ನೀರ್) + ಕೈ$_2$ (<ಕೆಯ್$_2$)]

ನೀರುಗೋಡಗ (ನಾ). ಒಂದು ಬಗೆಯ ಜಲಚರ ಪ್ರಾಣಿ ; ಮೊಸಳೆ : "ಶಿಂಶುಮಾರ ಎಂದು ಮೊಸಳೆ ; ನೀರುಗೋಡಗ ಎಂದೂ ಎಂಬರು" (ನಾಚಿರಾ. ಕಿ). [ನೀರು$_1$ (<ನೀರ್) + ಕೋಡಗ]

ನೀರುಗೋಣಿ 'ನೀರುಗೋಳಿ' ನೋ.

ನೀರುಗೋಳಿ, ನೀರಗೋಣಿ, ನೀರುಗೋಣಿ(ನಾ). ಒಂದು ಬಗೆಯ ಜಲಸಸ್ಯ ; "ಚಿವಿಲ್ಲಕಾ" (ಪಂಡಿತ. ೨೬೨) : (ಕಿ). **ನೀರಗೋಣಿ :** ನೀರಬೊಮ್ಮಿಸೊಪ್ಪು, ನೀರಗೋಣಿಸೊಪ್ಪು, ಇವು ಎರಡು ಬಗೆಯನ್ನು ಪಿಟ್ಟನಿಕ್ಕಿ ಆ ರಸದಲ್ಲಿ ಜೀರಿಗೆ, ಹಿಪ್ಪಲಿ, ಕಟುಕರೋಹಿಣಿ, ಈ ಮೂಱನ್ನು ಅಱುವೆಯಲ್ಲಿ ಬೇಯಿಸಿ ಇಳುಹಿ ಅದಂ ಆ ರಸದಲ್ಲಿ ಅರೆದು ಕದಡಿ ಕುಡಿಯಲು ಎರಡು ವೇಳೆ ಮೂಱು ವೇಳೆ ವಿರೇಕಮಕ್ಕುಂ (ವಿವೈವಿ. ೧೧೩). **ನೀರುಗೋಣಿ :** (ಮೈಔಗಿ. ೪೫-೮೯೨).
[ನೀರು$_1$ (<ನೀರ್) + ಗೋಳಿ$_1$]

ನೀರುಗೋಳಿ, ನೀರುಕೋಳಿ, ನೀರ್ಕೋಳಿ, ನೀರ್ಗೋಳಿ (ನಾ). ಒಂದು ಬಗೆಯ ನೀರುಹಕ್ಕಿ ; ಮುಂಡುಮುಳುಕ : "ಪ್ಲವ ಎಂದು ಮುಂಡುಮುಳುಕ ; ನೀರುಗೋಳಿ ಎಂದೂ ಎಂಬರು" (ನಾಚಿರಾ. ಕಿ). **ನೀರುಕೋಳಿ :** ಈ ಅರ್ಕಪುಷ್ಕರಿಣಿಯಲ್ಲಿ ನೀರುಕೋಳಿಯಾಗಿ ಹುಟ್ಟಿದನು. ಇವನಿಗೆ ಪೂರ್ವಜನ್ಮಗಳ ಸ್ಮರಣೆಯಿರುವದು (ಅರ್ಕಮಾ. ೪೯) ; ನೀರುಕೋಳಿ ಸಂಗಡ ಆಡಿ ಹಾರುಕೋಳಿ ಕೆಟ್ಟಿತು(ಗಾದೆ). **ನೀರ್ಕೋಳಿ:** ಇಲ್ಲಿ ಕುದುಂಬಳು, ಕೌಜಲು, ನೀರ್ಕೋಳಿ . . . ಡೇಗೆ, ಮತ್ತೊಂದು ಎಂದು ಸಾವಿರಜಾತಿಗಳಿವೆ (ಸ್ವಪ್ನಹೂ. ೧೨). **ನೀರ್ಗೋಳಿ :** "ಢಲಃ = ನೀರ್ಗೋಳಿ" (ಕಾಶಕೃ. ೫೦).
[ನೀರು$_1$(<ನೀರ್) + ಕೋಳಿ$_1$]

ನೀರುಚಂಚಲಿ 'ನೀರುಚೆಂಚಲಿ' ನೋ.

ನೀರುಚೆಂಚಲಿ, ನೀರುಚಂಚಲಿ (ನಾ). ಒಂದು ಬಗೆಯ ಜಲ ಸಸ್ಯ : "ವಿತುನ್ನಂ, ಸುನಿಷಣ್ಣಕಂ—೨ ನೀರುಚೆಂಚಲಿ, ಸುಲಿವಲ್ಲ" (ಸಿದ್ಧಾಂತಿ. ೧೪೬). **ನೀರುಚಂಚಲಿ :** (ಕಿ).

[ನೀರು$_1$(<ನೀರ್)+ಚೆಂಚಲಿ./ತೆಲು. ನೀರುಚೆಂಚಲಿ]

ನೀರುಜ (ಗು). ರೋಗವಿಲ್ಲದ ; ಆರೋಗ್ಯವಾದ. [ಸಂ.]

ನೀರುಜನ್ನಿಸೊಪ್ಪು (ನಾ). ಒಂದು ಬಗೆಯ ಸೊಪ್ಪು : ಆ ಜ್ವರವು ಪ್ರಕೋಪಿಸಿದರೆ ನೀರುಜನ್ನಿಸೊಪ್ಪಂ ತಂದು ಆ ರಸಮಂ ಹಿಂಡಿ . . . ಒಂದಿಷ್ಟು ಕುಡಿಯಲು ಕೊಟ್ಟು ಮಿಕ್ಕದ್ದನ್ನು ಮೈಕೈಗೆ ಒತ್ತುವುದು (ವಿನೈವಿ. ೧೭). [ನೀರು$_1$(<ನೀರ್)+ಜನ್ನಿ?+ಸೊಪ್ಪು$_2$]

ನೀರುಜಪ್ಲೆ (ನಾ). ಒಂದು ಬಗೆಯ ಸಸ್ಯ : ನೀರುಜಪ್ಲೆ, ನೀರುಕಕ್ಕೆ (ಮೈಔಗಿ. ೨೯-೫೫೩). [ನೀರು$_1$(<ನೀರ್)+ಜಪ್ಲೆ ?]

ನೀರುಡ 'ನೀರುಡು' ನೋ.

ನೀರುಡು, ನೀರುಡ (ನಾ). ನೀರಿನಲ್ಲಿ ವಾಸಿಸುವ ಹಲ್ಲಿಜಾತಿಗೆ ಸೇರಿದ ಒಂದು ಪ್ರಾಣಿ : "ನಹಾಕೆ, ಗೋಧಿಕೆ" (ನಾಚರಾ. ೬) ; ನೀ[ಪಾಶಾಂ. ಸೀ]ರುಡುವಿನ ಕರಡಿಯ ಮಾರ್ಜಾರದ ವಾಯಸದ ದನಿಗ ಮತಿಕಷ್ಟಂಗಳ್ . . . ಕರ್ಣಶೂಲಮಂ ಪುಟ್ಟಿಸುಗುಂ (ವರ್ಧಪು. ೧೧-೪೦) ; ಮೊಸಳೆ ನೀರಾನೆ ನೀರ್ವಾವು ನೀರುಡುಗಳ ಸಮೂಹದಿಂದ . . . ಕಡಲ್ ಕಣ್ಣಿಸೆದುದು (ಚಿಬಪು. ೨-೩). **ನೀರುಡ :** "ನಹಾಕಾ, ಗೋಧಿಕಾ—ನೀರಲ್ಲಿರುವ ಉಡುವಿನ ಪೆಸರು . . . ಬೈಲು ಉಡದ ಹಾಗೆಯೇ ನೀರುಡ ಎಂಬುವ ಜಂತು" (ಸಿದ್ಧಾಂತಿ. ೭೪).

[ನೀರ್+ಉಡು$_2$]

ನೀರುಣ್ (ಕ್ರಿ). ನೀರನ್ನು ಕುಡಿ,—ಪಾನಮಾಡು : ಏಣಶಾಬತತಿ ನೀರುಣೆ ಕಣ್ಗೊಳಿಪಾಳವಾಳಮಂಡಳದಿನದೊಂದು ಮುಂದೆಸೆದು ತೋಱಿ ದುದಾಗಳಶೋಕಭೂರುಹಂ (ಕಾದಂಪೂ. ೨೨೭) ; ಏರಿ ನೀರುಣ್ಬೊಡೆ . . . ತಾಯ ಮೊಲೆವಾಲು ನಂಜಾಗಿ ಕೊಲುವಡೆ ಇನ್ನಾರಿಗೆ ದೂಱುವೆನು (ಒಸನ. ೨೬) ; ಏರಿಯನೀಡಿಱುವೋಳಿಯೆ ನೀರುಣ್ಬ ಕನಲ್ವ ಪೋರ್ವ . . . ಗೋರಾಜಿಯ ಲೀಲೆ ಕಣ್ಗೆ ಪಡೆದುದು ಚೆಲ್ವಂ (ಚಂದ್ರಪು. ೨-೨೭) ; ನೀರುಣಲೆಂದು ಪೊಱಮಟ್ಟು . . . ಗಿಱ್ಜನೆಯ್ದುವ ಸೊರ್ಕಾನೆಗಳ ಕಾಲ ಸಂಕಲೆಯ ಗೋಸದೊಳಂ ಇಂದಿರನ ಪೊಱಲ ಸಿರಿಯ ಸಡಗರಮಂ ಪಿಡಿಯುತಿರ್ಪುದು (ಕಬ್ಬಿಕಾ. ೪೪) ; ನಳಿನಂ ಶುಕ್ತಿಕೆ ತಳ್ತ ನೀರ್ವನಿಗಳೇ ನುಣ್ಮುತ್ತು ನೀರುಣ್ಬ ನಿಶ್ಚಳಮಾತಂಗಮೆ ತೀರನೀರದ ಮಹೀಂದ್ರಂ (ತಒಕಂ. ೨-೫೫). [ನೀರ್+ಉಣ್]

ನೀರುಣಿಸು$_1$ (ಕ್ರಿ). ನೀರು ಕುಡಿಸು ; ನೀರೂಡು : ನೀರನ್ನು ಒದಗಿಸು : ಈ ಐದು ಪ್ರವಾಹಗಳು ಇನ್ನೂ ಹರಿಯುತ್ತಲಿವೆ. ಸಾಗರಾಂತ ಪೃಥ್ವಿಯನ್ನು ನೀರುಣಿಸಿ ಫಲವತ್ತಾಗಿ ಮಾಡುತ್ತಲಿವೆ (ವಿಚಾಮಂ. ೪೦) ; ಬಿಸಿಲಲ್ಲಿ ಮರಗಳಿಗೆ ನೀರುಣಿಸುತ್ತಿದ್ದಿರಿ ; ಪಿತ್ಥ-ಗಿತ್ಥ ತಲೆಗೇರಿಲ್ಲ ತಾನೆ ? (ಮೂರುದಾ. ೩೭). [ನೀರು$_1$(<ನೀರ್)+ಉಣಿಸು$_1$]

ನೀರುಣಿಸು$_2$ (ನಾ). ನೀರನ್ನು ಹಾಕುವಿಕೆ ; ನೀರೆರೆಯುವಿಕೆ : ಪರಿಪ ಕಾಲ್ವೆಗಳಿಂದ ಬಾಳೆಮೀನ್ನೆಗೆದು ಬಂಧುರಪೂಗಮಂ ಮುಟ್ಟಲಲ್ಲಿರ್ದ ಪೊಂಬಾಳೆ ಬಿರಿದು ಮಕರಂದರಸಮಂ ಸೂಸಲದು ಪೊನಲ್ವರಿದು ನೀರುಣಿಸಾಗಲು (ಸೌಂದಪು. ೫-೯೨). [ನೀರ್+ಉಣಿಸು$_2$]

ನೀರುಣಿಸುಂಕ (ನಾ). ನೀರಿನ ಮೇಲೆ ಹಾಕುವ ಒಂದು ಬಗೆಯ ತೆರಿಗೆ : ಇನ್ತೀ ಧರ್ಮಮಂ ಗೆಯ್ದೋಂ ನೀರುಣಿಸುಂಕಂ ಬಿಟ್ಟ ಮೊದಲಾ[ಗಿ] ಎಲ್ಲಮಂ ಬಿಟ್ಟೋಮ್ (ಸೌಇಇ. XI-1, ೧೫-೫ ; 871). 'ನೀರಾಣಿವರಿ', 'ನೀರೋಣಿ' ಪರಾ.

[ನೀರುಣಿ ? + ಸುಂಕ$_1$]

ನೀರುತರ್ಕಾರಿ (ನಾ). ಮೀನು : ಕರಿಯನ ಅಭಿಪ್ರಾಯದಲ್ಲಿ ಮೀನು ಮಾಂಸಕ್ಕೆ ಸೇರಿದುದೇ ಅಲ್ಲ. ಅದು ಯಾರು ಬೇಕಾದರೂ ಉಪಯೋಗಿಸಬಹುದಾದ ನೀರುತರ್ಕಾರಿ (ಬಿಸ್ತಕ. ೮).

[ನೀರು$_1$(<ನೀರ್)+ತರ್ಕಾರಿ$_2$(<ತರಕಾರಿ)]

ನೀರುತಾಪ (ನಾ). ಉರಿಮೂತ್ರ (?) : ಯಷ್ಟಿಮಧುಕ, ದ್ರಾಕ್ಷೆ ಹಣ್ಣು, ಬೆಲ್ಲವತ್ತದ ಹಣ್ಣು ಈ ಮೂಱನ್ನು ಕಷಾಯವ ಕಾಸಿ ಕೊಟ್ಟರೆ ನೀರುತಾಪ ಬಿಡುವುದು (ವಿನೈವಿ. ೧೭೨).

[ನೀರು$_1$(<ನೀರ್)+ತಾಪ$_2$]

ನೀರುತಿದಿ 'ನೀರ್ದಿತ್ತಿ' ನೋ.

ನೀರುತುಂಬು 'ನೀರ್ದುಂಬು' ನೋ.

ನೀರುತುಳಸಿಗಿಡ (ನಾ). ತುಳಸಿಜಾತಿಗೆ ಸೇರಿದ ಒಂದು ಬಗೆಯ ಸಸ್ಯ : (ಕಿ).

[ನೀರು$_1$(<ನೀರ್)+ತುಳಸಿ(=ತುಲಸಿ)+ಗಿಡ(<ಗಿಡು)]

ನೀರುತೊಟ್ಟಿ (ನಾ). ನೀರನ್ನು ತುಂಬಿಡುವ ಬಾನಿ : ಮನೆಗಳಲ್ಲಿ ನೀರುತೊಟ್ಟಿ ಇಲ್ಲದಿದ್ದರೆ ತುಂಬ ತೊಂದರೆಯಾಗುತ್ತದೆ (ರೂಢಿ).

[ನೀರು$_1$(<ನೀರ್)+ತೊಟ್ಟಿ$_2$]

ನೀರುದಂಟು (ನಾ). ಒಂದು ಬಗೆಯ ಸಸ್ಯ : ನೀರುಹಾವುಗಿಡ, ನೀರುದಂಟು (ಮೈಔಗಿ. ೪೮-೯೫೦). [ನೀರು$_1$(<ನೀರ್)+ದಂಟು]

ನೀರುದಗೆ (ನಾ). ಬಾಯಾರಿಕೆ ; ದಾಹ : (ಕಿ).

[ನೀರು$_1$(<ನೀರ್)+ದಗೆ$_1$]

ನೀರುದಲೆಯ (ನಾ). ತಲೆಯಿಂದ ನೀರು ಒಸರುವ ಒಂದು ಬಗೆಯ ಬಿಳಿಯ ಇರುವೆ ; ಗೆದ್ದಲು ; ಗೊರಲೆ : ನೀರುದಲೆಯನ ಮನೆಯಲಿರುವನಯೇರಿದನ ಸತಿಯನುಜೆಯಪ್ಪನ ಸಾರಿ ಬದುಕಿದನ (ಮಡಿಕ್ಯಾ. V. ೧೧೬೬ ; ಬಸವೇಶ್ವರನ ಪಂಚಸ್ತೋತ್ರ).

[ನೀರು$_1$(<ನೀರ್)+ತಲೆ$_1$+-ಅ$_7$]

ನೀರುದಾರಿ 'ನೀರ್ದಾರಿ' ನೋ.

ನೀರುದಾಳಿ (ನಾ). ಒಂದು ಬಗೆಯ ಸಸ್ಯ : "ಕೀಟಘ್ನ—ಗಂಧಕ, ನೀರುದಾಳಿ, ವಿಳಂಗ" (ಓಷಧಿ. ೩೪). [ನೀರು$_1$(<ನೀರ್)+ದಾಳಿ?]

ನೀರುದುರೆ (ನಾ). ಒಂದು ಬಗೆಯ ಸಸ್ಯ : ಉಡೀ, ಬೆಳುದುರೆ, ನೀರುದುರೆ (ಮೈಔಗಿ. ೩೭-೬೧೦). [ನೀರು$_1$(<ನೀರ್)+ಉದುರೆ$_2$]

ನೀರುದೆಗೆ 'ನೀರ್ದೆಗೆ' ನೋ.

ನೀರುದೊಣೆ 'ನೀರ್ದೊಣೆ' ನೋ.

ನೀರುದೋಷ (ನಾ). ನೀರಿನ ಕಲ್ಮಷದಿಂದುಂಟಾದ ಒಂದು ಬಗೆಯ ರೋಗ (?) : ನೆಲಾವರೆಯ ಸಮೂಲ . . . ಬೇನಿಸೊಪ್ಪು, ಆ ಬೇರು, ಇವಂ ಚೂರ್ಣವಂ ಮಾಡಿ ಊಟವಾದ ಮೇಲೆ ರಾತ್ರಿಯಲ್ಲಿ ಕೊಂಬುದು. ಮಲಶುದ್ಧಿಯಹುದು. ನೀರುದೋಷ ಕೆಡುಗುಂ (ವಿನೈವಿ. ೧೪೭). [ನೀರು$_1$(<ನೀರ್)+ದೋಷ]

ನೀರುನವಿಲು (ನಾ). ನೀರಿನಲ್ಲಿ ವಾಸಿಸುವ ಒಂದು ಬಗೆಯ ಪಕ್ಷಿ : ನೀರುನವಿಲುಗಳು ನೋಡಲು ನೀರುಕಾಗೆಗಳಂತಿದ್ದರೂ ಅವು ಪ್ರತ್ಯೇಕ ಪಕ್ಷಿಕುಟುಂಬ (ಪಕ್ಷಿ. ೧೦೧).

[ನೀರು$_1$(<ನೀರ್)+ನವಿಲು(<ನವಿಲ್)]

ನೀರುನಾಯಿ (ನಾ). ನಾಯಿಯಂತೆ ಇರುವ ಒಂದು ಬಗೆಯ ಜಲಚರ ಪ್ರಾಣಿ : ಆ ಸದ್ದಿಗೋ ಏನೋ, ಎರಡು ನೀರುನಾಯಿಗಳು ಅವಸರದಿಂದ ಈಜಿ, ಹತ್ತಿರದ ಮುಂಡಕನ ಹಳುವನ್ನು ಹೊಕ್ಕುವು (ಸ್ವಪ್ನಹೊ. ೨೬). [ನೀರು$_1$(<ನೀರ್)+ನಾಯಿ(<ನಾಯ್)]

ನೀರುನಿಲ್ಲು 'ನೀರ್ನಿಲ್' ನೋ.

ನೀರುನೆತ್ತಿ (ನಾ). ಬಿದ್ದ ಮಳೆಯ ನೀರನ್ನು ಬೇರೆ ಬೇರೆ ನದಿ, ಸಮುದ್ರ ಮೊದಲಾದ ಪಾತ್ರಗಳಿಗೆ ಹರಿಯುವಂತೆ ಪ್ರತ್ಯೇಕಿಸುವ ನೆಲದ ಉಬ್ಬುಪ್ರದೇಶ; ಜಲವಿಭಾಜಕ ಸ್ಥಳ; ಇಳಿ ಮೇಡು : (ಕಿಸಂಗ್ಲಾ. ೧೩೧). [ನೀರು$_1$(<ನೀರ್)+ನೆತ್ತಿ]

ನೀರುನೇರಳೆಗಿಡ (ನಾ). ಒಂದು ಬಗೆಯ ನೇರಳೆ ಗಿಡ: ಸೀತಾರಾಮ ನೀರುನೇರಳೆಗಿಡದ ಕಡ್ಡಿಯೊಂದನ್ನು ಮುರಿದು ಹಲ್ಲಿಂದ ಕಚ್ಚಿ . . . ಹಲ್ಲುಜ್ಜುವ ವಿಧಾನ ಗೆಳೆಯನಿಗೆ ತೋರಿಸಿಕೊಟ್ಟ (ಚಿಗುಕ. ೬೦).
[ನೀರು$_1$(<ನೀರ್)+ನೇರಳೆ(<ನೇಱಲ್)+ಗಿಡ(<ಗಿಡು)]

ನೀರುಪಕ್ಷಿ (ನಾ). ನೀರಿನಲ್ಲಿ ವಾಸಿಸುವ ಹಕ್ಕಿ ; ಜಲಪಕ್ಷಿ : ನೀರುಪಕ್ಷಿಗಳು ಜಟಲವಾದ ಗೂಡು ಕಟ್ಟುವುದಿಲ್ಲ (ಪಕ್ಷಿ. ೪೮).
[ನೀರು$_1$(<ನೀರ್)+ಪಕ್ಷಿ]

ನೀರುಪಲಸು, ನೀರುಹಲಸು (ನಾ). ಒಂದು ಬಗೆಯ ಹಲಸಿನ ಮರ ಮತ್ತು ಅದರ ಕಾಯಿ : ಹಳೆಯಕ್ಕಿಗಚ್ಚಿನೊಳು ನೀರುಪಲಸಿನ ಕಾಯ ಕಳಿಯ ಬೇಯಿಸಿ ಬಸಿದು ಕದುಕಿಱುದು . . . ತುಪ್ಪವನೆಱೆದು ಬೇಯಿಸಲು ಭಕ್ತಫಲನೀರಪನಸಮದಾದುದು (ಸೂಪಶಾ. ೫-೫೮). **ನೀರುಹಲಸು:** "ನಿಚುಳಃ, ಅಂಬುಜಃ, ಇಜ್ಜಲಃ—೩ ಗನ್ನೇರಳೆಗಿಡದ ಹೆಸರುಗಳು. ಇದನ್ನು ನೀರುಹಲಸಿನ ಗಿಡವೆನ್ನುವರು" (ಸಿದ್ಧಾಂತಿ. ೧೨೫) ; ನೀರುಹಲಸಿನ ತೊಳೆ, ಹಲಸು . . . ಇವುಗಳನ್ನು ನೆರೆಹೊರೆಯವರಿಗೂ ಹಂಚಿ ಅದರ ಉಪಯೋಗಕ್ರಮವನ್ನೂ ಅವರಿಗೆ ತಿಳಿಸಿದರು (ಮಲೆಮಂ. ೯೫). [ನೀರು$_1$(<ನೀರ್)+ಪಲಸು]

ನೀರುಪಾರಿವಪಕ್ಷಿ (ನಾ). ಒಂದು ಬಗೆಯ ನೀರುಹಕ್ಕಿ : "ಜಲಕಪೋತಃ—ನೀರುಪಾರಿವಪಕ್ಷಿ" (ಓಷಧಿ. ೬೧).
[ನೀರು$_1$(<ನೀರ್)+ಪಾರಿವ$_1$+ಪಕ್ಷಿ]

ನೀರುಪುಚ್ಚಿ ಕಾಯಿ (ನಾ). ಒಂದು ಬಗೆಯ ಕಾಯಿ (?) : ಬಲಗಡೆಗೆ ನಾಲ್ಕೈದು ನೀರುಪುಚ್ಚೀಕಾಯಿ ಗಿಡಗಳು (ದೆಯ್ಯಮ. ೧೨).
[ನೀರು$_1$(<ನೀರ್)+ಪುಚ್ಚಿ?+ಕಾಯಿ$_4$(<ಕಾಯ್$_4$)]

ನೀರುಪುಳ್ಳಂಪುರಚಿಎಲೆಗಿಡ (ನಾ). ಒಂದು ಬಗೆಯ ಸಸ್ಯ : ಚಕ್ಲೀತಾ ಸೊಪ್ಪು, ನೀರುಪುಳ್ಳಂಪುರಚಿ ಎಲೆಗಿಡ (ಮೈಔಗಿ. ೧೧-೧೯೭)
[ನೀರು$_1$(<ನೀರ್)+ಪುಳ್ಳಂಪುರಚಿ(<ಪುಳ್ಳುಂಪುಣಿಸೆ)+ಎಲೆ$_1$+ಗಿಡ(<ಗಿಡು)]

ನೀರುಪ್ಪಿಗಿಡ (ನಾ). ಒಂದು ಬಗೆಯ ಮುಳ್ಳುಗಿಡ ; ಇಕ್ಷುರ ; ಗೊಳಗೊಳಕೆ : ನೀರುಪ್ಪಿಗಿಡ, ಮುಳ್ಳು ಅಂಕೋಲೆ, ಗೋರಿವಿಡಿ, ಕೊಳವಳಿಕೆ (ಮೈಔಗಿ. ೧೧-೧೯೭).
[ನೀರು$_1$(<ನೀರ್)+ಉಪ್ಪಿ+ಗಿಡ(<ಗಿಡು)]

ನೀರುಪ್ಪು (ನಾ). ೧. ನೀರಿನಿಂದ ತಯಾರಿಸಿದ ಉಪ್ಪು; ಕಡಲುಪ್ಪು ; ಅಡಿಗೆ ಉಪ್ಪು : ನಾರು ಬಲಿಯದ ಹೀರೆ ಎಳೆಗಾಯ್ಗಳಂತಂದು . . . ಕತ್ತರಿಸಿ ತುಪ್ಪ ನೀರುಪ್ಪು ನೀರುಳ್ಳಿ ಶುಂಠಿಗಳನಿಕ್ಕಿ (ಸೂಪಶಾ. ೫-೬). ೨. ಉಪ್ಪು ಕದಡಿದ ನೀರು ; ಉಪ್ಪು ನೀರು : ನೀರುಪ್ಪಿನಲಿ ಕಲಸಿದುವು ಲವಣೋದಕಿಯೆನಿಕ್ಕು (ಮಂಗರಾ. ೬೪-೩). ೩. "ಉಪ್ಪಿನ ಕಾಯಿ" (ನೀತಿಮಂ. ಟಿಪ್ಪಣಿ) : ಬಡತನದಿಂ . . . ಬಾಟ್ಟಂ ಪರಗೃಹದಡುಗೂಟ್ ನೀರುಪ್ಪುಗಳ್ಗೆ ಲಯಮಂ ಮಾಟ್ಟಂ (ನೀತಿಮಂ. ೨-೩೬೦). 'ಕಲ್ಲುಪ್ಪು' ಪರಾ. [ನೀರ್+ಉಪ್ಪು$_1$]

ನೀರುಬಲ್ಲೆ, ನೀರುಬಿಲ್ಲೆ (ನಾ). ಒಂದು ಬಗೆಯ ರೋಗ (?) : ಇದ ಮೇಹಗಡಣ, ಜಲಗರ; ನೀರುಬಲ್ಲೆಯವರಿಗೆ ಮೂಱು ಹುಣಸೇಬೀಜದಷ್ಟು ಕೊಟ್ಟು ಮಧುರ ಆಹಾರವಿಕ್ಕಲು ಬಲ್ಲೆ ಮಲದೊಳಗೆ ಬೀಳುವುದು (ವಿನೈವಿ. ೧೭೨). **ನೀರುಬಿಲ್ಲೆ :** ದಂಗದೇಶದಲ್ಲಿ ನೀರುಬಿಲ್ಲೆ, ಸಂಧಿವಾತ ಮತ್ತು ಕನ್ಯೆ ಇವಕ್ಕಾಗಿ ಸಹಸಾ ಹುಡುಕಬೇಕಾಗಿಯೇ ಇಲ್ಲ (ಇಪ್ಪಕ. ೪೨೯). [ನೀರು$_1$(<ನೀರ್)+ಬಲ್ಲೆ:]

ನೀರುಬಳ್ಳಿ (ನಾ). ಒಂದು ಬಗೆಯ ಸಸ್ಯ : "ಗುಲ್ಮಿನೀ—ಹರೇಣುಕ, ನೀರುಬಳ್ಳಿ" (ಓಷಧಿ. ೪೯). [ನೀರು$_1$(<ನೀರ್)+ಬಳ್ಳಿ]

ನೀರುಬಳ್ಳೆ, ನೀರಬಳ್ಳೆ (ನಾ). ಒಂದು ಬಗೆಯ ಗಿಡ : "ಕಪಿಲೈಕರಃ—ನೀರುಬಳ್ಳೆ" (ಓಷಧಿ. ೨೭). **ನೀರಬಳ್ಳೆ :** "ಕಾಕನಾಳಃ—ನೀರಬಳ್ಳೆ" (ಓಷಧಿ. ೬೦). [ನೀರು$_1$(<ನೀರ್)+ಬಳ್ಳೆ$_1$]

ನೀರುಬಿಡು 'ನೀರ್ಬಿಡು' ನೋ.

ನೀರುಬಿಲ್ಲೆ 'ನೀರುಬಲ್ಲೆ' ನೋ.

ನೀರುಬಿಳಿಗಡ್ಡೆಹಂಬು (ನಾ). ಒಂದು ಬಗೆಯ ಬಳ್ಳಿ : ನೀರುಬಿಳಿಗಡ್ಡೆ ಹಂಬು, ಬಿಳೀಹಂಬು (ಮೈಔಗಿ. ೪೬-೯೧೪).
[ನೀರು$_1$(<ನೀರ್)-ಬಿಳಿಗಡ್ಡೆ$_0$+ಹಂಬು$_2$(<ಪರಪು$_2$)].

ನೀರುಬೆಕ್ಕು (ನಾ). ನೀರಿನಲ್ಲಿ ವಾಸಿಸುವ ಒಂದು ಬಗೆಯ ಪ್ರಾಣಿ : "ಉದ್ರಃ—ನೀರುಬೆಕ್ಕು" (ಸಿದ್ಧಾಂತಿ. ೬೪).
[ನೀರು$_1$(<ನೀರ್)+ಬೆಕ್ಕು]

ನೀರುಬೆಟ್ಟಬಳ್ಳಿ (ನಾ). ಒಂದು ಬಗೆಯ ಬಳ್ಳಿ : (ಮೈಔಗಿ. ೭೦-೧೪೩೮). [ನೀರು$_1$(<ನೀರ್)+ಬೆಟ್ಟ?+ಬಳ್ಳಿ]

ನೀರುಬೆರಸು 'ನೀರ್ವೆರಸು' ನೋ.

ನೀರುಬೇಳ (ನಾ). ಒಂದು ಬಗೆಯ ಗಿಡ : "ಕಾಂಚನಃ-ನೀರುಬೇಳ" (ಓಷಧಿ. ೨೯). [ನೀರು$_1$(<ನೀರ್)+ಬೇಳ$_0$]

ನೀರುಬೊಕ್ಕೆ (ನಾ). ನೀರು ತುಂಬಿರುವ ಬಿಲ,—ಡೊಗರು : ಕುಳೀರಃ, ಕರ್ಕಟಃ—೨ ಏಡೀ ಪೆಸರುಗಳು. ಅಂದರೆ ನೀರುಬೊಕ್ಕೆಗಳಲ್ಲಿರುವ ಏಡೀಕಾಯಿ, ನಳ್ಳಿಗಳು (ಸಿದ್ಧಾಂತಿ. ೮೩).
[ನೀರು$_1$(<ನೀರ್)+ಬೊಕ್ಕೆ$_2$]

ನೀರುಬೋಗದಬಂಟೆ (ನಾ). ಒಂದು ಬಗೆಯ ಗಿಡ : ನೀರುಬೋಗದ ಬಂಟೆ, ನೀರ್ವಾಡಮಲ್ಲಿ (ಮೈಔಗಿ. ೪೦-೭೮೫).
[ನೀರು$_1$(<ನೀರ್)+?]

ನೀರುಬ್ಬರ (ನಾ). ನೀರಿನ ಚಿಲುಮೆ,—ಬುಗ್ಗೆ ; ಒರತೆ : "ಉತ್ಸಃ, ಪ್ರಸ್ರವಣಂ—೨ ಬೆಟ್ಟದಲ್ಲಿ ಹುಟ್ಟುವ ನೀರುಬ್ಬರ, ಬೆಟ್ಟಚಿಲಮೆ, ಬೆಟ್ಟಜೌಗು" (ಸಿದ್ಧಾಂತಿ. ೧೦೭). [ನೀರು$_1$(<ನೀರ್)+ಉಬ್ಬರ(<ಉರ್ವರ)]

ನೀರುಬ್ಬು (ನಾ). ನೀರಿನ ಏರಿಕೆ,—ಉಕ್ಕು : ಮೆಱೆದುದಿದಿರಲಿ ನಿಖಿಳನದಿಗಳ ಮುಱುಕವನು ಮಸುಳಿಸುವ ಮಸಕದ ನಿಱಿಸಿನಲಿ ನೀರುಬ್ಬುಗಳ ನಿರ್ಘೋಷದಬ್ಬರದ ಬಿಱುಬುತೆರೆಗಳ . . . ಫೇನಪಿಂಡದ ಗುಱುಬಿನಲಿ ಗಾಡಿಸಿತು ಗೋದಾವರಿ ಕಕುತ್ಸ್ಥಜನ (ತೊರರಾ. ೩-೧-೪೭). [ನೀರು$_1$(<ನೀರ್)+ಉಬ್ಬು$_2$(<ಉರ್ವು$_2$)]

ನೀರುಬ್ರಹ್ಮಿ (ನಾ). ಕೆರೆ ಮುಂತಾದುವುಗಳ ದಡದಲ್ಲಿ ಬೆಳೆಯುವ ಒಂದು ಬಗೆಯ ಸಸ್ಯ : (ಕಿ).
[ನೀರು$_1$(<ನೀರ್)+ಬ್ರಹ್ಮಿ$_1$]

ನೀರುಬ್ರಾಹ್ಮಿ (ನಾ). = ನೀರುಬ್ರಹ್ಮಿ : (ಮೈಔಗಿ. ೧೧-೧೮೯).
[ನೀರು$_1$(<ನೀರ್)+ಬ್ರಾಹ್ಮಿ]

ನೀರುಮಂಜಿ 'ನೀರುವಂಜಿ' ನೋ.

ನೀರುಮಜ್ಜಿಗೆ 'ನೀರ್ಮಜ್ಜಿಗೆ' ನೋ.

ನೀರುಮಣ್ಣು 'ನೀರ್ಮಣ್' ನೋ.

ನೀರುಮತ್ತಿ (ನಾ). ಒಂದು ಬಗೆಯ ಮತ್ತಿಮರ : "ಕಾಳಂದಿನೀ—ನೀರುಮತ್ತಿ" (ಓಷಧಿ. ೨೮).
[ನೀರು$_1$(<ನೀರ್)+ಮತ್ತಿ$_1$(<ಮಱ್ತು$_2$)]

ನೀರುಮನೆ 'ನೀರ್ಮನೆ' ನೋ.

ನೀರುಮಳಿ 'ನೀರ್ಮುಚಿ' ನೋ.

ನೀರುಮಾವಿನ ಕಾಯಿ (ನಾ). ಮಾವಿನಕಾಯಿಯಿಂದ ತಯಾರಿಸುವ ಒಂದು ಬಗೆಯ ಉಪ್ಪಿನ ಕಾಯಿ: ನೀರುಮಾವಿನ ಕಾಯಿ (ಮಿಡಿಉಪ್ಪಿನ ಕಾಯಿ), ನೀರುಹಲಸಿನ ತೊಳೆ . . . ಹಪ್ಪಳಗಳು, ಇವುಗಳನ್ನು ನೆರೆಹೊರೆಯವರಿಗೂ ಹಂಚಿ ಅದರ ಉಪಯೋಗಕ್ರಮವನ್ನೂ ಅವರಿಗೆ ತಿಳಿಸಿದರು (ಪುಲಿಮಂ. ೯೫).

[ನೀರು$_1$(<ನೀರ್) + ಮಾವಿನ ಕಾಯಿ]

ನೀರುವಿಸಾ 'ನೀವಿರ್ಸಾ' ನೋ.

ನೀರುವುಟ್ಟು 'ನೀರ್ವುಟ್ಟು' ನೋ.

ನೀರುವೊಗೆ 'ನೀರ್ವೊಗೆ' ನೋ.

ನೀರುರುಳಿ (ನಾ). ನೀರಿನ ಗುಳ್ಳೆ; ಬುದ್ಬುದ: ತೆರೆಯುವು ನೀರ್ವಾವಿವು ಸಲಿಲದ ನುದಕರಿಯುವು ಜಲಗೊಳ್ಳ ಮುಗಿಲಿವು ನೊರೆಯಿವು ಶಂಕವು ಮುತ್ತಿವು ಸಿಡಿದ ನೀರುರುಳಿಯೆಂದಜುನರಿಗಾದವು (ಸೊಬಸೋ. ೧೫-೩೧). [ನೀರ್ + ಉರುಳಿ$_1$]

ನೀರುಲಿ (ನಾ). ನೀರಿನ ಶಬ್ದ,—ಮೊರೆತ: ಶಂಕರ ಜಟಾಜೂಟ ವಿಗಳಿತೆಯ, ನೀರುಲಿಯ ನೊರೆನಗೆಯ ಜಡವೊನಲ ತೆರೆನಡೆಯ . . . ಜಹ್ನುಜಾತೆಯಂ ದರ್ಶಿಸಿದೊಡನೆ (ತ್ರಿಲೋಪಾ. ೯೭-೫೧೯).

[ನೀರ್ + ಉಲಿ$_2$]

ನೀರುವಂಜಿ, ನೀರಂಜಿ, ನೀರವಂಜಿ, ನೀರುಮಂಜಿ (ನಾ). ೧. ಒಂದು ಬಗೆಯ ಸೆಣಬಿನ ಗಿಡ: "ಅಂಬುಪ್ರಿಯ—ನೀರುವಂಜಿ" (ಅಕಾನಿ. ೧-೧೬). **ನೀರಂಜಿ: ೧.** ನೀರವಂಜಿ, ನೀರಂಜಿ, ಹೊಳೆಬೋಸಿ (ಮೈಚಿಗಿ. ೬೭-೧೩೭೬); ತೀತೆ, ಭಾವಿಯ ಬಳಿಯ ನೀರಂಜೀ ಪೊದೆಯ ಮರೆಯಲ್ಲಿ ನಿಂತಳು(ಅಪತಂ.೧೩೬). **೨.** ಒಂದು ಬಗೆಯ ಮರ: ಆಟಗಳಲ್ಲೆಲ್ಲ ಕಲಾತ್ಮಕವೂ ಜನಪ್ರಿಯವೂ ಆದುದೆಂದರೆ ಕೋಲಾಟವೇ ಆಗಿದೆ . . . ಕೋಲುಗಳನ್ನು ನೀರಂಜಿ ಮರದಿಂದ ಮಾಡಿರುತ್ತಾರೆ (ಕವಿಕೋ. I, ೭೧೬). **ನೀರವಂಜಿ: ೧.** ನೀರವಂಜಿ, ನೀರಂಜಿ, ಹೊಳೆಬೋಸಿ (ಮೈಚಿಗಿ. ೬೭-೧೩೭೬); ನೀರವಂಜಿ, ಸೊಂಟೆ, ಅರಿಸಿನ (ಸಸ್ಯನಾ. ೨೩೮). **ನೀರುಮಂಜಿ: ೧.** "ನಾಪೇಯಂ—ಸ್ಕೈಂಧವ, ನೀಲಾಂಜನ, ನೀರುಮಂಜಿ" (ಓಷಧಿ. ೮೫).

[ನೀರು$_1$(<ನೀರ್) + ಮಂಜಿ$_2$]

ನೀರುವಂಜಿನಾರು (ನಾ). ನೀರುವಂಜಿ ಗಿಡದ ನಾರು,—ಹುರಿ: ಗಂಟುಭಾರಂಗಿ . . . ಕರ್ಕಾಟಕಶೃಂಗಿ, ನೀರುವಂಜಿನಾರು, ಅಮೃತಬಳ್ಳಿ ಇವನ್ನು ಬಿಸಿ ಮಾಡಬೇಕು (ಸಕವೈ. ಪರಿ. ೪೮೬).

[ನೀರುವಂಜಿ + ನಾರು$_3$(<ನಾರ್)]

ನೀರುವಕ್ಕಿ 'ನೀರ್ವಕ್ಕಿ' ನೋ.

ನೀರುವಕ್ಕೆ (ನಾ). ನೀರಿನ ಆಶ್ರಯಸ್ಥಾನ; ಜಲಾಶಯ (?): ಆ ಹೊಸಗೆಜಿಯ ಬಡಗಣ ಕೋಡಿಯಿಂದಂ ಮೂಡ ಹೋದ ನೀರುವಕ್ಕೆಯಿಂದಂ ಅಯ್ಕನಕಟ್ಟದ ಕಾರ್ಯವಳ್ಳದಿಂದಂ ತೆಂಕಲಾದುದೆಲ್ಲವಿನಿತುಂ ಪರಮಂಗೆ ಸೀಮೆಯಾಗಿ ಬಿಟ್ಟ ದತ್ತಿ (ಎಕ. II, ೭೩-೪೬; 1118).

[ನೀರು$_1$(<ನೀರ್) + ಪಕ್ಕೆ$_1$(<ಪಟ್ಟಿ$_1$)]

ನೀರುವಡೆ (ನಾ). ನೀರಿನ ಮೇಲೆ ಹಾಕುವ ಒಂದು ಬಗೆಯ ತೆರಿಗೆ (?): ಆ ಗ್ರಾಮಕ್ಕೆ ಪಳೆಯ ಶಾಸನವ ನೆದಿಸಿ ಕೊಟ್ಟವಾಗಿ ನೀರುವಡೆ ಕಾಲುವಡೆ ಸ್ಥಾನಮಾನ್ಯ ಪೂರ್ವಮರಿಯಾದೆಯೆಂದು ಕೊಟ್ಟ ಶಿಲಾಶಾಸನ (ಎಕ. XIV, ಗುಂಡ್ಲು ೫೯. ೧೩೨-೧೪; 1540). 'ಕಾಲುವಡೆ' ಪರಾ. [?]

ನೀರುವರಿ$_1$ 'ನೀರ್ವರಿ' ನೋ.

ನೀರುವರಿ$_2$ (ನಾ). ನೀರಿನ ಮೇಲಿನ ತೆರಿಗೆ.—ಸುಂಕ. 'ನೀರಾಣೆವರಿ' ಪರಾ. [ನೀರು$_1$(<ನೀರ್) + ವರಿ$_1$]

ನೀರುವಲೆ 'ನೀರ್ವಲೆ' ನೋ.

ನೀರುವಳಿ (ನಾ). ನೀರಾವರಿ ಇರುವ ಪ್ರದೇಶ (?): ಹಲ್ದುಣಿಯ ಊರ ಮುಂದಣ ಬ್ರಹ್ಮದೇವನ ಕೆಜಿಯಿಯುಂ ಅಲ್ಲಿಂ ಬಡಗಣ ಹಳ್ಳದ ಕಾಲ್ವೆಯುಂ ಅಂತೆರಡಜ ನೀರುವಳಿಯಿಂ ಬೆಳೆವ ಭೂಮಿ ಎನಿತುಂಟನಿತುಮಂ ಧಾರಾಪೂರ್ವಕಂ ಮಾಡಿ ಕೊಟ್ಟರು (ಸೌಇಇ. IX-i, ೭೫೦-೫೫ ; 1148); ಹಾಸನದ ಸೀಮೆಯೊಳಗಣ ಸೆಟ್ಟಿಹಳ್ಳಿಗೆ ಸಲುವಂಥಾ ಚತುಸ್ಸೀಮೆಯೊಳಗಾದ ಗದ್ದೆ ಬೆದ್ದಲು ಕಟ್ಟೆ ಕಾಲುವೆ ಅನೆ ಆಚ್ಚುಕಟ್ಟು ಹೊಲ ಮೇರೆ ನೀರುವಳಿ ಇವೆಲ್ಲಂ ಒಳಗಾಗಿ (ಎಕ. V, ಹಾಸನ. ೨-೧೭ ; 1363). [ನೀರು$_1$(<ನೀರ್)+ಬಳಿ$_3$(<ಬುಜಿ$_3$)]

ನೀರುವಜ್ಜಗೋಲ್ (ನಾ). ನೀರನ್ನು ದಾಟುವ ಸಾಧನ; ದೋಣಿ; ಹರಿಗೋಲು: "ಅರಿತ್ರಯೆನೆ ನೀರುವಜ್ಜಗೋಲಕ್ಕುಂ [ಪಾವಾಂ. ನೀರೆ ಪಜ್ಜುಗೋಲಕ್ಕುಂ, ನೀರುವಜ್ಜಗೋಲಕ್ಕುಂ]" (ಪುಂಗವಾ. ೧೨೩-೧೩೩). [ನೀರು$_1$(<ನೀರ್)+ಪಜ್ಜುಗೋಲ್(<ಪಜ್ಜುಗೋಲ್)]

ನೀರುವಾಟೆ (ನಾ). ಬಿದಿರಿನ ಜಾತಿಯ ಒಂದು ಗಿಡ: ಚಕ್ರಾಣಿಕೆ, ನೀರುವಾಟೆ (ಮೈಚಿಗಿ. ೫-೧೩೦). [ನೀರು$_1$ (<ನೀರ್) + ವಾಟೆ]

ನೀರುವಾವು 'ನೀರ್ವಾವು' ನೋ.

ನೀರುವ್ಯಾಧಿ (ನಾ). ನೀರಿನಿಂದ ಉಂಟಾಗುವ ಒಂದು ಬಗೆಯ ವ್ಯಾಧಿ (?): ಕಾಡುನುಗ್ಗೆ ಅರಳಿಸಿಪ್ಪೆ . . . ಸೀಗೆರಸ, ಇವ ಮರ್ದಿಸಿ ಕೊಳ್ಳೆ ನೀರುವ್ಯಾಧಿ ಮಾಣ್ಗುಂ (ವೈವೈ. ೧೩೭).

[ನೀರು$_1$ (<ನೀರ್) + ವ್ಯಾಧಿ]

ನೀರುಸಂಬರೇಣುಎಲೆ (ನಾ). ಒಂದು ಬಗೆಯ ಎಲೆ: ನೀರುಸಂಬರೇಣುಎಲೆಯನ್ನು ಬಿಸಿ ಮಾಡಿ ತೆಗೆದ ರಸ ೩ ದುಡ್ಡು ತೂಕ, ಹರಳೆಣ್ಣೆ ೨ ದುಡ್ಡು ತೂಕ . . . ಇವನ್ನೆರೆದು ಕುಡಿಯಲು ಮೂತ್ರಕೃಚ್ಛ್ರ ಪರಿಹಾರವಾಗುವುದು (ಸಕವೈ. ೫೧೫).

[ನೀರು$_1$ (<ನೀರ್) + ಸಂಬರೇಣು$_0$ + ಎಲೆ$_1$]

ನೀರುಸಜ್ಜೆಹುಲ್ಲು (ನಾ). ಒಂದು ಬಗೆಯ ಹುಲ್ಲು: (ಮೈಚಿಗಿ. ೫-೭೬).

[ನೀರು$_1$ (<ನೀರ್) + ಸಜ್ಜೆ$_1$(<ಸಜ್ಜೆ$_1$) + ಹುಲ್ಲು (<ಪುಲ್)]

ನೀರುಸಣ್ಣಸೊಪ್ಪು (ನಾ). ಒಂದು ಬಗೆಯ ಸೊಪ್ಪು: ನೀರುಕಣಿಗಲು, ತಕ್ಕರೋಹಿತ, ನೀರುಸಣ್ಣಸೊಪ್ಪು (ಮೈಚಿಗಿ. ೬೭-೧೩೯೧).

[ನೀರು$_1$ (<ನೀರ್) + ಸಣ್ಣ + ಸೊಪ್ಪು$_2$]

ನೀರುಸಬ್ಬಸಿಗೆಹುಲ್ಲು (ನಾ). ಒಂದು ಬಗೆಯ ಹುಲ್ಲು: ನೀರುಸಬ್ಬಸಿಗೆಹುಲ್ಲು, ಕಾಡುಸಬ್ಬಸಿಗೆಹುಲ್ಲು (ಮೈಚಿಗಿ. ೭೭-೭೭೭).

[ನೀರು$_1$(<ನೀರ್) + ಸಬ್ಬಸಿಗೆ + ಹುಲ್ಲು(<ಪುಲ್)]

ನೀರುಸಲ್ಲಿ (ನಾ). ಒಂದು ಬಗೆಯ ಸಸ್ಯ: ಬಾನಾವರ, ನೀರುಸಲ್ಲಿ, ಹನಕೆ (ಮೈಚಿಗಿ. ೩೯-೭೭೫). [ನೀರು$_1$ (<ನೀರ್) + ಸಲ್ಲಿ ?]

ನೀರುಸಿರಿ (ನಾ). ನೀರಿನಲ್ಲಿ ಉಸಿರಾಡುವ ಜೀವಿ; ಜಲಚರ: ಬೀಸುತೆ ಪುರಿನೇರ್ ಪೆಣ್ದಾ ಬಲೆಯನ್ . . . ಪಿಡಿವನ್ ಬಯಲಾ ಕೂರುಸಿರಿಗಳನ್, ಮೇರ್ ಕಡಲಾಜದ ನೀರುಸಿರಿಗಳನ್ (ಅಂತಿಗೂ. ೧೩-೩೨೪); ಕಡಲ ನೀರ್‌ಉಸಿರಿಗಳ್ಗೆರೆಯಾಗಿ ಎಸೆದು ಬಿಡು ಎನ್ನನ್ (ಬದ್ದಪ್ರ. ೩೦-೩೫೩). [ನೀರ್ + ಉಸಿರಿ]

ನೀರುಸೀನಿನ ಗಿಡ (ನಾ). ಒಂದು ಬಗೆಯ ಗಿಡ; "ಭಾಜೀ" (ಪಂಡಿತ. ೨೪೨): (೫). [ನೀರು$_1$ (<ನೀರ್)+ ? +ಗಿಡ (<ಗಿಡು)]

ನೀರುಸುಳಿ 'ನೀರ್ಸುಳಿ' ನೋ.

ನೀರುಹಂದಿ (ನಾ). ಒಂದು ಬಗೆಯ ನೀರುಪ್ರಾಣಿ : "ಶಂಕುಃ—ನೀರುಹಂದಿ" (ಸಿದ್ಧಾಂತಿ. ೮೩).

[ನೀರು$_1$ (<ನೀರ್) + ಹಂದಿ (<ಪಂದಿ)]

ನೀರುಹಂಬು (ನಾ). = ನೀರುಹಬ್ಬೆ : ನಾದೇಯಿ, ನೀರುಹಬ್ಬೆ, ನೀರುಹಂಬು, ಪರಿವ್ಯಾಧ (ಸಸ್ಯನಿ. ೨೬).

[ನೀರು$_1$ (<ನೀರ್) + ಹಂಬು$_2$(<ಪರಪು$_2$)]

ನೀರುಹಕ್ಕಿ 'ನೀರ್ವಕ್ಕಿ' ನೋ.

ನೀರುಹಚ್ಚೆ (ನಾ). ಒಂದು ಬಗೆಯ ಬಿದಿರು : ವಿದುಲ = ನೀರುಹಚ್ಚೆ (ವಿಚೈನಿ. ೫೯). 'ನೀರುಹಬ್ಬೆ' ಪರಾ.

[ನೀರು$_1$ (<ನೀರ್) + ಹಚ್ಚೆ$_2$]

ನೀರುಹನಿ 'ನೀರ್ವನಿ' ನೋ.

ನೀರುಹಬ್ಬೆ, ನೀರಹಬ್ಬೆ (ನಾ). ಬಿದಿರಿನ ಜಾತಿಗೆ ಸೇರಿದ ಒಂದು ಬಗೆಯ ಸಸ್ಯ : "ಪರಿವ್ಯಾಧಃ, ವಿದುಲಃ, ನಾದೇಯಿ, ಅಂಬುವೇತಸಃ—ಳ ನೀರು ಹಬ್ಬೇಗಿಡ" (ಸಿದ್ಧಾಂತಿ. ೧೧೮); ನೀರುಹಬ್ಬೆಯನ್ನು ಹಾಲಿನೊಡನೆ ಅರೆದು ಕುಡಿಯಲು ಕಲ್ಲು ಬೀಳುವುದು (ಸಕವೈ. ಪರಿ. ೪೯೬); ಹಬ್ಬೆ, ನೀರುಹಬ್ಬೆ, ನುಗ್ಗೆ ಮೊದಲಾದ ಪುಷ್ಪಫಲಭರಿತವಾದ ವೃಕ್ಷಂಗಳು (ಕೃಪಾಅ. ೨೨೮). **ನೀರಹಬ್ಬೆ** : "ನಾರಂಗ—ನೀರಹಬ್ಬೆ, ಕೊಳವಳಿಕೆ, ನೀರುಮಂಜಿ" (ಓಷಧಿ. ೮೫); ಎಲೈ ಮಿತ್ರನೆ, ನೀರಹಬ್ಬೆಗಿಡ ಬಾಗಿರುವುದು ತನ್ನ ಪ್ರಭಾವದಿಂದಲೋ ಅಥವಾ ನದೀವೇಗದ ಪ್ರಭಾವದಿಂದಲೋ ? (ಶಾಕುಂತ. ೨೦-೨೪). 'ನೀರ್ಬೆತ್ತ' ಪರಾ. [ನೀರು$_1$ (<ನೀರ್) + ಹಬ್ಬೆ$_1$]

ನೀರುಹಲಸು 'ನೀರುಪಲಸು' ನೋ.

ನೀರುಹಾದಿ (ನಾ). ೧. "ತೊರೆ ; ನೀರುಹಾದಿ ; ನಾಲೆ ; ಕೊರಕಲು" (Nallah. ಇಂಕನಿ). ೨. (ಹಡಗು ಮುಂತಾದುವುಗಳು) ನೀರಿನ ಮೇಲೆ ಪ್ರಯಾಣ ಮಾಡುವ ಮಾರ್ಗ ; ಜಲಮಾರ್ಗ : ನೀರುಹಾದಿಯ ಪ್ರಯಾಣಕ್ಕೆ ವಾಯುಮಾರ್ಗಕ್ಕಿಂತ ಹೆಚ್ಚು ಕಾಲ ಬೇಕು (ರೂಢಿ). [ನೀರು$_1$(<ನೀರ್)+ಹಾದಿ(<ಪಾದಿ$_1$)]

ನೀರುಹಾಯಿಸು (ಕ್ರಿ). ನೀರು ಬಿಡು ; ನೀರನ್ನು ಹರಿಸು : ಈ ಕೆಲಸವನ್ನು ಹಿಂದೆ ಹೇಳಿದಂತೆ ನೀರುಹಾಯಿಸುವ ಪ್ರದೇಶಗಳಲ್ಲಿ ಮಾಡಬೇಕಾದದ್ದು ಅತ್ಯಾವಶ್ಯಕ (ಸ್ವಪಸು. ೬೩); ಬುದ್ಧಿವಂತ ಮನುಷ್ಯ ಕಾಲುವೆ ತೋಡಿ, ಗದ್ದೆ ತೋಟಗಳಿಗೆ ನೀರುಹಾಯಿಸಿ ಗಿಡಮರಗಳನ್ನು ಬೆಳೆಯಿಸುತ್ತಾ ಬಂದ (ನನಪಿ. ೪).

[ನೀರು$_1$ (<ನೀರ್) + ಹಾಯಿಸು (<ಪಾಯಿಸು)]

ನೀರುಹಾವು 'ನೀರ್ವಾವು' ನೋ.

ನೀರುಹಾವುಗಿಡ (ನಾ.) ಒಂದು ಬಗೆಯ ಸಸ್ಯ : ನೀರುಹಾವುಗಿಡ, ನೀರುದಂಟು (ಮೈಔಗಿ. ೪೮-೯೫೦).

[ನೀರುಹಾವು? + ಗಿಡ (<ಗಿಡು)]

ನೀರುಹಿಪ್ಪೆ 'ನೀರಿಪ್ಪೆ' ನೋ.

ನೀರುಹೊಗೆ (ನಾ). ನೀರಿನಿಂದ ಮೇಲೇಳುವ ಉಗಿ,—ಹಬೆ : (ಕಿ).

[ನೀರು$_1$ (<ನೀರ್) + ಹೊಗೆ$_2$ (<ಪೊಗೆ$_2$)]

ನೀರುಳ್ಳಿ (ನಾ). ಒಂದು ಬಗೆಯ ತರಕಾರಿಗೆಡ್ಡೆ ; ಈರುಳ್ಳಿ : "ಲತಾರ್ಕಃ, ದುದ್ರಮಃ - ಅದು ನೀರುಳ್ಳಿ" (ನಾಚರಾ. ೧೧೨); ಬೆಲ್ಲದ ನೀರೆಜ್ಜೆದಡೇನು ಬೇವು ಸಿಹಿಯಪ್ಪುದೆ ಕತ್ತುರಿಯ ಲೇಪವಿತ್ತಡೇನು ನೀರುಳ್ಳಿ[ಳ್ಳಿ]ಯ ದುರ್ಗಂಧ ದೂರಪ್ಪುದೆ (ಚನ್ನವ. ಕ. ೫೪-೧೧೬); ನೀರುಳ್ಳಿಯ ಗಡ್ಡೆಯಂ ಮನದೊಳಟ್ಟುಯೊಳಾವಗವೊಂದು ತಟ್ಕೆಯಂ ಚಲ್ಲಿಸಿ ಜಾಜಿಯಂ ಕಲಸಿ ಮೆಲ್ಲದ ಮಾನವನೇನ ಬಲ್ಲವಂ (ಸೂಕ್ತಿಸು. ೧೧-೯೬); ಅಂಬೆಹಳದಿ ಕಾರ್ಗೆಣಸು ನೀರುಳ್ಳಿ ಕೊತ್ತುಂಬರಿ ಕರಿಬೇವು ಸಹಿತ ಸಿಂಬೆ ಕೂಗಲಿ ಪಿಪ್ಪಲಗಾಯ ಕೊಯ್ದರು (ಮೋಹತ. ೪-೬೦); ತುಳಸಿ ಸಾನ್ನಿಧ್ಯದಲಿ ನೀರುಳ್ಳಿಯನು ಹಾಕೆ ಹೊಲಸು ಹೋಗ್ವುದೆ ಹಲವು ಕಾಲಿದ್ದರೆ (ವಿವಾಕೃ. ೧೮-೬); ನೀರುಳ್ಳಿಯವನ ಸಂಗಡ ಹೋರಾಟಕ್ಕೆ ಹೋದರೆ ಮೋರೆಯೆಲ್ಲ ನಾರದೆ ? (ಗಾದೆ). 'ಈರುಳ್ಳಿ' ಪರಾ.

[ನೀರ್+ಉಳ್ಳಿ$_1$./ತಮಿ. ತುಳು. ನೀರುಳ್ಳಿ ; ತೆಲು. ನೀರುಲ್ಲಿ]

ನೀರುಳ್ಳಿಗೆಡ್ಡೆ (ನಾ). = ನೀರುಳ್ಳಿ : ನೀರುಳ್ಳಿಗೆಡ್ಡೆ ಒಣರೊಟ್ಟ ತಕ್ಕೊಂಡು ಹಳದಡೆ ಬಾಯ ಬಿಡುತಾನೆ (ನಾಪದ. ೧೩೭).

[ನೀರುಳ್ಳಿ + ಗೆಡ್ಡೆ (<ಗಡ್ಡೆ)]

ನೀರೂಟ (ನಾ). = ನೀರುಣಿಸು$_2$: ಉಟಾಯ ಬಾಯ್ಗೆ ವೊರಸಿ ಕಾಸಿ ನೀರೂಟಮಂ ಎಣ್ಣೆಯಲ್ಲಾದೊಡಂ ಮಜ್ಜಿಗೆಯಲ್ಲಾದೊಡಂ ಕುಡಲ್ ಆ ಉಳಿ ವಜ್ರದಂತೆ ಬಲ್ಪಾಗಿರ್ಪುದು (ಲೋಕೋಪ. ೫-೪೦ ಟೀಕು); ಪಜ್ಜುದುಗುವ ರಸಾಸಾರಮೆ ಕೊಳಗೊಂಡೆಂದುಂ ನೀರೂಟಕ್ಕೆಳಸವಲ್ಲಿ ಕರ್ವಿನ ಕೆಯ್ಗಳ್ (ಚಂದ್ರಪು. ೧-೯೬); ತಮ್ಮೊಳ್ ಪಳಂಚಲೆ ವೊಳ್ಗೊಂಚಲ ಕಾಯೊಳುರ್ಕುವೆಳನೀರಿಂದಂ ಬನಂಗಳ್ಗುಂದಲೆ ನೀರೂಟಮಿದೇಕೆ ಕೆಮ್ಮನೆ ತೊಟಲ್ವುತಿರ್ಪರಿಂತೆಮ್ಮನೆಂದುಲಿವಂತಿರ್ಪುವು ಜಾಟಣಂಗಳ್ (ಸರ್ಧಪು. ೧-೪೩); ಅಲ್ಲಿಂದೊಸರ್ವ ರಸದ ಸಾರಪ್ರವಾಹಂಗಳಿಂದಂ ಬೆಳೆಗುಂ ನೀರೂಟಮಂ ಪಾರದೆ ಕಟವೆಗಳ ಕ್ಷೇತ್ರಮೆಲ್ಲಂ (ಬಾಧಪು. ೧-೬೯). [ನೀರ್+ಊಟ]

ನೀರೂಡಿಸು (ಕ್ರಿ). ನೀರನ್ನು ಕುಡಿಸು,—ಉಣಿಸು: ಲೀಲೆಗಾಲಯ ಮಾದ ಪುರದ ಪೊಱಗೆ ಬೀಡಂ ಬಿಟ್ಟರ್ದು ನೀಲಗಿರಿಹಸ್ತಿಯಂ ನೀರೂಡಿಸಲ್ ವ್ಯಾಳನೇಱಿ ಪೋಗಲ್ (ಪುಣ್ಯಾಸ್ರ. ೭-೬೦ ಪ); ಜವುಗುನೆಲಗಳಿಗೆ ನೀರೂಡಿಸಿದ ಅಸಂಖ್ಯನದೀಪ್ರತೀಕಗಳು (ಬದ್ಧಪ್ರ. viii ಪೀಠಿಕೆ).

[ನೀರೂಡು + -ಇಸು$_3$]

ನೀರೂಡು (ಕ್ರಿ). ೧. ನೀರು ಉಣಿಸು : ಆ ವಾಹಿನೀಪ್ರವಾಹಮೊಂದೊಂದೆಡೆಯೊಳಂದಂದಿಗೆ ಬಂದುಬಂದು ನೀರೂಡುವ ದೇವರಮಣೀವನಚರಕರೀಂದ್ರಕಟನಿಕಟನಿರ್ಯತ್ತಮಾಲಪಲ್ಲವರಸಾನುಕಾರಿ ದಾನಧಾರಾಪೂರದಿಂ . . . ಎಸೆವುದು (ಚಂದ್ರಪು. ೧-೮೪ ಪ); ಬನಮಂ ನೀರೂಡಿ ನಿಚ್ಚಂ ಬಳೆಯಿಸುವ ಬೆಸಂಬೆತ್ತುವೋ ಧಾರೆಯಿಂ ತಾಮೆನಲಾ ನೀರ್ಗಾಯ್ಗಳಿಂ ಭೋರ್ಗಱೆದುಗುವೆಳನೀರಂ (ಕುಸುಮಾ. ೧-೮೭); ನೀರೂಡಿ ನೆಱೆ ಸಲಹಿದರೆ ಶಾಲ್ಮಲಿವೃಕ್ಷ ಬೀಱುವುದುಂಟೆ ಸತ್ಫಲಪ (ಮೋಹತ. ೪೧-೨೪). ೨. ನೀರನ್ನು ಹೀರಿಕೊಳ್ಳುವಂತೆ ಮಾಡು; ನೀರು ಕುಡಿಸು : ರವಿದುಗ್ಧಂ ಪಾರಿವದೆಚ್ಚವುಂದುರದ ವಿಷ್ಟಿ ತಗರ ಕೋಡಿನ ಮಷಿಯೆಂಬಿವನೊರಸಿ ಕಾಸಿ ನೀರೂಡುವುದುಳಿಯಂ ತೈಲತಕ್ರದೊಳ್ ಪವಿಯಕ್ಕುಂ (ಲೋಕೋಪ. ೫-೪೦); ನೀರೂಡುವಂತೆ ಮದನನ ಕೂರಸಿಯಂ ಚುಯ್ಯೆನುತ್ತೆ ಪೊಗೆ ಪಾಯ್ವಿನೆಗಂ ನೀರೇಜವನದೊಳರ್ದುವನೋರಂತಿರೆ ವಿರಹದಹನದಗ್ಧೆಯರವಳಂ (ಲೀಲಾವ. ೯-೧೬೨). ೩. ನೀರನ್ನು ಹೀರಿಕೊಳ್ಳು ; ನೀರುಣ್ಣು : ಕಾಸಿದ ಲೋಹಕಾವು ಹತ್ತಿ ಕನಲಿ ಕೆಂಗಲಿಸಿ . . . ಎರಕದಲ್ಲಿ ಹರಿದು ನೀರೂಡಿ ಘನೀಭೂತವಾಗಿ ಪ್ರತಿಮೆಯಾಗುವಂತೆ, ಹರಿಹರನ ಪ್ರತಿಭೆಯಿಂದ ಹರಿದು ಬಂದಿದೆ ಈ ಕಾವ್ಯ (ಭಾವಗೀ. ೧೮೫).

[ನೀರ್+ಊಡು$_1$]

ನೀರೂಪ (ಗು). ೧. ಆಕಾರವಿಲ್ಲದ ; ನಿರಾಕಾರವಾದ. ೨. ವಿದ್ರೂಪಗೊಂಡ ; ವಿಕಾರವಾದ. (ನಾ). ೩. ಆಕಾರವಿಲ್ಲದುದು ; ನಿರಾಕಾರವಾದುದು : ಆ ಮೋಡಗಳು ಪಾರವಿಲ್ಲದುದಕ್ಕೆ

ಸಾರವೀಯುತ್ತವೆ. ನೀರೂಪವನ್ನು ಸರೂಪವಾಗಿ ಮಾಡುತ್ತವೆ (ರಾಮಾಸಿ.೧೦೬). [ಸಂ.]

ನೀರೂರು (ಕ್ರಿ). ೧. ನೀರು ಸುರಿ,—ಜಿನುಗು : ಅವಳು ಸ್ವಲ್ಪ ದೂರಕ್ಕೆ ಸರಿದಿದ್ದಳು . . . ಕಣ್ಣ ಕುಣಿಕೆಗಳಲ್ಲಿ ನೀರೂರಿತ್ತು (ಪ್ರಣಸ.೩). ೨. ತೇವವಾಗು ; ಒದ್ದೆಯಾಗು : ಚರ್ಮದ ಅತ್ಯಂತ ಹೊರಪದರ—ಎಪಿಕ್ಯೂಟಿಕಲ್. ೧—೨ ಮೈಕ್ರಾನ್ ದಪ್ಪ, ನೀರೂರುವುದಿಲ್ಲ (ಕೀಟಬೆ. ೮). [ನೀರು$_1$(<ನೀರ್)+ಊರು$_2$(<ಊಱು$_2$)]

ನೀರೂಳಿಗ (ನಾ). ನೀರನ್ನು ಹೊತ್ತು ತರುವ ಕೆಲಸ : (ಕಿ).
[ನೀರ್+ಊಳಿಗ (<ಊಱಿಗ)]

ನೀರೆ 'ನೀಱೆ' ನೋ.

ನೀರೆಡೆ (ನಾ). ನೀರಿರುವ ಸ್ಥಳ,—ಜಾಗ ; ಜಲಾಶಯ : ಧುರದೊಳ್ ಸಿಲ್ಕಿ ಬಂದ ನಿಜವಲ್ಲಭರಂ ಬನದಲ್ಲಿ ಕಾಣುತಂ . . . ಮಿಗೆ ನೀರೆಡೆಯಂ ಬಲುಕಟ್ಟುಗಟ್ಟುವರ್ (ಪುಲ್ಲಕಾ. ೫-೯೦). [ನೀರ್+ಎಡೆ$_3$]

ನೀರೆತ್ತು (ಕ್ರಿ). ನೀರು ಹಾಯಿಸು,—ಬಿಡು : ಮಱೆಯಿಲ್ಲದೆ ತೀವಿದ ಕೆಱೆಯಂತೆ ನೀರೆತ್ತದೆ ಫಲಮಾದ ತೋಟದಂತೆ (ಧರ್ಮಾಮೃ. ೮-೫೧). [ನೀರ್+ಎತ್ತು$_1$]

ನೀರೆದೆ (ನಾ). ನೀರಾದ ಹೃದಯ ; ಕರಗಿದ ಮನಸ್ಸು : ಚಿತ್ತ ಉಪರಮ ಹೊಂದುವಾಗಲೆ ಪಾಪ, ನೀರೆದೆ ನೊಂದಿತು (ಹಾಡುಪಾ. ೫೭-೪೮). [ನೀರು$_1$ (<ನೀರ್)+ಎದೆ (<ಎರ್ದೆ)]

ನೀರೆರಕಲು 'ನೀರೆಱಕಲು' ನೋ.

ನೀರೆರಚು (ಕ್ರಿ). ೧. ನೀರನ್ನು ಚಿಮುಕಿಸು,—ಸಿಂಪಡಿಸು : ಲಕೋಟೆಯನ್ನು ಹರಿದ, ಹಿಂದೆಯೇ ಮೂರ್ಛೆಹೋದ ಆನಂದೋದ್ರೇಕದಿಂದ . . . ಹೊತ್ತು ತಂದು ಹಾಸಿಗೆಗೆ ಚಲ್ಲಿ ಮುಖಕ್ಕೆ ನೀರೆರಚಿದರು (ಹುಚ್ಚುಹು. ೧೭). ೨. (ಆಲಂ) ಕುಗ್ಗಿಸು ; ಕಡಮೆ ಮಾಡು : ಸಿಟ್ಟುಮೂಡುತ್ತಿದ್ದಂತೆಯೇ ಈ ಎಲ್ಲ ಅವಸರದ ಸಂಬಂಧಕ್ಕೆ ಕಾರಣವಾದ ಆ ಘಟನೆಯ ನೆನಪಿನಿಂದ ಹುಟ್ಟಿದ ಜಿಗುಪ್ಸೆ ಸಿಟ್ಟಿನ ಮೇಲೆ ನೀರೆರಚಿತು (ಮೂರುದಾ. ೨೨೪). [ನೀರು$_1$(<ನೀರ್)+ಎರಚು(<ಎಱಚು)]

ನೀರೆರೆ 'ನೀರೆಱೆ' ನೋ.

ನೀರೆಸರು (ನಾ). ೧. ಒಂದು ಬಗೆಯ ಮೆಣಸಿನ ಸಾರು ; ಬೇಳೆಯನ್ನು ಬಳಸದೆ ಮಾಡುವ ಸಾರು ; ಗೊಡ್ಡುಸಾರು : (ಕಿ). ೨. ಅಡುಗೆಗಾಗಿ ಕುದಿಯಲು ಇಟ್ಟ ನೀರು ; ಕುದಿನೀರು : "ನೀರೆಸರು—ಅಡಗಿಗೆ ಕುದಿ ಇಟ್ಟ ನೀರು" (ಜಾನಕೋ. ೧೨).
[ನೀರು$_1$(<ನೀರ್)+ಎಸರು$_2$(<ಎಸರ್)]

ನೀರೆಳೆ (ಕ್ರಿ). ೧. ನೀರನ್ನು ಮೇಲಕ್ಕೆ ಸೆಳೆ ; ನೀರು ಸೇದು. ೨. (ಆಲಂ) ಹಾಳುಮಾಡು ; ನಾಶಗೊಳಿಸು : ಉತ್ತಮೋತ್ತಮರೊಕ್ಕಲಿಗೆ ನೀರೆಳೆವನಕಟಾ (ಅಮೃತ. ೨-೫೨).
[ನೀರು$_1$(<ನೀರ್)+ಎಳೆ$_1$(<ಎಱೆ$_1$)]

ನೀರೆಳ್ಳು (ನಾ). ಎಳ್ಳು ಸಹಿತವಾದ ನೀರು ; ತಿಲೋದಕ : ನೀನಿನ್ನೆನಗೆ ಸತಿಯಲ್ಲ. ನಿನಗಾಂ ಪತಿಯುಮಲ್ಲ, ತರ್ಪಣಂ ಕೊಟ್ಟೆನಿದೊ ನೀರೆಳ್ಳು ಕೊಳ್ ! (ಶ್ರೀರಾಮಾ. ೯೪-೪೪೦).
[ನೀರು$_1$(<ನೀರ್)+ಎಳ್ಳು (<ಎಳ್)]

ನೀರೆಱಕಲು, ನೀರೆರಕಲು, ನೀಱೆಱಕಲು (ನಾ). ನೀರಿನ ಸುರಿತ; ನೀರುಬೀಳು ; ಜಲಪಾತ : ಮೂಡಲು ನೆಯಿದಲೆಯ ಹುಲಿಯ ಮಾನಿಯ ಮಧ್ಯದ ನೀರೆಱಕಲ ಹೊಂನೆಯ ಮರನ ಒತ್ತಿನಲು ನಟ್ಟ ವಾಮನಮುದ್ರೆಯ ಕಲ್ಲು (ಎಕ. VIII, ಶೀರ್ಥಹ. ೧೩೩-೧೭ ; 1404) ; ತೆಂಕಲುಂ ನೀರೆಱಕಲುವೊಳಗಾಗಿ . . . ಪಡುವಲುಂ ನೀರೆಱಕಲುವೊಳಗಾಗಿ (ಬೊಂಕಶಾ. ೧೯೪೦, ಕುಮಟ. ೧೧೩-೨೦ ; 1475). **ನೀರೆರಕಲು :** ಪಡುವಲು ಕಂಬಿವಾರು ಬಂದ ಹಾಗೆ ನೆಲನಂಚು ನೀರೆರಕಲಲಿ ನೆಟ ಲಿಂಗಮುದ್ರೆ ಕಲುಗಡಿ (ಎಕ. VIII, ಶೀರ್ಥಹ. ೫೧-೩೬ ; 1630). △ **ನೀಱೆಱಕಲು :** ನೀಱೆಱಕಲು ಜಲಪಾಶಾಣ ನಿಧಿನಿಕ್ಷೇಪ ಸಹವಾಗಿ ಸರ್ವಮಾನ್ಯವಾಗಿ ಸುಖಂಬಾಳ್ವರು (ಮೈಅರಿ. ೧೯೩೧, ೬೪-೧೭ ; 1396). [ನೀರ್+ಎಱಕಲು]

ನೀರೆಱೆ, ನೀರೆರೆ (ಕ್ರಿ). ೧. ನೀರು ಸುರಿ ; ನೀರುಹಾಕು ; ನೀರು ಹನಿಸು : ಪುಣ್ಯಮೆಂದು ವಿಷವಲ್ಲಿಗೆ ನೀರೆಱೆವೆಗ್ಗನಂತೆ ಕೆಮ್ಮಗೆ ಸುಖಮೆಂದಸದ್ವಿಷಯಸೌಖ್ಯದೊಳಿಂತೆಱಗಲ್ಕೆ ತಕ್ಕುದೇ (ಕಾದಂಪೂ.೮೪೭) ; ಪೂಗಿಡುವೆಂಬ ಪೆಸರಿಂಗೆ ಕೊಳವಳ್ಳಿಯ ಗಿಡುಗಳಂ ನಟ್ಟು ನೀರೆಱೆದು ನಡೆಪೆ ಮಲ್ಲಿಗೆಯ ಪೂವಿನಂತಾಗಲರಿಯದು (ಧರ್ಮಾಮೃ. ೭-೭೯) ; ನೀರೆಱೆವಳ ವದನಂ ಕೈನೀರೋಳ್ಮಾರ್ಪೊಳೆಯಲಿಂದು ಸಿಕ್ಕಿದನೆನುತುಂ (ಉದ್ಭಟ. ೩-೩೧) ; ತೋಳ ನೆಗಹಿ ನೀರೆಱೆಯೆ ಗಳತೃಷ್ಣೆ ಪರಿದೊಡ ಮಿಾಂಟುವ ನೆವದಿಂ ಹೆಂಗಳ ಮುದ್ದುಮೊಗವ ನೋಡುವರು (ಮೋಹತ. ೨-೩೦) ; ಬೆಣ್ಣೆಗಳ್ಳನ ಕೊಬ್ಬಿದುದರದೊಳ್ಪೊಚ್ಚ ಪೊಸ ಸುಣ್ಣಮಂ ಪೊಯ್ದು ನೀರೆಱೆದಂತೆ ಮಾಡಿ (ಜೈಮಿಭಾ. ೭-೨೯) ; ದಾರಿದಾರಿಯೊಳಱ ವಟ್ಟಿಗೆಗಳೊಳಗೆ ನೀರೆಱೆವಬಲಾಜನದಾ ತೋರಮೊಲೆಗಳಿಗೆಱಗಿದ ಪಾಂಥರದಿಟ್ಟ ತೋಱುದುವನಿಮಿಷತೆಯನು (ಕಂನವಿ. ೨-೫೪). ೨. ಅಭ್ಯಂಜನ ಸ್ನಾನ ಮಾಡಿಸು : ಎಣ್ಣೆಯನೂಡಿ ನೀರೆಱುದು ತೂಪಿಱುದು . . . ಪಾಲೆಱೆದೋವಿ ಚಿಣ್ಣನ ಪಕ್ಕೆಗೈದಿದಳು (ಮೋಹತ. ೪-೭೫) ; ತರಳರಿಗೆ ನೀರೆಱೆದು ಕಾಂಚನವರದುಕೂಲವನಿತ್ತು (ನಳಚ. ೮-೪೮). **ನೀರೆರೆ :** ೨. ಆಕೆ ತನ್ನ ಎಳೆಯ ಮಗುವಿಗೆ ನೀರೆರೆಯುತ್ತಿದ್ದಾಳೆ (ರೂಢಿ).
[ನೀರ್+ಎಱೆ$_1$]

ನೀರೇಜ (ನಾ). ನೀರಿನಲ್ಲಿ ಹುಟ್ಟಿದುದು ; ತಾವರೆ ; ಕಮಲ : ನೀರೇಜಮಿಮ್ಮಾವು ಮಲ್ಲಿಗೆಯೆಂದಿಂತಿವನಟ್ಟಿಱುಂದಮರ್ದಿನೊಳ್ ತಾನಟ್ಟಿಯಿಂ ತೊಯ್ದು ಮೆಲ್ಲಗೆ ಸಂದಂಗಜನೆಂಬಜಂ ಪಡೆದನಂತಾ ಕಾಂತಿಯಿಂ ಕಾಂತೆಯಂ (ಪಂಪಭಾ. ೪-೭೫) ; ಜರೆಯಿಂದಂ ಕೂಡಿ ಬೆಳ್ಪಂ ತಳೆಯೆ ತಲೆ ದಳದ್ರಕ್ತನೀರೇಜಮಂ ಪೋಲ್ತಿರೆ ಕಣ್ (ಕಾದಂಪೂ. ೩೬) ; ರತಿ ಮನ್ಮಥರ ಮಾತೆಯಂತೆ ಬಳೆದಳು ಕುವರಿ ಪಾರ್ಥಿವಕುಮಾರ ಕಂದರ್ಪರಾ ಕಣ್ಮೇನ್ಸಳಂ ಸೆಳೆಯುವ ಸರೋವರದ ಚಾರುನೀರೇಜದೋಲ್ (ಶ್ರೀರಾಮಾ. ೪೧-೩೭೦). [ಸಂ.]

ನೀರೇಜಕುಟ್ಮಳ (ನಾ). ತಾವರೆಯ ಮೊಗ್ಗು,—ಮುಗುಳು : "ಕೋಶಂ ನೀರೇಜಕುಟ್ಮಳಾಖ್ಯೆಯು ಮಕ್ಕುಂ" (ವಸ್ತುಕೋ. ೧೩೪-೧೦೦). [ನೀರೇಜ+ಕುಟ್ಮಳ(=ಕುಟ್ಮಲ)]

ನೀರೇಜಗರ್ಭ (ನಾ). ತಾವರೆಯಲ್ಲಿ ಹುಟ್ಟಿದವನು ; ಬ್ರಹ್ಮ : ಅನಲಂ ರೂಪಿನ ಪಕ್ಷಪಾತದೊಳೆ ತಾನೇಟ್ಟಿಂದು ನೀರೇಜಗರ್ಭನ ಗೆಯ್ತಂ ಗಡಮಪ್ರಮಾಣಮೆನುತಂ (ಕಾದಂಪೂ. ೪೬). [ನೀರೇಜ+ಗರ್ಭ]

ನೀರೇಜಚ್ಛದ (ನಾ). ತಾವರೆಯ ಎಲೆ ; ಕಮಲಪತ್ರ : ಸುಡುಗುಂ ಕಾಮಾಗ್ನಿ ತಾನೆಂದು ತನ್ನೀರೇಜಚ್ಛದಜೀವನಂ ಭಯದಿನಾಗಳ್ ಕಂಪನಂ ಚೆತ್ತವೋಲ್ (ರಾಜಶೇ. ೭-೮೪). [ಸಂ.]

ನೀರೇಜಜ (ನಾ). = ನೀರೇಜಗರ್ಭ : 'ನೀರೇಜಜಾಂಡ' ಪರಾ.
[ಸಂ.]

ನೀರೇಜಜಾಂಡ (ನಾ). ವಿಶ್ವ ; ಬ್ರಹ್ಮಾಂಡ : ಮಗನ ಮಾತನು ಸಲಿಸಬೇಕೆಂದೊಗುಮಿಗೆಯ ಹರುಷದಲಿ ವಹ್ನಿಯ ನೆಗಹಿದನು ನೀರೇಜಜಾಂಡ ಕಟಾಹಪರಿಯಂತ (ತೊರುಾ. ೫-೮-೫೯).
[ನೀರೇಜಜ+ಅಂಡ$_2$]

ನೀರೇಜಪರ್ಣ (ನಾ). = ನೀರೇಜಚ್ಛದ : ನಸೆಮುಳಿಸಿಂ ಕಾಡ ಲೆಂದಾಕೆ ಪೊಕ್ಕರ್ದುದಿದಾ ನೀರೇಜಪರ್ಣೋತ್ಕರಮನುತೆ ಮೊದಲ್ಗೊಂಡು ದಂಭೋಜಸದ್ಮಾಂತದೊಳುದ್ಯತ್ಕಂತುಚೇತಂ ತೊಟಲಲವಿರತಂ ಚಕ್ರವಾಕಂ ವರಾಕಂ (ಚಂದ್ರಪು. ೪-೧೦). [ನೀರೇಜ+ಪರ್ಣ]

ನೀರೇಜಭವ (ನಾ). = ನೀರೇಜಗರ್ಭ : ಧ್ರುವನಿಸಿ ಮಗಳಂ ಹರಿಣ ರೂಪದಿ ರವಿಸುವಾ ನೀರೇಜಭವನಂ ನಿಮಿಷದಲಿ ಹರಿಸಿದನತಿಮೃಗವ್ಯಾಧರುದ್ರನಲಾ (ಟಸಪು. ೫೪-೪೮). [ಸಂ.]

ನೀರೇಜವದನೆ (ನಾ). ತಾವರೆಯಂತೆ ಮುಖವುಳ್ಳವಳು : ನೀರೇಜವದನೆ ತಜಿಪಳ್ ತೋರಿದ ಮಲ್ಲಿಗೆಯ ಮುಗುಳನಾಗಳ್ (ಲೀಲಾವ. ೧೩-೭೭). [ಸಂ. ನೀರೇಜವದನಾ (ನೀರೇಜ+ವದನ+-)]

ನೀರೇಜವನ (ನಾ). ತಾವರೆಯ ಕೊಳ; ಕಮಲಸರೋವರ : ನೀರೊಡುವಂತೆ ಮದನನ ಕೂರಸಿಯಂ ಜುಯ್ಯೆನುತ್ತೆ ಪೊಗೆ ಪಾಯ್ವ ನೆಗಂ ನೀರೇಜವನದೊಳರ್ದುವನೋರಂತಿರೆ ವಿರಹದಹನದಗ್ಗೆಯರವಳಂ (ಲೀಲಾವ. ೯-೧೩೨). [ನೀರೇಜ+ವನ]

ನೀರೇಜಾಂಬಕ (ನಾ). ಕಮಲದಂತೆ ಕಣ್ಣುಳ್ಳವನು ; ವಿಷ್ಣು ; ಕೃಷ್ಣ : ನೀರೇಜಾಂಬಕನೊಲ್ದು ರಾಜಧರನಂದಂ ಸೂನುವಂ ಪೂರ್ವದೊಳ್ . . . ಪಡೆದಂ (ಹಮ್ಮೀರ. ೨-೬).

[ನೀರೇಜ+ಅಂಬಕ]

ನೀರೇಜಾತ (ನಾ). ೧. ನೀರಿನಲ್ಲಿ ಹುಟ್ಟಿದುದು ; ತಾವರೆ ; ಕಮಲ. ೨. ನೈದಿಲೆ : ಅತನುಶ್ರೀಕಾಮಿನೀದರ್ಪಣಮೆನಿಸುವ ತದ್ವಕ್ತ್ರಶೀತಾಂಶು ನೇತ್ರಾಸಿತ ನೀರೇಜಾತಯುಗ್ಮಕ್ಕಮೃತಸಲಿಲ ಸಂಸೇಕಮಂ ಮಾಡೆ (ಆದಿಪು. ೮-೨೬). [ಸಂ.]

ನೀರೇಜಾನನೆ (ನಾ). = ನೀರೇಜವದನೆ : ನೀರೇಜಾನನೆ ವಜ್ರಕುಮಾರ ಮುನೀಶ್ವರನ ಸಾರೆ ಖಚರೇಶ್ವರನಂ ಸಾರವಿದೆನಿಸುವ ಸೂರ್ಯಾಕಾರ ಚಿನಸ್ತೂಪೆಯಂ ನವಿಸ್ತರದಿಂದಂ ಬೇಡುವುದುಂ (ಧರ್ಮಾಮೃ. ೮-೨೩೩). [ಸಂ. ನೀರೇಜಾನನಾ (ನೀರೇಜ+ಆನನ+-)]

ನೀರೇಜಾಸನ (ನಾ). (ವಿಷ್ಣುವಿನ ನಾಭಿಯ) ಕಮಲವೇ ಆಸನವಾಗಿ ಉಳ್ಳವನು ; ಬ್ರಹ್ಮ : ನೀರೇಜಾಸನಸೂನು ದಕ್ಷಸುತೆ ಸದ್ಧಾಕ್ಷಾಯಣೀದೇವಿಯಂ . . . ಪಡೆದಂ (ಹಮ್ಮೀರ. ೨-೬).

[ನೀರೇಜ+ಆಸನ]

ನೀರೇಜಿನಿ (ನಾ). ೧. ತಾವರೆಯ ಬಳ್ಳಿ. ೨. ತಾವರೆ; ಕಮಲ : ನೀರೇಜಿ[ಪಾಠಾಂ. ಜ]ನಿಯೆನಿತಲರ್ದೇಂ ಸಾರದೆ ಪೋದಂ ದಿನೇಶಂ (ಅರ್ಧನೇ. ೩-೨೭). [ಸಂ. ನೀರೇಜಿನೀ]

ನೀರೇಜಿನೀಷಂಡ (ನಾ). ಕಮಲಗಳ ಸಮೂಹ: ಸಿದ್ಧ ಹಿಂಸೋತ್ಕರ ಲೀಲಾರಮ್ಮದೊಳ್ ಸಂದಮ್ಮತನಿಲಯ ನೀರೇಜಿನೀಷಂಡದೊಳ್ ಸೌಂದರಕೇಲೀಹಂಸನಾದಂ ಸುಳಿದಿಜನಮನೋಮಾನಸೋತ್ತುಂಗಹಂಸಂ (ಆದಿಪು. ೧೩-೭೫). [ಸಂ.]

ನೀರೇಭ (ನಾ). = ನೀರಾನೆ : ಅದು ನೀರೇಭಕಥಾಭಿಘಾತ ವಿಚಲದ್ವಾರಾಶಿಯೊಳ್ ಪೋಗಿ ಕೂಡಿದೊಡಾ ವಾರ್ಧಿಯು ಪೆಂಪುಮೂ ತೊಜಿಯೊಳಾಯ್ತು (ಆದಿಪು. ೧-೫೫); ನೀರೇಭ[ಪಾಠಾಂ. ನೀರಾನೆ]ನೆಗಳು ವಾಶೀನ ಕಮಳ ಶಿಂಶುಮಾರ ಕರ್ಕಟ ಭಲ್ಲೂಕ ಘೋರಾಹಿ ಮೊದಲಾದ ದುಸ್ಸಜಂತುಗಳಿಂದ ವಾರಾಶಿ ಕಣ್ಗೆ ರಂಜಿಸಿತು (ನೇಮಿಪು. ೨-೫).

[ನೀರ್+ಇಭ]

ನೀರೇರು 'ನೀರೇಜು' ನೋ.

ನೀರೇರುಹ (ನಾ). = ನೀರೇಜ : ಆ ವಿನೀಳನೀರೇರುಹನೇತ್ರೆ ತತ್ಕುಸಳ ಮಾತ್ರದ ದಿವ್ಯನದೇಕೆ ಸೈರಿಪಳ್ (ಪಂಚಾಸಾ. ೩-೧೦೫). [ಸಂ.]

ನೀರೇರುಹಗರ್ಭ (ನಾ). = ನೀರೇಜಗರ್ಭ : ಸಂದ ನೀರೇರುಹಗರ್ಭಂಗಂ ವಿಗಿಲಾ ದಾನದಿನಖಿಳಜನಪ್ರೀತಿಗಾ ಕಲ್ಪಧಾತ್ರೀರುಹದಿಂದ ಮೇಲು (ಪೌಇಪು. XX, ೧೧೨-೧೩ ; 1144 ?).

[ನೀರೇರುಹ+ಗರ್ಭ]

ನೀರೇರುಹದಳ (ನಾ). ತಾವರೆಯ ಎಸಳು, = ಪಕಳೆ : ಕ್ಷೀರಮನೇ ಪ್ರಿಯನ ನಿಶಾಲೋರಸ್ಥಳದಲ್ಲಿ ನಿಂದು . . . ನೀರೇರುಹದಳನಯನೆ ನಾಡೆ ಕಣ್ಗಳ್ ಸೆದಿರ್ದಳ್ (ಕಾದಂಪೂ. ೪೨).

[ನೀರೇರುಹ+ದಳ$_2$ (= ದಲ)]

ನೀರೇರುಹನಾಭ (ನಾ). ಹೊಕ್ಕುಳಲ್ಲಿ ಕಮಲವುಳ್ಳವನು; ವಿಷ್ಣು : ನೀರೇರುಹನಾಭ ನೀರಜಸಮುದ್ಭವ ಶಂಕರರೀಗಭೀಷ್ಟಮಂ (ಕಬಿಚ. ೧-೨-೩ ; 1058) ; ಅರಿಗಾರಿಲ್ಲ ಯಮುನಾರುಭಟಕೆ ಅಸುರಾರಿ ಮೈಮುಜ್ಜಾಗ ನೀರೇರುಹನಾಭ (ಪುರಂದ. ಧಾ. ೨-೪೭-೨).

[ಸಂ. (ನೀರೇರುಹ+ನಾಭ+-)]

ನೀರೇಶ (ನಾ). ನೀರಿನ ಒಡೆಯ ; ವರುಣ : 'ನೀರೇಶದಿಕ್ಕು' ಪರಾ. [ನೀರ್$_2$+ಈಶ]

ನೀರೇಶದಿಕ್ಕು (ನಾ). ವರುಣನ ದಿಕ್ಕು ; ಪಶ್ಚಿಮ : ಮಿಸಿದಲೆ ಅನಾಮಿಕ ಕನಿಷ್ಠಾಂಗುಟದಿಂದ ನೀರೇಶದಿಕ್ಕಿನಲ್ಲಿ ಸಾಧಿಸಿರೊ (ವಿವಾಕ್ಯ. ೫೨-೩). [ನೀರೇಶ+ದಿಕ್ಕು]

ನೀರೇಱಿಸು (ಕ್ರಿ). ಸಂತೋಷಪಡಿಸು; ಸುಖವನ್ನುಂಟುಮಾಡು; ಉತ್ಸಾಹಗೊಳಿಸು : ಏಱು[ಯೆ] ನಂದಿ[ಯನಾ] ಪೆಜಗೇಱುದ ಗಿರಿಸುತೆಯ ಮೊಲೆಗಳಳ್ಳೀಱುಂ ನೀರೇಱುಸುತಿರೆ ಕರ್ಣಾರ್ಜುನರೇಱುನೋಡಲ್ಕೆ ಭೂತನಾಥಂ ಬಂದಂ (ಪಂಪಭಾ. ೧೨-೧೩೯) ; ತನಯನೆನಗೆಂದು ಮನ್ನಿಸಿ ತನಗುರುಗಜ್ಜ[ಮೆನೆ] ಪಾಕಶಾಸನನರ್ಧಾಸನಮೇಱಿಸಿ ನೀರೇಱಿಸಿ ಮನುಜಂಗಂ ಮಾನ್ಯಪದವಿಯಂ ಮಾಡಿದನೇ (ಗದಾಯು. ೩-೪೦). [ನೀರೇಱು+-ಇಸು$_3$]

ನೀರೇಱು, ನೀರೇರು (ಕ್ರಿ). ೧. ನೀರು ತುಂಬು ; ನೀರಿನಿಂದ ಆವೃತವಾಗು ; ಜಲಮಯವಾಗು : ನಡುವೆನ್ನೊಡೆದಿರ್ಬಗಿಯಾಗಿ ಪೋಟ್ದು ನೀರೇಱುದ ನಾಳಿಪುಣ್ಡೊಡೆದು ಸೌಳೆನೆ ಸೀಳ್ದುದು ದೋಣಿ ವೋಪಿನಂ (ಸುಳುಮಾ. ೫-೧೬) ; ಕರಣಂಗಳ್ ಕಳೆಯೇಱಿ ಲೋಚನಯುಗಂ ನೀರೇಱಿ . . . ತಲೆಗೇಱುಧುತ್ಸವದೆ ನಮ್ಮಂ ಪೂಜಿಸುತ್ತಾ ನುಮಾದರದಿಂದೀಕ್ಷಿಸುತಾಡುತಿರ್ಪುದನಗಿನ್ನೆಂದೋ ವಿರೂಪಾಕ್ಷನೇ (ಪಂಪಾಶ. ೧೫) ; ಆಲಿ ನೀರೇಱುದವು ತಮ್ಮನ ಮೇಲೆ ತಳತುದು ಮೋಹ (ಕುಪ್ಯಾವಿ. ೨-೪೪) ; ಕದಡಿದುದು ಧರೆ ಮೇಲೆಮೇಲೇಳುದಧಿ ನೂಕಿತು ನಾಕ ನೀರೇಱುದುದು (ನಿಭಾಗ. ೮-೨೩-೩೫). ೨. ಹೊಳೆ ; ಕಾಂತಿ ಬೀರು ; ಪ್ರಕಾಶಿಸು : ಏಱುಸದಿಕ್ಷುಶರಾಸನವೇಱುಸಿದಪುದೀಗಳಂಗಭವನಿಂದೆನೆ ನೀರೇಱುದ ಮಂಗಳವಸದನಮೇಱಿ ಮನಂಗೊಳಿಸಲಾರ್ತುದಾ ಕೋಮಳೆಯೂ (ಪುಸ್ಪಪು. ೮-೫೯). ೩. ಚಿಗುರು ; ಕೊನರು ; ಕುಡಿಯೊಡೆ : ವನಜಂಗಳ್ ದಳವೇಱಿ ಚೂತಲತೆಗಳ್ ನೀರೇಱಿ . . . ಬಂದುದು ವಸಂತಂ ಸಂತತೋತ್ಸಾಹದಿಂ (ಧರ್ಮಾಸ್ಯ. ೧೩-೧೦). ೪. ಅರಳು ; ವಿಕಸಿಸು : ಪದವಿಟ್ಟಳ್ ನೆಯ್ದಿಲಿಂ ತಾವರೆಗೆ ಸಿರಿಲತಾಕೋರಕಗ್ರಂಥಿ ನೀರೇಱುದುವು (ಸುಬ್ಬಪು. ೫-೩) ; ಇನನುದಯಂಗೆಯ್ಯಲೊಡಂ ವನಜಂ ನೀರೇಱುವಂತೆ ತತ್ಕೋಮಳೆಯಾನನ ಕಮಳವರಳಲ್ (ದಶಕು. ೪-೧೨೫). ೫. ಸಂತೋಷಿಸು ; ಆನಂದಪಡು : ನೀಱೆಯರುನ್ನತಸ್ತನಭರಂಗಳ ಭಾರಮುವುಂಕಿ ಸೋಂಕೆ ನೀರೇಱುದರೇಱುದರ್ ಪೆಜವು ಪೀತಮಂ . . . ನೀರೇಱುದೆ ಸಿಂಹವಿಷ್ಟರಮನೇಱುದೆ ನೀನೆ ನಲಂ ಜನೇಶ್ವರಾ (ಪಂಚಾಸಾ. ೫-೬) ; ಏಱುಸಿಕೊಂಡು

ಹಸ್ತಿ ನಿಜಮಸ್ತಕಮಂ ಬರೆ ಕಂಡು ಗುಂಡು ನೀರೇಱೆ . . . ಗಜೇಂದ್ರ ಮೆಯ್ದೆ ಪುಗುತಂದುದು ರಾಜಗೃಹಾಂತರಾಳಮಂ (ನೇಮಿಪು. ೨-೯೪); ಜನಮನಿತುಮುದ್ಧಸಿಂಹಾಸನಮಂ ತಚ್ಛಕ್ರಿಯೇಱೆ ನೀರೇಱುದುದು (ಚಂದ್ರಪು. ೭-೨); ಬಡಿದೊಡೆ ನೀರೇಱುವನೊದೆದೊಡೆ ನಲಿವಂ ಪೊಯ್ವೊಡೊಂದುರೂಪಪ್ಪಂ ನಾಣ್ಗೆಡೆ ನುಡಿಯೆ ರಾಗಿಯಕ್ಕುಂ ಕಡು ಱೋಡಗನಬ್ಬೆ ಗಂಡರೊಳ್ ಕವಿಕಾಮಂ (ಶೃಂಗಾರ. ೩-೧೬). **ನೀರೇರು:** ೧. ಮರಿಸೌತೆ ಮಸರಾಯ್ತು ಹೀರೆ ನೀರೇರಿದುದು ಹುರುಳಿ ಹೊಲಸಾದುದು (ಪಲಾಂಡು. ೨೩). [ನೀರ್+ಏಱು$_1$(<ಏಱ್$_1$)]

ನೀರೊಗು (ಕ್ರಿ). ನೀರು ಸುರಿ,—ಒಸರು: ನರೆತ ಮಂಡೆಯು ನೀರೊಗುವ ಕಂಗಳು . . . ಪತ್ತಿದ ಗಲ್ಲದ ನೆಱೆ ವೃದ್ಧನಡಿಯಿಟ್ಟ ನೊಲಿದು (ಜೀವಂಸಾಂ. ೧೬-೩೦); ದುಕ್ಕವಿನ್ನೆಂತುಟೊ ನೋಳ್ಪರ ಕಣ್ಣ ನೀರೊಕ್ಕುದದೇನ ಪೇಳುವೆನು (ಮೋಹತ. ೮-೨೪). [ನೀರ್+ಒಗು$_1$]

ನೀರೊಟ್ಟಲ್, ನೀರೊಟ್ಟಲು (ನಾ). ೧. ನೀರಿನ ಸಮೂಹ,—ರಾಶಿ. ೨. ಸಮುದ್ರ; ಕಡಲು: "ಮುನ್ನೀರ್, ನೀರೊಟ್ಟಲ್, ತೊಱೆಗಳಾಣ್ಮಂ, (ಕಡಲ್)—ಈ ೪ ಸಮುದ್ರಂ" (ಕಶಸಾ. ೫೩-೧೪೧). **ನೀರೊಟ್ಟಲು:** ೨. "ಮುನ್ನೀರ್ ನೀರೊಟ್ಟಲುಮೆಂದೆನ್ನುತ್ತುಂ ತೊಱೆಗಳಾಣ್ಮ ಕಡಲೆನೆಯುಂ . . . ಸಾಗರಮೆನಿಕುಂ" (ಕವಿಕಂ. ೮೯); ಅವವನ ಮನೆಯೆ ನೀರೊಟ್ಟಲಾವವನಣುಗನೀ ವಸುಧೆಯಲ್ಲಿ ಬಿಲ್ಲಾಳೆನಿಸಿ ಕೊಂಡನಿನ್ನಾವವನ ಸತಿ ಲೋಕದೈಶ್ವರ್ಯರೂಪೆ (ವೀಶೈಪು. ೪-೧೫-೧); ಸೂರ್ಯ ವಾರುವರಥಗೂಡಿ ಪಡುವೆಟ್ಟ ಶಿಖರದಿ ನೀರೊಟ್ಟಲೊಳು ಬಿದ್ದ ಮುದದಿ (ಮೋಹತ. ೧೮-೩); ಕಾರೊಡಲಿನ ರಂಗ ನಿನ್ನ ಕಂಡಲರಿಚ ನೀರೊಟ್ಟಲೊಂದುಪಟಳವ ದೂಱಲ್ಕೆ (ಶತಸಾಂ. ೧೩-೭೫); ಕೇಳಿರೈ ಕಪಿವೀರರೆಲ್ಲ ಮದ್ವಿಕ್ರಮವನೇಳುನೀರೊಟ್ಟಲಂ ನಿಮಿಷಾಂತರದಿ ದಾಂಟ ಕೋಳುಗೊಂಡಪೆ (ವೆಂಕಾರಾ. ೫-೧-೧೮). [ನೀರ್+ಒಟ್ಟಲ್]

ನೀರೊಟ್ಟಲಾಣ್ಮ (ನಾ). ಸಮುದ್ರರಾಜ; ವರುಣ: "ನೆಗೞ್ದೇರಂ, ಪಚ್ಚಮದೆಸೆಗೊಡೆಯಂ, ನೀರೊಟ್ಟಲಾಣ್ಮ—ಈ ೩ ವರುಣಂಗೆ ಪೆಸರ್" (ಕಶಸಾ. ೪೯-೩೭); "ನೀರೊಟ್ಟಲಾಣ್ಮನೆನೆ ವರುಣನಕ್ಕುಂ" (ಕಶರ. ೫೫). [ನೀರೊಟ್ಟಲ್+ಆಣ್ಮ (<ಆಳ್ಮ)]

ನೀರೊಟ್ಟಲು 'ನೀರೊಟ್ಟಲ್' ನೋ.

ನೀರೊಡಲ (ನಾ). ೧. ಒಡಲಲ್ಲಿ ನೀರುಳ್ಳುದು: ಮುಗಿಲಂತೆ ನೀರೊಡಲನುಮೆನಿಪ ತೇಂಗಾಯಿಂ . . . ಚೆಲ್ವಾದ ಕೇರಿಯಂಗಡಿಯಿಂ . . . ಪುರಂ ಕಣ್ಗಂಬಾದುದು (ರಾಮಾಶ್ವ. ೧೦೩-೧೬). ೨. ಮೋಡ. ೩. ವರುಣ.

ನೀರೊಡಲ ನಿಡುಗೋಲ್ = ದೊಡ್ಡ ವರುಣಾಸ್ತ್ರ: ಪರಿತರ್ಪ ಕಿರ್ಚುಂಗೋಲಂ ಚೆಚ್ಚರದೊಳೆ ತನ್ನೊಂದು ಬೆಚ್ಚ ಪೊಚ್ಚಪೊಸ ನೀರೊಡಲ ನಿಡುಗೋಲಿಂ ಕಾಲ್ದೊಳೆಯಿಸಿದಂ (ರಾಮಾಶ್ವ. ೯೨-೬).

[ನೀರ್+ಒಡಲ್+ -ಅ$_7$]

ನೀರೊಡೆ (ಕ್ರಿ). ನೀರು ಒಸರು; ನೀರೂರು: ಎಷ್ಟೋ ದಿವಸದ ಮೇಲೆ ನನಗೆ ಪ್ರಿಯವಾದ ಭಕ್ಷ್ಯ ಸಿಕ್ಕಿತು; ನಾಲಗೆ ನೀರೊಡೆಯುತ್ತಿದೆ (ಪಚಭಾ. ೩೬); ಅವನ ಬಾಯಿಗೆ ನೀರೊಡೆಯಿತು (ಅಂಬಿಕೆ. ೧೦೦).

[ನೀರು$_1$ (<ನೀರ್) + ಒಡೆ$_1$]

ನೀರೊಡೆತ (ನಾ). ನೀರಿನಲ್ಲಿರುವ ಘಟಕಗಳು ಬೇರೆಯಾಗುವಿಕೆ: ಅವುಗಳ ನೀರೊಡೆತ (ಹೈಡ್ರೊಲಿಸಿಸ್) ಇಲ್ಲವೆ ಆಮ್ಲಜನಕಗೂಡಿಕೆಯಿಂದ ಬರುವ ಉತ್ಪನ್ನಗಳೊಂದಿಗೆ ಬಣ್ಣದ ವಸ್ತುವಾಗಿಸುವ ಪತ್ತೆಕಾರಕಗಳಿಂದ . . . ಇರುವೆಡೆಗಳನ್ನು ತಿಳಿಯುವಿಕೆ (ಕವಿಕೋ. I, ೫೪).

[ನೀರು$_1$ (<ನೀರ್)+ಒಡೆತ]

ನೀರೊತಿಗೆ 'ನೀರ್ವತ್ತಿಗೆ' ನೋ.

ನೀರೊತ್ತಡ (ನಾ). ನೀರಿನ ರಭಸ,— ವೇಗ: ನೀರೊತ್ತಡದ ನೀರೊತ್ತಿಗೆ ಯಂತ್ರ (Ram. ಇಂಕನಿ). [ನೀರು$_1$(<ನೀರ್)+ಒತ್ತಡ]

ನೀರೊತ್ತು$_1$ (ಕ್ರಿ). ನೀರು ತುಂಬಿಕೊಳ್ಳು,— ಆವರಿಸು: ಹೊತ್ತಿ ಹೊಗೆವನುತಾಪದಲಿ ನೀರೊತ್ತಿದಂಬಕದಿಂದ ಬಿಡದಱಸುತ್ತ ಬಂದೆನು ಕರವತಿಗೆ ಜಲಸಹಿತ ತಾಂಡವನ (ತೊರರಾ. ೨-೫-೨೦).

[ನೀರ್+ಒತ್ತು$_1$]

ನೀರೊತ್ತು$_2$ (ನಾ). ೧. (ತೆರೆಯ) ಉಬ್ಬರ; ಭರತ: "ವೇಳಾಯೆಂಬುದು ನೀರೊತ್ತು" (ಹಲಾಯು. ೧೦೮-೩೨). ೨. ತೀರ; ದಡ; ಕರೆ: ಬಡಗಲು ಕಾನಿ ಮೂಡಲು ಸೇತುವಿಂಗೆ ಹೊಂಡದಾರಿ ತೆಂಕಲು ತುಡಿಕೆಯ ಮುನ್ತಣ ಬಟ್ಟೆ ನೀರೊತ್ತಿಂಗೆ ದೇವಣಭಟ್ಟರು ಕೊಟ್ಟ ಬೆದ್ದಲೆ (ಎಕ. V, ಹಾಸನ. ೧೧೬-೪೯; 1128); ಮೂಡಲಾ ಕೆಱೆಯ ನೀರೊತ್ತು ಗಡಿ ತೆಙ್ಕಲು ಮತ್ತವಾ ಕೆಱೆಯ ಕೋಡಿಗಡಿ ಹಡುವಲು ಹಿನ್ದಣ ಕೆಱೆಯ ನೀರೊತ್ತು ಗಡಿ (ಎಕ. XII, ಚಿಕ್ಕನಾ. ೨೧-೬೫; 1160); ನೀರೊತ್ತೊಳಗಾದ ಚತುಸ್ಸೀಮೆ (ಎಕ. II, ೩೩೪-೨೮; 1282). [ನೀರ್+ಒತ್ತು$_2$]

ನೀರೊರತೆ 'ನೀರೊಱತೆ' ನೋ.

ನೀರೊಲೆ (ನಾ). (ಸ್ನಾನಕ್ಕಾಗಿ) ನೀರು ಕಾಯಿಸಲು ಹೂಡಿದ ಒಲೆ: ನೀರೊಲೆಯ ಮೇಲೆ ಕಾಯ್ದ ನೀರೂ, ಇದ್ದಲಿಯೊಲೆಯ ಮೇಲೆ ಒಂದು ಚಹದ ಪಾತೇಲಿ ವಿರಾಜಿಸುತ್ತಿತ್ತು (ಅಪನಾ. ೨೬); ನೀರೊಲೆಗಿಡುವರು ಗಂಧದ ಮರವನೆ ಜನರು (ಇಂಚಾಪ. ೧೦೨-೧೦೦).

[ನೀರು$_1$ (<ನೀರ್)+ಒಲೆ$_4$]

ನೀರೊಳ್ಳೆ (ನಾ). ವಿಷವಿಲ್ಲದ ಒಂದು ಬಗೆಯ ಹಾವು; ನೀರು ಹಾವು: ಗರುಡನು ನೀರೊಳ್ಳೆ . . . ಕೆಣಕಿದ ಪರಿಯೊಳೆನ್ನನು ಹರದ ನಣುಗನಿವ ಕೆರಳಿಸಿದಂ (ಜೀವಂಚ. ೧೧-೩); ವಾಸುಗಿಯ ನೀರೊಳ್ಳೆ ತನ್ನ ನಿವಾಸದಲಿ ಜಱೆವುದು (ತೊರರಾ. ೫-೩-೫೬); ಕಂದಿರೆ . . . ನೀರೊಳ್ಳೆ ಪುತ್ತಿನ ಪಾವಂ ನುಂಗಲಾಟಪೊಂದಂದಮಂ (ರಾಮಾಶ್ವ. ೧೫೭-೭). [ನೀರ್+ಒಳ್ಳೆ$_2$]

ನೀರೊಱತೆ, ನೀರೊರತೆ (ನಾ). ನೀರು ಜಿನುಗುವ ತಗ್ಗು,— ಕುಳಿ: ನೀರೊಱತೆಗಳ ನೆಲ ನವಘನೋದಕದುಬ್ಬು ನರ್ಜರದ ನಿಱಿಸು ನಿಡುಜಂಝೂಸಮೀರನ ಬಿಱಿಸು ಬೇಸಱನಿತ್ತವು . . . ನವಮೇಘಕಾಲದಲಿ (ತೊರರಾ. ೪-೬-೭). **ನೀರೊರತೆ:** ನೀರೊರತೆಯಿಂದ ಗಿಡಗಳಿಗೆ ನೀರು ಹಾಯಿಸಬೇಕು (ರೂಢಿ).

[ನೀರ್+ಒಱತೆ (<ಒಱಂತೆ)]

ನೀರೊಱೆ (ಕ್ರಿ). ನೀರು ಸ್ರವಿಸು,—ಜಿನುಗು,—ಹೊರಸೂಸು: ತೋಳ ಹಿಂಗಟ್ಟುಗಳ ಮೋಱೆಯ ಕಾಳಿಕೆಯ ಬಿಡುದಲೆಯ ನೀರೊಱೆ ವಾಲಿಗಳ ಕುರುಭೂಪನಿದ್ದನು ತಮ್ಮದಿರು ಸಹಿತ (ಕುಪ್ಯಾಅ. ೨೧-೧); ನೀರನುಗುಳುತೆಸೆದವು ಮುತ್ತುವಸರಗಳ್ ನೀರೊಱೆಯಲು ಬಾಯಿ ಜನದ (ಕುರಾಸಾಂ. ೩-೭೬). [ನೀರ್+ಒಱೆ$_1$]

ನೀರೋಗ (ನಾ). ೧. ರೋಗವಿಲ್ಲದಿರುವಿಕೆ; ಆರೋಗ್ಯ: "ನೀರೋಗ ಫಲ್ಗವಾರ್ತಮುಮಕ್ಕುಂ" (ವಸ್ತುಕೋ. ೧೨೭-೫೫); ನಿಮ್ಮ ಮೆಯ್ಯ ಕುತ್ತುಂಗಳೆಲ್ಲಮನೇಱುದಿವಸದಿಂದೊಳಗೆ ಕಿಡಿಸಿ ನೀರೋಗ ಮಪ್ಪಂತಿರೆ ಮಾಡುವೆವು (ಪಡ್ಡಾರಾ. ೬೯-೨೪). ೨. ರೋಗವಿಲ್ಲದಿರುವವನು; ಆರೋಗ್ಯವಾಗಿರುವವನು; ನಿರೋಗಿ: ಅಗಳ್ ಸ್ವಾಹಾಂಗನಾನಾಥಂ . . . ನೀರೋಗನಾಗಿ ಮಹಾನುರಾಗಂಬೆರಸು ಪರಸಿ ಪೋದಂ (ಪಂಪಭಾ. ೫-೧೦೪ ವ). [ಸಂ.]

ನೀರೋಗತೆ (ನಾ). ಸಂ ನೀರೋಗ ೧ : ರಾಗದ್ವೇಷಮೆ ನಿಶ್ಚಯ ರೋಗಂ ರೋಗಪ್ರದಾಳ್ತರುಬೀಜಂ ನೀರೋಗತೆಯನೊಲ್ವುದವೆ ತನಗಾಗದವೊಲ್ ನೆಗಳ್ವುದನೆ ಸದ್ಯೋವೈದ್ಯಂ (ಉಸಾರ. ೨೬೮).

[ಸಂ. ನೀರೋಗತಾ]

ನೀರೋಗಪತ್ರ (ನಾ). ರೋಗವಾಗಲಿ, ರೋಗಸಂಪರ್ಕವಾಗಲಿ ಇಲ್ಲವೆಂದು ತಿಳಿಸುವ ಪತ್ರ : ಬಂದರಿಗೆ ಬಂದ ಒಂದು ಹಡಗನ್ನು ಆಂಟುರೋಗದ ಭಯದಿಂದ ಕೆಲವು ಕಾಲ ಸಂಪರ್ಕವಿಲ್ಲದಂತೆ ದೂರದಲ್ಲಿ ಟ್ಟದ್ದು ಆ ಗಡು ಮುಗಿದ ಮೇಲೆಯೊ ಅಥವಾ ಅಂಥ ಹಡಗು ನೀರೋಗಪತ್ರ ತೋರಿಸಿದ ಮೇಲೆಯೊ ಬಂದರಿನೊಡನೆ ಸಂಪರ್ಕ ಮಾಡಲು ಹಡಗಿಗೆ ಕೊಡುವ ಅನುಮತಿಪತ್ರ, ಪರವಾನೆ : ಸಂಸರ್ಗಾನುಮತಿಪತ್ರ (Pratique. ಇಂಕಸಿ). [ನೀರೋಗ+ಪತ್ರ]

ನೀರೋಗರ (ನಾ). ಒಂದು ಬಗೆಯ ಅನ್ನ : ಸರನೀರು ಸರಿಮೊಸರು ಶುಂಠಿ ನೀರುಳ್ಳಿಗಳ ತುಜುವಲೇಲಕ್ಕಿ ತದುಕಿನ ಬಗುರ ಕಿಜುಗಟ್ಟು ವೆರಸಿ ನೀರೋಗರವ ಹಾಕಲದು ತ್ರೈಲೋಕ್ಯಪೂಜ್ಯ ತಕ್ರೋದನ (ಸೂಪಶಾ.) ೩-೨೭). "ನೀರೊಳಗಿದ್ದ ಓಗರ" (ಸೂಪಶಾ. ಟೀಕೆ).

[ನೀರ್+ಓಗರ]

ನೀರೋಗಿ (ನಾ). ರೋಗವಿಲ್ಲದಿರುವವನು; ಆರೋಗ್ಯವಂತ ; "ಸಹ್ಯ, ಅರುಜ" (ನಾನಾರ್ಥ. ೬. ೧೧೧). [ಸಂ. ನೀರೋಗಿನ್]

ನೀರೋಟ (ನಾ). ೧. ನೀರಿನ ನಡೆ,—ಹರಿವು : ನೀರೋಟದಿಂದ ನಡೆಯುವ ಪುರಾತನಕಾಲದ ಒಂದು ಗಡಿಯಾರ (Clepsydra. ಇಂಕಸಿ). ೨. (ವಜ್ರ ಮುಂತಾದ) ರತ್ನಗಳಲ್ಲಿರುವ ಕಾಂತಿ,—ಪ್ರಕಾಶ : ಚೆನ್ನಾದ ನೀರೋಟದಿಂದ ಹೊಳೆಯುವ ಎಂಟುಮುಖದ ವೈಡೂರ್ಯ ಮಣಿಯಿದೆ (ಬುದ್ಧ. ೧೯೬) ; ಈ ಅಂಶವನ್ನು ವಜ್ರರತ್ನಾದಿಗಳಲ್ಲೂ ಪರೀಕ್ಷಕರು ತಿಳಿಯುವರು. ಲೌಕಿಕರು ಸಹ ಇದನ್ನು ನೀರೋಟವೆಂದು ಹೇಳುತ್ತಾರೆ (ಹಿಂದಸಾ. ೧೧೧) ; ತುಂಬ ಬೆಲೆ ಬಾಳುವ ವಜ್ರದೊಳಗೆ ಬಳುಕುತ್ತ ಬಳುಕುತ್ತ ಕಣ್ಮನಗಳನ್ನು ಸೆರೆಗೊಳ್ಳುವಂತೆ ತೋರುವ ನೀರೋಟದಂತಿರುವ ಕಣ್ಣಿನ ಕಾಂತಿ . . . ಇವುಗಳಿಂದ ಕೂಡಿದ್ದ ಆ ಬಾಲಕನನ್ನೇ ಸಭಿಕರೆಲ್ಲರೂ ದೃಷ್ಟಿಸಿ ನೋಡುತ್ತಿದ್ದರು (ತುರಾಯು. ೨೯).

[ನೀರು$_1$ (<ನೀರ್)+ಓಟ. /ತಮಿ. ನೀರೋಟ್ಟಮ್]

ನೀರೋಟೆ (ನಾ). ಬಿದಿರಿನ ಜಾತಿಗೆ ಸೇರಿದ ಒಂದು ಬಗೆಯ ಜಲಸಸ್ಯ : ಸ್ಲೇಟನ್ನು ಒರೆಸಲು ನೀರೋಟೆ ಬೇರು . . . ಪೆಟ್ಲಗೆ ಗಜ ಒದಗಿಸುತ್ತಿದ್ದವರು ರಾಗಜ್ಜ (ಪ್ರಶ್ನೆ. ೮೬).

[ನೀರು$_1$ (<ನೀರ್)+ಓಟೆ$_1$]

ನೀರೋಡು (ಕ್ರಿ). ೧. ಇಂಗಿ ಹೋಗು ; ಒಣಗು ; ಪಸೆಯಾರು ; ನಿರ್ದ್ರವವಾಗು : ಚಾರುತರವಿಮುಳವಕ್ತಿಕಜಾರಾದಿ ಸಮಸ್ತರತ್ನರಾಶಿಗಳಿಂದಂ ನೀರೋಡಿದ ರತ್ನಾಕರಮೋರನ್ನಮದಾಯ್ತು ರನ್ನವಸರಂ ಪುರದೊಳ್ (ಗಿರಿಕ. ೨-೯೩) ; ಬಾಡಿದ ಬಹಿರ್ಮುಖಂ ನೀರೋಡಿದ ಬಾಯ್ ಪ್ರಕೃತಿವಿಕೃತಿಯಾದೊಡೆ ತುರಗಂ . . . ಓಡುವುದಾ ಜವನ ಭವನಮಂ ಮುಟ್ಟುವಿನಂ (ಅಶ್ವಶಾ. ೬-೪೨). ೨. ಬೆವರು ಹರಿ : ನಡುಸುಯ್ದ್ ನೀರೋಡುವ ವದನಂ ನಸುನಡುಗುವ ಮೆಯ್ದ್ (ಜಯಕಾ. ೩-೧೪). ೩. ಕಾಂತಿಯನ್ನು ಕಳೆದುಕೊಳ್ಳು ; ಹೊಳಪನ್ನು ಕಳೆದುಕೊಳ್ಳು ; ಕಳೆಗುಂದು ; ಬಣ್ಣಗುಂದು ; ತಾರಕಾಳಿ ನೀರೋಡಿ ಕಟುಲ್ದು ಬೀಜ್ದ ಕಟುಪೂಗೆಣೆಯಾಗಿರೆ ತಣ್ಣನಪ್ಪೆಲರ್ ತೀವೆ ತಪೋವನಂಬೊಲತಿಪಾವನಮಾಯ್ತು ನಭಂ ಪ್ರಭಾತದೊಳ್ (ನುಚ್ಚಿಸು. ೧೨-೧೫) ; ರವಿಕಿರಣಂ ನೀರೋಡುತ್ತಿವೆ ತಣ್ಪಂ ಬೀಜುತಿವೆ . . . ಮೇಘಂ ಪಿಂಗಿ ಹರಹಿದಂತಿವೆ ನಭದೊಳ್ (ಗಿರಿಕ. ೯-೬೨) ; ಕೊಜತೆ ನಿನಗಿಲ್ಲದೇಕೆಂದಜಾಯೆಂ ನೀರೋಡಿ ನಿನ್ನ ತನುವಿನ ಬಣ್ಣಂ ಬಜುಗೊಳದಪೊಲಾಯ್ತು (ಯಶೋಚ. ೩-೬) ; ಬಾಡಿದುದೇಕೆ ನಿನ್ನ ತನುವಲ್ಲರಿಯಿಂದುಮುಖೀಂದು ನಾಡೆ ನೀರೋಡಿದುದೇಕೆ . . . ಪೇಟ ನೀನೆನಗೆ ನೀಳಸರೋಜವಿಲೋಲಲೋಚನೇ (ಪುರಾಸ್ತ್ರ. ೧-೬೩) ; ಒಂದು ಲಕ್ಷ ಮೇಲೊಡ್ಡ ಆಡೆನೆ ಶಿವಯೆನುತಾಡಿ ಗೆಲಲು ನೀರೋಡಿತು ಶಿವನ ಮುಖಾಬ್ಜ (ಭೈರವೇ. ೧-೩೫೩) ; ಕೆಲವು ನಿಮಿಷಗಳೊಳಗಾಗಿ ಅವನ ಮುಖ ನೀರೋಡಿತು (ಮುಹಾಗ. ೩೫೮). ೪. ಉತ್ಸಾಹಗುಂದು ; ಉದಾಸೀನವಾಗು : ಹೇಡಿಗೊಳದೆ ಹೆದರದೆ ನಿಜವನ ನೀರೋಡದೆ ತಪವ ಮಾಡುವರು (ರಾಷಟವಿ. ೨೦-೧೨೮). [ನೀರ್+ಓಡು$_1$]

ನೀರೋಣಿ (ನಾ). ನೀರಾವರಿಯ ಮೇಲೆ ವಿಧಿಸುವ ಒಂದು ಬಗೆಯ ತೆರಿಗೆ (?) : ಈ ತೋಂಟಕೆ ಬಡಗಮಂ ಕರಿಯೋಣಿ ತೆಂಕಮಂ, ಕರಿಯೋಣಿ ನೀರೋಣಿ ಭೈಸಾಸರ ಕೇಶವದೇವನ ನೂಜ ಮೂವತ್ತು ಮರಕ್ಕೆ ದೇ[ವ]ಧ ತೋಂಟದ ಬಾವಿಯಲು ನೀರನೆತ್ತಿಯೂಡುವರು (ಸೌಶಾ. IX-I,೨೬೭-೬೫ ; 1160) ; ಸುಂಕ ಸುವರ್ಣಾದಾಯ ಕಲ ಕೊಠಾರ ಕಾಲೋಣಿ ನೀರೋಣಿಯೇನುಂಟಾದ ಸಕಲಾಯ ಸ್ವಾಮ್ಯವನು . . . ಅನುಭವಿಸಿಕೊಂಡು (ಎಕ. III, ತಿರುಮ. ೬೨-೧೬೬ ; 1622) ; ಈ ಗ್ರಾಮಗಳಿಗೆ ಸಲುವ ಕಾಲೋಣಿ ನೀರೋಣಿ ಅಕ್ಷಿಣಿ ಆಗಾಮಿ ನಿಧಿ ನಿಕ್ಷೇಪ ಜಲಪಾಷಾಣ ಆಪ್ಯಭೋಗ ತೇಜಸ್ವಾಮ್ಯಗಳನು ನೀವು . . . ಅನುಭವಿಸಿಕೊಣ್ಣು ಬಹಿರಿಯನ್ನು ಕೊಟ್ಟ ಭೂದಾನ ಧರ್ಮಶಾಸನ (ಎಕ. XIV, ಮೈಸೂರು. ೧೧೪-೬೩ ; 1665). 'ನೀರಾಣಿವರಿ', 'ನೀರುಣಿಸುಂಕ' ಪರಾ. [ನೀರ್+ ?]

ನೀರ್ಕಟ್ಟೆ (ನಾ). ನೀರಿಗೆ ಅಡ್ಡಲಾಗಿ ಕಟ್ಟುವ ಒಡ್ಡು ; ಅಣೆಕಟ್ಟು : ಸೇತುವೆ ಎಂದು ಕರೆಯುವ ಬದಲು ನೀರ್ಕಟ್ಟೆ (Dam) ಎಂದರೂ ಸಲ್ಲುವುದು (ಬಾಲಪ್ರ. I, ೧೬೨) ; ಒಂದು ನೀರ್ಕಟ್ಟೆಯಿಲ್ಲ, ಕಾಲುವೆಯಿಲ್ಲ (ಚಿಗುಕ. ೨೭). [ನೀರ್+ಕಟ್ಟೆ$_1$]

ನೀರ್ಕಲ್ 'ನೀರ್ಗಲ್' ನೋ.

ನೀರ್ಕಾಗೆ 'ನೀರ್ಗಾಗೆ' ನೋ.

ನೀರ್ಕಾಲ್ (ನಾ). ಕೆರೆ, ನದಿ ಮುಂತಾದುವುಗಳಿಂದ ಗದ್ದೆಗಳಿಗೆ ನೀರು ಹಾಯಿಸಲು ಮಾಡಿದ ನಾಲೆ ; ಕಾಲುವೆ : ಹಳ್ಳದ ನೀರ್ಕಾಲಿಂ ಕೆಳಗೆ ಸರ್ವನಮಸ್ಯವಾಗಿ ಕೊಟ್ಟ ತೋಂಟ ಕಾಲ ಮತ್ತರೊಂದು ಪ್ರಭುವಿಷ್ಣುದೇವ ಆ ನೀರ್ಕಾಲಿಂ ಬಡಗಲು ಸರ್ವನಮಸ್ಯವಾಗಿ ಕೊಟ್ಟ ಕರಿಯ ಕೆಯಿ ಳಿಳೆಯ ಮತ್ತರೊಂದು (ನಾಂದೇಡ್. ೩೧-೨೨ ; 1134). [ನೀರ್+ಕಾಲ್$_2$]

ನೀರ್ಕುಟಿಕ$_1$ (ನಾ). ನಾವೆಯನ್ನು ನಡೆಸುವವನು ; ಅಂಬಿಗ : "ನೀರ್ಕುಟಿಕನೆಂದು ಅಂಬಿಗಂ" (ಕಶಸಾ. ೩೧-೩೫೪) ; "ಅಂಬಿಗ ತಾಂ ನೀರ್ಕುಟಿಕಂ" (ಕವಿಕಂ. ೧೫೫). [ನೀರ್+ಕುಟಿಕ$_1$]

ನೀರ್ಕುಟಿಕ$_2$ 'ನೀರ್ಗುಟಿಕ' ನೋ.

ನೀರ್ಕುಟಿಗ 'ನೀರ್ಗುಟಿಗ' ನೋ.

ನೀರ್ಕುಡಿ 'ನೀರ್ಗುಡಿ' ನೋ.

ನೀರ್ಕುಡಿಪ (ನಾ). ನೀರನ್ನು ಕುಡಿಯುವಿಕೆ ; ಜಲಪಾನ : ಕಣ್ಗಳ್ ಚೆನ್ನಾಗಿ ತೋಜುಪ, ನೀರಂ ಕುಡಿವಾಗಳ್ ಮುಸುಪ ಅಟ್ಟ ನೀರ್ಕುಡಿಪ . . . ಈ ಲಕ್ಷಣಂಗಳನುಳ್ಳ ಕುದಿರೆ ಸಂಪೂರ್ಣಾಯುಷ್ಯಾಯುಸ್ಕಮನುಳ್ಳುದು (ಲೋಕೋಪ. ೧೧೧-೬೫ ಟೀಕೆ).

[ನೀರ್ಕುಡಿ(<ನೀರ್ಗುಡಿ)+-ಪ$_2$(<-ಪ$_2$)]

ನೀರ್ಕುಳಿಗೊಳ್ 'ನೀಳ್ಕುಳಿಗೊಳ್' ನೋ.

ನೀರ್ಕೋಳಿ 'ನೀರುಗೋಟಿ' ನೋ.

ನೀರ್ಗಂಜಿ (ನಾ). ತಿಳಿಯಾದ ಗಂಜಿ,—ಅಂಬಲಿ : ಬರುತಿತ್ತು ಸಂಪತ್ತು ದಿನ ಸಂಜೆಗೆ ಈಗಿಲ್ಲಿ ದಿಕ್ಕಿಲ್ಲ ನೀರ್ಗಂಜಿಗೆ (ಗಂಗಾತ. ೫೬-೨).
[ನೀರ್ + ಗಂಜಿ$_1$]

ನೀರ್ಗಂಟಿ, ನೀರುಗಂಟಿ (ನಾ). ಕೆರೆ, ಕಾಲುವೆ, ಜಲಾಶಯ ಮುಂತಾದುವುಗಳಿಂದ ಗದ್ದೆಗಳಿಗೆ ನೀರು ಹಾಯಿಸಲು ಸರ್ಕಾರದಿಂದ ನೇಮಕನಾದವನು : "ಮಿವ್ವಃ = ನೀರ್ಗಂಟಿ" (ಕಾಶಕೃ. ೫೪); ಆಂಧ್ರದೇಶಕ್ಕೆ ಹೋಗಿ ನೀರ್ಗಂಟಿಯೊಬ್ಬನಿಗೆ ಅನುಗ್ರಹಿಸಿ . . . ಗೂಳೂರುಮತಕ್ಕೆ ಬಂದರು (ಶರಚ. ೬೧೬); ನೀರ್ಗಂಟಿ ಹೇಳಿದನು : "ಕೊಡುವೆವೆನ್ನುವ ವೇಳೆ ಮಿಂಚಿ ಹೋಯಿತು . . . ತನ್ನಿ ತನ್ನಿರಿ ಬೇಗ" (ನವರಾ. IV, ೨೪-೧೬). **ನೀರುಗಂಟಿ :** ಈ ಕಟ್ಟೇ ಕಾಲುವೇ ನೀರನ್ನು ಸರಾಗವಾಗಿ ತಂದು ಪೈರನ್ನು ಮಾಡಿಸುವದಕ್ಕೆ ಕಾಲುವೇ ಮಣೇಗಾರ ೧, ಶಾನುಭೋಗ ೧, ಕಾಲವೂಳಿಗ ೧, ನೀರುಗಂಟಿ ೧ . . . ಮುಂತಾದ ಜನಗಳನ್ನು ನೇಮಕ ಮಾಡಿಸಿದರು (ಚಾಮುಸಂ. ೧೧೬); ನೀರುಗಂಟಿ—ಕೆರೆ ಮತ್ತು ನಾಲಾಗಳಿಂದ ನೀರನ್ನು ಬಿಡುವವನು. ಇವನಿಗೆ ಕೆಲವು ಕಡೆ ಚಕ್ರನೆಂದು ಹೆಸರುಂಟು (ಗ್ರಾಮಾಕ. ೧).
[ನೀರ್ + ಕಂಟಿ$_2$]

ನೀರ್ಗಂಡಿ, ನೀರುಗಂಡಿ (ನಾ). ೧. ಕೆರೆ, ಕಟ್ಟೆ ಮುಂತಾದುವುಗಳಿಂದ ನೀರು ಹರಿದು ಹೋಗಲು ಮಾಡಿರುವ ಕಂಡಿ ; ತೂಬು: ನೀರ್ಗಂಡಿ, ಕೂರ್ಗಲಿ (ಶಬ್ದಾನು. ೯೦ ಪ್ರಯೋ). **ನೀರುಗಂಡಿ : ೧.** (ಹಡಗಿನ ಆಟ್ಟದಿಂದ ನೀರನ್ನು ಹೊರ ಸಾಗಿಸಲು ಪಕ್ಕದಲ್ಲಿ ಮಾಡಿರುವ) ಹಡಗಿನ ನೀರುಗಂಡಿ, ತೂಬುಗಂಡಿ (Scupper. ಇಂಕನಿ). **೨.** = ನೀರ್ದಿಡ್ಡಿ : ಈ 'ನೀರುಗಂಡಿ' ಯನ್ನು 'ದಿಡ್ಡಿ'ಯೆಂಬ ಹೆಸರಿನಿಂದಲೂ ಕರೆಯುವರು. ಕೋಟೆಯೊಳಗಿನವರು ನೀರನ್ನು ತರಲಿಕ್ಕೆಂದು ರಚಿತವಾದ ತೀರ ಚಿಕ್ಕ ಬಾಗಿಲುಗಳಿವು (ಕರ್ಣಾಜ. ೫೫).
[ನೀರ್ + ಕಂಡಿ$_1$]

ನೀರ್ಗಂತುಕ (ನಾ). ಜಲಕೇಳಿಯಲ್ಲಿ ಉಪಯೋಗಿಸುವ ಚಂಡು : ಸಳಯಂತ್ರದಿಂದ ಕೋಮಳೆಯೆಸೆಯೆ ಮತ್ತೊರ್ವ ನಳಿನಾಕ್ಷಿ ಪೊನ್ನಂಡೆಯಿಂದ ಕುಳಿರ್ವೋದಕದಿನಿಡೆ ಹೊಳದಿಟ್ಟನವಳ ಭೂತಳಪತಿ ನೀ[ಪಾತಾಂ. ನಿ]ರ್ಗಂತುಕದೊಳು (ಭೈರಸೂ. I, ೨೮೦). [ನೀರ್ + ಕಂತುಕ]

ನೀರ್ಗಂಪು (ನಾ). ನೀರಿನ ಕಂಪು,—ವಾಸನೆ : ಮುಡಿದಲರ್ಗಂಪು ಮೈಗಂಪು ನೀರ್ಗಂಪು ಮೇಲ್ಜಡಿವ ಮಂಜರಿ ಮುಡಿವಾಳ ನಿಡುಝುಲ್ಲಿ ಗುಂಪಿನ ಮಂಟಪದೊಳಗೊರ್ವ ಕಡುಚೆಲ್ವ ನೀಱೆ ನೀರೆಱೆದು (ಅಬ್ಬಲೂ. ೩-೬೪). [ನೀರ್ + ಕಂಪು]

ನೀರ್ಗಡವ 'ನೀರ್ಗಡವು' ನೋ.

ನೀರ್ಗಡವು, ನೀರ್ಗಡವ (ನಾ). ಒಂದು ಬಗೆಯ ಕದಂಬವೃಕ್ಷ: ನೀರ್ಗಡರಿ(ವಿ)ನ ಪೊದಱಂ ಪುತ್ತಿನ ಮೇಗೊಂಡುತ್ತರದೊಳ್ ಬಗೆದು ಮೂಗೆಯ್ಯಂ ಮಾಣ್ಡಗುಟ್ಟಿ ಬಾವಿಯಂ ಮೂಱಾಳ ಮಟ್ಟದೊಳ್ ನೀರ ಧಾರೆಗಳಕ್ಕುಕಿ (ಜಟ್ಟಮ. ೧೧-೫೫). **ನೀರ್ಗಡವ :** ಕೊಟೆದಿರ್ದ ಚರ್ಮಮಂ ಪೆರ್ಚಿದ ಪುಣ್ಗಳಂ ತೊಳೆದು ಕೊ(ತೊ)ಯ್ದು ಬಟಿಕ್ಕೆ ಜಲಾಶಯಂಗಳೊಳ್ ಪಚ್ಚನೆಯಪ್ಪ ನೀರ್ಗಡ(ಹು)ವಮಂ ಕರಿಮಾಡಿಡೆ ತದ್ವಿಷಾಪಹಂ (ಖಮದ. ೧೦-೫೬).
[ನೀರ್ + ಕಡವು$_2$ (<ಕಡಂಬ)]

ನೀರ್ಗಡಿಯಾರ (ನಾ). ನೀರು ಒಂದು ಪಾತ್ರೆಯಿಂದ ಇನ್ನೊಂದು ಪಾತ್ರೆಗೆ ಧಾರೆಯಾಗಿ ಹರಿಯುವುದರ ಮೂಲಕ ಕಾಲಮಾಪನ ಮಾಡುವ ಒಂದು ಸಾಧನ : "ನೀರೋಟದಿಂದ ನಡೆಯುವ ಪುರಾತನ ಕಾಲದ ಒಂದು ಗಡಿಯಾರ ; ನೀರ್ಗಡಿಯಾರ" (Clepsydra. ಇಂಕನಿ) ; ಈ ವೇಳಾಚಕ್ರಗಳಲ್ಲದೆ, ನೀರ್ಗಡಿಯಾರಗಳನ್ನೂ ಇಂಡಿಯಾದ ದೊಡ್ಡ ದೊಡ್ಡ ವಿಹಾರಗಳಲ್ಲಿ ಉಪಯೋಗಿಸುತ್ತಾರೆ (ಪ್ರವಾಇ. I, ೨೯೦).
[ನೀರ್ + ಗಡಿಯಾರ (<ಘಳಿಯಾರ)]

ನೀರ್ಗಡೆ (ಕ್ರಿ). ನೀರನ್ನು ಕಡೆ,—ಮಥಿಸು : ಎಣ್ಣೆಯಕ್ಕುಮೆಂದು ಮಣಲಂ ಪಿಟಿಪೊಡಂ . . . ಬೆಣ್ಣೆಯಕ್ಕುಮೆಂದು ನೀರ್ಗಡೆವೊಡಮವಾಗದಂತೆವೊಲು (ಪಸಾರ. ೪೬೦). [ನೀರ್ + ಕಡೆ$_1$]

ನೀರ್ಗಡ್ಡೆ (ನಾ). ಹೆಪ್ಪುಗಟ್ಟಿದ ನೀರು ; ಮಂಜುಗಡ್ಡೆ : ಶೀತಲವಾಯ್ತೆನ್ನೆದೆ ನೀರ್ಗಡ್ಡೆಯಂತೆ (ಕಗದ್ಯ. ೧೪೦). [ನೀರ್ + ಗಡ್ಡೆ]

ನೀರ್ಗಣಿವೆ (ನಾ). ನೀರಿನಲ್ಲಿ ಉಂಟಾದ ತಗ್ಗು, —ಕಂದರ : ಹರೀಶ್ವರಂ ತಾನೆತ್ತ ಚಲಿಸಿದೊಡತ್ತಲಳ್ಳೆ ಸೆಡೆತುದು ಕಡಲ್ ನೀರ್ಗಣಿವೆಯಪ್ಪವೋಲ್ (ಶ್ರೀರಾಮಾ. ೪೦೯-೧೬೯).
[ನೀರ್ + ಕಣಿವೆ (<ಕಣುವೆ)]

ನೀರ್ಗಣ್ಣಿ, ನೀರುಗಣ್ಣಿ (ನಾ). ೧. ನೀರಿನಿಂದ ಕೂಡಿದ ಕಣ್ಣುಳ್ಳವಳು : "ಹೇಳಿದೆನಲ್ಲ" ಎನ್ನುತ್ತ ನೀರ್ಗಣ್ಣಿಯಾದಳು (ಬೆಳುಮ. ೪೨). **ನೀರುಗಣ್ಣಿ : ೨.** ಯಾವಾಗಲೂ ಅಳುವವಳು ; ಅಳುಬುರುಕಿ : ನೀರುಗಣ್ಣಿ ಮುಂಡೆ ಊರು ಹಾಳು ಮಾಡಿದಳು (ಗಾದೆ).
[ನೀರ್ + ಕಣ್ಣು (<ಕಣ್)+-ಇ$_2$]

ನೀರ್ಗನಿಗಲು 'ನೀರುಗಣಿಗಲು' ನೋ.

ನೀರ್ಗರುಳ (ನಾ). ಮೃದುಸ್ವಭಾವದವನು ; ಕೋಮಲಸ್ವಭಾವದವನು : "ನೀ[ಪಾತಾಂ. ನಿ]ರ್ಗರುಳಂ ಕೋಮಲನು" (ಭಾರನಿ. ೧೫). [ನೀರ್ + ಕರುಳ್ + -ಅ$_7$]

ನೀರ್ಗರೆ (ಕ್ರಿ). ನೀರನ್ನು ಸುರಿ,—ವರ್ಷಿಸು : ಪಾರಿಜಾಕ್ಷನು ಸಕಲ ನಾರಿಯರ ಮ್ಯಾಲೆ ಕರವಾರಿಜಂಗಳಲಿ ನಿರ್ಭರದಿ ಚಲ್ಲಿದೊಡೆಯಾ ನೀರೆಯರು ಕೆರಳಿವೊಬ್ಬುಳಿಯಾಗಿ ನೀರ್ಗರೆದರಾ ಹರಿಗೆ ವಿವಹದಲ್ಲಿ (ನವಮೋ. ೧೦-೪೯). [ನೀರ್ + ಕರೆ$_2$ (<ಕಱೆ$_1$)]

ನೀರ್ಗಲ್, ನೀರ್ಕಲ್, ನೀರ್ಗಲ್ಲು (ನಾ). ೧. ಘನೀಭೂತವಾದ ನೀರು ; ಮಂಜುಗಡ್ಡೆ : ನೀರಧಿ ಬ್ರಹ್ಮ, ನೀರ್ಗಲ್ ಜೀವವೆನುತೊಂದು . . . ಮತವಿವರ (ಮಂಕುಕ. ೬೭೧). **೨.** ಅಂತಃಕಾಂತಿಯುಳ್ಳ ಕಲ್ಲು ; ರತ್ನ : ಬಲ್ಗೊಡದನ್ನವೀ ಮೊಲೆಯ ಬಿಣ್ಪೊದವಲ್ ಸುಕುಮಾರಿಯರ್ಗೆ ನೀರ್ಗಲ್ಗಳ ಹಾರದೊಂದು ಪೊಱೆಯೇಕೆನುತುಂ ಜಲದೇವಿ ಕೊಟ್ಟವೊಲ್ ಕಲ್ಗಳನಾವಗಂ ಬಲಿದು ಬೆಟ್ಟದುವಾಗದ ಬಿಂದು ಮೌಕ್ತಿಕಂ ವಲ್ಗದುರೋಜಮಂಡಲದೊಳೇಂ ತುಱುಗಿರ್ದುವೊ ಕಾಂತೆಯರ್ಕಳಾ (ಲೀಲಾವ. ೧೪-೧೫); "ಮುತ್ತು ?" (ಪ್ರಭಣ್ಣ). **೩.** ನೀರು ಸ್ರವಿಸುವ ಕಲ್ಲು ; ಚಂದ್ರಕಾಂತಶಿಲೆ : ಪಾಲ್ಗಡಲೊಳಪೊಕ್ಕ ಶಶಿಯಂತೆ ಪೊಕ್ಕು ನೀರ್ಗಲ್ಗಳ ರುಚಿ ಸರಸಿಯನು ಸಲ್ಗೆಯಸುರರೆಯ್ದೆ ಮಿಂದೆಯ್ದಿದನು ಕೂಟ ಸಾಲ್ಗಳ ಜಿನನ ಮಂದಿರವ (ವರ್ಧಚ. ೯-೯೪). **ನೀರ್ಕಲ್ : ೪.** ನೀರಿನ ಮಧ್ಯದಲ್ಲಿರುವ ಕಲ್ಲು : ಅಱುಚು ವಾರ್ಭಟಕತ್ಯಧಿಕಭೀಕರದೊಳಂಬುಜ ಕೈರವಂಗಳ್ ಶರದೊಳಾಳಲ್ಕಳ್ಳಿ ನೀರ್ಕಲ್ವಿಡಿದು ವ್ರತತತಿಗಳ ನೆರವಿ ನೆಱೆ ಮೆಱೆದುಱುಗಲಿಂ ಪರಿಪರಿದಡರ್ದು ಪುವ್ವಿಡಿಯಲ್ (ಮದೇಪು. ೨-೨೯). **ನೀರ್ಗಲ್ಲು : ೧.** ಹಿಮವಿಲ್ಲದಾಯತುವಿನಲ್ಲಿ ಹಿಮ ಬಿದ್ದು, ಅಳದಗಲದ ಹೊಳೆಯ ನೀರೆಲ್ಲ ನೀರ್ಗಲ್ಲ ಗಡ್ಡೆಗಟ್ಟಿ (ಪಾರಸಿ. ೧೮-೪೨೧); ಅಲ್ಲಿಗೆ ಹೋಗಲು . . . ಪರ್ವತಶ್ರೇಣಿಯನ್ನು ದಾಟಬೇಕಾಗಿತ್ತು. ಈ ಪರ್ವತಶ್ರೇಣಿ ನೀರ್ಗಲ್ಲಿನಿಂದ ಆವೃತವಾಗಿತ್ತು (ಪ್ರವಾಇ. I, ೧೯೧).

ನೀರ್ಗಲ್ಲ ಹಾವುಗೆ = "ಹಿಮದಮೇಲೆ ನಡೆಯುವಾಗ ಕಾಲು ಹೂತು ಹೋಗದಂತೆ ಹಾಕಿಕೊಳ್ಳುವ, ಟೆನಿಸ್ ದಾಂಡಿನಾಕಾರದ

ಅಥವಾ ಜಾರುಮರದ ಜೋಡು ; ಮಂಜು ಜೋಡು ; ನೀರ್ಗಲ್ಲ ಹಾವುಗೆ" (Snow-shoes. ಇಂಕನಿ). [ನೀರ್ + ಕಲ್$_3$]

ನೀರ್ಗಲ್ಲು 'ನೀರ್ಗಲ್' ನೋ.

ನೀರ್ಗಾಗೆ ನೀರುಕಾಗೆ, ನೀರುಗಾಗೆ, ನೀರ್ಕಾಗೆ (ನಾ). ಒಂದು ಬಗೆಯ ನೀರುಹಕ್ಕಿ ; ಜಲಕಾಕ : "ಮದ್ಗು ಜಳಕಾಕಮೆನೆ ನೀರ್ಗಾಗೆ" (ಮಂಗರಾ. ೫೧-೫) ; ಇರ್ವರುಮಾ ಗೊರವರ್ ಕೇಳ್ವಂ ತಾಗಿ ನುಡಿದು ಅಲ್ಲಿಂ ತಳರ್ದು ಪೋಗಿ ಕೊಕ್ಕುಂ (ಕುರ್ಕುಂ) ನೀರ್ಗಾಗೆಯುಮಾಗಿ ಬಂದವರ ಸಮೀಪದ ನೀರ ತಡಿಯೊಳಿರ್ದು ಕೊಕ್ಕುಂ (ಕುರ್ಕುಂ) ನೀರ್ಗಾಗೆಯಂ ಬೆಸಗೊಳ್ಗುಂ (ಜೀವಸಂ. ೧೬೩-೩೦ ಪ). **ನೀರುಕಾಗೆ** : "ಮದ್ಗುಃ ಎಂದರೆ ನೀರುಕಾಗೆ" (ನಾಚರಾ. ೧೧೫) ; ತಿಳಿದ ತಿಳಿಗೊಳದ ತಳಿತ ತಾವರೆಯರಳ ತಂಡುಲದ ರುಚಿಯ ಕಳಹಂಸಿ ಬಲ್ಲುದಲ್ಲದೆ ಒಡನಿರ್ದ ನೀರುಕಾ [ಪಾಠಾಂ. ಗಾ]ಗೆ ತಾನೆತ್ತ ಬಲ್ಲುದೋ (ಅದಸ. ೮೨-೧೩೫) ; ಸಿಹಿ ವೆಗ್ಗಳವಾಗಿ ಆಹಾರವ ಕೊಂಡಿದ್ದರೆ ನಾಡಿಯ ನರ ತೋರವಾಗಿ ಕಪ್ಪೆಯ ನಡೆಯ ಹಾಗೆ ನಡೆಯುತ್ತಿಹುದು ಹುಳಿ ವೆಗ್ಗಳವಾಗಿ ಕೊಂಡಿದ್ದರೆ ಎಣ್ಣೆ ಪೂಸಿದ ಹಾಗೆಯೂ ನೀರುಕಾಗೆಯ ಹಾಗೆಯೂ ವೇಗ ಕೂಡಿ ನಡೆವದು (ವೈದ್ಯಸಾ. I, ೬). **ನೀರುಗಾಗೆ** : "ಜಲವಾಯಸ—ನೀರುಗಾಗೆ" (ಓಷಧಿ. ೬೧). **ನೀರ್ಕಾಗೆ** : "ರಕ್ಕಸನೊಳು . . . ನೀರ್ಕಾಗೆಯೊಳು ಶಕ್ತಿಯೊಳು ಮುಸಲಿಯೊಳು ಬಲವೆನಿಕ್ಕು" (ಮಂಗರಾ. ೧೪೭-೩೯).

[ನೀರ್ + ಕಾಗೆ]

ನೀರ್ಗಾದಿಗೆ, ನೀರ್ಗಾರಿಗೆ (ನಾ). (ಕೋಟೆಯ ಸುತ್ತಲೂ ಇರುವ) ನೀರಿನಿಂದ ತುಂಬಿರುವ ಕಂದಕ ; ಅಗಳು : ಜರಾಸಂಧಂಗಳ್ಕಿ ಮಧುರಾಪುರಮಂ ಬಿಸುಟ್ಟು ಪೋಗಿ ದ್ವಾರಾವತಿಯಂ ಸಮುದ್ರಮೆ ನೀರ್ಗಾದಿಗೆಯಾಗಿ ಮಾಡಿದೆಂ (ಪಂಪಭಾ. ೬-೨೬ ಪ) ; ಆ ಸಮಸ್ತ ಜನತಾ ಹ್ಲಾದಿಯಾದ ನೀರ್ಗಾದಿಗೆಯಿಂ ಮನಕ್ಕೆವಪ್ಪೆರಡನೆಯ ಮೇದಿನೀಭಾಗದಿಂದತ್ತ . . . ಜಾಂಬೂನದವೇದಿಕಾಪರಿವೃತ್ತಿಯಿಂದಮೊಳಗೆ (ವರ್ಧಮಾ. ೧೩-೪೧ ಪ) ; ಬಡಬಾನಲಂಗೆ ಸೆಡೆದಿಂಗಡಲೆ ಸರಣ್ಬೊಕ್ಕುದಮರಶೈಲಮನೆಂಬೀ ಪಡೆಮಾತಂ ನೀರ್ಗಾದಿಗೆ ಪಡೆಯುತ್ತುಂ ಪೊನ್ನ ಕೋಂಟೆಯಂ ಬಳಸಿರ್ಕುಂ (ಪಂರಾಮಾ. ೧-೧೧೩) ; ನೀರ್ಗಾದಿಗೆ ಕೋಟೆಯಂದಮೊಗೆ ದಿರ್ದತ್ಯುತ್ಸವಂ ಮೇಘದೊಳ್ ತೊರೆಯೆಂಬಂತಿರೆ ಸನ್ನುತಂ ಕೃತಿ ಸುಧಾ ಕರ್ಮಂಗಳಿಂದುನ್ನತಂ (ಬಂಹರಿ. ೧-೨೨) ; ಪೊಂಗೋಂಟೆಯ ಪರಿವೃತಮಾಗಿ ನೀರ್ಗಾದಿಗೆ ಪೆಂಪಿಂಗಾಗರಮಾಗಿ ಕಣ್ಗೆ ರಾಜಿಸುವುದು (ತ್ರಿಭುತಿ. ೨-೨೩). **ನೀರ್ಗಾರಿಗೆ** : ಆ ದೇವಿಯ ಪುರದಾಗ್ನೇಯದ ಕೋಣಲಿದ್ದೊಡಿತೆ ಕುಳಿಯ ತೆಂಕಣ ನೀರ್ಗ್ಗಾರಿಗೆಯೆ ಮೇರೆ (ಎಕ.VII, ಶಿಕಾರಿ. ೩೨೩-೨೯ ; 1046) ; ಸಮುದ್ರಮೇ ನೀರ್ಗ್ಗಾರಿಗೆಯಾಗೆ ವರುಣನೇ ಕರಗ[ಬಳ]ನಾಗೆ (ಸೌಇಇ. IX-i, ೧೩೯-೨೭ ; 1074).

[ನೀರ್ + ಕಾದಿಗೆ$_1$]

ನೀರ್ಗಾಯ್, ನೀರುಗಾಯಿ (ನಾ). ಎಳೆಯ ತೆಂಗಿನಕಾಯಿ ; ನೀರು ತುಂಬಿರುವ ತೆಂಗು ; ಸೀಯಾಳ ; ಎಳನೀರು : ವನದೇವತೆಯರಮೃತಸಾರವಾರಿಯಂ ಪಚ್ಚೆವರಲ ಕರಗಂಗಳೊಳ್ ತೀವಿ ತೆಂಬೆಲರ ಪೊಯ್ಲಿನಿಂ ತಣ್ಪುವಡೆಯಲೆಂದು ನೆಱೆಪಿದಂತಿರ್ದ ನೀರ್ಗಾಯ ತುಱುಗಲಿಂದೆಱಗಿದ ನಾಳಿಕೇರಭೂರುಹಂಗಳುಂ (ಚಂದ್ರಪು. ೧-೧೦೫ ಪ) ; ಬನಮಂ ನೀರೂಡಿ ನಿಚ್ಚಂ ಬಳೆಯಿಸುವ ಬೆಸಂಬೆತ್ತುವೋ ಧಾರೆಯಿಂ ತಾಮೆನಲಾ ನೀರ್ಗಾಯ್ಗಳಿಂ ಭೋರ್ಗಱೆದುಗುವೆಳನೀರಂ ನವಾಮ್ರಾಳಿ ನಾನಾವನಿಜಾತಶ್ರೇಣಿಗೋರಂತೆಡೆವಿಡದತುಳಾವಾಳಖಾತಂಗಳಿಂ ತೀವಿ ನಿತಾಂತಂ ಸುತ್ತಿ ಪೂರಂಬರಿಪುದವಱೊಳೇ ನಾರಿಕೇಳಾಂಘ್ರಿಪಂಗಳ್ (ಕುಸುಮಾ. ೧-೮೭). **ನೀರುಗಾಯಿ** : ಫಾಲ್ಗುಣ ಚೈತ್ರಮಾಸಗಳಲ್ಲಿ ನೀರುಗಾಯಿ ಹೊಬ್ಬರಿ ಅಂತ ಕಚ್ಚಾಮಾಲು ಬರುತ್ತಿರುತ್ತದೆ (ಮುಂಬನ್ಯಾ. ೨೮೫). [ನೀರ್+ಕಾಯ್$_4$]

ನೀರ್ಗಾರಿಗೆ 'ನೀರ್ಗಾದಿಗೆ' ನೋ.

ನೀರ್ಗಾಲ (ನಾ). ಮಳೆಗಾಲ; ವರ್ಷಾಕಾಲ: ನೀರ್ಗಾಲಮಂ ಪೂರೈಸಿ ಮಾಸ ಕಾರ್ತಿಕಕೆ ಪೊರಮಡಿಮೆಂದು ಬೀರರ್ಗೆ ನಾನೆ ತಡೆಗಟ್ಟಹೆನ್ (ಶ್ರೀರಾಮಾ. ೩೪೪-೧೨೧). [ನೀರ್ + ಕಾಲ]

ನೀರ್ಗಾಲಿ (ನಾ). "ನೀರಿನ ಒತ್ತಡದಿಂದ ತಾನು ತಿರುಗಿ ಯಂತ್ರವನ್ನು ನಡಸುವ ಗಾಲಿ : ಜಲಚಕ್ರ, ನೀರ್ಗಾಲಿ" (Water-wheel. ಇಂಕನಿ) : ಜೊಂಬುಗಳಿಂದ ಮಾಡಿದ ಗಾಲಿಯ ಪರಿಧಿಯಲ್ಲಿ (circumference) ಬಟ್ಟಲುಗಳಿರುವ ನೀರ್ಗಾಲಿಗಳನ್ನು ಎಷ್ಟೋ ಶತಮಾನಗಳ ಹಿಂದೆ ಈಜಿಪ್ಟ್ ಮತ್ತು ಅಸ್ಸಿರಿಯ ಚಕ್ರಾಧಿಪತ್ಯಗಳಲ್ಲಿ ಬಳಸುತ್ತಿದ್ದರು (ತಿಲ್ಪನಾ. ೧೯೫). [ನೀರ್ + ಗಾಲಿ]

ನೀರ್ಗಾಲುವೆ, ನೀರುಕಾಲುವೆ (ನಾ). ೧. ನೀರು ಹರಿದು ಹೋಗಲು ಮಾಡಿರುವ ತೋಡು ; ಹರಿ : ಈಚೆಗೆ ಜನಸಂಖ್ಯೆಯು ಹೆಚ್ಚಿದ ಹಾಗೂ ತಗ್ಗಿನ ಗದ್ದೆಗಳು ಸಾಗುವಳಿಗೆ ಬಂದ ಮೇಲೆ ನೀರ್ಗಾಲುವೆಗಳ (Drains) ಏರ್ಪಾಡು ಒಂದು ಸಮಸ್ಯೆಯಾಗುತ್ತಿದೆ (ತಿಲ್ಪನಾ. ೩೭೧). **ನೀರುಕಾಲುವೆ** : ೨. ಪರ್ವತದ ಮೇಲಿನಿಂದ ಹರಿಯುವ ಝರಿ ; ನಿರ್ಝರ : "ನಿರ್ಝರಃ, ಝರಃ —೨ ವಾರಿಪ್ರವಾಹ—ಬೆಟ್ಟದಲ್ಲಿ ಹುಟ್ಟುವ ಜಲಪ್ರವಾಹವು, ಕಲ್ಲುಗುಡ್ಡಗಳಲ್ಲಿ ನೀರೂರಿ ಉಕ್ಕಿ ಮೇಲ್ಗಡೆಯಿಂದ ಜಾರಿಹರಿಯುತ್ತಿರುವ ನೀರುಕಾಲುವೆಗಳು (ಸಿದ್ಧಾಂತಿ.೧೦೭). [ನೀರ್ + ಕಾಲುವೆ(<ಕಾಲ್ವಾಯ್)]

ನೀರ್ಗಿಚ್ಚು, ನೀರುಗಿಚ್ಚು (ನಾ). ಸಮುದ್ರದ ಒಳಗೆ ಇರುವುದೆಂದು ನಂಬಲಾದ ಬೆಂಕಿ ; ಬಡಬಾಗ್ನಿ : ಎಚ್ಚನಾರಾತಿಭಟರನವರ ಸುಗಳನಚ್ಚರವೆಣ್ಗಳಿಗೊಲಿದು ವೆಚ್ಚವಿಕ್ಕಿದನಾ ಬಲಜಲಧಿಯ ನೀರ್ಗಿಚ್ಚಿನಂತುಱೆ ತವಿಸಿದನು (ಕುರಾಸಾಂ. ೪೬-೫) ; ಆ ಪ್ರಚೇತಸನೆನಿಪ್ಪುದೊಂದಾನೊಂದು ವೇಳೆ ಬೀಸುತ್ತ ವೃಕ್ಷಾತತಿಯ ನಾಶವನೆಯ್ದಿಸುತ್ತಿಹುದದಗ್ನಿಮಿಶ್ರಿತವಾಗಿ ಗೃಹಂಗಳಂ ಸುಡುವುದದು ವಾರಿನಿಧಿಗತನಪ್ಪ ವಾಡಬನೊಳೊಂದಿ ನೀರ್ಗಿಚ್ಚುಮಂ ಕೆಡಲೀಯದೊಪ್ಪಿರ್ಪುದು (ವೀಶೈಪು. ೪-೧೪-೨೯). **ನೀರುಗಿಚ್ಚು** : ಕಾಡಗಿಚ್ಚೆದ್ದರೆ ಅಡವಿಯೆ ಗುಱಿ ನೀರುಗಿಚ್ಚೆದ್ದರೆ ಸಮುದ್ರವೆ ಗುಱಿ ಒಡಲಗಿಚ್ಚೆದ್ದರೆ ಆ ತನುವೇ ಗುಱಿ . . . ನಿಮ್ಮ ಮಾಯೆಯ ಹೊಡಗಿಚ್ಚಿಂಗೆ ನಾನು ಗುಱಿಯಲ್ಲ ಕೇಳಾ (ಅವಚಂ. ೨೧೪-೯೬೬). [ನೀರ್+ಕಿಚ್ಚು]

ನೀರ್ಗಿಚ್ಚುಗೊಳ್ (ಕ್ರಿ). ಬಡಬಾನಲದ ಬಾಧೆಗೆ ಒಳಗಾಗು ; ಔರ್ವಾಗ್ನಿಯಿಂದ ಸುಡು : ಮದನಮಹಾದಾಹದಿಂ ದೇಹಂ ಕರಂ ಕೊರಗಿ ಕಡುಬಡವಾಗಿ ನೀರ್ಗಿಚ್ಚುಗೊಂಡ ಕಮಲಿನಿಯಂತಿರ್ದ ಕಾಮಿನಿಯಂ ಕಂಡು ಮನಂಗಾಣಲಾಱದೇಕಾಂತಕೆ ಕರೆದು ತಮಾಳಿಕೆ ಕಳಾವತಿಗಿಂತೆಂದಳ್ (ಲೀಲಾವ. ೭-೮೩ ಪ). [ನೀರ್ಗಿಚ್ಚು + ಕೊಳ್$_1$]

ನೀರ್ಗಿಱು (ಕ್ರಿ). ನೀರೆಂದು ಭಾವಿಸು ; ಜಲವೆಂದು ಎಣಿಸು : ಏಕಾಕಿ ಸಾಮಾನ್ಯನೆಂದನಿತುಂ ರಾಜಸಮಾಜಮಾಜಿಗುಱದೆಯ್ತಂದತ್ತು ನೀರ್ಗೆತ್ತು ಬೆಳ್ತನದಿಂ ಕತ್ತರಿವಾಣಿಯಂ ಜಡಜನಂ ಕೈಗುತ್ತಲೇಟ್ತಿರ್ಪವೋಲ್ (ಪಂರಾಮಾ. ೩-೪೮). [ನೀರ್+ಗಿಱು]

ನೀರ್ಗುಂಕುಮ (ನಾ). ನೀರಾಗಿರುವ ಕುಂಕುಮ : ತಡೆದು ಬಗೆನಲ್ಲನೀಕ್ಷಿಪ ಮಡದಿಯ ಕಟ್ಟಲಿಪ ಮೊಗಮುಮರುಣೇಕ್ಷಮುಂ ತೊಡೆದಂ ಜನಮುಂ ಮಱೆದಳವಡೆ ನೀರ್ಗುಂಕುಮಮನೆಚ್ಚಿಕೊಂಡಪೊಲೆಸೆಗುಂ (ಆರ್ಧನೇ. ೩-೧೧೦). [ನೀರ್ + ಕುಂಕುಮ]

ನೀರ್ಗುಂಡಿ 'ನಿರ್ಗುಡಿ' ನೋ.

ನೀರ್ಗುಂದ, ನಿರ್ಗುಂದ, ನೀರುಗುಂದ (ನಾ). ಒಂದು ಸ್ಥಳದ ಹೆಸರು : ಪೃಥಿವೀ ನೀರ್ಗುನ್ದ ರಾಜಸ್ಯ ವಿಜ್ಞಾಪನಾಯಾ ಮಹಾರಾಜಾಧಿರಾಜಪರಮೇಶ್ವರ ಶ್ರೀಜಸಹಿತದೇವೇನ ನೀರ್ಗುನ್ದವಿಷಯಾನ್ತ ಜ್ಞಾತಿ (ಎಕ. IV, ನಾಗಮು. ೮೫-೫೯; 776) ; ಶ್ರೀಮತ್ × × [ಮಾ]ರ ಮಾಳೆ ನೀರ್ಗುನ್ದದ ಸ×ಗೆ ರಣಂಕ × × ರವೆ[ಳೆ]ಕಾರಣ× (ಎಕ. IV, (R), ಹುಣಸೂ. ೩-೩ ; 4ನೆಯ ಶತ). **ನಿರ್ಗುಂದ :** ಶ್ರೀಪೃಥಿವೀವಲ್ಲಭಪರಮೇಶ್ವರ ಪಲ್ಲವದಿಯರನ್ನೊಟಂಬಲ್ಗೆ ಸಾಸಿರಮುನ್ನಿರ್ಗುನ್ದ ನಾಡುಮೂನೂಱುಮನಾಳೆ (ಎಕ. XI, ಚಿಕ್ಕಬ. ೩೩-೩೮ ; ಸು. 815) ; ನೇತ್ರ ಶಿವಾಭಾಜ್ಯಾಭಿಧಾನಾಯ ನಿರ್ಗುನ್ದವಿಷಯಾ ಸರ್ಬ್ಬಬಾಧಾಪರಿಹಾರಯಮತ್ (ಮೈಆರಿ. ೧೯೧೯, ೧೦-೩೫ ; 900); ಶ್ರೀಮತ್ಪತ್ಯವಾಕ್ಯ ಬೀರಪೆರ್ಮ್ಮನಡಿಯು ಗೊಟ್ಟ ಕಲ್ಲಾಟು ಬೆಳ್ಗಲಿಯ ನಿಗುರ್ನಿನ್ದ ಜಗ್ಗಿಯರಸರ್ಗೆ ಕೊಟ್ಟರ್ (ಎಕ. V, ಅರಕ. ೬೧-೫ ; 920). **ನೀರುಗುಂದ :** ನೀರುಗುಂದನಾಡ ಹಾ × × ದ ಚೆಣ್ಡಮುಣ್ಡೆಯ ತೀರ್ತ್ಥದ ಶ್ರೀಮಹಾದೇವರ್ಗ್ಗೆ ಚಿಕ್ಕಸಾನ್ತಲದೇವಿಯರ್ಗ್ಗೆ ಪರೋಕ್ಷವಿನಯಮಾಗಿ ಎಲಗುಂದದಲು ಬಿಟ್ಟ ವ್ರಿತ್ತಿ ಮೂಱು (ಎಕ. V, ಹಾಸನ. ೯೦-೨೨; 1135) ; ಶ್ರೀಮನ್ಮಹಾಗ್ರಹಾರ ನೀರುಗುಂದದ ಶ್ರೀಸ್ವಯಂಭು ಭೀಮೇಶ್ವರದೇವರ ನಂದಾದೀಪಗಳಿಗೆಗಂ . . . ಬಿಟ್ಟ ಹಾಗವೊಂದು (ಸೌಇಇ. IX-i, ೨೯೩-೨೪ ; 1162). [ನೀರ್? + ಕುಂದ3]

ನೀರ್ಗುಟಿಕ, ನೀರ್ಕುಟಿಕ2 (ನಾ). = ನೀರ್ಗಂಟೆ : "ನೀರ್ಗುಟಿಕನೆನೆ ನೀರೆಜೀವನಕ್ಕುಂ" (ಕಬ್ಬಿಕ್ಕ. ೩೩); ಶೋಧಿಸಿ ಜಲವಂ ಪರಿಂ ಚೋದಿತನಲ್ಲದೆ ನೃಪಾಲಸಮಯಗಳಂ ತಾ ಸಾಧಿಸಿ ನಿರ್ಮಲನಾಗಿಹ ಸಾಧುವು ನೀರ್ಗುಟಿಕನೆನಿಸುವಂ ಮಹಾಲಿಂಗಾ (ಪಂಡಿತ. ೧೮-೯೪). **ನೀರ್ಕುಟಿಕ2 :** (ಕ). [ನೀರ್ + ಕುಟಿಕ2]

ನೀರ್ಗುಟಿಗ, ನೀರುಕುಟಿಗ, ನೀರ್ಕುಟಿಗ (ನಾ). = ನೀರ್ಗಂಟೆ : "ನೀರ್ಗುಟಿಗನೆನೆ ನೀರನೆರೆಯುವವನು" (ಕಥಕ. ೫೫). **ನೀರುಕುಟಿಗ :** ಬೆಳ್ಳರು ನೀರುಕುಟಿಗರೆಂಬುದಕ್ಕಿಂತ, ಸಮಾಜವಿಕಾಸಕ್ರಮದ ಐತಿಹ್ಯದಂತೆ 'ಎಳುದಿನ' (Butter) ವ್ಯವಹಾರಗಳೆಂದು ಗ್ರಹಿಸುವುದೇ ಹೆಚ್ಚು ತರ್ಕಶುದ್ಧವಾಗಿದೆಯೆಂದು ಹೇಳಬಹುದು (ಕರ್ನಾಪೂ. ೫೮). **ನೀರ್ಕುಟಿಗ :** ಕುಟಿಗ ಪ್ರತ್ಯಯಕ್ಕೆ—ಕಲ್ಕುಟಿಗಂ, ನೀರ್ಕುಟಿಗಂ, ಮರಕುಟಿಗಂ (ಕಮದ. ೨೦೧ ಪ್ರಯೋ). [ನೀರ್ + ಕುಟಿಗ2]

ನೀರ್ಗುಟ್ಟು (ನಾ). ಅಜೀರ್ಣ ಮೊದಲಾದುವುಗಳಿಂದ ಕರುಳಿನಲ್ಲಾಗುವ ನೋವು (?) : ಪುರವಿಟ್ಟು ಕೆರೆದು ಮತ್ತಾ ಹುಡಿ ಮಾರಳೊಳು ಪೊರಳಿ ನೀರ್ಗುಟ್ಟು ಕಿಡಲೊಡನೆ ಹರುಷದಿಂದಾ ನೀರ್ಗುಡಿವಾ ಜಾತ್ಯಶ್ವಗಳಿರವಾ ತೊಜೆಯೊಳೊಪ್ಪಿದುವು (ಪ್ರಭಂಜ. ೨-೧೨೯).

[ನೀರ್ + ಕುಟ್ಟು2]

ನೀರ್ಗುಡಿ, ನೀರುಕುಡಿ, ನೀರುಗುಡಿ, ನೀರ್ಕುಡಿ (ಕ್ರಿ). ನೀರನ್ನು ಕುಡಿ,—ಈಂಟು : ವಿಂಧ್ಯಕಳೆಂಬಂ ಬಂದು ದುರ್ಯೋಧನನನೆಲ್ಲಿಯುಮಜಿಸಿ ಕಾಣದೆ ವೈಶಂಪಾಯನಸರೋವರಕ್ಕೆ ನೀರ್ಗುಡಿಯಲೆಂದು ಪೋಗಿ (ಪಂಪಭಾ. ೧೩-೬೬ ನ); ಮರುಳಕ್ಕ ಕನಸಿನ ತೊಜೆಯೊಳ್ ನೀರ್ಗುಡಿದೂ ತಣಿವನಜಿಸಿದರೊಳರೇ (ಶಾಂತಿಪು. ೪-೯೪); ಆ ಗಹನದೊಳು ಬಿಜುಬಿಸಿಲ ಗಾಳಿಯಿಂ ಹಸಿದು ಮುಜ್ಜಿದುಣ್ಣನೇ ನೀರ್ಗುಡಿಯನೇ (ಪಿದ್ಧರಾ. ೨-೧೩); ನಾವು ಹಿಡಿತಂದದು ಮೊದಲು ನೀರ್ಗುಡಿಯಲೊಲ್ಲವು ಮೇಯಲೊಲ್ಲವಿವು (ಬಸಪು. ೬೦-೩೪) ; ಮೃಗವೇಂಟೆಕಾಜರು ಮಾಂಸಭಾರದಲಿ ಬರುತ ನೀರಡಿಸಿದರು ಕಂಡರು ಸರಸಿಯನು ನೀರ್ಗುಡಿಯಲ್ಕೆತಂದು (ಕುಮ್ಮಾಗ. ೪-೪೨) ; ಕುದ್ಧಾಭಮನವಿಲ್ಲದೆ ಮುಜ್ಜಿದು ನೀರ್ಗುಡಿಯೆ . . . ಕಲಿಪುರುಷರಾಯನ ಸಂಧಿಸಿದ (ನಳಚ. ೪-೨೧) ; ಎಳೆಹುಲ್ಲ ಸವಿದು ನೀರ್ಗುಡಿವ ತಾಪಸನನಂದಲರಂಬಿಗೆ ಗುಜಿಮಾಡಿ (ಕಂಸವಿ. ೯-೧೪೬). **ನೀರುಕುಡಿ :** ಎತ್ತುಗಳಿಗೆ ನೀರುಕುಡಿಯುವ ಆಸೆಯಾಗಿದೆ (ದೇಸಹಂ. ೬೪) ; ಅವೊತ್ತು ಹಳು ನುಗ್ಗಿ ಆಕರ ಅದಾಗ ನೀರು ಕುಡಿದಿದ್ದು (ಮಲೆಮ. ೨೫೪). **ನೀರುಗುಡಿ :** ಸರಸಿಯ ತೀರದಲಿ ಕೀಲಿಸಿದ ಮಗ್ಗುಲಲಿ ಯಮಳರೊಜಗಿರೆ ಕಂಡು ಮುನಿದಲಿ ತಮವ ಹಿಡಿದನು ನೀರುಗುಡಿದೀ ಮನುತೆ ಮಿಗಲಾರ್ಕೈವೆನೆನುತಳಿದನು ಸರೋವರವ (ಕುಪ್ಯಾಖ. ೨೩-೨೩). **ನೀರ್ಕುಡಿ :** ಕುಡಿಯ ಭಗವಂತ ಎನಲು ಬುದ್ಧಂ ಪಾತ್ರವಿಸಕೊಂಡು ನೀರ್ಕುಡಿದು (ವ್ಯಶಾಖ. ೬೯-೧೩೦). [ನೀರ್ + ಕುಡಿ1]

ನೀರ್ಗುಡಿಸು1, ನೀರುಕುಡಿಸು (ಕ್ರಿ). ೧. ನೀರನ್ನು ಕುಡಿಯುವಂತೆ ಮಾಡು ; ನೀರನ್ನು ಕುಡಿಸು : ನಡೆದು ಪರಬಲನುಧ್ಮದಲಿ ನೀರ್ಗುಡಿಸಿ ಪರಿಯನು ಸಕಲಸುಭಟರ ಮುದುಹಿ ಫಲುಗುಣ ಗೆಲಿದ ನಗ್ಗದ ಕೌರವೇಶ್ವರನ (ಕುಪ್ಯಾದ್ರೋ. ೧೦ ಸೂಚನೆ) ; ನೀರಡಿಸಿದ ಕುದುರೆಗೆ ನೀರ್ಗುಡಿಸಲು ಸೂರಿಯನಂಬುಧಿಗಿಳಿದ (ಮೋಹತ. ೨೮-೪೦). **ನೀರುಕುಡಿಸು :** ೧. ಸಾಳೋ ನರಸಿಂಗರಾಯನು, ಕೂಹುಕೊಳ್ಳುತ್ತಿದ್ದ ಖಾಸಾಆನೆಯನ್ನು ದುರ್ಗದ ತಪ್ಪಲಲ್ಲಿರುವ ತಿಮ್ಮಣ್ಣನಾಯಕನ ಕೆರೆಗೆ ನೀರುಕುಡಿಸಲು ಹಿಡಿತಂದರು (ಚತ್ರಪಾ. ೧೧೧). ೨. (ಆಲಂ) ತೊಂದರೆಪಡಿಸು ; ಕಷ್ಟಕ್ಕೊಳಗು ಮಾಡು : ರೂಪಚಂದನು ನ್ಯಾಯಾಧೀಶನಿಗೂ ನೀರುಕುಡಿಸ ಬಲ್ಲ (ಜಮಿನ್ದಾ. ೧೫೩).

[ನೀರ್ + ಕುಡಿಸು1 (< ಕುಡಿಯಿಸು)]

ನೀರ್ಗುಡಿಸು2 (ಕ್ರಿ). ಪಿತೃತರ್ಪಣವನ್ನು ಕೊಡಿಸು ; ತಿಲಾಂಜಲಿಯನ್ನು ಕೊಡುವಂತೆ ಮಾಡು : ದವಿತಾರಿಯ ಭುಜಬಲವಿಕ್ರಮದಳವಿಗೆ ಮಚ್ಚಿ ಮಜ್ಜುಗುಡಿಸುವವೊಲನುಕ್ರಮದಿಂ ನೀರ್ಗುಡಿಸಿ ಯಥಾಕ್ರಮದಿಂ ಪದವಡಿಸಿ ಪಾರಲೌಕಿಕವಿಧಿಯಂ (ಶಾಂತಿಪು. ೪-೫೮).

[ನೀರ್ + ಕುಡಿಸು2 (< ಕೊಡಿಸು)]

ನೀರ್ಗುಡು 'ನೀರ್ಗೊಡು' ನೋ.

ನೀರ್ಗುತ್ತ (ನಾ). ೧. ಜಲಸಂಬಂಧವಾದ ರೋಗ ; ಜಲೋದರ : ನೀಂ ಪಂಡಿತಂ ದಿಟಮಾದೊಡೆ ನೀರ್ಗುತ್ತಕ್ಕೆ ಮರ್ದನುಸಿರ್ (ರಾಮಾಶ್ವ. ೨-೪). ೨. ಪಾಂತಿ : ಪಾಶ್ಚಾತ್ಯವೈದ್ಯದಲ್ಲಿ ಪಾಂತಿರೋಗ (ನೀರ್ಗುತ್ತ)ಕ್ಕೆ ಇನ್ನೂ ಸರಿಯಾದ ಮದ್ದು ತಯಾರಾಗಿಲ್ಲವೆಂಬುದನ್ನು ಅರಿತುಕೊಳ್ಳಬೇಕು (ಕನ್ನಇ. ೧೦೪). [ನೀರ್ + ಕುತ್ತ]

ನೀರ್ಗುಳ್ಳೆ, ನೀರುಗುಳ್ಳೆ (ನಾ). ೧. ನೀರಿನ ಮೇಲಿನ ಗುಳ್ಳೆ ; ಬುದ್ಬುದ : ನೀರ್ಗುಳ್ಳೆ ಗಾಳೀಸೊಡರ್ ಪರಿವೃತ್ತಿಪರ್ ಮರೀಚಿಕಾ ಜಲ ಜಲಾವರ್ತಾಕ್ಷರಂ ತೋಜುವೈಸಿರಿ ಪುಲ್ಲಗ್ರದ ತುಂತುಜ್ಯೆ (ಸೋಮೇಶ. ೯೦) ; ನೆನೆಯಲಶಕ್ತ ನೀರ್ಗುಳ್ಳೆಯಂತಿರುತಿಪ್ಪ ತನು ಮಲಭಾಂಡವಿದೇನು ಸುಖ (ಪುರಂದ. ೧-೪೬-೨). ೨. ನೀರು ತುಂಬಿಕೊಂಡಿರುವ ಗುಳ್ಳೆ,—ಬೊಕ್ಕೆ : ಕೆಲವು ವೇಳೆ ನೀರ್ಗುಳ್ಳೆಯ ಒಳಗಡೆ ರಕ್ತ ಸೋರುವುದುಂಟು (ಕಲಮೋ. ೫೮); ಕೆಂಪುಚುಕ್ಕೆಗಳು ಮೈಮೇಲೆ ಕಾಣಿಸಿಕೊಳ್ಳುತ್ತವೆ . . . ಕೆಲವೇ ಗಂಟೆಗಳಲ್ಲಿ ಅವು ನೀರ್ಗುಳ್ಳೆಯಾಗಿ ಮಾರ್ಪಡುತ್ತವೆ (ಕಲಮೋ. ೬೬). **ನೀರುಗುಳ್ಳೆ :** ೧. ನೀರುಗುಳ್ಳೆಯಂತೆ ತೋಜು ಅಡಗುವ ಅನಿತ್ಯಶರೀರದ ಭೋಗವು ನಿತ್ಯವೆಂದು ನಚ್ಚಿ . . . ಸುತ್ತುಹೋಗದಿರಣ್ಣಾ (ಅಖಂಡೇ. ೬೨-೧೪).

[ನೀರ್ + ಗುಳ್ಳೆ1 (< ಗುರುಳೆ)]

ನೀರ್ಗೆಂಪು (ನಾ). ತಿಳಿಗೆಂಪು ಬಣ್ಣ ; ತಿಳಿಯಾದ ಕೆಂಬಣ್ಣ ; ನಸುಗೆಂಪು : ನೀರ್ಗೆಂಪುತುಟಿಯಲ್ಲಿ ಸಪ್ಪೆ – ನಗೆ ಹರವುತಿದೆ ಬಿತ್ತಿರಿದ ಹಣತಿ ಹೊತ್ತಿದಂತೆ (ಗಂಗಾತ. ೬೧-೧೩). [ನೀರ್ + ಕೆಂಪು1]

ನೀರ್ಗೆಡಹು (ಕ್ರಿ). (ಮೈ ತೊಳೆಯಲು) ನೀರಿನಲ್ಲಿ ಬೀಳಿಸು,—ಉರುಳಿಸು : ಮಿತ್ರವಾಪುತ ಬೆನ್ನಟ್ಟಿ ನೀರ್ಗೆಡಹಿದ ಮತ್ತಗಜೇಂದ್ರ ಸೂತಿಯಲಿ ಎತ್ತಲೆಂದಱಿಯದೆ ಪರಿದಾಡುವಂತೆ ಕರ್ಗತ್ತಲೆ ತೀವಿತುರ್ವಿಯಲಿ (ಮೋಹಶ. ೧೪-೪). [ನೀರ್+ಕೆಡಹು(<ಕೆಡವು)]

ನೀರ್ಗೆದರ್ (ಕ್ರಿ). ನೀರನ್ನು ಕಲಕು,—ಕೆದಕು : ಮದಗಜಗಳು ಹೊಕ್ಕು ನೀರ್ಗೆದರ್ದ ಕೆರೆ ಕೋಣಗಳು ಪೊರಳ್ದ ಮಡು . . . ನೋಡಿರೆ ನುತೆ (ನಸಪೋ. ೧೬-೨೦). [ನೀರ್+ಕೆದರ್$_0$(<ಕೆದಱ್$_1$)]

ನೀರ್ಗೆರೆ (ನಾ). ನೀರಿನಿಂದುಂಟಾದ ಗೆರೆ,—ರೇಖೆ,—ಜಾಡು : ಅರಯೆ ಸೂಚಿಕುಂ ಗಿಳಿಗಳಿರ್ಪಗಕೋಟರದಿಂ ಜಗುಳ್ದ ನೀವಾರಮುಂ . . . ನಾರುಡೆಯಂಚಿನಿಂದಿಳಿದ ನೀರ್ಗೆರೆಯಾಂತ ತಟಾಕಮಾರ್ಗಮುಂ (ತಾಕುಂತ. ೬-೧೪). [ನೀರ್+ಗೆರೆ (<ಗೆಜಿ)]

ನೀರ್ಗೆಜಿ (ನಾ). ನೀರಿನಿಂದ ತುಂಬಿರುವ ಕೆರೆ ; ತಟಾಕ : ನೀಲಾಬ್ಜ ತಾವರೆ ನೆರೆದ ನೀರ್ಗೆಜಿ ಗಂಧಶಾಲಿ ಜೋತೊಲೆದ ಗದ್ದೆಗಳು . . . ವಿರಾಜಿಪುದು (ಭದಚ. ೬೫-೪೫). [ನೀರ್+ಕೆಜಿ]

ನೀರ್ಗೊಡ (ನಾ). ನೀರು ತುಂಬಿರುವ ಕೊಡ,—ಘಟ: ಮಟಿಯಂ ಬೆಸಗೊಳ್ವಾಗಳ್ ಮಟಿಯಾಕೃತಿ ಬೇಜಿ ತೋರ್ಪೊಡಂ ನೀರ್ಗೊಡನಂ ಪಿ(ಗ)ಳಿಪಿ(ಗ)ಳಿಸಿ ಸುರಿವೊಡಂ . . . ಮಟಿಯಂಕ್ಕುಂ (ಉಪ್ಪಸು. ೧-೪೨) ; ಕಿತ್ತಡಿ ನೀರ್ಗೊಡಮುಂ ಕೈವತ್ತಿದನವರೇಳ್ಗೆಗೊಳಿಪ ಕಾರಣದಿಂದಂ ಮತ್ತ ಮವಂ ನೆಗೆದಂ ಬಾನ್ಮುತ್ತ ಮರರಗುವರರಂ ಕರುತ್ತಿಂತೆಂದಂ (ಸೌನಂದ. ೧-೨೮). [ನೀರ್+ಕೊಡ$_2$]

ನೀರ್ಗೊಡು, ನೀರುಕೊಡು, ನೀರ್ಗುಡು (ಕ್ರಿ). ೧. ಮಡಿದವರಿಗಾಗಿ ನೀರನ್ನು ತರ್ಪಣ ಮಾಡು,—ಕೊಡು : ತನಗೆ ತಾನೆ ನೀರ್ಗೊಟ್ಟಪನೆಂಬಂತೆ ಸುರಿವ ನಿರಂತರಾಶ್ರುಪೂರಮುಂ (ಕಾದಂಉ. ೫೬೭). **ನೀರುಕೊಡು** : ೨. (ಕೈ, ಕಾಲು ತೊಳೆಯಲು ಅಥವಾ ಕುಡಿಯಲು) ನೀರನ್ನು ಕೊಡು : ಮೊದಲು ರತ್ನಪುರ ಭಾವನನ್ನು ಕರೆದು ನೀರುಕೊಟ್ಟರು (ಚಿಂಗಾಳ್ವ. ೧೦೫) ; ತಾನೇ ನೀರು ಕೊಟ್ಟು ಬರುವುದಕ್ಕೆ ಈಗೇಕೊ ನಾಚಿಕೆ (ಬೆಳುಸು. ೬೦). ೩. (ಕರಾ) ಸಮೂಲನಾಶ ಮಾಡು : ಅವನು ಬೆನ್ನಾಗಿ ನೀರುಕೊಟ್ಟ (ಡೂಢ). **ನೀರ್ಗುಡು** : ೧. "ನಿವಾಪಕ್ಕೆ ಪಿತೃತರ್ಪಣಂ—ಈ ೨ ನೀರ್ಗುಡುವುದು" (ಪಲಾಯು. ೧೧೫-೧೭) ; ಮುನ್ನೆ ಪರಶುರಾಮನೀ ಲೋಕದೊಳುಳ್ಳರಸುಮಕ್ಕಳೆಲ್ಲರುಮನಿರ್ಪತ್ತೊಂದುಸೂಟ್ಸರಂ ಪೇಟಿ ಪೆಸರಿಲ್ಲದಂತೆ ಕೊಂದು . . . ಅವರ ನೆತ್ತರ ಧಾರೆಯೊಳ್ ತೀವಿ ತನ್ನ ತಾಯುಂ ನೀರಿಟಪಲುಂ ತಾನುಂ ಪಿಂದು ತನ್ನ ತಂದೆಗೆ ನೀರ್ಗುಡಲುಮೆಂದು ಮಾಡಿದ ಶಮಂತಪಂಚಕಂಗಳೆಂಬಯ್ದು ಪೆರ್ಮಡುಗಳ ಕೆಲದೊಳೆಡೆಯ ಜಾಡು ಬೀಡಂ ಬಿಡಿಸಿ (ಪಂಪಭಾ. ೯-೧೬೪ ಪ) ; ತನ್ನ ತಾಯ್ಗೆ ನೀರಿಟಿಯಲುಂ ತಂದೆಗೆ ನೀರ್ಗುಡಲುಮೆಂದು ಮಾಡಿ (ಗದಾಯು. ೬-೨೮ ಪ). [ನೀರ್+ಕೊಡು$_1$]

ನೀರ್ಗೊತ್ತು (ನಾ). ನೀರಿರುವ ಸ್ಥಳ ; ನೀರಿನ ನೆಲೆ : ಮುಜಿವುದಾ ಶಿವಪುರದ ನಂದನತಟಾಕಾದಿ ನೀರ್ಗೊತ್ತುಗಳು (ಸುಪೇಪು. ೨೮-೬). [ನೀರ್+ಗೊತ್ತು]

ನೀರ್ಗೊರೆವಟ್ಟ (ನಾ). ಒಂದು ಪ್ರದೇಶದ ಹೆಸರು (?) : ಉದಿಚಿದೆಸೆ ಕೆಜೆಯನ್ನೀರ್ಗೊರೆವಟ್ಟ ಈಶಾನದೆಸೆ ಅರನೆಜಿ ಒಡಂ (ಎಇ. X (S), ಮುಳುನಾ. ೩೨೮-೫೨ ; ಸಂ. 650). [?]

ನೀರ್ಗೊಳ್ (ಕ್ರಿ). ೧. ನೀರನ್ನು ತೆಗೆದುಕೊಳ್ಳು ; ನೀರು ಕುಡಿ : ತಡಿಯೊಳ್ ನೀರ್ಗೊಂಬ ಕಾಡಾನೆಗಳಂ . . . ಮೇಲ್ಮಾಯ್ವ ಮುತ್ಸಱಂಗಳಂ ಪೆಂಪಿದಿರೊಪ್ಪಿತ್ತಲ್ಲಿ ಛೇನಸ್ಮಿತೆಯೆನಿಸುವ ಪೊಚ್ಚಂ ಪೊದ ಕ್ಕೊಪ್ಪದಿಂದಂ (ರಾಜಶೇ. ೬-೨೩). ೨. ನೀರಿನಿಂದ ಕೂಡಿರು,—ತುಂಬಿರು : ಕಂಡೆಯೋ ನೀನೆಲೆ ನವಿಲೆ ನೀರ್ಗೊಂಡ ಮುಗಿಲಂದದ ಮುಕುಂದನಖಂಡಸುಖಮಯಮೂರ್ತಿಯನು (ನಿಭಾಗ. ೧೦-೧೨೨-೨೩). [ನೀರ್+ಕೊಳ್$_1$]

ನೀರ್ಗೋಡು (ನಾ). ಹೆಚ್ಚಾದ ನೀರು ಹರಿದು ಹೋಗುವ ಭಾಗ ; ಕೋಡಿ : ಕೂಡೆ ಸಮಸ್ತ ವಸ್ತು ಶತಸಾರಸಮೃದ್ಧಿಯಿನೊಪ್ಪುತಿರ್ಪುದಾ ನಾಡು ದಿವಕ್ಕೆ ತೋಡು ಕುಸುಮೇಷುಗೆ ಬೀಡು ವೃಷದ್ವಿಷಕ್ಕೆ ತಾಯ್ನಾಡು ಸಯುಕ್ಕೆ ಪಾಡು ವಿಭವಕ್ಕಮುರ್ದೂಡು ಸುಪಾಮೃತಕ್ಕೆ ನೀರ್ಗೋಡು ತನುಕ್ಕೆ ನೀಡು ಸಯನಕ್ಕೆಳದಿಂಗಳ ಕಾಡಿದಂಬಿನಂ (ಪುಷ್ಪಕ. ೯-೧೪). [ನೀರ್+ಕೋಡು$_7$]

ನೀರ್ಗೋಳಿ 'ನೀರುಗೋಟು' ನೋ.

ನೀರ್ಚೆಂಡು (ನಾ) =ನೀರ್ಗಂತುಕ : ನೀರ್ಚೆಂಡಂ ಕಯ್ಗೊಂಡುಜೆ ಸಾರ್ದಡೆ ಕಡು ನೊಂದು ಮೂರ್ಛೆಯಿಂದಿರೆಯೋರ್ವಳ್ (ಪಮ್ಮರ. ೪-೨೯). [ನೀರ್+ಚೆಂಡು (<ಸೆಂಡು)]

ನೀರ್ಚೆಲ್ಲಾಟ (ನಾ). ನೀರಿನಲ್ಲಿ ವಿನೋದವಾಡುವುದು; ನೀರಾಟ; ಜಲಕೇಳಿ : ನೀರ್ಚೆಲ್ಲಾಟಕ್ಕಗಿದುವಿದರ್ಭದೆ ಕಾಂತಾಳಿ ಕಡೆಗೆ ಸಾರ್ದುದು ಬೇಗಂ (ಪಮ್ಮರ. ೪-೨೯). [ನೀರ್+ಚೆಲ್ಲಾಟ$_2$ (<ಜಲ್ಲಾಟ$_2$)]

ನೀರ್ಜಾಡಿಸು 'ನಿರ್ಧಾಟಿಸು' ನೋ.

ನೀರ್ಜೊಂಪೆ (ನಾ). ಕಾರಂಜಿಮನೆ ; ಜಲಗೃಹ ; ಧಾರಾಗೃಹ : ಅದು ನಿದಾಳಕ್ಕೆ ಪರಿಭವಸ್ಥಾನಮುಂ ಶೀತಕಾಲಕ್ಕೆ ಕೈದಾಣಮುಂ ಹಿಮ ಶೈಲಕ್ಕೆ ಸಹೋದರಮುಮೆನಿಸಿದ ನೀರ್ಜೊಂಪಮಂ ಪೊಕ್ಕು ಶಿಶಿರ ಶಿಲಾತಲದೊಳ್ಮಿಯ್ಯನಿಕ್ಕಿ (ಕಾದಂಉ. ೪೬೦). [ನೀರ್+ಜೊಂಪ$_1$]

ನೀರ್ಡೊಳ್ಳು (ನಾ). ಹೊಟ್ಟೆಯಲ್ಲಿ ನೀರು ತುಂಬಿಕೊಳ್ಳುವ ಒಂದು ಬಗೆಯ ರೋಗ ; ಜಲೋದರ : ಒಮ್ಮೊಮ್ಮೆ ಹೊಟ್ಟೆಯಲ್ಲಿ ನೀರು ತುಂಬಿಕೊಂಡು ನೀರ್ಡೊಳ್ಳು (ಅಸ್ಸೈಟಸ್) ಆಗಲೂಬಹುದು (ಕವಿಕೋ. I, ೪೨೭). [ನೀರ್+ಡೊಳ್ಳು$_1$ (<ಟೊಳ್ಳು)]

ನೀರ್ತರಿಸು (ಕ್ರಿ). ನೀರನ್ನು ಹೊತ್ತು ತರುವಂತೆ ಮಾಡು ; ನೀರು ಹೊರುವ ಕೆಲಸ ಮಾಡಿಸು : ನಿವುಡೆಯರೆನಿಸಿದ ವೀರರ ಮೂಗಿಗೆ ಕವಡೆಯ ಕಟ್ಟಿ ನೀರ್ತರಿಸಿ ದವುಡೆ ಜೇಗಟೆ ಮಲಹರಿಯ ಜಾಡಿಸಿ ಕೊಂಬ ಪ್ರವುಡೆಯರಿರ್ದರಿಕ್ಕೆಲದಿ (ಮೋಹಶ. ೫೦-೨೯). [ನೀರ್+ತರಿಸು$_1$]

ನೀರ್ತೆಗೆ 'ನೀರ್ದೆಗೆ' ನೋ.

ನೀರ್ತೋರಿಸು (ಕ್ರಿ). (ಎತ್ತು ಮುಂತಾದುವುಗಳಿಗೆ) ನೀರನ್ನು ಕುಡಿಸು : ದನಕ್ಕೆ ನೀರ್ತೋರಿಸಬೇಕು (ಡೂಢ). [ನೀರ್+ತೋರಿಸು (<ತೋಱಿಸು)]

ನೀರ್ದಂದಲ್ (ನಾ). ನೀರಿನ ಹನಿ ; ತುಂತುರು ; ಶೀಕರ : ಅವಗಾಹಂಗೈದು ಪೋದದ್ರಿಜಕರಿಗಳ ಕೈದುಂತುಜಾಂ ಕಾಯದಿಂದಂ ಕವಿದತ್ತಂ ಪೊಕ್ಕು ನೀರೊಳ್ ಬೆರಸಿ ಬಸಿವ ನೀರ್ದಂದಲಿಂ ಗಲ್ಲವುಣ್ಗಳ್ ಕವಿವನ್ನಂ ತಿಂಬ ಪೆರ್ದುಂಬಿಗಳನಿರಿಸುತುಂ ಕೊಲ್ಲದೀಡಾಡಿದುತ್ಕೃರವ ಕಂಜಸ್ರಾಯಪುಷ್ಪಪ್ರಕರದ ಪುದುವಿಂ ಮೆಲ್ಲಿತಾದತ್ತು ಮಾರ್ಗಂ (ಲೀಲಾವ. ೬-೬೦). [ನೀರ್+ತಂದಲ್]

ನೀರ್ದಡಿ (ನಾ). (ನದಿಯ) ದಡ ; ತೀರ : ನದುಬಾನಂ ರವಿ ಪತ್ತೆ ಭೂಸುರವರಂ ಕಂಡೊಯ್ಯನಲ್ಲಿದ್ದ ನೀರ್ದಡಿಯಂ ಸಾರ್ದು ಕಡಂಗಿ ನಿತ್ಯ ವಿಧಿಯಂ ಮಾಡಲ್ಕೆ (ಶ್ರೀಮಹಾ. ೧೦-೫೯). [ನೀರ್+ತಡಿ$_2$]

ನೀರ್ದಳಿ (ಕ್ರಿ). ನೀರನ್ನು ಚಿಮುಕಿಸು,—ಸಿಂಪಡಿಸು : ಮಗ ಮಗಿಸುತ್ತುಮಿರ್ಪ ಮೃಗನಾಭಿಯ ನೀರ್ದಳಿವಲ್ಲಿ ಕಂಪನಾಳ್ದುಗುಟ್ಟಲರುತ್ತುಮಿರ್ಪ ಪದದೊಳ್ ಪದವಟ್ಟು ಪೊದಟ್ಟು ತೋರಮಲ್ಲಿಗೆಯ ತುಱುಂಬು . . . ಒಪ್ಪಿರಲ್ (ಪಂಪಭಾ. ೭-೮೮) ; ಆರಸಿಯರ ತನು ಶ್ಯಾಮಕಾಗ್ರಂಗಳೊಳ್ ಸ್ನೇಹವಶಾನಂಗಾಗ್ನಿಯಂ ನೀರ್ದಳಿದು ನದಿಪುವಂತಾದನಂಭೋದಲೀಲಂ (ಶಾಂತಿಪು. ೮-೩೧) ; ಕೋಡಗದ ಕೆಯ್ಯ ಮಾಲೆಗೆ ಬಾಡಿರ್ದಪುದೆಂದು ಬಱಿದೆ ನೀರ್ದಳಿವಂದಂ (ಅನಂಪು. ೯-೨೨) ; ನಿಂದ ಠಾವಿಂಗೆ ನೀರ್ದಳಿವರಯ್ಯ ಕುಳಿತ ಠಾವಿಂಗೆ ಹೋಮವನಿಕ್ಕಿಸುವರಯ್ಯ (ಘನವ. ೯-೨೨) ; ಬಳಕಣಕಲಿತದಳಂ ನೀರ್ದಳಿದಿಟ್ಟಿಲೆಯಾಗೆ ನಳಿನ ಕೆಲದಟ್ಟಗಳಿಟ್ಟಳೆನಿಸೆ ವಿಕಚಾಬ್ಜಂಗಳ್ಕೊಳನೆಸೆದುದು ರಾಜಹಂಸ ನೌತಣದೆಡೆವೋಲ್ (ರಾಜಶೇ. ೧೨-೨೨). [ನೀರ್+ತಳಿ$_1$]

ನೀರ್ದಳಿಪೆ (ನಾ). ನೀರನ್ನು ಚಿಮುಕಿಸುವಿಕೆ,—ಸಿಂಪಡಿಸುವಿಕೆ ; ನೀರಿನ ಚಳೆಯ : ಘನತರಮಾದ ಕತ್ತುರಿಯ ನೀರ್ದಳಿಪಂ . . . ಮಾಲೆಗೊಂಡ ಮಣಿದೋರಣಮೆಂಬಿವು ಬೀದಿಬೀದಿಯೊಳ್ ಮನೆಮನೆಯೊಳ್ ವಿರಾಜಿಸೆ ವಿರಾಜಿಸುತಿರ್ದುದು ತತ್ಪುರಾಂತರಂ (ಜಗವಿ. ೯-೯೬) ; ತೊಳಪ ಪೊಸ ಕತ್ತುರಿಯ ನೀರ್ದಳಿಪಂ ಕಡೆಯಿಲ್ಲದೆಸೆವ ಮುತ್ತಿನ ಕಡೆ (ಕುಸುಮಾ. ೨-೯೬) ; ಗುಡಿಯಿಂ ತೋರಣದಿಂದ ನೀರ್ದಳಿಪದಿಂ ಮೇಲ್ಗಟ್ಟಿನಿಂ . . . ಚೆಲ್ವಾಯ್ತು ರಾಜಾಲಯಂ (ಪುಣ್ಯಾಸ್ರ. ೩-೪೬). [ನೀರ್+ತಳಿಪ]

ನೀರ್ದಾಣ (ನಾ). ನೀರಿರುವ ಸ್ಥಳ ; ಕೆರೆ, ಕೊಳ, ಜಲಾಶಯ ಮುಂತಾದುವು : ಬೀಡು ಬಿಡುವಿಂಬು ಕದಳಿ ತೆಂಗಿನ ತಾಣಂ ಜಾಣಂ ನೀರ್ದಾಣಮೆಂದೆಡೆಯಱಿದುಂ ಮಾಡಲ್ ಮಾಡಿಸಲ್ ಪಡೆಮೆಚ್ಚೆ ನೀಂಬಲ್ಲೆ (ಪಂಪಭಾ. ೫-೪೧) ; ವನಚರರೆಯ್ತಂದು ನಿಂದು ನೀರ್ದಾಣದೊಳೊಗ್ಗಿನ ಮರದ ಮಱೆಯೊಳೆರೆ ಮೆಲ್ಲನೆ ಬಂದತ್ತೊಂದು ಸೊರ್ಕಿದೆಕ್ಕಲನಾಗಳ್ (ಗಿರಿಕ. ೧-೯೯) ; ಹಂಸೆಗಳಾಡಿದವು ನೀರ್ದಾಣದೊಳು (ಸಾಳ್ವಭಾ. ೪-೨೬); ಅಂಬಂ ಬಿಡು ನೀರ್ದಾಣಂಗಳೊಳ್ ನಿಲ್ . . . ಎಂಬಬ್ಬರಂ ಪರ್ಬಿತೆತ್ತಂ (ಶಬಶಂ. ೩-೪೯); ಒಮ್ಮೆ ಅವನು ವಿನಯವತಿಗಾಗಿ ನೀರ್ದಾಣವನ್ನು ಹುಡುಕುತ್ತ ಹೋಗಿ ಅವಳಿಂದ ಅಗಲಿ ವನವನ್ನು ಸೇರಿ ಕಷ್ಟವನ್ನು ಅನುಭವಿಸಿದನು (ತಪನಿ. ೫೫). [ನೀರ್+ತಾಣ]

ನೀರ್ದಾರಿ, ನೀರುದಾರಿ (ನಾ). ೧. ನೀರಿನ ಹರಿವು,—ಪ್ರವಾಹ : ಮಿಂಚಿನ ಬೆಳಕಿಗೆ ಮಿಂಚುತ ಹರಿದಾ ಕರ್ವೊನಲಿನ ನೀರ್ದಾರಿಯನು ನೋಡಿದನೆವೆಯಿಕ್ಕದೆ (ಅಗ್ನಿಹಂ. ೭೩-೭೨). **ನೀರುದಾರಿ : ೨.** ನೀರು ಹರಿಯಲು ಮಾಡಿರುವ ಮಾರ್ಗ,—ದಾರಿ : "ಭ್ರಮಾಃ, ಜಲನಿರ್ಗಮಾಃ—೨ ನೀರು ಹರಿಯುವುದಕ್ಕೆ ತಕ್ಕ ಹಾಗೆ ಕಟ್ಟಲ್ಪಟ್ಟ ತೂಬು, ಬಚ್ಚಲು, ಮೊಹರಿ, ನಾಲೆ, ಕೋಡಿ ಮುಂತಾದವುಗಳ ಹೆಸರುಗಳು . . . ಅಂದರೆ ನೀರು ಹರಿಯುವ ಹಾದಿ, ನೀರುದಾರಿ" (ಸಿದ್ಧಾಂತಿ.೬೯). **೩.** ಹಡಗು ಪ್ರಯಾಣ ಮಾಡುವ ಮಾರ್ಗ ; ಜಲಮಾರ್ಗ. **೪.** ಒಂದು ಬಗೆಯ ತೆರಿಗೆ : ನೀರುದಾರಿ ನಿಧಿ ನಿಕ್ಷೇಪ ಜಲ ಪಾ[ಷಾ]ಣ ಅಕ್ಷೀಣಿ ಆಗಾಮಿ ಸಿದ್ಧ ಸಾಧ್ಯ ಸಹಿತವಾಗಿ . . . ಧಾರಾಪೂರ್ವ್ವಕವಾ[ಗಿ] ಮುಲವ ಎಱದು ಕೊಟ್ಟರೂ (ಕಇ. I, ೫೩-೨೦ ; 1433) ; ಚತುಸ್ಸೀಮೆಗೆ ಬಂದ ಮಕ್ಕಿ ಹಕ್ಕಲು ಕಾನು ಕಾಡಾರಂಭ ನೀರುದಾರಿ ನಿಧಿ ನಿಕ್ಷೇಪ ಅಕ್ಷೀಣಿ ಆಗಾಮಿ ಸಿದ್ಧ ಸಾಧ್ಯ ಮುಂತಾದ ತೇಜಮಾನ್ಯಗಳನುಳ ಈ ಕುಳಸ್ಥಳಂಗಳ . . . ನಾಲು ಬಿಟ್ಟು ಕೊಟ್ಟ ಧರ್ಮ್ಮಶಾಸನದ ಪಟ್ಟಿ ಇಂತಪ್ಪುದು (ಎಕ. VIII, ಸಾಗರ. ೧೬೪-೪೮ ; 1491). [ನೀರ್+ದಾರಿ$_1$]

ನೀರ್ದಾರೆ (ನಾ). ನೀರಿನ ಸುರಿತ ; ಜಲಧಾರೆ : ನುಗ್ಗಿಬಂದು, ನೀರ್ದಾರೆಗಳ ಓಲೆಗೊಡೆಯನ್ನು ರತ್ನಗಂಬಳಕ್ಕಿಳಿಹಿ ಬಿಟ್ಟು ಉತ್ತರಿಗೆಯನ್ನು ಬಿಚ್ಚಿ ಕಾಲೊರಸಿಕೊಳ್ಳುತ್ತಿರುವನು (ಮಂತ್ರಶ. ೩೦-೧೯). [ನೀರ್+ದಾರೆ$_1$]

ನೀರ್ದಿಗುರಿ (ನಾ). ನೀರಿನ ಚಕ್ರ ; ಸುಳಿ ; ಜಲಾವರ್ತ : ಸುಱಿಗಳ್ ನೀರ್ದಿಗುರಿಯವೋಲ್ ಸುಱಿದುವು (ಪಂರಾಮಾ. ೧೨-೯೦) ; ಉಲ್ಲೋಲಕಲ್ಲೋಲವಾಗಿರುವ ನಡುಗಡಲಲ್ಲಿ ಬೆಟ್ಟದೆತ್ತರದ ಬಳವತ್ತರಂಗ ಸಂಘಕ್ಕೆ ಸಿಲ್ಕಿ, ಬಿರುಗಾಳಿಗೆ ನೀರ್ದಿಗುರಿಯಂತೆ ಘಿರ್ರನೆ ತಿರುತಿರುಗುತ್ತ (ಬೆಟ್ಟಅ. ೨೧೫-೨೩) ; ಘೂರ್ಣಿಸುವ ನೀರ್ದಿಗುರಿಗೊಳಗಾದ ಬಣಗು ತೃಣಕಣದಂತೆ (ಚಿತ್ರಾಂಗ. ೫೨-೧೪೨೩).

[ನೀರ್+ತಿಗುರಿ]

ನೀರ್ದಿಡ್ಡಿ (ನಾ). ನೀರನ್ನು ಹೊರಗಿನಿಂದ ತರಲು ಜನರು ಹೋಗಿ ಬರುವುದಕ್ಕಾಗಿ, ಕೋಟೆಯಲ್ಲಿ ಮಾಡಿರುವ ಸಣ್ಣ ಬಾಗಿಲು : ಕೋಟೆಯ ಹೊರಗೆ ನೀರ್ದಿಡ್ಡಿಯ ಬಡಗಣ್ಗೆ ಹಿರಿಯಾಲದ ಮರದ ತೂರಲ್ಗೊಂಬಿನ ಇರುಂಬಿನೊಳಗೆ ಚುಂಚನ ಶವವು ಗೋಣಿಂದ ನೇಲುತ್ತಿದೆ (ಬೆಟ್ಟಅ. ೧೬೨-೧೦). [ನೀರ್+ದಿಡ್ಡಿ]

ನೀರ್ದಿತ್ತಿ, ನೀರುತಿದಿ (ನಾ). ೧. ನೀರನ್ನು ತುಂಬುವ ಚೀಲ : ಪದಪಿಂ ಕಟ್ಟರ್ದುಡಿದೊವಲೊದವಿದ ನೀರ್ದಿತ್ತಿ ಕಲ್ಲಿ ಸುತ್ತಿದ ಪುಲಿವಾಲದ ತಲೆಸುತ್ತುಗಳೆಸೆಯಲ್ಕ ಧಟಂದಂ ನೆರೆದು ಲುಬ್ಧಕರ್ ಬರುತಿರ್ದರ್ (ತ್ರಿಪುವಿ. ೨೭-೪೪). **ನೀರುತಿದಿ : ೨.** "ಕವಾಟವುಳ್ಳ ಪಾತ್ರೆಯನ್ನು ನೀರಿನಲ್ಲಿ ತಲೆಕೆಳಗಾಗಿ ಇಟ್ಟು ಅದನ್ನು ಏರಿಳಿಸುವುದರಿಂದ ಗಾಳಿಯನ್ನು ಒಳಸೇದುವಂತೆಯೂ ಹೊರದೂಡುವಂತೆಯೂ ಮಾಡಲಾಗುವ ಒಂದು ಬಗೆಯ ತಿದಿ : ನೀರುತಿದಿ" (Water-bellows. ಇಂಕನಿ). [ನೀರ್+ತಿತ್ತಿ(<ತಿದಿ)]

ನೀರ್ದುಂಬು, ನೀರುತುಂಬು (ಕ್ರಿ). ೧. ನೀರನ್ನು ತುಂಬು,—ಭರ್ತಿಮಾಡು : ಚೆಂಬೊನ್ನಂಡೆಯೊಳಂ ನೀರ್ದುಂಬಿಡೆಯರಸಂಗೆ ಸತಿಯರರಸಂ ನೀರಂ ತುಂಬಿ ಜಳಯಂತ್ರದಿಂದಿಡೆಯಂಬುಜಲೋಚನೆಯರಂಜಿ ಪೋದರ್ ಕಡೆಗಂ (ಹಮ್ಮೀರ. ೪-೨೬). **೨.** ರಸದಿಂದ ಕೂಡಿರು ; ರಸಭರಿತವಾಗು : ಮಿಗೆ ಪಸುರಿಡಿದ ಕಳಿಕೆ ತುಱುಗಿ ಕಾವನ ಕೂರ್ಗಣಿಗಳ ಮೂಡಿಗೆಗಳಂತಿರೆ ಬಿರಿದ ಪೊಂಬಾಳೆ ನೆಗಪಿ ಸೇರುವೆಗೆಯ್ದು ಬಾಳ್ಗಳೇಳ್ಗೆಯ ಬೀಱೆ ನೀರ್ದುಂಬಿಯುಳ್ಳರಲ್ದು . . . ಕೌಂಗೆಸೆದುದು (ಪದ್ಮರಾ. ೮-೩೪). **ನೀರುತುಂಬು : ೧.** ಮರುದಿವಸ ಅಭ್ಯಂಗ ಸ್ನಾನಕ್ಕಾಗಿ ನೀರುತುಂಬುವುದು . . . ಗೃಹಾಲಂಕಾರ ಇವೇ ಈ ದಿನದ ಕಾರ್ಯಗಳು (ಭಾಹಬ್ಬ. ೧೪೫). **೩.** ನೀರು ತುಂಬಿಕೊಳ್ಳು,—ಭರ್ತಿಯಾಗು : ದುಃಖದಿಂದ ಗೋವಿಂದರಾಯರ ಕಣ್ಣುಗಳಲ್ಲಿ ನೀರು ತುಂಬಿತು (ಬಾಳಿಗಿ. ೫೯).

ನೀರುತುಂಬುವ ಹಬ್ಬ = (ಮನೆಯವರೆಲ್ಲರು ಅಭ್ಯಂಜನ ಸ್ನಾನ ಮಾಡಲು) ನರಕಚತುರ್ದಶಿಯ ಹಿಂದಿನ ದಿನ ಹಂಡೆಗಳನ್ನು ಶುಭ್ರಗೊಳಿಸಿ, ಅಲಂಕರಿಸಿ, ನೀರನ್ನು ತುಂಬಿ ಆಚರಿಸುವ ಹಬ್ಬ : ನೀರು ತುಂಬುವ ಹಬ್ಬದ ದಿವಸ ಅಳಿಯ ಮಗಳು ಬಂದರು (ರೂಢಿ). [ನೀರ್+ತುಂಬು$_1$]

ನೀರ್ದುಮುಕು (ನಾ). ಜಲಪಾತ ; ತಡಸಲು : ನಡೆಯುತಿರಲಕ್ಕಟಾ ಕರಡಿ ಪುಲಿಗಳ ಕೂಗುಮೆಲರುಣಿಯ ಫಣಿಯ ಸುಯ್ ಕೇಳ್ದತ್ತು ನೀರ್ದುಮುಕುದನಿವೆರಸಿ (ತ್ರೀರಾಮಾ. ೩೮೦-೪೯೨). 'ನೀರ್ಬೀಳ್' ಪರಾ. [ನೀರ್+ದುಮುಕು(<ದುಮ್ಮಿಕ್ಕು)]

ನೀರ್ದುಳುಕು (ಕ್ರಿ). ೧. (ಜಲಕ್ರೀಡೆಯಲ್ಲಿ) ನೀರನ್ನು ಎರಚು,—ಸಿಂಪಡಿಸು : ತಮ್ಮೊಳ್ ಸರಸಕಳವಟ್ಟ ಸಖಿಯರರಿ ಸರಿಸಮಾಗೆನುತೆ ನೀರ್ದುಳುಕಿದರ್ ಪೊಳಕಿದರ್ ಮುಳುಕಿದರ್ ಕಲಕಿದರ್ ಕೊಳದೊಳ್

(ಚಿಒಪು. ೪೫-೫೪). ೨. ಅರ್ಘ್ಯವನ್ನು ಕೊಡು : ಸಬಳದೆ ಸಂಜೆ ವಾರಿಸಿದಪೆಮೆಂದು ನಿಬಂಧದೆ ಕರ್ಚಿ ಕಾಲ್ಗಳಂ. ದಿವಸಕರಂಗೆ ನೀರ್ದುಳಿ [ಳು]ಕಿ (ಸಮಪ. ೧೪-೨೪). [ನೀರ್ + ತುಳುಕು (<ತುಳುಂಕು$_1$)]

ನೀರ್ದೆಗೆ, ನೀರುದೆಗೆ, ನೀರ್ತೆಗೆ (ಕ್ರಿ). ೧. (ಜೀರುಕೊಳವಿ ಮೊದಲಾದುವುಗಳಿಂದ) ನೀರನ್ನು ಮೇಲಕ್ಕೆ ತೆಗೆ,—ಸೆಳೆ : ತೊಳಗುವ ಪೊನ್ನ ಜೀರ್ಕೋಟವಿಯಗ್ರಮನೊಂದಿನಿತಟ್ಟಿ ಭಂಗಿ ಸಂಗಳಿಸಿರೆ ಮೇಲೆ ನೀರ್ದೆಗೆವ ಕೋಮಳೆ . . . ರತಿಯೆಂಬ ಡಂಬರಂ ಬಳೆವಿನ ಮೊಪ್ಪಿದಳ್ (ಚಂದ್ರಪು. ೬-೧೩೮). ೨. ನೀರಿಲ್ಲದಂತಾಗು ; ಬತ್ತು ; ಒಣಗು ; ಆರು : ಅವಳೀಸೆ ಕಾಯ್ದು ನೀರ್ದೆಗೆದ ಸರೋವರಂಗಳಿವು (ಚಂದ್ರಪು. ೫-೧೩೩) ; ನೀರ್ದೆಗೆದು ಬೆಂಚೆಗಳೊಳ್ ಕೆಸಜೊಜೆ (ಕಬ್ಬಿಕಾ. ೫೩) ; ಉಬ್ಬರಿಸಿದುದು ಢಗೆ ಗೋನಾಳಿ ನೀರ್ದೆಗೆಯೆ ನುಡಿಯಲಾಜೆನು ಮಕ್ಕಳಿರ ನೀರಡಸಿದೆನು (ಕುಪ್ಯಾಭೀ. ೧೦-೨೪) ; ಇಳೆ ಕಾಯ್ಪೇಜುದು ದಬ್ಬಿ ನೀರ್ದೆಗೆದುದು . . . ಅರಣ್ಯಂ ಬೆಂದುದಾ ಗ್ರೀಷ್ಮದೊಳ್ (ರಾಜಶೇ. ೫-೩೬). **ನೀರುದೆಗೆ :** ೨. ಭೂರಿಭಯತಾಪದಲಿ ತಾಳಿಗೆ ನೀರುದೆಗೆದುದು ತುಟಿಯೊಣಗಿ ಸುಕುಮಾರ ಕಣ್ಣೆವೆ ಸೀಯೆ ಕರದಲಿ ಮುಚ್ಚಿದನು ಮುಖವ (ಕುಪ್ಯಾವಿ. ೬-೯). **ನೀರ್ತೆಗೆ :** ೨. ಪರೆಯೆ ಮುಗಿಲ್ ಜಲಕ್ಕನಿರಲೆಣ್ಡೆಸೆ ನೀರ್ತೆಗೆಯಲ್ಕೆ ಬೆಳ್ಕಳಲ್ದೆರೆಗಳನಪ್ಪುಕೆಯ್ಯೆ ತೊಜೆ . . . ಬಂದುದತಿನಿರ್ಮಲನೀರದವಪ್ಪ ಶಾರದಂ(ಕಾದಂಉ. ೬೩೨). [ನೀರ್ + ತೆಗೆ$_1$]

ನೀರ್ದೆರೆ (ನಾ). ನೀರಿನ ಅಲೆ,—ತರಂಗ : ಮೆಯ್ಸಿರಿ ಕರೆಗಣ್ಮಿ ಪಾಯ್ವ ತಿಳಿನೀರ್ದೆರೆಯಂತಿರೆ ಶಾರ್ಙ್ಗಭೃತ್ಸುಧಾಸರಸಿಯೊಳಟ್ಟು ತೇಲ್ದು ತಣಿದಾಂ ಕಳೆವೆಂ ಭವದಾವತಾಪಮಂ (ಚಕವಿ. ೧-೪); ಆ ಖಳನು ವೊಂದು ವಿಸಿಖಮ ತೊಟ್ಟುಯೆಸೆಯೆ . . . ನೀರ್ದೆರೆಯನೆಚ್ಚಂತೆ ಶರ ನುಸುಳಿ ಪೋಗೆ (ನವನೋ. ೧೨-೭೪). [ನೀರ್ + ತೆರೆ$_4$]

ನೀರ್ದೇರ್, ನೀರ್ದೇರು (ನಾ). ಮೋಡ ; ಮುಗಿಲು : ನೀರ್ದೇರ್ [ಪಾತಾಂ. ನೀರ ತೇರ್], ಮುಗಿಲ್—ಈ ೨ ಮೇಘಂ" (ಕಶಸಾ. ೪-೪೨) ; ನೀರ್ದೇರ್ ಗಾಳಿ ಮಳೆ ಸೋನೆ ಕಳಿವಲರ್ . . . ಪರ್ವತಂ ಮರುವಿವಾದಿಗಳೆಲ್ಲಮಾವಾವವಸ್ಥೆಗಳ್ಗಂತೆಂತು ಪಕ್ಕಾಗಿ (ಸಂಸಪ. ೨೯-೧೩೪). **ನೀರ್ದೇರು :** "ನೀರ್ದೇರೆನಲ್ ಮೇಘ" (ಕಶರ. ೫೬). [ನೀರ್ + ತೇರ್$_2$]

ನೀರ್ದೇರು 'ನೀರ್ದೇರ್ ನೋ.

ನೀರ್ದೊಣೆ, ನೀರುದೊಣೆ (ನಾ). ೧. ನೀರು ನಿಂತಿರುವ ಸ್ಥಳ. ೨. ನೀರಿನ ದೋಣಿ,—ಬಾನಿ : ಸುರಗಿರಿಯೆ ಮಜ್ಜನದ ಪೀಠವು ಸುರಪ ಮಜ್ಜನವಳ್ಳನಮೃತಾಂಬುಧಿಯೆ ನೀರ್ದೊಣೆಯು (ಸಾಳ್ವಭಾ. ೩೩-೬೩). ℙ 'ನೀರ್ದೋಣಿ' ಎಂಬುದರ ಅಪಲಿಖಿತವಿರ ಬಹುದು. **ನೀರುದೊಣೆ :** ೧. ಸಮುದ್ರದ ಇಳಿತ ಎಷ್ಟೆ ಕಡಿಮೆ ಯಾಗಿದ್ದರೂ ಹವಳದ ಕೊರಕಲುಗಳಲ್ಲಿ ಹೆಜ್ಜೆಯಿಂದ ಮೊಳಕಾಲಾಳದ ನೀರುದೊಣೆಗಳು ನಿಂತಿರುತ್ತವೆ (ಹಸುಹೊ. ೩೪೨). [ನೀರ್ + ದೊಣೆ$_1$]

ನೀರ್ದೊಳೆ (ಕ್ರಿ). ನೀರಿನಿಂದ ತೊಳೆ,—ಶುದ್ಧಮಾಡು : ನೀರಿಂ ತೊಳೆದಂ, ನೀರ್ದೊಳೆದಂ (ತಬ್ದಾಸು. ೨೯೨ ಪ್ರಯೋ). [ನೀರ್ + ತೊಳೆ$_1$]

ನೀರ್ದೊಜೆ (ನಾ). ನೀರಿನ ಪ್ರವಾಹ : ಅಂತು ವಿಯಚ್ಚರರಾಜನಾ ದಂದಿನ ವಿದ್ಯಾದೇವತೆಗಳ್ ಬಯ್ತಿಟ್ಟಂಗೆ ಪುಟ್ಟಿ ಕೊಳಿಪ ನಿಧಿಗಳಂತೀ ಭವದೊಳ್ ಎನಗೆ ಬೆಸಕ್ಕೆ ನೀರ್ದೊಜೆಗಳಾಗಿ ಬಂದು ನಿಂದುವು (ಶಾಂತಿಪು. ೨೮೬೫ ವ) ; ಪುಳಕದ ನೆವದಿಂದ ಪೊಣ್ಮುವ ಹರ್ಷದ ಬೆಳೆಗೈಗೆ ನೀರೆಜೆವಂತೆ ತುಳುಕುವ ಸೊಗದಾಲಿ ನೀರ್ದೊಜೆಯನು ತಂದಿಳುಪುತವನ ನಿಟ್ಟಪಳು (ಹದಿಬ. ೭-೪೪). [ನೀರ್ + ತೊಜೆ$_2$]

ನೀರ್ದೋಣಿ (ನಾ). ನೀರು ತುಂಬುವ ಅಗಲವಾದ ತೊಟ್ಟಿ,—ಕೊಪ್ಪರಿಗೆ : ಮಜ್ಜನಪ್ರದೇಶಕ್ಕೆ ಮಜ್ಜನೋಪಕರಣ ಸಂಪಾದನವ್ಯಗ್ರ ಪರಿಜನಂಬೆರಸು ಬಂದು ನೀರ್ದೋಣಿಯೊಳೋಲಾಡಿ ಮಜ್ಜನಪೀಠ ಮನಲಂಕರಿಸಿದಾಗಳ್ (ಕಾದಂಪೂ. ೭೦). [ನೀರ್ + ದೋಣಿ$_3$]

ನೀರ್ದೋಜು (ಕ್ರಿ). ತೊಳೆ ; ಪ್ರಕ್ಷಾಲಿಸು : ಮುಡಿಯಂ ಕಟ್ಟಳು ಮುದ್ದುಗೆಯ್ದು ಮೊಗಮಂ ನೀರ್ದೋಜಳ್ . . . ಕಾಮನಂಬಿಂಗೆ ಸಂದಡಿಯಾದಳ್ ಲಲಿತಾಂಗಿ (ಮಲ್ಲಕಾ. ೧೫-೮೬). [ನೀರ್+ತೋಜು]

ನೀರ್ನಡೆ (ನಾ). ನೀರಿನ ಓಟ,—ಪ್ರವಾಹ : ಕಡಲ ನೀರ್ನಡೆಗೆ ನಿಲ್ಗಡಿ ಯಾಗಿ, ಮಾರುತಿಯ ನಿಃಶ್ರೇಯಕೊಂದು ಮುನ್ನುಡಿಯಾಗಿ ಕುಳ್ತುದೆಲೆ ವನೆವಕ್ಕಿ (ಶ್ರೀರಾಮಾ. ೪೮೨-೨೧೨). [ನೀರ್+ನಡೆ$_2$]

ನೀರ್ನಳ (ನಾ). ನಲ್ಲಿ ; ಕೊಳಾಯಿ : ಒಂದು ಕಿಟಕಿಯ ಬುಡದಲ್ಲಿಯೇ ನೀರ್ನಳದ ಕಟ್ಟಿ ಕಟ್ಟಿದ್ದರು (ಕಾಬಝಾ. ೨೩). [ನೀರ್+ನಳ$_2$]

ನೀರ್ನಿಲ್, ನೀರುನಿಲ್ಲು (ಕ್ರಿ). ೧. (ಹಳ್ಳ, ಕೊಳ್ಳ ಮುಂತಾದ ಸ್ಥಳಗಳಲ್ಲಿ) ನೀರು ನಿಂತಿರು. ೨. ಗರ್ಭ ನಿಲ್ಲು ; ಗರ್ಭಧಾರಣೆ ಯಾಗು ; ಬಸಿರಾಗು : ಸೀತೆಗೆ ನೀರ್ನಿಂದು ದಿನಕ್ರಮದಿಂ ಬಸಿಱ್ಗೆ ಬಳೆಯೆ . . . ಮನಕೆ ಪುದುವಯಕೆ ಪುದುಂಗೊಳೆ, ಸೀತೆ ಬಸಿಱು ಯಾದಳ್ (ಪಾಮಾಶ್ವ. ೨೧-೬) ; ಅಂತು ಭಕ್ಷಿಸಿದ ಕೆಲದಿನಂಗಳ್ಗೆ ಪೆಣ್ಗೆ ನೀರ್ನಿಲ್ತು, ಬಸಿರ್ಬಳೆದು . . . ಸುಪುತ್ರಂ ಪುಟ್ಟಿದಂ (ಅದ್ಭುತ. ೫-೮). **ನೀರುನಿಲ್ಲು :** ೧. ತ್ವಾಟದ ಹಳ್ಳದಾಗೆ ನೋಡಿಲ್ಲೇನು ನೀನು ನೀರು ನಿಂತಿರೋದನ್ನ? (ಮಲೆಮ. ೪೭೦). ೨. ಅವಳಿಗೆ ನೀರು ನಿಂತದೆ ಕಣೋ, ಬೆಪ್ಪುಹುಡುಗಾ ! (ಮಲೆಮ. ೪೭೦). [ನೀರ್ + ನಿಲ್]

ನೀರ್ನೆರಳು (ನಾ). ಅಪರಕರ್ಮದ ಒಂದು ಭಾಗ ; ಹೆಣದ ಮೇಲೆ ನೀರು ಸುರಿಯುವುದು : ಅಮೃತಕೀರ್ತಿಯ ತಿರುಳು ಮೋಡ ಗಳ ನೀರ್ನೆರಳು ಮೃತನಿಗದು ಇದ್ದವರು ಕೊಟ್ಟ ಮಣ್ಣು (ಗರಿ. ೮೫-೨೦). [←ತುಳು. ನೀರ್ನೆರಲ್]

ನೀರ್ನೆಲ (ನಾ). ನೀರಾವರಿಭೂಮಿ ; ತರಿಜಮೀನು ; ಗದ್ದೆ : ದೇವರ ನಿವೇದ್ಯಕ್ಕೆ ತಮ್ಮ ದಶವಂಧದ ಗಟ್ಟಿಯೊಳಗೆ ನೀರ್ನೆಲಂ ಗಟ್ಟಿ ಮತ್ತರು ೨ (ಕಇಅ. ೩-೮-೨೬೮ ; 1062) ; ಉಡಿಯುತ್ತುಂ ನಂದನಂ ಗಳಂ ನೀರ್ನೆಲನಂ ಕಿಡಿಸುತ್ತುಂ ಲಂಕೆಗವರ್ ಪಡೆದರ್ ನಿಶ್ಶಂಕರಳವಿ ಗಟಿದರ್ದೆವಟಲಂ (ಪಂರಾಮಾ. ೧೪-೮೯). [ನೀರ್+ನೆಲ]

ನೀರ್ನೆಲೆ (ನಾ). ನೀರಿನ ಆಶ್ರಯ,—ಜಲಾಶಯ : ವನಿತೆಯ ಮೇಗಾಲ್ಗಳ ಪಾಸಟಯಂ ನಾಮೆಯ್ದುವೆವೆಂದು ದುನದೊಳ್ ಭಾವಿಸಿ ನೀರ್ನೆಲೆಯೊಳಗಾ ದಿನದಿ ತಪಂಗೆಯ್ದುವು ಕೂರ್ಮಂ ಮೇದಿನಿಯೊಳದಱ ನುತ್ತಮರ ಪದಂ ಬಯಸದ ಜೀವಿಗಳುಂಟೆ (ಜಯಕಾ. ೩-೨೮); ಉಟ್ಟುದು ತೊಟ್ಟುದೆಲ್ಲವನಾ ತಡಿಯೊಳಗಿಟ್ಟು ನೀರ್ನೆಲೆಯನು ಹೊಕ್ಕು ನೆಟ್ಟನೆ ನೀರಾಡುವ ನೃಪಸುತರು (ಪ್ರಭಂಜ. ೨-೧೩೦) ; ನೀರ್ನೆಲೆಗಳಂ ಸೂಚಿ ಸುತೆ ತೀಡಿದುದು ತಂಪುಗಾಳಿ (ಶ್ರೀರಾಮಾ. ೪೧೮-೪೨೬). [ನೀರ್+ನೆಲೆ]

ನೀರ್ನೆಲೆದಪ್ಪು (ಕ್ರಿ). ಮುಳುಗು : "ಆಗುಟ್ಟಂ = ನೀರ್ನೆಲೆ ದಪ್ಪಿದಂ (ಮುಟುಗಿದಂ)" (ಶಮದ. ಪರಿ. ೧). [ನೀರ್ + ನೆಲೆದಪ್ಪು]

ನೀರ್ನೊಣ (ನಾ). ನೀರಿರುವ ಸ್ಥಳದಲ್ಲಿ ವಾಸಿಸುವ ಒಂದು ಬಗೆಯ ನೊಣ : ರಣಹೇಡಿಗಳಾದವರ ಕಣ್ಮನಕೆ ನೀರ್ನೊಣ ಗರು ತ್ಮಂತನಂತಿಹುದು (ಮೋಹತ. ೧೨-೪೪). [ನೀರ್ + ನೊಣ(<ನೊಳವು)]

ನೀರ್ಪಂಚೆ (ನಾ). ಸ್ನಾನಮಾಡುವಾಗ ಅಥವಾ ಮಡಿಯಲ್ಲಿರು ವಾಗ ಉಟ್ಟುಕೊಳ್ಳುವ, ಜಾಳುಜಾಳಾಗಿರುವ ವಸ್ತ್ರ ; ಪಾಣಿ ಪಂಚೆ; ಮಡಿಪಂಚೆ : ಊಟಮಾಡುವಾಗ ಉಡುವ ನೀರ್ಪಂಚೆಯನ್ನು ಉಟ್ಟೇ ತನ್ನ ಅಫೀಸಿಗೆ ಹೋಗಬಹುದು (ಕಥಕ.೯೫). [ನೀರ್ + ಪಂಚೆ]

ನೀರ್ಪಡಿಸು (ಕ್ರಿ). ನೀರಿನಲ್ಲಿ ನೆನೆಹಾಕು,—ತೋಯಿಸು : ಬಂದಾಕೆ ನುಡಿಸೆ ಬಾಯ್ಬುರಿವಂದದಿ ನೀರ್ಪಡಿಸಿದಕ್ಕಿ ತೀವಿರೆ ನುಡಿಯುಂ ಕುಂದಿರೆ (ಪ್ರಾಕ್ಕಾವ್ಯ. ೧೬೪೫). [ನೀರ್+ಪಡು$_1$+ -ಇಸು$_3$]

ನೀರ್ಪನಿ 'ನೀರ್ವನಿ' ನೋ.

ನೀರ್ಪಿರೇ (ನಾ). ಹೀರೆಯಲ್ಲಿ ಒಂದು ಬಗೆ : ಮಾಂಗಾಯ್, ನೀರ್ಪಿರೇ (ಭಾಷಾಭೂ. ೧೨೬ ವೃತ್ತಿ). [ನೀರ್+ಪೀರೆ]

ನೀರ್ಪೂವು 'ನೀರ್ವೂ' ನೋ.

ನೀರ್ಪೊಯ್ 'ನೀರ್ವೊಯ್' ನೋ.

ನೀರ್ಬಟ್ಟೆ 'ನೀರ್ವಟ್ಟೆ' ನೋ.

ನೀರ್ಬಾವಿ (ನಾ). ನೀರಿರುವ ಬಾವಿ : ಹಾರುವೆನೊ ನೀರ್ಬಾವಿಯೊಳಗೆ ? ಹೀರುವೆನೊ ಕಹಿವಿಷವನು ? (ಕಏಪು. ೧೯-೨೬).

[ನೀರ್+ಬಾವಿ]

ನೀರ್ಬಿಡು, ನೀರುಬಿಡು (ಕ್ರಿ). ೧. ನೀರು ಒಸರು,—ಜಿನುಗು : ತಾರಾಪತಿಮ್ಮುತಿಗೆ ನೀರ್ಬಿಡುವಿಂದುರತ್ನಹಾರಂಬೊಲೊಪ್ಪುವ ಭುಜಂಗಳ ಕಂಠಕೀಯೆ ತೋರಲ್ಕೆ ಚಿತ್ರವ ಬೆಮರ್ತಿವೆ ಭೀತಿಯಿಂದ (ಉಾಗಾ. ೨೫-೧೯). **ನೀರುಬಿಡು :** ೧. ಕಿರಾಣ ಮಾಲಿನ ಸೈಕಿ ಜವಳ ಹಿಡಿಯುವ ಅಂದರೆ ನೀರುಬಿಡುವ ಮಾಲು ಮಳೆಗಾಲದಲ್ಲಿ . . . ಕೆಡುತ್ತದೆ (ಮುಂಬಪ್ರಾ. ೨೬ ಪ್ರಸ್ತಾವನೆ) ; ಈ ಎಲ್ಲ ಭಿನ್ನರುಚಿಗಳಿಗೆ ನಾಲಗೆಯು ನೀರುಬಿಡು(ಕಡೆಯುವ)ವುದರಲ್ಲಿಯೇ ರಸರಹಸ್ಯವು ಅಡಗಿಕೊಂಡಿದೆ (ಸಾಹಿವಿ. ೯). ೨. (ಕಾಲುವೆ ಮುಂತಾದುವುಗಳಿಂದ) ನೀರು ಹಾಯಿಸು : ಅವಕ್ಕೆ ಒಂದು ಗಂಟೆ ಹೊತ್ತಿಗೆ ಅಷ್ಟು ನೀರು ಬಿಡಿ. ನಂಬೆಗಡವೂ ಅವೂ ಬದುಕಿಕೊಳ್ಳುತ್ತವೆ (ಬಾಳಹೂ. ೨೪೧). ೩. ಧಾರೆಯೆರೆ ; ನೀರು ಸುರಿ : ದಾನವನ್ನು ಕೊಟ್ಟು ನೀರು ಬಿಡೋಣ (ಗಂಗಾಮ. ೧೪೯). ೪. (ಆಲಂ) ತರ್ಪಣವನ್ನು ಕೊಡು; ತಿಲಾಂಜಲಿಯನ್ನು ನೀಡು : (ಕಿ).

ನೀರು ಬಿಡುವ ಕಲ್ಲು = ಬೆಳುದಿಂಗಳಿಗೆ ನೀರು ಒಸರುವುದೆಂದು ಭಾವಿಸಲಾದ ಒಂದು ಬಗೆಯ ಕಲ್ಲು; ಚಂದ್ರಕಾಂತ : ಬಿದುಗಲ್ಲು —ಬೆಳುದಿಂಗಳಿಗೆ ನೀರು ಬಿಡುವ ಕಲ್ಲು (ಗಂಗಾಮ. ೨೩೪).

[ನೀರ್+ಬಿಡು$_1$]

ನೀರ್ಬೀಳ್, ನೀರ್ಬೀಳ (ನಾ). ಜಲಪಾತ ; ಅಬ್ಬಿ ; ತಡಸಲು : ಮೆಲ್ಲಮೆಲ್ಲನೆ ತೇಲಿ, ಅಳದಲಿ ಮಲೆಯೆಡೆಯೊಳಲುಗದೆಯೆ ಅಲುಗಿ, ಕಡಿದು ಬಂಡೆಗೆ ಬಂದು, ನೆಗೆದು ಬೆಳ್ಳಂಗೆಡೆವ ನೀರ್‌ಬೀಳ ಬೆಳ್ಪು ! (ಕನ್ನಬಾ. ೧೬೫-೫). **ನೀರ್ಬೀಳ :** ಮುತ್ತುಗಳ್ ರಾಸಿ ಸುರಿವಂತೆ ನೀರ್ಬೀಳಗಳ್ ಬೆಳ್ಳಿಯೋಲ್ ಬೆಳ್ಳಂಗೆಡೆದು ಪರಿದವಲ್ಲಲ್ಲಿ (ಶ್ರೀರಾಮಾ. ೪೮೧-೨೦೧). [ನೀರ್+ಬೀಳ್$_2$ (< ಬೀಳ್$_2$)]

ನೀರ್ಬೀಳ 'ನೀರ್ಬೀಳ್' ನೋ.

ನೀರ್ಬೆಂಕೆ (ನಾ). ದ್ರವರೂಪವಾದ ಬೆಂಕಿ ; ಲಾವಾರಸ : ಪ್ರೋಜ್ವಲಿಸಿದುದು ಕೋಪನಜ್ವಾಲೆ ಭೂಮಿಪಗೆ. ಪ್ರಾಣಾಗ್ನಿಪರ್ವತಜ್ವಾಲಾಮುಖಿಯ ಮುಖಂ ನೀರ್ಬೆಂಕೆಯಂ ಪೊನಲ್ಗರೆಯುತೋಕರಿಪಂತೆ (ಶ್ರೀರಾಮಾ. ೬೨-೪೮೮). [ನೀರ್+ಬೆಂಕೆ]

ನೀರ್ಬೆತ್ತ (ನಾ). = ನೀರುಹಬ್ಬೆ : ಕೈಯ ಚಾಚಿ ತಡೆವಂತೆ ನಾಚಿ ನೀರ್ಬೆತ್ತ ಬಾಗಿ ಎಳೆದು ಹಿಡಿದರೇನವಳ ಮುಗಿಲ ಬಣ್ಣದಾ ಮಂಜುಸೀರೆ ಸೆಳೆದು ಒಯ್ಯೊ ನಿನ್ನ ಹೊತೆಗಿರಲಿ, ಮೋಘವೇ ಪಯಣ ಬೆಳೆಸುವಾಗ (ಮೋಘಮೂ. ೧೧-೪೧). 'ಅಂಬುವೇತಸ' ಪರಾ.

[ನೀರ್+ಬೆತ್ತ]

ನೀರ್ಮಗಳ್ (ನಾ). ಲಕ್ಷ್ಮಿ.

ನೀರ್ಮಗಳ ಗಂಡ = ಲಕ್ಷ್ಮಿಯ ಗಂಡ ; ನಾರಾಯಣ ; ವಿಷ್ಣು : ನೀರ್ಮಗಳ ಗಂಡನಂ ಪೆಂಡತಿಯೊಳಾಳ್ದ ಪನ್ನಗಶಿಕಿಯಂ ಪರಿಜುವೆತ್ತ ಬಿಸುಗೊರಲ ರಕ್ಕಸು ಪೂಗುವರತತ್ತಿಯಂ (ಏಕೋಪು. ೩-೩).

[ನೀರ್+ಮಗಳ್]

ನೀರ್ಮಜ್ಜಿಗೆ, ನೀರುಮಜ್ಜಿಗೆ (ನಾ). ನೀರು ಹೆಚ್ಚಾದ ಮಜ್ಜಿಗೆ : ರಸರಸಾಯನವ ಚಪ್ಪರಿದು ನೀರ್ಮಜ್ಜಿಗೆ ಹಸಗೆಯ್ದುರಲೀಂಟದರು (ವೋಕಥ. ೩-೫೭) ; ಅತ್ತಿರಸ ಹುಗ್ಗಿಯನ್ನು ಮೆಚ್ಚಿ ಉಂಡ ಪಾನಕ ನೀರ್ಮಜ್ಜಿಗೆಗಳ ಸವಿದು ಬೇಗ (ವಾಧಿಕೀ. ೪೦-೩) ; ಬಾಟಿಕ್ಕೊದಲ್, ನೀರ್ಮಜ್ಜಿಗೆ (ಶಬ್ದನು. ೯೨ ಪ್ರಯೋ). **ನೀರುಮಜ್ಜಿಗೆ :** ಕ್ಷೀರಸಾಗರವ ಪೊಂದಿದವ ಮಥಿಸಿದ ನೀರುಮಜ್ಜಿಗೆ ಕಾಣನೆ (ಪುರಂದ. ೧-೫೫-೧) ; ಒಂದು ಲೋಟ ನೀರುಮಜ್ಜಿಗೆಯನ್ನೋ ನಿಂಬೆಹಣ್ಣಿನ ಪಾನಕವನ್ನೋ ಮಾಡಿಕೊಡು (ನಂಟರು. ೩೫) ; ಬೇಸಿಗೆಕಾಲದಲ್ಲಿ ಪಾನಕ, ನೀರುಮಜ್ಜಿಗೆ, ರಸಾಯನಗಳನ್ನು ನಾವು ನಮ್ಮ ಇಷ್ಟಮಿತ್ರರೊಡನೆ ಕಲೆತು ತಿಂದು ಕುಡಿಯಬೇಕೆಂಬ ಋತುಧರ್ಮಗಳು . . . ಹಿತವಾದ ಕರ್ತವ್ಯವೆಂದು ಹೇಳಬಹುದು (ಸಕ್ಷತ್ರ. ೨) ; ಯಾರೂ ಇಲ್ಲದ ಊರಿಗೆ ಹೋಗಿ ನೀರುಮಜ್ಜಿಗೆ ಬಯಸಿದ ಹಾಗೆ (ಗಾದೆ). [ನೀರ್+ಮಜ್ಜಿಗೆ]

ನೀರ್ಮಡುದಾಣ (ನಾ). (ನದಿ, ಹೊಳೆ ಮುಂತಾದುವುಗಳ) ಆಳವಾದ ನೀರಿರುವ ಪ್ರದೇಶ ; "ಹ್ರದ" (ಪ್ರಭಣ್ಣ) : ನೀರ್ಮಡುದಾಣಂ, ಕಾಳ್ಗಿಡುವೇಲಿ (ಶಬ್ದಾನು. ೮೭ ವ್ಯಾಖ್ಯಾ).

[ನೀರ್+ಮಡು$_2$+ತಾಣ]

ನೀರ್ಮಣ್, ನೀರುಮಣ್ಣು (ನಾ). ನೀರಾವರಿಯುಳ್ಳ ಭೂಮಿ ; ತರಿಜಮೀನು : ಅರೆಕೆಱೆಯ ಮೂಡಣ ಕಡಗೋಡಿನ ನೀರ್ಮಣ್ಣು ಮಣ್ಡಂಗಳಯ್ನೂಳಂ (ಎಕ. V, ಅರಕ. ೨೪-೧೧ ; ಸು. 900); ಪನ್ನಿರ್ಮ್ಮತ್ತರ ಹೆಸುಮಾವಾಡಿಯ ಕೆಱೆಯ ಕಾಟ ಪದಿರ್ಮತ್ತ್ನೀರ್ಮ್ಮ(ರ್)ಣ್ಣು ಮನಿತ್ತರ್ (ಸೌಇಇ. IX-i, ೬೧-೩೨ ; 931) ; ಪನ್ನೆರಡುಂ ಗಱ್ಡೆ ನೀರ್ಮಣ್ಣುಮಂ ಪದಿಂಬರ್ ದೇವಡಿಕಿಯರ್ಗ್ಗಂ ತಮಗಂ ಮನೆಗಂ . . . ಧಾರೆಯನೆಱೆದು ಬಿಟ್ಟು ಕೊಟ್ಟರ್ (ಎಕ. IV(R), ಚಾಮರಾ.೧೧೪-೧೩; ಸು. 10ನೆಯ ಶತ) ; ಅಱೆಯಕೆಱೆಯ ಕೆಳಗಣ ನೀರ್ಮ್ಮಣ್ಣುಳ್ಳ ಕುಂಬಾಱಗೆಱೆಯ ಕೆಳಗಣ ನೀರ್ಮಣ್ಣುಳ್ಳನಿತು ಗದ್ದೆಯುಮಂ . . . ಕೊಟ್ಟರು (ಸೌಇಇ. IX-i, ೨೪೫-೨೨ ; 1146). **ನೀರುಮಣ್ಣು :** ಆ ಕೆಱೆಯ ಕೆಳಗಣ ಬೆದ್ದಲೆ ನೀರುಮಣ್ಣು ಸಹಿತವಾಗಿ ಜಗತೇಶ್ವರದೇವರಿಗೆ ಕೊಟ್ಟ ದತ್ತಿ (ಎಕ. XI, ದಾವಣ. ೪-೨೨ ; 1143). [ನೀರ್+ಮಣ್]

ನೀರ್ಮನುಜ (ನಾ). ನೀರಿನಲ್ಲಿ ವಾಸಿಸುವ ಮಾನವ : ಕೊಡೆ ಮೇಣಗಪ್ಪಡ ಗೊಂಡಿ ಬಹುರಮ್ಯವಡೆದಿರ್ದ ಸಕಲಾತಿಪಳೆದು . . . ನೀರ್ಮನುಜರಂತೆಡೆಯಾಡುತಿರ್ದರೂರುಗರು (ವೋಕಥ. ೪-೪೧).

[ನೀರ್+ಮನುಜ]

ನೀರ್ಮನುಷ್ಯ (ನಾ). = ನೀರ್ಮನುಜ : ಜಲದೇವೀಜನಮೆಂಬಿನಂ ಸಕಳತದ್ದೇವೀಜನಂ ಮುಟ್ಟಾದತ್ತೊಲವಿಂದಂ ನೆಱೆ ನೀರ್ಮನುಷ್ಯರವೊಲಾ ದೇವರ್ಕಳುಂ ತೇಂಕಿದರ್ (ಬಾಧಪು. ೮-೧೨೭). [ನೀರ್+ಮನುಷ್ಯ]

ನೀರ್ಮನ್ನೆಯ (ನಾ). = ನೀರ್ನೆಲ : ಜೆ(ಂ)ಕ್ಕೆಯೂರ್ಪ್ಪಂನೆರಡಱ ಚಂಡರಸ ಮುಖ್ಯವಾ ಭೂಮಿಗಧೀಶ್ವರರೊಲವಿನಿಂದ ಲೋಕಾಭರಣ ಮುನೀಂದ್ರಂಗೆ ತೇಜಸಾಮ್ಯಮನಿತ್ತರು ಅಂತು ನೀರ್ಮ್ಮನ್ನೆಯಮುಂ ಸರ್ವಸಮಶ್ಯಮುಮಾಗಿ ಬಿಟ್ಟರ್ (ಸೌಇಇ. IX-i, ೩೨೦-೯ ; 1194).

[ನೀರ್+ಮನ್ನೆಯ]

ನೀರ್ಮಯ್ 'ನೀರ್ಮೆಯ್' ನೋ.

ನೀರ್ಮಳೆ 'ನೀರ್ಮಟೆ' ನೋ.

ನೀರ್ಮಳೆಗಱೆ (ಕ್ರಿ). ಧಾರಾಕಾರವಾಗಿ ಮಳೆ ಸುರಿ,—ವರ್ಷಿಸು: ಬಹುಕಾಲಮೆನಗೆ ನೀರ್ಮಳೆಗಱೆದ ಪುರುಷಾರ್ಥಕಹಹ ಮೃದ್ವಿಂದುಗಳ ನೀಗ ಸುರಿದಪೆನೆಂದು ಮಹಿ ನಭಸ್ಥಳಕೂರ್ಧ್ವಮುಖಮಾಗಿ ಸೂಸುವ ರಜದ ಸೋನೆಯೆನೆ ದೂಳಿಡೆ . . . ವಿಂಧ್ಯಾದ್ರಿಯಂ ಫಲುಗುಣನ ಸೇನೆ ತುಳಿದಸಿಯರೆದುದು (ಜೈಮಿಭಾ. ೧೦-೮).

[ನೀರ್ಮಳೆ (<ನೀರ್ಮಟೆ) + ಕಱೆ$_1$]

ನೀರ್ಮಟೆ, ನೀರುಮಳೆ, ನೀರ್ಮಳೆ (ನಾ). ಗದ್ದೆ, ಕೆರೆ, ಕಟ್ಟೆ ಮುಂತಾದುವುಗಳಿಗೆ ಸಾಕಷ್ಟು ನೀರೊದಗುವಂತೆ ಸುರಿಯುವ ಮಳೆ : ನೀರ್ಮಟೆ ಕೊಳ್ಗೆ ಪೆಱ್ಚುಗಿಳೆಗಾಯುಂ ಶ್ರೀಯುಮಾರೋಗ್ಯಮುಂ (ಲೋಕೋಪ. ೧೨-೬೬). **ನೀರುಮಳೆ** : ನೀರುಮಳೆ ಬಂದು ಕೆರೆ ತುಂಬಿತು (ರೂಢಿ). **ನೀರ್ಮಳೆ** : 'ನೀರ್ಮಳೆಗಱೆ' ಪರಾ.

[ನೀರ್+ಮಟೆ]

ನೀರ್ಮಾನಸ 'ನೀರ್ವಾನಸ' ನೋ.

ನೀರ್ಮಾನಿಸ 'ನೀರ್ವಾನಸ' ನೋ.

ನೀರ್ಮಾವು? (ನಾ). ೧. ಹೊಳೆಯುವ ಹಸಿರು ಬಣ್ಣದ ಮಾವು. ೨. ಹಸಿರುಕಾಂತಿಯ ಮಾವಿನ ಬಣ್ಣದ ಸೀರೆ. ೧, ೨ : ಆವರಿಸಿ ಬಳಸಿಯುಂ ಸಿರಿ ಭಾವನೆಯಂ ಬಿಗಿದು ತಳ್ತ ನೀರ್ಮಾವಂ ನೀರ್ಮಾವಂ ನಿಜಾವಿಡಿದಾ ನಗರೀವನಿತೆ ವಿಳಾಸದಿಂದಮುಟ್ಟಂತಿಕ್ಕುಂ (ಸರ್ಗಸಾ. ೧೧-೬೨). [ನೀರ್+ಮಾವು]

ನೀರ್ಮಿ, ನೀರುಮಿ (ಕ್ರಿ). ಸ್ನಾನಮಾಡು ; ಮಿಾಯು : ಬಾಡಬಂ ತಾನಲ್ಲಿ . . . ಮಾದರ ದೂಡಿಗನು ನೀರ್ಮಿಂದೆಡೆಯೊಳೆಡೆಯಾಡಿ ಬಿದ್ದನು ಎದ್ದನದೆ ಕೆಸಱಂ ತೊಳೆದುಕೊಂಡ (ಬಸಪು. ೫೬-೫೪); ಎಳಲತೆಯೊಳಸಿ ಮಳೆಗೆ ಮೈಯ್ಯೊಡ್ಡುವವೋಲ್ ನಾಲ್ಪಗಲಿನ ನೀರ್ಮಿಂದು (ಜಯಕಾ. ೨-೪೯). **ನೀರುಮಿಾ** : ಅವಳು ತುಂಬುಬಸುರಿಯಾಗಿದ್ದು ಸಂಗಡಲೇ ನೀರುಮಿಂದು . . . ಗಂಡನ ಸಂಗಡ ಹೊರಟಳು (ಕಥಾಮಂ. IV, ೪೭). [ನೀರ್+ಮಿಾ]

ನೀರ್ಮುಟ್ಟು, ನೀರುಮುಟ್ಟು (ಕ್ರಿ). ೧. ನೀರನ್ನು ತಾಕು,—ಸ್ಪರ್ಶಿಸು : ಆ ಜ್ವಾಲೆ ಬಳಕಲ್ಲಿ ನಿಂದು ಧಾರ್ಮಿಕರವರೊಳುಂಟೆ ತನ್ನ ನೆಂತಾದೊಡಂ ನೀರ್ಮುಟ್ಟದಂತೊಯ್ಯನಾ ತಡಿಗೆ ದಾಂಟಿಸುವ ಕೂರ್ಮೆಯುಳ್ಳವರೆಂದೊಡಲ್ಲರ್ದ ನಾವಿಕರ್ಕೇಳ್ದವಳ್ಗಿಂತೆಂದರು(ಜೈಮಿಭಾ. ೯-೨೫). **ನೀರುಮುಟ್ಟು** : ೨. ಮಲಮೂತ್ರಗಳನ್ನು ವಿಸರ್ಜಿಸಿದ ನಂತರ ನೀರಿನಿಂದ ಶುದ್ಧಮಾಡಿಕೊಳ್ಳು : (ಕ). ೩. ಮಲಮೂತ್ರಗಳನ್ನು ವಿಸರ್ಜಿಸು : ಜೋಗಿಪುರದ ಹತ್ತಿರ ಹರಿಯುವ ಕೆರೆಯ ಕೋಡಿಕಾಲುವೆ ಬಳಿ ಸರಸರನೆ ನೀರುಮುಟ್ಟಿ, ಕಾಲೆಳೆದುಕೊಂಡು ಹೋಗಿ, ಜೋಗಿಪುರ ಬಿದ್ದ (ಸನ್ನುರು. ೨೦೧).

[ನೀರ್+ಮುಟ್ಟು$_1$]

ನೀರ್ಮುಳುಗ (ನಾ). ಒಂದು ಬಗೆಯ ನೀರುಹಕ್ಕಿ : ಕೋಗಿಲೆ ಕಾಮುರುಳಿ ಬೆಳ್ಕಕ್ಕಿಯೆಲಗೋ ಹುಲ್ಲುಬಂದಿಗ ನಿಬ್ಬ ನೀರ್ಮುಳುಗ . . . ಕೆಂಡವಕ್ಕಿಗಳವಜೊಳೊಪ್ಪಿದವು (ಸಾಳ್ವಭಾ. ೫-೨೨).

[ನೀರ್ಮುಳುಗು + -ಅ$_7$]

ನೀರ್ಮುಳುಗು (ಕ್ರಿ). ನೀರಿನಲ್ಲಿ ಮುಳುಗು ಹಾಕು,—ಸ್ನಾನಮಾಡು : ಗೃಹಸರೋವರಚಕ್ರಂಗಳ್ಗೆ ಪಾಸೆಯಂಬಾಸೆಗೊಡುವ ಬಾಸೆದಳೆದು ನೀರ್ಮುಳುಗುವ ನಿತಂಬಿನಿಯರುಂ (ರಾಜಶೇ. ೨-೧೩೬ ನ) ; ನಿತ್ಯ ನೀರ್ಮುಳುಗುವನು ಹತ್ತಿದಡೆ ಸ್ವರ್ಗವನು ಎತ್ತಿ ಜನ್ಮವನು ಜಲದೊಳಿಪ್ಪಾ ಕಪ್ಪೆ ಹತ್ತದೇಕೆಂದ (ಸರ್ವಜ್ಞ. ೯೨೨).

[ನೀರ್+ಮುಳುಗು$_1$ (<ಮುಟುಂಗು)]

ನೀರ್ಮುಳ್ಳಿ (ನಾ). ಒಂದು ಬಗೆಯ ಸಸ್ಯ : ಕೊಳವಂಕೆ, ನೀರ್ಮುಳ್ಳಿ, ನೀರುಗೊಬ್ಬಿಗಿಡ (ಮೃಔಗಿ. ೧೦-೧೭೦).

[←ತಮಿ. ನೀರ್ಮುಳ್ಳಿ]

ನೀರ್ಮೆಯ್, ನೀರ್ಮಯ್ (ನಾ). ೧. ನೀರಿನ ಮೇಲುಭಾಗ : ಗಿರಣಿಕುಂಟೆಯಲ್ಲಿ ಮಿರುಗುತ್ತಿದ್ದ ನೀರ್ಮೆಯ್ಯ ಮೇಲೆ ಶಬ್ದ ಹರಡಿತು (ಪುನರು. ೨೬೪). **ನೀರ್ಮಯ್** : ೨. ಕಾಂತಿಯುಕ್ತವಾದ ಶರೀರ : ಅಳಿಕುಂತಳದಂಚೆನಡೆ ತಾವರೆಮೊಗ್ಗೆ ಮೊಲೆಯ ನೀರ್ಮಯ್ಯ ವಿಾಂಗಣ್ಣ ಲಲಿತೋತ್ಪಲಗಂಧಿಯರು ನೀರ ಹೊಕ್ಕರು ಕೊಳಕೆ ಪೂಗೊಳ ಬಂದಂತೆ (ಕ್ರೀಪಾಲ. ೫-೫೨). ೩. ಪೊಳ್ಳುಮೈ ; ಬೊಜ್ಜುದೇಹ. [ನೀರ್+ಮೆಯ್$_2$]

ನೀರ್ಮೊಗೆ, ನೀರುಮೊಗೆ (ಕ್ರಿ). ನೀರನ್ನು ತೋಡು,—ತೆಗೆದು ಸುರಿ : ಗಗಪತಿ ತಾನೆ ಜೈನಸವನೋತ್ಸವದೊಳ್ ಸಿರಿದಟ್ಟಿಯಿಂದ ನೀರ್ಮೊಗೆಯಲೊಡರ್ ಪಂಚಮಪಯೋಧಿಗೆ ನೀಡಿದನಕ್ಕುಮೆಯ್ದೆ ದೋರ್ಯುಗಳಮನರ್ಕೆಲಕ್ಕಂ (ಚಂದ್ರಪ್ರ. ೧೨-೧೨೦) ; ಓರ್ವಳೊಡನೆ ನೀರ್ಮೊಗೆದವಳಿಟ್ಟವರ ಸಂಶಯಮನುಡಿಗಿಸಿದಳೇಂ ಜಾಣೆಯೋ (ಪದ್ಮರಾ. ೮-೪೫) ; ಸಗ್ಗದಾಣ್ಮನ ವಜ್ರಪತಿಯಿಂದೆ ಸಾಗರಕೆ ಮುಗ್ಗುವ ಕುಲಾದ್ರಿಗಳ ಮಜ್ಜಾಗಳ ಸಮೂಹಮೆನಲೊಗ್ಗಿನಿಂ ಪೆರ್ಗಡಲ ನೀರ್ಮೊಗೆಯಲಿಳಿಧ ಕಾರ್ಮುಗಿಲ ಬಳಗಂಗಳೆನಲು (ಜೈಮಿಭಾ. ೩-೩೮). **ನೀರುಮೊಗೆ** : ಇತ್ತ ನೀರುಮೊಗೆಯಲು ಹೋದ ಅತ್ತಿಗೆ ನಾದಿನಿಯರು ಮರಳಿ ಬರುವಾಗ ಒಂದೂವರೆ ಜಾವವೇ ಸರಿದಿತ್ತು (ಮರಸು. ೬೫) ; ನೀರುಮೊಗೆಯುವುದು, ನೆಟ್ಟ . . . ಮುಂತಾದ ಎಲ್ಲ ಕೆಲಸಗಳಲ್ಲೂ ಅವಳು ಪ್ರಾಯದವರೂ ನಾಚುವಂತೆ ಗೇಯುತ್ತಾಳೆ(ಅನಾಥ.೨೧).

[ನೀರ್+ಮೊಗೆ$_1$]

ನೀರ್ಮೊರೆ (ನಾ). ನೀರಿನ ಅಬ್ಬರ,—ಆರ್ಭಟ : ಗುತ್ತಿ ಕತ್ತಲೆಯನ್ನು ನೋಡುತ್ತಾ, ಮಳೆಯ ಮತ್ತು ತೊರೆಯ ನೀರ್ಮೊರೆಯನ್ನೂ ಮರಗಳಲ್ಲಾಗುತ್ತಿದ್ದ ಗರ್ಜನೆಯನ್ನೂ ಆಲಿಸುತ್ತಾ . . . ನಿಂತನು (ಮಲಿಮ. ೫). [ನೀರ್+ಮೊರೆ$_2$ (<ಮೊಱೆ$_2$)]

ನೀರ್ಲಕ್ಕಿ (ನಾ). ಒಂದು ಬಗೆಯ ಲಕ್ಕಿಗಿಡ : ನೀರ್ಗುಂಡಿ, ನೋಚ್ಚಿ, ನೀರ್ಲಕ್ಕಿ (ಮೃಔಗಿ. ೭೮-೧೬೦೧). [ನೀರ್+ಲಕ್ಕಿ$_1$(<ಲೊಕ್ಕಿ$_1$)]

ನೀರ್ವಕ್ಕಿ, ನೀರಕ್ಕಿ, ನೀರುವಕ್ಕಿ, ನೀರುಹಕ್ಕಿ (ನಾ). ನೀರಿನಲ್ಲಿ ವಾಸಿಸುವ ಕೊಕ್ಕರೆ ಇತ್ಯಾದಿ ಪಕ್ಷಿ : ಜಲಚರಪಕ್ಷಿ : ಬಿಸುಸುಯ್ಯುತ್ತಗಲ್ದಿರ್ದ ನೀರ್ವಕ್ಕಿಗಳಾಗಲ್ ಕೂಡಿ ತೋಡಾದುವು (ಅದಿಪು. ೧೨-೯) ; ಪೂಗೊಳನಂ ತಿಳಿಯಿಟ್ಟು ನೀರ್ವಕ್ಕಿಗಳಂ ನೆಲೆವಱಸುತ್ತುಂ (ಗಿರಿಕ. ೭-೪೨ ವ) ; ನೀರ್ವಕ್ಕಿಗಳಿಂಚರಕ್ಕೆ ಶಫರಪ್ರಕರಂ ನಯನಕ್ಕೆ . . . ತಕ್ಕಳಿನಾದೆಯರ್ ವಿಮಳಲೋಚನೆಯರ್ ಜಲಕೇಳಿಗೆಯ್ದಿದರ್ (ದಶಕು. ೧೧-೭೯) ; ಬಿಡದೆ ಬೆಂಡೆದ್ದೇಳ್ವ ತಲೆಗಳ ಗಡಣನೀರ್ವಕ್ಕಿಗಳ ಸರಸಿಯ ನಡುವೆ ನಲಿನಲಿದಾಡುತಿರ್ದುದು ಭೀಮನನದಂತೆ (ಕುಸ್ಯಾದ್ರೋ.೧೨-೨೩); ಎಸೆವ ನೀರ್ವಕ್ಕಿಗಳ ಸಂಗದಿಂ ಭೃಂಗದಿಂದಾ ಕೊಳಂ ಕಣ್ಗೆಸೆದುದು (ಜೈಮಿಭಾ. ೧೫-೯) ; ನೀರ್ವಕ್ಕಿಗಳ್ ಜಲಕೇಳಿಗೆ ಮೊಗಸಿದವು (ರಾಮಾಶ್ವ. ೬೧-೨೪) ; ಬಿರಿವ ನೀರ್ವೂಗಳೊಳ್ ಬಂದುಣುವ ಪರಮೆಮೊರೆ ನೀರ್ವಕ್ಕಿಗಳ ಬೇಟದಿಂಚರದೊಡನೆ ಹೊಂಬಿ ನನ್ನನೇಳಿಪುದಲ್ತೆ ? (ಕ್ರೀರಾಮಾ. ೨೮೬-೪೬). **ನೀರಕ್ಕಿ** : ನೀರಕ್ಕಿಯೆಂದು ಚಾದಗೆವಕ್ಕಿ ನಾಲ್ಕೆರಡು ವಾರಿಕಣಮಂ ಬಯಸಿ ಮೇಳಕ್ಕೆ ಬಾಯ್ವಿಡಲು (ಸೌಂದಪು. ೧೧-೩೨). **ನೀರುವಕ್ಕಿ** : "ಕವಿಃ — ನೀರುವಕ್ಕಿ, ಗುಬ್ಬಿ" (ಓಷಧಿ. ೧೯). **ನೀರುಹಕ್ಕಿ** : "ಪುಷ್ಕರಾಹ್ವಃ, ಸಾರಸಃ—೨ ಸಾರಸಹಕ್ಕಿ ಹೆಸರು. ನೀರುಹಕ್ಕಿ, ಜಲಪಕ್ಷಿ" (ಸಿದ್ಧಾಂತಿ. ೧೬೦). [ನೀರ್+ಪಕ್ಕಿ]

ನೀರ್ವಚ್ಚಲ್ (ನಾ). ನೀರಿನ ಕಾಲುವೆ,—ತೋಡು : ಪಡುವಣೇರಿ ಮೇರೆ ಬಡಗಲು ಹಳ್ಳದಿಂ ಪಡುವ ಮುಂದಾಗಿ ಪರಿದ ನೀರ್ವಚ್ಚಲೆ ಮೇರೆ (ಎಕ. VII, ಶಿಕಾರಿ. ೧೩೪-೫೦ ; 1194). [ನೀರ್+ಬಚ್ಚಲ್]

ನೀರ್ವಟಿಗ (ನಾ). ಅಂಬಿಗ ; ನಾವಿಕ ; ಬೆಸ್ತ : ಕೊಲ್ಲಟಿಗಂ, ಗಟಿವಟಿಗಂ, ದೀವಟಿಗಂ, ನೀರ್ವಟಿಗಂ (ಶಬ್ದಾನು. ೪೪೧ ಪ್ರಯೋ).

[ನೀರ್+ < -ಅಟಿಗ]

ನೀರ್ವಟ್ಟೆ, ನೀರ್ಬಟ್ಟೆ (ನಾ). ನೀರಿನ ಮುಖಾಂತರ ಸಾಗುವ ದಾರಿ ; ಜಲಮಾರ್ಗ : ನೀರ್ವಟ್ಟೆಯೊಳ್ ನಡೆದು ಕಳಶಪುರ . . . ಬಬ್ಬರಾದಿ ದ್ವೀಪ ದಶಪೂರ್ವಾಪರ ಸಮುದ್ರೋಪಕಂತದ ಪಟ್ಟಣಂಗಳಂ ಪೊಕ್ಕು (ಬಂಹರಿ. ೪-೧೩ ವ) ; ಕೆಲವು ದಿವಸಕ್ಕೆ ಬಂಧುದತ್ತಂ ನೀರ್ವಟ್ಟೆಯೊಳ್ಬರುತ್ತಂ. . . ಮುಂ ಪೋದ ಪೊಳೆಗೆ ಬಂದು(ಪುಣ್ಯಾಸ್ರ. ೮-೧೦ ವ) ; ಮರುದಧೀನದೆ ಚಮತ್ಕರಿಸಿ ನೀರ್ವಟ್ಟೆಯೊಳಗಿರದೆ ಚರಿಸುವ ಪಡಂಗುಗಳ ಗಡಣಮೊ . . . ಎನೆ ಚತುರ್ಬಲಮೆಯ್ದಿತು (ಪದ್ಮರಾ. ೬-೨೮) ; ಶ್ರೀಕಲ್ಯಾಣೀತೀರ್ಥದೊಳ್ಮುಂ ಸುಚರಿತಂ ಸುರಸರಿತ್ಪೂರದೊಳೆಟ್ಟು ಪೊಱಮಟ್ಟ ನೀರ್ವಟ್ಟೆಯ ಬಾಯ್ವರೆಗಂ ಮುಟುಂಗಿ ನೆಗಪಿ ನೀಡುವ ನೀರಾನೆಯ ಬಱಿಕೆಯ್ಯೊಳೆಸೆವ ಪೊಂದಂಬಿಗೆಯ ತೀರ್ಥಮನೆ ತರ್ಪುದೆಂದುಂ (ಚಿಕವಂ. ೧೦೮-೧೧). **ನೀರ್ಬಟ್ಟೆ** : ಮುನ್ನೀರ್, ತೀರ, ಕರೆ, ಎಲ್ಲೆ—ಮುಂತಾದುವು ಅವರು ನೀರ್ಬಟ್ಟೆಯನ್ನು ತಿಳಿದವರಾಗಿದ್ದರೆಂದೂ . . . ಸಾರುತ್ತದೆ (ಭಾಷಾಶಾ. ೨೫೬) ; ಭೋರ್ಗರೆವ ಮೌನ, ನೀರ್ಬಟ್ಟೆಯ ಸಿಡಿಸುವ ಕಿಡಿ ! (ಅಮತಂ. ೫೮-೮). [ನೀರ್+ಬಟ್ಟೆ$_1$]

ನೀರ್ವಡೆ (ಕ್ರಿ). ನೀರನ್ನು ಪಡೆ,—ಹೊಂದು : ನೀರ್ವಡೆಯದ ಗಿಡುವಿನಂತೆ ಮುಖಂ ಬಾಡಿ (ಧರ್ಮಾಮೃ. ೩-೩೫). [ನೀರ್+ಪಡೆ$_1$]

ನೀರ್ವತ್ತಿಗೆ, ನೀರವತ್ತಿಗೆ, ನೀರೊತಿಗೆ (ನಾ). ಒಂದು ಬಗೆಯ ಸಿಹಿ ಭಕ್ಷ್ಯ ; ಆವಿಯಲ್ಲಿ ಬೇಯಿಸಿದ ಹೋಳಿಗೆ : ಬಟ್ಟಗಳಸಿಗೆಗೆ ನೀರ್ವೊಯಿದು ಪಾವಡೆಯುಮಂ ಕಟ್ಟವೊಲೆಗೆತ್ತಿ ಲತೆಯಿಱಿದು ಹೊಸ ಹೋಳಿಗೆಯನಿಟ್ಟು ಬೇಯಿಸಲು ನೀರ್ವತ್ತಿಗೆಯ ಪೆಸರನಾಂತು ಸುಖತರ ಮಾಗಿರ್ಪುದು (ಸೂಪಶಾ. ೧-೧೯). **ನೀರವತ್ತಿಗೆ:** ನೀರವತ್ತಿಗೆ ತಱಗು ಕಡಬುಗಳೇರಿಗಳನೊಟ್ಟದರೆ ಕಾಣುತ ಭೋರನೊಂದೇ ತುತ್ತಿನಲಿ ಕಬಳಿಸಿದ ಗುರುರಾಯ (ಪ್ರಭುಲೀ. ೨೩-೧೮). **ನೀರೊತಿಗೆ :** ಸಣ್ಣಕ್ಕಿ ಬೋನ ಬೆಣ್ಣೆ ಕಾಸಿದ ತುಪ್ಪ ನುಣ್ಣನೆ ಕಡುಬು ನಿ[ನೀ]ರೊತಿಗೆ ಬಣ್ಣ ಬಣ್ಣದ ನಾನಾ ಅಡಿಗೆಯಯೆಡೆಗಳ ಬಿನ್ನಣ (ದೇವಾಂಪು. ೫-೨೨೮).

[←ತೆಲು. ನೀರುವತ್ತಿಗ]

ನೀರ್ವನಿ, ನೀರುಹನಿ, ನೀರ್ಪನಿ (ನಾ). ನೀರಿನ ಹನಿ ; ಜಲಕಣ; ಸೀಕರ : "ಸಲಿಲಬಿಂದುವೆ ನೀರ್ವನಿ" (ಕರ್ಣಾನಿ. ೫೭) ; ನೀರ್ವನಿಯಂ ಸುರಿವಂಬುದಾಳಿ ಮಂಡಳಿಸಿದ ಮೇಘಕಾಲಮನೆ ಕಣ್ಗೆಸೆದಂ ನೃಪರೂಪ ಚಂದ್ರಮಂ (ಕಾದಂಪೂ. ೫೮೯) : ಆಡರಿ ಕಟಾಕ್ಷಚಂದ್ರಿಕೆ ಪಳಂಚೆ ಗವಾಕ್ಷದ ಚಂದ್ರಕಾಂತದಿಂದುಡುಗದೆ ಸೋರ್ವ ನೀರ್ವನಿಗಳ್ (ಮಲ್ಲಿಪು. ೨-೭೦) ; ಮಿನುಗುವ ನಿಟ್ಟೆಸಟೊಳ್ ನೀರ್ವನಿಗಳನೊಳಕೊಂಡು ತೋರ್ಪ ಕೆಂದಾವರೆಯಂ ನೆನೆಯಿಸಿದುದು . . . [illegible] ಮಲ್ಲಡಿಯುವಳಾ (ಕಬ್ಬಿಕಾ. ೭೪) ; ಮಂಡೆಯೊಳಗಣ ಗಂಗೆ ಕೆದಱಿ ನೀರ್ವನಿತಲೆಗೆ ಮಂಡಿಸಿದ ಮೌಕ್ತಿಕದ ಸೂಸಕಂ ಗಗನದೊಳು ಖಂಡಶಶಿಯೆಡೆಗೆ ನಕ್ಷತ್ರವಾಜಡೆಯೆಡೆಗೆ ಮಲ್ಲಿಗೆಯ ದಂಡೆ (ವೀತೃಪು. ೫-೮-೧) ; ನಳಿನಂ ಶುಕ್ತಿಕೆ ತಳ್ತ ನೀರ್ವನಿಗಳೇ ನುಣ್ಮುತ್ತು. . .ಕಣ್ಗೊಳಿಪನ್ನಂ ಕಮಳಾಕರಂ ತಳೆದುದಾ ರತ್ನಾಕರಾಕಾರಮಂ (ತಬಶಂ.೨-೫೫). **ನೀರುಹನಿ :** ಬೆಳಗಿನ ಬಿಸಿಲಿಗೆ ಹುಲ್ಲಿನ ಮೇಲಿನ ನೀರುಹನಿ ಗಾಜಿನ ಮಣಿಯಂತೆ ಹೊಳೆಯುತ್ತಿತ್ತು (ಕೂಡಿ). **ನೀರ್ಪನಿ :** ಭಗಣದ ಲೆಕ್ಕಮಂ ಮಟೆಯ ನೀರ್ಪ[ಪಾತಾಂ. ರ್ಪ]ನಿಯಂ . . . ಪವಣ್ಗಳಂ ಪವಣಿಸಲ್ ಬಗೆದರ್ಪನೆ ಗಾಂಪನಾಗನೇ (ಪಂರಾಮಾ. ೧೩-೧೧). [ನೀರ್+ಪನಿ$_2$]

ನೀರ್ವನೆ, ನೀರುಮನೆ (ನಾ). ೧. ಸಮುದ್ರ ; ಕಡಲು : ಹೇಡಿ ದಾನವಶಿಶುವ ನೀರ್ವನೆಯೊಳಂ ಬಿಸುಟು ಕೇಡಿಲ್ಲ ತನಗೆಂದು ನಾರದನ ಪೊಲಿದು ಕೊಂಡಾಡುತಂ ತತ್ಪುರಕೆ ಪೋದಂ(ಸನಮೋ.೧೧-೫೨). **ನೀರುಮನೆ :** ೨. ಸ್ನಾನದ ಮನೆ ; ಬಚ್ಚಲುಮನೆ : ಪ್ರಭಾವತಿಯು ಎದ್ದು ನೀರುಮನೆಗೆ ಹೋಗಿ ಒಂದು ತಪ್ಪಲೆಯಲ್ಲಿ ಬಿಸಿನೀರು ತೆಗೆದುಕೊಂಡು ಮುಂದಿನ ಜಗುಲಿಯ ಮೇಲಕ್ಕೆ ಹೋದಳು (ಚಂಗಾಳ್ವ. ೬).

[ನೀರ್+ಮನೆ]

ನೀರ್ವನೆಯ (ನಾ). (ಕ್ಷೀರ) ಸಮುದ್ರವೇ ನಿವಾಸವಾಗಿ ಉಳ್ಳವನು ; ವಿಷ್ಣು : "ನೀರ್ವನೆಯನೆನೆ ವಿಷ್ಣು" (ಕಶರ. ೫೩).

[ನೀರ್ವನೆ+-ಅ$_7$]

ನೀರ್ವರಿ, ನೀರುವರಿ$_1$ (ನಾ). ನೀರು ಹರಿಯಲು ಮಾಡಿರುವ ನಾಲೆ ; ಕಾಲುವೆ ; ತೋಡು : ಯೀಪಟಂ ನೀರ್ವ್ವರಿಯೊಳ್ಬೆಳೆವ ಮಣ್ಣುಳ್ಳನಿತಱೊಳ ಮತ್ತಲ್ಗೊರ್ಕ್ಕಣ್ಡುಗಂ ಗೆಯ್ದು ಕೊಟ್ಟುಗು (ಎಕ. VII, ಶಿಕಾರಿ. ೨೮೪-೬ ; 902) ; ಜಳಧಿಯುಮಂ ಲಕ್ಷ್ಮೀದಯಿತಂ ನೀರ್ವರಿಯಿಂದಾದಮೆ ಕಿಱಿದೆಂದು ಬಗೆದು ನೋಡಿದಂ (ಆದಿಪು.೧೨-೭೫); ನಾಯವ್ಯದ ದೆಸೆಯೊಳು ಗುರಿಯ ಪಳ್ಳಂ ಬಡಗಲಾ ಪಳ್ಳಮೆ ನೀರ್ವ್ವರಿಯಾಗೆ ಮೂಡಲೆರಡುಂ ಪಳ್ಳದ ಕೂಡಲೆ ಮೇರೆಯಾಗೆ (ಸೌಇಇ. XI-i, ೫೨-೫೭ ; ಸು. 1007) ; ಮೂಡಣ ಬಡಗಣ ಕೋಣೊಳ್ ಮೂಡಲ್ ಮೇಣ್ ಪಡುವಲಾಗೆ ನೀರ್ವರಿ ಶುಭಮಂ ಮಾಡುಗುಂ (ಲೋಕೋಪ. ೩-೧೭) ; ಒಕ್ಕಲ್ಗೆಱೆ ಜಲರಾಸಿಯೆನೆ ಪರಿವ ನೀರ್ವ್ವರಿ ಭಾಸುರಮೆನೆ ಬೆಳಗು ಗಂಧಸಾಳಿವನಂಗಳ್ (ಎಕ. VI, ಕಡೂರು. ೩೫-೨೮ ; 1136). **ನೀರುವರಿ$_1$:** ಪಡುವಣಸೀಮೆ ರಾಮೇಶ್ವರದೇವರ ತೆಂಕ ನೀರುವರಿಯ ತಳವೃತ್ತಿಯ ಮೂಡಣ ಕಡೆಯೆ ಮೇರೆ (ಎಕ. VII, ಶಿಕಾರಿ. ೩೨೩-೨೩ ; 1046) ; ಆ ಕೆಱೆಯ ಕೆಳಗಣ ಗದ್ದೆ ಬೆದ್ದಲೆ ನೀರುವರಿ ನೀರುಮಣ್ಣು ಸಹಿತವಾಗಿ ಜಗತೇಶ್ವರ ದೇವರಿಗೆ ಕೊಟ್ಟ ದತ್ತಿ (ಎಕ.XI,ದಾವಣ. ೪-೨೨; 1143) ; ನಾಗರಸರು ಪುಂದಿಂ ಪಡುವಲು ತೊಱೆಯ ಕೂಡಿದ ಹಳ್ಳ ನೀರುವರಿ ಎ ಮೇರೆಯಾಗಿ (ಎಇ. XXI, ೨-೬೮ ; 1260) ; ನಯಿರುತ್ಯದಲು ತಲೆವಿಡಿಗನ ಗುಡಿಯ ತುದಿಯ ನೀರುವರಿಯಲೂ ನಟ್ಟ ವಾಮನೆ ಮುದ್ರೆಯ ಕಲ್ಲು (ಎಕ. VIII, ತೀರ್ಥಹ. ೧೩೩-೧೯ ; 1404).

[ನೀರ್+ಪರಿ$_3$]

ನೀರ್ವಲೆ, ನೀರುವಲೆ (ನಾ). ನೀರಿನಲ್ಲಿ ಹರಡುವ ಒಂದು ಬಗೆಯ ಬಲೆ,—ಜಾಲ : ಹಾಸುವಲೆ ನೀರ್ವಲೆ ಮೇಲ್ವಲೆ ಸೊರ್ಕುವಾರ್ದು ಪೆರ್ಬಲೆ ಬಿಡುವಾರು ಸೋವಲೆಯೆಂಬಿನಿತಂ . . . ಒಡ್ಡಿದರೆಯ್ದೆ ಪುಳಿಂದ ನಾಯಕರ್ (ಮಲ್ಲಕಾ. ೩-೨೫೬) ; ಇಟ್ಟ ಗದೆ ಪೆರ್ಬಲೆ ನೀರ್ವಲೆ ಬಿಲ್ಗಳಂಬು ಬೆಂಬತ್ತುವ ಸಾಳುವಂ ಗಿಡಗಂ[illegible]೧-೭೭). **ನೀರುವಲೆ:** ಸುಲಭವಲ ನೀರುವಲೆ ಶಶಕವಲೆಯು (ರುಕ್ಮಾಂಗ. ೧೦-೧೯).

[ನೀರ್+ಬಲೆ$_2$]

ನೀರ್ವಸೆ (ನಾ). (ಶೈತ್ಯೋಪಚಾರದ) ತಂಪಾದ ಹಾಸು ; ಶೀತಶಯ್ಯೆ : ನಿನ್ನಂ ಕಂಡು ಕಣ್ಸೋಲ್ತತಿಶಯ ಮದನಾಸ್ತ್ರಾಗ್ನಿ ಸಂತಾಪದಿಂ ಚಂದ್ರಿಕೆಯೊಳ್ × × × ನೀರ್ವಸೆಯೊಳೊಡಲನಳ್ಳಾಡುವ ಪೋಲ್ ಮಾಡಿದೈ (ದಶಕು. ೮-೨೬೯). [ನೀರ್+ಪಸೆ$_2$]

ನೀರ್ವಾಡಮಲ್ಲಿ (ನಾ). ಒಂದು ಬಗೆಯ ಸಸ್ಯ : ನೀರುರ್ಬೇಗದ ಬಂಟ, ನೀರ್ವಾಡಮಲ್ಲಿ (ಮೈಔಗಿ. ೪೦-೭೮೫).

[ನೀರ್+ವಾಡಮಲ್ಲಿ$_0$(P←ತಮಿ. ವಾಟಾಮಲ್ಲಿ)]

ನೀರ್ವಾನಸ, ನೀರ್ಮಾನಸ, ನೀರ್ಮಾನಿಸ, ನೀರ್ವಾನಿಸ (ನಾ). ೧. = ನೀರ್ಮನುಜ : ಮಾನಸರೆಲ್ಲಂ ನೀರ್ವಾನಸರೆನಿಸೆಯುಂ (ಅಜಿಪು. ೪-೬೭ ಪ) ; ನೀರ್ವಾನಸಂ ಮೆಲ್ದು ಬಿಸುಡೆ ಪಸರಿಸುವ ತೆರೆಗೊನೆಯೊಳ್ ತೇಂಕಿ ಬರ್ಪ ಜಳಮೃಣಾಳನಾಳಮಂ ಜಳವ್ಯಾಳಮೆಂದು ಕೆಲದ ಬಿಲದಿಂ ಪಿಡಿಯಲೆಂದು ಧೀಂಕಿಡುವ ವಿಷಾಪಹಾರ ಶಾಲೂರಜಾಲಂಗಳೊಳಂ (ಚಂದ್ರಪು. ೫-೪೦ ಪ). **ನೀರ್ಮಾನಸ :** ೧. ನೀರ್ಮಾನಸರಂತೆ ನೀರೊಳ್ ನೆಲಸಿರ್ದುದಕವಾಸಿಗಳುಮಂ . . ನೋಡುತಿರ್ದ ರಾಜಕುಮಾರನಂ ಅಲ್ಲಿರ್ದುದೊಂದು ರಾಜಕೀರಂ ಕಂಡು (ಪಂಚತಂ. ೧೧೯-೧೨); ಅಮರ್ದ್ದಿನ ಬಲು ನೀರ್ಮಾನಸರ ನೆಱವಿನಿಂದಂಭೋನಿಧಿ ಬಳಸಿತ್ತು ಕಾಪಿನಂದದಿನಿಳೆಯಂ (ಕಇ. IV, ೧-೯ ; 1204). **ನೀರ್ಮಾನಿಸ :** ೧. ನಯನೋತ್ಸಾಹಮನಿತ್ತು ದೇಹರುಚಿಯಿಂದೆಯ್ತಂದನಾಕಾಶಗಂಗೆಯ ನೀರ್ಮಾನಿಸನೆಂಬಿನಂ . . . ನಾರದಂ (ಪಂರಾಮಾ. ೩-೧೮) ; ಪೊಸಗಾರ ತಂದಲೊಳ್ಳರಮಸಮಾಧಿಯೊಳೊಂದಿ ಮರದ ಮೊದಲೊಳ್ ನೀರ್ಮಾನಿಸನಂತಿರೆ ಬಗೆಯದೆ ಸರ್ವಸಾಧುಗಳನಾ ನರೇಂದ್ರವಧುವರ್ಚಿಸಿದಳ್ (ಮಲ್ಲಿಪು. ೪-೪೩). ೨. ಗಂಗಾದೇವಿಯ ಮಗ ; ಭೀಷ್ಮ . ೩. ನೀರಿನಲ್ಲಿ ನೆಲಸಿರುವವನು ; ವಿಷ್ಣು . ೨, ೩ : ನೀರ್ಮಾನಿಸಂ ನದೀಜಂ ನೀರ್ಮಾನಿಸನದ್ಧಿಶಯನನದು ಕಾರಣದಿಂ . . . ಭೀಷ್ಮರ ಸಹಧರ್ಮದ ಕೆಳೆಕೊಂಡು ಕೊನೆದುದೀ ಕೇಶವನಂ (ಜಗವಿ. ೧೬-೧೮). **ನೀರ್ವಾನಿಸ :** ೧. ಮಾನಸಿಕೆಯ ದೊರೆಗಿಡೆ ನೀರ್ವಾನಿಸ[ಪಾಠಾಂ. ನೀಂ ಮಾನಸ]ನೆನೆ ನೀರೊಳೆಲವೊ ನೀನುಂ ಮಿಾನೆಂಬೀ ನೆವದಿರ್ದೆ (ಪಂಪಭಾ. ೧೩-೭೯) ; ಅವರಂ ತವಿಸಲ್ ಬಟಿಸಂದು ನಿಂದು ವಂಡಾನೃಪಸೂನುವಿಕ್ರಮಕೃಶಾನುವದಲ್ಲದೊಡೆಲ್ಲಿ ಬೇಱೆ ನೀರ್ವಾನಿಸರಾರೊ ಬಡವಾನಳನೆಂಬುದದೇನೋ ತೋಱುರೇ (ಪುಷ್ಪಪು. ೫-೫೩)

[ನೀರ್ + ಮಾನಸ$_1$]

ನೀರ್ವಾನಸೆ, ನೀರ್ವಾನಿಸೆ (ನಾ). ೧. ನೀರಿನಲ್ಲಿ ವಾಸಿಸುವವಳು: ಪೆರ್ಚುಗೆಯ ಕಡುಹಿವದ ಕೋಡಿಂಗಗಿದು ಭಾಸ್ಕರಂ ತನ್ನ ನಚ್ಚಿನ ಕಮಲಿನಿಯಂ ನೀರ್ವಾನಸೆಯಂ ಬಿಟ್ಟು ಕೈಗೆಟ್ಟು ದೆಸೆಗೆಟ್ಟು ತುರಿಪದಿನೋಡಿ (ರಾಮಾಶ್ವ. ೧೧೫-೯). ೨. ನೀರಿನಲ್ಲಿ ಹುಟ್ಟಿದವಳು ; ಲಕ್ಷ್ಮಿ : ನೀನುದಧಿಯೊಳೊರ್ವಳ್ನೀರ್ವಾನಸೆಯಂ ಪಡೆದ ಗರ್ವದಿಂದಾನುಂ ಲಕ್ಷ್ಮೀನಿಳಯನೆನೆಂದಿರ್ದಪೆಂ (ಗದಾಯು. ೬-೫೪) ; ನೀರ್ವಾನಸೆಯಂತೆ ವಿಜಯವಧು ನೆಲಸಿರ್ಪಳ್ (ಚಂದ್ರಪು. ೩-೨೦). ೩. ನೀರಿನ ನಿವಾಸಿಯೆಂದು ನಂಬಲಾದ ಮನುಷ್ಯವರ್ಗಕ್ಕೆ ಸೇರಿದ ಹೆಂಗಸು ; ಜಲಕನ್ಯೆ. **ನೀರ್ವಾನಿಸೆ :** ೧. ನೀರ್ಗಿಚ್ಚು, ಊರ್ವೇಲಿ, ನೀರ್ವಾನಿಸೆ, ಕಾರ್ಗಾಲ್ (ಶಮದ. ಕಿ. ೧೮೪ ಪ್ರಯೋ). [ನೀರ್ವಾನಸ + -ಎ$_2$]

ನೀರ್ವಾನಿಸ 'ನೀರ್ವಾನಸ' ನೋ.

ನೀರ್ವಾನಿಸೆ 'ನೀರ್ವಾನಸೆ' ನೋ.

ನೀರ್ವಾಯ್ (ಕ್ರಿ). ನೀರು ಹರಿ,—ಪ್ರವಹಿಸು : ಮೆಟ್ಟಲ್ಕೆ ಬಲ್ಪೊಂದೆಡೆಯಿಲ್ಲೆಂಬಂತೆ ಪಂಕಂ ಮಸಗೆ ನೆನೆದು ನೀರ್ವಾಯುತುಂ ನಾಡೆಯುಂ ಬೇರ್ಗೆಡೆದತ್ತಂ ಬೆಟ್ಟುಗಳ್ ಕುಕ್ಕುಱುಸೆ (ಕುಸುಮಾ. ೬-೩೫). [ನೀರ್ + ಪಾಯ್$_1$]

ನೀರ್ವಾವು, ನೀರುವಾವು, ನೀರುಹಾವು (ನಾ). = ನೀರೊಳ್ಳೆ : "ಅಲಗರ್ದಃ, ಜಳವ್ಯಾಳಃ—ಈ ೨ ನೀರ್ವಾವು" (ಹಲಾಯು. ೧೦೬-೨೧); ನೆನೆ ನಿನ್ನ ಮಹಿಮೆಯಂ ನೀನೆನಿತನಿದಂ ಕೊಂಡುಕೊನೆವೆ ನೀರ್ವಾವನಿದರ್ಕಿನಿತೇಕೆ ಮಾನುಷತ್ವಮನೆನಸುಂ ನಟಯಿಸುವೆ ಕೃಷ್ಣ (ಜಗವಿ. ೩-೯೯) ; ತೆರೆಯಿವು ನೀರ್ವಾವಿವು ಸಲಿಲದ ಮದಕರಿಯಿವು (ಸೂಬಸೋ. ೧೫-೩೧) ; ಮೊಸಳೆ ನೀರಾನೆ ನೀರ್ವಾವು ನೀರುಡುಗಳ ಸಮೂಹದಿಂದೆ . . . ಕಡಲ್ ಕಣ್ಗೆಸೆದುದು (ಚಿಪಪು. ೨-೩). **ನೀರುವಾವು :** "ತೋಯಸರ್ಪ—ನೀರುವಾವು" (ಓಷಧಿ. ೭೩). **ನೀರುಹಾವು :** ನೀರುಹಾವಿನಿಂದ ವಿಷವೇರುವುದಿಲ್ಲ (ರೂಢಿ). [ನೀರ್ + ಪಾವು$_1$]

ನೀರ್ವಿಜ್ಜಣಿಗೆ (ನಾ). ನೀರಿನಲ್ಲಿ ಅದ್ದಿದ ಬೀಸಣಿಗೆ : ತೆರೆಗಳ್ಳೆಲ್ಪಿಂದೆ ನೀರ್ವಿಜ್ಜಣಿಗೆಯ ತೆಱದಿಂ ಬೀಸೆ ಹಂಸದ್ವಯಂಗಳ್ ತರದಿಂ ಕಣ್ಗೆಯ್ಯೆ (ಕಾದಂಉ. ೧೪೮). [ನೀರ್ + ಬಿಜ್ಜಣಿಗೆ]

ನೀರ್ವಿಡಿ (ಕ್ರಿ). ನೀರನ್ನು ಹಿಡಿ,—ಹಿಡಿದುಕೊಳ್ಳು : ಬಗಸೆಗೈಗಳಲಿ ನೀರ್ವಿಡಿದು ಶ್ರೀರಂಗೇಶ ಸೊಗಸುಗಾತಿಯರ ಮೇಲಿಡಲು (ಕಂಸವಿ. ೨೫-೧೨೩) ; ಲಾಮಂಚದಮಳ ಚಪ್ಪರದಿ ಹೇಮಾಂಬುರುಹಮೊಗ್ಗೆ ಮೊಲೆಯರು ನೀರ್ವಿಡಿದಾ ಮಹಾಸ್ಥಲಗಳೊಪ್ಪಿದುವು (ನವಮೋ. ೨-೨೮).

[ನೀರ್ + ಪಿಡಿ$_1$]

ನೀರ್ವುಗಿಲು (ನಾ). (ಕೊಲ್ಲಿಯಿಂದ) ನೀರು ಹೋಗುವ ಬಾಗಿಲು, —ದ್ವಾರ : ಪೆಗ್ಗೊಲ್ಲಿಯ ನೀರ್ವ್ವುಗಿಲು ಬಡಗಣ ದೆಸೆಯೊಳ್ ಅಂತೆ ಬರ ಪೇರೊಬ್ಬೆ (ಮೈಅರಿ. ೧೯೨೧, ೧೦-೧೮೪ ; 967).

[ನೀರ್ + ಪುಗಿಲು$_2$ (< ಪುಗಿಲ್$_1$)]

ನೀರ್ವುಗಿಸು 'ನೀರ್ವೊಗಿಸು' ನೋ.

ನೀರ್ವುಗು 'ನೀರ್ವೊಗು' ನೋ.

ನೀರ್ವುಟ್ಟು (ನಾ). ದೋಣಿಯನ್ನು ನಡೆಸುವ ಸಾಧನ ; ಹುಟ್ಟು: ನೀಲಾಬ್ಜಂ ನೀರ್ವುಟ್ಟೆನೆ ನೀಲಾಬ್ದಮನಡರ್ದು ತಳರ್ವ ಬಿಜ್ಜೋದರಿ ಕಣ್ಗೋಲಮನಮರ್ಚದಳ್ ಪಱುಗೋಲೊಳ್ ಪೋಪಂತೆ ಗಗನಮೆಂಬಂ ಬುಧಿಯೊಳ್ (ಶಬಶಂ. ೧-೪೩). [ನೀರ್ + ಪುಟ್ಟು$_3$]

ನೀರ್ವೂ, ನೀರ್ಪೂವು, ನೀರ್ವೂವು (ನಾ). ನೀರಿನಲ್ಲಿ ಅರಳುವ ಹೂವು ; ತಾವರೆ, ನೈದಿಲೆ ಇತ್ಯಾದಿ : "ಕೆಸರ್ಮಲ್ಲಿಗೆ, ಸಿರಿಯ ಕರುಮಾಡಂ, ತಾಮರೆ, ನೀರ್ವೂ—ಈ ೪ ಕಮಲಕ್ಕೆ ಪೆಸರ್" (ಕಶಸಾ. ೮-೧೬೫) ; ಸೂಸಿ ಪಾಸಿಱುದು ಬಣ್ಣವುರಂ ತೀವಿದಂತೆ ಬೆಡಂಗುವಡೆದ ಬಣ್ಣವಣ್ಣಿಗೆಯ ನೀರ್ವೂಗಳ ರಜಂಗಳುಮನೊಳದೊಂಡಿನ ಪಾಲ್ಗಳುಮಂ ಪೀರ್ದಿಂಗೊರಲ್ಗಳಾದ ನೀರ್ವಕ್ಕಿಗಳ ಸುಸಿಲಮಸಕದಿಂಚರಂಗಳುಮಂ (ಕಾದಂಉ. ೫೨೬) ; ತರುಣ ಬಿಸಸದನಮಬ್ಜಾಕರ ಕರಿ ಮೇಗೊಟ್ಟಿಕೊಂಡುದದು ನೀರ್ವೂವಂ ಸರಸಿರುಹಪತ್ರಕರ್ಣಂ ತರಂಗತರಮುಚ್ಯಮಾನ ಶೀಕರನಿಕರಂ (ಅರ್ಧನೇ. ೫-೧೦೪) ; ಬೆಂಚೆಗಳೊಳರೆವಿರಿದ ನೀರ್ವೂಗಳ ಕಂಪಿಂಗೆ ಮಾಣದೆ ಮುಸುಱು ಮೊಱೆವ ಪೆಣ್ದುಂಬಿಗಳ ಚೆಲ್ವನೊಳಕೊಂಡಿರ್ಪುದು (ಕಬ್ಬಿಕಾ. ೧೮) ; ನೀರ್ವೂವಿಡಿದು ರೈಯೆನೆ ಮೆಱೆವ ನಾಲ್ದೆಸೆಯೊಳಿರ್ದರಗೆಱೆಯ ಸೊಬಗಿಂದ (ಸಾಳ್ವಭಾ. ೪-೨೯) ; ಸಾವರ್ಗೆ ನೋವವರ ಜಾಳಿಗೆವೊನ್ನಂ ಕವರ್ವೊಂದು ಬಗೆಯೊಳಾರಯ್ವ ನೆಂಟರ್ಗೆ ದೊರೆವಂದ ಬಂಡುಣಿಗಳ್ ನೀರ್ವೂಗಳಂ ಸೇವಿಸುತಿರ್ದುವು (ರಾಮಾಶ್ವ. ೮೩-೧೦). **ನೀರ್ಪೂವು:** "ಸಿರಿಯ ಕರುಮಾಡ ನೀರ್ಪೂ[ಪಾಠಾಂ. ರ್ವೂ]ವು ತಾವರೆ. ಪೊಗಟೆ ಕೆಸರ್ಮಲ್ಲಿಗೆಯನಲ್ತಾವರೆಗೆ ಚಾರುತರಮಪ್ಪ ನಾಮಮಕ್ಕುಂ" (ಕಬ್ಬಿಕೈ. ೧೨). **ನೀರ್ವೂವು :** "ಸಿರಿಯ ಕರುಮಾಡಮುಂ ತಾವರೆ 'ನೀರ್ವೂವೆನ್ನುತಿರದೆ ಕೆಸರ್ಮಲ್ಲಿಗೆಯೆಂದುಱೆ ಪೇಟಲದು ಸರೋಜಂ" (ಕವಿಕಾ. ೯೪) ; ನೀರ್ವೂವುಗಳ ಸೌಸವದ ಕಯ್ಗಾಣ್ಕೆಯಂ ಸಲ್ಲೀಲೆಯಿಂ ಪಿಡಿದುಕೊಂಡು (ಪದ್ಮರಾ. ೮-೪೨). [ನೀರ್ + ಪೂ$_2$]

ನೀರ್ವೂವು 'ನೀರ್ವೂ' ನೋ.

ನೀರ್ವೂವೊಕ್ಕುಟ (ನಾ). ಹೊಕ್ಕುಳಲ್ಲಿ ಕಮಲವನ್ನುಳ್ಳವನು ; ಪದ್ಮನಾಭ ; ವಿಷ್ಣು : "ರಕ್ಕಸವಗೆಯಂ . . . ನೀರ್ವೂ [ಪಾಠಾಂ. ತಾವರೆ] ವೊಕ್ಕುಟನಲರ್ಗಣ್ಣಂ ಹರಿಯಕ್ಕುಂ" (ಚತುನಿ. ೭).

[ನೀರ್ವೂ + ಪೊಕ್ಕುಟ್ + -ಅ$_7$]

ನೀರ್ವೆಣ್, ನೀರ್ವೆಣ್ಣು (ನಾ). ೧. ನೀರಿನಲ್ಲಿ ವಾಸಿಸುವ ಹೆಣ್ಣು ; ಜಲಕನ್ಯೆ : ತೆಂಗಿನೆಳನೀರ ಕೂಡೆ ಕರೆಗಣ್ಮುವ ಕೊಳಂಗಳೊಳವೊಕ್ಕು ತಾವರೆಯ ಪಚ್ಚೆಲೆಯಂ ಮೆಯ್ಯೊಳಾಂತು ನುಣ್ಣೆತಪ್ಪೆಳವಿದಿರ ಬಣ್ಣಮಂ ತಳೆದ ನೀರ್ವೆಣ್ಣಂತಿರ್ಪಳ್ (ಕಬ್ಬಿಕಾ. ೩೧೫). ೨. "ಗಂಗಾದೇವಿ" (ಪ್ರಭಣ್ಣ). **ನೀರ್ವೆಣ್ಣು** : ೧. ಮುಗಿಲುಕಡಲಿನಲ್ಲಿ ನೀರ್ವೆಣ್ಣುಗಳೊಡನೆ ಚಲ್ಲಾಟವಾಡುತ್ತ ಅವನೂ ಹೊರಟ . . . ಪಡುವಲ ದಿಕ್ಕಿಗೆ ಮುಖನಾಗಿ (ಸುವಸಂ. ೨೩). [ನೀರ್ + ಪೆಣ್]

ನೀರ್ವೆಣ್ಣು 'ನೀರ್ವೆಣ್' ನೋ.

ನೀರ್ವೆರಸು, ನೀರು ಬೆರಸು (ಕ್ರಿ). ೧. ನೀರು ಸೇರು ; ನೀರು ಕೂಡು : ಪಾಲಿಂಗೆ ಪಾಲ್ಕೆನೆಗಟ್ಟವೋ ನೀರ್ವೆರಸಿದವೊ ಅರೋಗಿಸುವ ಬುದ್ಧಿ ಹುಟ್ಟದೋ (ಬಸಪು. ೧೪-೯). **ನೀರುಬೆರಸು** : ೨. ನೀರನ್ನು ಸೇರಿಸು,—ಮಿಶ್ರಮಾಡು : ಸ್ವಲ್ಪ ಭತ್ತವನ್ನು ತಂದು ಅದನ್ನು ಚೆನ್ನಾಗಿ ಕುಟ್ಟ ನೀರು ಬೆರಸಿ . . . ತಂದು ಅವಳ ಬಾಯಿಗೆ ಹಿಡಿದ (ಅನಾಥೆ. ೧೭). [ನೀರ್+ಬೆರಸು$_1$(<ಬೆರೆಯಿಸು)]

ನೀರ್ವೆಳಸು (ನಾ). ನೀರಿನಲ್ಲಿ ಬೆಳೆದುದು : ನೀರ್ವಾವು, ನೀರ್ವೆಳಸು (ಭಾಷಾಭೂ. ೩೧ ಉದಾ). [ನೀರ್ + ಬೆಳಸು$_2$]

ನೀರ್ವೇಂಟೆ (ನಾ). ನೀರಿನಲ್ಲಿ ಆಡುವ ಬೇಟೆ ; ಮೀನು ಹಿಡಿಯುವುದು : 'ನೀರ್ವೇಂಟೆಗಾಱ' ಪರಾ. [ನೀರ್ + ಬೇಂಟೆ]

ನೀರ್ವೇಂಟೆಗಾಱ (ನಾ). ನೀರಿನಲ್ಲಿ ಬೇಟೆಯಾಡುವವನು; ಮೀನುಗಾರ : ನೀರ್ವೇಂಟೆಗಾಱರ್ ಮೀನೇಡಿಯಾಮೆಗಳ್ ಮೊದಲಾದ ಜಲಚರಪ್ರಾಣಿಗಳಂ . . . ತಂದು ಮುಂದಿರಿಪುದುಂ (ಚಿಕವಂ. ೬-೨೧).

[ನೀರ್ವೇಂಟೆ+ -ಕಾಱ]

ನೀರ್ವೇಲಿ (ನಾ). ನೀರಿನಿಂದ ಆದ ಬೇಲಿ,—ಆವರಣ : ಅಂಬುಧಿ ನೀರ್ವೇಲಿಯೆನಲು ಜಂಬೂದ್ವೀಪವನವೊಪ್ಪುಗುಂ (ಕಇ. IV, ೧-೧೧ ; 1204). [ನೀರ್+ಬೇಲಿ]

ನೀರ್ವೇಱು (ಕ್ರಿ). ನೀರನ್ನು ಹೇರಿಕೊಳ್ಳು,—ಹೊತ್ತುಕೊಳ್ಳು : ಅಗಲದ ಪರೋಪಕಾರದ ಬಗರಗೆ ನೀರ್ವೇಱು ಕೀಱು ನವಜಲದಂಗಳ್ ಗಗನಪಥಕ್ಕಡರ್ವಗ್ನಿಯ ಪೊಗೆಗಳ್ ನೆಗೆವಂತೆ ನೆಗೆದುವಂಬುಧಿಯಿಂದಂ (ಸೂಕ್ತಿಸು. ೨-೨೯). [ನೀರ್+ಪೇಱು$_1$]

ನೀರ್ವೊಗಿಸು, ನೀರ್ವುಗಿಸು (ಕ್ರಿ). ನೀರನ್ನು ಹೊಗುವಂತೆ ಮಾಡು,— ಪ್ರವೇಶಿಸುವಂತೆ ಮಾಡು : ಲಲಿತಕರತಲಮೊಂದಿ ಮೆಱೆವ ನಳಿತೋಳರುಣಜಲವಾಂತೆಸೆವ ಬಿಸವಲ್ಲಿಯಂ ನೀರ್ವೊಗಿಸೆ (ಪದ್ಮರಾ. ೩-೨೯). **ನೀರ್ವುಗಿಸು** : ನಗೆಗಣ್ಣೈದಿಲನೈದೆ ನೀರ್ವುಗಿಸೆ . . . ವೇಣೀಭರಂ ಕಾಳಪನ್ನಗನಂ ಪುತ್ತಡರ್ವಂತೆ ಮಾಡೆ ಮೆಱೆದಳ್ ಶರ್ವಾಣಿ ಸೌಂದರ್ಯದಿಂ (ರಾಜಶೇ. ೧೪-೧೪೭). [ನೀರ್ವೊಗು+-ಇಸು$_3$]

ನೀರ್ವೊಗು, ನೀರ್ವುಗು (ಕ್ರಿ). ನೀರಿನಲ್ಲಿ ಪ್ರವೇಶಿಸು,-ಹೊಗು : ತುಳ್ಕುವ ನಲ್ಲಳ್ ನೀರ್ವೊಗಲಳ್ಕಿದವೋಲ್ [ಪಾಠಾಂ. ನೀರ್ವೊಯ್ ತೆಳುಕಿದವೋಲ್]ಮುಟುಗೆ ಮುನ್ನ ಕಣ್ಬೇಟದವಳ್ ತುಳ್ಕಿದೆಡೆಗೆಯ್ದಿ ಚುಂಬಿಸಿ ತುಳ್ಕಾಡಿ ಮರುಳ್ದು ಮೂಡಿದಂ ಶಠನೊರ್ವಂ (ಸೂಕ್ತಿಸು. ೧೨-೬೩ ; ಅನಂಪು. ೭-೩೮ ನೋ) ; ಇತ್ತರಂಬಿಡಿದೊತ್ತರಿಸಿ ಬೆಳೆದ ಮರದುಱುಗಲ್ಲಿರದೆಱಗಿ ಮುಱುವ ಕರಿಕರಕ್ಕಂಜಿ ನೀರ್ವೊಕ್ಕು ನಡುಗುವಂತೆ ತೆರೆವೊಯ್ಲಿಂ ಕಂಪಿಪದಱ ಪಡಿನೆಳಲ್ ಪರಿರಂಜಿಸೆಯುಂ (ರಾಜಶೇ. ೬-೨೪ ವ). **ನೀರ್ವುಗು** : 'ನೀರ್ವುಗಿಸು' ಪರಾ. [ನೀರ್ + ಪೊಗು]

ನೀರ್ವೊಟ್ಟಣ (ನಾ). ನೀರನ್ನುಳ್ಳುದು ; ಮೋಡ : ನೆರೆದ ನೀರ್ವೊಟ್ಟಣದೊಳ್ ಬೆಚ್ಚಂತಿರೆ ಮೈವೆರ್ಚಿ ನಿಗುರ್ದದೊಂದು ನೀಲಪರ್ವತಂ (ರಾಮಾಶ್ವ. ೭೨-೧೪). [ನೀರ್ + ಪೊಟ್ಟಣ(<ಪೊಟ್ಟಳ)]

ನೀರ್ವೊನಲ್, ನೀರ್ವೊನಲು (ನಾ). ನೀರಿನ ಪ್ರವಾಹ: ನೀರೋಟ : ಬರೆದ ವಿಚಿತ್ರಪತ್ರನಿಚಯಂ ನಿಜಲೋಚನಚಂದ್ರಿಕಾಪರಂಪರೆ ನಡೆನೆಟ್ಟು ಸೋರ್ವ ಶಶಿಕಾಂತದ ಕೇರ್ಗಳ ನೀರ್ವೊನಲ್ಗಳಿಂ ಪರೆಯೆ (ಪಂಠಾಮಾ. ೧-೧೧೭) ; ಭರದಿಂದ ಪರಿವ ನೀರ್ವೊನಲೆಳೆದುಕೊಂಡೊಯ್ವುತಿರಲು . . . ಕರುಣದಿಂ ಪೋಗಿ ಕೈದುಡುಕಿ ಪಿಡಿದೆತ್ತಿ (ಸೌಂದಪು. ೩-೩೬) ; ಧರೆಯೊಳ್ ನೀರ್ವೊನಲೆಲ್ಲಮಂ ಕಡಲ್ . . . ತಾಮೊಳಕೊಂಡು ಸಲ್ವ ತೆಱದಿಂ (ಚಿಕವಿ. ೨-೬). **ನೀರ್ವೊನಲು** : ಸೋನೆವಳೆ ಸುರಿವಂದು ನೀರ್ವೊನಲು ಹರಿವಂದು ಬಿಸಿಲುಮಳೆಯಂದವನು ಕಾಣಬೇಕು (ಭಾವಜೀ. ೨೧-೪೦೩). [ನೀರ್ + ಪೊನಲ್]

ನೀರ್ವೊನಲು 'ನೀರ್ವೊನಲ್' ನೋ.

ನೀರ್ವೊಯ್, ನೀರ್ಪೊಯ್ (ಕ್ರಿ). ೧. ನೀರು ಸುರಿ,—ಹೊಯ್ಯು,—ಎರೆ : ಇದಿರಂ ಬಂದು ನಿಱಿಸಿ ಬಲಗೊಂಡು ಬಂದು ಭಟಾರರ ಕಾಲಂ ಮಹಾದೇವಿ ನೀರ್ವೊಯ್ಯೆ ಅರಸಂ ತಾನೆ ಪ್ರಕ್ಷಾಳಿಸಿ (ವಡ್ಡಾರಾ. ೭೮-೯) ; ಮಟಿಗಾಲಮುಂಟೆಂದು ತಪ್ಪಿದ ಜೋಯಿಸಂ ಬಾವಿಯ ನೀರನರಿಕಿ ನೀರ್ವೊಯ್ದನೆಂಬ ಕಥೆಯಂತೆ (ಪಂಚತಂ. ೧೨೭-೩); ಒಣಗಿದ ಭೂಜಕ್ಕೆ ನೀರ್ವೊಯ್ದುದುಂ ಕೋಟಲೆವಟ್ಟೇ ನಿಷ್ಫಲೋದ್ಯೋಗಮನೊಡರಿಪುದೇನೆಂಬುದುಂ (ಪಂಠಾಮಾ. ೧೬-೫೫); ಶೈತ್ಯವಸ್ತುಗಳಿಂದೆ ಪಣ್ಣಿದುಪಚಾರಮಂ ಹೃದಯದೊಳ್ನೀರ್ವೊಯ್ದು ಸುಣ್ಣಮರಳ್ದಂತಾದುದೆಂದು ಕಾತರಿಸುವಳಬಲೆ ಕಾಮತಾಪದಿಂದೆ (ಜೈಮಿಭಾ. ೩೦-೩೫). ೨. (ಅಲೆ ಹೊಡೆದು) ನೀರು ನುಗ್ಗು : ವಾರ್ಧಿಯೊಳ್ ತದ್ವಹಿತ್ರನ್ನೀರ್ವೊಯ್ದು ಮುಟುಂಗಲಾಂ ಬರ್ದುಕಿದೆಂ (ದಶಕು. ೪-೪೬). **ನೀರ್ಪೊಯ್** : ೧. ತಾತ ನಂದನದೊಳಾಂ ನೀರ್ಪೊ[ಪಾಠಾಂ. ರ್ವೊ]ಯ್ದು ಬೆಳೆಯಿಸಿದ ಚೂತಲತೆ ಪೂತುದು (ಜೈಮಿಭಾ. ೨೯-೩೧).

[ನೀರ್ + ಪೊಯ್$_2$]

ನೀರ್ವೊಯ್ಲು (ನಾ). ನೀರಿನ ಹೊಡೆತ,—ಪೆಟ್ಟು : ಬಗಸೆಗೈಗಳಲಿ ನೀರ್ವಿಡಿದು ಶ್ರೀರಂಗೇಶ ಸೊಗಸುಗಾತಿಯರ ಮೇಲಿಡಲು ಒಗುವ ನೀರ್ವೊಯ್ಲ ಸೈರಿಸದೆ ಶ್ರೀಹರಿಯನು ಬಿಗಿಬಿಗಿದಪ್ಪಿದರಾಗ (ಕಂನವಿ. ೨೫-೧೨೩). [ನೀರ್ + ಪೊಯ್ಲು(<ಪೊಯಲ್)]

ನೀರ್ವೊರೆ 'ನೀರ್ವೊಱೆ' ನೋ.

ನೀರ್ವೊರೆಗಳೆ (ಕ್ರಿ). ನೀರಿನ ಭಾರವನ್ನು ಕಳೆದುಕೊಳ್ಳು : ಹಂತಿಗೊಂದುದು ಗಗನನೀಲಿಮೆಯ ನುಣ್ಜಗಲಿಯೊಳ್ ನೀರ್ವೊರೆಗಳೆದ ಬೆಳ್ಳಿಯುಣ್ಣೆಯಾ ಮುಗಿಲ ಹಗುರಂ (ಶ್ರೀರಾಮಾ. ೨೨೮-೧೪).

[ನೀರ್ವೊರೆ(<ನೀರ್ವೊಱೆ) + ಕಳೆ$_1$]

ನೀರ್ವೊಳೆ (ನಾ). ನೀರಿನಿಂದ ತುಂಬಿರುವ ಹೊಳೆ,—ನದಿ : ನಡೆವ ಸುವರ್ಣಪುತ್ರಿಕೆಯಿದೆಂದೆನೆ ನೀರ್ವೊಳೆಗೊರ್ವಳ್ತಿಯಿಂದಡಿಯಿಡುವನ್ನೆಗಂ ಪಥದಿನೊಯ್ಯನೆ ಹಬ್ಬೆಯದೊಂದು ದಂಡಮಂ ಪಿಡಿದಿದಿರ್ವರ್ಪನಂ ಪದೆದು ನಿಟ್ಟಿಸಿ ಮೆಯ್ಮರವಟ್ಟಳ್ (ರಸರ. ಪರಿ. ೧-೧೦೯).

[ನೀರ್ + ಪೊಳೆ$_3$ (<ಪೊಱೆ)]

ನೀರ್ವೊಱೆ, ನೀರ್ವೊರೆ (ನಾ). ನೀರಿನ ಹೊರೆ,—ಭಾರ : ಎಡಗಯ್ಯಂ ನಸುಸೋಂಕಿ ನೀರ್ವೊಱೆಯ ಬಿಣ್ಪಂ ಬಿಟ್ಟ ಧಮ್ಮಿಲ್ಲಮಂ ಪಿಡಿದು . . . ನಿಂದಬಲೆಯರ್ ಕಣ್ಗೊಪ್ಪಿದರ್ (ಸೂಕ್ತಿಸು. ೧೨-೯೩). **ನೀರ್ವೊರೆ** : 'ನೀರ್ವೊರೆಗಳೆ' ಪರಾ. [ನೀರ್+ಪೊಱೆ]

ನೀರ್ವೋಕುಳಿ (ನಾ). ಉತ್ಸವಸಂದರ್ಭದಲ್ಲಿ ಒಬ್ಬರ ಮೇಲೊಬ್ಬರು ಎರಚಾಡುವ ಬಣ್ಣದ ನೀರು : ಬಿಳಿಯಲರ್ಗಣ್ಗಳ್ ಬೆಳ್ಪಂ ಲಲನಾಜನದಧರಮಣಿಗೆ ಕೊಟ್ಟದಱ ಪುದುಂಗೊಳಿಸಿದ ಕೆಂಪಂ ನೀರ್ವೋಕುಳಿಯೊಳ್ ಮಾಱಾಡಿಕೊಂಡ ತೆಱದಿಂ ತೋರ್ಕುಂ (ಕಾವ್ಯಾವ. ೬೧೮).

[ನೀರ್ + ಓಕುಳಿ].

ನೀರ್ಸುಳಿ, ನೀರುಸುಳಿ (ನಾ). ನೀರಿನಲ್ಲಿರುವ ಸುಳ ; ಜಲಾವರ್ತ : ಕಡಲಲೆವ ಪಡಗುಪಡೆ ನೀರ್‌ಸುಳಿಗೆ ಸಿಲ್ಕಿ ತಿರ್ಪನೆ ತಿರುಗು ತಿರ್ದ್ದೊಡಂ . . . ಸುಳಿಯೊಡನೆ ಮಲೆತು ಹೋರಾಟಮಂ ತೊಡಗುವೋಲಂತೆ (ಶ್ರೀಪಾಮಾ. ೪೧೨-೨೩೮). **ನೀರುಸುಳಿ :** ಸಣ್ಣ ನೀರು ಸುಳಿ ; ಜಲಾವರ್ತ (Eddy. ಇಂಕಸಿ).

[ನೀರ್ + ಸುಳಿ$_2$(< ಸುಟು$_2$)]

ನೀರ್ಸೆಳವು (ನಾ). ನೀರಿನ ಸೆಳವು,—ಎಳೆತ : ಎರಡು ಭೂಖಂಡಂಗಳನೆ ಕೂಡಿಸುವ ನೀರ್‌ಸೆಳವು (ಬದ್ಧಪ್ರ. ೪೨-೯೦೬). [ನೀರ್ + ಸೆಳವು]

ನೀರ್ಸೆಜ್ಜೆ (ನಾ). ನೀರು ನಿಂತಿರುವ ಜಾಗ ; ಹಳ್ಳ, ಕೊಳ್ಳ ಮುಂತಾದುವು : ಅದಲ್ಲದೆಯಲ್ಲಿಂ ಬೇಜೊಂದು ನೀರ್ಸೆಜ್ಜೆಗೆಯ್ದಿರ್ದು ಬಟಾಯಂ (ಜಗವಿ. ೧೬-೪ ಪ). [ನೀರ್ + ಸೆಜ್ಜೆ$_2$]

ನೀಲ, ನೀಳ$_2$ (ಗು). ೧. ಕಡುನೀಲಿ ಅಥವಾ ಕಪ್ಪುಬಣ್ಣದಿಂದ ಕೂಡಿದ : ನೀಲನವಮೇಘಮಂಡಲದಾಲೋಲತಟಿಲ್ಲತಾವಿತಾನದ ಸೊಬಗಂ ಸಾಲಿಡುತಿರ್ದುದು ಸತತಂ ಬಾಲೆಯ ಸೂಸಕದ ಜೂಳೆಯುದ ರುಟಜಾಳಂ (ಸಳಚಂ. ೩೨೫) ; ನೀಲವಿಸ್ತರವಿರಲು ನಕ್ಷತ್ರಬಿಂದು ಸೊಗ (ಮುಂಕುಳ. ೫೧) ; ದೃಷ್ಟಿತೃಷೆಗಮೃತಮಂ ಕರೆಯುತ್ತೆ ಕಂಗೊಳಿಸಿ ಬಂದುದಾ . . . ನೀಲಮುಂಗಳಮನೋಹರ ಧೇವವಿಗ್ರಹಂ ! (ಶ್ರೀರಾಮಾ. ೧೩೪-೨೫೩). (ನಾ). ೨. ಕಡುನೀಲಿ ಅಥವಾ ಕಪ್ಪುಬಣ್ಣ ; ಶ್ಯಾಮಲ ವರ್ಣ : "ಕೃಷ್ಣಃ, ನೀಲಃ . . . ಕಪ್ಪು ಬಣ್ಣದ ಹೆಸರುಗಳು" (ಸಿದ್ಧಾಂತಿ. ೪೮) ; ನೀಲದ ಬೆಳ್ಳಿಯ ಗಾಡಿಯುಮಿಾ ಲಲಿತಾಂಗಿಯರ ಕಣ್ಣ ಪೋಲ್ತುಂ [ನಾಂ] ಕಣ್ಗೆಳೆದಮಾಗಿರೆವೆಂದೆಳವಾಳೆಗಳೋಡಿದುವು ಬಾಲೆಯರ್ ಪುಗುವಾಗಳ್ (ಪಂಪಭಾ. ೫-೬೧). ೩. ಒಂದು ಬಗೆಯ ಸ್ಪಸ್ಯ ಮತ್ತು ಅದರಿಂದ ತಯಾರಿಸುವ ನೀಲಿಬಣ್ಣದ ಪುಡಿ ; ನೀಲಿ : "ಕಾಕಹಾ—ಬೆಲ್ಲಗಣಿಕೆ, ಚೀಲೈ[ತ] ?, ನೀಲ" (ಓಷಧಿ. ೩೦). ೪. ನವರತ್ನಗಳಲ್ಲಿ ಒಂದು ; ನೀಲಿಬಣ್ಣದ ರತ್ನ ; ಇಂದ್ರನೀಲ : "ಹರಿಕಾಂತಮಸಿತಾಶ್ಮವೆನೆ ನೀಲಮಕ್ಕುಂ" (ನುಂಗರಾ. ೩೧-೩) ; ನೀಲದ ಪೊಳೆವ ಪರಲ್ಗಳ ಕೀಲನೆಯಿಂ ಜಲಕನಾದ ಜಲದೇವಿಯು ಪೊನ್ನೋಲೆಯೆನಿಸಿದುದು ಪತ್ರಕಪೋಲಗತಂ ಕನಕನೀಲ ಮೊಂದಳಿನೀನಂ (ಅರ್ಧನೇ. ೫-೧೦೭) ; ನೀಲದ ಪಟ್ಟೆಯ ಪವಳದ ಶಾಲೆಗಳ ಮರೀಚಿಯಂ ಪುರಂದರಧನುಗೆತ್ತಾಲೋಕಿಸಿ ನವನರ್ತನಲೀಲೆಯ ನೊಳಕೊಳ್ವುವಲ್ಲಿ ಪುರದ ನವಿಲ್ಗಳ್ (ಗಿರಿಕ. ೨-೪೩) ; ನೀಲದ ಕಿರೀಟ ನಿನಗಿಡುವೆ (ಪುರಂದ. ೧-೪೨-೩) ; ನೀಲವೆಂಬ ರತ್ನದ ಕ್ರಯವೂ ಕಾಂತಿಯೂ ವಜ್ರಮಾಣಿಕಗಳಿಗಿಂತ ಕಡಿಮೆ (ಮುಂಬಯಿ. ೪-೧೬೦) ; ನೀಲ ಮಾರಿ ಓಲೆ ಮಾಡಿದರೂ ಸಾಲದ ಉಪದ್ರ ನಿಲ್ಲಲಿಲ್ಲ (ಗಾಜೆ). 'ನವರತ್ನ' ಪರಾ. ೫. ಕುಬೇರನ ನವನಿಧಿಗಳಲ್ಲಿ ಒಂದು : ಕುಬೇರಂಗೆ . . . ಮಹಾಪದ್ಮ ಪದ್ಮ ಶಂಖ ಮಕರ ಕಚ್ಛಪ ಮುಕುಂದ ನೀಲ ವರವೆಂಬ ನವನಿಧಿಗಳಗಧಿಕಾರಮುಂಟಾಗಿ (ವಿನೇಕ. ೨೨೧). 'ನವನಿಧಿ' ಪರಾ. ೬. ರಾಮಾಯಣದ ಒಬ್ಬ ಕಪಿನಾಯಕನ ಹೆಸರು ; ಸುಗ್ರೀವನ ಸೇನಾಪತಿಗಳಲ್ಲಿ ಒಬ್ಬ : ಅಂತು ದಶಗ್ರೀವಂ . . . ನೀಲನ ನೀಲಲೋಹಿತದಿಂ ಭೂತಗಣಮಂ ತಣಿಪಲುಮುತ್ಕಂಠನಾಗಿ ನಿಜವರೂಥಮಂ ರಿಪುವರೂಥನಿಗೆ ಪರಿಯಿಸಲೊದರಿಸುವುದುಂ (ಪಂರಾಮಾ. ೧೩-೧೩೩ ಪ) ; ಮೈಂದನ ಸದೆದ ನೀಲನ ತುಳಿದ (ಕಾತಿರಾ. ೨೫-೨೨) ; ತೋಳ ನೆಗಹಿನಲಟ್ಟ ಹೊಯ್ದುದು ನೀಲನನು ನೀಲಾದ್ರಿಯನು ದಂಭೋಳಿ ದಟ್ಟಿಸಿದಂತೆ (ತೊರರಾ. ೬-೩೨-೩೬) ; ತೊಲಗಿತಿನ್ನಾಪತ್ತು . . . ನಳ ನೀಲ ಜಾಂಬವ ಹನುಮದಾದಿಯೂದೆಲ್ಲ ವಿತ್ರರ್ಗೆ (ಶ್ರೀರಾಮಾ. ೨೯೨-೨೦೬). ೭. ನೀಲಿ ಬಣ್ಣದ ಒಂದು ಬಗೆಯ ಹಕ್ಕಿ : 'ನೀಲಕ್ಕಿ' ಪರಾ. ೮. ಆಕಾಶ ; ಗಗನ : ಆಲೆ ಕೆದರೆ ತರು ಬೆದರೆ ನೀಲದಿಂ ಧುಮ್ಮಿಕ್ಕಿ ಕೋಡಿಗೇರುತ ಗಾಳಿ ಮೊರೆವ ನಲವು (ಪುಟಿದೇ. ೧೪-೫). 'ನೀಲ ಚುಂಬಿ' ಪರಾ. ೯. ಒಂದು ಬಗೆಯ ಕುದುರೆ : "ತುರಗವರ್ಣಾ ಬಿಳಿಯದಾಗೆ ಕರ್ಕನೆನಿಕ್ಕು . . . ಕಿಜುವಿಳುಪುದೋಜೆ ನೀಲಂ" (ನುಂಗರಾ. ೪೧-೧೪೪) ; ಜನ್ನನಂ ನೀಲನನಗನಂ ತನ್ನಿ . . . ಛಾಹಕರಿರಾ ನೀವು (ಬಸಪು. ೫೯-೪೦) ; ಕಾರೆಳ್ಳನಕ್ಕಿಯಂ ಸಮುಸಾರಿಕೆಯಿಂ ಬೆರೆಸಿದಂತೆ ಕರ್ಪುಂ ಬೆಳ್ಪುಂ ನೇರಿತ್ತಾಗಿರೆ ಬೆರಸಿ ತನೂರುಹವೊರನೆತ್ತ ನೀಲನೆಂಬ ಹೆಸರಂ ಪಡೆಗುಂ (ಅಶ್ವಶಾ. ೨-೨೩) ; ನೀಲ ಜನ್ನ . . . ಸಾರುಗವೆಂದೆನಿಪಗ್ಗಳೆಯ ಹಯಮುಂ ತುರಂಗಿಗಳ್ ಕೈಗೆಯ್ದುರ್ (ತ್ರಿಪುವಿ. ೨೪-೨೯೪). ೧೦. ಪಾಂಡವರ ಸೈನ್ಯದಲ್ಲಿದ್ದ ಒಬ್ಬನ ಹೆಸರು : ಕ್ಷತ್ರಧರ್ಮನು ನೀಲನು . . . ವಿಂಧ್ಯಗಿರಿಯ ಸುಹೋತ್ರ ರನ್ವಯದವರು ಪಾಂಡವಪಿಮಿತ್ರರೊದಗಿತು ಕೇಳು. (ಕುವ್ಯಾಭಾ. ೧೧೧-೨೬). ೧೧. [ಜೈನ] ಕುಲಪರ್ವತಗಳಲ್ಲಿ ಒಂದು ; ಈ ವಿದೇಹ ಮತ್ತು ರಮ್ಯಕ ಕ್ಷೇತ್ರಗಳ ಮೇರೆಯಲ್ಲಿರುವ ಈ ಪರ್ವತವು ನಾಲ್ಕು ನೂರು ಯೋಜನ ಎತ್ತರವಾಗಿದೆ. ಇದರ ಬಣ್ಣವು ವೈಡೂರ್ಯದಂತೆ ಇದೆ: ಹಿಮವನ್ಮಹಾಹಿಮವನ್ನಿಷಧ ನೀಲ[ಪಾತಾಂ. ೪] ರುಗ್ಮಿಶಿಖರಿಗಳೆಂಬ ವರ್ಷಧರಮಹೀಧರಂಗಳಿಂದಮಿನ್ನುಂ ಕನಕಗಿರಿಗಳಿಂದಂ (ಆದಿಪು. ೧-೪೪ ಪ) ; ಹಿಮವಂತ, ಮಹಾಹಿಮವಂತ, ನಿಷಧ, ನೀಲ, ರುಕ್ಮಿ ಇವಕ್ಕೆ ಕುಲಪರ್ವತಗಳೆಂದೂ ಹೆಸರು (ಜೈನಪ. ೩೮). ೧೨. = ನೀಲಲೇಶ್ಯೆ : ಕೃಷ್ಣ ನೀಲ ಕಪೋತಲೇಶ್ಯಾನುಬಂಧ ರೌದ್ರಪರಿಣಾಮ ಪರಿಣತರುಂ . . . ಅಪ್ಪ ಮಹಾಪಾಪಿಜೀವಂಗಳ್ ಕಾಲುಮೇಲಾಗಿ ನೆಲಸಿದಂತರ್ಮುಹೂರ್ತಮಾತ್ರದೊಳಗೆ (ಸುಕುಮಾ. ೧೧೯-೪೧ ಪ) ; ಈ ನಿರೂಪಿತ ಲೇಶ್ಯಾಷಟ್ಕದಲ್ಲಿ . . . ಕೃಷ್ಣ ನೀಲ ಕಪೋತಾಭಿಧಾನಾಶುಭ ಲೇಶ್ಯಾತ್ರಯಮುಂ ನಿರೂಪಿಸೆ ಪಟ್ಟುದು (ತತ್ತ್ವಪ್ರ. ೨೨೦) ; ಲೇಶ್ಯೆಯಲ್ಲಿ ಕೃಷ್ಣ, ನೀಲ . . . ಶುಕ್ಲಗಳೆಂದು ಆರು ಪ್ರಕಾರಗಳಿವೆ (ಜೈನಪ. ೨೯೮). **ನೀಳ$_2$:** ೪. ನೀಲದ ಕಂತಿಕೆಯಂ ಶುಂಡಾಳ ಶಿರೋಮಣಿಗೆ ಕಟ್ಟದಂತಿರೆ ಚೆಲ್ವಂ ಪಾಳಿಸುತಿರ್ದುದು (ಪಾರ್ಶ್ವಪು. ೪-೧೩೧). ನೀಲದ ಕೋಕಿಳಾಂಗನೆಗೆ ಪಟ್ಟೆಯ ಪೆಣ್ಗಣದಿಂದುಕಾಂತದಾಲಾಲಿತಮಾರಳಾವಳಿಗೆ ಸೋಲ್ತಿರದೆಯ್ದುವುದಲ್ತೆ ಲೀಲೆಯಿಂ ಮೇಳಿಸಲಿಂದು ದೀವದ ಪಿಕಾಳಿ ಶುಕಾಳಿ ಮರಾಳಮಂಡಲಂ (ಶಾಂತೀಶ್ವ. ೧೩-೧೭೦). ೫. ಕಪಿಕುಲಸಮುದ್ಭೂತಂ ಸುಗ್ರೀವಸಾತನ ತಮ್ಮಂದಿರ್ನಳನುಂ ನೀಳನುಂ . . . ರಾಮುಂಗೆ ಭೃತ್ಯರಾಗೆ (ಪುಣ್ಯಾಸ್ರ. ೧೧-೨೪ ಪ). ೬. ಬಿಳಿದಪ್ಪ ಬಣ್ಣದಾ ಹರಿಯೊಳೆ ಕರ್ಗಿದ ಬಾಲವಸಿ(ಶಿ)ತವಕ್ಷಂ ತುರಗಕ್ಕೊಳವಪ್ಪೊಡೆ ನೀಳ್ದ(ಳ)ನೆಂದಳವಡುಗುಂ ಪೆಸರದರ್ಕೆ (ಆಶ್ವಶಾ. ೨-೪). ೧೧. ಅಧಸ್ಥೋಪರಿಮತಳಸಮಾನನಿಸ್ತಾರಂಗಳುಮಪ್ಪ ಹಿಮವನ್ಮಹಾಹಿಮವನ್ನಿಷಧ ನೀಳ[ಪಾತಾಂ. ೬] ರುಗ್ಮಿ ಶಿಖರಿಗಳೆಂಬ ವರ್ಷಧರ ಮಹೀಧರಂಗಳಿಂದಂ . . . ಎಸೆದು (ಆದಿಪು. ೧-೪೪ ಪ) ; ನೀಳದ ಕೋಡುಂಗಲ್ಗಳ ತೋಳದ್ಯುತಿ ಮುಸುಜೆ ಮುಸುಳಿ ಮೇಗಣಿನಂ ತಾರಾಳಿಯ ಹಾರಿಯ ಬಟ್ಟೆಗೆ ಕೈಯಂ ಬರತೊಲಗಿದಂತೆ ಕೆಲದೊಳ್ ತೋರ್ಪುಂ (ಏಕಲವ. ೯-೩೪).

ನೀಲದ ಮಣಿ = ನೀಲಿಯ ಬಣ್ಣದ ರತ್ನ ; ಇಂದ್ರನೀಲ : ನೀಲದ ಮಣಿಯೊಂದು ಮಾಣಿಕವ ನುಂಗಿದಡೆ ವಜ್ರ ಬಂದು ಅದು ಬೇಡವೆಂದುಗುಳಿಸಿತ್ತು (ಬಸವ. ಕ. ೧೩೭೮) ; ನೀಲದ ಮಣಿ ಪವಣಿಸಿದ ನೂಲಾದರೆ ನೀಲದ ಕ್ರಯ ಬಾಳ್ತೇ ? (ಗಾಜೆ). **ನೀಲಮುತ್ತಿನೋಲೆ** = ನಡುವೆ ನೀಲಮಣಿಯನ್ನು ಅಳವಡಿಸಿದ

ಮುತ್ತಿನ ಓಲೆ : ಮೃಗಧರಬಿಂಬಂಗಳವೆರಡಗಲದೆ ಕೊಂಡೆಸೆಯುತಿರ್ದ ಪುವು ಸರಸಿಜದೊಂದಗಣತ ಕರ್ಕಶಮನೆನಲ್ ನಗಪುತ್ರಿಗೆ ನೀಲ ಮುತ್ತಿ ನೋಲೆಯನಿತ್ತರ್ (ಗಿರಿ. ೧೦-೪೨). [ಸಂ.]

ನೀಲಂ (ನಾ). ಒಂದು ಬಗೆಯ ಮಾವಿನ ಮರ ಮತ್ತು ಅದರ ಹಣ್ಣು : ಮತ್ತೆ ಬೇಕಿದ್ದರೆ ಒಂದು ವಾರ ಬಿಟ್ಟು ನೀಲಂ ಜಾತಿಯ ಹಣ್ಣುಗಳನ್ನು ಕಳುಹಿಸುವುದಾಗಿ ಹೇಳು (ದೇಸಹಿಂ. ೧೪೬); ಇದು ನೀಲಂ . . . ಇದು ಗಿಳಿಮೂಗು. ಇದು ಬಹಳ ರುಚಿ (ಬಾಳಿಗಿ. ೧೪೦); ಬಂಗನ್‌ಪಲ್ಲಿ, ನೀಲಮ್, ಸಿಂಧೂರ ಜಾತಿಗಳು ಉದ್ಭವವಾದದ್ದು ಈ ನವಾಬರ ಆಶ್ರಯದಿಂದ (ಹಸುಹೊ. ೩೦೯).

[←ತಮಿ. ನೀಲನ್]

ನೀಲಂಗು (ನಾ). ೧. ಹುಳು ; ಕೀಟ : "ಕೃಮಿಃ, ಕೀಟಃ, ನೀಲಂಗುಃ, ಪುಲ್ಲಕಃ—ಈ ೪ ಪು(ಹು)ಟು" (ಹಲಾಯು. ೧೦೫-೧೪). ೨. ಒಂದು ಬಗೆಯ ನೊಣ. ೩. ದೊಡ್ಡದಾದ ಕಪ್ಪು ಬಣ್ಣದ ದುಂಬಿ. ೪. ಹೂವು. ೫. ನರಿ ; ನೃಗಾಲ. ೬. ಕಂಬಳಿಯಂಥ ರೋಮಗಳಿಂದ ಕೂಡಿದ ಒಂದು ಬಗೆಯ ಹುಳು ; ಕೋರಿಹುಳು : (೬). ೭. (ಪ್ರಾಣಿಗಳಲ್ಲಿ ಉತ್ಪತ್ತಿಯಾಗುವ) ಒಂದು ಬಗೆಯ ಕ್ರಿಮಿ : (೬). [ಸಂ.]

ನೀಲಕಂಠ (ನಾ). ೧. ಕಡುನೀಲಿ ಅಥವಾ ಕಪ್ಪು ಬಣ್ಣದ ಕೊರಳು. ೨. ನೀಲಿಬಣ್ಣದ ಕೊರಳುಳ್ಳದು ; ನವಿಲು ; ಮಯೂರ : ನೀಲಕಂಠನೆ ಬಲಕೆ ಬಂದುದು (ಕುಪಾಖಂ. ೪-೩೪) ; ಅನಿಮಿಷಾರಣ್ಯಾಂತರಾಳದೊಳ್ . . . ಕಾಡ ಸೋಗೆಯ ಕುಳಂ ಸಾರ್ದು ನೀಲಕಂಠ ನಾಮಮಂ ಪಡೆದೆಡೆವಿಡದಡಸಿ ಕಡುಸೊಗಸಿಂದಿರ್ದವು (ಹವಿಸಾ. ೬-೪೫ ಪ) ; ನೀಲಕಂಠಾರೂಢನಾಗಿ ಸುರಗಣ ಸಹಿತೆ ಪಣ್ಮುಖಂ ನಡೆಗೊಂಡನು (ಚಿಒಪು. ೩೪-೨೨) ; ಬಲುತರದ ಬಿಸಿಲಿನಿಂದ ಪೆಡೆಗಾಯ್ದು ರನ್ನದುಪಟಲಕೆ ತಲೆಯಂ ಕೊಡಪುತಡಿಗಡಿಗೆ ನೀಲಕಂಠನ ಗರಿಯ ಮರೆ ಗೊಂಡು ಮಿಡುಕುತಿಹ ಕುಂಭೀನಸಂಗಳೆಡೆಯಾಟಮೇಂ ಚಿತ್ರತರಂ (ವೆಂಕಾದಾ. ೩-೩-೧೨). ೩. ಗುಬ್ಬಿ ; ಚಟಕ : "ಕಲವಿಂಕಃ, ಚಟಕಃ, ಗೃಹಬಲಿಭುಕ್, ನೀಲಕಂಠಃ—ಈ ೪ ಗುಬ್ಬಿ(ಲು)"(ಹಲಾಯು. ೪೧-೯೧). ೪. ಒಂದು ಬಗೆಯ ಹಕ್ಕಿ ; ಲಾವುಗೆ. ೫. ಹಾವು ; ಸರ್ಪ. ೬. ಒಂದು ಬಗೆಯ ಹಾರುವ ಹುಳು ; ಮಿಡಿತೆ ; ಶಿವನ ಕುದುರೆ. ೭. ಕಪ್ಪು ಬಣ್ಣದ ಕೊರಳುಳ್ಳವನು ; ಶಿವ ; ಈಶ್ವರ ; ℙ ಸಮುದ್ರಮಂಥನಕಾಲದಲ್ಲಿ ಉತ್ಪನ್ನವಾದ ವಿಷವನ್ನು ಶಿವನು ನುಂಗಿ ಕೊರಳಲ್ಲಿ ಧರಿಸಿರುವುದರಿಂದ ಕಪ್ಪು ಬಣ್ಣದ ಕೊರಳನ್ನು ಹೊಂದಿದನು : "ಭವನೀಶಂ ಶಂಭು . . . ನೀಲಕಂಠಂ ಶಿವನೀಶಾನಂ ತ್ರಿನೇತ್ರಂ . . . ವಾಮದೇವಂ ವೃಷಾಂಕಂ" (ನಸ್ತು ಕೋ. ೩-೧೩) ; ಕಾಲಕೂಟವನು ಪಾನ ಮಾಡಿದ ನೀಲಕಂಠನು ನೀನೆ (ಪುರಂದ. ೧-೧೪೩-೨) ; ನಿಷ್ಕಲ ನೀಲಕಂಠ . . . ಜಯಶಂಕರ ನಿರ್ಜಡ ಶಾಂಭವೀಧವಾ (ಶಬಶಂ. ೫-೨೪). ೧, ೭ : ಮದಜಳ ನೀಲ[ಪಾಠಾಂ. ಳ]ಕಂಠಕಳಿತಂ ವಿಷಮಾನಳಭೀಮಲೋಚನಂ ಪದನತ ದಾನವಾರಿ ಗಿರಿಶಂ ಗಿರಿಜಾತವಿನೂತಕೇಳಿ ಕಣ್ಮೊದನಿದ ಕೋಭೆಯಂ ಕುಡುತವಿಂಪ್ರುದು ನಾಗತಿರೋವಿಭೂಷಣಂ ವಿದಿತಗಜಾಸುರೇಂದ್ರನೆನೆ ಮರ್ದಿಸಲುಗ್ರನಭೇಂದ್ರನಾದನೋಲ್ (ಪಾರ್ವ್ವಪು. ೪-೧೩೨). ೨, ೭ : ಕಾತ್ಯಾಯನೀಕಾಯದಂತೆ ವಿಚಳಿತಪದ್ಮಭಯಂಕರವುಂ ವರುಣಚಂದನಪಲ್ಲವಾಳಂಕೃತಮುಂ ಸಂಧ್ಯಾಕಾಲದಂತೆ ನೃತ್ಯನ್ನೀಲಕಂಠಮುಂ ಪಲ್ಲವಾರುಣಿತಮುಂ (ಕಾದಂಪೂ. ೧೧೦) ; ಅದು ಸಮುಚಿತನೀಲಕಂಠವಿಳಾಸಮಾಗಿಯುಂ ವೀತಕೇತಕಮಲ್ಲು (ಚಂದ್ರಪು. ೪-೪೨ ಪ) ; ಮತ್ತ ಮಾ ಘನಸಮಯಂ . . . ಪ್ರದೋಷಕಾಲದಂತೆ ನೀಲಕಂಠತಾಂಡವಾಡಂಬರಮುಂ (ರಾಚಪ್ರೇ. ೪-೧೧೪ ಪ).

೪. [ಛಂದ] ರುದ್ರಗಣದ ಹದಿನಾರು ಬಗೆಗಳಲ್ಲಿ ಒಂದು : – ಀ – – ಹೀಗೆ ಪ್ರಸ್ತಾರವನ್ನು ಹೊಂದಿರುವುದು : ರುದ್ರಗಣ ಮೆಂತೆಂದೊಡೆ :— ೧. ಗಂಗಾಧೀಶಂ ೨. ಗಿರಿಜಾಕಾಂತಂ ೩. ನೀಲಕಂಠಂ . . . ೧೬. ಮುದನರಿವು(ಛಂದೋಂಬು. ೫-೩೪ ಪ). "ರುದ್ರನೊಳು ಗುಬ್ಬಿಯೊಳು ಕೇಕಿಯೊಳು ಗ್ರೀವದೊಳು ಕಾಪ್ರವೇಯಂಗಳೊಳು ನೀಲಕಂಠಮೆನಿಕ್ಕುಂ" (ಸುಂಗರಾ. ೧೪೯-೪೮). [ನೀಲ+ಕಂಠ]

ನೀಲಕಂಠಿ (ನಾ). ಹದಿನಾರು ಬಗೆಯ ರೂಪಾಯಿ ನಾಣ್ಯಗಳಲ್ಲಿ ಒಂದು : ೯ ಪನಾಳೀ, ೧೦ ನೀಲಕಂಠೀ, ೧೧ ಭೂತಪದಿ . . . ಇವುಗಳಲ್ಲಿ ಪನಾಳಿ, ನೀಲಕಂಠಿ. ಇವೆರಡು ಬಹಳ ಕಡಿಮೇ ಬೆಲೆ ಬಾಳುವಂಥವು (ಕಥಾಗ. ೨೪೧). 'ಕಂಠೀರಾಯಿ' ಪರಾ. [?]

ನೀಲಕಂಧರ (ನಾ). ೧. ಕಪ್ಪು ಬಣ್ಣದ ಕೊರಳು. ೨. ಕಪ್ಪು ಬಣ್ಣದ ಕೊರಳುಳ್ಳವನು ; ನೀಲಕಂಠ ; ಶಿವ : ಗರಲಗ್ರೀವ ನಹೀಂದ್ರನಿಂದುಮೃಗಲಕ್ಷ್ಮಂ ಶಂಕರಂ ನೀಲಕಂಧರನೆಂದೇಕೆ ತನ್ನ ನಿರ್ಮಾಳಯಶಂ (ಪಂಚಾಪೂ. ೯-೨೦೧) ; ನೀಲಕಂಧರನಂ . . . ಗಿರಿಜಾನಲ್ಲಭನಂ ಮನೋಜಹರನಂ ಕಂಡಂ ವಿರೂಪಾಕ್ಷನಂ (ಪಂಪಾಶ. ೩೪) ; ಕರುಣಾನಿಧಿಯೆ ನೀಲಕಂಧರನೆ ಪ್ರಮಾಣಪತ್ರವ ಸಲಹು ಕರುಣದಿಂದ (ಸೌಂದಪು. ೧೨-೪೩). ೩. ನವಿಲು ; ಮಯೂರ : ನೀಲಕಂಧರನ ನೆಗ್ಗಿಸಿದಂತೆ ನೀನೆನ್ನ ಮೇಲುರವಣಿಸೆಂದು ಬಸವ ಶೂಲದಂತೆಸೆವ ಕೊಂಬುಗಳಿಂದೆ ಶಿವಿದುದು ಬಾಲಾಹಿಸೂದನನೆದೆಯ (ನೋಹತ. ೩೮-೩೧).

[ನೀಲ+ಕಂಧರ]

ನೀಲಕಜುಕೆ (ನಾ). ಒಂದು ಬಗೆಯ ಹುಲ್ಲು : "ನೀಲೀ—ಕರಿಯ ತಿಗಡೆ, ನಜ್ರ, ಕಾಡಲವಣ, ಬಣ್ಣದ ಗೋರಟೆ, ನೀಲಕಜುಕೆ"(ಓಷಧಿ.೮೮).

[ನೀಲ+ಕಜುಕೆ(<ಕಜುಂಕೆ)]

ನೀಲಕಾಂಡಪಟ (ನಾ). ನೀಲಿಬಣ್ಣದ ತೆರೆ,—ಪರದೆ : ಇದುತ್ಪಲ ಲಕ್ಷ್ಮಿಯ ಮಂಡನಕ್ಕೆ ಸುಶ್ಲಿಷ್ಟ ನವನೀಲಕಾಂಡಪಟಂ (ಚಂದ್ರಪು. ೪-೧೯). [ನೀಲ + ಕಾಂಡಪಟ]

ನೀಲಕಾಂತಿ (ನಾ). ೧. ನೀಲಿಯ ಬಣ್ಣದ ಹೊಳಪು ; ನೀಲವರ್ಣದ ಪ್ರಕಾಶ. ೨. ಒಂದು ಬಗೆಯ ಗಿಡ ಮತ್ತು ಅದರ ಹೂವು : ನೀಲಕಾಂತಿಯಂಥ, ಅಂಗಿಗುಂಡಿಗಾತ್ರದ ಹೂವಿನ ಚಾಪೆಯೇ ಒಂದು ಕಡೆ ಹಾಸಿತ್ತು (ಅಪೂಪ. ೩೬). [ನೀಲ+ಕಾಂತಿ]

ನೀಲಕಾಯ (ನಾ). ಕಪ್ಪು ಬಣ್ಣದ ಶರೀರವುಳ್ಳವನು : ಅವರು ಯಮದೂತರಂತೆ, ನೀಲಕಾಯರೂ ನೀಳಕಾಯರೂ ಆಗಿದ್ದರು (ನಾಗಕಾ. ೪). [ನೀಲ+ಕಾಯ]

ನೀಲಕುಂತಲ, ನೀಲಕುಂತಳ, ನೀಳಕುಂತಳ (ನಾ). ಕಪ್ಪು ಬಣ್ಣದ ತಲೆಗೂದಲು : ನೀಳ ನೀಲಕುಂತಲವನ್ನು ಸುಂದರವಾಗಿ ಹೆಣೆದು . . . ಅಲಂಕರಿಸಿದರು (ಶಾಂತಲಾ. ೪೧). **ನೀಲಕುಂತಳ :** ನೀಲಕುಂತಳದೆ ನವಭೂಷಾರುಣಪ್ರಭೆಯು . . . ದೌಕ್ತಿಕಚ್ಛವಿಯೆನಿಪ ಕಾಲುಗುರ್ಗದಿರ್ವೆಣ್ಣಾ ಕೊಪ್ಪರು ನವರತ್ನಮಾಲೆಗಳ ಪಾಂಗಿನಿಂದ (ಭಾಪಚಂ. ೫-೨೯) ; ನೀಲಕುಂತಳ ನಿಬಿಡಸ್ತನಗಳ . . . ಸದ್ಗುಣ ಶೀಲೆಯರು ಪರಲ್ಪಟಿತದಾರತಿ ಪಿಡಿದು ನಡೆತಹರು (ನಾಗಪ್ರ. ೭-೬೨) **ನೀಳಕುಂತಳ :** ಅಂತು ಕುಟಿಳನೀಳಕುಂತಳಳಾಪೆಯರ ಚತುರ ಭಾವಕ್ಕೆ ತಾಮುಂ ಸೋಲ್ತು (ಶಾಂತಿಪು. ೪-೩೦ ಪ) ; ಆಕೆ ತನ್ನ ಮದಾಳಿನೀಳಕುಂತಳದೊಳ್ ಕುಟಿಲಸ್ವಭಾವಮಂ . . . ತಳೆದು (ಮಲ್ಲಿಪು. ೩-೫೪). [ನೀಲ + ಕುಂತಲ]

ನೀಲಕುಂತಲೆ, ನೀಲಕುಂತಳೆ (ನಾ). ಕಪ್ಪುಬಣ್ಣದ ಕೂದಲುಳ್ಳವಳು : ನೀಲಕುಂತಲೆ ಕೇಳು (ಮೋಹಶ. ೩೩-೪). **ನೀಲಕುಂತಳೆ:** ನೀಲವರ್ಣ ನೀನಾದರೆ ಆಕೆ ನೀಲಕುಂತಳೆ ತಾನಾದಳಯ್ಯ (ಕನಕ. ೧೫೯-೪); ಎಲೆಗೆ ರಾಮಾಭಿರಾಮೆ ; ಸುಗ್ರೀವೆ ; ನೀಲಕುಂತಳೆ (ರಾಮಾಶ್ವ. ೧೪೪-೧). [ಸಂ. ನೀಲಕುಂತಲಾ]

ನೀಲಕುಂತಳ 'ನೀಲಕುಂತಲ' ನೋ.

ನೀಲಕುಂತಳೆ 'ನೀಲಕುಂತಲೆ' ನೋ.

ನೀಲಕ್ಕಿ (ನಾ). ನೀಲಿಬಣ್ಣದ ಒಂದು ಬಗೆಯ ಪಕ್ಷಿ : ಹಾಲಕ್ಕಿ ನೀಲಕ್ಕಿ ನೀಲವರ್ಣದಕ್ಕಿ ಬೇಲೂರ ಗದ್ದೆ ಗೊನೆಬತ್ತದ ನೆಲ್ಲಕ್ಕಿ ಸೇರಾವೆ ನಮ್ಮ ಅರಮನೆಗೆ (ನಾಪಡ. ೧೧೫). [ನೀಲ+ಹಕ್ಕಿ(<ಪಕ್ಕಿ)]

ನೀಲಗಂಧಿ (ನಾ). ೧. ಕಡುನೀಲಿಬಣ್ಣದ ಒಂದು ಬಗೆಯ ಹೂವು: ಮಲ್ಲಿಗೆಯೊಳ್ ಬೆಳ್ಪು, ನೀಲಗಂಧಿಯೊಳ್ ಕಪ್ಪು ; ಇಂತೋರೊಂದು ಪೂಗಳೊಳೋರೊಂದು ಬಗೆಯ ಬಣ್ಣಮಂ ನೇರ್ಪಡಿಸಿದ ಗಾಂಪನಾವಂ ? (ರಾಮಾಶ್ವ. ೮-೩೯). ೨. ಪದ್ಮರಾಗದ ಒಂದು ಭೇದ ; ಸೌಗಂಧಿಕ ವೆಂಬ ರತ್ನ : ವಿದಿತ ಗದಾಂಗಂ ಮತ್ತಮು ನದಮಲತರ ನೀಲಗಂಧಿ ಯೆಂದಿರ್ತೆಜದಿಂ ಪದುಳದಿನಿರೆ (ಹಾಲಾಸ್ಯ. ೨-೧೧-೭೧). [ಸಂ. ನೀಲಗಂಧಿನ್]

ನೀಲಗಣ್ಣು (ನಾ). ಒಂದು ಬಗೆಯ ನೇತ್ರರೋಗ : ಕುರುಟಿಗೆಯ ಬೇರಂ . . . ಹಸುವಿನ ತುಪ್ಪದಿಂದ ಹಚ್ಚಲು ಕಾಚು, ನೀಲಗಣ್ಣು ಮಾಣ್ಗುಂ (ವಿನೈವಿ. ೧೩೫). 'ತಿಮಿರರೋಗ' ಪರಾ. [ನೀಲ+ಕಣ್ಣು(<ಕಣ್)]

ನೀಲಗಳ, ನೀಳಗಳ (ನಾ). ೧. ಕಪ್ಪುಬಣ್ಣದ ಕೊರಳು : ತೋಱುದಂ ಶಿವಂ ನಿಜಸ್ವರೂಪಕಳಿಯನಲ್ಲಿ ನೀಲಗಳದ ಹತ್ತುಭುಜದ ಪಂಚ ಮುಖಿದಸುಖವನಲ್ಲಿ (ನಪುರ. ದೇ. ೨೦೦-೧೦). ೨. ಕಪ್ಪುಬಣ್ಣದ ಕೊರಳನ್ನುಳ್ಳವನು ; ನೀಲಕಂಠ ; ಶಿವ : ನಾಲಗೆಯಂ ಕೊಯ್ದು ರ್ಚಿಸೆ ಲೀಲೆಗಳಂ ಮತ್ತೆ ಕೊನರಿಪಂ ಗಡ ಪಲರ್ಗಂ ನಾಲಗೆಯನಡಸಿ ಕೊಯ್ದೊಡೆ ನೀಲಗಳಂ ಕುಡಿದೆ ತಾನೆ ಬಕ್ಕುಮಿದೇನೋ (ನಪುಸ. ೯-೪೬); ವೇದಾಂತಾವಗಮ್ಯ ಮನೋರಥಪ್ರದ ನೀಲಗಳ ಬಿನ್ನಪವನವಧರಿಸು (ಬಸಪು. ೧-೬೩) : ನೀಲಗಳ ಪ್ಲಂಚಪರುಷವನಿತ್ತು ಪ್ರಮಥಗಣವೆರಸಿ ಬೀಕ್ಕೊಟ್ಟನಾಗ (ಪ್ರಾಥಂಾ. ೨-೩). **ನೀಳಗಳ :** ೩. ನವಿಲು ; ಮಯೂರ : ದೆಸೆ ಪಸುರೇಱು ಪಚ್ಚೆಯೊಳೆ ಮುಚ್ಚಿ ಮುಸುಂಕಿದ ಮಾಚ್ಕೆಯಾದುದಾಗಸಮಳಿನೀಳ ನೀಳಗಳಕಂತಮಾಳವಿನೀಳ ನೀರದ ಪ್ರಸರವಿಭಾಸಿಯಾದುದು (ಪಂಪಭಾ. ೬-೨೨). [ನೀಲ+ಗಳ್(=ಗಲ)]

ನೀಲಗಾರ್ 'ನೀಲಿಗಾಱ' ನೋ.

ನೀಲಗಾರ್$_2$ (ನಾ). ಧಾರ್ಮಿಕ ವೃತ್ತಿಗಾಯಕರ ಒಂದು ಪಂಗಡಕ್ಕೆ ಸೇರಿದವನು : ತಮ್ಮ ಅರಾಧ್ಯದೈವವಾದ ಮಂಟೇಸ್ವಾಮಿಯ ಪವಾಡಗಳನ್ನು ಸ್ವಾರಸ್ಯವಾಗಿ ಬಣ್ಣಿಸುವ ಲೀಲೆಗಾರರಾಜ ಇವರಿಗೆ ನೀಲ ಗಾರರೆಂದು ರೂಢಿಯ ಹೆಸರು ಬಂದಿದೆ (ಕಜಕ. ೧೧೨). [<ಲೀಲೆ+-ಗಾರ(<-ಕಾಱ)]

ನೀಲಗಿಡ (ನಾ). ಒಂದು ಬಗೆಯ ಸಸ್ಯ ; ನೀಲಿಯ ಗಿಡ : (೬). [ನೀಲ+ಗಿಡ(<ಗಿಡು)]

ನೀಲಗಿರಿ, ನೀಳಗಿರಿ (ನಾ). ೧. ಕಪ್ಪುಬಣ್ಣದ ಪರ್ವತ; ಕಪ್ಪನೆಯ ಬೆಟ್ಟ : ಅಯ್ವರುಮಂ ನೀಲಗಿರಿಗೊಡಗೊಂಡು ಪೋಗುತ್ತುಂ (ಪಂಪಭಾ. ೧೩-೪೮ ಪ) ; ಭೂಮಿಯಾಕಾಶವ ಮೆಟ್ಟಿ ಕಾಮಗಣಂಗಳ ಕೂಡೆ ಕಾದಿ ಗೆಲಲಱಿಯದೆ ನೀಲಗಿರಿಯ ಮೇಲೆ ನಿಂದು ಉಲಿವ ಉಯ್ಯಲೆಯನಾಡುತ್ತಿರ್ಪರಯ್ಯ (ಅಪಚಂ. ೧೦೭-೪೮೫); ನೀಲಗಿರಿಗಳ ನೆಮ್ಮಿ ಘನಮೇಘಾಳಿ ಸುರಿದವು ಮಳೆಯನು (ಕುವ್ಯಾಕ. ೧೦-೧೬); ನೀಲಗಿರಿಯಿಂದಿಳಿವವೊಲು ಭೂಪಾಲ ಮದಕರಿಯಿಳಿದು (ನಾಗಪ. ೫-೧೦೪). ೨. ಕರ್ನಾಟಕದ ದಕ್ಷಿಣಕ್ಕಿರುವ ಒಂದು ಬೆಟ್ಟದ ಹೆಸರು : ಬೇಂಟೆಕಾಜ ನೀಲಗಿರಿ×××ಕರ ಕಾನು ಯಿಂಮಡಿ×××ಶ್ರೀಮಮಮಹಾಪ್ರಧಾನಂ. ಪೆರುಮಾಳದೇವದಂಡಾಯಕಂ (ಎಕ. III (R), ಗುಂಡ್ಲು ಪೇ. ೬೪-೬ ; 1283) ; ನೀಲಗಿರಿಯಲ್ಲಿ ಬಹಳ ಕಡಿಮೆ ಸಂಖ್ಯೆಯಲ್ಲಿ ಇರುವ ಈ ತೊಡವರು ಆಡುವ ಭಾಷೆಯೇ ದ್ರಾವಿಡ ಭಾಷಾಪರಿವಾರಕ್ಕೆ ಸೇರಿದ ತೊಡ ಭಾಷೆ (ದ್ರಾವಿ. ೧೫೫) ; ನೀಲಗಿರಿಯ ತೋಡರು ಹೊರಗಿನ ಜನರೊಡನೆ ಈಗೀಗ ಬೆರೆಯತೊಡಗಿರುವರು (ಬಾಲಪ್ರ. I, ೪೯೯). ೩. [ಜೈನ] ಕುಲಪರ್ವತಗಳಲ್ಲಿ ಒಂದು ; ನೀಲಾಚಲ : ನೀಲಗಿರಿಯಲ್ಲಿ ವೈಡೂರ್ಯಗಳು ತುಂಬಿವೆ . . . ಶಿಖರಿ ಪರ್ವತವು ಬೆನ್ನಿಂದ ಆಗಿದೆ (ಜೈನಧ. ೩೮). **ನೀಳಗಿರಿ :** ೧. ನೀಳ [ಪಾತಾಂ. ಲ]ಗಿರಿಗಳ ಮಜ್ಜುಗಳಂ ಪೋಳ್ದು ಬಿಸುಟಂತೆ (ಇಷಪ್ರ. ದೇ. ೪೨-೧೩). ೪. ಪಶ್ಚಿಮದಿಕ್ಕಿನ ಬೆಟ್ಟ ; ಅಸ್ತಾಚಲ : ದಿನಪಂ ಪರಿ ಧರ್ಮರಾಜಜನಕಂ ಕರಕುಳಮಂ ತೆಗೆದು ನೀಳಗಿರಿಯಂ ಸಾರ್ದಂ (ಪಪ್ರಾಪ್ರ. ೩-೧೩).

ನೀಲಗಿರಿ ಉಧಾರಣ = ನೀಲಗಿರಿಯನ್ನು ರಕ್ಷಿಸಿದವನು; ಒಂದು ಬಿರುದು : ಮೂವರ ರಾಯರ ಗಂಡ ನೀಲಗಿರಿ ಉಧಾರಣ (ಎಕ. III, (R), ನಂಜನ. ೧೫೯-೪; 1304). **ನೀಲಗಿರಿ ಎಣ್ಣೆ** = ನೀಲಗಿರಿಯ ತಪ್ಪಲುಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯುವ 'ಯೂಕಲಿಪ್ಟಸ್' ಎಂಬ ಒಂದು ಬಗೆಯ ಮರದ ಎಲೆಗಳಿಂದ ತಯಾರಿಸಿದ ತೈಲ : ಅವನು ಬರುತ್ತಲೂ ಅವನನ್ನು ಅಂಗಡಿಗೋಡಿಸಿ ನೀಲಗಿರಿ ಎಣ್ಣೆಯ ಸೀಸೆಯೊಂದನ್ನು ತರಿಸಿದೆ (ನಾಸೋಲೀ. ೧೬೧) : ಕೈಕಾಲಿಗೆ ನೀಲಗಿರಿ ಎಣ್ಣೆ ತಿಕ್ಕಿ . . . ಮೂತಾಡುತ್ತ ಕುಳಿತರು (ಜಾಗಿನ. ೯೪). **ನೀಲಗಿರಿ ಗಿಡ** = ನೀಲಗಿರಿಯ ತಪ್ಪಲುಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯುವ, 'ಯೂಕಲಿಪ್ಟಸ್' ಎಂಬ ಒಂದು ಬಗೆಯ ಸಸ್ಯ : ಚಹಾ, ಕಾಫಿ, ನೀಲಗಿರಿ ಗಿಡಗಳನ್ನು ನೆಟ್ಟು ಆ ಬೆಳೆಯಿಂದ ವರುವರುಷ ಹಣ ತೆಗೆದರಿಸಿ ಸಿರಿವಂತರಾಗುವವರಿಗೆ ಮಲೆನಾಡಿನಲ್ಲಿ ಕಡಿಮೆಯಿಲ್ಲ (ಸುತ್ತಾಮು. ೩೬). **ನೀಲಗಿರಿತೈಲ** = ನೀಲಗಿರಿ ಎಣ್ಣೆ : ನೀಲಗಿರಿತೈಲ (ಸೋಂಕು ನಿವಾರಕ) (Eucalyptus Oil. ಇಂಕಾ); ಮೈ ಕೈ ನೋವಿಗೆ ನೀಲಗಿರಿತೈಲವನ್ನು ಉಜ್ಜಿದರೆ ನೋವು ಹೋಗುತ್ತದೆ (ಪಚಿ). **ನೀಲಗಿರಿ ಸಾಧಕ** = ನೀಲಗಿರಿಯನ್ನು ಗೆದ್ದವನು ; ಒಂದು ಬಿರುದು : ಕೊಂಗವಾರಿ ಕೊಂಗದಿಶಾಪಟ್ಟ ನೀಲಗಿರಿಸಾಧಕ ಗಿರಿದುರ್ಗ್ಗಮಲ್ಲ ಜಲದುರ್ಗ್ಗಮಂಡಳಿಕ ಹೃದಯಶಲ್ಯ (ಎಕ. III, ಗುಂಡ್ಲು ಪೇ. ೪೦-೧೧; 1320).

[ನೀಲ+ಗಿರಿ$_1$]

ನೀಲಗುರುಳ್ (ನಾ). = ನೀಲಕುಂತಲ : ಸುಳ್ಕುಂಗುರುಳ ನಿಡಿಗುರುಳ ಪೊಸ ನೀಲಗುರುಳ ಪೆಜಿನೊಸಲೊಳೆಡೆವಿಡದಲೆವ ಕುರುಳ ನುಣ್ಗುರುಳ ಕೋಮಲೆಯರೆಡೆವಿಡದೊದಗಿ ಬರುತಿರ್ಪರು (ಚಿಪು. ೬೭-೪೬). [ನೀಲ+ಕುರುಳ್$_1$]

ನೀಲಗೋರಟೆ (ನಾ). ನೀಲಿಬಣ್ಣದ ಹೂವುಗಳನ್ನು ಬಿಡುವ ಗೋರಟೆ ಗಿಡ ; ನೀಲಿಸ್ಫಟಿಕ : "ದಾಸೀ – ನೀಲಗೋರಟಿ, ದೊಡ್ಡ ಬಣ್ಣದ ಗೋರಟೆ" (ಒಷಧಿ. ೬೫). [ನೀಲ+ಗೋರಟೆ (<ಗೋರಂಟಿ)]

ನೀಲಗ್ರೀವ (ನಾ). ೧. ಕಪ್ಪುಬಣ್ಣದ ಕೊರಳು : ಅನಂತಕೋಟಿ ದರ್ಪಣಲಾವಣ್ಯದಿಂ ತ್ರಿಕೇತ್ರದಿಂ ನೀಲಗ್ರೀವದಿಂ . . . ಮಹೇಶ್ವರ ನೊಪ್ಪುತ್ತಿರಲಾಗಿ (ಭೈದಸೂ. I, ೧೬). ೨. ಕಪ್ಪುಬಣ್ಣದ ಕೊರಳುಳ್ಳವನು ; ನೀಲಕಂಠ ; ಶಿವ : "ಈಶಾನಃ, ಶಶಿಶೇಖರಃ . . .

ನೀಲಗ್ರೀವಃ, ವಹ್ನಿರೇತಾಃ . . . ನೀಲಲೋಹಿತಃ —ಈ ೪೫ ಮಹಾದೇವರ ಪೆಸರ್" (ಹಲಾಯು. ೩-೧೨) ; ನೀಲಗ್ರೀವ ಕಾಲಾಂತಕ . . . ವಿರೂಪಾಕ್ಷ ರಕ್ಷಿಪುದೆನ್ನಂ (ರಕ್ಷಾಶ. ೮೭); ಶಂಬರಾಂತಕಮದಾಡಂಬರಾಚಲ ನಿಶ್ಚಿತ ಶಂಬ ನೀಲಗ್ರೀವ ಜಯಯೆನುತ್ತೆಱಗಿದಂ ನಂಬಿ ಭಯಭಕ್ತಿಯಿಂದ (ಸೌಂದಪು. ೧೨-೪೨). [ನೀಲ+ಗ್ರೀವ]

ನೀಲಚುಂಬಿ (ಗು). ಆಕಾಶವನ್ನು ಮುಟ್ಟುವ ; ಗಗನಚುಂಬಿಯಾದ : ಕಲ್ಪನೆಗೆ ಕೆಚ್ಚಿರಲ್ ಕಟ್ಟ ಕಾಣಾ ನೀಲಚುಂಬಿ ಮಹೇಂದ್ರ ಕುತ್ಕೀಲಮಸ್ತಕದ ಶಕುನಿಶಿಲೆಗೇರ್ದು ನಿಂದಾ ವಿರಾಡ್ರೂಪದಾ ಭವ್ಯಚಿತ್ರವನಾಂಜನೇಯನಾ ! (ಶ್ರೀರಾಮಾ. ೪೦೪-೪೬). [ಸಂ. ನೀಲಚುಂಬಿನ್]

ನೀಲಚೂಳಿಕೆ (ನಾ). ನೀಲಿಯ ಬಣ್ಣದ ಶಿಖರ,—ಬೆಟ್ಟದತುದಿ : ಬಲವರುತಿರ್ಪ ಭಾನುಗೆ ತಮಃಪಟಳಂ ಸುಗಿದಭ್ರಮೇಖಳಾವಳಯಮನಾಸೆ ಪಟ್ಟು ನೆಲಸಿರ್ದುದೊ ಪೇಟೆನೆ ಮಂದರಾಗ್ರದೊಳ್ ನೆಲಸಿದ ನೀಲಚೂಳಿಕೆ ಜಿನಾಗಮನಕ್ಕಿದೆ ನಮ್ಮ ಮುಂದೆ ಪೂವಲಿಗೆದಱುತ್ತು ಮಿರ್ದಪುದು ಮೆಯ್ವೆಳಗೆಂಬತಸೀಲತಾಂತಮಂ (ಮಲ್ಲಿಪು. ೧೨-೯೧).

[ನೀಲ+ಚೂಳಿಕೆ(=ಚೂಲಿಕೆ)]

ನೀಲಚೇಲ, ನೀಳಚೇಳ (ನಾ). = ನೀಲಪಟ ೧ : ದಿನನಾಥಂ ಪೆಱಪಿಂಗೆ . . . ಮೃಗಾಂಕನೊಳ್ ನೆರೆಯಲೆಂದಾಶಾವಧೂದೌತ್ಯವರ್ತನದಿಂದಂ ಗಗನಸ್ಥಳೀಕುಲಟೆ ಕೊಂಡಳ್ ನೀಲಚೇಲಾವಗುಂಠನಮಂ ತಾನೆನೆ ದಟ್ಟಮಾಗಿರೆ ತಮಂ ತಳ್ತತ್ತು ದಿಕ್ಪ್ರಾಂತಮಂ (ಅನಂಪು. ೭-೭೩). **ನೀಳಚೇಳ :** ಅಭಿಮತ ರತೋತ್ಸುಕ ಸ್ವೈರಿಣೀಸಂತತಿಗತಂತುಮಯ ನೀಳಚೇಳಮುಮಕಲ್ಕಮಯ ಕಸ್ತೂರಿಕಾಪಂಕಮುಮಗ್ರಾವಮಯ ಮಹಾನೀಲಮಣಿಭೂಷಣಮುಮೆನಿಸಿ . . . ತಮಮಶೇಷಭುವನೋದರ ಮನಾವಗಂ ತೀವೆ (ವರ್ಧಪು. ೬-೨೯ ವೆ). [ನೀಲ+ಚೇಲ$_1$]

ನೀಲತಂತ್ರ (ನಾ). ಕಿರಣಾಗಮದ ಒಂಬತ್ತು ಪ್ರಕಾರಗಳಲ್ಲಿ ಒಂದು : ಗರುಡಾಗಮ ನೈರುತಾಗಮ ನೀಲತಂತ್ರ . . . ಕಾಲತಂತ್ರವೆಂದು ಕಿರಣಾಗಮದ ನವಭೇದಂಗಳು (ವಿವೇಕ. ೭೧). [ಸಂ.]

ನೀಲತುತ್ತೆ (ನಾ). ಒಂದು ಬಗೆಯ ಖನಿಜಲವಣ ; ಮೈಲುತುತ್ತ : ಜೋಳವನ್ನು ಕಾಡಿಗೆರೋಗದಿಂದ ಉಳಿಸಬೇಕಾದರೆ ಅದರ ಬೀಜಗಳನ್ನು ಕಾಪರ್‌ಸಲ್ಫೇಟ್ (ನೀಲತುತ್ತೆ) ದ್ರಾವಣದಿಂದ ತೊಳೆಯಬೇಕು (ನಿರಶಾ. ೧೭). [ನೀಲ+ತುತ್ತೆ(<ತುತ್ತ)]

ನೀಲತುರಂಗ (ನಾ). ಕಪ್ಪುಬಣ್ಣದ ಕುದುರೆ : ನೀಲತುರಂಗಮಾದೊಡಂ ಶ್ವೇತಾಶ್ವಮಾದೊಡಮಾ ವಾಜಿಯ ಕುಕ್ಷಿಯೊಳಾದೊಡಂ ವಕ್ಷದೊಳಾದೊಡಂ ಧವಳವರ್ಣಮಿರಲಾ ತೇಜಿ ವೈಜಯಕಮೆನಿಪುದು (ಹಾಲಾಸ್ಯ. ೪-೧೧-೧೦೩ ವೆ). [ನೀಲ+ತುರಂಗ$_1$]

ನೀಲತುರಗ (ನಾ). = ನೀಲತುರಂಗ : ನೀಲತುರಗವಿರಾಜಮಾನಳಿ ನೀಲವಸನೆಯೆ (ದೇವೀಮ. ೩-೧೮). [ನೀಲ+ತುರಗ]

ನೀಲತೆ (ನಾ). ನೀಲಿ ಅಥವಾ ಕಪ್ಪುಬಣ್ಣದಿಂದ ಕೂಡಿರುವಿಕೆ.

[ಸಂ. ನೀಲತಾ]

ನೀಲಧಮ್ಮಿಲ್ಲ (ನಾ). ಕಪ್ಪುಬಣ್ಣದ ತುರುಬು,—ಮುಡಿ : ಶ್ರೀಗಿರಿಸುತಾನೀಲಧಮ್ಮಿಲ್ಲ ಮಲ್ಲಿಕಾನಾಗಚಂಪಕಕೌಸುಮಾರಚಿತಮಾಲಿಕಾಪೂಗಧೂಳಿಮ ಧೂಳಿಪಂಕಿಲಿತವಾಮಾಂಸಶಿಖರಶೋಭಾಧುರೀಣಂ (ದುರಪು. ೧೭-೧). [ನೀಲ+ಧಮ್ಮಿಲ್ಲ]

ನೀಲಧಿ (ನಾ). ೧. ನೀಲವರ್ಣಕ್ಕೆ ಆಶ್ರಯವಾದುದು ; ಆಕಾಶ: ನೀಲಧಿಯಲಿ ಶಶಿಯ ದೋಣಿ ಈಸುತಿತ್ತು ಮಂದಾನಿಲಂ ಮಂದ ಮಂದಂ ಬೀಸುತಿತ್ತು (ಅನಿಕೇ. ೪೩-೧). ೨. ನೀರಿಗೆ ಆಶ್ರಯವಾದುದು ; ಸಮುದ್ರ (?). [ಸಂ.]

ನೀಲನಕ್ಷೆ (ನಾ). ಯಾವುದಾದರೂ ಕಟ್ಟಡ, ಯಂತ್ರ ಇತ್ಯಾದಿಗಳ ನಿರ್ಮಾಣವನ್ನು ಕೈಗೊಳ್ಳುವ ಮೊದಲು ತಯಾರಿಸುವ ಮೊದಲ ನಕ್ಷೆ : ನೀಲಪ್ರತಿ, ನೀಲನಕ್ಷೆ (Blue Print. ಪತ್ರಿನಿ. ೧೦).

[ನೀಲ+ನಕ್ಷೆ]

ನೀಲನಾಗಿನಿ (ನಾ). ನೀಲಿಬಣ್ಣದ ಹೆಣ್ಣುನಾಗರ ಹಾವು : ಕಾರ್ದವಿಷಮಂ ತಾನೆ ಮರಳಿ ಪೀರಲ್ಕೆಳಸಿ ಬಳಿ ಸಾರ್ವ ನೀಲನಾಗಿನಿಯಂತೆ ತನ್ನೆಡೆಗೆ ತಪಿಸುತ್ತೈತರುತಿರ್ದ ಭರತಜನನಿಯನಿರದೆ ನೂಂಕಿದನ್ (ಶ್ರೀರಾಮಾ. ೭೦-೪೪೬). [ನೀಲ+ನಾಗಿನಿ(<ನಾಗಿಣಿ)]

ನೀಲನೀರಜ (ನಾ). ನೀಲಿಯ ಬಣ್ಣದ ತಾವರೆ ; ಕನ್ನೈದಿಲೆ : ಬಾಯಱಿದಟ್ಟ ಮೆಟ್ಟಡುವ ಡಂಬಿಪ ರಂಡೆತನಕ್ಕೆ ಪೂಣ್ಣಭಿಪ್ರಾಯಮೆ ಸಿಂಹನಂದೆಗಮನಿಂದಿತೆಗಂ ಮೃಗಕಂತಮಾದ ತತ್ಸಾಯಕಮುರ್ಚೆ ಪೋಗದೆ ಮೃಗೀಯುಗಳಂ ಮಡಿವಂತೆ ಸತ್ತರಾಘ್ರಾಯಿಸಿ ನೀಲನೀರಜಮಂ (ಶಾಂತಿಪು. ೬-೯೪) ; ಪಾಲ್ಗಡಲಂ ಪೋಲ್ತಿರೆ ತತ್ಸರಂ . . . ಮೇಲೆಡೆಗೊಂಡೊಪ್ಪುವ ನೀಲನೀರಜವನಂ ಸ್ವರ್ಣಾಂಬುಜೋದ್ಯದ್ರಜಂ . . . ಒಪ್ಪುಗುಂ (ರಾಜಶೇ. ೧೦-೬೬). [ನೀಲ+ನೀರಜ$_2$]

ನೀಲನೀರದ (ನಾ). ಕಪ್ಪುಬಣ್ಣದ ಮೋಡ ; ನೀಲಮೇಘ : ನೀಲನೀರದ ತನುಚ್ಛವಿ ಭಸ್ಮರಜೋವಿಲಿಪ್ತಮಂಜನಗಿರಿಯಂ ಶರಜ್ಜಳಧರಂ ಕವಿದಂತಿರೆ ಚೆಲ್ವನಾಳ್ದು (ಪಂಪಭಾ. ೭-೫೯) ; ಈ ಸ್ವಯಂಪ್ರಭೆಗೆ ಲುಲತ್ತಟತ್ತ್ರಭೆಗೆ ಬಂಧುರಸಿಂಧುರನೀಲನೀರದಪ್ರಭನಭಯಂ ತ್ರಿಪೃಷ್ಠನುಟಿದರ್ ನಿಲೆ . . . ದೊರೆಯಾಗಲಾರ್ಕುಮೇ (ಶಾಂತಿಪು. ೫-೨೮) ; ತಾಂ ಮುಂತೆ ನಡೆಗೊಂಡನಡವಿಕೀಳ್ವಟ್ಟಿಯೊಳಿಳಾತ್ಮಜಾವಲ್ಲಭಂ, ನೀಲನೀರದವಿಪುಲವಪುವಾಗಿ, ಭೀಷಣ ಧನುಷ್ಪಾಣಿಯಾಗಿ (ಶ್ರೀರಾಮಾ. ೧೨೭-೫೪). [ನೀಲ+ನೀರದ]

ನೀಲಪಟ, ನೀಳಪಟ (ನಾ). ೧. ಕಪ್ಪುಬಣ್ಣದ ಬಟ್ಟೆ ; ನೀಲಿಬಣ್ಣದ ವಸ್ತ್ರ: ರಸದ ಮಳಯಜದ ಘುಸೃಣದ ಕುಸುಮದ ಕಪ್ಪುರದ ಕವಿವ ಸೊವಡಿಂಗಳಿಗಳ್ ಮುಸುಱೆ ನವನೀಲಪಟಮಂ ಮುಸುಕಿದ ವೋಲಸತಿಯೊರ್ವಳಡಿಯಿಡುತಿರ್ದಳ್(ಲೀಲಾವ. ೩-೧೨) ; ಪೊದೆದ ನವೀನ ನೀಲಪಟವಿಕ್ಕಿದ ಕತ್ತುರಿಯಣ್ಪು ತೊಟ್ಟ ನೀಲದ ತೊಡವೊಪ್ಪೆ . . . ಪರ್ವಿದ ತಮದುರ್ವಿನೊಳ್ ಸುಟಿದರಸ್ಫುಟಚಾರೆಯರಂದು ಜಾರೆಯರ್ (ಜಗವಿ. ೧೬-೧೦೨) ; ನೀಲಪಟಾಂಚಿತ ಕಂಚುಕಬಾಲಾಬಾಹಾಲತಾಗ್ರದೊಳ್ಮೆಱೆದುದು ಪೂಮಾಲೆ ವಿದುಂತುದಮುಖದಿಂ ಸಾಲಿಟ್ಟಳಿವಿಂದು ವಮೃತಕಣಮಂಜರಿವೋಲ್ (ರಾಜಶೇ. ೨-೧೦೬). ೨. ಮನ್ಮಥನನ್ನು ಆರಾಧ್ಯದೇವತೆಯಾಗುಳ್ಳ ಒಂದು ತಾಂತ್ರಿಕ ಪಂಥದ ಹೆಸರು ಮತ್ತು ಆ ಪಂಥಕ್ಕೆ ಸೇರಿದ ವ್ಯಕ್ತಿ ; ℙ ಇವರನ್ನು ಕಾಶ್ಮೀರದಲ್ಲಿ 'ನೀಲಾಂಬರ'ರೆಂದು ಕರೆಯುತ್ತಾರೆ : ಅರ್ಹನ್ ಬುದ್ಧಚಾರ್ವಾಕ ಮೀಮಾಂಸಕ ನೀಲಪಟರೆಂಬವರು ಕಾಯದರುಶನಂಗಳಲ್ಲಿ ದೀಕ್ಷಿತರಾಗಿ . . . ನರಕಕ್ಕಿಳಿದು ಅಧಮರಾಗಿ ಹೋಗಿ ಎಂದು ಹೇಳಿತ್ತೆಯಾ ವೇದ (ಉರಿಪೆ. ಕ. ೧೩೨-೨೦೧) ; ಯೋಗಿ ಜೋಗಿ . . . ನೀಲಪಟರು ಸುಳಿವರು ಕ್ಷುಧೆ ಕಾರಣ (ಸಮಾವ. ೬-೨೨) ; ಸ್ಮರಕಳಾತಾಪಸಂ ನೀಲಪಟನೆಂಬವಂ ಹರಿದು ಬಂದು. . . ಬಳಿಕಿಂತೆಂದನು (ಸಿದ್ದರಾ. ೪-೫೯) ; ನೀಲಪಟನುದ್ಯನ್ನಿರೀಶ್ವರಾನೇಕೇಶ್ವರಾಲೋಲಪೌರಾಣಿಕಪ್ರಾತ್ಯಭಿಜ್ಞಾದ್ಯಶೇಷಸಮಯಗಳ ಗಡಣಂ ಲೀಲೆಯಿಂದೆನ್ನೊಳ್ ಸೆಣಸಿ ನಿಗ್ರಹಂಬೊತ್ತು ಸೋಲಮಂ ಪಡೆದೋಲಗಿಸುತಿರ್ಪರ್ (ಪದ್ಮರಾ. ೯-೧೭). **ನೀಳಪಟ :** ೧. ಚೌಕಮಂ ಕೀಱುತುಂ ತೆಗೆದಾಚ್ಛಾದಿಸೆ ಕೇಳ ನೀಳಪಟಮಕ್ಕುಂ ಬಟ್ಟತಂ ಮಾಡಿ ಸುತ್ತುಗಳೆತ್ತಲ್ಕಸಿತಾತಪತ್ರಮೆನಲಕ್ಕುಂ (ಗಿರಿಕ. ೪-೭೬). [ನೀಲ+ಪಟ$_3$]

ನೀಲಪಟಕೇತು (ನಾ). ಕಪ್ಪುಬಣ್ಣದ ಬಾವುಟ,—ಧ್ವಜ : ನೀಲಪಟಕೇತುವಂ ಗಗನಾಲಂಬಿಯನಂಬುಜಾಪ್ತನಿದು ರಾಹುವೆನುತ್ತಾ ಲೋಕಿಸಿ ಭಯಮುತ್ತು ವಿಶಾಲಾಭ್ರದೆ ದಕ್ಷಿಣೋತ್ತರಾಯಣನಾದಂ (ನೃಷವಿ. ೪-೬೬). [ನೀಲಪಟ+ಕೇತು]

ನೀಲಪಟಚ್ಛದೆ (ನಾ). ಕಪ್ಪುಬಣ್ಣದ ಬಟ್ಟೆಯನ್ನು ಹೊದೆದು ಕೊಂಡಿರುವವಳು : ನೀಲಪಟಚ್ಛದೆ ನಿಶೆಯೊಳ್ ಲೋಕೇಕ್ಷಣೆ ಗಗನ ಮಾರ್ಗದಿಂ ರಾವಣನಿರ್ದಾಲಯಮಂ . . . ಬಂದೊಳವೊಕ್ಕಳ್ (ಪಂರಾಮಾ. ೧೦-೧೮೯). [ಸಂ. ನೀಲಪಟಚ್ಛದಾ]

ನೀಲಪಟಾಸ್ತರಣ (ನಾ). ನೀಲಿಬಣ್ಣದ ಬಟ್ಟೆಯ ಹೊದಿಕೆ : ನೀಲಪಟಾಸ್ತರಣದ ಮೇಲಾ ಲಲಿತಾಭರಣಮೊಪ್ಪಿ ತೋಱುದುದು ಶರತ್ಕಾಲದ ಗಗನ ತಾರಾಮಾಲೆಯನನುಕರಿಸಿ ದೇವದೇವನ ಸಭೆಯೊಳ್ (ಶಾಂತಿಪು. ೧೦-೧೬೩). [ನೀಲಪಟ+ಆಸ್ತರಣ]

ನೀಲಪಿಟ (ನಾ). [ಬೌದ್ಧ] ಚಾರಿತ್ರಿಕ ಘಟನೆಗಳು ಹಾಗೂ ರಾಜಶಾಸನಗಳನ್ನು ಒಳಗೊಂಡಿರುವ ದಾಖಲೆ ; ಬಖೈರು : ದೇಶದ ಆಗುಹೋಗುಗಳನ್ನು ಬರೆದಿಡಲು ಪ್ರತಿಪ್ರಾಂತದಲ್ಲಿಯೂ ಒಬ್ಬೊಬ್ಬರನ್ನು ನೇಮಿಸಿದ್ದಾರೆ. ಈ ದಾಖಲೆಗಳನ್ನು ನೀಲಪಿಟ ಎಂಬ ಸಾಮೂಹಿಕ ಹೆಸರಿನಿಂದ ಕರೆಯುತ್ತಾರೆ (ಪ್ರವಾಇ. 1, ೨೦೦). [ಸಂ.]

ನೀಲಪುಷ್ಪ (ನಾ). ೧. ನೀಲವರ್ಣದ ಒಂದು ಬಗೆಯ ಸಸ್ಯ : "ಅಜಲಿ(ಲ?)ಕಾ—ನೀಲಪುಷ್ಪ" (ಓಷಧಿ. ೬). ೨. ವಿಷ್ಣುಕ್ರಾಂತಿ ಗಿಡ : "ನೀಲಪುಷ್ಪ—ಕರಿಯ ಗೋರಟಿ, ವಿಷ್ಣುಕ್ರಾಂತಿ" (ಓಷಧಿ. ೮೮). ೩. ಮಾಚಿಪತ್ರೆ. [ಸಂ.]

ನೀಲಪ್ರತಿ (ನಾ). ನೀಲನಕ್ಷೆ : ನೀಲಪ್ರತಿ, ನೀಲನಕ್ಷೆ (Blue Print. ಪತ್ರಿನಿ. ೧೦). [ನೀಲ+ಪ್ರತಿ]

ನೀಲಪ್ರಸ್ತರ (ನಾ). ಕಪ್ಪುಬಣ್ಣದ ಶಿಲೆ ; ಕರಿಯ ಬಂಡೆಗಲ್ಲು : ವಿಸ್ತೀರ್ಣಮೆನಿಪ ನೀಲಪ್ರಸ್ತರದೊಳ್ ಮುನಿಪನಿರ್ದಂ (ಚಂದ್ರಪು. ೩-೨). [ನೀಲ+ಪ್ರಸ್ತರ]

ನೀಲಬೆ 'ನೀಲಬ್ಬೆ' ನೋ.

ನೀಲಬೇರ (ನಾ). ಕಪ್ಪುಬಣ್ಣದ ಕುದುರೆ : ನೀಲಾಂಬುರುಹ ತನುಚ್ಛವಿಯಾಗಲ್ ನೆಱೆ ಪರೆದಿರೆ ನೀಲಬೋ[ಬೇ]ರನಾ ಹಯಧೀರಂ (ಅಶ್ವಶಾ. ೨-೧೪). ℙ "ಕುದುರೆಯ ನಾಮ ವಿಶೇಷಗಳು—೨೯ : ಕರ್ಕ, ಕುಕ್ಕುಟ, ನೀಳ, ಶ್ಯಾಮವರ್ಣ, ಚೇರ, ಇಂದ್ರಾಹ್ವ, ಬೊಲ್ಲ, ಕುಂಕುಮಬೇರ, ಉಜ್ಜಲಬೇರ, ಮಂಗಳಬೇರ, ನೀಲಬೇರ, ಕೈರ, ಕಾರಳಗ, ಕೇಸಳಗ, ಸಂಪಳಗ, ಬೋರಳಗ, ಮಂಗಳ, ಕೊಂಕಾಹ್ವ, ಶೋಭೆಯಟ್ಟ, ಅವಟ, ಕಪೋತ, ಕಾಮಾಂಕಿ, ನೀಲ, ಗಂಗವಾಣಿ, ಚಕ್ರವಾಕ, ಸಿಂಹಪೋತ, ಸಿದ್ಧಾರ್ಥ, ಉತ್ತಮ, ಪುನ್ನಾಹ ಇ., (ಅಶ್ವಶಾ)" (ಶ್ರೀನತ್ಸ. ೧೨೨). [ನೀಲ+ಬೇರ್ಯ]

ನೀಲಬ್ಬೆ, ನೀಲಬೆ (ನಾ). ಒಬ್ಬಾಕೆಯ ಹೆಸರು : ಜಿಮ್ಮಾಡಿಯ ಮನೆವಗತಿ ನೀಲಬ್ಬೆಯ ಮಗಂ ರಾಜಮ್ಮನ ಧರ್ಮ್ಮ (ಎಕ. III, ನಂಜನ. ೧೫೮-೨ ; 970). **ನೀಲಬೆ :** ಜಿಮ್ಮಾಡಿಯುಂ ನೀಲಬೆಯುಂ ನರಸಿಙ್ಗಯ್ಯನುಂ . . . ಇನ್ತಿವರಿಬ್ಬು ಕೊಟ್ಟೋರ್ (ಎಕ. VI, ಚಿಕ್ಕಮ. ೩-೯ ; 899 ?). [ನೀಲ+ಅಬ್ಬೆ]

ನೀಲಭದ್ರ (ನಾ). ಹದಿನೇಳು ಕುಲಪರ್ವತಗಳಲ್ಲಿ ಒಂದು : ಶಂಖಕೂಟ . . . ಹೇಮಕೂಟ ನೀಲಭದ್ರ ಕೋಟಶೃಂಗ . . . ಎಂಬ ಹದಿನೇಳು ಕುಲಗೋತ್ರಂಗಳೇ ಪೂರ್ವೋಕ್ತ ಸುಪಾರ್ಶ್ವವೆಂಬ ಕೀಲಕ ಪರ್ವತಕ್ಕೆ ಬಡಗಣ ದಿಕ್ಕಿನಲ್ಲಿಹವು (ವಿವೇಕ. ೨೩೧). [ನೀಲ+ಭದ್ರ]

ನೀಲಭದ್ರತಂತ್ರ (ನಾ). ಚಂದ್ರಜ್ಞಾನಾಗಮದ ಹದಿನಾಲ್ಕು ಭೇದಗಳಲ್ಲಿ ಒಂದು : ಸ್ಥಿರಸಂಹಿತೆ ಸ್ಥಾಣುಸಂಹಿತೆ ನೀಲಭದ್ರತಂತ್ರ ಶಿವಭದ್ರಾಗಮ . . . ದೇವೀಮತವೆಂದು ಚಂದ್ರಜ್ಞಾನಾಗಮದ ಹದಿನಾಲ್ಕು ಭೇದಂಗಳ್ (ವಿವೇಕ. ೭೧). [ಸಂ.]

ನೀಲಮಣಿ, ನೀಳಮಣಿ (ನಾ). ನವರತ್ನಗಳಲ್ಲಿ ಒಂದು : ನೀಲವರ್ಣದ ರತ್ನ ; ಇಂದ್ರನೀಲ : ನೀಲಮಣಿರುಚಿರನಂ ವನಮಾಲಿಯಂ . . . ಕಂಡಳ್ (ಜಗವಿ. ೧೧-೩೦) ; ನೀಲಮಣಿಮುಕ್ತಾಮಾಲ ನಿಮ್ಮ ನೇನೆಂದು ಕರೆಯಲಿ ಸುಗ್ರೀವಪಾಲ (ಪುರಂದ. ೪-೧೬೦-೪); ನೀಲಮಣಿರಚಿತಂಗಳೆನಿಪ ವಿಶಾಲಪಾದರಿ ಪಟ್ಟಸಾಲೆ(ನಾಗಷ. ೩೦-೫೨). **ನೀಳಮಣಿ:** ಸುಳಲಿತ ಕವಿಕೃತಿಗಮಳಿನನೆಳಸುವ ವೋಲ್ ಮಲಿನನೆಳಸನತಿವಿಶದ ಹಿಮೋಪಳಮೊಸರ್ವವೊಲಿಂದುಕರಾವಳಿಗೆ ತೃಣಗ್ರಾಹಿ ನೀಳಮಣಿಯೊಸರ್ದಪುದೇ (ಚಂದ್ರಪು. ೧-೩೯) ; ನೀಳಮಣಿಸ್ಥಲಿಯೊಳ್ ನೀಳಾಳಕಮಂ ನೆಟಲೊಳಿನಿಸು ಕಾಣದೆ ತಲೆಯಂ ಬಾಲಕಿಯರಂಟುತುಂ ನೃಪಬಾಳನನಾ ನಗದ ರತ್ನಗುಹೆಯೊಳ್ ನಗಿಪರ್ (ಪರ್ಧಪು. ೨-೨೧). [ನೀಲ+ಮಣ್ಯ]

ನೀಲಮಲ್ಲಿ (ನಾ). ನೀಲಿಬಣ್ಣದ ಹೂವು ಬಿಡುವ ಒಂದು ಬಗೆಯ ಸಸ್ಯ : ಶಿವಮಲ್ಲಿ, ನೀಲಮಲ್ಲಿ, ಕೊಗ್ಗೆ (ಮೈಔಗಿ. ೪೫-೮೯೭). [ನೀಲ+ಮಲ್ಲಿ]

ನೀಲಮಹೀಧರ (ನಾ). ನೀಲವರ್ಣದ ಪರ್ವತ,—ಗಿರಿ : ನೀಲಮಹೀಧರಮುಱೆ "ಕೈಕಾಲಂ ಮೇಣ್ತೊ[ಣ್ತ]ಳೆದು ಸುಟಿಸಿದುದೋಯೆನೆ ದೀರ್ಘಸ್ಥೂಲಸ್ವರೂಪದಿಂದಂ ಕಾಲನಿಭಂ ಬಂದಂ (ಉದ್ಭಟ. ೪-೬೫). [ನೀಲ+ಮಹೀಧರ]

ನೀಲಮೇಘ (ನಾ). ಕಪ್ಪುಮೋಡ ; ಕಾಳಮೇಘ : ನೀಲಮೇಘದ ಮಿಂಚುಗಳ ಕೋಟಿಪ್ರಭೆಯಿಂದ (ದೀಕ್ಷಾಬೋ. ಬು. ೩-೬೨೩) ; ಆ ಮಹಾಪ್ರಚಂಡೋಗ್ರಹೂಂಕಾರದಿಂ ಬಿಡದಖಿಳ ದಿಕ್ಕ ಬಧಿರತೆಯನೆಯ್ದಿಸುತಿರ್ಪ ಬೆಡಗಿನಿಂ ನೀಲಮೇಘಾಂಜನಾಕಾರದಿಂದಂ . . . ವೀರಭದ್ರೇಶನೆಱಗಿಯೊರ್ಭಡಿಸಿ ಬಿನ್ನವಿಸುತಿರ್ದಂ (ವೀಶೈಪು. ೩-೫-೧೬) ; ನೀಲಮೇಘಂಗಳ ನಡುವೆ ಕಂಗೊಳಿಸುವ ಬಾಲಭಾಸ್ಕರನ ಕೀಳ್ಪಡಿಸಿ ಮಾಲಾಮಧ್ಯದ ಕೌಸ್ತುಭವೆಸೆದ ವಿಶಾಲವಕ್ಷವ ನಿಟ್ಟಿಸಿದಳು (ಮೋಹತ. ೨೯-೪೨). [ನೀಲ+ಮೇಘ]

ನೀಲಮೇಘಶ್ಯಾಮ, ನೀಳಮೇಘಶ್ಯಾಮ (ನಾ). ೧. ಕಾಳಮೇಘದಂತೆ ಕಪ್ಪಾಗಿರುವವನು ; ಕೃಷ್ಣ : ಪೇಳಲಳವೆ . . . ನೀಲಮೇಘಶ್ಯಾಮ ನಿನ್ನ ಬಾಲಲೀಲೆಯಾಟವ (ಪುರಂದ. ಧಾ. ೪-೫೧ ಅನುಪಲ್ಲವಿ). ೨. ರಾಮ : ನೀಸಂಜ್ಞಳಾದನಗೆ ಕಣಸಾದುದಾ ದರ್ಶನದಿ ಮೈದೋರ್ಧುದೀ ಸರ್ವಲೋಕರಮಣೀಯತಾ ನೀಲಮೇಘಶ್ಯಾಮ ಮೂರ್ತಿ (ಶ್ರೀರಾಮಾ. ೪೪-೪೫೭). **ನೀಳಮೇಘಶ್ಯಾಮ :** ಸುರಪತಿಕನಲಿ ಖತಿಗೊಂಡು . . . ನೀಳಮೇಘಶ್ಯಾಮನಿಗೆ ಸಮಪಾಳಿಯೆನಿಸುವ ನಳನೃಪಗೆ ಯೆರಡೆಣಿಸುವುದೆ ಎಂದ (ನಳಚ. ೪-೧೧). [ನೀಲಮೇಘ+ಶ್ಯಾಮ]

ನೀಲಮೇಘಶ್ಯಾಮಲ (ನಾ). = ನೀಲಮೇಘಶ್ಯಾಮ ೧ : ಕಣ್ಣಾರೆ ಕಂಡೆನಚ್ಯುತನ . . . ನೀಲಮೇಘಶ್ಯಾಮಲನ (ಪುರಂದ. ೧-೮೩-೩) ; ನೀಲಮೇಘಶ್ಯಾಮಲನ ಲೀಲೆ ಪೊಸತೆಂದು ಸುರರುಲಿಯೆ ಸ್ವಸ್ಯಾಲಕನ ರಥಾಗ್ರಕೆ ಸುಪರ್ಣಸ್ಕಂಧದಿಂದೆ ಮುರಹರನಿಳಿದನು (ಜೈಮಿಭಾ. ೧೩-೨೩). [ನೀಲಮೇಘ+ಶ್ಯಾಮಲ]

ನೀಲರತ್ನ, ನೀಳರತ್ನ (ನಾ). = ನೀಲಮಣಿ : "ನೀಲೋಪಲಃ—ನೀಲರತ್ನ" (ಓಷಧಿ. ೪೮). **ನೀಳರತ್ನ :** ನೀಳರತ್ನದ ಘಟದಿರದೆ ಮುರಿದೇಳೆ

ದುಂದಿಯ ಬಂಬಲನು ವಿಗೆ ಕೋಳುಗೊಂಡುಜ್ಜಳಿಪ ಕಂಪಿನ ಧೂಪ ಧೂಮಂಗಳಿಂ (ಸಾಳ್ವಭಾ. ೩-೨೯). [ನೀಲ+ರತ್ನ]

ನೀಲಲೇಶ್ಯೆ (ನಾ). [ಜೈನ] ಕೃಷ್ಣ, ನೀಲ, ಕಪೋತ, ಪೀತ, ಪದ್ಮ, ಮತ್ತು ಶುಕ್ಲಗಳೆಂಬ ಆರು ಲೇಶ್ಯೆಗಳಲ್ಲಿ ಒಂದು; ☞ "ಆಲಸ್ಯ, ಬುದ್ಧಿಹೀನತೆ, ಅವಿವೇಕ, ವಿಷಯಲಂಪಟತೆ, ಅಭಿಮಾನ, ಕಪಟ, ಅತಿನಿದ್ರೆ, ಧನಧಾನ್ಯಗಳಲ್ಲಿ ತೀವ್ರಅಭಿಲಾಷೆ—ಇವು ನೀಲಲೇಶ್ಯೆಯ ಪರಿಣಾಮಗಳು" (ಆದಿಪು. ಕೋಶ): ಅತಿರೌದ್ರಬೀಭತ್ಸಕುತ್ಸಿತೋತ್ಕೃಷ್ಟಸ್ಥಾನಂಗಳೊಳ್ ಕೃಷ್ಣನೀಲಕಪೋತ ಲೇಶ್ಯಾ ಬಹ್ವಾರಂಭಪರಿಗ್ರಹತ್ವಾದ್ಯಶುಭಪರಿಣಾಮಂಗಳಿಂ ಜೀವಂ ನೆಲಸಿ (ಆದಿಪು. ೫-೪೩ ಪ); ನೀಲಲೇಶ್ಯಾಪರಿಣಾಮದ ಮಧ್ಯಮಾಂಶದಿಂ ಜೀವಂ ಪಂಕಪ್ರಭೆಯೆಂಬ ನಾಲ್ಕನೆಯ ನರಕದೊಳು ಪುಟ್ಟುಗುಂ (ಪಸಾರ. ೪೧೪); ಇದೇ ರೀತಿ ಮೂರು, ನಾಲ್ಕು, ಐದನೆಯ ನರಕಗಳಲ್ಲಿ ನೀಲಲೇಶ್ಯೆಯು ಆಗುವುದು (ಜೈನಸ. ೪೪೮). [ನೀಲ+ಲೇಶ್ಯೆ]

ನೀಲಲೋಹಿತ (ನಾ). ೧. ಕಪ್ಪು ಮತ್ತು ಕೆಂಪುಬಣ್ಣಗಳ ಮಿಶ್ರ ವರ್ಣ; ಕೆನ್ನೀಲಿ: ನೀಲಲೋಹಿತರೂಪದಿಂ ನಿನ್ನಂ ಬಟಿಸಲ್ವೆಂ (ಅದ್ಭುತ. ೫೪-೧೪). ೨. ಕಪ್ಪಾದ ರಕ್ತ; ಕನ್ನೆತ್ತರು: ನಳನ ಕೋಪಾನಲನಂ ಖಡ್ಗಧಾರಾಜಲದಿಂ ನಂದಿಸಲುಂ ನೀಲನ ನೀಲಲೋಹಿತದಿಂ ಭೂತಗಣಮಂ ತಣಿಪಲುಮುತ್ಕಂಠನಾಗಿ (ಪಂಚಾಮೃ. ೧೩-೧೩೩ಪ). ೩. ಕಂಠದಲ್ಲಿ ನೀಲವರ್ಣವನ್ನೂ ಕೂದಲುಗಳಲ್ಲಿ ಕೆಂಬಣ್ಣವನ್ನೂ ಹೊಂದಿರುವವನು; ಶಿವ; ಈಶ್ವರ: "ಈಶಾನಃ, ಶಶಿಶೇಖರಃ . . . ನೀಲಲೋಹಿತಃ—ಈ ೪೫ ಮಹಾದೇವರ ಪೆಸರ್" (ಹಲಾಯು. ೪-೧೩); ಎಮ್ಮರಸಂ ಕಂಸದೇವಂ . . . ಈ ಪರಶುವಿಂ ಗಿರಿಶಬಂಧುವನೀ ಶೂಲದಿಂ ನೀಲಲೋಹಿತನಂ ಗೆಲ್ದನೆಂದು ಬೇಱೆವೇಱೆ ಪೆಸರ್ಮೆಸರೊಳ್ ತೋಜುತ್ತುಂ (ಜಗವಿ. ೬-೨೪ ಪ); ಮೊದಲಲಂಬುಜ ಭವನನಾ ಮಧ್ಯದಲಿ ಮಧುಸೂದನನನಾ ಬಲದುದಿಯಲಾಹ್ವಾಸಿಸಿದ ನಗ್ನದ ನೀಲಲೋಹಿತನ (ಕುವ್ಯಾಳ. ೧೫-೨೬); ನೀಲಲೋಹಿತನಿವಾಸಮೆನಿಪ್ಪಾ ಚೋಳದೇಶದೊಳಗೂರ್ಜಿತ ಸದ್ಭಕ್ತಾಳಿ ತನ್ನೊಳೊಲವಿಂದೆಸೆಯಲ್ ಸಲ್ಲೀಲೆಯೆಂಬ ಪುರವಿರ್ದಪುದೊಪ್ಪಿಂ (ತ್ರಿಪುವಿ. ೪೪-೨). [ನೀಲ+ಲೋಹಿತ]

ನೀಲಲೋಹಿತತಂತ್ರ (ನಾ). ಅಂಶುಮಹಾಗಮದ ಹನ್ನೆರಡು ಭೇದಗಳಲ್ಲಿ ಒಂದು: ವಿದ್ಯಾಪುರಾಣ ಭಾಸ್ಕರಾಗಮ ನೀಲಲೋಹಿತ ತಂತ್ರ . . . ಈಶಾನೋತ್ತರವೆಂದು ಅಂಶುಮಹಾಗಮದ ದ್ವಾದಶ ಭೇದಂಗಳು (ವಿವೇಕ. ೭೦). [ನೀಲಲೋಹಿತ+ತಂತ್ರ]

ನೀಲವಣ್ಣ (ನಾ). ೧. ನೀಲಿಯ ಬಣ್ಣ. ೨. ನೀಲಿಯ ಬಣ್ಣದ ದೇಹವುಳ್ಳವನು; ಕೃಷ್ಣ: ಅಲಿ ವಿಸಾನುಗಳು ಪೊಳೆಯೆ ಕಾಂತಿಜಲ ಪೂರ್ಣಾಲೀಲೆಯ ಪದನಸರದೊಳು ತೇಲಿ ತಡಿಗೆ ಬಂದ ಶೇವಾಲವೆನೆ ಪುಬ್ಬು ನೀಲವಣ್ಣಗೆ ಸೊಗಸಾಯ್ತು (ಪಧಗಿ. ೪-೬). [ನೀಲ+ವಣ್ಣ]

ನೀಲವರ್ಣ (ನಾ). ೧. ನೀಲಿಯ ಬಣ್ಣ: ನೀಲವರ್ಣದ ಬಾಲಕೃಷ್ಣನೆ ತೋಳನ್ನಾಡೈ (ಪುರಂದ. ೩-೧೪೪ ಪಲ್ಲವಿ); ನೀಲವರ್ಣದ ಲೋಲ ಕಾಲನವರಿಗೆ ಶೂಲ (ಕನಕ. ೪೩-೩); ಹಾಲಕ್ಕಿ ನೀಲಕ್ಕಿ ನೀಲವರ್ಣದಕ್ಕಿ (ನಾಪದ. ೧೧೫); ನೀಲವರ್ಣದ ಕಾವೇರಿ 'ಜೀವನವೂ ಒಂದು ಕಲೆ' ಎಂಬ ಸಂದೇಶವನ್ನು ಬೀರುತ್ತ ಮುನ್ನಡೆದಿದ್ದಳು (ಕಲಾಜ್ಯೋ. ೩೨೩). ೨. = ನೀಲವಣ್ಣ ೨: ಕಾಲಿಗೆ ಗೆಜ್ಜೆ ಕಟ್ಟಿ ನೀಲವರ್ಣನ ಗುಣ ಆಲಾಪಿಸುತ್ತ (ಪುರಂದ. ೨-೪-೧); ನೀಲವರ್ಣ ನೀನಾದರೆ ಆಕೆ ನೀಲಕುಂತಳೆ ತಾನಾದಳಯ್ಯ (ಕನಕ. ೧೫-೪). [ನೀಲ+ವರ್ಣ]

ನೀಲವಸನ (ನಾ). ೧. ನೀಲಿಯ ಬಣ್ಣದ ವಸ್ತ್ರ. ೨. ನೀಲಿಯ ಬಣ್ಣದ ವಸ್ತ್ರವನ್ನು ಧರಿಸಿದವನು; ಬಲರಾಮ: ಹಲಮುಸಲ ಪಾಣಿ ಮಧುಪಾಟಲನೇತ್ರಂ . . . ನೀಲವಸನನಾ ಧನಳಾಂಗಂ . . . ತಾಳಲಕ್ಷ್ಮಂ ಬಂದಂ (ಗದಾಯು. ೬-೫೬). ೩. ಶನಿ. ' 'ನೀಲಾಂಬರ' ಪರಾ. [ನೀಲ+ವಸನ]

ನೀಲವಿಲಾಸರಸ (ನಾ). ಒಂದು ಬಗೆಯ ಔಷಧಿ: ನೀಲವಿಲಾಸರಸ: — ಜಾಯಿಕಾಯಿ, ಜಾಯಿಪತ್ರೆ, ನುಡ್ಡು ಇವಂ ಭಂಗಿ ಸೊಪ್ಪಿನ ರಸದಲ್ಲಿ ಮರ್ದಿಸಿ ಕಡಲೆ ಪ್ರಮಾಣದಲ್ಲಿ ಗುಳಿಗೆ. ಇದು ನೀಲವಿಲಾಸರಸ (ವೈದ್ಯವಿ. ೩೬). [?]

ನೀಲವೃಕ್ಷ (ನಾ). ಒಂದು ಬಗೆಯ ಮರ: "ನರಮು, ನಬಾಲ? —ಈ ಯೆರಡುಂ ನೀಲವೃಕ್ಷ" (ಓಷಧಿ. ೮೩). [ಸಂ.]

ನೀಲವೇಣಿ (ನಾ). ೧. ಕಪ್ಪುಬಣ್ಣದ ಕೂದಲು: ಈ ಬಾನೆಲ್ಲ ಭೈರವನ ಶೂನ್ಯಶಕ್ತಿಯ ನೀಲವೇಣಿ (ಪೀಪಸು. ೧೨-೬). ೨. ಕಪ್ಪು ಕುರುಳುಳ್ಳವಳು: ನೀಲವೇಣಿ ಎನ್ನ ಕೂಡೆ ನಿಲ್ಲಲಾಜಿಯೆ (ಪುರಂದ. ೪-೬೪-೪೨). [ನೀಲ+ವೇಣಿ]

ನೀಲಶತಪತ್ರ (ನಾ). ನೀಲಿಯ ಬಣ್ಣದ ತಾವರೆ; ಕನ್ನೈದಿಲೆ: ನೀಲೋತ್ಪಲ: ಗೋತ್ರಪುತ್ರೀನೇತ್ರ ನೀಲಶತಪತ್ರರಾತ್ರೀಶ (ಉದ್ಭಟೇ. ೩-೩೭). [ನೀಲ+ಶತಪತ್ರ]

ನೀಲಶೈಲ (ನಾ). ಕಪ್ಪುಬಣ್ಣದ ಪರ್ವತ; ನೀಲಾಚಲ: ನೀಲಶೈಲಾವಳಿ ಕೈಕೊಂಡಭ್ರಮಂ ತಳ್ತಡರ್ದವೊಲಡರ್ದತ್ತಿತ್ತಲುಂ ಬಳ್ಳಿ ಮಿಂಡಂ ತಳೆದಾಶಾಮಂಡಲಂ (ಜಗವಿ. ೪-೧೪); ನೀಲಶೈಲದ ಮೇಲೆ ಮೂರ್ಪೊಳೆದೊಪ್ಪುವರ್ಕನವೋಲ್ಮಹೀಪಾಲಕಾಗ್ರಣಿ ರನ್ನವಚ್ಚಮನಾಂತು . . . ತೆರಳ್ದಂ (ಉದ್ಭಟ. ೪-೫೨). [ನೀಲ+ಶೈಲ]

ನೀಲಸರ (ನಾ). ಇಂದ್ರನೀಲದ ಹಾರ,—ಸರ: ಮುಷ್ಕರ್ಗ್ರಹಗಳ ಬಾಧೆಯನ್ನು ಪರಿಹರಿಸುವುದರಲ್ಲಿ ಚಮತ್ಕಾರವಾಗಿರುವುದೇ ನೀಲಸರದ ಗುಣಗಳು (ಸಕವೈ. ೩೮). [ನೀಲ+ಸರ$_3$]

ನೀಲಸರೋಜ, ನೀಳಸರೋಜ (ನಾ). = ನೀಲಶತಪತ್ರ: ನಯನಂ ನೀಲಸರೋಜಮಂ ಸೆಣಸುಗುಂ . . . ಮುಖಂ ಕಮಲಮಂ ಕೀಟ್ಮಾಡುಗುಂ (ಪಂಚಾಮೃ. ೧-೧೫). **ನೀಳಸರೋಜ:** ನೀಳ ಸರೋಜವನಂಗಳಾಗಳುಳ್ಕನಿತುಮರಲ್ವವೋಲ್ ಪೊಳೆವ ಕಣ್ಗುಳುಮುಜ್ಜ ನೀಯೆ (ಪಂಪಭಾ. ೮-೭); ಬಾಡಿದುದೇಕೆ ನಿನ್ನ ತನುವಲ್ಲರಿ . . . ಪೇಟ ನೀನೆನಗೆ ನೀಳಸರೋಜವನಿಲೋಲಲೋಚನೇ (ಪುಣ್ಯಾಸ್ರ. ೧-೬೩). [ನೀಲ+ಸರೋಜ]

ನೀಲಸರೋರುಹ (ನಾ). = ನೀಲಶತಪತ್ರ: ನೀಲಸರೋರುಹಾರುಣ ಸರೋರುಹಪಾಂಡು ಸರೋರುಹಪ್ರಭಾಮಾಲೆಯನೀಬ್ದುಕೊಂಡದನೆ ದೀಜುದುದೀತನಪಾಂಗವೆಂದಿನಂ . . . ಲೋಲದಪಾಂಗಮಾಲೆಯಿನನಂಗ ಲತಾಂಗಿಯ ಮೇಲೆ ಸೂಸಿದಂ (ಜಗವಿ. ೧೦-೭೪). [ನೀಲ+ಸರೋರುಹ]

ನೀಲಸರೋರುಹಾಕ್ಷಿ (ನಾ). ನೀಲೋತ್ಪಲದಂತೆ ಕಣ್ಣುಗಳುಳ್ಳವಳು: ನೀಲಸರೋರುಹಾಕ್ಷಿ ಬರವಿಲ್ಲಿಗೆ ಕಾರಣಮಾವುದು (ಉದ್ಭಟ. ೬-೨೩). [ಸಂ. ನೀಲಸರೋರುಹಾಕ್ಷೀ]

ನೀಲಸಿಂದ (ನಾ). ಒಬ್ಬಾತನ ಹೆಸರು: ಬಾಲಾದಿತ್ಯರಾಳು ಶ್ರೀಮುಂಜ್ಞನೆಮ್ಮೊನ್ನೀಲಸಿನ್ದ ನುನಸಿಜರಾನಿಜಾದು ಪಿಡಿದು ತಾನ್ಮೊನ್ದಿ ದಾನ್ (ಮೈಅರಿ. ೧೯೪೧, ೨-೨ ; ಸು. ತಿನಿಯ ೫೪). [?]

ನೀಲಾಂಗ (ನಾ). ೧. ನೀಲಿಬಣ್ಣದ ಶರೀರವುಳ್ಳವನು; ಕೃಷ್ಣ: ಪಾಂಡವರಯ್ವರುಮನೊಡಂಗೊಂಡು ಸಕಲವನಚರಜಲಚರಕಂಜಕುಮುದೇಂದೀವರಮಾಳಾನಿಳಯಮಪ್ಪ ನೀಳಾಚಳಕ್ಕೆ ನೀಲಾಂಗಂ ಪೋದಂ

(ಗದಾಯು. ೯-೧೨ ಪ) ; ನೀಲಾಂಗ ನಿನ್ನ ಮುತ್ತಿನರಳೆಲೆ ಕೀಲು ಮಾಗಾಯಿ ಹುಲಿಯುಗುರು ಕಂದು ಸೋಲ್ವರೋ ನಿನಗೆ ಸೊಬಗಿಯರು (ಪುರಂದ. ೨-೧೦೦-೨) ೨. ರಾಮ : ಆ ಲಕ್ಷ್ಮಣಾದಿಗಳ್ . . . ಅಲಿಂಗಿಸಿದ ಜಾಡ್ಯದಿಂದೆ ಜಡಿವವಯವದ ನೀಲಾಂಗನಂ ಕಂಡು ಕಾಲ್ಗೆಜಗಿ ನುಡಿಸಲಮ್ಮದೆ ಸುಮ್ಮನಿರುತಿರ್ದರು (ಜೈಮಿಭಾ. ೧೪-೪೪). ೩. ಒಂದು ಬಗೆಯ ನೀರುಹಕ್ಕಿ ; ಸಾರಸ. [ನೀಲ+ಅಂಗ೨]

ನೀಲಾಂಚಲ (ನಾ). ಕರಿಯ ಸೆರಗು ; ಕಪ್ಪಾದ ಸೆರಗು : ಸಖಿ ಕಾದಂಬಿನಿ, ಹಠಾತ್ ನೀನು ಅದೆಲ್ಲಿಂದ ಬಂದು ನಿನ್ನ ನೀಲಾಂಚಲದ ಮುಸುಕಿಟ್ಟು ಚಂದ್ರನನ್ನು ಕದ್ದುಕೊಂಡು ಓಡಿಹೋಗುತ್ತಿರುವಿ (ಇಪ್ಪಕ. ೨೫೧). [ನೀಲ+ಅಂಚಲ]

ನೀಲಾಂಜನ೧ 'ನೀರಾಂಜನ' ನೋ.

ನೀಲಾಂಜನ೨ (ನಾ). ಒಂದು ಧಾತು ವಿಶೇಷ ; ಸೌವೀರಾಂಜನ : "ಕಪೋತಕಂ—ನೀಲಾಂಜನ" (ಓಷಧಿ. ೨೫) ; ನೇತ್ರರೋಗಕ್ಕೆ :—ಶಂಖ . . . ನೀಲಾಂಜನ, ಹಿಪ್ಪಲಿ, ಶುಂಠಿ, ಮೆಣಸು, ತಾಮ್ರ, ಇವೆಲ್ಲವಂ ಎರಡುತೂಕದ ಲೆಖ್ಖದಲ್ಲೂ ಮೂಜುಜಿದಿನ ನುರ್ದನೆಯ ಮಾಡಿ ಕೆಂಪಿನ ಅಗಸೆಯ ರಸವನು ಕೂಡಿ ಕೊಂಬುದು (ವೈದ್ಯವಿ. ೩೦೧) ; ಅರಗಿನ ಚೂರ್ಣ, ನೆಲ್ಲಿಚೆಟ್ಟು . . . ನೀಲಾಂಜನ ಇವ್ಕನ್ನೂ ಸಮಾಂಶವಾಗಿ ಕೂಡಿ ಕಷಾಯವ ಮಾಡಿ ಸಕ್ಕರೆವೆರಸಿ ಕುಡಿಯಲು ಅಸ್ಥಿಸ್ರಾವ ಪರಿಹರ (ಸಕವೈ. ೨೦೪). [ಸಂ.]

ನೀಲಾಂಜನವಲಗೆ (ನಾ). ನೀಲಾಂಜನವನ್ನು ಹಚ್ಚಿಸಿಟ್ಟಿರುವ ಹಲಗೆ : ಹೊತ್ತಿದೇಕಾರತಿ ಪಂಚಾರತಿ ಕಡ್ಡಿಬತ್ತಿ ನೀಲಾಂಜನವಲಗೆ ಮತ್ತೆ ನಾನಾವಾದ್ಯರಭಸದಿಂ ಮೊಳಗಲುಯೆತ್ತಿದ ಮಹದಾರತಿಯ (ನೋಹತ. ೨೨-೪೩). [ನೀಲಾಂಜನ೧ (<ನೀರಾಂಜನ) + ಹಲಗೆ]

ನೀಲಾಂಬರ (ನಾ). ೧. ಕಪ್ಪುಬಣ್ಣದ ಬಟ್ಟೆ : ಕಂಬು ಲತಾಕಾಂತೆಗೆ ನೀಲಾಂಬರಕಂಚುಕವಿದೆಂದು ಮಿಂದಿಂದುಲಸದ್ಬಿಂಬಕ್ಕೆ ಲಕ್ಷ್ಮಲಕ್ಷ್ಮಿ ದಲೆಂಬುದನೆನಿಸಿದುವಧೀಶಕೇಶಾವಳಿಗಳ್ (ಶಾಂತಿಪು. ೧೧-೧೦೬). ೨. ನೀಲಿಯ ಬಣ್ಣದ ವಸ್ತ್ರವನ್ನು ಧರಿಸುವವನು ; ಬಲರಾಮ : "ಬಲದೇವಃ, ಬಲಭದ್ರಃ, ಮುಸಲೀ, ನೀಲಾಂಬರಃ . . . ಹಲಾಯುಧಃ —ಈ ೧೪ ಬಲದೇವನ ಪೆಸರ್" (ಹಲಾಯು. ೬-೨೯) ; ಗುರುಸುತನವೋಲಾಯು ನೀಲಾಂಬರನವೊಲು ಬಲ . . . ಮಾರುತಿಯವೊಲು ಗತಿ ಸಂವರಿಸುವುದು ಶಿವನೊಲಿದವರುಗಳಿಗಲ್ಲದಿಲ್ಲ (ಕುವ್ಯಾಭಾ. ೪-೧೧೨); ನೀಲಾಂಬರಗೆ ಸತ್ಕಾಜಿತಸುತೆಗೆ ಪೂಗೋಲ ವಂದನೆಗೆಯ್ದು ತನ್ನ ಲೋಲಾಕ್ಷಿಯೊಡನೆ ನಿಂದಿರಲಾಗಿ ಪರಮಾನುಕೂಲ ಶ್ರೀಕೃಷ್ಣ ನೋಡಿದನು (ನೋಹತ. ೧೩-೫೧). ೩. ನೀಲಿಯ ಬಣ್ಣದ ಒಂದು ಬಗೆಯ ಹೂವು; ನೀಲಿಸ್ಫಟಿಕ. ೪. ನೀಲಿಬಣ್ಣನ ಆಕಾಶ; ನೀಲಾಕಾಶ : ಜಲಪುಂಜದಿಂ ಮಿಂಚಿನಿಂ ಸಾರಮೊಳಗಿಂದೆ ನೀಲಾಂಬರದೆ ವರ್ಷಾಸಮಯಧಾರೆಯಿಂದಿಂದ್ರಗೋಪಗಳಿಂ ಭೂನೋಪಲಗಳಿಂದೆ ಮುಂಗಾರ್ ಬಂದುದು (ಭಾಪಚಂ. ೬-೨) ; ಆ ಉನ್ಮತ್ತ ಪ್ರಕಾಶಮಯ ನೀಲಾಂಬರದ ತಲದಲ್ಲಿ . . . ಸಾಯಲು ಸಾಧ್ಯವಾದರೂ ಸಾಕು (ಇಪ್ಪಕ. ೬೫೩). ೫. [ಜೈನ] ರಾವಣ : ಜಾನಕಿಯಂ ನೀಲಾಂಬರ ನೀಕ್ಷಿಸಿ ವಿಜಯಸ್ತಂಬೇರಮದಿಂ ಸಮುತ್ಸುಕಂ ಧರೆಗಿಬ್ಬಾದಂ' (ಪಂಚಾಮೂ. ೧೫-೪). [ನೀಲ+ಅಂಬರ]

ನೀಲಾಂಬರಿ (ನಾ). ೧. [ಸಂಗೀತ] ಒಂದು ರಾಗದ ಹೆಸರು : ಕಾಂಭೋಜೀ, ಕನ್ನಡ . . . ನೀಲಾಂಬರೀ ಎಂಬ ಈ ರಾಗಗಳುಭಾಷಾಂಗ ಲಕ್ಷಣವನ್ನುಳ್ಳವುಗಳು (ಚತುಪ್ರ. ೧೩೦) ; ನೀಲಾಂಬರಿ : ತ್ರಿಸ್ಥಾಯೆ ಮೇಳಕರ್ತ, ಧೀರಶಂಕರಾಭರಣದಲ್ಲಿ ಜನ್ಯ . . . ಸಾಯಂಕಾಲದಲ್ಲಿ ಹಾಡಬೇಕಾದ ರಾಗ (ಸಂಗೀಚಂ. ೧೩೧). ೨. (ಅಲಂ) ಬೇಸರದ ಧ್ವನಿ : ಹಿಂದಿದ್ದ ಗೀತೆಯೂ ಹಳೆಯ ಹಾಡೇ . . . ದಿನದ ನೀಲಾಂಬರಿಯ ಅಲಾಪ ಬೇರೆ (ಗಂ. ೩೯-೬).

ನೀಲಾಂಬರಿ ಹಾಡು = ಬೇಸರ ಬರುವಂತೆ ದುಃಖದ ಮಾತಾಡು. [ಸಂ. ನೀಲಾಂಬರೀ]

ನೀಲಾಂಬುಜ (ನಾ). ಕನ್ನೈದಿಲೆ ; ನೀಲೋತ್ಪಲ : ನಿನ್ನಂ ಬಲವರ್ಪುವಿನ್ನದಜ ಮೇಲೆ ಭುಯಾಳುಳ ಲೋಲನೇತ್ರ ನೀಲಾಂಬುಜ ಲಕ್ಷ್ಮಿಯಂ ಕೆದಜಿ ಪುಣವು ಕಾಣಗೆ ಮಾಯ್ದು ತುಂಬಿಗಳ್ (ಶಾಂತಿಪು. ೪-೪೭). [ನೀಲ+ಅಂಬುಜ]

ನೀಲಾಂಬುಜನಾಳ (ನಾ). ಕನ್ನೈದಿಲೆಯ ದಂಟು,- ಡೇಟು : ಕವಿಯ ಪಾಲೆ ನೀಲಾಂಬುಜನಾಳಮನವಟಿಯ್ಸುಗುಂ (ಸುಕುಸೂ. ೫-೫೧ ರಗಳೆ). [ನೀಲಾಂಬುಜ+ನಾಳ೧ (=ನಾಲ೧)]

ನೀಲಾಂಬುಜನ್ಮ (ನಾ). = ನೀಲಾಂಬುಜ : "ನೀಲಾಂಬುಜನ್ಮ, ಇಂದೀವರಂ—೩ ಕನ್ನೈದಿಲೇ ಹೆಸರುಗಳು" (ನಿಘಂ೩. ೪೯). [ನೀಲ+ಅಂಬುಜನ್ಮ]

ನೀಲಾಂಬುದ (ನಾ). ಕಪ್ಪು ಮೋಡ ; ಕಾರ್ಮುಗಿಲು : ನೀಲಾಂಬುದಲೇಖೆಗಳೆನೆ ಕೈಲದ ಸಾನುವಿನೊಳೆಸೆದರತಿಜಪಲತಟಿನ್ಮಾಲಾ ನುಂಜರಿಯಂತೆ ವಿಲೋಲಾಕ್ಷಿಗಳಡರೆ ಪೊಳೆವಿನಂ ವನಚರಿಯರ್ (ಲೀಲಾಸ. ೪-೩೯) ; ಸಂದನೆಸುವ ಜಡೆ ಬೆನ್ನಂ ಮಂದಯಿಸಿ ಮುಸುಂಕುತಿಯೆ ನೀಲಾಂಬುದಮಂ ಪಿಂದಿಕ್ಕಿ ಮುಂದೆ ಬೆಳಗುತೆ ನಿಂದೆಳವಿಂಚನಪೊಲಗಜೆ ನೆಜ್ ಮೆಱೆದಿರ್ದಳ್ (ಗಿನಿ. ೯-೭). [ನೀಲ+ಅಂಬುದ]

ನೀಲಾಂಬುರುಹ (ನಾ). = ನೀಲಾಂಬುಜ : ತುರಗತನುಜ್ವಲಿ ನೀಲಾಂಬುರುಹಮನನುಕರಿಸಿ ಕೋಱೆ ನೀಲಂ (ಅಶ್ವಶಾ. ೨-೧೪೪). [ನೀಲ+ಅಂಬುರುಹ]

ನೀಲಾಂಭೋಧರ (ನಾ). = ನೀಲಾಂಬುದ : 'ನೀಲಾಂಭೋಧರ ವರ್ಣ' ಪರಾ. [ಸಂ.]

ನೀಲಾಂಭೋಧರವರ್ಣ (ನಾ). ನೀಲಮೇಘದಂತೆ ಮೈಬಣ್ಣವುಳ್ಳವನು ; ಕೃಷ್ಣ : ಹೇಲಾಹಾರ್ಯತಭೂಮಿಭಾರಮಖಿಲಂ ಕಾಲಂ ಸದು ಜ್ಜೀವನಂ ನೀಲಾಂಭೋಧರವರ್ಣನೀತನ ಕರಾಂಭೋಜಂ ಮಹಾ ಲಂಬನಂ (ಪಸ್ತಪಂ. ೨-೧೧). [ನೀಲಾಂಭೋಧರ+ವರ್ಣ]

ನೀಲಾಚಲ, ನೀಳಾಚಳ (ನಾ). ೧. ಕಪ್ಪುಬಣ್ಣದ ಬೆಟ್ಟ ; ನೀಲಗಿರಿ : "ಕರ್ಮಟ್ಟಿಂದು ನೀಲಾಚಲಂ" (ಕಶಸಾ. ೪-೪೬) ; ಅಂತು ಕುಲಿಶಾಭಿಘಾತದಿಂ ನೀಲಾಚಲಮೆ ಕೆಡೆವಂತೆ ಕೆಡೆದು (ಗದಾಯು. ೪-೨೬ ಪ) ; ನೀಲಾಚಲೇಂದ್ರ ಮಣಿಮಯಚೂಳಕೆಯೊಳ್ತೋರ್ಪ ಮೇಘಡಂಬರವೆಂದೀ ಲೀಲೆಯನೇಂ ಮೆಜ್ದಿದುದೊ ಭೂಪಾಲಂಗೆತ್ತಿರ್ದ ಮೇಘಡಂಬರಮಾಗಳ್ (ಪುಪ್ಪಪು. ೫-೩೪) ; ಮಗ್ಗುಲಿಕ್ಕಿರ್ದಾದು ನುನ್ನೀರು ನೀಲಾಚಲದಿಂ ಸಾರಂಗಟ್ಟದವೊಲಿರೆ ಬಟಲ್ದು ಲುಲಾಯಂ (ಯಶೋಚ. ೩-೩೩) ; ನೀಲಾಚಲನಿತಾಯದ ಸೌಂದರಾಂಗದ ಕೌಸ್ತುಭ ಪ್ರಭೆಯಿಂದ ಕಾಂಚನರಥವನೀಂದನು ದಾನವಾರಾತಿ (ಕುವ್ಯಾಭಾ.೪-೫೭) ; ನೀಲಾಚಲನಡಯಂ ನಲೆ ಸಾಲಿಟ್ಟೈದಿಹುದು ಕದನಕೆಂದಂಧತಮೋ ಜಾಲಮನಾಲೋಕಿಪ ಸುರಪಾಲನ ಮುಕುಟಂಬೊಲೆಸೆದುದಾ ರವಿದಿಂಬಂ (ರಾಜಶೇ. ೧೩-೧೩೩). **ನೀಳಾಚಳ** : ೧. ಎಳವಿಸಿಲೆಳಸಿದ ನೀಳಾಚಳ ಶಿಖರದೊಳಸಿತಮೇಘವೆಳಸಿದ ತುಹಿನಾಚಳಶಿಖರದೊಳೆಯೆನೆ ಹರಿಬಳ ರೆಸೆದರ್ ಪೀತನೀಲಪಟಪರಿಧಾನರ್ (ಜಗವಿ. ೬-೯). ೨. [ಜೈನ] ನೀಲಿಯ ಬಣ್ಣದ ಒಂದು ಪರ್ವತದ ಹೆಸರು ; ℙ ಇದು ರಮ್ಯಕ ವರ್ಷದ ಉತ್ತರಕ್ಕೆ ಲವಣಸಮುದ್ರದ ಈಚೆ ಇದೆ : ಬಡಗಣ

ತಡಿಯೊಳಮೇಟನೆಯೆಡೆಯದು ನೀಳಾಚಳ[ಪಾಠಾಂ. ನೀಲಾಚಲ]ಕ್ಕೆ ತೆಂಕಣದು ಬೆಡಂಗೊಡರಿಪ ವಕ್ಷಾರಾದ್ರಿಗೆ ಪಡುವಣದದು ಸುಜನ ನಿಳಯಮಪಗತವಿಳಯಂ (ಆದಿಪು. ೧-೫೬); 'ಸಕಲವನಚರಜಲಚರಕಂಜ ಕುಮುದೇಂದೀವರಮಾಳಾನಿಳಯಮಪ್ಪ ನೀಳಾಚಳಕ್ಕೆ ನೀಲಾಂಗಂ ಪೋದಂ (ಗದಾಯು. ೯-೧ ವ). [ನೀಲ+ಅಚಲ]

ನೀಲಾದ್ರಿ, ನೀಳಾದ್ರಿ (ನಾ). ೧. = ನೀಲಾಚಲ ೧ : ಕಾಲಿಂದಿಯನಮರಾಪಗೆ ನೀಲಾದ್ರಿಯನಾ ಹರಾದ್ರಿ . . . ಪೋಲ್ತಿರೆ ಕಾಲದ ಮರ್ವುರ್ವಿ ಪರ್ವಿತುರ್ವೀತಳಮಂ (ಪುಷ್ಪಪು. ೮-೧೦೦); ನೀಲಾದ್ರಿಯ ಮಜಿಯೆರಡಂ . . . ಬಿಟ್ಟೊಲು ಮಹಿಷನ ಕಾಳೆಗಗಳು ಸೊಗಸು ತಿರ್ಪುವಾ ಬೀದಿಗಳೊಳ್ (ಮಲ್ಲಿಕಾ. ೪-೭೦೩). **ನೀಳಾದ್ರಿ :** ೨. ಕರ್ನಾಟಕದ ದಕ್ಷಿಣಕ್ಕಿರುವ ಒಂದು ಬೆಟ್ಟ; ನೀಲಗಿರಿ : ನೀಳಾದ್ರಿ ಪಡಿಯ ಘಟ್ಟಂ ಏಳುಂ ಮಲೆ ಕಂಚಿ ತುಳ್ವ ರಾಜೇಂದ್ರಪುರಂ ಕೋಳಾಲ ಬಯಲುನಾಡನಾಳಾಪದಿ ಕೊಂಡ ವಿಷ್ಣುವರ್ದ್ಧನದೇವಂ (ಎಕ. XVI, ಚಿಕ್ಕನಾ. ೬೨-೧೦; 1242). [ನೀಲ+ಅದ್ರಿ]

ನೀಲಾಬ್ಜ, ನೀಳಾಬ್ಜ (ನಾ). = ನೀಲಾಂಬುಜ : ಕಯ್ಯಲ್ಲಿ ಪಿಡಿದಿರ್ದ ನೀಲಾಬ್ಜವೊಪ್ಪುತಿರೆ (ಮೆಜೀರ. ದೇ. ೬೨-೨೪); ನೀಲಾಬ್ಜ ತಾವರೆ ನೆರೆದ ನೀರ್ಗೆಜೆ . . . ವಿರಾಜಿಪುದು (ಭರಚ. ೭೫-೪೫); ನೀಲಾಬ್ಜಂ ನೀರ್ವುಟ್ಟಿನೆ ನೀಲಾಬ್ಜಮನಡರ್ದು ತಳರ್ವ ಬಿಜ್ಜೋದರಿ ಕಣ್ಸೋಲಮನ ಮರ್ಚಿದಳ್ ಪಜಿಗೋಲೊಳ್ ಪೋಪಂತೆ ಗಗನಮೆಂಬಂಬುಧಿಯೊಳ್ (ಶಬಶಂ. ೧-೪೩). **ನೀಳಾಬ್ಜ :** 'ನೀಳಾಬ್ಜವನ' ಪರಾ. [ನೀಲ+ಅಬ್ಜ]

ನೀಲಾಬ್ದ (ನಾ). = ನೀಲಮೇಘ : ನೀಲಾಬ್ಜಂ ನೀರ್ವುಟ್ಟಿನೆ ನೀಲಾಬ್ದ ಮನಡರ್ದು ತಳರ್ವ ಬಿಜ್ಜೋದರಿ ಕಣ್ಸೋಲಮನಮರ್ಚಿದಳ್ ಪಜಿಗೋಲೊಳ್ ಪೋಪಂತೆ ಗಗನಮೆಂಬಂಬುಧಿಯೊಳ್ (ಶಬಶಂ. ೧-೪೩). [ನೀಲ+ಅಬ್ದ]

ನೀಲಾಭ್ರ, ನೀಳಾಭ್ರ (ನಾ). = ನೀಲಮೇಘ : ನೀಲಾಭ್ರಾಗ್ರದೆ ಚಂದ್ರಸಂಭವಮಯೂಖಾನೀಕಮತ್ಯುಲ್ಲಸಚ್ಛ್ರೀಲಾವಣ್ಯಮನೀಯುತಂ ಪರಿವವೊಲ್ದಂತಾವಳಾರೂಢಭೂಪಾಲಂಗಿಕ್ಕುವ ಚಾಮರದ್ವಿತಯಂ . . . ಲೋಲತ್ವಂಬಡೆದಿರ್ದುವು (ಉದ್ಭಟ. ೨-೩೧). **ನೀಳಾಭ್ರ :** ನೀಳಾಭ್ರ ಮನಂಭಃಕಣಜಾಳದೆ ಬಾಸಣಿಸುವಂತೆ ಶಶಿಮುಖಿಯರ್ ಸಲ್ಲೀಳೆಯೊ ಳಚಳತನೂಜೆಗೆ ಬಾಳೆಗೆ ಸೂಸಕಮನಿಕ್ಕಿದರ್ ಮುದದಿಂದಂ (ಗಿರಿಕ. ೧೦-೪೩). [ನೀಲ+ಅಭ್ರ]

ನೀಲಾಮ್ಲ (ನಾ). ಒಂದು ಬಗೆಯ ಸಸ್ಯ; ನೀಲಿ ಹೂ ಬಿಡುವ ಗೋರಂಟಿ : "ನೀಲಪಿಟಾಂಡೀ ? — ನೀಲಾಮ್ಲ, ತಿಲಕೇಸಿಕ" (ಓಷಧಿ. ೮೯). [ಸಂ. ನೀಲಾಮ್ಲಾ]

ನೀಲಾಲಕ, ನೀಲಾಳಕ, ನೀಳಾಳಕ (ನಾ). = ನೀಲಕುಂತಲ : ನೀಲಾಲಕಪ್ರಚಯಂ ಸೂಸಿ ಲತಾಂಗಲೇಖೆ ಬೆಮರಂ ತಾಳ್ದಿರ್ದು ಚೀನಾಂಚಲಂ ಕುಚದೊತ್ತಿಂ ನಸು ಜೋಲ್ದು ಕಣ್ಗೆಸೆಯೆ ಬಂದರ್ . . . ಕಾಂತೆಯರ್ (ಜಗವಿ. ೧೪-೮೫). 'ನೀಲಾಲಕಿ' ಪರಾ. **ನೀಲಾಳಕ :** ನೊಸಲೊಳ್ ನೀಳ್ದಿರ್ದ ನೀಲಾಳಕಂ ಪಿಸುಣಾಡಿತ್ತಸಮಾಸ್ತ್ರನಸ್ತ್ರಹತಿಯಂ ತತ್ಕಾಮಿನೀರೂಪಕಂ (ಲೀಲಾವ. ೪-೧೪೩); ಭೃಂಗಕುಲನೀಲಾಳಕಂಗಳ ನಭಂಗಳ ಬೆಳಂಗಿಸುವ ಮಧುರವಚನಂಗಳರುಣಪ್ರವಾಳಂಗಳ ನಖಂಗಳ ಲತಾಂಗಿಯರೆನಿಪ್ಪ ಪಣ್ಯಾಂಗನಾಜನವೆಸೆದುದು (ಹಚಕಾ. ೪-೪೦); ನೀಲಾಳಕಬದ್ಧಧಮ್ಮಿಲ್ಲಶೋಭಿತೆ ನೀಲೋತ್ಪಲದಳನೇತ್ರೆ . . . ನೀಲಾಂಜಲಿಯನಿಕ್ಕಿದಳು (ನೋಹತ. ೨೧-೧೬). **ನೀಳಾಳಕ :** ಮೊಗಮಂ ತಾವರೆಗೆತ್ತು ಕಣ್ಮಲರ್ಗಳಂ ನೀಲೋತ್ಪಲಂಗೆತ್ತು . . . ತನ್ಮೃಗ ಶಾಬಾಕ್ಷಿಯನಿಂತು ಮನ್ಮಥವನಶ್ರೀಗೆತ್ತು ಭೃಂಗಂಗಳೋಲಗಿಸುತಿರ್ದಪು ವೆಂಬಿನಂ ಸೊಗಯಿಕುಂ ನೀಳಾಳಕಂ ಕಾಂತೆಯಾ (ಸುಕುಮಾ. ೯-೯೦); ಕಾಳಿಮ ಜಲಕಣಂಗಳಂತೆ ನೊಸಲೊಳು ಕುಣಿವ ನೀಳಾಳಕಂಗಳು (ಬಸರ. ೨-೨೨). [ನೀಲ+ಅಲಕ]

ನೀಲಾಲಕಿ, ನೀಲಾಳಕಿ, ನೀಳಾಳಕಿ (ನಾ). = ನೀಲಕುಂತಲೆ : ಮತ್ತೇಭವಿಕ್ರೀಡಿತಂ ಪೆಸರಾಯ್ತಿಂತಿದು ನಾಗವರ್ಮ ಕವಿಯಿಂ ವ್ಯಾಲೋಲ ನೀಲಾಲಕೀ [ಪಾಠಾಂ. ನೀಳಾಳಕೇ] (ಛಂದೋಂಬು. ೨-೧೬೫). **ನೀಲಾಳಕಿ :** ಬಾಳದೊಳೆಸೆವ ಮುತ್ತಿನ ಬೊಟ್ಟ ತಳೆದಿಹ ನೀಲಾಳಕಿಯರೊಪ್ಪಿದರು (ಕಂಸವಿ. ೬-೧೦೩). **ನೀಳಾಳಕಿ :** ನೀಳಾಳಕಿಯ ಬಂಧುಗಳನೀ ಬರಹೇಳು (ತಿಮ್ಮಸ್ತ್ರೀ. ೨-೧). [ಸಂ. ನೀಲಾಲಕೀ]

ನೀಲಾಲಿ (ನಾ). ಕಪ್ಪುಬಣ್ಣದ ಕಣ್ಣು : ಅವಳ ಹಾಲುಗಲ್ಲ ಕರಿಯ ಮುಂಗುರುಳು . . . ಚೈತನ್ಯ ತುಂಬಿದ ಆ ನೀಲಾಲಿಗಳು ಎಲ್ಲವೂ ಅವಳ ಸೌಂದರ್ಯಸುಧೆಯನ್ನು ಹೆಚ್ಚಿಸಿದ್ದವು (ಹಾಡುಹು. ೫). [ನೀಲ+ಆಲಿ$_2$]

ನೀಲಾಲು (ನಾ). ಗೆಡ್ಡೆಗಳಿಂದ ಕೂಡಿದ ಒಂದು ಬಗೆಯ ಗಿಡ : "ಕೃಷ್ಣಾಲು—ನೀಲಾಲು" (ಓಷಧಿ. ೩೮). [ಸಂ.]

ನೀಲಾವಳಿ (ನಾ). ನೀಲಿಬಣ್ಣದ ರೇಷ್ಮೆವಸ್ತ್ರ : ನೀಲಾವಳಿಯ ನುಟ್ಟುಮಿಂದ್ರನೀಲಪತ್ರಂಗಳಂ ತೊಟ್ಟು . . . ವಸುದೇವಂ ಬರುತಿರೆ (ಬಂಹರಿ. ೧-೪೨ ವ). [ನೀಲ+<ಪಟಿ$_5$]

ನೀಲಾಶ್ಮ, ನೀಳಾಶ್ಮ (ನಾ). = ನೀಲಮಣಿಗಿರಿಕ. ೧-೬೭ ನೀಳಾಶ್ಮ: ವಾನೇಚರ ಸ್ತ್ರೀಭ್ರಮಮನತುಳನೀಳಾಶ್ಮಪಾಂಚಾಳಿಕಾದರ್ಶನದೊಳ್ ತಾಳುತ್ತುಮೆತ್ತಂ ಸುಟಿವುದು ಮಹಿಭೃದ್ಗೇಹದೇಣೀಸಮೂಹಂ (ಚಂದ್ರಪು. ೧-೧೪೭). [ನೀಲ+ಅಶ್ಮ]

ನೀಲಾಳಕ 'ನೀಲಾಲಕ' ನೋ.

ನೀಲಾಳಕಿ 'ನೀಲಾಲಕಿ' ನೋ.

ನೀಲಾಳಕೆ, ನೀಳಾಳಕೆ (ನಾ). = ನೀಲಕುಂತಲೆ : ನೀಲಾಳಕೆಯರಾಗ ನಡೆತಂದು ಕೈಮುಗಿದು ಪ್ರಮೀಳೆಯಂಬರಸಾಗಿಹ ಸ್ತ್ರೀಶಿರೋಮಣಿಗೆ ಸಂಭ್ರಮದೊಳಿಂತೆಂದರು (ಜೈಮಿಭಾ. ೧೬-೧). **ನೀಳಾಳಕೆ :** ಆ ನರಸಿಂಹಮಹೀಶಮನೋನಯನಪ್ರಿಯೆ ವಿಳೋಳ ನೀಳಾಳಕೆ ಚಂದ್ರಾನನೆ ಜಾಕವ್ವೆ ದಲಾ ಜಾನಕಿಗಗ್ಗಳಮೆ ಕುಲದೊಳಂ ಶೀಲದೊಳಂ (ಪಂಪಭಾ. ೧-೩೯). [ಸಂ. ನೀಲಾಲಕಾ]

ನೀಲಿ, ನೀಳಿ (ನಾ). ೧. (ನೀಲಿಬಣ್ಣವನ್ನು ಉತ್ಪಾದಿಸಲು ಸಹಾಯಕವಾದ) ಒಂದು ಬಗೆಯ ಸಸ್ಯ : "ನೀಲಿ, ಕಾಲಾ . . . ದೋಲಾ, ನೀಲಿನೀ—ಈ ೧೧ ನೀಲಿಯ ಗಿಡ" (ನಾಚಿರಾ. ೧೦೯); ಅಳೆಯೊಳ್ ಕುಡಿಯಿಸು ನೀಲಿಯ ದಳಮಂ . . . ಕಾಮಳೆ ದಿವಸತ್ರಯ ದಿನಗ್ಗಳಂ ನಿಂದಪುದೇ (ಲೋಕೋಪ. ೯-೧೨); ಸರಲೆಯಿಂ ಹಾಲೆಯಿಂ ಹೀಲೆಯಿಂ ನೀಲಿಯಿಂ ತೊರಲೆಯಿಂ ಹೊಂಗೆಯಿಂ . . . ಕಾಡೆಸೆದುದು (ಸಂದಿಮಾ. ೧೩-೧೨); ಹಿಂದುಸ್ಥಾನವು ಜಗತ್ತಿನ ನೀಲಿ (Indigo) ಯನ್ನು ಮುಖ್ಯವಾಗಿ ಬೆಳೆಯುತ್ತಿತ್ತು (ಬಾಲಪ್ರ. III, ೧೨೫೮). ೨. ಈ ಸಸ್ಯದ ಎಲೆಯಿಂದ ತಯಾರಿಸುವ ನೀಲಿಬಣ್ಣದ ಪುಡಿ : ನೀರಿಗೆ ಗಂಜಿ ಮತ್ತು ನೀಲಿಯನ್ನು ಬೇಕಾದ ಪ್ರಮಾಣದಲ್ಲಿ ಬೆರಸಿ ಬಟ್ಟೆಗಳನ್ನು ಅದ್ದಿ ಹಿಂಡಬೇಕು (ಗೃಹವಿ. ೯೨). ೩. ಶ್ಯಾಮಲ ವರ್ಣ; ಕಪ್ಪುಬಣ್ಣ : ನೀಲಿಯ ರಸದೊಳ್ ಕರಡಿಯ ತೋಲಂ ತೊಯ್ದಟ್ಟಿ ಮಸಿಯೊಳದಜಿಕೊಳ್ ಪುದಿದತ್ತು (ಕಾವ್ಯಾನ. ೬೩೫); ನಿನದತ್ಸಂಧ್ಯಾನಕಂ ನಿಗ್ಗವಣೆಯ ಪಟಿ ಪೂರ್ವಾಚಲಂ ತುಂಗರಂಗಂ ತನಗಾದತ್ತೆಂಬಿನಂ ನೀಲಿಯ ಜವನಿಕೆವೋಲ್ ಪಿಂಗೆ ಸಂಧ್ಯಾತಮಂ (ಚಂದ್ರಪು. ೮-೩೦). ೪. ನೀಲಿವರ್ಣ : ಮೇಲೆ ಸುತ್ತಲೆತ್ತೆತ್ತಲುಂ ಕಣ್ ಸೊಗಸಿದುದು

ಅಚಂಚಲಮಂಬರದ ನೀಲಿ, ಕೆಳಗೆ ದೂರದಿ ನೀರಧಿಯ ಚಂಚಲಾಂಚಲ ಮೃದುಲ ನೀಲಿ (ಶ್ರೀರಾಮಾ. ೪೦೮-೧೫೨); ಇಲ್ಲಿ ಕೆಂಪು; ಅಲ್ಲಿ ಹಳದಿ; ಹಸುರು, ಪಚ್ಚೆ, ನೀಲಿ; ಹೊಸತೆ ಬಂತೊ ತಾಯ ಹರಕೆ ಹೂವ ರೂಪ ತಾಳಿ (ಅನಿಕೇ. ೨೦-೧೧). ೫. ಆಕಾಶ; ಗಗನ: ಮಲ್ಲಿಗೆಯ ಬಿಳಿ ಮೈಯ ಹಕ್ಕಿ . . . ನೀಲಿಯ ಮೇಲೆ ಕಾಣಿಸಿತು ಚುಕ್ಕಿ (ಶಿಲಾಲ. ೬೦-೫). ೬. ನೀಲವರ್ಣದ ಹೂವು ಬಿಡುವ ಒಂದು ಬಗೆಯ ಗೋರಟೆ ಗಿಡ; ನೀಲಿಸ್ಫಟಿಕ: "ನೀಲಿ, ಝುಂಟೀ, ಬಾಣಃ—ಈ ೩ ಕರಿಯ ಗೋರಂಟೆ" (ಹಲಾಯು. ೩೪-೫೨); "ಝುಂಟೀ—ನೀಲೀ" (ಓಷಧಿ. ೬೪). ೭. ಒಂದು ಬಗೆಯ ಕರಿಯ ನೊಣ. ೮. ಒಂದು ಬಗೆಯ ರೋಗ. **ನೀಳಿ**: ೪. ನೀಳಿಯಾಗಸವನೆರ್ದೆಯಲ್ಲಿ ರನ್ನಗನ್ನಡಿಯಂತೆ ತೊಟ್ಟ ವನದೇವತಾಹೃದಯಲೋಚನಮೆನಲ್ ಮೆರೆವ ವಿಸ್ತಾರದಾಸ್ಫಟಿಕನಿರ್ಮಲಸರೋವರಸುಭಗತೀರದಲಿ ಶೋಭಿಸಿದುದಾ ಮುನಿನಿಕೇತನಂ (ಶ್ರೀರಾಮಾ. ೩೪-೧೮೦).

ನೀಲವ್ವ = ದುರ್ಗಿ; ಕಾಳಿ: (ಕಿ). **ನೀಲಿ ಕೆಟ್ಟ ಮಾತು** = ಅಸಂಭಾವ್ಯವಾದ ಮಾತು; ನಂಬಲು ಯೋಗ್ಯವಲ್ಲದ ಮಾತು: ಬೇರೊಬ್ಬನನ್ನು ಲಗ್ನವಾಗಿ ಹತ್ತೆಂಟು ಮಕ್ಕಳನ್ನು ಹಡೆದವಳು, ತನ್ನ ಚೊಚ್ಚಿಲ ಮಗನನ್ನು ಈ ಮನೆತನದ ಉತ್ತರಾಧಿಕಾರಿಯನ್ನಾಗಿ ಮಾಡುವದು ನೀಲಿ ಕೆಟ್ಟ ಮಾತು ಎಂದು ಅವರ ಅಭಿಪ್ರಾಯ (ಗ್ರಾಮಾಯ. ೧೦೧). **ನೀಲಿ ಕೆಟ್ಟ ಸುದ್ದಿ** = ನೀಲಿ ಕೆಟ್ಟ ಮಾತು: ಇಂದು ಅವಳಲ್ಲಾದ ಪರಿವರ್ತನೆ ಕಂಡು ಅದ್ಭುತ ಪವಾಡವೆನ್ನಿಸೀತು. 'ನೀಲಿ ಕೆಟ್ಟ ಸುದ್ದಿ' ಎನ್ನಿಸೀತು (ಬನಸಿ. ೪೯); ನೀಲಿ ಕೆಟ್ಟ ಸುದ್ದಿಯಂತೆ ಇದೊಂದೇನೋ ಚಮತ್ಕಾರವಾಗಿ ನನಗೆ ತೋರುತ್ತದೆ (ಪವಶೀ. ೧೨೭). **ನೀಲಿಮೆಯ್ಯವಂ** = ನೀಲವರ್ಣದ ಶರೀರವುಳ್ಳವನು; ರಾಮ: ಬಿಳಿಮೈಯ್ಯನೆಳ್ಳತ್ತು ಹೊರಗೆ ಹೋಗಿರೆ, ನೀಲಿಮೆಯ್ಯವಂ ಕನವರಿಸಿದನ್ (ಶ್ರೀರಾಮಾ. ೨೭೩-೨೬೫). **ನೀಲಿಹಾಕು** = ೧. (ಬಟ್ಟೆಗೆ ಹೊಳಪು ಬರಲು) ನೀಲಿಯ ಗಿಡದಿಂದ ತಯಾರಿಸಿದ ಪುಡಿಯನ್ನು ಹಾಕು: ಉಬ್ಬೆಗೆ ಹಾಕುವ ಒಂದು ಪಾತ್ರೆ . . . ನೀಲಿಹಾಕುವ ಸಣ್ಣ ಚೀಲಗಳು (ಗೃಹವಿ. ೮೫). ೨. ಮೋಸಮಾಡು; ವಂಚಿಸು: ನಿಮ್ಮ ಮುತ್ತಾತನ ತಲೆಗೆ 'ನೀಲಿಹಾಕಿ' ಶಾಂತಪ್ಪನಾಯಕನ ಮುತ್ತಜ್ಜ ಹೊಲ ಮನೆಗಳನ್ನೂ ಪಿಂಚಣಿಯನ್ನೂ ತನ್ನ ಹೆಸರಿಗೆ ಮಾಡಿಕೊಂಡನಂತೆ (ಬೆಳುಮ. ೧೧೫). [ಸಂ.]

ನೀಲಿಕ (ನಾ). ೧. ನೀಲಿಗಿಡ. ೨. ಕರಿಯ ಗೋರಟೆಗಿಡ; ನೀಲಿಸ್ಫಟಿಕ: "ನೀಲಿಕಂ ಗೋರಟೆಯೆನಿಕ್ಕು" (ಮಂಗರಾ. ೩೭-೨೧). [ಸಂ. ನೀಲಿಕಾ]

ನೀಲಿಕೆ, ನೀಳಿಕೆ$_2$ (ನಾ). ೧. ನೀಲಿ ಗಿಡ. ೨. ಒಂದು ಬಗೆಯ ಸಸ್ಯ; ಕರಿಯ ಲಕ್ಕಿ ಗಿಡ: "ಶೇಫಾಲಿಕಾ, ಸುವಹಾ, ನೀಲಿಕಾ, ನೀರ್ಗುಂಡೀ—ಕರೀ ಹುವ್ವುಗಳುಳ್ಳ ಲಕ್ಕಿಲಿ, ಕರೀಲಕ್ಕಿಲಿ" (ಸಿದ್ಧಾಂತಿ. ೧೨೮). ೩. ಕಣ್ಣಿನ ಒಂದು ರೋಗ. **ನೀಳಿಕೆ$_2$**: ೪. ಶ್ಯಾಮಲ ವರ್ಣ: ರಾಜಹಂಸಗಮನಂ ವಿಹಾನಾಂಬಕಂ ನೀಳಿಕಾವಿಸರತ್ಕುಂತಳ ಮೊಪ್ಪೆ ಕಂನೆಗೆಜೆಯಂ ಚಟ್ಟಂ ಧನಂಗೊಟ್ಟು ಕಟ್ಟಿಸಿ ಚಟ್ಟೀಶ್ವರ ಸದ್ವರಂಗೆ ಫಳಿಸಲ್ ಹಸ್ತೋದಕಂ ಮಾಡಿದಂ (ಎಕ. V, ಬೇಲೂರು. ೧೯೩-೧೦೭; 1161). ೫. ಒಂದು ಬಗೆಯ ಜಲಸಸ್ಯ; ಹಾವಸೆ: "ಶೈವಾಳಂ, ಶೈವಳಂ, ಜಳಶೂಕಂ, ನೀಳಿಕಾ—ಈ ೪ ಪಾವಸೆ" (ಹಲಾಯು. ೧೧೩-೬೧). [ಸಂ. ನೀಲಿಕಾ]

ನೀಲಿಗಂಧ (ನಾ). ಒಂದು ಬಗೆಯ ಬಟ್ಟೆ: "ದಸರಿಗಬ್ಬುಳ ನೀಲಿಗಂಧ[ಪಾಠಾಂ. ಗಂಧನೀಲಿ]ಸಂಧ್ಯಾರಾಗ ಕುಸುಮಿಯಾವಂಚೆ ದೋರಿಯನಾಗವಟ್ಟೆ ಪುಲ್ಲಿ ಸುವರ್ಣಪಟಿ ಮದವಿ ಮಂಜಿಷ್ಠೆ ದೇವಾಂಗಮೆಂದು ಪಟಭೇದಮಕ್ಕುಂ" (ಮಂಗರಾ. ೧೦೧-೨೮). [?]

ನೀಲಿಗಟ್ಟು (ಕ್ರಿ). ೧. (ದೇಹದ ಮೇಲೆ) ಪೆಟ್ಟಿನಿಂದ ನೀಲಿಯ ಕಲೆಯುಂಟಾಗು: ಮೈಗೆ ಪೆಟ್ಟು ಸ್ವಲ್ಪ ತಗುಲಿದರೆ ಮೈಯ ಒಳ ಭಾಗದಲ್ಲಿ ರಕ್ತಸ್ರಾವವಾಗಿ ಅಲ್ಲಲ್ಲಿ ನೀಲಿಗಟ್ಟಿಕೊಳ್ಳುತ್ತದೆ (ಗೃಹವಿ. ೧೪೯). ೨. ಶ್ಯಾಮಲ ವರ್ಣವನ್ನು ಹೊಂದು: ನೇರಿಳೆ ಚಿಗುರನು ಕಿವಿಗಿಟ್ಟು ಬೇಸಾಯದೊಡೆಯನ ಮಗಳಲೆವಂದು ಓರೆಗಣ್ಣೊಳು ನೋಡುತಿರುವ ಆ ಶ್ಯಾಮೆಯ ಮುಖಕಾಂತಿ ನೀಲಿಗಟ್ಟುವುದು (ಗಾಥಾಸ. ೪೫-೮೦). [ನೀಲಿ+ಕಟ್ಟು$_1$]

ನೀಲಿಗಣ್, ನೀಲಿಗಣ್ಣು (ನಾ). ೧. ನೀಲಿಬಣ್ಣದ ಗುಡ್ಡೆ ಇರುವ ಕಣ್ಣು: (ಕಿ). ೨. = ನೀಲಗಣ್ಣು: ಆಲಿ ನೊಂದುದೋ ಕಣ್ಣ ಬೇನೆಯೋ . . . ನೀಲಿಗಣ್ಣೋ ಮಾಱವೆಯೊ ಕಣ್ಕುಟಿಲವೊ ಅರಿಯೋ (ಬಸಪು. ೧೮-೬೬). **ನೀಲಿಗಣ್ಣು**: ೧. ಚೆಂಗೂದಲ, ಮಿರುಮಿರುಗುವ ನೀಲಿಗಣ್ಣುಗಳ ಸುಂದರ ಖೈದಿಯೊಬ್ಬಳು ಅವನೊಡನೆ ಮಾತನಾಡುತ್ತಿದ್ದಳು (ಪುನರು. ೧೮೯). ೨. ಅಳಿಗಣ್ಣೊ ಪರೆಗಣ್ಣೊ ಪೊಸ ನೀಲಿಗಣ್ಣೊ ಮೈಲಿಗೆಗಣ್ಣೊ ಸುರಿವ ನೀರೊಂದಿದರಿಗಣ್ಣೊ (ಕುಮಾಪು. ೪-೨೪೨). [ನೀಲಿ+ಕಣ್]

ನೀಲಿಗಣ್ಣು 'ನೀಲಿಗಣ್' ನೋ.

ನೀಲಿಗಪ್ಪಡ (ನಾ). ಕಡುನೀಲಿಬಣ್ಣದ ವಸ್ತ್ರ,—ಬಟ್ಟೆ: (ಕಿ). [ನೀಲಿ+ಕಪ್ಪಡ]

ನೀಲಿಗವಾರ್ತೆ (ನಾ). ನೀಲಿ ಕೆಟ್ಟ ಮಾತು; ಸುಳ್ಳುಸುದ್ದಿ: ಶೀಲಶೀಲವೆಂಬ ನಿ(ೀ?)ಲಿಗ [ಪಾಠಾಂ. ನಿಲಗಾಱರ, ನಿಲಗ, ನಿಲೆಗೆ, ನೀವೀಗ]ವಾರ್ತೆಯ ಬೇಳುವೆ ಬಾಲರಾಳಿಯಂತೆ ಅಳಿಗೊಂಡಿತ್ತು (ಅವಚಂ. ೭೪-೩೨೭), "ನಿಲಿಗವಾರ್ತೆ: (= ನೀಲಿ ಕವರ್ತೆ) ಮೋಸ ಮತ್ತು ಸುಲಿಗೆ" (ಅವಚಂ. ಕೋಶ). [?]

ನೀಲಿಗಾಱ, ನೀಲಗಾರ$_1$ (ನಾ). ೧. ನೀಲಿಬಣ್ಣವನ್ನು ತಯಾರಿಸುವವನು: (ಕಿ). ೨. ನೀಲಿಬಣ್ಣವನ್ನು ಹಾಕುವವನು; ಬಣ್ಣಗಾರ: ಕರಸಣ್ಣಗಳ ನೆಯ್ವ ಜೇಡರಂ ಲಾಡರಂ ಪರಿಮಳದ ಪೂವಿನಾ ಮಾಲೆಗಾಱರ ನೀಲಿಗಾಱರಾ ಪಸರಮೆಸೆಗುಂ (ಗುರುಚಾ. ೧-೩೪). **ನೀಲಗಾರ$_1$**: ೨. ನೀಲಗಾರರು—ಇವರು ಲಿಂಗವಂತರಾದ್ದರಿಂದ ಇವರ ಆಹಾರ, ಆಚಾರ, ವ್ಯವಹಾರಗಳೆಲ್ಲ ಲಿಂಗವಂತರವೇ ಇರುತ್ತವೆ. ನೂಲಿಗೆ ನೀಲಿಯ ಬಣ್ಣ ಕೊಡುವದೇ ಇವರ ಮುಖ್ಯ ಹೋರೆಯು (ಕಭಾಗೆ. ೧೫೫); ಯಾತಕ್ಕೆ ನೀ ಯಾಸ ಹಾಕೋಲ್ಲ ಅಂದರೆ ಮಾದ ಅಂದ, ನಾ ನೀಲಗಾರ (ಚೆಲುವು. ೩೬). [ನೀಲಿ+—ಕಾಱ]

ನೀಲಿಗಿಡ 'ನೀಲಿಯ ಗಿಡು' ನೋ.

ನೀಲಿನಿ (ನಾ). ಒಂದು ಬಗೆಯ ಸಸ್ಯ; ನೀಲಿಯ ಗಿಡ: "ನೀಲೀ, ಕಾಲಾ . . . ದೋಲಾ, ನೀಲಿನೀ—೧೧ ನೀಲಿನಿ ಗಿಡ" (ನಾಚಿರಾ. ೧೦೯). [ಸಂ. ನೀಲಿನೀ]

ನೀಲಿಬಣ್ಣ (ನಾ). ೧. ಒಂದು ಬಗೆಯ ಬಣ್ಣ; ನೀಲವರ್ಣ: ಬಿಳಿಯದಾಗಿದ್ದ ಬೀಜ ಮಾತ್ರ ನೀಲಿಬಣ್ಣಕ್ಕೆ ತಿರುಗುತ್ತದೆ (ಹಸುಹೊ. ೩೦೩); ಈ ನೀಲಿಬಣ್ಣದ ನೀರಿನಲ್ಲಿ ಜಾಲಾಡಿ ಹಿಂಡಿದ ಬಟ್ಟೆಗಳನ್ನು ಅದ್ದಿಮತ್ತೆ ಹಿಂಡಿ ಒಣಗಿಹಾಕಿದರೆ ಅವುಗಳಿಗೆ ಒಳ್ಳೆಯ ಬಣ್ಣ ಬರುತ್ತದೆ (ಗೃಹವಿ. ೮೭). ೨. ನೀಲಿಯ ರಂಗಿನ ಪುಡಿ: ಮೊದಲು ರಾತ್ಲಿಗೆ ೧೨ ರೂಪಾಯಿಯಷ್ಟು ವಿಕ್ರಯ ಬೆಲೆ ಬರುತ್ತಿದ್ದ ನೀಲಿಬಣ್ಣವು ಈಗ ಬರೇ ಎಂಟಾಣೆಗೆ ವಿಕ್ರಯವಾಗುತ್ತಿದೆ (ಬಾಲಪ್ರ. III, ೧೨೫೩). [ನೀಲಿ+ಬಣ್ಣ]

ನೀಲಿಮರ (ನಾ). ಒಂದು ಬಗೆಯ ಮರ : ತಾರೆಮರ ನೀಲಿಮರ ಕಂಚುವಾಳದ ಮರ ಯೀ ಮರಗಳು ಭಯಂಕರಗಳಾದ್ದರಿಂದ ಉದ್ಯಾನಗಳಲ್ಲಿ ಹಾಕಬಾರದು (ಸೌಗಂಧಿ. ೪೨೬-೧೧) ; ಗೊಬ್ರನೇರಳೆ, ನೀಲಿಮರ (ಮೈಔಗಿ. ೧೩-೨೨೪). [ನೀಲಿ+ಮರ$_1$]

ನೀಲಿಮಾತು (ನಾ). (ಆಲಂ) ಸುಳ್ಳುಮಾತು ; ಹುಸಿನುಡಿ : ನೀಲಿಮಾತು ನಿಜವಲ್ಲ (ಗಾದೆ). [ನೀಲಿ+ಮಾತು$_1$]

ನೀಲಿಮೆ (ನಾ). ನೀಲಿಬಣ್ಣ ; ನೀಲವರ್ಣ : ನೆಲವ ಕವಿವೀ ಬಾನ ನೀಲಿಮೆಯ ತಲದಿ ಸೃಷ್ಟಿಯೆಲ್ಲವ ತುಂಬಿ ಹಸರಿಸುವ ನಿಸ್ಸೀಮ ಸದ್ಭಾವ ಕೇಂದ್ರದೊಳು ವಿಶ್ರಾಂತನಂತೆ (ಮಲೆದೇ. ೫೨-೪) ; ನಡುರಾತ್ರಿ ತಾರಾಖಚಿತ ನೀಲಿಮೆಯನುಟ್ಟು ನಿಂದತ್ತು. ನೀರವಂ (ಶ್ರೀರಾಮಾ.೧೦೩-೮೩).
[ಸಂ. ನೀಲಿಮನ್]

ನೀಲಿಯ ಗಿಡು, ನೀಲಿಗಿಡ (ನಾ). ೧. (ನೀಲಿಯ ಬಣ್ಣವನ್ನು ಉತ್ಪಾದಿಸಲು ಸಹಾಯಕವಾದ) ಒಂದು ಬಗೆಯ ಸಸ್ಯ. ೨. ಒಂದು ಬಗೆಯ ಸಸ್ಯ : "ಅಶ್ವಕರ್ಣಃ—ಕರತಾಟಿ, ಮತ್ತಿ, ಕುದುರೆ, ನೀಲಿಯ ಗಿಡು" (ಓಷಧಿ. ೫). **ನೀಲಿಗಿಡ :** ೧. "ನೀಲೀ . . . ನೀಲಿನೀ-೧೧ ನೀಲೀಗಿಡದ ಹೆಸರುಗಳು" (ಸಿದ್ಧಾಂತಿ. ೧೩೩) ; ೧೮೯೭ರಲ್ಲಿ ನಮ್ಮ ದೇಶದಲ್ಲಿ ಒಂದು ಮಿಲಿಯ ಎಕ್ರೆ ಜಮೀನುಗಳಲ್ಲಿ ನೀಲಿಗಿಡಗಳನ್ನು ಬೆಳೆಯುತ್ತಿದ್ದರು (ಬಾಲಪ್ರ. III, ೧೨೫೩).[<ನೀಲಿ+ಗಿಡು]

ನೀಲಿವಾರ್ತೆ (ನಾ). (ಆಲಂ) ಸುಳ್ಳು ಸುದ್ದಿ,—ವದಂತಿ : (ಕಿ).
[ನೀಲಿ + ವಾರ್ತೆ]

ನೀಲಿಸಮಾಚಾರ (ನಾ). = ನೀಲಿವಾರ್ತೆ : ಈ ಹಯಾತ, ಬಸಪ್ಪ, ಇವರ ಗುಂಪಿನವರೆಲ್ಲರು ಸೇರಿ . . . ಒಂದು ನೀಲೀಸಮಾಚಾರವನ್ನು ಹುಟ್ಟಿಸಿದರು (ಮುಸುಗ. ೯೬). [ನೀಲಿ + ಸಮಾಚಾರ]

ನೀಲಿಸೊಪ್ಪು (ನಾ). ನೀಲಿಗಿಡದ ಸೊಪ್ಪು, —ಎಲೆ : ಬೆಲ್ಲಗಣಿಕೆಯ ಸೊಪ್ಪು, ನೀಲಿಸೊಪ್ಪು . . . ಯಷ್ಟಿಮಧುಕ, ಇವಿಷ್ಟನು ಸಮಾಂಶವಾಗಿ ಕೂಡಿಸಿ ತುಪ್ಪದಲ್ಲಿ ಹಾಕಿ ಕಾಸಿ ಆ ತುಪ್ಪವ ತೊಡೆಯಲು ಬೆಂದ ಹುಣ್ಣು ಮಾಣುವುದು (ವೈದ್ಯಸಾ. II, ೧೬೦). [ನೀಲಿ + ಸೊಪ್ಪು$_2$]

ನೀಲಿಸ್ಫಟಿಕ (ನಾ). ನೀಲಿಬಣ್ಣದ ಹೂವು ಬಿಡುವ ಒಂದು ಬಗೆಯ ಸಸ್ಯ ; ನೀಲಾಂಬರ. [ನೀಲಿ + ಸ್ಫಟಿಕ]

ನೀಲೀಪಟ (ನಾ). = ನೀಲಪಟ ೧ : ನೀಲೀಪಟಮಂ ದೆಸೆವೆಣ್ಣೋಲೈಸೆ ನಿಜಾಂಗಕಾಂತಿ ಕೌಸ್ತುಭರುಚಿ ತಳ್ತಾಲಿಂಗಿಸೆ ಮುನಿಯಂ ವನಮಾಲಿ ಕನಕ್ಷೀತವಸನನೊಸೆದಿದಿರೆಟ್ಟಂ (ಜಗವಿ. ೧೦-೧೧). [ಸಂ.]

ನೀಲೀರಾಗ (ನಾ). ೧. ನೀಲಿಬಣ್ಣ : 'ನೀಲೀರಾಗತೆ' ಪರಾ. ೨. ಸ್ಥಿರವಾದ ಪ್ರೀತಿ ; ಗಾಢವಾದ ಅನುರಾಗ ; ℙ ವಿಪ್ರಲಂಭ ಶೃಂಗಾರದಲ್ಲಿ ಪೂರ್ವರಾಗ, ಮಾನ, ಪ್ರವಾಸ, ಕರುಣ ಎಂಬ ನಾಲ್ಕು ಬಗೆಗಳಿವೆ. ಪೂರ್ವರಾಗವೆಂದರೆ ಕೇಳಿಯೋ ನೋಡಿಯೋ ಪರಸ್ಪರ ಅನುರಕ್ತರಾದ ಸ್ತ್ರೀಪುರುಷರು ಸಮಾಗಮಕ್ಕೆ ಮೊದಲು ಅನುಭವಿಸುವ ದಶಾವಿಶೇಷ ; ವಿರಹಾವಸ್ಥೆ. ಪೂರ್ವರಾಗದಲ್ಲಿ ನೀಲೀರಾಗ, ಕುಸುಂಭರಾಗ, ಮಂಜಿಷ್ಠಾರಾಗವೆಂದು ಮೂರು ವಿಧಗಳಿವೆ. ನೀಲೀರಾಗ : ಪ್ರೇಮವು ಅತಿಶಯವಾಗಿ ಪ್ರಕಾಶವಾಗುವುದೂ ಇಲ್ಲ, ಅಳಿಸಿ ಹೋಗುವುದೂ ಇಲ್ಲ. ಸೀತಾರಾಮರ ಪ್ರಣಯದಂತೆ ಹೃದಯದಲ್ಲಿ ಸ್ಥಿರವಾಗಿ ನೆಲಸಿರುತ್ತದೆ. ಕುಸುಂಭರಾಗ: ಮೊದಲು ಪ್ರೇಮವು ಅತಿಯಾಗಿದ್ದು ಕ್ರಮೇಣ ಅಳಿಸಿ ಹೋಗಿ ಬಿಡುತ್ತದೆ. ಮಂಜಿಷ್ಠಾರಾಗ : ಪ್ರೀತಿಯು ಮೊದಲಿನಿಂದ ಕೊನೆಯವರೆಗೂ ಅತಿಶಯವಾಗಿಯೇ ಇರುತ್ತದೆ : ಕದಡಿದ ಸಲಿಲಂ ತಿಳಿವಂದದೆ ತನ್ನಿಂ ತಾನೆ ತಿಳಿದ ದಶವದನಂಗಾದುದು ವೈರಾಗ್ಯಂ ಸೀತೆಯೊಳುದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ (ಪಂರಾಮಾ. ೧೪-೧೧೨). ೩. ಅಚಲವಾದ ಪ್ರೀತಿಯುಳ್ಳವನು : "ಸ್ಥಿರಮಾಗಿ ಸ್ನೇಹ ಮಾಟ್ಟವನಂ ನೀಲೀರಾಗನೆಂಬುದು" (ಹಲಾಯು. ೬೧-೨೧೯). [ಸಂ.]

ನೀಲೀರಾಗತೆ (ನಾ). ನೀಲಿಬಣ್ಣವಾಗುವಿಕೆ : ನೀಲೀರಾಗತೆಯಂ ಹರಿನೀಲಚ್ಛವಿ ಪಡೆಯೆ ಹರಿಗಮ್ಮೈರಾವತಶುಂಡಾಳಕ್ಕಂ ಬಳಸಿದ ವಿಬುಧಾಳಿಗಮಿಂದ್ರಾಣಿಗಂ ಜಿನಾರ್ಭಕನೆಸೆದಂ (ಪಾರ್ಶ್ವಪು. ೧೪-೩೩).
[ಸಂ. ನೀಲೀರಾಗತಾ]

ನೀಲೆ (ನಾ). ೧. ನೀಲಿಬಣ್ಣದ ನೊಣ. ೨. ನೀಲಿಗಿಡ. ೩. ಕೃಷ್ಣನ ಅಷ್ಟಮಹಿಷಿಯರಲ್ಲಿ ಒಬ್ಬಳು : ಸತ್ಯಭಾಮೆಯು ನೀಲೆ[ಪಾಠಾಂ. ನೀಳಾ] ಭದ್ರೆ ಕಾಳಿಂದಿಯು ಮಿತ್ರವಿಂದೆಯು (ಪುರಂದ. ೪-೩೬-೪). [ಸಂ. ನೀಲಾ]

ನೀಲೋತ್ಪಲ, ನೀಳೋತ್ಪಳ (ನಾ). ನೀಲಿಯ ಬಣ್ಣದ ತಾವರೆ ; ಕನ್ನೈದಿಲೆ: "ಕರ್ನೈದಿಲೆನಿಸಿಕ್ಕು ಕಪ್ಪೇಱರ್ದ ನೈದಿಲೆಗೆ ನೀಲೋತ್ಪಲಂ ಕುಮುದಮೆಂಬಾಭಿಧಾನಮಕ್ಕುಂ" (ಮಂಗರಾ. ೧೨೪-೧೭) ; ನೀಲೋತ್ಪಲಾಬ್ಜಾಕರಾಳಿ ಮನಂಗೊಳ್ಳುದು (ಆದಿಪು. ೫-೨೯) ; ಮೊಗಮಂ ತಾವರೆಗೆತ್ತು ಕಣ್ಮಲರ್ಗಳಂ ನೀಲೋತ್ಪಲಂಗೆತ್ತು . . . ಭೃಂಗಂಗಳೋಲಗಿ ಸುತ್ತಿರ್ದಪುವೆಂಬಿನಂ ಸೊಗಯಿಕುಂ ನೀಳಾಳಕಂ ಕಾಂತೆಯಾ (ಸುಕುಮಾ. ೯-೯೦) ; ಪದಂ ಚಾರುಕಾಂಚನವರ್ಣಂ ಸ್ಫಟಿಕಾಶ್ಮವರ್ಣಮುದರಂ ಮಾಣಿಕ್ಯವರ್ಣಂ ಕೊರಲ್ ಘನನೀಲೋತ್ಪಲವರ್ಣವಾಸ್ಯಮೆಸೆದತ್ತು (ಜಗವಿ. ೧-೫೧) ; ಮೈತುಂಬಿ ಚೆಂದಳಿರ ಕೋಮಳತೆವೆತ್ತೆಸೆದಿರ್ದ ನೀಲೋತ್ಪಲನಿಭಾಂಗನಂ ಕುಲದೀಪಚಂದ್ರನಂ . . . ಆಲಿಂಗಿಸುತೆ (ಶ್ರೀರಾಮಾ.೧೭-೪೪೮). **ನೀಳೋತ್ಪಳ:** "ನೀಳೋತ್ಪಳಂ, ಕುವಳಯಂ—ಈ ೨ ಕರ್ನೆಯ್ದಿಲ್" (ಹಲಾಯು. ೧೧೨-೫೯) ; ಅಂತಃಪುರಕಾಂತೆಯರ ನಗೆಮೊಗದ ನಗೆಗಣ್ಣಳ ಬೆಡಂಗನೆ ಕಿಱುನಗೆ ನಗುವಂತೆ ಮೆಲ್ಲಮೆಲ್ಲ ನುಳ್ಳಲರ್ವ ಮಹೋತ್ಪಳ ನೀಳೋತ್ಪಳಂಗಳುಂ (ಆದಿಪು. ೧೧-೫ ಪ).
[ನೀಲ+ಉತ್ಪಲ]

ನೀಲೋತ್ಪಲದಳ, ನೀಳೋತ್ಪಳದಳ (ನಾ). ಕನ್ನೈದಿಲೆಯ ದಳ,— ಎಸಳು : ನಂದಗೋಪಂ ನಂದನಮುಖಾರವಿಂದಾವಲೋಕನೋತ್ಸುಕಂ ಗೋಕುಲಕೆ ಪೋಗಿ ನೀಲೋತ್ಪಲದಳಶ್ಯಾಮನಪ್ಪ ತಾಮರಸನೇತ್ರನಂ ನೋಡಿ (ಜಗವಿ. ೩-೨೩ ಪ) ; ನೀಲೋತ್ಪಲದಳನೇತ್ರೆ . . . ನೀಲಾಂಜಲಿಯನಿಕ್ಕಿದಳು (ಮೋಹತ. ೨೧-೧೬). **ನೀಳೋತ್ಪಳದಳ :** ಆಳಿಕುಳರುಚಿಯಂ ನೀಳೋತ್ಪಳದಳಮಂ ಚಂದ್ರಬಿಂಬಮಂ ಪೊಂಗಳಸಂಗಳ ಚೆಲ್ವನಿಭಗತಿಯನೀಳ್ಕುಳಿಗೊಣ್ಡುದು ರೂಪು ರೂಪವಿದ್ಯಾಧರಿಯ (ಸೌಇಇ. XX, ೪೯-೩೨ ; ಸು. 1076 ?).
[ನೀಲೋತ್ಪಲ + ದಳ$_2$ (= ದಲ)]

ನೀಲೋತ್ಪಲಸಖ (ನಾ). ಕನ್ನೈದಿಲೆಯ ಸ್ನೇಹಿತ ; ಚಂದ್ರ : ಪುಳಕತತಿ ತಾಗುವದೊ ನೀಲೋತ್ಪಲ [ಪಾಠಾಂ. ಬಾಲೋತ್ಪಳ] ಸಖಾಂಕ ಕಪರ್ದಿಗೆನುತ ವಿಚಲಿತಮಪ್ಪ ನಿಜಾತ್ಮದಿಂದಾಲಿಂಗಿಸುವ ಪರಿಯೊ (ಬಸಪು. ೩೫-೨೪). [ನೀಲೋತ್ಪಲ + ಸಖ]

ನೀವ (ನಾ). ಒಂದು ಬಗೆಯ ಮರ : ಸಿರಿತಾಳೆಯಿಂಗುಳದ ನೆಲ್ಲಿಯ ನೀವ[ಪಾಠಾಂ. ನಿಂಬ]ದ ಸೋಲೆಯಾಲದಿಂ . . . ಕಾರಿರುಳೋಳಿ ಕೊಂಬುಗೊಂಡುದೆನೆ ಕಱಂಗಿ ಕಟ್ಟಲಿಸುತಿರ್ದುದು ಕಾನನವೆತ್ತ ನೋಟ್ಪೊಡಂ (ಲೀಲಾವ. ೬-೨೬). [ಸಂ.]

ನೀವರಣ (ನಾ). ಅಡ್ಡಿ ; ತಡೆ ; ℙ ಇದು ಐದು ಬಗೆ : "ಅಭಿದ್ಯೆ, ವ್ಯಾಪಾದಪ್ರದೋಷ, ಸ್ತ್ಯಾನಮಿದ್ಧಗಳು, ಔದ್ಧೃತ್ಯಕೌಕೃತ್ಯ,

ವಿಚಿಕಿತ್ಸೆ (ಮೂಪಾಸೂ. ೨೮)." (ಶ್ರೀವತ್ಸ. ೨೪೨) : ಕಾಮಚ್ಛಂದ, ವ್ಯಾಪಾದ, ಸ್ತ್ಯಾನಮಿದ್ಧ, ಔದ್ಧೃತ್ಯಕೌಕೃತ್ಯ, ವಿಚಿಕಿತ್ಸೆ ಎಂಬ ಐದು ನೀವರಣಗಳಿಗೆ 'ಜರಡಿ'ಯೆಂಬುದು ಸಂಜ್ಞೆ (ಬುದ್ಧಪ. ೭೩).

[←ಪಾಲಿ. ನೀವರಣ./ಸಂ. ನಿವಾರಣ]

ನೀವಳಿ 'ನಿವಾಳಿ' ನೋ.

ನೀವಳಿಗರೆ (ಕ್ರಿ). ದೃಷ್ಟಿದೋಷಪರಿಹಾರಕ್ಕಾಗಿ ಇಳಿತೆಗೆದ ವಸ್ತುವನ್ನು ಎರಚು,—ಚೆಲ್ಲು : ಹೊರೆಹೊರೆಯು ದಿವ್ಯಾಂಬರವ ವಿಸ್ತರದೊಳಾಂತಾ ವಾರಣಾಸಿಯ ಪುರಕೆ ನಡೆದರದೇನುವೈಸಿರಿ ಅರಸರೊಂದಾಗಿ ವರಯುಧಿಷ್ಠಿರನಂಘ್ರಿಗಳ ಕಾತುರದಿನೀಕ್ಷಿಸಲೆಂದು ನೀವಳಿಗರೆದು ಚಲ್ಲಿದರೈದಿಯಿದಿರೊಳಗಮಲವಸ್ತ್ರಗಳ (ಜಿನಭಾ. ೧೩-೧೯).

[ನೀವಳಿ (<ನಿವಾಳಿ) + ಕರೆ$_2$ (<ಕಱೆ$_1$)]

ನೀವಳಿವಟ್ಟ 'ನಿವಳಿವಟ್ಟ' ನೋ.

ನೀವಳಿವಟ್ಟಂಗೆಯ್ (ಕ್ರಿ). ಸಂಪೂರ್ಣನಾಶಮಾಡು; ನಿರ್ನಾಮಗೊಳಿಸು : ದೇವ ಅನೇಕದೇಶಂಗಳಂ ನೀವಳಿವಟ್ಟಂಗೆಯ್ವುತ್ತಂ ನೀಳಗಿರಿವೆಸರ ವ್ಯಾಳಗಜಂ ಬಂದು ನಮ್ಮ ಪೊಱವೊಟಲ ಪರಿಸರದ ಸರೋಜಪಂಡದೊಳ್ ನೀರಾಟಮನಾಡುತ್ತಿರ್ದಪುದು (ಪುಣ್ಯಾಸ್ರ. ೭-೫೦ ಪ).

[ನೀವಳಿವಟ್ಟ (<ನಿವಳಿವಟ್ಟ) + ಕೆಯ್$_1$]

ನೀವಾಕ (ನಾ). ೧. ಬರಗಾಲದಲ್ಲಿ ಧಾನ್ಯಗಳಿಗೆ ಇರುವ ಅಧಿಕವಾದ ಬೇಡಿಕೆ ; ಧಾನ್ಯದ ಕೊರತೆಯ ನಿಮಿತ್ತ ಕೊಳ್ಳುವವರ ಪೈಪೋಟಿ : "ನೀವಾಕ-ಧಾನ್ಯಾದಿಗಳ ಅರ್ಘಮಂ ಪಾರ್ವುದು; ಮೇಣು ಧಾನ್ಯವ ಪೊಯಿವುದಱ ಹೆಸರು" (ನಾಚಿರಾ. ೬). ೨. ಬರ ; ಕ್ಷಾಮ ; ದುರ್ಭಿಕ್ಷ. [ಸಂ.]

ನೀವಾರ (ನಾ). ತನ್ನಿಂದ ತಾನೆ ಬೆಳೆಯುವ ಒಂದು ಬಗೆಯ ಕಾಡುನೆಲ್ಲು ; ಕಾಡಿನಲ್ಲಿ ಬೆಳೆಯುವ ಬತ್ತ ; ಕಾಡುನವಣೆ : ಅಂತು ಕೊಂಡ ಪದವಟ್ಟಿಗಳೊಳ್ ಕಳಮಷಷ್ಟಿಕಾವ್ರೀಹಿಯವಯಾವ ನಾಳಗೋಧೂಮಕಂಗುಸ್ಯಾಮಾಕಕೋದ್ರವನೀವಾರ . . . ಜೀರಕ ಧಾನ್ಯಕಾದಿ ವಿವಿಧಧಾನ್ಯಭೇದಂಗಳುಂ (ಆದಿಪು. ೬-೭೨ ಪ) ; ನೀವಾರ ಪಾಕದಿ ವಿನುತ ವಾನಪ್ರಸ್ಥರಿಗೆ ಸಚ್ಚರಿತವಹುದು (ತಿಮ್ಮಶಾಂ. ೨-೩೦) ; ನೀವಾರದ ಹಿಟ್ಟಿನ ಲಿಂಗವು ಸರ್ವಾರಿಷ್ಟವನ್ನು ಪರಿಹರಿಸುವುದು (ಸೌಗಂಧಿ. ೩೯೩-೪) ; ಒಂದು ನವಿಲು ಅಲ್ಲಿಗೆ ಹೋದರೆ ಅದಕ್ಕೆ ನೀವಾರಧಾನ್ಯವನ್ನು ಹಾಕುವವರು ಅಲ್ಲಿಲ್ಲ (ಕೊನಪೈ. ೯೮). [ಸಂ.]

ನೀವಾರಬಲಿ (ನಾ). ಕಾಡುಬತ್ತದ ಅನ್ನದಿಂದ ರಚಿಸಿದ ಬಲಿ : ದ್ವಾರದ ಬಳಿಯಲ್ಲಿ ಮೊದಲೆ ನೀನಿರಿಸಿದ ನೀವಾರಬಲಿಯಂ ವಿಲೋಕಿಸಿ ಮೀರುವ ಮನದಳಲನೆಂತು ತಡೆವೆಂ (ಶಾಕುಂತ. ೫೮ ೯೯).

[ನೀವಾರ + ಬಲಿ$_3$]

ನೀವಾಳಿ 'ನಿವಾಳಿ' ನೋ.

ನೀವಾಳಿತೆಗೆ 'ನಿವಾಳಿದೆಗೆ' ನೋ.

ನೀವಾಳಿಯೆತ್ತು 'ನಿವಾಳಿಯೆತ್ತು' ನೋ.

ನೀವಾಳಿಸು 'ನಿವಾಳಿಸು' ನೋ.

ನೀವಿ (ನಾ). ೧. ಸೀರೆಯನ್ನು ಉಡುವಾಗ ನಿರಿಗೆಗಳನ್ನು ಸಿಕ್ಕಿಸಲು ಹಾಕುವ ಗಂಟು ; ಬಾಳೆಕಾಯಿ ; ಕಣಯ : "ನೀವೀ, ಉಚ್ಚಯಃ—ಈ ೨ ಕಣಯಂ" (ಹಲಾಯು. ೯೦-೩೯೩) ; ನೀವಿಯನೆಡಗಯ್ಯಿಂದಮೆ ಸಾವಗಿಸುತ್ತತುಳಸಾಧ್ವಸಂ ಬೆರಸೆಟ್ಟಾ ದೇವಿಯನೇಟಿದಿರೆನುತುಂ ಭೂವರನೆಟ್ಟಿಂದು ಪೊರ್ದಿ ತಾಂ ಕುಳ್ಳಿರ್ದಂ (ಕುಸುಮಾ. ೫-೫೯) ; ಬಿಡದೊಯ್ಯನೆ ನೀವಿಯಂ ತೆಱಂದಿರಿಪುತುಮಲ್ಲಿ ತೀಡುವುದು ಕಾಮುಕನಂದದೆ ಪೌರಮಾರುತಂ (ಶಾಂತೀಶ್ವ. ೧-೧೩೨) ; ಕಟ್ಟುವರ್ ನಿಱಿಕೆಯ ನೀವಿಯೊಳಗೆ ಕೈಗಟ್ಟುವರ್ ಕಂಕಣಗಳನು (ಮೋಹತ. ೨-೨೩); ನೀವಿಯನೊತ್ತುವ ಪುಷ್ಪಪುತ್ರಿಕಾವಿರಚನೆಗೆಯ್ವ ನೀಱಿಯರದೇನೆಸೆದಿರ್ದರೊ ಮಂಟಪಾಗ್ರದೊಳ್ (ರಾಜಶೇ. ೮-೭); ಸೀರೆಯ ನೀವಿಯ ಬಿಚ್ಚಲೆಂದಿನಿಯನು ತಡವರಿಸುವುದನು ಕಂಡೆ (ಗಾಥಾಸ. ೮೮-೫೧). ೨. ಮೂಲಧನ ; ಬಂಡವಾಳ : "ನೀವೀ, ಪರಿಪಣಂ, ಮೂಲಧನಂ—ಈ ೩ ಬಂಡವಾಳದ ವಡಿವೆ" (ಸಿದ್ಧಾಂತಿ. ೨೯೭). ೩. ಜೂಜಿನಲ್ಲಿ ಒಡ್ಡುವ ವಸ್ತು; ಪಣ : "ನೀವೀ . . . ಪಂದ್ಯಕಟ್ಟ ಕೊಂಡ ವಡಿವೆ" (ಸಿದ್ಧಾಂತಿ. ೪೨೨). ೪. ಸೊಂಟಕ್ಕೆ ಸುತ್ತಿಕೊಳ್ಳುವ ಬಟ್ಟೆ : ಸಾಧಾರಣವಾಗಿ ಅಧೀವಾಸ ಮತ್ತು ನೀವಿಗಳೆಂಬ ಎರಡು ವಸ್ತ್ರಗಳನ್ನೇ ಸೊಂಟಕ್ಕೊಂದನ್ನೂ ಹೆಗಲಿಗೊಂದನ್ನೂ ಉಪಯೋಗಿಸುತ್ತಿದ್ದರು (ಭಾಇಪ್ರ. ೪೪). [ಸಂ. ನೀವೀ]

ನೀವಿಬಂಧ (ನಾ). ಕಣಯದ ಗಂಟು : ಉರ್ವೀತಳಮಂ ಜೂದಾಡಿಗೆಲ್ದಂದಿನ ನಿಜಕಬರೀನೀವಿಬಂಧಂಗಳಂ ದೋರ್ವಳದಿಂದಂ ತಮ್ಮನಿಂದಂ ತೆಗೆಯಿಸಿ ನಡೆದಾ ನೀಚನಾ ದ್ರೋಹನ . . . ಆ ಪಾತಕನಿರವನಿದಂ ನೋಡು ಪಂಕೇಜವಕ್ತ್ರೇ (ಗದಾಯು. ೮-೪೫). [ನೀವಿ+ಬಂಧ]

ನೀವೀಬಂಧ (ನಾ). = ನೀವಿಬಂಧ : ಶಿಥಿಲನೀವೀಬಂಧಮಂ ಕಾಂಚಿಯೊಳ್ ತೆಗೆಯುತ್ತುಂ . . . ಬಾಲೆ ಮೆಱೆದಳ್ ಲೀಲಾಪದನ್ಯಾಸಮಂ (ಪಂರಾಮಾ. ೫-೪೨). [ಸಂ.]

ನೀವೀಬಂಧನ (ನಾ). = ನೀವಿಬಂಧ : ಅಲಕೋತ್ಸಾರಿತಕೇಶಸಂಯಮನನೀವೀಬಂಧನಾವಿಷ್ಕೃತಸ್ಖಲಿತಂ . . . ಸ್ವಕೀಯಭವನವ್ಯಾಪಾರಚಿಂತಾಂತರಂಗಳನೆಲ್ಲಂ ಮಱೆದಿಂತು ಕೂಡೆ ನೆರೆದತ್ತೆತ್ತಂ ಪುರಸ್ತ್ರೀಜನಂ (ಆದಿಪು. ೪-೬೦). [ಸಂ.]

ನೀವೀಭರ (ನಾ). = ನೀವಿಬಂಧ : ಜೋಲ್ದಿರ್ದ ಬಂಬಲ್ಮುಡಿ ಶಿಥಿಲತೆವೆತ್ತಿರ್ದ ನೀವೀಭರಂ ಕಣ್ಗೊಳಿಪನ್ನಂ ಲೀಲೆಯಿಂದುಪ್ಪವಡಿಸಿದಳ್ ಹೃದ್ಯಾಂಗಿ (ಜಗವಿ. ೨-೭೮) ; ರತಿರಾಗಂಬೆತ್ತು ಕಾಂತಂ ತೆಗೆದು ಬಿಗಿದು ತಳ್ಕೈಸೆ ನೀವೀಭರಂ ಜಾಱೆ (ರಾಜಶೇ. ೮-೮೪). [ಸಂ.]

ನೀವು (ಕ್ರಿ). ೧. (ಮೃದುವಾಗಿ) ಸವರು,—ತೀಡು,—ನೇವರಿಸು: ಆಗಳ್ ಪರಸೈನ್ಯಭೈರವಂ. . . ಮಹಾಪ್ರಚಂಡಗಾಂಡೀವಮಂ ಕೊಂಡೇಱಿಸಿ ನೀವಿ ಜೇವೊಡೆದು (ಪಂಪಭಾ. ೧೦-೬೪ ಪ) ; ಪಾವು ಕೊಳೆ ಕರ್ಣಮಲಮಂ ತೀವುಗೆ ಮೇಣ್ ಕೊಯ್ದು ಕಳೆಗೆ ಪಿಂಡುಗೆ ರಕ್ತಸ್ರಾವಂ ಮಾಡುಗೆ ಚುರ್ಚುಗೆ ನೀವುಗೆ ವಿಷಹರಣಮಲ್ತೆ ತಾತ್ಕಾಲಿಕದೊಳ್ (ಲೋಕೋಪ. ೧೦-೧೩) ; ಕರ್ವುವಿಲ್ಲನೆಡಗೆಯ್ಯೊಳ್ ಮಂಡಿತಮೆನೆ ಪಿಡಿದಾಹಾ ರತಿಪತಿ ನಾರಿಯನೋವಿ ನೀವಿ ಜೇವೊಡೆವಾಗಳ್(ಗಿರಿಕ.೮-೨೨); ಮನಸಿಜಾರಾತಿ ಒಯ್ಯನೆ ಬಂದವನಿಯೊಳು ನಿಪತಿತಪ್ರಸವಜಾತವಾಸನನಾಗೆ ಕುಳ್ಳಿರ್ದಾತು ಬಿಡೆ ನಿಡುಸುಯಿಲುಗಳು ತಾ ಬೀತೆಡೆಯ ನೀವುತ್ತನಂಬಿಯ ಮೊಗವನೀಕ್ಷಿಸುತ (ಬಸಪು. ೨೬-೪೨) ; ನಿಡುಬಿಲ್ಲ ರಥದ ಮೇಲೂಱಿ . . . ಹೆದೆಯ ಎಡಗೈಯೊಳೇಱಿಸಿ ನೀವಿ ಜೇವಡೆದನು ಸಿಡಿಲ ವೀಣೆಯ ಮುಟ್ಟಿದಂತೆ (ಭರಚ. ೨೪-೩೨) ; ಅವಳ ಹೆಗಲ ಮೇಲೆ ಕೈಯಿಟ್ಟು ಮೆದುವಾಗಿ ನೀವಿದೆ (ಮಾರ್ಗದ. ೯೧). ೨. ಒರಸು ; ತೆಗೆದು ಹಾಕು : ಹಣೆಯ ಮೇಲಿನ ಬೆವರುಹನಿಗಳನ್ನು ನೀವಿ ಕೊಳ್ಳುತ್ತಾ ಆದಿನಾಥನೆಂದ (ಆತ್ರಮ. ೯). ೩. ನಾಟು ; ನೆಡು : ಒದೆದು ರಥವನು ಸೂತರಿಳಿದೋಡಿದರು ಚಾಪವನಿಳುಹಿ ಸಮರಥರೆದೆಯ ನೀವಿತು (ಕುವ್ಯಾಗ. ೧-೧೩). [ದೇ.॥ ತಮಿ. ನೀವು ; ಕೊತ. ನಿವ್]

ನೀವ್ರ (ನಾ). ೧. ಛಾವಣಿಯ ಮುಂಚಾಚಿಕೊಂಡಿರುವ ಭಾಗ ; ಮುಂಜೂರು: "ನೀವ್ರಂ, ಪಳೀಕಂ (ಪಟಲಾಂತಂ)—ಈ ೨ ಸೂ(ಜು)ರು" (ಹಲಾಯು. ೫೧-೧೪೮). ೨. ಛಾವಣಿ ; ಸೂರು : (ಕಿ). [ಸಂ.]

ನೀಶಾರ (ನಾ). ೧. ಹೊದಿಕೆ ; ಹಚ್ಚಡ ; ದುಪ್ಪಟಿ. ೨. ಸೊಳ್ಳೆ ಪರದೆ. ೩. ಡೇರೆಯಲ್ಲಿರುವ ಬಟ್ಟೆಯ ಗೋಡೆ; ಕನಾತು. [ಸಂ.]

ನೀಸರ (ನಾ). ಕೋಟೆಯ ಹೆಬ್ಬಾಗಿಲು ; ಹುಲಿಮುಖ : "ನೀಸರ [ಪಾಠಾಂ.ನಿಸ್ಸರೆ]ವೆಸಲು ಹುಲಿಮುಖಂ" (ಮುಂಗರಾ. ೫೭-೪).

[<ಸಂ· ನಿಸರ]

ನೀಸು (ಕ್ರಿ). ೧. ನೀರಿನ ಮೇಲೆ ಚಲಿಸು ; ಈಜು ; ಈಸು : ಈ ಸಂಸಾರದ ಬುಡದಲ್ಲಿ ನಾನಾವಿಕಾರತ್ರಯದ ಗುಣದಲ್ಲಿ ನೀರಿನೊಳಗಿರ್ದು ನೀಸುವನಂತೆ ಬಂಧಮೋಕ್ಷಕರ್ಮಂಗಳಲ್ಲಿ ಪ್ರಬಂಧತನಲ್ಲದ ನಿಂದು ನಿಜೈಕ್ಯಂಗೆ ಹಿಂದು ಮುಂದೆಂಬ ಬಂಧವಿಲ್ಲ (ಸರ್ವಜ್ಞ. ೫೬-೨೯); ಪಳಿರೇಖೆ ವಡೆದ ಬಡನಡು ತೊಲೆಯೆನೆ ಕುಚಜಘನಭಾರಮಂ ಕರತಲದೊಳ್ ನಿಲ್ಲಿಸಿ ಲತಾಂಗಿಗೆ ನೀಸಲ್ ಕಲಿಪ ವಿಟಂ ತೂಗುವಂಗಜಂಗೆಣೆಯಾದಂ (ಅಸಂಪು. ೬-೬೯) ; ಆ ತುಂಬುವೊಳಿಗೆ ಇದಿರಾಗಿ ನೀ[ಪಾಠಾಂ. ಈ]ಸುವರುಂಟೆ (ಸಮ್ಯಕ್ತಾ. ೨-೭೦) ; ಮಱಿಯಾನೆಗಳು ನೀರಿನಾಟಕೆ ನಡೆವಂತೆ ತೊಜೆಗೆಯ್ದು ತಿಳಿನೀರ ಹೊಳ್ಕು ನೆಜಿ ನೀಸಿ ತೇಲಿ . . . ದುಡುವಿಮ್ಮುಡಾಡಿ ಲೀಲೆ ಮಾಡಿದರು (ಭರಜ. ೬೩-೬೨). ೨. ನಿರ್ವಹಿಸು; ನಿಭಾಯಿಸು: ದಾಸೋಹವೆಂಬ ಸೇವೆಯ ಬಿಟ್ಟು ನೀಸಲಾಜದೆ ಕೈಲಾಸವೆಂಬ ಆಸೆ ಬೇಡ (ಪಚಸಂ. ೧೩೫-೧೩೯) ; ಗಬ್ಬವಂದೆಗಳ್ಕಲಿಗಳ ಹೊಬಿಗೆಯ ಹೊತ್ತು ನೀಸುವರೆ (ಕುರಾಸಾಂ. ೪೩-೧೩) ; ಈ ಸಕಲ ಜಗದ ಸೃಷ್ಟಿ ಸ್ಥಿತಿ ಪ್ರಳಯಂಗಳ್ಕೆಸು ನನ್ನಾಧೀನವೀ ಭಾರಮಂ ಪೊತ್ತು ನೀಸುವವನಾನಲ್ಲದಾರುಂಟು (ಚಿಬಪು. ೧೪-೩) ; ಇಂತು ಮಹಾರಾಜಂ ಸಾಮ್ರಾಜ್ಯಸುಖಾನುಭವದೊಳಿರೆ ಯುವರಾಜನುಂ ದಿಗ್ವಿಜಯಪ್ರಜಾಪಾಲನ ವ್ಯಾಪಾರಂಗಳವನಾಯಾಸದಿಂ ಪೊತ್ತು ನೀಸುತ್ತೆ (ಚಿಪವಿ.೫-೬೭) ; ಬೆಳೆಯುವ ನಾಲ್ಕುಕಾಳು ರಾಗಿಯಲ್ಲಿ ರೈತರು ಹೇಗೊ ಸಂಸಾರ ನೀಸಿ ಕೊಂಡು ಹೋಗುತ್ತಾರೆ (ಬೈಸರ್. ೧೭). ೩. ಅನುಭವಿಸು ; ಅನುಭೋಗಿಸು : ಬಂದುದ ನೀಸದಿರ್ದಡೆ ಪೂರ್ವಕರ್ಮವು ತಿಂದಲ್ಲದೆ ಬಿಡದು (ಹರಿಸಾಂ.೪೦-೧೦೦) ; ಬಾಳನ್ನು ಕಷ್ಟವೋ ನಿಷ್ಠುರವೋ—ನೀಸುವುದು ತಪ್ಪುತ್ತದೆಯೇ ? (ರಾಮಾಸಿ. ೭೮) ; ಒಂದು ಬಂಗಿ ನೀಸ್ಲಿಲ್ಲ, ಒಂದು ಬಡ್ಡನಾ ನೀಸ್ಲಿಲ್ಲ (ಹುಟ್ಟು ಹ. ೧೬೧). ೪. ತೃಪ್ತಿಪಡಿಸು ; ತಣಿಸು : (ಪ). 'ಈಸು$_1$' ಪರಿಶಿ.

[ದೇ.॥ ತಮಿ. ಮಲ. ನೀನ್ದು ; ತುಳು. ನೀಂದು ; ಕೋತ. ನೀಂಜ್]

ನೀಹಾರ (ನಾ). ೧. ಮಂಜು ; ಹಿಮ : "ಪ್ರಾಕ್ಪ್ರಳೇಯಂ, ಅವಶ್ಯಾಯಃ . . . ಮಿಹಿಕಾ, ನೀಹಾರಃ—ಈ ೪ ಮಂಜು" (ಪಲಾಯು. ೧೦೭-೨೪) ; ನೀಹಾರಪ್ರಸ್ಪರ್ಧಿ ಚಂಚಚ್ಚಮರಜಕಲಹಂಸಾಸ್ಪದಂ ಬೆಲ್ಲನಿತ್ತ ತ್ರೋರಂತಂಭೋಧಮಾಗ್ದ ತಿಳಿದ ಕೊಳದವೋಲ್ದೋರ್ವ ಸಂದೋಹದಿಂದಂ (ಆದಿಪು. ೧೦-೧೯) ; ತರಳತರತರಂಗಾವರ್ತಗರ್ತನೀಹಾರ ಶೀಕರದ ನಿಕರಂ . . . ತಿಮಿತಿಮಿಂಗಿಳೋತ್ಕರಜಳೂಕವ್ಯಾಳಕೋಳಾಹಳಧ್ವಾನವೆರಸಿ ಜಲನಿಧಿ ಮೆಜ್ಜಿದುದು (ಹಚಕಾ. ೧-೩೩) ; ಮಂದಾತಿನೀಕ್ಷೀರವಾರಾಕರಪಟೀರಶಾರದನೀರದಪಹಾರನೀಹಾರ . . . ಗೌರ ಧಿಕ್ಕಾರ ಕೀರ್ತಿಪ್ರಭಾಪೂರ (ಪದ್ಮರಾ. ೧-೫) ;. ಸಗುಣಮಯನೀಹಾರದಲಿ ಮುಳುಗಿ ಮಿಂಚುವೆಳಗಿನ ಬಳಕೆಯಲಿ ಮನಮುಂಚಿ ಮೈಗೊಂಡಳಲು ವಾತುಮಮಂಚಳವು ನೀವ್ ಪಶುಗಳೆಂದರೆ ಪೇದವೇಕೆ (ಕುಮ್ಮಾಕ. ೬-೨೭) ; ಪ್ರಕೃತಿಪ್ರಿಯಂ ನೋಡಿದನು ಸೃಷ್ಟಿಯ ಅಭಾವವನೆ ಚಕ್ರಿಸಿದ ವೋಲ್ ನೀಹಾರರಚಿತಮೂ ಹೇಮಂತಮಂಜುಕಲೆಯಂ ! (ತ್ರಿಲೋಪಾ. ೧೯೪-೧೩೪). ೨. ಮಲಮೂತ್ರಗಳ ವಿಸರ್ಜನೆ : ಚತುರ್ದಿನಕಾಲ್ಪೈಕವಾರ ಬದರೀಫಲಮಾತ್ರಾಹಾರರುಂ ವಿಗತನೀಹಾರರುಂ . . . ಅಪ್ಪರ್ (ತತ್ತ್ವಪ್ರ. ೧೪೦); ಆ ಭೋಗಭೂಮಿಯೊಳ್ ಪಾತ್ರತ್ರಿತಯದಾನ ಫಲಂಗಳಿಂದೇಕದ್ವಿತ್ರಿಪಲ್ಯೋಪಮಾಯುಷ್ಕರುಮೇಕ ದ್ವಿತ್ರಿದಿವಸಾಂತರ ತಾಮಳಕಾಕ್ಷಬದರಮಾತ್ರಾಹಾರರುಂ ವ್ಯಪಗತನೀಹಾರರುಂ . . . ದಂಪತಿಸ್ವರೂಪದಿಂ ಪುಟ್ಟ (ಚಂದ್ರಪು. ೩-೩೩ ಪ). [ಸಂ.]

ನೀಹಾರಕ (ನಾ). ಆಕಾಶದಲ್ಲಿಯ ಕಾಂತಿಮಯವಾದ ಪ್ರದೇಶ ; ಜ್ಯೋತಿಃಪಟಲ : ಅಂಡ್ರೋಮಿಡದ Bದ ಮೇಲೆ ಸಣ್ಣದೊಂದು ನಕ್ಷತ್ರಪ ಸಮೀಪದಲ್ಲಿ ಪ್ರಕಾಶವುಳ್ಳುದಾಗಿ ಬೆಳ್ಳಂಬಿ ಮುಂಕಾಗಿರುವ ಬಾಲವೊಂದು ಗೋಚರವಾಗುತ್ತದೆ. ಇದೇ ಜ್ಯೋತಿಶ್ಶಾಸ್ತ್ರದಲ್ಲಿ ಮೊಟ್ಟ ಮೊದಲು ಉಕ್ತವಾಗಿರುವ ಆಂಡ್ರೋಮಿಡದ ದೀರ್ಘಚತುರಸ್ರಾಕೃತಿಯ ನೀಹಾರಕ (Nebula) (ಜ್ಯೋಚಿವಿ. ೩೧) ; ನೀಹಾರಕದಲ್ಲಿ ಸೂರ್ಯನೊಡನೆ ನಕ್ಷತ್ರಗಳೂ ಚಲಿಸುವಾಗ ನಕ್ಷತ್ರಗಳ ನಡುವೆ ಇರುವ ಅನಿಲ – ದೂಳಿನ ಅಗಾಧಮೇಘಗಳ ಮೂಲಕ ನಕ್ಷತ್ರಗಳು ಹಾಯುತ್ತವೆ (ಭೂಹುಟ್ಟು. ೫೩). [ಸಂ.]

ನೀಹಾರಕರ (ನಾ). (ಮಂಜಿನಂತೆ) ತಂಪಾದ ಕಿರಣಗಳುಳ್ಳವನು; ಚಂದ್ರ : ನೀಹಾರಕರನಲಸಿ ಪಟ್ಟಕ್ಕೆ ಸಾರಲೊಡಂ ಮಗುಟಕ್ ಮರ್ಬುಸರ್ದುತ್ತಾಗಳ್ (ಲೀಲಾವ. ೩-೯) ; ಕಾರಿರುಳ ತರಳತಾರೆಗೆ ಗೋರಗೆಯೆನೆ ಕುರುಳೊಳೆಸೆಯೆ ಮಲ್ಲಿಗೆ ಮಿಗೆ ನೀಹಾರಕರವದನೆ ಮದನಾಕಾರಮನೋರಮಣನಂಕದೊಳ್ ಕುಳ್ಳಿರ್ದಳ್ (ರಾಜಶೇ. ೪-೧೩) ; ರಾಹು ತೊರೆದೊಡನೆ ಶಶಿಯಂ ರೋಹಿಣಿ ಬಳಿವೊರ್ದಿದಂತೆ . . . ನೀಹಾರಕರನಾಸ್ಯ ಸೇರ್ದೆಯೆನ್ನಯ ಬಳಿಯಂ (ಶಾಕುಂತ. ೧೦೯-೧೦೫). [ನೀಹಾರ+ಕರ$_3$]

ನೀಹಾರಕಾಲ (ನಾ). ಹಿಮಗಾಲ ; ಚಳಿಗಾಲ : ಅನುದಿನ ಫಲಾಹಾರನೇಮದಿಂ ತನುವ ದಂಡನೆಗೈವ ಸುಕುಮಾರ ನೀಹಾರಕಾಲದೊಳ್ ಗೆಂತರ್ಪನೊ (ವೆಂಕಾರಾ. ೩-೮-೧೩). [ನೀಹಾರ+ಕಾಲ]

ನೀಹಾರಾಗ (ನಾ). ಹಿಮದಿಂದ ಕೂಡಿರುವ ಪರ್ವತ ; ಹಿಮಾಲಯ : ಭಾರವಂ ನೆಲಕಂ ಪಿಂಗಿಸಿ ಕೀರ್ತಿಯಿಂದಿಟುಸಿ ನೀಹಾರಾಗಮಂ ರಾಗವುಂ ಸಲೆ ಮಾಟ್ಟುಂ ನಮಗಜ್ಜುತಂ (ಜಗವಿ. ೧೫-೧೬). [ನೀಹಾರ+ಅಗ$_2$]

ನೀಹಾರಿ (ನಾ). (?) : ನೀಹಾರಿಯಾಗಿ ಪಾಂಡಿತ್ಯದಿಂ ನಯವಾಗಿ ಬೇಹುನುಡಿಯುಳ್ಳಾತನೇ ಗುಣಜ್ಞಂ ಕಣಾ (ವೀಶ್ವಪು. ೪-೨೩-೨೩). "ಕಾಂತಿವಂತ" (ವೀಶ್ವಪು. ಟೀಕೆ). [?]

ನೀಹಾರಿಕೆ (ನಾ). =ನೀಹಾರಕ ; ಚಂದ್ರ ನಕ್ಷತ್ರ ನೀಹಾರಿಕಾರಜೋಮೇಘದಗ್ನಿಮಂಡಲವೊ (ತ್ರಿಲೋಪಾ. ೬೯೯-೧೦೦೩) ; ಅಣುವಿನಲ್ಲಿರುವ ಅಗಾಧವಾದ ಶಕ್ತಿಯ ಸಂಶೋಧನೆಯಿಂದಾಗಲೀ ಗ್ರಹ ನಕ್ಷತ್ರ ನೀಹಾರಿಕೆಗಳ ದೂರ, ಗಾತ್ರಗಳ ಅಳತೆ ತೂಕಗಳ ನಿರ್ಣಾಯಕ ಚರ್ಚೆಗಳಾಗಲೀ ಸಾಹಿತ್ಯದ ಸೃಷ್ಟಿಪ್ರತಿಭೆಗೆ ಮಾರಕವಾಗುವುದಿಲ್ಲ (ಸುವರ್ಣ. ೩೦೩) ; ಈಚೆಗೆ ರೇಡಿಯೋವಿನಂತೆ ಟೆಲಿವಿಸನ್ ಕಾರ್ಯಕ್ರಮವೂ ಪ್ರಚಾರಕ್ಕೆ ಬರುತ್ತಿದೆ . . . ಗ್ರಹ ತಾರೆ ನೀಹಾರಿಕೆಗಳ ಪೃಶ್ಯಗಳನ್ನೂ ಈ ಮೂಲಕ ಪಡೆದುಕೊಳ್ಳುವ ಸಾಹಸ ಆರಂಭವಾಗಿದೆ (ತಿಕ್ಷದ. ೫೯) ; ಬರುಗಣ್ಣಿಗೆ ಕಾಣದ ಯಂತ್ರದೃಷ್ಟಿಗೆ ಮಾತ್ರ ಗೋಚರವಾಗಿರುವ ತಾರೆ ನೀಹಾರಿಕೆಗಳಲ್ಲಿ ಭಯಂಕರ ಅನಿಲ ವಿಪ್ಲವಗಳಾಗುತ್ತಿರುತ್ತವೆ (ಕಾನೂರು. ೧೬೬). [ಸಂ. ನೀಹಾರಿಕಾ]

ನೀಳ್, ನೀಳು (ಕ್ರಿ). ೧. ಉದ್ದವಾಗು ; ನಿಡಿದಾಗು ; ನೀಳವಾಗು : "ನೀಳ್ — ಪ್ರಸಾರಣೇ (ಉದ್ದವಾಗು)" (ಶಪಥಾ) ; ವದನಕ್ಕೆಮ್ಮಕ್ಕೆ ತಳಕ್ಕೆ ನೀಳ್ದ ನಗೆಗಣ್ಣಂ ತಾಂ ಗಡಂ ತನ್ನ ನೀಳ್ದ ದಳಂಗಳ್ ಗಡ ಪೋಲ್ವೆಯೆಂಬ ನೆಣಸಿಂ ವಿಸ್ಮಯವದಿಂದಿಕ್ಕಿ ಮೆಟ್ಟಿದರೀ ಕಾಂತೆಯರೀ ಸರೋರುಹದಲವ್ಯಾತಂಗಳಂತಪ್ಪೆಂಬುದನೆಂಬನ್ನೆಗಮೇಂ

ಬೆಡಂಗೆಸೆದುದೋ ದೇವಾಂಗನಾನರ್ತನಂ (ಆದಿಪು. ೭-೫೫); ನೀಳ್ದಿರ್ದ ಸೆಱಂಗು ಚಿತ್ರಿಸಿದ ಹಂಸಾನೀಕದಿಂ ಚೆಲ್ವನಾಳ್ದಿರೆ (ಕಾದಂಪೂ. ೨೮); ದಾಂಗುಡಿಯಿಟ್ಟು ಬಾಸೆ ನೀಳ್ದೆಸೆದುದು (ಪಂಚತಂ. ೧೮೪-೧೧); ಭೃಂಗಾವಳಿ ಸುಯ್ಗೆ ಸಾರ್ವ ತೆಱದಿಂ ಸುರ್ಕುಂಗುರುಳ್ಮಾಲೆ ನೀಳ್ದುವು (ಮಲ್ಲಿಪು. ೪-೯೮); ನನೆಯಂಬಿನ ಪೊದೆಯಂ ಪೂವಿನ ಗೊಂಚಲ್ ನೀಳ್ದ ಕರ್ವುವಿಲ್ಲಂ ಸೆಳೆಗೊಂಬನುಕರಿಸೆ ಬಾಲಚೂತಂ ನೆನೆಯಿಸಿದುದು ಚಿತ್ತಭವನ ಕೀಟೂಳವನಂ (ಚಂದ್ರಪು. ೭-೪೪); ಬೆಳೆದು ಕವಲಿಱಿದು ನೀಳ್ದ ಪ್ರವಾಳಜಾಳದಂತೆ ಬೆಂಬಳಿವಿಡಿದಿಳಿದ ಕೆಂಜೆಡೆಗಳಿಂ . . . ಒಪ್ಪಿ (ಬಸರ. ೪-೧೦). ೨. ಚಾಚು; ನೀಡು: ತಳಿರ್ಗಳ ತೊಂಗಲಿಂದಮಲರೋಳಿಗಳಲ್ಲುಗುವಂತೆ ಕೆಂದಳಂಗಳಿನುದಿರ್ವಕ್ಕಿಗಳ್ ನಿಮಿರ್ದ ದಾಂಗುಡಿಯಂತಿರೆ ನೀಳ್ದ ತೋಳ್ಗಳುಚ್ಚಲದಲಿ ಗಾನದಂತೆ ಮಣಿಕಂಕಣನಾದ ಮೊಱಲ್ಚೆ ಸೇಸೆಯಂ ತಳಿದರನಂಗಜಂಗಮಲತಾಂಗಿಯರಂದು ರಾಗದಿಂ (ಆದಿಪು. ೪-೫೯); ಬಿತ್ತರದಿಂದನ್ಯರ ಸಂಪತ್ತಿನ ವನಿತೆಯರ ನೀಳ್ದ ನಿಡಿದೋಳ್ ಕಿಱಿಯಂದೆತ್ತಿದ ತೋಳೆಂದಿರ್ಪಂ (ಧರ್ಮಾಮೃ. ೧೩-೧೮೪); ಕುಸುಮರಜದ ಕೆಂಪಂ ತಾಳ್ದಿ ನೀಳ್ದೇಱಿಯಂ ಲಂಘಿಸುವ ತೆರೆಯ ಜಿಹ್ವಾಡಂಬರಂ ಪೊಣ್ಮೆ . . . ರಾಕ್ಷಸಿಯ ತೆಱೆದ ಬಾಯಂತಿರ್ದುದಾ ಪದ್ಮಸದ್ಮಂ (ಚಂದ್ರಪು. ೫-೪೧); ನಿಮಿರ್ದಂಗಂ ನೀಳ್ದ ಮುಂಗಾಲುಡುಗಿ ನಡೆವ ಪಿಂಗಾಲ್ (ಗಿರಿಕ. ೧-೯೫); ನೀಳ್ದ ಕುಸುಮಮಂಜರಿದಂತವಳವಟ್ಟದರ್ಕೆಱಗುವಳಿಮಾಲೆ ಬರಿಕಯ್ಯವಱ ಝುಂಕೃತಿಯೆ ಬೃಂಹಿತಂ (ಪದ್ಮರಾ. ೮-೩೦). ೩. ವ್ಯಾಪಿಸು; ಹಬ್ಬು: ಮಱೆಗೆ ವಂದರಂ ಕಾಯದೆ ನೀಳ್ದೊದವಿದ ಜಸಮನುಪಾರ್ಜಿಸದಭಮನದೇತರ್ಕೆ ಬಾರ್ತೆ ಜೀವನ್ಮೃತಕಂ (ಆದಿಪು. ೧೨-೯೭); ನೀಳ್ದು ಪೊಣ್ಮಿತ್ತುದಯ ಸಮಯದೊಳ್ ಶೋಣಸೂರ್ಯಾಂಶುಜಾಲಂ (ಕಾದಂಪೂ. ೧೪೨); ಉದಧಿಯನೆಯ್ದಿ ದಿಗ್ಗಜಮನೆಯ್ದಿ ಕುಲಾದ್ರಿಯನೆಯ್ದಿ ನೀಳ್ದು ನಿಲ್ವುದು ಜಸಮಿತ್ತರ್ಗಿತ್ತ ಧನಮೇನದು ನಿಲ್ವುದೆ (ಗದಾಯು. ೧-೩೫); ನಿಸಿತಾಸ್ತ್ರಾಘಾತದಿಂ ಸತ್ತ ಭೂಪರ ಪೆಂಡಿರ್ ಬಿಸುಸುಯ್ಯೆ ನೀಳ್ವ ಶಿಖಿತಂನಂ ಮುಟ್ಟೆ (ಎಕ. VIII, ಸಾಗರ. ೧೦೯-೩೫; 1042); ತಾರಕಾಪಥಂ ಸ್ಫುಟಯಿಸಿದತ್ತೋ ಪೇಟೆನಿಸಿ ಮಾರ್ದನಿ ನೀಳ್ದುದು ದಿಕ್ತಟಂಗಳೊಳ್ (ಪರ್ಧಪು. ೩-೪೩); ಕೋಪಂ ನಾಡೆಯುಮೊತ್ತರಿಸಿ ನೀಳ್ದು ನಿಟಿಲೇಕ್ಷಣದೊಳ್ ಕೂಡೆ ಬಳೆಬಳೆದು . . . ಕುದಿದಾಗಳ್ (ಗಿರಿಕ. ೮-೪೬). ೪. ದೀರ್ಘವಾಗು: ಕಾರಕಮಂ ಕ್ರಿಯೆಯುಮನಱಿದೋರಂತಿರೆ ಮುಂ ತಗುಳ್ಚಿ ಮುಕ್ತಕಪದದೊಳ್ ಸಾರಂ ಸಮಾಸಪದದುಚ್ಚಾರಣೆಯಂ ನೀಳ್ದು ನಿಲೆ ತಗುಳ್ಚುಗೆ ಕೃತಿಯೊಳ್ (ಕವಿರಾ. ೨-೮೭). ೫. ಮಹತ್ವವನ್ನು ಪಡೆ; ಘನತೆಯನ್ನು ಪಡೆ: ನೀಳ್ದ ಗೂಢಾರ್ಥವೊಂದುಂಟು ಆಳ್ದನ ಕೂಡೆ ಯೋಚಿಸ ಬಂದೆಂ (ಭರಚ. ೧೦-೯೬). ೬. ಉದ್ದಮಾಡು; ಎಳೆ: ಅದಟನಿಂ ನೀಳ್ವನಾ ಶೇಷನಂ ತಾಂ ಹೆಡೆಯಿಂ ಬಾಳಂಬರಂ (ಎಕ. VIII, ಸೊರಬ. ೧೩೮-೩೧; ಸು. 1145). ೭. ಮುನ್ನುಗ್ಗು; ಮುಂಬರಿ: ನೀಳ್ದೊದವಿದರುನ್ನತಮೂರ್ತಿಗಳೊದವಿ ಗದಾಯುದ್ಧದೆ ಭೀಮ ಭುಜಗಧ್ವಜರುಂ (ಗದಾಯು. ೮-೬); ಗಾಂಪಿನೊಳನ್ಯಪುಷ್ಪದೊಳು ಮೇಳಿಸಿ ನೀಳ್ದುದಿದೇಕೆ ಕಂಪಿನೊಳ್ ಪೊಂಪುಟಿಪೋಗುತಿರ್ದಮಳವಕ್ತ್ರಸರೋಜಮೆ ಸಾಲ್ಗುಂ (ಧರ್ಮಾಮೃ. ೬-೨೦೧). ೮. ಬಹಳವಾಗು; ಹೆಚ್ಚಾಗು: ಸುಂದರನಂದನಕ್ಕಳುರೆ ಮುಂ ತನ್ನರ್ಚಗಳ್ ಬಂದು ಮೊಕ್ಕಳಮೆತ್ತಂ ಸುರಿಯುತ್ತುಮಿರ್ಪ ರಸಮಂ ಮುಂ ಪೀರ್ದುಕೊಂಡಂ ಮನಂಗೊಳೆ ಸಪ್ತಾರ್ಚಿ ಪೊದಟ್ಟು ನೀಳ್ದೊಸಗೆಯಿಂದಾಪೋಶನಂಗೊಳ್ವವೋಲ್ (ಪಂಪಭಾ. ೫-೮೬); ಅಕ್ಷಿಪುಟಾಂತರದಿಂದಮೇಕೆ ಪೇಟ್ ಪಸರಿಸಿ ನೀಳ್ದು ಪೊಣ್ಮಿದುವು ಕಣ್ಬನಿಗಳ್ (ಕಾದಂಪೂ. ೩೩೧); ನೀಳ್ದುರಿಯೆ ಮೇಣ್ ಗೃಹತೋರಣ ಕೇತು ದೇವತಾವಸಥಮದಗ್ನಿಯಿಲ್ಲದುರಿಯುತ್ತಿರೆ . . . ಮುಂವಱುದಿಂಗಳಿಗಕ್ಕುಮಾಹವಂ (ಲೋಕೋಪ. ೪-೪೫); ಕೂಡುವ ನಲ್ಲರ ನೀಳ್ದ ಸೇದೆಯಂ ಸೆಳೆದೆಲರಲ್ಲಿ ತೀಡುವುದು ಮೆಲ್ಲನೆ (ಕಬ್ಬಿಕಾ. ೩೩). ೯. ನೀಡು; ಕೊಡು: "ನೀಳ್ತನೆನಲಿತ್ತವಂ" (ಸಂಜೀವ. ೨೫); ನೀಳ್ದಂ ಮೂವತ್ತುಕಾಲಂ ಪವಣಿಸಿದುಲಿಯಿಾ ಗೆಜ್ಜೆಯಂ ಕಾಲ್ಗೆ ನಿನ್ನ ಜೀಯೆನ್ನೀ ಕಾಣ್ಕೆದಾಳಳ್ತಿಯೆ! (ಗಿಳಿವಿಂ. vii, ಸಮರ್ಪಣ). ೧೦. ಮೇಲಾಗು; ಔನ್ನತ್ಯವನ್ನು ಪಡೆ: ಎನಗಾಳ್ದಂ ತಾನೆ ನೀಳ್ದಂ ಕರಿಪತಿತನುವಂ ಸೀಳ್ದನಿಂತೊಪ್ಪೆ ಬಾಳ್ದಂ (ಪಂಪಾಶ. ೮೦); ನೆಗೆದಯ್ ಲೋಕದ ನೀಳ್ದ ತುತ್ತತುದಿಯಂ ನೀಂ (ಶಮದ. ಕಿ. ೨೨೯). ನೀಳು: ೭. ದಿಗ್ಗಜವರ್ತ್ಥಿ x x x ಕಟ್ಟಲು ಕೆತ್ತಿದುತ್ತುಂಗಹಸ್ತವನಾಂತನ್ಯಬಳಕ್ಕೆದೋರ್ಪ್ಪ ನೆವದಿಂ ಕೋದಣ್ಡದತ್ತಣ್ಗೆ ನೀಳುವ ನೀನಟಾಯೆ ಗಗನಾತ್ಮಕರ×ಂ ಸಂಗ್ರಾಮರಂಗಾಗ್ರದೊಳು (ಎಕ. VII, ತಿವಮೊ. ೫೬-೫೧; 1115).

ನೀಳ್ದೆಸಳ್ = ಉದ್ದವಾದ ದಳ,—ಪಕಳೆ: ನಱುಗಂಪಡರಿದ ನೀಳ್ದೆಸಳ್ಗಳಿನೊಪ್ಪುವ ಸಂಪಗೆಯಿಂದುದ್ಘಟನರ್ಚಿಸಿದಂ (ಉದ್ಭದೇ. ೬-೧೪). ನೀಳ್ದೊಡಲ್ = ನಿಡಿದಾದ ದೇಹ,—ಶರೀರ: ನಡೆ ಮಿಡುಕದ ಚಮರದ ನೀಳ್ದೊಡಲೆತ್ತಿದ ಕಿವಿಯ ತಮ್ಮ ಪದರಜಮುಂ ಪಾಯ್ದೊಡೆ ಸಿಲ್ಕದಶ್ವಗಳ್ ಧೀಂಕಿಡುವುವು ತನ್ಮೃಗಜವಾಸಹಿಷ್ಣುಗಳೆಂಬೋಲ್ (ಶಾಕುಂತ. ೪-೮). ನೀಳ್ದೊರಗು = ಮೈಚಾಚಿ ಮಲಗು: ಸುಖಾಸನದ ಮೂಡಾವೆಗಳಲ್ಲಿ ಸಿಂಗಾರಮ್ಮನು ನೀಳ್ದೊರಗಿರುವಳು (ಬೆಟ್ಟಅ. ೧೦-೧).

[ದೇ.॥ ತಮಿ. ನೀಳ್, ನೀಳಿ; ಮಲ. ನೀಳು; ತೊದ. ನೀಳ್; ತೆಲು. ನೀಲುಗು]

ನೀಳ್$_1$ (ನಾ). ೧. ಉದ್ದವಾಗಿರುವಿಕೆ; ನಿಡಿದು; ದೀರ್ಘತೆ: "ದೀರ್ಘಮಾಯತಂ ನೀಳಕ್ಕೆ ಪೆಸರೆನಿಕ್ಕುಂ" (ಮಂಗರಾ. ೧೩೨-೨೪); ತೋಳ ನೀಳದ ಕೆಂದಳಿರಿಂದಂ ಸಂದಣಿಸಿರ್ದ ಮದಾಳಿಯಿಂದೋಳದಿಂ ಮಳಯಾನಿಳಲೀಲಾಂದೋಳದಿನೊಪ್ಪೆ ಮನೋಭವಂ (ಆದಿಪು. ೩-೩೦); ಲವಣಜಳಧಿ ಬಳಸಿದಂತೆ ಬಳಸಿದಗಟಿ ನೀಳದಿಂದುದಗ್ರಕನಕಶಾಳದಿಂ (ಪಂಪಭಾ. ೧-೫೮ ರಗಳೆ); ನಾಲ್ವತ್ತೆಣ್ಗಾವುದದ ನೀಳದ ಮೂವತ್ತಾಱು ಗಾವುದದಗಲದ ಬೀಡಂ ಬಿಡಿಸಿ (ಚಾವುಂಪು. ೪೧); ತದ್ದೈತ್ಯಾಧಮಂ ನೀಳದಿಂ ಬಿರಿದಂ ಭೂತಗಣಕ್ಕಮಂಡಜಗಣಕ್ಕಂ ಪಚ್ಚುಕೊಟ್ಟಂದದಿಂ (ಜಗವಿ. ೫-೪೬); ಅಂದು ಮೊದಲಾಗಿ ನೀಳದ ಬೊಟ್ಟು ಸಲ್ಲಲ್ಲಿ ಅಂದು ಮೊದಲಾಗಿ ವೈಷ್ಣವರೆಂಬರಿಲ್ಲಲ್ಲಿ (ಇಱಿರ. ದೇ. ೧೧೦-೨೩); ರಸನೆ ನೀಳಕ್ಕೆ ಸೀಳ್ವುದು ನುಡಿದಡಿಂತಹ ಭಾಷೆಯಂ (ಬಸಪು. ೩೫-೪೯). ೨. ವಿಸ್ತಾರ; ಹರವು: ಮೂವತ್ತು ಕಂಣ ನೀಳದ ನಿವೇಶನಂ (ಹೈಅಸಿ. ೭-೩೯; 1056). ೩. ಎತ್ತರ; ಔನ್ನತ್ಯ: ಮುಗಿಲಂ ಮುಟ್ಟಿದುದಱ ನೀಳಮಂ ಮಕ್ಕಳ್ಪೆತ್ತಳ ಮದುವೆಯಂ . . . ಬೆಸಗೊಂಬವನ ಬೆಳ್ತನದಂತೆ (ಧರ್ಮಾಮೃ. ೨-೧೩೩). ೪. ನೇರ (?): ಹಗಱುಗಳನಿಕ್ಕಿ ಬಿಗಿದಡೆ ನಾಯ ಬಾಲವದು ಬಳಿಕ ನೀಳಕೆ ಸಸಿನವಹುದೆ (ಬಸಪು. ೬೦-೪೮). ೫. (?): ಹತ್ತು ನೀಳ ಹದಿನಯ್ದು ಕೆಯಿ (ಜೊಂಕಶಾ. ೧೯೩೯, ಹಾನಗಲ್. ೧೧೪-೫೩; ?).

ನೀಳದು = ಉದ್ದವಾದುದು; ನಿಡಿದಾದುದು: ನೀಳದರ ನೆರಳೂ ಬೋಳಿಯ ಮಾತೂ ಗಾಳಿಯ ಹಾಗೆ (ಗಾದೆ); ನೀಳದರ ಮೇಲೆ ನಿಂತರೆ ಗಾಳಿಗೇನು? (ಗಾದೆ).

[ದೇ.॥ ತಮಿ. ಮಲ. ಕೊಡ. ನೀಳ]

ನೀಳ್$_2$ 'ನೀಲ' ನೋ.

ನೀಳಂಬಿಸು (ಕ್ರಿ). ನಿಡಿದಾಗಿಸು ; ಬೆಳೆಸು ; ದೀರ್ಘಗೊಳಿಸು : ಬಿಚ್ಚನೆ ಬಿಟ್ಟು ಕಣ್ಣಂ ನೆರಡುಂ ನೀಳಂಬಿಸುತ್ತೊಂದೊಂದಂಬರದೊಳ್ ನಿಂದು ಗಜಪ್ರಯಾಂಬರಚರರ್ ಜೀಯಯ್ಯಾ ಭಾಪ್ಪೆಂದು ಜೀಂಕರಿಪನ್ನಂ ವನದಂತಿ ಪೋರ್ವುದು (ಶಾಂತಿಪು. ೨-೧೧೦). [<ನೀಳ+-ಇಸು$_3$]

ನೀಳಕಾಯ (ನಾ). ೧. ದೊಡ್ಡ ದೇಹ ; ಮಹಾಕಾಯ. ೨. ದೊಡ್ಡ ಶರೀರವುಳ್ಳವನು ; ಮಹಾದೇಹವುಳ್ಳವನು ; ಅವರು ಯಮದೂತರಂತೆ, ನೀಲಕಾಯರೂ, ನೀಳಕಾಯರೂ ಆಗಿದ್ದರು (ನಾಗಕು. ೪). [ನೀಳ್$_1$ + ಕಾಯ]

ನೀಳಕುಂತಳ 'ನೀಲಕುಂತಲ' ನೋ.

ನೀಳಕುರ್ಚಿ (ನಾ). ಒರಗಿ ಕುಳಿತುಕೊಳ್ಳಲು ಅನುಕೂಲವಾದ ಉದ್ದ ಕುರ್ಚಿ ; ಆರಾಮಕುರ್ಚಿ : ನನ್ನ ಆ ಎರಡು ನೀಳಕುರ್ಚಿ ಮತ್ತು ಬೋಂಡ ಇವುಗಳ ವಿಷಯವನ್ನು ಒಂದೊಂದು ಸಲ ಜ್ಞಾಪಿಸಿಕೊಳ್ಳುತ್ತೇನೆ (ನಬಂಫ. II, ೧೩೬). [ನೀಳ್$_1$ + ಕುರ್ಚಿ$_1$]

ನೀಳಕೆಯ್ (ನಾ). ಉದ್ದವಾದ ಕೈ : ತೂಲಿ ಇದ ಕೋ ಎನುತ ಹಾಯ್ಕಲು ಮೇಲೆ ಬೀಳದ ಹಾಂಗೆ ಲಿಂಗವು ನೀಳಕೆಯ್[ಪಾಠಾಂ. ಕೈ] ಗಳನೆತ್ತಿ ಕಲ್ಲಂ ಕೊಲಗಿಸುತ (ಬಸಪು. ೫೦-೬೫). [ನೀಳ್$_1$ + ಕೆಯ್$_2$]

ನೀಳಗಳ 'ನೀಲಗಳ' ನೋ.

ನೀಳಗಿರಿ 'ನೀಲಗಿರಿ' ನೋ.

ನೀಳಘನಾಘನ (ನಾ). ಕಪ್ಪುಮೋಡ ; ನೀಲಮೇಘ : ಪ್ರಭವಂ ನೀಳಘನಾಘನಂ ಸಮವಸೃತ್ಯುರ್ನಿರ್ಗತಕಂ ವಿಯಂಜಿ ಸಪ್ರಭೆಗೈತೋರಣ ಮೂಲಿಕಲ್ ಸುರಿವ ಮಂದಾರಪ್ರಸೂನಂಗಳಾಗಭಿರಾಜನ್ನವಮೇಘ ಕಾಲಮೆನೆ ಬಂದಂ ದೇವದೇವಂ . . . ಕಜಿಯುತುಂ ಧರ್ಮಾಮೃತಾಸಾರಮಂ (ಚಂದ್ರಪು.೭-೫) ; ನೀಳಘನಾಘನಪ್ರತತಿಯಂ ನೆಜಿ ಪೊತ್ತಿರೆ ಮೆಯ್ಯ ಕಪ್ಪು . . . ಕಾರ್ಗಾಲದ ಮಾಟಿಕ್ಕೆಯಿಂದೆ ಶಬರಂ ನಡೆತಂದಿದಿರಾಗಿ ತಾಗಿದಂ (ಪುಣ್ಯಾಸ್ರ. ೫-೪೨). [ನೀಳ್$_2$(=ನೀಲ) + ಘನಾಘನ]

ನೀಳಚೇಳ 'ನೀಲಚೇಲ' ನೋ.

ನೀಳತೋಳ್, ನೀಳತೋಳು (ನಾ). ಉದ್ದವಾದ ತೋಳು ; ದೀರ್ಘ ಬಾಹು : ತಂದೆಯೆನ್ನದೆ ಕಡುಮುಳಿದು ತನ್ನ ನೀಳ ತೋಳಲ[ಪಾಠಾಂ. ಕೋಳ]ಮರ್ದು ನಿಮಿರ್ದ ಕರಾಳಪರಶುವನೆತ್ತಿ ಲಿಂಗವನಾಳಿಗೊಂಡವನಡಿಗಳಂ ಕಡಿಪಿಂಡವಂ ಮಾಡಿ (ಬಸಪು. ೫೮-೨೫). **ನೀಳತೋಳು :** ಅವನು . . . ಸಿಕ್ಕಲ್ಲಿ ನೀಳತೋಳು ಚಾಚುತ್ತಾನೆ (ದೀಪಪ್ರ. II, ೨೨೨). [ನೀಳ್$_1$ + ತೋಳ್]

ನೀಳತೋಳು 'ನೀಳತೋಳ್' ನೋ.

ನೀಳನಗ (ನಾ). ಕಪ್ಪುಬಣ್ಣದ ಬೆಟ್ಟ : ಶರದಭ್ರಂಗಳ್ಕಟ್ಟಾವರಿಸಿರ್ದುವು ನೀಳನಗಮನೆನೆ ಮದಜಳನಿರ್ಝರವಾರಣದಿಂ ಸೊದೆವಟುಬರ ಮನೆಯಂ ಬಳಸಿದಾನೆಸಾಲೆಗಳೆಸೆಗುಂ (ಪಲ್ಲಪು. ೨-೬೫) ; ನೀಳನಗಮೆನಿಸಿ ಕಾಂಚನಶೈಲಂ ಮೊದಲಲ್ಲಿ ಜಿನತನುಪ್ರಭೆಯಿಂದಂ ಕೈಲಾಸಮೆನಿಸಿತೊದವಿದ ಪಾಲಿಂ ಜಿನಜನನಸವನಮೇನಚ್ಚರಿಯೋ (ಪಾರ್ಶ್ವಪು. ೧೪-೮೬).

[ನೀಳ್$_2$ (=ನೀಲ) + ನಗ$_4$]

ನೀಳನಾಲಗೆ, ನೀಳನಾಲಿಗೆ (ನಾ). ಉದ್ದವಾದ ನಾಲಿಗೆ ; ಚಾಚಿದ ನಾಲಿಗೆ : ನೀಳನಾಲ[ಪಾಠಾಂ. ಲಿ]ಗೆಯಿಂದ ಮಾಲೆಯ ಮೇಲೆ ತಿರುಹುತ್ತೊರೆದೊರೆದು ಶಿವನಾಳು ನೋಡುವನು (ಬಸಪು. ೧೪-೬೦). **ನೀಳನಾಲಿಗೆ :** ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ನೀಳ್$_1$ + ನಾಲಗೆ]

ನೀಳನಾಲಿಗೆ 'ನೀಳನಾಲಗೆ' ನೋ.

ನೀಳನೀರೇಜ (ನಾ). ನೀಲೋತ್ಪಲ ; ಕನ್ನೈದಿಲೆ : ರಾಜಿಸುತಿರ್ದು ವಂದರುಣಪಂಕಜಪಾಂಡುಪಯೋಜನೀಳನೀರೇಜಕದಂಬಕಂಗಳ ಪೊದಟ್ಟುಲಿ ವಂಚೆಯ ಮತ್ತಸಟ್ಪದೀರಾಜಿಯ ವರ್ಣಸಂಕರತೆಯಿಂದೆ ಕೊಳಂಗಳ ನಂಗರಾಜನೀ ರಾಜನ ಲೀಲೆಗೆಂದು ರತಿ ತೀವಿದ ಬಣ್ಣವುರಂಗಳಂದದಿಂ (ಜಗವಿ. ೪-೭೫). [ನೀಳ್$_2$(=ನೀಲ)+ನೀರೇಜ]

ನೀಳಪಟ 'ನೀಲಪಟ' ನೋ.

ನೀಳಪಯಣ (ನಾ). ದೀರ್ಘವಾದ ಪ್ರಯಾಣ : ಅಚ್ಚರಿಯು ಬಚ್ಚಟ್ಟು ಹುದುಳ ಹಚ್ಚದೆ ಬಾಳ ನೀಳಪಯಣದ ಹಾದಿ (ನೆಲಮು. ೬೬-೧೦). [ನೀಳ್$_1$ + ಪಯಣ]

ನೀಳಬೊಟ್ಟು (ನಾ). ಉದ್ದವಾದ ನಾಮ ; ಊರ್ಧ್ವಪುಂಡ್ರ : ದ್ವಿಜರೊಮ್ಮೆ ಮುಜಿದು ನೀಳಬೊಟ್ಟನಿಟ್ಟರಾದಡೆ ಅದಜ ಪರಿಯಲೇ ಅಸಿಯ ಗರಗಸವ ಮಾಡಿ ಸೀಳುವರೆಂದುದು ನೋಡಾ (ಸರ್ವಜ್ಞ. ೨೧೦-೯೪೬) ; ಕೇಳಿಯೊಳು ದ್ವಿಜನೊಮ್ಮೆ ನೀಳಬೊಟ್ಟಂ ಮುಜಿದು ತಾಳದೊಡೆ ಮುಂದೆ ಯಮದೂತರಲ್ಲಿ ಹೋಗಿ ಕಳೆವರ್ತನುವ (ಸಾಸಂಚ. ೨-೧೫೧). [ನೀಳ್$_1$ + ಬೊಟ್ಟು$_1$]

ನೀಳಮಣಿ 'ನೀಲಮಣಿ' ನೋ.

ನೀಳಮಾರು (ನಾ). ದೊಡ್ಡ ಮಾರಿನ ಅಳತೆ : ತೆಂಕಣ ನಿಟ್ಟು ೧ ಕೈ ೩೦೭ ನೀಳಮಾರೂ ೪೬೩ ತೆನೆಗಳೂ ××× ಈ ಮೇರೆಗೆ ಅಳತೆಮಾಡಿ ತ್ರಿನಯನೇಶ್ವರಸ್ವಾಮಿ ದೇವಸ್ಥಾನವನ್ನು ಒಳಕ್ಕೆ ಸೇರಿಸಿಕೊಂಡು ಕಾಮಗಾರಿ ಆಗುವಷ್ಟರಲ್ಲಿಯೇ ಚಾಮರಾಜ ಒಡೆಯರವರಿಗೆ ಪಟ್ಟವಾಯಿತು (ಚಾಸುಪಂ. ೮೮). [ನೀಳ್$_1$ + ಮಾರು$_3$(<ಮಾರ್)]

ನೀಳಮೇಘಶ್ಯಾಮ 'ನೀಲಮೇಘಶ್ಯಾಮ' ನೋ.

ನೀಳರತ್ನ 'ನೀಲರತ್ನ' ನೋ.

ನೀಳಲ್ (ನಾ). ಒಂದು ಬಗೆಯ ಹೂವು (?) : ನೀಳಲ ಕಂಪ ನೊಟ್ಟು ನಳನಂಗಳನ್ಕೈಸಿ ಬೆಳ್ಕುಗಿಲ್ಗಳಂ ತೂಳಮನೆತ್ತುವಂತೆಬೆ ಪು . . . ತೀಡಿದುದು ಮೂಡಣ ಗಾಳಿ ಹಿಮಪ್ರದೇಶದೊಳ್ (ಲೀಲಾಸ. ೯-೨).

[?]

ನೀಳಲೆ (ನಾ). ನೇರವಾಗಿ ಹೋಗುವ (ಶಬ್ದದ) ತರಂಗ,—ಅಲೆ : ಅಲೆಗೆ ಕಾರಣವಾದ ಸ್ಪಂದನವು ಯಾವ ದಿಕ್ಕಿನ ಕಡೆಗೆ ಆಗುವುದೊ ಅಲೆಯು ಪ್ರಸಾರವೂ ಅದೇ ದಿಕ್ಕಿಗೆ ಆದರೆ ಅಂತಹ ಅಲೆಗಳನ್ನು ನೀಳಲೆ (Longitudanal wave)ಗಳೆಂದೂ . . . ಕರೆಯುತ್ತಾರೆ (ಭೌವಿ. ೧೩೩). [ನೀಳ್$_1$ + ಅಲೆ$_3$]

ನೀಳಸರೋಜ 'ನೀಲಸರೋಜ' ನೋ.

ನೀಳಸರೋಜಮಾಳೆ (ನಾ). ಕನ್ನೈದಿಲೆಗಳ ಹಾರ ; ನೀಲೋತ್ಪಲಗಳ ಮಾಲೆ : ಜವಿದ ಕಡಿಗಣ್ಣ ಜರ್ವುಗಳೊ ಮೋದಿದ ನೀಳ [ಪಾಠಾಂ. ಲ]ಸರೋಜಮಾಳೆ[ಪಾಠಾಂ. ಲೆ]ಯಿಂದುದಿರ್ದು ಮದಂಗದೊಳ್ ತೊಡರ್ದು ತೋರ್ಪ ದಳಂಗಳೊ ಪೇಟುಮಾವುದೆಂಬುದನೆನೆ ಕಾದಿ ಮೋದಿದ ವಿನ್ಯಾಣವದಿಲ್ಲಿ ದಲಿಲ್ಲ ನಲ್ಲಳಾ (ಆದಿಪು. ೪-೧೧).

[ನೀಳಸರೋಜ (=ನೀಲಸರೋಜ) + ಮಾಳೆ$_1$ (=ಮಾಲೆ)]

ನೀಳಾಗ (ನಾ). ಕಪ್ಪುಬಣ್ಣದ ಬೆಟ್ಟ : 'ನೀಳಾಗಾಗ್ರ' ಪರಾ.

[ನೀಳ್$_2$ (=ನೀಲ) + ಅಗ$_2$]

ನೀಳಾಗಾಗ್ರ (ನಾ). ಕಪ್ಪುಬಣ್ಣದ ಬೆಟ್ಟದ ತುದಿ : ಬರ್ಹಿ ತಾಂ ನೀಳಾಗಾಗ್ರದೆ ನರ್ತಿಪಂತಿರೆ (ಪಸ್ತಪಂ.೩-೩೦). [ನೀಳಾಗ+ಅಗ್ರ$_1$]

ನೀಳಾಚಳ 'ನೀಲಾಚಲ' ನೋ.

ನೀಳಾಚಳಚೂಳಿಕೆ (ನಾ). = ನೀಳಾಗಾಗ್ರ : ಇದು ಮೇಲ್ಕೊಂಡ ದುಕೂಲಚೇಲಮೆನೆ ತದ್ಯಾಮಧ್ಯಮಾಂತೊಪ್ಪಿತಿರ್ದುದು ನೀಳಾಚಳ

ಜೂಳಿಕಾವರಸರಃಸಂಜಾತೆಯುಂ ಕಂಜಕೌಮುದಸೌಗಂಧ್ಯ ಸಮೇತೆಯುಂ . ಸೀತೆಯುಂ (ಪುಷ್ಪಪು. ೨-೭).

[ನೀಳಾಜಳ (= ನೀಲಾಜಲ) + ಜೂಳಿಕೆ (= ಜೂಲಿಕೆ)]

ನೀಳಾದ್ರಿ 'ನೀಲಾದ್ರಿ' ನೋ.

ನೀಳಾಬ್ಜ 'ನೀಲಾಬ್ಜ' ನೋ.

ನೀಳಾಬ್ಜವನ (ನಾ). ಕನ್ನೈದಿಲೆಗಳ ಗುಂಪು; ನೀಲೋತ್ಪಲಗಳ ಸಮೂಹ: ಮುಕುಳಭಾವದೊಳಿನಿಸಂ ಪೊರೆದುದು ನೀಳಾಬ್ಜವನಂ ನೆರೆದುದು ಚಕ್ರಾಹ್ವಯದ್ವಯಂ ದಿನಮುಖದೊಳ್ (ಚಂದ್ರಪು.೮-೧೦೦).

[ನೀಳಾಬ್ಜ (= ನೀಲಾಬ್ಜ) + ವನ]

ನೀಳಾಭ್ರ 'ನೀಲಾಭ್ರ' ನೋ.

ನೀಳಾಭ್ರಜಾಳ (ನಾ). ನೀಲಮೇಘಗಳ ಸಮೂಹ,—ಗುಂಪು: ನೀಲಾಚಲಂಗಳ್ಗುಲಪರಿಭವಮುಂ ಪಿಂಗಿಸಲ್ಕಾಕಲೋಕಾಧಿಪಸೊಳ್ಕಿಲೆತ್ತಿ ಕಾಪಲ್ಕೆರೆದುವೊ ವಡವಾಭೀತಿಯಂ ಮೇಣ್ಮರಕ್ಕೊಕ್ಕಪುದೋ ನೀರಾಕರಂ ವ್ಯೋಮ(ಮ)ನೆನೆ ನೆಗೆದತ್ತಂದು ನೀಳಾಭ್ರಜಾಳಂ (ಪುಷ್ಪಪು. ೮-೮೨); ನೀಳಾಭ್ರಜಾಳವೊರ್ಮೆಯಿ ಮೇಳಿಸಿ ಕಜಿಯಲ್ಕೆ (ಪುಣ್ಯಾಸ್ರ. ೧೦-೧೩). [ನೀಳಾಭ್ರ (=ನೀಲಾಭ್ರ) + ಜಾಳ$_2$ (< ಜಾಲ$_1$)]

ನೀಳಾಶ್ಮ 'ನೀಲಾಶ್ಮ' ನೋ.

ನೀಳಾಳಕ 'ನೀಲಾಲಕ' ನೋ.

ನೀಳಾಳಕಿ 'ನೀಲಾಲಕಿ' ನೋ.

ನೀಳಾಳಕೆ 'ನೀಲಾಳಕೆ' ನೋ.

ನೀಳಿ 'ನೀಲಿ' ನೋ.

ನೀಳಿಕೆ$_1$ (ನಾ). ಉದ್ದವಾಗಿರುವಿಕೆ; ದೀರ್ಘತೆ: ಶೇಷಕಾಯದ ನಡಿದ ನ[ನೀ]ಳಿಕೆಯ ದೀರ್ಘತರಬಾಸೆವಾಲಂ ಮಿಳ್ಕಿರೆ . . . ಮೇಗಣ್ಗೆ ಜಿಗಿದು ಪಕ್ಷಂಗಳಿಂದಪ್ಪಳಿಸಿದಂ (ರಾಘಚ. ೧೪-೧೦).

[ನೀಳ್ + -ಇಕೆ]

ನೀಳಿಕೆ$_2$ 'ನೀಲಿಕೆ' ನೋ.

ನೀಳಿತು (ನಾ). ಉದ್ದವಾದುದು; ದೀರ್ಘವಾದುದು: "ದೀರ್ಘಂ, ಆಯತಂ--ಈ ೩ ನೀಳಿತು[ಪಾತಾಂ. ನಿಳ್ಕಿತು (ನಡಿದು ?)]" (ಹಲಾಯು. ೧೨೪-೬೬). [< ನೀಳ್]

ನೀಳು 'ನೀಳ್' ನೋ.

ನೀಳೇಕ್ಷು (ನಾ). ಕಪ್ಪುಬಣ್ಣದ ಕಬ್ಬು: ಕರಿಯ ಕಬ್ಬು: ನನೆಯಂಬಂ ನನೆಮಾದಿ ಚಾಪಲತೆಯಂ ನೀಳೇಕ್ಷುಗಳ್ಗೆತ್ತು ಕೇತನಮಂ ಖ್ಯಾತಿಯೊಳಿಕ್ಕಿ ತೋಂಟಗವೆಸಂಗೆಯ್ದುಂಗಜಂ (ಆಸಂಪು. ೧೦-೮೨).

[ನೀಳ್$_2$ (= ನೀಲ) + ಇಕ್ಷು]

ನೀಳೋತ್ಪಳ 'ನೀಲೋತ್ಪಲ' ನೋ.

ನೀಳೋತ್ಪಳದಳ 'ನೀಲೋತ್ಪಲದಳ' ನೋ.

ನೀಳೋರ್ವಿ (ನಾ). ಕರಿಯ ಬಣ್ಣದ ಅಲೆ: ಗೋದಾವರೀ ಸಂಗತ್ಯೋ[ರ್ಜ]ತ ವಾರಿಸಾರಯಮನುನಾನೀಳೋರ್ವಿ ನೀರಂ ಭುಜೋತ್ತುಂಗಂಗೀಗರಿಗಂಗೆ ಮುಂಗಳ ಮಹಾಶ್ರೀಯಂ ಜಯಶ್ರೀ ಯುಮುಂ (ಪಂಪಭಾ. ೧೪-೩೧). [ನೀಳ್$_2$ (< ನೀಲ) + ಊರ್ವಿ$_2$]

ನೀಳ್ಕರಿಸು$_1$ 'ನೀಜ್ಕರಿಸು' ನೋ.

ನೀಳ್ಕರಿಸು$_2$ 'ನೀಕರಿಸು' ನೋ.

ನೀಳ್ಕು, ನಿಲಕು, ನಿಲಿಕು, ನಿಲುಕು$_1$, ನಿಲ್ಕು, ನಿಳ್ಕು (ಕ್ರಿ). ೧. ಕೈ ಚಾಚಿ ಹಿಡಿ; ಎಟುಕಿಸಿಕೊಳ್ಳು: ನಿಡುದೋಳ್ ನೀಳ್ದುವು ನೀಳ್ಕಲುದ್ಧತ ಸಿತಚ್ಛತ್ರಂಗಳಂ (ಪುಷ್ಪಪು. ೪-೧೩೯); ನನೆಗೊಂಬಂ ನೀಳ್ಕಿ ಚಂದ್ರಾತಪಮೆ ಪುದಿದುದೆಂಬನ್ನೆಗಂ ನೋಡಿ ಚಂದ್ರಾನನೆ ಪೂವಂ ಲೀಲೆಯಿಂದಂ ತಿಱಂಯೆ (ಪುಷ್ಪಪು. ೬-೭೬); ಸ್ವರ್ಗಫಲಮಂ ಸ್ವಕೀಯ ಭುಜಾಗ್ರದಿ ನೀಳ್ಕಿ ತಳೆದುಕೊಂಡವನೀತಂ ನಿಗ್ರಹದಿಂದೆನೆ ಗಹನಾಂತರ್ಗತನೆನೆದಿರ್ಪನೂರ್ಧ್ವಬಾಹುವೊಳೊರ್ವಂ (ಪುಷ್ಪಕಾ. ೩-೪೪). ೨. ದೊರಕು; ಸಿಗು; ಹಿಡಿತಕ್ಕೆ ಬರು; ಸಾಧ್ಯವಾಗು: ಕೋಣೆಯೊಳ್ಕುಟ್ಟಿ ನೇಲ್ದ ನೆಲವಿನೊಳ್ಕೊಸರ್ಗಂದಲಂ ಕಂಡು ಕಡೆಗೋಲಂ ನೆಗಸಿ ಕುಟುಕುವಿನಂ ನೀಳ್ಕದಿರೆ (ಚಳಸಂ. ೩೯-೧೧). **ನಿಲಕು**: ೨. ನಾಲಿಗೆಗೆ ನಿಲುಕದ ಹಾಗಿದ್ದರೆ (ಮುಂಬಯಿ.೩-೩೧). ೩. (ಅಲಂ)ನೆನಪಿನ ಹಿಡಿತಕ್ಕೆ ಸಿಗು; ಸ್ಮರಣೆಯಾಗು; ಗೊತ್ತಾಗು; ಅರಿವಾಗು: ಉಪನಿಷದ್ವಾಕ್ಯಗಳಿಂದೆ ಲಪನಚತುಷ್ಟಯ ನುತಿ ಪೂಡಲಜಾಯ ಮಜ್ಜ ಕೀರ್ತನೆ ನಿಲಕುವುದೆ (ನೋಹಚ. ೪೧-೬೦). **ನಿಲಿಕು**: ೩. ಕಾಯದಿಂದ ಕಂಡಹೆನೆಂದಡೆ ಬ್ರಹ್ಮನ ಹಂಗು . . . ಕಾಬ ಕಾಬಲ್ಲಿ ಕಂಡಹೆನೆಂದಡೆ ನಾಡೆಲ್ಲರ ಹಂಗು ಇವನೆಲ್ಲವನಲ್ಲಾ ಎಂದು ನಿಲಿಕಿ ನೋಡಿ ಕಂಡ (ಅಂಬಿವ.೪.೬೮೧-೧). ೪. ಸೇರು; ತಲಪು: ಜಲನಿಧಿಯಂ ಪಾಯ್ದೊರ್ಪನೆ ನಿಲಿಕಿ[ಪಾತಾಂ.೩] ದಶಾನನನ ಪೊಲನಾ ಲಂಕೆಯನಾಕುಲಮಿಲ್ಲದಿಜಿತ (ಪು) ನಿಂದಂ (ಕವಿಗಾ.೩-೧೯೦). **ನಿಲುಕು$_1$**: ೧. ಅಲರಿದಂಬುಜವೆಂದು ವದನಕೆ ನಿಲುಕಿ ತುಂಬಿಗಳೆಂದು ಕುರುಳಿಂಗಳುಕಿ ಕೈಗಳ ತೆಜಿದರತಿ ಮುಗದೆಯರು ಖಚರಿಯರು (ಕುವ್ಯಾಆ. ೧೧-೨೪); ನಿಲುಕಿ ಪೂಗೊಯ್ವ ಲಲಿತಾಂಗಿಯರ ಬಟ್ಟ ಬಲ್ಕೊಲೆಗಳಂ ಪೊಜಲಾಜದಸಿಯ ಸೆಳೆನಡುವಿದು (ಜೈಮಿಭಾ. ೮-೧೯). ೨. ಕುಂಜರನು ಕೈಯಿಕ್ಕೆ ನಿಲುಕದೆ ಕಂಜವನವು (ಕುವ್ಯಾ ಆ. ೨೨-೩೨); ತಾಯ್ತಂದೆಗಳ . . . ಕಾತಿಯೊಳಿಲುಹುವದೆ ಸಂಕಲ್ಪವದು ತಾ ನಿಲುಕದಾದುದು (ತೊರರಾ. ೨-೫-೧೬) ; ನನ್ನ ಅನುಭವಕ್ಕೂ ಅರಿವಿಗೂ ನಿಲುಕಿದ ಒಂದೆರಡನ್ನು ಮಾತ್ರ ನಿಮಗೆ ತಿಳಿಸಬಹುದು (ಪೇಕಸ್ಮೃ. ೭೯); ಯಾವ ಪ್ರಕಾರದ ದೋಷಗಳಿಗೂ ನಿಲುಕದಂಥ ಪರಮೇಶ್ವರನು (ಮುಂಬಯಿ. ೪-೮೯). ೩. ಅಪ್ಪತನುವಿನೊಳಗೆ ಹುದುಗಿರ್ಪ ಲಿಂಗವ ನಿಲುಕಿ ನೋಡಿಯೆ ಕಂಡನಂಬಿಗ ಚೌಡಯ್ಯ (ಪಚನಂ. ೪-೭) ; ಸಿದ್ಧರ ಬಗೆಯೊಳು ನಿಲುಕದವನೆ ಜಯ (ಜಯರ. ೮-೨೧) ನೆನಹು ನಿಲುಕನ ಸುಖದ ಸುಗ್ಗಿಯಂ ಸವಿದನೀಪನ ಕುಮಾರಂ (ಸಿದ್ಧರಾ.೩-೧೭); ಜನನ ಜರಾಮರಣಂಗಳೆಂಬ ಪೆಸರಿಂದ ಘನತರವಹ ಮೂಜು ಪುರವು . . . ನೆನಹಿಗೆ ನಿಲುಕದಂತಿಹುದು (ತ್ರಿಪುಸಾಂ. ೩೩) ; ಒಡಹುಟ್ಟಿದನ ವೇದನೆಯ ನಿಲುಕಿ ಕಂಡನು ಶಲ್ಯನನುಜನು ಹಿಳುಕುಹಿಳುಕಿನ ಮೇಲೆ ಸಂಧಿಸಿ ಮುಳಿದೆಸುತ ತಾಗಿದನು ಖತಿಯಲಿ ಪಾರ್ಥನಂದನನ (ಕುವ್ಯಾಜ್ರೋ. ೫-೩೬). ೪. ಕಳಿವರಿದು ಹಿಮಗಿರಿಯ ಮೂಲೆಗೆ ನಿಲುಕಿ ಸಕಲ ಮ್ಲೇಚ್ಛ ಭೂಪಾವಳಿಯ ಭಂಗಿಸಿ ಹೇಱಿಸಿದನೊಂಟಿಗಳಲಾ ಧನವ (ಕುವ್ಯಾಸ.೩-೭). ೫. ಮುಟ್ಟು; ತಗುಲು; ತಾಗು; ಘರ್ಷಿಸು: ಹಾವಿನಂತಿರೆ ನಿಲುಕಿದರು ಸೂಕಲನಪೊಲು ಕೋಡೆತ್ತಿ ಹಾಯ್ದುದರು . . . ಕಡಿತಲೆಗಾಜರುಭಯದಲಿ (ಕುವ್ಯಾಭೀ. ೪-೬೫); ತಲರ್ದನಲ್ಲಿಂ ಮೇಲೆ ಮುನಿಸದ ನಳಿನಕಾನತನಾಗಿ ಸೇನಾಜಲನಿಧಿಯ ನಿರ್ಘೋಷ ನಿಲುಕಲಜಾಂಡ ಮಂಡಲವ (ತೊರರಾ. ೨-೬-೧೬) ; ಸುಳಿಸುಳಿದು ಸುನುನೋರಜಂಗಳು ನಿಲುಕಿ ಗಗನಾಂಗಣಕೆ ಪರಿಮಂದಲಿಸಿ ಪವನಾವೇಶದಲಿ ಭೃಂಗಾನುಗತವಾಗಿ ತೊಳಲುತಿರಲು (ನಿಭಾಗ. ೧೦-೭೦-೩೨); ಗಹನವಾಜ ಸಮಸ್ಯೆಗಳು ಸಾಧಾರಣವಾಜ ಬುದ್ಧಿಶಕ್ತಿಯಮ್ಮ ನಿಲುಕುವುದಿಲ್ಲ (ಪೋಧಪು.೬೩). ೬. ಚಾಚು; ನೀಡು: ಬಲಿದ ಪೌನಕೆ ನಿಲುಕಿ ಮುಂದಕೆ ನಿಲುಕಿ ಮೇಲಣ ಮುಖದ ಸಾನಿರದಳದ ತಾವರೆ ತಾನಧೋಮುಖವಾಗಿ ಮಿಂಚುತಿರೆ (ಬಸಪು. ೬-೧೦) : ಮುಂದಕೆ ನಿಲುಕಿ ಹೊಯ್ದನು ಗಗನ ಭುವಿಮ್ಮಿಡಿಕಲಿ ವಿಭೀಷಣನ (ತೊರರಾ. ೬-೧೪-೩೫). ೭. ಮೈ ಚಾಚಿ ನಿಲ್ಲು; ನೆಟ್ಟುಂಗಾಲಿನಲ್ಲಿ ನಿಲ್ಲು; ತುದಿಗಾಲೂರಿ ನಿಲ್ಲು: ಮೃದಭಕ್ತರೈ

ವರು ತಟಾಕದೇರಿಯ ಮೇಲೆ ನಡೆತರಲು ದೂರದಿಂ ಕಂಡು ದಿಟ್ಟಿಸಿ ನಿಲು [ಪಾಠಾಂ. ಲಿ]ಕಿ ನೋಡಿದಂ ಕಣ್ಮುಚ್ಚದೆ (ಸೋಮಚ. ೨-೮೫); ಬೆಬ್ಬನೆ ಬೆಜ್ಜೆವುತಂ ತಲೆವಾಗಿಸುತ ನಿಲುಕುತ್ತ ಘರ್ರನೆ ತೇಗುತೊಲೆವುತ್ತ . . . ಮುಂಡುಗಾಜನು ದಸರಿದೇವನ ಬಳಿವಿಡಿದು ಸಾರ್ದು (ಒಸಪು. ೩೮-೧೬). ೮. ಎದುರು ನೋಡು ; ಕಾಯು ; ನಿರೀಕ್ಷಿಸು : ಇಂದಿಗೆಂದಣಿಗೆಯ್ವ ತವಕಿಗರಿಗೆಲ್ಲ ಮೇಣ್ ನಾಳೆಯಂ ನಿಲುಕಿ ನಿಟ್ಟಿಪರಿಗೆಲ್ಲ ಕೂಗುತಿದೆ ಕತ್ತಲೆಯ ಕಾವಲಿನ ಕೋಳಿ (ಗಿಳಿವಿಂ. ೧೧೯-೧೬). ೯. ದೊರಕಿಸಿಕೊಳ್ಳು ; ಸಾಧಿಸಿಕೊಳ್ಳು : ನೀ ನಿಲುಕಲಳವೇ ಕರ್ಣ ಜಯವತಿ ಸುಲಭವೇ ನಿನ್ನಂದದವರಿಗೆ ಪಾರ್ಥ ಹೇಳು (ಕುಸ್ಯಾಕ. ೧೬-೧೯). ೧೦. ತೊಡಗು ; ಉಪಕ್ರಮಿಸು : ಅಲಘುಬಲ ನೀನೆಂದು ಬಗೆದಿಹೆ ನಿನ್ನ ಚಿತ್ತದಲಿ ತಿಳಿವಡರಿದಾದುದು ನಿಯುದ್ಧಕೆ ನಿಲುಕುವುದು ಬೆಜಗಲ್ಲವೇ (ತೊರಾ. ೬-೬-೫೩). ೧೧. "ಕಾಣಿಸು ; ಗೋಚರವಾಗು" (ಪ್ರಭಣ್ಣ). **ನಿಲ್ಕು** : ೨. ಸಾತ್ವಿಕ ಶಿವಭಕ್ತಿಗಲ್ಲದಭವಂ ಸಮಂತು ಸಿಲ್ಕಂ ನಿಲ್ಕಂ (ಗಿರಿಕ. ೫-೪೯) ; ಇದೆ ಹರ್ಯಜೇಂದ್ರಾದಿಗಳ್ಗೆ ನಿಲ್ಕದ ವಸ್ತು (ಪಡ್ಮರಾ. ೧೨-೪೮). ೬. ಮೃದುತಳಕಾಂತಿಯಿಂ ಮಿಳಿರ್ವ ಪೂಗುಡಿ ಕೆಂದಳಿರ್ದೊಂಗಲಂತೆ ತೋಜುದೊಡದನೊಲ್ಲದೊಳ್ಗಳಿಗೆ ನಿಲ್ಕಿ [ಪಾಠಾಂ. ಳ್ಕಿ]ದೊಡಂತಲರ್ಗೊಂಚಲಂತೆ ತೋಜುದೊಡೆ ನಖಾಂಶು ವಿಂದದುಮನೊಲ್ಲದೆ ಮಾಮರನಲ್ಲಿದೊಂದು ಮಾಯದ ಮರನೆಂದು ಸಾರ್ದಳತಿಮುಗ್ಧೆ ಕುಜಾಂತರಮಂ ವನಾಂತದೊಳ್ (ಚಂದ್ರಪು. ೭-೧೦೭). **ನಿಳ್ಕು** : ೧. "ನಿಳ್ಕು—ಉಪರಿಸ್ಪರ್ಶನೇ (ನಿಲುಕಿಸಿಕೊಳ್ಳು)" (ಶಮಧಾ); ನಿಜಪದಾಂಗುಷ್ಠಾಗ್ರದಿಂ ನಿಂದು ಕಣ್ಗಳ್ ಪೊಳೆಯೆ ಮಿಳಿರ್ವ ಕೊಂಬಂ ನಿಳ್ಕಿ ಪೂಗೊಯ್ದಳೊರ್ವಳ್ (ಕಾಸ್ಯಾಪ. ೬೧೧) ; ನಡು ಬಳ್ವಳ ಬಳ್ಕೆ ನಿಳ್ಕಲಾಜದೆ ತಳಿರಂ ತುಡುಕುವ ಕೆಳದಿಯ ಕಚಮಂ ಪಿಡಿದೆತ್ತಿದ ಳೊರ್ವಳಬಲೆ ಸಂಭ್ರಮದಿಂದಂ (ಲೀಲಾವ.೧೩-೭೪); ಮುನಿದು ವಜ್ರವೀರಂ ಘನಪೀಠದಿನೆಟ್ಟು ವಜ್ರನಿರ್ಘೋಷದವೋಲನಯಪರಂ ಪೊಳೆವಸಿಮಿಂಚ ನಿಳಿಸಿ ಪೊಯ್ಯಲ್ಕೆ ನಿ[ಪಾಠಾಂ.ನೀ]ಳ್ಕಿದಂ ನೃಪಚರನಂ(ಪಾರ್ಶ್ವಪು. ೨-೮೧). ೨. ನಿಳ್ಕುವರಲ್ಗೊಳಲ್ಕಿವಜಕೊಳಪ್ಪುದೆನಿಪ್ಪ ಮರಲ್ದ ಪೂಮರಂಗಳ್ಕೆಲ ವಿರ್ದೊಡಂ ಕೆಲದೊಳೊಲ್ಲದೆ ನಲ್ಲಳನುಚ್ಚಶಾಖೆಗಾಗಳ್ಕರದುಯ್ದನೊರ್ವಂ (ಚಂದ್ರಪು. ೭-೧೦೧). ೩. ನೆನೆವೊಡೆ ನಿಳ್ಕದೀಕ್ಷಿಪೊಡೆ ಸಿಲ್ಕದ . . . ದಿವ್ಯಲಿಂಗಮಂ ಘನತರಭಕ್ತಿಯಿಂ ನೆನೆದಭೀಕ್ಷಿಸಿ (ವೃಷವಿ. ೨೩-೨೬) ; ಎತ್ತಿದ ಭುಜದಿಂ ನಿಮಿರ್ದ ದೇಹದಿಂ ನಿ[ಪಾಠಾಂ. ನೀ]ಳ್ಕದ ಚಿತ್‌ಪದಮಂ ಮುಟ್ಟುವೆನೆಂದೋವದೆ ನಿಮಿರ್ದೋರಂತೆ ನಿಂದ ಮಾಳ್ಕೆಯೊಳೆಸೆದಂ (ಶಬಶಂ. ೨-೮೦) ; ಹೆತ್ತಮ್ಮಯ್ಯನವರಿಗೀ ಓಲೆಯ ಸಂಚು ನಿಳ್ಕದಂತೆ ಗುಟ್ಟಾಗಿ ಒಪ್ಪಿಸಬೇಕೆಂದೂ, ನೀನು ಎಚ್ಚರಿಸಲಿಲ್ಲವೆ ? (ಬೆಟ್ಟಅ. ೧೫-೧೭). ೬. ತೊಳಗುವ ಮಾಳವೀಮುಖಸರೋರುಹಕಾಂತಿಗೆ ಸೋಲ್ತ ಚಂದ್ರಮಂಡಳದ ಕಳಂಕಮಂ ಕಳೆದಪಳ್ಳಗರೀಲಲಿತಾಂಗಿ ನಿಳ್ಕಿ ತೋಳ್ಗಳಿನೆನೆ ಕೂಡೆ ಕಣ್ಗೊಳಿಸಿ ತೋರ್ಪುವು . . . ಕೇತನಾಳಿಗಳ್ (ಕಾದಂಪೂ. ೩೦೩) ; ಮಾಕಾಳಿಯಡುರ್ತು ನಿಳ್ಕುವಳು ನಾಲಗೆಯಂ (ಎಕ. IV, ಹುಣಸೂ. ೧೩೭-೧೮ ; 1162) ; ಈ ಭಾನುಬಿಂಬಮಂ ಲೀಲಾಭಸ್ತ್ರಿಕೆಯೆಂದು ಪೊಯ್ವವೊಲ್ ನಿಳ್ಕುವ ಹಸ್ತಾಭೋಗದಿನೆಸೆದತ್ತ ಚಲಾಭಂ ತಾನೆನಿಪ ಕುವಲಯಾಪೀಡೇಭಂ (ಜಗವಿ. ೬-೪೯) ; ತಡಿಯೊಳ್ನಿಂದು ನಿಳ್ಕಿ ನೀಡಿದ ಮದಗಜದ ಕರದ ಮಾರ್ಪೊಳಪು ನಿಜಸ್ವಚ್ಛತೆಯಿಂ . . . ಕಮನೀಯಮಾಗಿಯುಂ (ರಾಜಶೇ. ೬-೨೪ ಪ). ೭. ತನ್ನನೆ ನಿಳ್ಕಿ ನೋಟ್ಟರ ಕಣ್ಗೆ ಕಣ್ಬೊಳೆಪು ತನ್ನಯ ಮೆಯ್ಯ ಬೆಳ್ಪಿನೊಳಟ್ಟು ನಿಂದೊಡೆ ವಾಳೆಮಿಾನ್ ಪೊಳೆಯೆ ಧಾತ್ರಿಗೆ ವರ್ಷ ಗಂಗೆವೊಲೊಪ್ಪಿದಂ ಮುನಿಪುಂಗವಂ (ಪಂಪಭಾ. ೬-೭). ೧೨. ನೀಳವಾಗು ; ಉದ್ದವಾಗು ; ಚಾಚಿಕೊಳ್ಳು : ಎನಸುಂ ಮುಂದೆ ನಖಾಂಶು ನಿಳ್ಕೆ ನೃಪ ಹಸ್ತಾನ್ವೇಷಣಂಗೆಯ್ವವೊಲ್ (ಕಾದಂಉ. ೫೯). ೧೩. ಮೀರು ; ಅತಿಕ್ರಮಿಸು : ಅರ್ಕಾಶ್ವಂಗಳಂ ನಿ[ಪಾಠಾಂ. ನೀ]ಳ್ಕಿ ಕೊಪ್ಪರದಿಂ ಪಾಯ್ವಳವಿಂದೆ ಕೇಶಿ ಪರಿತಂದಂ ಕಂಸನಾದೇಶದಿಂ (ಜಗವಿ. ೫-೪೪) ೧೪. (ದ್ವಂದ್ವಯುದ್ಧದಲ್ಲಿ) ಹಿಡಿದುಕೊಳ್ಳು : ಎಡದಡಿಯಂ ಪುಗಿಸುವ ಬಲದಡಿಯಂ ಪೊಱಗಿಡುವ ದಂಡೆಯಂ ನಿ[ಳ್ಕು]ವ ಕೈನಡುಗದೆ ಗದೆಯಂ ಬೀಸುವ ಬೆಡಂಗು ರಂಜಿಸಿತು ಭೀಮದುರ್ಯೋಧನರಾ (ಗದಾಯು. ೮-೮). [<ನೀಳ್]

ನೀಳ್ಕುಳಿಗೊಳ್, ನಿರ್ಕುಳಿಗೊಳ್, ನೀರ್ಕುಳಿಗೊಳ್ (ಕ್ರಿ). ೧. ವಶಪಡಿಸಿಕೊಳ್ಳು : ವೀರಬಲ್ಲಾಳನರಾತಿಮಂಡಳಮಂ ನೀಳ್ಕುಳಿಗೊಳ್ವುದು (ಸೌಇಎ. ೧೯೨೯, ನವಲಗುಂದ. ೧೯೩-೩೦ ; 1707). ೨. ಸೆಳೆಯಲ್ಪಡು ; ಆಕರ್ಷಿತವಾಗು : ದೇವಿಯಂ ಬಲವಂದು ಲಕ್ಷ್ಮಣಂ ನಮಿಸಿ ಬಳಿಕ ಬೀಳ್ಕೊಂಡು ನಡೆಯಲ್ಕೆ ಹಿಂದುಹಿಂದಕೆ ಮನಂ ನೀಳ್ಕು [ಪಾಠಾಂ.ಳ್ಕೊ]ಳಿಗೊಳಲ್ಕೆಂದುಮಗಲದಣ್ಣನ ಕಡೆಗೆ ದೊಳ್ಕಾಯ ದೊಳ್ಪತ್ತಿ ಪೊರಳ್ವ ಸೀತೆಯ ಕಡೆಗೆ ತೂಗುಯ್ಯಲೆವೊಲಾದನು (ಜೈಮಿಭಾ. ೧೯-೨೯). **ನಿರ್ಕುಳಿಗೊಳ್** : ೧. ಸುರಲೋಕ ಸಂಪದಪ ನೆಜ್ಜೆ ನಿಮಿರ್ದು ನಿರ್ಕುಳಿಗೊಂಡುದು (ಕೊಟ್ಟೂಬ. ೭-೨೫) ; ಪೆಂಡವಾಸದ ಮಾತು ನಿರ್ಕುಳಿಗೊಂಡುದಾತನ ಮನವ (ಶಂಕದಾ.೨-೧೪). **ನೀರ್ಕುಳಿಗೊಳ್** : ೧. ಕುಂದು ಕಳಂಕ ಪೊರ್ದದ ಪೂರ್ಣಚಂದ್ರನೆಯ್ತಂದು ನಿಂದಂತೆ ರಾಜಿಸುವ ಕಂದರ್ಪರೂಪನ ಗಾಡಿ ನೀರ್ಕುಳಿಗೊಂಡುದಂದು ಸೌಗಂಧಿಸುತೆಯರ (ನಾಗಕು. ೬-೫೧).

[<ಈಟ್ಕುಳಿಗೊಳ್]

ನೀಳ್ಕೆಯ್ಸು (ಕ್ರಿ). ೧. ಉದ್ದಮಾಡು ; ನೀಳವಾಗಿಸು : (ಕಿ). ೨. ತಡಮಾಡು : ಅಳ್ಕಿ ಪುಳಿಂದಂ ಕಾಣುತೆ ತಳ್ಕೈಸಿಯೆಕೊಂಡು ಶುನಕನೆರಡುಂ ಕಡಿಯಂ ಕಾಳ್ಕಿರ್ಚು ತಗುಳ್ದ ತೆಜದಿಂ ನೀಳ್ಕೆಯ್ಸು [ಪಾಠಾಂ. ನಿಳ್ಕೈಸ, ನಿಳ್ಕಳಿಸ, ನಿಳ್ಕರಿಸ]ದೆ ನೊಂದು ಬೆಂದು ಬಳಲುತ್ತೆಂದಂ (ಗಿರಿಕ. ೧-೧೦೬). [ನೀಳ್ + ಕೆಯ್ಸು]

ನೀಳ್ಕೊಂಬು (ನಾ). ಉದ್ದವಾದ ಕೊಂಬೆ; ನಿಡಿದಾದ ಟೊಂಗೆ : ತಾಳೆಹೂ ಗರುವಲಿಯ ಬೆನ್ನಟ್ಟ ಚುಚ್ಚುವುದು ನೀಳ್ಕೊಂಬಿನಿಂ ಮಾವು ಹೂ ಮುಡಿಯುತಿಹುದು (ಕಾಲೂರ.೧೧೩-೨೩೪). [ನೀಳ್ + ಕೊಂಬು$_1$]

ನೀಳ್ಕೊಳಿ (ನಾ). (ಆಲಂ) ಕ್ಷೋಭೆ : ಬಂದೊಬ್ಬನುಸುರಿದಂ ನೀಳ್ಕೊಳಿಯ ಪೊಸನುಡಿಯ ಕಾಳು ಕೊರಗರ್ಗೆ (ಕಾಲೂರ. ೧೦೭-೨೧೮).

[<ಈಟ್ಕುಳಿ?]

ನೀಳ್ಗತೆ (ನಾ). ದೀರ್ಘವಾದ ಕಥೆ ; ನೀಳವಾದ ಕತೆ : ಒಂದು ಪೌರಾಣಿಕ ದೃಶ್ಯವನ್ನು, ಐತಿಹಾಸಿಕ ನೀಳ್ಗತೆಯಾಗಿ ಪರಿವರ್ತಿಸಿ . . . ವಾಚಕರನ್ನು 'ಬೆಪ್ಪು'ಗೊಳಿಸಿದ . . . ಸಾಹಸವು ನಿಜವಾಗಿಯೂ ನವ್ಯವಾಗಿದೆ (ರೂಪಸಂ. ೧೮). [ನೀಳ್ + ಕತೆ]

ನೀಳ್ಗಬ್ಬ (ನಾ). ದೀರ್ಘವಾದ ಕಾವ್ಯ ; ನೀಳವಾದ ಕವಿತೆ : ಈ ನೀಳ್ಗಬ್ಬದ ರಸ ತಾನೆಂಥದೊ ರಸಿಕಜನಕೆ ತುಷ್ಟಿಯ ತರುವಂಥದೊ ? (ಅಹಲ್ಯೆ. III, ಅರ್ಪಣೆ). [ನೀಳ್ + ಕಬ್ಬ$_1$]

ನೀಳ್ಗವನ (ನಾ). = ನೀಳ್ಗಬ್ಬ : ಶ್ರೀಯವರಿರಿಸಿದ ಚಿನ್ನದ ಪದಕವು ನನ್ನ ನೀಳ್ಗವನಕೆ ಬಂತು (ಇಂಜಾಪ. ೨೯-೩೨) ; Waste Land ಎಂಬ ನೀಳ್ಗವನದ ಪ್ರಕಾಶನವು ಆಂಗ್ಲಕಾವ್ಯದಲ್ಲಿ ಒಂದು ಹಿರಿಯ ಕ್ರಾಂತಿಯನ್ನೇ ಹೂಡಿತು (ನವ್ಯಕಾ. ೨೭). [ನೀಳ್ + ಕವನ]

ನೀಳ್ಗವಿತೆ (ನಾ). = ನೀಳ್ಗಬ್ಬ : ಈ ನೀಳ್ಗವಿತೆಯಲ್ಲಿ ಮಲೆನಾಡಿನ ಹಳ್ಳಿಯ ಕುಟುಂಬದ ಎರಡು ತಲೆಮಾರಿನ ಜೀವನಚಿತ್ರವೊಂದು ಅಡಕ

ವಾಗಿದೆ (ಕಾಲೂರ. ಮುನ್ನುಡಿ); ಭಾವಗೀತ, ಅಷ್ಟಪಟ್ಟಿದಿ, ನೀಳ್ಗವಿತೆ . . . ಎಲ್ಲವೂ ಇಂದು ಕನ್ನಡದಲ್ಲಿ ನೆಲೆಗೊಂಡಿವೆ (ನಪ್ಯಕಾ. ೨೪).

[ನೀಳ್ + ಕವಿತೆ]

ನೀಳ್ಗೈ (ನಾ). ೧. ಉದ್ದವಾದ ಕೈ. ೨. ದೊಡ್ಡ ಭಾರಗಳನ್ನು ಎತ್ತಿ, ಬೇಕಾದ ಕಡೆಗೆ ತಿರುಗಿಸುವ ದೊಡ್ಡ ಯಂತ್ರ; ಎತ್ತು ಯಂತ್ರ : ಆ ಊರಿನ ಸುತ್ತುಮುತ್ತಲಿನ ಅನೇಕ ಗುಡ್ಡಗಳ ತುದಿಯಲ್ಲಿ ನಿಲ್ಲಿಸಿದ ಕೊತ್ತಳಗಳು, ನೀಳ್ಗೈ (Crane) ಮೊದಲಾದುವನ್ನು ಕಂಡು ಅವು ಕಲ್ಲಿದ್ದಲಿನ ಗಣಗಳಿರಬೇಕೆಂಬ ನೆನಪೂ ಆಯಿತು (ಅಪೂಪ. ೧೦೬); ಇವನ್ನು ನದಿಯಲ್ಲಿ ನಿಲ್ಲಿಸಿ, ಮೇಲಿಂದ ನೀಳ್ಗೈಗಳ (Cranes) ಬಲದಿಂದ, ಬಲವಾದ ಕೊಡತಿಯನ್ನು ಇಳಿಸಿ, ಸ್ತಂಭವನ್ನು ಹೊಡೆಯುವರು (ಜಾಬಪ್ರ. ೧, ೧೭೫). [ನೀಳ್ + ಕೈ$_2$(< ಕೆಯ್$_2$)]

ನೀಳ್ಜಟೆ (ನಾ). ಉದ್ದವಾದ ಜಟೆ : ನೀಳ್ಜಟೆಯ ನೀಳುಗಡ್ಡದ ದಟ್ಟ ದರಿದ್ರ ಗೊರವ (ತುಂಗಭ. ೮೧). [ನೀಳ್ + ಜಟೆ]

ನೀಳ್ದನಿ (ನಾ). ದೀರ್ಘವಾದ ಸ್ವರ,—ಧ್ವನಿ : ಹಾಡಿನ ನುಣ್ದನಿಯತ್ತ, ಗೋಳಿನ ನೀಳ್ದನಿಯತ್ತ (ಪಾಂಚಜ. ೬೭-೧೪); ಕಿವಿಗೆ ಬಂದುದು ಗೋಳು ನೀಳ್ದನಿ (ತ್ರಿರಾಮಾ. ೧೦೩-೧೦೧). [ನೀಳ್ + ದನಿ$_1$]

ನೀಳ್ದೋಳು (ನಾ). ಉದ್ದವಾದ ತೋಳು : ಅವಳ ಬೆಳ್ಳನೆಯ ನೀಳ್ದೋಳುಗಳು . . . ಚಂಚಲವಾದ ತುಟಿ ಮೂಗುಗಳು—ಪ್ರತಿಯೊಂದೂ ಸುಂದರವಾಗಿದ್ದುವು (ಪುನರು. ೨೩೮).

[ನೀಳ್ + ತೋಳು(< ತೋಳ್)]

ನೀಳ್ಪು (ನಾ). ೧. ಉದ್ದ; ದೀರ್ಘತೆ; ನೀಳ : ನೀಳ್ಪಂ ಬೆಳ್ಪುಮಂ ತಾಳ್ದಿ . . . ಶೌಚಾಂಜನೇಯನ ಕಣ್ಗಳೆಂಬರಲಂಬುಗಳ್ ಗಣಿಕಾಜನಂಗಳೆರ್ದೆಯಂ ನಟ್ಟು ಕೆಂಕಮಾದಂತಾದುವು (ಪಂಪಭಾ. ೨-೩೯ಸ); ಅದ್ರಿಯ ತಲೆಯೊಳಿಟ್ಟ ವಾರಾಸಿಯ ಕೆಯ್ಯೆನೆ ರಯ್ಯಮಾದುದಾ ನದಿ ನೀಳ್ಪಿಂ (ಅರ್ಧನೇ. ೨-೬೪); ಕೆಂದಳಿರ ಪಕ್ಕರಕ್ಕೆಗಳಂದಂಬಡೆದೆಸೆವ ಪಲ್ಲಣಂಗಳ ಸೊಂಪುಂ ಸಂದಿಸೆ ನೀಳ್ಪಿಂ ನಡೆದುದು ಸಂದರಗಿಳೆಯೆಂಬ ಕುದುರೆಗಳ ದಟಿವೆತ್ತಂ (ಕಬ್ಬಿಕಾ. ೨೧೨); ಇದು ಚಿತ್ರಂ ಮೃದುಪಾದ ಪಲ್ಲವದ ಮೆಲ್ಪುಂ ನೋಟ್ಪೊಡೀ ಕೇಶಪಾಶದ ನೀಳ್ಪುಂ (ಸೂಕ್ತಿಸು. ೮-೩೮೭). ೨. ಔನ್ನತ್ಯ; ಎತ್ತರ : ನೀಳ್ಪಿಂದಮೆತ್ತಂ ಮುಗಿಲಂ ಪೊತ್ತಿರ್ಪ ಕೂಟಪ್ರಕರಂ (ಚಂದ್ರಪು.೩-೮೨); ಆಗಸಮನಣೆವ ಕೋಡುಂಗಲ್ಲಿಂ ನೀಳ್ಪಂ ತಳೆದಾ ಬೆಟ್ಟದ ತಾಟ್ಟುಡಿದ ಬನಂಗಳಲ್ಲಿ ಬೀಡಂ ಬಿಟ್ಟಂ (ಕಬ್ಬಿಕಾ. ೨೩೭). ೩. ವಿಸ್ತಾರ : ಹರವು : ಎಡೆಬಿಡದೆ ದುಃಖಿಂಗ ಕೊತ್ತುತಿರೆ ಬಾಳ ನೀಳ್ಪನ್ ಬಯಸಿ ತಾಳ್ದನ್ ಅಂಜುಕುಳಿ (ಅಶ್ವತ್ಥಾ. ೩-೨). [ನೀಳ್ + -ಪು$_2$]

ನೀಳ್ಪುಪಡೆ (ಕ್ರಿ). ಉದ್ದವಾಗು; ನೀಳವಾಗು; ದೀರ್ಘವಾಗು : ಬೆಳ್ಪಲ್ಲದ ಬಣ್ಣಂಗಳೊಳೊಳ್ಪಳವಟ್ಟರೆಯಪಾನದಿಂ ಸ್ತ್ರುವ(ಸ್ತ್ರುವೆ)ವರೆಗಂ ನೀಳ್ಪುವಡೆದೆಸೆದು ತೋಱೆಯುಮೊಪ್ಪಂ ಶುಭಪ್ರೋಥಜಾತಮೆನೆ ಪೆಸರ್ಪಡೆಗುಂ (ಅಶ್ವಶಾ. ೩-೨). [ನೀಳ್ಪು + ಪಡೆ$_1$]

ನೀಳ್ಪುವೆಱು (ಕ್ರಿ). ೧. ಉದ್ದವಾಗು; ದೀರ್ಘವಾಗು : ನಿಱುವಲೆ ನೀಳ್ಪುವೆತ್ತ ನಗೆಗಣ್ ಬೆಳಗ್ಗೊಪಿನ ಸೊಂಪನಾಳ್ದ ಬಾಯ್ದೆಱೆ (ರನಾದ. ೬೫ ಪ್ರಣೋ). ೨. ಎತ್ತರವಾಗು : ಉನ್ನತವಾಗು : ನೀಳ್ಪುವೆತ್ತ ಪೂವಿನ ಪೊಸ ಟಿಕ್ಕೆಯಂ ಮಿಳಿರೆ . . . ನಡೆತಂದುವಂದು ಪೂಸಮಾವಿನ ಪುಗ್ಗಡದಗ್ಗದಾನೆಗಳ್ (ಕಬ್ಬಿಕಾ. ೨೧೧). [ನೀಳ್ಪು + ಪೆಱು$_1$]

ನೀಳ್ಪೊಳ್ತು (ನಾ). ಬಹಳ ಹೊತ್ತು : ದೀರ್ಘಕಾಲ : 'ನಂಬಿದರ್ ನೀಳ್ಪೊಳ್ತು ಮಿಡುಕದಿರೆ ಸತ್ತುದಂ (ಕಾಲೂರ. ೮೭-೧೬೭).

[ನೀಳ್ + ಪೊಳ್ತು(< ಪೊಱ್ತು)]

ನೀಳ್ಮುಪ್ಪು (ನಾ). ದೀರ್ಘವಾದ ಮುಪ್ಪು : ಬಹುಕಾಲ ಮುಪ್ಪಾಗಿರುವಿಕೆ : ಇದ ಕೇಳೆ ಬದುಕಿದೆವೇ! ನೀಳ್ಮುಪ್ಪನೆಯ್ದಿದೆವೇ! ಅಳಿ, ಪಾರಸಿಕರೆ, ಅಳಿ! ಕಣ್ಣೀರ ಸುರಿಸಿ! (ಪಾರಸಿ.೧೨-೨೭೫).

[ನೀಳ್ + ಮುಪ್ಪು]

ನೀಱ್ (ಕ್ರಿ). ತಿನ್ನು; ಮೆಲ್ಲು : ಸಿರಿಸದ ಮಾಲೆಯೆಂದೆಸೆವ ದಾಡಿಮ ಬೀಜಸಮಾಜವೆಂದು ಸೌಂದರ ಬಿಸಕಾಂಡವೆಂದು ಸಲವಿಂದಳಿಯುಂ ಗಿಳಿಯುಂ ಮುರಾಳಮುಂ ಪಜಾಮಜಾಯಾದಿ ವಾಸಿಸದೆ ಪೀರದೆ ನೀಱದೆ ಮಾಣ್ದ ಪಚ್ಚೆಯೊಳ್ಪರಲ ತೊಳಪ್ಪ ಮಾಣಿಕದ ಮುತ್ತಿನ ಲಂಬಣಮಿಲ್ಲದೆಲ್ಲಿಯುಂ (ಚಂದ್ರಪು. ೬-೪೮).

[ಇದು 'ತೀಱು' ಎಂಬುದರ ಅಪಲಿಪಿತವಿರಬಹುದೆ?]

ನೀಱ, ನೀರ$_1$ (ನಾ). ೧. ಸುಂದರ; ಚೆಲುವ; ಸೊಬಗ : "ನೀಱ ರೊಳ್ ಗಾಡಿಕಾಱರ್" (ಕರ್ಣಾನಿ. ೪೦); ತಳರೊಳ್ ನೀನೆ ಬೆದಂಗನ್ನೆ ನನೆಗಳೊಳ್ ನೀಂ ನೀಱ [ಪಾಶಾಂ. ಚೆಲ್ವ]ನ್ನೆ ಪುಷ್ಪಸಂಕುಳದೊಳ್ ನೀನೆ ವಿಲಾಸಿಯ್ಯೆ (ಅರಿಪು. ೧೧-೯೬); ಮಾಲೆಪೂವಂ ನೆಗಪಿ ಸೊಗಯಿಸುಂ ನೀಱರೊಳ್ ಪುಷ್ಪಚಾಪಂ ಗುಱುಯೇಸಂ ತೋಱಲಂಬಂ ಪೊದೆಗೆದಱುದಪೋಲ್ ಪುಷ್ಪಲಾವೀಕದಂಬಂ (ಪಂಚಾಮಾ. ೧-೧೨೦); ನೀಱರ್ ಪಲರಲಘುಭುಜರ್ ಭೂಪಪುತ್ರರ್ಕಳೆಲ್ಲಂ ಸನ್ನೂತರ್ ಕೂಡೆ ಬಂದೊಂದಿರೆ (ನೇಮಿಪು. ೫-೨); ಕಾಳರಕ್ಕಸಿ ಬರುತ ನೀಱ[ಪಾಶಾಂ. ಧೀರ]ನಂ ಸುಕುಮಾರನಂ ಪುಷ್ಪನಂ . . . ಸಿದ್ಧರಾಮಯ್ಯನಂ ದೂರದಿಂ ಕಂಡಳು (ಸಿದ್ಧರಾ. ೬-೧); ಚತುರಂ ನೀಱನುದಾರನುಜ್ಜ್ವಲಯಶಂ ಸೌಭಾಗ್ಯಸಂಪನ್ನನೂರ್ಜಿತಪುಣ್ಯೋದಯನೀ ಜನಾರ್ದನಂ (ಅನಂಪು. ೧-೫೧). ೨. ಹಿತಕರನಾದವನು; ಪ್ರಿಯ; ಇನಿಯ : ಕಣ್ಣಪ್ಪಗೆ ನೀಱನೆ ಕರುಣಿಪುದು ಹಂಪೆಯ ವಿರೂಪಾಕ್ಷಾ (ಕಣ್ಣಪ. ಮೇ. ೧೫೧-೮); ಅಳುವಿ ನಭೋವಧು ನಿಟ್ಟಿಸಿ ಘಳಿಲನೆ ತತ್ಕಾಲಮೆಂಬ ನೀಱನನಲರ್ಗಣ್ಗಳ ಕಾಂತಿ ಸೂಸಿತಂದೆನಲಳವಟ್ಟುದು ಮುಗಿಲೊಳಮರ್ದ ಮಿಂಚಿನ ಗೊಂಚಲ್ (ಉದ್ಭಟ. ೯-೧೩೬); ನೀಱನ ಚೆಲ್ವೊರೆದ ಸವಿದುಟಿಯ ನೊಲವಿಂ ಬರೆ ಪೀರ್ದುವು ನೋಡುವಿಚ್ಛೆಗಾರ್ತಿಯ ಕಣ್ಗಳ್ (ಕಬ್ಬಿಕಾ. ೩೨೯); ನೀಱನ ಕಲೆಯ ಬಿನ್ನಾಣಕೆ ತಡೆಯದೆ ನೀಱ್ ಮೈಗೊಡುವ ಲೀಲೆಯೊಳು ಪಜಾಱ ಗಜ ತೊಡೆಸನ್ನೆಯಿಂದಾ ರಾಯ ತೋಱುದತ್ತೊದಗಿ ಸಾಗಿದುದು (ಭರತ. ೩೬-೭೧). ೩. ವೀರ; ಧೀರ : 'ನೀಱ ತನ' ಪರಾ. **ನೀರ$_1$** : ೧. ತುಂಬಿಯೆನೆ ತಾವು ಪೀರುವುವು ಹೂವು, ಅ ಪೀರೆ ಪೀರನಾಗಿ ಕನಸಾಗಿ ನಿದ್ದೆ ತನ್ನಲ್ಲಿ ತಾನು ತನ್ನನ್ನೆ ಮೀರದಾಗಿ (ಮಸಾಹಿ. ೧೮). ೨. ನೀರರು ಪರಸ್ಪರರ ತಿರುಳು ನೆರಳು (ಸೂರ್ಯಶಾ. ೨೫-೨). 'ನಿಱ್$_2$' ಪರಾ.

[ದೇ.॥ ತಮಿ. ನೀರ್ಮೈ = ಸೌಂದರ್ಯ]

ನೀಱತನ (ನಾ). ೧. "ಸೌಂದರ್ಯ; ಸೌಭಾಗ್ಯ; ಚೆಲುವಿಕೆ" (ಪ್ರಭಣ್ಣ). ೨. ಶೌರ್ಯ; ಪರಾಕ್ರಮ : ಹಾಜಲೂದಿದನಹಿತ ರಾಯನ ನೀಱತನವನು (ಕುಮಾಕ. ೧೪-೧) : ಮಾಜದೆ ಸಕ್ಕ್ರಿಯೆಯೆನಿ ತುಂಟನಿತುಂ ನೀಱತನದೆ ಸಮೆದುರುತರ ಸುಕೃತವ ಸೂಱೆಗೊಳುತ್ತೆ ಯಶಃಪೂರಿತದಿಕ್ತಟನುದ್ಭಟನೆಸೆವಂ (ಉದ್ಭಟೇ. ೧೫-೩೯).

[ನೀಱ + - ತನ]

ನೀಱತೆ (ನಾ). ಸೌಂದರ್ಯ; ಚೆಲುವು; "ಸೊಬಗು" (ಚತುನಿ.ಕಿ. ೧, ೭೭) : ಸೂಱೆಗಳು ಸಹ ಪೊಳೆಗೆ ಬಂದು ಕಂಡರು ಅವನ ಪಱು ಜಪ್ಪನವಂ . . . ನಾಭಿಯೊಳಗೆಳ್ಳ ನಿಱುಗಡ್ಡದ ನೀಱತೆಯೊಳುಂ ಭುಜದೊಳೊಲೆವ ತುಱುಬಂ (ಪ್ರಭುಪು. ೬-೭೯).

[ನೀಱ + -ತೆ$_3$]

ನೀಱಲು 'ನೇಱಲ್' ನೋ.

ನೀಱು, ನೀರು$_2$ (ನಾ). ೧. ಪುಡಿ ; ಧೂಳು : (ಕ). ೨. ವಿಭೂತಿ; ಭಸ್ಮ : 'ತಿರುನೀಱು' ಪರಾ. ೩. (?) : ಎರಡುಂ ಮೊಱಡಿಯೆಡೆ XX ಸರಿಮ ಅಲ್ಲಿಂ ಪಡುವಣ ನೀಱುವುಂ (ಎಕ. VII, ಶಿವಮೊ. ೬೪-೧೦೨ ; 1112?) **ನೀರು$_2$** : 'ತಿರುನೀರು' ಪರಾ.

[ದೇ.॥ ತಮಿ. ಮಲ. ನೀಱು ; ತೆಲು. ನೀಱು, ನೀರು, ನಿಗುರು, ನಿಗುಱು, ನಿವುರು, ನಿವುಱು ; ಪರ್ಜಿ. ನೀಡ್ ; ಗೊಂಡಿ. ನೀರ್]

ನೀಱೆ, ನೀರೆ (ನಾ). ೧. ಸುಂದರಿ ; ಚೆಲುವೆ : ನೆಲೆಮಾಡಂಗಳ ನೇಱಿದ ನೀಱೆಯರಲಕ್ತಕರಾಗರಂಜಿತಪದಪಲ್ಲವಂಗಳಿನವನಿತಳಮೆಲ್ಲಂ ಪಲ್ಲವಿಸಿದಂತೆಯುಂ (ಕಾದಂಪೂ. ೪೭೮) ; ಏಱಿ ಮಣಿವೆಸದ ಸಿವಿಗೆಯ ನೇಱಿಸಿ ಕುಡುವಿಲ್ಲನೊಡನೆ ಬರೆ ಕಂದರ್ಪಂ ನೀಱೆ ಮುಗಿಲ್ವೊರೆಯೊಳ್ ಮೆಯ್ದೋಱುವ ಶಶಿಕಳೆಯ ಗಾಡಿಯಂ ಗೆಲೆವಂದಳ್ (ಪಂರಾಮಾ. ೩-೪೦) ; ನೀಱೆಯರ ನಿಡಿಯ ಕಡೆಗಣ್ಣೇಱಿಂದೆರ್ದೆ ಬಿರಿಯೆ (ಲೀಲಾವ. ೪-೪೬) ; ನಗೆಗಣ್ಣಳ ನಲ್ಲೆಗೆ ನಾಸಿಕದ ನೀಱೆಗೆ ಬೆಳವಾಯ ಭಾಗ್ಯನಿಧಿಗೆ . . . ರುದ್ರಾಣಿಗೆ ರಕ್ಷಣಾರ್ಥಂ ತಂದೆ ನಿಯಾಮಿಸಿ ಕೊಟ್ಟದಂಡಿಗೆಯ ಧವಳಛತ್ರದ ಅಂಗರಕ್ಷಕರ . . . ಸೋಡಶಸಹಸ್ರ ವಿಳಾಸಿನಿಯರ್ವೆರಸು ನಡೆತಂದು (ಗಿರಿಕ. ೩-೯೧ ಪ); ಕುಂಚಿತಾಳಕದ ಚಂಚಲಾಕ್ಷಿ ನಿಡುಜಡೆಯ ನೀಱೆ (ಉದ್ಭಟ. ೫-೫೩ ಪ). ೨. ಪ್ರಿಯತಮೆ ; ನಲ್ಲೆ ; ಪ್ರೇಯಸಿ : ಬೇಱೂರ್ಗೆ ಪೋದ ನಲ್ಲರ ನೆನೆದು ದೂಱಿಸುವ ನೀಱೆಯರ ಗಡಣದಿಂ (ಕಬ್ಬಿಕಾ. ೫೪). ೩. ಹೆಂಡತಿ ; ಪತ್ನಿ : ನಲ್ಲಳಂ ವಂಚಿಸಿ ಪೋಪ ಬಗೆಯಂ ನೆನೆದು ನೀ[ಱೆಗೆ] ಕೂರ್ಪನಂತೆ ನುಡಿದಾ ಖಚರಂ ವಿಮಾನಮನೇಱಿ ಪುರಮಂ ಪೊಱಮಟ್ಟು (ಧರ್ಮಾಮೃ. ೩-೩೮) ; ಆ ನೀಱೆಗೂಡಿ ನಡೆತಂದೊಳಪೊಕ್ಕಲಂಪಿಂ ತಾನೊಲ್ದು ಪೂಜಿಸಿದನಾ ಹರನಂ ನೃಪಾಲಂ (ಉದ್ಭಟ. ೧೨-೧೦೫) ; ಮೂಱುಲೋಕದ ಗಂಡನೀತನ ಮೀಱಲಹುದೇ ದೇವಿ ದಿವಿಜರ ನೀಱೆಯರು ಬಯಸುವರು (ತೊರರಾ. ೫-೩-೩೬), ತೋಱಿದನು ತದ್ವನದ ಸಿರಿಯನು ನೀ[ಱೆ]ಗೆ (ಸಿಭಾಗ. ೧೦-೭೦-೨೧). **ನೀರೆ**: ೧. ಸಂತಸಗೊಂಡು ಸುಖವನನುಭವಿಸು ನೀರೆ (ವೆಂಕಾರಾ. ೫-೯-೭) ; ಒಂದು ದಿನ ನೀರೆ ನುಡಿದಳು (ತುರಂಗ. ೩-೩೪) ; ತಾರೆ, ಕೊಡಗಿನುಡುಗೆಯ ಸೀರೆ ಸಿಂಗರಿಸಿದಾ ನೀರೆ . . . ಬೆಸಗೊಂಡಳೇರ್ವೆಸನದಾಗುವೋಗಂ (ಶ್ರೀರಾಮಾ. ೩೦೮-೧೯೯) ; ಗಲ್ಲಕೆ ಕೈ ಬೆರಳೊಂದನು ನೀನೂರೆಗೊಟ್ಟೇಕೆ ನಿಂತೆಯೆ ನೀರೆ (ಇಂಚಾಪ. ೮೫-೧೫). [ನೀಱ + – ಎ$_2$]

ನೀಱೆತನ (ನಾ). ಹೆಣ್ಣಿನ ಸ್ವಭಾವ,— ಸ್ಥಿತಿ : ಮೀಱಿಯಾಕೆಯ ನೀಱೆತನವ ವಿಚಾರಿಸದೆ ಪತಿಕರಿಪೆಯಾದೊಡೆ ನೀಱೆಯನು ನೀಯ ಜ್ಞಕಾಲಕೆ ಕರೆದು ಪಿಂಡವನು ಹಾಱಿಸುವುದೈ (ಸಂಭಪ. ೩-೬). [ನೀಱೆ + – ತನ]

△ **ನೀಱೆಱಕಲು** 'ನೀರೆಱಕಲು' ನೋ.

△ **ನೀಟ್ಕರಿಸು$_1$, ನೀಳ್ಕರಿಸು$_1$** (ಕ್ರಿ). ೧. ತಡಮಾಡು; ನಿಧಾನಿಸು: ಪದಸ್ಖಳನಮಾದುದಂಚೆಗಿದಿರೊಳ್ಪಿಕಂ ವಕ್ರಮಂ ತೊದಳ್ನುಡಿದುದು . . . ಈ ದುರ್ಣಯಂ ಪೊದಟ್ಟೊಡಮವರ್ಕೆ ನೀಟ್ಕರಿ[ಪಾಠಾಂ. ನಿರ್ಕಲಿ]ಸದುರ್ಕಿ ಬಂದಂ ಸ್ಮರಂ (ಮಲ್ಲಿಪು. ೧೪-೩೯) ; ಕಾಟ್ಕಿಚ್ಚು ತಗುಳೆ ತಮ್ಮೊಳ್ ಕೋಟ್ಕುಟ್ಟಿ ವನದ್ವಿಪೇಂದ್ರಚಯಮತಿಭಯದಿಂ ನೀಟ್ಕರಿ[ಪಾಠಾಂ. ಕಿಟ್ಕಲಿ]ಸಿ ನಿಲ್ಲದೆನಸುಂ ನಾಟ್ಕಡೆವೋಪಂತೆ ಪೋಪುದೀ ನಗತಟದಿಂ (ಕಾಪ್ಯಾಪ. ೨೯೮) ; ಸಮುಚಿತಧನಮಂ ನೀಟ್ಕರಿಸದಿತ್ತು ಚರನಂ ಬೀಟ್ಕೊಡೆ (ಅನಂಪು. ೧೩-೫೨). ೨. ಉದ್ದಮಾಡು ; ನೀಳವಾಗಿಸು : "ನೀಡುಕರಿಸಿದುದರ್ಕೆ ನೀಟ್ಕರಿಸಿತೆಂಬುದದು ಬಲ್ಮೆಗೆಯ್ದುದಜ ನಾಮಂ" (ಸಂಜೀವ. ೨೨); ನಿಶಿತೋದಗ್ರಧಾರಾಗ್ರ ಶಶ್ವಚ್ಚಲಜಿಹ್ವಾಯುಗ್ಮಮಂ ನೀಟ್ಕರಿಸಿದನಿತೆ ನೀಡುತ್ತುಮಿಂತಿರ್ಪುದಾಜ್ಞಾಬಲವದ್ವಿಶ್ವಂಭರೋರ್ವೀಶ್ವರಕರಕಲಿತೋಗ್ರಾಸಿ ಕಾಲೋರಗೇಂದ್ರಂ (ಕುಸುಮಾ. ೩-೧೬) ; ಡಕಾರಕ್ಕಾದೇಶಮಾದ ಜಟಕ್ಕೆ ಪ್ರಯೋಗಂ—ಕಾಡುಕಿಚ್ಚು = ಕಾಟ್ಕಿಚ್ಚು . . . ನೀಡುಕರಿಸಿದಂ = ನೀಟ್ಕರಿಸಿದಂ (ಶಮದ. ೧೯ ಪ್ರಯೋ). ೩. ನೀಡುವಂತೆ ಮಾಡು ; ಹರಿಯ ಬಿಡುವಂತೆ ಮಾಡು : ಆಗಳಾಗಳ್ ಮೊಱಗುವ ಭೇರಿಯೊಂದು ಬಿಱುಸರಂ ಕಾರಗುಡುಗಂ ಪುಟ್ಟಸೆ ತುಂಬುಗೊಳನೊಳಿಂಬುಗೊಂಡ ಮುದ್ದಂಚೆಗಳ್ಗೆ ಜಲಕ್ರೀಡೆಗೆ ಮನಮಂ ನೀಟ್ಕರಿಸುವ ದೇಗುಲಂಗಳಿಂ . . . ಊರು ಚೆಲ್ವಾಗೆ (ರಾಮಾಶ್ವ. ೧೦೨-೧೬). ೪. ವ್ಯಾಪಿಸು ; ಹಬ್ಬು ; ವೃದ್ಧಿಯಾಗು : ಇನ್ನೆಬರಂ ಕೊನೆವರಿದು ನೀಟ್ಕರಿಸಿದ ಬಟಿಯ ಬಟಿಯಾಗಳ್ ತನ್ನೊಳ್ ತಡೆದುದೆಂಬೊಂದು ಬಾಗುಳ ಪೆಟಸಿನಗವಟ್ಟಾಗಳುಮಿಾ ಕತದೊಳೆ ಬಗೆಗೆಟ್ಟರ್ಪ ರಾಯನೋಲಗಕೊರ್ಮೆ ಜಾಬಾಲಿಮುನಿಪಂ ಬಿಜಯಂಗೈದಂ (ರಾಮಾಶ್ವ. ೧೦೪-೧೯). **ನೀಳ್ಕರಿಸು$_1$** : ೧. ನೀಳ್ಕರಿಸದೆ ಜಾನಿಸಿ ಪೂಜಿಸುತೀ ಮಾಳ್ಕೆಯಿನಾದಂ ನಡುವಗಲಂಬರಮೆರ್ದೆಯುಂ ಕೈದಣಿಯೆ (ಉದ್ಭದೇ. ೩-೫೫). ೫. ಚಾಚು ; ನೀಡು : ಧರೆಯ ಮೇಲುಂಗುಟಾಗ್ರವನೂಱಿ ನೀಳ್ಕರಿಸಿ ಕರಯುಗವ ಶಂಕರನ ಹೃದಯದೊಳು ನೆಲೆಗೊಳಿಸಿ ಪರಮಕಾಷ್ಠೆಯನೆಯ್ದಿ ತಪವನಾಚರಿಸುತಿರಲ್(ರಾಘಚ. ೧೧-೨೧). ೬. ಸಡಿಲಗೊಳಿಸು; ಶಿಥಿಲಗೊಳಿಸು : ಪಡದೊಂದಂಗುಷ್ಟದಗ್ರಂ ನೆಲಸಿ ನೆಲದೊಳೊಂದಂಘ್ರಿಯಂ ಕೊಂಕಿಸುತ್ತೆತ್ತಿ ದುರಾಶಾಪಾಶಮಂ ನೀಳ್ಕರಿಸಿ ನಿಜಭುಜದ್ವಂದ್ವಮಂ ನೀಡಿ . . . ಯೋಗಾನ್ವಿತರ್ ಕಣ್ಗೆವಂದರ್ (ಶಬಶಂ. ೨-೭೧). ೭. ಹೆಚ್ಚಾಗು ; ಅಧಿಕವಾಗು : ವಿನಯಂ ತುಳ್ಕಿ ನೀಳ್ಕರಿಪ ಭಕ್ತಿಯಿಂ ನೋಡುತಿರೆ (ಕೊಟ್ಟೂಬ. ೧೬-೧೬). [<ನೀಡು$_2$ + –ಇಸು$_3$]

ನೀಟ್ಕರಿಸು$_2$ 'ನೀಕರಿಸು' ನೋ.

ನೀಟ್ದಾತ (?). (?) : ಗಮನಮಂ ನೋರ್ಬ್ಬಂನ್ತೆ ವಿಲ್ಬೊಟ್ಟು ××× ನೀಟ್ದಾತನೆಂದೀಯಾ (ಸೌಇಇ. XI-i, ೧೦-೨೧; 864). [?]

△ **ನೀಟ್ಮುಡಿ** (ನಾ). ಉದ್ದವಾದ ಕೂದಲು ; ನೀಳವಾದ ಮುಡಿ: ಇರದೊಱೆವಾಲಿನೀರ್ವೊನಲಿನಟ್ಗಿಪರಗ್ಗಲಿಪಾಸ್ಯಶೋಷಮಂ ಜರಿದು ಪೊದಟ್ಟ ನೀಟ್ಮುಡಿಯ ಪೆರ್ಮುಸುಕಿಂ ಬಿಸಿಲಾರ್ಪನಾಱಿಪರ್ (ಅಪ್ರತಿ. ೬೯-೭೩). [<ನೀಡು$_2$+ಮುಡಿ$_3$]

ನುಂಗಣೆ (ನಾ). ನುಂಗುವಿಕೆ ; ಕಬಳಿಸುವುದು: ದೇವರು ಕೊಟ್ಟದ್ದು ನುಂಗಣೆ ಮನುಷ್ಯರು ಕೊಟ್ಟದ್ದು ಹಂಗಣೆ (ಗಾದೆ).

[ನುಂಗು$_1$ + – ಅಣೆ$_4$]

ನುಂಗಿ (ನಾ). ೧. ನುಂಗುವವನು ; ಕಬಳಿಸುವವನು : ಉಚ್ಚೆಯ ಬಚ್ಚಲ ಕೊಚ್ಚೆಯ ತಾವು ಪೂಜಿಸುವ ನಿಶ್ಚಯರಿಗೆ ಮಱೆ ಮಾಡುವ ಮೆಚ್ಚು ನುಂಗಿಗೇಕೆ ನಿಶ್ಚಯದ ಆಱುವು (ಸಗಬೊ. ಕ. ೬೨೪-೭). ೨. ನುಂಗುವಂಥದು ; ಕಬಳಿಸುವಂಥದು : ರಣವೀತಿಹೋತ್ರನುಗಿಗಳೊ ಭರ್ಗನ ನೆಱೆ ಪಣೆಗಣ್ಣಿನುರಿಯ ಸಂಗಿಗಳೊ ಸೆಣಸುವಧಟರ ನುಂಗಿಗಳೆನ್ನಲೆಸೆದುವು ಗಣನೆಯಿಲ್ಲದ ಪಿರಂಗಿಗಳು (ಕಂಸವಿ. ೬-೧೬).

[ನುಂಗು$_1$ + – ಇ$_3$]

ನುಂಗಿಸು (ಕ್ರಿ). ನುಂಗುವಂತೆ ಮಾಡು; ಕಬಳಿಸುವಂತೆ ಮಾಡು: ನಿನ್ನಂ ಕೊಂದನ ಬಸಿಱಿಂ ನಿನ್ನಂ ತೆಗೆಯುವೆಯುಮವನ ಕರುಳಂ ಪರ್ದಿಂ ಮುನ್ನುಂಗಿಸಿ ನೋಡದೆಯುಂ ಮುನ್ನಮೆ ಯುವರಾಜ ನಿನ್ನನಾಂ ನೋಡಿದೆನೇ (ಪಂಪಭಾ. ೧೩-೫೭) ; ಶಿಂಗನಿಗೆ ಇನ್ನೊಂದೆರಡು ಮಾತ್ರೆಗಳನ್ನು ನುಂಗಿಸಿ ಅವನು ಬಿಡದಿಯಲ್ಲಿಯೇ ಉಳಿಯುವಂತೆ ಒಪ್ಪಿಸಿದೆ (ಹಸುಹೊ. ೨೦). [ನುಂಗು$_1$ + – ಇಸು$_3$]

ನುಂಗು$_1$ (ಕ್ರಿ). ೧. ಆಹಾರ, ಪಾನೀಯ ಮುಂತಾದುವುಗಳನ್ನು ಗಂಟಲೊಳಗೆ ಇಳಿಸು ; ಕಬಳಿಸು : "ನುಂಗು—ಗಲನೇ" (ಶಮಭಾ). ಆತನ ಮಹಾದೇವಿ ಮಂದೆಯೆಂಬೊಳಾಕೆಗೆ ಗರ್ಭಮಾಗಿ ಚಂದ್ರನಂ ನುಂಗುವ ಬಯಕೆಯಾಗಿ ಬಡವಾದೊಡೆ (ಪಡ್ಡಾರಾ. ೧೮೬-೯) ; ತೋರ ಮಲ್ಲಿಗೆಯ ತುಱುಂಬು ರಾಹು ತವೆ ನುಂಗಿದ ಚಂದ್ರನನೊಯ್ಯನೊಯ್ಯ ನಂದುಗುಟ್ಟಿವೊಲೊಪ್ಪಿರಲ್ ಬಲದೊಳುರ್ವಸಿ ದೇಸಿಗೆ ದೇಸಿಯಾಡಿದಳ್ (ಪಂಪಭಾ. ೭-೮೭) ; ಪೆಱರ್ಗೀ ಬಯಕೆಗಳಂ ತಾನಱಿಪಿದೊಡಂ ತೀರ ದೆಂದು ಕಾಮಿನಿ ಮನದೊಳ್ ಮಱುಗಿ ಬಿಸಿದಪ್ಪ ತುಪ್ಪಮನಱಿಯದೆ ಶಿಶು ನುಂಗಿದಂತೆ ಚಿಂತಿಸಿ ಮನದೊಳ್ (ಧರ್ಮಾಮೃ. ೮-೧೦) ; ಆಕಾಶ ದಲಾಡುವ ಹದ್ದನೊಂದು ಸರ್ಪ ನುಂಗಿತ್ತ ಕಂಡೆ (ಆದಪ. ೩೫-೧೦೦) ; ನಂಬಿ ನಂಬೀ ಕಂದ ಮೊಸಳೆ ನುಂಗಿತೆ (ನಂಬಿರ. ೧೭-೧೫೭) ; ಕೊಂದ ಹೆಣನಂ ಕಾಣೆವಾತಂ ತಿಂದನೋ ವಿಧಿ ನುಂಗಿದುದೊ ಅದಱಿಂದವಱಿ ಯೆವು (ಬಸಪು. ೨೧-೧೭) ; ಆರ ದೀಪನ ಚೂರ್ಣಬಲದಲಿ ವೀರರುದ್ರನು ಜಗವ ನುಂಗುವನೋರೆಗೆಡೆಯದಿರಂಬ ಸುರಿ ಸುರಿ (ಕುಮ್ಯಾದ್ರೋ. ೧೦-೫೨) ; ಬಾಳೆಗಳಂ ತಿಮಿ ನುಂಗೆ ನುಂಗಿದಾಗಳೆ ತಿಮಿಯಂ ತಿಮಿಂಗಿಳ ನಡಂಗುವಿನಂ ತವೆ ನುಂಗೆ ತತ್ತಿಮಿಂಗಿಳನುಮನಾ ತಿಮಿಂಗಿಳಗಿಳಂಗಳೆ ನುಂಗಿದುವು (ಕಾವ್ಯಸಾ. ೭೬). ೨. ಒಳಗೆ ಸೇರಿಸಿಕೊಳ್ಳು ; ಅಡಗಿಸಿಕೊಳ್ಳು : ನೆಗಪಿ ವರೂಥಮಂ ವಸುಧೆ ನುಂಗಿದುದಂ ಸಮಪಾದದಾಸನಂ ಬಗೆಗೊಳೆ ತನ್ನ ಮುಂ ತೆಗೆದ ದಕ್ಷಿಣಮುಷ್ಟಿಯೆ ಕರ್ಣಮೂಲದೊಳ್ ಸೊಗಯಿಸೆ ಪಾಟಿಯಂ ನೆಱಪದಾಳ್ದನ ಕಜ್ಜಮ ನೊಕ್ಕು ಸತ್ತರಂ ನಗುವವೊಲಿರ್ದನಂಗಪತಿ ನೆಮ್ಮಿ ನಿಜೋನ್ನತಕೇತು ದಂಡಮಂ (ಗದಾಯು. ೫-೧೦) ; ನಿಂದ ನೆಲ ನುಂಗುವಡೆ . . . ಬದುಕ ಬಹುದೇ (ತೊರರಾ. ೨-೩-೬). ೩. ತಿನ್ನು ; ಸೇವಿಸು : ಧರೆ ಬೀಜಂಗಳ ನುಂಗೆ . . . ಹರ ಕೊಲ್ಲಲ್ ಪರ ಕಾಯ್ವನೇ (ಸೋಮೇಶ. ೨೯) ; ಲಿಂಗವಿರಹಿತನಾಗಿ ಏನುವನು ನುಂಗಬಾರದು (ಸಾಹಿಜೀ. ೧೦೬). ೪. ಸಂಪೂರ್ಣವಾಗಿ ನಾಶಪಡಿಸು,– ಹಾಳುಮಾಡು,– ಇಲ್ಲದಂತೆ ಮಾಡು : ಈ ಜಗತ್ತ್ರಯಮನೊರ್ಮೆಯೆ ನುಂಗುವ ಕಾಲರೂಪಮಂ ತೋಱಿದಂ (ಪಂಪಭಾ. ೯-೬೦) ; ನೆಲನಂ ನುಂಗಲುಮಂಬುಧಿಜಲಮಂ ತವೆ ತುಳ್ಳಲುಂ ಕುಲಾಚಲಕುಲಮಂ ನೆಲೆಯಿಂ ಕಿಟಲುಂ ತಾರಾವಲಿಯ ನುದಿರ್ಚಲುಮೊಡರ್ಚಿದಂ ಚಕ್ರಧರಂ (ಕಾವ್ಯಾಪ. ೧೦೮) ; ಹರಿಯ ನುಂಗಿತ್ತು ಮಾಯೆ ಅಜನ ನುಂಗಿತ್ತು ಮಾಯೆ . . . ಎನ್ನ ಮಾಯವ ಮಾಣಿಸಾ ಕರುಣೆ (ಮಹಾದೇ. ಕ. ೫-೬). ೫. ಕೊಲ್ಲು ; ಸಾಯಿಸು ; ಸಂಹರಿಸು : ಕರಿಯಂ ನುಂಗಿ ಕಳಿಂಗನಂ ನೊಣೆದ ದರ್ಪಕ್ಕೊಂದು ಗೊಳ್ ಮತ್ಸಹೋದರರಂ ಕೋಪದೆ ತಿಂದುದರ್ಕೆರಡುಗೊಳ್ . . . ಎಂದು ಮಚ್ಚರದಿಂದೋವದೆ ಪೊಯ್ದನೆತ್ತಿ ಗದೆಯಂ ದುರ್ಯೋಧನಂ ಭೀಮನಂ (ಗದಾಯು. ೮-೧೮) ; ಮಾಱಾಂತವರ ನುಂಗದೆ ಮಾಣ್ದೆ ನಾದರೆ ದಿವಿಜಪತಿತನಯಂಗೆ ತಾ ಜನಿಸಿದವನಲ್ಲ (ಕುಮ್ಯಾದ್ರೋ. ೪-೩೯) ; ನುಂಗದೆ ಉಗುಳಿದ ಮೃತ್ಯು, ಬಸವಂತಿಯನ್ನು ಶ್ಯಾಮರಾಯನಿಗೆ ಮೀಸಲು ಬಿಟ್ಟತ್ತು (ದೀಪಹ. II, ೧೪೫). ೬. ಮುಸುಕು ; ಮುಚ್ಚು ; ಕಾಣದಂತೆ ಮಾಡು : ರಾಯರಿಬ್ಬರ ಮನದ ತಿಮಿರದ ತಾಯಿಮನೆಯೆಂಬವೊಲು ತಾ ಪೂರಾಯದಲಿ ನುಂಗಿದುದು ಕತ್ತಲೆ ನಿಮಿಷದಲಿ ಜಗವ (ಕುಮ್ಯಾಕ. ೪-೩೯). ೭. (ದುಃಖ, ಕೋಪ ಮುಂತಾದ ಭಾವಗಳನ್ನು) ಅದುಮಿಡು ; ಹತ್ತಿಕ್ಕು ; ತಡೆದು ಕೊಳ್ಳು : ನಿಮ್ಮ ಸ್ವಭಾವವು ಬಹಳ ಸಿಟ್ಟನದಿದ್ದರೆ, ಕೈಲಾದ ಮಟ್ಟಿಗೆ ಆ ಸಿಟ್ಟು ನುಂಗುವುದಕ್ಕೆ ಯತ್ನಮಾಡಿರಿ (ಮುಂಬಯಿ. ೪-೧೬) ; ಪಾಂಡೂ ಅದನ್ನು ರಾಚಪ್ಪನ ಕಿವಿಯಲ್ಲಿ ಉಸಿರಿದ್ದ. ರಾಚಪ್ಪ ಅದನ್ನೂ ನುಂಗಿದ್ದ (ದೀಪಹ. II, ೧೪೦). ೮. (ಆಲಂ) (ಪರರ ಸ್ವತ್ತು, ಹಣ ಮುಂತಾದುವುಗಳನ್ನು) ಎತ್ತಿ ಹಾಕು ; ಲಪಟಾಯಿಸು ; ತಿಂದು ಹಾಕು : ಆತನಿಗೆ ನಂಬಿಕೆ ಮೇಲೆ ದುಡ್ಡುಕೊಟ್ಟರೆ ಪೂರ್ತಿ ಹಣವನ್ನು ನುಂಗಿಬಿಟ್ಟ (ರೂಢಿ).

ನುಂಗಲಾರದ ಗುಳಿಗೆ = ಸಹಿಸಲಾಗದುದು : ಯಾವ ಸಮಾಜ ವನ್ನು ತಾನು ಗೌರವಿಸುವುದಿಲ್ಲವೂ ಅಂಥ ಸಮಾಜದ ಜನರಿಂದ ಸಹಾಯ ಯಾಚನೆ ಮಾಡುವುದೆಂದರೆ ಅವನಿಗೆ ನುಂಗಲಾರದ ಗುಳಿಗೆಯಾಗಿತ್ತು (ಪುನರು. ೩೩). ನುಂಗಲಾರದ ತುತ್ತು = ೧. ನಿಭಾಯಿಸಲು ಆಗದ ಮಾತು ಅಥವಾ ಕಾರ್ಯ : ಭಾಗೀರಥಿಗೆ ಕಮಲವ್ವನ ಮಾತು ಗಳು ನುಂಗಲಾರದ ತುತ್ತಾದವು (ಭಾರಥಿ. ೧೭). ೨. ಅರ್ಥಮಾಡಿ ಕೊಳ್ಳಲು ಕಷ್ಟವಾದುದು : ಕುಮುದಾ ಅವನಿಗೆ ನುಂಗಲಾರದ ತುತ್ತಾದಳು (ರೂಪಸ. ೧೪೪). ನುಂಗಿಕೊಳು, ನುಂಗಿಕೊಳ್ಳು = ೧. ಎತ್ತಿಹಾಕು ; ಲಪಟಾಯಿಸು : ಎಮ್ಮ ಭಕ್ತರು ಕೊಟ್ಟ ಪಾತ್ರೆಯಂ ಪಿಡಿತಂದು ತಮ್ಮ ವಶದೊಳು ಕೊಟ್ಟು . . . ಇರಿಸಲ್ಕದಂ ಕೊಂಡು ಮೌನದಿಂದಿರ್ದಪರು ಹಿರಿಯರೀ ಪಾತ್ರೆಯಂ ನುಂಗಿಕೊಂಡಿರ್ದಪರು (ತಿರುರ. ದೇ. ೧೬-೬) ; ಕೊಟ್ಟ ಸಾಲವ ನುಂಗಿಕೊಳಲೆಣಿಪರು (ಪುರಂದ. ೧-೨೮-೨). ೨. ಕಬಳಿಸು ; ನುಂಗು : ಏನೇ ! ನುಂಗಿಕೊಳ್ಳುವ ಹಾಗೆ ದುರುಗುಟ್ಟುತ್ತಿರುವೆ ! (ಮಂತ್ರಶ. ೫೫-೧೬). ೩. ಹತ್ತಿಕ್ಕು ; ಅದುಮಿಡು : ತಂದೆಯ ಸಾವಿನ ಘೋರಸಂಕಟವನು ನುಂಗಿ ಕೊಂಡೆನು ಹೇಗೊ ಒತ್ತಿ (ಇಂಚಾಪ. ೨೩-೩) ; ನುಂಗಿಕೊಂಡ ಸಂಕಟ ಬೆಂಕಿಗಿಂತ ಹೆಚ್ಚು (ಪಚಭಾ. ೧೨೧) ; ಇಬ್ಬರೂ ರೋಷವನ್ನು ನುಂಗಿ ಕೊಂಡು ಸುಮ್ಮನಿದ್ದರು (ಒಡೆಕ. ೨೨). ನುಂಗಿ ನೀರ ಹಿಡಿ = ನಾಶ ಮಾಡು ; ಹಾಳುಗೆಡವು : ನನ್ನ ಮಾತು ಕೇಳಿ ಒಂದು ಜೀವಾ ಹೊಡದದ್ದ ಸಾಕು. ಇನ್ನೊಂದು ಜೀವಾ ದಾದಾನದು ; ಅದನ್ನೂ ಒಂದು ನುಂಗಿ ನೀರ ಹಿಡಿದರ ದೇವರ ಮುಂದ ಏನ ಜವಾಬ ಕೊಡೂದೈತಿ ? (ಗ್ರಾಮಾಯ. ೧೩೧). ನುಂಗಿ ನೀರ್ಗುಡಿ, ನುಂಗಿ ನೀರು ಕುಡಿ = ೧. ಸಂಪೂರ್ಣವಾಗಿ ನುಂಗಿಬಿಡು : ಬಿಸು ಗದಿರನ ನುಂಗಿ ನೀರ್ಗುಡಿದಖಿಳರಾಕ್ಷಸಿಯ ಮಸ್ತಕದ ಬೈತಲೆಯ ಅಸಿಯ ಚಂದ್ರಾಂಕಿತವೆಂಬಂತೆ ಸಂಜೆಗೆಂಪೆಸೆದುದು (ಮೋಹತ. ೨೭-೨೨). ೨. ಸಂಪೂರ್ಣ ಹಾಳುಮಾಡು : ಕೆಂಗಿಡಿಗಱಿಯುತ್ತೆ ಪರಿತಂದು ಮದನನ ನುಂಗಿ ನೀರ್ಗುಡಿದುದು (ಮೋಹತ. ೩೮-೨೦) ; ಮೊಗಲ ಸಾಮ್ರಾಜ್ಯವನ್ನು ಅವರು ಎಂದೋ ಕಬಳಿಸಿಕೊಂಡಿದ್ದಾರಲ್ಲದೆ ಪೇಶ್ವೆ ಯರ ರಾಜ್ಯಗಳನ್ನು ನುಂಗಿ ನೀರು ಕುಡಿದಿದ್ದರು (ಪ್ರಬಂಧ. ೫೪). ನುಂಗಿ ನೊಣೆ = ಸಂಪೂರ್ಣವಾಗಿ ಹಾಳುಮಾಡು : ನಾಳೆಯೊ ನಾಡಿದೊ ಕಾಲನ ಧಾಟಿಯವಂ ನುಂಗಿ ನೊಣೆಗುಗುಂ ಶರಣಾರೆಂದಾಳೋಚಂ ಗೆಯ್ಯದೆ ದಿಟಬಾಟಿಂದುಱಿ ಬೆಱಿತು ಬೀಗುವರ್ಗೇಗೆಯ್ವೆಂ (ಶಬ್ದಾನು. ೪೬೪ ವ್ಯಾಖ್ಯಾ).

[ದೇ.॥ ತಮಿ. ನುಙ್ಕು, ನೊಣ್ಕು ; ತುಳು. ನಿಂಗು ; ಕೋತ. ನುಂಗ್ ; ತೊದ. ನುಗ್ ; ಮಲ್ತೊ. ನುಂಗೆ]

ನುಂಗು$_2$ (ನಾ). ಆವರಣ ; ಮುಸುಕು : ನೇರಗುರಿಯನರಸಿ ಕಂಡ ರದ ನೋಡುವೆನು ಇಲ್ಲದಿರೆ ಕಳ್ತಲೆಯ ನುಂಗಿನೊಳಗಾಂ ಸೇರಿ ಅಳಿಸಿ ಪೋಗುವೆನು (ವಿಸೀಗೀ. ೧೯-೨೦).

[<ನುಂಗು$_1$]

ನುಂಗು$_3$ (ನಾ). ೧. ತಾಳೆಜಾತಿಗೆ ಸೇರಿದ ಒಂದು ಬಗೆಯ ಮರ ಮತ್ತು ಅದರ ಕಾಯಿ. ೨. ತಾಳೆ ಕಾಯಿಯೊಳಗಿರುವ ಎಳೆಯ ಕೊಬ್ಬರಿ : ಕಾಯಿ ಹೆಚ್ಚುಕಡಿಮೆ ದುಂಡು . . . ಚಿಪ್ಪಿನೊಳಗಡೆ

ಎಳನೀರು, ಎಳಕೊಬರಿ;ಎಂದರೆ 'ನುಂಗು', 'ತಾಟನುಂಗು' (ಹಸುಹೊ. ೩೩೫). [ದೇ.॥ ತಮಿ. ನುಙ್ಕು ; ಮಲ. ನೊಣ್ಣು ; ತೆಲು. ನುಂಗು]

ನುಂಗುಂಗಣ್ಣು (ನಾ). ಕಬಳಿಸುವಂತೆ ನೋಡುವ ನೋಟ ; ಬಿರುನೋಟ : ಏನೇ ! ನುಂಗಿಕೊಳ್ಳುವ ಹಾಗೆ ದುರುಗುಟ್ಟುತ್ತಿರುವೆ . . . ನುಂಗುಂಗಣ್ಣ ಮೆಳ್ಳವ್ವೆ ! (ಮಂತ್ರಶ. ೫೫-೧೭).

[ನುಂಗು$_1$+ಕಣ್ಣು(<ಕಣ್)]

ನುಂಗುರುಳು 'ನುಣ್ಗುರುಳ್' ನೋ.

ನುಂಗುಹ (ನಾ). ಕಬಳಿಸುವುದು ; ನುಂಗುವಿಕೆ : "ಗೀರ್ಣಃ, ಗಿರಿಃ—೨ ನುಂಗುವಿಕೆ" (ಸಿದ್ಧಾಂತಿ. ೩೫೮); ಇದು ಬಾಯೊಳಗಣ ಹುಣ್ಣು ಹೇವರಿಸಿದ ಮತ್ತೆ ಇನ್ನಾವ ತಾವಿನಲ್ಲಿ ನುಂಗುಹ (ಸಕಪ. ಬಾಬೊಮ್ಮ. ೫೫೯-೨೬ [ನುಂಗು$_1$+ - ಹ$_2$ (< -ಪ$_2$)]

ನುಂಗೊರಳ್ 'ನುಣ್ಗೊರಲ್' ನೋ.

ನುಂಗೊಲೆವಡಿಸು (ಕ್ರಿ). (?) : ತಿಳಮಿಪ್ಪಲಮಾಗಿರೆ ಗೋಜಳದೊಳ್ ಭಾವಿಸಿದ ವಾಕುಚಯ ಬೀಜಮುಮಿಪ್ಪಳಮಾಗಿರೆ ತಿಂದೊಡೆ ನುಂಗೊಲೆವಡಿ(ರಿ)ಸುವ ತುಜಾ ಕೆಜಂಕಿನೆಸಕಂ ಮಾಣ್ಗುಂ (ಲೋಕೋಪ.೯-೧೧೨).

[ನುಂಗೊಲೆ? +ಪಡಿಸು]

ನುಂಚರ 'ನುಣ್ಚರ' ನೋ.

ನುಂಪಡರ್ 'ನುಣ್ಪಡರ್' ನೋ.

ನುಂಪಿಡಿ 'ನುಣ್ಪಿಡಿ' ನೋ.

ನುಂಪಿಸು (ಕ್ರಿ). ಸೊಗಸುಗೊಳಿಸು ; ಮನೋಹರವಾಗುವಂತೆ ಮಾಡು : ಸಂಪಗೆಯೊಳು ಮುಡಿವಾಳ ಬೆರೆದ ಕಂಪ[ಪು] ನುಂಪಿಸೆ ಮನಕುತ್ಸಹವ ಸೊಂಪಾದವಿನಿಯಳಾಲಿಂಗನ ಸವಿಯಂತೆ ಇಂಪುದೋಜುವುದು ಕೇಳ್ವರಿಗೆ (ಅಬ್ಬಲೂ. ೧-೧೪). [ನುಂಪು(<ನುಣ್ಪು)+ -ಇಸು$_3$]

ನುಂಪು 'ನುಣ್ಪು' ನೋ.

ನುಂಪುದೊಡೆ (ನಾ). ನುಣುಪಾದ ತೊಡೆ ; ನಯವಾದ ತೊಡೆ : ನುಂಪುದೊಡೆ ಬಾಳೆಗಳ್ ಪೊಕ್ಕುಳೇ ಕೊಳಂಗಳ್ . . . ತೋರ ಸೋರ್ಮುಡಿ ನವಿಲ್ಗಳಾಗಲಾ ಸತಿಯರೆಂದೆಂಬ ಚೆಲ್ವಿಡಿದ ಜಂಗಮವನಂ ಸ್ಥಾವರವನಕ್ಕೈದುವಂತೆ ವನಮಂ ಪೊಕ್ಕರು (ಚಿಬಪು. ೪೫-೩೪).

[ನುಂಪು(<ನುಣ್ಪು)+ತೊಡೆ$_2$]

ನುಂಪುವಣೆ (ನಾ). ನುಣುಪಾದ ಹಣೆ ; ಚೆಲುವಾದ ನೊಸಲು : ಕೆಂಪೇಜಾದರಳ್ಗಣ್ಣ ಕಡೆಪರೆದ ಕುರುಳಾಂತ ನುಂಪುವಣೆ ಮಸುಳ್ದ ತಿಲಕಂ . . . ಕೆದಜಾದ ನಿಜಾಯ ಸುರತಾಂತೆಯರ್ ದೇವಕಾಂತೆಯರ್ ಬರುತಿರ್ದರು (ಚಿಬಪು. ೧೯-೨೫). 'ನುಣ್ಬಣೆ' ಪರಾ.

[ನುಂಪು (<ನುಣ್ಪು)+ಪಣೆ$_1$]

ನುಂಬೆರಲ್ 'ನುಣ್ಬೆರಲ್' ನೋ.

ನುಂಬೆಳಗು 'ನುಣ್ಬೆಳಗು' ನೋ.

ನುಕಸಾನಿ 'ಲುಕ್ಸಾನು' ನೋ.

ನುಕಸಾನು 'ಲುಕ್ಸಾನು' ನೋ.

ನುಕ್ಸಾನು 'ಲುಕ್ಸಾನು' ನೋ.

ನುಗಿಸು 'ನೂಂಕಿಸು' ನೋ.

ನುಗುತೆ (ನಾ). ಹೊಗುವಿಕೆ ; ಪ್ರವೇಶ : 'ನುಗುತೆಗಂಡಿ' ಪರಾ.

[<ನುಗುಳ್+-ತೆ$_2$]

ನುಗುತೆಗಂಡಿ (ನಾ). ಹೊಗುವ ಕಂಡಿ ; ಪ್ರವೇಶಿಸುವ ಕಂಡಿ : ಒಗುವ ನೆತ್ತರ ಸುರಿವ ಬಾಣದ ನುಗುತೆಗಂಡಿಯ ಮೆಯ್ಯ ಭೀಮನ ಬೆಗಡು ಮೊಳೆತುದು ಗುರುತನೂಭವನೆಚ್ಚನನಿಲಜನ (ಕುಪ್ಯಾಕ. ೩-೨೪). 'ನುಗುಳುಗಂಡಿ' ಪರಾ. [ನುಗುತೆ+ಕಂಡಿ$_1$]

ನುಗುನಾಡು (ನಾ). ಒಂದು ಪ್ರದೇಶದ ಹೆಸರು ; ℙ ಈಗಿನ ಮೈಸೂರುಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನ ನುಗುನದಿ ಹರಿಯುವ ಪ್ರದೇಶ : ಶ್ರೀಮದೆಜಿಪ್ಪೆರಸರ್ ನುಗುನಾಡು ನವಲೆನಾಡುಮಾನಾಳುತ್ತಮಿರೆ (ಎಕ. IV, ಹೆಗ್ಗಡ. ೧೦೩-೫ ; ಸು. 910) ; ಕುಡಿಯರಾಭರಣಂ ನುಗುನಾಡ ರಾಮನೆನ್ದಡೆ ಕಲಿಕಾಲ ಕರ್ಣ್ಣ (ಎಕ. IV, ಹೆಗ್ಗಡ. ೧೮-೬ ; 1057). [? +ನಾಡು]

ನುಗುಳ್, ನುಗುಳು, ನುಗುಟ್ (ಕ್ರಿ). ೧. ಪ್ರವೇಶಿಸು ; ಹೊಗು : "ನುಗುಳ್ — ದ್ವಾರಪ್ರವೇಶೇ" (ಶಮಧಾ) ; ಅಂತು ಸೊಗಯಿಸುವ ವನವೇದಿಕೆಯ ನಾನಾಮಣಿಮಯೂಖಮಾಲಾವಿರಾಜಿ ತೋತ್ತುಂಗತೋರಣದ್ವಾರದಿಂದಂ ನುಗುಳ್ದು ವನವೀಧಿವಿಡಿದು ಬಂದು (ಅಪಿಪು. ೧೩-೧೧ ವ) ; ಮಕರತೋರಣಮಂ ನುಗುಳ್ದು ಪೋಗಿ . . . ಕರುಮಾಡದ ಬಾಗಿಲನೆಯ್ದುವಂದು (ಶಾಂತಿಪು. ೩-೧೯ ವ) ; ಸೊಗಯಿಪ ತಳಿರ್ದೋರಣಮಂ ನುಗುಳುತ್ತುಂ ಪಲರ ಪರಕೆಯಂ ಕೈಕೊಳುತುಂ . . . ಎಯ್ದುದಂ ನನೆಗಣೆಯಂ (ಕಬ್ಬಿಕಾ. ೧೯೮). ೨. ಇಕ್ಕಟ್ಟಾದ ಪ್ರದೇಶದಲ್ಲಿ ನುಸುಳು,—ತೂರು : ಸಂತಸದೆ ಮೈಮಜೆಂದು ಕೂಡೆ ಕುಣಿವಜ್ಜರಿಂ ಅಂತವರ ಕಾಲೆಡೆಗಳೊಳ್ ನುಗುಳ್ವ ಗುಜ್ಜರಿಂ . . . ಕರಮೆ ಕಣ್ಗೆಸೆದುದು ನರೇಂದ್ರಭವನಾಂಗಣಂ (ಅಜಿಪು. ೪-೧೬ ರಗಳೆ). ೩. ನುಣುಚಿಕೊಳ್ಳು ; ತಪ್ಪಿಸಿಕೊಳ್ಳು : ಘನಸ್ಯೂಸನೊಳಬಗೆಯ ಉದ್ದೆಸಮನೆಂತುಂ ತಪ್ಪಿಸುತೆ ನುಗುಳಲ್ ದಾರಿಯೆನಗಾವುದಿನ್ ? (ಬದ್ಧಪ್ರ. ೪೭-೧೦೪೦). **ನುಗುಳು** : ೧. ಮಣಿಮಾಡ ಕುರುಜು ಪತಾಕೆ ವಿಚಿತ್ರತೋರಣಗಳ ನುಗುಳುತೆಯ್ತಂದು (ಭರಚ. ೩೯-೨೭). △ **ನುಗುಟ್** : ೧. ಆರೊವ್ವರಿದರ್ಕ್ಕೆ ವಕ್ರಂ ಬನ್ದಳಿದು ನಡೆಯಿಸೆಮೆನ್ದಡೆ ಸಿರಿವಾಗಿಲಲೆನಿಸೆಟ್ಟು ನುಗುಟ್ದು ಪೋದವನಿತುಮನಳಿದ ಮಹಾಪಾತಕನಕ್ಕುಂ (ಸೌಇಇ. XI-1, ೭೫-೨೫ ; 1042). 'ನುಸುಳ್$_1$' ಪರಾ. [ದೇ.॥ ತಮಿ. ನುಟುವು, ನುಟ್ಕೈ ; ಮಲ. ನುಟಯು, ನೂಳು ; ತುಳು. ನೂರು]

ನುಗುಳಿಸು (ಕ್ರಿ). ತೂರಿಸು ; ನುಸುಳುವಂತೆ ಮಾಡು : ನಿನ್ನ ಸೊಮ್ಮಿನ ಟೀಕಾ ಟಿಪ್ಪಣಗಳನ್ನು ನುಗುಳಿಸಿ ಭಾರಮಾಡಿ ಕ್ಲಿಷ್ಟತೆಗೆ ಕೆಡಹದೆ, ತಕ್ಕ ತೆರದಲ್ಲಿ ಶ್ರುತಪಡಿಸಿಕೊಳ್ಳುತ್ತಿರುವುದು ಅರಿವಾಯ್ತೆ ? (ಬೆಟ್ಟಅ. ೬೬-೧೯). [ನುಗುಳ್+-ಇಸು$_3$]

ನುಗುಳು 'ನುಗುಳ್' ನೋ.

ನುಗುಳುಗಂಡಿ (ನಾ). = ನುಗುತೆಗಂಡಿ : ಹೊಗಿಸಬೇಡಾರುವನು ಕರ್ಣಾದಿಗಳು ಮೊದಲಾಗೆಂದು ದಡ್ಡಿಯ ನುಗುಳುಗಂಡಿಯ ಕಾಹಕೊಟ್ಟನು ತನ್ನ ಬೇಹವರ (ಕುಪ್ಯಾಅ. ೨೧-೧೭) ; ತೆಗಸಬೇಹುದು ತರಣಿಬಿಂಬವ ತಗುಳ್ವ ತಿಮಿರವ ನಿಮ್ಮ ಹಂಗಿನ ನುಗುಳು[ಪಾಠಾಂ. ೪] ಗಂಡಿಯ ನುಸುಳುದಲೆಗನೆ ಮರಳಿ ನೀವು (ಕುಪ್ಯಾಕ. ೧೯-೧೭).

[ನುಗುಳು(<ನುಗುಳ್)+ಕಂಡಿ$_1$]

ನುಗುಳ್ಚು (ಕ್ರಿ). = ನುಗುಳ್ ೨ : "ನುಗುಳ್ಚು—ಸೂಕ್ಷ್ಮದ್ವಾರಪ್ರವೇಶೇ" (ಶಮಧಾ). [ನುಗುಳ್+-ಚು$_1$]

△ **ನುಗುಟ್** 'ನುಗುಳ್' ನೋ.

ನುಗ್ಗಡಿ (ನಾ). ಚೂರು ; ಛಿದ್ರ ; ತುಂಡು : 'ನುಚ್ಚುನುಗ್ಗಡಿ' ಪರಾ. [ನುಗ್ಗು$_4$(<ನುಜುಗು$_2$)+ಕಡಿ$_3$]

ನುಗ್ಗರಿ (ಕ್ರಿ). ಚೂರುಚೂರಾಗಿ ಮಾಡು ; ನಾಶಮಾಡು ; ಪುಡಿಮಾಡು : ಭರದಿ ರಥದ ಚಕ್ರಗೊಂಡು ತಿರುಹುತಿನಜಗೆರಗಿ ಬೊಬ್ಬಿರಿದು ರಥ ತುರಂಗ ನುಗ್ಗರಿದ ನಿಮುಷದೀ (ಅಭಿಕಾ. ೧೫).

[ನುಗ್ಗು$_4$ (<ನುಜುಗು$_2$) + ಅರಿ$_1$]

ನುಗ್ಗರೆ (ಕ್ರಿ). ನಾಶಗೊಳಿಸು ; ಛಿದ್ರಮಾಡು ; ಹಾಳುಮಾಡು : ಇಪ್ಪತ್ತೊಂದು 'ಅಜುಕೆಗಾಳಿಗ'ಗಳಲ್ಲಿ ವಿರೋಧಿರಾಜವಂಶಗಳನ್ನು ನುಗ್ಗರೆದವನೆಂದರೆ ಪರಶುರಾಮನು (ನಾಡೋಜ. ೧೫೯).

[ನುಗ್ಗು$_4$(<ನುಜುಗು$_2$)+ಅರೆ$_1$]

ನುಗ್ಗಾಟ (ನಾ). ಗುಂಪಿನ ಗೊಂದಲದಲ್ಲಿ ನೂಕುತ್ತಾ ಮುಂದೆ ಸರಿಯುವಿಕೆ ; ನೂಕುನುಗ್ಗಲು : ಗುಂಪಿನ ನುಗ್ಗಾಟದಿಂದ ಅವರ ಕಣ್ಣಾಪಲ್ಲವಗಳು ಜಾರುತ್ತಿದ್ದವು (ಬಾಣಿ. ೧೩).

[ನುಗ್ಗು$_1$(<ನುಗ್ಗು$_1$)+ಆಟ]

ನುಗ್ಗಿ 'ನುಗ್ಗೆ' ನೋ.

ನುಗ್ಗಿಸು (ಕ್ರಿ). ಬಲವಂತದಿಂದ ಒಳಹೊಗಿಸು ; ಬಲಾತ್ಕಾರದಿಂದ ನುಗ್ಗುವಂತೆ ಮಾಡು : ಬಸ್ಸಿನಲ್ಲಿ ಕಾಲೂರುವುದಕ್ಕೆ ಸ್ಥಳವಿಲ್ಲದಿದ್ದರೂ ಕಂಡಕ್ಟರು ಒಂದೇ ಸಮನೆ ಜನರನ್ನು ಬಸ್ಸಿನೊಳಕ್ಕೆ ನುಗ್ಗಿಸಿದ (ದೂಷಿ). [ನುಗ್ಗು$_1$ (<ನುಗ್ಗು$_1$)+-ಇಸು$_3$]

ನುಗ್ಗಿಳೆ (ನಾ). ಒಂದು ಬಗೆಯ ಮರ : ಪೂಗ ತಾಕ್ಕಾಗ ಹೇರಳೆ ಹೊಂಗೆ ನುಗ್ಗಿಳಂ ಗನ್ನೇರಳೆ (ಪಿಡ್ಡಕಾ. ೬-೧೬).

[? ಇದು 'ಗುಗ್ಗಿಳ'ಎಂಬುದರ ಅಪಲಿಖಿತವಿರಬಹುದೆ ?]

ನುಗ್ಗು$_1$ 'ನುಗ್ಗು$_1$' ನೋ.

ನುಗ್ಗು$_2$ 'ನುಜುಕು' ನೋ.

ನುಗ್ಗು$_3$ (ನಾ). ನೂಕಾಟ ; ನೂಕುನುಗ್ಗಲು : ನುಗ್ಗಿನಲೆಡೆಗುಡದೆ ನಿಂದು ಮೊನೆಗೊಡಿರನುವಿಂ ಹಿಗ್ಗಿ ಪಬಿಸಾರದಿಂ (ಪಪಾ೯ಸ್ವ. ೬-೩೯).

[<ನುಗ್ಗು$_1$]

ನುಗ್ಗು$_4$ 'ನುಜುಗು$_2$' ನೋ.

ನುಗ್ಗುಗಲ್ (ನಾ). ಚೂರುಚೂರಾದ ಕಲ್ಲು : ಗುಗ್ಗುರಿಗಲ್ಗುಂಡುಗಲ್ಲು ಮೊರಡಿ ಬೆಟ್ಟ ನುಗ್ಗುಗಲ್ಲುದುರೆಗಲ್ಲುಗಳ ಮೊಗ್ಗರದೊಳ್ಕಾಲಾಡಬಾರದು ಬಲುದುರ್ಗವದಿಳೆಗನುರೇಂದ್ರ (ಕುರಾಸಾಂ. ೨೮-೯೬).

[ನುಗ್ಗು$_4$(<ನುಜುಗು$_2$)+ಕಲ್$_3$]

ನುಗ್ಗುಗುಟ್ಟು 'ನುಗುರ್ಗುಟ್ಟು' ನೋ.

ನುಗ್ಗುಗೆಯ್, ನುಗ್ಗುಗೈ (ಕ್ರಿ). ೧. ಪುಡಿಮಾಡು ; ಚೂರುಮಾಡು : ಬೀಯು ಸೊಜ್ಜಿಗೆಯೊಳಂಗರವಳಿಗೆಯುಂ ಮಾಡಿ ಬಳಿಕ ಬೇಯಿಸಿ ನುಗ್ಗುಗೆಯ್ದು ಕರ್ಪುರವುಡಿಯ ತಳಿದು ದೀಪದ್ರಾಕ್ಷಿ ಖರ್ಜೂರ ಪಣ್ಣು ಕೆನೆದುಪ್ಪ ಸಕ್ಕರೆಯನಿಕ್ಕಿ ಪಾಳಿದು ರೊಟ್ಟಿಯ ಮಾಡಿ (ಸೂಪಶಾ. ೧-೧೫೫). **ನುಗ್ಗುಗೈ** : ೨. ಧ್ವಂಸಮಾಡು ; ನಾಶಗೊಳಿಸು : ಸಗರಸುತರೆಲ್ಲರುಂ ಬಗಿದೀ ಪುಹೀತಳವ ಮೊಗವ ಕಂಡವರುಗಳ ನುಗ್ಗುಗೈದರ್ (ಪೆಂಕಾರಾ. ೧-೧೪೪-೫೮).

[ನುಗ್ಗು$_4$(<ನುಜುಗು$_2$)+ಕೆಯ್$_1$]

ನುಗ್ಗುಗೈ 'ನುಗ್ಗುಗೆಯ್' ನೋ.

ನುಗ್ಗುನುರಿ 'ನುಗುರ್ಗುನುಜಿ' ನೋ.

ನುಗ್ಗುನುಸಿ (ನಾ). ಜರ್ಝರಿತವಾದುದು ; ಜೀರ್ಣವಾದುದು ; ಚೂರುಚೂರು ; ಪುಡಿಪುಡಿ : ನೊಸಲ ಪೀಸಕ ನುಗ್ಗುನುಸಿ ಬಂಧಿಸಿದ ಸರಪಣಿ ಹಿಳಿದವಂಬಲದೆಸಕ ನಿಂದುದು ಪಾರ್ಥನೆಚ್ಚನು ವೈರಿಮೋಹರವ (ಕುಸಾ೦ಪ್ರೊ.೬. ೧೦-೩).

ನುಗ್ಗುನುಸಿ ಮಾಡು = ಜರ್ಝರಿತಗೊಳಿಸು: ಧ್ವಂಸ ಮಾಡು; ನಾಶಗೊಳಿಸು : ಮುಗ್ಗಿ ಬೀಳುವ ಪಾಯದಳಪನು ನುಗ್ಗುನುಸಿ ಮಾಡಿದನು ರಕುತದ ನುಗ್ಗಿಯಾದುದು ಶಾಕಿಯರಿಗೆ ಕಳನ ಚೌಕದಲಿ (ಕುಸಾ೦ಳೀ. ೪-೪೬) ; ಹೊದಜ ಹೊರಳಿಸಿ ನುಗ್ಗುನುಸಿ ಮಾಡಿದ ನಖೋಕಾವನದ ಘನಸಂಪದದ ಸೊಗಸಿನ ವಿವಿಧ ಗುಲ್ಮಲತಾನಿತಾನಕವ (ತೊರಂಗಾ. ೫-೪-೪). ನುಗ್ಗುನುಸಿಯಾಗು = ಅಜಗಿಜಿಯಾಗು ; ನಾಶವಾಗು ; ಹಾಳಾಗು : ಮುಂದಿದು ಮುಂದರಗಿರಿ ಪಯೋಧಿಯ ತೆರೆಗಳನು ತುಳಿವಂತೆ ರಿಪುಮೋಹರವನರೆದುದು ನುಗ್ಗುನುಸಿಯಾಯ್ತು ಪಿಳ ತಳತಂತ್ರ (ಕುವ್ಯಾದ್ರೊ.೬. ೩-೧೪) ; ಬಸನಳಿದಳ್ಳೆ ಪೊಯ್ದೆದಯಾಜ್ಞೆ ಮೈ ನುಗ್ಗುನುಸಿಯಾಗಿ ಜಡರು ಕೂಡುವರು (ಧರಜ. ೧೦-೧೩೬) ; ನಿಗ್ಗಪ ದೊಳೀದಿಜಾಯೆ ಕುಲಪರ್ವತಂಗಳುಂ ನುಗ್ಗುನುಸಿಯಪ್ಪುವು (ಚಜಪ. ೨೪-೧೦). [ನುಗ್ಗು$_1$(<ನುಜುಗು$_2$)+ನುಸಿ$_2$]

ನುಗ್ಗುನುಜಿ 'ನುಗುರ್ಗುನುಜಿ' ನೋ.

ನುಗ್ಗುನೆರೆ (ನಾ). ನುಗ್ಗಿ ಬರುವ ಮಹಾಪೂರ ; ಹುಚ್ಚು ಪ್ರವಾಹ : ಅವುದಾ ಪಡೆ ಸೆಣಸಿ ಕೆಡದೆ ಅಣಕಳ್ಪಟ್ಟನೊಡ್ಡುವುದು ತಂದು ? ಆ ನುಗ್ಗುನೆರೆಗಿದಿರ್ ನಿಂದು (ಪಾರಸಿ. ೬-೧೨೬).

[ನುಗ್ಗು$_1$(<ನುಗ್ಗು$_1$)+ನೆರೆ$_6$(<ನೆಜೆ$_2$)]

ನುಗ್ಗುಮೊನೆ(ನಾ). ಯುದ್ಧ ಅಥವಾ ಆಕ್ರಮಣದಲ್ಲಿ ಮುಂದಾಗಿ ನುಗ್ಗಲು ನೇಮಕವಾದ ಸೈನ್ಯ ; ಮುಂಚೂಣಿಯ ದಳ : "ಆಕ್ರಮಣದ ಮುಮ್ಮೊನೆ, ನುಗ್ಗುಮೊನೆ" (Spearhead. ೫೦೪೬).

[ನುಗ್ಗು$_1$(<ನುಗ್ಗು$_1$)+ಮೊನೆ$_2$]

ನುಗ್ಗುವೊಯ್ (ಕ್ರಿ) ಪುಡಿಯಾಗುವಂತೆ ಬಡಿ ; ಹುಡಿಗುಟ್ಟು ; ಧ್ವಂಸಗೊಳಿಸು : ದ್ವೀಪಾಂತರಕೆಯಿಲ್ಲಿಂ ಪೋಗಿಯಾ ರಥನೂಪುರಚಕ್ರವಾಳವನು ವ್ಯಾಪಿಸಿದಾ ವಜ್ರಬರ್ಬರನನು ಕೋಪಾಟೋಪದಿಂದ ನುಗ್ಗುವೊಯ್ದು (ನೇಮಿಸಂ. ೨೬-೪೬).[ನುಗ್ಗು$_4$(<ನುಜುಗು$_2$)+ಪೊಯ್$_1$]

ನುಗ್ಗೆ, ನುಗ್ಗಿ, ನುಗ್ಗೆ (ನಾ). ಟೊಳ್ಳಾದ ಕಾಂಡವನ್ನುಳ್ಳ, ಸಣ್ಣಗೆ ಉದ್ದವಾಗಿ ಬೆಳೆಯುವ ಒಂದು ಬಗೆಯ ಗಿಡ ; ℙ ಇದರ ಸೊಪ್ಪು ಮತ್ತು ಕಾಯಿಗಳನ್ನು ತರಕಾರಿಯಾಗಿ ಬಳಸುತ್ತಾರೆ : ಸಮನಿಸೆ ವಳುಳದ ಬೇರಿಂದವರ್ಕೆ ಮೇಣ್ ಗುಂಜೆ ನುಗ್ಗೆ ಯಜ್ಜಗೆಯೆಂಬಿಂತಿವಱಂದವರ್ಕೆ ಬೇವಿನ ತೊವಱಂ ತೆಗಪಿದೊಡೆ ಕೈಪೆಗೆಟ್ಟನಿದಕ್ಕುಂ (ಲೋಕೋಪ. ೪-೨೫) ; ಎಲವಂ ಪಾದರಿ ಹಾಲೆ ನುಗ್ಗೆ ಸಿರಿಸಂ (ಸೂತ್ರಸು. ೩-೨೩) ; ಪ್ರಳಯಗಾಳಿಯ ತೆಜದಿ ತೆಂಗನು . . . ಎಳೆಯ ನೇಜುಳಿ ನುಗ್ಗೆ ಮಾವನು ಕೋಪದಿಂದುಡಿದ (ಕಾತಿರಾ. ೧೧-೧೪) ; ಸೋರೆ ಬಸಳೆ ನುಗ್ಗೆ[ಪಾಪಾಂ.ನ್ಗಿ]ಕುಯಿಕೀರೆ ನಜುವಲು ಹಜುಹೆ ಮೊದಲಾದ ಹಸುರು ಸೊಪ್ಪ . . . ಉಳ್ಳರಿಸಿ (ಸೂಪಶಾ. ೪-೩೩) ; ಮಂದರಗಿರಿಯನೆತ್ತುವಡೆ ನುಗ್ಗೆಯ ದೊಣ್ಣೆಯಿಂದ ಪಿಸಾಂಟಿಪಡೇಳುವುದೆ (ನೋಚಕ. ೨೯-೩೪). **ನುಗ್ಗಿ** : "ನುಗ್ಗಿಯೆನೆ ಶಿಗ್ರುವಕ್ಕುಂ" (ನುಂಗಾರಾ. ೩೬-೧೩) ; ಸವನಾಗಿ ನುಗ್ಗಿ ಬಜೆ ಸಾಸಿವೆ ಮೂಲಗೆ ಕರಿಯ ಬನ್ನಿ ಎಂಬಿವಿನಿತಜ ಬೀಜವನಾವ ತಕ್ರ ದಿಂದರೆದು ವಿಲೇಪಂಗೆಯ್ಕೆ ಕಳೆಗುಮವು ಗಂಟುಗಳಂ (ಲೋಕೋಪ. ೯-೧೨೬) ; ನುಗ್ಗಿಯುಳ್ಳಿಯೆಂಬಿವನೆಂತುಂ ಮೆಲಲಾಗದೆಂದು ಪೇಟ್ಟಾ ಮುಳಿನಾತ್ಮರ ಮಾತುಗೇಳಲಾಗದು ಚದುರಂ (ಸಪಪ. ೧೪-೧೪೪) ; ನುಗ್ಗಿಯ ಬನಕ್ಕೆ ಗುಬ್ಬಿ ಕೋಗಿಲೆಯೆಂಬಂತೆ (ಧಪಪಾಮ್ಯ. ೭-೨೨೯) ; ಇರೆ ಮುಳ್ಳುಸೌತೆ ನುಗ್ಗಿಯ ನರ ಬೀಜಂ ಸೈಂಧವಾನ್ವಿತಂ ಮೇಣ್ ಕೊತ್ತುಂಬರಿ ತಕ್ರಂ ಕುಡೆ ಗೋಧಿಯ ಗರಳಕ್ಕುಪವಿಷವಿದಲ್ತೆ (ಪಪುಪ. ೨-೧೬೧) ; ತುಲಸಿಯ ನುಗ್ಗಿಯ ತಗ್ಗಿಯ ಬೆಳೆದಾವುಡಲದಗೆಯ . . . ಸೇಕಂಗೆಯ್ಕೆ ಪತ್ರಸೇಕಂ ದಿವ್ಯಂ (ಅತ್ತಪ್ರಾ. ೧೦-೨೧). △ **ನುಗ್ಗೆ** : "ಪೋಚಳಕಃ = ನುಗ್ಗೆಯುಂ, ಬಿಟ್ಟನುಂ" (ಶಾಪಕೃ. ೨೧೩).

ನುಗ್ಗೆಕಾಯಿ, ನುಗ್ಗಿಕಾಯಿ = ನುಗ್ಗೆಯ ಗಿಡದ ಕಾಯಿ : ನುಗ್ಗಿ ಬಾರದವನಿಗೆ ನುಗ್ಗೇಕಾಯಿ ಮದ್ದೇ? (ಗಾಪದ)| ನಮ್ಮ ಮನ್ಯಾಗ ನುಗ್ಗಿಕಾಯಿ ಕಾರಬೇಳಿ ಮಾಡೇನಿ (ಪೆಸ್ಸಹಿಂ. ೬೨). ನುಗ್ಗೆಗಿಡ, ನುಗ್ಗಿ

ಗಿಡ = ನುಗ್ಗೆಯ ಗಿಡ : "ಮಧುಶಿಗ್ರುಃ, ಅಸೌರಕ್ತಃ– ಕೆಂಪುಹುವ್ವುಗಳುಳ್ಳ ನುಗ್ಗೇಗಿಡದ ಹೆಸರು" (ಸಿದ್ಧಾಂತಿ. ೧೧೯); "ಮಧುಶಿಗ್ರು—ನುಗ್ಗೇಗಿಡ" (ಗಂಗಾಮ. ೨೪೯). ನುಗ್ಗೆಮರ = ನುಗ್ಗೆಗಿಡ : "ಶೋಭಾಂಜನಃ, ಶಿಗ್ರುಃ, ತೀಕ್ಷ್ಣಗಂಧಕಃ, ಅಕ್ಷೀಬಃ, ಮೋಚಕಃ—ಜ ನುಗ್ಗೆಮರದ ಹೆಸರು" (ಸಿದ್ಧಾಂತಿ. ೧೧೮); ನುಗ್ಗೇಮರ, ಮೋಚಕಮರ (ಮೈಔಗಿ. ೫೫–೧೦೯೮). ನುಗ್ಗೆಸೊಪ್ಪು, ನುಗ್ಗಿ ಸೊಪ್ಪು = ನುಗ್ಗೆಯ ಎಲೆ : ನುಗ್ಗೆಸೊಪ್ಪಿನ ರಸದಲ್ಲಿ ಮೆಣಸ ಚೆನ್ನಾಗಿ ಸಣ್ಣನಾಗಿ ಅರೆದು ಮಂಡೆಗೆ ಲೇಪಿಸಲು ಮಂಡೆನೋವು ಶಮನವಹುದು (ವೈದ್ಯಸಾ. II, ೧೪೦); ಮೇಲೆ ಕಸಕಸಿಯಗಸಿ ನುಗ್ಗಿಸೊಪ್ಪುಗಳನ್ನು . . . ಬಿಟ್ಟನಾ ಗುರುವರಂ (ಮಹಾವಿ. ೧೧–೬೫).

[ದೇ.॥ ತುಳು. ನುರ್ಗೆ, ನುರಿಗೆ]

ನುಗ್ಗೇಳು (ಕ್ರಿ). ೧. ಚೂರಾಗು ; ಪುಡಿಯಾಗು ; ಹಾಳಾಗು : ಬಿದ್ದುದು ಬಾಣ ಕುಂಭಾಂಡವರೂಥ ನುಗ್ಗೆದ್ದುದು ಪ್ರತಿರಥವಡರಿ ಕದ್ದೊಯ್ಸದೆ ಖಳರಾಯ ತ್ರಿಶೂಲದಿ ಹೆದ್ದೈವವ ಹೇಱಿದನು (ಮೋಹತ. ೪೦–೭೫). ೨. (ಆಲಂ) ಸೋಲು ; ಪರಾಭವಗೊಳ್ಳು : ತಡೆಯದೆ ತಳತಂತ್ರ ನುಗ್ಗೆದ್ದೊಡೆ ಕಟ್ಟಕಡೆಯಲ್ಲಿ ದೊರೆ ಸಿಕ್ಕಬೇಕು (ಮೋಹತ. ೯–೨೬). [ನುಗ್ಗು$_4$(<ನುಱುಗು$_2$) + ಏಳು$_1$(<ಏಟ್$^{ಟ್}_1$)]

ನುಗ್ಗೊತ್ತು 'ನುರ್ಗೊತ್ತು' ನೋ.

ನುಚ್ಚಕ್ಕಿ(ನಾ). ತುಂಡಾದ ಅಕ್ಕಿ; ಕಡಿಯಕ್ಕಿ; ಅಕ್ಕಿಯ ನುಚ್ಚು: ನುಚ್ಚಕ್ಕಿ ಮೊಳೆಯ ಬಲ್ಲುದೆ ಸತ್ತ ಮರ ಎಳಕಬಲ್ಲುದೆ (ಸಿದ್ಧೇಪ. ೧೩೬–೪೦೩); ಅಚ್ಚಕ್ಕಿ ಇದ್ದಾಗ ನುಚ್ಚಕ್ಕಿ ಹಂಗೇನು ? (ಹಳ್ಳಿಯ. ೯೬).

[ನುಚ್ಚು + ಅಕ್ಕಿ$_1$]

ನುಚ್ಚಕ್ಕಿವಲ್ (ನಾ). ಅಕ್ಕಿಯ ನುಚ್ಚಿನಂತಿರುವ ಚಿಕ್ಕಹಲ್ಲು : 'ನುಚ್ಚಕ್ಕಿವಲ್ಲ' ಪರಾ. [ನುಚ್ಚಕ್ಕಿ + ಪಲ್]

ನುಚ್ಚಕ್ಕಿವಲ್ಲ (ನಾ). ಅಕ್ಕಿಯ ನುಚ್ಚಿನಂತಿರುವ ಚಿಕ್ಕ ಚಿಕ್ಕ ಹಲ್ಲುಳ್ಳವನು : ಕುಸಿಗೊರಲಂ, ನುಚ್ಚಕ್ಕಿವಲ್ಲಂ, ಕೆಂದಲೆಯಂ (ಭಾಷಾಭೂ. ೧೩೧ ಉದಾ). [ನುಚ್ಚಕ್ಕಿವಲ್ + –ಅ$_7$]

ನುಚ್ಚು, ನುರ್ಚು (ನಾ). ೧. ಪುಡಿ ; ಚೂರು ; ಕಡಿ : ಮುಗುಳುವಾಳೆಯ ಹೊಡೆಯ ನುಚ್ಚಾ[ಪಾಠಾಂ. ನೂಚಾ]ಗಿ ಕತ್ತರಿಸಿ ಪೊಗರು ಹೋಹಂತೆ ಸುಣ್ಣದ ನೀರಿನಿಂ ಕುದಿಸಿ ತೆಗೆದು ನೀರಂ ಹಿಂಡಿ (ಸೂಪಶಾ. ೪–೬೦). ೨. ಅಕ್ಕಿ, ಜೋಳ ಮುಂತಾದ ಧಾನ್ಯಗಳ ಕಡಿ,—ಒಡಕಲು : "ಕಣಃ, ಕ್ಷುದ್ರತಂಡುಳಃ—ಈ ೨ ನುಚ್ಚು" (ಹಲಾಯು. ೯೫–೪೨೪); ಪಕ್ಕಿಗಳಲ್ಲಿ ತಿಂದುಳಿದ ನೆಲ್ಗಳ ನುಚ್ಚುಗಳಂ ಫಲಂಗಳಂ ಪಕ್ಕದೊಳಿರ್ದ ಗೂಡುಗಳಿನಾಯ್ದೆನಗಿಕ್ಕುವನಟ್ಟಱಿಂದೆ ತಾಂ (ಕಾದಂಪೂ. ೧೩೬); ವೇದಶಾಸ್ತ್ರಾಗಮ ಪುರಾಣಂಗಳೆಂಬುವ ಕೊಟ್ಟಣವ ಕುಟ್ಟುತ್ತ ನುಚ್ಚು ತೌಡು ಕಾಣಿಭೋ (ಮಹಾದೇ. ಬ. ೪೬–೧೦೭); ಇಚ್ಛೆಯನು ಅಱಿದಿತ್ತ ನುಚ್ಚೊಂದು ಮಾಣಿಕವು ಇಚ್ಛೆಯದು ತೀರ್ದ ಬಳಿಕಿತ್ತ ಮಾಣಿಕವು ನುಚ್ಚಿಗೂ ಕಷ್ಟ (ಸರ್ವಜ್ಞ. ೬೩೯); ಕಿಚ್ಚು ನುಂಗುವವ ನುಚ್ಚು ಬಿಟ್ಟಾನೇ ? (ಗಾದೆ). ೩. ಜೋಳ, ಗೋಧಿ ಮುಂತಾದ ಧಾನ್ಯಗಳ ತರಿಯಿಂದ ಮಾಡುವ ಗಟ್ಟಿ ಅಂಬಲಿ; ದೊಗ್ಗ: "ನುಚ್ಚು—ಹುಳ್ಳಂಬಲಿ, ಚೂರು" (ಜಾನಕೋ. ೧೨); ಹಳ್ಳಿಯಲ್ಲಿ ಅನೇಕ ಮಂದಿ ನುಚ್ಚು ತಿಂದು ಕೆಲಸಕ್ಕೆ ಹೋಗುತ್ತಾರೆ (ರೂಢಿ). △ **ನುರ್ಚು** : ೧. ಒದೆಯಿಪುದಿವನುತ್ತಮಾಂಗಮಂ ನುರ್ಚಪ್ಪಂತೆ (ದಶಕು. ೯–೨೩). ೩. ಸುಖಂ ಸಲೆ ಮೊಗ್ಗಾದುದೆ ಭಾವಿಪೊಡೆಲೆಗಳ ನುರ್ಚಂಗೆ ಕೊಳ್ವ ತುಂಬೆಯ ಬಾಡೇ (ಧರ್ಮಾಮೃ. ೬–೧೭೧). ೪. ಅಲ್ಪನಾದವನು ; ತುಚ್ಛವ್ಯಕ್ತಿ: ಸಿಕ್ಕಿದಳಲಾ ಬಹಳಕಾಲಕಿಂದಿನ ದಿನಂ ರಕ್ಕಸರ ಜಯಲಕ್ಷ್ಮಿ ಕವಿವ ನುಚ್ಚುಗಳ ಪೊಯ್ ಮಿಕ್ಕು ಕವಿಕವಿಯೆನುತೆ ಸುರಬಲದ ನಾಯಕರ್ ತಾವಾಗ ಕೂಡೆ ಮಸಗಿ (ಚಿಬಪು. ೪೪–೪೨).

[ದೇ.॥ಮಲ. ನುಚ್ಚು, ನೊಚ್ಚು; ತುಳು. ನೊಚ್ಚು; ಕೊಡ. ನುಚ್ಚಿ; ಕೋತ ನುಚ್; ತೊದ. ನೂಚ್; ತೆಲು. ನೂಚ]

ನುಚ್ಚುಗ (ನಾ). ಅಲ್ಪ ; ನಾಡಾಡಿ : ನುಚ್ಚುಗರ ಸದೆಬಡಿದ ಗರ್ವ (ದೇವೀಮ. ೩–೨೬). [ನುಚ್ಚು + –ಗ$_2$]

ನುಚ್ಚುಗಳ್ಳ (ನಾ). ಅಲ್ಪನಾದ ಕಳ್ಳ ; ಕ್ಷುದ್ರನಾದ ಕಳ್ಳ : "ನುಚ್ಚುಗಳ್ಳ–ಕಿರುಕಳ್ಳ, ತುಡುಗ" (ಜಾನಕೋ. ೧೨).

[ನುಚ್ಚು + ಕಳ್ಳ$_1$]

ನುಚ್ಚುಗುಟ್ಟು (ಕ್ರಿ). ಹುಡಿಗುಟ್ಟು ; ನುಗ್ಗುಮಾಡು ; ನಾಶಗೊಳಿಸು : ಮದಮಂ ಮುಱಿದು ಮಚ್ಚರಮಂ ನುಚ್ಚುಗುಟ್ಟಿ ತಾಪತ್ರಯಕ್ಕೆ ತೆಱಹುಗೊಡದೆ ಹೃದಯಕಮಳಮನೆಡೆಮಾಡಿ (ಮಳರ.ಹ. ೧೨೨–೨೨); ಮಚ್ಚರಿಸಿ ಬಂದವರ ಗಂಟಲ ನುಚ್ಚುಗುಟ್ಟುತ ಖಳರ ನೆಲ್ಲರ ಕೊಚ್ಚಿಯೊಂದೆಡೆ ಸಿಕ್ಕಿ ತಳದಲಿ ಬಡಿದು ಜೀವಿಗಳ ನುಚ್ಚಿನಂದದ ಲಾಯ್ತು ತುಳಿಯಲು (ಸಂಭವ. ೮–೧೧೨); ಮಹಾಮೋಹಾಸುರನ ಮುಸುಡಾ ನುಚ್ಚುಗುಟ್ಟದೆ (ಸಾಳ್ವಭಾ. ೩–೫). [ನುಚ್ಚು+ಕುಟ್ಟು$_1$]

ನುಚ್ಚುಗೂಳು 'ನುಚ್ಚುಗೂಟ್' ನೋ.

ನುಚ್ಚುಗೂಟ್, ನುಚ್ಚುಗೂಳು (ನಾ). ಜೋಳ, ಗೋಧಿ ಮುಂತಾದುವುಗಳ ತರಿಯಿಂದ ಮಾಡಿದ ಗಟ್ಟಿಯಾದ ಅಂಬಲಿ; ದೊಗ್ಗ : ಕಟವೆಯ ಕೂಟುಮಂ ತಿಳಿದುಪ್ಪಮುಮಂ ಬಿಸುಟ್ಟು ನುಚ್ಚುಗೂಟುಮನೆಣ್ಣೆಯುಮನುಣ್ಬನುಮಂ ಬಾಟಿಯ ಪಣ್ಣುಮಂ ಖಂಡಶರ್ಕರೆಯುಮಂ ಬಿಸುಟು ಎಱೆಯ ಮಣ್ಣಂ ಮೆಲ್ವನುಂ . . . ಮರುಳರಲ್ಲದೆ ಚತುರರಲ್ಲರ್ (ಧರ್ಮಾಮೃ. ೧೧–೧೦೦). **ನುಚ್ಚುಗೂಳು**: ನುಚ್ಚುಗೂಳುಣ ಹೊಲ್ಲ ಚುಚ್ಚುಕರ ನೆರೆ ಹೊಲ್ಲ (ಸರ್ವಜ್ಞ. ೧೯೦೨).

[ನುಚ್ಚು + ಕೂಟ್$^{ಟ್}_1$]

ನುಚ್ಚುಗೋಣಿ 'ನುಚ್ಚುಗೋಳಿ' ನೋ.

ನುಚ್ಚುಗೋಳಿ, ನುಚ್ಚುಗೋಣಿ (ನಾ). ಒಂದು ಬಗೆಯ ಗೋಣಿ ಸೊಪ್ಪು : (ಕಿ). **ನುಚ್ಚುಗೋಣಿ** : (ಕಿ).

[ನುಚ್ಚು + ಗೋಳಿ$_1$]

ನುಚ್ಚುದಱಿ (ಕ್ರಿ). ಚೂರು ಚೂರಾಗಿ ಕತ್ತರಿಸು,—ತುಂಡರಿಸು: ತನುವಂ ತಟ್ಟಿಱಿದೆತ್ತಿ ಕುತ್ತಿ ಕಡಿಖಂಡಂಗೆಯ್ದು ಪೊಯ್ದುರ್ಚಿ ತೊಟ್ಟನೆ ನಿಟ್ಟಿಲ್ಗಳನೊಟ್ಟಿ ನುಚ್ಚುದಱಿವುತ್ತುಂ ಚೆಂದದಿಂ ದಂಡಿಪರ್ (ಶಾಂತೀಶ್ವ. ೯–೯೦). [ನುಚ್ಚು + ತಱಿ$_1$]

ನುಚ್ಚುನುಗ್ಗಡಿ (ನಾ). ಚೂರುಚೂರು; ಪುಡಿಪುಡಿ : ಮುಚ್ಚು ಮರೆಯೇಕಿನ್ನು ಪ್ರಾಣವು ಕೊಚ್ಚಿಬಿಡುವನುಯನ್ನುತ ರಾಮನು ನುಚ್ಚು ನುಗ್ಗಡಿ ಮಾಡಿ ಬಿಟ್ಟನು ಅಚ್ಚುತನ ಕರುಣದಲಿ (ಬಾಣಾಕ. ೨೨).

[ನುಚ್ಚು + ನುಗ್ಗಡಿ]

ನುಚ್ಚುನುರಿ 'ನುಚ್ಚುನುಱಿ' ನೋ.

ನುಚ್ಚುನುಱಿ, ನುಚ್ಚುನುರಿ, ನುರ್ಚುನುರಿ, ನುರ್ಚುನುಱಿ (ನಾ). ೧. ಚೂರುಚೂರು ; ತುಂಡುತುಂಡು ; ಪುಡಿಪುಡಿ : ಆತ್ಮೀಯ ವಿದ್ಯಾಗರ್ವಪರ್ವತಮವರ ವಚೋವಜ್ರನಿರ್ಘಾತದಿಂ ನುಚ್ಚು ನುಱಿಯಾಗಿ ಪೋದೊಡೆ (ಅದಿಪು. ೩–೭೫ ವ); ಅಚ್ಚು ಮುಱಿದ ಭಂಡಿಯಂತೆ ನುಚ್ಚುನುಱಿಯಾಗೆ ಬಿರ್ದುದಂ ಮಾಂಸಾಹಾರಿಗಳ್ ಕಂಡು (ಪಂಚತಂ. ೧೫೫–೩); ಬಲ್ಲಿದರಂ ಕಲ್ಲಂ ತಾಗಿದ ಪುಳ್ಳಿಯಂತೆ ನುಚ್ಚು ನುಱಿ ಮಾಡಿ (ಧರ್ಮಾಮೃ. ೭–೯೫); ತೇರ್ಗಳ ಗೊಂದಣಂ ಮುಱಿದು

ಮೆಟ್ಟದ ಕೊಂಬುಡಿದಂತೆ ಬೇಗದಿಂ ನೆರ್ಗನೆ ಬಿಟ್ಟು ನುಚ್ಚುನುಱಿಯಾಗೆ (ಕಬ್ಬಿಕಾ. ೨೭೯) ; ಬಲುಮೆ ಮಿಗೆ ಜಿನಬಸದಿಗಳ ಮೇಲಳವದಿಪ ಶಿಖರಂಗಳಂ . . . ನುಚ್ಚುನುಱಿ ಮಾಡಿ (ಬಸಪು. ೫೧-೭೨) ; ಕೊಚ್ಚಿದರು ನುಗ್ಗಿದರು ಕೊಯ್ದರು ನುಚ್ಚುನುಱಿ ಮಾಡಿದರು ಹರಿಬಕೆ ಹೆಚ್ಚಿ ಹೊಗುವವನೀಶನನುಜರ ಮನ್ನಣೆಯ ಭಟರ (ಕುಮ್ಯಾಅ. ೧೯-೪೬). **೨.** ಅಲ್ಪವಾದುದು ; ಕ್ಷುದ್ರವಾದುದು ; ತುಚ್ಛವಾದುದು : ಬೀಳಹೊಯ್ ಹೊಯ್ ನಾಯ್ಗಳಂ ನುಚ್ಚುನುಱಿಗಳ ಜಾಳಿಸಿದ ಹಂಕಾರಮೇ ಸುರರ ಗಂಟಲಂ ಸೀಳೆನುತೆ ತಾರಕಾಕ್ಷಂ ತನ್ನ ಸೇನೆಯಂ ಕೈವೀಸಿ ಮುಂಬರಿಯಲು (ಚಿಬಪು. ೪೪-೩೧). **ನುಚ್ಚುನುರಿ :** **೧.** ರಾಯ್ಗೊಳ್ಳುದ್ರೇ ಹೋಗಿ ಹೂವ್ವಿಂ ತೋಟವಾ ನುಗ್ಗಿ ಹೂವೆಲ್ಲಾ ನುಚ್ಚೂನುರಿಯಾದೋ (ಹುಟ್ಟಿಹ. ೧೭೮) ; ಇವನೊಬ್ಬ ಧನವಂತ : ಕಳ್ಳನವ ಬಲವಂತ ಕೊಳುವನೆಲ್ಲವ ನುಚ್ಚುನುರಿಯಿರಿಸಿ ತನುವ (ಪಯಣ. ೬೦-೭೧) ; ಆ ಗಂಗೀ ಕೈಯಾಗ ನಾ ಸಿಕ್ಕೆ ಅಂದರ ನನ್ನ ನುಚ್ಚುನುರಿ ಮಾಡತಾಳ (ಗಂಪೂಯಿ. ೨೦೫). **ನುರ್ಚುನುರಿ :** **೧.** ಭೂಕಂಪ ಕಾಲದೊಳ್ ಶಿಬಿರದೌನ್ನತ್ಯದಿಂ ಕಣಿವೆ ಕಿಬ್ಬಿಗುರುಳ್ದು ಬೀಳ್ವ ಪೆರ್ಬಂಡೆ ತಾಂ ತಳ್ಪಲ್ಗಿಡು ಮರಂಗಳಂ ನುರ್ಚುನುರಿಗೆಯ್ದು ನುರ್ಗಿ ಬರ್ಪಂತೆ ಪೋಲ್ ಬಂದಳ್ . . . ತಾಟಕೆ (ತ್ರೀರಾಮಾ. ೩೪-೧೬೨). **ನುರ್ಚುನುಱಿ :** **೧.** ತತ್ಪಣರಾಜಕೇತನನ ವಿಕಟಲಲಾಟಶಿಲಾಪಟ್ಟಮಂ ತನ್ನ ಗದಾದಂಡದಿಂ ನುರ್ಚುನುಱಿ ಮಾಡಲುಂ (ಗದಾಯು. ೬-೧೬ ಪ).

[ನುಚ್ಚು + ನುಱಿ₂]

ನುಚ್ಚುನೂರು 'ನುಚ್ಚುನೂಱು' ನೋ.

ನುಚ್ಚುನೂರ್ಗೆಯ್ (ಕ್ರಿ). ಚೂರುಚೂರಾಗಿಸು ; ಪುಡಿಪುಡಿ ಮಾಡು : ನುಚ್ಚುನೂರ್ಗೆಯ್ವರಶ್ವಧ್ವಜವನೊರ್ಮೊರ್ಮೆ ಪೆಚ್ಚುವರ್ ಗಾಯಗಾಯಕೆ ರಣಾವೇಶದಿಂ ನಿಚ್ಚಟದ ಕಲಿಗಳೆಚ್ಚಾಡಿದರ್ ಹರಿ ಜಲಂಧರರಂದು ಸಂಗರದೊಳು (ಚಿಬಪು. ೨೫-೧೯).[<ನುಚ್ಚುನೂಱು + ಕೆಯ್₁]

ನುಚ್ಚುನೂಱು, ನುಚ್ಚುನೂರು, ನುರ್ಚುನೂಱು (ನಾ). ಚೂರು ಚೂರು ; ಪುಡಿಪುಡಿ : ಗದಾಘಾತದಿಂದೂರುಯುಗ್ಮಂ ಮುಱಿದೆತ್ತಂ ನುಚ್ಚುನೂಱಾಗಿರೆ ಕೆಡೆದನಿಳಾಭಾಗದೊಳ್ ಧಾರ್ತರಾಷ್ಟ್ರಂ (ಪಂಪಭಾ. ೧೩-೯೬) ; ಮದನಾಗ್ನಿಜ್ವಾಲೆಯಿಂ ಮಗ್ಗಿದುದೊ . . . ನಿಶ್ವಾಸಂಗಳಿಂ ಪಾಱುದುದೊ ಕುಸುಮಬಾಣಂಗಳಿಂ ನುಚ್ಚುನೂಱಾದುದೊ . . . ಪೇಟಿಮೆಂಬಂದದೆ ಲಜ್ಜಾಮಗ್ನಗೇನುಂ ನುಡಿ ಪೊಱಮಡದಾಯ್ತು (ಕಾದಂಉ. ೨೯೧); ಸಂನ್ಯಸನಮಂ ಕೈಕೊಂಡ ಮಹಾಪುರುಷನ ಕರ್ಮಂ . . . ವಜ್ರಂ ತಾಗಿದ ಗಿರಿಯಂತೆ ನುಚ್ಚುನೂಱಕ್ಕುಂ (ಧರ್ಮಾಮೃ. ೧೪-೧೦೨) ; ಅಚ್ಚುಡಿದು ಕೀಲ್ಮುಱಿದು . . . ನುಚ್ಚು [ಪಾಠಾಂ. ನುಚ್ಚ, ನುಚ್ಚಂ] ನೂಱಂ ಮಾಡೆ (ಇಹರ. ದೇ. ೪೩-೨) ; ತದ್ವಚೋವಜ್ರಘಾತದಿಂ ಸ್ವಾತ್ಮೀಯವಿದ್ಯಾಮದಮಹೀಧರಂ ನುಚ್ಚುನೂಱಾಗಿ ಭಂಗಿತರಾಗಿ (ಮಹಾನೇ. ೮-೮ ಪ) ; ಬಚ್ಚೆವೋಗದ ರಾಮಬಾಣಂಗಳಂ ನಡುವೆ ನುಚ್ಚುನೂಱಾಗೆ ಕತ್ತರಿಸಿ (ಜೈಮಿಭಾ. ೨೧-೩೪). **ನುಚ್ಚುನೂರು :** ಸುನಂದಳ ಭವಿಷ್ಯ ನುಚ್ಚುನೂರಾಗಿತ್ತು (ದೂಬೆಟ್ಟ. ೫೯) ; ಕೆಳಗುರುಳಿ ಪ್ರಪಾತದಲ್ಲಿ ನುಚ್ಚುನೂರಾಗಬೇಕಿತ್ತು ಅಮರ (ಸಿಡಿಲು. ೮೬). **ನುರ್ಚುನೂಱು :** ಬಳೆಯ ಪೇಱನಾನೆ ಮೆಟ್ಟದಂತೆ ನುರ್ಚುನೂಱಿಪ್ಪಿನಮವುಂಕಿ ಪಿಡಿದಡಸಿ [ಯ]ಗುರ್ವು ಪರ್ವೆ ಬೀಸಿ ಗುಣಣೆಯ ಕಂಭಂಗಳೊಳಂ ಕೇರ್ಗಳೊಳಮಾಸ್ಫೋಟಿಸಿ ತಾಟಿಸಿದಾಗಳ್ (ಪಂಪಭಾ. ೮-೭೬ ಪ) ; ಕಪಟ ವಟು [ಪಟು] ಮನೋಗರ್ವಪರ್ವತಂ ನುರ್ಗಿ ನುರ್ಚುನೂಱಾದುದು . . . ನೆರೆದ ವಿದ್ವದಾಸ್ಥಾಯಿಕೆಯೊಳ್ (ಶಾಂತಿಪು. ೮-೧೪೮) ; ವರ ಪಂಚಾಚಾರ ಚಂಚತ್ಕುಳಿಸದೆ ಮದನೋದ್ಯತ್ಪ್ರತಾ ಪೋಚ್ಚಧಾತ್ರೀಧರಮಂ ಮುಂ ನುರ್ಚು(ನೂ)ಱಿಪ್ಪಿನಮೊಡೆದು (ವರ್ಧಪು. ೧-೩).

ನುಚ್ಚುಂನೂಱಾಗು = ತುಂಡು ತುಂಡಾಗು; ಚೂರು ಚೂರಾಗು: ಪಿಡಿದು ಹಿಂಗಾಲಂ ಪಿಡಿದ ಹಲಗೆ ನುಚ್ಚುಂ ನೂಱಾಗಲ್ಕಡುಪಿಂದಪ್ಪಳಿಸಿ . . . ಹಿಣಿಲಗರುಳನುರ್ಚಿದನು (ಕುಮುರಾ. ೮-೫೧).

[ನುಚ್ಚು + ನೂಱು₂]

ನುಚ್ಚುಬಡಿ (ಕ್ರಿ). = ನುಚ್ಚುಗುಟ್ಟು : ದಂಡದಿಂದೆಸೆವ ಪಲ್ಲಳ ನುಚ್ಚುಬಡಿದೆಲುವ ಖಂಡಿಸುತ ನರವ ತೆಗೆಯಲ್ಕೊಡಂ ಸ್ತುತಿಸುತಿಹ ಮಾಯೆಗಂ ಮಚ್ಚಿ (ಗುರುಚಾ. ೨-೧೫). [ನುಚ್ಚು + ಬಡಿ₁]

ನುಚ್ಚುಮಲ್ಲಿಗೆ (ನಾ). ಒಂದು ಬಗೆಯ ಮಲ್ಲಿಗೆ ಗಿಡ ಮತ್ತು ಅದರ ಹೂವು : ನುಚ್ಚುಮಲ್ಲಿಗೆ ಮಿಠಾಯಿಹೂ ಮೊದಲಾದ ಹೂವುಗಳ ಆಳವಾದ ಬಟ್ಟಲಿಗೆ ಕೈಹಾಕಲು ನೀಳವಾದ ಸೊಂಡಿಲುಳ್ಳ ಹುಳುಗಳೇ ಬೇಕಾಗುವುವು (ಬಾಲಪ್ರ. I, ೪೨೪).

[ನುಚ್ಚು₂ + ಮಲ್ಲಿಗೆ]

ನುಚ್ಚುವಣಲ್ (ನಾ). ಸಣ್ಣ ಕಣಗಳಿಂದ ಕೂಡಿದ ಮರಳು : ಬಿಸಿಲಂ ಬೆನ್ನೊಳಿಕ್ಕಿ ನೀರ್ನೆಟಲನಱಸಿ ಗುಗ್ಗರಿಗಲ್ಲವರಿವರಲ ತಱಿಮೊರಬಿನ ನುಚ್ಚುವಣಲ ನೀರಱಿದು ಪರಿದು ದಿಂಟಿಯ ದರಿಯ ಕುಟಿಯ ಕುತ್ತುಱ ಕುಟಿವಳ್ಳಮಂ ಕಂಡದಱ ಬಟಿವಿಡಿದು . . . ನಡೆವಾಗಳ್ (ಲೀಲಾವ. ೬-೪೨ ಪ). [ನುಚ್ಚು + ಮಣಲ್]

ನುಜುಗು (ಗು). ಅಲ್ಪವಾದ ; ಕ್ಷುಲ್ಲಕವಾದ ; ಸಾಮಾನ್ಯವಾದ: ಗೊಜಗುಟ್ಟುತ್ತೆದ್ದು ಬಿದ್ದಿಳೆಗೆ ಪೊರೆಯಪ್ಪ ಕಡುನುಜುಗುಮನದಜ್ಞಾನಿ ಜನರೆಲ್ಲ ಪಿರಿಯರೆ (ಮದೇಪು. ೩೦-೨೦) ; ನುಜುಗು ನುಸಿಗಳನಾರು ಬಲ್ಲರು (ಅಂಬಿಕಾ. ೧೭ ಪೀಠಿಕಾಸಂಧಿ). [?]

ನುಜ್ಜು 'ನಜ್ಜು₂' ನೋ.

ನುಡಿ₁ (ಕ್ರಿ). **೧.** ಮಾತನಾಡು ; ಹೇಳು ; ಉಚ್ಚರಿಸು : "ನುಡಿ—ವಚನೇ" (ಶಮಭಾ) ; ಪಿತೃಕಳತ್ರಮಿತ್ರಜನಮಂ ಶಾಯ್ವಾನ್ಯತಾಟ್ಟಪ್ಪೊಡೀ ನುಡಿಯಲ್ವೆಟ್ಟುಮೇ (ವಿಕ. III, ಪ್ರೈಸೂರು. ೬-೧೦ ; ಸು. 750) ; ಪದನಱಿದು ನುಡಿಯಲುಂ ನುಡಿದುದನಱಿದಾರಯಲುಮಾರ್ಪರಾ ನಾಡವರ್ಗಳ್ ಚದುರರ್ ನಿಜದಿಂ (ಕವಿಾ. ೧-೩೪) ; ವಿದುರನೆಂಬೀ ತೊಟ್ಟುಟ್ಟಿಯ ಮನೆಯ ಕೂಟೆ ನುಡಿಯಿಸೆ ನುಡಿದೈ (ಪಂಪಭಾ. ೯-೫೮) ; ಶುಕ ಶಾರಿಕಾದಿ ವಿಹಗಪ್ರಕರಂ ಮುಂ ಕೇಳ್ದ ವಚನಮಂ ನುಡಿವುದು ಕೌತುಕಮಲ್ಲದೀಗಳುಂ ಕೌತುಕಮಿಂತಿಂತೇಕೆ ದೇವ ನೀನಱಿಯದುದೇ (ಕಾದಂಪೂ. ೬೪) ; ಆ ಸಮ್ಯಗ್ದರ್ಶನಮಿಲ್ಲದೆ ನಿರಂತರಸ್ಥಾಯಿಯಪ್ಪ ಮುಕ್ತಿಶ್ರೀಯಂ ಪಡೆವೆನೆಂಬಾತಂ . . . ನಾಲಗೆಯಿಲ್ಲದೆ ನುಡಿವೆನೆಂಬ ಪಱುಗೋಲಿಲ್ಲದೆ ತೊಱೆಯಂ ಪಾಯ್ವೆನೆಂಬ ಪಚ್ಚ ಪಸಿಯೆಗ್ಗನಂ ಪೋಲ್ಕುಂ (ಧರ್ಮಾಮೃ. ೧-೬೭) ; ನುಡಿದರೆ ಮುತ್ತಿನ ಹಾರದಂತಿರಬೇಕು ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು (ಒಸವ. ೮೦೨) ; ಕುರುಪತಿ ಕಾಳೆಗದೊಳಸ್ತಮಿಸಿದನೆ ನುಡಿಯಂಜಬೇಡೆಂದ (ಕುಮ್ಯಾಕ. ೧-೧೧). **೨.** ಜಪಮಾಡು ; ಧ್ಯಾನಿಸು : ಪತಿತಪಾವನ ನಮ್ಮ ರತಿಪತಿಜನಕನ ಸತತವು ನುಡಿ ಕಂಡ್ಯ ಸಾಲಿಗೆ (ಪುರಂದ. ೧-೧೮೩-೧). **೩.** ಶಕುನ ಹೇಳು ; ಭವಿಷ್ಯ ನುಡಿ : ಜಯವದೆ ಜಯವದೆ ಈ ಮನೆತನಕೆ ಬಹಳ ಜಯವದೆ ಹಕ್ಕಿ ನುಡಿಯಿತಣ್ಣ (ಪುರಂದ. ೧-೧೮೧-೧); ಶುಭ ನುಡಿಯೆ ಶಕುನದ ಹಕ್ಕಿ (ನಾದಲೀ. ೩-೨). **೪.** (ವಾದ್ಯಗಳು) ಧ್ವನಿ ಹೊರಡಿಸು,—ನಾದ ಹೊಮ್ಮಿಸು,—ದನಿಮಾಡು: ವೀಣೆ . . . ಕೈಲಾಸವೀಣೆ ಮೊದಲಾದ ತಂತಿ ಕಟ್ಟ ನುಡಿವ ವಾದ್ಯವನಱಿವುದು ಪ್ರಸಾದಲಿಂಗದಲ್ಲಿಯ ಗುರುಲಿಂಗ (ಅದನ. ೬-೧೨) ; ಸುರರು

ಹೂಮಳೆಗಱೆದರಾಗಳು ನೆರೆದು ನುಡಿದವು ದೇವದುಂದುಭಿ (ಪ್ರಭುಲೀ. ೬-೨೫); ಕೋಣ ಬಲ್ಲುದೆ ವೀಣೆ ನುಡಿಯುವ ಸುನಾದವನು (ಪುರಂದ. ೨-೪೪-೧). ೫. ಹೀಯಾಳಿಸು; ಅವಹೇಳನ ಮಾಡು; ತಿರಸ್ಕರಿಸಿ ಮಾತನಾಡು; ತೆಗಳು: ನೀನ್ನುಡಿದು ಬರ್ದುಕಿದ್ಯೆ ಪೆಱರೆನ್ನಿದಿರೊಳ್ ನುಡಿದು ಕರ್ಣನಂ ಬರ್ದುಕುವರೇ (ಪಂಪಭಾ. ೧೩-೨೬). ೬. ವರ್ಣಿಸು; ಬಣ್ಣಿಸು; ಬಣ್ಣನೆ ಮಾಡು: ಕಿಚ್ಚಂ ಪೊಕ್ಕುದನೀ ಜಗಮಚ್ಚರಿವಟ್ಟದನೆ ನುಡಿಯುತಿರ್ಪುದು ನಿಚ್ಚ[ಂ](ಇಆ. XX, ೭೦-೧೯೪; ಸು. ೨ನೆಯ ಶತ): ಜಡರೇಂ ನುಡಿವರೊ ಗುಣಭದ್ರದೇವರುಂ ದೇವರುಮಂ (ಚಾವುಂಪು. ೨): ಕಡಲುವರಿವರುಣಾಂಬುಜಲಧಿಗೆ ಬಿಡಿಸಿದವು ಬಿಂಕವನು ಶಿವಶಿಷ ನುಡಿವ ಕವಿ ಯಾರಿನ್ನು ಪಾರ್ಥಕುಮಾರನಾಹವವ (ಕುಸ್ಯಾದ್ರೋ. ೬-೬). ೭. ಭಾಷೆ ನೀಡು; ಮಾತು ಕೊಡು; ಪ್ರತಿಜ್ಞೆ ಮಾಡು: ನರನಿವನು ಮಗನಿದಿರುಗಾಣದೆ ಹಿರಿದನೇಱಿಸಿ ನುಡಿದನಿದ ಪತಿಕರಿಸಬೇಹುದು ನಿನ್ನ ಕರುಣವೆ ಹರಣವೆಮಗೆ (ಕುಸ್ಯಾದ್ರೋ. ೯-೩೧). ೮. ಆಕ್ಷೇಪಿಸು; ಗದರಿಸು: ಜಱವರಯ್ಯಾ ನುಡಿವರಯ್ಯಾ ಕೂಡಲಸಂಗನ ಶರಣರೊಡೆಯರಾಗಿ (ಬಸವ. ೩೩೫); ನಡೆವರಯ್ಯಾ ಒಡೆಯರು ತನುಮನಧನದ ಮೇಲೆ ನುಡಿವರಯ್ಯಾ ಒಂದು ನಿಮಿಷ ಬಾರದಿರ್ದೊಡೆ ಜಱವರಯ್ಯಾ ಒಡೆಯರು ಮನ ಬಂದ ಪರಿಯಲಿ (ಬಸವ. ೩೩೯).

ನುಡಿದಂತೆ ಗಂಡ = ಕೊಟ್ಟ ಮಾತನ್ನು ಉಳಿಸಿಕೊಳ್ಳುವವನು; ಒಂದು ಬಿರುದು: ಸಿನ್ದಕುಳಕಮಳಮಾರ್ತ್ತಣ್ಡಂ ನುಡಿದನ್ತೆ ಗಣ್ಡಂ (ಸೌಇಇ. XI-i, ೯೭-೧೮; 1062); ನುಡಿವಳಿಯನ್ತೆ ನಡೆವಳಿಯೆನಿಸಿದಂ ನುಡಿದನ್ತೆ ಗಣ್ಡಂ ಗುಣಗಳ್ಳ (ಎಕ. VII, ತಿಕಾರಿ. ೧೨೯-೩೯; 1071). **ನುಡಿದು ತಪ್ಪು** = ಕೊಟ್ಟ ಮಾತನ್ನು ಉಳಿಸಿಕೊಳ್ಳದಿರು; ವಚನ ಭಂಗಮಾಡು: ಷಡ್ಗುಣಾಳಂಕಾರಂ . . . ನುಡಿದು ತಪ್ಪದಂ ಶ್ರೀಮತ್[ಕೇ]×[ಕ]ಜ್ಜಂ (ಸೌಇಇ. XI-i, ೨೨-೭; 897); ಅಬ್ರಹ್ಮರಾಕ್ಷಸನಿವಳ ಮಾತಂ ನಂಬಿ ನಂಬುಗೆಯಂ ಕೊಂಡು ಬೆಂಬಱಿಯನೆ ತಗುಳ್ದು ಪೋಪೆಂ ನುಡಿದು ತಪ್ಪಿದೊಡೆ ಪಿಡಿದು ನುಂಗಲಱಿಯದೊನಲ್ಲೆನೆಂದು ರೂಪುಗರೆದು ಪೆಱಪೆಱಗನೆ ಬರುತಿರ್ದಂ (ಸುಕುಮಾ. ೬-೧೭ ಪ); ನುಡಿದು ತಪ್ಪದ ಭಾಷೆ ಬಸವನ ನುಡಿ ಶಿಲಾಶಾಸನವು (ಬಸಪು. ೩೭-೨೫).

[ದೇ.॥ ತಮಿ. ಮಲ. ನೊಟ; ತುಳು. ನುಡಿ; ತೆಲು. ನುಡುಗು, ನೊಡುಗು]

ನುಡಿ$_2$ (ನಾ). ೧. ಮಾತು; ಸೊಲ್ಲು: ನುಡಿಯಂ ಛಂದದೊಳೊಂದಿರೆ ತೊಡರ್ಚಲಱಿವಾತನಾತನಿಂದಂ ಜಾಣಂ (ಕವಿರಾ. ೧-೧೬); ನುಡಿಯಂ ಕಿತ್ತಯ್ಯಂಗಳ್ ಕೇಳ್ದು (ಪಡ್ಡಾರಾ. ೭೯-೨೦); ಅಳ್ಳೆರ್ದೆ ನೊಂದು ಕುಂದುಗುಂ ನುಡಿ ತಡವಕ್ಕುಂ (ಅಪಿಪು. ೧೨-೪೧); ನುಡಿ ಸುರಾಚಳದಿಂನ್ಮಚಳಂ ಪರಾಕ್ರಮಂ ಖರಕರತೇಜದಿಂ ಬಿಸಿದು (ಎಕ. II, ೧೩೩-೨೭; 982); ನಡೆ ಚೆನ್ನ ನುಡಿ ಚೆನ್ನ ಎಲ್ಲಿ ನೋಡಿದಡೆ ಚೆನ್ನ (ಬಸವ. ೭೯೪); ನುಡಿ ಕಿಱಿದು ನಡೆ ಪಿರಿದು ನೋಡೆನ್ನ ಭಕ್ತಂಗೆ (ಅರಿರ. ದೇ. ೧೭೬-೧೩); ನಿಜಮನೋವೃತ್ತಿಗಳೊಳಗೆ ನುಡಿ ಮುಳುಗಿ ತೇನಿದು ಚಿತ್ರವಾಯ್ತು (ಕುಸ್ಯಾಅ. ೮-೫೦); ಮಾಯೆ ತನ್ನಂತೆ ನಡೆಯ ಕಲಿಸಿದಳಂಚೆವಿಂಡಿಗೆ ನುಡಿಯ ಕಲಿಸಿದಳರಗಿಳಿಗೆ (ಪ್ರಭುಲೀ. ೩-೩೨); ಪೊಡೆಯೆಂಬ ನುಡಿ ಶಾಲಿಯ ಬೆಳೆಯೊಳು ಕೊಂಕು ಬಡಕೆಂಬ ನುಡಿಯಾ ನಾಡ ಮಡದಿಯರವಯವಗಳೊಳಲ್ಲದೆ ಬಿಱುನುಡಿಯಿಲ್ಲವೇನ ಬಣ್ಣಿಸುವೆ (ಕಂನವಿ. ೨-೧೪); ಮಲೆಯ ನಾಡಿನಡವಿಯಲ್ಲಿ ಕವಿಯೊರ್ವನೆ ನಡೆಯುವಲ್ಲಿ ನುಡಿಯೆ ಸೆರೆಮನೆ (ಅನಿಕೇ. ೪೨-೪). ೨. ಪ್ರಸಿದ್ಧವಾದ ಮಾತು; ಹೇಳಿಕೆ: ಕಾವ್ಯಂ ಕಲ್ಪಾಂತರಸ್ಥಾಯಿಯೆನಿಪ ನುಡಿ ಸತ್ಯಂ ಕವೀಶಾಧಿಪತ್ಯಂ (ಗಿರಿಕ. ೧-೧೬). ೩. ಗಾದೆ; ನಾಣ್ಣುಡಿ: ಮನಕತದಿಂದೊಂದೊರ್ವರನಿನಿಸನಗಲ್ದಿರ್ದಿರಿನಿಸೆ ನಿಮಗಂ ತಮಗಂ ಮುನಿಸುಂಟೆ ಕಾಯ್ದು ಬೆನ್ನೀರ್ ಮನೆ ಸುಡದೆಂಬೊಂದು ನುಡಿಯವೋಲ್ ಕುರುರಾಜಾ (ಪಂಪಭಾ. ೯-೩೮); ವಸುಧೆಯೊಳು ಪೊಡಮಡಲು ದೇಗುಲಂ ಬಿರ್ದ ನುಡಿ ಪಸರಿಸುವ ನಾಡ ಗಾದೆಯ ತೆಱದಿ (ಸಿದ್ದರಾ. ೧-೨೬). ೪. ಭಾಷೆ; ಪ್ರತಿಜ್ಞೆ: ಎನ್ನ ನುಡಿ ಟಾತಡಾಢಣಮೆನ್ನಂ ಬೆಸಸುವುದು ರಾಜಸೂಯಂ ಬೇಳಲ್ (ಪಂಪಭಾ. ೬-೨೬); ಇವನ ಕೊಂದರೆ ತಂದೆ ಮಿಗೆ ಮೆಚ್ಚುವನೊ ಮುನಿವನೊ ತನ್ನ ನುಡಿ ಸಂಭವಿಸದೆಂಬನೊ ಭೀಮಸೇನನ ಭಾಷೆಗಂಜುವೆನು (ಕುಸ್ಯಾದ್ರೋ. ೫-೪೯); ಸಿಂಧುಜಂ ಶೌಚದೊಳ್ ಕರ್ಣಂ ತಪ್ಪಿಲ್ಲೆಂದೆನಿಪ ನುಡಿಯೊಳ್ . . . ಎಸೆದಂ ಭೂಮಿಕಂದರ್ಪನೆಂದುಂ (ಛಂದೋಂಬು. ೧-೨೪). ೫. ಶಬ್ದ; ಪದ: 'ನುಡಿಗಟ್ಟು' ಪರಾ. ೬. ಮಾತಿನ ಜಾಣ್ಮೆ; ವಾಕ್ಪಟುತ್ವ: ನುಡಿಯುಳ್ಳವರೆಲ್ಲಂ ಮಂತ್ರಿಗಳೇ ಬಂಟರಾದವರೆಲ್ಲಂ ನಾಯಕರೇ ಕಾದುವರೆಲ್ಲಂ ವೀರರೇ (ಧರ್ಮಾಮೃ. ೫-೨೩೯); ನಾಲಿಗೆಯ ವೀರರು ನೀವು ಮೂಢರು ನಾವು ನುಡಿಗಳಲಿ (ಕುಸ್ಯಾಕ. ೧೦-೪೫). ೭. ನಿಂದೆ; ದೂಷಣೆ; ಚುಚ್ಚುಮಾತು: ಶೋಕವಿಮ್ಮಡಿಸಿತ್ತು ಚಿತ್ತವ್ಯಾಕುಳತೆಯಾ ಸತಿಯ ನುಡಿಗಳನೇಕ ಸಾಣೆಯ ಸರಳು ಮುಱಿದವು ನೃಪನ ಹೃದಯದಲಿ (ಕುಸ್ಯಾದ್ರೋ. ೭-೧೮). ೮. ಆಜ್ಞೆ; ಅಪ್ಪಣೆ: ಕೋಪಶಿಖಿತಿಮಿರಾಕ್ಷನಾ ಜಮದಗ್ನಿಮುನಿಪನ ನುಡಿಯನನುಕರಿಸಿ ರಕ್ಷಿಸಿದೆ ರೇಣುಕೆಯನು (ಕುಸ್ಯಾಸ. ೧೪-೧೧೪). ೯. ಭವಿಷ್ಯವಚನ: 'ನುಡಿಯಾಡು' ಪರಾ. ೧೦. [ಸಂಗೀತ] ಹಾಡಿನ ಒಂದು ಭಾಗ,—ಘಟಕ: ಈ ನುಡಿಯಲ್ಲಿ . . . ದ್ರೌಪದಿಯ ವಸ್ತ್ರಾಪಹರಣದ ಪ್ರಸಂಗದ ವಿವರಣೆ ಇದೆ (ಪುರಂದ. ಧಾ. ೩-೩೨೧ ಪರಿ); ಮೊದಲ "ನುಡಿ"ಯನ್ನು ನೋಡಿದರೆ . . . ಪದ್ಮಗಣವೆಂದೇ ಅದನ್ನು ಗಣಿಸಬೇಕು (ಸಮಾಲೋ. ೨೧೬).

ನುಡಿಕೊಳ್ = ಮಾತನಾಡಿಕೊಳ್ಳು: ಲೋಕದವರೆಲ್ಲರುಂ ಕರ್ಣನುಂ ಸೂತಪುತ್ರನೆಂದುಂ ರಾಧಾಕುಮಾರನೆಂದುಂ ನುಡಿಕೊಳುತಿರ್ಪರು (ಭಾರಶಾಂ. ೧-೪).

[<ನುಡಿ$_1$./ತಮಿ. ನೊಟ; ತುಳು. ನುಡಿ; ತೆಲು. ನುಡಿ, ನೊಡಿ]

ನುಡಿಕಂಪು (ನಾ). ಮಾತಿನ ಮಾಧುರ್ಯ; ನುಡಿಯ ಸವಿ: ಒಡವೆಯ ಒಡಲೆಲ್ಲ ಸವಿರೂಪು ನುಡಿಕಂಪು ಮುಟ್ಟುತಟ್ಟಿನೊಳಿದೆ ಭೂಭುವನ (ಮುಕ್ತಕಂ. ೨-೧೩). [ನುಡಿ$_2$+ಕಂಪು]

ನುಡಿಕಟ್ಟು 'ನುಡಿಗಟ್ಟು' ನೋ.

ನುಡಿಕಾರ (ನಾ). [ಸಂಗೀತ] ಗೇಯಾಭಿವ್ಯಕ್ತಿಯನ್ನುಂಟುಮಾಡುವುದು; ಗೇಯವಸ್ತುವನ್ನು ಕಂಠದಿಂದ ಹೊರಸೂಸುವ ಕೌಶಲ,—ಸಾಮರ್ಥ್ಯ; ಪಲುಕು: ಕರ್ನಾಟಕಪದ್ಧತಿಯಲ್ಲಿನ ಸ್ಥೂಲವಾದ ನುಡಿಕಾರಗಳನ್ನು ಕೂಡ ಇಷ್ಟು ಸುಲಭವಾಗಿ ಹಿಡಿಯಲಾರೆವು (ಗಾನಕ. ೫೪). [?./ತೆಲು. ನುಡಿಕಾರ = ಮಾತು, ಮಾತಿನ ಚಮತ್ಕಾರ]

ನುಡಿಕಾರ್ತಿ (ನಾ). ಮಾತುಗಾತಿ; ವಾಕ್ಚತುರೆ: ನಗೆಕಾರ್ತಿ, ನುಡಿಕಾರ್ತಿ, ಬಗೆಕಾರ್ತಿ (ಶಬ್ದಾನು. ೨೦೧ ಪ್ರಯೋ).

[ನುಡಿಕಾಱ (<ನುಡಿಗಾಱ)+-ತಿ$_1$(<-ಇತ್ತಿ)]

ನುಡಿಕಾಱ 'ನುಡಿಗಾಱ' ನೋ.

ನುಡಿಕೆ (ನಾ). = ನುಡಿಕಾರ: ಅಪರೂಪ ಶೈಲಿ, ದ್ರುತಕಾಲದ ವಿಸ್ಮಯಕರ ಮಿಂಚಿನ ವೇಗದ ನುಡಿಕೆಗಳು (ಬಿರ್ಕಾ) ಇವೆಲ್ಲ, ಆಚಾರ್ಯರ ಗಾಯನ ಕೇಳಿದವರಿಗೇ ಅನುಭವವೇ ಹೊರತು ವರ್ಣನೆಗೆ ಎಟುಕುವುದಿಲ್ಲ (ಸಂಗೀಚಂ. ೨೭೮). [ನುಡಿ$_1$+-ಕೆ]

ನುಡಿಕೊಡು 'ನುಡಿಗೊಡು' ನೋ.

ನುಡಿಗ (ನಾ). ೧. ಜ್ಯೋತಿಷ್ಕ; ಜೋಯಿಸ: ನಡೆವಣಿಗ ಗೋಳಾಯ್ಲ ಸೂಳಾಯ್ತಡಪವಳ ಬಳೆಗಾಱ ಕಮ್ಮಱ ನುಡಿಗ ಕುಂಬಱ ಕಂಚುಗಾಱರ ಕೇರಿ ಮೆಱೆದಿಹವು (ಸಾಳ್ವಭಾ. ೨-೮). ೨. ವಾಗ್ಮಿ; ವಾಕ್ಪಟು. [ನುಡಿ$_2$+-ಗ$_2$]

ನುಡಿಗಟ್ಟು, ನುಡಿಕಟ್ಟು (ನಾ). ೧. ಒಂದು ಭಾಷೆಯಲ್ಲಿ ಕೇವಲ ಶಾಬ್ದಿಕ ಘಟಕಗಳಿಂದ ಹೊರಡುವ ಅರ್ಥಕ್ಕಿಂತ ಬೇರೆಯಾದ ಅರ್ಥವನ್ನುಳ್ಳ ಹಾಗೂ ಜನರೂಢಿಯಲ್ಲಿ ವಿಶೇಷಾರ್ಥವುಳ್ಳ ಪದರಚನೆ,—ಪದಪುಂಜ: ಪ್ರಕಟಿಸಿದೆ ನೀನೈಹಿಕಾಮುಷ್ಮಿಕದ ನಡು ಪರುಠವಿಸಿದೊಖ್ಖಾಣಿಕೆಯ ಸೇತುವೊಲಿದರ ನುಡಿಗಟ್ಟಿನ ಸಗಾಢಿಕೆಯ (ಗಿಳಿವಿಂ. ೯೭-೮); ಹಿರಿಯ ಹುಡುಗ ಜನಸಾಮಾನ್ಯದಲ್ಲಿ ಬಳಕೆಯಲ್ಲಿದ್ದ ನುಡಿಗಟ್ಟನ್ನು ಬಳಸಿದನು (ಪುನರು. ೨೮೧); ನುಡಿಗಟ್ಟು ಭಾಷೆಯನ್ನು ಸೋಕಿದ ಎಲ್ಲ ಕಲ್ಪನೆಯ ಹರಹಿನ ಪದರೂಪದ ಚಿತ್ರ (ನಮ್ಮನು. ೪೮). **ನುಡಿಕಟ್ಟು**: ೧. ತನಗೆ ಪರಿಚಿತವಾದ ಕೆಲವೇ ಕ್ರಿಯಾಪದಗಳನ್ನು ಪ್ರತ್ಯಯಗಳನ್ನು ಜೋಡಿಸಿ ಹಲವು ನುಡಿಕಟ್ಟು (Idioms) ಗಳನ್ನು ಮಾಡಲು ಸಾಧ್ಯವಿದೆ (ಬಾಲಪ್ರ. III, ೧೩೧೪). ೨. ವಾದ್ಯದಲ್ಲಿಯ ತಾಳಕ್ಕನುಸಾರವಾದ ನುಡಿತ,—ವಾದನ: ಯಕ್ಷಗಾನದವರು ವಾದ್ಯದ ವಿಚಾರದಲ್ಲಿ ವಿಶೇಷ ಕೃಷಿಮಾಡಿದವರು. ಅವರು ಬಳಸುವ ಮದ್ದಲೆಯ ನುಡಿಕಟ್ಟುಗಳು (ಬಡ್ತಿಗೆ) ತುಂಬ ವಿಸ್ತಾರವಾದುವು (ಯಕ್ಷಬ. ೯೧).

ನುಡಿಗಟ್ಟನಾಟ = ಅಕ್ಷರದ ಗುರುತುಳ್ಳ ಚೀಟಗಳನ್ನಾಯ್ದು ಶಬ್ದಗಳನ್ನು ಜೋಡಿಸಿ ಆಡುವ ಒಂದು ಬಗೆಯ ಆಟ: ನುಡಿಗಟ್ಟನಾಟದಕ್ಕರಚೀಟಯೊಟ್ಟನಲಿ ತಡಕಿ ನಾವಾಯ್ದಾಯ್ದು ನುಡಿ ಜೋಡಿಪಂತೆ ಬಿಡಿಜೀವ ಸಂಗಾತಿಜೀವಗಳನರಸಿ ತಾಂ ಪಡೆದಂದು ಪೂರ್ಣವದು (ಮಂಕುಕ. ೧೮೭). [ನುಡಿ$_2$+ಕಟ್ಟು$_2$]

ನುಡಿಗಡಣ, ನುಡಿಗಡಣೆ (ನಾ). ಮಾತುಗಳ ಸಮೂಹ; ಉಕ್ತಿಗಳ ಸಂಚಯ: ಕಡುದರ್ಪವೇಱುದ ಒಡಲೆಂಬ ಬಂಡಿಗೆ ಮೃಡಶರಣರ ನುಡಿಗಡಣವೇ ಕಡೆಗೀಲು ಕಾಣಾ (ದೇದಾಪ.೧-೨); ತೆಱಹಿಲ್ಲ ತೆಱಹಿಲ್ಲವಯ್ಯಾ ನುಡಿಗಡಣಕ್ಕೆ (ಅಖಂಡೇ. ೩೩೮-೫೦); ನುಡಿಯಲ್ಲಿ ಭಕ್ತಿಯು ನಡೆಯಿಲ್ಲದಿದ್ದರೆ ಕಡೆಮುಟ್ಟದು ಶಿವನೊಲಿವುದು ಸಟೆಯ ನುಡಿಗಡಣವೇಕೆ (ಸಿದ್ಧಪು. ೨೩-೬೬). **ನುಡಿಗಡಣೆ**: ಕೂಡಲಸಂಗನ ಶರಣರ ನುಡಿಗಡಣೆ ಎಲ್ಲಕ್ಕೂ ಅಧಿಕ (ಬಸವ. ೬೧೨); ನುಡಿಗಡಣೆ ತತ್ತ್ವವಿಚಾರ ಭಾಷೆಗಳುಲಿವು ತೂರ್ಯತ್ರಯದ ಘೋಷಣವು (ಬಸಪು. ೪-೫೪).

[ನುಡಿ$_2$+ಗಡಣ$_2$]

ನುಡಿಗಡಣೆ 'ನುಡಿಗಡಣ' ನೋ.

ನುಡಿಗಣ್ಣು (ನಾ). ಹೇಳಬೇಕಾದುದನ್ನು ಸೂಚಿಸುವ ಕಣ್ಣು: ಕಪ್ಪಾಗಿ, ಅಳದಲಿ ಹೊಳಪಿಡುವ ನಿನ್ನ ನುಡಿಗಣ್ಣು, ನಾ ಕಂಡ ಮಿಕ್ಕಾವ ಕಣ್ಣನೂ ಮರೆಮಾಡಿ, ಮುಂದೆ ನಿಲುವುವು ಬಂದು, ನಡುವಿರುಳ ಹೊತ್ತು (ಇಂಗೀತ. ೫೬-೧೪). [ನುಡಿ$_2$+ಕಣ್ಣು (<ಕಣ್)]

ನುಡಿಗಬ್ಬ (ನಾ). ಗದ್ಯಕಾವ್ಯ; ವಚನಕಾವ್ಯ: ಪುಸಿಯನೇವೊಟ್ಟಂಗಮುಸಿರೆಂ. ಈವಗೆಯ ನುಡಿಗಬ್ಬಂ ಮುಂತಿಲ್ಲ ಪಿಂತಿಲ್ಲಮೆಂದಾಯ್ತು (ರಾಮಾಶ್ವ. ೧೬೪-೨೪). 'ಓದುಗಬ್ಬ' ಪರಾ.

[ನುಡಿ$_2$+ಕಬ್ಬ$_1$]

ನುಡಿಗಲ್, ನುಡಿಗಲಿ (ಕ್ರಿ). ಮಾತನ್ನು ಕಲಿ,—ಅಭ್ಯಾಸ ಮಾಡು: ಬಿಡು ಮಿಥ್ಯಾತ್ವಮನಂಜದೆ ಪಿಡಿ ಸಮ್ಯಕ್ತ್ವಮನುದಾರ ಚಿತ್ತದಿನೆಂಬೀ ನುಡಿಯನೆ ನುಡಿದು ಮನಂಬಿಡೆ ನುಡಿಗಲ್ತಂ ಸುಕವಿನಿಕರ ಪಿಕಮಾಕಂದಂ (ಧರ್ಮಾಮೃ. ೭-೧೪); ಗಿಳಿಯೊಡನೋದಿಯೋದಿ ನುಡಿಗಲ್ತು ಮದಾಲಸರಾಜಹಂಸಮಂಡಳಿಯೊಡನಾಡಿಯಾಡಿ ನಡೆಗಲ್ತು . . . ಬಾಲಭಾವದೊಳೆ ಬಾಲಕಿಯರ್ ಬಳೆವರ್ (ಕಾವ್ಯಾವ. ೨೯೦); ಮೃಡದೂಷಕರ ಬಾಯ್ಗಳಂ ಮುದ್ರಿಸುವ ಚೆಲ್ವ ನುಡಿಯೊಡನೆ ನುಡಿಗಲ್ತು (ಪದ್ಮರಾ. ೪-೩೩). **ನುಡಿಗಲಿ**: ಅಲ್ಲಿಗಲ್ಲಿಗೆ ನುಡಿಗಲಿತ ಮಗನಲ್ಲದೇನು ವನಱಾಯಲಾ ನೀನಿಲ್ಲಿ ಒಱತೆಯನಗಿದೊಡಲ್ಲದೆ ಮುನಿಸು ತಿಳಿಯಲ್ಕೆ ಒಲ್ಲನಯ್ಯನು (ಬಸಪು. ೪೭-೨೧); ಒಯ್ಯನೆ ನುಡಿಗಲಿಯಲೆಂದು ಬಂದು ಪುರುಳಿಗಳನಾಳಿಯರಿಂದೆ ತೊಲಗಿಸುತ್ತೆ (ಚಿಬಪು. ೭-೧೪).

[ನುಡಿ$_2$+ಕಲ್$_1$]

ನುಡಿಗಲಿ 'ನುಡಿಗಲ್' ನೋ.

ನುಡಿಗಲಿಸು (ಕ್ರಿ). ಮಾತನ್ನು ಕಲಿಸು; ಮಾತನಾಡಲು ಅಭ್ಯಾಸ ಮಾಡಿಸು: ಕಿಱುಗೂಸುಗಳಂ ನುಡಿಗಲಿಸಿದಂ ತೊದಲ್ನುಡಿ ಪಡೆವಿನೆಗಂ ಪಿತೃಯುಗಕೆ ಕರ್ಣಾಮೃತಮಂ (ಪಂರಾಮಾ. ೧-೭೯); ನುಡಿಗಲಿಸಿ ಮಾಣ್ದುದೇ ಕನ್ನಡವಕ್ಕಿಯನಿಸಲನಂಗನಂ ಕಲಿಸಿದುದೆಂದೊಡೆ ಬಿರಯಿಗೆ ಮುನ್ನಿನ ಭವದಿಡುವಗೆ ಚೂತಾಂಕುರಂ ವಿಷಾಂಕುರಮೆ ವಲಂ (ಮಲ್ಲಿಪು. ೬-೨೮). [ನುಡಿಗಲ್+-ಇಸು$_3$]

ನುಡಿಗಾಱ, ನುಡಿಕಾಱ (ನಾ). ಮಾತುಗಾರ; ಮಾತಿನಲ್ಲಿ ಜಾಣ; ವಾಕ್ಪಟು: ಗರವಟಗರ ಕೊಲ್ಲಾಯ್ತರ ನುಡಿಗಾಱರ ಮಾಸ್ವಾರರ ಸಂದಣಿ ಸಲೆ ಸೊಗಯಿಸಿತು (ಜಯಕಾ.೧೨-೧೯); ಕಟ್ಟಣಕದ ನುಡಿಗಾಱ! ಅಡಿಗಡಿಗೇಂ ಜಱುಚುವಯ್ (ರಾಮಾಶ್ವ. ೯-೨೮). **ನುಡಿಕಾಱ**: ಜಡಿವ ಪಡಿಯಱರ ಸೊಗಯಿಪ ನುಡಿಕಾಱರ ಮೇಳದರಸುಗಳ ಮೆಲ್ಲನೆ ಕೈಗುಡುವ ಸೊಬಗೆಯರ ನೆರವಿಗಳೊಡನೆಟ್ಟಂ(ಕಬ್ಬಿಕಾ.೯೦); ನುಡಿಕಾಱಂ, ಆಟಕಾಱಂ ಮೋಸಕಾಱಂ, ಮುಂಡಕಾಱಂ (ಶಬ್ದಾನು. ೪೨೩ ಪ್ರಯೋ). [ನುಡಿ$_2$+-ಕಾಱ]

ನುಡಿಗಾಱಿಕೆ (ನಾ). ಮಾತುಗಾರಿಕೆ; ವಾಕ್ಚಾತುರ್ಯ: ನರನ ನುಡಿಗಾಱಿಕೆಗೆ ವರ್ಮವ ಧರಿಸಿ ತನ್ನರಸಿಯಳ ನೋಡುತ ಹರನು ಸಂತಸವಡಗಿ ಸತಿಯೇ ಕೇಳಿದೈಯೆನಲು (ಕೃಷ್ಣಾಕಾ. ೨೫-೨೮).

[ನುಡಿಗಾಱ+-ಇಕೆ]

ನುಡಿಗುಂದು (ಕ್ರಿ). ಮಾತು ಅಡಗು; ಮೌನವಾಗು: ಬಿಡು ನಿಜಮನ್ಯುಬಾಷ್ಪಭರಮಂ ನುಡಿಗುಂದುತಮಿಂತು ದುಃಖಮಾಂತೊಡೆ ಕಡೆಗೋಡಿಪೋಗದೆ ಪೊನಲ್ ಪುಗುತರ್ಪ ತಟಾಕದಂದದಿಂದೊಡೆದಪುದಲ್ತೆ ನಿನ್ನ ಸುಮಕೋಮಲಮಪ್ಪೆರ್ದೆ ತಂದೆಯ ತಾಯ ಬಾಟ್ಕೆಯಿಂ (ಕಾದಂಉ. ೫೮೫). [ನುಡಿ$_2$+ಕುಂದು$_1$]

ನುಡಿಗುಡು 'ನುಡಿಗೊಡು' ನೋ.

ನುಡಿಗೆಡಿಸು (ಕ್ರಿ). ಮಾತಿಗೆ ತಪ್ಪು: ಲಂಚಗಾಱನಂತೆ ನುಡಿಗೆಡಿಸದೆ ಏಕಚಿತ್ತದಿಂ ಕೇಳ್ವಿರಪ್ಪೊಡೆ ಪೇಟ್ಡಿಪೆಂ (ಧರ್ಮಾಮೃ. ೧-೮೩).

[ನುಡಿಗೆಡು+-ಇಸು$_3$]

ನುಡಿಗೆಡು (ಕ್ರಿ). ೧. ಮಾತು ಬಾರದಂತಾಗು; ಮಾತಾಡಲು ಅಸಮರ್ಥವಾಗು: ಢಗೆವಡೆದೊಡಲೊಳು ಸ್ಫೋಟಕವೆದ್ದು ನಾಲಗೆ ನುಡಿಗೆಟ್ಟುವೆ ಜೀಯ (ಮೋಹತ. ೯-೧೪). ೨. ಮಾತಿಗೆ ಅತೀತವಾಗು; ನುಡಿಗೆ ಮೀರು: ತಾ ನಡೆವಡೆ ನಡೆಗೆಟ್ಟ ನಡೆಯ ನಡೆಯಬೇಕು, ತಾ ನುಡಿವಡೆ ನುಡಿಗೆಟ್ಟ ನುಡಿಯ ನುಡಿಯಬೇಕು (ಅವಡಂ. ೯೯-೪೪೮). [ನುಡಿ$_2$+ಕೆಡು$_1$]

ನುಡಿಗೇಡು (ನಾ). ೧. ಪರಿಣಾಮವಾಗದಿರುವ ಮಾತು; ವ್ಯರ್ಥವಾದ ಮಾತು: (ಕ). ೨. ಮಾತಿಗೆ ತಪ್ಪುವಿಕೆ; ವಚನ ಭ್ರಷ್ಟತೆ: 'ನುಡಿಗೇಡುಗ' ಪರಾ. [ನುಡಿ$_2$+ಕೇಡು]

ನುಡಿಗೇಡುಗ (ನಾ). ಮಾತಿಗೆ ತಪ್ಪುವವನು ; ವಚನಭ್ರಷ್ಟ : ನುಡಿದ ನುಡಿಗೇಡುಗನ ವಿಪ್ರರ ಮಡುಹಿದಾತನನಮಳಗುರುವಿನ ಮಡದಿಯರಿಗಳುಪಿದನ . . . ವಿಪ್ರರ ಜಡಿದು ನುಡಿದನ ಗತಿಗಳಾಗಲಿ ರಣದೊಳೋಡಿದರೆ (ಕುಸ್ಕಾದ್ರೋ. ೨-೮). [ನುಡಿಗೇಡು+-ಗ$_2$]

ನುಡಿಗೇಳ್, ನುಡಿಗೇಳು (ಕ್ರಿ). ೧. ಮಾತನ್ನು ಕೇಳು,—ಆಲಿಸು : ಇನಿಯನ ಚೆಲ್ವನೀಕ್ಷಿಪ ಸೊಕಂ ನುಡಿಗೇಳ್ವಳಿಪಂ ನಿಮಿರ್ಚದು (ಚಂದ್ರಪು. ೪-೮೨). **ನುಡಿಗೇಳು** : ೨. ಧ್ವನಿ ಕೇಳು : ಅವಗಮೊಡನಾಡಿಯುಂ ನುಡಿಗೇಳಿಯುಂ ಬಿನಯುಂಗೆಯ್ದುಂ ಬೇಟ್ಟುದನಿತ್ತುಂ ಮನ್ನಿಪರುನ್ನತಿಗೆ ಮಿತಿ ಯಾವುದು (ಚಿಕಸಂ. ೭೮-೧೩). ನೊಂದೆನಾ ನುಡಿಗೇಳುತವೆ ಪೂರ್ಣೇಂದುಮುಖಿ ಕೇಳ ತಾಂಡವನ ತಾಯ್ ತಂದೆಗಳ ದನಿದೋಜದಿಳುಹಿದೆನಿಳೆಗೆ ಮರದಿಂದ (ತೊರರಾ. ೨-೫-೨೨).

[ನುಡಿ$_2$+ಕೇಳ್]

ನುಡಿಗೇಳು 'ನುಡಿಗೇಳ್' ನೋ.

ನುಡಿಗೊಡು, ನುಡಿಕೊಡು, ನುಡಿಗುಡು (ಕ್ರಿ). ೧. ಮಾತಿನ ರೂಪಕೊಡು ; ಮಾತಿನಲ್ಲಿ ತಿಳಿಸು ; ಅಭಿವ್ಯಕ್ತಿಪಡಿಸು. ೨. ಮಾತುಕೊಡು ; ಭಾಷೆ ನೀಡು ; ವಚನ ಕೊಡು : (ಕಿ). **ನುಡಿಕೊಡು** : ೧. ಮನಸ್ಸಿನಲ್ಲಿ ಮೊರೆಯುತ್ತಿದ್ದ ಚಿಂತೆಗೆ ನುಡಿಕೊಡಲಾರದೆ ದಾಸರು ಏನೋ ಮೂಕಸಂಕಟಪಡುವವರಂತೆ ಸುಮ್ಮನೆ ನಿಂತುಕೊಂಡರು (ರೂಪಸ. ೧೮). **ನುಡಿಗುಡು** : ೨. ನುಡಿಗುಡದನಿಶಂ ಸುಮ್ಮನೆ ಕೊಡುವ ಮಹಾದಾನಿಯಂತಿರಲಲರೇಜದೆ ಸೊಂಪಿಡಿದಿನಿವಣ್ಣಳ ನೆಲ್ಲರ್ಗೆಡೆವಿಡಿದೀವುತ್ತಮೊಪ್ಪುಗುಂ ಪನಸಕುಜಂ (ಉದ್ಭಟ. ೯-೨೦).

[ನುಡಿ$_2$+ಕೊಡು$_1$]

ನುಡಿಜಾಣ (ನಾ). ಮಾತನಾಡುವುದರಲ್ಲಿ ನಿಪುಣ ; ವಾಕ್ಪಟು : "ನುಡಿಜಾಣನಂ ಸುಮುಖನೆಂಬುದು" (ಹಲಾಯು. ೬೧-೨೧೯) ; ಸೊಬಗಿಯ ಗಾಂಪಿನಂತೆ ನುಡಿಜಾಣನ ಮೋನದಂತೆ ಬಲ್ಲಿದನ ನೋಟದಂತೆ (ಧರ್ಮಾಮೃ. ೮-೯೪) ; ನುಡಿಜಾಣ ನಡೆಜಾಣ ನೆಱೆಜಾಣ . . . ಎನ್ನಂತರಂಗದೊಳಿರು ಜಾಣರೊಡೆಯ ಚಿದಂಬರಪುರುಷಾ (ಭರಚ. ೭-೭೬); ಈ ಲಿಂಗಾರ್ಪಿತ ಸಕೀಲವನಱಿಯದೆ ಬಱಿದೆ ಪ್ರಸಾದಿಗಳೆಂದು ನುಡಿವ ನುಡಿಜಾಣರ ಕಂಡು ನಾಚಿದೆನಯ್ಯಾ (ಅಖಂಡೇ. ೧೭೩-೪೭).

[ನುಡಿ$_2$+ಜಾಣ]

ನುಡಿಜಾಣೆ (ನಾ). ಮಾತನಾಡುವುದರಲ್ಲಿ ನಿಪುಣೆ : ಆಡುವ ಮುಗ್ಧ ಬಾಳಕಿಯರುಂ ನುಡಿಜಾಣೆಯರಾದರೀಗಳಿಂಪೋಡದ ನಿನ್ನ ಮಾತುಗಳ ನಾಡಿಯೆ ಕೇಳಿಸಲೆ (ವರ್ಧಪು. ೪-೩೬). [ನುಡಿ$_1$+ಜಾಣೆ]

ನುಡಿಜಾಣ್ಮೆ (ನಾ). ಮಾತಿನ ಚಾತುರ್ಯ,—ಜಾಣತನ : ವಾಕ್ಚಾತುರ್ಯ : ನುಡಿಜಾಣ್ಮೆಯಲ್ಲ ನೂತನಪುರುಷನ ಕಂಡು ಕಡುಗುವುದಲ್ಲ ನಿನ್ನಾಣೆ ಕಡುಗಾಡಿಕಾಱನವನ ಚೆಲ್ವು ಕೈಸೆಱೆವಿಡಿದುದೆನ್ನಂತರಂಗವನು (ಕುರಾಸಾಂ. ೨೩-೨೧) ; ನುಡಿಜಾಣ್ಮೆ ನಡೆಜಾಣ್ಮೆ ನನಗೊ ದೇವರಿಗೊ ಸಂಗಡದ ಭೂಪರು ಪೇಳಲಿ (ಭರಚ. ೩೯-೧೦೭) ; ನುಡಿಜಾಣ್ಮೆಯಿಂದೆ ಜಯಮಂ ಪಡೆವಳವಂತಿರ್ಕೆ ದೃಷ್ಟಮಂ ತೋರ್ಪಧಟುಳ್ಳೊಡೆ ತೋಱಿ ಗೆಲ್ವುದು (ವೃಷವಿ. ೩೬-೬೧). [ನುಡಿ$_1$+ಜಾಣ್ಮೆ]

ನುಡಿತ (ನಾ). ೧. ಅಭಿವ್ಯಕ್ತಿ ; ಹೇಳುವಿಕೆ ; ನುಡಿಯುವಿಕೆ : ಹೊರಗೊಳಗಣ ನುಡಿತದಲ್ಲಿ ಮಿಂಚೂ ಇದೆ (ಚಿತ್ರಸೃ. ೧ ಮುನ್ನುಡಿ). ೨. (ವಾದ್ಯಗಳ) ಧ್ವನಿ ; ವಾದನಧ್ವನಿ : ಎರಡು ಕೋಲುಗಳಿಂದ ಬಡಿದು ಬಾರಿಸುವ ಚಂಡೆಯು ಇನ್ನಷ್ಟು ಏರಿನ ಧ್ವನಿಯಲ್ಲಿದ್ದು, ಅದರ ನುಡಿತ ಗಾವುದ ದೂರಕ್ಕೆ ಕೇಳಿಸಬಲ್ಲುದು (ಯಕ್ಷಬ. ೯೧).

[ನುಡಿ$_1$+-ತ$_2$]

ನುಡಿತಟ್ಟೆ (ನಾ). ಸಂಗೀತ, ಭಾಷಣ ಮೊದಲಾದುವುಗಳ ಧ್ವನಿ ಸಂಗ್ರಹವಾಗಿರುವ ತಟ್ಟೆ ; ಗ್ರಾಮಫೋನ್ ರೆಕಾರ್ಡ್ : ನಾಟಕ ವಾರಂಭವಾಗುವ ಮೊದಲು ಹಲವು ಚಿತ್ರಗೀತೆಗಳ ನುಡಿತಟ್ಟೆಗಳನ್ನು ಹಾಕಿದ್ದರು (ಅಲಹೂ. ೧೦೯). [ನುಡಿ$_2$+ತಟ್ಟೆ]

ನುಡಿತೆ (ನಾ). ಮಾತು ; ಸೊಲ್ಲು : ಹಿಡಿತೆ ಬಿಡಿತೆಯ ಹೆಚ್ಚು ಕುಂದಿನ ನಡತೆ ನುಡಿತೆಯ ಸ್ಥೂಲ ಸೂಕ್ಷ್ಮದ . . . ಸುಖದಡರುಯಂಡರಿನಲೇಕತೆಯಲೆಡೆಗೊಡುವ ಸಹಜಸಮಷ್ಟಿಕೆಯನುಸುರುವೆನು (ಗಗತಾ. ೧೭-೬).

[ನುಡಿ$_1$+-ತೆ$_2$]

ನುಡಿದಪ್ಪು$_1$ (ಕ್ರಿ). ಮಾತಿಗೆ ತಪ್ಪು ; ವಚನಭಂಗಮಾಡು : ಆಡಿ ನುಡಿದಪ್ಪುವ ರಾಯರ ಗಂಡನಾಹವೋದ್ದಂಡರ ಗಂಡನೆಂಬ ಬಲವುಂ ಬಿರುದಂ ಚಿಕದೇವರಾಯನೊಳ್ ಮಂಡಿತಮಲ್ತೆ (ಅಪ್ರತಿ. ೮-೧೮).

[ನುಡಿ$_2$ + ತಪ್ಪು$_1$]

ನುಡಿದಪ್ಪು$_2$ (ನಾ). ಮಾತಿಗೆ ತಪ್ಪುವುದು ; ವಚನಭಂಗ : ನುಡಿದಪ್ಪಿಗೆ ತಂದೆ ತಾನೇ ಕೊರಲ್ಗೊಯಿಸಿದಪನೆಂದು ನೀಂ ನೊಂದೊಡೆ (ಭಾವಚಿಂ. ೯-೧೫). [ನುಡಿ$_2$ + ತಪ್ಪು$_2$]

ನುಡಿದೂಸಱು (ನಾ). ತೆಗಳಿಕೆಯ ಮಾತು ; ತಿರಸ್ಕಾರದ ನುಡಿ ; ನಿಂದೆ : ಪೊಡೆಯರಲನಂಗನೆಯ ಮನೆಯ ಸತಿಯೆನಲಾಳ್ವ ನುಡಿದೂಸಱಿಂಗಳ್ಕದಾ ರಮಾಕಾಂತೆಯೊಡನೆಡೆವಿಡದೆ ಪಗಲೆ ಪಳ್ಕೆಯೊಳಿರ್ಪನು (ಭಾವಚಿಂ. ೩-೪೭). [ನುಡಿ$_2$ + ದೂಸಱು]

ನುಡಿದೊಡು (ಕ್ರಿ). ಪ್ರತಿಜ್ಞೆಮಾಡು ; ಭಾಷೆತೊಡು : ಅರಿಗನು ಪುತ್ರಮರಣಕಾರಣನಾದ ಜಯದ್ರಥನನ್ನು ಮುಡುಹುವೆನೆಂದು ನುಡಿದೊಡುವುದು (ನಾಡೋಜ. ೨೦೫). [ನುಡಿ$_2$ + ತೊಡು$_1$]

ನುಡಿನಲ್ಮೆ (ನಾ). ಪ್ರೀತಿಯ ಮಾತು ; ನಲ್ನುಡಿ : ಇದು ನುಡಿನಲ್ಮೆಯೆಂಬುದುತ್ತರವಾಕ್ಯಂ ಪೆಱರ ಮನಕ್ಕೆ ನೋವಂ ಪುಟ್ಟಸದ ನುಡಿಹಂ ನಲ್ಮೆಯೆಂಬುದು ತಾತ್ಪರ್ಯಂ (ನೀತಿವಾ. ೨೬-೫೬).

[ನುಡಿ$_2$ + ನಲ್ಮೆ]

ನುಡಿನಿಱಿಗೆ (ನಾ). ಮಾತಿನ ಕ್ರಮ ; ಮಾತಿನ ಹೊಂದಾಣಿಕೆ : ನುಡಿನಿಱಿಗೆಯುಂ ಬೆದಂಕಿ ಪಾರದಂತುಂ, ಇರ್ದಂತೆ ಬಣ್ಣಪೊಂದು ಜಾಣ್ಮೆ ದೊರೆಕೊಳ್ವಂತುಂ . . . ಬಣ್ಣಪೆಂ (ರಾಮಾಶ್ವ. ೮೮-೧).

[ನುಡಿ$_2$ + ನಿಱಿಗೆ]

ನುಡಿಬಿನ್ನಣ (ನಾ). ಮಾತಿನ ಜಾಣ್ಮೆ,—ಚಾತುರ್ಯ : ಎಲ್ಲೆ ರಾಘವ, ನುಡಿಬಿನ್ನಣಂ ಸಾಲ್ಗುಂ ಪಿಡಿ ಎನ್ನೀ ಕೋಯಂಡಮಂ (ಅದ್ಭುತ. ೩೨-೨೪). [ನುಡಿ$_2$ + ಬಿನ್ನಣ (<ಬಿನ್ನಾಣ)]

ನುಡಿಮೇಳ (ನಾ). (ಹಾಡಿಗೆ ಹೊಂದಿಕೊಳ್ಳುವಂತೆ) ನುಡಿಸುವ ಕೊಳಲು, ನಾಗಸ್ವರ ಮುಂತಾದ ವಾದ್ಯ : ಊದಿ ಬಾಱಿಸುವ ನುಡಿಮೇಳ ಮೊದಲಾದುದೇ ಸುಷಿರವೆನಿಸುವದು (ವಿವೇಕ. ೨೫೨).

[ನುಡಿ$_2$ + ಮೇಳ (= ಮೇಲ)]

ನುಡಿಯಾಟ (ನಾ). ಮಾತನಾಡುವಿಕೆ : "ಒಣರನ್", "ಒಣರ್ವೊನ್" ಪಿಡಿದು ನುಡಿಯಾಟಮಿರೆ : ಗೆಯ್ಮೆಯನ್ ಗೆಯ್ದೊರನ್ ತೋಱದೊಡೆ, ಕೇಡನ್ ಅಱಿಲಾಭಮೆಸಗಿದಪುದೆಂಬುದನ್ ನುಡಿವೆ (ಅಂತಿಗೊ. ೧೫-೩೦೧). [ನುಡಿ$_2$ + ಆಟ]

ನುಡಿಯಾಡು (ಕ್ರಿ). ಭವಿಷ್ಯ ಹೇಳು : ಪಲರ್ಮೆ ಸಂದೆಯದೆ ಪಿಥಿಯಸನ ಡೆಲ್ಫಿಗಂ, ಡೊಡೋನದ ನುಡಿಯಾಡುವೋಕಮರಕ್ಕಂ, ಅಟ್ಟದನ್ ದೂತರನ್ (ಬದ್ಧಪ್ರ. ೩೫-೭೪೯). [ನುಡಿ$_2$ + ಆಡು$_1$]

ನುಡಿಯಿಸು, ನುಡಿಸು (ಕ್ರಿ). ೧. ಮಾತನಾಡುವಂತೆ ಮಾಡು ; ಹೇಳಿಸು : ವಿದುರನೆಂದೀ ತೊಟ್ಟುಟ್ಟಿಯ ಮನೆಯ ಕೂಟೆ ನುಡಿಯಿಸೆ

ನುಡಿದೈ (ಪಂಪಭಾ. ೯-೫೮) ; ಲೋಕಪಾಲನಿರುಳ್ ತೂಂಕಡಿಸುವಾಗಳ್ ವಕುಳ ಮಾಲೆಯೆಂಬ ಗೊಜ್ಜೆಯಿಂದೆ ನುಡಿಯಿಸಿ[ಪಾಠಾಂ. ನುಡಿಸಿ]ದೊಡ ರಸನದಂ ಸ್ವಪ್ನಮೆಂದೇ ಬಗೆದು (ಚಾವುಂಪು. ೬೦) ; ಆ ಮನೋಹರಾ ಲಾಪೆಯ ಪ್ರಿಯಾಲಾಪಮೆ ನುಡಿಯಿಸಿದಪ್ಪುದು (ಕಾದಂಉ. ೪೦೪) ; ಮಡಿದೀ ದುಶ್ಶಾಸನನೇಂ ನುಡಿಯಸುವನೊ ಕುರುನರೇಂದ್ರದುರ್ಮರ್ಷಣನೇಂ ನುಡಿಯಿಸುವನೊ (ಗದಾಯು. ೩-೮೧). ೨. ಮಾತಾಡಿಸು: ನುಡಿಯಿಸಿದೊಡೆ ಮತ್ತಿನಿಯಳ್ನುಡಿಯದೆ ಮಱುಮಾತನಶ್ರುವಿಹಿತ ವಿಲೋಕಂ ಜಡಚರಿತಕುಮುದದಳಮೆನೆ ಕಡೆಗಣ್ಣಂ ನೋಡಿದಳ್ ವಯಸ್ಯೆಯ ಮುಖಮಂ (ಅನಂಪು. ೧೨-೬೧). ೩. ವಾದ್ಯವನ್ನು ಬಾರಿಸು ; ನಾದ ಹೊರಡಿಸು : ಗದೆ ಬೀಸುವಂತಲ್ತು ಭೀಮ, ಬಿಲ್ವೆಸನ್ ನುಡಿಯಿಸಲ್ ಬಲ್ಲಂಗೆ ಬಿಲ್ಲೊಂದು, ಮೇಣ್ ಬೀಣೆಯೊಂದು(ಅಶ್ವತ್ಥಾ.೮೩೫).

ನುಡಿಸು : ೨. ನುಡಿಸಿದನೆನ್ನಂ ನಲ್ಲಂ ಬಿಡಿಸಿದನೆನ್ನಂತರಂಗದನುತಾಪಮಂ (ಕವಿರಾ. ೩-೨೩೫) ; ಮನುಷ್ಯಂ ಪೊದಲಾಗಿ ನುಡಿವುದರಿದೆಂದೊಡೆ ಮರನಂ ನುಡಿಸುವುದು ಪರಮಗಹನಂ (ಪಂಚತಂ. ೧೭೨-೧೩) ; ಗರ ಹೊಡೆದವರ ನುಡಿಸಬಹುದು ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ (ಬಸವ. ೧೩೨) ; ಜಡನಂ . . . ಅನಿಷ್ಟಂ ಮಾಟ್ಪನಂ ನೋಡಿಯುಂ ನುಡಿಸಲ್ ಸುಜನರೊಲ್ವರೇ (ಸೋಮೇಶ.೧೯) ; ಮುಟ್ಟಬಾರದು ನೋಡಬಾರದು ನುಡಿಸಲರಿದು ಪಿಡಿದು ಬಿಟ್ಟಡೆ ತುಪ್ಪದ ಕೊಡನ ಮೇಲಲ್ಲದೆ ಬೀಳಂ (ನಂಬಿರ. ೬-೫೦) ; ನುಡಿಸೆ ತಲೆವಾಗಿದನು ಲಜ್ಜೆಯ ಝುಡಿತೆಯಲಿ (ಕುಪ್ಯಾಅ. ೮-೫೧). ೩. ದುರಪದವನೊಯ್ಯನೆ ಮಿಡಿಸು ಲಿಂಗಾದೇವಿ ಕೊಳಲಂ ನುಡಿಸು ಚಂಗಳೆ ತಾಳಧರಿ ನೀನಾಗು ಭೋಗಾಯಿ (ಬಸಪು. ೧೨-೪೨) ; ನುಡಿಸು ನಿಸ್ಸಾಳವನು ಕರೆ ಹೊಂಗೊಡನ ಹಿಡಿದೈತರಲಿ ನಾರಿಯರೆಡಬಲನು ತೆಜಹಾಗಲಿಕ್ಕಲಿ ಸಿಂಹವಿಷ್ಟರವ (ಕುಪ್ಯಾದ್ರೋ. ೧-೩೭) ; ಮಣಿಖಚಿತ ಕಾನಕದ ದಂಡಿಗೆಯ ನುಡಿಸುತ್ತ ಪೊಸತಾನಮಾನ ಗಂಧರ್ವಕಿನ್ನರಸತೀಸಂಕುಳದ ಗಾನವಂ ಕೀಳ್ಪಡಿಸಲು (ಸೌಂದಪು. ೮-೪) ; ನಾಲಗೆ ಕುಡುಹು ಶರೀರವೆ ವಾದ್ಯ ನಿರಾಳಾತ್ಮನೇ ವಾದ್ಯಕಾಱ ತಾಳಿ ನುಡಿಸುತಿರ್ದು ಬಿಟ್ಟು ಹೋದರೆ ದೇಹ ಡೋಳಿನಂದದೊಳು ಬಿದ್ದಿಹುದು (ಭರಚ.೧-೧೧೩) ; ವೀಣೆಯಿಂ ಗಾನಮಂ ನುಡಿಸುವಂದದೊಳೆನ್ನ ವಾಣಿಯಿಂ ಕವಿತೆಯಂ ಪೇಳಿಸಿದಂ (ಜೈಮಿಭಾ. ೧-೮) ; ವೀಣೆಯಲ್ಲಿ ತಾನ ನುಡಿಸಲು ಸುವ್ಯವಸ್ಥೆ ಮಾಡಿದರು . . . ದೊಡ್ಡಸುಬ್ಬಣ್ಣನವರು (ಸಂಗೀಚಂ. ೯೦). ೪. ಬಿಲ್ಲಿನ ತಿರುವನ್ನು ಮೀಟ ಧ್ವನಿಮಾಡು : ಟೇಂಕಾರಮಾಡು : ಸಾಯಲಂಜುವಡಿಳುಹು ಧನುವನು ನೋಯಿಸೆನು ನುಡಿಸಿದಡೆ ಕೌರವರಾಯನಾಣೆ ನೃಪಾಲ ಕೇಳೆ ನುತೆಚ್ಚನಾ ಕರ್ಣ (ಕುಪ್ಯಾಕ. ೧೧-೪೭). [ನುಡಿ$_2$ + -ಇಸು$_3$]

ನುಡಿಯುಡುಗು (ಕ್ರಿ). ಮಾತು ಬಾರದಂತಾಗು ; ಸೊಲ್ಲು ಉಡುಗು : ಹರಿಮುಖಸುರರ್ ಭೀತಿಯಿಂ ನುಡಿಯುಡುಗಿ ಧೂಮಕರ ನನೀಕ್ಷಿಸೆ (ಪದ್ಮರಾ. ೧೦-೨೨೧). [ನುಡಿ$_2$ + ಉಡುಗು$_1$]

ನುಡಿಲಿಂಗ (ನಾ). [ವೀಶೈ] 'ಮಾತನಾಡುವ ದೇವರು ; ಜಂಗಮ : ಲಿಂಗದಲ್ಲಿ ದಿಟವನಱಸುವರೆ ಜಂಗಮವ ನೆಱೆ ನಂಬುವುದು ನಡೆಲಿಂಗ ನುಡಿಲಿಂಗ ಮುಖಲಿಂಗವೆಂದೇ ನಂಬೋ (ಬಸವ. ೪೨೭).

[ನುಡಿ$_1$ + ಲಿಂಗ]

ನುಡಿವಕ್ಕಿ (ನಾ). ಮಾತನಾಡುವ ಪಕ್ಷಿ ; ಗಿಳಿ : ನುಡಿವಕ್ಕಿ ರನ್ನನೀ ಬಾರೆಂದವ ಮೈದಡವಿ ದಾಡಿಮ ತನಿವಣ್ಣ ಕುಡುಕಿತ್ತು ಮುಂಗೈಯ್ಯಲಿ ಕುಳ್ಳಿರಿಸಿಕೊಂಡೊಡನುಸುರಿದನಿಂತೆಂದು (ಜೀವಂಸಾಂ. ೧೨-೫೫) ; ನಡೆವಕ್ಕಿಯ ನಲ್ಮೆಯ ಪೊಣರ್ವಕ್ಕಿಯ ನುಡಿವಕ್ಕಿಯ ಬೆಳುದಿಂಗಳ ಹಕ್ಕಿಯ ನಿಡುಗಣ್ಣಱವಕ್ಕಿಯ ಬಳಗಂ ಬಳಸಿದುದಾ ನೃಪಸತಿಯ (ಜಯಕಾ. ೨-೧೮) ; ನಡೆವಕ್ಕಿ ನುಡಿವಕ್ಕಿ ಕೊಳರ್ವಕ್ಕಿ ಪೊಣರ್ವಕ್ಕಿ ಪಡಿಯಱವಕ್ಕಿ ಕೇಳಿಸುವ ಗೆಡೆವಕ್ಕಿ . . . ಬನದೊಳಿರುತಿಹವು (ಕುರಾಸಾಂ. ೨-೩೧) ; ಮೈವಾಗಿ ಕೆಲಕೊಲೆದ ಕಱವಣ್ಣಂ ಕೊಕ್ಕಿಂ ಕುರ್ಕಿ ಸೀಯೆನೆ ಸವಿವ ನುಡಿವಕ್ಕಿಗೊಂದಣದಿಂ . . . ಬನಂ ಮನಂಗೊಂಡುದು (ರಾಮಾಶ್ವ. ೫೪-೮). [ನುಡಿ$_1$ + ಪಕ್ಕಿ$_1$]

ನುಡಿವಡೆ (ಕ್ರಿ). ೧. ಸ್ವರ ಹೊರಡಿಸು ; ಶಬ್ದಮಾಡಲು ಶಕ್ತಿ ಹೊಂದು : ಕಾಕಾಲಯದೊಳಗೊಡಲಂ ಪೊರೆದುಂ ಮೆಯ್ಮಸಿವಣ್ಣಮನಾಂತನವರತಂ ನುಡಿವಡೆಯದೆ ಪಿಕಮಿರ್ದುವು ಧರೆಯೊಳು (ಜಯಕಾ. ೩-೫೪). ೨. ಮಾತಿನ ರೂಪವನ್ನು ಪಡೆ : ತೊಳೆದ ಬಗೆಯಿಂದೆದ್ದು ನುಡಿವಡೆದು ಬರೆಹದಿಂ (ಕಾಲೂರ.೧೯೨-೪೩೮). [ನುಡಿ$_2$+ಪಡೆ$_1$]

ನುಡಿವಲ್ಮೆ (ನಾ). ಮಾತಿನ ಶಕ್ತಿ,—ಪ್ರೌಢಿಮೆ; ವಾಕ್ಚಾತುರ್ಯ: ಜಡಜನಮುಮೆಲ್ಲವೋದಂ ತಡೆಯದೆ ಕಲ್ಗುಂ ಗುರೂಪದೇಶ ಕ್ರಮದಿಂ ನುಡಿವಲ್ಮೆಯಲ್ತದೇಂ ಕಲ್ತೊಡನೋದುವುದಲ್ತೆ ಗಿಳಿಗಳುಂ ಪುರುಳಿಗಳುಂ (ಕವಿರಾ. ೧-೧೦). [ನುಡಿ$_2$ + ಬಲ್ಮೆ]

ನುಡಿವಳಿ (ನಾ). ೧. ಹೇಳುವಿಕೆ; ಮಾತನಾಡುವಿಕೆ ; ಅಭಿವ್ಯಕ್ತಿಗೊಳಿಸುವಿಕೆ. ೨. ಮಾತನಾಡುವ ಕ್ರಮ ; ಮಾತಿನ ರೀತಿ,—ಧಾಟಿ : ಗಿಳಿಯಂ ಸೋವೆಳೆಯಳ ನುಡಿವಳಿಯಿಂದೆ ವಿಕಾಸಮಾದ ಟಾಯ್ದೆಱೆಗಂಡಂದೆಳಸುತ್ತಿರ್ಪುವು ದಾಡಿಮಫಳಬೀಜಂಗೆತ್ತು ದಂತಕುಳಮಂ ಗಿಳಿಗಳ್ (ಗಿರಿಕ. ೨-೧೭) ; ಸಂದೇಹಕ್ಕೆ ಎಳ್ಳಷ್ಟೂ ಇಂಬು ಹೊರೆಯದಂತೆ ತಮ್ಮ ನುಡಿವಳಿ, ನಡೆವಳಿಯನ್ನಿಡುವುದು ಅವರ ಕರ್ತವ್ಯವಾಗಿದೆ (ಯಕ್ಷಪ್ರ. ೭೫) ; ಹಳೆಯ ನುಡಿವಳಿ—ಹೊಸ ನಡೆವಳಿಗಳನ್ನು ಬೆಸೆದು ಹೊಸಬಗೆಯಲ್ಲಿ ಚೆಲುವನ್ನು ಕಂಡು ಸೊಂಪನ್ನು ಉಂಡು ಕಾಲೂರ ಚೆಲುವೆಯನ್ನು ಬರೆದೆನು (ಕಾಲೂರ. ೪ ಬರೆದವನ ನಾಲ್ಕು ಮಾತು). ೩. ಪ್ರತಿಜ್ಞೆ; ಭಾಷೆ ; ವಾಗ್ದಾನ ; ಕೊಟ್ಟ ಮಾತು : ಗಾಂಗೇಯಂ. . .ತನ್ನ ನುಡಿದ ನುಡಿವಳಿಯೆಂಬ ಪ್ರಾಸಾದಕ್ಕಧಿಷ್ಠಾನಂ ಗಟ್ಟುವಂತೆ ಚಿತ್ರಾಂಗದಂಗೆ ಪಟ್ಟಮಂ ಕಟ್ಟ (ಪಂಪಭಾ. ೧-೭೨ ಪ); ಮುನ್ನ ಮನುಷ್ಯಗತಿಯೊಳ್ಪುಟ್ಟದರಂ ಮತ್ತಿನವರ್ ಪ್ರತಿಬೋಧಿಸುವುದೆಂದು ಕೃತಪ್ರತಿಜ್ಞರುಮಾದರಿದನಱಿದು ನುಡಿವಳಿಗೆ ತಕ್ಕಂದದೊಳ್ ನೆಗೞ್ವುದು (ಚಾವುಂಪು. ೨೦೧) ; ನೀಂ ನಿನ್ನ ನುಡಿದ ನುಡಿವಳಿಯಂ ನೆಱಪಿದೆ ನಿನ್ನ ನನ್ನಿ ನಿನ್ನಯ ಮೆಯ್ಯೊಳ್ ಸನ್ನಿದಮಾದುದು ಪೋಗು (ಸುಕುಮಾ. ೭-೨೬) ; ನುಡಿಮಾ ತತ್ವದ ಮಾತಂ ಬಿಡಲಾವ್ × × ಏನುವಂ ನುಡಿವಳಿಯನ್ತೆ ನಡೆವಳಿಯೆನಿಸಿದಂ ನುಡಿದನ್ತೆ ಗಣ್ಡಂ ಗುಣಗಳ್ಳ (ಎಕ. VII, ತಿಕಾರಿ. ೧೨೯-೩೯ ; 1071); ನುಡಿದ ನುಡಿವಳಿ ಸಂದುದೇ ನಿಮ್ಮಡಿಗಳಿಗೆ (ಕುಪ್ಯಾದ್ರೋ. ೧೩-೬೨) ; ನಾಮೀರ್ವರೊಳಗೆ ಮುನ್ನ ಮಾನವಗತಿಗೆ ಬಂದವರ್ಗೆ ಈ ನಾಕದೊಳಗಿರ್ದವರು ಬೋಧಿಸುವುದೆಂಬೀ ನುಡಿವಳಿಯುಂಟಪ್ಪುದು (ಶಾಂತೀಚ. ೩-೮೪) ; ಕರ್ಣನು ತಾನು ಕುಂತಿಗೆ ನುಡಿದ ನುಡಿವಳಿಯನ್ನು ನೆನೆದು ಪುರಿಗಣೆಯ ದೊಣೆಗೆ ಕೈಯಿಡದೆ ರೌದ್ರಶರದ ದೊಣೆಗೆ ಕೈನೀಡಿದನು (ಭಾಮಣಿ.೩೨). 'ನಡೆವಳಿ$_1$' ಪರಾ.

[ನುಡಿ$_1$+-ವಳಿ$_1$]

ನುಡಿವಳಿಕಾಱ (ನಾ). ಒಳ್ಳೆಯ ಮಾತುಗಾರ ; ವಾಕ್ಪಟು : ಕಾಱಕ್ಕೆ—ನಡೆವಳಿಕಾಱಂ, ನುಡಿವಳಿಕಾಱಂ . . . ಬಗೆಕಾಱಂ (ಶಮದ. ೧೯೯ ಪ್ರಯೋ). [ನುಡಿವಳಿ+ -ಕಾಱ]

ನುಡಿವಳಿಕೆ (ನಾ). ಮಾತಿನ ರೀತಿ,—ಕ್ರಮ : ಕೃತಿಯು ಏನಾದರೂ ನುಡಿವಳಿಕೆ ; ಚಾರಿತ್ರ್ಯವು ನಡೆವಳಿಕೆ. ನುಡಿವಳಿಕೆಯು ಅತ್ಯುಚ್ಚವಾಗಿ ನಡೆವಳಿಕೆಯು ಅದರ ಕನ್ನಡಿಯಂತಿದ್ದರೆ, ಆ ಮನುಷ್ಯನು ಸಾಧುವೆಂದೆನಿಸಿಕೊಳ್ಳುವನು (ಸಾಹಿಸಂ. ೨). [ನುಡಿವಳಿ+-ಕೆ]

ನುಡಿವಳ್ಳ 'ನುಡಿವಾಳ' ನೋ.

ನುಡಿವಟಿ ? (ನಾ). (?): ನಂಬಿದರನೋವದೆ ಛಿದ್ರಿಪ ಕಳ್ವ ಕಳ್ಳರೊಳ್ ನುಡಿ[ಪಾಠಾಂ. ಕುಡಿ, ಗುಡಿ]ವಟಿಯಾದನೆಂದು ನವನಾರಕರಂ ಪರಿದೆಯ್ದೆ ನಾರಕರ್ (ಅಜಿಪು. ೧೧-೧೦). [?]

ನುಡಿವಾಳ, ನುಡಿವಳ್ಳ (ನಾ). ವಾಚಾಳಿ; ಮಾತುಗಾರ : "ಪಕ್ತಾ . . . ವಾದೀ, ವಾವದೂಕಃ—ಈ ೬ ನುಡಿವಾಳಂ" (ಕಾಶಕೃ. ೧೯೧). **ನುಡಿವಳ್ಳ** : "ರಪ್ತಾ = ನುಡಿವಳ್ಳಂ" (ಕಾಶಕೃ. ೨೮).

[ನುಡಿ$_2$ + –ವಾಳ$_3$(< – ವಳ)]

ನುಡಿವೆಣ್, ನುಡಿವೆಣ್ಣು (ನಾ). ಮಾತಿನ ಅಧಿದೇವತೆ; ಶಬ್ದದ ಒಡತಿ; ಸರಸ್ವತಿ : "ನುಡಿವೆಣ್, ಬಾಸೆವೆಣ್, ಸೊಲ್ವೆಣ್, ಮಾತೆಱೆಯಳ್, ಸಾರದೆ, ಸರಸ್ವತಿ—ಈ ೬ ಸರಸ್ವತಿಗೆ ಪೆಸರ್" (ಕಶಸಾ. ೪೮-೧೬); ಆ ನುಡಿವೆಣ್ಣನಾಂತ ನಾಲ್ಕೊಗಮಿರದಚ್ಚ ಬಾವರೆಯ ಚೆಂದಮನಂದೊಳಕೆಯ್ಯೆ ಬಂದು ನೆಟ್ಟಗೆ ಬಲವಕ್ಕದೊಳ್ ನೆಲಸಿ ಕಣ್ಗೆಸೆದಂ ಬಿದಿ ನಿಂದು ನೋಟ್ಪರಾ (ಕಬ್ಬಿಕಾ.೧೬೪); ಮೃಡನಂ ಮೊರಡಿಯಣುಗೆ ನಾಲ್ಕೊಗನಂ ನುಡಿವೆಣ್ಣಂಬುರುಹೋದರನಂ ಸವಿಗಡಲ ಕುವರಿ . . . ಕಯ್ವಿಡಿದಂದದಿ ನೃಪತಿಯ ತೋಳ್ಬಾಳಂ ಪಿಡಿದು (ಜಯಕಾ. ೨-೧೦); ನುಡಿವೆಣ್ಣಂ ವಿಧಿ ಬೊಮ್ಮನಂ ಸರಸಿಜಂ ತತ್ಕಂಜಮಂ ವಿಷ್ಣು ತಾನೊಡಲೊಳ್ವಿಷ್ಣುವನಬ್ಧಿ ತಾಳ್ಗುಮದಱಿಂ ತಾಂ ಶ್ರೇಷ್ಠವೆಂದಾಡೆ (ಹವಿಸ್ಮಾರ. ೫-೪೯); ಕನ್ನಡದ ನುಡಿವೆಣ್ಣೆ ಭರ್ತೃಮಂದಿರಮಾಗಿ (ಶ್ರೀರಾಪ.೫೩-೯೭). **ನುಡಿವೆಣ್ಣು** : "ನುಡಿವೆಣ್ಣು ಸರಸತಿಯು ಸಾರದೆಯೆಂಬಿವರಿಂದಭವ ನರಸಿಗಕ್ಕುಂ" (ಶಬ್ದಮಂ.೯); ನುಡಿವೆಣ್ಣು ಮೆಯ್ದೋಱುವಂತಿದೆ ಕಾವ್ಯಜ್ಞ ನುಡಿ ನಿನ್ನ ಚತುರ ನಲ್ನುಡಿಯ (ವರ್ಧಚ. ೮-೨); ಇದು ರತಿಯ ನೂಪುರದ ನುಣ್ಚರ ಇದುವೆ ನುಡಿವೆಣ್ಣಂಚೆಯಿಂಚರ (ಸಾಳ್ವಭಾ.೧೮-೩೫).

ನುಡಿವೆಣ್ಣೆನಿಯ = ನುಡಿವೆಣ್ಣಾಳ್ಮ : "ಅಂಚೆದೇರಂ, ನುಡಿವೆಣ್ಣೆನಿಯಂ . . . ತಾವರೆವಸೆಯಂ—ಈ ೮ ಬ್ರಹ್ಮಂಗೆ ಪೆಸರ್" (ಕಶಸಾ. ೪೮-೧೫). [ನುಡಿ$_2$ + ಪೆಣ್]

ನುಡಿವೆಣ(ನಾ). ಮಾತನಾಡುತ್ತಿದ್ದರೂ ಹೆಣದಂತಿರುವವನು; ಬಾಳ್ವೆಣ; ಜೀವಚ್ಛವ : ನಡೆವೆಣನ ನುಡಿವೆಣನ ಸಂಸಾರವೇನವನ (ಬಸವ. ೧೫೭); ಪತಿತರು, ಪಾಪಾತ್ಮರೆಂಬ ನಂಬಿಕೆಯಿಂದ ನಿರ್ವೀಣ್ಯರಾಗಿ, 'ನಡೆವೆಣ ನುಡಿವೆಣ'ಗಳಾಗಿ ಹೋಗಿದ್ದ ಜನತೆಗೆ . . . ಶರಣರ ಅಭಯವಾಣಿ . . . ದಿವ್ಯಧ್ವನಿಯಾಗಿ ಕೇಳಿಸಿತು (ಶರಚ.ii,ಮುಮ್ಮಾತು).

[ನುಡಿ$_1$ + ಪೆಣ]

ನುಡಿವೆಣ್ಣಾಣ್ಮ 'ನುಡಿವೆಣ್ಣಾಳ್ಮ' ನೋ.

ನುಡಿವೆಣ್ಣಾಳ್ಮ, ನುಡಿವೆಣ್ಣಾಣ್ಮ (ನಾ). ಸರಸ್ವತಿಯ ಗಂಡ; ಬ್ರಹ್ಮ : "ಪೊಂಬಸಿಱಂ ನುಡಿವೆಣ್ಣಾಳ್ಮಂ[ಪಾಠಾಂ. ಣ್ಮಂ]ಬೊಮ್ಮಂ . . . ಬಿದಿ ನಾಲ್ಕೊಗನೆನಲಜಂ" (ಚತುನಿ. ೫). **ನುಡಿವೆಣ್ಣಾಣ್ಮ** : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ.

[ನುಡಿವೆಣ್ + ಆಳ್ಮ]

ನುಡಿವೆಣ್ಣು 'ನುಡಿವೆಣ್' ನೋ.

ನುಡಿವೆಣ್ಣೆಱೆಯ (ನಾ). = ನುಡಿವೆಣ್ಣಾಳ್ಮ : "ಅರಲಿಚ ನಾಲ್ಕೊಗ ನುಡಿವೆಣ್ಣೆಱೆಯಂ ಪೊಂಬಸಿಱನಂಚೆದೇರಂ . . . ಬೇದಬಿಜ್ಜೆಗನುಮನೆ ಧಾತ್ರಂ" (ಕವಿಕಂ. ೨೯); ಬಣ್ಣೆ ಪೊಡಸದಳವಾ ನುಡಿವೆಣ್ಣೆಱೆಯಂಗೆನಿಪ ಲಂಪಿನೇಟ್ಗೆಯನಾಂತಕ್ಷುಣ್ಣ ಪ್ರಭನನಿಶಂ ಮುಕ್ಕಣ್ಣ ವಿರೂಪಾಕ್ಷ ನಾಲಯಂ ರಂಜಿಸುಗುಂ (ಉದ್ಭಟ. ೪-೬). [ನುಡಿವೆಣ್+ಎಱೆಯ]

ನುಡಿವೇಟ (ನಾ). ಮಾತನ್ನು ಕೇಳಿದ ಮಾತ್ರದಿಂದಲೇ ಉಂಟಾಗುವ ಮೋಹ : ರಾಮನನು ಆ ಯುವತಿ . . . ಕಿವಿವೇಟ ಕಣ್ಬೇಟ ನುಡಿವೇಟ ಮೂಱಱ ಸವಿ ತಲೆಗೇಱೆ ನೋಡಿದಳು(ಕುರಾಸಾಂ.೩೨-೮೨). 'ಚಕ್ಷೂರಾಗ' ಹೋ. [ನುಡಿ$_2$ + ಬೇಟ$_1$(<ಬೇಂಟು)]

ನುಡಿಸಲ್ಗೆ (ನಾ). ಮಾತಿನಲ್ಲಿ ತೋರುವ ಸದರ,—ಸಲುಗೆ : ಬಗೆವುಗುವ ನೇರನುಡಿಗಳಲೆ, ಕೆಳೆಯ ಕೆಳೆಯರೊಳ್ ನುಡಿಸಲ್ಗೆ ಸಲ್ವಂತೆ ನುಡಿದಪೆನ್ (ಬದ್ಧಪ್ರ. ೩೨-೬೮೯). [ನುಡಿ$_2$ + ಸಲ್ಗೆ]

ನುಡಿಸು 'ನುಡಿಯಿಸು' ನೋ.

ನುಡಿಸುಹ (ನಾ). ಮಾತನಾಡುವಿಕೆ; ಹೇಳುವಿಕೆ : "ಆಭಾಷಣಂ, ಆಲಾಪಃ—ನುಡಿಸುಹ" (ನಾಚಿರಾ. ೬).

[ನುಡಿಸು(<ನುಡಿಯಿಸು) + –ಹ$_2$(< –ಪ$_2$)]

ನುಡಿಹ (ನಾ). ೧. ಮಾತನಾಡಿಸುವಿಕೆ. ೨. ನುಡಿಯುವಿಕೆ : "ಮಿಥ್ಯಾಭಿಶಂಸನಂ, ಅಭಿಶಾಪಃ—ಇಲ್ಲದ ಹೊಲ್ಲಹಂ ಮೇಲಿಕ್ಕಿ ನುಡಿಹ" (ನಾಚಿರಾ. ೬): ಪೆಱರ ಮನಕ್ಕೆ ನೋವಂ ಪುಟ್ಟಸದ ನುಡಿಹಂ ನಲ್ಮೆ ಎಂಬುದು ತಾತ್ಪರ್ಯಂ (ನೀತಿನಾ. ೨೬-೫೬).

[ನುಡಿ$_1$ + –ಹ$_2$(< –ಪ$_2$)]

ನುಡಿಹೀನ (ನಾ). ಸರಿಯಾಗಿ ಮಾತನಾಡಲು ತಿಳಿಯದಿರುವವನು; ಮಾತಿನ ಕೊರತೆಯುಳ್ಳ ವ್ಯಕ್ತಿ : ಉಡೆಹೀನ ಮೂಡಲು ನುಡಿಹೀನ ಬಡಗಲು ಕಡುಕೋಪದವರು ಪಡುವಲೊಳು ತೆಂಕಲಲಿ ಸಡಗರದಲಿಹರು (ಸರ್ವಜ್ಞ. ೧೬೧೫). [ನುಡಿ$_2$ + ಹೀನ]

ನುಣ್–(ಸಪೂರೂ) 'ನುಣ್ಣೆತು' ಎಂಬ ಗುಣವಾಚಕಕ್ಕೆ ಸಮಾಸಪದಗಳಲ್ಲಿ ಬರುವ ಆದೇಶರೂಪ. [<ನುಣ್ಣೆತು]

ನುಣಾಮರ (ನಾ). ಒಂದು ಬಗೆಯ ಮರ : ಮಡ್ಡೀಹಂಬು, ಪೊಪ್ಪಿಳಿಮರ, ನುಣಾಮರ (ಮೈಡಿಗಿ. ೫೫-೧೦೯೭).

[ನುಣಾ$_0$ (P<– ತಮಿ. ನುಣಾ) + ಮರ$_1$]

ನುಣಿಚು 'ನುಣ್ಚು' ನೋ.

ನುಣುಚು$_1$ 'ನುಣ್ಚು' ನೋ.

ನುಣುಚು$_2$ (ನಾ). ಜಾರಿಕೆ; ತೇಲಿಕೆ; ಹಾರಿಕೆ : ಏನಾದರೂ ಬೇಕಾಗಿತ್ತೇ . . . ಎಂದು ಅವನು ಪ್ರಶ್ನಿಸಿದಾಗ, ಅವಳು ಸಿಗ್ಗಾಳಿಯಾಗಿ ನುಣುಚುನುಣುಚಾಗಿ ಉತ್ತರ ಕೊಟ್ಟಳು (ಪುನರು. ೪೯೭).

[<ನುಣುಚು$_1$]

ನುಣುಪು 'ನುಣ್ಪು' ನೋ.

ನುಣುಪುಗೊಳಿಸು (ಕ್ರಿ). ಕಾಂತಿಗೊಳಿಸು; ಹೊಳೆಯುವಂತೆ ಮಾಡು : ಅಮೃತಸಾಗರಸದೃಶವಾದ ತಪಸ್ತೇಜದಿಂದ ಕಾಡುಗಳನ್ನೇ ದಂತಮಯವಾಗಿ ಧವಳಿಸುವ, ತಾರಾಚಳವನ್ನೇ ನುಣುಪುಗೊಳಿಸುವ ಈ ಅತ್ಯುತ್ತಮ ದಿವ್ಯಾಕಾರೆ (ಸೌಂದಸ. ೨೧೯).

[ನುಣುಪು (<ನುಣ್ಪು) + ಕೊಳ್$_1$ + –ಇಸು$_3$]

ನುಣ್ಕದಪು 'ನುಣ್ಗದಪು' ನೋ.

ನುಣ್ಗಂಟು (ನಾ). ಸೊಬಗಿನ ಸಿರಿತನ; ಸೌಂದರ್ಯದ ಶ್ರೀಮಂತಿಕೆ : ಕಡುಸೋವದಿಯಾದಪೆ ನಿನ್ನ ಮೆಯ್ಯ ನುಣ್ಗಂಟೊಡವುಟ್ಟೆ ಮಟ್ಟಮಿರೆ ಮಿಱುವರಾರೊ ಮನೋಜನಾಜ್ಞೆಯಂ (ಮಲ್ಲಿಪು. ೬-೬೪). [ನುಣ್ (<ನುಣ್ಣೆತು) + ಗಂಟು]

ನುಣ್ಗಟಕಿ (ನಾ). ತೀಕ್ಷ್ಣವಾದ ವ್ಯಂಗ್ಯ, — ಕಟಕಿ : ಪಲವುಂ ನಿರೋಧಂಗಳಂ ದೂಡೆ ನಿಂದು ಸತಿಯರ್ ನೊಂದು ನುಣ್ಗಟಕಿಗಳನಾಡೆ (ನಂಬಿರ. ೧೫-೯೦); ದಿಟ ಶುದ್ಧನಂತೇ ನುಣ್ಗಟಕಿಗಮ್ಮದೆಯೊಮ್ಮೆ ತುಟ ಮಿಡುಕದಿರಲದನಱಿದು (ಭೈರವೇ. ೨-೧೧೦); ಅರಸಂ ಪೋಗದಿರೆಂದು ನುಣ್ಗಟಕಿಯಾಡುತ್ತಿರ್ಪಂ (ಪೃಷವಿ. ೩೭-೧೩).

[ನುಣ್ (<ನುಣ್ಣೆತು) + ಕಟಕಿ]

ನುಣ್ಗದಪು, ನುಣ್ಕದಪು (ನಾ). ಕಾಂತಿಮಯವಾದ ಕಪೋಲ ; ಥಳಥಳಿಸುವ ಕೆನ್ನೆ : ಚಟುಲ ಲೋಚನದ ನುಣ್ಗದಪುಗಳ ಥಳಥಳಿಪ ನಿಟಲ ತಟದಂಗನೆಯರೇಳ್ತಂದರು (ಸೌಂದಪು. ೧೩-೫೧) ; ಅಪರಂಜಿದಗಡುಗಳ ದೊರೆಯಾದುವು ನುಣ್ಗದಪುಗಳಾ ಶ್ಯಾಮೆಗೆಯಭಿನವರಮೆಗೆ (ಜಯಕಾ. ೩-೪೩) ; ತೊಳಪ ನಾಸಿಕದ ನುಣ್ಗದಪುಗಳ ಪೊಳೆವ ಕಂಗಳ . . . ಮೋಹನದ ಚೆಲ್ವಿನೊಬ್ಬುಳಿಯೆನಿಪ ರಾಘವನ ಸಿರಿಮೊಗವನೆಂತು ನೋಡದೆ ಮಾಣ್ಬನಕಟ (ಜೈಮಿಭಾ. ೧೯-೨೧) ; ನುಣ್ಗದಪಂ ಪಳಂಚಲೆಯೆ ಕುಂಡಳಮಂಡಳಮಾನನಾಂಬುಜಂ ತಣ್ಗದಿರಂಗೆ ಸೋಲಮನೊಡರ್ಚೆ (ರಾಜಶೇ. ೧೩-೬೧) ; ಎಳೆಯ ತಳಿರು ಹೊಳೆವ ತಳಿರು ನುಣ್ಗದಪನು ಚುಂಬಿಸೆ (ಕವಿಸೋ. ೨೩-೧೦). **ನುಣ್ಕದಪು** : ಮೆರೆವ ನಗುಮೊಗದ ಬಗೆ, ಪೊಳೆವ ಕಣ್, ನುಣ್ಕದಪು, ಚೆಲ್ವ ಪಣಿ, ಇವೆಲ್ಲಮಂ ನೋಡಿ . . . ಹಿಗ್ಗಿ (ಚಂದ್ರಸ. ೧೭-೨೧).

[ನುಣ್ (<ನುಣ್ಣಿತು) + ಕದಪು (<ಕದಂಪು)]

ನುಣ್ಗದಿರ್ (ನಾ). ೧. ಉಜ್ವಲವಾದ ಕಿರಣ : ಒಯ್ಯನೆ ಚಾಮರಾಂಗನೆಯ ಕಯ್ಯೊಳ್ಕೊಟ್ಟ ನಾತ್ಮೋತ್ತರೀಯದುಕೂಲಾಂಚಲ ಸೂಕ್ಷ್ಮ ಸೂತ್ರವಿವರವ್ರಾತಂಗಳಿಂ ಕೂಡೆ ನುಣ್ಗದಿರ್ಗಳ್ ಸೂಸುವ ಶೇಷ ಮೆಂಬಮಳತಾರೋದಾರಮಂ ಹಾರಮಂ (ಕಾದಂಉ. ೧೯೪) ; ೨. ಮನೋಹರವಾದ ಹೊಳಪು ; ಆಪ್ಯಾಯಮಾನವಾದ ಕಾಂತಿ : ಮುತ್ತುಂ ಪಚ್ಚೆವರಲ್ಗಳುಂ ಕುಳಿಸಮುಂ ಮುಂತಾಗಿ ಕುಂದಿಲ್ಲದೊಂಬತ್ತುರನ್ನದ ನುಣ್ಗದಿರ್ ನೆಗೆದು ನೀಳ್ದೊಂದೊಂದಱೊಳ್ ಕೂಡಿ (ಕಬ್ಬಿಕಾ. ೩೬) ; ಕಾರಮಿಂಚಂ ನಿವಾರಿಸುವ ನುಣ್ಗದಿರ ತುಱುಗೆವೆಗಣ್ಣ ಹಂಸಗತಿಯಳಿವ ನಡೆಯ ಕನ್ನೆಯರು . . . ಬಂದರು (ಸೌಂದಪು. ೭-೪೯) ; ಅಂಭೋಜಕುಟ್ಮಳವಕ್ಷೋರುಹದಗ್ರಘಾಳ್ದುದೆಳೆಗರ್ಪಂ ನುಣ್ಗದಿರ್ದೇಹದೊಳ್ಕೆಳೆಗೊಂಡತ್ತು ತನೂದರಂ ಬಳೆದುದಾ ತನ್ವಂಗಿಗಾ ಗರ್ಭದೊಳ್ (ರಾಜಶೇ. ೪-೩೧). [ನುಣ್(<ನುಣ್ಣಿತು) + ಕದಿರ್$_2$]

ನುಣ್ಗಲ್ (ನಾ). ೧. ನಯವಾದ ಕಲ್ಲು. ೨. ಹೊಳಪುಳ್ಳ ಕಲ್ಲು. 'ನುಣ್ಗಲ್ಗಟ್ಟು' ಪರಾ. [ನುಣ್ (<ನುಣ್ಣಿತು) + ಕಲ್$_3$]

ನುಣ್ಗಲೆ (ನಾ). ಸೌಂದರ್ಯವನ್ನುಂಟು ಮಾಡುವಂಥ ಕಲೆ ; ಅಂದವಾದ ಗುರುತು,—ಚಿಹ್ನೆ : ಸಲೆ ನಿಲೆ ವೇಳೆಯೆನ್ದು ಭಯದಿಂ ಕಡಿದಂಗುಳಿ ಮೆಲ್ದ ಬಾಯ ತಂಬುಲವೆಳಕೊಣ್ಡುಮಣ್ಡ ಮಡಗೂಳುರದಂಕುಸವಾಗಿ ಕೊಯ್ದ ನುಣ್ಗಲೆಯಿವು ಕಾಗು (ಎಕ. XI, ದಾವಣ. ೪೨-೩೦ ; ಸು. 1162). 'ಲೂನವಕ್ಷ' ಹೋ.

[ನುಣ್ (<ನುಣ್ಣಿತು) + ಕಲೆ$_2$]

ನುಣ್ಗಲ್ಗಟ್ಟು (ನಾ). ನುಣುಪಾದ ಕಲ್ಲಿನ ರಚನೆ : ಗಗನದೊಳ್ ಪಚ್ಚೆಯ ನುಣ್ಗಲ್ಗಟ್ಟನ ಜಗಲಿವೊಲಿರೆ ಕಾಲ್ಗಟ್ಟೆಯ ಮಡಿಗಳೆಸೆದುವೋರೊಂದೆಡೆಯೊಳ್ (ಮಲ್ಲಿಪು. ೨-೧೭). [ನುಣ್ಗಲ್ + ಕಟ್ಟು$_2$]

ನುಣ್ಗಲ್ಲ (ನಾ). ನುಣುಪಾದ ಕೆನ್ನೆ,— ಕಪೋಲ : ಕುಟಿಲಾಳಕಿಯರ ನುಣ್ಗಲ್ಲ ತೊಂಡೆವಣ್ಣುಟಯ ಕರ್ದುಕಿ ಮೆಯ್ನವಿರ ಸುಟಯಿಂದ ಗುಡಿಗಟ್ಟಿಸುವ ಮಾಗಿಯ ಹಿಮ ವಿಟನಂತೆ ಕಣ್ಗೆ ರಂಜಿಸಿತು (ಮೋಹತ. ೪-೪೫) ; ತಲ್ಲಣಿಸಿ ತಿಂಗಳರಗಿಳಿ ಪೂಸರಲ್ಕಬ್ಬುವಿಲ್ಲಾಱಡಿಗಳೊಳ್ದಳಿರ್ಗಳೆಂದೆಣಿಸಿ ನುಣ್ಗಲ್ಲದೊಳ್ಕೈಯಿಟ್ಟು ಬೆಜಗಾಗಿ ಚಂತಿಸುವ ತೆಜದೊಳವಳಿರುತಿರ್ದಳು (ಜೈಮಿಭಾ. ೩-೩೭).

[ನುಣ್ (<ನುಣ್ಣಿತು) + ಗಲ್ಲ$_1$]

ನುಣ್ಗಱಿ (ನಾ). ೧. ಮೃದುವಾದ ರೆಕ್ಕೆ ; ನುಣುಪಾದ ರೆಕ್ಕೆ : ನುಣ್ಗಱಿ[ಪಾಠಾಂ. ಕ್ಕೊಲೆ]ಗಳ್ ಮಿನುಗಲ್ಕೆ ವಿದ್ರುಮಾಂಕುರದವೊಲೊಪ್ಪೆ ಚಂಚುಪುಟಮೊಯ್ಯನೆ ಬಂದುದು (ಕಾದಂಉ. ೬೦) ; ಜಳಜದಳಪೀಠದೊಳ್ ನಲ್ಲಳ ನುಣ್ಗಱಿ ಸೋಂಕೆ ಸೋಂಕಿ ಕುಳ್ಳಿರ್ದಳಿನೀ ಕಳಗೀತರವಮನಾಲಿಪ ವಿಳಾಸಮಂ ನೆನೆದೊನಲ್ದುದೊಂದು ರಥಾಂಗಂ (ಚಂದ್ರಪು. ೮-೯) ; ಪಕ್ಕಿಗಳ ನುಣ್ಗಱಿ ಸೀದುದರಣ್ಯದಲ್ಲಿ ಸಂಗಡಿಸಿದ ಶುಕ್ಷರೋಮತತಿ ಬೆಂದುದು ಬೇಸಗೆಯುಗ್ರಮೆಂತುಟೋ (ರಾಜಶೇ. ೫-೪೬). ೨. ಕೋಮಲವಾದ ಪುಕ್ಕ ; ಎಳೆಯ ಗರಿ : ಎಱಗಿದ ಮಱಿಗಿಳಿಗಳ ನುಣ್ಗಱಿದುಱುಗಲ ಪೊಳಪಿನಿಂ ಮೃಗಾವಳಿಗೆನಸುಂ ಮಿಱುಗುವ ಪೊಸಪಸುರ್ವುಲ್ಲೆಂಬೆಱಕಮನೊದವಿಸುವುವಲ್ಲಿ ಕಟವೆಯ ಕೆಯ್ಗಳ್ (ಕುಸುಮಾ. ೨-೪೦). [ನುಣ್ (<ನುಣ್ಣಿತು) + ಗಱಿ]

ನುಣ್ಗಱಿ (ನಾ). ಅಂದವಾದ ಗುರುತು,—ಚಿಹ್ನೆ ; ಮನೋಹರವಾದ ಕಲೆ : ಬಾಲೆಯ . . . ಲಲಾಟದೊಳ್ ಮೃಗಮದಬಿಂದುವಂ ಪೆಱಿಗೆ ನುಣ್ಗಱಿಯಂ ಪಡೆವಂತೆ ತಿರ್ದಿದರ್ (ಪಂಠಾಮಾ. ೫-೪೩) ; ತೆಗೆಯೆ ಚಕೋರಿ ಕರ್ಚಿ ಶಶಿಮಂಡಲದಿಂದಮೆ ಕಿಟ್ಟು ಬಿಟ್ಟ ರಶ್ಮಿಗಳೆಡೆಯಂತೆ ತೋಱುದುದು ನುಣ್ಗಱಿಯಾ ಕೆಡೆದುನ್ಮಯೂಖಮಾಲೆಗಳನೆ ಚಂದ್ರಮಂಗೆ ಕುಡಲೆತ್ತಿದವೋಲೆಸೆದಿರ್ದರ್ . . . ಮಾಲೆಗಾರ್ತಿಯರ್ (ಲೀಲಾವ. ೨-೨೬) ; ಮಿಱುಗುವ ವಿದ್ರುಮಾಧರದ ಮಧ್ಯದೊಳಾಯತ ವೃತ್ತಮಾದ ನುಣ್ಗಱಿಯಿದು ಮನ್ಮನಕ್ಕೆ ಪಡೆದಪ್ಪುದು . . . ಪೋಲ್ವೆಯಂ (ಚಂದ್ರಪು. ೮-೫೭) ; ನುಣ್ಗಱಿಯಿಲ್ಲದ ವಿಧುವಿಂ ತಣ್ಗದಿರೊಗೆವಂತೆ ವಿಮಳಮುಖಮಂಡಳದಿ ಕಣ್ಗೊಳಿಸೆ ದಂತಕಾಂತಿ (ಶಾಂತೀಶ್ವ. ೨-೫೩). [ನುಣ್(<ನುಣ್ಣಿತು) + ಕಱಿ$_2$]

ನುಣ್ಗಾಡಿ (ನಾ). ಮನೋಹರವಾದ ಸೌಂದರ್ಯ,—ಚೆಲುವು : ಬಿಣ್ಗೆಚ್ಚಲಿಕ್ಕಿ ಕೊಡವಾಲ್ಗಱಿಯದಾವಿಲ್ಲ ನುಣ್ಗಾಡಿ[ಪಾಠಾಂ. ಣ್ಗೂಡು] ವೆತ್ತಿರದ ಪಶುಪಕ್ಷಿಮೃಗವಿಲ್ಲ ಕಣ್ಗೊಳಿಪ ರಾಮರಾಜ್ಯದೊಳ್ (ಜೈಮಿಭಾ. ೧೮-೧೩). [ನುಣ್(<ನುಣ್ಣಿತು) + ಗಾಡಿ$_1$]

ನುಣ್ಗಾರೆ (ನಾ). ನಯಗೊಳಿಸಿದ ಗಾರೆ ; ನಯಗಾರೆ : ಹಂಪೆಯ ಕಮಲಮಹಲನ್ನು ನುಣ್ಗಾರೆಯಿಂದ ನಯಗೊಳಿಸಿದ್ದಾರೆ (ರೂಢಿ).

[ನುಣ್(<ನುಣ್ಣಿತು) + ಗಾರೆ$_1$]

ನುಣ್ಗುರುಳ್, ನುಂಗುರುಳು, ನುಣ್ಗುರುಳು (ನಾ). ೧. ಮೃದುವಾದ ಮುಂಗುರುಳು ; ಕೋಮಲವಾದ ಸುರುಳಿಗೂದಲು : ನಡೆಗಳೊಳಂಚೆ ನುಣ್ಗುರುಳೊಳಾಱಡಿ ತೋಳ್ಗಳೊಳಳ್ಳೆಗೊಂಬು ಸೋರ್ಮುಡಿಗಳೊಳ್ಳೆದೆ ಸೋಗೆ . . . ದೊರೆಕೊಂಡುವೆನುತ್ತೆ ಕಾಯ್ದುದಾಱುಡುವೊಲಾ ಬನಕ್ಕೆ ನಡೆತಂದುದು ಪೆಂಡಿರ ತಂಡಮೇಟ್ಗಿಯಿಂ (ಕಬ್ಬಿಕಾ. ೯೨) ; ನುಣ್ಗುರುಳ ನೀಱಿಗೆ ಬೆಡಂಗಮರ್ದೆಸೆವ ತುಂಬುದಣ್ಗದಿರನಂದದ ಮೊಗದ ಚೆಲ್ವೆಗೆ . . . ಗರ್ಭಚಿಹ್ನವಂಕುರಿಸಿದುದು (ಪದ್ಮರಾ. ೨-೩೮) ; ಅಂಬುಜಂ ತುಂಬಿಗಳ ಬಂಬಲಂ ಮೈದಡಪುವಂತೆ ನುಣ್ಗುರುಳ್ಗಳಂ ನೆಳಲುವ ಕರಾಬ್ಜಂ ಕಂಗೊಳಿಸೆ ತೋರ್ಪ ಗಂಧರ್ವಸುಂದರಿಯರಿಂ (ರಾಜಶೇ. ೧-೧೩೫ ವ). ೨. ಕಾಂತಿಯುತವಾದ ಕೂದಲು ; ಹೊಳಪಿನಿಂದ ಕೂಡಿರುವ ಕೂದಲು : ನುಣ್ಗುರುಳ ಪೊಳೆವ ಕರ್ಪುಂ ಕಣ್ಗಗ್ಗಳಮಾದ ಮೆಯ್ಯ ಬೆಳಗೆಸೆವಿನೆಗಂ ಪೆಣ್ಗಂಡು ರಾಜ್ಯಲಕ್ಷ್ಮಿಯ ಕಣ್ಗಳ ದೊರೆಯಾಗಿ ಸಮನೆ ಬಳೆವಿನಂ (ಯಶೋಚ. ೪-೪೧). **ನುಂಗುರುಳು** : ೧. ತನ್ನ ಕಂಠದ ಮಾಲೆಯಂ ಪಱಿದು ನುಂಗುರುಳ ಗನ್ನದಿಂ ಕೆದಱಿ ಚೆಳ್ಳುಗುರುಗಳಿಂ ಸ್ಥೂಲಕುಚಕುನ್ನತದ ಹತಿಗಳಂ ಮಾಡುತ್ತ (ಚತುಪು. ೨-೭-೮೨). **ನುಣ್ಗುರುಳು** : ೧. ತರುಣಿಮ ತಮಾಲದೆಳದಳಿರಂತೆ ನೀಳ್ದ ನುಣ್ಗುರುಳು ಸಿಂಗರಕಿದೇ ಸೀಮೆಯೆಂದೆನಿಪ ಪೇರುರವೊಪ್ಪೆ ಸಾರ್ದುದೆಳವರೆಯ ಸೌಂದರಗೆ (ಸೌಂದಪು. ೧೪-೫) ; ನುಣ್ಗುರುಳ ತಳಿತ ನೀಲದ ಕುರುಳವರಾ ಕುವರಿಯ ಬಳಿವಿಡಿದೈದಿತೊಗ್ಗಿನಲಿ (ಮೋಹತ. ೨೪-೧೧). [ನುಣ್(<ನುಣ್ಣಿತು) + ಕುರುಳ್$_1$]

ನುಣ್ಗುರುಳು 'ನುಣ್ಗುರುಳ್' ನೋ.

ನುಣ್ಗೂದಲು (ನಾ). ಮೃದುವಾದ ಕೂದಲು ; ಕೋಮಲವಾದ ನವಿರು : ದಟ್ಟವಾಗಿ ಬೆಳೆದು ಕತ್ತರಿಸಿದ್ದ ನುಣ್ಗೂದಲು ಸಂಸ್ಕಾರವಿಹೀನವಾಗಿ ನೇತಾಡುತ್ತಿತ್ತು (ಪುನರು. ೧೪೩).

[ನುಣ್(<ನುಣ್ಣಿತು)+ಕೂದಲು(<ಕೂಂದಲ್)]

ನುಣ್ಗೆಂಪು (ನಾ). ಹೊಳಪುಳ್ಳ ಕೆಂಪು ; ಕಾಂತಿಯುತವಾದ ರಕ್ತವರ್ಣ : ಮುಟುಗದು ಗಡಿನ್ನುಮೆನುತಂ ಮುಳಿಸಿಂ ಕಾಮಿನಿಯರೀಕ್ಷಿಸುತ್ತಿರೆ ನುಣ್ಗೆಂಪೆಳಸಿದುದೆನೆ ಬಿಂಬಂ ಕೆಂಪೆಳಸಿರ್ದುದು ಚಕ್ರವಾಕ ಚಕ್ರೇಶ್ವರನಾ (ಕಾದಂಉ. ೧೩೮). [ನುಣ್(<ನುಣ್ಣಿತು)+ಕೆಂಪು$_1$]

ನುಣ್ಗೊದಳ್ (ನಾ). (ಮಕ್ಕಳ) ಇಂಪಾದ ತೊದಲು ಮಾತು ; ಮಧುರವಾದ ತೊದಲ್ನುಡಿ: ಈಕ್ಷಿಸಿ ಮಕ್ಕಳ ಮುದ್ದುಗೆಯ್ತುದೊಳ್ಪಂ ಬಿಡದಪ್ಪಿ ಕೋಮಲತರಾಂಗಮನಾಲಿಸಿ ನುಣ್ಗೊ[ಪಾಠಾಂ.ಣ್ಗೊ]ದಳ್ ಪೊದಟ್ಟಂಬಿನಿವಾತನಟ್ಟಿಱೊಳೆ ವಾಸಿಸಿ ನೆತ್ತಿಯಂ...ತಣಿವೆಯ್ದುವರೇಂ ಕೃತಾರ್ಥರೋ (ಚಂದ್ರಪು. ೩-೪೪).

[ನುಣ್(<ನುಣ್ಣಿತು)+ಕೊದಳ್$_2$(<ಕೊದಲು$_2$)]

ನುಣ್ಗೊನರ್ (ನಾ). ಕೋಮಲವಾದ ಚಿಗುರು ; ಮೃದುವಾದ ಕುಡಿ : ತೀವಿದ ನುಣ್ಗೊನರ್ ಕಿಱುಗೊನರ್ ನಸುಬಲ್ಗೊನರೆಂಬಿವೇಟ್ಗೆವೆತ್ತು (ಜಗವಿ. ೧೪-೨೬). [ನುಣ್(<ನುಣ್ಣಿತು)+ಕೊನರ್$_2$]

ನುಣ್ಗೊನೆ (ನಾ). ಮೃದುವಾದ ತುದಿ ; ಸೂಕ್ಷ್ಮವಾದ ಕೊನೆ ; ನವುರಾದ ಅಗ್ರಭಾಗ : ಕೇಸರದ ನುಣ್ಗೊ[ಪಾಠಾಂ. ಣ್ಗೊ]ನೆ ಸೂಸೆ ಮರಲ್ದು ಚೆಲ್ವಿನೊಳ್ ಗಡಣಿಸಿದತ್ತು ಮುಂಬಗಲೊಳಂಬುರುಹಂ ಸರಸೀ ಸಮೂಹದೊಳ್ (ಚಂದ್ರಪು. ೮-೧೦೩).

[ನುಣ್(<ನುಣ್ಣಿತು)+ಕೊನೆ$_2$]

ನುಣ್ಗೊರಲ್, ನುಂಗೊರಳ್, ನುಣ್ಗೊರಲು, ನುಣ್ಗೊರಳ್, ನುಣ್ಗೊರಳು (ನಾ). ೧. ಸುಂದರವಾದ ಕೊರಳು ; ಅಂದವಾದ ಕುತ್ತಿಗೆ : ಮೆಲ್ಲುಲಿ ನುಣ್ಗೊರಲೊಳುಣ್ಮಲಿಂಚರಂಗೆಯ್ತುತಿರ್ಪಲರ್ವಕ್ಕಿ ವಳಗದಿಂ . . . ಕೊಳಂಗಳ್ ಮೆಱೆದುವು (ಪದ್ಮರಾ. ೮-೩೯) ; ಸುಲಲಿತಾಂಗಿಯರ ನುಣ್ಗೊರಲ ಕಂಠಿಕೆಯಂತೆ . . . ಒಪ್ಪಿದನು ಸದ್ವಿಪ್ರಕುಲರತ್ನದೀಪಂ (ಚಂಪ್ರಸಾಂ. ೫-೧೨೩) ; ಥಳಥಳಿಪ ನುಣ್ಗೊರಲ ನಳಿತೋಳ್ಗಳ . . . ಸುಳಿಗುರುಳ್ಗಳ ಪೆಣ್ಗಳಿರ್ದರಂದರಸಿನೊಡ್ಡೋಲಗದೊಳು (ಚೆಬಪು. ೭-೧೨) ; ನುಂಗೆ ನುಣ್ಗೊರಲುಂ ಜಿಹ್ವೆಯುಮಾ ವಿಷಾಗ್ನಿಯುರಿಯಿಂದೇನಾದುದೋ ಕುಕ್ಷಿಯೊಳ್ಳರದಿಂ ಪೊಕ್ಕು ಮಡಲ್ತೆನಿತ್ತೆಸಗಿತೋ ಸಂತಾಪಮಂ ದೇವನಾ (ವೃಷವಿ.೮-೨೫ ಪ) ೨. ಮಧುರವಾದ ಕಂಠ; ಇಂಪಾದ ಧ್ವನಿ,—ಶಾರೀರ : ಕಡುಸೊಕ್ಕಿ ನುಣ್ಗೊರಲಿನಿಂಚರಂ ಪೊಱಪೊಣ್ಮಿ ಸುಳಿವ ಮಱಿದುಂಬಿಯ ವಿಲಾಸದಂತೆ . . . ರಸಿಕರ್ಗೆ ನಲವೀವುದೀ ದಿವ್ಯಕಾವ್ಯಂ (ಸೌಂದಪು. ೧-೧೬) ; ಪರಿವ ಪಸುಳೆಗಿಳಿಗಳ ನುಣ್ಗೊರಲಿಂ ಪಱಿಗುಟ್ಟುವ ಪರಪುಟ್ಟದ ಪಾಡುವ ಪಱಮೆವಱಿಯ (ಜಯಕಾ. ೧-೪೬). **ನುಂಗೊರಳ್** : ೧. ನುಂಗೊ[ಪಾಠಾಂ.ಣ್ಗೊ]ರಳ ಕೌಸ್ತುಭದ ರುಚಿರಾಪಾಂಗಲಕ್ಷ್ಮಿಯ ಸುಸ್ಮಿತಾಧರಮಂಗಳಾನನ ಕಮಲವನು ನೆನೆವುದು ಮನೋಮಯನ (ಸಿಭಾಗ. ೪-೧೩-೩೧); ತಾಂಬೂಲರಸವಾ ನುಂಗುವಾಗಿದಿರಿಗೆ ತೋಱುವುದರಸನ ನುಂಗೊರಳೇನ ಬಣ್ಣಿಪೆನು (ಭರಚ.೬-೫೫). **ನುಣ್ಗೊರಲು**: ೨. ಹೊರೆಯ ಮಧುರದ ಷಡ್ಜ ಪಂಚಮದೆರಡು ತಂತಿಯನಾರಯಿದು ನುಣ್ಗೊರಲು ಬೆರಲೊಂದಾದುದೆನೆ ಬಾಜಿಸಿದಳಾ ಚದುರೆ (ಸಾಳ್ವಭಾ. ೧೮-೭). **ನುಣ್ಗೊರಳ್** : ೧. ಲಲಿತ ಸ್ಮೇರವದನದ ನುಣ್ಗೊರಳ ಪೀವರಪಯೋಧರದ . . . ಭೂರಿ ಭೂಷಣದಮರಿಯರು ಮೆಱೆದಿರ್ದುದೊಂದೆಸೆಯ (ತೊರರಾ. ೫-೨-೬೧). ೨. ಪಿರಿದುಂ ನುಣ್ಗೊರಳಿಂದಮೊಂದಱೊಳನೇಕಚ್ಛಂದಮಂ ತೋಱಬಂಧುರರಾಗಂಗಳನುನ್ನತಪ್ರಮದದಿಂದಾಳಾಪನಂಗೆಯ್ದನಿರ್ಜರ ಸೀಮಂತಿನಿಯೊರ್ವಳ್ . . . ನೆಱೆ ಪಾಡಿ ಮೆಚ್ಚಿಸಿದಳಾ ಭೂಪಾಳನರ್ಧಾಂಗಿಯಂ (ಬಾಧಪು. ೬-೮೭). **ನುಣ್ಗೊರಳು** : ೧. ಥಳಥಳಿಸುವ ಶಂಖದಂತೆ ನಳಿನಾಕ್ಷಿಯ ನುಣ್ಗೊರಳು ನೋಳ್ಪರ ಕಣ್ಗೆ ಸುಲಲಿತೋತ್ಸವವಿತ್ತುದು (ಕಂಸವಿ. ೯-೩೧). [ನುಣ್(<ನುಣ್ಣಿತು)+ಕೊರಳ್(<ಕೊರಲ್)]

ನುಣ್ಗೊರಲ (ನಾ). ಸುಂದರವಾದ ಕೊರಳುಳ್ಳವನು : ಮಂಡಳಿಸುವ ಕಂಠಸರದ ನುಣ್ಗೊರಲನ ಕಂಡಾಕ್ಷಣ ಸೋತರೊಲಿದು (ಮೋಹತ. ೧೮-೬೩). [ನುಣ್ಗೊರಲ್+ – ಅ$_7$]

ನುಣ್ಗೊರಲು 'ನುಣ್ಗೊರಲ್' ನೋ.

ನುಣ್ಗೊರಳ್ 'ನುಣ್ಗೊರಲ್' ನೋ.

ನುಣ್ಗೊರಳು 'ನುಣ್ಗೊರಲ್' ನೋ.

ನುಣ್ಚರ, ನುಂಚರ, ನುಣ್ಸರ (ನಾ). ೧. ಮೆಲ್ಲುಲಿ; ಇನಿದನಿ ; ಇಂಚರ : ಎಡೆಯಾಡುವೆಳವೆಂದಿರ ನೂಪುರದ ನುಣ್ಚರಕ್ಕೆಳಸಿ ಪರಿವ ವಲ್ಲಭಹಂಸನಂ ಮೃಣಾಳಲತೆಯ ಸಂಕೊಲೆಯೊಳಿಕ್ಕು (ಕಾದಂಉ. ೨೫) ; ನೆರಪೆ ತುಂಬಿಗಳನಾತ್ಮಮುಖೋದ್ಯತ್ಪರಿಮಳಂ ಕಮಳಬಂಧುರಗಂಧಂ ಪರಪೆ ಕೇಕಿಗಳ ತಾಂಡವಮಂ ನುಣ್ಚರದ ತಿಣ್ಪು ಘನಘೋಷಗಭೀರಂ (ಕಾವ್ಯಾವ. ೭೪) ; ನುಣ್ಚರದೆ ಮಿಂಚಂ ಸೀಳ್ದವೋಲ್ಪೊಣ್ಮೆ ಕಾಕಳಿಯೊಳ್ಕೂಡಿದ ಸೀಯನಪ್ಪ ರಸಗೇಯಂ ಚಿತ್ತಮಂ ತಾಗೆ (ಲೀಲಾವ.೩-೬೧); ತುಂಬಿಗಳ ನುಣ್ಚ[ಪಾಠಾಂ.ಣ್ಸ]ರದಿಂ ಕರೆವಂತಿರ್ದ ಪೂದೋಂಟಂಗಳಿಂ (ನಂಬಿರ. ೧೨-೨೯) ; ಕಿವಿಗಿನಿದಪ್ಪಂತಿರೆ ಕರೆವ ಕೋಗಿಲೆಯ ನುಣ್ಚರದಿಂದಂ ಬಿರಿಯಿಗಳ್ಗೆ ಮಾಡುವುದಟಲಂ (ಕಬ್ಬಿಕಾ. ೩೧) ; ಅಬಲೆ . . . ಪುಷ್ಪಮಾಲೆಯಂ ನಿಬಿಡಕರಾಗ್ರದಿಂ ಪಿಡಿದಿರಲ್ ಮಱಿದುಂಬಿಯ ಬಂಬಲುಜ್ಜ್ವಲಸ್ತಬಕನಿಭಕ್ಕೆ ಬಂದೆಱಗಿ ಝೇಂಕರಿಸಲ್ ಮೆಱೆದತ್ತು ನುಣ್ಚರಂ (ನಳಚಂ. ೩೭೪). **ನುಂಚರ** : ೨. ಕಾಲಂದುಗೆಯ ಧ್ವನಿ : "ನುಂಚರಮೆಂದು ನೂಪುರರವಂ" (ಕರ್ಣಾನಿ ೩೧). **ನುಣ್ಸರ** : ೧. ನುಣ್ಚರಂ, ನುಣ್ಸರಂ (ಶಬ್ದಾನು. ೯೩ ಪ್ರಯೋ). [ನುಣ್(<ನುಣ್ಣಿತು)+ಸರ$_3$]

ನುಣ್ಚು, ನುಣಿಚು, ನುಣುಚು$_1$ (ಕ್ರಿ). ೧. ಜಾರು ; ಜಗುಳು ; ಕಳಚಿಕೊಳ್ಳು : "ನುಣ್ಚು—ಅಪಸರಣೇ" (ಶಮಧಾ) ; "ನುಣ್ಚೆಂದುಂ, ಜಗುಟೆಂದುಂ ಜಾಱುವುದು" (ಕಶಸಾ. ೬೯-೫೭೦) ; ಕಾಲಿಂ ನವಮಣಿಮಯಮಂಜೀರಕಂ ನುಣ್ಚುತಂ ತೀವಿ ನಿಜಪ್ರದ್ಯೋತದಿಂ ಪಶ್ಚಿಮಶಿಖರಿ ಶಿರೋಭಾಗದೊಳ್ಬೀಟ್ಟುದೆಂಬಂತಿನಬಿಂಬಂ ರಂಜಿಸಿತ್ತಸ್ತಮಯಸಮಯದೊಳ್ (ಕಾದಂಪೂ. ೫೦೭) ; ಅತನುಬಾಣದ ಪೊಗರಂ ನುಣ್ಚೊಗರೊಳಿಟಿಸಿ ನೋಡಿದ ಕಣ್ನುಣ್ಚುಗುಮೆನಿಪ ನುಣ್ಪಿನಿಂದೇಂ ಸೊಗಯಿಸುವುವೊ ಬಾಹುಮೂಲಮಾ ಕಾಮಿನಿಯಾ (ಮಲ್ಲಿಪು. ೩-೬೮). ೨. ತಪ್ಪಿಸಿಕೊಳ್ಳು ; ನುಸುಳಿಕೊಳ್ಳು : ಪೊಸೆದು ಪೂಳ್ವ ಸಾಹಸಿತನಕೆ ಬೆರಸಿದ ಮಲ್ಲನನೊರಸಿಬಿಡುವ ಲವಣಿಸಾರದೊಳ್ ನುಣ್ಚುವ ಮಲ್ಲನನೌಂಕಿಪಿಡಿದು (ಗಿರಿಕ. ೨-೧೦೫ ಪ) ; ಅಯ್ಯೊ ಪಾಪಿಯೇ, ಪರಮನೀಚರನ್ ನುಣ್ಚೆ ಪೋಗವಿಟ್ಟಕಟ ! (ಅಶ್ವತ್ಥಾ. ೧೫-೩೧೩). **ನುಣಿಚು**: (ಕ). **ನುಣುಚು$_1$** : (ಕ).

ನುಣಿಚಿಕೊಳ್ಳು, ನುಣುಚಿಕೊಳ್ಳು = ತಪ್ಪಿಸಿಕೊಳ್ಳು ; ನುಸುಳಿಕೊಳ್ಳು : ನೀವು ಅವರಿಂದ ನುಣಿಚಿಕೊಳ್ಳಲಾಗಲಿಲ್ಲ, ಅಲ್ಲವೆ ? (ಪುನರು. ೨೪) ; ಸೋದರರ ಮೇಲೆ ಜವಾಬ್ದಾರಿಯನ್ನು ಹೊರಿಸಿ, ತಾನು ನುಣುಚಿಕೊಳ್ಳುವ ಉಪಾಯವನ್ನು ಹುಡುಕುತ್ತಾನ (ಮನೋನಂ. ೨೪೩).

ನುಣ್ಣಗಲಿ (ನಾ). ಅಂದವಾದ ವೇದಿಕೆ,—ಕಟ್ಟೆ ; ನಯವಾದ ಜಗಲಿ : ಪಗಲನುದಂಶುವಿಂದುಗುಟ್ಟ ದೀವಿಗೆ ತೆಳ್ಪಳಿಕಿಂದಮಾದ ನುಣ್ಣಗಲಿಯೊಳಾಯ್ತು ಮೆಲ್ಪೆನಪ ಪಾಸಲರ್ಮಟ್ಕೆಯ ತಾಣಂ (ಜಂದ್ರಪು. ೪-೬೧). [ನುಣ್(<ನುಣ್ಣೆತು)+ಜಗಲಿ]

ನುಣ್ಣಗೆ (ಅ). ೧. ನಯವಾಗಿ ; ಕೋಮಲವಾಗಿ ; ಮೃದುವಾಗಿ : ನುಣ್ಣಗೆ ಬಣ್ಣಗೆ ನುಡಿವ ಅಣ್ಣಗಳೆಲ್ಲರು ಕಣ್ಣು ಕಾಣದೆ ಕಾಡಬಿದ್ದರು ನಿಜಗುರುಸ್ವತಂತ್ರಸಿದ್ಧಲಿಂಗೇಶ್ವರಾ ನಿಮ್ಮನಜಾಯದ ಅಂಧಕರೆಲ್ಲರು (ಪಡರ. ೫೯-೨೪೩). ೨. ಅಂದವಾಗಿ ; ಚೆನ್ನಾಗಿ : ದೂರದ ಬೆಟ್ಟ ನುಣ್ಣಗೆ (ಗಾದ). ೩. ಜಿನುಗಾಗಿ ; ಸಣ್ಣಾಗಿ : ರಾಗಿ ನುಣ್ಣಗೆ ಬೀಸು (ರೂಢಿ). ೪. ಸಂಪೂರ್ಣವಾಗಿ ; ಪೂರ್ತಿಯಾಗಿ ; ನಿಶ್ಶೇಷವಾಗಿ : ಬಗೆದೀಡಾಡೆ ದುರಂತದುಃಖಿತತಿಗಳ್ ಬೆನ್ನಟ್ಟಿ ದುರ್ಮೋಹ ಮತ್ಸ್ಯಗಣಂಗಳ್ ಕಡಿದಿಕ್ಕೆ ಲೋಭಮಕರಾನೀಕಂಗಳಾಟಂದು ನುಣ್ಣಗೆ ನುಂಗುತ್ತಿರೆ ಮಾರರಾಗಶಿಶುಮಾರಂಗಳ್ ಮಹೋಗ್ರಂಗಳಿನ್ನೆಗಮೋದಂತೆ ತೊಟಲ್ದೆನಂ ತಿರಿಯಲಾಱೆಂ (ಅದಿಪು. ೯-೬೦) ; ಇದ್ದ ಆಸ್ತಿಯನ್ನೆಲ್ಲಾ ಅವನು ನುಣ್ಣಗೆ ಮುಗಿಸಿದ (ರೂಢಿ).

ನುಣ್ಣಗೆ ಮಾಡು = ೧. ನುಣುಪಾಗಿಸು ; ನಯಗೊಳಿಸು : ನೆಲಕ್ಕೆ ಹಾಕಿದ ಗಾರೆಯನ್ನು ನುಣ್ಣಗೆ ಮಾಡುವುದರಿಂದ ಹೊಳಪುಂಟಾಗುವುದು (ರೂಢಿ). ೨. ನಾಶ ಮಾಡು ; ಹಾಳು ಮಾಡು : ಅಪ್ಪ ಕೂಡಿಟ್ಟ ಹಣವನ್ನೆಲ್ಲಾ ಮಗ ನುಣ್ಣಗೆ ಮಾಡಿದ (ರೂಢಿ).

[ನುಣ್(<ನುಣ್ಣೆತು)+-ಅಗೆ೩]

ನುಣ್ಣಡಲೆ (ನಾ). ನುಣ್ಣಗಾದ ತಲೆ ; ಬೋಳಿಸಿದ ತಲೆ : ವ್ಯರ್ಥದಿ ನುಣ್ಣಡಲೆಗಳ ಮಾಡಿ ಲೋಕವ ಚರಿಸಲೇಕೆನ್ನು (ಸುಜ್ಞಾ. ಚಂ. ೧-೨೯). [<ನುಣ್ಣೆತು+ತಲೆ೧]

ನುಣ್ಣನೆ (ಅ). ೧. ಚೆನ್ನಾಗಿ ; ಅಂದವಾಗಿ ; ಸುಂದರವಾಗಿ : ತಮಾಲತರುಗಳುಮಂ ಪೊಸವಿಸಿಲ ಪೊಳಪಿನಿಂ ನುಣ್ಣನುಜ್ಜಳಿಪ ರನ್ನದೆಳ ವೆಳಗಿನ ಬಳಗದಿಂ ಬಣ್ಣಿಸಿ (ಕಾದಂಉ. ೫೨೬) ; ಸಣ್ಣ ನಡು ಬಳೆಯೆ ತ್ರಿವಳಿಗಳಡಗೆ ತೆಳ್ವಾಸೆ ನುಣ್ಣನೆ ಪೊಗರ್ದಡೆಯೆ (ಜೈಮಿಭಾ. ೧೮-೩೪). ೨. ನಿಶ್ಶೇಷವಾಗಿ ; ಸಂಪೂರ್ಣವಾಗಿ ; ಪೂರ್ತಿಯಾಗಿ : ಕೆಲರಂ ನುಣ್ಣನೆ ನೊಣೆದಂ ಕೆಲರಂ ಪಿಡಿದಡಸಿ ನುಂಗಿದಂ (ಗದಾಯು. ೩-೯) ; ನುಣ್ಣನೆ ನೊಣೆವುದು ಮಾಂಸಮನುಣ್ಣದನಂ ದಿವಮನೆಯ್ದನೆಯ್ದನೆನುತ್ತಂ ಪಣ್ಣಂ ಕಲಸುವರಿನಂ ಬಣ್ಣಿಸಿ ತಾಂ ಪೆಟ್ಟಡೆಲ್ಲಿಯುಂ ಸ್ಮೃತಿಕಾಜರ್ (ಸಮಸ್ಕ. ೧೪-೧೪೧) ; ಉಗ್ರಫಣೆ ಮುಳಿಸಿಂದಂ ಮಡಿಪಿದೊಡೆತ್ತಿದನಂ ಕೂಗಿಡೆ ನುಣ್ಣನೆ ನೊಣೆದೊಡಾವ ಧರ್ಮಂ ಮುನಿಪಾ (ಧರ್ಮಾಮೃ. ೧೨-೧೧೦) ; ಜಗಜಟ್ಟಿ ಹಾಯ್ಕೊಂಡು ನುಣ್ಣನೆ ಬಿಟ್ಟು ಮುಜುಗಾಟದಲಿ ಸದೆದನು ಮತ್ತೆ ಕೌರವನ (ಸಂಭಪ. ೧೭-೫೯) ; ನುಣ್ಣವಿಲ್ಲ ಭಾಗವತರೆ ನುಣ್ಣನೆ ಗೋಡೆಯ ನಿನ್ನೆ ತೊಡೆದು ಬಿಟ್ಟೆ (ಪುರಂದ. ೨-೪೪ ಪಲ್ಲವಿ). ೩. ಸಭ್ಯವಾಗಿ ; ಸಾಧುವಾಗಿ : ಮಹಾ ನಾಯಾವಿಯು ತುದುಗುಗೊಂಡ ತೊಟ್ಟನಂತೆ . . . ನಿಮ್ಮ ಮುಖೊಳ್ಕು ನುಣ್ಣನಿರ್ದಪಂ (ಧರ್ಮಾಮೃ. ೬-೧೧೫).

ನುಣ್ಣನಾಗು = ೧. ನಯವಾಗು ; ನುಣುಪಾಗು : ಲಲಿತಪದಂ ಪ್ರಸನ್ನಕವಿತಾಗುಣವಿಲ್ಲದೆ ಪೂಣ್ದು ಪೇಟ್ಟ ಬೆಳ್ಗಳ ಕೃತಿಬಂಧಮುಂ ಬರೆ[ಪ]ಕಾಜರ ಕೈಗಳ ಕೇಡು ನುಣ್ಣನಪ್ಪಳಕದ ಕೇಡು ಪೇಟುಸಿದೊಡರ್ಥದ ಕೇಡು (ಪಂಪಭಾ. ೧-೧೨). ೨. ಇಂಪಾಗಿರು ; ಮಧುರವಾಗಿರು : ನೆಗೆದ ಮುಂಗಿಲ್ಗಳುಂ ಸುರಿವ ಪೆರ್ಮಟಿಯುಂ ದಿಗೆ ನುಣ್ಣನಪ್ಪ ಕೇಕಿಗಳ ಸರಂಗಳುಂ ಪೊಳೆವ ವಿಂಜುಗಳುಂ . . . ಪಥಿಕಾಂಗನಾಜನದುಸಂಜಿಸುವಂತಿರೆ (ಕವಿಾ. ೧-೧೨೪). ೩. ಸೂಕ್ಷ್ಮವಾಗಿರು : ಊಹೆ ಮಿಕ್ಕ ಯುಕ್ತಿಯಿನ್ ನುಣ್ಣನಪ್ಪ ಜಾಣ್ಮೆಯಿನ್ ಕೆಡಕಗೊರ್ಕೆ ನಡೆದಪನ್ ನಲ್ಮೆಗೊರ್ಕೆ ನಡೆದಪನ್ (ಅಂತಿಗೂ. ೧೭-೩೫೦).

[ನುಣ್(<ನುಣ್ಣೆತು)+-ಅನೆ೧]

ನುಣ್ಣನೆಯ (ಗು). ೧. ನಯವಾದ; ಜಿನುಗಾದ : ಆ ನುಣ್ಣನೆಯ ಹಿಟ್ಟನಂಗಯ್ಕೆ ಸರಿದಟ್ಟದೊಳು ತಣ್ಣೆಱೆದು ನುಡಗಿಯೆಮ್ಮೆಯ ಬೆಣ್ಣೆಯಂ ಕಾಸಿ ಬೇಯಿಸೆ ಸಮುದ್ರಫೇಣೆ (ಸೂಸಪಾ. ೧-೨೩). ೨. ನುಣುಪಾದ : ನುಣ್ಣನೆಯ ಶಿಲೆಯೊಳಗೆ ಬಣ್ಣಿಸುತ ಬರೆದ ಪಟದೊಳಗೆ ಇರುವಾತ ತನ್ನೊಳಗೆ ಇರನೆ (ಸರ್ವಜ್ಞ. ೩೩೮). ೩. ಮಧುರವಾದ ; ಇನಿದಾದ ; ಹಿತವಾದ : ಕೊಡುವುದುಂ ಕೊಂಬುದುಂ ಸರಿವಂತ ಭಕ್ತರೊಳು ನುಡಿವುದುಂ ನುಣ್ಣನೆಯ ಮಾತನಾ ಭಕ್ತರೊಳು (ಅಕ್ಕಿರ. ದೇ. ೯೨-೬) ; ನುಣ್ಣನೆಯ ಸಣ್ಣ ದನಿ ಗೀತಮುಂ ಹಾಡಿತ್ತು (ಕವಿಸೋ. ೨೦-೨೩). [ನುಣ್(<ನುಣ್ಣೆತು)+-ಅನೆಯ೨]

ನುಣ್ಣುಮಾತು (ನಾ). ನಯವಾದ ಮಾತು ; ಮೃದುವಾದ ಮಾತು : ಸೂಕ್ಷ್ಮ ನೀ, ದಿನಬಳಕೆ ನುಣ್ಣ ಮಾತಿದು ತೋರ ಅರಿದಿದಕೆ ನಲುಗಿಸದ ನಿನ್ನ ಹಿದಿಯೆ (ಪುಲದೇ. ೪೩-೩). [<ನುಣ್ಣೆತು+ಮಾತು೧]

ನುಣ್ಣುವಿರ್ (ನಾ). ಮೃದುವಾದ ತುಪ್ಪುಳು : ಅನಿತುಂ ಪೋತಂಗಳಂ ವೀಕ್ಷಿಸುತೆಜಕೆಗಳಂ ಮೆಲ್ಲನುರ್ಚುತ್ತೆ ನಂದೊಯ್ಯನೆ ಸಾರ್ದ್ರಕ್ರೋಟಿಯಿಂದಂ ತೊಡೆದು ಗಜಗಳಂ ನುಣ್ಣುವಿರ್ [ಪಾಠಾಂ.ನುಣ್ಣೆ]ದಿರ್ಚಿ ಮೆಯ್ಯಂ ತೊನೆದು . . . ಕುಕ್ಕುಟಂ ಕೂಗಿತಾಗಳ್ (ಪದ್ಮಸಾ. II, ೬೯೫ ; ಶಾಂತೀಶ್ವ. ೧೧೧-೧೬ ನೋ).

[ನುಣ್(<ನುಣ್ಣೆತು)+ನವಿರ್]

ನುಣ್ಣೆತ್ತು, ನುಣ್ಣೆತ್ತು (ನಾ). ೧. ಮೃದುವಾದುದು; ಕೋಮಲವಾದುದು : ನತಮುಂ ಮಾಂಸಳಮುಂ ನುಣ್ಣೆತುಮಾಗಿರೆ ತೋರ್ಪ ಮನ್ನುಲದು ಶುಭದಂ ಬೆನ್ನ ತಿಪುಜುವಾಗೆ ಶುಭಂ (ಲೋಕೋಪ. ೧೧-೯) ; ಕೊಳಂಗಳೊಳಪೊಕ್ಕು ತಾವರೆಯ ಪಚ್ಚೆಲೆಯಂ ಮೆಯ್ಕೊಳಿಕಾಂತು ನುಣ್ಣೆತಪ್ಪೆ [ಪಾಠಾಂ.ನುಣ್ಣನಪ್ಪೆ]ಳವಿದಿರ ಬಣ್ಣಮುಂ ತಳೆದ ನೀರ್ಮೆಣ್ಣಂತಿರ್ಪರ್ (ಕಬ್ಬಕಾ. ೩೧೫). (ಗು). ೨. ಕಾಂತಿಯುತವಾದ ; ಹೊಳಪಿನಿಂದ ಕೂಡಿದ : 'ನುಣ್ಗಾದಪು' 'ನುಣ್ಗೆಂಪು' ಪರಾ. ೩. ಕೋಮಲವಾದ ; ಮೃದುವಾದ : 'ನುಣ್ಗಾದವು' ಪರಾ. ೪. ಅಂದವಾದ ; ಚೆಲುವಾದ : 'ನುಣ್ಗಾದಿರ್' ಪರಾ. ೫. ನಯವಾದ ; ನುಣುಪಾದ : 'ನುಣ್ಗಾಲ್ಲ' ಪರಾ. ೬. ಇಂಪಾದ ; ಮಧುರವಾದ : 'ನುಣ್ಗೊಂದಳ್' ಪರಾ. ೭. ಹಿತವಾದ; ಪ್ರಿಯವಾದ : 'ನುಣ್ಪೆಸ' ಪರಾ. ೮. ಅಧಿಕವಾದ ; ಅತಿಶಯವಾದ : 'ನುಣ್ಮೆಂಚು' ಪರಾ. ೯. ತೀಕ್ಷ್ಣವಾದ ; ಚುರುಕಾದ : 'ನುಣ್ಗಟಕಿ' ಪರಾ. **ನುಣ್ಣೆತ್ತು** : ೧. ಬೆಟ್ಟತು, ಬೆಟ್ಟತ್ತು . . . ನುಣ್ಣೆತ್ತು ; ತಣ್ಣೆತ್ತು ; ಬಿಣ್ಣೆತ್ತು (ಶಮದ. ೬೬ ಪ್ರಯೋ).

ನುಣ್ಣೆತಂ ಮಾಡು = ಮೃದುವಾಗಿಸು ; ನಯಗೊಳಿಸು : ಹಪ್ಪಳದಂತೆ ಲತೆಯಿಱುದು ಬೆಣ್ಣೆಯಂ ಬೆರಸಿ ಅಕ್ಕಿಯ ಹಿಟ್ಟನವ ಜೋರಿಡು ಮೈಯೊಳಗೆ ತಡಹಿಕೊಂಡು ನುಣ್ಣೆತಂ ಮಾಡಿ (ಸೂಸಪಾ.೧-೪೫).

ನುಣ್ಣೆತಂವೇಟ್ಸ್ = ನಯವಾಗಿ (ವಂಚಕತನದ) ಮಾತನಾಡು; ಸೋಗಿನ ಮಾತು ಹೇಳು : ಪೆರ್ಜೋಡೆಯಂತೆ ನುಣ್ಣೆತಂವೇಟ್ದು ಪಣುಗಾಳಂತೆ ಪಾಯಂಬಡೆದು[ಂ] ಮೀಳದಂಳದಂತೆ ಸುಟಾಯಜುದು[ಂ] (ಪಂಪಭಾ. ೬-೬೨ ಪ).

[ದೇ.॥ ತಮಿ. ನುಣ್ ; ಮಲ. ನುಣ್ಮ ; ತುಳು. ನೊಣ್ಣಾ ; ತೆಲು. ನುನ್]

ನುಣ್ಣೆತ್ತು 'ನುಣ್ಣೆತು' ನೋ.

ನುಣ್ಣೆರ್ (ಕ್ರಿ). ನಯವಾಗಿರು; ನುಣುಪಿನಿಂದ ಕೂಡಿರು: ನುಣ್ಣೆಹ ಕದಪುಗಳೊಳು ನೊಸಲೊಳು ಕಪ್ಪ ಬಿನ್ನಣಮೆನಲೊಂದಿಸಿದರು (ಅಂಜಚ. ೪-೪೨). [ನುಣ್(<ನುಣ್ಣೆತು)+ಇರ್$_1$]

ನುಣ್ಣಿಸು (ಕ್ರಿ). ೧. ನಯಗೊಳಿಸು; ನುಣುಪುಮಾಡು: ನೆರೆದು ಕುತರ್ಕದಿಂದರೆದು ಸಣ್ಣಿಸಿ ನುಣ್ಣಿಸಿಯಂತದಿಂದು ಪೋದರ ಕೃತಿಯೊಳ್ಳಿ ತನ್ಯಕೃತಿ ಪೊಲ್ಲದಿದೆಣ್ಣಿಗೆ ಬೆಣ್ಣೆ ಸಣ್ಣವೆಂಬರ ನುಡಿ ಬೇಡ (ಗಿರಿಕ. ೧-೧೯). ೨. ಅಂದಗೊಳಿಸು; ಸುಂದರಗೊಳಿಸು; ಸೊಗಸುಂಟುಮಾಡು: ಸರ್ವದಿಶಾಧಿನಾಥರನಿತುಂ ದಿಕ್ಕಾಮಿನೀವಕ್ತ್ರಮಂಡಳಮಂ ನುಣ್ಣಿಸುವರ್ (ಅನಂಪು. ೧೪-೩೫); ಖಡುಗಮುಖದಲಿ ಕಾಬುದಲ್ಲದೆ ನುಡಿಯ ನುಣ್ಣಿಸಲೇನು ಕಾರಣ (ಪ್ರಭುಲೀ. ೧೯-೩೩). ೩. ಕಾಂತಿಗೊಳಿಸು; ಹೊಳಪುಂಟು ಮಾಡು: ದೇಹಾಂಶುಗಳ ಬಳಗಧಿಂ ತಾರಾಚಳಮನಸದಳಂ ನುಣ್ಣಿಪಂತೋರ್ವಳತ್ಯುತ್ತಮ ದಿವ್ಯಾಕಾರೆ ಕುಳ್ಳಿರ್ದತನುಹರನನಾರಾಧಿಸುತ್ತಿರ್ದಳ್ (ಕಾದಂಪೂ. ೬೫೯); ಬಿಸಿಲಂ ಲಾವಣ್ಯದಿಂ ನುಣ್ಪಡರೆ ಬೆಳಗುತುಂ ನೀಳ್ದಪಾಂಗಂಗಳಿಂ ನುಣ್ಣಿಸುತುಂ ದಿಕ್ಕಾಮಿನೀಸಂಕುಳಮನಮಳಹಾಸಪ್ರಭಾಪೂರದಿಂ ಪುಟ್ಟಿಸುತುಂ ತಳ್ತಚ್ಚವೆಳ್ದಿಂಗಳನವಯವ ಶೃಂಗಾರವಾರಾಶಿಯೊಳ್ ತೇಂಕಿಸುತುಂ ವಕ್ತ್ರೇಂದುವಂ ಬಂದುದು ನೆರೆದಿದಿರಂ ವಾರನಾರೀಕದಂಬಂ (ಲೀಲಾವ.೧೨-೯);ಮಿಸುನಿಯ ಕಾಂತಿಯಂ ಬಳಿದು ನುಣ್ಣಿಸಿದಂದದ ಸಣ್ಣ ತುಪ್ಪುಟಿಂತಸಿಯ ಕೊರಲ್ ಚಳಲ್ಲುಳಿತ ಕರ್ಣಯುಗಂ (ಶಾಂತೀಶ್ವ. ೫-೧೫೨); ಸಿಂಗರಕ್ಕೆ ಮನಮೆಳಸಿ ನುಣ್ಣಿಸುವಂತೆ ರಸಮಱಿತ ಮೊಗಮಂ ಬೀತ ಕಾಮಮಂ ಹಸಗೆಯ್ವೆನೆಂಬ ಮನದುಜ್ಜುಗದ ಲೋಲೆಯರ್ ಮೆಱೆದರ್ (ಚಿಬಪು. ೧೦-೭೫); ನಿನ್ನ ಭಾಂಡವ ಮುರಿದು,ಬಗೆಬಗೆಯ ಬಣ್ಣಗಳ ನುಣ್ಣಿಸಿದ ಬಣ್ಣಿಸಿದ ಕನಸುಗಳ ಚೆಲ್ಲಿತ್ತ (ನಲ್ಮೆ. ೫೩-೨೪). ೪. ಲೇಪಿಸು; ಹಚ್ಚು; ಬಳಿ: ಕಣ್ಣಿಗಿಕ್ಕೊಡನೆ ಕಮ್ಮೆಣ್ಣೆಯಳಕದಿಂ ನುಣ್ಣಿಸು ಲಲಿತಕಜ್ಜಳವಾ ಬಣ್ಣಿಸಿ ಸವಿದಿನಿವಣ್ಣ ನೋಡೆನ್ನಾಣೆ ಹೆಣ್ಣೆಯೆಂದಳು ವಿರಹದಲಿ (ಭೈರವೇ. ೨-೧೧೭). ೫. ಸೋಕಿಸು; ತಗುಲಿಸು: ನುಣ್ಣಿಸೆ ಪರುಷವ ಲೋಹಕೆ ಚಿನ್ನವು (ಪಂಚತ. ೩೮-೯೫). ೬. ಮಸೆ; ಹರಿತಗೊಳಿಸು: ಉಣ್ಣದರೂರೊಳಗಣ ದೇವಿಯರಂ ನುಣ್ಣಿಸಿದಸಿಧಾರಾಪೂರ್ವಕದಿಂ ತಿಣ್ಣನೆ ಕೈಗೂಡಿಸಿ ಭೂತಮುಮಂ ಬಿರ್ದುವೊಲೆಯ್ದಿಸುವೆಂ (ಜಯಕಾ. ೬-೯). ೭. ಹದಗೊಳಿಸು; ಪಕ್ವಗೊಳಿಸು: ಸಹಜವಾಗಿ ಜಂಗಮಸ್ವೀಕಾರವುಂಟಾಗುವಂತೆ ಆಡಿಗಡಿಗೂ ಮನಸ್ಸನ್ನು ಅರೆದು ನುಣ್ಣಿಸಿದರು (ಭಕ್ತಿಬ. ೩೪). ೮. ಅರೆ; ಸಣ್ಣಿಸು; ನುರಿಸು: ಕಾರ ಸರಿಯಾಗಿ ನುಣ್ಣಿಸು (ರೂಢಿ). [ನುಣ್(<ನುಣ್ಣೆತು)+ಇಸು$_3$]

ನುಣ್ಣುಡಿ (ನಾ). ನಯವಾದ ಮಾತು; ಸವಿಯಾದ ಮಾತು: ನಸೆಯನೆಸಗುವ ಪಲವುಂ ನುಣ್ಣುಡಿ ಪಸರಿಸೆ ಮನದಿಂ ಜಾಣ್ಣಡೆಗೊಳೆ ತೊಡರ್ದರಿನಿಯಕೂಟದೊಳಿನಿಯರ್ (ಚಂದ್ರಪು. ೮-೬೯); ರಾಗಮನೀವ ನುಣ್ಣುಡಿಗಳಿಂ ವನಪಾಲಕನಕ್ಷಕಂ ವಸಂತಾಗಮಮಂ ಸಮಂತಱಿಯೆ ಬಿನ್ನವಿಸುತ್ತಿರೆ (ಕುಸುಮಾ. ೫-೪೬); ಒಳ್ಳಿದರವರಂತಿರಲಿ ನುಣ್ಣುಡಿಗಳ ಕಳ್ಳರಿಗಾನೆಱಗುವೆನು (ಕುರಾಸಾಂ. ೧೮-೫೨); ಅರಗಿಳಿವಿಂಡು ತೊಂಡು ಗೆಡೆವಂತಿರೆ ನುಣ್ಣುಡಿ ಸೋಗೆ ಸಾಗಿ ಸೈವರಿವವೊಲೊಪ್ಪೆ ಸೋರ್ಮುಡಿ . . . ಬಂಪಳದೊಂದು ಬಿಂಕದಿಂ (ರಾಜಶೇ. ೭-೧೬).

[ನುಣ್(<ನುಣ್ಣೆತು)+ನುಡಿ$_2$]

ನುಣ್ಣೆಸಳ್ (ನಾ). ಕೋಮಲವಾದ ದಳ; ಮೃದುವಾದ ರೇಕು, —ಪಕಳೆ: ಕೇತಕಿಯ ಸಣ್ಣನಪ್ಪ ನುಣ್ಣೆಸಳ ಕರ್ಣಪತ್ರಮನಿಕ್ಕಿ (ಗಿರಿಕ. ೫-೭೬ ಪ); ಈ ಹೊಸಕುಸುಮವೆಲ್ಲಿಯದೆನುತ್ತರಸಂ . . . ಒಳಗಣ ಪರಿಮಳದ ತೆನೆಯ ಮಗ್ಗುಲೊಳೊಗ್ಗಿಬೆಳೆದ ಸಣ್ಣಮ[ನ]ಪ್ಪ ನುಣ್ಣೆಸಳನೊಂದಂ ತೆಗೆದು ಬಸವರಾಜನ ಕೈಯೊಳು ಕುಡೆ (ಬಸರ. ೬-೭೦); ಜೆಡೆಯೆಡೆಯಾಂತ ಕೇತಕಿಯ ನುಣ್ಣೆಸಳಾಗೆ ಶಶಾಂಕರೇಖೆ (ವೃಷವಿ. ೧೪-೨೯). [ನುಣ್(<ನುಣ್ಣೆತು)+ಎಸಳ್(<ಎಸಟ್ಳ್)]

ನುಣ್ಣೊಸಲ್, ನುಣ್ಣೊಸಲು (ನಾ). = ನುಂಪುವಣೆ: ಸುಲಿಪಲ್ಕೆಂಬ ವಳಂಬೊಲೊಪ್ಪುವಧರಂ ಭೃಂಗಾಳಕಂ ನುಣ್ಣೊಸಲ್ತಿಲಪುಷ್ಪೋಪಮನಾಸಿಕಂ . . . ಪದಾಬ್ಜಂ ಮಂಜುಳಂ ಕಾಂತೆಯಾ (ರಾಜಶೇ. ೩-೧೭).

ನುಣ್ಣೊಸಲು: ಭಲರೆ ಭಾಪುರೆ ಕಲಿಗಳ ನುಣ್ಣೊಸಲಿನ ತಿಲಕ ಸಾಹಸವಿಕ್ರಮಾರ್ಕ (ಕಂನವಿ. ೧೯-೭೭).

[ನುಣ್(<ನುಣ್ಣೆತು)+ನೊಸಲ್]

ನುಣ್ಣೊಸಲು 'ನುಣ್ಣೊಸಲ್' ನೋ.

ನುಣ್ದನಿ (ನಾ). = ನುಣ್ಚರ ೧: ಪೂಗಣೆ ಕರ್ಪುವಿಲ್ ಮಿಳಿರ್ವ ಮಿಾಂಗುಡಿಮಲ್ಲಿಗೆ ಮಾವು ತೆಂಬೆರಲ್ ಕೋಗಿಲೆ ಜೊನ್ನಮಿಂದೊಳದ ನುಣ್ದನಿ ಸುಗ್ಗಿಯೆನಿಪ್ಪವೆಲ್ಲಮೊಂದಾಗಿಯೆ ದರ್ಪಕಂಗೆ ಸಮನಿಪ್ಪ ಜಗಜ್ಜಯ ದರ್ಪಮಂ ಸಮಂತಾಗಿಸಲೊಂದೆ ಸಾಲ್ಗುಮೆನಿಸಿತ್ತು ಕುಮಾರಕೃತ ಪ್ರಸಾಧನಂ (ಚಂದ್ರಪು. ೬-೬೩); ಇಂಚರಂ ಕರಂ ಬಗೆಗೊಳಿಸಿರ್ದ ಕೋಗಿಲೆಯ ನುಣ್ದನಿಯಾಗೆ ಜಗಜ್ಜಯಕ್ಕೆ ತಾಂ ಮಿಗೆ ನೆರಮೆಂಬನಾಸತಿಯ ಜವ್ವನಮೆಂಬ ವಸಂತಮಂ ಸ್ಮರಂ (ವರ್ಧಪು. ೧-೮೬); ನೇವುರದ ನುಣ್ದನಿಯ ಕಾಂಚಿಯ ಕೇವಣದ ಕಿಂಕಿಣಿಯ ರಭಸದ . . . ಡೊಳ್ಳಾಸ ಕಾತಿಯರಾ ವಿಬುಧಪತಿಯೋಲಗವ ಹೊಕ್ಕರು ನವಾಯಿಯಲಿ (ಕುವ್ಯಾಅ. ೬-೯೦); ಹಾಡಿನ ನುಣ್ದನಿಯತ್ತ, ಗೋಳಿನ ನೀಳ್ದನಿಯಿತ್ತ (ಪಾಂಚಜ. ೬೭-೧೩). [ನುಣ್(<ನುಣ್ಣೆತು)+ದನಿ$_1$]

ನುಣ್ದನಿವಿಡು (ಕ್ರಿ). ಮಧುರವಾದ ಸ್ವರವನ್ನು ಹೊರಸೂಸು,—ಹೊಮ್ಮಿಸು: ಕಾಂಚಿ ನುಣ್ದನಿವಿಡೆ ನೂಪುರಂ ಪೊಡರೆ ನೀವಿ ಜಗುಟ್ಟರೆ ನೀಟ್ದ ಕಣ್ಮಲರ್ ತನಿವೆಳಗಂ ಕಡಲ್ವರಿಸೆ . . . ತಳರ್ದತ್ತು ವಿಲಾಸಿನೀಜನಂ (ಕುಸುಮಾ. ೫-೯೯). [ನುಣ್ದನಿ+ಬಿಡು$_1$]

ನುಣ್ದಳಿರ್ (ನಾ). ಕೋಮಲವಾದ ತಳಿರು; ಎಳೆಯ ಚಿಗುರು; ಮೃದುವಾದ ತಳಿರು: ಕನರ್ಗೊನರೆಲ್ಲಿಯಲ್ಲಿ ಮಿಳಿರ್ದಾಡುವ ನುಣ್ದಳಿರೆಲ್ಲಿಯಲ್ಲಿ . . . ಪಣ್ಗೊನೆಗಳವೆಲ್ಲಿಯಲ್ಲಿಯೆನೆ ಸೋಲಿಸುಗುಂ ಬಿಡದಾವನಂ ಬನಂ (ಕಬ್ಬಿಕಾ. ೩೨). [ನುಣ್(<ನುಣ್ಣೆತು)+ತಳಿರ್$_2$]

ನುಣ್ದುಟಿ (ನಾ). ಮೃದುವಾದ ತುಟಿ; ಕೋಮಲವಾದ ಅಧರ: ನಗೆಮೊಗದೊಳ್ ತೆಱಂಬೊಳೆದು ನುಣ್ದುಟಿಯೊಳ್ ಮೊಗಮಿಕ್ಕಿ ಗಲ್ಲದೊಳ್ ಜಗುಟ್ಟು. . .ಮಾರ್ಪೊಳೆದುವಾಕೆಯ ಡಾಳಮನಾಂತ ದಿಟ್ಟಗಳ್ (ಕಬ್ಬಿಕಾ. ೩೩೦). [ನುಣ್(<ನುಣ್ಣೆತು)+ತುಟಿ]

ನುಣ್ದುಱುಬು (ನಾ). ಅಂದವಾದ ಮುಡಿ; ಸುಂದರವಾದ ತುರುಬು: ಆ ಕೋಮಲೆಗಂದಮಾದುದು ನುಣ್ದುಱುಬು (ಶ್ರೀಪಾಲ. ೧೦-೪೧); ನುಣ್ದುಱುಬು ಪೆಱೆನೊಸಲ್ ನಿಡುಗಣ್ದೇಸೆಯ ನೋಟಮೆಸೆಯೆ . . . ಪೆಣ್ದೇವತೆಯಂತೆ ಬಂದಳರಮನೆಯಿಂದಂ (ಚಿಕವಿ. ೪-೩೮).

[ನುಣ್(<ನುಣ್ಣೆತು)+ತುಱುಬು$_2$(<ತುಱುಂಬು$_2$)]

ನುಣ್ದೊಡೆ (ನಾ). ೧. ನಯವಾದ ತೊಡೆ; ನುಣುಪಾದ ತೊಡೆ: ನುಣ್ದೊಡೆಯ ಚೆಲ್ವಂ ನೋಡಲೆಂದು ಸಿಡಿಮಿಡಿವರ್ಪ ಕಾತರವಿಟರ ಕಣ್ಗಪಾರಣೆಯಂ ಮಾಡಿಸಿಯುಂ (ಚಂದ್ರಪು. ೮-೪ ಪ); ಮಿಸುಗುವ ತಮ್ಮ ನುಣ್ದೊಡೆಗಳುಜ್ವಲಮಜ್ಜನಪೀಠಮಾಗಿ ರಾಜಿಸೆ (ಕುಸುಮಾ. ೬-೭೯); ಕರ್ವಾಳೆಯನೇಳಿಪ ನುಣ್ದೊಡೆಯ ಇರುಳ ತಿರುಳ ಬಣ್ಣದ ತನುವಿನ ಕತ್ತುರಿಗಂಪಿನ ಕಾಳ್ಬೇಡಿತಿ ನಡೆತಂದು (ಜಯಕಾ. ೨-೨೧); ನುಣ್ದೊಡೆ ಕದಕ್ಕದಿಸುತ್ತಿರೆ ಬಂದು ನಿಂದು ಪೆಣ್ಗಡಣಮದಲ್ಲಿ ಪಾಱುಪುದು ಕೈರವದಿಂದಿಡುತಂ ಶುಕಾಳಿಯಂ (ವೃಷವಿ. ೪-೧೯). ೨. ಅಂದವಾದ ತೊಡೆ:

ಸೊಬಗುರನ್ನೆಯ ತನ್ನ ನುಣ್ಣೊಡೆಯೊಳಗಿಟ್ಟುಕೊಂಡು ಕಂದರ್ಪಸುತ ತೆರಳಿದ (ನೋಹತ. ೪೧–೬೫). [ನುಣ್(<ನುಣ್ಣಗು)+ತೊಡೆ$_2$]

ನುಣ್ಣೊದಳ್ (ನಾ). = ನುಣ್ಣೊದಳ್ : ಈಕ್ಷಿಸಿ ಮುಕ್ಕಳ ಮುದ್ದುಗೆಯ್ತು ದೊಳ್ಪಂ ಬಿಡದಪ್ಪಿ ಕೋಮಲತರಾಂಗಮನಾಲಿಸಿ ನುಣ್ಣೊ[ಪಾಠಾಂ. ಣ್ಣೊ]ದಳ್ ಪೊದಟ್ಟಿಂದಿನಿವಾತನಟ್ಟುಜೊಳ್ ವಾಸಿಸಿ ನೆತ್ತಿಯಂ (ಚಂದ್ರಪು. ೩–೪೪) ; ಚಲಿಪಿಲಿಗುಟ್ಟಿ ನುಣ್ಣೊದಳ್ಗಳಿಂ ಕವಿಗಿಂಪ ನೊಡರ್ಚ ಗೆಜ್ಜೆಗಳ್ ಘಲಿಕೆನಿಪಂತಿರೆಯ್ದಿ (ದಶಕು. ೧–೫೭). [ನುಣ್(<ನುಣ್ಣಗು)+ತೊದಳ್$_2$]

ನುಣ್ಣೊಳ್, ನುಣ್ಣೊಳು (ನಾ). ಮೃದುವಾದ ತೋಳು; ಕೋಮಲವಾದ ಬಾಹು : ನುಣ್ಣೊಳ ಕಾಂತಿ ಕರತಳದ ಕಾಂತಿ ಕಾಂ ತೊಳಪುರಸ್ಥಲದ ಕಾಂತಿ . . . ಉಗುರ್ವೆರಲ ಕಾಂತಿಗಳ್ ತಿಂತಿಣಿಸಿ ಘನಕಾಂತಿಮಯವಾಗಿ ಕಣ್ಗೇಂ ಬೆದಂಗಾದನೋ (ಪದ್ಮಕಾ. ೩–೩) ; ಕುಲದೀಪಡಂದ್ರನಂ . . . ಮುದ್ದಿಸುತೆ . . . ಬಿಣ್ಣನುಣ್ ದೋಳ್ಗಳಿಂ ತನ್ನ ನೇದೋಳ್ಗಳಿಂ ಮುಟ್ಟಿ ಸೋಂಕಿಗೆ ಸೊಗಸುವಳು ತಾಯಿ (ತ್ರಿಪುರಾಸಾ. ೧೭–೪೫೨). **ನುಣ್ಣೊಳು** : ಸೂಡಿದರ್ ನುಣ್ಣೊಳ ಮಣಿಗಂಡ ಮಾತ್ರದಿ ಕೋಡಿದುನೆದೆಯ ಪೂಸರಳು (ನೋಹತ. ೨೮–೧೧). [ನುಣ್(<ನುಣ್ಣತು)+ತೋಳ್]

ನುಣ್ಣೊಳು 'ನುಣ್ಣೊಳ್' ನೋ.

ನುಣ್ಪಡರ್, ನುಂಪಡರ್ (ಕ್ರಿ). ೧. ನುಣುಪಾಗು ; ಕೋಮಲತೆಯನ್ನು ಹೊಂಮು : ಬರೆ ತೆಗೆದೀಂಟೆ ನುಣ್ಪಡರೆ ಪೊಣ್ಮಿದ ಬಾಯ್ ಕದಪಂ ಕದಂಪಿನಿಂದೊರಸೆ (ಪರ್ಥಪು. ೬–೫೦). ೨. ಸುಂದರವಾಗಿರು; ಅಂದವಾಗಿರು : ಕವಿಯಂ ಜಕ್ಕುಲಿಪಂತೆ ನುಣ್ಪಡರ್ದ ಶಬ್ದಂ ಶಬ್ದ ಸಂದರ್ಭದೊಳ್ ಸವಿಯಂ ಮುಂದಿಡುವರ್ಥಂ (ಚಂದ್ರಪು. ೧–೫೧). **ನುಂಪಡರ್** : ೧. ನುಂಪಡರ್ದ ಮಾಂದಳಿರಿದಿಯ ನವಕನಕಕಳಶಮಂ ಪೋಲ್ವ ಬಟ್ಟಬಲ್ಮೊಲೆಯ ಪವಳದ ಬಳ್ಳಿಯಂ ಪಳಿವ ಸಿರಿಯ ಚೆಂದುಟಿಯ . . . ಹೆಂಪಿನೊಳೊರ್ವ ಕೆಂಪು ನಡೆತರುತಿರ್ದಳು (ಭಕ್ತಾಜ. ೩–೨೪).

[ನುಣ್ಪು+ಅಡರ್]

ನುಣ್ಪಡಸು (ಕ್ರಿ). ೧. ಹೊಳಪಿನಿಂದ ಕೂಡಿರು ; ಕಾಂತಿಯುಕ್ತವಾಗಿರು : ಮಡ ಚೆಲ್ವ ಮೃದುಪಾದಾಂಗಂಳಿ ಜಾನು ಜಂಘೆ ನುಣ್ಪಡಸಿದ ಕರಿಕುಂಭಜಘನ ಬಡನಡು . . . ಉಡುರಾಜಮುಖವು ಪದ್ಮಿನಿಗೆ (ನೋಹತ. ೧೪–೩೪). ೨. ಅಂದವಾಗಿರು. [ನುಣ್ಪು+ಅಡಸು]

ನುಣ್ಪೆಕ್ಕು (ಕ್ರಿ). ನಯಗೊಳಿಸು ; ಸುಂದರವಾಗಿ ಕಾಣುವಂತೆ ಮಾಡು : ಎಳವುತ್ತಿನ ಕಾಂತಿಯಿಂದೆ ನುಣ್ಪೆಕ್ಕಿದವೊಲೆ (ಕವಿಚ. II, ೧೩ ಚಂದ್ರಪ್ರಭಸ್ತುತಿ). [ನುಣ್ಪು+ಇಕ್ಕು]

ನುಣ್ಪೆಡಿ, ನುಂಪಿಡಿ (ಕ್ರಿ). ೧. ನುಣುಪಾಗು ; ಸ್ನಿಗ್ಧವಾಗು : ಅರಯೆ ನೂಚಿಕುಂ . . . ಇಂಗುದೀ ಫಲವಿಳ್ದೇದದೆ ನುಣ್ಪೆಡಿದರ್ಪ ಕಲ್ಲಳುಂ ತೇರಿನ ಶಬ್ದಮಂ ಸಹಿಸಿ ನಂಬುಗೆಯಿಂ ಸುಳಿವೇಣಬ್ಯಂದಮುಂ (ಶಾಕುಂತ. ೬–೧೪). **ನುಂಪಿಡಿ** : ೨. ಕಾಂತಿಮಯವಾಗು : ತನು ಸೊಂಪಡರ್ದು ನುಂಪಿಡಿದು ಕಂಪೊಗೆಯೆ . . .ಜೌವನದೇಳ್ಗೆಯಿಂದೆಸೆವ ವಿಷಯೆ ನಿಜತಾತನ ಸವಿಾಪಕ್ಕೆತರುತಿರ್ದಳು(ಜೈಮಿಭಾ. ೨೯–೨೮). [ನುಣ್ಪು+ಇಡಿ$_2$]

ನುಣ್ಪೆಡು, ನುಂಪಿಡು (ಕ್ರಿ). ೧. ಹೊಳೆಯುವಂತೆ ಮಾಡು : ಹೊಳಪುಗೊಡು : ತನ್ನ ದಿಟ್ಟವೆಳಗಿಂ ನುಣ್ಪಿಟ್ಟು ಕೊಟ್ಟಳ್ ಘನ ಸ್ತನಭಾರಾವನತಾಂಗಿ ವಿಸ್ಮಯಪದವ್ಯಾಹಾರಮಂ ಹಾರಮಂ (ಪುಲ್ಲಿಪು. ೪–೧೧೪). **ನುಂಪಿಡು** : ೨. ನಯವಾಗಿ ಹೊಂದಿಸು : ದಿಟ್ಟಿಯರೆ ದೆಂತೊ ನವಕುಂಕುಮವನೀಗ ನುಂಪಿಟ್ಟರ್ಲ್ಲಿದೆ ಪೋದ ಮಧ್ಯದೊಳದೆಂತು ನಿಲಿಸಿದರೊ ದಿವ್ಯಾಂಬರವನು (ಜೈಮಿಭಾ. ೩೧–೬). [ನುಣ್ಪು+ಇಡು$_1$]

ನುಣ್ಪು, ನುಂಪು, ನುಣುಪು (ನಾ). ೧. ನಯವಾದುದು ; ಒರಟಲ್ಲದುದು : ಅರ ನೆಗಟ್ಟ್ಯಯುಂ ಬಲಮುಂ . . . ಪೂರೆ ದೊಳಿರ್ದು ನೋಡೆ ಸೊಗಯಿಪ್ಪುದು ಬೆಟ್ಟದ ನುಣ್ಪನಂತೆ (ಕಾವ್ಯಸಾ. ೪೩೫). ೨. ಮೃದುತ್ವ ; ಕೋಮಲತೆ ; ಮೃದರ್ವ : ಬೇಱ ದೊಂದು ಕಡುಗಾಡಿಯ ಸನ್ನಿಧಿ ಬೇಱದೊಂದು ನುಣ್ಪಿನ ಕಣಿ ಬೇಱ ದೊಂದು ಪೊಸಗಂಪಿನ ಪೊಂಪುಟಿ (ಶಾಂತಿಪು. ೪–೭೯) ; ನುಣ್ಪು ನಯಗಳಂ ಕಂಡರಿಯವನವನೊಳಗು ಹೊರಗುಗಳ್ (ತ್ರಿಪುರಾಸಾ. ೫೬೨–೨೬೭). ೩. ಕಾಂತಿ ; ಹೊಳಪು : ಗಲ್ಲಂ ನುಣ್ಪು ಕೈಮಿಕ್ಕು ಕನ್ನಡಿಯಂ ಪೋಲ್ತಿರೆ (ಕಬ್ಬಕಾ. ೧೩). ೪. ಅಂದ; ಚೆಂದ ; ಚೆಲುವು : ಅಸುಳೆಯು ಕೆಂಪು, ಪಾದರಿಯ ಕಂಪು ಪಯೋಜಲಸಸ್ಯರೋವರಪ್ರಸರದ ತಣ್ಪು ಸಂಪಗೆಯ ನುಣ್ಪು . . . ಸುತ್ತಲುಂ (ಸುಕುಮಾ. ೯–೪೮) ; ನೆಳಲ ತಣ್ಪೆಂದಂಕುರದ ಸೊಂಪಿಂ ಪಲ್ಲವದ ನುಣ್ಪೆಂ (ಗಿರಿಕ. ೨–೭೧೪) ; ಲತಾಂಗಿಯ ಜಕರವದು ದಿನದಿನಕೆ ನುಣ್ಪುಂ ಪೆಂಪುಮುಂಪುಂ ಕೊನದುಗ್ (ಬಸಪು. ೩–೪). ೫. ಜಾರಿಕೆ ; ಜಾರುವ ಗುಣ : ಮಿಕ್ಕಕ್ಷಿಗಳೋ ಶನಗಱೆಯ ದೇಹಕಾಂತಿಯ ನಿರೀಕ್ಷಿಸಲ್ ತನುನುಣ್ಪಿನೊಳ್ ನಿಲದೆ ಜಗುಳ್ದು ಪದಕಮಲಂಗಳೊಳ್ ನಿಂದುವೊ . . . ಎನಲ್ ಗಿರಿಸುತೆಯ ಪದನಖದ ಚೆಲ್ವೆನೆದುದು (ಚಿಬಪು. ೩೭–೧೨). ೬. ಸವಿ ; ಮಾಧುರ್ಯ : ಮಕ್ಕಳ ತೊದಲುನುಡಿಯ ನುಣ್ಪಿನಂತೆ ಮನಕ್ಕೆ ಬಂದಿದೆ ನುಡಿ ನಿನ್ನ (ಕುರಾಸಾಹಂ. ೧–೫೮) ; ಪುಗೆ ಮಾಂದ್ಯದೊಳೊಕ್ಕೊಡೆ ನುಡಿ ಕಡುನುಣ್ಪಾನಾನೆ ರಾಗದೊಳ್ ಮನಂ ಕಡೆಗನ್ತೊಡರ್ದಿರೆ ಜವ್ವನಮಡಿಯಿಟ್ಟುದು (ರಾಜಶೇ. ೪–೮೦). ೭. ಹೊಳಪುಂಟು ಮಾಡುವ ಲೇಪನ ವಸ್ತು ; ಅಣ್ಪು : ನರಿಗೂದಲ್ಗಿಕ್ಕಿ ನುಣ್ಪಂ ಮುಡಿಯನಳವಡಲ್ಸೆಕ್ಕಿ ಬತ್ತಿರ್ದ ವಕ್ತ್ರಾಂಬುರುಹಂ ವಿುಂಚಾಗಲಿರ್ಪಂ ತೊಡೆದು (ದಶಕು. ೪–೧೯೧). **ನುಂಪು** : ೧. ಹೊಸಕಿಚ್ಚಂ ಹೊಸೆದು ಖಂಡವಂ ಬಿಡಿಸಿ ಕೆಂಪುಳ್ಳ ನುಂಪುಳ್ಳ ಸೊಂಪುಳ್ಳ ಖಂಡಮುಂ ಕಾಸುತಂ (ಕಣ್ಣರ. ಚೇ. ೧೩೧–೭) ; ಹಾವುಮೆಕ್ಕೆಯ ಹಣ್ಣು ನುಂಪು[ಪಾಠಾಂ.ಣ್ಪು] ಆಗಿದ್ದರೇನು ಕಹಿ ಬೆರೆದ ಕಾರಣ ಪ್ರಯೋಜನಕಾರಿಯಾದುದಿಲ್ಲ (ಸಿದ್ಧೇನ. ೧೦೪–೬೫೫) ; ಎಳಲತೆಯನುಂಪು [ಪಾಠಾಂ.ಣ್ಪು]ಗಳ ನವಪರಿಮಳದ ಪವನನ ಸೊಂಪುಗಳ ವೆಗ್ಗಳಿಕೆ ಝಳಪಿಸಿ ಹೊಯ್ದು ಸೆಳೆದುದು ಜನದ ಕಣ್ಮನವ (ಕುಪ್ಯಾಪ. ೫–೪). ೪. ಕದ್ದಿನ ಬಿಲ್ಲು ಜೇವೊಡೆದಂತೆ ಪಾಡಿದರೊಬ್ಬೊಬ್ಬರಿಂಪು ನುಂಪಿನೊಳು (ಭರತ. ೧೩೬–೨೯) ; ಎಳದಳಿರ ಕೆಂಪು ಪೂಗಳ ಕಂಪು ಕೋಕಿಲಂಗಳ ಸರದ ನುಂಪು . . . ಸಂಗಳಿಸಿತೆಲ್ಲೆಲ್ಲಿಯುಂ (ಚಿಬಪು. ೪೫–೧೫). ೫. ಕಸ್ತೂರಿಕಾಸುಳುಂಕುಮವಾದಿಯಾಗಿಹ ಸಮಸ್ತ ಪರಿಮಳದ ನುಂ[ಪಾಠಾಂ.ನೂ]ಪಿಟ್ಟು ಮುಖಮುಲ ವಿನ್ಯಸ್ತ ಕರ್ಪೂರತಾಂಬೂಲಶೋಭಿತರಾಗಿ (ಚಿಪು. ೨೫–೨೯). **ನುಣುಪು** : ೧. ನಾಲಿಗೆಗೆ ನುಣುಪಿಲ್ಲ ಹಾಲಿಗಿಂ ಬಿಳುಪಿಲ್ಲ ಕಾಲ ನಿಂದಧಿಕ ಆರಿಯಿಲ್ಲ ದೈವದದು ಶೂಲಿಯಿಂದಿಲ್ಲ (ಸರ್ವಜ್ಞ. ೨೩೬). ೬. ಸಂಸ್ಕೃತ, ದ್ರಾವಿಡ ಭಾಷೆಗಳ ನಯ ನುಣುಪುಗಳನ್ನು ವೆಗ್ಗಳಿಸಿರ ಬಹುದು (ದ್ರಾವಿವಿ. ೧೫ ಜಿನ್ನೆಲ). ೭. (ಅಲಂ) ಮೋಸ ; ವಂಚನೆ. 'ನುಣ್ಪುವಮಾಡು' ಪರಾ.

ನುಣುಪಾಗು, ನುಂಪಾಗು = ನಯವಾಗು ; ಒರಟಾಗಿಲ್ಲದಿರು : ಈ ಭಾಗದ ಮೇಲೆ ದಪ್ಪವಾದ, ದುಂಡಾದ, ನುಣುಪಾದ . . . ಬೋದಿಕೆಯಿರುತ್ತದೆ (ಪೊಳಂಬು. ೧೧೫) ; ಆ ದ್ವಾರರಕ್ಷಿಣಿಯ ಕವಿಯ ದಂತಪತ್ರಗಳು ಅವಳ ನುಣುಪಾದ ಕೆನ್ನೆಗೆ ಮೆರುಗುಗೊಟ್ಟಿದ್ದವು (ಬಾಣಅ. ೬೫) ; ಅನ್ಯತದೊಳಗಿರ್ದ ಸರ್ಪನ ತನುವಿನಂತೆ ಇರ್ದನಯ್ಯಾ ಹೊಜಗೆ ನುಂಪಾ[ಪಾಠಾಂ.ಣ್ಪಾ]ಗಿ (ಒಸಪ.ಕ. ೬೮೦). ನುಣ್ಪಂ ಮಾಡು,

ನುಣುಪು ಮಾಡು, ನುಣ್ಪು ಮಾಡು = ೧. ನಯಗೊಳಿಸು ; ನುಣ್ಣಗಾಗಿಸು : ಎಣ್ಣೆ ನುಣ್ಪಂ ಮಾಡುವಂತೆ ಕಳ್ಳ ಮಾಡುಗುಮೆ (ಧರ್ಮಾಮೃ. ೧೧-೧೮೮); ನೆಲಕ್ಕೆ ಹಾಕಿದ ಗಾರೆಯನ್ನು ಚೆನ್ನಾಗಿ ನುಣುಪು ಮಾಡಬೇಕು (ದೂಢ); ಕಲ್ಲಂ ನುಣ್ಪು ಮಾಡದೆ ಚಿತ್ರಂ ಬರೆವ ಪೊನ್ನನಾಭರಣಂ ಮಾಡದೆ ತುಡುವ (ಧರ್ಮಾಮೃ. ೧೨-೨೪). ೨. ಮೋಸಗೊಳಿಸು ; ವಂಚಿಸು : ಅವನು ತೆಗೆದುಕೊಂಡ ಹಣವನ್ನು ಕೊಡದೆ ನುಣುಪು ಮಾಡಿಬಿಟ್ಟ (ದೂಢ). ನುಣ್ಪುಮೆಗಿಜು ? = (?) : ಶ್ರೀವನಿತೆಯುಂ . . . ಆತ್ಮೀಯಭುನಜಳನದ ನುಣ್ಪೆನೊಳ್ ನುಣ್ಪುಮೆ [ಪಾಪಾಂ. ನುಣ್ಪೆನೊಳ್ ನುಣ್ಪುಗುಮೆ, ನುಣ್ಪೆನೊಳ್ ಗುಣ್ಪುಮೆ, ಮುಣ್ಪೆನೊಳೆ ನುಣ್ಪುಗುಮೆ]ಗೆತ್ತು ರುಚಿರರುಚಿಕಾಯಮಾನ ಮಣಿಕಿಂಕಣೀ ವಿರಾಜಿತ ಕನಕಕಾಂಚೀ ಕಳಾಪಮನನಂಗರಾಗರಸಪ್ರವಾಹಕ್ಕೆ ಕಟ್ಟೆ ಗಟ್ಟುವಂತೆ ಕಟ್ಟ (ಆದಿಪು. ೪-೪೧ ಸಿ).

[ದೇ.॥ ತಮಿ. ನುಣ್ಪು ; ಮಲ. ನುಣ್ಮ ; ತುಳು. ನೊಣ್ಣ ; ತೆಲು. ನುಂಪು, ನುನುಪು, ನುನ್ಪು]

ನುಣ್ಪುವಡು (ಕ್ರಿ). ನಯವಾಗು ; ನುಣುಪಾಗು : ನುಣ್ಪುವಟ್ಟು ತೋಜಿ ಬಿಗಿದುಟ್ಟ ಪುಲಿದೊವಲೊಳಂ ತಕ್ಕಿನಂ ವಿಕ್ಕು ಪೋರ್ದಾನೆರಕ್ಕಸನ ಸಮ್ಮದ ಮೇಲ್ಪೊದಿಕೆಯೊಳಂ ಬೆಲ್ವನಾಂತು (ಕಬ್ಬಿಕಾ. ೧೬೭). [ನುಣ್ಪು + ಪಡು,]

ನುಣ್ಪುವಡೆ (ಕ್ರಿ). ನುಣುಪನ್ನು ಹೊಂದು ; ನಯವಾಗಿರು : ನುಣ್ಪುವಡೆದೂರುದ್ವಯದ ಮೃದುತಳದ ಮಂದಗಮನದ ಮುದ್ದು ನುಡಿಯ ಕೋಮಲಾಂಗದ ವಿದ್ಯಾಧರ್ಯವಾರನಾರೀ ಕದಂಬಂ ಕಾಮದೇವನ ರಾಜ್ಯಕ್ಕೆ ನಾವು ಮೊದಲಿಗರೆಂಬಂತೆ . . . ಎಸೆದು (ಧರ್ಮಾಮೃ. ೪-೧೯೬). [ನುಣ್ಪು + ಪಡೆ,]

ನುಣ್ಪುವೆಜು (ಕ್ರಿ). ೧. ನಯವಾಗಿರು ; ನುಣುಪಾಗಿರು : ಪೊನ ಮುತ್ತಿನ ಸುತ್ತಿನ ಭರ್ಮಸೂತ್ರಮುಂ ನುಣ್ಪುವೆತ್ತ ಮಳಯಜ ದಣ್ಪುಂ . . . ಒಪ್ಪಿರೆ (ಸುಕುಮಾ. ೧೧-೯೮). ೨. ಮನೋಹರವಾಗಿರು ; ಸೊಗಸಿನಿಂದ ಕೂಡಿರು : ನುಣ್ಪುವೆತ್ತು ಸೋಲಿಪ ಚೆಲ್ವಿಂ ಬಾರಿಸಿ ಸೊಬಗಿಂಗೆತ್ತಿದ ತೋರಣಗಂಬಂಬೊಲಿರ್ದುವಾಕೆಯ ತೊಡೆಗಳ್ (ಕಬ್ಬಿಕಾ. ೬೫) ; ದೊರೆವೆಣ್ಣ ಹೊಂಬಾಳೆದೊಜೆ ಸೊಂಪು ನುಣ್ಪುವೆತ್ತಿರೆ (ಮೋಹತ. ೨೪-೪೦). ೩. ಇಂಪಾಗಿರು ; ಮಧುರವಾಗಿರು : ಅಲ್ಲಿ ಗೇಯದ ದನಿ ನುಣ್ಪುವೆತ್ತೆಸೆಯುತಿರ್ದಪುದೀಗಳೆ ಪೋಗಿ ನೋಟ್ಪೆನಾಂ (ಕಾದಂಪೂ. ೬೫೩). [ನುಣ್ಪು + ಪೆಜು,]

ನುಣ್ಪೆಸೆ (ಕ್ರಿ). ಮನೋಹರವಾಗಿರು; ಶೋಭಿಸು; ಕಂಗೊಳಿಸು: [ಇದಂ]ಗೆಲಲ್ಬಗೆವ ತುಂಬಿಗಳ ಧ್ವನಿಯಿಂ ಕುಕಿಲ್ವ ಕೋಗಿಲೆ ನನೆದೋಜೆ ನುಣ್ಪೆಸೆವ ಮಾಮರಂ . . . ಪುಗಿಲೊಳೇನೆಸೆದತ್ತೊ ಬಸಂತಮಾಸದೊಳ್ (ಪಂಪಭಾ. ೨-೧೨) ; ಮಹಾಲಂಕೃತಿವೆತ್ತು ನುಣ್ಪೆಸೆವ ಕುಂಭಗಳಂದವೊ ವಜ್ರದಂಡವೋ ಶಂಕೆಗಳುಂಬವಾಯ್ತು ರಥನಭ್ಯುದಯಾವಸಥಂ ಮುನೋರಥಂ (ನಳಚಂ. ೬೭೮). [ನುಣ್ಪು + ಎಸೆ,]

ನುಣ್ಪೇಳು (ಕ್ರಿ). ನುಣುಪಾಗು ; ನುಣ್ಣಗಾಗು : ಕಾಳು ಮೂಲನ ಮುಂಡೆಯಂ ನುಣ್ಪೇಳೆ ಚೋಳಿಸಿ ಮೂಹುರಿಗಳಲಿ ಪೀಳೆ ವಿಸಿದುಡಿದಾರವಂ ಬಂಧಿಸಿ (ಬಸಪು. ೩೮-೧೪).

[ನುಣ್ಪು + ಏಳು, (< ಏಟ್ಗ್,)]

ನುಣ್ಪೇಜು (ಕ್ರಿ). ನುಣುಪು ಅಧಿಕವಾಗು : ಪಿಡಿನಡು ತೋರವಾಯಿತು ತೊಡೆ ನುಣ್ಪೇಜು ಅಡಿಯಿಟ್ಟು ನಡೆವುತ ಸುಯ್ದು ನುಡದಿಗೆ ನವಮಾಸ ತುಂಬಿತು (ಅಬ್ಬಲೂ. ೨-೩೬).

[ನುಣ್ಪು + ಏಜು, (< ಏಟ್ಗ್,)]

ನುಣ್ಪಣೆ (ನಾ). = ನುಂಪುವಣೆ : ನುಣ್ಪಣೆಯೊಳಿಸಿದ ಸಿರಿವಣ್ಬೆಳಗುಗಳಿಂದೆ ಪೂತು ಪೊದಟ್ಟ ಬೆಳ್ವಾವರೆಗಳಂ . . . ಬಗೆಗೊಳಿಸಿದರ್ (ಚಕಪಂ. ೧೨೬-೬) ; ನುಣ್ಪಣೆ ಮೆಲ್ಲದಪು ಮುರಲ್ಗಣ್ (ಚಕವಿ.೬-೩೧೫).

[ನುಣ್(< ನುಣ್ಣಿತು) + ಪಣ್,]

ನುಣ್ಪದ (ನಾ). ಸುರತ ದ್ರವ: ಉಗುರ್ಗಳನೊಳದೊಡೆಯೊಳು ನಾಂಟಿ ಪುಗೆ ನುಣ್ಪದನೊಯ್ಯಗೆ ನಾಣ್ಪಾಣದೊಳಗನಲೆವುದು ಕೇತನದಿಂದಂ (ಜನಪ. ೪-೨೨). [ನುಣ್(< ನುಣ್ಣಿತು) + ಪದ,]

ನುಣ್ಪನಿ (ನಾ). ಮನೋಹರವಾದ ಹನಿ ; ಅಂದವಾದ (ನೀರಿನ) ಬಿಂದು : ಕಜ್ಜಿದುವು ಕಾಳಿಮಮಂ . . . ಬುಜಾಕಂ ಕಜ್ಜಿದುವು ನುಣ್ಪನಿಯನೊಗೆದ ಮುಗಿಲೆಳಗಾರೊಳ್ (ಚಂದ್ರಪ್ರ. ೪-೩೪).

[ನುಣ್ (< ನುಣ್ಣಿತು) + ಪನಿ,]

ನುಣ್ಪನಿದಂದಲ್ (ನಾ). ಅಂದವಾದ ಹನಿಗಳ ಸೋನೆ: ಕುಚಾಗ್ರಂಗಳಂ ನುಣ್ಪನಿದಂದಲ್ ಸೋರೆ. ನಿಂದಿರ್ದುದು ಹಿಮವ್ಯತಕಾಯಂ ವರಸ್ತ್ರೀನಿಕಾಯಂ (ಕುಸುಸೂ. ೫-೧೫೪). [ನುಣ್ಪನಿ + ತಂದಲ್]

ನುಣ್ಪರಲ್ (ನಾ). ಅಂದವಾದ ಹರಳು,— ರತ್ನ : ಪೊಸತಪ್ಪ ಮಾಣಿಕದ ನುಣ್ಪರಲಂ [ಪಾಪಾಂ. ನುಣ್ಣರಲಂ, ನುಣ್ಣಲರಂ, ನುಣ್ಪೆರಲಂ] ಮಧು ಮನ್ಮಥಂಗೆ ಬಣ್ಣಿಸಿ ಸಮೆದಂತೆ ತೋಜುವುದು ಪೂಗೊಳೀಂ ಸುರಹೊನ್ನೆ ಚೆನ್ನನೋ (ಆದಿಪು. ೧೧-೧೧೨) ; ಬಾಂದೊಜೆ, ನುಣ್ಪರಲ್, ತಣ್ಪುಟಿಲ್ (ಭಾಜಾಭೂ. ೨೮ ಉದಾ).

[ನುಣ್ (< ನುಣ್ಣಿತು) + ಪರಲ್]

ನುಣ್ಪವರಿ (ನಾ). ಕೆನ್ನೆಯ ಮೇಲಿನ ಸುಂದರವಾದ ಕೂದಲು ; ಅಂದವಾದ ಪನ್ನೆ : ಕಪ್ಪಿನ ರೇಖೆಯ ತೆಗೆದಂತೆ ತೋಜುವ ತುಪ್ಪಳು ವಿಸೆ ನುಣ್ಪವರಿ ಉಪ್ಪರಜವ್ವನೆಯರು ಕಂಡು ಸೋಲ್ತು ಬಂದಪ್ಪು ವೊಲೆಸೆದನಾ ಮದನ (ಧರಚ. ೪೭-೬೭).

[ನುಣ್ (< ನುಣ್ಣಿತು) + ಪವರಿ,]

ನುಣ್ಪಸಲೆ (ನಾ). ಮನೋಹರವಾದ ಹುಲ್ಲುಗಾವಲು ; ಅಂದವಾದ ಹುಲ್ಲು ಮೈದಾನ : ಬಳಸಿಯೆ ನೋಡುತಿರ್ದ ಹರಿಣಂಗಳ ಕಂಗಳ ಕಾಂತಿಯಿಂದೆ ಕಣ್ಗೊಳಿಪೆಳೆವುಲ್ಲ ನುಣ್ಪಸಲೆಯಂ ಪುಗುವಂದದೆ . . . ಪೊಕ್ಕಪುದಿಂತಿದೆ ಪಾವು ಪೀಲಿಗಣ್ಗಳ ಪರಭಾಗದಿಂದಸೆದು ತೋಜುವ ಸೋಗೆಯ ತಳ್ಕ ಸೋಗೆಯಂ (ಕಾದಂಪೂ. ೨೫೮) ; ಅದೊಂದು ವಟವಿಟಪಿಚ್ಛಾಯಾಚ್ಛಾದಿತಮಪ್ಪ ತಣ್ಪುಟಿಲ ನುಣ್ಪಸಲೆಯೊಳ್ಕಶ್ರಮಿಸಿ ಪಥಶ್ರಮಮನಾಜಿಸುತ್ತುಂ (ಪಂಂಪಾಪು. ೬-೩೧ ಸಿ) ; ಪಸರಿಸಿದ ಬಯಲ್ಮಡು ಪಾವಸೆಗೊಂಡಿರೆ ಗಡಣದಾಡುವೆಳವೆಂದಿರ್ ನುಣ್ಪಸಲೆಯೆಗೆತ್ತೆಯ್ದರೆ (ಲೀಲಾವ. ೫-೪೬) ; ನಸೆಮಸಪೊಂದೆ ನುಣ್ಪಸಲೆಯೊಳ್ಸುಸಿಲಾಂತೆಸೆವೇಣನಂ ವಿಲಂಬಿಸದಿಸಲೆಂದು ಬಂದನ ಪುಳಿಂದನ ವಕ್ಷ ಮನುದ್ದ ಪಾಸ್ತ್ರದಿಂದಿಸೆ (ರಾಜಪೇ. ೫-೧೧೫) ; ಅಲ್ಲಲ್ಲಿ ನೆರೆ ಕಣ್ಗೊಳಿಪ್ಪ ನುಣ್ಪಸಲೆಯೊಳ್ಮಲಿಸರ್ಪ ಹರಿಣಂಗಳಿಂದೆ ಸಾತ್ವಿಕರಪ್ಪ ಮುನಿಗಳಿಂ ದಾತ್ರಮನದೇನೊಪ್ಪುತೋ (ಶೀಷಂಪಾ. ೪-೬).

[ನುಣ್ (< ನುಣ್ಣಿತು) + ಪಸಲೆ]

ನುಣ್ಪಸೆ, (ನಾ). ಅಂದವಾದ ಹಸಮಣೆ ; ಮನೋಹರವಾದ ಪೀಠ : ತೆರೆಯ ಸೆಳೆಮಂಚದೊಳ್ ಬಿತ್ತರಿಸಿದ ಗಳಿತಾಬ್ಜದಳದ ನುಣ್ಪಸೆಯೊಳ್ ಬೆಳ್ನೊರೆಯ ತೆರೆಸುತ್ತಿನೊಳ್ ಸ್ರಿಯೆಗಿರದೊಪ್ಪಸೆ ಬಯಸಿ ಕೋಕನಾಯ್ತು ಸಶೋಕಂ (ಚಂದ್ರಪ್ರ. ೪-೪).

[ನುಣ್ (< ನುಣ್ಣಿತು) + ಪಸೆ,]

ನುಣ್ಪಸೆ, (ನಾ). ಮೃದುವಾದ ಮಜ್ಜೆ : ಪುಸಿಯೆಂದಾಪನದರ್ಪಿ ತಪ್ಪಿಸಿ ಸರಲ್ಮಕ್ಕೊಂಡು ತಾಂ ಪೋಗೆ ನುಣ್ಪಸೆಯಂ ಮುಟ್ಟದೆ ನುತ್ತ

ಮೊಂದು ಕಡೆ ಕಲ್ಲಂ ತಾಗಿದಂತಾಗೆ ಕೊಂಡಸಿಯಂಬೊಂದೆನೆ ದಡ್ಡುವಿರ್ದ ಹೃದಯಂ ಜಾಳಾಂದರಂಬೋಪಿನಂ ಬೆಸೆದಿಜ್ಜಂ ಕಡುದೇಸೆವೆಂದಿರ್ಪುದೇಂ ಕಾಮಂ ಫಲಗ್ರಾಹಿಯೋ (ಅರ್ಧನೇ. ೪-೧೪೬).

[ನುಣ್ (<ನುಣ್ಣಿತು) + ಬಸೆ$_3$]

ನುಣ್ಪುಳುಕು (ನಾ). ನಯವಾದ ಸ್ಫಟಿಕ ; ನುಣುಪಾದ ಸ್ಫಟಿಕ: ರತಿದೇವಿಯ ಕೇಳಿಗಿಟ್ಟ ನುಣ್ಪುಳುಕಿನ ಬಟ್ಟವಂಜರದ ಕೋಗಿಲೆಯುಂ ಗೆಲೆವಂದುದು . . . ಅಮರೇಂದ್ರ ವಧೂ ಮುಖಪತ್ರವಿಧ್ವಮುಂ (ವೀಲಾಪ. ೨-೧೧); ಇಂತೊಪ್ಪುವ ಮಂಡಪದೊಳಗೆಸೆವ ಭವಂತಿಯ ನುಣ್ಪುಳುಕಿನ ವೇದಿಕೆಯೊಳು ಕಾಂತಕನಕಸಿಂಹಾಸನದುಪರಿಮದೊಳಗೆ . . . ಕುಳ್ಳಿರಿಸಿದಂ (ಜಯಕಾ. ೪-೫೨).

[ನುಣ್(<ನುಣ್ಣಿತು) + ಪಳುಕು(<ಪಟಿಕ)]

ನುಣ್ಪೆಳೆ (ನಾ).ನುಣುಪಾದ ಕೈಬಳೆ: ಗಲಕೆನೆ ಕೈಯ ನುಣ್ಪಳೆ ಪುಳಿಂದಿಯರಂದದೆ ನಿಂದು ಸೂವಿಯುಜ್ವಲರವಮೊಪ್ಪಿರಲ್ ಚಳಿಸಿದರ್ ಬಿದಿರಕ್ಕಿಯನಲ್ಲಿ ರಾಗದಿಂ (ರಾಜಶೇ. ೫-೧೧೦).

[ನುಣ್ (<ನುಣ್ಣಿತು) + ಬಳ್$_2$]

ನುಣ್ಪೆತ್ತು (ನಾ). ನಯವಾದ ಬೀಜ : ಅಂಬುಜಾಕ್ಷಿಯರ ಪಂತ ಚ್ಛವಿ ನಮ್ಮಯ ನುಣ್ಪೆತ್ತಿನೊಳಗಿದೆಯೆನುತ ಇಂದಿಲ್ಲ ಪಲ್ಗಿಜಿದುಸಿರುವ ನೋಲ್ಪಲಿನಿ ದಾಳಿಂಬದ ಮರಗಳೊಪ್ಪಿ ಹುವು (ಕಂಸವಿ. ೫-೮೧).

[ನುಣ್ (<ನುಣ್ಣಿತು) + ಬಿತ್ತ್ವ್ (<ಬಿತ್ತು)]

ನುಣ್ಪುರುಳ್ (ನಾ). ಮನೋಹರವಾದ ಅರ್ಥ,—ಸತ್ತ್ವ : ಇದು ರಾಯನ ನಾಟ್ಯಕೊಳಿರ್ಕೆ ನಿಚ್ಚಮುಂ ದೇಸೆಯ ಗೊತ್ತು ಜಾಣ್ಣುಡಿಯ ತಾಯ್ವನೆ ನುಣ್ಪುರುಳೇಟ್ಟಿಯೆಂದಿಸಂ (ಕಬ್ಬಕಾ. ೩೪೪).

[ನುಣ್ (<ನುಣ್ಣಿತು) + ಪುರುಳ್$_2$]

ನುಣ್ಪುಳಿಲ್ (ನಾ). ನಯವಾದ ಮರಳು ; ಜಿನುಗಾದ ಉಸುಕು: ನುಣ್ಪುಳಿಲಮರ್ದೊಟ್ಟಲಲ್ಲಡಪಿ ಮೆಲ್ಲನೆ ಪಾಯ್ವುದು ಮಂದಮಾರುತಂ (ಪೃಸವಿ. ೪-೫೩).

[ನುಣ್ (<ನುಣ್ಣಿತು) + ಪುಳಿಲ್ (<ಪುಟಿಲ್$_2$)]

ನುಣ್ಪುಟಿಲ್ (ನಾ). ಅಂದವಾದ ಉಪವನ,—ತೋಟ : ನುಣ್ಪುಟಿಲೊಳಗದಿರ್ಮುತ್ತೆ ಪವಣ್ಪಡೆ ಕಟ್ಟಲಿಸಿ ಬೆಳೆದು ಬಳಸಿರ್ದೊಡದಂ ತಣ್ಪಳಗನೀಯೆ ಬೆಳತಿಗೆಗಣ್ಪಳಗೊಳಪೊಕ್ಕು ಚಪಳೆ ಕಳಿಕೆಯನಾಯ್ದುಳ್ (ಚಂದ್ರಪ್ರ. ೭-೧೦೫). [ನುಣ್ (<ನುಣ್ಣಿತು)+ಪುಟಿಲ್$_1$]

ನುಣ್ಪೆರಲ್, ನುಂಬೆರಲ್, ನುಣ್ಪೆರಳ್ (ನಾ). ಮೃದುವಾದ ಬೆರಳು ; ಕೋಮಲವಾದ ಬೆರಳು : ಪಾಲ್ಮೊಜಿದ ನುಣ್ಪೆರಲಂ ಮೊಲೆಗೆತ್ತು ಪೀರ್ದು ಕಣ್ದೆಜೆಯದ ಕಂದನೆಂದನಗೆ ಕಣ್ದೆಜೆಯಿಪ್ಪ ನೊಮುಂದಹಾಸಮಂ (ಅರ್ಧನೇ. ೧-೧೦೦); ಪಂಚಪರವಂ ಪಳಿಪ ನುಣ್ಪೆರಲ ವಿಸ್ತರಂ ಪಂಚಮುಖಪರಿಚಾರಕರ ತೆಜಿದೊಳಿರೆ (ಕಾರಿರ. ಪೀ. ೨೪೯-೧೬)• **ನುಂಬೆರಲ್** : ಪಾದದ್ವಂದ್ವಂ ತಳಿರ್ ನುಂಬೆರಲ್ಗಳೆ ಕೊನಗರ್ಗಳ್ (ಪಾಪ್ರಾಕ. ೧). **ನುಣ್ಪೆರಳ್** : ಉಂಗುರವೇ . . . ನೀರೆಯ ನುಣ್ಪೆರಳೆಡೆಯನು ಸೇರಿ ಪುಣ್ಮದಿ ಹಾರುತೆಂತು ಮುಳುಗಿದೆ ನೀಂ ನೀರೊಳಕ್ಕಟಾ (ಪಾಕುಂತ. ೪೬ ಅಡಿಟಿ).

[ನುಣ್ (<ನುಣ್ಣಿತು) + ಬೆರಲ್]

ನುಣ್ಪೆರಳ್ 'ನುಣ್ಪೆರಲ್' ನೋ.

ನುಣ್ಪೆಸೆ (ನಾ). ನಯಗೆಲಸ ; ಕುಸುರಿಗೆಲಸ : ಪೊಕ್ಕಳಮನೆ ಬಸಿಜೀಜುಂಡೊಕ್ಕ ಕರುಳ್ ತೊಡೆಯೊಳಾವಗಂ ತೊಡರ್ದನಸುಂ ಮಿಕ್ಕುವು ಬಿರುದರ ಬಿರುದಿಂಗಿಕ್ಕಿದ ನುಣ್ಪೆಸದ ಮಿಸುಪ ತೊಡೆ ಸಂಕಲೆಯಂ (ಚಂದ್ರಪ್ರ. ೧೦-೭೪). [ನುಣ್(<ನುಣ್ಣಿತು)+ಬೆಸ$_1$]

ನುಣ್ಪೆಳಂತಿಗೆ (ನಾ). ಕಾಂತಿಯುತವಾದ ಬಿಳಿಯ ಬಣ್ಣ ; ಅಚ್ಚ ಬಿಳುಪು : ಎಸೆವ ನುಣ್ಪೆಳಂತಿಗೆ ಮಬಲ ತಣ್ಪುಟಿಲೊಳ್ ಮದವಣಿಗ ತನದ ಬೇಸೆಯಿಂ ವಿಲಾಸಂಬಡೆದ ಬಾಲಸಹಕಾರನಂದನಂ ವನಪಾಲಂ . . . ತೋಱಿ (ಅನಂಪು. ೬-೬ ವ).

[ನುಣ್(<ನುಣ್ಣಿತು)+ಬೆಳಂತಿಗೆ(<ಬೆಳತಿಗೆ)]

ನುಣ್ಪೆಳಗು, ನುಂಬೆಳಗು (ನಾ). ೧. ನಯವಾದ ಬೆಳಕು ; ಸೌಮ್ಯವಾದ ಕಾಂತಿ: ಒಸರ್ದಪುದಿದಲ್ತೆ ಚಂದನರಸಮೆನೆ ಮಿಂಚುಂಗುರ ಮಿಸುಪ ನುಣ್ಪೆಳಗಿನಸುಂ ಪಸರಿಸೆ (ಕಾದಂಪೂ. ೧೧೬); ನುಣ್ಪೆಳಗಂ ಕಜಿವ ಪೊಂಬಾಳೆಯ ಪತ್ರಂಗಳನಿಂದಿನಂ ಪಾಸುತ್ತುಂ (ಗಿರಿಕ. ೫-೬೭ವ); ಬೆಳ್ಪಸದನದ ನುಣ್ಪೆಳಗಿಂದುಟ್ಟ ದುಕೂಲಚೇಲದ ಧಾವಲ್ಯಂ ಚತುರ್ಗುಣ ಮಾಗಿಂತು ಚೆಲ್ವುವೆತ್ತು (ಬಾಧಪು. ೬-೧೧೦ ವ). ೨. ಉಜ್ವಲವಾದ ಬೆಳಕು : ಎಣ್ಣೆ ಬತ್ತಿಯನೇಜಿ ನುಣ್ಪೆಳಗನೀವಂತೆ ಸಣ್ಣಾಗಿ ಸುಟ್ಟು ಬೆಳಗೀವ ಶಿವಯೋಗಿ ಸಣ್ಣಾತನೇನು (ಸರ್ವಜ್ಞ.೫೫೫). **ನುಂಬೆಳಗು** : ೧. ರತ್ನಾವಳಿಯ ನುಂಬ[ಪಾಠಾಂ. ನುಣ್ಪೆ]ಳಗಿನಲಿ ಹಂಸೆಯ ಕುಳಿಯ ಮೇಲ್ವಾಸಿನಲಿ ಪವಡಿಸುವೀಕೆ . . . ಈ ಕಲುನೆಲದೊಳೊಜಗಿದಳು (ಕುವ್ಯಅ. ೯-೩೦).

[ನುಣ್(<ನುಣ್ಣಿತು)+ಬೆಳಗು$_2$]

ನುಣ್ಪೊಗರ್(ನಾ).೧. = ನುಣ್ಪೆಳಗು: ೧. ಪೊಗರ್ಮಟ್ಟನತನುಬಾಣದ ಪೊಗರಂ ನುಣ್ಪೊಗರೊಳಿಟ್ಟುಸಿ ನೋಡಿದ ಕಣ್ಣುಣ್ಣುಗುಮೆನಿಪ ನುಣ್ಪೆನಿಂದೇಂ ಸೊಗಯಿಸುವುವೊ ಬಾಹುಮೂಲಮಾ ಕಾಮಿನಿಯಾ (ಪುಲ್ಲಿಪು. ೩-೩೮); ಕಲಶಮನೆತ್ತಿ ನೀರೆಜೆವ ಕಾಂತಿಯ ತೋಳ ತೆರಳ್ಕೆ ಮೇಲುದಂ ತೊಲಗಿಸೆ ನೋಡಿ ನುಣ್ಪೊಗರನೀಂಬ ಕುಡದ್ವಯಮೂಲಮಂ ಸಮುಜ್ಜ್ವಲಭುಜಮೂಲಮಂ ನೆಜಿಯೆ ಕಂಡು (ಚಂದ್ರಪ್ರ. ೧-೯೪) ; ತೆಳ್ಗದಪಿನ ನುಣ್ಪೊಗರುಗುವ ಚಾರು ಚುಬುಕದ ಮಗಳಂ ನಡೆನೋಡಿ ನಲಿದನಾ ಭೀಮನೃಪಂ (ಪಮಸ್ವ. ೧-೩೯). ೨. ಉಜ್ವಲವಾದ ಹೊಳಪು : ಕೂರ್ವಾಳ ತೊಳಪ್ಪ ನುಣ್ಪೊಗರದೆತ್ತಂ ಪರ್ವಿ ಕಾರ್ಮಿಂಚಿ ನಂತಿರೆ ಬಿಲ್ಲಾಳ್ಗಳ ಬಲ್ಸುರಂ ದೆಸೆಗಳಂ ತಳ್ಪಿಯ್ಕೆ (ಕಬ್ಬಕಾ. ೩೫೨) ; ನುಣ್ಪೊಗರನೇ ಮಿಂಚೆಂದು ಸೊಗಯಿಸುವ ಪೂಗಳಿಂದೆ ಉಗುವ ಮಳರಂದಬಿಂದುಗಳನೇ ಮಳಗಳೆಂದೊಗೆದ ಸಂತಸದೊಳಾವಗಮೈದೆ ಕುಣಿವ ಸೋಗೆಗಳ ಬಳಗಂಗಳಂ ಮಗನೆ ಕಂಡ್ಯೆ (ಜೈಮಿಭಾ. ೩-೨೫).

[ನುಣ್(<ನುಣ್ಣಿತು)+ಪೊಗರ್$_2$]

ನುಣ್ಪೊಗರಿ (ನಾ). ಅಂದವಾದ ಬುಗುರಿಯಾಕಾರದ ಶಿಲ್ಪ ರಚನೆ : ನಸುಬಾಗಿ ಕೊಂಬಿನೊಳ್ ಪೊಳೆವೆಳಗಾಯ ನುಣ್ಪೊಗರಿಯಿಂ ಸುಟುತರ್ಪಲಿಂದೆ ಬಿಟ್ಟ ಪೂಗಳ ಪುಡಿಯಿಂ ಕರಂ ಸೊಗಯಿಪೋಲಗ ಸಾಲೆಯೊಳಿರ್ದರೊಪ್ಪದಿಂ (ಕಬ್ಬಕಾ. ೧೨೬) ; ಕರ್ಣಕಾರದ ಪಲಗೆಗಟ್ಟ ನೆಡೆಯೆಡೆಯೊಳಳವಟ್ಟ ಎಸಳ್ಗಳಂ ನೆಗಪಿ ಕೀಲಿಸಿದ ಪೊಂದಾವರೆಯ ಮೊಗ್ಗೆಗಳ ನುಣ್ಪೊಗರಿಗಳಿಂ . . . ರಂಜಿಸಿ (ರಾಜಶೇ. ೧೧-೩೧ ಚ).

[ನುಣ್(<ನುಣ್ಣಿತು)+ಬೊಗರಿ]

ನುಣ್ಪೊದೆ (ಕ್ರಿ). ಚೆಲುವಾಗು; ಅಂದವಾಗು : ಪದೆದು ತೊಂಗಲ್ ತೊಂದೆ . . . ನುಣ್ಪೊ[ಪಾಠಾಂ. ಪ್ಪೊ]ದೆದ ಜೊಂಪಂ ತೊಂಗೆ ಗುಚ್ಛಮೆಂದಿರದೊಪ್ಪಿ ಪದೆದ ನಾಮಂ (ಕಬ್ಬಕೈ. ೧೯).

[ನುಣ್(<ನುಣ್ಣಿತು)+ಪೊದೆ$_1$]

ನುಣ್ಮಡ (ನಾ). ನುಣುಪಾದ ಹಿಮ್ಮಡಿ,—ಪಾದದ ಹಿಂಭಾಗ : ಕೆಂಪಪ್ಪ ನುಣ್ಮಡಮಂ ವಾಮಪದಪ್ರಗುಳ್ಫದಡೆಯೊಳ್ ಸೈತಿಟ್ಟು . . . ನಿದ್ರಾಂಗಿ ಕಣ್ಮೊಪ್ಪದಳ್ (ದಶಕು. ೪-೨೯ಚ) ; ಅಡಗಿದ ಪರಡು ನುಣ್ಮಡ ಸಣ್ಣ ಬೆರಳೊಪ್ಪ ವಡೆದ ಪಾವುಗೆನಜ್ಜೆ ಸೈಪಗೆ ಕಡುಪಿನುಗುರ್ಗಳು ಪದತಳ

ಗಳೊಳು ತೊಟ್ಟಡುವಂತೆ ಕೆಂಪು ರಂಜಿಸಿತು (ಭರಜ. ೬-೬೯); ದುರುಳ ಕಾಮನ ಕನಕಕಂತುಕಾಯುಗಳಮಂ ನೆರೆ ಪೋಲ್ವ ನುಣ್ಮಡಂ ವಪ್ಪು ತಿರಲು (ಸಪಮೋ. ೨೩-೧೯). [ನುಣ್(<ನುಣ್ಣತು)+ಮಡ$_1$]

ನುಣ್ಮಣಲ್, ನುಣ್ಮರಲ್, ನುಣ್ಮಳಲ್ (ನಾ). = ನುಣ್ಬುಳಿಲ್ : ವೈತರಣಿಯ ಪಿರಿಯ ದರಿಯಂ ಮೆಟ್ಟ ನುಣ್ಮಣಲಂ ಮಣಿಲ್ದಿಂಟೆಗೆತ್ತ ದಱ ಪರಿತಪ್ತಲೋಹರಜಸ್ಸಿಕತಿಳತಳದೊಳ್ ಮೆಯ್ಯನೀಡಾಡುವುದುಂ (ಶಾಂತಿಪು. ೭-೯೧ ಪ); ತಿಳಿಗೊಳದ ತಡಿಯ ತಣ್ಬುಟೀಲ ನುಣ್ಮಣಲೊಳ ತನುಗುರು ರತಿಯನೋದಿಸುವ ಶುದ್ಧಾಕ್ಷರಂಗಳಿನಿಪ ಶುಕ ಪಿಕ ಚಕೋರ ... ಕುರವಕಸಂಕುಳಚರಣಸಂಚರಣದಿಂ ಪಳಚ್ಚನೆಸೆವ ಪಚ್ಚೆಗಳು ಮಳುಂಟ ಮೆನಿಸುಗುಂ (ಪುಷ್ಪಪು. ೨-೩೯ ಪ); ಸಲೆ ನೆಲಸಿರ್ದ ನುಣ್ಮಣಲ ಲಿಂಗ ದೊಳಂ ಶಬರಾಂಗದೊಳ್ ಸಮುಜ್ಜ್ವಲನರವಕ್ತ್ರಸಂಭವಮನಾ ಸ್ತವಮಂ ಪಳಿಯಂ ಕಪರ್ದಿ . . . ಕೇಳ್ದು (ಶಬಕಾ. ೪-೧೦೭). **ನುಣ್ಮರಲ್** : ನುಣ್ಮರ[ಪಾಠಾಂ. ಣ]ಲಿಂದೆ ಮಾಡಿ ಶಿವಲಿಂಗಮನರ್ಚಿಸಿ ಧೇನುವೃಂದಮಂ ಜಾಣ್ಮಿಗೆ ತಂದು ಪಾಲ್ಗಱೆಯೆ ಕಂಡೊಂದೆಯುತ್ತಿರೆ (ರಾಜಶೇ. ೩-೧೦೨).

ನುಣ್ಮಳಲ್ : ತುಂಗಶೃಂಗದುತ್ಸಂಗದ ತಿಂತಿಣಿಯಾಗಿ ಪೆಣೆದ ಲತೆ ಗಾವಣಗಳ ನುಣ್ಮಳಲ ಜಗತಿಯೆರಡುಂ ಕೆಲದೊಳ್ (ಶಾಂತಿಪು. ೯-೭೮); ಅಲ್ಲಲ್ಲಿಗೆ ಮುತ್ತಿನ ಪುಡಿಯ ನುಣ್ಮಳಲ್ಗಳಾಲವಾಲಂಗಳಿಂ ಕೂಡಿರ್ದೆಡೆವಿಡದೆ ಸುರಿವ ತೋರವನಿಗಳಿಂ (ಕಾದಂಬು. ೨೧೬); ಬರುಂಟದೊಡೆ ಬಿಸಿಯ ನುಗುಟ್ಟ ಕಪ್ಪುರದ ನುಣ್ಮಳಲ ಜಗಲಿಯುಂ (ಪರ್ಧಪು. ೫-೬೩ ಪ); ತನುವಿನಲ್ಲಿ ಪುಳಕಂ ಸಾಲ್ಗೊಂಡುಣ್ಮುತ್ತಿರೆ ಗಿರಿಪತಿಸುತೆ ನುಣ್ಮಳಲಿಂ ದಿವ್ಯಲಿಂಗಮಂ ವಿರಚಿಸುವಳ್ (ಗಿರಿಕ. ೩-೯೩); ತಿಳಿದುಪ್ಪವೆಱೆದಾಗ ಚಿನ್ನದ ರಸದೊಂದು ಹೊಳೆ ಹರಿವಂತೆ ಶೋಭಿಸಿತು ಬಲುಹೆಱೆದುಪ್ಪ ಬಹಾಗ ಪಾಲ್ಗಡಲ ನುಣ್ಮಳಲಿಳಿವಂತೆ ರಂಜಿಸಿತು (ಭರಜ. ೧೬-೮೦).

[ನುಣ್(<ನುಣ್ಣತು)+ಮಣಲ್]

ನುಣ್ಮಣಿ (ನಾ). ೧. ಹೊಳಪುಳ್ಳ ಮಣಿ ; ಸರದಲ್ಲಿ ಪೋಣಿಸುವ ಗುಂಡಾದ ಗಾಜು ಮೊದಲಾದುವುಗಳ ಮಣಿ : ಬಿಗಿದ ಬೆಳ್ಳಿಯ ನುಣ್ಮಣಿಯಂತೆವೊಲ್ಬಗಣಮೊಪ್ಪಿರೆ ಕಾಲವನೇಚರಂ ಜಗದ ಲೋಚನ ಮಿನಕೆ ಬೀಸಿದ ನೆಗ್ಗ ಕರ್ಬಲೆವೋಲ್ತಮಮೊಪ್ಪುಗುಂ (ರಾಜಶೇ. ೧೧-೨೩). ೨. ಉಜ್ವಲವಾದ ರತ್ನ : ಸಾಂಧ್ಯರುಚಿವಲ್ಮಲಭಾಸುರ ನಭ್ರಜಾನಕೀಪತಿ ತಳಿರ್ದ ಬೈತಲೆಯ ನುಣ್ಮಣಿಯಂತೆಸೆದತ್ತು ಚಂದ್ರಮಂ (ಚಕವಿ. ೬-೧೯). [ನುಣ್(<ನುಣ್ಣತು)+ಮಣಿ$_3$]

ನುಣ್ಮಯ್ 'ನುಣ್ಮೆಯ್' ನೋ.

ನುಣ್ಮರಲ್ 'ನುಣ್ಮಣಲ್' ನೋ.

ನುಣ್ಮಸೆ (ನಾ). ಹೊಳೆಯುವ ಚೂಪು,—ಹರಿತ,—ತೀಕ್ಷ್ಣತೆ : ಬಸವಟೀವಂಗದಿಂ ಬಸಿವ ಘರ್ಮಜಲಂಗಳಿನಾಱೆ ಪಲ್ಲ ನುಣ್ಮಸೆ ಮಿಗೆ ಪತ್ತೆ ಜರ್ಜರಿತಮಾಗಿ ಬೆಳರ್ತಧರೋಷ್ಠದಿಂ ರತಿವ್ಯಸನಮಹಾಹಿ ನುಂಗಿ ಯುಗುಟ್ಟುವಂತೆವೊಲಿರ್ದ ನಿಮಿಲಿತಾಕ್ಷಿಯಂ . . . ಕಂಡು (ಲೀಲಾವ. ೧೩-೩೬). [ನುಣ್(<ನುಣ್ಣತು)+ಮಸೆ$_2$]

ನುಣ್ಮಳಲ್ 'ನುಣ್ಮಣಲ್' ನೋ.

ನುಣ್ಮಾತು (ನಾ). = ನುಣ್ಣುಡಿ : ಮಱುಗಿಳಿಯಂ ಮಱುಸುವ ನುಣ್ಮಾತಿನ ಕಿಱುದಳರಂ ಗೆಲ್ವಧರದ . . . ನೃಪತನುಜೆಯ ತರುಣಮ ಮೊಪ್ಪಿದುದು (ಜಯಕಾ. ೩-೨೨); ನಲ್ಮಗಾರ್ತಿಯ ನುಣ್ಮಾತಂ ಕೇಳ್ದು ಹರ್ಷಂದಾಳ್ದು (ರಾಜಶೇ. ೧೧-೧೫೬ ಪ). 'ನುಣ್ಣಮಾತು' ಪರಾ.

[ನುಣ್(<ನುಣ್ಣತು)+ಮಾತು$_1$]

ನುಣ್ಮಾಲೆ (ನಾ). ಮನೋಹರವಾದ ಹಾರ : ಇದು ಮಾಣಿಕ್ಯದ ಮಾಲೆಯೋ ರುಚಿರ ಮುಕ್ತಾಮಾಲೆಯೋ ನೀಲರತ್ನದ ನುಣ್ಮಾಲೆಯೊ ಪೇಟೆನಲ್ಕೆ . . . ಮಣಿಪ್ರದ್ಯೋತಿ ತೇರೈಸಿ ಪರ್ವಿದ ಸೌಗಂಧಿಕ ಮಾಲೆಯಂ ಧರಿಸಿದಳ್ ತನ್ವಂಗಿ ಹಸ್ತಾಗ್ರದೊಳ್ (ಸಳಚಂ. ೩೭೨).

[ನುಣ್(<ನುಣ್ಣತು)+ಮಾಲೆ]

ನುಣ್ಮೆಂಚು (ನಾ). ಮನೋಹರವಾದ ಕಾಂತಿ ; ಅಂದವಾದ ಹೊಳಪು : ಕರ್ಪರಲಿ, ಕೂರ್ಪರಲಿ ನಿನ್ನ ಬೆಳ್ಪನು ಹೇಳು—ಕೂರಸಿಯ ಮಿಂಚು, ಕಾರಮಿಂಚು, ಪೆಣ್ಣಾಣಗಳಾ ಕಣ್ಣ ನುಣ್ಮೆಂಚು, ಅರಿದರಾ ಕೂರ್‌ನೋಟ ಮಿಂಚು (ಹೊಂಗಳು. ೧೬-೩).

[ನುಣ್(<ನುಣ್ಣತು)+ಮಿಂಚು$_3$]

ನುಣ್ಮೇಸೆ (ನಾ). ಸೊಗಸಾದ ಮೀಸೆ ; ಅಂದವಾದ ಮೀಸೆ : ನಸು ದೋಱುತ್ತಿರ್ದ ನುಣ್ಮೇಸೆಗಳುಮತಿಮೃದುಸ್ನಿಗ್ಧಕೇಶಂಗಳುಂ ಕಣ್ಗೆಸೆ ಯಲ್ . . . ಬಂದನೊರ್ವಂ ಕುಮಾರಂ (ಕಾದಂಬು. ೫೪೭).

[ನುಣ್(<ನುಣ್ಣತು)+ಮೀಸೆ]

ನುಣ್ಮುಡಿ (ನಾ). ಅಂದವಾದ ಕೇಶಪಾಶ,—ಧಮ್ಮಿಲ್ಲ : ನುಣ್ಮುಡಿ ಬಿಣ್ಪಾದುದು ಮೆಲ್ದೆರ್ದೆಯೊಳ್ ನಾಣ್ಮೊಳೆತುದು ಮೂಡಿದುವುರದೊಳ್ ಮೊಲೆ ಪೆಣ್ಮಾಣಕಕೆ ಮನೋಹರವಡೆದೇಱುಂಜೌವನದೊಳಗೆ (ಜಯಕಾ. ೩-೨೫). [ನುಣ್(<ನುಣ್ಣತು)+ಮುಡಿ$_3$]

ನುಣ್ಮುತ್ತು (ನಾ). ಸುಂದರವಾದ ಮುತ್ತು ; ಸೊಗಸಾದ ಮುತ್ತು : ತರದಿಂದುಣ್ಮುಪ ಕಣ್ಣ ನೀರ್ವನಿಗಳಂ ಕೈಕೊಂಡು ನುಣ್ಮುತ್ತಿ ನೊರ್ಚರಮಂ ಪೆರ್ಮೊಲೆ ಚುನ್ನವಾಡೆ (ಕಬ್ಬಕಾ. ೬೯); ತರಳಂಗೊಪ್ಪಿ ರ್ದುದೊಳ್ಮಾಣಿಕದರಳೆಲೆ ನೀಲಂಗಳಿಂ ತಳ್ತ ಕರ್ಣಾಭರಣಂ ನುಣ್ಮುತ್ತಿನೇಕಾ ವಳಿ ಮಿಸುಪ ಹರಿದ್ರತ್ನಮೊಂದಿರ್ದ ಮುಂಗೈಸರಂ (ರಾಜಶೇ. ೪-೭೧).

[ನುಣ್(<ನುಣ್ಣತು)+ಮುತ್ತು$_3$]

ನುಣ್ಮೆಯ್, ನುಣ್ಮಯ್ (ನಾ). ಕೋಮಲವಾದ ದೇಹ ; ಸುಕುಮಾರ ಶರೀರ : ನೀರ ಚಿಮ್ಮುರಿಯ ಸುತ್ತಿದ ಸಿರಿಮುಡಿಗೆ ಮಂದಾರ ಮಾಲೆಯ ಸುತ್ತಿ ಹಣೆಗೆ ರಾರಾಜಿಪ ತಿಲಕವನಿಟ್ಟು ಗಂಧವ ಪೂರಯಿಸಿ ದನು ನುಣ್ಮೆಯ್ಗೆ (ಮೋಹತ.೧೨-೪೬). **ನುಣ್ಮಯ್** : ನಿಡುಬೊತ್ತಿನ ಬಿಸಿಲೊಳು ನುಣ್ಮಯ್ಯನು ನಡಸಿ ಪತ್ತಿದ ಜಡತೆಯನು ಕಡೆವಗಲಿನ ತಂಪು ವರ ಮೆಯ್ಯೊಱಗಿರ್ದಡಗಿಸಿದನು ಭೂಪಾಲ (ಕ್ರೀಪಾಲ. ೪-೬೧); ನುಣ್ಮಯ್ಯನಮರ್ದಪ್ಪಿ ಕೂಡಲಿಂದ್ರಿಯಂ ಪೊಱಪೊಣ್ಮತೆಂಬುದದಾವ ಚದುರು (ಭರಜ. ೧೦-೧೧೦).

[ನುಣ್(<ನುಣ್ಣತು)+ಮೆಯ್$_2$]

ನುಣ್ಮೊಗ (ನಾ). ಅಂದವಾದ ಮುಖ ; ಸುಂದರವಾದ ಮುಖ : ನುಣ್ಮೊಗಮಿರದಚ್ಚದಾವರೆಯ ಮೆಯ್ಸಿರಿಯಂ ಪಿಡಿದೆತ್ತೆ ನೀಳ್ದ ಸೆಳ್ಳುಗುರ್ಗಳ ಬೆಳ್ಪು ಕೇದಗೆಯ ಕುತ್ತೆಸಱೋಳಿಯನೆತ್ತೆ (ಕಬ್ಬಕಾ. ೪೦); ಜನನುತೆ ನುಣ್ಮೊಗದೊಳೆದು . . . ಎದ್ದಳಾಗ (ಕ್ರೀಪಾಲ. ೨-೨೨); ಕಣ್ಮಲರ್ಚಾತರಿಸೆ ಮುಡಿ ಪೂಗಳಂ ಸೂಸೆ ನುಣ್ಮೊಗಂ ಬೇಱೊಂದು ಪರಿಯಾಗೆ ನುಡಿ ದೈನ್ಯಮುಣ್ಮೆ ಹೀನಸ್ವರದೊಳೆಸೆಯೆ (ಚೈಮಿಭಾ. ೧೧-೧೯); ಗಗನಸರೋಜಮಿಲ್ಲೆನಿಪ ವಾಕ್ಯಮನಿಲ್ಲೆನಿಸಂತೆ ನುಣ್ಮೊಗಂ ಬಗೆಗೊಳೆ (ರಾಜಶೇ. ೧೧-೧೮೯).

[ನುಣ್(<ನುಣ್ಣತು)+ಮೊಗ]

ನುಣ್ಮೊಲೆ (ನಾ). ನುಣುಪಾದ ಸ್ತನ : ಪವನವೇಗವ ಕೀಳ್ಪಡಿಸಿ ದೂವಾಳಿಪ ಜವಗಾತಿಯ ಚನ್ನೊಳಿರ್ದು ಕುವರ ಕಂಗೆಟ್ಟು ಬಿದ್ದಪೆನೆಂದು ತಕ್ಕೆಗೊಂಡವಳ ನುಣ್ಮೊಲೆಯ ಬಲ್ಪಿಡಿದ (ಮೋಹತ.೩೧-೨೬); ನುಣ್ಮೊ ಲೆಯ ನೆಲೆಮೊಲೆಯ ಬಲ್ಮೊಲೆಯ ಹೊಳೆಹೊಳೆವ ಕಣ್ಮಲರ ಸನ್ನೆಗಳ . . . ವೈಸಿಕದೊಳುಣ್ಮುವ ಗುಣಂಗಳ ಮಹಾಪ್ರೌಢವನಿತೆಯರ್ ಕಣ್ಗೆಸೆ ದರ್ (ಚಿಬಪು. ೧೦-೨೧); ಜಡಿವುತ್ತಿರೆ ನುಣ್ಮೊಲೆಯುಂ ಮುಡಿಯುಂ

ಪೊಡರುತ್ತಿರೆ ಪೂರ್ಣಘನಂ ಜಘನಂ . . . . . ಪೊಡೆದಳ್ ಪಿಡಿದಳ್ ಪುಟಚೆಂಡನವಳ್ (ರಾಜಶೇ. ೧೧-೧೮೫).

[ನುಣ್(<ನುಣ್ಣಿತು)+ಮೊಲೆ$_1$]

ನುಣ್ಮೊಲೆವೆಱು (ಕ್ರಿ). ನುಣುಪಾದ ಮೊಲೆಗಳನ್ನು ಪಡೆದಿರು,—ಹೊಂದಿರು : ತೋರ ನುಣ್ಮೊಲೆವೆತ್ತ ಹೆಂದಿರು ರತ್ನಭಂಡಾರ ನಾನಾ ವಸ್ತು ಪೆಱರ್ಗೆ ಸಾರಲೊಪ್ಪುವುದು ಯೌವನ ಕೂಡೆ ಲೋಕೋಪಕಾರವೆ ಕೈವಲ್ಯವಹುದು (ಮೋಹತ. ೫-೫೬). [ನುಣ್ಮೊಲೆ+ಪೆಱು$_1$]

ನುಣ್ಸರ 'ನುಣ್ಚರ' ನೋ.

ನುತ (ಗು). ೧. ಕೊಂಡಾಡಿದ ; ಹೊಗಳಿದ : ನುತ ಸಮ್ಯಕ್ತ್ವಗುಣ ವ್ರತಸ್ಥಿತಿಸಮತ್ವೀಭಾವನಂ ಪ್ರೋಷಧವ್ರತಮೆಂದುಂ ಪಸಿಯೊಂದುಮಂ ಪಱಿಯೆನೆಂಬೀ ಪೂಣ್ಕೆ ಮಾಡೆಂ (ಅಪಿಪು. ೬-೧೦) ; ನುತ ಭವ್ಯಾನೀಕ ನೀಳಾಂಬುರುಹಮಲರೆ ಮಿಥ್ಯಾತ್ವಸೂರ್ಯಾಂಶು ಕುಂದಲ್ (ಧರ್ಮಾಮೃ. ೧-೪). ೨. ಶ್ರೇಷ್ಠವಾದ ; ಪ್ರಸಿದ್ಧವಾದ : ನುತ ಶಬ್ದಾಲಂಕಾರದೊಳತಿಶಯಮಿಾ ಕನ್ನಡಕ್ಕೆ ಸತತಂ ಪ್ರಾಸಂ ಕೃತಕೃತ್ಯಮಲ್ಲವಲ್ಲಭವಂತದಿಂ (ಕವಿರಾ. ೨-೩೦) ; ನುತ ಜಂಬೂದ್ವೀಪದಿಂದಂ ವಿಭುಗಳೆ ನಭದಿಂ ಬಂದು ಪೊಕ್ಕಿಲ್ಲಿ. ಧೈರ್ಯಚ್ಯುತಿಯಿಂ ಕೊಂಡೋಡಿ ಪೋದರ್ (ನೇಮಿಪು. ೧೦-೧೦೬). (ನಾ). ೩. ಕೊಂಡಾಟ ; ಹೊಗಳಿಕೆ ; ಸ್ತುತಿ.

[ಸಂ.]

ನುತಗುಣ (ನಾ). ೧. ಶ್ರೇಷ್ಠವಾದ ಸ್ವಭಾವ,—ಗುಣ : ನುತಗುಣಸಾಗರರ್ ದಯದಮಾಕರರಪ್ರತಿಮ' ಪ್ರಬುದ್ಧರನ್ವಿತಶುಭಭಾವ ಶುದ್ಧರ್ . . . ಎಂದು ಧರೆ ಭೋರ್ಗರೆದೆಯ್ದೆ ಸಮಂತು ಬಣ್ಣಿಕುಂ . . . ಮಲಧಾರಿದೇವರಂ (ನೇಮಿಪು. ೧-೧೨). ೨. ಶ್ರೇಷ್ಠವಾದ ಗುಣಗಳಿಂದ ಕೂಡಿದವನು : ನುತಗುಣನ ಬಿರುದಾವಳಿಯ ಸಂಗತಿಯನಭಿವರ್ಣಿಸುವ ಸಮಯೋಚಿತದ ಮನ್ನಣೆವಡೆದು ಮೆಱೆದುದು ಭಟ್ಟ ಸಂದೋಹ (ಕುಪ್ಯಾಉ. ೮-೩೯) ; ಸತಿಯಾದ ಶಕುಂತಳೆಯುಂ ನುತಗುಣನೆಂದೆನಿಪ ಪುತ್ರನುಂ ನೀನುಂ ಭೂಪತಿ ಪುಣ್ಯದೆ ಕೂಡಿದುದನ್ವಿತಮಾದಂತಾಯ್ತು ಭಕ್ತಿವಿತ್ತಂ ವಿಧಿಯುಂ (ಶಾಕುಂತ. ೧೧೩-೧೯೨).

[ನುತ+ಗುಣ]

ನುತಿ (ನಾ). ೧. ಕೊಂಡಾಟ ; ಸ್ತುತಿ ; ಸ್ತೋತ್ರ ; ಹೊಗಳಿಕೆ : "ಅರ್ಥವಾದಃ, ಪ್ರಶಂಸಾ, ಸ್ತೋತ್ರಂ, ಈಡಾ, ಸ್ತುತಿಃ, ನುತಿಃ, ವಿಕತ್ಥನಂ, ಸ್ತವಃ, ಶ್ಲಾಘಾ, ವರ್ಣನಂ(ನಾ)—ಈ ೧೦ ಸ್ತುತಿಯ ನಾಮಂ" (ಹಲಾಯು. ೨೪-೧೪೪) ; ನುತಿಯಿಂ ನತಿಯಿಂ ಪೂಜಾತತಿಯಿಂ ಭಜಿಯಿಸಿ (ಅನಂಪು. ೧೦-೯೨) ; ಅಗೊ ಮರಳಿ ಬಂತು ಮಳೆ, ನಮ್ಮೆ ನುತಿಗು ಖತಿಗೂ ತಾನು ಹೊರತೆಂಬ ಪರಿಗೆ ಹನಿಯೆರಚಿ (ಹಂಸದ. ೧೬೭). ೨. ಪೂಜೆ. ೩. ಮನ್ನಣೆ ; ಗೌರವ. ೪. ಪ್ರಸಿದ್ಧಿ ; ಕೀರ್ತಿ: 'ನುತಿವಡೆ' ಪರಾ. [ಸಂ.]

ನುತಿಗೆಯ್, ನುತಿಗೈ (ಕ್ರಿ). ಕೊಂಡಾಡು ; ಸ್ತುತಿಸು ; ಹೊಗಳು ; ಸ್ತೋತ್ರಂ ಮಾಡು : ಪರಸಿದರಿದಿರ್ಗೊಂಡರಲಂಕರಿಸಿದ ರಾದರಿಸಿದರ್ ಕರಂ ನುತಿಗೆಯ್ದರ್ (ಗಿರಿಕ. ೪-೭೨) ; ಚರಣದೊಳ್ಬಿಳ್ದು ನುತಿಗೆಯ್ದು ತನ್ಮುನಿಪಂಗೆ ಸರಸಿಜಾಕ್ಷಂ ಶಿಷ್ಯನಾಗಿರಲ್ ಕ್ಷೀರಾಬ್ಧಿಯಂ ಪಡೆದದೇಂ ಬರ್ದುಕನೇ (ಪದ್ಮರಾ. ೧೧-೬೨) ; ಉರಿವ ಭಾಸ್ಕರಕೋಟಿ ತೇಜದೆ ಪೊಱಸುತ್ತಿ ಪರಿವ ಚಕ್ರವ ನುತಿಗೆಯ್ದು (ಮೋಹತ. ೩೧-೧೫) ; ಬಳಿಕನಲಸೂಕ್ತಂಗಳಿಂದೆ ನುತಿಗೆಯ್ದು [ಪಾಶಾಂ. ಗೈದು] ಭೂತಳಕೊಂದಿ ಸಾಷ್ಟಾಂಗದಿಂದೆಱಗಿ ನಿಂದು (ಜೈಮಿಭಾ. ೮-೪೨). **ನುತಿಗೈ** : ಈ ಪರಿಯ ನುತಿಗೈದು ಧ್ಯಾನಾಲಾಪದಿಂ ಹೃತ್ಪದ್ಮದಲಿ ಚಿದ್ದೀಪಮೂರ್ತಿಯ ಸೆರೆವಿಡಿದು (ಗಗತಾ. ೧೭-೬೫) ; ಅಖಂಡಾನಂದವಿಗ್ರಹನ ನಿಟ್ಟಿಸುತ ನುತಿಗೈದು ಸಂತಸದೊಳು (ವೆಂಕಾರಾ. ೫-೩-೧೮) ; ಸ್ಮರಜನಕನು ನುತಿಗೈದ ಚೆಲುವರಾಯ ಬರಬೇಕೆಮ್ಮೆಡೆಗೆ ನೀ (ಕರ್ನಾಕ. ೨೨೬).

[ನುತಿ+ಕೆಯ್$_1$]

ನುತಿಗೈ 'ನುತಿಗೆಯ್' ನೋ.

ನುತಿಗೊಡು (ಕ್ರಿ). ಕೊಂಡಾಡು ; ಸ್ತುತಿಸು ; ಹೊಗಳು : ತನ್ನ ಮಂದಿರಕೀಗ ಚೆನ್ನಿಗನು ಬರುತಿಹನು ! ನನ್ನಿ ಇದು, ಬಾ ನೀರ, ನುತಿಗೊಡುವ ಬಾ (ಮಾಂದಳಿ. ೭೧-೩). [ನುತಿ+ಕೊಡು$_1$]

ನುತಿಯಿಸು 'ನುತಿಸು' ನೋ.

ನುತಿವಡೆ (ಕ್ರಿ). ಪ್ರಸಿದ್ಧವಾಗು ; ಪ್ರಖ್ಯಾತಿಹೊಂದು : ನುತಿವಡೆದೀ ಕ್ಷೇತ್ರದೊಳಾ ಶಿತಿಕಂಠಾರ್ಪಿತಸುಧೂಪ ವರಗಂಧಘ್ರಾಣಿತರೈದ ರ್ವೈತರಣಿಯ ತತದುರ್ಗಂಧವನೆ ವಾಸಿಸರ್ ಜನನಾಥಾ (ಉದ್ಭಟ. ೩-೭೧) ; ನುತಿವಡೆದ ಪದಿನೆಂಟುವರ್ಣನೆಗಳಿಂ ಸಮಾಶ್ರಿತನವರಸಾದ್ಯಲಂಕಾರುಗಳಿಂ ವಿಬುಧತತಿ ಬಣ್ಣಿಪಂತುಸಿರ್ದೆನೀ ಕಾವ್ಯಮತಿಸೇವ್ಯಮಾದುದೆಂಬೊಲ್ ಸುಜನರು (ಚಿಬಪು. ೧-೩೬). [ನುತಿ+ಪಡೆ$_1$]

ನುತಿವಾದ (ನಾ). ಸ್ತುತಿಯ ಮಾತು ; ಸ್ತೋತ್ರ : ನುತಿವಾದ ಪರಿವಾದದಲಿ . . . ದ್ವಾದಶಾತ್ಮನ ಭಜಿಸಿದರೆ ಭಕ್ಷ್ಯಾದಿ ಬಹುವಿಧದನ್ನ ಸಿದ್ಧಿಪುದು (ಕುಪ್ಯಾಅ. ೧-೬). [ನುತಿ+ವಾದ$_2$]

ನುತಿವೆಱು (ಕ್ರಿ). ೧. ಕೊಂಡಾಡಲ್ಪಡು ; ಹೊಗಳಿಕೆ ಹೊಂದು ; ಸ್ತುತಿಯನ್ನು ಪಡೆ : ಮಾಚಯ್ಯ ಪ್ರೇಮವೆಸೆಯಲು ಬಸವನಂ ಸನ್ನಾಮಿ ಕಿನ್ನರಶರಣನಂ ಸುಕ್ಷೇಮದಿಂ ಜೀವಂತರಂ ಮಾಡಿದನು ನುತಿವೆತ್ತು (ಬಸಪು. ೩೬-೪೪). ೨. ಹೆಸರಾಗು ; ಪ್ರಸಿದ್ಧವಾಗು : ಕ್ಷಿತಿವಧು ತಾಳ್ದಲಂಕೃತಿಯಿದೆಂದೆನಿಸಿರ್ಪುದು . . . ದತ್ತನಿರ್ಜರಸ್ಥಿತಿ ನುತಿವೆತ್ತ ಧರ್ಮವತಿಯೆಂಬ ಪುರಂ ವಿತತಪ್ರಭಾವದಿಂ (ರಾಜಶೇ. ೨-೩೨).

[ನುತಿ+ಪೆಱು$_1$]

ನುತಿಸು, ನುತಿಯಿಸು (ಕ್ರಿ). ಹೊಗಳು ; ಕೊಂಡಾಡು ; ಕೀರ್ತಿಸು ; ಸ್ತುತಿಸು : ಆಗಮಪುರಾಣಾರ್ಥವಿಹಿತವಿಭಾಗಸೂಕ್ತಿಗಳಿಂದೆ ಮಂಜುಳರಾಗರಸವೊಸರ್ದೆಸೆಯಲನುರಾಗಿಸಿ ನುತಿಸುತಿರಲು (ಬಸಪು. ೪-೫೬) ; ಆ ಮುನಿಕುಲಂ ಭೀತಿಯಿಂ ನುತಿಸೆ ನಿಜರೂಪಮಂ ತೋಱಿ ಪರಿಪೂತ ಸುಜ್ಞಾನಮಂ ಕೊಟ್ಟವರ ಪೊರೆದನು (ಪದ್ಮರಾ. ೧೧-೨೨) ; ಕರಿಮುಖನ ಷಣ್ಮುಖನ ಚರಣಕ್ಕೆಱಗಿ ನುತಿಸುತ್ತಿರಲು ಪಾರ್ಥನ ಪರಮ ಭಕ್ತಿಗೆ ಮೆಚ್ಚಿ ತೆಗೆದಪ್ಪಿದರು ಕರುಣದಲಿ (ಕುಪ್ಯಾಅ. ೬-೧೦೭) ; ಶಿವಗೃಹಕೆ ತಾ ಬರಲು ಬಲ್ಪಿಂ ಕದವು ಸೇರಿಸಿರೆ ನಂಬಿ ಪೊಱಗಿರ್ದೀಶನಂ ನುತಿಸಿದ (ಸೌಂದಪು.೧೪-೧೫); ರಥಕುರುಜುಗಳೊಳಗೆಸೆವ ಪಟಗಳು. . . ನುತಿಸಲೋಲಗಸಿರಿ ಕೈನೀಡಿ ನಿರ್ಜರತತಿಯ ಕರೆವೊಲೊಪ್ಪಿದುವು (ಕಂಸವಿ. ೨೦-೨೦). **ನುತಿಯಿಸು** : ನುತಿಯಿಪ ವಡ್ಡಾಚಾರ್ಯ್ಯಬ್ರತಿಪತಿಯೆ ನೇಮಿದೇವರಿಂದಮೆ ಪೂಜ್ಯ (ಎಕ. VII, ತಿವಮೊ. ೬೪-೮೦ ; 1112 ?) ; ಅವರುಗಳನ್ನು ನುತಿಯಿಸೆ ಕುಂದುಹೆಚ್ಚನು ನೀವು ಕಾಣ್ಬುದು ಮಂದರೋದ್ಧರ (ಸಂಭವ. ೬-೧೦) ; ಉಜ್ವಳಮುಕ್ತಿಯೇ ಮೂರ್ತಿವೆತ್ತು ಸಾರ್ದತ್ತೆನ್ನ ಪಲವುಜನ್ಮಂ ಸಫಲಮಾದುದೆಂದಮರೇಂದ್ರನಭವನಂ ನುತಿಯಿಸಿದನು (ಚಿಬಪು. ೨೦-೬). [ನುತಿ+ – ಇಸು$_3$]

ನುತ್ತ (ಗು). ೧. ಹೊರದೂಡಿದ ; ತಳ್ಳಿದ. (ನಾ). ೨. ಹೊರದೂಡಿದುದು ; ತಳ್ಳಿದುದು : "ನುತ್ತಂ ನುನ್ನಂ" (ವಸ್ತುಕೋ. ೧೦೪-೪೦); "ನುತ್ತಃ, ನುನ್ನಃ, ಅಸ್ತಃ, ನಿಷ್ಕೃತಃ, ವಿದ್ಧಃ, ಕ್ಲಿಪ್ತಃ, ಈರಿತಃ—೭ ನೂಕಲ್ಪಟ್ಟದ್ದು, ತಳ್ಳಲ್ಪಟ್ಟದ್ದು" (ಸಿದ್ಧಾಂತಿ. ೩೪೬). [ಸಂ.]

ನುನುನ್ನಿಗಿಡ (ನಾ). ಒಂದು ಬಗೆಯ ಸಸ್ಯ : (ಮೈಔಗಿ. ೪೮-೯೬೧).

[ನುನುನ್ನಿ$_0$+ಗಿಡ (<ಗಿಡು)]

ನುನ್ನ (ನಾ). ೧. = ನುತ್ತ ೨ : "ನುನ್ನಂ, ಕ್ಷಿಪ್ತಂ—ಈ ೨ ನೂಕಲ್ಪಟ್ಟುದು" (ಹಲಾಯು. ೧೨೬–೮೨). ೨. [ಗಣಿತ] ಕಳೆಯುವುದು; ವ್ಯವಕಲನ : "ರಜತಂ, ರಜಿತಂ, ಉನಿತಂ, ತ್ಯಜಂ, ನುನ್ನಂ, ವಿವರಣಂ, ವಿಶೋಧ್ಯಂ, ಶೋಧ್ಯಂ, ತ್ಯಜಿಸು, ಕಳೆ ಇಂತಿನಿತುಂ ಕಳೆವುದಕ್ಕೆ ಪೆಸರು" (ಸ್ವಪಜಾ. ೧೧೧–೨೧). [ಸಂ.]

ನುನ್ನಿತ (ಗು). ಕಳೆದುಹೋದ : ಮೋಹನೆ ಗೌರಿ ಕನ್ಯಾವಯಸ್ಸ ನುಳಿದು ನುನ್ನಿತ ವಯೋತರುಣಕಾಲವಾಕೆಯ ರೂಪಿಗಿನ್ನಾಗಲೀ ಕರಿದಹಳಿಂದು (ಜಿನಸು. ೪೨–೭). [<ಸಂ. ನುನ್ನ ?]

ನುರಿ[1] 'ನುಜ್ಜು[1]' ನೋ.

ನುರಿ[2] 'ನುಜ್ಜು[2]' ನೋ.

ನುರಿಗ (ನಾ). ಒಂದು ಬಗೆಯ ಗಿಡ : "ಛಿನ್ನಪತ್ರಾ-ನುರಿಗನ ಕಾಯಿ" (ಓಷಧಿ. ೫೯). [?]

ನುರಿನುಳ್ಳು (ಕ್ರಿ). ಚೂರುಚೂರಾಗು ; ಛಿದ್ರಛಿದ್ರವಾಗು ; ನುಚ್ಚುನೂರಾಗು : ನುರಿನುಳ್ಳಿ ಜರ್ಜರಿತಮಾಗಿರ್ದುದೈ ಮುನಿವರ ನಿಶಾಕರನ ಪುಣ್ಯಾಶ್ರಮಂ ! ಪೊರಗೆ ಪೋಗಿರ್ದವಂ ಬರ್ದುಕಿದಂ ಋಷಿ (ತ್ರಿಪುರಾಮಾ. ೩೮೪–೭೧೫). [ನುರಿ[2](<ನುಜ್ಜು[2]) + ನುಣ್ಣು(<ನುಟ್ಟು)]

ನುರಿವಡೆ (ಕ್ರಿ). ಚೂರುಚೂರಾಗು ; ಕಣಕಣವಾಗು ; ತುಂತುರಾಗು : ಗಿರಿಶಿಖರವಾದ ಹಣೆಯಲ್ಲೊಸರುವ ಬೆವರ ಬಿಂದುಗಳೊಳಗೆ ಕೆಲವು ಹಾಗೆ ಕೆನ್ನೆಗಳತ್ತ ಜಾರಿದರೆ, ಕೆಲವು ಹೀಗೆ ಮೂಗಿನ ಇಕ್ಕೆಡೆಗಳಲ್ಲಿಳಿದು ಬಿಸುಸುಯ್ಲಿನ ಸೂಂಕಾರದಿಂದ ನುರಿವಡೆದು ಹಾರುತ್ತಿದ್ದವು (ವೀರಬಂ. ೬೬). [ನುರಿ[2](<ನುಜ್ಜು[2]) + ಪಡೆ[1]]

ನುರಿಸು (ಕ್ರಿ). ೧. ಚೂರುಮಾಡು ; ಹುಡಿಗುಟ್ಟು ; ಪುಡಿಮಾಡು : (೬). ೨. ಪಳಗಿಸು : ಅಂಜೆ, ಬಾಸುಲಿ, ತಂತಿ ಇವಿ ಪ್ರಪಂಚದ ಹಂತಿನುರಿಸಿ ಹೊಂದಿಸಿ—ಕೊಳಲಿ ನವಜೀವನ (ನೆಲಮು. ೨೧–೮). ೩. ಮನನ ಮಾಡು : ಹರಿ ನಂಬಿದವರನು ರಕ್ಷಿಸುವನೆಂಬ ವಾಕ್ಯವನು ಮನದಿ ನುರಿಸುತ. ಆರ್ಜಕರು ಮುಂದೆ ಹೆಜ್ಜೆ ಇಡೆ (ನವಿಕಾ. V, ೬೪–೪). ೪. ಅಗಿ ; ಜಗಿ : ಕುದುರೆಗಳು ಮೊದಲು ದವಡೆಗಳಿಂದ ನುರಿಸಿ, ಆಮೇಲೆ ನುಂಗುತ್ತವೆ (ಮುಂಬಯಿ. ೩–೩೭) ; ಆಹಾರದ ಎಷ್ಟೋ ಭಾಗವು ನುರಿಸುವಾಗಲೇ ಅರಗಿಹೋಗುವುದು (ಗೋಗ್ರಾಸ. ೪೧) ; ನರಹರಿಗೆ ಆವರ ಮಾತುಗಳನ್ನು ಕೇಳಿ ಬೇಸರ ಬಂದಿತು . . . ಎದ್ದು ಹೋಗುವ ಹಾಗಿರಲಿಲ್ಲ. ಮುನ್ನೋಡಿ ಎಲೆಯಲ್ಲಿದ್ದುದನ್ನು ನುರಿಸುತ್ತ ಕುಳಿತಿದ್ದನು (ಸಮಜೀ. ೧೩೦).

ನುರಿಸಿಕೊಳ್ಳು = ಮೆಲಕು ಹಾಕು; ಮನನ ಮಾಡು : ಮಾಣಿಗೆ ಆದಿ ತೋರಿಸಬೇಕಾದ ಬಿರುನುಡಿಗಳನ್ನು ಮನಮನದೊಳಗೆ ನುರಿಸಿಕೊಂಡು ಅವನ್ನು ಗಟ್ಟಿಮಾಡಿಕೊಳ್ಳಹತ್ತಿದನು (ಇಪ್ಪಳ. ೨೬೫). [ನುರಿ[2](<ನುಜ್ಜು[2]) + -ಇಸು[3]]

ನುರುಕು 'ನುಜುಕು' ನೋ.

ನುರುಗು 'ನುಜುಕು' ನೋ.

ನುರುಜು, ನೊರಜು[2] (ನಾ). ನುಣುಪಾದ ಸಣ್ಣ ಸಣ್ಣ ಕಲ್ಲಿನ ಚೂರು : 'ನುರುಜುಗಲ್ಲು' ಪರಾ. **ನೊರಜು[2]** : ಮುಳ್ಳು ಮುಣ್ಣು ನೊರಜಿನ ನಡುವೆ ಇಕೊ ಹೊಚ್ಚ ಹೊಸ ಹೊನ್ನಕ್ಷತ್ರ (ಚಲುವು. ೫–೩). [ದೇ.॥ ತೆಲು. ನಜುಜು = ಸಣ್ಣದು]

ನುರುಜುಕಲ್ಲು 'ನುರುಜುಗಲ್ಲು' ನೋ.

ನುರುಜುಗಲ್ಲು, ನುರುಜುಕಲ್ಲು, ನೊರಜುಗಲ್ಲು (ನಾ). = ನುರುಜು : ಎತ್ತಿನಬಂಡಿಯ ಸಾಲು ಕೀಗುಟ್ಟುತ್ತ, ರಸ್ತೆಯ ನುರುಜುಗಲ್ಲನ್ನು 'ಕರಕರ' ಎಂದು ತಿಕ್ಕಿ ಪುಡಿಮಾಡುತ್ತ . . . ಹೋಯಿತು (ರಂಗನಾ. ೪) ; ನುರುಜುಗಲ್ಲಿನ ಮೇಲೆ ನಡೆಯುವುದಕ್ಕೂ ಜೋಡಿನೊಳಗೆ ನುರುಜುಗಲ್ಲು ಹಾಕಿಕೊಂಡು ನಡೆಯುವುದಕ್ಕೂ ಯಾವ ವ್ಯತ್ಯಾಸ ವಿರುತ್ತದೆಯೋ ಹಾಗೆ (ಶಿಬಂಧ. II, ೧೮೫). **ನುರುಜುಕಲ್ಲು** : ಆ ಬಳಿಕ ಕೆಂಪುನುರುಜುಕಲ್ಲುಗಳು ಯಿರುವವು (ಸೌಗಂಧಿ. ೪೩೧–೫೧). **ನೊರಜುಗಲ್ಲು** : ಈ ಮಧ್ಯಾಹ್ನದಲ್ಲಿ ಕಾಯ್ದ ನೆಲದ ಮೇಲೆ ನಡುವ ನುರಿಸಿ ಮೇಲೆ ಕಠಿಣವಾದ ನೊರಜುಗಲ್ಲು ಮರಳುಗಳನ್ನು ಕಾಲಿನಿಂದ ತುಳಿಯುತ್ತ ಬಂದರೆ ಕಾಲು ಗಾಯವಾಗಿ ನೋಯುವುದು (ಬುದ್ಧಪ. ಮಿಲಿಂದ. ೩೫) ; ನೊರಜುಗಲ್ಲಿನಲ್ಲಿ ನೂರಕ್ಕೆ ಮೂವತ್ತಾರರಷ್ಟು ರಂಧ್ರಗಳಿರುತ್ತವೆ (ಕವಿಕೋ. I, ೭೬). [ನುರುಜು + ಕಲ್ಲು (<ಕಲ್[3])]

ನುರುಟುವಲ್ (ನಾ). ವಿಕಾರವಾದ ಹಲ್ಲು ; ಮುರುಟಿಕೊಂಡಿರುವ ಹಲ್ಲು : ನೊರಜುಗಣ್ಣಿನ ನಳಿದ ಮೂಗಿನೆಳಲುವ ತುಟಿಯನು[ಪಾಠಾಂ. ಕು]ರುಟುವಲ್ಲಿನ . . . ನಾಜುವ ಬಾಯ ನೊರೆ ಸೂಸು ತಿರ್ದಳ್ (ಹಚಕಾ. ೪–೨೪ ; ಸೋಸುತ. ೨–೫೮ ನೋ). [ನುರುಟು[0] (P←ತುಳು. ನುರುಂಟು) + ಪಲ್]

ನುರುಹು (ಕ್ರಿ). ಪುಡಿಮಾಡು ; ನರುಕು ; ನುಣ್ಣಗೆ ಮಾಡು : ಪ್ರತಿದಿನವೂ ಒಂದೊಂದು ಗುಳಿಗೆಯನ್ನು ನುರುಹಿ ಹಸುವಿನ ಬೆಣ್ಣೆ ಮತ್ತು ಸಕ್ಕರೆಯಲ್ಲಿ ಮಿಶ್ರಮಾಡಿಕೊಡಲು ದಾಹಜ್ವರ ಗುಣವಾಗುವುದು (ಸಕಸೈ. ೪೬). [<ನುರಿ[2] + -ಹು[1](<-ಪು[1])]

ನುಗ್ಗಾಡು (ಕ್ರಿ). ಛಿದ್ರಗೊಳಿಸು ; ಚೂರುಮಾಡು : ಒರ್ವ ನೂರುಗಳನೆನ್ನ ಗದಾಶನಿಘಾತದಿಂದೆ ನುಗ್ಗಾಡುವೆನೆಂದು ಲೋಕ ಮಜಿಯುತ್ತಿರೆ ಪೂಣ್ದೆನಗಂತೆ ಸಂತಸಂ ಮಾಡದೆ (ಪಂಪಭಾ. ೯–೨೪). [ನುಗ್ಗು[3] (<ನುಜುಗು[2]) + ಆಡು[1]]

ನುಗ್ಗಿಸು 'ನುಜುಕಿಸು' ನೋ.

ನುಗ್ಗು[1], ನುಗ್ಗು[1] (ಕ್ರಿ). ೧. ಇಕ್ಕಟ್ಟಿನಲ್ಲಿ ಒತ್ತರದಿಂದ ಮುಂದೆ ನುಗ್ಗಿ ; ಒತ್ತರಿಸು ; ನೂಕಿ ನಡೆ : "ಇಟ್ಟಿಡೆಯ ಗಮನಂಗಳೊಳ್ ನುಗ್ಗು" (ಶಬ್ದಮಂ. ೪೫) ; ತನಗಾಂತಧಿಕೋಗ್ರವಿರೋಧಿಸಾಧನಂ ವಳಕೆ ಬಳಲ್ದಿ ನುಗ್ಗಿರ್ದ ಪಲರಂ ತವೆ ಕೊಂದು (ಎಕ. VIII, ಸೊರಬ. ೧೮೪–೮ ; 1033 ?) ; ನೆರವಿಯನುರನಣಿಸಿ ಪಾಯ್ದು ಬೀದಿವರಿದಾಜಿಗೊಂಡು ಸಿಕ್ಕಿದ ರೂಪಿನ ತಲೆಯೊಳ್ ನಿಳಿಲ್‌ನಿಕ್ಕೆಂದು ತಗಿ ನುಗ್ಗಿ [ಪಾಠಾಂ. ಕುರ್ಗೆ] ಕಚ್ಚಿ ಕೊಡಹುವ . . . ಸುಳಿಕಾಶ್ವಮಂ ಬೇಗದಿಂ ಬೆಂಗೆವಾಯ್ದು ರಾಳೆಯೊಳೌಂಕಿ ವಾಳೆಯೊಳ್ ನಿಲಿಸಿ (ಗಿರಿಕ. ೨–೧೦೬ ಪ) ; ಎಲ್ಲರ ಧೈರ್ಯಮುಂ ಮೊಲೆಯ ಬಿಣ್ಪಿಂ ನುಗ್ಗಿ ನೂಂಕಲ್ಕೆ ಧೀರಂಕಿಡುವಂತಾಡಿದಳುಯ್ಯಲಂ ತರುಣ ತಂದಳ್ ಕಾಮನಂ ಹುಯ್ಯಲಂ (ಅನಂಪು. ೪–೬). **ನುಗ್ಗು[1]** : ೧. ನಾಲ್ಕುಕೋಟೆ ಭಟಾಳದಂಬವು ನೂಕಿ ನುಗ್ಗುವ ಪಾಯಿದಳ ಹದಿನಾಕುಕೋಟಿಗಳು (ಸಂಧಪ. ೧೩–೨೨) ; ನೋಡಲಗ್ನಿಯೊಳಡಗಿ ನುಗ್ಗಿದುದು ಸುತ್ತಲುಂ ಮಾಡಿದುದು ಕರ್ಣಶವನಮರ ಸುಭಟಾಳಿ(ಚಿಬಪ. ೪೨–೭೧) ; ನಡೆ ಮುಂದೆ ನಡೆ ಮುಂದೆ, ನುಗ್ಗಿ ನಡೆ, ಮುಂದೆ ! (ಪಾಂಚಜ. ೫–೨) ; ಕಾಲವಾಹಿನಿಯಲ್ಲಿ ಸಿಕ್ಕಿ . . . ಮೇಲ್ಮೇಲೆ ವಿಷವೀಚಿಮಾಲೆಗಳು ನುಗ್ಗುತ್ತ ಬರುತಿಹವು ಕೊಚ್ಚುತಿಹವು (ಕವಿಸೋ. ೩೬–೩). ೨. ಹೊಗು ; ಪ್ರವೇಶಮಾಡು : "ನುಗ್ಗು—ಒಳಹೊಗು, ಪ್ರವೇಶಿಸು" (ಜಾನಕೋ. ೧೨) , ಅವರ ಮನೆಯ ಬಾಗಿಲನ್ನು ನುಗ್ಗುವಾಗಲೇ . . . ಅವರ ಮಗಳು ಸರಸ್ವತಿಯು ಕಾಣಿಸಿಕೊಂಡಳು (ಮುರಮು. ೫೭೫) ; ಮಹಾಪುರುಷನು ಕಾರ್ಯಕ್ಷೇತ್ರಕ್ಕೆ ನುಗ್ಗಿದನು (ಕೃಮಹ. ೪೯). [ದೇ.॥ತಮಿ. ನುಟುವು, ನುಟ್ಟು ; ಮಲ. ನೂಟು, ನೂಳು, ನೊಕ್ಕು ; ಕೊಡ. ನುಗ್ಗ್]

ನುರ್ಗು$_2$ 'ನುಱುಕು' ನೋ.

ನುರ್ಗು$_3$ 'ನುಱುಗು$_2$' ನೋ.

ನುರ್ಗುಗುಟ್ಟು, ನುಗ್ಗುಗುಟ್ಟು (ಕ್ರಿ). ಹುಡಿಗುಟ್ಟು ; ಪುಡಿ ಮಾಡು ; ಧ್ವಂಸಗೊಳಿಸು : ಜಲಧಿಯೊಳಿರ್ದಡೀಂಟ ಕುಲಶೈಲದೊಳಿರ್ದಡೆ ನುರ್ಗು[ಪಾಠಾಂ. ಗ್ಗು]ಗುಟ್ಟ . . . ವಿರೋಧಿಯುಷ್ಣ ರುಧಿರಾಂಬುವಿನಿಂ ಸುತೆ ನಿನ್ನ ಕೇಶಮಂ ತೊಳೆಯದೊಡೆನ್ನ ಚಕ್ರಮಿದು ಚಕ್ರಮೆ ಕೋವರಚಕ್ರಮಲ್ಲದೇ (ಮಹಾನೇ. ೬-೯೯). **ನುಗ್ಗುಗುಟ್ಟು** : ಅದಱ ಪಡಿಯನು ಸಂದ ಪರಾಕ್ರಮಿಯಾ ದಂಡಾಧಿಪ ನಂದಿಟ್ಟು ನುಗ್ಗುಗುಟ್ಟದನು (ಶ್ರೀಪಾಲ. ೧೩-೧೭೧) ; ವಿಕ್ರಮಯುತ ಸೇನಾಧಿನಾಯಕನಾ . . . ಮ್ಲೇಚ್ಛನೃಪರ ಪರಾಕ್ರಮವನು ನುಗ್ಗುಗುಟ್ಟ (ಶ್ರೀಪಾಲ. ೧೩-೧೭೬). [ನುರ್ಗು$_3$(<ನುಱುಗು$_2$). + ಕುಟ್ಟು$_1$]

ನುರ್ಗುನುಱಿ, ನುಗ್ಗುನುರಿ, ನುಗ್ಗುನುಱಿ (ನಾ). ಚೂರು ಚೂರು ; ನುಚ್ಚುನೂರು ; ನಜ್ಜುಗುಜ್ಜು ; ಪುಡಿಪುಡಿ : ಕುರು ಕುಲಮಹೀಪಾಲ ಬೃಹದೂರುಶೈಲದ್ವಂದ್ವಂಗಳಂ ತನ್ನ ಗದಾದಂಡವಜ್ರ ದಂಡದಿಂ ನುರ್ಗು[ಪಾಠಾಂ. ಚರ್ಗು]ನುಱಿ ಮಾಡಲುಂ (ಗದಾಯು. ೬-೧೬ ಪ) ; ತೇರ ತೆಕ್ಕೆಗಳ್ ಕಲ್ಲ ಗಾಣದ ಕಣಿಯ ಬಾಯ್ಗೆ ಬಿಟ್ಟ ಕಳಿಕೆಯ ಚೆಂಡಿನಂತೆ ನುರ್ಗುನುಱಿಯಾಗಿರ್ದುವು (ಅನಂಪು. ೧೪-೬ ಪ) ; ಕಾದಲೆಯಂ ಬರೆಸೆಳೆದೊಳಅಟ್ಟೆ ನುರ್ಗುನುಱಿಯಪ್ಪಿನಂ . . . ತನ್ನೆ ರಡುಂ ನಿಡುದೋಳ್ಗಳಿನಮರ್ದು ಬಿಗಿದು ತಳ್ಕೈಸಿಯುಂ (ರಾಮಾಶ್ವ. ೬೦-೨೨). **ನುಗ್ಗುನುರಿ** : ಪವಮಾನಿ . . . ದನುಜನ ಮಹೋರ ಸ್ಥಲವ ಗುದ್ದಿದನು ನುಗ್ಗುನುರಿಯಾಗಿ ಬಿದ್ದನಸುರನು ನೆಲಕೆ (ಅನಂರಾ. ೬-೯-೩೧). **ನುಗ್ಗುನುಱಿ** : ದಬ್ಬಳಮಂ ಬೆರಲ್ಗಳೊಳಡಂಗುವಿನಂ ನಡೆಪೊಯ್ದು ಮೂಳೆಯಂ ದಬ್ಬುಕದಿಂದೆ ನುಗ್ಗುನುಱಿಯಪ್ಪಿನೆಗಂ ಬಿಡೆ ಬೀಸಿ ಪೊಯ್ದು (ಸುಕುಮಾ. ೭-೬) ; ಅಪ್ಪಿದರೆ ಅಸ್ಥಿಗಳು ನುಗ್ಗುನುಱಿ[ಪಾಠಾಂ. ಸಿ]ಯಾಗಬೇಕು (ಮಹಾದೇ.ಬ. ೧೪೭-೩೩೬) ; ಹಲಾಯುಧ ಮನ್ಮಥಾದಿಗಳು ಬಗ್ಗಿ ಕವಿವ ಕಠೋರದೈತ್ಯರ ನುಗ್ಗುನುಱಿ ಮಾಡಿದರು (ಕುವ್ಯಾಅ. ೨-೨೪) ; ಕಗ್ಗಲ್ಲ ಮೊರಡಿಯನಾ ಕೊಂಬಿನಿಂ ನುಗ್ಗುನುಱಿಮಾಡುತಿರದೆಯ್ದಿತಾ ಭದ್ರಹಸ್ತಿ (ನೇಮಿಸಂ. ೯-೮).

[ನುರ್ಗು$_3$ (<ನುಱುಗು$_2$) + ನುಱಿ$_2$]

ನುರ್ಗುನೂಂಕು (ನಾ). ನುಚ್ಚುನೂರು ; ನಾಶ : ಮಾರ್ಗಣಿಗಳಂ ಕಡಿದುಂ ಕಟ್ಟಳವಿಯ ಹರಿಬಂ ನುರ್ಗುನೂಂಕಪ್ಪಿನೆಗಂ ತನಗಂ ತೇರ್ಗಂ ಕಾಪಿಟ್ಟು (ರಾಮಾಶ್ವ. ೧೧೨-೪). [ನುರ್ಗು$_1$ + ನೂಂಕು$_2$]

△ **ನುರ್ಗೆ** 'ನುಗ್ಗೆ' ನೋ.

ನುರ್ಗೊತ್ತು, ನುಗ್ಗೊತ್ತು (ಕ್ರಿ). ೧. ಬಲವಾಗಿ ಅದುಮು ; ನುಗ್ಗಾಗುವಂತೆ ಹಿಸುಕು, — ಒತ್ತು : ಕುರುರಾಜಾನುಜರಂ ಪ್ರಭಂಜನಸುತಂ ಕೊಂದಿಕ್ಕುಗುಂ ಕೌರವೇಶ್ವರನೂರುದ್ವಯಮಂ ಗದಾ ಪರಿಘದಿಂ ನುರ್ಗೊತ್ತುಗುಂ (ಗದಾಯು. ೫-೫೮) ; ನರನಂ ಗೆಲುವಂದು ವನೇಚರನಾದಂ ರಜತಗಿರಿಯನೆತ್ತಿದ ಲಂಕೇಶ್ವರನಂ ನುರ್ಗೊತ್ತಿದನೆಂದು ರಾಗದಿಂ ಪೊಗಟಲಾಗದಾಪ್ತನನುಱಿವರ್ (ಸಮಪ. ೮-೫೧) ; ಸಿಡಿಲಂ ನುರ್ಗೊತ್ತುವಂ ಭೈರವನ ಮಸಕಮಂ ಬಗ್ಗಿಪಂ . . . ವೀರ ಸಾಮಂತ ಸಿಂದನ್ (ಎಕ. XIV, ನಾಗಮಂ. ೧೪೦-೩೪ ; ಸು. 1224) ; ಕಡಲೊಳ್ ನೇಸಱನಟ್ಟಲುಂ ಪೊಡವಿಯಂ ನುರ್ಗೊತ್ತಲುಂ ಕೊಂಕಿ ಘೀಟಿಡೆ ತಟ್ಕಿಂ ದೆಸೆಯಾನೆಯಂ ಮುಱಿಯಲುಂ . . . ಬಗೆದನಾಗಳ್ ದಪ್ಪದಿಂ ದಪ್ಪಗಂ (ಕಬ್ಬಿಕಾ. ೧೫೨) ; ಘನಮಹತ್ವವೆನಿಪ್ಪ ಗದೆಯಿಂದ ನತ ಪರವಾದಿಗಳೆನಿಪ ಗರ್ಜನೆಯ ಮೃಗಸಂದೋಹಮಂ ಬೆಂಬತ್ತಿ ನುರ್ಗೊತ್ತಿ (ಬಸಪು. ೩೪-೩೫). ೨. ನಿಗ್ರಹಿಸು ; ದಮನ ಮಾಡು : ದುರ್ವ್ಯಸನಮಂ ನುರ್ಗೊತ್ತಿ ರಾಗಾದಿಯಂ ಸದೆದು . . . ಚಿತ್ಪದಮಂ ಸಾರ್ಚುಗುಮಲ್ತೆ ನಿನ್ನ ವಚನಂ ಪ್ರತ್ಯಕ್ಷಭಾಳೇಕ್ಷಣಾ (ವೃಷವಿ. ೨೭-೧೬). **ನುಗ್ಗೊತ್ತು** : ೧. ತುರಗವನು ಸಿಂಧವನು ಮಾರ್ಗಣವೆರಡಱಲಿ ನುಗ್ಗೊತ್ತೆ ರಥದಿಂ ಧರಣಿಗಿಳಿದನು ಕರ್ಣ (ಕುವ್ಯಾದ್ರೋ. ೧೩-೩೬) ; ಗಾಢಭುಜದಲಿ ತಳಹತಿಯಲಂಘ್ರಿಯಲಿ ನುಗ್ಗೊತ್ತಿದನು ನಂದನವ (ತೊರರಾ. ೫-೪-೩) ; ಹತ್ತಸರವ ಹಱಿದಳು ನೂಪುರವ ನುಗ್ಗೊತ್ತಿ ದಳಡಿದೊಡವುಗಳ ಅತ್ತಿತ್ತ ಕೆದಱಿದಳು (ಕುರಾಸಾಂ. ೩೩-೮೫). ೩. ಬಲವಾದ ಒತ್ತಡಕ್ಕೆ ಒಳಗಾಗು : ಬತ್ತಿದುದು ಸಾಗರವ್ರಾತ ಮಹಿಪನ ಕೊರಲ್ ಕುತ್ತಿದುದು ಕೂರ್ಮ ಖರ್ಪರಮಿರದೆ ಬೇಗ ನುಗ್ಗೊತ್ತಿದುದು(ಚಿಬಪು.೨೩-೩೦). [ನುರ್ಗು$_3$(<ನುಱುಗು$_2$)+ಒತ್ತು$_1$]

△ **ನುರ್ಚು** 'ನುಚ್ಚು' ನೋ.

ನುರ್ಚುನುರಿ 'ನುಚ್ಚುನುಱಿ' ನೋ.

ನುರ್ಚುನುಱಿ 'ನುಚ್ಚುನುಱಿ' ನೋ.

ನುರ್ಚುನೂಱು 'ನುಚ್ಚುನೂಱು' ನೋ.

ನುಲಿ$_1$ (ಕ್ರಿ). ೧. (ಹುರಿ, ಹಗ್ಗ ಮೊದಲಾದುವುಗಳನ್ನು) ಹೊಸೆ : ಆತ ಹಗ್ಗ ನುಲಿಯುತ್ತಾ ಇದ್ದ (ರೂಢಿ). ೨. ತಿರಿಚು ; ನುಲಿಚು ; ತಿರುಗಿಸು : ಅರಸಂ ಕಂಡು ಕಡುಮುಳಿದದಱ ಗೊಂಕೆಯಂ ನುಲಿದು ಕೊಂದನಾ [ಪಾಠಾಂ. ಗೋಣಂ ಮುಱಿ ದೊಡಾ] ಗಿಳಿಯುಂ ಸತ್ತಾ ಪೊಟಲ ಬಹಿರುದ್ಯಾನವನದೊಳ್ ವ್ಯಂತರ ದೇವನಾಗಿ ಪುಟ್ಟಿತು (ಪಡ್ಡಾರಾ. ೧೦೯-೧) ; ಕುಲಜಂ ಪಶುವಿನ ಗೋಣಂ ನುಲಿದುಂ ತಿಂದಮರಪಥಕೆ ತಾಂ ಗಡ ಸಲ್ವಂ (ಸಮಪ. ೧೧-೧೦೩) ; ಬೆನ್ನನೊಯ್ಯನೆ ನುಲಿದುಕೊಳುತಾತಂ ನಿಗುರೆ ಕೈವೆರಳುಗಳು ತಲೆಯಂ ನಿಲಿಸಿಯಳ್ಳೆಗಳದಿರೆ (ಬಸಪು. ೪೭-೫೮) ; ನಾಚಿಕೆಗೂಡಿ ಮೆಯ್ಮುರಿವುದ ಱಿಂದ ಮನ್ಮಥನು ಶರೀರವನು ನುಲಿದು ಹಿಂಡುವಂತೆ . . . ಚಂದ್ರಾ ಪೀಡನಿಗಭಿಮುಖವಾಗಿ ದೃಷ್ಟಿಗಳಿಂದೆಳೆಯಿಸಿಕೊಂಡಂತೆ ಎದ್ದು ನಿಂತಳು (ವಚಕಾ. ೮೫). ೩. ತಿರಿಚಿಕೊಳ್ಳು : ಮಲಹರನ . . . ಹೊಳೆವ ಮೋಱಿಯು ಬೆಱತು ಕೊರಳುಂ ನುಲಿದು ಬಿಗಿಯಿತ್ತು.(ಬಸಪು.೧೭-೨); ಬಲದ ಪದಘಟ್ಟಣೆಗೆ ಹೆಮ್ಮರ ನುಲಿದು ಬಿದ್ದುವು ಸಾಲ ಪೂಗಾವಳಿ ಕಪಿತ್ಥ . . . ಜಂಬೀರಾದಿಗಳು ನುಗ್ಗಾಯ್ತು ನಿಮಿಷದಲಿ (ಕುವ್ಯಾಅ. ೧೮-೩೬) ; ಸದಾ ಮಂಜಿನ ಹೊರೆಯನ್ನು ಹೊತ್ತು ಕಷ್ಟದಿಂದ ನುಲಿದುಕೊಳ್ಳುತ್ತಿದ್ದ ನೀಲಿಯ ಹೂವುಗಳು ಹತ್ತುಹತ್ತಾಗಿ ಕಾಣಿಸಿ ಕೊಂಡವು (ಯೋಧಪು. ೪೮). ೪. (ಸುಲಭಪ್ರಸವಕ್ಕಾಗಿ ಹೆರಿಗೆಯ ಸಮಯದಲ್ಲಿ ಮಗುವನ್ನು) ತಿರುಗಿಸು : ಸೂಲಿಸುವ ಬಗ್ಗಿಸುವ ನೋಯಿಸುವ ನುಲಿವ . . . ಬಾಲೆಯರ ಹಂಗಿಲ್ಲ (ಸಿದ್ಧರಾ. ೧-೫೫). ೫. (ಕರುಳು) ಹಿಂಡಿದಂತಾಗು ; ಬಹುವಾಗಿ ನೋಯು : ಕರುಳು ನುಲಿದರೆ ದುಃಖ ಆಗುತ್ತದೆಯಪ್ಪ ! (ಮಹಾಗ.೩೨). 'ಹೊಟ್ಟೆ ನುಲಿ$_1$' ಪರಾ. ೬. (ದೇಹವನ್ನು) ಕೊಂಕಿಸು ; ಒಯ್ಯಾರ ತೋರು : ಈಗ ನೋಡಳು, ನಾಚಿ ನುಲಿವಳು, ನಾನು ನೋಡಲು ಮುನಿವಳು (ಇಂಗೀತ. ೪೩-೭). 'ನೂಲ್$_1$' ಪರಾ.

ನುಲಿನುಲಿ (ದ್ವಿರುಕ್ತಿ) : ಬಾಲವಂ ನುಲಿನುಲಿದುಕೊಳುತಾಭೀಳ ಭೂತೃತಿ ಪೊಣ್ಮೆ ಮೊಱಿವುತ್ತೇಳುತ ವಿಜೃಂಭಿಸುವ ತತ್ ಘಟಸರ್ಪನಂ ನೋಡಿ (ಬಸಪು. ೫೧-೫೯).

[ದೇ.॥ ತುಳು. ನುಪ್ಪು ; ತೆಲು. ನುಲಿಂಚು, ನುಲಿಯು, ನುಲುಚು, ನುಲುಪು, ನುಲಮು, ನುಲ್ಚು, ನುಲ್ಪು]

ನುಲಿ$_2$ (ನಾ). ೧. (ಹೊಸೆದು ಮಾಡಿದ) ಹುರಿ ; ಹುರಿ ಹಾಕಿದ ನೂಲು ; ದಾರ : ಆ ಗಿರೀಂದ್ರಕಂದರದೊಳ್ ತಪಂಗೆಯ್ದು

ತಪೋಧನರ ತಪಂಗಳೆಲ್ಲಮಾತನ ತಪೋಮಯಶಿವಿಗಳಿಂ ಬೆಂದು ಬೆಂದ ನುಲಿಯಂತೇತರ್ಕಂ ಮುಟ್ಟಿಲ್ಲದೆ ಮುಟ್ಟುಗಿಡೆ (ಪಂಪಭಾ. ೭–೮೦ ಪ); ಬಜುಗೊಡನೆನ್ದ್ ಪುಟ್ಟಿ ನುಲಿ ನೇರ್ ಬಡಿಕೋಲ್ . . . ವಿಮುಕ್ತಕೇಶಿಯಿದಿರೊಳ್ ಬರೆ ಕಾಣಲುಮಾಗದು . . . ಆಗದು ಪೋಗಲೆತ್ತಲುಂ (ಲೋಕೋಪ. ೧೨–೧೦); ಕೆಂಡದ ಶವದಂತೆ . . . ಬೆಂದ ನುಲಿಯಂತೆ ಮತ್ತೆ ಹಿಂದಣ ಹಂಗುಂಟೆ (ಪುಷಾದೇ. ಬ. ೭೩–೧೪೨); ಬೇಗದಿಂದೆ ಉರಿದಾಕ್ಷಣದೊಳ್ ಬೆಂದ ನುಲಿಯಂತೆ ಮುದನಂ ನಿಂದಿರೆ ಕಂಡಭವನೆಯ್ದಿ ಮುಳಿದಂ ತುಳಿದಂ (ಗಿಶಿ. ೪–೫೨); ಹಲವೆಲುವಿನೆಕ್ಕೆಗಳ ಬಿಗಿದು ಬೀವಂ ನೆಯ್ದ ನುಲಿಯ ಹಂದೊಗಲ ಹಾಸಿನೊಳು ಮುಂಡಂ ಜಡಿಯೆ (ಹಚಳಾ. ೧೧–೩೧); ಎಟ್ಟು =ಗೂಟಂ . . . ಊಕೆಯ ನುಲಿ (ಶಸುಪ. ಪರಿ. ೧); ಬಿಂದುವನು ಬಲಿದಾತ ವಂದ್ಯನಹ ಜಗಕೆಲ್ಲ ಬೆಂದ ನುಲಿಯಂತೆ ಅದಾತ ಜಗದೊಳಗೆ ಇಂದುಧರನಕ್ಕು (ಸರ್ವಜ್ಞ. ೪೧೨). ೨.(ಕರುಳಿನಲ್ಲಿ)ಉಂಟಾಗುವ ಹಿಂಡುವಂತಹ ನೋವು,—ಯಾತನೆ: 'ಹೊಟ್ಟೆನುಲಿ₂' ಪರಾ. ೩. ಒಂದೊಂದು ಹಿಡಿಗೆ ಸರಿಯಾಗುವಂತೆ ಕಂತೆಯಾಗಿ ಮಾಡಿದ ಬತ್ತದ ಪೈರು; "ನಾಟ ಹಾಕಿದ ಬತ್ತದ ಪೈರಿನ ಮೊರಡು" (ಹುಲಿಹಾ. ಕೋಶ): ಪೂವಯ್ಯ ನುಲಿಗಳನ್ನು ಕೊಯ್ಯಲೆಂದು ಬಲಗೈಯಲ್ಲಿದ್ದ ಕುಡುಗೋಲನ್ನು ಜಾಚಿದ (ಹುಲಿಹಾ. ೧೮೪). [<ನುಲಿ₁ / ತೆಲು. ನುಲಿ]

ನುಲಿಕೆ (ನಾ). ೧. =ನುಲಿ₂ ೧: "ನುಲಿಕೆ = ಹುರಿ" (ಚತುನಿ. ೫. ೨,೬೬); ಇಪ್ಪು ಸಂಭ್ರಮಗಳ ನಿಟ್ಟಿಸಿ ನಾಗಯ್ಯ ಕಟ್ಟಗೆಯೆನಲಿಹ ತೆಜದಿ ಸುಟ್ಟ ನುಲಿಕೆಯಂತೆ ಬಿಟ್ಟ ಮರೀಚಿಯ ಕಟ್ಟದ ತೆರೆಯಂದದಲಿ (ಕರಚಾ. ೩–೨೫); ಗಾಳಿಪಟ ಏರಿದಾಗ . . . ಬಳಯಲ್ಲಿಯೇ ನೋಡುತ್ತ ಕುಳಿತ ತಂದೆ ಈ ರಂಜಕದೃಶ್ಯ ನೋಡಲಾಗದೆ, ತನ್ನ ವಯಸ್ಸಿನ ಗಾಂಭೀರ್ಯ ಬದಿಗಿರಿಸಿ ಕಣಕ್ಕಿಳಿದು ಪಟ ಏರಿಸುವ ನುಲಿಕೆ ಬಿಡುವ. ಅದು ಗಗನಕ್ಕೇರಿದಾಗ ಮಗರಾಜನ ಕೈಯಲ್ಲಿ ಕೊಡುವ (ಸುತ್ತಮು. ೬೮). ೨. ತಿರುಚಿಕೊಂಡಿರುವಿಕೆ: ಎರಳೆಯ ಕೊಂಬಿನ ನುಲಿಕೆಯ ಬಳಸಿನಲ್ಲಿ ಅಜುಹಿರಿಯರೆಲ್ಲರು ಬಳಸಿ ಆಡುತ್ತೈ ಧಾರೆ (ಅಜುಮಾ. ೪. ೧೪೦–೧೩೬); ಕೆಲವು ಎಳೆಗಳಿಗೆ ಎಡಭಾಗದ ನುಲಿಕೆಗಳು, ಇನ್ನು ಕೆಲವು ಎಳೆಗಳಿಗೆ ಬಲಭಾಗದ ನುಲಿಕೆಗಳು ಇರುತ್ತವೆ (ಗೃಹವಿ. ೬೨). [ನುಲಿ₂+–ಕೆ / ತೆಲು. ನುಲಕ, ನುಲ್ಕ]

ನುಲಿಗ (ನಾ). ಒಂದು ಬಗೆಯ ಔಷಧಿಸಸ್ಯ: "ರಜತವಲ್ಲೀ–ನುಲಿಗನ ಕಾಯರ್" (ಓಷಧಿ. ೧೩೬); ಎಳೆಯ ಮಕ್ಕಳ ಒಗೆದ ಬಟ್ಟೆಗಳನ್ನು ಹಿಂಡಿದರೆ ಅವುಗಳು ಮೈಕೈ ನುಲಿಯುವುದರಿಂದ, ಹಾಗೆ ನುಲಿಯದೆ ಇರಲಿ ಎಂದು ನುಲಿಗನ ಕಾಯನ್ನು ತೊಟ್ಟಿಲಿಗೆ ಕಟ್ಟುತ್ತಾರೆ (ರೂಢಿ). [?]

ನುಲಿಗಡಗ (ನಾ). (ಹುರಿ ಹಾಕಿದ) ನುಲಿಯಂತೆ ಆಕಾರವುಳ್ಳ ಒಂದು ಬಗೆಯ ಕಡಗ: ಫಳಫಳಿಸುವ ರತ್ನದೈರಿಗಡಗ ದಿವ್ಯ ನುಲಿಗಡಗ ಗಳಾಮಲಕದ ತೊಳಪ ಕಡಗ ಹಲಸಿನಕಾಯಿಗಡಗಗಳೆಳೆನ್ಗೊಸೆದರರ್ಕಿಯಲಿ (ಶಂನವಿ. ೨೪–೨೮). [ನುಲಿ₂+ಕಡಗ₁]

ನುಲಿಗಪ್ಪ (ನಾ). = ನುಲಿಗೆಕಪ್ಪ: ನುಲಿಗಪ್ಪಗಳ ಅನುಕರಣೆ ಇಂದಿನ ನವೀನವಾದರಿಯ ಆಭರಣಗಳಲ್ಲೂ ಕಂಡುಬರುತ್ತದೆ (ರೂಢಿ).

[ನುಲಿ₁+ಕಪ್ಪ₂]

ನುಲಿಗೆ (ನಾ). =ನುಲಿಕೆ ೨: 'ನುಲಿಗೆಕಪ್ಪ' ಪರಾ.

ನುಲಿಗೆ ಮಾಡು = ತಿರುಚು; ನುಲಿ: ರೈತರು ಸಂಜೆ ಬಿಡುವಾದಾಗ ಹುರಿ ನುಲಿಗೆ ಮಾಡಿ ಹಗ್ಗ ತಯಾರಿಸುತ್ತಾರೆ (ರೂಢಿ). [ನುಲಿ₂+–ಗೆ]

ನುಲಿಗೆಕಪ್ಪ (ನಾ). ಅಲಂಕಾರಕ್ಕಾಗಿ ಕೈಯಲ್ಲಿ ಧರಿಸುವ ಚಿನ್ನದ ಅಥವಾ ಬೆಳ್ಳಿಯ ಎಳೆಗಳನ್ನು ನುಲಿದು ಮಾಡಿದ ಕಪ್ಪ,—ಹಸ್ತಕಡಗ: ಆ ಊರ ಪಟೇಲ ನುಲಿಗೆಕಪ್ಪ ಧಾರಿಸಿದ್ದಾನೆ (ರೂಢಿ).

[ನುಲಿಗೆ+ಕಪ್ಪ₂]

ನುಲಿಗೊಳ್ಳು (ಕ್ರಿ). ತಿರುಚಿಕೊಳ್ಳು; ನುತ್ತಿಕೊಳ್ಳು: ಮಲ್ಲಿಗೆಯ ಜಡೆಕುಚ್ಚುಗಳು ಅಲ್ಲಾಡುವಂತೆ ಹಾರಂಗಳು ನುಲಿಗೊಳ್ಳುವಂತೆ (ಸೌಗಂಧಿ. ೨೨೪–೪). [ನುಲಿ₁+ಕೊಳ್ಳು₂(<ಕೊಳ್₂)]

ನುಲಿಚು (ಕ್ರಿ). ೧. ತಿರುಚು; ಹಿಂಡು: ವಾತ್ಸಲ್ಯದ ವಾರಿಧಾರೆಯ ಕೊರತೆಯಲ್ಲಿ ತನ್ನ ಕಂದಮ್ಮ ನೀರಿಲ್ಲದ ಬಳ್ಳಿಯಂತೆ ಬಾಡಬಹುದು . . . ಕರುಳನ್ನು ನುಲಿಚಿದಪ್ಪ ಸಂಕಟವಾಗುತ್ತಿದೆ (ನಡದಾ. II, ೯೬೧). ೨. (ಆಲಂ) ಹಿಂಸೆಗೊಳಗು ಮಾಡು: ಅವರು ನಮ್ಮನ್ನು ಸಿಕ್ಕಾಬಟ್ಟೆ ನುಲಿಚಿಬಿಡುತ್ತಾರೆ (ಪುಸರು. ೬೦೨).

[ನುಲಿ₁+–ಚು₁]

ನುಲಿತ (ನಾ). ೧. ಹಿಂಡುವಿಕೆ; ತಿರುಚುವಿಕೆ: ಹೊಟ್ಟೆಯ ನುಲಿತ ಸ್ವಲ್ಪ ಸ್ವಲ್ಪ ಕಾಣಿಸ್ತಾ ಇದೆ (ರೂಢಿ). ೨. ಜೋಡಿಸುವಿಕೆ; ಹೆಣೆದುಕೊಳ್ಳುವಿಕೆ (?): ಎದೆಯ ಏರಿಳಿತಕೆ ಕೈಬಳೆಗಳುಲಿತಕೆ ಬೆರಳುಗಳ ನುಲಿತಕೆ ನಗು ನನ್ನ ನಲ್ಲೆ (ನಡಬಂ. ೨೯–೨೦).

[ನುಲಿ₁+–ತ₂]

ನುಲಿಪಯ್ಯ (ನಾ). ಒಬ್ಬಾತನ ಹೆಸರು: ಶ್ರೀನುದಿಜುನ ನೊಬಮ್ಮಾಧಿರಾಜನ್ ನುಲಿಪಯ್ಯನ ಬೆಸದೊಳ್ (ಎಕ. X, ಬೌರಿಂಗ್. ೪–೧; ಸು. 950). [? +ಅಯ್ಯ₁]

ನುಲಿಮಂಚ(ನಾ). ಹುರಿಗಳಿಂದ ಹೆಣೆದ ಮಂಚ; ಹೊರಸು: (೫).

[ನುಲಿ₂+ಮಂಚ]

ನುಲಿವು (ನಾ). ೧. (ನಾಟ್ಯದಲ್ಲಿ ಮೈಯನ್ನು) ಬಳುಕಿಸುವಿಕೆ: ಆ ಹೆಣ್ಣಿನ ಕುಣಿತ ಅಮೋಘವಾದದ್ದು. ಮೈಯ ನುಲಿವು . . . ಮುಖಜ ಮಾಟ–ಎಲ್ಲವೂ ಒಂದೊಂದು ಕವನದಂತೆ ಸ್ಫುಟವಾಗಿ ಅರ್ಥವಾಗಿ ಜನ ಕುಣಿತದ ಸಾರ್ಥಕ್ಯವನ್ನು ಕಂಡರು (ಸವಿ. ೫). ೨. (ಆಲಂ) ಸಂಕಟ; ಯಾತನೆ: ಎದೆಗೆ ಕಬ್ಬಿಣದ ಕೀಲು ಜಡಿಯುವಾಗ ಅವನ ಮೊಗದಲ್ಲಿ ಸೋದಿನ ನುಲಿವು ಮೂಡಿಯೇ ಇರಬೇಕು ಎನಿಸುತ್ತದೆ (ಬದ್ಧಪ್ರ. XXXIX, ನಾಟಕದ ಸಮಸ್ಯೆ). [ನುಲಿ₁+–ವು]

ನುಲಿಸು (ಕ್ರಿ). ತಿರುಚಿಕೊಳ್ಳುವಂತೆ ನೂಡು; ನುತ್ತಿಕೊಳ್ಳುವಂತೆ ನೂಡು: (೫). [ನುಲಿ₁+–ಇಸ್ಕು₃]

ನುಲುವಾಲೆ 'ನೂಲುವಾಲೆ' ನೋ.

ನುಲುಹು (ನಾ). ತಿರುಚಿಕೊಂಡಿರುವಿಕೆ: ಎರಳೆ ಸತ್ತು ಕೋಡೋದು ಕೊಂಬಿನ ನುಲುಹು ನೇರಿತವಾಗಿ (ಅಜುಮಾ. ೧೪೦–೧೩೬).

[<ನುಲಿ₁+–ಹು₂(<–ಪು₂)]

ನುಶಿ 'ನುಸಿ₂' ನೋ.

ನುಸಿ₁ (ಕ್ರಿ). ೧. ನುಣುಚು; ನುಸುಳು; ತೂರು: ಬಿಸುಕ ದೊಡಣು ಪರಮಾಣು ಮಾತ್ರವ ತುಂಡಿಸುತಿದೆ ದೃಷ್ಟಿಗಭೇದ್ಯ ನುಸಿದು ಪೋಪೊಡೆ ಕಕ್ಕವಲ್ಲೆಂದು ತನ್ನೊಳು ಬಿಸುಸುಯ್ದಳಾ ಚಿತ್ರಲೇಖೆ (ನೋಹಕ. ೨೯–೨೯); ಕಾಡಿನಲಿ ನುಸಿಯುತ್ತ, ಕಲ್ಲಿನಲಿ ಮೊರೆಯುತ್ತ, ಮರಳಿನಲಿ ಸುಳಿಸುಳಿದು ಸರಿಯ ದುಮುಕಿ . . . ಕಣ್ಣುಗಳ ಬೆರಗಾಗಿ ಹರಿವ ಹೊನಲು (ಹೊಂಗಳು. ೫–೧೧); ಅವರು ಒಳಕ್ಕೆ ಬಂದರೆ ನೀನು ನುಸಿದುಕೊಂಡು ಹೊರಕ್ಕೆ ಓಡಿ ಗ್ರಾಮಸ್ಥರನ್ನು ಎಬ್ಬಿಸು (ನಡದಾ. II, ೮೬೦); ಇರುವೆ ನುಸಿಯಲು ಸಹಾ ಸ್ಥಳವಿಲ್ಲ (ನಾಡಿಗೇ. ೨೧೦); ಒಬ್ಬ ಜಾಜಿ ಕೆಳಗೆ ನುಸಿದರೆ ಇನ್ನೊಬ್ಬ ರಂಗೋಲಿ ಕೆಳಗೆ ನುಸಿದ (ಗಾವಿ). ೨. ತಿರುಚು; ಹಿಂಸಿಸು; ಹಿಸುಕು: ಜೀವದ ಹಸುವ ಹದಿನೆಂಟು ಜಾತಿಯ ಮುಂಡದಡಿಯಲ್ಲಿ ನುಸಿದು ಗೋದಾನ ಮುಖದಲ್ಲಿ ಕೊಂಡು

ಹೋಹರನೇ ಬ್ರಾಹ್ಮಣರ ಮಾಡಿದರು (ಉಂಡಿ. ೧೩೭–೨೪೦). 'ನುಸುಳ್$_1$' ಪರಾ.

ನುಸಿ$_2$, ನುಸಿ (ನಾ). ೧. ಅಜಗಿಜಿಯಾಗಿರುವಿಕೆ ; ನುಗ್ಗಾಗಿರುವಿಕೆ ; ಜಜ್ಜಿಹೋಗಿರುವಿಕೆ : (೪). ೨. ಹುಡಿ ; ಪುಡಿ : ಶಿವಭಕ್ತನಾಗಿ ತನ್ನ ಹಿಡಿದಹೆನೆಂದು ಹೋದಡೆ ನುಗ್ಗು ಮಾಡುವ ನುಸಿಯ ಮಾಡುವ (ಬಸವ. ೬೮೫). ೩. ಬಟ್ಟೆ, ಕಾಗದ ಮುಂತಾದುವುಗಳನ್ನು ಹಾಳುಮಾಡುವ ಒಂದು ಬಗೆಯ ಸಣ್ಣ ಹುಳು : ಉಲ್ಲನ್ ಬಟ್ಟೆಗಳು ಬೇಗ ನುಸಿದುರುವುದಿಲ್ಲ. ಇವಕ್ಕೆ ನುಸಿಯೂ ಬೇಗ ಹಿಡಿಯುವುದಿಲ್ಲ (ಗೃಹವಿ. ೬೯). ೪. ಕಾಳು–ಕಡಿಗಳನ್ನು ನಾಶಮಾಡುವ ಒಂದು ಬಗೆಯ ಹುಳು ; ಓಟೆ ಹುಳು : ನೂಲೆಳಸದಲ್ಲೆ ಹೊರಳಲಹುದು ಹುಳು–ಸೊಳ್ಳೆ–ನೊರಜು–ನುಸಿಯು (ಅರಳು. ೬೪೩–೬). ೫. ದೀಪದ ಹುಳು ; ಪತಂಗ : ನುಸಿಗಳುರಿಜಾಳಿಗೆಯೊಡನೆ ರೈಂಪಿಸುವುದುಚಿತವೆ ಕರ್ಣ ಪಾರ್ಥನ ಭಸಣಯೇಕೈ ನಿನಗೆ (ಕುವ್ಯಾಳ. ೯–೬). ೬. ಸೊಳ್ಳೆ : ಬ್ಯಾಗ ಬ್ಯಾಗ ನಡೀರಿ. ಈ ನುಸಿ ಕಾಟ ಬ್ಯಾರೆ (ಮಲೆಮ. ೬೩) ; ಅಲ್ಲಿ ತಗಣಿಗಳೂ ನುಸಿಗಳೂ ತುಂಬಿಕೊಂಡಿರುತ್ತಿದ್ದವು (ಮಹಾತ್ಮಾ. ೬೪) ; ಹೊಲಕ್ಕೆ ಹೋದರೆ ಹುಲಿಯ ಕಾಟ, ಮನೆಗೆ ಬಂದರೆ ನುಸಿಯ ಕಾಟ (ಗಾಪ). 'ನುಸಿಬಲೆ' ಪರಾ. ೭. ಹಾರಾಡುತ್ತಾ ಕಣ್ಣು, ಕೆವಿ ಮುಂತಾದುವುಗಳನ್ನು ಮುತ್ತುವ ಸಾಸಿವೆ ಆಕಾರದ ಕೀಟ ; ಗುಂಗುರು : ನುಸಿಗಾತ್ಮಕೆ ಕನಕನೆ ಪಾಯಸ? (ಗಾಪ). ೮. (ಆಲಂ) ಅಲ್ಪ ; ಕ್ಷುದ್ರ ; ಕ್ಷುಲ್ಲಕ : ನುಸಿಗಳೆನ್ನೆವು ನೀವು ಜಗಸಾಹಸಿಕರ್ಕೆ ಕಾಲಾಳು ಜೋಧ ಪ್ರಸರದೆಸುಗೆಗೆ ಹೆದಱುವೆವು (ಕುವ್ಯಾಕ. ೧೯–೧೦) ; ಶಿವಪದನೆಗಭಿನುಸಿ ದಿವಿಜಪ್ರಸರದಲಿ ಮರನೆಂಬರೆನ್ನನು ನುಸಿಗಳಿನ್ನಾರೆನ್ನ ಮರನೆಂಬವರು ಪಾಮರರು (ಅಂಬಿಕಾ. ೪೫–೨೫) ; ಬಸವಳಿದು ರಥದೊಳಗೆ ಕೆಡೆದನು ಬಿಸರುಹಾಕ್ಷನ ಕೂಡೆ ಕೊಂಬುದೆ ನುಸಿಗಳಿಗೆ ರಣವೆಂದು ಗುಹಲಿಕ್ಕಿತು ಸುರಸ್ತೋಮ (ಕೋಗಳು. ೨೨–೨೬) ; ಎಲ್ಲ ಆಟ ಅವನದು ಹಸಿಯೆ ನುಸಿಯೆ ನನ್ನ ಬದುಕು· ಶುದ್ಧ ಸ್ವಯಂಭವನದು (ಅರಳು. ೧೯೨–೬). **ನುಸಿ** : ೯. ಪ್ರತಿಕೀಟಕ್ಕೂ ಒಂದು ಜೊತೆ ಕುಡಿಮಿಾಶೆ, ತಲೆಯ ಎರಡನೆ ಭಾಗದ (Segment) ಅನುಬಂಧ. ಅದಿಲ್ಲದ ಜೇಡ, ನುಸಿ, ಉಣ್ಣೆ, ಚೇಳು ಮತ್ತು ಎರಡು ಜೊತೆ ಕುಡಿಮಿಾಶೆಗಳುಳ್ಳ ಕೀಗಡಿ, ಏಡಿಗಳಿಂದ ಬೇರ್ಪಡಿಸಬಹುದು (ಕೀಟವಿ. ೧೪) ; ಈ ಒಂದೇ ಕಾಗದದಿಂದ ಶ್ಯಾಮರಾಯನನ್ನು ನುಸಿಯಂತೆ ಒರೆಸಿ ಒಗೆಯಬಲ್ಲೆನೆಂಬ ಹಮಹಮಿಕೆ ಬಂದಿತು (ದೀಪಹ. II, ೩೦೦).

ನುಸಿ ಹಿಡಿ=(ಬಟ್ಟೆಗೆ) ನುಸಿ ಹತ್ತು : ಸೈಬಾನ್ ಬಟ್ಟೆಗಳು . . . ಜಿರಳೆ ಮತ್ತು ಹುಳುಗಳು ಇವನ್ನು ತಿನ್ನುವುದಿಲ್ಲ. ಇದಕ್ಕೆ ನುಸಿ ಹಿಡಿಯುವುದೂ ಇಲ್ಲ (ಗೃಹವಿ.೬೭) ; ಜೇನಿ, ನಿನ್ನ ಬದುಕು ನುಸಿ ಹಿಡಿಯಿತು (ರೂಢಿ).

[<ನುಸಿ$_1$./ತೆಲು. ನುಸಿ, ನುಸುಮು]

ನುಸಿಗುಳಿಗೆ (ನಾ). ಬಟ್ಟೆಯು ಹಾಳಾಗದಂತೆ, ಜಿರಲೆ ಮೊದಲಾದುವುಗಳನ್ನು ನಿವಾರಿಸಲು ಉಪಯೋಗಿಸುವ ಒಂದು ಬಗೆಯ ಔಷಧದ ಗುಳಿಗೆ,—ಉಂಡೆ : ಬೀರುವಿನಲ್ಲಿ ನುಸಿಗುಳಿಗೆಗಳನ್ನು ಹಾಕದೆ ಇರುವುದರಿಂದ ಜಿರಲೆಗಳು ಹೆಚ್ಚಾಗಿವೆ (ರೂಢಿ).

[ನುಸಿ$_2$+ಗುಳಿಗೆ$_1$]

ನುಸಿಗೆಲಸ (ನಾ). ಸಣ್ಣಪುಟ್ಟ ಕೆಲಸ (?) : ಬಿಸಿಗೆಲಸದಲ್ಲಯ್ಯ ಕಕ್ಕಯ್ಯ ಬಂಕಯ್ಯ ನುಸಿಗೆಲಸದಮಲಯ್ಯ ಧಾರಯ್ಯ ಭೋಗಯ್ಯ (ಲಿಂಗಪು. ೨೪–೨೬). [ನುಸಿ$_2$ + ಕೆಲಸ]

ನುಸಿಗೊಳ್ (ಕ್ರಿ). ಕೀಳೆಂದು ಭಾವಿಸು ; ತಿರಸ್ಕರಿಸು ; ಕಡೆಗಣಿಸು : ಎಸವ ಶಿವನಿಳಯಮುಂ ಮಾಡುವಡೆ ನೆಲನ ಶೋಧಿಸ ಬೇಹುದೀಯೆಡೆಯನಗೆಯೆನಲು ಮನದೊಳಗೆ ನುಸಿಗೊಳುತುದಾಸೀನದಿಂ ಗುದ್ದಲಿಯನೆತ್ತಿ ಮಿಾಂಟುತೆ ಪೊಡೆಯೆ ಮುಂದೆ (ಸಿದ್ಧರಾ. ೩–೪೨).

ನುಸಿನುಸಿಗೊಳ್, ನುಸುನುಸುಗೊಳ್ (ದ್ವಿರುಕ್ತಿ) : ಶಿವಂಗೆ ಜನನಿ ಜನಕರುಂಟಾದೊಡೆ ಪೇಳರೆಯೆಂದು ಕೇಳೆ ನುಡಿಯಲ್ ಗತಿಯುಂ ಕಾಣದೆ ನುಸಿನುಸಿಗೊಂಬ ಸಮಯದೊಳ್ (ಪಮ್ಮಿರ. ೩–೨೬ ಪ) ; ಗೌರಿ ನುಸಿನುಸಿಗೊಳುತಯಿಂತಾ ಪೋರತನ ನಾನಱಯೆ ಬೇಕೆಂದಾರಪನಂ ತಡವಿ ಬೆನ್ನಿಗೆ ತಂಸುವುದು ಗುಣನೆ (ಚೇಸಪು. ೮–೧೨೫) ; ಧನವಿಲ್ಲ ಶಿವ ಗೇಹವನು ಮೂಳ್ಪಡೆಂದು ತನ್ನನದೊಳು ನುಸುನು[ಪಾಠಾಂ. ನ]ಸುಗೊಂಡು ಜಿನುಗುವ ಬೊಮ್ಮುಣ್ಣನನುವರಿದಿತ್ತನು ಕನಕರಾಶಿಯ ಸಿದ್ಧರಾಮ (ಭೈರವೇ. ೨–೧೫೩). [ನುಸಿ$_2$+ಕೊಳ್$_1$]

ನುಸಿಬಲೆ (ನಾ). ಸೊಳ್ಳೆ ಪರದೆ : ಎಡಭಾಗದಲ್ಲಿ ಬೆಳ್ಳಿಯ ಕಾಲುಗಳ ಅಂದವಾದ ಮಂಚ ನುಸಿಬಲೆಯೊಂದಿಗಿದೆ (ಪ್ರಕಾಶ. ೧೯).

[ನುಸಿ$_2$+ಬಲೆ$_2$]

ನುಸಿಸು (ಕ್ರಿ). ಹೊಗಿಸು ; ನುಸುಳಿಸು ; ಪ್ರವೇಶಿಸುವಂತೆ ಮಾಡು : ಅನೇಕಕ್ಷೋಣಿ ಹತಿಸಲವನಟ್ಟಿ ಮುಟ್ಟಿ ಯಸಳಮುಪಹರಿಸುವಂತೆಸೆದವನ ದೆಸೆಗೆಡಿಸಿ ನುಸಿಸಿದರ್ ನಿಜಬೀಡನಾ ರಾತ್ರಿ (ಜೈಮಿ. ೩೪–೨೩). [ನುಸಿ$_1$+–ಇಸು$_3$]

ನುಸುಕು 'ನುಸುಗು' ನೋ.

ನುಸುಕುವ್ಯಾಪಾರ (ನಾ). ಕಳ್ಳತನದಿಂದ ಸುಂಕ ಕೊಡದೆ ಸಾಮಾನುಗಳನ್ನು ಅಮದು, ರಫ್ತು ಮಾಡುವ ವ್ಯಾಪಾರ ; (ಸುಂಕದವರ) ಕಣ್ಣು ತಪ್ಪಿಸಿ ಮಾಡುವ ವ್ಯಾಪಾರ ; ಕಳ್ಳ ಸಾಗಾಣಿಕೆ : "ನಿಷಿದ್ಧವ್ಯಾಪಾರ ; (ನಿಷಿದ್ಧಪದಾರ್ಥಗಳನ್ನು) ಕಳ್ಳತನದಿಂದ (ಸುಂಕ ಕೊಡದೆ) ನುಗ್ಗಿಸುವುದು ; ಕಳ್ಳತನದಿಂದ (ಸುಂಕ ಕೊಡದೆ) ಅಮದು ರಫ್ತು ಮಾಡಿದ ಸಾಮಾನು : ನುಸುಕು ವ್ಯಾಪಾರ ; ಕಳ್ಳವ್ಯಾಪಾರ" (Contraband. ಇಂಗಿ).

[ನುಸುಕು(<ನುಸುಗು)+ವ್ಯಾಪಾರ]

ನುಸುಕುವ್ಯಾಪಾರಿ (ನಾ). (ಸುಂಕದವರ ಕಣ್ಣು ತಪ್ಪಿಸಿ) ಕಳ್ಳ ವ್ಯಾಪಾರ ಮಾಡುವವನು ; ಸುಂಕಗಳ್ಳ ; ಕಳ್ಳಸಾಗಣೆದಾರ : "ಕಳ್ಳತನದಿಂದ (ಸುಂಕ ಕೊಡದೆ) ಸಾಮಾನು ನುಗ್ಗಿಸುವವನು: ನುಸುಕು ವ್ಯಾಪಾರಿ" (Contrabandist. ಇಂಗಿ).

[ನುಸುಕು(<ನುಸುಗು)+ವ್ಯಾಪಾರಿ]

ನುಸುಗು, ನುಸುಕು (ಕ್ರಿ). =ನುಸಿ$_1$ ೧ : ರತ್ನಪ್ರಾಯರಾದ ಸ್ತ್ರೀಜನರ ಪರಿವಾರದಿ ಎಳಸಿ ಬದಲು ಅವಾರದಿ ಬಳಸಿ ನಿಲಲು ಬಳ್ಳಿವೆಳಗಿನಂತೆ ಕೋಟೆಯೊಳಗಿನಿಂದ ನುಸುಗುವೆ ಅವರ ಬಳ್ಳಿಯೊಳಗೆ ನಿಂತು ಮಿನುಗುನಗೆಯ ನೆಸಗುವೆ (ಪಯಣ. ೯–೧೩). 'ನುಸುಳ್$_1$' ಪರಾ. **ನುಸುಕು** : 'ನುಸುಕುವ್ಯಾಪಾರ' ಪರಾ. [ದೇ.‖ ತೆಲು. ನುಸುಗು]

ನುಸುಲುಮಣ್ಣು (ನಾ). (ನದಿಯ ಪ್ರವಾಹದಲ್ಲಿ) ಜಾರಿ ಕೊಂಡು ಬಂದ ನುಣುಪಾದ ಮಣ್ಣು : ಮೂಲಂಗಿ . . . ಚೆನ್ನಾಗಿ ಗೊಬ್ಬರ ಹಾಕಿದ ನುಸುಲುಮಣ್ಣು ಇವಕ್ಕೆ ಒಳ್ಳೆಯದು (ಅಡುಪೌ. ೧೨೭). [<ನುಸುಳ್$_1$+ಮಣ್ಣು(<ಮಣ್)]

ನುಸುಳ್$_1$, ನುಸುಳು$_1$ (ಕ್ರಿ). ತೂರಿಬರು ; ಕಂಡಿ ಮೊದಲಾದುವುಗಳಲ್ಲಿ ಮೆತ್ತಗೆ ಒಳಸೇರು ; ನುಸಿ ; ನುಣುಚು : "ನುಸುಳ್–ದ್ವಾರಪ್ರವೇಶೇ" (ಶಮುಧಾ); ಸಮುದ್ರದ ತಡಿಯೊಳುದಕವುಂತ್ರದ ಬಲದಿಂ ನುಸುಳ್ದೊಡೆ ಜಳನಿಧಿಯಂ ಕರುಣಿಸಿ ಕೊಟ್ಟರ್ ಧನಮನಂಜಿ ಕೊಟ್ಟರೆ

ದಿವಿಜರ್ (ಆದಿಪು. ೧೪-೬೮) ; ನಸುದೆಱೆಯುತ್ತಮಿರ್ದ ಪೊಸಮುತ್ತಿನ ಸಿಂಪಿನ ಸಂಪುಟಂಗಳಂ ನುಸುಳ್ದು ಸುಪಾಣಿಯಾಗಿ ಪೊಜಪೊಣ್ಮುವ ಮುತ್ತಿನ ಮಾಲೆಯಂದದಿಂ ಪಿಸುಗಿ ನಿರಂಜನಂಗಳಿನಪಕ್ಷಪುಟಾಂತರದಿಂದಂ (ಕಾದಂಪೂ. ೩೩೧) ; ಇನಶಶಿರಶ್ಮಿಯಂ ನುಸುಳಲೀಯದ ನಾಗಲತಾವಿತಾನ ನಂದನತಮಮಂ ಖನಾಗಮವಿದೆಂದಿರುಳೆಂದು ಕನಲ್ವ ಹಂಸೆ ನರ್ತ್ತನ ನುನೊಡರ್ಚುತಿಪ್ಪರ್ ನವಿಲ್ (ಸೌಇಇ. IX-i, ೨೬೭-೨೪ ; 1160) ; ಅಂತು ಗಾಳಿಗಂ ನುಸುಳಲ್ಪಾರದಂದದಿಂ ಸಂದಣಿಸಿ ಮುತ್ತಿ ಕೋಂಟೆಯಂ (ಪುಷ್ಪಪು. ೩-೧೨೭ ಪ) ; ಆಸಮಲೋಚನ ಈಗಳಾರೋಗಿಸಿದಡಲ್ಲದೆ ನಿಮ್ಮುದಿಗಳಂ ನುಸುಳಲೀಯೆನು (ಬಸಪು. ೨೪-೬೫). **ನುಸುಳು**₁ : ಸ್ಥೂಲಕ್ಕೆ ಸೂಕ್ಷ್ಮವಾಗಿ ಸೂಕ್ಷ್ಮಕ್ಕೆ ಸ್ಥೂಲವಾಗಿ ಆ ಕಲ್ಲಿಯ ದ್ವಾರದಲ್ಲಿ ಅಲ್ಲಿಯೇ ನುಸುಳುತ್ತ ಕಲ್ಲಿಗೆ ಹೊಜಗಾಗುತ್ತ . . . ಭಾವವಿರಹಿತನಾದೆಯಲ್ಲಾ (ಸನಕು. ೫೯-೬೧) ; ತಾಗಿದವು ನಾಲ್ಕಂಬು ದೇಹದ ಬೇಗಡೆಯಲೆಂಟೆಂಬು ನುಸುಳಿದವಾಗ ಹದಿನಾಱಂಬು ಹರಿದವು ಮತ್ತೆ ಬಳಸಲಿಸಿ (ಕುಬ್ಯಾಕ. ೪-೧೫) ; ಎಸೆವಾಳು ಕುದುರೆ ಗಜಗಳ ಪೋಹರದಲ್ಲಿ ನುಸುಳಲಾಜದೆ ಪವಮಾನ ಹಸಗೆಟ್ಟು ಮಂದಗತಿಯನ್ನೆದಿದನಂ (ಕಂಪವಿ. ೧೬-೨೯) ; ಇತ್ತ ಇಲಿಯೂ ತನ್ನ ಹೋರಿನೊಳಗೆ ನುಸುಳತು (ಮುಂಬಯಿ. ೪-೯೭). 'ನುಗುಳ್' ಪರಾ.

[ದೇ.॥ ತೆಲು. ನುಸಲು, ನುಸುಲು ; ಕುರುಖ್. ನುನಾ, ನುಲುಗ್ನಾ]

ನುಸುಳ್₂, ನುಸುಳು₂, ನೂಳ್₂, ನೂಳು (ನಾ). ೧. ಇಕ್ಕಟ್ಟಾದ ಸಂದಿನಲ್ಲಿ ತೂರುವಿಕೆ ; ಇರುಕುಸ್ಥಳದಲ್ಲಿ ಪ್ರವೇಶಿಸುವಿಕೆ ; ನುಣುಚಿಕೊಳ್ಳುವಿಕೆ : ಪುಷ್ಕರಣಿದೊಳ್ ಕೆಂದಳಂ ಕೆಂದಳಿರಂತೆ ತೊಳಗೆ ದೀರ್ಘಾಂಗುಳಿಯಿಂ ಪಿಡಿದು ಗದುಡನೊಪ್ಪಮಂ ಗಾಳಿಯ ನುಸುಳುಮಂ ಕೈಕೊಂಡು ಕೊಂಡಾಡಿ (ಅರ್ಧನೇ. ೫-೧೧೩ ಪ). ೨. ಕಪಟ ; ವಂಚನೆ ; ಸುಳ್ಳು ; ಮೋಸ ; ಕೃತ್ರಿಮ : ಪುಸಿ ನುಸುಳ್ ಗನ್ನಗತಕಂ ಕಳವು ಕೊಲೆ ಕೇಡು ಕಿಸುರುಂ ಕೃತಘ್ನಭಾವಂ ನಿಂದೆ ಮಾಯೆ ದುರ್ಮ್ಯಸನಂ . . . ಇವು ಪೆರ್ಚ್ (ಚಬಪು. ೩-೧೧೧) ; ಪುಸಿ ನುಸುಳೊಡ್ಡಣೆ . . . ಸಂದಣಿ ಪಳಿಜಗಳಂಗಳಕ್ಕೆ ನುಡಿ ಗಣಿಕೆಯರಾ (ಪ್ರಸವಿ. ೨೪-೭೩). ೩. ತಪ್ಪಿಸಿಕೊಂಡು ಹೋಗುವುದು ; ಜಾರಿಕೊಂಡು ಹೋಗುವುದು : ನುಸುಳು ನೆಲೆ ದಿಳ್ಳಾಯ್ತು ಪೈಸರೆ ಬೆಸುಗೆ ಬಿಗುಹುಳು ಕೊತ್ತು ಕಲೆಗಳ ರಸದ ಪಸರವನಱಿಯಬಾರದು ಏಗಡ · ವಿಟರುಗಳ (ಕುಬ್ಯಾಅ. ೧೫-೨೫). ೪. ಕತ್ತಿ ಕಾಳಗದ ಒಂದು ವರಸೆ : ಪಗೆ ಕೆಯ್ಯ್ಗೆ ಕೆಯ್ಯುಸುರಿ ನುಸುಳೆಂಬ ಕೇಣದ ಕುಸುರಿಯನಱಿದಿಱಿದು ಮೆಱೆದು ನೆಱೆದುಜದರೆಬರ್ (ಪಂಪಭಾ.೧೦-೪೧). ೫. [ಕಾವ್ಯಮೀಮಾ] ಹೇಳಿಕೆಯಲ್ಲಿಯ ಏಳು ಪ್ರಭೇದಗಳಲ್ಲಿ ಒಂದು ; ಉದ್ದಿಷ್ಟವಾದ ಅರ್ಥವು ನೇರವಾಗಿ ಗೊತ್ತಾಗದಂತೆ ಅಡಗಿಸಿ ಹೇಳುವುದು : ಭಾವೆಯಂ ನುಸುಳುಮಸ್ಪಷ್ಟಾಕ್ಷರಮುಮಾವರ್ಣನ್ಯತ್ಯಯಮಂ ಬಿಂದು ಚ್ಯುತಿಯಂ ಭಾವಿಸಿದೊನ್ನುಡಿಯಂ ವರ್ಣಚ್ಯುತಮಂ ಕೇವಲಮವಜ ಭೇದಮಂ ನುಸಮಸ್ತಕಮಂ (ಕವಿರಾ. ೨-೧೪೨) ; ನುಸುಳೊನ್ನುಡಿ ಭಾಮೆ ಪುನಕ್ಕೆಸೆವಸ್ಪಷ್ಟಾರ್ಥಮುಚಿವು ನಾಮಾಂತರಿತಂ ಕುಸುರಿಯ ನುಡಿಯೆಂಬಿವು ಭಾವಿಸೆ ಪೇಳಿಕೆಗಳೊಳ್ ಪೇಬ್ಪ ಭೇದಮುವಳ್ಕುಂ (ಕಾವ್ಯಾವ. ೫೯೪). **ನುಸುಳು**₂ : ೨. "ನುಸುಳಿನಲು ಪುಸಿಯುಂ" (ಕಶಪ. ೫೬) ; ಪಿಸುಣನ ಪದನಿಂದೆ ಗರ್ವತೆ ನುಸುಳು ಹಿಂಸೆ ವಿಷಾದ ಮದ ಕರ್ಕಶವಚನ ಮಿವು ಮಗನೆ ದೋಷಾಕರಗಳವನಿಯಲಿ(ಪೇಸಂಚ. ೫-೪೮). ೫. ತಿರುಪುದೊಂದು ಚಕ್ರದೊಳ್ ನಿಂದು ದಿವಾಕರನೆ ಮುತ್ತಱದು ಕಳವೊಡಂತದನಾವೆಡೆಯಿಂದರಮೆಯಾಗಿ ನೆಲಸಿ ಕೆಲಕಾಲದಿಂ ಪೊರೆದಿರದಟ್ಟುಪ ಬಟುಕ ತಾನೆಲದೊಳ್ —. (ನುಸುಳು) (ಕವಿರಾ. ೩-೧೪೪). **ನೂಳ್**₂ : ೩. "ಕಟುಕಂ ತೊರೆಳ್ ನೂ[ಪಾಠಾಂ. ನುಸು]ಳೆಂದು ನೆಜಕೆ ಪುಸಿಯೆ ನಲ್ಕನೃತಮುಳ್ಕು" (ಕಬ್ಬಿಕೃ. ೫೯) ; ನೆಜಕೆ ತನ್ನ ದೇಹವನಿಱುದೊಡೋ ರ್ವೆಯುಂ ಕೆದರೆ ಮೆಱೆವ ಸೈರಣೆ ನೂಳದಿಲ್ಲದಿಹ ಮಾಪು ನಲೆ ಕಜಕೆ ಪೊರ್ದದಿರ್ಪ ಸತ್ಕೀರ್ತಿ ತಾನೆಡೆಗೊಂಡೊಡಾತನೇ ನಿತ್ಯಮುಳ್ಕಂ (ಸಿದ್ಧೇಶ್ವ. ೨೨-೧೬೯). **ನೂಳು** : ೨. "ನೂಳು-ನುಳ್ಳು" (ಜಾನಕೋ. ೧೩).

[<ನುಸುಳ್₁]

ನುಸುಳಿಸು (ಕ್ರಿ). ೧. ಸೇರಿಸು ; ನುಗ್ಗಿಸು ; ಜಾರಿಸು ; ಪ್ರವೇಶಿಸುವಂತೆ ಮಾಡು : ಸಂಭಾಷಣೆಯಲ್ಲಿ ರಾವಣ ವಿಷಯವನ್ನು ನುಸುಳಿಸಿ, ರಾವಣನು ಬ್ರಹ್ಮನ ಮರಿಮಗನೆಂದು ಕೇಳಿ ಬ್ರಹ್ಮಘಾತಮಾಡಿದ್ದಕ್ಕಾಗಿ ರಾಮನು ಮೂರ್ಛೆಹೊಂದಿದನೆಂದು ಬಣ್ಣಿಸಿದೆ (ತಪಸಿ. ೧೮೫). ೨. ದಾಟು ; ಪಾರಾಗು ; ನುಣುಚು : ಮಾಯೆಯ ಬಲೆಯ ನುಸುಳಿಸಿದಲ್ಲದೆ ನಿಮ್ಮ ನೆಲೆಯ ಕಾಣಬಾರದು ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ (ಪಚಸಂ. ೫೬-೧೩).

[ನುಸುಳು₁ (<ನುಸುಳ್₁) + -ಇಸು₅]

ನುಸುಳು₁ 'ನುಸುಳ್₁' ನೋ.

ನುಸುಳು₂ 'ನುಸುಳ್₂' ನೋ.

ನುಸುಳುಗಂಡಿ 'ನುಸುಳ್ಗಂಡಿ' ನೋ.

ನುಸುಳುದಲೆಗ (ನಾ). ತಲೆಮರೆಸಿಕೊಂಡು ಹೋಗುವವನು ; ತಲೆತಪ್ಪಿಸಿ ಓಡುವವನು : ತೆಗಸಬೇಹುದು ತರಣಿಬಿಂಬದ ತಗುಳ್ವ ತಿಮಿರವ ನಿಮ್ಮ ಹರಗಿನ ನುಗುಳಗಂಡಿಯ ನುಸುಳುದಲೆಗನೆ ಮರೆ ನೀವೆಂದ (ಕುಬ್ಯಾಕ. ೧೪-೧೬).

[ನುಸುಳು₁(<ನುಸುಳ್₁)+ತಲೆ₁+ -ಗ₂]

ನುಸುಳ್ಗಂಡಿ, ನುಸುಳುಗಂಡಿ (ನಾ). ತಪ್ಪಿಸಿಕೊಂಡು ಹೋಗುವ ದಾರಿ ; ಜಾರುಗಂಡಿ ; ಕಳ್ಳಗಂಡಿ : ರಕ್ಕಸರ ಭಯಕಂಜಿ ಬಾಲದ ಲಿಕ್ಕಿರಲು ಕೋಟೆಯನು ಮರುತಜ ದಿಕ್ಕನೊಡೆದುಜ್ಜಳಿಸಿ ಬೆಳಿದಿರೆ ವಜ್ರ ರೋಮಗಳು ಚಿಕ್ಕ ನುಸುಳ್ಗಂಡಿಯನು ಮಾಡಿಯೆ ರಕ್ಕಸರಿಗಸದಳದ ಕಾವಲಳಿಕ್ಕಿ ವಾನರಭಟರ ಕಾಯ್ದಿರುತಿರ್ಪ ಹನುಮಂತ (ಕಾಕಾ. ೩೯-೩೦). **ನುಸುಳುಗಂಡಿ** : ಕಲ್ಲಣಿಸಿದರು ನಾಯಕರು ಮುಸುಡ ತಿರುಹುತ ಮುಳುಟಿದರ್ಧನರುಸುರಲಮ್ಮದೆ ಸಿಕ್ಕಿ ಭೂಪನ ನುಸುಳುಗಂಡಿಯ ನೋಡುತಿರ್ದರು ಕೂಡೆ ತಮತಮಗೆ (ಕುಬ್ಯಾದ್ಯೋ. ೬-೪೭) ; ತಳೆಯ ಮಜ್ಜೆಯೊಳಿರ್ದ್ ನುಸುಳುಗಂಡಿಯೊಳಾಗ ಮುಳಿದು ಕಗ್ಗೊಲೆ ಗೈದುವರ ತಲೆಯನರಿದು (ಕಂಪವಿ. ೧೮-೭೭) ; ಹೆಸರ ಬೆಸಗೊಂಡಂಜೆ ನಮ್ಮನು ಹುಸಿಗರನ ಮಾಡುವರೆ ಮಾತಿನ ನುಸುಳುಗಂಡಿಗೆ ನುಸುಳುವರೆ ನಾವರೆಯೆಂದವರು (ಕೊಲ್ಲಾಚ. ೧೫೦).

[ನುಸುಳು₁ (<ನುಸುಳ್₁) + ಕಂಡಿ₁]

ನುಸುಳ್ವಾವಣಿಗೆ (ನಾ). (?) : ಎಸಳ್ + ವಳಿ, ಎಸಳ್ವಳಿ, ಎಸಳ್ವಳಿ. ಏವಂ ನುಸುಳ್ವಾಗಿಲ್, ನುಸುಳ್ವಾಗಿಲ್ . . . ನುಸುಳ್ವಾವಣಿಗೆ (ಶಬ್ದಾನು. ೭೨ ಪ್ರಯೋ).

[ನುಸುಳ್₁ + ಮಾವಣಿಗೆ ?]

ನುಸುಳ್ವಾಗಿಲ್ (ನಾ). ನುಸುಳಿ ಹೋಗಲು ಉಪಯೋಗಿಸುವ ಬಾಗಿಲು ; ತಪ್ಪಿಸಿಕೊಂಡು ಹೋಗುವ ಬಾಗಿಲು : ಎಸಳ್ + ವಳಿ, ಎಸಳ್ವಳಿ, ಎಸಳ್ವಳಿ. ಏವಂ ನುಸುಳ್ವಾಗಿಲ್, ನುಸುಳ್ವಾಗಿಲ್ . . . ನುಸುಳ್ವಾವಣಿಗೆ (ಶಬ್ದಾನು. ೭೨ ಪ್ರಯೋ).

[ನುಸುಳ್₁ + ಬಾಗಿಲ್]

ನುಳಿ (ನಾ). ಕಂಡಿ ; ಸಂದು ; ಇಕ್ಕಟ್ಟಾದ ಹಾದಿ (?) : ದರಿಯುಮಂ ಕುಮ್ಮರಿಯುಮುಂ ಮೊರಡುಮಂ ಕೊರಡುಮಂ ನುಳಿಯುಮುಂ

ಕುಳಿಯುಮಂ ಮೆಳೆಯುಮಂ ನಾನಲುಮಂ ಬಾನಲುಮಂ . . . ಕಳೆದು ಪೋಗಿ (ಲೀಲಾವ. ೬-೧೬ ವ). [←ತಮಿ. ನುಟ್ಕೆ]

ನುಳ್ಗು 'ನುಱುಕು' ನೋ.

ನುಱಿ$_1$, ನುರಿ$_1$ (ಕ್ರಿ). ೧. ಪುಡಿಪುಡಿಯಾಗು ; ಚೂರಾಗು ; ನುಗ್ಗಾಗು ; ಛಿದ್ರಛಿದ್ರವಾಗು : "ನುಱಿ—ಸಂಚೂರ್ಣೇ" (ಶಮಧಾ) ; ರಾಗವೆತ್ತು ವರೊಮ್ಮೆ ಶಬರಿಯರ್ಬೇಗ ಕೂಸೊಱಗೆ ನುಱಿಯಲಕ್ಕಿ (ಸೂಬಸೋ. ೧೪-೬೫). ೨. ಪುಡಿಮಾಡು ; ನುಗ್ಗಾಗಿಸು : ಇಱಿಯಲ್ಕೆನ್ನನ್ ನುಱಿಯಲ್ಕೆನ್ನನ್ . . . ಸಗ್ಗದ ಪೊಸದೊರೆ ಪುಡುಕಿರ್ಪನ್ ತಾನ್ (ಬದ್ಧಪ್ರ. ೬-೧೨೧). **ನುರಿ$_1$** : ೧. ನನ್ನ ಹಲ್ಲಿಗೆ ಗೋಟಡಿಕೆ ನುರಿಯೋದಿಲ್ಲ (ರೂಢಿ). ೨. "ಕಡಿ, ಕಚ್ಚು, ನುರಿ, ಹರಿ, ಹೋಳು, ಜಬಡು, ಜಜ್ಜು, ಕುಟ್ಟು" (ಕಂಸುಹು. ೮೦); ಸಿಟ್ಟಿನಿಂದ ಯಾರನ್ನೋ ಕತ್ತು ನುಲಿಯುವಂತೆ ಕಡುಬು ನುರಿಯತೊಡಗಿದನು (ಮಲೆಮ. ೨೦). ೩. ಪಳಗು ; ಅನುಭವ ಪಡೆ : ಸಾಹಿತ್ಯದ ಎಲ್ಲ ವಿಭಾಗಗಳಲ್ಲಿಯೂ ಇವರ ಕೈ ನುರಿತಿದೆ (ಮಧುನ. ೧) ; ಲೋಕದ ಕಣ್ಣಿಗೆ ನೀ ಮಣ್ಣನೆರಚುವೆ ಪೊಲ್ಲಮೆಯೊಳು ನುರಿತಿರುವೆ (ಇಂಚಾಪ. ೮೪-೧೦) ; ಅರಿತು ನುರಿತ ಪಂಡಿತರು ವಿದ್ಯಾರ್ಥಿ ತಂಡಗಳಿಗೆ ಸಾಹಿತ್ಯವನ್ನೂ, ಗಣಿತವನ್ನೂ ಕಲಿಸುತ್ತಿದ್ದರು (ದಭಾಇ. ೮೨). ೪. ನುಣುಪಾಗು ; ಹೊಳಪಾಗು ; ನಯವಾಗು : ಒಂದಿಬ್ಬೆ ಕುಟ್ಟುವಾಗ ಒಬ್ಬಣ್ಣ ನುಣಬಂದ ಒಬ್ಬೀಗೆ ಒಬ್ಬೆ ನುರಿಯವು . . . ಎಬ್ಬಿಸೊ ನಿನ್ನ ಮಡದಿಯ (ನಾಪದ. ೮೯). ೫. ಉಜ್ಜು ; ಹೊಸಕು ; ಕಿವುಚು : ಅವನು ಬೀಡಿಯನ್ನು ನೆಲಕ್ಕೆ ನುರಿದು ಆರಿಸಿದ (ಪ್ರಶ್ನೆ. ೧೧೬).

[ದೇ. ॥ ತಮಿ. ನೂಱು, ನೂಱಿ, ನೆರಿ ; ಮಲ. ನುಱುಣ್ಣು, ನೆರಿಯು ; ತುಳು. ನುರಿ ; ತೆಲು. ನುಱುಮು, ನೂಱು, ನೆರುಮು]

ನುಱಿ$_2$, ನುರಿ$_2$ (ನಾ). ಚೂರು ; ಪುಡಿ : ಆ ಸಗ್ಗಮನೆನ್ನೀ ಸಱಿದಲೆಯಿಂ ಪೊತ್ತಂಬುಜಜನ್ಮಾಂಡದ ಪೊಱಗಡೆಗಾಗಿ ನುಱಿಯಪ್ಪಂದದಿ ಹಾಕದೊಡೆನಗೇತಱ ದೊಡ್ಡಿತ್ತೆನುತುಂ ಬೆಳೆವಂದದಿನುಱಿ ಮುಟ್ಟದುದಾ ನಿರ್ಜರಲೋಕಮನಾ ಮಿಸುನಿಯ ಬೆಟ್ಟು (ಜಯಕಾ. ೧-೩೩). **ನುರಿ$_2$** : 'ನುರಿನುಳ್ಗು', 'ನುರಿವಡೆ' ಪರಾ. [<ನುಱಿ$_1$]

ನುಱುಕಿಸು, ನುರ್ಗಿಸು, ನುಱುಗಿಸು (ಕ್ರಿ). ೧. ಸಣ್ಣಗಾಗುವಂತೆ ಪುಡಿಮಾಡು : ವಡೆಯ ಬೇಯಿಸಿಕೊಂಡು ಚೆನ್ನಾಗಿ ನುಱುಕಿ [ಪಾಠಾಂ. ಗಿ]ಸಿದ ಪುಡಿಯುಮಂ ತುಪ್ಪದೊಳು ಹುರಿದು ಹಾಲೊಡಪಿನಿಂದೊಡವೆರಸಿ ನೀರುಳ್ಳಿ ಶುಂಠಿಯಂ ಹಾಕಿ ಹೆಱೆದುಪ್ಪದೊಳು ಕಲಸಿಕೊಂಡು (ಸೂಪಶಾ. ೧-೬೭). **ನುರ್ಗಿಸು** : ೨. ಪುಡಿಮಾಡಿಸು ; ಚೂರುಗೊಳಿಸು : ಆಳೆನಿಸುವರ್ಥಪತಿಯ ನಿಜಾಲಯಮಂ ತದ್ಗಜೇಂದ್ರನಿಂ ನುರ್ಗಿಸಿ ಸಲ್ಲೀಲೆಯಿನಲ್ಲಿಂ ತಳರ್ದು ವಿಶಾಲಮೆನಿಪ್ಪೊಂದು ಚೆಲ್ವ ಕುಜವಂ ಕಂಡೆಂ (ದಶಕು. ೮-೧೩೨). **ನುಱುಗಿಸು** : ೧. ಹಪ್ಪಳವನೊತ್ತಿ ನುಱು [ಪಾಠಾಂ. ನುಱಿ]ಗಿಸಿ ಹಾಕಿಯೊಂದಕ್ಕೆ ಹುರಿಯಕ್ಕಿ ಹುರಿಗಡಲೆಗಳ ಹುಡಿಯನು ಪೊತ್ತರಿಸಿ (ಸೂಪಶಾ. ೩-೧೬).

[ನುಱುಕು + -ಇಸು$_3$]

ನುಱುಕು, ನುಗ್ಗು$_2$, ನುರುಕು, ನುರುಗು, ನುರ್ಗು$_2$, ನುಳ್ಗು, ನುಱುಗು, ನುಟ್ಗು (ಕ್ರಿ). ೧. ಪುಡಿಮಾಡು ; ಚೂರುಮಾಡು ; ಹುಡಿಗುಟ್ಟು : ಕಡಿವ ಕೊಚ್ಚುವ ಕೊಱೆವ ನು[ಪಾಠಾಂ. ಕು]ಱುಕುವ ಸುಡುವ ತಾಳಿಸಿ ತಿಂಬ ತೇಗುವ ಕುಡಿವ ಹಾಡುವ ಹಾರವಿಸುವಸುರೆಯರ . . . ಕಂಡು ಹೇಸುತ ಹನುಮ ಹೊಱವಂಟ (ತೊರರಾ. ೫-೨-೩೬). ೨. ಕ್ಷೀಣವಾಗು ; (ಬೆಳವಣಿಗೆ) ಕಡಿಮೆಯಾಗು : "ನುಱುಕು—ವೃದ್ಧಿಹೀನೇ (ಬೆಳವಣಿಗೆ ಕಡಿಮೆಯಾಗು)" (ಶಮಧಾ). **ನುಗ್ಗು$_2$** : ೩. ಪುಡಿಯಾಗು ; ಚೂರಾಗು ; ಅಜಿಗಿಜಿಯಾಗು : ಹೆಗಲೆಲುವುಗಳೆಲ್ಲಂ ನುಗ್ಗೆ [ಪಾಠಾಂ. ನೆರೆ ತಗ್ಗೆ] ಕೆಲವು ಪಾಸಂ ಪತ್ತಿ ಕೆಲವು ಪಾರಣೆಯಾಗೆ ಬಲವಳಿದು ಡೆಂಡಣಿಸಿ ಹೆಜ್ಜೆ ಹುಣ್ಣಂತಾಗೆ (ಓಹಿರ. ಹ. ೨೧೪-೨೦) ; ಒದೆದಡದು ಹಱಿಹಂಚೆನಲು ನುಗ್ಗಿದುದು ರಥವುಂ (ಸಾಳ್ವಭಾ. ೨೧-೪೪). **ನುರುಕು** : ೧. "ನುರುಕು = ಸಣ್ಣಮಾಡು" (ಜಾನಕೋ. ೧೨) ; ಕಂಗಾಣದಾದ ಅಂಥ ಅವಸ್ಥೆಯ ಕನವರಿಕೆ ಚುರುಕನ್ನೆಲ್ಲ ನುರುಕಾಗಿಸುವುದೆಂಬುದನ್ನು ಈಗಲೂ ಕಾಣಬಹುದು (ನಾಡೋಜ. ೩೭೪). **ನುರುಗು** : ೪. ಪಳಗು ; ಅನುಭವಗೊಳ್ಳು : ಕನ್ನಡದ ಸೇವೆಯಲಿ ನುರುಗಿ ಹಣ್ಣಾದವರೆ, ಹಿರಿಯ ಕನ್ನಡ ಧೀರರೆ (ಕನ್ನಬಾ. ೯೮-೪) ; ನಾನು ಕೆಷ್ಟದಲ್ಲಿ ನುರುಗಿದವಳು, ಅರಿಯದ ಹುಡುಗಿಯಲ್ಲ (ಪಚಭಾ. ೩೫೫). **ನುರ್ಗು$_2$** : ೧. ಅದಿರದೆ ವೀರವೈರಿಭಟರಂ ಘಟಕೋಟಿಗೆ ಪಾಟಗಂಡು ನುರ್ಗಿದ ಪಿರಿದಪ್ಪ ಕಲ್ಲ ಕಡುಗಂಬಮನೊಂದೆ ಕರಾಗ್ರದಿಂದಮೆತ್ತಿದ ಕಪಿಕತ್ಥಮಂ ಘನಕಪಿತ್ಥಮನಾ ಬನದೊಳ್ ಕಡಂಗಿ ಕಿಟ್ಟಿದಟದು ಪೋದುದೇ (ವರ್ಧಪು. ೩-೧೫) ; ಸಿಡಿಲಂ ನುರ್ಗುವ ಶೇಷನಂ ಪೊಸೆವ ದಿಙ್ನಾಗಂಗಳಂ ಪೊಯ್ದು ಘೀಳಿಡಿವೇಳುಂ ಕಡಲಂ ತುಳುಂಕುವ . . . ಗಣಗಳ್ ಬಂದರಾನಂದದಿಂ (ಗಿರಿಕ. ೧೦-೬೪). ೩. ತನ್ನೆಚ್ಚ ಶರಾಳಿಗಳ್ ವಿಲಯಕಾಲೋಲ್ಕಂಗಳಂ ತಾಗಿದಾಗಡೆ ತತ್ಸೂತರಥಾಶ್ವಕೇತನಶರವ್ರಾತಂಗಳುಂ ನುರ್ಗಿ ಕಣ್ಗಡೆ ಬೆನ್ನಟ್ಟಿದನಂತು ನಮ್ಮ ಹರಿಗಂ ಗಂಡಂ ಪೆಱರ್ ಗಂಡರೇ (ಪಂಪಭಾ. ೧೧-೧೩) ; ಕರಿ ಪೊಣರ್ದೆಕ್ಕಲಂ ಮಲೆತು ಪೆರ್ಬುಲಿ ಪಾಯ್ದುಗಿಯಲ್ಕೆ ಡೋಣಿವಿರ್ದುರದ ಪಿಸುಟ್ಟ ಪೆರ್ದೊಡೆಯ ನುರ್ಗಿದ ದಂಡೆಯ ಭಂಗಿ ರೌದ್ರಮಾಗಿರೆ (ಜಗವಿ. ೧೬-೨೧) ; ಆವನಿನುಗ್ರಕರ್ಮವಿಪಿನಂ ನೆಱೆ ನುರ್ಗಿದುದು (ವರ್ಧಪು. ೧೦-೩೭) ; ಮನವೆನ್ನಂ ದುರ್ವಿಕಾರಕ್ಕೆಳೆದಪುದು ಮನಂ ಮಾನಮಂ ನುರ್ಗಿದತ್ತು (ರಕ್ಷಾಶ. ೧೨). ೫. ಅದುಮು ; ಒತ್ತು ; ಘರ್ಷಿಸು : ಮದಗಜವೆರಡಱ ಬಾಲದ ಮೊದಲಂ ಪಿಡಿದೆತ್ತಿಯೊತ್ತಿ ನುರ್ಗುತ್ತಿರೆಯಾಸ್ಯದಿನುಗುವ ರಕ್ತಮುರಿಯೆನೆ ತಿದಿಯೊತ್ತುವ ಕಮ್ಮಱಂಬೊಲಿರ್ದಂ ಭೀಮಂ (ಭಾಷಾಭೂ. ೧೮೭ ಉದಾ). ೬. ನಿಗ್ರಹಿಸು ; ದಮನ ಮಾಡು : ನೀಳ್ದಸಿತ ಜಟಾಳಿ ನುರ್ಗಿದ ಬಹಿರ್ವಿಷಯಸ್ಥಿತಿ ನೂತ್ನಮೂರ್ತಿ ನೇರ್ಪೆಸೆದಿರೆ . . . ತನ್ಮುನಿಗೆ ವಂದಿಸಿದಂ ಮಗಧಕ್ಷಿತೀಶ್ವರಂ (ದಶಕು. ೨-೬೩). **ನುಳ್ಗು** : ೩. ನುಳ್ಗಿದ ಪಲ್ಗಳಿಂದೊಡೆದ ಮಂಡೆಗಳಿಂ . . . ತೋರ್ಪ ಬಾಸುಳ್ಗಳಿನೆಯ್ದೆ ಬಂದೆಱಗಿ ಕೀರ್ತಿಸುತಿರ್ದುದು ದೇವಸಂಕುಳಂ (ವೀರವಿ. ೧೨-೧೧೦) ; ದುರ್ಜನರ ಕೊರ್ಬಂ ನುಳ್ಗಿ ಸಂತೋಷದಾಯತಿಗೆಯ್ವೆಂ (ವಿಷ್ಣುಪು. ೫-೨-೮೨). **ನುಱುಗು$_1$** : ೨. ಮುಗ್ಗದ ಮುಗಿಯದ ಬಾಡದ ನುಱುಗದ ಸುರುಂಟದ ಪೂವೆ ಪೂಬನದೊಳಳುಂಬಂ (ರಾಮಾಶ್ವ. ೫೩-೨೫). ೭. ನಯವಾಗು ; ಹೊಂದಿಕೊಳ್ಳು ; ಹದವಾಗು : ನೆಱೆ ಸಣ್ಣಗೋದುವೆಯ ಹಿಟ್ಟ ಸಿಹಿವಾಲೊಳಗೆ ನುಱುಗುವಂದದಿ ಕಲಸಿ ಹೆಬ್ಬೆಟ್ಟ ತೋರದೊಳು ಕೊಱೆದ ಕರಟಕೆ ತುಂಬಿವೊಡೆಯದೊಲು ತುಪ್ಪದೊಳಗಡಲು ಚಿಲುಮುರಿಯಾದುದು (ಸೂಪಶಾ. ೧-೩೩) ; ತಱುಪಿನೆಮ್ಮೆಯ ಹಾಲ ನಾಲ್ಕೊಂದೆನಿಸಿ ಕಾಸಿ ನೆಱೆ ಸಣ್ಣನಾದಕ್ಕಿಹಿಟ್ಟನಿನಿಸಂ ಹೊಯ್ದು ನುಱುಗು [ಪಾಠಾಂ. ನರುಗು ಮರುಬ]ವಪ್ಪಂತೆ ಹಿಟ್ಟಂ ತೊಳಸಿಯುಂಡಲಿಗೆವದನಾಗಲಿಳುಹಿಕೊಂಡು ಕಿಱುಬಟ್ಟ ಮಾಡಿ (ಸೂಪಶಾ. ೧-೫೮). △ **ನುಟ್ಗು** : ೩. "ನುಟ್ಗು (ನುಳ್ಗು)—ಸಂಚೂರ್ಣೇ" (ಶಮಧಾ); ಇಳೆ ಮೊಳಗಿತ್ತೊ ಭಾನುರಥಮುರ್ವಿಗೆ ಬಿಟ್ಟುದೊ ಶೇಷಕಂಠಕಂದಳ ಕಠಿನಾಸ್ಥಿ ನುಟ್ಗುದುದೊ (ಪಂರಾಮಾ. ೧೩-೩೫). 'ನಱುಂಕು', 'ನೊರಕು' ಪರಾ.

ನುಳ್ಗುನುಸಿಯಾಗು = ಚೂರುಚೂರಾಗು : ಧರಣಿ ತಳ್ಗದೇ ಶೇಷಂ ಸುರುಳ್ವನೇ ಕಮಠಪಂ ನುಳ್ಗುನುಸಿಯಾಗದುಳಿವನೆ ಶಿವಮಹಾತ್ಮೆ ಬಣ್ಣಿಸಲಾರ ವಶಂ (ಚಿಬಪು. ೨೯-೩೩).

[ದೇ.॥ ತಮಿ. ನುಱುಱ್ಕು, ನುಱುಕು, ನುಕ್ಕು ; ಮಲ. ನುಱುಕ್ಕು ; ತುಳು. ನುರಿಯು, ನುಕ್ಕು, ನುರಿಪು, ನುರ್ಪು, ನುರ್ಕ್, ನುಲಿ ; ತೆಲು. ನುಲಿಯು, ನುಱುಮು]

ನುಱುಗಿಸು 'ನುಱುಕಿಸು' ನೋ.

ನುಱುಗು$_1$ 'ನುಱುಕು' ನೋ.

ನುಱುಗು$_2$, ನುಗ್ಗು$_4$, ನುರ್ಗು$_3$ (ನಾ). ೧. ನುಚ್ಚು ; ಪುಡಿ : ನೀಡುತಿರ್ದರು ಗಂಜಿಯುಂಬಲಿ ತೌಡು ನುಱುಗವಲಕ್ಕಿಗಚ್ಚನು (ಪ್ರಭುಲೀ. ೨೩-೩೯). **ನುಗ್ಗು$_4$** : ೧. 'ನುಗ್ಗುಗೆಯ್', 'ನುಗ್ಗುವೊಯ್' ಪರಾ. ೨. ಬಡವು ; ತ್ರಾಣವಿಲ್ಲದುದು : ಗಂಡ ಹೆಂಡರ ನಡುವೆ ಕೂಸು ನುಗ್ಗು (ಸಾಹಿವಿ. ೯೫). ೩. ಅಲ್ಪ ; ಕ್ಷುದ್ರ : ಪಾದೋದಕವೆಂಬುದ ಬಲ್ಲನಾಗಿ ಬ್ರಹ್ಮನ ಲಿಪಿಯೊಳಗೆ ಸಿಲುಕ ವಿಷ್ಣುವಿನಲ್ಲಿ ಕಟ್ಟುವೊಡೆಯ ರುದ್ರನ ಶೂಲದಲ್ಲಿ ಭಂಗಿಸಿಕೊಳ್ಳ ಇಂತೀ ಅಗ್ಗಳೆಯಂಗೆ ಜಗದ ನುಗ್ಗುಗಳು ಸರಿಯೆಂದರೆ ಸಿಗ್ಗಾಗದಿಪ್ಪರೆ (ವೋಳಿಮಾ. ೧೬೫-೬೧೭) ; ಅಗ್ಗಿಸಿದೊಡೆ ದಿಟವೆಂದೆಗ್ಗಱಿಯದನಗ್ಗದ ಹೆಗ್ಗರು ನುಗ್ಗುಗಳಂ ಬಗ್ಗಿಸಿ (ವೀರೇಚ. ೨-೨೭) ; ದೇವದಾನವಭಟರು ನುಗ್ಗೆಂದಾವು ಬಗೆದಿಹೆವುಳಿದ ಮರ್ತ್ಯರು ನೀವು ತಾವೇಸಱ ಸಮರ್ಥರು ಕರ್ಣಗಳಹದಿರು (ಕುಪ್ಯಾದ್ರೋ. ೧೩-೨೩). ೪. (ಉಕ)ಬೆರಣಿ. **ನುರ್ಗು$_3$** : ೧. 'ನುರ್ಗುಗುಟ್ಟು', 'ನುರ್ಗುನುಱಿ' ಪರಾ. ೫. ಪುಡಿಯಾದುದು ; ಚೂರಾದುದು : ಕಾಮಕರಂ ಕರಮಡಂಗಿ ನುರ್ಗಪ್ಪಿನೆಗಂ ಕಾಮದನಡಂಗೆ ವೊಯ್ದಂ (ಶಮದ. ೨೪೬ ಪ್ರಯೋ).

ನುಗ್ಗಾಗು = ೧. ಚೂರುಚೂರಾಗು ; ಪುಡಿಯಾಗು : ತನ್ನ ಬಲಮೆಲ್ಲಂ ಕಲ್ಲ ಮೇಲೆ ಬಿರ್ದ ಕಾಜಿನ ಪೇಱಿನಂತೆ ನುಗ್ಗಪ್ಪುದುಂ ಮುನಿದು ಸಮುದ್ರಬಾಣಮಂ ಬಿಡುವುದುಂ (ಧರ್ಮಾಮೃ. ೮-೧೨೪) ; ಹಡಗು ಜಲಧಿಯೊಳೋಡಿ ಗಿರಿಗಳನೆಡಹಿ ನುಗ್ಗಾದಂತೆ ಸುಭಟರ ಗಡಣ ಗಜವನು ತಾಗಿ ತಾಗಿ ವಿಘಾತಿಯಲಿ ನೊಂದು (ಕುಪ್ಯಾದ್ರೋ. ೩-೨೮) ; ನರಸಿಂಹನ ಕಾಲ್ದುಳಿಯೆಸಕದೊಳಗೆ ಹಿರಣ್ಯಕನ ಅಸಮಮಾರ್ಬಲ ನುಗ್ಗಾದಂತೆ ತುರುಕರು ದೆಸೆಗೆಟ್ಟುರುಳಿದರಾಗ (ಕಂನವಿ. ೧೫-೫೬). ೨. ಕಂದು ; ಕುಂದು ; ನಿರ್ವಿಣ್ಣವಾಗು ; ನಿತ್ರಾಣವಾಗು : ನೊಂದೆನ್ನೆ ನುಗ್ಗಾದೆನ್ನೆ ಗೋವಿಂದ ಕೃಪೆ ಮಾಡಕಟೆನುತ ಪೂರ್ಣೇಂದು ಮುಖಿ ಹಲುಬಿದಳು ಬಲುತೆಱದಿಂದಲಚ್ಯುತನ (ಕುಪ್ಯಾಸ. ೧೪-೧೨೯) ; ಮುಂದೆ ನಮಗಿನ್ನೇನು ಗತಿ ನಾವ್ ನೊಂದೆವ್ವೆ ನುಗ್ಗಾದೆವ್ವೆ (ತೊರರಾ. ೪-೫-೧೫) ; ಪ್ರಜೆಗಳು ಅಸಹ್ಯವಾದ ಕರಗಳ ಭಾರದಿಂದ ನುಗ್ಗಾಗಿದ್ದರು (ಇಂಗ್ಲಂಡ. ೨೮) ; ಇಗ್ಗೆಲಸ ಮಾಡಿ ನುಗ್ಗಾದೆ ಮಗಳೆ (ಗಾದೆ). ನುಗ್ಗುನುಚ್ಚುಮಾಡು = ಹುಡಿಗುಟ್ಟು ; ಛಿನ್ನವಿಚ್ಛಿನ್ನಗೊಳಿಸು : ಉಗ್ರಬಾಹುವು ಬಾರವಾಶಿಯಾದ ಶಲ್ಯವಂ ಚಂದ್ರದ್ಯುಮ್ನನ ಮೇಲೆ ಪ್ರಯೋಗಿಸಲು ಅದಂ ಮತ್ತೊಂದು ಗದೆಯಿಂದ ನುಗ್ಗುನುಚ್ಚು ಮಾಡಿ (ಸೌಗಂಧಿ. ೨೫೬-೪). ನುಗ್ಗುಮಾಡು = ನಿರ್ವಿಣ್ಣಗೊಳಿಸು ; ನಿಸ್ಸತ್ವಗೊಳಿಸು : ಶಿವಭಕ್ತನಾಗಿ ತನ್ನ ಹಿಡಿದಹೆನೆಂದು ಹೋದರೆ ನುಗ್ಗುಮಾಡುವ ನುಸಿಯ ಮಾಡುವ . . . ಕೂಡಲಸಂಗಮದೇವರ ನೆಱೆ ನಂಬಿದನಾದರೆ ಕಡೆಗೆ ತನ್ನಂತೆ ಮಾಡುವ (ಬಸವ. ೬೮೫) ; ಅಗ್ಗಳೆಯೆಳೆತನದಿ ನಿಜದ ಹಗ್ಗದಿಂದ ಬಿಗಿದು ಕಟ್ಟ ನೆಗ್ಗಿ ನೆಗ್ಗಿ ಮಱವೆ ಜಡವೆ ನುಗ್ಗುಮಾಡಿ ಓಡಿಸುವೆನು (ತಿಸಗೀ. ೧೫೬-೭೬೪) ; ಮ್ಲೇಚ್ಛರಾಕ್ಷಸಕೋಟಿಯೈವತ್ತು ಜನಿಸಿದುದು . . . ಗಾಧಿಯ ತನುಜಸೈನ್ಯವ ನುಗ್ಗುಮಾಡಿದರವರು ಕ್ಷಣದೊಳಗೆ (ಸಂಭಪ. ೨೪-೭೧) ; ವೈಕುಂಠಪತಿಯೆಂಬ ವಜ್ರವನು ತಕ್ಕೊಂಡು ನೂಕುವ ಯಮಭಟರ ನುಗ್ಗುಮಾಡಲುಬಹುದು (ಪುರಂದ. ೩-೧೦೪-೨). ನುಗ್ಗುಹಾಕು = ಬೆರಣಿಯನ್ನು ಒಟ್ಟು : ಅಂತ್ಯಸಂಸ್ಕಾರಕ್ಕಾಗಿ ನುಗ್ಗುಹಾಕಿದ್ದರು (ರೂಢಿ).

[<ನುಱುಕು./ತಮಿ. ನುಕ್ಕು, ನೂಕು, ನೂಗು ; ತೆಲು. ನುಗ್ಗು, ನುರ್ಗು, ನುಱುಗು]

△ **ನುಟ್ಗು** 'ನುಱುಕು' ನೋ.

ನೂಂಕಿಸು, ನುಗಿಸು, ನೂಕಿಸು, ನೂಗಿಸು (ಕ್ರಿ). ೧. ತಳ್ಳಿಸು ; ದಬ್ಬಿಸು ; ತಳ್ಳುವಂತೆ ಮಾಡು : ಪಿಡಿದೊತ್ತಿ ಜೀವಮಲ್ಲಾಡೆ ತೊಡಂಕಿ ನೂಂಕಿಸೆನೆ ಮೇರುನಗಕ್ಕೆಳದುಯ್ದು ಮೇಗಣಂ ಕೂಡಿ ಸಮಂತುರುಳ್ಚಿಸೆನೆ ಪನ್ನಗಸಂಕುಳದಿಂ ಭಯಂಕರಂ ಮಾಡಿ ತಗುಳ್ಚಿ ಬೆರ್ಚಿಸೆನೆ ಲೋಕಮಗುರ್ವಿಸಲೆನ್ನ ವಿದ್ಯೆಯಿಂ (ಧರ್ಮಾಮೃ. ೯-೧೮೦) ; ಜಿನಬಸದಿಗಳ ಮೇಲಳವಡಿಪ ಶಿಖರಂಗಳಂ ಭೂತಳಕಿಳಿಯ ನೂಂಕಿಸುತವೆಲ್ಲಂ ನುಚ್ಚುನುಱಿಮಾಡಿ (ಬಸಪು. ೫೧-೭೨) ; ನಾರದ ವಚ ತಪ್ಪಲಱಿಯದು ಕನ್ಯಾಚೋರ ಸಿಕ್ಕಿದನೆಂದೆನುತೆ ದ್ವಾರಕವಾಟವ ನೂಂಕಿಸಲ್ತರಿಸಿದ ಹೇರಾನೆಗಳ ವಂಗಡವ (ಮೋಹತ. ೩೪-೫). **ನುಗಿಸು** : ೨. ರಭಸವಾಗಿ ತಳ್ಳು,—ನೂಕು : ಬಾಗಿಲನ್ನು ನುಗಿಸಿದಳು (ಅಪಹಾ. ೨೮). **ನೂಕಿಸು** : ೧. ಐತಹ ನಾರಿಯರ ರತುನಾರತಿಯ ತಳಿಗೆಗಳ ನೂಕಿಸುತ ಸಾರಿ ಕೈಗೊಡುವದಟರನು ಕಣ್ಣೋರೆಯಲಿ ಕೋಪಿಸುತ ತನ್ನಯ ತೇರನಿಳಿದನು ಪಾರ್ಥನು (ಕುಪ್ಯಾದ್ರೋ. ೮-೧೨) ; ಮಂಚದ ಮೇಲಿಂದ ನನ್ನ ನೂಕಿಸುತ್ತಾ (ಮುಂಬಯಿ. ೫-೪೯) ; ನೂಕಿಸಿಕೊಂಡು ಹೋಗೋದಕ್ಕಿಂತ ಮೇಕೆ ಕಾಯೋದು ಲೇಸು (ಗಾದೆ). **ನೂಗಿಸು** : ೨. ಆ ಮುವ್ವರು ಒಂದು ಡೋಣಿಯನ್ನು ನೀರೊಳಗೆ ನೂಗಿಸಿ (ಮುಂಬಯಿ. ೫-೧೫೬).

ನುಗಿಸಿ ಕೊಡು = ರಭಸವಾಗಿ ತಳ್ಳು,—ದಬ್ಬು : ಆಕೆ ಕೆರಳಿ ಅವನನ್ನು ನುಗಿಸಿ ಕೊಟ್ಟಳು. ಅನಂತನ ತಲೆ ಗೋಡೆಗೆ ಬಡಿಯಿತು (ನಿಸರ್ಗ. ೨೫). ನೂಕಿಸಿ ಬಿಡು, ನುಗಿಸಿ ಬಿಡು = ನುಗಿಸಿ ಕೊಡು : (ಶ್ರೀರಂಗಪಟ್ಟಣದ ನಿಯೋಗಿಗಳನ್ನು ಕಂಡು) ಈಯಿವರ್ಗಳನ್ನು ಕೋಟೆಯ ಹೊರಗಣ್ಗೆ ನೂಕಿಸಿ ಬಿಡಿ (ಸುಗುಗಂ. ೫೮-೧೨) ; ಟಳಕರು ಆ ಕತ್ತಲೆಯಲ್ಲಿ ನನ್ನನ್ನು ನುಗಿಸಿ ಬಿಟ್ಟರು (ಸ್ಮೃತಿಚಿ. ೬೯).

[ನೂಂಕು$_1$ + – ಇಸು$_3$]

ನೂಂಕು$_1$, ನೂಕು$_1$, ನೂಗು (ಕ್ರಿ). ೧. ದಬ್ಬು ; ತಳ್ಳು ; ದೂಡು : "ನೂಂಕು — ಪ್ರೇರಣೇ" (ಶಮಧಾ) ; ಚಾಣಾಕ್ಯನೆಂಬ ಭಟ್ಟನಂ ನಂದಂ ಪರಿಭವಿಸಿ ನೂಂಕಿಯಟ್ಟ ಕಳೆಯಿಸಿದೊಡೆ (ವಡ್ಡಾರಾ. ೭೫-೭) ; ದ್ರುಪದಂ . . . ಏಂ ದ್ರೋಣನೆಂಬನೇಂ ಪಾರ್ವನೆ ಪೇಱೆಂ ತೆನಗೆ ಕೆಳೆಯನೇ ನೂಂಕಂತಪ್ಪನನಱಿಯೆನೆಂದು ಸಭೆಯೊಳ್ ನುಡಿದಂ (ಪಂಪಭಾ. ೨-೪೭) ; ಜಡಿದು ಕರದಿಂ ಪೋಪೋ ಪೋಗೆಂದು ನೂಂಕುವ ಬೇಡರಿಂ (ಧರ್ಮಾಮೃ. ೨-೨೩೦) ; ಕಡೆಗಣಿಸಿ ನೂಂಕು ಚಿಃ ಲಜ್ಜೆಗೆಟ್ಟ ಚ್ಛೆಯಂ ಎನುತೆ ಸಖಿಯರು ನೆರೆದು ಪೆಟ್ಟಗೆಗಳುಮನೊಡೆದು (ನಂಬಿರ. ೧೫-೬೬) ; ಹರನ ಮುನ್ನಿನ ಪೂಜೆಯಂ ಬಲುಗೆರಹುಗಾಲಲಿ ನೂಂಕಿವದನಾಂಬುರುಹದೊಳು ತುಂಬಿರ್ದುದಕದಿಂ ಮಜ್ಜನಕ್ಕೆಱೆದು (ಬಸಪು.೧೮-೩೨) ; ಕುತ್ತಡಸು ಬಯ್ ಪೊಯ್ ನೂಂಕುತೌಂಕು ಸೀಳ್ ತಡೆಯೆನುತ್ತೆ ಕಡಿದಾಡಿದರ್ (ಚಿಬಪು. ೨೪-೬). ೨. (ಸಮಯವನ್ನು) ಕಳೆ ; ವ್ಯಯಿಸು : ಓವದೆ ಪೊಡವಿಯೆಱೆಯನಣುಗಿನ ಸುಕುಮಾರಂ ಸಡಗರದಿಂ ಸಲೆ ಸಂಪದದೊಳ್ ದಿನಮಂ ನೂಂಕುತ್ತಿಹನು (ಜಯಕಾ. ೨-೬೬) ; ಬಂದಪ್ಪರಾಣ್ಮನಾದೇಶಮಂ ತಂದಪ್ಪರೆಂದು

ಪಗಲಿರುಳುಗಳನೆಳ್ಚರೊಳೆ ನೂಂಕುತಿರ್ದುತ್ಕಂತೆ ಮೆಲ್ಲನೊಳಪೊಕ್ಕತಿಥಿ ಕಿರಣಪ್ರಥಮದೂತನಂ ಕಾಣುತ (ಶ್ರೀರಾಮಾ. ೮೨೬-೪೬); ಅಳಲಿಂ ರಾತ್ರಿಯ ನೂಂಕುವಂ ಪೊರಳುತುಂ ಶಯ್ಯಾಂತದೊಳೆಚ್ಚರಿಂ . . . ನೃಪಂ (ಶಾಕುಂತ. ೮೧-೧೩೬). ೩. ನುಗ್ಗಿಸು; ರಭಸದಿಂದ ಮುಂದೆ ಹೋಗುವಂತೆ ಮಾಡು: ಕಟ್ಟಿದಿರೊಳೆ ನೂಂಕಿದಾನೆಗಳ ಕೋಡುಗಳಂ ಬಳೆವೋಗೆ ಪೊಯ್ದುಂ (ಪಂಪಭಾ.೧೦-೪೧); ತಂತಮ್ಮೆಱೆ ದಾನೆಗಳಂ ನೂಂಕಿ ಚಕ್ರಾಚಕ್ರಿಯುಂ ಖಟ್ಗಾಖಟ್ಗಿಯುಮಾಗೆಯುಂ ಪೆಣೆದಿಱುವ ಪದದೊಳ್ (ಶಾಂತಿಪು. ೬-೮೨ ವ); ನಿಜರಥವ ಆ ಪರಬಲ ಕಾಗಿ ನೂಂಕಿ ನಿಂದನು ದಿವಿಜಾಪಹಾರಕನದಟಂದ (ಅಂಜಚ. ೬-೧೨೧). ೪. ಆಕ್ರಮಣ ಮಾಡು; ಮೇಲೆ ಬೀಳು; ನುಗ್ಗು: ಒಡ್ಡು ಪುಣ್ಪಡುವಿನವಿಟ್ಟು ಸನ್ದು ಸವಕಟ್ಟಱದಲ್ಲಿಗೆ ನೂಂಕಿ ಬೀರಮಚ್ಚಟ್ಟಿನಮಾಮೆ ತಳ್ತಿಱದು ಗೆಲ್ದೆವರಾತಿಯನೆನ್ದು ಪೊಚ್ಚಱ ನುಡಿವಟ್ಟಿಗಣ್ಡರಂ ನಗುವುದೊಟ್ಟಜೆ ಮಾವನ ಗನ್ಧ ಹಸ್ತಿಯಂ (ಎಕ. II, ೧೩೪-೫೧; ಸು. 982); ಎಡೆವಿಡದೆ ನೂಂಕಿ ಗಜಘಟೆ ನಡೆಯಲ್ಮೇಲೆಸೆದುವಾಂತ ಬೆಳ್ಗೊಡೆಗಳ್ (ಕಾದಂಪೂ. ೬೦೦); ನಿಲಲುಂ ನೂಂಕಲುಮರಿಯಂ ಗೆಲಲುಂ ಪೆಱರೊಳರೆ ಕರ್ಣನಲ್ಲದೆ ಕರ್ಣಂ ತಲೆನಾಯಕನಾರುಮವಂ ನಿಲೆ ನಿಲ್ವರ್ನೂಂಕೆ ನೂಂಕುವರ್ಗೆಲೆ ಗೆಲ್ವರ್ (ಗದಾಯು. ೩-೬೪); ಕರ್ಮವೆಂಬ ಅಂಕದೊಡನೆ ತೊಡರಿದೆ ಬಿನ್ನಪವನ ವಧಾರು ನಿಮ್ಮಾಳಿನ ಭಾಷೆಯ ಕಡೆಗಳಕ್ಕೆ ನೂಂಕುವೆ ಕೆಡಹುವೆನಂಕವ (ಬಸವ. ೬೯೯); ಮಾಗಧಪ್ರಮುಖ ನಿಖಿಲ ನರಪಾಲಕರ್ ನೂಂಕೆ ಸಂಕರ್ಷಣಂಗೆ ಸಮರವತಿಭರವಾದುದಂ ಕಂಡು (ಜಗವಿ. ೭-೭೦ ವ). ೫. ತ್ಯಜಿಸು; ಈಡಾಡು: ಮಿಡಿದನಿತು ಬೇಗದಿಂದಟ್ಟಿವೊಡಲನಿದಂ ಪೋಗೆ ನೂಂಕಿ ಚೆಲ್ವಪ್ಪೊಡಲಂ ಪಡೆದಪೆಯಿಾಗಳೆ ಬಲ್ವಿಡಿವಿಡಿದು ಶರಣ್ಬುಗು ಜಿನೇಂದ್ರಪದಸರಸಿಜಮಂ (ಆದಿಪು. ೨-೫೮). ೬. ಗುಡಿಸು; ಉಡುಗು: ಹರಿದಶ್ವಂ ಬಂದಪಂ ವಾಹಳಿಗೆನುತರುಣಂ ವ್ಯೋಮ ವಿಸ್ತೀರ್ಣರಂಗಾಂತರವೀಧೀಚ್ಛನ್ನತಾರಾಸ್ಫಟಿಕಶಕಲಮಂ ನೂಂಕುತಂ ಚಾರುಚಾಮೀಕರಯಂತ್ರವ್ರಾತದಿಂ ಕುಂಕುಮಘನರಸಮಂ ಸಿಂಪಿಸುತಿರ್ದನೆಂಬಂತಿರೆ (ಕಾದಂಪೂ. ೧೪೧). ೭. (ಶ್ರಮ, ಆಯಾಸ ಮುಂತಾದುವನ್ನು) ಪರಿಹರಿಸಿಕೊಳ್ಳು; ನೀಗಿಕೊಳ್ಳು; ಶಮನಮಾಡಿಕೊಳ್ಳು: ಪಸಿವಂ ಬಿಟ್ಟು ದಶಾರ್ತಿಯಂ ತೊಱೆದು ದೇಹಾಯಾಸಮಂ ನೂಂಕಿ ಬಲ್ಪಿಸಿಲಂ ನೋಡದೆ ವನ್ಯದಂತಿಮಹಿಷವ್ಯಾಘ್ರಾದಿ ನಾನಾ ಮೃಗಪ್ರಸರಕ್ಕಳ್ಕದೆ . . . ಎಸೆದನೀಶಂಗೋಹಿಲಂ (ಉದ್ಭಟ. ೧೧-೯೨); ಗಗನೇಚರಿಯರ್ ಶ್ರಮಮಂ ಮಿಗೆ ನೂಂಕಲ್ ನಿಲ್ವುದರ್ಕಿವೆಮ್ಮೆಮ್ಮಯ ತಾವುಗಳೆಂದು ಕುಱುಪುಗೊಂಡಾ ಬಗೆಗಿಟ್ಟಂತೆಸೆವುವಿದಱ ಕೋಂಟೆಯ ತೆನೆಗಳ್ (ದಶಕು. ೧-೩೪). ೮. ಸರಿಸು; ಓರೆ ಮಾಡು; ಹಿಂದಕ್ಕೆ ತಳ್ಳು: ಪೆಱೆನೊಸಲೊಳ್ ಕಱೆಯ ಪಾಂಗಿ ನಿಂದಲೆವ ಮುಂಗುರುಳಂ ನೂಂಕೊತ್ತುವೊಂದು ನೆವದಿಂ ತೋಳ ಮೊದಲಂ ತೋರ್ಪಡಿಸಿಯುಂ (ರಾಮಾಶ್ವ. ೫೯-೧೨). ೯. ಅಂಗಸಾಧನೆಯ ಸಾಮು, ದಂಡೆ ಮುಂತಾದುವನ್ನು ಮಾಡು: ಬಾಲಾಭ್ಯಾಸಿ ದಂಡೆಯ ನೂಂಕುವಂತಂಬೆಗಾಲಿಕ್ಕತೊಡಗಿದನೊಲಿದು (ಮೋಹತ. ೧೬-೬೧). ೧೦. ಮಿಡಿ; ಮೀಟು; ಬಾಜಿಸು: ತಾಂ ಮೆಲ್ಲನೆ ವಾಮದೋರ್ಲತೆಯನೆತ್ತಿ ಬೆರಲ್ಗಳನಿಟ್ಟು ತಂತಿಯಂ ನಿಲ್ಲದೆ ನೂಂಕು ತೊಂದಿನಿಸು ಗೋಣನೊಱಂಗಿಸಿ ನೋಡುತೋಪನಂ ವಲ್ಲಕಿಯೊಪ್ಪುವಿಂಚರ ಮನ್ಯೆದೆ ನೆಗಟ್ಟುದಳೊರ್ವಳೊಲ್ಮೆಯಿಂ (ಉದ್ಭಟ. ೧೦-೪೭). ೧೧. (ಭಾವನೆಗಳನ್ನು) ಒತ್ತು; ಅದುಮು; ನಿಗ್ರಹಿಸು: ಉದ್ಗತಾನಂದಮಂ ನೂಂಕಿ ನೆನೆದುಬ್ಬುವಂ ಶಿವಪೂಜೆಯೊಳಗೆ (ಒಸರ. ೩-೧೫೦). ೧೨. ತಿವಿ; ಚುಚ್ಚು: ಮಡದಲಿ ನೂಂಕಿ ವಾಜಿ ಗರುಡಂಗಮದಿರ್ಮಡಿ ವಾಯುವಿಂಗೆ ಮೂರ್ಮಡಿಯೆನಿಪ್ಪೊಂದು ತನ್ನ ಜವದಿಂ ಪರಿಯಲ್ಕೆ ಮುಹೂರ್ತಮಾತ್ರದೊಳ್ಗಡ ಪದಿನೈದು ಯೋಜನಮನೊರ್ವನೆ ಸಂಧಿಸಿ ಪೋದನಂದು (ಕಾದಂಪೂ. ೬೨೧); ಕರವಾಳ್ಗಳಂ ಜಡಿದು ನೂಂಕುವರ್ ತಾಂಕುವರ್ (ಚೆಬಪು. ೫೦-೨೫). ೧೩. ಮುಂದುವರಿ; ಸಾಗು; ನಡೆ: ಗೋತ್ರನಾಮವ ಬೆಸಗೊಂಡರೆ ಮಾತು ನೂಂ[ಪಾಠಾಂ. ನೂ]ಕದೆ ಸುಮ್ಮನಿದ್ದಿರಿದೇನಯ್ಯಾ (ಬಸವ. ೬೪೪). ೧೪. [ಗಣಿತ] ಗುಣಿಸು; ಗುಣಾಕಾರ ಮಾಡು: ತಿವಿ, ಪೊಯ್, ಪೆರ್ಚಿಸು, ನೂಂಕು . . . ಬೆಳೆಸೆಂದು ಇಂತಿನಿತುಂ ಗುಣಿಸೋದಕ್ಕೆ ಹೆಸರು (ವ್ಯವಹಾ. ೧೧-೮). ನೂಕು$_1$: ೧. ಹಗಹದಲ್ಲಿ ಬಿದ್ದವರ ಮೇಲೆ ಒರಳ ನೂ[ಪಾಠಾಂ. ನೂಂ]ಕುವರೆ (ಬಸವ. ೩೧೬); ಲೋಕದ ಹಂಗನೆ ಹಱದು ಬೇಕು ಬೇಡೆಂಬುದನೆ ನೂಕಿ ತಾ ಸುವಿವೇಕಿಯಾದಲ್ಲದೆ ಜ್ಯೋತಿಯ ಬೆಳಗ ಕಾಣಬಾರದು (ಪಚಸಂ. ೪೧೨-೭೭); ಮನದ ಕತ್ತಲೆ ಗುರುವರನ ವಾಕ್ಕಿನಲಿ ತೊಲಗುವವೋಲು ತುಂಬಿಯ, ತನತನಗೆ ನೂಕಿದವು ವಿಕಸಿತ ಕೈರವಾದಿಗಳು (ಕುವ್ಯಾದ್ರೋ. ೧೬-೧೬); ಐದುವರ್ಷದ ಹಸುಳೆ ವನವೆತ್ತ ತಪವೆತ್ತ ಬೈದು ಮಲತಾಯಿಯಡವಿಗೆ ನೂಕಲು (ಪುರಂದ. ೨-೬೦-೧); ಮೀಟುವೆಣ್ಣುಗಳ ಕುಂತಳ ತಮವೆಂದು ನಿಡುಜಡೆವಿಡಿದು ಶ್ರೀಕಾಂತ ನೀರೊಳಗೆ ನೂಕಿದನು (ಮೋಹತ. ೧೪-೫೬); ಪಾತಕವ ನೂಕುವಡೆ ಸೂತಕ ಕಳೆಯುವಡೆ ಧೂತೇಶನೊಲುಮೆ ಪಡೆಯುವಡೆ ಹಸಿದರಿಗೆ ಕಾತರಿಸದಿಕ್ಕು (ಸರ್ವಜ್ಞ. ೬೪೯). ೨. ಭಾನುಮತಿ ಬರೆ ಮುರಿದ ಮುಸುಕಿನ ಮೌನಿ ನೂಕಿದನಿರುಳನುದಯದನೂನಮಂಗಳ ಪಟಹ ಶಂಖಧ್ವನಿಯ ಮಾಣಿಸಿದ (ಕುವ್ಯಾಸ. ೧೨-೩); ತನುವ ತುಂಬಿತು ತಾಪ ತಾಪದ ಘನತೆಯಲಿ ಗರುವಾಯಿಗೆಟ್ಟನು ನೆನೆದು ನಯನಜಲಂಗಳಲಿ ನೂಕಿದನು ಯಾಮಿನಿಯ (ತೊರರಾ. ೨-೨-೮); ಆಕೆಯಳ್ತಿಯ ಸಲಿಸಿ ಶಿಶುತೆಯ ನೂಕಿ ಸಿತಪಕ್ಷದೊಳು ಬೆಳೆವ ಸುಧಾಕರನವೊಲು ಕಳೆಗಳೊಡವೆಳೆಯಲು ಬೆಳೆವನಾತಾ (ಸಾಳ್ವಭಾ. ೪-೩). ೪. ಇತ್ತ ರತ್ನಗ್ರೀವಾದ್ಯ ವಶಿಷ್ಟ ಖಚರರೊಡನರ್ಣವನಿನದದಿನಾರ್ದು ನೆರೆದು ನೂಕಿದರಾಗಳ್ (ಶಾಂತಿಪು. ೪-೨೬); ಮನಸಿಜನ ದಳ ನೂಕಿತೇಳೇಳೆನುತ ಚೆಲ್ಲಿತು ಮುನಿನಿಕರ (ಕುವ್ಯಾಅ. ೧೮-೧೫); ಅಗಣಿತದ ಪೆಟ್ಟಗೆಯ ಹೊಱೆಯಾಳುಗಳ ಸಂದಣಿ ನೂಕಿದುದು (ತೊರರಾ. ೧-೧೬-೧೦); ಎಲೆಲೆ ಕವಿಕವಿಯೆನುತವನ ಬಲಂ ಕಂಡು ಸಂಕಲೆಗಡಿದ ಮುಗಿಲಂತಿವನ ಮೇಲೆ ಕೈದುಗಳ ಮಳೆಗಱೆಯುತಿಟ್ಟಣಿಸಿ ನೂಕಲನುಸಾಲ್ವಂ ಕನಲ್ದು (ಜೈಮಿಭಾ. ೧೨-೪೦). ೫. ಎಲ್ಲಿ ನೂಕುವೆನೀ ತನುವ . . . ತಮಗಿಲ್ಲಿ ಕಡೆಯಾಯ್ತುಡವಿಯೊಳಗೆಂದೆನುತ ಹಲುಬಿದನು (ಕುವ್ಯಾಅ. ಓರಿಇ. ೨೬-೩೫). ೧೩. ನೂಕಿತೊಂದೇ ವಾಘೆಯಲಿ ರಥ ನಾಕುಸಾವಿರ ಬಲುಗುದುರೆ ಹದಿನಾಕುಸಾವಿರ ನೂಱುಕರಿಘಟೆ ಲಕ್ಕ ಪಾಯ್ದಿದಳ ಜೋಕೆ ಜವಗೆಡೆ ಮುಱುವಡೆದು ಬಲದೊಳೆವಾಳರು ಸರಿಯೆ ಸೋಲದ ನೂಕು ನೂಕಾಯಿತ್ತು ಕೌರವರಾಯಸೇನೆಯಲಿ (ಕುವ್ಯಾಕ. ೨-೯); ಸತ್ತ್ವಗುಂದಿದ ಸಮರ ನೂಕದು (ಕೌಶಿರಾ. ೨೬-೪೨). ೧೫. ಮುಂದುವರಿಸು; ನುಗ್ಗಿಸು; ಸಾಗಿಸು: ಕಿರಣ ತೋಮರ ದಕ್ಷಿಣೋರು ಸ್ಫುರಣ ತಿಮಿರ ಮೃಗೀಕವಂಬಕ ತರಣಿ ನೂಕಿದನುದಯಶೈಲಕೆ ರತುನಮಯರಥವ (ಕುವ್ಯಾಕ. ೮-೧೫); ಆಗ ಭೀಮನು ತನ್ನ ರಥವನ್ನು ನೂಕಿ ಕರ್ಣನನ್ನು ನೋಡಿ (ಕೃಪಾಕ. ೬೬). ೧೬. ಲಭಿಸು; ಸಂಭವಿಸು; ಉಂಟಾಗು; ಪ್ರಾಪ್ತವಾಗು: ಚಾಪವೀತನ ಕೈಯಲಿರಲಿನ್ನಾ ಪಿನಾಕಿಗೆ ಗೆಲವು ನೂಕದು [ಪಾಠಾಂ. ಘಟಿಸದು] (ಕುವ್ಯಾದ್ರೋ. ೬-೨೯); ನೂಕಲರಿಯದು ಜಯವು ನಮಗೆ ಹರಿ

ಶಂಖರವ ಲೋಕಪಾಲಕರೆದೆಯ ಸೀಳುತಿದೆ (ತುರಂಗ. ೫೫-೨೪). ೧೭. ತುಂಬು ; ಆಗು : ಪತಿಯಳಿವಂದಿನ ಅಕಾಲಕೊದವಿರ್ದ ಮೂಜು ತಿಂಗಳ ಗರ್ಭ ನೂಕಿತ್ತು (ಭಾವಚಿಂ. ೮-೩೬). ೧೮. ಸಾಧ್ಯವಾಗು ; ಸಮರ್ಥವಾಗು ; ಶಕ್ಯವಾಗು : ಸಾಕ್ಷಿಕೊಳ್ಳೆ ಕೃಷ್ಣ ನೋಡಲು ನೂಕದೆನ್ನೆವೆ ಸೀವುತಿವೆ ಕರುಣಾಕರನೆ ಕೈಗಾವುದ್ದೆ ಕೃಪೆಮಾಡಬೇಕೆಂದ (ಕುವ್ಯಾಭೀ. ೩-೭೫); ಈ ಕುದುರೆಯನವನೇಱದಿರ್ದೊಡೆ ಮತ್ತೆ ನೂಕದವನ ಕೈಯೊಳಗೆ ಈ ಕದನವ ಜಯಿಸುವುದು (ಕುರಾಸಾಂ. ೩೮-೭೯); ಸಾಕೆಲೆ ಕಿರಾತ ನಿನ್ನಯ ಬಲ್ಮೆಯೆಮ್ಮೊಡನೆ ನೂಕುವದೆ (ಚಿಬಪು. ೫೩-೪೧); ಆ ಕುದುರೆ . . . ಲೋಕಮಂ ದಣಿಸುತ್ತೆತರಲಖಿಳ ದೆಸೆಯೊಳದನಾಕೆವಾಳರ್ತಡೆಯೆ ಬಿಡಿಸಬೇಕನಿಬರಿಂ ನೂಕದೊಡೆ ಕರ್ತೃ ತಾನಾದೊಡಂ ಪೋಗಿ ನಡೆಸುವುದು ಬಳಿಕಾ ಹಯವನು (ಚೈಮಿಭಾ. ೨-೨೯). ೧೯. ಚಿಮ್ಮು ; ಹೊರಹೊಮ್ಮು ; ಹೊರಸೂಸು : ಹಱುದು ದಿಮ್ಮೈಜೋಡು ನೆತ್ತರಿನೊಱತೆ ನೂಕಿತು ಭದ್ರಪೀಠದ ಹೊಱಗು ನನೆದುದು (ಕುವ್ಯಾಕ. ೨೪-೬). ೨೦. ಕೆಡಹು ; ಬೀಳಿಸು : ಸೂತನ ತಲೆಯನೆರಡಱಲಿ ನೂಕಿ ಧನುವನು ಮೂಜು ಬಾಣದಲೌಕಿ ಖಂಡಿಸಿ ಹೋಗು ಹೋಗಿನ್ನಾಕೆವಾಳರನಱಸಿ ತಾ ಎನುತ್ತೈದಿದನು ದ್ರೋಣ (ಕುವ್ಯಾದ್ರೋ. ೨-೪೨). ೨೧. ನೆಗವು ; ಎತ್ತು : ಆನಿರಲು ಹೆಕ್ಕಳವೇಕೆ ಹೋಹೋಯೆನುತ ಹೊತ್ತನು ನೂಕಿ ಹೆಗಲೆರಡಱಲಿ ಕುಂತಿಯ ಧರ್ಮನಂದನನ (ಕುವ್ಯಾಆ. ೯-೩). ೨೨. ದೂರಮಾಡು ; ಕಡೆಗಣಿಸು ; ಉಪೇಕ್ಷೆಮಾಡು ; ತಿರಸ್ಕರಿಸು : ಒದೆದು ಕಳೆ ಭವವ ಸದ್ಗುರುಚರಣ ಕೃಪೆಯಿಂದ ಏಕೆ ಮಱೆಮಾತುಗಳು ಸಾಕಿನ್ನು ಸದ್ಗುರುವೆ ನೂಕಬೇಡಿನ್ನೆನ್ನ ಸ್ವೀಕರಿಸು ಮದ್ಗುರುವೆ (ದೀಕ್ಷಾಬೋ. ೧೮-೩೧೮); ಏಕೆ ದುರಾತ್ಮರ ಮಾತಂ ನೂಕುವೆ ನಾಂ ಕಂಡ ಬುದ್ಧಿಯಂ ಕಾಣ್ಬೆಂ ನಿರ್ವ್ಯಾಕುಲದಿನಿಂದಿರುಳೆಂದಾ ಕಾಂತೆಯಮಾತ್ಯವಚನಮಂ ಮನ್ನಿಸಿದಳ್ (ದಶಕು. ೨-೩೫). **ನೂಗು** : ೧. 'ನೂಗಿಸು' ಪರಾ. ೨. ಮುಂಜಾವ ತೊಟ್ಟು ಇರು ಹಂಗು ಬಿಟ್ಟು ಬರಿ ಹಾಂಗ ಕೂಗತದೋ ತಲಿಕಾವಿನೊಳಗ ಇಮ್ಮಾವಿನೊಳಗ ಬಿಸಿಗಾಲ ನೂಗತದೋ (ಗಂಗಾತ. ೮೮-೧೪). ೪. ಊರ್ಧ್ವಗತಿಯಲೇ ಮನೋರಥವು ಸಹ ಅಪಾರ್ಥವೆ ನಿಸದೆ ನೂಗಲಿ (ಅರಳು. ೩೦೧-೧). ೨೩. ಸಹಿಸು ; ತಾಳು : ನೂಗುತೊಂದೇ ದುಃಖ ತೂಗುತೊಂದೇ ಸುಖವ . . . ಸಾಗೋಣ ಕೂಡಿ ಕೂಡಿ (ಉಯ್ಯಾಲೆ. ೩೮-೧೪). 'ನೂಗಿಸು' ಪರಾ.

ನೂಕುನೂಕು, ನೂನೂಗು (ದ್ವಿರುಕ್ತಿ) : ಕುಣಿವ ತೊಡರಿನ ಪೆಂಡೆಯದ ಡೊಂಕಣಿಯ ಬಿರುದರ ನೂಕುನೂಕೆನೆ ಹಿಣಿಲ ಬಾವುಲಿಗಾಱರಾವೆಡೆ. . . ನೂಕುವದೆಂದು ಸಾರಿದರು (ಕುವ್ಯಾಭೀ. ೪-೩೯); ಜಡಜಡವನೆಳದಾಡಿ ಮನಮನವ ತಾಗಿಸುತ ಕರ್ಮದೊಡ್ಡಿನೊಳಿಹವ ನೂನೂಗುತಿರುವ ಜೀಯ ನಿಮ್ಮ ಹಸಾದರೆಂಬರುರವಟೆಯೊಳಗೆ (ಮಲೆದೇ. ೪೭-೨). **ನೂಕಲಾಟ** = ನೂಕು ; ನುಗ್ಗಾಟ ; ನುಗ್ಗಲು : ಭಾಸ್ಕರರಾಯ ಗಾಡಿಯ ನೂಕಲಾಟದಲ್ಲಿಯೂ ನುಗ್ಗಿ ಒಳ್ಳೆಯ ಸ್ಥಾನವೊಂದನ್ನಾಕ್ರಮಿಸಿ ಕುಳಿತುಕೊಂಡ (ಕಮನೆ. ೪೧). **ನೂಕುತಾಕು** = ನೂಕಲಾಟ ; ನೂಕಾಟ : ಆಕಾಶವ ನೋಡುವುದಕ್ಕೆ ನೂಕುತಾಕೆ (ವಿಲೇಶ್ವ. ೪೦); ಈ ಕಥೆಗಾವುದು ಮೊದಲೆನೆ ತೆರೆಗಳ ನೂಕುತಾಕಿಂದ ರತ್ನಗಳ ಆಕರದಿಂದ ನಾನಾ ಜಲಚರಗಳಿಂದಾ ಕಡಲಿರದೊಪ್ಪುತಿಹುದು (ಕುರಾಸಾಂ. ೨-೧); ಲೋಕದ ಮುಂದಣ್ಣ ಸೋಲವೆಂದನು ನೂಕುತಾಕಾಯ್ತು ಚಕ್ರಕೆನ್ನಿಂದ (ಭರಚ. ೫೧-೧೪೪); ಮೆಯ್ಯೊಳ್ನವಿರುಮಾಗಿ ಪೊಱಮಡುವವರುಮೋರೋರ್ವರಿದಿರ್ಚುವ ನೂಕುತಾಕಂ ನಿರವಿಸಿ ಕಿಱುದುಂ ಪೊಟ್ತು ನಿಂದು (ಚಿಕಸಂ. ೧೨೧-೨೧). **ನೂಕುತಾಕುಗೊಳು** = ಗೊಂದಲಗೊಳ್ಳು ; ಗಡಿಬಿಡಿಹೊಂದು : ಮಾತಿನ ಪಸರದ ವ್ಯವಹಾರದೊಳಗೆ ಸಿಕ್ಕಿ ನೂಕುತಾಕುಗೊಳುತಿಪ್ಪವಂಗೆ ಮೋಹದ ಮಾತೇಕೆ (ವಚಸಂ. ೩೫೦-೯೮). **ನೂಕುನುಗ್ಗಲು** = ೧. ನೂಕುತಾಕು : ಆ ನೂಕುನುಗ್ಗಲಲಿ ಹುಯಿಲಿನಲಿ ಮೊದಲಾರು ಸತ್ತನ್ ಅವನದೇ ಪುಣ್ಯಂ (ಪಾರಸಿ. ೧೯-೪೨೭); ನೂಕುನುಗ್ಗಲೇಕೆ? ನಿದಾನವಾಗಿ ಒಬ್ಬರ ಹಿಂದೊಬ್ಬರು ಹತ್ತಿದರೆ ಆಗದೆ? (ಸಿಡಿಲು. ೧೯). ೨. ಗುಂಪು ; ಸಮೂಹ: ನೂಕುನುಗ್ಗಲು ಹಿಂದಿನಿಂದ ಒಂದೇ ಸಮನಾಗಿ ಏರಿಬರುತ್ತಿತ್ತು (ಅಲಹೂ. ೧೪). **ನೂಕುನುಗ್ಗು** = ನೂಕುನುಗ್ಗಲು ೧ : ನೂಕುನುಗ್ಗಿನಲ್ಲಿ ಮಾತನಾಡಬಾರದು, ನಾಚಿಸುವವರ ಮನೇಬಾಗಲು ತುಳಿಯಬಾರದು (ಗಾದೆ).

[ದೇ. ॥ ತಮಿ. ನೂಕ್ಕು, ನೂಕ್ಕಿ ; ತುಳು. ತೆಲು. ನೂಕು ; ಕೊಡ. ಕೋಲಾ ನೂಕ್, ನೂಕಿ]

ನೂಂಕು$_2$, ನೂಕು$_2$ (ನಾ). ೧. ನೂಕುವಿಕೆ; ತಳ್ಳುವಿಕೆ: 'ನೂಂಕುದಟು' ಪರಾ. ೨. ಗೊಂದಲ ; ಗಜಿಬಿಜಿ. **ನೂಕು$_2$** : ೧. ಗೆದ್ದಲು ತಿಂದ ಮರಬೀಳುವುದಕ್ಕೆ ಬೇಕಾದ ನೂಕಿನಂತೆ ಗಂಡನ ಸಾವು ಒದಗಿ ಅವರನ್ನೂ ಕೊಂಚಕಾಲದಲ್ಲಿಯೇ ಕಣ್ಣುಮುಚ್ಚಿಸಿ ಕರೆದೊಯ್ದಿತು (ಜಾಳಹೊ. ೧೯೧). ೩. ಮುಂಚಾಚಿದ ಕಟ್ಟಡದ ರಚನೆ ; ಚೆಜ್ಜ (?) : ಆ ಛತ್ರವು ಹನ್ನೆರಡು ಕಂಭದ ತೊಟ್ಟಿಯಾಗಿದ್ದಿತು, ನಾಲ್ಕು ಕಡೆಯೂ ನೂಕು (ಚಿಂಗಾಳ್ವ. ೩೧೪).

ನೂಕುನೂಕಾಗು = ಗೊಂದಲವಾಗು : ನಾಕು ಕಡೆಯಲಿ ಕವಿದುದಳವಿಗೆ ನೂಕುನೂಕಾಯಿತ್ತು ನರನವ್ಯಾಕುಳತೆಯಲಿ ಸವಱತೊಡಗಿದನ ಹಿತಬಲವನವ (ಕುವ್ಯಾದ್ರೋ. ೧೦-೨). [<ನೂಂಕು$_1$]

ನೂಂಕುದಳಿ 'ನೂಂಕುದಟು' ನೋ.

ನೂಂಕುದಟು, ನೂಂಕುದಳಿ (ನಾ). (ಕೋಟೆಕಾಳೆಗದಲ್ಲಿ ಬಳಸುತ್ತಿದ್ದ) ತಳ್ಳುವ ಮರದ ದಿಮ್ಮಿ,—ತೊಲೆ: ಕಡಸಿರಗೆಯ್ದ ನೂಂಕುದಟುಯಿಕ್ಕುವ ಬಲ್ದಸಿ ಭೀತಿಯಂ ಮನಕ್ಕೊಡರಿಸೆ ಲಗ್ಗೆಯೊಟ್ಟಳದೊಳಿಟ್ಟಳವಾದುದು ಕೋಂಟೆಗಾಳೆಗಂ (ಚಂದ್ರಪು. ೫-೧೦೫). **ನೂಂಕುದಳಿ** : ಕೋಟೆಯನ್ನೇರಿ ಬರುತ್ತಿರುವ ಶತ್ರುಸೈನಿಕರನ್ನು ಈ 'ನೂಂಕುದಳಿ' ಗಳಿಂದ ನೂಕುತ್ತಿದ್ದರು (ಕರ್ಣಾಜ. ೫೮).

[ನೂಂಕು$_2$ + ತಟು]

ನೂಂಕುಹ (ನಾ). ನೂಕುವಿಕೆ ; ತಳ್ಳುವಿಕೆ : ವಿಪರೀತಂ . . . ನೂಂಕುಹಂ ಕೃಪೆಹೀನಂ ಅಭಿಹಾರಮಕ್ಕುಂ (ನಾನಾರ. ೧೫೨).

[ನೂಂಕು$_1$ + -ಹ$_2$ (<-ಪ$_2$)]

ನೂಕಡ್ಡೆ (ನಾ). (ಕರಾ) ಒತ್ತು ಸೇವಿಗೆ : "ಬಂದ ನಂಟರಿಗೆ ನೂಕಡ್ಡೆಯೇ" ಎಂದಳು. ನೂಕಡ್ಡೆ ಎಂಬುದು ತುಳುವಿನಲ್ಲಿ ಸೇವಿಗೆಗೆ ಹೆಸರು (ಮುಗಿಯು. ೧೫೭). [<ನೂಂಕು$_1$]

ನೂಕರಿಸು (ಕ್ರಿ). ನೂಕು ; ತಳ್ಳು ; ದಬ್ಬು : ಕಾಲ್ಬಲಗಳಂ ನೂಕರಿಸಿ ತುಳಿತುಳಿದು ಕೊಂದುದ್ದೆ ಚತುರಂಗ ಬಲಗಳಂ ಸುಪ್ರತೀಕ (ತುರಂಗ. ೪೯-೩೮). [<ನೂಂಕು$_1$ + -ಇಸು$_3$]

ನೂಕಾಟ (ನಾ). ನೂಕುನುಗ್ಗು : ಅವರ ನೂಕಾಟದಲ್ಲಿ ನನಗೆ ಉಸಿರು ಸಿಕ್ಕಿದಂತಾಯಿತು (ಅಲಹೂ. ೧೩). [<ನೂಕಾಡು]

ನೂಕಾಡು (ಕ್ರಿ). ೧. ನೂಕು ನುಗ್ಗಿನಲ್ಲಿ ತೊಳಲು. ೨. ನುಗ್ಗಾಡು : ಬೇಕಾದ ಬಗೆಯ ದಂಡು ನೂಕಾಡಿ ನುಗ್ಗಿಬಂದು ಬೇಕಾದುದಾದರೇನು ಸಾಕಾಗದಾಗ ತಾನು (ಗಂಗಾತ. ೧೮-೬); ಜನತಂತಿಬಲೆಯ ಎರಡು ಕಡೆಯೂ ನೂಕಾಡುತ್ತಿದ್ದರು (ಪುಸರು. ೧೮೮). ೩. ತಳ್ಳಿ ಹಿಂಸೆಪಡಿಸು.

ನೂಕುನೂಕಾಡು (ದ್ವಿರುಕ್ತಿ) : ನೂಕುನೂಕಾಡುವ ವಿಪತ್ತಿನ ವೈಕೃತಿಗೆ ನಾನೊಬ್ಬನೇ ದಿಟವಾಕೆವಾಳನೆ ಶಿವಶಿವಾಯೆಂದರಸ ಬಿಸುಸುಯ್ದು (ಕುಸ್ಯಾಅ. ೨೨-೪೭). [ನೂಕು$_1$(<ನೂಂಕು$_1$)+ಆಡು$_1$]

ನೂಕಿಸು 'ನೂಂಕಿಸು' ನೋ.

ನೂಕು$_1$ 'ನೂಂಕು$_1$' ನೋ.

ನೂಕು$_2$ 'ನೂಂಕು$_2$' ನೋ.

ನೂಕುತೆರೆ 'ನೂಕುದೆರೆ' ನೋ.

ನೂಕುದೆರೆ, ನೂಕುತೆರೆ (ನಾ). ದಬ್ಬಿಕೊಂಡು ಬರುವ ತೆರೆ; ತಳ್ಳುವ ಅಲೆ; ಏರಿಬರುವ ತರಂಗ: ಬೀಸಿದರು ಬಿಜುಗಾಳಿಯಾಗಿ ಮಹಾಸಮುದ್ರದ ನೂಕುದೆ[ಪಾಠಾಂ. ತೆ]ರೆಯಲಿ ಬೇಸಱಿಸಿದರು ಹರಿದರವನಿಯಲಗ್ನಿರೂಪಾಗಿ (ಕುಸ್ಯಾಅ. ೧೨-೪೯). **ನೂಕುತೆರೆ :** ಪ್ರಳಯ ಜಲಧಿಯ ನೂಕುತೆರೆಗಳ ಲಹರಿಯೋ ನಿಲುವಾತನಾರಿದಕೆ (ಕುಸ್ಯಾದ್ರೋ. ೧೦-೨). [ನೂಕು$_1$(<ನೂಂಕು$_1$)+ತೆರೆ$_4$]

ನೂಕುಧಾರೆ (ನಾ). ನುಗ್ಗಿಬರುವ ಪ್ರವಾಹ; ಏರಿ ಬರುವ ಪ್ರವಾಹ: ಗಾಳಿಯೆತ್ತಲು ಘಾಡಿಸುವ ಮೇಘಾಳಿಯೆತ್ತಲು ವೈರಿಸೇನೆಯ ನಾಳೆಗಡಿತದ ನೊರೆಯ ರಕುತದ ನೂಕುಧಾರೆಗಳ ಏಳಿಗೆಯಲಾ ಭತ್ರಚಮರೀಜಾಳ ನನೆದವು (ಕುಸ್ಯಾಕ. ೧೦-೨೩).

[ನೂಕು$_1$(<ನೂಂಕು$_1$)+ಧಾರೆ]

ನೂಕುಬಂಡಿ (ನಾ). ತಳ್ಳುಗಾಡಿ; ರಿಕ್ಷಾಗಾಡಿ: ನೂಕುಬಂಡಿಯಲ್ಲಿ ಒಬ್ಬ ಆಂಗ್ಲರಮಣಿ, ಕುದುರೆಯ ಮೇಲೆ ಕೆಲವು ಆಂಗ್ಲಪುರುಷಗಣ, ವಾಯುಸೇವನೆಗೆಂದು ಹೊರಹೊರಟಿದ್ದಾರೆ (ಇಪ್ಪಕ. ೧೯೭).

[ನೂಕು$_1$(<ನೂಂಕು$_1$)+ಬಂಡಿ$_1$]

ನೂಗಿಸು 'ನೂಂಕಿಸು' ನೋ.

ನೂಗು 'ನೂಂಕು$_1$' ನೋ.

ನೂಡನುಳೂರ್ (ನಾ). ಒಂದು ಊರಿನ ಹೆಸರು: ನೂಡನುಳೂರೊಳ್ ಕಾದಿದನ್ದು ಅಯ್ನೂರ್ವ್ವರಿಗಾಗಿ ರಾಜಪೊಷಣಮ್ ಕಾದಿ ಸತ್ತು ಸಗದೊಳ್ ಇಟ್ಟಮ್ (ಮೈಅರಿ. ೧೯೨೩, ೩೩-೩; ?). [?+ಊರ್]

ನೂತ$_1$ 'ನೂಲ್$_1$' ಪರಾ.

ನೂತ$_2$ (ಗು). ಹೊಗಳಿಸಿಕೊಂಡ; ಕೀರ್ತಿಸಿಕೊಂಡ; ಸ್ತುತಿಸಿಕೊಂಡ: ಅವನೀನೂತಯಶಂ ಯಶೋಧವಳಿತಾಶಾಮಂಡಳಂ ಮಂಡಳಾಗ್ರವಿಲೂನಾರಿಬಲಂ . . . ಶ್ರೀಮಚ್ಚಮೂವಲ್ಲಭಂ(ಎಕ. VI, ಚಿಕ್ಕಮ. ೧೬೧-೬೬ ; 1137); ತಾಳಸ್ಥೂಳಕರಂ . . . ದಾನಾರ್ದ್ರಗಂಡಸ್ಥಳಂ ಲೀಳಾಯಾನನುದಗ್ರ ಪಲ್ಲವನದೇಂ ತಾನಾಯ್ತೊ ನೂತಕ್ಷಮಾಶೀಳಂ ಕೇಸರಿಗಂ ನಿರೀಕ್ಷಣಸುಖ ಶ್ರೀಪಂಜರಂಕುಂಜರಂ (ಅರ್ಧನೇ. ೫-೯೦). 'ವಿನೂತ' ಪರಾ. [ಸಂ.]

ನೂತನ (ಗು). ೧. ಹೊಸ; ಅಭಿನವ; ನವೀನ: ನೂತನಮಣಿಭೂಷಣ ಬಾಲಾತಪಸಿತಮಣಿಮರೀಚಿ ಚಂದ್ರಾತಪಪಿಷ್ಟಾತಕಪರಾಗಪಿಂಜರಿತಾತಪಮಯಮಾದುದಾ ಧರಾಧಿಪಭವನಂ (ಆವಿಪು. ೭-೧೧೫); ಬುಧರಿರ್ದು ನೋಟ್ಟುದು ಪುರಾತನನೂತನ ಕಾವ್ಯರೇಖೆಯಂ (ಗದಾಯು. ೧-೪೬); ಹೆಜ್ಜೆ ಹೆಜ್ಜೆಗೂ ಕ್ರಾಂತಿಕಾರರಲ್ಲಿ ನೂತನ ಉತ್ಸಾಹ, ಆಶಾಭಾವನೆ ಬೆಳೆಯಲಾರಂಭಿಸಿತು (ಆತ್ಮಾರ್ಪ. ೧೪೩). ೨. ಎಳೆಯ. ೩. ತಾಜಾ. (ನಾ). ೪. ಹೊಸದು; ನವೀನವಾದುದು: "ನವ್ಯಂ, ನವಂ, ನವೀನಂ, ನೂತನಂ, ಅಭಿನವಂ, ನೂತ್ನಂ—ಈ ೬ ಪೊ(ಹೊ)ಸತು" (ಹಲಾಯು. ೧೧೮-೨೬); ನೂತನವಾದುದಕ್ಕೆ ಸೋತವನು ನಾತದ ವಸ್ತುವಿಗೆ ಸೋತಾನೇ? (ಗಾದೆ). ೫. ಅಪೂರ್ವವಾದುದು; ಸುಂದರವಾದುದು: ಇದು ಪೊಸರೀತಿ . . . ಲೇಸಿದು ರಸಸ್ಥಿತಿ ನೂತ್ನಮಿದಲ್ತೆ ನೂತನಂ ಪದರಚನಾವಿಲಾಸಮಿದು ಕಬ್ಬಮಪೂರ್ವಮಿದೆಂದು . . . ಕೀರ್ತಿಸೆ ನಿಮಿರ್ಚುವೆನೀ ಸುಭಗಪ್ರಬಂಧಮಂ (ಶಬಶಂ. ೧-೨೬). ೬. ಈಚಿನವನು; ನವೀನ: ನೂತನರುಂ ಪುರಾತನರು ಮಪ್ಪ ಮಹಾಕವಿಗಳ್ಳವಿತ್ವ ವಿಖ್ಯಾತಿಗೆ . . . ಕೈ ಮಿಗೆ ಪೇಟ್ಟಪೆನೀ ಪ್ರಬಂಧಮಂ (ಮಲ್ಲಿಪು. ೧-೫೧). ೭. ನೂತನ ಕಾಲದ ಶರಣ: ವರ ಪುರಾತನ ಪುಣ್ಯಚರಿತೆಯಂ ನೆನೆದು ವಿಸ್ತರಿಸುವೆಂ ಧರೆಯ ನೂತನರ ಚಾರಿತ್ರಮಂ (ಲಶಿಚಿಂ. ೩೮ ಸೂಚನೆ). [ಸಂ.]

ನೂತನಂಬಡೆ, ನೂತನವಡೆ (ಕ್ರಿ). ೧. ಹೊಸತನವನ್ನು ಹೊಂದು; ನವೀನತೆಯನ್ನು ಪಡೆ. ೨. ಸೊಗಸಾಗು; ಚೆಲುವಾಗು; ಅಂದವಾಗು: ಪಿಡಿದ ಲೀಲಾಬ್ಜಂ ನೂತನಂಬಡೆಯೆ (ಗಿರಿಕ. ೨-೧೦೫ ವ). **ನೂತನವಡೆ :** ೨. ಆನೆಯ ಶಾಲೆ ಹಯಾವಳಿಗಳ ಲಾಯ ಜೀನಶಾಲೆಗಳಲ್ಲಲ್ಲಿಏನೆಂಬೆ ನೂತನವಡೆದಿಹುವುಱೆ ನೋಳ್ಪ ಮಾನಿಸರುಗಳ ಕಣ್ಮನಕೆ (ಕಂನವಿ. ೨-೬೮). [ನೂತನ+ಪಡೆ$_1$]

ನೂತನಮಾರ್ಗ (ನಾ). ಹೊಸ ರೀತಿ,—ದಾರಿ: ಈ ತೆಱದಿಂದರ್ಥಾಲಂಕೃತಿಯೋತು ವಿಭೇದಮನಾದಮೆಲ್ಲಮಂ ನೂತನಮಾರ್ಗಮೆಸೆಯೆ ಪೇಟ್ಟಂ ಖ್ಯಾತಯಶಂ ಕವಿತಾಗುಣೋದಯಂ (ಕಾಸ್ಯಾದ. ೭೭೮).

[ನೂತನ+ಮಾರ್ಗ]

ನೂತನವಡೆ 'ನೂತನಂಬಡೆ' ನೋ.

ನೂತನಶಕ್ತಿ (ನಾ). ನವೀನ ಶಕ್ತಿ,—ಸಾಮರ್ಥ್ಯ: ಯಾವುದೋ ಅಪೂರ್ವ ನೂತನಶಕ್ತಿಯೊಂದು ಅವನನ್ನು ಅವಳೆಡೆಗೆ ಸೆಳೆಯುತ್ತಿತ್ತು (ಪುನರು. ೧೯೫). [ನೂತನ+ಶಕ್ತಿ]

ನೂತನೆ (ನಾ). ಹರೆಯದವಳು; ಯೌವ್ವನೆ; ಜವ್ವನೆ: ಎಸೆವುಡಿಗೆಯ ಪೊಸಚೆಲ್ವೆಗೆ ನುಣ್ದೊಡೆಯ ನೂತನೆಗೆ . . . ನೇವಳದ ನಾಯಕಿಗೆ (ಗಿರಿಕ. ೩-೯೧ ವ). [ಸಂ. ನೂತನಾ]

ನೂತಿ$_1$ (ನಾ). ನೂಲಿನ ಅಳತೆಯ ಒಂದು ಪ್ರಮಾಣ: ಸಣ್ಣಿಸಿ ನೂತು ಬಣ್ಣಿಸಿ ಹುಯ್ದು ಒಪ್ಪೆಂದರುವೆಗೆ ಅಪ್ಪಿಗೆ ಹಚ್ಚಿ ಇಪ್ಪತ್ತು ಮಳಕೆರಡು ನೂತೀನೇ ನೂತು ಮಳಕೊಂದು ದುಡ್ಡು ಕಲ್ಲುಗಳನೇ ತರಿಸಿ ನಾಲಕು ಮಂದಿ ಜಾಡರನೇ ಕರಸಿ (ನಾಪದ. ೧೪೧).

[<ನೂಲ್$_2$]

ನೂತಿ$_2$ 'ಲೂತಿ' ನೋ.

ನೂತಿಗಣ್ಣು (ನಾ). ನೂತಿಹುಣ್ಣು ಇರುವ ಕಣ್ಣು: (ಕಿ). 'ಕಣ್ಣುನೂತಿ' ಪರಾ.

[ನೂತಿ$_2$ (<ಲೂತಿ) + ಕಣ್ಣು (<ಕಣ್)]

ನೂತಿವ್ರಣ (ನಾ). ನೂತಿಯ ಹುಣ್ಣು: ಗೋರೋಜನವನ್ನು ಧರಿಸಿದಲ್ಲಿ . . . ಕಿಂಚಿತ್ ಭೇದಿಕರವಾಗಿ ನೂತಿವ್ರಣ ಸಕಲವನ್ನೂ ಹೋಗಲಾಡಿಸುವುದು (ಸಕವೈ. ೪೨). [ನೂತಿ$_2$ (<ಲೂತಿ)+ವ್ರಣ]

ನೂತಿಹುಣ್ಣು (ನಾ). = ನೂತಿವ್ರಣ: ನೂತಿಹುಣ್ಣಿಗೆ:—ಬಾಳೆ ಹೂವು, ಹುರುಳಿ, ಗೇರಹರಳು ಇವೆಲ್ಲಟ್ಟು ಇಳುಹಿ, ಗೇರಹರಳು ಮೆಲಲು ನೂತಿ ಮಾಣ್ಗುಂ (ವಿನೈವಿ. ೬೩).

[ನೂತಿ$_2$ (<ಲೂತಿ) + ಹುಣ್ಣು (<ಪುಣ್)]

ನೂತು 'ನೂಲ್$_1$' ಪರಾ.

ನೂತೆ (ನಾ). ೧. ಹೊಗಳಿಕೆಗೆ ಪಾತ್ರಳಾದವಳು; ಸ್ತುತ್ಯಳಾದವಳು. ೨. ಪ್ರಸಿದ್ಧಳಾದವಳು: ಆತನ ವಧು ತಾಂ ಶ್ರೀಮತಿ ನೂತೆ[ಪಾಠಾಂ. ನೂತ] ಯಶೋನ್ವೀತೆಯಾಕೆಗಾ ದಿವಿಜೆ ತನೂದ್ಭೂತೆಯೆನಿಸಿರ್ದಳೀ ವಧು ಮಾತೇಂ ಮಾದೇವಿಯಾಗಿ ಪದ್ಮಾವತಿಯುಂ (ನೇಮಿಪು. ೧೪-೩೫). [ನೂತ$_2$+-ಎ$_2$]

ನೂತ್ನ (ಗು). ೧. = ನೂತನ ೧: ನಿಯತಂ ಚತುರನುಯೋಗ ಪ್ರಯೋಗ ಪೂರ್ವಾನುಯೋಗ ಸಾಗರವೀಚೀಚಯದಿಂ, ಪೊಜಪೊಣ್ಮೆದುದತಿಶಯ ಸುಕಥಾನೂತ್ನರತ್ನರಶ್ಮಿಕಳಾಪಂ (ಸುಕುಮಾ. ೧-೬೩); ನೂತ್ನರತ್ನಾ ಭರಣಂಗಳಿಂ ಶೃಂಗಾರಂಗೆಯ್ದು ಪರಿವೇಷ್ಟಿಸಿರ್ದಂಗನಾಜನಂಗಳಿಂ . . . ನೆಗಟುತ್ತುಮಿರೆಯಿರೆ (ಜಗವಿ. ೨-೩೯ ಪ); ನೂತ್ನ ಶಶಿಕಾಂತನಿರ್ಮಳರತ್ನ ಚ್ಛವಿಸಹಜವಸನಭೂಷಣಮಾಳಂ . . . ಮಹಿಮನೆಸೆದನಂದಹಮಿಂದ್ರಂ (ಪಾರ್ಶ್ವಪು.೧೨-೯೨); ನರನ ಪ್ರಾಕ್ತನಕೆ ನೂತನಸತ್ತ್ವ ಬೆರೆತು ಪರಿವುದೀ ವಿಶ್ವಜೀವನಲಹರಿಯನವರತ ಚಿರಪ್ರತ್ನನೂತ್ನ ಜಗ (ಮಂಕುಕ. ೧೨೯). ೨. ಸುಂದರವಾದ; ಸೊಗಸಾದ; ಚೆಲುವಾದ : ಆ ರಮಣೀಯ ದೇವಾಯತನನೂತ್ನಸ್ತಂಭವಂ ನೆಮ್ಮಿ ನಿಂದಿರ್ದು ತದಂಗನಾ ಗೀತಾವಸಾನಸಮಯಮಂ ಪಾರುತ್ತಮಿರ್ಪುದುಂ (ಕಾದಂಪೂ. ೬೮೬). (ನಾ). ೩. ಹೊಸದು; ನೂತನವಾದುದು : "ನವ್ಯಂ, ನವಂ, ನವೀನಂ, ನೂತನಂ, ಅಭಿನವಂ, ನೂತ್ನಂ—ಈ ೬ ಪೊ(ಹೊ)ಸತು" (ಹಲಾಯು. ೧೧೮-೨೬). ೪. ಸುಂದರವಾದ ವಸ್ತು; ಮನೋಹರವಾದ ವಸ್ತು : ಶ್ರೀಜಾನಕೀಶಿರೋರತ್ನಮಂ ಸಂಪತ್ಸಮಾಜಗಳ ಕೈಗೈವ ಯತ್ನಮಂ ಶುಭವಿಭವರಾಜಿಗಳನೊಲಿದೀವ ನೂತ್ನಮಂ ತಂದಿತ್ತ ಮಾರುತಿಯ ನೋಡಿ (ವೆಂಕಾರಾ. ೫-೧-೧). [ಸಂ.]

ನೂತ್ನಾಗಾರ (ನಾ). ಹೊಸ ಮನೆ : ಕೆಂಪಿನ ಪೂವನೆಣ್ಣೆದಲೆ ನೂತ್ನಾಗಾರಮಂ ದೈತ್ಯರಂ ಕನಸೊಳ್ ಕಾಣಲು ಬಾರದೈ (ಸೋಮೇಶ. ೭೦). [ನೂತ್ನ + ಆಗಾರ]

ನೂನ$_1$, ನೂನು (ನಾ). ೧. ಕೊರತೆ; ಅಭಾವ; ನ್ಯೂನತೆ : ಪಟಿಯ ಸೀರೆಯಂತೆ ಗುಣದೊಳ್ ನೂನಮಾಗದೆ ಕಾಗೆಯಂತೆ ಪೆಱರ್ಗೆ ಪೀಡೆಯಂ ಮಾಡದೆ (ಧರ್ಮಾಮೃ. ೫-೯೯); ಯತ್ವಲೋಪಕ್ಕೆ—ಅಮಾವಾಸ್ಯಾ—ಅಮಾಸೆ, ಅವಸೆ . . . ನ್ಯೂನ-ನೂನ (ಶಮದ. ೨೮೧ ಪ್ರಯೋ); ಆ ನದಿಗೆ ಬಲವಂದು ಬ್ರಹ್ಮಜ್ಞಾನಮುನಿಕೋಟಿಗಳು ನಿತ್ಯಸ್ನಾನ ಸಂಧ್ಯಾವಂದನಾನುಷ್ಠಾನವಿಧಿಗಳನೂ ನೂನವಿಲ್ಲದೆ ರಚಿಸಿ . . . ಜಪಿಸುತಲಿಹರು (ಆನಂರಾ. ೧-೩-೧೭). ೨. ತುಚ್ಛವಾದುದು; ಹೀನವಾದುದು : ಕಾಯವೆಂಬ ಕದಳಿಯನೆ ಹೊಕ್ಕು ನೂನ ಕದಳಿಯದಾಂಟಿ ಜೀವ ಪರಮರ ನೆಲೆಯನಱಿದು ಜನನ ಮರಣವ ಗೆದ್ದು ಭವವದಾಂಟದಲ್ಲದೆ ಘನವ ಕಾಣಬಾರದೆಂದರು (ಲಿಂಗಪ. ೬೨-೫೦). ೩. ಭಂಗ; ಭಗ್ನತೆ : 'ನೂನಿಸು' ಪರಾ. **ನೂನು** : ೪. ವಿಕಲತೆ; ವಿಕಾರ : ಅವಯವಂಗಳು ನೂನು ಕೂನಿಲ್ಲದೆ ಬರೆಗಳ ಹಾಕದೆ ಇರುವಂತಹ ಗೋವ ತಂದು (ಚನ್ನವ. ಕ. ೭೨-೧೬೩). [<ಸಂ. ನ್ಯೂನ]

ನೂನ$_2$ (ನಾ). ದಿಟ; ಸತ್ಯ; ನಿಜ : ನೂನವಿದು ಪ್ರಾಣಾದಿ ಪಂಚಕ ಮಾನನಿಧಿ ಪವಮಾನತತ್ತ್ವದ ಸಾರದಿಂದಾಯ್ತು (ಅಮೃತ. ೪-೨೦); ನಾನು ನಾನೇ ನಾನೆನುತ್ತೆ ಕಿರಿಕೊಡದ ನೀರ್ ಗಾನಗೆಯ್ವುದು ಹೆಮ್ಮೆಯಿಂ ಕಡಲ ಮರೆತು ನೂನದಿಂದಲ್ಲವೆನುವಬ್ಧಿಯೊಳಗದನಿರಿಸೆ ಮೌನವದು ಮಣ್ಕರಗಿ (ಮಂಕುಕ. ೯೦೧). [<ಸಂ. ನೂನಂ]

ನೂನಂ (ಅ). ೧. ನಿಶ್ಚಯವಾಗಿ; ನಿಜವಾಗಿ; ಖಂಡಿತವಾಗಿ : ಆನುಂ ಪೊಜಮಡಲಾಱಿಂ ನೂನಂ ಮನಮಿಕ್ಕಿ ಪಸಿದು ಸಾಯದೆ ನೀಮೆತ್ತಾನುಂ ಪಡೆವೊಡೆ . . . ಅಱಸಿ ತಿನ್ನಿಮೆನಗಂ ತನ್ನಿಂ (ಪಂಚತಂ. ೧೪೧-೯); ನೂನಂ ಹಸಿವು ನೀಗಿತೇನುಂಟು ಸಂದೇಹಮಾನಂದ ಮಾಯ್ತೆಂದು ನಲಿದನಾ ಯತಿವರನುಂ(ದುರಪು.೧೯-೧೫). ೨. ಬಹುಶಃ; ಪ್ರಾಯಶಃ. [ಸಂ.]

ನೂನಿಸು (ಕ್ರಿ). ಮುರಿ; ಭಗ್ನವಾಗು : ಆ ನರೇಂದ್ರಾಟೋಪವಾದಿ ಚುಂಬನದಿ ಪಲ್ನೂನಿಸಲ್ ಭೋಗವಾರಾತಾರು ಕೊಲುವರೆಂಬಾ ನುಡಿ ಭಯಂಕರಕೆ ಬಿಡೆವುಯೆನುತೊತ್ತಿಬಹರಿಂಗಸ್ತ್ರ ದಾನಿಸಿದರು (ಜಿನಮು. ೧೫-೨೧). [ನೂನ$_1$+-ಇಸು$_3$]

ನೂನು 'ನೂನ$_1$' ನೋ.

ನೂಪುರ (ನಾ). ೧. (ಗೆಜ್ಜೆಗಳುಳ್ಳ) ಕಾಲಿನ ಆಭರಣ; ಕಾಲ್ಗಡಗ; ಕಾಲಂದುಗೆ : "ತುಲಾಕೋಟಿ, ನೂಪುರಃ—ಈ ೨ ಗೆಜ್ಜೆ" (ಹಲಾಯು. ೯೨-೪೦೭); ವರಹಂಸಕದಂಬಕಮದು ಶರದಂಬುದ ಮಲ್ತು ಮಂಖರ ನೂಪುರಸಂವಾದಿರವಂ ನೆಗಟ್ಟುಪ್ಪುದು (ಕವಿರಾ. ೩-೧೦೩); ಸುರಾಸುರೇಂದ್ರವೃಂದವಂದಿತಪಾದಂಗೆ ಮೃದುಪದಂಗಳೊಳ್ ಕಲರವರಣಿತ ಮಣಿನೂಪುರಂಗಳಂ ತುಡಿಸಿ (ಆದಿಪು. ೭-೧೦೬ ಪ); ಅನಲಂ ರೂಪಿನ ಪಕ್ಷಪಾತದೊಳೆ ತಾನೇಟ್ಟಂದು ನೀರೇಜಗರ್ಭನ ಗೆಯ್ತಂ ಗಡಮ ಪ್ರಮಾಣಮೆನುತಂ ತಜ್ಜಾತಿ ಸಂಶೋಧನಕ್ಕನುರಾಗಂಬೆರಸಾದಮಪ್ಪಿದನೊ ಪೇಟೀಗಳೆಂತೆಂಬಂದದಿಂದೆನಸುಂ ನೂಪುರರತ್ನಕಾಂತಿ ತನುವಂ ಪರ್ವಿತ್ತು ತನ್ವಂಗಿಯಾ (ಕಾದಂಪೂ. ೪೬); ಪುಷ್ಕರಿಣಿಯಿಂ ಸರೋವರದಿಂ ಕೌತುಕಮನ ವರ್ಕಂಡರ್ಕೌತುಕ ಮಂಗಳಪುರಮನುರ್ವರಾನೂಪುರಮಂ (ಪಂರಾಮಾ. ೩-೩೪); ಸೀತೆಯ ಕಿವಿಗೆ ಕೇಳಿಸಿತ್ತೊಂದು ಕಿಂಕಿಣಿ ಕನಕನೂಪುರದ ! (ಶ್ರೀರಾಮಾ.೩೩೫-೧೦೮). ೨. [ನಾಟ್ಯ] ನೃತ್ಯದಲ್ಲಿ ಒಂದು ಭಂಗಿ; "ಕಾಲುಗಳನ್ನು ಸ್ವಸ್ತಿಕದಂತೆ ನಿಲ್ಲಿಸಿ, ಪಾದಗಳನ್ನು ಮುಂಗಾಲು ಮತ್ತು ಹಿಮ್ಮಡಿಗಳಲ್ಲಿ ರೇಚಿತ ಮಾಡುವುದು" (ಲಾಸ್ಯರಂ. ೩೨೧ ಗದ್ಯಾನುವಾದ) : ಪದಮೊಂದಂ ಕುಂಚಿತಮಂ ಪುದಿದುಂ ಪಿಂತಣ್ಗೆ ನಿಮಿರ್ದು ಹಿಮ್ಮಡದಿಂದಂ ಒದವಿ ತಾಗಲ್ಕೆ ಶ್ರಿಕಮುಮನದನಗ್ರದ ತಲದೆ ತಟ್ಟಿ ನೂಪುರಮೆನಿಕುಂ (ಲಾಸ್ಯರಂ. ೬-೪೭). [ಸಂ.]

ನೂಪುರಕ್ವಣಿತ (ನಾ). ಕಾಲುಕಡಗದ ಶಬ್ದ; ಅಂದುಗೆಯನಾದ : ಅಲ್ಲಿ ಕೆಲರ್ ನಿಜಚರಣಮಣಿನೂಪುರಕ್ವಣಿತಮಂ ಪೆಣ್ಣಂಚೆಯಿಂಚರಮೆ ಗೆತ್ತೆಳಸುವ ರಾಜಹಂಸನಂ ಕಂಡು ಕನಲ್ದು (ಮಲ್ಲಿಪು. ೩-೩೪). [ನೂಪುರ+ಕ್ವಣಿತ]

ನೂಪುರಝೇಂಕೃತ (ನಾ). = ನೂಪುರಕ್ವಣಿತ : ನೂಪುರಝೇಂಕೃತ ಮೆಸೆಯಲ್ ಚಾಪಳಕರಲೋಚನಾಂಶು ನಿಮಿರುತ್ತಿರಲ್ (ತ್ರಿಪುವಿ. ೧೧-೧೯). [ನೂಪುರ+ಝೇಂಕೃತ]

ನೂಪುರರಣಿತ (ನಾ). = ನೂಪುರಕ್ವಣಿತ : ಪಳಂಚುವ ರತ್ನಮಾಲೆಗಳೊಳಮಡಿಯಿಡುವ ರಮಣಿಯರ ನೂಪುರರಣಿತಕ್ಕೆಳಸಿ ಬರ್ಪ ಅಂಚೆವಿಂಡಿನಿಂಚರದೊಳಮುಲ್ಲಸಿತಮಾದ ಕಾಂಚೀಕ್ರೇಂಕಾರಕ್ಕುತ್ಕಂಠಂಗಳಾದ ಸಾರಸಂಗಳ ಕೂಜಿತಂಗಳೊಳಂ (ಕಾದಂಪೂ. ೬೭). [ನೂಪುರ+ರಣಿತ]

ನೂಪುರರವ (ನಾ). = ನೂಪುರಕ್ವಣಿತ : ಸೀತಾರಾಮಲಕ್ಷ್ಮಣರ್ ವೃದ್ಧನಂ ಪರ್ಯಂಕಕೆತ್ತಿ ಸಂತೈಸುತಿರೆ, ವರ್ಧಿಸಿತೊ ನೂಪುರರವಂವೆರಸಿ ಸ್ತ್ರೀಜನಾಕ್ರಂದನಂ (ಶ್ರೀರಾಮಾ. ೯೧-೩೫೮). [ನೂಪುರ+ರವ$_1$]

ನೂಪುರಾರವ (ನಾ). = ನೂಪುರಕ್ವಣಿತ : ಅವತಂಸೋತ್ಪಲತಾಡನಂ ಕನಕಕಾಂಚೀಬಂಧನಂ ನೂಪುರಾರವಝಂಕಾರಿತ ಚಾರುವಾಮಚರಣಾಘಾತಂ . . . ಚಕ್ರಿಗಿತ್ತುವಲಂಪಂ ಪ್ರಣಯಪ್ರಕೋಪಸುರತಪ್ರಾರಂಭದೊಳ್ ಕಾಂತೆಯಾ (ಆದಿಪು. ೧೨-೪೭). [ನೂಪುರ+ಆರವ]

ನೂಪುರೋಲ್ಲಪನ (ನಾ). = ನೂಪುರಕ್ವಣಿತ : ನೃಪಲೀಲಾಪರಿಷನ್ನಿ ಕೇತನಪುರೋಭಾಗಕ್ಕೆ ಸಾರ್ತಂದಳ್ . . . ನೂಪುರೋಲ್ಲಪನವ್ಯಾಜದಿನಾಗಳೇಸುವೆಸನಂ ಕಾಮಂಗೆ ಪೇಟ್ವಂದದಿಂ (ಚಂದ್ರಪು. ೫-೧೧೪). [ಸಂ.]

ನೂರಡಿ (ನಾ). ೧. ನೂರು ಅಡಿ. ೨. ಶತಪಥ.

ನೂರಡಿ ಮಾಡು = ಶತಪಥ ಹಾಕು : ವನಮಾಲಿಯು ಬಹಳ ರಾತ್ರಿಯ ವರೆಗೆ ಹೊರಬಂಕದಲ್ಲಿ ಅದೆಷ್ಟೋ ಬಾರಿ ನೂರಡಿ ಮಾಡಿಮಾಡಿ ತನ್ನ ಕೋಣೆಯ ಮನೆ ಹೊಕ್ಕನು (ಇಪ್ಪಕ. ೪೧೦).

[ನೂರು (<ನೂಱು$_2$) + ಅಡಿ$_1$]

ನೂರು 'ನೂಱು$_2$' ನೋ.

ನೂರುಕಾಲ 'ನೂರ್ಕಾಲ' ನೋ.

ನೂರುಮಡಿ 'ನೂರ್ಮಡಿ' ನೋ.

ನೂರೆರ್ದೆ (ನಾ). ೧. ನೂರು ಎದೆ. ೨. (ಆಲಂ) ಅತಿಶಯವಾದ ಧೈರ್ಯ,—ಕೆಚ್ಚು : ಅಂದಿನ ಆ ಸುಳ್ಮಾಲೆಯೋಲೆಗೆ ಮಹಾಸನ್ನಿಧಾನದ ಶ್ರೀಹಸ್ತದ ಮುದ್ರೆಯನ್ನೇ ಕಯ್ಪರೆದಂಕಿಸುವಂತೆ ನಡೆಯಿಸಿದ ನೂರೆರ್ದೆಯ ವಂಚನೆಯ ದ್ರೋಹದ ಸಿದ್ಧಿಯು (ಬೆಟ್ಟಅ. ೧೬೧-೧೬).

[ನೂರು (<ನೂಱು$_2$)+ಎರ್ದೆ]

ನೂರೆಲೆ 'ನೂಱೆಲೆ' ನೋ.

ನೂರೆಲೆಗೆಣಸು (ನಾ). ಒಂದು ಬಗೆಯ ಗೆಣಸು : ತೂನಗೆಣಸು, ಮುಡಿಗೆಣಸು, ನೂರೆಲೆಗೆಣಸು, ತುಣಗೆಣಸು, ದಂಡಾಲು (ಮೈಔಗಿ. ೩೧-೫೨). [ನೂರು (<ನೂಱು$_2$)+ಎಲೆ$_1$ + ಗೆಣಸು (<ಗೆಟಸು)]

ನೂರ್ಕಡಿ (ನಾ). ನೂರು ತುಂಡು ; ನೂರು ಚೂರು ; ಅನೇಕಾನೇಕ ಚೂರು : ಜಿತೇಂದ್ರಿಯರ ಯರ್ದೆಗೆ ಲಗ್ಗೆಯಂ ತಾಗಿ ನೂರ್ಕಡಿಗಳನ್ನೂ ಮಾಳ್ಪಾ ದುರುಳ ಕಾಮನ ಕನಕ ಕಂತುಕಾಯುಗಳಮಂ ನೆರೆ ಪೋಲ್ವ ನುಣ್ಮಡಂ ವಪ್ಪುತಿರಲು (ನವಮೋ. ೨೩-೧೮).

[<ನೂಱು$_2$+ಕಡಿ$_3$]

ನೂರ್ಕಳ (ನಾ). ಒಂದು ಬಗೆಯ ಮರ : ನೂರ್ಕಳ (ಚಾರ).—ಮಧ್ಯಮಆಕಾರದ ವೃಕ್ಷ. ಕಟ್ಟಿಗೆಯೊಳಗಿನ ಗಂಡು ಗಟ್ಟಿ ಇರುತ್ತದೆ . . . ಫಲವು ಕರೆ ಛಾಯೆಯ ಅಂಜೀರೀ ಬಣ್ಣದ್ದಾಗಿ ರುಚಿಯುಳ್ಳದ್ದಿರುತ್ತದೆ (ಕಭಾಗೆ. ೪೨). [?]

ನೂರ್ಕಾಲ, ನೂರುಕಾಲ (ನಾ). ಬಹಳ ಕಾಲ ; ಅನೇಕ ವರುಷ : ಹೊಸರಕ್ತವವರು ಹೆಮ್ಮೆಯಿಂದ ಘೋಷಿಸಿದರು—ಬಾಳು ಶಾಂತವ್ವ ನೂರ್ಕಾಲ ಉಘೇ ! ಉಘೇ ! (ಸವತಿ. ೫). **ನೂರುಕಾಲ:** ನೂರುಕಾಲ ಬಾಳು ಮಗು (ರೂಢಿ).

[<ನೂಱು$_2$ + ಕಾಲ]

ನೂರ್ಚ್ಛಾಸಿರ 'ನೂರ್ಛಾಸಿರ' ನೋ.

ನೂರ್ಛಾಸಿರ, ನೂರ್ಚ್ಛಾಸಿರ (ನಾ). ನೂರು ಸಾವಿರ ; ಒಂದು ಲಕ್ಷ : ನೂಱ ನೂರ್ಛಾಸಿರಮಂ ವಿಗುರ್ವಿಸಿ ವಿಮಾನದ ಯಾನದ ವಾಹನಂಗಳಗ್ರೇಸರಸದ್ವಿಮಾನಮುಮನರ್ಚನೆಯೊಳ್ ದೊರೆಕೊಂಡ ಚೆಲ್ವುಮಂ ಅವಗಯಿಸಿ (ಶಾಂತಿಪು. ೧೦-೨) ; ಅಂತ್ಯಲೋಪಕ್ಕೆ — ನೂರ್ಮಡಿ, ನೂರ್ಮಾತು, ನೂರ್ಛಾಸಿರಂ, ಸಾಸಿರ್ಮಡಿ, ಸಾಸಿರ್ವರ್ (ಶಮದ. ೧೯೧ ಪ್ರಯೋ). **ನೂರ್ಚ್ಛಾಸಿರ:** ತನಗೆಡೆವಿಡದತಿಚಪಲಂ ಮನಮದು ನೋಡೊಂದೆ ನೂಱು ನೂರ್ಚ್ಛಾಸಿರಮಾಯ್ತೆನೆ ಬಿಡದೆ ಪಿಡಿದು ನೃಪರಂ ಕನಲ್ಚಿ ತನ್ನಿಚ್ಛೆಗೆಯ್ವುದೊಂದಚ್ಚರಿಯೇ (ಕಾದಂಪೂ. ೫೫೯) ; ಸಂಖ್ಯೆಗೆ— ಇರ್ಚ್ಛಾಸಿರಂ, ಎಣ್ಛಾಸಿರಂ, ನೂರ್ಚ್ಛಾಸಿರಂ, ಪದಿನೆಣ್ಛಾಸಿರಂ (ಶಮದ. ೧೪ ಪ್ರಯೋ). [<ನೂಱು$_2$+ಸಾಸಿರ]

ನೂರ್ಮಡಿ, ನೂರುಮಡಿ, ನೂಱುಮಡಿ (ನಾ). ನೂರರಷ್ಟು ; ನೂರು ಪಟ್ಟು : ಗಂಡಗಾಡಿ ನೂರ್ಮಡಿ ಮಿಗಿಲಾದುದಾ ರಥಮನೇಱಲೊಡಂ ಪಡೆಮೆಚ್ಚೆ ಗಂಡನಾ (ಪಂಪಭಾ. ೮-೧೦೧); ಸಿರಿ ಪರುಸ ಕಲ್ಪತರು ಸುರಧೇನುಗಳು ಬಂದ ಹರುಷದಿಂ ನೂರ್ಮಡಿಯೆನಿಪ್ಪ ಸಂತಸದಿಂದ . . . ನಲಿದು ಬೆಸಸುವುದು (ತಿರುರ. ದೇ. ೧೧-೮) ; ಮದಗಜಗಮನೆಯರಡಿಯಿಟ್ಟು ನೂರ್ಮಡಿ ಮದನನ ನೋಡಿದರೊಸೆದು (ಭರಣಿ. ೨೧-೭೫) ; ನಿಡುತೋಳ ಬಲ ನೂರ್ಮಡಿಯಪ್ಪುದು ನುಡಿ ತಾಯೆ, ನಿನ್ನಯ ನುಡಿಬಲದಿ (ವಿಸೀಗೀ. ೫೧-೫). **ನೂರುಮಡಿ :** ಅವನಿಯೊಳು ದಶಕಂಠ ಮೊದಲಾದವರುಗಳ ವಿಕ್ರಮಕೆ ನೂರುಮಡಿಯಹನು ಕೇಳ್ಯೆ ಶುಂಭದಾನವನೆಂದನಾ ಮುನಿಪ (ದೇವೀಮ. ೫-೨೦) ; ನಾನೀ ಪೊಳ್ತು ತೊರೆವ ರಾಜ್ಯಕೆ ನೂರುಮಡಿ ಶಾಶ್ವತದ ಸಿರಿಯ ಸಾಮ್ರಾಜ್ಯಮಹುದೆನಗೆ (ಶ್ರೀರಾಮಾ. ೮೧-೯೫). **ನೂಱುಮಡಿ :** ಸೀತೆಗೆ ಜಾಹ್ನವಿಗೆ ರವಿಸತಿಗೆ ನೂಱುಮಡಿ . . . ಗಂಗಾಯಿ (ಬಸಪು. ೪-೩೦) ; ತೋಱಿದನು ತಾ ಬಳಿಕವಗೆ ಹದಿನಾಱು ಬಣ್ಣದ ಪುಟದ ಚಿನ್ನಕೆ ನೂಱುಮಡಿಯೆನೆ ಹೊಳೆ ಹೊಳೆವ ಹೊಮ್ಮಱಿಯ ರೂಪಕವ (ತೊರರಾ. ೩-೮-೧೪); ಮುಂದೊರ್ವ ವೀರಶೈವಾಚಾರ್ಯನೀ ಧರೆಗೆ ಬಂದಿದಕೆ ನೂಱುಮಡಿಯಾಗಿ ಬೆಳಗಂ ತೋರ್ಪನೆಂದು ಸೂಚಿಸುವಂದದಿಂದುದಯಶೈಲಾಗ್ರದೊಳ್ ದಿನಪನುದಯಿಸಿದನು (ಚೆಬಪು. ೪-೭).

ನೂರ್ಮಡಿ ಅಯ್ಯ ಹರಸಂ = ಒಂದು ಬಿರುದು (?) : ಬಿನ್ನವುರಂ ೧೨ಱೊಳಗಣ ಕುಳುವನೂರುಂ ನಿಟ್ಟಾರವೆಯನಂತೆರಡೂವನೆ ಖಚಾಯೆಲೆ ಕುಡುವ ನೂರ್ಮಡಿ ಅಯ್ಯ ಹರಸಂ ಬರ್ಮ್ಮಿಸೆಟ್ಟಿಗೆಗೊಟ್ಟ ಶಾಸನದ ಪೊಲದ ಸೀಮೆ (ಎಕ. XI, ದಾವಣ. ೧೯-೧೨ ; 1043). **ನೂರ್ಮಡಿ ತೈಲ** = ರನ್ನನ ಪೋಷಕನಾಗಿದ್ದ ಕಲ್ಯಾಣ ಚಾಲುಕ್ಯವಂಶದ ಸ್ಥಾಪಕನಾದ ತೈಲಪಚಕ್ರವರ್ತಿಯ ಒಂದು ಬಿರುದು ; ೫ ತೈಲಪನ ಪರಾಕ್ರಮದ ನೂರರಷ್ಟು ಶೌರ್ಯವುಳ್ಳವನು ಎಂಬರ್ಥದ ಒಂದು ಬಿರುದು (?) : ನೂರ್ಮಡಿ ತೈಲನ ಪಡೆವಳ ತೈಲಪನ ಜನನಿಗೆಣೆ ಪೆಱರೊಳರೇ (ಅಜಿಪು. ೧-೫೧) ; ಆ ಸತ್ಯಾಶ್ರಯ ಕುಳದೊಳಿಳಾಸುದತೀಶಂ ಪ್ರತಾಪಿ ನೂರ್ಮ್ಮಡಿತೈಲಂ ವಾಸದ ವಿಭವಂ . . . ಸಕಳಧಾತ್ರಿಯನಾಳ್ದಂ (ಇಆ. V, ೧೫-೧೧ ; 1019).

[<ನೂಱು$_2$+ಮಡಿ$_3$]

ನೂರ್ಮಡಿಸು (ಕ್ರಿ). ೧. ನೂರು ಪಟ್ಟು ಹೆಚ್ಚಾಗು : ರುಕ್ಮಿಣಿಗದೊರ್ವಳ್ ಕಟ್ಟಿದಳ್ ರತ್ನನೂಪುರಮಂ ತತ್ಪದಕಾಂತಿ ನೂರ್ಮಡಿಪಿನಂ ಮಂಜೀರಕಾಕಾಂತಿಯಿಂ (ಜಗವಿ. ೧೦-೧೧೦) ; ಪನ್ನೀರು . . . ಬೀಸಣಿಗೆ ಮುಂತಾದ ಸನ್ನಾಹದೊಳು ಸತಿಪುರುಷರಿದ್ದರು ಮೈಗೆ ಮುನ್ನಿನ ಕಾಂತಿ ನೂರ್ಮಡಿಸೆ (ಭರಣಿ. ೧೦-೧೩೨) ; ಸಸ್ಯ ಮೃಗಪಕ್ಷಿಗಳ್ ಸಂತಸದಿ ಪೆರ್ಚಿದುವು; ಇರ್ಮಡಿಸಿ ಮೂರ್ಮಡಿಸಿ ನೂರ್ಮಡಿಸಿದುದು ಪೈರುಪಚ್ಚೆ (ಚಂದ್ರಸ. ೫೯-೨೩). ೨. ನೂರುಪಾಲು ಹೆಚ್ಚಿಸು ; ನೂರರಷ್ಟು ಅಧಿಕಗೊಳಿಸು ; ನೂರುಪಟ್ಟು ಹೆಚ್ಚು ಮಾಡು : ಆ ಭುವನ ನಾಭಿಯೆನಿಸಿದ ನಾಭಿಮಹೀಭುಜಭುಜಾಂತರಾಳಂ ಲಕ್ಷ್ಮೀವ್ಯಾಭಾಸಿ ಮತ್ತಮತಿಶಯಶೋಭೆಯನಾ ಕಾಂತೆಯಿರವಿನೊಳ್ ನೂರ್ಮಡಿಕುಂ (ಆದಿಪು. ೬-೮೭) ; ನೇತ್ರ ನೀಲೋತ್ಪಲದ ನೆಟಿಲ ಬಂಬಲ್ಗಳಿಂ ನೆಯ್ದಿಲಂ ನೂರ್ಮಡಿಸುತ್ತುಂ . . . ಪೊಕ್ಕುದಬ್ಜಾಕರಮನೊಲವಿನಿಂ ಕಾಂತಕಾಂತಾಕದಂಬಂ (ಲೀಲಾವ. ೧೩-೧೧೬); ವೈಶ್ರವಣಂ ನಿರ್ಮಿಪ ರೈವೃಷ್ಟಿಯೊಳಾದ ಪೆರ್ಮೆಯಂ ನೂರ್ಮಡಿಪಂತಾ ವರ ದಿವಿಜಸ್ತ್ರೀರತ್ನಾವಳಿ ದಿವದಿಂದಮಿಳಿದುದಿಳೆಗುಜ್ವಲಿತಂ (ಪರ್ಧಪು. ೧೩-೫೧).

[ನೂರ್ಮಡಿ+ – ಇಸು$_3$]

ನೂರ್ಮಾತು (ನಾ). ಹೆಚ್ಚುಮಾತು ; ಬಹಳ ಮಾತು : ಅಂತ್ಯಲೋಪಕ್ಕೆ—ನೂರ್ಮಡಿ, ನೂರ್ಮಾತು, ನೂರ್ಛಾಸಿರಂ (ಶಮದ. ೧೯೧ ಪ್ರಯೋ). [<ನೂಱು$_2$+ಮಾತು$_1$]

ನೂರ್ಮೆ (ನಾ). ನೂರು ಸಲ ; ನೂರು ಬಾರಿ : "ನೂರ್ಮೆಯೆನಲ್ ಶತವಾರ ನಾಮದೊಳ್" (ಕರ್ಣಾನಿ. ೮೫) ; ಈ ಮುನಿಪುಂಗವರೊಂದು

ಮಾರ್ಗವಂ ಕರಮುತಿಭಕ್ತಿಯಿಂ ನಿಲದೆಯುಣ್ಬುದು ನೂರ್ಮೆಯುಮಂತೆ ಸಾವೊಡಂ ಪರಿಹರಿಸಲ್ಕೆವೇಬ್ಕುಮಳಿವಿಲ್ಲದೆ ನೋಡ ಸಮಸ್ತ ವಸ್ತುವಂ (ಧರ್ಮಾಮೃ. ೪-೯೨) ; ನೂರ್ಮೆ ಪಡು ಕಜಿವುದಂ ತಾನೊರ್ಮೆಯೆ ಕಜಿವೆರ್ಮೆಯಲ್ಲದಟಾಯೆರ್ಮೆಗಳೀ ಯೆರ್ಮೆಗಳೊಳಗಿಲ್ಲೆನಿಸಿರ್ದರ್ಮೆಯು ಪಿಂಡುಗಳಿನೊಪ್ಪುಗುಂ ಕೆಲವೆಡೆಯೊಳ್ (ಕಾವ್ಯಾನ. ೩೫೦) ; ನಿನ್ನ ಹೆಸರಂ ಕೊಂಡು ನಿಂದೆನಿದೊ ಸಿಡಿಗುಂಡು ನೂರ್ಮೆ ಮಾರ್ಮೊರಸೆ ಕಾರ್ಮೊಳಗನುರ್ವರೆಯಿಂ (ಗಿಳಿವಿಂ. ೭೦-೩). [< ನೂಱು₂ + -ಮೆ₂]

ನೊಲ್₁, ನೂಲು₁ (ಕ್ರಿ). ೪ ನೂತ₁ (ಭೂತಕೃ) ; ನೂತು (ಭೂತನ್ಯೂ) ; ಎಳೆತೆಗೆ ; ದಾರತೆಗೆ : "ನೂಲ್—ತಂತುಕರಣೇ (ನೂಲು) ತಂತುಮಾತ್ರೇ ಚ" (ಕಪುಧಾ) ; ನೂತ ನೂಲೆಟೆಯಲ್ಲಿ ನಿಚಯಂಗಳಲ್ಲಿ ತಂತುವದು (ಪುಂಗರಾ. ೧೫೪-೩೩). **ನೂಲು₁** : ಎಣಿಸಿಕೊಂಡೇಳ್ದಂಜಿಯ ನೂತರೆ ಮುನಿಯದ ಸಾಲವು ತೀರ್ದತೇ (ಪುರಂದ. ೧-೧೫೩-೩) ; ನೂತಳದಾವ ಸುಜಾತೆಯೊಳ್ಳೆದೆ ಪುರಾತನದಾವ ಕೋವಿದನೊ ಶ್ವೇತವಸ್ತ್ರವ ತೊಳೆದಪಗನದಾರೆಂದು ಭೂತೇಶ ಬಲ್ಲ ನಾನಜ್ಞಯೆ (ನೋಹತ. ೨೩-೩೦) ; ನೂತುದೆಲ್ಲಾ ಹಂಜೆಯಾಯ್ತೆ ? ಆಳಿನಾ ಕಂದ ಸೋತೆ ನಿನ್ನಲಿ (ಹಬ್ಬೆರ. ೫-೩೯) ; ಅಜ್ಜಿ ನೂತದ್ದೆಲ್ಲಾ ಅಜ್ಜನ ಉಡಿದಾರಕ್ಕೇ ಸರಿ (ಗಾದೆ).

[ದೇ.।। ತಮಿ. ನೂಲ್, ; ಮಲ. ನೂಲ್ಕ ;
ತುಳು. ನೂಪು, ನುಪ್ಪು ; ಕುಯಿ. ನೋಲ್ಪ]

ನೊಲ್₂, ನೂಲು₂ (ನಾ). ೧. ಎಳೆ ; ಸೂತ್ರ ; ತಂತು ; ದಾರ : "ನೂಲ್—ತಂತುಕರಣೇ (ನೂಲು) ತಂತುಮಾತ್ರೇ ಚ" (ಕಪುಧಾ) ; ಬಿಳಿಯ ತಾವರೆಯೆಳಗಾನಿನಸಿಯ ನೂಲೊಳ್ ಕೋದ ತೋರಮಲ್ಲಿಗೆಯ ಬಿರಿಮುಗುಳ ಸರಿಗೆಯುಮಂ ಕಪ್ಪುರವಳುಕಿನ ಲಂಬಣಮುಮಂ ತೊಟ್ಟು (ಪಂಪಭಾ. ೫-೬೫) ; ವಜ್ರಾಯುಧನ ದಿಕ್ಕರಿಕರಾಕಾರವಾಹುಪರಿಘಯುಗಳಮಂ ತಾಮರೆಯ ನೂಲೊಳಾನೆಗಟ್ಟುವಂತೆ ಕಟ್ಟ (ಕಾಂತಿಪು. ೮-೪೯ ಪ) ; ಪಾಲ್ ಕೆಚ್ಚಲೊಳ್ ತಣಪು ಊಟದೊಳ್ ನೀರೆ ನೂಲೊಳ್ . . . ಪುಟ್ಟುವಂತೆ . . . ಮಹಾವ್ರತಂಗಳುಂ ಜಿನಮತದೊಳ್ ಪುಟ್ಟುಗುಮಲ್ಲದೆ ಪೆಜವು ಕುಮತಂಗಳೊಳ್ ಪುಟ್ಟವು (ಧರ್ಮಾಮೃ. ೪-೧೩) ; ಆ ಮನೆಯವರು ಪೂಗಟ್ಟುವಂದಮಂ ನೋಡಿ ತಾನುಮೊಂದು ನೂಲಂ ಕೊಂಡು ನಾನಾವಿಧ ಚಿತ್ರಬಂಧದ ಮಾಲೆಯಂ ಸಮೆವ ಹಸ್ತಕೌಶಲ್ಯಮಂ ಕಂಡು (ಜೀವಸಂ. ೩೦೪-೪೬ ಪ). ೨. ಒಡ್ಯಾಣ ; ಡಾಬು ; ಉಡೆನೂಲು ; ಕಟಿಸೂತ್ರ : ಉಡೆ ಜೋಲಲ್ ನೂಲ್ ಸಡಿಲಲ್ ಮುಡಿ ಪಜೆಯಲ್ ಹಾರಲತೆಯನಕ್ಕಾವಳಿಯಂ ಪಿಡಿವಂತೆ ಪಿಡಿದು ತುರಿಪಡೆ ನಡೆತಂದಳ್ ಕಾಮಯೋಗಿನೀವಿಭ್ರಮದಿಂ (ಕಾದಂಪು. ೪೮೦) ; ಸ[ರಿ]ಗೆಗೆ ಸೇತಮಾಲೆಗೆ ಬೆದಂಗಿನ ಕನ್ನವುರಕ್ಕೆ ನೂಲ್ಗೆ ನೂಪುರನಿಕರಕ್ಕೆ ತೋಳ್ವಲೆಗೆ ಮಲ್ಲಿಗೆಗಿಂತವು ತಕ್ಕವೆಂದು ಸೌಂದರಯ[ರ್] . . . ಆಯ್ದು ಪಂಕುರ[ಕು]ಮುದಪ್ರಸೂನಫಲಪಲ್ಲವಸಂತತಿಯಂ ವನಾಂತದೊಳ್ (ಪಧರ್ಮಾ. ೪-೬೯). ೩. ಬಡಗಿಗಳು ಮರವನ್ನು ಕೊಯ್ಯುವಾಗ ಬಣ್ಣ ಬಳಿದ ದಾರದಿಂದ ಹಾಕಿಕೊಳ್ಳುವ ಗುರುತು : ಕಳಗಸಿಗರೊಂಮ ಭಾಗಂಬರಂ ಸೀಟ್ಟು ನೂಲ ತಲೆಯೊಳ್ ಕೀಲಂ ಬಿಟ್ಟದ ಮರನಂ ಕಂದದಜ ಮೇಲೆ ಕುಳ್ಳಿರ್ದು (ಪಂಚತಂ. ೩೦-೫). **ನೂಲು₂** : ೧. ತೆರನಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ ತನ್ನ ನೂಲು ತನ್ನನೇ ಸುತ್ತಿ ಸುತ್ತಿ ಸಾವ ತೆಜನಂತೆ (ಮಹಾದೇ. ಬ. ೧೫-೧೬) ; ಪರಿವಿಡಿಗಳಿಂ ತನ್ನ ನೂಲಿಂ ತೆರೆಯವೊಲು ಮೇಲ್ಮುಟ್ಟನಂದದಿ ಪರಿವ್ಯತೋನ್ನತವೃಕ್ಷಗುಲ್ಮಲತಾತೃಣಂಗಳಲಿ ಹುರಿಗೊಳಿಸಿ (ಬಸಪು. ೧೪-೩೪) ; ರಸರೂಪಗಂಧ . . . ನೂಲಿನೊಳು ಸಾಧುಜನದೊಳು ಸಲಿಲದೊಳೆಸೆವ ಬಿಲ್ದೆರುವಿನೊಳು-ಮುಮ್ಮುದೊಳು ಶೌರ್ಯದೊಳು ಪರಮನೊಳು ಗುಣ ಮೆನಿಕ್ಕುಂ (ಪುಂಗರಾ. ೧೪೭-೩೭) ; ಕಲಹವಿಲ್ಲದೆ ನೂಲಿನೆಳೆಯಲಿ ತಲೆಯನರಿವ ವಿರೋಧಿರಾಯರನಳುಕಿಸುವ . . . ನುಂತ್ರಿಗಳು ಸುಜಿತರು ಪಾಮಭಾಗದಲಿ (ಕುನ್ಯಾಉ. ೪-೩೫) ; ಹಾಸಾದ ಮಿಂಚಿನಂದ ಬೀಸಿದ್ದ ಸೆರಗಿನಿಂದ ಸೆಳೆದಂತೆ ಎರಡು ನೂಲು ಉಳಿದಾವ ನಾಕು ಸಾಲು (ಗಂಗಾತ. ೨೧-೩) ; ತಾಯಿಯಂತೆ ಮಗಳು, ನೂಲಿನಂತೆ ಸೀರೆ (ಗಾದೆ). ೪. ಒಂದು ಅಳತೆಯ ಪ್ರಮಾಣ ; ಇದರ ಎತ್ತರವನ್ನು ಒಂದು ನೂಲು ಕಡಿಮೆ ಮಾಡು (ಮಾಪಿ). ೫. ಬಟ್ಟೆ ; ವಸ್ತ್ರ : ನಾಣ ಮುಜಿಯ ನೂಲು ಸಡಿಲೆ ನಾಚುವರು ನೋಡಾ ಗಂಡು ಹೆಣ್ಣೆಂಬ ಜಾತಿ (ಮಹಾದೇ. ಬ. ೬೪-೧೫೪) ; ನಾಣ ಮುಜಿಯ ನಾಚಿಕೆ ಒಂದು ನೂಲ ಮುಜಿಯಲಡಗಿತ್ತು (ಅವಚಂ. ೬೪-೬೩೦). ೬. ನೂಲಿನ ಮೇಲೆ ಹಾಕುವ ಒಂದು ಬಗೆಯ ತೆರಿಗೆ : ಮುಗ್ಗತೆಜ್ ಹೊಗೆದೆಜ್ ಲವಣ ಪಣ್ಣುಕಾರುಕಳಳು ಕೈಬಣ್ಣ ನೂಲು ಕಟ್ಟುಗಳ ದಳಮಿಡಿ ಹೆನೆಯಕುಳ ಮುಮ್ಮಿಪಾದ ಸರ್ವ ಆಯವನೂ ಆ ಜೊಡನಾಥದೇವರಿಗೆ ಸಬ್ಬಮಾನ್ಯಂ ಮಾಡಿ ದಾರಾಪೂರ್ವಳವಾಗಿ ಬಿಟ್ಟು ಧಾರೆಯನೆಜ್ದೆವು (ಎಳ. IX, ಚನ್ನಪ. ೬೬-೧೪ ; 1288).

ನೂಲ ಕಂಕಣ = ನೂಲಿನ ಎಳೆಯಿಂದ ಮಾಡಿದ ಕಂಕಣ : "ಕಂಕಣಂ, ಹಸ್ತಸೂತ್ರಂ, ಪ್ರತಿಸರಂ—ಈ ೩ ನೂಲ ಕಂಕಣಂ" (ಹಲಾಯು. ೪೨-೪೨೪). **ನೂಲ ಕುಕ್ಕಡಿ** = ರಾಟೆಯಲ್ಲಿ ನೂತು ಕದಿರಿಗೆ ಸುತ್ತಿದ ನೂಲಿನೆಳೆಯ ಉಂಡೆ : "ಕಂಡಿಕಾ = ನೂಲ ಕುಕ್ಕಡಿ" (ಕಾಶಕ್ಯ. ೧೨೧). **ನೂಲ ತೊಂಗಲ್** = ಗೆಜ್ಜೆಗಳುಳ್ಳ ನಡುಕಟ್ಟು ; ಕಟಿಸೂತ್ರ : "ನೂಲ ತೊಂಗಲೆಂದು ಕಟಿಸೂತ್ರಂ" (ಕಕಸಾ. ೨೨-೪೧೪) ; ಒದವಿದ ನೂಲ ತೊಂಗಲುಲಿಯಿಲ್ಲದೆ ಪೀನ ನಿತಂಬಮಾರವಿಲ್ಲದೆ ಕುಡ ಮಂಡಳಂ ಪಲವುಮಂದದ ಚಂದದ ಚಿನ್ನ ಪೂಗಳಿಲ್ಲದೆ ಲುಳಿತಾಳಕಂ ಕ್ವಣಿತ ನೂಪುರವಿಲ್ಲದೆ ಪಾದಪದ್ಮವೊಪ್ಪದಪುದು. ನೋಡ ರೂಪಿನಿತು ಬೇಸ ಜೊಳಂ ಸೊಗಯಿಪ್ಪುದೀಕೆಯಾ (ಅದಿಪು. ೩-೪೪). **ನೂಲ ತೊಡವು** = ನೂಲಿನ ಆಭರಣ : ರತ್ನದ ತೊಡವಿನ ನೂಲ್ ತೊಡವಿನ ಸೊಡರಿನ ಕಾಟ್ಕಿಚ್ಚಿನ ರಕ್ಷೆಯಂತರಿದುಮೇಳಿದಮುಮುಕ್ಕುಂ (ಧರ್ಮಾಮೃ. ೧೧-೧೪೪). **ನೂಲ ತೋಡಾಗು** = ದಾರದೆಳೆಗಳು ಹಾಸುಹೊಕ್ಕಾಗಿ ಹೊಂದಿಕೊಳ್ಳುವಂತೆ ಹೊಂದಿಕೊಳ್ಳು : ಮುನ್ನ ನೂಲ ತೋಡಾಗದ ಕೆಟ್ಟು ಪೋದವರನಂ ಮಗುಟ್ಟುಂ ನಿಜುಪಂತು ಬೆಳ್ಳನೇ (ಪಂಪಭಾ. ೯-೪೬) ; "ನೂಲ ತೋಡಾಗದೆ = ಹರಿದ ನೂಲಿನಂತೆ ತಿರುಗಿ ಸೇರದೆ" (ಪಂಪಪೀ. ೩೧೪). **ನೂಲ ನೆಯ್ಗೆ** = ನೂಲನ್ನು ನೇಯುವಿಕೆ : ಊತ ನ್ಯೂತ ಇವು ನೂಲ ನೆಯ್ಗೆಯಲ್ಲಿಯೂ ಹೊಲಿಗೆಯಲ್ಲಿಯೂ ವರ್ತಿಸುಗು (ನಾಟರಾ. ೬) ; 'ಊಯಿಾ — ತಂತುಸಂತಾನೇ, ನೂಲ ನೆಯ್ಗೆಯೊಳ್" (ಕಾಶಕ್ಯ. ೧೧೦). **ನೂಲ ಪಬ್ಬ, ನೂಲ ಹಬ್ಬ** = ಶ್ರಾವಣಮಾಸದಲ್ಲಿ ಬರುವ ಒಂದು ಉತ್ಸವ; ☞"ಪಟಗಾರರು ರೇಷ್ಮೆನೂಲಿನಲ್ಲಿ ಏಳು, ಒಂಬತ್ತರಂತೆ ಮೆಣಸಿನ ಕಾಳುಗಳನ್ನು ಕಟ್ಟಿ ಕೊಟ್ಟರುತ್ತಾರೆ. ಹೋಮ ಹವನಾದಿಗಳ ಬಳಿಕ ಅದನ್ನು ಜನಿವಾರದ ಹಾಗೆ ದೇವಿಗೆ ಏರಿಸಬೇಕು. ನೂಲ ಹಬ್ಬವನ್ನು 'ಕಕ್ಕೆ ಹುಣ್ಣಿಮೆ' ಎಂದೂ ಕರೆಯುವುದುಂಟು" (ಗ್ರಾಮಜೀವನ. ೧೫೫) : ಆಯನ ಮಗಂ ರುದ್ರಿಸುಯ್ಯಂ ದೇವರ ನೂಲ ಪಬ್ಬಕ್ಕೆ ಕೊಟ್ಟ ಗದ್ಯಾಣ ೧ (ಕಇ. II, ೯-೨೧ ; 1075) ; ಆಷಾಢಮಾಸದ ನೂಲ . ಪಬ್ಬದ ವುಪ್ಪಾರ ಗದುಗೆಯ ಪಟ್ಟಣಗೂಡಿ (ಎಳ. VI, ಕಡೂರು. ೪೯-೫೭ ; 1291) ; ಮುಂಗುಳ ಭತ್ತ ನೂಲ ಹಬ್ಬಕ್ಕೆ ಮನೆಯಲೊಂದು ಕಳಹು (ಎಳ. V, ಹಾಸನ. ೬೬-೪೭ ; ಸು. 1170 ?) ;

ಮಾಡಳೆ ಮಗಳು ಕರ್ಣಾವತಂಸವನೊತ್ತೆಯಿಟ್ಟಾ ನೂಲ ಹಬ್ಬವನು (ಬಸಪು. ೪೨-೧೧). **ನೂಲ ಪರ್ವ** = ನೂಲ ಪರ್ಬ : ಆಶಾಡ ಶುದ್ಧ ಏಕಾದಶಿ ಬುಧವಾರದ ನೂಲ ಪರ್ವ್ವದಲು (ಮೈಅರಿ. ೧೯೩೪, ೧-೪೪; 1174). **ನೂಲ ರಕ್ಕೆವಣಿ** = ನೂಲಿನ ರಕ್ಷಾಮಣಿ : ರೋಚನದಿಂ ರಂಜಿಪ ನೂಲ ರಕ್ಕೆವಣಿಗಳ್ ಚೆಲ್ವಾಗೆ . . . ಮಱಲ್ದೆಸೆವ ತೂಗುಂದೊಟ್ಟಲೊಳ್ ಪಟ್ಟ ಪುತ್ರನ ವಕ್ತ್ರೇಂದುವನಂಜನಾಂಕಿತಮನಾ ನಿನ್ನೆಂದು ಪೇಟ್ ಕಾಣ್ಬೆನೋ (ಕಾದಂಪೂ. ೩೫೫). **ನೂಲ ವರ್ತಿ** = ಅರಳೆಯ ನೂಲನ್ನು ಹೊಸೆದು ಮಾಡಿದ ಬತ್ತಿ; ದಾರದ ಬತ್ತಿ: ಬಳ್ಳಿಯ ಮಾಟವುಳ್ಳ ಸಮರಾಕಾಂತ ವರ್ತುಲಮಪ್ಪಯೆಣ್ಣೆವುಳ್ಳವದಾವು ದಂತದೊಂದುಂಟಲಾ ಪಾತ್ರವದಱಲ್ಲಿಯತ್ಯಂತವೆನೆ ನೂಲ ವರ್ತಿಯೊಳು ಸಾಗಿಸೆ ಪಟ್ಟುದೆಂಬುದೀ ಪರಿಯದಾಗಿ (ವೀಶೈಪು. ೫-೨೦-೨೬). **ನೂಲ ಸೀರೆ** = ನೂಲಿನ ಸೀರೆ ; ಹತ್ತಿ ಸೀರೆ : "ಕಾರ್ಪಾಸ, ಬಾದರಂ—ಈ ೨ ನೂಲ ಸೀರೆ" (ನಾಚಿರಾ. ೧೨೩). **ನೂಲ ಸುತ್ತು** = ನೂಲನ್ನು ವರ್ತುಲಾಕಾರವಾಗಿ ಸೇರಿಸು: ರಕ್ಷೆಗೆ ಪಂಚವರ್ಣದ ನೂಲ ಸುತ್ತುವ ಮಂತ್ರಮಂ . . . ಬೇಱೆಬೇಱೆ ವಿವರಿಸಿ ದೇವೇಂದ್ರಮುನೀಂದ್ರರು ಪೇಟ್ಟಪರು (ಬಾಲಚಿ. ೧೨೪-೧೦). **ನೂಲ ಸೆಜ್ಜೆ** = ಹತ್ತಿಯಿಂದ ಮಾಡಿದ ಹಾಸಿಗೆ : ಎಡೆಗೊಟ್ಟು ದೇವಸಮಿತಿಗೆ ಬಿಡದನಿಲತ್ರಿತಯವೃತ್ತಿಯಿಂದೆ ತ್ರಿಜಗಂ ಕಡೆದೋಱದಿರ್ಪ ಗಗನದ ನಡುವಿರ್ಪುದು ನೂಲ ಸೆಜ್ಜೆಯಂ ನೇಱುದವೋಲ್ (ಪಾರ್ಶ್ವಪು. ೧-೯೮). **ನೂಲ ಹದಿಕೆ** = ನೂಲಿನ ಮೇಲೆ ಹಾಕುವ ತೆರಿಗೆ : ವಣಖಾಣನಿಬನ್ಧಿ ನೂಲ ಹದಿಕೆ ಅಡಕೆಯ ಸುಂಕ (ಎಕ. VI, ತರೀಕೆ. ೨೦-೨೯ ; 1185). **ನೂಲ ಹರಿಗೆ** = ಹುರಿಯಿಂದ ಮಾಡಿದ ಗುರಾಣಿ : ನೂಲ ಹರಿಗೆಯ ಹೆಗಲ ಬಾರಿಯ ತೋಳ ತೋರಿಯ ಲೌಡಿಗಳ . . . ಛಲದಂಕರಾವುತರೊತ್ತಿ ನೂಕಿದರು (ಕುವ್ಯಾಭೀ. ೪-೫೬) ; ಭರದಿನಾಲಗಳ ತಿಟ್ಟಿಗೆ ಬಂದು ನಿಂದು ಬದ್ದರದ ಮಱೆಯೊಳ್ನೂಲ ಹರಿಗೆಯಂ ಹಿಡಿದು (ಸಮ್ಯಕೌ. ೮-೩೧) ; ಖೇಡೆಯ ನೂಲ ಹರಿಗೆ ತರಕಸ ಸಿಂಗಾಡಿಗಳನು ಹಾಯ್ಕಿ ಬೇಗ ಪಾಡಳಿದಿಳಿಯ ಬಿದ್ದರು ಕಾಲವರು (ಕುರಾಸಾಂ. ೩೯-೨೫). **ನೂಲ ಹುಣ್ಣಿಮೆ** = ಶ್ರಾವಣಮಾಸದಲ್ಲಿ ಬರುವ ಹುಣ್ಣಿಮೆಯ ಹಬ್ಬ ; ನೂಲ ಹಬ್ಬ: ನಿನಗೆ ಇನ್ನು ನಾಳಿನ ನೂಲ ಹುಣ್ಣಿಮೆಗೆ ೧೬ ತುಂಬತದೆ (ಸಂಪಿಗೆ. ೧೪). [<ನೂಲ್$_1$. / ತಮಿ. ಮಲ. ಕೋತ. ಕೋಲಾ. ಗೊಂಡಿ. ಪರ್ಜಿ. ನೂಲ್ ; ತುಳು. ತೆಲು. ನೂಲು ; ಕುಇ. ನೂಡು ; ಕುವಿ. ಲೂಲೂ, ಲೋಲು]

ನೂಲಿಗ (ನಾ). ೧. ವಿಷವಿಲ್ಲದ, ನೂಲಿನಂತಿರುವ ಹಸಿರು ಬಣ್ಣದ ಹಾವು; "ಹಸರುಹಾವು" (ಜಾನಕೋ. ೧೨). 'ಹಸರು ನೂಲಿಗ' ಪರಾ. ೨. ಒಂದು ಬಗೆಯ ವಿಷಸಸ್ಯ : (ಕಿ).

[<ನೂಲ್$_2$]

ನೂಲಿಸು (ಕ್ರಿ). ನೂಲುವಂತೆ ಮಾಡು : ಸತಿಯ ಕೈಯಿಂ ನೂಲಿಸಿ ನೂತ ನೂಲಂ ಮಾಱಿ ಸತಿ ಬೀಯಮಂ ತರಲು ವೋತು ಲಿಂಗಾರ್ಪಣವ ಮಾಡಿಕೊಂಡಿರುತಿರಲು (ಗುರುಜಾ. ೧೪-೨). [ನೂಲ್$_1$ + -ಇಸು$_3$]

ನೂಲು$_1$ 'ನೂಲ್$_1$' ನೋ.

ನೂಲು$_2$ 'ನೂಲ್$_2$' ನೋ.

ನೂಲುಂಡೆ (ನಾ). ದಾರದ ಉಂಡೆ ; ನೂಲಿನ ಉಂಡೆ : ತಲೆಯ ನಮಿ[ವಿ]ರುಚ್ಚುತಿರೆ ಮೇಣ್ಸಲೆ ನೂಲುಂಡೆಯನೆ ಸುತ್ತುವಂತಿರೆ ಕೈಗಳ್ ಕೆಲಕೆಲ್ಲಂ ಪೊಡವಡುತಿರೆ (ಕಲ್ಯಾಕಾ. ೨-೧) ; ಕಿಱುನಾಯ್ಗಳ ಬಾಯ್ಗಳಿಂದೆ ನೂಲುಂಡೆಯನಿಟ್ಟವೋಲ್ ಮಿಡುಕುತುಂ ಪರಿದಾಡಿದುದೊಂದು ಪೆರ್ಮೊಲಂ (ಸೂಕ್ತಿಸು. ೩-೧೨೧) ; ಬೆಣ್ಣೆಯ ಬೆರಸಿದ ಹಿಟ್ಟುಮಂ ತೊಡೆದು ನೂಲುಂಡೆಯಂದದಿ ಸುತ್ತಿ ಸಟ್ಟಯೊಳಗೊತ್ತಿ ಪೇಣಿಯ ಮಾಡಿ (ಸೂಪಶಾ. ೧-೫೦). [ನೂಲ್$_2$ + ಉಂಡೆ]

ನೂಲುಕಂಡಿಕೆ (ನಾ). ಲಾಳಿಯಲ್ಲಿ ಸೇರಿಸುವ ದಾರದ ಉಂಡೆ : ವೇಮಾ, ವಾಯದಂಡಃ – ೨ ನೂಲುಕಂಡಿಕೆಯನಿರಿಸಿ ನೇಯುವ ಕೊಳವಿಯ ಪೆಸರು (ಸಿದ್ಧಾಂತಿ. ೩೧೪).

[ನೂಲು$_2$ (< ನೂಲ್$_2$) + ಕಂಡಿಕೆ$_1$]

ನೂಲುಗಟ್ಟು 'ನೂಲ್ಗಟ್ಟು' ನೋ.

ನೂಲುಗುಂಡು (ನಾ). ದಾರದ ತುದಿಗೆ ಕಟ್ಟ ತೂಗುಬಿಟ್ಟ ಕಲ್ಲು,—ಗುಂಡು; ನೂಲುಮಟ್ಟ : ಅವನ ಕೈಯಲ್ಲಿ ನೂಲುಗುಂಡು (Plumbline) ಎಂಬೊಂದು ಸಾಧನವಿದೆ (ಬಾಲಪ್ರ. III, ೧೩೬೮).

[ನೂಲು$_2$ (<ನೂಲ್$_2$) + ಗುಂಡು]

ನೂಲುಬಟ್ಟೆ (ನಾ). ನೂಲಿನೆಳೆಯಿಂದ ತಯಾರಿಸಿದ ಬಟ್ಟೆ : ಹತ್ತಿಬಟ್ಟೆ : "ಫಾಲಂ, ಕಾರ್ಪಾಸಂ, ಬಾದರಂ— ೩ ನೂಲು ಬಟ್ಟೆ" (ಸಿದ್ಧಾಂತಿ. ೨೦೨). [ನೂಲು$_2$ (<ನೂಲ್$_2$) + ಬಟ್ಟೆ$_2$]

ನೂಲುಮಟ್ಟ (ನಾ). = ನೂಲುಗುಂಡು : ನನ್ನ ಅಳತೆಗಳನ್ನು ತೆಗೆದುಕೊಳ್ಳಲು . . . ಮೊಣಕಾಲೂರಿ ನಾನು ಕೂತೆ. ನನ್ನ ಕುತ್ತಿಗೆಯವರೆಗೆ ಏಣಿಗಳನ್ನು ನಿಲ್ಲಿಸಿದರು. ಆ ಏಣಿಯನ್ನು ಒಬ್ಬ ಹತ್ತಿದ. ನನ್ನ ಕೊರಳಿನಿಂದ ನೂಲುಮಟ್ಟವನ್ನು ಇಳಿಬಿಟ್ಟ ಗುಂಡು ನೆಲ ತಾಕುವವರೆಗೆ. ಆ ನೂಲಿನ ಉದ್ದ ಸರಿಯಾಗಿ ನನ್ನ ಅಂಗಿಯ ಉದ್ದ (ಗಲಿಪ್ರ. ೭೫).

[ನೂಲು$_2$ (<ನೂಲ್$_2$) + ಮಟ್ಟ$_1$]

ನೂಲುಮದುವೆ (ನಾ). (ಕರಾ) ಮುಂಜಿ ; ಉಪನಯನ : ಮಂಗಳೂರಲ್ಲಿ ನಮ್ಮಮನೆಯಲ್ಲಿ ತಮ್ಮನ ನೂಲುಮದುವೆಗೆ ಸಮಾಪಿಸಿದೆ (ಕಂನಾಸಾ. ೧). [ನೂಲು$_2$ (<ನೂಲ್$_2$) + ಮದುವೆ]

ನೂಲುಯಂತ್ರ (ನಾ). ದಾರ ನೂಲುವ ಒಂದು ಉಪಕರಣ : "ದಾರ ಮಾಡುವ ಅಥವಾ ದಾರ ನೂಲುವ ಯಂತ್ರ : ನೂಲುಯಂತ್ರ" (Filatory. ಇಂಕನಿ). [ನೂಲು$_2$ (<ನೂಲ್$_2$) + ಯಂತ್ರ]

ನೂಲುವಸ್ತ್ರ (ನಾ). ಹತ್ತಿಯ ಬಟ್ಟೆ ; ನೂಲಿನ ಬಟ್ಟೆ : "ಕಾರ್ಪಾಸಮೆನಲು ನೂಲುವಸ್ತ್ರಂ" (ಮಂಗರಾ. ೧೦೧-೭೨).

[ನೂಲು$_2$(<ನೂಲ್$_2$)+ವಸ್ತ್ರ]

ನೂಲುವಾಲೆ, ನುಲುವಾಲೆ (ನಾ). ಒಂದು ಬಗೆಯ ಔಷಧಿ ಸಸ್ಯ : "ಶೃಂಗಿರೀಟ — ನೂಲುವಾಲೆ" (ಓಷಧಿ. ೧೭೦). **ನುಲುವಾಲೆ** : "ಮಧುಕರಃ — ನುಲುವಾಲೆ, ತುಂಬಿ, ಮಾವು, ಕರ್ಪೂರಬೆಂಡೆ" (ಓಷಧಿ. ೧೨೦). [ನೂಲು$_0$ + ಪಾಲೆ$_2$]

ನೂಲುವೊಯ್ 'ನೂಲ್ವೊಯ್' ನೋ.

ನೂಲೆಗೆಣಸು (ನಾ). ಒಂದು ಬಗೆಯ ಗೆಣಸು; ಕಾಡು ಗೆಣಸು (?) : ಭೂಮಿ ಹುಣ್ಣಿಮೆ ಹಬ್ಬದಲ್ಲಿ ನೂಲೆಗೆಣಸು, ಉಗನಿಕಾಯಿ, ಬೆರಕೆಸೊಪ್ಪು ಇತ್ಯಾದಿಗಳನ್ನು ಸಂಗ್ರಹಿಸುವಾಗಲೋ ಬಗನಿ ಕಟ್ಟಲು ಸರಿಯಾದ ಮರಗಳನ್ನು ಹುಡುಕುವುದಕ್ಕಾಗಿಯೊ . . . ಗುತ್ತಿಗೆ ಸಹ್ಯಾದ್ರಿಯ ಆ ಅರಣ್ಯಪ್ರದೇಶ ಸುಪರಿಚಿತವಾದದ್ದೆ ಆಗಿತ್ತು (ಮಲೆಮ. ೫೭೬). [ನೂಲೆ$_0$ + ಗೆಣಸು (<ಗೆಟಸು)]

ನೂಲೆಳೆ 'ನೂಲೆಟೆ' ನೋ.

ನೂಲೆಳೆಗ (ನಾ). ಒಂದು ಪಕ್ಷಿಯ ಹೆಸರು : ಕೋಗಿಲೆ ಚಾದಗೆ ಪೋದಗೆ ಮೂಗಿಲಿ ಕೌಂಗಂಚೆ ಕೊಂಚೆ ನೂಲೆಳೆಗಂ [ಪಾಠಾಂ. ನೂಲೆಳಗ, ಮೂಲೆಗಳೆಗ] ಹಂಗಾಗೆ ಪೊಣರ್ವಕ್ಕಿ ಪಿಂಗುರಿ ಗೂಗೆ ಮುಕುಂಡ ಬಳಾಹಕ ಲಾವುಗೆ ಶೇನಂ (ಸೂಕ್ತಿಸು. ೩-೧೪೪) ; (ಕಾವ್ಯಸಾ. ೧೦೪೪ ಶೂದ್ರಕ ನೋ). [?]

ನೂಲೆಟಿ, ನೂಲೆಳೆ (ನಾ). ೧. ದಾರದ ಎಳೆ ; ನೂಲಿನ ತಂತು : "ಎಟಿ = ನೂಲೆಟಿ" (ಶಸುದ. ಸರಿ. ೧); "ನೂತ ನೂಲೆಟಿಯಲ್ಲಿ ನಿಚಯಂಗಳಲ್ಲಿ ತಂತುವದು" (ಮಂಗರಾ. ೧೫೪-೬೬). **ನೂಲೆಳೆ** : ೨. ವ್ರತದಲ್ಲಿ ಕಟ್ಟಿಕೊಳ್ಳುವ ದಾರ : ಸಾಸಿರ ನೋಂಪಿಯ ನೋಂತು ನೂಲೆಳೆಯ ಹಱುದಂತಾಯಿತ್ತು ಭಾವದಲ್ಲಿ ಬಲ್ಲಿಕೆ ಇಲ್ಲ ಜ್ಞಾನದಲ್ಲಿ ಶುದ್ಧವಿಲ್ಲ (ಮೋಳಿಮಾ. ೫೫-೨೨೯). [ನೂಲ್₂ + ಎಳೆ₂(<ಎಟಿ₂)]

ನೂಲೇಣಿ (ನಾ). ನೂಲಿನ ಏಣಿ; ಹಗ್ಗದಿಂದ ಹೆಣೆದ ನಿಚ್ಚಣಿಕೆ : ಬೇಟೆಗನುಕೂಲಮಾದ . . . ನೆಲಗೂಡು ಮದ್ದುಗುಂಡು ನೂಲೇಣಿ ಮೊದಲಾದ ಸಾಧನಂಗಳ್ (ಸೌಗಂಧಿ. ೫೦-೧೮) ; ಉಗ್ರಾಣಗಳಲ್ಲಿ ನೂಲೇಣಿ . . . ಬಾಣ ಬತ್ತಳಿಕೆಗಳ ಎಲ್ಲ ವಿವರವನ್ನು ಬಿಡಿಬಿಡಿಯಾಗಿ ನೋಡುವನು (ಸವತಿ. ೪೮) ; ಕತ್ತಲಲ್ಲಿ ಕೋಟೆಯಿಂದ ನೂಲೇಣಿಯ ಮಾರ್ಗವಾಗಿ ಹೊರಕ್ಕೆ ಇಳಿಸಿಕೊಟ್ಟರು (ಭಾರವೀ. ೩೫).

[ನೂಲ್₂ + ಏಣಿ₁]

ನೂಲ್ಗಟ್ಟು, ನೂಲುಗಟ್ಟು (ಕ್ರಿ). ೧. ನೂಲಿನಿಂದ ಕಟ್ಟು ; ಹಗ್ಗದಿಂದ ಬಿಗಿ : ನೂಲ್ಗಟ್ಟಿ ಪೊಯ್ದ ಪೊಸಗುಡಿಸಲ್ಗಳ್ತವೆ ನಟ್ಟ ಗಟಿಗಳಿರಿಸಿದದೋಳ್ಗಳ್ ಕಾಲ್ಗಟ್ಟಿ ಮೇವ ಕಟ್ತಿಯ ಸಾಲ್ಗಳಿರಲ್ಬೀಡೆಸೆದುದು ಕೊಲ್ಲಟಜನರಾ (ಉದ್ಭಟ. ೫-೧೦೧). **ನೂಲುಗಟ್ಟು** : ೨. (ಆಲಂ) ಹರಡು ; ವ್ಯಾಪಿಸು : ನನ್ನ ಆ ಮಾತು ಒಬ್ಬನ ಕಿವಿಗೆ ಬಿತ್ತು. ಕಿವಿಯಿಂದ ಕಿವಿಗದು ನೂಲುಗಟ್ಟಿತು (ನಡೆದಾ. ೩, ೪೪೦).

[ನೂಲ್₂+ಕಟ್ಟು₁]

ನೂಲ್ಗೊಳ್ಳು (ಕ್ರಿ). ಹೊಂದಿಕೊಳ್ಳು ; ಸೇರಿಕೊಳ್ಳು ; ನೆಯ್ದುಕೊಳ್ಳು : ಕುವರನು 'ತೊಟ್ಟಿಲಿಗ'ನಾಗಿ 'ಇಂದ್ರೇಂದ್ರನ ತೋಳೆ ತೊಟ್ಟಿಲಾಗಿರೆ ಬಳೆದು'ದು ಎಂಬ ಹೇಳಿಕೆಗಳೆಲ್ಲವೂ ನೂಲ್ಗೊಳ್ಳುತ್ತಿವೆ (ನಾಡೋಜ. ೪೮). [ನೂಲ್₂ + ಕೊಳ್ಳು₁(<ಕೊಳ್₁)]

ನೂಲ್ತೊಂಗಲ್ (ನಾ). (ಗೆಜ್ಜೆಗಳುಳ್ಳ) ನಡುಕಟ್ಟು ; ಕಟಿಸೂತ್ರ : "ನೂಲ್ತೊಂಗಲ್ ಕಟಿಸೂತ್ರ" (ಕವಿಕಂ. ೧೭೯).

[ನೂಲ್₂ + ತೊಂಗಲ್]

ನೂಲ್ದೆಗೆ (ಕ್ರಿ). ೧. ಅರಳೆ ಮೊದಲಾದುವುಗಳಿಂದ ಎಳೆಯನ್ನು ತೆಗೆ,—ದಾರವನ್ನು ತೆಗೆ. ೨. (ಗೆರೆಯೆಳೆದಂತೆ) ಸಾಲಾಗು ; ಸಾಲುಗಟ್ಟು : ದೇವರ ದಂಡಧಾರರೆರಡುಂ ಪಕ್ಷಂಗಳೊಳ್ ಸಾರೆ ನೂಲ್ದೆಗೆದಂತಿಂದ್ರಗಿರೀಂದ್ರಮೆಯ್ದುವಿನೆಗಂ ಪೋಯ್ತಾಗಳಿಂದ್ರದ್ವಿಪಂ (ಶಾಂತಿಪು. ೧೦-೨೪) ; ತರದೆ ಪಾಱುದುವು ಬೆಳ್ವಕ್ಕಿ ನೂಲ್ದೆಗೆದಂತೆ (ಅನಂಪು. ೯-೧೬ ರಗಳೆ). ೩. ಗೆರೆಯೆಳೆ ; ಬರೆ ; ರೇಖಿಸು ; ರೂಪುಕೊಡು : ಪಾರ್ಶ್ವಂಗಳಿಂ ನೂಲ್ದೆಗೆದತ್ತೆಂಬಂತೆ ಪಾ[ಶ್ಚಾತ್ಯದೆ] ಸವಡಿಸಿತೆಂಬಂತಿರುದ್ಗ್ರೀವದಿಂ ಪರ್ವುಗೆವೆತ್ತಂತಂಗಳಾಂತಿಪ್ರಕರದೆ ಪಸರಿಪ್ಪಂತೆ . . . ಅತಿಜವಮಿದಿರೊಳ್ಬಂದುದಿಂದ್ರಾಯುಧಾಶ್ವಂ (ಶಾದಂಪು. ೪೫೬). ೪. ಅವಿಚ್ಛಿನ್ನವಾಗು ; ಅಖಂಡವಾಗು (?) : ಅಂತಕ್ಷೀಣಯೋಗಲಕ್ಷಿತಮಪ್ಪ ಸಮರುಜುಸಂಸ್ಥಾನಕ್ಕೆ ಪರಮಪದಭಾವದಿಂ ನೂಲ್ದೆಗೆದಂತೆ ನಿಱುಗೆವಡೆದ ಬಾಹ್ಯಸಾಮಗ್ರಿಯೊಳ್ ವ್ಯಗ್ರನಾಗಿ (ಅನಂಪು. ೯-೧೧೪ ಪ). [ನೂಲ್₂ + ತೆಗೆ₁]

ನೂಲ್ವಾಸ (ನಾ). ನೂಲಿನಿಂದ ಮಾಡಿದ ಕಟ್ಟು,—ಬಂಧನ : ತಳದಿಂದವುಂಕಿ ತೊಡೆದುದ್ದಳಿಕೆಯ ನೂಲ್ವಾಸಮೆಸೆಯೆ ಝೇಂಕಾರಮನಿತ್ತಳವಡೆ ಬಾಜಿಸೆ ಶಶಿಮಂಡಳಮುಗುಟ್ವಮರ್ದೆನಿಸಿದತ್ತು ಢಕ್ಕಾನಿನದಂ (ಪುಲ್ಲಿಪು. ೮-೨೯). [ನೂಲ್₂ + ಪಾಸ₁]

ನೂಲ್ವೊಯ್, ನೂಲುವೊಯ್ (ಕ್ರಿ). = ನೂಲ್ದೆಗೆ ೩ : ಒಡ್ಡಿನ ಮುಂತು ಪಿಂತು ಕೆಲನಂ ತಿರ್ದುತ್ತೆ ತಮ್ಮಿರ್ಬರುಂ ಮುರಜಂ ಬಾಯ್ತರೆ ದೇವಸೇನೆ ನಡೆದತ್ತೋರಂತೆ ನೂಲ್ವೊಯ್ದುವೊಲ್ (ಅನಂಪು. ೫-೪೪). **ನೂಲುವೊಯ್** : ಚಿರಂತನ ಚಿತ್ರಕರನಪ್ಪ ಚೀರಘಟ್ಟ ಶಂಖವಿಟ್ಟ ಬಟ್ಟಗೆವಲಗೆಯುಂ . . . ವಿಶಾಲಪಟ್ಟದ ಮೇಲೆ ನೂಲುವೊಯ್ದು ತಿಟ್ಟವಿಟ್ಟಣ್ಕಗೆಯ್ದು ರುಜಾಸ್ಥಾಸಕದ ಸಮವರಿಜಿನ ನಂದಕ್ಕೆ ಪಡಿಚಂದಮಾಗಿ (ಪುಷ್ಪಪು. ೧೪-೨೯ ಪ). [ನೂಲ್₂ + ಪೊಯ್₂]

ನೂಲ್ಸೋನೆ (ನಾ). ದಾರದ ಎಳೆಯಂತೆ ಬೀಳುವ ಮಳೆಯ ಹನಿ, ಸೋನೆ : ಕುಳ್ಳಿರ್ದ ಮಳೆಗಾಲಮೆದ್ದು ನಿಂತುದು ತುದಿಯ ಕಾಲಿನಲಿ ನೂಲ್‌ಸೋನೆಯಾ ತೆರೆಮರೆಯನೆತ್ತಲ್ಕೆ (ಕ್ರೀರಾಮಾ. ೩೪೫-೧೩೯).

[ನೂಲ್₂+ಸೋನೆ₁]

ನೂಸು (ನಾ). (?) : ಅಂತು ಪುಣ್ಯಭಾಜನಂಗೆ ನೂಸೆ[ಪಾಶಾಂ.ಕೆ] ಪಾಸೆಂಬಂತೆ . . . ಅಜಿತಂಜಯಭೂಪಾಲಂಗಮಾತನರಸಿ ವಸುಮತಿಗಂ ಯುಗಂಧರನೆಂಬ ಪೂರ್ವಪುಣ್ಯನಾಮಮಂ ತಾಳ್ದಿ (ಆದಿಪು. ೩-೭೯ ಪ) ; ಮನೆಯಿಂದಂ ಮನೆಗೆಂದು ಪೋಪ ತೆಱದಿಂ ಮೇಣ್ ನೂಸೆ ಪಾಸೆಂಬ ಮಾತಿನ ಪಾಂಗಿಂದನಿತುಂ ಯುಗಂ ತಳರ್ದು (ಆದಿಪು. ೫-೭೦) ; ಉಪಚ್ಛದಾಚ್ಛಾದ್ಯತಳದೊಳನವದ್ಯದೊಳಗ್ಲಪಿತನಿರೆ ಪಾಸಿನೊಳ್ ನೂಸೆ ಪಾಸುಕೃತಿಗೆಂದು ದಿವಿಜರುಲಿದರ್ ತಮ್ಮೊಳ್ (ಶಾಂತಿಪು. ೭-೧೩).

[?]

ನೂಳ್₁ (ಕ್ರಿ). ಹುಡಿಮಾಡು ; ಪುಡಿಮಾಡು : ಏಣಾಧಿನಾಥನೇಳ್ತರುತ್ತಿರಲಿತ್ತಲೊರ್ವ ಮಾಸಾಳ್ಪಗಲ್ಕೈದೀವಿಗೆಯೊಳಱಸಿ ನೆಲನಂ ನೂಳ್ದು ತೂಱು ಕೇಱು ಕಾದುವ ಭಟರಂ ಕಾಣೆನೆನುತ್ತೆ (ಕ್ರಿಪುವಿ. ೨೩-೧೦ ಪ).

[?]

ನೂಳ್₂ 'ನುಸುಳ್₂' ನೋ.

ನೂಳ (ನಾ). ೧. ಸುಳ್ಳುಗಾರ ; ಸುಳ್ಳು ಹೇಳುವವನು ; ಹುಸಿಗಾರ : "ನೂಳ = ಹುಸಿಗ" (ಚತುನಿ. ಕಿ. ೧, ೫೮) ; ಸಿಂದಿದರ್ ಬಗೆಯಳಿರ ನೂಳರಂ ಜರೆದು (ಕಾಲೂರ. ೧೧೪-೨೩೬). ೨. ಸುಳ್ಳು ; ಹುಸಿ : ಗುರುಕಾರ್ಯನಿರ್ವಾಹ ಸದ್ಗುಣಸಮೂಹಬಂಧುರಮಪ್ಪ ನಿನ್ನದೃಷ್ಟಪ್ರತ್ಯಯಂ ನೂಳಮಾದುದೀ ಜಗವಱಿಯಲು (ಆರಾಚ. ೨-೪-೪೭). [ನೂಳ್₂(<ನುಸುಳ್₂)+-ಅ₇]

ನೂಳದು₁ (ನಾ). ಆಧಿಕ್ಯ ; ಅತಿಶಯವಾದುದು : "ನೂಳದು = ಪಿರಿದು" (ಶಸುದ. ಸರಿ. ೨) ; "ಉಬ್ಬರಂ, ಉಬ್ಬಟೆ . . . ನೂಳದು, ಮಿಾಂಟು, ಒಟ್ಟಜೆ, ಪೆರ್ಚುಗೆ — ಈ ೧೯ ಅತಿಶಯಂ" (ಕಶಸಾ. ೫೭-೨೩೪) ; ನೂಳದದೊಂದು ದಂದುಗಕ್ಕೆ ಕೆಯ್ಗಮರ್ದ ಚಿಂತಾಮಣಿಯನೊತ್ತೆಯಿಟ್ಟು ಬಾಟ್ವ ಕೈನೆಯ ಕೈಮೆಗೊಳಗಾದನಕ್ಕಟ ! (ರಾಮಾಶ್ವ. ೬೮-೪).

ನೂಳದು₂, ನೂಟದುಂ (ಅ). ಅಧಿಕವಾಗಿ ; ಅತಿಶಯವಾಗಿ : ಅಬ್ಧಿಯೊಳ್ತಾಮರಸಪ್ರಿಯಂಗೆ ಮುಳುಗಿರ್ಪುದೆ ನೂಳದು ಲೇಸೆನಿಕ್ಕುಂ (ಮರಾಚ. ೧೦೫-೨೯). △ **ನೂಟದುಂ** : ಕರ್ಮರದ ಮಾವಿನರನೇಱಿಲ ಕಂಚೀಳೆಯ ಪಲಸಿನ ಮರದಿಂ ನೂಟದುಮೆಸೆದಿರ್ಕುಮದಱ ಬಹಿರುದ್ಯಾನಂ (ಕಾವ್ಯಾಪ. ೨೩೦). [<ನೂಳದು₁]

ನೂಳು 'ನುಸುಳ್₂' ನೋ.

ನೂಳೆಯೆ (?). (?) : ಅಳಗೆ ಮನೆಯೊಳ್ ದೇ(ದಿ)ವಸಮ(ನೋ) ನೂಳೆಯೆ ನಿಂದಿರಿಸಿ ಕಡೆಯನೆಣಿಸುತೆ ಬಾಸಾಲೀಲೆಯೊಳೆ ನೀರನೊಕ್ಕೊಡೆಗಾಲಯ ಮೇಲಿ(ಲ)ನಿತೆ ಸಮಯದೊಳ್ ಮಟಿಯಕ್ಕುಂ ? (ಜಟ್ಟಮ. ೩-೫). [?]

ನೂಱು₁ (ಕ್ರಿ). (?) : ಪುಗಿಲಂ ಪೋಗಂ ಬಾರಿಯಂ ಸನ್ನೆಯಂ ನೂಱುವಮರ್ಚುವ ನಿಲ್ವೆಡೆಯಂ ಬಗೆಯಂ ತೆಗೆಯನಲ್ಲಾಟಮಂ ಕಾಟಮಂ

ನೋವುದಂ ಸಾವುದನೆಲ್ಲಂದದಿಂ ಬಗೆದಾಗಳರಸರೊಳೆಲ್ಲ ಕೇಳ್ ನೀಂ ಬಲ್ಲೆ ಬೇಂಟಿಕಾಱರೊಳೆಲ್ಲವಾನೆ ಬಲ್ಲೆಂ (ಪಂಪಭಾ. ೫-೪೩). [?]

ನೂಱು$_2$, ನೂರು (ನಾ). ೧. ಒಂದು ಸಂಖ್ಯಾವಾಚಕ; ಹತ್ತನ್ನು ಹತ್ತರಿಂದ ಗುಣಿಸಿದರೆ ಬರುವ ಲಬ್ಧ; ಶತಕ : ಕುದಿಕುದಿದತ್ತಣಿಂ ಕುದುರೆ ನೂಱಱೊಳಾ ಬಲದಾನೆ ಪತ್ತು ತಾಗಿದುವೆನೆ ದೋಷಮಾ ಪಿರಿದು ಸಂಖ್ಯೆಯೊಳೇಕ ಬಹುತ್ವ ಸಂಗದಿಂ (ಕವಿರಾ. ೧-೧೨೦); ಯಮುನಾನದಿಯ ತೆಂಕಣ ದೆಸೆಯೊಳ್ ನೂಱು ಯೋಜನದಗಲದೊಳಮನಿತೆ ನೀಳದೊಳಂ ನೆಱೆದು (ಪಂಪಭಾ. ೫-೬೯ ಪ); ತುಡೆ ನೂಱಿಸೆ ಸಾಸಿರಮಾ ಪಡೆಯಂ ಕೊಳೆ ಲಕ್ಕೆಲೆಕ್ಕ ಮಾಗುರ್ಚಿದುವು . . . ಕಡುಪಿಂದಿಸೆ ವಿಬುಧವನಜವನಕಳಹಂಸಂ(ಶಾಂತಿಪು. ೪-೨೬); ತನಗೆಡವಿಡದತಿಚಪಲಂ ಮನಮದು ನೋಡೊಂದೆ ನೂಱು ನೂರ್ಚ್ಛಾಸಿರಮಾಯ್ತೆನೆ ಬಿಡದೆ ಪಿಡಿದು ನೃಪರಂ ಕನಲ್ಚಿ ತನ್ನಿಚ್ಚೆ ಗೊಯ್ವುದೊಂದಚ್ಚರಿಯೇ (ಕಾದಂಪೂ. ೫೫೯); ದುರ್ಜನಂಗೆ ನೂಱು ಲೇಸಂ ಮಾಡಿದೊಡಂ ಕಿಡುವುದು ಅಱಿಯದವನ ಮುಂದೆ ನೂಱು ಸುಭಾಷಿತವನೋದಿದೊಡಂ ಕೆಡುವುದು (ಪಂಚತಂ. ೧೩೭-೧); ಸಾಸಿರಂ ಪರದೊಳಿರೆ ಪತ್ತರ್ಕೆ ಪಯಿನ್ನೆಂದು ಆದೇಶಂ; ನೂಱರ್ಕಂ ಮತ್ತಂ ಸಾಸಿರಕ್ಕಂ ಕಿಱಿದೆಡೆಯೊಳ್ ಅಂತ್ಯಲೋಪಮಕ್ಕುಂ (ಶಮದ. ೧೯೧ ವೃತ್ತಿ); ನೂಱು ರಥದಲಿ ಸರಳ ಹೊದೆ ಮೂನೂಱು ಪರಿಚಾರರು ಸಹಿತ ಮೈದೋಱಿ ನಿಂದನು ಭೀಮನೊಬ್ಬನೆ ತಱುಬಿ ಕುರುಬಲವ (ಕುಮ್ಯಾಕ. ೧೫-೩). ೨. ಅನೇಕ; ಬಹಳ : ನೂಱನೋದಿ ಏವೆನಯ್ಯ ನಮ್ಮ ಕೂಡಲಸಂಗಮದೇವರ ಮನಮುಟ್ಟ ನೆನೆಯದನ್ನಕ್ಕ (ಒಸವ. ೪೭೫); ಆಚ್ಚುಡಿದು ಕೀಲ್ಮುಱಿದು ಬಿಚ್ಚಿ ಬೇಱಾಗಿರಲು ನುಚ್ಚ ನೂಱಂ ಮಾಡೆ ಶೂಲಿ ಮೆಚ್ಚುತ್ತಿರಲು (ಇಹರ. ದೇ. ೪೩-೨). **ನೂರು** : ೧. ನಾಲಯ್ವರಲ್ಲದೆ ನೂರೊಕುವರರೊಮ್ಮಿಗೆ ಕೆರಳಿ ಕೊರಚಾಡಲ್ (ಹೆಬ್ಬೆರ.೧೪-೧೦೧); ನೂರು ಬಂದಾಗ ಹತ್ತುವರೆಯೇಕೆ ಕೊಡಬಾರದು ? (ಅನ್ನಾಪ. ೪೫); ಸಾವಿರ ಹಾರಿ ಹೋಯಿತು, ನೂರು ಬೆರಸಿ ಬಂತು (ಗಾದೆ).

ನೂರಾಗು = ಅನೇಕವಾಗು; ಬಹಳವಾಗು : ನೀರೊಳೀತನ ತಮ್ಮನಿಣುಕಿ ನೋಡುವನು, ಸಾರೆ, ಬಾ ಎಂದು ತನ್ನೆಡೆಗೆ ಕರೆಯುವನು ಸಾರಿದರೆ-ನೂರಾಗಿ ಹರಿದೋಡುತಿಹನು ಸೇರಿದರೆ-ಸೆರೆವಿಡಿದು ಮರಳಿ ಪೋಗೊಡನು (ಕಎಪು. ೧೧-೬). **ನೂರಾಡು** = ನೂರು ಹೇಳು : ನೂರಾಡಿ ಏನು ಫಲವು ತಾರಾಡುವಾಗ ಒಲವು ಕಿವಿಗಿಳಿದು ಬರಲು ಹಾಡು ಸವಿಗಾಗ ಯಾವುದೀಡು (ಗಂಗಾತ. ೨೦-೧). **ನೂರು ಹೇಳು** = ಬೇಕಾದಷ್ಟು ಹೇಳು; ಬಹಳವಾಗಿ ಹೇಳು : ಅವರು ನೂರು ಹೇಳಿದರೂ ಹೆತ್ತ ತಂದೆ-ತಾಯಿ (ಸುಬ್ಬಣ್ಣ. ೩೪). **ನೂರೊಂದು ಸ್ಥಳ** = ವೀರಶೈವ ಷಟ್ಸ್ಥಲಗಳಲ್ಲಿಯ ಒಟ್ಟು ಉಪಭಾಗಗಳು; ಏಕೋತ್ತರಶತಸ್ಥಲ; ☞ ವೀರಶೈವ ಷಟ್ಸ್ಥಲಗಳಲ್ಲಿ (ಅಂಗಸ್ಥಲ ಮತ್ತು ಲಿಂಗಸ್ಥಲ ಎರಡರಲ್ಲಿಯೂ ಷಟ್ಸ್ಥಲಗಳುಂಟು) ಪ್ರತಿಯೊಂದು ಸ್ಥಲದಲ್ಲಿಯೂ ಉಪಭಾಗಗಳನ್ನು ಗುರುತಿಸುತ್ತಾರೆ. ಇವುಗಳಲ್ಲಿ ಅಂಗಸ್ಥಲಗಳು ೪೪ ಮತ್ತು ಲಿಂಗಸ್ಥಲಗಳು ೫೭. ಹೀಗೆ ಒಟ್ಟು ನೂರೊಂದು ಸ್ಥಲಗಳಿವೆ. ೧. ಅಂಗಸ್ಥಲಗಳು - ೪೪. (೧). ಭಕ್ತಸ್ಥಲ-೧೫ : ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ದೀಕ್ಷಾಲಕ್ಷಣ ಗುರುಕಾರುಣ್ಯಸ್ಥಲ, ಲಿಂಗಧಾರಣಸ್ಥಲ, ವಿಭೂತಿಸ್ಥಲ, ರುದ್ರಾಕ್ಷಧಾರಣಸ್ಥಲ, ಪಂಚಾಕ್ಷರೀಜಪಸ್ಥಲ, ಭಕ್ತಮಾರ್ಗಸ್ಥಲ, ಗುರುಲಿಂಗಾರ್ಚನ ಸರೂಪೋಭಯಸ್ಥಲ, ಜಂಗಮಾರ್ಚನಲಕ್ಷಣ ತ್ರಿವಿಧ ಸಂಪತ್ತಿಸ್ಥಲ, ಚತುರ್ವಿಧಸಾರಾಯಸ್ಥಲ, ಉಪಾಧಿಮಾಟಸ್ಥಲ, ನಿರುಪಾಧಿಮಾಟಸ್ಥಲ, ಸಹಜಮಾಟಸ್ಥಲ. (೨). ಮಾಹೇಶ್ವರಸ್ಥಲ-೯ : ಮಾಹೇಶ್ವರ ಪ್ರಶಂಸಾಸ್ಥಲ, ಲಿಂಗನಿಷ್ಠಾಸ್ಥಲ, ಪೂರ್ವಾಶ್ರಯನಿರಸನಸ್ಥಲ, ಅದ್ವೈತನಿರಸನಸ್ಥಲ, ಆಹ್ವಾನನಿರಸನಸ್ಥಲ, ಅಷ್ಟಮೂರ್ತಿ ನಿರಸನಸ್ಥಲ, ಸರ್ವಗತ್ವ ನಿರಸನಸ್ಥಲ, ಶಿವಜಗನ್ಮಯಸ್ಥಲ, ಭಕ್ತದೇಹಿಕಲಿಂಗಸ್ಥಲ. (೩). ಪ್ರಸಾದಿಸ್ಥಲ-೭ : ಪ್ರಾಸಾದಿಸ್ಥಲ, ಗುರುಮಾಹಾತ್ಮ್ಯಸ್ಥಲ, ಲಿಂಗಮಾಹಾತ್ಮ್ಯಸ್ಥಲ, ಜಂಗಮಮಾಹಾತ್ಮ್ಯಸ್ಥಲ, ಭಕ್ತಮಾಹಾತ್ಮ್ಯಸ್ಥಲ, ಶರಣಮಾಹಾತ್ಮ್ಯಸ್ಥಲ, ಪ್ರಸಾದಮಾಹಾತ್ಮ್ಯಸ್ಥಲ. (೪). ಪ್ರಾಣಲಿಂಗಿಸ್ಥಲ-೫ : ಪ್ರಾಣಲಿಂಗಿಸ್ಥಲ, ಪ್ರಾಣಲಿಂಗಾರ್ಚನಸ್ಥಲ, ಶಿವಯೋಗಸಮಾಧಿಸ್ಥಲ, ಲಿಂಗನಿಜಸ್ಥಲ, ಅಂಗಲಿಂಗಸ್ಥಲ. (೫). ಶರಣಸ್ಥಲ-೪ : ಶರಣಸ್ಥಲ, ತಾಮಸನಿರಸನಸ್ಥಲ, ನಿರ್ದೇಶಸ್ಥಲ, ಶೀಲಸಂಪಾದನಸ್ಥಲ. (೬). ಐಕ್ಯಸ್ಥಲ-೪ : ಐಕ್ಯಸ್ಥಲ, ಆಚಾರಸಂಪತ್ತಿಸ್ಥಲ, ಏಕಭಾಜನಸ್ಥಲ, ಸಹಭೋಜನಸ್ಥಲ. ೨. ಲಿಂಗಸ್ಥಲಗಳು - ೫೭. (೧). ಭಕ್ತಸ್ಥಲ-೯ : ದೀಕ್ಷಾಗುರುಸ್ಥಲ, ಶಿಕ್ಷಾಗುರುಸ್ಥಲ, ಜ್ಞಾನಗುರುಸ್ಥಲ, ಕ್ರಿಯಾಲಿಂಗಸ್ಥಲ, ಭಾವಲಿಂಗಸ್ಥಲ, ಜ್ಞಾನಲಿಂಗಸ್ಥಲ, ಸ್ವಯಸ್ಥಲ, ಚರಸ್ಥಲ, ಪರಸ್ಥಲ. (೨). ಮಾಹೇಶ್ವರಸ್ಥಲ-೯ : ಕ್ರಿಯಾಗಮಸ್ಥಲ, ಭಾವಾಗಮಸ್ಥಲ, ಜ್ಞಾನಾಗಮಸ್ಥಲ, ಸಕಾಯಸ್ಥಲ, ಅಕಾಯಸ್ಥಲ, ಪರಕಾಯಸ್ಥಲ, ಧರ್ಮಾಚಾರಸ್ಥಲ, ಭಾವಾಚಾರಸ್ಥಲ, ಜ್ಞಾನಾಚಾರಸ್ಥಲ. (೩). ಪ್ರಸಾದಿಸ್ಥಲ-೯ : ಕಾಯಾನುಗ್ರಹಸ್ಥಲ, ಇಂದ್ರಿಯಾನುಗ್ರಹಸ್ಥಲ, ಪ್ರಾಣಾನುಗ್ರಹಸ್ಥಲ, ಕಾಯಾರ್ಪಿತಸ್ಥಲ, ಕರಣಾರ್ಪಿತಸ್ಥಲ, ಭಾವಾರ್ಪಿತಸ್ಥಲ, ಶಿಷ್ಯಸ್ಥಲ, ಶುಶ್ರೂಷುಸ್ಥಲ, ಸೇವ್ಯಸ್ಥಲ. (೪). ಪ್ರಾಣಲಿಂಗಿಸ್ಥಲ-೯ : ಆತ್ಮಸ್ಥಲ, ಅಂತರಾತ್ಮಸ್ಥಲ, ಪರಮಾತ್ಮಸ್ಥಲ, ನಿರ್ದೇಹಾಗಮಸ್ಥಲ, ನಿರ್ಭಾವಾಗಮಸ್ಥಲ, ನಷ್ಟಾಗಮಸ್ಥಲ, ಆದಿಪ್ರಸಾದಸ್ಥಲ, ಅಂತ್ಯಪ್ರಸಾದಸ್ಥಲ, ಸೇವ್ಯಪ್ರಸಾದಸ್ಥಲ. (೫). ಶರಣಸ್ಥಲ-೧೨ : ದೀಕ್ಷಾಪಾದೋದಕಸ್ಥಲ, ಶಿಕ್ಷಾಪಾದೋದಕಸ್ಥಲ, ಜ್ಞಾನಪಾದೋದಕಸ್ಥಲ, ಕ್ರಿಯಾನಿಷ್ಪತ್ತಿಸ್ಥಲ, ಭಾವನಿಷ್ಪತ್ತಿಸ್ಥಲ, ಜ್ಞಾನನಿಷ್ಪತ್ತಿಸ್ಥಲ, ಪಿಂಡಾಕಾಶಸ್ಥಲ, ಬಿಂದ್ವಾಕಾಶಸ್ಥಲ, ಮಹಾಕಾಶಸ್ಥಲ, ಕ್ರಿಯಾಪ್ರಕಾಶನಸ್ಥಲ, ಭಾವಪ್ರಕಾಶನಸ್ಥಲ, ಜ್ಞಾನಪ್ರಕಾಶನಸ್ಥಲ. (೬). ಐಕ್ಯಸ್ಥಲ-೯ : ಸ್ವೀಕೃತ ಪ್ರಸಾದೈಕ್ಯಸ್ಥಲ, ಶಿಷ್ಟೋದನಸ್ಥಲ, ಚರಾಚರಲಯಸ್ಥಲ, ಭಾಂಡಸ್ಥಲ, ಭಾಜನಸ್ಥಲ, ಲಿಂಗಲೇಪಸ್ಥಲ, ಸ್ವಪರಾಜ್ಞಾಸ್ಥಲ, ಭಾವಾಭಾವಲಯಸ್ಥಲ, ಜ್ಞಾನಶೂನ್ಯಸ್ಥಲ : ಈ ಶಾಸ್ತ್ರಕ್ಕೆ ವೀರಶೈವಧರ್ಮನಿಷ್ಠನಾದ, ಮುಮುಕ್ಷುವಾದ ಭಕ್ತನೇ ಅಧಿಕಾರಿ . . . ೧೦೧ ಸ್ಥಳಗಳ ಜ್ಞಾನವೇ ವಿಷಯ (ಭಾತತ್ತ್ವ. ೬೭೦). **ನೂರ್ವರ್, ನೂರ್ಬರ್** = ನೂರು ಮಂದಿ; ನೂರುಜನ : ಇಟ್ನೂವ್ವೊ(ರ್ವ)ರುಂ ಮಹಾಜನದ ಕಾಲಂ ಕಟ್ಟು (ಎಇ. XII, ೨೧೯-೨೦; 814); ಒದವುಗೆ ನಿನ್ನ ಸಂತತಿಗೆ ನೂರ್ವರುದ ಗ್ರಸುತರ್ಕಳೊಂದೆ ಗರ್ಭದೊಳೆನೆ ಕೆಮ್ಮನಿಂತು ಪೊಸದಿಕ್ಕಿದೆ (ಪಂಪಭಾ. ೧-೧೩೧); ಕವಿಸೂನುಗೆ ನೂರ್ಬರು ಬ್ಯಾಸಂಗೆ ನೂರ್ಬರು ಮನುವಿಂಗೆಣೆ ನಾಲ್ಕು ನೂರ್ಬರಾದ×ಳಮೆ ನಾಗವಾವಿಯ[ವ]ರು (ಕಇಅ. ೧೧-೪-೩೪; ಸು. 1093); ಶಿವೆಯಗೇರಿಯ ನೂರ್ಬರಿಗೆ (ಎಇ. XVIII, ೧೭೨-೩೭; 1184). **ನೂಱಾಱು, ನೂರಾರು** = ಬಹಳ; ಅನೇಕ; ಹಲವಾರು : ಬಾಲಕರು ನೂಱಾಱು ಮೆಱೆದರು (ಕುಮ್ಯಾಸ. ೬-೧);

ಗುಱಿಯ ತಾಗದ ಕೋಲ ನೂಱಾಱಿಸೆದೇನು ಬಱಡಿಗೆ ಭಕ್ತಿ ಭಜಿಸಿದೊಡೆ ಅದು ತಾನು ಇರಲಱಿಯದಯ್ಯ (ಸರ್ವಜ್ಞ. ೨೫೬) ; ಧನಿಕನೌಷಧಗಳು ನೂರಾರು ತೆರನವು ದುಡಿಮೆಯೆ ಬಡವನೌಷಧವು (ಇಂಚಾಪ. ೧೯೨-೪೬). **ನೂಱುಕಾಲ ಮಂಟಪ** = ನೂರುಕಂಬಗಳುಳ್ಳ ಮಂಟಪ: ಶ್ರೀ ಕ್ರುಷ್ಣರಾಯ ಮಹಾ[ರಾಯ]ರೂ ಶ್ರೀವೀರಶ್ರೀವಿಠಲದೇವರಿಗೆ ಕಟ್ಟಿಸ್ತ ನೂಱುಕಾಲಮಂಟಪ (ಸೌಇಇ. IX-ii, ೫೦೨-೯ ; 1516). **ನೂಱು ಯಜನದ ಜಾಣ** = ನೂರು ಯಜ್ಞಗಳನ್ನು ಮಾಡಿದವನು ; ಶತಕ್ರತು ; ಇಂದ್ರ : ತೋಱಿದುದು ಜರೆ ನಮಗೆ ನಾವಿನ್ನೇಱಲುಳ್ಳವರಮರನಗರದ ನೂಱುಯಜನದ [ಪಾಠಾಂ. ನೂಱುಯಜ್ಞದ, ನೂಱುಜನ್ಮದ, ದೂಱುಗಾಱನ]ಜಾಣನೋಲಗದಮಳವಿಷ್ಟರವ (ತೊರಂಗ. ೨-೧-೬). **ನೂಱೆಂಟು, ನೂರೆಂಟು** = ೧. ನೂರರ ಮೇಲೆ ಎಂಟು; ನೂರು ಮತ್ತು ಎಂಟರ ಮೊತ್ತ : ಸಾಲಾಮ್ಬಾಲ ತಪೋಗ್ರದಿನ್ತು ನಡದೊಂ ನೂಱೆಣ್ಟು ಸಂವತ್ಸರಂ (ಎಕ. II, ೨೨-೨ ; ಸು. 700) ; ಭರತಾಗಮದೊಳ್ ಮೂವತ್ತೆರಡನೆ ನೆಗಟ್ಟಂಗಹಾರಮುಂ ನೂಱೆಂಟುಂ ಕರಣಮುಮನವಳ ಡಪಕೆಯ ಪರಿಚಾರಿಕೆಯಱಿಗುಮಾಕೆಗವು ತೊಡರ್ಪೆಡೆಯೆ (ಅದಿಪು. ೨೯). ೨. ಅನೇಕ ; ಬಹಳ : ಮಕ್ಕಳಿಲ್ಲದಿದ್ದರೆ ಇಲ್ಲ ಎಂಬದು ಚಿಂತೆ, ಇದ್ದರೆ ಹೀಗೆ ನೂರೆಂಟು ಚಿಂತೆ (ಹೊಸಕ್ತಿ. ೧೮).

[ದೇ.॥ ತಮಿ. ಮಲ. ನೂಱು ; ತುಳು. ನೂದು ; ತೆಲು. ನೂಱು, ನೂರು]

ನೂಱುಮಡಿ 'ನೂರ್ಮಡಿ' ನೋ.

ನೂಱೆಲೆ, ನೂರೆಲೆ (ನಾ). ೧. ನೂರು (ವೀಳೆಯದ) ಎಲೆ : ಅರವಾನೆಣ್ಣೆ ಹೇಱಿಂಗೆ ನೂಱೆಲೆ ಹೊಱೆಯ ×× ತು ಹಸುಬೆಗೆ ಅಡಿಕೆ ೨ ಭತ್ತಕೆ ಸೋಡಿಗೆ ಭತ ಯಿಂತೀ ಧರ್ಮವಂ ಪ್ರತಿಪಾಳಿಸಿದವರಿಗೆ (ಎಕ. VII, ಹೊನ್ನಾಳಿ. ೧೦೮-೫೬ ; 1203). ೨. ನೂರು ದಳಗಳುಳ್ಳದು ; ಶತಪತ್ರ ; ತಾವರೆ : 'ನೂಱೆಲೆಗಣ್ಣ', 'ನೂಱೆಲೆಗೆಳೆಯ' ಪರಾ. **ನೂರೆಲೆ** : ೨. "ನೂರೆಲೆ-ಕಮಲ" (ಗಂಗಾಮ. ೧೯೦). [ನೂಱು$_2$ + ಎಲೆ$_1$]

ನೂಱೆಲೆಗಣ್ಣ (ನಾ). ಕಮಲದಂತೆ ಕಣ್ಣುಳ್ಳವನು ; ಕೃಷ್ಣ : ಮೀಱಬಾರದು ಪ್ರಾಪ್ತಿವಶವನೆಂದಳಿಗೆ ಮಾಱುತ್ತರಗೊಟ್ಟು ನಗುತ ನೂಱೆಲೆಗಣ್ಣ ರುಕ್ಮಿಣಿಗೊಡರ್ಚಿದ ಹೊಗರೇಱುವ ಗರ್ಭೋತ್ಸವವ (ಮೋಹತ. ೪-೬೬). [ನೂಱೆಲೆ + ಕಣ್ + -ಅ$_7$]

ನೂಱೆಲೆಗೆಳೆಯ (ನಾ). ಕಮಲದ ಮಿತ್ರ ; ಸೂರ್ಯ : ನೂಱೆಲೆಗೆಳೆಯನುಗ್ರಕೋಪದಿಂದುರಿಯನುಗುಳದೆ ಮಾಣನೆಂಬಂತಿರೆ (ಜೈಮಿಭಾ. ೩-೪೧). [ನೂಱೆಲೆ + ಗೆಳೆಯ (<ಕೆಳೆಯ)]

ನೂಱೆಲೆವಗೆಯ (ನಾ). ಕಮಲದ ಶತ್ರು ; ಚಂದ್ರ : (ಕಿ). 'ನೂಱೆಲೆಗೆಳೆಯ' ಪರಾ. [ನೂಱೆಲೆ + ಪಗೆಯ]

△ **ನೂಱದುಂ** 'ನೂಳದು$_2$' ನೋ.

ನೃಕ್ಷೇತ್ರ (ನಾ). ಮನುಷ್ಯರು ವಾಸಿಸುವ ಸ್ಥಳ : ಪುದ್ಗಲಸಂಪ್ರಭೇದದಲು ಸರ್ವಾವಧಿಜ್ಞಾನಾಂತಿಮಭಾಗಮನೆ ಕೈಕೊಂಡು ನೃಕ್ಷೇತ್ರವಿಷಯದಿಂ ಪರಮನಃಸ್ಥಿತಾರ್ಥಗ್ರಹಣಧಾರಣಸಮರ್ಥ ಮನಃಪರಿವಿದ್ಯಾಮಂತ್ರಮಹಿತಗುಣದಿಂ ನೆಱೆದು (ಸುಕುಮಾ. ೮-೪ ಪ). [ಸಂ.]

ನೃಗತಿ (ನಾ). [ಜೈನ] ಚತುರ್ಗತಿಗಳಲ್ಲಿ ಒಂದಾದ ಮನುಷ್ಯಗತಿ; ಮನುಷ್ಯಾವಸ್ಥೆ : ಮಳಲೊಂದನಲ್ಲಿ ಕುಱಿಪಂ ಮಾಡಿಟ್ಟು ಚೈರಂತನಕ್ರಮದಿಂದಾ ಮಣಲೆಲ್ಲಮಂ ಮಗುಟೆ ಪಾರಾವಾರದೊಳ್ ಪೊಯ್ದು ಮತ್ತಮದಂ ಸೋದಿಸಿ ಕಾಣ್ಬವೊಲ್ ನೃಗತಿ ನೋಡಲ್ ನಾಡೆಯುಂ ದುರ್ಲಭಂ (ಸುಕುಮಾ. ೫-೩೩). [ಸಂ.]

ನೃಜಿತ (ನಾ). ಮನುಷ್ಯನನ್ನು ಗೆದ್ದವನು : ವಿಶ್ವಜಿತನು ಧನುಜಿತನು ಸರ್ವಜಿತನು ಸುತ್ರಾಮಜಿತನು ನೃಜಿತನು . . . ಕೂಡಲಸಂಗಯ್ಯನು (ಬಸವ. ೯೫೪). [ಸಂ. ನೃಜಿತ್]

ನೃತ (ನಾ). ಸತ್ಯ ; ನಿಜ : ನೃತವಾಕ್ಯಾಂಬುಧಿ ಶೌರ್ಯ ಸದ್ಗುಣಿ . . . ಸುಮನೋಜಾತನೆಂದೊಲ ವಿಂದಂದರೆ ಬಂದು ದೇಶ ಶರದೋಷಶ್ಚಂದ್ರನಂ ಚಂದ್ರನಂ (ಮದತಿ. ೧-೪೫) ; ಪರಹಿತವೃತ್ತಿಯೊಳ್ ಸಿಬಿ ಪರಾರ್ತ್ಥದೊಳಾ ರವಿನಂದನಂ ನೃತಾದರತೆಗೆ ಧರ್ಮ್ಮನಂದನನೆ (ಎಕ. VII, ತಿಕಾರಿ. ೧೧೯-೨೨ ; 1181).

ನೃತ ಮಾಡು = ನಿಜವನ್ನಾಗಿ ಮಾಡು ; ಸತ್ಯವನ್ನಾಗಿ ಮಾಡು : ಪತಿತಪಾವನರಂಗ ವಿಜಯವಿಠ್ಠಲರೇಯ ನೃತ ಮಾಡು ವೇಗ ಈ ಕೃತಿಯ ಸಿದ್ಧನೆನಿಸಿ (ಮೋಕ್ಷದೀ. ೩-೫).

[ಗಿ 'ಅನೃತ' ಎಂಬುದು ನಿಷೇಧಾರ್ಥಕವೆಂದು ತಪ್ಪಾಗಿ ಭಾವಿಸಿ, ಅದರಿಂದ ಮಾಡಿಕೊಂಡ ಪದ]

ನೃತ್ತ (ನಾ). ೧. [ನಾಟ್ಯ] ತಾಳಲಯಾಶ್ರಿತವಾಗಿ ಅಂಗ, ಪ್ರತ್ಯಂಗಗಳ ವಿಕ್ಷೇಪಮಾತ್ರದಿಂದ ಸೌಂದರ್ಯಭಾವವನ್ನು ವ್ಯಕ್ತಪಡಿಸುವ ಕುಣಿತ ; ಗಿ ಇದರಲ್ಲಿ ವಾಗರ್ಥವಾಗಲಿ, ಶೋಕವೀರಾದಿ ನವರಸಗಳ ಪ್ರತೀತಿಯಾಗಲಿ ಇರುವುದಿಲ್ಲ. ಇಂದಿನ ಭರತನಾಟ್ಯದ ಅಲರಿಪು, ಜತಿಸ್ವರಗಳು ಇದಕ್ಕೆ ಉದಾಹರಣೆ : ವಾರನಾರೀರಮಣೀಯನೃತ್ತಮಮರುತ್ತಿರೆ ಸಂದ ವಿರಾಟನಂದು ಕೆಯ್ನೂರೆಱೆದೀಯೆ ಗೆಯ್ದರಭಿಮನ್ಯುಗಮುತ್ತರೆಗಂ ವಿವಾಹಮಂ (ಪಂಪಭಾ. ೯-೯) ; ಎಲ್ಲಿತ್ತೊ ಗೀತವಾದ್ಯಂ ಸಲ್ಲಲಿತ ವಧೂಜನ ಪ್ರವೃತ್ತಂ ನೃತ್ತಂ (ಗದಾಯು. ೫-೪೩) ; ಎಸೆವ ಜಿನೇಂದ್ರಬಿಂಬ ಮನಳುಂಬಮಿದೆಂಬಿನಮಟ್ಟಿಯಿಂ ಪ್ರತಿಷ್ಠಿಸಿ ನೆಱೆದೆಂಟುಮರ್ಚನೆಗಳಿಂ ರಸವೃತ್ತಿಯ ನೃತ್ತಮಂ ಪ್ರವರ್ತಿಸಿ ಮಗುಟ್ದೂ ಪ್ರಕಾರದಿನನುಷ್ಠಿಸಿದಂ ದಿವಸಾಷ್ಟಕಂಬರಂ (ಚಂದ್ರಪು. ೪-೬೯) ; ತಾಂಡವ ನಾಟ್ಯ ನೃತ್ತ ಲಾಸ್ಯ ಗುಂಡಿಲ ಪೆಕ್ಕಣ ಲಚ್ಚಲ ಅಪರಿಪಾತ್ರ ಸುಪಾತ್ರ . . . ಸರ್ವತೋಭದ್ರವೆಂಬ ದಶವಿಧಪಾತ್ರಂಗಳಂ ಬೀಱಿ (ವಿವೇಕ. ೨೩೯) ; ಅಭಿನಯಮಿಲ್ಲದೆಯಾಂಗಿಕವಿಭವದೆ ಕೈಕಾಲನೆಯ್ದೆ ನೀಡಲ್ ನೃತ್ತಂ (ಲಾಸ್ಯರಂ. ೧-೬೩); "ಭಾವಾಭಿನಯವಿಲ್ಲದೆ ಕೈಕಾಲುಗಳನ್ನು ಆಡಿಸುವುದೇ ನೃತ್ತ" (ಲಾಸ್ಯರಂ. ೨೧೯ ಗದ್ಯಾನುವಾದ) ; ಇದಲ್ಲದೆ ಭಾವಾಶ್ರಯವಾದ 'ನೃತ್ಯ'ಕ್ಕೆ ಮಾರ್ಗವೆಂದೂ ತಾಲಲಯಾಶ್ರಯವಾದ 'ನೃತ್ತ'ಕ್ಕೆ ದೇಶಿ (ದೇಸಿ)ಯೆಂದೂ ಹೆಸರಿರುವಂತೆ ದಶರೂಪಕದಿಂದ ತಿಳಿಯಬರುತ್ತದೆ (ಕೈಪಿಡಿ. ೨೨೩). ೨. ನಾಟ್ಯ ಮಾಡುವವಳು ; ನರ್ತಕಿ : ಅವಿನಾಶ ಚಂದ್ರದಾಸರು ತಮ್ಮ . . . ಗ್ರಂಥದಲ್ಲಿ, "ನಾಟ್ಯಗಾತಿಗೆ ನೃತ್ತ ಎಂಬ ಹೆಸರಿತ್ತು, ಈ ಹೆಸರು ಬಹುಶಃ ವೃತ್ತಿಯನ್ನು ಅವಲಂಬಿಸಿದ್ದವರಿಗೆ ಅನ್ವಯಿಸಿರಬಹುದು" ಎಂದಿದ್ದಾರೆ (ಭಾರದ. ೫೫೦). [ಸಂ.]

ನೃತ್ತಹಸ್ತ (ನಾ). [ನಾಟ್ಯ] ನೃತ್ಯದ ಅಂಗಿಕಾಭಿನಯದಲ್ಲಿ ಕೈಗಳ ವಿನ್ಯಾಸ ; ಚತುರಸ್ರ, ಲಲಿತ ಮೊದಲಾದ ಮೂವತ್ತು ಭೇದಗಳುಳ್ಳ ಅಂಗ : ಚತುರಸ್ರ, ಉದ್ವೃತ್ತ, ತಲಮುಖ . . . ವಲಿತ, ಲಲಿತ – ಈ ಮೂವತ್ತು ನೃತ್ತಹಸ್ತಂಗಳ್ (ಲಾಸ್ಯರಂ. ೨-೪೪ ಪ); ನೃತ್ತಹಸ್ತವೂ ಒಂದು ಚಲನೆಯೂ ಕೂಡಿದರೆ 'ಕರಣ'ವಾಗುತ್ತದೆ (ಅಭಾನೃ. ೩೦). [ನೃತ್ತ + ಹಸ್ತ]

ನೃತ್ಯ (ನಾ). [ನಾಟ್ಯ] ಅಂಗ ಪ್ರತ್ಯಂಗ ವಿಕ್ಷೇಪ ಸಹಿತವಾಗಿ, ವಾಗರ್ಥದ ಮೂಲಕ ಶೋಕ ವೀರಾದಿ ನವರಸಗಳನ್ನು ಪ್ರತಿಪಾದಿಸುವುದು ; ಗಿ ನೃತ್ತದಲ್ಲಿ ಸೌಂದರ್ಯಭಾವವು ಶುದ್ಧ, ಪ್ರಧಾನ. ನೃತ್ಯದಲ್ಲಿದು ಪರೋಕ್ಷ, ಗೌಣ : ನೃತ್ಯಂ, ತಾಂಡವಂ,

ಲಾಸ್ಯಂ–ಈ ೩ ನಾಟ್ಯಮೆಂಬುದು"(ಹಲಾಯು. ೧೩–೧೩); ತ್ರಿದಶಗಣಾಧಿನಾಯಕನ ಪರ್ವಿದ ತೋಳ್ದುಜುಗಲ್ಗಳೊಳ್ ಪಳಂಚಿದ ಗಗನಂಬರಂ ನೆಗೆದು ಸೂಸದೆ ಬಾಹುಪರಿಭ್ರಮಂಗಳೊಳ್ ಬೆದಜಿದೆ ಶಕ್ರನೃತ್ಯದೊಳೊದಂಬಡೆ ನರ್ತಿಸುವಲ್ಲಿ ಜತ್ತವಟ್ಟದ ಮಣಿಯಂತದೇಂ ಪದುಳಮಾದುದೊ ದಿವ್ಯ ವಧೂಕದಂಬಕಂ(ಆದಿಪು. ೭–೧೨೫); ನೃತ್ಯದ ಗೀತದ ವಾದ್ಯದ ಬಿತ್ತರಮಂ ಮೊದಲೆ ಮನದೊಳವಗಾಹಿಸುತುಂ . . . ಕೇಳಿಸಿದನೀಶನಂ ತಾಳ ಧರಂ (ವಿಕ್ರಾಸಾ. ೭೭); ಬಜಿಯಯಾಂಗಿಕದಭಿನಯದಿಂ ನೆಜಿಭಾವಂಗಳನೆತೋರ್ಪುದೇ, ನೃತ್ಯಾತ್ಮಿಂ (ಲಾಸ್ಯರಂ. ೧–೬೨) ; ಕರುಣದಿಂದ ನರ್ತಿಸುವಾಗ ನಟನತಾಂಡವ, ನೃತ್ಯದುತ್ಕಟ . . . ಗುಂಡಾಳವ ನಟಿಸಿ ಪಾತ್ರವಾದಿದನು (ಭೈರಸಾ. ೨೫೬). [ಸಂ.]

ನೃತ್ಯಕಲೆ (ನಾ). ನರ್ತನಕಲೆ ; ನಾಟ್ಯ : ಇಂದ್ರನು ಬುಧನ (ವಿಭುನ ಕನ್ಯಾ)ನವಾಂಶಗಳಲ್ಲಿರುವಾಗ ಸೂರ್ಯ ನೋಡಿದರೆ ಜಾತಕನು ನೃತ್ಯಕಲೆಯಲ್ಲಿ ನಿಪುಣನೂ . . . ಶನಿ ನೋಡಿದರೆ ಶಿಲ್ಪನಿಪುಣನೂ ಆಗುತ್ತಾನೆ(ಜಾತಕ.೫೦–೧೯ಅಡಿಟಿ) : ಮದನ್‌ಲಾಲ್ ಜೋಶಿಯು ನೃತ್ಯಕಲೆಯ ಮೇಲಿನ ತನ್ನ ಅಭಿಮಾನವನ್ನು ಮಾತುಗಳಿಂದ ವ್ಯಕ್ತಪಡಿಸಿದ (ಪೊಪಮ. ೧೭೭) ; ಕಲೆಗಳಲ್ಲೆಲ್ಲ ನೃತ್ಯಕಲೆಯು ಅತ್ಯುನ್ನತವಾದ . . . ಅತಿ ಸುಂದರವಾದ ಕಲೆ (ಅಭಾನೃ. ೧).

[ನೃತ್ಯ + ಕಲೆ೨]

ನೃತ್ಯಗಾತಿ (ನಾ). ನಾಟ್ಯ ಮಾಡುವವಳು ; ನರ್ತಕಿ : ಮೂರನೆಯ ವಿಧದ ಕಂಭಗಳಲ್ಲಿ . . . ನೃತ್ಯಗಾರರ, ನೃತ್ಯಗಾತಿಯರ, ವಾದ್ಯಗಾರರ ಚಿತ್ರಗಳು ಇತ್ಯಾದಿ ಕೆತ್ತನೆ ಇರುತ್ತವೆ (ನೊಳಂಬ. ೧೧೫).

[ನೃತ್ಯಗಾರ+-ತಿ೧(<-ಇತ್ತಿ)]

ನೃತ್ಯಗಾರ (ನಾ). ನಾಟ್ಯ ಮಾಡುವವನು ; ನರ್ತಕ : ಉತ್ತಮ ಮತ್ತು ಪ್ರಸಿದ್ಧ ನೃತ್ಯಗಾರರು ಕಲೆಯನ್ನು ಚೆನ್ನಾಗಿ ಹೇಳಿಕೊಡಬಲ್ಲರು ಎಂಬ ಭಾವನೆಯು ತೀರಾ ತಪ್ಪು (ಅಭಾನೃ. ೮).

[ನೃತ್ಯ+-ಗಾರ(<-ಕಾಱ)]

ನೃತ್ಯಗೀತೆ (ನಾ). ನರ್ತಿಸುವಾಗ ಹೇಳುವ ಹಾಡು : ನೃತ್ಯಗೀತೆಗಳನ್ನೂ ಅಭಿನಯಗೀತೆಗಳನ್ನೂ ಹೇಳಿಸಿ ಸಣ್ಣ ಸಂವಾದದ ನಾಟಕಗಳನ್ನು ಆಡಿಸಬೇಕು (ಶಿಕ್ಷದ. ೧೦೮). [ನೃತ್ಯ+ಗೀತೆ]

ನೃತ್ಯಗೃಹ (ನಾ). ನಾಟ್ಯಮಾಡುವ ಮನೆ; ನೃತ್ಯಶಾಲೆ : ನಾಟ್ಯವಿದರ್ ತಾಂಗೆಯುಮೇಜಾ ನೃತ್ಯಗೃಹಮಂ ಚಕ್ರೇಶ್ವರೋದ್ದಾಮ ರೂಪವಿಲೋಚಾಮೃತಪ್ರಲೋಚನಮನಸ್ಸಂಕಲ್ಪ ಸಂಭೋಗ ಸಂಭವ ಘರ್ಮಾಂಬುಗಳಿಂದವಿರ್ಮರ್ದಿಸಿದಳ್ ನೃತ್ತಶ್ರಮಸ್ವೇದಮಂ (ಆದಿಪು. ೧೧–೧೯); ಮಧುಲಕ್ಷ್ಮೀ ನೃತ್ಯಗೃಹಂ ಮಧುವ್ರತಸ್ತ್ರೀನಿಕಾಯಮಾಧ್ವೀಕ ಗೃಹಂ ಮಧುವಿತ್ರ ಜಗಜ್ಜೈತ್ರಾಯುಧಗೃಹಮೆನೆ ವಿಳಸವಿಚಕಿಳಂ ಸೊಗಯಿಸುಗುಂ (ಚಂದ್ರಪು. ೭–೫೦); ನೃತ್ಯಗೃಹಂಗಳ್ ಕುಳನಗ ಮತ್ತುನ್ನತವಡೆಯಲೆಂದು ಯವನೋನ್ನತನಂ ಸ್ತುತ್ಯನನೊಸೆದೋಲಗಿಪ ವೊಲತ್ಯಾಯತವಡೆದು ಸುತ್ತಿ ಸೊಗಯಿಸುತಿರ್ಪುಂ (ಪಾರ್ಶ್ವಪು.೧೬–೫೮).

[ನೃತ್ಯ+ಗೃಹ]

ನೃತ್ಯಜ್ಞ (ನಾ). ನಾಟ್ಯವನ್ನು ಬಲ್ಲವನು : ಮತಿವಂತಂ ಪರಚಿತ್ತಕಾಂಕ್ಷಿ ಬ[ಲುವೆಲ್ವಂ] ಗೀತ ನೃತ್ಯಜ್ಞನುನ್ನತನಾಸಂ . . . ನಯುಂಗ್ಮೋದ್ಭವಂ (ಜಾತಕ. ೧೬–೩). [ಸಂ.]

ನೃತ್ಯತಂಡ (ನಾ). ನರ್ತಕರ ಸಮೂಹ; ನಾಟ್ಯದವರ ಗುಂಪು : ಅವನನ್ನು ನೋಡಲೋಸುಗ ಕೊಂಕಣ ಮತ್ತು ಕರ್ನಾಟಕದಿಂದ ಹೆಂಗಸರೂ ಗಂಡಸರೂ ಇರುವ ನೃತ್ಯತಂಡದವರು ಬಂದರಂತೆ (ದ್ರಾವಿ. ೬೨).

[ನೃತ್ಯ+ತಂಡ]

ನೃತ್ಯನಾಟಕ (ನಾ). ಮಾತಿಲ್ಲದೆ ಕೇವಲ ನರ್ತನದ ಮೂಲಕವೇ ಅಭಿನಯಿಸುವ ನಾಟಕ ; ☞ ಮಾತಿಲ್ಲದೆ ಮೂಕಾಭಿನಯದಿಂದ ನಾಟ್ಯದ ಮೂಲಕ ವೇಷಭೂಷಣಗಳೊಂದಿಗೆ ಅಭಿನಯಿಸುವ ನಾಟಕ. ಇದು ಯೂರೋಪಿನಲ್ಲಿ ಪ್ರಸಿದ್ಧಿ ಹೊಂದಿದ 'ಬ್ಯಾಲೆ' ನೃತ್ಯವನ್ನು ಹೋಲುತ್ತದೆ : ಒಮ್ಮೆ ಸೂಲಮಂಗಲಂದಲ್ಲಿ ಅವರು "ಪ್ರಹ್ಲಾದ ಚರಿತ್ರಂ" ನೃತ್ಯನಾಟಕಕ್ಕೆ ಹೋಗಿದ್ದರು (ಸಂಗೀತ. ೯೧) ; ಇನ್ನೂ ಅನೇಕ ನೃತ್ಯನಾಟಕಗಳನ್ನು ನಾಟ್ಯಾಚಾರ್ಯರು ವಿರಚಿಸಿದ್ದಲ್ಲಿ ಭರತನಾಟ್ಯದಲ್ಲಿ ಹೊಸಹೆಜ್ಜೆಯನ್ನಿಟ್ಟಂತಾಗುವುದು (ಅಭಾನೃ. ೬೧).

[ನೃತ್ಯ+ನಾಟಕ]

ನೃತ್ಯಭಂಗಿ (ನಾ). ನಾಟ್ಯದ ರೀತಿ ; ಕುಣಿತದ ನಿಲುವು : ಈ ಪ್ರತಿಯೊಂದು ನೃತ್ಯಭಂಗಿ, ಸಂಗೀತಪಾದ್ಯಗಳನ್ನು ಸೂಕ್ಷ್ಮವಾಗಿ ವಿಮರ್ಶಿಸಬೇಕಾಗಿದೆ (ಹೊಪ್ರವಾ. ೨೪) : ಶಾಸ್ತ್ರೀಯ ನೃತ್ಯಭಂಗಿಗಳನ್ನು ಕೆತ್ತಿದ ಶಿಲ್ಪಿಗಳು ನೃತ್ಯದಲ್ಲಿ ಪಾಂಡಿತ್ಯವನ್ನು ಹೊಂದಿದ್ದರೆಂದು ಗೊತ್ತಾಗುತ್ತದೆ (ಅಭಾನೃ. ೫೧). [ನೃತ್ಯ+ಭಂಗಿ೨]

ನೃತ್ಯಮಂಡಲಿ (ನಾ). ನರ್ತನ ಮಾಡುವವರ ಗುಂಪು; ನರ್ತಕರ ತಂಡ : ಲಲಿತಕಲಾ ಅಕಾಡಮಿಯು ನೃತ್ಯಮಂಡಲಿಯೊಂದನ್ನು ಹೊರ ದೇಶಕ್ಕೆ ಕಳಿಸಿತು (ಡಂಢಿ). [ನೃತ್ಯ+ಮಂಡಲಿ೧]

ನೃತ್ಯಮಂದಿರ (ನಾ). ☞ನೃತ್ಯಗೃಹ : ನಿಮ್ಮ ನೃತ್ಯಮಂದಿರದ ದಾಸಿಯಾಗಿ ನಿಮ್ಮ ಸೇವೆ ಸಲ್ಲಿಸುತ್ತೇನೆ (ಪೊಸಮ. ೩೦೨) ; ಸಂಜೆ ಭೋಜನಾನಂತರ ಹೊರದೇಶದಿಂದ ಬಂದಿದ್ದ ಕೀಸ್‌ವೆಟ್ಟರ್‌ನ ಉಪದೇಶ ಕೇಳುವ ಸಲುವಾಗಿ ವಿಶಾಲ ನೃತ್ಯಮಂದಿರದಲ್ಲಿ ಜನ ಬಂದು ನೆರೆಯುತ್ತಿದ್ದರು (ಪುನರು. ೩೪೫). [ನೃತ್ಯ+ಮಂದಿರ೨]

ನೃತ್ಯರಸ (ನಾ). ನರ್ತನದಿಂದುಂಟಾಗುವ ಆನಂದ : ಗೀತವಾದ್ಯಂ ನೃತ್ಯರಸದೊಳೋಲಾಡುತುಂ ನೂತನೋದ್ಗತ ನರ್ತನಕ್ಕೆ ಮುಯ್ಯಾನುತುಂ ಕೊಡೆ ಹೀಲಿದಳಿಯಣಕುಗಳ ನಡುವೆ ಮೆಜಿವುತುಂ (ನಂಬಿರ.೩–೬೧).

[ನೃತ್ಯ+ರಸ]

ನೃತ್ಯಲೀಲೆ (ನಾ). ನರ್ತನದ ವಿಲಾಸ: ಅಂತು ಗಗನರಂಗದೊಳ್ ನೃತ್ಯಲೀಲೆಯಂ ಮೆಜಿದು ವಾಸವನಿವಾಸಕ್ಕಭಮುಖಿಯಾಗಿ ಪೋದಳ್ (ಜಗವಿ. ೩–೧೩೫).

[ನೃತ್ಯ+ಲೀಲೆ]

ನೃತ್ಯವಿದ್ಯೆ (ನಾ). ☞ನೃತ್ಯಕಲೆ : ಚರಣನಿಕಂಬಗ್ರೀವಾಕರಶಾಖಾಜನಿತ ರೇಚಕಂ ನಯನಮನೋಹರಮಾಗೆ ನೃತ್ಯವಿದ್ಯೆಯೆ ಪರಿಜಂ ಕೈಕೊಂಡು ದಿಂದಿನಂ ಸೊಗಯಿಸಿದಳ್ (ಮಲ್ಲಿಪು. ೮–೩೬). [ನೃತ್ಯ+ವಿದ್ಯೆ]

ನೃತ್ಯಾಂಗ (ನಾ). ನಾಟ್ಯದ ಭಾಗ ; ನರ್ತನಕ್ಕೆ ಸೇರಿದುದು : ಅಂಗನಾಳುಸುಮುಸುಳುಮಾರಾಂಗಸಮುಚಿತಮುಮಪ್ಪ ಲಾಸ್ಯಮನಚ್ಯ ರಸೆಯರಾದಿ ಸಂಧ್ಯಂಗಗತ ನೃತ್ಯಾಂಗರಸಭಾವಾಭಿನಯಾಂಗಳನಿಂದ್ರಂ ಶ್ರೀದೇವಂಗೆ ನೋಡಿತೊಳ್ಕೆಂಬಂತೆ ಪರಿಸ್ಫುಟಂ ಮಾಡಿ (ಶಾಂತಿಪು. ೭–೬೨ ಪ).

[ನೃತ್ಯ+ಅಂಗ೨]

ನೃಪ (ನಾ). ಪ್ರಜೆಗಳನ್ನು ಕಾಪಾಡುವವನು ; ಜನರನ್ನು ರಕ್ಷಿಸುವವನು ; ಅರಸ ; ದೊರೆ ; ರಾಜ : "ರಾಜಾ, ರಾಜನ್ಯಃ, ರಾಟ್, ಪ್ರಜಾಪತಿಃ, ಕ್ಷತ್ರಿಯಃ, ನೃಪಃ, ಕ್ಷತ್ರಂ . . . ಲೋಕಪಾಲಃ–ಈ ೧೩ ಅರಸು" (ಹಲಾಯು. ೬೯–೩೬೭) ; ನರಪತಿ ಬಂದನಾ ನೃಪನನಟ್ಟುಳಿಯೆ ಕಾಣ್ಬುದು (ಕವಿಕಾ. ೧–೧೧೫); ಆ ನೃಪರೊಳಾರಾ ಪಾಂಡುರಾಜಂ ಬರಂ (ಪಂಪಭಾ. ೧–೧೧೦) ; ನೃಪಂ ಚಕ್ರಿಪದಾಂಬುಜಕ್ಕೆಜಗವೇಟ್ವೀ ರತ್ನವಿಸಾ ಹೇಮವಿಸಾ ದ್ವಿಪವಿಸಾ ತುಂಗತುರಂಗವಿಂಗಳವರಿತ್ತರ್ಥಂಗಳೆಂದೆಂದು (ಶಾಂತಿಪು. ೧೧–೪೪) ; ನೃಪಂ ಸಿನ್ನಂ ಪಿದಿದುಯೆ ಭಾನು ಮತಿಯಂ ಸಂತೈಸಿ ಚಿತ್ರಾಂಗದಂಗುಪಯೋಗಾಸ್ತ್ರವನೆಚ್ಚು ಕೊಡೆ ನಭದಿಂ

ಗಾಂಪೀವಿ ತರ್ಪಾಗಳ್ (ಗದಾಯು. ೨-೩೪) ; ಕಾಳೆಗದ ಮುಖವಾವು ದೆಂದಜುಯದ ಹಂದೆನೃಪಂಗೆ (ಒಸಪ.೭೦೫) ; ನೃಪನೆನ್ನಂ ಬಗೆದಿರ್ಕುಮೋ ಕರುಣದಿಂ ಕೈಸಾರ್ಗುಮೋ ಪೇಟುಮೆಂದುಪತಾಪಂ ಬಿಗೆ ಸುಯ್ದು . . . ಶಂಕೆಪಳಂ ಮೆಲ್ಲನೆ ಸಾರ್ದು ಸಾರ್ದು ಸಖಿಯರ್‌ಪೊಂದಾಟಿಯಂ ಬೀಸುವರ್ (ಸಳಚ. ೧೪೯). [ಸಂ.]

ನೃಪಕಾಂತೆ (ನಾ). ರಾಜನ ಹೆಂಡತಿ ; ರಾಣಿ ; ಅರಸಿ : ನೃಪ ಕಾಂತೆಯ ಕೆಲದೊಳ್ ಶೋಭಿಪ ಸುತನಂ ರೂಪವಿಜಿತಕಮಲಾಸುತನಂ ಈಕ್ಷಿಸುತಿರ್ದಂ (ಕುಸುಮಾ. ೬-೯೧). [ನೃಪ+ಕಾಂತೆ]

ನೃಪಕುಮಾರ (ನಾ). ರಾಜಕುಮಾರ ; ರಾಜಪುತ್ರ : ನೋಡಿದಂ ನೃಪಕುಮಾರರನುತ್ಸವದಿಂದ ಬಾಹುಕಂ (ಸಳಚ. ೭೧೬) ; ಎಲೆ ಯುಧಿ ಷ್ಠಿರ ನೃಪಕುಮಾರ ಪ್ರಳಯದಾಪತ್ತಾಯ್ತೆ ಭೀಮನ ನಲವಿಗೂನೆಯ ವಾಯ್ತೆ . . . ದ್ರೌಪದಿ ಸುಭದ್ರಾಲಲನೆಯರಿಗನುಚಿತವು ಘಟಿಸಿತೆ ಎಂದನಾ ಮುನಿಪ (ಕುವ್ಯಾದ್ರೋ. ೬-೨೨). [ನೃಪ+ಕುಮಾರ]

ನೃಪಕುಲ, ನೃಪಕುಳ (ನಾ). ಅರಸುಕುಲ ; ರಾಜಕುಲ : ಬವಣೆಯೇಕೆ ಹಿಮಾಂಶುಕುಲಸಂಭವನು ಸುಜನಾಧಾರ ನೃಪಕುಲನಿವಹದೊಳು ವಿಖ್ಯಾತ . . . ಇನ್ನಾ ಭುವನಪತಿಗೆನೆ ಯಪರು ಲೋಕದೊಳೆಂದ ನಮರೇಂದ್ರ (ಸಳಚ. ೪-೧೨). **ನೃಪಕುಳ :** ಅಳವಡೆ ಭುಜದೊಳ್ ಮೃಗಮದತಿಳಕದವೋಲ್ ಸಕಲಧರಣಿ ಯೆಂಬನ ಭೂಷಾವಳಿಯನೆ ತಿರ್ದುವನಾ ನೃಪಕುಳಶೇಖರನಮೃತಮತಿಯ ಮುಖದರ್ಪಣದೊಳ್ (ಯಶೋಚ. ೨-೧೬). [ನೃಪ+ಕುಲ]

ನೃಪಕುಳ 'ನೃಪಕುಲ' ನೋ.

ನೃಪಗೃಹ (ನಾ). ಅರಮನೆ ; ರಾಜನ ವಾಸಸ್ಥಾನ : ಇದು ಬನ ಮಿದು ನೃಪಗೃಹಮೆಂಬುದವೋಘಂ (ಜಗವಿ. ೨-೩೬).

[ನೃಪ+ಗೃಹ]

ನೃಪಗೇಹ (ನಾ). = ನೃಪಗೃಹ : ನಿರಾಕುಳ ಕವಿರಾಜಹಂಸಸುಭಗಂ ನಭಮಂ ನೃಪಗೇಹಮಂ ಸಮಂ ತಿಳಿಪುಗುಮಲ್ಲಿ ಮಂದಪವನೋಚ್ಚಳ ಶೀಕರಮಂಬುಜಾಕರಂ (ಪುಷ್ಪಪು. ೨-೫೨). [ನೃಪ+ಗೇಹ]

ನೃಪತಿ (ನಾ). = ನೃಪ: "ನೃಪತಿ ರಾಟ್ ರಾಜಂ ನರಾಮರಂ ಪಾರ್ಥಿವಂ ಕುಪತಿ ಮೂರ್ಧಾಭಿಷಿಕ್ತಂ ಕ್ಷತ್ರಿಯಂ ಪ್ರಜಾಧಿಪನೆನಲ್ಕುರಸಕ್ಕು" (ನುಂಗರಾ. ೭೮-೧) ; ನೃಪತೀ ಪರೋಪಕಾರೀ . . . ರಿಪುವರ್ಗ ಮನಳೆದು ಗೆಲ್ವೆಯೊಗಾಹವದೊಳ್ (ಕವಿರಾ. ೨-೨೪) ; ನೃಪತಿ ಪತಿವ್ರತೆ ಬಂದಿರ್ದಪಳರಮನೆಯೆಸೆವ ಬಾಗಿಲೊಳ್ (ದಶಕು. ೧೨-೯೩) ; ನೃಪತಿಗೆ ಸಹಾಯವನಿಗ್ಗಿ ಮಾಡುವವು (ಕುವ್ಯಾಸ. ೫-೧೩) ; ನೃಪತಿಯಾ ಭಾವ ಮಹಿಮಾಜ್ಯೋತಿ ಸಂಜರಿಸಿದುದು ವಿಂಚಿ ಪಟ್ಟಮಹಿಷಿಯರೆರ್ದ ಗಳೊಳ್ (ತ್ರಿಲೋಮಾ. ೧೨-೩೧). [ಸಂ.]

ನೃಪತಿನಿಕೇತ (ನಾ). = ನೃಪಗೃಹ : "ನೃಪತಿನಿಕೇತಸ್ಥಾನಕಮುಪ ಕಾರ್ಯಮುಮಂತದಕ್ಕುಂ" (ಪಸ್ತು.ಕೋ. ೪೮-೧೩). [ನೃಪತಿ+ನಿಕೇತ]

ನೃಪತಿಲಕ, ನೃಪತಿಳಕ (ನಾ). ರಾಜಶ್ರೇಷ್ಠ : ಬಲದ ಗದ್ದುಗೆಗಳಲಿ ಭಟರಗ್ಗಳೆಯು ರವಿಸುತ ನದಿಯು ಮಗ ನೃಪತಿಲಕ ದುಶ್ಶಾಸನ ಕೃಪ ದ್ರೋಣಾದಿ ನಾಯಕರು . . . ಗಜಗಲಿಸಿದರು ಮಾಣಕ್ಕಮಂಡೆಯಭೂಷಣ ವಿಳಾಸದಲಿ (ಕುವ್ಯಾಉ. ೮-೩೦). **ನೃಪತಿಳಕ :** ಅಂಬರತಟಕ್ಕೆ ಖಗ ಕುಲವಂಬರವಂ ಕೊಂಡು ಪಾಱಲಿಕ್ಕಿಸುತಿರ್ದಂ ಕಂಬುಗ್ರೀವಂ ನೋಯಲ್‌ಕಂಬು ಗ್ರೀಷ್ಮಕ್ಕೆ ಸುಗಿವವೋಲ್ ನೃಪತಿಳಕಂ (ಸಳಚಂಪೂ೨೮೮)

[ನೃಪ+ತಿಲಕ]

ನೃಪತಿಸನಾಭಿ (ನಾ). ರಾಜನಿಗೆ ಸಮೀಪದ ಸಂಬಂಧಿ ; ದಾಯಾದಿ : ನೃಪನ ನರಪಾಲತನಯನ ನೃಪವಧುವರ್ನೆರೆದು ಸುಖದಿನಿರೆ ಕೈಕೊಂಡತ್ತ ಪರಿಮಿತರಾಗಮೆರ್ದೆಯಂ ನೃಪತಿಸನಾಭಿಗಳ ಬಂಧುಜನದಾ ಕೆಯೊ (ಕವಿರಾ. ೨-೨೨). [ನೃಪತಿ+ಸನಾಭಿ]

ನೃಪತಿಳಕ 'ನೃಪತಿಲಕ' ನೋ.

ನೃಪತುಂಗ (ನಾ). ೧. = ನೃಪತಿಲಕ : (ಕ). ೨. ರಾಷ್ಟ್ರಕೂಟ ಅಮೋಘವರ್ಷನೆಂಬ ರಾಜನ ಹೆಸರು : ಶ್ರೀ ತಳ್ತುರದೊಳ್ ಕೌಸ್ತುಭಜಾತದ್ಯುತಿ ಬಳಸಿ ಕಾಂಡಪಟದಂತಿರೆ ಸಂಪ್ರೀತಿಯಿನಾಪನನ ಗಲಳ್ ನೀತಿನಿರಂತರನುದಾರನಾ ನೃಪತುಂಗಂ (ಕವಿರಾ. ೧-೧).

[ನೃಪ+ತುಂಗ೨]

ನೃಪಧರ್ಮ (ನಾ). ಅರಸನು ಅನುಸರಿಸಬೇಕಾದ ಧರ್ಮ ; ರಾಜ ಧರ್ಮ : ಕಪಟದ್ಯೂತವಿದು ನೃಪಧರ್ಮವೇ (ಕುವ್ಯಾಗ. ೫-೧೨) ; ಕಪಥನ ಗೈದುದನಲಾಪಿಸುವುದಿದು ನೃಪಧರ್ಮವೇನೋ ನರೇಂದ್ರಾ ಕೃಪಾಕರ ಗುಣಸಾಂದ್ರ (ಶಾಳುಂತ. ೬೮ ಅಡಿಪದ್ಯ). [ನೃಪ+ಧರ್ಮ]

ನೃಪನಂದನ (ನಾ). = ನೃಪಕುಮಾರ : ನೃಪನಾ ನೃಪನಂದನನಾ ನೃಪವಧುವರ್ ನೆರೆದು ಸುಖದೊಳಿರೆ ಕೈಕೊಂಡತ್ತ ಪರಿಮಿತರಾಗ ಮೆರ್ದೆಯಂ ನೃಪಬಾಂಧವರಾ ಸುಮಿತ್ರರಾ ಪರಿಜನ(ದಾ) (ಕವಿರಾ. ೨-೨೧). [ನೃಪ+ನಂದನ]

ನೃಪನಂದನೆ (ನಾ). ಅರಸನ ಮಗಳು ; ರಾಜಪುತ್ರಿ : ನೃಪನಂದನೆ ತನಗುದಯಿಸಿದ ಪುತ್ರನಂ ರುದ್ರಭೂಮಿಯೊಳ್ ಬಿಸುಟು ಬರಲ್(ದಶಕು. ೯-೪೩). [ನೃಪ+ನಂದನೆ]

ನೃಪನೀತಿ (ನಾ). = ನೃಪಧರ್ಮ : ನುಡಿದೆರಡನಾಡದಿರು ಕಾರ್ಯವ ಬಿಡದಿರು . . . ಅನುಜಾತ್ಮಜರೊಳಗ್ಗೊಡೆಯದಿರು ನೃಪನೀತಿಯಿದು ಭೂಪಾಲ ಕೇಳೆಂದ (ಕುವ್ಯಾಸ. ೧-೪೭) ; ಅಡಸಿದಾಪತ್ತಿನಲಿ ಹಗೆಯನು ಕೆಡಹುವುದೆ ನೃಪನೀತಿ (ಕೌತಿಂಪು. ೩೬-೬೪) ; ನೃಪನೀತಿ ತಪ್ಪದಂತಿರೆ ವಿಪುಳವಚೇಶ್ರೀ ಪೊದಳ್ದು ಸಾರ್ದಂತಿರೆ ನಿನ್ನುಪಮೆಯೊಳಿಸುರುವುದೆನ ಲವನಿಪಂಗೆ (ತ್ರಿಪುವಿ.೨೪-೨೪೧); ಅರಿಭಯಂಕರಶಸ್ತ್ರಗಳ ಸಂಹರಿಸುವುದು ನೃಪನೀತಿ ನಿನಗಿದು ತರವೆ ಬಿಡು ಪರಹಿಂಸೆ ದೋಷವಿದೆಂದುದಾ ಪಕ್ಷಿ (ಸಳಚ. ೨೨-೧೪೪). [ನೃಪ+ನೀತಿ1]

ನೃಪನೀತಿವಿದ (ನಾ). ರಾಜಧರ್ಮದಲ್ಲಿ ನಿಷ್ಣಾತ ; ರಾಜನೀತಿ ಚತುರ : ಅತನನಾರಾಧಿಸಿ ನೃಪನೀತಿವಿದರ್ ಖೇಚರಾವನೀಚರರಾತ್ಮ ಖ್ಯಾತಿಶ್ರೀಯಂ ಕಾದಭಜಾತ ನೃಪಾನ್ವಯರನೆನಿಬರಂ ಪೆಸರ್ಗೊಳ್ಪಿಂ (ಶಾಂತಿಪು. ೩-೮೭). [ಸಂ. ನೃಪನೀತಿವಿದ್]

ನೃಪನೀತಿಶಾಸ್ತ್ರ (ನಾ). ರಾಜಧರ್ಮವನ್ನು ತಿಳಿಸುವ ವಿದ್ಯೆ ; ರಾಜ ನೀತಿ : ನೃಪನೀತಿಶಾಸ್ತ್ರಮಂ ನೀನಪೂರ್ವಮಂ ನುಡಿಯೆ ನುಡಿಯೆ ಮತ್ತದನನುವರ್ಣಪನ ನುಡಿಗಳ್ . . . ನಿನ್ನ ನುಡಿಗೆ ಸಮನಾದಪುದೇ (ಶಾಂತಿಪು. ೨-೩೩). [ನೃಪನೀತಿ+ಶಾಸ್ತ್ರ]

ನೃಪಪತಿ (ನಾ). ರಾಜರುಗಳ ಒಡೆಯ ; ಚಕ್ರವರ್ತಿ ; ಸಾರ್ವ ಭೌಮ : ನೃಪಪತಿಯುಕ್ತಮಿದಂ ನೀಂ [ಪಾಣಾಂ. ಉಪಪತ್ತಿಯುಕ್ತ ಮಿದನಿಂ] ನೃಪ ಕೆಯ್ಕೊಳ್ನಿನ್ನ ತಂದೆಯೆಂದುದಂ (ಗದಾಯು. ೪-೪).

[ನೃಪ+ಪತಿ2]

ನೃಪಪದ (ನಾ). ೧. ಅರಸನ ಪಾದ ; ರಾಜನ ಚರಣ : ನಮಗೆ ಭಾರಿಯ ಭಾಗ್ಯಲಕ್ಷ್ಮಿಯ ಮುಮತೆಯಾಯ್ತಿನ್ನೀನು ನೃಪಪದಕಮಲದಲಿ ಬೀಳುವೆವು ನಡೆನಡೆ ಧನ್ಯರಹೆವೆಂದ (ಕುವ್ಯಾವಿ. ೧೦-೧೪). ೨. ರಾಜ ಪದವಿ. [ನೃಪ+ಪದ2]

ನೃಪಪೀಠ (ನಾ). ರಾಜನ ಆಸನ ; ಸಿಂಹಾಸನ : ಉದಯದಲಿ ನಾವಿನಿಬರಾತನ ಸದನದಲಿ ನೃಪಪೀಠವನು ಗರ್ವದಲಿ ನೆಮ್ಮುವವಾತ ನಮ್ಮಲಿ ಖೋಡಿಯನು ಹಿಡಿಯೆ (ಕುವ್ಯಾವಿ. ೯-೪೧). [ನೃಪ+ಪೀಠ]

ನೃಪಪುತ್ರಿ (ನಾ).= ನೃಪನಂದನೆ : ನೃಪಪುತ್ರಿ ಶೂರಸೇನಾಧಿಪ ನಿದಿರೊಳ್ ಧರ್ಮನಿ ನಿಲ್ವುದುಂ ಚತುರಕಳಾಲಪನೆ ನೃಪೇಶ್ವರವರ್ಣನನಿಪುಣೆ ಪತಿಂಪರೆಯು ಮುಂದೆ ನಿಂದಿಂತೆಂದಳ್ (ಶಾಂತಿಪು. ೫-೧೨೬).

[ನೃಪ+ಪುತ್ರಿ]

ನೃಪಪ್ರತಿಮಗುಣ (ನಾ). ರಾಜನಿಗೆ ಸಮಾನವಾದ ಗುಣವುಳ್ಳವನು : ತಾರೇಶಂ ನಿಲೆ ಮೇಪದೊಳಾರಂ ಮೊದಲಾಗೆ ಪಡ್ಸ್ರಹಂ ನೋಡೆ ನೃಪಂ ಸೂರಿ ನೃಪಪ್ರತಿಮಗುಣಂ ಚೋರಂ ನಿರ್ಧನನೆನಿಕ್ಕುಮಾತಂ ಕ್ರಮದಿಂ (ಜಾತಕ. ೨೦-೧).

[ನೃಪ+ಪ್ರತಿಮ+ಗುಣ]

ನೃಪಬಾಧೆ (ನಾ). ಅರಸನ ಹಿಂಸೆ ; ರಾಜನ ಉಪದ್ರವ : ನೃಪಬಾಧೆ ಕಳ್ಳರಿಂದಾಪ ಪುಯ್ಕುಲ್ ಅಗ್ನಿಪ್ರಕೋಪಮುಬ್ಬರದಿಂದಪ್ಪು ಪಸರ್ಗಮೆನಿಪ ವಾರ್ತಾಪ್ರಪಂಚನೂದಲ್ಲಿ ಕೇಳಬೇಡೋಸಜ್ಞಾಯಂ (ಲೋಕೋಪ. ೧೨-೫೨).

[ನೃಪ+ಬಾಧೆ]

ನೃಪಭವನ (ನಾ).= ನೃಪಗೃಹ : ಜನತೋತ್ಸವಯುಗಲವ್ಯಗ್ರನಾಳ ನರಲೋಕಸಕಲಜನಕಳಕಳದಿಂದೆನಿತಾನುಂ ವಿಭವದಿನಿಂತು ನಾಡೆಯುಂ ರಯ್ಯಮಾದುದಾ ನೃಪಭವನಂ (ಆದಿಪು. ೯-೬೨) ; ಅರಿಭಯಂಕರ ಭೀಮಸೇನನ ನಿರುಪಮಾಲಯವೆಪಡೆ ಕಡೆಯಲಿ ಸರಿಸದಲಿ ಸೂತ್ರಿಸಿತು ಸಹದೇವಂಗೆ ನೃಪಭವನ (ಕುವ್ಯಾಉ. ೧೧-೪೫) [ನೃಪ+ಭವನ]

ನೃಪಭಾಗ (ನಾ). ಅರಸನಿಗೆ ಸಲ್ಲಬೇಕಾದ ಹುಟ್ಟುವಳಿಯ ಭಾಗ ; ಭೂಕಂದಾಯ ; ನೆಲದೆರಿಗೆ : ಶರಣಂಗಳೊಳು ನೃಪಭಾಗ ಜೊಳು ಜಲದೊಳಂಬುಜದೊಳನಿಲದೊಳು ಕೈಗಳೊಳು ಕರಮೆನಿಕ್ಕುಂ (ಸುಂಗರಿತಾ. ೧೪೪-೪೩).

[ನೃಪ+ಭಾಗ]

ನೃಪಮಂಡಲ, ನೃಪಮಂಡಳ (ನಾ). [ರಾಜ್ಯಶಾ] (ನೆರೆ ಹೊರೆಯ) ರಾಜರ ಸಮೂಹ: ಪಡೆಯಱಿಯಲಾದೊಡ[ರಿ]ಯಂ ಕಿಡಿಸುಗುಮಂತಃಕಳಂಕ ನೃಪಮಂಡಲ [ಸಾಣಾಂ. ೪]ಮಂ ತಡೆಯದೆ ತಮ ಸ್ಸ್ವಭಾವಂ ಕಿಡಿಸುವವೋಲಱಿದು ರಾಹು ಶಶಿಮಂಡಲಮಂ (ಕವಿರಾ. ೩-೧೫೭). **ನೃಪಮಂಡಳ** : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. ☞ ವಿಜಿಗೀಷು, ಅರಿ, ಮಧ್ಯಮ ಮತ್ತು ಉದಾಸೀನ ಎಂಬ ನಾಲ್ಕು ಬಗೆಯ ರಾಜರಿದ್ದು, ಪ್ರತಿಯೊಬ್ಬರಿಗೂ ಮಿತ್ರ ಹಾಗೂ ಮಿತ್ರಮಿತ್ರ ಎಂಬ ಅರಸರಿರುವುದರಿಂದ ಈ ಮಂಡಲಗಳು ಹನ್ನೆರಡಾಗುತ್ತವೆ. [ನೃಪ+ಮಂಡಲ]

ನೃಪಮಂಡಳ 'ನೃಪಮಂಡಲ' ನೋ.

ನೃಪಮಂದಿರ (ನಾ).=ನೃಪಗೃಹ : ಬಂದು ವೇದವ್ಯಾಸಮುನಿ ನೃಪಮಂದಿರವ ಹೊಗಲೆದ್ದು ಪದದಲಿ ನಂದನನಿ ಜಾಜದನು ಮುಕುಟವನವನಿಪಾಲಕನು (ಕುವ್ಯಾದ್ರೋ. ೬-೨೧).

[ನೃಪ+ಮಂದಿರ]

ನೃಪಮುಕುರ (ನಾ). = ನೃಪತಿಲಕ : ಅಳಟೆ ಕಪಟದೂತದಲಿ ನೃಪಮುಕುರನುನ್ನತಿ ಮುಱಿದುದೇ ಕೌಳಿಕದಲೀ ಕೌರವರು ಕೊಂಡರೆ ಧರ್ಮಜನ ನೆಲನ ಅಳುಟಲರಿಗೇಕೆಮು ನಿರಾಬಾಧಕರಿಗೇಕೆಮು 'ಸಕಲ ಸುಜನಪ್ರಕರವಂದ್ಯರಿಗೇಕೆನುತ್ತನುರಾರಿ ಚಿಂತಿಸಿದ (ಕುವ್ಯಾಅ. ೨-೩).

[ನೃಪ+ಮುಕುರ]

ನೃಪಯೂಥ (ನಾ). ರಾಜರ ಗುಂಪು ; ಅರಸರ ಸಮೂಹ : ಚೆಲ್ಲಿತೀ ನೃಪಯೂಥ ಜಾಜಲಿ ಜಳ್ಳುಗಳು ಜಲಜಾಕ್ಷನ ಪ್ರತಿಮಲ್ಲ ತಾನೇ ಸಾಲದೇ ಹಾರುವೆನೆ ಕೆಲಬಲನ . . . ಎಂದನಾ ಚೈದ್ಯ (ಕುವ್ಯಾಸ. ೧೦-೬೬).

[ನೃಪ+ಯೂಥ]

ನೃಪಲಕ್ಷ್ಮ (ನಾ). ರಾಜನ ಚಿಹ್ನೆಯಾದ ಶ್ವೇತಛತ್ರ : "ನೃಪಲಕ್ಷ್ಮ—ರಿ. ರಾಜರಿಗೆ ಮಾತ್ರ ಸಲ್ಲ ಕಳ್ಳ ಚಿಹ್ನೆ" (ಸಿದ್ಧಾಂಶಿ. ೩೪೫).

[ನೃಪ+ಲಕ್ಷ್ಮ]

ನೃಪಲಕ್ಷ್ಮಿ (ನಾ). ರಾಜ್ಯಭಾರ ಮಾಡುವ ಪದವಿ,—ಅಧಿಕಾರ, — ಐಶ್ವರ್ಯ : "ಅರಸು ನೃಪಲಕ್ಷ್ಮಿ ತಾನಾಧಿರಾಜ್ಯಮೆನಿಕುಂ" (ಸಸ್ತುಕೋ. ೬೨-೬೧).

[ನೃಪ+ಲಕ್ಷ್ಮಿ]

ನೃಪವಂದ್ಯ (ನಾ). ಅರಸನಿಂದ ನಮಸ್ಕಾರ ಮಾಡಿಸಿಕೊಂಡವನು ; ರಾಜಪೂಜಿತ : ನೃಪವಂದ್ಯಂ ಬಾಗ್ವಧೂವಲ್ಲಭನಮಳಯಶಂ ನಿರ್ಮಳಂ ಕಿಲ್ಬಿಸ್ಕೆಕದ್ವಿಪವಜಾಸ್ಯಂ . . . ಒಸೆದಂ ಪ್ಯಾತಶ್ರೈವಿದ್ಯೆ ಚಕ್ರಾಧಿಪಪಾದಾಂಭೋಜಭೃಂಗಂ ಸುಳವಿಜನನುನಃ ಪದ್ಮನೀರಾಜಹಂಸಂ (ಧರ್ಮಾಶ್ಯ. ೫-೨೫೯).

[ನೃಪ+ವಂದ್ಯ]

ನೃಪವಧು (ನಾ). = ನೃಪಕಾಂತೆ : ನೃಪನ ನರಪಾಲತನಯನ ನೃಪವಧುವರ್ ನೆರೆದು ಸುಖದೊಳಿರೆ (ಕವಿತಾ. ೨-೨೨).

[ನೃಪ+ವಧು]

ನೃಪವರ (ನಾ). ರಾಜಶ್ರೇಷ್ಠ : ಮೃದುಪದಪಾತದಿಂದನುಕೆಯಂ ತಳರ್ದೇಱುತಿ ಕೇಕರಾಂಶುಪಾತದಿನಲರ್ಗೊಂಡಲಂ ತಿಳಕಮಂ ತಳೆವಂತಿರೆ ಮಾಡಿ ಪರ್ದೆ ಕೊರ್ದಿದ ಕುಚದೊತ್ತಿನಂ ಕುರವಕಕ್ಕೆ ನವಾಂಕುರಮಂ ನಿನಿರ್ಚಿ ಬೀಱುದುದಬಳಾಜನಂ ನೃಪವರಂಗೆ ಮನೋಜಮಹೇಂದ್ರ ಜಾಳಮಂ (ಸುಲ್ಲಪು. ೬-೫೩) ; ನೃಪವರನುದ್ಭಟೋರ್ವಿಪನ ಧಾಳಿಗೆ ಕೆಟ್ಟಹಿತಾಂಗನಾಜನಂ ವಿಪಿನಮನಂದು ಪೊಕ್ಕು (ಉದ್ಭಟ. ೧-೧೩) ; ಶತಾನೀಕರು ಶತಾಯುಧರೆನಿಪ ನೃಪವರರು ತುರಗ ಗಜರಥ ಪಾಯದಳಸಾಗರದ ಸೌರಂಭದಲಿ ನಿಜ ಸಂವರಣೆಯನು ತೋಱುವರು ತನ್ಮುಕ್ತೋಹಿಣೀದಳವ (ಕುವ್ಯಾಉ. ೧೧-೫೩).

[ನೃಪ+ವರ್]

ನೃಪವಿದ್ಯೆ (ನಾ). ಆನ್ವೀಕ್ಷಕೀ, ತ್ರಯೀ, ವಾರ್ತಾ ಮತ್ತು ದಂಡನೀತಿ ಎಂಬ ನಾಲ್ಕು ರಾಜವಿದ್ಯೆಗಳು : ನಾಲ್ಕುಂ ನೃಪವಿದ್ಯೆಯೊಂದು ಬಲದಿಂ ಪಂಚಾಂಗವಂತ್ರಂ ಮನಂಬುಗೆ ಬೇಱಿಂದೆಡೆಗಾಣ ದುದ್ಧತರಿಪುಶ್ರೀಕಾಂತೆ ತನ್ನಂ ಶರಣ್ಬುಗೆ ಪೊಕ್ಕಂ (ಶಾಂತಿಪು. ೨-೨೮) ; ನ್ಯಾಯಾಗಮ ನೃಪವಿದ್ಯಾಮ್ನಾಯಕಲಾಕಾಮತಂತ್ರ ವಿಷಯವಿರೋಧ ಪ್ರಾಯಂ ಶಾಸ್ತ್ರವಿರುದ್ಧಂ ಶ್ರೇಯಮದಂತೆಲ್ಲಿಯಾನುಮುಕ್ತಿಕ್ರಮದಿಂ (ಕಾವ್ಯಾಪ. ೪೭೬).

[ನೃಪ+ವಿದ್ಯೆ]

ನೃಪವ್ಯಭ (ನಾ). ರಾಜಶ್ರೇಷ್ಠ : ಅಪರಾಗಂ ಮುನಿಪತಿವೋಲಪ ಗತಗುಣನಾಗಿಯುಂ ನಿಜಾಯತದೋಷಂ ವಿಪುಳಯಶೋಧನಲೋಭಂ ನೃಪ ವೃಷಭನರಾತಿನಿಕರತರುದವದಹನಂ (ಕವಿರಾ. ೩-೧೫೮).

[ನೃಪ+ವೃಷಭ]

ನೃಪಶಾಸ್ತ್ರ (ನಾ).=ನೃಪನೀತಿಶಾಸ್ತ್ರ : ರಾಜಶಾಸ್ತ್ರವನ್ನು 'ನೃಪಶಾಸ್ತ್ರ' ಮತ್ತು ದಂಡನೀತಿ ಎಂದೂ 'ಧನು' ದಂಡವೆಂದೂ, ನೀತಿಶಾಸ್ತ್ರವೆಂದೂ ಕರೆದಿದ್ದಾರೆ (ಭಾರದ. ೩೭೦).

[ನೃಪ+ಶಾಸ್ತ್ರ]

ನೃಪಶಾಸ್ತ್ರಜ್ಞತೆ (ನಾ). ರಾಜನೀತಿಶಾಸ್ತ್ರವನ್ನು ತಿಳಿದಿರುವಿಕೆ : ನೃಪಶಾಸ್ತ್ರಜ್ಞತೆಗಿಲ್ಲಿ ಮುಲ್ಲಪನೊಳಶ್ವೀಭಾಗಮುಕ್ಕಿಲ್ಲಿ ಮುಲ್ಲಪನೊಳ್ ಶೂರತೆಗಿಲ್ಲಿ . . . ಮುಲ್ಲಪನೊಳ್ ನೋಟ್ರೊಡೆ ಕಾಣಲಾಗದು ಸಮಾನಂ ಮಾನವಾನೀಕಮಂ (ಅಜಿಪು. ೧-೩೭).

[ಸಂ. ನೃಪಶಾಸ್ತ್ರಜ್ಞತಾ]

ನೃಪಸಂಪದ (ನಾ). ಅರಸನ ಸಂಪತ್ತು ; ರಾಜನ ಐಶ್ವರ್ಯ : ಶವದ ಸಿಂಗಾರದಂದದೊಳೆನಗೆ, ಮುಕ್ಕಳಿಲ್ಲದ ಬೊರೆಗೆ, ನೃಪಸಂಪದಂ (ಶ್ರೀರಾಪು. ೯-೩೨೮).

[ನೃಪ+ಸಂಪದ]

ನೃಪಸತಿ (ನಾ). = ನೃಪಕಾಂತೆ : "ಭಟ್ಟನಿಯರ್ ನೃಪಸತಿಯರ್" (ಸಸ್ತುಕೋ. ೬೦-೪೯) ; ನೃಪಸತಿಯು ಕೆಲದ ಚಮರರುಹಪಾಣಿಪಲ್ಲವಲತಾಂಗಿ ಗೆಲವಂದಳ್ ಮುಗ್ಧಪಯೋಧಿಮಥನದೊಳ್ ಫೇನಪಟಳಮಂ ಪಿಡಿದು ನೆಗೆವ ಲಕ್ಷ್ಮೀವಧುವಂ (ಸುಲ್ಲಪು. ೧೧-೯೦) ; ನೃಪಸತಿಯಗರ್ಭದಯಿಸಿದರ್ ತಪನಪ್ರತಿಮಪ್ರತಾಪರಧನವಪಾಕೀನಪತಾಕರಿಂದ್ರಸೇನನು ಮುಸೇಂದ್ರಸೇನನುಮೆನಿಪ್ಪ ಪೆಸರಿನೆವಿರ್ಪರ್ (ಶಾಂತೀಶ್ವ. ೬-೨೪).

[ನೃಪ+ಸತಿ]

ನೃಪಸದನ (ನಾ). = ನೃಪಗೃಹ : ಇದು ಬನಮಿದು ನೃಪಗೃಹ ಮೆಂಬುದಮೋಘಂ ಸ್ಪರ್ಶನಾನುಮಿತಮಪ್ಪುದುಷಟ್ಪದಶುಕಪಿಕಾಳಿಗೆನೆ ನೃಪಸದನಂ ಸೊಗಯಿಪುದು ಚಿತ್ರಮಣಿಶಬಲತೆಯಿಂ (ಜಗವಿ. ೨-೩೬).
[ನೃಪ + ಸದನ]

ನೃಪಸಭ (ನಾ). ಅನೇಕ ರಾಜರುಗಳ ಕೂಟ,—ಸಭೆ : ದಾಸೀ ಸಭಂ ನೃಪಸಭಂ ರಕ್ಷಸ್ಸಭಮಿಮಾದಿಶಃ (ಸಿದ್ಧಾಂತಿ. ೪೫೩). [ಸಂ.]

ನೃಪಸಭೆ (ನಾ). ೧. ರಾಜನ ಒಡ್ಡೋಲಗ; ರಾಜಾಸ್ಥಾನ : ಚತುರಚತುರಾನನರು ತರ್ಕಶ್ರುತಿಸಮಸ್ತಕಳಾಸ್ವತಂತ್ರರು ನುತಗುಣರು ನೃಪಸಭೆಯೊಳೆಸೆದರು (ಕುವ್ಯಾಉ. ೮-೩೧). ೨. = ನೃಪಸಭ: ಬಂದಳಾದಮಯಂತಿ ನೃಪಸಭೆಗಂದು ಹೊಕ್ಕಳು ಕೆಳದಿಯರು ಮುಂದದಿಂದ ತೋಱಿದರಲ್ಲಿಯಿವರಿವರೆಂದು ವಿವರಿಸುತ (ನಳಚ. ೬-೫೮).
[ನೃಪ + ಸಭೆ]

ನೃಪಸಿಂಹ (ನಾ). ರಾಜಶ್ರೇಷ್ಠ : ಮದಮಣಮಿಲ್ಲ ದಾನಗುಣದಿಂ ನೆಗೞ್ದುಂ ನೃಪಸಿಂಹನಾಗಿಯುಂ ವಿದಿತ ವಿಶುದ್ಧ ಭದ್ರಗುಣಂ (ಗದಾಯು. ೧-೧೦). [ನೃಪ + ಸಿಂಹ]

ನೃಪಸುತ (ನಾ). = ನೃಪಕುಮಾರ : ತೊಳಗುವ ರತ್ನಾಭರಣಂಗಳ ರುಚಿ ನಿಜರೋಮಕಾಂತಿಯೊಳ್ ತಳ್ತು ತೆಱಂಬೊಳೆಯಲ್ಕಿಂದ್ರಾಯುಧಮೇಂ ಪೊಳೆದುದೊ ನೃಪಸುತನ ಮುಂದೆ ತೆಗೆದು ಬರುತ್ತಂ (ಕಾದಂಪೂ. ೫೯೮); ನೃಪಸುತನಂ ನೋಡಲೆಯ್ತಂದಳೊರ್ವಳ್ (ಪುಷ್ಪಪು. ೫-೨೮).
[ನೃಪ + ಸುತ]

ನೃಪಸೂನು (ನಾ). = ನೃಪಕುಮಾರ : ಅಂಬೆ ಭೀಷ್ಮನ ಬೈದು ಕಂಬನಿದುಂಬಿ ಹೋದಳು ತಪಕೆ ಬಳಿಕೀಯಂಬಿಕೆಯನಂಬಾಲೆಯನು ರಮಿಸಿದನು ನೃಪಸೂನು (ಕುವ್ಯಾಆ. ೨-೩೮). [ನೃಪ + ಸೂನು]

ನೃಪಸೇನೆ (ನಾ). ಅರಸನ ಸೈನ್ಯ ; ರಾಜನ ದಂಡು : "ನೃಪಸೇನೆಯೊಳಂ ದಂಡಂ" (ವಸ್ತುಕೋ. ೧೩೮-೧೨೦). [ನೃಪ+ಸೇನೆ]

ನೃಪಸೇವೆ (ನಾ). ಅರಸನ ಸೇವೆ; ರಾಜನ ಕೈಂಕರ್ಯ : ನೃ [ಪಾಠಾಂ. ತ] ಪಸೇವಾಯಾತಪೃಥ್ವೀಪತಿಸುತವೃತತೂರ್ಯಪ್ರಣಾದಂ ಪಯಃಪಾನಪರವ್ಯಾಯಾತಗಂಧದ್ವಿಪಗಣಘನಘಂಟಾಪ್ರಘೋಷಂ . . . ಕರಂ ರಂಜಿಸೆ ಬಗೆಗೊಳಿಕುಂ ತತ್ಪುರೀರಾಜಮಾರ್ಗಂ (ರಾಜಶೇ. ೨-೧೧೨).
[ನೃಪ + ಸೇವೆ]

ನೃಪಾಲ, ನೃಪಾಳ (ನಾ). = ನೃಪ : ಅದು ಪಿರಿಯ ಸಿರಿಯ ಬಾಟ್ಮೊದಲದು ಚಾಗದ ಭೋಗದಾಗರಂ ಸಕಲಸುಖಕ್ಕದು ಜನ್ಮಭೂಮಿಯೆನಿಸಿದುದದನಾಳ್ವಂ ಮಾರಿದತ್ತನೆಂಬ ನೃಪಾಲಂ (ಯಶೋಚ. ೧-೩೩); ತಜ್ಜನಪಂ . . . ಅನಘ ಬಸವನ ಮುಖವನೀಕ್ಷಿಸೆ ಮನದೊಳನುರಾಗಿಸುತ ನಲಿದೊಯ್ಯನೆ ನಗುತ ಭಂಡಾರಿಯಿಂತೆಂದಂ ನೃಪಾಲಂಗೆ (ಬಸಪು. ೨೧-೪೬); ಈ ಸಮಸ್ತನೃಪಾಲಜನವಾರಾಸಿ ಮೇರೆಯನೊದೆವುತಿದೆ ನಿಮಗೇಸು ಭಾರವಿದೆಂದು ಬಿನ್ನವಿಸಿದನು ಭೀಷ್ಮಂಗೆ (ಕುವ್ಯಾಸ. ೧೦-೬); ಹರಕೆಗಳ ಕೈಕೊಳುತ ಸತಿ ಬಂದರಮನೆಯ ಹೊಕ್ಕಳು ನೃಪಾಲನ ಚರಣಕಮಲಕೆ ನಮಿಸಿ ಪಡೆದಳು ಪತಿಯ ಚಿತ್ತವನು (ನಳಚ. ೯-೬೩).
ನೃಪಾಳ : ಹಸ್ತ್ಯಶ್ವರಥಪದಾತಿಸಮಸ್ತಯುತಂ ನಡೆದು ನಳನೃಪಾಳಂ ರಿಪುವಂ ಶಾಸ್ತಿಯನೈದಿಸಿ ದಿಗ್ವಿಜಯಸ್ತಂಭಮನೆಂಟುದಿಕ್ಕಿನೊಳ್ ನಿಱಿಸಿಟ್ಟಂ (ನಳಚಂ. ೨೨). [ಸಂ.]

ನೃಪಾಲಕ, ನೃಪಾಳಕ (ನಾ). = ನೃಪ : ಗರ್ವಿತನೃಪಾಲಕಾಧಮದುರ್ವಿಳಸನಜನಿತ ಭೂರಿಭಾರದೊಳೆನಸುಂ ನಿರ್ವಿಣ್ಣೆಯಾಗಿ ಭೂವಧುಗೀರ್ವಾಣಾವೃತ ವಿರಿಂಚಿಸಭೆಯಂ ಪೊಕ್ಕಳ್ (ಜಗವಿ. ೧-೨೬); ನೃಪಾಲಕಂ ಕಾಮಿನಿಗೂಡಿ ನಾಡೆ ತೋರ್ಪಪಾರರಾಗಾವಿಲನಾಗಿರಲ್ಸಮಂ ತುಪೇಂದ್ರನಂ ಪೊರ್ದುವ ತಾರ್ಕ್ಷ್ಯನಂತೆ ರಂಜಿಪಾ ಶುಕಂ ಪೊರ್ದಿದುದ್ದುರ್ವಿಪಾಲನಂ (ಉದ್ಭಟ. ೭-೧೧೫); ಮೇಘನೃಪಾಲಕನ ಡಂಗುರವೊ ಮೊಳಗುವ ಸಿಡಿಲಿನಬ್ಬರವೊ . . . ಬೀಳ್ವ ತಾರಾಮಾಲೆಗಳೊ ಜೀಮೂತಲತೆ ಲಂಬಿಸಿದುದಂಬರವ (ಕುವ್ಯಾಆ. ೧೯-೧೯). **ನೃಪಾಳಕ** : ಹರಡೆ ಹೋದಗೆ ಚಾದಗೆ ಹಂಗನಿಟ್ಟೆ ಬೆಳ್ಳಕ್ಕಿಗಳಿಂ ಮನಂಗೊಳಿಪರಣ್ಯವನೆಯ್ದಿದನಾ ನೃಪಾಳಕಂ (ನಳಚಂ. ೫೨೧). [ಸಂ.]

ನೃಪಾಲಯ (ನಾ). = ನೃಪಗೃಹ : ನೃಪಾಲಯಾಂತರ್ಗತ ಕಕ್ಷೆ ಕೋಷ್ಠಂ (ವಸ್ತುಕೋ. ೪೭-೧೪). [ನೃಪ + ಆಲಯ]

ನೃಪಾವಸಥ (ನಾ). = ನೃಪಗೃಹ : ವಾಜಿಯಂ ಧಾರಾಪಂಚಕದೊಳ್ ವಿಚಿತ್ರಲಯದಿಂ ತಾಮೇಱಿ ಬರ್ಪೀ ಮಹಾಧೀರರ್ ಕಾಲ್ನಡೆಯೊಳ್ ನೃಪಾವಸಥದಿಂ ಬರ್ಪಂದಮಾವಂದಮೋ (ಪಂರಾಮಾ. ೬-೧೮೦).
[ನೃಪ + ಅವಸಥ]

ನೃಪಾಸನ (ನಾ). = ನೃಪಪೀಠ : "ನೃಪಾಸನಂ, ಭದ್ರಾಸನಂ—೨ ರಾಜರು ಕುಳಿತುಕೊಳ್ಳುವ ಆಸನದ ಹೆಸರು" (ಸಿದ್ಧಾಂತಿ. ೨೪೫).
[ನೃಪ + ಆಸನ]

ನೃಪಾಳ 'ನೃಪಾಲ' ನೋ.

ನೃಪಾಳಕ 'ನೃಪಾಲಕ' ನೋ.

ನೃಪೇಂದ್ರ (ನಾ). = ನೃಪತಿಲಕ : ಬಂದು ಮಣಿಮಕುಟನಸವಸದಿಂದಂ ಚಕ್ರಿಯ ಪೊದಟ್ಟು ತೇಜಕ್ಕೆ ಮಸುಳ್ದಂದೆಱಗಿ ಮುಂದೆ ನಿಲ್ವುದುಮೊಂದ ವಯವದಿಂದೆ ಸಾರೆ ಕರೆದು ನೃಪೇಂದ್ರಂ (ಆದಿಪು. ೧೩-೧೪); ಪರಸಿರೆ ಪರಸಿರೆ ನೃಪೇಂದ್ರನಂ ನೀವು (ಯಶೋಚ. ೧-೫೯). [ಸಂ.]

ನೃಯುಗ್ಮ (ನಾ). ೧. ಸ್ತ್ರೀಪುರುಷರ ಜೋಡಿ; ಮಾನವ ಜೋಡಿ. ೨. [ಜ್ಯೋತಿ] ಮಿಥುನರಾಶಿ : ಕವಚಧರಂ ಶೂರಂ . . . ವಿಹಗಪಾಸ್ಯಂ ನೃಯುಗ್ಮಮಧ್ಯತ್ರ್ಯಂಶಂ (ಜಾತತಿ. ೧೯-೮). [ಸಂ.]

ನೃವಾಹನ (ನಾ). ಮನುಷ್ಯರನ್ನೇ ವಾಹನವಾಗಿಸಿಕೊಂಡವನು; ನರವಾಹನ; ಕುಬೇರ : "ಯಕ್ಷಂ ಮನುಷ್ಯಧರ್ಮಂ ನೃವಾಹನ ಧನಾಧ್ಯಕ್ಷನುತ್ತರದಿಗ್ವರಂ . . . ರಾಕ್ಷಸ ದ್ವಿಷನೆನೆ ಕುಬೇರನೆನಿಸಿಕ್ಕು" (ಮಂಗರಾ. ೧೬-೧೫). [ಸಂ.]

ನೃಶಂಸ (ನಾ). ಕೆಡುಕ; ಕೇಡಿಗ; ನೀಚ; ಕ್ರೂರಿ : "ನೃಶಂಸಃ, ಕ್ರೂರಕರ್ಮಕೃತ್—ಈ ೨ ಹೊಲ್ಲೆ ಹಗೆಯ್ವವಂ" (ಹಲಾಯು. ೬೧-೨೧೭); ಜೀವರಾಶಿಗಳನೋವದೆ ಘಾತಿಸಿದೈ ನೃ[ಶಂಸ] ಬಾರ್ಬಲೆ ಬಡಿಗಾಳ ಮಂಬು . . . ಪಿರಿದೆಂದು ಮೂದಲಿಸಿ ಬಂದಿಱವರ್ ಕುಱುಪಿಂದೆ ನಾರಕರ್ (ವರ್ಧಮಾ. ೫-೨೯); ಇರದೆ ನಿಜಬಲನಾಶನವ ಸಂಗರದ ಕಲಿತನಗಳನು ಕೇಳ್ದಾಯಿರುಳು ಕಂಸಂಗಾಯ್ತು ಜಾಗರವಾ ನೃಶಂಸಂಗೆ (ನಿಭಾಗ. ೧೦-೩೮-೧). [ಸಂ.]

ನೃಶಂಸತೆ (ನಾ). ಕ್ರೌರ್ಯ ; ನೀಚತನ : ಹಿಂಸೆಗೊಡಬಡೆ ನಾನು ನಿನಗೆ ನೃಶಂಸತೆಯಲಘುವಪ್ಪುದೆಂದಳಪಾಂಸುಲೋತ್ತಮೆ ಜನವ ಬಾಧಿಪ ದುಷ್ಟಸರ್ಪವನು ಧ್ವಂಸಿಸುವೆನೆಂದಾ ಪುಳಿಂದೋತ್ತಂಸಂಗೆಂದಳು (ತಿಮ್ಮಆ. ೧-೧೦). [ಸಂ. ನೃಶಂಸತಾ]

ನೃಸಿಂಹ (ನಾ). ಮನುಷ್ಯ ಮತ್ತು ಸಿಂಹದ ಆಕಾರವನ್ನು ಹೊಂದಿದ ವಿಷ್ಣುವಿನ ನಾಲ್ಕನೆಯ ಅವತಾರದ ಸ್ವರೂಪ; ನರಸಿಂಹ : ವಾಸುದೇವಾಯ ನಮೋ ವಾಸುಕಿಶಯನಾಯ . . . ಭೂಸುರಪ್ರಿಯ ಭಜಕಪೋಷಕನೆ ರಕ್ಷಿಪುದು ಕೇಶವ ನೃಸಿಂಹರೊಲಿದು (ಕನಕ. ೯೦ ಪಲ್ಲವಿ); ದೈತ್ಯ ಹಿರಣ್ಯಕಶ್ಯಪನೊಡಲು ಬಗಿಬಗಿದು . . . ಆತನ ಕರುಳ ಮಾಲೆಯ ಯಡದ ಕೈಯಲಿ ಪಿಡಿದು ಕಂಠಕೆ ತೊಡರು ಮಾಡ್ದ ನೃಸಿಂಹ ನಾಲ್ಕನೆ ಅವತರಣವೆಂದ (ಗಗತಾ. ೧೯-೨೮). [ಸಂ.]

ನೃಸೇನ (ನಾ). ಕಾಲಾಳಿನ ಸೈನ್ಯ ; ಪದಾತಿದಳ : ಪಪ್ಪಂತವು ಪೂರ್ವಪದವಾಗಿವುಳ್ಳ ಸೇನಾ ಥಾಯಾ ಶಾಲಾ ಸುರಾ ಶಬ್ದಗಳು ನೃ, ನ್ಯು: ಆಗೋದು, ನೃಸೇನಮಿತ್ಯಾದಿಗಳು (ಸಿದ್ಧಾಂತ. ೪೫೮). [ಸಂ.ನೃಸೇನಾ]

ನೃಹರಿ (ನಾ). = ನೃಸಿಂಹ : ಆ ಮತ್ಸ್ಯನಾ ಕೂರ್ಮನಾ ನರಾಹಂ ನೃಹರಿ ವಾಮನಂ . . . ಕೃಷ್ಣನೆಂದಾತನವತಾರ ಹತ್ತೆನಿಕ್ಕುಂ (ಮುಂಗಂಠಾ. ೬-೧೯). [ಸಂ.]

ನೆಇಗಾರ 'ನೆಯ್ಗೆ ಕಾಟಿ' ನೋ.

ನೆಂಗಿಯೂರ್ (ನಾ). ಒಂದು ಸ್ಥಳದ ಹೆಸರು : ಕೀಜುವಳ್ಳಿ ಬಾಳ ಪುರು ಇತ್ಯೇತೇಶಾಂ ಗ್ರಾಮಾನಾಂ ಮಧ್ಯೇ ನೆಜ್ಞಾಯೂರ್ನ್ನಿವಳ್ಳಿ ಸಹಿತಸ್ಸುಳ್ಳಿಯೂರ್ನಾಮ ಗ್ರಾಮೋದತ್ತಃ (ಎಕ. X, ಕೋಲಾರ. ೬೩-೬೮ ; 754). [ನೆಂಗಿ? + ಊರ್]

ನೆಂಚು 'ನಂಜು$_1$' ನೋ.

ನೆಂಜು 'ನಂಜು$_1$' ನೋ.

ನೆಂಟ 'ನಂಟ' ನೋ.

ನೆಂಟತನ 'ನಂಟತನ' ನೋ.

ನೆಂಟಸ್ತ 'ನಂಟಸ್ತ' ನೋ.

ನೆಂಟಸ್ತನ 'ನಂಟಸ್ತನ' ನೋ.

ನೆಂಟಸ್ತಿಕೆ 'ನಂಟಸ್ತಿಕೆ' ನೋ.

ನೆಂಟಸ್ಥ (ನಾ). ನಂಟ ; ಬಂಧು : 'ನೆಂಟಸ್ಥಿಕೆ' ಪರಾ.

[<ನೆಂಟು + -ಸ್ಥ]

ನೆಂಟಸ್ಥಿಕೆ (ನಾ). ನಂಟತನ ; ಬಂಧುತ್ವ : ಈ ಹೊಸ ನೆಂಟಸ್ಥಿಕೆಯಿಂದ ಎರಡು ಮನೆತನಗಳಲ್ಲಿಯೂ ಅನ್ಯೋನ್ಯತೆ ಬೆಳೆಯಿತು (ಗಂಗಾಳ. ೨). [ನೆಂಟಸ್ಥ + -ಇಕೆ]

ನೆಂಟಿತ 'ನಂಟಿತ' ನೋ.

ನೆಂಟಿತ್ತಿ 'ನಂಟಿತ' ನೋ.

ನೆಂಟು 'ನಂಟು$_2$' ನೋ.

ನೆಂಟುತನ 'ನಂಟುತನ' ನೋ.

ನೆಂತರುಗೊಡಗಿ 'ನೆತ್ತರುಗೊಡಗೆ' ನೋ.

ನೆಂಪು 'ನೆನಪು' ನೋ.

ನೆಕುಂಡ, ನೆಕುಂಡಿ, ನೆಕ್ಕೊಂಡಿ (ನಾ). ಒಂದು ಸ್ಥಳದ ಹೆಸರು : ಸ್ವಸ್ತಿಶ್ರೀ ನೆಕುಣ್ಣರಾ ವಾಜುಪೇಯಾಜಿಯೂ ಮಗನ್ ಜನ್ನನ್ಕೊಟ್ಟದು ಸಲೆ ಅಚನ್ದ್ರಾರ್ಕಂ (ಎಕ. VII, ತೀರ್ಥ. ೪೫b-೫೯ ; ಸು. 890 ?). **ನೆಕುಂಡಿ :** ರಾಮಯರಸರ್ ನೆಕುಣ್ಡ ಆಳಿ (ಪ್ಯೆಅರಿ. ೧೯೧೬, ೧೨-೩ ; ೭ನೆಯ ಶತ). **ನೆಕ್ಕೊಂಡಿ :** ಅದಿವಾರದಂದು ನೆಕ್ಕೊಂಡಿಯು ಶ್ರೀರಾಮೇಶ್ವರದೇವರ್ಗೆ . . . ಬಿಟ್ಟರು (ತೆಲಂಕಾ. ೩೩-೨೪ ; 1134 ?).

[?]

ನೆಕುಂಡಿ 'ನೆಕುಂಡ' ನೋ.

ನೆಕುಂದೆ 'ನೆಕ್ಕುಂದಿ' ನೋ.

ನೆಕ್ಕನೆ (ಅ). ಇದ್ದಕ್ಕಿದ್ದಂತೆ ; ಥಟ್ಟನೆ ; ಕೂಡಲೆ : ಮುನಿದರ ಡಂದಿನೊಳ್ ರಥಮುನುಂ ಪದವಿಲ್ಲುಮನೆಯ್ದೆ ಪಾರ್ದೂ ನೆಕ್ಕನೆ ಕಡಿದು (ಪಂಪಭಾ.೧೧೯-೧೯); ಬೆಕ್ಕನೆ ಸಾವುದುಮಂ ಸಿರಿ ನೆಕ್ಕನೆ ತಿಡುವುದುಮನ ಱಾದು ಕಂಡುಂ ಕೇಳ್ದುಂ ಸೊಕ್ಕುವರುಕ್ಕುವರಂಜದೆ ಯ[ದ]ಕ್ಕುಂದಲೆ ವಾಯ್ವರನ್ಮರೆನಗಿದು ಜೋದ್ಯಂ (ಧರ್ಮಾಮೃ. ೭-೧೬೩) ; ಭುವನೈಕ ಮಲ್ಲಂ ಮೋಹಮಲ್ಲನನೆಕ್ಕತುಳದಿಂದಕ್ಕುಳಿಸದೆ ಡೊಕ್ಕಂಗೊಂಡು ನೆಕ್ಕ [ಪಾರಾಂ.ಟ್ಟ]ನೆ ಮುಱಿದಿಕ್ಕಿ (ಪಾರ್ಶ್ವಪು. ೧೬-೧೦ ಪ).

[ನೆಕ್ಕು$_3$ + -ಅನೆ$_1$]

ನೆಕ್ಕರೆ, ನೆಕ್ಕೊರ, ನೆಕ್ಕೋರೆ (ನಾ). ಒಂದು ಬಗೆಯ ಕುರುಚಲು ಗಿಡ : ಪಿಲು (ಪಲಸು) . . . ಪೇರಳೆ, ಗೋಳಿ, ನೆಲ್ಲಿ, ನೆಕ್ಕರೆ, ತಾಳೆ (ತುಳುನಾ. ೧೫೩). 'ದೊಡ್ಡ ನೆಕ್ಕರೆ' ಪರಾ. **ನೆಕ್ಕೊರ :** ಲಲಿತ ಲತಾಂಗಿಯ ವರಜಂಘಾಯುಗಲಂಗಳ ಭಂಗಿಯನಱಯಂ ಪೊಗಲ್ ನೆಕ್ಕೊರವಟ್ಟಿಯ ತೆಱನೇನಲ್ಲದ ಬಣ್ಣಪ ಬಟ್ಟೆಯನಂಭೋಜಾನನೆಯೂರು ಯುಗಂಗಳ್ (ಸುಕುಮಾ. ೫-೫೧ ರಗಳೆ). **ನೆಕ್ಕೋರೆ :** ಮನಸಿಜನೊಲ್ದು ತನ್ನ ಬಿನದಕ್ಕೆಡೆಯೂಡುವ ಪೂಗೊಳಂಗಳೊತ್ತಿನೊಳೊಗೆದಿರ್ದ ನೆಕ್ಕೋರೆಯ ನುಣ್ಪೊಡೆಯಂಬಿನವೇಟ್ಗೆವೆತ್ತು ಕಣ್ಗ ನುನಯವಾಗಿ ನೆಪ್ಪುವಡೆದುಜ್ಜ್ವಲ ಕಾಂತಿಯನೊಳ್ಪವೆತ್ತ ತದ್ವನಿತೆಯ ಜಂಗೆಗಳ್ ವಿಟರ ಚಿತ್ತದ ಶಂಕು ಗಳಲ್ತೆ ಸಂತತಂ (ನಳಚಂ. ೩೩೭).

[ದೇ.॥ ತುಳು. ನೆಕ್ಕರ್, ನೆಕ್ಕಾರ್ ; ತೆಲು. ನೆಕ್ಕರ]

ನೆಕ್ಕ 'ಲೊಕ್ಕೆ$_1$' ನೋ.

ನೆಕ್ಕಲು 'ನೆರ್ಗಿಲ್' ನೋ.

ನೆಕ್ಕಸು 'ನಕ್ಕಸು' ನೋ.

ನೆಕ್ಕು$_1$ 'ನಕ್ಕು$_1$' ನೋ.

ನೆಕ್ಕು$_2$ 'ನಱುಂಕು' ನೋ.

ನೆಕ್ಕು$_3$ (ನಾ). ಒಂದು ಅನುಕರಣ ಶಬ್ದ : ಅಂಬುಗಳಿಜಿಗಿ ರೋಮ ರೋಮಕ್ಕೆ ನೆಲಲ್ ನೆಕ್ಕು ಜಳಿಲ್ ಜಕ್ಕು ಬೊಗಲ್ ದೊಕ್ಕೆನೆ ನಾಂಟ ದುವರಾಭಟರವಯವಮಂ (ಜಗವಿ.೭-೪೧); ಚಿಕ್ಕನೈತಂದು ಘುಡುಘುಡಿ ಸುತೂರಂ ಪೊಕ್ಕು ನೆಕ್ಕು ನೆರನಟಲು ಖಣಿಖಟಿಲೆನಲು ಹೊಡೆದು (ವೀರೇಶ. ೩-೪-೨೩).

ನೆಕ್ಕು ನೆರಿಲ್ = ಒಂದು ಅನುಕರಣ ಶಬ್ದ : ನೆಕ್ಕು ನೆರಿಲೆಂಬ ನಿಳಿಲ್ನಟಲೆಂಬ . . . ಗರಿಗರಿಲೆಂಬ ನಿಷ್ಕುರರವಂ ಮಿಗೆ ತಳ್ತಜಾದತ್ತು ಯುದ್ಧದೊಳ್ (ಗಿರಿಕ. ೬-೬೮). **ನೆಕ್ಕು ನೆಳಿಲ್** = ಒಂದು ಅನುಕರಣ ಶಬ್ದ : ಖಂಡೆಯದ ದನಿಯೊಡನೆ ನೆಕ್ಕು ನೆಳಿಲೆನೆ ವಾದ್ಯಾರಭಸದಿಂಪುಜುಬಿದರ್ ಮುಳ್ಕಳಾಟಿಕೆಯಾಯ್ತು ಖಳಭಟರ ಕಾಳೆಗಂ (ಚಿಬಪು. ೪೪-೪೨).

ನೆಕ್ಕು$_4$ (ನಾ). ತಿವಿತ ; ನೂಕುವಿಕೆ : 'ಕಿಱುನೆಕ್ಕು' ಪರಾ. [?]

ನೆಕ್ಕುಂದಿ, ನೆಕುಂದೆ (ನಾ). ಒಂದು ಸ್ಥಳದ ಹೆಸರು : ಕುನ್ದಯ್ಯಂ ನೆಕ್ಕುನ್ದಿ ನಾಡಾಳೆ (ಎಕ. X, ಚಂತಾಮ. ೩೬-೩ ; ಸು. 885 ?) ; ಶ್ರೀ ಮಹಾವಲಿವಾಣರಸರ್ ಪ್ರಥಿವೀರಾಜ್ಯಂಗೆಯಿ ಬಾಣರಸರುವರ್ ಮಹಾ ಜ[ನ]ರುವರ್ ಕಾದುತ್ತಿರೆ ನೆಕ್ಕುನ್ದಿ ನಾಡನಱಯಮೆನ್ದು ಅಟ್ಟಿ (ಎಕ. X, ಕೋಲಾರ. ೨೦೦-೬ ; ಸು. 908 ?) ; ಕಾಯ್ವರನಾಡ ನೆಕ್ಕುನ್ದಿ ನಾಡ ಊರಾಳಿಯ ದೇವ ಭೋಗ ××× ಎಲ್ಲ ಸಲ್ವುದು (ಎಕ. IX, ಹೊಸಕೋ. ೩೬-೧೩ ; ಸು. 950). **ನೆಕುಂದೆ :** ನಂಮ ಕಾಕತ್ತಿಯ ಸೀಮೆಯ ಸ್ವಳ ನೆಕುಂದೆಯ ಚತುಸ್ಸೀಮೆಯ ಗದ್ದೆ (ಎಕ.X,ಚಂತಾಮ. ೪೦-೩ ; 1423). [? + ಕುಂದಿ$_2$ (<ಕುಂದ$_3$)]

ನೆಕ್ಕೊಂಡಿ 'ನೆಕುಂಡ' ನೋ.

ನೆಕ್ಕೊರ 'ನೆಕ್ಕರೆ' ನೋ.

ನೆಗಂಪು 'ನೆಗಪು$_1$' ನೋ.

ನೆಗಚು (ಕ್ರಿ). ೧. ಹಾರುವಂತೆ ಮಾಡು ; ಜಿಗಿಸು : ನೆಗಚ ಹೋದುದು ಮಗಚ ಬಂದೀತೇ ? (ಗಾದ). ೨. "ಜಾಡಿಸು ; ಸರಿ ಪಡಿಸು" (ಜಾನಕೋ. ೧೨). [ನೆಗೆ + -ಚು$_1$]

ನೆಗಡಿ (ನಾ). ೧. ಶೀತಬಾಧೆಯಿಂದ ಮೂಗಿಗೆ ಉಂಟಾಗುವ ಉಪದ್ರವ; ಪೀನಸ: "ಕಫಃ, ಶ್ಲೇಷ್ಮಾ, ಪ್ರತಿಶ್ಯಾಯಃ, ಪೀನಸಃ— ಈ ೪ ನೆಗಡಿ" (ಹಲಾಯು. ೯೯-೪೫೧) ; ಸರಸತಿಗಾದತ್ತು ನೆಗಡಿ ಹರಿಣ ಧರಂಗಾದುದಾಗಳೇ ಕ್ಷಯರೋಗಂ (ವೀರವಿ. ೮-೧೫) ; ಮೂಗಿರುವ

ತನಕ ನೆಗಡಿ ತಪ್ಪುವ ಹಾಗಿಲ್ಲ ! (ನಂಟರು. ೪೦); ಅವನಿಗಾಗಲಿ ಅಕೆಗಾಗಲಿ ರಾಮಾಶ್ವಮೇಧ ಮುಗಿವವರೆಗೆ ನೆಗಡಿ ಹಾಯಲಿಲ್ಲವೆಂದರೆ ನಾನು ನಂಬಲಾರೆ (ದೇಕನ್ಯೆ. ೧೯); ನೆಗಡಿಯಂಥ ಜಡ್ಡು ಇಲ್ಲ, ಬುಗುಡಿಯಂಥ ಒಡವೆ ಇಲ್ಲ (ಗಾದೆ). ೨. ಸಿಂಬಳ; ಗೊಣ್ಣೆ : ವಿಪರೀತ ನೆಗಡಿ ಯಾದಾಗ ಮಗುವನ್ನು ಬೋರಲಾಗಿ ಮಲಗಿಸಿದರೆ ಮೂಗಿನಿಂದ ನೆಗಡಿ ಸುರಿದು ನೆಗಡಿ ಸ್ವಲ್ಪ ಶಮನವಾಗಬಹುದು (ಗೃಹವಿ. ೧೪೭).

[ದೇ.॥ ತುಳು. ನೆಗಡೆ, ನೆಗಡಿ, ನಿಗಡಿ, ನಿಗಡೆ]

ನೆಗಪು₁, ನೆಗಂಪು, ನೆಗಪ್ಪು, ನೆಗವು, ನೆಗಹು₁ (ಕ್ರಿ). ೧. ಮೇಲಕ್ಕೆ ಎತ್ತು; ಎತ್ತಿ ಹಿಡಿ : "ಉದಂಚಿತಮದೂರ್ಧ್ವಮುತ್ ಕ್ಷಿಪ್ತಮೆನೆ ನೆಗಪಿದುದು" (ಮಂಗರಾ. ೧೩೨-೨೭); ನೆಗಪಿ ವರೂಥಮಂ ವಸುಧೆ ನುಂಗಿದುದಂ ಸಮಪಾದಶೋಭೆಯುಂ . . . ಸೊಗಯಿಸೆ ಪಾಟಿಯಂ ನೆಱಪದಾಳ್ದನ ಕಜ್ಜಮನೊಕ್ಕು ಸತ್ತರಂ ನಗುವವೊಲಿರ್ದನಂಗಪತಿ ನೆಮ್ಮಿ ನಿಜೋನ್ನತಕೇತುದಂಡಮಂ (ಗದಾಯು. ೫-೧೦); ಆಟ್ಟಾಯಿಂ ನೆಗಪಿದನೊಂದೆ ಹಸ್ತದೊಳೆ ಕೋಟಿಕನಾಮದ ಶೈಳಮಂ (ವರ್ಧಪು. ೩-೪೬); ವೃದ್ಧಮಾಹೇಶ್ವರನಂ . . . ಮೆಲ್ಲನೆ ನೆಗಪಿ ನಿಂದಿರಿಸಲ್ (ನಂಬರ. ೬-೪೪); ಧರಣಿಯೊಳು ತಲೆಯೂಱಿ ಮೇಲಕೆ ಚರಣಯುಗಮಂ ನೆಗಪಿ (ಬಸಪು. ೨-೧೩); ಕಾಲ್ವಿಡಿದಿದ್ದ ದೇವಿಯನ್ನು ಕೈಗಳಿಂದ ಮೇಲಕ್ಕೆ ನೆಗಪಿ (ಶಾಂತಲಾ. ೧೭೧). ೨. ನೀಡು; ಚಾಚು : ಮೊಗಸಿದಪುದೆತ್ತಲುಂ ಬಿಗಿದೊಗೆದ ಕುಚಾಭೋಗವೆಂದು ಚುಬುಕಮನಾದಂ ನೆಗಪಿದಪುವೆಂಬಿನಂ ತಳ್ತೊಗೆದುವು ಘನಕುಚೆಯ ರುಚಿರಹಾರಕರಂಗಳ್ (ಕಾದಂಉ. ೧೨); ಕಯ್ಯ ಹುಲ್ಲಂ ನೆಗಪಿ[ಪಾಠಾಂ. ಹಿಡಿದು] ದೆಸೆದೆಸೆಗೆ ಸಿವದಿಡುತೆ (ತಿರುರ. ದೇ. ೧೪-೧೩); ಮಂಗಳ ತೂರ್ಯಕೋಟಿ ಮೊಟಗುತ್ತಿರೆ . . . ಪೊಂಗಳಸಂಗಳಂ ನೆಗಪಿ ಸಪ್ರಣ ವೋಚ್ಚರಣಾನನಾಂಬುಜರ್ ಬೇರ್ವರಿವ ಪುಣ್ಯವಿಟಪಿಗೆ ನೀರ್ವೊಯ್ವಂತ ನಘಜಿನನ ಮಸ್ತಕದೊಳ್ ಪೊಯ್ದರ್ . . . ಪಯೋಧಾರೆಗಳಂ (ಪುಷ್ಪಪು. ೧೧-೩); ಪೊಡೆಯುತ್ತುಂ ಗಿರಿಶೃಂಗಮಂ ನೆಗ[ಪಾಠಾಂ. ಗೆ]ಪುತುಂ ವ್ಯೋಮಕ್ಕೆ . . . ತೀಡಿದುದೊಂದು ಘೋರಪವನಂ ಚಿತ್ರಾವಹಂ ನಾಡೆಯುಂ (ದಶಕು. ೫-೭೧). ೩. ಚಾಚಿಕೊಳ್ಳು; ಮೇಲಕ್ಕೆ ಏರು : ಬಿರಿದ ಪೊಂಬಾಳೆ ನೆಗಪಿ ಸೇರುವೆಗೆಯ್ದ ಬಾಳ್ಗಳೇಳ್ಗೆಯ ಬೀಱೆ (ಪದ್ಮರಾ. ೮-೩೪); ಅದೆ ಶಕ್ರಹಸ್ತವಜ್ರಾಯುಧಂ ನೆಗಪಿ ಕಿಡಿಗೆದಱುತಿದೆ ವಹ್ನಿ ಪಿಡಿದುಗ್ರ ಖಡ್ಗಂ ಕರದೊಳೊದಱುತಿದೆ . . . ಸಲಹು ಸಲಹೆಂದು ಮೊಱೆಯಿಟ್ಟರಾ ದೈತ್ಯರುಂ (ಚಬಪು. ೨೧-೨೫). ೪. ಎತ್ತಿಕೊಳ್ಳು; ಹಿಡಿ; ಗ್ರಹಿಸು : ಮಾಣಿಕಮೆಂದು ಕೆಂಡಮಂ ನೆಗಪುವ ಪುಣ್ಯಮೆಂದು ವಿಷವಲ್ಲಿಗೆ ನೀರೆಱೆವೆಗ್ಗನಂತೆ ಕೆಮ್ಮಗೆ ಸುಖಮೆಂದಸದ್ವಿಷಯಸೌಖ್ಯದೊಳಿಂತೆಱಗಲ್ಕೆ ತಕ್ಕುದೇ (ಕಾದಂಪೂ. ೮೪೭); ಖಳನಪ್ಪಂಗಾರವೇಗಂ ಬೃಹದ್ಬಳನಂತಾ ವಸುದೇವನಂ ನೆಗಪಿಕೊಂಡೊಯ್ದಂ ನಭೋಭಾಗದಿಂ (ನೇಮಿಪು. ೪-೬); ಆ ಶಚಿ ಮಾಯಾನಿದ್ರೆಯನಾ ಶಶಧರವದನೆಗಿತ್ತು ಬಲಗೆಲದೊಳ್ ಮಾಯಾಶಿಶುವನಿರಿಸಿ ಪಾಣಿಕುಶೇಶಯಯುಗದಿಂದೆ ನೆಗಪಿದಳ್ ಜಿನಶಿಶುವಂ (ವರ್ಧಪು.೧೩-೯೫). ೫. ಚಿಮ್ಮಿಸು; ಹೊಮ್ಮಿಸು; ಸೂಸು : ಅಮರ್ದಪ್ಪಿಕೊಂಡು ತತ್ತನುಜೆಯಗಲ್ಕೆಯೊಳ್ ನೆಗಪಿದರ್ ಬಸಮಲ್ಲದ ಬಾಷ್ಪವಾರಿಯಂ (ಅದಿಪು. ೪-೫೬); ವಿಹ್ವಳೆಯರಗಲ್ಕೆಯೊಳ್ ನೆಗಪಿದರ್ ವಸಮಲ್ಲದ ಬಾಷ್ಪವಾರಿಯಂ (ಅಜಿಪು. ೬-೧೧೧); ಮಹಾಸತಿಯರ ರಥದಿಂದಿಟಿಪಿ ಮನ್ಯುಗದ್ಗದಕಂಠನಾಗಿ ಕಣ್ಣೀರ್ಗಳಂ ನೆಗಪುವುದುಂ (ಪಂರಾಮಾ. ೧೫-೭೫ ವ); ತತ್ಕುಮಾರಕಂ ನೆಗಪಿದನಶ್ರುಬಿಂದುಗಳನೊಂದಿದ ಮೌಕ್ತಿಕಜಾಳಮೆಂಬಿನಂ (ನೇಮಿಪು. ೧-೯೨). ೬. ಉಂಟು ಮಾಡು; ಹುಟ್ಟಿಸು : ನೆಗಪುತ್ತುಂ ಬೆಮರಂ ವಿಯೋಗಿಜನದೊಳ್ ಕಾಂತಾಮುಖಾಂಭೋಜಮಂ ನಗಿಸುತ್ತುಂ . . . ಇರುಳೊಳೇಂ ಪರ್ಬಿತ್ತೊ ಚಂದ್ರಾತಪಂ (ಲೀಲಾವ. ೨-೧೪). ೭. ಎಬ್ಬಿಸು; ಹಾರಿಸು : ಬಿಱುಗಾಳಿ ಬೀಸಿತ್ತು ವನದ ತಱಗೆಲೆ ಹೊಳ್ಳು ಧೂಳಿಯಂ ನೆಗಪಿತ್ತು (ಅರಿರ.ದೇ. ೧೭೬-೮). ೮. (ಆಲಂ) ಬಹಿರಂಗ ಪಡಿಸು; ಪ್ರಕಟಿಸು; ಸ್ಫುಟಗೊಳಿಸು : ನವಮಂಜರಿಯಂ ಪೆತ್ತೀ ನವಮಾಳಿಕಾಲತೆ ಲತಾಕೋಮಳೆಯ ಕುಮಾರಿಯಂ ಪಡೆವ ಬಗೆಯ ಬಯಕೆಯನೆಲ್ಲರ್ಗಂ ನೆಗಪಿ ತೋಱಿದುದು (ಲೀಲಾವ. ೭-೩೮ ವ); ಶ್ರೀಮದ್ವೈಷ್ಣವಪದದುದ್ದಾಮತೆಯಂ ನೆಗಪುತಮೃತಕಲೆಯಂ ವಿಬುಧಸ್ತೋಮಕ್ಕಮಿಾಯುತುಂ ಶ್ರೀರಾಮಾನುಜನೆನೆ ವಿರಾಜಿಕುಂ ದ್ವಿಜರಾಜಂ (ಚಕವಿ. ೧-೭೨). ೯. ಕಾಪಾಡು; ರಕ್ಷಿಸು : ಭೂಸತಿಯಂ ಶ್ರೀಧರನೆತ್ತಿ . . . ಸಂತವಿಸಿದಂತಾರ್ತಾವನೋದ್ಯುಕ್ತನೀ ಕ್ಷಿತಿಪಾಲಂ ಕವಿಕನ್ಯೆಯಂ ನೆಗಪುತುಂ ಸೌಕರ್ಯಮಂ ತಾಳ್ದಿದಂ (ಚಕವಿ. ೧-೮೬). ೧೦. ಎತ್ತಿ ಹಾಕು; ಕದ್ದೊಯ್ಯು; ಅಪಹರಿಸು : ರಾಗದಿಂದಮಿಾ ರತ್ನಮನೀಗಳ್ ನೆಗಪಿದೆನಪ್ಪೊಡೆ ಪೋಗಲ್ಬಾರದು (ಧರ್ಮಾಮೃ. ೬-೫೪). ೧೧. ಪ್ರಚೋದನೆ ಮಾಡು; ಪ್ರಚೋದಿಸು : ರಕ್ಕಸನೊಳಿಱಿವ ಕಾಯ್ಪಿನ ತಕ್ಕಂ ನೆಗಪಲ್ಕೆ ದೇವ ಕಂಡೆಂ ನಿಮ್ಮಂ (ಅನಂಪು. ೧೩-೬೯). **ನೆಗಂಪು**: ೧. ಮಾರ್ತಾಂಡ ಚಂಡರೋಚಿಯನಱಸಲೆತ್ತಿ ಪೊತ್ತಿಸಿದ ದೀವಿಗೆಗಳೆನಿಸಿ ಮಿಸುಪ ಖದ್ಯೋತಜಾತಮಂ ನೆಗಂಪಿ[ಪಾಠಾಂ. ನೆಗಪಿ]ಯುಂ (ವರ್ಧಪು. ೬-೩೨ ವ). **ನೆಗಪ್ಪು**: ೨. ಎತ್ತಿದ ಗುಡಿ ಪೊತ್ತ ಕನ್ನಡಿ ನೆಗಪ್ಪಿದ ಪೊಂಗಳಸಂಗಳೊಪ್ಪೆ ಬಂದುದು ಸುರಸೌಂದರೀನಿವಹಂ (ಅನಂಪು. ೧೪-೬೦). ೪. ಮಾಡದ ಕಂಭಮಂ ಮಲಗಿನೊಳ್ಪರಿಪಾಯ್ದು ನೆಲಕ್ಕೆ ಬಾಳನಲ್ಲಾಡೆ ನೆಗಪ್ಪಿಕೊಂಡು ತೊಡೆಗಾ ನರಸಿಂಹನವುಂಕಿ (ಅರ್ಧನೇ. ೮-೧೧೭). **ನೆಗವು**: ೧. ಯಾರಂತ ಎತ್ತಲಿ ಯಾರಂತ ಹೊರಿಸಲಿ ಯಾರಂತ ಕೊಡವ ನೆಗವಲಿ (ಗರತಿ. ೭೦); ಅಂಬಿಗರ ಸಿಂಗಣ್ಣನು ಒಂದು ದೊಡ್ಡ ಕಲ್ಲನ್ನು ನೆಗವಿಕೊಂಡು ದಿಗ್ಗನೆ ಎದ್ದನು (ರಂಗರೋ. ೧೨); ವಿಗಡ ಹನುಮಂತ ಅದನ್ನು ಕಂಡು ಹೆಬ್ಬೆಟ್ಟವನ್ನು ಕಿತ್ತು ನೆಗವಿತಂದು ಅರ್ಭಕನ ಮೇಲೆ ಇಟ್ಟ (ಬಿದುರೆ. ೨೧೮). ೧೦. ಈ ಶ್ಯಾನಭೋಗ ಐವತ್ತು ರೂಪಾಯಿ ನೆಗವಿ ಕುಂತಾ (ಗ್ರಾಮಾಯ. ೨೮೫); ಯಾವದೋ ಬ್ಯಾಂಕಿನಾಗಿಂದ ಆ ರೊಕ್ಕಾ ನೆಗವಿ ನುಂಗಿ ಹಾಕಿಬಿಟ್ಟ (ಗಂಮಾಯಿ. ೧೭). **ನೆಗಹು₁**: ೧. ಎಲ್ಲರು ಮೈ ಸಾಗಿಸಲು ಪಾದವ ಹಿಡಿಯೆ ತಲೆಗಳ ಹಿಡಿದು ಕೈಗಳಲ್ಲಿ ನೆಗಹುತ್ತಿರಲು (ಚನ್ನವ. ಕ. ೫೮೫-೧೩೦೬); ತೃಣವ ತುಡುಕಿ ನೆಗಹಿದ ಕಯ್ಯ ನಿಷ್ಕಾರಣಂ ನೃಪತಿ ಹೊಡೆದನು (ಹಚಕಾ. ೭-೨೬); ಶೆಳೆಯೊಳಡರ್ತ್ತು ಪೊಯ್ಯೆ ಶೆಳೆಯಿಂ ನೆಗಹಲ್ಕತಿಚಿತ್ರಮಾದುದಾ ಶೆಳೆಕೊನೆಯಲ್ಲಿ ನೇಲ್ವ ಪುಲಿಯೆತ್ತಿದ ಸಿಂದಮೆನಲ್ಕೆ (ಎಕ. XI, ಚಿತ್ರದು. ೧-೫; 1910 ?); ಇಂದುಧರನಿಂತೆಂದ ನಂಘ್ರಿಗೆ ಬಿದ್ದವನ ನೆಗಹಿ (ನಿಭಾಗ. ೯-೪-೧೩); ನಗಜಾವರಶತ್ರು ಗರುಡಿಯೊಳ್ ಬಾಹುಮೂಲಗಳ ಸತ್ರಾಣಿಸಲೆನುತೆ ನೆಗಹುವ ಹೊಸ ಹೊನ್ನ ವಜ್ರಮುಷ್ಟಿಗಳಂತೆ ಜಘನದ ತಳಗಳೊಪ್ಪಿದುವು (ಮೋಹತ. ೨೩-೧೬). ೨. ಎತ್ತಿ ನೆಗಹಿದ ತೊಳಪ ಮುತ್ತಿನ ಸತ್ತಿಗೆಯ ಸಡಗರದ ಸರಿಸದೆ . . . ಸಗಾನದ ತೆತ್ತಿಗರ ಸಂಭ್ರಮದಲಂದಣವೇಱಿದಳು ಮಾಯೆ (ಪ್ರಭುಲೀ. ೪-೨೫); ನಸುನಗೆ ನಱುನಾಣು ನೆಲೆಮೊಲೆ ನಳಿತೋಳು ಮಿಸುಪ ಕಣ್ಣಗ[ಪಾಠಾಂ. ಸ]ಹಿದ ಕಳಸ ಪೊಸ ದೇಸಿವಡೆಯೆ ನೀರೆಱೆವ ನೀಱೆಯರು ಕಣ್ಣೆಸೆದಿಹರಲ್ಲಿ ಪಥಿಕರ (ಕುರಾಸಾಂ. ೨-೪೨). ೪. ಕೆಡವ ಮಡಕೆಯ ನೆತ್ತು ಬಸವಾ ಎನಲು ಹರವಿಯನತ್ತ ಕಯ್ಯಂ ನೀಡಿ ಬೀಳದ ಮುನ್ನ ನೆಗಹಿದನು (ಬಸಪು. ೧೦-೬); ಕಪಾಲಪಾತ್ರೆಯನರೆ ನೆಗಹಿ ಕೊಂಕಿನಲಿ

ಕುಡಿದನರು ಮುಕ್ತಕೇಶಿಯರು (ಕುಪ್ಯಾಭೀ. ೫–೩೨) ; ತಿರುವನು ನೆಗಹಿ ಬೆರಳಿನಲೇಱಿಸಿದನುದ್ದಂಡಕಾರ್ಮುಕವ . . . ರಘುಪತಿ (ತೊರಠಾ. ೬–೪–೧೫) ; ಕರುಣೆ ಕಾಣುತ ನೆಗಹಿಕೊಂಡನು ಸಾವ ಶಿಶುಮೃಗವ (ಶಿಭಾಗ. ೫–೪–೩೦). ೧೨. ಮೇಲೇರು ; ಎದ್ದು ನಿಲ್ಲು ; ಏಳು : ಹೊಳೆವ ಹೇಮದ ರಥಕೆ ಹೂಡಿಪ ತಿಲಕಗುದುರೆಯ ನೆಗಹಿ ನಗುರುವ ಕಳಶಸಿಂಧದ ದ್ರೋಣ ಹೊಕ್ಕನು ಕಾಳೆಗದ ಕಳನ (ಕುಪ್ಯಾದ್ರೋ. ೨–೨೦). ೧೩. ಎದ್ದು ಕಾಣು,—ತೋರು : ನೆಗಹಿದವು ಕೈದೀವಿಗೆಯ ಸಾಲುಗಳು ಹೊಂದಂಡಿಗೆಯ ದೂವಾರಿಗಳು ವೆಂಕಣಸಿದರು (ಕುಪ್ಯಾದ್ರೋ. ೮–೫೫) ; ಉಪ್ಪರದ ಗುಡಿ ನೆಗಹಿದವು ನಗರಾಂತರದಲಿ (ತೊರಠಾ. ೧೦–೭–೫೬) ; ಅಗಡಿತ ಕನಕದಂಡದ ಪಲ್ಲವಛತ್ರ ನೆಗಹಿರೆ (ನೋಹಕ. ೧೫–೩೦). ೧೪. ಮೇಲಕ್ಕೆ ಎದ್ದು ನಿಲ್ಲುವ ಹಾಗೆ ಮಾಡು ; ಎಬ್ಬಿಸು ; ಎತ್ತಿ ನಿಲ್ಲಿಸು : ಆನೆ ಕೆಸಱೊಳಗದ್ದಿ ಬಿದ್ದೊಡೆ ತಾನೆ ತನ್ನಯ ಭುಜಬಲದ ಸುಯಿದಾನದಿಂದೊಡನೇಳ್ವುದಲ್ಲದೆ ಯಾರು ನೆಗಹುವರು (ಪ್ರಭುಲೀ. ೧೩–೩೩). ೧೫. ಮೇಲಕ್ಕೇಳುವಂತೆ ಮಿಾಟು ; (ಮಿಾಟ) ಎಬ್ಬಿಸು : ಕುತ್ತಿ ಹಿಂಗುವ ಭಟರ ದಾಡೆಯೊಳೊತ್ತಿ ನೆಗಹಿದಡೊಡಗುವ ರಕುತಕೆ ಮುತ್ತಿ ಬಾಯ್ಗಳನೊಡ್ಡಿ ಕುಡಿದುದು ಶಾಕಿನೀನಿವಹ (ಕುಪ್ಯಾಭೀ. ೪–೭೯).

ನೆಗವಿ ಹಾಕು = ಎತ್ತಿಹಾಕು ; ಮೋಸಮಾಡು : ಆದರೆ ನನಗೆ ತಿಳಿಯದಂತೆ ಒಂದು ಪೈಯನ್ನಾದರೂ ಯಾರರ ನೆಗವಿ ಹಾಕಿಯಾರೇನು ! (ಕುರಿಹಂ. ೧೩೬) ; ಉದ್ದರಿಯಾಗಿ ಹಾಲು — ಮೊಸರು ಕೊಟ್ಟ ಗವಳಿಗನು, ಉಪಾಯಾಂತರದಿಂದ ಬಳಿಹೋಡನ್ನು ನೆಗವಿ ಹಾಕಿದನು (ಗುರುಪ್ರ. ೮) ; ನಿಶ್ಚಯವಾಗಿಯೂ ಅವನೇ ನೆಗವಿ ಹಾಕಿದ್ದಾನೆ (ಕಾಳಕಾ. ೩೬).

[ನೆಗೆ₁ + – ಪು. /ತಮಿ. ನವಪ್ಪು = ಎತ್ತರ, ಔನ್ನತ್ಯ ; ತುಳು. ನಗಪು, ನೆಗಪು, ನೆಗಿಪು ; ಕೋಲಾ. ನಾಯ್ಕಿ. ನೆಗಪ್]

ನೆಗಪು₂, ನೆಗಹು₂ (ನಾ). ೧. ಮೇಲಕ್ಕೆತ್ತುವುದು ; ಎತ್ತುವಿಕೆ : ಶಬ್ದಮಿತವೇಗದಲ್ಲಿ ಚಲಿಸುವ ರೆಕ್ಕೆಯಲ್ಲುಂಟಾಗುವ ನೆಗಪು (ಲಿಫ್ಟ್) ರೆಕ್ಕೆಯ ಪೈಮೇಲೆ ಗಾಳಿಯ ಪರಿಚಲನೆಯ ವಿಸೆಯಿಂದ ಉಂಟಾಗುತ್ತದೆ (ಕವಿಕೋ. I, ೨೫೩). **ನೆಗಹು₂** : ೧. ಧರಣಿಯಳತೆಯ ಹರಿಯ ನೆಗಹಿನ ಚರಣದಗ್ರದೊಳಿವ ಭುನನಿರ್ಝರದವೊಲು ಮುದಧಾರೆ ಮೆಜ್ಜಿದುದು ಕರಿಕಪೋಲದಲಿ (ಕುಪ್ಯಾದ್ರೋ. ೬–೪) ; ತೋಳ ನೆಗಹಿನಲಟ್ಟಿ ಹೊಯ್ದುದು ನೀಲನನು ನೀಲಾದ್ರಿಯನು ದಂಭೋಳಿ ಪಟ್ಟಿಸಿದಂತೆ ನೊಂದನು ಹೊಯ್ಲಲಿಭಪತಿಯ (ತೊರಠಾ. ೬–೩೨–೩೫). ೨. ಉಬ್ಬು ; ಉತ್ಸಾಹ ; ಸಡಗರ ; ಹಿಗ್ಗು : ನಟ್ಟ ನೋಟದ ನೆಗ್ಗಿದುತ್ಸವದ ಹೂಳಿದೂಹೆಯ ಹಿಳಿದ ನೆಗಹಿನ ಹೇಳಲರಿದೆನೆ ಹುದಿದ ಭಾವದಲಾಲಿಸಿದನಸುರಾರಿ ದೂತನ್ಯಜದ ವಿನ್ನಪವ (ಕುಪ್ಯಾಅ. ೨–೨). ೩. ಎತ್ತರ : ನಗವದಿಪ್ಪತ್ತೈದು ಗಾವುದದುದ್ದವಾ ನಗದ ಕಬ್ಬಸಿಜಾನ ಕದಪ ನೆಗ ಪೆಂಟುಗಾವುದ ಪನ್ನೆರಳ್ನಾವುದದಗಲವಾಗಿರೆ ನಿಟ್ಟಿಸಿದನು (ಧರಣ. ೨೯–೫೬). ೪. ಘನತೆ ; ಹಿರಿಮೆ ; ಶ್ರೇಷ್ಠತೆ : ಉರ್ವಿಗತಿಶಯ ಸುಲಭ ಸುಗುಣನ ಸಾರ್ವಭೌಮನ ನೆಗಹು ತಿಳುಹೆ ಸುಪರ್ವಸತಿಯರು ವಹಿಸಿಕೊಂಡರು ನರ ವಿಭೀಷಣನ (ಉತ್ತಕ. ೮–೪೭). ೫. ಯುದ್ಧದಲ್ಲಿ ಒಂದು ವರಸೆ ; (ದೇಹಕ್ಕೆ ಅಪಾಯವಾಗದಂತೆ) ಚಿಮ್ಮುವಿಕೆ : ಜಗದೊಳಾವಭ್ಯಾಸಿಯೋ ತಾಳೆಗೆಯ ತಲ್ಲಣದೊಳಗೆ ನೆಗಹಿನ ಸುಗಮ ಸಾಹಸನರರೆ ಮರ್ಮು ಭಾಷೆಂದುದುಭಯ ಬಲ (ಕುಪ್ಯಾದಶ್ವ.೧೩–೧೪).

[<ನೆಗಪು₁]

ನೆಗಪ್ಪು 'ನೆಗಪು₁' ನೋ.

ನೆಗರ್ತಿ 'ನೆಗಟ್ತಿ' ನೋ.

ನೆಗರ್ತೆ 'ನೆಗಟ್ತಿ' ನೋ.

ನೆಗರ್ತೆವಡೆ 'ನೆಗಟ್ತವಡೆ' ನೋ.

ನೆಗರ್ತೆವೆಱು 'ನೆಗಟ್ತವೆಱು' ನೋ.

ನೆಗರ್ದ 'ನೆಗಟ್ಟ್₁' ಪರಾ.

ನೆಗಪ್ಪು 'ನೆಗಟ್ಟು' ನೋ.

ನೆಗಲ (ನಾ). (?) : ಮೃಗದ ಕೇಲಿಗೆ ಹೋಪ ಜಾವಿಗೆ ನಗಿಸುತಿಹ ತಾ ಸೊಗಸಿನಾಟಿಕೆ ಪಗಲೆಯಿರುಳೇ ಹೋಗಿ ಬಾಹ ಗೋವಾಗಿಯಿರುತಿಪ್ಪ ಬಗೆಯಲವರಿಗೆ ಅಂಗಸಂಗವು ಪುಗದೆ ಮೋಹವು ನೆಗಲವಾದುದು ಜಗ ದೊಳಗೆಯೆ ಅಭ್ಯಾಸಿಕೊಂಬರು ರಾಯ ಕೇಳೆಂದಾ (ಕಕ್ಕೋಚೆ. ೮–೭).

[?]

ನೆಗವು 'ನೆಗಪು₁' ನೋ.

ನೆಗಹು₁ 'ನೆಗಪು₁' ನೋ.

ನೆಗಹು₂ 'ನೆಗಪು₂' ನೋ.

ನೆಗಹುಗೈ (ನಾ). ಮೇಲಕ್ಕೆತ್ತಿದ ಕೈ ; ಎತ್ತಿದ ಹಸ್ತ : ಪಳರು ನೆರೆದುಪು ಜಡಿವ ಖಡ್ಗದ ನೆಗಹುಗೈಗಳಲಿ (ಅಂಬಿಕಾ. ೧೯–೩೩).

[ನೆಗಹು₁ (<ನೆಗಪು₁) + ಕೈ₂ (<ಕೆಯ್₂)]

ನೆಗಹುಢಾಣೆ (ನಾ). ಎತ್ತಿ ಹಿಡಿದ ಗದೆ ; ಮೇಲಕ್ಕೆತ್ತಿರುವ ಢಾಣೆ : ದೈತ್ಯರ ನೆರವಿಯುವಿಸಿತು ಕೋಟಸಂಖ್ಯೆಯುಂ ನೆಗಹುಢಾಣೆಯಲಿ (ಅಂಬಿಕಾ. ೪೨–೩೩). [ನೆಗಹು₁ (<ನೆಗಪು₁) + ಢಾಣೆ₁]

ನೆಗಹುಹತ್ತ (ನಾ). = ನೆಗಹುಗೈ : ಮುದದುಬ್ಬುಗೊಂಡಿನ ಶೂಲ ಸಬಳದ ನೆಗಹುಹತ್ತ ಕರಾಳರಕ್ಕಸರಮನು ನಡೆದುದು ನಡುಗಲಬುಜಭವ (ಅಂಬಿಕಾ. ೪–೫೩). [ನೆಗಹು₁ (<ನೆಗಪು₁) + ಹತ್ತ₂]

ನೆಗಳ್₁ 'ನೆಗಟ್ಟ್₁' ನೋ.

ನೆಗಳ್₂ 'ನೆಗಟ್ಟ್₃' ನೋ.

ನೆಗಳಿಕೆ 'ನೆಗಟ್ಕಿ' ನೋ.

ನೆಗಳಿಚು 'ನೆಗಟ್ಟು' ನೋ.

ನೆಗಳಿಸು 'ನೆಗಟಿಸು' ನೋ.

ನೆಗಳು₁ 'ನೆಗಟ್ಟ್₁' ನೋ.

ನೆಗಳು₂ 'ನೆಗಟ್ಟ್₃' ನೋ.

ನೆಗಳೆ 'ನೆಗಟ್ಟ್₃' ನೋ.

ನೆಗಳ್ಚಿಸು (ಕ್ರಿ). ೧. ಮಾಡಿಸು ; ಆಗುವಂತೆ ಮಾಡು : ಎನ್ನಜ್ಞತೆಯಿನೆಸಗಿದಲ್ಲವಂ ಕ್ಷಮಿಸಿ ಮೇಣಿನ್ನಿತ್ತಲೆನ್ನಯ ಮನವನಹಂಕಾರ ಯುತಮಂ ನೆಗಳ್ಚಿಸದೆ . . . ಭೃತ್ಯನೆಂದು ಪೊರೆ (ಪದ್ಮರಾ. ೧೧–೭೮) ; ಚದುರ ದಕ್ಷಿಣನಾಯಕಂ ಪೊರೆಯೊಳರ್ದ ಸಮಿಯಧ್ವರಸಮಂ ಚುಂದಿಸುತೆ ಸೀತ್ಯತಂಗೇಳದಂದದೊಳವಳ ವಲಯರವಮಂ ನೆಗಳ್ಚಿಸಿದನೆತ್ತಿದ ಚಂದ್ರ ಶಾಲೆಯೊಳಗೆ (ಚಿಬಪು. ೧೦–೩೭). ೨. ಕಟ್ಟಿಸು ; ನಿರ್ಮಿಸು : ನೀನೊಂದು ಕೆಱೆಯಂ ನೆಗಳ್ಚಿಸುವುದು (ಪದ್ಮರಾ. ೫–೩೯).

[ನೆಗಳ್ಚು (<ನೆಗಟ್ಟು) + –ಇಸು₅]

ನೆಗಳ್ಚು 'ನೆಗಟ್ಟು' ನೋ.

ನೆಗಳ್ತ 'ನೆಗಟ್ತಿ' ನೋ.

ನೆಗಳ್ತವಡೆ 'ನೆಗಟ್ತವಡೆ' ನೋ.

ನೆಗಳ್ತೆವೆಱು 'ನೆಗಟ್ತವೆಱು' ನೋ.

ನೆಗಳ್ದೇರ 'ನೆಗಟ್ದೀರ' ನೋ.

ನೆಗಳ್ವಾಯಿ (ನಾ). ೧. ಮೊಸಳೆಯ ಬಾಯಿ. ೨. ಮೊಸಳೆಯ ಬಾಯಿಯಂತಹ ಅಲಂಕರಣ ; ಮಕರತೋರಣ : ಚಾವಿಸಾಳರ

ಲಾಂಛನಲಾಂಛಿತಮಾದ ನೆಗಳ್ವಾಯಿಗಳಿಂ ವಿರಾಜಿಸುತ್ತಿರ್ಪ ಪೊಸಪಲ್ಲಕ್ಕಿಯಿಕ್ಕಿ ನಿಜನಿವಾಸಕ್ಕೆ ಕಳುಪಿ (ಕಳಸ್ಯ. ೧-೯೪).

[ನೆಗಳ್[2](<ನೆಗಟು್ಟ[3])+ಬಾಯಿ[1](<ಬಾಯರ್)]

ನೆಗಟು್ಟ[1], ನೆಗಳ್[1], ನೆಗಳು[1] (ಕ್ರಿ). ನೆಗರ್ದ (ಭೂತಕೃ). ೧. ಇರು ; ನೆಲಸು : ಪಾಟುಯ ಬಟ್ಟೆದಪ್ಪಿ ಮುಂ ನೆಗಟ್ಟಿಡೆಯಾಲ್ಲ ಪೋಗು ಜಯಮುಕ್ಕೆ ಶುಭಂ ನಿಮಗಕ್ಕೆ ಮುಂಗಳಂ (ಪಂಪಭಾ. ೬-೨೧); ಳಿನಪಥದೊಳೆಲ್ಲ ದಿಸೆಯೊಳಮನಿತಾನುಂ ತೆಜದ ರೂಪಮುಂ ತಳೆದುಲ್ಕಾಶನಿವಿದ್ಯುತ್ತಾರಾವಿಷ್ಣುನಾಮದಿಂದುಟ್ಟುಮುಯ್ದು ತೆಜದೊಳ್ ನೆಗಟ್ಟುಂ (ಲೋಕೋಪ. ೪-೧೪). ೨. ತೊಡಗು ; ಕೈಗೊಳ್ಳು : ಸಂಪ ಚಕ್ರಿಗಳಿಸಕಂ ದೇವ ನಿನಗೆಸಕಮದಱೊಳೆ ದೇವರ್ ನೆಗಟಲ್ಕೆವೇಟ್ಟುಂ (ಆದಿಪು. ೧೨-೭೩); ಶ್ರೀವರ್ಮಂ ಯುಗಂಧರತೀರ್ಥಂಕರರ ಪಕ್ಕದೆ . . . ಱಿನರೂಪಮುಂ ಕೈಕೊಂಡು ಸರ್ವತೋಭದ್ರಸಿಂಹನಿಕ್ರೀಡಿತಮೆಂಬ ತಪದೊಳ್ ನೆಗಟ್ಟು (ಜೀವಂಧ. ೨೦); ಕರಗುವ ಮುಗಿಲುಂ ಕೆನ್ನೆಯ ನರೆಯುಂ ಕಂಡನಿತಱುಂ ಕೆಲರ್ ಪರಮತಪೋಭರದೊಳ್ ಭರದೊಳ್ ನೆಗಟಲ್[ಪಾಠಾಂ. ಟ್ಟರ್]ಗುರುಬಂಧುಪ್ರಿಯವಿಯೋಗಮುಂ ಕಂಡು ಕೆಲರ್ (ಆದಿಪು. ೨-೪೪); ಪನ್ನಿರ್ತೆಱದ ತಪದೊಳುತ್ತರೋತ್ತರಂ ನೆಗಟ್ಟು . . . ತ್ರಿಲೋಕಶಿಖರಿಶೇಖರನಾದಂ (ಧರ್ಮಾಮೃ. ೨-೨೩೮); ಆಗಳಾನ್ ನೆಲಮುಗಿಲ ಮಕ್ಕಳಾ ದೈತ್ಯರನ್ ನಲ್ನುಡಿದು ನಡಪಲ್ಕೆ ನೆಗಟ್ಟಿನ್ (ಬಡ್ಡಪ್ಪ. ೧೨-೨೪೪). ೩. ಮಾಡು ; ಆಚರಿಸು : "ನೆಗಟು್ಟ–ಉದ್ಯೋಗ, ಪ್ರಾತಿಪದಿಕ, ನಕ್ರೀ ಚ (ಮೊಸಳೆ)" (ಶಬ್ದಾಧಾ); ಅವರಾ ರೂಪಿನೊಳದಂ ನೆಗಟಲಂಜಿ ವಲ್ಕಲವಸನರುಂ . . . ಪರಿವ್ರಾಜಕರುಮಾಗಿ ತಮಗೆ ತಾವೇ ವನಪ್ರವೇಶಮಂ ಮಾಡಿ (ಆದಿಪು. ೯-೧೩೪); ಅವ ಕಾರ್ಯಮುಮುಂ ವಿಚಾರಪೂರ್ವಕಮಲ್ಲದೆ ನೆಗಟಲಾಗದೆಂಬುದನುಪುವುದು ಪರೀಕ್ಷೆಯೆಂಬುದು (ಪಂಚತಂ. ೨೧-೧); ವಿಶ್ವಕರ್ಮಮೇನೆಂದೊಡಮೆಂದುದಂ ನೆಗಟದುದ್ಧತಿಯಿಂದಮವಂದಿರುರ್ಕಿ ದಕ್ಕುಂದಲೆವಾಯ್ವರ್ (ಸುಕುನಾ. ೨-೪); ಪಿರಿಯರ್ ಮುಂ ನೆಗಟ್ಟಂದದಿಂ ನೆಗಟವೇಟ್ಟುಂ ತತ್ಪರಂಗೆಂಬರೆಲ್ಲರುಂ (ಸಸುಪ. ೧೦-೧೬೦); ಅಮ್ಮಜ್ಜಿದೊರ್ಮೆಯುಂ ನಿನಗೆಯಪ್ರಿಯಮುಂ ನೆಗಟಿಂ (ಚಂದ್ರಪು. ೩-೬೨). ೪. ನಡೆದುಕೊಳ್ಳು; ವ್ಯವಹರಿಸು ; ವರ್ತಿಸು : ನಿಂಗೆ ಪಟುವರೆನ್ನನೆನ್ನದೆ ಪೊಗಟ್ಟರ್ ನೆರೆವೆಲ್ಲರೆನ್ನನೆನ್ನದೆ ತನ್ನೊಳ್ ಬಗೆದುಭಯಲೋಕಹಿತದೊಳ್ ನೆಗಟ್ಕಿ ಜನಂ ಪಟುಗೆ ಪೊಗಟ್ಕಿ ತನಗೇನದಱೊಳ್ (ಕವಿರಾ. ೩-೧೩೯); ಜನಕಜೆಯನ್ತೆ ಪತಿಂಗೆ ನೆಗಟ್ಟು ಶೀಲದಿಂ (ಎಳ. XIV, ಎಡತೊ. ೩೧-೩; ಸು. ೯೦೦); ನಿನ್ನೞವಿಗಳವನಱಾಯದೆ ನೆಗಟ್ಕಿವ್ವ (ಪಂಪಭಾ. ೬-೫೨); ಆರಸನನಾಂ ಕಂಡಱಾಯೆಂ ಪರಿಚಯನಿಲ್ಲೆನ್ನೊಳೆಂದು ನಿಮಗೆ ತಾಂ ನಾಣ್ಚುತ್ತಿರದಿಂದೆನ್ನೊಳದಂತಂತಿರೆ ನೀಂ ನೆಗಟ್ಟುದು ನಿರಂತರಂ ಕಮಲಮುಖೀ (ಕಾದಂಬ. ೪೨); ತನ್ನೊಂದು ಪಾರ್ಶ್ವದಿಂದಂ ನೆಗಟಿ್ಟದ್ದೆಯ್ದಿ [ಪಾಠಾಂ. ಟ್ಟೀಕೆ] ಕೆಟ್ಟನಧಿಕಂ ದುರ್ಬುದ್ಧಿ ದುರ್ಯೋಧನಂ (ಪಂಚತಂ. ೧೭-೨); ಪೊಲೆಯರ ತೆಱದಿಂ ನೆಗಟ್ಟುಂ ಕುಲನಾಶನಕ್ಕೆ ತನುಜನಾದಡೆ ಸಾಲ್ಗುಂ (ಸಸುಪ. ೫-೧೦೧). ೫. ಉಂಟಾಗು ; ಮೈದಳೆ ; ಸಂಭವಿಸು ; ಮೂಡು : ಪರಮಾಲಂಕಾರೋಚಿತ ವಿರಚನೆಗಳ್ ನೆಗಟ್ಟುಮಾರ ಪದನೋದರದೊಳ್ ನೆರಮಕ್ಕಾ ಪರಮಕವೀಶ್ವರರೆಮಗೀ ಕೃತಿಯೊಳಕೃತಕಾಚಾರಪರರ್ (ಕವಿರಾ. ೧-೪); ನೆಗಟಿ ನಿಜಪ್ರತಿಬಿಂಬಂ ನೆಗಟ್ಟರಸುಗಳುರದೊಳಿಸೆವ ಹಾರಮಣಿದೀಪ್ತಿಗಳಿಳವರೆರ್ದೆಯನಲ್ಲಿಂ ಪುಗುವುದನನುಕರಿಸಿ ರಂಗದೊಳ್ ಸೊಗಯಿಸಿದಳ್ (ಆದಿಪು. ೯-೪೨); ಶಂಖರವಂ ನಿನ್ನೆಂದಂತೆ ನಿರುತಮೆಂಬೊಂದಂದದಿನೊಡನೊಡನೆ ನೆಗಟಿ ಪೊಗಟಿ ಜಗಂಗಳ್ (ಶಾಂತಿಪು. ೬-೧೧೧); ಜಾಡ್ಯ ವ್ಯವಹಾರಂ ಪಿಂಗಿ ತನ್ನಿಂ ನೆಗಟಿ ಸುಖಮಯಂ ಸೃಷ್ಟಿ (ಪುಣ್ಯಪು. ೧-೨೩); ನೆಗಟ್ದ ಪೊಲ್ಲಮೆಗೆ ತದೀಯಾಂಬುಜಪದಮಂ ತನ್ನ ಶಿರೋಂಬುಜದಿಂಬರ್ಚಸಲ್ ಪರಿಚ್ಛೇದಿಸಿದಂ (ಯಶೋಚ. ೪-೫೩); ಯುಗಳಾರ್ಥದ ಬಹುವಚನ ಕ್ಕೊಗೆತಂದಾವಿಷ್ಪಲಿಂಗದಡೆಗೇಕತ್ವಂ ನೆಗಟ್ಟುಂ (ಶಬುಡ. ೧೪೪). ೬. ಬಳಕೆಯಲ್ಲಿರು; ಚಾಲ್ತಿಗೆ ಬರು: ಮೃಗಪಕುಶಕುನಿಗಣಂಗಳೊಳಗಣಿತ ನಿಜಜಾತಿಜನಿತಭಾಷೆಗಳಿಂದುಂ ನೆಗಟ್ಟಿಂತಿರೆ ನರರೊಳಮಪ್ರಗಲ್ಭವಚನಪ್ರವೃತ್ತಿ ನೆಗಟ್ಟುಂ ಸಹಜಂ (ಕವಿಶಾ.೧-೭).೭. ಪ್ರಾಪ್ತವಾಗು ; ಲಭಿಸು : ನೆಗಟಿ್ಟಂದು ತುತ್ತಿನುಣಿಸಿನೊಳಗುಟಿ್ಟಂದುಪ್ಪಿನೆಗವಿಟುಪಿತತ್ಕ್ಷಮದಿಂದಾವಗವೇಜಾಹಿರದನೆಯ ತಪಮೊಗೆದುದು (ಶಾ:ಚಿತ್ರ. ೧೩-೯೫). ೮. ತಯಾರುಮಾಡು ; ಸಿದ್ಧಮಾಡು : (ಕ). ೯. ಲೋಕೋತ್ತರವಾಗು : ನೆಗಟಿ್ಟಲ್ಲಿರಾವತದಂತಿಗಾದುದು ಮೊಗಂ ಮೂವತ್ತೆರಡು (ಆದಿಪು. ೬-೫೩). ೧೦. ಹೆಸರುವಾಸಿಯಾಗು ; ಪ್ರಸಿದ್ಧಿ ಪಡೆ ; ಕೀರ್ತಿಹೊಂದು ; ವಿಖ್ಯಾತವಾಗು : "ನೆಗಟು್ಟ–ಉದ್ಯೋಗ, ಪ್ರಾತಿಪದಿಕ, ನಕ್ರೀ ಚ (ಮೊಸಳೆ)" (ಶಬುಧಾ); ಮಾಸರ ಜಕ್ಕಯ್ಯನೀಶ್ವರಗತಿಬಕ್ಕೆ ××× ನೊಳಗೆ ನೆಗಟ್ಟಿ ದೇಗುಲ (ಎಕ. VIII, ಸಗರ. ೬೨-೫; ಸು. ೪೦೦); ನೆಗಟ್ಟಿದ್ದ ಕನ್ನಡಂಗಳೊಳಗಣಿತಗುಣನಿಧಿತ ಸಂಸ್ಕೃತೋಕ್ತಕ್ರಮಮುಂ ಬಗೆದು(ಕವಿರಾ.೧-೫೬); ನಿನ್ನ ಕಲ್ತ ವಿದ್ಯೆಯಂ ಪಂಡಿತಕ್ಕೆಯುಮನಾ ಪೊಬಲೊಳ್ ನೆಗಟ್ಟು ನೆಗಟ್ಟು ಪಂಡಿತರ್ಕಳೊಡನೆ ವಾದಂಗೆಯ್ದೊಡವರಂ ಗೆಲ್ದು . . . ಬಂದೊಡೆ (ವಡ್ಡಾರಾ. ೭೪-೧೪); ನೆಗಟ್ಟರಿಗನ ಸಾಹಸಮೊರ್ಮೆಗೊರ್ಮೆ ಕೆಲದವರ ಮಾತಿನೊಳ್ ತನ್ನ ಮನಂ[ಬು]ಗೆ . . . ತಲೆಗರೆದಿರ್ಪಂ (ಪಂಪಭಾ.೭-೪೩); ನೆಗಟ್ದುದು ರಾಮಾಯಣಮುಂ ನೆಗಟ್ದುದು ಭಾರತಮುಮಾ ಮಹಾಕವಿಗಳಿನಾ [ನೆಗಟ್ದರ್ ವ್ಯಾಸರ್ ವಾಲ್ಮೀ[ಕಿಗಳಿನೆ ನೆಗಟ್ದುಭಯಕವಿಗಳೆ ಮಗಧವಂದ್ಯರ್ (ಗದಾಯು. ೧-೪); ವಿಷ್ಣುಗ್ರಸತಿಯೆನೆ ನೆಗಟ್ದಳ್ (ಎಕ. VII, ೨೨ಮೊ. ೬೪-೧೪; 1112 ?); ನೆಗದ್ದಾದಿತ್ಯನಾಯಕ[ಂ] ನುದಾತ್ತರತ್ನನಾಯಳನೆಸೆದಂ (ಕಇಶ. ೭೫-೧೨-೭೪; 1170). **ನೆಗಳ್[1]**: ೩. ಒಂದೊಂದಹ್ವೋಪವಾಸದಿಂ ಕಾಯೋತ್ಸರ್ಗ್ಗದಿಂ ದಲೆನೆ ನೆಗಳ್ದು (ಎಕ. II, ೬೯-೧೬; 1100); ಸೊಂಪರ್ಗ್ಗಳಿಸೆ ಸಮ್ಮದವಡಿಸಿ ಪರಿಣಯಮುಂ ನೆಗಳ್ದು ಸಮಾಪ್ತಿಯಂ ಮಾಡಿ (ಓಸಪು. ೩೨-೩೯); ಶಿವ ಪೂಜೆಯಂ ನೆಗಳ್ವ . . . ತಾಪಸರ್ ಮೆಱೆದರ್ (ಪದ್ಮರಾ. ೧೩-೩೨); ಕೌರವರು ಬಹಳಾವಮಾನವನೆಮಗೆ ನೆಗಳಿದರು (ಕುಪ್ಯಾಭೀ. ೨-೨೪); ಅಳಟಾ ನೆಗಳಲಹುದೇ ಪುರುಷಸಂಗವನೆಂದಳಾ ಜನಂ(ಪ್ರಭುಲೀ.೫-೫೬); ಬೆಸಸಿದ ಕಜ್ಜಮುಂ ನೆಗಳದುತ್ತರವಿತ್ತಪನೆಂದು ನಿನ್ನ ಮಾನಸದೊಳಧೀಶ ನೀಂ ಬಗೆಯದಿರ್ (ರಾಜಶೇ. ೧೩-೪); ಳಿನಮುಹಿಮನನಲ್ಲಿಂದಲೇಳಿಸಲೊಂದನುವ ನೆಗಳ್ದರೇವೇಳ್ಕೆ (ಕಂನವಿ. ೫-೧೪). ೫. ಮಧ್ಯಂದಿನ ಸಮಯೋದಿತ ದಿಂಡಿಮಧ್ವಾನಂ ನೆಗಳೆ ಪೇರೋಲಗಮುಂ ಪರೆಯವೇಳ್ದಲ್ಲರಂ ಕಳುಪಿ . . . ತನ್ನ ಮಹಮನೆಗೆ ಬಪ್ಪಲ್ಲಿ (ಬಸರ. ೬-೩೬); ಭುರ್ ಭುಗಿಲೆಂಬಿನಂ ನೆಗಳ್ದ ನೇತ್ರಜ್ವಾಲೆಯಿಂ ತೊಟ್ಟ ನೋವದೆ ಸುಟ್ಟಂ ಮದನಾರಿ (ಪಂಪಾಶ. ೪೦); ಪರಮತಿವನಿಷ್ಠಂ ವಸಿಷ್ಠ ನತಿಶರುಣಿದಿಂದರರೆ ವಿಶ್ವಾವಿತ್ರಭೂಪನಂ ಬ್ರಹ್ಮರ್ಷಿವರನೆನಲ್ ನೆಗಳ್ದುದಿಲ್ಲಾ (ಪದ್ಮರಾ. ೪-೪೧); ಈ ನೆಗಳಿದುತ್ಪಾತಶಾಂತಿವಿಧಾನವೇನೆನೆ ಕೃಷ್ಣ ಚೇಷ್ಟೆಯೆ ಹಾನಿವೃದ್ಧಿವಿನಾಶವಭ್ಯುದಯ ಪ್ರಪಂಚದಲಿ (ಕುಪ್ಯಾಸ. ೧೦-೭೪); ಅನಿಲಂ ಮುಗಿಲುಂ ಕನಲ್ದು ಪೊಯ್ದನ್ನೆಗಳಲ್ ಳಿನಧ್ವನಿ (ರಾಜಶೇ. ೪-೧೧೬); ಆ ಮರುತ್ತಂಗೆ ಸಂತೋಷಂ ನೆಗಳ್ದುದು (ಜೈಮಿಭಾ. ೫-೪೫). ೬. ನಿಮಗೆ ಗುರೋರಧಿಗತಂ ಜ್ಞಾನಮೆಂಬುನುತಿದೆ ತೊಟ್ಟುಗೆ ವಾಯುತಂತ್ರಂ ಸ ವಿಷ ಸರ್ವಮೆನುತ್ತೆ ನೆಗಳ್ದು ಕಾರಣ

ಮೆನುತ್ತಿದೆ ಸೂತಗೀತಿ ಪಲವೇಂ ಗುರುವೆ ಸೇವ್ಯನೆಂತುಂ (ಪದ್ಮರಾ. ೧೧-೧೦೩). ೧೦. ತಂಸಾಜ್ಞೆ ತಂನ ತೇಜಂ ತಂನುಂನತಿ ನೆಗಳೆ . . . ಪೆರ್ಮ್ಮಾಡಿರಾಯನೆಸೆದಂ ಜಗದೊಳ್ (ಸೌಇಇ. XI-ii, ೧೧೯-೮; 948); ನೆಗಳ್ದಾಹವಮಲ್ಲಾವನಿಪನ ಭುಜಯುಗಳಮೆನಿಸಿದರ್ . . . ನಾಗವರ್ಮ್ಮನುಂ ಮಾಧವನುಂ (ಸಾಂದೇಡ್. ೩-೬; 1047); ವಿಷ್ಣು ವರ್ಧನಭೂಪಂ ನೆಗಳ್ದಂ ಧರಾವಳೆಯದೊಳ್ (ಎಕ. II, ೧೪೩-೧೬; 1131); ಶಿವಸೌಖ್ಯಂ ನಂಬಿಯಣ್ಣಂ ಶಿಶುವೆನೆ ನೆಗಳ್ದಂ ಶ್ರೀವಿರೂಪಾಕ್ಷ ಕಂದಂ (ನಂಬಿರ. ೨ ಸೂಚನೆ); ನೆಗಳ್ದ ದೇಶೀಗಣವಿಜಯಕೀರ್ತಿಗಳ ತನುಜರ ಜಾತರೂಪರ . . . ಪದಯುಗಕೆ ಭಕ್ತಿಯೊಳೆಱಪೆನು (ಸಾಳ್ವಭಾ. ೧-೨೦); ದುರ್ಧರ ಗ್ರೀಷ್ಮರಾಜನ ನೆಗಳ್ದ ಚತುರಂಗಮೆನಲು ರವಿಯ ಕಡುಗಾಯ್ಪುಗಳ್ತೇರೈಸಲು (ಜೈಮಿಭಾ. ೧೫-೪). ೧೧. ರಚಿಸು; ಕಟ್ಟು; ನಿರ್ಮಾಣ ಮಾಡು: ಸಾರತರ ಬಸವರಾಜೀಯಮಂ ನೆಗಳ್ದ ಪಾಲ್ಕುಱಿಕೆ ಸೋಮೇಶ್ವರಂಗೆ ವಂದಿಸಿದಪೆಂ (ಪದ್ಮರಾ. ೧-೧೨); ರಗಳೆಯ ಕವಿಯೆಂದು ತೆಗಳೆ ವಾದಿಗಳೆಲ್ಲ ಸೊಗಸೊಗುವಂತೆ ವಸ್ತುಕವ ನೆಗಳಿದ ಹಂಪೆಯ ಹರಿಯಣ್ಣನ ಪದಯುಗಳಕೆಱಗುವೆನಳ್ತಿಯೊಳು (ಕುರಾಸಾಂ. ೧-೩೪); ಪಳಿಯಲ್ ಬಲ್ಲಂ ನೆಗಳಲ್ ಖಳನೇಂ ಬಲ್ಲನೆ ನವೀನಕಾವ್ಯಮನಿಳೆಯೊಳ್ (ರಾಜಶೇ. ೧-೪೮). ೧೨. ಉಂಟುಮಾಡು; ಒದಗಿಸು: ಚತುಸ್ಸಮುದ್ರಾಂತಮಾಗೆನಗೆ ಕೀರ್ತಿಪ್ರತಾಪಂಗಳಂ ನೆಗಳುತೀ ಘನಭಾರಮಂ ಅಂತೆಮ್ಮನುಂಟುಮಾಡೆಂದು . . . ದಂಡೇಶ ಪಟ್ಟಮಂ ಕಟ್ಟ (ಪದ್ಮರಾ. ೪-೧೦). ೧೩. ತೋರಿಸು; ನಿರ್ದೇಶಿಸು: ಮತ್ತೆ ಪಾದದೊಳ್ನೆಗಳ್ದುದಂ ತಲೆಯಲ್ಲಿ ಪೊತ್ತು ಮಾಳ್ಪಾ ವಿಪುಲ ಸದ್ಭೃತ್ಯಂ (ಪದ್ಮರಾ. ೧೧-೬೬). **ನೆಗಳು**$_1$: ೩. ನಿಮಗೆ ಗಂಗಾಸುತನ ಬಲವಾಹ ವವನೀತನ ನೇಮದಲಿ ನೆಗಳುವುದು ನೀತಿಯಿದು (ಕುವ್ಯಾಭೀ. ೧-೧೪); ಪಗಲಾಣ್ಮ ನಡನಡುಗಿದ ಹುತಾಶನ ಬೇಱೆ ನೆಗಳಿದಪ್ರತಿನಿಶ . . . ಹಿಮದುಪಟಳಕೆ (ಮೋಹತ. ೪-೪೬); ಖಗದ ಮಱುಗಳು ಮಾತೆಯ ಮೇಲೆ ಪ್ರೀತಿಯ ನೆಗಳುವ ಭಾವವ ಕಂಡು (ಕಂನವಿ. ೪-೪೮); ರೋಗಂ ಗಳಿಗೆ ತಕ್ಕ ಚಿಕಿತ್ಸೆಯ ನೆಗಳಲೊಡನಾರೋಗ್ಯಕರಮಾಗಿರ್ಪುದು (ಸಕವೈ. ೭). ೫. ಶ್ರೀವಿವಾಹದ ಸರ್ವಸಂಭ್ರಮಂ ನೆಗಳುತಿರೆ ದೇವನಣುಗಂ ನಂಬಿ ಯಣ್ಣನಂದೊಪ್ಪುತಿರೆ (ನಂಬಿರ. ೫-೧); ಅಭ್ರದಿ ಧೂಮಕೇತುಗಳು ನೆಗಳಿದುವು (ಕುವ್ಯಾಸ. ೧೫-೪೧); ಕಾಂತೆ ನೋಡಿನ್ನು ಮುಂದೆ ನೆಗಳುವ ನಾಟಕವ (ಸೌಂದಪು. ೪-೬೮). ೧೦. ಕುಲಸತಿಯರ ಧರ್ಮ ಕೊನ ರಿಡೆ ನೇಹವ ನೆಲೆಗಾಣಿಸಿ ನೆಗಳುವುದು (ಹದಿಬ. ೩-೧೦). ೧೪. ಪ್ರಸಿದ್ಧ ಗೊಳಿಸು; ವಿಖ್ಯಾತವಾಗುವಂತೆ ಮಾಡು: ಬಗೆವೊಡೀ ಪರಿ ಭಕ್ತಿ . . . ಪೊಸತೆನುತೆ ಜಗದೊಳಗೆ ನೆಗಳಿ ನಿರ್ವಂಚನೆಯ ಭಕ್ತಿಯ ಮೊಗದು ಗಣತಿಂತಿಣಗಳಿರ್ದರು . . . ನಿರ್ಮಳಭಾವಶುದ್ಧಿಯಲಿ (ಪ್ರಭುಲೀ. ೯-೩೦). ೧೫. ಎತ್ತು; ನೀಡು: ಕರವ ನೆಟ್ಟನೇ ಊರ್ಧ್ವಕ್ಕೆ ನೆಗಳಿ ಸಮುಖದಿ ನಿಂದು ಭಟ್ಟನಾಯಕರು ಶತ್ರುಗಳೆದೆಯು ಬಿಚ್ಚುವೋಲ್ ಪೊಗಳುತಿರ್ದರು ವಲವಿನಿಂ (ನವಮೋ. ೨೭-೪೬). ೧೬. ಕಳೆ (?): ಸೋಂಕುಸೋಂಕಿನಲಿ, ಮುತ್ತು ಮುತ್ತಿನಲಿ ನೆಗಳಿದ ದಿವಗಳನು, ಇಲ್ಲಿ ನೋಡು ಎದೆಯಲ್ಲಿ (ಭಾರಂಗ. ೪೬-೨).

ನೆಗಟ್ಟಿ ನುಡಿ = ಪ್ರಕಟವಾಗಿ ನುಡಿ; ಪ್ರತಿಜ್ಞೆ ಮಾಡು; ಶಪಥ ಮಾಡು: ಕಾದುವೆನೆಂದು ನೆಗಟ್ಟಿ ನುಡಿದ ನುಡಿಯುಮಂ ಪಿಡಿದ ಚಲಮುಮಂ ಬಗೆದು (ಪಂಪಭಾ. ೧೦-೨೬ಪ). **ನೆಗಟ್ಟಿ ಪಡು** = ಆಚರಿಸಲ್ಪಡು; ಮಾಡಲ್ಪಡು: ಚರಮದೇಹಧಾರಿಗಳಿಂದಂ ನೆಗಟ್ಟಿ ಪಟ್ಟುದನೊಳ್ಳಿತಪ್ಪ ಮೋಕ್ಷಮಾರ್ಗಮಂ ಪೊರ್ದಿಯುಂ (ವಡ್ಡಾರಾ. ೮೭-೧೩). [ದೇ.॥ ತಮಿ. ನಿಕಟ್ಟ್, ನಿಕಳ್; ತೆಲು. ನೆಗಡು, ನೆವಡು]

ನೆಗಟ್ಟ್$_2$ (ನಾ). ಕೀರ್ತಿ; ಪ್ರಸಿದ್ಧಿ: "ನೆಗಟ್ಟ್ = ಪ್ರಸಿದ್ಧಿ; ಚರಿತ್ರಂ; ಜಲಗ್ರಾಹಂ" (ಶಮದ. ಪರಿ. ೧).

[<ನೆಗಟ್ಟ್$_1$]

ನೆಗಟ್ಟ್$_3$, ನೆಗಳ್$_2$, ನೆಗಳು$_2$, ನೆಗಳೆ (ನಾ). ಒಂದು ಬಗೆಯ ಜಲ ಚರ; ಮೊಸಳೆ; ನಕ್ರ: ಗಂಗೆಯಂ ಮಿಾಯಲ್ಪೋಗಿ ಮಿಾವಲ್ಲಿ ನೆಗಟ್ಟ್ ಪಿಡಿದೊಡೆ (ವಡ್ಡಾರಾ. ೧೫-೨೧); ನೀರೊಳಗೆ ತನ್ನನಡಸಿದ ನೆಗಟಂ ಬಾಯಟುವಿನಮಿಸಿಸಿಯುಂ (ಪಂಪಭಾ. ೨-೬೦); ಅವೆರಡರ್ಕಂ ನೇಹ ಮಾಗೆಯಾ ನೆಗಟ್ಟ್ ತನ್ನ ಮನೆಯಂ ಮಱೆದಲ್ಲಿಯೆ ಸಂತಸಮಿರುತ್ತಿರೆ (ಪಂಚತಂ. ೨೭೭-೨೨); ಗಂಗೆಯಂ ಮಿಾವಾ[ಗ]ಳ್ ನೆಗಟ್ಟ್ ಬಂದು ಕಾಲಂ ಪಿಡಿದೊಡೆ (ಸುಕುಮಾ. ೭-೧೬ ಪ); ಬೆಟ್ಟದಡಿಯಲ್ಲಿರ್ದ ನಿಧಿ ಯಂತೆ ನೆಗಟುಳ್ಳ ಮಡುವಿನೊಳಿರ್ದ ನಿಕ್ಷೇಪದಂತೆ (ಧರ್ಮಾಮೃ. ೧೩-೧೮೫); ನೀರ್ಗುಡಿವೆಡೆಯೊಳ್ ಪೊಳೆವ ತಮ್ಮ ನೆಟಲಂ ಮಾರ್ಪಡೆಯೆ ಗೆತ್ತು ಎಡೆಮಡಗದೆ ಕಡುಪಿನಿಂ ಪಾಯ್ದು ಬಾಯ್ತೆಱೆದೆಟ್ಟು ನೆಗಟ ಮೊಗದೊಳರ್ದಡಂಗುವ ಶಾರ್ದೂಲಸಂದೋಹಂಗಳೊಳಂ (ಚಂದ್ರಪು. ೫-೪೦ ಪ). **ನೆಗಳ್**$_2$: ಜಲನಿಧಿಯ ಮಣಿಗಳ ನೆಗಳ ಭಯಕಂಜಿ ತಳೆಯದಿಹರೆ (ಜೀವಂಚ. ೧-೨೪); ನೆಗಳ ಕೊರಳೋ ಹಸಿದ ಹುಲಿಗಳ ಮೊಗವೊ (ಕೌತಿರಾ. ೧-೨೧); ನೆಗಳಾನೆ ಮಿಾನ್ಗಳನೊಳಕೊಂಡು ಬಂದು ಪೇರಗಳಾದುದಬ್ಧಿ ದ್ವಾರಕೆಗೆ (ಮೋಹತ. ೩-೫); ಪಡುವಣಂಬುಧಿ ಯೊಳ್ ಮುಳುಂಗಿದಿನನಂ ನೆಗಳ್ವಿಡಿದು ನುಂಗುಗೆ (ಚಿಜಪು. ೯-೧೧); ಗಂಧರ್ವನಂದು ಬಲು ಗರ್ವಿಸೆ ನೆಗಳಾಗೆಂದು ಸುರಪತಿ ಮುಳಿದು ಶಾಪವ ನಿತ್ತನವಗೆ (ಕಂನವಿ. ೨೩-೧೦). **ನೆಗಳು**$_2$: "ಶಿಂಶುಮಾರಃ-ನೆಗಳು" (ಸಿದ್ಧಾಂತಿ. ೮೨); ತೊಱೆಯೊಳಗಣ ನೆಗಳು ಹಱುಗೋಲ ನುಂಗಿದಡೆ ಗತಿಯಿಲ್ಲ (ಅವಚಂ. ೮೦-೩೬೦); ಪಾತ್ರೆಯಂ ಏನೀ ಪೆಟ್ಟಿಗೆ ತಿಂದಿತೇ ನೆಗಳು ನುಂಗಿತೇ (ತಿರುರ ದೇ. ೧೩-೯); ರಾಜಮರಾಳಮಿಥುನವೆಡೆ ಯಾಡುವ ರಾಜಾಂಗಣ ನೆಗಳುಗಳು ರಾಜಿಪ ತಾಣವೆಂದೆನಿಸುವ ಸರಸಿಯ ರಾಜತನುಜ ನೋಡಿ ಕಂಡಂ (ಅಂಜಚ. ೭-೧೨೭); ಬಳಿಯಲಬುಧಿಯ ನೆಗಳುಗಳು ಮಿಾನುಗಳು ನೀರಾನೆಗಳು ಮೊಸಳೆಗಳು ಬೆಗಡುಗೊಂಡೋಡಿ ದವು (ತೊರರಾ. ೪-೧೨-೩೫); ನೆಗಳು ಮಿಾನ ಕಮಠ ತಂಡತಂಡದೆ ಜಲಚರ ತುಂಬಿ ಕಣ್ಗೆ ಶ್ರೀಖಂಡವಾಗಿರ್ದಳು ಗಂಗೆ (ಮೋಹತ. ೬-೩೬). **ನೆಗಳೆ** : ನೀನು ವರುಣತೀರ್ಥವಾಗಿರಲು ನೆಗಳೆ (ಮೊಸಳೆ) ನಿನ್ನಲ್ಲಿಗೆ ಬರುವುದು ನ್ಯಾಯವಿತ್ತು; ಈ ಯಮವಾಹನರೇಕೆ ಮೊದಲು ಬಂದರು? (ಮೈಲಿಮಾ. ೬); ಅವರು ಅಲ್ಲಿಗೆ ಹೋಗುವಾಗ ಹಲವಾರು ನೀಗ್ರೋ ಗುಲಾಮರು ನೆಗಳೆಗಳ ಬೇಟೆಯ ಸಿದ್ಧತೆಯಲ್ಲಿದ್ದರು (ಮಾರ್ಟಿನ. ೫೫); ಆನೆಗಳಷ್ಟು ದೊಡ್ಡ ನೆಗಳೆಗಳನ್ನು ಯಾರಾದರೂ ನೋಡಿರಬಹುದೋ? (ಮುಂಬಯಿ. ೬-೨೫೯); ನೆಗಳೆ ಹಾರಿದರೆ ಮುಗಿಲು ಮುಟ್ಟೀತೇ? (ಗಾದೆ).

ನೆಗಳ ವಾಹನ = ಮೊಸಳೆಯನ್ನು ವಾಹನವನ್ನಾಗಿ ಉಳ್ಳ ವನು; ವರುಣ: ನೆಗಳ ವಾಹನನಿತ್ತ ಮಂತ್ರೋಪದೇಶವದು (ತುರಂಗ. ೫೪-೫೧). **ನೆಗಳ ಸುಂಡಿಲು, ನೆಗಳ ಸೊಂಡಿಲು** = ಮೊಸಳೆಯ ಬಾಯಿಯ ಆಕಾರದ ರೀತಿಯ ಒಂದು ಬಗೆಯ ಅಲಂಕಾರ; ಮಕರ ತೋರಣ: ಪೊಗಳಲದಾರ ಜಿಹ್ವೆಗೆ ಸಾಧ್ಯ ಮಣಿಹರ್ಮ್ಯಯುಗಳಪಕ್ಷದ ಮುಂಬಿನಲಿ ನೆಗಳ ಸುಂಡಿಲ ತೋರಣ ಗುಡಿ ಬಲು ಕುರುಜುಗಳ ಹೊಂಗೆಲಸದುನ್ನತಿಯ (ಮೋಹತ. ೪೨-೨೫); ನೆಗಳ ಸೊಂಡಿಲ ಚಿನ್ನದಣಸಿನ ಪಲ್ಲಕ್ಕಿ . . . ಮುಂತಾದ ವಸ್ತುಗಳನಿತ್ತನು ಕೃಷ್ಣ ಮಗಗೆ (ಮೋಹತ. ೧೫-೨೦)..

[ದೇ.॥ ತುಳು. ನೆಗಳ್, ನೆಗರ್, ನಿಗಳ್; ತೆಲು. ನೆಗಡು]

ನೆಗಟುಸು, ನೆಗಳಸು (ಕ್ರಿ). ೧. ಮಾಡಿಸು ; ಆಗಿಸು : ಮಜ್ಜನ ಭೋಜನಭೂಷಣಂಗಳೆಂದಿವುಮಂ ಪ್ರಾರ್ಥನೆಗೆಯ್ದು ದೇವ ನಿಷ್ಟಮು ಮನುವಿಸಿ ನೆಗಟುಪುದು ಪರಿಜನಂ ಮಾನಿನಿಯಾ (ಕಾದಂಪೂ. ೬೪೩) ; ಅನಲಂ ಕಾನನಮಂ ಕಱುತ್ತಡಿಗಿಡಲ್ ಸುಟ್ಟುಂ ಬಟುಕ್ಕಲ್ಲಿ ನೂತನ ಬೀಜಾಂಕುರವೃದ್ಧಿಯಂ ನೆಗಟುಪಂ (ಪುಷ್ಪಪು. ೫-೫೨). ೨. ಆಚರಣೆಗೆ ತೊಡಗಿಸು ; ಆಚರಿಸುವಂತೆ ಮಾಡು : ಅಲಸರಪ್ಪವರ್ ತಮ್ಮ ಮೆಯ್ಯ ಸುಖಕ್ಕೆ ಪಾಪಹೇತುಗಳಪ್ಪ ಕುಧರ್ಮಮನುಂ ಪೇಟ್ದು ಪೆಱರಂ ಮರುಳ್ಮಾಡಿ ಧರ್ಮಮೆಂದು ನೆಗಟುಸುವರ್ (ಧರ್ಮಾಮೃ ೪-೩೪). ೩. ಕಾಣುವಂತೆ ಮಾಡು ; ತೋರಿಸು : ಇವಳೊಳ್ ನಿನ್ನ ವಿಜೃಂಭಣವೃತ್ತಿಗಳನ್ನೆಗಟುಸಿ ಬೆದಱಿಸುವುದಿದೆತ್ತಣ ಬಿನಪಂ (ಚಳವಿ. ೬-೩೩). ೪. ಪ್ರಸಿದ್ಧಿಪಡಿಸು ; ಹೊಗಳು ; ಕೀರ್ತಿಸು : ವಿಜ್ಞೆಯ ಬಳದಿಂ ಕವಿಗಳ್ಗಟ್ಟನೆ ನೆಗಟುಸೆಯವನೆ ಗಡಾ ಜೀವನೆನಿಸಿ ಜಸಮಂ ಪಡೆಗುಂ (ಚಳವಿ. ೧-೨೨). ೫. ಅಭಿವೃದ್ಧಿ ಮಾಡು ; ಏಳಿಗೆಯಾಗುವಂತೆ ಮಾಡು : ನೆಗಟುಸಿಮ್ಮ ದೊರೆತನದಿರವಂ (ಚಳವಿ. ೪-೧೬೭). **ನೆಗಳಿಸು :** ೪. ನರ್ಮಲಸತಿಯರ ಧರ್ಮವ ೞ್ತಿಯಾಗಿ ನಿರ್ಮಿಸಿ ನೆಗಳಿಪೆ[ಪಾಠಾಂ. ಕೇಳಿಪೆ]ನಿಂದು (ಹರಿಬ. ೧-೮). ೫. ಪೊಗಳಿಸಲು ನೆಗಳಿಸಲು ರೂಢಿಸಲು ನಿಜಕೀರ್ತಿಯಂ . . . ಇಳೆಗೆ ಬಂದ ಮಹಾಮಹಿನು (ಬಸಪು. ೩೩-೪೨). ೬. ವರ್ತಿಸು ; ನಡೆದುಕೊಳ್ಳು : ಅವರು ರಕ್ಕಸರಾಗಿ ಜನಿಸಿದರವನಿಯೊಳು ನೆಗಳಿಸಿ ನಡದರು ದಿವಿಜದಲ್ಲಣರಾಗಿ (ಉತ್ತಕ. ೫-೭). [ನೆಗಟ್+-ಇಸು]

ನೆಗಟ್ಕೆ, ನೆಗಳಕೆ (ನಾ). ೧. ನಡೆದುದು ; ವಿದ್ಯಮಾನ ; ಸಂಗತಿ: ನಿನ್ನನ್ ನೆಗಟ್ಕೆಯಿನ್ ಪೊಱಗಿಟ್ಟು ಸುತ್ತುಗಾಸಿದುವಯರ್ (ಅಂತಿಗೊ. ೧೧-೨೨೩). ೨. ನಡವಳಿಕೆ ; ಇರಸರಿಕೆ ; ವರ್ತನೆ : ಇಂತಾಗೆ ನಲ್ವುವರಿಯ ನೆಗಟ್ಕೆಯಂ ಕರಮೊಲ್ದು ಬಂದಾ ಮುನಿಯಂ ಪೊಗಟ್ದು ಪಾಡಿದಂ (ರಾಮಾಶ್ವ. ೭೦-೬). **ನೆಗಳಿಕೆ :** ೩. ಪ್ರಸಿದ್ಧಿ ; ಖ್ಯಾತಿ : ಹರಿ ದನುಜದಲ್ಲಣನೆನಿಪ್ಪ ನೆಗಳಿಕೆಯನಾಂತಂ (ಲಕಚಂ. ೧೪-೩೨) ; ಅರರೆ ಜಂಗಮಗಿರಿಯೊ ಜವನುಬ್ಬರದ ಜಾತ್ರೆಯೊ ಖಿಲಯವಹ್ನಿಯ ನೆರವಿಯೋ ನೆಗಳಿಕೆಯ ಬಲವೋ ಕಾಲಭೈರವನ (ತೊರಣಾ. ೪-೭-೮). ೪. ಹಿರಿಮೆ ; ಹಿರಿತನ : ಪೊಗಳಲಾರೆನು ನಿನ್ನ ಚರಿತೆಯ ನೆಗಳಿಕೆಯಯೆನಗೆಂತು ಗೋಚರಿಸಿದೆ ಮಹಾದೇವ (ಕೃಷ್ಣಾರ್ಜು. ೧-೨೯). ೫. ಕೈಚಳಕ ; ಮಾಟ : ಗಗನಕುಸುಮದಂತೆ ಶುಕ್ತಿರಜತದಂತೆ ಮಿಗೆಯಾತ್ಮನಂತಿಂದ್ರಜಾಲದ ನೆಗಳಿಕೆಯೆಂತೆಂದು (ಪರಬೋ. ೪-೪-೮). [ನೆಗಟ್+-ಕೆ]

ನೆಗಟ್ಟು, ನೆಗಳಚು, ನೆಗಳ್ಚು (ಕ್ರಿ). ೧. ತೊಡಗು ; ಕೈಗೊಳ್ಳು ; ನಡೆಸು : ಒಲವಿಂ ನೆಟ್ಟನುಪವಲ್ಲಭನೊಳಳವಟ್ಟಂಗಜಕೇಳಿಯಂ ನೆಗಟ್ಟು ದಳೊರ್ವಳ್ (ಉದ್ಭವ. ೧೦-೧೧೧). ೨. ಮಾಡು ; ನೆರವೇರಿಸು : ಮಹಾದಾನಮಂ ನೆಗಟ್ಟಿಯುಂ ಅನೇಕರತ್ನಪ್ರತಿಮೆಗಳಂ ಮಾಡಿಸಿಯುಂ (ಅಜಪು. ೪-೩ ಪ) ; ಸೌಂದರಮಿಗೆ ಶಿಶಿರೋಪಚಾರಮನಗಲದೆ ನೆಗಟ್ಟುತುಂ (ಉದ್ಭವ. ೬-೬೪ ಪ). ೩. ಮಾಡಿಸು : ಉತ್ಸವಮಂ ನೆಗಟ್ಟುದಂ (ಕಾದಂಪೂ. ೪೨೯). ೪. ನಡೆದುಕೊಳ್ಳು ; ವರ್ತಿಸು ; ವ್ಯವಹರಿಸು : ಅಂತು ಪಾಂಡುರಾಜನಧಿಕತೇಜನುಮವನತವೈರಿ ಭೂಭೃತ್ಸಮಾಜನುಮಾಗಿ ನೆಗಟ್ಟುತಿ[ಪಾಠಾಂ. ಬುತ್ತಿ]ರ್ದು (ಪಂಪಭಾ. ೧-೧೧೦ ಪ) ; ಮತ್ತೊರ್ವಳ್ ತಾನೊಲ್ದುಮೊಲ್ಲದಂತವನೊಳ್ ನೆಗಟ್ಟುವ ಮಗಳಣಕಕ್ಕೆ ತಲೆ ಕಣಕಣಿಸೆ (ಚಂದ್ರಪು. ೪-೬೫ ಪ). ೫. ಉಂಟು ಮಾಡು ; ಒದಗಿಸು : ಆನಿಂದರಿವೆಂ ವಿರೋಧಿಗಳಮಂ ಗಳ ಮುಂಗಳಮಂ ನೆಗಟ್ಟುವೆಂ (ಜಗವಿ. ೧೭-೩೩) ; ಕುದುರೆಯ ತಟ್ಟುಗಳ್ ನೆರೆದ ಬಲ್ದೆರೆಯುಂ. . .ಪೊಸತೇರ್ ಪಡಗಂ ನೆಗಟ್ಟಿ ಪೆರ್ಚಿದ ಕಡಲೆಂದಿನಂ ಮುಸಗಿ ಬಂದುದು ಪೆರ್ಬಡೆ ಕರ್ಬುವಿಲ್ಲನಾ (ಕಬ್ಬಕಾ. ೩೦೭) ; ಭೂನಾಥ ನೀನುನೊಲವಿಂದಾ ನೆರವಿಯೊಳಜಯಂದಂತು ಬಂದಿರ್ಪುದು ಮತ್ತಾ ನಾಗಳೇನನೆಸಗುವೆನೇನತಿಶಯಮುಂ ನೆಗಟ್ಟುವೆಂ ನೀ ಕಾಣ್ಪೆ (ದಶಕು. ೬-೧೨೭) ; ಪುರುಡಿಂ ಮೆಯ್ಗುಣ್ಣಂ ಕೀರ್ಬಗೆಯಿಂ ತಪೋವಿಘ್ನಮಂ ನೆಗಟ್ಟಲೆಂದು ತಱಿಸಂದು (ರಾಮಾಶ್ವ. ೫೫-೨೦). ೬. ಹೊರ ಹೊಮ್ಮಿಸು : ಪಸರಿಸಿದಾ ಬಗೆ ಮನದೊಳ್ ಪೊಸತಾಗೆ ನೆಗಟ್ಟಲಜಿಯನಾ ರಚನೆಯೊಳೀಂ ಬಸನಂ (ಕವಿಗಾ. ೧-೧೩) ; ಭೀಮುಂ ಭೀಮ ನಾದನುಂ ನೆಗಟ್ಟಿ (ಗದಾಯು. ೬-೩೪ ಪ) ; ನೆಗಟ್ಟು ಕಂತೆದುಲುಪಂ ಕೀರಾಳಿಯೇ (ಉದ್ಭವ. ೬-೬೩) ; ಮಹೋತ್ಸವದೆ ಕೋಗಿಲೆವೆಣ್ ಗಟಪಂ ನೆಗಟ್ಟುವಂತನುವಿಪ ಸೊರ್ಕಿನಿಂ ಪಿಕನಿನಾದೆ ಪೆಜಳ್ ಗಟಪಂ ನೆಗಟ್ಟುವಳ್ (ಕಾವ್ಯಸಾ. ೧೬೪). ೭. ಹೊಡೆಯಿಸು ; ಹೊಯ್ಯಿಸು : ಇತ್ತ ಧರ್ಮಪುತ್ರನುಂ . . . ಸೌಭದ್ರಪ್ರಮುಖನಾಯಕರ್ಮೆರಸು ರಣ ಪಟಹಂಗಳಂ ನೆಗಟ್ಟಿ (ಪಂಪಭಾ. ೧೦-೧೧೩ ಪ). ೮. ಪ್ರಸಿದ್ಧಿಯಾಗುವಂತೆ ಮಾಡು ; ಪ್ರಖ್ಯಾತಿಗೊಳಿಸು ; ವಿಖ್ಯಾತಿಪಡಿಸು ; ಪ್ರಕಟಿಸು : "ನೆಗಟ್ಟು—ವಿಖ್ಯಾತೌ, ಉದ್ಯೋಗೇ ಚ" (ಕಧಾಧಾ) ; ನಿನ್ನ ಕಲ್ತ ವಿದ್ಯೆಯಂ ಪಂಡಿತಕ್ಕೆಯುಮುನಾ ಪೊಬಲೊಳ್ ನೆಗಟ್ಟಿ ನೆಗಟ್ಟಿ ಪಂಡಿತರ್ಕಳೊಡನೆ ವಾದಂಗೆಯ್ದಿವರಂ ಗೆಲ್ದು . . . ಬಂದೊಡೆ (ವಡ್ಡಾರಾ. ೭೪-೧೪೪) ; ಧರಾಮರರೀ ಬ್ರಾಹ್ಮಣರೆಂದುಕೊಂಡು ಕೊನೆದಾ ಪಟ್ಟಿಂಡಭೂಮಂಡಲೇಶ್ವರನೋರಂತೆ ನೆಗಟ್ಟಿ ಕೂಡೆ ನೆಗಟ್ಟಿ ತ್ತೆತ್ತಂ ದ್ವಿಜನ್ಮಾನ್ವಯಂ (ಅದಿತು. ೧೫೫-೨೦) ; ನೆಗಟ್ಟುರ್ದುತ್ತಮಜೈನ ಮಾರ್ಗರುಚಿಯಿಂ ಚಾರಿತ್ರ್ಯಸಂಸಿದ್ಧಿಯೊಳ್ ನೆಗಟ್ಟರ್ಶಿಷ್ಯರುಮಂ ನೆಗಟ್ಟು ವರದರ್ಕಾಚಾರ್ಯರೆಂಬೀ ಪೆಸರ್ ಜಗತೀವ್ಯಾಪಕಮಾಗೆ (ಅಜಪು. ೧-೩) ; ತನಗಿಲ್ಲದಂತುಟಂ ತಾನೆ ನೆಗಟ್ಟುವ ಪರಗುಣಂಗಳಂ ಮುಚ್ಚುವ . . . ನೀಚನೊಳ್ ನೀಚಗೋತ್ರದಾಸ್ರವಮಕ್ಕುಂ (ಸುಕುಮಾ. ೪-೨೩). **ನೆಗಳಿಚು : ೫.** ಮದಕರಯುವಪದ್ರವ ನೆಗಳಿಚಲು ತಪ್ಪುಪುದೆ ಮರಿ ಹುಲ್ಲೆ (ಕೋಗಯ. ೪-೧೫). **ನೆಗಳ್ಚು :** ೨. ಕನಸಿದೊಳ್ಳಿತಲ್ಲೆಂದ ದಕೆ ಶಾಂತಿಯಂ ಮುನಿವರ ಪಸಿಷ್ಮಂ ನೆಗಳ್ಚಿದಂ (ಜೈಮಿಭಾ. ೧೪-೪೧) ; ಕೊಡರ್ಚಿದ ಕುಸುಮಮಾಲಿಕೆಗಳ ನೆಗಳ್ಚಿ [ಪಾಠಾಂ. ನೆಗಳಿ ನೆಲೆಗೊಳಿಸಿ]ದ ಚಿತ್ರಪುತ್ರಿಕೆಗಳ (ರಾಜಶೇ. ೪-೫ ಪ) ; "ಕಟ್ಟು ; ರಚಿಸು ; ರಚನೆ ಮಾಡು" (ಪ್ರಭಣ್ಣ). ೪. ಕೆಂದಳಿರದು ಮಾಂದಳಿರನೆ ನಂದಣಿಸಿದ ಪಣ್ಣಳಿಗಳನೆ ತಾನುಂ ಮೂಕಂದಮೆನಿಸಲ್ಕೆಗಳ್ಚಿದ ಚಂದಮನಾಂತಂತೆ ನೇಜಿಲಲ್ಲೆ ಸೆದಿರ್ಕುಂ (ರಾಜಶೇ. ೨-೪೬). ೯. ಪೂರೈಸು ; ಈಡೇರಿಸು: ವಸುಧೆಯೊಳಿಪ್ಪಾರ್ಥವಂ ತವೆ ನೆಗಳ್ಚುವನ ಬಹುವಿಧದ ಧರ್ಮಂಗಳಂ ರಚಿಸುವನ ಮನೆಯೊಳಿಂದಿರೆ ಬಿಡದೆ ನೆಲಸಿರ್ಪಳು (ಜೈಮಿಭಾ. ೫-೬೭).

[ನೆಗಟ್+-ಚು]

ನೆಗಟ್ಟಿ, ನೆಗರ್ತೆ, ನೆಗರ್ತೆ, ನೆಗಳ್ತೆ (ನಾ). ೧. ಇರವು ; ಸ್ಥಿತಿ ; ರೀತಿ : ಆರಸಿಯ ನೆಗಟ್ಟಿ ನೋಡಲ್ಬರಿದುಂ ವಿಸ್ಮಯಮುನಾಗಿಪುದು (ಕಾದಂಪೂ. ೩೪೨) ; ಬಾರದ ಭವಂ ಬಂದ ಜೀವನ ನೆಗಟ್ಟಿಯಂ ಪ್ರತ್ಯಕ್ಷಮಾಗಿ ನುಡಿದುದರ್ಕೆ ಕೊಕ್ಕರಿಸಿ (ಅಜಪು. ೨-೧೧೨ ಪ) ; ಕರತಲ ಕಾಂತಿಯಿಂ ವದನಚಂದ್ರಮನೊಳ್ ನವಸಾಂಧ್ಯರಾಗಮಂ . . . ಸರಳ ತರೋಷ್ಮನಿಶ್ವಸಿತಮಾದುತನಿಂದೆ ನಿಜೋತ್ತರೀಯದೊಳ್ ತರಳತೆಯಂ ನಯೋಜಿಪ ನೆಗಟ್ಟಿಗೆ ಕಾರಣಮೇನೋ (ಚಂದ್ರಪು. ೩-೫೪) ; ಪಣ್ಣಿಲ್ಲದ ಮರನ ಬಾಟ್ತಿ ತಣ್ಣೀರೊಸರ್ ಕುಂದಿದ ಕೊಳನ ನೆಗಟ್ತಿ . . . ನಂದ ಜಗದ ತೊಡುಹಕ್ಕೆಡೆಗುಡದೇಂ ಪೋಕುಂ? (ರಾಮಾಶ್ವ. ೧೦೪-೨೫). ೨. ಕೈಯೆ ; ಕಾರ್ಯ ; ಕೃತ್ಯ : "ಆಚಾರಾಧಿಕ್ಯಮಃ,

ಕ್ರಿಯಾ—ಈ ೨ ನೆಗಟ್ತಿ" (ಹಲಾಯು. ೧೨೯–೯೮); ತನ್ನ ಮುನ್ನಿನ ಮಲಯಸುಂದರನಪ್ಪ ಭವದ ನೆಗಟ್ತಿಗಳೆಲ್ಲಮಂ . . . ನೋಡುತ್ತಂ ಪಾಡುತ್ತಂ (ವಡ್ಡಾರಾ. ೩೯–೧೪); ಅಱಿಪು ನೆಗಟ್ತಿಯೆಂಬುಭಯ ಕಾಂಡಮೆ ಮುಕ್ತಿಪಥಕ್ಕೆ ಹೇತುವೆಂದಱಿಪುವರನ್ಯರ್ (ಅಜಿಪು. ೧–೯); ಪೊತ್ತುಂಗೆಲಸಂಗೊಳ್ವ ನೆಗಟ್ತಿಗಳಂ ನೆಗಱಲೆಂತುಮಱಿಯರ್ ಜೈನರ್ (ಸಮಯ. ೫–೧೦); ದೆಸೆಯಂತುವರಂ ನಿಜಕೀರ್ತಿಯಂ ನಿವಿರ್ಚದನೆನೆ ವಜ್ರಬಾಹುವ ನೆಗಟ್ತಿ ಪೊಗಟ್ತಿಗಳುಂಬಮಾಗದೇ(ಪಂರಾಪಾ. ೨–೨೩); ಇಂದ್ರಂ ಸೈರಿಸದೆ ನಿಮ್ಮೆಮ್ಮ ನೆಗಟ್ತಿಯ ಫಲಮನವಧಾರಿಸಿ ಮೆಂದೇಳಿಸಿ ನುಡಿಯೆ (ಧರ್ಮಾಮೃ. ೨–೨೧೭). **೩.** ನಡತೆ; ಚಾರಿತ್ರ್ಯ : "ನೆಗಟ್ತಿಯೆಂದು ಪ್ರಸಿದ್ಧಿಯುಂ ಚರಿತ್ರಮುಮಕ್ಕುಂ" (ಶಮದ. ಸ. ೩೩ ಪ್ರಯೋ); "ನೆಗಟ್ತಿಯೆನಲ್ ಚರಿತ್ರದೊಳ್" (ಕರ್ಣಾಸಿ. ೭೪); ಕಿಟ್ಟ ಕರವಾಳ್ಗಮೆಸಗಂ ಮಿಟ್ಟುವಿನಂತಿರ್ದ ಮಾರಿಗಂ ಬೆದಱದೆ ನಿಂದಟ್ಟುಯನೆ ನುಡಿವರಿವರ ನೆಗಟ್ತಿ ಕರಂ ಸಿರಿದು ಧೀರರಕಟ ಕುಮಾರರ್ (ಯಶೋಧ. ೧–೬೧). **೪.** ಪೂರೈಕೆ; ನೆರವೇರಿಸುವುದು : (ಕ). **೫.** ಅಭ್ಯಾಸ; ರೂಢಿ : (ಕ). **೬.** ಕಾಂತಿ; ಪ್ರಕಾಶ; ಶೋಭೆ : 'ನೆಗಟ್ತಿವಡೆ', 'ನೆಗಟ್ತಿವೆಱು' ಪರಾ. **೭.** ಕೀರ್ತಿ; ಖ್ಯಾತಿ; ಪ್ರಸಿದ್ಧಿ : "ನೆಗಟ್ತಿಯೆಂದು ಪ್ರಸಿದ್ಧಿಯುಂ ಚರಿತ್ರಮುಮಕ್ಕುಂ" (ಶಮದ. ಸ. ೩೩ ಪ್ರಯೋ); ನುಡಿಗೆಲ್ಲಂ ಸಲ್ಲದ ಕನ್ನಡದೊಳ್ ಚತ್ತಾಣಮುಂ ಬೆದಂಡೆಯುಮೆಂದೀಗಡಿನ ನೆಗಟ್ತಿಯ ಕಬ್ಬದೊಳೊಡಂಬ(ಡಂ ಮಾ)ಡಿದರ್ ಪುರಾತನಕವಿಗಳ್ (ಕವಿರಾ.೧–೩೩); ನೀರಿಲ್ಲದ ಕೆಟಿಯ ನಡುವಂ ಕಂಡುದಱಂ ತೀರ್ಥಂಕರಚಕ್ರವರ್ತಿಗಳ ಪುಟ್ಟಿದ ಮಧ್ಯದೇಶದೊಳ್ ಧರ್ಮದ ನೆಗಟ್ತಿಯಾಗದು (ವಡ್ಡಾರಾ. ೮೬–೨೦); ಶ್ರೀಗೆ ನೆಗಟ್ತಿಗೆ ವೀರಶ್ರೀಗಾಗರಮಪ್ಪೆನೆಂಬ ಕಳಕಳ ವಿಜಯೋದ್ಯೋಗದೊಳೆ ನೆಗಟ್ತಿನೆಂಬುದ್ಯೋಗಿಗೆ ಮಲೆವನ್ಯನ್ಯಪತಿ ಮಂಡಳಮೊಳವೇ (ಪಂಸಭಾ. ೯–೧); ಇಂತು ನೆಗಟ್ತಿಗಂ ಪೊಗಟ್ತಿಗಮಳುಂಬಮಾದ ಸುವ್ರತಾಮಹಾದೇವಿ (ಬಾಧಪು. ೨–೬೭ ಪ). **ನೆಗರ್ತಿ : ೭.** ಅದ ನೆಗರ್ತಿಯೊಳಗ್ಗಳಮಾದುದು ಸಂಪತ್ತಿ ಸತ್ಯಮಾದುದು ನುಡಿ (ಕಇ. V, ೧೪–೨೧; 1099). **ನೆಗರ್ತೆ : ೭.** ನೆಗಟ್ತಿಯಗುಂಸೆದೆಣ ವಡೆಸಿ ದಲ್ (ಎಕ. II, ೧೧೧–೧; ಸು. 700); ಪೊಗಳ್ತಿಗಂ ನೆಗರ್ತ್ತೆಗಂ ನೆಲೆಯಾಗಿ ಕಾದಿ (ಎಕ. VIII, ಸೊರಬ. ೪೪೫–೮; 975 ?); ಚನ್ನಣ್ಣಾಸಿದ್ಧಾನ್ತಮುನೀಶ್ವರರ್ಗುರುಗಳೆಂಬ ನೆಗರ್ತ್ತಿಯ ಪಾವಣ್ಣಾಸಿದ್ಧಾನ್ತಮುನೀಶ್ವರರ್ (ಸೌಇಇ. XI–i, ೧೧೧–೨೦; 1071); ಅಂತು ನೆಗರ್ತ್ತೆಗಂ ಪೊಗರ್ತ್ತೆಗಂ ನೆಲೆಯಾದ . . . ಮಹಾಪ್ರಚಣ್ಡದಣ್ಡನಾಯಕಂ (ಮೈಅರಿ. ೧೯೨೯, ೬೫–೪೯; 1081); ಪುಣ್ಯೋದಯದೊಳ್ ಪ್ರದ್ಯುಮ್ನಕುಮಾರಂಗೆ ಸಕಳವಿದ್ಯಾಸಂಯೋಗಮುಂ ಜನಾನುರಾಗಮುಮಾಗಿ ರೂಪಿನ ಪೊಗರ್ತೆಯುಂ ಸಹಜದ ನೆಗರ್ತೆಯುಮುಂ ಕೇಳ್ದು (ಬಂಹರಿ. ೮–೫೨ ಪ). **ನೆಗಳ್ತೆ : ೭.** "ನೆಗಳ್ತೆಯೆನಲುಂ ಖ್ಯಾತಿಯಕ್ಕುಂ" (ಕಶರ. ೧೨೬); ಮನುಚರಿತಂ ಪೊಗಳ್ತೆಯ ನೆಗಳ್ತೆಯ ರೂಢಿಯ ಮಲ್ಲಿದೇವ ಭೂಪನೆ ತನಗಾಳ್ದನೀಶ್ವರನೆ ನಂಬಿದ ದೆಯ್ವವೆನಿಪ್ಪ ನಾವನೋ ವರಮಂತ್ರಿ ಬಮ್ಮಣನಾಮಣನ್ (ಸೌಇಇ. IX–i, ೨೬೦–೬೫; 1169); ಇನ್ತು ಪೊಗಳ್ತಿಗಂ ನೆಗಳ್ತಿಗಂ ನೆಲೆಯಾದ ಸಾಮನ್ತ ಕಾಮಯ್ಯನಾಯಕರ್ (ಎಕ. XI, ಚಿತ್ರದು. ೩೬–೩೫; 1199); ಶರಧಿ ಪರಿರಚನೆವಡೆದುದು ನೆಗಳ್ತಿಯಿಂ ಭುವನದುರ್ಗಾವೃತದಗಳುವೆನಲು (ಸಂದಿಮಾ. ೨–೯); ಕುಲದ ನೆಗಳ್ತೆಯುಮಂ ನೀಂ ಕಲುಷಿತಮಂ ಮಾಡಲೆನ್ನುಮಂ ಕೆಡಪಲ್ಕೇಕೆಳಸುವೆ ಕೂಲಂಕಷ ಶೈವಲಿನಿಯವೋಲ್ ತಿಳಿದ ಜಲಮುಮಂ ತಟಜಮುಮಂ (ಶಾಕುಂತ. ೬೮–೧೨೧). [ನೆಗಟ್ತ್ $_1$ + –ತೆ $_2$]

ನೆಗಟ್ತಿಗಿಡಿಸು (ಕ್ರಿ). ಖ್ಯಾತಿಯನ್ನು ಕುಂದಿಸು; ಹೀನಗೊಳಿಸು : ಅ ಕಳದ ಕೆಲದೊಳ್ ಸಾರಿಯಂ ಕೋಲೊಡ್ಡಿ ಗೆಲ್ವ ನಿಗಳನ ನೆಗಟ್ತಿಗಿಡಿಪ ಭೃಗುವಂ ನಗುವ ಬೇತಾಳನಂ ಬೇಡೆನಿಪ ತಕ್ಕುಮಿಕ್ಕುವರೆ ಕಲ್ಲ ಬಿನ್ನಣಗಳಿರ್ದುಂ (ಪುಷ್ಪಪು. ೨–೬೦ ಪ).

[ನೆಗಟ್ತಿ + ಕಿಡಿಸು(< ಕೆಡಿಸು $_1$)]

ನೆಗಟ್ತಿಗೆಯ್ (ಕ್ರಿ). ಉಂಟುಮಾಡು; ರಚಿಸು : ನಸುನೀಳ್ದು ಮಿಸುಪ ನಾಸಾವಂಶಂ ನಯನಾಮೃತಜಲಧಿಗಳರಡುಮೊಡವರೆಯದಂತೆಡೆ ಯೊಳಿಟ್ಟ ಪೊಂಗಟ್ಟಿಯ ನೆಲೆಯಂ ನೆಗಟ್ತಿಗೆಯ್ಯುತ್ತಿದೆ (ಚಿಕನಂ. ೮೨–೧೯). [ನೆಗಟ್ತಿ + ಕೆಯ್ $_1$]

ನೆಗಟ್ತಿವಡೆ, ನೆಗರ್ತೆವಡೆ, ನೆಗಳ್ತೆವಡೆ (ಕ್ರಿ). **೧.** ಪ್ರಕಟವಾಗು; ಸ್ಪಷ್ಟವಾಗು : ಕುಡವೇಟ್ಟುನ ಕುಡುವನ ಕುಡೆ ಪಡೆವನ ಪೊಂಪೇಂ ನೆಗಟ್ತಿವಡೆಗುಮೊ (ಪಂಪಭಾ. ೬–೪೯); ಇನ್ತು ನೆಗಟ್ತಿವಡೆದ ಶೌಚರಸ ರಾಳ್ಕೆಯಲು (ಸೌಇಇ. XI–i, ೧೦೧–೨೩; 1068); ಅಗಣಿತಮೆನಿಸುವ ಗುಣನಿಂ ನೆಗಟ್ತಿವಡೆದಿರ್ದ ಶಾಸ್ತ್ರತರ್ಕಾಗಮದಿಂ ಜಗತೀವಳಯಂ ಬಣ್ಣಿಸೆ ನೆಗಟ್ದರ್ ತ್ರೈವಿದ್ಯಮೇಘಚಂದ್ರಮುನೀಂದ್ರರ್ (ಧರ್ಮಾಮೃ. ೧–೩೪). **೨.** ಪ್ರಸಿದ್ಧವಾಗು; ಕೀರ್ತಿಯನ್ನು ತಳೆ; ವಿಖ್ಯಾತಿಯನ್ನು ಹೊಂದು : ತನ್ನ ಜಸದೆಸಕದಿಂ ನೆಗಟ್ತಿವಡೆದ ಸಾರ್ವಭೌಮ ರಾಘವನಂ ಕೈವಿಡಿದು ಪಟ್ಟದರಸಿಯಾಗಿಯುಂ . . . ಬಾಟ್ತಿನಗೀಗಳಿಂತೊಂದು ವಿಧಿ ಬಗೆದುದೇ ! (ರಾಮಾಶ್ವ. ೩೯–೨೩). **೩.** ಕಾಂತಿಯಿಂದಿರು; ಅಲಂಕಾರವಾಗಿರು; ಶೋಭಾಯಮಾನವಾಗಿರು : ಬಿಂಕದಿಂ ಬಲಗೆಲದೊಳ್ ನೆಗಟ್ತಿವಡೆದಿರ್ಪರಸಂಚೆಯ ಸಿಂಡು . . . ಒಪ್ಪೆ ಬಗೆಗೋಲಗಮೊಪ್ಪಿದುದಂದು ಕಾವನಾ (ಕಬ್ಬಕಾ. ೧೨೮). **ನೆಗರ್ತೆವಡೆ : ೨.** ಚಿತ್ರಕವಿತಾವಿಸ್ತೀರ್ಣಸನ್ದರ್ಭಗರ್ಭನಿರುದ್ಧೋನ್ನತಿಯಿಂ ನೆಗರ್ತ್ತೆವಡೆದ ತ್ರೈವಿದ್ಯಗೋವರ್ಧನರ್ (ಸೌಇಇ. XI–i, ೬೮–೨೯; 1045); ಇನ್ತು ನೆಗರ್ತ್ತೆವಡೆದಂ ಶ್ರೀಮದ್ದಣ್ಡನಾಯಕ ವಾಸುದೇವಯ್ಯಂಗಳ (ಸೌಇಇ. XI–i, ೧೦೧–೧೯; 1068); ನ್ಯಾ(ಜ್ಞಾ)ನ ಶಕ್ತಿಬ್ರ(ವ್ರ)ತೀಂದ್ರಂ ತಾನೆಯ್ದೆ ನೆಗರ್ತ್ತೆವಡೆದನಿಪಱಂ ಜಗದೊಳ್ (ಇಅ. XIII, ೯೩–೨೫; 1084). **೩.** ಇನ್ತು ನಿಜಗೋತ್ರಶಿಖಾಮಣಿಯಾ ದ್ವಿಜವಂಶಭೂಷಣ[ರುಮೆ]ನಿಸಿ ನೆಗರ್ತ್ತೆ[ವಡೆದು] (ಸೌಇಇ. XX, ೬೪–೧೬; 1112). **ನೆಗಳ್ತೆವಡೆ : ೨.** ಜಗಜಂಪಿನ ಸತ್ತಿಗೆಯ ಪಲಬಿರುದುಗಳ್ನೆಗಳ್ತೆವಡೆಯೆ (ರಾಜಶೇ. ೬–೧೧ ಪ). [ನೆಗಟ್ತಿ + ಪಡೆ $_1$]

ನೆಗಟ್ತಿವೆಱು, ನೆಗರ್ತೆವೆಱು, ನೆಗಳ್ತೆವೆಱು (ಕ್ರಿ). **೧.** = ನೆಗಟ್ತಿವಡೆ ೨ : ಈತನ ವಂಶದೊಳೀ ಪೊಱಲೊಳ್ ನೆಗಟ್ತಿವೆತ್ತಂ ದಂಡಿತಾರಾತಿಮಂಡಳಂ ದಂಡಕನೆಂಬಂ(ಅಜಿಪು. ೨–೧೪ ಪ); ಅಪ್ಸರಸಿಯೊಳುದಿಸಿದ ಗೌರಿಗಂ ಗಂಧರ್ವಲೋಕಾಧಿಪತಿಯಪ್ಪ ಹಂಸಂಗಂ ಮಗಳಾಗಿ ಮಹಾಶ್ವೇತೆಯೆಂಬ ಪೆಸರಿಂ ನೆಗಟ್ತಿವೆತ್ತಳ್ (ಕಾದಂಪೂ. ೭೯೪); ಉನ್ನತಗಂಗಮಂಡಲೇಶ್ವರಮಕುಟಾರ್ಚಿತಂ ಭುವನದಿಂ ತಮಗೆಂಬ ನೆಗಟ್ತಿವೆತ್ತ ಲಂಕರಿಸಿ (ಅಜಿಪು. ೧–೬). **೨.** ಕಾಂತಿಯುತವಾಗಿರು; ಶೋಭಿಸು; ಸೊಗಸಾಗಿರು : ಪೊಗಟ್ತಿ ಜನಂ ಝುಂಝುವಾವೇಗಗೆ ತಾನಂತೊಂದು ಕೋಟಿ ದೀನಾರಮನಾ ಮೃಗನಯನೆ ಕೊಟ್ಟು ಕೊಂಡಳ್ ನೆಗಟ್ತಿವೆತ್ತಿರ್ದ ರತ್ನಮಯಕಂಬಳಮಂ (ಸುಕುಮಾ. ೧೦–೧೧೮); ಶ್ರುತದಗ್ಗಳಿಕೆ ತಪದುನ್ನತಿಕ್ಕೆ ತನ್ನೊಳೆ ನೆಗಟ್ತಿವೆತ್ತಿರೆ ಭೂವಿಶ್ರುತನೆನೆ . . . ಗೆಲೆವಂದಂ (ಪಂರಾಪಾ. ೨–೫೧). **ನೆಗರ್ತೆವೆಱು : ೧.** ನೆಗರ್ತೆವೆತ್ತೀ ಜಂಬೂದ್ವೀಪದ ನಟ್ಟನಡುವೆ . . . ನಿಂದುದು ಸೌಂದರಮಂದರಾಚಳಂ (ವರ್ಧಮಾ. ೧–೩೭ ಪ); ಗಂಗವಾಡಿ ನಾಡೊಳಗೆ ನೆಗರ್ತ್ತೆವೆತ್ತೆಸೆವ ಮಣ್ಡಲಿ (ಎಕ. VII, ಶಿವಮೊ. ೯೬–೪೩; 1113);

ಶ್ರೀರೂಪು ಸೌಜನ್ಯದೊಳ್ಪಲರುಂ ಮೆಚ್ಚೆ ನೆಗರ್ತೆವೆತ್ತು ಪಿರಿಯಂ ತಾನಾದನ್ (ಸೌಇಇ. IX-i, ೨೦೦-೧೨ ; 1121). **ನೆಗಳ್ತೆವೆಱು :** ೧. ನೆಗಳ್ತೆವೆತ್ತ ನಿಜವಾಮಕರಕಲಿತಪ್ರಚಂಡಕೋದಂಡ ಕೋಟಿಯೊಳ್ ಮಂಜುಸಿಂಜಿನಿಯನಮರ್ಚಿ (ಶಬಶಂ. ೪-೧೬ ವ).

[ನೆಗಟ್ತೆ + ಪೆಱು$_1$]

ನೆಗಟ್ಟೀರ, ನೆಗಳ್ದೀರ (ನಾ). ಮೊಸಳೆಯನ್ನು ವಾಹನವನ್ನಾಗಿ ಉಳ್ಳವನು ; ವರುಣ : "ನೆಗಟ್ಟೀರಂ, ಪಚ್ಚಮದೆಸೆಗೊಡೆಯಂ, ನೀರೊಟ್ಟಲಾಣ್ಮಂ-ಈ ೩ ವರುಣಂಗೆ ಪೆಸರ್" (ಕಶಸಾ. ೪೯-೩೬) ; "ಪಚ್ಚಮದ ದೆಶೆಗೊಡೆಯ ಮುನ್ನೀರೆಱೆಯ ನೀರೊಟ್ಟಲಾಣ್ಮಂ ನೆಗಟ್ಟೀರನೆನೆ ವರುಣನು" (ಕಬ್ಬಿಕೃ. ೧೪). **ನೆಗಳ್ದೀರ :** "ನೆಗಳ್ದೀರ ನೆಂದೆನೆ ವರುಣನಕ್ಕುಂ" (ಕಶರ. ೫೬). [ನೆಗಟ್ಟ್$_3$ + ತೀರ್$_2$ + -ಅ$_7$]

ನೆಗಟ್ಪು, ನೆಗಪ್ಪು (ನಾ). ೧. ನಡವಳಿಕೆ ; ವರ್ತನೆ : ಅಂತೆ ಕಿಱುಕುಳ ವ್ಯಂತರಂಗಳ ಪೊಲ್ಲಗ್ರಹಂಗಳ ಶೈವಾದಿಗಳ ನೆಗಟ್ಪೆ ಪ್ರಮಾಣಮಲ್ಲದು (ಧರ್ಮಾಮೃ. ೯-೧೦೧). **ನೆಗಪ್ಪು :** ೨. ಕೀರ್ತಿ ; ಖ್ಯಾತಿ ; ಪ್ರಸಿದ್ಧಿ : ಶ್ರೀ ಬಿಟ್ಟಗಂ ಮೌಳಿಕೋಸಿಗರಾಣ್ಮ ನೆಗಪ್ಪಿನಣುವಂ ಚಿಡ್ಡೂರಾಳ್ಗೆ (ಮೈಅರಿ. ೧೯೨೯, ೭೮-೬ ; 964).

[ನೆಗಟ್ಟ್$_1$ + -ಪು$_2$]

ನೆಗಿಲು 'ನೆರ್ಗಿಲ್' ನೋ.

ನೆಗೆ$_1$ (ಕ್ರಿ). ೧. ಮೇಲಕ್ಕೇಳು ; ಮೇಲಕ್ಕೆ ಬರು : ಕೋಟಿಯ ಚೆಲ್ವು ಪೊಗಟಲರಿದೆನಿಸಿರೆ ನೆಗೆದುದು ನಭಮನೆಯ್ದೆ ಮಿಳಿರ್ವ ಪತಾಕಾವಳಿ (ಪಂಪಭಾ. ೪-೧೦) ; ಸುರರೆಲ್ಲಂ ಬಡಗಲು ನೆರೆದಿರೆಯಾ ದೆಸೆ ಕುಸಿದು ತೆಂಕ ನೆಗೆದೊಡಗಸ್ತ್ಯಂ ಪರಿದತ್ತಲ್ ನಿಲೆ ವಿಶ್ವಂಭರಿ ಸಮತಳಮಾದುದೆಂಬರಿಳೆ ಕುಸಿದಪುದೆ (ಸಮಪ. ೧೦-೧೧೪) ; ಹರಿ ನೆಗಹಿದಡೆ ನೆಗೆದ ಮಂದರದಾ ಬಲುಹೆನಿತು (ಬಸಪು. ೧೯-೨೬) ; ರಕುತದ ಕಡಲೊಳಗೆ ಬೆಂಡೆದ್ದು ನೆಗೆದುದು ಕೋಟಿ ಪಾಯದಳ (ಕುವ್ಯಾದ್ರೋ. ೬-೪೮) ; ತೀರದ ನೀರೆದಂ ನೆಗೆದು ಗರ್ಜಿಪುದೆಂದು ಪಯೋಧಿಕೇಳಿಯಂ ಸಾರಮರಾಳನೇನುಳಿದುದೇ (ರಾಜಶೇ. ೧೩-೧೯). ೨. ಹಾರು ; ಜಿಗಿ ; ಎಗರು : "ನೆಗೆ—ಉತ್ಪ್ಲವನೇ" (ಶಮಧಾ) ; ಖೇಚರನುಂ . . . ಸಿಂಹಲಂಕಾನದಿಂ ಮೇಗೆ ನೆಗೆದು ವಜ್ರಸಮಾನಮಪ್ಪ ಕೈಯಿಂದಂ ಕುಮಾರನಾತನ ತೆಗಲೆಯಂ ತಿವಿದೊಡೆ (ವಡ್ಡಾರಾ. ೫೯-೨೮) ; ಅಂಬರಂಬರಂ ನೆಗೆದ ಧೂಳಿಯೊಳ್ ದೆಸೆಯಜ್ಜುಯದೆಯುಂ . . . ಚಾತುರ್ವರ್ಣಂಗಳ್ ಮೊದಲ ಸಮಕಟ್ಟುಗೆಟ್ಟು (ಪಂಪಭಾ. ೧೦-೭೦ ವ) ; ಕುರುರಾಜಂ ವಿದ್ಯಾಧರಕರಣದೆ ನೆಗೆದಂಬರಕ್ಕೆ ಗದೆಯಂ ಕ್ರಮದಿಂ ತಿರುಪೆ ಧರಾಚಕ್ರಂ ಕೋವರಚಕ್ರಂ ತಿರಿವ ತೆಱದೆ ತಿರಿದತ್ತೆನಸುಂ (ಗದಾಯು. ೮-೨೪) ; ಕೊರಳುದ್ದಕ್ಕೆ ಹೂಳಿಸಿಕೊಂಡು ಮುಗಿಲುದ್ದಕ್ಕೆ ನೆಗೆದಹೆನೆಂಬವನ ಹಾಂಗೆ ಶಿವನ ಜೋಕೆಯನಱಯದೆ ಮಾತನಾಡುವ ಮಾತೆಲ್ಲವು ಮಾತಿನ ಮಾಲೆಯಲ್ಲದೆ ಅಲ್ಲಿ ನಿಜವಿಲ್ಲ (ವಚಸಂ. ೩೫೦-೯೮) ; ನೋಡಿದ ಮೃಗಂಬೆರಸಿ ನೆಗೆದನಾಕಾಶಕ್ಕೆ (ಚಂಡೇರ. ದೇ. ೨೫೧-೨೪) ; ಪಕ್ಕಿಗಳು ಗಗನಕ್ಕೆ ನೆಗೆದವು (ಬಸಪು. ೧೨-೪೮) ; ಮೇಲೆ ನೆಗೆದೊತ್ತರಿಸಿ ನಡೆವ ಮುತ್ತಿನ ಸತ್ತಿಗೆಗಳಿಂ ಚಂದ್ರಭುವನಮವತರಿಸಿದಂತೆಯುಂ (ರಾಜಶೇ. ೧೩-೭೭ ವ). ೩. ವೇಗವಾಗಿ ಮುನ್ನುಗ್ಗು : ಬಟ್ಟೆ ಬರೆ ಹಾಕಿಕೊಂಡರೆ ಕಾಲವಿಳಂಬವಾದೀತೆಂದು ಹಟ್ಟನೆ ನಗ್ನತೆಯಲ್ಲೇ ಕಳ್ಳರ ಹಿಂದೆ ನೆಗೆದನು (ಕಾಸ್ಯಸ. ೬). ೪. ಸೆಟೆದು ನಿಲ್ಲು ; ನಿಮಿರು ; ನಿಗುರು : ಆ ದ್ವಿಜಕುಮಾರನೆಡೆವಿಡದೆ ನಟ್ಟುಡಿದ ನನೆಯಂಬಿನ ಮೊನೆಗಳಂತೆ ನೆಗೆದ ಕಂಟಕನಿಕಾಯಮುಂ (ಕಾದಂಉ. ೫೬೫) ; [ಪೆಗಲೆಲ್ಲಂ ಬೆಂದು] ತೋಳ ಮೊದಲಂ ಕಿರ್ಜಳುರ್ವಾಗಳ್ ನರವುಗಳ್ ತೆಗೆದು ತೋಳ್ ತನಗೆ ತಾನೆ ನೆಗೆವುದುಂ (ಧರ್ಮಾಮೃ. ೧೨-೪೧ ವ) ; ಅನುವಿಸುವ ಕಂಪನದ ಭರದಿನಖಿಳಾವಯವಮೊರ್ಮೊದಲೆ ಚೆಚ್ಚರಮೆಬ್ಬಱುವ ತೆಱದೆ ಮೆಯ್ನವಿರ್ಗಳಾವಗಂ ನೆಗೆಯೆಯುಂ (ಪರ್ಧಾಪು. ೬-೨ ವ) ; ಪಸರಿಸಿ ಪರ್ಬಿದ ನೀಡಡಿ ಕುಸಿದಂಗಂ ನೀಳ್ದ ದಂಡೆ ನೆಗೆದ ಭುಜಾಗ್ರಂ ಕುಸುಮಶರಾಕುಂಚಿತಕರಮೆಸೆದರ್ದುವು ದೃಷ್ಟಿಮುಷ್ಟಿ ಶರಸಂಧಾನಂ (ಗಿರಿಕ. ೮-೨೪) ; ಕೆಂಗಣ್ಣುಗಳ ಮುಪ್ಪುರಿಗೊಂಡ ಹುಬ್ಬುಗಳ ನೆಗೆದ ರೋಮಾವಳಿಯ . . . ರಕ್ಕಸರನೀಕ್ಷಿಸಿ ನುಡಿದನಸುರೇಂದ್ರ (ತೊರಾ. ೬-೧೩-೬). ೫. ಎತ್ತರವಾಗು ; ಉನ್ನತವಾಗು : ಈಂಟುಜಳಧಿಯೆನಿಪಗಟ ನೀಳ್ಪಿನಿಂ ನೆಗೆದು ಸೊಗಯಿಸುವ ಕೋಂಟೆಯೊಳ್ಪಿನಿಂ (ಪಂಪಭಾ. ೩-೨೨) ; ಅರಿದಿಱದರ್ ಪೆಣಬಣಂಬೆಗಳ್ ನೆಗೆವಿನೆಗಂ (ಪಂಪಭಾ. ೧೦-೮೨) ; ಶಿವನಾಗಮವೆ ನೆಗೆದ ಬಿರುದಿನಟ್ಟಣೆಯದಕೆ (ತಿರುರ.ದೇ. ೨-೨೩); ಪುಣ್ಯಪುಂಜದ ಸಿರಿಗಳಿವೆನಿಸುವುವು ನೆಗೆದ ಜಿನಭವನಂಗಳ್ (ಅಸಂಪು. ೧-೧೦೩). ೬. ಮೇಲಕ್ಕೆತ್ತು ; ಎತ್ತಿಹಿಡಿ ; ಎತ್ತರಿಸು : ಕುಸಿದ ತಲೆಯನು ನೆಗೆದು ನಲ್ಲಳಿ ಹೇಳು ಹೇಳೆಂದ (ಸಾಳ್ವಭಾ.೧೯-೪೪). ೭. ಮೂಡು ; ಕಾಣಿಸಿಕೊಳ್ಳು ; ತಲೆದೋರು ; ಉಂಟಾಗು ; ಹುಟ್ಟು : ನೆಗೆದ ಮುಗಿಲ್ಗಳುಂ ಸುರಿವ ಪರ್ಮಱೆಯುಂ ಮಿಗೆ ನುಣ್ಣನಪ್ಪ ಕೇಕಿಗಳ ಸರಂಗಳುಂ . . . ತೋಱೆ ಸುತ್ತಲುಂ (ಕವಿಕಾ.೧-೧೨೪); ಸುಭದ್ರೆಯೆಂಬ ಕನ್ನೆ ಕೆಮ್ಮುಗಿಲ ತೆರೆಯ ಪೊರೆಯೊಳ್ ನೆಗೆದು ಪೊಱಮಡುವ ವಿದ್ಯಾಧರಿಯಂತೆ . . . ಬಾಗಿಲೊಳ್ ನಿಂದು (ಪಂಪಭಾ. ೪-೩೯ ವ) ; ತರದಿಂ ರಂಗತ್ತರಂಗಂ ನೆಗೆಯಲೆಸೆವ ಗಂಗಾಪ್ರವಾಹಂಬೊಲಿರ್ದಂ (ಕಾದಂಪೂ. ೨೩೮); ಸರಿ ಸುರಿಯೆ ಮಿಂಚು ಮಿಳ್ಳಿಸೆ ಸುರಚಾಪಂ ನೆಗೆಯೆ (ಪಂರಾಮಾ. ೧-೮೧) ; ಮಾಣದೆ ಕಡು ನೋಪಿಂ ಕಣ್ಗಾಣದೆ ಬಾಷ್ಪಾಂಬು ನೆಗೆಯೆ (ಧರ್ಮಾಮೃ. ೩-೨೪೫) ; ನುತ ರೋಮಾಂಚಂಗಳೇಳಲ್ ಬೆಮರ್ವನಿ ನೆಗೆಯಲ್ (ರಕ್ಷಾಶ. ೬೫) ; ನೆಗೆದವು ಪುಳಕಂ ಬಾಷ್ಪಾಂಬುಗಳೊಗೆದವು (ಪಾರ್ಶ್ವಪು. ೧೬-೯೫) ; ನೆಗೆದ ಬುಗುಟೆದೆ ಹಣೆಯಲಿ (ಕುವ್ಯಾಸ.೧೨-೩೦) ; ಮೃಗನಯನೆಗೊಂದು ದಿನ ಮೊಗದೊಳು ನೆಗೆದುದೊಪ್ಪುವ ಮೊಡವಿ (ಸಾಳ್ವಭಾ. ೩-೩೩). ೮. ಆವರಿಸು ; ಹಬ್ಬು ; ವ್ಯಾಪಿಸು ; ಪಸರಿಸು : ಪೊಗೆ ಪರ್ಬಿ ನೆಗೆದ ಕಾಟ್ಮಿಕ್ಕರ್ಚುಮಂ (ವಡ್ಡಾರಾ.೮೫-೨೬); ಮಯನೆಂಬ ದಾನವ ವಿಶ್ವಕರ್ಮಂ ನೆಗೆದುರುವುರಿಮಾಲೆಗಳಂ ಗದೆಯೊಳ್ ಬೀಸುತ್ತುಂ ಪೊಱಮಡೆ (ಪಂಪಭಾ. ೫-೪೬ ವ) ; ಮುಂದೈಸಿ ನೆಗೆವಗರು ಧೂಪಧೂಮದೊಳಮೆಸೆವಾಸ್ಥಾನಮಂಟಪದೊಳ್ (ಕಾದಂಪೂ. ೭೯); ದಿವಕ್ಕೆ ಪೋಪ ಬಟ್ಟೆಗೆ ಸೋಪಾನಂ ಗಟ್ಟಿದಂತೆ ತೆಱತೆಱದಿಂ ನೆಗೆದೊಗೆವ ಪೊಗೆಯಂ ಕಂಡು (ಪಂಚತಂ. ೧೧೫-೬) ; ಪುಸೆಮನೆದಪ್ಪದೆ ನೆಗೆದುದು ತನಗಿರ್ಚೆನೆ ದಹನವಿಧ್ಯೆಯಿಂ ಸುಟ್ಟಂ ಪಾವನಿ ಲಂಕೆಯಂ (ಪಂರಾಮಾ. ೧೧-೧೪೪) ; ನೆಗೆದ ಕೌಂಗಿನ ಸಾಲಸಂದಣಿಯೊಳ್ ನಿಱುಗಱುಂಪನಾಡಿಯುಂ (ಕಬ್ಬಿಕಾ. ೫೪). ೯. ಬೀರು ; ಚೆಲ್ಲು ; ಸೂಸು : ಪೊತ್ತಲರ್ಗಂಪಂ ನೆಗೆದುಱೆ ತಣ್ಣಲರ ದಿನಿಸು ತೀಡುತ್ತಾಗಳ್ (ಕಾದಂಉ. ೧೬೪). 'ನೆಸೆ$_1$' ಪರಾ.

ನೆಗೆನೆಗೆ (ದ್ವಿರುಕ್ತಿ) : ಪರಿಪರಿಯ ದಿವ್ಯವಸ್ತ್ರಂಗಳುಂ ತೆಗೆದು ಸಿಡಿದು ಶರಣರ ಮೈಯೊಳು ಬುರಬುರನೆ ನೆಗೆನೆಗೆದೇಳ್ವ ಪುಳಕದ ಸಾಲ್ಗೆ ದೃಷ್ಟಿಯಾದಪುದೆಂದು . . . ಪೊದೆಯಿಸಿ (ಬಸರ.೮-೧೪); ಹೆಗಲನೇಱಿಸಿಕೊಂಡು ಮೆಲ್ಲನೆ ನೆಗೆನೆಗೆದು ನಡೆವುತ್ತ ನಿಮ್ಮೋಲಗಕೆ ಬಂದು (ಬಸಪು. ೪೭-೪೧). **ನೆಗೆಕೊಳ್ಳು, ನೆಗೆಗೊಳ್** = ೧. ಎತ್ತಿಕೊಳ್ಳು : ಹಬ್ಬಿದ ಹಳುವದಲಿ ಬಿದ್ದಿರ್ದ ಮಂಗಿಯ ಕಂಡು ನೆಗೆಕೊಂಡು ತಳುವದಲ್ಲಿಂ ಮಗುಳ್ದು ಬರುತಾ ಬಳಿಯಲಾ ಮುನಿವರರ ಚರಣಂಗಳ ಕೆಲದಲಿಳಿಪಿದನು ಮಂಗಿಯ ತವವನಾ ಭಟನು (ಸಾಳ್ವಭಾ. ೨೦-೪೦). ೨. ಹೊಂದಿ

ಕೊಳ್ಳು ; ಅಳವಡು (?) : ವಿಲಸಿತಮುಪ್ಪಲಂಕರಣಶಾಸ್ತ್ರದವೋಲ್ ದೆಸೆಗಳ್ ಪ್ರಸನ್ನಮಂ ತಳೆದು ಪೊದಟ್ಟುವಾ ರುಚಕಭೂಷೆಯವೋಲ್ ನೆಗೆಗೊಂಡು ಕಂಕದೊಳ್ ಪೊಳೆವ ಪಯಃಪ್ರವಾಹಮಯಮಾಯ್ತು ನದೀ ತತಿ ಸತ್ಕವೀಂದ್ರನುಜ್ಜ್ವಳಕವಿತಾಳಿವೋಲ್ ಮೃದುಪದನ್ಯಸನೋಚಿತಮಾಯ್ತು ತಾತಳಂ (ಕುಸುಮಾ. ೬-೪೪). **ನೆಗೆದಾಟ = ಹಾರಾಟ :** ಖಗರಾಜ ಕಡುವೇಗದ ಪೋಗಿ ದೈತ್ಯರ ನೆಗೆದಾಟವ ಬಿಡಿಸಿನಲು ಗಗನದೊಳಡರಿ ಗಟ್ಟುವೆಜಕೆಯಲಿ ಬೀಳಲೊಗೆದನು ಧರಣಿಯ ತಲಕೆ (ಮೋಹತ. ೪೦-೭೪). **ನೆಗೆದಾಡು = ಹಾರಾಡು ; ಕುಣಿದಾಡು :** ನನಗಣಯನ ಮೆಯ್ನೆಳ ಗೆಂಬಿನಿಗೊಳದೊಳ್ ಮೊದಲೆ ಮಿಳಿರ್ದು ನೆಗೆದಾಡಿದುವಂದೆನಸುಂ ಕಡು ನೀಜಿಯ ಜೆಲ್ವಿನೆ ತೊಳಗುವ ಕಣ್ಗಳೆಂಬ ಪೊಸಮಿಾಂಬೊಣರ್ಗಳ್ (ಕಬ್ಬಕಾ. ೩೩೧) ; ತಿವ ನೀನಾದ ಕಾರಣದಿಂದೆ ಬಂದಾಹವದೊಳು ಬೊಬ್ಬಿಕ್ಕಬಹುದು . . . ಎಂದಜ್ಯುತ ಕವಲಂಬೊಳಚ್ಚು ಬೊಬ್ಬಿಜಾದ ಹರಿ ನೀನಾದ ಕಾರಣದಿಂದ ಸಮರ ಶಾತ್ಪರಿಯದಿ ನೆಗೆದಾಡಬಹುದು ತುರಿಯದೆ ಕೈದ ಕೊಳ್ಳೆಸುತಲೀಶ್ವರ ಮುಂದುವರಿದೆಚ್ಚನಾಗ ಬಾಣದಲಿ (ಮೋಹತ. ೩೯-೨೭). **ನೆಗೆದು ಬಿದ್ದು ಹೋಗು = ನೆಗೆದು ಬೀಳು ೧ :** ನಿನ್ನ ಮನೆ ಹಾಳಾಗ, ನಿನ್ನ ಮಕ್ಕಳು ನೆಗೆದು ಬಿದ್ದು ಹೋಗ ಎಂದು ಬಾಯಿಗೆ ಬಂದ ಹಾಗೆ ಆ ಮುದುಕಿ ಬಯ್ಯುತ್ತಿದ್ದಳು (ಕೂಡಿ). **ನೆಗೆದು ಬೀಳು = ೧. ಸಾಯು ; ಮರಣಹೊಂದು :** ವಿಷವನ್ನು ಬೆರಸಿದ ಅನ್ನವನ್ನು ತಿಂದು ಇಲಿಗಳೆಲ್ಲಾ ನೆಗೆದು ಬಿದ್ದವು (ಕೂಡಿ). **೨. ಬಹಳ ಪ್ರಯತ್ನಿಸು, —ಕಷ್ಟ ಪಡು :** ನೀನು ಕಾಲೇಜನ್ನು ಬಿಟ್ಟು ಪರಿಂದ ಈ ಸ್ಥಾನ ನನ್ನದಾಯಿತು. ನಾನು ನೆಗೆದು ಬಿದ್ದಿದ್ದರೂ ನಿನ್ನನ್ನು ಮಿರಿಸಲು ಆಗುತ್ತಿರಲಿಲ್ಲ (ನಾರಾತಿ. ೬೭). **ನೆಗೆದು ಹೋಗು = ಜಿಗಿಯುತ್ತ ಹೋಗು :** ಅರಮನೆಯ ಹುಲ್ಲೆ ಕರುವೂ . . . ಯಾರೂ ಮಾತಾಡಿಸಲಿಲ್ಲವೆಂದು ನೆಗೆದು ಹೋಯಿತು (ಪುಟ್ಟರ. ೧೨). **ನೆಗೆದೇಳು = ಪುಟಿದು ಮೇಲೇಳು :** ಒಡನೆಯೆ ಅವಳು ನೆಗೆದೆದ್ದು . . . ಹೊರಟು ಹೋಗುವಂತೆ ಒತ್ತಾಯಪಡಿಸಿದಳು (ಪುನರು. ೪೦). **ನೆಗೆದೋಡು = ನೆಗೆಯುತ್ತ ಓಡು ; ಜಿಮ್ಮು :** ದೊಡ್ಡನಂ ಕಂಡೊಡನೆ ನೆಗೆದೋಡಿ ಮರೆಯಾಯ್ತು (ಕಾಲೂರ. ೮೨-೧೫೫).

[ದೇ.॥ ತಮಿ. ನವ; ಮಲ. ನಳ ; ತುಳು. ನೆಗಿ ; ತೆಲು. ನೆಗಯು, ನೆವಯು ; ಕೋಲಾ. ನಾಯ್ಕಿ. ನೆಗಯ್]

ನೆಗೆ₂ (ನಾ). ಹಾರುವುದು ; ಜಿಗಿತ ; ನೆಗೆತ : ನನ್ನ ಬಿನ್ನೀರಿಯುಂ ಪೆಣ್ಗೆ ಸಾಧ್ಯಮೆ ಕಡಲ ನೆಗೆ? (ತ್ರಿಪುರಾಮಾ. ೫೨೨-೫೯೪).

[<ನೆಗೆ₁]

ನೆಗೆಣ್ಣೆ 'ನಗೆವೆಣ್' ನೋ.

ನೆಗೆಣ್ಣು 'ನಗೆವೆಣ್' ನೋ.

ನೆಗೆತ (ನಾ). ಜಿಗಿಯುವಿಕೆ ; ಹಾರುವಿಕೆ ; ಎಗರುವಿಕೆ : "ಶಕ್, ಶಕಿಃ, ಶಕುಃ, ಶಕಿತಂ, ಶಾಸ್ಯಂ, ಈ ೫ ನೆಗೆತಂ" (ಕಾಶಕ್ಯ. ೬೪).

[ನೆಗೆ₁+-ತ₂]

ನೆಗೆತರ್ (ಕ್ರಿ). ೧. ಹಾರಿ ಬರು ; ಹಾರು : ಅಗಲಲಸಹ್ಯಮೆಂದು ಪೆಣಗೀ ಬಟಾಸಲ್ವಳೆ ಮುಂದೆ ಬಂದಳೀ ತಗೆವೊಡೆ ಚತ್ರದುಳ್ಕಲಿಕೆಯಿಂ ನಭಕೀ ನೆಗೆತಂದಳ್ (ಕಾದಂಬ. ೧೪೧) ; ಎಳಸಿ ನೆಗೆತಂದು ಮಿಳ್ಕಗ್ಗಳಿಸುತುವಿರ್ದಂತಿರಲ್ಪೆ ಮುಧುರರಸಂ ಪೆಗ್ಗಳಿಸೆ ಲವಲವಿಸುತುಂ ಪಣ್ಗಳೊಳಳ್ದುದೊಂದು ರಾಜಶುಕನತಿಭರದಿಂ (ಗಿರಿ. ೩-೪೦) ; ಹಾದಿಗೆಟ್ಟು ತೊಟ್ಟಗೆ ನೆಗೆತರ್ಪ [ಪಾಠಾಂ. ನಡೆತರ್ಪ] ನುಣ್ಗದಿರೊ (ಕಬ್ಬಕಾ. ೩೦೬) ; ಬಳಿದು ನೆಗೆತಂದು ದಾಂಧಳ ಧಳಂಧಳಧ್ವನಿಯಳುರ್ಕೆಗೊಳೆ ಶಬ್ದಗುಣಂ ತಿರೊಡದಕಾಯ್ತು ಗಗನಸ್ಥಳಗಳ್ಳಡೊಡ್ಲಿ ಶಬ್ದಮೇಂ ಸಮುನಿಳುಮೇ (ರಾಜಶೇ. ೬-೪೪). **೨. ಮೇಲಕ್ಕೆತ್ತು :** ಆ ಹುಡುಗವನು ನೆಗೆತಂದು ಗಂಡನ ಕೊರಳ ಹೊಯ್ಯಲು (ಸಾಳ್ವಭಾ. ೨೦-೪೬). **೩. ಮೂಡು ; ಹುಟ್ಟು ; ಉಂಟಾಗು :** ಬೆಳ್ಪು ನೆಗೆತಂದುದಯಾದ್ರಿಯ ಸೆಜ್ಜರಕ್ಕೆ ಪಕ್ಕೆಗೆ ಬರುತಿರ್ಪ ದೇವಗಜದಂಗ ಮರೀಚಿಯ ಭಂಗಿವೆತ್ತಿರಲ್ ಬಗೆಗೊಳಿಸುತ್ತ ಚಂದನರಸಂದೊಡೆದಂದದೆ ಪೂರ್ವ ದಿಙ್ಮುಖಂ (ಜಗವಿ. ೧೬-೧೦೩). [ನೆಗೆ₁+ತರ್]

ನೆಗೆಯಿಸು (ಕ್ರಿ). ನಿವಿರಿಸು ; ಮೂಡಿಸು : ಸೊಗಯಿಪ ಮುಗ್ಧಾವಲೋಕನಪ್ರಭೆಯಿಂ ತಾಂ ನೆಗೆಯಿಸುವಂ ಪುಳಕಶ್ರೇಣಿಗಳಂ ಪಿತೃ ಮಾತೃಗಾತ್ರದೊಳ್ ನೃಪಪುತ್ರಂ (ಕುಸುಮಾ. ೬-೧೪೪).

[ನೆಗೆ₁+-ಇಸು₃]

ನೆಗೆಲು (ನಾ). (?) : ಆ ದೇವರುಗಳ ಅಮ್ಮುತಪಡಿ ನೆಗೆಲು ದಿ ೧ ಕಂಕೊ ೨ ಲೆಕದಕಿ ೧ (ಎಕ. VI, ಕಡೂರು. ೪೯-೫೩ ; 1291). [?]

ನೆಗೆವಕ್ಕಿ (ನಾ). ಹಾರುವ ಹಕ್ಕಿ ; ಮೇಲಕ್ಕೆ ಚಿಮ್ಮುವ ಪಕ್ಷಿ : ನೆಗೆವಕ್ಕಿಯ ಬಾಣದಿ ಹಾರುವ ತಾಣದಿ ಕಾಲ ಬುಡಕೆ ನಾ ಕಳಗಿಸುವೆ (ಹಬ್ಬೆರ. ೧-೧೨). [ನೆಗೆ₁+ಪಕ್ಕಿ]

ನೆಗೆವರಿ (ಕ್ರಿ). ಚಿಮ್ಮುತ್ತ ಹರಿ ; ಜಿಗಿಯುತ್ತ ಪ್ರವಹಿಸು : ಎಲ ಗಣಲಿಯಿನ್ದೆ ತೆಂಕಲು ಜಲರುಹಸುತಲಲನೆ ವರದ ತೀರ್ಥಂ ನದಿ ತಾಂ ಜಳಪುದ್ರಿತ ತುಂಗಭದ್ರೆಯೊಳೊಲವಿನೊಳಾ ಕೆಳದಿಯೊಳು ನೆಗಂ ನೆಗೆವರಿದಳ್ (ಮೈಆರಿ. ೧೯೩೮, ೪೫-೪ ; 1085). [ನೆಗೆ₁+ಪರಿ₂]

ನೆಗೆವಾವು (ನಾ). ಜಿಗಿಯುವ ಸರ್ಪ ; ಎಗರುವ ಹಾವು : ಶರಜ್ಯ ಶಾಂಕರುಚಿಯೊಳ್ ಸೆಣಸಲೆಳಸಿ ನೆಗೆವಾವೆನಿಸಿ ರಂಜಿಪ ಧವಳಚಾಮರಮಂ ಬಿಂಕದಿಂ ಕೊಂಕಿ ನಿಂದು ಸೂಳಜುಮು ತೋಳ್ಗಳಂ ನೆಗಪು ಡಾಳಿಪ ಗಾಯತ್ರ್ಯಾದಿ ಪರಮಶಕ್ತಿಯರಿಂ (ಶಬಶಂ. ೧-೬೯ ಸ). [ನೆಗೆ₁+ಪಾವು₁]

ನೆಗೆವೆಣ್ಣೆ 'ನಗೆವೆಣ್' ನೋ.

ನೆಗೆಹ (ನಾ). ಮೇಲಕ್ಕೆತ್ತುವುದು : "ನೆಗೆಹ- ಉನ್ನಾಯ,ಉನ್ನಯ" (ನಾಚರಾ. ೬). [ನೆಗೆ₁+-ಹ₂(<-ಪ₂)]

ನೆಗೆಹೆಣ್ಣು 'ನಗೆವೆಣ್' ನೋ.

ನೆಗೆಹೆಣ್ಣೆ 'ನಗೆವೆಣ್' ನೋ.

ನೆಗೆಳ್ಪು 'ನಗೆಯೆಳ್ಪು' ನೋ.

ನೆಗ್ಗಲಿ 'ನೆರ್ಗಿಲ್' ನೋ.

ನೆಗ್ಗಲಿಮುಳ್ಳು 'ನೆಗ್ಗಿಲುಮುಳ್ಳು' ನೋ.

ನೆಗ್ಗಲು 'ನೆರ್ಗಿಲ್' ನೋ.

ನೆಗ್ಗಲುಮುಳ್ಳು 'ನೆಗ್ಗಿಲುಮುಳ್ಳು' ನೋ.

ನೆಗ್ಗಲಿ 'ನೆರ್ಗಿಲ್' ನೋ.

ನೆಗ್ಗಿಲ್ 'ನೆರ್ಗಿಲ್' ನೋ.

ನೆಗ್ಗಿಲು 'ನೆರ್ಗಿಲ್' ನೋ.

ನೆಗ್ಗಿಲುಮುಳ್ಳು, ನೆಗ್ಗಲಿಮುಳ್ಳು, ನೆಗ್ಗಲುಮುಳ್ಳು (ನಾ). = ನೆರ್ಗಿಲ್ : ಕಾಲ ತುಂಬ ನೆಗ್ಗಿಲುಮುಳ್ಳು ನಟ್ಟವೆ (ಕೂಡಿ). **ನೆಗ್ಗಲಿಮುಳ್ಳು :** ನೆಗ್ಗಲಿಮುಳ್ಳು, (ಗೋಕುರು) (ಸುಂಬವ್ಯಾ. ೧೩೫). **ನೆಗ್ಗಲುಮುಳ್ಳು :** ಇಬ್ಬಂದಿಕಾರ ಜವರಾಯ್ನ ಮಂಗ್ಗಲಿಗೆ ನೆಗ್ಗಲುಮುಳ್ಳು ಸುರಿಯಾಲಿ (ಹಳ್ಳಿಯ. ೧೩೩).

[ನೆಗ್ಗಿಲು (<ನೆರ್ಗಿಲ್)+ಮುಳ್ಳು(<ಮುಳ್)]

ನೆಗ್ಗಿಲ್ಲಾಡು (ನಾ). ನೆಗ್ಗಿಲು ಮುಳ್ಳುಗಳಿಂದ ತುಂಬಿದ ಕಾಡು : ಕಿಸುಗಾಡುಮಂ ನೆಗ್ಗಿಲ್ಲಾಡುಮಂ ನಿಡುವುಲ್ಲುಮಂ ಮಣಲುಮಂ . . . ಬಳ್ಳಿಯುಮಂ ಕಳ್ಳಿಯುಮಂ ಕಳೆದು ಪೋಗಿ (ಲೀಲಾವ. ೬-೧೬ ಪ).

[ನೆಗ್ಗಿಲ್ (<ನೆರ್ಗಿಲ್)+ಕಾಡು₂]

ನೆಗ್ಗಿಸು, ನಗ್ಗಿಸು (ಕ್ರಿ). ೧. ತಗ್ಗು ಬೀಳಿಸು ; ಹಳ್ಳ ಬೀಳುವಂತೆ ಮಾಡು : ಮದಗಜ ನೀಲಾದ್ರಿನಿಚಯದೆ ಪರಿತಪ್ಪ ಪದಘಾತ ನೆಲನ ನೆಗ್ಗಿಸಿತು (ಮೋಹತ. ೪೦-೧೦). ೨. ಬಗ್ಗಿಸು ; ಸೋಲಿಸು : ನೀಲಕಂಧರನ ನೆಗ್ಗಿಸಿದಂತೆ ನೀನೆನ್ನ ಮೇಲುರವಣಿಸೆಂದು ಬಸವ ಶೂಲದಂತೆಸೆವ ಕೊಂಬುಗಳಿಂದ ತಿವಿದುಡು ಬಾಲಾಹಿಸೂದನನೆದೆಯ (ಮೋಹತ. ೩೮-೩೧). ೩. ನಾಶಮಾಡು ; ಇಲ್ಲವಾಗಿಸು : ಪ್ರಕಟತವಾಗಿರ್ದ ಖಗನಿಚಯವ ಕುಮಾರಕ ಬೇಂಟೆಯೊಳಗೆ ನೆಗ್ಗಿಸಿದ (ಮೋಹತ. ೧೯-೪೨). ೪. ಬೆರಳನ್ನು ಬಗ್ಗಿಸಿ ಶಬ್ದವನ್ನುಂಟು ಮಾಡು ; ನೆಟಗೆ ತೆಗೆ : ಕೊರಲೊಳು ಗದ್ಗದ ಸುರಿವ ಕಣ್ಣನಿ ಕೆಯ್ಯ ಬೆರಲ ನೆಗ್ಗಿಸುವ ಸಂಪಗೆಯ ಅರಳುಂಡ ಪೆಣ್ಣುಂಬಿಯುಂದದಿನಿಯ ಪೂಸರಲನ ತಂದು ತೋಜುದಳು (ಮೋಹತ. ೧೨-೨೨). **ನಗ್ಗಿಸು :** ೨. ಮುಂತೆಯ್ದುವ ಲುಳಿಯುಂ ಘೀಳಿರನಲುಗುವ ಡಮರುವ ನಗ್ಗಿಸಿ ಕೊಡಹುವ [ಮಿಾಜುದ] ಸಾಹಸದ ಮೇಲೇಜುವ ಬಗೆ ಮಿಗೆ . . . ಕರಘಟ್ಟಿ ನೆರೆದುವು ಬಲದೊಳಗೆ (ವೀರೇಶ. ೨-೨೮). [ನೆಗ್ಗು$_1$ (<ನಜುಂಕು)+-ಇಸು$_3$]

ನೆಗ್ಗು$_1$ 'ನಜುಂಕು' ನೋ.

ನೆಗ್ಗು$_{2a}$, ನಗ್ಗು$_2$ (ನಾ). ಪೆಟ್ಟು ಬೀಳುವಿಕೆಯಿಂದ ಪಾತ್ರೆಗಳಲ್ಲಿ ಉಂಟಾಗುವ ತಗ್ಗು : (ಕ). **ನಗ್ಗು$_2$:** 'ನಗ್ಗೆತ್ತಿಸು' ಪರಾ.

ನಗ್ಗುಬೀಳು = ಜಜ್ಜಿ ಹೋಗು ; ತಗ್ಗಾಗು ; ತಗ್ಗು ಬೀಳು : (ಕ). [<ನಜುಂಕು]

ನೆಗ್ಗು$_3$ (ನಾ). ಒಂದು ಅನುಕರಣ ಶಬ್ದ : ನಿಜುನಿಟಲು ನೆಗ್ಗೆಂಬ ಧನಿಗೆಚ್ಚೆತ್ತು ಕಾವರಲ ಮಜಕೆದು ಕಳವಳಿಸುತ್ತ ಬೆಚ್ಚುತ್ತ . . . ಹರಿತರಲು (ಕೌಶರಾ. ೧೧-೨೧).

ನೆಗ್ಗೊತ್ತು 'ನೆಗ್ಗೊತ್ತು' ನೋ.

ನೆಚ್ಚಾರ್ಪು (ನಾ). ನಂಬಬಹುದಾದ ಸಾಹಸ ; ವಿಶ್ವಸನೀಯವಾದ ಪರಾಕ್ರಮ (?) : ನಿನ್ನ ಕಲಿಗಳ ಕೂರ್ಪು, ಕೆಚ್ಚೆದೆಯ ಕಟ್ಟಾಳ ಕೂರ್ಪು, ನೆಚ್ಚಾರ್ಪು (ಹೊಂಗಳು. ೧೫-೨೦).

[ನೆಚ್ಚು$_2$ (<ನಚ್ಚು$_2$)+ಅರ್ಪು$_1$]

ನೆಚ್ಚಿಕೆ 'ನಚ್ಚಿಕೆ' ನೋ.

ನೆಚ್ಚಿಗೆ 'ನಚ್ಚುಗೆ' ನೋ.

ನೆಚ್ಚಿಸು 'ನಚ್ಚಿಸು$_1$' ನೋ.

ನೆಚ್ಚು$_1$ 'ನಚ್ಚು$_1$' ನೋ.

ನೆಚ್ಚು$_2$ 'ನಚ್ಚು$_2$' ನೋ.

ನೆಚ್ಚುಕಡ್ಡಿ (ನಾ). ಒಂದು ಬಗೆಯ ಸಸ್ಯ : ಕರನೆಕ್ಕಿ, ಕರಿಲಕ್ಕಿ, ನೆಚ್ಚುಕಡ್ಡಿ (ಮೃಪಾಗಿ. ೪೮-೧೫೪). [ನೆಚ್ಚು? + ಕಡ್ಡಿ]

ನೆಚ್ಚುಗೆ 'ನಚ್ಚುಗೆ' ನೋ.

ನೆಚ್ಚುಗೆಡು 'ನಚ್ಚುಗೆಡು' ನೋ.

ನೆಚ್ಚುವೆಚ್ಚು 'ನಚ್ಚುವೆಚ್ಚು' ನೋ.

ನೆಜರಿಡು 'ನದರಿಡು' ನೋ.

ನೆಜರು 'ನಜರು' ನೋ.

ನೆಟ್ಟ್, ನೆಟ್ಟ$_2$ (ಸಪೂರೂ). 'ನಿಡಿದು' ಎಂಬ ನಾಮವಾಚಕಕ್ಕೆ ಸಮಾಸಗಳಲ್ಲಿ ಬರುವ ಆದೇಶರೂಪ. 'ನೆಟ್ಟಗೆ', 'ನೆಟ್ಟನೆ', 'ನೆಟ್ಟೆಲುವು' ಪರಾ. **ನೆಟ್ಟ$_2$:** 'ನೆಟ್ಟಗರುಳು' ಪರಾ.

[<ನಿಡಿದು$_1$]

ನೆಟಂದಿಜು (ಕ್ರಿ). ಆಯಾಸ ಹೊಂದು ; ಬಳಲು : "ನೆಟಂದಿಜುದು ದೆಂದು ದಣಿದುದು (?)" (ಕಶಸಾ. ೭೦-೬೦೦) ; "ನೆಜಿ ದಣಿದುದೆನಲು ನೆಟಂ[ಪಾಠಾಂ. ನೆಟ್ಟಂ]ದಿಜುದುದು" (ಕವಿಕಂ.೨೪೧). [?+ತಿಜು]

ನೆಟಕೆ 'ನೆಟ್ಟಕೆ' ನೋ.

ನೆಟಕೆ ಮುರಿ 'ನೆಟ್ಟಗೆ ಮುರಿ' ನೋ.

ನೆಟಗೆ 'ನೆಟ್ಟಕೆ' ನೋ.

ನೆಟಗೆ ತೆಗೆ, ನಟಕೆ ತೆಗೆ, ನೆಟಗೆ ತೆಗೆ (ಕ್ರಿ). ೧. ನೆಟ್ಟಗೆಯನ್ನು ತೆಗೆ ; ನೆಟ್ಟಗೆ ಮುರಿ : ಕೈಬೆರಳುಗಳನ್ನು ಮುರಿದುಕೊಳ್ಳುತ್ತ ನೆಟಗೆ ತೆಗೆಯಲಾರಂಭಿಸಿದಳು (ಕುಮಾಸಾಂ.೧೪೨). **ನೆಟಕೆ ತೆಗೆ :** ೨. ದೃಷ್ಟಿಯನ್ನು ತೆಗೆ : ಮಗುವಿಗೆ ನಟಕೆ ತೆಗೆದರು (ರೂಢಿ). **ನೆಟಗೆ ತೆಗೆ :** ೧. ಅವನು ಆಯಾಸದಿಂದ ನೆಟಗೆ ತೆಗೆಯುತ್ತ ಎದ್ದು ನಿಂತ (ರೂಢಿ).

[ನೆಟಗೆ (<ನೆಟ್ಟಕೆ)+ತೆಗೆ$_1$]

ನೆಟಕೆ 'ನೆಟ್ಟಕೆ' ನೋ.

ನೆಟಕೆ ಮುರಿ 'ನೆಟ್ಟಗೆ ಮುರಿ' ನೋ.

ನೆಟಗೆ 'ನೆಟ್ಟಕೆ' ನೋ.

ನೆಟಗೆ ತೆಗೆ 'ನೆಟಗೆ ತೆಗೆ' ನೋ.

ನೆಟಗೆ ಮುರಿ 'ನೆಟ್ಟಗೆ ಮುರಿ' ನೋ.

ನೆಟಸು 'ನಡಿಸು$_2$' ನೋ.

ನೆಟುಕು 'ನೆಟ್ಟಕೆ' ನೋ.

ನೆಟ್ಟ$_1$ 'ನಡು$_1$' ಪರಾ.

ನೆಟ್ಟ$_2$ 'ನೆಟ್' ನೋ.

ನೆಟ್ಟ$_3$ (ಅ). ಉದ್ದವಾಗಿ ; ನೀಳವಾಗಿ : ಪಂಚಾಗ್ನಿಮಧ್ಯದೊಳ್ನಿಂದು ನೆಟ್ಟ ನೆಗಸಿ ಬಾಹುಗಳ ಘನಪರಂಜ್ಯೋತಿಯಂ ಮನದ ಕೊನೆಯಲ್ಲಿ ತಾಳ್ದು (ಕುಮಾಪು. ೧-೪೦). [<ನೆಟ್ಟನೆ]

ನೆಟ್ಟಗರುಳು (ನಾ). ದೊಡ್ಡ ಕರುಳು : ಹಿಂದುಗಡೆಯ (ಬೆನ್ನ ಕಡೆಯ) ಕೊನೆವೆ ನೆಟ್ಟಗರುಳಾಗಿ (ರೆಕ್ಟಮ್), ಮೇಲ್ಬರ್ಮದ ಇನ್ನೊಂದು ಕುಳಿಯನ್ನು (ಗುದ) ಕೂಡಿಕೊಂಡು ಕಾಕ್ಸಿಕ್ಸ್‌ನ ಸದ್ಯ ಮುಂದುಗಡೆ ಕೊನೆಗೊಳ್ಳುವುದು (ಕವಿಕೋ. I, ೧೪).

[ನೆಟ್ಟ$_2$ (<ನಿಡಿದು$_1$)+ಕರುಳು (<ಕರುಳ್)]

ನೆಟ್ಟಗೆ (ಅ). ೧. ಉದ್ದವಾಗಿ ; ನೀಳವಾಗಿ : ಹೊಗೆಯೊಳಗೆ ಹೋಗಬೇಕಾದರೆ ಬಾಗಿಕೊಂಡು ಹೋಗಬೇಕು ; ಹಾಗೇ ನೆಟ್ಟಗೆ ಹೋಗಬಾರದು (ಮುಂಬಯಿ. ೪-೬೧). ೨. ಅಣಿಯಾಗಿ ; ಸುವ್ಯವಸ್ಥಿತವಾಗಿ : ಸಂಜೆ ಹೊತ್ತಿಗೆ ಕಾರ್ಯಕ್ರಮ ನಡೆಯುವ ಅಂಗಳವನ್ನು ನೆಟ್ಟಗೆ ಇಟ್ಟರಬೇಕು (ರೂಢಿ). ೩. ಚೆನ್ನಾಗಿ : ಕನಕಪ್ರಾಕಾರದ ಬಾಗಿಲ್ವಾಡಂಗಳೊಳಂ . . . ಚತುರ್ವಿಂಶತಿಹರ್ಮ್ಯತಿಮಾ ವಿರಾಜಮಾನ ಹೇಮದಾಮವಿಳಂಬಿತ ಮಣಿಘಂಟಾಸಮನ್ವಿತವಂದನ ಮಾಲೆಗಳೊಳಂ . . . ತನ್ನ ಮಕುಟಶಿಖರಮನವು ನೆಟ್ಟಗೆ ತಾಗುವಂತು ಮಾಗಿರೆ ಜಗದಧಿಪನುದಾತ್ತಭಕ್ತಿಯಿಂ ಮಾಡಿಸಿದಂ (ಆದಿಪು. ೧೬-೩೮) ; ನೆಟ್ಟಗೆ ಗುರುಪಾದದ ಮುಟ್ಟ ಭವಗೆಟ್ಟೆನು (ದೇವಾವ. ೧೧-೧೪). ೪. ಸರಿಯಾಗಿ ; ಸಮರ್ಪಕವಾಗಿ : ನಮ್ಮ ಪ್ರಕೃತಿ ಹೇಗಿದೆ . . . ನೆಟ್ಟಗಿದ್ದೇನೆ (ಕೊಡಕಾ. ೨) ; ಒಂದ ಸಾಮಾನು ನೆಟ್ಟಗ ಸೋಡಿ ತರುವಂತಿಲ್ಲ ಬಿಡುವಂತಿಲ್ಲ (ಅಕೋಕ. ೧) ; ನೋಟ ನೆಟ್ಟಗಿದ್ದರೆ ಕಾಟ ಹ್ಯಾಗೆ ಬಂದೀತು ? (ಗಾದೆ). ೫. ಅಂದವಾಗಿ : ಪರೀಕ್ಷೆಯಲ್ಲಿ ಅಕ್ಷರ ನೆಟ್ಟಗೆ ಬರೆದು ಬಾ (ರೂಢಿ). ೬. ಸ್ಪಷ್ಟವಾಗಿ ; ಸ್ಫುಟವಾಗಿ ; ವ್ಯಕ್ತವಾಗಿ ; ತೊಡಕಿಲ್ಲದೆ : ನೆಗಟ್ಟೂ ನಪುಂಸಕ್ಕೆ ಕೋಕ್ತಿಗೆ ಕೆಲರಿತುವಿತ್ತುವತ್ತುವೆಂದು ಸಿರ್ವರ್ ನೆಟ್ಟಗೆ ಪುಗಿಸುವರಂತೇಕೋಕ್ತಿಗೆ ತಾಂ ಸ್ತ್ರೀವಿಷಯಮಾಗಳಂತಸ್ಥಿತಿಯಂ (ಶಮದ. ೨೨೬). ೭. ಪೂರ್ಣವಾಗಿ : ಮೃಗದೊಲವರಮುಮನರಸನ ಬಗೆಯುಮನಜುದಲಸದೆಳಸ ಲೋಲಗಿಸಲ್ ನೆಟ್ಟಗೆ ಬಲ್ಲನುಳ್ಳೊಡವನಲ್ತೆ ಗುಣಾರ್ಣವ ಬೇಂಟೆಕಾಱ

ನೋಲಗಕಾಱಂ (ಪಂಪಭಾ. ೫-೪೨); ನರಂಗೆ ದುರ್ಗಮಂ ಸುಗಮಮಿದೊಂದೆ ಪಂಚಶತಜಾಪಮಿತಂ ತನು ಪುಟ್ಟಕೋಟ ನೆಟ್ಟಗೆ ಪರಮಾಯು ಪುಟ್ಟದವರ್ಗೊಂಬ ಕಥಾಕಥನಂ ವಿದೇಹದೊಳ್ (ಮಲ್ಲಿಪು. ೨-೫). ೮. ತಕ್ಷಣ; ಕೂಡಲೇ: ನೆಟ್ಟಯ ಪೇಟ್ಕೈಯಿನೊಯ್ಯನೆ ನೆಟ್ಟಗೆ ವೈಡೂರ್ಯರತ್ನಮಂ ತರ್ಪನೆಟ್ಟಟ್ಟ ಬಳಿನೆಂದು ಕಲ್ಲಿಂದಿಟ್ಟು ಕುಕಿಲ್ದಾರ್ದು ಬಱದೆ ನೋಡ ತಳಾಜಂ ಕೊಂಡಂ ಮುನ್ನ (ಧರ್ಮಾಮೃ. ೬-೧೨೫); ಬಗೆಗೊಗೆದಲ್ತಿಯಂ ಸಲಿಸವೇಳ್ಕುದು ಬೇಡನವೇಡ ತಂದೆ ನೆಟ್ಟಗೆ ಮುಳಿದಪ್ಪನೆಂದಣಸದಿರ್ (ರಾಜಶೇ. ೧೩-೨೬). ೯. ಸರಳವಾಗಿ; ನೇರವಾಗಿ; ಋಜುಮಾರ್ಗದಲ್ಲಿ: ಋಜುಃ, ಅಜಿಂಹಃ, ಪ್ರಗುಣಃ — ೩ ನೆಟ್ಟಗಿರುವುದರ ಪೆಸರು (ಸಿದ್ಧಾಂತಿ. ೩೪೨). ೧೦. ನಿರಾತಂಕವಾಗಿ; ಸಹಜವಾಗಿ: ಭಯಪಡದೆ ನಡೆದುದನ್ನು ನಡೆದ ಹಾಗೆ ನೆಟ್ಟಗೆ ಹೇಳು (ರೂಢಿ). ೧೧. ಸತ್ಯವಾಗಿ; ನಿಸ್ಸಂದೇಹವಾಗಿ.

ನೆಟ್ಟಗಾಗು = ೧. ನೀಳವಾಗು; ನೇರವಾಗು: ಒಂಟೆಯ ಕತ್ತು ನೆಟ್ಟಗಾಯಿತ್ತು (ವಚಸಂ. ೪೧೨-೭೯). ೨. ಸರಿಯಾಗು; ಒಳಿತಾಗು; ಲೇಸಾಗು: ಹಾಗಾದರೆ ನೆಟ್ಟಗಾಯಿತು (ಮುಂಬಯಿ. ೪-೧೭೮); ಇನ್ನು ಮಾತ್ರ ನನ್ನ ಗತಿಯು ನೆಟ್ಟಗಾಗುವುದಿಲ್ಲ (ಮಂಜುಕ. ೩೧). ೩. (ರೋಗದಿಂದ) ಗುಣ ಹೊಂದು; ವಾಸಿಯಾಗು: ಶ್ರೀಕಾಂತ ನೆಟ್ಟಗಾಗುವ, ನೆಟ್ಟಗಾಗಲೇಬೇಕು, ಎಂಬ ದೃಢವಿಶ್ವಾಸ ಕೊನೆಯವರೆಗೂ ಇತ್ತು (ಮುಕ್ತಿ.೯). ನೆಟ್ಟಗಿರು = ಸರಿಯಾಗಿರು: ನಿನಗೆ ತಲೆ ನೆಟ್ಟಗಿದೆಯೋ ಇಲ್ಲವೋ (ಪಂಜಪಂ. ೨೧೬). ನೆಟ್ಟಗೆ ಮಾತಾಡು = ಕ್ರಮವರಿತು ಮಾತನಾಡು: ನೆಟ್ಟಗೆ ಮಾತಾಡಲೂ ಬರುವುದಿಲ್ಲ. ವಾಡ ಬೇರೆ ಮಾಡುತ್ತೀಯಾ? (ರೂಢಿ). [ನೆಟ್ (<ನಿಡಿದು₁) + -ಅಗೆ₃]

ನೆಟ್ಟನೆ (ಅ). ೧. ನೇರವಾಗಿ: ನೀಂ ಮೊನ್ನಿನ ಶೂನ್ಯವಚನಮಂ ನುಡಿಯದೆ ನೆಟ್ಟನೆ ಬರ್ಪುದು (ಧರ್ಮಾಮೃ. ೫-೨೨೮); ಹೃದಯಂಗಮಂ ನೆಟ್ಟನೆ ಮನಂಬುಗುವ ನುಡಿಯಕ್ಕುಂ (ಮಂಗರಾ. ೨೬-೨); ನೀಡಿದಾ ಕೈಯಲ್ಲಿ ಮುನ್ನಂ ನೀಡಿದಂದದಿ ನೀಡು ನೆಟ್ಟನೆ (ಒಸಪು. ೨೪-೮೨); ನೆಟ್ಟನಲ್ಲಿಂದಿಳಿದು ಬಂದನು ಪಟ್ಟಣಕೆ (ಸಂಭಪ. ೧೦-೧೪); ಭಾವೆಯರು . . . ನೆಟ್ಟನೆ ಸ್ಮರಸಿರ್ದ ನಂದನದೆಡೆಗೆ ಸಾಲಿಟ್ಟುದನೇಕ ಸಂಭ್ರಮದಿ (ಮೋಹತ. ೫-೨೯). ೨. ಸರಿಯಾಗಿ: ಮತ್ತುಟಾಯಲಾಗದು ನೆಟ್ಟನೆ ಪೂಣ್ದುದಂ ಪುಸಿವರಾಗಿರದೆ ಮಾನಸರ್ (ಕವಿರಾ. ೧-೧೩೫); ಸುಳಿದಡೆ ನೆಟ್ಟನೆ ಜಂಗಮವಾಗಿ ಸುಳಿಯಬೇಕು ನಿಂದರೆ ನೆಟ್ಟನೆ ಭಕ್ತನಾಗಿ ನಿಲಬೇಕು (ಅಪಚಂ. ೭೬-೩೩೯). ೩. ಚೆನ್ನಾಗಿ: ನೆಟ್ಟನೆ ತಾಂ ಸವಿಯೊಳೊಂದಿರೆ ಭೋಜನಮಾನಟ್ಟು ಬಡಿಸು (ಕವಿಕಾ. ೨-೧೪೭); ಪಸರಿಸಿದುದು [ಕೀ]ರ್ತಿ ನೆಟ್ಟನನುಪಮ ಕವಿಯ (ಎಇ. X, ೧೫೧-೨೮; 913); ಜಿನರ ಪ್ರತಿಮೆಗಳಂ ನೆಟ್ಟನೆ ಪೊನ್ನಿಂ ಮಾಡಿ . . . ಪೂಜಿಸುತುಂ (ಧರ್ಮಾಮೃ. ೧೦-೨೭); ಮಾಡಿಸಿದಂ ಜಿನರಾಜಗೇಹಮಂ ನೆಟ್ಟನೆ ಪೊಯ್ಸಳೇಶನೆನೆ ಬಣ್ಣಿಪರಾರ್ (ಎಕ. II, ೧೪೩-೧೨; 1131); ಮಹಾಭಟರ ಕಟೇತಟಂಗಳೊಳ್ ಕಟ್ಟಿ ನೆಟ್ಟನೆ ಮಿಱುಗುವೊಜೆಗಳಿಂ ಪೂಜಗಣ್ಣ ತಾಮೆ ಬಿಗಿದು ಪಾಜಾ ಪಣಪಣತ್ಯತಿಗೆಯ್ದು ಪಳ್ಳಧೇನುಗಳ್ (ಪರ್ಧಪು. ೮-೪೦ ಪ). ೪. ಸ್ಪಷ್ಟವಾಗಿ; ಸ್ಫುಟವಾಗಿ: ನೆಟ್ಟನೆ ವಿಷಮೊಳ್ಳೆಗುಳ್ಳೊಡಮದೊಳ್ಳೆಯೆ ಕಾಳಯ ನಾಗನಾಗದು (ಪಂಪಭಾ. ೧೨-೪೧); ನೆಟ್ಟನಾತನೆ ಮುಂ ತಾನಿನಿತೊಂದನಸ್ಥಿಗೊಳಗಾಗಲ್ ಕಾಮನಂ ಬಿಟ್ಟು ಮತ್ತೆನಗಾರ್ ಬಂಧುಗಳ್ (ಕಾಪಂಪೂ. ೮೬೬); ರಾಜಸೂಯಮಖಮಂ ತಡವಿಲ್ಲದೆ ಬೇಳ್ದ ಬೀರಮಂ ನೆಟ್ಟನೆ ನೀನೆ ಕಂಡಿಱಸಲಕ್ಕುಮೆ ಗಾಂಡಿವಿಯಂ ಸುಯೋಧನಾ (ಗದಾಯು. ೨-೩೭). ೫. ಪೂರ್ತಿಯಾಗಿ; ಸಂಪೂರ್ಣವಾಗಿ; ಸಮಗ್ರವಾಗಿ: ಕಟ್ಟಿದ ಪಟ್ಟಮೆ ಸರವಿಗೆ ನೆಟ್ಟನೆ ದೊರೆ ಪಿಡಿದ ಬಿಲ್ಲೆ ದಂಟಂಗೆಣೆ (ಪಂಪಭಾ. ೧೦-೧೭); ಈ ಸನ್ಮೂರ್ತಿಗಾರ್ನೆಟ್ಟನಾಳ್ತನದೊಳ್ ನಿಲ್ಲದರ್ (ಕಾದಂಉ. ೧೧೦); ನೆಟ್ಟನೆ ಮನದೊಳ್ ಭಾವಿಪೊಡಸಾರಮಿಾ ಸಂಸಾರಂ (ಅಜಿಪು. ೨-೬೬); ಇನಿತುಮನೋರಂತಿರೆ ನೆಟ್ಟನೆ ತಾಳ್ದಿದ ನರನ ಸುಖಮನೇವೊಗಟ್ಟುದೊ (ಧರ್ಮಾಮೃ. ೧-೮೩); ನೆಟ್ಟನೆ ನಿಮ್ಮ ಮನ ಮುಟ್ಟಿ ಪೂಜಿಸಿ ಭವಗೆಟ್ಟಿ ನಾನು ಚನ್ನಮಲ್ಲಿಕಾರ್ಜುನ (ಮಹಾದೇ. ಬ. ೧೦೮-೨೪೧); ನೆಟ್ಟನೀಶಾಚಾರವಂ ಮುಂದಿಟ್ಟು ಬೆಳೆಯಿಪ ಭಾಷೆ (ಒಸಪು. ೬-೭). ೬. ಕೂಡಲೆ; ತಕ್ಷಣ; ಒಮ್ಮೆಲೆ: ಮಗನೆ ನೀಂ ಪಗೆಯಂ ತಱಿದೊಟ್ಟು ನೆಟ್ಟನೆನ್ನದೆ ಬಗೆಗೆಟ್ಟು ತಾಯಿಗರುಳಂ ಮಗುಟ್ಟುಂ ಪುದುವಾಟ್ಟುದೆಂಬಿರೇ (ಪಂಪಭಾ. ೧೧-೫೦); ಅನುವರ ಕಹಿತಂ ಬಂದಿರೆ ಪೆಗಡೆತನಮುಟ್ಟುವನರಾತಿ ಬೆನ್ನಟ್ಟಿ ನೆಟ್ಟನೋಡುವ ನಕ್ಕುಂ (ಶಾಂತಿಪು. ೩-೯೩); ಇನಸುತನಿರವಂ ದುಶ್ಶಾಸನನಿರವಂ ಕಂಡುಮೆನ್ನಸುವಿದು ನೆಟ್ಟನೆ ಪೋದುದಿಲ್ಲ (ಗದಾಯು. ೫-೨೮); ನೆಟ್ಟನೆ ನೀನೆತ್ತಿಕೊಂಡ ಕಳ್ಳಂ ಬಾಯಂ ಸುಟ್ಟೋಡಿದನೆಂಬಂತಿರೆ ದುಷ್ಟಾ ನೀಂ ಮಾಱಿ ನೆಗಟ್ಟಿಯೆನ್ನಾಣೆಯುಮಂ (ಧರ್ಮಾಮೃ. ೨-೯೫). ೭. ನಿಜವಾಗಿ; ದಿಟವಾಗಿ; ನಿಸ್ಸಂದೇಹವಾಗಿ; ನಿಸ್ಸಂಶಯವಾಗಿ: ಉಸಿರದೆ ನಿಲ್ವ ಕಾರಣನುದಾವುದೋ ನೆಟ್ಟನೆ ನಾಳೆ ಕಾಳೆಗಂ (ಪಂಪಭಾ. ೧೦-೩೨); ನೆಟ್ಟನೆ ಚಂದ್ರನೊಳ್ಪಿಸುಪು ಪುಟ್ಟದವೊಲ್ ನೃಪರೂಪಚಂದ್ರನೊಳ್ ಪುಟ್ಟದುಮಂತು (ಕಾದಂಉ. ೪೭೯); ಕತ್ತೆ ಬತ್ತಲೆ ಇದ್ದಡೆ ನೆಟ್ಟನೆ ನಿರ್ವಾಣಯೆ (ಮೋಳಿಮಾ. ೨೩-೯೦); ಬೆಟ್ಟದ ಮುನಿಯಂ ನೆನೆದೊಡೆ ಮುಟ್ಟುವ ರಾಕ್ಷಸಪಿಶಾಚವಿಷಮಾಹಿಗಳುಂ ನೆಟ್ಟನೆ (ಸೇಮಿಪು. ೧-೧೭); ಕರ್ಣ ನಾವಿಂದಜುಂಬೆವು ನೀ ನೆಟ್ಟನೋಲೆಯ ಕಾಜನೆಂಬುದನು (ಕುಮ್ಯಾಕ. ೧೧-೨೩). ೮. ನಿಷ್ಪಂದವಾಗಿ; ಅಲುಗಾಡದೆ: ಸೈಂಧವನು ಸೈಂಧವಶಿಲೆಯವೊಲಿರೆ ಶಲ್ಯ ಶಲ್ಯದ ತೆಱದಿ ನೆಟ್ಟನಿರೆ (ಸಾಳ್ವಭಾ. ೩೦-೬೩). ೯. ಕಣ್ಣೆದುರಿಗೆ; ನೇರದಲ್ಲಿ: ಹಣ ಬಂಗಾರ ವಸ್ತ್ರ ಕಪ್ಪಡ ಬಟ್ಟೆಯಲ್ಲಿ ನೆಟ್ಟನೆ ಬಿದ್ದಿರಲು ಕಂಡು ಕಾತರಿಸಿ ಎತ್ತದ ಭಾಷೆ (ಅದಪ. ೨೧-೫೨). [ನೆಟ್ (<ನಿಡಿದು₁) + -ಅನೆ₁]

ನೆಟ್ಟಲಿಂಗಮರ (ನಾ). ಒಂದು ಬಗೆಯ ಮರ: ಸಣ್ಣ ಹೆಸ್ಸರೆ, ನೆಟ್ಟಲಿಂಗಮರ (ಮೈಚಿಗಿ. ೬೩-೧೨೮೩). [? + ಮರ₁]

ನೆಟ್ಟ₁, ನಟ್ಟು₂, ನೆಟ್ಟೆ₁ (ನಾ). (ಬೆರಳುಗಳ) ಕೀಲನ್ನು ಮಡಿಸಿ ತೆಗೆಯುವ ಲಟಕೆ: ಮುಗಿಲ ದನಿಯಂ ಕೇಳ್ದ ಮುದಿಹಂಸೆಯಂತೆಯಾ ಮಗನ ದನಿಯಂ ಕೇಳಿ ಕೈಯ ನೆಟ್ಟ[ಪಾಠಾಂ. ನೆಟಕೆ]ಯ ಮುರಿದು ಮಿಗೆ ಬೆದಱುತೇವೆನೆಂದೆನುತ ಪಾಣ್ಣನನೊಂದು ಗೊಂದಿಯೊಳಗಿರಿಸಿ (ಸಮ್ಯಕ್ತ್ವ. ೨-೭೪); ಕೆಟ್ಟೆವೆನುತ ಕೈಯ ನೆಟ್ಟಯ [ಪಾಠಾಂ. ನೆಟ್ಟಗೆ, ನೆಟ್ಟೆಯ] ನೆಗ್ಗಿ (ರಾಮವಿ. ೧೬-೮೮); ದೃಷ್ಟಿಯ ಮಂತ್ರಿಸುತ ಕಪ್ಪಿಡುತ ನೆಟ್ಟಯ ಮುರಿದು ತೂಪಿಱಿದೊಡನೆ ತೊಟ್ಟಲೊಳಿಟ್ಟು ಶಿಶುವನು ತೂಗುತಿಹರು (ಪ್ರದ್ಯುಮ್ನ. ೮-೩೮). **ನಟ್ಟು₂**: 'ನಟ್ಟುಮುರಿ' ಪರಾ. **ನೆಟ್ಟೆ₁**: ನೆಟ್ಟನಾ ಅಯ್ಯಗಳ ಕೈಯಂ ಮುಟ್ಟಿ . . . ನೆಟ್ಟೆಯಂ [ಪಾಠಾಂ. ನೆಟ್ಟನೇ] ತೆಗೆವುತ್ತ (ಬಸಪು. ೩೮-೫೦); ತೊಟ್ಟಿಲ ಮಕ್ಕಳ ಮೊಗವ ನಿಟ್ಟಿಸದತ್ತಿತ್ತ ಪರಿದಾಡಿದರು ಕಯ್ಯ ನೆಟ್ಟೆಯೊತ್ತುತ ಕಾಮುಕಿಯರು (ಕುರಾಸಾಂ. ೪೫-೨೪); ಕಟ್ಟಿದ ಹರಸಿ ಕಾಣಿಕೆ ಕುಲದೈವಕ್ಕೆ ಇಟ್ಟಳು ಪಣೆಗೆ ಭಸಿತವ ಕೆಟ್ಟಿಸಿದೇನು ಕಾರಣವೆಂದು ಕರಗಳ ನೆಟ್ಟೆಯ ಮುರಿದು ಕೇಳಿದಳು (ಮಾದೇಸಾಂ. ೨-೧೬).

[ದೇ. ॥ ತಮಿ. ನೆಟ್ಟ, ನೆಟ್ಟೈ, ನೊಟ; ಮಲ. ನೊಟ, ನೊಟ್ಟ; ತುಳು. ನೆಟ್ಟ]

ನೆಟ್ಟ 2 (ನಾ). ಒಳಗಿನ ತಿರುಳು ; ಸಾರ (?) : ಬೀಜದ ನೆಟ್ಟ [ಪಾಠಾಂ. ಟ್ಟ]ಕರಗಿದರಕಟ ಬಳಿಕದು ಹುಟ್ಟಲಱುವುದೆ (ನಿಭಾಗ. ೨-೧-೪೯) ; ನೆಟ್ಟ [ಪಾಠಾಂ. ಟ್ಟ]ಕರಗಿದ ಬೀಜ ಮಣ್ಣೊಳಗಿಟ್ಟಡದು ಮುನ್ನಿನವೊಲಂಕುರ ಹುಟ್ಟಲಱುವುದೆ (ನಿಭಾಗ. ೫-೪-೨೫).

[←ತಮಿ. ನೆಟ್ಟ ?]

ನೆಟ್ಟಕೆ, ನಟಕು 1, ನಟಕೆ, ನಟಗೆ 1, ನಟುಕು, ನೆಟಕೆ, ನೆಟಗೆ, ನೆಟಕೆ, ನೆಟಗೆ, ನೆಟುಕು, ನೆಟ್ಟಗೆ, ಲಟಕಿ, ಲಟಕು, ಲಟಕ್ಕು, ಲಟಕಿ, ಲಟಕೆ, ಲಟಗೆ, ಲೆಟಗೆ (ನಾ). ೧. = ನೆಟ್ಟ 1 : ಇವನ ಮನೆ ಬಟ್ಟ ಬಯಲಾಗ ಈಗಲೆ ಹುಟ್ಟಬೇಕೆ ಈ ಚಂದ್ರನೆಂದು ನೆಟ್ಟಕೆಗಳಂ ಮುರಿಯುತ (ಸೌಗಂಧಿ. ೧೮೭-೨). **ನಟಕು 1** : (ಕ). **ನಟಕೆ** : ೧. ಇನ್ನೆನಗೆ ಬನ್ನವಪ್ಪುದೆನುತ್ತೆ ಕೈವೆರಲ ನಟಕೆಗಳಂ ಮುರಿದುಕೊಳುತುಂ (ಸಿದ್ಧೇಶ್ವ. ೧೫-೬೨) ; ಸಗ್ಗವೆಣ್ಣಂಬ ಮಾತಿಗೆ ಕಾಯ್ದು ನಟಕೆಯಂ ನೆಗ್ಗಿ (ಚೆಬಪು.೧೯-೨೬). **ನಟಗೆ 1** : (ಕ). **ನಟುಕು** : (ಕ). **ನೆಟಕೆ** : ೧. 'ನೆಟಕೆ ಮುರಿ' ಪರಾ. **ನೆಟಗೆ** : ೧. 'ನೆಟಗೆ ತೆಗೆ' ಪರಾ. **ನೆಟಕೆ** : ೧. ಇಕ್ಕಿದಳು ನೆಟಕೆಯನು ಕಡು ಮುಳಿಸಿಂದ ದ್ರೌಪದಿಯು (ಜಿಸಭಾ. ೫೦-೪೨) ; ಕಾಲ ಬೆರಳುಗಳು ನೆಟಕೆಗಾಗಿ ಹಾತೊರೆಯುತ್ತಿವೆ (ಅಸ್ನಪೂ. ೨೦) ; ತುಳಸಾಬಾಯಿ ನೆಟಕೆಗಳನ್ನು ಮುರಿಯುತ್ತ . . . ಹೇಳಿದಳು (ಪಹಾಗ. ೨೪೮). **ನೆಟಗೆ** : ೧. ವಿಟಪುರುಷರನು ನೋಡಿ ನಟಕುಗಳ ತೋರುತಲಿ ನೆಟಗೆಯನು ಮುರಿಯುತಲಿ ಚಟುಲೆ ನೋಡುತಿರೆ (ಹಮಚಿ. ೨೪೫) ; ಕೈಗಳ ನೆಟಗೆಯನು ಮುರಿಮುರಿವ ಕಾರಣ (ಕರಿಕ. ೪೮-೫). **ನೆಟುಕು** : ೧. ಕಂಜಾಕ್ಷಿ ಕಳಸವಕ್ಷಜೆಯರೀ ಪಾಪಿ ಶಶಿಗೇನು ತ್ವರಿತತಳವೆಂದು ಹಳಿವುತಂ ಚಲಿತ ನೆಟುಕುಗಳಂದ ಹೊರಟರೇಕಾಂತವಗಲಿ (ಜಿಸಮು. ೪೯-೨೩). **ನೆಟ್ಟಗೆ** : ೧. ಕಡೆಯಂ ಕಾಣದೆ ಇರುವ ಕಾಡಿನೊಳ್ ಕರುಣಮಿಲ್ಲದ ಕಠಿನಚಿತ್ತನಾದ ಕಮಲಸಂಭವನೆ ನೀನು ಯೀ ಪರಿ ನಮ್ಮ ನಾಲ್ವರಂ ಪಾಡು ಪಡಿಸಬಹುದೇ ಯಂದು ಕೈಗಳಂ ಸಾಚಬೆಟ್ಟುಗಳಿಂದ ನೆಟ್ಟಗೆಗಳಂ ನಿಟ್ಟುತ (ಸೌಗಂಧಿ. ೫೦೪-೧೭) ; ನಂಟರಾದ ಮುದುಕಿಯರು ಬಂದು ಶಿಶುವಂ ತೂಪಿರಿದು ನೆಟ್ಟಗೆಯಂ ಮುರಿದು ಹರಸಿ ಹೋಗಲು (ಕೃಷ್ಣಕ. ೧-೮೬). **ಲಟಕಿ** : ೧. 'ಲಟಕಿ ಮುರಿ' ಪರಾ. **ಲಟಕು** : ೧. 'ಲಟಕುಮುರಿ' ಪರಾ. **ಲಟಕ್ಕು** : ೧. "ಲಟಕ್ಕು = ಬೆರಳು ಮುರಿಯುವ ಸಪ್ಪಳ" (ಜಾನಕೋ. ೪೨). **ಲಟಕಿ** : ೨. ಕೈಯ ಹೆಬ್ಬೆರಳು ಮತ್ತು ನಡುಬೆರಳುಗಳನ್ನು ಸೇರಿಸಿ ಮಿಡಿದು ಶಬ್ದ ಮಾಡುವಿಕೆ ; ಚಿಟಕೆ : 'ಲಟಕಿ ಹೊಡೆ' ಪರಾ. **ಲಟಕೆ** : ೧. 'ಲಟಕೆ ಮುರಿ' ಪರಾ. **ಲಟಗೆ** : ೨. 'ಲಟಗೆ ಹೊಡೆ' ಪರಾ. **ಲೆಟಗೆ** : ೧. ನರನರಯೆಂದು ಲೆಟಗೆಗಳು ಬಂದು (ತತ್ವಾಸಿ. ೮೩-೨).

[ದೇ.॥ ತುಳು. ನಟುಕು ; ತೆಲು. ನೆಟಕ, ನೆಟ್ಟಕ]

ನೆಟ್ಟಗೆ 'ನೆಟ್ಟಕೆ' ನೋ.

ನೆಟ್ಟಗೆ ಮುರಿ, ನಟಕೆ ಮುರಿ, ನೆಟಕೆ ಮುರಿ, ನೆಟಕೆ ಮುರಿ, ನೆಟಗೆ ಮುರಿ, ಲಟಕಿ ಮುರಿ, ಲಟಕು ಮುರಿ, ಲಟಕೆ ಮುರಿ, ಲಟಗೆ ಮುರಿ (ಕ್ರಿ). ೧. (ದೃಷ್ಟಿ ತೆಗೆಯಲು) ಕೈ ಬೆರಳುಗಳ ಕೀಲನ್ನು ತನ್ನ ತಲೆಯ ಎರಡೂ ಕಡೆಗಳಲ್ಲಿ ಮಡಿಸಿ ಹತ್ತಿಕ್ಕಿ ಶಬ್ದ ಮಾಡು ; (ದೃಷ್ಟಿ ನಿವಾರಣೆಗಾಗಿ) ಬೆರಳುಗಳನ್ನು ಮಡಿಸಿ ನೆಟ್ಟಗೆ ಬರಿಸು : ಎಲ್ಲರೂ ಮಗುವನ್ನು ನೋಡಿ ದೃಷ್ಟಿ ತೆಗೆದು ನೆಟ್ಟಗೆ ಮುರಿದು ಹೋದರು(ಮಹೋಸಂ.೧೫೨) ; ಮಗನಿಗೆ ದೃಷ್ಟಿ ತಾಗದಿರಲೆಂದು ಕಿಟ್ಟಯ ತಾಯಿ ನೆಟ್ಟಗೆ ಮುರಿದರು (ಬಳಿಜೀ. ೬೬). **ನಟಕೆಮುರಿ** : ೧. ಕಳಾವಿಳಾಸಿನಿಮಣ್ಣಳು . . . ಬಳಿ ಸಂದು ಕರದ ಬೆರಳ್ಗಳ ನಟಕೆಮುರುಕೊಳುತ (ನವಮೋ. ೬-೫೫) ; ಹಿರಣ್ಯಧನು ಕಣ್ಣೀರನ್ನು ತಡಕೊಂಡು ನೆಲದಲ್ಲಿ ನಟಕೆ ಮುರಕೊಳ್ಳುವನು(ಹಿಬೃರ. ೨೦-೭). ೨. ಶಾಪಹಾಕು; ಕೆಡುಕನ್ನು ಬಯಸು ; "ಚಟಕುಮುರಿ ; ಶಪಿಸು"(ಜಾನಕೋ.೬). **ನೆಟಕೆ ಮುರಿ** : ೧. ಸುಂದರಮ್ಮ . . . ಮಗಳ ಕೆನ್ನೆ ಸವರಿ ನೆಟಕೆ ಮುರಿದರು (ದೂಬೆಟ್ಟ. ೨೪). **ನೆಟಕೆಮುರಿ** : ೧. ಕೆನ್ನೆ ಸವರಿ ತಲೆಯ ಪಕ್ಕದಲ್ಲಿ ನೆಟಕೆಮುರಿಯುವಳು (ಮಲ್ಲಿ. ೧೧). ೨. ಹೆಣ್ಣಲ್ಲ ರಾಕ್ಷಸಿ ಅಂತ ನೆಟಕೆಮುರೀತಾರೆ ಹೆಂಗಸರು (ಸತದಾ. II, ೧೦೫೬). **ನೆಟಗೆಮುರಿ** : ೩. ಬೆರಳುಗಳ ಕೀಲನ್ನು ಮಡಿಸು,—ಶಬ್ದ ಮಾಡು ; ಎಲುಬುಗಳನ್ನು ಬಾಗಿಸಿ ನೆಟಗೆ ತೆಗೆದು ಆಯಾಸ ಪರಿಹಾರ ಮಾಡಿಕೊಳ್ಳು : ಮಲಗಿದ 'ಅಡ್ಡ'ದ ಹೆಂಗಸರೆಲ್ಲ ದಡಬಡನೆ ಎದ್ದು ನೀಳವಾಗಿ ಆಕಳಿಸಿ, ಕೈ-ಮೈಗಳ ನೆಟಗೆ ಮುರಿದರು(ಚಗುಬ. ೮೩). **ಲಟಕಿ ಮುರಿ** : ೧. ಸ್ಯಾಸಿಯೆಟ್ಟು, ತಮ್ಮನ್ ದೃಷ್ಟಿ ಲಟಕಿ ಮುರೀತಿದ್ ಕೈನಾ ಮುರಿದಿಟ್ಕೊಲ್ಲೋ ಯಪ್ಪಾ ! (ಬಾಗಿನ. ೧೮). **ಲಟಕು ಮುರಿ** : ೧. ನನ್ನ ಗಲ್ಲ ಹಿಡಿದು ಮುದ್ದಾಡಿ ತಲೆಗೆ ಲಟಕು ಮುರಿದಳು (ಮೇದಿಮು. ೪೧) ; ಅವಳನ್ನು ನೋಡಿದ ಭಾಗ್ಯಮ್ಮನವರು ಸಂತೋಷಚಿತ್ತರಾಗಿ 'ನಿನ್ನ ಕೈ ಹಿಡಿಯುವವನು ಭಾಗ್ಯವಂತನೇ ಸರಿ' ಎಂದು ಲಟಕು ಮುರಿದು ಪ್ರೀತಿಯ ಹೊಳೆ ಹರಿಸಿದರು (ರಂಗರೋ.೨೧೦); ಜಾನಕಿಯ ಮಾತನ್ನು ಕೇಳಿ ಅವಳು ಪ್ರೀತಿಯ ಲಟಕು ಮುರಿದು ಗದ್ಗದಿತಳಾದಳು (ಮುತ್ತೈದೆ. ೮). ೨. ಮಲತಾಯಿ ಮುಂದ ಮರಿಗುದರಿ ಏರಿದರೆ ಮನದಾಗ ಲಟಕ ಮುರಿದಾಳ (ಜನಗೀ. ೬೩) ; ತಾಯವ್ವನು ಅವಳಿಗೆ ಶಪಿಸುತ್ತ ಲಟಕು ಮುರಿದಳು (ಕನಕಿ. ೬೭). **ಲಟಕೆ ಮುರಿ** : ೧. ಸುಂದರಮ್ಮ . . . ಮಗುವಿನ ಮುಂಗುರುಳನ್ನೂ ಎರಡೂ ಕೈಗಳಿಂದ ನೇವರಿಸಿ, ತನ್ನ ತಲೆಯ ಬದಿಗೊಯ್ದು ಲಟಕೆ ಮುರಿದು ಸರಕ್ಕನೆ ಅಡಿಗೆಮನೆಯೊಳಕ್ಕೆ ಹೋದಳು (ಬನಶಂ. ೧೦೧). **ಲಟಗೆ ಮುರಿ** : ೨. ಹಾರವನ ಹೆಸರು ಹೇಳಿದರೆ ಎಲ್ಲರೂ ಲಟಗೆ ಮುರಿಯುವರೇ (ನಾಡಿಗೇ. ೮).

[ನೆಟ್ಟಗೆ(<ನೆಟ್ಟಕೆ) + ಮುರಿ 1]

ನೆಟ್ಟದೆಗೆ (ಕ್ರಿ). ಮೈ ಕೈ ನೋವಾದಾಗ ಕೀಲುಗಳನ್ನು ಎಣ್ಣೆಯಿಂದುಜ್ಜಿ ನೋವು ಇಳಿಯುವಂತೆ ಮಾಡು ; ಎಲುಬುಗಳನ್ನು ನೀವು : ಜಟ್ಟಗಳೆಯ್ದು ನೋಡಿದರು ನಾವೊಯ್ಯನೆ ನೆಟ್ಟದೆಗೆವೆವೆಂದರೊಡನೆ (ಭರಚಿ. ೪೯-೯೬). [ನೆಟ್ಟ 1 + ತೆಗೆ 1]

ನೆಟ್ಟ ಮುರಿ, ನಟ್ಟು ಮುರಿ (ಕ್ರಿ). ೧. ನೆಟ್ಟಗೆಯನ್ನು ಮುರಿ,—ತೆಗೆ ; ಶಪಿಸು : ಅಳುತ ಬಾಯ್ವಾಯ ಬಿಡುತ ನೆಟ್ಟ ಮುರಿವುತ ನಿಳಯವ ಪೊಕ್ಕಡಗಿದರು (ಜ್ಞಾನಚಿ. ೧೪-೬೨). **ನಟ್ಟು ಮುರಿ** : ೨. ದೃಷ್ಟಿತೆಗೆ : ಪೊರೆಯಲಿ ನಿನ್ನನೀಶ್ವರಂ . . . ಇದೂ ನಟ್ಟು ಮುರಕೊಳುವೆ (ಹಬೃರ. ೨೦-೬). [ನೆಟ್ಟ 1 + ಮುರಿ 1]

ನೆಟ್ಟು 1 'ನಡು 1' ನೋ.

ನೆಟ್ಟು 2 'ನಡು 1' ಪರಾ.

ನೆಟ್ಟು 3 (ನಾ). (ಹುರಿ, ಹಗ್ಗ, ಕೂದಲು ಮೊದಲಾದುವುಗಳಿಂದ ಮಾಡಿದ) ಬಲೆ ; ಜಾಲ : ಚೆಂಡು, ಬ್ಯಾಟು, ನೆಟ್ಟುಗಳನ್ನು ಹಿಡಿದು ಆಟಕ್ಕೆ ಹೊರಟನು (ರೂಢಿ). [←ಇಂ. Net]

ನೆಟ್ಟೂರು (ನಾ). ಒಂದು ಊರಿನ ಹೆಸರು : ದೇವಯ್ಯನಳಿಯ ಎಱುಂಗಾರಿ ಸತ್ತೊಡೆ ಆತನ ಮಗಂ ಬೀಚಂಗಂ ಕಲ್ಯಱುನಾದ ನೆಟ್ಟೂರ ಕಲ್ನಟುಗೊಟ್ಟರ್ (ಎಕ. V, ಚನ್ನರಾ. ೨೬೨-೨೧ ; 971).

[ನೆಟ್ಟು ?+ಊರು 3(<ಊರ್)]

ನೆಟ್ಟೆ 1 'ನೆಟ್ಟ 1' ನೋ.

ನೆಟ್ಟೆ 2 'ನಾಟಿ 1' ನೋ.

ನೆಟ್ಟೆರೆ (ಕ್ರಿ). ನೇರವಾಗಿಬೇಡು ; ನಿಸ್ಸಂಕೋಚವಾಗಿ ಯಾಚಿಸು (?): ನರಸಿಂಹಾಕಾರದಿಂ ದಾನವಪತಿಯುರಮಂ ಸೀಳ್ದನಣ್ಣಾಣ್ಮ ರುದ್ರಂ ಬೆರಸಾ ಕೈಳಾಸಮಂ ತೂಗಿದನಳವಳತಾರ್ತ್ತರ್ತ್ತಿಯಿಂ ಚರ್ಮ್ಮಮಂ ನೆಟ್ಟೆರೆದಿನ್ಬ್ರಂಗಿತ್ತಂ (ಎಕ. VII, ಶಿಕಾರಿ. ೧೨೪–೮ ; 1077).

[ನೆಟ್ಟ$_2$(<ನಿಡಿದು$_1$)+ಎರೆ$_2$]

ನೆಟ್ಟೆಲು 'ನೆಟ್ಟೆಲುವು' ನೋ.

ನೆಟ್ಟೆಲುವು, ನೆಟ್ಟೆಲು (ನಾ). ನೆಟ್ಟನೆಯ ಎಲುಬು ; ಬೆನ್ನು ಮೂಳೆ ; ಬೆನ್ನೆಲುಬು : ಪಶ್ಚಿಮ ಪದ್ಮಾಸನದಲ್ಲಿ ಕುಳಿತು ನೆಟ್ಟೆಲುವ ಮುರಿದು ತುಟಿ ಮಿಡುಕದೆ ಅಟ್ಟಯಾಡಿತ್ತಲ್ಲಾ (ಬಸವ. ೮೧೪) ; ಬಲಿ ಹರಣ ಕಾರಣಕವತರಿಸಿ ಬೆಳೆದವನ ನೆಟ್ಟೆಲುವಿನಂದದಿ ಬೆಳುಗುದುಗೆಯಂ ಬಲದ ಕರದಲಿ ಪಿಡಿದು ತಿರುಪುತ್ತ (ಬಸಪು. ೨೯–೪) ; ಈಡಾಡುವೆಂ ಕುಲಗಿರಿವ್ರಜವ . . . ನಿಂದಕರ ತಱುಂದೊಟ್ಟ ನೆಟ್ಟೆಲುವ ಮುಱುವೆ (ಲಶಿಚಂ. ೧೮–೨೨) ; ಆ ಮತ್ಸ್ಯಮಂ ಕೊಂದು ನೆಟ್ಟೆಲುವನುಱ್ ತಾ ಪಿಡಿಯೆ (ಚಪುಪು. ೫೨–೨೫). **ನೆಟ್ಟೆಲು :** ನೆಟ್ಟೆಲುಗಳಂ ಮುಱುದು ಮುಟ್ಟಯಿಕ್ಕಡಿಯಾಗಿ ತಟ್ಟುಗಳ ಸೀಳ್ದು ಉರುಹಿ ಕೊಲುವಾಗ ಲುಂಡುಟ್ಟ ಸತಿ ಸುತರು ಬಿಡಿಸುವರೊ (ಗುರುಬೋ. ೫೯–೬) ; ನಿಡುನರ ಹಱುದು ಬೆನ್ನೀರ್ಗಳು ಹರಿದು ಬಿರಿದು ನೆಟ್ಟೆಲು ಮೈಮಱೆದಾಗ ರಿಪುಬಲ ಹೊರೆಯದುದೇನೆಂಬೆನದನು (ಕಂಸವಿ. ೧೪–೮೭). 'ನಿಟ್ಟೆಲ್ವು', 'ನಿಟ್ಟೆಲುವು' ಪರಾ. [ನೆಟ್ಟ(<ನಿಡಿದು$_1$)+ಎಲುವು$_2$(<ಎಲ್ವು)]

ನೆಡಳೆ (ನಾ). (?) : ಕಾಡಾರಂಬ ನೀರಾರಂಬಕೆ ಸಲುವ ಕೆಱೆ ಕುಂಟೆ ಕೊಣನು ಅಚಿ ಅಱುಕಟು ದರೆ ನೆಡಳೆ ಸಕಳಾ ಒತ್ತಾಯ ಸಕಳ ನದಾಯ ಪಾಬಕೂಪ ಪಟಾಕ (ಎಕ. X (S), ಕೋಲಾರ. ೩೦೪–೧೫ ; 17ನೆಯ ಶತ). [?]

ನೆಡಿಸು 'ನಡಿಸು$_2$' ನೋ.

ನೆಡು 'ನಡು$_1$' ನೋ.

ನೆಡುಗಣ್ಣು 'ನಡುಗಣ್ಣು' ನೋ.

ನೆಡುಗುರಿ (ನಾ). ನಿಶ್ಚಿತವಾದ ಗುರಿ : ಕೋಲ ಕಡೆಗಣ್ಣ ಕೊನೆ ನೆಡುಗುರಿಯ ನೋಡುವು ಹುರುಪೆದ್ದು ಕುಣಿಯುವುದು (ನಡೆದಾ. I, ೪೪೧) ; ಆದರೆ ಅವನು ಹುಟ್ಟಿ ಬೆಳೆದ, ಬೆಳೆದು ಬಾಯ್ದೆರೆದ ನಾಡಾವುದೆಂಬುದರ ನೆಡುಗುರಿ ಇನ್ನೂ ಸರಿಯಾಗಿ ಕಂಗೊಳಿಸಲಿಲ್ಲವೆಂದೇ ಹೇಳಬೇಕು (ನಾಡೋಜ. ೧೫). [ನೆಡು (<ನಡು$_1$)+ಗುರಿ$_1$(<ಕುಱಿ$_2$)]

ನೆಡುಗೆ 'ನಡಿಗೆ$_2$' ನೋ.

ನೆಡುತೋಪು (ನಾ). "ನೆಟ್ಟ, ಬೆಳೆಯುವ, ಮರಗಳ ದೊಡ್ಡ ತೋಪು ; ನೆಡುತೋಪು, ಕಾನು" (Plantation. ಇಂಳಕಿ).

[ನೆಡು(<ನಡು$_1$)+ತೋಪು$_1$]

ನೆಡುಬಗೆ (ನಾ). ಸ್ಥಿರವಾದ ಮನಸ್ಸು ; ಚಂಚಲವಾಗದ ಚಿತ್ತ : ಸೌಂದರ್ಯ ಶೃಂಗಾರರಸ ಸ್ತ್ರೀವ್ಯಕ್ತಿಗಳಿಗೆ ಪ್ರಾಧಾನ್ಯವಿರುವ ವಾಙ್ಮಯಾದಿಗಳನ್ನವಗಾಹಿಸುವಲ್ಲಿ ವಾಚಕರು ನೆಡುಬಗೆಯುಂದಿರಬೇಕು (ನಾಡೋಜ. ೩೮೩). [ನೆಡು(<ನಡು$_1$)+ಬಗೆ$_3$]

ನೆಡುಬೊಱೆ (ನಾ). ಒಂದು ಸ್ಥಳದ ಹೆಸರು : ಶ್ರೀ ನೆಡುಬೊಱೆಯ ಪಾನಪಭೋಗರ್ನ್ನೋನ್ತು ಮುಂಡಿಪ್ಪಿದಾರ್ (ಎಕ. II, ೯–೧ ; ಸು.700). [?]

ನೆಡುಮೊಱಡಿ (ನಾ). ಒಂದು ಗುಡ್ಡದ ಹೆಸರು : ಅನ್ತೆ ಮೂಡ ನೋಡಿ ಪರಿದ ಪೇರೊಱ್ಪೆ ನೆಡುಮೊಱಡಿಯುಳ್ತಾಗಿ ಪೊಱಡಿಯ ಮೇಗಿಟ್ಟ ಪೇರಾಲೆ ಈಶಾನಂಗೆ ಸೀಮೆ ನೆಡುಮೊಱಡಿಯಾ ಪುಣುಸೆ ಪುಗರಿಯಾ ಎಡೆಯೆ ಬೀಟ್ಟನ್ನ ಪಳ್ಳಮೆ (ಎಕ. IX (S), ಬೆಂಗಳೂ. ೧೫೧–೪೭ ; 474). [ನೆಡು? + ಮೊಱಡಿ(<ಮೊರಡಿ)]

ನೆಡೆ 'ನಡೆ$_1$' ನೋ.

ನೆಣ (ನಾ). ೧. ಎಲುಬಿನ ಮಧ್ಯದ ಪೊಳ್ಳು ಭಾಗದಲ್ಲಿರುವ ಒಂದು ಬಗೆಯ ಜಿಗುಟು ಪದಾರ್ಥ; ಕೊಬ್ಬು ; ಮೇದಸ್ಸು ; ಚರ್ಬಿ : "ವಸಾ, ಮೇದಃ, ವಸಾ—ಈ ೩ ನೆಣಂ" (ಹಲಾಯು. ೧೦೪–೧೩) ; ನೆಣದ ಪಳ್ಳಂಗಳಂ ಪಾಯ್ದುಂ ನೆತ್ತರ ತೊಱೆಗಳಂ ಬಂಜಿಸಿಯುಂ (ಪಂಪಭಾ. ೧೩–೫೩ ಪ) ; ನೆತ್ತರ ತೊಱೆಯುಂ ನೆಣದ ಪಳ್ಳಂಗಳುಂ ಪೆಣದ ಬಣಂಬೆಗಳುಂ ಕೋಟ್ಟುದುಳ ಕೋಟ್ಟೆಸಱುಮಗುರ್ವೂವಡೆಯೆ (ಪಂರಾಮಾ. ೧೩–೫೪ವ); ನೆಣದ ಕೊಳ ರಕ್ತದ ಹುತ್ತು . . . ಶುಕ್ಲದ ಕೋಶ ಎಲುವಿನ ಬಲುಹಿಂದಿಪ್ಪುದೀ ಕಾಯ (ಅಪನ. ೧೫–೩೪) ; ತಣೆವನ್ನಂ ರುಧಿರಾಂಬುವಂ ಪದಪಿನಿಂದೀಂಟುತ್ತುಮಳ್ಳೊಕ್ಕ ಮೆಲ್ನೆಣನಂ ಗಟ್ಟನೆ ನುಂಗಿ (ಕುಸುಮಾ. ೧೧–೯೩) ; ರಿಪುಭಟನೊಡಲ ಹೊಳ್ಳಿಸಿ ನೆಣನನುಣಲಿಕ್ಕುವೆನು ದೈತ್ಯರಿಗೆ (ಕುವ್ಯಾದ್ರೋ. ೨–೩೩) ; ಕಡ್ಡಿ ಕೊರೆದು ಬದಿಯಲ್ಲಿದ್ದ ನೆಣ ಬಳಿದ ದೀಪವನ್ನು ಹಚ್ಚುತ್ತಾನೆ (ಚೇಸಬಾ. ೫). **೨.** ಶಕ್ತಿ ; ಬಲ : ಎಷ್ಟು ಕೆಲಸ ಮಾಡಿದರೂ ಸ್ವಲ್ಪವೂ ಮೈ ಭಾಸಿಯಾಗದಿದ್ದ ತಾರುಣ್ಯದ ನೆಣ ಈಗೆಲ್ಲಿ ಬರಬೇಕು? (ರೂಢಿ). **೩.** (ಆಲಂ) ಜಂಬ ; ಸೊಕ್ಕು : ಅವನ ನೆಣವನ್ನು ಕರಗಿಸದಿದ್ದರೆ ನಾನ್ಯಾಕಿರಬೇಕು ? (ರೂಢಿ). **೪.** (?) : ಅಣ್ಯವು ಪುಣ್ಯವು ಪುಣ್ಯದ ನೆಣಗಳು ಹೆಚ್ಚಾವು (ಎಬಕಾ. ೧೩೫–೨೩).

[ದೇ.॥ ತಮಿ. ಮಲ. ನಿಣ = ಹೆಪ್ಪುಗಟ್ಟಿದ ರಕ್ತ ; ಕೊಡ. ನಣ ; ತುಳು. ನಿನ]

ನೆಣಗೊಬ್ಬು (ನಾ). ೧. ದೇಹದಾರ್ಢ್ಯ; ಅಂಗಸೌಷ್ಠವ: ಕೊಬ್ಬಿದ ಭುಜಯುಗಳದಿ ವೀರರಸದಿಂದುಬ್ಬಿದ ನಿಡುದೋಳ್ಗಳೆಡೆಯ ಪರ್ಬಿದ ಕಾಂತಿ ತಾಣಗಳೆನೆ ನೆಣಗೊಬ್ಬಿಲಿ ಗರುವನೊಪ್ಪಿದನು (ವೋಹತ. ೩೩–೫೭). **೨.** (ಆಲಂ) ಅತಿಯಾದ ಹೆಮ್ಮೆ,—ಕೊಬ್ಬು,—ಸೊಕ್ಕು : ಆರೊಡನೆ ಕಾದುವೆನು . . . ಎಂದು ಕುಮಾರ ನೆಣಗೊಬ್ಬಿನಲಿ ನುಡಿದನು ಹೆಂಗಳಿದಿರಿನಲಿ (ಕುವ್ಯಾವಿ. ೫–೨೦) ; ಅಬ್ಬರಿಸಿದುದು ವೀರರಸ ರಣದುಬ್ಬರದ ರೌದ್ರಾದ್ಭುತದ ನೆಣಗೊಬ್ಬಿನಲಿ (ತೊರಾ. ೬–೪೫–೬೭).

[ನೆಣ+ಕೊಬ್ಬು$_2$(<ಕೊರ್ವ್ವ$_2$)]

ನೆಣವಸೆ (ನಾ). ಮೇದಸ್ಸು ; ಕೊಬ್ಬು : ಕಾಲೊಳ್ತೊಡರ್ದು ತೊರಳೆಗಳ ಮೈನವಿರ್ ಸಾಲೊಳ್ಪೊರೆದ ನೆಣವಸೆಗಳ ಮೇಲುಮೊಗದ ನೆತ್ತರ ದಾಡೆಯೊಳು ಸಿಕ್ಕಿ ಹೋಲುವ ಕರುಳ್ದಂಗಲೆಸೆದವು (ಸೂಬಸೋ.೧೨–೧೦) ; ದುಱುದುಱುಪ ತಲೆಮಿದುಳ ದಂಡೆಯ ಹಱುಗರುಳ ನೆಣವಸೆಯ ಮೂಳೆಯ ಮುಱುಕುಗಳ ಕಡಿಖಂಡಮಯವಾಯ್ತಖಿಳ ಚತುರಂಗ (ಕುವ್ಯಾದ್ರೋ. ೧೮–೩೩) ; ನೆತ್ತರಿನ ನೆಣವಸೆಯ ಮಾಂಸದ ಕುತ್ತುರನ ಕ್ರಿಮಿ ಕೀವು ಕಿಸುಕುಳದೊತ್ತುಯಲು ಮಲ ಮೂತ್ರದುದುಭವಜನ್ಮ ಭೂಮಿಯಿದು (ಶಿಭಾಗ. ೬–೧೪–೧೨) ; ಮಾಂಸ ಬಲಿವುದು ನೆಣವಸೆಗಳು ಬಲಿವುವು (ಅಶ್ವಟೀ. ೪೬–೬). [ನೆಣ+ಬಸೆ$_3$]

ನೆಣವಸೆಗೆಸಱು (ನಾ). ಕೊಬ್ಬಿನ ರಾಡಿ ; ಮೇದಸ್ಸಿನ ಕೆಸರು : ಕಡಿವಡೆದ ಹಕ್ಕರಿಕೆ ಜೋಂಡೆಯ ತಡಿಗಳಲಿ ಕುಳ್ಳಿರ್ದು ಮೊಣಕಾಲ್ಗಡಿಯ ಗಾಢವ್ರಣದ ನೆಣವಸೆಗೆಸಱ ಬಳಿಬಳಿದು . . . ಮುಂದೆ ಹೆಜ್ಜೆಯನಿಡುತ ಪೈಸರವೋಗಿ (ಕುವ್ಯಾಗ. ೩–೧೩).

[ನೆಣವಸೆ + ಕೆಸಱು (<ಕೆಸಱ್)]

ನೆಣವುಲಿ (ನಾ). (?) : ಕಿಱುನೆಲ್ಲಿಯುಪ್ಪು ನೆಣವುಲಿ ತೊಱೆನಾಯ್ ಸತ್ತೆಡೆಯ ಮಱ್ ಶುಕಾಸ್ಯಂ ಮದ್ಯಂ ಮುಱುದೊಂಡೆಯೆಂಬಿವಂ ಪೆಸರ ಱಾಯದ ಬಾಹುಗಳೊಳೊರಸಿ ಪೊಱಸಿ(ಸು)ಗೆ ಪೋಕುಂ (ಲೋಕೋಪ. ೯–೨೦೨). [?]

ನೆತರುಕೊಡಗೆ 'ನೆತ್ತರುಗೊಡಗೆ' ನೋ.

ನೆತಸೆ (ನಾ). ಒಂದು ಊರಿನ ಹೆಸರು(?): ತಪ್ಪಿದನ್ನು ಬ್ರಾಹ್ಮಣಗ್ಗಂ ಪಶುಗಳ್ಗಂ ತಪ್ಪಿದ ಪಾತಕಮಕ್ಕುಂ ನೆತಸೆ ಕಲ್ನಾಟು (ಎಕ. VIII, ಸೊರಬ. ೪೭೬-೨೩ ; 991). [?]

ನೆತ್ತ$_1$, ಲತ್ತ, ಲೆತ್ತ (ನಾ). ೧. ಪಗಡೆಯಾಟದ ಹಾಸಂಗಿ ; ದಾಳ : ಅರಸ ಕೇೞೀ ವಿಪ್ರನಿಭಾಸುರಸುತೇಜದೊಳೆಸೆವ ನೆತ್ತವನೆರಡ ಕಾಣಿಕೆಗೊಟ್ಟನು (ನಳಚ. ೪-೨೬) ; ವಿರಾಟರಾಯನು . . . ಕೋಪಿಸಿ ಕೊಂಡು . . . ನೆತ್ತದಿಂದ ಆತನ ಬಲಹಣೆಯ ಮೇಲೆ ಬಡಿದು (ಕೃವಾವಿ. ೧೧೬). ೨. ಪಗಡೆಕಾಯಿ : ನಾನು ಆಡುವ ನೆತ್ತದ ಸಾಲೆ ಅತಿಕ್ರಮಿಸಿ ಹೋದುದು. ನೆತ್ತ ಮನೆಯ ಬಿಟ್ಟು ಈ ಮನೆಯಲ್ಲಿಯೇ ನಿಂತು ಇದೆ (ಬತ್ತೀಸ. ೭೯). ೩. ಪಗಡೆಯಾಟ ; ಅಕ್ಷಕ್ರೀಡೆ : ಸೆಜೆಯು ಮೇಱುಂ ನೆತ್ತಮಾಡುವರೊಳ್ (ಎಸಂ. XIII, ೩೩೨-೪೪ ; 929) ; ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾಡುತ್ತಿರೆ ಲಂಬಣಂ ಪಜಾಯೆ ಮುತ್ತಿನ ಕೇಡನೆ ನೋಡಿ ನೋಡಿ ಬಳ್ಕುತ್ತಿರೆ (ಪಂಪಭಾ. ೯-೬೯); ಕನ್ಯಕೆಯರೊಡನೆ ನೆತ್ತದೊಳಂ ವೀಣಾವಾದ್ಯದೊಳಂ ಸ್ವರಸಂದೋಹವಿವಾದದೊಳಂ . . . ಕ್ರೀಡಿಸುತ್ತಮಿರ್ದು (ಕಾದಂಬ. ೯೪); ಚದುರಂಗದ ನೆತ್ತದ ಗೌರವದ ಗೊಟ್ಟುಗುಟಾಯಂ ಮುಟ್ಟಂ ಮನೆಯೊಳ್ ಪದೆದಿರಿಸುಗೆ (ಪುದಪ. ೧೭-೩೦) ; ನೆತ್ತದಲಿ ಭಕ್ತಂಗೆ ಹಿಂದಣ ವಿತ್ತಮುಂ ಸೋಲ್ತು (ಬಸಪು. ೪೪-೬೧) ; ನೀವು ಚತ್ರವಿಸಿದೊಡೆ ನೆತ್ತದೊಳಾವು ಸೋಲಿಸಿ ಕೊಡುವೆವವರನು (ಕುಪ್ಯಾಸ. ೧೨-೩೦). ೪. ಪಗಡೆ ಮುಂತಾದ ಆಟಗಳಲ್ಲಿ ಬೀಳುವ ಗರ : ನೆತ್ತಗಳು ನಳನಿಗೆ ವಿರೋಧವಾಗಿಯೇ ಬೀೞುತ್ತಿದ್ದುದ್ದನ್ನು ನೋಡಿ ದಮಯಂತಿಯು ಹೆದರಿ (ನಚಭಾ. ೧೩೨). **ಲತ್ತ** : ೧. ಇದರಸ್ತಿ ಲತ್ತ ಪಗಡೆಯು ಚರ್ಮ ಪಾಸಂಗಿಯು ಮಾಡಿ (ತುರಂಗ. ೧೨-೪೯). ೨. ಇಂದುಮುಖಿ ಸತ್ಯ ಭಾಮೆಯ ಕೂಡೆ ಲತ್ತವಂ ಚಂದದಿಂದಾಡುತ್ತಿರೆ (ತುರಂಗ. ೨೪-೪೦). ೪. ನೆನೆದುದೆ ಲತ್ತ ಬೀಳಬೇಕೆಂದಿವರ ಬೇಡಿದನು ವರಗಳಂ (ತುರಂಗ. ೧೨-೪೦). **ಲೆತ್ತ** : ೧. ನೀನು ಲೆತ್ತಗಳನ್ನು ಒಗೆದು ಆಟವನ್ನು ಆರಂಭಿಸು (ಮಭಾರ. ೪೯) ; ನಾನು ಲೆತ್ತಗಳನ್ನು ಚೆಲ್ಲುತ್ತೇನೆ (ನಲದ. ೬೫) ; ಲೆತ್ತ ಹಾಳಲಿಕ್ಕೆ ಹೋದರೆ ಬೋಕಿ ಬಿತ್ತು (ಗಾದೆ). ೩. ಲೆತ್ತದೊಳ್ ಪಿರಿದಾಂ ಸೋಲ್ತೆನೊ (ಉದ್ಭಟ. ೧೧-೩೪) ; ಉಭಯರಾಯರು ಸೇರಿ ಮುದದಿ ಲೆತ್ತವನಾಡಿ ಸಭೆಯೊಳು ಧರ್ಮಜ ಸತಿಯ ಸೋಲೆ (ಪುರಂದ.೧೧-೧೬೨-೧) ; ಅಡುವ ಪಗಡೆ ಲೆತ್ತ ಚದುರಂಗಂಗಳಂ ಬಿಸುಟ್ಟು (ಚಬಪು. ೧೯-೨೮) ; ದಾಯಿಗನ ಪುನರಪಿ ಲೆತ್ತದಲಿ ಗೆಲಿದೊಡನೆ ರಾಜ್ಯಂಗೈದನೊಲವಿನಲಿ (ಅಂಬಕಾ. ೪೮ ಸೂಚನೆ).

ನೆತ್ತದ ಚಾರಿ, ನೆತ್ತದ ಸಾರಿ = ನೆತ್ತಸಾರಿ : ಆಗಳೊರ್ವಳ್ ನೆತ್ತದ ಚಾರಿಯಂ ಕೊಂಡು ಬಂದು (ಬಂಹರಿ. ೩-೭೦ ವ); ನೆತ್ತದ ಸಾರಿಯಂತೆ ಮೊಲೆ ಮೂಡಲೊಡಂ ಗುಣವೇೞು ಲಜ್ಜೆ ನಾಡ್ ಪತ್ತುವು ಗಾಳು ಗಣ್ಬರಿದುವಾನೆಯ ಪಾಸಗೆಯಂತೆ (ಅನಂಪು. ೪-೧೫). **ನೆತ್ತದ ಹಲಗೆ, ಲೆತ್ತದ ಹಲಗೆ = ನೆತ್ತವಲಗೆ** : ತರುಣಿಯ ವಿಳಿತ ಕೋಮಳ ನೀಲಕಚಭರವೊಪ್ಪ ಪಸರಿಸುಗು ನಳಿನಮುಖಿಗಂಗಜನ ನೆತ್ತದ ಹಲಗೆಯಿಂದಂ ಬಾಗುವೆತ್ತುದು ಬೆಲುವು ವಿಗೆ ಬಲದೇವಪುತ್ರಿಯ ಬೆನ್ನಿನುನ್ನತಿಗೆ (ಬಸಪು. ೪-೨೯) ; ಹಿಟ್ಟು ಅಕ್ಕಿಯ ಹಿಡಿದು ಲೆತ್ತದ ಹಲಗೆಯ ಹಿಡಿದು ಹೆತ್ತವ್ವ ನಿನ್ನಲ್ಲಿಗೆ ಬರುವೆನು (ಕನ್ನಜಾ. ೩೨೪). **ನೆತ್ತದ ಹಾಸಂಗಿ = ನೆತ್ತಸಾರಿ** : "ದ್ಯೂತ ನೆ[ಪಾಪಾಂ. ಲೆ]ತ್ತದ ಹಾಸಂಗಿ ಪಲಂಕೆ ಶಾರಿ ವರವೈತೀಕಂಗಳಾಳಪರ್ಕಮಕ್ಕುಂ" (ನಾನಾರ್ಥ. ೧೩೫) ; ನೆತ್ತದ ಹಾಸಂಗಿ ಎತ್ತ ಬಿದ್ದರು ದಾಯ (ಸರ್ವಜ್ಞ. ೪೦೭).

ನೆತ್ತದಾಟ = ಪಗಡೆಯ ಆಟ : ನೆತ್ತದಾಟವನುಡುಗಿ ನಿನಗನಿಮಿತ್ತ ಹಾಸ್ಯವದೇಕೆ ಸಂಭವಿಸಿತ್ತು ಸಂಶಯವಾದುದೆನಗೆ ಮುದೀಶ ಜಗದೀಶ (ಬಸಪು. ೪೩-೧೨); ಅರಿನೃಪರ ಪಡಲ್ವಡಿಸುವ ಪರಿಯಕ್ಕುಮೊ ನೆತ್ತದಾಟ ಮಕ್ಕುಮೊ (ವೃಸಮಿ. ೨೯-೧೪೬); ದುರ್ಯೋಧನನು ಬಿಂಕಿಸುತ್ತಿರಲು ಶಕುನಿ ನೆತ್ತದಾಟಕ್ಕೆ ಧರ್ಮರಾಜನನ್ನು ಕರಸಂವ ಸಲಹೆಯನ್ನು ಕೊಡುವನು (ತವಪಿ. ೬೪). **ನೆತ್ತವಾಡು, ಲೆತ್ತವಾಡು = ಪಗಡೆಯಾಟವಾಡು** : ಧರ್ಮರಾಯನನ್ನು ನೆತ್ತವಾಡುವುದಕ್ಕೆ ಕರೆಯಿಸಿದರೆ ಅವನನ್ನು ಸೋಲಿಸಿ ಅವನ ದೇಶಕೋಶಗಳೆಲ್ಲವನ್ನೂ ಗೆದ್ದುಕೊಡುವೆನೆಂದು . . . ಪ್ರೌತ್ಸಾಹಪಡಿಸಿದನು (ಭೀಷ್ಮಚ. ೧೧೩) ; ಉದ್ಭಟನಂದು ಕರಂ ಲೆತ್ತವಾಡುತುಂ ರಂಜಿಸಿದಂ (ಉದ್ಭಟ. ೧೧-೧೧); ಕೊಲ್ಲೆಂಬ ನುಡಿ ಲೆತ್ತವಾಡುವೆಡೆಯೊಳ್ . . . ಅಳಯೂಸೆ ಎಣಸಲ್ಕೆ ಕುಸುಮತರುಗಳೊಳಲ್ಲದಿಲ್ಲವಾ ಜನಪದದೊಳು (ಚಬಪು. ೬-೪೩) ; ವರುಣನು ದೇವರಾಜನ ಮನೆಗೆ ಹೋಗಿ, ಲೆತ್ತವಾಡುವದರಲ್ಲಿ ಮಗ್ನನಾಗುತ್ತಿದ್ದನು (ದೇಪಲ. ೧). **ಲೆತ್ತದ ಪಾಸಿ = ಲೆತ್ತದ ಗರ** : ಇಂದು ಲೆತ್ತದ ಪಾಸಿಯೇ ತಿರುವು ಮುರುವಾಗಿ ಬಿಟ್ಟಿತು ; ಪರಿಣಾಮವನ್ನು ಸಂವರಿಸಿಕೊಳ್ಳುವುದೇ ಸಾಧ್ಯವಿಲ್ಲ (ಶ್ರೀಮಾಶ್ರ. ೨೬೧). [ದೇ.+ತೆಲು. ನೆತ್ತ]

ನೆತ್ತ$_2$ (ನಾ). ಕಣ್ಣು ; ನೇತ್ರ ; ನಯನ : ನೇತ್ರ-ನೆತ್ತ; ನಿದ್ರಾ-ನಿದ್ದೆ (ಕಸುದ. ೨೬೧ ಪ್ರಯೋ). [<ಸಂ. ನೇತ್ರ]

ನೆತ್ತಕ (ನಾ). ನೆತ್ತವಾಡುವವನು : ಕುಳ್ಳಿರ್ದರಂದೋಳಗಂ ದಂಡಾಧಿಪರ್ ಮಾಂಡಳಿಕರ್ . . . ನೆತ್ತಕರ್ ವಾಸಕಾಜರ್ ನಗೆಕಾಜರ್ (ಆನಂಪು. ೨-೨೬). [ನೆತ್ತ$_1$+-ಕ]

ನೆತ್ತಕಾರ 'ನೆತ್ತಗಾಱ' ನೋ.

ನೆತ್ತಕಾಱ 'ನೆತ್ತಗಾಱ' ನೋ.

ನೆತ್ತಗಾರ 'ನೆತ್ತಗಾಱ' ನೋ.

ನೆತ್ತಗಾಱ, ನೆತ್ತಕಾರ, ನೆತ್ತಕಾಱ, ನೆತ್ತಗಾರ (ನಾ). ಲೆತ್ತವಾಡುವವನು : ನೆತ್ತಗಾಱರ ಚದುರಂಗಕಾಱರೊರೆಗಾಱರ ಬಾಜಿಪ ಬೀಡ ಗಾಜಿರಾಗರಮನೆ ಪೆಂಪು ಸೊಂಪನೊಳಕೊಂಡೆಸೆದಿರ್ಪುವು ಸೂಳೆಗೇರಿಗಳ್ (ಕಬ್ಬಕಾ. ೪೨) ; ಸಾರಿಯಂ ಕೆದಱುವ ನೆತ್ತಗಾಱರ ವಿನೋದಮನೀಕ್ಷಿಸುತಿರ್ದಂ (ಚಶಕು. ೪-೪೯). **ನೆತ್ತಕಾರ** : ಅಕ್ಷದ್ಯೂತದ ಸಾಧನೋಪಕರಣಗಳನ್ನು ಆಸ್ಥಾನದ ನೆತ್ತಕಾರರು ಸುವಿಧಾನದಿಂದ ಸಾಗಿಗೊಳಿಸುತಿದ್ದು ಪೆರಸಾರುವರು (ಮುಂತ್ರಿಚ. ೧೩೩-೫). **ನೆತ್ತಕಾಱ** : ಭಂಗವಿಲ್ಲದ ನೆತ್ತಕಾಱನೊಯ್ದುತ್ತ ಹಾಸಂಗಿಯೊಳ್ಸುರಿವ ಕಾಯಂತೆ ಅಂಗವರಿದು ತೆಗೆದಂತೆ ನಾಲ್ದೆಸೆಗೆ ತುರಂಗ ಮ್ಯೆಗೊಟ್ಟು ಹಾಱುಮುದು (ಧರಚ. ೩೦-೩೩). **ನೆತ್ತಗಾರ** : ತಂತಮ್ಮ ಆಟಗಳಲ್ಲಿ ಆಗಳೇ ನಿರತರಾಗಿರುವ ನೆತ್ತಗಾರರೂ ಇತರ ದ್ಯೂತಾಜೀವರೂ ಐಹಿಕವನ್ನೇ ಮರೆತು ಳಲಿದಿರುವರು (ಚಟ್ಟಅ. ೮೨-೯). [ನೆತ್ತ$_1$+-ಕಾಱ]

ನೆತ್ತಗೆ (ನಾ). = ನೆತ್ತಕ (?) : ಅದರು ಸಮುಯದ್ರೋಹರು ರಾಜದ್ರೋಹರು ಬಣಂಜಿಗ ಪಗೆಯರು ನೆತ್ತಗೆಯರು ಕೊಲೆ ಕವತ್ತೆಗೊಡೆಯರು (ಎಕ. II, ೩೩೬-೨೪ ; 1206 ?). [?]

ನೆತ್ತಗೊಡಗೆ 'ನೆತ್ತರುಗೊಡಗೆ' ನೋ.

ನೆತ್ತಪಡಿ 'ನೆತ್ತರ್ಪಡಿ' ನೋ.

ನೆತ್ತರ್, ನೆತ್ತರ, ನೆತ್ತರು (ನಾ). ಮನುಷ್ಯ ಮತ್ತು ಪ್ರಾಣಿಗಳ ನರನಾಡಿಗಳಲ್ಲಿ ಹರಿಯುವ, ತ್ರಾಣವನ್ನು ಕೊಡುವ ಕೆಂಪು ದ್ರವ ; ರಕ್ತ ; ಕೆನ್ನೀರು : "ನೆತ್ತರಾಕ್ಷತಜಮಸ್ರಕ್ ಲೋಹಿತಂ ರುಧಿರವಸ್ರಮೆನೆ ರಕ್ತಮಕ್ಕುಂ" (ಮುಂಗಂರಾ. ೧೧೩-೩); ತನ್ನ ಕಾಲಂ ದರ್ಭಾಂಕುರಂ ನೆತ್ತರ್ವರೆ ಕೊಂಡೊಡೆ (ಪಡ್ಡಾರಾ. ೧೮೪-೧) ;

ಭೋಂಕೆನೊಗೆತರ್ ಮಹೋರಗನೆಯ್ದೆ ಪಲ್ಗಳರ್ದೊಡೆ ಕಡಿವೀಟ್ ನೆತ್ತರೊಜೆದುರ್ಚುಗೆ ಕೊಂಡುದು ತತ್ತಪಸ್ವಿಯಂ (ಅದಿಪು. ೨-೪೦) ; ಪರ್ಬಂದಿಗಳ್ ನೆತ್ತರುಂ ಬಸಿವುತ್ತಿರ್ಪುದು (ಕಾದಂಪೂ. ೧೫೭) ; ಕುರುನಂದನರಂ ಕೊಂದೆಂ ಕುರುಶಾಖಾನುಜನ ನೆತ್ತರಂ ಕುಡಿದೆಂ (ಗದಾಯು. ೧-೬೯); ನೆತ್ತರನೆ ಕಾಜಾ ಕೆಡೆದರ್ ನೆಲದೊಳ್ (ಧರ್ಮಾಮೃ. ೩-೨೦೩) ; ನೆತ್ತರಿಂ ನೆಣದಿನೆಳ್ಗರುಳಿಂದಮೆ ಭೂತಕೋಟಿಯಂ ತಣಪ ನೆಗಟ್ಟಿಯಂ ಪಡೆದ × × × (ಎಕ. VIII, ಸಾಗರ. ೧೦೮-೨೧ ; 1631).

ನೆತ್ತರ : "ನೆತ್ತರದಲ್ಲಿಯುಂ, ನೀರಲ್ಲಿಯುಂ, ಕೀಲಾಲಮೆಂಬುದು" (ಹಲಾಯು.೧೩೮-೪೧); ಹರೆಯದ ಗುಂಗಿನಲ್ಲಿ ಕಾದ ನೆತ್ತರದ ಹರಿದಾಟದಲ್ಲಿ ಮಾನವನು ತನ್ನನ್ನು ತಾನೆ ಮರೆಯುವನು (ಕಸ್ನಜಾ. ೯೧). **ನೆತ್ತರು** : "ಕ್ಷತಜಂ, ಲೋಹಿತಂ . . . ರಕ್ತಂ—ಈ ೬ ನೆತ್ತರು" (ಹಲಾಯು. ೧೦೪-೧೦) ; ಅರಿದ ಜಾರುವನೊಬ್ಬನು ಅರಿದ ತಲೆಯ ಹಿಡಿದುಕೊಂಡು ಅಧ್ಯಾತ್ಮವಿಕಾರದ ನೆತ್ತರ ಕುಡಿದನು ನೋಡಾ (ಅಪಚಂ. ೯-೩೩) ; ನೂಕಿ ಕೊಯ್ದೊರಳುಗಳ ಮುಂಡದ ಮೂಕಿನಲಿ ನೆಗೆದೋಗುವ ನೆತ್ತರು ನಾಳವನು ನಾದಿದುದೆನಲು ಸಮುದ್ರದನು ಪರಬಲವ (ಕುವ್ಯಾದ್ರೋ.೬-೪೪); ದೈತ್ಯಗೆ ಪುಟ್ಟನಕ್ಕಿದ ಮೂಗಿನೊಳ್ ನೆತ್ತರು ಸುರಿಯೆ (ಮೋಹತ. ೪೦-೬೧) ; ಎಲ್ಲರೂ ಜಿಗಜಿಗಳೆ ನನ್ನ ನೆತ್ತರಿಗೆ ! (ಕೋಗಿಪ. ೧೫-೪).

ನೆತ್ತರ ಕರಣೆ = ಉಂಡೆಯಾದ ರಕ್ತ ; ಗಟ್ಟಿಯಾದ ರಕ್ತ ; ರಕ್ತದ ಗರಣೆ : ನೆತ್ತರ ಕರಣೆ ನೀರೊಳು ಬಿದ್ದುದನು ಕಂಡತ್ತರು ದಿಗ್ವನಿತೆಯರು . (ಮೋಹತ. ೧೧೧-೨೯): **ನೆತ್ತರ ಕೊಡಿಗೆ** = ನೆತ್ತರು ಗೊಡಗೆ : ದಳವಾಯಿ ಸೊಣಯಗ್ರಾಡಂಗೆ ಕೊಟ್ಟ ನೆತ್ತರ ಕೊಡಿಗೆ (ಎಕ. X, ಕೋಲಾರ. ೧೬೫-೪ ; 1630). **ನೆತ್ತರ ಗೂಳು** = ರಕ್ತದಲ್ಲಿ ಕಲಸಿದ ಅನ್ನ,—ಆಹಾರ : ನೆತ್ತರಗೂಳನುಂಬವೊಲಖಿಳರಾಜ್ಯದ ಮೇಲೆ ಸೊಗಸುವ ಸಿರಿಯನೊಲ್ಲೆನು(ಕುವ್ಯಾಭೀ.೬-೪೨). **ನೆತ್ತರ ತೃಷೆ** = ರಕ್ತದ ದಾಹ : ಇವರ ನೆತ್ತರ ತೃಷೆಗೆ ನಿರ್ದೋಷಿ ಈತನನ್ನೀಯುವುದೆ ನಿಶ್ಚಯಂ (ಗೂಳೂಹಾ. ೪-೨೧೨). **ನೆತ್ತರು ಮಾಡು** = ರಕ್ತವನ್ನು ಜೆಲ್ಲು ; ರಕ್ತಸಿಕ್ತಗೊಳಿಸು : ಮೂಡುವನು ರವಿ ಮೂಡುವನು ಕತ್ತಲೊಡನೆ ಜಗಳಾಡುವನು ; ಮೂಡಣರಂಗಸ್ಥಳದಲಿ ನೆತ್ತರು ಮಾಡುವನು ಕುಣಿದಾಡುವಮ (ಕವಪು. ೫-೧),

[ದೇ.॥ ತಮಿ. ನೆಯ್ತ್ತೂರ್ ; ತುಳು. ನೆತ್ತೆರ್ ; ಕೊಡ. ನೆತ್ತೆರು ; ತೆಲು. ನೆತ್ತುರು, ನೆತ್ರು ; ಕೋಲಾ. ನೆಸುರ್ ; ನಾಯ್ಕಿ. ನೆತ್ತುರ್ ; ಪರ್ಜಿ. ನೆತೂರ್ ; ನೆತ್ರೊ ; ಗದಬ. ನೆತ್ರೂರ್ ; ಗೊಂಡಿ. ನತ್ತುರ್, ನೆತುರ್, ನೆತ್ತುರ್ ; ಕುವಿ. ನೆತೊರಿ ; ಕೋತ. ನೆತ್ರ್]

ನೆತ್ತರ 'ನೆತ್ತರ್' ನೋ.

ನೆತ್ತರು 'ನೆತ್ತರ್' ನೋ.

ನೆತ್ತರುಕಾರು 'ನೆತ್ತರುಕಾಜು' ನೋ.

ನೆತ್ತರುಕಾಜು, ನೆತ್ತರುಕಾರು (ಕ್ರಿ).ರಕ್ತವನು ಕಕ್ಕು,—ಕಾರು : ಕೆರಳಿ ಕಪಿ ಮೇಲೆಜಗೆ ನೆತ್ತರು ಕಾಜಿ ಖಳ ಬಿದ್ದ (ಕಾತಿರಾ. ೨೬-೨೯).

ನೆತ್ತರುಕಾರು : ಬೀಳಲಿ ಮೈ ನೆತ್ತರು ಕಾರಿ (ಕೋಗಿಪ. ೩೩-೧).

[ನೆತ್ತರು(<ನೆತ್ತರ್)+ಕಾಜು,(<ಕಾಜ್ದ್)]

ನೆತ್ತರುಕುರು (ನಾ). ಊದಿ ರಕ್ತ ತುಂಬಿಕೊಂಡಿರುವ ಒಂದು ಬಗೆಯ ಕುರು ; ರಕ್ತಕುರು : ನೆತ್ತರುಕುರುವಿನ ನೋವು ಸಲ್ಲ, ಮಂತ್ರ ಮಾಡುವವರ ಸೋಗು ಸಲ್ಲ (ಗಾಪ).

[ನೆತ್ತರು(<ನೆತ್ತರ್)+ಕುರು,]

ನೆತ್ತರುಕೊಡಗೆ 'ನೆತ್ತರುಗೊಡಗೆ' ನೋ.

ನೆತ್ತರುಕೊಡಿಗೆ 'ನೆತ್ತರುಗೊಡಗೆ' ನೋ.

ನೆತ್ತರುಕೊಡೆಗೆ 'ನೆತ್ತರುಗೊಡಗೆ' ನೋ.

ನೆತ್ತರುಗೆಯರ್ 'ನೆತ್ತರುಗೆಯರ್' ನೋ.

ನೆತ್ತರುಗುಡಿಹಿ, ನೆತ್ತರುಗುಡುಹಿ (ನಾ). ರಕ್ತವನ್ನು ಕುಡಿಯುವವನು ; ನೆತ್ತರನ್ನು ಹೀರುವವನು ; ರಾಕ್ಷಸ : ಅಡಿಗಡಿಗೆ ಮಾನಸರ ಸೊಗಡವಗಡಿಸುತಿವೆ ಬರಹೇಳು ನೆತ್ತರುಗುಡಿ[ಪಾಶಾಂ.೮೮]ಹಿಗೈನೆಯರೆಲ್ಲಿ ಶಾಕಿನಡಾಕಿನೀನಿಕರ (ಕುವ್ಯಾಅ. ೧-೨೬). **ನೆತ್ತರುಗುಡುಹಿ** : ನೋಲಿನ ಪ್ರಯೋಗದ ಪಾಶಾಂತರವನ್ನು ನೋಡಿ.

[ನೆತ್ತರು(<ನೆತ್ತರ್)+ಕುಡಿಹಿ]

ನೆತ್ತರುಗುಡುಹಿ 'ನೆತ್ತರುಗುಡಿಹಿ' ನೋ.

ನೆತ್ತರುಗುಡುಹಿತಪ (ನಾ). ರಕ್ತವನ್ನು ಕುಡಿಯುವ ಸ್ವಭಾವ ; ಕ್ರೌರ್ಯ : ಫಡ ವಿಕಾರವೆ ನೋಡು ನೆತ್ತರುಗುಡುಹಿತನವೇ ನಮ್ಮೊಡನೆ . . . ಕುಡಿದ ರಕುತದ ಜಿಗುಳಿ ನೀ ನಿನ್ನೊಡಲ ನಿಗುಚುವೆ (ಕುವ್ಯಾಕ. ೨೦-೪). [ನೆತ್ತರುಗುಡುಹಿ(<ನೆತ್ತರುಗುಡಿಹಿ)+-ತನ]

ನೆತ್ತರುಗೆಱ 'ನೆತ್ತರುಗೆಯರ್' ನೋ.

ನೆತ್ತರುಗೆಯರ್, ನೆತ್ತರುಗಯರ್, ನೆತ್ತರುಗೆಱ (ನಾ).=ನೆತ್ತರುಗೊಡಗೆ : ದಾಮನಾಯಕನ ವೀರಗಲ್ಲ××ನೆತ್ತರುಗೆಯ ಮಂಗಳ ಮಹಾಶ್ರೀ (ಸೌಇಇ. XX, ೨೨೨-೯ ; 1287). **ನೆತ್ತರುಗಯರ್** : ನೆತ್ತರುಗಯ್ಕ ಬಣಜಿಗಗೊಟ್ಟದಕ್ಕೆ ಸನ್ನಿಕಂಬದ ಮುಂದೆ ಪಸುಂಬಿಯಂ ನಿಕ್ಕಿದಡಂ (ಎಕ. XI, ದಾವಣ. ೧೦೫-೪೫ ; 1218). **ನೆತ್ತರುಗೆಱ** : ತೆಂಕಣ ಕೋಡಿಯ ಹಿಂದೆ ಗಜ್ಜನ ಗೆಳೆಯಲು ಕಂಬ ೧೫೬ನು ನೆತ್ತರುಗೆಱಯಾಗಿ ಕಲ್ಲ ನಟ್ಟು ಕೊಟ್ಟರು (ಎಕ. VII, ಚನ್ನಗಿ. ೫೫-೮; 1279).

[ನೆತ್ತರು(<ನೆತ್ತರ್)+ಕೆಯರ್,]

ನೆತ್ತರುಗೊಡಗಿ 'ನೆತ್ತರುಗೊಡಗೆ' ನೋ.

ನೆತ್ತರುಗೊಡಗೆ, ನೆಂತರುಗೊಡಗಿ, ನೆತರುಕೊಡಗೆ, ನೆತ್ತಗೊಡಗೆ, ನೆತ್ತರುಕೊಡಗೆ, ನೆತ್ರುಕೊಡಿಗೆ, ನೆತ್ತರುಕೊಡೆಗೆ, ನೆತ್ತರುಗೊಡಗಿ (ನಾ). ಯುದ್ಧದಲ್ಲಿ ಕಾದಿ ಮಡಿದವನ ಕುಟುಂಬಕ್ಕೆ ದಾನವಾಗಿ ಕೊಡುವ ಭೂಮಿ ; ರಕ್ತಕೊಡಿಗೆ : ಹಿರಿಯ ಹೊಲದಲಿ ಸನುದಿಕವಾಗಿ ನೆತ್ತರುಗೊಡಗೆ ಬಿಟ್ಟ ಮಣ್ಣು ೫೦೦ (ಎಕ. III(R), ನಂಜನ. ೨೬೫-೧೮ ; 1180) ; ಮಾಳಬೋವನ ತಮ್ಮ ಮಲ್ಲಯನಾಯಕ ಬಿದ್ದಲಿ ನೆತ್ತರುಗೊಡಗೆ (ಎಕ. VII, ಹೊನ್ನಾಳಿ. ೧೧೧-೫ ; 1185). **ನೆಂತರುಗೊಡಗಿ** : ಮುಂಮಡಿ ಬಕಪಗ್ರಾಡರಯ್ಯನವರು ಕೋಗಗ್ರಾಡಗೆ ಕೊಟ್ಟ ನೆನ್ನರುಗೊಡಗಿ ಮಾನ್ಯದ ಹೊಲ (ಸ್ಯೆಆರಿ. ೧೯೩೯, ೯೯-೪ ; 1533 ?). **ನೆತರುಕೊಡಗೆ** : ಬಯಿಚಪಗಳುಡನು ತಿಂಮಣಿಗೆ ಕೊಟ್ಟ ನೆತರುಕೊಡಗೆ (ಎಕ. X(S), ಕೋಲಾರ. ೬೦೮-೪; ಸು. 16ನೆಯ ಶತ). **ನೆತ್ತಗೊಡಗೆ** : ಅಶೇಷಮಹಾಜನಂ ಮೆಚ್ಚ ನೆತ್ತಗೊಡಗೆಯೆಂದಾತನ ಮಗಂ .ಮಾಕೆಯನಾಯಕಜ್ಗೆ ಹಾದ ಕೆಯ್ಯುಮಂ ಹತ್ತು ಕೆಯ್ಯ ಮನೆಯುಮಂ ಸರ್ವಾಬಾಧಾಪರಿಹಾರವಾಗಲಾಚಂದ್ರಾರ್ಕ್ಕ ತಾರಂಬರಂ ಸಲುವಂತಾಗಿ ಕೊಟ್ಟರು (ಎಕ. VIII, ಸೊರಬ. ೨೫೧-೧೬ ; 1177). **ನೆತ್ತರುಕೊಡಗೆ** : ಅರೆವತ್ತಲು ಗದ್ದೆಯಂ ನೆತ್ತರುಕೊಡಗೆಯಾಗಿ ಬಿಟ್ಟಂ (ಸ್ಯೆಆರಿ. ೧೯೩೦, ೩೬-೩೧ ; 1194) ; ಆ ಊರೆ ನಾವಿದ ಮುಂಚೆ ಕಾದಿ ಬಿದ್ದಲ್ಲಿ ಒಳಳುಪ್ಪೆ ಹಳ್ಳಿ ನೆತ್ತರುಕೊಡಗೆ ಕಂಬ ೧೧೦ (ಎಕ. IV (R), ಚಾಮರಾ. ೨೫೨-೧೦ ; 1380). **ನೆತ್ತರುಕೊಡಿಗೆ** : ಈ ಕಾನನು ನೆತ್ತರುಕೊಡಿಗೆಯಾಗಿ ಕೊಟ್ಟನು (ಸ್ಯೆಆರಿ. ೧೯೩೩, ೪೮-೪ ; ?). **ನೆತ್ತರುಕೊಡೆಗೆ** : ಕೋಲ್ಮುಮ್ಮಸೆಯ ಬಯಲೊಳಗೆ ನೆತ್ತರುಕೊಡೆಗೆಯಯಾತನ ಪೀಳಿಗೆಗೆ ಕೊಟ್ಟ (ಎಕ. VIII, ಸೊರಬ. ೯೪-೧೦ ; 1196). **ನೆತ್ತರುಗೊಡಗಿ** : ಕರಡಿಕೆಱೆಯ ಪೆರುಮಗಳುಡನ ಮಗ ನಾಗೆಯ

ನಾಯ್ಮಂಗೆ ಕೊಟ್ಟ ನೆತ್ತರುಗೊಡಗಿಯು ಕ್ರಮವೆಂತೆಂದಡೆ (ಎಕ. XI, ಹಿರಿಯೂ. ೧೬-೬ ; 1205).

[ನೆತ್ತರು(<ನೆತ್ತರ್)+ಕೊಡಗೆ(<ಕೊಡಂಗೆಯ್$_2$)]

ನೆತ್ತರುಣಿಗೆ (ನಾ). =ನೆತ್ತರುಗುಡಿಹು : ಕಾಮಗ ವಿಮಾನಂ . . . ಸಮರಶೂರರೆನಿಪ ನೆತ್ತರುಣಿಗರ ವೀರಭಟರನದು ಪಲಬರಂ ಪೊತ್ತು ದಿಡ ದೆತ್ತೆತ್ತಲುಂ ಗಗನಮಾರ್ಗದೊಳೆನಿತ್ತು ದೂರಕ್ಕಾದೊಡಂ ಜವದೊಳ್ಕೆದು ವುದು (ಶೇಷರಾ. ೧೪-೨೦). [ನೆತ್ತರ್+-ಉಣಿಗ]

ನೆತ್ತರುನಂಜು (ನಾ). "(ಕೇವು ಕಟ್ಟ ರಕ್ತಕ್ಕೆ ಬೆರೆಯುವುದ ರಿಂದಾಗುವ) ನೆತ್ತರು ನಂಜು" (Pyaemia. ಇಂಕಿನಿ).

[ನೆತ್ತರು(<ನೆತ್ತರ್)+ನಂಜು$_2$]

ನೆತ್ತರುಮಾನ್ಯ (ನಾ). = ನೆತ್ತರುಗೊಡಗೆ : (ಕಿ).

[ನೆತ್ತರು(<ನೆತ್ತರ್)+ಮಾನ್ಯ]

ನೆತ್ತರುವಜಱ (ನಾ). ಒಂದು ಬಗೆಯ ತೆರಿಗೆ (?) : ನೆತ್ತರುವಜಱಯ ಪೊಲವದದೊನ್ತಲವರನ್ನಿದ್ದೊನಟುದೊನ್ವಂಜಮಹಾಪಾತಕನಕ್ಕುಂ (ಎಕ. III (R), ಹೆಗ್ಗಡ. ೧೧೩-೮ ; ಸು. 9ನೆಯ ಶತ).

[ನೆತ್ತರು(<ನೆತ್ತರ್)+ವಱ$_3$(<ವರಿ$_1$)]

ನೆತ್ತರೂರು (ಕ್ರಿ). ರಕ್ತ ಸುರಿ,—ಜಿನುಗು : ಅಹಹ ವಿಶ್ವಾಸ ಘಾತವೊ ! ಕಣ್ಣಿನಲಿ ನೆತ್ತರೂರದೇ ನರ್ಮಯವೊ ! ಕುರಿಗೆ ತೋಳನ ಮುತ್ತೋ ! ಅಹಹ ಕೇದಗೆ ನಗೆಯೊ ! (ಹಬ್ಬರ. ೩೨-೧೩೮).

[ನೆತ್ತರ್+ಊರು$_2$(<ಊಱು$_2$)]

ನೆತ್ತರೊಗೊಡೆ (ನಾ). =ನೆತ್ತರುಗೊಡಗೆ : [ಗೊ]ಜ್ಜಕ್ಕೆ ಕಪ್ಪಡಮಾ [ನ]ಲ್ಲಕ[ಜ್ಜ]××ನಮಸ್ಯ ನೆತ್ತರೊಗೊಡೆ[ಬಾ]ಟ ಮಱುವಕ್ಕ (ಸೌಇಇ. XI-i, ೧೦-೯ ; 864). [<ನೆತ್ತರ್+ಕೊಡೆ$_3$]

ನೆತ್ತರೊಡೆ (ಕ್ರಿ). ರಕ್ತ ಚಿಮ್ಮು : ನೆತ್ತರೊಡೆದುದು ಹುಲಿಯ ಕೂರುಗುರ್ಗೀರಿದುವು (ಕಾಲೂರ. ೯೬-೧೯೦).

[ನೆತ್ತರು(<ನೆತ್ತರ್)+ಒಡೆ$_1$]

ನೆತ್ತರೊಸರು (ಕ್ರಿ). ರಕ್ತ ಸೋರು : ನೋಡಿಲ್ಲಿ ನೆತ್ತರೊಸರುವ ಗಾಯ (ಚಂದ್ರಸ. ೨೯-೧೬).

[ನೆತ್ತರು (<ನೆತ್ತರ್)+ಒಸರು$_1$(<ಒಸರ್$_1$)]

ನೆತ್ತರ್ಗಾಯ (ನಾ). ರಕ್ತ ಸುರಿಯುವ ಗಾಯ ; ನೆತ್ತರನ್ನು ಹರಿಸುವ ಪೆಟ್ಟು : ನಮ್ಮ ಅಸಮಾಧಾನ ಕೋಪ ನಿರಾಶೆಗಳ ತೀಕ್ಷ್ಣ ಸಂಕಟದಿಂದ ಏರ್ಪಟ್ಟ ಹೃದಯಮಣ್ಡಲದ ನೆತ್ತರ್ಗಾಯಗಳನ್ನು ಮುಳುಕಿಸಿ ಗುಣಮಾಗಿಸಿಕೊಂಡು—ನರಕಕ್ಕೆ ದುಢುಮ್ಮನೆ ಧುಮ್ಕಿಕ್ಕಿ ಬಿಡೋಣ (ಬೆಟ್ಟಅ. ೯೭-೧೮). [ನೆತ್ತರ್+ಗಾಯ]

ನೆತ್ತರ್ಗೆಂಪು (ನಾ). ರಕ್ತದಂತಹ ಕೆಂಪು ಬಣ್ಣ ; ರಕ್ತವರ್ಣ : ದಿಗಂತದಲಿ ಚೈತ್ರರವಿ ಮುಗಿಲ ನೆತ್ತರ್ಗೆಂಪಿನಲಿ ಮುಳುಗುವೋಲಂತೆ (ಶ್ರೀರಾಮಾ. ೧೪-೩೯೯) ; ಕಾಳೆಗದ ದಿನದ ಸಂಜೆಗೀ ನೆತ್ತರ್ಗೆಂಪು ಸಹಜ ಮಲ್ತೆ ? (ಚಂದ್ರಸ. ೪೮-೧೨). [ನೆತ್ತರ್+ಕೆಂಪು$_1$]

ನೆತ್ತರ್ಪಟ್ಟೆ (ನಾ). =ನೆತ್ತರುಗೊಡಗೆ : ಪಾರ್ವರೊದೊಳ್ ಸತ್ತಾನ್ ಪೆರಾಣ್ಮೋವನ್ ಕಣ್ದುಳದಾವೆದೆ ಕಟನಿ ನೆತ್ತರ್ಪಟ್ಟೆ (ಎಕ. X (S), ಶ್ರೀನಿವಾ. ೧೧೬-೬ ; ಸು. 700). [ನೆತ್ತರ್+ಪಟ್ಟೆ$_3$]

ನೆತ್ತರ್ಪಡಿ, ನೆತ್ತಪಡಿ (ನಾ). =ನೆತ್ತರುಗೊಡಗೆ : ಅಗವೆಸಲ್ಪಟ್ಟದು ನೆತ್ತರ್ಪಡಿ (ಎಕ. X, ಶ್ರೀನಿವಾ. ೧೬-೬ ; ?). **ನೆತ್ತಪಡಿ** : ಮುಂದು ವೂರಾ ತೊಱುಕೊಳ್ವಲ್ಲಿ ವಿಟ್ಟೋರ್ ಪೆರಾಣ್ಮೋವರ್ ಅವಂಗೆ ಪದಿ ತೂಪು ಕಟನಿ ನೆತ್ತಪಡಿ (ಎಕ. X, ಶ್ರೀನಿವಾ. ೨೦-೮ ; ಸು. 750).

[ನೆತ್ತರ್+ಪಡಿ$_1$]

ನೆತ್ತವಲಗೆ (ನಾ). ಪಗಡೆ ಆಡಲು ಉಪಯೋಗಿಸುವ ಹಲಗೆ,—ಹಾಸು : ಅಕೆಯ ಪರಿಚಾರಿಕೆಯರ್ ನೆತ್ತವಲಗೆಯಂ ತಂದು ಮುಂದಿಟ್ಟು (ನೇಮಿಪು. ೪-೫೨ ವ) ; ಪಾಸಂಗಿಗಳನಾ ಬಿಸಜಲೋಚನೆ ನೆತ್ತವಲಗೆಯ ಮೇಲೆಯಂತಿರಿಸಿ (ಬಸಪು. ೪೩-೧೧) ; ತೊತ್ತೆ ಬಾ . . . ನೆತ್ತವಲಗೆಯ ವೈಸಿಕದ ಮದ್ದುಗಳ ಭರಣಿಗಳ ಹೊತ್ತು ಕೊಳ್ಳೇಳು. . .ಎಂಬೊತ್ತುವಲ್ಲಿನ ಸಬುದವೆಸೆದುದು ಸೂಳೆಗೇರಿಯಲಿ (ತೊರರಾ. ೫-೮-೭೭) ; ಮಡದಿಯ ಮಮತೆಯಾಳಿಯರು ಕಡುವೇಗದಿಂ ನೆತ್ತವಲಗೆಯನೀರ್ವರ ನಡುವೆ ತಂದು ಮಡಗಿದರು (ನೇಮಿಸಂ. ೧೦-೭೩) ; ಅಯ್ಯೆಗೊಂಡ ಶಾರಿಕೆಗಳನ್ನೆತ್ತಿ ನೆತ್ತವಲಗೆಯ ಮೇಗಿರಿಸಿ (ಮಂತ್ರಶ. ೧೩೩-೧೯).

[ನೆತ್ತ$_1$+ಪಲಗೆ./ತಮಿ. ನೆತ್ತಪ್ಪಲಕೈ]

ನೆತ್ತಸಾರಿ (ನಾ). ನೆತ್ತದಾಟದಲ್ಲಿ ಉಪಯೋಗಿಸುವ ಕಾಯಿ ; ಪಗಡೆಯಾಟದ ಕಾಯಿ ; ಲೆತ್ತದ ಕಾಯಿ : ಹಲವು ಮಾತಿನಲೇನು ಭೂಪತಿ ಕೆಲಕೆ ಸಿಲುಕಿದನವದಿರೊಡ್ಡಿದ ಬಲೆಗೆ ಬಂದನು ನೆತ್ತಸಾರಿಯ ಗುಜ್ಜಯ ಗದ್ದುಗೆಗೆ (ಕುಮಾ್ಯಸ. ೧೩-೪೫). [ನೆತ್ತ$_1$+ಸಾರಿ$_4$]

ನೆತ್ತಿ (ನಾ). ೧. ತಲೆಯ ಮಧ್ಯಭಾಗ ; ನಡುದಲೆ : ಕೀಱು ನೆತ್ತಿಯೊಳ್ ಬಾಳಂ ನಿರ್ನೆರಮೂಱು ಚಲದಿನೆಱಗಿಸಲಿರೆ ಭರತಂಗೆಱಗುವೆಱಕ ಮಂಜಮೆಯಲ್ತೇ (ಆದಿಪು. ೧೪-೭೫) ; ನೆತ್ತಿಯೊಡೆದು ಸುರಿವ ಬಿಸು ನೆತ್ತರ್ಪ್ರಧಾರೆಯುಮಂ ಕಂಡದಿಂಡೆಯುಮಂ ಕಂಡು (ಪಂಚತಂ. ೬೨-೧೪); ನೆತ್ತಿಯಲ್ಲಿ ಅಲಗ ತಿರುಹುವಂತಪ್ಪ ವೇದನೆಯುಹುದೆನಗೆ (ಬಸವ. ೩೦೩) ; ಮುತ್ತಿನ ತೋರಣಂ ಗಜದ ನೆತ್ತಿಯ ಮುತ್ತುಗಳೆಲ್ಲ ಪಲ್ಗಳೊಳ್ ಪತ್ತಿದ ಪೋಲ್ವೆಯಂ ಪಡವ ಗೋಪುರ ಪಂಚಕಮಾಸ್ಯಮಾಗೆ ಮೈವೆತ್ತಿರೆ(ಅರ್ಧನೇ. ೧-೬೭) ; ಈ ಶಿಶುವಂ ನೆಲದ ಮೇಲೆ ಪಟ್ಟರಸಲ್ ನಿಮ್ಮಾರ್ವರ್ಗಂ ಪಚ್ಚ ಕೊಡುವೆನೆಂದುಂ ನಂಜನೆಂಜಲಿಪ ಸುರಗಿಯಂ ಕಿತ್ತು ಕೂಸಿನ ನೆತ್ತಿಯ ಮೇಲಡ್ಡವಿಡುವುದುಂ (ಪುಣ್ಯಾಸ್ರ. ೩-೩೭ ವ) ; ಇದು ಎನ್ನ ಮಸ್ತಕದ ನೆತ್ತಿಯಾದೊಡೆ ಕರ್ಕಶಂ ಮಾಡುತ್ತಿಹುದೆ ಜಂಗಮದ ಕೈಗೆ (ಬಸಪು. ೩೮-೩೫) ; ನಿಲುಕಿ ನೆತ್ತಿಯನೊಡೆದು ನಿಡುಪಚ್ಚಳಕೆ ಹಾಯ್ದುವು ಬಾಣ (ಕುಮಾ್ಯದ್ರೋ. ೩-೭೪) ; ನೆತ್ತಿಯ ಕೊಱೆದು ನಾಲಿಗೆಯ ಹಱುವಾಗ ಚಿತ್ರಜನಯ್ಯನ ನೆನೆಗೊಡದಲೆ ಮನ (ಪುರಂದ. ೧-೧೪೨-೩) ; ಗಾಣಗಿತ್ತಿ ಅಯ್ಯೋ ಅಂದರೆ ನೆತ್ತಿ ತಣ್ಣಗಾದೀತೇ ? (ಗಾದೆ). ೨. ತಲೆ; ಮಸ್ತಕ: "ಉತ್ತಮಾಂಗಂ ಶಿರಂ ಕಂ ಮೌಳಿ ಮಸ್ತಕಂ ನೆತ್ತಿ" (ಮಂಗರಾ.೯೩-೧); ಗಂಡರ ನೆತ್ತಿಯೊಳೊತ್ತಿ ಬಾಳನಿನ್ನೂಱುಗುಮೆಂದೊಡೇಂ ಸಿರಿದೊ ತೇಜದ ಬಳ್ಳುರಿ ಪಾಂಡುರಾಜನಾ (ಸಂಪಭಾ. ೧-೧೦೯) ; ನಿನಗಾಯುಬ್ಬೆಯೊಡೆ ಯಳೆಂಬುದಂ ಬೇಟ್ಟುದುಮದಂ ಕೇಳ್ದು ತೊಟ್ಟನೆ ನೆತ್ತಿಯಂ ಸಿಡಲ್ವೊಡೆ ದಂತಾಗೆ (ಕಾದಂಉ. ೬೪೧) ; ಎತ್ತಿ ಜಿನಶಿಶುವನಾಗಳ್ ನೆತ್ತಿಯ ಮೇಲಿಟ್ಟು (ಅಜಿಪು. ೪-೧೪) ; ಮಿಱುಕ ಮದಾಜ್ಞೆಯಂ ಗಿರಿಯನೇಱುವ ನಿನ್ನಯ ನೆತ್ತಿಗೀಗಳಿಂತೇಱುಸಿ ಜೀವಮಂ ಜವನ ಲೆಕ್ಕದೊಳೇಱುಸಿ ಮತ್ತೆ ನಿನ್ನನಾನೇಱುಬೆನೆನ್ನ ತೋಳ್ಗೆ ಬಱುಯಂ ನೆಱ್ ಗೆಲ್ಲಮಂ (ಚಂದ್ರಪು. ೫-೭೪) ; ಕಣ್ಣೊಂದಱೊಳಿಕ್ಕಿದ ಬೆಳ್ಳವಡೆಗೆ ಕಣ್ಣಂ ಮೆಳ್ಳಿಸಿ ನೆತ್ತಿಯ ಚೆಂಡಿಕೆ (ಭೃಂಗೀರ. ಹ. ೪೭೨-೨೨). ೩. ಹಣೆ ; ನೊಸಲು ; ಲಲಾಟ : ಸುಭದ್ರೆಯಪ್ಪ ವ್ಯಂತರದೇವತೆ . . . ಸರ್ದಿನ ರೂಪಂ ಕೈಕೊಂಡು ಬಂದು ನೆತ್ತಿಯ ಮೇಗಿರ್ದು ಕಣ್ಗಳಂ ತೋಡಿ ತಿನೆ (ಪಡ್ಡಾಂರಾ. ೧೬೮-೫) ; ಈಗಳೀ ತಪಕ್ಕಮ್ಮ ಮನಂದರಲ್ ನಿಮಗೆ ಸಲ್ಲ ದೊಡಂಬಡಿಮೆಂದು ಕಾಲ್ಗಳಂ ತಮ್ಮಯ ನೆತ್ತಿಯೊಳ್ ನಿಱುಸಿ ಮಾರ್ಕೊಳೆ (ಅದಿಪು. ೪-೬೮) ; ವನರುಹವಿಷ್ಟರಂ ರುಚಿರರೇಚಕಪೂರಕಕುಂಭಕ ಕ್ರಿಯಾಮನಸಿರೆ ನೆತ್ತಿಯೊಳ್ದರನಿಮಿಲಿತದೃಷ್ಟಿನಿಷ್ಠಮಾಗೆ (ಗದಾಯು. ೬-೧೫) ; ತಿಗುಳಗೆ ತುತ್ತಿಗೆ ತತ್ವಾರವಾದರೂ ನೆತ್ತಿ ತುಂಬಾ ನಾಮಕ್ಕೆ

ಕಡಿನೆ ಇಲ್ಲ (ಗಾಪ). ೪. ಮೇಲುಭಾಗ; ಮೇಲ್ಭಾಗ: ನೆತ್ತಿಯೊಳ್ ಪಾಜುವ ಗಿಳಿಯಿಂಡು ಪಜ್ಜೆಯ ಸತ್ತಿಗೆಯಂತೆ ಮಂಡಲಿಸೆ (ನೋಹಪ. ೨-೪೫); ಪಗಲ್ ನೆತ್ತಿಯೊಳಿರ್ದುದಿನ್ನುಂ (ತ್ರಿಲೋಪಾ. ೬೪೮-೧೫೬); ಗ್ಯಾಸ್ ಛೈರಿನ ನೆತ್ತಿಗೆ, ಮರದ ಹಲಗೆಯ ಮೇಲಿದ್ದ ಸೌಂದರ್ಯವರ್ಧಕ ಸಾಮಗ್ರಿಗಳ ಸಾಲು (ಹೊಸಕ್ತಿ. ೨೭೦). ೫. ತುದಿ; ಶಿಖರ: ನೆತ್ತಿಯಗ್ರದ ತೋರಗುಂಡುರುಳುತ್ತಲಿರ್ದವು ಜಲಧಿಯಡಿಮಳಲೆತ್ತುತಿರ್ದುದು ಗುಮ್ಮಿಣಿದು ಗುಡಿಯಿಜ್ಜುದು ಗುಳ್ಕೆಗಳು (ತೊರಠಾ. ೪-೧೩-೨೪); ನೆಗೆಳುದುರೆವೋಲ್ ಮಲೆಯ ನೆತ್ತಿಮೇಲ್ ಬಳೆದಳ್ (ಅಂತಿಗೂ. ೪೪-೧೦೯); ಸಾಲೆಯ ಗುಡ್ಡದ ನೆತ್ತಿಯಲ್ಲಿ . . . ಆ ಕಲ್ಲುಬಂಡೆಯ ಮರೆಗೆ ಕುಳಿತು (ಪೂರುದಾ. ೧೫೬).

ನೆತ್ತಿಕಣ್ಣಾಗು = ಸೊಕ್ಕೇಗೇಳು; ಗರ್ವ ಬರು: ಸತ್ಕವಿ ಬಿತ್ತು ಹುರಿದುದು ಪಟ್ಟಗಟ್ಟಿದುದಾ ಕೃತಿಕ್ಕೆ ನೆತ್ತಿಕಣ್ಣಾಯ್ತು ಧಮತೆಗೆ(ಕುವ್ಯಾಅ. ೨೧-೬೯). ನೆತ್ತಿಗೇಱು, ನೆತ್ತಿಗೇರು = ೧. ಮೇಲಕ್ಕೆ ಏಕ್ಕಿಕೊಳ್ಳು; – ನೆಡು : ಕವಿಗಳಿಳ(ಬ)ಲ್ಲಂ ತೂಜುವೊಡೆ ಮೆಯ್ಯಾಬಿಗಿದಪ್ಪೊಡೆ ದಿಟ್ಟ ನೆತ್ತಿಗೇಱುವೊಡೆ . . . ಎಚ್ಚುಗೆ ಪಟ್ಟಸೂ [ತ್ರಭಸ್ಮ]ವನೆರೆದು (ಲೋಕೋಪ. ೯-೨೦೯). ೨. ನೆತ್ತಿಯನ್ನು ಶಿವಿದು ಹೊರಬರು : ಶಿವನ ನಿಲಯದೊಳಗೆ ಪೂತ್ರ ಮಲವನೆಸಪ ಪಾಪಗಳ್ಲಿ . . . ಕೂರ್ಪುವೆತ್ತ ಧಾರೆತೋರ ಹಾರೆಗಾಸಿ ಗುದದೊಳಿಟ್ಟು ತನುಗಳೆಲುಗಳೊಡೆದು ನೆತ್ತಿಗೇಱಿ ಮೂಡೆ ಕುಟ್ಟಿ ಹೆಟ್ಟಿ ಮರ್ಮದಲ್ಲಿ ಲೋಹಜಾದಿ ರಸವನೆಱೆದು ಸುಡುವರೆಯ್ದೆ (ಸಾನಂಜ. ೬-೧೪೪ ರಗಳೆ). ೩. ತುತ್ತು, ಗುಟುಕು ಮುಂತಾದುವು ನೆತ್ತಿಗೆ ಹತ್ತು : ತೊರೆದ ನುಣ್ಣೊಲೆಯನೀಂಟುತೆ ಪೆಸರ್ಗಾಯದ ಬೆರಲೊಳು ಮೊಲೆದೊಟ್ಟೆ ಪಿಡಿದು ಮರುಳ್ದುಡೆ ನೆತ್ತಿಗೇಱಲಿಕುಸಿರೊದುತೆ ತರಳಾಕ್ಷಿ ಬೆಚ್ಚುವಳು (ನೋಹಪ. ೧೬-೬೬). ೪. ಹೆಚ್ಚಾಗು; ಅಧಿಕವಾಗು; ವಿಪರೀತವಾಗು : ಇವನ ಗ್ರಹಂ ಸೋಂಕಿತೋ ಭೂತಚೇಷ್ಟೆಯೋ ಯಿವನ ಕೈವವೆ ನೆತ್ತಿಗೇಱಿತೆನೆ ತಿಳಿವವರ ಚರಣಾಂಬುಜಕ್ಕೆ ಶರಣು (ಲಕ್ಷಂ. ೩೩-೧೧); ಇದುವೆ ತಾನ್ ಬಂದವನ್‌ಗಳ್ ನೆತ್ತಿಗೇಱುವೊನ್ (ಅಂತಿಗೂ. ೭-೧೧೯); ನೆತ್ತಿಗೇರಿದ ಮದ ಇಳಿಸುತ್ತೇನೆ (ಪೂರುದಾ.೧೪೮); ನನಗಂತೂ ಪಿತ್ತ ನೆತ್ತಿಗೇರಿ ಬಿಡುತ್ತದೆ (ಸುವಸಂ. ೧೪). ನೆತ್ತಿ ಬೀಳು = (ಮಕ್ಕಳ) ನೆತ್ತಿಯ ಬಾಯಿ ಒಳಕ್ಕೆ ಹೋಗು : ನೆತ್ತಿ ಬಿದ್ದಿಹಿತೆಂದಿರುಳು ಹಗಲೆತ್ತಲಂಜುತ್ತುರ ದೊಳುದರದೊಳೊತ್ತಿ ಕೊಂಬಳು (ಭಸಪು. ೧೫೫-೧೬). ನೆತ್ತಿಯ ಬತ್ತಿ = ದೇವರಿಗೆ ಬಲಿಕೊಟ್ಟ ಪ್ರಾಣಿಯ ತಲೆಯ ಮೇಲೆ ಹಚ್ಚಿ ಇಡುವ (ದೀಪದ) ಬತ್ತಿ: ಉದ್ಧತರ ನೆತ್ತಿಯ ಬತ್ತಿವೊಲಾಯ್ತು ತೀಬ್ರರುಗ್ಮಂಡಳಮಂ ದಿಟಂ ಪಿಗುವ ತೇಜದ ಪಳ್ಳುರಿ (ಎಳ. V, ಆರಣ್ಯ. ೧೨೬-೨೫ ; 1185). ನೆತ್ತಿಯಲ್ಲಿ ಕಾಣು = ತಲೆಯಲ್ಲಿ ಕಾಣು; ಮೆದುಳಲ್ಲಿ ಕಾಣು : ಅದನ್ನು ನೆತ್ತಿಯಲ್ಲಿ ಕಾಣಬೇಕೆಂಬುದನ್ನಷ್ಟೇ ಇಲ್ಲಿ ಅರುಹುವೆವು (ಪರಪ. ೨೧೦). ನೆತ್ತಿಯ ಹಿಡಿ = ನೆತ್ತಿಗೇಱು ೪ : ಕಡು ಪರಾಕ್ರಮಪಿತ್ತ ನೆತ್ತಿಯ ಹಿಡಿದು ನೀ ಗಳಹಿದರೆ ನಿನ್ನೀ . . . ಛತ್ರಧಾರಿಗಳು ಒಡೆಯ ನೀನೆಂದಂಜಿ ನಿರುತವ ನುಡಿಯಲುಮ್ಮರು (ಕುವ್ಯಾಕ.೯-೧೧೧). ನೆತ್ತಿಯ ಹೆಱೆಯವ = ಚಂದ್ರನನ್ನು ತಲೆಯಲ್ಲಿ ಧರಿಸಿದವನು; ಶಿವ : ನೀನು ನೆತ್ತಿಯ ಹೆಱೆಯವನೊ ಮೇಣ್ ಬೊಮ್ಮನೋ (ತೊರಠಾ. ೩-೨೩-೬). ನೆತ್ತಿಯೊಳಾನ್ = ೧. ತಲೆಯ ಮೇಲಿಟ್ಟುಕೊಳ್ಳು : ಸಲಿವು ಹಿಂಗಿದ ತಾಯ ಕಂಗಳ ಜಲವ ಸೆಜಗಿನೊಳೊರಸಿದನು ಪದತಳವ ನೆತ್ತಿಯೊಳಾಂತು (ಕುವ್ಯಾದ್ರ್ಯ. ೬೦೫, ಪರಿ.೨೬೮). ೨. ಗೌರವಿಸು; ಶಿರಸಾ ವಹಿಸು; ಪಾಲಿಸು : ತಾಮುಮಾಮಾ ಮೊದನಿರ್ಪಂ ಬರ್ಪುದೆಂಬೀ ಶಾಸನಮಂ ನೆತ್ತಿಯೊಳಾಂತು ಬನ್ನಮೆಱಗಿಂ ಜಕ್ಕೇಶಪಾದಾಬ್ಜದೊಳ್ (ಅದಿಪು. ೧೪-೩೧). ನೆತ್ತಿಯೊಳ್ತಳಿ = ನೆತ್ತಿಯೊಳಾನ್ ೧ : ಮುಂಳಿಸಿಂದೀಕ್ಷೆಸೆ ಸಾರ್ದುವೆಮ್ಮ ಧನಮುಂ ದೇಶಂಗಳುಂ ನಿನ್ನಸಗ್ಗಳಮಿನ್ನೆಮ್ಮಯ ಜೀವಮೆಂದಸಿಲತೋದ್ಯತ್ಪತ್ರಮುಂ ನೆತ್ತಿಯೊಳ್ತಳೆದಾವ್ಯರಿಗಳಂಬುದಿಪ್ಪಮನೆ ಪೊಳ್ಕಂದುದ್ಭಕ್ಷೋಭೆಯಕೋಜ್ವಳಧಾರಾಜಲದಲ್ಲಿ ಮಟ್ಟುವುದು ನಿಜ್ಜಂ ತದ್ಧರಾಧೀಶನಾ (ಪಾರ್ಶ್ವಪು. ೨-೬). ನೆತ್ತಿಯೊಳ್ಪೊಱು, ನೆತ್ತಿಯಲ್ಲಿ ಹೊರು = ಶಿರಸಾವಹಿಸು; ಪಾಲಿಸು : ಗುರ್ವಾಜ್ಞೆಯಂ ವಿನಾಜದತ್ಯಾದರದಿಂದಂ ನೆತ್ತಿಯೊಳ್ ಪೊತ್ತು (ರಕ್ಷಾ.೪-೬೫) ; ನಿಮ್ಮಯಾಜ್ಞೆಯಂ ನೆತ್ತಿಯೊಳ್ಪೊತ್ತಾ ಚರಿಸುವ ಭೃತ್ಯನೆನ್ನ ನಾರಯ್ಯುತಿರಿಂ (ಪದ್ಮರಾ. ೩-೭೭); ಅವನು 'ಹಸಾಜ' ವೆಂದು ರಾಜಾಜ್ಞೆಯನ್ನು ನೆತ್ತಿಯಲ್ಲಿ ಹೊತ್ತುಕೊಂಡ (ಹಾಹುಪ್ರ. ೪೫). [ದೇ.॥ ತಮಿ. ನೆಱ್ಱಿ; ಮಲ. ನೆತ್ತಿ, ನೆಱು; ಕೋತ. ನೆಱ್; ತುಳು. ಕೊಡ. ತೆಲು. ಕೋಲಾ.ನಾಯ್ಕಿ. ನೆತ್ತಿ ; ಗೊಂಡಿ. ನೇಱ್; ಮಲ್ತೊ. ನೆಪ]

ನೆತ್ತಿಗ (ನಾ). ಜೂಜುಕೋರ : (೪).

ನೆತ್ತಿಗರ ಪಿಸ, ನೆತ್ತಿಗರ ಹಿಸ = ಜೂಜಿನ ಮನೆಯನ್ನು ನಡೆಸುವಾತ : "ದ್ಯೂತಕಾರಕ" (ನಾಚರಾ. ೬). [ನೆತ್ತ$_1$ + –ಇಗ]

ನೆತ್ತಿಗಣ್ (ನಾ). ಹಣೆಯಲ್ಲಿ ಇರುವ ಕಣ್ಣು : 'ನೆತ್ತಿಗಣ್ಣ' ಪರಾ.

ನೆತ್ತಿಗಣ್ಣವ = ನೆತ್ತಿಗಣ್ಣ : 'ಮೂಜಗಕೆ ಕೇಡಂ ಮಾಡುವಾ ನೆತ್ತಿಗಣ್ಣವನೊಳ್ ಕಾದುವ ಬಲ್ಪು ಮೊಗ್ಗೆ ಗರ್ವಿಂದಾರಯ್ದು ಮೇಲೆತ್ತುವೆಂ (ಕಬ್ಬಕಾ. ೧೫೮). [ನೆತ್ತಿ + ಕಣ್]

ನೆತ್ತಿಗಣ್ಣಿ (ನಾ). ಹಣೆಯಲ್ಲಿ ಕಣ್ಣುಳ್ಳವನು ; ಶಿವ : "ಎಲುಗ್ಯೆಯ ಬೂದಿಮಯ್ಯಂ ಬೆಳರ್ವಣ್ಣಂ ನೆತ್ತಿಗಣ್ಣ ನೆನುತುಂ ಜತ್ತುಗದಲೆಯನೆನೆ ಸತ್ಕವೀಂದ್ರರ್ ಸಲೆ ಪೇಟ್ಪರ್ ಸ್ಮರಹರಂಗೆ ನಾಮವಿದೆನುತಂ" ಕವಕಂ. ೧೮೮). [ನೆತ್ತಿಗಣ್ + –ಇ$_7$]

ನೆತ್ತಿಗನ್ನಡಿ (ನಾ). "ನೆತ್ತಿಯಲ್ಲಿ ಕಟ್ಟಿಕೊಳ್ಳುವ ಕನ್ನಡಿ"(ಕಣ್ಣರ. ಕೋಶ) : ಮೊಗದೊಳೊಪ್ಪುವ ವಿಭೂತಿಯುಂ ತುಂಬಿ ನೊಸಲೆಸೆಯೆ ನೆಗಹಿ ಕಟ್ಟಿದ ನೆತ್ತಿಗನ್ನಡಿ ಕರಂ ಹೊಳೆಯೆ (ಕಣ್ಣರ. ಪೀ. ೧೨೬-೧೪).

[ನೆತ್ತಿ + ಕನ್ನಡಿ$_1$]

ನೆತ್ತಿಗೂದಲು (ನಾ). ಮುಂಗೂದಲು : ನೀವೇನೊತ್ತಿನೊಳೆ ಬೇಡುವರೆ ಕುರುಳನು ಬಾಯಂ[ಚ್ಚಿ]ಕೊಳ್ಳಿಂದು ನೆತ್ತಿಗೂದಲನರಿದವರ ಕೈಗಿತ್ತು ಕಳುಹಲು (ಸಾಳ್ವಭಾ. ೩೦-೪೯).

[ನೆತ್ತಿ+ಕೂದಲು (<ಕೂಂದಲ್)]

ನೆತ್ತಿಗೋಡು (ನಾ). ತಲೆಯ ಮೇಲಿನ ಕೊಂಬು : ನೆತ್ತಿಗೋಡೆರಡುಳ್ಳವರನೊಂದು ಕೋಡವರ ಕತ್ತೆ ಮೊಗ ಕುದುರೆಮೊಗದವರ ದೇಶಂಗಳಂ ಕಂಡನಾ ಕಲಿ ಪಾರ್ಥನು (ಜೈಮಿಭಾ. ೧೬-೨೦). [ನೆತ್ತಿ+ಕೋಡು$_5$]

ನೆತ್ತಿಬಾಯಿ (ನಾ). ಎಳೆಯ ಮಗುವಿನ ನೆತ್ತಿಯಲ್ಲಿ ಇನ್ನೂ ತುಂಬಿಕೊಳ್ಳದೆ ಇರುವ ಮೂಳೆ; ನೆತ್ತಿಮೂಳೆ : ಮಗುವಿನ ನೆತ್ತಿಬಾಯಿ ಕೂಡಿಲ್ಲ (ರೂಢಿ). [ನೆತ್ತಿ+ಬಾಯಿ$_1$(<ಬಾಯ್)]

ನೆತ್ತಿಮುತ್ತು (ನಾ). (ಅನೆಯ) ಕುಂಭಸ್ಥಳದಲ್ಲಿರುವ ಮುತ್ತು : ನೆತ್ತಿಮುತ್ತೊಡಗೂಡಿರೆ ಸುಗಿದಗಿದು ಬಿಳ್ದುದಾ ಗಜಮಿಳೆಯೊಳ್ (ಶಬಶಂ. ೩-೫೮). [ನೆತ್ತಿ + ಮುತ್ತು$_3$]

ನೆತ್ತಿಮುಸುಕು (ನಾ). ತಲೆಗೆ ಹಾಕಿಕೊಳ್ಳುವ ಮುಸುಕು : ನೆತ್ತಿಮುಸುಕಿನ ಕೈಯ ಗಲ್ಲದ ಕುತ್ತದಲೆ ನೆಟ್ಟಾಲಿಗಳ ಚಲಚಿತ್ತರಿದ್ದುದು ಸಕಲನಾಯಕವಾಡಿ ಪುಗುಡದಲಿ (ಕುವ್ಯಾದ್ರ್ಯ. ೪-೪).

[ನೆತ್ತಿ + ಮುಸುಕು$_2$ (<ಮುಸುಂಕು$_2$)]

ನೆತ್ತಿಮೂಳೆ (ನಾ). (ಮಗುವಿನ) ಎಳೆಯ ನೆತ್ತಿ ; ಅಳ್ನೆತ್ತಿ : ಮಕ್ಕಳಿಗೆ ಮೂರುವರ್ಷವಾದರೂ ನೆತ್ತಿಮೂಳೆ ಕೂಡಿಕೊಳ್ಳುವುದಿಲ್ಲ (ಗೃಹವಿ. ೩೦). [ನೆತ್ತಿ+ಮೂಳೆ]

ನೆತ್ತಿಮೋಡ (ನಾ). ಆಕಾಶದ ಮಧ್ಯದ ಮುಗಿಲು,—ಮೋಡ : ನೆತ್ತಿಮೋಡವನೆತ್ತಿ ನಿಮಿರಿದಡವಿಯ ಮಲೆಯ ತಾಯನಿತ್ತು ಬೆಟ್ಟ ಬೆಟ್ಟಕೆ ಕಟ್ಟ ಜೋಗುಳದ ತೊಟ್ಟಿಲನು ತೂಗಿದತ್ತು ! (ಅಸಿಕೇ. ೫೩-೩).

[ನೆತ್ತಿ + ಮೋಡ$_1$]

ನೆತ್ತಿಯೆಡೆ (ನಾ). ತಲೆಯ ಪ್ರದೇಶ ; ಶಿರೋಭಾಗ : ಕೋಲ್ಗಾರೊಳ್ ಸುರಿವಾಲಿವರಲ್ಗಳವೊಲ್ ನೆತ್ತಿಯೆಡೆಯ ಮುತ್ತುಗಳೆತ್ತಂಗಲ್ಗಲನೆ ಸುರಿಯೆ ಜೋದರ್ ಬಲ್ಗಣೆಯಿಂದೆಚ್ಚರದಟನಿಂದಾನೆಗಳಂ (ಕಬ್ಬಿಕಾ. ೨೮೨). [ನೆತ್ತಿ+ಎಡೆ$_3$]

ನೆತ್ತಿಯೊತ್ತು (ಕ್ರಿ). ತಲೆಗೆ ಬಾಧೆಯಾಗು; ತಲೆನೋವುಂಟಾಗು: ಮೃತ್ತಿಕೆಯ ನೆಱೆ ಪೊತ್ತ ಭಾರದಿ ನೆತ್ತಿಯೊ[ಪಾಠಾಂ. ವೊ]ತ್ತಿದಡಳುಕಿ ನೀ ಬೇಸತ್ತೆಡೆಯೊಳ್ (ಬಸಪು. ೧೮-೫೧). [ನೆತ್ತಿ+ಒತ್ತು$_1$]

ನೆತ್ತಿವಂದ (ನಾ). ಹಣೆಗೆ ಧರಿಸುವ ಪಟ್ಟ,—ಭೂಷಣ ; ಶಿರೋಬಂಧ ; ಶಿರೋಭೂಷಣ : ಬಂದುಗೆಯಲರಿನಂದಂಬೆತ್ತದಿರ್ಮುತ್ತೆಯ ನೆತ್ತಿವಂದಂಗಳುಮಂ . ... ನಿಜನಿಜಾಂಗರುಚಿಗೊಡಂಬಡುವ ಪೂದೊಡವಂ ತಾನುಮಗ್ರಜನುಮೆಸೆಯೆ ಪಸದನಂಗೆಯ್ದು (ಜಗವಿ. ೬-೧೬ ವ).

[ನೆತ್ತಿ + ಬಂದ$_1$]

ನೆತ್ತಿವಟ್ಟಿಗೆ (ನಾ). ಚಕ್ರದ ಸುತ್ತುಪಟ್ಟ,— ಅಂಚು,— ಧಾರೆ : "ಚಕ್ರಧಾರಾ, ಪ್ರಧೀಃ, ನೇಮಿಃ—ಈ ೩ ನೆತ್ತಿವಟ್ಟಿಗೆ" (ಹಲಾಯು. ೭೩-೨೯೩). [ನೆತ್ತಿ + ಪಟ್ಟಿಗೆ]

ನೆತ್ತಿವಣಿ (ನಾ). (ಹಾವಿನ) ತಲೆಯಲ್ಲಿರುವ ಮಣಿ,—ರತ್ನ : ಜಳಕೇಳಿಗೈವ ಪನ್ನಗವಿಳಾಸಿನೀಜನದ ನೆತ್ತಿವಣಿಗಳವೆತ್ತಂ ತೊಳಗಿರೆ (ವೃಷವಿ. ೪-೭೦). [ನೆತ್ತಿ + ಮಣಿ$_3$]

ನೆತ್ತಿವತ್ತು, ನೆತ್ತಿಹತ್ತು (ಕ್ರಿ). ೧. ತಲೆಗೇರು ; ಹೆಚ್ಚಾಗು : ತಪದುಬ್ಬೆಗದುದ್ಭ್ರಮೆ ನೆತ್ತಿವತ್ತೆ ಸೈತಿರದೆ ಮರುಳ್ತನಂದಳೆದಿದಿರ್ಚಿದ ನೆನ್ನವೊಲಜ್ಞನಾವನೋ (ಶಬಶಂ. ೪-೧೧೧). **ನೆತ್ತಿಹತ್ತು : ೨.** ತುತ್ತು, ಗುಟುಕು ಮುಂತಾದುವುಗಳಿಂದ ಶ್ವಾಸನಾಳದಲ್ಲಿ ಅಡ್ಡಿಯುಂಟಾಗಿ, ಉಸಿರಾಟ ಕಷ್ಟವಾಗಿ ಕೆಮ್ಮು ಬರು : ಊಟ ಮಾಡುವಾಗ ತುಂಬಾ ನಕ್ಕಿದ್ದರಿಂದ ನೆತ್ತಿಹತ್ತಿತು (ರೂಢಿ).

[ನೆತ್ತಿ + ಪತ್ತು$_1$]

ನೆತ್ತಿವರಿಗೆ (ನಾ). ಒಂದು ಬಗೆಯ ಗುರಾಣಿ : ನೆತ್ತಿವರಿಗೆಯಲಡರುವರು[ರ]ವರ ಮೇಲೆತ್ತುಗಲ್ಗಳ ಹಾಕಿ ತಲೆಗಳನೆತ್ತದಂದದಿ ಲೋಹರಸಗಳನೆರೆವರೆಡೆವಿಡದೆ (ನಾಗಷ. ೧೭-೩೬). 'ತಲೆವರಿಗೆ' ಪರಾ.

[ನೆತ್ತಿ + ಪರಿಗೆ]

ನೆತ್ತಿಹತ್ತು 'ನೆತ್ತಿವತ್ತು' ನೋ.

ನೆತ್ತಿಹೊಯ್ (ಕ್ರಿ). ತಲೆಯನ್ನು ಹೊಡೆ : ಶತ್ರು ತಾ ಸುತ್ತ ಮುತ್ತಿ ಬರೆ ಕತ್ತಿಯಿಂ ನೆತ್ತಿಹೊಯ್ಯೆಂದ (ಸರ್ವಜ್ಞ. ೭೧೮).

[ನೆತ್ತಿ + ಹೊಯ್$_1$ (<ಪೊಯ್$_1$)]

ನೆದರಿಡು 'ನದರಿಡು' ನೋ.

ನೆದರು 'ನಜರು' ನೋ.

ನೆದರೊಡೆ (ಕ್ರಿ). ದೃಷ್ಟಿತಾಗು ; ದೃಷ್ಟಿಯಾಗು ; ಕಣ್ಣೆಂಜಲಾಗು : ಬಿತ್ತುಗೆಯಾದ ಮೇಲೆ ಆ ಹೊಲದಲ್ಲಿ ನೆದರೊಡೆಯುವಂತಹ ಬೆಳೆ ಬಂತು (ಕನ್ನಜಾ. ೨೦).

[ನೆದರು(<ನಜರು)+ಒಡೆ$_1$]

ನೆನ (ನಾ). ಸತ್ಯ ; ನನಸು : ನೆನದೊಳಂ ಕನದೊಳಂ ಮನನಿಸುವೆ ನೀನಲ್ಲಡಿನಿತು ತಿಳಿಸೆಳೆಯೊ ನಿನ್ನಯ ಗಾನಕೆ ? (ಗಿಳಿವಿಂ.೮-೧೦೦). 'ನೆನಸ್ಸು$_3$' ಪರಾ. [?]

ನೆನಕೆ, ನೆನಿಕೆ, ನೆನೆಕೆ (ನಾ). ೧. ನೆನಪು ; ಜ್ಞಾಪಕ ; ಸ್ಮರಣೆ : ಒಂದಾನೊಂದು ಚಿತ್ರವನ್ನು ನೋಡುತ್ತ ಯೋಚಿಸುತ್ತಿದ್ದಂತೆ ಆ ನೆನಕೆಯಲ್ಲಿಯೇ ಕಲ್ಪನೆಯ ಬಳ್ಳಿ ಹುಟ್ಟ ಹಬ್ಬುತ್ತ . . . ಕಾದಂಬರಿಯಾಯಿತು (ಹೇಮಂತ. ೩ ಮುಮ್ಮಾತು). ೨. ಯೋಚನೆ ; ಚಿಂತನೆ : "ಇನ್ನೂ ಪ್ರಯತ್ನ ಸಫಲವಾಗಬೇಕು" ಎಂಬ ನೆನಕೆಯಲ್ಲಿ ಹೊಸಮನಿಯಲ್ಲಿಯೂ ಅಷ್ಟು ಮಾರ್ಪಾಟಾಗಲಿಲ್ಲ(ಅಪನಾ. ೨೩೬). ೩. ಕೃತಜ್ಞತಾಪೂರ್ವಕವಾದ ಸ್ಮರಣೆ ; ಗೌರವಸೂಚನೆ : ಎಲ್ಲರಿಗೂ ನನ್ನ ಅಂತಃಕರಣಪೂರ್ವಕ ನೆನಕೆಗಳು (ದ್ರಾವಿವಿ. xii, ಮೊದಲ ಮಾತು); ಅವರಿಗೆ ನಾನು ನೆನಕೆಗಳನ್ನು ಸಲ್ಲಿಸುತ್ತೇನೆ (ಸಾಸಮಾ. iv, ಅರಿಕೆ). **ನೆನಿಕೆ :** ೩. ಬಾಳ ಭಾಂಡಾರದಲಿ ಮೂರು ರತ್ನಗಳುಂಟು. 'ನೆನಿಕೆ, ನಯ, ನಂಬಿಕೆ'ಗಳೆಂದು ಉಸಿರು (ಕಲ್ಲೋಲ. ೭-೮). **ನೆನೆಕೆ :** ೧. ಪ್ರವಹಿಸಲಿ ವಾತ್ಸಲ್ಯ ಮೈತ್ರ್ಯಗಳ ನೆನೆಕೆಯಿಂ ನೆನೆದನ್ನ ಮನವಾ ಕರುಣೆ ತವರಿನೆಡೆಗೆ (ಮಲೆದೇ. ೨೧-೭). [ನೆನೆ$_1$+-ಕೆ]

ನೆನಗಡಲೆ 'ನೆನೆಗಡಲೆ' ನೋ.

ನೆನದಕ್ಕಿರಡ್ಡಿಗಿಡ (ನಾ). ಒಂದು ಬಗೆಯ ಸಸ್ಯ ; ಅಕ್ಕಿಹೆಡೆ ; ದುಗ್ಧಿಕೆ : "ಕ್ಷೀರಾವೀ, ದುಗ್ಧಿಕಾ—೨ ಅಕ್ಕಿಹೆಡೆಯ ಗಿಡದ ಹೆಸರುಗಳು . . . ನೆನದಕ್ಕಿರಡ್ಡಿಗಿಡ, ಹಾಲುಘಂಟಾಮಣಿಗಿಡವೆನ್ನುವರು" (ಸಿದ್ಧಾಂತಿ. ೧೩೪). [? +ಗಿಡ (<ಗಿಡು)]

ನೆನಪಿಡು (ಕ್ರಿ). ಜ್ಞಾಪಕದಲ್ಲಿಟ್ಟುಕೊಳ್ಳು ; ನೆನೆ ; ಗಮನದಲ್ಲಿಡು : ಈಗ ತಾವು ಹೇಳಿದ್ದು ಒಳ್ಳೆ ನೆನಪಿಡ ತಕ್ಕ ಮಾತು (ಮುಂಬಯಿ. ೪-೯೧). [ನೆನಪು+ಇಡು$_1$]

ನೆನಪಿಸು (ಕ್ರಿ). ನೆನಪು ಮಾಡು ; ಜ್ಞಾಪಕಕ್ಕೆ ತರು ; ಸ್ಮರಣೆಗೆ ತರು : ಬಾಧ್ಯೋಗ ಋಷಿಗಳು . . . ನಚಿಕೇತನನ್ನು ಅವರಲ್ಲಿಗೆ ಶಿಷ್ಯನಾಗಿ ವೇದಾಧ್ಯಯನಕ್ಕೆ ಕಳಿಸಬೇಕಾದ ಮಾತನ್ನು ಅವರಿಗೆ ನೆನಪಿಸಿದರು (ಬೆತಂಬಾ. ೧೦೮); ನೀವು ನೆನಪಿಸದೆ ಇದ್ದಿದ್ದರೆ ನಾನು ಅಲ್ಲಿಗೆ ಬರುತ್ತಲೇ ಇರಲಿಲ್ಲ (ರೂಢಿ). [ನೆನಪು+-ಇಸು$_3$]

ನೆನಪು, ನೆಂಪು, ನೆನಹು, ನೆಪ್ಪು$_1$ (ನಾ). ೧. ನೆನಕೆ ; ಜ್ಞಾಪಕ ; ಸ್ಮರಣೆ : ನೆನಪದೊ[ಪಿನೊ]ಳಂ ಕನಸಿನೊಳಂ ಮನಸಿನೊಳಮಾದಮೆ ಸನ್ನಿದಮಾದ ವಲ್ಲಭಾಗಮನದೊಳ್ ಬಳೆದ ರತಿಕಲಹನಿರ್ಭರಮನೆ ದಿಟಂ ಮಾಡಿ (ವರ್ಧಪು. ೪-೬೧ ವ) ; ದೇವಿ ನಿನ್ನ ನೆನಪಂ ಕಾತ್ಯಾಯನೀದೇವಿ ಮಾಟ್ಟುದನೇಂ ಮಾಣ್ಬಳೇ (ಕುಸುಮಾ. ೧೨-೧೬೫) ; ನೆನೆದ ನೆನಪು ತವೆ ಕೂಡಿದಂತಾದುದು ವರದಯೆನ್ನಿದ್ದ ವೇಷಕೆ ತಕ್ಕಶನವಾಯ್ತು (ಬಸಪು. ೪೩-೭೨) ; ದಿವಿಜರೊಳಾರ ನೆನಪುಂಟವರ ನೆನೆ ಸಾಕು (ಕುಪ್ಯಾಅ. ೧೪-೨೮) ; ನೆನಪಿಲ್ಲದ ಕೆಲಸ ಹಣಕಿದರೆ ಆದೀತೇ ? (ಗಾದೆ). **ನೆಂಪು :** ೨. ಗುರುತು : ಕೆಂಪು ಮೂಗಿನ ಪಕ್ಷಿ ತಂಪಿನೊಳಿರುವುದು ನೆಂಪು ಬಲ್ಲವರು ಪೇಳಿ (ಕನಕ. ೨೨೮ ಪಲ್ಲವಿ) ; ಕೆಂಪು ಮನಚಳಚಿತ್ತಮದನನ ಗುಂಪು ಮಂದಿರ ಗುಣದಿ ಮಧ್ಯಮೆ ನೆಂಪು ತಿಳಿಯೈ ಸತಿಯು ಪೈತ್ಯಪ್ರಕೃತಿ ನೋಡೆಂದ (ಕಕ್ಕೋಕ. ೭-೫೬). **ನೆನಹು :** ೧. ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ ನೆನಹಿಂಗೆ ಅಱಿವಾಗಿ ಕಾಡಿತ್ತು ಮಾಯೆ (ಮಹಾದೇ. ಬ. ೧೭-೨೬) ; ಮೇನೆಯುಂ ಗಿರಿರಾಜನುಂ ಕಣ್ ತೀವಿ ನೋಡಿ ಮೆಯ್ತೀವಿಯಪ್ಪಿ ಮನಂ ತೀವಿ ನೆನ [ಪಾಠಾಂ. ನೆ]ಹಿನೊಳಿಟ್ಟು ಶಶಿಕಲೆಯಂ ಸಲಹುವಂತೆ . . . ಪಾರ್ವತಿಯಂ ಸಲಹುತ್ತುಮಿರೆಯಿರೆ (ಗಿರಿಕ. ೩-೧೧೯ ವ) ; ಮತ್ತೆಯುಂ ನೆನೆವ ತಾನು ತನ್ನಯ ನೆನಹು

ಚಿತ್ತದೊಳೇನ ನೆನೆಯಲು ತೋಱುವರ್ಥವು ತಾನದಲ್ಲಿಯೆ ಅಡಗಿಕೊಂಡಿರಲು (ಬಸಪು. ೩೫-೨೦); ಮನದ ಮದದಕ್ಕಱಿನ ವಿಷಯದ ನೆನಹು ನೆಗ್ಗಿತು (ತೊರರಾ. ೩-೪-೨೪). ೩. ಧ್ಯಾನ; ಚಿಂತನೆ: ಸಚನದಲ್ಲಿ ನಾಮಾಮೃತ ತುಂಬಿ ಮನದಲ್ಲಿ ನಿಮ್ಮ ನೆನಹು ತುಂಬಿ (ಬಸವ. ೪೯೧); ನೆನಹು ನಿಲುಕದ ಸುಖದ ಸುಗ್ಗಿಯಂ ಸವಿದನೀಶನ ಕುಮಾರಂ (ಸಿದ್ಧರಾ. ೨-೧೭); ಪಾವನಶಿವನ ನೆನಹನುಳ್ಳುದಕ್ಕೆಂದು ಸದ್‌ಭಾವದಿಂದೊಲ್ದು ಶಿವಸಂಕಲ್ಪ ನಾಮದಿಂದೋವೊ ರಂಜಿಸುವುಪನಿಷತ್ತು ಸಾಱುತಿದೆ ಸಾಂಬನೇ ಸರ್ವಜನಕನೆಂದು (ಪದ್ಮರಾ. ೧೦-೯೯); ನೆನಹಿಂ ನಿರೀಕ್ಷೆಯಿಂದನುದಿವಸಂ ಸಮರ್ಚಿಸುವುದತ್ಯಧಿಕಂ (ಶತಕ. ೩೯); ಚಿತ್ತ ಸಂಚಲವಾಗಿ ನೆನಹಿನ ನೇಮ ನೆಲೆಗೆಡಲು (ಪ್ರಭುಲೀ. ೩-೧೫); ಎನ್ನ ನೆನಹಿನೊಳು ಶಿವರೂಪು ಹೊಳೆವುತಿದೆ (ಚಿಬಪು. ೪-೬). ೪. ಚಿತ್ತ; ಮನಸ್ಸು: ಆವಳೋ ನೆನಹಿನಲಿ ಸುಳಿದಳು (ಕುವ್ಯಾಅ. ೧೯-೨೪); ರಾಜ್ಯದೊಳಿರ್ದು ಯುಕ್ತಿ ಸಂಧಾನದೊಳಗೆ ನಿನ್ನ ನೆನಹು (ಭರಚ. ೨-೪೨); ನೆನಹಿಂಗೆ ಮುಂಚುವ ಪದನ್ಯಾಸಮಂ ಕಲಿತು ನಡೆವ ಜಾರೆಯರ ಚದುರೆಸೆದಿರ್ದುದು (ಜೈಮಿಭಾ. ೨೬-೧೦); ಲಿಂಗದೊಳು ನೆನಹನಿರಿಸಿ ಸತ್ಯದಿ ನಿಲಲು ಲಿಂಗ ನೀನಪ್ಪೆ (ಸರ್ವಜ್ಞ. ೧೫೧). ೫. ವಿಚಾರ; ಆಲೋಚನೆ: ಮನಸಿಜನೆಂಬ ವನವು ಬಳಸಿಹುದಾ ದನುಜೇಶ್ವರನ ಪುರಗಳ ನೆನಹಿಗೆ ನಿಲುಕದ ಕರ್ಮಭೂರುಹವಾ ವನದೊಳು ಬಳಸಿರುತಿಹವು [ಪಾಠಾಂ. ಹವಣಿಸಬಾರದನಂತಾನುಬಂಧಿ ಯೆಂಬವು ವನದ ಕಮಲಷಂಡಗಳು] (ತ್ರಿಪುಸಾಂ. ೪-೩೮); ಸರ್ವಾತ್ಮನು ಮಹೇಶ್ವರನೆನಿಪನೀತನ ನೆನಹನೀತನ ನಿಜವನಱಿವ ಮಹಾತ್ಮನಾರೆಂದ (ಕುವ್ಯಾಸ. ೯-೩); ಲೋಕದಲಿ ದುಷ್ಟರ ನೆನಹದೊಂದಾಗಿಹುದವರ ಮಾತಿನಲಿ ಬೇಱೊಂದವರು ಮಾಡುವ ಕೃತ್ಯ ತಾನೊಂದು (ಜೀವಂಚ. ೪-೫೩); ಮನಕೆ ಬಂದುದು ತನ್ನ ಚಿತ್ತದ ನೆನಹಿನನುಬಂಧತೆಗೆ ಮಾತದು ಕೊನೆವೆರಳನುಪ್ಪರಿಸಿ ಕೊಂಡಾಡಿದನು ವಾಲಿಜನ (ತೊಠರಾ. ೪-೧೨-೧೧). ೬. ಸ್ಮೃತಿ; ಎಚ್ಚರ; ಬಾಹ್ಯಜ್ಞಾನ: 'ನೆನಹಳಿ' ಪರಾ. ನೆಪ್ಪು$_1$: ೧. ವಸ್ತುವಿಪ್ಪ ಭೇದವ ಬಲ್ಲೆನೆಂದರೆ ಪರ್ಜದೊಳಗಿಪ್ಪ ಪಚ್ಚೆಯಂತೆ . . . ಅದು ನೆಪ್ಪಿಗೆ ಬಾರದು (ಮೋಳಿಮಾ. ೬-೧೦); ಒಪ್ಪಿಡಿಯೆಂದು ಬಣ್ಣಿಪ ಕವಿಗಳ ಮೇಲೆ ತಪ್ಪ ಹೊಱಿಸಿ ನೋಡಿದರೆ ನೆಪ್ಪಿನಂತಿಹ ನಡುವಿನ ನೀಱೆಯರು ಮುಂದೊಪ್ಪಿಹರಾ ನರಪತಿಯ (ಕುರಾಸಾಂ. ೨೫-೬೯); ಅಪ್ಪುವ ನಳಿತೋಳ್ಗಳೆಲ್ಲಿ . . . ಬೆಳ್ಪುವಡೆದ ಸೆಳ್ಳುಗುರ್ಗಳ ತೋಱೆಂದು ನೆಪ್ಪಿನೊಳ್ ಬೆದಕಿ ನೋಡಿದಳು (ಮೋಹತ. ೮-೧೪); ನೆಪ್ಪಿರಲಿ ನಿಮ್ಮಂಘ್ರಿಗೆ ತಪ್ಪ ಕೂಡಿಸಿದವಂ (ಪರಶು. ೩೬-೨೮); ಬರುವುದೇನೆ ನೆಪ್ಪಿಗೆ ನಾವು ಬಿದ್ದ ಟೊಪ್ಪಿಗೆ (ಗಂಗಾತ. ೨೫-೧); ನಮ್ಮ ನೆಪ್ಪ ಹ್ಯಾಂಗ ಉಳಿದೀತ ತಂಗಿ (ಕೆರೆಹಾ. ೫). ೨. ಲಿಂಗಕ್ಕೆ ಬಡಿಸಬಲ್ಲಡೆ ಬಾಯ ನೆಪ್ಪ ಕಾಣೆ (ಮೋಳಿಮಾ. ೧೬೫-೯೧೫); ಸರ್ಪಾನಾ ದಾರೀಲಿ ಸಂಜೇನು ನಾ ಬಳಸಿ ನೆಪ್ಪಿಲ್ದ ಮಲೆಗೆ ಬರಬಹುದೆ ಏಳುಮಲೆ ನೆಪ್ಪು ತೋರ್ಯಾವು ಹುಲಿ ಕರಡಿ (ಹಳ್ಳಿಬಾ. ೧೬). ೩. ಲಕ್ಷ್ಯ; ಗಮನ: ಒಪ್ಪಿರುವರು ಐದುಮಂದಿ ಪ್ರಧಾನಿಗಳು ನೆಪ್ಪಿನಿಂದ ನೋಡೆಲಾ (ಗುರುಬ. ೫೨-೮).

ನೆನಪಾಗಿ = ಕ್ರಮ ತಪ್ಪದೆ; ಕ್ರಮವಾಗಿ: ಯೀ ದ್ರವ್ಯಕ್ಕೆ ಯಿದೇ ಕ್ರಯ ನೆನಪಾಗಿ ಸಲುಉದು (ಮೈಆರಿ. ೧೯೩೫, ೩೨-೩೨; 15ನೆಯ ಶತ). ನೆನಪಾಗು, ನೆನಹಾಗು, ನೆಪ್ಪಾಗು = ಜ್ಞಾಪಕಕ್ಕೆ ಬರು; ಸ್ಮರಣೆಯುಂಟಾಗು: ಇಲಿಯನ್ನು ಏಕೆ ಕೊಲ್ಲಬೇಕೆಂಬುದಕ್ಕೆ ಇನ್ನಷ್ಟು ಕಾರಣಗಳು ನೆನಪಾಗಿರುವುದರಿಂದ ಹೇಳಿ ಬಿಡುತ್ತೇನೆ (ದೇಕನ್ಯೆ. ೪೪); ಕಡಲೆಯನ್ನು ತಿನ್ನಲಿಕ್ಕೆ ಬಂದಾಕ್ಷಣವೇ ಅದನ್ನು ಹಿಡಿದು ಕೊಂಡಿದ್ದು ಅವನಿಗೆ ನೆನಪಾಯಿತು (ಮುಂಬಯಿ. ೪-೮೦); ಯಾಕೆ ಬಾಯಿಸಾಹೇಬರಿಗೆ ಇಷ್ಟು ಲಗೂನ ಮನೀ ನೆನಪಾತು (ದಾಸಹು. ೪೭); ಎನಗೆ ನಿಮ್ಮ ನೆನಹಾದಾಗಲೇ ಉದಯ (ಬಸವ. ೪೯೯); ಧೃತರಾಷ್ಟ್ರಂಗೆ ಮಕ್ಕಳ ಮೇಲೆ ನೆನ [ಪಾಠಾಂ. ನೆ]ಹಾಯ್ತ ಧಿಕಶೋಕೋದ್ರೇಕ ಪಲ್ಲವಿಸೆ (ಕುವ್ಯಾಭೀ. ೧-೫೪); ಆಟದಾಗಿನ ಪದಾ ನೆಪ್ಪಾದವೇನು ಆ ಮನಿ ಕತಿ ಕೇಳಿದರ? (ಅಮನಿ. ೪). ನೆನಪಿನ ಪತ್ರ = ಜ್ಞಾಪಕಕ್ಕೆ ತರಲು ಸಹಾಯಕವಾದ ಪತ್ರ; ಜ್ಞಾಪನಪತ್ರ: ಸರ್ಕಾರದ ಇಲಾಖಾ ಮುಖ್ಯರಿಂದ ಕಚೇರಿಗೆ ಬಂದ ನೆನಪಿನ ಪತ್ರಕ್ಕೆ ಜರೂರಾಗಿ ಪ್ರತ್ಯುತ್ತರವನ್ನು ನೀಡಲಾಯಿತು (ರೂಢಿ). ನೆನಪು ಮಾಡಿಕೊಳ್ಳು = ಜ್ಞಾಪಿಸಿಕೊಳ್ಳು; ಸ್ಮರಿಸು: ಅವರ ನೆನಪು ಮಾಡಿಕೊಂಡು ನನ್ನ ಮನೆಯವಳು ಬಿಕ್ಕಿ ಬಿಕ್ಕಿ ಅಳುತ್ತಿದ್ದಾಳೆ (ಹುಚ್ಚುಹು. ೯೩). ನೆನಹಿನೊಸಗೆ = ನೆನವೊಸಗೆ: ಆ ನೆನಹಿನೊಸಗೆಗಳ ನಿಧಿಗೊಳುತ್ತ, ಗುಡಿಯೆ, ನಿಂತೆ ನನ್ನ ಮಾನಸ ನಿನ್ನ ಶ್ಯಾಮಸುಂದರಗರ್ಭದೊಳಗವನು ತಡತಡಕಿ ತೀರದಂತೆ (ಮಲೆದೇ. ೧೦-೯). ನೆನಹುಗೊಡು = ವಿಚಾರವನ್ನು ತಿಳಿಸು; ತಿಳಿವಳಿಕೆ ನೀಡು: ಪಟ್ಟಣವನು ವಿಚಿತ್ರದಿ ರಚಿಸಿ ಕೊಡುವಡೆ ವಿಶ್ವಕರ್ಮನಿಗೆ ನೆನಹುಗೊಡಲಮರಾದ್ರಿಗುತ್ತರವೆನಿಸುವಲಕಾಪುರವ ಕಾವಿಸಿ ಧನದನಿಗೆ ಪಾಲಿಸಲು ವೈಭವದಿಂದಲಿರುತಿರ್ದ (ಅನಂರಾ. ೧-೬-೨೮). ನೆಪ್ಪು ಹಾರು = ಜ್ಞಾಪಕವಿಲ್ಲದಾಗು; ಮರೆತು ಹೋಗು: ನನಗೂ ನೆಪ್ಪು ಹಾರ್ತು ನೋಡ್ರಿ! (ಹೊಸಂಸಾ. ೧೩೫).

[ನೆನೆ$_1$+-ಪ್ಪು$_2$./ತಮಿ. ನಿನೈಪ್ಪು; ತುಳು. ನೆನೆಪು; ತೊದ. ನೆನ್ಪ್]

ನೆನಪುಗ (ನಾ). ಜ್ಞಾಪಕ ಮಾಡಿಕೊಳ್ಳುವವನು; ಸ್ಮರಿಸುವವನು: "ಚನಃ, ಚನಕಃ, ಚನ್- ಈ ೩ ನೆನಪುಗಂ" (ಕಾಶಕೃ. ೧೪೧).

[ನೆನಪು+-ಗ$_2$]

ನೆನವರಿಕೆ, ನನವರಿಕೆ (ನಾ). ೧. ಜ್ಞಾಪಕಕ್ಕೆ ಬರುವುದು; ನೆನಪುಂಟಾಗುವುದು; ಸ್ಮರಣೆ: ಎಲ್ಲಿ ನೋಡಿದ್ದೆನೋ ನೆನವರಿಕೆಯಿಲ್ಲ (ಕೋಹಿನೂ. ೪೦); ಅದೇ ಪ್ರಸಂಗದಲ್ಲಿ ಉಡುಪಿಯ ಕೃಷ್ಣರಾಯನ ನೆನವರಿಕೆಯೂ ಬರುತ್ತದೆ (ಯಕ್ಷಬ. ೧೬೬). ನೆನವರಿಕೆ: ೨. ಉತ್ಕಟವಾದ ಧ್ಯಾನ,—ಹಂಬಲು: ಹುಡುಗ—ಪ್ರಾಯದ ಹುಚ್ಚು ಕನವರಿಕೆ ನನವರಿಕೆಗಳ ಕಂಡೆನು (ಸಖೀಗೀ. ೪೨-೮೫೪). 'ಕನವರಿಕೆ' ಪರಾ. [ನೆನವರಿಸು+-ಕೆ]

ನೆನವರಿಸು (ಕ್ರಿ). ಜ್ಞಾಪಿಸಿಕೊಳ್ಳು; ನೆನೆ; ಸ್ಮರಿಸು: ಆತನು ತನ್ನನ್ನು ಎಚ್ಚರಿಸಿದುದನ್ನೂ ನೆನವರಿಸಿ ಪಿಲಾತನಿಗೆ ಎದೆ ಕುಸಿದು (ಗೊಲ್ಗೊಥಾ. viii, ಮುನ್ನುಡಿ). [ನೆನವು+ಬರಿಸು$_1$(<ವರಿಸು$_1$)]

ನೆನವಿ (ನಾ). ನೆನಪು; ಜ್ಞಾಪಕ; ಸ್ಮರಣೆ: ಸಾವಿರವರ್ಷಕ್ಕೊಮ್ಮೆ ಆಹಾರವೆ[ದ] ನೆನವಿಯಕ್ಕುಂ (ತಸೂವೃ. ೧೮೬); ಇಂದ್ರಿಯ ವಿಷಯಂಗಳ ನೆನವಿಯಂ ತೊಱೆವುದುಂ (ತತ್ತ್ವಪ್ರ. ೨೭೦); ಅಂತು ಪಲಕಾಲಮೇನಾನುಮಂ ಮಾಡಿ ಮಱೆದವಂಗೆ ನೆನವಿ ಪುಟ್ಟುವಂತೆ ಪುಟ್ಟದ ಭವಪ್ರತ್ಯಯಜ್ಞಾನಪ್ರಭಾವದಿಂದಂ (ಚಂದ್ರಪು. ೪-೬೫ ಪ).

[ನೆನೆ$_1$+-ವಿ$_1$]

ನೆನವೀ (ಕ್ರಿ). ಜ್ಞಾಪಿಸು; ನೆನಪಿಗೆ ಬರುವಂತೆ ಮಾಡು: ಎನಗವಳಂ ನೀಂ ನೆನವಿತ್ತೇಂ ಮಗುಳ್ದು, ಚಿತ್ರಗತೆಯಂ ಗೈದೈ (ಶಾಕುಂತ. ೯೧-೧೫೨). [ನೆನವು+ಈ$_2$]

ನೆನವು, ನೆನೆವು (ನಾ). ೧. ನೆನಪು; ಜ್ಞಾಪಕ; ಸ್ಮರಣೆ: ಲೀಲೆಯೋಯಿದು ಮೇಣು ಕೃಷ್ಣನ ಬಾಲಕೇಳಿಯ ನೆನವೋ [ಪಾಠಾಂ. ನೆನಹೊ] ಬೊಮ್ಮದ ಕೌಳಿಕದ ಕಣುಮಾಯೆಯೋ (ಕುವ್ಯಾಅ. ೨೦-೬); ರಂಗದ ಮೇಲೆ ಪ್ರದರ್ಶಿತನಾದ ನಾಯಕನನ್ನು ನಾವು ನೆನವಿನಿಂದ ಗುರುತಿಸುವ ಪ್ರಕ್ರಿಯೆಯನ್ನು ವರ್ಗೀಕರಿಸಲಾಗುವುದಿಲ್ಲ ಎಂದು ಹೇಳುವುದು

ತಾನೆ ಹೇಗೆ? (ತತ್ವಪ್ರಾ. ೫೧೮); ಒತ್ತಡವೆ ಅವನಿಗೆ ತನ್ನ ಹುಟ್ಟೂರು ನೆನವಿಗೆ ಬಂತು (ಕಪಾಕುಂ. ೨೬). ೨. ಧ್ಯಾನ; ಭಾವನೆ: ಎನಗೆ ಸುತ ಸುಜನವತ್ಸಲ ನೆನವಿಗೆ ಗೋಚರನೆಯಾಗಿ ಪೋಗದೆ ಮತ್ತೆಂದಿನ ತೆಱದೆ ನಯನಗೋಚರನೆನಿಪ್ಪುದಂ ಪೇಟಿ ಪುಣ್ಯತರವಾಸರಮಂ (ಚಂದ್ರಪು. ೫-೧೬). **ನೆನೆವು**: ೧. ಅನುಭವಕ್ಕೆ ಬಾಯಿ ಇಲ್ಲ; ಆದರೆ ನೆನೆವು ಮಾತಾಳಿ (ಸಾಹಿವಿ. ೧೪೨); ಕವಿ ಕವಿ ಎಂದು ನನ್ನನ್ನು ಕರೆವುದೇಕೆ, ಮತ್ತೆ ಮತ್ತೆ ನೆನೆವು ಬೇಕೆ (ಚಿತ್ರಸ್ಯ. ೬).

[ನೆನೆ$_1$+-ವು./ತಮಿ. ನಿನೈವು; ಮಲ. ನಿನವು]

ನೆನವೊಸಗೆ (ನಾ). ನೆನಪಿನ ಆನಂದ,—ಉಲ್ಲಾಸ: ಒಂದು ನಗೆ ಒಂದು ನುಡಿ ಒಂದು ಚಲನದಿ ಹೊಳೆದು ಆವುದೋ ನೆನವೊಸಗೆ ಮರಳುವುದು ಮರೆಗೆ (ಪುಲಿದೇ. ೧೦-೮). [ನೆನವು+ಒಸಗೆ]

ನೆನಸು$_1$ 'ನೆನೆಯಿಸು' ನೋ.

ನೆನಸು$_2$ 'ನನೆಸು' ನೋ.

ನೆನಸು$_3$ 'ನನಸು' ನೋ.

ನೆನಹ (ನಾ). ೧. ಜ್ಞಾಪಕ; ನೆನಪು; ಸ್ಮರಣೆ: ನಿಮ್ಮ ನೆನಹವಿಲ್ಲದೆ ನಿರ್ಭಾಗ್ಯನಾದೆ ಎನಗೆ ನೀ ಕರುಣಿಸಾ (ಬಸವ. ೨೫೭); ಭವನ ನೆನಹಲ್ಲದೆಯು ಬೇಱೆ ನೆನಹವು[ಪಾಠಾಂ.ನೆನೆವುದು]ಮಿಲ್ಲ(ಮೆಱೆರ. ದೇ.೭೦-೧೦). ೨. (ಸಂಸಾರದ) ಚಿಂತೆ; ಯೋಚನೆ: ನೆನಹವೆಲ್ಲವ ಬಿಟ್ಟು ಕಣ್ಮುಚ್ಚಿ ನೋಳ್ಪಾಗ ಜಿನನಾಥ ತೋಱುವನೊಳಗೆ (ಭರಚ. ೨-೬೯).

[ನೆನೆ$_1$+-ಹ$_2$(<-ಪ$_2$)]

ನೆನಹಳಿ (ಕ್ರಿ). ಎಚ್ಚರ ಇಲ್ಲವಾಗು; ಮೈಮರೆ: ಒಡಲು ಜೊಂಪಿಸಿ ಶಿರಂ ಭಾರೈಸಿ ನೆನಹಳಿದು ನುಡಿವ ನುಡಿಗಳು ಮೆಲ್ಲನಾಗಿ ಇಂದ್ರಿಯ ವ್ಯಾಪ್ತಿ ಮನದೊಳಡಗಲು (ಸೋಮಚ. ೧-೮೦).

[ನೆನಹು(<ನೆನಪು)+ಅಳಿ$_1$(<ಅಟಿ$_1$)]

ನೆನಹು 'ನೆನಪು' ನೋ.

ನೆನಹುಗೆಡು (ಕ್ರಿ). ಇಹದ ಅಥವಾ ಹೊರಗಿನ ಪ್ರವೃತ್ತಿಯಿಲ್ಲವಾಗು: ಪ್ರಾಣ ಲಿಂಗವಾಗಿ ನವನಾಳದ ಸುಳುಹನಱಿಯದು ಮನ ಲಿಂಗವಾಗಿ ನೆನಹುಗೆಟ್ಟತ್ತು (ಅವಚಂ. ೨೩೯-೧೦೮೫).

[ನೆನಹು(<ನೆನಪು)+ಕೆಡು$_1$]

ನೆನಹುಡುಗು (ಕ್ರಿ). ಜ್ಞಾಪಕಶಕ್ತಿ ಕುಂಠಿತವಾಗು; ಸ್ಮರಣೆ ಇಲ್ಲದಾಗು: ಮನಂಬಿರ್ದು ನೆನಹುಡು[ಪಾಠಾಂ. ಡಿ]ಗಿ ನಡೆಗೆಟ್ಟು ಕಂಪಿಸಿ ನಸುಬೆಮರ್ತು (ನಂಬರ. ೧೨-೫೨).

[ನೆನಹು(<ನೆನಪು)+ಉಡುಗು$_1$]

ನೆನೆ$_1$ (ಕ್ರಿ). ೧. ಜ್ಞಾಪಿಸಿಕೊಳ್ಳು; ನೆನೆದುಕೊಳ್ಳು; ಸ್ಮರಿಸು: "ನೆನೆ-ಸ್ಮರಣೇ"(ಶಮಧಾ); ಪೂಣ್ಡ ಪ್ರತಿಜ್ಞೆಯಂ ನೆನೆವೆಯೊ ನೆನೆಯೆಯೊ ಎನೆ (ಪಡ್ಡಾರಾ. ೧೨೫-೭); ನೆನೆಯದಿರಣ್ಣ ಭಾರತದೊಳಿಂ ಪೆಱರಾರು ಮನೊಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ (ಪಂಪಭಾ. ೧೨-೨೧೭); ಹಿಂಡನಗಲಿ ಹಿಡಿವಡೆದ ಕುಂಜರ ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯ (ಮಹಾದೇ. ಬ. ೧೩೮-೩೧೩); ನೆನೆದರು ಮನೆಯ ರಾಣಿಯರ (ಕುವ್ಯಾಭೀ. ೮-೬೧). ೨. ಯೋಚನೆ ಮಾಡು; ವಿಚಾರಿಸು; ಆಲೋಚಿಸು; ಚಿಂತಿಸು: ಅದಾನಟಿಯೋರೂ ಅಟೆವಲ್ಪಟ್ಟಿದೋರ್ ×× ಮನದೆ ನೆನೆವೋರುಂ . . . ಪಞ್ಚಮಹಾಪಾತಕ ಸಂಯುಕ್ತರಪ್ಪೊರ್ (ಎಕ. VI, ಕೊಪ್ಪ. ೩೮-೯; ಸು. 675 ?); ಪುನರುಕ್ತಮೆಂಬುದಕ್ಕುಂ ನೆನೆಯದೆ ಪೂರ್ವೋದಿತಾರ್ಥಪದಪದ್ಧತಿಗೊಂದಿನಿಸುಂ ವಿಶೇಷಮಿಲ್ಲದೆ ಜನಿಯಿಸಿದ ಪದಾರ್ಥಂ (ಕವಿರಾ. ೧-೮೪); ಚೇಟಕಿಯರ್ನೆರೆದಿರ್ದರೆಂಬಿದಂ ನೆನೆ (ಕಾದಂಉ. ೬೬); ನೆನೆದೂಡಾಶ್ಚರ್ಯಮಲ್ತೆ ಸಂಸ್ಕೃತಿಚಕ್ರಂ (ಸುಕುಮಾ. ೫-೧೯); ನನೆಯಂಬಂ ಬಗೆಯೊಳ್ ನೆನೆಯುತ್ತಿರ್ಪನ್ನೆಗಂ (ಕಬ್ಬಿಕಾ. ೮೭); ಗಣನೆಗೇರಲಿಕೆಂತು ಜನ ತಪಿಸಿ ತೊಳಲುವುದು ನೆನೆಯದಾತ್ಮದ ಸುಖವ (ಮಂಕುಕ. ೯೫೩). ೩. ಧ್ಯಾನಮಾಡು; ಧ್ಯಾನಿಸು; ಚಿಂತನೆ ಮಾಡು: ಉಟಿದುದಂ ಬಿಸುಟ್ಟೊಂದನೆ ನೆನೆವುದು (ಅಜಿಪು.೮-೨೮ ಪ); ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ . . . ಎನಗೆ ನಮ್ಮ ಕೂಡಲಸಂಗಮದೇವರ ನೆನೆವುದೆ ಚಿಂತೆ (ಬಸವ.೩೬೪); ಕರುಣಿ ಕರುಣಿಸಿ ರಕ್ಷಿಸೆಲೆ ದೇವ . . . ನಿಮ್ಮುವಂ ನೆನೆಯಲಱಿಯದತಿ ಕಷ್ಟನಂ (ವಾಗೀರ. ದೇ. ೨೬೨-೧೮); ಮಲುಹಣನು . . . ಪರಶಿವನಂ ನೆನೆವ ಯೋಗೀಂದ್ರನಂದದಿ ತನ್ನನಂಗನೆ ಮುನ್ನೊಲಿಸಿ ನೋಳ್ಪೊಲುಮೆಯಂ ನೆನೆವ (ಬಸಪು. ೪೨-೨೦); ಶಿವಮಂತ್ರವಂ ನೆನೆವುತವನ ನೆತ್ತಿಗೆ ಕರವನಿಡೆ (ಪದ್ಮರಾ. ೨-೩೦); ಪಾಂಡವರು . . . ಲಕ್ಷ್ಮೀಲೋಲನಂಘ್ರಿಯ ನೆನೆವುತಿದ್ದರು ವೀರನರಯಣನ (ಕುವ್ಯಾಆ. ೨೧-೭೧). ೪. ತಿಳಿ; ಗ್ರಹಿಸು; ಅರಿತಕೊಳ್ಳು: ನೆನೆದು ವಿಚಾರಿಸಿ ನಿಶ್ಚಯಮನತುಳೋಪಾಯಕೋವಿದಂ ಸ್ಥಿತಿಕರ್ತಂ ವನಜಾಕ್ಷಂ . . . ಶಕ್ರನೊಡನಿಂತೆಂದಂ (ಗಿರಿಕ. ೬-೮೦). ೫. ಉದ್ದೇಶಿಸು; ಸಂಕಲ್ಪಿಸು: "ಸಂಕಲ್ಪವೆಂದರೆ ನೆನೆವುದಕ್ಕುಂ" (ಮಂಗರಾ. ೧೩೪-೩೪); ವೈರವ ಬೆಳಸಿ ಬಂದರು ಧರೆಯ ಭಾಗವ ಬೇಡಿ ಕದನವ ನೆನೆದರೆಮ್ಮೊಡನೆ (ಕುವ್ಯಾಭೀ.೧-೧೯); ಇಷ್ಟ ನೀ ಕೀರ್ತಿಸಲಾತನ ಮೇಲೊಂದು ಕಷ್ಟವ ನೆನೆದು ಪೂಸರಳವೃಷ್ಟಿಯ ತೋಱುವೆ (ಮೋಹತ. ೬-೧೧). ೬. ಮನಸ್ಸಿಗೆ ತಂದುಕೊಳ್ಳು; ಗಮನಿಸು; ಲಕ್ಷ್ಯಕೊಡು: ನೀನ್ನಿನ್ನ ಸಾವನದನೆನಸುನ್ನೆನೆಯದೆ ನೆರೆವೆನೆಂಬ ಬಗೆಯೊಳ್ ಬಂದೈ (ಪಂಪಭಾ. ೨-೨೧); ಧೃತರಾಷ್ಟ್ರನಂದನಂ ಮುನ್ನಗೆಯ್ದ ಧರ್ಮಮಂ ನೆನೆ[ಪಾಠಾಂ. ಬಗೆ]ಯದೆ ಕುಲಕ್ರಮಯುಕ್ತಮಪ್ಪ ನಿರ್ಮಲ ಕ್ಷತ್ರಧರ್ಮಮನೆ ಬಗೆದು ಧರ್ಮನಂದನನಿಂತೆಂದಂ (ಗದಾಯು. ೬-೮ ಪ); ಎನಿತು ಜನರು ಬಂದರೇನು ಎನಿತು ಜನರು ಹೋದರೇನು ನೆನೆದರಿಲ್ಲ ಕುರುಡನಿರವ ಮನದ ರಂಗದಿ (ಕವಿಸೋ. ೪೦-೧೫). ೭. ಕಲ್ಪಿಸು; ಭಾವಿಸು; ಊಹಿಸು: ನೆಲನ ಸವೆಸಿತು ನೇಸಱಿನ ಕಂಗಳನು ಕದುಕಿತು ನೆನೆಯಬಾರದು ನಳಿನಭವ ಹರನಾದನೆನಲುಚ್ಚಳಿಸೆ ಪದಧೂಳಿ (ಕುವ್ಯಾಭೀ. ೧-೪೮). ೮. ಬಯಸು; ಇಚ್ಛಿಸು: ಎನಿತುಂ ಕಾಯ್ದುಂ ಬೆನ್ನೀರ್ ಮನೆ ಸುಡದೆಂಬಂತೆ ನಿನಗವರ್ ನಿಲೆ ಕಾಯ್ದುಂ ಮನದೊಳ್ ಪೊಲ್ಲದನೆಂತುಂ ನೆನೆಯರ್ (ಕಾವ್ಯಾವ. ೨೩೫); ನಾನೊಂದು ನೆನೆದೊಡೆ ತಾನೊಂದು ನೆನೆವುದು ನಾನಿತ್ತಲೆಳೆದೊಡೆ ತಾನತ್ತಲೆಳೆವುದು . . . ಮಾಯೆ (ಬಸವ. ೧೪); ನೆನೆದಂತೆ ಕಾರ್ಯಮದು ನೆಟ್ಟನೆ ಸಂಗಳಿಸುವುದು ಪೂರ್ವಪುಣ್ಯದ ಪಾಂಗೆಂದೆನುತಮೊಡರಿಸಿದನಾಗಳ್ ತನಯನ ಪರಿಣಯನಮಂ ತ್ರಿಪಿಷ್ಟನೃಪಾಳಂ (ಶಾಂತೀಶ್ವ. ೫-೧೧). ೯. "ಮರುಗು, ಮಿಡುಕು, ನೆನೆ" (ಕಂನುಹು. ೮೯).

ನೆನೆನೆನೆ (ದ್ವಿರುಕ್ತಿ): ನೆನೆನೆನೆದು ಪೆಱರ ಮಾತುಗಳನೆ ನೆಗೞ್ದುರೆ ಕೃತಿಯೊಳಿಡುವವಂ ನಗೆದ ಗುಹಾಧ್ವನಿಯವೊಲನರ್ಥವಚನಂ ತನಗಾಗಿಸಲಱಿಯನುಚಿತವಾಕ್ಚತುರತೆಯಂ (ಕವಿರಾ. ೧-೧೪); ಗದ್ದದಕಂತೆಯರ್ . . . ಪೋದ ನಿಜವಲ್ಲಭನಂ ನೆನೆನೆನೆದು (ಅಜಿಪು. ೬-೧೧೨ ಪ); ಕಣ್ಗಳನರೆದೆಱೆವುದು ನೆನೆನೆನೆದು ಕಾಂತೆಯಂ ಕಳಹಂಸಂ (ಗಿರಿಕ. ೨-೫೮); ಆ ವನಜನಯನೆಯ ರತಿಕಳಾಭಾವಭವಸೌಖ್ಯಂಗಳಂ ತಾನಾವಗಂ ನೆನೆನೆನೆದು ವಿರಹದೊಳಿರಲು (ಬಸಪು. ೪೨-೨೭); ಅನಿಲಜನ ಘಾತಕ್ಕುಪಾಯವ ನೆನೆನೆನೆದು ಮನಗುಂದಿ ಕೌರವಜನಪ ಕಂಡನು ಮತ್ತೆ ವಿಷಗಳನಿಕ್ಕಬೇಕೆನುತ (ಸಂಭವ. ೧೭-೫೨); ನೆನೆನೆನೆದು ಗಹನವನು . . . ಮಣಿಮಣಿದು ಕೈಮುಗಿಯೊ (ಮಂಕುಕ. ೯೧೮).

[ದೇ.॥ ತಮಿ. ನಿನೈ; ಮಲ. ನಿನ, ನಿನೆ; ಕೊಡ. ನೆನ]

ನೆನೆ$_2$ 'ನನೆ$_1$' ನೋ.

ನೆನೆಕೆ 'ನೆನಕೆ' ನೋ.

ನೆನೆಗಟ್ಟು (ನಾ). ವಿಚಾರಸರಣಿ ; ಆಲೋಚನೆ ; ತರ್ಕ : ಈಗ ನಮ್ಮ ಜನ ಈ ಹೆಸರುಗಳಲ್ಲಿ ಅನೇಕವನ್ನು ಬಿಟ್ಟಿದ್ದಾರೆ. ಉಳಿದಲ್ಲಿ ಹೇಗೆ ಹಾಗೆ ಇಲ್ಲಿಯೂ ನೆನೆಗಟ್ಟು ಬೇರೆಯಾಗಿ ನುಡಿಕಟ್ಟು ಬೇರೆಯಾಗಿದೆ (ನಮ್ಮನು. ೨೧೪). [ನೆನೆ$_1$ + ಕಟ್ಟು$_2$]

ನೆನೆಗಡಲೆ, ನೆನಗಡಲೆ (ನಾ). ನೆನೆ ಹಾಕಿದ ಕಡಲೆ : ಪರಿಪರಿಯ ಫಲವಸ್ತು ತರಿಸುತ ಸುರಿದು ನೆನೆಗಡಲೆಗಳ ರಾಶಿಯ (ಸಂಭಪ. ೨೦-೨೧). **ನೆನಗಡಲೆ :** ನೆನಗಡಲೆ ಚಿಗುಳಿ ತಂಬಿಟ್ಟು . . . ಮೊದಲಾದವಸ್ತುಗಳಂ (ಸೌಗಂಧಿ. ೪೩-೧೯) ; ಚಿಗುಳಿ ತಂಬಿಟ್ಟು ಕಬ್ಬು ನೆನಗಡಲೆ ಬೆಲ್ಲದಿಂ (ಲಿಂಗಪು. ೨೦-೧೬) ; ನೆನಗಡಲೆ ಒಲ್ಲೆನೆಂದು ಮುಂದೆ ಹೊರಟನು (ಸಿದ್ಧಪು. ೫-೪೧) ; ಹೆಬ್ಬಕಲಲ್ಲಿರುವೊ ಕಬ್ಬಲ್ಲ ಬೆನವಗೆ ಕಬ್ಬಿನ ಜಲ್ಲೆ ನೆನಗಡಲೆ ಸಲಿಸುವೆ (ನಾಪದ. ೮). [ನೆನೆ$_1$ + ಕಡಲೆ]

ನೆನೆಗುದಿ 'ನನೆಗುದಿ' ನೋ.

ನೆನೆಯಕ್ಕಿ$_1$ 'ನನೆಯಕ್ಕಿ' ನೋ.

ನೆನೆಯಕ್ಕಿ$_2$ (ನಾ). ಒಂದು ಬಗೆಯ ಔಷಧೀ ಸಸ್ಯ : ನೆನೆಯಕ್ಕಿ ಬೇರನರೆದು, ಬಿಸಿನೀರಲ್ಲಿ ಕಲಸಿ ಕುಡಿಯ ಕೊಡೆ ಸೂತಕವಿಲ್ಲದ ಸ್ತ್ರೀ ಸೂತಕವಾಗುವಳು (ವೈದ್ಯಸಾ. II, ೪೩) ; ನೆನೆಯಕ್ಕಿ ಸಮೂಲಗಿಡವನ್ನು ಕುಟ್ಟಿ ಕಷಾಯ ಕಾಯಿಸಿ ಶೋಧಿಸಿ ಇದರಲ್ಲಿ ಗುಗ್ಗುಳು ಚೂರ್ಣ ಗ'॥ ತೂಕ ಸಕ್ಕರೆ ಹಾಕಿ ಸೇವಿಸಲು ರಕ್ತಮೂಲ ನಿಲ್ಲುವುದು (ಸಕವೈ. ಪರಿ. ೪೬೬). [?]

ನೆನೆಯಿಕ್ಕು 'ನನೆಯಿಕ್ಕು' ನೋ.

ನೆನೆಯಿಡು (ಕ್ರಿ). = ನೆನೆಹಾಕು : ಮುಲ್ಲಂಗಿಗಡ್ಡೆಯನ್ನು ಸಣ್ಣಗೆ ಪಚ್ಚಡಿಯಂತೆ ಹೋಳು ಮಾಡಿ . . . ಆ ಪಾಕದಲ್ಲೇ ನೆನೆಯಿಟ್ಟಿದ್ದು (ಸಕವೈ. ಪರಿ. ೪೯೬). [ನೆನೆ$_2$ (<ನನೆ$_1$) + ಇಡು$_1$]

ನೆನೆಯಿಸು, ನೆನಸು$_1$, ನೆನೆಸು$_1$ (ಕ್ರಿ). ೧. ಜ್ಞಾಪಕಕ್ಕೆ ತರು ; ಸ್ಮರಣೆ ಉಂಟಾಗುವಂತೆ ಮಾಡು; ಜ್ಞಾಪಿಸು : ಜಿನಸವನಾಂಬುವಿನೊಳ್ ಭೋಂಕೆನೆ ಚಂದ್ರಂ ತೇಂಕಿ ವೃದ್ಧಹಂಸನನಿನಿಸಂ ನೆನೆಯಿಸಿ. . . ಸಿತವನರುಹಲಕ್ಷ್ಮಿಯುಮನಿನಿಸು ತನಗೊಳಕೊಂಡಂ (ಆದಿಪು. ೭-೯೯) ; ಕನಕಾಚಲಮೆಂಬ ಕನತ್ಕನಕಾಬ್ಜದ ಕರ್ಣಿಕಾಗ್ರದೊಳ್ ಪಾಯ್ವಳಿಯಂ ನೆನೆಯಿಸಿ ಕಹ್ಗೊಪ್ಪುವುದಿಂದ್ರನೀಲಮಣಿರುಚಿಯಿನೆಸೆವ ಚೂಳಿಕೆ ನಭದೊಳ್ (ಅಜಿಪು. ೧೧-೨೬); ಮದನಕುಂಭಿಕುಂಭಸ್ಥಳಮಂ ನೆನೆಯಿಸುವುದಸಿಯಳ ಲಘುನಿತಂಬಂ (ಮಲ್ಲಿಪು. ೩-೬೧) ; ಕೆಂದಾವರೆಯಂ ನೆನೆಯಿಸಿದುದು . . . ನಿಡಿಯ ಮೆಲ್ಲಡಿಯವಳಾ (ಕಬ್ಬಿಕಾ. ೭೪) ; ಸತಿಯತಿ ಕಾರ್ಶ್ಯಂದಳೆದೊಪ್ಪಿದಳು . . . ಸಿತಪಕ್ಷಂ ತೀರಿದ ನಿರ್ಮಲ ಶಶಿಬಿಂಬದ ಭಂಗಿಯುಮಂ ನೆನೆಯಿಸುತ (ಜಯಕಾ. ೪-೩೨). ೨. ತಿಳಿಸಿಕೊಡು ; ವಿವರಿಸು ; ವಿಶದಪಡಿಸು ; ಗಮನಕ್ಕೆ ತರು : ಅನುಚಿತಕಾರ್ಯಮನವನೊಡರಿಸೆ ಕಂಡು ನಿನಗಿದು ನೀತವಲ್ಲೆಂದು ನೆನೆಯಿಪೆನಲ್ಲದೆ ನೇಮಿಪುದಿಲ್ಲೆಂದು ವಿನಯವೆರಸಿ ಬಿನ್ನವಿಪುದು (ಹರಿಬ. ೩-೨೯). **ನೆನಸು$_1$:** ೧. ವಿಧಿಬದ್ಧ ಸರ್ಕಾರವಾದುದರಿಂದ ಗತವೈಭವವನ್ನು ನೆನಸಿತು (ಭಾರದ. ೩೭೩). ೩. ನೆನಪು ಮಾಡಿಕೊಳ್ಳು ; ಜ್ಞಾಪಿಸಿಕೊಳ್ಳು ; ಸ್ಮರಣೆಗೆ ತಂದುಕೊಳ್ಳು : ನೆನಸಿಕೋ ನೀಲಕಂಠನ ವಧೂಟಯ ಮಾತ (ಮೋಹತ. ೨೬-೫೫) ; ನಾವು ಅವರ ಉಪಕಾರವನ್ನು ಯಾವಾಗಲೂ ನೆನಸಬೇಕು (ಮುಂಬಯಿ. ೨-೪೦). ೪. ಧ್ಯಾನಿಸು ; ಚಿಂತನೆಮಾಡು : ಹರಿ ನೆನಸಿದೊಡೆ ಬಾರನೆ (ಜೈಮಿಭಾ. ೨-೩೫) ; ಓರ್ವ ಮುನಿಪುಂಗವನು ಮನದೊಳಪೂರ್ವಮಹಿಮನ ಚರಣಕಮಲವ ನೆನಸುತಿರಲು (ಅರ್ಚಾವಿ. ೩೧-೨). ೫. ಊಹಿಸು ; ಕಲ್ಪಿಸು ; ಭಾವಿಸು : ಒಂದು ಮನೆಯನ್ನು ನೋಡಿದರೆ ತತ್ಕಾಲದಲ್ಲಿ ಮನುಷ್ಯರು ಕಾಣದೆ ಇದ್ದಾಗ್ಯೂ ಅದು ಮನುಷ್ಯರು ಕಟ್ಟಿದ್ದಲ್ಲವೆಂದು ಎಂದಾದರೂ ನೆನಸುವನೋ ? (ಮುಂಬಯಿ. ೪-೫೯). ೬. ಬಯಸು ; ಇಚ್ಛಿಸು ; ಕೋರು : ನೀ ನೆನಸಿ[ಸಾಕಾಂ. ನೀನೆಳಸಿ]ದಿಷ್ಟಾರ್ಥಫಲ ಸಿದ್ಧಿಸಿದುದಿನ್ನೇನು (ಸಳಚ. ೨-೪೫). **ನೆನೆಸು$_1$:** ೩. ಅಮ್ಮ, ಅಪ್ಪ ನನ್ನ ನೆನೆಸಿಕೊಳ್ತಾಲೇ ಇರಲಿಲ್ಲವೆ ? (ರಂಗನಾ. ೬೩) ; ತನ್ನ ನೆನೆವನೇ ತಾನೆ ನೆನೆಸಿ ಒಳವೊಳಗೆ ನಿದ್ರಿಸಿರಲು (ಸೂರ್ಯಪಾ. ೭೪-೧೦).

ನೆನೆಸಿ ಕೊಡು, ನೆನಸಿ ಕೊಡು = ನೆನಪು ಮಾಡು ; ಜ್ಞಾಪಿಸು : ನೆನೆಸಿ ಕೊಡುವನು ಹಗೆಗೆ ಮರ್ಮವನನುಜನೀತನ ಕೊಲುವೆನೆನುತವೆ ತನಗೆ ಮಯನಿತ್ತುಗ್ರ ಶಕ್ತಿಯ ಕೊಂಡು ತಿರುವಿಟ್ಟ (ಕೌತಿರಾ. ೨೨-೩೪) ; ನಿಮ್ಮ ಕಾರ್ಯಕ್ರಮವನ್ನು ನೆನೆಸಿಕೊಡುವ ಸಲುವಾಗಿ ಈ ಪತ್ರ ಬರೆಯುತ್ತಿದ್ದೇನೆ (ಪುನರು. ೧೬) ; ಹರಿಶ್ಚಂದ್ರಭೂಭುಜನ ಮನೆಗೀಗಳಿಂತು ನೀ ಹೋಗಿ ಕೌಶಿಕನು ನೆಟ್ಟನೆ ನಿನ್ನನಂತಿಂತು ಕೆಡಿಸಿದಪ ನೀನಾವ ಪರಿಯಲೆಚ್ಚತ್ತಿರೆಂದು ನೆನಸಿ ಕೊಡು ಹೋಗು (ಹಚಕಾ. ೨-೨೯). **ನೆನೆಸಿಕೊಳ್ಳು** = ಜ್ಞಾಪಿಸಿಕೊಳ್ಳು ; ಸ್ಮರಣೆಗೆ ತಂದುಕೊಳ್ಳು : ಅದೆಲ್ಲ ನೆನಸಿಕೊಂಡರೆ, ಏನು ಪ್ರಯೋಜನ ? (ರಾಯಕ. ೬೫) ; ಬೋಳಿ ತುರುಬ ನೆನಸಿಕೊಂಡ ಹಾಗೆ (ಗಾದೆ) ; ಹಿಂದಿನದೆಲ್ಲ ನೆನಸಿಕೊಂಡು ಹಿತ್ತಲಲ್ಲಿ ಅತ್ತರಂತೆ (ಗಾದೆ). [ನೆನೆ$_1$ + -ಇಸು$_3$]

ನೆನೆವು 'ನೆನವು' ನೋ.

ನೆನೆಸು$_1$ 'ನೆನೆಯಿಸು' ನೋ.

ನೆನೆಸು$_2$ 'ನನೆಸು$_1$' ನೋ.

ನೆನೆಹಾಕು (ಕ್ರಿ). (ನೀರಿನಲ್ಲಿ) ನೆನೆಸಿಡು : ಕಂಚಿನ ಪಾತ್ರೆಯಲ್ಲಿ ದಾಳಿಂಬೀಹಣ್ಣಿನ ರಸವಂ ಹಿಂಡಿ ಏಳು ದಿನ ಆ ಕೆಂಪುರತ್ನವಂ ನೆನೆಹಾಕಲು (ಸೌಗಂಧಿ. ೩೬೭-೨೪) ; ಸಾಮಾನು ನೆನೆಹಾಕಿದ್ದೂ ಹಾಕಿದ್ದೆ (ರೂಪಸಂ. ೧೭) ; ಭತ್ತವನ್ನು ನೀರಿನಲ್ಲಿ ನೆನೆಹಾಕಿ, ಅನಂತರ ಬೇಯಿಸಿ ಒಣಗಿಸುತ್ತಾರೆ (ಅಡುಸೌ. ೭೪) ; ಆರೆಕಲ್ಲು ನೆನೆಹಾಕಿದಂತೆ (ಗಾದೆ).

[ನೆನೆ$_2$(<ನನೆ$_1$) + ಹಾಕು(<ಪಾಯ್ಕು$_1$)]

ನೆನ್ನೆ 'ನಿನ್ನೆ' ನೋ.

ನೆಪ 'ನೆವ' ನೋ.

ನೆಪಗೆಯ್(ಕ್ರಿ). ಕಾರಣವನ್ನಾಗಿ ಮಾಡಿಕೊಳ್ಳು ; ನೆವ ಹೂಡು: ಕಪಿರಾಜನು ದ್ಯೋಗ ಶಾಖಾಮೃಗಂಗಳುಂ ವಿಪುಳಭೂಮಿಯ ಚದುರಿಸಿದುರುವೇಗ ಸಾಗರಮ[ವ] ನೆಪಗೆಯ್ಯದಾಂ ದಾಂಟಿಬಂದು ನಗರಿಯ ಪೊಕ್ಕು ತೊಳಲ್ದ ಮುಖ್ಯಶ್ರಮಗಳು ವಿಫಲವಾದುವು (ವೆಂಕಾರಾ. ೫-೫-೯). [ನೆಪ(<ನೆವ) + ಕೆಯ್$_1$]

ನೆಪತೆಗೆ 'ನೆವತೆಗೆ' ನೋ.

ನೆಪವೊಡ್ಡು (ಕ್ರಿ). ತೋರಿಕೆಯ ಕಾರಣವನ್ನು ಕೊಡು ; ನೆವ ಹೇಳು : ತಾನು ಕೂಡಲೆ ಮನೆಗೆ ಹೋಗಬೇಕೆಂದು ನೆಪವೊಡ್ಡಿ, ಅವನು ಬೀಳ್ಕೊಳ್ಳಲನುವಾದನು (ಪುನರು. ೧೨೭). [ನೆಪ(<ನೆವ) + ಒಡ್ಡು$_1$]

ನೆಪಹೇಳು 'ನೆವಹೇಳು' ನೋ.

ನೆಪ್ತಿ (ನಾ). ಜ್ಞಾಪಕ ; ನೆನಪು ; ಸ್ಮರಣೆ : ಆ ಪದಗೋಳು ನೆಪ್ತೀಗೆ ಬಂದು ಹಿಂಗೇ ಹಾರೋಗಲಾ ಅಂತದೇ ಜೀವ (ಕೂಲಿ. ೮). 'ಗೆಪ್ತಿ' ಪರಾ. [<ಸಂ. ಜ್ಞಪ್ತಿ]

ನೆಪ್ಪು$_1$ 'ನೆನಪು' ನೋ.

ನೆಪ್ಪು$_2$ (ನಾ). ಪ್ರದೇಶ ; ತಾಣ : ತೊಪ್ಪತೊಪ್ಪನೆ ಪಿರಿಯ ಕಲ್ಲೊಳು ತಪ್ಪಲಿಡುತಂ ಸೋಹುತಂ ಹರಿತಪ್ಪ ಕೆಲವಾಡುಗಳನಾ ಬೊಬ್ಬುಲಿಯ

ಮರಳಿಸಿ ನೆಪ್ಪಿಗಾತನು ಹೊಡೆದದಱ ಕಾಯ್ಸೊಪ್ಪುವಂ ತಱುವುತ (ಬಸಪು. ೨೦-೧೪) ; ಉಪ್ಪುನೀರಂ ದಿನಂಪ್ರತಿ ಖಾತನದಿಂದ ತಪ್ಪದೇ ಹೀರಿದಾ ತಲೆಬಿಗುಡು ಗಗನದೊಳಗೊಪ್ಪದಿಂ ಪರಿನ ದೇವಾಪಗೆಯ ಮಧುರತರ ವಾರಿಯ ಹೀರಿ ಹೀರಿ ಚಪ್ಪರಿಸಿದಲ್ಲದೇ ಹೋಗದೆಂದೆನುತುಮಾ ನೆಪ್ಪಿಂಗೆ ತದ್ವನಧಿಯಿಂದ ವಡಬಾಗ್ನಿಯೇ ಉಪ್ಪರಿಸಿ ನೆಗೆವಂತೆ ಉಷ್ಣ ಕಿರಣಂ ಮೂಡಿ ನೆಗೆದುದಂಬರತಳಕ್ಕೆ (ಸನ್ಮಕೌ. ೧೨-೯).

[←ತೆಲು. ನೆಪ್ಪು]

ನೆಪ್ಪು$_3$ 'ನೇರ್ಪು$_1$' ನೋ.

ನೆಪ್ಪು$_4$ 'ನೇರ್ಪು$_2$' ನೋ.

ನೆಪ್ಪು$_5$ (ನಾ). ಕೋಪ ; ಸಿಟ್ಟು : 'ನೆಪ್ಪುಗೊಳ್$_2$' ಪರಾ.

[←ತಮಿ. ನೆರುಪ್ಪು]

ನೆಪ್ಪು$_6$ (ನಾ). ನೀರಿನ ಅಡ್ಡಗಟ್ಟೆ (?) : ತಪ್ಪಲಿನಲ್ಲಿ ನೆಪ್ಪ ನೋಡುತ್ತ ಹೋಗುತ್ತಿರಲಾಗಿ ಮುಂದೆಯೊಂದು ಕಟ್ಟೆ ಕಟ್ಟಿದುದ ಕಂಡೆ (ಪೂಂಪ. ೨೧೫-೬) ; ಕುಲಚರಿಯನೆಂಬ ಭಕ್ತನ ಕಂಗಳಜಿತಿರಲು ಪೊಳೆಯ ತೀರದಿ ಲಿಂಗವಂರಿಸಿ ಗಂಟಿಂ ಬಲಿದು ನುಲಿಯ ಜಲದಡೆಗೆ ನೆಪ್ಪಂ ಕಟ್ಟಿ[ಟ್ಟಿ]ಯಗ್ಗಣಿಯ ತಂದು ಮಜ್ಜನಕೆಱಿಯಲು (ಗುರುಚಾ. ೫-೬೪). [?]

ನೆಪ್ಪುಗೆ (ನಾ). ಜ್ಞಾಪಕದಲ್ಲಿಟ್ಟುಕೊಳ್ಳುವವನು : "ವನಃ, ವನಕಃ, ವನನ್, ಈ ೩ ನೆಪ್ಪುಗಂ" (ಶಾಶಕ್ಕ. ೧೪೧).

[ನೆಪ್ಪು$_1$(<ನೆನಪು)+-ಗ$_2$]

ನೆಪ್ಪುಗಾತಿ (ನಾ). ಅಂದಗಾತಿ ; ಒನಪುಗಾತಿ ; ಬೆಡಗುಗಾತಿ : ಅಪ್ಪಿದರಪ್ಪು ವಳುಗುರಿಟ್ಟರುಗುರಿಕ್ಕಿ ಉಪ್ಪರಿಸುವಳೊದಱುವಳು ನೆಪ್ಪುಗಾತಿಯು ನೇನುಗಾಣನು ಹೊಕ್ಕರು ಮುಪ್ಪಿಡೆ ಸಾದನೆಗಂದು (ಭರಚ. ೧೧-೮೯). [ನೆಪ್ಪು$_4$ (<ನೇರ್ಪು$_2$)+-ಕಾತಿ$_3$]

ನೆಪ್ಪುಗೊಳ್$_1$ 'ನೇರ್ಪುಗೊಳ್$_1$' ನೋ.

ನೆಪ್ಪುಗೊಳ್$_2$ (ಕ್ರಿ). ಸಿಟ್ಟುಗೊಳ್ಳು ; ಕೋಪಿಸು : ತಪ್ಪಗೆ ಕುಳ್ಳಿರ್ದೆ ದೋಷವಿಲ್ಲೆಂದರೆ ಒಪ್ಪದೆ ನಿಂದಿರ್ದರವರು ಅಪ್ಪಾಜಿಯಾಜೆ ಕುಳ್ಳಿರಿಯೆಂದ ಕುವರನ ನೆಪ್ಪುಗೊಂಡವರು ನೋಡಿದರು (ಭರಚ. ೨೭-೭೯).

[ನೆಪ್ಪು$_5$+ಕೊಳ್$_1$]

ನೆಪ್ಪುದೋಱು (ಕ್ರಿ). ಅಂದವನ್ನು ತೋರು ; ಚೆಲುವಾಗಿ ಕಾಣು : ತುಪ್ಪುಳುಮಿಸಿ ರೇಖೆಗೆ ಬಂದುದಿಲ್ಲ ಮೈದಪ್ಪ ಸಂಪೂರ್ಣವಾಯ್ತಿಲ್ಲ ನೆಪ್ಪುದೋಱುತು ಪ್ರಾಯ ನೆರೆವರಿನ್ನವರೆನುತಿಪ್ಪನಿತಱೊಳಿಂತುಟಾಯ್ತೆ (ಭರಚ. ೭೧-೨೭).

[ನೆಪ್ಪು$_4$(<ನೇರ್ಪು$_2$)+ತೋಱು]

ನೆಪ್ಪುವಡೆ 'ನೇರ್ಪುವಡೆ' ನೋ.

ನೆಬ್ಬ (ನಾ). (?) : ಉಬ್ಬಸಗೈವರನ್ನುಬ್ಬಸರೊಳಗಿಂದ ತೆಗೆದು ಊರ್ಧ್ವಯೊಳಗೆ ಇಟ್ಟು ಪಾಲಿಪನಂತೆ ನೆಬ್ಬವು ತೆರದಂತೆ ಸಂಸೃತಿ ಕಾಣೆ ನೀನು ಗಬ್ಬಿನಲ್ಲಿ ಕೆಟ್ಟು ಪೋಗದಿರು (ವಿಸಾಸು. ೪೪-೧). [?]

ನೆಮರು 'ನಮಲು$_2$' ನೋ.

ನೆಮಲ(?) (ನಾ). ಒಂದು ಸ್ಥಳದ ಹೆಸರು (?) : ಪೆರಮ್ಮಣ್ಣ ಮಗಂ ನೊಡಯಸ್ಸ್ಯ ನೆಮಲದ ತೊರೆಗೊಳ್ಳಿಳಿಜಾದು (ಎಕ. ೪, ಚಂತಾಸು. ೧೧೯-೨ ; ಸು. 1000). [?]

ನೆಮಬ್ಬ್ (?). (?) : ಮುಗುಬ್ಬ್, ನೆಮಬ್ಬ್, ತೆಮಬ್ಬ್ (ಶಬ್ದಾನು. ೧೪೦ ಪ್ರಯೋ). [?]

ನೆಮ್ಮದಿ (ನಾ). ಸಮಾಧಾನ; ಶಾಂತಿ ; ನಿಶ್ಚಿಂತೆ : ಆಯಿಡೆ ನೆಮ್ಮದಿಯೊಳುರುಳಾಡುವುದದ ನೀನೆಮ್ಮೊಡನರುಹು (ಜಿನಭಾ. ೨೦-೫೦); ನಾವು ನೆಮ್ಮದಿಯಾಗಿ ನಿದ್ದೆ ಹೋಗಬಹುದು (ಜ್ಯೋತಿವಿ. ೧೭೩) ; ನೀವೆಲ್ಲರೂ ನೆಮ್ಮದಿಯಿಂದ ಊರಿಗೆ ಹೋಗಿ ಬನ್ನಿ ! (ಪ್ರತಾಪ. ೬೪) ; ನೆಮ್ಮದಿ ಇದ್ದಿದ್ದರೆ ಯಾವ ಹುಡುಗಿ ಗಂಡನ ಮನೆಯನ್ನು ಬಿಟ್ಟು ಬರುತ್ತಾಳೆ ಹೇಳಿ ? (ಪದ್ಮಸ. ೩೨೨) ; ಕಣ್ಣಿಗೆ ನಿದ್ದೆಗೆ ಜಗಳವಾಗುವುದುಂಟೆ ಆದರೆ ನೆಮ್ಮದಿಯುಂಟೆ (ಇಂಚಾಪ. ೨೩೪-೫೬).

[ದೇ.॥ ತಮಿ. ನಮ್ಮತಿ ; ತೆಲು. ನೆಮ್ಮದಿ]

ನೆಮ್ಮದಿಗ (ನಾ). "ನೆಮ್ಮದಿವಂತ ; ಪ್ರಾಮಾಣಿಕ ; ಬಲ್ಲಿದ" (ಜಾನಕೋ. ೧೩). [ನೆಮ್ಮದಿ+-ಗ$_2$]

ನೆಮ್ಮದಿಪರ (ನಾ). ಬದುಕಿಗೆ ಬವಣೆ ಪಡಬೇಕಾಗಿರದವನು ; ಹೊಟ್ಟೆಬಟ್ಟೆಗೆ ಸಾಕಾಗಿ ಹಣ ಮಿಗುವಂತಿರುವವನು ; ಸುಖಿ ; ಸ್ಥಿತಿವಂತ ; ಶ್ರೀಮಂತ : ಒಂದೂರಿಗೆ ಒಬ್ಬೊಬ್ಬರು ನೆಮ್ಮದಿಪರರು, ಕದಿಮೆಯವರೆಲ್ಲರೂ ಬಡವರು (ಕಥಾಮಂ. IV, ೬೧).

[ನೆಮ್ಮದಿ+ಪರ$_2$]

ನೆಮ್ಮದಿವಂತ (ನಾ). =ನೆಮ್ಮದಿಪರ : ತರುವಾಯ ಮುಖ್ಯಾಧಿಕಾರಿಗಳನ್ನೂ ನೆಮ್ಮದಿವಂತರಾದ ಶ್ರಡೆಗಳನ್ನೂ ಕರೆಕಳುಹಿಸಿ ನಯಭಯಂಗಳಿಂದ ಅವರಿಂದ ನಜರಾಹೆಯನ್ನು ತೆಗೆದುಕೊಂಡು ಹಣವನ್ನು ಕೂಡಿಸಿದನು (ಒಡಕ. ೬೨). [ನೆಮ್ಮದಿ+-ವಂತ]

ನೆಮ್ಮದಿವಡೆ (ಕ್ರಿ). ಸಮಾಧಾನ ಹೊಂದು ; ನಿರಾಳವಾಗು : ನೆಂಟರಿಷ್ಟರ ಕಂಡು ನೆಮ್ಮದಿವಡೆದರು (ಇಂಚಾಪ. ೧೬-೭೦).

[ನೆಮ್ಮದಿ+ಪಡೆ$_1$]

ನೆಮ್ಮದಿವೆರು (ಕ್ರಿ). =ನೆಮ್ಮದಿವಡೆ : ನೆಮ್ಮದಿನೆತ್ತು ವಿಶ್ರಮಂದಳೆಗೆ ಮದೀಯ ಜಾಪದಿಂದುವುಂ ಶಿಥಿಲೀಕೃತರಜ್ಜುಬಂಧನಂ (ಶಾಕುಂತ. ೨೩-೪೧). [ನೆಮ್ಮದಿ+ಪೆರು$_1$(<ಪೆಱು$_1$)]

ನೆಮ್ಮಿ, ನೇಹಿ (ನಾ). ೧. ಚಕ್ರದ ಸುತ್ತುಪಟ್ಟಿ,—ಅಂಚುಪಟ್ಟಿ : "ನೆಮ್ಮಿ—ನೇಮಿ = ಹಳಿ" (ತದ್ಭವಕೋ. ೨೩). ೨. ಒಂದು ಬಗೆಯ ಮರ ; ಹುಲಿಗಿಲಮರ ; ಹೊಂಗೆಮರ : "ತಿನಿಶಃ, ಸ್ಯಂದನಃ, ನೇಮಿಃ, ರಥದ್ರುಃ, ಅತಿಮುಕ್ತಕಃ, ಪಂಜುಳಃ, ಚಿತ್ರಕೃತ್–೭ ಹುಲಿಗೇ ಮರದ ಪೆಸರುಗಳು. ಹುಲಿಗಲಿ ನೆಮ್ಮಿ, ಹೊಂಗೆ" (ನಿಘಂ೨. ೧೧೭). **ನೇಹಿ** : ೨. "ನೇಹಿ (ನೆಮ್ಮಿ)— ನೇಮಿ = ಒಂದು ಮರ" (ತದ್ಭವಕೋ. ೨೩) ; ಕಲ್‌ಮುತ್ತುಗ, ಕಲ್‌ಹೊನ್ನೆ, ಕರಿಹೊನ್ನೆ, ನೇಹಿ (ಸ್ಯಟಿಗಿ. ೫೯-೧೧೬೫). [<ಸಂ. ನೇಮಿ]

ನೆಮ್ಮಿಗೆ 'ನೆಮ್ರುಗೆ' ನೋ.

ನೆಮ್ಮಿಸು 'ನೆಮ್ರಿಸು' ನೋ.

ನೆಮ್ಮು$_1$ 'ನೆಮ್ರು$_1$' ನೋ.

ನೆಮ್ಮು$_2$ 'ನೆಮ್ರು$_2$' ನೋ.

ನೆಮ್ಮುಗೆ 'ನೆಮ್ರುಗೆ' ನೋ.

ನೆಮ್ಮುಗೆಗೊಳ್ (ಕ್ರಿ). ಶಾಂತಿ ಹೊಂದು ; ಸಮಾಧಾನವನ್ನು ಪಡೆ ; ನೆಮ್ಮದಿಗೊಳ್ಳು : ಮುನಂ ನೆಮ್ಮುಗೆಗೊಂಡು ಪೆಲೆನಿಲ್ಲಿನಂ ತೀರ್ಥಾಟನಂಬೋಗಲೆಣಿಪಂ (ರಾಮಾಶ್ವ. ೬೫-೧೦).

[ನೆಮ್ಮುಗೆ(<ನೆಮ್ರುಗೆ)+ಕೊಳ್$_1$]

ನೆಮ್ಮುಗೆವಿಡಿ (ಕ್ರಿ). ನಂಬಿಕೆಯಿಡು ; ವಿಶ್ವಾಸವಿಡು ; ನಂಬು ; ನೆಚ್ಚು : ಇದು ಕಾರಣ ನೆಮ್ಮುಗೆವಿಡಿದು ಮಾಡುವ ಭಕ್ತಂಗೆ ಇದೆ ಮಾಟವಯ್ಯ (ಅದವ. ೧೫-೩೨) ; ನೆಮ್ಮುಗೆವಿಡಿದು ನಿಮ್ಮ ದಿಸವಣ್ಣನ ಪ್ರಸಾದವ ಕೊಂಡಿತ್ತು (ಮಡಿಸಂ. ೬೫-೯೫).

[ನೆಮ್ಮುಗೆ(<ನೆಮ್ರುಗೆ)+ಪಿಡಿ$_1$]

ನೆಯ್$_1$, ನೆಯಿ$_1$, ನೆಯ್ಯು, ನೇ, ನೇಯ್, ನೇಯು (ಕ್ರಿ). ನೆಯಿದ, ನೆಯ್ದ, ನೇತ (ಭೂತಕೃ). ನೆಯ್ದು, ನೇದ್ದು

(ಭೂತನ್ಯೂ). ೧. ನೂಲನ್ನು ಮಗ್ಗದಲ್ಲಿ ಹಾಸುಹೊಕ್ಕಾಗಿ ಅಳವಡಿಸಿ ಬಟ್ಟೆಯನ್ನು ತಯಾರಿಸು : "ನೆಯ್—ವಸ್ತ್ರಕ್ರಿಯಾಯಾಂ, ಘೃತೇ ಚ"(ಶಮಧಾ); ಎಳದೆನಿಸಿರ್ದ ಪಾವಸೆಯ ತಣ್ಣೆಟ್ಟಿಯಿಂದಮೆ ನೆಯ್ದು ಸೀರೆ (ಕಾದಂಉ. ೪೫೯) ; ದೇವರ ನಂದಾದೀವಿಗೆಗೆ ಬಿಟ್ಟ ಗಾಣ ವೆರಡು ಹಳವಿಗೆಯಂ ನೆಯ್ವ ಮನೆಯೊಂದು ಹೇಱುನಲು ಎಲೆ ೧೦೦ (ಎಕ. XI, ಚಳ್ಳಕೆ. ೨೧–೩೭ ; 1087) ; ಈ ಸೀರೆಯ ನೆಯ್ದವ ನಾನೋ ನೀನೋ (ದೇದಾವ. ೭೦–೧೪೭) ; ಇಂಗದಿರಿಂದೆ ನೆಯ್ದುದೆನಲಪ್ಪ ದುಕೂಲದ ಕಮ್ಮನಪ್ಪ ಬೆಳ್ದಿಂಗಳೆನಲ್ಕೆ . . . ಮಲ್ಲಿಗೆಯ ಕಾಂತಿ ಮುಸುಂಕೆ (ವರ್ಧಪು. ೬–೪೯) ; ಅಂಬರದ ನಡುವೆ ಬಹುತರದಿಂ ನೆಯ್ದಂಬರದೊಳ್ ಕೆಯ್ಗೊಳಿಸಿದ ಚುಂಬಿತರತ್ನಂಗಳಂತೆ ತಾರಗೆ ಮೆಱೆಗುಂ (ಗಿರಿಕ. ೪–೯೧); ಈರಾಱ್ವತ್ಸರಂಗಳು ಜಾಣ್ಮೆಯಲಿ ನೆಯ್ದು ಮಡಗಿ ದುತ್ತಮವಸ್ತ್ರಮಂ ಪ್ರಿಯವಡರಿ ಬೇಡಿದಡೊಬ್ಬ ತಪಸಿಗೆ ಕೊಡನೆ ಜೇಡರ ದಾಸಂ (ಬಸಪು. ೧೧–೩೬). ೨. ಹೆಣೆ ; ಹೋಡಿಸು : ಕುಸುಮಾಸ್ತ್ರ ವಸ್ತ್ರಂಗಳಂ ಮೆಯ್ಯೊಳ್ ನೆಯ್ದೋರಂತೋಜೆಯರ್ ತೊಡೆದಂಗಾನು ಲೇಪನದ ಸೌರಭ್ಯಮಂ ತೆರಳ್ಚಿ (ಕುಸುಮಾ. ೪–೨೯ ಪ). ೩. ರಚಿಸು ; ನಿರ್ಮಿಸು : ಬೈದರಿಂದ್ರನನಿಂದುಮೌಳಿಗೆ ನೆಯ್ದ ರಥ ನುಗ್ಗಾಯ್ತು ನಾಳವ ಕೊಯ್ದರೋ ಹುಗ್ಗಿಗರೆನುತೊಱಲಿದುದು ಸುರಸ್ತೋಮ (ಕುವ್ಯಾಕ. ೬–೨೫) ; ನಾನು ಬಾಹ್ಯವಿಷಯಪ್ರಪಂಚವನ್ನು ನೆಯ್ದು ಅಲ್ಲಿ ಸಿಕ್ಕು ಪಾರಾಗಲರಿಯದೆ ಒದ್ದಾಡಿಕೊಂಡಿರುವುದೇ ಸುಖ ಶಾಂತಿ ಎಂದಿರುವ ಮನ (ಮೋಳಿಮಾ. ೧೨೨ ಪ್ರಸ್ತಾವನೆ). ೪. ಹೊಂದಿಕೊಳ್ಳು ; ಹೆಣೆದುಕೊಳ್ಳು ; ದಟ್ಟವಾಗಿ ಬೆರೆ,— ಕೂಡು : ಕಿಱುಬಿದಿರುಗಳ ಕಂಟಕಿಗಳು ನೆಯ್ದುಕೊಂಡಿಱುಹೆಗೆ ದಾರಿಯ ಕೊಡದೆ . . . ಮುಸುಕಿ ಹವು (ಕಂನವಿ. ೧೮–೪೫). ನೆಯ್ಯಿ₁ : ೧. ನಾರು ನೂಲು ಕ್ರಿಮಿಜ ರೋಮಂಗಳಿಂದೆ ನೆಯಿದ[ಪಾಠಾಂ. ನೆಯ್ದಾ, ನೈದಾ] ಆ ಸೀರೆ ನಾಲ್ಕು ತೆಱನಕ್ಕು (ಮಂಗರಾ. ೧೦೦–೨೭). ನೆಯ್ಯು : ೧. ನೆಯ್ಯುವವನಿಗೆ ಲಾಳಿ ನಗಕ್ಕೆ ಗಾಳಿ (ಗಾದೆ). ನೇ : ೧. ಒಂದೇ ಮಗ್ಗದಲಿ ನೇತ ಕವಿತೆ ಶಬಲಾಂಶುಕವನುಡುತ ಕವಿಗತಿಸುಖವ ನೀಡು (ಗಿಳಿವಿಂ. ೨೩–೬೯). ೪. ವೇದಪುರುಷನ ವಿಗ್ರಹದಲಿ ವಿಭೇದವಿಲ್ಲದೆ ಬಿಸಜಸಂಭವನಾದಿಯಾದ ಸಮಸ್ತದೇವರು ನೆಲೆವನೆಗಳಾಗಿ ನೇದುಕೊಂಡಿಹರು (ಕುವ್ಯಾಉ. ೪–೬೪) . ೫. ವ್ಯಾಪಿಸು ; ಹರಡು : ಮೆರೆವ ಹೊಂಬಿಸಿಲ್ಕೆಕಿಲಿಂ ತೊಡವುಗಳ ಸಮರೆ ತೆರೆದ ಹೊಲಮಂ ನೇದು ಮನೆಯೊಸಗೆಯಂತೆ ನರುಗಂಪು ತುಂಬಿ ತೆನೆ ಬಾಗೆ ಬಂದಂ ದೊಡ್ಡ ಮರಿಯಾನೆ ಬೆಳ್ಳಿಹೊರೆ ತರುವುದೆಂಬಂತೆ (ಕಾಲೂರ. ೬೨–೧೩೦). ನೇಯ್ : ೧. ವಪತೇ = ನೇಯ್ದಪಂ (ಕಾಶಕೃ. ೧೬೦); ಸಂತೆ ಹೊತ್ತಿಗೆ ಮೂರುಮೊಳ ನೇಯ್ದ ಹಾಗೆ (ಗಾದೆ). ನೇಯು : ೧. ಮುಂಬಯಿ . . . ಮೊದಲಾದ ಪಟ್ಟಣಗಳಲ್ಲಿ ಕೆಲವರು ಶ್ರೀಮಂತರಾದ ವರ್ತಕರು ಇಂಗ್ಲೆಂಡದಿಂದ ನೂಲುವ, ನೇಯುವ ಯಂತ್ರಗಳನ್ನು ತರಿಸಿ ಕಾರಖಾನೆಗಳನ್ನೂ ಹಾಕಿರುತ್ತಾರೆ (ಮುಂಬಯಿ. ೪–೨೯) ; ಹಬ್ಬಿರುವ ಹಳೆಮಾಟ ಹೊಸ ಹೊಸೆಯ ನೇಯುವುದು ಇಬ್ಬೆಳಕಿನಿಂ ತೊಳಗಿ ಪಡೆದುಡೆಯ ಗೆಲುವಂ (ಕಾಲೂರ. ೬೦–೧೨೫) ; ಅವಸರಕ್ಕೆ ಮೂರು ಮೊಳ ನೇಯಬೇಡ (ಗಾದೆ). ೩. ಒಡಲ ನೂಲಿನಿಂದ ನೇಯುವಂತೆ ಜೇಡ ಜಾಲಾ (ನಾದಲೀ. ೮೪–೯); ಈ ಪ್ರತಿಮೆಗಳನ್ನು ನೇಯುವಾಗ . . . ನಮ್ಮ ಮನಸ್ಸಿನಲ್ಲಿ ಹೇಗೆ ಅವು ಕೂಡುವುವೋ ಹಾಗೆಯೇ ಹೋಡಿಸುತ್ತಾನೆ (ಚಂಡೆಮ. ೩ ಮುನ್ನುಡಿ) ; ಪದಗಳನ್ನು ಗೀತರೂಪವಾಗಿ ನೇಯುವುದು, ಅವುಗಳ ಓಟವೇ ನೃತ್ಯದ ಸಂತೋಷ ಗಳನ್ನು ನೀಡುವಂತೆ ಮಾಡುವುದು ಇವು ಮುಖ್ಯ (ಭಾವಗೀ. ೪೯); ಇದೆಲ್ಲವನ್ನು ಸೂಕ್ಷ್ಮವಾಗಿ ಅವಲೋಕಿಸಿ, ಶನಿಖಿಸಿ ನಾನು ನನ್ನ ಜಾಡನ್ನು ನಿವಾಂತವಾಗಿ ನೇಯತೊಡಗಿದೆ (ದೀಪಹ. II, ೨೮).

[ದೇ.॥ ತಮಿ. ಮಲ. ಕೊಡ. ನೆಯ್ ; ತುಳು. ನೆಯ್, ನೆಯಿ; ತೆಲು. ನೇಯು ; ಕುವಿ. ನೆಹ್ನಾಯ್]

ನೆಯ್ಗ್₂, ನೆಯ್ಯಿ₂, ನೈ₂ (ನಾ). ೧. ತುಪ್ಪ ; ಆಜ್ಯ : "ನೆಯ್—ವಸ್ತ್ರಕ್ರಿಯಾಯಾಂ, ಘೃತೇ ಚ" (ಶಮಧಾ); "ನೆಯ್ಯೆಂದಾಜ್ಯಂ" (ಕಶಸಾ. ೭–೧೩೭); ನಾಯ್ಗೆ ನೆಯ್ಯಕ್ಕುಗುಮೇ (ಸಮಪ. ೪–೩೯); ಗರಗರನಾಹುದು ಕೂಟ್ ನೆಯ್ ಸುರಯಿಯ ಕಂಪಾಯ್ತು ಸಟ್ಟುಗಕ್ಕಂ ಮೊಸರ್ಗಂ ಪಿರಿದುಂ ಪೋರ್ಕುಳಿಯಾದುದು ಕರಮಿನಿದಾಯ್ತಱಕೆ ಹೊದಕನಲ್ಲದೆ ಹೊರಕಂ (ಸೂಕ್ತಿಸು. ೧೧–೯೦); ಪಿರಿದುರಿದ ಕಿಚ್ಚಿಂಗೆ ನೆಯ್ಯನೆಱೆ ವಂದದಿಂ ಪರಿಪರಿಯ ನಿಷ್ಠುರದ ಮಾತುಗಳ ನುಡಿವ (ಜ್ಞಾನಚಂ. ೧–೯೬) ; ಕಿಚ್ಚು ನೀರಿಂದ ನಂದುವುದದು ನೆಯ್ಯಿಂದ ಹೆಚ್ಚುವುದು (ಭರಚ. ೬೫–೪೦) ; ಘಟ್ಟಗೊಂಡ ತಿಳಿನೆಯ್ಯಂತೆ (ರಾಜಶೇ. ೩–೮೫). ೨. ಜೇನುತುಪ್ಪ : ಪುದಿದಡವಿಯ ಕಟ್ಟಲೆ ಸೂಲದೊಳಿಕ್ಕಿದೊಡಿಱುದು ಸೋರ್ವ ತಿಂಗಳ ಪೆಣದಂದದಿನಿರ್ದುಪುರ್ವಿ ಕೆಟಗುರ್ಕಿದ ನೆಯ್ಯಿಂ ಜೇನ ಪುಟ್ಟ ಪೆರ್ಮರ ಗಾಡೊಳ್ (ಲೀಲಾವ. ೬–೨೬); ಜೇನ್‌ಹುಟ್ಟಯಿನೊಯ್ಯನೆ ನೆಯ್ಯೊಸರುವವೊಲ್ (ಉದ್ಭದೇ. ೬–೯). ೩. ಎಣ್ಣೆ ; ತೈಲ : ಸೌಂದರಿಗೆ ಸಮಂತು ನೆಯ್ಯನೊಸೆದೇಱುಸಿದರ್ ಕುಲಕಾಮಿನೀಜನಂ (ಶಾಂತೀಶ್ವ. ೪–೨೨೦) ; 'ನೆಯ್' ಎಂಬುದಕ್ಕೆ 'ತೈಲ' ಎಂಬ ಅರ್ಥವಿತ್ತು (ಸಂಶೋಧ. ೮೮). ನೆಯ್ಯಿ₂ : ೪. ಜೆಡ್ಡು : ನೆಯಿ ಹತ್ತದ ನಾಲಿಗೆಯಂತೆ ಹುಡಿಹತ್ತದ ಗಾಳಿಯಂತೆ . . . ಇರ್ದೆನಯ್ಯಾ (ವಚಸಂ. ೪೭೮–೧೮೬). ನೈ₂ : ೧. ಕೈ ಮುಟ್ಟದ ಗತಿಯಂತೆ ನೈ[ಪಾಠಾಂ. ನೆಯಿ] ಮುಟ್ಟದ ನಾಲಿಗೆಯಂತೆ ಪವನ ಮುಟ್ಟದ ಪರ್ಣದಂತೆ ಭಾವಭ್ರಮೆಯೊಳಗಿದ್ದೂ ಇಲ್ಲದ ಶರಣನ ಇರವು ಸದಾಶಿವಮೂರ್ತಿಲಿಂಗದ ಅಂಗವು ತಾನೆ (ಅಱಿಮಾ. ಕ. ೧೫೯–೬೧೧ ; ಗಣಭಾ. ೧೨೧–೪ ನೋ).

ನೆಯ್ಯನಿಳುಹು = ನೆಯ್ಯಿಳಿಸು : ಮಂಗಲವಾಗು ನೀನಜಿತಸೇನಂಗೆನು ತಂಗನೆಯರು ನೆಯ್ಯನಿಳುಹಿ ಉಂಗುರುಡುಕೆಗಳ ಮಾಡಿದರಭಿನವಮಂಗಲ ದೇವಿಗೆ ಮುದದಿ (ಚಂಪ್ರಸಾಂ. ೧೨–೧೮೦). ನೆಯ್ಯನೇಱುಸು = ನೆಯ್ಯೇಱುಸು : ಲಗ್ನಸುಮುಹೂರ್ತದಲ್ಲಿ ಲಲನೆಯರ್ ಗಿರಿಜೆಗಕ್ಷತೆ ಯಿಟ್ಟು ಶೋಭಾನದುಲುಹಿನಿಂ ನೆಯ್ಯನೇಱುಸಲಿತ್ತ ಪರಶಿವಂ ಚಲಿಸಲನು ವಾದನು (ಲತಿಚಿಂ. ೧೫–೧೯) ; ಲಲನೆ ನಿನ್ನೆರ್ದೆವಾಗಿದಲರೆಂಬಿವೆಂದಂಘ್ರಿ ಗಳಿಗೆಱಗಿಸಿ ಸಂತಗೆಯ್ವಂತೆ ಎಳೆಯಳಡಿಗೆ ನೆಯ್ಯನೇಱುಸಿದರು ಚೆಲ್ವ ಕೆಳದಿಯರು . . . ಇನಿಯನ ಮನಕನುರಾಗವನೀವ ವನಿತೆಯ ದೋರ್ಮೂಲಗಳೆಂದು ಘನಕುಚೆಯರು ಸರದಿಂ ಮುಟ್ಟಿ ತೋರ್ಪಂತೆ ವಿನಯದೆ ನೆಯ್ಯನೇಱುಸಿದರು ಮುದದೆ ಮಸ್ತಕದೊಳು ನೆಯ್ಯನೇಱು ಸಿದರಬ್ಜವದನೆಗೆ ಕೆಳದಿಯರು (ತ್ರಿಭುತಿ. ೨೨–೩೧).

[ದೇ.॥ ತಮಿ. ಮಲ. ಕೊಡ. ಕೊಲಾ. ನಾಯ್ಕಿ. ಪರ್ಜಿ. ನೆಯ್ ; ತುಳು. ನೆಯಿ ; ತೆಲು. ನೆಯಿ, ನೆಯ್ಯಿ, ನೇಯಿ ; ಗಡಬ. ನೆಯ್, ನೆಯ್ಯು ; ಗೊಂಡಿ. ನೀ ; ಕುಇ. ನೀಜು ; ಕುವಿ. ನೀಯು ; ಕುರುಖ್. ನೇತ ; ಕೋತ. ನಯ್ ; ತೊದ. ನಿಯ್]

ನೆಯಕಾರ 'ನೆಯ್ಕಾರ' ನೋ.

ನೆಯಕಿ 'ನೆಯ್ಗೆ' ನೋ.

ನೆಯಿ₁ 'ನೆಯ್ಗ್₁' ನೋ.

ನೆಯಿ₂ 'ನೆಯ್ಗ್₂' ನೋ.

ನೆಯಿಕಾರ 'ನೆಯ್ಕಾರ' ನೋ.

ನೆಯಿಗೆ 'ನೆಯ್ಗೆ' ನೋ.

ನೆಯಿದ 'ನೆಯ್ಗ್₁' ಪರಾ.

ನೆಯಿದಲೆ 'ನೆಯ್ದಿಲ್' ನೋ.

ನೆಯಿದಿಲು 'ನೆಯ್ದಿಲ್' ನೋ.

ನೆಯಿದೊಡೆ (ಕ್ರಿ). ಎಣ್ಣೆ ಹಚ್ಚು; ತೈಲವನ್ನು ಲೇಪಿಸು : ನೆರೆದು ಬಂದಾ ಗೋಪಿಯರು ತಾಂ ಸ್ಮರನ ತಂದೆಯನೆತ್ತಿಕೊಳುವತಿಹರುಷದಲಿ ನೆಯಿದೊಡೆವ ಮೈದೊಳೆದೈದೆ ತೂಪಿಱುವ ಮುದ್ದಿಪ ಪಾಡಿ ತೂಗಿಪ ನಲಿವಿನಿಂದಿಹರು (ಸಾಳ್ವಭಾ. ೨೧-೨೬). [ನೆಯ್ದಿ$_2$(<ನೆಯ್$^{\text{ಗ}}_2$)+ತೊಡೆ$_1$]

ನೆಯ್ಕಾರ, ನೆಇಗಾರ, ನೆಯಕಾರ, ನೆಯಿಕಾರ, ನೇಕಾರ, ನೇಗಾರ (ನಾ). ನೇಯ್ಗೆ ಕೆಲಸ ಮಾಡುವವನು; ನೇಯುವವನು : 'ನೆಯ್ಕಾರಿಕೆ' ಪರಾ. **ನೆಇಗಾರ :** ಸುಗುಟೂರ ×××ಂಕ ನಾಡಿನ ಹವಳದ ನೆಇಗಾರ ಸೆಟಗಳಿಗೆ ಹಾಕಿಸ್ತ ಶಿಲಾಶಾಸನ (ಎಕ. X (S), ಕೋಲಾರ. ೨೬೮-೪; 1578). **ನೆಯಕಾರ :** ಅವರ ಪರಿಚಯವನ್ನು ನೆಯಕಾರರಿಗೆ ಮಾಡಿಕೊಟ್ಟರು (ಇಂಗ್ಲಇ. ೧೧). **ನೆಯಿಕಾರ :** "ಕುವಿಂದ—ಜೇಡ, ನೆಯಿಕಾರ" (ಗಂಗಾಪು. ೯೧). **ನೇಕಾರ :** "ಜಾಡ, ನೇಕಾರ, ಹಟಗಾರ, ದೇವಾಂಗ" (ಕಂನುಹು. ೮೪); ಶಿಕ್ಷಣ ಪಡೆದ ನೇಕಾರರು . . . ಪರಿಶ್ರಮ ಪಡೆದಿದ್ದರು (ಕ್ರಿಯಾತಿ. ೯೪); ಬಾಳುವೆ ನಡೆಯಬೇಕಾದರೆ ಕುಂಬಾರ, ಹಡಪಿಗ, ಮಡಿವಾಳ, ನೇಕಾರ ಮೊದಲಾದವರೂ ಬೇಕು (ಕನ್ನಜಾ. ೪೪). **ನೇಗಾರ :** ನೇಗಾರ, ಚಮ್ಮಾರ, ಬಡಗಿ, ನಾಯಿಂದ ಇವರುಗಳು ತಮ್ಮ ತಮ್ಮ ಕಸುಬುಗಳಿಂದಲೇ ಜೀವನಾಧಾರಕ್ಕೆ ಬೇಕಾಗುವಷ್ಟು ದವಸಧಾನ್ಯ ಪಡೆಯುತ್ತಿದ್ದರು (ಕಳಹು. ೯೩). [ನೆಯ್$^{\text{ಗ}}_1$ + -ಕಾರ(<-ಕಾಱ)]

ನೆಯ್ಕಾರಿಕೆ (ನಾ). ನೇಯುವ ಕೆಲಸ; ನೆಯ್ಗೆ : ಪ್ರಾಚೀನಕಾಲದಲ್ಲಿ ನೆಯ್ಕಾರಿಕೆಯ ಸಲುವಾಗಿ ಪ್ರಸಿದ್ಧವಾದ ಸ್ಥಾನವೆಂದರೆ ಪೈಠಣ (ಕರ್ಣಾಪೂ. ೬೫). [ನೆಯ್ಕಾರ+ -ಇಕೆ]

ನೆಯ್ಕೂಳು (ನಾ). ತುಪ್ಪದೊಡನೆ ಬೆರಸಿದ ಅನ್ನ; ತುಪ್ಪದ ಅನ್ನ : ನೆಯ್ಕೂಳು, ಕಡುಂಬುಟ್ಟು ಮತ್ತು ಪಾಯಸಗಳನ್ನು ಮಾಡಿದ್ದರು (ನಡೆದಾ. II, ೧೧೩೨); ಕಡುಂಬುಟ್ಟು ಕೋಳಿಕರಿ ನೆಯ್ಕೂಳುಗಳ ಬಿರ್ದೂಟದಿಂದ ಅವನು ಬಾಯ ಸವಿಯನ್ನು ತಣಿಸಿಕೊಂಡ (ಹುಲಿಹಾ. ೧೪೬). [ನೆಯ್$^{\text{ಗ}}_2$+ಕೂಳು$_2$(<ಕೂಟ್$^{\text{ಗ}}_1$)]

ನೆಯ್ಗಡಲೆ (ನಾ). ಎಣ್ಣೆಯಿರುವ ಕಡಲೆ; ನೆಲಗಡಲೆ; ಕಡಲೆ ಕಾಯಿ; ಸೇಂಗಾ: ನೆಯ್ಗಡಲೆಯಂ ಮೆಲುತುಂ (ಕುಸುಮಾ.೧೧-೧೫೯). [ನೆಯ್$^{\text{ಗ}}_2$+ಕಡಲೆ]

ನೆಯ್ಗೆ, ನೆಯಕಿ, ನೆಯಿಗೆ, ನೇಗೆ, ನೇಯಿಗೆ (ನಾ). ೧. ಬಟ್ಟೆ ನೇಯುವುದು; ನೇಕಾರನ ಕೆಲಸ: "ನೆಯ್ಗೆಗೆ ಮಧ್ಯನಾರಿಯೊಳಗೂಕೆ ಶಬ್ದಂ" (ಶಬ್ದಮಂ. ೬೯); ಊತ, ಸ್ಯೂತ=ಇವು ನೂಲ ನೆಯ್ಗೆಯಲ್ಲಿಯೂ ಹೊಲಿಗೆಯಲ್ಲಿಯೂ ವರ್ತಿಸುಗು (ನಾಚರಾ. ೬). ೨. ಹೂಟ; ಸಂಚು; ತಂತ್ರ : ದೈವದೂರರು ಧರ್ಮಹೀನರು ನೆಯ್ವ ನೆಯ್ಗೆಗಳೆನುತ ಮಿಗೆ ಬಿಸುಸುಯ್ವುತಿರ್ದರು ಕರ್ಣ ಕೃಪ ಗುರುನಂದನಾದಿಗಳು (ಕುಪ್ಯಾದ್ರೋ. ೧೪-೪೬). ೩. ಎಣಿಕೆ; ವಿಚಾರ; ಆಲೋಚನೆ : ಬಿಡಿಸಿದಧರದ್ವಯ ವಿಷಾದದ ತಡಿಯ ಚಿತ್ತದ ನೆಯ್ಗೆ ಬೇಱೊಂದೆಡೆಯಲಿದ್ದುದು (ಕುಪ್ಯಾಅ. ೨೧-೧೩). **ನೆಯಕಿ :** ೧. ವಸ್ತ್ರವು . . . ಇಂಥಾ ತರದ ದಪ್ಪ ನೆಯಕಿ ಉಳ್ಳದ್ದಿರಬೇಕು (ಮುಂಬಪ್ಯಾ. ೪೦). **ನೆಯಿಗೆ :** (ಕ). **ನೇಗೆ :** ೧. ಋಗ್ವೇದದಲ್ಲಿ ನೇಗೆಯ ಕಲೆಯ ವಿಷಯವಾಗಿ ಬಹು ಸೊಗಸಾದ ದೃಷ್ಟಾಂತಗಳು ಕಂಡುಬರುತ್ತವೆ (ಜಾದಿಶಾ.೧೦). **ನೇಯಿಗೆ :** ೧. ನೇಯಿಗೇ ಕೆಲಸವು ಎಲ್ಲಾ ಕಡೆಗಳಲ್ಲಿಯೂ ನಡೆಯುತ್ತದೆ (ಭೂಗೋಳ. ೩೯); ನೇಯಿಗೆಯಾದರೂ ನಯವಿದ್ದರೆ ನಾಣ್ಯ ಸಿಕ್ಕೀತು (ಗಾದೆ).

ನೆಯಿಗೆಯವ, ನೇಯಿಗೆಯವ=ನೇಯುವ ಕೆಲಸ ಮಾಡುವವನು; ನೇಕಾರ : ಇನ್ನೊಂದು ಸಣ್ಣ ಮನೆಯಲ್ಲಿ ಮೊದಲಿನಿಂದಲೂ ಯಾರೋ ಒಬ್ಬ ನೆಯಿಗೆಯವರ ಮಗ್ಗ ನಡೆದುಕೊಂಡು ಬಂದಿತ್ತು (ಸಾಹೇಬ್. ೫); "ತಂತುವಾಯಃ, ಕುವಿಂದಃ—೨ ನೇಯಿಗೆಯವನ ಹೆಸರು" (ಸಿದ್ಧಾಂತಿ. ೩೧೦); ನೇಯಿಗೆಯವನಿಗೆ ಯಾಕೆ ಕೋತೀಮರಿ ? (ಗಾದೆ). **ನೆಯಿಗೆ ಹುಳ**=ಜೇಡರ ಹುಳು; ಊರ್ಣನಾಭ : "ಊತಾ, ತಂತುವಾಯಃ, ಊರ್ಣನಾಭಃ, ಮರ್ಕಟಕಃ, ಜಾಡಹುಳು, ಸಾಲೇಹುಳ . . . ನೆಯಿಗೇಹುಳ" (ಸಿದ್ಧಾಂತಿ.೧೫೬). [ನೆಯ್$^{\text{ಗ}}_1$+-ಗೆ]

ನೆಯ್ಗೆಕಾಱ (ನಾ). = ನೆಯ್ಕಾರ : ತುಹಿನಕರಂ ಮಿಥುನದೊಳಿರೆ ಮಹಿಜಾದಿಗಳೀಕ್ಷಿಪಂದು ಲೋಹಾಜೀವ್ಯಂ ಮಹಿನಾಥಂ ವಿಬುಧಂ [ಭಯ]ರಹಿತಮನಂ ನೆಯ್ಗೆಕಾಱನಧನನೆನಿಕ್ಕುಂ (ಜಾತತಿ. ೨೦-೩). [ನೆಯ್ಗೆ+-ಕಾಱ]

ನೆಯ್ಗೆಗೊಳ್ (ಕ್ರಿ). ಹೆಣೆದುಕೊಳ್ಳು; ಒಂದಕ್ಕೊಂದು ಸೇರಿಕೊಳ್ಳು : ಗುಲ್ಮಮುಲಪಮಾ ವೀರುಧಂ ಸ್ತಂಬಮೆನೆ ನೆಯ್ಗೆಗೊಂಡಿರ್ದ ಹೊದಱೆನಿಸಿಕ್ಕು (ಮಂಗರಾ. ೩೩-೬). [ನೆಯ್ಗೆ+ಕೊಳ್$_1$]

ನೆಯ್ದ 'ನೆಯ್$^{\text{ಗ}}_1$' ಪರಾ.

ನೆಯ್ದಿಲ್, ನೆಯಿದಲೆ, ನೆಯಿದಿಲು, ನೆಯ್ದಿಲು, ನೆಯ್ದಿಲೆ, ನೈದಿಲ್, ನೈದಿಲು, ನೈದಿಲೆ (ನಾ). ನೀರಿನಲ್ಲಿ ಬೆಳೆಯುವ ಒಂದು ಬಗೆಯ ಹೂವು; ಕುಮುದ; ಉತ್ಪಲ : "ಇಂದೀವರಂ, ಉತ್ಪಲಂ ಈ ೨ ನೆಯ್ದಿಲ್" (ಹಲಾಯು. ೧೧೨-೫೯); ನೆಯ್ದಿಲ ಕಾವಂ ತುದಿಗೆಯ್ದೆ ಸೀಳ್ವ ತೆಱದಿಂ ಸೀಳ್ದಂ ಜರಾಸಂಧನಂ (ಪಂಪಭಾ.೬-೨೬); ನೆಯ್ದಿಲೊಳ್ಮುಗುಳಿನ ಮಾಲೆಯೆಂದಸಿಯನಪ್ಪುವ . . . ಎಗ್ಗನಂತೆ (ಕಾದಂಪೂ. ೮೪೭); ದಿಟ್ಟ ನೆಯ್ದಿಲ ಪೊಸವಾಸಿಗದೊಳೆಣೆಯೆನೆ (ಶಾಂತಿಪು. ೫-೧೫೮); ತಿಳಿಗೊಳಂ ಪೆಣ್ಣಂಚೆಯಿಂ ಬೆಂಚೆ ನೆಯ್ದಿಲ ಪೂವಿಂ . . . ಒಪ್ಪೆ (ಮಲ್ಲಿಪು. ೨-೧೫); ಗಿರಿಜೆ ಶಶಿವದನೆ ಕೊಳನಂ ಭರದಿಂ ಪುಗೆ ನೆಯ್ದಿಲೆಯ್ದಿದುವು ವಿಕಸನಮಂ (ಗಿರಿಕ. ೪-೨೧). **ನೆಯಿದಲೆ :** ಪದುಮ ಪಂಜಳ (ಪಜ್ಜಳ)ವರ್ಣ ನೆಯಿದಲೆ (ನೈದಿಲೆ)ಯಾಗಿರ್ದಳವ್ವೆ (ಸರ್ವಪ.೬೯-೩೭೪). **ನೆಯಿದಿಲು:** ತೊಳಪ ಕಂಬೆಳಗಿನಿಂದ ನೆಯಿದಿಲ[ಪಾಠಾಂ. ನೈದಿಲ] ಬಳಗವನು ಸಾಲಿಡುತ (ಸಾಳ್ವಭಾ. ೩೨-೧೬). **ನೆಯ್ದಿಲು :** "ಇಂದೀವರಂ-ನೆಯ್ದಿಲು, ಶುಂಠಿ, ಕರಿಯ ಕೋಷ್ಠ" (ಓಷಧಿ.೧೪); "ಚಂದ್ರಿಕಾಂಬುಜಂ-ನೆಯ್ದಿಲು, ಬಿಳಿಯ ನೆಯ್ದಿಲು" (ಓಷಧಿ. ೫೫). **ನೆಯ್ದಿಲೆ :** "ಉತ್ಪಲಂ ಇಂದೀವರಾಖ್ಯಮೆನೆ ನೆಯ್ದಿ[ಪಾಠಾಂ. ನೈದಿ]ಲೆಗೆ ನಾಮ ಮಕ್ಕುಂ" (ಮಂಗರಾ. ೧೨೪-೧೬); ಪೋಗಲಾಜದೆ ನೆಯ್ದಿಲೆ ಮುಂದೆ ಮುಚ್ಚಿತು ಮೂಗಾಯ್ತು ಜೊನ್ನವಕ್ಕಿಗಳು (ಮೋಹತ. ೧೮-೧೦೭); ತಳಿರಡಿಗೆ . . . ನೆಯ್ದಿ[ಪಾಠಾಂ. ನೈದಿ]ಲೆ ಕಣ್ಗೆ ಬಾಳೆ ತೊಡೆಗೆ . . . ಗಿಳಿಗಳಿಂಚರಕೆ ಸೋಲ್ದವಯವಂಗಳೊಳ್ನೆಲಸಿದುವು (ಜೈಮಿಭಾ. ೩೦-೪); ನೆಯ್ದಿ[ಪಾಠಾಂ. ನೈದಿ]ಲೆ ಪಗಲ್ಮುಗಿಯದು ಬೆಳ್ದಿಂಗಳೆಂದು ಭಾವಿಸಿ ಹಿಮಮಂ (ರಾಜಶೇ. ೯-೯). **ನೈದಿಲ್ :** "ಉತ್ಪಲಃ—ಕೋಷ್ಠ, ಲಾಮಂಚ, ನೈದಿಲ್, ಸುಗಂಧಿ, ಮಾಗಳಿ" (ಓಷಧಿ. ೧೫); ಕಣ್ಗಳೋ ದೊರೆವೆತ್ತೊಪ್ಪುವ ನೈದಿಲೋ (ಕಬ್ಬಿಕಾ. ೩೩೯); ನೈದಿಲ ತಾವರೆಯ ಮಿತ್ರರಿಗೆ ಮಂಡೆಯೊಳಿಟ್ಟೆನಂಜುಳಿಯ (ಕುಪ್ಯಾಸ. ೧೫-೨೮); ಪದ್ಮಮಂ ಮಿಗೆ ತೊಱೆದಲ್ಲಿ ಲಕ್ಷ್ಮಿನಿಲೆ ನೈದಿಲೊಳ್ (ರಾಜಶೇ. ೯-೪). **ನೈದಿಲು :** "ಜಾತ್ಯುತ್ಪಲಂ - ನೈದಿಲು" (ಓಷಧಿ. ೬೨); ನಳಿನದಳದೊಳಗಡಗಿದವು ನೈದಿಲುಗಳಲಿ ತನಿಮೊರೆವ ತುಂಬಿಯ ಕಳರವಕೆ ಬೆಚ್ಚಿದುವು. . .ಜಕ್ಕವಕ್ಕಿಗಳು (ಕುಪ್ಯಾದ್ರೋ. ೧೬-೧೫); ಸೀದವಾ ಮಗ್ಗುಲಿನ ಮೈಯಲಿ ನೈದಿಲಿನ ತಾವರೆಯ ಕದಳಿಯ ನಾದಿಕೆಯ ನಾಳಂಗಳುರಿನೊರೆಗುದಿಯ

ಸಬುದದಲಿ (ತೊರರಾ. ೩-೧೧-೪೭) ; ಚೆಂಗಣಿಗಿಲು ನೈದಿಲು ಹೊಂದಾವರೆ ಪೊಂಗಿದ ಸರಸಿಗಳಿಂದ ಮಂಗಳಮಯವೆನಿಪುದ್ಯಾನ ಕಣ್ಗೆ ಬೆಡಂಗಾಗಿ ರಾಜಿಸುತಿಹುದು (ಕಂಸವಿ. ೨-೪೯). **ನೈದಿಲೆ :** ಬಲು ಬಿಸಿಲೊಳುಱೆ ನೊಂದ ನೈದಿಲೆಗಳಿಗೆ ಚಂದ್ರಿಕೆ . . . ಭವಗೋಟಲೆಯ ಜೀವಿಗೆ ಸುಪ್ರಬೋಧದ ಸುಳುವಿನಂತಿರೆ ಪಾರ್ಥ ಮೈದೋಱಿದನು ನಿಜಬಲಕೆ (ಕುವ್ಯಾದ್ರೋ. ೩-೪೬).

ನೆಯ್ದಿಲ ಗಡ್ಡೆ, ನೈದಿಲ ಗೆಡ್ಡೆ = ನೈದಿಲೆ ಬೇರಿನಲ್ಲಿರುವ ಗಡ್ಡೆ : "ಶಾಲೂಕ-ನೆಯ್ದಿಲ ಗಡ್ಡೆ" (ನಾಚಿರಾ. ೬) ; "ಸೋತ್ಪಲ = ನೈದಿಲ ಗೆಡ್ಡೆ" (ಬಾಹಟೀ. ೨-೨-೬೦ ಪ). **ನೆಯ್ದಿಲಗಣ್ಮೆಯ್ಯ (?)** = ಕೃಷ್ಣ : ಉಱೆ ಮೆಱೆವ ಪೆಣ್ಮಾಣಿಕಗಡಣವನಿತ್ತ ನೆಯ್ದಿಲಗಣ್ಮೆಯ್ಯ ರತಿಮನೋಧವಗೆ (ಮೋಹತ. ೧೫-೨೧). **ನೆಯ್ದಿಲ ತಕ್ಕ** = ನೈದಿಲೆ ಹೂವಿನ ಗೆಳೆಯ,—ಪ್ರಿಯ ; ಚಂದ್ರ : ನೆಯ್ದಿಲ ತಕ್ಕನುದಯಗಿರಿಶಿಖರಮನೇಱಲ್ ಪಿರಿದುಂ ಸೊಗಸಿದುದು (ಜಯಕಾ. ೧೧-೫೯). **ನೆಯ್ದಿಲ ನನೆಗಾಱ** = ನೆಯ್ದಿಲ ತಕ್ಕ : ಶರಧಿಯು ಬೆಳೆಗಾಱ ನೆಯ್ದಿಲ ನನೆಗಾಱ ವಿರಹದುಬ್ಬಟೆಗಾಱ . . . ಚಂದಿರನುದಿಸಿದ (ವರ್ಧಚ. ೮-೭). **ನೆಯ್ದಿಲ ನಲ್ಲ** = ನೆಯ್ದಿಲತಕ್ಕ : "ನೆಯ್ದಿಲ ನಲ್ಲಂ . . . ಇರುಳೆಱೆಯನಪ್ಪಂ" (ಚತುನಿ. ೨೧೧). 'ನೆಯ್ದಿಲ್ನಲ್ಲ' ಪರಾ. **ನೆಯ್ದಿಲ ಬಣ್ಣ** = ನೈದಿಲೆ ಹೂವಿನ ಬಣ್ಣ ; ಕಪ್ಪು : "ಶ್ಯೇನಿಯೆಂಬುದು ನೆಯ್ದಿಲ ಬಣ್ಣಂ [ಪಾಠಾಂ. ನೈದಲ ವರ್ಣ]" (ಹಲಾಯು. ೧೨೨-೫೩). **ನೆಯ್ದಿಲ ಮಯ್ದುನ** = ನೆಯ್ದಿಲ ತಕ್ಕ : (ಕಿ). **ನೈದಿಲರಸ** = ನೈದಿಲೆಯ ಒಡೆಯ ; ಚಂದ್ರ : ಕರಯುಗಳತಳದಲಿ ಪಾದದಲಿ ಪದ್ಮಂಗಳೆಡದಲಿ ಮತ್ತಿ ನೊಸಲಿನಲಿ ನೈದಿಲರಸನ ಚಿಹ್ನವಿವು ತಾನೈದಿಹವು (ತೊರರಾ. ೫-೩-೯೦). **ನೈದಿಲ ಸಖ** = ನೆಯ್ದಿಲ ತಕ್ಕ : ವಿರಹಿಗಳಯ್ಯ ನೈದಿಲ ಸಖನುಡುರಾಜ ಸರಸಿಜರಿಪು ಮೃಗಧರನೆ ತರುಣಿ ರೋಹಿಣಿಯ ಚಂದ್ರನೆ ನಲ್ಲ ಬಾ ಎಂದು ಕರೆದು ಚಕೋರನುಲಿದವು (ನಿಜಸಾಂ. ೩-೬).

[ದೇ.॥ ತಮಿ. ಮಲ. ನೆಯ್ತಲ್ ; ತುಳು. ನೈದಿಲೆ]

ನೆಯ್ದಿಲು 'ನೆಯ್ದಿಲ್' ನೋ.

ನೆಯ್ದಿಲೆ 'ನೆಯ್ದಿಲ್' ನೋ.

ನೆಯ್ದಿಲೆಗೋಲ್, ನೈದಿಲೆಗೋಲ್ (ನಾ). ನೈದಿಲೆಯ ಹೂವಿನ ಬಾಣ ; ಮನ್ಮಥನ ಬಾಣ : ಗಂಡಲರ್ವಕ್ಕಿ ತಿಱುವಾಂತ ಕುಸುಮ ಕೋದಂಡವನೆಡಗೆಯ್ಯೊಳಾಂತು ಚಂಡವಿಕ್ರಮ ನೆಯ್ದಿಲೆಗೋಲ ತಿರುಹುತ ಕಂಡನು ಕುಳಿತಿರ್ದ ಶಿವನ (ಮೋಹತ. ೭-೫೨). **ನೈದಿಲೆಗೋಲ್ :** ಗೊಲೆಗೊಳಿಸಿದ ಪುಷ್ಪಚಾಪ ಸರೋಜ ನೈದಿಲೆಗೋಲ್ಗಳ ಕುಸುಕಿಱಿದು (ಮೋಹತ. ೭-೨೩). [ನೆಯ್ದಿಲೆ (<ನೆಯ್ದಿಲ್)+ಕೋಲ್$_1$]

ನೆಯ್ದಿಲ್ಗೆಳೆಯ (ನಾ). ನೈದಿಲೆ ಹೂವಿನ ಗೆಳೆಯ ; ಚಂದ್ರ : "ಜೊನ್ನೊಡಲಂ, ಸವಿಗಡಲಣುಗಂ . . . ನೆಯ್ದಿಲ್ಗೆಳೆಯಂ . . . ತಿಂಗಳ್ — ಈ ೨೦ ಚಂದ್ರನ ಪೆಸರ್" (ಕಶಸಾ. ೪೮-೨೩) ; "ನೆಯ್ದಿಲ್ಗೆಳೆಯಂ ವಿಧು ಬೆಳ್ಗದಿರಂ" (ಕರ್ಣಾನಿ. ೩೯) ; "ಎರಳೆಗುಱುಪಂ ಚಂದ ನೆಯ್ದಿ[ಪಾಠಾಂ.ನೈದಿ]ಲ್ಗೆಳೆಯಂ . . . ಬಿದುವೆನಲ್ ಚಂದ್ರನಾಮವು" (ಶಬ್ದಮಂ. ೧೭). [ನೆಯ್ದಿಲ್+ಕೆಳೆಯ]

ನೆಯ್ದಿಲ್ಗೆಱೆ (ನಾ). ಒಂದು ಕೆರೆಯ ಹೆಸರು : ತೆಱ್ಕಣ್ಣಾ ಸೀಮೆ ನೆಯ್ದಿಲ್ಗೆಱೆಯಾ ಏಱಿ (ಎಇ. XXI, ೨೯-೧೩ ; ಸು. ೩ನೆಯ ಶತ).

[ನೆಯ್ದಿಲ್+ಕೆಱೆ]

ನೆಯ್ದಿಲ್ಗೊಳ, ನೈದಿಲ್ಗೊಳ (ನಾ). ನೈದಿಲೆ ಹೂವುಗಳಿಂದ ತುಂಬಿದ ಕೊಳ ; ಕುಮುದಸರೋವರ : "ಕುಮುದ್ವತೀ, ಕುಮುದಿನೀ, ಕೈರವಣೀ—ಈ ೩ ನೆಯ್ದಿ[ಪಾಠಾಂ.ಯ್ದ]ಲ್ಗೊಳಂ" (ಹಲಾಯು. ೧೧೩-೬೧) ; ನೆಯ್ದಿಲ್ಗೊಳನಲರ್ದತ್ತೆನೆ ಕಣ್ಗಳ ಬಳಗಮಾಗಳಿಂದ್ರಂ ಬಂದಂ (ಪಂಪಭಾ. ೧-೧೩೮) ; ವಿರಹವಿಹ್ವಲತೆಯಿಂ . . . ನೆಯ್ದಿಲ್ಗೊಳಂಗಳೊಳೋಲಾಡಿಯುಂ (ಕಾದಂಪೂ. ೮೯೮) ; ಶೀತಾಂಶು ತೀವಿದ ನೆಯ್ದಿಲ್ಗೊಳನಲ್ಲದಿಲ್ಲೆನೆ ಬನಂ ಚಿತ್ತೋತ್ಸವಾಲಂಬನಂ (ಮಲ್ಲಿಪು. ೨-೭೭) ; ನೆಯ್ದಿಲ್ಗೊಳಂಗಳೆಡೆಯೊಳ್ ಕಾಯ್ದೋವದೆ ಪೋರ್ವ ಪಲವು ನೀರ್ವಕ್ಕಿಗಳಿಂದೆಯ್ದುಣ್ಮುವ ಸೀರ್ಪನಿಯೊಳ್ ತೊಯ್ದೊಯ್ಯನೆ ಗಾಳಿ ಕೂಡೆ ತೀಡುತ್ತಿರ್ಕುಂ (ಕಬ್ಬಿಕಾ. ೨೪). **ನೈದಿಲ್ಗೊಳ :** "ಕೈರವಣಿ ಕುಮುದಿನಿಯೆನಲ್ಕೆ ನೈದಿಲ್ಗೊಳಂ" (ಮಂಗರಾ. ೧೨೪-೧೭).

[ನೆಯ್ದಿಲ್+ಕೊಳ$_2$]

ನೆಯ್ದಿಲ್ನಲ್ಲ (ನಾ). "ಚಂದ್ರ" (ಚತುನಿ. ಕಿ. I, ೧೦೭).

[ನೆಯ್ದಿಲ್+ನಲ್ಲ$_1$]

ನೆಯ್ದಿಲ್ಪಗೆಯ 'ನೆಯ್ದಿಲ್ವಗೆಯ' ನೋ.

ನೆಯ್ದಿಲ್ವಗೆಯ, ನೆಯ್ದಿಲ್ಪಗೆಯ (ನಾ). ನೈದಿಲೆ ಹೂವಿನ ಶತ್ರು ; "ಸೂರ್ಯ, ರವಿ" (ಪ್ರಭಣ್ಣ). **ನೆಯ್ದಿಲ್ಪಗೆಯ :** "ನೆಯ್ದಿಲ್ಪಗೆಯಂ ರವಿ ಕೆಂಗದಿರಂ" (ಕರ್ಣಾನಿ. ೩೯).

[ನೆಯ್ದಿಲ್+ಪಗೆ$_2$+-ಅ$_7$]

ನೆಯ್ದು 'ನೆಯ್ದ್$_1$' ಪರಾ.

ನೆಯ್ಯಿಳಿಸು (ಕ್ರಿ). ಮದುವೆಯ ಶಾಸ್ತ್ರಗಳೆಲ್ಲ ಮುಗಿದ ನಂತರ ಮುತ್ತೈದೆಯರು ಹಾಲು ತುಪ್ಪದಲ್ಲಿ ಅದ್ದಿದ ಅಂಬಿನ ಕೋಲನ್ನು ಮದುಮಗಳಿಗೆ ತಲೆಯಿಂದ ಆರಂಭಿಸಿ ಕಾಲಿನವರೆಗೂ ಮುಟ್ಟಿಸುವ (ಸಂಪ್ರದಾಯದ) ಶಾಸ್ತ್ರವನ್ನು ಮಾಡು : ಒಂದಿಬ್ಬರು ಮುತ್ತೈದೆಯರು ಬೇಗನೆ ಬನ್ನಿ. ನೆಯ್ಯಿಳಿಸೋ ಶಾಸ್ತ್ರವನ್ನು ಮುಗಿಸೋಣ (ರೂಢಿ). 'ನೆಯ್ಯೇಱಿಸು' ಪರಾ.

[ನೆಯ್ದ್$_2$+ಇಳಿಸು(<ಇಱಿಸು)]

ನೆಯ್ಯು 'ನೆಯ್ದ್$_1$' ನೋ.

ನೆಯ್ಯೆಱೆ (ಕ್ರಿ). ತುಪ್ಪವನ್ನು ಸುರಿ,—ಎರೆ ; ಆಜ್ಯವನ್ನು ಹೊಯ್ಯು : ಉರಿಗಿಚ್ಚಿಗೆ ನೆಯ್ಯೆಱೆಯೆ ಕೆದರ್ವಂತೆ ಕೋಪಂ ಕೆದಱಿ (ಅದ್ಭುತ. ೧೫-೫). [ನೆಯ್ದ್$_2$+ಎಱೆ$_1$]

ನೆಯ್ಯೇಱಿಸು, ನೈಯೇಱಿಸು (ಕ್ರಿ). ಮದುವೆಯ ಅಂಗವಾಗಿ ಮುತ್ತೈದೆಯರು ಹಾಲು ತುಪ್ಪದಲ್ಲಿ ಅದ್ದಿದ ಅಂಬಿನ ಕೋಲನ್ನು ಮದುಮಗಳಿಗೆ ಕಾಲಿನಿಂದ ಆರಂಭಿಸಿ ನೆತ್ತಿಯವರೆಗೂ ಮುಟ್ಟಿಸುವ (ಸಂಪ್ರದಾಯದ) ಶಾಸ್ತ್ರವನ್ನು ಮಾಡು : ಅಲರಂಬಿಂ ತಲೆಯೊಳ್ ಕೆಯ್ಯಿಡುವಂತೆವೊಲಲರಂಬಿಂದಬ್ಜಮುಖಿಗೆ ನೆಯ್ಯೇಱಿಸಿದರ್ (ಲೀಲಾವ. ೧೨-೫೧) ; ಸುಮನಃಶರಮಿವು ಕನ್ಯಾಭಿಮಾನದಾಜ್ಞೆಗೆ ಪಳಂಚಲಣ್ಮದೆ ಸುತ್ತುಂ ಭ್ರಮಿಯಿಸಿದವುವೆನೆ ಸತಿಯರ್ ಕುಮಾರಿಗರ್ಚಿಸಿದ ಶರದ ನೆಯ್ಯೇಱಿಸಿದರ್ (ವರ್ಧಪು. ೭-೫) ; ಚಂದನರಸಂ ತೀವಿರ್ದ ನಳಿನಪತ್ರದ ಘಳಿಗೆವಟ್ಟಲ ಮುಂದಿರ್ದ ವಸಂತನಂ ನೋಡುತುಂ ನನೆಯಂಬಿಂ ನೆಯ್ಯೇ [ಪಾಠಾಂ. ನೆಯಿಯೇ, ನೆಯ್ಯೇ, ನೇ] ಱಿಸುವ ರತಿಗೆ ಮುಯ್ಯಾನುತುಂ (ಸಂಬರ. ೧೦-೬೯) ; ಕನ್ನೆಯಂ ಪೆರ್ವಂಡಿರ್ಬಂದು ನೆಯ್ಯೇಱಿಸಿ ಸೇಸೆಯಿಟ್ಟು ಮಿಸಿಸಿದುಕೂಲವನ್ನುಡಿಸಿ ಕಯ್ಗೆಯ್ಸಿದಾಗಳ್(ಬಂಹರಿ.೧೧-೧೩ ಪ); ಪಾಡಿ ಪರಸುತ್ತ ನೆಯ್ಯೇಱಿಸಿ ಪತಿವ್ರತಾಪಟ್ಟಗಟ್ಟುತ್ತ ಮದುವಳಿಗೆ ಪೆಸರಿಡುತಿರಲ್ಕೆ (ಸಿಂಗಿರಾ. ೬-೩೪). **ನೈಯೇಱಿಸು :** ಚೆನ್ನೆಯರೊಲಿದು ನೈಯೇಱಿಸಿದರು ರಾಜಕನ್ನೆಗೆ ನನೆಯಂಬಿನಿಂದ (ಚಂಪ್ರಸಾಂ. ೧೨-೭೬) ; ಸಡಗರದಿಂದಡಿ ತೊಡೆ ಮೊಲೆ ಮುಂಗಯ್ ಮುಡುಹು ಮಡಗಳೆಡೆಗಳೊಳು ಬಿಡದೆ ನೈಯೇಱಿಸಿದರು ಕಬ್ಬುವಿಲ್ಲಿಗೆ ಒಡನಲರಂಬೇಱಿಪಂತೆ (ಚಂಪ್ರಸಾಂ. ೧೨-೭೭).

'ನೆಯ್ಯಿಳಿಸು' ಪರಾ. ℙ ಇಲ್ಲಿರುವ ಪ್ರಯೋಗಗಳಲ್ಲಿ ಈ ಸಂಪ್ರದಾಯದ ಶಾಸ್ತ್ರವನ್ನು ಮದುಮಗಳಿಗೆ ಮಾತ್ರ ಮಾಡುವುದನ್ನು ಕಾಣಬಹುದಾದರೆ, ಕೆಲವೆಡೆಗಳಲ್ಲಿ ಈ ಶಾಸ್ತ್ರವನ್ನು ಹಂದರದ ಕಂಬಕ್ಕೂ, ಮದುಮಕ್ಕಳಿಗೂ ಮಾಡುವುದನ್ನು ಕಾಣಬಹುದು. ಉದಾಹರಣೆಗೆ : "ತುಪ್ಪದ ಕೊಡಕ ಇಪ್ಪತು ಕೀಲಿ ಕರುಪಿ ಅಪ್ಪಯ್ಯ ಹಿಡಿವ ಸರಳಂಬ ತಕ್ಕೊಂಡು ಬಂಧು ಬಳಗೆಲ್ಲ ನಯನೇರೂನು ಬನ್ನಿರೆ, ಕಂಚಿನ ಬಟ್ಟಲದಾಗ ಮಿಂಚೆಣ್ಣೆ ತಕ್ಕೊಂಡು ಕೆಂಚೆರೈವರು ಕೈವಿಡಿದು ಹಂದರದ ಹಾಲುಗಂಬಕ ನಯನೇರೂನು ಬನ್ನಿರೆ, ಬೆಳ್ಳಿ ಬಟ್ಟಲದಾಗ ಒಳ್ಳೆಣ್ಣೆ ತಕ್ಕೊಂಡು ನಲ್ಲೇರೈವರು ಕೈವಿಡಿದು ಮಂಟಪದ ಮದುಮಕ್ಕಳಿಗೆ ನಯನೇರೂನು ಬನ್ನಿರೆ" (ಲೋಕಗೀ. ೪೨).

[ನೆಯ್$_2$ + ಏಱಿಸು]

ನೆಯ್ವೊಯ್ (ಕ್ರಿ). = ನೆಯ್ಯೆಱೆ : ನೆಗೆದುರಿವ ತಲೆಯ ಕಿಚ್ಚಿನೊಳೊಗುಮಿಗೆ ನೆಯ್ವೊಯ್ದ ತೆಱದೆ ಪೊಣ್ಮಿದ ಮುನಿಸಿಂ ಭುಗಿಲಸುರಿದೆಟ್ಟಂ (ಕಬ್ಬಿಕಾ. ೧೫೧). [ನೆಯ್$_2$+ಪೊಯ್$_2$]

ನೆಯ್ಸು, ನೇಯಿಸು (ಕ್ರಿ). ನೇಯುವಂತೆ ಮಾಡು : (ಕಿ). **ನೇಯಿಸು** : ಮನೆ ಮನೆಯಲ್ಲೂ ರಾಟೆಗಳಿಂದ ನೂಲು ತೆಗೆದು ಮಗ್ಗಕ್ಕೆ ಕೊಟ್ಟು ನೇಯಿಸಿಕೊಳ್ಳುವರು (ಕಳಹು. ೯೩).

[ನೆಯ್$_1$ + -ಸು$_1$]

ನೆರ$_1$ 'ನೆಱ$_1$' ನೋ.

ನೆರ$_2$, ನೆರವು$_1$, ನೆಱವು$_2$ (ನಾ). ೧. ಸಹಾಯ; ಬೆಂಬಲ; ಒತ್ತಾಸೆ: ನೆರಮಕ್ಕಾ ಪರಮ ಕವೀಶ್ವರರೆಮಗೀ ಕೃತಿಯೊಳಕೃತಕಾಚಾರಪರರ್ (ಕವಿಶಾ. ೧-೪); ವಿರಹಿಗಳಂ ತೆರಳ್ಚಿ ತುಱಿವಲ್ಲಿಗೆ ನೀಂ ನೆರಮಯ್ಯೊಳಕ್ಕೆ ನೀಂ ಬರೆ ಭುವನಂಗಳೊಳ್ ನೆಗಟ್ಟುದೀ ಮಧುಮಾಸಮುಂ (ಆದಿಪು. ೧೧-೧೦೦ ಅಡಿಪದ್ಯ); ಇಱಿವೊಡೆ ನೆರವೊಳೆಮಿನಿಬರುಮಿಱಿ (ಪಂಪಭಾ. ೧೩-೨೩); ಇಂತಾರುಮಂ ಬಗೆಯದೆ ನೆರಮಂ ಪಾರದೆ ಪೋಗಿ ಪರಮ ಪ್ರೀತಿಯಿಂ ಹರನಾಲಯದೊಳ್ ಗಿರಿಜಾತೆಯಿರ್ಪುದುಂ (ಗಿರಿಕ. ೩-೯೧ ವ). ೨. ಆಸರೆ ; ಆಧಾರ : ಅರಿಗನ ಬಟ್ಟನಂಬುಗಳ ಬಲ್ಸರಿ ಸೋಂಕುಗುಮೇಱಿಮೆನ್ನ ತೋಳ್ನೆರಮೆನಗೆನ್ನ ಬಿಲ್ಲೆ ನೆರಮೆಂದು ವರೂಥತುರಂಗಮಂಗಳಂ ತುರಿಪದೆ ತಾನೆ ಚೋದಿಸುತುಂ (ಪಂಪಭಾ. ೧೨-೨೦೬); ಜ್ಞಾನದೃಷ್ಟಿಯ ನೆರಮೊ ಪೊಱನೋಟಮೇವುದೆಂದು ಮುರಿದು ನೋಟ್ಟನೆನೆ ತುಱುಗೆಮೆಯರೆದೆಱೆದ ಕಣ್ಣೊಚ್ಚತಮಾಗೆ (ರಾಮಾಶ್ವ. ೪೦-೨೦). ೩. ಚಮತ್ಕಾರ ; ಜಾಣ್ಮೆ(?) : ಗದೆಯಿಂದಂ ಪೊಯ್ಗುಳಂ ಬಿಂಬಿಪ ನೆರ[ಪಾಠಾಂ. ವ]ವೆಸೆಯಲ್ (ಜಗವಿ. ೬-೯೩). **ನೆರವು$_1$** : ೧. ದೇವ ಬೆಂಬಲಂ ಮನಸಿಜನೀಗಳಾಱು ಋತುವುಂ ನೆರವೆಂದೊಡೆ ಸೋಲದಿರ್ಪರಾರ್ (ಪಂಪಭಾ. ೬-೮೧); ನೆರವಾರೆನಗಿರ್ದಪರೆತ್ತವೋಪೆನೊರ್ಬರುಮೆನಗಾಸೆಯಿಲ್ಲ (ಕಾದಂಪೂ. ೯೦೨); ನೆರವೆನಗಕ್ಕುಮಿಾ ಸತಿಗೆ ಪುಟ್ಟಿದ ಬಾಳಕಂ (ಮಲ್ಲಿಪು. ೪-೮೯); ಶರಭಮಿದಿರ್ಚೆ ಸಾರ್ಚಿ ಗೆಲಲುಂ ಕೊಲಲುಂ ನೆರವಿಲ್ಲದಿರ್ದೊಡಂ ಹರಿ . . . ಇರದಿದಿರಾಗಿ ಸತ್ತು ಜಸಮಂ ಗೆಡೆಗೊಂಡುದು (ಪುಷ್ಪಪು. ೫-೬೮); ಬಂದು ಸಮಸಪ್ತಕರ ದೂತರು . . . ನಂದಗೋಪನ ಮಗನ ಬಿಡು ನೆರವಿಂಗೆ ಕರೆ ಹರನ ಎಂದವಗಡಿಸಿ ಹಿಡಿದರು ಫಲುಗುಣನ ಸೆಱಗ (ಕುಮ್ಯಾದ್ರೋ. ೪-೨೩); ಬೆಳೆಯಿಸಬಹುದು ನೀನೀ ನೀರೆ ನೆರವೊಳು ನಲುಮೆಯ ಗಿಡಬಳ್ಳಿಗಳನು (ಇಂಚಾಪ. ೮೪-೮೬). ೨. ನೆರವಿಲ್ಲದಿರೆ ನಿಲುತ ಕೂಡದೊಡಾಗ ನಡೆಯುತ್ತ ಮೆಲ್ಲನೀತಂ ಬರಲು (ಸಿದ್ಧರಾ. ೨-೫೩); ಗುರುವೆಂದು ವಿನಯಗೂಡಿರ್ಪುದಿನಿಯನೊಳು ನೆರವೆಂದು ನೆಱೆ ನಂಬುವುದು (ಹದಿಬ. ೩-೪೦). ೪. ಹಾಲು ಹೆಪ್ಪಾಗಲು ಸಹಾಯವಾಗುವ ವಸ್ತು. 'ನೆರವು ಹಾಕು' ಪರಾ. △ **ನೆಱವು$_2$** : ೧. ಧರೆಗೆಲ್ಲಂ ತನ್ನ ಬಾಹಾಬಳದ ನೆಱವು. . . ತನ್ನೂರ್ಜ್ಜಿತ ಖ್ಯಾತಿಯೊಳ್ಪಚ್ಚರಿಯಾಗುತ್ತಿರ್ಪಿನಂ ರಂಜಿಸಿ (ಎಕ. VII, ಶಿಕಾರಿ. ೧೨೪-೧೬ ; 1077).

ನೆರಮಾಗು, ನೆರವಾಗು = ಸಹಾಯವಾಗು ; ಬೆಂಬಲ ನೀಡು : ಭೂಭುಜನ ದೋರ್ದಂಡಕ್ಕೆ ಪುಣ್ಯೋದಯಂ ನೆರಮಕ್ಕೆ (ಆದಿಪು. ೧೨-೧೨೫); ಆಂ ನೆರಮಪ್ಪೆನುಗ್ರ ಕಿನ್ನರಸುರದನುಜೋರಗರ ಕದನಮೇಂ ನಿನಗರಿದೇ (ಪಂಪಭಾ. ೫-೮೪); ಒಡನೆ ನಡೆಪಿದ ನಾಲ್ವರ್ ನೆರಮಾಗಿ ಪೋದರಂತಕಪುರಕ್ಕೆ (ಅಜಿಪು. ೨-೧೦೪); ಎನಗೆ ನೆರಮಾದುದಿದೆಂದಾಗಳೆರ್ದೆಗೊಂಡನಾಶರದಾಗಮಮಂ ಪ್ರಭುಗುಣಾಬ್ಜಿನೀ ಕಳಹಂಸಂ (ಪುಷ್ಪಪು. ೫-೧); ಆಳ್ ಕುಡಿಗೆ ನೆರಮಾದೆ ನಾನ್ ; ನನಗೆ ನಾನ್ ನೆರಮಾಗದಾದೆನ್ (ಬದ್ಧಪ್ರ. ೧೬-೩೧೩); ಇನ್ನಿರೆನೆನ್ದು ಸಿಙ್ಗದನ್ತಿರೆ ಹರಿ ಬೀರಲಕ್ಷ್ಮಿ ನೆರವಾಗಿರೆ (ಎಕ. III, ಮಂಡ್ಯ. ೪೧-೧೮ ; 950); ಬಲವಂತರ್ ನೆರವಾಗಲ್ . . . ತಾಂ ಬಲುಭಾಗ್ಯಂ ದೊರೆಗಪ್ಪುದ್ಯೆ (ಸೋಮೇಶ. ೫೬); ತೊಡಗಿದೆನೀ ಮಹಾಕೃತಿಯನೆನಗೆ ನೆರವಾಗಿ ನಡೆಸುಗೆ (ಹಡಕಾ. ೧-೧೪); ತನಗೆ ಭರ್ಗನು ಪಡಿಯನಿಕ್ಕುವ ಧನಕೆ ನೆರವಾಗು (ಬಸಪು. ೨೯-೩೦); ಕಾಡುವರೆ ನಮ್ಮುತ್ಸವಕೆ ನೆರವಾದವರು (ಕುಮ್ಯಾಸ. ೧೦-೬); ತೆರೆ ನಿಂತಾಮೇಲೇನೈ ಕಡಲಲಿ ನೆರವಾಗುವುದೇ ಮೀಯಲಿಕೆ ? (ಕಎಪು. ೪೯).

ನೆರ$_3$ 'ನೆರಂ' ನೋ.

ನೆರಂ, ನೆರ$_3$ (ಅ). ೧. ಜೊತೆಗೆ ; (ನಂಜಿಕೊಳ್ಳಲು) ಸಹಾಯಕವಾಗಿ : ಎಮ್ಮ ಮಾವಂ ಬೈಕಂದಿರಿದು ತಂದ ಕೂಟ್ಗೆ ನೆರ[ಪಾಠಾಂ. ನೀರ, ನೆರೆ]ಮೆಣ್ಣಿಯನಕ್ಕುಪ್ಪನಕ್ಕೆ ಕಟಿಯನಕ್ಕೆಂದಪ್ಪೊಡವಿಕ್ಕಿಯುಮೆಱೆಯಿಸಿಯುಮಱಿಯಂ (ಪಡ್ಡಾರಾ. ೪-೧೪). ೨. ಚೆನ್ನಾಗಿ : ಪಡೆದುದಯಿಸಲೆಂದುಂ ಕಾಲದೊಳಲ್ಲದುದಾರತೇಜನರ್ಕನುಮಲ್ಲಂ ಸದುದಿತಗುಣನದಱಿಂ ನಯವಿದನಪ್ಪಂ ಕಾಲಮಂ ನೆರಂ ತೋರ್ಕೆ ನೃಪಂ (ಕವಿಶಾ. ೩-೧೪೬). **ನೆರ$_3$** : ೨. ಅರಿಊರ್ಪ್ಪನ್ನಿರ್ವ್ವರು ಕೂಡಲೂರು ಇನೆತ್ತು ಮೂರ್ ನೆರ ಸಾಸನಮಾಗೆ ಕುದಿಯ್ಯ (ಎಕ. IV, ಗುಂಡ್ಲುಪೇ. ೮೮-೬ ; 750). [<ನೆರ$_2$]

ನೆರಂಗೆಯ್ (ಕ್ರಿ). ಸಹಾಯ ಮಾಡು; ಬೆಂಬಲ ನೀಡು : ಅಂಗದ ತನಿಸೊಬಗಿಂಗೆ ನೆರಂಗೆಯೆ ಪೊಸವಸದನಂಗಳಾವಗಮೊಳ್ಪಿಂ ಸಿಂಗರವಡೆ ಪೆಣ್ಮಣಿಯೆ ಪದಂಗೊಳಿಸೊಳ್ಗೊಂಡರೆರ್ದೆಯ ಪೊಸ ಪೊಸ ಸೊಗಸಿಂ (ಚಿಕವಿ. ೬-೮೩); ಸಿಂಗರಕಿನಿಯನ ದಿಟ್ಟ ನೆರಂಗೆಯೆ ತಾಂ ಪೊಣ್ಮೆ ಪೂಣ್ದು ಪೊಂಗಿತ್ತಾಗಳ್ (ಚಿಕವಿ. ೬-೨೫೧). [ನೆರ$_2$+ಕೆಯ್$_1$]

ನೆರಂಬಡೆ (ಕ್ರಿ). ೧. ಸಹಾಯವಾಗಿ ಪಡೆದುಕೊಳ್ಳು ; ಬೆಂಬಲವನ್ನು ಹೊಂದು : ನಿಮಿರ್ಪ ಕಾಡಿಗೆಗುಡಿಗಳ . . . ವಿಜಯಕಟಕ ಸಮದಗಜಸಾಮಜಂಗಳ ಕರ್ಪುಗಳೆಲ್ಲಮಂ ನೆರಂಬಡೆದು ಬಳೆದ ತಮೋಮದೇಭದ ಘಟೆಯೊಡ್ಡು (ಆದಿಪು. ೧೨-೪ ವ); ಆನುಂ ಬಂದಪ್ಪೆನೆಂದೊಡಾ ಪಾರ್ವಂ ನೆರಂಬಡೆದೆನೆಂದು ಕರಮೊಳ್ಳಿತ್ತೆಂದು ಬನ್ನಿಮೆಂದು (ಪಂಚತಂ. ೨೨೮-೨೦); ಬಲ ನಾರಾಯಣರಂ ನೆರಂಬಡೆದು ನಿಮ್ಮೊಳ್ ಕಾದುವುದ್ಯೋಗದಿಂ ಪಲವುಂ ದ್ವೀಪದ ಖೇಚರರ್ ನೆರೆದು (ಪಂರಾಮಾ. ೧೨-೪೯). ೨. ಅಂಗೀಕರಿಸು ; ಒಪ್ಪು ; ಸಮ್ಮತಿಸು : ಸೂರ್ಯಜನುಂ ಋಕ್ಷಜನುಂ ನಿನ್ನಾಜ್ಞೆಯಂ ನೆರಂಬಡೆದು ಪಾತಾಳಲಂಕೆಯಿಂದೆತ್ತಿ ಪೋಗಿ (ಪಂರಾಮಾ. ೧೦-೧೬೦ ವ).

[ನೆರ$_2$ + ಪಡೆ$_1$]

ನೆರಂಬರ್, ನೆರವರ್, ನೆರವು ಬರು (ಕ್ರಿ). ಸಹಾಯಕ್ಕೆ ಬರು ; ನೆರವು ನೀಡು : ಕಣ್ಬೊಲದೊಳ್ ಸುಟುವ ಕಾಲಾಯಸ ಕಾಲಪುರುಷನಂ

ಕಾಳೆಗಕ್ಕೆ ಜವಂ ನೆರಂಬಂದಪ್ಪನೆಂದುಂ . . . ಉತ್ಪಾತಂಗಳ ನೇಮಮುಂ ಬಗೆಯದೆ ಕೋಪಮನೆ ಬಗೆದು (ಪಂಚಾಸಾ. ೧೪-೧೨೮ ಪ) ; ಇಂತವರೆಲ್ಲರುಂ ನೆರಂಬರೆ ನಿನಗಾಂತು ನಿಲ್ ನಿನಗೆ ತೋಜುವನೆನ್ನ ಭುಜ ಪ್ರತಾಪಮುಮುಂ (ಜಗವಿ. ೭-೨೬) ; ಅಲಂಘ್ಯಲಜ್ಜಾ ಮರ್ಯಾದೆಗೆ ನೆರಂಬರ್ಪಂತೆ ಬಂದೊರ್ ಪಡಿಯಜಂ ಪೊಡವಟ್ಟು (ಪಭರಾ. ೪-೪೭ಪ). **ನೆರವರ್ :** ಆಗಳ್ ವಾಲ್ಮೀಕಿ ತಾನವಿತಾನವಿನಿದಂ ಕಜ್ಜಿಯೆ . . . ಪಲವುಂ ಬಗೆಯ ರಾಗಂಗಳೊಳ್ ಬಾಜಿಪ ಬಾಣಯ ಬೀಣೆಯಿಂಚರಕೆ ನೆರವರ್ಪೊಂದು ಭಂಗಿಯಿಂ ಬಾಲಕರಿಂ ರಾಮಾಯಣಮನೆಪ್ಪಿಸಿದಂ (ರಾಸೂಶ್ವ. ೧೬೨-೩೦). **ನೆರವು ಬರು :** ಮನದಂಧತೆಗೆ ಕತ್ತಲೆ ನೆರವು ಬರೆಯಾಲೋಚನೆಗೆ ಬೇಹವರ ಮಂತ್ರಿಗಳ ಬರಿಸಿ ನೃಪನಿರುಳೋಲಗವ ನಿತ್ತು (ನಿಘಾಗ. ೧೦-೩೪-೨). [ನೆರ್$_2$+ಬರ್(<ಪರ್)]

ನೆರಂಬಾರ್ (ಕ್ರಿ). ಸಹಾಯವನ್ನು ಬಯಸು ; ನೆರವನ್ನು ನಿರೀಕ್ಷಿಸು : ಸಾರಥಿಯಪ್ಪೊಡಪ್ಪನೆನಗೀತನೆ ಪೋ ಪೆಜರೇವರಿಂ ನೆರಂಬಾರೆ ನೆನುತ್ತೆ (ಪಂಪಭಾ. ೪-೯೪) ; ಭುಜಾದಂಡಂ ಗದಾದಂಡಮೆಂಬೆರಡುಂ ಸಂಜಯ ಮಜ್ಜಯಕ್ಕೆ ನೆರವಿಂ ನುತ್ತಾರ್ನೆರಂಬಾರ್ಮೇನೇ [ಪಾಶಾಂ. ಕ್ರೌದವಿರಲ್ ಮುತ್ತನ್ನರಂ ಪಾರ್ಮನೇ] (ಗದಾಯು.೩-೪೭); ವಿಭವಾರ್ಥಂ ಸೈನ್ಯಮಂ ಪಾಲಿಸುವುದು ಸಮರಕ್ಕೇಂ ನೆರಂಬಾವುದೇ ವೀರಭಟಂ (ಜಗವಿ. ೧೩-೩೪). [ನೆರ್$_2$+ಪಾರ್$_1$]

ನೆರಂಬಿಡಿ (ಕ್ರಿ). ಆಶ್ರಯಿಸು ; ಆಧಾರವನ್ನಾಗಿ ಹಿಡಿ ; ಅವಲಂಬಿಸು : ದೋಷಾದಿಗಳಂ ನೆರಂಬಿಡಿದವಂ ಮುತ್ತೇಕೆ ಕೈವಾರ್ದಪಂ (ಚಂದ್ರಪ್ರ. ೨-೩೩). [ನೆರ್$_2$+ಪಿಡಿ$_1$]

ನೆರಂಬೆಱು (ಕ್ರಿ). ಸಹಾಯವನ್ನು ಪಡೆ ; ನೆರವನ್ನು ಹೊಂದು : ಇನಿಸಂ ಪೋಲೆ ಸಮಸ್ತ ಜಾತಿಗಳ ರೂಪಂ ಚಿತ್ರಿಸಲ್ ವಿಶ್ವಕರ್ಮನ ಮಾಂಡವ್ಯನ ಚೀರಭಟ್ಟಿಯಳವಲ್ಲೆಂದಟ್ಟಜ್ಜಂ ಚಿನ್ನಪೂವಿನ ಚೆಂಬೊನ್ನ ಮಯೂಖಲೇಖೆಗಳನಂತಾ ಚಿತ್ರನಿರ್ವಾಹರೇಖೆ ನೆರಂಬೆತ್ತಿರೆ ನೋಡಿ ನೋಡಿ ತಲೆದೂಗಿತ್ತಂಗನಾಸಂಕುಲಂ (ಜಗವಿ. ೧೭-೧೧೬).

[ನೆರ್$_2$+ಪೆಱು$_1$]

ನೆರಂಬೇಟ್ (ಕ್ರಿ). ಸಹಾಯಕ್ಕಾಗಿ ನೇಮಿಸು ; ಬೆಂಬಲಿಸುವಂತೆ ಅಪ್ಪಣೆ ಮಾಡು : ರಥಮಂ ಸಮಕಟ್ಟೆ ಸಾಲ್ಕುಲಕ್ಕಬಲಮಂ ನೆರಂಬೇಟ್ಟು ಕಳಿಪಿದನಾಗಳ್ (ಪಂಪಭಾ. ೨-೯೨ ಪ) ; ವಾರಿಷೇಣನೆಂಬ ಮಗನಂ ಕುಮಾರಂಗೆ ನೆರಂಬೇ[ಪಾಶಾಂ. ಪೇ]ಟ್ಟುತನಂ ಬಂಧುಗಳನೆಯ್ದಿಸೆಂದು ಕಳಿಪೆ (ಜಾವುಂಪು. ೭೬) ; ನಡೆಗಟ್ಟುಗಳನಿರ್ಗರ್ಮೇಜಲ್ ಕೊಟ್ಟು ಪಿರಿದಾಳಂ ನೆರಂಬೇಟ್ಟು ತಿಜುದಂತರಂ ಕಳಿಪುತ್ತುಂ ಬಂದು (ಸುಕುಪಾ. ೨-೫೯ ಪ). [ನೆರ್$_2$+ಪೇಟ್$_1$]

ನೆರಕು 'ನರಕು' ನೋ.

ನೆರಕೆ$_1$, ನೆರಿಕೆ, ನೆರಿಕೆ (ನಾ). ೧. (ತೆಂಗಿನ ಗರಿ, ಜೋಳದ ದಂಟು, ಬಿದಿರುಕಡ್ಡಿ ಮುಂತಾದುವುಗಳಿಂದ ಹೆಣೆದು ಮಾಡಿದ) ಮರೆ; ತಟ್ಟಿ; ತಡಿಕೆ : ತೊಳದು ಕಂಡಿಹೆನೆಂದಡೆ ಅಂಗದ ಪನಲ್ಲ ಹೊದಿಸಿ ಕಂಡಿಹೆನೆಂದಡೆ ಮುಂಡೆಯವನಲ್ಲ ಮಾತಾಡಿಸಿ ಕಂಡಿಹೆನೆಂದಡೆ ಬಾಯವನಲ್ಲ ಇವರು ಮೂವರು ನೆರಕೆಯೊಳಗಾಗಿದ್ದಡೆ ನೆರಕೆಯ ಹೊಱಗಿದ್ದು ಬಜಾಕಾಯನಾಗಿದ್ದೆಯಲ್ಲಾ (ಸೋಳಸೂ. ೧೬೧-೬೦೨) ; ತಳಿರ ನೆರಕೆಗಳ ಮುಜುಱಿದೋಡುತಂ (ಸಾಸೂಪ. ೬೯-೧೪) ; ಲಾಮುಱದ ನೆರಕೆ ಗಜಾಪೂವುಗಳ ಹೊದಕೆ (ಪದ್ಮರಾ. ೪-೪) ; ಬರಕೆ ಬುತ್ತಿಯು ಹೊಲ್ಲ ನೆರಕೆಯ ಮನೆ ಹೊಲ್ಲ (ಸರಾಜ್ಞ. ೧೧೧೫) ; ಆರಕೆಲಗೂಡು ಪೇಟೆಯವಳೆ ನೆರಕೆಯ ಮನೆಯವಳೆ ಸರಕೆಂದರೆ ಕದವ ತೆರೆಯುವಳೆ (ವೈಸರ. ೧೬೩). ೨. ತೆರೆ : ಪರದೆ : ಉಟ್ಟುಡಿಗೆ ಬಳಸಿದ ನೆರಕೆ ತೊಡೆಯೆ ಕಂಬಳವಟ್ಟು ಕಟ್ಟು ಸಡಿಲ್ದಿ ಮೆಜ್ಜೆಯ ಮುಗಿ ಮೇಲ್ವೊದಕೆ ಬಟ್ಟ ಮೊಲೆ ಕಲಶಂಗಳಾ ಕಾಂತಿರಸವೆ ತಳಿಸೀರಾಗಲು . . . ಆತನುವಜ್ಜಟ್ಟಗೆ ಯೊಯೆಂಬವೊಲ್ ಪ್ರಪಾಕಾಂತಾಜನಂ (ಪದ್ಮರಾ.೪-೧೧). ೩. ಬೀಡು; ನಿವಾಸ: ನರಳ ಬೇಜುನ್ನೀಕೆ ತನುವೇ ನರಳವಿದೆಲಾ ಯೆಲುವು ತೊಗಲಿನ ನೆರಕೆ (ನಿಘಾಗ. ೧೦-೪೭-೩೭) ; ಕಾಳಿಜದೇಳ್ಗೆ ಪೊಲಸಿನ ಶೇಷ ನರವಿನ ನೆರಕೆ . . . ಪುಳುಗಳ ಪುತ್ತು ದಿನದಿನ ನಾಶಮಪ್ಪ ಅಕಾರಕಾಯ (ಪಂಕದಾ. ೩-೩೩). ೪. "ತಟ್ಟಿಯ ಗುಡಿಸಲು" (ಜಾನಪೋ. ೧೩) : ಆ ತಂಟೆ ಮಾರಿ ಬಡ್ಡಿನುಗನ ಜಗ್ಲೀ ಮೇಲೆ ನೆರಕೆ ಯಾಕೆ ಕಟ್ಟೋಂಡಿದ್ದೆ (ಹುಬ್ಬಹ. ೧೪೩)! ೫. ಊರೆ ; ಆಸರೆ ; ಆಧಾರ ; ಆಶ್ರಯ : ಬಡತನ ಹಸಿವೆಯ ಗಾಳಿ ಬೀಸುತ್ತಿದ್ದರೂ ಕುಡಿವರಿಯುವ ಬಳ್ಳಿಗೆ ನೆರಕೆ ಯಾಗಿದ್ದಳು (ಕಕೆಂಡ. ೬೯). **ನೆರಿಕೆ :** ೧. ಹರಕೆಯಿಲ್ಲದ ದಾನ ನೆರಕೆಯಿಲ್ಲದ ಮನೆಯು (ಸರಾಜ್ಞ. ೧೬೫). ೨. ತಟ್ಟಿ, ತೆರೆ, ನೆರಿಕೆ; ಪರದೆ; ಜವನಿಕೆ (Screen. ಇಂಕನ). ೪. ನೆರಿಕೆಯ ಸೂರಿನೊಳಗಿಂದ ಬೆಳಗಿನ ತಂಗಾಳಿ ಬಂದು ತಗುಲಿತು (ಅಪೋಕ. ೧೯೫). ೫. ಕರಿಕಾಲಜೋಳದ ಹರುಸ ಬಿತ್ತಿಗೆ ಮಾಡಿ ಎರಳ ಹೊಯ್ದಿದ್ದ ಶಿವಭಕ್ತ ನಾಡೊಳಗೆ ನೆರಿಕೆ ತನಗೆಂದು ಚೆನ್ನಯ್ಯ (ಕನ್ನಜಾ. ೩೧೪). **ನೆರಿಕೆ :** ೧. ನೆರಿಕೆಯಂದದಿ ಇಡಿಗಡಿದು ಸುರಂಗವ ಕೊರೆದರು ಸುತ್ತ ನೂರಾರ (ಬಜ್ಜರಾ. ೧೨-೬೧).

[←ತಮಿ. ನಿರೈಚ್ಚಲ್]

ನೆರಕೆ$_2$ (ನಾ). ಒಂದು ಬಗೆಯ ಬಾಣ (?) : ನೆಜಿದು ನಿರ್ವಾಯಂ ನರುವಾಯಂ ಮುಮ್ಮೊನೆ ನೆರ[ಪಾಶಾಂ. ರಿ]ಕೆ ನಾರಾಚಂ ತಗರ್ಚಲೆಯುಂ ನೆಜನರಿ[ವ] ಕ[ಣೆ] ಗೆಲೆಯಂಬು ಕಕ್ಕಂಬು ಕೆಲ್ಲಂಬು ಮೊನೆಯಂಬು [ತೀವೆ ಕಣ್ಣಂ] (ಪಂಪಭಾ. ೧೩-೩೯). [?]

ನೆರಕೆಗಟ್ಟು (ಕ್ರಿ). ತಡಿಕೆಯನ್ನು ಕಟ್ಟು : ದೆಸೆಯೊಳು ನೆರಕೆಗಟ್ಟ ದಂತೆವೊಲು ಮೇಲಾಗಸದೊಳು ಪಂದಲಿಟ್ಟಂತೆ ಮುಸುಕಲು ಶರವಲ್ಲಿ ನೋಡುವರಿಗುಬ್ಬಸವ ಮಾಡಿದುದಾ ಸಮರ (ನೇಮಿಪಂ. ೨೬-೪೦).

[ನೆರಕೆ$_1$+ಕಟ್ಟು$_1$]

ನೆರಡಿ 'ನರಡು$_2$' ನೋ.

ನೆರಡು (ನಾ). (?) : ಎರಡೆಂಬನ್ನಕ್ಕರ ನೆ(ನೆ?)ರಡಾಯಿತ್ತು ಕರಡಿ ತೊಡರಿದೆ ನೋಡಾ ಎರಡನೊಂದೆಂದು ತಿಳಿಯಲು ನೆರಡು ನಾಯಿತ್ತು ಕರಡಿ ಬಿಟ್ಟೋಡಿತ್ತು ನೋಡಾ (ನಿಜೈಪ. ೧೦೬-೨೩೧). [?]

ನೆರತೆ 'ನೆಱತೆ' ನೋ.

ನೆರಪು, ನೆರಹು$_1$, ನೆರಿಪು (ಕ್ರಿ). ೧. ಕೂಡಿಸು ; ಸೇರಿಸು : ಎಂಟೆನೆಯ ದಿವಸದ[ನ್ದು] ಪ್ರಜಾಪರಿವಾರಮಂ ನೆರಪಿ (ಪೌಇ. XI-೧, ೬೪-೨೫ ; 1028) ; ಪರಿವಾರವಧೂಜನವಳಕಜಾಳದಿನಳಿಮಾಳೆಯಂ ನೆರಪು ವಂತೆ (ಪುಪ್ಪಪು. ೪-೬೨ ಪ) ; ಉದಾರತಾರಾಸಮೂಹಮಂ ಚಂದ್ರನೊಳ್ ನೆರಪುವಂತೆ (ಪುಪ್ಪಪು. ೧೨-೧೦೬ ಪ) ; ಸರಸಮೃದುಮಧುರೋಪಮೆಗಳಂಕುರಿಸೆ ವಸ್ತುಳ ವರ್ಣಂಗಳ ನೆರಪಿ . . . ರಚಿಸುವೆಂ ಕೃತಿಯ (ಚಿಸಪು. ೧-೧೧) ; ನೆಲೆಗೆಡಿಸುತ ನೆಲದುರ್ಗವ ನೆರಪುತ ಜಲದೊಳು ಜಲದುರ್ಗವನು ನಲೆ ಗೋಳಿಡಿಸುತ ಗಿರಿದುರ್ಗಗಳನಾ ಲಲನೆ ನಡೆದಳು ಬಲ್ಮೆಯೊಳು (ಕುರಾಸಾಂ. ೪೧-೭೪). ೨. (ವಿವಾಹಸಂಬಂಧದಿಂದ) ಕೂಡಿಸು ; ಜೊತೆಗೂಡಿಸು ; ಜೊತೆ ಸೇರಿಸು : ಈ ನಿಜ ತನೂಜೆಯನುತ್ಪವಮಂಗಳಾನಳಧ್ವನಿ ದೆಸೆಯಂ ಪಳಂಚಲೆವಿನಂ ನೆರಪೀಗಳೆ ವಜ್ರಜಂಘನೊಳ್ (ಆದಿಪು. ೪-೨೬) ; ಕುಮಾರನಂ ತಂದು ನಿನ್ನೊಳ್ನೆರಪುವೆನೆಂದು ಸಂತೈಸಿ (ಜಾವುಂಪು. ೭೫). ೩. ಸಂಗ್ರಹಿಸು ; ಶೇಖರಿಸು ; ಕಲೆಹಾಕು : "ನೆರಪು (ನೆರಪು)—ಸಂಗ್ರಹೇ" (ಪಸುಧಾ) ; ಧನಮಂ ನೆರಪದೆ ವಿದ್ಯಾಧನಮಂ ಮಾಡದೆ ತಗುಳ್ದು ನೆಗಟದೆ ತಪದೊಳ್

ಮನುಜತ್ವಮಫಲಮಾಯ್ತು (ಕವಿರಾ. ೩-೧೦೨) ; ಕಿತ್ತಯ್ಯಂಗಳ ನಿಂದೆಮಗೆ ಕಾರುಣ್ಯಂಗೆಯ್ವುದಾವು ನಿಱಿಸಿ ಪಾನಿಗಟ್ಟ ಪುಣ್ಯಮಂ ನೆರಪಿ ಕೊಳ್ವಮೆಂದೊಡೆ (ವಡ್ಡಾರಾ. ೭೯-೧೯) ; ಸೌಂದರಿಯರ ಗಾಡಿಗಳೊಳ ಗೊಂದೊಂದನೆ ನೆರಪಿ[ಪಾಠಾಂ. ಪಡೆದು]ಮಾಡಿದಂ ಬಿದಿಯೆನೆ . . . ಸೌಂದರಿ ಸೌಂದರಿಯೆ ಪೆಸರೊಳಂ ರೂಪಿನೊಳಂ (ಆದಿಪು. ೨-೩೬) ; ಪಲವು ಭವಂಗಳೊಳ್ನೆರಪಿದೆನ್ನಯ ಪಾಪವೊ (ಕಾದಂಪೂ. ೯೨೧) ; ರಾಜ್ಯಾಭಿಷೇಕಯೋಗ್ಯಂಗಳಪ್ಪ ನಾನಾಪ್ರಕಾರಮಂಗಳದ್ರವ್ಯಂಗಳಂ ನೆರಪಿ ಕೌಶಿಕವಿಹಂಗಮಕ್ಕೆ ಪಟ್ಟಂಗಟ್ಟಲಿರ್ದವಸರದೊಳ್ (ಪಂಚತಂ. ೨೨೪-೮) ; ಚಿಂತಾಸಮುತ್ಸೇಕದಿಂದಪ್ಪುದೆ ಪುತ್ರೋತ್ಪತ್ತಿ ಮುನ್ನಂ ನೆರಪಿದ ಸುಕೃತಂ ಪಕ್ವಮಾದಲ್ಲದೆ (ಪುಷ್ಪಪು. ೩-೧೦೧). ೪. ಗಳಿಸು ; ಸಂಪಾದಿಸು : ಮಲ್ಲಪಯ್ಯನುದಾತ್ತಯಶೋನಿಧಿ ಪುನ್ನಮಯ್ಯನುಂ ತಾಮುಪಕಾರಮಂ ನೆರಪಿದರ್ ಜಗದೊಳ್ ಜಿನಚಂದ್ರದೇವರಾ (ಶಾಂತಿಪು. ೧-೫೧). ೫. ಹೊಂದಿಸು ; ಹೊಂದಾಣಿಕೆ ಮಾಡು : ಸ್ಯೂಸ ನಿಷ್ಪಕ್ಕೆ ಎನ್ನಿಷ್ಟಮನ್ ನೆರಪುವುದೆ ಎನಿತೊ ಒಳ್ಳಿತ್ತಾಗಿ ನೇರ್ಪಾಗಿ ಕಂಡತ್ತು (ಬದ್ಧಪ್ರ. ೧೩-೨೬೦). ೬. ರಾಶಿ ಹಾಕು : ಕನಕವ ಸೇವಿಸಿದವ ಮಣ್ಣುಮಸಿಯನು ಕನಕವೆನುತ ನೆರಪಿದೊಡೆ . . . ಜನರದ ಸ್ವೀಕರಿಸುವರೆ (ನಾಗಕು.೧-೬೫). ೭. ಸಂದಣಿಸು ; ಗುಂಪುಗೂಡು; ನೆರೆ : ಗಜಾರೋಹಕರ್ ಪಸದನಂಬಡೆದೇಱಿ ಮೀಱಿ ನೆರಪಿದಾಗಳ್ (ರಾಜಶೇ.೧೩-೬೫ ಪ). ೮. ಉಂಟುಮಾಡು ; ಆಗಿಸು : ಅರುಣಾಂಶುಗಳಿಂ ಪಶ್ಚಿಮಗಿರಿಕೂಟಮನರ್ಕಪೂರ್ವಪಲ್ಲವಚಯದಿಂ ನೆರಪಿಪಡು ನೇಸಱಿಸೆದುದು ಶರನಿಧಿನಾಥಂಗೆ ಪಿಡಿದ ಮಾಣಿಕಗೊಡೆವೋಲ್ (ಜಗವಿ. ೪-೧೧೧) ; ಅಱನಂ ಪೆರ್ಚಿಸುವಱಿವಂ ನೆರಪುವ . . . . ನಿಮ್ಮಯ ದರ್ಶನಕಱಿದೆಂ ಕಾರಣಮನೆನ್ನ ಪುಣ್ಯಮೆ ಪೆಱತೇಂ (ಚಂದ್ರಪು.೩-೭೩) ; ನೆರೆದುದು ವಿರಹಿಮನಸ್ತೃಣ ಶರಣದೊಳಂಗೋದ್ಭವಾಗ್ನಿಯಂ ನೆರಪುತ್ತುಂ ನೆರೆದಭ್ರಂ ಕೊರ್ವಿದುದಚ್ಚರಿಯಂ ಚಾದಗೆಯ ಗರ್ಭಮಂ ಕೊರ್ಬಿಸುತುಂ (ಕುಸುಮಾ. ೬-೧೨) ; ಮಂದಹಾಸದ ಕಾಂತಿ ವಜ್ರರುಚಿಯಂ ನೆರಪೆ (ಪುಷ್ಪಪು. ೯-೫೮ ರಗಳ). **ನೆರಹು₁** : ೧. ಊರ ಮಹಾಜನಮೆಲ್ಲ ಮನೋರಂತಿರೆ ನೆರಹಿ ತಂದು (ಮೈಆರಿ. ೧೯೨೭, ೩೪-೬ ; 11ನೆಯ ಶತ); ಮಹಾಪ್ರಮಥಗಣಂಗಳಂ ತಂದು ನೆರಹಿದಾತ ನಮ್ಮ ಬಸವಯ್ಯನು (ನೀಲಪ. ೬-೯) ; ಮಱುದಿನವಾಳುಕುದುರೆಯ ನೆರಹಿ ಧರಣೀಪಾಲ ಸುಮುಹೂರ್ತದಲಿ ಹೊಯ್ಸಿದನಂದು ಹೊಱಗುಡಿಯ(ಕುಪ್ಯಾಭೀ.೧-೪೩); ವೇದವ್ಯಾಸನಖಿಳನಿರ್ಜರರು ಮನುಮುನಿಗಳಂ ನೆರಹಿ (ಸೌಂದಪು. ೬-೩) ; ಅರಸನಂಘ್ರಿಸರೋಜಸೇವೆಗೆ ನೆರಹಿದೆನು ಶರನಿಧಿಪರೀತ ಸಮಸ್ತಕಪಿಬಲವ (ತೊರರಾ. ೪-೬-೨೭). ೨. ನೇಹವೆಂಬ ಕುಂಟಣಿ ಚೆನ್ನಮಲ್ಲಿಕಾರ್ಜುನನ ನೆರಹದಿರ್ದಡೆ ನಾನೇವೆ ಸಖಿಯೆ (ಮಹಾದೇ.ಬ ೧೪೮-೩೧೮). ೩. ನಿಧನವಲ್ಲದೆ ಧನವ ನೆರಹುವ ಹದನ ನೀನೇ ಕಾಂಬೆ (ಕುಪ್ಯಾಸ. ೨-೨೩) ; ಭೂತಳದ ಮೇಲಾ ವಿರಂಚಿಯ ತಾತ ಹುಟ್ಟಿದ ಮಾಡಿ ನೆರಹಿದ ಪುಣ್ಯಫಲದಿಂದ (ಸಂಭವ. ೨೬-೮). ೪. ಹೊರೆಯ ಲಱಿಯೆನು . . . ಆದಱೊಳಗೊಬ್ಬನುದರಕೆ ನೆರಹಲಾಱೆನು ಕೂಳ ನೆಂದಳು ಕುಂತಿ ನಸುನಗುತ (ಕುಪ್ಯಾಆ. ೧೦-೧೫). ೫. ಕಂಚುಗಾಱನ ಬಿಡಾರದಂದದಿ ಕಂಚು ಹಿತ್ತಾಳೆ ಪ್ರತಿಮೆಯ ನೆರಹಿ (ಪುರಂದ. ೨-೨೫—೨) ; ತರಹೇಳು ಹೆಡಗೆ ಹೆಡಗೆಯೊಳು ಹೊಸ ಹೊನ್ನ ಇರಲಯ್ಯ ನಿನ್ನ ಮೇಲೆಂದು ನೆರಹಿ ಬೇಕಾದರೆ ತರಿಸಿಕೊಂಬೆವು ಎಂದು ಹರರೂಪ ಪೊಜಮಟ್ಟನಾಗ (ಹರಿಸಾಂ. ೧-೫೧). ೭. ಹರಸಿ ಮಾಡುವುದು ಹರಕೆಯ ದಂಡ ನೆರಹಿ ಮಾಡುವುದು ಡಂಭಿನ ಭಕ್ತಿ (ಬಸವ. ೨೨೮) ; "ಜನರನ್ನು ಕೂಡಿಸು" (ಬಸವ. ಕೋಶ) ; ಶಿವಭಕ್ತ ವೀಧಿಗಳು ನಿಂದು . . . ನೆರಹಿತ್ತು ತೆಱಹಿಲ್ಲೆನಿಸಿ ಪುರದೊಳಗೆ (ಅನೀರ. ದೇ. ೮೪-೮). ೯. ಕೂಡು ; ಮದುವೆಯಾಗು ; ವಿವಾಹವಾಗು : ಮಡದಿಯರ ನೆರಹಿದರೇನು ಒಡವೆಯ ಗಳಿಸಿದರೇನು ಶಿವನೇ ನಿಮ್ಮನಱಿಯದ ಮನುಜನ ಒಡಲೆಂಬುದು ಹೊಲೆಜೋಗಿಯ ಕೈಯ ಒಡೆದ ಸೋರೆಯಂತೆ ಕಾಣಾ (ವಚನಂ. ೩೧೮-೯೨). ೧೦. ಬೆರಸು : ಕಣ್ಣನಲ್ಲಿ ನೋಡಿ ಮಣ್ಣಿನಲಿ ನೆರಹಿ ಉಣ್ಣದೆ ಹೋಗದಿರಾ (ಬಸವ. ೨೦೧). ೧೧. ಪಡೆ ; ಹೊಂದು (?) : ಸುರಪ ನೀನೇ ಕಳುಹದಿರ್ದೊಡೆ ಪರಮಮುನಿ ದೂರ್ವಾಸರಲಿ ನೀ ನೆರಹಿದಂದವ ಮಾಡುವೆನು (ಸಂಭವ. ೨೦-೫೯). **ನೆರೆಪು** : ೧. ಕಂಪಿನ ಕಣಿ ತುಂಬಿಯಂ ನೆರೆಪುತಿರ್ದುದು ಮಲ್ಲಿಗೆ ಚೈತ್ರಮಾಸದೊಳ್ (ಜಗವಿ. ೧೪-೩೩). ೨. ಆತಿಜಿತೇಂದ್ರಿಯರನಂಗನೆಯರೊಳ್ ನೆರೆಪುತಂ (ಚಿಬಪು. ೩೫-೧೬). ೩. "ನೆರೆಪು (ನೆರಪು) ಸಂಗ್ರಹೇ" (ಶಮಧಾ) ; ಮುನ್ನಿನ ಭವದೊಳ್ ಪುಣ್ಯಮನಾನ್ನೆರೆ [ಪಾಠಾಂ. ರ]ಪಿದೆನದಱ ಫಲಮನುಂಡಪೆನದಱಿಂದಿನ್ನಪ್ಪ ಭವಕೆ ನೆರಪು ವೆನೆನ್ನದ ನರಪತಿಗೆ ನರಕಪತನಂ ಪಿರಿದೇ (ಆಜಿಪು. ೨-೧೦೬) ; ತರದ ಬೊಮ್ಮಾಂಡವಂ ನೆರೆ[ಪಾಠಾಂ. ರ]ಪುವಲ್ಲಿಯ ಪುಣ್ಯ ಉರುಪುವಲ್ಲಿಯ ಪಾಪವೆಲ್ಲಿ ತೋಱೈ (ಸಾನಂಚ.೨-೨೮). ೬. ವನದೇವತೆಯರಮೃತಸಾರವಾರಿಯಂ ಪಚ್ಚೆವರಲ ಕರಗಂಗಳೊಳ್ ತೀವಿ ತೆಂಬೆಲರ ಪೊಯ್ಲಿನಿಂ ತಣ್ಪುವಡೆಯಲೆಂದು ನೆರೆಪಿದಂತಿರ್ದ ನೀರ್ಗಾಯ ತುಱುಗಲಿಂದೆಱಗಿದ ನಾಳಿಕೇರಭೂರುಹಂಗಳುಂ (ಚಂದ್ರಪು. ೧-೧೦೫ ಪ). ೮. ದೇವಿ ನಿಜಪದನಪೇಂದುಕರಾವಳಿಯಿಂ ತೀವಿ ವನಸರೋವರಮಂ ರಾಜೀವಕ್ಕಿತ್ತು ವಿಕಾಸಮನಾವಗಮಿಂ ನೆರೆಪು ಪಗೆಯನೀ ನಗೆಮೊಗದಿಂ (ಚಂದ್ರಪು. ೭-೭೩).

[ನೆರೆ₁+-ಪು₁]

ನೆರಮನೆ 'ನೆರೆವನೆ' ನೋ.

ನೆರವಂಬಳೆ (ನಾ). ಒಂದು ಬಗೆಯ ಸಸ್ಯ : ಆದಿರಾಜ, ಹೊಳೆ ತುಂಬೆ, ನೆರ್ವಾಳ, ಮವಲಂಗಮರ, ಹೊಳೆನೆಕ್ಕಿ, ನೆರವಂಬಳೆ, ತುಡೆ ಮದಿರಂಗಿ, ಹೊಡ್ಡೆಲೆನಗೆ (ಮೈಟಿಗಿ. ೨೫-೪೬೬). 'ನೆರ್ವಾಳ' ಪರಾ.

[?]

ನೆರವಣಿಗೆ₁ (ನಾ). ೧. ಗುಂಪು ; ಸಮೂಹ : ಸುಭಟರ ನೆರವಣಿಗೆ ನಿಪ್ಪಸರದಲಿ ಮುಸುಕಿತು ಧನಂಜಯನ (ಕುಪ್ಯಾಶ. ೨-೫೫). ೨. ಹೊಂದಾಣಿಕೆ ; ಸೇರುವೆ ; ಕೂಟ : ಹಿರಿಯ ನೀ ಧರ್ಮಜಗೆ ನೀನೆಲೆ ನಿರುತ ಕಾರಣ ಪ್ರಕೃತಿ ಪುರುಷರ ನೆರವಣಿಗೆ ಹರಿಸಿರಿಯನಿಬ್ಬರನುಳಿದು ಭೂಗಣಕೆ ಮರುತನಾತ್ಮಜ ನಿನಗೆ ಸರಿಯೊ ಧರೆಯ ಜೀವರೊಳಾರು (ಸಂಭವ. ೨೨-೨೯). ೩. ಗಳಿಕೆ ; ಸಂಪಾದನೆ : ಅಱಿದಯವರಿಗೆ ಆತ್ಮವಿದ್ಯೆಯನಱುಪುವದಱಿಂದಧಿಕಪುಣ್ಯದ ನೆರವಣಿಗೆ ಬೇಱಾವುದು (ನಿಭಾಗ. ೭-೧-೨). [ನೆರೆ₁+-ವಣಿಗೆ].

ನೆರವಣಿಗೆ₂ 'ನೆಱವಣಿಗೆ' ನೋ.

ನೆರವಣಿಗೆ₃ (ನಾ). ಸಹಾಯ ; ಬೆಂಬಲ : ನೆರವು : ಉಷ್ಣಕ್ಕೆ ಶೈತ್ಯ ನೆರವಣಿಗೆಯಾದಂತೆ (ಸರ್ವಪ. ೨೦-೯೫). [ನೆರ₂+-ವಣಿಗೆ]

ನೆರವಣಿಗೆಗೊಳಿಸು (ಕ್ರಿ). ಪೂರ್ಣಗೊಳಿಸು; ಮುಗಿಸು : ಸ್ನಾನಾದಿ ನಿತ್ಯಕರ್ಮಾನುಷ್ಠಾನ ತಿರುವಾರಾಧನಂಗಳಂ ನೆರವಣಿಗೆಗೊಳಿಸಿ (ಚಿಕವಂ. ೬೩-೪). [ನೆರವಣಿಗೆ₂(<ನೆಱವಣಿಗೆ)+ಕೊಳ್₁+-ಇಸು₃]

ನೆರವರ್ 'ನೆರಂಬರ್' ನೋ.

ನೆರವಲ್₃, ನಿರವಲ್, ನೆರವಲ್₂, ನೆರವಲು (ನಾ). [ಸಂಗೀತ] "ರಾಗ ಭಾವ ಪೂರಿತವಾಗಿ ಮಾಡಿದ ಸಾಹಿತ್ಯ ಸಂಗೀತ ವಿಸ್ತರಣೆಯೇ ನಿಜವಾಗಿ 'ವಿನ್ಯಾಸ' ಅಥವಾ 'ನೆರವಲ್' ಎನಿಸಿ ಕೊಳ್ಳುತ್ತದೆ" (ಸಂಗೀಚಂ. ೯೩) : ಕೆಲವು ಪಲ್ಲವಿಗಳಿಗೆ ಸಂಗತಿಗಳೂ

ಇರುವುದುಂಟು. ಅವನ್ನು ನೆರವಲ್‌ಗೆ ಮುಂಚೆಯೇ ಹಾಡಬೇಕು (ಸಂಗೀಚಂ. ೯೩). **ನಿರವಲ್ :** ಈ ರೀತಿಯ ಸಮಯಸ್ಫೂರ್ತ ಸಂಗೀತಕ್ಕೆ ಐದು ಅಂಗಗಳಿವೆ. ಆಲಾಪನೆ, ತಾನ, ಪಲ್ಲವಿ, ನಿರವಲ್ ಮತ್ತು ಸ್ವರ (ಸಂಗೀತ. ೧). **ನೆರವಲ$_2$:** ಸತತ ಅಭ್ಯಾಸದಿಂದ ಪಲಕುಗಳು, ನೆರವಲಗಳು ಲೀಲಾಜಾಲವಾಗಿ ನುಡಿಯುತ್ತಿದ್ದವು (ನಟಸಾ. ೫೯). **ನೆರವಲು :** ಅವರ ಹಾಡುಗಳನ್ನು ನಮ್ಮ ಕಚ್ಚೇರಿಗಳಲ್ಲಿ ಸ್ವಲ್ಪ 'ನೆರವಲು' ಮಾಡಿ, ನಾಲಕ್ಕಾವರ್ತಿ ಸ್ವರಗಳನ್ನು ಬೆಳೆಸಿ ಹಾಡಿ ಹಾಡಿಸಿ ನೋಡಬಾರದೆ ? (ಗಾನಕ. ೧೦೮) ; ರಾಗಾಲಾಪನೆ, ನೆರವಲು, ಸ್ವರಕಲ್ಪನೆ ಮತ್ತು ತಾನ ಎಂಬ ಹೆಸರುಗಳಲ್ಲಿ . . . ಸೃಷ್ಟಿಸುವ ಅಂಶಗಳನ್ನು ಒಳಗೊಂಡುದು ಆಧುನಿಕ ಕರ್ಣಾಟಕಸಂಗೀತವೆನ್ನಬಹುದು (ಕವಿಕೋ. I, ೭೮೭). [?]

ನೆರವಲ$_1$ (ನಾ). ಸಹಾಯಕಸೈನ್ಯ,—ದಳ : ಪಾರದೆ ಕೈದುವ ಬಲಮಂ ಪಾರದೆ ನೆರವಲಮನೊಂದೆ ತೋಳ್ವಲದಿಂ ಸಂಹಾರಿಸಿದಂ ಮಾರ್ಬಲಮಂ ಪಾರಿಜನಾಭಂಗೆ ಸಂಗರಕ್ಕಿದಿರುಂಟೇ (ಪಂರಾಮಾ. ೪-೬೫). [ನೆರ$_2$+ಬಲ$_3$]

ನೆರವಲ$_2$ 'ನೆರವಲ್' ನೋ.

ನೆರವಲು "ನೆರವಲ್" ನೋ.

ನೆರವಾನ್ (ಕ್ರಿ). ಸಹಾಯವನ್ನು ನೀಡು : ಆತಂಗೆ ನೆರವಾಂತ ನಾಲ್ಕುಮುಪಾಯದಂತೆ ನಾಲ್ಕುಂ ಪುರುಷಾರ್ಥದಂತೆ ಮೈಗೊಂಡು ಪುಟ್ಟಿದ ನಾಲ್ವರ್ ಕುವರರೊಳ್ ಪಿರಿಯ ರಾಮಂಗೆ ಪಟ್ಟಾಭಿಷೇಕ ಮಾಯ್ತು (ರಾಮಾಶ್ವ. ೭-೧೨). [ನೆರವು$_2$(<ನೆರ$_2$)+ಆನ್$_1$]

ನೆರವಾನಿಸ (ನಾ). "ಸಹಾಯಕ ಪುರುಷ" (ಪ್ರಭಣ್ಣ) : ನರಗಟ್ಟು, ನೆರವಾನಿಸಂ, ಬರವಟ್ಟೆ (ಶಬ್ದಾನು. ೩೩೨ ಪ್ರಯೋ).

[ನೆರ$_2$+ಮಾನಿಸ$_1$(<ಮಾನುಸ)]

ನೆರವಿ, ನೆರಹಿ, ನೆರೆವಿ (ನಾ). ೧. ಗುಂಪು ; ಸಮೂಹ ; ಸಮುದಾಯ: "ಬಂಬಲ್, ತುಱುಗಲ್, ವಂಗಡಂ . . . ನೆರವಿ, ಬಳಗಂ . . . ಗೊಂದಣಿ(ಉಂದಲ್)—ಈ ೪೦ ಸಮೂಹಂ" (ಕಶಸಾ. ೫೬-೨೨೨); ಇತ್ತ ಇರುಳಿನೋಲಗದೊಳ್ ನೆರೆದಿರ್ದ ನೆರವಿಯೊಳ್ (ವಡ್ಡಾರಾ. ೮೨-೪); ಭೀಮಸೇನನಾ ನೆರೆದ ನೆರವಿಗಿಂತೆಂದಂ (ಪಂಪಭಾ. ೧೨-೧೬೦ವ); ನೆರೆದ ನೆರವಿಯೆಲ್ಲಂ ತಮ್ಮೊಳಿಂತೆಂದರ್ (ಧರ್ಮಾಮೃ. ೬-೧೨೪); ರಸಪೂರಮತಿಗಭೀರಂ ಕಾವ್ಯಂ ನೀರಸರಱಿವಂತೇನಿದು ತಾರೆಲೆಯೇ ಬೀದಿವಾಡೆ ನೆರವಿಯ ತುಮುಕೇ (ಗಿರಿಕ.೧-೩೦) ; ವಿಹಗವಿತತಿಯ ನೆರವಿಗಳಲೊಪ್ಪುವ ಮಹಾಕಾನನವ ಪ್ರಭು ಕಂಡ(ಪ್ರಭುಲೀ.೨೦-೧೬); ಗರುಡರ ಸಮುದಾಯಮುಂ ಮಯೂರರ ನೆರವಿ . . . ರಾಗದಿಂದೀಶನೋಲಗಕೆ ಬರುತಿರ್ದುದು (ಚಿಬಪು.೨-೧೬) ; ನದಿಗಳೊಳ್ ಸುರಗಂಗೆ ತಾರೆಗಳೊಳಂ ರೋಹಿಣಿಯು ತೀರ್ಥನೆರವಿಯೊಳ್ ಮಣಿಕರ್ಣಿಕೆಯವೊಲಾ ಸತಿಯ ರೊಳ್ಯರ್ವಾಣಿ ಶೋಭಿಸಿದಳು (ನಂದಿಮಾ. ೬-೯). ೨. ರಾಶಿ; ಮೊತ್ತ : ನರವಿನ ನೆರವಿಯೊಳ್ತೊಟಲ್ದು ನೋಡಿಯುಂ (ಗದಾಯು. ೬-೨೮ ವ) ; ಮುರಿಮುರಿದು ಕಬ್ಬೊಗೆಯ ಹೊದಱಿನ ಹೊರಳಿ ಹರೆದುದು ಸೂಸುಗಿಡಿಗಳ ನೆರವಿ ನಸಿದುದು (ಕುಮ್ಯಾದ್ರೋ. ೧೯-೫೦); ಪರುಷವಿಲ್ಲದ ಭೂಮಿ ಮುತ್ತಿನ ನೆರವಿಯಿಲ್ಲದ ಮಣಲು ಹೊಂದಾವರೆಗಳಿಲ್ಲದ ತಿಳಿಗೊಳಂಗಳವಿಲ್ಲ ಮತ್ತಲ್ಲಿ (ಸಾಳ್ವಭಾ. ೧-೫೮) ; ಶರಧಿಮಥನದೊಳ್ ನೊರೆಗಳ ನೆರವಿಯ ನಿರದಾಂತು ಪರಿವ ತೆರೆಗಳ ಸಿರಿಯಂ ಧರಿಸಿ ಪರಿದುದು ತುರಂಗೋತ್ಕರ ಮಾನನಫೇನಖಂಡಪಂಡದಿನಾಗಳ್ (ರಾಜಶೇ. ೬-೫೯) ; ಪೊಳೆಯುತಿಹ ಬಿದಿರುಗಳ ನೆರವಿಯೆಂಬ ಕೊಳಲಿಂದೆ ಮಾರುತನು . . . ತುತಿಸುತಿರಲು (ಕವಿಕಾ. ೧-೮). ೩. ದಟ್ಟಣೆ ; ದಟ್ಟೈಸುವಿಕೆ: ಸುರನದೀ ತೀರದಲು ರಾತ್ರಿಯ ನೆರವಿಯಲು ವಿಸ್ತರಿಸಿ ಪಾಂಡವರರಸಗಱುಹಿದನಂದು ಕಥೆಯ ಸಹಸ್ರಬಾಹುವಿನ (ಸಂಭಪ. ೨೫-೬೪). ೪. ಆಧಿಕ್ಯ ; ಅತಿಶಯತೆ : ವಿನಯಸಂಪನ್ನತಾವಿನಯದ ನೆರವಿಯುಂ (ತತ್ತ್ವಪ್ರ. ೨೬೫). ೫. ಬೀಗರೂಟ : ಬೀಗರು ಮಾಡಿದ ನೆರವಿ ಭರ್ಜರಿಯಾಗಿತ್ತು (ರೂಢಿ). **ನೆರಹಿ :** ೧. ಸಂತೆಯ ನೆರಹಿಯಲ್ಲಿ ಅಭಿಮಾನದ ಮಾತ ಮಾಱಬಹುದೆ (ಶೂನ್ಯಸಂ. ೧೧೧-೬೯) ; ಅರಸ ಕೇಳ್ಳೆ ಬೇಂಟೆಗಾಱರು ಕರೆಯ ಬಂದರು ಮೃಗನಿಕಾಯದ ನೆರಹಿ[ಪಾಠಾಂ.ವಿ]ಗಳ ನೆಲೆಗೊಳಿಸಿ ಪಾಂಡುನೃಪಾಲ ನೋಲಗಕೆ (ಕುಮ್ಯಾಆ. ೪-೧೧). **ನೆರವಿ :** ೧. ತರುಣ ಹರಿಣಾಕ್ಷಿ ಬಿಂಕಂಬೆರಸೊರ್ವಳ್ನೋಡ ಗಳಿಗೆಗೋರಡಿಯುಂ ವಿಸ್ತರದಿಂದಿಡುತುಂ ಬಂದಳ್ ನೆರವಿಯ ನೋಟಿಕರ ಮನಮನಲ್ಲಾಡಿಸುತುಂ (ಧರ್ಮಾಮೃ. ೭-೧೮೮).

[ನೆರೆ$_1$+-ವಿ$_1$]

ನೆರವಿಗ$_1$ (ನಾ). ಸಹಾಯ ಮಾಡುವವನು ; ಸಹಾಯಕ : "ಸಹಾಯಕ ; ನೆರವಿಗ ; ಸಹಕಾರಿ" (Accessary. ಇಂಕನಿ); ಅರಸಂ ನೇಹಿಗನೊಲ್ಮೆಗಂ ನೆರವಿಗಂ ಕಾವಂ ಹಿತಂ ತೆತ್ತಿಗಂ (ಅಪ್ರತಿ. ೧೪-೮೩); ನೆರವಿಗನು ಮೇಣ್ ರಕ್ಷಕನು ನೀನೊರ್ವನೆಯೆ (ಮೂರುನಾ. ೧೦೮) ; ಅವರಿಗೆ ನೆರವಿಗನಾಗಿ ನಾನು ಕೆಲಸ ಮಾಡುತ್ತಿದ್ದೆ (ಕಂನಾಸಾ. ೧೩೦) ; ತೋಳ್ನೆಗಹಿ ನೆರವಿಗರ ಕರೆಯುತಳುತಿತ್ತು (ಕಾಲೂರ. ೧೩೯-೩೦೧).

[ನೆರವು$_2$(<ನೆರ$_2$)+-ಇಗ]

ನೆರವಿಗ$_2$ (ನಾ). ಗುಂಪಿನಲ್ಲಿರುವವನು ; ಸಮೂಹದಲ್ಲಿ ಸೇರಿದವನು : ಇಕ್ಕೆಲದ ನೆರವಿಗರು ಕೆಲಬಲಕೊಕ್ಕು ಸರಿದರು (ಶೊರರಾ. ೨-೩-೧೦) ; ಏನಿದಚ್ಚರಿಯೆಂದು ನೆರವಿಗರ್ಬಳಿಕ ಸುಮ್ಮಾನದೆ ಮೇಗ ನಿಟ್ಟಿಸುತ ಮಾನಿನಿಯಾಸ್ಯೇಂದುಮಂಡಲವನು ಕಂಡಾನಂದವಿಡಿದು ನುಡಿದರು (ಕಂನವಿ. ೯-೮೯) ; ಆ ನೆರವಿಗರ ಸಂತೆಯನ್ನು ಚೆದುರಿಸಲು ಸೈನ್ಯವು ಪ್ರಯತ್ನಿಸಿದುದು ಸಾರ್ಥಕವಾಗಲಿಲ್ಲ (ವಿಗಡ. ೮-೧೧).

[ನೆರವಿ+-ಗ$_2$]

ನೆರವಿದೊಳಸು (ನಾ). ತುಮುಲ ; ಗೊಂದಲ ; ಕ್ಷೋಭೆ : ತುರಗ ಗಜಘಟೆ ಬೀದಿವರಿದವು ನೆರವಿದೊಳಸಿನ ಮನ್ನೆಯರ ಸೆಣಸಿದರು ಶೂಲದಲಿ (ಕುಮ್ಯಾದ್ರೋ. ೬-೭).

[ನೆರವಿ+ತೊಳಸು$_4$(<ತೊಟಸು$_2$)]

ನೆರವಿವಡೆ (ಕ್ರಿ). ಸಮೂಹಕ್ಕೆಲ್ಲ ತಿಳಿ ; ಸರ್ವಶ್ರುತವಾಗು ; ಖ್ಯಾತಿಹೊಂದು ; ಪ್ರಸಿದ್ಧವಾಗು : ಮೂಱುಲೋಕಮುಂ ಕರ್ಣಾರ್ಜುನರ ಯುದ್ಧಮಂ ನೋಡಲ್ ನೆರೆದಲ್ಲಿ ನೆರವಿವಡೆದನ್ನ ಪ್ರತಿಜ್ಞೆಯಂ ನೆಱಪಲಿಂದವಸರಂಬಡೆದೆನೆಂದು . . . ಪವನತನಯಂ ಬದ್ಧವಪುವಾಗಿ ದುರ್ಯೋಧನಾನುಜರಂ ಪೆಸರ್ವೆಸರೊಳೆ ಕರೆದು ಮೂದಲಿಸಿದೊಡೆ (ಪಂಪಭಾ. ೧೨-೧೪೪ ವ). [ನೆರವಿ+ಪಡೆ$_1$]

ನೆರವೀ, ನೆರವೀಯು (ಕ್ರಿ). ಬೆಂಬಲ ನೀಡು ; ಸಹಾಯಮಾಡು: ಪರಮನಾ ರೂಪದಲಿ ನೆರವೀಯಲಱಿಯದೆ ನರನಾಗಿ ಬಂದು ಪರವೀವ ಗುರುವಿಂಗೆ ಸರಿಯಾರ ಕಾಣೆ (ಸರ್ವಜ್ಞ. ೪೯) ; ಬೆಂಗೊಂಡು ಬಾಳ್ವೆಯೊಳ್ ಹೊರಲಾರದಿಹ ಹೊರೆಗೆ ತಂಗಿ ತಲೆಗೊಟ್ಟು ನೀ ನೆರವಿತ್ತೆಯೆನಗೆ (ಕಾಲೂರ. ೧೭೮-೪೦೨) ; ಆ ಪರ ಊರೊಳು ತಂದೆಯ ಗೆಳೆಯರು . . . ಓದಿಗೆ ನೆರವಿತ್ತರವರು (ಇಂಚಾಪ. ೨೦-೮೮). **ನೆರವೀಯು :** ಬ್ಯಾಂಕಿಗೆ ಪೇಟೆಯ ವಿಚಾರದಲ್ಲಿ ನೆರವೀಯುವ ಬುದ್ಧಿ ಇದೆ ಎಂಬುದು ಅರ್ಥ (ಹಣಪ್ರ. ೧೮೬). [ನೆರವು$_1$(<ನೆರ$_2$)+ಈ$_2$]

ನೆರವೀಯು 'ನೆರವೀ' ನೋ.

ನೆರವು$_1$ 'ನೆರ$_2$' ನೋ.

ನೆರವು$_2$ 'ನೆಱವು$_1$' ನೋ.

ನೆರವುಟ್ಟು (ಕ್ರಿ). ಸಹಾಯವೊದಗು ; ಬೆಂಬಲವುಂಟಾಗು : ಪುಟ್ಟದನಾಕೆಗೆ ಮಗನೊಡವುಟ್ಟೆ ಮಹಾಭಾಗಧೇಯಲಕ್ಷಣನಿಕರಂ ಪುಟ್ಟೆ ಧರಾಭಾರಕೆ ನೆರವು[ವು]ಟ್ಟದುವೆಮಗೆಂಬ ನಲವು ದಿಗ್ದಂತಿಗಳೊಳ್ (ಚಂದ್ರಪು. ೩-೯೩). [ನೆರ$_2$ + ಪುಟ್ಟು$_1$]

ನೆರವುತಪ್ಪು (ಕ್ರಿ). ಆಶ್ರಯ ತಪ್ಪಿಹೋಗು ; ಆಸರೆ ಇಲ್ಲವಾಗು: ಕೂಳ ಭಣಗಿಗೆ ನೆರವುತಪ್ಪಿದುದೆಂಬ ನಾಣ್ಣುಡಿಯಾಯಿತು (ಬಸಪು. ೫೭-೧೩). [ನೆರವು$_1$ (<ನೆರ$_2$) + ತಪ್ಪು$_1$]

ನೆರವುನೀಡು (ಕ್ರಿ). ಸಹಾಯಮಾಡು ; ಬೆಂಬಲಕೊಡು : ಹೀಗೆ ಭಕ್ತರು ಲೋಕಸಂಗ್ರಹಕಾರ್ಯದಲ್ಲಿ ತುಂಬ ನೆರವುನೀಡಿದ್ದಾರೆ (ಧರ್ಮಸಾ. ೧೫೧). [ನೆರವು$_1$(<ನೆರ$_2$) + ನೀಡು$_1$]

ನೆರವುಬರು 'ನೆರಂಬರ್' ನೋ.

ನೆರವುಸಂಬಳ (ನಾ). ಸಹಾಯಕ್ಕೆ ಬರುವ ಬುತ್ತಿ,-ಪಾಥೇಯ,-ಊಟದ ಸಾಮಗ್ರಿ : ಹರಿಗುಣಶ್ರವಣಾನುಕೀರ್ತನ ಚರಣಸೇವೆಗಳೆಂಬ ನಂಬಿದ ನೆರವುಸಂಬಳದಿಂದ ದುಸ್ತರಮಾರ್ಗವನು ಕಳಿದು (ನಿಭಾಗ. ೪-೧೫-೯) ; ಹರಿಪರಾಯಣರೆಂದೊಡವರನು ನೆರವುಸಂಬಳ ಸಹಿತ ಮನ್ನಿಸಿ ಪರತರಾತ್ಮಾನಂದಪದವೆಂಬೂರ ಹೊಗಿಸುವಳು (ನಿಭಾಗ. ೫-೮-೨೫).

[ನೆರವು$_1$(<ನೆರ$_2$)+ಸಂಬಳ$_2$(=ಸಂಬಲ)]

ನೆರವುಹಾಕು (ಕ್ರಿ). ಹೆಪ್ಪುಹಾಕು : ಹಾಲಿನಲ್ಲಿ ಬೆಣ್ಣೆಯಿರುವುದು ರಹಸ್ಯ. ಈ ರಹಸ್ಯವನ್ನು ಮೊತ್ತಮೊದಲು ತಿಳಿದುದು 'ಸಂಶೋಧನ'. ಆ ಬೆಣ್ಣೆಯನ್ನು ಪಡೆಯುವುದಕ್ಕಾಗಿ ಮೊದಲು ಮಾಡಿದ ಕ್ರಿಯೆಗಳು (ನೆರವು ಹಾಕಿ ಮೊಸರು ಮಾಡಿ ಕಡೆಗೋಲಿನಿಂದ ಕಡೆದುದು)ಸಂಶೋಧನ ಕಾರ್ಯ (ಸಂಶೋಧ. ೧೮೫).

[ನೆರವು$_1$(<ನೆರ$_2$)+ಹಾಕು(<ಪಾಯ್ಕು$_1$)]

ನೆರವೇರಿಸು (ಕ್ರಿ). ೧. ಈಡೇರಿಸು ; ಪೂರ್ಣಮಾಡು : ನೀನೂ ಭೂಷಣನ ಮದುವೆಗೊಪ್ಪಿ ಶುಭಕಾರ್ಯ ನೆರವೇರಿಸಬಾರದೇ ? (ಕಂಕಕೂ. ೪೧) ; ಹಿರಿಯ ರಾಜಕುಮಾರನಾದ ತಿರುಮಲದೇವರಿಗಿನ್ನೂ ಆರುವರ್ಷಗಳಾಗಿದ್ದಾಗಲೇ ರಾಯನು ಅತನಿಗೆ ಪಟ್ಟಾಭಿಷೇಕಮಹೋತ್ಸವವನ್ನು ನೆರವೇರಿಸಿ ಬಿಟ್ಟನು (ಕೃದೇವ. ೧೪). ೨. ಪಾಲಿಸು ; ಶಿರಸಾವಹಿಸು : ರಾಜನ ಆಜ್ಞೆಯನ್ನು ನೆರವೇರಿಸಲು ಇಬ್ಬರು ಸಿಕ್ಕಿದರು (ಪ್ರವಾಇ. II, ೧೯೪). [ನೆರವೇರು + -ಇಸು$_3$]

ನೆರವೇರು (ಕ್ರಿ). (ಕೆಲಸ, ಯೋಚನೆ ಮುಂತಾದುವು) ಈಡೇರು; ಪೂರ್ಣವಾಗು : ಕೃತಿಯು ನೆರವೇರಲೋಸುಗ ಪ್ರತಿದಿನದಲ್ಲಿ ರಾಜನುತಿ ಗೈಯ್ಯೆ ವೆಂಕಟರಮಣಶರ್ಮಂ (ಸೌಪರಿ. ೧-೩) ; ಸದುದ್ದೇಶವು ನೆರವೇರಲು ಇದೊಂದೇ ಮಾರ್ಗ (ಜೈಮಹ. ೧೪೪) ; ಇದು ನೆರವೇರದ ಯೋಚನೆ (ವ್ಯಾಸಚಿ. ೧೪೩) ; ಎಲ್ಲರ ಆಸೆಗಳೂ ನೆರವೇರಲು ಅವಕಾಶವಾಗುತ್ತದೆ (ಹಣಪ್ರ. ೧೧).

[ನೆರವು$_2$(<ನೆಱವು$_1$)+ಏರು$_1$(<ಏಱ್$_1$)]

ನೆರಸು 'ನೆರೆಯಿಸು' ನೋ.

ನೆರಹಿ 'ನೆರವಿ' ನೋ.

ನೆರಹಿಸು (ಕ್ರಿ). ಗುಂಪುಗೂಡಿಸು ; ಒಟ್ಟುಮಾಡು : ಹೊಳಲ ಪರಿವಾರಕೆ ಸಾಱಿಸು ಕೆಲಬಲದ ರಾಯರಿಗೆ ದೂತರ ಕಳುಹಿ ನೆರಹಿಸು ಕಾದಿಸೆಂದನು ಕೌರವರ ರಾಯ (ಕುಪ್ಯಾಭೀ. ೧-೮).

[ನೆರಹು$_1$(<ನೆರಪು)+-ಇಸು$_3$]

ನೆರಹು$_1$ 'ನೆರಪು' ನೋ.

ನೆರಹು$_2$ (ನಾ). ಗುಂಪು ; ಸಮೂಹ ; ಸಮುದಾಯ : 'ನೆರಹುಗೂಡು' ಪರಾ. [<ನೆರಪು]

ನೆರಹುಗೂಡು (ಕ್ರಿ). ಗುಂಪಿನಲ್ಲಿ ಸೇರು ; ಜನಸಮುದಾಯದಲ್ಲಿ ಬೆರೆ : ನೆರಹುಗೂ[ಪಾತಾಂ. ಗು]ಡದೆ ಏಕಾಂತದೊಳಗಿರಬೇಕು ನೆರಹಬೇಕಮಲಗುಣ ಪರವಸ್ತುಗಳನು (ತಿವಗೀ. ೧೪೩-೩೩೧ ; ಮಹಾದೇ. ಬ. ೯೫-೨೨೨ ನೋ). [ನೆರಹು$_2$ + ಕೂಡು$_1$]

ನೆರಳ್$_1$ 'ನರಲ್$_1$' ನೋ.

ನೆರಳ್$_2$ 'ನೆಟಲ್$_1$' ನೋ.

ನೆರಳು$_1$ 'ನರಲ್$_1$' ನೋ.

ನೆರಳು$_2$ 'ನೆಟಲ್$_1$' ನೋ.

ನೆರಳು$_3$ (ನಾ). ಒಂದು ಬಗೆಯ ಸಸ್ಯ : "ಛರ್ಧಿಘ್ನ—ನೆರಳು (ನೇಱಲ್ ?)" (ಓಷಧಿ. ೫೮). [?]

ನೆರಳುಕೊಡು (ಕ್ರಿ). ಆಶ್ರಯ ಕೊಡು ; ಆಸರೆ ನೀಡು : ನೆತ್ತರಿಳಿದರೂ ಏನಾತು, ನೆರಳು ಕೊಟ್ಟವರ ಮನಿ ನಡಸಾಕ ಬ್ಯಾಡ?(ಹೊಸಂಸಾ. ೧೪೮). [ನೆರಳು$_2$(<ನೆಟಲ್$_1$) + ಕೊಡು$_1$]

ನೆರಳುನಾಟಕ (ನಾ). ಪರದೆಯ ಮೇಲೆ ನೆರಳುಗಳು ಬೀಳುವಂತೆ ಮಾಡಿ, ನಟರು ಪರದೆಯ ಹಿಂದೆ ನಡೆಸುವ ಆಟ ; ಛಾಯಾನಾಟಕ ; ನಾಟಕದಲ್ಲಿ ಒಂದು ಪ್ರಯೋಗ : ಈ ಎರಡು ಮಹಾಕಾವ್ಯಗಳು ಅಲ್ಲಿಯ ನಾಟಕ, ನೃತ್ಯ, ನೆರಳುನಾಟಕ ಮತ್ತು ಬೊಂಬೆಯಾಟಗಳಿಗೆ ಕಥಾವಸ್ತುಗಳನ್ನು ಒದಗಿಸಿ ಕೊಟ್ಟವೆ (ಕಪಪು. ೬-೮೪).

[ನೆರಳು$_2$(<ನೆಟಲ್$_1$) + ನಾಟಕ]

ನೆರಳುನೀಡು (ಕ್ರಿ). ನೆರಳು ಕೊಡು ; ಆಶ್ರಯ ನೀಡು : ಕಾಲಕಾಲಕ್ಕೆ ಭಾರತೀಯ ಸಂಸ್ಕೃತಿ ಬೆಳೆದು ಮಹಾವಟವೃಕ್ಷವಾಗಿ ನೆರಳು ನೀಡಿ ನಿಂತಿರುವ ಕಥೆ ಈ ಪುರಾಣಗಳಿಂದ ಚೆನ್ನಾಗಿ ತಿಳಿದುಬರುತ್ತದೆ (ಭಾರದ. ೧೩೨). [ನೆರಳು$_2$(<ನೆಟಲ್$_1$) + ನೀಡು$_1$]

ನೆರಳುಹಾಕು (ಕ್ರಿ). ನೆರಳು ಬೀಳಿಸು : ಉಲ್ಕಾಪಾತದ ಜ್ವಾಲೆಯಂತೆ ಹೊಳೆಯುತ್ತಿದ್ದ ಅದರ ಹೊಳಪಿಗೆ ಮರಗಳೆಲ್ಲ ನೆರಳು ಹಾಕುತ್ತಿದ್ದವಂತೆ (ಯೋಧಪು. ೫೫). [ನೆರಳು$_2$(<ನೆಟಲ್$_1$) + ಹಾಕು(<ಪಾಯ್ಕು$_1$)]

ನೆರಿ 'ನಿಱಿ$_2$' ನೋ.

ನೆರಿಕೆ 'ನೆರಕೆ$_1$' ನೋ.

ನೆರಿಕೆಮನೆ (ನಾ). ತಡಿಕೆಗಳಿಂದ ಮಾಡಿದ ಮನೆ : ಅರಕಲ್ಲೂಡ್ಪೇಟ್ಯವಳೆ ನೆರಿಕೇಮನೆಯವ್ಳೇ (ಹಳ್ಳಿಯ. ೫೬).

[ನೆರಿಕೆ(<ನೆರಕೆ$_1$) + ಮನೆ]

ನೆರಿಗಂಟು (ನಾ). ನಿರಿಗೆಯ ಗಂಟು : ಉಟ್ಟರುವ ಸೀರೆಯ ನೆರಿಗಂಟು ಮಲಯಮಾರುತ ಪ್ರೇರಣೆಯಿಂದ ಸಡಿಲಿ ಭೂಮಿಯಲ್ಲಿ ಬೀಳಲು (ಕೃವಾಆ. ೧೫೬). [ನೆರಿ(<ನಿಱಿ$_2$) + ಗಂಟು]

ನೆರಿಗುರುಳು 'ನಿಱಿಗುರುಳ್' ನೋ.

ನೆರಿಗೆ 'ನಿಱಿಗೆ' ನೋ.

ನೆರಿಗೆಗಟ್ಟು 'ನಿರಿಗೆಗಟ್ಟು' ನೋ.

ನೆರಿಗೆಬೀಳು (ಕ್ರಿ). ನಿರಿಗೆಬೀಳು ; ನಿರಿಗೆಗಟ್ಟು : ನಿನ್ನ ಮುಖವೆಲ್ಲಾ ನೆರಿಗೆಬಿದ್ದು ಹೋಯಿತು (ಹಳ್ಳಹಾ. ೧೦೮) ; ಅವನ ಕಂದುಬಣ್ಣದ ಮೋರೆ ಸುಕ್ಕುಗಟ್ಟತ್ತು, ಅದರೆ ನೆರಿಗೆಬಿದ್ದಿರಲಿಲ್ಲ (ಮಹಾತ್ಮಾ. ೫).

[ನೆರಿಗೆ(<ನಿಱಿಗೆ) + ಬೀಳು$_1$(<ಬೀಱ್$_1$)]

ನೆರಿಪಿಡಿ 'ನಿಱಿವಿಡಿ' ನೋ.

ನೆರಿಲ್ (ನಾ). ಒಂದು ಅನುಕರಣ ಶಬ್ದ : ಕಟವಾಯ್ಗೆ ಕೈಯನಿಟ್ಟರ ದೆರಳ್ ಸೀಳಾಗಿ ನಿಟ ನೆರಿಲ್ ನಿಟಲೆನಲ್ ನಿಟ್ಟಲುವನುಱೆ ಮುಱಿದು (ಚಿಬಪು. ೨೧-೬).

ನೆರಿಹಿಡಿ 'ನಿಱಿವಿಡಿ' ನೋ.

ನೆರೂರ್ (ನಾ). ಒಂದು ಊರಿನ ಹೆಸರು : ನೆರೂರ್ನ್ನಾಮಾಗ್ರಾಮಸ್ಸಭೋಗಸ್ಸರ್ವ್ವಬಾಧ(ಧಾ)ಪರಿಹಾರೋದತ್ತಃ (ಇಅ. IX, ೧೨೮–೩೪ ; 700). [? + ಊರ್]

ನೆರೆ$_1$ (ಕ್ರಿ). ೧. ಸೇರು; ಜೊತೆಗೂಡು: "ನೆರೆ—ಸಂಯೋಗೇ (ಸೇರು), ಪಾರ್ಶ್ವೇ ಚ" (ಶಮಧಾ) ; ಅರಣ್ಯದೊಳ್ ತಿರಿತರುತಿರ್ದ ಕಣ್ಬಡಿಗರಿಂ ಮಗುಟ್ಟುಂ ಬಿಱುತೋಡಿ ಬೇಡರೊಳ್ ನೆರೆದಿರಲಲ್ಲದೊಡ್ಡಯಿಸಿ ರಾಜ್ಯದೊಳೇಂ ನೆರೆಯಲ್ಕೆ ತೀರ್ಗುಮೋ (ಪಂಪಭಾ. ೮–೮೫) ; ತ್ರಿಭುವನತಿಲಕನ ಮನಮಂ ದಿವಿಜೆಯರೆ ನೆರೆದು ಗೆಂಟಾಗಿಸಿದರ್ (ಅಜಿಪು.೬–೧೦೨); ಸಕಲವಸ್ತುಗಳುಂ ತೆರಳ್ದು ನಿರ್ಭಾಗ್ಯರಂ ಬಿಟ್ಟು ಪುಣ್ಯಾಧಿಕರೊಳ್ ನೆರೆಗುಂ (ಧರ್ಮಾಮೃ. ೬–೧೨೮) ; ಹರನೀವ ಕಾಲಕ್ಕೆ ಸಿರಿಯು ಬೆನ್ನಲ್ಲಿ ಬರ್ಕು . . . ನೆರೆಯದ ವಸ್ತು ನೆರೆವುದು ನೋಡಯ್ಯಾ (ಬಸವ.೧೬೯) ; ಸದ್ಗುಣಸ್ತೋಮವೆಲ್ಲಂ ನೆರೆದು ರೂಪಾದುದೆನಿಸುವ ಮಹಾಮಹಿಮ ಹಂಪೆಯ ಹರೀಶ್ವರನ ಮೂರ್ತಿ ನೆಲಸಿರ್ಕೆನ್ನ ಚಿತ್ತದೊಳಗೆ (ಹಚಕಾ. ೧–೧೨). ೨. ಕೂಡು ; ಸಂಭೋಗಿಸು : "ಪಾರ್ಶ್ವ ಸಮ್ಮೇಳನ ಸುರತಗಳೊಳ್-ನೆರೆ" (ಶಬ್ದಮಂ. ೧೦೩) ; ಸ್ವರ್ಗಲೋಕದ ಸುರಾಂಗನೆಯರೊಳ್ನೆರೆದೊ (ಎಕ. XI, ಚಳ್ಳಕೆ. ೮–೫ ; ಸು. 810 ?) ; ನೃಪನಂದನನಾ ನೃಪವಧುವರ್ನೆರೆದು ಸುಖದೊಳಿರೆ (ಕವಿರಾ. ೨–೨೧) ; ಆವುಪಾಯದೊಳಾದೊಡಂ ನೆರೆದಲ್ಲದಿನ್ನಿರೆನೀಕೆಯೊಳ್ (ಪಂಪಭಾ. ೮–೬೩) ; ಋತುಕಾಲಪ್ರಾಪ್ತೆಯಾಗಿರ್ದ ಸರ್ವದೈತೆಯೊಳ್ ನೆರೆದು (ಚಾವುಂಪು. ೮೦) ; ಚಂದ್ರಾಪೀಡನೊಳ್ನೆರೆವ ಪುಣ್ಯಮೆನಗಿಲ್ಲ (ಕಾದಂಉ. ೪೪೮) ; ಕೂಸುಳ್ಳಸೂಳೆ ಧನದಾಸೆಗೆ ಒತ್ತೆಯ ಕೊಂಡರೆ ಕೂಸಿಂಗಲ್ಲ. ಬೊಜಗಂಗಲ್ಲ ಕೂಸನೊಮ್ಮೆ ಸಂತಯ್ಸುವಳು ಬೊಜಗನನೊಮ್ಮೆ ನೆರೆವಳು ಧನದಾಸೆ ಬಿಡದು (ಬಸವ. ೧೦೧) ; ಮೈಮಱೆದು ಗುರುಸತಿಯನು ನೆರೆದೊಡೆ (ಹಚಕಾ. ಪರಿ. ೨೧೧). ೩. ಗುಂಪು ಸೇರು ; ಒಟ್ಟುಗೂಡು : ಮಹಾರಜರಾ ಸಮತ್ತವಲಮುಂ ನೆರೆದುವನ್ದು (ಎಕ. X (S), ಚಿಂತಾಮ. ೧೬೯–೪ ; ಸು. 800) ; ಮತ್ತಿತ್ತ ಇರುಳಿನೋಲಗದೊಳ್ ನೆರೆದಿರ್ದ ನೆರವಿಯೊಳರಸನುಂ ಮಹಾದೇವಿಯುಂ ಕಿತ್ತಯ್ಯಂಗಳ ತಪಮುಂ ಗುಣಮುಮಂ ಪೊಗಟುತ್ತೆ (ಪಡ್ಡಾರಾ. ೮೨–೪) ; ವರದತ್ತಂ ಮೊದಲಾಗೆ ಧರಣೀಶರವರ್ಗೆಲ್ಲಂ ಸುರಲೋಕಂ ಸುವಿಧಿಯೊಡನಾದುದಂತುಟೆ ನೆರೆದರನಿತೀ ಸುರಲೋಕಂ (ಆದಿಪು. ೬–೧೩) ; ನೆರೆದಿರ್ದರ್ನಭದೊಳ್ ಕುತೂಹಲಯುತರ್ನೋಡಲ್ ಗದಾಯುದ್ಧಮಂ (ಗದಾಯು. ೭–೬೭) ; ಗೌರಿಯನೋನುವ ಬನ್ನಿರೇ ಚಿಕ್ಕಮಕ್ಕಳೆಲ್ಲರೂ ನೆರೆದು (ಬಸವ. ೮೨) ; ನವಾಂಭೋಜದಿಱುಂಬಿನೊಳ್ ನೆರೆದುದೋರಂತಾ ರಥಾಂಗವ್ರಜಂ (ಕುಸುಮಾ. ೪–೭೪) ; ಸುರಪರಿವಾರ ನೆರೆದುದನೆಣಿಸಲಳವೇ ಕೋಟಿಜಿಹ್ವೆಯಲಿ (ಕುವ್ಯಾಅ. ೧೨–೧೧). ೪. ಗುಂಪುಗೂಡಿಸು ; ಒಟ್ಟುಗೂಡಿಸು : ಕರೆದು ನೆರೆಯರ್ಯ ಬೆದರ್ದು ಕೆದರ್ದಮ್ಮ ಪಡೆಯಾಳ್ಗಳಂ (ಶ್ರೀರಾಮಾ. ೬೪೧–೩೧೧). ೫. ಸೇರಿಹೋಗು ; ಬೆರೆತು ಹೋಗು; ಐಕ್ಯವಾಗು : ಬಲವೆಲ್ಲ ನೀರಲಿ ನೆರೆದುದೋ ಮಾರ್ಬಲದ ವೀರರು ಹರೆದುದೋ ಹವಣಿಲ್ಲ ದಂತಿಯ ಸಮರಸೌರಂಭ (ಕುವ್ಯಾದ್ರೋ.೩–೧೭) ; ಸಂಸಾರಕಾಗಳೆ ಬೆಚ್ಚಿ ವೈರಾಗ್ಯದಲಿ ನೆರೆದನು ಮೇಘರಥನೃಪತಿ (ಸಾಳ್ವಭಾ. ೨೦–೭೬). ೬. ಉಂಟಾಗು ; ಪ್ರಾಪ್ತವಾಗು : ನೆರೆಯದ ನರಕಾಯುಷ್ಯಮಂ ನೆರಪುವನೆಂಬಂತೆ ಮುಳಿದು ಘೂರ್ಣಮಾನಲೋಹಿತಲೋಚನಂ ದಶನನಿಪೀಡಿತ ದಶನವಸನನಸಿಧೇನುವಂ ಕಿಟ್ತು (ಆದಿಪು. ೨–೧೪ ಪ) ; ನೆರೆವತಿತೃಷ್ಣೆಯಿಂ ಹೃದಯಮಂ . . . ಕರಸರೋರುಹದೊಳ್ ಕದಪಂ ಲಲಾಟದೊಳ್ ಪಱೆದ ಕುರುಳ್ಗಳಂ ವಿರಹವಿಹ್ವಲೆಯಾಗಿ ಲತಾಂಗಿ ತಾಳ್ದುವಳ್ (ಕಾದಂಉ. ೩೩೩) ; ಹರಿದುದು ಚಿಂತೆ ಸಂತಸವಾಯ್ತು ರೋಮಾಂಚ ನೆರೆದುದಾಗಳೆ ದೇಹ ತುಂಬಿ (ಭರಚ. ೩–೫೬) ; ನುಡಿ ಬೇಸಱಂ ಬೆರೆಯೆ, ನಡೆಗಲಸು ನೆರೆಯೆ . . . ಸೀತೆ ಬಸಿಱಿಯಾದಳ್ (ರಾಮಾಶ್ವ. ೨೧–೯). ೭. ಹರಡು ; ವ್ಯಾಪಿಸು : ನಂಬಿರುವ ಸುಚರಿತರ ತೊರೆಯೆಯೆಂಬಾ ಕೀರ್ತಿ ಎಂದಿನಂತೆಯೆ ನೆರೆದು ಪೂಜ್ಯವಾಗುವುದು (ವಿಸೀಗೀ. ೨೩–೧೨). ೮. ನಡೆದುಕೊಳ್ಳು ; ವರ್ತಿಸು : ಮಂತ್ರಿಯುಂ ನೃಪತಿಯುಂ ಬಗೆಗೊಂಡನುಕೂಲವೃತ್ತಿಯೊಳ್ ನೆರೆದಿರೆ ಕೂಡುಗುಂ ನಿಖಿಳರಾಜ್ಯವಿಭೂತಿಗಳಾವ ಕಾಲಮುಂ (ಪಂಚತಂ. ೯೩–೨೨). ೯. (?) : ಪಾರ್ವತಿಯನೂನಮಾಗೆ ತೊಟ್ಟ ನವರತ್ನಖಚಿತದಿವ್ಯಾಭರಣಮಂ ನೆರೆವಂತೆ [ಪಾಠಾಂ. ಮೆಱೆಯೆ] ನಿಱಿವಿಡಿದುಟ್ಟ ದೇವಾಂಗವಸ್ತ್ರಾಪಶಾಖೆಯಂ ತುಱುಂಬಿ ಮಿಱುಪ ಪರಿಮಳ ಮನುಗುಟ್ಟಿ ಮಂದಾರಕುಸುಮದಾಮಂಗಳಿಂ (ಧರ್ಮಪ. ೩–೬೮ ಪ).

ನೆರೆನೆರೆ (ದ್ವಿರುಕ್ತಿ) : ಪೂಡೆಯೆ ನೆರೆನೆರೆಯೆಂದು ನೆರೆದುದಾತನ ಕುಲಂ ಕಡುಶೋಕದಿಂ ಪುರಸ್ತ್ರೀಪುರುಷಸಂಕುಳಂ (ಇಱಿರ.ದೇ.೧೦೮–೧೮); ಜನಕದಂಬವಾ ಪೂಮಳೆಗೆ ಜನನಕ್ಕೆ ಶಿಶುಗೆ ಚೋದ್ಯಂಬಟ್ಟರಲ್ಲಲ್ಲಿ ತನತನಗೆ ಹರಿಹರಿದು ನೆರೆನೆರೆದು ನುಡಿನುಡಿದರು (ಸಿದ್ಧರಾ. ೨–೮) ; ಗಜಾರೋಹಣ ಧುರೀಣರಾದಾ ಧೋರಣರ್ನೆರೆನೆರೆದು ಪರಿಪರಿದು (ರಾಜಶೇ. ೬–೧೧ ಪ). **ನೆರೆವೊಡೆ ಗಂಡ, ನೆರವೊಡೆ ಗಂಡ, ನೆರೆಯೊಡೆ ಗಂಡ** = ಶತ್ರುಸೈನ್ಯವೆಲ್ಲ ಒಟ್ಟುಗೂಡಿ ಬಂದಾಗ ಹೆದರದೆ ಹೋರಾಡುವ ಶೂರ,—ಪರಾಕ್ರಮಿ ; ಒಂದು ಬಿರುದು : ವಿಬುಧಜನವನಜವನಮಾರ್ತ್ತಣ್ಡ ನೆರೆವೊಡೆ ಗಣ್ಡ ನರ್ಮ್ಮದಾನದ್ಯುಭಯತಟರಾಜಹಂಸ (ಕಇ. IV, ೭೬–೯ ; 1060) ; [ಸಂಗ್ರಾ]ಮರಾಮಂ ಭುಜಬಳಭೀಮಂ ನೆರವೊಡೆ [ಗಣ್ಡಂ]ವೈರಿಭೇರುಣ್ಡಂ ನಿಗಳಂಕಮಲ್ಲಂ (ನಾಂದೇಡ್. ೮–೧೩ ; 1070) ; ಪರಬಳಸಾಧಕಂ ನೆರೆಯೊಡೆ ಗಂಡ ಇಮ್ಮ ××× ಕಟಕದ [ಸೋ]ವಣ ದಣ್ಡನಾಯಕರ ಮಹಿಮೆಯೆನ್ತೆಂದಡೆ (ಸೌಇಇ. IX–i, ೩೧೭–೧೨; 1223). **ನೆರೆವೊಡೆ ಬಂಟ** = ನೆರೆವೊಡೆ ಗಂಡ : ಸಮಧಿಗತಪಞ್ಚಮಹಾಶಬ್ದಮಹಾಸಾಮನ್ತಂ . . . ನೆರೆವೊಡೆ ಬಣ್ಟಂ ಗಿರಿದುರ್ಗ್ಗಮಲ್ಲ ಕೊಂಕಣಭಯಂಕರಂ ನಾಮಾದಿ ಸಮಸ್ತಪ್ರಸಸ್ತಿಸಹಿತಂ (ಸೌಇಇ. XI–i, ೪೭–೭ ; 995).

[ದೇ.॥ ತಮಿ. ನಿರೈ, ನಿರ, ನೆರುಙ್ಕು ; ತುಳು. ನೆರೆ, ನೆರಿ]

ನೆರೆ$_2$ (ಕ್ರಿ). ೧. ಸುತ್ತು ; ತಿರುಗು ; ಚಲಿಸು: (ಕ). ೨. ದಿಗ್ಭ್ರಮೆಗೊಳ್ಳು ; ತಬ್ಬಿಬ್ಬಾಗು : (ಕ). ೩. ಆತುರ ಪಡು ; ಉತ್ಸಾಹವನ್ನು ಹೊಂದು : (ಕ). [?]

ನೆರೆ$_3$ 'ನೆಱೆ$_1$' ನೋ.

ನೆರೆ$_4$ 'ನರೆ$_1$' ನೋ.

ನೆರೆ$_5$ (ನಾ). ೧. ಪಕ್ಕ ; ಪಾರ್ಶ್ವ ; ಮಗ್ಗುಲು : "ನೆರೆ—ಸಂಯೋಗೇ (ಸೇರು) ಪಾರ್ಶ್ವೇ ಚ" (ಶಮಧಾ) ; ಅರೆಭಕ್ತರಾದವರ ನೆರೆ ಬೇಡ ಹೊರೆ ಬೇಡ (ಬಸವ. ೧೩೩) ; ನೆರೆಯ ಹೊರೆಯ ದುರ್ಗಂಗಳನಿಳಿಸಿ ತನ್ನಂ ಮಱೆವುದು (ಎಇ. XIV, ೨೭೧–೨೦ ; 1173) ; ಕೇರಿಯೊಳಾದೊಡಂ ನೆರೆಯೆಂಬುದಂ . . . ಸೈರಿಸಂ (ಕಬ್ಬಿಕಾ. ೧೪೮) ; ಪಾರಿಜಾತಂ ನೆರೆಯೊಳಿರುತಿರೆ ಭೂರುಹಂಗಳ ನೆಳಲನರ್ಥಿಸಿ ಸಾರಿದನವೊಲು (ಬಸಪು. ೬೦–೪೬) ; ಎಲೆ ಖಳ ಮಾರಮಥನನ ನೆರೆಯ ಹೊಕ್ಕರು ಬಿಡುವೆನೇ ನಿನ್ನ (ಕೌತಿರಾ. ೩೬–೭೧) ; ನೆರೆಯ ಕಟ್ಟಾಳೊಬ್ಬನೊಲ್ಮೆಯಿಂ ಬಳಿವಿಡಿಯೆ (ಕಾಲೂರ. ೮೫–೧೬೨). ೨. ಸಮೀಪ ; ಹತ್ತಿರ : ಅಂಗಲಾಚುತ್ತವನ ತಾಯ್ತಂದೆಗಳ್ ನೆರೆಯ ಸಂಗಡಿಗ ಬಂಧುಬಳಗಂಗಳಳುತಿರೆ (ಚಿಬಪು. ೬–೩೦) ; ಹುಡುಕುವ ಕೊಪ್ಪರಿಗೆ ಕಣ್ಣಿನ ನೆರೆಗೆ ಖಣಿಲನೆದ್ದೊಲಾದುದು ಗೆಲವು ! (ಹೆಬ್ಬೆರ. ೨೦–೯೪).

೩. ನೆರೆಹೊರೆ ; ಅಕ್ಕಪಕ್ಕದ ಮನೆಯವರು : ಮನ್ನೆಯಂಗಾಱದೆ ತಳಾಱಿಂಗೆ ನೆರೆಗಾಱದೆ ಮಗಂಗೆ ಮುನಿವರೆಂಬ ನಾಬ್ನುಡಿಯಂತೆ (ಧರ್ಮಾಮೃ. ೬-೧೧೯); ನೆರೆಯಲ್ಲದು ಪೊರೆಯಲ್ಲದು ಗೊರವನನೆಲೆ ಮಗವು ಪೋಲ್ತುದೆಂದೀ ನುಡಿಯಂತಿರೆ (ಧರ್ಮಾಮೃ. ೪-೧೧). ೪. ಸಹವಾಸ ; ಸಂಬಂಧ : ನೆರೆ ಹೊಲ್ಲ ದುರಾಚಾರಿಗಳ ನೆರೆ ಹೊಲ್ಲ ಜಾರ ಚೋರಕರ (ಅಖಂಡೇ. ೧೨೯-೧೩); ಇಬ್ಬರಿಗೂ ನೆರೆ ತಪ್ಪುವಂತಿತ್ತು (ಕಪ್ಪುಹು. ೨೧). ೫. ಜೊತೆಗಾರ ; ಸಹಾಯಕ : ಹೊರೆ ಭಾರವಾಗಿದೆಯೆ ? ನೆರೆಯು ಕರೆದವನ ಕೈಗದನು ನೀಡು (ಪಾಂಚಜ. ೪೨-೧೫). ೬. ಆಧಾರ ; ಅವಲಂಬನೆ ; ಸಹಾಯ : ಆತನನು ನೀವಾನ ಪರಿಯಲಿ ನಮ್ಮ ಕುಲಗುರುವ ನೀತಿಯಲಿ ನೆರೆ ಮಾಡಿಕೊಂಬುವುದು (ಸಂಭವ. ೩೭-೪); ತಾನೇ ರನ್ನ ಪಂಪರನ್ನು ಹಿಡಿದರೆ, ಅಡಿಗಡಿಗೆ ಕಟ್ಟಿಲಿನ ನೆರೆ, ನೋಟಗಳಲ್ಲದೆ ದಾರಿಗಾಣುತ್ತಿರಲಿಲ್ಲ (ಸುಗಿಯು. ೧೩೬). ೭. ಸುರುಳಿ ; ಕಟ್ಟು : ಎರಡು ಮೂರು ಬಗೆಯ ಎಲೆಗಳನ್ನು ಒಟ್ಟಿಗೆ ಮಡಿಸಿ, ನಾರಿನಿಂದ ನೂರಾರು ಸುರುಳಿಗಳನ್ನು ಕಟ್ಟುತ್ತಾರೆ. ಈ ಸುರುಳಿಗಳಿಗೆ ನೆರೆಗಳೆಂದು ಹೆಸರು . . . ಮನೆಯ ಕಂಬಗಳಿಗೆ, ಬಾಗಿಲುಗಳಿಗೆ, ಕಣಜಗಳಿಗೆ, ದನದ ಕೊಟ್ಟಿಗೆಗೆ ತೆನೆಗಳನ್ನು ಜೋಚ್ಚಿದ ನೆರೆಗಳನ್ನು ಕಟ್ಟುತ್ತಾರೆ (ಕಪಪು. ೪-೭೪).

ನೆರೆಕರೆ, ನೆರೆಕರೆ = ಅಕ್ಕಪಕ್ಕದ ಜನ ; ನೆರೆಹೊರೆ : ನೆರೆಕರೆಯ ಶಬರೆರೊಡನೆಮಗೆ ಜಗಳಗಲ್ಲ (ಪಚ್ಚರ. ೧೬-೨); ಈರ ನೆರೆಕರೆಯವರ ಹಾಡು ಕೇಳಿ ತಟ್ಟನೆದ್ದ (ಮುಂಗಾಮು. ೭೪) ; ದಯಾಮಿದನು ಯುದ್ಧ ಮಾಡಿ ನೆರೆಕರೆಯ ದೇಶದ ಜನರನ್ನು ಗೋಳಾಡಿಸುತ್ತಿದ್ದನು (ಪುಣಿಸ. ೯೬); ರಾಮಣ್ಣಯ್ಯ ಹುಬ್ಬು ಹಾಲು ತರಲು ನೆರೆಕರೆಗೆ ಓಡಿದ (ಸಸ. ೨೯). **ನೆರೆಕೂಟ** = ರತಿಕ್ರೀಡೆ ; ಸಂಭೋಗ : ಮೇಳವಿಲ್ಲದ ಊಟ ಬಾಲೆಯರ ನೆರೆಕೂಟ ಕಾಳೆಮ್ಮೆ ಹಸುರ ತೊಱೆದು ತಾ ತೀಡಿನ ಕೂಳ ಮೆದ್ದಂತೆ (ಸರ್ವಜ್ಞ. ೧೪೦೨). **ನೆರೆನೆಲನ್** = ಪಕ್ಕದ ಊರಿನವನು ; ನೆರೆನಾಡಿನವನು : ನೆರೆನೆಲನ್, ಅರೇಸ್‌ದೇವನಲ್ಲಿ ತಾನ್ ಕಂಡನ್, ಫೀನೆಯುಸ್ ಮಕ್ಕಳ್ಕರ್ವರ ಕಣ್ಣ ಕುರುಡನ್ (ಅಂತಿಗೊ. ೪೩-೪೭೦); ನೆರೆಯರ್, ನೆರೆಯವರು (ಬಹುವ) : ನೆರೆಯರ್ಗೆ ತೊಟ್ರಪ್ಪೊರ್ ಕೊರ್ದಿ ನಡೆಯಲ್ಕೆ ಸರಿಯೆಲ್ತು (ಅಂತಿಗೊ. ೨೨-೪೭೦); ನಮಗಾಗಲಿ, ಯಜಮಾನರಿಗಾಗಲಿ, ನೆರೆಯವರಿಗಾಗಲಿ . . . ಕೆಲಸದ ಫಲವಾಗಿ ಹಣ ಬಂದರೆ ಆಯಿತು (ಹಣಪ್ರ. ೧೧). ನೆರೆಯವ = ಜೊತೆಯಲ್ಲಿರುವವನು : ಧನವಹ ಸೀಮೆಯ ಖಳನಿಗೆ ಕೊಟ್ಟು ನೀಮುಳಿದು ನೆರೆಯವನಿತ್ತ ಕುನಿಗಿಲ ಸೀಮುಗ್ಗೆದಿದನೇವೇಳ್ವೆ (ಕಂಪವಿ. ೧೧-೬೨); ಮೆಚ್ಚದಂ ನೆರೆಯವಂ ಗುರಿವೆತ್ತುದಂ (ಕಾಲೂರ. ೪೭-೧೬೯). **ನೆರೆವೆಂಡಿರ್** = ಅಕ್ಕಪಕ್ಕದ ಹೆಂಗಸರು ; "ಇತರ ಸ್ತ್ರೀಯರು" (ಪ್ರಭಣ್ಣ) : ನೆರೆವೆಂಡಿರ ಸುಖಗೋಷ್ಠಿಗಳ್ ನಾರಿಯರೊಳ್ ಮೊದಲಿಕ್ಕುಗುಂ (ರಾಮಾಶ್ವ. ೧೬-೨೮). **ನೆರೆ ಹೊರಡು** = ನೆರೆಯವರನ್ನೆಲ್ಲ ಕರೆದುಕೊಂಡು ವಧುವಿನ ಮನೆಗೆ ದಿಬ್ಬಣ ಹೊರಡು,–ಮೆರವಣಿಗೆ ಹೊರಡು : ದೇವರ ಪೂಜೆಗೂ ಗಂಡೂ ನೆರೆ ಹೊರಟಾಗ ಹಾಳುವುದಕ್ಕೂ ಹೆಣ್ಣು ಗಂಡಿಗೆ ಗಂಡು ಹೆಣ್ಣಿಗೆ ಧಾರೆಯು ವೇಳೆ ಸಮಾನಾಮಾಲೆ ಹಾಳುವುದಕ್ಕೂ ಇವೇ ಹೂವು ನನ್ನೂರಿನಲ್ಲಿ. ಆದರೆ ಹೂವಿನಲ್ಲಿ ಪರಿಮಳವಿಲ್ಲ (ನಸ್ಸೂರು. ೧೨). [<ನೆರೆ$_1$]

ನೆರೆ$_6$ 'ನೆಜಿ$_2$' ನೋ.

ನೆರೆ$_7$ 'ನೆಜಿ$_3$' ನೋ.

ನೆರೆ$_8$ 'ನರೆ$_2$' ನೋ.

ನೆರೆ$_9$ 'ನಿಜಾ$_2$' ನೋ.

ನೆರೆಕಾಲುವೆ (ನಾ). ಉಕ್ಕಿ ಬರುವ ಪ್ರವಾಹದ ನೀರನ್ನು ಉಪಯೋಗಿಸಿಕೊಳ್ಳಲು, ನದಿಯ ದಡಗಳಲ್ಲಿ ತೋಡಿದ ಕಾಲುವೆ : ನೆರೆಕಾಲುವೆಗಳು (Inundation Canals).—ಸಿಂಧೂಪ್ರಾಂತ ಇತರ ಕೆಲವು ಪ್ರದೇಶಗಳಲ್ಲಿ ನದಿಯ ದಡಗಳಿಂದ ಕಾಲುವೆ ತೆಗೆಯುವುದುಂಟು. ಪ್ರವಾಹಕಾಲದಲ್ಲಿ ನದಿಯ ನೀರು ಹೆಚ್ಚಿ ಈ ಕಾಲುವೆಗಳಿಗೆ ಉರುಳುತ್ತದೆ . . . ಈ ನೆರೆಕಾಲುವೆಗಳು ಅಪ್ಪ ಪ್ರಯೋಜನಕಾರಿಗಳಲ್ಲ (ಭೂವಿನ. ೨೮೪). [ನೆರೆ$_6$(<ನೆಜಿ$_2$)+ಕಾಲುವೆ(<ಕಾಲ್ವಾಯ್)]

ನೆರೆಕೆ 'ನೆರಕೆ$_1$' ನೋ.

ನೆರೆಕೋಲು (ನಾ). "ಕಣದಲ್ಲಿ ಬತ್ತ ಮುಂತಾದ ಹುಲ್ಲನ್ನು ಎತ್ತಿಹಾಕಲು ಅಥವಾ ರೇಕೆ ಮಾಡಲು ಅನುಕೂಲವಾದ, ಕೊಕ್ಕೆಯುಳ್ಳ, ಒಂದಾಳುದ್ದದ ಬಿದಿರಿನ ಕೋಲು" (ನಸ್ಸೂರು. ಕೋಶ) : ಕೂರಿಗೆ, ಹಲುಬೆ, ನೆರೆಕೋಲು, ಗುನಿದೊಣ್ಣೆ . . . ಕತ್ತಿ — ಇವುಗಳನ್ನು ತೊಳೆದು ಬಾಗಿಲ ಬಳಿ ಇಟ್ಟು ಪೂಜಿಸುತ್ತಾರೆ (ನಸ್ಸೂರು. ೩೬). 'ಮೆರೆಕೋಲು' ಪರಾ.

[ನೆರೆ+ಕೋಲು$_1$(<ಕೋಲ್$_1$)]

ನೆರೆಗೆಂಪು (ನಾ). ಹೆಚ್ಚಾದ ಕೆಂಪುಬಣ್ಣ ; ಅಧಿಕವಾದ ಅರುಣ ವರ್ಣ : ಹರೆಯ ಚಗುರಡಗಿ ನೆತ್ತರದ ನೆರೆಗೆಂಪು ಹಳಸುತಿದೆ ಧರದಲ್ಲಿ (ಉಯ್ಯಾಲೆ. ೧೨-೪). [ನೆರೆ$_6$(<ನೆಜಿ$_2$)+ಕೆಂಪು$_1$]

ನೆರೆಗೆಯ್ (ನಾ). ಮಗ್ಗುಲಲ್ಲಿರುವ ಹೊಲ ; ಪಕ್ಕದ ಗದ್ದೆ : ನೆರೆಮನೆಯವರಂ ಪಾವಂ ಪಿಡಿಯಿಮೆಂಬಂತೆ ನೆರೆಗೆಯ್ಯವರಂ ಬಿತ್ತಿಕೊಡಿಮೆಂಬಂತೆ (ಧರ್ಮಾಮೃ. ೬-೧೭). [ನೆರೆ$_5$+ಕೆಯ್$_1$]

ನೆರೆಗೊಂಚಲ್ (ನಾ). ತುಂಬಿದ ಹೂಗೊಂಚಲು : ಬಿಡಿಪೂಗಳು, ಕಮ್ಮಿಲರ ನೆರೆಗೊಂಚಲ್ಗಳು, ಮನೋಹರಪುಷ್ಪಗಳ ಎಳ್ಕೆಸರ . . . ಮೊದಲಾದ ಪೂದೊಡವುಗಳು (ಜಟ್ಟಿಅ. ೮೨-೧೧). [ನೆರೆ$_6$(<ನೆಜಿ$_2$)+ಗೊಂಚಲ್]

ನೆರೆಗೊಳು 'ನೆಜಿಗೊಳು' ನೋ.

ನೆರೆತ (ನಾ). ತುಂಬಿರುವಿಕೆ ; ಪೂರ್ಣತೆ : ಪರಿಪೂರ್ಣ ಸುಖಸತ್ವ ಸಾಗರದ ತೆರೆಗಳ್ . . . ತೆರೆಯು ನೆರೆತದ ಕುರುಹೊ (ಮಂಕುಕ.೨೧೯). [ನೆರೆ$_6$(<ನೆಜಿ$_2$)+-ತ$_2$]

ನೆರೆತರ್ (ಕ್ರಿ). ಗುಂಪುಗೂಡು ; ನಂದಣಿಸು : ಉನ್ನತಮಸ್ತಕಸ್ಥಳ ದೊಳಂಬುಗಳಬ್ಬುದಿದಿರ್ದೊಡತ್ತಮಿತ್ತನ್ನೆರೆ ತಂದು ಬಲ್ದಿಗರಿಬ್ಬುಟಿ ನೊಳ್ ಕಿಟಿ ನೊಂದೆನೆನ್ನದೆ(ಪಂಪಭಾ.೧೧೧-೩); ಭಾವನಭೌಮ ಜ್ಯೋತಿಷ ನ್ಯಮೂನಿಕಾಮರರ್ನೆರೆತಂದರ್ (ಸುಕುಸಾ. ೪-೬೪); ಪುರದಂಗನೆಯರ್ ನೆರೆತಂದು ಬಾಹುವಲ್ಲರಿ ಕುಡೆ ಪೇಸೆಯಂ ತ್ರಿಭುವನಸ್ತ್ರಭುಗಿಕ್ಕಿದರೊಲ್ದು ಸೇಸೆಯಂ (ಜಗದಿ. ೧೫-೬೯); ಝಂಳಕವನುಲೇಪನ ವಿಭೂಷಣ ವಿಳಸದನ್ನ ತಾಹಾರ ಮೊದಲಹ ಹಲವು ಸೇವೆಗೆ ಯೋಜಿಸಲು ನೆರೆತಂದುದೋರಂತೆ (ಸಾಳ್ವಭಾ. ೩೨-೧೫). [ನೆರೆ$_1$+ತರ್]

ನೆರೆದಲೆ 'ನರೆದಲೆ' ನೋ.

ನೆರೆನಂಬು 'ನೆಜಿನಂಬು' ನೋ.

ನೆರೆನಾಡು (ನಾ). ಪಕ್ಕದಲ್ಲಿರುವ ಪ್ರಾಂತ : ಕ್ರೈಸ್ತಕೃತಿಯೊಂದರಲ್ಲಿ ನಿರೋಧನ ನೆರೆನಾಡುಗಳನ್ನು ಕುರಿತು ಹೇಳುತ್ತಾ 'ಮಲೆ' ಎಂಬ ಪ್ರದೇಶವನ್ನು ಹೆಸರಿಸಿ ಅಲ್ಲಿಂದ ಮೆಣಸು ಹೊರಗಡೆಗೆ ಹೋಗುತ್ತಿತ್ತೆಂದು ಹೇಳಿದೆ (ದ್ರಾವಿವಿ. ೧೨೦). [ನೆರೆ$_5$+ನಾಡು]

ನೆರೆನೀರು (ನಾ). ಮಹಾಪೂರದ ನೀರು : ಮುದುವೆಯು ಚಪ್ಪರ, ನೆರೆನೀರು ತುಂಬಿದ ಗದ್ದೆಯಂತಾಯಿತು (ಮುರಮು. ೨೬೬).

[ನೆರೆ$_6$(<ನೆಜಿ$_2$)+ನೀರು$_1$(<ನೀರ್)]

ನೆರೆಪಳ್ಳಿ, ನೆರೆಹಳ್ಳಿ (ನಾ). ಪಾರ್ಶ್ವದಲ್ಲಿರುವ ಗ್ರಾಮ ; ಪಕ್ಕದ ಹಳ್ಳಿ : ಈ ಕೇರಿಯಂ ಬಿಟ್ಟು ಸೂಳೆಯರೆಲ್ಲಂ ನೆರೆಪಳ್ಳಿವೋದರಿವಳೀ ಮಾಧುರ್ಯಮಿನ್ನೆಂತುಟೋ (ಲೀಲಾವ. ೨-೮೦). **ನೆರೆಹಳ್ಳಿ** : ನಮ್ಮೂರಿನ ಸಮಾರಂಭಕ್ಕೆ ನೆರೆಹಳ್ಳಿ ಜನರೆಲ್ಲಾ ಬಂದಿದ್ದರು (ರೂಢಿ). [ನೆರೆ$_5$+ಪಳ್ಳಿ$_1$]

ನೆರೆಪು 'ನೆರಪು' ನೋ.

ನೆರೆಪೊನಲ್ 'ನೆರೆವೊನಲ್' ನೋ.

ನೆರೆಬೆಳ್ಳಕ್ಕಿ (ನಾ). ಒಂದು ಬಗೆಯ ಬೆಳ್ಳಕ್ಕಿ : ಹಗಲೆಲ್ಲ ಏಡಿ ಮೀನುಗಳನ್ನು ತಿನ್ನಲು ಅಲ್ಲಲ್ಲಿ ಗುಂಪುಕುಳ್ಳಿರುತ್ತಿದ್ದ ಬೆಳ್ಳಕ್ಕಿ ಮತ್ತೆ ನೆರೆಬೆಳ್ಳಕ್ಕಿಗಳಲ್ಲಿ . . . ಕೆಲವು ಮಾತ್ರವೆ ಬೇಟೆಯಲ್ಲಿ ತೊಡಗಿದ್ದವು (ಮಲೆಮ. ೭೫೨). [ನೆರೆ$_0$+ಬೆಳ್ಳಕ್ಕಿ(<ಬೆಳ್ವಕ್ಕಿ)]

ನೆರೆಮನೆ 'ನೆರೆವನೆ' ನೋ.

ನೆರೆಮಾತು 'ನೆರೆವಾತು' ನೋ.

ನೆರೆಯಂಗಡಿ (ನಾ). ಪಕ್ಕದ ಅಂಗಡಿ ; ಪಾರ್ಶ್ವದಲ್ಲಿರುವ ಅಂಗಡಿ : ಕಳಕಳವಿದೇನೆಂದು ನೆರೆಯಂಗಡಿಯ ಮುಂದಣಂಗಡಿಯ ಪರದರಂ ಕಂಡು ಬೆಸಗೊಳ್ವ ಬಚ್ಚಬಱಿಯೆಗ್ಗರುಮಂ (ಗದಾಯು. ೯-೩೪ ಪ). [ನೆರೆ$_5$+ಅಂಗಡಿ(<ಅಂಗಾಡಿ)]

ನೆರೆಯಿರ್ (ಕ್ರಿ). ಬೆಂಬಲವಾಗಿರು; ಆಧಾರವಾಗಿರು; ಸಹಾಯಕವಾಗಿರು : ಜೀಯ ! ಮೂಜಗಮಂ ಕಾವ ನೀಂ ನೆರೆಯಿರ್ದು ತಿರೆಯಂ ಪೊರೆವಂದು ಲೋಗರ್ಗೆ ಸೊಗಕ್ಕೆ ಕುಂದೆ ! (ರಾಮಾಶ್ವ. ೨೩-೨೯). [ನೆರೆ$_5$+ಇರ್$_1$]

ನೆರೆಯಿಸು, ನೆರಸು, ನೆರೆಸು (ಕ್ರಿ). ೧. ಗುಂಪುಗೂಡಿಸು ; ಸೇರಿಸು ; ಒಟ್ಟಾಗಿಸು : ಹೃತ್ಕುಹರದೊಳಗವಿತ ಸದ್ಭಾವಪುಂಜಗಳ ಜಾಗರದಿ ನೆರೆಯಿಸುವ ಸೂಕ್ತಿಯೊಸಗೆ (ಮಲೆದೇ. ೩೮-೪) ; ಬಳಿಕ ಕಂಪಿಲನು ಓಲಗವನ್ನು ನೆರೆಯಿಸಿ . . . ಆತನ ಊರಿಗೆ ಬೀಳ್ಕೊಟ್ಟನು (ಕುಮಾಸಾಂ. ೪೩). ೨. ರತಿಕ್ರೀಡೆಯಲ್ಲಿ ತೊಡಗಿಸು : ಇನಿಯರನೆಂದುಂ ನೆರೆಯಿಪ ಬಿನದಮೆ ತನ್ನಿಚ್ಛೆಯಾಗೆ (ಕಬ್ಬಿಕಾ. ೧೨೦). ೩. ಸಂಗ್ರಹಿಸು ; ಶೇಖರಿಸು : ನಾಲ್ಗಾವುದದಳತೆಯೊಳ್ ಯಾಗಶಾಲೆಯಂ ನೇರ್ಪಡಿಸಿ ಕುಂಬೆಯಂ ಬಲಿದು . . . ವೇದಿಯಂ ಸಮಕಟ್ಟ ತಗುವೆಡೆಯೊಳ್ ಕೊಂಡಮಂ ಪಣ್ಣಿ ಯಾಗಂಗಳಂ ನೆರೆಯಿಸುತಿರ್ದರ್ (ರಾಮಾಶ್ವ. ೧೬-೬). ೪. ಉಂಟುಮಾಡು ; ಆಗಿಸು : ಮನಕ್ಕೆ ಕೋಪಮಂ ನೆರೆಯಿಸಬೇಡ ಪೋಗೆನುತವಳ್ ನಗೆಯಿಂ ಕೊಱಚಾಡಿ ಕಾಡಿದಳ್ (ರಸರ. ೩-೧೪೯). **ನೆರಸು** : ೧. ಮೋಹರವ ಮೇಳೈಸಿದನು ನಿರ್ವಾಹವನು ನಿಶ್ಚೈಸಿದನು . . . ನೆರಸಿದನು ಬಹಳಾಕ್ಷೋಹಿಣೀಬಲವ (ಕುಪ್ಯಾವಿ. ೪-೨೬) ; ಹಿರಿವುದೆಂದೀ ಸಂತೆ ಬಲ್ಲರಾರು ನೆರಸಿದನಲ್ಲದೆ ? (ಗಿಳಿವಿಂ. ೫೪-೪). **ನೆರೆಸು** : ೨. ಅಬ್ಜಾನನೆಯರ್ ಕೇಳೊಲ್ಲದ ವಿಟರಂ ಕಡುಲೀಲೆಯಿನವರೊಡನೆ ನೆರೆಸುವಂ ದೂರ್ತಿಂದಂ (ಧರ್ಮಾಮೃ. ೨-೪೦). [ನೆರೆ$_1$+-ಇಸು$_3$]

ನೆರೆಯೂರ್, ನೆರೆಯೂರು (ನಾ). ಪಕ್ಕದ ಊರು ; ಪಾರ್ಶ್ವದಲ್ಲಿರುವ ಗ್ರಾಮ : ಅಂ ನೆರೆಯೂರ್ಗೆ ಪೋಗಿ ಬಂದಪೆಂ (ಪಂಚತಂ. ೧೫೪-೭) ; ಆ ಶಿವದೇವನೊಂದುದಿನಂ ದೇವಕಾರ್ಯನಿಮಿತ್ತಂ ಗೃಹಿಣಿವೆರಸಿ ನೆರೆಯೂರ್ಗೆ ತೆರಳಲುಜ್ಜುಗಿಸಿ (ವೃಷವಿ. ೯-೬೯ ಪ) ; ಹುಡುಕಿ ನೆರೆಯೂರ್ಗಳಂ ದೊರೆಯದಾಯ್ತಾವೊರೆಗೆ ಬಾಳ್, ಬಳಿಯೊಳಿಲ್ಲ (ಕಾಲೂರ. ೩೫-೩೬). **ನೆರೆಯೂರು** : ದೇವಕಾರ್ಯಕೆ ನೆರೆದು ನೆರೆಯೂರಿಂಗೆ ಪೋಪಂತೆ (ಬಸಪು. ೪೪-೭೨) ; ಅರೊಡನೆ ಕಾದುವೆನು ಕೆಲಬರು ಹಾರುವರು ಕೆಲರಂತಕನ ನೆರೆಯೂರವರು (ಕುಪ್ಯಾವಿ. ೫-೨೦). [ನೆರೆ$_5$+ಊರ್]

ನೆರೆಯೂರು 'ನೆರೆಯೂರ್' ನೋ.

ನೆರೆರಾಜ (ನಾ). ಪಕ್ಕದ ದೇಶದ ಅರಸ,— ದೊರೆ : ಮಧ್ಯ ಹಿಂದೂಸ್ಥಾನದಲ್ಲಿ ಕದಂಬರ ನೆರೆರಾಜರಾಗಿದ್ದ ವಾಕಾಟಕರು ಬೌದ್ಧ ವಿಹಾರಗಳನ್ನು ನಿರ್ಮಿಸಿದರೆಂದು ಮೊದಲೇ ಹೇಳಿದ್ದೇವೆ (ಕರ್ಣಾಅ. ೫). [ನೆರೆ$_5$+ರಾಜ]

ನೆರೆರಾಜ್ಯ (ನಾ). ಪಕ್ಕದ ರಾಜ್ಯ,—ದೇಶ : ಈತನು ಗಂಗರ ಮೇಲಲ್ಲದೆ, ತನ್ನ ನೆರೆರಾಜ್ಯದವರಾದ ಚೋಳರ ಮೇಲೆಯೂ ಸಹ ದಂಡಯಾತ್ರೆ ನಡೆಸಿದನು (ನೊಳಂಬ. ೫೧). [ನೆರೆ$_5$+ರಾಜ್ಯ]

ನೆರೆವನೆ, ನೆರಮನೆ, ನೆರೆಮನೆ (ನಾ). ಪಕ್ಕದ ಮನೆ ; ಮಗ್ಗುಲ ಮನೆ : ನೆರೆವನೆಯಾತನೆನ್ನೊಡನುದಾರಗುಣಕ್ಕೆ ಜಸಕ್ಕೆ ನಾಡೆ ಮಚ್ಚರಿಸುತುಮಿರ್ಪಂ (ಧರ್ಮಾಮೃ. ೪-೧೧೨). **ನೆರಮನೆ** : ವೃಥಾ ನೆರಮನೆಗಳ್ತು ಕಣ್ಗಿಡುವರೇಂ ಮರುಳ್ಗೊಂಡರೊ (ಪಂಪಾಶ. ೭೩) ; ಇರಲಿರಲು ಮಾಸಾಂತರದಲಾ ನೆರ[ಪಾಠಾಂ. ರೆ]ಮನೆಯ ಶೋಕಾರ್ತರವದಬ್ಬರವ ಕೇಳಿದು . . . ಏನು ದುಃಖೋತ್ಕರುಷವಾಕಸ್ಮಿಕವದೆಂದಳು ಕುಂತಿ (ಕುಪ್ಯಾಅ. ೧೦-೮) ; ಗೃಹಕೃತ್ಯಮಂ ಬಿಟ್ಟು ನೆರ[ಪಾಠಾಂ. ರೆ]ಮನೆ ತವರ್ಮನೆಯೊಳಿಹಳು (ಜೈಮಿಭಾ. ೫-೫೭) ; ನೆರಮನೆ ಹೋಳಿಗೆಗೆ ತುಪ್ಪ ಕಾಯಿಸಿದ ಹಾಗೆ (ಗಾದೆ). **ನೆರೆಮನೆ** : ಅದಭ್ಯುದಯ ಸುಖನಿಳಯಮದು ಮೋಕ್ಷದ ನೆರೆಮನೆ (ಆದಿಪು. ೬-೩೬) ; ನೆರೆಮನೆಯ ನಾವಿದನ ಪೆಂಡತಿಯಪ್ಪ ದೂದವಿ . . . ಪರಿತಂದು (ಪಂಚತಂ. ೭೫-೨) ; ನೆರೆಮನೆಯವರಂ ಪಾವಂ ಪಿಡಿಯಿಮೆಂಬಂತೆ (ಧರ್ಮಾಮೃ. ೯-೯೭) ; ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂಡಲಸಂಗಮದೇವ (ಬಸವ. ೧೨೪) ; ವೃದ್ಧವೇಶ್ಯಾಂಗನೆ ತನ್ನ ನೆರೆಮನೆಯ ಬಾಲಮುಗ್ಧೆಯ ಸೊಬಗಂ ಕಂಡು ಅಸೂಯೆಗೊಂಡು ತನ್ನೊಳಿಂತೆಂದಳ್ (ಗಿರಿಕ. ೪-೧೫೫ ಪ) ; ನೆರೆಮನೆಗಳ ಭಾಗ್ಯವ ನೋಡಿ ತರಹರಿಸುತ ಅಸೂಯೆಯಿಂದ ಹರಿಯ ಸ್ಮರಣೆಗೆ ವಿಮುಖನಾದೆ (ಪುರಂದ. ಧಾ. ೨-೨೫-೨). [ನೆರೆ$_5$+ಮನೆ]

ನೆರೆವರಿ (ನಾ). ಒಂದು ಬಗೆಯ ತೆರಿಗೆ : ನೆರೆವರಿ ವರಾಡ ಕಡ ಮಸವರಿ . . . ಹಸ್ತಾಂತರ ಸಂಜಾಯಿತ ನಿಲಗಳ ಪರಿವಿಡಿಯಂ ನಿಲಿಸಿ ಸೀಮೆಯಂ ರಕ್ಷಿಸಿದಂ (ಕೆಳನೃ. ೭-೪೯). [ನೆರೆ?+ವರಿ$_1$]

ನೆರೆವಾತು, ನೆರೆಮಾತು (ನಾ). ೧. ಶೃಂಗಾರದ ಮಾತು ; ಪ್ರಣಯದ ನುಡಿ (?) : ಗರತಿಯರೆದೆವಾತು, ನೆರೆವಾತುಗಳ ಬೆರೆತು ಲಾವಣಿಯಲಂಕಾರದಲಿ ಹೊಂದಿದೆ (ಸಖೀಗೀ. ೪೫-೯೨೧). **ನೆರೆಮಾತು** : ೨. ಅಕ್ಕಪಕ್ಕದವರ ಮಾತು ; ಚಾಡಿಮಾತು : ಕುರುಡನ ಕೋಲು ಕಳ ಹೊಲ್ಲ ದೊರೆಗಳಿಗೆ ನೆರೆಮಾತು ಹೊಲ್ಲ (ಸರ್ವಜ್ಞ. ೭೨೪). [ನೆರೆ$_5$+ಮಾತು$_1$]

ನೆರೆವಾಟ್ (ಕ್ರಿ). ಜೊತೆಯಲ್ಲಿ ಬಾಳು,—ಬದುಕು : ಹಯಮಂ ಬಿಟ್ಟು ಕಪ್ಪಮಂ ಕೊಟ್ಟು ನೆರೆವಾಟ್ಟುದು ಕರಮೊಳ್ಳಿತ್ತು (ರಾಮಾಶ್ವ ೧೪೨-೧೮). [ನೆರೆ$_5$+ಬಾಟ್$_1$]

ನೆರೆವಿ 'ನೆರವಿ' ನೋ.

ನೆರೆವೀಡು (ನಾ). = ನೆರೆವನೆ : ಪಡಿಮೊಗದ ನೆರೆವೀಡ ನಡುಜವ್ವನದ ಕೆಳದಿಯೊರ್ವಳಂ ಸನ್ನೆಯಿಂ . . . ಎಂದುಂ ನಿನ್ನ ತೋಳೆಡೆಯೊಳೊಪ್ಪುವಂಗದಂ ತೋರ್ಕುಮಿಲ್ಲಮಿಂದೇನೆನೆ (ರಾಮಾಶ್ವ. ೫೦-೧೬). [ನೆರೆ$_5$+ಬೀಡು$_2$]

ನೆರೆವೀದಿ (ನಾ). ಪಕ್ಕದ ರಸ್ತೆ ; ಮಗ್ಗುಲು ಬೀದಿ : ಕಬ್ಬಿಗರ ಬಲ್ಲಹಂ ಮುದ್ದಣನರಮನೆಯಿಂ ಪೊಱಮಟ್ಟು ನೆರೆವೀದಿವಿಡಿದು ಪೊರೆವೀಡಿಂಗೈತರ್ಪುದುಂ (ರಾಮಾಶ್ವ. ೪-೭). [ನೆರೆ$_5$+ಬೀದಿ]

ನೆರೆವೆರೆ 'ನೆಱೆವೆಱೆ' ನೋ.

ನೆರೆವೊನಲ್, ನೆರೆಪೊನಲ್ (ನಾ). ಪ್ರವಾಹ ಬಂದ ಹೊಳೆ; ಮಹಾಪೂರದ ಹೊಳೆ : ನೆರೆವೊನಲ್ಗಾಂಕೆಗೊಂಡದರ ಬೇಗಕೆ ಕುಸಿದು ಹಿಸಿದು ಬೀಳುತ್ತೊಯ್ಯನಿಯೆ ಹಿರಿದುಹಿಂದಕ್ಕೆ ಸರಿವ ಪುಸಿಯೆರೆಮಣ್ಣ ನೊರ್ವೊಳೆಯ ದಡದಂತೆ (ಶ್ರೀರಾಮಾ. ೫೯೭-೩೪೯). **ನೆರೆಪೊನಲ್** : ನೆರೆಪೊನಲ ಸೆಳೆತಕ್ಕೆ ತಲೆವಾಗಿ ಬಳ್ಳುವ ಮರಂಗಳ್(ಅಂತಿಗೊ. ೫೩-೬೬೦).

[ನೆರ್ಕೆ(<ನೆಱೆ$_2$)+ಪೊನಲ್]

ನೆರೆಸು 'ನೆರೆಯಿಸು' ನೋ.

ನೆರೆಹ (ನಾ). ಸೇರುವಿಕೆ; ಕೂಡುವಿಕೆ (?) : ಸಾಧಕನವನೊಬ್ಬ ನೇತ್ರವಟ್ಟೆಯನ್ನುಟ್ಟುಕೊಂಡು ಸೂತ್ರಧಾರಿಯನಱಸುತ್ತ ಬಂದನಯ್ಯಾ ಕರೆಯಿರೈ ಕರೆದು ತೋಱಿಸಿರೈ ತಱಿಹಕ್ಕೆ ನೆರೆಹಕ್ಕೆ ಹೊಱಗಾದನು (ಸರ್ವಸ. ೨೮-೧೩೩). [ನೆರೆ$_1$+-ಹ$_2$(<-ಪ$_2$)]

ನೆರೆಹಳ್ಳಿ 'ನೆರೆಪಳ್ಳಿ' ನೋ.

ನೆರೆಹಾವಳಿ (ನಾ). ಮಹಾಪೂರದಿಂದ ಉಂಟಾಗುವ ಉಪದ್ರವ : ಇನ್ನು ನೆರೆಹಾವಳಿ . . . ಇಡಿಯ ಅಸ್ಸಾಮು ನೀರಲ್ಲಿ ಕೊಚ್ಚಿಕೊಂಡು ಹೋದೀತೋ ಏನೋ ಎನ್ನುವ ಭಯದ ಸೂಚನೆ ಇತ್ತು (ತೇಮೋಡ. ೭೧).

[ನೆರೆ$_6$(<ನೆಱೆ$_2$)+ಹಾವಳಿ]

ನೆರೆಹೊರಕೆ (ನಾ). ಅಕ್ಕಪಕ್ಕದ ಜನ; ನೆರೆಹೊರೆ : ಅಲ್ಲಿ ನೆರೆಹೊರಕೆ ಚನ್ನಾಗಿಲ್ಲವಾದ್ದರಿಂದ ಮನೆ ಮಾಡಲು ಇಷ್ಟವಾಗಲಿಲ್ಲ (ರೂಢಿ).

[ನೆರೆಹೊರೆ+-ಕೆ]

ನೆರೆಹೊರೆ (ನಾ). ೧. ಅಕ್ಕಪಕ್ಕ; ಸಮೀಪ : ಗುರುಸ್ವಾಮಿ ನಿಮ್ಮ ನೆರೆಹೊರೆ ಸರಿಸಮೀಪ ಗ್ರಾಮದಲ್ಲಿರಲು (ವಚಸಂ. ೩೧೫-೭೯ ಅಂಬಿವ); ನೆರೆಹೊ[ಪಾಠಾಂ. ಪೊ]ರೆಯ ಸಿರಿವಂತರ ಮನೆಗೆ ಪರಿಯಿಡಲ್ಕಡಹಡಿಸಿ ಮಿಡುಕುತಿರ್ಪ ಮಿಂಡರ ತಂಡಂಗಳುಮಂ (ವರ್ಧಪು. ೯-೫೬ ವ); ನೆಱೆದು ನೆರೆಹೊರೆಯ ಕೆಲದ ಕೇರಿಯ ಸಕ್ಕಜದ ಮಕ್ಕಳೊಡನೊಕ್ಕಿಲಿಕ್ಕಿ ನಲಿ ನಲಿದು ನರ್ತಿಸುತ್ತಿರಲ್ (ನಂಬಿರ. ೨-೧೩); ಪಂಚಮಹಾಪಾತಕರ ನೆರೆಹೊರೆಯ ಸಂಗದಲ್ಲಿರ್ದವರಿಗೆ ಅನಂತಕಾಲ ಮಾಡಿದ ಪುಣ್ಯವು ಕೆಟ್ಟು ಮುಂದೆ ಪಾಪವು ಬೆಂಬತ್ತಿ ಕಾಡುವುದಯ್ಯ (ಅಖಂಡೇ. ೧೨೮-೯೨). ೨. ಅಕ್ಕಪಕ್ಕದ ಜನ : ನೆರೆಹೊರೆ ನೋಡಿ ನಗುವರಲ್ಲ (ಪುರಂದ. ೧-೧೮೨-೫); ನೆರೆಹೊರೆಯಱಿಯದಂತೆ ಪತಿಯಂ ಮಱಸಿ ಮನೆಯವರ ನೆಲ್ಲರಂ ಟೊಣೆದು ಮದನಕೇಳಿಗೆ ಸಂದು (ಜೈಮಿಭಾ. ೫-೫೯); ರಕ್ಕಸನು ಮನೆಯವರ ಕಂಡರೆ ಕರ್ಕಶನು ನೆರೆಹೊರೆಗೆ (ಅಮೃತ. ೨-೫೨); ಅವರವರ ಪುಣ್ಯದಿಂದ ನೆರೆಹೊರೆಯು ಬದುಕಿದರೆ ನೀನೇಕೆ ವ್ಯಸನಪಡುವೆ? (ಬತ್ತೀಸ. ೧೨೪).

ನೆರೆಹೊರೆಯವರು = ಅಕ್ಕಪಕ್ಕದಲ್ಲಿ ವಾಸಿಸುವವರು : ದಲ್ಲಾಳಿ ತನದಿಂ ಲಂಡಪುಂಡರೊಳ್ ಮುಂದೆ ನೋಡದೆಯಾಡಿ ಕೊಟ್ಟುಕೊಂಡವರು ನೆರೆಹೊರೆಯವರು ನಗುವ ತೆಱದಿ (ಸಮ್ಯಕೌ. ೧೦-೩); ಪೂರ್ವಸಮುದ್ರದ ಹತ್ತಿರ ಪಿಠಾಪುರದ ಮೇಲ್ಭಾಗದಲ್ಲಿ ಕಳಿಂಗರೂ ಅವರ ಪಶ್ಚಿಮದಿಕ್ಕಿನ ನೆರೆಹೊರೆಯವರಾಗಿ ಕೋಸಲರೂ ರಾಜ್ಯವಾಳುತ್ತಿದ್ದರು(ಕರ್ಣಾಅ. ೪೪).

[ನೆರೆ$_5$+ಹೊರೆ$_4$(<ಪೊರೆ$_4$)]

ನೆರೆಹೊಳೆ (ನಾ). = ನೆರೆವೊನಲ್ : ಹಲವು ಕೆರೆಯಂತೆ, ತೊರೆಯಂತೆ ನೆರೆಹೊಳೆಯಂತೆ ಮಲಿನವನು ಲಲಿತವನು ತೋರಿ ಮೆರೆದು (ಕಎಪು. ೩೧-೪). [ನೆರೆ$_6$(<ನೆಱೆ$_2$)+ಹೊಳೆ$_3$(<ಪೊಱೆ)]

ನೆರ್ಕನೆ (ಅ). ಒಂದು ಅನುಕರಣಾವ್ಯಯ : ಪೂಡಿ ಪರಿವ ಪದದೊಳ್ ಪೊಚ್ಚಪೊಸತೆನಿಪಚ್ಚುಗಳ್ ನಿರ್ನಿಮಿತ್ತಂ ನೆರ್ಕೆ[ರ್ಕ]. [ಪಾಠಾಂ. ನೇರ್ಕ] ನುಡಿಯೆ (ವರ್ಧಪು. ೮-೪೦ ವ).

ನೆರ್ಕನೆರ್ಕನೆ (ದ್ವಿರುಕ್ತಿ) : ಬಱಿ ಕೆಂಬಲ್ಮೂಳೆಯಂ ನೆರ್ಕ್ಕನೆರ್ಕ್ಕನೆ ಬೇರ್ಕ್ಕೆಯ್ದು (ಎಕ. VI, ತರೀಕೆ. ೪೫-೨೭; 1196).

[ನೆರ್ಕು+-ಅನೆ$_1$]

ನೆರ್ಕಳ (ನಾ). ಒಂದು ಬಗೆಯ ಮರ : ನೆರ್ಕಳ (ಭೇಡಸ)—ಮಧ್ಯಮ ಆಕಾರದ್ದು, ಸರುವುಗಳಲ್ಲಿ ಬೆಳೆಯುವದು. ಕಟ್ಟಿಗೆ ಇಮಾರತಿಗೂ ಗಳೆಯ ಸಾಮಾನಿಗೂ ಬರುತ್ತದೆ (ಕಭಾಗೆ. ೪೨). [?]

ನೆರ್ಕು (ನಾ). ಒಂದು ಅನುಕರಣ ಶಬ್ದ : ಖಣಲೆಂಬ ಖಟಲೆಂಬ ನಿಳಿಲೆಂಬ ನೆರ್ಕೆಂಬ . . . ಕೂರಸಿಗಳುರವಣೆಯ ದನಿಯಡಸುತಂ ಪುಟ್ಟೆ (ಇಹರ. ದೇ. ೪೧-೨೧).

ನೆರ್ಕೊರೆ 'ನೆಕ್ಕರೆ' ನೋ.

ನೆರ್ಗನೆ (ಅ). ಒಂದು ಅನುಕರಣಾವ್ಯಯ : ತೇರ್ಗಳ ಗೊಂದಣಂ ಮುಱಿದು ಮೆಟ್ಟಿದ ಕೊಂಬುಡಿದಂತೆ ಬೇಗದಿಂ ನೆರ್ಗನೆ ಬಿಟ್ಟು ನುಚ್ಚು ನುಱಿಯಾಗೆ (ಕಬ್ಬಿಕಾ. ೨೭೮). [ನೆರ್ಗು$_0$+-ಅನೆ$_1$]

ನೆರ್ಗಿಲ್, ನೆಕ್ಕಿಲು, ನೆಗಿಲು, ನೆಗ್ಗಲಿ, ನೆಗ್ಗಲು, ನೆಗ್ಗಲೆ, ನೆಗ್ಗಿಲ್, ನೆಗ್ಗಿಲು (ನಾ). (ನೆಲದ ಮೇಲೆ ಹಬ್ಬುವ) ಒಂದು ಬಗೆಯ ಮುಳ್ಳಿನ ಗಿಡ ಮತ್ತು ಅದರ ಮುಳ್ಳು : ಬದಣೆಗುಪ್ಪೆಯ ಮುಟ್ಟಿಗಿಯ ಕೊಳೆಯನೂರ ಧಾಸನೂರ ತೃಸನ್ಧಿಯ ನೆರ್ಗಿಲ ಗುಂಬೆ ನಿಡುವೆಳುಱ್ಗೆ (ಎಕ. I, ೧-೨೮; 466). **ನೆಕ್ಕಿಲು** : ನೆಕ್ಕಿಲು, ತುಳಸಿ. ದೊಡ್ಡಪತ್ರಿ, ಪಚ್ಚೇತೆನೆ (ನಮ್ಮನು. ೨೩೮). **ನೆಗಿಲು** : ಭೂತಾಣಿ, ನೆಗಿಲು, ಕೊಮರಕ(ನಮ್ಮನು. ೨೩೮). **ನೆಗ್ಗಲಿ**: 'ನೆಗ್ಗಲಿಮುಳ್ಳು' ಪರಾ. **ನೆಗ್ಗಲು**: 'ಆನೆನೆಗ್ಗಲು', 'ನೆಗ್ಗಲುಮುಳ್ಳು' ಪರಾ. **ನೆಗ್ಗಲೆ** : ಮುಳ್ಳಿನ ಹಾಸಿಗೆ ಹಾಸಿದಂತೆ ನೆಗ್ಗಲೆ ಬಳ್ಳಿಗಳು ಹಬ್ಬಿದ್ದವು (ಮೇದಿಮ. ೧೧೮). **ನೆಗ್ಗಿಲ್** : "ತ್ರಿಕಂಟಕಂ ಗೋಕ್ಷುರಕಂ ದಂಷ್ಟ್ರಿಯೆನೆ ನೆಗ್ಗಿಲಕ್ಕುಂ" (ಮಂಗರಾ. ೩೭-೨೮); ವಿಷ್ಣುಕ್ರಾಂತಿಯೆಲೆಯಂ ಮೇಣ್ ನೆಗ್ಗಿಲ ಬೇರ ನರೆದು ಪಾಲೊಳ್ ಸಲೆ ಕುಡಿವಂ ಸಂಕ್ಷಯಕ್ಕೆ ಪಡೆಗುಂ ಕ್ಷಯಮಂ (ಲೋಕೋಪ. ೯-೩೮)); ತುಱುವೆಯ ನೆಗ್ಗಿಲ ಪೂಗಳ ತುಱುಪಟ್ಟೆಯ ಪೊಱಗೆ ತುಱುಗಿ ಕರಮೆಸೆದಿರ್ಕುಂ (ಲೀಲಾವ. ೫-೯೯); ನೆಗ್ಗಿಲ್ ತಗಚೆ ನಿದಿಗ್ಧಿಕೆ ತಗ್ಗಿಯಪಾಮಾರ್ಗದೊಡನೆ ಬೆರಸಿದುದಂ ತಾಂ ಕೊಗ್ಗಿ ಕುಮಾರಿಗಳಂ ಕುಡಿಸೊಗ್ಗಿಸಿದಂಬಿಲದೆ ಬೇದುಗಟ್ಟು ವಿಷಘ್ನಂ (ಖಮದ. ೧೬-೭೪); ನೆಗ್ಗಿಲ ಬೇರ ತಂದು ಕರಿಅಡಿನ ಹ್ಯಾಲಿನಲ್ಲಿ ಬೇಯಿಸಿ . . . ೧೨ ದಿವಸ ಕುಡಿದರೆ ವೀರ್ಯವೃದ್ಧಿ (ಕಾಮಶಾ. ೧೦-೨೫೪). **ನೆಗ್ಗಿಲು**: "ಗೋಕ್ಷುರಃ, ಸ್ಥಳಶೃಂಗಾಟಃ, ಶ್ವದಂಷ್ಟ್ರಾ, ತ್ರಿಕಂಟಕಃ—ಈ ೪ ನೆಗ್ಗಿಲು" (ಹಲಾಯು. ೩೩-೪೮); ಕೊಡೆಸಿಗದತಿಗುಡಿನೊಡನಾಸಡಿ ನೆಗ್ಗಿಲು ಯಷ್ಟಿಮಧುಕ ಪರ್ಪಟಕಂಗಳ್ (ಕಲ್ಯಾಕಾ. ೫-೯); ಆಲವಂಬಟೆ ತಗ್ಗಿ ನೆಗ್ಗಿಲು [ಪಾಠಾಂ. ತುಗ್ಗಿಲು, ತುಂಬುರ, ತೂಬರ, ತದಿಗಿಲು]ಬೇಲ ಬೊಬ್ಬುಲಿ . . . ಇವ ನೋಡಬಲೆ (ತೊರರಾ. ೩-೧-೨೮); ನೆಲಬೇವು . . . ನೆಗ್ಗಿಲು, ಮೂರೆಲೆಹೊನ್ನೆ, ಶುಂಠಿ ಇವುಗಳ ಕಷಾಯವಿಕ್ಕಿ ಸೇವಿಸಿದರೆ ವಾತಜ್ವರಂ ಕೆಡುಗುಂ (ಸಕವೈ. ೬೫).

[ದೇ.॥ ತಮಿ. ನೆರುಞ್ಚು, ನೆರುಞ್ಚಿಲ್; ಮಲ. ನೆರುನ್ನಿಲ್; ತುಳು. ನೇಗಿಲ್]

ನೆರ್ಗು 'ನಱುಂಕು' ನೋ.

ನೆರ್ಗೊತ್ತು, ನೆಗ್ಗೊತ್ತು (ಕ್ರಿ). ೧. ಪುಡಿಪುಡಿ ಮಾಡು; ಚೂರು ಮಾಡು; ಒಡೆ : ಆ ಕನ್ನೆ ಪಿಡಿದ ಕನ್ನಡಿಯಂ ನೆರ್ಗೊತ್ತಿದಳ ದನೇನೆಂಬೆಂ (ಜಯಕಾ. ೧೪-೭೦). **ನೆಗ್ಗೊತ್ತು** : ೧. ವಿಭೂತಿಯ ಗಳಿಗೆಯನು ನೆಗ್ಗೊತ್ತಿ ಸರ್ವಾಂಗದಲಿ ಧೂಳಿಸಿದ (ಕುವ್ಯಾಕ. ೭-೧೧); ಉಲಿವ ಬಳೆಗಳೊಳೆರಡೆರಡ ತಾನುಳುಹಿ ನೆಗ್ಗೊತ್ತಿದಳು ಮಿಕ್ಕವ

(ನಿಭಾಗ.೧೧-೧೬-೧೩). ೨. ಜಜ್ಜೆ ಹೋಗುವಂತೆ ಒತ್ತು,- ಹಿಸುಕು: ಬಳೆಯ ನೆಗ್ಗೊತ್ತಿದನು ಕೌರವಬಲದ ಗಂಟಲ ಬಳೆಯ ಮುಱುವ ವೋಲ್ (ಕುವ್ಯಾವಿ. ೬-೪೯); ಖಳಕಂಸ ಬಂದು ಕೂಸನು ನೋಡಿಯಾಕೆಯ ತಂದವನ ದೆಸೆಯಿಂದ ಬಾಧೆಯು ಬಂದಪುದು ತನಗೆಂದಳಿಕಿ ನೆಗ್ಗೊತ್ತಿದನು ಮೂಗ (ಸಾಳ್ವಭಾ. ೨೧-೩೦); ಹೇರಾನೆಯ ತಲೆಯಡಗ ಭಕ್ಷಿಸುವ ಕಂಠೀರವನೊಡಲ ನೆಗ್ಗೊತ್ತಿ ಘೋರಾಕೃತಿವೆತ್ತು ಹಿರಿತಿಂಬ ಶರಭ ಹೂಂಕಾರದಿಂದಿದಿರ್ವಂದುದಾಗ (ಮೋಹತ. ೧೯-೩೪); ಪಸುಗಳ ಜೀವಮಂ ನೆಗ್ಗೊತ್ತಿ ಮೂಗಂ ಕೊರೆದು (ಭಾರಶಾಂ. ೨೫). ೩. ನಜ್ಜು ಗುಜ್ಜಾಗು; ಜಜ್ಜೆ ಹೋಗು: ಪೆರ್ಗಡೆಯು ತೆಕ್ಕೊಂಡು ಹುತ್ತವ ಹೊಕ್ಕರೆ ಬಿಡೆನೆಂದು ತಲೆ ನೆಗ್ಗೊತ್ತಲಪ್ಪಳಿಸುತಿಕ್ಕಿದನು (ಮೋಹತ. ೩೮-೬೧). ೪. ನಾಶ ಮಾಡು; ಇಲ್ಲವಾಗಿಸು: ಉರವಣಿಸು ವಿಂದ್ರಿಯವ್ಯಾಘ್ರದೆನುಜನ ಮದವನಿರದೆ ನೆಗ್ಗೊತ್ತಿಯಜ್ಞಾನಾಂಧ ಕಾಸುರನ ಉರವ ತೊತ್ತಳದುಳಿದು ಗೆಲುವ ನವನಾಟ್ಯಾಭಿರಂಗ ನಿನಗಾನು ಸರಿಯೆ (ಲಶಿಚಿಂ. ೨೯-೩೪); ಸುಷೇಣ ಗೌತಮರುರವಣಿಯ ನೆಗ್ಗೊತ್ತಿ ಹಾಯ್ದನು ಮತ್ತೆ ಸೈವರಿದು (ಕುವ್ಯಾಕ. ೧೪-೨೭); ಕೌರವ ಬಕ ಹಿಡಿಂಬ ಕೀಚಕರೆಂಬ ದುರುಳಸಂತತಿ ನೆಗ್ಗೊತ್ತಿ ಘೋರಪಾತಕಿ ದುಶ್ಶಾಸನನ ರಕುತವ ಹೀರಿ ಮುದದಿ ಮುರವೈರಿಯ ಭಜಿಸಿದ ಗುರು (ಪುರಂದ. ೧-೨೦೭-೨); ಈತನ ಗರ್ವವ ನೆಗ್ಗೊತ್ತಿ ಭಸ್ಮೀಭೂತನ ಶಿವನೆಸಗಿದನು (ಮೋಹತ. ೨೯-೫೨).

[ನೆರ್ಗು(<ನಱುಂಕು)+ಒತ್ತು$_1$]

ನೆರ್ಪು (ನಾ). (?): ಇರ್ಪುಂ ತೋರ್ಪುಂ ಕೆರ್ಪುಂ ನೆರ್ಪುಂ . . . ಮೆಯ್ಗರ್ಪುಂ ಮೊದಲಾಗಿ ರೇಫಸಂಯೋಗಂಗಳ್ (ಶಮದ. ೩೯).

ನೆರ್ಪುನೆರ್ಪು (ದ್ವಿರುಕ್ತಿ): ಕಾಯಾನುರೂಪಮಳವಿಯೊಳಾಯತಮದು ತೆಳ್ಳಿತೆನೆ ಬಹಿರ್ಮುಖಮುಚಿತಂ ಬಾಯೊಳಗೆ ನೆರ್ಪುನೆರ್ಪಂ ತೋಯಜಸುರಭಿಗಂಧಮುಳ್ಳೊಡೆ ಪೂಜ್ಯಂ (ಆಶ್ವಶಾ. ೧-೧೯). [?]

ನೆರ್ಮ (ನಾ). ಆಸರೆ; ಆಧಾರ; ಆಶ್ರಯ: ಧರ್ಮಮಮರೇಂದ್ರ ಗತಿಯಧರ್ಮಮಧೋಗತಿಯನೆಸಗುವೆಸಕದೊಳೀಗುಂ ಧರ್ಮಾಧರ್ಮ ಪ್ರಕ್ರಿಯೆಗಳೆ ನೆರ್ಮಂ ಜೀವಕ್ಕೆ ಮನುಜಗತಿಯೊಳ್ ಮಾಟ್ಕುಂ (ಅದಿಪು. ೫-೭೮); ಇನಿತುಂ ಪೆರ್ಮ್ಮೆಗೆ ನೆರ್ಮ್ಮವಾಗಿ ನೆಗರ್ದ್ದಿರ್ದಾ ಸೋಮದಂಡಾಧಿನಾಥಂ (ಎಇ. XIII, ೩೦೬-೬೪; 1125).

[<ನೆರ್ಮು$_2$]

ನೆರ್ಮಿಸು, ನೆಮ್ಮಿಸು (ಕ್ರಿ). ೧. ಒರಗಿಸು; ಆನಿಸು: ಕುಂಕುಮದ ಬಿಂಕಂ ಬೆಳ್ಳಿಯ ಬೆಟ್ಟದ ತೋಳ ಮೊದಲೊಳ್ ನೆ[ಪಾಠಾಂ. ನಿ]ರ್ಮಿಸಿದ ಕೆಮ್ಮುಗಿಲಿನ ಪೆರ್ಮೆಯಂ ಪಡೆಯೆ (ಅನಂಪು. ೨-೨೬ ವ). **ನೆಮ್ಮಿಸು**: ೧. ದೆಸೆಗೆಟ್ಟುದ್ಬಾಷ್ಪದಿಂದಂ ತರಳಿಕೆ ಪಿಡಿದೆಂತಾನು ವಾತ್ಮಾಂಗಮಂ ನೆಮ್ಮಿಸೆ (ಕಾದಂಉ. ೫೪೨); ತನ್ನಂ ನೆಮ್ಮಿಸಿಕೊಂಡಿರ್ದದಯಿತ ಸಾಮಂತನೊಳಿಂತೆಂದಂ (ಅನಂಪು. ೧೨-೬೩ ವ); ನಿನ್ನಯ ಸುದ್ದಿ ಹೊಱಗೆ ಹೊಮ್ಮಿದೊಡಿತರಾದಿಗಳೇಳಿಪರೆಂದು ನೆಮ್ಮಿಸಿಕೊಂಡಳಂಗದಲಿ (ಮೋಹತ. ೨೭-೫೭). ೨. ಸಿಲುಕಿಸು; ತೊಡಗಿಸು: ಏಕೆ ವಿಧಿ ತನ್ನನು ವಿಕರ್ಮವಿಪಾಕದಲಿ ನೆಮ್ಮಿಸಿದನು (ನಿಭಾಗ. ೪-೫-೫೯). ೩. ಒಪ್ಪಿಸು; ವಹಿಸಿಕೊಡು: ನಮ್ಮ ಭರಭಾರವನು ಹಿಂದಾಱ ನೆಮ್ಮಿಸಿದವೀತನಲಿ (ತೊರರಾ. ೩-೧೨-೫). [ನೆರ್ಮು$_1$+-ಇಸು$_3$]

ನೆರ್ಮು$_1$, ನೆಮ್ಮು$_1$ (ಕ್ರಿ). ೧. ಒರಗು; ಆತುಕೊಳ್ಳು: ಕಣ್ಗೆಸೆ ದೊಪ್ಪಿದಳೊರ್ವಳೋಪನಂ ನೆರ್ಮಿದ ಬಾಳೆ ಕತ್ತುರಿಯ ನೀರ್ದಳಿದುತ್ಪಳ ಮಾಳೆಯಂದಮಂ (ಶಾಂತಿಪು. ೮-೧೦೪); ಮೇಳದವಳಂ ಸತಿ ನಿರ್ಭರ ಗರ್ಭಭಾರದಿಂ ನೆರ್ಮಿ ನಿಮಿರ್ಚುವಳ್ ಪುರುಳಿಯೊಳ್ಪರಿಹಾಸವಚೋ ವಿಳಾಸಮಂ (ಮಲ್ಲಿಪು. ೪-೧೧೦); ತಾನಾದಿದಿಕ್ಕುಂಜರ ನಿಬಿಡ ದ್ರಿಢ ಸ್ಕಂಧಮಂ ನೆರ್ಮಿ (ಎಕ. IV, ನಾಗಮಂ. ೨೯-೧೧; 1218); ಮನದನ್ನನಂ ಸಮ್ಮದಂ ಮಿಗೆ ನೆರ್ಮಿ ಕುಳ್ಳಿರ್ದ ಶಶಿಕಾಂತದೊಡ್ಡುಂಗಲ್ಲೊಳ್ ತನ್ನ ಪಡಿನೆಳಲಂ ಕಂಡು(ಶಬಶಂ. ೩-೩೫ ವ). ೨. ಆಶ್ರಯಿಸು; ಅವಲಂಬಿಸು: ಶಚಿ ಪೂತಚೂತಮಂ ನೆರ್ಮಿದಶೋಕವಲ್ಲರಿಯ ಪಲ್ಲವಮೊಂದನೆ ಕೊಯ್ದು (ಪಂಪಭಾ. ೫-೮೨); ಕಲಿಕಾಲಧರ್ಮತನಯಂ . . . ಎಂದು ಪಲರುಂ ನೆರ್ಮುವರಾಯುಗನಿದೇಂ ಕೃತಾರ್ತ್ಥನೋ ಜಗದೊಳ್ (ಸೌಇಇ. XI-i, ೬೫-೩೧; 1028); ಪೆರ್ಮರನನಡರ್ದ ವನಲತೆ . . . ವಿಂಧ್ಯಾಚಲಮಂ ನೆರ್ಮಿದ ನರ್ಮದೆಯೆನಿಸಿದಳೊರ್ಮೆಯೆ ವನಚರನನಪ್ಪಿ ವನಚರಿಯೊರ್ವಳ್ (ಕಾವ್ಯಾವ. ೨೧೭); ಆ ಕುಱುಹು ಉಭಯವ ನೆಮ್ಮಿ ನಿಂದುದು ಭಕ್ತಿಸ್ಥಲ ಆ ಭಕ್ತಿ ತ್ರಿವಿಧವ ನೆಮ್ಮಿ ನಿಂದುದು ಮಾಹೇಶ್ವರಸ್ಥಲ (ಮೋಳಿಮಾ. ೧೪೧-೫೪೦); ಬಿಡಾಲವ್ರತದ ಬಾಡುಬರ್ಕಳ್ ದುರದ್ವೈತಮಂ ನೆರ್ಮಿ ಸರಿಮಾಡುವರ್ ಶಂಭುಗುಳಿದವರತ್ಯಜ್ಞರೆಂಗುಮಾ ಸೂತಿಗೀತಿ (ಪದ್ಮರಾ. ೧೧-೯). ೩. ನಟ್ಟು ನಿಲ್ಲು; ನಾಟಿರು; ನಟ್ಟಿರು: ನಯದಿಂದಂ ಬರೆದಂತೆಯುಂ ಕಡೆದು ತಂದಿಟ್ಟಂತೆಯುಂ . . . ಉತ್ಪಾದಿಸಿದಂತೆಯುಂ ನಿಱಿಸಿ ಕಾಲ್ಗೋದಂತೆಯುಂ ನೆರ್ಮಿದಂತೆಯುಮಿರ್ಕುಂ ಜಿನಬಾಲರೂಪಮೆರ್ದೆಯೊಳ್ ಮುಂ ಕಂಡಗಲ್ದಿರ್ದರಾ (ಶಾಂತಿಪು. ೧೦-೮೫). ೪. ಆವರಿಸು; ಆಕ್ರಮಿಸು; ಕವಿ; ಮುಸುಕು: ಕರ್ಮಜಮೆಂದು ರೋಗಜಮುಮೆಂದೆರಡುಂ ತೆಱದಿಂ ಶರೀರಿಯಂ ನೆರ್ಮಿದ ಕುತ್ತಮೊತ್ತಿದೊಡೆ (ಪದ್ಮಸಾ. II, ೮೨೮). **ನೆಮ್ಮು$_1$**: ೧. "ನೆಮ್ಮು—ಪೃಷ್ಠಸ್ಥಾಪನೇ (ಒರಗು)" (ಶಮಧಾ); ಪುಳಿನದ ಲೋಹಾಸನಂಗಳೊಳ್ ನೆಮ್ಮಿರ್ದುಂ[ಪಾಠಾಂ. ಕುಳ್ಳಿರ್ದುಂ]ಚಳದಳಕೆಯರರೆ ಬರದೇಂ ಕಳೆದರೋ ಶರದಾತಪಪ್ರಭೂತಶ್ರಮಮಂ (ಅದಿಪು. ೧೧-೭೪); ಚಾರುಚಾಮೀಕರಮೃಗೇಂದ್ರಾಸನದ ಕೆಲದ ಮತ್ತವಾರಣಮಂ ನೆಮ್ಮಿ ನಿಶ್ಚೇತನನಪರಾಜಿತಮಹಾಮಹೀಶನಿರೆ (ಶಾಂತಿಪು. ೨-೨೩ ವ); ಪೊಳೆಯುತ್ತಿರ್ಪ ಮಹಾವರಾಹವದನೋದ್ಯದ್ದಂಷ್ಟ್ರಮಂ ನೆಮ್ಮಿ ನಿಂದಳೋ ಭೂಕಾಂತೆಯೆನಲ್ಕೆ (ಕಾದಂಪೂ. ೧೦೧೩); ಪೊಡರ್ವುತ್ತುಂಗಸ್ತನಂ . . . ಕಂಪಿಸುವ ತನು ರತಿಶ್ರಾಂತಿಯಿಂದಂ ಬೆಡಂಗಂ ಕುಡೆ ನೆಮ್ಮಿರ್ದೋಪನಂ ಮೆಯ್ಪೆಮರ ನೆವದೊಳಂದಾಱಿಸುತ್ತಿರ್ದಳೊರ್ವಳ್ (ಜಗವಿ. ೧೬-೧೨೪); ಆರ್ಪಿಂ ಭಿತ್ತಿಗಳಂ ನೆಮ್ಮಿರ್ಪಳ್ ನಿಂದಗಜೆ ಬಾಲ್ಯಮಂ ನಟಿಯಿಸುತಂ (ಗಿರಿಕ. ೩-೭೩). ೨. ಬ್ರಹ್ಮವಿತ್ತುಗಳು ಬ್ರಹ್ಮತತ್ತ್ವವಡೆದು . . . ನೆಮ್ಮುವರು ವಿಷ್ಣುವನು (ಬಸವ. ೩೮೩); ತಮ್ಮ ಸಂಕಟಕಿವರು ವಿನಯವ ನೆಮ್ಮಿ ಬಿನ್ನಹ ಮಾಡುತಿರ್ದೊಡೆ (ಕುಪ್ಯಾಅ. ೨೦-೧೨); ಅನೀತಿಯಿಂ ಪರಮತವ ನೆಮ್ಮಿ ನರಕಕ್ಕಿಳಿವ ಪಾತಕರನಲ್ಲದಲ್ಲಿಯು ಕಾಣೆ ಶಿವಭಕ್ತರುಗಳ ಪರಿಭಾವಿಸಿದೊಡೆ (ಸಿದ್ದೇಪು. ೧-೫೧); ಭವತ್ಪದಮಂ ನೆಮ್ಮಿದವೆಮ್ಮನೊಡನೆ ರಕ್ಷಿಸು ಪರದಾ (ಹಸ್ತಿಮಾ. ೭-೨೮); ನಿರ್ಮಮದ ಸದ್ವಿವೇಕದ ದೀಪಕಿಂತ ನೀಂ ನೆಮ್ಮಲಿನ್ನೇನಿಹುದೋ? (ಮಂಕುಕ. ೫೫೫). ೩. ನಿಮ್ಮ ತಂದೆಯ ಬಾಣವಹಿತನ ನೆ[ಪಾಠಾಂ. ಹ]ಮ್ಮಿದವು . . . ನೆಲೆಗೆಡಿಸಿದವು ನಿಮಿಷದಲಿ ನಿರ್ಜರರ (ತೊರರಾ. ೬-೨೫-೧೦); ಕಾಮ್ಯ ಫಲಾಭಿಲಾಷರಿಗೆ ಬ್ರಹ್ಮವಿದ್ಯಾಭ್ಯಾಸಹಲಿ ಮನ ನೆಮ್ಮದು (ಅಮೃತ. ೧-೪೪); ಸ್ತ್ರೀಯರೊಳು ಮನ ನೆಮ್ಮಿಹುದು ಸುಖವಲ್ಲೆನುತ ಮನ ನಿಮ್ಮಳದಿ ಹೇಳಿದನು (ಸಾಳ್ವಭಾ. ೨೦-೫೯); ಚಿತ್ತವಂ ನೆಮ್ಮಿದಾತಂಕದಿಂ ಚರನೊರ್ವನಂ ಕರೆದು . . . ಬಸವನಂ ಕರೆದು ತಾರೆನಲು (ಚಿಚಪು. ೭-೨೫). ೪. ನೀವಿಂದುಗ್ರ ಪಾತಿವ್ರತೆಯರೊಳಗಗ್ಗಳರು ನಿಮ್ಮನು ನೆಮ್ಮದಪಕೀರ್ತಿ (ತೊರರಾ. ೨-೨-೪೪); ತಮ್ಮ ಬಾ ಶತ್ರುಘ್ನ ನಮ್ಮನು ನೆಮ್ಮಿತಧಿಕ ವಿಪತ್ತು . . . ಎಂದು ರೋಷಾವೇಶಮನನಾಹ

(ತೊರರಾ. ೪-೯-೧೩). ೫. ಹಿಂಬಾಲಿಸು ; ಅನುಸರಿಸು : ಫಲುಗುಣಂ ಬರುವ ಗಡ ವಾಹಿಯನ್ನೆಮ್ಮಿ ದೇಶಂಗಳಂ ಚರಿಸಿ (ತುರಂಗ. ೮೨-೧೩). ೬. ಹಿಡಿದಿರು ; ಹೊತ್ತಿರು : ಕಂಕುಳಲಿ ಕೊಡವೊಂದ ನೆಮ್ಮಿ . . . ಕುಡಿವ ನೀರನು ತರುವಂದು (ಸನ್ನಪ. ೧೯-೨). ೭. ಹರಡು ; ವ್ಯಾಪಿಸು : ಭದಿಪರ್ಯಂತಂ ನೆಮ್ಮಿರ್ಪುದು ತಾನದು ಮತ್ತವಾರಣಂ (ವಸ್ತುಕೋ. ೪೭-೧೫). ೮. ತಗುಲು ; ಮುಟ್ಟು ; ಸೋಕು : ಕಮ್ಮಿಯನ ಚೇಳಿನ ಹೊಮ್ಮೆರಡು ಒಂದಯ್ಯ ನೆಮ್ಮಿದರೆ ಚೇಳು ಹೊಡೆದಿಹುದು ಕಮ್ಮಿ ತಾ ನೆಮ್ಮದೆ ಹೊಡೆವ (ಸರ್ವಜ್ಞ. ೧೦೦೯). [<ನೆರ್ದ$_2$?]

ನೆರ್ಮು$_2$, ನೆಮ್ಮು$_2$ (ನಾ). ೧. ಅವಲಂಬನ ; ಆಸರೆ ; ಆಧಾರ ; ಆಶ್ರಯ : ಧರ್ಮಾರ್ಥಕಾಮಮೆಂಬಿವು ಧರ್ಮಾರ್ಥಿಜನಕ್ಕೆ ನೆಱೆದ ನೆರ್ಮಂತವಱೊಳ್ ಧರ್ಮಂ ಪ್ರಧಾನಂ(ಆದಿಪು. ೧೦-೫೦) ; ಕುಳ್ಳಿರ್ದೆಡೆಯೊಳಡಸಿ ನೆರ್ಮಾಗುತಂ . . . ಅಂದವನೀಶಂಗಾಸೆಯಾದಂ ಪ್ರಿಯಸಚಿವಸುತಂ (ಲೀಲಾವ. ೬-೪೨) ; ದಿಗಧೀಶರ್ ಪರಿವಾರವಾಹನವಧೂನ ದ್ಧಾಯುಧರ್ ವಂದು ಪೆರ್ಮೆಗೆ ನೆ[ಪಾಠಾಂ. ನಿ]ರ್ಮಾಗೆ (ಅನಂಪು. ೫-೧೨) ; ಎವಗಾವಾವ ಭವಂಗಳೊಳ್ ಬಿಡದೆ ನೆರ್ಮಾಗಿರ್ಕೆ . . . ಜಿನಧರ್ಮಾನಲ್ಪಕಲ್ಪಾಂಘ್ರಿಪಂ (ಶಾಂತೀಶ್ವ. ೧-೯). ೨. (?) : ಧರ್ಮಾನುರಾಗದೊಳ್ ಧರ್ಮಸುತನೆನಿಸಿದಂ ನೆರ್ಮಂ ಬುಧಂಗಹಿಮಕರನಂತಿ[ರ]ನಿಸಿದಂ ಗುರುಸೇವೆಗಿಡದುದಱಾನಮರಪತಿಯೆನಿಸಿದಂ (ಸೌಇಇ. IX-1, ೧೧೭-೩೦ ; ಸು. 1055). **ನೆಮ್ಮು$_2$** : ೧. ನೀರೊಳಗೊಂದು ನೆಳಲು ಸುಳಿಯುತ್ತಲ್ಲಾ ನೆಳಲೊಳಗೊಂದು ಹೊಳೆವ ಶಬ್ದವು ಅದು ನೆಮ್ಮಲ್ಲ ಸೊಮ್ಮಲ್ಲ ಅಮ್ಮಿದರಾಯಿತ್ತು ನೆಮ್ಮಿದರಳಿಯಿತ್ತು (ಸರ್ವಜ. ೨೬-೧೧೪) ; ಬಾಲಕರ ಮರಣವನು ಕೇಳುತ ಕ ಳುಡೆಯ ನೆಮ್ಮಿನಲಿ ಚಮ್ಮಿದನುಗುರಲಶ್ರುಗಳ [ಪಾಠಾಂ. ಮೇಲುಮಲಗಿನಲಶ್ರುಜಲವನು ಮಿಡಿದನುಗುರಿನಲಿ, ಕವುಳುಡೆಯ ನೆಮ್ಮಿದನು ಮಿಡಿದನು ಬೆರಳಲಶ್ರುಗಳ, ಕೇಳುತಲ್ಲಿ ನೆಮ್ಮಿನಲ್ಲಿ ಚಮ್ಮಿದನುಗುರಲಶ್ರುಗಳ] (ತೊರರಾ. ೬-೪೦-೩) ; ಎನಿತೊಂದು ನಾಡುಗಳನಾಳಿದುದು ಸೂಸ . . . ಆತನಾಳಿಕೆಯಲ್ಲಿ ನೆಮ್ಮದಿಗೆ ನೆಮ್ಮಾಗಿ, ಬಾಳಿದವು ಮೈತ್ರಿಯಲಿ ಬೆಸೆದು ಹೆಮ್ಮಿಗಿಲಾಗಿ (ಪಾರಸಿ. ೩೩-೭೫೮). ೩. "ದಿಂಬು, ಒರಗು" (ಪ್ರಭಣ್ಣ). [<ನೆರ್ಮು$_1$]

ನೆರ್ಮುಗಂಭ (ನಾ). ಒರಗಿಕೊಳ್ಳುವ ಕಂಭ : ಬರೆದು ನಿಜನಾಮಮಂ ನೃಪವರನಾ ಲಿಖಿತಪ್ರಯುಕ್ತಬಾಣದಿನಿಸೆ ಚಕ್ಷುರಮೆಯ್ದುನಟ್ಟುದಣಮಚ್ಚರಿವಡೆ ಮಾಗಧನ ನೆರ್ಮುಗಂಭಮನಾಗಳ್ (ಶಾಂತೀಶ್ವ ೧೫-೧೧೫). [ನೆರ್ಮು$_1$ + ಕಂಭ]

ನೆರ್ಮುಗೆ, ನೆಮ್ಮಿಗೆ, ನೆಮ್ಮುಗೆ (ನಾ). ೧. ನಂಬಿಕೆ ; ನೆಚ್ಚು ; ಭರವಸೆ : ಆ ಮಹಾಸಭೆಯಲ್ಲಿ ಗೌರವವು ವಿಶ್ವಾಸವು ನೆರ್ಮುಗೆಯಡರ್ಪುಬಳೆದಂತೆಲ್ಲ (ಮಂತ್ರಶ. ೧೫೪-೧೨). **ನೆಮ್ಮಿಗೆ** : ೨. ಆಧಾರ ; ಆಶ್ರಯ ; ಆಸರೆ : ವಿಶ್ವಾಳಿಗೇ ನೆಮ್ಮಿಗೆಯದಾದನಂ ನೂತನಾಧಾರನಂ . . . ನಮಿಸುವೆಂ (ವೀರೇಶಪು. ೬-೧-೩೨) ; ಕರ್ಮವಿರಹಿತನೆ ನಿಮ್ಮ ಶ್ರೀಪಾದವ ನೆಮ್ಮಿಗೆಯನು ನೆಱೆ ನಂಬಿ ಉಮ್ಮಳದಲಿ ಕೃತಿವರ್ಣಿಪೆ (ಕರಜಾ. ೫-೩) . **ನೆಮ್ಮುಗೆ** : ೧. "ನೆಮ್ಮುಗೆ ನಂಬಿಕೆ" (ಶಕರ. ೫೬) ; ಅಱಾವಲ್ಲಿಯೆ ನೆಮ್ಮುಗೆ ಬಿಡಗೂಡಬೇಕು (ಅಪಚಂ. ೨೬೯-೧೨೩೪) ; ಧರ್ಮಮಯವಹ ಶ್ವೇತದ್ವೀಪನ ನೆಮ್ಮುಗೆಯನುಳ್ಳವನ ನೆನೆದರೆ . . . ಆಹುದು ನೂರ್ಮಡಿಯೆಂಬ ಘನಮಹಿಮೆ (ನಿಭಾಗ. ೧೧-೨೨-೧೪) ; ಸೊಮ್ಮುಗಳ ಸೌಭಾಗ್ಯ ಸಂಪದ ನೆಮ್ಮುಗೆಯ ವೈಶ್ರವಣ ಶಿವನಿಗೆ ಸಮ್ಮತದ ಸಖನೆನಿಪ ಸುತನಹನೆನುತಲಜತಳವ (ಉತ್ತಕ. ೪-೧೦); ಬಾಳು ಬಲ್ಪೊಗಸಮ್ಮ ನೆಮ್ಮುಗೆಯ ನಾಡಿನೊಳಗೆ (ಇಂಗೀತ. ೮೯-೮) ; ಪ್ರಜಾವಳಿಯ ಮಹಾಸಮ್ಮತದ ನೆಮ್ಮುಗೆಯ ರಕ್ಷೆಗೆ ಸಲ್ವಂತೆ . . . ಈ ಮಹಾಸಭೆಯು ಆಚರಿಸಿಕೊಳ್ಳಬೇಕಾಗಿದೆ (ಮಂತ್ರಶ. ೭೩-೮). ೨. "ಅಂಕೆಯುಮಡರ್ಪಂದು ನೆಮ್ಮುಗೆಗೆ ನಾಮಮಕ್ಕುಂ" (ಕಬ್ಬಿಕೃ. ೭೩) ; ಅಂಗದ ಕುಜುಹಿನ ನೆಮ್ಮುಗೆಯಪ್ಪ ಲಿಂಗವು . . . ಭವಪಾಶವ ಗೆಲ್ಲುವುದು (ಮೋಕ್ಷಸಾ. ೫೭-೨೩೬) ; ಚರ್ಮದಂಡದ ನೆಮ್ಮುಗೆಯಲ್ಲದೆ ದನಿದೋಱುವನುಮಾನಂ ಪೊರ್ದದೆ ಮಡಸನ್ನೆ ಮನದೊಳಂಕುರಿಸುವಲ್ಲಿಂ ಮುನ್ನಂ ಪರಿದು (ಗಿರಿಕ. ೬-೫೫ ಪ) ; ಜಿನಧರ್ಮವಂ ನೆಮ್ಮುಗೆಯ ಮಾಡಿಕೊಂಡು (ಸೌಂದಪು. ೧೩-೬) ; ಮೇಣಾವ ಶಶಿವಂಶಾವಳಿಯ ನೆಮ್ಮುಗೆಯ ನೆಗಳಿದೆ ತತ್ತ ಶಾಳಿಗಳೆ (ಕುವ್ಯಾಭೀ. ೩-೩೪), ನೆಯ್ದಿಲಿಗೆ ನೇಸಱಾನ ನೆಮ್ಮುಗೆಯಾದ ತೆಱನಲಿ (ಪ್ರಭುಲಿಂ. ೭-೩೧) ; ಹರಿಯ ನೆಮ್ಮುಗೆ ಕಮಲಜನ [ಪಾಠಾಂ. ಹರಿ ಹಿರಿಯನೆನಗೆ ಕಮಲಜ] ಸಹಾಯಂ ದಿಶಾವರರೊತ್ತು (ಚೆಬಪು. ೩೦-೩೩) ; ಯುವತಿಯ ಸರಸಕಟಾಕ್ಷದ ನೆಮ್ಮುಗೆಗಳು ಇಲ್ಲ (ಬಿಮರಿ. ೮೮). ೧,೨ : ನೇಮಿಯ ನೆಮ್ಮುಗೆಯಿಲ್ಲದೊಡೀ ಮತ್ತಿನ ಕವಿಮನೋರಥಂ ನಡೆದಪುದೇ (ಧರ್ಮನಾ. ೧-೩೯). ೩. ನೆಮ್ಮದಿ ; ಸಮಾಧಾನ ; ಶಾಂತಿ: 'ನೆಮ್ಮುಗೆಗೊಳ್' ಪರಾ. ೪. ನಂಬಿಕೊಂಡಿರುವ ಆಧಾರ ; ತತ್ವಾಧಾರ (?) : ಬಿಜ್ಜಳೋರ್ವೀಶಳೇಂದ್ರ ಕೇಳ್ ನಿಮ್ಮ ಬಂಟಂಗಾದೊಡೇಳಬೇಡವ ಬಸವ ತಾನೇಳ ನೀವೇಳಲು ನೆಮ್ಮುಗೆಯುದಾವ. ಬಲುಹಾಡಿಸಾಡದೊಡೆ ತಾನೆಮ್ಮ ಪಾದಕ್ಕೆ ನಮಿಸಲಿ (ಲಕಚಿಂ. ೩೩-೧೨). [ನೆರ್ಮು$_1$ + -ಗೆ]

ನೆರ್ವಾಳ 'ನೇಸಾಲ$_1$' ನೋ.

ನೆಲ್, ನೆಲ್ಲು (ನಾ). ೧. ಒಂದು ಬಗೆಯ ಧಾನ್ಯ; ಬತ್ತ :"ಸ . . . ಸ್ತಂಬಕರಿ:—ಈ ೨ ನೆಲ್" (ಹಲಾಯು. ೧೫-೪೨೫) ; ಪನ್ನಿಕ . . . ವೆದೆ ನೆಲ್ಮಣ್ಣನ್ನೆನ್ದು ಪಾಱುನ್ದೆನ್ದು ಅತಿವುರ ಪಡೆದನು (ಇ . . . ೧೩೭-೮ ; 454) ; ಇಲ್ಲಿಗಿದು ತಕ್ಕುದಿಲ್ಲಿಗೆ ಪೊಲ್ಲದಿದೆಂದಱುದು ಸಮಱುಬಲ್ಲಂತೆಲ್ಲಂ ನೆಲ್ಲುಂ ಮೊಸರುಂಗುಡಿದಂತಲ್ಲದೆ ತಲ್ಲಣಿಸದಲಸದಿಡು ಮೃದುಪದಮಂ (ಕವಿರಾ. ೨-೪) ; ಪಕ್ಕಿಗಳಲ್ಲಿ ತಿಂದುಱುದ ನೆಲ್ಗಳ ನುಚ್ಚುಗಳಂ ಫಲಂಗಳಂ ಪಕ್ಕದೊಳಿರ್ದ ಗೂಡುಗಳಿನಾಯ್ದೆನಗಿಕ್ಕುವನಟ್ಟುಱುಂದೆ ತಾಂ (ಕಾದಂಪೂ. ೧೩೬) ; ಕೆಸಱೊಳ್ ನೆಲ್ ಬೆಳೆಗುಮಲ್ಲದೆ ಜೋಳಂ ಬೆಳೆಯಲರಿಯದು (ಧರ್ಮಾಮೃ. ೧೧-೧೯೦) ; ಅಲ್ಲಿ ಬಿಳಿದಪ್ಪ ನೆಲ್ ಬರಲುಮಾಧೀಶಂಗೆ ಅಲ್ಲಿ ಬಂದೋಗರದ ನೆಲ್ಲೆಲ್ಲವೀಶಂಗೆ (ಅರಿರ.ದೇ. ೧೬೨-೧೩) ; ನೆಲ್ಲುಂ ಕೌಂಗುಂ ಮಾವುಂ ಮಲ್ಲಿಗೆಯುಂ ಬೆಳೆವುವಲ್ಲಿ ಕರ್ವಿನ ರಸದಿಂ (ಸೂಕ್ತಿಸು. ೪-೫೧). ೨. ಎಂಟು ಎಳ್ಳಿನಷ್ಟು ಪ್ರಮಾಣ : ಕರಿತಿಲದ ಕಾಱುಗಂದು ನೆಲ್ (ವ್ಯವಹಾ. I, ೬-೩ ಅನುಬಂಧ) ; ಕರಿಸಾಸಿವೆಯಾಗಲೊಂದು ನೆಲ್ಲೆನಿಸಿರ್ಕುಂ(ವ್ಯವಹಾ. I, ೮-೧೨ಅನುಬಂಧ). **ನೆಲ್ಲು**: ೧."ಶಾಲಿ ವ್ರೀಹಿ ಸ್ತಂಬಕರಿಯೆನಲು ನೆಲ್ಲು"(ಮಂಗರಾ. ೧೧೦-೪); ಪುಣ ಸೂರ್ಪ್ಪೋಲ ನೆಲ್ಲು ಪಾಣ್ಡಯುವಳೆವದು (ಮೈಅರಿ. ೧೯೩೦, ೫೬-೮ ; ಸು. 800) ; ದೇವರ್ಗ್ಗೆ . . . ನೆಲ್ಲುವುಪ್ಪು ಯೆಳ್ಳು ಕಡಲೆ ತೊಗರಿಯಾದಿಯಾಗಿ ಸಲುವುದು (ಎಕ. VIII, ಸೊರಬ. ೩೨೮-೬೧ ; 1159) ; ತಿರುನಾಳ್ಗೆ ನೆಲ್ಲಿಲ್ಲ ಪರವೆ ಮುನಿದಪಳಯ್ಯ (ಸಂಬರಿ. ೧೧-೪೫) ; ಮೇಲುಪಾಯವದಿಲ್ಲದಿರೆ ಕುಡುಗೋಲನೊಂದುವನಳವದಿಸಿ ಕೈಕೊಲಿಯಂ ರಾಜನದೆ ನೆಲ್ಲಿಂಗೆಂದೊಡಂಬಡಿಸಿ ಲೀಲೆಯಿಂ ಮಾಡುತ್ತ ಹಿಡಿದ ಸುಶೀಲವಂ ನಡೆಸಲ್ಕೆ (ಬಸಪು. ೨೬-೧೬) ; ನೆಲ್ಲು ಮೊಸರು ಕಲಸಿದ ಹಾಗೆ (ಗಾದೆ).

ನೆಲ್ಲ ಕುಟಿ = (?) : ಶ್ರೀಮತ್ತೆರ್ಮ್ಮನಡಿಗಳ್ಪೃಥುವೀರಾಜ್ಯಂಗೆಯ್ದುತ್ತಿರೆ ತೊಮ್ಮತ್ತೇಱು ಸಸಬ್ಬದ್ವಿನಿವರೆಮ್ಮಟ್ಟಕ್ಕೆ ನೆಲ್ಲ ಕುಟಿಣಲಾಗ್ಗೆದೆನ್ದು ಬಿಟ್ಟ ದತ್ತಿ (ಎಕ. XIV, ಮಳವ. ೬೮-೮ ; ಸು. 860) . **ನೆಲ್ಲ ಗರ್ದೆ, ನೆಲ್ಲ ಗದ್ದೆ** = ನೆಲ್ಲುಗದ್ದೆ : ಪಲವು ಪರಿಯಂ ನೆಲ್ಲ ಗರ್ದೆಗಳೊಪ್ಪುದುವು (ಪದ್ಮರಾ. ೮-೧೨) ; ಪಸುರೇಱು ಪಾಲ್ವಿಡಿದು ಎಸಕದಿಂ ತಲೆವಾಗಿ

ಬೆಳೆದಿರ್ದವಾ ನೆಲ್ಲ ಗರ್ದೆಯಾ ದೇಶದೊಳಗೆ (ಸಿದ್ಧೇಪು. ೨-೪); "ನೆಲ್ಲ ಗದ್ದೆ ವ್ರೈಹೇಯವೆಂಬುದು" (ಹಲಾಯು. ೨೬-೬). **ನೆಲ್ಲನಿತು** = ಬತ್ತದ ಕಾಳಿನಷ್ಟು : ತಿರುವೊಳೆ ಕೋಲನಿಟ್ಟು ತೆಗೆಯಲ್ಕದು ನೆಲ್ಲ ನಿತೆಯ್ದೆ ಜಾಜಲಾ ಹರಿಣನನೆಚ್ಚೊಡುರ್ಬ ನೆಲದೊಳ್ ಮೊನೆದೋಪ್ಪುದು ಚೋದ್ಯವು (ಮಲ್ಲಕಾ. ೩-೨೦೯). **ನೆಲ್ಲ ಪುಲ್, ನೆಲ್ಲ ಹುಲ್ಲು** = ಬತ್ತದ ಹುಲ್ಲು : ಸಾರತರಮಪ್ಪ ಪನಸೋರ್ವೀರುಹಮಂ ಕೊಡೆ ನೆಲ್ಲ ಪುಲ್ಲಿಂದ ಮಲಂಕಾರಮನೆ ಮಾಡಿ ಕಟ್ಟುಗೆ ಬೇರಿಂ ಕಾಯ್ಗುಂ(ಲೋಕೋಪ.೬-೩೧); "ಬಿಳಿಯ ಹುಲ್ಲು" (ಲೋಕೋಪ. ೬-೩೧ ಅಡಿಟ); ಪನಗಳು ನೆಲ್ಲ ಹುಲ್ಲನ್ನು ಹೆಚ್ಚಾಗಿ ತಿನ್ನುತ್ತವೆ (ರೂಢಿ). **ನೆಲ್ಲ ಮಡಿ** = ನೆಲ್ಲುಗದ್ದೆಯ ಒಂದು ಚೌಕವಾದ ಭಾಗ ; ನೆಲ್ಲುಪಾತಿ : ನಿವೇದ್ಯಕ್ಕೆ ನೆಲ್ಲ ಮಡಿ ಎರಡು ಕೆಜಿಗೆ ಮಡಿ ಎರಡು (ಸೌಇಇ. IX-1, ೬೦-೧೫; 931); ಗೊಲ್ಲವೆಣ್ಣುಗಳು ಕಡುಗಾಡಿಯಿಂ ಬಂದು ನೋಡುತಿಹರು ನೆಲ್ಲ ಮಡಿಗಳಿಗಿಳಿವ ಗಿಳಿಗಳ (ಕುಂಬಾಸಾಂ. ೨-೩೬). **ನೆಲ್ಲ ಮಣ್** = ಬತ್ತ ಬೆಳೆಯುವ ಜಮೀನು (?) : ಆತನ ಬೆಳವಡಿಚ ಅಲ್ಲಿಗಂ ಕೀಟ್ಟುಗ್ಗೆಯಾಗಿ ಸ××ಪ್ತನಾದ ಆತಂಗಂ ನಡಮಣ್ಣ ಪನ್ನಿರ್ಮ್ಮುತ್ತರ್ನೆಲ್ಲ ಮಣ್ಣ ಖ×××ವಕ ಸೂಳೆವಳ್ಳ××ಱು (ಎಕ. XI, ದಾವಣ. ೧೧೯-೮; 930). **ನೆಲ್ಲ ಹೆಡಿಗೆ** = ೧. ಬತ್ತದ ಗೂಡೆ,—ಬುಟ್ಟಿ. ೨. (?) : ತಲೆ ಹುಟಿತ ನಾಯ ಸುಡು ಗಾವಿಲ ಬಟ್ಟೆಯ ಚಿಕ್ಕಚಿಕೆ ಬೆಳ್ಗತ್ತೆಯ ನಾಣಿಲಿ ನೆಲ್ಲ ಹೆಡಿಗೆ ಸಡಿ ಫಡ ಚೆಲುವಜಟಾಯದ ಕುಡದ ಕಾನುದೇವನದೇವಂ ? (ಸೂಕ್ತಿಸು. ೮-೪೨೩).

[ದೇ.॥ ತಮಿ. ಮಲ. ಕೋತ. ನೆಲ್; ಕೊಡ. ನೆಲ್ಲಿ ; ತೊದ. ನೆಸ್]

ನೆಲ (ನಾ). ೧. ಭೂಪ್ರದೇಶ ; ಭೂಮಿ ; ಭೂತಳ : "ಸ್ಥಿರೆ ಧಾರಣಿ ಧಾತ್ರಿ ಮೇದಿನಿ . . . ಭೂಮಿ ಭೂ ಗೋತ್ರೆ ನೆಲಂ" (ಪಸ್ತುಕೋ. ೨೬-೧); ನೆಲನುಂ ವೆಳೆಗೆ ಪಾರ್ವ್ವರುಂ ಪ್ರಜೆಯುಂ ತಣಿಗೆ (ಇಅ. XIX, ೧೪೫-೧೮; 680); ಪಚ್ಚು ಪರಿಕಲಿಸಿ ಬೆನ್ನಂ ಮುಚ್ಚಿರೆ ಮುಡಿ ಕಳ್ಳಬೆಳ್ಳವಟ್ಟಲ್ ಬಾಯೊಳ್ ಬೆಚ್ಚಂತಿರೆ ಸತಿ ಶಕಿಯಂ ಕಚ್ಚಿ ನೆಲಕ್ಕಿಱಿದ ರಾಹುವಂ ನೆಜಿ ಪೋಲ್ತಳ್ (ಕಾವ್ಯಸಾ.೯೬೬ ಶೂದ್ರಕ); ತಿರಿವುದದೊಂದು ಚಕ್ರದೊಳೆ ನಿಂದು ದಿವಾಕರನೆ ಮತ್ತ[ರಿ]ದು ಕಳೆವೊಡಂತದನಾವೆಡೆಯಿಂದರಮೆಯಾಗಿ ನೆಲಸಿ ಕೆಲಕಾಲದಿಂ ಪೊರೆದಿರದಱಿದ ಬಱಿಕ ತಾ ನೆಲದೊಳ್ (ಕವಿಗಾ. ೨-೧೪೬); ಸಮದಗಜಘಟಾಟೋಪಂ ಬೆರಸು ನೆಲನದಿರೆವಂದು ತಾಗಿದ ಕಕ್ಕಲನ ತಮ್ಮನಪ್ಪ ಬಪ್ಪುವನಂಕಕಾಜನಂ (ಪಂಪಭಾ. ೯-೫೨ ಪ); ನೆಲದ ಮಜಿಯ ನಿಧಾನದಂತೆ . . . ಭಾವದ ಮಜಿಯ ಬ್ರಹ್ಮವಾಗಿಪ್ಪ ಚೆನ್ನಮಲ್ಲಿಕಾರ್ಜುನನ ನಿಲವನಾರೂ ಅಱಿಯಬಾರದು (ಮಹಾದೇ. ಬ. ೯-೨); ಮರುದಿನ ಮಧ್ಯಾಹ್ನ ಅಂಗಡಿಯಿಂದ ಹಿಂತಿರುಗಿದಾಗ ನೆಲಕ್ಕೆ ಕಾಲು ತಾಗಿಸುವ ಸ್ಥಿತಿಯಲ್ಲೇ ಇರಲಿಲ್ಲ ಶಾನಭಾಗರು ! (ಮೂರುದಾ. ೧೦೨). ೨. ಮಣ್ಣು : ನೆಲದ ಬೊಂಬೆಯ ಮಾಡಿ ಜಲದ ಬಣ್ಣ ವಸುಡಿಸಿ . . . ಆಡಿಸುವ ಯಂತ್ರವಾಹಕನಾರೋ (ಅಪಚಂ. ೫-೧೬). ೩. ಕೃಷಿಯ ಭೂಮಿ ; ಜಮೀನು : ಶಾಳಿಗಳಂ ಬೆಳೆವ ನೆಲನೆ ಪೊಲನಾ ನೆಲದೊಳ್ (ಪುಷ್ಪಪು. ೨-೧೪); ತನ್ನ ಪಾಲಿನ ನೆಲಂ ಬಿಸಿಲೊಳಾರಲ್ ತೇದು ತನ್ನುಡೆಯ ಬೆನ್ನೊಡಲ ತೊಳೆವವನ ಗೇದು (ಕಾಲೂರ. ೨೯-೨೧). ೪. ಸ್ಥಳ ; ಜಾಗ ; ಪ್ರದೇಶ : ನೊಕ್ಕಜ ಒಡೆ ಅಗ್ಗದೀಕಡ××× ಕೊಟ್ಟ ನೆಲ (ಎಕ. III, ಮೈಸೂರು. ೫೫-೨ ಹಂಭಾಗ; ಸು. 750); ಮುಂದರಾಚಲದಧೋಭಾಗದ ಚಿತ್ತೆಯೆಂಬ ನೆಲದಿಂ ಕೆಟಗೆ . . . ನಾಗಾದಿ ನವವಿಧ ಭವನವಾಸಿಕನಿವಾಸಮಿರ್ದುದು (ಅಜಿಪು. ೧೧-೬ ಪ); ಧರೆಗೊಡೆಯ ಚಕ್ರೇಶಂ ತಿರಿವನೆ ಬಲಿಯಲ್ಲಿ ಬೇಡಿ ಮೂಱಡಿ ನೆಲನಂ (ಸುಮಪ. ೮-೧೪೪); ನಾಚುವರೆ ಮೊಜಿಯಿಲ್ಲ ತೊಲಗುವರೆ ನೆಲನಿಲ್ಲ (ಬಸವ. ೯೧೨); ಮಹಾರಥರಾಜಿ ಕದನದ ನೆಲನ ಬಿಡಿ ಖಡಿಗೊಂಡು . . . ರಿಪುವನು ತಱುಬಿದನು ಕರ್ಣ (ಕುವ್ಯಾದ್ರೋ. ೫-೨೬); ಬಳಿಕ ನೆಲ ಶೋಧಿಸಿತು ಸವನಸ್ಥಳಕೆ ಸುಮುಹೂರ್ತದಲಿ . . . ನಿಳಯಂಗಳು ನಿರ್ಮಿಸಿದವು (ತೊರಾ.೧-೬-೧೧); ಮತ್ತೆ ನಾಲ್ಕು ವರುಷಗಳಲ್ಲಿ ಉಳಿದ ನೆಲವೂ ವಾಸಿಸುವ ಮನೆಯೂ ಸಾಹುಕಾರನ ವಶವಾದವು (ರಂಗರೋ. ೧೦೧); ೫. (ಕಟ್ಟಡಗಳ) ಸಮ ಮಾಡಿದ ನೆಲ ; ನೆಲಗಟ್ಟು : ದೇಗುಲಕ್ಕೆ ನೆಲನ ಕಟ್ಟಿಸಿಕೊಟ್ಟ ಪದ[ಜ್ಞ]ಲಿಗಂ ಒನ್ದು (ಸೌಇಇ. XI-1, ೩೫-೮; 935); ನೆಲ ಒರಸಲು ಬೇರೆಯೇ ಬಟ್ಟೆಯನ್ನಿಟ್ಟುರಬೇಕು (ಆಡುಸೌ. ೪೬). ೬. ನಾಡು ; ರಾಜ್ಯ ; ದೇಶ : "ನೆಲನೆನೆ ರಾಜ್ಯಂ" (ಚತುನಿ. ೬೬); ನೆಲನಂ ಪ್ರತಿಪಾಲಿಸಿ ಧರ್ಮಸೂನು ಸುಖಮಿರ್ದಂ (ಪಂಪಭಾ. ೪-೧೦); ಕೇಯೂರಮಂ ತಳೆವಂದದಿಂ ಪೃಥುಳಭುಜದಿಂ ಪೃಥ್ವೀಶಂ ತಾಳ್ದಿದಂ ನೆಲನೆಲ್ಲಮಂ (ಕಾದಂಪು. ೧೬); ನೆಲಕಿಱುವೆನೆಂದು ಬಗೆದಿರೆ ಚಲಕಿಱುವೆಂ ಪಾಂಡುಸುತರೋಳ್ ನೆಲನಿದು ಪಾಟ್ಟೀಲನೆನಗೆ (ಗದಾಯು. ೫-೪೬); ದೇವಮಾತೃಕವೆನೆರ್ನ್ನದಾ ನೆಲದ ಕೆಯ್ದೊಲನಂ ಪೆಜತೇನನೆಂಬುದೋ (ಮಲ್ಲಿಪು. ೨-೧೬); ಪಾಳೆಯಕೆ ಮರಳಿಚು ರಥವನಿನ್ನೆಲ್ಲಿಯದು ನೆಲ ನೆಱೆ ಕುದಿವ ಕುರುಡನ ಮಕ್ಕಳೇ ಕೊಳಲಿ (ಕುವ್ಯಾಕ. ೧೪-೫); ವಂಚಕರ ಸಂಚನಿಂದೆ ಭರತಂಗೀ ನೆಲಂ ಪಳುವಾಯ್ತು ? (ಕ್ರೀರಾಮಾ. ೬೧-೨೦೧). ೭. ಲೋಕದ ಜನ; ಪ್ರಪಂಚ : ದಿಟದಿಂ ಮಾನಸರಜಟಾಯರೆ ಬಾಸುಗಿ ತಾನಜಟಾಯನೆ ಮತ್ತಮಜಟಾಯದೇ ನೆಲನಿತುಂ (ಕಬ್ಬಿಕಾ. ೧೮೭). ೮. "ಕುಂಬಾರರು ತಿಗರಿಯ ಮೇಲಿಂದ ಕೊಯ್ದಿಟ್ಟು ತಟ್ಟೆ ಸಮ ಮಾಡದೆ ಇರುವ ಪಾತ್ರೆ" (ಪ್ರಭಣ್ಣ). ೯. ಒಂದು ಗೊತ್ತಾದ ಭೂಭಾಗ ; ಸಣ್ಣ ಭೂಪ್ರದೇಶ ; "ಅಲ್ಪ ವಸುಧೆ" (ಧಾರಣಿ. ೪೮. ಕಿ).

ನೆಲಕಿಕ್ಕು, ನೆಲಕ್ಕಿಕ್ಕು = ೧. ನೆಲಕ್ಕೆ ಕೆಡಹು ; ನೆಲಸಮ ಮಾಡು ; ಮಣ್ಣುಗೂಡಿಸು : ಜಾಂಬವನಂ ಪಿಂಬಗಲಾದಿತ್ಯನಂತೆ ತೇಜಂಗಿಡಿಸಿ ಹನುಮನನುಮಾನಂ ಮಾಡದೆ ನೆಲಕಿಕ್ಕಿ (ಧರ್ಮಾಮೃ. ೬-೯೫); ನೆಲಕಿಕ್ಕುಗುಮಾತಂ ದೋರ್ವಲದೃಪ್ತನಮೋಘಮುಱದೆ ನಮ್ಮಯ್ಯನುಮಂ ಚಲದಿಂ ನಿನ್ನೆಱೆಯನುಮಂ (ನೇಮಿಪು. ೩-೮); ತೊಟ್ಟಿಲಂತೆಸೆದರ್ ಶಕಟನ ನೆಲಕಿಕ್ಕಿ ಮೆಟ್ಟಿದ ಪಾದವೆಚ್ಚಱಚೆ (ಮೋಹತ. ೧೪-೨೦). ೨. ನೆಲದ ಮೇಲೆ ಇಡು; ನೆಲಕ್ಕೆ ಇಳಿಸು : ಬಾಹುಬಲಿ ಭರತನಂ ದೃಷ್ಟಿಯುದ್ಧ ಜಳಯುದ್ಧದೊಳು ಗೆಲ್ದು . . . ಭರತನಂ ಪಿಡಿದೆತ್ತಿ ನೆಲಕ್ಕಿಕ್ಕುವುದುಂ ಭರತಂ ಸಿಗ್ಗಾಗಿ ಚಕ್ರರತ್ನಮಂ ಬೆಸಸಿದೊಡೆ (ಚಾವುಂಪು. ೪೯). ೩. ನಾಶಮಾಡು : ಮುನ್ನಾರಾರ ಬಲ್ಪಂ ನೆಲಗಿಡಿಸವಿವಾರಾರ ತಕ್ಕಂ ನೆಲಕ್ಕಿಕ್ಕುವು (ಕಬ್ಬಿಕಾ. ೩೦೩). **ನೆಲಕಿಡು** = ನೆಲಕಿಕ್ಕು ೨ : ಕರಿಯ ಭತ್ತಮನುಗುರಿಂ ಚಪುಂಟ ನೆಲಕಿಡೆ (ದಿವ್ಯಚ. ೩-೩೦ ಪ). **ನೆಲಗಣ್ಣ** = "ಜಗಚ್ಚಕ್ಷು ; ರವಿ" (ಪ್ರಭಣ್ಣ). **ನೆಲದ ಪಡೆ** = ಭೂಸೈನ್ಯ : ನೆಲದ ಪಡೆ, ನೀರ ಪಡೆ, ಗಾಳಿಪಡೆಗಳ್— ಕೋಟಿ ಕೋಟಿಗಳ್—ಸಿದ್ಧವಾಗಿಹವಿಂದು ಯುದ್ಧಲೀಲಾವಿಲಯಕಲೆಗೆ (ಕ್ರೀರಾಮಾ. ೫೫೭-೧೫೧). **ನೆಲದಮರ್ದುಣಿಸು** = **ನೆಲನಮರ್ದುಣಿ** : "ನೆಲದಮರ್ದುಣಿಸುಗಳೆಂದುಂ, ನೆಲನಮರ್ದುಣಿಗಳೆಂದುಂ ವಿಪ್ರರ್ಗೆ ಪೆಸರ್" (ಕಶಸಾ. ೬೦-೩೩೩). **ನೆಲದರಸ** = ಭೂಮಿಯ ಒಡೆಯ ; ಭೂಪತಿ ; ಅರಸ ; ದೊರೆ : ನೆಲದರಸರ್ವರ ಸಿರಿಗಳೊಂದುಗೂಡಿ ದೊಡೆ (ಕ್ರೀರಾಮಾ. ೫೧-೬೬೯); ಶಿವಶರಣರನ್ನು ಮರೆತುಬಿಟ್ಟು ನಾಲ್ಕು ದಿನದ ನೆಲದರಸನನ್ನು ಭಜಿಸಿ ಪೂಜಿಸಿ ಪ್ರದಕ್ಷಿಣೆ ಮಾಡಿ ಹಾಡಿ ಹೊಗಳಲೆ ? (ತುಂಗಭ. ೬). **ನೆಲದವ್ವ** = ಭೂಮಿತಾಯಿ : ನಾವು

ನೆಲದವ್ವನ ಮಕ್ಕಳು (ಹಾಹುತ್ತ. ೬೮). **ನೆಲದ ಹಾದರಿ** = ಒಂದು ಬಗೆಯ ಪಾದರಿಗಿಡ ಮತ್ತು ಅದರ ಹೂವು : "ಕುಂಭಿ-ದಂತಿ, ಕರಿಯ ಸಿವನ್ನು, ಕಿಱಾಯ ಗುಳ್ಳ, ನೆಲದ ಹಾದರಿ . . . ಹೆಗ್ಗುಳ್ಳ" (ಓಷಧಿ. ೩೪). **ನೆಲದಱಕೆ, ನೆಲದರಿಕೆ** = ಲೋಕದಲ್ಲೆಲ್ಲಾ ಹರಡಿದ ಖ್ಯಾತಿ,—ಪ್ರಸಿದ್ಧಿ ; ಜಗದ್ವಿಖ್ಯಾತಿ : ನೆಲದಱಕೆಯ ಬಿದಿಯಂ ಪೊಡೆಯಲರನನಿಂದಿರನನದಟರಂ ತವಸಿಗಳಂ ನೆಲೆ ನಟ್ಟು ನೋಯಿಸಿದುದಿನ್ನಲರಂದಿನ ಮೊನೆಗೆ ನಿಲ್ವನೇ ಬಡಗೊರವಂ (ಕಬ್ಬಿಕಾ. ೧೫೭) ; ಕೃಷ್ಣದೇವನ ಕುಲದ ನೆಲದರಿಕೆಯಾಳಿಕೆಯಾ ಹೆಮ್ಮೆಯಿಂದಾಳು (ಹೊಂಗಳು. ೧೩-೭). **ನೆಲದಾಣ್ಮ** = ನೆಲದರಸ : ಬಱದೆ ಕಾಳಗಕೆ ಬಲಸಹಿತ ಬಂದೆ ನೀನಿನಿತುಜುಬೆಗೆಜಗುವರೆ ನೆಲದಾಣ್ಮರಕಟ ನಿನಗೆ [ಪಾಠಾಂ. ಬಂದೆಮ್ಮೊಡನೆ ಕೆಣಕಿ ರಣದೊಳಗೆ ಕುದುರೆಯಂ ಬೇಡಲೇಕೆ] (ಜೈಮಿಭಾ. ೨೭-೩೯) ; ನಿಮ್ಮ ವಂಶದ ನೆಲದಾಣ್ಮರು . . . ಬಲ್ಬಲಯುತರಾಗಿ ರಂಜಿಪರು (ಕಂನವಿ. ೧೮-೧೨೫). **ನೆಲದುಬ್ಬು** = ಭೂಮಿಯ ಎತ್ತರದ ಭಾಗ ; ಪರ್ವತ ; ಬೆಟ್ಟ : ನೆಲದುಬ್ಬಿನೀ ಮಲೆಯ ತಲೆಯ ಗುಡಿಮೊನೆಯಿಂದ – ನೆಲವ ಕವಿವೀ ಬಾನ ನೀಲಿಮೆಯ ತಲದಿ (ಮಲೆಮೇ. ೫೨-೩). **ನೆಲದೆಱೆಯ, ನೆಲದೆರೆಯ** = ನೆಲದರಸ : ಒಲವಿಂದೋಲಗಿಸುವೆನೀ ನೆಲದೆಱೆಯನನೆಂದು ಬರ್ಪವೋಲ್ ಬಗ್ಗಿಪ ಕೋಗಿಲೆಯ ತೊದಳ್ನುಡಿ ಬಿರಯಿಯನಲೆಯುತ್ತಿರೆ ಬಿಡದೆ ಬಂದುದಂದು ವಸಂತಂ (ಕಬ್ಬಿಕಾ. ೫೨) ; ನೆಲದೆ[ಪಾಠಾಂ. ನೆ]ಱೆಯನ ಮೆಯ್ಯುರಿಯಂ . . . ಕೆಲಬರ್ ಮಂತ್ರಂಗಳಿಂದೆ ಮಾಣಿಪೆನೆಂದರ್ (ತ್ರಿಪುವಿ. ೩೩-೩೫) ; ಹಯಮಂ ಬಿಟ್ಟು ನೆಲದೆಱೆಯ ಧರ್ಮಸುತನಂ ಕಂಡು ಬದುಕುವುದು ಲೇಸೆಂದು ನರನೆಚ್ಚನು (ಜೈಮಿಭಾ. ೧೪-೯) ; ನೆಲದೆರೆಯ ವುತ್ತಾನಪಾದನಾತ್ಮಜ ಭರ್ತಗೊಲಿದಿತ್ತ ಭೂಮಿಯದರಿಂದ ಭರತಾಖ್ಯಮಖಂಡ ಮೆನಿಸುತ್ತ ಲಿಹುದು (ನಳಮೋ. ೨-೧೮); ನೆಲದೆರೆಯ ಜನಕರಾಜನ ಹೃದಯದಿಂಗಿತಕೆ ಮನಮೊಪ್ಪಿ ಸೌಮಿತ್ರಿಯೂರ್ಮಿಳೆಯನೊಪ್ಪಿದಂ (ತ್ರೀರಾಮಾ. ೫೧-೯೨೮). **ನೆಲದೊಡಲು** = ಭೂಮಿಯ ಒಳಭಾಗ : ಬೇರು ನೆಲದೊಡಲಿಗೂ ಬಿಟ್ಟಿರುತ್ತದೆ (ನೆಲಮು. VII, ನಾಲ್ಕು ಮಾತು). **ನೆಲದೊಡೆಯ, ನೆಲನೊಡೆಯ** = ೧. ಭೂದೇವಿಯ ಪತಿ ; ವಿಷ್ಣು : "ನೆಲದೊಡೆಯನೆಂದೆನಲ್ ನಾರಾಯಣಂ" (ಕಶರ. ೫೬) ; ತೇರಣಿಗೆ ನೆಲದೊಡೆಯನಾಯ್ದು ಹೂವನೆ ಬೆಳ್ಳಿ ಸಾರಿದಳ್ ಪೆರ್ವೊಗರ ಕಡಲೊಡಲ ಪೊರ್ದಿ (ಕಾಲೂರ. ೧೭೮-೪೦೩) ; ಜಗದೊಡೆಯಂ ನೆಲನೊಡೆಯಂ (ಶಸುದ. ೨೦೬ ಪ್ರಯೋ). ೨. = ನೆಲದರಸ : ಒಡನೆ ಕಳುಹುತ ಬಂದನಾ ನೆಲದೊಡೆಯನನುಜರು ಸಹಿತ (ಕುಮಾದ್ರೋ. ೪-೫೩) ; ನೆಲನೊಡೆಯನಾಪ್ತಿಗರು ಬಗೆದರು ಸ್ವಾಮಿದ್ರೋಹಿಕೆಯ (ಕುಮಾದ್ರೋ. ೧೦-೭). **ನೆಲನಂ ಬರೆ, ನೆಲನ ಬರೆ** = (ಭಯ, ನಾಚಿಕೆ, ಸೋಲು ಮುಂತಾದುವನ್ನು ಸೂಚಿಸುವಂತೆ) ಕಾಲ ಬೆರಳಿನಿಂದ ನೆಲವನ್ನು ಗೀರು : ಅವರ್ಗಳ್ ತಲೆಯಂ ಬಾಗಿ ಮಱುಮಾತುಗುಡದೆ ಕಣ್ಣ ನೀರಂ ತೀವಿ ನೆಲನಂ ಬರೆಯುತ್ತಿರೆ (ಪಡ್ಡಾರಾ. ೨-೨೨) ; ಕೆಳದಿಯ ನುಡಿಗೆ ಪೆಱತೇನುಮನೆನಲಱಯದೆ ತಲೆಯಂ ಬಾಗಿ ನೆಲನಂ ಬರೆಯುತ್ತುಂ (ಪಂಪಭಾ. ೪-೬೪ ಪ) ; ತಲೆಯಂ ಬಾಗಿ ನೆಲನಂ ಬರೆಯುತ್ತಿರ್ದ ದವನಕನ ಕೃತಕವೇಷಮಂ ಕಂಡು (ಪಂಚತಂ. ೯೨-೨) ; ಗೋತ್ರನಾಮವ ಬೆಸಗೊಂಡರೆ . . . ತಲೆಯ ಕುತ್ತಿ ನೆಲನ ಬರೆಯುತ್ತಿದ್ದಿರಿದೇನಯ್ಯಾ (ಬಸವ. ೬೪೪) ; ಮುಂದನಱಯದ ಮತಿಗೆಟ್ಟ ಮರುಳುಮನವೇ ಕಾಲ ಕಾಮರಗೆಲುವ ಉಪಾಯವಾವುದೆಂದು ತಲೆಯೂಱ ನೆಲನ ಬರೆವುತಿಪ್ಪೆ (ಘಸನ. ೧೫-೧೩). **ನೆಲನ ಜೇನ್ಗೊಡ** = ಎರೆಭೂಮಿಯ ಬೀಡಿನೊಳಗೆ ಕಟ್ಟಿದ ಜೇನುಹುಟ್ಟು : ಹೆಗ್ಗರಡಿಗಳು ಕಿತ್ತೊದರಿದ ನೆಲನ ಜೇನ್ಗೊಡನು ನೋಡೆಂದುದು ಕಿರಾತಱಯ (ಅಸುರಾ. ೩-೩-೧೩). **ನೆಲನಡಿ** = ಭೂಮಿಯ ಕೆಳಭಾಗ ; ಪಾತಾಳ : ಆಬಕ್ಕೆ, ನೆಲನಡಿಯ ಆಬಕ್ಕೆ, ಬಿತ್ತರದ ಅಡಿನೆಲದ ಆಬಕ್ಕೆ ಎನ್ನನ್ . . . ತೂಳ್ದು ಎಸೆದಿರ್ದೋಡೋವೋ (ಬದ್ಧಪ್ರ. ೧೦-೧೯೧). **ನೆಲನನುಗ್ಗಡಿಸು, ನೆಲನುಗ್ಗಡಿಸು** = ಗೌರವಸ್ಥರನ್ನು ಕರೆದುಕೊಂಡು ಹೋಗುವಾಗ ದಾರಿ ಬಿಡಿಸಿ ಕೊಡು,—ದಾರಿ ತೋರಿಸುತ್ತಾ ಹೋಗು,— ಪಾದಾವಧಾನವನ್ನು ಹೇಳು : ದುಕೂಲಂಗಳಂ ಸಿಡಿದು ನೆಲನನುಗ್ಗಡಿಪ ಕೇಯೂರಕನು ಮೊದವರೆ (ಕಾದಂಬಿ. ೧೦೫) ; ನೆಲನನುಗ್ಗಡಿಸೆ ಉಳೀ ಚಾಂಗುಭಲಾ ಎಂದು (ಬಸವ. ೫೯೫) ; ನೆಲನುಗ್ಗಡಿಪ ಪಡಿಯಱತಿಯರಂ ನಿವಾರಿಸಿದಪ್ಪಳೆನಿಸಿಯುಯುಂ (ಕಾದಂಬಿ. ೩೬). **ನೆಲನನೊಡಂಬಡು** = ನೆಲದ ಮೇಲೆ ಬೀಳು ; ಮೂರ್ಛೆ ಹೊಂದು : ಕಟ್ಟಾಳ್ಗಳೆನಿಪ ರಕ್ಕಸರೊಟ್ಟಿಗೆಗೆಟ್ಟಱಲೆ ಸಗ್ಗಿಗರ್ ನೆಲನನೊಡಂಬಟ್ಟರೆ ಕಾಳಗದೆಡೆಯೊಳ್ (ಕಬ್ಬಿಕಾ. ೩೦೮). **ನೆಲನ ಮಗಳ್** = ಭೂಮಿಯ ಮಗಳು; "ಅವನಿಜೆ, ಸೀತೆ" (ಪ್ರಭಣ್ಣ). **ನೆಲನಮರ್ದುಣಿ** = ಬ್ರಾಹ್ಮಣ ; ಭೂಸುರ : "ನೆಲದಮರ್ದುಣಿಸುಗಳೆಂದುಂ, ನೆಲನಮರ್ದುಣಿಗಳೆಂದುಂ ವಿಪ್ರರ್ಗೆ ಪೆಸರ್" (ಕಶಸಾ. ೬೦-೩೩೩) ; "ತಳೆದಿರ್ಪರಾ ದ್ವಿಜರ್ ನೆಲನಮರ್ದುಣಿ [ಪಾಠಾಂ. ನೆಲದಮರ್ದುಣಿ. ನೆಲನಮರ್ದುಣಿಸಿ]ವೆಸರಂ" (ಕಬ್ಬಿಕೈ. ೩೩). **ನೆಲನಮರ್ದುಣಿಸಿ** = ನೆಲನಮರ್ದುಣಿ : "ತಳೆದಿರ್ಪರಾ ದ್ವಿಜರ್ ನೆಲನಮರ್ದುಣಿಸಿ [ಪಾಠಾಂ. ನೆಲದಮರ್ದುಣಿ, ನೆಲನಮರ್ದುಣಿ]ವೆಸರಂ" (ಕಬ್ಬಿಕೈ. ೩೩) ; "ನೆಲನಮರ್ದುಣಿಸಿಗಳೆನ್ನಲ್ ಸಲೆ ವಿಪ್ರರ್" (ಕವಿಕಂ. ೧೫೦). **ನೆಲನಾಳ್ದ** = ನೆಲದರಸ : ವ್ಯಾಧನೊಂದು ಮೊಲನ ತಂದರೆ ಸಲುವ ಹಾಗಕ್ಕೆ ಬಿಲಿವರಯ್ಯಾ ನೆಲನಾಳ್ದನ ಹೆಣನೆಂದರೆ ಒಂದಡಕೆಗೆ ಕೊಂಬವರಿಲ್ಲ ನೋಡಯ್ಯಾ (ಬಸವ. ೧೫೮). **ನೆಲನುಂ ನೇಸಱುಂ ಕಾಣದಂತೆ** = "ಅತಿರಹಸ್ಯವಾಗಿ, ಅತಿಸುಖವಾಗಿ ಉಪಹತಿಯಿಲ್ಲದೆ" (ಪ್ರಭಣ್ಣ) : ನೆಲನುಂ ನೇಸಱುಂ ಕಾ[ಪಾಠಾಂ. ಗಾ]ಣದಂತು ಮನೆಯೊಳಗೆ ಬಳೆಯುತ್ತುಮಿರ್ದಿಭ್ಯಕೇತುಕುಮಾರಂ (ಅರ್ಧನೇ. ೩-೯೪ ಪ). **ನೆಲನುಗ್ಗಡಣಕಾಱ** = ಪಾದಾವಧಾನವನ್ನು ಹೇಳುವವನು : ಬಿಡದೆ ಕೈವಾರಿಸುವ ನೆಲನುಗ್ಗಡಣಕಾಱ [ಪಾಠಾಂ. ವಾದ್ಯದ ಭರಕೆ ನೆಲ ಘೀಳಿಡಲು ರಾಯರ] ಮೊತ್ತಗಳು ಮುಂಗುಡಿಯಲೊಪ್ಪಿರೆ ನಡೆದನಿದಿರನು ಬಸವದಂಡೇಶ (ಪ್ರಭುಲೀ. ೨೨-೧೭). **ನೆಲಮಕ್ಕಳ್** = ಒಕ್ಕಲ ಮಕ್ಕಳು; ರೈತರು : ಸ್ವಸ್ತಿಶ್ರೀ ಪೆಮ್ಮಡಿಯ ಬೆಸದೊಳ್ಳಹಾದೇವಿಯ ತಮಾನನ್ತರ ಪರಿವರಿತರೆ ನೆಲಮಕ್ಕಳ್ನೆಲದ ಸನ್ದು × ತಲೆಯಸನ್ದುವ ಮೆಟ್ಟಲಗದೆನ್ದು (ಎಕ. XVI, ಮದ್ದಗಿ. ೧೩೩-೭ ; ?). **ನೆಲವ ಗೀರು** = ನೆಲನಂ ಬರೆ : ಮೋಣರ್ಜುನಂ ತಲೆವಾಗಿ ನೆಲವ ಗೀರುತ ನಿರುತ್ತರನಾದ (ಹಬ್ಬೆರ. ೧೦-೭). **ನೆಲವನ್ನು ಕೆರೆ** = ನೆಲನಂ ಬರೆ : ದುರ್ಯೋಧನನು ಅನೆಯ ಸೊಂಡಲಂತಿದ್ದ ತನ್ನ ತೊಡೆಯನ್ನು ತಟ್ಟಿ ಮುಗುಳುನಗುತ್ತ ತನ್ನ ಹೆಜ್ಜೆಯಿಂದ ನೆಲವನ್ನು ಕೆರೆಯುತ್ತಿದ್ದನು (ಪಡಭಾ. ೧೧೫). **ನೆಲಸಮಾನ ಮಾಡಿಸು** = ಭೂಮಿಯ ಮಟ್ಟಕ್ಕೆ ಮಾಡು ; ನಾಶಗೊಳಿಸು : ಪಟ್ಟದೊಳಗಿನ ಮನೆಗಳನ್ನೂ ಮೇಲುಪ್ಪರಿಗೆಗಳನ್ನೂ ಗುಡಿಗಳನ್ನೂ ಕೆಡವಿಸಿ, ನೆಲಸಮಾನ ಮಾಡಿಸಿದನು (ಮುಂಬಯಿ. ೫-೪೫).

[ದೇ.॥ ತಮಿ. ಮಲ. ನಿಲ ; ತುಳು. ಕೊಡ. ತೆಲು. ನೆಲ ; ಪರ್ಜಿ. ನೆನ್ದಿಲ್, ನೇದಿಲ್ ; ಕೋತ. ನೆಲ್ಮ್]

ನೆಲಅಣಬೆ (ನಾ). ಒಂದು ಬಗೆಯ ನಾಯಿಕೊಡೆ : ಈಶ್ವರಿ ನೆಲಅಣಬೆ ಚಿತ್ರಮೂಲ . . . ಇವ ಸಮಾನಂಗೊಂಡು (ವಾಕಾಚ. ೧೩-೧).

[ನೆಲ + ಅಣಬೆ(< ಆಳಂಬೆ)]

ನೆಲಕಂಚಿ (ನಾ). ಒಂದು ಬಗೆಯ ಸಸ್ಯ : "ನೆಲಕಂಚಿ, ನೆಲಹೆರಿಳೆ, ನೆಲನಾರಂಗಿ" (ಸಸ್ಯಶಿ. ೧೫). [ನೆಲ+ಕಂಚಿ$_1$./ತುಳು. ನೆಲಕಂಚಿ]

ನೆಲಕಚ್ಚು (ಕ್ರಿ). ಭೂಮಿಯನ್ನು ಹಿಡಿ ; ನೆಲಕ್ಕೆ ಅಂಟಿಕೊಂಡಿರು: ಹೊಳೆಗೆ ಬಿದ್ದ ಆವನ ಹೆಣ ನೆಲ ಕಚ್ಚಿದೆ. ಮೇಲೆ ಬರಲು ಎರಡು ದಿನವಾದರೂ ಬೇಕು (ರೂಢಿ). [ನೆಲ+ಕಚ್ಚು$_1$(<ಕರ್ಚು$_1$)]

ನೆಲಕಟ್ಟು 'ನೆಲಗಟ್ಟು' ನೋ.

ನೆಲಕಡಲೆ 'ನೆಲಗಡಲೆ' ನೋ.

ನೆಲಕರ (ನಾ). ಭೂಮಿಯ ಮೇಲೆ ಹಾಕುವ ತೆರಿಗೆ ; ಭೂಕಂದಾಯ: ಆ ಊರುಗಳ ನೆಲಕರ ಮರವಳಿಗಳನ್ನು ಬಿಟ್ಟದ್ದು ಹಾಗಿರಲಿ, ಬೆಳಸನ್ನು ಕಳೆದುಕೊಂಡ ಮಂದಿಯ ಹೊಟ್ಟೆಯನ್ನೂ ತುಂಬಿಕೊಡಬೇಕಾಯಿತು (ಸಪತಿ. ೬೩). [ನೆಲ+ಕರ$_3$]

ನೆಲಕಲ (ನಾ). ಜಿಪುಣ ; ಲೋಭಿ ; ಕೃಪಣ : "ನೆಲಕಲಂ ಲೋಭಿ" (ಕರ್ಣಾಗ. ೬೨) ; ನೆಲಕಲನೆಂದು ಲೋಭಿ (ಶಮದ. ೧೬ ಪ್ರಯೋ) ; ನೆಲದಾಳಿಗಳ ರಾಯಕುವರಿಗೊಲಿದು ನೆಲಕಲನೆನಿಸದೆ ನೆಲದೊಲವಿತ್ತು (ಕೈವಲ್ಯ. ೧–೨೬–೧), ಶಿಲೆಯೊಳು ಮೃದುನೆಲಕಲನೊಳು ತ್ಯಾಗ . . . ಪರಮಾರ್ಥದಱಿವು ಗಾಂಸನೊಳುಂಟೆ (ಮೋಕಿಪ. ೫–೧೨೨) ; ತಾನು ಮುಣದ ಪೆಱವರ್ಗನಿಯಾದ ನೆಲಕಲನ ಮಱೆಯ ಮುಚ್ಚಿನ ಭಂಡಾರದೊಳಗಣೊಂದು ಪಾಟ್ಕೀಡಿಂ ಪುರುಳ್ ಕುಂದುವಂತಿರೆ (ರಾಮಾಶ್ವ. ೮೩–೫). [?]

ನೆಲಕುಳಿ (ನಾ). ಕುಟ್ಟುವುದಕ್ಕೆ ಅಥವಾ ರುಬ್ಬುವುದಕ್ಕೆ (ನೆಲದಲ್ಲಿ) ಮಾಡಿರುವ ಗುಳಿ ; ಒರಳು : ಮೂವರು ಮೂರು ಒನಕೆಗಳನ್ನೆತ್ತಿ ಅನುಕ್ರಮವಾಗಿ ನೆಲಕುಳಿಗೆ (ಒರಲಿಗೆ) ಗುರಿ ತಪ್ಪದೆ ಕುಟ್ಟುವಾಗ (ಸಂಶೋಧ. ೧೪೬).

[ನೆಲ+ಕುಳಿ$_1$(<ಕುಟ್ಟು$_1$)./ತುಳು. ನೆಲಕ್ಕುಳಿ, ನೆಲಕ್ಕುರಿ]

ನೆಲಕೊಳವಳಿಕೆ (ನಾ). ಒಂದು ಬಗೆಯ ಮುಳ್ಳುಗಿಡ : ತಾವರೆ ಎಲೆ, ನೆಲಕೊಳವಳಿಕೆ, ಅಶ್ವಗಂಧಿಗೆಡ್ಡೆ . . . ಕಷಾಯವಿಕ್ಕಿ ಕೊಡಲು ಭಳಿ ನಿಲ್ಲುವುದು (ಸಕವೈ. ೭೫). [ನೆಲ+ಕೊಳವಳಿಕೆ(<ಕೊಳಗುಳಿಕೆ)]

ನೆಲಕೋಟೆ 'ನೆಲಗೋಂಟೆ' ನೋ.

ನೆಲಗಂದಾಯ (ನಾ). = ನೆಲಕರ : ನೆಲಗಂದಾಯವನ್ನು ಹೆಚ್ಚಿಸಿದ್ದಲ್ಲದೆ ಅನೇಕ ತೆರಿಗೆಗಳನ್ನು ಹೊಸದಾಗಿ ಗೊತ್ತುಮಾಡಿದರು (ಬಡೆಕ. ೪೩).

[ನೆಲ+ಕಂದಾಯ]

ನೆಲಗಂಪು (ನಾ). ಮಣ್ಣಿನ ವಾಸನೆ : ಮಣ್ ತೊಯ್ದು, ಕಮ್ಮನೆ ಸೊಗಸಿ ತೀಡಿದುದು ನೆಲಗಂಪು ನಲ್ (ತ್ರೈರಾಮಾ. ೩೪೧–೩೫).

[ನೆಲ+ಕಂಪು]

ನೆಲಗಚ್ಚು (ನಾ). = ನೆಲಗಟ್ಟು ೧ : ಕಾಜಿನ ಕಂಬ ನೆಲಗಚ್ಚ ಮನಿಯಾಗ . . . ಮನಿಗ್ಯಾನ (ಲೋಕಗೀ. ೧೭೬). [ನೆಲ+ಗಚ್ಚು$_2$]

ನೆಲಗಟ್ಟಿಸು (ಕ್ರಿ). ನೆಲಗಟ್ಟನ್ನು ಮಾಡು,—ರಚಿಸು : ಗಟ್ಟಿಸಿ ಸಿಂಧುರದೊಳ್ ನೆಲಗಟ್ಟಿಸಿ ಚೆಂಬೊನ್ನ ನೆಲೆಯ ಚೌಪಳಿಗೆಗಳೊಳ್ ಕಟ್ಟಿಸಿ ಪಟಯಿಗೆಗಳನಳವಟ್ಟಿರೆ ಬಿಯಂಮಲ್ಲಿ ಮೊಟಗೆ ಪಲವುಂ ಪಜ್ಜೆಗಳ್(ಪಂಪಭಾ. ೨–೬೬) ; ನವರುಧಿರಜಳಚಳ[ತ್ಪೇಚನ]ದೊಳ್ ಘಟ್ಟಿಸಿ ಸಿಂಧುರದೊಳ್ ನೆಲಗಟ್ಟಿಸಿದಂತಿರ್ದ ರಂಗಭೂಮಿಯೊಳೆರಡುಂ ಪಡೆಯ ನಾಯಕರ್ ಬಿಲ್ಲಾಳೆಗಂಗಾದುವಾಗಳ್ (ಪಂಪಭಾ. ೧೦–೭೦ ಪ) ; "ನೆಲಗಟ್ಟಿಸಿದಂತಿರ್ದ = ನೆಲಕ್ಕೆ ಹಾಸಿದಂತಿದ್ದ" (ಪಂಪವೀ. ೩೬೪).

[ನೆಲಗಟ್ಟು+–ಇಸು$_3$]

ನೆಲಗಟ್ಟು, ನೆಲಕಟ್ಟು (ನಾ). ೧. (ಕಟ್ಟಡಗಳ) ಸಮ ಮಾಡಿದ ನೆಲ. ೨. ಪಚ್ಚೆ, ರತ್ನ ಮುಂತಾದುವುಗಳನ್ನು ಕುಂದಣಿಸಿದ ನೆಲ,—ಕುಟ್ಟಿಮ : "ಕುಟ್ಟಿಮಂ, ಬದ್ಧಭೂಮಿಕಂ–ಈ ೨ ನೆಲಗಟ್ಟು" (ಹಲಾಯು. ೪೯–೧೩೯) ; ಪಚ್ಚೆಯ ನೆಲಗಟ್ಟನೊಳಂ ರಾಜಾವರ್ತದ ಕಂಬದೊಳಂ (ಪಂಪಭಾ. ೩–೭೪ ಪ) ; ಪನಿಪುಲ್ ಪಚ್ಚೆಯ ನೆಲಗಟ್ಟಿನ ಮುತ್ತಿನ ರೆಂಗವಲಿಯ ತೆಱನಂ ಮನದೊಳ್ ಜನಿಯಿಸೆ (ಶಾಂತಿಪು. ೮–೧೧೨) ; ಪಚ್ಚೆಯ ನೆಲಗಟ್ಟು ಕನಕದ ತೋರಣ ವಜ್ರದ ಕಂಭ ಪವಳದ ಚಪ್ಪರವಿಕ್ಕಿ ಮದುವೆಯ ಮಾಡಿದರು (ಮಹಾದೇ. ಬ. ೩೫–೭೬) ; ನೆಲಗಟ್ಟ ಕಟ್ಟಿಸಿ ಕನಕ ನವನವರತ್ನಮಯ ಶಿವಭವನಮಂ ರಚಿಸಿ (ಬಸಪು. ೫೩–೨೯) ; ಧೂಳಿಪಟವಾಯಿತು ಹಿರಣ್ಯಪುರಾಲಯದೆ ನೆಲ[ಪಾಠಾಂ. ಲೆ]ಗಟ್ಟು (ಕುವ್ಯಾಅ. ೧೩–೪೮) ; ಅವನು ಸ್ಫಟಿಕಶಿಲೆಯಿಂದ ಮಾಡಿದ್ದ ನೆಲಗಟ್ಟನ್ನು ನೀರೆಂದು ಭ್ರಮಿಸಿ ತಾನು ಉಟ್ಟಿದ್ದ ಬಟ್ಟೆಯನ್ನು ಮುದುರಿಕೊಂಡನು (ಪಚಭಾ. ೮೯). ೨. ತಳಹದಿ ; ಅಸ್ತಿವಾರ ; ಬುನಾದಿ : ಶೌರ್ಯಮಾರ್ತಂಡದೇವರ ದೇಗುಲದ ನೆಲಗಟ್ಟನ ನೈರುತ್ಯದ ಮೂಡಲ್ಪೇತುಕೋಟಿವರಂ ಮೇರೆಯಾಗೆ (ಎಕ. VIII, ಸಾಗರ. ೧೦೮–೪೨ ; 1631) ; ಕೋಪವೆಂಬುದು ತಾನು ಪಾಪದ ನೆಲಗಟ್ಟು (ಸರ್ವಜ್ಞ. ೪೯೯) ; ಮಾನವನ ದೇಹರಚನೆಯಲ್ಲೇ ಈ ವ್ಯಾಧಿಗೆ ಭದ್ರವಾದ ನೆಲಗಟ್ಟು ದೊರೆತಿದೆ (ಸಂಟರು. ೪೦); ಭೂಲೋಕದ ನೆಲಗಟ್ಟನಲ್ಲಿ ನಿಂತು ಸಕಲಲೋಕಗಳನ್ನಳೆಯುವ ವಾಮನಶಕ್ತಿಯಲ್ಲಿ . . . ಪ್ರಾಚೀನಗ್ರೀಕರಿಗೆ ಅಪಾರ ಗೌರವವಿತ್ತು (ಸಂಜುಂಡ. ೧೩೬). ೩. ಭೂಮಿಯ ಗುಣ : ನಮ್ಮೂರ ತಿಪ್ಪೆಶೆಟ್ಟಿ ತೋಟದ್ದು ನೆಲಗಟ್ಟು ಯೆಂದು ಕಾಣುತ್ತೆ. ನಮ್ಮೂರಿನಲ್ಲಿ ಇನ್ನೂ ಅನೇಕರು ಬದನೆ ಹಾಕಿದ್ದಾರೆ. ಇಷ್ಟು ರುಚಿ ಯಾವುದೂ ಇಲ್ಲ (ಚೆಂಗಾಳ್ವ. ೨೧) ; ಆ ಅನ್ನ ಊಟ ಮಾಡುವಾಗ್ಯೆ ಹಾಲಿನ ರುಚಿಯೂ ನೆಲಗಟ್ಟನ ಮೇಲಿದೆಯೆಂಬುದನ್ನು ಚರ್ಚೆ ಮಾಡಿದರು (ಚೆಂಗಾಳ್ವ. ೨೧). **ನೆಲಕಟ್ಟು** : ೧. ಮೇಲುಕಟ್ಟಿನ ಝುಲ್ಲಿಗಳು ನೆಲಕಟ್ಟಿನ ನೀಲರತ್ನದೊಳು ಮಾರ್ಪೊಳೆಯೆ (ಭರಚ. ೧೨–೧೬) ; ಕಿಟಕಿಯ ನೆಲಕಟ್ಟಿನ ಮೇಲೆ ಚಾಕುವಿನಿಂದ ಕತ್ತರಿಸಿಟ್ಟದ್ದ ಕಾಗದದ ಹಾಳೆಗಳನ್ನು ಹಾರಿಸುತ್ತಿದ್ದ ವಸಂತಮಾರುತ . . . ಇವೆಲ್ಲ ಏಕಕಾಲದಲ್ಲಿ ನೆಕ್ಲುದೋವ್‌ನಿಗೆ ನೆನಪಾದುವು (ಪುನರು. ೨೭೪). [ನೆಲ+ಕಟ್ಟು$_2$]

ನೆಲಗಡಚ (ನಾ). ಒಂದು ಬಗೆಯ ಔಷಧಿ ಸಸ್ಯ : "ಅನಂತಾಃ— ನರುವಲು, ಕಱುಕೆ, ಗೋರಟೆ, ನೆಲಗಡಚ . . . ಸುಗಂಧಿ" (ಓಷಧಿ.೪).

[?]

ನೆಲಗಡಲೆ, ನೆಲಕಡಲೆ (ನಾ). ಕಡಲೆಕಾಯಿ ; ಶೇಂಗಾ : ರೈತರು ನೆಲಗಡಲೆ, ಗೆಣಸು, ಈರುಳ್ಳಿ, ಬೆಳ್ಳುಳ್ಳಿ ಮುಂತಾದ ಕೀಳುಬೈರನ್ನು ಹಾಕಿ ಭರತನ ಬಳಿಗೆ ಬಂದು . . . ಎಂದರು (ಹುಟ್ಟಹ. ೧೬೨); ನೆಲಗಡಲೆ ಅಥವಾ ಕಡಲೆಕಾಯಿ—ಈಚೀಚೆಗೆ ಇದರ ವ್ಯವಸಾಯವು ಹೆಚ್ಚಾಗುತ್ತಿದೆ (ವ್ಯವಸು. ೪೨); ನಮ್ಮ ಪ್ರದೇಶದಲ್ಲಿ ಬೆಳೆಯುವಷ್ಟು ನೆಲಗಡಲೆಯು ಜಗತ್ತಿನ ಇನ್ನಾವ ದೇಶದಲ್ಲಿಯೂ ಬೆಳೆಯುವುದಿಲ್ಲ (ಸಸ್ಯಶಾ. ೧೩೧). **ನೆಲಕಡಲೆ** : "ಕಲಾಯಃ, ಸತೀನಕಃ, ಹರೇಣುಃ, ಖಂಡಿಕಃ–೪ ಬಟ್ಟಗಡಲೆಯ ಹೆಸರುಗಳು, ನೆಲಕಡಲೆ" (ಸಿದ್ಧಾಂತಿ. ೨೭೮).

ನೆಲಗಡಲೆಕಾಯಿ = ನೆಲಗಡಲೆ : ನೆಲಗಡಲೆಕಾಯಿ, ಕಡಲೆಕಾಯಿ (ಮೃಚ್ಛಿಗಿ. ೮–೧೩೨). [ನೆಲ+ಕಡಲೆ. /ತುಳು.ನೆಲಕಡಲೆ]

ನೆಲಗಡವ, ನೆಲಗಡವು (ನಾ). ಒಂದು ಬಗೆಯ ಔಷಧಿ ಸಸ್ಯ : "ಭೃಂಗಪ್ರಿಯಃ — ನೆಲಗಡವ" (ಓಷಧಿ. ೧೧೩). **ನೆಲಗಡವು** : ಕುಲಹಲಃ – ಜೋಟಿತಜಿ . . . ನೆಲಗಡವು" (ಓಷಧಿ. ೩೬).

[ನೆಲ+ಕಡವ$_1$(<ಕಡಂಬು)]

ನೆಲಗಡವು 'ನೆಲಗಡವ' ನೋ.

ನೆಲಗತ (ನಾ). ೧. ಬಿದ್ದುಹೋದುದು ; ಭೂಗತವಾದುದು : ಅಂಕನಾಥದೇವರ ದೇವಾಲ್ಯಉ ನೆಲಗತವಾಗಿಯಿರಲಾಗಿ ಜೀರ್ಣೋದ್ಧಾರವಾಗಿ ಗರ್ಭಗೃಹ ಸುಖನಾಸಿ ರಂಗಮಂಟಪ ಸಿಖರ ಮೊದಲಾಗಿ ಕಟಿಸಿ ಸಂಪ್ರೋಕ್ಷಣೆಯ ಮಾಡ್ಸಿ (ಎಕ. IX(S), ಚನ್ನಪ. ೨೯೯-೩೨ ; 1387). ೨. ನಾಶ ; ಹಾಳು : ನೀಮ ನೆಲಗತವಾಯಿತ್ತು ಸೀಮೆ ನಿಸ್ಸೀಮೆಯಾಯಿತ್ತು ನೋಡಾ (ಸಿದ್ಧೇಶ. ೨೯೯) ; ನೆಗ್ಗಿ ನೆಲಗತವಾಯ್ತು ವನನಿಚಯ (ಶೋರರಾ. ೪-೯-೯). 'ಭೂಗತ' ಪರಾ. [ನೆಲ+ಗತ$_2$]

ನೆಲಗನ್ನ (ನಾ). ನೆಲದಲ್ಲಿ ಕೊರೆದ ಕನ್ನ,—ತೋಡಿದ ಚೋರಗಂಡಿ : ನೆಲಗನ್ನವಂ ಬಲುಗೋಡೆಗನ್ನವನು ತೋಡಿ ಮನೆಯೊಳ ಪೊಕ್ಕು (ಬಸಪು. ೩೧-೫) ; ನೆಲಗನ್ನ ಗೋಡೆಗನ್ನ ಅಗುಳಿಗನ್ನವನಗಿದು ಮನೆಯ ಪೊಕ್ಕು ನೋಡುವಲ್ಲಿ (ಭೈರಸೂ. ೩೫೦) ; ನೆಲಗನ್ನಂ ಗೋಡೆಗನ್ನಂ ಮಿಸುಗುವ ಗುಳಿಗನ್ನಂ ದೃಢದ್ವಾರಬಂಧಸ್ಥಲದೊಳ್ಗನ್ನಂದಲಿಂತೆಂಬವೆಂಬೊಳದಕೆ ತಕ್ಕಂದದಿಂ ಕನ್ನಮಂ ತೋಡಿ (ವೃಷವಿ. ೨೦-೮). [ನೆಲ+ಕನ್ನ$_1$]

ನೆಲಗಪ್ಪು (ನಾ). ಮೃಗಗಳನ್ನು ಹಿಡಿಯಲು ನೆಲದಲ್ಲಿ ತೋಡಿ ಮುಚ್ಚಿಟ್ಟ ಹಳ್ಳ,—ಕುಳಿ : ಬಲೆ ಕಾಲ್ಕಣ್ಣಿ . . . ನೆಲಗಪ್ಪುಗಳಿಂದ ಮೃಗಗಳ ಹರಣವ ತೊಲಗಿಸುವರು ಬೇಡರಲ್ಲಿ (ರಾಮವಿ. ೧೫-೬೪). [ನೆಲ+ಕಪ್ಪು$_3$]

ನೆಲಗರ್ನಾಲು (ನಾ). ಒಂದು ಬಗೆಯ ಪಟಾಕಿ : ಬಿರುಸು, ಗರ್ನಾಲು, ನೆಲಗರ್ನಾಲುಗಳೆಂದು ಸಮರಸೂಚನೆಯೋ ಅಯಿತು . . . ಎಷ್ಟೆಷ್ಟು ಬಗೆಯ ಸುಡುಮದ್ದುಗಳಿವೆಯೋ ಅಷ್ಟೆಲ್ಲವೂ ಧ್ವಂಸವಾದುವು (ಮರಸು. ೨೬೫). [ನೆಲ+ಗರ್ನಾಲು]

ನೆಲಗವಿ (ನಾ). ನೆಲದಲ್ಲಿ ಅಗೆದ ಗುಹೆ,—ಗವಿ : "ಗರ್ತಂ=ನೆಲಗವಿ" (ಕಾಶಕೃ. ೨೧೬). [ನೆಲ+ಗವಿ$_1$]

ನೆಲಗಾಡು (ನಾ). ಬೆಟ್ಟದ ತಪ್ಪಲಲ್ಲಿರುವ ಮೈದಾನಪ್ರದೇಶ : ಕುಲಶಿಖರಿಯ ತುತ್ತತುದಿಯೊಳುದಯಿಸಿ ನೆಲಗಾಡಂ ಪತ್ತಿ ಪರಿವರಕ್ತೋದವೆಸರ ನದಿಯಂದಮನನುಕರಿಸಿ (ಜಯಕಾ. ೭-೨೨) ; ಆ ತೆಲುಂಗರಾಯನು . . . ಬೀಡಿಕೆಯಿಂದ ಬಹು ದೂರಕ್ಕೆ ಹೋಗಿ, ನಿರ್ಜನವಾಗಿರುವ ನೆಲಗಾಡಿನಲ್ಲಿ, ಮಂತಣಗೊಳ್ಳುವುದು ಬಳಕೆ (ಪುಂತ್ರಶ. ೪೨-೨೬). [ನೆಲ+ಕಾಡು$_2$]

ನೆಲಗಾಣು (ಕ್ರಿ). ದಾರಿ ಕಾಣು ; ಮಾರ್ಗ ಕಂಡುಬರು (?) : ಕಂಗೆಟ್ಟ ದೊಡ್ಡನೆಲ್ಲಿಯೊ ಹೊಳಲ ಸುತ್ತಾಡಿ . . . ಬಂದಿರಲ್ ತಾಯ್ತಿರ್ಗೆ ಮುಂಗಡೆಯ ಬಾಳ್ವೊರೆಗೆ ನೆಲಗಾಣುತಿಹುದು (ಕಾಲೂರ. ೧೮೭-೪೨೬). [ನೆಲ+ಕಾಣು(<ಕಾಣ್)]

ನೆಲಗಾಳಿ (ನಾ). "ನೆಲದ ಕಡೆಯಿಂದ ಸಮುದ್ರದ ಕಡೆಗೆ ಬೀಸುವ ಗಾಳಿ" (Land - breeze. ಇಂಕನಿ) : ನೇಣುಗಳ ನೆಲಗಾಳಿ ಕುಲುಕಿತ್ತು, ಹಡಗು ತಲೆಕೆಳಕಾಯಿತು (ಇಂಗೀತ. ೨೪-೯). [ನೆಲ+ಗಾಳಿ$_1$]

ನೆಲಗಿರುಬ (ನಾ) (ವಿಷವುಳ್ಳ)ಒಂದು ಬಗೆಯ ಕೀಟ ; ಷಡ್ಪಿಂದು : ಷಡ್ಪಿಂದು ಎಂಬ ಹುಳು ಕಚ್ಚಿದರೆ ಎಕ್ಕೆಯ ಹಾಲನ್ನು ಕಚ್ಚಿದ ಗಾಯಕ್ಕೆ ಇಕ್ಕಿಸುವುದು. ಷಡ್ಪಿಂದು ಎಂದರೆ ನೆಲಗಿರುಬ ಎಂಬರು (ವೈದ್ಯಸಾ. II, ೨೧೩). [ನೆಲ+ಕಿರುಬ(<ಕಿಜುಬ$_1$)]

ನೆಲಗುಂಬಳ (ನಾ). ಒಂದು ಬಗೆಯ ಕುಂಬಳ : "ವಿದಾರೀ—ನೆಲಗುಂಬಳ, ಬಳ್ಳಿಸುಂಡೆ, ಮೂಜೀಲೆಹೊನ್ನೆ" (ಓಷಧಿ. ೧೫೩) ; ನೆಗ್ಗಿಲು ನೆಲಗುಂಬಳ ಭದ್ರಮುಸ್ತೆ (ಸಾಳ್ವಸಾಂ. ೧೧) ; ಗರಿಕೆಯ ರಸ, ನೆಲಗುಂಬಳದ ರಸ, ಕಬ್ಬಿನ ಹಾಲು, ಆಷಾಡಿಗೆಡ್ಡೆರಸ ಇವಿಷ್ಟು ಪ್ರತ್ಯೇಕ ಒಂದು ಬಳ್ಳ . . . ಪ್ರತಿದಿನವೂ ಪ್ರಾತಃಕಾಲದಲ್ಲಿ ಶರೀರಬಲಾನುಗುಣವಾಗಿ ಮಾತ್ರೆ ಅರಿತು ಕೊಡಲು ರಕ್ತಪಿತ್ತಹರ (ವೈದ್ಯಸಾ. I, ೧೪೦) ; ನೆಲಗುಂಬಳವು ವಾತಪಿತ್ತನಾಶಕ (ಅಷ್ಟಾಂಗ. ೧೩೬-೮೫). 'ಬೂದುಗುಂಬಳ' ಪರಾ. [ನೆಲ+ಕುಂಬಳ./ತುಳು. ನೆಲಕುಂಬುಡ]

ನೆಲಗುಡುಗು (ನಾ). ಭೂಮಿಯೊಳಗಿಂದ ಬಂದ ಮೊಳಗು : ಗಂಡನ ಕಡೆಗೆ ತಿರುಗಿ, ಸಿಡುಕುಮೋರೆಯ ಮಾಡಿ, ನೆಲಗುಡುಗಿನಂತಾದಿರ್ಲ್ (ಶ್ರೀರಾಮಾ. ೧೫೫-೯೯). [ನೆಲ+ಗುಡುಗು$_2$]

ನೆಲಗುಡ್ಡಗೆಣಸು (ನಾ). ಒಂದು ಬಗೆಯ ಗಡ್ಡೆ : ಭೂಮಿಚಕ್ರ ಗಡ್ಡೆ, ಭುಜಗುಂಬಳ, ನೆಲಗುಡ್ಡಗೆಣಸು (ಮೃಔಗಿ. ೪೬-೯೧೨). [ನೆಲ+ಗುಡ್ಡಗೆಣಸು]

ನೆಲಗುಣ (ನಾ). ಭೂಮಿಯ ಗುಣ,—ಸತ್ವ : ಒಂದೇ ಶಿವಗಂಗಾ ಮೂಲದಲ್ಲಿ ಸಂಭವಿಸಿ ನೆಲಗುಣದ ಪ್ರಭಾವದಿಂದ ಸ್ವಲ್ಪದೂರ ಬೇರೆ ಬೇರೆ ದಾರಿಗಳಲ್ಲಿ ಸಂಚರಿಸಿ (ತುಂಗಭ. ೧೨೫). [ನೆಲ+ಗುಣ]

ನೆಲಗುಮ್ಮ$_1$ (ನಾ). ೧. ನೆಲದೊಳಗೆ ಮುಚ್ಚಿಕೊಂಡಿರುವ ಒಂದು ಬಗೆಯ (ಕಾಲ್ಪನಿಕ) ಭೂತ : ನೆಲಗುಮ್ಮ ಕೂಡಿಕೊಂಡು ಒಂದು ಮೇಳದಲ್ಲಿ ಒದರಿದಂತೆ ಒಳಗಿನಿಂದ ಅಪಸ್ವರಾಲಾಪ (ಹುಚ್ಚಾಟ. ೨೦). ೨. ಒಂದು ಬಗೆಯ ಪಕ್ಷಿ : (ಕ). [ನೆಲ+ಗುಮ್ಮ$_1$]

ನೆಲಗುಮ್ಮ$_2$, ನೆಲಗುಮ್ಮೆ (ನಾ). ೧. ಕೋಟೆಯನ್ನು ಆಕ್ರಮಿಸಲು ಉಪಯೋಗಿಸುತ್ತಿದ್ದ ಒಂದು ಬಗೆಯ ಯಂತ್ರ : ನೆಲಕೆ ಬಾಗಿಸಿದ ಪಲವರಿಯ ಡೆಂಕಣಿ . . . ಕಾಸುವಂಬಲಿ ಸಾರಮಾರಿ ನೆಲಗುಮ್ಮ (ಸಮ್ಯಕೌ. ೮-೨೮) ; ಅಗಳಾಳ್ವೇರಿ ಕೋಟೆಕೊತ್ತಳ ನೆಲದಿಡ್ಡಿ ಮುಗಿಲಟ್ಟಳೆ ನೆಲಗುಮ್ಮ (ಕುರಾಸಾಂ. ೩೭-೫೧) ; ನಡೆಚಪ್ಪರ ವೇಣಿ ಭದ್ರಿಕೆ ನೆಲಗುಮ್ಮ ಬೆಡಗಿನ ಮಕರಬಿಬ್ಬಿಗಳು (ನಾಗಕು. ೧೭-೨೧) ; ಡಗ್ಗೆ ನೆಲಗುಮ್ಮಗಳ ತರಹೇಳು (ಪ್ರಹ್ಲಾಚ. ೫-೪೧). ೨. "ನೆಲವನ್ನು ತಟ್ಟುವ ಮಣಿ ಮುಂತಾದವು" (ಪ್ರಭಣ್ಣ). **ನೆಲಗುಮ್ಮೆ** : ೩. ಒಂದು ಬಗೆಯ ಪಟಾಕಿ : ನೆಲಕ್ಕೆ ಅಪ್ಪಳಿಸಿ ಗರ್ಜಿಸುವ 'ನೆಲಗುಮ್ಮೆ' ಹೆಡೆ ಬಿಚ್ಚಿದ ಹಾವಿನ ಮರಿಯಂತಹ ತಾಳೆಮಡಲಿನ 'ಧಡಲ್ಬಾಜೀ' (ಮೂರುದಾ. ೨೧೬). [ನೆಲ+ಗುಮ್ಮ$_2$]

ನೆಲಗುಮ್ಮೆ 'ನೆಲಗುಮ್ಮ$_2$' ನೋ.

ನೆಲಗುಳ್ಳ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಕಾಯಿ ; ಗುಳ್ಳದ ಬದನೆಕಾಯಿ : "ನಿಧಿಗ್ಧಿಕಾ, ಕಂಟಕಾರಿಕಾ, ವ್ಯಾಘ್ರೀ—ಈ ೩ ನೆಲಗುಳ್ಳಂ" (ಹಲಾಯು. ೧೦೧-೪೬೫) ; ನೆಲಗುಳ್ಳಂ ಬಿಳಿಯ ಗಣಂ . . . ಶುಂಠಿಗಳಾವಗಂ ಕ್ಷಯಕ್ಕಿವು ಪಥ್ಯಂ (ಕಲ್ಯಾಕಾ. ೬-೩) ; ನೆಗ್ಗಿಲ ಬೇರು, ನೆಲಗುಳ್ಳದ ಬೇರು, ಭತ್ತದ ಅರಳು ಈ ಮೂಱನು . . . ಕಷಾಯವೆತ್ತಿ (ವೈದ್ಯಸಾ. II, ೧೪೧). [ನೆಲ+ಗುಳ್ಳ]

ನೆಲಗೂಡು (ನಾ). ಬೇಟೆಯಲ್ಲಿ ಉಪಯೋಗಿಸುವ ಒಂದು ಬಗೆಯ ಬೋನು : ಬ್ಯಾಟಿಗನುಕೂಲಮಾದ ಹೆಬ್ಬಲೆ ಕಿರುಬಲೆ ಬಿರಸು ಬಾಣ ಬೋನು ಶಿಡಿಭಂಡಿ ನೆಲಗೂಡು ಮದ್ದು ಗುಂಡು ಸೂಲೇಣಿ . . . ಮೊದಲಾದ ಸಾಧನಂಗಳ್ (ಸೌಗಂಧಿ. ೫೦-೧೮). [ನೆಲ+ಗೂಡು]

ನೆಲಗೂಲಿ (ನಾ). ಶವವನ್ನು ಸುಡುವ ಜಾಗಕ್ಕೆ ಕೊಡಬೇಕಾದ ತೆರಿಗೆ ; ಮಸಣದೆರೆ : ಹರಿಶ್ಚಂದ್ರನು . . . ಇಲ್ಲಿ ಶವವನ್ನು ಸುಡುವುದಕ್ಕೋಸ್ಕರ ಒಂದು ಹಣ ನೆಲಗೂಲಿಯನ್ನು ಕೊಡು ಎಂದು ಗರ್ಜಿಸಿದನು (ನೀತಿಚಿಂ. XI, ೨೯). 'ನೆಲದೆಱೆ' ಪರಾ. [ನೆಲ+ಕೂಲಿ$_1$]

ನೆಲಗೆಡು (ಕ್ರಿ). ಆಧಾರವಿಲ್ಲದಾಗು ; ನೆಲೆಗೆಡು : ವಿಶಾಖನಂದನುಂ ತನ್ನ ರಾಜ್ಯಮಂ ದಾಯಿಗರೆಱೆದುಕೊಳೆ ನೆಲಗೆಟ್ಟು ಪೆಱರ ಬೆಸದೊಳೋಲೆಯನಡುಕುತ್ತುಮಾ ಪುರಕ್ಕೆ ಬಂದು (ಜಾಮಂಪು. ೧೬೦). [ನೆಲ+ಕೆಡು$_1$]

ನೆಲಗೆದರು (ಕ್ರಿ). (ಉಗುರುಗಳಿಂದ) ನೆಲವನ್ನು ಕೆದಕು,—ಕೆರೆ: ಭಲ್ಲುಕಂಗಳು ಪೋಗಿ ನೆಲಗೆದರಿ ಕಂದಮೂಲಾದಿಗಳ ತಂದಪವು (ನಪಮೋ. ೬-೧೧). [ನೆಲ+ಕೆದರು(<ಕೆದಱ್$_1$)]

ನೆಲಗೊಟ್ಟ (ನಾ). ಒಂದು ಬಗೆಯ ಔಷಧಿ ಸಸ್ಯ : ನೆಲಗೊಟ್ಟ[ಟ್ಟ] ಯೆನಿಪ್ಪುವಂ ಮೊಲಗಿವಿಕ್ಕಾಪ್ಪರಣ್ಮಕಂ ಜೀರಕಂ ವಿಲಸನ್ಮೂಲಮನಿಂತಿ ವೆಲ್ಲಮ ಸಮಂ ಕೂಡಿಟ್ಟು ತದ್ಯೋಗಮಂ (ಖಮಡ. ೧೬-೫೯).

[ದೇ.॥ ತಮಿ. ನಿಲಕ್ಕೊಟ್ಟೈ]

ನೆಲಗೋಂಟೆ, ನೆಲಕೋಟೆ, ನೆಲಗೋಟೆ (ನಾ). ಕೋಟೆಯ ತಳ, —ಕೆಳಭಾಗ : ಮಿಗೆ ಗಿರಿದುರ್ಗದ ನೆಲಗೋಂಟೆಗೆ ಸವೆಯ ಬಳಿಕ್ಕೆ ಸುರಂಗಂಗಳನೆರಡಂ ಬಗೆದರಡಱ ಮಧ್ಯದೊಳೊಂದಗೆದೊಳಪೊಕ್ಕಿಳಿದು ತಱಂದು ಕೆಡಪಿದರೆಂದರ್ (ಹಮ್ಮೀರ. ೩-೨೭). **ನೆಲಕೋಟೆ** : ಬೆಳಗಾಂವಿ, ಧಾರವಾಡ, ಬೆಂಗಳೂರು, ತೊರಗಲ್ಲು, ವಿಜಯನಗರ ಇವೆಲ್ಲ ಪಳುಗೋಂಟೆಗಳೆ ; ಆದರೆ ಇದ್ದ ಪಳುವೆಲ್ಲ ಹಾಳಾಗಿಹೋದುದರಿಂದ, ಅವು ಬಯಲುಗೋಟೆಗಳಾಗಿ ಬರಿಯೆ 'ನೆಲಕೋಟೆ' ಎಂದು ಹೆಸರನ್ನು ಪಡೆದಿವೆ(ಕರ್ನಾಜ.೪). **ನೆಲಗೋಟೆ**: ಸಾಹಸಭೀಮ [ನೆಲ]ಗೋಟೆಮಲ್ಲಂ ಕೊಣ್ಡೆಯ ತಳಪ್ರಹಾರಿಯಿಡುವರಾದಿತ್ಯ[ಂ] (ಸೌಇಇ. XI-i, ೩೦-೧೨ ; 1024). [ನೆಲ+ಕೋಂಟೆ]

ನೆಲಗೋಟೆ 'ನೆಲಗೋಂಟೆ' ನೋ.

ನೆಲಗೋಣೆ (ನಾ). ಒಂದು ಬಗೆಯ ಗೋಣೆಸೊಪ್ಪು : ನೆಲಗೋಣೆ [ಪಾತಾಂ.ಗೊನ್ನಿ, ಗೊಳ್ಳಿ] ಪು(ಹು)ಣಸೆ ಪಾಪಟೆ . . . ಎಂಬಿವಱೊಲೆಯಂ ಕಱುಯೊಳುಱ್ ಕಾಸಿ ಕಟ್ಟಲ್ ತೊಲಗುಗುಮೊದಱುಸುವ ಮುಳ್ಳ ವಿಷ ಮೆನಿತನಿತುಂ (ಖಮಡ. ೨-೨೧೧). [ನೆಲ+ಗೋಣೆ$_1$(<ಗೋಳ್ಳಿ$_1$)]

ನೆಲಗೋರಟೆ (ನಾ). ಒಂದು ಬಗೆಯ ಸ್ಫಟಿಕದ ಗಿಡ : "ಭೂಮಿ ಕುರುವಕಂ—ನೆಲಗೋರಟೆ" (ಓಷಧಿ. ೧೧೩).

[ನೆಲ+ಗೋರಟೆ(<ಗೋರಂಟಿ)]

ನೆಲಚಳುಸೊಪ್ಪು (ನಾ). ಒಂದು ಬಗೆಯ ಔಷಧಿ ಸಸ್ಯ : ನೆಲ ಚಳುಸೊಪ್ಪು, ಸಣ್ಣಗುಂಡುಹುಲ್ಲು (ಮೈಔಗಿ. ೭-೧೧೨).

[ನೆಲ+ಚಳು? + ಸೊಪ್ಪು$_2$]

ನೆಲತಗಸಿ (ನಾ). ಒಂದು ಬಗೆಯ ತಗಚೆಗಿಡ : (ಮೈಔಗಿ. ೧೯-೩೩೭). [ನೆಲ+ತಗಸಿ(<ತಗಚೆ)]

ನೆಲತರ (ನಾ). ನಿರಂತರ (?) : ಅಷ್ಟಾಹ್ನಿಕದ ಧರ್ಮ್ಮವನು ಶ್ರೀ ಸಿತಾಳಮಳಿಗೆಯ ಸಮಸ್ತರು ನೆಲತರವಾಗಿ ನಡಸಿ ಕೊಡಲುಳ್ಳವರು ಯೆಂದು ಬರಸಿ ಕೊಟ್ಟ ಶಾಸನ (ಎಕ. XIV, ಶ್ರೀರಂಗ. ೧೮೧-೯ ; 1666).

[?]

ನೆಲತಾಟ 'ನೆಲದಾಟ್' ನೋ.

ನೆಲತಾಯ್ 'ನೆಲದಾಯ್' ನೋ.

ನೆಲತಾಯಿ 'ನೆಲದಾಯ್' ನೋ.

ನೆಲತಾವರೆ 'ನೆಲದಾವರೆ' ನೋ.

ನೆಲತಾಳಿ 'ನೆಲದಾಳಿ' ನೋ.

ನೆಲತಾಳೆ 'ನೆಲದಾಟ್' ನೋ.

ನೆಲತೆಂಗು 'ನೆಲದೆಂಗು' ನೋ.

ನೆಲತೆರ 'ನೆಲದೆಱ' ನೋ.

ನೆಲದಳ (ನಾ). ಭೂಮಿಯ ಕೆಳಭಾಗ; ಭೂಮಿಯ ತಳ ; ಪಾತಾಳ : ನೆಲದಳಕಿಳಿದಹಿರಾಜನ ತಲೆವಣಿಯಂ . . . ಕಣ್ಪೊಲನಾಗರ ಸುರಮಣಿಯಂ ಸಲೆ ಪಳಕ್ಕೆದೆಸೆಗುಮಲ್ಲಿ ಗುಣಮಣಿವಸರಂ (ನೃಪವಿ. ೪-೮೨).

ನೆಲದಳದರು = ಪಾತಾಳಲೋಕದಲ್ಲಿರುವವರು ; ನಾಗರು : ದೆಸೆಯಾಣ್ಮರು ಸಗ್ಗದರು ನೆಲದಳದರು ಸಸಿನೇಸಱರುಗಳ್ ಜತಿಗಳು ಮುಸುಕಿಹುದಾಗಳೆನ್ನಯ ಮಣಿವಾಗಿಲ ಜಸಗಂಪ ಸಮಯಗಾಣದೆ ಕೇಳ (ಸೊಬಸೋ. ೧೨-೩೩). [ನೆಲ + ತಳ(= ತಲ)]

ನೆಲದಳೆ (ಕ್ರಿ). ಭೂಮಿಯನ್ನು ತಳೆ,—ಧರಿಸು.

ನೆಲದಳೆದ = ಭೂಮಿಯನ್ನು ಹೊತ್ತಿರುವಂಥದು ; ಪರ್ವತ. **ನೆಲದಳೆದನಣುಗಿಯಾಣ್ಮ** = ಪರ್ವತರಾಜಪುತ್ರಿಯ ಪತಿ ; ಗಿರಿಜಾ ವಲ್ಲಭ ; ಈಶ್ವರ : ನೆಲದಳೆದನಣುಗಿಯಾಣ್ಮಂ ಸಿದ್ಧ ನಂಜೇಶ ರಕ್ಷಿಸುಗೆ ಬಿಡದೆಮ್ಮನು (ರಾಘಚ. ೧-೪) ; ಶ್ರೀನೆಲದಳೆದನಣುಗಿಯಾಣ್ಮನು ನೋಡಿ ಸಂತಸದಿ ಪೊಲಿದು ಮನ್ನಿಸಿ (ನಪಮೋ. ೨೦-೨೩). **ನೆಲದಳೆದವಿಲ್ಲ** = (ಮೇರು) ಪರ್ವತವನ್ನು ಬಿಲ್ಲಾಗಿ ಉಳ್ಳವನು ; ಈಶ್ವರ : ನೆಲದಳೆದವಿಲ್ಲ ಪುಷ್ಪಂಬನೊಡಲುರಿಕ . . . ಪೊರೆಗೆಮ್ಮನು (ನಪಮೋ. ೩೨-೧). [ನೆಲ+ತಳೆ$_1$]

ನೆಲದಾಯ್, ನೆಲತಾಯ್, ನೆಲತಾಯಿ, ನೆಲದಾಯಿ (ನಾ). ಭೂಮಿತಾಯಿ ; ಭೂಮಾತೆ : ತಾನೋರ್ವಳಾದೊಡಂ ಪಲಪೆಸರ ನುಳ್ಳವಳ್ ಅದಱಿಂದೆ ನೆಲದಾಯೆಂದೊಡಂ ಎನ್ನಿಂ(ಪದ್ಧಪ್ರ.೧೩-೨೫೫). **ನೆಲತಾಯ್** : ನೆಲತಾಯ ಹೂಹಣ್ಣ ತಳಿರ ತಟ್ಟೆಯಿದಲ್ತೆ (ಕಾಲೂರ. ೩೪-೩೩). **ನೆಲತಾಯಿ** : ನನ್ನನ್ನು ಸಾಕಿ ಬೆಳೆಸಿದ ಕೋಟೆಹಾಳಿನ ನೆಲತಾಯಿಯ ತೊಡೆಯ ಮೇಲೆ ಬೀಳಬೇಕು (ಬೆಳುಮ. ೧೫೮) ; ಮೂಡು ಪಡುಕಡಲುಗಳ ದಡಗಳ ವರೆಗೆ ಈ ಪರ್ವತಶ್ರೇಣಿಯು ನೀಡಿದ್ದು, ಮಧ್ಯದಲ್ಲಿರುವ ನೆಲತಾಯ ಅಲಂಕಾರವೋ ಎಂಬಂತೆ ಮನೋಹರವಾಗಿರುವುದು (ನಾಗಕಾ. ೩). **ನೆಲದಾಯಿ** : ತುಂಬಿತು ತಾಯಿಯ ಒಲವು, ನೆಲದಾಯಿಯ ಹಿರಿಚೆಲುವು (ಚಿಂತನ. ೨೫-೧೬) ; ತಾಯಿ ಇದ್ದಷ್ಟೇ ಅತ್ಮೀಯಳು ನೆಲದಾಯಿ (ವಿಚಾಮಂ. ೯೩) ; ಅದೇ ನೆಲದಾಯಿಯ ಆಶ್ರಯದಲ್ಲಿ ಅವರು ಮಲಗುತ್ತಿದ್ದರು (ಸಮಚೇ. ೨೫೩).

[ನೆಲ+ತಾಯ್]

ನೆಲದಾಯಿ 'ನೆಲದಾಯ್' ನೋ.

ನೆಲದಾರು (ನಾ). ಒಂದು ಬಗೆಯ ಸಸ್ಯ : "ಚಾರುದಾಲು॥—ಅಲ, ನೆಲದಾರು" (ಓಷಧಿ. ೫೬). [ನೆಲ+ದಾರು$_2$]

ನೆಲದಾವಣೆ(ನಾ). (?) : ಮಣಿಮಕುಟದಿಳಿಗೊಯ್ಲ ನೆಲದಾವಣೆಯೊ ಗಗನಾರ್ಣವದ ವಾಡಬಗಣವೊ ಕೌತುಕವೆನಿಸಲೆಚ್ಚಾಡಿದರು ಬಿಲ್ಲವರು (ಕುಸುಭೀ. ೪-೧೬). [ನೆಲ+ದಾವಣೆ?]

ನೆಲದಾವರೆ, ನೆಲತಾವರೆ (ನಾ). ಒಂದು ಬಗೆಯ ಸಸ್ಯ ; ಸ್ಥಳ ಪದ್ಮಿನಿ: "ನೆಲದಾವರೆ—ಅಮೃಥೆ, ಅತಿಚರೆ, ಪದ್ಮಚಾರಿಣೀ" (ನಾಚರಾ.೫); "ಗಂಧಮೂಲಿ—ನೆಲದಾವರೆ, ಖಚೋರ, ಸ್ವಿಯಂಗು" (ಓಷಧಿ. ೪೬).

ನೆಲತಾವರೆ : (ಮೈಔಗಿ. ೪೨-೮೨೬).

[ನೆಲ + ತಾವರೆ (<ತಾಮರೆ). ತಮಿ. ನಿಲತ್ತಾಮರೈ ; ತೆಲು. ನೆಲತಾಮರ]

ನೆಲದಾಳ, ನೆಳದಾಳ (ನಾ). = ನೆಲದಾಟ್ : ನೆಲದಾಳಗೆಡ್ಡೆ ಗಿಣಮೂಗಿ . . . ಇವಂ ಸಮಾನಂಗೊಂಡು ಚೂರ್ಣಂ ಮಾಡಿ (ವೈದ್ಯವಿ. ೯೯) ; ಬಾಳೆ ನೆಲದಾಳ ಕದ್ದಾಳ ಪುಷ್ಪವಿವು ಯೋಗ್ಯ ಶಿವಗೆ (ಗುರುಚಾ. ೬-೧೬); ಕೇದಿಗೆಬೀಳಿನ ರಸದಲ್ಲಿ ನೆಲದಾಳವನ್ನರೆದು ಕುಡಿಯೆ ದಾಹಜ್ವರ ಪರಿಹಾರವಾಗುವುದು(ಸಕವೈ.೭೭). **ನೆಳದಾಳ** : ನೆಳದಾಳ:— ನೆಲದಾಳಕಲ್ಪಮಂ ಪೇಳ್ವೆ (ವೈದ್ಯವಿ. ೫). [ನೆಲ+ತಾಳ$_2$(= ತಾಲ)]

ನೆಲದಾಳಿ, ನೆಲತಾಳಿ (ನಾ). = ನೆಲದಾಟ್ : "ಕಾಂತ–ಹರೇಣುಕ, ದೊಡ್ಡಯಾಲಕ್ಕಿ, ನೆಲದಾಳಿ . . . ಹತ್ತಿ" (ಓಷಧಿ. ೨೮) ; ನೆಲದಾಳಿ

ಯುಷಾಧಿಯುಜಮೋದ ನೆಗ್ಗಿಲು ನೆಲಗುಂಬಳ ಭಜ್ರಮುಸ್ತೆ (ಸಾಳ್ವಸಾಂ. ೧೧) ; ನೆಲದಾಳೆ ಕಿರುಗೊರಟಿಗೆ ದೀಜಮೆಣಸು ಇವನ್ನು ಸಮಾನಗೊಂಡು ಜೂರ್ಣಿಸಿ ಬೆಣ್ಣೆಯಲ್ಲಿ ಕಲಸಿ . . . ಲೇಪನಂಗೈಯೆ ಶುಕ್ಲಸ್ತಂಭ (ಕಾಮಶಾ. ೧೬-೨೭೧). **ನೆಲತಾಳಿ :** "ನೆಲತಾಳಿ=ನೆಲದಾಳಿಗಡ್ಡೆ, ಮುಸಲಿ, ತಾಲಮೂಲಿಕೆ" (ಪ್ರಭಣ್ಣ). [ನೆಲ+ತಾಳಿ$_2$(=ತಾಳಿ$_3$)]

ನೆಲದಾಳು 'ನೆಲದಾಟುಲ್' ನೋ.

ನೆಲದಾಳೆ 'ನೆಲದಾಟುಲ್' ನೋ.

ನೆಲದಾಟುಲ್, ನೆಲತಾಟು, ನೆಲತಾಳೆ, ನೆಲದಾಳು, ನೆಲದಾಳೆ (ನಾ). (ತಾಳೆಯ ವರ್ಗದ) ಒಂದು ಬಗೆಯ ಔಷಧಿ ಸಸ್ಯ ; ತಾಲಮೂಲಿಕೆ : "ನೆಲದಾಟುಲ್ — ತಾಲಮೂಲಿಕೆ, . ಮುಸಲಿ" (ನಾಚರಾ. ಕಿ.), ನೆಲದಾಟನೆರೆದು ಪಾಲೊಳ್ ಕಲಸಿ . . . ಧಾನ್ಯದೊಳ್ ಕರ್ಣಲೇಪನಂಗೆಯ್ಯೆ ಕರ್ಣವರ್ಧನಮಕ್ಕುಂ (ಪೋಕೋಪ. ೯-೬೭). **ನೆಲತಾಟು :** "ಮುಸಲೀ, ತಾಲಮೂಲಿಕಾ-೨ ನೆಲತಾಟು[ಪಾತಾಂ. ಕಾಟು, ತಾಟು]ಹೆಸರು" (ಸಿದ್ಧಾಂತಿ. ೧೩೯). **ನೆಲತಾಳೆ :** "ಮುಸಲೀ, ತಾಲಮೂಲಿಕಾ-೨ ನೆಲತಾಟು ಹೆಸರು. ನೆಲತಾಳೆಗೆಡ್ಡೆಯೆಸ್ವುವರು" (ಸಿದ್ಧಾಂತಿ. ೧೩೯) ; ನೆಲತೆಂಗು, ನೆಲತಾಳೆ (ಮೈಪಿಗಿ. ೨೬-೪೫೫). **ನೆಲದಾಳು :** "ಮುಸಲೀ, ತಾಳಮೂಲಿಕಾ ಈ ೨ ನೆಲದಾಳು" (ನಾಚರಾ. ೧೧೧) ; "ಭೂತಾಳೆ-ನೆಲದಾಳು, ನೆಲಹಾದರಿ" (ಓಷಧಿ.೧೧೨); ನೆಲದಾಳುಗೆಡ್ಡೆಯನಾದರೂ ಕಟುಳಕೋಹಣಯನಾದರೂ ಜೂರ್ಣಿಸಿ ಜೀನುತುಪ್ಪದಲ್ಲಿ ಕಲಸಿ ಕೊಡಿಸಲು ಸಕಲ ಸ್ಥಾವರ ವಿಷಗಳು ಪರಿಹರವಹವು (ವೈದ್ಯಸಾ. II, ೨೨೪). **ನೆಲದಾಳೆ :** "ಗೋದಾಪದೀ—ಹಂಸಪದಿ, ನೆಲದಾಳೆ" (ಓಷಧಿ. ೫೧) ; ನೆಲದಾಳೆಗೆಡ್ಡೆಯಂ ನೀರಿಂದ ಅರೆದು ಪಾನ, ನಸ್ಯ, ಲೇಪನಗಳ ಮಾಡಿಸಲು ಹಂದಿಯ ವಿಷ ಪರಿಹರವಹುದು (ವೈದ್ಯಸಾ. II, ೨೧೬) ; ನೆಲದಾಳೆಯ ಗೆಡ್ಡೆಯನ್ನರೆದು ಜೀನುತುಪ್ಪದಲ್ಲಿ ಕಲಸಿ ಕೊಡಲು ಪಾತಜ್ವರಂ ಮಾಣ್ಗುಂ (ಸಕವೈ. ೬೪). [ದೇ.॥ ತೆಲು. ನೆಲತಾಡಿ]

ನೆಲದಿಟ್ಟಿ (ನಾ). ಭೂಮಿಯ ಕಡೆ ತಿರುಗಿಸಿದ ದೃಷ್ಟಿ ; ತಗ್ಗಿಸಿದ ನೋಟ : ಆಶ್ರಮುಲಿನಾಸ್ಯನಾತನುಂ ನೆಲದಿಟ್ಟಿಯಾಗಿ . . . ಎನಲ್ (ಕ್ರೀರಾಮಾ. ೩೧೪-೩೪೬). [ನೆಲ+ದಿಟ್ಟಿ]

ನೆಲದಿಡ್ಡಿ (ನಾ). ಭೂಮಿಯಲ್ಲಿ ತೋಡಿರುವ (ರಹಸ್ಯವಾದ) ಸುರಂಗಮಾರ್ಗ : ಮತ್ತಲ್ಲಿ ಕೊಱೆದ ನೆಲದಿಡ್ಡಿಯಂ ತೆಗೆತೆಗೆಯೆನುತ್ತ ಪೊಱಮಟ್ಟು (ಸಮ್ಯಕೌ. ೮-೩೬) ; ಅಗಳಾಳ್ವರಿ ಕೋಟೆ ಕೊತ್ತಳ ನೆಲದಿಡ್ಡಿ[ಪಾತಾಂ. ದಿಡಿ] . . . ಪಲ ಪುಲಿಮೊಗಗಳನನುಮಾಡಿಸಿದನ್ (ಶುಂತಾಸಾಂ. ೩೭-೫೧). [ನೆಲ+ದಿಡ್ಡಿ]

ನೆಲದುರುವೆ (ನಾ). ಒಂದು ಬಗೆಯ ಸಸ್ಯ : "ಪಾಷಾ-ನೆಲದುರುವೆ" (ಓಷಧಿ. ೧೭೩) ; ನೆಲದುರುವೆ ಸೊಪ್ಪನು ಹುಳಿಮಜ್ಜಿಗೆಯಲ್ಲಿ ತೆಗೆದು ಕೊಳ್ಳಲು ಉರಿಮೂತ್ರಂ ಮಾಣ್ಗುಂ (ಸಕವೈ. ೩೫೪).

[ನೆಲ+ತುರುವೆ$_2$(<ತುಜುವೆ)]

ನೆಲದುರ್ಗ (ನಾ). ನೆಲದ ಮೇಲೆ ಕಟ್ಟಿದ ಕೋಟೆ : ನೆಲೆಗೆಡಿಸುತ ನೆಲದುರ್ಗವ ನೆರಪುತ ಜಲದೊಳು ಜಲದುರ್ಗವನು . . . ನಡೆದಳು ಬಲ್ಮೆಯೊಳು (ಶುಂತಾಸಾಂ. ೪೧-೭೪) ; ನಗರವೇ ನೆಲದುರ್ಗ ಬಳಸಿಯುಂ ಸೊಗಪ ನದಿ ಜಲದುರ್ಗಂ (ನಾಗಚ. ೨-೭೦).

[ನೆಲ+ದುರ್ಗ]

ನೆಲದೆಂಗು, ನೆಲತೆಂಗು (ನಾ). ಒಂದು ಬಗೆಯ ಸಸ್ಯ : ಸಿದ್ಧವಾರದ ದಿನ ನೆಲದೆಂಗ ತಂದು ಕತ್ತರಿಸಿ ನೆಳಲಲ್ಲಿ ಒಣಗಿಸಿ . . . ಸೇವಿಸೆ ಶ್ಲೇಷ್ಮಜ್ವರ ಗುಣವಾಗುವುದು (ಸಕವೈ. ೪೧). **ನೆಲತೆಂಗು :** ಸಿದ್ಧವಾರದ ದಿವಸ ನೆಲತೆಂಗ ತಂದು . . . ಸೇವಿಸೆ ಶ್ಲೇಷ್ಮಪ್ರಕೋಪಂ ಮಾಣ್ಗುಂ (ಸಕವೈ. ೧೫೦) ; ನೆಲತೆಂಗು, ನೆಲತಾಳೆ (ಮೈಪಿಗಿ.೨೬-೧೫೬).

[ನೆಲ+ತೆಂಗು$_3$]

ನೆಲದೆಜ್ಜೆ, ನೆಲತೆರ (ನಾ). ೧. ಶವವನ್ನು ಸುಡುವ ಜಾಗಕ್ಕೆ ಕೊಡಬೇಕಾದ ತೆರಿಗೆ ; ಶ್ಮಶಾನದ ಸುಂಕ : ಸುಡುಗಾಡಿನಧಿಕಾರ ಮುದ್ರೆ ಕಟ್ಟಾಣಿ ಚಾವಡಿ ಹೆಣನ ಕಲೆಯಕ್ಕಿ ನೆಲದೆಜ್ಜೆಯ ಹಾಗ ಶವದುಡಿಗೆಯನಗಾಯ್ತು (ಹಜಕಾ. ೧೧೧-೩೮). **ನೆಲತೆರ :** ೨. ಭೂಮಿಯ ಮೇಲೆ ಹಾಕುವ ಸುಂಕ ; ಭೂಕಂದಾಯ : ಕಮ್ಮಡಹಳ್ಳಿ ಎಂಬ ಗ್ರಾಮದಲ್ಲಿ ವರ್ಷ ೧೯೬೩ ನೆಲತೆರವನ್ನೂ ಆಂ ವರಹ ಕೈಸಂಬಳವನ್ನೂ . . . ತಂದುಕೊಡುವದಾಗಿ ಹೇಳಿರುತ್ತಾನೆ (ಮಜಾವಂ. I, ೫೮). [ನೆಲ+ತೆಜ್ಜೆ$_3$]

ನೆಲದೊಂಡೆ (ನಾ). ಒಂದು ಬಗೆಯ ಸಸ್ಯ : "ದಿವ್ಯತುಂಬೀ—ನೆಲದೊಂಡೆ" (ಓಷಧಿ. ೭೫). [ನೆಲ+ತೊಂಡೆ$_1$]

ನೆಲದೊಟ್ಟಿ (ನಾ). ಒಂದು ಬಗೆಯ ಔಷಧಿ ಸಸ್ಯ : ನೆಲಮಾವುಂ ನೆಲದೊಟ್ಟಿ ತೊಟ್ಟಿ . . . ಇಂತಿವೆಲ್ಲಮ ಸಮಂ ಕೂಡಿಟ್ಟು ತದ್ಯೋಗಮಂ (ಖಪದ. ೧೬-೫೯). [ನೆಲ+ತೊಟ್ಟಿ$_4$]

ನೆಲಧಾರೆ (ನಾ). ಒಂದು ಬಗೆಯ ಮರ : ನೆಲಧಾರೆ (ಳದಗುನ)—ಎತ್ತರವಾಗಿ ಬೆಳೆಯುವದು, ಬಹುಶೋಭೆಯುಳ್ಳದ್ದು. ಬೆಲೆಯುಳ್ಳ ಇಮಾರತಿಯ ಕಟ್ಟಿಗೆಯು (ಳಭಾಗ. ೪೩). [?]

ನೆಲಧೊರೆ (ನಾ). ಅರಸ ; ಭೂಪತಿ : ಪ್ರೇಮದಿಂ ನೆಲಧೊರೆಗಳಂ ಕೂಡಿಕೊಂಡು ಸುತ್ರಾಮವಂದಿತಗೆ ಕಾಣಿಕೆಯನಿತ್ತಿಜಿಗಿ ಸುಮ್ಮಾನದಿಂದಿರಲು (ತುರಂಗ. ೭೫-೨೮). [ನೆಲ+ಧೊರೆ(<ದೊರೆ$_3$)]

ನೆಲನಡುಗು (ನಾ). ನೆಲದ ಅದುರುವಿಕೆ ; ಭೂಕಂಪ : ನೆಲ ನಡುಗೊ ? ಬಾನ್ನುಡುಗೊ ? ಕೇಳದೊ ಮಹಾಸ್ವನಂ ಮೊಳಗುತಿದೆ, ದೂರದ ಸಮುದ್ರಘೋಷಮೆನಲ್ಕೆ (ಕ್ರೀರಾಮಾ. ೧೫೭-೩೪). [ನೆಲ+ನಡುಗು$_2$]

ನೆಲನಳ್ಳಿ (ನಾ). "ಕಡಲಲ್ಲಿ ಹುಟ್ಟಿ ನೆಲದ ಮೇಲೆ ಜೀವಿಸುವ ನಳ್ಳಿ" (Land-crab. ಇಂಳಿ). [ನೆಲ+ನಳ್ಳಿ$_1$]

ನೆಲನಾರಂಗಿ(ನಾ). ಒಂದು ಬಗೆಯ ಈಳೆ : ನೆಲಹೆರಳೆ, ನೆಲನಾರಂಗಿ (ಮೈಪಿಗಿ. ೫೬-೧೧೨೧). [ನೆಲ+ನಾರಂಗಿ]

ನೆಲನೆಕ್ಕರೆ (ನಾ). ಒಂದು ಬಗೆಯ ಸಸ್ಯ : (ಮೈಪಿಗಿ. ೫೬-೧೧೫೬). [ನೆಲ+ನೆಕ್ಕರೆ./ತುಳು. ನೆಲನೆಕ್ಕರೆ]

ನೆಲನೆಲ್ಲಿ (ನಾ). ಒಂದು ಬಗೆಯ ಸಸ್ಯ ; ಕಿರುನೆಲ್ಲಿ : (ಮೈಪಿಗಿ. ೬೧-೧೨೬೪) ; "ಅಜ್ಜುಟಿ=ನೆಲನೆಲ್ಲಿಯ ಗಿಡ" (ಗಂಗಾಪು. ೫).

[ನೆಲ+ನೆಲ್ಲಿ. / ಕಮಿ. ನಲನೆಲ್ಲಿ ; ತುಳು. ನೆಲನೆಲ್ಲಿ]

ನೆಲನೇರಳೆ 'ನೆಲನೇಜುಲ್' ನೋ.

ನೆಲನೇರಿಲ್, ನೆಲನೇರಳೆ, ನೆಲನೇಜುಲು (ನಾ). ಒಂದು ಬಗೆಯ ನೇರಿಳೆ ; ನಾಯಿನೇರಳೆ ; ಭೂಮಿಜಂಬುಕೆ : "ಖಳಭಕ್ಷ್ಯಾ-೬—ನೆಲನೇಜುಲ್" (ಓಷಧಿ. ೯೮). **ನೆಲನೇರಳೆ :** "ನಾದೇಯಿ, ಭೂಮಿಜಂಬುಕಾ-೨ ನೆಲನೇರಳೇ ಹೆಸರುಗಳು. ನಾಯಿನೇರಳೇ ಹೆಸರುಗಳು" (ಸಿದ್ಧಾಂತಿ. ೧೭೩). **ನೆಲನೇಜುಲು :** "ಕಾಷ್ಠ ಜಂಬು-ನೆಲನೇಜುಲು" (ಓಷಧಿ. ೭೦). [ನೆಲ+ನೇಜುಲ್]

ನೆಲನೇಜುಲು 'ನೆಲನೇಜುಲ್' ನೋ.

ನೆಲಪಡು (ಕ್ರಿ). (ಸೋತು) ನೆಲ ಹಿಡಿ : ನೆಲಕ್ಕೆ ಮುಖ ಕೊಟ್ಟು ಮಲಗಿ, ನೆಲಪಟ್ಟನಂತೆ ಬಲವಾಗಿ ನೆಲವನ್ನು ಕೈಯಿಂದ ಕಟ್ಟಿಹಿಡಿದ (ಭೀಮಕಾ. ೭೦) ; ಈ ಕಾಳಿನ ಹಿಟ್ಟಲೇ ಮಾಡಿದ ರೊಟ್ಟೀ ತುಣುಕು

ತಿಂದು ಮುಕ್ಕಳೆಲ್ಲಾ ಹಿಂದಕ ಮುಂದಕ ಮಾಡಿಕೊಂಡು ನೆಲಪಟ್ಟ ಬಿದ್ದಾಮಿ (ಗ್ರಾಮಾಯ. ೧೪೮). [ನೆಲ+ಪಡು$_1$]

ನೆಲಪತಿ (ನಾ). =ನೆಲಧೊರೆ : ನೆಲಪತಿ ಬಳಿಯೊಳು ನೀನಿರು ಜಲಫಲಗಳ ತಂದು ಕೊಡುವೆ ನಿನಗೆಲೆ ಪುತ್ರ (ಹಮಚ. ೭೦). [ನೆಲ+ಪತಿ$_2$]

ನೆಲಪು, ನೆಲಹು, ನೆಲುಹು (ನಾ). ಪಾತ್ರೆ, ಆಯುಧ ಮುಂತಾದುವುಗಳನ್ನಿಡುವುದಕ್ಕಾಗಿ ಹಗ್ಗ, ತಂತಿ, ಬಿದಿರು ಮುಂತಾದುವುಗಳಿಂದ ಹೆಣೆದು, ನೇತುಬಿಡುವ ಸಾಧನ; ನೆಲು : ಅಲದ ಕೊಂಬಿನೊಳ್ ನೂಱೊಂದು ಕಾಲ ನೆಲಪಂ ಕಟ್ಟಿ ನೆಲಪಿನ ಕೆಳಗೆ ಸುರಗಿ ಮೊದಲಾಗೆ ಮುನಿವತ್ತೆರಡಾಯುಧಮುಂ ಮಹೋತ್ಸವಂಬೆರಸಿನಿತುಂ ನಿಲಿಪಿ (ಧರ್ಮಾಮೃ. ೨-೧೩೭) ; ಮನವಿಕ್ಕಿ ಹೆಪ್ಪನಿಟ್ಟು ನೆಲಪಿನೊಳ್ [ಪಾಠಾಂ. ಹೆಪ್ಪನೆಱೆದು, ಹೆಪ್ಪನಿಟ್ಟು ನಿಲವಿನೊಳ್]ಬಯ್ತಿಟ್ಟು(ಜೀವಸಂ. ೨೧೪-೧೧೧). **ನೆಲಹು** : "ಕಾಷಂ, ತಿಕ್ಕಂ–ಈ ೨ ನೆಲಹು"(ಹಲಾಯು. ೧೨೫-೬೩) ; ನೆಲಹಿನ ಪೊಸರಂತೆ ಬೆನ್ನೇಱಿದ ಮಗುವಿನಂತೆ(ಧರ್ಮಾಮೃ. ೪-೧೪೬ ಆದಿಪದ್ಯ) ; ಹಾಲ ಹರವಿಯ ಬಿಗಿದು ನೆಯ್ದುಲಂ ಬಿಸಿಮಾಡು ನೆಲಹಿನಲಿ ಸಂತವಿಡಿಸು (ಹಜಕಾ. ೪-೪೯); ಕರಿದಂತಕ್ಕಂಕ್ರಮಂ ಮೇಳಿಸಿ ನೆಲಹುಗಳಂ ಕಟ್ಟಿ ತಂದೊಡ್ಡಿ ಮೂಂಸೋತ್ಕರಮಂ ಪೊತ್ತು . . . ನಡೆದರಾ ಕಾಡೊಳ್ ಬೇಡರಾ[ಗಳ್] (ಕುಸುಸಾ. ೧೪-೫೨) ; ಎಲೆ ಗೋಪ ನಿನ್ನ ಮಗನ ದೆಸೆಯಿಂದ . . . ನೆಲಹಿನ ಬೆನ್ನೆಯುಳಿಯದು (ನೇಮಿನಾಥ. ೧೫-೯೩). **ನೆಲುಹು** : ಮನೆಕೆ ಬಂದಡೆ ತುಪ್ಪವದೆ ನೆಲು[ಪಾಠಾಂ. ಲ]ಹಿನ ಗಡಿಗೆಯುಲಿ ಮಡಗಿ ಬೇಕಾದನಿತನಾದಡೆ ತಂದಪೆಂ (ಬಸವ. ೧೪-೧೧೧) ; ನೆಲು[ಪಾಠಾಂ. ಲ]ಹುಗಳಲಿರಿಸಿದರೆ ಕೈಗಳು ನಿಲುಕದಿರ್ದೊಡೆ . . . ಕೆಳೆಯರ ಹೆಗಲನೇಱಿ ದುರಂತವಿಕ್ರಮರು ಕಳೆದು ಕೊಂಬರು ಹಾಲು ಬೆಣ್ಣೆಗಳ (ನಿಭಾಗ. ೧೦-೪-೨೬) ; ಬಿಸಿಯ ಹಾಲನು ಬೆಣ್ಣೆ ಸಹವೀಂಟಿದನು ನೆಲು[ಪಾಠಾಂ. ಲ]ಹುಗಳ ಮೊಸರನುಂಡನು (ಸಾತ್ಯಭಾ. ೨೧-೪೯). 'ನೆಲುವು' ಪರಾ. [ನೆಲು+–ಪು$_2$]

ನೆಲಬದರಿ (ನಾ). ಒಂದು ಬಗೆಯ ಸಸ್ಯ : "ಲಘುಬದರೀ–ನೆಲಬದರಿ" (ಓಷಧಿ. ೧೪೨). [ನೆಲ+ಬದರಿ]

ನೆಲಬರೆ (ಕ್ರಿ). (ಭಯ, ನಾಚಿಕೆ ಮುಂತಾದುವನ್ನು ಸೂಚಿಸುವಂತೆ) ಕಾಲ ಬೆರಳಿಂದ ನೆಲವನ್ನು ಗೀರು : ನಿಮಿರ ತಲೆವಾಗಿ ನೆಲಬರೆಯುತ್ತಾ ಜಹಾಂಗೀರನೆದುರು ಬದಿಯಲ್ಲಿ ನರದು ನಿಂತಳು (ನೂರಜ. ೨೫). [ನೆಲ+ಬರೆ$_1$]

ನೆಲಬಲ 'ನೆಲವಲ' ನೋ.

ನೆಲಬಲಿಕೆ (ನಾ). (ರಾಜ್ಯದ) ಹಿರಿಮೆ,—ಮೇಲ್ಮೈ : ಜಲಧಿ ಬಳಸಿದಗಳಾಗೆ ತ್ರಿಕೂಟಾಚಲವ ಬಳಸಿ ವಜ್ರಪರಿಖೆ ನೆಲಸಿರಲಾ ಪಟ್ಟಣದ ನೆಲಬಲಿಕೆಯನೊಲಿದು ಪೇಳುವ ಕವಿ ಯಾರು (ರಾಮವಿ. ೧೧೧-೨೬).

[ನೆಲ+ಬಲಿಕೆ(<ಬಲ್ಕೆ)]

ನೆಲಬಾಗೆ (ನಾ). ಒಂದು ಬಗೆಯ ಸಸ್ಯ : ನೆಲಬಾಗೆಬೇರು, ಚಿತ್ರಮೂಲ, ಕೋಳಿಕುಟುಮನ ಗೆಡ್ಡೆ ಇವಿಪ್ಪನ್ನೂ ನಿಂಬೇಹುಳಿಯ ರಸದಿಂದ ಅರೆದು ಲೇಪಿಸಲು ತ್ವಗ್ಗತವಾದ ಕುಷ್ಠ, ವಿಸ್ಫೋಟಕಗಳು ಪರಿಹರಿಸಹವು (ವೈದ್ಯಸಾ. II, ೩೯೩). [ನೆಲ+ಬಾಗೆ$_1$]

ನೆಲಬಾದಾಮಿಹುಲ್ಲು (ನಾ). ಒಂದು ಬಗೆಯ ಸಸ್ಯ : (ಮೈಪಾಗ. ೨೮-೫೬೧). [ನೆಲ+ಬಾದಾಮಿ$_2$+ಹುಲ್ಲು(<ಪುಲ್)]

ನೆಲಬಾವಿ (ನಾ). (ಕಟ್ಟೆ ಇಲ್ಲದ) ನೆಲಕ್ಕೆ ಸಮವಾಗಿರುವ ಬಾವಿ; ನೆಲದ ಮಟ್ಟಕ್ಕಿರುವ ಬಾವಿ : ಮಳೆ ಬಂದು ನೆಲವೆಲ್ಲ ಒದ್ದೆಯಿದ್ದುದರಿಂದ ನೆಲಬಾವಿಯಲ್ಲಿ ನೀರು ಸೇದಲು ಕಷ್ಟವಾಯಿತು (ದೂಢಿ).

[ನೆಲ+ಬಾವಿ]

ನೆಲಬಾಳ್ (ನಾ). ಭೂಮಿಯ ಮೇಲಿನ ಬದುಕು,—ಜೀವನ : ತಲೆಯೊಂದೆ ಬೇರ್ಪಡಿಸಿದೀ ಸಾವು ಬಿಡ್ಪುದೆಯು ನೆಲಬಾಳನಬ್ಬರಿಪ ಕಟ್ಟಲ್ತೆ ನೋಡೆ (ಕಾಲೂರ. ೧೪೧-೪೦೯).

[ನೆಲ+ಬಾಳ್$_2$(<ಬಾಳ್$_2$)]

ನೆಲಬಿದರಹುಲ್ಲು (ನಾ). ಒಂದು ಬಗೆಯ ಸಸ್ಯ : (ಮೈಪಾಗ. ೯-೧೫೮). [<ನೆಲಬಿದರು$_2$+ಹುಲ್ಲು(<ಪುಲ್)]

ನೆಲಬುರುಕಿ (ನಾ). ನೆಲದ ಮೇಲೆ ತೆವಳುವಂತಹುದು : ನೆಲಬುರುಕಿ ಮಹಾಶಯನಿಗೆ ನಿದ್ದೆ ನಮಗಿಂತ ಹೆಚ್ಚಾದರೂ ಅವನು ಮುಂಚಿತವಾಗಿ ಮಲಗುವುದರಿಂದ ಮುನ್ನಿವೆ ಎದ್ದು ಬಿಡುತ್ತಾನೆ (ಗಾಳಿಪ.೧೬೦).

[ನೆಲ+–ಪುರುಕಿ]

ನೆಲಬೇವು (ನಾ). ೧. ಒಂದು ಬಗೆಯ ಮೂಲಿಕೆ ; ಚಿರಾಯಿತ : "ಕಿರಾತಕಿಕ್ತ, ಭೂನಿಂಬ, ಅನಾರ್ಯತಿಕ್ತ, ಈ ೩ ನೆಲಬೇವು" (ನಾಚಿರಾ. ೧೫೧) ; "ಪನ್ನಂಗಿಯೆನೆ ನೆಲಬೇವು" (ಮುಂಗರಾ. ೪೪-೪೫) ; ನೆಲಬೇವು · ಚಿತ್ರಕಂ ಪಿಪ್ಪಲಿ ನಾಗರಮೆಂಬಿವಿನಿತುಮಂ ಕುದಿಯಿಸುತ ತಜ್ಜಲಮಂ ಬಿಸಿಬಿಸಿಯೆನೆ ಕುಡಿಯಲೊಡಂ ಶ್ಲೇಷ್ಮರೋಗ ಶಮನ ಮದಕ್ಕುಂ (ಶೋಕೋಚಿ. ೯-೧೪) ; ಬಳ್ಳಿಹುಜುಬೆ ನೆಲಬೇವು ಮುಸ್ತೆ ಪರ್ಪಾಟಕದಿಂ ಕುದಿದಿಳುಪಿ ಕಟುಕರೋಹಿಣಿಯದಱೊಳಗಿರೆ ಕೆದಿಕು ಮಲ್ತೆ ಪಿತ್ತಜ್ವರಮಂ (ಕಲ್ಯಾಕಾ. ೩-೩೨) ; ಜೀರಿಗೆ, ಕೊತ್ತುಂಬರಿ, . . . ಬೇವು, ನೆಲಬೇವು, ಕಟುಕರೋಹಿಣಿ—ಇವುಗಳನ್ನು ಬಿಸಿನೀರಿನಿಂದರೆದು ಕೊಡಲು ವಾತಜ್ವರಂ ಪೂರ್ಣಂ (ಸಕವೈ. ೩೩). ೨. ಒಂದು ಬಗೆಯ ಸಸ್ಯ ; ಹೊನ್ನೆಗನ್ನೆ : "ಸ್ವನಪಯೋಗಂಧಿಯೆನೆ ನೆಲಬೇವು" (ಮಂಗರಾ. ೪೦-೩೩).

[ನೆಲ+ಬೇವು$_1$ / ತಮಿ. ನಿಲವೇಮ್ಬು ; ಮಲ. ನಿಲವೇಪ್ಪು ; ತುಳು. ನೆಲಬೇವು ; ತೆಲು. ನೆಲವೇಮು]

ನೆಲಬೈರಿಗೆ (ನಾ). ನೆಲವನ್ನು ಕೊರೆಯುವ ಬೈರಿಗೆ : ಭೂಮಿಯಲ್ಲಿ ಕಂಡಿ ಕೊರೆಯುವುದಕ್ಕಾಗಿ ಉದ್ದ ಬೆಳಸಿಕೊಂಡು ಹೋಗುತ್ತ ಉಪಯೋಗಿಸುವ ಸಾಧನ: ನೆಲಬೈರಿಗೆ (Auger. ಇಂಕಸಾ).

[ನೆಲ+ಬೈರಿಗೆ]

ನೆಲಮಗಳ್, ನೆಲಮಗಳು (ನಾ). ಭೂಮಿಯ ಮಗಳು ; ಸೀತೆ : ಮುನಿಯ ಸತಿ ನೆಲಮಗಳನುಪಚರಿಸಿದಳ್ (ತ್ರೇತಾಸಾ. ೧೩೩-೩೧೩). **ನೆಲಮಗಳು** : ನೆಲಮಗಳ ರೂಪಿನ ಕಲಿ ಮನೋಭವ ಬಂದ (ಕಾತಿಂತ. ೨-೧೩). [ನೆಲ+ಮಗಳ್]

ನೆಲಮಗಳು 'ನೆಲಮಗಳ್' ನೋ.

ನೆಲಮನೆ 'ನೆಲವನೆ' ನೋ.

ನೆಲಮರೆ (ನಾ). ಭೂಮಿಯಲ್ಲಿ ಬಚ್ಚಿಟ್ಟುದು ; ನೆಲದಲ್ಲಿ ಅವಿತಿಟ್ಟುದು : ಚಿನ್ನ ಬೆಳ್ಳಿ ಇದ್ದದ್ದನ್ನು ನೆಲಮರೆ ಮಾಡಿಕೊಂಡು ಇದ್ದಾರೆ (ರಾಷೇಂದ್ರ. ೧೬೪). [ನೆಲ+ಮರೆ$_2$(<ಮುಱೆ$_2$)]

ನೆಲಮಹಡಿ (ನಾ). ನೆಲಮಾಳಿಗೆ; ನೆಲಮನೆ : ನಾನೀಗ ಮಲಗಿರುವ ಹಾಸಿಗೆಯ ಕೆಳಗೊಂದು ಹಲಿಗೆಯಿದೆ . . . ಅದರ ಕೆಳಗೊಂದು ನೆಲಮಹಡಿಯಿದೆ (ಜೀವೀಚಾ. ೩೫).

[ನೆಲ+ಮಹಡಿ]

ನೆಲಮಾಗಳಿ, ನೆಲಮಾಗುಳಿ (ನಾ). ಒಂದು ಬಗೆಯ ಸಸ್ಯ : ವೀಳಯದ ಎಲೆ . . . ನೆಲಮಾಗಳಿಯ ಸೊಪ್ಪು . . . ಈ ಸೊಪ್ಪುಗಳ ಪ್ರತ್ಯೇಕ ರಸಗಳನು ಜೇನುತುಪ್ಪ ಬೆರಸಿ ಕಣ್ಣಿಗೆಚ್ಚಲು ಹೊಸತಾದ ಕಣ್ಣು ಬೇನೆ ಶಮನವಹುದು (ವೈದ್ಯಸಾ. II, ೭೮) ; **ನೆಲಮಾಗುಳಿ**: ನೆಲಮಾಗುಳಿ, ನೆಲ್ಲಿಚಟ್ಟು . . . ಭದ್ರಮುಸ್ತೆ ಇವಿಪ್ಪನೂ ಪ್ರತ್ಯೇಕ ಎರಡೆರಡು ವರಹ ತೂಕ ಒಂದು ಬಳ್ಳ ನೀರಲ್ಲಿ ಕಷಾಯವೆತ್ತಿ (ವೈದ್ಯಸಾ. I, ೩೩೩) ;

ಗುಳ್ಳ, ನೆಲಗುಳ್ಳ . . . ನೆಲಮಾಗುಳಿ, ಕಬ್ಬು. . . ಕೆಂಪಿನ ನೆಗ್ಗಿಲು ಇವು ಪ್ರತ್ಯೇಕ ೩ ಹಲವಂ ತುಳಿದು (ಸಕವೈ. ೩೮೨).

[ನೆಲ+ಮಾಗಳಿ$_1$]

ನೆಲಮಾಗಳಿಚೋರ (ನಾ). ಒಂದು ಬಗೆಯ ಸಸ್ಯ : ಬೀಳೀ ಹೂಲಿ, ಕೊರೆ, ಸಣ್ಣ ಹೂಲಿ, ನೆಲಮಾಗಳಿಚೋರ (ಮೈಔಗಿ. ೩೬-೭೪೫).

[ನೆಲಮಾಗಳಿ+ಚೋರ ?]

ನೆಲಮಾಗಳಿಬೇರು (ನಾ). = ನೆಲಮಾಗಳಿ : ಮಾಗಳಿಗೆಣಸು, ನೆಲಮಾಗಳಿಬೇರು, ಅರಿಸಿನ . . . ಇನಿಷ್ಟನೂ ಪ್ರತ್ಯೇಕ ನಾಲ್ಕು ವರಹ ತೂಕವ ಸೇವಿಸಲು (ವೈದ್ಯಸಾ.II, ೫೬).

[ನೆಲಮಾಗಳಿ+ಬೇರು(<ಬೇರ್)]

ನೆಲಮಾಗುಳಿ 'ನೆಲಮಾಗಳಿ' ನೋ.

ನೆಲಮಾಟ (ನಾ). ಕೆಲವು ನಿರ್ದಿಷ್ಟವಸ್ತುಗಳನ್ನು ನೆಲದಲ್ಲಿ ಹೂಳಿ ಮಾಡುವ ಮಾಟ,—ಮಂತ್ರ : ಸೇರಿದ ಕೆಲವು ಹಿರಿಯರು ಇದು ನೆಲಮಾಟವೆಂದರೆ . . . ಇನ್ನು ಕೆಲವರು ಇದು ಪಿಶಾಚಿಯ ಬಾಧೆಯೆಂದೂ ಹೇಳತೊಡಗಿದರು (ಕಾಲೂರ. ೧೪ ಕಥಾಸಾರ). [ನೆಲ+ಮಾಟ$_1$]

ನೆಲಮಾರ್ಗ (ನಾ). ೧. ಭೂಮಿಯ ಮೇಲಿನ ದಾರಿ ; ರಸ್ತೆ. ೨. ಭೂಮಿಯೊಳಗೆ ತೋಡಿರುವ ರಹಸ್ಯ ದಾರಿ ; ಸುರಂಗ ಮಾರ್ಗ: ಕೋಟೆಯೆಂದೊಡನೆ ಇಂದಿನ ಬಹು ಜನರ ಕಣ್ಣೆದುರು ಬಂದು ನಿಲ್ಲುವುದೆಂದರೆ ಕೋಟೆಯ ಸುತ್ತುಗೋಡೆ . . . ಬಹಳವಾದರೆ ನೆಲಮಾರ್ಗ (ಕರ್ಣಾಜ. ೪). [ನೆಲ+ಮಾರ್ಗ]

ನೆಲಮಾವು (ನಾ). ಒಂದು ಬಗೆಯ ಔಷಧಿ ಸಸ್ಯ : ನೆಲಮಾವು ನೆಲದೊಟ್ಟ ತೊಟ್ಟ . . . ಇಂತಿವೆಲ್ಲವು ಸಮಂ ಕೂಡಿಟ್ಟು (ಖಮದ. ೧೬-೫೯). [ನೆಲ+ಮಾವು]

ನೆಲಮಾಳಿಗೆ 'ನೆಲವಾಳಿಗೆ' ನೋ.

ನೆಲಮಿಂಡ (ನಾ). (?) : ಎಳಮೆಯೊಳೆನ್ನ ಮೆಯ್ಸುರಿಯಿನೊಳ್ಮೊಗ ದೋಜೆಯಿನೋರೆನೋಟದೊಳ್ಮೊಳಪಿನೆಳಲ್ದು ಬಟ್ಟ ನೆಲಮಿಂಡರೊಳಾ ಬಟಾಕೊರ್ವ ಗಂಡನಂ ತಳೆದು (ಚಕವಿ. ೬-೨೮೩). [?]

ನೆಲಮುಂಗುಹುಲ್ಲು (ನಾ). ಒಂದು ಬಗೆಯ ಸಸ್ಯ : (ಮೈಔಗಿ. ೪೬-೯೨೧). [ನೆಲ+ಮುಂಗು$_2$+ಹುಲ್ಲು(<ಪುಲ್)]

ನೆಲಮುಕ್ಕ, ನೆಲಮುಕ್ಕು (ನಾ). ೧. ಒಂದು ಬಗೆಯ ಹಾವು : ಬರಸಿಡಿಲ ಬಳಗದಂತೆ . . . ನೆಲಮುಕ್ಕನ ತೆಕ್ಕೆಯಂತೆ ನಿತ್ತುವಿನ ಮೊತ್ತದಂತಿರ್ದಸಂಖ್ಯಾತ ದೈತ್ಯನಾಯಕರ ಮಾಯಾಪ್ರಯೋಗಮಂ ಪ್ರತಿಹತಂ ಮಾಡಿ ಗೆಲ್ದುದು (ಜಗವಿ. ೧೫-೧೫ ಪ) ; ಅಲ್ಲಿ ನೆಲಮುಕ್ಕನೆನಿಸುವ ಪಾವು ನೋಡಮ್ಮ (ಸಾನಂಚ. ೪-೧೩೪, ರಗಳೆ). 'ಮಣ್ಣುಮ್ಕ' ಪರಾ. ೨. ಪಿಶಾಚಿ ; ದೆವ್ವ : ಗಾಳಿಗರುಂ ನೆಲಮುಕ್ಕ ಜಕ್ಕಿಯುಂ ಬರ್ಮನುಮೆಂದು ಜೀವವಧೆಗೆಯ್ದೊಡೆ ಕುತ್ತದ ದುಃಖದಿಂದ ಸಾಸಿರ್ಮಡಿ ದುಃಖಮಂ ಪಡೆವ ನಾರಕದುಃಖಮನೆಯ್ದುದಿರ್ಪರೇ (ಪದ್ಯಸಾ. II, ೮೨೮ ; ಶಾಸ್ತ್ರಟೀ. ೨೪-೩ ನೋ). **ನೆಲಮುಕ್ಕು** : ೨. ಅಂತು ಬೆಸನಂ ಬೇಡಿಕೊಂಡು ಬೀಚ್ಕೊಂಡು ನೆಲಮುಕ್ಕನಂತೆ ನಭಕ್ಕೆ ನೆಗೆದು (ಪಂಚಾಮಾ. ೯-೧೨೩ ಪ) ; ಇರೆಯಿರೆ ಪಾವೆ ಕಾಲಗತಿಯಿಂ ನೆಲಮುಕ್ಕನಿ ಪಂದದಿಂ ಹಿಮಂ ಬರೆಬರೆ ಬೆರ್ಚನಿಂ ಶಿಶಿರಮಾಗಿ ನಿಮಿರ್ಚದುದು (ಪುಷ್ಪಪು. ೬-೪೮) ; ಬಿನುಗೊಂಡು ನೆಲಮುಕ್ಕು ಕಾಡುತಿಹುದೆನುತಂ (ಕಾಲೂರ. ೧೫೪-೩೩೯). 'ನೆಲಗುಮ್ಕ$_1$' ಪರಾ. [ನೆಲ+ಮುಕ್ಕ$_1$]

ನೆಲಮುಕ್ಕು 'ನೆಲಮುಕ್ಕ' ನೋ.

ನೆಲಮುಚ್ಚಳ (ನಾ). ಒಂದು ಬಗೆಯ ಸಸ್ಯ : ನೆಲಮುಚ್ಚಳ, ನಾರುಂಬೇಳೆಸೊಪ್ಪು (ಮೈಔಗಿ. ೪೧-೪೧೯). [ನೆಲ+ಮುಚ್ಚಳ ?]

ನೆಲಮುಚ್ಚಿಲು (ನಾ). ಒಂದು ಬಗೆಯ ಔಷಧಿ ಸಸ್ಯ : ನೆಲಮುಚ್ಚಿಲು, ಹಸ್ತಿಪಾದ, ಹಕ್ಕರಿಕೆ, ಅನೆಕಾಲುಗಿಡ, ನಾಯಿನಾಲಗೆ ಗಿಡ (ಮೈಔಗಿ. ೩೩-೬೪೧). [ನೆಲ+ಮುಚ್ಚಿಲು./ತುಳು. ನೆಲಮುಚ್ಚಿಲ್]

ನೆಲಮುಟ್ಟು (ಕ್ರಿ). ಭೂಮಿಯನ್ನು ಸೋಕು ; ನೆಲವನ್ನು ಸ್ಪರ್ಶಿಸು : ಕಣೆ ಪಂಜರದೊಳ್ ಎಱಗಿ ಭೀಷ್ಮನ್ ಬಿಟ್ಟಂತೆ ನೆಲಮುಟ್ಟದೆ ಬಿಟ್ಟೊಡ್ಡೀನಾನ್ (ಎಕ. VIII, ಸೊರಬ. ೧೦-೮ ; ಸು. 800); ತಿಂತಿಣಿಯಾಗೆ ನಟ್ಟ ಕಣೆಯೊಳ್ ನೆಲಮುಟ್ಟದೆ ಮೆಯ್ಯೊಳತ್ತಮಿತ್ತಂ ತೆಱದಿರ್ದ ಪುಣ್ಣಳಿಸೆವಕ್ಕರದಂತಿರೆ ನೋಡಿ ಕಲ್ಲಿಮೆಂಬಂತೆವೊಲಿರ್ದನಟ್ಟ ವಣೆ ಕೋಲ್ಗಳ ಮೇಲೆಸೆದಿರ್ದ ವೀರಸಿದ್ಧಾಂತದ ಶಾಸನಂ ಬರೆದ ಪೊತ್ತಗೆಯಂತಮರಾಪಗಾತ್ಮಜಂ (ಪಂಪಭಾ. ೧೧-೪೬) ; ಧೈರ್ಯನಿಧಿ ಕೊಂಡ ಕುಂದಾಚಾರ್ಯರ ಚರಣಂಗಳೊಲೆದು ನೆಲಮುಟ್ಟದ ತಾತ್ಪರ್ಯಮನ ಱಿದೆಂ (ಅರ್ಧನೇ. ೧-೧೪) ; ಕಯ್ಯೊಂಬೆಯಂ ತೂಗೆ ನೆಲಮುಟ್ಟ ಕುಂಬಿಟ್ಟು (ಕಾಲೂರ. ೧೨೦-೨೫೧) ; ಇಬ್ಬರೂ ನೆಲಮುಟ್ಟ ಅಡ್ಡ ಬಿದ್ದರು (ಸಡಪಾ. I, ೪೩೬). [ನೆಲ+ಮುಟ್ಟು$_1$]

ನೆಲಮುಟ್ಟುಗೂರ್ (ನಾ). ಒಂದು ಊರಿನ ಹೆಸರು : ಅಗ್ನೇಯದೆಸೆ ಪುಲ್ಲಾಯಟಿ ದಕ್ಷಿಣದೆಸೆ ತಳ ಅಣ್ಣಯ್ ಸೈರಿತ್ತೆದೆಸೆ ನೆಲಮುಟ್ಟುಗೂರ್ (ಎಕ. X (S), ಮುಳಬಾ. ೩೨೮-೫೧ ; ಸು. 650).

[ನೆಲ+ಮುಟ್ಟುಗ ?+ಊರ್]

ನೆಲಮುಳ್ಳಿಹಣ್ಣು (ನಾ). "ಮೇಲ್ಭಾಗದಲ್ಲಿ ಹಳದಿ ಬೀಜಗಳು ತುಂಬಿರುವ, ಕೆಂಬಣ್ಣದ ಒಂದು ಬಗೆಯ ತಿರುಳು ಹಣ್ಣು (ಬಿಡುವ, ಬಳ್ಳಿಗವಲುಗಳುಳ್ಳ, ಬಹು ವರ್ಷ ಇರುವ ಸಸ್ಯ) : ನೆಲಮುಳ್ಳಿ ಹಣ್ಣು" (Straw berry. ಇಂಕನ).

[ನೆಲ+ಮುಳ್ಳಿ ?+ಹಣ್ಣು$_3$ (<ಪಣ್$_3$)]

ನೆಲಮುಟ್ಟುಗೂರ್ (ನಾ). ಒಂದು ಊರಿನ ಹೆಸರು : ನೆಲಮುಟ್ಟುಗೂರ್ ಪ್ರತೀಚೀ ದೆಸೆ ಪೆದ್ದಾಣಯ್ ಮೈಅರಿ. ೧೯೧೭, ೯-೫೧ ; ?). 'ನೆಲಮುಟ್ಟುಗೂರ್' ಪರಾ.

[ನೆಲ+ಮುಟ್ಟುಗ+ಊರ್]

ನೆಲಮೂಗಿ (ನಾ). ಒಂದು ಬಗೆಯ ಸಸ್ಯ : "ವಿಷಾಣೀ – ಔಷಧಿ, ಚೇಳುವಾಲಿ, ನೆಲಮೂಗಿ" (ಔಷಧಿ. ೧೫೫). [ನೆಲ+ಮೂಗಿ ?]

ನೆಲಮೆಟ್ಟು$_1$ (ಕ್ರಿ). ಭೂಮಿಯನ್ನು ತುಳಿ,—ಮೆಟ್ಟು : ಹಲವು ಸಮತಲದೆ ವಹಿಸುತಲೆ ಪ್ರಪಾತದಲೆ ಇಳಿದು ನೆಲಮೆಟ್ಟ ಭೈರವನ ತೆರ ಮೊರೆದು (ಕಎಪು. ೩೧-೨). [ನೆಲ+ಮೆಟ್ಟು$_1$]

ನೆಲಮೆಟ್ಟು$_2$ (ನಾ). ಕುದುರೆಗಳ ಮೇಲೆ ಹಾಕುವ ತೆರಿಗೆ (?) : ನೆಲಮೆಟ್ಟನ ಭಾಯಿಯ ನಾಯಕನಿಂ ದೇವಗ್ಗಾ ಸ್ಥಳದ ನಾಲ್ಕುಂ ಕುದುರೆಯ ನೆಲಮೆಟ್ಟಂ ಬಿಟ್ಟಂ (ಎಇ. XV, ೩೨೨-೬೬ ; 1172) ; ಬಡಗಣಂ ಬಂದ ಕುದುರೆಗೆ ನೆಲಮೆಟ್ಟು ಹಾಗಪೊಂದು (ಎಇ. XIII, ೨೧-೫೧ ; 1204). [ನೆಲ+ಮೆಟ್ಟು ?]

ನೆಲಯಿಪ್ಪೆ (ನಾ). ಒಂದು ಬಗೆಯ ಹಿಪ್ಪೆ : "ಭೂಪೀಲುಃ – ನೆಲಯಿಪ್ಪೆ" (ಔಷಧಿ. ೧೧೨). [ನೆಲ+ಇಪ್ಪೆ$_1$ (<ಇರ್ಪೆ)]

ನೆಲರುದ್ರಾಕ್ಷಿಹೂ (ನಾ). ಒಂದು ಬಗೆಯ ರುದ್ರಾಕ್ಷಿಹೂವು : ಕೆಂಪುಗೊಂಡೆ, ನೆಲರುದ್ರಾಕ್ಷಿಹೂ (ಮೈಔಗಿ. ೪೦-೭೮೬).

[ನೆಲ+ರುದ್ರಾಕ್ಷಿ+ಹೂ$_2$ (<ಪೂ$_2$)]

ನೆಲವ (ನಾ). ಒಂದು ಬಗೆಯ ಸಸ್ಯ : ಸಮುದ್ರಸೋಗೆಬೀಜ ಉಮ್ಮತ್ತದ ಬೀಜ ನೆಲವದ ಹಗಿನು . . . ಇವಂ ಸಮಾನಂಗೊಂಡು ಭಂಗಿಯ ಸೊಪ್ಪಿನ ರಸದಿಂದ ಲೇಸಾಗಿ ಮರ್ದಿಸಿ (ಕಾಮಶಾ. ೧-೨೬೫). 'ಎಲವ' ಪರಾ. [?]

ನೆಲವಕ್ಕೆ 'ನೆಲವಟ್ಕೆ' ನೋ.

ನೆಲವಟ್ಟ (ನಾ). ನೆಲದ ಮಟ್ಟ,—ಪಾತಳಿ: ಘಟಸ್ಥಾವರದೊಳಗನೊಡೆದು ಕೆಚ್ಚನ ಹೊಟೆಯ ಕಡೆಗಾಣಿಸಿ ಮಕ್ಕಾದ ಹೊಜಗಣ ಹೊಟೆಯ ತಿಗುಡಂ ಕೆತ್ತಿ ಕಂಬದ ಶುದ್ಧಿಯಿ ನೆಲವಟ್ಟಕ್ಕೆ ಚಮುರಸವನಿಂಬುಗೊಳಿಸಿ . . . ಕಂಬ ಎರವಿಲ್ಲದೆ ನಿಂದ ಮತ್ತೆ (ಸರ್ವಜ. ೧೧೯–೬೧೭). [ನೆಲ+ಮಟ್ಟ$_1$]

ನೆಲವಣ್ಣ (ನಾ). ನೆಲಸಮ; ನಾಶ: ಹತ್ತು ತಲೆಯ ರಾವಣನ ಒಂದೆ ಅಂಬಿನಲಿ ಮಡುಹಿದ ಛಲದಿಂದ ಲಂಕಾದ್ವೀಪವ ನೆಲ [ಪಾಠಾಂ. ನೆಲೆ]ವಣ್ಣ ಮಾಡಿದ (ಬಸವ. ೬೨೪); ಹೊಲೆಯ ಹೋಗೆಲೊ ನಿನ್ನ ಮನೆಗೇ ವಂಶ ನೆಲವಣ್ಣವಾಗುವದು ಕಡೆಗೆ ನಿನ್ನ ತಲೆಯನರಿಯದೆ ಬಿಡರು (ಪಾಂಡಿಚ. ೨೮–೩). [ನೆಲ+ಬಣ್ಣ]

ನೆಲವತ್ತಿ$_1$ (ನಾ). ಒಂದು ಬಗೆಯ ಹತ್ತಿ: ನೆಲವತ್ತಿ ಕದಳಿಯ ರಸದಿಂದ ಸೇವಿಸೆ ಬಹುಮೂತ್ರ ಕಿಡುಗುಂ (ಸಾಳ್ವಸಾಂ. ೨೧).

[ನೆಲ+ಪತ್ತಿ$_1$ (<ಪಟ್ಟಿ)]

ನೆಲವತ್ತಿ$_2$ 'ನೆಲ್ಲವತ್ತಿ' ನೋ.

ನೆಲವತ್ತಿಗ (ನಾ). ಭೂಮಿಯ ಸಾಗುವಳಿದಾರ: ಬಾಹುಬಲಮಿಲ್ಲದ ರಾಜಪುತ್ರನಂತೆ ತಕ್ಕುಗೆಟ್ಟು ನೆಲಬಲಮಿಲ್ಲದ ನೆಲವತ್ತಿಗನಂತೆ ಕಟ್ಟು ಕಟಲ್ದು (ಶಾಂತಿಪು. ೪–೩೦ ಪ). [ನೆಲ+ಪತ್ತಿಗ$_2$]

ನೆಲವನೆ, ನೆಲಮನೆ (ನಾ). ೧. ನೆಲದ ಅಡಿಯಲ್ಲಿ ಮಾಡಿದ ಮನೆ; ನೆಲದ ಮಟ್ಟಕ್ಕಿಂತಲೂ ಕೆಳಗಿರುವ ಮನೆಯ ಭಾಗ: ಆ ಗ್ರೀಯವರ ನೆಲವನೆಯಪ್ಪ ಸಿಸ್ತನೆಯ ಗಾರ್ಗಸಿಯ ಬಯಲ್ಗಳನ್ ಸೇರ್ವಿನಂ . . . ನಡೆದು ಪೋಗು (ಬದ್ಧಪ್ರ. ೪೨–೯೧೧). **ನೆಲಮನೆ:** ೧. ಅನಿಬರುಮಂ ನೆಲಮನೆಯೊಳಿಕ್ಕಿ ಮಲ್ಲಲ್ ಪುಗುವನಿತು ಬಾಗಿಲಂ ಮಾಡಿ (ಪಡ್ಡಾರಾ. ೧೮೨–೯); ಶರೀರದ ನೆಲಮನೆಯಲ್ಲಿದ್ದು ನೆರೆವಸ್ತುವನಱಿವುದಕ್ಕೆ ಕುಱುವಾವುದು (ನೋಳಿಮಾ. ೫೩–೨೨೦); ನೆಲಮನೆಯೋಪಪೊಡನಯ್ಯಿಲ ದೆವಸಂ ಸುಖದಿನಿರ್ಪೆಯುಂಗಜ ತಪದಿಂದೊಲೆದೊರ್ವೆಯೆ ಬಯಲೆಡೆಗಳೊಳಲಸದೆ ನೀಂಬೇಟ್ಟ ವಾಸದೊಳ್ ಸೈರಿಸುವಾ (ಬಂಹರಿ. ೧೪–೧೪); ಮುಕ್ತಾದೇವಿಯ ಕೈಹಿಡಿದು . . . ಅವಳನ್ನು ನೆಲಮನೆಯಲ್ಲಿಳಿಸಿದ ಕಾಪಾಲಿ (ಅಕ್ಕಮ. ೫೩). ೨. "(ಮುಂ. ಬಂಡೆಯಲ್ಲಿ ಕೊರೆದು ಮಾಡಿದ, ಕಲ್ಲಿನಿಂದ ಅಥವಾ ಇಟ್ಟಿಗೆಯಿಂದ ಕಟ್ಟಿ ಮಾಡಿದ) ಸಮಾಧಿ ಗುಹೆ; ಗೋರಿ; ಹೆಣ ಹೂಳುವ ಗುಹೆ. ನೆಲಮನೆ"(Sepulchre. ಇಂಕಸಿ). ೩. ನೆಲಮಾಳಿಗೆಯ ಬಂದಿಖಾನೆ: (ಕ). [ನೆಲ+ಮನೆ]

ನೆಲವರ$_1$ 'ನಿಲವರ' ನೋ.

ನೆಲವರ$_2$ (ನಾ). ಮರಣ ಸ್ಥಳ; ಮರಣ ಭೂಮಿ: ಆಗಳಗುರ್ವು ಮದ್ಭುತಮುಮಾಗೆ ನೆಲೆಯಿಂ ತಳರ್ದು ನೆಲವರದೆಡೆಗೆ ಕಾಲೊಯ್ಯುಮೆಂಬ ಮಾತಂ ನನ್ನಮಾಟ್ಟಂತೆ ಪೌದನಪುರಕ್ಕಾಸನ್ನಮಾಗೆ ಬಂದು (ವರ್ಧಮಾ. ೪–೩ ಪ); ಉದಯನವಾಂಶಕ ಪತಿ ಯಾವುದೊಂದು ಮಂದಿರದೊರ್ದನಾಗೃಹಸಂಬಂಧದ ಭೂಮಿಯೊಳಾತಂ ಸಾಯದಿರಂ ಮಿಗುವನ್ನರೊಳರೆ ನೆಲವರದೆಡೆಯಂ (ಜಾತಕ. ೨೩–೨೨); "ಗೊತ್ತಾದ ಭೂಮಿ; ಸಾಯುವ ನೆಲ" (ಜಾತಕ. ಕೀರ್ಣ). [?]

ನೆಲವರ್ತಿ 'ನೆಲ್ಲವತ್ತಿ' ನೋ.

ನೆಲವಲ, ನೆಲಬಲ (ನಾ). ೧. ದೊಡ್ಡ ಸೈನ್ಯ; ಮಹಾಬಲ (?): ನೆಲಬಲನೆನೆನ್ನದಲ್ಲದಿದು ಪೆರ್ಬಲವೆಂದೆ ದೋಃಪ್ರತಾಪದಿಂ ಗಿಲಿಗಿಲಿಗಂಬವಾಡಿಸುವನಾಹವದೊಳ್ ಕಲಿ ಬಿಟ್ಟದೇವನ್ (ಎಕ. XII, ಚಿಕ್ಕನಾ. ೪೩–೧೭; 1171); ನೆಲವಲ; ಪೆರ್ವಲ; ಭುಜಬಲ (ಶಮದ. ೨೯೮ ಪ್ರಯೋ). **ನೆಲಬಲ:** ೨. (?): ಬಾಹುಬಲಮಿಲ್ಲದ ರಾಜಪುತ್ರನಂತೆ ತಕ್ಕುಗೆಟ್ಟು ನೆಲಬಲಮಿಲ್ಲದ ನೆಲವತ್ತಿಗನಂತೆ ಕಟ್ಟು ಕಟಲ್ದು (ಶಾಂತಿಪು. ೪–೩೦ ಪ). [ನೆಲ+ಬಲ$_3$]

ನೆಲವಳಿ (ನಾ). ಒಂದು ಬಗೆಯ ತೆರಿಗೆ,—ಸುಂಕ; ಭೂಕಂದಾಯ: ಭಂಡಿಯ ಬತ್ತದ ಸುಂಕ ಉಪ್ಪರ ನೆಲವಳಿ ಅಸುವು ಅಳು ಅರ [ಕಾ]ಣಕೆ ಕಡಾಯಿಉ . . . ಇಂತಿಷ್ಟಉ . . . ಬರದು ಕೊಟೆಉ (ಸೌಇಇ. IX–ii, ೪೩೮–೧೫; 1417). [ನೆಲ+ಬಳಿ$_7$ (=ಬಲಿ$_2$)]

ನೆಲವಟ್ಕೆ, ನೆಲವಕ್ಕೆ (ನಾ). ೧. ನೆಲದ ಮೇಲೆ ಮಲಗುವುದು; ಭೂಶಯನ: ಪಂಚಶಯ್ಯೆಯೊಳಗೊಜಗುವಿಂಬದುವೆತ್ತ ಹಾ ಪರಲ ಮೊನೆಯೊತ್ತೆ ನೆಲವಟ್ಕೆ(ಕೈ)ಯಿರವೆತ್ತ (ಜೀವಸಂ. ೧೨೦–೧೪). **ನೆಲವಕ್ಕೆ:** ೨. [ಜೈನ] ಮುನಿಗಳು ಆಚರಿಸಬೇಕಾದ ಇಪ್ಪತ್ತೆಂಟು ಮೂಲಗುಣಗಳಲ್ಲಿ ಒಂದು; ನೆಲದ ಮೇಲೆ ಮಲಗುವುದು; ಇ "ಗುಣ–೨೮: ಪಂಚಾಣುವ್ರತಗಳು, ಪಂಚಸಮಿತಿ, ಪಂಚೇಂದ್ರಿಯಸಂಯಮ, ಷಡಾವಶ್ಯಕಗಳು, ಸ್ನಾನಾಭಾವ, ಭೂಮಿಶಯನ, ನಗ್ನತ್ವ, ಕೇಶೋತ್ಪಾಟನ, ಏಕಾಶನ, ದಂತಧಾವನಾಭಾವ, ಸ್ಥಿತಾಶನ" (ತ್ರೈಲೋಕ್ಯ. ೧೫೧) : ಲೋಚುಂ ಪುಡದುದಂ ಮೀಯದುದಂ ನೆಲವಕ್ಕೆಯುಂ ಹಲ್ಲಂ ಸುಲಿಯದುದುಂ . . . ಎಂದಿಪ್ಪತ್ತೆಂಟು ಮೂಲಗುಣಂ (ಶಾಸ್ತ್ರಟೀ. ೬೨–೧) ; ನೆಲವಕ್ಕೆ ಮೊದಲಾದ ಮೂಲಗುಣಗಳು ವೆಗ್ಗಳಿಸಿದುತ್ತರಗುಣನಿಚಯ ಹಲವಿವು ಧ್ಯಾನಕೆ ಹೊಜಸಹಕಾರಿಗಳೆಲೆ ಭವ್ಯರಿರ ಕೇಳಿರೆಂಬ (ಭರತ. ೬೦–೮೬).

[ನೆಲ+ಪಟ್ಕೆ]

ನೆಲವಾಸು 'ನೆಲೆವಾಸು' ನೋ.

ನೆಲವಾಳ್ 'ನೆಲೆವಾಟ್' ನೋ.

ನೆಲವಾಳಿಗೆ, ನೆಲಮಾಳಿಗೆ (ನಾ). ೧. = ನೆಲಮನೆ: ಎಸಟ ಪಸೆಗಳೊಳಂ ಪಳುಕಿನ ನೆಲವಾಳಿಗೆಗಳೊಳಂ ಧಾರಾಗೃಹಂಗಳೊಳಂ ಜಲಮಂಟಪಂಗಳೊಳಮೆಂತುಮಾ ಸಂತಾಪಮಂ ಸಂತಯಿಸಲಾಱದೆ(ಕಾದಂಉ. ೬೬೩); ತನ್ನ ನೆಲವಾಳಿಗೆ [ಪಾಠಾಂ. ನೆಲಮನೆ]ಯೊಳರ್ದ ಪೊನ್ನೆಟ್ಟಂ ತೋಱುಂದೊಡವರ್ ಬೆಕ್ಕಸಮಾಗಿರ್ದಿಂತೆಂದರ್ (ಜೀವಸಂ. ೧೪೯–೩೧ ಪ); ರಾತ್ರಿಯೊಳಾಂ ಕನ್ನವನಿಕ್ಕಿ ಪೋಗುತಿರ್ಪಲ್ಲಿ ವಿಳಾಸದೆ ಕಂಡೆನೊಂದು ನೆಲವಾಳಿಗೆಯಂ (ದಶಕು. ೯–೧೧೯); ಈ ಅರಮನೆಗೇ ನೆಲವಾಳಿಗೆಗಳ್ಗೆ ಏರಿ ಬಂದಿರುವ ಮಧುಮದ್ಯಭಾಣ್ಡಗಳೂ . . . ಉಬ್ಬಿ ವಿಜೃಂಭಿಸುತ್ತಿರುವಾಗ (ಬೆಟ್ಟಉ. ೨೧–೧೦). **ನೆಲಮಾಳಿಗೆ:** ೧. ಎಟ್ಟಾನ ರೂಪನಱಿಯಲಾಱದಿರ್ಕುಮೆಂದು ಸಿರಿದಪ್ಪ ಪೊನ್ನೆಟ್ಟಂ ಮಾಡಿ ನೆಲಮಾಳಿಗೆಯೊಳ್ ಬಯ್ತಿಟ್ಟು (ಜೀವಸಂ. ೧೪೮–೩೦ ಪ) ; ಕೊಲಿಸು ರಾಮನನೆಂದು ಬಲಿದು ಮಂತ್ರಿಗೆ ಪೇಳಲವನು ನೆಲಮಾಳಿಗೆಯೊಳಿಟ್ಟವನ ಕೊಲಿಸಿದೆನೆಂದು ನೆಲೆ ಮಾಡಲಾ ಸುದ್ದಿಯನು ಕೇಳಿ (ಕುರಾಸಾಂ. ೧–೮೮) ; ಹಲರಱಾಯದ ನೆಲಮಾಳಿಗೆಯೊಳಗೊಬ್ಬ ಬೆಳಗಿದ ದೀವಿಗೆಯಂತೆ ಕಲಿಲಾರಿ ಬಲ್ಲ ತಾ ಬಲ್ಲನನ್ಯರು ಕಾಣದೊಳಗಿದ್ದುದಾತ್ಮ ಪ್ರಕಾಶ (ಭರತ. ೬೨–೪೧) ; ಮಂದಾರಮಾಲೆಯಿರುವ ಬಳಿಯು ತಿಳಿಯಲಿಲ್ಲ ಯಾವ ನೆಲಮಾಳಿಗೆಗಳಲ್ಲಿ ಬಚ್ಚಿಟ್ಟಿಯಿರುವನೊ (ಸೌಗಂಧಿ. ೪೫೨–೧); ಹಣತೆಯ ಕುಡಿ ಬೆಳಗುವುದಲ್ತೆ ಸೂರ್ಯನು ಬೆಳಗದ ನೆಲಮಾಳಿಗೆಯನು (ಇಂಚಾಪ. ೧೩೮–೮೦). ೨. ಕಣಜ; ಹಗೇವು: "ಗರ್ತಃ . . . ನೆಲಮಾಳಿಗೆ ಅಥವಾ ಹಗೇವಿನ ಹೆಸರು" (ಸಿದ್ಧಾಂತಿ. ೬೧).

[ನೆಲ+ಮಾಳಿಗೆ. /ತಮಿ. ನಿಲಮಾಳಿಕೈ]

ನೆಲವಾಳು 'ನೆಲೆವಾಟ್' ನೋ.

ನೆಲವಿಡಿ, ನೆಲಹಿಡಿ (ಕ್ರಿ). ೧. ಭೂಮಿಗೆ ಅಂಟಿಕೊಂಡಿರು,—ಹೊಂದಿಕೊಂಡಿರು: ನೆಲವಿಡಿದು ಹಮ್ಮದಂಬೋದವನ ಕಡಲಳಿಯೆ

ನೊಲವಿಂದ ಕಾಯಲೆಂದಾರಯ್ದುರೊದಗಿ (ಕಾಲೂರ. ೯೯–೧೯೭); ತಲೆ ಹೆಗಲ ಕೈಗಳಂ ತಿಕ್ಕಿ ಸುಯಿಲೆಳೆದು ನೆಲವಿಡಿದು ಕುಳಿತೊಡನೆ ನಾಡೆ ಬಂದಿತು ನೋಡೆ (ಕಾಲೂರ. ೧೦೨–೨೦೬). **ನೆಲಹಿಡಿ :** ೨. ತಳ ಸೇರು ; ನಾಶವಾಗು : ಮನುಷ್ಯನು ಆಶೆಯೆಂಬ ಪ್ರವಾಹದೊಳಕ್ಕೆ ಸಿಕ್ಕಿ ಕೊಚ್ಚಿಕೊಂಡು ಹೋಗಬಾರದು. ಹಾಗೆ ಹೋದರೆ ಅವನು ಎಲ್ಲಿಯಾದರೂ ಸುಳಿಗೆ ಸಿಕ್ಕಿ ಗುಟುಕುನೀರು ಕುಡಿದು ನೆಲಾ ಹಿಡಿಯುವುದೇ ಸರಿ (ನೀಗಟ್ಟು. ೧೧೭). ೩. ಹಾಸಿಗೆ ಹಿಡಿ : ಕ್ರಮವಾಗಿ ಜ್ವರವು ಹೆಚ್ಚಾಯಿತು—ಕಡೆಗೆ ನೆಲ ಹಿಡಿದು ಮಲಗಿದಳು (ದೇವೀಚೌ. ೨೭) ; ತುಳಸಿ ಗಾಯ ಹೊಂದಿ ಅಶಕ್ತನಾಗಿ ನೆಲ ಹಿಡಿಯದಿದ್ದರೆ ಆತನು ಲಾರಿಯವರೆಗೆ ಏನಾದರೂ ಮಾಡುತ್ತಿದ್ದ. ಆದರೆ ಅವನು ನೆಲ ಹಿಡಿದ (ಜವಿನಾ. ೪೫). ೪. (ಆಲಂ) ಕುಗ್ಗು ; ಕುಸಿ ; ನಿರ್ವಿಣ್ಣವಾಗು : ಸಾಲದ ಹೊರೆಯಿಂದ ನೆಲ ಹಿಡಿದಿದ್ದರು (ಶ್ರೀಮಾಪ್ರ. ೨೪೮) ; ಅಪೀಲು ಮಾಡಲು ಹಣವಿಲ್ಲ ಎಂದು ನೆಲಹಿಡಿದರೂ ತಾವೇ ವೆಚ್ಚಮಾಡಿ ಅಪೀಲು ಮಾಡಿದರು (ಮನೆಬೆ. ೯). [ನೆಲ+ಹಿಡಿ$_1$]

ನೆಲವೀಡು 'ನೆಲೆವೀಡು' ನೋ.

ನೆಲವು 'ನೆಲುವು' ನೋ.

ನೆಲವುಟ್ಟು (ನಾ). ಭೂಮಿಯ ಮೇಲೆ ಜನನವಾದುದು : ಇನ್ನೊರ್ವನನ್ ನೋಡಿರ್ದನೆನ್ . . . ಆ ಬಿತ್ತರದ ಸೈಲೀಷಿಯದ ಗವಿಗಳಾ ನೆಲವುಟ್ಟು ನೆಲಸಿಗನನುಗ್ರನನ್, ಭೋರ ಶತಶಿರದ ಟೈಫೊನನ್ (ಬದ್ದಪ್ರ. ೨೦–೪೦೮). [ನೆಲ+ಪುಟ್ಟು$_2$]

ನೆಲವುತ್ತು (ನಾ). ಭೂಮಿಯೊಳಗಿರುವ ಹುತ್ತ : ನೆಲವುತ್ತಿನೊಳ್ ಪೊನಲು ಪುಗೆ ಪಾವು ಪೊಜಮಟ್ಟು ಪೆಡೆಗಳಂ ಕೊಡೆಗಳಂತೆತ್ತಿದುವು ಕಡೆಪಟ್ಟು (ಅಸಂಪು. ೯–೧೬ ರಗಳೆ). [ನೆಲ+ಪುತ್ತು$_1$]

ನೆಲವುವಿಡಿ (ಕ್ರಿ). ನೆಲುವಿನಲ್ಲಿ ಒಂದರ ಮೇಲೊಂದಿರು : ಅಡಕಿಲ ಮಡಕೆಗಳೆಂಟುಂ ಬೆಡಂಗು ನಿಲೆ ನೆಲವುವಿಡಿದು ನಿಲ್ವಂತೆಂಟುಂ ಪೊಡವಿಗಳಂ ತಾಳ್ದಿದುವೋಗಡಿಸದೆ ಮೂಱುಂ ಮಹಾನಿಲಂಗಳ್ ಕ್ರಮದಿಂ (ಕಾಂಪು. ೧೨–೫೧). [ನೆಲವು (<ನೆಲುವು)+ಪಿಡಿ$_1$]

ನೆಲವೆಂಬು (ನಾ). ಒಂದು ಬಗೆಯ ಸಸ್ಯ : ಬಿರಟು, ಪಾದರು, ನೆಲವೆಂಬು, ಗಂಟುಕಾಲು, ಕೆರೇಹಿಪ್ಪಲಿ (ಸಮ್ಮಸು. ೨೩೮). 'ನೆಲಬೇವು' ಪರಾ. [←ತಮಿ. ನಿಲವೇಮ್ಬು]

ನೆಲವೆಣ್, ನೆಲವೆಣ್ಣು (ನಾ). ಭೂದೇವಿ ; ಭೂಮಿ : ತಳೆದಳೊ ಪತಿಯಂ ನೆಲವೆಣ್ ಬಳೆದನುರಾಗದೊಳೆ ಹೃದಯದಿಂದೆಂಬಿನೆಗಂ ಥಳಥಳಿಪ ರತ್ನಕುಟ್ಟಿಮತಳದೊಳ್ ಪೊಳೆದತ್ತು ರೂಪು ಭೂಪೋತ್ತಮನಾ (ಕಾದಂಪೂ. ೩೩) ; ಆಳಿಮಾಳೆ ಬಳಸಿದೀ ಪೂವಲಿಯಲರ್ಗಳ್ಗುರುಳ ಚಿನ್ನ ಪೂವಿನ ಚೆಲ್ವಂ ನೆಲವೆಣ್ಗೆ ಪಡೆದಿದೇಂ ಕಣ್ಮಲರನಲರ್ಚಿದುವೊ ಮಣಿಮಯಾಂಗಣತಳದೊಳ್ (ವರ್ಧಪು. ೫–೫) ; ನೆಲವೆಣ್ಣಂ ಚತುರಂಬುರಾಶಿ ರಶನಾಳಂಕಾರೆಯಂ ವಿಕ್ರಮಾತುಲಸೌಂದರ್ಯದಿನಿಂತು ಕೂರಿಸಿ ನಿಜಚ್ಛತ್ರಾಮಳಚ್ಛಾಯೆಯೊಳ್ ನಿಲಿಸಿಟ್ಟಂ ಸತತಂ ಸಮಗ್ರವಿಭವಂ ವಿಶ್ವಂ ಭರೋರ್ವೀಶ್ವರಂ (ಕುಸುಮಾ. ೩–೩) ; ನೆಲವೆಣ್ಣ ಗಿರಿನಿತಂಬಸ್ಥಲಮದು (ರಾಜಶೇ. ೬–೨೪). **ನೆಲವೆಣ್ಣು :** ರತ್ನಾಕರ ನೆಲವೆಣ್ಣನುಡೆಯ ಮೇಖಲೆಯಂದದೆ ಪರಿವೇಷ್ಟಿಸಿರ್ದುದನೇಕಸಂಭ್ರಮವನೇನೆಂದೆ (ಮೋಹತ. ೨–೪) ; ನಲ್ಮೆಯಿಂ ನೆಲವೆಣ್ಣು ನೀಡುವಳ್ ಕಣ್ಮುಚ್ಚಿ ನಿಲ್ಲದಾ ಕೈವುರುಳ್, ಹೊಳಲ ಬಾಯಲ್ಲಿ (ಕಾಲೂರ.೨೬–೧೭). 'ನೆಲವೆಣ್ಮಗಳ್' ಪರಾ. [ನೆಲ+ಪೆಣ್]

ನೆಲವೆಣ್ಣು 'ನೆಲವೆಣ್' ನೋ.

ನೆಲವೆಣ್ಣುಮಗಳ್ 'ನೆಲವೆಣ್ಮಗಳ್' ನೋ.

ನೆಲವೆಣ್ಮಗಳ್, ನೆಲವೆಣ್ಣುಮಗಳ್ (ನಾ). ಭೂಮಿಯ ಮಗಳು; ಅವನಿಜೆ ; ಸೀತೆ : ಲಕ್ಷ್ಮಣಾಗ್ರಜನವಂ ನೆಲವೆಣ್ಮಗಳಿಗಿನಿಯನಯ್ ! (ಶ್ರೀರಾಮಾ. ೨೭೨–೨೩೩). **ನೆಲವೆಣ್ಣುಮಗಳ್ :** ನೆಲವೆಣ್ಣು [ಪಾಠಾಂ. ಣ್ಣ]ಮಗಳಿರುತಿರ್ದ ರಾಜಮಂದಿರಕ್ಕೆದಿ ಕಣ್ಣೋಳ್ಕಿಸದೆ ತಲೆವಾಗಿ ದೂರದೊಳೆ ನಿಂದಾ ಸೀತೆಗಿಂತೆಂದನು (ಜೈಮಿಭಾ. ೧೮–೬೦).

[ನೆಲವೆಣ್+ಮಗಳ್]

ನೆಲವೊಡಿಗೆ (ನಾ). ಒಂದು ಗ್ರಾಮದ ಹೆಸರು : ಭೈಮರಥೀನದೀ ಪಶ್ಚಿಮೇ ತೀರೇ ನೆಲವೊಡಿಗೆ ನಾಮಗ್ರಾಮಮ್ (ಮೈಅರಿ. ೧೯೦೯, ೨–೧೪ ; 749). [ನೆಲ+ ?]

ನೆಲವೊರೆಗ (ನಾ). ಲೋಕವನ್ನು ಪಾಲಿಸುವವನು ; ಭೂಮಿಯನ್ನು ರಕ್ಷಿಸುವವನು ; ರಾಜ : ಪಲಗಣ್ಣಂ ಪಾಱುಂಬಳೆ ಗೈಯಂ ನೆಲವೊರೆಗಂ ಬೆಂತರಬಲ್ಲಹನುಜ್ಜಲಿಸುವ ಹೋಯಿಸರಾಣ್ಮಂ ಮಿಗದರಸಂ ಮೊದಲಾಗಿ ಸಲೆ ಸೊಗಯಿಸುವ ಶತೇಂದ್ರರ್ . . . ಜಿನಪನ ಗಂಧಕುಟಿಯೊಳೆಡೆಗಿಱಿದಿಹುದು (ಜಯಕಾ. ೧೬–೬೯).

[ನೆಲ+ಪೊರೆ$_3$+–ಗ$_2$]

ನೆಲವೊಜೆ (ನಾ). ಭೂಮಿಯ ಹೊರೆ ; ಭೂಭಾರ : ನೆಲವೊ [ಪಾಠಾಂ. ದೊ]ಜೆಯಂ ತಾಂ ತಳೆದೆಮ್ಮಲಸತೆಯುಂ ಕಳೆದು ಪೊಜೆ ದುದೀ ಗಿರಿಯೆಂದಾ ನೆಲದಳದ ಕರಿಗಳೇತ್ತಂದಲಸದೆ ಸೇವಿಪವೊಲದಜೊಳಾನೆಗಳೆಸೆಗುಂ (ರಾಜಶೇ. ೫–೬೪). [ನೆಲ+ಪೊಜೆ]

ನೆಲಸಂಪಗೆ, ನೆಲಸಂಪಿಗೆ (ನಾ). ಒಂದು ಬಗೆಯ ಸಂಪಿಗೆ ಗಿಡ ಮತ್ತು ಅದರ ಹೂವು : ನೆಲಸಂಪಗೆಯೂ ವಿಲಸಿತಮಾಯ್ತು ಮನುಪುಷ್ಪವಾಟಿಯೊಳಾಗಳ್ (ಹಾಲಾಸ್ಯ. ೧–೪–೯೦). **ನೆಲಸಂಪಿಗೆ :** ಮರಸಂಪಿಗೆಯನು ನೋಡಿಹ ಜನಗಳು ನೆಲಸಂಪಿಗೆಯನು ಕಂಡಿಹರೇ ? (ದುಂಜಿನಾ. ೮೪–೨) ; ಸುಗಂಧರಾಜ, ನೆಲಸಂಪಿಗೆ, ಸಂಧ್ಯಾರಾಗ (ಮೈಕೆಗಿ. ೬೩–೧೨೮೨).

[ನೆಲ + ಸಂಪಗೆ. / ತಮಿ. ನಿಲಚ್ಚಮ್ಪುಞ್ಜಾ ; ತುಳು. ನೆಲಸಂಪಯಿ ; ತೆಲು. ನೆಲಸಂಪೆಗ]

ನೆಲಸಂಪಿಗೆ 'ನೆಲಸಂಪಗೆ' ನೋ.

ನೆಲಸಕ್ರೆಗಡ್ಡೆ (ನಾ). ಒಂದು ಬಗೆಯ ಗಡ್ಡೆ : (ಮೈಕೆಗಿ. ೫೨–೧೦೩೫).

[ನೆಲ+ಸಕ್ರೆ(<ಸಕ್ಕರೆ)+ಗಡ್ಡೆ]

ನೆಲಸಣ (ನಾ). ಸ್ಥಳ; ನಿವೇಶನ : ವರ್ಷಕ್ಕೆ ಮುರದಲೊಂದಡಕೆ ಎಲೆಯ ಸುಂಕ ಮನೆಯ ನೆಲಸಣಂ ಮೂಡಣ ಪೆರ್ಬಾಗಿಲಿಂ ಪೊಱಗು ತೆಂಕ ಸೇತುವಿನ ಬಡಗಣ ಕೋಡಿಂ ಮೂಡ ದೇವಾಲಯಂ (ಎಕ. VII, ತಿಕಾರಿ. ೨೦–೧೬; 1032) ; ಅಱುನೂಱು ಬಳ್ಳಿಯ ತೋಂಟ ಪನ್ನೆರಡು ಮನೆಯ ನೆಲಸಣವೆತ್ತುಗಾಣ ೧ ಕೈಗಾಣ ೧ (ಸೌಇಇ. IX–i, ೧೦೭–೧೫; 1050); ಮಾರಸಿಂಗಗಾವುಣ್ಡಂ ದೇವರ್ಗ್ಗೆ ಬಿಟ್ಟ ನೆಲಸಣ (ಸೌಇಇ. XI–ii, ೧೪೯–೩೫; 1100) ; ಹಿರಿಯ ಕೆಱೆಯ ಕೆಳಗೆ ತೋಂಟ ಕಂಮ್ಮ ೧೨ ಮನೆಯ ನೆಲಸಣಂ ೧೨ ಆ ನಲ್ಲಿಗನ ಗಾಣ ೧ (ಎಕ. VII, ತಿವನೊ. ೫೭–೬೯; 1115). [ನೆಲ+ ?]

ನೆಲಸಮ (ನಾ). ಭೂಮಿಯ ಮಟ್ಟ; ನೆಲದ ಸಮತಳ : ನೆಲಸಮ ಕೆಡವಿಸಬೇಕಂತೆ ! ಎಷ್ಟು ಹಿಂದಿನಿಂದ ಬಂದ ಮನೆ ! (ಯೋಧಪು. ೨೭).

ನೆಲಸಮ ಮಾಡು = ಭೂಮಿಯ ಮಟ್ಟ ಮಾಡು ; ನಾಶಗೊಳಿಸು : ನೆಲಸಮ ಮಾಡಿರಿ ಕತ್ತಲೆಗೂಡನು ಜಗಳವ ಬೆಳಸುವ ಭೇದದ ಬೀಡನು (ಕವಿಸೋ. ೧೪–೧೩) ; ಈ ಬಾರಿ ಶ್ರೀರಂಗಪಟ್ಟಣವನ್ನು ನೆಲಸಮ ಮಾಡದೆ ಬಿಡುವುದಿಲ್ಲವೆಂದು ಹೇಳುತ್ತಾರೆ (ದೌಲತ್. ೩೭೩). [ನೆಲ+ಸಮ$_3$]

ನೆಲಸರಿ (ನಾ). ೧. ಭೂಮಿಯ ಮಟ್ಟ. ೨. (ಆಲಂ) ನಾಶ; ನಿರ್ನಾಮ: ಬಲಮಿದೆ ಬಂದುದದ್ರಿ ಪುಡಿಯಪ್ಪಿನಮಗ್ಗದರಣ್ಯಮೆಲ್ಲಮುಂ ನೆಲಸರಿಯಪ್ಪಿನಂ ಘನತರಂಗಿಣಿ ಪಂಕಿಳಮಾಗುತಿರ್ಪಿನಂ (ರಾಜಶೇ. ೬-೩೪). [ನೆಲ+ಸರಿ$_5$]

ನೆಲಸರಿಸ (ನಾ). = ನೆಲಸರಿ ೨ : ಬಸದಿಗಳ ನೆಲಸರಿಸವಪ್ಪಂತೆ ಕಿತ್ತು ಪಾಳ್ಮಾಡಿ (ಪಾಸೋಪು. ೪-೧೧೭). [ನೆಲ+ಸರಿಸ$_1$]

ನೆಲಸಿಂದ (ನಾ). ಒಂದು ಬಗೆಯ ಔಷಧಿ ಸಸ್ಯ: ನೆಲಸಿಂಧ[ದ], ಸಿಹಿಹಾಲೆಯ ಬೇರು, ಕಿಱುಕಳ್ಳಂಗಡಲೆ, ಚಟ್ಟಾಮುಟ್ಟು, ಇಷ್ಟನೂ ಪ್ರತ್ಯೇಕ ಹತ್ತು ಹಲಗಳ ಚೆನ್ನಾಗಿ ಒಣಗಿಸಿ, ಜಜ್ಜುಗುಟ್ಟ (ವೈದ್ಯಸಾ. I, ೪೧೫). [ನೆಲ+ಸಿಂದ$_0$]

ನೆಲಸಿಗ (ನಾ). ನೆಲಸಿದವನು; ನೆಲೆ ನಿಂತವನು: ಇನ್ನೋರ್ವನನ್ ನೋಡಿರ್ದಪೆನ್ . . . ಆ ಬಿತ್ತರದ ಸ್ವೈರೀಸಿಯದ ಗವಿಗಳಾ ನೆಲವುಟ್ಟು ನೆಲಸಿಗನನುಗ್ರನನ್, ಘೋರ ಶತಶಿರದ ಟೈಫೊನನ್ (ಬದ್ಧಪ್ರ. ೨೦-೪೦೮). [ನೆಲಸು$_1$+-ಇಗ]

ನೆಲಸಿವಚೆಳ್ಳೆ (ನಾ). ಒಂದು ಬಗೆಯ ಸಸ್ಯ: "ಭೂಚುಕ್ರಃ—ನೆಲಸಿವಚೆಳ್ಳೆ" (ಔಷಧಿ. ೧೧೨). [ನೆಲ+ಸಿವಚೆಳ್ಳೆ]

ನೆಲಸು$_1$, ನೆಲೆಸು (ಕ್ರಿ). ೧. ನೆಲೆ ನಿಲ್ಲು; ನೆಲೆಯೂರು; ನೆಲೆಗೊಳ್ಳು: ನೆಲಸಿದ ಕಾವ್ಯಂ ಕಾವ್ಯಕ್ಕೆ ಲಕ್ಷಣಂ ಸತತಮೆಂದೆ ಪಟಗನ್ನಡಮಂ ಪೊಲಗೆಡಿಸಿ ನುಡಿವರಾಗಮಬಲಹೀನರ್ (ಕವಿಗಾ. ೧-೪೮); ತುಂಗಭದ್ರನೆಂಬೊಂ . . . ಧನಶ್ರೀಯೆಂಬ ಮಹಾದೇವಿಯ ಗರ್ಭದೊಳ್ ನೆಲಸಿದಂ (ವಡ್ಡಾರಾ. ೧೫೬-೧೨); ನಿನ್ನ ಲೀಲಾಲಸದ್ಭಷ್ಟಿ ಪಾತಮೆರ್ದೆಯೊಳ್ ನೆಲಸಿರ್ದುವು (ಅದಿಪು. ೩-೨೩); ಪವನಂಗೆ ಪುಟ್ಟಿದಂ ರಾಘವನಣುಗಾಳ್ ತ್ರಿಣಯನಾಂಶಮೆನಿಪಣುವಂ ಪಾಂಡವಕೇತುದಂಡದೊಳ್ನೆಲಸುವುದಾವಗ್ಗಳಿಕೆ ಕಪಿಗೆ ಚಪಲತೆ ಸಹಜಂ (ಗದಾಯು. ೩-೪೧); ಶ್ರೀ ನೆಲಸೆ ವಕ್ಷದೊಳ್ ವಾಕ್‌ಶ್ರೀ ನೆಲಸೆ ನಿಜಪ್ರಸನ್ನಮುಖದೊಳ್ ವಿಜಯಶ್ರೀ ನೆಲಸೆ ಭುಜದೊಳೊಪ್ಪಿದನಾ ನರಪಂ ಸರಸಚತುರಕವಿಕುಲತಿಳಕಂ (ಬಾಧಪು. ೨-೧). ೨. (ಕಾಯಂ ಆಗಿ) ವಾಸಿಸು; ವಾಸ ಮಾಡು: ಪೆಸರೊಳ್ ಲಕ್ಷ್ಮಿಯೆನ್ನೆಗಂ ನೆಲಸಿ ತಾಂ ದುರ್ಯೋಧನೋರಸ್ಸ್ಥಳಾವಸಥಂ ದ್ರೋಣನದೀಜ ಕರ್ಣಭುಜವೀರ್ಯಾವೇಷ್ಟಿತಂ ಮಾಡೆ ಸಂತಸದಿರ್ದಂ (ಪಂಪಭಾ. ೧೩-೧೦೦); ರ[ಟ್ಟಕಿಳ]ಕಂ ಶ್ರೀಮಾನ್ಯಖೇಟದೊಳ್ನೆಲಸಿರ್ದ್ದಂ (ಸೌಇಇ. XI-i, ೪೧-೬; 969); ಮಲದ ಮೂತ್ರ ಕುಲದ ನಡುವೆ ಕಲಸಿ ನೆಲಸಿ ತೊಲಗದಿರ್ದು ಕೆಲಬಲಂಗಳಱಿಯದಧಮ ಕೂಪದಲ್ಲಿ ತಾವಿಸಿರ್ದು (ಹಂಪರ. ಹ. ೫೧೧-೨೩); ಈ ಕೋಲರು ಕೇವಲ ಭಾರತದ ಪೂರ್ವದಿಕ್ಕಿನಲ್ಲಿ ಮಾತ್ರ ನೆಲಸಿದಂತೆ ತೋರುತ್ತದೆ (ದ್ರಾವಿವಿ. ೩೧). ೩. ತಂಗು; ಬಿಡಾರ ಹೂಡು; ಬೀಡು ಬಿಡು: ಜಿನೇಂದ್ರದತ್ತಸೆಟ್ಟಿ . . . ಜಿನಕಥಾಳಾಪದೊಳಂ ನೇಸರ್ಪಟ್ಟು ನೇಸರ್ಮೂಡುವಿನಮಲ್ಲಿಯೆ ನೆಲಸಿರ್ದಂ (ಧರ್ಮಾಮೃ. ೬-೧೯); ನೆಲಸಿರ್ದ ಪಕ್ಕವಿಂಡುಗಳುಲಿದೆಟ್ಟು ವಿಭಾತಸಮಯದೊಳ್ ಪೋಗಲೊಡಂ (ಪುಷ್ಪಪು. ೧೨-೨). ೪. ಸ್ಥಿರವಾಗಿ ನಿಲ್ಲು; ದೃಢವಾಗಿ ನಿಲ್ಲು: ಜಲದ ನೆಟಲುಂ ಪರಮಂ ವಿಲಾಸಮುಂ ಬೆಗುವುದಿತವಿದ್ಯುಲ್ಲತೆಯುಂ ನೆಲಸವು ಚಲಂಗಳಾದಂ ವಿಲಾಸಿನೀಜನದ ನಲ್ಮೆಯುಂ ಸಂಗಮಮುಂ (ಕವಿಗಾ. ೩-೯೬); ಅಹಿತರಂ ಗೆಲ್ವ ಜಯಶ್ರೀಗೆ ಭುಜಶಿಖರಮಂ ನೆಲೆಯಾಗಿಸಿ ನೀಂ ನೆಲಸು ನೇಸಱುಳ್ಳಿನಮರಿಗಾ (ಪಂಪಭಾ. ೨-೧); ನಾಕಲೋಕಸುಖಮಂ ಕೈಕೊಂಡಳೋ ದೈವವೀ ರಮಣೀರತ್ನದ ಮೇಲೆ ಮೇಣ್ ನೆಲಸಿತೋ . . . ಎನುತ್ತೆ ಪದಪಿಂದಾನಾಕೆಯಂ ನೋಡಿದೆಂ (ಕಾದಂಪು. ೮೦೪). ೫. ಇರುವಂತೆ ಮಾಡು; ನೆಲೆಗೊಳಿಸು: ಪಟ್ಟೀಯ ಸೀರೆ ನೆರಿಯೋಳೆ, ಗಂಟಲಿಗೆ ಅಕ್ಷರವ ನೆಲಸವ್ವ, ನಾಲಿಗೆಗೆ ಅಕ್ಷರವ ನೆಲಸವ್ವ, ಗುಟ್ಟನಲಿ ಮತಿಯ ನೆಲಸವ್ವ (ಹಳ್ಳಿಬಾ. ೧೦). ೬. ಮೂಡು; ಕಂಡುಬರು; ಕಾಣಿಸು: ಬಾಳದಿನೇಶಬಿಂಬದ ನೆಟಲ್ ಜಲದೊಳ್ ನೆಲಸಿತ್ತೊ ಮೇಣ್ ಫಣೀಂದ್ರಾಳಯದಿಂದಮುರ್ಚಿದ ಫಣಾಮಣಿ ಮಂಗಳ ರಶ್ಮಿಯೋ (ಪಂಪಭಾ. ೧-೯೬). **ನೆಲೆಸು**: ೧. ಬಳಕಲಾ ಗ್ರಾಮದೊಳು ನೆಲೆ[ಪಾಠಾಂ.ಲ]ಸಿರ್ದ ಶಿವಲಿಂಗದೊಳಗೆ ಕಾರುಣ್ಯದಿಂದ ಪ್ರತ್ಯಕ್ಷವಾಗಿ (ಸೌಂದಪು. ೫-೫೨); ಆಗೊಂದು ಈಗೊಂದು ಬೀಳುತ್ತಿದ್ದ ಎಲೆ ಚಕ್ಕಂದವಾಡದೆ ಚಕ್ಕಳದ ಹಾಗೆ ನೆಲದ ಮೇಲೆ ನೆಲೆಸುತ್ತಿತ್ತು (ಹೊಸಕ್ರಿ. ೨೭೧); ರೋಗದ ಗತಿ, ರೋಗವನ್ನು ಗುರುತಿಸಿದ ಘಟ್ಟ . . . ಇವುಗಳ ಮೇಲೆ ರೋಗಿಯ ಭವಿಷ್ಯ ನೆಲೆಸಿರುತ್ತದೆ (ಕೆಲರೋ. ೨೩). ೩. ಹಯಮಂ ಹಿಡಿದೊತ್ತಿ ತಂದು ಮುಳ್ಳುಂದದ ಬೀಡನೊ × × × ಮುತ್ತವದಿಂ ನೆಲೆಸಿರ್ದ್ದು ಸೊಭನ (ಸೌಇಇ. XI-i, ೫೦-೯; 1005). ೬. ದಿನಕೃನ್ಮಂಡಲಮುರ್ವಿಯೊಳ್ ನೆಲೆಸಿತೋ ಮೇಣ್ದೇವಸಂದೋಹವಿಮಾಮುನಿಯಂ ಪೊಂಗಳಿನೊಲ್ದು ಪೂಜಿಸಿದರೋ . . . ಪೇಟೆಂಬತಿಭ್ರಾಂತಿಯಂ ಪುಟ್ಟಿಸಿ ತೊಳತೊಳಗುವ ಬಾಲಾರ್ಕನಂತಪ್ಪ ಶಿಶುವಂ ಕಂಡು (ಧರ್ಮಾಮೃ. ೮-೧೦೪).

ನೆಲಸಿ ನಿಲ್ = ಸ್ಥಿರವಾಗಿ ನಿಲ್ಲು; ನೆಲೆಗೊಳ್ಳು: ಕ್ಷತ್ರಂ ತೇಜೋಗುಣಮಾ ಕ್ಷತ್ರಿಯರೊಳ್ ನೆಲಸಿ ನಿಂದುದು (ಪಂಪಭಾ. ೧-೨೧); ಪಲವು ಕಾಲದಿಂ ಮೇಲೆ ಸಂಸಾರಸುಖಕ್ಕಲಸಿ ತಪೋವನದೊಳ್ ನೆಲಸಿ ನಿಲುತ್ತುಂ (ಪಂಚತಂ. ೩೦-೯); ಅಭಿನವಶ್ರೀಶೈಲವನೆ ಮಾಡಿ ಕಪಿಲಸಿದ್ಧಮಲ್ಲಿಕಾರ್ಜುನನೇ ನೆಲಸಿ ನಿಂದು (ಎಇ. XXIII, ೩೦-೯; 1265).

[ನೆಲೆ+-ಸು$_1$]

ನೆಲಸು$_2$ (ನಾ). ೧. ಬೀಡು; ಬಿಡಾರ: ಶಾತವಾಹನ ಪ್ರಭುಗಳ ಕಡೆಗಾಲದ ವೇಳೆಗೆ ಭಾರತೀಯರ ದೂರದ ನೆಲಸುಗಳು ಪೂರ್ವದಿಕ್ಕಿನಲ್ಲಿ ಪೀತಸಮುದ್ರದವರೆಗೂ ವೃದ್ಧಿಗೊಂಡಿದ್ದವು (ಭಾಇಪ್ರ. ೧೯೩); ಜೇನು ಹುಳುಗಳು ತಮ್ಮ ನೆಲಸಿನ ಹುಳುಗಳನ್ನು ಗುರ್ತಿಸಲು ಮತ್ತು ಗೂಡನ್ನು ನಿರ್ದೇಶಿಸಲು ಗುರ್ತಿನ ವಾಸನೆ ವಸ್ತುಗಳನ್ನು ಸ್ರವಿಸುತ್ತವೆ (ಕೀಟಬೆ. ೪೩). ೨. ನೆಲೆ: ಹಣಕಾಸು . . . ಬ್ಯಾಂಕು ವ್ಯವಹಾರ ಮುಂತಾದವಕ್ಕೆ ಸಂಬಂಧಿಸಿದ ಸಮಸ್ಯೆ ವಿಚಾರಗಳು ದಿನಬೆಳಗಿದ್ದರೆ ಏಳುತ್ತಿರುವ ಈ ಕಾಲದಲ್ಲಿ ವಿಷಯದ ನೆಲಸು ಯಾವುದು? (ಹಣಪ್ರ. XII, ೮೦೯). [< ನೆಲಸು$_1$]

ನೆಲಸುಗೆ (ನಾ). ಇರುವಿಕೆ; ಸ್ಥಿತಿ: "ಸ್ಥಿತಿ—ನೆಲಸುಗೆಯುಂ" (ತಸಾವ್ಯ. ೯). [ನೆಲಸು$_1$+-ಗೆ]

ನೆಲಸುನಾಡು (ನಾ). ವಲಸೆ ಹೊರಟವರು ಸ್ಥಾಪಿಸಿಕೊಂಡ ಸ್ವತಂತ್ರವಾದ ನಾಡು,—ಬೀಡುದಾಣ: ಶಿಕ್ಷೆ ವಿಧಿಸಲ್ಪಟ್ಟ ಅಪರಾಧಿಗಳ ನೆಲಸುನಾಡಾದಾಗಲೇ ಇಲ್ಲಿ ಭೂವ್ಯವಸಾಯ ಪ್ರಾರಂಭವಾಯಿತು (ಕವಿಕೋ. I, ೭೩); ಬ್ರಿಟನ್ ದೇಶದಲ್ಲಿಯೂ ಅದರ ನೆಲಸುನಾಡುಗಳಲ್ಲಿಯೂ ಅಲ್ಲಲ್ಲಿಯ ಪ್ರಜೆಗಳು ಎಂಥಾ . . . ಸ್ವರಾಜ್ಯವನ್ನು ಪಡೆದಿದ್ದಾರೋ ಅಂಥಾ ವ್ಯವಸ್ಥೆಯೇ ನಮಗೆ ನಮ್ಮ ದೇಶದಲ್ಲಿ ಬೇಕಾದದ್ದು (ರಾಜ್ಯಶಾ. ೨೧). [ನೆಲಸು$_1$+ನಾಡು]

ನೆಲಸುಹಕ್ಕು (ನಾ). ವಾಸ ಮಾಡುವ ಸ್ವಾಮ್ಯ; ನೆಲಸುವ ಅಧಿಕಾರ: ಯುದ್ಧದ ಬಂದಿಗಳನ್ನೂ ನೆಲಸುಹಕ್ಕಿಲ್ಲದ ವಿದೇಶೀಯರನ್ನೂ ನಿರ್ಬಂಧದಲ್ಲಿಡುವ ಪಾಳೆಯ (Internment camp. ಇಂಕಸಿ). [ನೆಲಸು$_1$+ಹಕ್ಕು$_2$]

ನೆಲಸೆಣಬು (ನಾ). ಒಂದು ಬಗೆಯ ಸೆಣಬು: ಎಳ್ಳೆ ನೆಲಸೆಣಬು ಬಿಳಿಗಾರ ಮಣಿಶಿಲಾ ಜಾಡಿಯೆಲೆ ರಸದಲ್ಲಿ ಕೋಪ್ಪ ಇವೆಲ್ಲವಂ ಅರೆದು

ಲಿಂಗಲೇಪನ ಏಳುದಿನ ಪರ್ಯಂತ ಮಾಡಲು ಲಿಂಗ ಉತ್ಥಾಪಿಸುವದು (ಕಾಮಶಾ. ೨೭೪). [ನೆಲ+ಸೆಣಬು(<ಸಣಂಬು)]

ನೆಲಹಲಸು (ನಾ). ಒಂದು ಬಗೆಯ ಹಲಸು : ಹಲಸು ಚಟ್ಟಲಸು ರುದ್ರಾಕ್ಷಹಲಸು ನೆಲಹಲಸು ಬಕ್ಕೆವಲಸು ನೇರಿಳೆ . . . ಮೊದಲಾದ ರಸ್ಯಸುಖಾರ್ಹ ಸಾರ್ವರ್ತುಕಮಾದ ಫಲಂಗಳುಳ್ಳ ತರುನಿಕರಂಗಳುಂ (ವಿನೇಕ. ೨೨೬). [ನೆಲ+ಹಲಸು(<ಪಲಸು)]

ನೆಲಹಾಗ (ನಾ). ಶವಸಂಸ್ಕಾರ ಮಾಡುವ ಸ್ಥಳಕ್ಕೆ ತೆರಬೇಕಾದ ಹಾಗ ; ಶ್ಮಶಾನದ ಸುಂಕ : ಇಟ್ಟಣಿಸಿದ ಸಭೆಯೊಳಗೆ ಕೊಟ್ಟನೆನ್ನೊಡೆಯನು ವೀರಬಾಹುಕನೆಂದು ಹುಟ್ಟಿದ ನೆಲಹಾಗ ಸೆರಗ ಎಂದು ಕೂಗುತ (ಹರಿಸಾಂ. ೪-೧೪) ; ಚಂದ್ರಮತಿ ಅರ್ಧರಾತ್ರಿಯಲ್ಲಿ ಅಱಸಿಕೊಂಡು ಹೋಗಿ ಹೆಣನಂ ಕಂಡು ಸುಡುವುದಕ್ಕೆ ತರಲು ಹರಿಶ್ಚಂದ್ರನು ನೆಲಹಾಗವಂ[ಪಾಠಾಂ. ನೆಲನ ಹಾಗವ] ತಾರೆನಲು (ಭೈರಸೂ. ೭೧) ; ನೆಲಹಾಗ ಪಣೆಯಕ್ಕಿಯಿಲ್ಲದಿರೆ ಸುಡಲೀಸೆ (ತುರಂಗ. ೩೨-೩೧).

[ನೆಲ+ಹಾಗ(<ಪಾಗ₁)]

ನೆಲಹಾದರಿ (ನಾ). ಒಂದು ಬಗೆಯ ಪಾದರಿಗಿಡ : "ಭೂ ಪಾದರಿ—ನೆಲಹಾದರಿ" (ಓಷಧಿ. ೧೧೩); "ರಕ್ತಪುಷ್ಪಿಕಾ—ನೆಲಹಾದರಿ, ಶಂಖಪುಷ್ಪಿ" (ಓಷಧಿ. ೧೩೫). [ನೆಲ+ಹಾದರಿ(<ಪಾದರಿ₂)]

ನೆಲಹಾದಿ (ನಾ). ಭೂಮಿಯ ಮೇಲಿನ ದಾರಿ ; ಭೂಮಾರ್ಗ : (ಮುಂಬಯಿ. ಕಿ. ೪-೧೩೦). [ನೆಲ+ಹಾದಿ(<ಪಾದಿ₁)]

ನೆಲಹಾಸು (ನಾ). (ನೀರಿನ ಧಾರೆಯನ್ನು ತಡೆಗಟ್ಟಲು ಮತ್ತು ತಳವು ಕೊಚ್ಚಿಹೋಗದಂತೆ ತಡೆಯಲು) ಕಲ್ಲು ಇತ್ಯಾದಿಗಳನ್ನು ನೆಲಕ್ಕೆ ಹರಡಿ ರಚಿಸುವ ದಿಬ್ಬ,—ಜಗಲಿ : ಕೋಡಿಯ ಮೇಲೆ ಉರುಳಿದ ನೀರು ಕೋಡಿಹಳ್ಳದ ತಳವನ್ನು ಕೊರೆಯದ ಹಾಗೆ ನೆಲಹಾಸುಗಳಿಂದ ಭದ್ರಪಡಿಸಬೇಕು. ಈ ನೆಲಹಾಸನ್ನು ಕಾಡುಕಲ್ಲಿನಿಂದ ಮಟ್ಟವಾಗಿ ಇಲ್ಲಪೆ ಇಳಿಜಾರಾಗಿ ಕಟ್ಟಬಹುದು (ಶಿಲ್ಪಸಾ. ೩೭೪) ; ಮರಳಿನ ತಳಪಾಯದ ಮೇಲೆ ನಿಂತಿರುವ ಅಣೆಕಟ್ಟುಗಳು ಮೂರು ಬಗೆಯಾಗಿವೆ. ೧. ಅಣೆಕಟ್ಟಿನ ಮೇಲಿನಿಂದ ನೀರು ನೇರವಾಗಿ ಮಟ್ಟವಾದ ಕಲ್ಲುಗಾರೆಯ ನೆಲಹಾಸಿನ ಮೇಲೆ ದುಮುಕುವುದು . . . ೩. ನೆಲಹಾಸು (ಏಪ್ರಾನ್) ಇಳಿಜಾರಾಗಿ ಕಲ್ಲುಗುಂಡುಗಳಿಂದ ತುಂಬಿರುವುದು (ಕವಿಕೋ. I, ೨೪೦). [ನೆಲ+ಹಾಸು₃(<ಪಾಸು₂)]

ನೆಲಹಿಡಿ 'ನೆಲವಿಡಿ' ನೋ.

ನೆಲಹಿಪ್ಪಲಿ (ನಾ). ಒಂದು ಬಗೆಯ ಹಿಪ್ಪಲಿ : ಕೆರೆಹಿಪ್ಪಲಿ, ಗಜಹಿಪ್ಪಲಿ, ನೆಲಹಿಪ್ಪಲಿ (ಮೈಔಗಿ. ೫೧-೧೦೧೬). [ನೆಲ+ಹಿಪ್ಪಲಿ]

ನೆಲಹು 'ನೆಲಪು' ನೋ.

ನೆಲಹೊನ್ನೆ (ನಾ). ಒಂದು ಬಗೆಯ ಹೊನ್ನೆ : ಉರಿಮೆವೇಳ್ಪು, ಚಿತ್ರಮೂಲ . . . ನೆಲಹೊನ್ನೆ, ಶುಂಠಿ ಇವಂ ಕಷಾಯವಿಟ್ಟು ಕೊಡಲು ದೋಷಜ್ವರಂ ಗುಣಮಕ್ಕುಂ (ಸಕವೈ. ೧೦೬).

[ನೆಲ+ಹೊನ್ನೆ(<ಪೊನ್ನೆ)]

ನೆಲಾವರಿಕೆ (ನಾ). ಒಂದು ಬಗೆಯ ಆವರಿಕೆ ಗಿಡ : ಒಂದು ಮಾನ ನೀರು ಒಂದು ಮಾನ ಹಾಲು ಸಹ ಕೂಡಿಸಿ ನೆಲಾವರಿಕೆ ಎಲೆಯನ್ನು ಅರೆದು ಕದಡಿ . . . ಸೇವಿಸಿದರೆ ಶೀತಜ್ವರ ಪರಿಹಾರವಾಗುವುದು (ಸಕವೈ. ೬೮); ಆವರಿಕೆ (ತಂಗಡಿ) ಜಾತಿಯ ಸಸ್ಯ; ನೆಲಾವರಿಕೆ ; ಸೋನಾಮುಖಿ. (ವಿರೇಚಕವಾಗಿ ಉಪಯೋಗಿಸುವ) ಇದರ ಒಣಗಿದ ಎಲೆಗಳು (Senna. ಇಂಕನಿ). [ನೆಲ+ಆವರಿಕೆ]

ನೆಲಾವರೆ(ನಾ). = ನೆಲಾವರಿಕೆ:"ತಾಪಸಾಹಾರಃ—ನೀವಾರ,ನೆಲಾವರೆ" (ಓಷಧಿ. ೬೭) ; ತರ್ದುಗಳಟಾಗುಂ ಬಜಟೆಯೊಳರ್ದಿ ನೆಲಾವರೆಯು ಬೇರನಾಮಳಕಮುಮುಂ ಬರ್ದಿಲಿಮಿಂಜಿಯ ರಸದೊಳ್ . . . ಪೂಸೆ (ಶಮದ. ೨೬೧ ಪ್ರಯೋ) ; ಗರ್ದುಗು ನೆಲಾವರೆ ತುಂಬೆಯೊಳೊದವಿದ ಪತ್ರಂಗಳಂ ಗಡಂ ದೊರಕಿದುದಂ ಪದೆಪಿಂ ನಸ್ಯದೊಳಂದೀವುದು ಮರಿಚಂಗೂಡಿ ನರ್ವಿಷಾಖ್ಯಮುದಕ್ಕುಂ (ಶಮದ. ೬-೮೭) ; ಮಕ್ಕಳ ಕೋವೆಗೆ . . . ನೆಲಾವರೆಬೇರಂ ಹಾಲಲ್ಲಿ ಅರೆದು ಕುಡಿಯೆ ಮಾಣ್ಗುಂ (ವೈದ್ಯವಿ. ೧೦೮). [ನೆಲ+ಆವರೆ./ತಮಿ. ನಿಲಾವಿರೈ]

ನೆಲಿಂಗಳ (ನಾ). ಒಂದು ಬಗೆಯ ಇಂಗುದಿ ಗಿಡ : ಈ ರೋಗಕ್ಕೆ . . . ನೆಲಿಂಗಳ, ಬಜೆ, ಬಾಳದ ಬೇರು ಮೊದಲಾದ ಔಷಧಗಳೂ ಹಿತಕರವಾಗಿವೆ (ಗೃಹಚೈ. ೫೦). [ನೆಲ+ಇಂಗಳ₂]

ನೆಲು (ನಾ). = ನೆಲಪು : ನೆಲು ಹರಿದು ಬೆಕ್ಕಿನ ಮುಂದೆ ಬಿದ್ದ ಹಾಗೆ (ಗಾದೆ). [<ನೇಲ್ ?]

ನೆಲುವು₂, ನಿಲುವು₃, ನೆಲವು (ನಾ). ೧. ಪಾತ್ರೆಗಳನ್ನು ಇಡುವುದಕ್ಕೆ ತೊಲೆಯಿಂದ ಇಳಿಬಿಡುವ ಹಗ್ಗದ ಜಾಳಿಗೆ; ನೆಲಹು: ಮೊಸರಕಡೆದು ಬೆಣ್ಣೆಯ ನೆಲುವಿನ ಮೇಲಿಕ್ಕಿ ಶಿಶುವಿಗೆ ನಾ ಮೊಲೆಯ ಕೊಡುತಿರಲು (ಮಹಾದೇ. ಬ. ೧೨೭-೨೮೬) ; ಮಾವಿನ ಮರದ ಕೊನೆ ಕೊಳದ ಮೇಲೆ ಬಂದಿರುವುದು. ಅದಕ್ಕೆ ಒಂದು ನೆಲುವು ಕಟ್ಟಿ ಇರುವುದು (ಬತ್ತೀಸ. ೩೨) ; ತುಪ್ಪಕ್ಕೆ ನೆಲುವೀವೆ ಮಕ್ಕಳಾಡೋರೆ ಗಿಲಿಕೀವೆ (ಕಂದಕೊ. ೨೦೦). **ನಿಲುವು₃** : ೧. ಶಾಮ . . . ಒಂದೊಂದು ಬಗೆಯ ಉಪ್ಪಿನಕಾಯಿಗೆ ಒಂದೊಂದು ನಿಲುವನ್ನು ಕಟ್ಟಿದ್ದ (ತಿಪರಾ. ೭೩). **ನೆಲವು** : ೧. ನೆಲವಿಗೆ ನಿಲುಕಲಱಯದವ ಭಾನುಬಿಂಬವನುಗಿವ ಗಡ (ತೊರರಾ. ೬-೧೪-೩೩) ; ನೆಲವಿನೊಳಿಹ ಬೆಣ್ಣೆಯನು ತುಡುಕುತೆ ತಮ್ಮ ಕೆಳೆಯರಿಗಿತ್ತು (ಕೃಷ್ಣಗೋ. ೧೨-೫) ; ನೆಲವಿನ ಹಾಲ ಹರವಿಯ ಬೊಗ್ಗಿಸಿದೆ (ಚಿದಾವ. ೭೮-೧೪). ೨. "ಒಂದು ವಸ್ತುವನ್ನು ತೂಗ ಕಟ್ಟಲು ಆಧಾರವಾಗಿರುವ ಉಂಗುರ, ಬಳೆ, ಮೊ. ; ತೂಗುಂಗುರ ; ತೂಗುಬಳೆ" (Hanger. ಇಂಕನಿ).

[ನೆಲು+-ವು]

ನೆಲುಹು 'ನೆಲಪು' ನೋ.

ನೆಲೆ₁, ನಿಲೆ₁ (ನಾ). ೧. ಆಶ್ರಯ ; ಆಧಾರ : "ಇಕ್ಕೆ, ಇಂಬು, ಗೊತ್ತು, ನೆಲೆ . . . ಆಗರಂ—ಈ ೧೫ ಆಶ್ರಯಕ್ಕೆ ಪೆಸರ್" (ಕಶಸಾ. ೫೯-೨೯೦) ; ಸುಖಕ್ಕೆ ನೆಲೆಯೆನಿಸಿರ್ಪಂ (ಕಾದಂಉ. ೫೨೦) ; ನೆಲೆಯೌವನಲಕ್ಷ್ಮಿಗೆ ನೆಲೆ ಚಿತ್ತಭವಂಗೆ ನೃಪನ ಕಣ್ಗಂ ಮನಕ್ಕಂ ನೆಲೆ ತಾರಹಾರಶೋಭೆಗೆ ನೆಲೆಯೆನೆ ನೆಲೆಮೊಲೆಗಳೆನಿಕುಮಬಲೆಯ . ಮೊಲೆಗಳ್ (ಅಜಿಪು. ೨-೩೩) ; ಪರಮಸುಖಕ್ಕೆ ತಾನೆ ನೆಲೆಯಂ ಬಿಡದಾತ್ಮವಿಭೂತಿ ಸೂಚಿಸುತ್ತಿರೆ (ಸಮಪ. ೩-೯೯) ; ತಳಿರ ತಾಣಂ ಕುಸುಮಕುಲದ ನೆಲೆ . . . ನವಿಲ ನಂದನವೆನಿಪ್ಪ ಕೇಳೀವನಕ್ಕೆಯ್ತಂದನು (ಹಚಕಾ. ೩-೨೬); ಅಲದ ನೆಲೆಯೊಳಿದ್ದೆನ್ನಿರವಳಿದು ನಿಃಫಲವೆನಿಸಿತಲ್ಲಾ ಪ್ರಳಾಪಿಸದೆಂತು ಸೈರಿಸುವೆ (ಬಸಪು. ೫೭-೧೫) ; ಮುಂದದ ನೆಲೆ ಶುಭದಿಕ್ಕೆ ಸೊಗಸಿನ ಸದನ . . . ಮನೋರಥದುದಯಗಿರಿ ಹಿಂದೀಸುದಿನವಮರಾವತೀನಗರ (ಕುವ್ಯಾಅ. ೧೨-೪). ೨. ವಾಸಸ್ಥಾನ ; ವಾಸಸ್ಥಳ ; ನಿವಾಸ ; ಆವಾಸ : ಕುಸುಮದಳಸುಕುಮಾರರ್ ತಳರ್ದು ನೆಲೆಯಿಂದವಮಾಗಳ್ ಕೊಳದಿಂ ಪೊಱಮಟ್ಟ ಹಂಸಗಳ್ಗೆಣೆಯಾದರ್ (ಸಂಪಭಾ. ೨-೯೭) ; ಶ್ರೀರಮಣಗೆ ನೆಲೆ ತನ್ನಯ ಪೇರುರವಂ ಮಾಟ್ಟಿಸೆಂಬ ಬಗೆ ಮಿಗೆ ಸಮರಪ್ರಾರಂಭದೆ ಪೂಣ್ದೆರ್ದಂ ಕೌರವಕುಲವಿಲಯಕೇತು ಸಾಹಸಭೀಮಂ (ಗದಾಯು. ೮-೧) ; ನೆಲೆಗೆ ಪೋಗಿ ಮಕ್ಕಳೊಳಂ ಪೆಂಡಿರೊಳಮೊಡಗೂಡಿ ಸುಖದಿಂ ಚರಿಯಿಸುವೆಂ (ಧರ್ಮಾಮೃ. ೧-೧೩೧) ; ನೆಲೆಯೊಳ್ ಸೇರಲು ಪೋರುಗೈದು ಸತಿ ತಾಂ ಪೋಗಟ್ಟುವಳ್ . . . ತೊಲಗಿರಲ್ ಲಕ್ಷ್ಮೀ

ಕಟಾಕ್ಷೇಕ್ಷಣಂ (ಸೋಮೇಶ. ೫೧); ಖಗವಿತಾನಂ ಕೋಟರಂಗಳ ನೆಲೆಗೆ ಸೇರಿದವು (ಬಸವ. ೧೧-೪೭). ೩. ಮನೆಯ ಒಂದು ಭಾಗ; ಒಳ ಮನೆ; ಕಕ್ಷಾಂತರ: "ಕಕ್ಷಾಂತರಂ, ಪ್ರಕೋಷ್ಠಂ—ಈ ೨ ನೆಲೆ" (ಹಲಾಯು. ೫೧-೧೪೯). ೪. ಉಪ್ಪರಿಗೆಯ ಒಂದು ಭಾಗ; ಅಂತಸ್ತು; ಮಹಡಿ: ಚಂಡವೇಗಂ ಕರುಮಾಡದ ಮೇಗಣ ನೆಲೆಯೊಳಿರ್ದು ನೋಂಟಕ್ಕೆ ಗೆಂಟುಪೋಗೆ (ವಡ್ಡಾರಾ. ೧೨೧-೭); ಸುಭದ್ರೆಯೆಂಬ ಕನ್ನೆ . . . ತನ್ನ ಚೆಂಬೊನ್ನ ಕನ್ನಮಾಡದ ಮೇಗಣ ನೆಲೆಯ ಚೌಪಳಿಗೆಯ ಬಾಗಿಲೊಳ್ ನಿಂದು (ಪಂಪಭಾ. ೪-೩೯ ಪ); ಏಳು ನೆಲೆಯ ಕರುಮಾಡದುಪ್ಪರಿಗೆಯೊಳಗೆ . . . ಮೇಲಿಪ್ಪ ಕಳಸವ ಕಂಡವರಾರನು ಕಾಣೆ (ಅದಪ. ೨೭-೬೬); ಅಡಕಿಲ್ಲೊಂಡೊಪ್ಪುವೇಟುಂ ನೆಲೆಗಳ ಮಣಿಮಾಡಂಗಳಿಂದಂ ವಿಚಿತ್ರಂಬಡೆದಿರ್ದು . . . ಕೌತುಕಕ್ಕಂದೆಡೆಯಾಯ್ತುಯ್ದುದ್ಧ ರಾಜಾಲಯಂ (ಬಾಧಪು. ೧-೧೫೪); ಹಲವು ನೆಲೆ ಚೆಲುವಿಕೆಗೆ ಸಲೆ ಹೊಂಗಲಶ ಲೋಕಕೆ ವಿಲಸ ಹೇಮದ ಕೆಲಸ ಗತಿಯಲಿ ಚೆಲುವನಿಸಿದುಪ್ಪರಿಗೆ ನೋಳ್ಪರಿಗೆ ಹೊಳಹಿನಲಿ ಥಳಥಳಿಸುತಿಹುದು (ಕುವ್ಯಾಅ. ೬-೩೨). ೫. ಜಾಗ; ಸ್ಥಳ; ಸ್ಥಾನ: "ನೆಲೆ ತಾಣ" (ಕವಿಕಂ. ೧೩೫); ಕಡುಗೋಟಲೆಯಿಂ ಮೆಯ್ ಪೊಜಮಡೆ ಕಟುಯೊಳ್ ಕರ್ಚಿ ಕರಿಯ ಕಾಕೆಯ ರಸಮಂ ತೊಡೆದೊತ್ತುಗಲ್ಲದೊಡಮುತ್ತರಣಿಯ ರಸದಿಂದೆ ತನ್ನ ನೆಲೆಗದು ಪೋಕುಂ (ಲೋಕೋಪ. ೯-೧೯೪); ಹುಟ್ಟಿದ ನೆಲೆಯ ತೃಷ್ಣೆ ಬಿಡದವರಿಗೆ ಲಿಂಗಾನುಭಾವದ ಮಾತೇಕೋ (ಅಪಚಂ. ೫೪-೨೩೦); ಆವುದು ನೆಲೆ ನಿನ್ನಯ ಪೆಸರಾವುದು ನೀಂ ಬಂದ ಕಜ್ಜವೇನೆಂದು ತದುರ್ವೀವರನಂ ಬೆಸಗೊಳಲ್ (ಉದ್ಭಟ. ೩-೫೧); ಸಂಸ್ಕೃತಶಬ್ದನಿಯುಕ್ತ ಲಕಾರದ ನೆಲೆಗೆ ನಿಂದು ಸರಿಯಾಗಿ ಸಲ್ವುದಂ ಕ್ಷಳನೆಂಬರ್ (ಶಮದ. ೧೬); ವೀರರಿದ್ದೇಗುವರು ದೈವದ ಕೂರುಮೆಯ ನೆಲೆ ಬೇಱೆ ನಮಗೊಲಿದಾರು ಮಾಡುವುದೇನು (ಕುವ್ಯಾದ್ರೋ. ೨-೪). ೬. ಭೂಮಿ; ಲೋಕ: "ಕ್ಷೋಣಿಃ = ನೆಲೆ" (ಕಾಶಕೃ. ೩೫); ನೆಲೆಗೆ ಪಂಚಮಪ್ರಾಯನೊರೆವೆನು ಕೃಷ್ಣ ಮೆಚ್ಚಲಿಕೆ (ಕುವ್ಯಾಅ. ೧-೧೩). ೭. ಸಂಸಾರ: ನೆಲೆಗಂಜಿ ತೊಱೆದವರೊಳೆಲ್ಲಂ ಕೊಲೆಗಂಜಿ ಕೊಲ್ಲಮೆಯನ್ ನೆನೆವನ್ ತಲೆ (ಕುಱಿಗ. ೧-೩೩-೫). ೮. ಗುಟ್ಟು; ರಹಸ್ಯ: ಶೀಲ ಶೀಲ ಎಂತೆಂಬಿರಯ್ಯ ಶೀಲದ ನೆಲೆಯ ಬಲ್ಲಡೆ ಹೇಳಿರೋ (ಮಹಾದೇ. ಬ. ೪೭-೧೧೦); ಮಗನೆ ಕೇಳ್ ನಿನ್ನ ಮಾನಸದಳಲ್ಮಾಣಲಿಂಗದ ನೆಲೆಯನಱಿದಲ್ಲದಳಯದು (ಪದ್ಮರಾ. ೧೨-೨೯); ಶುಕ್ರನಿಲಿಸಿ ತನ್ನಯ ಮನೆಯಲವರಿಗೆ ಕಲಿಸಿದನು ಸಂಜೀವನೌಷಧ ನೆಲೆಯಂ (ಸಂಭಪ. ೫-೭೯); ಸಲಹಿದನು ಜನಕಕ್ಷಿತೀಶನು ನೆಲದೊಳುದಿಸಿದ ಮಗಳನೆಂದೇ ಹಲಬರಾಡುವರದಱಿನಿಂ ನಿಜತನಯಳಲ್ಲೆಂದು ಉಲುಕುವುದು ಚಿತ್ತದಲಿ ಜನನದ ನೆಲೆಯನಱಿಹಿದಡೊಪ್ಪುಗೊಂಬುದಕಲಸಿಕೆಯದೇನಿದ್ದುದೆಂದನು ಮುನಿ ವಿದೇಹಂಗೆ (ತೊರಾ. ೧-೧೬-೨೬); ಆತುಮನ ಬಣ್ಣವನು ಮಾತಿನಾಗಾಥವನು ಜಾತಿಯ ನೆಲೆಯನಱಿದು ತಾ ಪರಮನಾದಾತನೇ ಯೋಗಿ (ಸರ್ವಜ್ಞ. ೩೫೪). ೯. ಆಳ; ಮರ್ಮ: ಪಱಿಗೋಲ್ಗಳನಿಕ್ಕಿ ಪಾಯಿಸಲ್ ನೆಲೆಯೆಂದು ನೋಡಲೊಳಪೊಕ್ಕು ಧುಮುಮ್ಮಿಱಿದಾಡಲೀಸಲಗ್ಗಲಿಸದಲಂಬಿನಿಂ ಬಗೆದುದಂದು ಜನಂ ಘನಚಂದ್ರಿಕಾಂಬುವಂ (ಅಜಿಪು. ೬-೪೫); ಅನುಭಾವ ನೆಲೆಗೊಂಡಲ್ಲದೆ ಜ್ಞಾನ ಸುಜ್ಞಾನದ ನೆಲೆಯ ಕಾಣಬಾರದು (ವಚನಸಂ. ೪-೬); ಕಳವಿನಲಿ ಕುದಿವಂಗೆ ದೈವದ ನೆಲೆಯನಱಿಯದವಂಗೆ ದಿಟವಿದು ತಿಳಿಯಬಾರದು ನಿದ್ರೆ (ಕುವ್ಯಾಉ. ೬-೩); ಅವಳು ಕೊಟ್ಟ . . . ಉಪಮೆಯಿಂದ ಅವಳ ನಿಲುವು, ಒಲವು, ನೆಲೆ ಹೊಳೆಯಲು ಅವಕಾಶ ಹಿಡಿಯಲಿಲ್ಲ (ದೀಸಹ.II, ೧೭೭); ಹೆಂಗಸಿನ ನೆಲೆ ತಿಳಿಯದು ಎನಿಸಿತವನಿಗೆ (ಗಂಗಾಸಾ. ೧೦೩). ೧೦. ತಳ; ಬುಡ: ನೆಲೆ[ಪಾಠಾಂ. ರೆ]ಯಿಲ್ಲ ಸಂಸಾರವಿಳಿದಂತೆ ಬಾವಿಯೊಳು ಸಿಲುಕಿ ಸಿಲುಕಿ ಭ್ರಮಿತನಾದೆ (ಪುರಂದ. ೧-೧೫೯-೧). 'ನೆಲೆಗಳೆ' ಪರಾ. ೧೧. ನಿಜ; ಸತ್ಯ; ದಿಟ: ಜಲದೊಳಗಿದ್ದ ಕಿಚ್ಚು ಜಲವ ಸುಡದೆ ಜಲವು ತಾನಾಗಿದ್ದಿತ್ತು ನೋಡಾ ನೆಲೆಯನಱಿದು ನೋಡಿಹೆನೆಂದಡೆ ಆದು ಜಲವು ತಾನಲ್ಲ (ಅಪಚಂ. ೧-೩); ನೆಲೆಯನಱಿಯದವ ಕೊಲಿಸು ರಾಮನನೆಂದು ಬಲಿದು ಮಂತ್ರಿಗೆ ಹೇಳಲು (ಕುರಾಸಾಂ.೧-೮೮); ಕುಲವರ್ಧನೆ ಹೇಳಿದ ಮಾತು ನೆಲೆಯೆ? (ಪಚಕಾ.೬). ೧೨. ಅಚಲತೆ; ದೃಢತೆ; ಸ್ಥಿರತೆ: ನೆಲೆ ಸೋಮಸೂರ್ಯವೀಥಿಗಳಿಲ್ಲವಾ ಪುರಕೆ (ತಿರುರ.ದೇ. ೩-೨); ಅಕ್ಕಟಾಯಿದೇನಂ ನೆಗಳ್ದನೋ ಉಲಿಯಲೆರ್ದೆ ನಡುಗುತಿದೆಯೆಂಬರ್ ಕೆಲಂಬರಿದೆ ನೆಲೆಗೆ ನಿಲ್ಪುದೆ ಎಂಬುವರ್ ಕೆಲಬರ್ (ಪದ್ಮರಾ. ೧೧-೧೭೦); ಉಯ್ಯಾಲೆಯ ಮಣಿ ನೆಲೆಗೆ ನಿಂದಂತೆ ಆದೆನಯ್ಯ. (ಭಸವ. ೫೩-೪೫); ಮುಂದೆ ಭೂಲೋಕದೊಳ್ ವೀರಶೈವಂ ನೆಲೆಗೆ ನಿಂದಪುದು (ಚಿಬಪು. ೩-೨೬). ೧೩. ನಿಶ್ಚಯ; ನಿರ್ಧಾರ; ನಿಃಸಂಶಯ: ವರದನಾಗೆಮ್ಮೆಡೆಗೆ ಸೋಮೇಶ್ವರನವಶ್ಯಂಬಪ್ಪುದದು ನೆಲೆ ಪರಿಕಿಸುವಡೆಂತೆನಲು ನಂದಿಸ ಬಂದನೇ (ಬಸವ. ೫೩-೧೯); ನೆಲೆ ಇಲ್ಲದಪರ ಮಾತು ಹೊಲೆಗಿಂತ ಹೆಚ್ಚು (ಗಾದೆ). ೧೪. ಶಾಶ್ವತವಾಗಿರುವಿಕೆ; ನಿತ್ಯತ್ವ: ಅನೇಕ ಮುಖದಿನೊಗೆದು ನೆಲೆಯಿಲ್ಲದಳಿವ ಕಾಲವೆ ದೈವವೆಂಬನುಜ್ವಲಕಾಲವಾದಿ (ಪದ್ಮರಾ. ೧೧-೧೯೮); ನೆಲೆ ಇಲ್ಲದ ಕಾಯ ಎಲುವಿನ ಹಂದರ . . . ಹೊಲಸು ತೊಗಲ ಮೆಚ್ಚಿ ಕೆಡಬೇಡಿರೊ (ಪುರಂದ. ೨-೧೦-೨); ಪರಪುರುಷಾರ್ಥ ಕೆಳಸುವಂ ನೆಲದ ಮೇಲಣ ಬಾಳ್ಕೆಯಂ ನಿಜಶರೀರಮಂ ನೆಲೆಯೆಂದು ನೋಡುವನೆ (ಚೈಮಿಭಾ. ೨೬-೪೧). ೧೫. ಎತ್ತರ; ಔನ್ನತ್ಯ: ಪಂಚಧನುಶ್ಶತಂ ಪವಣ್ ನೆಲೆ ನರರ್ಗೆಂದೊಡಿನ್ನಿಮಿರೆ ಬಣ್ಣಿಸಲಾನಱಿಯೆಂ ವಿದೇಹಮಂ (ಅದಿಪು. ೧-೫೨); ಕರಮೆಸೆದಪುವಿದಱ ನೆಲೆಯಂ ಚೈತ್ಯಗೃಹಂಗಳ್ (ಅದಿಪು. ೨-೩೨). ೧೬. ನಿಲ್ಲುವ ರೀತಿ,—ವಿನ್ಯಾಸ: ಕೊನೆ ಸೆಳ್ಳುಗರ್ಗಳ್ ಕುಡಿ ತೋಳ್ ನಯಂ ನಯಂ ನೆಲೆನೆಲೆ ಭಂಗಿ ಭಂಗಿ ಪದವಣ್ ಬೆಳವಾಯ್ ಪೆಱತಲ್ಲಿದೆಂತೊ ಕೋಮಲಲತೆ ಪೇಱುಮೆನ್ನಿ ನಿಯಳಂ ಮಱೆಗೊಂಡುದೊ (ಪಂಪಭಾ. ೫-೧೨). ೧೭. ಸ್ಥಿತಿ; ಗತಿ: ನೆಲೆಯುಂ ಗಾಡಿಯುಮಳವಡೆ ಲಲನೆ ಪೆಱಳ್ ದಿವ್ಯಮಾಲೆಯಂ ಮುಡಿಯಿಸೆ (ಜಗವಿ. ೧೦-೧೨೭); ಆ ಪರಾಪರವಸ್ತುವಿನ ನಿಜರೂಪು ನಾಮದ ಗಾಢತರ ಮಹಿಮಾಪಯೋಧಿಯ ನೆಲೆಯನಱಿವವರಾರು ಲೋಕದಲಿ (ತೊರಾ. ೧-೨-೮). ೧೮. ಮಟ್ಟ; ದರ್ಜೆ: ಪದ್ಮನಿಧಿಯಿಂ ತಂದ ಸೂತ್ರದೊಳವರವರ ನೆಲೆಗಳನಱಿವಂತೇಕಸೂತ್ರಮಾದಿಯಾಗೇಕಾದಶಸೂತ್ರಮಂತಮಪ್ಪ ಯಜ್ಞೋಪವಿತಮನವರ್ಗೆ ಮಾಡಿ (ಚಾವುಂಪು. ೫೨); ಮಾತನಾಡುವಾಗ ತಂತಮ್ಮ ನೆಲೆ ನೋಡಿ ಮಾತನಾಡಬೇಕು (ಕುರುಕಾ. ೧೧೯). ೧೯. ಧೋರಣೆ; ನಿಲುವು: ಧರೆಯಲಧರ್ಮಶೀಲರ ತಲೆಯ ಚೆಂಡಾಡುವೆವು ಧರ್ಮವನೊಲಿದು ಕೊಂಡಾಡುವೆವು ಶಿಕ್ಷಾರಕ್ಷಣಮೃಸನ ನೆಲೆ ನಮಗೆ (ಕುವ್ಯಾಸ. ೨-೭೩). ೨೦. ಅವಸ್ಥೆ; ಹಂತ: ಕಾಲ್ಗಾಪು ಕಾಲ್ಗಾಪಿನೊಳ್ ಹೋದರ್ ಹೋದರೊಳಾನೆಯಾನೆಯೊಳಗುರ್ವಪ್ಪನ್ನೆಗಂ ಕಾದೆ ಕಣ್ಗಾದಂ ಚೆಲ್ವೆಸೆದತ್ತು ಮೂಱುನೆಲೆಯಿಂ ಮಾದ್ಯದ್ಗಜೇಂದ್ರಾಹವಂ (ಪಂಪಭಾ. ೧೦-೯೩); ಶಲ್ಯತ್ರಯವಿರಹಿತನೆರಡನೆಯ ನೆಲೆಯವಂ ತಾಂ ವ್ರತಿಕಂ (ಸುಕುಮಾ. ೬-೨೬); ಮೂಱುನೆಲೆಯಲಿ ನಿಂದು ನಾಲ್ಕನು ಬಳಸಿ . . . ಮಾಯಾಗುಪ್ತನಾಗಿ ಮುಕುಂದ ತೋಱುವನು (ಕುವ್ಯಾಸ. ೯-೨೧). ೨೧. ಕಾರಣ; ನಿಮಿತ್ತ: ಎಲೆ ತರಳ! ನಿನ್ನ ಬಿಂಕದ ನೆಲೆಯೇಂ? (ರಾಮಾಶ್ವ. ೧೫೬-೧೬). ೨೨. ಗುರಿ; ಉದ್ದೇಶ

ಹಲವು ಕಾಲ ಧಾವತಿಗೊಂಡು ಒಟ್ಟದ ಹಿದಿರೆಯು ಒಂದು ಮಿಡುಕುಬಿಲ್ಲಿ ಬೀವಂತೆ ಸಲೆ ನೆಲೆ ಸನ್ನಿಹಿತನಾಗಿರ್ಪ ಶರಣನ ಭಕ್ತಿ ಒಂದನಾಯತದಿಂದೆ ಕೆಡುವುದು (ಬಸವ. ೨೧೩); ಲಜ್ಜೆಗೆ ನೆಲೆಯ ಮಾಡಿದೆ ಹೂಡಿದ್ಯೆ ದುರಿಯಶವನೆನಗೆ (ಕುಸ್ಯಾಭೀ. ೬-೩೯). ೨೩. ಸರಿಯಾದ ಮಾರ್ಗ,—ಕ್ರಮ: ಕಳುಹು ಲಲನಾಜನವನಾ ಮುನಿಕುಲಲಲಾಮನ ಬಳಿಗೆ ಸತಿಯರ ಬಲೆಗೆ ಸಿಲುಕದರಾರು ತ್ರೈಮೂರುತಿಗಳೊಳಗಾಗಿ ನೆಲೆಯಿದೀಗ (ತೊರರಾ. ೧-೫-೨೫). ೨೪. ನಿಧಿ: ಜಾಲಗಾಜನ ಡೋಣಿಯಂತೆ ಬಳಸುವ ಹುಟ್ಟಿನಂತೆ ಬೈಚಟ್ಟ ನೆಲೆಯಂತೆ ಇದ್ದಡೇನು ಭೋಗಿಸಲರಿಯವಾಗಿ (ಪೋಳಿಮಾ. ೩೦-೧೨೪). (ಗು). ೨೫. ಅಪ್ಪಟವಾದ. ೨೬. ಪೂರ್ಣವಾದ; ಅಧಿಕವಾದ: 'ನೆಲೆಜವ್ವನ' ಸರಾ. **ನೆಲೆ₂**: ೧೨. 'ಕಲ್ನಿಲೆ' ಸರಾ. ೧೭. 'ಶಿವನಿಲೆ' ಸರಾ.

ನೆಲೆನೆಲೆ (ದ್ವಿರುಕ್ತಿ): ಮರಕತದ ನೆಲಗಟ್ಟುಗಳ ಹಿಮಕಿರಣ ಕಾಂತದ ನೆಲೆನೆಲೆಯ ಬಂಧುರದ ಘನಸೋಪಾನಗಳ . . . ಕೃತಕಾದ್ರಿಗಳೊಪ್ಪಿದುದಾ ಪುರೋದ್ಯಾನ (ತೊರರಾ. ೧-೯-೧೪); ನೆಲೆನೆಲೆಯೊಳು ಮಣಿಮಂಚದಿಂದೊಪ್ಪುವ ನೆಲವಾಡದೊಳು (ಕುರಾಸಾಂ. ೨೬-೭೩); ಕಲೆಗಧಿನಾಥಚಂದ್ರನ ನೋಡ ಪೋಪಂತೆ ನೆಲೆನೆಲೆಗಡರ್ದಳಾ ಕುವರಿ (ಪೋಚಕ. ೨೭-೩೦); ವಿಯಚ್ಚರಾಂಗಣಕಡರ್ದ ವಜ್ರವೈಡೂರ್ಯ ಮಾಣಿಕ್ಯದೊಳ್ ನೆಲೆನೆಲೆಗಳ ಅಚ್ಚಮುತ್ತಿನ ಗುದಿಗಳಿಂ (ಚಿಬಪು. ೫-೩); ಅವಳಂಗಚ್ಛವಿಯು ನೆಲೆನೆಲೆಗಳೊಳು ಪ್ರಜ್ವಲಿಸೆ (ನಪಮೋ. ೨೪-೨೪); ಬಯಲಾಟವು ನೆರೆದಲ್ಲಿ-ನೆಲೆನೆಲೆ ಏರುವ ಹೊಳಲು (ಉಯ್ಯಾಲೆ. ೬೭-೧೨). **ನೆಲೆ ಮಾಡು**=ತಂಗುವ ಜಾಗವನ್ನಾಗಿ ಮಾಡಿಕೊಳ್ಳು; ಆಶ್ರಯಿಸು: ಆ ಮಹೀಪಾಲನ ಲೋಲಲೋಚನಂಗಳಾಕೆಯ . . . ನೆಲೆಮೊಲೆಯಂ ನೆಲೆ ಮಾಡಿಯುಂ ಬಾಯ್ದೆಱೆಗೆ ತೆಱೆದೆಂತುಂ . . . ಮನದೊಳುತ್ಸುಕತೆಯಂ ತನುಲತೆಯೊಳ್ಪುಳಕಾಂಕುರಮನೊದವಿಸುತ್ತುಮಿರೆ (ಮಲ್ಲಿಪು. ೩-೮೭ ಪ); ಮರಳ ಕಾಮ್ಯಕವನದ ದಳಮಂದಿರವನೇ ನೆಲೆಮಾಡಿದೆವು (ಕುವ್ಯಾಅ. ೧೪-೧೩). ೨. ಸ್ಥಿರಗೊಳಿಸು; ದೃಢಪಡಿಸು; ಗಟ್ಟಮಾಡು: ನೆಲಮಾಳಿಗೆಯೊಳಿಟ್ಟವನ ಕೊಲಿಸಿದೆನೆಂದು ನೆಲೆ ಮಾಡಲಾ ಸುದ್ದಿಯನು (ಕುರಾಸಾಂ. ೧-೮೮). ೩. ಅವಕಾಶ ಮಾಡು: ಆತನ ಪಡೆಗೆ ನಡೆಯಲೆಡೆಮಾಡಿದಂತೆ ಬಳ್ವಳಾದ ದೆಸೆಗಳುಮಾತನ ವಿಜಯಸೈನ್ಯಕ್ಕೆ ತಡೆಯದೆ ಪಾಯಲ್ಕೆವೇಟ್ಟುಮೆಂಬಂತೆ ನೆಲೆ ಮಾಡಿದ[ಪಾಠಾಂ. ನೆಲೆಯಾದ] ಮಹಾನದೀನದಂಗಳುಂ (ಅದಿಪು. ೧೧-೫ ಪ). **ನೆಲೆಯ ಮಾಡ**=ಅಂತಸ್ತುಗಳಿಂದ ಕೂಡಿರುವ ಸೌಧ; ನೆಲೆಮಾಡ; ನೆಲೆಯುಪ್ಪರಿಗೆ: ಸಿರಿದೊಂದು ಪೊಟಲುಂ ಧವಳಾರಂಗಳುಂ ನೆಲೆಯ ಮಾಡಂಗಳುಂ . . . ಮಾನಸರ ಬರುವುಮಂ ಪೋಗುಮಂ ಕಂಡು (ಪಡ್ಡಾರಾ. ೮೯-೨೦). **ನೆಲೆಯ ಹೊನ್**=(ಶಾಶ್ವತವಾದ) ಹಣದ ಕೊಡುಗೆ: ಸ್ವಸ್ತಿಶ್ರೀ ವೀರಬಲ್ಲಾಳದೇವರಸರು ಕೊಟ್ಟ ನೆಲೆಯ ಹೊಂಗಿಂಗೆ ಅಚಳಪ್ರಕಾಶಸ್ವಾಮಿಗಳು ವರದನರಸಿಂಹದೇವರ್ಗ್ಗೆ ಹಿರಿಯೂರ ಹಳ್ಳಿ ಪ್ರಾಪ್ತಿ ಸಹಿತವಾಗಿ ಕೊಂಡು ಕೊಟ್ಟ ಯೆರಡು ವೃತ್ತಿಯ ಸ್ಥಳವನು (ಮೈಅರಿ. ೧೯೪೦, ೩-೩೦; 1215). **ನೆಲೆಯಾಗಿಸು**=ಆಶ್ರಯವನ್ನಾಗಿ ಮಾಡು; ಆಧಾರವಾಗಿಸು: ಅಹಿತರಂ ಗೆಲ್ವ ಜಯಶ್ರೀಗೆ ಭುಜಶಿಖರಮಂ ನೆಲೆಯಾಗಿಸಿ ನೀಂ ನೆಲಸು ನೇಸಱುಳ್ಳಿನಮರಿಗಾ (ಪಂಪಭಾ. ೨-೧). **ನೆಲೆಯಾಗು**=೧. ಆಧಾರವಾಗು; ಆಶ್ರಯವಾಗು: ವೀರಲಕ್ಷ್ಮಿಗೆ ನೆಲೆಯಾಗು ಪೋಗೆನೆ ನೃಪಂ ಪೊಡೆವಟ್ಟು ಮನೋಸುರಾಗದಿಂ (ಪಂಪಭಾ. ೧೧-೩೨); ತದ್ವಿರೋಧಿಗಳನವುಂಕಿ ಮೆಟ್ಟಿ ಸೆಱೆಯಿಟ್ಟವಲೇಪಮೊ ಪೇಱೆಮೆಂಬ ಶಂಕೆಗೆ ನೆಲೆಯಾದುದಂಬರಚರೇಶ್ವರನರ್ದ ಮೃಗೇಂದ್ರವಿಷ್ಟರಂ (ಶಾಂತಿಪು. ೩-೪೧); ಜಸಕ್ಕೆ ನೆಲೆಯಾದಂ ನಾಚದಣ್ಣಾಧಿಪಂ (ಎಇ.XXVIII, ೩೪-೨೩; 1082); ಎನ್ನಂತೆ ರತ್ನವಿತತಿಗೆ ತಾನ್ನೆಲೆಯಾಯ್ತೆಂಬ ಸಮಗುಣಪ್ರಣಯದಿನಾ ಮುನ್ನೀರ್ ಬಂದಪ್ಪುದುದೆನೆ ತನ್ನಗರಮನಮಲ ಸರಿಐ ಬಳಸಿದುದೆತ್ತಂ (ಚಂದ್ರಪು. ೧-೧೧೫). ೨. ವಾಸಸ್ಥಾನವಾಗು; ನಿವಾಸವಾಗು: ಸಿರಿಗೆ ನೆಲೆಯಾದ ಪೊಂದಾವರೆಯ ಮುಗುಳ್ಕೆಲ್ಲ ಮೆಲ್ಲನಲರ್ದಪುವು (ಮಲ್ಲಿಪು. ೪-೧೩೩). ೩. ನೆಲೆ ನಿಲ್ಲು; ನೆಲಸು: ಆರ್ಯೆಯರುಮಲ್ಲಿಗೆ ವರ್ಪುದುಂ ಅಲ್ಲಿ ನೆಲೆಯಾಗಿರ್ಪ ಕುಬೇರಕಾಂತನ ಭಾರ್ಯೆ ಪ್ರಿಯದತ್ತೆ ಬಂದು (ಜಾಪುಂಪು. ೬೬); ನಿಖಿಲಜಸ್ಯಂಗಳಿಂ ನೆಲೆಯಾಗಿ ನಿಂದಘಚಯಂ ಪರೆಗುಂ (ಪದ್ಮರಾ. ೧೨-೨೫); ಕಾಮೋದ್ರೇಕದಿಂ ವೀರ್ಯಸ್ಖಲನಮಾಗೆ ಮುಂದದು ಶರಸ್ತಂಭದಲ್ಲಿ ನೆಲೆಯಾಗಿ ಮುದದಿಂದಿರಲು (ತುರಂಗ. ೧೧-೧೧). ೪. ಶಾಶ್ವತವಾಗು; ಸ್ಥಿರವಾಗು: ಮುರಮಥನ ಬಿನ್ನಹವು ರವಿ ತಾನಿರದೆ ಪಡುವಲು ಸಾರ್ದ ಸೈಂಧವನಿರವು ನೆಲೆಯಾಗ[ದು]ದು ಮಹಾದೇವೆನುತ ರಥವಿಳಿದು (ಕುವ್ಯಾದ್ರೋ. ಪರಿ. ೨೯೫); ಪಲರಾಯಭಾರದಿರವಂ ಪಲವಗಲಿಂ ಕಂಡು ಕೇಳ್ದು ತಿರ್ದಿ ಪೊದಟ್ಟೀ ಪಲರುಂ ನಿರ್ನಯಮಿಟ್ಟುದೆ ನೆಲೆಯಾದೊಡಮಾನುಮೊಂದು ಬಿನ್ನತಿಗೆಯ್ವೆಂ (ಚಕವಿ. ೫-೩೩); ಶ್ರೀಗೋಪಾಳದೇವರ ಅಮೃತಪಡಿ ದೀಪೋತ್ಸವ ಚೈತ್ರಪವಿತ್ರ ಒಳಗಾದ ಪಂಚಪರ್ಬಕೆ ವರ್ಷಂಪ್ರತಿ ಎಂದೆಂದೂ ನೆಲೆಯಾಗಿ ಕೊಡುವರು (ಎಕ. XVI, ಚಿಕ್ಕನಾ. ೭೧-೨೪; ?). ೫. ಒಪ್ಪಿಸಲ್ಪಡು; ವಹಿಸಲ್ಪಡು: ನಿಯತ ದಧಿ ಘೃತ ದುಗ್ಧಗುಡ ಸಂಚಯಕೆ ಸಂಬಾರಾದಿ ರಸನಿರ್ಣಯಕೆ ಕಟ್ಟಧಿಕಾರ ಸಿದ್ಧಾರ್ಥಂಗೆ ನೆಲೆಯಾಯ್ತು (ತೊರರಾ. ೧-೭-೨೬).

[ದೇ.॥ ತಮಿ. ನಿಲೈ; ಮಲ. ನಿಲ; ತುಳು. ನೆಲೆ, ನಿಲೆ; ಕೊಡ. ನೆಲೆ]

ನೆಲೆ₂ (ಅ). ಚೆನ್ನಾಗಿ: ನೆಲೆ ಕಾಲ್ಗೊಳ್ಳವಘಾತಿಸಂಕುಲರಥಾಂಗಂ ಪೋಯ್ತು ಮುಂ ಘಾತಿಗಟ್ಟಲೆ (ಅನಂಪು. ೧೪-೪೯). [<ನೆಲೆ₁]

ನೆಲೆಕಟ್ಟು 'ನೆಲೆಗಟ್ಟು' ನೋ.

ನೆಲೆಕೊಳ್ 'ನೆಲೆಗೊಳ್' ನೋ.

ನೆಲೆಗಂಡು (ನಾ). ಬಹಳ ಪೌರುಷವುಳ್ಳವನು,—ಗಂಡಸುತನವುಳ್ಳವನು,—ಪುರುಷತ್ವವುಳ್ಳವನು: ಕಲಸಲೊಡಮೊಲ್ದು ನಲವಿಂ ನಲಿ ನಲಿಯಿಸಿ ನಜ್ಜುನಜ್ಜುಗೆಯ್ದಾ ಸೊಗದೊಳ್ ಬೆಲೆವೆಣ್ತನಮನೆ ಬಿಡಿಸುವ ನೆಲೆಗಂಡನೆ ನೆಗಟ್ಟೊಡವನೆ ಗಡ ಕಂದರ್ಪಂ (ಚಕವಿ. ೬-೧೩೨).

[ನೆಲೆ₁+ಗಂಡು]

ನೆಲೆಗಟ್ಟು, ನೆಲೆಕಟ್ಟು (ನಾ). ೧. ಸಮಮಾಡಿದ ನೆಲ; ಕುಟ್ಟಿಮ: ಶರಣಂಗೆ ಕಳಸದ ಮೇಲೆ ನೆಲೆಗಟ್ಟೆಂಬುದೇನೊ (ಅಸಚಂ. ೧೩೧-೫೯೮); ಪಳುಕಿಂದ ನಯವಡೆದ ನೆಲೆಗಟ್ಟು ಶಶಿಕಾಂತದಳವಟ್ಟ ಭಿತ್ತಿ (ಹಚಕಾ. ೪-೬); ಮಣಿಮಯದ ನೆಲೆಗಟ್ಟುಗಳ ರಚನೆಗಳ . . . ಪನ್ನೀರ ಚಳೆಯದೊಳೆಸೆದುದಾ ಪುರವು (ಜೀವಂಚಿ. ೬-೨೨); ನೀಲರತ್ನಂಗಳಿಂ ನೆಲೆಗಟ್ಟು ಪಳಕುಗಳ ಸಾಲೆಸೆವ ಭಿತ್ತಿಗಳ್ ವಜ್ರದೊಳ್ಗಂಬಂಗಳ್ (ಚಿಬಪು. ೫-೪೮). ೨. ತಳಹದಿ; ಬುನಾದಿ; ಅಡಿಪಾಯ: ಕೋಪವೆಂಬುದು ಪಾಪದ ನೆಲೆ[ಪಾಠಾಂ. ಲ]ಗಟ್ಟು (ಸರ್ವಜ್ಞ. ೪೭೯); ಪಸರಿಸಿಹ ಪಂಚತತ್ವಂಗಳುಂ ನೆಲೆಗಟ್ಟು (ಏಕೋಪು. ೨-೨೫); ಯಾವ ದೇಶ ಕಾಲ ಮತಗಳಿಗೂ ನೀತಿಯೇ ನೆಲೆಗಟ್ಟು (ಜಗದಾ. ೭೦); ಜಾತಿ ವರ್ಣ ನೆಲೆಗಟ್ಟನ್ನು ಸಡಿಲಿಸಿ, ಜಾತ್ಯತೀತವಾದ ಮತಧರ್ಮಗಳನ್ನು ಬೆಳೆಸಿದ್ದು ದಕ್ಷಿಣಭಾರತಸಂಸ್ಕೃತಿಯ ವೈಶಿಷ್ಟ್ಯಗಳಲ್ಲಿ ಒಂದಾಗಿದೆ (ಭಾರದ. ೩೯೮). **ನೆಲೆಕಟ್ಟು**: ೧. ಸಾದಿನ ಸಾರಜೆಯ ನೆಲೆಕಟ್ಟುಗಳ ಕರ್ಪೂರಧೂಳಿಯ . . . ಪರಿಮಳ ಭಾರದಲಿ ಬಿಜುಗಾಳಿ ಕುಸಿದುದು (ಕುಸ್ಯಾಅ. ೧೨-೧೦); ಪಳಿಕಿನ ಪಟ್ಟಗೆ ನೀಲದ ನೆಲೆಕ[ಪಾಠಾಂ. ಗಟ್ಟ].

. . . ಕಣ್ಣೋಳಿಸಲೆಸೆದುದಾ ನಿಳೆಯ (ಕುರಾಸಾಂ. ೩-೯೩); ಪಳುಕುಗಳ ನೆಲೆಕಟ್ಟು[ಪಾಠಾಂ ಬಗಟ್ಟು] ಮುರಕತಂಗಳ ಜಗಲಿ ಪೊಳೆವ ನೀಲದ ಭಿತ್ತಿ (ಚೈಮಿಭಾ. ೧೩-೨೩); ನೆಲೆಕಟ್ಟುಗಳೊಳ್ ನಿಲಿಸಿದ ಪಚ್ಚೆಯ ಕಂಭಸಾಲು (ಸೌಗಂಧಿ. ೪-೪). [ನೆಲೆ$_1$ + ಕಟ್ಟು$_2$]

ನೆಲೆಗಳೆ (ಕ್ರಿ). ಬುಡಸಮೇತ ತೆಗೆದುಹಾಕು,—ನಿವಾರಿಸು; ನಿರ್ಮೂಲ ಮಾಡು: ಅನುಪಮಲಿಂಗವೆ ನೆನಹಿಂಗೇಕೆ ಬಾರೆ ತನುಮನ ಶುದ್ಧವಿಲ್ಲವೆಂದು ಅನುವಿನಲ್ಲಿ ನಿಲ್ಲೆಯಾ ಎನ್ನ ಪಾತಕದ ಪುಂಜವ ನೆಲೆಗಳೆಯಯ್ಯಾ (ಮೋಳಿಮಾ. ೧೪-೫೨); ಅಱುಸ್ಥಲವನಱುತು ಮೂಱುಸ್ಥಲವ ಮುಟ್ಟಿ . . . ನೂಱೊಂದಱಲ್ಲಿ ಸಂಗವ ಮಾಡಿ ಬೇಱೆ ನೆಲೆ[ಪಾಠಾಂ.ನತಿ, ನೆತ್ತಿ, ನೇತಿ]ಗಳೆದು ನಿಂದಲ್ಲಿ ಕಾಯ ಜೀವದ ಬಂಧ ಅದೇತಱಿಂದ ನಿಂದಿತ್ತೆಂದಱಱಿ ನಿನ್ನ ನೀನೆ (ಕೋಲಶಾಂ. ೧೧).

[ನೆಲೆ$_1$ + ಕಳೆ$_1$]

ನೆಲೆಗಾಣ್, ನೆಲೆಗಾಣು (ಕ್ರಿ). ೧. ತಳವನ್ನು ಕಾಣು; ಬುಡವನ್ನು ಕಾಣು: ಅಗಾಧ=ನೆಲೆಗಾಣಬಾರದುದು (ನಾಚರಾ. ೬). ೨. ಆಳವನ್ನು ತಿಳಿ; ಮರ್ಮವನ್ನು ಅರಿತುಕೊಳ್ಳು; ಮಹಿಮೆಯನ್ನು ಕಂಡುಕೊಳ್ಳು: ನೆಲೆಗಾಂಬನ್ನಕ್ಕಂ ತೊಱೆಯ ಅಂಜಿಕೆಯ್ಯೆಸೆ ನೆಲೆಗಂಡ ಬಳಿಕ ತೊಱೆ ಬಱೂದೊಱೆಯಲ್ಲದೆ ಅಂಜಿಕೆಯಿಲ್ಲ (ಅಪಚಂ. ೪. ೪೬೨-೧೨೫೧); ಪಿರಿಯ ಜ್ಞಾನಿಗಳು ಭಜನೆಯ ಮಾಳ್ಪರು ಬಕುತಿಯಿಂದಲಿ ಚತುರ್ಭುಜ ನಿನ್ನ ನೆಲೆಗಂಡುದಿಲ್ಲ (ಮೋಹತ. ೧೩-೬೦); ನೆಲೆಗಾಣದ ನಿನ್ನೀ ಮೈಮೆಯಂ ಬಣ್ಣಿಸಲಾವಂ ಸಾಲ್ವನೆಂದು ಗುಣಸ್ತವನಂಗೆಯ್ದುಳ್ (ರಾಮಾಶ್ವ. ೩೧-೫). ೩. ಸ್ಥಿತಿಯನ್ನು ಅರಿತುಕೊಳ್ಳು: ಮಾತಿರ್ದೋಡಂ ಮೂಕರಪ್ಪರು ಕಾಲಿರ್ದೋಡೆ ಕುಂಟರಪ್ಪರೆಂಬೆ ಕಾಲಂ ಪೂರ್ವಪುಣ್ಯಂಗಳಿಂ ಸಿರಿವಂತರ್ ನೆಲೆಗಾಣರ್ಕೆ (ಸೋಮೇಶ.೫೩). ೪. (?): ಎನ್ನ ಮುನಿಸಿಂಗಾಂ ಕಾದುವೆಂ ಬೇಸಿದಂ ನೆಲೆಗಂಡಂತೆ ನೆಲಕ್ಕೆ ಗೆಲ್ದೊಡಮದಂ ಚಿಃ ಮತ್ತಮಾನಾಳ್ವೆನೇ (ಪಂಪಭಾ. ೧೩-೧೭); "ಸ್ಥಿರತೆಯನ್ನು ತಿಳಿ" (ಪಂಪದೀ. ೫೧೫); ಜ್ವಲನಜಟೆ ಮುಕ್ತಿಲಲನಾಧಿಲಾಷದಿಂ ದೀಕ್ಷೆಗೊಂಡುದಂ ಕೇಳ್ದು ವಿನಿಶ್ಚಳಮಾನಸಂ ಪ್ರಜಾಪತಿ ನೆಲಕ್ಕೆ ನೆಲೆಗಂಡನಂತೆ ಬೀಸಿ ಬಿಸುಟ್ಟಂ (ಪರ್ಧಮಾ. ೪-೧೦೨). **ನೆಲೆಗಾಣು**: ೨. ಈ ವಿಶ್ವಾಸಘಾತ ಅವನ ಮನಸ್ಸಿಗೆ ಆಘಾತ ಕೊಟ್ಟಿದೆ. ಇದರಿಂದಾಗಿ ಅವನಿಗೆ ಮನೆಯಿಂದ ನೆಲೆಗಾಣದ ಶೂನ್ಯದಲ್ಲಿ ಹೆಜ್ಜೆ ಹಾಕಿದಂತೆ ತೋರಹತ್ತಿದೆ (ಇಪ್ಪಕ. ೨೬೨). 'ನೆಲೆಯಱಿ' ಪರಾ.

[ನೆಲೆ$_1$ + ಕಾಣ್]

ನೆಲೆಗಾಣಿಸು(ಕ್ರಿ). ೧. ಇರುವ ಸ್ಥಳವನ್ನು ತೋರಿಸು: ನೆಲೆಗಾಣಿಸದೆ ಶಂಬರದೈತ್ಯ ಕರ್ಗತ್ತಲೆಯಾಗಿ ಕುವರನ ತುಡುಕೆ ಸಲೆ ಭಾಸ್ಕರರೂಪ ತಾಳ್ದಿ ಮನ್ಮಥ ಮೆಟ್ಟಿ ತಲೆಯ ಕಡಿದನು (ಮೋಹತ. ೧೨-೮೨). ೨. ಅಂತರ್ಯವನ್ನು ತೋರು,—ಕಾಣಿಸು: ದಿವ್ಯಸಿದ್ಧಿಯ ನೆಲೆಗಾಣಿಪ ದೇವನ ದಿವ್ಯಧ್ವನಿಯ ಪಾಡಿದರು (ಭರಚಿ. ೧-೯೭). ೩. ಸ್ಥಿರವಾಗಿರಿಸು: ಕುಲಸತಿಯರ ಧರ್ಮ ಕೊನರಿಡೆ ನೇಹವ ನೆಲೆಗಾಣಿಸಿ ನೆಗಳುವುದು (ಜಿದಿಬ. ೩-೧೦). [ನೆಲೆಗಾಣ್ + -ಇಸು$_3$]

ನೆಲೆಗಾಣು 'ನೆಲೆಗಾಣ್' ನೋ.

ನೆಲೆಗಿಡಿಸು 'ನೆಲೆಗೆಡಿಸು' ನೋ.

ನೆಲೆಗಿಡು 'ನೆಲೆಗೆಡು' ನೋ.

ನೆಲೆಗುಂದು (ಕ್ರಿ). ನೆಲೆಯಿಲ್ಲದಂತಾಗು; ಆಶ್ರಯಹೀನವಾಗು: ಪೋದುದಸೂಯೆ. . . ಸಲೆ ಕೆಟ್ಟುದಪಮೃತ್ಯು ಜ್ವಲಿಸಿದುದು ಭಯಬಿತ್ತು ನೆಲೆಗುಂದಿದಳ್ ಮಾರಿ ತೊಲಗಿತಭಯಂ (ಚಿಬಪು. ೪-೩೫).

[ನೆಲೆ$_1$ + ಕುಂದು$_1$]

ನೆಲೆಗೂರ್ (ನಾ). ಒಂದು ಊರಿನ ಹೆಸರು: ಸ್ವಸ್ತಿಶ್ರೀ ಸತ್ಯವಾಕ್ಯ ಪೆರ್ಮ್ಮಾನಡಿಗಳ ಪೃಥುವೀರಾಜ್ಯಂಗೆಯ ಬೂತರಸ ತೊಱೆಕಾರಟ್ಟಿಯ ಪದಿಯಳೆಯು ನೆಲೆಗೂರು ಮೊಗಪೆ ಅಳೆಯುವು ಬಿಚ್ಚೆ (ಎಕ. IV, ಗುಂಡ್ಲು ಪೇ. ೯೪-೫; ಸು. 890). [? + ಊರ್]

ನೆಲೆಗೆಡಿಸು, ನೆಲೆಗಿಡಿಸು (ಕ್ರಿ). ಸ್ಥಿತಿ ಕೆಡುವಂತೆ ಮಾಡು; ನೆಲೆಗೆಡುವಂತೆ ಮಾಡು: ತದುದ್ಯಾನಂ . . . ಉನ್ಮಾದವಿಷಯಮುಂ ವಿಮೋಹವಿಷಯಮುಮಾಗಿ ನಿಜಮಾನಸಾಂತರಾಳಮುಂ ಭೋಂಕೆನೆ ಕಲಂಕಿ ನೆಲೆಗೆ[ಪಾಠಾಂ. ಗಿ]ಡಿಸೆ (ಪರ್ಧಪು. ೬-೨೩ ಪ); ಇಂದ್ರನನು ನೆಲೆಗೆಡಿಸಿಯೈರಾವತವ ಧರೆಗಿಳುಹಿ ನೋನಿಸದಿರ್ದನಾದೊಡೆ ಇಳೆಯ ವಲ್ಲಭ ಧರ್ಮರಾಯನ ಪಾದದಾಣೆ (ಸಂಭಸ. ೨೦-೪೭); ಹರಿಯ ನೆಲೆಗೆಡಿಸಿದನು ಪರಮೇಶ್ವರನ ಭಿಕ್ಷವನೆತ್ತಿಸಿದ ಸರಸಿರುಹಭವ ತಾ ಶಿರವ ಹೋಗಾಡಿದನು ಪೂರ್ವದಲಿ (ಸಳಚ. ೯-೯); ರಿಪುಸೈನ್ಯಕಾನನವನು ನೆಗ್ಗಿದರ್ನೆಲೆಗೆಡಿಸಿ ಬಿಱುಗಾಳಿಯಂತೆ (ಚೈಮಿಭಾ. ೪-೩೨); ಬೀಗಿಸುಗ್ಗಿಯ ಬಿಸಿಲ್ ನೆಲೆಗೆಡಿಸೆ ನೆಳಲಂ (ಕಾಲೂರ. ೧೩೬-೨೯೨). **ನೆಲೆಗಿಡಿಸು**: ಗೋಮೂತ್ರ ಮಂಡಲಮುಮಾಕಾಶಂ ಪೇಜವಿತಿಯೆಂಬ ವಿಧಿಗಳೊಳ್ ಬಂದು ನೆಲೆಗಿಡಿಸಲುಂ ಪೊಲಗಿಡಿಸಲುಂ ಬಲ್ಲಂ (ಶಾಂತಿಪು. ೩-೨೩ ಪ); ವಿರೋಧಿವಂಶಾವಳಿಯಂ ನೆಲೆಗಿಡಿಸಿ ನಿನ್ನ ತೇಜೋಜ್ವಲನಂ ತಳ್ತಟ್ಟುಕೊಳ್ಗೆ ವಿಕ್ರಮತುಂಗಾ (ಕಾಪ್ಯಾಸ. ೩೭೫); ಇವು ಮುನ್ನಾರಾರ ಬಲ್ಪಂ ನೆಲೆಗಿಡಿಸವು (ಕಬ್ಬಿಕಾ. ೩೦೩). [ನೆಲೆಗೆಡು + -ಇಸು$_3$]

ನೆಲೆಗೆಡು, ನೆಲೆಗಿಡು (ಕ್ರಿ). ೧. ನೆಲೆತಪ್ಪು; ಆಶ್ರಯವಿಲ್ಲದಾಗು; ನೆಲೆಯಿಲ್ಲದಾಗು; ನಿರಾಶ್ರಿತವಾಗು: ವಿಶಾಖನಂದನುಂ ತನ್ನ ರಾಜ್ಯಮಂ ದಾಯಿಗರೆಟ್ಟಿದುಕೊಳೆ ನೆಲೆಗೆಟ್ಟು ಪೆಜರ ಬೆನದೊಳೋಲೆಯನಡುಕುತ್ತುಮಾ ಪುರಕ್ಕೆ ಬಂದು (ಚಾವುಂಪು. ೧೪೧); ಗೋಮಹಿಷೀ ಕರೇಣುತುರಗೋಷ್ಟ್ರಕುಲಕ್ಕವಳಾಗೆ ಪೊಂದುಗುಂ ತಾಮಱುದಿಂಗಳಿಂಗೆ ನೆಲೆಗೆಟ್ಟುಱಿಗುಂ (ಲೋಕೋಪ. ೪-೬೭); ಸಕಲರಾಜ್ಯಮುಂ ಹೋಗಾಡಿ ಕಡೆಗಧಿಕಳುಱಯಾಗಿ ನೆಲೆಗೆಟ್ಟು . . . ಜಗಕೆ ನಗೆಗೆಡೆಯಾದ ಪಾತಕ ಹರಿಶ್ಚಂದ್ರನವನನೇನೆಂದು ನೆನೆದಪೆ (ಹಚಕಾ. ೧೨-೪೩); ಶಿವತತ್ತ್ವಮದು ಬೇರ್ವರೆಯಲಜ್ಞಾನಕೂಪ ನೆಲೆಗೆಟ್ಟುದೆನೆ ನಾಭಿ ನಿಮ್ಮವನುಳಿದುದು (ಚಿಬಪು. ೪-೧೫). ೨. ಸ್ಥಿರತೆಯನ್ನು ಕಳೆದುಕೊಳ್ಳು; ಅಸ್ಥಿರವಾಗು; ಚಂಚಲವಾಗು: ಪೊಲೆಬೂತಿನಂತೆ ಕಿಡೆ ನುಡಿಯದೆ ಪಾದರಸದಂತೆ ನೆಲೆಗೆಟ್ಟು ಪರಿಯದೆ (ಧರ್ಮಾಮೃ. ೧೧-೫೭). ೩. ನೆಲೆಯನ್ನು ಮೀರು; ಕಟ್ಟಳೆಯನ್ನು ಅತಿಕ್ರಮಿಸು; ಅತೀತವಾಗು: ಕುಲದೊಳಗಿದ್ದು ಕುಲವ ಬೆರಸದೆ ನೆಲೆಗೆಟ್ಟು ನಿಂದುದನಾರು ಬಲ್ಲರು (ಅಪಚಂ. ೧-೩). ೪. ಮೇರೆ ಮೀರು; ಹತೋಟಿ ಮೀರು: ಮಿಕ್ಕು ಮಾಸುವ ಬೆಳಗು ಕೆಂಪಡರ್ದ ಮುಗಿಲು ತಲೆಯಿಕ್ಕುವಬುಜಂ ನಗುವ ಕುಮುದ ನೆಲೆಗೆಡುವಬುಧಿ ತೆಕ್ಕೆಯಿಂದಗಲ್ವ ಚಕ್ರಂ (ಸೋಮಶಚ. ೨-೧೦). **ನೆಲೆಗಿಡು**: ೧. ಆತಂಗೆ ಸರಸೆಯೆಂಬಳ್ ಪಾತಕಿ ಕುಲವನಿತೆಯೆನಿಸಿ ಕಯನೆಂಬ ಮಹಾಪಾತಕನೊಳ್ ಪುದುವಾಟ್ಟಳ್ ಜಾತಿಯ ನೀತಿಯ ನೆಗಟ್ಟಿ ನೆಲೆಗಿಡುವಿನೆಗಂ (ಪಂಚಾಮೃ. ೬-೩೩); "ಅಸ್ಥಿರವಾಗು" (ಪ್ರಭಣ್ಣ). [ನೆಲೆ$_1$ + ಕೆಡು$_1$]

ನೆಲೆಗೆಯ್ (ಕ್ರಿ). ನಿರ್ಧಾರ ಮಾಡು; ಖಚಿತಗೊಳಿಸು: ನಿಡುವಯಣಂ ಇರ್ಕೆ ರಾಘವಂ ಪೇಟ್ಟಂ ಅಲ್ಲದೊಡೆ ತಾಂ ತಮಗೆ ನೆಲೆಗೆಯ್ವರ್ (ರಾಮಾಶ್ವ. ೨೭-೩೦). [ನೆಲೆ$_1$ + ಕೆಯ್$_1$]

ನೆಲೆಗೊಡು (ಕ್ರಿ). ಮರ್ಮವನ್ನು ತಿಳಿಯಲು ಅವಕಾಶ ಮಾಡಿಕೊಡು: ತಿಳಿಯೆ ಶಬ್ದ ಸ್ಪರ್ಶ ರೂಪಂಗಳಿಗೆ ರಸ ಗಂಧಂಗಳಿಗೆ ತಾ ಬಳಕೆಯಿಲ್ಲದ ಕತದಿನಿಂದ್ರಿಯಸಮೂಹ ಹೊಮ್ಮದಡೆ ನೆಲೆಗೊಡದು ಪರತತ್ವ

ಸತ್ಯೋಜ್ವಲವನಂತಜ್ಞಾನವೆಂದಿಂತಲಘುಮಹಿಮೆಯನುಳ್ಳಡಧಿಕಬ್ರಹ್ಮವಱಿ (ತಿಮ್ಮಶಾಂ. ೬-೫). [ನೆಲೆ$_1$+ಕೊಡು$_1$]

ನೆಲೆಗೊಳ್, ನೆಲೆಕೊಳ್, ನೆಲೆಗೊಳು, ನೆಲೆಗೊಳ್ಳು (ಕ್ರಿ). ೧. ನೆಲೆ ನಿಲ್ಲು; ನೆಲಸು : ಲಲಾಟಾಗ್ರದೊಳ್ ನೆಲೆಗೊಂಡೊಪ್ಪುವ ವೀರಪಟ್ಟಂ (ಕಾವ್ಯಸಾ.೫೨೫ ಶೂದ್ರಕ) ; ಚಿರಂದೇವಿ ಸರಸ್ವತಿ ಹಂಸೀಭಾವದೆ ನೆಲೆಗೊಳ್ಗೆ ಕೂರ್ತು ಮನ್ಮಾನಸದೊಳ್ (ಕವಿಗಾ. ೧-೩) ; ಅರಿನರಪಾಲವರೌಳಿಮಣಿಯೊಳ್ ನೆಲೆಗೊಂಡುದು ಶಂಖಚಕ್ರಚಾಮರಹಳಚಿಹ್ನಚಿಹ್ನಿತ ಪದಾಕೃತಿ (ಸಂಪಭಾ. ೬-೨೯) ; ಸ್ವಯಂಪ್ರಕಾಶವೆ ಶಿವನಾದ ಕಾರಣ ಆ ಮಹಾಪ್ರಕಾಶವೆ ನೇತ್ರಂಗಳೊಳಗೆ ನೆಲೆಗೊಂಡು ಸಕಲಪದಾರ್ಥಂಗಳ ಕಾಣಿಸಿ ತೋರ್ಪ ದೆಸೆಯಿಂ ನೇತ್ರಕ್ಕೆ ಶಿವಲಿಂಗವಾಗಬೇಕಾಯಿತ್ತು (ಆದಪ. ೮-೧೩) ; ಶಿವಭಕ್ತಿ ನೆಲೆಗೊಳ್ವ ಸಮಸುಖಸಹಾಯಮಂ ನೆನೆದು ತನ್ನೊಳಗೊಳಗೆ ತಿಳಿದಂ ಶಿವಧ್ಯಾನಿ (ಬಸರ. ೫-೮). ೨. ಸ್ಥಾಪಿತಗೊಳ್ಳು ; ಸ್ಥಾಪನೆಯಾಗು : ಜಳನಿಧಿಯನೊಳಪೊಕ್ಕು ನೆಲೆಗೊಂಡುದಲ್ಲಿ ರಥಮವಿಚಳದಿಂ ನೆಲದಲ್ಲಿ ನಿಲ್ವಪೊಲ್ (ಶಾಂತೀಶ್ವ. ೧೫-೧೧೪) ; ಬ್ರಹ್ಮೇಶ್ವರನು ನೆಲೆಗೊಂಡಿದ್ದನಲ್ಲಾ ಪೀಠಮಧ್ಯದಲಿ (ಬಸಪು.೫೪-೭೬); ನೆಲೆಗೊಂಡನಲ್ತೆ ಮಲಿನಾಪಹಾರಿ ನಿಶ್ಚಲ ಸತ್ಯಪಂ . . . ನಿಲಯಾಂತರಾಳದೊಳ್ (ಹಾಲಾಸ್ಯ.೩-೨-೨೯). ೩. ತಳವೂರು; ಬೇರು ಬಿಡು : ನಾಟುವಂಟುಗಳು ನಾಲ್ಕೆಂಟು ದಿವಸದಲ್ಲೆ ನೆಲೆಗೊಂಬುವವು (ಗಾದೆ). ೪. ಸ್ಥಿರವಾಗು ; ದೃಢವಾಗು : ಭಾವಶುದ್ಧವಿಲ್ಲದವಂಗೆ ಭಕ್ತಿ ನೆಲೆಗೊಳ್ಳದು (ಬಸವ. ೬೫೮) ; ಅನುಭಾವ ನೆಲೆಗೊಂಡಲ್ಲದೆ ಅಂಗಲಿಂಗದ ಹೊಲಬನಱಿಯಬಾರದು (ವಚಸಂ. ೪-೬) ; ನೆಲೆಗೊಳ್ಳದು ಚಿತ್ತ ಮಗನೆ ನೀನಿದಿರ್ವಂದು ತಲೆದೋಱಿಸು (ಮೋಹತ. ೪-೮೧). ೫. ಸ್ಥಿತಿಯನ್ನು ಪಡೆ ; ರೂಪುಗೊಳ್ಳು ; ರೂಪುದಾಳು ; ಮೈದಾಳು : ಯುಗ ಜುಗ ಮಿಗಿಲೆನಿಸಿದ ಹದಿನಾಲ್ಕುಭುವನ ನೆಲೆಗೊಳ್ಳದಂದು ನಿಜವನಱಿದಿಹೆನೆಂಬ ತ್ರಿಜಗಾಧಿಪತಿಗಳಿಲ್ಲದಂದು ತೋಱುವ ಬೀಱುವ ಭಾವದಲ್ಲಿ ಭರಿತ ಅಗಮ್ಯ ಗುಹೇಶ್ವರಲಿಂಗವು (ಅವಚಂ.೨-೭) ; ಜಾಂಬವನ ರೂಪಿಂದ ತೋಱಿದನಬುಜಭವನು ಪುರಂದರನು ನೆಲೆಗೊಂಡನಂಗದನಂಗಶೋಭೆಯಲಿ (ತೊರರಾ. ೧-೮-೬೭). ೬. ಉಂಟಾಗು ; ಒದಗು ; ಸಂಭವಿಸು : ದಾಹಂ ನೆಲೆಗೊಂಡರೋಚಕಮುಮಿರೆ ನಿಲಲಾಱದೊಡಾಮಜನಿತಮೆಂದಾ ಜ್ವರಮಂ (ಕಲ್ಯಾಕಾ. ೩-೧೪) ; ಇಂತು ತೀವಿದ ಗರ್ಭದಿಂ ಭಾವಭರಿತ ಪರಮಹರ್ಷಂ ನೆಲೆಗೊಂಡು ನಿಂದು (ಗಿರಿಕ. ೩-೩೯ ಪ) ; ಅರಸುತನ ರಾಮಂಗೆ ನೆಲೆಗೊಳಲರಸಿ ಕೇಳೌ ನಿನ್ನ ಮಗನೇನ ರಸನೋ ಮೇಣ್ವರಸನೋ ಸಾಮ್ರಾಜ್ಯಸೌಂದರಿಗೆ (ತೊರರಾ. ೨-೧-೨೬) ; ಬೆಲೆವೆಣ್ಣ ಬಲು ರಸಿಕರು ಭಾವಿಸರಾಕೆಗಳಿಜಸ ನೆಲೆಗೊಂಬುದಲೆ ಚಿತ್ತೈಸು (ಕಂಸವಿ. ೯-೧೫೮). **ನೆಲೆಕೊಳ್ :** ೧. ಶ್ರೀಸ್ವಸ್ತಿ ತನಗೆ ಮೃತ್ಯುಪರವಾನಱಿದೆ ಪೆರ್ತ್ವಾಣವಂಶದೊನ್ . . . ಸುರ××ಗ ಗತಿಯುಳ್ನೆಲೆಕೊಣ್ಡನ್ (ಎಕ. II, ೯೯-೪ ; ಸು. 700). **ನೆಲೆಗೊಳು :** ೨. ತನುವಿನ ಕೊಱತೆಗೆ ಸುಳಿಸುಳಿದು . . . ಗುಹೇಶ್ವರನೆಂಬ ಲಿಂಗಮನದಲ್ಲಿ ನೆಲೆಗೊಳ[ಪಾಠಾಂ. ಳ್ಳ]ದಾಗಿ (ಅವಚಂ. ೧೧೬-೫೨೬). **ನೆಲೆಗೊಳ್ಳು :** ೧. ಇದರಿಂದ ದೇಶದಲ್ಲಿ ಅಶಾಂತಿ ತಲೆದೋರಿ ಅಧರ್ಮ ನೆಲೆಗೊಳ್ಳುತ್ತದೆ (ಪ್ರತಾಪ. ೯೧) ; ಆ ಬೋಧೆ . . . ಎದೆಯಲ್ಲಿ ನೆಲೆಗೊಂಡಿದ್ದ ಸ್ವಾಭಾವಿಕವಾದಣಿಕೆಯನ್ನಲುಗಿಸಿತು (ನಾಡೋಜ. ೩೬೮). ೩. ಗೌತಮಮಹಾಮುನಿಯ ಕಾಲದಲ್ಲಿಯೂ . . . ಈಗ ಇಪ್ಪತ್ತನೆಯ ಶತಮಾನದಲ್ಲಿ ಭಾರತಭೂಮಿಯಲ್ಲಿ ನೆಲೆಗೊಂಡಿರುವ ಬ್ರಿಟಿಷರ ಪ್ರಭುತ್ವದಲ್ಲಿಯೂ ಅದೇ ನಕ್ಷತ್ರಗಳೇ ಬೆಳಗುತ್ತಿರುವುವು (ಜ್ಯೋತಿರ್ವಿ. ೩). ೪. ಮುಂದಣ ಹಜ್ಜೆಯಳಿದಲ್ಲದೆ ಒಂದು ಪಾದ ನೆಲೆಗೊಳ್ಳದು (ಅವಚಂ. ೧೦೫-೪೭೫). ೫. ನರಕದಲ್ಲಿ ಬೀಳುವ ಕರ್ಮಿಗಳಿಗೆ ಕೂಡಲಸಂಗನ ಶರಣರನುಭಾವ ನೆಲೆಗೊಳ್ಳದು (ಬಸವ. ೮೫೮) ; ಕಷ್ಟ ದುಃಖ ನೆಲೆಗೊಂಡಿತ್ತೆಂದು ತನ್ನಿಷ್ಟಲಿಂಗಪೂಜೆಯನಗಲಿಸಿ ಬಿಟ್ಟಯ ಮಾಡಬಹುದೇನಯ್ಯ (ವಚಸಂ. ೩೧೪-೭೭) ; ಇಂತೀ ತ್ರಿವಿಧ ಸಂಪತ್ತು ನೆಲೆಗೊಂಡ ಸದ್‌ಭಕ್ತಂಗೆ ನಮೋನಮಃ ಎಂಬೆನಯ್ಯ (ಅಖಂಡೇ. ೮೬-೮೭). ೭. ಸೇರಿಕೊಳ್ಳು ; ಕೂಡಿಕೊಳ್ಳು ; ಜೊತೆಯಾಗು : ತನ್ನವರೊಡನೆ ನೆಲೆಗೊಂಡು ಮಹಮ್ಮದನನ್ನು ತೊಂದರೆಪಡಿಸತೊಡಗಿದನು(ಜೈಮಹ.೬೮). [ನೆಲೆ$_1$+ಕೊಳ್$_1$]

ನೆಲೆಗೊಳಿಸು (ಕ್ರಿ). ೧. ನೆಲಸುವಂತೆ ಮಾಡು ; ನೆಲೆ ನಿಲ್ಲುವಂತೆ ಮಾಡು : ಅಂತಾ ಗರ್ಭೇಶ್ವರಿಯರಾ ಪುರುಪರಮೇಶ್ವರನ ಮನಸ್ಸರೋವರದೊಳ್ ತಮ್ಮ ಪಾದಪದ್ಮಂಗಳಂ ನೆಲೆಗೊಳಿಸಿಯುಂ (ಅದಿಪು. ೮-೨೪ ವ); ಆಚಾರವೇ ಲಿಂಗವೆಂದಱುಹಿದನಯ್ಯ ಬಸವಣ್ಣನು ಪ್ರಾಣದಲ್ಲಿ ಅಱಿವ ನೆಲೆಗೊಳಿಸಿದ[ಪಾಠಾಂ. ಎನ್ನ ಪ್ರಾಣದಲ್ಲಿ ಅಱುಹ ತೋಱಿದನಯ್ಯ ಬಸವಣ್ಣನು](ಮಹಾದೇ. ಬ. ೬೧-೧೫೧) ; ಮದೀಯ ಪದಪಂಕರುಹಮಂ ತನ್ನಾತ್ಮದೊಳ್ ನೆಲೆಗೊಳಿಸಿ ಭಕ್ತಿಯಲಿ (ಬಸಪು.೨-೧೧); ಮಾತೃ ಪಿತೃಗಳು ಶತ್ರುಭಾವವನಾಂತು ನಿಜಸಂತಾನದಲಿ ಸಂಪ್ರೀತಿಯನು ನೆಲೆಗೊಳಿಸಿ ಸರ್ವಜ್ಞಾಧಿಕಾರದಲಿ ಖ್ಯಾತರನು ಮಾಡದಡೆ . . . ಯೋಗ್ಯರಹರೇ (ಕುವ್ಯಾಉ. ೩-೨೦) ; ಸತಿ ಸುತರ ಪಿತೃ ಮಾತೃಗಳ ಸಂಗತರ ಸದ್ವಂಶಾಭಿಮಾನವನತಿಗಳೆಸಿ [ಪಾಠಾಂ. ಗಮಿಸಿ] ಮಕರಧ್ವಜನ ಮಾಯೆಯಲಿ ನೆಲೆಗೊಳಿಸಿ . . . ಚಪಳೆಯರು ಮೋಹಿಸಿತು (ತೊರರಾ. ೧-೫-೨೮). ೨. ಇರಿಸು ; ನಿಲ್ಲಿಸು : ಕೊಳುಗುಳವನಾರೈದು ಬಾಯೆನೆ ನಿಲುವುದನು ಚಿತವರ್ಜುನನ ನೆಲೆಗೊಳಿಸಿ ಬಹೆನೆಂದಾಯುಧವ ಕೊಂಡಡರಿದನು ರಥವ (ಕುವ್ಯಾದ್ರೋ. ೧೧-೩) ; ನಿಟಲಾಕ್ಷ ಭೀತಸ್ಥನಾಗಿ ಕುಟಲವರ್ಜಿತ ನಿಡುಜಡೆಯೊಳಗಾಕಾಶತಟನಿಯ ನೆಲೆಗೊಳಿಸಿದನು (ಮೋಹತ. ೧೯-೪೭). ೩. ಅಳವಡಿಸು ; ಹೊಂದಿಸು : ನೆಲೆವಾಡದೊಳು ನೀನೆನ್ನ ನೆಲೆಮೊಲೆಗಳಿಗೆ ಮಕರಿಕಾಪತ್ರವ ನೆಲೆಗೊಳಿಸಂಗಜರೂಪ (ಕುರಾಸಾಂ. ೨೬-೭೩) ; ತಲೆವಳಸಿ ನೆಲೆಗೊಳಿಸಿದ ಮಾಣಿಕ್ಯದ ತಲೆಮಾಲೆಯ ಪರಿಸರದೊಳೆಳಲೆವಿಟ್ಟ ಕನಕದರಳೆಲೆಮಾಲೆಯ . . . ವಿಳಾಸಮಳವಡೆ (ರಾಜಶೇ. ೬-೧೧ ವ). [ನೆಲೆಗೊಳ್+-ಇಸು$_3$]

ನೆಲೆಗೊಳು 'ನೆಲೆಗೊಳ್' ನೋ.

ನೆಲೆಗೊಳ್ಳು 'ನೆಲೆಗೊಳ್' ನೋ.

ನೆಲೆಗೋಟೆ (ನಾ). ಸ್ಥಿರವಾದ ಕೋಟೆ,—ದುರ್ಗ : ಅರ್ಗ್ಗಿ ತರ್ಗ್ಗದ ನೆಲೆಗೋಟೆ ಧೂಳಿಪಟವಾಗದ ದುರ್ಗ್ಗಕುಲಮ್ (ಎಇ. V, ೧೬-೧೧ ; 1142). [ನೆಲೆ$_1$+ಕೋಟೆ$_1$(<ಕೋಂಟೆ)]

ನೆಲೆಜವ್ವನ (ನಾ). ತುಂಬುಜವ್ವನ ; ಪೂರ್ಣಯೌವನ : ಎಲೆಲೆ ಕಲಾವತಿಗೀ ಪರಿ ನೆಲೆಜವ್ವನಮೊದವಿತಮಮ (ಚಿಕವಿ. ೬-೧೧೧). [ನೆಲೆ$_1$+ಜವ್ವನ]

ನೆಲೆತಪ್ಪು 'ನೆಲೆದಪ್ಪು' ನೋ.

ನೆಲೆದಪ್ಪಿಸು (ಕ್ರಿ). ೧. ಆಧಾರವಿಲ್ಲದಂತಾಗಿಸು ; ಆಶ್ರಯವಿಲ್ಲದಂತೆ ಮಾಡು : ತನ್ನ ಆಳದ ಒಳನೋವಿನ ನವಿರುಗೂಡಿದ ನುಡಿಯ ಬರೆಹಗಳನ್ನೆಲ್ಲ ಹೀಗೆ ನೆಲೆದಪ್ಪಿಸಿ ಬಿಟ್ಟದ್ದಕ್ಕೆ ಅಮಲನು ಮನಮನದೊಳಗೆ ಚಾರುಲತೆಯ ಮೇಲೆ ಸಿಡಿಮಿಡಿಗೊಂಡನು (ಇಪ್ಪಕ. ೨೪೧). ೨. ಗುರಿ ತಪ್ಪಿಸು ; ದಿಕ್ಕು ತೋಚದಂತೆ ಮಾಡು: ಇಂತಿದು ಕಣಾ! ಸೋದರರಂ ಸೊಮ್ಮುಗಿಡಿಸಿದುದು, ಅಗಸ್ತ್ಯನಂ ನೆಲೆದಪ್ಪಿಸಿದುದು ; ಸಾಜಮಲ್ತೇ ಪತಿಪತ್ನಿಗಳೊಳ್ ವಿಯೋಗ ದುಃಖಂ! (ರಾಮಾಶ್ವ. ೪೬-೧೯). [ನೆಲೆದಪ್ಪು + -ಇಸು$_3$]

ನೆಲೆದಪ್ಪು, ನೆಲೆತಪ್ಪು (ಕ್ರಿ). ೧. ಆಶ್ರಯವಿಲ್ಲದಂತಾಗು ; ಸ್ಥಾನಭ್ರಷ್ಟವಾಗು ; ನಿರಾಧಾರವಾಗು : ವಿಪತ್ತು ಬಂದಡಸಿದಾಗಳೆ ತಗ್ಗಿಸವೇಟ್ಟುಮೆಂದು ನೆಟ್ಟಗೆ ನೆಲೆದಪ್ಪಿರಲ್ ಬಿಡದೆ ಮುತ್ತಿದ ತುಂಬಿಯ ಬಂಬಲೆಂಬಿನಂ ಸೊಗಯಿಸುವಿಂಪುಗಂಪನಮರ್ದಪ್ಪಿ ಮನಂ ಗೊಳಿಪಚ್ಚ ಪೊಚ್ಚ ಸಂಪಗೆಯರಲಂ ತುಱುಂಬಿದ ತುಱುಂಬೆಸೆದರ್ದುದು ತದ್ವಧೂಟಿಯಾ (ಉದ್ಭಟ. ೯-೭೪) ; ಮೇಲುಜಗವೇಳೋಡಿದವು ಧ್ರುವನಾಲಯಕೆ. ನೆಲೆದಪ್ಪಿದುದು ಗ್ರಹಮಾಲೆ (ಕುಪ್ಯಾದ್ರೋ. ೧೯-೧೯). ೨. ಮೇರೆ ಮೀರು ; ಉಕ್ಕೇರು : ಹಗೆಗೆ ಕಾಲ್ವೊಳೆಯಾದ ವೀರರಸಾಬ್ಧಿ ನೆಲೆದಪ್ಪಿತ್ತು ನಿಮಿಷದಲಿ (ಕುಪ್ಯಾಕ. ೧-೨೫). ೩. ಸ್ಥಿತಿ ಕೆಡು : ತುಸು ಗಾಳಿ ತಾಕುತ್ತಲೇ ಅವನು ಸೀತು ಕೆಮ್ಮಿ ನೆಲೆದಪ್ಪಿದಂತೆ ಮಾಡುತ್ತಾನೆ (ಇಪ್ಪಕ. ೪೧೬). ೪. ಹಾಳಾಗು ; ದುರ್ದೆಶೆಗೆ ಬರು : ನೆಲೆದಪ್ಪಿದೆಡೆಗೆ ಮತಿ ಸಂಚಲಿಸಿರ್ದೆಡೆಗನ್ಯದೇಶಮಾದೆಡೆಗೆ ಖಳರ್ ಮುಳಿದೆಡೆಗೆ ಬುದ್ಧಿವೇಟಲ್ ಕುಲವಧುವೇ ಕಾರಣಂ (ದಶಕು.೧೨-೧೬೧). **ನೆಲೆತಪ್ಪು** : ೧. ಶಕುಂತಲೆ ತನ್ನಿಂದ ಧಿಕ್ಕಾರ ಹೊಂದಿ . . . ನೆಲೆತಪ್ಪಿ ನಿಂತಾಗ, ಅವಳು ತನ್ನ ಕಡೆಗೆ ಬೀರಿದ ಬಾಷ್ಪಾಕುಲವಾದ ದೃಷ್ಟಿ ಈಗ ವಿಷದ ಮುಳ್ಳಿನಂತೆ ಅವನನ್ನು ದಹಿಸತೊಡಗಿತು (ಕಾವ್ಯಸ. ೫೦). [ನೆಲೆ$_1$ + ತಪ್ಪು$_1$]

ನೆಲೆದಾಣ (ನಾ). ಆಶ್ರಯಸ್ಥಾನ ; ಆಕರ : ಬೆಲೆವೆಣ್ಣಳಾಡುಂಬೊಲ ಬೆಸವೆಣ್ಣಳ ನೆಲೆದಾಣ ಬಿಡುವೆಣ್ಣುಗಳ ನಿಳಯವೆನಿಸಿ ಮೆಱೆದಿಹುದಾದುರ್ಗದ ಕಲಕಲರವ ರಾಜವೀಥಿ (ಕುರಾಸಾಂ. ೪-೧೧೬) ; ಕಾಣುತೀಶನ ಮೂರ್ತಿಯಂ ಮಹಾಸತಿಯರೆರ್ದೆದಾಣಮಲರ್ಗಣೆಗೆ ನೆಲೆದಾಣಮಾದುವು (ಚೆಬಪು. ೨೦-೧೯). [ನೆಲೆ$_1$ + ತಾಣ]

ನೆಲೆದೀಪ (ನಾ). (ಪೂಜೆಯನ್ನು ಹೊಂದುವ) ಒಂದೇ ಸ್ಥಳದಲ್ಲಿ ಸ್ಥಿರವಾಗಿ ಉರಿಯುವಂತೆ ಇಟ್ಟರುವ ದೀಪ; ನಂದಾದೀಪ: (ಕ). [ನೆಲೆ$_1$ + ದೀಪ$_2$]

ನೆಲೆದೀವಿಗೆ (ನಾ). = ನೆಲೆದೀಪ : (ಕ). [ನೆಲೆ$_1$ + ದೀವಿಗೆ]

ನೆಲೆದೆಗೆ (ಕ್ರಿ). ಸ್ಥಳವನ್ನು ಬಿಡು ; ಜಾಗ ಬಿಟ್ಟು ಕದಲು : ನೆಲೆದೆಗೆದು ನಮ್ಮವರ ನೃಪನರನೆಲೆಗೆ ಸೇರದೆ ಸರಿಯೆ ಕಂಡನು ನಳಿನ ಮಿತ್ರನ ಮೊಮ್ಮ ತಡೆದನು ಭೀಮನುರವಣೆಯ (ಕುಪ್ಯಾಕ. ೧೯-೧೦೦). [ನೆಲೆ$_1$ + ತೆಗೆ$_1$]

ನೆಲೆದೇಗುಲ (ನಾ). ಸ್ಥಿರವಾದ ಆಲಯ : ಪಲರಂ ರಕ್ಷಿಸಿ ಮತ್ತಂ ಪಲವಂ ನಡೆದೇಗುಲಂಗಳಂ ಮಾಡಿಸಿದಂ ನೆಲನೆಲ್ಲಮಱಿಯೆ ಚಟ್ಟಂ ನೆಲೆದೇಗುಲಮುಮನಿದೊಂದನೊಲ್ದೆತ್ತಿಸಿದಂ (ಎಕ. V, ಬೇಲೂರು. ೧೯೬-೯೪ ; 1160). [ನೆಲೆ$_1$ + ದೇಗುಲ]

ನೆಲೆದೊಡಿಗೆ (ನಾ). ಯಾವಾಗಲೂ ಧರಿಸುವ ಆಭರಣ : ಪುಲಿದೊವಲುಡುಗೆಯ ಹಾವಿನ ನೆಲೆದೊಡಿಗೆಯ ನೊಸಲ ಕಣ್ಣ ಖಟ್ವಾಂಗದ ಪಂದಲೆಗಳ ಮಾಲೆಯ ಶೂಲದ ಕಲಿಗಂಜದೆ ಮನವನೆಂತು ಮಾಡಿದೆ ಮುಗ್ಧೇ (ಗಿರಿಕ. ೯-೧೧೪). [ನೆಲೆ$_1$ + ತೊಡಿಗೆ(<ತೊಡುಗೆ)]

ನೆಲೆದೊಳ್ತು (ನಾ). ಯಾವಾಗಲೂ ಇರುವ ಸೇವಕ; ಜೀತದಾಳು. ನೆಲೆದೊಳ್ತಿರ್ (ಬಹುವ): ನಲಿನಲಿದು ಬಂದು ಗಿರಿಪತಿಯೊಲವಿಂದಂ ಗಿರಿಜೆ ಸಹಿತವುಂ ನಾವೆಲ್ಲವುಂ ನೆಲೆದೊಳ್ತಿರ್ ಬಳಿದೊಳ್ತಿರ್ ಸಲೆದೊಳ್ತಿರ್ ನಿಮಗೆನುತ್ತೆ ಧಾರೆಯನೆಱೆದಂ (ಗಿರಿಕ. ೧೦-೯೫). [ನೆಲೆ$_1$ + ತೊಳ್ತು (<ತೊಟ್ಟು)]

ನೆಲೆದೋಱು (ಕ್ರಿ). ೧. ಸ್ಥಳವನ್ನು ತೋರಿಸು : ಮುಕ್ತಿಗಿದು ನೆಲೆದೋಱುವುದು ಹರಿಭಕ್ತರಿದನಾಲಿಪುದು (ಹರಿಸಾ. ೧೮). ೨. ಕಾಣಿಸಿಕೊಳ್ಳು ; ತಲೆದೋರು : ಇಂತು ನಿಟ್ಟಿಸಿದರಸಂಗೆ ಅಲುಗದ ತುಱುಗೆವೆ ನಟ್ಟೆಡೆದೊಲಗದ ಕಡುನೇಹ ದಿಟ್ಟ ಬಟ್ಟಾಡುವ ನೀರ್ ತಲೆಯೇಱುವ ಸಂತಸದಿಂ ನೆಲೆದೋಱುದುವಂದು ನಂದನಾಲೋಕನದೊಳ್ (ಚಿಕವಿ. ೪-೬೭). [ನೆಲೆ$_1$ + ತೋಱು]

ನೆಲೆನಿಲ್, ನೆಲೆನಿಲ್ಲು (ಕ್ರಿ). ಸ್ಥಿರವಾಗಿ ನಿಲ್ಲು ; ನೆಲಸು : ಒಲಿದಿನಿಯನ ನಲ್ಪಗೆಯ ನೆನಹಿನೊಳು ನೆಲೆನಿಂದು ನೇಮಗೊಳುವಳು (ಹದಿಬ. ೭-೮) ; ಮನಂ ನೆಮ್ಮುಗೆಗೊಂಡು ನೆಲೆನಿಲ್ವಿನಂ ತೀರ್ಥಾಟನಂಬೋಗಲೆಣಿಪೆಂ (ರಾಮಾಶ್ವ. ೭೫-೧೦). **ನೆಲೆನಿಲ್ಲು** : ನಮ್ಮ ಪೂರ್ವಿಕರಂದು ನೆಲೆನಿಂದಲೈತಂದು ಆ ದೇವರರ್ಚಕರಾಗಿ (ಇಂಜಾವ.೫-೧೨) ; ರಾಜಾಜಿಗೆ ಮದರಾಸು ಬೊಂಬಾಯಿ ಕಲಕತ್ತಗಳಂತಹ ವಿಶಾಲ ನಗರಗಳಲ್ಲಿ ನೆಲೆನಿಲ್ಲುವ ಆತುರವಾಯಿತು (ರಾಜವ. ೬೭). [ನೆಲೆ$_1$ + ನಿಲ್]

ನೆಲೆನಿಲ್ಲು 'ನೆಲೆನಿಲ್' ನೋ.

ನೆಲೆನೋಡು (ಕ್ರಿ). ಸ್ಥಳವನ್ನು ನೋಡು : ಬಿಗಿ ಪುಗು ಬಿಟ್ಟು ಕೂಡು ಜಡಿ ಬಗ್ಗಿಸು ಪೊಯ್ನೆಲೆನೋಡು ಸಾಯೆ ಸಾರ್ದುಗಿ ಕೊಳೆ ನೂಂಕು ಸಾರ್ಚು . . . ತೆಗೆ ತೊಂಗಲನಿಂಬೆನೆ ನೂಂಕು ಯುದ್ಧಮಂ (ಕಾವ್ಯಾವ. ೪೦೬). [ನೆಲೆ$_1$ + ನೋಡು]

ನೆಲೆಬಾಟ್$_1$ (ಕ್ರಿ). ಚೆನ್ನಾಗಿ ಬದುಕು : ನೆಲೆಬಾಟ್ಗೆ, ನೆಲೆಬಾಟ್ಗಳ್, ನೆಲೆಬಾಟ್ದಂ, ನೆಲೆಬಾಟ್ದಪಂ, ನೆಲೆಬಾಟ್ವಂ, ನೆಲೆಬಾಟ್ಗುಂ (ಶಬ್ದಾನು. ೭೪ ಪ್ರಯೋ). [ನೆಲೆ$_2$ + ಬಾಟ್$_1$]

ನೆಲೆಬಾಟ್$_2$ (ನಾ). ಸ್ಥಿರವಾದ ಜೀವನ,—ಬದುಕು : ನೆಲೆಬಾಟ್ಗೆ, ನೆಲೆಬಾಟ್ಗಳ್, ನೆಲೆಬಾಟ್ದಂ, ನೆಲೆಬಾಟ್ದಪಂ, ನೆಲೆಬಾಟ್ವಂ, ನೆಲೆಬಾಟ್ಗುಂ (ಶಬ್ದಾನು. ೭೪ ಪ್ರಯೋ). [ನೆಲೆ$_1$ + ಬಾಟ್$_2$]

ನೆಲೆಬಿಂಬ (ನಾ). ಶಾಶ್ವತವಾದ ಬಿಂಬ (?) : ಹೊಳೆಯ ಸುಳಿಯಲ್ಲಿ ಸಿಕ್ಕಿದ ಹುಲ್ಲು ಬಳಸುವದಲ್ಲದೆ ಅಳಿವುದಿಲ್ಲ ಮುಳುಗುವದಿಲ್ಲ ಭವಸಾಗರದಲ್ಲಿ ಸಿಕ್ಕಿದ ಚಿತ್ತು ತೆಱಪಿಂಗೊಡಲಿಲ್ಲ ಜಲಪಾಷಾಣದಂತೆ ನೆಲೆಬಿಂಬದಂತೆ ಈ ಸುಲಲಿತ ಬಲುಗೈಯ್ಯರಿಲ್ಲದ ಲಿಂಗೈಕ್ಯವು ನಿಃಕಳಂಕ ಮಲ್ಲಿಕಾರ್ಜುನಾ (ಸೋಳಿಮಾ. ೧೩೧-೫೦೭). [ನೆಲೆ$_1$ + ಬಿಂಬ]

ನೆಲೆಬೀಡು 'ನೆಲೆವೀಡು' ನೋ.

ನೆಲೆಬೀಳು (ಕ್ರಿ). ರಚ್ಚೆಹಿಡಿ ; ಚಂಡಿಹಿಡಿ: ಹುಡುಗ ಅತ್ತು—ಅತ್ತು—ಅತ್ತು ನೆಲೆ ಬಿದ್ದ. ಅತ್ತೆ ಅವನಿಗೆ ಅಂಗಾರ ಹಚ್ಚಿದಳು ; ಧೂಪ ಹಾಕಿದಳು. ಆದರೂ ಅವನ ಅಳು ನಿಲ್ಲಲಿಲ್ಲ (ಸ್ಮೃತಿಚಿ. ೧೦೬). [ನೆಲೆ ?+ಬೀಳು$_1$(<ಬೀಟ್$_1$)]

ನೆಲೆಬೆಲೆ 'ನೆಲೆವೆಲೆ' ನೋ.

ನೆಲೆಮನೆ 'ನೆಲೆವನೆ' ನೋ.

ನೆಲೆಮಾಡ 'ನೆಲೆವಾಡ' ನೋ.

ನೆಲೆಮುರಿ (ಕ್ರಿ). ಆಶ್ರಯ ತಪ್ಪಿಹೋಗು ; ಆಧಾರವಿಲ್ಲವಾಗು : ಬಿಟ್ಟ ಬಟ್ಟಲು ಕೈಯಲ್ಲಿ ತಕ್ಕೊಂಡು ಮೆಟ್ಟಲೇರುವಷ್ಟರಲ್ಲಿ, ನೀರಿನ ಪ್ರವಾಹವು ಬಂದು ನೆಲೆಮುರಿಯಿತು. ಭಾಗೀರಥಿ ಕೆರೆಗೆ ಆಹುತಿಯಾದಳು (ಕಪಪು. ೬-೨೪). [ನೆಲೆ$_1$ + ಮುರಿ$_2$(<ಮುಱಿ$_1$)]

ನೆಲೆಮೂಡು (ಕ್ರಿ). ನೆಲಸು ; ಸ್ಥಾಪಿತವಾಗು ; ಭದ್ರವಾಗು : ತಾಯಿಯ ಮನೋಭಾವ ಸಹೃದಯತೆ ಇವು ಮಗನಲ್ಲಿಯೂ ಮಗನ ಗುಣಗಳು ತಾಯಿಯಲ್ಲಿಯೂ ನೆಲೆಮೂಡಿ ಅವರ ಸಂಸಾರ ಜೇನಿನಲ್ಲಿ ಸಕ್ಕರೆ ಬೆರಸಿದಂತಿತ್ತು (ಕೊನೆಭೇ. ೨೦) [ನೆಲೆ$_1$ + ಮೂಡು$_1$]

ನೆಲೆಮೊಲೆ (ನಾ). ಉನ್ನತವಾದ ಸ್ತನ ; ಬಲ್ಮೊಲೆ : ಅಲಘು ನಿತಂಬದ ಪೊಯ್ಲೊಳ್ ನೆಲೆಮೊಲೆಯೆಳ್ಳೇಱಿನೊಳ್ ತರಂಗಂಗಳ್ ತೂಳ್ಡಲಱುಗುಮವಱಳ್ಳೇಱಿನೊಳಲಱುಗುಮೆರ್ದೆ ತೆರೆಗಳಳಱ ತೂಳ್ವುದು

ಸಿರಿದೇ (ಆದಿಪು. ೧೧-೧೪೨); ಅಭೀಷೇಕಕ್ಕೆ ಬಂದಿಟಿದ ಪುಳಿಂದರಾಜ ಸುಂದರಿಯರ ನೆಲೆಮೊಲೆಯ ಸಿರಿಕಂಡದಣ್ಣಿನಿಂ ಪೊರೆದು ಬೆಳರ್ಪನಾಂತ ತೆರೆಗಳೊಳಂ (ಕಾದಂಪೂ. ೧೧೭); ನೆಲೆಮೊಲೆ ಹಾರಮಂ ಕೆಲಕೆ ನೂಂಕಿದುದು (ವರ್ಧಪು. ೯-೩೦); ವಕ್ಷಃಶ್ರೀ ನೆಲೆಮೊಲೆಗೆ ತಿಲಕವಿಕ್ಕೆ ಮುಖಂ ಲಾವಣ್ಯದ ಚಿಬ್ಬುವೊಯ್ಯೆ . . . ಸುಮುಹೂರ್ತದೊಳು ಸುಪುತ್ರನುದ್ಭವಿಸೆ (ಬಸರ. ೧೦-೧೦೦). [ನೆಲೆ$_1$+ಮೊಲೆ$_1$]

ನೆಲೆಯರಿ 'ನೆಲೆಯಱಿ' ನೋ.

ನೆಲೆಯಱಿ, ನೆಲೆಯರಿ (ಕ್ರಿ). ೧. ಆಳವನ್ನು ತಿಳಿ; ಮರ್ಮವನ್ನು ಅರಿತುಕೊಳ್ಳು; ಒಳಗನ್ನು ತಿಳಿ: ಬಲಮಱಿಯದಾತನ ಕಾಳಗಮುಂ ನೆಲೆಯಱಿಯದೆ ತೊಱೆಯಂ ಪಾಯ್ವನುಂ . . . ತುದಿಯೊಳ್ ಮಹಾದುಃಖಮನೆಯ್ದುವರಲ್ಲದೆ ಸುಖಮನೆಯ್ದುವರಲ್ಲರಿಂತು (ಧರ್ಮಾಮೃ. ೧೧-೪೨ ಅಡಿಟ); ಭರತವನೋದುತುಂ ಮತ್ತುಳಿದ ಕಲಾಳಿಗಳ ನೆಲೆಯಱಿದುಸುರುತುಂ (ಪದ್ಮರಾ. ೯-೩೪); ತತ್ತ್ವದ ನೆಲೆಯಱಿತಾ ಮಾರ್ಗದಿಂದತ್ತಲಿತ್ತಲ್ ಪೊಳೆದತ್ತಂ ಪೋಗದಂತಿರ್ಕುಳಿಸುತೆ ಬುಧರಂ ತರ್ಕಿಕುಂ ಚಿಕ್ಕದೇವಂ (ಚಿಕವಿ. ೪-೧೦೦). **ನೆಲೆಯರಿ:** ೨. ಸ್ಥಳವನ್ನು ತಿಳಿದುಕೊಳ್ಳು; ಜಾಗವನ್ನು ಕಂಡುಕೊಳ್ಳು: ಪೊದರ್ಪೊಕ್ಕು ಪುಲಿವುದುಗಿ ಕುಳಿತು . . . ಕೆಂಡ್ಗಣ್ಗಳಂ ಬಿಡುತ್ತಿರೆ ಶಬರರುಂ ನೆಲೆಯರಿದು ಮುತ್ತಿ ಬಾಲಂಗಳಿಂದೊತ್ತಲು (ನವಮೋ. ೧೬-೨೮).

[ನೆಲೆ$_1$+ಅಱಿ]

ನೆಲೆಯಾಂದೆ (ನಾ). ಕದಲದೆ ನೆಲೆಯಾಗಿರುವ ಗೂಬೆ; ಸ್ಥಿರವಾಗಿ ಒಂದೇ ಎಡೆಯಲ್ಲಿರುವ ಗೂಗೆ: ಎಲೆ ದೇವರೆ ಪುತ್ತುಂ ಬತ್ತಲೆಯುಂ ಬಱಿದಿಲ್ಲರೆಂಬರದು ಕಾರಣದಿಂ ನೆಲೆಯಾಂದೆಯ ನಚ್ಚಿದ ಪೋಲೆಲೆ[ಪಾಠಾಂ. ನೆಲೆಯಾಂದೆಗನಚ್ಚಿಯಪೋಲೆಲೆ, ನೆಲೆಯಾಂದೆಯಮನರ್ಚಿಸಿದೆಲೆ] ಮಿಡುಕದೆ ನೆನೆಯುತಿರ್ದಿರೇನಂ ಮನದೊಳ್ (ಯಶೋಚ. ೪-೧೫). [ನೆಲೆ$_1$+ಆಂದೆ]

ನೆಲೆಯಾಸೆ (ನಾ). ದೃಢವಾದ ಬಯಕೆ: ಮೋಡ ಮುತ್ತುವ ಜಡೆಗೆ ಜಾಹ್ನವಿಯೆ ಜಾರಿ ಬರೆ ಪಕ್ಕಕೆಳವೆರೆ ಸೆಕ್ಕಿ ಕಣ್ ಸವಿಯ ಕೊಳುತ ಮೆರೆವಿದರ ದರ್ಶನವೆ ದುಡುಕಿಸುವುದೆನ್ನೆದೆಯ ನಡೆಯ ಮನುಜಗಿದು ನೆಲೆಯಾಸೆಯೋ ಕಟ್ಟಕಡೆಯ? (ಮಲೆದೇ. ೧೨-೧೦). [ನೆಲೆ$_1$+ಆಸೆ$_1$]

ನೆಲೆಯುಪ್ಪರಿಗೆ (ನಾ). ಅಂತಸ್ತುಗಳಿಂದ ಕೂಡಿರುವ ಮನೆ; ಮಹಡಿ ಮನೆ; ಕರುಮಾಡ: ಮೇಗಣ ನೆಲೆಯುಪ್ಪರಿಗೆಯ ಕಳಕಳರವಮಂ ಕೇಳ್ದು (ಬಾಧಪು. ೨-೬೮ ಪ); ದ್ರೋಣನಿದಿರಾಗಿ ಧರಣಿಪನ ಸತ್ಕರಿಸಿ ನೆಲೆಯುಪ್ಪರಿಗೆಗೊಯ್ದನು (ಕುಸ್ಯಾದ್ರೋ. ೮-೫೬); ನಿಡಿಯ ಬಾಲವ ಬೀಸಿ ಬೀದಿಗಳೆಡಬಲದ ನೆಲೆಯುಪ್ಪರಿಗೆಗಳನಡಿಮಗುಚುತ್ಯೆತಂದನನಿಲಜನಂಜಲಖಿಳಜನ (ತೊರರಾ. ೫-೭-೧೪); ಮತಿಗೆಡಿಪ ಬೆಲೆವೆಣ್ಗಳೊಪ್ಪಿವ ರತುನಗಳ ನೆಲೆಯುಪ್ಪರಿಗೆ ತರತರದಿ ಮೆಱೆದಿಹುದು (ಸಾಳ್ವಭಾ. ೨-೧೦). [ನೆಲೆ$_1$+ಉಪ್ಪರಿಗೆ]

ನೆಲೆಯೂರು$_1$ (ಕ್ರಿ). ಸ್ಥಿರವಾಗಿ ನಿಲ್ಲು; ನೆಲೆಯಾಗಿ ನಿಲ್ಲು; ನೆಲಸು: ಆಗ ಸ್ವಾಮಿಗಳು ತಾವು ಅನುಸರಿಸಿದ ಮಾರ್ಗವೇ ಯೋಗ್ಯ . . . ಎಂದು ಕೂಗಾಡಿ ಹಳ್ಳಿಯ ಹಿರಿ-ಕಿರಿಯರಲ್ಲಿ ನೆಲೆಯೂರಿ ಬಿಡುತ್ತಿದ್ದರು (ಜಯಂತ. ೧೧). [ನೆಲೆ$_2$+ಊರು$_1$(<ಊಱು$_1$)]

ನೆಲೆಯೂರು$_2$ (ನಾ). ನೆಲಸಿರುವ ಸ್ಥಳ; ವಾಸಸ್ಥಾನ: ತಂಮ ನೆಲೆಯೂರು ಸಿಂದಂಗೆಱೆಯ ಬಸದಿಗೆ . . . ಧಾರಾಪೂರ್ವ್ವಕಂ ಹಡೆದು ಬಿಟ್ಟ ಸವಗೋನಹಳ್ಳಿಯ ಸೀಮಾಸಮ್ಬಂಧಂ ಎಂತೆಂದಡೆ (ಎಕ. VI, ಚಿಕ್ಕಮ. ೧೬೧-೩೧; 1137); ಆ ಸೋಮಯಾಜಿಯ ನೆಲೆಯೂರು 'ವೆಂಗಿಪಟು' (ನಾಡೋಜ. ೬೪). [ನೆಲೆ$_1$+ಊರು$_3$(<ಊರ್)]

ನೆಲೆವಂತ (ನಾ). ೧. ನೆಲೆಯುಳ್ಳವನು; ಆಧಾರವಿರುವವನು: "ಸೂದಃ=ನೆಲೆವಂತಂ" (ಕಾಶಕೃ. ೨೭೫). ೨. ಆಧಾರ ನೀಡುವವನು; ಆಶ್ರಯದಾತ: ಎಲೆ ಕುವರಿ ನಿನ್ನ . . . ಚತುರತೆಗೆ ಬೇಟಕ್ಕೆ ಕೂಟಕ್ಕೆ ನೆಲೆವಂತ ಕಲೆವಂತನು . . . ಸುಳಿದಪನು ಸ್ವಪ್ನದೊಳು (ನವಮೋ. ೨೪-೯೩). [ನೆಲೆ$_1$+-ವಂತ]

ನೆಲೆವಟ್ಟಣ (ನಾ). ಮೂಲಸ್ಥಾನ; ಸ್ವಂತ ಊರು: ಅಂದು ನೆಲೆ[ಪಾಠಾಂ.ರೆ, ಲ]ವಟ್ಟಣಕ್ಕೆ ಬರೆ ನಡುವಿರುಳು ನಡೆತಂದು ಊರ ಹೊಱಗಣ ಮಸಣವಟ್ಟಗೆಯೊಳಿರಲು (ನಂಬಿರೆ. ೬-೫೪).

[ನೆಲೆ$_1$+ಪಟ್ಟಣ]

ನೆಲೆವಟ್ಟಿಗ (ನಾ). ಮನುಷ್ಯ; ಭೂಚರ: ನೆಲದೊಳಗಾ ನೆಲ ಹೇಸುವಂದದಿನಾ ನೆಲೆವಟ್ಟಿಗರು ಬೊಬ್ಬಿಱಿದು ತಲೆ ಮುಂಡ ಕರುಳು ನೆತ್ತರು ಜೋರೆಯೇಳ್ವಂತಲೆಸದೆ ಕಾದಿ ಮಡಿದರು (ನೇಮಿಸಂ. ೩೧-೧೨).

[ನೆಲೆ$_1$+ಬಟ್ಟಿಗ]

ನೆಲೆವಡಲಗೆ, ನೆಲೆವಡಲಿಗೆ (ನಾ). (ಸಸ್ಯಗಳನ್ನು ಬೆಳೆಯುವ) ಅಗಲವಾದ ಬಾಯುಳ್ಳ ಹರಿವಾಣ,—ಪಡಲಿಗೆ: ಜಾಗದ ನೆಲೆವಡಲಗೆಗಳ ಜಾಗಂಗಳ ಪಸುರ್ಗಳೆಸೆಯೆ ರತ್ನದ ಕೇರ್ಗಳ್ ಜಾಗಂಬೊಯ್ದಂತಿರೆ ಪರಭಾಗಂಬಡೆದುವು ವಿವಾಹಗೇಹಾಂತರದೊಳ್ (ಆದಿಪು. ೪-೩೧); ನೆಲೆವಡಲ [ಪಾಠಾಂ. ಲಿ]ಗೆಗಳ ಜಾಗಂ ಪಲವಾಗಿರೆ ತನ್ನ ನೆಗೆವ ಪಸುರ್ಗದಿರಿಂದಂ ಪೊಲಗಿಡಿಸಿದುದಮರರ ಕಣ್ಮಲರಂ ಜಿನಸವನಭವನಹರಿತಸ್ತಂಭಂ (ಮಲ್ಲಿಪು. ೧೨-೧೦೭). **ನೆಲೆವಡಲಿಗೆ:** ನೆಲೆವಡಲಿಗೆಗಳ ಜಾಗದ ಕೆಲದೊಳ್ ಮೊಸರಣ್ಮೆ ಪತ್ತಿ ಸಂಗಡಮೆಸೆಗುಂ ಫಲಮಕ್ಷತ ಕಮಲಾಕ್ಷತ ಮಲರಚ್ಚಂಗಱುಕೆ ಮಂಗಳದ್ರವ್ಯಂಗಳ್ (ಅಜಿಪು. ೪-೪೦); ಆಗೆ ಮೂಡುವಂದದಿಂ ತೆರ್ಕೆಗೊಂಡು ಕಿಱುಮೊನೆಯ ಸೆಲೆಗಳಿಡಿಕಿಱುದಿರೆ ನೆಟ್ಟಗೆ ಪಾಪದಗೆಯ ನೆಲೆವಡಲಿ[ಪಾಠಾಂ. ಲ]ಗೆಗಳಿವೆನಿಸುವುವು ನರಕಬಿಲ ಪಟಲಂಗಳ್ (ವರ್ಧಪು. ೧೧-೩). [ನೆಲೆ$_1$+ಪಡಲಗೆ]

ನೆಲೆವಡಲಿಗೆ 'ನೆಲೆವಡಲಗೆ' ನೋ.

ನೆಲೆವಡಿಸು (ಕ್ರಿ). ೧. ನೆಲೆನಿಲ್ಲುವಂತೆ ಮಾಡು; ಸ್ಥಿರವಾಗಿರಿಸು: ಆ ವೇದಶಾಸ್ತ್ರಾದಿಗಳಿಗಿಂತಲೂ ಹೆಚ್ಚಾಗಿ ಕಾವ್ಯವೇ ಆತ್ಮಸಮತಾ ಸಂಸ್ಕೃತಿಯನ್ನು ಹರಡಿಸಿ ನೆಲೆವಡಿಸಿತು (ನಾಡೋಜ. ೨). ೨. ನಿರ್ಮಾಣ ಮಾಡು: ಮಾಮರದ ತಣ್ಣಳಲೆಡೆಯೊಳು ಕಡುವಹಿಲದಿಂದ ಶೀತಾಳ ಚಪ್ಪರವ ನೆಲೆವಡಿಸಿ ಪುಡಿಗಪ್ಪುರದ ತೆಳುಮಳಲ ಹರಹಿ ಹಚ್ಚಡಿಸಿ ಸುಳಿವಾಳೆಯೆಲೆಗಳನವಱ ಮೇಲೆ ಮಲಗಿಸಿ ಹಿಮಾಂಬುವ ತಳಿದರು (ಸೌಂದಪು. ೮-೨೨). [ನೆಲೆವಡೆ+-ಇಸು$_3$]

ನೆಲೆವಡೆ (ಕ್ರಿ). ೧. ಆಧಾರ ಪಡೆ; ಆಶ್ರಯ ಹೊಂದು: ಪಂಚಮುಖದ ಪವಿ ಫಣಿ ಪರಶು ಪಾಶಾಂಕುಶಂ ಖಡ್ಗ ಶೂಲವಭಯಾ ಹುತವಹಂ ಘಂಟೆ ನೆಲೆವಡೆದ ದಶಭುಜದ ಸನ್ನುತಮೂರ್ತಿ ಸಲಹುಗೆಮ್ಮನು (ಸೌಂದಪು. ೧-೨); ತನ್ನನಱಿಸಿ ತೊಳಲ್ವ ಕಾದಲನಂ ಕಾದಲ್ಮೆಯಿಂ ಕಾಡಲೆಳಸಿ ಘಳಿಲನೆ ಬೀಳಿಲ್ವಿಡಿದಡರ್ದು ನಿಡುಗೊಂಬಿನೆಲೆದುಱುಗಲ ಪೊದಱ ಪೊರೆಯೊಳ್ ಮೆಯ್ಗರೆದಿರ್ದ ಗಂಧರ್ವಸೌಂದರಿ ನೆಲೆವಡೆದಕ್ಷೀಣರೂಪಯಕ್ಷಿಣಿಯಂತೆಸೆಯೆ ಮಿಸುಪ ವಟವಿಟಪಿಯಿಂ(ಶಬಶಂ. ೩-೩೫ ಪ). ೨. ನೆಲಸು; ನೆಲೆನಿಲ್ಲು: ಗಂಗೆಯೇ ದಕ್ಷಿಣಕ್ಕೆ ಬಂದು ನೆಲೆವಡೆದಿದ್ದಂತೆ ಕೆರೆ ಜಲಸಮೃದ್ಧವಾಗಿತ್ತು (ನೊಳಂಬ. ೮೮). ೩. ಬಳಕೆಗೆ ಬರು; ರೂಢವಾಗು: ಸಲೆ ಯಜುರಂಗದಿಂದಭಿನಯಂಗಳ ಸುನ್ನತ ಮಱ್ನುಕಾಯದಿಂ ನೆಲೆವಡೆದಿರ್ಪ ಶಬ್ದತತಿಯಂ . . . ಕೂಡಿಮಿಗೆ ಪುಟ್ಟಿಸಿದಂ ಬಿದಿ ನಾಟ್ಯವೇದಮಂ (ಲಾಸ್ಯರಂ. ೧-೮); ಹೊಸಬಗೆಯಲ್ಲಿ ರೀತಿ-ರಸಾದಿಗಳಿಂದ ಬೆರೆದು ಧರ್ಮದನ್ನು ಬೋಧಿಸುವ

ಕಾವ್ಯವು, ಆದಿಕವಿ ಎನ್ನಿಸಿದ ವಾಲ್ಮೀಕಿಯಿಂದ ತಲೆದೋರಿ ನೆಲೆವಡೆದುದು (ನಾಡೋಜ.೩೫೬); ಅಪ್ರಧಾನಕರ್ತೃಕವು ಸತಿಸಪ್ತಮಿಯೆ ಮೊದಲಾದವುಗಳ ಮುಖಾಂತರವಾಗಿ ವಾಕ್ಯದೊಡನೆ ಸಂದುಗೂಡಿ ನೆಲೆವಡೆಯಬೇಕು (ಕನ್ನಇ. ೧೭೪). [ನೆಲೆ$_1$ + ಪಡೆ$_1$]

ನೆಲೆವತ್ತು (ಕ್ರಿ). ನೆಲಸಮವಾಗು ; ನೆಲಹತ್ತು : ಬತ್ತೆ ತೊಱೆ ಬೆಟ್ಟುಗಳ್ ನೆಲೆವತ್ತೆ . . . ನಡೆದತ್ತಾಗಳ್ ಸಗರಚಕ್ರವರ್ತಿಯ ಕಟಕಂ (ಅಜಿಪು. ೯-೧೬). [ನೆಲೆ$_1$ + ಪತ್ತು$_1$]

ನೆಲೆವನೆ, ನೆಲೆಮನೆ (ನಾ). ೧. ಅನೇಕ ಅಂತಸ್ತುಗಳನ್ನುಳ್ಳ ಮನೆ; ಮಹಡಿಮನೆ ; ಕರುಮಾಡ : "ಕರುಮಾಡಂ ನೆಲೆವನೆಯುಪ್ಪರಿಗೆಯುಮೆನೆ ಸೌಧ" (ಕವಿಕಂ. ೧೪೪); ತೊಳಗುವ ಕರುಮಾಡಂ ನೊರೆ ಬಳಸಿದ ಪೊಂಗೋಂಟೆ ಮೇರೆ ನೆಲೆವನೆ ಘೊಗಯಿಪ್ಪೊಳಗಣ ಬೆಟ್ಟುಗಳೆನೆ ಬಗೆಗೊಳಿಪುದು ಮುನ್ನೀರ ತೆಱದಿನಾ ಪೊಟಲೆಂದುಂ (ಕಬ್ಬಿಕಾ. ೨೮); ನೆಲೆವನೆಯ ಮಾಡದಲಿ . . . ಪವಡಿಸುವೀಕೆಯಿಂದೀಗ ಹಳುವದಲಿ ಘೋರಾಂಧಕಾರದ ಮಳೆಯೊಳೊಬ್ಬಳೆ ನಡೆದು ನೆನೆದೀ ಕಲು ನೆಲದೊಳೊಱಗಿದಳೆನುತ ಮಱುಗಿದನು ಧರಣೀಶ (ಕುವ್ಯಾಅ. ೯-೩೦); ಸೀತೆಯೊರ್ಮೆ ಕನ್ನೆವಾಡದ ನೆಲೆವನೆಯ ಮೊಗಸಾಲೆಯೊಳ್ ತೂಗುಂ ಮಂಚಮನೇಱಿ ಚೆಲ್ಲದಿಂ ಕುಳ್ಳಿರ್ದು (ರಾಮಾಶ್ವ. ೧೭-೨೯). ೨. ಸ್ಥಿರವಾದ ಆಶ್ರಯಸ್ಥಾನ; ನೆಲೆವೀಡು : ಅನುಭಾವವೇ ಭಕ್ತಿಗೆ ನೆಲೆವನೆ (ದೇವಾವ. ೨೩-೪೦); ನಿಷ್ಕಾಮಿ ನೀಂ ಕಾಮದ ನೆಲೆವನೆಯಾಂ ತಂದೆ ನೀಂ ಪುತ್ರ ನಾಂ (ರಕ್ಷಾಶ. ೪೬); ಸರ್ವತೀರ್ಥಂಗಳ ನಿವಾಸಂ ಸರ್ವದೇವರ್ಷಿಗಳ ನೆಲೆವನೆ . . . ಶ್ರೀಪರ್ವತೇಂದ್ರಂ (ಬಸಪು. ೧೯-೨೫); ವೇದಪುರುಷನ ವಿಗ್ರಹದಲಿ ವಿಭೇದವಿಲ್ಲದೆ ಬಿಸಜಸಂಭವನಾದಿಯಾದ ಸಮಸ್ತದೇವರು ನೆಲೆವನೆಗಳಾಗಿ ನೇದುಕೊಂಡಿಹರು (ಕುವ್ಯಾಉ.೪-೬೪); ಸೌಗಂಧಮಂದಾನಿಲನ ನೆಲೆವನೆಯೊ ಕುಸುಮಬಾಣನ ಬೀಡೊ ಸುರವನವೆಸೆವ ಜನ್ಮನಿವಾಸವೆನೆ ವನವೆಸೆದುದು (ತೊರರಾ.೫-೩-೧೫). **ನೆಲೆಮನೆ:** ೧. "ಕರುಮಾಡಮೆಂದುಂ ನೆಲೆಮನೆಯೆಂದುಂ ಉಪ್ಪರಿಗೆ" (ಕಶಸಾ. ೫೯-೩೦೪); ಧೂಪಧೂಮದ ಪರಿಮಳಮಯಮಪ್ಪ ನೆಲೆಮನೆಯ ಮೇಗೇಕಾಗ್ರಮನಃಪರಿಗ್ರಹೆಯಾಗಿ (ತಾಂತಿಪು. ೮-೮೯ ಪ). ೨. ಅತುಳ ಭಕ್ತಿಗೆ . . . ಗಾಢವ್ರತಕೆ ನೆಲೆಮ[ಪಾಠಾಂ. ವ]ನೆಯಾಗೆಸೆವ ಮೋಳಿಗೆಯ ಮಾರಂಗೆ ಕ್ಷಿತಿಯೊಳೆಣೆಯಹ ಭಕ್ತರಿಲ್ಲ (ಬಸಪು. ೩೦-೨೨); ಇನ್ನವರ ಬಾಳಿಕೆಗಡವಿಯೇ ನೆಲೆಮನೆಯದಲ್ಲದೆ ಪಾಂಡುಪುತ್ರರಿಗೆ ಪೊಡವಿಯೊಡೆತನ ಸಲ್ಲದು (ಕುವ್ಯಾಅ. ೮-೨೩); ಅಂತೂ ಇಂತೂ ಸಮಾಜದ ಮಹಾಜನವೇ ಧರ್ಮಕ್ಕೆ ನೆಲೆಮನೆಯೆಂದು ಹೇಳಿದ ಹಾಗಾಯಿತು (ರಾಜ್ಯಾಂಗ. ೪೨). [ನೆಲೆ$_1$ + ಮನೆ]

ನೆಲೆವರು (ಕ್ರಿ). ನೆಲೆಯಾಗು; ಆಧಾರವಾಗು : ನೂತನ ವಸ್ತ್ರಾಭರಣವೆರಸು ಕೊಟ್ಟ ಸೋತ ನೃಪರ ವಸ್ತುಗಳ ಖ್ಯಾತಿಗೆ ನೆಲೆವಂದು ಬೀಳ್ಕೊಟ್ಟನವರ ಸಂಗೀತಸುಧಾಬ್ಧಿ ಚಂದ್ರಮನು (ನಾಗಕು. ೯-೧೩೭).

[ನೆಲೆ$_1$ + ಬರು$_1$ (< ವರ್)]

ನೆಲೆವಟಿ (ನಾ). ದಾರಿಯಲ್ಲಿರುವುದು; ಹಾದಿಯಲ್ಲಿರುವುದು : ಎಸೆವಲತಗೆಯಿಂ ಪೊರೆದ ಮೆಲ್ಲಡಿಯ ನಡೆಯ ಬೆಡಂಗಿನೊಂದು ಭಾವದಿಂ ನೆಲೆವಟಿಯ ಕಲ್ಗಳ್ಗೆ ರಾಗಮನೊಡರ್ಚಿಯುಂ (ರಾಮಾಶ್ವ. ೫೯-೯).

[ನೆಲೆ$_1$ + ಬಟಿ$_3$]

ನೆಲೆವಾಗಿಲ್ (ನಾ). ಅಗಸೆಬಾಗಿಲು ; ಹೆಬ್ಬಾಗಿಲು : ಚಲವಿಡಿದು ಪಗೆವೊಟಲ್ಗಳ ನೆಲೆವಾಗಿಲನುಡಿಯದುಟಿಯನಿವನೆಂಬಳ್ಕಿಂ ತೊಲಗಿ ಕದಂಗಳಿನಾ ಬಲ್ಪೊಲವಿಂದೀ ಕುವರನೆರ್ದೆಯ ನೆಮ್ಮಿದುದು ದಿಟಂ (ಚಿಕವಿ. ೪-೧೫೯). [ನೆಲೆ$_1$ + ಬಾಗಿಲ್]

ನೆಲೆವಾಡ, ನೆಲೆಮಾಡ (ನಾ). ೧. = ನೆಲೆಯುಪ್ಪರಿಗೆ : "ನೆಲೆವಾಡಂ ಕರುಮಾಡಮುಪ್ಪರಿಗೆಯೊಳ್" (ಕರ್ಣಾನಿ. ೯೪); ಎಳೆವೆಂಡಿರ್ನ್ನೆಲೆವಾಡದೊಳೆಳಸಿರೆ ನಡೆ ನೋಡಿ (ಕಾದಂಪೂ. ೩೦೪); ಪಾದರಿಯ ನೆಲೆವಾಡಂಗಳೊಳಂ ದವನದ ದಾವಣಂಗಳೊಳಂ . . . ಸೊಂಪುವಡೆದ ಕಂಪಿನ ಪೊಟಲೆಂಬ ಬೀಡು ಬಗೆಗೊಳಿಸುತಿರ್ಪುದು (ಕಬ್ಬಿಕಾ. ೧೧೮); ಇಂದುಕಾಂತದ ಪುತ್ತಳಿಗಳಿಂದ ಸಮೆದ ಕಂಭಗಳಿಂ ಕುಂದಣದಿಂ ಥಳಥಳಿಸುವ ಕಳಸಗಳಿಂದೆಸೆದವು ನೆಲೆವಾಡ (ಜೀವಂಸಾಂ. ೧-೪೨); ನೋಡುತಿರ್ದರು ಪುರಜನರು ನೆಲೆವಾ[ಪಾಠಾಂ. ಮಾ]ಡದುಪ್ಪರಿಗೆಯಲಿ (ನಳಚ. ೯-೬೧). ೨. ವಾಸಸ್ಥಳ; ನಿವಾಸ : ಸಪ್ತಮಣಿಕಳಶಂಗಳಂ ತಳೆದ ಗೋಪುರದ ಶಿಖರದಿಂದೊಪ್ಪುತಾ ವನಲಕ್ಷ್ಮಿಯ ನೆಲೆವಾಡದಂತೆ ಕಣ್ಗೊಳಿಸುವಾ ದೇವತಾನಿಲಯಮಂ ಕಂಡು (ಶೇಷರಾ. ೭-೧೮). ೩. ಒಂದರ ಮೇಲೊಂದು ಖಾನೆಗಳಿರುವ ಕಪಾಟು ; ಅಲಮಾರು : ಪುಸ್ತಕಗಳನ್ನು ನೆಲೆವಾಡ (ಕಪಾಟು)ದಲ್ಲಿಟ್ಟು ಬೇಗಬೇಗನೆ ತಾಯಿಯ ಬಳಿಗೆ ಹೋದಳು (ಸಂಚಿತ್ರ. ೪೩). **ನೆಲೆಮಾಡ :** ೧. ನೆಲೆಮಾಡಂಗಳೊಳೋಳಿವಟ್ಟ ಗುಡಿಗಳ್ ಗಂಧಾಂಬುವಿಂದಾದ ಪೂವಲಿಯಿಂ ಚೆಲ್ವೆಸೆದಿರ್ದ ಬೀದಿಗಳ್ (ಅದಿಪು. ೭-೧೧೩); ನೆಲೆಮಾಡಂಗಳನೇಱಿದ ನೀಱೆಯ ರಲಕ್ತಕರಾಗರಂಜಿತಪದಪಲ್ಲವಂಗಳಿನವನಿತಳಮೆಲ್ಲಂ ಪಲ್ಲವಿಸಿದಂತೆಯುಂ (ಕಾದಂಪೂ. ೪೭೮); ರಾಜಕೀರಮಿಲ್ಲದ ನೆಲೆಮಾಡಮಿಲ್ಲದ . . . ಸೂಳೆವನೆಯಿಲ್ಲದವಿಲ್ಲವು ಸೂಳೆಗೇರಿಯೊಳ್ (ಮಲ್ಲಿಪು. ೨-೫೭); ಇಟ್ಟಣಿಸಿದ ಲರ್ಗಳೆಸೆದಿರೆ ಕಟ್ಟುದ್ದಮನಾಂತು ಮಿಸುಪ ಕೊಸಗಿನ ಚೆಲ್ವೇಂ ಪುಟ್ಟಿಸಿದುದೊ ಪೊಸಸಿರಿಗೆಱವೆಟ್ಟನೆ ಪೂಗಣೆಯನಿರ್ಪ ನೆಲೆಮಾಡದವೋಲ್ (ಕಬ್ಬಿಕಾ. ೧೦೭); ನೆಲೆಮಾಡಂಗಳ ಚೂಳಿಕಾಗ್ರಮನಡರ್ದೇಱಿರ್ದ ಕಾಂತಾಸ್ಯಮಂಡಳಮಂ ನೋಡಿ (ಬಾಧಪು. ೧-೧೫೯). ೨. ಕಾಯವಿಲ್ಲದೆ ಪುಷ್ಪಕವ ಕಂಡ ನಮ್ಮ ಬಸವಯ್ಯನು ನಮ್ಮ ಬಸವಯ್ಯನ ನೆಲೆಮಾಡ ಕರುಮಾಡವಾಯಿತ್ತು (ನೀಲವ. ೧೯-೫೬); ವಿಚಕಿಲಕುರುವಕವಕುಳ ಪ್ರಚಯದೆ ಮಂಡವಿಗೆ ಚಂಪೆಯಂ ನೆಲೆಮಾಡಂ ರಚಿಯಿಸೆ ನೆಲಸಿದರಿವರಾರುಚಕಾದ್ರಿಯ ಮೂಡಣೆಂಟು ಶಿಖರದ ವನದೊಳ್ (ಅನಂಪು. ೪-೭೫).

[ನೆಲೆ$_1$ + ಮಾಡ$_2$]

ನೆಲೆವಾತು (ನಾ). ನಿಶ್ಚಯವಾದ ಮಾತು; ಖಾತರಿಯಾದ ನುಡಿ; ದೃಢವಾದ ಮಾತು : ಬಳಿಕ ಬರಿಸಿ ಕುದುರೆಯ ಸಾದಗಾಱನ ಬೆಲೆಯೇನೀ ವಾಜಿಗೆನಲು ಬಲುಮೆಯನುಳಿದು ಪುಸಿಯನಿಳಿಕೆಯ್ದಿಂತು ನೆಲೆವಾತ ನುಡಿದ ಸಚಿವಗೆ (ಕುರಾಸಾಂ. ೯-೧೦೭).

[ನೆಲೆ$_1$ + ಮಾತು$_1$]

ನೆಲೆವಾಸು, ನೆಲವಾಸು (ನಾ). ಉನ್ನತವಾದ ಹಾಸು : ಪುದಿದು ಪಳಚ್ಚನಪ್ಪ ಬೆಳರ್ದಿಂಗಳೊಳಂಗಣದಲ್ಲಿ ತೀವಿ ಪಾಸಿದ ನೆಲೆವಾಸಿನೊಳ್ ಮಲಗಿ (ಕಾವ್ಯಸಾ. ೨೩೪-೫ ಕಲಾವಿಲಾಸವರ್ಣನೆ). **ನೆಲವಾಸು :** ನೆಲವಾಸಿಂ ನೆಲದತ್ತ ಬೀಟ್ವಳವಿಗಂ ಕೂಸಂಜುಗುಂ (ಜೀವಸಂ. ೧೦೧-೧೮); ನೆಲವಾಸು ತಂಬುಲಂ . . . ಸುಪ್ಪತಿಗೆ ಧವಳಾರಂ ಕೆಲದ ಸಿಗಳಿಗೆಯಿನಿಂಬಿಂ ಸಲೆ ಸವಿಪೊಡೆ ಮಾಗಿ ಗೀಗಿಯೇಗೆಯ್ದುಪುದೋ (ಸೂಕ್ತಿಸು. ೧೦-೨೫೯); ಬಾಸಿಗದ ನೊಸಲಿನಲಿ ಮೆಱೆವ ಮಹೀಶರೈವರು ಮಂಟಪದ ನೆಲವಾಸಿನಲಿ ಕುಳ್ಳಿರ್ದರನುಪಮ ರಾಜತೇಜದಲಿ (ಕುವ್ಯಾಅ.೧೬-೨೯); ಝುಡಿತೆಯಲಿ ನೆಲವಾಸಿನಲಿ ಸೈಗೆಡೆದು ಸುಯ್ವುತ ಶೂನ್ಯಹರುಷದ ತೊಡಕಿನಲಿ ತಾಂಬೂಲವನು ತೊಱೆದಿರ್ದಳಾ ಕೈಕೆ (ತೊರರಾ.೨-೧-೪೧); ಕುಳ್ಳಿರಿಮೆಂದು ನೆಲವಾಸಿನೊಳೆಲ್ಲರುಂ ಮಂಡಿಸುವುದುಂ (ಚಿಕವಿ. ೬-೧೮೬ ಪ). [ನೆಲೆ$_1$ + ಪಾಸು$_2$]

ನೆಲೆವಾಳ್ 'ನೆಲೆವಾಟ್' ನೋ.

ನೆಲೆವಾಳಿಗ (ನಾ). ಸ್ಥಿರಾಸ್ತಿಯುಳ್ಳವನು ; ಜಮೀನುದಾರ : ಎಲೆ ದೇವನೆ ನೀನು ಪೂರ್ವದ ಭವದಲ್ಲಿ ವಿಲಸಿತ ಸಾಲಿಗ್ರಾಮದೊಳು ನೆಲೆವಾಳಿಗನಾಗಿ ಶಿವಶರ್ಮವೆಸರಾಂತು ಬಲುವಿಪ್ರನಾಗಿರುತಿರಲು (ಜ್ಞಾನಚ. ೩೬-೧೦). [ನೆಲೆವಾಳ್ (<ನೆಲೆವಾಟ್ಟ್)+-ಇಗ]

ನೆಲೆವಾಳ್ತೆ 'ನೆಲೆವಾಟ್ತೆ' ನೋ.

ನೆಲೆವಾಟ್ಟ್, ನೆಲೆವಾಳ್, ನೆಲವಾಳು, ನೆಲವಾಳ್ (ನಾ). (ಜಮೀನು ಮುಂತಾದ) ಸ್ಥಿರಸ್ವತ್ತು ; ಸ್ಥಿರಾಸ್ತಿ : ಮಗನಂ ಕೊಂದು ಗಂಡುದೋಜುವ ನೆಲೆವಾಟಂ ಮಾಜಿ ಸೂಳೆಗೆಯ್ವ . . . ಕಟ್ಟಿಗ್ಗರಂತೆ (ಧರ್ಮಾಮೃ. ೯-೧೬೨) ; ನೆಲೆವಾಟೀವ. [ಪಾಠಾಂ. ನೆಲವೊಳ್ಳೀವ, ನೆಲೆವಾಳ್ಳೀವ] ಧನಂ ಸುವರ್ಣನಿಕರಂ ರತ್ನವ್ರಜಂ ಧಾನ್ಯಸಂಕುಲಂ . . . ಪಲವುಂ ಬಂಧಪರಿಗ್ರಹಾಗ್ರಹವಿನಿರ್ಮುಕ್ತಂಗೆ ಚಾರಿತ್ರದೋರ್ವಲಯುಕ್ತಂಗೆ ದುರಷ್ಟಕರ್ಮರಿಪುಗಳ್ ತೂಳ್ದೋಡದೇಂ ನಿಲ್ವುವೇ (ಜೀವಸಂ. ೧೭೩-೨೧). **ನೆಲವಾಳ್** : ತಲೆವೋಪಡವೆತ್ತಾನುಂ ನೆಲವಾಳ್ವೋಪಡವೋಪುವೀ ಧರ್ಮ್ಮ×××ಳೊಂ ××× ಯನೊಡೆದಡಕೆಯಂ ಬೇಡಲಾಗದು (ಕೂಲ್ಹಾಶಾ. ೩-೪೫ ; 1079 ; ಎಇ.XV,೨೯-೪೫ ; 1110 ನೋ). **ನೆಲವಾಳು** : ಊರನೆನ್ನದೆನ್ದು ಮೂಜುವರಿಷದುಣ್ಬಳಿಯ ಪೋಗ ತೊಟ್ಟುಣುತಮಿರ್ಪುದಂ ಕಣ್ಡು ನೆಲವಾಳು ಪಾಕಂಬೋಪಲ್ಲಿ ಮೂವರಲೋರ್ವ್ವರ್ ಸತ್ತಡಲ್ಲದೆ ಭೂಮಿ ನಿಲ್ಲದೆನ್ದು (ಸೌಇಇ. IX-1, ೧೨೩-೧೮ ; 1059). **ನೆಲೆವಾಳ್** : 'ನೆಲೆವಾಳಿಗ' ಪರಾ.

ನೆಲವಾಳು ಸಾಮ್ಯ = ಸ್ಥಿರಾಸ್ತಿಯ ಮೇಲಿರುವ ಹಕ್ಕು,—ಅಧಿಕಾರ : ಲೋಕಾಯ್ತವೊಟಿಳಿದ ನೆಲವಾಟ ಸಾಮ್ಯಮುವವರ್ . . . ಸರ್ಬ್ಬಬಾದಪರಿಹಾರಮ್ ದೇವಭೋಗಮ್ ಮಾಡಿ ಕೊಟ್ಟನ್ (ಎಕ. XI, ಹೊಳಲ್ಕೆ. ೨೩-೪೧ ; 968). [ನೆಲೆ$_1$+ಬಾಟ್$_2$]

ನೆಲೆವಾಟ್ತೆ, ನೆಲೆವಾಳ್ತೆ (ನಾ). ೧. = ನೆಲೆವಾಟ್ಟ್ : ತನ್ನೊಳಿರ್ಪನಿತ್ಯಮುಕ್ತರ ನೆಲೆವಾಟ್ತೆಯೊಳಟ್ತಿವಡುತ್ತುಂ . . . ರೂಪಟಿದಿರ್ಪಬದ್ಧಾತ್ಮವರ್ಗದ ದುರ್ಗತಿಯಂ ಕಳೆಯಲೆಂದು ಸರ್ಗಂಗೆಯ್ಯಲೆಳಸಿ (ಚಿಕವಿ. ೧-೬೦). ೨. ಶಾಶ್ವತವಾದ ನಿವಾಸ,—ವಾಸಸ್ಥಾನ : ಈ ಜಗಮನಿತುಮನಿವಳ್ ಪೊಟ್ತುಗಳೆವ ಬಿನದದಾಟದ ಪುರುಳೆನಿಸಿಯುಂ ಪರಮಪದಮನಿವಳ ನೆಲೆವಾಟ್ತೆಯರಮನೆಯೆನಿಸಿಯುಂ (ಚಿಕವಂ. ೧೧೫-೧೦). **ನೆಲೆವಾಳ್ತೆ** : ೨. ನಮಗೆಂದಾಯ್ದು ವಿರ್ಪಡಿಸಿ ಸಜ್ಜುಗೊಳಿಸಿರುವ ನೆಲೆವಾಳ್ತೆಯ ಭವನವನ್ನು . . . ತಿದ್ದಿ ಒಪ್ಪಿ ಮುದ್ರಿಸಿ, ನಿಮ್ಮನ್ನು ಬಳಿಯಟ್ಟ, ಎಷ್ಟು ವಿನಾಡಿಗಳಾಗಿರಬಹುದು, ಸಾಧ್ಯವಿಲ್ಲ ಮಹಾಶಯ ? (ಮಂತ್ರಶ. ೧೬೨-೧೧). [ನೆಲೆವಾಟ್ಟ್+-ತೆ$_3$]

ನೆಲೆವಿಡಿ (ಕ್ರಿ). ೧. ಸ್ಥಿರಗೊಳಿಸು ; ಸ್ಥಿರೀಕರಿಸು ; ಗಟ್ಟಿಯಾಗಿ ಹಿಡಿ : ಮನೋಭವಾಗ್ನಿ ವಿಧುವಿಂ ಮಧುವಿಂ ವಧುವಿಂಗೆ ಪರ್ಚೆ ತಣ್ಣಲೆವ ಕೊಳಕ್ಕೆ ವಂದಮಳಿನಂ ಪುಳಿನಂ ನಳಿನಂ ನಿಜಾರ್ತಿಯಂ ನೆಲೆವಿಡಿ [ಪಾಠಾಂ. ಗೆಲೆಪಡೆ]ಯಲ್ ಬಟಿಕ್ಕವಳಟಲ್ದು ಬಟಲ್ದು ತೊಟಲ್ದು ಜಾನಿಪಳ್ (ಜಗವಿ. ೧೧-೨೩) ; ಛಲವಿಡಿದೊಂದನೆಳಸಿ ಚಾರಿವರಿಯದೆ ನೆಲೆವಿಡಿದೊಂದಜಿಳಿರದೆ ನೆಲೆನಿಂದ ನೀರ ತೆಪ್ಪದವೋಲು ತೆಗೆದಡೆಗಲೆಗೊಳದನುಸರಿಸುವುದು (ಹದಿಬ. ೩-೩೭). ೨. ಆಶ್ರಯಿಸು ; ಅವಲಂಬಿಸು (?) : ಪಲಬಗೆಯ ಯೋಗಂಗಳಲಿ ತಾಂ ನೆಲೆವಿಡಿದ ಮಾತಂಗಶೈಲದೊಳೊಲುಮೆಯಿಂ ಜನಿಸಿದಳು ದಾಕ್ಷಾಯಿಣಿ ಗಿರೀಂದ್ರನಿಗೆ (ಆನಂರಾ. ೧-೧೯-೩). [ನೆಲೆ$_1$+ಪಿಡಿ$_1$]

ನೆಲೆವೀಡು, ನೆಲವೀಡು, ನೆಲೆಬೀಡು (ನಾ). ೧. ವಾಸಸ್ಥಳ ; ನೆಲೆಮನೆ : ನೆಲೆವೀಡಂ ಬೀಡು ಮಾಡಲ್ ಪಲವು ದಿವಸಮುಂ ಬೇಟ್ಟುದು (ಆದಿಪು. ೧೩-೨೦) ; ನೆಲೆವೀಡು ರತಿಗೆ . . . ವಿಯೋಗಿಗೆ ಸಂಕಲೆವೀಡು ವಸಂತದಂತಿಗುಪನಗರವನಂ (ಚಂದ್ರಪು. ೧-೧೦೩) ; ಭಾರತಿಯ ನೆಲೆವೀಡು ಮಂಗಳಂಗಳ ನಿಜಾಗಾರ ಲಕ್ಷ್ಮಿಯ ರಾಜಧಾನಿಯೆನಲೊಪ್ಪುವುದು ಚಾರುತರ ಲಾಳದೇಶಂ (ಹಚಕಾ. ೧-೩೪) ; ಯೋಗಿಗಳ ನೆಲೆವೀಡು ಬೊಮ್ಮದ ಸಾಗರವು . . . ಮೂಲೋಕದರ್ಪಣವಾಗಿ ದುಗ್ಧೋದಧಿಯೊಳೆಸೆವದು ಶ್ರೀಗಧೀಶನ ನಗರ (ಕುವ್ಯಾಅ. ೭-೫೨) ; ಸೊಬಗಿನ ಶೃಂಗಾರ ಸಾರದ ನೆಲೆವೀಡುಗಳು ಇವು (ಶಾಂತಲಾ.೧೩೩). 'ನೆಲೆವೀಡುಗೊಳಿಸು' ಪರಾ. ೨.(ರಾಜನ) ಹಂಗಾಮಿಯಾದ ಬೀಡು,—ಬಿಡಾರ ; ತಾತ್ಕಾಲಿಕವಾದ ರಾಜಧಾನಿ : ಚಾಲುಕ್ಯಾಭರಣ ಶ್ರೀಮಜ್ಜಗದೇಕಮಲ್ಲದೇವರ್ ಮೊಟಿಗನೂರ ನೆಲೆವೀಡಿನೊಳ್ ರಾಜ್ಯಂಗೆಯ್ಯುತ್ತಮಿಟ್ಟು (ಮೈಆರಿ. ೧೯೨೯, ೬೫-೪ ; 1024 ?) ; ರಾಜಧಾನಿ ಬಳ್ಳಿಗಾವೆಯ ನೆಲೆವೀಡಿನೊಳ್ . . . ಬಸದಿಗೆ ಪೂಜಾನಿಮಿತ್ತದಿಂ . . . ಕೊಟ್ಟ ಗಟ್ಟಿ ಮತ್ತರಯ್ದು (ಎಕ. VII, ಶಿಕಾರಿ. ೧೨೦-೧೨ ; 1048) ; ಪ್ರತಾಪಹೊಯ್ಸಳವೀರಬಲ್ಲಾಳದೇವರು . . . ದೋರಸಮುದ್ರದ ನೆಲೆವೀಡಿನೊಳು ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತುಮಿರೆ (ಮೈಆರಿ. ೧೯೨೮, ೧೫-೭ ; 1200). ೩. ರಾಜ್ಯದ ಮುಖ್ಯಪಟ್ಟಣ ; ರಾಜಧಾನಿ : ಪೂಗಣೆಯಂಗೆ ಸಾಪಮನಿತ್ತುದಂ ಬಸಂತನಿಂ ನೆಲೆವೀಡಿನೊಳಿರ್ದಿಚ್ಚೆಗಾರ್ತಿ ಕೇಳ್ದು ಮುಚ್ಚೆವೋಗಿ (ಕಬ್ಬಿಕಾ.೩೧೨) ; ರಾಜಧಾನಿಯನ್ನು 'ನೆಲೆವೀಡು'ಎಂದು ಕರೆಯುತ್ತಿದ್ದರು (ಕಶಾಅ. ೩೨೫). **ನೆಲವೀಡು** : ೨. ವಿಷ್ಣುವರ್ದ್ಧನ ಶ್ರೀನಾರಸಿಂಘದೇವರು ದುಷ್ಟನಿಗ್ರಹ ಶಿಷ್ಟಪ್ರತಿಪಾಳನಂ ಮಾಡಿ ದೋರಸಮುದ್ರದ ನೆಲವೀಡಿನೊಳು ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರೆ (ಎಕ. XII, ತುಮಕೂ. ೯-೮ ; 1151) ; ಹೊಯ್ಸಳವೀರಬಲ್ಲಾಳದೇವರು . . . ದೋರಸಮುದ್ರದ ನೆಲವೀಡಿನೊಳ್ಸುಖಸಂಕಥಾವಿನೋದದಿಂ ರಾಜ್ಯಂಗೆಯುತ್ತಮಿರೆ (ಎಕ. XIV, ಗುಂಡ್ಲುಷೇ. ೨೭-೬ ; 1196) ; ವೀರಬಲ್ಲಾಳದೇವಂ . . . ಅಂತು ಸುಖಸಂಕಥಾವಿನೋದದಿಂ ದೋರಸಮುದ್ರದ ನೆಲವೀಡಿನೊಳು ರಾಜ್ಯಂಗೆಯುತ್ತಮಿರೆ (ಎಕ. VII, ಶಿವಮೊ. ೫-೧೧ ; 1218). **ನೆಲೆಬೀಡು** : ೧. ಸ್ಥಳಿಕಸಂಸ್ಥಾನಗಳು ಕರ್ನಾಟಕದ . . .ಪರಂಪರೆಗಳ ಪ್ರತೀಕಗಳಾಗಿ, ನೆಲೆಬೀಡುಗಳಾಗಿ, ಉಳಿದು ಬೆಳೆಯಲು ಹೆಚ್ಚಿನ ಅವಕಾಶಗಳು ಒದಗಿ ಬಂದವು (ನೊಳಂಬ. ೭೦).

ನೆಲೆವೀಡಾಗು = ವಾಸಸ್ಥಳವಾಗು ; ನಿವಾಸವಾಗು : ಊರೂರ ಕಾಲ್ವಳ್ಳಿಗಳ್ ನೆಲೆಮಾಡಂಗಳಿನೊಪ್ಪೆ ಬೇಱೆ ನೆಲೆವೀಡಾಯ್ತಂಗಜಂಗಾನೆಲಂ (ಮಲ್ಲಿಪು. ೨-೧೫) ; ಅಲ್ಲಿಯ ಬನಂ . . . ಸೊಂಪನೊಳಕೊಂಡ ತಾವರೆಗೊಳಂಗಳೊಳಂ ಬಸಂತಂಗೆ ನೆಲೆವೀಡಾಗಿರ್ದುದು (ಕಬ್ಬಿಕಾ. ೩೦).

[ನೆಲೆ$_1$+ಬೀಡು$_2$]

ನೆಲೆವೀಡುಗೊಳಿಸು (ಕ್ರಿ). ವಾಸಸ್ಥಳವಾಗಿ ಮಾಡು : ಈ ಶೈಲಕೆರಡುಗಾವುದ ತೆಂಕಣರಮ್ಯದೇಶವ ನೆಲೆವೀಡುಗೊಳಿಸಿ ಈ ಶೂರರು ನೆಲಸಿದರದಱಿಂದೆ ಮಹೀಶೂರಪುರವೆನಿಸಿದುದು (ಹದಿಬ. ೧-೬).

[ನೆಲೆವೀಡು+ಕೊಳ್$_1$+-ಇಸು$_3$]

ನೆಲೆವೆಣ್ (ನಾ). (?) : ನೆಲಕೆ ಬಿದ್ದೊಂದು ಪುಷ್ಪದ ಫಲಕೆಯಿನಿತಾಯ್ತು ಹಲವು ಪುಷ್ಪವ ತಂದು ಹೋಡಶುಪಚಾರದಿಂದೊಲಿದು ಶಿವಪೂಜೆಯಂ ಮಾಡಿದರೆಯೆನ್ನಂತೆ ಕೋಟಿರಂಭೆಯರು ನಿನಗೆ ನೆಲೆ[ಪಾಠಾಂ. ನೆಲ]ವೆಂಡಿರಾಗರೇ (ಗುಭಚ. ೨-೧೩). [?]

ನೆಲೆವೆರ್ಚಿಸು (ಕ್ರಿ). ೧. ಉಕ್ಕೇರಿಸು ; ವೃದ್ಧಿಗೊಳಿಸು : ಅಂತು ಕಾಮಧ್ಯಾಗರಸಸಾಗರಮಂ ನೆಲೆವೆರ್ಚಿಸುವ ಶರಶ್ಚಂದ್ರಾತಪದೊಳ್ . . . ನಾಗರಿಕರಮಣರಮಣೀಜನಂಗಳ್ ಕೌಮುದೀಮಹೋತ್ಸವೋತ್ಸುಕರಾಗಿ ನೆರೆದು (ಆದಿಪು. ೧೨-೧೧ ವ) ; ಕೆಲದೊಳೆ ಕಿಟ್ತು ಸಾರ್ಚಿದ ಕೃಪಾಣದ

ಕರ್ಪು ನಿಜಾಂಗನಾಂಗದಗ್ಗಲಿಪ ಬೆಳರ್ಪು ಬಾಲಕನ ಕೋಮಲದೇಹದ ಕೆಂಪು ನಾಡೆಯುಂ ನಲವನಿಳಾಧಿಪಂಗೆ ನೆಲೆವೆರ್ಚಿಸಿದತ್ತು ಗೃಹಾಧಿದೇವತಾವಿಲಸದಪಾಂಗದೊಳ್ ನೆರೆದು ಮೂದೆಱದೊಪ್ಪುವ ಬಣ್ಣದಂದದಿಂ (ಚಂದ್ರಪು. ೩-೧೦೨); ಅಂತಖಿಳ ಕಾಮುಕನಿಕಾಯಮವಿರಳಸುಖಾವಗಾಹದೊಳ್ ನಾಡೆ ತೇಂಕಾಡಿ ತಣಿವಿನಮನಂಗಜಳನಿಧಿಯಂ ನೆಲೆವೆರ್ಚಿಸಿ ನಿರತಿಶಯಕೌಮುದೀಪೂರಮಸದಳಂ ಬಳೆದು ಬೆಳಗುತಿರ್ಪಿನಂ (ವರ್ಧಪು. ೬-೫೨ ಪ). ೨. ಸಂತೋಷಪಡಿಸು; ಉಬ್ಬಿಸು: ಪೂಗೊಳನಂ ತಿಳಿಯಿಟ್ಟು ನೀರ್ವಕ್ಕಿಗಳಂ ನೆಲೆವೆರ್ಚಿಸುತ್ತುಂ ರವಿಕಿರಣಂಗಳಂ ಪುಟವಿಟ್ಟು ರಥಾಂಗಮಂ ನಲವೇಱಿಸುತ್ತುಂ (ಗಿರಿಕ. ೭-೪೨ ಪ).

[ನೆಲೆವೆರ್ಚು$_1$ + -ಇಸು$_3$]

ನೆಲೆವೆರ್ಚು$_1$ (ಕ್ರಿ). ೧. ಅಭಿವೃದ್ಧಿಯಾಗು; ವರ್ಧಿಸು; ಹೆಚ್ಚಾಗು: ಪೆರ್ಚುಗೆ ಭರತಕುಲಂ ನೆಲೆವೆರ್ಚುಗೆ ನಿಮ್ಮೆರಡು ತಂಡಮೊದವಿದ ನಣ್ಪಿಂ (ಪಂಪಭಾ. ೧೩-೬೭); ಲಲನೆಯ ನುಡಿಯಿಂ ಹರ್ಷಂ ನೆಲೆವೆರ್ಚೆ ಸುಧಾಂಶುಲೇಖೆಯೆಳವೆಳಗಿಂದಂ ನೆಲೆವೆರ್ಚುವ ಪಾಲ್ಗಡಲಂಗೆಲೆವಂದು ನೃಪಗುಣಾಶ್ರಯಂ ವೈಶ್ರವಣಂ (ಮಲ್ಲಿಪು. ೪-೮೮); ಸ್ತ್ರೀರತ್ನಾರ್ಥಂ ನೃಪತಿಸಭಾರತ್ನಾಕರಮನಾಂ ಕಲಂಕಿದೆನದಱಿಂ ವೈರಂ ನೆಲೆವೆರ್ಚುಗುಮರಿವೀರರೊಳಂ ಸ್ತ್ರೀಜವೈರಮೇಂ ಕೇವಲಮೇ (ಜಗವಿ. ೯-೨೧); ನವಾಂಬುಕೇಳಿಯಂ ವಿರಚಿಸುವಂತೆ ಡೊಕ್ಕರಿಗಳಿಂ ಮೊಗೆದೊರ್ಬರೊಳೊರ್ಬರಾಗಳಚ್ಚರಿ ನೆಲೆವೆರ್ಚ ಪೊಯ್ದರೊಲವಿಂ ವಿಜಯಾವತಿಯುಂ ನರೇಂದ್ರನುಂ (ಕುಸುಮಾ. ೫-೧೩೫); ಗಲ್ಲದ ಸೊರ್ಕುನೀರ ಪೊನಲಿಂ ನೆಲೆವೆರ್ಚ ಕಡಲ್ ತುಳುಂಕೆ . . . ಬಂದುವು ಬಿಂಕದಿನಂಕದಾನೆಗಳ್ (ಕಬ್ಬಿಕಾ. ೨೦೩). ೨. ಉಬ್ಬು; ಉಕ್ಕು: ಉದಯಿಸೆ ಚಂದ್ರಂ ನೆಲೆವೆರ್ಚದರ್ಣವಂ ಘೂರ್ಣಿಪಂತೆ ಭೋರೆಂದೋರಂದದೆ ಭುವನಮೈದೆ ಘೂರ್ಣಿಸಿದುದದೆತ್ತಂ ರಾಜಪುತ್ರಜನನೋತ್ಸವದೊಳ್ (ಕಾದಂಪೂ. ೪೧೧); ತೆರೆಗೈಯಿಂ ತುಡುಕುತ್ತುಮೊಳ್ದೊಡೆಯಂ . . . ವಕ್ಷೋಜಮಂ ನಿಟ್ಕಿ ನೇವರಿಸುತ್ತುಂ ನೆಲೆವೆರ್ಚ ಕಾಮುಕನವೊಲ್ ನೀರೇಱುತಿರ್ದತ್ತು ತತ್ತರುಣೀಸಂಕುಳಮೆಲ್ಲಮಿಾಗಳೊಳಗಾಯ್ತೆಂಬಂತೆ ಪದ್ಮಾಕರಂ (ಚಂದ್ರಪು. ೭-೧೨೬); ಇಂದುರುಚಿ ಸೋಂಕಿದಿಂಗಡಲಂದದೆ ನೆಲೆವೆರ್ಚದತ್ತು ಪರಿಜನವತುಳಾನಂದದಿನಿಳೇಶಮದನಂ ಬಂದಂ ತಾನೆಂಬ ವಾರ್ತೆಯಿಂದಾ ಪದದೊಳ್ (ಕುಸುಮಾ. ೧೫-೯೯). ೩. ಉತ್ಸಾಹಿಸು; ಸಂತೋಷ ಪಡು: ನೆಲೆವೆರ್ಚುವ ಪೆಣ್ಗಳ ಕರತಲದಿಂ ಕರತಲಕೆ ಬರ್ಪ ಬಾಲಕನಾಗಳ್ಗೆಲೆವಂದಂ ಕೆಂದಾವರೆಯಲರಿಂದಲರ್ಗೆಯ್ದೆ ತಳರ್ವ ಹಂಸಾರ್ಭಕನಂ (ರಾಜಶೇ. ೪-೬೯). [ನೆಲೆ$_1$ + ಪೆರ್ಚು$_1$]

ನೆಲೆವೆರ್ಚು$_2$ (ನಾ). ಆಧಿಕ್ಯ; ಹೆಚ್ಚಳ: ಮೃದುಪದಬಂಧಮಂ ಬಗೆಯ ಭಾವದ ಮೆಯ್ಸಿರಿಯಂ ರಸಪ್ರವಾಹದ ನೆಲೆವೆರ್ಚನಿಂಬಱಿದು ಭಾವಿಸಿ ಭಾವಿಸಿ ಮೆಚ್ಚಿ ಮೆಚ್ಚಿ ಪೊಣ್ಮದ ಪುಲಕಂಗಳಿಂ ಅನುರಾಗಮಂ ಪಡೆವ ಸಜ್ಜನಸಂಸ್ತವಮೊಂದೆ ಸಾಲದೇ (ಪಂರಾಮಾ. ೧-೨೯); ಮದನವಿರೋಧಿ ಬಾರ ದುರಿತಾಂತಕ ಬಾರ . . . ಪುಣ್ಯದ ನೆಲೆವೆರ್ಚ ಬಾರ (ಪಂಪಾಶ. ೧೭). [<ನೆಲೆವೆರ್ಚು$_1$]

ನೆಲೆವೆಲೆ, ನೆಲೆಬೆಲೆ (ನಾ). ನಿಶ್ಚಿತವಾದ ಬೆಲೆ; ಖಚಿತವಾದ ಮೌಲ್ಯ: ನೆಲೆವೆಲೆವೇಱೂ ಪೊಂಬರಣಿಗಳೆರಡರ್ಕಂ (ಚಿಕವಿ. ೬-೫೦). **ನೆಲೆಬೆಲೆ**: ಅಂತೂ ಎಲ್ಲರು ಆನಂದದಾಯಕ ಶಕ್ತಿಯ ಉತ್ಕರ್ಷಾಪಕರ್ಷಕ ಗುಣಪ್ರಮಾಣದಿಂದ ಕಾವ್ಯದ ರಸದ ನೆಲೆಬೆಲೆ ಗೊತ್ತುಮಾಡುವರು ಎಂದಂತಾಯಿತು (ಸಾಹಿವಿ. ೧೨); ಕನ್ನಡಸಾಹಿತ್ಯವನ್ನು ಈ ಕಣ್ಣಿನಿಂದ ನೋಡಿ ಇಂದು ಅದರ ನೆಲೆಬೆಲೆಯನ್ನು ಅರಿತುಕೊಳ್ಳಬೇಕಾಗಿದೆ (ತವನಿ. ೨೭). [ನೆಲೆ$_1$ + ಬೆಲೆ$_2$]

ನೆಲೆವೆಲೆಗೊಳಿಸು (ಕ್ರಿ). ಖಚಿತವಾದ ಬೆಲೆಯನ್ನು ಕಟ್ಟು; ಸರಿಯಾದ ಮೌಲ್ಯವನ್ನು ನಿರ್ಧರಿಸು: ಮಣಿಯಂ ಗಾಜುಮನೆಣೆಗೊಂಡೆಣಿಸುಗೆ ಕಾಲುರಿಚರದಱಿನೇನೂಣಯಮೇ ಗುಣಮಂ ದೋಷಮನಱಿತು ವಿಪಣಿಯೊಳದೇನೊರ್ವನಿರನೆ ನೆಲೆವೆಲೆಗೊಳಿಪಂ? (ಚಿಕವಿ. ೧-೪೫). [ನೆಲೆವೆಲೆ + ಕೊಳ್$_1$ + -ಇಸು$_3$]

ನೆಲೆವೆಱು (ಕ್ರಿ). ೧. ಸ್ಥಾಪಿತವಾಗು; ನೆಲೆಯೂರು; ನೆಲೆನಿಲ್ಲು; ನೆಲಸು: ಆ ಮಾತುಗಳ್ ನೆಲೆವೆತ್ತಾ ಯತಿಪಂಗೆ ಚಿತ್ತದೊಳಿರಲ್ ಪುಟ್ಟಿತ್ತು ಕೋಪಾನಳಂ (ನೇಮಿಪು. ೫-೧೦೪); ಎಲೆ ತಮ್ಮ ಗಿಳಿಯ ಚಪಳತೆ ನೆಲೆವೆತ್ತುದು ನಿನ್ನೊಳಿನ್ನೆಗಂ ನಿನಗಿನಿತುಂ ಕಲಿಸಿದ ಕೋವಿದ ನಾವೊಂ ಜಲಕ್ಕನಱಿಪು (ವರ್ಧಪು. ೧೬-೧೧). ೨. ಉನ್ನತ ಸ್ಥಾನವನ್ನು ಪಡೆ; ಪ್ರಸಿದ್ಧಿಯನ್ನು ಹೊಂದು: ನೆಲೆವೆತ್ತ ಮುತ್ತರಿಂ ಮಿಗೆ ನೆಲೆವತ್ತಂ ಚಾಮರಾಜನೆಳಗಟಲೆಯವೋಲ್ (ಚಿಕವಿ. ೨-೬೩). ೩. ಎಡೆಬಿಡದಿರು; ಸತತವಾಗು; ನಿರಂತರವಾಗು: ಜಲಮಯಮಿಳೆಯೆಲ್ಲಂ ಪ್ರಜ್ವಲಿತ ತಟನ್ಮಾಲಿಕಾಮಯಂ ದೆಸೆಯೆಲ್ಲಂ ಜಲದಮಯಮಭ್ರಮೆಲ್ಲಂ ನೆಲೆವೆತ್ತಿರೆ ಬಿಡದೆ ಕಟ್ಟಿ ಕಱೆದುವು ಮಳೆಗಳ್ (ವೃಷವಿ. ೧೪-೨೭).

[ನೆಲೆ$_1$ + ಪೆಱು$_1$]

ನೆಲೆವೊಗು (ಕ್ರಿ). ಮನೆಗೆ ಹೋಗು; ವಾಸಸ್ಥಾನವನ್ನು ಸೇರು, —ತಲುಪು: ನೆಲೆವೊ[ಪಾಠಾಂ. ಯೊ]ಕ್ಕನಂತಾತನತ್ತಲಿತ್ತಂ ಸಿದ್ಧತಿಲಕ ನುಱೆ . . . ಒಡನಾಡಿಗಳುವೆರಸಿ ನಡೆಯಲು ಮುಂದೆ (ಸಿದ್ಧರಾ. ೨-೧೫).

[ನೆಲೆ$_1$ + ಪೊಗು$_1$]

ನೆಲೆವೊಟ್ಟು (ನಾ). ಚೆಲುವಾದ ತಿಲಕ: ಪುರ್ಬೆಂಬ ಕಬ್ಬಿನ ಬಿಲ್ಲಿಂ ಬರ್ದುಂಕಿದ ಮದನನಲರಂಬೆಂಬಿನಮಿಂಬಾಗಿರ್ದ ನೆಲೆವೊಟ್ಟುಂ ನೆಲೆವೊಟ್ಟನೊಳೊಟ್ಟೈಸಿ ಪಳಂಚಲೆವ ಕುರುಳೋಳಿಯುಂ . . . ತೋರಮಲ್ಲಿಗೆಯ ಮುಡಿಯುಮೆಸೆಯೆ (ಆದಿಪು. ೪-೪೧ ಪ); "ಎತ್ತರವಾದ ರಾಶಿ" (ಆದಿಪು. ಕೋಶ). [ನೆಲೆ$_1$ + ಬೊಟ್ಟು$_1$]

ನೆಲೆಸಿಕಿ (ನಾ). ಕಟ್ಟಿದ ಶಿಖೆ (?): ಬಲಗಡೆಗಾಗಿ ಬಾಗಿ ಬಿಗಿವಟ್ಟುಱೆ ಬಟ್ಟತೆಂಬಿನಂ ಮಲರ ಸರಂಗಳೊತ್ತರಿಸೆ ಸುತ್ತಿರೆ ಪತ್ತಿದಂದದಿಂ ನೆಲೆಸಿಕಿಯಚ್ಚ ಪೊಂದುಗುಲದಿಂ ಪೊಗರೇಱಿ ಮತ್ತದೇಂ ಬೆಲೆವಡೆದತ್ತೊ ಚಿತ್ತಭವನಂದದ ಬಂದಿಗಾಱನಾ (ಚಿಕವಿ. ೫-೭). [ನೆಲೆ$_1$ + ಸಿಕ್ಕಿ$_2$(<ಸಿಕೆ$_1$)]

ನೆಲೆಸು 'ನೆಲಸು$_1$' ನೋ.

ನೆಲೆಸೊಗ (ನಾ). ಹೆಚ್ಚಾದ ಸುಖ; ಅತಿಶಯವಾದ ಆನಂದ; ತನಿಸುಖ: ನೆಲೆಸೊಗವಾಂಪರಿಂದು ಚಿಕದೇವನ ವೀಣೆಯ ನುಣ್ಚರಂಗಳಿಂ (ಚಿಕವಿ. ೪-೧೧೯). [ನೆಲೆ$_1$ + ಸೊಗ]

ನೆಲೆಸೊಡರ್ (ನಾ). ಸ್ಥಿರವಾದ ಕಾಂತಿಯುಳ್ಳ ದೀಪ: ಇಡಿದಡರೆ ಕೊಂಡ ಕುಸುಕಱ ಕಡುಗಟ್ಟಲೆ ತಲೆಯನೆತ್ತದೊತ್ತರಿಸದಣಂ ಸೊಡರದೆಲೆ ಮಿಡುಕದಿರೆ ನೆಲೆಸೊಡರ್ಗಳನಾ ಜ್ಯೋತಿರಂಗತರು ಕುಡುತಿರ್ಕುಂ (ಶಾಂತಿಪು. ೬-೧೧೮). [ನೆಲೆ$_1$ + ಸೊಡರ್]

ನೆಲೆಹತ್ತು (ಕ್ರಿ). ೧. ನೆಲಸಿದ ಸ್ಥಳ ಗೊತ್ತಾಗು, —ಪತ್ತೆಯಾಗು: ನೀನು ಏನಾದೆಯೋ ಎಂದು ಎಷ್ಟೆಲ್ಲ ಸಂಕಟ ಪಟ್ಟೆ, ಊರೆಲ್ಲಾ ಹುಡುಕಿದೆ, ನೆಲೆ ಹತ್ತದೆ ಸುಮ್ಮನಾದೆ (ಹೊಸಕ್ಷಿ. ೪೧). ೨. ಆಳ ಗೊತ್ತಾಗು; ಮರ್ಮ ತಿಳಿದು ಬರು: ತನ್ನ ವಾಕ್ಯವನ್ನು ವೇದಮಂತ್ರದಂತೆ ಮನ್ನಿಸುತ್ತ ಬಂದ ಮಗನ ಈ ವೃತ್ತಿಯು ತಿಳಿಯದಾಯಿತು. ಎಷ್ಟು ವಿಚಾರಿಸಿದರೂ ನೆಲೆ ಹತ್ತಲಿಲ್ಲ (ಜಯಂತ. ೪).

[ನೆಲೆ$_1$ + ಹತ್ತು$_1$(<ಪತ್ತು$_1$)]

ನೆಲೆಹೊಲ (ನಾ). ನೆಲಸಿರುವ ಸ್ಥಳ; ವಾಸಿಸುವ ಜಾಗ: ಹಲವು ಗಿರಿಗಳ ತಪ್ಪಲಲ್ಲಿ ಮಲೆಯ ಮಂದಿರಗಳಲ್ಲಿ ಬಳಸಿ ಬಳಸಿ ಮೇದು ಮತ್ತೆ

[illegible] ೧೦೭-೫೭೬).

[illegible] ಗಿಡ : "ಭೂ [illegible] (< ಅವುಡಲು)]

[illegible] ಕೇಶೆಯ [illegible] ೮೮-೧೩ ;

[illegible] ನೆಲ್ಲದ ಮೆಟೆ : ಹಳದಿ [illegible]

[illegible] ನೆಲ್ಲನ [illegible] [ನೆಲ್+ಬನ್₁]

[illegible] ಕಮ್ಮರ [illegible] ಲೆಯಂ [illegible] [?]

[illegible] ಮಗ [illegible] (ಎಕ. IX, [illegible]

[illegible] : ನೆಲ್ಲಲ್ಲಿಯೂರ [illegible] ಎಟ್ಟಿನ [illegible] ೧೬೭-೧ ;

[illegible] : ಬಸುರಿ ಬಿಳು [illegible] ಕಾಲೆ ಕೇಗು [illegible] ಸೆದುದು [illegible] ನೆಲ್ಲ . . . ಕಳೋರ್ಲ [illegible] ಎಲೆಗಳನ್ನು ಹಾಕಿ [illegible] ಹಾಕುವರು [illegible]

[illegible] ಎಱೆಯರ್ [illegible] ನಂಜನ. ೨೬-೩ ; [illegible] ಬಿಟ್ಟನ್ [illegible] ಪನ್ನೆರಡು [illegible] ಮನುಷ್ಯರ್ಗಂ [illegible] ; [illegible] 1153) ; [illegible] ಮಾವಡು [illegible] ಕೊಟ್ಟು [illegible] ನೆಲ್ಲಕ್ಕಿ ಬಂದವೆ [illegible]

[illegible] ಮುಖ್ಯ [illegible] ಬಂದು ಪುತ್ತರಿ [illegible] (ಹುಲಿಹಾ. ೧೮೯).

[illegible] : ನೆಲ್ಲ ಒಲ್ಲಿಯ [illegible] (ಸರ್ವಜ್ಞ. [illegible]

ನೆಲ್ಲಜವಳ್ಳಿ (ನಾ). ಒಂದು ಊರಿನ ಹೆಸರು : ರವಿಚನ್ದ್ರಯ್ಯ ನೆಲ್ಲಜವಳ್ಳಿಯೊಳ್ಕಸವದಿತ್ಯರ್ಕ್ಕಳಂ ಪ್ರತಿಷ್ಠೆಗೆಯ್ದುಮ್ (ಎಕ. VIII, ತೀರ್ಥಹ. ೨೭-೯ ; 929). [?+ಪಳ್ಳಿ₁]

ನೆಲ್ಲಡಕು (ಕ್ರಿ). ಬತ್ತವನ್ನು ಪೇರಿಸು : ಪೊಂಗುನಿ ತಿರುನಾಳ್ಗಂ ನೆಲ್ಲಡ[ಪಾಠಾಂ.ಡು]ಕುವ ಹಿಂಗಡೆ ಪೊನ್ನಾಂಬಲಕಂದೆಯ್ದುವ ಹರನಲ್ಲಿಗೆ ನೆಱೆ ಬಿಟ್ಟಗಳಾದವು ತಿರುನಾಳ್‌ಪೋವರ ತುಷ್ಟಿಗಳಾದವು (ತಿರುನಾ.ದೇ. ೨೧೭-೨೧). [ನೆಲ್+ಅಡಕು₁(<ಅಡುಕು)]

ನೆಲ್ಲರಳು (ನಾ). ಬತ್ತದ ಅರಳು ; ಲಾಜೆ : ಬಲಸಂದೆಯ ಗುಗ್ಗುರಿ ನೆಲ್ಲರಳು ಕಬ್ಬಿನ ರಸ ಜೇನುತುಪ್ಪ . . . ಅಷ್ಟವಿಧಾರ್ಚನೆವೆರಸು ಆ ಮನೆಗೆ ಮೂಡಲಾಗಿ ಮೂಱುಸಂಜೆ ಸಂಜೆಯೊಳು ತಾಂಬೂಲ ವಸ್ತ್ರ ಕಾಣಿಕೆಯಿಂ ಮಂತ್ರಸಮನ್ವಿತವಾಗಿ ಮೂಱುದಿನ ಬಲಿಯಂ ಕೊಡಲು (ಬಾಲಚಿ. ೧೩೨-೨) ; ಆಸನ ವದನಂ ಫಣಿಯ ನಿವಾಸದ ನೆಲ್ಲರಳ ಬೆಲ್ಲವತ್ತದರಿಷ್ಟಭಾಸದ ಮಧುವಿನ ಪಲಸಿನ ವಾಸದ ನಿಶ್ವಾಸಮೆನೆ ಹಯಂಗಳುಂ ಶುಭದಂ (ಅಶ್ವವೈ. ೩-೧೯) ; ಬಾಯಿ ತಿಕಗಳಲ್ಲಿ ಹುತ್ತದ ಮಣ್ಣಿನ ನೆಲ್ಲರಳಿನ ಬೆಲ್ಲವತ್ತದ ಹಣ್ಣಿನ ಜೇನುತುಪ್ಪದ ಹಲಸಿನ ಹಣ್ಣಿನ ಪರಿಮಳಗಳನುಳ್ಳ ಕುದುರೆಯನಾಳೆ ಮಹಾವುತ್ತಮ (ಅಶ್ವವೈ. ೩-೧೯ ಟೀಕು). [ನೆಲ್+ಅರಳು₃(<ಅರಳ್₃)]

ನೆಲ್ಲವತ್ತಿ, ನೆಲವತ್ತಿ₂, ನೆಲವರ್ತಿ, ನೇಲವತ್ತಿ, ನೇಲುವತ್ತಿ (ನಾ). ೧. ಒಂದು ಊರಿನ ಹೆಸರು ; ೫ ಈಗಿನ ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ನ್ಯಾಮತಿ: ತನಗೆ ಪರಹಿತಮೆ ಹಿತಮೆಂದನು ಮಾನಿಸಿ ನೊಕ್ಕನೊಲ್ದು ಮಾಡಿಸೆ ವಿಶ್ವಾವನಿಯೊಳಗೆ ನೆಲ್ಲವತ್ತಿಯ ಜಿನ ಭವನಂ ರಿತುವಿಮಾನಮಂ ಪೋಲ್ಪಿರ್ಕುಂ (ಎಕ. VII, ತಿಪಮೊ. ೧೦-೪೮; 1085?). **ನೆಲವತ್ತಿ₂** : ೧. ದಿವ್ಯಾಹಾರಮನಾಕಂಠಪ್ರಮಾಣಂಬರೆಗಂ ತಣಿಯುಂಡು ಬಟುಕ್ಕೆ ಕರ್ಪೂರಸಮ್ಮಿಶ್ರಮಪ್ಪ ನೆಲವತ್ತಿಯಡಕೆಯ ಪೋಟ್ಗಳುಮಂ ಕೈಕೀವಿದೆಲೆಯುಮಂ ಬ್ರಹ್ಮಯ್ಯಂಗೆ ಕೊಟ್ಟು (ವಡ್ಡಾರಾ. ೭೮-೨೩) ; ಶ್ರೀಮದಗ್ರಹಾರಂ ನೆಲವತ್ತಿಯ ತುಱುವಂ ಬೆಳಗವತ್ತಿಯ ದೇಸೆಯಂ ಕೊಂಡು ಪೋದಲ್ಲಿ (ಎಕ. VII, ಹೊನ್ನಾಳಿ. ೬೫-೨ ; 1125). **ನೆಲವರ್ತಿ** : ೨. ನೆಲ್ಲವತ್ತಿಪ್ರದೇಶದಲ್ಲಿ ಬೆಳೆಯುವ ಅಡಕೆ (?) : ಊರೊಡೆಯ ಪ್ರಮುಖ ಸಾಸಿರ್ವ್ವರ್ಮ್ಮಹಾಜನಂಗಳ್ ಏ(ಐ)ಕಮತ್ಯವಾಗಿರ್ದ್ದು ನೆಲವರ್ತ್ತಿಗೆ ಸಾಸಿರಕ್ಕೆ ಪನ್ನೊಂದಡಕೆಯ ಸೊಜ್ಜಮುಮಂ . . . ಬಿಟ್ಟರ್ (ಎಇ. XVIII, ೧೯೨-೩೩ ; 1224). **ನೇಲವತ್ತಿ** : ೧. ಅಡಸಿದ ಪಾರಿಜಾತಕದ ಕಪ್ಪುರವಳ್ಳಿಯ ನೇಲವತ್ತಿಯಾಯ್ದಡಕೆಯ ಭೀಮಸೇನಿಕದ ತಂಬುಲದಿಂ (ಶಾಂತಿಪು. ೧೦-೯೫). **ನೇಲುವತ್ತಿ** : ೧. ಕಾಮವಿಕಾರೋತ್ಕರ್ಷಸಮಾಕರ್ಷಣ ನಿಮಿತ್ತಂ ಮಾಡಿದೌಷಧದ ಘಟಿಕಾಪೇಟಕಂಗಳೆಂಬಂತಿರ್ದ ಕರ್ಪೂರ ಕೈಲದಿಂ ಘೋಳಿಸಿದ ನೇ[ಪಾಠಾಂ. ಮೇ]ಲುವತ್ತಿಯಾದಡಕೆಯ ಭಾಗಂಗಳಿಂದಂ (ಬಾಧಪು. ೬-೧೧೮ ಪ).

[?./ತೆಲು. ನೆಲವತ್ತಿ, ನೆಲವತಿ = ಅಡಕೆಯ ಹೋಳು]

ನೆಲ್ಲವರೆ (ನಾ). ಅವರೆಯಲ್ಲಿ ಒಂದು ಬಗೆ : ಬದನೆ ಪಡವಲ . . . ನೆಲ್ಲವರೆ . . . ಮೊದಲಾದ ವ್ಯಜನ (ಸೌಗಂಧಿ. ೩೭-೧೮) ; ನೆಲ್ಲವರೆ, ಗಿಣ್ಣು ನೆಲ್ಲವರೆ (ಮೃಬಿಗಿ. ೧೦-೧೭೮). [ನೆಲ್+ಅವರೆ₁]

ನೆಲ್ಲಾನೆ (ನಾ). ಒಂದು ಬಗೆಯ ಸಸ್ಯ : (ಮೃಬಿಗಿ. ೫೬-೧೧೨೪).

[ನೆಲ್+ಅನೆ?]

ನೆಲ್ಲಿ (ನಾ). ೧. ಹುಳಿಯಾದ ಕಾಯಿ ಬಿಡುವ ಒಂದು ಬಗೆಯ ಮರ ಮತ್ತು ಅದರ ಕಾಯಿ ; ಆಮಲಕ : "ಧಾತ್ರೀ, ಆಮಳಕೀ, ಶಿವಾ—ಈ ೩ ನೆಲ್ಲಿ" (ಹಲಾಯು.೧೦೧-೪೬೪); ಕ್ರಿಯೆಯಿಂ ನೆಲ್ಲಿಯುಮಂ

ದಂತಿಯುಮಂ ರಜನಿಯುಮನರೆದು ಪೂಸಿದೊಡೆ . . . ಭಗಂಧರಂ ಪ್ರಶಮಿಸುಗುಂ (ಲೋಕೋಪ. ೯-೧೫೯); ಅರನೇಱಲ್ ತಾಱ್ ತುಂಬುರ್ ತದುಕಳಿಲೆಲವಂ ನೆಲ್ಲಿ . . . ಬ್ರಹ್ಮವೃಕ್ಷಂ ಕಱಿಕೆ ತಱಿಯ ದಿಂದೊಪ್ಪುತಿರ್ದತ್ತರಣ್ಯಂ (ಗಿರಿಕ. ೧-೬೨); ನಾರಿಕೇಳವೆ ಕೇಳು ನಾರಿಯ ಸಾರಬೋಧೆಯನಾದರಿಸದವಿಚಾರಿಯಾದೆನು ನೆಲ್ಲಿಯೇ ಇನ್ನೆಲ್ಲಿ ಯದು ಬದುಕು (ಬಸಪು. ೪೫-೬೯); ನೆಲ್ಲಿ ನೇಱಿಲು ನಗರೆ ಕಡಸಿಗೆ ಕಲ್ಲರಳಿ ಕರ್ಪೂರ ಕದಳಿಗಳಿಲ್ಲಿ ನೋಡಿವೆ ಭೂಮಿಸುತೆ ಭೂಜಾತಸಂತತಿಯ (ತೊರರಾ. ೬-೧-೨೯). ೨. ಕೆಲವು ಅಂಕಿತನಾಮಗಳ ಕೊನೆಯಲ್ಲಿ ಸೇರಿ ಬರುವ ಶಬ್ದ : ಆ ಗಣಪಂಣಗಳು ಆ ಪಾದಮೂಲಿ ವಿಷ್ಣುನೆಲ್ಲಿ ನಾರಣನೆಲ್ಲಿ ಕೇಶವನೆಲ್ಲಿ ಯಿವರುಗಳ ಕೈಯ್ಯಲ್ಲಿ ಅರ್ಧಪರಿಚ್ಛೇದವಾಗಿ ಮೂಳಿಯ ಹಣ ಸಹಿತವಾಗಿ ಕೊಟ್ಟು ಮೂಲಪರಿಚ್ಛೇದವಾಗಿ ಧಾರಾ ಪೂರ್ವಕವಾಗಿ ಕೊಂಡ ಕ್ಷೇತ್ರದ ವಿವರ (ಸೌಇಇ. IX-ii, ೪೨೬-೧೧; 1402).

ನೆಲ್ಲಿಯ ಕಾಯ್, ನೆಲ್ಲಿಯ ಕಾಯಿ = ನೆಲ್ಲಿಕಾಯ್ : "ವೃತ್ತ ಫಲಾ-ಬದನೆ, ಮಿಾನಿಕೆ, ನೆಲ್ಲಿಯ ಕಾಯ್" (ಓಷಧಿ. ೧೫೭); ತೋರ ನೆಲ್ಲಿಯ ಕಾಯಿಂ ಪಿರಿಯವಪ್ಪ ಮುತ್ತಿನ ಬ್ರಹ್ಮಸೂತ್ರಮನೆಟಲಿಕ್ಕಿ (ಪಂಪಭಾ. ೧೨-೧೦೮ ಪ); ನಾಲ್ವತ್ತೊಂಬತ್ತು ದಿನಕ್ಕೆ ಯವ್ವನಮನಪ್ಪು ಕೆಯ್ದು ನೆಲ್ಲಿಯ ಕಾಯ ಪ್ರಮಾಣದಿನಾಂತರಿತಾಹಾರಮಂ ಉಟಿದು ದೆಲ್ಲಂ ಪಿಂದಣ ಪರಿ (ಪುಣ್ಯಾಸ್ರ. ೧೦-೭ ಪ); ಕಡು ಸಣ್ಣನಂ ಮಾಡಿ ಕೊಂಡ ನೆಲ್ಲಿಯ ಕಾಯ . . . ತುಪ್ಪದೊಳು ಹುರಿದು (ಸೂಪಶಾ. ೬-೧೪); ಬೆಟ್ಟದ ನೆಲ್ಲಿಯ ಕಾಯಿ ಸಮುದ್ರದೊಳಗಣ ಉಪ್ಪು ಎತ್ತಣಿಂ ದೆತ್ತ ಸಂಬಂಧವಯ್ಯ (ಅವಚಂ. ೧೫-೫೯); ಆ ಗೃಹಸ್ಥನಿಗೆ ನೆಲ್ಲಿಯ ಕಾಯಿಯೆಂದರೆ ಆಶೆ (ಕಸರಿ. ೨೯). ನೆಲ್ಲಿಯ ಮರ = ನೆಲ್ಲಿಕಾಯಿಯ ಮರ : "ತಿಷ್ಯಫಲಾ, ಆಮಲಕೀ, ಅಮೃತಾ, ವಯಸ್ಥಾ-ಈ ೪ ನೆಲ್ಲಿಯ ಮರ" (ನಾಚಿರಾ. ೧೦೮); ನೆಲ್ಲಿಯ ಮರಂಗಳೋಳಿಗಳಲ್ಲಿ ಕರಂ ತೋರ್ಪ ತೋರಗಾಯ್ಗಳ ಮೊತ್ತಂ . . . ಕಣ್ಗೇವುತಿರ್ಪುದತಿಶಯಸುಖಮಂ (ಬಾಧಪು. ೧೦-೮೫); ಅಲ್ಲಿಂ ತೆಂಕಲು ಹೊಳೆಯ ದಡದ ಮೇಲಣ ಆಸಿಯ ನೆಲ್ಲಿಯ ಮರನ ಒತ್ತಿನಲಿ (ಎಕ. VIII, ತೀರ್ಥಹ. ೧೯೦-೬೨; 1407). ನೆಲ್ಲಿಯ ಸೆಟ್ಟು = ನೆಲ್ಲಿಚಟ್ಟು : ಅಣಿಲೆಯ ಕಾಯ್, ತಾಱ್ಯ ಕಾಯ್, ನೆಲ್ಲಿಯ ಸೆಟ್ಟು ಈ ಮೂಱುಮನರೆದು ಕುಡಿವುದು (ಲೋಕೋಪ. ೯-೧೩೬ ಟೀಕೆ). ನೆಲ್ಲಿಹಿಂಡಿ = ನೆಲ್ಲಿಕಾಯಿಯಿಂದ ಮಾಡುವ ಚಟ್ಟಣಿ :(ಕಿ).

[ದೇ.॥ ತಮಿ. ಮಲ. ತುಳು. ತೆಲು. ನೆಲ್ಲಿ; ಕೊಡ. ನೆಲ್ಲಿಕೆ; ಪರ್ಜಿ. ನೆಲ್ಲ; ಗೊಂಡಿ. ನೆಲ್ಲಿ, ನಲ್ಲೀ; ಕುಇ. ನೆಡಿ; ಕುವಿ. ಲೆಲ್ಲಿ]

ನೆಲ್ಲಿಕಾಯ್, ನೆಲ್ಲಿಕಾಯಿ (ನಾ). ನೆಲ್ಲಿ ಗಿಡದಲ್ಲಿ ಬಿಡುವ ಫಲ : ಗಟ್ಟದುಪ್ಪು ಬೆಟ್ಟದ ನೆಲ್ಲಿಕಾಯ್ಗೆ ಸುಪ್ರಯೋಗಿಸಿದಂತೆ ಸುಗು ಣಾನಿರುದ್ಧಗೆ ಕಪ್ಪುರಗಂಧಿ ಸೇರಿದಳು (ಮೋಹತ. ೪೧-೪೫). ನೆಲ್ಲಿ ಕಾಯಿ : "ಧಾತ್ರೀಫಲಂ-ನೆಲ್ಲಿಕಾಯಿ" (ಓಷಧಿ. ೮೧); ಪಚ್ಚೆತುತ್ಥ, ತಾರೆಕಾಯ ಬೀಜದ ತಿರುಳು, ನೆಲ್ಲಿಕಾಯ ಬೀಜದ ತಿರುಳು, ಇವಿಷ್ಟನು . . . ಕಣ್ಣಿಗೆಚ್ಚಲು ಅತ್ಯಂತ ನೋವು ಸಹಿತವಾಗಿದ್ದ ಕಣ್ಣನಲ್ಲಿ ನೀರು ಸುರಿವುದು ಶಮನವಹುದು (ವೈದ್ಯಸಾ. II, ೭೯); ನೆಲ್ಲಿಕಾಯಿ 'ಸಿ' ಜೀವಾತು ಬಹಳ ಪ್ರಮಾಣದಲ್ಲಿರುವ ವಸ್ತು (ಆಡುಸೌ. ೬೪).

ನೆಲ್ಲಿಕಾಯಿ ತಾಟ = ನೆಲ್ಲಿಕಾಯಿಗಳನ್ನು ಒಣಗಿಸಿ ಮಾಡಿದ ಚಟ್ಟು : ಕಹಿಪಡುವಲು, ಅಳಲೇಕಾಯಿ ತಾಟ, ನೆಲ್ಲೀಕಾಯಿ ತಾಟ . . . ಇವುಗಳ ಕಷಾಯದಲ್ಲಿ ಶುದ್ಧ ಗುಗ್ಗಳ ೧ ಚವಲಿಯ ತೂಕ ಹಾಕಿ ಕುಡಿಸಬೇಕು (ಗೃಹವೈ. ೭೨). [ನೆಲ್ಲಿ + ಕಾಯ್$_4$]

ನೆಲ್ಲಿಕಾಯಿ 'ನೆಲ್ಲಿಕಾಯ್' ನೋ.

ನೆಲ್ಲಿಕಾಯಿಸರ (ನಾ). (ನೆಲ್ಲಿಯ ಕಾಯಿಯ ಆಕಾರದಲ್ಲಿರುವ) ಚಿನ್ನದ ಗುಂಡುಗಳಿಂದ ಮಾಡಿದ ಸರ : ಕಂಠಭೂಷಣಗಳು . . . ನೆಲ್ಲಿಕಾಯಿ ಸರ, ಗೋದಿ ಸರ, ಜೋಳದ ಸರ, ಮಾವಿನಕಾಯಿ ಸರ, ಮಲ್ಲಿಗೆ ಮೊಗ್ಗಿನ ಮಾಲೆ ಪದಕ ಇತ್ಯಾದಿ (ಕವಿಕೋ. I, ೮೨೧).

[ನೆಲ್ಲಿಕಾಯಿ(<ನೆಲ್ಲಿಕಾಯ್) + ಸರ$_3$]

ನೆಲ್ಲಿಗುಂಡಿ (ನಾ). ಒಂದು ಊರಿನ ಹೆಸರು : ಶ್ರೀಪೃಥಿವೀವಲ್ಲಭ ಪರಮೇಸ್ವರ ಪಲ್ಲವಾಧಿರಾಜಂ . . . ಗಂಗವೂರ ಮೂವತ್ತು ನೆಲ್ಲಿಗುಣ್ಡ ಪನ್ನೆರಡುಮನಾಳುತ್ತು ×× (ಎಕ. XI, ಚಳ್ಳಕೆ. ೩೪-೧೪; ಸು.815).

[?]

ನೆಲ್ಲಿಗೆಱೆ (ನಾ). ಒಂದು ಊರಿನ ಹೆಸರು : ಸ್ವಸ್ತಿಶ್ರೀ ಮಇನ್ದಂ ನೊಟಮ್ಬನ್ ಗಙ್ಗಱುಸಸಿರಮು ಆಳೆ ನೆಲ್ಲಿಗೆಱೆಯ ತುಱುಗೊಣ್ಡಲ್ಲಿ ತುಱುವನಿಕ್ಕಿಸಿರೊಸಗರಲಯನ್ ಪೊಸಮೆಣ್ಡ ಸಗಮೇಱಿದನ್ (ಎಕ. IX (S), ಹೊಸಕೋ. ೯-೬; 875); ತಮ್ಮಣ್ಣನ ಕಲ್ಲ ನೆಲ್ಲಿಗೆಱೆಯಲಿ ಕಲ ನಿಗ್ಗುನ್ದಸೆಟ್ಟ ನಿಱಿಸಿದನ್ (ಎಕ. X, ಚಿಂತಾಮ. ೧೧೫-೧೨; 1010); ನೆಲ್ಲಿಗೆಱೆಯ ಕೆಱೆಗಂ ಕೊಟ್ಟ ಪೊಂ ಅಯ್ವತ್ತು ಏಟು ಗದ್ಯಾಣಂ (ಎಕ. IX, ಹೊಸಕೋ. ೧೦-೧೦; 1023).

[ನೆಲ್ಲ + ಕೆಱೆ]

ನೆಲ್ಲಿಚಟ್ಟು, ನೆಲ್ಲಿಚೆಟ್ಟು (ನಾ). ಬೀಜ ತೆಗೆದು ಒಣಗಿಸಿಟ್ಟ ನೆಲ್ಲಿಯ ಕಾಯಿ : ನೆಲ್ಲಿಚಟ್ಟು :- ಇದಂ ಮೊಸರಲ್ಲಿ ಅರೆದು ತೆಗೆದು ಕೊಳ್ಳೆ ಹೊಟ್ಟೆ ಹರಿಯುವುದು ನಿಲ್ಲುವುದು (ವಿವೈವಿ. ೫); ನೆಲ್ಲಿಚಟ್ಟು, ತಾರೇಕಾಯಿ, ಕಳ್ಳಂಗಡಲೆ ಬೇರು . . . ಕಷಾಯವ ಕಾಸಿ ಕೊಡಿಸಲು ಸಕಲವಾದ ರುಗ್ಧಾಹಸನ್ನಿಪಾತ ಶಮನವಹುದು (ವೈದ್ಯಸಾ. I, ೭೦); ಕೊತ್ತುಂಬರಿ, ಕೊಡಸಿಗೆ ಬೇರು . . . ನೆಲ್ಲಿಚಟ್ಟು, ಬೇವಿನ ಕಡ್ಡಿ ಇವು ಗಳನ್ನು ಸಮದಿಂ ಕಷಾಯ ಕಾಯಿಸಿ ಕೊಡಲು ವಾತಜ್ವರಂ ಮಾಣ್ಗುಂ (ಸಕವೈ. ೬೫). ನೆಲ್ಲಿಚೆಟ್ಟು : ಜೇನುತುಪ್ಪ, ಯಷ್ಟಿಮಧುಕ . . . ನೆಲ್ಲಿಚೆಟ್ಟು, ಕರ್ಪೂರದರಿಸಿನ, ಹಿಪ್ಪಲಿ, ಲೋಧ್ರ, ಭದ್ರಮುಸ್ತೆ, ಜೀರಿಗೆ ಇವುಗಳನ್ನೆಲ್ಲಾ ಸಮಭಾಗವಾಗಿ ಚೂರ್ಣಿಸಿ (ಸಕವೈ. ೭೮).

[ನೆಲ್ಲಿ + ಚಟ್ಟು$_1$(<ಚಟ್ಟ$_1$). / ತಮಿ. ನೆಲ್ಲಿಚ್ಚಾನ್ತು; ತುಳು. ನೆಲ್ಲಿಚಟ್ಟ್]

ನೆಲ್ಲಿಚೆಟ್ಟು 'ನೆಲ್ಲಿಚಟ್ಟು' ನೋ.

ನೆಲ್ಲಿಸರ (ನಾ). = ನೆಲ್ಲಿಕಾಯಿಸರ : ಹರಳು ಕೆಚ್ಚಿದ ಪಟ್ಟ ಸರಗಿ ಪುತ್ಥಳಿ ನೆಲ್ಲಿಸರ ಚಿಂತಾಕ ಕಿರಿಪಿಲ್ಲಿ ಸುರಳಿ ಸಹಿತವಾಗಿ ಪರಿಪರಿ ವಸ್ತುವ ಧರಿಸಿಕೊಂಡಿಹರು (ಜನಗೀ. ೪೪). [ನೆಲ್ಲಿ + ಸರ$_3$]

ನೆಲ್ಲು 'ನೆಲ್' ನೋ.

ನೆಲ್ಲುಗದ್ದೆ (ನಾ). ಬತ್ತದ ಗದ್ದೆ; ನೆಲ್ಲು ಬೆಳೆಯುವ ಭೂಮಿ : "ವಪ್ರಂ, ಕೇದಾರ, ಕ್ಷೇತ್ರಂ—೩ ಕ್ಷೇತ್ರದ ಹೆಸರು, ನೆಲ್ಲುಗದ್ದೆ" (ಸಿದ್ಧಾಂತಿ. ೨೭೭). [ನೆಲ್ಲು(<ನೆಲ್) + ಗದ್ದೆ(<ಗಟ್ದೆ)]

ನೆಲ್ಲುಗೆಯ್ (ನಾ). = ನೆಲ್ಲುಗದ್ದೆ : ಶ್ರೀಮತ್(ದ್)ಬಾಪ್ಪುವರಸ (ಸರ್) . . . ನನ್ದಿಕೇಸ(ಶ್ವ)ರಮು(ಮೂ) ನೆಲ್ಲುಗೆಯುವಂ ಕೊಟ್ಟ[ರು] (ಇಆ. X, ೧೦೪-೧೦; 934). [ನೆಲ್ಲು(<ನೆಲ್) + ಕೆಯ್$_4$]

ನೆಲ್ಲುಮಡಿ (ನಾ). = ನೆಲ್ಲುಗದ್ದೆ : ಪಾಮರಿಯರೂ . . . ನಡೆ ತಡಬಡಿಸುತ ನೆಲ್ಲು ಮಡಿಗಳಿಗೆ ಇಳಿವ ಗಿಳಿಗಳನ್ನು ಸೋವುವ ಗೊಲ್ಲವೆಣ್ಣು ಗಳೂ ಪಾಂಥರ ಬಗೆಯನ್ನು ತಲೆಕೆಳಗು ಮಾಡುತ್ತಾರೆ (ನಂಜುಂಡ.೧೨೫).

[ನೆಲ್ಲು(<ನೆಲ್) + ಮಡಿ$_5$]

ನೆಲ್ಲುಸುಲಿ (ಕ್ರಿ). ನೆಲ್ಲನ್ನು ಒಡೆ; ಬತ್ತ ಒಡೆದು ಅಕ್ಕಿ ಮಾಡು : ನೆಲ್ಲು ಸುಲಿಯಲು . . . ಬೀಸುವ ಕಲ್ಲು (ನನ್ನಜೊ. ೬೯).

[ನೆಲ್ಲು(<ನೆಲ್) + ಸುಲಿ$_1$]

ನೆಲ್ಲುಹೊಟ್ಟು (ನಾ). ಬತ್ತದ ಹೊಟ್ಟು : ನೆಲ್ಲುಹೊಟ್ಟಿನಲ್ಲಿ ಮಾಡಿದ ಲಿಂಗವು ಮಾರಣಕರವು (ಸೌಗಂಧಿ. ೩೯೨-೩೨).

[ನೆಲ್ಲು(<ನೆಲ್)+ಹೊಟ್ಟು$_2$ (<ಪೊಟ್ಟು)]

ನೆಲ್ಲೂರು (ನಾ). ಒಂದು ಊರಿನ ಹೆಸರು : ನೆಲ್ಲೂರ ಮಲೆಯರ ಕೆಱೆಯಮನ ಮಗ ಅಮ್ಮಣಗಾವುಣ್ಡನುಂ . . . ಬೇಗುಲಮಂ ಮಾಡಿಸಿ ಸಾಸನಮಂನ್ನಿಱಿಸಿದಂ (ಎಕ. VIII, ಸೊರಬ. ೪೭೧-೯ ; 1012).

[ನೆಲ್ ? + ಊರು$_3$(<ಊರ್)]

ನೆಲ್ಲೆ 'ನೆಲ್ಲ' ನೋ.

ನೆಲ್ಲೊಗೆ (ಕ್ರಿ). ಬತ್ತ ಉತ್ಪತ್ತಿಯಾಗು,—ಹುಟ್ಟು : ಬಿದಿರು ಸದ್ವಂಶವಾಗಿದ್ದರೂ ಅದರಲ್ಲಿ ಅರುವತ್ತುವರ್ಷಕ್ಕೊಮ್ಮೆ ಮಾತ್ರ ಬತ್ತವಾಗುವುದು. ಹಾಗೆಯೇ ಮಹಾಉದಯವೂ ಕೂಡ ಸುವಂಶದ ಪ್ರತಿಭಾ ಪರಿಪಾಕದ ಪರಮಾವಧಿಯೆನ್ನಬಹುದು. ಅದರಿಂದಲೇ ನೆಲ್ಲೊಗೆದ ಮೇಲೆ ಆ ಬಿದಿರ ಕಟ್ಟೆಯೇ ಹೋಗುವಂತೆ, ಆ ಮಹಾಕವಿಗಳ ಅನಂತರದಲ್ಲಿ ವಂಶವು ನಿಸ್ಸಂತತಿಯಾಗುತ್ತದೆ (ಕನ್ನಇ. ೬೫). [ನೆಲ್+ಒಗೆ$_1$]

ನೆಲ್ಲೋಗರ (ನಾ). ಬತ್ತದ ಅಕ್ಕಿಯಿಂದ ತಯಾರಿಸಿದ ಅನ್ನ ; ನೆಲ್ಲಕ್ಕಿ ಅನ್ನ : ನೆಲ್ಲೋಗರ ಕೆನೆಮೊಸರ್ಪುಳಿಯಲ್ಲವನಲ್ಲವೆ ಸವಿಸವಿದಾ ನಂದಿಸು (ಮದೇಪು. ೨೬-೧೧); ಬೆಲ್ಲ ಗೆಣಸುಗಳುಂಟು ಅಲ್ಲಲ್ಲಿ ನೀರುಂಟು ನೆಲ್ಲೋಗರುಂಟು ನೆಳಲುಂಟು ಕೆಱೆಕುಂಟೆ ಎಲ್ಲೆಲ್ಲು ಉಂಟು (ಸರ್ವಜ್ಞ. ೧೬೨೫). [ನೆಲ್+ಓಗರ]

ನೆವ, ನೆಪ (ನಾ). ೧. ಕಾರಣ ; ಹೇತು ; ನಿಮಿತ್ತ : ಪಱಿಗೆ ಮೇಣ್ ಪೊಗಟ್ಗೆ ಮೇಣ್ ನೆವಮಿಲ್ಲದೊಡಿಂತು ಕೈಗಟಿಯೆ ಬಗ್ಗಿಸುಗೆ ಮೇಣವರೆಲ್ಲರುಮಂತುಮಾನುಟಿವೆನಲ್ಲೆ ನೆನಿತಾದೊಡಮೆಂಬುದು ಚಲ್ವ ಪಾಂಗಟಿಯ[ದ]ಂತಿದನಿಂತಿರೆ ಪೇಟ್ಗೆ ವಿಕಲ್ಪಮಂ (ಕವಿರಾ. ೧-೧೩೬) ; ಆಕೆಯ ಗರ್ಭದೊಳ್ ಪಾಪಕರ್ಮಜೀವಂ ನೆಲಸಿದೊಡೇನುಂ ನೆವಮಿಲ್ಲದೆ ಕಸವರಮೆಲ್ಲಂ ಕೆಟ್ಟತ್ತು (ವಡ್ಡಾರಾ. ೭೬-೧೦) ; ನೆಗಟ್ತೆ ಮಾಸೆ ನಣ್ಪಿನ ನೆವದಿಂದೆ ಪಾಂಡವರನೊಳವೊಕ್ಕೊಡೆ ನೀಮೆ ಪೇಸಿರೇ (ಪಂಪಭಾ. ೯-೬೮) ; ಒಳಗಣುಪತಾಪೋಪಶಮನಕೆ ಮಲಯರುಹ ಕರ್ಪುರದ ಶೀತಳ ಸಲಿಲದಿಂ ನನೆದಿದಱ ನೆವವಿರುಳಿನಿತು ಕಣ್ಮುಚ್ಚೆ (ಬಸಪು. ೩-೧೮) ; ಆಸೆ ಬುರುಕಿಗೊಂದು ಕೂಸಿನ ನೆವ (ಗಾದೆ). 'ಪಿಳ್ಳೆನೆವ' ಪರಾ. ೨. ಉದ್ದೇಶಪೂರ್ವಕವಾದ ನಟನೆ,—ಸೋಗು ; ತೋರಿಕೆಯ ಕಾರಣ—,ಸಬೂಬು : ಬೇಂಟೆಯ ನೆವದಿಂ ಬಂದು ದ್ವೈತವನದ ಕೆಲದ ನಂದನವನದೊಳ್ ಪಾಂಡವರ್ಗೆ ಸಮೀಪಮಾಗೆ ಬೀಡಂ ಬಿಟ್ಟು (ಪಂಪಭಾ. ೭-೩೨ ಪ) ; ಚೀ ಜಪಮೆಣಿಸುವ ನೆವ[ಪಾಠಾಂ. ಪ]ದಿಂದಂ ನೃಪ ತದ್ಗುಣಗಣಮನೀಗಳೆಣಿಸುತ್ತಿರ್ಪೆಂ (ಕಾದಂಪೂ. ೯೫೬) ; ಅನುಜೆಯನಿತ್ತು ನರಂಗೆ . . . ತಾನಾತನ ರಥಮನೆಸಗಿ ಧರ್ಮಜನನುಜನ ನೆವದಿಂದಮರಸುಗೆಯ್ವಂ ಕೃಷ್ಣಂ (ಗದಾಯು. ೩-೪೨) ; ಹೋಮದ ನೆವ[ಪಾಠಾಂ. ನೇಮ]ದಲ್ಲಿ ಹೋತನ ತಿಂಬ ಅನಾಮಿಕರೊಡನಾಡಿ ಗೆಲುವುದೇನು (ಬಸವ. ೫೭೮) ; ರಾಯ ಕುರುಪತಿ . . . ವಿಪಿನಕೆ ಘೋಷಯಾತ್ರೆಯ ನೆವದಲ್ಲೈತಂದ (ಕುವ್ಯಾಅ. ೧೬ ಸೂಚನೆ). ೩. ಕಪಟ ; ಮೋಸ; ವಂಚನೆ: "ಕೈತವಂ, ಕಪಟಂ . . . ವ್ಯಪದೇಶಃ—ಈ ೧೦ ನೆವಂ" (ಹಲಾಯು. ೧೧೬-೨೪); ಹಿಂದೆ ಜಂಗಮವೇಷಮಂ ನೆವದಿಂದೆ ಧರಿಸಿದ್ದುದ ನಱಿದು ಸಿಗ್ಗೊಂದಿ (ಬಸಪು. ೩೯-೧೯) ; ನೆವದ ನೆಲೆವೀಡು ಕುಹಕದ ಕೊಟಾರಂ ಪೊಸಬಗೆಯ ಚದುರ ಚಾವಡಿ . . . ಎನಿಪ ವೇಶ್ಯಾಶ್ರಯಂ ಮನೋವಿಸ್ಮಯಂ ಸ್ಮರಪ್ರಿಯಂ ಚೆಲ್ವಾದುದು (ಚಬಪು. ೧೦-೯) ; ಎನ್ನೊಳು ನೆವಮಿನಿತಿಲ್ಲದೆಱಕಗೂಡಿ ಮನ್ನಿಸಿ ನುಡಿದಳಿಂತೆಂದು (ಹದಿಬ. ೧-೨೮). ೪. ಉಪಾಯ ; ಯುಕ್ತಿ ; ಹಂಚಿಕೆ : ಈ ನೆವದಿಂದಂ ನಮ್ಮಂ ತಾನಾರಯ್ಯಲ್ಕೆ ಬಗೆವನಲ್ಲದೊಡೊಳಪೊಕ್ಕಾ ನೃಪನ ಮಂತ್ರಿ ಮಂತ್ರ ವಿಧಾನದಿನುಯ್ಯಲ್ಕೆ ನಮ್ಮನೊಡರಿಪನಕ್ಕುಂ (ಶಾಂತಿಪು.೨-೩೪); ಎನಗಂ ಕೃತ್ಯವಿಲ್ಲದಿರ್ದೊಡಂ . . . ನಿನಾನುಮೊಂದು ನೆವಂ ಮಾಡಿ ಮಹೋತ್ಕಟತ್ವದೆ ದಿಟಂ ಬಂದೆಂ (ಕಾದಂಪೂ. ೮೬೨) ; ಅಲ್ಲಿ ಪಲವು ಮತ್ಸ್ಯಂಗಳಿರ್ಪುದುಮೊಂದು ಬಕಂ ಕಂಡು ತಾನೊಂದು ನೆವದಿಂದಾ ಮೀನ್ಗಳಂ ತಿಂದು ಕಾಲಮಂ ಕಳೆವೆನೆಂದು ತಪೋರೂಪಮಂ ಕೈಕೊಂಡು (ಪಂಚತಂ. ೫೩-೬) ; ತರಳನಿವನದ್ವೈತಕಲೆಯಲಿ ಪರಿಣತನು ತಾನಲ್ಲ ನೆವದಿಂ ನರನ ಬೋಧಿಸಬೇಕೆನುತ ನುಡಿಸಿದನು ಫಲುಗುಣನ (ಕುಪ್ಯಾಭೀ. ೩-೩೨). ೫. ದೋಷಾರೋಪಣೆ; (ಸುಳ್ಳಾಗಿ) ತಪ್ಪು ಹೊರಿಸುವುದು : ಅಂತು ಲಬ್ಧೋಪಾಯೆಯಪ್ಪ ವಣಗೀಶಜಾಯೆ ಚಂದನೆಯನೇನಾನುಮೊಂದು ಪೊಲ್ಲಮೆಯನಿಲ್ಲದುದನುದ್ಭವಿಸಿ ನೆವದಿಂ ಶೃಂಖಳಾಬಂಧನೆಯಂ ಮಾಡಿ (ವರ್ಧಪು. ೧೫-೫೪ ಪ). ೬. ಹೋಲಿಕೆ; ಸಾಮ್ಯ : ದೆರಹಾಸವಿಭಾಸಿತವಕ್ತ್ರಶೋಭೆಯ ನೆವದಿಂದೆ ಚಂದ್ರವಳಯಂ ತಳೆದತ್ತನಿಶಂ ದ್ವಿರೂಪಮಂ (ಚಂದ್ರಪು. ೨-೧೫). ೭. ವಿಧ ; ರೀತಿ ; ಕ್ರಮ : ಅಸುಹೃತ್ಕರಿಯಂ ಹಲಿ ದಳಿಯಿಸುವಂದುಚ್ಚಳಿಸಿ ಪುದಿದ ನೆತ್ತರ ಕೆಂಪಾಗಸದೊಳ್ ತೋಱುವುದಿನ್ನುಂ ಕಿಸುಸಂಜೆಯ ನೆವದೆ ದಿನದ ರಾತ್ರಿಯ ಪುಗಿಲೊಳ್ (ಜಗವಿ. ೮-೪೪) ; ಸಟೆಗಳಿಂ ದಿಟಗಳಿಂದಾವನೊಳಗಾದೊಡಂ ಅಟಮಟದೊಳಾವ ನೆವದಿಂದಲಾರಾದೊಡಂ ಆವ ಪರಿಯಲಿ ಭಜಿಸಲೀವನಮಳತ್ವಮಂ (ದೀಕ್ಷಾಬೋ. ೧೧-೨೪); ತಿರುಗಿ ಜಂಗಮವತ್ತ ಹೋದನು ಮರಳಿ ಕಾಣೆವು ನಾವವರನೀ ಪರಿಯ ನೆವವಂತಾಗಲಾಪುದಲಾ ಅದೆಂತೆನಲು (ಬಸಪು. ೩೫-೪೮) ; ನಾವೀಯವನಿಯೊಡೆತನವುಳಿದು ರಾಜಋಷಿತ್ವಮಂ ವಹಿಸೀ ನೆವದಿ ಚರಿಸುವೆವಿಲ್ಲಿ (ಅನಂರಾ. ೩-೩-೯). ೮. ವ್ಯಾಜ; ರೂಪಾಂತರ; ರೂಪವ್ಯತ್ಯಾಸ: ನಗೆಯೆಂಬ ನೆವದೆ ಬೆಳಗೀ ಮೊಗಮೆಂಬೀ ನೆವದೆ ತಿಂಗಳೊಳಗೆಸೆದಾದಂ ಸೊಗಯಿಸಿ ತೋರ್ಕುಂ ಲೋಚನಯುಗಮೆಂಬೀ ನೆವದೆ ಲಕ್ಷ್ಮಮೆನೆ ತದ್ವ್ಯಾಜಂ (ಕವಿರಾ.೩-೨೬); ತೊಳಗುವ ಪಾರಿಜಾತದಲರ್ಗೊಂಚಲಿನೊಪ್ಪುವ ಕರ್ಣಪೂರಮಂ ಕಳೆದೊಡಮಲ್ಲಿ ಸಂಗಮಿಸಿ ಪೋಗದ ಕಂಪನುಣಲ್ಕೆ ಕರ್ಣದತ್ತೆಳಸಿ ಜಿನುಂಗುತಿರ್ಪ ನೆವದಿಂ ಸ್ಮರಮಂತ್ರಮನೋದುವಂತೆ ಕಣ್ಗೊಳಿಪಳಿಸಂಕುಳಂ ನೆನೆಯಿಸಿತ್ತ ಸಿತೋತ್ಪಳಕರ್ಣಪೂರಮಂ (ಕಾದಂಪೂ. ೮೩೩); ಜಳದಾಧ್ವಂ ಸ್ವರ್ಧುನೀ ಫೇನದ ನೆವದೆ ಪೆಱುತ್ತಿರ್ದುದೋ ತಾನದಭ್ರಾಮಳಶುಭ್ರಜ್ಯೋತಿಯಂ (ಕುಸುಮಾ. ೪-೫೨) ; ಒಂದು ವಸ್ತುರೂಪಮನಪಲಪಿಸುವುದೆನೆ ವ್ಯಾಜ್ಯಂ ನೆವಂ ಎಂಬಿವು ಮುಂತಾದ ಪದಂಗಳಿಂ ಪೇಟೆಯದು ಕೈತವಾಪಹ್ನುತಿಯೆನಿಪುದು (ಅಪ್ರತಿ.೪೯-೩೪). **ನೆಪ** : ೧. ನಿನ್ನ ನೆಪದಿ ಮನದಲೊಂದು ಕಿಚ್ಚು ಉರಿಯುತಿರುವುದು (ಕವಿಸೋ.೨೯-೫). ೨. ಮೋದಕ ನೇವೇದ್ಯವನಣಗೈಯೆ ನೆಪವೇನಂ ಪೇಳಲಿ ನಾನರಿಯೆ (ಗಣೇಶ. ೩-೫೬); ಅದೆಲ್ಲಾ ಬರೀ ನೆಪ. ಬೇರೆ ಯಾರಿಗೂ ಕೇಳಿಸದ ಹಾಗೆ ಮೆಲ್ಲನೆ ಹೇಳಿ ಕೊಡಬೇಕು (ಶಾಲೆಮ. ೧೯). ೮. ಸುದತಿಯರ ಮೃದುಪದಾಲಕ್ತಕರಸವಿಸರಮಂ ತಳಿರ ಬೆಳಗೆಂಬ ನೆಪ[ಪಾಠಾಂ.ವ]ದಿಂ ಮಗುಟುಗುಟ್ವಂತೆ ಕೆಂಕಮಾದ ಕಂಕೆಲ್ಲೀವಲ್ಲರಿಗಳುಂ (ಚಂದ್ರಪು. ೧-೧೦೫ ಪ).

ನೆವನೆವ (ದ್ವಿರುಕ್ತಿ) : ಇಡಿದಡರೆ ಕಾಯ್ತು ಚೂತಮನಡಸಿ ಸಿಡಿಲ್ ಪೊಯ್ದುದೆನಿಸೆ ನೆವನೆವದಿಂದೆನ್ನೊಡವುಟ್ಟದರುಂ ತಂದೆಯುಮಡಗಿರ್ದರ್ ಖಳಕೃತಾಂತದಂತಾಂತರದೊಳ್ (ಅದಿಪು. ೩-೩೪) ; ತವಿಸುತಿರೆ ತಪದೊಳೊಡಲಂ ನೆವನೆವದಿಂ ಶಾಂತಿ ಮಾಡೆ ಬೇತಾಳಂ ಮೂಡುವ ತೆಱದಿನಂತರಾಯಂ ಸಮನಿಸುಗುಂ ಪುಣ್ಯಹೀನನಪ್ಪಂಗೆಂತುಂ (ಸಮಪ. ೪-೪೧) ಧರ್ಮಮನೇಳಿಸಿ ಬಿಟ್ಟೊಡೆ ಕರ್ಮದಿ ನೆವನೆವದಿನಡಸುಗುಂ ಕಡುದುಃಖಂ (ಧರ್ಮಾಮೃ. ೬-೧೩೬). **ನೆಪ ಮಾತ್ರ** = ಹೆಸರಿಗೆ ಮಾತ್ರ ; ನಿಮಿತ್ತ

ಮಾತ್ರ: ವಿಜಯನಗರದ ಸಾಮ್ರಾಜ್ಯವು ನೆವಮಾತ್ರಕ್ಕೆ ಉಳಿದಿದೆಯೆಂಬುದನ್ನು ನೀವರಿಯಿರಾ? (ಶ್ರೀರಾಯ. ೬೬). ನೆವ ಮಾಡು, ನೆಪ ಮಾಡು = ೧. ನಿಮಿತ್ತವನ್ನಾಗಿ ಮಾಡಿಕೊಳ್ಳು; ಕಾರಣವನ್ನಾಗಿಸು: ಆ ಕೃಷ್ಣನು ಪಾಂಡವರನ್ನು ನೆವ ಮಾಡಿಕೊಂಡು . . . ಮಾಢರಾದ ಸುಯೋಧನಾದಿಗೆಳನ್ನು ಅಡಗಿಸುವನು (ಕೃಪಾಳು. ೧೧೮). ೨. ನೆಪ ತೆಗೆ; ನೆವ ಹೂಡು: ಪ್ರತಿಸಲ ಬಂದಾಗಲೂ ನನ್ನನ್ನು ತನ್ನ ಹಳ್ಳಿಗೆ ಬಾ ಎಂದು ಕರೆಯುವುದೂ ಆ ಕರೆಯನ್ನು ಏನಾದರೊಂದು ನೆಪ ಮಾಡಿ ನಾನು ತಪ್ಪಿಸುವುದೂ ಅಷ್ಟೇ ಪಾಡಿಕೆಯಾಗಿತ್ತು (ಚಂದತೋ. ೧೧). ನೆವ ಹೂಡು, ನೆಪ ಹೂಡು = ತೋರಿಕೆಯ ನಿಮಿತ್ತವನ್ನು ಹೂಡು; ನೆಪವೊಡ್ಡು: ಈಗಂತೂ ಪ್ರಕೃತಿ ಸ್ವಸ್ಥವಿಲ್ಲವೆಂದು ನೆವ ಹೂಡು. ಮುಂದೆ ನೋಡಿದರಾಯಿತು (ಕೂತಕಾ. ೪೪); ತನ್ನ ಕೋಣೆಗೆ ಅವನನ್ನು ಬರಮಾಡಿಕೊಳ್ಳಲು ಯಾವುದೋ ನೆಪ ಹೂಡಿದ್ದಳು (ಪುನರು. ೧೩೦); ಆ ಬಂದರಿನ ನಿವಾಸಿಗಳು ಗಾಳಿಯ ಹೊಡೆತದಿಂದ ಹಡಗು ತಮ್ಮಲ್ಲಿಗೆ ಬಂದಿತೆಂಬ ನೆಪ ಹೂಡಿ ಹಡಗನ್ನು ಕೊಳ್ಳೆಹೊಡೆಯುತ್ತಾರೆ (ಪ್ರವಾಇ. II, ೧೪೯).

[ದೇ.॥ ತಮಿ. ನಿಪ, ನೀಪ; ತೆಲು. ನೆವ, ನೆಹ./ಸಂ. ನಿಭ./ಪ್ರಾ. ಣಿಹ]

ನೆವಂಗೊಳ್ (ಕ್ರಿ). ೧. ಕಾರಣವಾಗು; ನಿಮಿತ್ತವಾಗು: ಎಯ್ದೆ ಬೇರ್ವರಿದ ಪಗೆಯುಂ ಬನ್ನಂಬಟ್ಟೆನ್ನ ಮುನ್ನಿನ ಬನ್ನಮುಂ ಪಿರಿದದೆ ನೆವಂಗೊಂಡಾನಿಂದಿಲ್ಲಿ ನೀಗದೆ ಮಾಣ್ಬೆನೇ (ಪಂಪಭಾ. ೧೨-೧೯). ೨. ನೆಪವೊಡ್ಡು; ನೆಪ ತೆಗೆ: ಮನೋರಮಣನಿರ್ದ ಮಣಿಭವನಮಂ ಸಾರ್ವಲ್ಲಿ ನೆವಂಗೊಂಡು ಕೆಳದಿಯರ್ತೊಲಂಗೆ (ರಾಜಶೇ. ೪-೧೪ ಪ).

[ನೆವ+ಕೊಳ್$_1$]

ನೆವಂಬಡೆ (ಕ್ರಿ). = ನೆವಂಗೊಳ್ ೨: ಮುಖದ ಕಾಮಕಾರ್ಪಣ್ಯಮುಮಂ ದೃಷ್ಟಿಯ ದೈನ್ಯಮುಮನಱಿದು ಏನಾನುಮೊಂದು ನೆವಂಬಡೆದೆದ್ದು [ಪಾಠಾಂ. ನೆವದಿಂದೋಲಗದಿಂದೆದ್ದು, ನೆವಂವಿಡಿದು ಓಲಗದಿಂದೆದ್ದು] ಪುತ್ರವಿವಾಹಚಿಂತಾಸಕ್ತನಾಗಿ . . . ಇಂತೆಂದಂ (ನಂಬಿರ. ೪-೧೩). [ನೆವ+ಪಡೆ$_1$]

ನೆವಣೆ 'ನೇವಣೆ' ನೋ.

ನೆವಣೆ 'ನೇವಣೆ' ನೋ.

ನೆವತೆಗೆ, ನೆಪತೆಗೆ (ಕ್ರಿ). ೧. ನೆಪ ಹೇಳು; ಸಬೂಬು ಹೇಳು: ಸುಮ್ಮನೆ ನೆವತೆಗೆಯಬೇಡ (ರೂಢಿ). ನೆಪತೆಗೆ: ೨. ಕಾರಣವನ್ನು ಹುಟ್ಟಿಸು; ನೆಪವೊಡ್ಡು: ಬೇಳೆಂದು ನೆಪತೆಗೆದು ಜಗಳವಾಡಿ . . . ಗೋಳುಹುಯ್ದುಕೊಳ್ಳುತ್ತಿದ್ದರು (ಕಳಹು. ೧೦). [ನೆವ+ತೆಗೆ$_1$]

ನೆವನ, ನೆವನು (ನಾ). ೧. ಕಾರಣ; ಹೇತು; ನಿಮಿತ್ತ: ಮುಂದೆ ಮಿಗಗೊಂದಣವ ತೋಱಿ ಕಚ್ಚೇತು ಪುಲಿಯೆಂದು ಚೆದಱಿಸಲಾಯು ತೀರಿ ಬರಲಾ ನೆವನದಿಂದ ಧರಣಿಗೆ ಬಿದ್ದು ಮಡಿಯಲ್ಕೆ (ಪ್ರೌಢರಾ. ೨೧-೨೨); ಏನಾನು ನೆವದಿಂದ ತಾನೆ ಬಪ್ಪುದು ಸಿರಿಯು . . . ಏನಾನು ನೆವನದಲಿ ತಾನೆ ಪೋಪುದು ಸಿರಿಯು (ಸರ್ವಜ್ಞ. ೮೮೮); ೨. ಉದ್ದೇಶ; ಅಭಿಪ್ರಾಯ: ವೇದಾಂತಿಗಳು ಪ್ರಾರಂಭಮಾಡುವ ನೆವನದಿಂದ ಅತ್ತ ನೋಡಿದರು (ಕನಕ. ೪೦). ೩. ಉದ್ದೇಶಪೂರ್ವಕವಾದ ಕಾರಣ; ಸಬೂಬು: ಕೆಲವರು ಕುಡಿತದಿಂದಾಗಿ . . . ಏನಾದರೂ ನೆವನ ಹಿಡಿದು ಜಗಳವಾಡುತ್ತಿದ್ದರು (ರಕ್ತರೂ. ೩೪); ಏನೇನೋ ನೆವನಗಳನ್ನು ಹೇಳಿಬರಲಾಗುವುದಿಲ್ಲವೆಂದು ಬರೆದಳು (ಗೌರಕ. ೧೦). ನೆವನು: ೧. "ವ್ಯವಧಾನಮಪವಾರಣಂ ತಿರೋಧಾನಮೆನೆ ನೆವನಕ್ಕು" (ಮಂಗರಾ. ೧೨೯-೧೩); ಇದು ಮಹೀಮಂಡಲದ ಭಾರವನೊದೆಯಲಾದ ಏಲಾಸ

[illegible]

ನೆವನ [illegible]

[illegible]

ನೆವನು [illegible]

ನೆವನೋಚು [illegible]

ನೆವಮಾಳ್ಳು [illegible]

ನೆವಮಿಟ್ಟು [illegible]

ನೆವರು$_1$ [illegible]

ನೆವರು$_2$ [illegible]

ನೆವವಾಳು [illegible]

ಗೋಮುಖಿಯ ನೋಂಪಿಯೆನಿಪ್ಪ ನೆವವಿಟ್ಟು . . . ನಂದನನಾ ವಹಿಲದಲಿ ಕರಸೆ ಬಂವೆಜಗಿದನು ಹರುಷದಲಿ (ಸಾಳ್ವಭಾ. ೨೨-೩). ೩. ಸಂಚು ಹೂಡು ; ಉಪಾಯ ಮಾಡು : ನಾನಾದೇಶಿಗಳುಮಪ್ಪ ವ್ಯವಹಾರಿಗಳುಮಂ ನೆವವಿಟ್ಟು ಕವರ್ದುಕೊಂಡು ಸಮಸ್ತ ವಸ್ತು ವಾಹನಂಗಳಂ ತನ್ನೊಡನಾಡಿಗಳಪ್ಪ ಭಂಡಮಂಡಲಿಗೆ ಸೂಜೆಗೊಟ್ಟು (ಪಂಚತಂ. ೨೮-೧೩). **ನೆವಮಿಡು : ೪.** ಹೊಂಚು ಹಾಕು : ಜಗದ ಮೃಗವೆಲ್ಲವಂ ಜವನೆ ನೆವಮಿಟ್ಟು ನುಂಗಲುಂ ನೊಣೆಯಲುಂ ಪುಟ್ಟದಂತಪ್ಪ ಮಹಾದ್ಭುತಮನಭೂತಪೂರ್ವಮಂ ರುದ್ರನ ಭದ್ರ ವೃಷಭನನಾನಸನುಳರಿಸುವುದುಮಂ ಕಂಡೆಂ (ಪಂಚತಂ. ೪೬-೧೧). ೫. ದೋಷಾರೋಪಣೆ ಮಾಡು; ಅಪವಾದ ಹೊರಿಸು : ಭದ್ರಂಗೆ ಕುಡಲ್ವೇಡರ್ದ ಕೂಸನೆನಗೆ ಮದುವೆಯಾಗೆಂಬುದುಂ ಭದ್ರನುಂ ನಂದಂಗೆಂದು ಬಳೆದ ಕೂಸೆನಗೆ ಮೊಱೆಯಲ್ಲಳೆಂದಿರ್ವರುಮೋರೋರ್ವರ ಮೇಲೆ ನೆವವಿಟ್ಟು ಮಾಣ್ದುದುಂ (ಸುಕುಮಾ. ೭-೩೨ ವ). [ನೆವ+ಇಡು$_1$]

ನೆವಹೇಳು, ನೆಪಹೇಳು (ಕ್ರಿ). ತೋರಿಕೆಯ ಕಾರಣವನ್ನು ಹೇಳು ; ಸಬೂಬು ಕೊಡು : ಇಂದಿವನು ನೆವಹೇಳಿ ಹೋದೊಡಾ ನುಳಿದಿರೆನು ನೊಂದು ಬಳಲಿದೆನಿತೊ ಸೈಸೆನನ್ನು (ವಿಜೀಗೀ. ೨೭-೧೯) ; 'ಮನೆಯಲ್ಲಿಯೇ ಬೇಕಾದ ಪುಸ್ತಕಗಳೂ ಪತ್ರಿಕೆಗಳೂ ಸಿಗುವವಲ್ಲ !' ಎಂದು ನೆವಹೇಳುವನು (ಡಾಸಮು. ೬೩). **ನೆಪಹೇಳು :** ರಮೇಶ ಅಲ್ಲಿಯೇ ಸುತ್ತಾಡಿ ಬರುವೆನೆಂದು ನೆಪಹೇಳಿ ಹೊರಟ (ಸಡಿದಾ. II,೯೭೭). [ನೆವ+ಹೇಳು(<ಪೇಳ್)]

ನೆವೇಸಣ 'ನಿವೇಶಣ' ನೋ.

ನೆಶ್ಕ 'ನಶ್ಯ$_1$' ನೋ.

ನೆಸ ? (ನಾ). (?) : ಅಯಾಮಂ ಪದಿನೆಂಟು ಬಟ್ಟು ನೆಸವುಂ ತಾನರ್ಪಿನಂ ತೋರಮುಂ ಬೀಯಂದಟ್ಟಿದ ರೋಮವಿಲ್ಲದ ನರಂ ಕಾಣಲ್ಕಿ ನಿತಿಲ್ಲದಾ [ಸ್ತ್ರೀ]ಯಂ ಕೈವಿಡಿವಂಗೆ ಮಾಳ್ಪೆರ್ದವರಂ ಗೂಢಾಸ್ಥಿ ಪರ್ವಂಗಳಾ ಗೇಯಂಗಳ್ ನೆರೆಯುಂ ನವಿರ್ ನೆಗೆಯದಾ ತೋಳ್ಗಳ್ ಸುಖಂಗಳ್ ವಲಂ (ಹಾಲಾಸ್ಯ. ೧-೧೩-೨೩) ; "ಕಾಂತಿ" (ಹಾಲಾಸ್ಯ. ಕೋಶ). [?]

ನೆಸಣ 'ನಿವೇಶಣ' ನೋ.

ನೆಸರಿ (ನಾ). ಒಂದು ಬಗೆಯ ಮರ : ಪಚುಮಂದ ನೆಸರೆ ಬಲುಕುಣಿಕೆ ಪಾದರಿ ಹಾಲೆ ತೇಗುಗಳ ದಿಸರ ನಾನಾವೃಕ್ಷಜಾತಿಯಿಂದೆಸೆವ ಘೋರಾರಣ್ಯಕಕ್ಷೆ ಸೆದುದು (ಪಂಗಿರಾ. ೩೦-೯). [?]

ನೆಸಲು (ನಾ). ಸಲಿಗೆ ; ಸದರ : ನೆಸಲು ಕೊಟ್ಟ ನಾಯಿ ನೊಸಲು ನೆಕ್ಕಿದಂತೆ (ಗಾಜಿ). [ನೆಸೆ$_2$(<ನಸೆ$_1$)+-ಅಲು (<-ಅಲ್$_2$)]

ನೆಸೆ$_1$ (ಕ್ರಿ). ೧. ಏಳು ; ಮೇಲಕ್ಕೆ ಬರು : ಇಱುಂಪೆ ಊಜಲು ನೋಡುತಿರ್ದವ್ವ ಗಂದೆ ನೆಸೆದುದೊ ನೊಂದು ಜುಳ್ಳನುರಿದುದೊ ತಂದೆ ಬೆಂದೆ ನಾಂ ಬೆಂದೆ ನಾನಿಲ್ಲೀಗಳೆಲೆ ತಂದೆ ವೆನುತೆ (ರುದ್ರರ. ದೇ.೨೦೪-೩). ೨. ಎತ್ತು ; ಎತ್ತರಿಸು ; ಎಬ್ಬಿಸು : ಕಟ್ಟೆದರಿಳೊಂದು ಚಟಿಕೆ ನೀಡದೊಳಿರ್ದುಂ ಕಿಱುಮಱಿಯುಂ . . . ಕೊಕ್ಕಿಂ ಮೆಲ್ಲುಪ್ಪುಟ ನೊಸೆದು ನೆಸೆದುಂ ಲಲ್ಲೆಗೆಯ್ವುದಂ ನಟ್ಟಾಲಿಯೊಳಭೀಕ್ಷ್ಣಿ ಮುಳ್ಳಳ ಬಯಕೆಯಿಂ ಜಾನಕಿ ಸಖಿಗಿಂತೆಂದಳ್ (ರಾಮಾಶ್ವ. ೧೪-೩). ೩. ನೀಡು ; ಚಾಚು : ಮಲಹರನ ನಡುವೊಂದೆಸೆಗೆ ಒಲಿದೊಲಿದು ಕೊಂಡಿದೆ ಕೈಗಳುಂ ಕೆಲಕೆಲಕೆ ನೆಸೆದುಜುಗಿದವು . . . ಕೊರಳುಂ ನುಲಿದು ಬಿಗಿಯಿತ್ತು (ಬಸಪು. ೧೭-೨). ೪. ನಿಗುರು ; ನಿಮಿರು ; ನೆಟ್ಟಿದು ನಿಲ್ಲು : ಕುಡಿವಾಲಂ ನೆಸೆದಿರೆ . . . ಮೃಗತತಿಯಂ ಬೆಂಬಿಡದೆಜಗುತೆ ಪೊಯ್ದು ಕೆಡಪಿದವು ಜಾಯಿಲಗಳ್ (ಯಾದಚಂ. ೪-೫೪) ; ಮೇಂಗೊರಲ ನವಿರೋಳ್ ನೆಸೆಯೆ. . .ಧೀಕರಂಗಳಾಗಿರ್ಪ ಕಾಳ್ಕೋಣಂಗಳ ಗಡಣಂಗಳೊಳಂ (ಮುರಾಚ. ೪-೨೪ ವ). ೫. ಜಿಗಿ ; ಹಾರು ; ಚಿಮ್ಮು : (೪). ೬. ಉಬ್ಬು ; ಮೆರೆ (?) : ಮುದದಿಂ ನೆಸೆದು ನಾನಾ ಭವಭಯಂಗಳ ನುಸುಳಿ ಬರುತಿಪ್ಪವನು ತಾನೇ ಸ್ವಪ್ನಕಲ್ಪಿತನು (ಸದ್ಗುರು. ೪-೧೦). ೭. ಕುಪ್ಪರಿಸು ; ಕೆಳಗೆ ಬೀಳು (?) : ಉಸುರ ಹಿಡಿದುಬ್ಬರಿಸುತುಬ್ಬಿಸಿ ಕುಸಿದು ನೆಸೆಯಲ್ಕುದಜ ದೆಸೆಯಿಂ ಮನುಳಿಸುವುದೇ ಮಾಯೆ (ಸದ್ಗುರು. ೧-೧೬) ; ಹುಸಿಯದೆ ಹುಸಿಯದೆ ಕುಸಿಯದೆ ನೆಸೆಯದೆ ಹಸಗೆಡಪಬಿಳರೊಳಗೆ ಕಾರುಣ್ಯಂ ಮನುಳಿದುದ್ರೇಕಿಸದೆ . . . ಮನಸ್ಸಂಸಾರದ ಬೆಸುಗೆಯುಳಿದು ಸುಳಿಯುತ್ತಿಹನಳೆಯೊಳು (ಯೋಗಾಂದಿ. ೬-೨೦) .

ನೆಸೆನೆಸೆ (ದ್ವಿರುಕ್ತಿ) : ತಟಕ್ಕನೆ ಸಂತೋಷಕ್ಕೆ ಮುಗ್ಗರಿಸಿದಂತೆ ಮುನ್ನುಗ್ಗಿ ಹಳು ಮುರಿಯುವಂತೆ ನೆಸೆನೆಸೆದು ಬಂದು . . . ಅವನ ಬಾಯನ್ನೆ ನೆಕ್ಕಿಬಿಟ್ಟದ್ದು ! (ಪುಟಿಪು. ೧೪೪). **ನೆಸ್ತಾಟ** = (ಕೋಪದಿಂದ) ಹಾರಾಡುವುದು ; ಎಗರಾಡುವುದು : ನೆಸ್ತಾಟಕ್ಕೆ ಹೋಗಿ ಮಸ್ತಾಟ ಹೆಚ್ಚಿತು(ಗಾದೆ). **ನೆಸ್ತಾಡು** = ಹಾರಾಡು; ಎಗರಾಡು:(೪). 'ನೆಗೆ$_1$' ಪರಾ. ☐ [?]

ನೆಸೆ$_2$ 'ನಸೆ$_1$' ನೋ.

ನೆಳದಾಳ 'ನೆಲದಾಳ' ನೋ.

ನೆಳಲ್ 'ನೆಟಿಲ್$_1$' ನೋ.

ನೆಳಲಂಚೆ 'ನೆಟಲಂಚೆ' ನೋ.

ನೆಳಲಂಚೆಕಾಱ (ನಾ). (ಬಟ್ಟೆಯ ಮೇಲೆ ಬೊಂಬೆಯ) ನೆರಳಿನ ಆಟವನ್ನು ತೋರಿಸುವವನು : "ತೋ[ಶಾ]ಭಕಃ = ತೋಭಕನೆಂಬೊಂ, ನೆಳಲಂಚೆಕಾಱಂ" (ತೋ[ಶಾ]ಭಕಃ ಕ್ಷಪಾಯಾಂ ಕಾಂಡಪಟಾವರಣೇನ ನಾನಾ ರೂಪದರ್ಶೀ) (ತೀಕವಾ. ೧೩-೧೪).

[ನೆಳಲ್ (<ನೆಟಲ್$_1$)+ಅಂಚೆ$_4$+-ಕಾಱ]

ನೆಳಲಪಾಣಿ (ನಾ). ಒಂದು ಬಗೆಯ ಬಟ್ಟೆ : ಚಿತ್ರಾವಳಿಯ . . . ನೆಳಲಪಾಣಿಯ ಬಣ್ಣದ ಕಣದ ಬಣ್ಣವಣ್ಣಿಗೆಯ ಜವಳಿಗಳನೆ ಮೊಗಂ ನೋಡದೆ ಸೂಸಿದಾಗಳ್ (ಆದಿಪು. ೪-೩೪ ವ). [?]

ನೆಳಲಿಸು (ಕ್ರಿ). ನೆರಳನ್ನುಂಟು ಮಾಡು : ತಱಯುರಿಯುದೆ ಹಯಮುವ ಗಗನತಲಂ ನಿನ್ನೊಡೆತನದ ಪತಾಕೆಯೊಲು ವಲಂ ನೆಳಲಿಸಿ ಹೊದಿಪುದು ವಸುಮತಿಯಗಲಂ ನಿನ್ನ ಪ್ರಭಾವವನು (ಗಳವಿಂ. ೨೫-೫).

[ನೆಳಲ್ (<ನೆಟಲ್$_1$)+-ಇಸು$_3$]

ನೆಳಲು$_1$ 'ನೆಟಲ್$_1$' ನೋ.

ನೆಳಲು$_2$ 'ನೇಟಲ್' ನೋ.

ನೆಳಲುಗತ್ತರಿ (ನಾ). (?) : ಳನ ನೆಳಲುಗತ್ತರಿಯ ಪಾಪಿಯ ಕೂಸಿನ ಕುದಿವ ಕೂಪದ ಕಮ್ಮರಿಯ . . . ತಾಣಂಗಳಂ ತೋಱುದಂ ಭೈರವಂ ಸಿದ್ಧಪತಿಗೆ (ಸಿದ್ಧರಾ. ೩-೧) ; ಸುತ್ತಣ ಬಿಲದ್ವಾರಮುಂ ಪುಗುತ ಳನ ನೆಳಲುಗತ್ತರಿಯನೆಡಪುತ್ತ ವಜ್ರಲೇಪವನು ತುಡುಕುತ್ತ ನಡೆದಂ (ಸಿದ್ಧರಾ. ೩-೪) ; ನೆಳಲುಗತ್ತರಿಯಂತೆ ಹೊಳಚ ಹೊಳ್ಕಾಡುತಿಹ ಲಲನೆಯರ ನಂಬಿ ಶಿವಸುಖವನಜಾಯದಿಹ ಮಲದೇಹಿಗೆತ್ತಣದು ನಿತ್ಯ (ಗುರುಜೋ. ೧-೧೨೦). 'ಕತ್ತರಿವಾಣಿ' ಪರಾ. [?]

ನೆಳಲುಗಾಣು (ಕ್ರಿ). ನೆರಳನ್ನು ಕಾಣು ; ಛಾಯೆಯನ್ನು ಕಾಣು : ನೆಳಲುಗಂಡವ್ವಳಿಸುವುದು ಸುಂದಿಲನು ತೂಗಾಡುವುದು . . . ನೆಲಕೆ ಕವಿಯನು ಹೋಲುದಿಡುವುದು ಬಲುಕಣಿಯ ಹಿಡಿಹಿಂಗೆ ಲಾಗಿಸು ತಿರ್ದುದಾ ದಂತಿ (ಕುನ್ಯಾದ್ರೋ. ೩-೩೬).

[ನೆಳಲು$_1$(<ನೆಟಲ್$_1$)+ಕಾಣು(<ಕಾಣ್)]

ನೆಳಲುಗೆಡು (ಕ್ರಿ). ಛಾಯೆ ಇಲ್ಲವಾಗು ; ನೆರಳಿಲ್ಲವಾಗು : ಒಲವು ಮಿಗೆ ಲಲಿತಾರ್ಘಪುಷ್ಪಾಂಜಳಿಯನರ್ಪಿಸಿ ನಾಯ ಕಾಲಂ ತೊಳೆದ ತೆಱದಿಂ ಭಿನ್ನಕುಂಭದೊಳೆಱೆದುದಕದಂತೆ ನೆಳಲುಗೆಟ್ಟ ಮಹೀಜದಂತು ಜ್ವಳಿಪ ಲಿಂಗಪರಾಙ್ಮುಖರಾಗಳು ಭಜಿಸಿ ಭವಬಂಧನಕ್ಕೊಳಗಾಗ ದೆಂತಿಹನು (ಬಸಪು. ೬೦-೫೧). [ನೆಳಲು$_1$ (<ನೆಟಲ್$_1$)+ಕೆಡು$_1$]

ನೆಳಲುಗೊಳ್ (ಕ್ರಿ). ನೆರಳನ್ನು ಸೇರು : ತೆಗೆದುದಗ್ಗದ ತಂಪು ನದಿ ಸರಸಿಗಳ ತಡಿಯಲಿ ಹಜ್ಜೆಯಾದುದು ಹಗಲು ಹಂಸೆಯು ನೆಳಲು ಗೊಂಡದು ಬಯಸಿ [ಪಾಠಾಂ. ಹಗಲು ಹಾವಸೆ ಹರಿದು ಹೊಕ್ಕರಿಸಿದುದು] ಹಿಮಜಲವ (ಕುನ್ಯಾಅ. ೫-೫). [ನೆಳಲು$_1$(<ನೆಟಲ್$_1$)+ಕೊಳ್$_1$]

ನೆಳಲುಮರ 'ನೆಳಲುವರ' ನೋ.

ನೆಳಲುವರ, ನೆಳಲುಮರ (ನಾ). ನೆರಳನ್ನು ಕೊಡುವ ಮರ : ತಳಿರುಗಳ ತೋರಣದ ಗುಡಿಗಳ ನೆಳಲುವ[ಪಾಠಾಂ. ಮ]ರಗಳ ತಿಂಥಿಣಿಯ ಶೀತಳ ತರುಚ್ಛಾಯೆಯಲಿ ಮೆಱೆವಾ ಪುರವರವ ಕಂಡ (ನಿಭಾಗ. ೧೦-೩೬-೩೦). **ನೆಳಲುಮರ :** ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ನೆಳಲು$_1$ (<ನೆಟಲ್$_1$)+ಮರ$_1$]

ನೆಳಲ್ಕವಿ (ಕ್ರಿ). ನೆರಳು ಪಸರಿಸು,—ಮುಸುಕು ; ಛಾಯೆ ಹರಡಿ ಕೊಳ್ಳು : ತಳಿರ್ದುಱುಗಿದೆಳಮಾವುಗಳ ನೆಳಲ್ಕವಿದ ನಿರ್ಮಲ ಪುಳಿನ ತಳದಿಂ . . . ನಳಿನೋತ್ಪಲಪ್ರಕರಶೋಭಿತಸರೋವರಂಗಳ ರಮ್ಯ ಸೋಪಾನದಿಂದೆ ತದ್ರಾಜಕೇಳೀವನಂ ಕಣ್ಗೆಸೆದುದು (ಜೈಮಿಭಾ. ೨೯-೪೫). [ನೆಳಲ್ (<ನೆಟಲ್$_1$)+ಕವಿ$_1$]

ನೆಳವು (ನಾ). ೧. ಗುಟ್ಟು ; ರಹಸ್ಯ(?) : ನೆಳವರಿಯದಜ್ಞಾನಮುಂ ನಳೆವಳಿಪ ಸಂಶಯಮುಂ ಸ್ವಭಾವವ ತಿಳಿಯದಿಹ ವಿಪರೀತ ಭಾವನ ಸಹಿತ ಮೂವಿಧವೂ ಬೆಳವಿಗೆಯ ವಿಘ್ನತ್ರಯಂಗಳಿನೊಳವರಿದು ಶೃತದೃಷ್ಟದಿಂದವೆ ಕಳಚಿ ನಿಂದ ವಿವೇಕಿಗಳೆ ಸಚ್ಛಿಷ್ಯರವರೆಂದ (ಗಗತಾ. ೧೩-೧೪). ೨. ಪರಿಚಯ : ತಾನು ಜೀವನು ಬ್ರಹ್ಮ ನಲ್ಲೆಂಬಾ ನೆಳವದಜ್ಞಾನಮೆನಿಪುದು ಮೇಣಹುದೊ ತಾನಲ್ಲವೊಯೆಂಬಳವೆ ಸಂಶಯವೂ ತಾನು ಬ್ರಹ್ಮಮದಹುದು ಮುನ್ನಿನ ಹೀನಗುಣ ಬಿಡಲಿಲ್ಲವೆಂಬನುಮಾನವೇ ವಿಪರೀತಭಾವನಮೆನಿಸುತಿಹದೆಂದ (ಗಗತಾ. ೧೩-೧೫). ೩. ಇರುವ ಸ್ಥಳ ; ನಿಯತಸ್ಥಾನ ; ನೆಲೆ : ಹಲ್ಲೂ, ಕೂದಲೂ, ಉಗುರೂ, ಮನುಷ್ಯರೂ ತಮ್ಮ ತಮ್ಮ ನೆಳವುಗಳು ತಪ್ಪಿದರೆ ಕೆಲಸಕ್ಕೆ ಬಾರದೇ ಹೋಗುವರು. ಕಾಗಿ, ಕುತ್ಸಿತ, ಪುರುಷ ಸಮೂಹ, ಮೃಗ ಮುಂತಾದವುಗಳು ತಮ್ಮ ನೆಳವುಗಳನ್ನು ಬಿಡಲಾರದೆ . . . ಅಲ್ಲೆ ತೀರಿಹೋಗುವವು (ಮುಂಬಯಿ. ೬-೩೩೬). [←ತೆಲು. ನೆಳವು]

ನೆಳಿಲ್ 'ನೆಱಿಲ್' ನೋ.

ನೆಳ್ಕನೆ 'ನೆಟ್ಕನೆ' ನೋ.

ನೆಳ್ಕು 'ನೆಟ್ಕು' ನೋ.

ನೆಳ್ಗು 'ನಱುಂಕು' ನೋ.

ನೆಳ್ಳಿಸು (ಕ್ರಿ). (?) : ಅಗಜೆಯ ಮೋಟೆಯ ನೆಳ್ಳಿಸಿ ಶಕ್ರನ ಬಗೆಯಿಂದ ಮೈಯನಿದೋಱೆ ನಗೆವ ಮಾಲಿಯದ ಸಭವವೆನೆ ತೋಱೆ ಪಗಲಜಸಿರ ದುದ್ದಾರಿಸುತ ಸಕಳ ವ್ರಿಂಚಿಗಳ ಕಳಂಕವದೋಱುತ್ತ ವಿಕಳಶಕ್ತಿಯ ರೂಪುದೋಱೆ (ದೇವಾಂಪು. ೭-೭೫). [? + -ಇಸು$_3$]

ನೆಱ$_1$, ನೆರ$_1$ (ನಾ). ೧. ಮರ್ಮಸ್ಥಾನ ; ಮುಖ್ಯಸ್ಥಾನ ; ಆಯಕಟ್ಟು : "ಜೀವಸ್ಥಾನಂ, ಮರ್ಮ—ಈ ೨ ನೆಱಂ" (ಹಲಾಯು. ೮೭-೨೭೫) ; ಅಂಬುಜೋದರಂ . . . ತೊಡೆಯಂ ಪೊಯ್ದಾರ್ವುದುಂ ದುರ್ಯೋಧನನ ನೆಱನದೆಂದಱಿದು ನೆಱನೀತಂಗೂರುಯುಗ್ಮಂ ನೆಱನನಱಿ ಯದಾನಿನ್ನೆಗಂ ಮಾಣ್ದೆನಿಂ ಪೋ ತೆಱಪಂ ಪಾರ್ದಿರ್ಪೆನೆಂದೊಯ್ಯನೆ ಗದೆಯನಣಂ ಪಾಡುಗೆಯ್ದರ್ದು ಭೋರೆಂದೆಱಪುಗ್ರಾರಾತಿಯೂರುದ್ವಯ ಮನಿಡೆ (ಪಂಪಭಾ. ೧೩-೯೬) ; ತೊಡೆಯಂ ಪೊಯ್ದಾರ್ದ ನೆವದೆ ನೆಱ ನೀತಂಗೀಯೆಡೆಯೆಂದು ತೋಱೆ ಕುಡೆ (ಗದಾಯು. ೮-೩೫) ; ಆವೆಡೆಯಂ ನಟ್ಟವು ಬಾಣಾವಳಿ ನಟ್ಟೆದೆಯೆ ತಮಗೆ ನೆಱನೆನೆ ಕೆಡೆದರ್ ಭೂವಳಯಕ್ಕೆ ವಿಯಚ್ಚರರ್ (ಪಂರಾಮಾ. ೯-೬೭). 'ಕಡುನೆಱ' ಪರಾ. ೨. ಗುಟ್ಟು ; ರಹಸ್ಯ : ಅಂತು ಪುಟ್ಟದ ವಿಭಂಗಜ್ಞಾನದಿಂದ ಪಗತನರಕ ಲೋಕವೃತ್ತಾಂತರಾದಿಂಬಱಿಯಮೋರೊರ್ವರ ನೆಱಂಗಳು ಮನನ್ಯೋನ್ಯ ವೈರಕಾರಣಂಗಳುಮನುಗ್ಘಡಿಸುತ್ತುಂ (ಅದಿಪು. ೫-೮೫ ಪ); ಓರೊರ್ವರ ನೆಱಂಗಳುಮನನ್ಯೋನ್ಯಬದ್ಧ ವೈರಕಾರಣಂಗಳುಮಂ ಮೂದಲಿ ಸುತ್ತುಂ (ಸುಕುಮಾ. ೧೧-೪೨ಪ). ೩. ಅಂತರಾಳ ; ಮರ್ಮ : ಕಥಾ ಕಥನವಿನ್ನೋದದಿನಿರ್ದವರ ಮನಮನಱಿದು ನುಡಿವ ನುಡಿಗಂ . . . ಇಂಬಱಿದು ಸೇವಿಸುವ ಸೇವೆಗಂ ನೆಱನಱಿದು ಪಾಡುವ ಪಾಟಕ್ಕಂ ಪೊಟ್ಟಱಿದು ಸಾರ್ವ ಸಾರ್ಕೆಗಂ ಮನಂಬೆಚ್ಚು ಪತ್ತೆ ಪೊಯ್ದಂತಾಗಿರೆ (ಶಾಂತಿಪು. ೩-೫೯ಪ). ೪. ಮರ್ಮಾಘಾತದಿಂದ ಉಂಟಾದ ನೋವು ; ಮರ್ಮೋದ್ಘಾಟನದಿಂದ ಉಂಟಾದ ವೇದನೆ : ಭೀಮಸೇನಂ ಕೌರವನಿದಿರ್ಗೆವಂದು . . . ನೆಱನನುಂಟುಮಾಡಿ ಮೂದಲಿಸಿ ನುಡಿಯೆ ದುರ್ಯೋಧನನತಿ ಕ್ರೋಧಾನಲನಾಗಿ (ಗದಾಯು. ೭-೩೧ಪ). **ನೆರ$_1$:** ೧. ಎತ್ತ ತಿರುಗಲುಮಿಲ್ಲದೆಮ್ಮೋರ್ ಬೀರು ಗಲ್ಗಳ್, ಬಿಲ್ಲ ತಿರುವಿಂದ ಜೀವಮನುಣಲ್ ಬರ್ಪ ಕೋಲ್ಗಳ್, ನೆರ ನಿರಿಯೆ, ತೊಪ್ಪ ತೊಪ್ಪನೆ ಕುಪ್ಪೆಯೊಟ್ಟಿದರ್ (ಪಾರಸಿ. ೧೮-೪೦೨).

ನೆಱನೆತ್ತು = ಮರ್ಮೋದ್ಘಾಟನ ಮಾಡು : ನೆಱನೆತ್ತಿ ಬೈವ ಪುರುಡಿಪ ಜಱುಚುವ ಪಿರಿದಲಸೆ ಕೂಡ ಲಟಲಟಿಸುವ ಮೇಲ್ಪರಿಯದೆ ಸೋಂಕುವ ಕೂರದೊಡೆಱಗುವ ವಿಟನೆಗ್ಗನಲ್ತೆ (ಮದತಿ. ೧೦-೪೮) ; ನೊಂದು ನುಡಿದ ತಾಯ ನುಡಿಯೆ ತಮ್ಮ ಪರಾಭವಮನಱಿಯೆ ತೆಱೆಯೆ ನೆಱನೆತ್ತಿ ಮೂದಲಿಸಿದಂತಾಗಿ (ಸುಕುಮಾ. ೨-೩೬ ಪ) ; ಪಲತೆಱದಿ ನೆಱನೆತ್ತಿ ನುಡಿಯೆ ದಶಮುಖಂ ಮುಳಿದು ಪಲವಂ ಗಟಪಲೀಯದೀತನಂ . . . ಪೊಱಮಡಿಸಿ ಕಳೆಯಿಮೆನೆ (ಪಂರಾಮಾ. ೧೧-೧೪೦ಪ).

[ದೇ.॥ ತಮಿ. ನಿಱ ; ತುಳು. ನೆರವು ; ನಿರವು ; ತೆಲು. ನೆಱನು ; ಗೊಂಡಿ. ನರಮ್]

ನೆಱ$_2$ 'ನೆಱ್$_2$' ನೋ.

△**ನೆಱಂತೆ** 'ನೆಱತೆ' ನೋ.

ನೆಱಗೊಳ್ (ಕ್ರಿ). ೧. ಮರ್ಮವನ್ನು ಭೇದಿಸು : ಶಿತಾಸ್ತ್ರಂಗಳಿಂ ದ್ವಿಜನ್ಮನ ನೊಸಲಂ ನೆಱಗೊಳ್ವಿನಮೆಚ್ಚೊಡೆ (ಪಂಪಭಾ. ೧೨-೭೪). ೨. (ಮನಸ್ಸನ್ನು) ಸೂರೆಗೊಳ್ಳು ; ಅಂತರಂಗವನ್ನು ಹೊಗು ; ಆಕರ್ಷಿಸು : ಗೀತಾರಾವದಿಂಪಿನ್ನೆಱೆಯೆ ನೆಱಗೊಳಲ್ ರಕ್ತಕಂಠೀಜನಂ ಬಂದಿರೆ ವಂದಿವ್ರಾತಮೆತ್ತಂ ಬಗೆಗೊಳಲಿರೆ ಚೆಲ್ವಾದುದಾಸ್ಥಾನರಂಗಂ (ಅದಿಪು. ೨-೩). . ೧, ೨ : ಸ್ಮರಶರಮುಂ ತದೀಯ ಮೃದುಗೇಯ ಮುಮುರ್ಚಿದ ಪುಣ್ಣ ನೊಕ್ಕ ನೆತ್ತರನಱಸಲ್ಕೆವೇಡ ನೆಱಗೊಂಡುದನುಣ್ಮುವ ಕಣ್ಣ ನೀರಿನಂಕುರಿಸಿದ ಮೆಯ್ಯ ರೋಮದೊದವಿಂದುಪಲಕ್ಷಿಸೆ ಬರ್ಪುದಿಲ್ಲ ಬರ್ಬರೆಯ ಕಿರಾತೆಯೊಟ್ಟಜೆಗೆ ಕಿನ್ನರರೊಟ್ಟಜೆಯುಂ ತೆರಟ್ಕೆಯುಂ (ಶಾಂತಿಪು. ೨-೨೨). [ನೆಱ$_1$+ಕೊಳ್$_1$]

ನೆಱತೆ, ನೆರತೆ, ನೆಱಂತೆ (ನಾ). ೧. ಏಳಿಗೆ ; ಅಭಿವೃದ್ಧಿ : ಕೊಱತೆ ನೆಱತೆ ಕಂದು ಕಲೆ ಸಸಿಯೊಳು . . . ಅಲ್ಲದೆ ಅಱಸಲಾ ನೆಲದೆಱೆಯ ನೊಳಿಲ್ಲ (ಸೊಬಸೋ. ೧-೬೧). ೨. ಹೆಚ್ಚಳ ; ಆಧಿಕ್ಯ ; ಸಮೃದ್ಧಿ : ಕರುಣಸಾಗರ ಜಿನಮುನಿಗಳು ಶೋಧಿಸಿ ನೆಱತೆ ಮಾಡಿತಿದ್ದಿ ಕೊಳ್ಳಿ (ದ್ವಾದಶಾ. ೧೨-೩೧) ; ಬಗೆಗೆ ಸರಿಯಾದರೆಯು ತವಗೀ ಮಗನ ಹೆಸರಲಿ ಕೊಱತೆ

ನೆಱತೆಯದೇನು(ನಿಭಾಗ. ೯-೧೮-೨೨). ೩. ಪೂರ್ಣತೆ ; ಸಮಗ್ರತೆ : ಭಕ್ತರ್ಗೆ ನೆಱತೆಯಿಂ ಕರುಣಮಂ ಕಱೆದು ಮಿಱುಪ ಮಱುವಾವುಗಳ ತುಱುಗಲಿಂದೊಪ್ಪುತಿಹ ಕರಿಗೊರಲ ಪಂಪಾವಿರೂಪಾಕ್ಷ ಸಲಹೆಮ್ಮನು (ಚಿಬಪು. ೨೪-೧). ೪. ಪೂರೈಸುವುದು ; ಪೂರ್ತಿಯಾಗುವುದು ; ಪೂರೈಕೆ : ಕರ್ಣನ ವೀರಪಟ್ಟದಲಿ ನೆಱವಣಿಗೆಯುಂಟಾದಡೊಂದೇ ಕೊಱತೆಯಿಂದು ನಿಮ್ಮಿಂದ ಕಡೆಯಲಿ ನೆಱತೆಯಹುದಿನ್ನುತ್ತರೋತ್ತರಸಿದ್ಧಿ ಬಳಿಕೆಂದ (ಕುವ್ಯಾಕ. ೫-೧೬) ; ಇದಱ ಕೊಱತೆಯ ನೆಱತೆ ತನ್ನದು ವಿದಿತ ವೈದಿಕ ಲೌಕಿಕಕೆ ಜಗವದುಹದಂತಿರೆ ಚಿತ್ತಗೊಡಬೇಕೆಂದು ಕೈಮುಗಿದ (ತೊರರಾ. ೬-೫೩-೨೭). **ನೆರತೆ :** ೩. "ಪರಿಪೂರ್ಣತೆ; ಸಂಪೂರ್ಣತೆ; ಸಮಗ್ರತೆ; ಸಾಂಗತೆ; ಸಂಪೂರ್ಣ, ಸಮಗ್ರ,—ಮಾಡುವುದು; ಪೂರ್ಣ ವಿಕಸನ ; ನಿರ್ದುಷ್ಟತೆ ; ಅನ್ಯೂನತೆ;ನೆರತೆ; ತುಂಬಿಕೆ" (Perfection. ಇಂಕನಿ). △ **ನೆಱಂತೆ :** ೨. ಕೊಱಂತೆಯಿಲ್ಲದ ನೆಱಂತೆಯ ನಿವಾಸಂ ನಾನಾ ವಸ್ತುವಿನ ಕೋಶಂ . . . ಸಿಂಗರದ ಸಿರಿಯ ಪಿರಿಯರಮನೆಯೊಳ್ ತ್ರೈಲೋಕ್ಯಚೂಡಾಮಣಿ ರಾಜಂ ಸಕಲೈಶ್ವರ್ಯಸಂಪದ್ಗೌರವಾಟೋಪ ಪ್ರತಾಪದಿಂದೊಪ್ಪುತ್ತಿರ್ದನಂತರದೊಳ್ (ಹಮ್ಮೀರ. ೧-೬೬ ಪ).

[<ನೆಱ್$_1$+-ತೆ$_2$]

ನೆಱತೆವಡೆ (ಕ್ರಿ). ಪೂರ್ಣತ್ವವನ್ನು ಹೊಂದು; ಪರಿಪೂರ್ಣವಾಗು; ಸಂಪೂರ್ಣತೆಯನ್ನು ಪಡೆ : ಸೌಂದರಪುರಾಣದೀ ಕೃತಿಯನವನಿಯೊಳಂದಚಂದಮಂ ಪಡೆವಂತೆ ಸಂಪೂರ್ಣವಾಗಿ ರಚಿಸೆಂದು . . . ಬೆಸಸಲು ಪೊಂದೇಗುಲಕ್ಕನರ್ಘ್ಯವ ರತ್ನಕಳಶಮಂ ತಂದು ಸೇರಿಸುವಂತೆ ನೆಱತೆವಡೆ ದೊಪ್ಪೆ ಪೇಳ್ದಂ (ಸೌಂದಪು. ೧೯-೩೬) ; ಪುದಿದು ಕಂದಿನೊಳೊಂದಿ . . . ಮುನ್ನಾಡೆ ನಾಣ್ಣದೆ ನೆ[ಪಾತಾಂ. ಕೊ]ಱತೆವಡೆದಮರ್ದುಗಯ್ಯನಂ ಪೊಂದಾವರೆಯನಮಳಮಣಿಮುಕುರಮಂ ಪದಪಿನಿಂದೇಳಿಪ್ಪ ಟಾಳಿಪ್ಪ ಜಾಳಿಪೊಂದದಟಿನಿಂದೇಳಿಸಿತು ಸುದತಿಯಾ ಮಿಱುಮಿನುಪ ವದನ (ಉದ್ಭದೇ. ೨-೫೫) [ನೆಱತೆ+ಪಡೆ$_1$]

ನೆಱಪು, ನೆರಪು$_2$, ನೆರೆಪು$_2$, ನೆಱಹು, ನೆಱ್ಪು (ಕ್ರಿ). ೧. ಪೂರ್ತಿಗೊಳಿಸು ; ಪೂರ್ಣಮಾಡು ; ಪೂರೈಸು : ಆನರಸಿಯ ಬಯಕೆಯಂ ನೆಱಪುವೆಂ (ಪಡ್ಡಾರಾ. ೧೮೬-೧೨) ; ಆಗಳ್ ವೃಕೋದರಂ ತನ್ನ ತಳೋದರಿಯ ಮುಖಮಂ ನೋಡಿ ನಿನ್ನೆನ್ನ ಪ್ರತಿಜ್ಞೆಯಂ ನೆಱಪುವಂ ಬಾಯೆಂದು ಕೆಲದೊಳ್ ಕುಳ್ಳಿರಿಸಿ (ಪಂಪಭಾ. ೧೨-೧೫೨ ಪ) ; ನೆಱಪಲ್ ಪೂಣ್ಕೆಯನ ಮರರೊಳಿಱುದುದದೇಗಣಿದಮಮರಹಿತನಚ್ಯುತ ನೀನಿಱುದುದನುಚಿತವದ ರ್ಕಾನಱುಪುವೆನೊಂದಮರಹಿತಮನೆನ್ನಭಿಮತಮಂ (ಜಗವಿ. ೧೪-೨). ೨. ಕೊನೆಗೊಳಿಸು ; ಮುಗಿಸು : ಪಗೆ ಸಾಱುವುದುಂ ಕೊಲ್ಲೆಂ ಪಗೆ ಸಾಱುದ ನಿನ್ನನಾರ ಮಱೆಯಂ ಪೊಕ್ಕುಂ ಪಗೆಯಂ ನೆಱಪೆನೆ ನೆಱಪುವ ಬಗೆಯೊಳೆ ಪೊಕ್ಕಂ ಕಡಂಗಿ ಕರ್ಣನ ದೊಣೆಯಂ (ಪಂಪಭಾ. ೫-೧೦೦). ೩. ತುಂಬಿಸು; ಭರ್ತಿ ಮಾಡು : ಅಟವೀವ್ರಾತಮಂ ಚೂರ್ಣಿಸುತ್ತಂ ನೆಱಪುತ್ತಂ ನಿಮ್ಮಮಂ ನಿಮ್ಮಮ ತೆಮರನೊಡರ್ಚುತ್ತಮಾತ್ಮೀಯ ಸೈನ್ಯೋತ್ಕರದಿಂದಂ ರಾಜವರ್ಗಂ ಬೆರಸಿರೆ ಪೊಱಮಟ್ಟಂ ಮಹೀಭೃನ್ಮಹೇಂದ್ರಂ (ಕಾದಂಪೂ. ೬೧೨) ; ಕರ್ಣಂಗಳಿಗಮಂಗಲಧ್ವನಿಗಳಂ ನೆಱಪುವ ಬಲೆಯರ . . . ಆರಯ್ಯುತ್ತ ಹೊಕ್ಕನಾ ಸುಡುಗಾಡನವನೀಶನು (ಹಚಕಾ. ೧೧-೪೧) ; ಅಱಿಯೆಯಾ ಸ್ಯೂಸ್‌ದೇವನೆಂತೊಯ್ದಿಪೌಸಿನಾ ಪಾಪಮನ್ ಬಿಡದೆ, ಮೊಗೆಮೊಗೆದು ನೆಱಪಿದಪನಿನ್ನುಱಿದಿರ್ಪ ನಮ್ಮಿರ್ವರಾ ಬಾಟೆಯೊಳ್ ? (ಅಂತಿಗೊ. ೧-೩). ೪. ತಿಳಿಸು ; ಹೇಳು : ಬಂದು ತುಂಬುರನಿದಂ ನಂಬಿಯಣ್ಣಂಗಱುಪೆ ಎಂದ ಮಾತಂ ಸೌಂದರನ ಕರ್ಣದೊಳ್ ನೆಱಪೆ (ನಂಬರ. ೧೩-೬೨). ೫. ಈಡೇರಿಸು ; ನೆರವೇರಿಸು; ಸಲ್ಲಿಸು : ಸಂಗರದೊಳ್ ಜೋಳದ ಪಾಟಿಯಂ ನೆಱಪಿದಂ ಗಂಡಂ ಪೆಱಂ ಗಂಡನೇ (ಪಂಪಭಾ.೧೦-೪೩) ೬. ತೋರಿಸು ; ಪ್ರಕಟಪಡಿಸು : ಅಱುವೆಸದೊಳ್ನಂಟನೆಡಱೊಳೂರಱುವಿನೊಳಂ ತಱಿಸಂದು ಗಂಡು ತನ ಮನೆ ನೆಱಪದವಂ ಗಂಡನಲ್ಲನೆಂತುಂ ಷಂಡಂ (ಗದಾಯು. ೨-೨೪) ; ವಿದ್ಯುತ್ಪ್ರಭಂ ತಾನವರ್ ನೆಱೆ ಪುಟ್ಟರ್ದುದನುರ್ವಿಯೊಳ್ ನೆಱಪಲೆಂದಾ ಕಾರವಿದ್ಧಂಗಳಂ ಮಿಱುಗಲ್ ಚಿತ್ರಿಸಿಕೊಂಡು . . . ವನಭೂಜಸ್ಕಂಧದೊಳ್ ಕಟ್ಟಿದಂ (ಕುಸುಮಾ. ೧೨-೧೦೯). ೭. (ಸೇಡನ್ನು) ತೀರಿಸು : ನಿನ್ನನೆ ನಚ್ಚಿ ನಿನ್ನರಲ ಬಾಣಮನರ್ಚಿಪ ಪುಷ್ಪಬಾಣನಂ ತನ್ನ ವಿಲಾಸದಿಂ ಪರಿಭವಕ್ಕೆಡೆಮಾಡಿದನೆನ್ನ ನಲ್ಲನಾ ಬನ್ನಮನಾತನೊಳ್ನೆಱಪಲಾಱದನಾಥೆಯೆನೆಂದಟಲ್ದು ನೀನೆನ್ನ ಮನಕ್ಕೆ ಮಾಡುವುದೆ ಮಲ್ಲಿಗೆ ಕೆಮ್ಮನೆ ತೀವ್ರತಾಪಮಂ (ಮಲ್ಲಿಪು. ೩-೩೭). **ನೆರಪು$_2$:** ೫. ಅರಸಂಚೆಯ ನುಡಿ ಕಿವಿಯೊಳ್ಸುರಿದಂತೆವೊಲಾಗಲಮೃತವೃಷ್ಟಿಯ ಬಗೆಯೊಳ್ ಹರುಸಂ ಮಿಗೆ ನುಡಿದನಿದಂ ನೆರಪಿದೊಡೆನಗಲ್ತೆ ನೀಂ ಪ್ರಿಯಂಕರನೆನುತಂ (ದಮಸ್ವ. ೧-೧೩೧). **ನೆಱಹು :** ೩. ಕಿವಿಯೊಳಗೆ ನೆಱಹುವಂತಿರೆ ಶೈವಪಂಚಾಕ್ಷರಿಯನುಪದೇಶಿಸಿ ವಿನೂತನ ಹರುಷದಲಿ ಹರಿಸಿದನು ನಿರ್ಮಳಮತ್ತೆ ನಿಜಸುತೆಯ (ಪ್ರಭುಲೀ. ೯-೪). ೪. ಅಂದು ಬಳಿಕಾ ಹದನನಾಗಳ್ ತಂದು ನೆಱಹಲು ಕೆಲರು ಭರವಸದಿಂದ ಮೋಹಿನಿದೇವಿ ತನ್ನಯ ಮಗಳ ಮಂದಿರಕೆ ಬಂದು (ಪ್ರಭುಲೀ. ೫-೫೫). **ನೆಱ್ಪು :** ೫. ಸ್ವಸ್ತಿರಕ್ಕಸನೊಟಮ್ಬಂ ಪಲ್ಲವಾಭರಣಂ ಶ್ರೀಮತ್ ಪಾಳಿಗಱ್ಗೆ ಪೂಣ್ದು ನೆಱ್ಪಿ ಸತ್ತಂ ವೇಳೆವಡಿಯ ಅರಸಿಗನ ಮಯ್ದುನ (ಮೈಆರಿ. ೧೯೩೯, ೪೮-೨ ; 11ನೆಯ ಶತ). [ನೆಱ್$_1$+-ಪು$_1$./ತೆಲು. ನೆಱಪು, ನೆರಪು]

ನೆಱಲ್ (ಕ್ರಿ). ೧. (ಬಲಹೀನವಾಗಿ) ಜೋಲು ; ನೇಲು : "ನೆಱಲ್—ನಿಶ್ಚೇಷ್ಟಾವಲಂಬನೇ (ದೊಣ್ಣೆ ಮೊದಲಾದುವುಗಳ ಸ್ಥಿರವಾದ ಆಧಾರ)" (ಶಮಭಾ) ; "ನೆಱಲೆಂದುಂ, ಎಟಲೆಂದುಂ ನೇಲ್ವುದು" (ಕಶಸಾ. ೭೨-೬೩೯) ; ಎಱಂಕೆ ನೆಱಲ್ದಿರೆ ಕಂಠನಾಳಮಂ ನೀಡಿ ವಿಯತ್ತಲಕ್ಕೊಗೆದು ಕಾರಮುಗಿಲ್ವನಿಯಂ ಮನಂ ಕುಳಿರ್ಕೋಡುವಿನಂ ಕರ್ದುಂಕಿ ನಲಿವಾಱುದುವಾಱುದುವಂದು ಚಾತಕಂ (ಪಂರಾಮಾ. ೭-೧೪೭) ; ನಡೆಕೋಲ್ವರಮಂದಂಬುರದೆಡೆಯಂ ಪುಣ್ಗೂರ್ತು ಕಾಳವಟ್ಟದ ಕೊಪ್ಪಂ ಪಿಡಿದು ನೆಱಲ್ದರ್ಕಸುತಂ ಗಿಡಿಗಂ ಪೊಯೆ ನೊಂದ ಭುಜಗನಿರ್ಪಂತಿರ್ದಂ (ಕಾವ್ಯಾವ. ೩೦೮). ೨. ಒರಗು ; ನೆಮ್ಮು : ಚಿತ್ತದೊಳ್ ಕೀಲಿಸೆ ಕಾವನಂಬವಱ ಬಿಣ್ಪನೊಳೊಯ್ಯನೆ ಜೋಲ್ದವೋಲೆ ತಾಂಬೂಲಕರಂಕ ವಾಹಿನಿಯ ಮೇಲೆ ನೆಱಲ್ದಿರೆ ಬಾಲಲೀಲೆಯಿಂ (ಪಂಪಭಾ. ೪-೪೩) ; ಅಂಗಜಶರಾಹತಿ ಪೊರ್ದದ ದೇಶಮುಳ್ಳೊಡಂತಲ್ಲಿಯೆ ಮಾಟ್ಕೆ ಮಜ್ಜನನಮಂ ಬಿದಿಯೆಂದು ರಥಾಂಗಕಾಂತೆ ಹೃದ್ವಲ್ಲಭವಿಪ್ರಯುಕ್ತೆ ಬಗೆಗೆಟ್ಟು ನೆಱಲ್ದುದು ಪದ್ಮಪತ್ರದೊಳ್ (ಚಂದ್ರಪು.೮-೭) ; ನಳಿನದಳಂಗಳೊಳ್ ನೆಱಲ್ದು ಬಿರಯಿಸುವ ಜಕ್ಕವಕ್ಕಿಗಳಮದನಾನಲಜ್ವಾಲೆಗೆ ಜೌವನಮನೊಡರಿಸಿಯುಂ . . . ಸಾಯಂತನಸಮಯಸಮೀರಣಂ ತೀಡುತ್ತುಮಿರ್ಪಾಗಳ್ (ಕುಸುಮಾ. ೪-೨೯ ಪ) ; ಪುಳಿಂದಸೌಂದರಿಯರ ಗೀತನಾದಮುಮನಾಲಿಸಿ ಸೋಲ್ತು ನೆಱಲ್ದೊಱಲ್ದು ಸುಂದರಗಿರಿಕಂದರೋದರದೊಳಿರ್ದುದದೊಂದು ಮದಾಂಧ ಸಿಂಧುರಂ (ಸೂಕ್ತಿಸು. ೩-೫೨). ೩. ನಿಶ್ಚೇಷ್ಟಿತವಾಗು ; ಸ್ತಂಭಿತವಾಗು:ಇಡಿದಿರೆ ರೋಮಕೂಪದೊಳಗುರ್ಚಿದ[ಸಾಲ ಸರಲ್ಗಳುಂ ತೆಱಂಬಿಡಿದಿರೆ ಬೆಟ್ಟುವೋ]ರ್ಗುಡಿಸಿದಂತೆ ನೆಱಲ್ದಿರೆ . . . ಬಿಟ್ಟದೇನೆಸೆದನೋ ಶರಶಯ್ಯೆಯೊಳಂದು ಸಿಂಧುಜಂ (ಪಂಪಭಾ. ೧೩-೬೨) ; ನೆಲದೊಳ್ ಬಿಟ್ಟಡಗಿಂಡೆಯಾಗೆ ನೆಱನಂ ನಟ್ಟುರ್ಚಿದುಗ್ರಾಯುಧಾವಲಿಯಿಂದುರ್ವಿಸುವಿಂದ್ರಜಾಲಿಗನವೋಲ್ ಜೋಲ್ದುಂ ನೆಱಲ್ದುಂ ಸಮಾಕುಲಿತರ್ ಮೋಹಿಸಿ ಮುಚ್ಚೆವೋಗೆ ಪರಿತಂದುತ್ತಪ್ತಲೋಹದ್ರವಂ ಜಲಮೆಂದಲ್ಲಿಯ ನಾರಕರ್ ತಳಿವುದುಂ ತಾತ್ಕಾಲಿಕರ್ ನಾರಕರ್

(ಶಾಂತಿಪು. ೭-೮೯). ೪. ತದೇಕಚಿತ್ತದಿಂದಿರು; ತನ್ಮಯವಾಗಿರು : ಸಗ್ಗದ ಪೊಸದೇಸಿಯೋಳಿಗಳನೊರ್ಮೆಳೊಱಲ್ದು ನೆಱಲ್ದು ಪಾಡಿದಳ್ (ಪಂಪಭಾ. ೭-೯೦).

ನೆಱವಟ್ಟೆ (ನಾ). ಒಂದು ಬಗೆಯ ರೇಷ್ಮೆವಸ್ತ್ರ : ನಾಗವಟ್ಟೆ ಮಾಣಿಕವಟ್ಟೆ . . . ನೆಱವಟ್ಟೆ . . . ಎಳೆಹೂವಂ ಮೊದಲಾದ ನಾನಾ ವಸ್ತ್ರಂಗಳಂ ಕುಡುವ ಪದ್ಮನಿಧಿಯುಂ (ಶಾಸ್ತ್ರಟೀ. ೧೯-೭).

[ನೆಱ ? + ಪಟ್ಟೆ₃./ತೆಲು. ನೆಱಪಟ್ಟು]

ನೆಱವಣಿಗೆ, ನೆರವಣಿಗೆ₂, ನೆಱವಳಿಗೆ, ನೆಱೆವಣಿಗೆ, ನೆಱೆವಳಿಗೆ (ನಾ). ೧. ಪೂರ್ತಿಯಾಗಿರುವಿಕೆ ; ಸಂಪೂರ್ಣತೆ ; ಸಮಗ್ರತೆ : ಆಚಾರದ ಓದಿನ ನೆಱವಣಿಗೆ ಬ್ರಹ್ಮವರ್ಚಸಮೆಂಬುದು (ಹಲಾಯು. ೬೬-೨೪೩) ; ಸಮ್ಯಗ್ದರ್ಶನಜ್ಞಾನಚಾರಿತ್ರಂಗಳ ನೆಱವಣಿಗೆಯಂ ಪಡೆದ ನಂತರ ಚತುಷ್ಟಯಸ್ವರೂಪದಿಂ ಪರಿಣಮಿಸಲ್ಕೆ ಯೋಗ್ಯರಪ್ಪ ಜೀವಂಗಳು ಭವ್ಯರು (ಶಾಸ್ತ್ರಟೀ. ೧೨೨-೩) ; ಅವನು ದಿನದಿನದೊಳಣುವಣುಮಾತ್ರವನು ಬೆಳೆದು ಧರೆಯ ತುಂಬಲು ತನ್ನ ಸತ್ವದ ನೆಱವಣಿಗೆಗೈದಿಸದೆ ನಾನಾ ತೆಱದೊಳಾಯಸಗೊಳ್ಳನೇ (ಕುವ್ಯಾಅ. ೮-೨೨) ; ಪರಮಮಂಗಳಕೆ ಪಾರ್ವತಿ ಸೌಭಾಗ್ಯದ ನೆಱವಣಿಗೆಗೆ ಸಿರಿದೇವಿ ವರವಿದ್ಯಾಕಲಾಪ್ರೌಢಿಗೆ ಶಾರದೆ ಸರಿಮಿಗಿಲೆನಿಸಿ ರಾಜಿಪರು (ಕಂನವಿ. ೨೪-೪). ೨. ಶಕ್ತಿ ; ಬಲ ; ತ್ರಾಣ : "ನೆಱವಣಿಗೆಯದಾಳ್ತನ" (ಚತುನಿ. ೧೭೨) ; ಹಱಿಯ ದರ್ಜುನನಿಂದ ಭೀಮನ ನೆಱವಣಿಗೆ ನೋಯಿಸದು . . . ಇಱುವಡಾ ಮಾದ್ರೇಶನನು ನೆಱೆ ಮುಱುವಡೆಯು ನಿನಗಹುದು (ಕುವ್ಯಾಶ. ೧-೩೧) ; ತೆಱನನಱುದು ನುಡಿಗೆ ನುಡಿಯನೀವ ಬಿನ್ನಣ ಬಿಱುಬಿನವನನೊಲಿಸು ಪೋಜೆ ಹಱಿಯದುದನೆ ಹಸನುಗೆಯ್ವ ನೆಱವಣಿಗೆಯವಳೆ ಮೃಗಾಕ್ಷಿ ಕೇಳ ಮಧ್ಯಮೆ (ಜನವ. ೫-೧೦) ; ಅದ್ಭುತದ ರಣ ನೆಱವಣಿಗೆಯುಳ್ಳವರೊ ರಾವಣ ರಾಘವಾನುಜರು (ತೊರರಾ. ೬-೪೪-೩೧). ೩. ತುಂಬುವಿಕೆ ; ನಿರ್ಭರತೆ : ಸಱಿಯನಿಟ್ಟಳವಳಿಕೆ ರೇಖೆಯ ನಿಱಿಗೆ ಬಣ್ಣದ ಜಾತಿ ಭಾವದ ನೆಱವಣಿಗೆಯಿಂ ಬಲಿದ ನಿಪುಣತೆ ಕಣ್ಗೆ ಸೊಗಯಿಸಲು (ಕುಮುರಾ. ೩-೫೧). ೪. ಪೂರ್ಣವಾದ ಸಿದ್ಧತೆ : ಸಂಪೂರ್ಣವಾದ ತಯಾರಿ : ನೆಱ[ಪಾಠಾಂ. ಱೆ]ವಣಿಗೆಯೊಳು ನಿಂದು ತೊಟ್ಟನು ನರ ಮಹಾಶರವ (ಕುವ್ಯಾವಿ. ೮-೫೯) ; ಮಱೆದನಾ ಹರಿ ಚರಣಚಿಂತೆಯ ತೆಱನ ತತ್ಪೂಜಾವಿಧಾನದ ನೆಱವಣಿಗೆ ನೆಱೆ ಬೀಳು ಕೊಂಡುದು ನೃಪತಿಗಾಕ್ಷಣಕೆ (ನಿಭಾಗ. ೫-೫-೨೫). ೫. ಕೌಶಲ ; ಚಾತುರ್ಯ : ಮೆಱೆವವೇ ರಘುನಾಥನಿದಿರಿನಲಿಱುತಕಾಱನ ಚಾಪವಿದ್ಯೆಯ ನೆಱವಣಿಗೆ (ತೊರರಾ. ೬-೪೭-೨೬). ೬. ಪೂರ್ತಿಮಾಡುವುದು ; ಮುಕ್ತಾಯ : ಸ್ನಾನಾದಿ ನಿತ್ಯಕರ್ಮಾನುಷ್ಠಾನ ತಿರುವಾರಾಧನಂಗಳಂ ನೆಱವಣಿಗೆಗೊಳಿಸಿ (ಚಿಕವಂ. ೭೩-೪). ೭. ಹೆಚ್ಚಳ ; ಆಧಿಕ್ಯ : ಘಾಯದ ನೆಱ[ಪಾಠಾಂ. ಱು]ವಣಿಗೆಯಲಿ ನೆಗ್ಗಿ ಮುಗ್ಗಿದ ಕುದುರೆ ಕಾಲಾಳ ಅಱಿಯೆನಭಿವರ್ಣಿಸಲು (ಕುವ್ಯಾಕ. ೧೫-೨೫) ; ತೊಱೆದು ನಿಜಪಿತೃಮಾತೃಬಾಂಧವರಱಿಕೆಯನು ಸತಿಸುತರ ಹಿತವರ ನೆಱವಣಿಗೆಯಾಸೆಯನು ಮೇಣಿಹಪರದ ಸೌಖ್ಯವನು (ನಿಭಾಗ. ೩-೧೩-೧೧); ಪಡವಣ್ಣಜ . . . ಗೋವೆ ನೆಱವಣಿಗೆ ಗೆದಿದು ಗೋವೆನಲಂಬೆವೆನುತ್ತೆ (ಬೊಂಕಶಾ. ೧೯೨೯, ಬಾದಾಮಿ. ೧೪೯-೧೯ ; ?). **ನೆರವಣಿಗೆ₂** : ೧. ಕಾಲೂರ ಕೇಡುಗಳ್ ಬಿಗಿದೊಂದನಿನ್ನೊಂದು ಮೇಲಾಟದಿಂದಹುದು ಹೊಳಲ ನೆರವಣಿಗೆ (ಕಾಲೂರ. ೧೦೧-೨೦೪). ೪. ಬಾಳ್ಕೆಯಂ ಬಿಡದಳೆದು ಸರಿಯುಗುಂ ಮರೆತೂಗು ಪೋಳ್ವ ಪಗಲಾಣ್ಮಂಗೆ ಅಣಿಯೆ ನೆರವಣಿಗೆ (ಕಾಲೂರ. ೬೬-೧೧೫). ೮. ಉಪಾಯ ; ಸಂಚು ; ಹಂಚಿಕೆ : ಕರದ ಚಕ್ರಕೆ ಗಯನನೊಪ್ಪಿಸಿ ಹರಣಮಂ ಬಳಿಕುಳುಹಿ ಕೊಂಬೀ ನೆರವಣಿಗೆ ಲೇಸೆನುತ ನುಡಿದನು ಮುಳಿದು ಮುರವೈರಿ (ಕೋಗಯ. ೨೬-೧೬). **ನೆಱವಳಿಗೆ** : ೭. ಪ್ರವಿದಿತನಿದಂಗಾ ಪ್ರಮಾದದೋಷದಿ ಬಂದ ನೆವವನೇ ನೆಱವಳಿಗೆ ಮಾಡಿ ಮುಂಗೋಪದಿಂ ವಿವಿಧೋಪಸರ್ಗಮಂ ಮಾಡಿಸಿದ ದುಷ್ಕರ್ಮ ನಾನಲಾ (ಸಮ್ಯಕೌ. ೧೧-೭೯). **ನೆಱೆವಣಿಗೆ** : ೧. "ಆಭೋಗಃ, ಪರಿಪೂರ್ಣತಾ – ಈ ೨ ನೆಱೆ[ಪಾಠಾಂ. ಱ]ವಣಿಗೆ" (ಹಲಾಯು. ೧೨೪-೭೦) ; ಸಂಸ್ಕೃತಮಂ ಮಱೆಗೊಳ್ಳದೆ ನೆಱೆವಣಿಗೆ[ಪಾಠಾಂ. ನೆಱೆವಣಿ]ಯಿಂದಚ್ಚಗನ್ನಡಮಂ ಪೇಟ್ವರ್ಗೀಯಪಭ್ರಂಶಪದಮುಂ ಇದಱ ಸಮಾಸಮುಂ ತತ್ಸಮದ ಸಮಾಸಮುಂ ಕಯ್ವೊಕ್ಕ ನಿಧಾನಮಿದಱೊಡನೆ ಕನ್ನಡದ ದೇಶೀಯ ಪದಮುಂ ಸಮಾಸಿಸಲಪ್ಪುದು (ಶಮದ.೨೯೯ ವೃತ್ತಿ). ೨. ಬಳಿಕೀತನಾತನ ನೆಱೆವಣಿಗೆ ಲೇಸೆನುತ ತುಳುಕಿದನಂಬಿನಂಬುಧಿಯ (ಕುವ್ಯಾದ್ರೋ. ೧೦-೧೨). ೩. ಮಱೆಯಲಱಿವನೆ ನಿಮ್ಮ ನೇಹದ ನೆಱೆ[ಪಾಠಾಂ. ಱ]ವಣಿಗೆಯನು ಕೋಟ ಕಲ್ಪಾಂತರಕೆ (ನಿಭಾಗ. ೧೦-೪೪-೨೭) ; ಧೈರ್ಯದ ನೆಱೆವಣಿಗೆಯಿಂ . . . ಚಾರುದತ್ತನು ನಡೆದನೊಲವಿನಲಿ (ಸಾಳ್ವಭಾ. ೧೭-೩೯). ೮. ಕಪಟದ ನೆಱೆವಣಿಗೆಗಳನಱಿಯರಿಂದ್ರ ದ್ರೋಣ ಶಂಕರರು (ಕುವ್ಯಾದ್ರೋ. ೪೧-೧೨); **ನೆಱೆವಳಿಗೆ** : ೯. ಔಚಿತ್ಯ ; ಸರಿಯಾದ ರೀತಿ : ಪುತ್ತೇಱಿ ಮೊಱೆಯಿಟ್ಟವರ ಕಾಯದ ತುಳಿಲಾಳ್ಗದು ನೆಱೆವಳಿಗೆಯೆ ಲೋಕವಱಿಯೆ (ಶ್ರೀಪಾಲ. ೮-೬೮).

[ನೆಱೆ₂ + – ವಣಿಗೆ./ತೆಲು. ನೆಱವಣಿ, ನೆಱವಡಿ]

ನೆಱವಣಿಗೆಗುಂದು (ಕ್ರಿ). ಶಕ್ತಿಗುಂದು ; ಬಲಹೀನವಾಗು : ನೆಱವಣಿಗೆ[ಪಾಠಾಂ. ನೆಱೆವಣಿಗೆ]ಗುಂದಿತ್ತು ಬಲ ಕೈಮಱೆದರದಟರು ಬಿರುದ ಭಟರಿಗೆ ಬೆಱಗು ಬಲಿದುದು (ಕುವ್ಯಾಭೀ. ೭-೭).

[ನೆಱವಣಿಗೆ + ಕುಂದು₁]

ನೆಱವಳಿಗೆ 'ನೆಱವಣಿಗೆ' ನೋ.

ನೆಱವಿ (ನಾ). ೧. ಮುಕ್ತಾಯ ; ಮುಗಿಯುವಿಕೆ : ಮತ್ತಂ [ನೋಂಪಿಯ] ಪ್ರಾರಂಭದೊಳಂ ನೆಱವಿಯೊಳಂ ಮಂದರದಂತೆ ಧೈರ್ಯಂಬೆರಸು . . . ನೋಂಪುದೆಂದು ಪೇಟ್ವುದುಂ (ಧರ್ಮಾಮೃ. ೧-೧೩೫) ; ಭವಪರ್ಯಾಯಪರಿಭ್ರಮಣದಿಂ ಬಂದು ಪುಟ್ಟುತ್ತುಂ ಕಡೆಯೊಳುತೃಷ್ಟಾಯುಷ್ಯಮನೆಯ್ದೆ ನೆಱೆಯಿಸುವ ನೆಱವಿ ಭವಪರಿವರ್ತನಮೆಂಬುದು (ಸುಕುಮಾ. ೬-೬ ವ). ೨. ಸಮಗ್ರತೆ : ಅಪರ್ಯಾಪ್ತಿ ನಾಮಂ ತಂತಮ್ಮ ಪರ್ಯಾಪ್ತಿಗಳ ನೆಱವಿಯನಾಗಲೀಯದು (ಪಸಾರ. ೧೭).

[ನೆಱೆ₁ + – ವಿ]

ನೆಱವು₁, ನೆರವು₂ (ನಾ). ೧. ಸಂಪೂರ್ಣತೆ ; ಪೂರ್ಣತ್ವ ; ಸಮಗ್ರತೆ : ಮುಱುಕದ ಮುಂಗುಡಿ ಸೊಬಗಿನ ನೆಱವು . . . ತಲೆ ದೋಱುದುದು ಜಗಮೆಱಗುವಿನಮವಳ್ಗೆ ಮದನನಾಳ್ಕೆಯ ಹರೆಯಂ (ವರ್ಧಪು. ೯-೨೭) ; ಈ ನೆ[ಪಾಠಾಂ. ತೆ]ಱವಿನೊಳೆಯ್ದೆ ಕಂಡು ನಯಮಂಜಯಮಂಪ್ರಿಯವಂ ಪ್ರಧಾನರಾರಱಿಪುವರಿಂತಧೀಶಹಿತಮಂ ಮಿತಮಂ ಮತಮಂ ಮಹಾಮತೀ (ಜಗವಿ. ೧೫-೬೨) ; ಸೊಬಗಿನ ನೆಱವುಂ ರೂಪಿನ ಬೆಡಂಗುಮಾ ಸತಿಗಧಿಕಂ (ಎಕ. V, ಚನ್ನರಾ. ೨೪೩-೧೪ ; 1210). ೨. ಸನ್ನದ್ಧತೆ ; ಸಜ್ಜು ; ಸಿದ್ಧತೆ ; ಅಣಿ : ವೀರವಿದ್ಯಾಧರನಾಯಕರಂ ಬರಿಸಿ ನಾಳೆ ಕಾಳೆಗಂ ಚಮರಚಂಪಾಪುರಿಗೆ ಪೊಱಮಡುವ ನೆಱವಂ ನಿಮಿರ್ಚುವುದೆಂದು ನೇಮಿಸಿ (ಶಾಂತೀಶ್ವ. ೫-೨೦೪ ವ). ೩. ತಣಿವು ; ತೃಪ್ತಿ : ಅಱಿವುಂ ನೆಱವುಂ ತನ್ನೊಳ್ ನೆಱೆದಂದಱಿದದಱೊಳೆಸಪುದಲ್ಲದೆ ಬಱಿಯಂ ಗುಱಿ ನೆಱದೆಡೆಯೊಳ್ ಮಮ್ಮಲಮಱುಗಿದೊಡಾ ನೆಱವುಮಱುವುಮೇಂ ಕೂಡುಗುಮೇ (ಅದಿಪು. ೩-೬೭). **ನೆರವು₂** : 'ನೆರವೇರು' ಪರಾ.

[ನೆಱೆ$_1$ + -ವು. / ತಮಿ. ನಿಱವು, ನಿಱೈವು ; ಮಲ. ನಿಱವು ; ತೆಲು. ನೆಱವು, ನೆರವು]

ನೆಱವು$_2$ 'ನೆರ$_2$' ನೋ.

ನೆಱಹು 'ನೆಱಪು' ನೋ.

ನೆಱೆ$_1$ (ಕ್ರಿ). ನೇತು ಬಿಡು : ಶಕುಂತಪಾಳಿಕೆಯರ್ ಪೊಱಗೆ ವಾಸಯಷ್ಟಿಗಳೊಳ್ ನೆ[ಪಾಠಾಂ. ನಿಱಿ]ಱಿದ ಪೊನ್ನ ಪಂಜರದ ಪುಗಿಲ್ಗಳಿಂ ಜಾಳಿಸಿ ಪೊಕ್ಕು ದೀಹದ ಚಕೋರಿಕೆಗಳಟ್ಕಱಿಂ ಮುಕ್ಕುಟಿಪ ಮುಂಡಾಡುವ ಕರ್ದುಂಕುವೊದೆವ ಚೆಲ್ಲಕೆ ಮೈಸಾರ್ಚಿಯುಂ (ಚಂದ್ರಪು. ೮-೪೩ ವ). 'ನೆಱಲ್' ಪರಾ.

[ದೇ. ॥ ತಮಿ. ನಾಱ್ಱು ; ಮಲ. ನೇಱ್ಱು ; ಕೊಡ. ನೆರ್]

ನೆಱೆ$_2$ 'ನಿಱೆ$_2$' ನೋ.

ನೆಱೆಗೆ 'ನಿಱೆಗೆ' ನೋ.

ನೆಱೆತ್ತೊಱೆ (ನಾ). ಒಂದು ನದಿಯ ಹೆಸರು : ಪಶ್ಚಿಮಸ್ಯಾನ್ ದಿಶಿ ನೆಱೆತ್ತೊಱೆ (ಮೈಆರಿ. ೧೯೨೪, ೮೦-೯೮ ; 799). [? + ತೊಱೆ$_2$]

ನೆಱೆಲ್ಗಾಲ್ (ನಾ). ಒಂದು ಕಾಲುವೆಯ ಹೆಸರು (?) : ತಸ್ಯ ಸೀಮಾನ್ತರಂ ಪೂರ್ವ್ವಸ್ಯಾನ್ದಿಶಿ ತುಟ್ಟಿಲ್ಗಾಲೆ . . . ಅನ್ತೆ ಬನ್ದು ನೆಱೆಲ್ಗಾಲೆ ಅನ್ತೆ ಬನ್ದು ಕೊಣ್ಣಿದ್ದಗಾಲೆ . . . ತೊಱೆಯುಳ್ ಕೂಡಿತ್ತು (ಮೈಆರಿ. ೧೯೩೬, ೫೩-೨೫ ; ಸು. 550).

[ನೆಱೆಲ್$_0$ + ಕಾಲ್$_2$]

ನೆಱೆವಿಡಿ 'ನಿಱೆವಿಡಿ' ನೋ.

ನೆಱೆ$_1$, ನೆರೆ$_3$ (ಕ್ರಿ). ೧. ಪೂರ್ಣವಾಗು; ಪೂರ್ತಿಯಾಗು : "ನೆಱೆ-ಸಮಗ್ರತ್ವೇ" (ಶಮಥಾ) ; ವನಿತಾಹೇತುವೆ ಕೇತುವಾಯ್ತು ನಿಮಗಂ ಗಾಂಧರ್ವರಿಂದಿಂದು ನಿಮ್ಮ ನಿಷೇಕಂ ನೆಱೆದತ್ತು ಸತ್ತಿರೆನುತುಂ . . . ನೀಚಕೀಚಕನಿಕಾಯಧ್ವಂಸನಂ ಮಾಡಿದಂ (ಪಂಪಭಾ. ೮-೮೦) ; ನೂಱ ನಾಲ್ವತ್ತುದಿವಸದಿಂ ನೆಱೆವ ಕರ್ಮಕ್ಷಪಣಮೆಂಬ ನೋಂಪಿಯಂ ನೋಂತು (ಚಾವುಂಪು. ೨೦) ; ಮಱೆಯದೆ ಮನೆಯೊಳಗಿರ್ದುದೆಲ್ಲವ ಜಗದೆಱೆಯನ ಪೌತ್ರಗೆ ಸಾರ್ಚಿ ನೆಱೆಯದ ಕಡಮೆಗೆ ತಮ್ಮ ಕಣ್ಮನವ ಕೈಸೆಱೆಗೊಟ್ಟರಡವಿವೆಣ್ಣುಗಳು (ಮೋಹತ. ೧೯-೭೮). ೨. ವೃದ್ಧಿಯಾಗು ; ವಿಕಾಸಹೊಂದು : ಅಂತು ಭುವನಭವನಕ್ಕೆಲ್ಲಮಾಯಮುಮಳವುಮಱಿವುಮಣ್ಮುಂ ಪುಟ್ಟುವಂತೆ ಪುಟ್ಟ ನವಯೌವನಂ ನೆಱೆಯೆ ನೆಱೆಯೆ (ಪಂಪಭಾ. ೧-೬೭ ವ) ; ದಿವ್ಯವಸ್ತ್ರಭೂಷಣಮಣಿಮಾಳೆಗಳ್ನೆಱೆದು ತನ್ನೊಡವುಟ್ಟರೆ ಬೇಗವೇಗಮಾಕ್ಷಣದೊಳೆ ಜವ್ವನಂ ನೆಱೆಯೆ ನೆಟ್ಟನೆ ತೊಟ್ಟನೆ ಬಂದು ಪುಟ್ಟದಂ (ಸುಕುಮಾ. ೯-೧೮) ; ಆ ಕುಮಾರರಂತೆ ಬಳೆದಶೇಷ ಕಳಾಕುಶಲತೆಯಿಂ ನವಯೌವನದೊಳಂ ನೆಱೆದು (ನೇಮಿಪು. ೩-೩೦ ವ). ಚಂದ್ರಂ ನೆಟ್ಟನೆ ನೆಱೆದು ಬಿಂಬದಿಂ ಪೂರ್ಣನಾಗೆ ರಾಕಾಖ್ಯೆ ಪೌರ್ಣಾಮಾಸಿಯದಕ್ಕುಂ (ವಸ್ತುಕೋ. ೧೬-೯). ೩. ಚೆನ್ನಾಗಿ ಬೆಳೆ; ಪುಷ್ಟವಾಗು ; ಬಲಿತುಕೊಳ್ಳು : ಆ ಪಾವು ಪಾಲಂ ಕುಡಿದು ಕೊರ್ಬಿ ನೆಱೆದಾಡುತ್ತುಮಿರ್ದುದು (ಪಂಚತಂ. ೧೨೮-೧೯) ; ನೃಪನಾ ವಚನಮುಮಂ ನಂಬಿ ನೆಱೆದ ಪೊಲೆಯರ ಪೋಂತಂ ತರಿಸಿ . . . ಇರಿಸಿದೊಡೆ (ಯಶೋಚ. ೨-೫೯); ಉರಿವ ಕಾಳ್ಗಿಚ್ಚಿನೊಳು ಸಿಲ್ಕಿದ ಗಱಿ ನೆಱೆಯದಂಚೆಯ ವೊಲಾದರು ಮಱಿಗೆಡಸಿದೆಳೆವುಲ್ಲೆಯಂತಕಟಕಟ ದೆಸೆಗೆಟ್ಟು (ಸಾನಂಚ. ೬-೪೨). ೪. ಪ್ರಾಯಕ್ಕೆ ಬರು ; ಋತುಮತಿಯಾಗು : ವರ್ಯಾ, ಪತಿಂವರಾ-ಈ ೨ ಕುಡಲ್ ನೆಱೆದ ಕೂಸು (ಹಲಾಯು. ೬೯-೩೨೯) ; ಪರಮಬ್ರಹ್ಮಹೃದಯಸರಸಿರುಹೋದರದೊಳಗೊಗೆದಾತನ ಸಿರಿಮೊಗದೊಳು ಗರುವಿಕೆದಾಳಿ ನೆಱೆದು ಕೈವಲ್ಯಸತಿಗೆ ಸಹಚರಿಯಾಗಿ ಭರದಿಂ ಭವ್ಯಭುಜಂಗರೆನವಳೊಳ್ ನೆಱವುವ ಕೋವಿದೆ . . . ಮನ್ಮತಿಗೀವುದು ಮಾಂಗಲ್ಯವನು (ಜಯಕಾ. ೧-೭). ೫. ಪ್ರಾಪ್ತವಯಸ್ಕನಾಗು ; ವಯಸ್ಸಿಗೆ ಬರು : ನಿನ್ನುದಯಸಮಯದೊಳೆಮ್ಮ ಗುರುರೂಪ ವಿಶ್ವಪತಿಯತಿವೇಷದಿಂ ಬಂದು . . . ನೀಂ ನೆಱೆಯೆ ತನ್ನೆಡೆಗೆ ಬರ್ಪುದೆಂದಂದು ನಿರವಿಸಿದಂ (ಪದ್ಮರಾ. ೩-೧೦) ; ಮಕ್ಕಳ ಮಾಣಿಕ ಪ್ರದ್ಯುಮ್ನ [ನೆಱೆ]ದರೆ ಕಕ್ಕಸವಹುದೆಂದೆನುತ ರಕ್ಕಸರುಗಳು ಮಾಯದೊಳುಯ್ದರು (ಮೋಹತ. ೪-೯೧) ; ಕಿಱಿಯಮ್ಮ ದೀಕ್ಷೆಗೆಯ್ದುವೆನೆನೆ ಭರತೇಶನಱುಗೋಲನಾತ್ಮಜರಿನ್ನು ನೆಱೆವನ್ನ ದೀಕ್ಷೆಗೆಳಸಲಾಗದೆಂದು ಕಾಲ್ಗೆಱಗಿ ನಿಲ್ಲಿಸಿದನಾ ಚಕ್ರಿ (ಭರಚ. ೫೩-೨). ೬. ಅಧಿಕವಾಗು ; ಹೇರಳವಾಗು ; ಸಮೃದ್ಧವಾಗು ; ಹೆಚ್ಚಾಗು : ನೆಱೆದಾದ ವ್ರತಶೀಲನೋನ್ಪಿಗುಣದಿಂ ಸ್ವಾಧ್ಯಾಯಸಮ್ಪತ್ತಿನಿಮ್ ಕಱೆಇಲ್ಲಲ್ತಪ ಧರ್ಮ್ಮದಾ ಸಸಿಮತಿಶ್ರೀಗನ್ತಿಯರ್ . . . ಸ್ವರ್ಗ್ಗಾಲಯಕ್ಕೇಱಿದಾರ್ (ಎಕ. II, ೭೬-೧ ; 700) ; ನೆಱೆದಾತನ ಪುಣ್ಯಮೆ ಕಣ್ದೆಱೆದಂತಿರೆ ತೆಱೆದುವಾ ವಿಮಾನದ ಪಡಿಗಳ್ (ಚಂದ್ರಪು. ೪-೬೨). ನೆಱೆಯೆ = ಪೆರ್ಚುಗೆಯಾಗೆ (ಶಮದ. ೩ ಟೀಕು). ೭. ತುಂಬಿಕೊಳ್ಳು ; ಭರ್ತಿಯಾಗು ; ತೀವು : ಉಜ್ವಲಪಂಚರತ್ನಭಾಸ್ಪದಸದನಂಗಳಿಂ ನೆಱೆದುದಂ ಸಮೆದಂ ಪುರಮಂ ಪುರಂದರಂ (ಆದಿಪು. ೬-೮೯) ; ತೀವಿದ ಪೊಕ್ಕರಣೆಗಳ ನೆಱೆದ ಕೆಱೆಗಳ ಸರೋವರಂಗಳ ಬೆಡಂಗಗುಂದಲೆಪುರದೊಳ್ (ಸುಕುಮಾ. ೯-೫೧). ೮. (ಕಾಲ) ತೀರು ; ಮುಗಿ ; ಪೂರೈಸು : ನೆಱೆದುವು ಪನ್ನೆರಟ್ಟರಿಸಮುಗ್ರವಿರೋಧಿಜನಕ್ಕೆ ಮಿಟ್ಟುಗಳ್ ನೆಱೆವವೊಲ್ (ಪಂಪಭಾ. ೮-೪೯) ; ನವಮಾಸಂ ನೆಱೆವುದುಮೆನ್ನ ಪೆಂಡತಿ ಗಂಡುಮಗನಂ ಪೆಱಲೊಡಂ (ಪಂಚತಂ.೧೮೭-೫); ನೆಱೆವುದಾರಾಯುಷ್ಯವಾರಿಂದಱಿತುಕೋ ಚಿತ್ಪ್ರಭೆಯ ಮಾಯೆಯ ಮಱೆಯ ಜವನಿಕೆಯೇಕೆ ನೀನಿದಕಳುಕಬೇಡ (ತೊರವಾ. ೨-೫-೧೬). ೯. ಸಿದ್ಧವಾಗು ; ತಯಾರಾಗು ; ಸನ್ನದ್ಧವಾಗು : ಕೊಂಕಿ ಪಱಿಯುತ್ತಿರವಿಂದೆ ಕೊಲಲ್ಕೆ ಮೊಕ್ಕಳಂ ನೆಱೆದುದಱಿಂದೆ ಸಪ್ತಮುಖದಿಂದೆ . . . ಪೋಲ್ತುದು ಮಹಾನದಿ ರುಂದ್ರಫಣೀಂದ್ರರಾಜನಂ (ಕಾವ್ಯಸಾ. ೭೪೭ ಶೂದ್ರಕ) ; ಅಟಿವಗೆಯಂ ಪಱಿಪಡಿಸಲ್ಕೆ ಹಲಾಯುಧ ನೆಱೆದಿರ್ದಪೆನೆನಗೆ ತೋಱಿ ಬಿಡು ಕೌರವನಂ (ಗದಾಯು. ೭-೬೧); ಮರೆ ಹುಲಿ . . . ಎಯ್ಯಮೃಗಂ ಕಡುಕೊರ್ಬಿ ಕಾನನಾಂತರದ ಕುಟೀರವಂ ಬೆಳೆದ ಕೆಯ್ಗಳನಂತಿರಲೀಯವಂತವಂ ನಿರಸನವೈದಿಸಲ್ ನೆಱೆವ ಬೇಂಟೆಗೆ ಕಾಲಮಿದು (ನಳಚಂ. ೬೫). ೧೦. ಈಡೇರು ; ನೇರವೇರು ; ಸಿದ್ಧಿಸು : ಚಂದ್ರನಂ ನುಂಗೆಂದು ತೋಱಿದೊಡಾಕೆಯುಂ ಕಂಡು ರಾಗಿಸಿಯಾ ನೀರಂ ಕುಡಿದು ಬಯಕೆ ನೆಱೆದತ್ತು (ಪಡ್ಡಾರಾ. ೧೮೬-೨೧) ; ನೆಱೆದತ್ತೆತ್ತಾನುಮಿಾ ದಂಪತಿಯ ಬಯಕೆ ಸಂಪೂರ್ಣಮಾಯ್ತುತ್ಸವಂ (ಆದಿಪು. ೪-೪೮). ೧೧. ಸಾಕಾಗು ; ಸಾಲು : ಇದೆನ್ನ ಭುಜಾಸಿಗೆ ತೇದು ಪೂಸಲುಂ ನೆಱೆಯದು (ಕಾವ್ಯಸಾ. ೪೧೧ ಶೂದ್ರಕ) ; ಪರಮನ ನಿರತಿಶಯಾಂಗಸ್ವರೂಪಮಂ ನೆಱೆಯ ನೋಡಲಾವೆಡೆಗಂ ತನ್ನೆರಡುಂ ಕಣ್ಗಳ್ ನೆಱೆಯದೆ ಸುರೇಂದ್ರನುಂ ಗಡ ಸಹಸ್ರಲೋಚನನಾದಂ (ಆದಿಪು.೭-೧೦೭); ಸಿವಸ್ಥಾನಕ್ಕೆ ಮುನ್ನ ಕೊಟ್ಟ ಭೂಮಿ ನೆಱೆಯದೆನ್ದು ಮತ್ತ ಕಿಱಿದು ಭೂಮಿಯ . . . ಕೊಟ್ಟರ್ (ಎಕ. IV, ಗುಂಡ್ಲುಪೇ. ೮೩-೮ ; ಸು. 995 ?); ಎನ್ನೊರ್ವನೆರ್ದೆ ಮರ್ದಿಂಗೆ ನೆಱೆಗುಂ ನೆಱೆಯದಿರ್ಕುಮದ ನಱಿಯಲ್ಬಾರದು (ಪಂಚತಂ.೨೮೧-೪). ೧೨. ತೃಪ್ತಿಪಡು ; ಸಂತೃಪ್ತಿಹೊಂದು : ಕನ್ನೆ ನಿಜಜೀವಿತಮುಮಂ ತನ್ನುಮನಿರದಿತ್ತು ತೊಟ್ಟು ತನಮಂ ತಾಂ ಕೊಂಡುಂ ನೆಱೆಯಳ್ (ಕಾದಂಉ. ೧೧೪) ; ಭಜಿಸಿ ನೆಱೆಯರು ನಾರದಾದ್ಯರು ನಿಜವನೀತನನೀತ ನಿನಗಾತ್ಮಜನೆ ಹೋಗೆಲೆ

ಮರುಳೆ ನೀನಾರೀತನಾರೆಂದ (ತೊರವಿ. ೧-೮-೩೬). ೧೩. ತೃಪ್ತಿ ಕೊಡು ; ಸಂತೃಪ್ತಿಯನ್ನು ನೀಡು : ಅವಾಸ ನೆಱೆಯದು ಮಕ್ಕಳಿಲ್ಲದೆ ಭೂಪ ದಶರಥಗೆ (ಕೌಶಿಕಾ. ೧-೨೮). ೧೪. ಸಾಧ್ಯವಾಗು ; ಶಕ್ತವಾಗು ; ಸಮರ್ಥವಾಗು : ಕಿಱುದುಮರ್ಥಮನಱುಪಲ್ ನೆಱೆವಾತನಾತನಿಂದಂ ನಿಪುಣಂ (ಕವಿಗಾ. ೧-೧೫), ಮೃಗಪ್ರಜದೊಡ್ಡೇಂ ಮೃಗರಾಜನಂ ನೆಱೆವುದೇ ತಾಂಗಳ್ಳೆ (ಆದಿಪು. ೧೩-೫೬); ಇಱುವ ಬೆಡಂಗನೊಳಿಱುಯಲ್ ನೆಱೆಯೈ ನಿನಗಾನೆ ಸಾಲ್ವೆಂ (ಗದಾಯು. ೭-೩) ; ವಿಶ್ವಾವನಿಯಂ ಕೈಕೊಂಡು ತಾಳ್ದಲ್ ನೆಱೆವ ತನಯನಂ ಗರ್ಭದೊಳ್ತಾಳ್ದಿದ್ದೆ (ಮಲ್ಲಿಪು. ೪-೯೨). ೧೫. ಯೋಗ್ಯವಾಗು ; ಉಚಿತವಾಗು ; ಅರ್ಹವಾಗು: ಸೋಲ್ತು ಕಪ್ಪಮನಿತ್ತೊಡೆ ಕೈಕೊಳ್ವುದುಂ, ಕಾವಲರ್ಗೆ ನೆಱೆಗುಂ (ರಾಮಾಶ್ವ. ೧೫-೧೭). ೧೬. ಕಾಣಿಸಿಕೊಳ್ಳು ; ಕಾಣು ; ತೋರು : ಅಂದೊಮ್ಮೆ ವರಹಾವತಾರದಿ ನೆಱೆದ ಗೋವಿಂದ ತನ್ನಯ ಪೀತಾಂಬರವ ಕುಂದದೆ ಭೂಮಿಗೆ ಪೊದಿಸಿದೊಲಿರುವುದು ಗಂಧಶಾಲಿಯ ವನ ಕಳಿತು (ಮೋಹತ. ೨-೫೨). ನೆರೆ$_3$: ೪. ಕಾಡಸಬ್ಬಸಿಗೆ ಸಮೂಲ ಹಿರಿಮದ್ದಿನ ಬೇರು ಸಹಾ ಬರಲಲ್ಲಿ ತಿರುಹಿ ರಸವ ಹಿಂಡಿಕೊಂಡು . . . ದಿನ ಮೂರಿ ನೆರೆಯದ ಕನ್ನೆಯರು ಸೇವಿಸೆ ಯತುವಹರು (ಸಳವೈ. ೧೨೫) ; ಮೈಸೂರುಶೀಮೆಯ ಜೈನರು ತಮ್ಮ ಹೆಣ್ಣುಮಕ್ಕಳು ನೆರೆದ ಬಳಿಕ ಅವರ ಲಗ್ನ ಮಾಡುವರು (ಕಭಾಗೆ. ೯೯). ೫. ನೆರೆದ ಮಗ = ಹರೇಕ ಬಂದ ಮಗ (ಜಾನಕೋ. ೧೨). ೬. ದಣಿಯ ಅಪ್ಪಣೆಗೆ ತನ್ನ ಅಭಿಲಾಷೆಯೂ ನೆರೆಯಿತು (ಕಾವ್ಯಸ. ೯೬). ೧೭. ಪೂರ್ಣ ಮಾಡು ; ಪೂರ್ತಿಯಾಗಿಸು : ಒಪ್ಪಿನಿಂ ಕುಣಿವ ಪರಿಜಂ ನೆರೆದು ಜೋಲ್ನವಿರ ಕಪ್ಪು ಬೆಳ್ಪುಗಳ ಪೊಂಬೊಗರ ನೇವರಿಸಿ ಬಪ್ಪನೇಂ ಬೋಳನೆನೆ ಹೆಬ್ಬುಲಿಯವು ಬರುತಿಹುದು (ಕಾಲೂರ. ೯೪-೧೮೬) ; ಮುಂದಪ್ಪುದಂ ನೆರೆಯಲಣೆಯೆನಲ್ ನಿಂದಂ (ಕಾಲೂರ. ೧೩೭-೨೯೫).

ನೆರೆದ ಹಣ = (ಅಗಸರ ಜಾತಿಯಲ್ಲಿ) ಹುಡುಗಿ ಮೈನೆರೆದಾಗ ನಡೆಯುವ ಶಾಸ್ತ್ರ ಮುಂತಾದುವುಗಳಿಗೆ ಆಕೆಯ ಗಂಡ ಅಥವಾ ಮದುವೆಯಾಗಲಿರುವ ವ್ಯಕ್ತಿ ಕೊಡುವ ಹಣ : (ಎಸಮೈ. IV, ೧೦). **ನೆಱೆದ ಪೆಣ್, ನೆರೆದ ಪೆಣ್, ನೆರೆದ ಹೆಣ್ಣು** = ಪ್ರಾಯಕ್ಕೆ ಬಂದ ಹೆಣ್ಣು ; ಋತುಮತಿಯಾದವಳು : "ತುಱುಮಿಂದಿಯೆನೆ ನೆಱೆದ ಪೆಣ್ಣಕ್ಕು" (ಶಬ್ದಮಂ. ೭೪) ; ಪೆರನಾರೊ ಬಂದಿರಲ್ ಕಣ್ಮುರಿದು ಗೆಳತಿಯಂ ನೆರೆದ ಪೆಣ್—ನಿನಗೆಂದು ಚುಟ್ಟ ನುಡಿಯುವಳು (ಕಾಲೂರ. ೬೧-೧೦೨) ; ನೆರೆದ ಹೆಣ್ಣು = ಹರೇಕ ಬಂದ ಹೆಣ್ಣು (ಜಾನಕೋ. ೧೨). [ದೇ.॥ ತಮಿ. ನಿಱ್ಕೈ ; ಮಲ. ನಿಱಯು ; ತುಳು. ನೆರಿಯು, ನೆರೆವು ; ಕೊಡ. ನೆರೆ, ನೆರ ; ತೆಲು. ನೆಱಯು, ನೆರಯು ; ಕೋಲಾ. ನಿಂದ್ ; ನಾಯ್ಕಿ. ನಿಂದ್, ನಿಪ್ಪ ; ಗೊಂಡಿ. ನಿಂದಾನಾ ; ಕುಇ. ನೆಂಜ, ನೆಂಬ, ನೆಪ್ಪ, ನೆಸ್ಸ, ನೆಹ್ಪ, ಕುವಿ. ನೆಂಜಲಿ ; ಕುರುಖ್. ನೀಂದ್‌ನಾ ; ಮಲ್ತೊ. ನಿಂದೆ]

ನೆಱೆ$_2$, ನೆರೆ$_6$, ನೆಱೆ$_2$ (ನಾ). ೧. ಪರಿಪೂರ್ಣತೆ ; ಸಮಗ್ರತೆ : "ನೆಱೆ ಪೂರ್ಣಾರ್ಥಾಹ್ವಯಂ" (ಕರ್ಣಾನಿ. ೪೦) ; "ಸಮಗ್ರತೆ ಬಹಳದೊಳ್ ನೆಱೆ" (ಶಬ್ದಮಂ. ೧೧೭). ೨. ಅತಿಶಯ ; ಹೆಚ್ಚಳ ; ಆಧಿಕ್ಯ : "ಉಬ್ಬರಂ, ಉಬ್ಬಟೆ . . . ನೆಱೆ, ನೂಳದು, ವಿಾಂಟು, ಒಟ್ಟಱೆ, ಪೆರ್ಚುಗೆ—ಈ ೧೯ ಅತಿಶಯಂ" (ಕಶಸಾ. ೫೭-೨೩೪). ೩. ಸಮರ್ಥನಾದವನು : ಪೆಱ[ನಾ]ವಂ ಧರಾಚಕ್ರಕ್ಕೆಱೆಯಂ ಕೆಳೆಯಪ್ಪವಂ ನೆಱೆ ಯಾರೆಣೆಯೆಂಬನ್ನಂ ಕುಱುತಱಿಗೆ ಬನ್ನಮಂ (ಕವಿಗಾ. ೧೨-೭). ೪. ತುಂಬಿ ಹರಿಯುವ ನೀರು ; ತುಂಬುಪ್ರವಾಹ ; ಮಹಾಪೂರ : ನೆಱೆಯ ಕಾಲದ ವೃಷ್ಟಿ ಸುರಿಯಲು . . . ಹೊಕ್ಕನು ದೈತ್ಯನಂದನೆಯ ನಿರುತಮಂದಿರದೊಳಗೆ (ಸಂಭಸ. ಪರಿ. ೨-೬೦) ; ಬಗೆಗಱ್ಚರಿಯೆನಿಸಿ ನೆಱೆ ಬಂದು ಮಿಗೆ ಭೋರ್ಗರೆಯುತಿರ್ದುದು ಮುಂದೆ ಯಮುನಾನದಿಯು ಗುರುವಾಗಿ (ಸಾಳ್ವಭಾ. ೨೧-೧೬) ; ಇದು ನಾದಿದು ಕಾದಿದು ನೆಱೆಯಿದು ಕೆಱೆಯಿದು ನೆಲನಿದು ಪೊಲನಿದು . . . ಎಂದು ಬಗೆಯಲ್ಪಾರದಾಯ್ತು (ರಾಮಾಶ್ವ. ೨೨-೨೬). ೫. ಸೇವೆ (?) : ಇಪ್ಪತ್ತಾರು ಮತ್ತಲ್ ಗಟ್ಟಿ ಇನ್ನೂರ ನಯೊಳ್ಕೊಣ್ಡು ದೇವರ್ಗ್ಗೆ ನೆಱೆಗಂ ಬಿಟ್ಟ ಕೆಱೆಗಾಲನೂ (ಎಕ. VII, ತಿಕಾವಿ. ೧೯೪-೧೫ ; 935). (ಗು). ೬. ಪೂರ್ಣವಾದ ; ಸಮಗ್ರವಾದ : 'ನೆಱೆಗೆಲ್ಲ' ಪರಾ. ೭. ಅಧಿಕವಾದ : 'ನೆಱೆಜಾಣ' ಪರಾ. **ನೆರೆ$_6$** : ೨. "ನೆರೆಯೆನಲ್ ಪೆರ್ಚಿನಕ್ಕುಂ" (ಕಶರ. ೫೭). ೪. ಕರೆ ಬಂದಿತಣ್ಣ, ತೆರೆ ಬಂದಿತಣ್ಣ ನೆರೆ ಬಂದಿತಣ್ಣ ಬಳಿಗೆ (ಹೃದಸ.೧-೫) ; ಮೊರೆವ ಮಳೆ ಪಗಲಿರುಳ್ ಕಲ್ಮಣ್ಣು ಕೆಸರಾಗೆ ನೆರೆಯಿಂದ ಮುಗಿಯದಿದೆ ಕಡಲಿತ್ತ ಸಾಲಂ (ಕಾಲೂರ. ೪೫-೬೨); ನದಿಗೆ ನೆರೆ ಬಂದಾಗ ಪೋರಾಸಾನುಪ್ರಾಂತ ಇಡೀ ನೀರಿನಲ್ಲಿ ಮುಳುಗಿರುತ್ತಿತ್ತು (ದಕ್ಷಿಸ. ೪೧). ೮. (ಅಲಂ) ಉದ್ವೇಗ; ಉಬ್ಬರ: ಮತ್ತೆ ನನ್ನ ಮನಸ್ಸಿಗೆ ನೆರೆ ಬಂತು, ನಾನು ವಿಶೋಚನ ಗುಡಿಗೆ ಹೋಗಿ ತಾಸುಗಟ್ಟಲೆ ಅಳುತ್ತ ಕೂಡತೊಡಗಿದೆ (ಸ್ಮೃತಿಚಿ. ೨೦೭). **ನೆಱ$_2$** : ೯. ಮುಕ್ತಾಯ ; ಕೊನೆ : ಪುಟ್ಟುತ್ತುಂ ಸಾವುತ್ತುಮೆರಡುಂ ಕಾಲಮುಮನೀ ಮಾರ್ಗದಿಂ ಸಮಯೋತ್ತರವೃದ್ಧಿಯಿಂ ಪರಿಸಮಾಪ್ತಮಾಗೆ ನೆಱಮೆಯ್ದಿಸುವುದು ಕಾಲಪರಿವರ್ತನಮೆಂಬುದು (ಸುಕುಮಾ. ೬-೬ ಪ). ೧೦. ಶಕ್ತಿ ; ಸಾಮರ್ಥ್ಯ : ಇನ್ನೆಮಗೆ ನಿತ್ತರಿಸಲ್ ನೆಱವಿಲ್ಲ [ಪಾಠಾಂ. ನಿಲ್ಲ]. . . ಕೂಟ ನೀರ ದೆಸೆಯಿಲ್ಲದೊಡಲ್ಗಳನೆಂತು ತಾಳ್ದುವಂ (ಆದಿಪು. ೯-೮೯).

ನೆಱೆಯಾಗು = ಹೆಚ್ಚಾಗು ; ಅಧಿಕವಾಗು : ಒಪ್ಪುವ ಭೃಂಗಸಂಗವಿಲ್ಲದ ನವಪದ್ಮನೀಮುಕುಳದಿಕ್ಕೆಗಮೆನೆ ನೆಱೆಯಾಗಿ ಶೋಭಿವೆತ್ತುದೊ ಪರಿಶೋಭಿವೆತ್ತಿರೆ ವಿಲಾಸದ ವಿಭ್ರಮದೇಟ್ಕ್ಗೆ ಕನ್ನೆಯಾ (ಸುಕುಮಾ. ೫-೬೦); ಅಂತರಿತಮಹರಾದಿಲೋಕದಲಂತರವು ನೆಱೆಯಾಯ್ತು ಯೋಜನವಂತು ನೂಱುಱುಮೇಲದಿಪ್ಪತ್ತೆರಡುಕೋಟಿಗಳು (ಸಂಭಸ. ೧೧-೧೬).

[<ನೆಱೆ$_1$./ತಮಿ. ನಿಱ್ಕೈ ; ಮಲ. ನಿಱ ; ತೆಲು. ನೆಱ, ನೆರ]

ನೆಱೆ$_3$, ನೆರೆ$_7$, ನೆಱೆಯೆ (ಅ). ೧. ಪೂರ್ಣವಾಗಿ ; ಪೂರ್ತಿಯಾಗಿ : ಪಱ್ಪು ಪರಿಕಲಿಸಿ ಬೆನ್ನಂ ಮುಚ್ಚರೆ ಮುಡಿ ಕಳ್ಳಬೆಳ್ಳವಟ್ಟಲ್ ಬಾಯೊಳ್ ಬೆಚ್ಚಂತಿರೆ ಸತಿ ಶಶಿಯಂ ಕಚ್ಚಿ ನೆಲಕ್ಕಿಟುದ ರಾಹುವಂ ನೆಱೆ ಪೋಲ್ತಳ್ (ಕಾವ್ಯಸಾ. ೯೬೬ ಶೂದ್ರಕ) ; ಭದ್ರಬಾಹು ತಪಂಬಟ್ಟು . . . ಸಕಲಶಾಸ್ತ್ರಪಾರಾವಾರಗನಾಗಿ ಎಲ್ಲಾ ಪೋದುಗಳುಮಂ ನೆಱೆಯೋದಿಕಟ್ಟು (ವಡ್ಡಾರಾ. ೩೪-೨೪) ; ಕಾರ್ಯವಶದಿಂ ಕೂರ್ಪಂತೆವೋಲ್ ನಿನ್ನ ನಾಂ ನೆಱೆ ಕೊಂದೆಂ ಮುಳಿಸಿಂದಮಂಗನೃಪತಿ ಕೌಂತೇಯರೇಂ ಕೊಂದರೇ (ಪಂಪಭಾ. ೧೩-೫) ; ತೆಱೆಯದೆ ಮುಚ್ಚಿದ ಪಡಿಗಳ್ ತೆಱೆದುವು ನೆಱೆ ಮೋಕ್ಷಗೃಹದ ಸೌಖ್ಯದ ಪಡಿಗಳ್ ತೆಱೆದವೆನೆ ದಿವದ ಪಡಿಗಳ್ ತೆಱೆದುವದೇನರಿದೆ ಜೈನಪದಸೇವನೆಯಿಂ (ಸುಕುಮಾ. ೯-೧೯); ಸಕ್ಕದಮಂ ಪೇಟ್ಕೊಡೆ ನೆಱೆ ಸಕ್ಕದಮಂ ಪೇಟ್ಕೆ (ಧರ್ಮಾಮೃ. ೧-೪೨). ೨. ಚೆನ್ನಾಗಿ : ಕಸವರಮೆಂಬುದು ನೆಱೆ ಸ್ಥಿರಿಸಲಾರ್ಪೊಡೆ ಪರವಿಚಾರಮುಂ ಧರ್ಮಮುಮಂ ಕಸವೇಂ ಕಸವರಮೇನುಬ್ಬಸಮಂ ಬಸಮಲ್ಲದಿರ್ದು ಮಾಡುವರೆಲ್ಲಂ (ಕವಿಗಾ. ೩-೧೭೬) ; ದಿವದೊಳ್ ಮೇಲಪ್ಪ ರತ್ನಂಗಳೆಂತನಿತಂ . . . ಈತನುಮಿಗಳ್ ನೆಱೆ ತೊಟ್ಟು ಬಂದಂ (ಆದಿಪು. ೨-೧೮) ; ಕೋಣನೊಂದು ಕುದುರೆಯ ನುಂಗಿತ್ತು ಕಟ್ಟಿದ ಪಕ್ಷಿ ನೆಱೆ ಪಾಱುತ್ತು (ಆದಪು. ೩೭-೧೦೨) ; ಎಲೆ ತೀಡುವ ತೆಂಗಾಳಿಯೆ . . . ಕಾದಲನಂ ತಂದೊಡೆ ನಱುಸುಯ್ಮೆಲರಿಂದಂ ನಿನ್ನ

ನಾಗಳುಂ ನೆಱೆ ಪೊರೆವೆಂ (ಕಬ್ಬಿಕಾ. ೭೧). ೩. ಹೆಚ್ಚಾಗಿ ; ಅಧಿಕವಾಗಿ ; ಬಹಳವಾಗಿ : ಮದನಹತಕನಿಂದಂ ನೆಱೆ ಮುನ್ನುಱುವೋದಕ್ಕಂ ತಾಂ ಪೇಟಱುಯಳೆ ಮುನ್ನಮೆ ಮದೀಯ ಧೈರ್ಯಚ್ಯುತಿಯಂ (ಕಾದಂಉ. ೭೭) ; ನೆಱೆ ಸಂತೋಷದಿಂ ಕೈನೀರೆಱೆಯಲ್ಕೆಂದಿರ್ಪ ಪದದೊಳತ್ಯಾಶ್ಚರ್ಯಂ ನೆಱೆದಿರೆ ಮದಾಳಿಗಯಸಂ ಪಱುಪಡೆ ಬರ್ಪಂದದಿಂದೆ ನಂದಂ ಬಂದಂ (ಸುಕುಮಾ. ೭-೩೨) ; ಸಂಪಗೆ ಮೊಲ್ಲೆ ಕೇದಗೆ ಸಂದ ಪಾದರಿಯ ಪೂಗಳನಾವಗಂ ನೆಱೆ ಸೂಱೆಗೊಂಡು (ಧರ್ಮಾಮೃ. ೨-೨೪) ; ಪೊಱಮಟ್ಟನಚ್ಚ ಶಿವಲಿಂಗಾರ್ಚಕಂ ನೋಡೆ ನೆಱೆ ತೀವಿ ಪೂರದೊಳಗೆ ಧೂಪಧೂಮಂ ಕೂಡೆ (ತಿರುರ. ದೇ. ೬-೬). ೪. ಅಪ್ಪಟವಾಗಿ ; ಪಕ್ಕಾ : ಕೊಱಚಾಡೆಲ್ಲರ ಮುಂದೆ ರಚ್ಚೆಗೆಟೆಯುತ್ತಂ ಕಿತ್ತು ಮೆಯ್ಯೆಲ್ಲವಂ ಹಱುತಿಂದುಳ್ಳ ಸುವಸ್ತುವಂ ಕಡೆಯೊಳೊರ್ವಂಗಿತ್ತು ತಾಂ ಭಾಷೆಯಂ ಬಱಿಗಂಟಕ್ಕುವನೆಂದು ತಾಯ ಹೊಸೆಬಿಟ್ಟೆಟ್ಟಿ ಕೊಂಡಾಡುತಂತಿರುವಳ್ ತಾಂ ನೆಱೆ ಸೂಳೆಯ್ಯೆ (ಸೋಮೇಶ. ೭೩). ನೆರೆ$_7$: ೧. ನೆರೆ ತೆರೆಯಲುಂಟು ಸೌಂದರ್ಯ ಸತ್ಯ ಸಜ್ಜನಿಕೆ ಇರುವ ನೆಲೆಯು, ಸಿರಿಮನದ ವೈಭವದಿ ಮುಗಿಯಲಿಲ್ಲ ಈಶ್ವರನ ಸೃಷ್ಟಿಕಲೆಯು (ಹೃದಸ. ೧೦-೭) ; ನರುಗಂಪಿದು ಹಾಳೆ, ನೀನೆ ನೆರೆ ತಾಳೆ (ಬಾಸಿಗ. ೮-೨೨). ನೆಱೆಯೆ : ೧. ದೋಷಮುಮನಂತೆ ಗುಣಮುಮಂ ಕಿಱುದಱೊಳ್ ನೆಱೆಯೆ[ಪಾಠಾಂ. ಆಱುಯೆ]ಪೇಟ್ಡಿಂ (ಕವಿಗಾ. ೧-೧೩೭) ; ರೌದ್ರತರರೂಪಮನೊರ್ಮೆಯೆ ವಿಶ್ವರೂಪಮಂ ತೋಱುದನಿರ್ದರಂ ನೆಱೆಯೆ ಮೋಹಿಸಿ ವೈಷ್ಣವದಿಂ ಮುರಾಂತಕಂ (ಪಂಪಭಾ. ೯-೬೦); ತನ್ನ ಬಂದ ವೃತ್ತಾಂತಮನೆಲ್ಲಮಂ ನೆಱೆಯೆ ಪೇಟ್ದು ಮತ್ತಮಾ ದಿವ್ಯಕಾಂತೆಯನಿಂತೆಂದಂ (ಕಾದಂಪೂ. ೬೯೫) ; ಒಂದು ಬಕಂ . . . ತಪೋರೂಪಮಂ ಕೈಕೊಂಡು ಕಿಱುಮೀಂಗಳೆಲ್ಲಮಂ ನೆಱೆಯೆ ತಿಂದು (ಪಂಚತಂ. ೮೩-೮). ೨. ಪೊನ್ನ ಮಡಕೆಯೊಳ್ ಬೋನಮನೊಡ್ಡಿ ನೆಱೆಯೆ ತೊಟ್ಟುಟ್ಟು ಮಂಗಳವಸದನಂಗೊಂಡು ದಿವ್ಯಸ್ತ್ರೀ ಬಂದು ನಿಱಸಿದೊಡೆ (ವಡ್ಡಾರಾ. ೮೯-೧೩) ; ಇದಿರ್ಚ್ಚುವ ಗಣ್ಡರ ನಾಮ್ಪೆವೆನ್ದು ಪೊಟ್ಟಳಿಸುವ ಬೀರರಂ ನೆಱೆಯೆ ಕಾಣೆಮೆ (ಎಕ. III, ಮಂಡ್ಯ. ೪೧-೧೬ ; 950) ; ನೆಱೆಯಱುವ ನೆಱೆಯೆ ಕಾಣ್ಬೇ ತೆಱದಿಂ ಸಮಸಂದು ಸಂದತೀಂದ್ರಿಯಸುಖದತ್ತೆಱಗಿದೆನಿಂ ವಿಷಯಸುಖಕ್ಕೆಱಗೆಂ ಪಱುಕೆಯ್ದು ತೊಟ್ಟನುಟುವಂತುಟುವೆಂ (ಅಜಿಪು. ೨-೮೨); ವಿಪುಲಾಚಲದೊಳ್ ವೀರಜಿನಪಾರ್ಶ್ವದೊಳ್ ಗೌತಮಂ ಗಣಾಗ್ರಣಿ ಮಗಧಾಧಿಪನಱುಯೆ ನೆಱೆಯೆ ಪೇಟ್ದುದನಪೂರ್ವಮೆನೆ ರಾಮಕಥೆಯನಭಿವರ್ಣಿಸುವೆಂ (ಪಂರಾಮಾ. ೧-೪೦). ೩. ನೆಱೆಯೆ ಬಸಮಟುದು ಚಿಂತಿಸಿ ಮಱುಗಿ ಯಶೋಭದ್ರೆ . . . ಕಡುಗಂದಿ ಕುಂದಿ ತೆರಮರದಿರ್ದಳ್ (ಸುಕುಮಾ. ೯-೯೭). [<ನೆಱೆ$_1$]

ನೆಱೆಕೊಳ್ 'ನೆಱೆಗೊಳ್' ನೋ.

ನೆಱೆಗಡಿ (ಕ್ರಿ). ಪೂರ್ತಿಯಾಗಿ ಕತ್ತರಿಸು,—ತುಂಡುಮಾಡು : ಪಾರ್ಥನನಿಬರ ವಿಶಿಖವನು ನೆಱೆಗಡಿದು ಕೆತ್ತುವನನಿಬರೊಡಲುಗಳ (ಕುಸ್ಯಾಭೀ. ೮-೪೩). [ನೆಱೆ$_3$ + ಕಡಿ$_2$]

ನೆಱೆಗಡಿತ (ನಾ). ಸಂಪೂರ್ಣವಾಗಿ ಕತ್ತರಿಸುವುದು,—ಕಡಿಯುವುದು : ತೂಳಿ ತುಳಿದವು ನೂಱುಗಜ ಭೂಪಾಲಕನ ನೆಱೆಗಡಿತದಡವಿಗೆ ಬಾಳೆ ಹೆಮ್ಮರನಾಯ್ತು ಗಡ (ಕುಸ್ಯಾಗ. ೨-೩೭). [ನೆಱೆ$_3$+ಕಡಿತ$_2$]

ನೆಱೆಗಲಿ (ನಾ). ಮಹಾಶೂರ ; ಕಡುಗಲಿ : ಲೋಕದೊಳುಳ್ಳ ನೆಱೆಗಲಿಗಳನೆಲ್ಲರನು ಮೊಱೆಯಿಡಲೊಯ್ದು ಹೆಣ್ಣುಗಳ ಗರ್ಭವ ಬಲು ಸೆಱೆಮನೆಯೊಳಗಿರಿಸುವನು (ಕ್ರಿಪುಸಾಂ. ೯೪) ; ಹುಡಿಗುಟ್ಟಿ ಯಜ್ಞಮಂ ಕಡುಹಿನಿಂ ಜಯಸಿರಿಯ ಪಡೆದ ನೆಱೆಗಲಿ ವೀರಭದ್ರೇಶನೊಲವಿಂದೆ ಕುಡುಗೆ ನಿರ್ವಿಘ್ನದೆಸಕವನೀ ಮಹಾಕೃತಿಗೆ (ಸೌಂದಪು. ೧-೭) ; ನೆಱೆಗಲಿ ಜೋದರುವೆರಸು ಉಱುಬಿದನಾ ಗಜಪತಿ ರಾಮನಾಥನ ಮುಱುದು ಮೋದುವ ತವಕದಲಿ (ಕುರಾಸಾಂ. ೧೬-೪೬). [ನೆಱೆ$_2$ + ಕಲಿ$_2$]

ನೆಱೆಗಾಣ್ (ಕ್ರಿ). ಕೊನೆಗಾಣು ; ಮುಕ್ತಾಯವನ್ನು ಕಾಣು : ನೆಱೆಗೊಂಡುದು ನಾರಾಚಂ ನೆಱೆಗಾಣಲ್ಕಾರ್ತುದಿಲ್ಲ ಬೀರಕೆ ಬೀಯಕ್ಕಿಱುವ ಬೆಡಂಗನೊಳಾರ್ದೊರೆ ನೆಱೆ ತೋರ್ಕುಮೆ ಶತ್ರುಜನಕಮರ್ಥಿಜನಕ್ಕಂ (ಗದಾಯು. ೧-೧೮). [ನೆಱೆ$_2$+ಕಾಣ್]

ನೆಱೆಗಿವುಡ (ನಾ). ಪೂರ್ತಿಯಾಗಿ ಕಿವಿ ಕೇಳಿಸದವನು : ಅಪಸ್ಮಾರಗ್ರಹಗೃಹೀತರಂತೆ ವಕ್ರಗ್ರೀವರಾಗಿಯುಂ ನೆಱೆಗಿವುಡರಂತೆ ಕಿವುಂಡುಗೇಳ್ದುಂ (ಪಂಚತಂ. ೧೯-೧). [ನೆಱೆ$_3$ + ಕಿವುಡ(<ಕಿವುಂಡ)]

ನೆಱೆಗೆಲ್ಲ (ನಾ). ಪೂರ್ಣವಾದ ಜಯ ; ಪೂರ್ತಿಯಾದ ಗೆಲುವು : ಮೀಱು ಮದಾಜ್ಞೆಯಂ ಗಿರಿಯನೇಱುದ ನಿನ್ನಯ ನೆತ್ತಿಗೀಗಳಿಂತೇಱುಸಿ ಜೀವಮಂ ಜವನ ಲೆಕ್ಕದೊಳೇಱುಸಿ ಮತ್ತೆ ನಿನ್ನನಾನೇಱುಪೆನೆನ್ನ ತೋಳ್ಗೆ ಬಟಾಯೇ ನೆಱೆಗೆಲ್ಲಮನಲ್ಲದಂದು ಬಲ್ಪೇಱದೆನುತ್ತವಂ ತಿರಿಪಿದಂ ನಿಜನಿಷ್ಠುರಕಾಷ್ಠದಂಡಮಂ (ಚಂದ್ರಪು. ೫-೭೪). [ನೆಱೆ$_2$+ಗೆಲ್ಲ]

ನೆಱೆಗೊಳ್, ನೆರೆಗೊಳು, ನೆಱೆಕೊಳ್ (ಕ್ರಿ). ೧. ಎಲ್ಲವನ್ನೂ ಆಕರ್ಷಿಸು,—ಸೆಳೆ : ನೆಱೆಗೊಳೆ ಗಾಡಿ ನೋಟ್ಪ ಬಗೆ ಬರ್ಪುದುಂ (ಪಂಪಭಾ. ೪-೭೬). ೨. ತುಂಬಿ ಬರು ; ಪೂರ್ಣತೆಯನ್ನು ಪಡೆ : ಇದು ಲೀಲಾಂದೋಳಮಿಂದೋಳದ ದನಿ ನೆಱೆಗೊಳ್ವನ್ನೆಗಂ ಪಾಡಲೆಂದೇಱುದಳಂ ತೂಗುತ್ತುಮಿರ್ದೆನ್ನಯ ಪರಿಜು (ಅದಿಪು. ೪-೯). ೩. ಪೂರ್ಣಗೊಳ್ಳು ; ಪೂರ್ತಿಯಾಗು : ನೆಱೆಗೊಂಡುದು ನಾರಾಚಂ ನೆಱೆಗಾಣಲ್ಕಾರ್ತುದಿಲ್ಲ (ಗದಾಯು. ೧-೧೮) ; ನೆಱೆಗೊಂಡು ತಾನ್ ಮುಗಿದ ಮುನ್ನಮೇ ಬಾಟ್ಕೊಯ್ದು ಬರ್ಪೆನ್ (ಅಂತಿಗೂ. ೪೧-೮೪೪). ೪. ಪೂರ್ಣವಾಗಿ ನಡು,—ನಾಟು : ತೆಱಪುವೆತ್ತು ಪಾಪೇಭಕಂಠೀರವ ನೆಚ್ಚೊಂದಪೂರ್ವಸಾಯಕಂ ಚಿತ್ರಾನೀಕನಂ ನೆಱೆಗೊಳ್ವುದು (ಶಾಂತಿಪು. ೪-೨೩ ಪ) ; ಮುಂದಱುಯದೆ ಸೀತೆಯಂ ಮದನನಾಕೆಯ ದೂಸಱುನೆನ್ನ ನೆಚ್ಚಪಂ ನೆಱೆಗೊಳೆ ಪೂವಿನಂಬಲಗಿನಂಬುಗಳೆಂಬಿನಂ (ಪಂರಾಮಾ. ೯-೧೬೦) ; ನೆಱೆಗೊಂಡು ತೊನೆವ ಸರಲಿಂ ನೆಱಲ್ದು ರಥದೊಳಗೆ ಬಿಟ್ದು ಚಕ್ರಧರಂ ಮೆಯ್ಮಱೆದು ಗುಹಾಂತರದೊಳ್ ಮಿಗೆ ಮಱಸುಂದಿದ ಪುಲಿಯನಾಗಳಿನಿಸಂ ಪೋಲ್ತಂ (ಕಾದ್ಯಾಪ. ೪೪೮) ; ನೆಱೆ[ಪಾಠಾ.ಱ]ಗೊಂಡಿರೆ ಪೂಗಣೆಯ್ಯೆದುಮೊರ್ವಳ್ . . . ಪಲುಂಬಿದಳ್ (ಚಂದ್ರಪು. ೮-೬೪). ನೆರೆಗೊಳು : ೫. ತುಂಬಿಕೊಳ್ಳು ; ಭರ್ತಿಯಾಗು ; ತುಂಬು : ನೆಗೆದೊಡನೆ ನೆರೆಗೊಳುವ ನೇತ್ರಾಂಬುತೀರ್ಥಗಳ ಹೊಗೆವೊಳಗನೇರೆ ಬಹ ದಿವ್ಯಭಾಗಗಳ (ಮಲೆದೇ. ೩೪-೫). ನೆಱೆಕೊಳ್ : ೧. "ನೆಱೆಕೊಳ್—ಸರ್ವಸ್ವಹರಣೇ, ಮರ್ಮಭೇದೇ ಚ (ವರ್ಮಭೇದೇ ಚ)(ಚುಚ್ಚು)" (ಶಮಧಾ) ; ಎಮ್ಮುಳ್ಳುದಂ ನೆಱೆಕೊಂಡೆಮ್ಮಯ ಬಾಟ್ವೆಯೊಳ್ ನಿಱುಸುವಂ ನೀಂ (ಪಂಪಭಾ. ೬-೩೦). [ನೆಱೆ$_2$ + ಕೊಳ್$_1$]

ನೆಱೆಜವ್ವನ (ನಾ). ತುಂಬುಯೌವನ ; ಪೂರ್ಣಯೌವನ : ನೆಱೆಜವ್ವನವೈಸೆ ನಿಂದ ಜವ್ವನವಲ್ಲ ಕುಱುಹಱುಯಳು ರತಿಸುಖದ ಹೊಱುಗೆಗಾಣಿಸಿ ನೇಮವಲುಗುತಿದ್ದಳು ಮಝು ತಱುಮಿಂಡಿಯಾದರಿನ್ನೆಂತೊ (ಭರಚ. ೯-೧೦೫) ; ಮಲ್ಲಿಗೆಗೆ ಮೊಳೆಜವ್ವನಂ ಸುರಯಿಗೆ ನೆಱೆಜವ್ವನಂ . . . ತಾವರೆಗೆ ನಿಱುಂಜವ್ವನಮೊದವಿತ್ತು (ರಾಮಾಶ್ವ. ೧೧೪-೧೯). [ನೆಱೆ$_2$+ಜವ್ವನ]

ನೆಱೆಜಾಣ (ನಾ). ಅಧಿಕವಾದ ಜಾಣತನವುಳ್ಳವನು ; ಬಹುಜಾಣ : ಅಧಿಕ ಸುಜಾಣರ ಜ್ಞಾನಲೋಚನಕೆ ಕಾಣ ಬರ್ಪಂತೆ ಕನ್ನಡ

ವಾಕ್ಯದೆ ನೆಱೆಜಾಣ ಸತ್ಕೃತಿಯ ವಿಸ್ತರಿಸು (ಮೋಹತ. ೩-೧); ನುಡಿ ಜಾಣ ನಡೆಜಾಣ ನೆಱೆಜಾಣ . . . ಜಗಕೆ ಸುಜಾಣ (ಭರಚ. ೭-೭೬). [ನೆಱೆ$_2$+ಜಾಣ]

ನೆಱೆಜಾಣೆ (ನಾ). ಬಹಳ ಬುದ್ಧಿವಂತೆ; ಅಧಿಕವಾದ ಜಾಣ್ಮೆಯುಳ್ಳವಳು : ನೆಱೆಜಾಣೆ ನಿನ್ನ ಕೀರ್ತನೆಗೆಯ್ವೊಡಹಿಲೋಕದೆಱೆಯಂಗೆ ಮತಿ ಮಂದವಹುದು (ಮೋಹತ. ೨೬-೨೭). [ನೆಱೆ$_2$+ಜಾಣೆ]

ನೆಱೆದಾತ (ನಾ). ಬಹಳವಾಗಿ ದಾನಮಾಡುವವನು; ನೆಱೆದಾತ ಬಸವಣ್ಣ ತಂದೆ ಪಟ್ಟೇಶ್ವರದೊಳಿರುತ ತನ್ನೆರಡು ಮಕ್ಕಳ ಶಿರವನರಿದು ಭಾಸುರ ವೀರಭದ್ರೇಶಗಾರತಿಯನೆತ್ತಿ . . . ಮೆಱೆದಂ (ಗುರುಚಾ. ೧೦-೪೪). [ನೆಱೆ$_3$+ದಾತ$_2$]

ನೆಱೆದಿಂಗಳ್, ನೆಱೆದಿಂಗಳು (ನಾ). ೧. ಪೂರ್ಣವಾಗಿ ತುಂಬಿದ ಚಂದ್ರ; ಪೂರ್ಣಚಂದ್ರ : ಫುಲ್ಲಶರಂ ಬಸಂತದ ಪುಗಿಲ್ ನೆಱೆದಿಂಗಳ ತಣ್ಬೆಸಿಲ್ . . . ತುಂಬಿಯ ಗೇಯಮೆಂಬಿನಂ ಬಲ್ಲವರಂ ಮನಂಗೊಳಿಸುಗುಂ ಕೃತಿ ಸತ್ಕೃತಿ ನಾಗಚಂದ್ರನಾ (ಮಲ್ಲಿಪು. ೧-೪೪); ಎತ್ತಿದ ಮುತ್ತಿನ ಸತ್ತಿಗೆಯೆ ನೆಱೆದಿಂಗಳಾಗೆಯುಂ ಬಳಸಿ ಪೊಳೆವ ದುಗುಲದ ಕಾಂಡಪಟಮೆ ಚಂದ್ರಿಕಾಪಟಳಮಾಗೆಯುಂ (ವರ್ಧಪು. ೬-೨ ಪ); ನೆಱೆದಿಂಗಳಂ ಪೋಲ್ವ ತರುಣಿಯರ ಚೆಲ್ವ ನಗೆಮೊಗದ ಮುಂದೀಗ ತಾವರೆಯಾದುವೆಂಬಂತೆ ಪೆಣ್ಗಳಾಸ್ಯಕೆ ಸೋಲ್ದುವಾ ಕೊಳದ ಕಮಲಂಗಳು (ಜೈಮಿಭಾ. ೩೦-೯). ೨. ಪೂರ್ಣಮಾಸ; ಪೂರ್ತಿ ತಿಂಗಳು : ಕರಕರೆಯೇಕೆ ಸಾಕು ಚಕದೇವನೃಪಾಲಕನೊಲ್ಮೆವೆತ್ತನಿನ್ನರೆ ನೆಱೆದಿಂಗಳೊಳ್ ಮದುವೆಗೆಯ್ದುಪೆಂ (ಅಪ್ರತಿ. ೨೩-೫). **ನೆಱೆದಿಂಗಳು** : ೧. ಹೊಗರೊಗುವ ನೆಱೆದಿಂಗಳೊಲು ಮೊಗ ಹೊನ್ನ ಸೆಳೆನಡು ತುಂಗಕಟಪೊಂಬಾಳೆದೊಡೆ . . . ಲತಾಂಗರುಚಿ ಕಣ್ಮನವ ಸೋಲಿಸಿದವು ಮನೋಭವನ (ಸಾಳ್ವಭಾ. ೨೮-೨೬); ಅಮೃತವಾರ್ಧಿಯ ಪೊರೆಯೊಳಿರ್ಪ ನೆಱೆದಿಂಗಳಂತೆ . . . ತೋರ್ಪ ಶಿಶುವಂ ಕಂಡು (ಚಿಬಪು. ೫-೨೩). [ನೆಱೆ$_2$+ತಿಂಗಳ್]

ನೆಱೆದಿಂಗಳು 'ನೆಱೆದಿಂಗಳ್' ನೋ.

ನೆಱೆದೊಱೆ (?) (?). (?) : ನೆಱೆದೊಱೆ ಕಾದಿದಂ ಕಡುಗಲಿಯಂ ಪೋಲ್ತುಗವಱೆ × × ತಿಳಕಂ (ಎಕ. IV, ನಾಗಮಂ. ೨೩-೪; 977). [?]

ನೆಱೆನಂಬು, ನೆರೆನಂಬು (ಕ್ರಿ). ಪೂರ್ತಿಯಾಗಿ ನಂಬು,—ನೆಚ್ಚು; ಸಂಪೂರ್ಣವಾಗಿ ವಿಶ್ವಾಸವಿಡು : ನೆಱೆನಂಬೊ ನೆಱೆನಂಬೊ ದಾಸದುಗ್ಗಳೆಯಂತೆ (ಬಸವ. ೧೪೯); ಗುರುವನು ನೆಱೆನಂಬಿದಡಾತನೆ ಪರಮಸುಖಿ (ಶಿವಗೀ. ೪೬೫); ಗುರುವೆಂದು ವಿನಯಗೂಡಿರ್ಪುದಿನಿಯನೊಳು ನೆರವೆಂದು ನೆಱೆ ನಂಬುವುದು (ಹದಿಬ. ೩-೪೦). **ನೆರೆನಂಬು** : ತೆಲುಗು—ತಮಿಳಿನ ಅಭಿಮಾನಿಗಳು ಹೇಳುವ ವ್ಯುತ್ಪತ್ತಿಯನ್ನು ನೆರೆನಂಬಿ ಅವುಗಳ ಜಾಡು ಹಿಡಿದು ನಡೆದುದರಿಂದ ಇವರ ನಿರುಕ್ತವು ಕೂಡ, ಅಭಿಮಾನಯುಕ್ತವಾಗಿದ್ದರೂ ದಾರಿ ತಪ್ಪಿದೆ (ದ್ರಾವಿವಿ. ೯೧). [ನೆಱೆ$_3$+ನಂಬು]

ನೆಱೆನಗೆ (ನಾ). ಹೆಚ್ಚಾದ ನಗು; ಗಹಗಹಿಕೆ : ನೆಱೆನಗೆಯ ನಯನಾಂಬುಗಳ ಖಳನೆಱಗಲತಿಸುಮಾನವೇನೆಂದಸುರ ಬೆಸಗೊಂಡ (ಕುಪ್ಯಾಅ. ೧೨-೧೪). [ನೆಱೆ$_2$+ನಗೆ]

ನೆಱೆನುಡಿ$_1$ (ಕ್ರಿ). ಚೆನ್ನಾಗಿ ಹೇಳು,—ತಿಳಿಸು : ಅಱಿದಿಹುದು ನೀನೆಂದು ರಾಯಂಗಱುಹಿ ಭೀಮಾದಿಗಳಿಗುಚಿತವ ನೆಱೆನುಡಿದು ಮರುಪದಿಯ ಮನ್ನಿಸಿ ಮರಳಿದನು ಪುರಕೆ (ಕುಪ್ಯಾಅ. ೧೫-೩೦). [ನೆಱೆ$_3$+ನುಡಿ$_1$]

ನೆಱೆನುಡಿ$_2$ (ನಾ). ಪರಿಪೂರ್ಣವಾದ ಮಾತು; ಅರ್ಥದಿಂದ ತುಂಬಿದ ನುಡಿ : ನೆಱೆನುಡಿಯ ಮಾನಿಸರ ಪೆರ್ಮೆಯನ್ ನೆಲದೊಳ್ ಮಱೆನುಡಿ ತೋಱಿ ಬಿಡುಗುಂ (ಕುಱಳ್. ೧-೩-೮). [ನೆಱೆ$_2$+ನುಡಿ$_2$]

ನೆಱೆನೂರ್ (ನಾ). ಒಂದು ಊರಿನ ಹೆಸರು : ಯಿಾಯೂರ ಮೂಲಿಗ ಕೆಱೆಯ ಹಳ್ಳಿಯ ಗುಲುಗಣ್ಣ ನೆಱೆನೂರಱಿವಿನೊಳ್ಳಾದಿ ಸತ್ತ (ಎಕ. VIII, ಸೊರಬ. ೨೧೬-೮; 903). [?+ಊರ್]

ನೆಱೆನೋಟ (ನಾ). ತುಂಬುನೋಟ; ಪೂರ್ಣದೃಷ್ಟಿ : ಕಿಱುನೋಟ ವಿಟನಿಂಗೆ ಅರೆನೋಟ ವಿದುಷಕಗೆ ನೆಱೆನೋಟ ನಾಗರಿಕಗೆ (ಸರ್ವಜ್ಞ. ೧೬೩೨). [ನೆಱೆ$_2$+ನೋಟ]

ನೆಱೆಪು 'ನೆಱಪು' ನೋ.

ನೆಱೆಮಲವತ್ತಿ (ನಾ). (?) : ಹೊಱವಾಱೊಳವಾಱು ಮಗ್ಗದೆಱೆ ಕಾಳಬೋವನ ಹಳ್ಳಿಯ × × × ಯಿನಿತಱ ಮತ್ತಂತು ಮನೆಸುಂಕ ನೆಱೆಮಲವತ್ತಿಯ ಸುಂಕವಿನಿತಂ . . . ಬಲ್ಲಯಂ ಮನಮೊಸದು ಭೋಗವಸದಿಯೊಳು ಜಿನಪೂಜೆಗೆ ಭಕ್ತಿಯಿಂದಿದಾ × × × (ಮೈಅರಿ. ೧೯೪೦, ೨೯-೪; 1173). [?]

ನೆಱೆಮ್ಮೆ (ನಾ). ಒಬ್ಬಾತನ ಹೆಸರು (?) : ಕಾದುವೆಮನ್ದು ಪರಿಚ್ಛೇದಿಸಿ ನಡವಾಗಳ್ದೆ ಬಟ್ಟದೆಱೆ ನೆಱೆಮ್ಮೆ ಕಲಿಗಳ್ಳನೆಂಬೋ . . . ಕಾದಿ ಸತ್ತೋಂ (ಸೌಇಇ. XI-i, ೨೧-೭; 893). [?]

ನೆಱೆಯಗಲ್ತೆ (ನಾ). ಸಂಪೂರ್ಣವಾಗಿ ತ್ಯಜಿಸುವುದು; ಪೂರ್ತಿಯಾಗಿ ತ್ಯಾಗ ಮಾಡುವುದು : ನಿಶ್ಶೇಷ ವಿಶ್ಲೇಷತಶ್ಚ—ನೆಱೆಯಗಲ್ತೆಯತ್ತಣಿಂದಮುಂ (ಜೀವಸಂ. ೧೬೬-೨೩). [ನೆಱೆ$_3$+ಅಗಲ್ತೆ]

ನೆಱೆಯಱಿ (ಕ್ರಿ). ಚೆನ್ನಾಗಿ ತಿಳಿ; ಪೂರ್ತಿಯಾಗಿ ಅರಿತುಕೊಳ್ಳು : ನೆಱೆಯಱಿದೆನಂತರಿಕ್ಷಸ್ವರಭೌಮವ್ಯಾಜನಾಂಗಚಿಹ್ನ ಸ್ವಪ್ನೋದ್ಧುರ ಲಕ್ಷಣಮೆಂದೇ ಬಿತ್ತರಿಪಷ್ಟಾಂಗದ ನಿಮಿತ್ತ ಶಾಸ್ತ್ರಾವಳಿಯಂ (ಶಾಂತೀಶ್ವ. ೫-೫೪); ಅಱಿವನಱಿಯದ ಗುರುವು ಪರವನಱಿಯದ ಶಿಷ್ಯ ನೆಱೆಯಱಿಯದೋದು ಇವು ಮೂಱು ಅಂಧಕನು ತಿರುಗಾಡಿದಂತೆ (ಸರ್ವಜ್ಞ. ೮೫). [ನೆಱೆ$_3$+ಅಱಿ]

ನೆಱೆಯಱಿವು (ನಾ). ಸಂಪೂರ್ಣಜ್ಞಾನ, — ವಿವೇಕ : ನೆಱೆಯಱಿವ ನೆಱೆಯೆ ಕಾಣ್ಬೇ ತೆಱದಿಂ ಸಮಸಂದು ಸಂದತೀಂದ್ರಿಯ ಸುಖದತ್ತೆಱಗಿದೆನಿಂ ವಿಷಯಸುಖಕ್ಕೆಱಗೆಂ (ಅಜಿಪು. ೨-೮೨). [ನೆಱೆ$_2$+ಅಱಿವು]

ನೆಱೆಯಿಸು (ಕ್ರಿ). ಮುಗಿಸು; ಪೂರ್ಣಗೊಳಿಸು; ಪೂರ್ತಿ ಮಾಡು : ಅನೇಕಭವಪರ್ಯಾಯಪರಿಭ್ರಮಣದಿಂ ಬಂದು ಪುಟ್ಟುತ್ತುಂ ಕಡೆಯೊಳುತೃಷ್ಟಾಯುಷ್ಯಮನೆಯ್ದೆ ನೆಱೆಯಿಸುವ ನೆಱವಿಭವಪರಿವರ್ತನಮೆಂಬುದು (ಸುಕುಮಾ. ೬-೬ ಪ); ಒಡನೆ ತದ್ಭಾಷೆಯ ಕೊಱತೆ ನೆಱೆ [ಪಾಠಾಂ. ಱ]ಯಿಸುವನೀಗಳ್ಕೆ (ಬಸಪು. ೩೬-೧೩). [ನೆಱೆ$_1$+-ಇಸು$_3$]

ನೆಱೆಯೆ 'ನೆಱೆ$_3$' ನೋ.

ನೆಱೆವಣಿಗೆ 'ನೆಱವಣಿಗೆ' ನೋ.

ನೆಱೆವಳಿಗೆ 'ನೆಱವಣಿಗೆ' ನೋ.

ನೆಱೆವೆಱೆ, ನೆರೆವೆರೆ (ನಾ). ಪೂರ್ಣ ಚಂದ್ರ; ಹುಣ್ಣಿಮೆಯ ಚಂದ್ರ : "ನೆಱೆವೆಱೆಯೆಂದು ಪೂರ್ಣಚಂದ್ರಂ" (ಕಶಸಾ. ೪೮-೨೬); ನೆಱೆವೆಱೆಯನು ನುಂಗಿತು ಕತ್ತಲೆ (ಜೀವಂಸಾಂ. ೪-೪೯); ನೆಱೆವೆಱೆಯಂ ನಿಜವದನಂ ಜಱೆಯೆ ಮುಗುಳ್ನಗೆಯ ಕಾಂತಿ ತಿಳಿಜೊನ್ನದೊಳೀಡಿಱಿಯೆ (ವಿಷ್ಣುಪು. ೫-೩-೧೨೯). **ನೆರೆವೆರೆ** : ನೆರೆವೆರೆಯ ಸಾನ್ದ್ರಚನ್ದ್ರಿಕೆಯ ಲಲಿತಾವರಣವನ್ನು ಸಂತಸದಲಂಪಿನ ಕ್ಷೀರಸಾಗರದ ರಂಗತ್ತರಂಗಗಳ ಕಳಿತ ಕಳಕಳವು ಡಂಗುರಿಸಿ ಬಿಟ್ಟಾಡಿ ಬಿಡುವುದಿಲ್ಲವೆ? (ಮಂತ್ರಶ. ೩೨-೨೫).

ನೆಜಿವೆಜಿಯಿರುಳ್ = ಪೂರ್ಣಚಂದ್ರನಿರುವ ರಾತ್ರಿ ; ಹುಣ್ಣಿಮೆಯ ರಾತ್ರಿ : ಮನೋಜ್ಞಮಾಗಿ ನೆಜಿವೆಜಿಯಿರುಳೊಳ್ ತಾಂ ತನುಗಿಬುತಂದು ಬಿನದದಿಂ ವಿಹರಿಪಜ್ಜರಿಯರ ನೆಲೆಯ ಸಿಂಗರದ ಮಾಟದ ಬೆಳ್ಳಿವೆಟ್ಟುಗಳ ತಬ್ಬಲ್ಗಳೆಂಬಂತಿರೆ . . . ತೋರ್ಪ ಸೌಧಂಗಳಂ (ರಾಮಾಶ್ವ. ೧೦೨-೭). [ನೆಜಿ$_2$ + ಪೆಜಿ]

ನೆಜಿವೆಜಿಮೊಗ (ನಾ). ಪೂರ್ಣಚಂದ್ರನಂತಿರುವ ಮುಖ ; ಸುಂದರವಾದ ಮುಖ : ನೆಜಿವೆಜಿಮೊಗದಬಳೆಯ ನುಣ್ಗೊರಲತರಂಜನೆವಡೆಯಿತ್ತು (ಜಜುಕಾ. ೪-೫೧); ನೆಜಿವೆಜಿಮೊಗದ ಬಾಲೆಯ ಕೀರ್ತನೆಗೆಯ್ದು ಕಜಿಗೊರಲನ ರಾಣಿ ಪೆಟ್ಟ ಮುಜಿಯದೆ ವಸ್ತ್ರಭೂಷಣ ಪರಿಮಳದುಡುಗೊಜಿಯತ್ತು ಕುಸ್ತರಿಸಿದಳು (ಮೋಹತ. ೨೫-೬೨). [ನೆಜಿವೆಜಿ + ಮೊಗ]

ನೆಜಿವೈರಿ (ನಾ). ಪ್ರಬಲ ಶತ್ರು ; ಕಡುವೈರಿ : ಕುರುಪತಿಯೆ ನೆಜಿವೈರಿ ಭೀಮನ ನೀಳಲೇಳೆಂದ (ಕುವ್ಯಾಗ. ೫-೨೯). [ನೆಜಿ$_2$ + ವೈರಿ]

ನೆಜಿಸಿಂಹ (ನಾ). ವಯಸ್ಸಿಗೆ ಬಂದ ಸಿಂಹ ; ಪ್ರಾಯದ ಸಿಂಹ : ಮುಜುಸಿಂಹನೆಂಬರು ನೆಜಿಸಿಂಹನೆಂಬರು ಮುಜು ತಾನೆ ನೆಜಿಸಿಂಹವಾಯ್ತು (ಭರಜ. ೬೯-೪೬). [ನೆಜಿ$_2$ + ಸಿಂಹ]

ನೆಜಿಸು 'ನಿಜಿಸು$_1$' ನೋ.

ನೆಟಲ್$_1$, **ನೆರಳ್**$_2$, **ನೆರಳು**$_2$, **ನೆಳಲ್**, **ನೆಳಲು**$_1$ (ನಾ). ೧. (ಮನುಷ್ಯ, ಮರ, ಗಿಡ, ಕೊಡೆ ಮುಂತಾದುವುಗಳ) ಛಾಯೆ : "ನೆಟಲ್ = ಆತಪತ್ರಾದಿ ಛಾಯೆ ; ಜಲದರ್ಪಣ ಪ್ರತಿಬಿಂಬ ; ಒಂದು ಸುರಂ"(ಕಪದ. ಸರ. ೧); ಜಲದದ ನೆಟಲುಂ ಪರಪ್ಪುಂ ವಿಲಾಸಮುಂ ಬೆಳಗುವುದಿತವಿದುಲ್ಲತೆಯುಂ ನೆಲಸವು ಚಲಂಗಳಾದಂ ವಿಲಾಸಿನೀಜನದ ನಲ್ಮೆಯುಂ ಸಂಗಮಮುಂ (ಕವಿಾ.೩-೯೭); ಸುರಕುಜದ ನೆಟಲೊಳಂಗಣದೊಳೇನುಮಲಪಿಲ್ಲದೆ ಕಟ್ಟರೆ ಕಾಮಧೇನು (ಪಂಪಭಾ. ೪-೧೦); ಬಿಸಿಲೊಳ್ ನಿಂದೊಡೆ ನೆಟಲತ್ತ ಸಾರಿಮೆಂದೆಂದುಮಜುವಲ್ಲಂ ನಮ್ಮಂ (ಸುಳುಮಾ. ೨-೬೫); ಕಾಯಕ್ಲೇಶಮದೆನ್ನೊಳಾಗೆ ಜಗದೊಳ್ ಮರ್ಬುರ್ದಿ ಮೈವೆರ್ದಪನ್ಯಾಯಂ ಕೈವಿಗಲೆನ್ನ ಕಾಂತನನಲಂಪಿಂ ಕೂಡಿದಳ್ ಪಶ್ಚಿಮಾಶಾಯೋಷಿತ್ಕುಟಲಾತ್ಮೆಯೆಂದು ದಿವಸಶ್ರೀ ಬೈದು ಬೆಂಬತ್ತಿದಳ್ ಛಾಯಾಸಂಕುಳದಿಂದೆನಲ್ಕೆ ಪಡುವಲ್ ಮುಂತಾದುವೆಲ್ಲಾ ನೆಟಲ್ (ದಕಳು. ೪-೧೪). ೨. ಪ್ರತಿಬಿಂಬ ; ಪ್ರತಿರೂಪ : ಬಾಳ ದಿನೇಶದಿಂಬದ ನೆಟಲ್ ಜಲದೊಳ್ ನೆಲಸಿತ್ತೊ (ಪಂಪಭಾ. ೧-೯೬); ತೊಲಗಿಪಳೊ ರಹಸ್ಯಶ್ರವಣಲಜ್ಜೆಯಿಂ ತನ್ನ ಪೊಳೆವ ನೆಟಲುಮನೆನೆ ನಿರ್ಮಲಮಣಿಕುಟ್ಟಿಮಮಂ ಕೋಮಲೆ ಚರಣಾಂಗುಷ್ಠದಿಂದೆ ಬರೆಯುತ್ತಿರ್ದಳ್ (ಕಾದಂಬ. ೨೮೯); ತಿಳಿದಿರ್ದ ಕೊಳದ ಜಲದೊಳ್ ಪಳಚ್ಚನೆಸೆದಿರ್ದ ತನ್ನ ನೆಟಲಂ ತನ್ನೊಳಪಳಗೆತ್ತು ಮುಟುಗಿ ಕಾಣದೆ ತಳವೆಳಗಾಗಿರ್ದುವಿರುಳ ವಿರಹವಿಹಂಗಂ (ಅಜಪು. ೬-೬೨); ನೀರೊಳಗಿರ್ದ ನಲ್ಲಳ ನೆಟಲಂ ಕಂಡು ನಲ್ಲಳೆಂದು ಮುತಿಗೆಟ್ಟು ಬಾಯ್ವು ಸಾವ ಸಾಧುವಿಟನಂತೆ (ಧರ್ಮಾಮೃ. ೧೦-೫೪). **ನೆರಳ್**$_2$: ೧. ತರುಗಳ ನೆರಳ್ಗಳಂ [ಪಾಠಾಂ. ನೆಳಲ್ಗಳಂ] ನೇರತೊಡಗಿತು ಜನಂ (ಜೈಮಿಭಾ. ೧೮೮-೨೩); ಕಾಡ ಹೂವಿನ ನೆರಳ್ ನೆಲದ ಪುರುಳಿನ ಪುರುಳ್ ಪಡೆದ ಬೀಯದ ತಿರುಳ್ (ಕಾಲಜ್ಞಾ. ೬೧-೧೨೩). **ನೆರಳು**$_2$: ೧. ನೆರಳ್ಲಿದೆ ನೀರಿಲ್ಲದೆ ಬೇರಿಲ್ಲದೆ ಸಸಿ ಹುಟ್ಟಿ ಹೂವಿಲ್ಲದೆ ಕಾಯಿಲ್ಲದೆ ಫಲ ತಂದಿತು (ಪುರಂಜ. ೧-೩೬-೧); ಒಂದು ಖಾವಿನೋಳೇಳವೃಕ್ಷದ ನೆರಳೆ. [ಪಾಠಾಂ. ಳಲಿ]ನಲಿ ನವಕುಸುಮದಿಕ್ಕೆಯಲಿ ಆ ಕಮಲಜನ ತುರಗ ನಿದ್ರಾವ್ಯಾಳುಲದಿ ಮುಲಗಿರಲು (ನಳಚ. ೨-೧೫); ತಪ್ಪ ಸಾಧಿಪ ನೃಪನೊಳಿಪ್ಪವನೆ ಕಡುಹೆಡ್ಡ ಸರ್ಪನುಜಿಹೆಡೆಯ ನೆರಳ್ಗಲ್ಲಿ ಸೇರಿದ [ಪಾಠಾಂ. ನೆಳಲೆಂದು ಸಾರಿದ] ಕಪ್ಪೆಯಂತಕ್ಕು (ಸರ್ವಜ್ಞ. ೬೭೭) ; ಅಲಕ್ಕೆ ಹೂವಿಲ್ಲ ಸಾಲಕ್ಕೆ ಕೊನೆಯಿಲ್ಲ ಜಾಲಿಯ ಮರವು ನೆರಳಿಲ್ಲ (ಜಗೀತ. ೪೮). ೨. ಒಂದು ನಾಯಿ ಮೂಸಿದ ತರಣಿಯನ್ನು ಕಟ್ಟಿಕೊಂಡು, ಹಳ್ಳಿ ದಾಟುವಾಗ ನೀರೊಳಗೆ ತನ್ನ ನೆರಳು ಕಂಡಿತು (ಮುಂಬಯಿ. ೨-೪) ; ನೆರಳು ನೋಡಿ ನಿಜಾ ಮರೆತ (ಗಾಜಿ). ೩. (ಆಲಂ) ಆಶ್ರಯ ; ರಕ್ಷಣೆ ; ಆಸರೆ : ನೀರರು ಪರಸ್ಪರರ ತಿರುಳು ನೆರಳು, ಪಾಡುಪಟ್ಟತು ಕರುಳು, ರಾಗರಂಜಿತ ಕೊರಳು, ತಂತಿಯಲಿ ಮೂಡಿಸಿತು ಒಲೆದ ಬೆರಳು. (ಅರಳು. ೪೦೧-೨) ; ಅವನ ಜೀವನವೇ ಅವರಿಂದ ನೆರಳು ಕಂಡಿತ್ತು (ಬೆಟ್ಟಹೂ. ೬೫). ೪. ಅನುಯಾಯಿ ; ಹಿಂಬಾಲಕ : ನಾನು ನಿಮ್ಮ ಪ್ರಜೆ; ನಿಮ್ಮ ನೆರಳು(ಹಾಪುತ್ರ. ೧೧೦). ೫. ಬಳಿ ; ಸಮೀಪ ; ಹತ್ತಿರ : ಕೆಟ್ಟ ಹುಡುಗರ ನೆರಳಿಗೆ ಸಹ ಹೋಗಬಾರದು (ಮುಂಬಯಿ. ೪-೧) ; ಚಂದ್ರಭಾಗಕ್ಕನ ಕೈಹಿಡಿಯುವುದುಳಿಯಲಿ, ಅವಳ ನೆರಳಿಗೆ ಬರುವ ಯೋಗ್ಯತೆಯಾದರೂ ಇತ್ತೆ . . . ಇವನಿಗೆ ? (ಸೂರುದಾ. ೬೪). **ನೆಳಲ್** : ೧. ಮರದ ನೆಳಲಲಿದ್ದು ತನ್ನ ನೆಳಲನುಜಿಸಬಹುದೆ (ಬಸವ. ೩೩೩) ; ಮುಂಗಿಲ ನೆಳಲು ವಿಂದ್ರಚಾಪವಚಿರವೆಂದು ಕಂಡುದಿಲ್ಲ ನಿತ್ಯವೆಂದು ನಿರುತವೆಂದು ಹತ್ತೆ ಸಾರುತಿರ್ದೆನೆಯ್ (ಹಂಪಿರ.ಹ. ೫೧೧-೪) ; ವಾರಿಜಾತಂ ನೆರೆಯೊಳಿರುತಿರೆ ಭೂರುಹಂಗಳ ನೆಳಲನರ್ಥಿಸಿ ಸಾರಿದನಪೊಲು (ಬಸಪು. ೬೦-೪೬) ; ಬಂದು ವಟಕುಜದಡಿಯಲಿನಿಬರು ನಿಂದು ದುರುಪದಿ ಸಹಿತ ನೆಳಲೊಳಗಂದು [ಪಾಠಾಂ. ಬಳಲಿಕೆಯಿಂದ] ವಿಶ್ರಮಿಸಿದರು (ಕುವ್ಯಾವಿ. ೧-೨). ೨. ವಾರಿಧಿ ಬತ್ತುಗುಂ ಮಸುಧೆ ಪೊತ್ತುಗು ದಿಗ್ಗಜಮಳ್ಕಿ ಬಳ್ಕುಗುಂ ಮೇರು ನಗಾಧ್ರಿ ನೀರ ನೆಳಲಂತತಿಸಂಚಳಮಾಗಿ ತೋಳ್ಕುಮೇ (ಎಕ. VIII, ಸಾಗರ. ೧೦೩-೨೬ ; 1089) ; ತಿಲದೊಳಿಹ ತೈಲದಪೊಲ್ . . . ಕನ್ನಡಿಯೊಳಿಹ ನೆಳಲಪೊಲ್ (ಬಸಪು. ೪೯-೩೨) ; ಹೊಳೆವ ಕನ್ನಡಿ ಕೈಯೊಳಿರ್ದು ನೋಡದೆ ನೀರ ನೆಳಲ್ಲಲ್ಲಿ ಮೊಗವ ನೋಳ್ಪಂತೆ (ಭರಜ. ೧-೧೦೩); ಪೂದೊಡಂಬೆಯ ನೆಳಲ್ ತಾಗೆ ಹೊರೆಯೊಳ್, ತೀಡಿ ಮೋದುವಂತಿರೆ ಕನ್ನಡಿಯ ಚೆಲ್ವು ಕಜ್ಜೆ (ಕಾಲೂರ. ೧೧೯-೨೪೪). ೩. ಮನೆ ನೆಳಲಂ ನೆನೆಯದೆ ಅರ್ಥಮಂ ಲೆಕ್ಕಿಸದೆ . . . ಹರಭಕ್ತಿಯೊಳಾತುರದಿಂ ಬಾಗಿ ವಾಡಿಯಂ ಪೊಱಮಟ್ಟು (ಬಸರ. ೨-೪೪). **ನೆಳಲು**$_1$: ೧. ಕಾಯುವೆಂಬ ಕಂಥೆಯ ಧರಿಸಿ ನಿಂದಲ್ಲಿ ನೆಳಲಿಲ್ಲದೆ ಸುಳಿದರೆ ಹೆಜ್ಜೆ ಇಲ್ಲದ ಸುಳಿವ ಅಲ್ಲಮಪ್ರಭುರಾಯನ ಜಂಗಮಸ್ಥಲದ ಫಲುಳಡೆ ಎಂತಿರ್ದುದೆಂದೊಡೆ (ಶೂನ್ಯಸಂ. ೨೦-೧೨) ; ಈಸೆ ನೆಳಲು ಹೊರೆದಿಡುವುದೇ (ವಿಡ್ಡರಾ. ೬-೪) ; ಗಳಹನನಿಲಜ ಗಾಢಗರ್ವದ ಹುಳುಳನರ್ಜುನನವರ ದೇಹದ ನೆಳಲು ಮಾದ್ರೀಸುತರು (ಕುವ್ಯಾಅ. ೧೭-೧೩) ; ಕಳದರಧ್ವಶ್ರಮವನಾ . . . ನಳನಳಿಪ ಮಾಮರದ ನೆಳಲಲಿ ಮೂವರವರು (ತೊರರಾ. ೨-೪-೨೨). ೨. ಬೇರಿಲ್ಲದ ಮರ ನೀರಿಲ್ಲದ ನೆಳಲೊಳಗೆ ತೋಱುವ ಪ್ರತಿಬಿಂಬವ ನಾನೇನೆಂಬೆ (ಅಸಚಂ. ೬-೨೪) ; ನೆಳಲು ಜಲದಲಿ ನಡುಗಲಿನ ಮಂಡಲಕೆ ಕಂಪವೆ (ಕುವ್ಯಾಸ. ೯-೧೪) ; ಮಾರುತನ ವೇಗಮಂ ಮುಂಕೊಂಡು . . . ಮಾರುತಿಯು ಪೋಗುತಿರೆ ನೆಳಲು ಪ್ರತಿಪಾಲಿಸಲಾ ನೀರಧಿಯೊಳು (ವೆಂಕಾರಾ. ೫-೧-೫೪). ೩. ಕೃಷ್ಣನ ನೆಳಲು[ಪಾಠಾಂ. ಒಲುಮೆ, ಬಲುಹು]ದಿಟವುಂಟಾದೊಡೊಳಗಾಗರು ವಿರೋಧಿಗಳು (ಕುವ್ಯಾದ್ರೌ. ೨-೬೨) ; ರಾಮಚಂದ್ರನ ನೆಳಲು ನಿರ್ಜರಕುಜದ ನೆಳಲಾಯ್ತಿಳೆಯ ಜನ ಪುರವರಜನಂಗಳಿಗೆ (ತೊರರಾ. ೨-೧-೬) ; ತಾಯಿಯ ನೆಳಲೂ ಹೊಂಗೆಯ ನೆಳಲೂ ಒಂದೇ ಅಂತೆ, ನನ್ನ ಪಾಲಿಗೆ ತಾಯಿಯ ನೆಳಲು ಬೆಂಕಿಯ ಉರಿಯ ನೆಳಲು (ಸುಪಸಂ. ೨೫). ೪. ಪೊಳೆಪೊಳೆವ ಪರಶಕ್ತಿಯವನ ನೆಳಲೆನಿಸುತಿಹರು (ಗಗತಾ. ೧೨-೬೯).

೬. ಸುಳಿವು ; ಸೂಚನೆ : ಅದರಲ್ಲಿ ವಿಷಯಾಸಕ್ತಿಯ ನೆಳಲೂ ಇಲ್ಲ (ತತ್ವಪ್ರಾ. ೩೮೦). ೭. ಕತ್ತಲೆ ; ಅಂಧಕಾರ : ನೆಳಲು ಸುತ್ತಲು ಸುಳಿದುದಿನಮಂಡಳಕೆ ಕಾಳಿಕೆಯಾಯ್ತು ಫಲದಲಿ (ಕುಪ್ಯಾಸ. ೧೦-೭೨). ೮. ಆಕಾರ ; ಛಾಯಾಶರೀರ : ಹಿಂದೆ ರಾಯನ ಪಟ್ಟದರಸಿಯ ತಂದು ಭಾರಿಯ ಭಂಗಬಡಿಸಿದೆ . . . ಕದನದಲಿ ನೀನೊಂದು ನೆಳಲುಳಿಯಲು ಸಹೋದರವೃಂದ ತನುಜಜ್ಞಾತಿಬಾಂಧವರಳಿದರದಱಿಂದ (ಕುಪ್ಯಾಗ. ೩-೨೭).

ನೆರಳ ದಾರಿ = (ಮರಗಿಡಗಳ) ಛಾಯೆಯಿಂದ ಆವೃತವಾದ ಮಾರ್ಗ : ನೆರಳ ದಾರಿಯಿಂದ ಹೋದರೆ, ಒಂದು ಕಡೆ ಮರದ ಕೆಳಗೆ ಗುಂಡಿ ಮಾಡಿದ ಒಂದು ಕಲ್ಲಿನಲ್ಲಿ ಸ್ವಚ್ಛವಾದ ನೀರಿತ್ತು (ನಿಬಂಧ. II, ೧೫೭). ನೆಳಲನೂಡು = ನೆರಳನ್ನು ನೀಡು : ಎಲೆಗಳಾ ನಡುಹಗಲಿನಲಿ ಕಡುಬಳಲಿ ತೂಕಡಿಸುತ್ತಿರೆ, ನೆಲದ ತಾಪವನಿರದೆ ತಣಿಸುವ ನೆಳಲನೂಡುತ ಕಾಯುವೆ (ಕಎಪು. ೨೯-೩). ನೆಟಲ ಗುಡಿಸು = ಸಂಪೂರ್ಣ ನಾಶ ಮಾಡು ; ಮೂಲೋತ್ಪಾಟನ ಮಾಡು : ಮರೂರು ಕುನ್ದಾಡಿಯ ನೆಟಲ ಗುಡಿಸಿದ ತ್ರೈಲೋಕ್ಯವೀರಕೆ ಕೊಟ್ಟ ಮಣ್ಣು ಇರ್ಖಣ್ಡುಗ (ಎಕ. IX, ಬೆಂಗಳೂ. ೪೦-೯ ; ಸು. 820). ನೆಟಲಾಗು, ನೆರಳಾಗು, ನೆಳಲಾಗು = ೧. ಬಿಸಿಲು ಬೀಳದಂತೆ ತಡೆಯಾಗು ; ಛಾಯೆಯಾಗು : ನೆಟಲಾಗಿರ್ದ ಸರೋರುಹದಳಮಡು ಕಡುವಿಸಿಲ ಬೆಂಕಿಯಿಂ ಕೊರಗಿದೊಡಾಗಳೆ ತನ್ನೆಱಂಕೆಗೊಡೆಯಂ ಕಳವಳಿಸುವ ಸತಿಗೆ ಪಿಡಿದುದೊಂದು ರಥಾಂಗಂ (ಶಾಂತೀಶ್ವ. ೧೨-೨೬); (ಕುಸುಮಾ. ೮-೧೩೦ ನೋ.). ೨. ಅನುವರ್ತಿಯಾಗು ; ಅನುಸರಿಸು : ತಾಯವ್ವ ಪತಿಯ ನೆರಳಾಗಿ ನಡೆವಳು (ಸಿದ್ಧಪು. ೧-೮೮) ; ನೀನು ನಗುತ ಕೈಪಿಡಿದವನ ನೆರಳಾಗಿ ಬಪ್ಪುದಂ ಮೊಗೆದು ನೋಡುವ ಬಯಕೆ ಕನಸಾದುದೇನು ? (ಕಾಲೂರ. ೧೭೬-೩೯೭) ; ಗಂಡಸಿನ ನೆಳಲಾಗಿ ಇರಲು ಮನಸು ಒಪ್ಪದು (ಯಕ್ಷಪ್ರ. ೧೫೭). ೩. ನೆರಳು ಬೀಳು : ಅಳವಾಂತು ಗರುಡ ಕೃಷ್ಣನ ಕೊಂಡು ತೆರಳಲ್ಕೆ ವಳಯದೆ ಪುಣ್ಯಮೂರುತಿಯ ನೆಳಲಾದ ಸ್ವಸ್ಥಾನದೆ ಬಿದ್ದ ಮಾರ್ಗದ ಪೊಳಲವರ್ ಪುಣ್ಯವೆಯ್ದಿದರು (ಮೋಹತ. ೪೨-೧೦). ನೆಟಲೊಳ್ಬರ್ = ಅಧೀನವಾಗು ; ಆಶ್ರಯದಲ್ಲಿರು ; ಅಧೀನಕ್ಕೆ ಬರು ; ಅಂಕೆಗೆ ಒಳಪಡು (?) : ದಮಿತಾರಿಗೆ ಉಟ್ಟಿಸುಟ್ಟುಂಬೆಯ ನೆಟಲೊಳ್ಬಂದುಮುಗುಟಿನೊಳ್ ಪೂಟ್ಟುಂ ಭ್ರೂಲತಾಪ್ರತಾನದೊಳ್ ಕಟ್ಟುಂ ಕೆಟ್ಟಟ್ಟುಮಿರ್ಪುದುಚಿತಮಲ್ತು (ಶಾಂತಿಪು. ೪-೮೨ ವ).

[ದೇ.॥ ತಮಿ. ನಿಟಲ್, ನೀಟಲ್ ; ಮಲ. ನಿಟಲ್ ; ತುಳು. ನೆರಳ್, ನಿರಲ್ ; ಕೊಡ. ನೆಳ ; ತೆಲು. ನೀಡ ; ಕೋಲಾ. ನಿಂದ ; ನಾಯ್ಕಿ. ನೀಂಡ ; ಪರ್ಜಿ. ನೀರ ; ಗಡಬ. ನಿಕಿರ್ ; ಗೊಂಡಿ. ನೀರಾ]

ನೆಟಲ್$_2$ 'ನೇಟಲ್' ನೋ.

ನೆಟಲಂಚೆ, ನೆಳಲಂಚೆ (ನಾ). (ರಾತ್ರಿವೇಳೆಯಲ್ಲಿ ಬೊಂಬೆಯಾಟದಲ್ಲಿ) ತೆರೆಯ ಮೇಲೆ ಪ್ರತಿಬಿಂಬವನ್ನು ತೋರಿಸುವ ಆಟ ಮತ್ತು ಅದಕ್ಕೆ ಉಪಯೋಗಿಸುವ ಬಟ್ಟೆ,—ತೆರೆ (?) : ಅಂತು ಸೋಪಾನಪಙ್ಕ್ತಿಯನೇಱಿ ಪಂಚರತ್ನಧೂಳೀಶಾಳದಿಂ ಪರಿವೇಷಂಗೊಂಡ . . . ಚಕ್ರವಾಳಭೂಮಿಯ ಚಿತ್ರದಂಚೆಯೊಡನೆ ನೆಟಲಂಚೆಯಾಡಿಯುಂ (ಮಲ್ಲಿಪು. ೧೪-೨೧೦). ನೆಳಲಂಚೆ : ಅಳವುಳ್ಳ ರಾವುತರೇಱಲು ಮನವುಳ್ಳ ಬಲುಗುದುರೆಗಳ ಬೇಗದೊಳು ನೆಳಲಂ[ಪಾಠಾಂ. ಲನಂ]ಚೆಯ ಕುದುರೆಗಳಂತವು ಕಣ್ಗೊಳಿಸಿದವಾ ಮೋಹರದೊಳು (ಕುರಾಸಾಂ. ೧೨-೯೧) ; ಇಕ್ಕಿದ ನೆಳಲಂಚೆಯ ತೆರೆಯೊಳಗೆ ಕಾಲಿಕ್ಕುವ ಚಿತ್ರಾಶ್ವಗಳ ಮಿಕ್ಕು ಹೊಳೆದವು ಪಕ್ಕರಿಕೆಯ ಮಱೆಯೊಳು ಮಿಕ್ಕ ಮನದ ಕುದುರೆಗಳು (ಕುರಾಸಾಂ. ೧೨-೯೨). [ನೆಟಲ್$_1$ + ಅಂಚೆ$_4$]

ನೆಟಲ್ದಾಣ (ನಾ). ನೆರಳಿರುವ ಸ್ಥಳ,—ಪ್ರದೇಶ : ಮನಂಗೊಂಡೊಪ್ಪಿದಂ ಮುತ್ತಿನ ಕೊಡೆಯ ನೆಟಲ್ದಾಣದೊಳ್ ಕೃಷ್ಣನಾಗಳ್ (ಪರ್ಧಪು. ೮-೪) ; ವರರಾಜ್ಯಶ್ರೀನಿಜಚ್ಛತ್ರದ ಕುಳಿರ್ವ ನೆಟಲ್ದಾಣದೊಳ್ ಲೀಲೆಯಿಂದೊಪ್ಪಿರೆ ತಾನೆಂದುಂ . . . ತದ್ಭೂಕಾಂತನೋರಂತರಸುತನ ಮನಾ ರೂಢಿಯಿಂ ಮಾಡುತಿರ್ಪಂ (ಕುಸುಮಾ. ೩-೨೩).

[ನೆಟಲ್$_1$ + ತಾಣ]

ನೆಟಲ್ಪಚ್ಚೆ (ನಾ). ನೆಳಲುಬೊಂಬೆಯಾಟದ ತೆರೆ ; ನೆರಳಿನ ಚಿತ್ರಗಳನ್ನು ಮೂಡಿಸುವ ತೆರೆ: ಬನದಿಂದಂ ಬನದಾನೆಗಳ್ ಪಿಡಿಗಳಂ ಮುಂದಿಟ್ಟು ಪೋಪಂತೆ ಕಾಮಿನಿಯರ್ಕಳ್ವೆರಸಾರ್ಯರಾತ್ಮತನುಗಳ್ ತತ್ಕಾಲದೊಳ್ ಮಾಯಮಾಗೆ ನೆಟಲ್ಪಚ್ಚೆ[ಪಾಠಾಂ. ಳಟ್ಟಚ್ಚಿ]ಯ ರೂಪಿನಂತೆ ತಳರ್ದರ್ ಸೌಧರ್ಮಕಲ್ಪಕ್ಕೆ ಭಾವನೆ ಜೈನೋಕ್ತಿಯೊಳಾಗೆ ದುರ್ಗತಿಗಮಾ ಜೀವಕ್ಕಮೇಂ ಸಮ್ಮದಂ (ಶಾಂತಿಪು. ೬-೧೨).

[ನೆಟಲ್$_1$ + ಪಚ್ಚೆ$_0$(P ← ಪ್ರಾ. ಪಚ್ಛಯ = ಬಟ್ಟೆ)]

ನೆಟಲ್ವಿಡಿ (ಕ್ರಿ). ನೆರಳನ್ನುಂಟುಮಾಡು : ಹೇಮಸರೋಜದೊಳ್ತಳೆದು ಮಾಣಿಕಮಂ ಶರದಭ್ರಶುಭ್ರಮಂ ತಾಮರಸಪ್ರಸೂನಮನದಕ್ಕೆ ನೆಟಲ್ವಿಡಿದೊರ್ವಳುತ್ಪಲಶ್ಯಾಮಳೆ ಮಂಗಳಾಭರಣಭೂಷಿತೆ ತಂದದನೀವುದಂ ಲತಾಕೋಮಳೆ ಕಂಡಳ್(ಮಲ್ಲಿಪು. ೪-೫೬). [ನೆಟಲ್$_1$ + ಪಿಡಿ$_1$]

ನೆಟಲ್ವೀಱು (ಕ್ರಿ). ನೆರಳನ್ನು ಬೀರು ; ಛಾಯೆಯನ್ನು ಪಸರಿಸು,—ಹರಡು : ರವಿಯಿರ್ದೆಡೆಗೆ ನೆಟಲ್ವೀಱುವ ಬಾಂಗಡರ್ದೇಱುವ ತರುಗಳಾ ತಪೋವನತರುಗಳ್ (ಜಾವಿ. ೧೬-೩೮). [ನೆಟಲ್$_1$ + ಬೀಱು$_1$]

ನೆಟಿಲ್, ನೆಳಿಲ್ (ನಾ). ಒಂದು ಅನುಕರಣ ಶಬ್ದ : "ನೆಟಿಲ್ಲೆನೆ (ನೆಟಿಲೆನೆ), ನೆಟ್ಕನೆಯೆ ಮುಱಿದುದು—ಇವು ಅನುಕರಣಂಗಳ್" (ಶಮದ. ಪರಿ. ೧). ನೆಳಿಲ್ : ತರ್ಕೈಸಿ ಸುರಿವ ತೆಱದಿಂದುರ್ಕಂಬುಗಳೆಱಗಿ ರೋಮರೋಮಕ್ಕೆ ನೆಳಿಲ್ ನೆಕ್ಕು ಚಳಿಲ್ ಚಕ್ಕು ದೊಗಲ್ದೊಕ್ಕೆನೆ ನಾಂಟದುವರಾತಿಭಟರವಯವಮಂ (ಜಗವಿ. ೬-೮೧).

ನೆಳಿಲ್ನೆಳಿಲ್ (ದ್ವಿರುಕ್ತಿ) : ಕರಮಂ ತೂಂತಿ ತದಾಸ್ಯದೊಳ್ ಬಳೆಯಿಸಲ್ ತದ್ವರ್ಧನೋದ್ರೇಕದಿಂ ಸೆರೆಗಳ್ ಬೀಗಿ ನೆಳಿಲ್ನೆಳಿಲ್ಗರೆಯೆ ನೆತ್ತರ್ ಮೂಗಿನೊಳ್ ತೀವಿ ಪಾಯ್ತರೆ ನಿಟ್ಟೆಲ್ವು ಭಟಚ್ಛಟೆಂದೊಡೆಯೆ ತದ್ದೈತ್ಯಾಧಮಂ ನೀಳದಿಂ ಬಿರಿದಂ (ಜಾವಿ. ೫-೪೬) ; ಬೆರಸಿ ಪದಾತಿ ನೆಕ್ಕುನೆರಿಲೆಂಬ ನೆಳಿಲ್ನೆಳಿಲೆಂಬ . . . ನಿಷ್ಠುರರವಂ ಮಿಗೆ ತಳ್ತಿಱಿದತ್ತು ಯುದ್ಧದೊಳ್ (ಗಿರಿಕ. ೬-೬೮).

ನೆಟಿಳ್ದಾಳೆ (?). (?) : ದೇವನ್ ಆಱ್ಮ ಸತ್ತ ಆತನಗಿಪ × × × ರರ್ ಕೊಟ್ಟೊದು ನೆಟಿಳ್ದಾಳೆ ಅಯ್ಗೊಳಂ ಕಟಿನಿ ಇದನಳಿವೋನ್ × × × ಪಞ್ಚಮಹಾಪಾತಕನಕ್ಕು (ಎಕ. X, ಶ್ರೀನಿವಾ. ೪೧-೩ ; ?). [?]

ನೆಟ್ಕನೆ, ನೆಳ್ಕನೆ (ಅ). ಒಂದು ಅನುಕರಣಾವ್ಯಯ : "ನೆಟಿಲ್ಲೆನೆ (ನೆಟಿಲೆನೆ), ನೆಟ್ಕನೆಯೆ ಮುಱಿದುದು—ಇವು ಅನುಕರಣಂಗಳ್" (ಶಮದ. ಪರಿ. ೧). ನೆಳ್ಕನೆ : ಮುನ್ನಂ ಶರಯಂತ್ರಮನತ್ಯುನ್ನತಿಯಿಂ ಶಬರರೊಲ್ದು ಕಪಿಲಾಸವದೊಳ್ ಚೆನ್ನೆಸೆಯೆ ಮಾಡಿರಲ್ ಯಂತ್ರಂ ನೆಳ್ಕನೆ ಪುಲಿಯ ಗೋಣನರಿಯಿತ್ತಾಗಳ್ (ದಶಕು. ೨-೧೩೫).

[ನೆಟ್ಕು + -ಅನೆ$_1$]

ನೆಟ್ಕು, ನೆಳ್ಕು (ನಾ). ಒಂದು ಅನುಕರಣ ಶಬ್ದ : ಒದೆದೆಡದ ಬರಿಯ ಪಲಗೆಯನಿಡಿಯೆಲ್ಗಳ್ ನೆಟ್ಕು ನೆಟಿಲೆನಲ್ ಕರಿ ತಟ್ಟುಂಗೆಡೆಯೆ ಭಗದತ್ತನಿಟ್ಟಂ ಕಡುಪಿಂ ಪಿಡಿದಿರ್ದ ನಿಶಿತವಜ್ರಾಂಕುಶದಿಂ (ಮಹಾನೇ. ೧೨-೧೩೯). ನೆಳ್ಕು : ಕೆಡೆವ ಕರಿ ನೆಳ್ಕು ನೆಳಿಲೆನಲುಡಿವ ವಿಷಾಣಂಗಳೊಂದೆವೊಯ್ಲಿಂ ಪಱಿದಿಕ್ಕಡಿಯಾಗಿ ಪಿಂದಣಂಗೊಂಡೊಡಲಜಗರದಂದ ಮಾದ ಶುಂಡಾದಂಡಂ (ಮಹಾನೇ. ೧೨-೫೩).

ನೇಟ್ಕುನೇಟ್ಕು (ದ್ವಿರುಕ್ತಿ) : ಕಡಲೇಟುಂ ಕದಡಲ್ ಕುಲಾದ್ರಿಕುಲ ಮಟ್ಟುಡಲ್ ಮಹೀಮಂಡಲಂ ನಡುಗಲ್ ತೀವ್ರಕರಾರದಾವಯವಮೆಲ್ಲಂ ನೇಟ್ಕುನೇಟ್ಕುಂಡಿನಲ್ . . . ಆ ಭೀಕರದಾಕರಂ ಘನರವಂ ಪರ್ವಿತ್ತು ಮೂಲೋಕಮಂ (ಸುಭದ್ರಾ. ೧೩-೬೫).

△ನೇಟ್ಗು 'ನಡುಂಕು' ನೋ.

ನೇ 'ನೆಯ್'[1] ನೋ.

ನೇಕನಿಯತ್ತು, ನೇಕುನಿಯತ್ತು (ನಾ). ಒಕ್ಕೆಯ ಸಂಕಲ್ಪ ; ಸದುದ್ದೇಶ : ಆ ಕಾಗದದಲ್ಲಿ ತಾವು ನೇಕನಿಯತ್ತಿನಿಂದ ಬಹಳ ದಿವಸ ದಾರಭ್ಯ ಹಮೇಷ ದೋಸ್ತಿಯಿಂದಾ ನಮ್ಮ ಸರಕಾರಕ್ಕೆ ಖೈರುಕಾಯಿ ಮಾಡಿರುವಂಥಾದ್ದು ನಾವು ದರಿಯಾಫ್ತ್ ಮಾಡಿ . . . ಬರದು ಇದ್ದೇವೆ (ರಾಜೇಂದ್ರ. ೩೨೮). **ನೇಕುನಿಯತ್ತು** : ಇಂಗ್ರೇಜ್ ಬಹಾದ್ದರರ ಜಯಪ್ರದವಾದ ಸರಕಾರದ ಯಾವತ್ತು ಜನರ ನೇಕುನಿಯತ್ತಿನಿಂದಾ ಆಗಿ ಇದೆ (ರಾಜೇಂದ್ರ. ೩೮೫). [←ಪಾರ. ಹಿಂ. ಮರಾ. ನೇಕ್‌ನೀಯತ್]

ನೇಕರಿಸು 'ನೀಕರಿಸು' ನೋ.

ನೇಕಾರ 'ನೆಯ್ಗಾರ' ನೋ.

ನೇಕಾರಗೊತ್ತಳಿ (ನಾ). ನೇಯ್ಗೆಕಾರರ ಸಂಘ : ಅಲ್ಲಿನ ನೇಕಾರ ಗೊತ್ತಳಿ, ಸಿಪ್ಪಿಗಗೊತ್ತಳಿಗಳೂ ಕೂಡ ಸ್ವಲ್ಪ ನೆರವಾಗಿವೆ (ಸನಪ. ೨೧).

[ನೇಕಾರ(<ನೆಯ್ಗಾರ)+ಕೊತ್ತಳಿ(<ಕೊತ್ತು೪)]

ನೇಕಾರಿತಿ (ನಾ). ನೆಯ್ಗೆಯ ಕೆಲಸ ಮಾಡುವವಳು ; ನೇಯುವವಳು : ನನ್ನ ನಿನ್ನೆಯ ಮನದ ಹೊನ್ನ ಮಗ್ಗದ ಮೇಲೆ ನಿನ್ನ ಮತ್ತೆನ್ನೆಡೆಯ ಕಸೆಗೆ ಕಸೆಯನುಗೊಳಿಸಿ ನನ್ನಿ ನೇಕಾರಿತಿಯು ಮುಗಿಯದಿಹ ಬಟ್ಟೆಯನ್ನನವರತ ನೇಯುತಿಹಳು (ಗಂ. ೮-೧೨).

[ನೇಕಾರ(<ನೆಯ್ಗಾರ)+-ಇತಿ[1](<-ಇತ್ತಿ)]

ನೇಕುನಿಯತ್ತು 'ನೇಕನಿಯತ್ತು' ನೋ.

ನೇಕ್ಚಾಲ್ (ಗು). ಸಭ್ಯರೀತಿಯ ; ಉತ್ತಮ ನಡವಳಿಕೆಯ ; ಸದ್ವರ್ತನೆಯ : ಗ್ರಾಮಾಧಿಕಾರಿಯು ತನ್ನ ಗ್ರಾಮದಲ್ಲಿ ಯಾರಾದರೂ ಅನುಮಾನಾಸ್ಪದವಾದ ನೇಕ್‌ಚಾಲ್ ಜನಗಳು ಬಂದು ಇಳಿದ ಕೂಡಲೇ ಆ ಸಂಗತಿಯನ್ನು . . . ಪೋಲಿಸಿಗೂ ತಿಳಿಸತಕ್ಕದ್ದು ಅವನ ಕರ್ತವ್ಯ (ಗ್ರಾಮಾಕಾ. ೪೬). [←ಪಾರ. ಹಿಂ. ನೇಕ್‌ಚಾಲ್]

ನೇಗಲ್ 'ನೇಗಿಲ್' ನೋ.

ನೇಗಲಿ 'ನೇಗಿಲ್' ನೋ.

ನೇಗಲಿಹೊಡೆ 'ನೇಗಿಲುಹೊಡೆ' ನೋ.

ನೇಗಲು 'ನೇಗಿಲ್' ನೋ.

ನೇಗಲುಕನ್ನೆಸೊಪ್ಪು (ನಾ). ಒಂದು ಬಗೆಯ ಸಸ್ಯ : ನೇಗಲುಕನ್ನೆಸೊಪ್ಪು, ಗೊಲಗಂಡಿ (ವೈದ್ಯಸಿ. ೨೬-೫೦೫).

[ನೇಗಲು? + ಕನ್ನೆಸೊಪ್ಪು]

ನೇಗಾರ 'ನೆಯ್ಗಾರ' ನೋ.

ನೇಗಿಲ್, ನೇಗಲ್, ನೇಗಲಿ, ನೇಗಲು, ನೇಗಿಲು (ನಾ). ೧. ಭೂಮಿಯನ್ನು ಉಳುವುದಕ್ಕಾಗಿ ಬಳಸುವ ಸಾಧನ ; ರೆಂಟೆ ; ಹಲ : "ಹಲಂ, ಲಾಂಗಲಂ, ಸೀರಃ—ತೆ ಕ ನೇಗಿಲ್" (ಹಲಾಯು. ೯೪-೪೫೧) ; ನೇಗಿಲುಮೆಟ್ಟುಂ ಸಂಧಿಸಿ ಪೋಗದೆ ನಿಲೆ ನಟ್ಟ ಮನೆಯ ಮುಟ್ಟುಗಳೊಳ್ ಮೇಣಾಗೆ ವಿಕಾರಂ ನರಿ ಮೇಣೋಗದಿಸದೆ ಕರೆಯೆ ಕೆಯ್ವುವಿಂ ಭಯಮಕ್ಕುಂ (ಲೋಕೋಪ. ೪-೬೦) ; ಮೂಗಿನೊಳುಟು ವಾತಂಗೆ ನೇಗಿಲಂ ಕೊಟ್ಟರೆಂಬಂತೆ . . . ಲೋಕದೊಳೀತಂ ಮಾಯಾವಿದ್ಯೆಯಪ್ಪ ಜನಳುಟಕೆಯಿಂ ಜನರ ಸರ್ವಸ್ವಮಂ ಕಳ್ವಂ (ಧರ್ಮಾಮೃ. ೨-೧೪೯) ; ನೇಗಿಲುಬಲೊಳ್ಳಿತದು ಪಿಡಿದಾಗಳುಮೊಕ್ಕಲಿಗನಂತೆ ಕಪ್ಪಡ ಮುಟ್ಟಾಳಾಗಿರ್ದಮ್ಮರಸನ ಪೊಜವಾಗಿಲನೋಲಗಿಪುದೊಳ್ಳಿತಜ್ಞಂದಿರವೋ (ಬಂಹರಿ. ೧೧-೬೨). **ನೇಗಲ್** : ೧. "ನೇಗಿಲ್(ಲ,ನೇಗಲ್) —ಲಾಂಗಲ" (ತದ್ಭವಕೋ.೨೩). **ನೇಗಲಿ** : ೧. ಪೋತ್ರ . . . ನೇಗಲಿಯ ತುದಿ (ಗಂಗಾಮ. ೨೧೪) ; ಭೂಮಿಯ ವ್ಯವಸಾಯಕ್ಕೆ ಬೇಕಾಗಿರುವ . . . ನೇಗಲಿ ಮಡಿಕೆ ರೆಂಟೆ ಕುಂಟೆ ಕೂರಿಗಿಯುಡಿಯು ಕುಂಟೆ ತುಸು . ನೊಗಗಳು ಶಿಲ್ಪಶಾಸ್ತ್ರಕ್ರಮದಂತೆ ಅನುವಾಗಿಯೂ ಬಲಾತ್ಕಾರವಾಗಿಯೂ ಇರಬೇಕು (ಕೃಷಿಪ್ರ. ೨೦) ; ನೇಗಿ ಹೂಡಿದ ಜೋಡ, ನೇಗಲಿಯ ಒಳ್ಳಲಿಗ ಹಾಗಿನಲಿ ಹಾದಿ ಹುಲುಸಾಗಿ ಭೂಲೋಕ ತೂಗಿ ತೊನೆಯುವದು ಬೆಳೆ ತುಂದಿ (ಕನ್ನಜಾ.೧೩೭). **ನೇಗಲು** : ೧. "ಲಾಂಗಲಂ, ಹಲಂ, ಗೋದಾರಣಂ, ಸೀರಃ—ನೇಗಲ ಹೆಸರುಗಳು" (ಸಿದ್ಧಾಂತಿ.೨೬೮); ಒಂದು ಸಣ್ಣ ಬಗಿ ಇದ್ದದ್ದು ನೇಗಲಾಯಿತು (ಮುಂಬಯಿ. ೫-೨೬೪) ; ನೇಗಲು ಉತ್ತರೆ ಹೊಲ, ಹಾಲು ಇದ್ದರೆ ಗೋವು (ಗಾದೆ). ೨. ಯುದ್ಧದಲ್ಲಿ ಬಳಸುವ ಒಂದು ಬಗೆಯ ಸಲಕರಣೆ ; ನೇಗಿಲಿನಾಕಾರದ ಆಯುಧ : ಒಂದು ದಿಕ್ಕಿನಲ್ಲಿ ಮಹಾರಥಿಕರು ನೊಗೆಯನ್ನು ನೊಗೆಯಿಂದಲೂ ನೇಗಲನ್ನು ನೇಗಲಿಂದಲೂ . . . ತಾಕಿಸಿ . . . ಹೋರುತ್ತಿದ್ದರು (ಕೃವಾಭೀ. ೭೪) ; ವಿದಳಿತವಾದ ನೇಗಲುಗಳೂ. . . ಹಲ್ಲಣಗಳೂ . . , ಇವೇ ಮೊದಲಾದವು ಯುದ್ಧರಂಗದಲ್ಲಿ ಭಯಂಕರವಾಗಿದ್ದವು (ಕೃವಾಕ. ೧೦೧). **ನೇಗಿಲು** : ೧. ಹೊನ್ನ ನೇಗಿಲಲುತ್ತು ಎಕ್ಕೆಯ ಬೀಜವ ಬಿತ್ತುವರೆ (ಬಸವ. ೫೯೫) ; ಪೊನ್ನ ನೇಗಿಲಲುತ್ತು ಗುಳ್ಳದ ಬೀಜವಂ ನೆಜೆ ಬಿತ್ತುವಂದದಿ (ಬಸವ. ೬೦-೫೦); ಕುಲಿಶಪರಿಯಂತೇಕೆ ನೇಗಿಲ ಬಳಿಯ ಹುಲುವೆಟ್ಟಕೆ ಖರೋಧಿಗಳಳಬಲಕೆ ಕಲಿಕರ್ಣ ನೀ ಪರಿಯಂತೆ ಸಂಗರವೆ (ಕುವ್ಯಾಭೀ. ೧-೪) ; ನೇಗಿಲ ಹಿಡಿದಾ ಹೊಲದೊಳು ಹಾಡುತ ಉಳುವಾ ಯೋಗಿಯ ನೋಡಲ್ಲಿ (ಕೊಳಲು. ೨೮-೧). ೨. ಬೀಸುನೇಣನ ಸೆಳೆವ ನೇಗಿಲ ಸೂಸುಗಣೆಗಳ ಕಡಿವ ಕೊಡಲಿಯ ಕೈಸುರಗಿ ಸೂನಗೆಯ ನಾನಾಯುಧದ ಗಡಣಗಳ . . . ವೈರಿಬಲವನು ಘಾಸಿಮಾಡಿದರೊಗ್ಗಿನಲಿ ಹಮ್ಮಿರೆ ರಾವುತರು (ಕುವ್ಯಾಭೀ. ೪-೬೨) ; ಗುಟ್ಟಳಿದುದು ವಜ್ರಮಯರಥ ನೇಗಿಲ ಪೆಟ್ಟು ಸಂಧಿಸಲು ನುಗ್ಗಾಯ್ತು ಬಿಟ್ಟುದು ಬಾಯ ರಕ್ಕಸರಾಯಸೈನ್ಯ ಕಂಗೆಟ್ಟುದು (ಮೋಹತ.೪೦-೫೯). ೩. [ಜ್ಯೋತಿ] ಒಂದು ನಕ್ಷತ್ರಪುಂಜದ ಹೆಸರು : ಪ್ರಾಚೀನಕಾಲದ ಪಾಶ್ಚಾತ್ಯರು ಇದೇ ಪುಂಜಕ್ಕೆ 'ಸಪ್ತರ್ಷಳ' . . . ಎಂಬುದಾಗಿ ನಾವು ಕರಣವನ್ನು ಮಾಡಿದ್ದರು. ಕೆಲವರು ಸಾಮಾನ್ಯವಾಗಿ ಇದನ್ನು 'ನೇಗಿಲು' ಎಂದು ಕರೆಯುವುದುಂಟು (ಜ್ಯೋತಿವಿ. ೨೫).

[ದೇ.॥ತಮಿ. ಞಾಞ್ಞಲ್, ನಾಞ್ಞಲ್; ಮಲ. ಞೀಞ್ಞಿಲ್; ತುಳು. ನಾಯೆರ್; ತೆಲು. ನಾಂಗಲಿ, ನಾಂಗೆಲು, ನಾಂಗೇಲು ; ಗಡಬ. ನಾಂಗಲ್ ; ಕುಣ. ನಾಂಗೆಲಿ./ಸಂ. ಲಾಂಗಲ]

ನೇಗಿಲು 'ನೇಗಿಲ್' ನೋ.

ನೇಗಿಲುಹೊಡೆ, ನೇಗಲಿಹೊಡೆ (ಕ್ರಿ). ನೇಗಿಲಿಂದ ಉಳು,—ಉಳುಮೆ ಮಾಡು : ಉಳು = ಹರಗು, ನೇಗಿಲುಹೊಡೆ (ಗಂಗಾಮ. ೪೭). **ನೇಗಲಿ ಹೊಡೆ** : ಸೀತೆ = ಹೊಲದೊಳಗೆ ನೇಗಲಿ ಹೊಡೆದ ಗೆರೆ (ಗಂಗಾಮ. ೬೨೯).

[ನೇಗಿಲು(<ನೇಗಿಲ್)+ಹೊಡೆ[1](<ಪೊಡೆ[1])]

ನೇಗಿಲ್ಬಾಯ್ (ನಾ). ನೇಗಿಲಿನ ತುದಿಯ ಭಾಗ,—ಮುಂಭಾಗ : ಕುಟಂ (ಗುಬಂ) = ನೇಗಿಲ್ಬಾಯಿ ಕಬ್ಬುನಂ (ಕಪುಡ. ಪರಿ. ೧).

[ನೇಗಿಲ್ + ಬಾಯ್]

ನೇಗೆ 'ನೆಯ್ಗೆ' ನೋ.

ನೇಜ 'ನೇಜಯ' ನೋ.

ನೇಜಯ, ನೇಜ, ನೇಜೆ, ನೇಜೆಯ, ನೇಜ್ಯೆ, ನೇಝಿಯ, ಲೇಜಯ (ನಾ). ೧. ಒಂದು ಬಗೆಯ ಆಯುಧ; ಈಟಿ; ಭರ್ಜಿ; ಭಲ್ಲೆ : ಕರದ ಖಂಡೆಯದಿಂದ ರಿಪುಗಳ ಶಿರವನು ತಱಿದು ನೇಜಯದಿಂದಲಿಱಿದು ತುರಗಗಳನು ಬೀಳಗೆಡಹಿ ಬೆಟ್ಟದ ಚಾಮ ದುರಗಲಿ ಮೆಱೆದ ಸಾಹಸವ (ಕಂನವಿ. ೩-೮೦) ; ರಾಜಬೀದಿಯೊಳಿಟ್ಟು ಮಾಱುತಿಹ ವಡೆಯನುಂ ನೇಜಯದ ಮೊನೆಯಿಂದಲಿಱಿದು ಕೊಳ್ಳೆಲೆ ಬಸವ ರಾಜನೆ ಪ್ರಸಾದಮುಮನೆನಲು (ರಾಘಚ. ೧೨-೬೦) ; ನೇಜ[ಪಾಠಾಂ. ಜಿ, ಜೆ]ಯದಿಂದಿಱಿದೆತ್ತಿ ನಿಜೌಜಮನೆ ಬಿಡಾಜಸರ್ಗೆ ತೋರ್ಪಂತ ಸುಹೃದ್ರಾಜಿಯನೆ ವಾಜಿವಾಹಕರಾಜಿ ಮಹಾಜಿಯೊಳೆ ತಳರ್ದುದದ್ಭುತ ಮೊಗೆಯಲ್ (ರಾಜಶೇ. ೬-೬೫). ೨. ಒಂದು ಬಗೆಯ ಧ್ವಜ, — ಪತಾಕೆ : ಗೂಳಿಗಳ ಠಕ್ಕೆಯದ ವ್ಯಾಸನ ತೋಳ ಕೇತನಗಳ ಕಲಶಗಳ ಮೇಳವಿಸಿ ಮುಂಗಡೆಯ ಮಿಱುಗುವ ಶುಭ್ರ ನೇಜಯದ . . . ಗಡಣದೊಳು ತೆರಳಿದ ಹರಿಶರಣಭರಣ (ಶಂಕದಾ. ೬-೩೭). **ನೇಜ** : ೧. ತಾವರೆಯೆಲೆಯ ಖೇಡೆಯ ಪೊನ್ನ ಕದಳಿಯ ಸುಳಿಯ ನೇಜ[ಪಾಠಾಂ. ಜೆ]ಗಳಾ ಲಲಿತಹಸ್ತದೊಳಾಂತು . . . ನೋಡಿದನಮಿತ ಸೈನಿಕವ (ಆನಂರಾ. ೧-೧೯-೧೨) ; ವರಪಾತುಶಾಹಸೈನ್ಯೋತ್ಕರವನೆರಳ್ಳಯ್ಯೊಳಾಂತ ನೇಜಗಳಿಂ ಕೋಡಿರಿದು ಕಾಲ್ದೆಗೆಸಿ ವೆಂಕಟನರಪತಿ ದೋನೇಜನೆಂಬ ಬಿರುದಂ ಮೆರೆದಂ (ಕಳನೃ. ೫-೨೫) ; ವಾಜಿಯನು ಏರುತಲಿ ಕರದಲಿ ನೇಜವನು ಪಿಡಿಯುತಲಿ ಜಗದಲಿ ಸೋಜಿಗವ ತೋರುತಲಿ ಮ್ಲೇಂಭರನೆಲ್ಲ ಮಥಿಸುತಲಿ (ಸುದಾಮ. ೩-೨೪). ೨. ಮೆಱೆವ ನೇಜಗಳನು ಮೇಲಕೆ ಹಾಱಿಸಿ ದೊರೆಮಗನಿಗೆ ಕೈಯ ಮುಗಿದು (ಜ್ಞಾನಚ. ೪-೪೬). **ನೇಜೆ** : ೧. ರಾವುರಾವುತರು ಅತಿ ತವಕದಿಂದ ನೇಜೆ ನೇಜೆಗಳಿಂದಲಿಱಿದಾಡಿ ನೆತ್ತರವು ಹೂಜೆಯಿಂ ಬೀಳ್ವ ಕೆಂಜಲದಂತೆ ಸುರಿವುತ್ತ (ಪ್ರೌಢರಾ. ೧೪-೩೫) ; ತುರಗವನಡರಿ ನೇಜೆಯನಾಂತು ಕರದೊಳು ಹರಿಸಾಡುತ ಕುದುರೆಗಳ (ಜ್ಞಾನಚ. ೩೨-೩). **ನೇಜೆಯ** : ೧. ನೇಜೆಯದಿಱಿತಕೆ ಚಿಗಿದು ಕುದುರೆಯಿಂದ ಮಾಜದೆ ಬೀಳ್ವ ರಾವುತರ ವಾಜಿಯ ಪಿಡಿದು ಮೂಗರಿದವರನು ಯಮರಾಜನಾಲಯ ಕಟ್ಟದರು (ಕಂನವಿ. ೩-೬೯) ; ಎರಕದಿಂ ನೇಜೆಯವನು ಕರದೊಳಗಾಂತು (ಜ್ಞಾನಚ. ೪-೬೬). ೨. ನೆಗಳ ನೇಜೆಯ ಬಗೆಬಗೆಯ ಪತಾಕೆಗಳ್ಮುಗಿಲ ನಲೆವುತ ಮುಂದೆಯ್ದೆ ಪೊಗಳುತ ವಂದಿಗಳೆಯ್ತರೆ (ಕುರಾಸಾಂ. ೧೧-೮೨) ; ಮುಗಿಲ ಮುಟ್ಟುವ ವೈಜಯಂತಿಗಳಿಂ ನವದುಗುಲದ ನೇಜೆ[ಪಾಠಾಂ. ಜ, ಝೆ]ಯದಿಂದ ಸೊಗಯಿಪ ಸಿಂದಂಗಳಿಂದ ಸ್ವಯಂವರ ಮಿಗೆ ರಂಜಿಸಿದುದು (ರಾಮವಿ. ೭-೩೨). **ನೇಜ್ಯೆ** : ೧. ಅನೇಕವಾದ ದುಷ್ಟ ಮೃಗಗಳನ್ನು ಕೆಣಕಿ ಬೇಟೆಯಾಡುತ . . . ಕೈಗೆ ಸಿಕ್ಕದೆ ಓಡುತ್ತಿದ್ದ ಮೃಗಗಳನು ಕುಮಾರಸ್ವಾಮಿಯೋಪಾದಿಯಲ್ಲಿ ನೇಜ್ಯೆಗಳಿಂದ ತಿವಿಯುತ (ಕೃವಾಅ. ೧೫೧). **ನೇಝಿಯ** : ೧. ಸಿಂಗಾಡಿ ತರಕಸ ಖೇಡೆಯ ನೇಝಿ[ಪಾಠಾಂ. ಜೆ]ಯ ಕಂಗಲು ಬಲು ಜೋಡುಗಳನು ಅಂಗವ ತಂದೊಪ್ಪಿಸಿದನು ಕಾಟಣ್ಣನಭಂಗವಿಕ್ರಮರಾಮನೆಡೆಗೆ (ಕುರಾಸಾಂ. ೪೨-೮೨). **ಲೇಜಯ** : ೧. ನರಪತಿಯು ನಗುತಲಂಗಡಿಯೊಳಿಹ ಗಾರಿಗೆಯ ಸರಿಸದಿಂ ಲೇಜಯದ ಮೊನೆಯೊಳಾನುತೆ ಬಸವ ಕೊಳ್ಳೆನಲು ಹುಳು ಬಿಸುಡೆನೆ (ಪ್ರಭುಪು. ೭-೫೮).

[←ಪಾರ. ಹಿಂ. ಮರಾ. ನೇಜಾ]

ನೇಜಯಂಬೊಱು (ಕ್ರಿ). ಈಟಿಯನ್ನು ಹಿಡಿದುಕೊಳ್ಳು : 'ನೆಗೆದಡರಿ ನೇಜಯಂಬೊತ್ತೇಱಿ ತಿವಿದೊಡನೆ ಚಿಗದೆತ್ತಿ ಬಿಸುಡುತ್ತೆ ರಾವ್ತಗುದುರೆಗಳನುಗಿಬಗಿಮಾಡಿ ಕಾದುತ್ತಲಿರ್ದರಿರ್ಬಲದ ಘೋಟಾರೂಢರಾಹವದೊಳು (ಚೆಬಪು. ೪೮-೫೧). [ನೇಜಯ+ಪೊಱು]

ನೇಜಿ (ನಾ). ೧. (ಕರಾ) ಬತ್ತ, ರಾಗಿ ಮೊದಲಾದುವುಗಳ ಎಳೆಯ ಸಸಿ: ಸ್ವತಃ ತಮ್ಮ ಮನೆಯ ದನವೇ ಬೇಕಾದರೆ ಗದ್ದೆಗಳ ನೇಜಿ ತಿಂದರೆ "ನಿನ್ನನ್ನು ಹುಲಿಯೇ ತಿನ್ನಲಿ!" ಎಂದು ಶಪಿಸುತ್ತಿದ್ದರು (ಕೃಮಾಂಸ. ೪) ; ವೆಂಕಪ್ಪಯ್ಯನವರ ಗದ್ದೆಗಳಲ್ಲಿ ನೇಜಿ ಇದ್ದರೂ ಕೋಣಗಳಿಂದ ತುಳಿಸಿ ಅವುಗಳ ಪೈರನ್ನೆಲ್ಲಾ ಹಾಳು ಮಾಡಿಸಿದರೆ ಅವರು 'ಸಲಾಂ' ಹೊಡೆದು ಗದ್ದೆ ಮಾರುತ್ತಾರೆ (ಪರಾಮ. ೩೪) ; ನೇಜಿಗಾಗಿ ಪ್ರತ್ಯೇಕ ಒಂದು ಕೆಸರು — ಮಜಲಿನಲ್ಲಿ ಬತ್ತದ ಬೀಜ ಚೆಲ್ಲಿ ನೀರನ್ನೊಣಗಿಸಿ ಬಿಟ್ಟರು (ಬಾಳಿಗಿ. ೧೦೩) ; ದೂಜಸೋಜರಿಗೆ ಸದ್ಯ ಗಿರಿಯಪ್ಪರ ನೇಜಿ ತೆಗೆಸಲು ಸಿದ್ಧತೆ ನಡೆಸುವ ಕೆಲಸ ಸಿಕ್ಕಿತ್ತು (ರಕ್ತರೂ. ೫೨). ೨. ಅಗೆ ಹಾಕಿ ಒಗ್ಗಾಗಿ ಬೆಳೆಸಿದ ಸಸಿಗಳನ್ನು ಕಿತ್ತು ಕ್ರಮವಾಗಿ ಬೇರೆ ಬೇರೆ ಸ್ಥಳಗಳಲ್ಲಿ ನೆಡುವಿಕೆ; ನಾಟ ಮಾಡುವಿಕೆ : ಅಂದು ಗಿರಿಯಪ್ಪರೇ ಸ್ವತಃ ನೇಜಿಯ ಕೆಲಸದ ಮೇಲ್ವಿಚಾರಣೆ ನಡೆಸುತ್ತಿದ್ದರು (ರಕ್ತರೂ. ೫೨).

ನೇಜಿ ಹಾಕು = ಒಗ್ಗಾಗಿ ಬೆಳೆಸಿದ ಸಸಿಗಳನ್ನು ಕಿತ್ತು ಕ್ರಮವಾಗಿ ನೆಡು ; ನಾಟ ಹಾಕು : ತರಕಾರಿ ಬೆಳೆಯಿಸಿದ ಗದ್ದೆಯಲ್ಲಿ ನೇಜಿ ಹಾಕಿದರೆ ಒಳ್ಳೆಯದಾಗುತ್ತದಾದ್ದರಿಂದ ಎಷ್ಟು ಸಾಧ್ಯವೋ ಅಷ್ಟು ನೆಟ್ಟು ಬೆಳೆಸುತ್ತಿದ್ದರು (ಭ್ರಾಂಕಿಸು. ೩). [←ತುಳು. ನೇಜಿ]

ನೇಜಿ ಕೀಳು (ಕ್ರಿ). ಒಗ್ಗಾಗಿ ಬೆಳೆಸಿದ ಸಸಿಗಳನ್ನು ನಾಟ ಹಾಕುವುದಕ್ಕಾಗಿ ಕೀಳು, —ತೆಗೆ : ಗದ್ದೆಯ ಒಂದಂಚಿನಲ್ಲಿ ಹತ್ತಿಪ್ಪತ್ತು ಜನ ನೇಜಿ ಕೀಳುವ ಕೆಲಸದಲ್ಲಿ ತೊಡಗಿದ್ದರು (ಚಿಗುಬ. ೭).

[ನೇಜಿ+ಕೀಳು$_1$(<ಕೀಟ್$_1$)]

ನೇಜಿ ನಡು, ನೇಜಿ ನೆಡು (ಕ್ರಿ). ನೇಜಿಹಾಕು ; ನಾಟ ಹಾಕು : ಹಲವರೊಟ್ಟು ಸೇರಿ . . . ಉಚ್ಚಸ್ವರದಿಂದ ಪಾಡ್ದನ ಹಾಡುತ್ತಾ ಮಿಂಚಿನ ವೇಗದಿಂದ ನೇಜಿ ನಡುತ್ತಾ ಸಾಗುವುದನ್ನು ನೋಡುವಾಗ ನಾವೂ ಹೋಗಿ ಅವರ ಮಧ್ಯದಲ್ಲಿ ಕಲೆತುಬಿಡುವ ಎಂದು ಮನಕ್ಕನ್ನಿಸುತ್ತಿತ್ತು (ಕುರುಕಾ. ೨೯). **ನೇಜಿ ನೆಡು** : ಬೈಲುಗದ್ದೆಗಳಲ್ಲಿ ಮಾತ್ರ ನೇಜಿ ನೆಡುವರು (ಬಾಳಿಗಿ. ೧೦೨) ; ಒಂದು ದಿನ ಗದ್ದೆಯಲ್ಲಿ ನೇಜಿ ನೆಡಲೆಂದು ಅವಳು ಹೋದಳು (ಹಾಹುತ್ತ. ೬೫) ; ಮಳೆ ಬಂದೊಡನೆ ಎಣೆಯ ಬೆಳೆಯ ಸಾಮಗ್ರಿಗಳನ್ನೆಲ್ಲ ಸಿದ್ಧಪಡಿಸಿ ನೇಜಿ ನೆಟ್ಟು ಪುನಃ ಗಟ್ಟಕ್ಕೆ ಮರಳುವ (ರಕ್ತರೂ. ೧೧). [ನೇಜಿ+ನಡು$_1$]

ನೇಜಿ ನೆಡು 'ನೇಜಿನಡು' ನೋ.

ನೇಜಿಸೂಡಿ (ನಾ). (ನಾಟಗಾಗಿ ಕಿತ್ತ) ಸಸಿಗಳ ಸಣ್ಣ ಸಿವುಡು,— ಕಂತೆ : ನೇಜಿಸೂಡಿಗಳನ್ನು ತಂದು ಗದ್ದೆಯಲ್ಲಿ ಹರಡುವರು. ಹಾರೆ ಹಿಡಿದು ಎತ್ತರ ತಗ್ಗುಗಳನ್ನು ಸರಿ ಪಡಿಸುವರು (ಕುರುಕಾ. ೨೯).

[ನೇಜಿ+ಸೂಡಿ$_2$(<ಸೂಡು$_2$)]

ನೇಜೆ 'ನೇಜಯ' ನೋ.

ನೇಜೆಯ 'ನೇಜಯ' ನೋ.

ನೇಜ್ಯೆ 'ನೇಜಯ' ನೋ.

ನೇಝಿಯ 'ನೇಜಯ' ನೋ.

ನೇಟಾಲ್‌ಹುಲ್ಲು (ನಾ). ಒಂದು ಬಗೆಯ ಹುಲ್ಲು : (ಮೈಔಗಿ. ೬೬-೧೩೫೧). [ನೇಟಾಲ್ ? +ಹುಲ್ಲು(<ಪುಲ್)]

ನೇಟು (ನಾ). ೧. ನೇರ ; ನೆಟ್ಟಗಿರುವಿಕೆ ; ಡೊಂಕಿಲ್ಲದಿರುವುದು: ಆಕಳುಗಳ ಕೋಡುಗಳು ನೇಟಾಗಿ ಅಥವಾ ಬಾಗಿ ಇರುವವು(ಮುಂಬಯಿ. ೫-೧೮); ನೇರವಾದ, ನೇಟಾದ ಸಮಾಚಾರ(First hand information. ಇಂಕನಿ). ೨. ಚೆನ್ನಾಗಿರುವುದು ; ಸರಿಯಾಗಿರುವುದು : ಕಪಟ ನಾಟಕ ಶ್ರೀ ಲಕುಮಿಶ ಆಹ ನೇಟಾಗಿ ನಖಲಲಾಟ ಪರಿಯಂತ

ನೋಟದಿಂದಲೆ ಈಶಕೋಟ ಸಹಿತನಾಗಿ ಕಾಮಾದಿಗಳನ್ನೆಲ್ಲ ತರಿದು (ವಿವಾಕ್ಯ. ೫೩-೨೨); ಶ್ರೀನಿವಾಸಾಖ್ಯಕವಿ . . . ನೇಟಾದ ರಂಗ ನಗರಕ್ಕೈದಿ ನಿಜಸತಿಗೆ ತೋರಿಸಿದನದರ ಚಲುವಾ (ಅರ್ಚಾವಿ. ೧-೧); ಅವನೂ ನೇಟ ಕುಳವಾಗಿದ್ದರೆ, ಮೇಳದ ಒಡತಿಯ ನಕಾರ ಬರದಿದ್ದರೆ . . . ಖೇಲ್ – ಖಲಾಸಾದ ಮೇಲೆ ಏಕಾಂತವಾಗಿ ಜಮಾಸಿಕೊಳ್ಳುತ್ತಾರೆ (ದೀಪಹ. II, ೩೯೧). ೩. ನಿಜ; ಸತ್ಯ: 'ನೇಟುಸುದ್ದಿ' ಪರಾ. ೪. ಶಕ್ತಿ; ಬಲ; ಸಾಮರ್ಥ್ಯ: ನೇಟ (ಶಕ್ತಿ), —ಹುಡುಗನ ಮೈಯಾಗ ನೇಟ ಇಲ್ಲ (ಹುಡುಗನ ಮೈಯಲ್ಲಿ ಶಕ್ತಿ ಇಲ್ಲ) (ಸುವರ್ಣ. ೩೨೬). 'ನಿಡಿದು$_1$', 'ನೀಟು$_2$' ಪರಾ.

[ದೇ.॥ ತಮಿ. ನೆಟ್ಟು, ನಟ್ಟ; ತೆಲು. ನೇಟು./ಮರಾ. ನೇಟ್]

ನೇಟುಸುದ್ದಿ (ನಾ): ನಿಜವಾದ ಸಮಾಚಾರ,—ಸುದ್ದಿ: (೬).

[ನೇಟು + ಸುದ್ದಿ]

ನೇಣ್$_1$, ನೇಣು (ನಾ). ೧. ಹಗ್ಗ; ಹುರಿ: "ಶುಲ್ಬಾ, ರಜ್ಜುಃ, ವಟಾರಃ, ವಟಃ, ತಂತ್ರೀಗುಣಃ—ಈ ೫ ನೇಣ್"(ಹಲಾಯು. ೯೮-೪೪೩); ಕೆಯ್ಯಂ ನೇಣುಮನಳವಿಯೊಳ್ ಕೂಡಿ ನಡೆಯಲ್ವೇಟ್ಟು ಬೇಂಟೆವಸದನಂ ಗೊಂಡು [ಕಂ]ಡಿಯ ಬಾಗಿಲೊಳುದಾತ್ತನಾರಾಯಣನುಂ ನಾರಾಯಣ ನುಮಿರ್ದು . . . ಬಿಲ್ಲ ಬಲ್ಮೆಯಂ ಮೆಱೆದು (ಪಂಪಭಾ. ೫-೪೭ ಪ); ಕರ್ಮಮುಳ್ಳಂಗೆ ನೇಣಂ ಪಿಡಿದೊಡಂ ಪಾವಾಗಿ ತಿಂಗುಂ (ಧರ್ಮಾಮೃ. ೧೩-೮೪). **ನೇಣು**: ೧. ಪಾತಾಳದಗ್ಗವಣಿಯ ನೇಣಿಲ್ಲದೆ ತೆಗೆಯ ಬಹುದೇ ಸೋಪಾನದ ಬಲದಿಂದಲ್ಲದೆ (ಚನ್ನವ. ಕ. ೩೩೦-೬೮೭); ವಾಣಿ ನುಡಿಸುವ ವೀಣೆಯ ತಂತಿಯದು ದೊಡ್ಡ ನೇಣೆಂದು ನಗುವ ಚೆಲ್ವಿಕೆಯ ವೀಣೆಯ ನುಡಿಸುತ ಪಾಡಿದರರುಹನ ವೀಣಾಲಾಪೆಯರೊಲ್ದು (ಭರಚ. ೫-೭೧); ಕೋಪವೆಂಬುದು ಕೇಳಿ ಪಾಪದ ನೆಲೆಗಟ್ಟು ಕೂಪದೊಳು ನೇಣು ಹಱುದಂತೆ ನರಕದೊಳು ಕೋಪಿ ತಾನಿಳಿವ (ಸರ್ವಜ್ಞ. ೫೨೯). ೨. ಅಪರಾಧಿಗಳ ಕೊರಳನ್ನು ಬಿಗಿದು ಕೊಲ್ಲುವ ಕುಣಿಕೆ,—ಉರುಲು ಮತ್ತು ಹಾಗೆ ಕೊಲ್ಲುವ ಶಿಕ್ಷೆ: ನಿಮ್ಮನಱಯದ ಕಾರಣ ಕೈಯಲ್ಲಿ ಹುಲ್ಲು ನಿಮಗೆಱಗದ ಕಾರಣ ಕೊರಳಲ್ಲಿ ನೇಣು (ಬಸವ. ೫೮೯); ಹನ್ನೆರಡು ವರ್ಷಗಳಿಂದ ನರಳಿದೆನಯ್ಯಾ ಆ ಭಯಂಕರ ರೋಗ ದಿಂದ . . . ಏನಾದರೂ ವಾಸಿಯಾಗಲಿಲ್ಲ. ಇನ್ನೇನು ನೇಣೊಂದೆ ಉಳಿದಿತ್ತು (ಚಂದ್ರಸ. ೪೫-೨೪); ಅವನಿಗೆ ನೇಣಾಯ್ತು (ರೂಢಿ). ೩. ದಾರ; ನೂಲು; ಸೂತ್ರ: ನೇಣ ತುದಿಯ ಬೊಂಬೆಯಂತಂತೆ ಆಡಿದೆನಯ್ಯ ನೀನಾಡಿಸಿದಂತೆ (ಮಹಾದೇ. ಬ. ೧೬-೨೦); ಮತ್ಸ್ಯಾವಳಿಯ ದಾರದಲಂಬಿಗನು ಪೋಣಿಸುತಲಿರುತಿರಲು ಮನದೊಳಗೆ ಆ ಪ್ರಾಪ್ತಕಾ ಲಜ್ಞನು ನಿಧಾನಿಸಿಕೊಂಡು . . . ನೇಣನು ತುಡುಕಿ ತಾ ಕಚ್ಚಿಕೊಂಡೊಂ ದಿನಿತು ಚಲಿಸದೆ ನಿಂದುದಾಕ್ಷಣ (ತಿಮ್ಮಶಾ. ೩-೬೧). ೪. (ಆಲಂ) ಜನಿವಾರ: ಬಡ ಹಾರುವನೇಸು ಭಕ್ತನಾದರೆಯೂ ನೇಣಿನ ಹಂಗ ಬಿಡ ಮಾಲೆಗಾಱನೇಸು ಭಕ್ತನಾದರೆಯೂ ಬಾವಿಯ ಬೊಮ್ಮನ ಹಂಗ ಬಿಡ (ಬಸವ. ೪೫೦).

ನೇಣ ಜಂತ್ರ = "ಸೂತ್ರದ ಬೊಂಬೆ" (ವರ್ಧಪು. ಕೋಶ): ನೇಣ ಜಂತ್ರದವೊಲಮರ್ಕೆಗೆಟ್ಟಬಲೆ ಲಾಂಗಲಿ ಮೂರ್ಛೆಗೆ ಸಂದು (ವರ್ಧಪು. ೯-೫೮).

[ದೇ.॥ ತಮಿ. ಞ್ಗಾಣ್, ನಾಣ್, ನಾಣಿ; ಮಲ. ಞ್ಗಾಣ್; ತುಳು. ನೇಣ, ನೇಣು, ನೇನು; ಗೊಂಡಿ. ನೋನೆ; ಕುಇ. ನೋಣು]

ನೇಣ್$_2$ (ನಾ). ಒಂದು ಬಗೆಯ ಮರ: "ನೇಣೆನೆ[ಪಾಠಾಂ, ನೇಣೆಯೆನೆ]ಬೋನ ಗಾರೆ ಮಂಗಾರೆ ಮಗ್ಗಾರೆಯಕ್ಕು" (ಮಂಗರಾ. ೩೬-೧೬).

[?]

ನೇಣಿಕ್ಕು (ಕ್ರಿ). ಯಜ್ಞೋಪವೀತವನ್ನು ಧರಿಸು: ಮಾಣಿಯವ ನೆಂದು ಕೊರಳೊಳು ನೇಣಿಕ್ಕಿದ ಕತದೆ ಪಾರ್ವನಾದಂ (ಸಮಪ. I ಅನು. ೩೭೧-೪೦). [ನೇಣ್$_1$ + ಇಕ್ಕು]

ನೇಣಿಗ (ನಾ). ಯಜ್ಞೋಪವೀತವನ್ನು ಧರಿಸಿದವನು; ಬ್ರಾಹ್ಮಣ: ಪೊಡೆಯದಲ್ಲದೆ ಮಾಣವೆಂದು ಗುರು ಕಿಂಕರರ್ಘುಡಿಘುಡಿಸಿ ರೌದ್ರಾಕೃತಿಯ ತೋಱಲಾಕ್ಷಣಂ ಪಡಲಿಟ್ಟು ನೇಣಿಗರ ಪಡೆ ಕೆಟ್ಟೆವೆಂದು ದಡದಡಿಸಿ ಬೀಳುತ್ತೋಡುತೆ . . . ಮೊಱೆಯಿಡಲು (ಕೊಟ್ಟೂಬ. ೩-೧೩). [ನೇಣ್$_1$ + -ಇಗ]

ನೇಣು 'ನೇಣ್$_1$' ನೋ.

ನೇಣುಕಾಱ 'ನೇಣುಗಾಱ' ನೋ.

ನೇಣುಗ (ನಾ). ಹಗ್ಗವನ್ನು ಮಾಡುವವನು ಅಥವಾ ಮಾರು ವವನು: ಉಗ ಪ್ರತ್ಯಯಕ್ಕೆ—ನಾರುಗಂ . . . ನೇಣುಗಂ, ಹೆಣ್ಣುಗಂ, ಮಣ್ಣುಗಂ (ಶಮದ. ೨೦೪ ಪ್ರಯೋ). [ನೇಣ್$_1$ + -ಉಗ]

ನೇಣುಗಂಬ (ನಾ). ನೇಣು ಹಾಕುವುದಕ್ಕೆ ನಿಲ್ಲಿಸಿದ ಕಂಬ; ಗಲ್ಲುಗಂಬ: ಇಂದು ಯಾರೂ ನೇಣುಗಂಬವನ್ನು ಏರುವುದಿಲ್ಲವೆಂಬ ತೃಪ್ತಿ ರಾಜಕೀಯ ಖೈದಿಗಳಲ್ಲಿ ಮೂಡಿತು (ಆತ್ಮಾರ್ಪ. ೧೩).

[ನೇಣು(<ನೇಣ್$_1$) + ಕಂಬ$_1$(<ಕಂಭ)]

ನೇಣುಗಾಱ, ನೇಣುಕಾಱ (ನಾ). ೧. = ನೇಣಿಗ: ಹೆಱರ ಗೋಣ ಕೊಯ್ದೆನೆಂದು ಮಂತ್ರವನೋದುವ ನೇಣುಗಾಱರ ಮೆಚ್ಚ ಕೂಡಲ ಸಂಗಮದೇವ (ಬಸವ. ೫೮೦). **ನೇಣುಕಾಱ**: ೨. = ನೇಣುಗ: ನೇಣುಕಾಱರ್ ವೀಸಂ ಕಾಗಿಣಿಯಂ ಬಿಟ್ಟರ್ (ಮುಂಬರಾ. XI, ೨೬೬-೬೪; 1162). [ನೇಣು(<ನೇಣ್$_1$) + -ಕಾಱ]

ನೇಣುಗೊಲೆ (ನಾ). ನೇಣು ಹಾಕಿ ಕೊಲ್ಲುವಿಕೆ; ಗಲ್ಲಿಗೇರಿಸುವಿಕೆ: ಗಂಡ ಹೆಂಡಿರನ್ನು ಬೇರ್ಪಡಿಸಿ ಪರಸ್ತ್ರೀ ಪರಪುರುಷರೊಡನೆ ಬಲಾತ್ಕಾರವಾಗಿ ಸೇರಿಸುವ ಅತ್ಯಾಚಾರ, ಜೊತೆಗೆ ಗುಂಡುಗೊಲೆ ನೇಣುಗೊಲೆ ಗಳು—ಇಂಥ ಅಸಂಖ್ಯಾತ ಅತ್ಯಾಚಾರಗಳಿಗೆ ಸರ್ಕಾರವೇ ಹೊಣೆ (ಪುನರು. ೫೫೧). [ನೇಣು(<ನೇಣ್$_1$) + ಕೊಲೆ$_2$]

ನೇಣುರುಳು (ನಾ). = ನೇಣುಹಗ್ಗ: ಹೂಮಾಲೆ ಸೂಡುವೆವು ಕೊರಳಿಂಗೆ ಎಂದೆನುತೆ ನೇಣುರುಳನೆಳೆದಯ್ಯೋ ಕೊಲ್ಲಬೇಡಿ (ಕೋಗಿಲೆ. ೪೧-೨೦). [ನೇಣು(<ನೇಣ್$_1$) + ಉರುಳು$_3$(<ಉರಿಲ್)]

ನೇಣುಶಿಕ್ಷೆ (ನಾ). ಗಲ್ಲಿಗೇರಿಸುವ ದಂಡನೆ: ಅಪರಾಧಿಗೆ ಶ್ರೇಷ್ಠ ನ್ಯಾಯಾಲಯದವರು ನೇಣುಶಿಕ್ಷೆಯನ್ನು ಘೋಷಿಸಿದರು (ರೂಢಿ).

[ನೇಣು(<ನೇಣ್$_1$) + ಶಿಕ್ಷೆ]

ನೇಣುಹಗ್ಗ (ನಾ). ನೇಣು ಹಾಕಲು ಬಳಸುವ ಹಗ್ಗ; ಗಲ್ಲಿಗೇರಿ ಸುವ ಮಿಣಿ: ಆ ಜನರು ಬಂದೂಕು, ಚೂರಿ, ಬಿಲ್ಲು–ಬಾಣ, ನೇಣು ಹಗ್ಗಗಳೇ ಮೊದಲಾದ ಪ್ರಾಣಾಂತಕ ಆಯುಧಗಳ ಬಗ್ಗೆ ಹೆದರುತ್ತಿದ್ದಿಲ್ಲ (ಬಂಗಾಹೆ. ೨, ಮುನ್ನುಡಿ); ರಾಜಕೀಯವೆಂಬುದು ಲಕ್ಷೋಪಲಕ್ಷ ಮಂದಿಯ ಇಷ್ಟಾನಿಷ್ಟಗಳ, ಹಿತಾಹಿತಗಳ ಸಂಘಾತ. ಅದರಲ್ಲಿ...ಒಬ್ಬನಿ ಗಾದ ಹೂಮಾಲೆ ಇನ್ನೊಬ್ಬನಿಗೆ ನೇಣುಹಗ್ಗ (ಸಾಹಿಶ. ೧೪).

[ನೇಣು(<ನೇಣ್$_1$) + ಹಗ್ಗ(<ಪಗ್ಗ)]

ನೇಣುಹಾಕು (ಕ್ರಿ). (ಕೊಲ್ಲುವುದಕ್ಕಾಗಿ) ಕೊರಳಿಗೆ ಉರುಲು ಹಾಕು; ಗಲ್ಲಿಗೇರಿಸು: ನನ್ನನ್ನು ಕೊಂದರೆ ನಿಮ್ಮನ್ನು ಸುಮ್ಮನೆ ಬಿಡುತ್ತಾರೆಯೆ? ನಿಮ್ಮನ್ನೂ ನೇಣು ಹಾಕುತ್ತಾರೆ (ಹೊಸಕ್ಷಿ. ೧೧). ಕೊರಲನ್ನು ಹಿಡಿದು ನೇಣುಹಾಕುವಳು (ಕವಿಕ. ೪೮).

ನೇಣು ಹಾಕಿಕೊಳ್ಳು = ೧. (ಸಾಯುವುದಕ್ಕಾಗಿ) ಕುತ್ತಿಗೆಗೆ ಉರುಲು ಹಾಕಿಕೊಳ್ಳು: ನೇಣು ಹಾಕಿಕೊಳ್ಳುವವನ ಹತ್ತಿರ ಕೋಣ

ಕೇಳಿದ ಹಾಗೆ (ಗಾದೆ); ಅಪ್ಪ ನೆಟ್ಟ ಅಲದ ಮರಕ್ಕೆ ನೇಣು ಹಾಕಿಕೊಂಡಂತೆ (ಗಾದೆ). ೨. (ಆಲಂ) ಹಿಂಸೆ ಕೊಡು : ಸಾಲದ ಹಣಕ್ಕಾಗಿ ಅವನು ದಿನಾ ಬಂದು ನೇಣುಹಾಕಿಕೊಳ್ಳುತ್ತಾನೆ (ರೂಢಿ).

[ನೇಣು(<ನೇಣ್$_1$)+ಹಾಕು(<ಪಾಯ್ಕು$_1$)]

ನೇಣ್ಕಾರ್ತಿ (ನಾ). ಸಾವುಂಟುಮಾಡುವವಳು : ಮೃಗಮಂ ಪತಿಯಿಂದಂ ಗೋರಿಗೆ ಪತ್ತಿಸಿ ಕೊಲಿಪ ಶಬರಿ ಪಥಿಕರನೊಳ್ಮಾತುಗಳಿಂ ಸಿಲ್ಕಿಸಿ ಪತಿಯಿಂದುಗಿಯಿಪ ನೇಣ್ಕಾರ್ತಿ[ಪಾಠಾಂ.ಎಣೆಗಾರ್ತಿ]ಯಂದಮಂ ನೆನೆಯಿಸಿದಳ್ (ಪಾರ್ಶ್ವಪು. ೧೨-೭೭).

[ನೇಣ್$_1$+-ಕಾಱ+-ತಿ$_1$(<-ಇತ್ತಿ)]

ನೇಣ್ಗಯ್ಯ 'ನೇಣ್ಗೆಯ್ಯ' ನೋ.

ನೇಣ್ಗೆಯ್ಯ, ನೇಣ್ಗಯ್ಯ, ನೇಣ್ಗೈಯ (ನಾ). ಪಾಶವನ್ನು ಕೈಯಲ್ಲಿ ಹಿಡಿದಿರುವವನು ; ವರುಣ : "ನೇಣ್ಗೆ [ಪಾಠಾಂ. ಣ್ಗ]ಯ್ಯ ಮುನ್ನೀರೆಱೆಯ ಕರಮೆಸೆವ ನೆಗಟ್ದೇರ ಪಡುವದೆಸೆಗೊಡೆಯನೆನೆ ವರುಣನಾಮಂ" (ಶಬ್ದಮಂ. ೧೪). **ನೇಣ್ಗಯ್ಯ** : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. **ನೇಣ್ಗೈಯ** : ಕರ್ಮದಿನೆ ಇಂದಿರಂ ದೇವರ್ಕಳೊಡೆಯನಾದಂ . . . ತಗರ್ದೇರಂ ನೇಣ್ಗೈಯಂ ಮುಂತಪ್ಪರ್ ದೆಸೆವಳರಾದರ್ (ರಾಮಾಶ್ವ. ೧೪೦-೩).

ನೇಣ್ಗಯ್ಯವ = ನೇಣ್ಗೆಯ್ಯ : "ಸಲೆ ವರುಣನಕ್ಕು ನೇಣ್ಗಯ್ಯವಂ" (ಕಶರ. ೫೭). [ನೇಣ್$_1$+ಕೆಯ್$_2$+-ಅ$_7$]

ನೇಣ್ಗೈಯ 'ನೇಣ್ಗೆಯ್ಯ' ನೋ.

ನೇಣ್ಗೋಣ (ನಾ). ಕೊರಳಿಗೆ ನೇಣು ಹಾಕಿಸಿಕೊಂಡವನು : ಮುನ್ನಮೇ, ಮದಿಸಿ ನೀಮ್ ನಡಸಿದತ್ಯಾಚಾರಮಿದನೆಲ್ಲ ಜನಕೆ, ಬರ್ದುಕಿರ್ದೆ ನೇಣ್‌ಗೋಣರಾಗಿ, ನೀಮ್ ತೋಱ್ಪುರ್ (ಅಂತಿಗೊ. ೧೫-೨೮೭). [ನೇಣ್$_1$+ಗೋಣ್+-ಅ$_7$]

ನೇಣ್ಬಲೆ 'ನೇಣ್ವಲೆ' ನೋ.

ನೇಣ್ವಲೆ, ನೇಣ್ಬಲೆ (ನಾ). (ಹಗ್ಗ ಅಥವಾ ಕಣ್ಣಿಯಿಂದ ಮಾಡಿದ) ಒಂದು ಬಗೆಯ ಬಲೆ ; ಉರುಳು ಹಾಕುವ ಬಲೆ : ಕರಿಯ ಜವಿವಲೆ ಮುಸುಕುವಲೆ ಬಿತ್ತರದ ನೇಣ್ವಲೆ ಮೊಕರವಲೆ ಬೇಡರಸಿರದೊಳೊಪ್ಪಿದುದು (ಸಾಳ್ವಭಾ. ೫-೧೯). **ನೇಣ್ಬಲೆ** : ಅಂತು ನಿದ್ರೆಗೆಯ್ದು ಕಿಱಿದು ಬೇಗಕ್ಕೆಂತಾನುಮೆಚ್ಚತ್ತು ನೇಣ್ಬಲೆಯೊಳ್ ಸಿಲುಕಿರ್ದೆನ್ನಂ ಕಂಡಿದೆತ್ತಣಿಂ ಬಂದುದೆಂದು ನೋಟ್ಪನ್ನೆಗಂ (ಕಾದಂಉ. ೭೩೬) ; ಓರೊರ್ಮೆ ಧಾರಾಗೃಹಾಂತರದೊಳಂತುಮಿಂತುಮುಣ್ಮುವ ಹಿಮಾಂಬುಧಾರೆಗಳ್ ಬಳಸೆ ಬೆಗಡುಗೊಂಡು ನೇಣ್ಬಲೆಯ ತೊಡರೊಳ್ ತೊಡಂಕಿ ನಡುಗುವ ಕುರಂಗಿಯೊಳ್ ದೊರೆಯಪ್ಪಳೆ (ವರ್ಧಪು. ೪-೫೮ ಪ).

[ನೇಣ್$_1$+ಬಲೆ$_2$]

ನೇಣ್ವೆಲ್ಲು (ನಾ.) ಒಂದು ಬಗೆಯ ಬಿಲ್ಲು : ಅಲ್ಲಿಯಾತನ ಕೂಡೆ ತಟ್ಟಯ ಬಿಲ್ಲುಗಳನಾ . . . ನೇಣ್ವೆಲ್ಲುಗಳ ಪದವಿಲ್ಲುಗಳನೆಡೆಗೆಡೆಗೆ ಸೀವಳಿಬಿಲ್ಲುಗಳ ಪಿಡಿದಾ ನಿಶಾಟರು ನೆರೆದುದವನೊಡನೆ (ಸಾಳ್ವಭಾ. ೫-೧೩). [ನೇಣ್$_1$+ಬಿಲ್ಲು$_1$ (<ಬಿಲ್$_2$)]

ನೇತ 'ನೆಯ್$_1$' ಪರಾ.

ನೇತಾಡು 'ನೇಲ್' ಪರಾ.

ನೇತಾರ (ನಾ). ಮುಖಂಡ ; ಮುಂದಾಳು ; ನಾಯಕ : ಆರಾದೇಶಕ್ಕೆ-ಸವಿತಾರ, ಕರ್ತಾರ, ನೇತಾರ (ಶಮದ. ೮೪ ಪ್ರಯೋ); ಸುತ್ತಲು ಪ್ರಾಣಿಗಳ ಹಾಹಾಕಾರ ದಿಕ್ಕನ್ನೇ ಭೇದಿಸುವಂತೆ ಕೇಳುತ್ತಿದ್ದರೂ ಲೋಕ ನೀತಿಯ ನೇತಾರ ತಾನೆಂದು ತಿಳಿದ ವಿಶ್ವಾಮಿತ್ರ ಅದಕ್ಕೆ ಕಿವುಡನಾಗಿದ್ದಾನೆ (ಅಶ್ವಮೇ. ೩೧) ; ನಿತ್ಯಜೀವನದಲ್ಲಿ ಹೇಳ ಹೆಸರಿಲ್ಲದಂಥ ಹತ್ತಾರು ಮಂದಿ – ವೀರ, ಧೀರ ನೇತಾರರೆನಿಸಿದರು (ಗೊಂಡಾರ. ೪) ; ಹಿಂದೂ ಸಮಾಜದ ಆಶೆ-ಆಕಾಂಕ್ಷೆಗಳನ್ನು ಹಿಂದೂಮಹಾಸಭೆಯ ಕೆಲವು ನೇತಾರರು ಜಗತ್ತಿನ ಎದುರು ಚೆನ್ನಾಗಿ, ತರ್ಕಶುದ್ಧವಾಗಿ ಮಂಡಿಸಿದ್ದೇನೊ ನಿಜ(ಯಕ್ಷಪ್ರ. ೮೫). [ಸಂ. ನೇತೃ]

ನೇತಿ (ನಾ). [ಅದ್ವೈತ] ಅಲ್ಲದುದು ; ಇಲ್ಲದುದು ; ಶೂನ್ಯ : ಹಕ್ಕಿ ನೈರಾಶ್ಯದ ತಳದಲಿ ಸ್ವರ ಮರೆಸಿದ ರೀತಿ ಸುಮ್ಮನಿಹವು ಗಿಳಿ ಗೊರವಕ ನವಿಲು ; ಮೌನ ಮುದ್ರಿಸಿತು ನೇತಿ (ಸುನೀತ. ೪೨-೧೦) ; ಅರಿಸ್ಟಾಟಲ್‌ನೆಂಬ ಪಾಶ್ಚಿಮಾತ್ಯತತ್ವಜ್ಞನು ತನ್ನ ನೈತಿಕಸಿದ್ಧಾಂತದ ಗ್ರಂಥದಲ್ಲಿ . . . ಪ್ರತಿಯೊಂದು ಸದ್ಗುಣವು ಅತಿ ಮತ್ತು ನೇತಿ ಇವುಗಳ ನಡುವಿನ ಮಿತಿಮಾರ್ಗವು, ಅದೇ ನಿಜವಾದ ಸದ್ಗುಣವು ಎಂದೆನ್ನುತ್ತಾನೆ (ಗೀತಾಸಂ. ೧೨೫). 'ನೇತಿಗಳೆ' ಪರಾ.

ನೇತಿ ಮಾಡು = ನೇತಿಗಳೆ ೧ : ಶರಣನು ಸಾಕಾರವಾಗಿ ದೃಶ್ಯನಪ್ಪ ಜೀವನಲ್ಲ ನಿರಾಕಾರನಾಗಿ ಸಾಕಾರವ ನೇತಿ ಮಾಡಿ ತೋರದಿಪ್ಪವನಲ್ಲ (ವಚಸಂ. ೫೩೫-೧೪ ಟೀಕು). [ℙ ಇದು ಸಂಸ್ಕೃತದಲ್ಲಿ ಒಂದು ಪದವಲ್ಲ, ನ ಮತ್ತು ಇತಿ]

ನೇತಿಗಳೆ (ಕ್ರಿ). ೧. ಇಲ್ಲದಂತೆ ಮಾಡು ; ನಿವಾರಿಸು ; ತೆಗೆದು ಹಾಕು : ತ್ರಿವಿಧಮಲವ ನೇತಿಗಳೆದು ಮತ್ತಾ ಅಱಿವ ಮಱೆದು ಮಲತ್ರಯವನೊಡಗೂಡಿದಲ್ಲಿ ಬಂಧನವೆಂಬುದಕ್ಕೆ ಸೂಚನೆ (ಮೋಳಿಮಾ. ೧೦೬-೪೨೧) ; ದೇಹಾದ್ಯನಾತ್ಮವರ್ಗಮಂ ಯುಕ್ತಿಯಿಂ ನೇತಿಗಳೆದುಳಿದಾತ್ಮನ ನಿಜವನಱುಹಿಪುದೇ ಅತದ್ವ್ಯಾವೃತ್ತಿಲಕ್ಷಣವೆನಿಸುವುದು (ವಿವೇಕ. ೨೨) ; ಇನಿತು ವಿಧವಾಗಿರ್ದ ಪ್ರಾಣಗಳನಿತನಾತ್ಮಗಳೆಂದು ತಿಳಿದವ ಘನವಿವೇಕದಿ ನೇತಿಗಳೆದದಱಲ್ಲಿ ಮಮತೆಯನು ನೆನೆಯದದಱ ನಿಮಿತ್ತಕಾರಣವೆನಿಪ ನಿಜಚೈತನ್ಯವಸ್ತುವನನಘ ನಿನ್ನೊಳು ಕಂಡು ನೀನೆಂದದನು ಚಿಂತಿಪುದು(ಅಮೃತ. ೩-೪೫). ೨. ವ್ಯರ್ಥವಾಗಿ ಕಳೆ; ನಿರರ್ಥಕಗೊಳಿಸು : ಭೂತಳಾಧಿಪನಿಂತು . . . ಮೃಗಸಂಪ್ರೀತಿಪರವಶನಾಗಿ ದಿನವನು ನೇತಿಗಳೆವುತ್ತಿರ್ದನು (ನಿಭಾಗ. ೫-೫-೪೦). [ನೇತಿ+ಕಳೆ$_1$]

ನೇತು 'ನೇಲ್' ಪರಾ.

ನೇತೃ (ನಾ). ೧. ಮುಖಂಡ ; ಮುಂದಾಳು ; ನಾಯಕ : ಈ ಸಂಜೀವಕನನಾಪ್ತನೆಂದು ಮಂತ್ರಿಯಂ ಮಾಡಿ . . . ಅದು ಕಾರಣದಿಂ ನಿನ್ನ ರಾಜ್ಯಕ್ಕಾತನೇ ನೇತೃ [ಪಾಠಾಂ. ಭೂಮಕೇತು] ವಾದನೆಂದು ಮಡಿದ ದವನಕನ ನಿಷ್ಠುರಾಲಾಪಂಗಳ್ಗೆ ಪಿಂಗಳಕಂ ಕರಂ ಮುಳಿದಿಂತೆಂದಂ (ಪಂಚತಂ. ೯೯-೨) ; ಉಗ್ರಪಕ್ಷದ ನೇತೃಗಳಾದ ಬಾಲಗಂಗಾಧರತಿಲಕರ ಜೊತೆಯಲ್ಲಿ ನಿಂತು ಶ್ರೀ ಅರವಿಂದರು ಕೆಲಸ ಮಾಡತೊಡಗಿದರು (ಕಪಪು. ೭-೮೩) ; ಸಾವಿತ್ರೀದೇವಿಯವರು . . . ಈ ಆಯೋಗದ ನೇತೃಗಳಾದ ರೋಹಿಣೀಕುಮಾರರವರೆಗೆ . . . ನಿರ್ಭಯವಾಗಿ ವ್ಯವಹರಿಸುತ್ತಿದ್ದರು (ಹೇಮಂತ. ೩೫೫). ೨. ಒಡೆಯ ; ಯಜಮಾನ ; ಅಧಿಪತಿ : "ನೇತೃವೆನಲೊಡೆಯಂಗೆ ನಾಮಮಕ್ಕು" (ಪುಂಗರಾ. ೬೭-೬). [ಸಂ.]

ನೇತೃತ್ವ (ನಾ). ಮುಖಂಡತನ ; ನಾಯಕತ್ವ : ಪ್ರಧಾನ ಮಹಾಪ್ರಧಾನರ ನೇತೃತ್ವದಲ್ಲಿ ಭಟರು ಸಿದ್ಧರಾಗಿ ಕೆಲಸ ಮಾಡುತ್ತಿದ್ದರು (ಶಾಂತಲಾ. ೧೦೨) ; ರಾಜೇಸಾಹೇಬರ ಖಾಸ ನೇತೃತ್ವದಲ್ಲಿ ಹೆಸರಾಂತ ಪೈಲವಾನರ ಕುಸ್ತಿಗಳನ್ನು ಅಲ್ಲಿ ಏರ್ಪಡಿಸಲಾಗಿತ್ತು (ಗ್ರಾಮಾಯ. ೫೧).

[ಸಂ.]

ನೇತ್ರ (ನಾ). ೧. ಕಣ್ಣು ; ನಯನ : "ದೃಕ್, ದೃಷ್ಟಿಃ, ನೇತ್ರಂ . . . ಅಕ್ಷಿ-ಈ ೯ ಕಣ್" (ಹಲಾಯು. ೮೬-೩೬೫) ; ಸುಮನೋಭೂಷಣದಿಂ ಜಂಗಮಲತೆಗಳೆನಿಪ್ಪ ಲಲನೆಯರ್ ನೃಪನೇತ್ರಭ್ರಮರಮನಾ ವನಲತೆಯಿಂ

ತಮಗಭಮುಖಮಾಗೆ ಮಾಡಿದರ್ ತತ್ಕ್ಷಣದೊಳ್ (ಮಲ್ಲಿಪು. ೬-೮೪) ; ನೇತ್ರ ನಾಸಿಕ ಪಾದ ಪಾಣಿ ಶ್ರೋತ್ರವೆಂಬಿವು ತಮ್ಮೊಳೊಂದೇ ಸೂತ್ರದಲಿ ಸಂಸೃಷ್ಟವಾಗಿ ಸಮಾನಬುದ್ಧಿಯಲಿ ಗಾತ್ರವಿಡಿದಿಹವೋಲು ವಿಶ್ವದ ಮೈತ್ರಿಯಲಿ ಮನಸಂದು ಪಾತ್ರಾಪಾತ್ರವೆನ್ನದೆ ಬೆರಸಿ ಬದುಕುವುದಧಿಕ ಗುಣವೆಂದ (ಕುವ್ಯಾಉ. ೪-೭) ; ರಮಣೀಯ್ಯದೊಳಗಧಿಕ ರಮಣೀಯ್ಯವಾಗಿರ್ಪ ರಮಣಿಯ ಮುಖಾಂಭೋಜದಲ್ಲಿ ಸುಳಿವುತ್ತಿರ್ಪ ರಮಣನೆನಿಸುವ ಶಿವನ ನೇತ್ರಭೃಂಗಗಳೊಪ್ಪಿದವು (ವೀಶೈಪು. ೩-೧೭-೩೪). ೨. ಕಡೆಗೋಲಿನ ಹಗ್ಗ ; ಕಡೆಯುವ ಹಗ್ಗ. ೩. ಮರದ ಬೇರು, -ಮೂಲ : "ಬೇರಲ್ಲಿಯುಂ ನೇತ್ರಮೆಂಬುದು" (ಹಲಾಯು. ೧೩೫-೨೩); "ಬೇರಲ್ಲಿ ನೇತ್ರವೆಂಬುದು" (ಮಂಗರಾ. ೧೩೯-೮). ೪. ಮರದ ಬೀಳಲು. ೫. ಒಂದು ಬಗೆಯ ಬಟ್ಟೆ,— ವಸ್ತ್ರ : "ಸೀರೆಯೊಳು ಗುಣದೊಳಕ್ಷಿಯೊಳು ನೇತ್ರವೆನಿಕ್ಕು" (ಮಂಗರಾ. ೧೫೦-೫೨) ; ಪಸಿಯ ನೇ[ಪಾಠಾಂ. ವೇ]ತ್ರಮಂ ಪಚ್ಚವಡಿಸಿದಂತೆ ಪಸುರ್ಪುವಡೆದ ನೆಲದೊಳ್ ಪದ್ಮರಾಗದ ಪರಲ್ಗಳಂ ಬಲಿಗೆದಱಿದಂತೆ ಉಪಾಶ್ರಯಂಬಡೆದಳಂಕರಿಸು ವಿಂದ್ರಗೋಪಂಗಳುಮಂ . . . ಕಂಡು (ಪಂಪಭಾ. ೭-೨೫ ವ) ; ಜಗಪೊಗಳೆ ಪುಲ್ಲಿಯ ಕಥಾಯಿ ಕಡೆಗಟ್ಟಂದ ಸೊಗಯಿಸಿದ ನೇತ್ರಸೂತ್ರಾವಳಿಗಳಿಂ ವಿವಾಹಗೃಹವೆಸೆಯಿತ್ತು (ಸಿದ್ಧರಾ. ೮-೫೩) ; ಆ ಪುರದೊಳಗುಣ್ಮೆ ಪೊಣ್ಮೆ ಕೃತಮಂಗಳತೂರ್ಯನಿನಾದವೆತ್ತಲುಂ ಸುರುಚಿರ ತೋರಣಂ ತುಱುಗೆ ತಳ್ತಿರೆ ನೇತ್ರವಿಚಿತ್ರಕೇತನಂ (ಪುಷ್ಪಪು.೮-೫೦). ೬. ಅಡಕೆಯ ಮರ ; ಪೂಗ : "ಕುಭೃತ್ಕುಜಾತ ಜಟಿಮೂಲಂ ಚೇಲ ಪೂಗಾಂಬಕಂ ಖ್ಯಾತಂ ಸದ್ಗುಣ ನೇತ್ರಮಕ್ಕು" (ನಾನಾರ. ೬೭). ೭. [ಗಣಿತ] ಎರಡು ಎಂಬ ಸಂಖ್ಯೆಯ ಸಂಕೇತ: "ಕರ ನೇತ್ರಮೆನ ಲೆರಡು" (ಮಂಗರಾ.೧೦೩-೮); ಯಮ ನಯನ ಕರ್ಣ ಕರ ಯಮಳಾಂಘ್ರಿ ದ್ವಿಯಕ್ಷಿ ಪಕ್ಷ ನೇತ್ರಂ ಸೂತ್ರಂ ಕ್ರಮ ಚರಣಂ . . . ಕಿವಿಗಳೆರಡಱ ನಾಮಂ (ವ್ಯವಹಾ.೯-೨). [ಸಂ.]

ನೇತ್ರಗ್ರಾಹ್ಯ (ನಾ). ಕಣ್ಣಿಗೆ ತಿಳಿಯುವಂಥದು ; ದೃಗ್ಗೋಚರವಾದುದು : ಕೇಶಿರಾಜನು . . . ಅಕ್ಷರಗಳ ಉತ್ಪತ್ತಿಕ್ರಮವನ್ನು ನಿರೂಪಿಸಿ, ಅವುಗಳ ಸ್ವರೂಪವನ್ನು ಕುರಿತು 'ಧವಳವರ್ಣಮಕ್ಷರರೂಪಂ' (ಸೂತ್ರ ೩೪) ಎಂದಿದ್ದಾನೆ. ಈ ಧವಳವರ್ಣವು ನೇತ್ರಗ್ರಾಹ್ಯವಲ್ಲ, ಭಾವಗ್ರಾಹ್ಯವಾದ ರೂಪವನ್ನೆ ಕಲ್ಪಿಸಿ ಹೇಳಿದುದಾಗಿ ತೋರುತ್ತದೆ. (ಸಂಶೋಧ. ೨). [ನೇತ್ರ+ಗ್ರಾಹ್ಯ]

ನೇತ್ರಚಿಕಿತ್ಸಕ (ನಾ). = ನೇತ್ರವೈದ್ಯ : ಪೂರ್ಣದೃಷ್ಟಿನಾಶ, ಶಸ್ತ್ರಕ್ರಿಯೆಗೆ ಮೀರಿದ ಸ್ಥಿತಿ ; ಫಲ : ಉಳಿದ ಜೀವನವನ್ನು ಕುರುಡಾಗಿ ಕಳೆಯುವುದು . . . ನೇತ್ರಚಿಕಿತ್ಸಕನನ್ನು ಹಳಿಯುವುದೆ ? ಇಲ್ಲವೆ ಅವರ ಕರ್ಮಫಲವನ್ನು ಹಳಿಯುವುದೆ ? (ನಿಮ್ಮದೃ. ೧೪೮).

[ನೇತ್ರ+ಚಿಕಿತ್ಸಕ]

ನೇತ್ರಚ್ಛದ (ನಾ). ಕಣ್ಣೆವೆ ; ರೆಪ್ಪೆ. [ಸಂ.]

ನೇತ್ರಜ್ಞ (ನಾ). ಕಣ್ಣಿನ ವಿಷಯದಲ್ಲಿ ಪರಿಣತನಾದವನು,— ತಜ್ಞನಾದವನು : ಯಾವ ನೇತ್ರಜ್ಞನೂ ಅರೆಕ್ಷಣ ಎರಚುವ ಬೆಳಕಿನಲ್ಲಿ ಗಟ್ಟಿ ಕಣ್ಣಿನ ಎಳಸಿನ ಸ್ಥಿತಿಯನ್ನು ಕಣ್ಪರೆಯಿಂದ ಪ್ರತ್ಯೇಕಿಸಿ ಗೊತ್ತು ಹಚ್ಚಲಾರ (ನಿಮ್ಮದೃ. ೧೪೮). [ಸಂ.]

ನೇತ್ರತ್ರಯ (ನಾ). ಮೂರು ಕಣ್ಣುಗಳುಳ್ಳವನು ; ಮುಕ್ಕಣ್ಣ ; ಶಿವ. [ಸಂ.]

ನೇತ್ರಪಟ್ಟ (ನಾ). "ರೇಷ್ಮೆಯ ಬಟ್ಟೆ" (ಮಹಾನೇ. ಕೋಶ) : ಚೀನದ ಚಿತ್ರಾವಳಿಯ ದೇವಾಂಗದ ಸಂಧ್ಯಾರಾಗದುದಯರಾಗದ ನೇತ್ರಪಟ್ಟದ ಬಣ್ಣವಣ್ಣಿಗೆಯ ಜವಳಿಗಳಂ . . . ಪ್ರಮೋದದಿಂ ಕುಡುವುದುಂ (ಮಹಾನೇ. ೧೪-೧೨೧ ವ). 'ನೇತ್ರವಟ್ಟೆ' ಪರಾ.

[ನೇತ್ರ+ಪಟ್ಟ$_3$./ತೆಲು. ನೇತ್ರಪಟ್ಟು]

ನೇತ್ರಪಲ್ಲವ (ನಾ). [ಯೋಗ] ಆರು ಮಂತ್ರಾಂಗ ಪಲ್ಲವಗಳಲ್ಲಿ ಒಂದು : ಮಂತ್ರಪಟ್ಟಲ್ಲವಂಗಳಲ್ಲಿ . . . ಮೋಹನ ಉದ್ದೀಪನ ಪುಷ್ಟಿ ವಿಜಯ ಶ್ರೇಯಸ್ಸಂಪಾದನಗಳಿಗೆ ನೇತ್ರಪಲ್ಲವಮಂ . . . ಮಂತ್ರಾಂತ್ಯದಲ್ಲಿ ಪ್ರಯೋಗಿಸಿ (ವಿವೇಕ. ೮೨). [ನೇತ್ರ+ಪಲ್ಲವ ?]

ನೇತ್ರಪಲ್ಲವಿ (ನಾ). ಕಣ್ಣಿನಿಂದ ಮಾಡುವ ಸಂಜ್ಞೆ ; ಕಣ್ಸನ್ನೆ : ನೇತ್ರಪಲ್ಲವಿಯಿಂದ ಸೂತ್ರಗೊಂಬೀ ಹಾಂಗ. ಪಾತ್ರ ಕುಣಿಸ್ಯಾನ (ಮೂರ್ತಿಕಾ. ೪೫-೧) ; ಬಾನ ಬರಸಿಡಿಲಲ್ಲಿ ಕೆಮ್ಮಿಂಚು ಹೊಮ್ಮಿಂಚು ಅಬ್ಬ ! ವಜ್ರದ ಮಿಂಚು, ನೇತ್ರಪಲ್ಲವಿಯ ಈ ತಂತ್ರ ಬಲ್ಲವರಾರು ? (ಸೂರ್ಯಪಾ. ೧೧೧-೨). [←ಮರಾ. ನೇತ್ರಪಲ್ಲವೀ, ನೇತ್ರಪಾಲವೀ]

ನೇತ್ರಪಟಿ, ನೇತ್ರವಳಿ, ನೇತ್ರಾವಳಿ, ನೇತ್ರಾವಟಿ (ನಾ). ಒಂದು ಬಗೆಯ ರೇಷ್ಮೆ ಬಟ್ಟೆ : ಎಲ್ಲಾ ಕಾಲಮುಂ ಮಣಿ ಕುಟ್ಟಿ ಮಭೂಮಿಯೊಳ್ ಪಾಸಿದ ನೇತ್ರ[ಪಾಠಾಂ. ನೇತ್ರದ]ಪಟಿಯಮೇಗೆ ನಡೆದ ಮೃದು ಲಲಿತಮಪ್ಪ ಚರಣದ್ವಯದೊಳ್ ಮುನ್ನೆಂದವುಂ ನೆಲನಂ ಕಿಟ್ಟಿಯಱಿಯದೊಂ ಕಠಿನಭೂಮಿಯೊಳ್ ನಡೆದೊಡೆ (ವಡ್ಡಾರಾ. ೨೯-೮). **ನೇತ್ರವಳಿ** : ಸೂತ್ರವಳಿಯು ಚಿನ್ನಧಾರೆ ನೇತ್ರವಳಿಯು ಸುಲಿ ಪಲ್ಲು ಗಂಗಾಪುರ . . . ಕಂದವಾರದ ಸೀರೆ ಕೈಬರಹದ ಬಣ್ಣದಂದವ ನೇನ ಬಣ್ಣಿಸುವೆ (ಆಮುಸಾಂ. ೪-೮). **ನೇತ್ರಾವಳಿ** : ಪಳಿಯು ಪಟ್ಟಾವಳಿಯು ನೇತ್ರಾವಳಿಯು . . . ಇವು ಮೊದಲು ಥರಥರದೊಳಂದೆಮ್ಮವರುಗಳು ಪಡೆದೊದವಿಸಿದ ಯೀ ವಿವಿಧ ಪಟ್ಟಾವಳಿಗಳುಂಟು (ಬಸಪು. ೧೧-೨೫) ; ಪೊಪ್ಪುಳಿಯು . . . ಮಿರುಪ ನೇತ್ರಾವಳಿಯು ಮುಖ್ಯ ನಾನಾವಿಧದ ಸೀರೆಗಳ ಚಿನ್ನದೆಳೆಮೊಗ್ಗ ಕಂಚುಕವ ಬೇಹನಿತ ತಗದು (ನವಮೋ. ೧೭-೬೦). **ನೇತ್ರಾವಟಿ** : ಎರಡು ತೊಡೆಯುಂ ತೋಱೆ ತೆಮಳ್ದಿ ಬಿಗಿದುಟ್ಟು ನೇತ್ರಾವಟಿಯ ಚಲ್ಲಣಮುಂ . . . ಸೊರ್ಕಾನೆಯ ಕಯ್ಯ ಕರಿಯ ಪಿರಿಯ ಪಿಲ್ಲಣಿಗಯುಮಗುರ್ವುಮದ್ಭುತಮಾಗೆ (ಅರ್ಧನೇ. ೮-೬೭ ವ). [ನೇತ್ರ+ಪಟ್ಟಿ$_6$]

ನೇತ್ರಪಾಟವ (ನಾ). ಕಣ್ಣಿನ ಸಾಮರ್ಥ್ಯ,— ಪಟುತ್ವ : ವ್ಯಾಧಿಗ್ರಸ್ತನಾಗಿ, ಮರಣಾಸನ್ನನಾಗಿ, ನೇತ್ರಪಾಟವ ಕಡಿಮೆಯಾಗಿ ಇದ್ದ ಅರಸ ಅವು ಕೃಷ್ಣನ ಕಣ್ಗಳೆಂದೇ ನಂಬಿದ (ಆಳೌಕ. ೧೪) ; ಹೇಮಾದ್ರಿಗಳಿಗೆ ಇಷ್ಟು ಬೇಗ ನೇತ್ರಪಾಟವ ಕಡಿಮೆಯಾಯಿತೆ ! (ಶಾಂತಲಾ. ೪೩).

[ನೇತ್ರ+ಪಾಟವ]

ನೇತ್ರಪುತ್ರಿಕೆ (ನಾ). ಕಣ್ಣಿನ ಗೊಂಬೆ,-ಗುಡ್ಡೆ : ಪುಟ್ಟದಳ್ ಸ್ವಯಂ ಪ್ರಭೆ ಮಗಳಾಕೆ ಪಾರ್ಶ್ವಚರಭೂಚರಖೇಚರನೇತ್ರಪುತ್ರಿಕಾನಿಭೆ(ಶಾಂತಿಪು. ೫-೧೭) ; ನೇತ್ರಪುತ್ರಿಕಾಪ್ರಸಾಧನಸದನಮುಂ ಲಕ್ಷ್ಮೀಲೀಲಾ ಲಾಸ್ಯ ಮಾಂಗಲ್ಯರಂಗಮುಮೆನಿಪ ಪುರ ಬಹಿಃಪುರದಿಂದೊಳಗೆ . . . ಪೊನ್ನ ಕೋಂಟೆಯಂ ಬಳಸಿರ್ಕುಂ (ಪಂರಾಮಾ. ೧-೧೧೨ ವ) ; ನಾಗರಖಂಡ ಪತ್ರಪರಿವೇಷ್ಟನದಿಂ ಜನನೇತ್ರಪುತ್ರಿಕಾರಾಗಮನಿತ್ತು ಮಾಣ್ಡುದೆ ಮನಸ್ಸುಖದಂ ಬನವಾಸೆಮಂಡಲಂ (ಎಕ. VIII, ಸೊರಬ. ೨೮೬-೮; 1168). [ನೇತ್ರ + ಪುತ್ರಿಕೆ]

ನೇತ್ರಬಂಧ (ನಾ). ೧. ಕಣ್ಣನ್ನು ಕಟ್ಟುವುದು : "ನೇತ್ರಬಂಧಂ ಕಣ್ಣುಕಟ್ಟು" (ಮಂಗರಾ. ೬೭-೫). ೨. ಕಣ್ಣುಮುಚ್ಚಾಲೆ ಆಟ.

[ನೇತ್ರ+ಬಂಧ]

ನೇತ್ರಮೂಲಿ (ನಾ). (ನೀಲಿಬಣ್ಣದ ಹೂವು ಬಿಡುವ) ಒಂದು ಬಗೆಯ ಸಸ್ಯ ; ವಿಷ್ಣುಕ್ರಾಂತಿ : "ನೇತ್ರಮೂಲಿ ಜಯಂತಿಯೇ ವಿಷ್ಣುಕ್ರಾಂತಿ" (ಮಂಗರಾ. ೩೯-೨೬). [?]

ನೇತ್ರರುಜೆ (ನಾ). = ನೇತ್ರರೋಗ : (೪). [ನೇತ್ರ + ರುಜೆ]

ನೇತ್ರರೋಗ (ನಾ). ಕಣ್ಣಿನ ಬೇನೆ; ಕಣ್ಣಿಗೆ ಸಂಬಂಧಿಸಿದ ವ್ಯಾಧಿ : ಕೆಂಪಿನ ಅಗಸೆ :—ಈ ಹೂವಿನ ರಸವನ್ನು ದಿನ ಬಿಟ್ಟು ದಿನ ಒತ್ತಿ ನೀರನೆಜೆದರೆ ಮೂರ್ಧವ್ಯಾಧಿ, ನೇತ್ರರೋಗ ಗುಣ (ವೈದ್ಯವಿ. ೪); ಕ್ಷೀರಧಾರಾ (ನೊರೆಹಾಲು) ಗುಣ—ಇದನ್ನು ಸೇವಿಸಲು . . . ನೇತ್ರ ರೋಗ, ವಿಷರೋಗ ಸಹ ಗುಣಮುಕ್ಕುಂ (ಸಕವೈ. ೩೪).

[ನೇತ್ರ + ರೋಗ]

ನೇತ್ರಲಾಂಛನ (ನಾ). (ವೈ) ತುಂಬ) ಕಣ್ಣಾಗಳ ಚಿಹ್ನೆಗಳುಳ್ಳವನು; ಇಂದ್ರ : ಇಂಚರದಮರಿಯರೊಡನಾಡುವ ನೇತ್ರಲಾಂಛನಗುಜಿ ಮೇಳವೆಣ್ಣು ಸಂಚಲದ್ಯಗುನನ್ನೆಯಮಾಡಿದಂದದಿ ವಿಂಚಿಡರಿತು ಸಭಸ್ಥಲದಿ (ನೋಪಚ. ೪-೩೩). [ನೇತ್ರ + ಲಾಂಛನ]

ನೇತ್ರವಟ್ಟಣಿಗೆ (ನಾ). = ನೇತ್ರಪಟಿ : ಚತ್ರಾವಟಿಯ ಪಟ್ಟಾವಟಿಯ ಪಟ್ಟಸೂತ್ರದ ಚತ್ರಸೂತ್ರದ ನೇತ್ರವಟ್ಟಣಿಗೆಯ ಪುಟ್ಟಗೆಗಳ ನೊಟ್ಟ ಬೆಟ್ಟಾಗಿ ಪುಂಜಿಸಿ . . . ಮೆಜೆದಳ್ (ಸುಕುಮಾ. ೧೦-೯೧ ಪ).

[ನೇತ್ರ + ಪಟ್ಟಣಿಗೆ1 (< ಪಟ್ಟಗೆ1)]

ನೇತ್ರವಟ್ಟೆ (ನಾ). = ನೇತ್ರಪಟಿ : ವಿರಾಜಿಸುವ ಪೂಜಾಗ್ರಹದಿಂದಮಿಲ ಪೂಜಾರ್ಥಗಳನಿತ್ತ ಬನ್ನಿಮೆಂದು ಕೈಸನ್ನೆಗೆಯ್ವಂತೆ ವಿಳಿರ್ಮ ನೇತ್ರ ವಟ್ಟೆಯ ಜಾಗದ ಪಟಯಿಂಗೆಯ ತುಜುಗಲಿಂ (ಪುಲ್ಲಿಪು. ೨-೭೪) ; ಸಾಧಕನ ವನೊಬ್ಬ ನೇತ್ರವಟ್ಟೆಯನುಟ್ಟುಕೊಂಡು ಸೂತ್ರಧಾರಿಯನಜನುತ್ತ ಬಂದನಯ್ಯಾ (ಸಪಸ. ೨೪-೧೩೩) ; ಕಾರೋಹಣದ ಕಳ್ಕಪಟಯಿಗೆಯ ನೇತ್ರವಟ್ಟ[ಟ್ಟೆ]ಯ ಮದವಿಯ ಮಂಜಿಷ್ಠಿಯ ಸಂಧ್ಯಾರಾಗದುದಯ ರಾಗದ ಸೀಸಕ ಬಾಹಂಕ್ಕೆ ಜೋಡು ಸವಗಮೊಚ್ಚಯಂಗಳ (ಮಹಾನೇ. ೧೨-೨೧ ವ) ; ಪಸುರ್ಮಟ್ಟೆಯ ಕಂಚುಕ, ನೇತ್ರಪಟ್ಟಿಯ ಪೊಸ ಜಲ್ಲಣ, ಮುತ್ತಿನ ದಂಡೆ ಉಟ್ಟು ತೊಟ್ಟು ಮೂರೆಡೆ ಬಳುಕಿದ ಕಾಮನ ಬಿಲ್ಲಿನಂತೆ ತ್ರಿಭಂಗಿಯ ನಿಲುವಿನಲ್ಲಿ ನಿಂತ ನರ್ತಕಿ, ಲೀಲಾವತಿ! (ಸಾಹಿಸಂ. ೨೮).

[ನೇತ್ರ + ಪಟ್ಟೆ3]

ನೇತ್ರವಳಿ 'ನೇತ್ರಪಟಿ' ನೋ.

ನೇತ್ರವಾಯು (ನಾ). ಒಂದು ಬಗೆಯ ಕಣ್ಣಿನ ಬೇನೆ: ಹೊಸ ಗೊನ್ನೆಯ ರಸ, ಗರುಗದ ರಸ . . . ಕಸ್ತೂರಿ ಅರಸಿನ, ಇದಂ ಚೂರ್ಣವಂ ಮಾಡಿ ಹಾಕಿ ತೈಲ ಹದದಲ್ಲಿ ಕಾಸಿ ಈ ತೈಲ ಒತ್ತಿಕೊಳ್ಳಲು ನೇತ್ರ ವಾಯು ಗುಣ (ವೈದ್ಯವಿ. ೧೩೫). [ನೇತ್ರ + ವಾಯು]

ನೇತ್ರವೈದ್ಯ (ನಾ). ಕಣ್ಣಿನ ರೋಗಗಳಿಗೆ ಚಿಕಿತ್ಸೆ ನಡೆಸುವ ವೈದ್ಯ : ಕಣ್ಣಿಗೆ ಏನಾದರೂ ತೊಂದರೆಯುಂಟಾದರೆ ತಕ್ಷಣ ನೇತ್ರ ವೈದ್ಯರಿಗೆ ತೋರಿಸಬೇಕು (ರೂಢಿ). [ನೇತ್ರ + ವೈದ್ಯ]

ನೇತ್ರವ್ಯಾಧಿ (ನಾ). = ನೇತ್ರರೋಗ : ನಿಂಬೇಹಣ್ಣಿನ ಹುಳಿ . . . ಗರುಗದ ರಸ, ಎಳ್ಳೆಯ ಸಮಭಾಗ ಕೂಡಿಸಿ ಅಟ್ಟು ತಲೆಗೆ ಒತ್ತಿಕೊಳ್ಳುವುದು . . . ಏಳುದಿನಕ್ಕೆ ನೇತ್ರವ್ಯಾಧಿ ಗುಣ (ವೈದ್ಯವಿ. ೧೩೫).

[ನೇತ್ರ + ವ್ಯಾಧಿ]

ನೇತ್ರಶ್ರವಣ (ನಾ). ಕಣ್ಣೇ ಕಿವಿಯಾಗಿರುವ ಪ್ರಾಣಿ ; ಹಾವು : ನೇತ್ರಶ್ರವಣನು ಕುಂಡಲಾಕೃತಿಯಗೊಂಡಂತೆ ಪಳುಕಿನ ಸುಕೋಂಟೆಯೆಸೆಗು (ಸಪಮೋ. ೨-೨೪). [ನೇತ್ರ + ಶ್ರವಣ2]

ನೇತ್ರಸೌಖ್ಯ (ನಾ). ಕಣ್ಣಿಗೆ ಸುಖಕರವಾದುದು ; ನೋಡಲು ಸುಂದರವಾದುದು : ನೇತ್ರಸೌಖ್ಯಮನೊಂದುದಿನವಾ ಪಾತ್ರಭೂಜಾ ಮಣಿಯೆನಿಪ ನಿಜಪುತ್ರಿ ಮಗಧಸವುಂದರಿಯ ಸೊಬಗಾದ ನೃತ್ಯವನು . . . ತೋಜಿಸೆ ಕಂಡನಧಿಕೇತು (ಸಾಳ್ವಭಾ. ೬-೧೨).

[ನೇತ್ರ + ಸೌಖ್ಯ]

ನೇತ್ರಾಂಚಲ (ನಾ). ಕಣ್ಣಿನ ತುದಿ ; ಕಡೆಗಣ್ಣು ; ಕಟಾಕ್ಷ : ಅವಳ ಧವಳನೇತ್ರಾಂಚಲಾಲೋಕಮಾತ್ರಂ ನೆರವಾದತ್ರ ಂಗಜಂಗೀ ತ್ರಿಜಗಮುಮಿದಿರಿಲ್ಲೆಂದಿನಂ . . . ಲೀಲೆಯಿಂ ಬಾಲೆಯರ್ಮಾಳ್ (ಜಗವಿ. ೧೦-೧೬). [ಸಂ.]

ನೇತ್ರಾಂಬರ (ನಾ). = ನೇತ್ರಪಟಿ : ಸುರರಾಜಪುರಶ್ರೀಗಾ ಪುರಲಕ್ಷ್ಮೀ ಕಾಂತೆ ಸೆಸಿ ಕಿಸುಗಣ್ಣಿದ ಕೇಕರಕಾಂತಿಯಂತೆ ನೇತ್ರಾಂಬರಕೇತನಮಾಳಿ ತುಜುಗಿದುವು ಮನೆಮನೆಯೊಳ್ (ನುಲ್ಲಿಪು. ೧೨-೯).

[ನೇತ್ರ + ಅಂಬರ]

ನೇತ್ರಾಂಬು (ನಾ). ಕಣ್ಣಿನಿಂದ ಬರುವ ನೀರು ; ಕಣ್ಣೀರು : "ಅಶ್ರು, ನೇತ್ರಾಂಬು,ರೋದನಂ, ಅಸ್ರಂ, ಅಸ್ರ—ಇ ಕಣ್ಣನಲ್ಲಿ ಸುರಿಯುವ ನೀರು" (ಸದ್ಧಾಂತಿ. ೧೯೬). [ನೇತ್ರ + ಅಂಬು3]

ನೇತ್ರಾಂಶುಕ (ನಾ). = ನೇತ್ರಪಟಿ : ವನಲಕ್ಷ್ಮಿಯ ನೇತ್ರಾಂಶುಕವೆನೆ ನೇತ್ರಕ್ಕೆಸೆದು ಮಿಸುಗಿ ಪಸುರ್ವಡೆದುವು ನಂದನದ ಕೆಲಂದಿಡಿದಾರ್ದ್ರಕವನ ಜೇಥಕವನ ಹರಿದ್ರವನ ಸಂತತಿಗಳ್ (ಪುಪ್ಪಪು. ೨-೪೬).

[ನೇತ್ರ + ಅಂಶುಕ]

ನೇತ್ರಾಕರ್ಷಣ (ನಾ). ಕಣ್ಣುಗಳನ್ನು ಆಕರ್ಷಿಸುವುದು : ವಧೂಟೀ ಜನನೇತ್ರಾಕರ್ಷಣಾಲೇಪನಕಪಜಯಮಂ ಮಾನಿನೀಚಿತ್ತಸಂಮೋಹನ ರೂಪಕ್ಕೆಗ್ಗನುತ್ಪಾದಿಸುವುದು ನೃಪರೂಪಂ ಜನಾಶ್ಚರ್ಯರೂಪಂ (ಪುಲ್ಲಿಪು. ೩-೩೧). [ನೇತ್ರ + ಆಕರ್ಷಣ]

ನೇತ್ರಾತುರ (ನಾ). ಕಣ್ಣು ಬೇನೆಯುಳ್ಳವನು ; ಕಣ್ಣಿನಲ್ಲಿ ರೋಗ ವುಳ್ಳವನು : ಉಜುವ ಪೂಗಣೆ ನಾಟ ರಾಘವ ಬರವ ಹಾರುತ್ತಿರಲು ಜಾನಕಿ ಬರಲು ಮನವೊಳಸರಿದುದು . . . ಕರುಜೆ ಕಡಲಾಜುತ್ತು ನೇತ್ರಾ ತುರನು ದೀಪವ ಕಾಂಬ ಪರಿಯಲಿ ಕಂಡ ದೇವಿಯನು(ಕೌಶರಾ. ೪೩-೧೬).

[ನೇತ್ರ + ಆತುರ]

ನೇತ್ರಾಧ್ವ (ನಾ). ಕಣ್ಣಿನ ಮಾರ್ಗ,—ದೃಷ್ಟಿ : ನಿಜ ನೇತ್ರಾಧ್ವ ದೊಳಾಗಳಾಗಳದಟಂ . . . ದೊರೆಕೊಂಡಂ ದ್ರೋಣನೆಂದೇಡಾದಂ ತ್ರಿಜಗದ್ಭೂಷಣದಂತಿಯಂ ರಿಪುಜಮುಖವಿದ್ರಾವಣಂ ರಾವಣಂ(ಪಂರಾಮಾ. ೧೦-೨೦೯). [ನೇತ್ರ + ಅಧ್ವ]

ನೇತ್ರಾನಂದ (ನಾ). ಕಣ್ಣಿಗೆ ಉಂಟಾಗುವ ಆನಂದ ; ನೋಟ ದಿಂದ ಉಂಟಾಗುವ ತೃಪ್ತಿ,—ಸಂತೋಷ : ನೇತ್ರಾನಂದಮನೀಯೆ ಸಾಂದ್ರಶಶಿದಿಂಬಾಡಂಬರಂ ಶ್ರೀಮುಖಂ . . . ಧಾತ್ರೀಧವಾರ್ಜಿತಸತ್ಪ ಸಂತತಿಗೆನಲ್ (ಸುಹಾನೇ. ೧-೨೧); ನೀನೀ ವಿಗ್ರಹದಿಂದ ಜನವಾವುದನ್ನು ಮಾಡಿಸಬಲ್ಲೆಯೋ ಅದನ್ನೆಲ್ಲ ಮಾಡಿಸು. ನೇತ್ರಾನಂದವಾಗುವಂತೆ ನೋಡಿ ಬಿಡುವೆನು (ಕವಿಕ. ೧೪). [ನೇತ್ರ + ಆನಂದ]

ನೇತ್ರಾಭ್ಯಂಗನ (ನಾ). ಕಣ್ಣಿಗೆ ಎಣ್ಣೆ ಯನ್ನು ಹಚ್ಚಿಕೊಳ್ಳುವಿಕೆ : ಪಾದಾಭ್ಯಂಗನದಿಂದ ನೇತ್ರರೋಗವೂ ನೇತ್ರಾಭ್ಯಂಗನದಿಂದ ಶಿರೋ ರೋಗವೂ ಶಿರೋಭ್ಯಂಜನದಿಂದ ಸರ್ವರೋಗವೂ ಹರವಾಗುವುದು (ಸಕವೈ. ೩೧). [ನೇತ್ರ + ಅಭ್ಯಂಗನ]

ನೇತ್ರಾವಳಿ 'ನೇತ್ರಪಟಿ' ನೋ.

ನೇತ್ರಾವಟಿ 'ನೇತ್ರಪಟಿ' ನೋ.

ನೇತ್ರಾಳಿ (ನಾ). ಕಣ್ಣುಗಳ ಸಮೂಹ : ತನ್ನೇತ್ರಾಳಿಗಳನಿಸೆದನೀಶ ನಮಲಪ್ರಕಾಶಂ (ವೀಶೃಪು. ೩-೧೭-೩೪). [ನೇತ್ರ + ಆಳಿ4 (= ಆಲಿ4)]

ನೇತ್ರಿ1 (ನಾ). ಹೊಳೆ ; ನದಿ : "ನೇತ್ರಿ = ಹೊಳೆ" (ಗಂಗಾಮ.೧೯೧). [ಸಂ. ನೇತ್ರೀ]

ನೇತ್ರಿ2 (ನಾ). ಒಂದು ಬಗೆಯ ಸಸ್ಯ ; ಚಮ್ಯ : "ಕೃಕವಾಕು ಮುಸ್ತಕಂ ನೇತ್ರಿಯೆನೆ ಚಮ್ಯವಕ್ಕುಂ" (ಸುಂಗರಾ. ೪೨-೩೮). [?]

ನೇತ್ರೇಂದ್ರಿಯ(ನಾ). ಕಣ್ಣು ; ನಯನ : ಈ ಬೆಳಗಳ ಇಂದ್ರಿಯಾಂಗಗಳನ್ನು ಪ್ರತಿಕ್ರಿಯೆಗಳ ಆಧಾರದ ಮೇಲೆ ವಿಂಗಡಿಸಬಹುದು . . . ಬೆಳಕು, ನೇತ್ರೇಂದ್ರಿಯಗಳು (Visual organs) (ಕಬಬೆ. ೫೦).

[ನೇತ್ರ + ಇಂದ್ರಿಯ]

ನೇತ್ರೋನ್ಮೀಲನ (ನಾ). ಕಣ್ಣನ್ನು ತೆರೆಯುವಿಕೆ : ಜಯಿಯ ನೇತ್ರೋನ್ಮೀಲನಂಗೆಯ್ದು ಸಜ್ಜರಿತರ್ ಸಾಧುಗಳೆಮ್ಮನುದ್ಧರಿಸುಗೀ ಸಂಸಾರವಾರಾಶಿಯಿಂ (ಸುಶ್ಲಿಷ. ೧-೫); ಮೂಲಬೇರದ ಸ್ಥಾಪನೆಯಾದ ಮೇಲೆ ಪ್ರಾಣಪ್ರತಿಷ್ಠಾ ನೇತ್ರೋನ್ಮೀಲನಾದಿ ಕರ್ಮಗಳನ್ನು ವಿಧಿವತ್ತಾಗಿ ಮಾಡಿದರೆ ಕ್ಷೇತ್ರವು ಜಾಗೃತವಾಗುವುದು (ಹೊಯ್ಸಸಾ.೧೯೯).

[ನೇತ್ರ + ಉನ್ಮೀಲನ]

ನೇದಿಷ್ಠ (ನಾ). ತೀರ ಸಮೀಪದಲ್ಲಿರುವುದು : "ನೇದಿಷ್ಠಂ, ಅಂತಿಕತಮಂ—ಎಂ ಬಹಳ ಹತ್ತಿರವಾದದ್ದು, ಕೇವಲ ಸಮೀಪವಾದದ್ದು" (ಸಿದ್ಧಾಂಶಿ. ೬೪೧); ಶಕ್ರಯೋಷಿನ್ನೇದಿಷ್ಠಃ ಪದ್ಮರಾಗೋಜ್ವಳಮುಕುರ ಮಿದೆಂಬಂತುಮಿಂಬಾಗೆ ಚಿಲ್ವಿಂದಾದಂ ಕಣ್ಮೊಂಡು ತೋಜಾತ್ತುದಯ ಗಿರಿಶಿರೋಭಾಗದಿಂ ಚಂದ್ರಬಿಂಬಂ (ಪರ್ಧಸಾ. ೮-೭೬೨). [ಸಂ.]

ನೇದು 'ನೆಯ್' ಪರಾ.

ನೇಪತ್ರ (ನಾ). ಎಳೆಯ ಬಿದಿರು ; ಕಳಿಲೆ : ನೇಪತ್ರ (ಕಳಲೆ)ಯು ಹೊಟ್ಟೆಯುಬ್ಬುಮಾಡುವುದು (ಅಷ್ಟಾಂಗ. ೧೩೫-೪೦). [?]

ನೇಪಥ್ಯ (ನಾ). ೧. ಆಭರಣ; ಅಲಂಕಾರ; ತೊಡುಗೆ : "ಭೂಷಣಃ, ಆಳಂಕಾರಃ, ನೇಪಥ್ಯಂ, ಆಭರಣಂ—ಈ ೪ ತುಡುಗೆ" (ಹಲಾಯು. ೪೯-೫೦೫) ; ಅನತೋರ್ವೀಶರ ದಂತಿದಂತವಳಯೂಳಾಲಂಕಾರದಿಂ ವೀರವೈರಿ ನೃಪಾಲದ್ವಿಪಮೌಕ್ತಿಕಾವಳಿಗಳಿಂ ಕೆಯ್ಮಿಯ್ಸುಗುಂ ನಿನ್ನ ನಂದನೆಯಂ ಪೇರ್ ಪೆರಂತೆ ಮಿಕ್ಕ ಬಳೆಯಿಂದಂ ಮಿಕ್ಕ ಮುತ್ತಿಂದಮಂಗನೆಯರ್ಗಾಹುವ ಧೀರನಾ ನೃಪವರಂ ನೇಪಥ್ಯಮಂ ಮಾಪ್ಪನೇ (ಪುಪ್ಪಶು. ೬-೪೪). ೨. ನಾಟ್ಯಗೃಹದಲ್ಲಿ ರಂಗಭೂಮಿಯ ಹಿಂಭಾಗ ; ಪಾತ್ರಗಳು ವೇಷಭೂಷಣಗಳನ್ನು ಮಾಡಿಕೊಳ್ಳುವುದಕ್ಕಾಗಿ ಇರುವ ರಂಗಭೂಮಿಯ ಹಿನ್ನೆಲೆ : ಇದಕ್ಕೆ 'ರಂಗಶೀರ್ಷ' ವೆಂದು ಹೆಸರು. ಇದರ ಅಕ್ಕಪಕ್ಕಗಳಲ್ಲಿ ನೇಪಥ್ಯದೊಳಕ್ಕೆ ಹೋಗಲು ಬಾಗಿಲುಗಳಿರುತ್ತವೆ (ಸಂನಾಟ. ೨೩). [ಸಂ.]

ನೇಪಥ್ಯಗೀತ (ನಾ). (ನಾಟಕ, ಚಲನಚಿತ್ರ ಮೊದಲಾದುವುಗಳಲ್ಲಿ) ಹಿನ್ನೆಲೆಯಲ್ಲಿ ಹಾಡುವ ಗೀತೆ ; ತೆರೆಮರೆಯ ಗೀತೆ : ನಾಟಕದ ಭಾವಗಳನ್ನು ಮೆರೆಯಿಸಲು ಬೆಳಕಿನ ಯೋಜನೆ, ನೇಪಥ್ಯಗೀತ (Back-ground Music), ತಿರುಗುವ ರಂಗಭೂಮಿ(Revolving Stage) ಗಳಂಥ ಹಲವು ನವೀನ ಸಲಕರಣೆಗಳು ಕಾಲಿರಿಸಿವೆ (ಬಾಲಪ್ರ.III, ೧೨೮೩).

[ನೇಪಥ್ಯ + ಗೀತ]

ನೇಪಥ್ಯಗೃಹ (ನಾ). (ನಟ, ನಟಿಯರ ಸಿದ್ಧತೆ ಮೊದಲಾದುವುಗಳಿಗಾಗಿ) ರಂಗಭೂಮಿಯ ಹಿಂಭಾಗದಲ್ಲಿ ಇರುವ ಗೃಹ,—ಕೋಣೆ : ನರ್ತನಾಲಂಕರಣದಿನಲಂಕರಿಸಿ ನರ್ತಕಿ ನೇಪಥ್ಯಗೃಹದಿಂ ವಿವಿಧರತ್ನರಚಿತಮೆನಿಸಿದ ಜವನಿಕೆಗವತರಿಸಿ (ಸುಶ್ಲಿಷ. ೮-೬೫) ; ಇದರಲ್ಲಿ ಹಿಂದಿನಿಂದ ೧೬×೪೨ ಹಸ್ತ, ನೇಪಥ್ಯಗೃಹ ; ಅಲ್ಲಿಯೆ ನಟರು ವೇಷ ಭೂಷಣಾದಿಗಳನ್ನು ಹಾಕಿಕೊಳ್ಳುವುದು (ಸಂನಾಟ. ೨೩).

[ನೇಪಥ್ಯ + ಗೃಹ]

ನೇಪಾಲ₁, ನೆರ್ವಾಳ, ನೇಪಾಳ₁, ಲೇಪಾಳ₁ (ನಾ). ಒಂದು ಬಗೆಯ ಗಿಡ ಮತ್ತು ವಿರೇಚಕ ಗುಣವುಳ್ಳ ಅದರ ಕಾಯಿ:(೪). **ನೆರ್ವಾಳೆ** : ಆದಿರಾಜ, ಹೊಳೆತುಂಬೆ, ನೆರ್ವಾಳ, ಮುವಲಂಗಮುರ . . . ಹೊಡ್ಡೆಲೆನಗೆ (ಪೃಬಿಗಿ. ೨೫-೪೬೬). **ನೇಪಾಳ₁** : "ನೇತ್ರ ನಿರ್ಮೂಲಕಾರೀ-ಖಿಪ್ಪಲಿ, ನೇಪಾಳ, ಜೇಪಾಳ, ತುತ್ತ, ತಾಮ್ರ, ನೇಪಾಳ, ಕೆಂಜಾಜಿ" (ಓಷಧಿ. ೯೦) ; ಪುಡ್ಡಿಮಾಡಿದ ನೇಪಾಳ ೧೦ ವರಹ ತೂಕ . . . ನಿಂಬೆಹಣ್ಣಿನ ರಸದಿಂ ಮರ್ದಿಸಿ ಕಡುಹಂ ಮಾಡಿ ನೆಳಲ್ಲಿ ಒಣಗಿಸಿ ತಿಲಪ್ರಮಾಣಂ ಕಣ್ಣಿಗೆಚ್ಚಲು ಸನ್ನಿಪಾತಂ ಗುಣಮುಕ್ಕುಂ (ಸಕವೈ. ೧೪೦). 'ಜಾಪಾಳ' ಪರಾ. **ಲೇಪಾಳ₁** : "ಮೂೞೀ-ಲೇಪಾಳ ಬೀಜಂ (ಓಷಧಿ. ೧೨೩).

[ದೇ.॥ ತಮಿ. ನೇಪಾಳ, ನೇರ್ವಾಳ; ಮಲ. ನೀರ್ವಾಳ; ತೆಲು. ನೇಪಾಳ]

ನೇಪಾಲ₂, ನೇಪಾಳ₂ (ನಾ). ೧. ಒಂದು ಬಗೆಯ ಲೋಹ ; ತಾಮ್ರ. ೨. ಭಾರತದ ಉತ್ತರದಲ್ಲಿರುವ ಒಂದು ದೇಶದ ಹೆಸರು; P ಹಿಂದೆ ಪ್ರಸಿದ್ಧವಾಗಿದ್ದ ಐವತ್ತಾರುದೇಶಗಳಲ್ಲಿ ಒಂದು. **ನೇಪಾಳ₂** : ೨. ಆಂಗ ವಂಗ ಕಳಿಂಗ ಕೊಂಗ ಮಾಳವ ಚೋಳ ನೇಪಾಳ . . . ಮುರುಪ್ರಭೃತಿಭೂಪಾಲಕರಿಂ ಭಯಾನಕರಸಮುಂ . . . ಇಂತು ನವರಸಂಗಳಿಂದಭಿನವರಸಂಗಳಾಗಿ ನೆಗಬುತ್ತುಮಿರೆಯಿರೆ (ಜಗವಿ. ೨-೬೯ ನ) ; ನೇಪಾಳ ಕುಂತಳ ಕುಳುರ ಬರ್ಬರ . . . ಕೇರಳ ಮುಖಾಪಾಶದೇಶಂಗ ಳೊಳಿಸಿವ ಜಂಗಮವು ಭಕ್ತಾಳಿ (ಬಸಪು. ೬-೧೮೮) ; ಲಾಳ ಚೋಳ ವರಾಳ . . . ಕುರು ನೇಪಾಳ ನಿಷಧ ವಿದರ್ಭ ಧರಣೀಪಾಲತತಿ ಸಂದಣಿಸಿದುದು ಸಾಕೇತನಗರಿಯಲಿ (ತೊರಾ. ೧-೬-೧೪) ; ನೇಪಾಳದೇಶದ ಭೂಪಾಲನಾದರೆ ಗೋಪಾಳದವನಿಗೆ ಏನು ? (ಗಾಪ). ೩. ನೇಪಾಳ ದೇಶದ ದೊರೆ : ಪಾಂಡ್ಯನ ಕಾಳಿಜಕ್ಕೆ ನೇಪಾಳನ ಬೆಂಕ ಸೊಂಟಿಗೆಗೆ ಚೋಳನ ಕಾರಡಗಿಂಗೆ . . . ಕಾಯ್ದು ಖಿಲ್ಲ ಮಾಳಾಳಿಯಡುತ್ತುರ್ವ ನಿಳ್ಳುವಳು ನಾಲಗೆಯಂ ನರಸಿಂಗಭೂಪನ (ಎಕ. IV (R), ಹುಣಸೂ. ೨೪-೧೭ ; 1182). [ಸಂ.]

ನೇಪಾಳ₁ 'ನೇಪಾಲ₁' ನೋ.

ನೇಪಾಳ₂ 'ನೇಪಾಲ₂' ನೋ.

ನೇಪಾಳಕಂಬಳಿ (ನಾ). ನೇಪಾಳದೇಶದಲ್ಲಿ ತಯಾರಿಸಿದ ಕಂಬಳಿ : ನೇಪಾಳಕಂಬಳಿ ಗುಣ . . . ವಾತಶ್ಲೇಷ್ಮಹರವಾಗಿಯೂ, ಐಶ್ವರ್ಯಪ್ರದವಾಗಿಯೂ ಇರುವುದು (ಸಕವೈ. ೩೬).

[ನೇಪಾಳ₂(=ನೇಪಾಲ₂) + ಕಂಬಳಿ]

ನೇಪಾಳಗುದುರೆ (ನಾ). ನೇಪಾಳದೇಶದ ಕುದುರೆ : ನೀಲ ಹರಿಹಿತು ಕರಿಗಳನು ನೇಪಾಳಗುದುರೆಯ ಥಟ್ಟುಗಳ ಹಿಂಗಾಲಲಡೆದುದು . . . ಸುಪ್ರತೀಕಗಜ (ಕುವ್ಯಾದ್ರಿ. ೩-೧೫).

[ನೇಪಾಳ₂(=ನೇಪಾಲ₂) + ಕುದುರೆ]

ನೇಪಾಳಬೇವು (ನಾ). ಒಂದು ಬಗೆಯ ಬೇವು : "ನಾಡೀತಕ್ಕಳಃ—ನೇಪಾಳಬೇವು" (ಓಷಧಿ. ೮೫). [ನೇಪಾಳ + ಬೇವು₁]

ನೇಪಾಳಿ (ಗು). ನೇಪಾಳದೇಶಕ್ಕೆ ಸಂಬಂಧಿಸಿದ : ಮಂಡಲಗಳ ರಚನೆಯಲ್ಲಿ ನೇಪಾಳಿ ಕಲಾವಿದರು ತೋರಿಸುವ ಮಾದರಿಗಳ ಆರಿವು, ಪ್ರಮಾಣ ಪರಿಜ್ಞಾನ ಪ್ರಶಂಸನೀಯವಾಗಿದೆ (ಭಾರದ. ೫೩೨). [ಸಂ. ನೇಪಾಲೀ]

ನೇಪಿಸು (ಕ್ರಿ). ಸರಿಪಡಿಸು ; ಓರಣಗೊಳಿಸು ; ಜೋಡಿಸು(?) : ನೇಪಿಸಿದ ಪತ್ತಿಗೆಯೊಳನುಪಮರೂಪ ಚೀನಾಂಬರಗಳನು ಸದ್ಯಾಪಿಸಿಹ ರಂಗಡಿಯೊಳೆಲ್ಲೆಲ್ಲಾಲು ಸಾಲುಗಳ (ಜಂಗಮ. ೩೬-೪೧) ; ಆಪಾದ ಸೋಂಕುತಿಹ ಕೇಶಗಳನೆಣೆಗಂಟಿ ನೇಪಿಸುವ ಸಮಯ (ಜಿಸಮು. ೪೨-೬೯). [<ನೇರ್ಪು₂ + -ಇಸು₅]

ನೇಮು₁ (ನಾ). ೧. (ಮನಸ್ಸಿನ) ನಿಯಂತ್ರಣ ; ಸಂಯಮ ; ಪ್ರತಿಬಂಧ : 'ನೇಮಿಸು' ಪರಾ. ೨. (ಹೀಗೆಯೇ ಇರಬೇಕೆಂಬ) ಕಟ್ಟಳೆ ; ನಿಯಮ ; ವಿಧಿ : ನಾನಾವ್ರತನೇಮ ಭೇದಂಗಳಲ್ಲಿ ಅಜನತ್ತುನಾಲ್ಕು ವ್ರತ ಐವತ್ತಾಜು ತೀಲ ಮೂವತ್ತೆರಡು

ನೇಮು ನಿತ್ಯಕೃತ್ಯ ಲೆಕ್ಕಕ್ಕವಧಿಯಿಲ್ಲ (ಸರ್ವಜ್ಞ. ೧೪೮-೮೭೪); ಮುಗುದೆಯರೀ ಕೃತಿಗೇಳಿ ನಿಗಮದೊಳಗೊಗೆದ ನೇಮಂಗಳ ತೀರದೀ ಜಗಕೆ ಪಾವನೆಯರೆನಿಪರು (ಪಂಪಾ. ೧-೫೭); ದಿನಾಲು ನೇಮದಿಂದ ಸಾಲೆಗೆ ಬಂದು . . . ಕಲಿಯಬೇಕು (ಮುಂಬಯಿ. ೪-೧); ಹೋಯ್ತು ಅಟವು ಇದೇ ತರದ್ದಿರಬೇಕೆಂಬ ನೇಮ ನಿತ್ಯವಿಲ್ಲ (ಕನ್ನಜಾ. ೧೬೨); ನಾಮವಿಲ್ಲದ ಅರಸನಿಗೆ ನೇಮವಿಲ್ಲದ ಪ್ರಧಾನಿ (ಗಾದೆ). ೩. ಆಜ್ಞೆ; ಅಪ್ಪಣೆ; ಅನುಜ್ಞೆ: ವಿಜಯವಿಗ್ರಹವೀರನಾ ಧರ್ಮಜನ ನೇಮದಲಂದು ವೈರಿವ್ರಜವ ತೊತ್ತಳದುಳಿದ ಸಾತ್ಯಕಿ ಕಂಡನರ್ಜುನನ (ಕುಮಾವ್ಯಾಪ್ರೇ. ೧೧ ಸೂಡಣಿ); ಬಿಡದಿಂದುಮೊದಲು ನಿಮ್ಮಂದಳದ ದುಂದಿನೊಳು ಗುದಿಗಟ್ಟಿ ಕುಣಿವುತ್ತ ಬಪ್ಪಂತೆ ನೇಮವಂ ಕೊಡಿಯನಗೆ (ಸೌಂದತ್ತಿ. ೫-೫೧); ಮಡದಿಯರು ಮೂವರಿಗೆ ಮುನಿಕುಲ ಮೃಡ ವಸಿಷ್ಠನ ನೇಮದಲಿ ಬಿಂಗಡಿಸಿ ಕೊಟ್ಟನು ನೃಪತಿ ಪರಮೋದನವನುಚಿತದಲಿ (ತೊರವಿ. ೧-೭-೫೭). ೪. ಗೊತ್ತುಪಡಿಸುವಿಕೆ; ನಿಯೋಜಿಸುವಿಕೆ: 'ನೇಮಿಸು' ಪರಾ. ೫. ಕ್ರಮಬದ್ಧವಾದ ಆಚರಣೆ; ಅನುಷ್ಠಾನ: "ನೇಮ-ನಿಯಮ" (ತತ್ಪ್ರಕೋ. ೨೩); ಬಂದುದ ಕೈಕೊಳ್ಳಬಲ್ಲರೆ ನೇಮ ಇದ್ದುದ ವಂಚನೆ ಮಾಡದಿದ್ದರೆ ಅದು ನೇಮ ನಡೆದು ತಪ್ಪದಿದ್ದರೆ ನೇಮ ನುಡಿದು ಹುಸಿಯದಿದ್ದರೆ ನೇಮ (ಬಸವ. ೨೩೧); ವ್ರತ ಉಪವಾಸಂ ನೇಮಗಳಿಂದಂ [ಪಾಕಾಂ. ನಿಯಮನೆಂಬುವಱಂ]ಗತವೆನಿಸುವವು ಪ್ರಸಾದಗಳವಱಂ (ದೀಕ್ಷಾಬೋ. ೯೩-೧). ೬. ದೇವರ ಪ್ರೀತಿಗಾಗಿ ಮಾಡುವ ಉಪವಾಸ, ಧ್ಯಾನ ಮೊದಲಾದ ಆಚರಣೆ; ವ್ರತ; ನೋಂಪಿ: ಹಾಲ ನೇಮ ಹಾಲ ಕೆನೆಯ ನೇಮ ಕೆನೆ ತಪ್ಪಿದ ಬಳಿಕ ಕಿಚ್ಚಡಿಯ ನೇಮ ಬೆಣ್ಣೆಯ ನೇಮ ಬೆಲ್ಲದ ನೇಮ ಅಂಬಲಿಯ ನೇಮದವರನಾರನೂ ಕಾಣೆ (ಬಸವ. ೨೩೭). ೭. ನಿಶ್ಚಿತವಾದುದು; ನಿಯತವಾದುದು: 'ನೇಮಸೀಮೆ' ಪರಾ. ೮. (ಕರಾ) ವರ್ಷಕ್ಕೊಮ್ಮೆ ನಡೆಸುವ ದೆವ್ವದ ಪೂಜೆ: ಕೋಲ ನೇಮಗಳಿಗೆ ಬೇಕಾದ ಹೂ ಕಸ್ತೂರಿ ಮುತ್ತುಗದ ಹೂ ಯಾವ ಮಣ್ಣಿಗೂ ಬೇಡದ್ದು (ಸುಗಿಯು. ೧೬). ೯. (ಉಕ) ಹೊಚ್ಚಲು ಗಂಡುಮಗುವಿನ ತಾಯಿ, ಅವನ ಮದುವೆಯ ವರೆಗೂ ಪಾಲಿಸುವ ನಿಯಮ,—ವ್ರತ; ℙ ಹಸಿರು ಸೀರೆ, ಹಸಿರು ಬಳೆಗಳನ್ನು ಧರಿಸದಿರುವುದು, ಕೆಲವು ನಿರ್ದಿಷ್ಟ ತರಕಾರಿಗಳನ್ನು ತಿನ್ನದಿರುವುದು ಇತ್ಯಾದಿ: 'ನೇಮ ಬಿಡಿಸು' ಪರಾ. ೧೦. [ಕಾಮಶಾ] ರತಿಕಲಾಸ್ಥಾನ: ಜಾಯ್ಗುಮರ್ದುದೇ ಯಧರಮಾಗಿ ನೇಮವೆ ತಮ್ಮ ಕಯ್ಗುಮರ್ದುದಾಗಿ ಮನಕಮರ್ದುದೇ ಮನೆಯಾಗಿ . . . ಅಱಿಕೆಗೂಡಿದ ಪರವಶಂ ಹಾರರೊಳ್ ಮೆಱೆದುದು (ಚಿಬಪು. ೯-೧೫೫). 'ನಿಯಮಸ್ಥಾನ' ಪರಾ. [<ಸಂ. ನಿಯಮ]

ನೇಮ₂ (ನಾ). ೧. ಒಂದು ಭಾಗ; ಅರ್ಧ: "ಖಂಡಃ, ಅರ್ಧಃ (ಧ್ವಂ), ನೇಮಃ, ಶಕಲಂ, ಭಿನ್ನಂ, ಸಾಮಿ—ಈ ೬ ಅರ್ಥಂ" (ಹಲಾಯು. ೧೧೫೮-೨೮); ಶ್ರೀಮನ್ನಿನೀರಮಣ ಪ್ರೇಮಾಮಾರನತಾ ಸಾಮಾಮಲಶ್ರುತಿಗ್ರಾಮಾಮಿತಾಭವಳ್ಳೆಮಾ ಮದೇಭೇಂದ್ರಹೋಮಾ ಮುಯಾಹಿತಕಲಾಮಾಲಿನೇಮವಾಹ . . . ತಾಮಾಂತಕ (ಉದ್ಭವೇ. ೬-೩೬). ೨. ಮೋಸ; ವಂಚನೆ; ಕಪಟ. ೩. [ಸಂಗೀತ] (?): ಅಚ್ಚು ವೈತಿಕ ನೇಮ ವ್ಯಾಪ್ತ ಬೊಟ್ಟು ಮೋಹರ ಅರಿದೆಂದಿವಂ ತದಿರಾ ಎಂಬ ಕೂಜು ತಪ್ಪದೆ ಶುದ್ಧ ಭಾರಿ ಕವಣೆಯೆಂಬ ಮದ್ದಳೆಗಳಂ ಬಾಜಿಸುವ ಮದ್ದಳೆಕಾಱರಂ . . . ಗೀತ ಕಟ್ಟು ನೇಮ ಉರುಪು ಪದ ಪಟ್ಟ ದರುಗಳಂ ತೋಱಿಸುವ . . . ಪಾತ್ರಂಗಳಿಂ (ದಶಾವ. ೨-೧೧ ಪ). [ಸಂ.]

ನೇಮಂಬಡೆ (ಕ್ರಿ). ಅಪ್ಪಣೆಯನ್ನು ಪಡೆ; ಅನುಮತಿಯನ್ನು ಹೊಂದು: ತಾನುಂ ಸಹ ಪುರಮಂ ಪೊಱಮಟ್ಟು ರಕ್ಕಸರ ಮಾಱೞೊಡ್ಡಂ ತಾಗುವುದುಂ ಅಮರೇಂದ್ರನಿಂ ದಶರಥಂ ನೇಮಂಬಡೆದು (ದಶಾವ. ೮-೨೮ ಪ). [ನೇಮು₁ + ಪಡೆ₁]

ನೇಮಂಬೆರಸು (ಕ್ರಿ). = ನೇಮಂಬಡೆ: ಈಗಳಿವಂ ಗಿರಿಶನಂ ಗೆಲಲೆಳಸಿ ನೇಮಂಬೆರಸಿದ ಮನಸಿಜನಳ್ಕುಮಲ್ಲದೊಡೀ ಸೌಂದರ್ಯಮೆತ್ತಣದು (ಚಿಕನಂ. ೮೧-೧೪). [ನೇಮು₁ + ಬೆರಸು₁ (<ಬೆರೆಯಿಸು)]

ನೇಮಂಬೊಱು (ಕ್ರಿ). ನಿಯಮವನ್ನು ಹೊಂದು; ವ್ರತವನ್ನು ಹೊಂದು: ಸತ್ತ ಕಜುವಿನ ಮಾಂಸವಂ ಮುದವೆತ್ತಿಯಾರೋಗಿಸುವ ನೇಮಂಬೊತ್ತು ಬಂದೆನು (ಬಸಪು. ೫೭-೩೪). [ನೇಮು₁ + ಪೊಱು]

ನೇಮಕ (ನಾ). ೧. ಅಂಕೆಯಲ್ಲಿಟ್ಟುಕೊಳ್ಳುವುದು; ನಿಯಂತ್ರಿಸುವುದು. ೨. ನಿಯಮ; ನಿಬಂಧನೆ: (ಕ). ೩. ನಿಯಮಿಸುವಿಕೆ; ಗೊತ್ತುಪಡಿಸುವಿಕೆ: 'ನೇಮಕಗೊಳ್ಳು' ಪರಾ.

ನೇಮಕ ಮಾಡು = ನಿಯೋಜಿಸು; ಗೊತ್ತುಪಡಿಸು: ನಮ್ಮಲ್ಲಿರುವ ಎಲ್ಲಾ ದೊಡ್ಡ ವ್ಯಕ್ತಿಗಳೂ ನೇಗಾಧಿಪತ್ಯಕ್ಕೆ ಅರ್ಹರಾದವರು... ಹೀಗೆಂದು ನಾವು ಎಲ್ಲರನ್ನೂ ಒಟ್ಟಿಗೆ ನೇಮಕ ಮಾಡಿಕೊಳ್ಳುವ ಹಾಗಿಲ್ಲ (ಪಚಭಾ. ೨೬೯); ತತ್ತ್ವಶಾಸ್ತ್ರಕೋವಿದನಾಗಬಲ್ಲವನನ್ನು ಕಾರ್ಖಾನೆಯ ಕೆಲಸಕ್ಕೂ ಕವಿತೆಗಳನ್ನು ಬರೆಯಬಲ್ಲವನನ್ನು ಕಲ್ಲಿದ್ದಲುಗಣಿಯ ಕೆಲಸಕ್ಕೂ ನೇಮಕ ಮಾಡುವುದು ಜನಾಂಗಕ್ಕೆ ನಷ್ಟ (ಕ್ರಿಯಾ. ೧೫).

ನೇಮಕವಾಗು = ನಿಯಮಿಸಲ್ಪಡು; ನಿಯೋಜಿತವಾಗು: ಭಾರತ ಸರ್ಕಾರದ ವಾರ್ತಾಶಾಖೆಯ ಮಂತ್ರಿಯವರಾದ . . . ಅವರ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದ ಸಮಿತಿಯವರು ಪರಿಶೀಲಿಸಿ ಸಮ್ಮತಿಸಿದ ತರುವಾಯ ಈ ಪುಸ್ತಕವು ಮುದ್ರಿತವಾಗಿದೆ (ಭಾಧಾನ. ಪೀಠಿಕೆ); ಮರಳಿ ನೇಮಕವಾಗಿ ಗಂಗೋತ್ರಿಗೈದಿವೆ ಬಂದೆನು ತಿರುಗಿ ಈ ನೆಲೆಗೆ (ಇಂಚಾಪ. ೫೪-೫೬). [<ಸಂ. ನಿಯಾಮಕ]

ನೇಮಕಗೊಳ್ಳು (ಕ್ರಿ). ನಿಯಮಿಸಲ್ಪಡು; ನಿಯೋಜಿತವಾಗು; ಗೊತ್ತಾಗು: ವೃದ್ಧಶ್ರೀಮಂತನೊಬ್ಬನಿಗೆ ಪಾಲಕನಾಗಿ ಅವನು ನೇಮಕಗೊಂಡಿದ್ದುದಾಗಿಯೂ ನೆಕ್ಲುದೋವ್ ಹಿಂದೊಮ್ಮೆ ಕೇಳಿದ್ದನು (ಪುನರು. ೬೧೨); ಲಾಹೋರಿನ ಸರ್ಕಾರಿಕಾಲೇಜಿನಲ್ಲಿ ಸಸ್ಯಶಾಸ್ತ್ರದ ಪ್ರಾಧ್ಯಾಪಕನೆಂದೂ, ನಂತರ ಪಂಜಾಬ್ ವಿಶ್ವವಿದ್ಯಾಲಯದ ಉಚ್ಚ ಪ್ರಾಧ್ಯಾಪಕನೆಂದೂ ನೇಮಕಗೊಂಡನು (ಸಸ್ಯಕ. ೧೧೫). [ನೇಮಕ+ಕೊಳ್ಳು₁ (<ಕೊಳ್₂)]

ನೇಮಕಪತ್ರ (ನಾ). ನೌಕರಿ ಮೊದಲಾದುವುಗಳಿಗೆ ನಿಯೋಜಿತವಾದ ಬಗ್ಗೆ ಕೆಲಸಗಾರನಿಗೆ ಕಳುಹಿಸುವ ಅಧಿಕೃತವಾದ ತಿಳಿವಳಿಕೆಯ ಪತ್ರ: ಹೊಸಮನೆಯ ಪ್ರಯತ್ನವೆಲ್ಲ ಯಶಸ್ವಿಯಾಗಿ ಪತ್ರಿಕೆಯ ಕಚೇರಿಯಿಂದ ಅನಿಲನಿಗೆ ಒಂದು ಔಪಚಾರಿಕ 'ನೇಮಕಪತ್ರ' ಬಂದಿತು (ಅಸನಾ. ೩೪೦). [ನೇಮಕ+ಪತ್ರ]

ನೇಮಕಹೊಂದು (ಕ್ರಿ). ನೇಮಕವಾಗು; ನಿಯೋಜಿತವಾಗು: ಅವರ ಖಾತೆಯಿಂದ ಮುನಿಸಿಪಾಲಿಟಿಯಲ್ಲಿ ಜಿಲ್ಲಾಆಫೀಸರ ಕೆಲಸಕ್ಕೆ ನೇಮಕಹೊಂದಿದ್ದವರಿಗೆ ನಾನು ಹೋಗಿ ಭೆಟ್ಟಿಯಾಗಲು ತಿಳಿಸಿ . . . ಹೇಳಿ ಕಳುಹಿಸಿದರು (ಹೇಸುಂತ. ೧೬೭). [ನೇಮಕ+ಹೊಂದು₁ (<ಪೊರ್ದು)]

ನೇಮಕಾತಿ (ನಾ). (ಕೆಲಸ, ಅಧಿಕಾರ ಇತ್ಯಾದಿಗಳಿಗೆ) ನಿಯೋಜಿಸುವುದು,—ನೇಮಕ ಮಾಡುವುದು: ಈ ನೌಕರಿಯ ನೇಮಕಾತಿಯ ಜವಾಬ್ದಾರಿಯು ಮುಖ್ಯ ಸದಸ್ಯರ ಸಮಿತಿಯನ್ನವಲಂಬಿಸಿದೆ (ಕೂಡಿ). [<ನೇಮಕ]

ನೇಮಕ್ರಿ (ನಾ). ತನ್ನ ನಿರ್ದಿಷ್ಟನಿಯಮಕ್ಕೆ ಸರಿಯಾಗಿ ಮಾಡುವ ಕ್ರಿಯೆ : ತನ್ನನುವಿಂಗೆ ಅನುವಾದುದನಱಿದು ಸಮ್ಮಂದಿಸಿಯಿಪ್ಪುದು ನೇಮಕ್ರಿ (ಏಲೇಶ್ವ. ೧). [ನೇಮ$_1$+ಕ್ರಿ]

ನೇಮಗಲೆ (ನಾ). [ಕಾಮಶಾ] ನಿಯಮಸ್ಥಾನವನ್ನು ತಿಳಿಯುವ ಕಲೆ ; ರತಿಕಲಾಸ್ಥಾನವನ್ನು ತಿಳಿಯುವ ಚಾತುರ್ಯ : ಬಳಿಕಾಸುಧನ್ವಂ ಮನದೊಳು ಭೀತಿಯಂ ತೊಱೆದು ಕಾಂತೆಯ ಕೂಡೆ ರಮಿಸಿದಂ . . . ಲಲ್ಲೆವಾತು ಗಳರವ ನೇಮಗಲೆ ತಾಡನಪ್ರೌಢಿ ಬಂಧಸಮ್ಮೋಹನದೊಳು (ಜೈಮಿಭಾ. ೧೧-೨೧). [ನೇಮ$_1$+ಕಲೆ$_3$]

ನೇಮಗಾಣು (ಕ್ರಿ)..ನಿಯಮವನ್ನು ಅರಿ ; ಕ್ರಮವನ್ನು ತಿಳಿ : ಕಾಮನ ಸಖರು ದಕ್ಷಿಣಸಾಗರಾದಿಗಳಾ ಮಾತಿಗೆಲ್ಲರೊಗ್ಗಾಗಿ ನೇಮಂ ಗಂಡಾಡಿದ ಪ್ರಣಯಚಂದ್ರಮಮಂತ್ರಿ ಸ್ವಾಮಿ ಮೆಚ್ಚುವನೆಂದರಿದಕೆ (ಭರಚ. ೪೮-೬೩). [ನೇಮ$_1$+ಕಾಣು(<ಕಾಣ್)]

ನೇಮಗಾರ 'ನೇಮಗಾಱ' ನೋ.

ನೇಮಗಾರಿಕೆ (ನಾ). ನಿಯಮಿಸುವಿಕೆ ; ಗೊತ್ತುಮಾಡುವಿಕೆ : ಈ ಇಂದಿನ ಮಹಾರಾಜನು . . . ತನ್ನ ಆ ನೇಮಗಾರಿಕೆಯ ನಪೋನವೀನಲೀಲೆಗಳ ವಿಕಾರ ವಿಪರೀತಗಳನಿತಕ್ಕೂ ಮಹಾರಾಜಮುದ್ರೆಯನ್ನೊತ್ತಿಕೊಂಡು . . . ಕುಣಿದಾಡುತ್ತಿರುವನು (ಮಂತ್ರಶ. ೬೭-೨೩). [ನೇಮಗಾರ(<ನೇಮಗಾಱ)+-ಇಕೆ]

ನೇಮಗಾಱ, ನೇಮಗಾರ (ನಾ). ೧. ನಿಯಮಗಳನ್ನು ಬಲ್ಲವನು ; ಆಚಾರವಂತ : ಗಿರಿಜೆ ಶಂಕರನಂ ಸಿರಿಯರಸಿ ನಾರಾಯಣನಂ ಸಾರ್ದಂತೆ ಸಾರ್ದ ಅಮೃತಾಂಬೆಯೆಂಬರಸಿ . . . ಕ್ಷಮೆ ಜಿತಾತ್ಮನಂ ದಯೆ ಧಾರ್ಮಿಕನಂ ನೀತಿ ನೇಮಗಾಱನಂ ಬಱಿಸಲ್ವಂತೆ ಬಱಿಸಂದಿರ್ಪಳ್ (ಚಿಕವಂ. ೬೪-೧). ೨. ಶೃಂಗಾರಕಲೆಗಳನ್ನು ಬಲ್ಲವನು ; ರಸಿಕ : ಅಪ್ಪಿದರಪ್ಪುವಳುಗುರಿಟ್ಟರುಗುರಿಕ್ಕಿ ಉಪ್ಪರಿಸುವಳೊದಱುವಳು ನೆಪ್ಪುಗಾತಿಯು ನೇಮಗಾಱನು ಹೊಕ್ಕರು ಮುಪ್ಪಿಡೆ ಸಾಧನೆಗಂದು. (ಭರಚ. ೧೧-೮೯). **ನೇಮಗಾರ** : ೩. ನಿಯಮಿಸುವವನು ; ನೇಮಕ ಮಾಡುವವನು : 'ನೇಮಗಾರಿಕೆ' ಪರಾ. [ನೇಮ$_1$+-ಕಾಱ]

ನೇಮಗೊಳು (ಕ್ರಿ). ನಿಯಮವಾಗಿ ಹೊಂದು ; ವ್ರತವಾಗಿ ಪಡೆ: ಆತನ ಚಿತ್ತ ನೋಯದಂತೆ ಮತ್ತಾವ ಬಂಧನದ ಕಟ್ಟನಿಕ್ಕದೆ ಕೃತ್ಯವ ನೇಮಗೊಂಡು ಮಾಡೆಂದು ನೇಮವ ಲಕ್ಷಿಸದೆ ಆತ ತನ್ನ ತಾನಱಿತು ಮಾಡಿದಲ್ಲಿ ಅದು ತನಗೆ ಮುನ್ನಿನ ಸೋಂಕೆಂಬುದನಱಿತು ಮುಟ್ಟದೆ ಆ ಪ್ರಸನ್ನವಪ್ಪ ವಸ್ತು ಮಹಾಮಹಿಮ ಕಲ್ಲೇಶ್ವರಲಿಂಗವು ತಾನಾದ ಶರಣ (ವಚಸಂ. ೧೯೧-೩೪). [ನೇಮ$_1$+ಕೊಳು(<ಕೊಳ್$_1$)]

ನೇಮಣುಕಿ 'ನೇಮಣೂಕು' ನೋ.

ನೇಮಣೂಕ 'ನೇಮಣೂಕು' ನೋ.

ನೇಮಣೂಕಿ 'ನೇಮಣೂಕು' ನೋ.

ನೇಮಣೂಕು, ನೇಮಣುಕಿ, ನೇಮಣೂಕ, ನೇಮಣೂಕಿ (ನಾ). (ಉಕ) ೧. (ನೌಕರಿ ಮೊದಲಾದುವುಗಳಿಗೆ) ನೇಮಕ ಮಾಡುವಿಕೆ,—ನಿಯಮಿಸುವಿಕೆ : ಪೋಲೀಸರ ನೇಮಣೂಕು ಆದ್ದರಿಂದ ಪ್ರಜೆಗಳ ಜೀವಿತಕ್ಕೂ ಆಸ್ತಿಗೂ ಭಯವಿಲ್ಲದ ಹಾಗಾಯಿತು (ಕಭಾಗೆ. ೩೬೨) ; ಈ ದಿನ ಅಲ್ಲಿ ನಡೆಯುವ ಲಿಲಾವಿನ ಬಂದೋಬಸ್ತಿಯ ಸಲುವಾಗಿ ನನ್ನ ನೇಮಣೂಕಾಗಿದೆ (ಕಳೃಕಾ. ೨೫). ೨. ಮಾಸಾಶನ, ಜೀವನಾಂಶ ಮೊದಲಾದುವುಗಳ ಏರ್ಪಾಟು : ಹೈದರನು . . . ಚಾಮರಾಜನ ರಾಜ್ಯಾಧಿಕಾರ ಕಸುಕೊಂಡು, ಅವನನ್ನು ಕೆಲವು ನೇಮಣೂಕು ಗೊತ್ತುಮಾಡಿ ಶರೆಯೊಳಗಿಟ್ಟು ತಾನು ಹೈದರಅಲ್ಲೀಯೆಂಬ ಹೆಸರಿನಿಂದ ಆಳ ಹತ್ತಿದ್ದನು (ಕಭಾಗೆ. ೩೫೭). ೩. ಸಹಾಯಧನ ; ಅನುದಾನ : ಈ ಜಾತ್ರೆಗಾಗಿ ಸರಕಾರದಿಂದ ವರ್ಷಕ್ಕೆ ೩೦೦ ರೂಪಾಯಿ ನೇಮಣೂಕು ಬುನಾದಿಯಿಂದ ನಡಿಯುತ್ತ ಬಂದದೆ (ಕಭಾಗೆ. ೫೩೫) ; ಆ ನಾಡಿನ ಅರಸು . . . ಆ ದೇವರಿಗೆ ಒಂದು ನಂದಾದೀಪದ ನೇಮಣೂಕು ಮಾಡಿಕೊಟ್ಟನು (ಮುಂಬಯಿ. ೫-೧೭೫) ; ಮಧುಕೇಶ್ವರನಿಗೆ ಸರಕಾರದಿಂದ ೪೦೦೭ ರೂಪಾಯಿಯ ನೇಮಣೂಕು ನಡೆಯುತ್ತದೆ (ಕಾರವ. ೭೩). **ನೇಮಣುಕಿ** : ೧. ನೌಕರಿ ಬಿಟ್ಟ ಜನರ ಸ್ಥಳದಲ್ಲಿ ಕಾಯಂ ನೇಮಣುಕಿ ಆಗಿಲ್ಲ (ಕರವೀ. ೭೨). **ನೇಮಣೂಕ** : (ಕಿ). **ನೇಮಣೂಕಿ** : ೧. ನಿನಗೆ ನೇಮಣೂಕಿ ಆರ್ಡರ ಇನ್ನೂ ಬಂದು ಮುಟ್ಟಿಲ್ಲವೆ ? (ಬೆನ್ನುಹಿಂ. ೧೨) ; ಸಾಹೇಬರ ಸುಕುಮಾರಿ, ಕುಮಾರಿ ಚಿರಂಜೀವ ಶಕೂನಿಗೆ ನಾವು ಪಾಠ-ಪ್ರವಚನರತರಾಗಬೇಕೆಂಬ ನೇಮಣೂಕಿಯ ಫರ್ಮಾನು ಹೊರಟಿತು (ದೀಪಹ. II, ೧೯). ೨. ಆತ ಬನಾರಸದೊಳಗಿನ ಹಿಂದೂಧರ್ಮಾಧ್ಯಕ್ಷರ ನೇಮಣೂಕಿಗಳನ್ನು ನಿಲ್ಲಿಸಿ ಬಿಟ್ಟ (ಹಂಸಾ. ೧೪೨). [←ಮರಾ. ನೇಮಣೂಕ]

ನೇಮದಟ್ಟು (ಕ್ರಿ). ಮರ್ಮವನ್ನು ಮುಟ್ಟು ; ಹೃದಯಸ್ಪರ್ಶಿಯಾಗು : ವರ್ಣಕ ವಸ್ತುಕವೆಂಬ ಕವಿತ್ವದ ನಿರ್ಣಯದೊಳು ನೇಮದಟ್ಟಿ ಕರ್ಣರಸಾಮೃತವನೆ ಕಱೆವುತ ಕವಿತಾರ್ಣವರೆಸೆದರರ್ತಿಯೊಳು (ಭರಚ. ೬೪-೬೧). [ನೇಮ$_1$+ತಟ್ಟು$_1$]

ನೇಮದಳೆ (ಕ್ರಿ). ಆಜ್ಞೆಯನ್ನು ಹೊಂದು ; ಅಪ್ಪಣೆಯನ್ನು ಪಡೆ: ಬೆಟ್ಟದ ಚಾಮೇಂದ್ರ . . . ಘಳಿಲನೆ ಕೋಟೆಯ ನೃಪನ ಸಂಧಿಸಿ ನೇಮದಳೆದು ಶೀಘ್ರದೆ ತಿರುಗಿದನು (ಕಂನವಿ. ೩-೫೪). [ನೇಮ$_1$+ತಳೆ$_1$]

ನೇಮದಾಣ (ನಾ). [ಕಾಮಶಾ] ರತಿಕಲಾಸ್ಥಾನ : ನೇಮದಾಣವ ಬಲ್ಲ ನೀಱೆ ನೀಱನ ಕೂಟ ಕಾಮನ ರತಿಯಾಟದಂತೆ ಕಾಮಾತುರ ಮಾತ್ರದವರಾಟ ಸೊಗಸಲ್ಲ ಪಾಮರಜನದಾಟದಂತೆ (ಭರಚ. ೭-೧೬). [ನೇಮ$_1$+ತಾಣ]

ನೇಮಬಿಡಿಸು (ಕ್ರಿ). (ಉಕ) (ಚೊಚ್ಚಲುಮಗನ ಮದುವೆಯ ಸಂದರ್ಭದಲ್ಲಿ, ತಾಯಿಯಾದವಳು ಮೊದಲಿನಿಂದ ಪಾಲಿಸುತ್ತಿದ್ದ) ನಿಯಮಗಳನ್ನು ಕೊನೆಗೊಳಿಸು,—ತೊರೆಯಿಸು : ಚೊಚ್ಚಲ ಮಗನ ತಾಯಿಾ ನೇಮಾ ಬಿಡಿಸಬೇಕು, ಚೌಕಲಾಣಿ ಹಾಕಬೇಕು (ಅಮನಿ. ೫೪). [ನೇಮ$_1$+ಬಿಡಿಸು]

ನೇಮವಂತ (ನಾ). ನಿಯಮಗಳನ್ನು ಪಾಲಿಸುವವನು ; ಧಾರ್ಮಿಕ ಆಚರಣೆಗಳನ್ನು ನಡೆಸುವವನು : ನೆಲ ಬಲವಂತನಿಗೆ, ಕುಲ ನೇಮವಂತನಿಗೆ (ಗಾದೆ). [ನೇಮ$_1$+-ವಂತ]

ನೇಮವಳಿ (ಕ್ರಿ). ಕ್ರಮಬದ್ಧವಾದ ಆಚರಣೆಯನ್ನು ತಪ್ಪು,-ಬಿಡು : ಗೌಡ ರಾಮಗಿರಿಯ ದುರ್ಗ ಮೊದಲಾದ ಘನವಹ ಸೀಮೆಯ ಖಳನಿಗೆ ಕೊಟ್ಟು ನೇಮವಳಿದು ನೆರೆಯವನಿತ್ತ ಕುಣಿಗಿಲಸೀಮೆಗೈದಿಹನು (ಕಂನವಿ. ೧೧-೬೨). [ನೇಮ$_1$+ಅಳಿ$_1$ (<ಅಱು$_1$)]

ನೇಮವೀ (ಕ್ರಿ).ಅಪ್ಪಣೆಯನ್ನು ಕೊಡು ; ಆಜ್ಞೆಮಾಡು ; ಆಣತಿ ನೀಡು : ಆ ಸತಿಯೊಳೊಂದಿ ನೀನೀ ಜಗತ್ಸೃಷ್ಟಿಯಂ ಬೇಸಱದೆ ಮಾಡೆಂದು ನೇಮವಿತ್ತಂಭೋರುಜಾಸನನನಳ್ಕಱಂ ಬೀಳ್ಕೊಟ್ಟು ಶಕ್ತಿಯಂತರ್ಧಾನದಿಂ ಪೋದಳು (ಚಿಬಪು. ೧೩-೧೬). [ನೇಮ$_1$+ಈ$_2$]

ನೇಮವೇಳು (ಕ್ರಿ). ಅಪ್ಪಣೆಯನ್ನು ಕೊಡು ; ಅನುಮತಿಯನ್ನು ನೀಡು : ಭಾಸ್ಕರ ಕೆಡೆದ ಪಶ್ಚಿಮಸಮುದ್ರದೊಳು ತಡವಿಲ್ಲದೆ ಪಯಣಕೆ ನೇಮವೇಳೆನೆ ಮಡದಿ ಮನ್ನಿಸಿದಳಾಕೆಯ (ಮೋಹತ. ೩೦-೪೧). [ನೇಮ$_1$+ಪೇಳು(<ಪೇರ್ಱ್)]

ನೇಮಸೀಮೆ (ನಾ). ನಿಯತವಾದ ಎಲ್ಲೆ ; ನಿಶ್ಚಿತವಾದ ಗಡಿ : ತಲ್ಲಿಂಗಾಭಿಷೇಕವಾರಿಯು . . . ಗೋಮತಿಯ ನದಿಯ ಕಲೆಯ ಲುವುಭಯ

ದಡಸೂಸಿ ನೇಮಸೀಮೆಯ ಮೀರಿ . . . ಪರಿದುದು (ನನಮೋ.೨೧-೨೬).
[ನೇಮ$_1$ + ಸೀಮೆ]

ನೇಮಸುತ್ತು (ನಾ). (ಕರಾ) ಒಂದು ಬಗೆಯ ವಸ್ತ್ರ,—ಪಂಚೆ : ಯಾವಾಗಲೂ ತೆಳ್ಳಗಿನ 'ನೇಮಸುತ್ತು' ಉಟ್ಟು ಮೈಮೇಲೆ ಬೆಳ್ಳಗಿನ ಮಕಮಲ್ಲು ಅಂಗಿ (ಹಹಸ. ೧೦). [←ತುಳು. ನೇಮಸುತ್ತು]

ನೇಮಸ್ತ (ನಾ). ವ್ರತಾಚರಣೆಗಳನ್ನು ಪಾಲಿಸುವವನು; ಧಾರ್ಮಿಕ ವಿಧಿಗಳನ್ನು ನೆರವೇರಿಸುವವನು ; ನೇಮವಂತ : ನೇಮಸ್ತನಱಿವು ಪ್ರಪಂಚನಲ್ಲಿ ಹೋಯಿತ್ತು ಭಕ್ತನಱಿವು ಸಮಾಧಾನದಲ್ಲಿ ಹೋಯಿತ್ತು (ಅವಚಂ. ೭೧-೩೧೪); ಭವಿಮಿಶ್ರದವರ ಮನೆಯಲ್ಲಿ ನೇಮಸ್ತರುಗಳು ಹೊಕ್ಕು ಲಿಂಗಾರ್ಚನೆಯ ಮಾಡಿದಡೆ ಅನ್ನ ಪಾಕಾದಿಗಳ ಕೊಂಡಡೆ ನಾಯಡಿಗನರಮಾಂಸವು ತಪ್ಪದಯ್ಯಾ (ಚನ್ನವ. ೨೩-೯). [ನೇಮ$_1$ + -ಸ್ತ]

ನೇಮಸ್ಥ (ನಾ). = ನೇಮಸ್ತ : ಗುರು ಅನಾಚಾರಿ ಲಿಂಗವು ನೇಮಸ್ಥ ಜಂಗಮ ದುರಾಚಾರಿ ಇಂತೀ ತ್ರಿವಿಧ ಭೇದ ಸ್ಥೂಲ ಸೂಕ್ಷ್ಮ ಕಾರಣ (ಮೋಳಿಮಾ. ೨೭೬-೨೮). [ನೇಮ$_1$ + -ಸ್ಥ]

ನೇಮಿ$_1$ (ನಾ). ನಿಯಮವನ್ನು ಹೊಂದಿರುವವನು ; ನೇಮವಂತ: ನೇಮಿಯ ನೇಮ ಲಿಂಗಾರ್ಚನೆಯ ಕೆಡಿಸಿತ್ತಲ್ಲಾ (ಸಕವ. II, ೬೧೬-೯೬ ಸಮಾವ). [ನೇಮ$_1$ + -ಇ$_2$]

ನೇಮಿ$_2$ (ನಾ). ೧. ಗಾಡಿಯ ಚಕ್ರದ ಅಂಚು,—ಪಟ್ಟಿ : "ಚಕ್ರ ಧಾರಾ, ಪ್ರಧೀಃ, ನೇಮಿಃ—ಈ ೩ ನೆತ್ತಿವಟ್ಟಿಗೆ" (ಹಲಾಯು. ೭೩-೨೯೩) ; ಎರಡುಂ ತೇರೊಂದನೊಂದೆಯ್ತರೆ ನಡುಗೆ ನೆಲಂ ನೇಮಿ ಸಂಘಟ್ಟದಿಂದಂ (ಸಂರಾಮಾ. ೧೩-೧೦೨); ಸಾರಥಿ ನಡೆಯಿಪ ರಥಿಕರೇಱಿದ ಬಲ್ದೇರಗಾಲಿಗಳ ನೇಮಿಗಳು (ಚಂಪ್ರಸಾಂ.೧೫-೮೫); ಓಡಿದನು ಮಾರೀಚ ನಟ್ಟದನು ದಾಶರಥಿ ; ಮುಟ್ಟದರು ನೀರದಾಕೃತಿವೆತ್ತ ಪುಷ್ಪಕಜಮಂ ಛಾಯಾವಲಯ ನೇಮಿಯಂ (ಕ್ರೀರಾಮಾ. ೨೩೭-೨೫೦). 'ಚಕ್ರನೇಮಿ' ಪರಾ. ೨. ಬಾವಿಯಿಂದ ನೀರೆತ್ತುವ ರಾಟೆ : "ಅಂಧುಃ, ಕೂಪಃ—ಈ ೨ ಬಾವಿ. ಪ್ರಧೀಃ, ನೇಮಿಃ (ಅದಱ ಱ್ಯಾಟ)" (ಹಲಾಯು. ೧೧೩-೬೨) ; "ನೇಮಿಃ, ತ್ರಿಕಾ, ೨.ಆಸ್ಯ ಈ ಭಾಮಿಗೆ ಸಂಬಂಧಿಸಿದ ಭಂಡಿ, ತಿರಗಣಿ, ರಾಟ, ಕಪಿಲೆ, ಯಾತ ಮುಂತಾದ ನೀರೆತ್ತುವ ಯಂತ್ರಗಳಿಗೆ ಹೆಸರುಗಳು" (ಸಿದ್ಧಾಂತಿ. ೮೫). ೩. ಅಂಚು ; ದಡ ; ಎಲ್ಲೆ : "ಸಾರಿಹ ದಡಂ ಪ್ರಧಿ ನೇಮಿಯೆನಿಸಿಕ್ಕುಂ" (ಮಂಗರಾ. ೧೨೪-೧೮) ; ದುಮುಕುತಿದೆ ಆ ತಪೋವನದ ನೇಮಿಯೊಳೊಂದು ನಿರ್ಝರಿಣಿ (ಕ್ರೀರಾಮಾ. ೧೩೨-೨೦೪). ೪. ಒಂದು ಬಗೆಯ ಮರ ; ಹುಲಿಗಿಲ ಮರ :"ತಿನಿಶಃ, ಸ್ಯಂದನಃ, ನೇಮಿಃ, ರಥದ್ರುಃ . . . ಅತಿ ಚಿತ್ರಕೃತ್—೬ ಹುಲಿಗೇಮರದ ಪೆಸರುಗಳು. ಹುಲಿಗಿಲಿ, ನೆಮ್ಮಿ, ಹೊಂಗೆ" (ಸಿದ್ಧಾಂತಿ.೧೧೭). ೫. [ಜೈನ] ಇಪ್ಪತ್ತೆರಡನೆಯ ತೀರ್ಥಂಕರನ ಹೆಸರು : ವೃಷಭ, ಅಜಿತ . . . ನೇಮಿ ಪಾರ್ಶ್ವ ವರ್ಧಮಾನ ರೆಂಬಿಪ್ಪತ್ತುನಾಲ್ವರ್ ತೀರ್ಥಂಕರರ್ (ಚಾವುಂಪು. ೪೦೨) ; ನೇಮಿ ಲೋಕ ಸ್ವಾಮಿ . . . ನಿಸ್ಸೀಮ ದೀಕ್ಷಾಲಕ್ಷ್ಮಿಯೊಳು ಮದವಳಿಗ ತಾನಾದ (ಸಾಳ್ವಭಾ. ೫೯ ಪದ). ೬. ಕನ್ನಡದಲ್ಲಿ 'ಲೀಲಾವತಿ ಪ್ರಬಂಧ' ಮತ್ತು 'ನೇಮಿನಾಥಪುರಾಣ' ಎಂಬ ಗ್ರಂಥಗಳನ್ನು ಬರೆದ ಹನ್ನೆರಡನೆಯ ಶತಮಾನದ ಒಬ್ಬ ಪ್ರಸಿದ್ಧಕವಿಯ ಹೆಸರು ; ನೇಮಿಚಂದ್ರ : ರಸಮೋ ರಸಾಯನಮೋ ಶ್ರುತಿವಸಂತಮೋ ಕಿವಿಗಳಮೃತಮೋ ನೇಮಿಯ ವಾಕ್‌ಪ್ರಸರಮದಱಿಸಕದಿಂ ನಿಪ್ಪೊಸತಾದುದು ಜಗಕೆ ನೇಮಿಪುರಾಣಂ (ಅರ್ಧನೇ. ೧-೨೮) ; ಸರ್ವರ ಸಮ್ಮತಮೆನಗಿದು ಗರ್ವದ ಮಾತಲ್ಲ ಶಾಸ್ತ್ರಲೌಕಿಕಕಳೆಯೊಳ್ ಬೇರ್ವರಿದ ನೇಮಿ ಜನ್ನಿ ಗರಿರ್ವರೆ ಕರ್ಣಾಟಕೃತಿಗೆ ಸೀಮಾಪುರುಷರ್ (ಧರ್ಮನಾ. ೧-೪೧).[ಸಂ.]

ನೇಮಿಕೆ (ನಾ).(ನೌಕರಿ ಮೊದಲಾದುವುಗಳಿಗೆ) ನಿಯಮಿಸುವಿಕೆ, —ನಿಯೋಜಿಸುವಿಕೆ,—ಗೊತ್ತುಪಡಿಸುವಿಕೆ : ಒಂದು ವಾರದ ಅವಧಿಯಲ್ಲಿ ನನಗೆ ನೇಮಿಕೆಯ ಪತ್ರವು ಬಂದು ಮುಟ್ಟಿತು (ಹೇಮಂತ. ೧೮೧). [ನೇಮಿಸು + -ಕೆ]

ನೇಮಿತ (ಗು).೧.ನಿಯಂತ್ರಿಸಿದ ; ಹತೋಟಿಗೆ ತಂದ ; ಸಂಯಮದಿಂದ ಕೂಡಿದ : (ಕ). (ನಾ). ೨. ಮಿತಿಯಲ್ಲಿರುವುದು ; ನಿಯಂತ್ರಿತವಾದುದು : ಅವರ ಸೇನೆಯು ನೇಮಿತವಾಗಿರಬೇಕೆಂದೂ ಒಂದು ವೇಳೆ ಅದನ್ನು ಬೆಳೆಸಿದ್ದುದಾದರೆ . . . ಅವರ ಸಂಸ್ಥಾನವನ್ನೇ ಕಿತ್ತುಕೊಳ್ಳಲಾಗುವುದೆಂದು ಕಟ್ಟಪ್ಪಣೆಯನ್ನು ವಿಧಿಸಲಾಯಿತು (ಪ್ರಬಂಧ. ೬೨). [<ಸಂ. ನಿಯಮಿತ]

ನೇಮಿಮರ (ನಾ). ಒಂದು ಬಗೆಯ ಮರ ; ತಿನಿಶ : ಪಾದರಿ, ಹಾದರಿ, ನೇಮಿಮರ (ಮೈಔಗಿ. ೫೪-೧೦೮೩). [ನೇಮಿ$_2$ + ಮರ$_1$]

ನೇಮಿವತ್ತಿಗೆ (ನಾ). ಚಕ್ರದ ಹೊರವಲಯದ ಪಟ್ಟಿ : ಸೂರ್ಯನ ರಥಕ್ಕೆ ಮಾಡಿದ ಗಾಲಿ ವಂಭತ್ತು ಸಾವಿರದ ಯೋಜನಗಲಂ ನೇಮ[ಮಿ]ವತ್ತಿಗೆಯೆ ಸಾವಿರದ ಯೋಜನ ವಿಶಾಲಕದಕ್ಕೈದು ಮೊಳೆಯಾ ಗಾಲಿ ಸಾವಿರದ ಯೋಜನುದ್ದೆಂ (ತುರಂಗ. ೨೯-೫೦). 'ನೆತ್ತಿವಟ್ಟಿಗೆ' ಪರಾ.
[ನೇಮಿ$_2$ + ಪತ್ತಿಗೆ$_1$(<ಪತ್ತುಗೆ)]

ನೇಮಿಸು (ಕ್ರಿ). ೧. ಮನಸ್ಸನ್ನು ನಿಯಂತ್ರಿಸು,—ನಿರೋಧಿಸು ; ಸಂಯಮದಿಂದಿರು : (ಕ). ೨. ಅಪ್ಪಣೆ ಮಾಡು ; ಆಜ್ಞೆ ಮಾಡು ; ವಿಧಿಸು : ಭೀಮಲಿಂಗವು ರಾಮಪೀಠಕೆ ರಾಮಲಿಂಗವು ಭೀಮಪೀಠಕೆ ನೇಮಿಸಿದವೋಲಲ್ಲಿಗಲ್ಲಿಗೆ ಪಲ್ಲಟಿಸಿ ನಿಲಲು (ಬಸವು. ೫೭-೫೪) ; ವೇದವ್ಯಾಸಮುನಿ ನಡೆತಂದು . . . ಆ ಸಮರವೃತ್ತಾಂತ ನಿನಗೆ ಸಮಾಸವಿಸ್ತಾರವಾಗಿರಲಿ ಭೂಮಿಾಶತಿಲಕಂಗಱುಹುವುದು ನೀನೆಂದು ನೇಮಿಸಿದ (ಕುನ್ಯಾಭೀ. ೧-೫೫) ; ಎನಗೆ ನೇಮಿಸಿ ಕಳುಹಿ ನಿಮ್ಮಯ ಮನದ ಬಯಕೆಯ ಸಲಿಸುವೆನು (ನಳಚ. ೪-೬) ; ನಮ್ಮ ಬಲ ಸರ್ವ ಸನ್ನಾಹವೈದಿ ಬಂದಿರಲೆಂದಾಗ ಮೇದಿನೀಶ್ವರ ದಳಪತಿಗೆ ನೇಮಿಸುತನು ವಾದನಾಹವಕಾ ಕ್ಷಣದೆ(ಕಂನವಿ.೧೫-೧೧). ೩.(ಅಧಿಕಾರ,ಉದ್ಯೋಗ ಮುಂತಾದುವುಗಳಿಗೆ) ಗೊತ್ತುಪಡಿಸು,— ನಿಯಮಿಸು : ಅಂತರಂಗದಲಿ ಆ ಮಹಾ ಶಿವಲಿಂಗಸಂಗಪ್ರೇಮಿಯಾಗಿ ಶಿವೈಕ್ಯಪದವನ್ನು ನೇಮಿಸಿದ ಮಹದೇವಿಯಕ್ಕಗೆ ಶರಣು ಶರಣಾರ್ಥಿ (ಪ್ರಭುಲೀ. ೧-೫) ; ಅವನನ್ನೇ ತನ್ನ ಪ್ರಧಾನನ ಕೆಲಸಕ್ಕೆ ನೇಮಿಸಿಕೊಂಡನು (ಮುಂಬಯಿ. ೪-೮೦) ; ಕಂಠೀರವ ನರಸರಾಜರು . . . ತಮೆಗೆ ವಿಧೇಯರಾದಂತಹ ದಳವಾಯಿಗಳನ್ನು ನೇಮಿಸಿಕೊಂಡರು (ಸಂಸಕ. ೧೧೪).
[ನೇಮ$_1$ + -ಇಸು$_3$]

ನೇಯ್ 'ನೆಯ್$_1$' ನೋ.

ನೇಯ್ಯ$_1$ 'ನಾಯ' ನೋ.

ನೇಯ್ಯ$_2$ (ಗು). ೧. ಅನ್ವಯಿಸುವ ; ಊಹಿಸುವ ; ಅಧ್ಯಾಹಾರವಾದ : 'ನೇಯಾರ್ಥ' ಪರಾ.(ನಾ). ೨. ಅನ್ವಯಿಸುವಂಥದು; ಅಳವಡುವಂಥದು : ಬಹುಸಂಘಿಗಳಾರ್ತಗೇಯಕರ್ ಕುಂದದೆ ಬೇಱೆ ಬೇಱೆಸಗಿ ನೇಯಮನಾ ಪ್ರಭುಗೆಯ್ದ ಕೇಳಿಸಲ್ ಕುಂದವನಾ ಕವಿತ್ವದೊಳೆ ಕಾಣದೆ ಸಂಶಯಕಲ್ಪನಾರ್ಥಮಂ (ಹಾಲಾಸ್ಯ. ೪-೪-೧೯) ; "ರೀತಿ ; ಕ್ರಮ" (ಹಾಲಾಸ್ಯ. ಕೋಶ) ; ಕಾಯ ನಿರ್ಣೇಯವದರೊಳು ಮನವನಿರ್ಣೇಯ ಸ್ನಾಯು ಸಂಖ್ಯೇಯ ಜೀವಳಮಸಂಖ್ಯೇಯ ಮೇಯಾ ಪ್ರಮೇಯ ಮಿಶ್ರಣವಿಂತು ನರಜಂತು ನೇಯವದು ವಿಶ್ವಕಂ (ಮಂಕುಕ. ೧೦೨). ೩. ಇನ್ನೊಬ್ಬರ ಮಾರ್ಗದರ್ಶನದಲ್ಲಿರುವವನು ; ಸ್ವಬುದ್ಧಿಯಿಲ್ಲದವನು : ತಾವು ಅಶ್ರದ್ಧಧಾನನಂತೆ, ನೇಯನಂತೆ,

ಎಚ್ಚ ಶರಂಗಳಂ ಮುಳಿದು ಕಡಿದುಂ ಸೀಳ್ದುಂ ನೀರ್ದುಂ ನಿಜಾಸ್ತ್ರದಿನೇಂ ಮನಂಗೊಳಿಸಿದನೊ ಸೀರಾಸ್ತ್ರಂ ನೋಟ್ಪಿಂದ್ರರುಂದ್ರ ಸಭಾಳಯಂ (ಶಾಂತಿಪು. ೪-೩೪); ಜೀರ್ಗಟ್ಟೆಯೆ ತೆಗೆದು ಬಿಲ್ಲಂ ಭೋರ್ಗೞ್ದು ವರೂಥಯೂಥವಿಸಲನ್ಯೋನ್ಯಂ ಕೂರ್ಗಣೆ ನಟ್ಟುವು ನೇರ್ದುವು ನೀರ್ಗೋಲ್ಚುಜಿದುವು ಪಳಂಚಿದುವು ದಿಕ್ತಟಮಂ (ಜಗವಿ. ೭-೬೩); ಶ್ರೀರಮಣಾಜ್ಞಾನೋದಿತಂ ನೇರ್ದುದು ಖಗಪತಿರಿಳಂತಮಂ ಚಕ್ರರತ್ನಂ (ಪಧಪು. ೪-೬೧). ೫. ಒಪ್ಪು ; ಸಮ್ಮತಿಸು ; ಒಡಂಬಡು: (ಕ). **ನೇರು**[1] : ಗಿ. ತಿರುಚುವ ಮುರುಚುವೆಳವ ನೇರುವ ತೆಗೆವ ತೀವ ಕಾಸುವ . . . ನೆಟಿ ಸುಲಿವ ಖರ ಕಳಕಳದ ಕೋಳಾಹಳದೊಳಾ ರೌರವಂ ಭಯಂಕರ ಪಾದುದು (ಸಿದ್ಧರಾ. ೪-೨೯). ೩. ಮುಂಚಾಚಿಕೊಳ್ಳು ; ನೀಡಿಕೊಳ್ಳು ; ನೇರವಾಗು : ಭೋರೆನೆ ಕಿಚ್ಚನ[ನಾಲಿಗೆನೇರಿದಪಾಗಳುಜಿನೋವಿನೊಳ್ ಸ್ವೈರಣಿಗೆಟ್ಟೊರಂತೆ ಮಱುಗಿ ಕುದಿಯದೆ ಧೀರಂ ಜನಪಾದ ಪದ್ಮಮಂ ನೆನೆಯುತ್ತುಂ (ಧರ್ಮಾಮೃ. ೧೨-೨೩). ೪. ಸಮಗ್ರವಾಗು ; ಪೂರ್ತಿಯಾಗು ; ಪೂರ್ಣವಾಗು : ಸಾರತರೋಕ್ತಿಗೆ ನಲ್ಲುಂ ಮೋರುಂಗೋದಂತೆ ನೇರಿ ಕಲ್ತಾರ್ಪರವರ್ಗೋರೆ ನಿಬಂಧನ ಟೀಕಾಳಾರಂಗಲ್ಲದೆ ಪೆಱಂಗೆ ಕೋಟಿಕ್ಕೋದಪುದೇ (ಶಾಂತಿಪು. ೧೦-೧೮೨); ಗೋತ್ರಭೂಭೃತ್ಕುಲಮಂ ಬೇರಿಂದೆ ಕಿತ್ತೆತ್ತಲುಮಖಿಳ ದಿಶಾಚಕ್ರಮಂ ನೇ[ರಿ] ತೇಲ್ಚೆಸಲುಂ . . . ಒಡರ್ದುಂ ದುರ್ಧರಂ ಬೇಱರೇಂದ್ರಂ(ಪಧಪೂಪು. ೪-೯೧). [ದೇ.॥ ತಮಿ. ನೇರ್; ಮಲ. ನೇರು]

ನೇರ್[2], **ನೇರು**[2] (ನಾ). ೧. ಒಪ್ಪಿಗೆ ; ಸಮ್ಮತಿ ; ಒಡಂಬಡಿಕೆ : (ಕ). ೨. ನೆಟ್ಟಗಿರುವಿಕೆ ; ಡೊಂಕಿಲ್ಲದಿರುವಿಕೆ ; ಸರಳವಾಗಿರುವಿಕೆ : ಮುರ್ಕಾಟೆಯೂಹಂ . . . ನೇರಿರ್ದ ತಿದಿಗಳಂ ಸೀಳ್ದುಂ ಇದ್ದಿಲರಾಸಿಯಂ ಸೂಸಿಯುಂ ನಿಸರ್ಗಚಪಳಸ್ವಭಾವದಿಂದಾಡುತಿರ್ದು (ಪಂಚತಂ. ೩೦-೨). ೩. ಸರಿಯಾದುದು; ಯೋಗ್ಯವಾದುದು : 'ನೇರ್ದುಡಿ' ಪರಾ. ೪. ಹೊಂದಿಕೆ ; ಸೇರಿಕೆ ; ಕೂಡಿರುವಿಕೆ : 'ನೇರ್ಪಡೆ', 'ನೇರ್ವಡು' ಪರಾ. (ಗು). ೫. ನೆಟ್ಟನೆಯ ; ಸುತ್ತು ಬಳಸಿಲ್ಲದ ; ಅವ್ಯವಹಿತವಾದ : 'ನೇರ್ಗಿಱುದು' ಪರಾ. ೬. ಒಳ್ಳೆಯ ; ಉತ್ತಮವಾದ : 'ನೇರಂದ' ಪರಾ. **ನೇರ್ದು**[3] : ೭.[ನಾಟ್ಯ]ಒಂದು ನೃತ್ಯ ವಿಶೇಷ (?) : ಲೀಲೆಯಿಂ ಬಳಿಕೊರ್ವಳೆಯ್ತಂದು ಕೊಂಡು ಮುಖಜಾಲಿಯಂ ನೇರು ಬಿತ್ತರ ಲವಣೆ . . . ಎಸಗುವಡಹುಗಳನು . . . ಲೇಸುವಡೆಯೆ ತಾಂಡವಮನಾಡುತಿರ್ದಳು (ರೇಚಣ. ೩-೪೮); ಪದತಳದೊಳ್ ತಾಳಮುಂ ಬೀಸರಂಬೋಗೆ ಲೀಯದೆ ಸೆಱೆವಿಡಿದು ರೂಪು ನೇರು ಲಾಗು ಲವಣೆಯಡಪು ತಿರುಪು ಭೈಮುಱಿ ಳಲಾಸ ಕೂಟಮಾನಂಗಳಂ ಸಂಗಳಿಸಿ . . . ಶುದ್ಧದೇಶಿಯ ನೃಮದಿಂ ಚತುರ್ವಿಧನರ್ತನಮುಂ ಚತುರಜನಂ ಮೆಚ್ಚುವಂತೆ ತೋರ್ಪ ನರ್ತಕಿಯರಿಂ (ರಾಜಶೇ. ೫-೧೯ ಸ); ಕರುಣದಿಂದ ನರ್ತಿಸುವಾಗ ನಟನ ತಾಂಡವನೃತ್ಯದುತ್ಕಟ ತಿರುಪು ನೇರು[ಪಾಕಾಂ. ನೇರುಪು, ನೇರುಹು] ಗುಂದಾಳವ ನಟಿಸಿ ಪಾತ್ರವಾದಿದನು (ಭೈರಪಾ. ೨೫೬) ; ಮೂಡೆ ನೇರುರುಪು ಜಾಳಂ ಮಡುಪುದರು ಕುಳಕೆ ನಾಡೆ ಜೊಕ್ಕಳಮಾಗೆ ತಪ್ಪುತಿ ವಿಲಾಸದಿಂ ಪಾಡ ಕಿನ್ನರ ನುದಿಸುತಿರ್ದನವ ಕಿನ್ನರಿಯು ಗಾಡಿ ಮಿಗೆ ಬಹಳ ಸುಖದಿ (ಲಿಂಗಪು. ೨೬-೧೬). [ದೇ.॥ ತಮಿ. ಮಲ. ನೇರ್]

ನೇರ್[3] (ಸಪೂರೂ) 'ನೇರಿತ್ತು' ಎಂಬ ಅವ್ಯಯಕ್ಕೆ ಸಮಾಸಗಳಲ್ಲಿ ಬರುವ ಆದೇಶರೂಪ : 'ನೇರೇಳ್', 'ನೇರ್ಗುತ್ತು', 'ನೇರ್ಗೈ' ಪರಾ. [<ನೇರಿತ್ತು[2]]

ನೇರ[1] (ನಾ). ೧. ನೆಟ್ಟಗಿರುವಿಕೆ ; ವಕ್ರತೆಯಿಲ್ಲದಿರುವಿಕೆ ; ಡೊಂಕಿಲ್ಲದಿರುವಿಕೆ : ಉರಗಳುಮಾರನ ನಡೆಯಲ್ಲ ಡೊಂಕದರಿರವಿ

ನೊಳುಂಟೆ ನೇರಗಳು (ನಾಗಕು. ೯-೧೨೦). ೨. ಸರಿಯಾದುದು ; ತಕ್ಕುದು ; ಉಚಿತವಾದುದು : ಹತ್ತಾರು ದಾರಿಯೊಳಲೆಯುವು ದೇತಕೆ ನೇರವಾದೊಂದರೊಳೋಡು (ಇಂಚಾಪ. ೯೨-೪೭) ; ಅವನು ಹೋಗುವ ದಾರಿ ಬಹಳ ನೇರವಾದುದು (ರೂಢಿ). ೩. ಸುತ್ತುಬಳಸು ಗಳಿಲ್ಲದಿರುವಿಕೆ ; ಸೀದಾತನ : ಅವನು ತುಂಬ ನೇರವಾಗಿ ಮಾತ ನಾಡುತ್ತಾನೆ (ರೂಢಿ). ೪. ಋಜುಮಾರ್ಗ ; ಸತ್ಪಥ : ನಾರಾಯಣನ ವಾಕ್ಯವ ಕೇಳಿ ತ್ರಿದಶೋಪಕಾರಕ್ಕೆ ಸ್ಮರ ತನ್ನನೆಚ್ಚು ಬಾರದ ಬಟ್ಟೆಯ ಬಳಿವಿಡಿದನ ಬಿಟ್ಟು ನೇರದಿ ಬಾಳೆಂದು ನುಡಿದ (ಮೋಹತ. ೮-೩೪) ; ಶ್ಲೇಷ್ಮಪ್ರಕೃತಿಯುಳ್ಳ ಪುರುಷನು . . . ಕೃತಜ್ಞನಾಗಿ ನೇರ [ಪಾಠಾಂ. ನೆನಪು]ವುಳ್ಳವನಾಗಿ ವಿದ್ವಾಂಸನಾಗಿ ಚಂದವುಳ್ಳವನಾಗಿ . . . ಸ್ಥಿರವಾದ ಸ್ನೇಹವುಳ್ಳವನಾಗಿ ಇಹನು (ವೈದ್ಯಸಾ. I, ೧೮). ೫. ದಿಕ್ಕು ; ಹಾದಿ ; ನಿಟ್ಟು : ಗಾಳಿ ತೀಡುವಾ ನೇರದೊಳ್, ದೂರದೊಳೆ, ಮೇಡ ಕೋಡಿನ ಮೇಲೆ ಕುಳ್ಳಿರ್ದೆಮ್ (ಅಂತಿಗೂ. ೧೯-೩೯೯) ; ಸೂರ್ಯನ ನೇರಕೆ ಹೋಗುವಿಯಾದರೆ ತಪ್ಪೀತು ಒಳಹಾದಿ ನಿನಗೆ (ಇಂಚಾಪ. ೨೧೧-೪೪). ೬. ಮನೋಹರತೆ ; ರಮಣೀಯತೆ ; ಸೊಗಸು : ಶಾರದೆ ವಿನಾಯಕಂ ನೇರದೆ ವಿಲಾಸಮಂ ತೀರದೆ ಕುಶಬ್ದಮಂ ತಾರದೆ . . . ಅರದೆಯೊಲಿದು ಬಾಲಶಾರದೆಯೆನಿಪ್ಪ ಮಂಗನ ಕೃತಿಯನಿಂತುಟುದ್ಧರಿಸಿ ತಿರ್ದುಗೆ ಕೃಪೆಯೊಳು(ಮಂಗರಾ. ೧-೨) ; ಶಾರದೆ ಜಡರತ್ತ ಸಾರದೆ ಪೆಱರ ಕೈಸಾರದೆ ಬಂದೆಮ್ಮುವನು ಸೇರಿದೆಯಿನ್ನು ನೀ ಜಾಱದೆ ಹೋರದೆ ನೇರದಿ ಮಾಡೀ ಕೃತಿಯ (ನಾಗಕು. ೧-೧೯) ; ತರುಣ ಪಲ್ಲವದ ವಿಸ್ತಾರದಿಂ ನೇರದಿಂ ಸರಗೈವರ ಕಲಪಿಕೋಚ್ಚಾರದಿಂ ಸಾರದಿಂ . . . ಕರಮೆಸೆಯು ತಿರ್ಪ ಸಹಕಾರದಿಂ ತೀರದಿಂಪೆಲ್ಲಿಯುಂ ನಂದನದೊಳು (ಜೈಮಿಭಾ. ೩-೨೮) ; ಬಿಸಿಲ್ ತಣಿಯೆ, ತಂಗಾಳಿ ಮೈದೋಱೆ, ವಿಹಗಂಗಳ್ ನೇರದಿಂ ಪಾಡೆ, ಮಾರ್ತಂಡಂ ಪಶ್ಚಿಮಾಭಿಮುಖನಾಗೆ, ಸೀತಾ ಲಕ್ಷ್ಮಣರುತ್ತರಾಭಿಮುಖರಾಗಿ ಪೊಱಮಟ್ಟರ್(ರಾಮಾಶ್ವ.೩೨-೩). ೭. ನಿಜ ; ಸತ್ಯ ; ದಿಟ : ನೇರಮೋ ಈ ಬೇಂಟೆ ? . . . ನೇರಂ. ಆತನದೆ ಈ ಕೆಲಸಮ್; ಒಳಗಿರ್ಪನ್ (ಅಶ್ವತ್ಥಾ.೨-೨೨). ೮. [ನಾಟ್ಯ] ಒಂದು ಬಗೆಯ ನೃತ್ಯ (?) : ಗಿರಿಯೊಳಾಡುವನೊಮ್ಮೆ ಮುಗಿ ಲೊಳಾಡುವನೊಮ್ಮೆ ಸರಿತದೋಱುವನು ಡೊಂಕಹನು ಉರುಪ ನೇರಗಳ ಚಕ್ಕಡಿ ಚಿಂತು ಮೊದಲಾದ ಪರಿಪರಿ ನಾಟ್ಯದೋಱಿದನು (ಭರಚ. ೭೪-೯೧). 'ನೇರ್$_2$' ಪರಾ.(ಗು). ೯. ನೆಟ್ಟಗಿರುವ ; ಡೊಂಕಿಲ್ಲದ: 'ನೇರಬೊಟ್ಟು' ಪರಾ.

ನೇರಮಾಗು, ನೇರವಾಗು = ೧. ಸರಿಯಾಗು ; ಯೋಗ್ಯ ವಾಗು; ಸಮಂಜಸವಾಗು : ನೆರೆಹೊರೆಯವರಱಿದೊಡೆ ನೇರಮಾ ಗದು (ಪ್ರಭಂಜ. ೨-೩೨) ; ಕಡಿತಲೆಯ ಸುರಗಿಯ ಕೊಂತದ ಸೂಳದ ಶ್ರೀರಂಗಪಟ್ಟಣ ಬಿಲ್ಲಣಿಯ ಮೂಡಿಗೆಯ ಭಟರ ದೆಖ್ಖಾಳಂ ನೇರಮಾಗೆ (ರಾಮಾಶ್ವ.೫೦-೮) ; ಕರ್ಣಾಟಕವೆಂಬ ನಾರಿಯ ನೊಸಲೊಳು ಮೆಱೆವ ಚಾರುರನ್ನದ ಬೊಟ್ಟನಂತಿಹುದದ ಕೊಳೆ ನೇರವಹುದು ರಾಜಕಾರ್ಯ (ಕಂನವಿ.೧೧-೬೭) ; ಯೌವನದಲ್ಲೇ ವಕ್ರವಾಗಿದ್ದ ಸ್ವಭಾವ ಮುಪ್ಪಿನಲ್ಲಿ ನೇರವಾಗುವುದಿಲ್ಲ (ಯೋಧಪು. ೭೬). ೨. ನೆಟ್ಟಗಾಗು ; ಡೊಂಕಿಲ್ಲ ದಾಗು : ನಾಯಿಬಾಲ ನೇರವಾಗುವುದಿಲ್ಲ (ರೂಢಿ). ೩. ತಕ್ಕ ಷ್ಟಾಗು ; ಸಾಕಾಗು : ಎಷ್ಟು ಸಂಬಳ ತಂದರೂ ಎರಡು ಹೊತ್ತಿನ ಊಟಕ್ಕೇ ನೇರವಾಗೋಲ್ಲ (ಅನ್ನಾಪ. ೧೫). **ನೇರ ಮಾಡು** = ೧. ಕೊಂಕಿದುದನ್ನು ನೇರಗೊಳಿಸು ; ಡೊಂಕಾದುದನ್ನು ನೆಟ್ಟಗೆ ಮಾಡು : ಮಂತ್ರೀಶ ಬಳಿಯಟ್ಟಿ ಬಂದರಾಗಳೆ ದಿವ್ಯಮಂತ್ರ ವಾದಿಗಳು ಲಗ್ಗೆಯೊಳು ಮಂತ್ರಿಸಿ ನೇರ ಮಾಡುವೆವಿದ ನೋಡೆಮ್ಮ ಮಂತ್ರಶಕ್ತಿಯನೆಂದರವರು (ಭರಚ. ೪೯-೯೫). ೨. ಸಾಕಷ್ಟಾಗು ವಂತೆ ಮಾಡು ; ಸಾಕಾಗುವಂತೆ ಹೊಂದಿಸು : ಇರುವ ತಿಂಡಿ ಯನ್ನು ಎಲ್ಲ ಮಕ್ಕಳಿಗೂ ನೇರ ಮಾಡು (ರೂಢಿ). **ನೇರವಾಗಿ** = ೧. ನೆಟ್ಟಗೆ ; ಅಂಕುಡೊಂಕಿಲ್ಲದೆ : ತಾಳೆಗರಿ ಅಥವಾ ಓಲೆಗರಿಯ ಮೇಲೆ ಬರೆಯುವಾಗ ಅಕ್ಷರ ನೇರವಾಗೂ, ಚೌಕವಾಗೂ ಇದ್ದರೆ ಬರವಣಿಗೆಯಲ್ಲಿ ವೇಗ ಬರುವುದಿಲ್ಲ (ದ್ರಾವಿವಿ. ೫೯). ೨. ಅಡೆತಡೆಗಳಿಲ್ಲದೆ ; ನೆಟ್ಟಗೆ ; ಸೀದಾ : ಅಷ್ಟರಲ್ಲಿ ಒಂದು ಬಾನುಲಿಯುಕೇಳ ಬಂದಿತು . . .ನಕುಲನು ಅದಾವುದನ್ನೂ ಕಿವಿಯದೆ ನೇರವಾಗಿ ನೀರು ಮೊಗೆಯಹೋದನು (ಯಕ್ಷಪ್ರ. ೨) ; ಫ್ರಿಟ್ಸ್ . . . ಜೀವಶಾಸ್ತ್ರಜ್ಞನಾದರೂ, ಪ್ರಾಯೋ ಗಿಕ ವಿಧಾನಗಳಿಂದ ಪ್ರಕೃತಿಯನ್ನೇ ನೇರವಾಗಿ ಪ್ರಶ್ನಿಸುತ್ತಾನೆ (ಸಸ್ಯಕ. ೮೩) ; ದೂತನನ್ನೇ ನೇರವಾಗಿ ಇಲ್ಲಿಗೆ ಕಳುಹಿಸಿ ಅವನಿಂದ ನಿಮಗೆ ತತ್ತ್ವಬೋಧೆ ಮಾಡಿಸುತ್ತಿದ್ದನು (ಪೈಮಹ. ೨೬). **ನೇರ ವಾಗಿರು** = ಹೊಂದಾಣಿಕೆಯಿಂದ ಕೂಡಿರು : ರಾಯನೆನಗೆ ನೇರ ವಾಗಿಹನಂಜದಿರೆಂದು ರಾಮನ ಭೀರುತೆಯನು ಬಿಡಿಸುವೆನು (ಕುರಾಸಾಂ. ೨೬-೧೪೬). **ನೇರಾಗಿಸು** = ನೆಟ್ಟಗೆ ಮಾಡು ; ನೇರಗೊಳಿಸು ; ಡೊಂಕಿಲ್ಲದಂತೆ ಮಾಡು : ನೊಂದ ಬೆನ್ನನ್ನು ನೇರಾಗಿಸಲೆಂದು ನಿಂತ ಭಟನೊಬ್ಬನ ಕೈಯಿಂದ ಗುದ್ದಲಿಯನ್ನು ಕಸಿದು . . . ಮಣ್ಣು ಹೆಂಟೆಗಳನ್ನು ಕಡಿದು ಕೊಳ್ಳಕ್ಕೆ ಎಸೆಯಲಾರಂಭಿಸಿದರು (ಹುಲಿಹಾ. ೩೩೯). [<ನೇರಿತು]

ನೇರ$_2$ (ನಾ). ಕಾಲ ; ಸಮಯ ; ಹೊತ್ತು : ನೇರವು ಸಾಯಂಕಾಲ ವಾಗುತ್ತ ಬಂದಿತು ; ಉಪವನಕ್ಕೆ ತೆರಳಿದ ರಾಜನಂದಿನಿಯು ಇನ್ನೂ ರಾಜಗೃಹಕ್ಕೆ ಹಿಂದಿರುಗಿ ಬರಲಿಲ್ಲ (ಅಮಾನಂ. ೧೫).

[ದೇ.॥ ತಮಿ. ಮಲ. ನೇರ]

ನೇರಂ (ಅ). ೧. ನೇರವಾಗಿ ; ನೆಟ್ಟಗೆ ; ಸುತ್ತುಬಳಸಿಲ್ಲದೆ : ಉದ್ಯಾನದಿಂ ನೇರಮರಮನೆಗೆಯ್ದಿ, ಪುತ್ರಾಭಿವಾಂಛೆಯತಿಚಿಂತೆಯಿಂ ಬರಿಸಿದನ್, ನುಡಿಸಿದನ್ ಗುರುಗಳಂ ವಾಮದೇವ ವಸಿಷ್ಠರಂ (ಶ್ರೀರಾಮಾ. ೮-೨೦೭) ; ನೇರಮೊರೆವೊಡೆ ಎನ್ನ ಉಪಕೃತಿಗಳನ್ ಇಂತು ದುಷ್ಕೃತಿ ಗಳಿನ್ ಮುಯ್ ಮಾಡಿದೆಲ್ಲ ದೇವರ್ಕಳುಂ ಎನಗೆ ಪಗೆಗಳೆಂದೇ ಎಣಿಸಿ ದಪ್ಪೆನ್ (ಬದ್ಧಪ್ರ. ೫೧-೧೧೨೩). ೨. ಚೆನ್ನಾಗಿ ; ಸೊಗಸಾಗಿ ; ಅಂದವಾಗಿ : ನುಡಿ ಬೇಸಱಂ ಬೆರೆಯೆ, ನಡೆಗಲಸು ನೆರೆಯೆ, ನಿಡುಬಾಸೆ ನೇರಂ ಮೆಱೆಯೆ, ನೋಟದ ಗಾಡಿ ತಟ್ಟೆ, ಮನಕೆ ಪುದುವಯಕೆ ಪುದುಂಗೊಳೆ, ಸೀತೆ ಬಸಿಱಿಯಾದಳ್ (ರಾಮಾಶ್ವ. ೨೧-೯). [<ನೇರ$_1$]

ನೇರಂದ (ನಾ). ೧. ನೇರವಾದ ರೂಪ ; ನೆಟ್ಟಗಿನ ಆಕೃತಿ : ಚಂದನವಿತ್ತ ಮೂಹೊಱಡೆಯ ತನುವ ನೇರಂದವ ಮಾಡಿ ತೋಱಿಸಿದ ವೃಂದಾವನತಾತ್ಪರ್ಯನ ಕಾರುಣ್ಯದಿಂದೆ ಮೇಲ್ಗತೆಯ ವಿಸ್ತರಿಸು (ಮೋಹತ. ೪೦-೧). ೨. ಉತ್ತಮವಾದ ರೂಪ ; ಅತಿಶಯ ವಾದ ಸೌಂದರ್ಯ : 'ನೇರಂದವಡೆ' ಪರಾ. ೩. ಪರಿಶುದ್ಧ ವಾದ ನಡತೆ ; ಸದಾಚರಣೆ : ನೇರಂದವಾಗಿರ್ದ ಮುನಿಪತ್ನಿಗೆ ಸತ್ಕುಮಾರನ ಕೊಟ್ಟ ಸಾತ್ವಿಕನು ಚೋರರ ಕೊಲಬಂದ ನೋಡೆಂದು ನೆಯ್ದಿಲೆ ನೀರೊಳು ನಸುನಕ್ಕುವಾಗ (ಮೋಹತ. ೧೮-೩೧).

[ನೇರ್$_2$ + ಅಂದ]

ನೇರಂದವಡೆ (ಕ್ರಿ). ಅತಿಶಯವಾದ ಚೆಲುವನ್ನು ಪಡೆ ; ಹೆಚ್ಚಿನ ಸೌಂದರ್ಯವನ್ನು ಹೊಂದು : ಹೊಂದಗಡಿನ ಹೊದಕೆಯ ಮನೆ ಬಹಳ ನೇರಂದವಡೆದ ಪಟ್ಟಶಾಲೆ ಮುಂದೆಸೆಯಲಿ ತುಳಸಿಯ ಮಂಟಪದಿ ಗೋವಿಂದನ ಕೀರ್ತಿಸುತಿಹರು (ಮೋಹತ. ೩-೩೪).

[ನೇರಂದ + ಪಡೆ$_1$]

ನೇರಗೊಳಿಸು (ಕ್ರಿ). ಸರಿಗೊಳಿಸು; ಯೋಗ್ಯವಾಗುವಂತೆ ಮಾಡು; ಉತ್ತಮಪಡಿಸು: ದಿನದಿನವೂ ಜನರ ಚಿತ್ತವನ್ನು ನಯಭಯಗಳಿಂದ ತಿದ್ದಿ ನೇರಗೊಳಿಸುತ್ತಿದ್ದರೇ ಅಲ್ಲವೆ ಅವರಿಗೆ ಅಹಿಂಸೆ, ಸತ್ಯ, ಅಸ್ತೇಯ, ಮೊದಲಾದ ಉದಾತ್ತಗುಣಗಳಲ್ಲಿ ನಂಬಿಕೆ, ಅವುಗಳನ್ನು ಆಚರಣೆಯಲ್ಲಿಟ್ಟುಕೊಳ್ಳುವ ಉತ್ಸಾಹ ಇವು ಸಹಜವೆಯದೆ. ಇರುವುವು? (ಸಾಹಿಜೀ. ೬೪). [ನೇರ್$_1$ + ಕೊಳು (<ಕೊಳ್$_1$)+-ಇಸು$_3$]

ನೇರಣಿಗ (ನಾ). ಚಿನ್ನದ ಕೆಲಸ ಮಾಡುವವನು; ಅಕ್ಕಸಾಲಿಗ: ವೀರಭಟರ ವಿದ್ವಾಂಸರಕ್ಕಿಂಗರ ನೇರಣಿಗರ ನಜ್ಜುಗರ ವಾರವನಿತೆಯರ ವೈದ್ಯರ ಬಚ್ಚರ ಕೇರಿಯಿಂದೆಸೆಯಿತಾ ನಗರ (ನೇಮಿಸಂ. ೧-೭೯). 'ಏರಣಿಗ' ಪರಾ. [<ನೇರಾಣಿ+-ಗ$_2$]

ನೇರನೀರು (ನಾ). ನೇರವಾಗಿ ಹರಿಯುವ ನೀರು: ನಟ್ಟಾಸೆ ಬಾಳ್ವೆಯುಲಿ ನಟ್ಟಾಸೆ ನದಿ, ನೇರನೀರಲಿ ಜಿಗುಳೆಯಂತೆ ಕೊಂಕುವರಿಯದಿರಣ್ಣಾ! (ಪಬ್ಬೆರ. ೪-೪೭). [ನೇರ್$_1$+ನೀರು$_1$ (<ನೀರ್)]

ನೇರಬೊಟ್ಟು (ನಾ). ಹಣೆಯ ಮಧ್ಯಭಾಗದಲ್ಲಿ ಬೈತಲೆಯ ಕೆಳಭಾಗಕ್ಕೆ ಸರಿಯಾಗಿ ಇಡುವ ಆಭರಣ,—ಬೈತಲೆಬೊಟ್ಟು: "ತಿಂಗಳಿಗೆ ಜೂಳೆಯಮೆನಲ್ ನೇರ[ಪಾಠಾಂ. ಮುಜೆವ]ಬೊಟ್ಟು" (ಶಬ್ದಮಂ. ೭೩); "ಜೂಳೆಯ ತಿಂಗಳಿಗೆಯೆನಲ್ ನೇರಬೊಟ್ಟಿಗೆ ಪೆಸರ್" (ಕಬ್ಬಕೈ. ೨೬). [ನೇರ್$_1$+ಬೊಟ್ಟು$_1$]

ನೇರಲು 'ನೇಜುಲ್' ನೋ.

ನೇರಲುತಾರೆ (ನಾ). ಒಂದು ಬಗೆಯ ಸಸ್ಯ: ಮುಸ್ಸಿ, ಕರುವಾಡಿ, ನೇರಲುತಾರೆ (ಸೈಜಿಗಿ. ೫-೪೨). [?]

ನೇರಲೆ 'ನೇಜುಲ್' ನೋ.

ನೇರಶಿಷ್ಯ (ನಾ). ಪ್ರತ್ಯಕ್ಷ ಶಿಷ್ಯ; ಖುದ್ದು ಶಿಷ್ಯ; ಖಾಸಾ ಶಿಷ್ಯ: ತ್ಯಾಗರಾಜರ ನೇರಶಿಷ್ಯರೆಲ್ಲೊಬ್ಬರಾದ ಮನಂಬುಚಾವಡಿವೆಂಕಟಸುಬ್ಬಯ್ಯರ್ ಇವರಿಗೆ ಸಂಗೀತಾಭ್ಯಾಸ ಮಾಡಿಸಿದ ಗುರುಗಳು (ಸಂಗೀತ. ೨). [ನೇರ್$_1$ + ಶಿಷ್ಯ]

ನೇರಸಂಧಾನ (ನಾ). ೧. ಮಧ್ಯಸ್ಥರ ಸಹಾಯವಿಲ್ಲದೆ ನಡೆಸುವ ವ್ಯವಹಾರ. ೨. ಅಡೆತಡೆಗಳಿಲ್ಲದ ಸಂಪರ್ಕ: ಈ ರೀತಿ ಒಂದು ತಪ್ಪು ಬೇರೊಂದು ಸೂಕ್ಷ್ಮತರ ತಪ್ಪನ್ನು ಸ್ಫುಂಜಿಸುತ್ತಾ ಕಾವ್ಯದ ಆತ್ಮದೊಡನೆ ನೇರಸಂಧಾನವನ್ನು ನಡೆಸುವ ನೆಲೆಯನ್ನು ತಲುಪಲು ಸಹಾಯಕವಾಗುತ್ತದೆ (ಶ್ರೀಚಿತ್ತಪ್ರ. ೭೩). [ನೇರ್$_1$+ಸಂಧಾನ]

ನೇರಳೆ 'ನೇಜುಲ್' ನೋ.

ನೇರಳೆಮಾವು (ನಾ). ಒಂದು ಬಗೆಯ ಮರ: ದೇವಗರಿಗೆ, ಹಿರೀಕಣಗಲು, ನೇರಳೆಮಾವು, ದೀವರಿಗೆ, ಚಿಳ್ಳ ಕಮರಾಳ ಮರ, ಕಾಡುಜೀರಕ (ಸೈಜಿಗಿ. ೬೮-೬೫೯). [ನೇರಳೆ (<ನೇಜುಲ್)+ಮಾವು]

ನೇರಾಣಿ, ನೇರಾಳಿ (ನಾ). ಶುದ್ಧ ಬಂಗಾರ; ಅಪ್ಪಟ ಚಿನ್ನ; ಅಪರಂಜಿ: ಬಾಲ್ಗಡಲ ನೀರ ಪರಿವ ಪೊನಲ್ಗಳ್ ಸುರಗಿರಿಯ ಪಿರಿಯ ನೇರಾಣಿಯ ತಾಜಲ್ಗಳ್ಗಿದಿ[ಟಿ](ದಂ)ದೇಟಲ್ಗೆಜಗಿದುವಾ ಜಿನೇಂದ್ರ ಸವನೋತ್ಸವದೊಳ್ (ಶಾಂಪು. ೧೦-೫೧); ಮಾಣದೆ ತಪದಿಂ ಮುನಿ ನೀರ್ವಾಣನ ತನು ತಪ್ಪ ಮಾಗಿಯುಂ ಕಂದದೆ ನೇರಾಣಿಯ ಪೊಳೆಪಂ ತಳೆದುದು ಮಾಣಿಕಮಂ ಬೆಳಗಿದಂತೆ ದಹನಕ್ರಿಯೆಯಿಂ (ಅಸಂಪು. ೯-೧೦೮); ಚಿನ್ನದ ಬೊಂಬೆಗಳೆನೆ ನೇರಾಣಿಯ ಕೆನ್ನೆಯರೆನೆ . . . ಸನ್ನುತ ಸೌಭಾಗ್ಯಬಡೆದಬಲೆಯರೊಪ್ಪುವಡೆದರಾಗ (ಜಯಾ.೧೪-೨೫); ತೋರೆ ಮಾಣಿಕ ಪಚ್ಚೆ ವಜ್ರ ವೈಡೂರಿಯ ನೇರಾಣಿ ಮೌಕ್ತಿಕ ನೀಲ ರಾರಾಜಿಪ ರತ್ನಭೂಷಣಂಗೆಯ್ವ ಸೊನ್ನಾರರಂಗಡಿಗಳೊಪ್ಪಿದುವು (ಮೋಹತ. ೬-೨೫). 'ನೇರಾಣಿಗೆಲಸ' ಪರಾ. **ನೇರಾಳಿ**: 'ನೇರಾಳಿಗೆಲಸ' ಪರಾ.

ನೇರಾಣಿಯ ಪೊನ್, ನೇರಾಣಿಯ ಹೊನ್ = ೧. ಶುದ್ಧವಾದ ಚಿನ್ನ; ಅಪ್ಪಟ ಬಂಗಾರ: ಜೈನಾಗಮಮೊದ್ಯಂತಂ ನೇರಾಣಿಯ ಪೊನ್ನಂತುಟಿ ಮಧ್ಯಸ್ಥವ್ಯಕ್ತಿಯಿಂ ನೋಟ್ಪುಗಳ್ (ಸಮಪ. ೬-೨೫). ೨. ಪ್ರೀತಿಪಾತ್ರವಾದ ವ್ಯಕ್ತಿ: ಮಾಣಿಕದನ್ನೆರಪ್ಪ ಪೊಸ ಚೆನ್ನೆರನೀಗಳೆ ತರ್ಪನೆನ್ನ ನೇರಾಣಿಯ ಹೊನ್ನೆ ಬೇಡವನ ನನ್ನೆದನಾಂ ಸೆಜಗೊಡ್ಡಿ ಬೇಡುವೆಂ (ಲೀಲಾವ. ೨-೧೨೨). [<ಸಂ. ಹೈರಣ್ಯ?]

ನೇರಾಣಿಗೆಲಸ, ನೇರಾಳಿಗೆಲಸ (ನಾ). ಚಿನ್ನದ ಕೆಲಸ; ಹೊಂಗೆಲಸ: ದ್ವಾರಪಾಲಕರ ಸುಮತದಿಂದ ಜ್ಞಾನೇಂದು ನೇರಾಣಿಗೆಲಸದೆರಡನೆ ದ್ವಾರದಿಂದೊಳಪೊಕ್ಕು(ಜ್ಞಾನಚ. ೬-೨೯). **ನೇರಾಳಿಗೆಲಸ**: ಮೂಜಿನ ಕೋಂಟೆಯ ನಟ್ಟನಡುವಿನಲ್ಲಿ ನೇರಾಳಿಗೆಲಸದಿ ಮೆಜೆವ . . .ಮುಲಗುವ ಮನೆ (ಜ್ಞಾನಚ. ೧-೧೫೭). [ನೇರಾಣಿ+ಕೆಲಸ]

ನೇರಾಳಿ 'ನೇರಾಣಿ' ನೋ.

ನೇರಾಳಿಗೆಲಸ 'ನೇರಾಣಿಗೆಲಸ' ನೋ.

ನೇರಿ (ನಾ). ಒಂದು ಬಗೆಯ ಸಸ್ಯ ಮತ್ತು ಉಪ್ಪಿನಕಾಯಿಗೆ ಬಳಸುವ ಅದರ ಕಾಯಿ: ನಳನಳಿಸುವ ಮೆಣಸಿನ ಕರೆ ಹುಳಿಯಲ್ಲಂ ಬಿದಿರ ಕಬಲೆಯೇಲಕ್ಕಿಯ ಕಾಯ್ ಮೊಟಗಿನ ಕಾಯ್ ನೇರಿ [ಪಾಠಾಂ. ನೆಲ್ಲಿ]ಯ ಕಾಯ್ ಕಬಮೆಯ ಕಾಯ್ ಬೇಜೆವೇಜೆ ಸವಿವಡೆದಿರವೇ (ನಳಚಂ. ೪೬೩; ಸೂಕ್ತಿಸು. ೧೧೧-೪೪ ನೋ). [?]

ನೇರಿಡು (ಕ್ರಿ). ೧. ಕ್ರಮವಾಗಿ ಇಡು; ಸಾಲಾಗಿ ಇಡು: ಅಂಗಜಂ ತೋಳ ನೀಳದ ಪತ್ರಂ ಬರೆದೀಯೆ ಕೊಂಡು ಮಧುಚೌತಂ ಪೂಸಿ ನೇರಿಟ್ಟ ಮಾರ್ಗದೆ ಕಂಕೆಲ್ಲದ ಶೋಣಪಲ್ಲವಚಯಂ ಚಿಲ್ವಾದುವುದ್ಯಾನದೊಳ್ (ಪುಷ್ಪಪು. ೪-೪೨). ೨. ಕ್ರಮವಾಗಿ ಒದಗು; ಒಂದಾದ ಮೇಲೊಂದರಂತೆ ಉಂಟಾಗು: ಅಂತು ಬಂದಾ ಕನ್ನೆವೆಣ್ ತವಸಿಯಂ ಎಮ್ಮ ಜಾತ್ರೆನಯನಗರ್ಗೆ ನೇರಿಟ್ಟಾಧಿವ್ಯಾಧಿಗಳಂ ಪರಿಹರಿಸಿ ಪೊರೆಯೈ ಎಂದು ಕಾಲ್ಗೆಱಗಿದಳ್ (ರಾಮಾಶ್ವ. ೬೪-೧೯); ಹಗಲಿನಾಚೆಯಿರುಳ ಕರೆ ನೇರಿಟ್ಟತು ನೇಹಿಗರೆ ಅಸೆಯಂತೆ ಬಾಳಾಗೆ ತೋಪವೊಂದೆ ಮೇಲಾಗೆ ಬನ್ನಿ ಬನ್ನಿ (ಗೋಕುನಿ. ೩-೧೪).

[ನೇರ್$_3$(<ನೇರಿತ್ತು$_2$)+ಇಡು$_1$]

ನೇರಿತು, ನೇರಿತ್ತು$_1$, ನೇರಿದು (ನಾ). ೧. ನೇರವಾದುದು; ನೆಟ್ಟಗಿರುವುದು; ವಕ್ರತೆ ಇಲ್ಲದುದು: ಪೇನಂತೆ ಪತ್ತುವಿಡದು ಬಣಗಿನಂತೆ ನೇರಿತಲ್ಲದು (ಧರ್ಮಾಮೃ. ೪-೧೩೫); ಗುಂಡು ತೀವಿದ ಡಂಗದವೋಲ್ ನೇರಿತಲ್ಲದ ಹುಂಡಶರೀರಸಂಸ್ಥಾನಮುಮಂ ಯಥಾಕ್ರಮದಿಂ ಮಾಡ್ಕುಂ (ತತ್ತ್ವಪ್ರ. ೨೯೬); ಭಾರವಿಳಿದುದು ಬಳಿಕ ವಸುಧಾನಾರಿಗೊಜಗಿದ ಗೋಣುಸಾಸಿರ ನೇರಿತಾದವು ಫಣಪತಿಯ . . . ದಶಶಿರನ ಮರಣದಲಿ (ತೊರಂರಾ. ೧-೨-೨೨). ೨. ಸರಳವಾದುದು; ವಕ್ರತೆಯಿಲ್ಲದುದು; ಋಜುವಾದುದು. ೩. ಸರಿಯಾದುದು; ಉಚಿತವಾದುದು; ತಕ್ಕುದು: ನೆಜಿದಿರ್ದೀರಿಯ ನೇರಿತಪ್ಪೆಡೆಗಳೊಳ್ ನೇರ್ಪುಟ್ಟು ಶೋಭಾವಹಕ್ಕೆಜೆವಟ್ಟುಜ್ಜ್ವಲ ಮಪ್ಪ ದೇವಕುಳದಿಂ . . . ಎತ್ತಮೂ ಕೆಜೆ ರಯ್ಕುಂ (ಪಂಚತಂ. ೬೦೪-೧೬); ಸಂಚಿತ ಪೂರ್ವಕರ್ಮದುಸ್ಪೇರಣೆ ನೇರಿತಂ ನಡೆಯಲೀಗುಮೆ (ಪಂರಾಪಾ. ೧೧೧-೧೬೬); ನೇರಿತಂ ಪೇಳ್ದ ನುಡಿಯಂ ಬೇರೊಂದು ತೆರ ನೆಣ್ಣುದಿರ್ ಒರಂಟನುನೊರಟನ್ನಂ ಒಳಂ ಮುದಿಯ ಸಜ್ಜನಂ (ಪೌನಂದ. ೧೧-೧೫). ೪. ಅಂದವಾದುದು; ಚೆಲುವಾದುದು; ಸುಂದರವಾದುದು: ಚೆಲ್ಲಗಣ್ಣೊಳ್ಕುರ್ದಿತೆಗೆ ತಿಣ್ಣಮಾದುವಿವೇ ಪರಿಜೇಂ ಕಡುನೇರಿತಾದುದೋ (ಪುಲ್ಲಿಪು. ೬-೬೪); ಹೊರನು ನೇರಿತಾಗಿಯುಂ ಹಾಸಲ್ಲದಂತೆ [ಪಾಠಾಂ. ಗುಡಿಸಲ್ ಚೆಲ್ವಾಗಿಯುಂ ಮೂಳಿಗೆಯಲ್ಲದಂತೆ]

. . . ದೂರಭವ್ಯರುಮಭವ್ಯರುಂ ಶ್ರಾವಕರಾಗಿಯುಂ ಋಷಿಯು ರಾಗಿಯುಂ ಮೋಕ್ಷಗಾಮಿಗಳಲ್ಲರ್ (ಧರ್ಮಾಮೃ. ೧೧-೧೪೬); ನೇರಿಸಿ ನಿಪ್ಪ ಜನ್ಮವರದಿಂ ಕರಯುಗ್ಮದೊಳಾಂತ ದರ್ಭೆಯಿಂ . . . ವಾಮನ ರೂಪುವೆತ್ತ ಗಂಭೀರನುದಾತ್ತನಾ ಬಲಿಯ ಬೇಟ್ಟುದುಂ (ನೇಮಿಸ. ೫-೨೧). ೫. ನವುರು ; ನಯ ; ನುಣುಪು : ಕಡುಬಿಬ್ಬಂ ಬೊಯ್ದು ಬಣ್ಣಂಬಡೆದು ಮೊನೆಗಳುಂ ನೇರಿತಾಗಿರ್ದು ಮುಸ್ಸಿಮ್ಮನಿ ಡಿಲ್ಮಂ ಬೀಱುತುಂ ರಂಜಿಪ ಬೀಯೆಲೆಗಳ್ (ಬಾಧಪು. ೧-೧೩೪); ಮೃಗ ಮದಕಾಂತಿಯಂ ಪರಮರತ್ನ ಮೃದುತ್ವಮನುಪ್ಪ ಕರ್ಣಕಾರಗತಮೆನಿಪ್ಪ ಸೌರಭಮುಮಂ ಹರಿಚಂದನದೊಂದು ನೇರಿತಂ ಮಿಗೆ ಬಿದಿ ಕೊಂಡು ನಿರ್ಮಿಸಿದನೀಕೆಯನಲ್ಲದೊಡೆಂತು ಬಂದುದೀ ಸೊಗಯಿಪ ಕಾಂತಿಯುಂ ಮೃದುತೆಯುಂ ಸುರಭಿತ್ವಮುಮೆಯ್ದೆ ನೇರಿತುಂ (ಬಾಧಪು. ೩-೩). (ಗು). ೬. ನುಣುಪಾದ ; ನಯವಾದ ; ನವುರಾದ : ನೇರಿತೆಳ ವಾಟಿಗಂಬಮನೋರಂತಿರೆ ನುಣ್ಪುವೆತ್ತ ಸೋಲಿಪ ಜೆಲ್ವಿಂ ಜಾರಿಸಿ ಸೊಬಗಿಂಗೆತ್ತಿದ ತೋರಣಗಂಬಂಬೊಲಿರ್ದುವಾಕೆಯ ತೊಡೆಗಳ್ (ಕಬ್ಬಕಾ. ೬೫). **ನೇರಿತ್ತು**₁ : ೧. "ಉಬ್ಬನಂ, ಉಬ್ಬನೀಯಂ, ಈ ೨ ನೇರಿತ್ತು" (ಕಾಶಿಕ್ಯ. ೨೧೬). ೨. ಸುಜನರ ಮನದಂತೆ ನೇರಿತ್ತಾಗಿ ನಲಂಬೆತ್ತಿರ್ದಳತೆಗಳುಮುಂ . . . ನುನೋವಲ್ಲಭಿಗೆ ತೋರುತ್ತುಂ (ಧರ್ಮಾಮೃ. ೧೬-೨೬) ; ತುಕಾರಾಂತಕ್ಕೆ ವಿಕಲ್ಪದಿಂ ದ್ವಿತ್ವಮುಂಟು . . . ತೋರಿತ್ತು, ನೇರಿತ್ತು, ಕೂರಿತ್ತು (ಶಮದ. ೬೭ ಪ್ರಯೋ). ೩. ದೂರದ ಬೆಟ್ಟದ ತೆಱದಿಂ ನೇರಿತ್ತಾಗಿಳ್ಕು [ಪಾಶಾಂ.ನೇರಿದವಾಗಿರ್ಕುಂ] ಮುಲ್ಲದೊಳಗಂ ನೋಡಲ್ ಸಾರತರಮಲ್ತು ಪೊಳ್ಕು ವಿಚಾರಿಸುವಡೆ ಜೈನಲ್ಲದನನ ಚರಿತ್ರಂ (ಸನುಪ. ೬-೪೪). **ನೇರಿದು** : ೧. ನೇರಿದಪ್ಪ ಬಾಸೆಯ ನುಣ್ಪುವಡೆದೂರುದ್ದಯದ ಮೃದುತಳದ . . . ವಿದ್ಯಾಧರರ ವಾರನಾರೀತಳದಂಬಂ (ಧರ್ಮಾಮೃ. ೪-೧೯೬). (ನಾ). ೭. ಧಾರ್ಮಿಕವಾದ ನಿಷ್ಠೆ ;—ಶ್ರದ್ಧೆ ; "ಭಕ್ತಿ" (ಜಕುಸಾ. ೬. ೧, ೬೫).

ನೇರಿತವಾಗು, ನೇರಿದವಾಗು—೧. ಒಳ್ಳೆಯತನದಿಂದ ಕೂಡಿರು; ಒಳ್ಳೆಯದಾಗು : ಆ ಶರಣನ ಕುಮನವಳಿದ ನೇರಿತವಾದ ಮನಸ್ಸೆಂಬುದೀಗ ಸರಂಗದ ಸುಮನದವೆಂಬ ಶಬ್ದಕ್ಕರ್ಥ (ಅಜಿಸಾ. ೧೬-೫೫). ೨. ಸುಂದರವಾಗು ; ಅಂದವಾಗು ; ಜೆಲುವಾಗು : ಸಾರಮೆನಲ್ ಕರಂತರದಿನೊಪ್ಪುವ ಪೊಂಗಳಸಂಗಳಿಂ . . . ನೇರಿದವಾದ ಗರ್ಭಗೃಹದಿಂ ಜಿನರಾಜಗೃಹಂಗಳೊಪ್ಪುಗುಂ (ಸುಳುಪಾ. ೯-೫೮). **ನೇರಿತ್ತಂ ಮಾಡು** = ಸರಿಯಾದುದನ್ನಾಗಿ ಮಾಡು ; ತಳ್ಳುದನ್ನಾಗಿ ಮಾಡು ; **ತಿದ್ದು** : ತಿರ್ದುವುದು = ನೇರಿತ್ತಂ (ಸರಿ)ಮಾಡುವುದು (ಶಮದ. ೪ ೬೬). **ನೇರಿದಂ** = ನಿರುದ್ವಿಗ್ನನಾದವನು ; ಶಾಂತ ಸ್ವಭಾವದ ವ್ಯಕ್ತಿ : ಒಸ್ಪಿಸಿ ಮನಮುಂ ಮಾನ್ಪಿನಿಗೊಸ್ಪಿಸಿ ತನುವಂ ತಪಕ್ಕೆ ಮುನಿ ಮುನಿಸಿಜನಂ ಸೊದ್ಯಾಗಿಬರ್ಪುರ್ಪವಡಿಯ ಕುಪ್ಪ ಸಮುಂ ಪೋಲ್ತು ಪೊಱಗೆ ನೇರಿದನಾದಂ (ಪಂಪಾಮಾ. ೪-೧೩); ಮನದೊಳ್ ಬೆದಱಿ ದಿಟಂ ಬೆದಱದಂತೆ ಪೇಶರಪತಿ ನೇರಿದನಾಗಿ ಪೊಱಗೆ ತಾಂ ಬರಿಸಿದನಾ ಕತಬಿಂದುವೆಂಬ ನೈಮಿತ್ತಿಕನಂ (ಶಾಂತೀಶ್ವ. ೬-೪೫). **ನೇರಿದರ್, ನೇರಿದರು** (ಬಹುವ) = ೧. ಸರಿಯಾದ ಮಾರ್ಗದಲ್ಲಿರುವವರು ; ಋಜುಸ್ವಭಾವದವರು : ಪಂದೆಯ ಯುದ್ಧದಂತೆ ಸದ್ಧರ್ಮಕ್ಕಂಜಿದರಿವರೆನಿಸದೆ ಸಮ್ಯಕ್ತ್ವದೊಳಂತಿದರಿರ್ವರಂತೆ ನೇರಿದರೊಳರೇ (ಧರ್ಮಾಮೃ. ೧೧-೪೯) ; ಆ ಪುರದ ವೀರ ಬಣಿಂಜಿಗರುಗ್ರಕೀಜಮಂನೇರಿದರಲ್ಲದುದ್ಧತರನೀಗಳೆ ಸಿಕ್ಷಿಪೆಮೆಂದು ನಿಂದಾ ರಭಸಪ್ರಭಾವಮನದೇವೆಸಗೊಂಡಪೆಯಣ್ಣ (ಸೌಇಇ.IX-1,೨೯೭-೬೧;1177). ೨. ಬ್ರಾಹ್ಮಣರು; ದ್ವಿಜರು : "ದಿನ್ಮಿದರುಮೆನಲ್ ಸೈದರನೆ ಗನಹರೆನೆ ನೇರಿದರ್[ಪಾಶಾಂ. ದೆನಲ್ಮನೆಯಂ] ಸಾಗರದೆನೆ ಪರಿಯಲ್ಕೆ ಬ್ರಾಹ್ಮಣ ಲೋಕಂ (ಪಜಿ. ೧೦-೧೦); ಕೆಲ್ಲಂಬಟ್ಟು ಬಳ್ಕಸದ ಜನನಾಳ್ಗಳ್ ನೈಷ್ಠರಂ ನಿವಾಸಂಗಳಂ ಪೊಲಂ-೫ ! ಸರಿಯುಂಡೇಳಲಿ ಗೆಯ್ಕುಮೊ ! ನೇರಿದರ್ಗಳಿಂದಲ್ತಾ ಯಜ್ಞಮಂ ! . . . ಎಂದು ಬಿನ್ನಯಿಸಿದರ್ (ರಾಮಾಶ್ವ. ೮೧-೮) ; ಗೇನೊ ಯದಿನ್ನೊಡಲ್ ತಾನಿನಿತು ತಗ್ಗಿ ಲೆನೆ ತೊಡಗಿದರ್ ನಾಡುವೆಯುಂ ಬಲಿಯಾಯ್ತು ಬಗೆಗೆ ಒಡ್ಡನೆದ್ದು ಕಾಳು ಬೊಕ್ಕಾಸ ಪದೆಯೆ ನೆದಮಂ ಸೋದ ನೇರಿದರ ಮನಸಂ (ಶಾಲಿಶ. ೧೧-೨೧). ೩. ಸರಿಣತಕಾರಾದವರು ; ನಿಪುಣರು ; ಕುಶಲರು ; ಸೌಶ್ರ ಗುರು ಕರ್ಣ ಧೃವ ಪ್ರಮುಖರ್ಕಳಂ ನೇರಿದರೆ ಯಿಂದಂ ಬಿಂಬಾನನಮುಂಬರಿಸಿಸಾ ಸುರರ್ಕಳೀಂ ಪುಟುಪುಂ ಬಾಲಾಲಾಪಿ ಸ್ತ್ರೀಯನಿಂದನೆಯಂ ಸುರಸ್ತ್ರಶಂ(ಸಂದಭಾ. ೧೨-೬೭). ೪. ಧಾರ್ಮಿಕ ನಿಷ್ಠೆಯುಳ್ಳವರು ; ಧರ್ಮನಿರತರಾದವರು : ಶುಂಗಪ್ರಾಂತ್ಯಾ ನಂ.ವಿಚರಿಸ್ಪಯುಂ [ಪಾಶಾಂ. ಧೀರರೆನಿಸ್ಪರುಂ] ಯಾಮ್ ಜಪರಂ ದುದಾತ್ಮರಂ (ಧರ್ಮಾಮೃ. ೪-೨೦೦). ನೇರಿಚಿತ್ತ = ಸಾತ್ವಿಕ ಸ್ವಭಾವದವನು : ಇವಳ್, ಇವನ್ . . . ನೇರಿವಳ್, ನಿರಿವಾ ಕೀಱಯಳ್ (ಶಬ್ದಾನು. ೧೪೪ ಪ್ರಯೋ). ನೇರಿಸುವ್ = ೧. ನೇರಿದವಾಗಿರುವುವು ; ನೆಟ್ಟಗಿರುವುವು ; ಜೊಂಕೆಲ್ಲದಿರುವುವು : ನೇರಿದುಪುಂ ಸ್ನಿಗ್ಧ ಮುಮಸ್ಯಾರೆಯುಮೊಳಗೆಯಿಗಿ ತೋಱುಪುದು ಸುಭ ವಂಗ ಸ್ವೀರಫಲಭದಶನಮುಂ ನಿಶ್ಚರಾಳರಮುಮೆಂಬವಂಗಳುಂ ಬಾಳುಗೆಯುಂ (ಅಶ್ವಶಾ.೧-೩೦). ೨. ಉತ್ತಮವಾದುವು : ಕೂರಿದುವುಂ ನೇರಿದುವು ಮುಸ್ಪಯ್ದೆ ಮೋಘಾಸ್ತ್ರಂಗಳಂ ಬಾಣಧಿಯಿಂದುಜ್ಜಿಗೊಂಡು ತನ್ನ ಮುನ ಬೊಳಿ ಸಮಳಿಪ್ಪ ಕೊಂಬಿಚ್ಚಾಗಳ್ (ಪಂಪಭಾ. ೧೨-೮೫ ಸ) , ನೇರಿದುವೆನಿ ಪರಿದುಂ ಕವಿತಾರಸವಿನಾ ಸವಣನೊರ್ಪಸೊಳ್ ನೆಲಸಿದುವಿನ್ನಾ ಶಾರ ಕವಿತ್ವಮುಮನುವಿಚಾರಿಪ ರಮಣೀಯಮಲ್ಲಿ ಪುರುಳಲುಸುಪುದೇ (ರಾಂಪಸು. ೧೨-೬೯) ; ಪೊಜ್ಜ ಪೊಸಕೆನಿಪಚ್ಚುಗಳ್ ನಿರ್ಮಾಯಿತ್ತಂ ನೆಕ್ಕನುಲಿಪೆಂ ಲಿಲುಪ್ಪೆ ಳೆಡೆದುರುಳ್ವ ತೇರ ನೇರಿದುವಪ್ಪ ರಥಾಂಗಂಗಳಳ್ ನಿರೀಕ್ಷಿಪುದರ್ ಪಲ್ಲಪೋಲ್ಲಸಿಪ ರಥಾಂಗವಿಘಟನಮುಂ ನೂಚಿಸೆಯುಂ (ವರ್ಧಪು. ೯-೪೦೮). ೩. ನಯವಾದುವು ; ನುಣುಪಾದುವು ; ನವುರಾದುವು : ಚೀರಿಂ ಕೊಟ್ಟು ತುದಿಗೊಂಬುವರನೋರಂತೆ ನೇರಿದುವಾಗಿರ್ದಲೆಯಿಂ ಕುಯಿಗಿ ಫಲವಾದ ದನಸಿನ ಸುರಂಗಳುಮುಂ . . . ಜೋದ್ಯಂಬಟ್ಟೆ ನೋಡುತಿರ್ದ ರಾಜಕುಮಾರನಂ ಅಲ್ಲಿರ್ದುದೊಂದು ರಾಜಸೀರಂ ಲಂಪು (ಪಂಚಪಂ. ೧೧೭-೧೮). ೪. (?) : ಪಾರಿವದ ನಿವಾಸ ನಯನಾಕರ್ಷಕ ಸೌಂದಂಬಡೆ ಪೊದಟ್ಟು ನೀಳ್ದೆಸೆವೆಸಗಳ್ ನೇರಿದುವಾಗಿರೆ ರದನಗಳಾದಾ ? ಮುಭುಪಿಂಗಲೋಚನಂಗಳ್ ಶುಭದಂ (ಲೋಕೋಪ. ೧೧-೬೬)

[ದೇ.॥ ಪಮಿ. ನೇರ್ಪ್ರ, ನೇಱ್ಪು ; ಮಲ. ನೇಱ್ಪು]

ನೇರಿತ್ತು₁ 'ನೇರಿತು' ನೋ.

ನೇರಿತ್ತು₂(ಅ). ೧. ನೇರವಾಗಿ ; ನೆಟ್ಟಗೆ : 'ನೇಗರ್ತುತ್ತು' ಪರಾ. ೨. ಕ್ರಮವಾಗಿ ; ಸಾಲಾಗಿ : 'ನೇರಿದು' ಪರಾ. ೩. ಜೆನ್ನಾಗಿ ; ಸೊಗಸಾಗಿ : ತಾರಾನಿಕರಾವೇಷ್ಟಿತ ತಾರಾಪತಿಯಂ ಸದುನ್ನ ಸುರ ಲೋಕಮುಮಂ ನೇರಿತ್ತು ಬೆಳಗಿ ಸೋಪುದನಾ ರಾತ್ರಿಯೊಳಿಂಪಿನಿಂಪಿನಿಂ ನೀರ್ಯಂ ಕಂಡಂ (ಅಪಪು. ೧೩-೧೬) ; ಸಾರಂ ನುಂನುಭರುಗ್ರಿಯೊಳ್ ದ್ವಾರಿಯೊಳಂತಳನ ಬಾಧೆ ಭೂಭುಜರಿಜ್ಞಾಸರ್ ನೇರಿತ್ತು ಬೆಳೆಯದಿಂತು ಧರಾಸಮಯಂ ಕಲಿಯಿಂ ನೇಲ್ದಸೊಳ್ಳಿನ ಜಿಟ್ಟಿಂ (ಅಷ್ಟಮ.೨-೨೨).

[<ನೇರಿಸು]

ನೇರಿತ್ತು 'ನೇರಿತು' ನೋ.

ನೇರಿಳಿ 'ನೇರಿಲ್' ನೋ.

ನೇರಿಲೆ 'ನೇಱಿಲ್' ನೋ.

ನೇರಿಳೆ 'ನೇಱಿಲ್' ನೋ.

ನೇರು$_1$ 'ನೇರ್$_1$' ನೋ.

ನೇರು$_2$ 'ನೇರ್$_2$' ನೋ.

ನೇರೆ$_1$, ನ್ಯಾರೆ$_1$ (ನಾ). ಒಂದು ಬಗೆಯ ತೃಣಧಾನ್ಯ (?): ಗಂಗೆ ಬಟಲ್ದವೋಲ್ನೆಲಕೆ ಬೆಳ್ಳಿಯ ಬೆಟ್ಟದ ಬಳ್ಳಿವೆಳ್ಪು ಬೆಳ್ಳಂಗೆಡೆದೊಪ್ಪೆ ತಟ್ಟಿಲ ಫಲಾರುಣದರ್ಧತಟಾಕಸಂಕುಳಂ ತಿಂಗಳ ತೋಂಟದಂತೆ ಬಳೆದೊಪ್ಪುವ ನೇರೆಯ ಕೆಯ್ಗಳಚ್ಚವೆಳ್ದಿಂಗಳ ಕೆಯ್ಗಳಂತೆ ನಡೆ ನೋಟ್ಪರ ಕಣ್ಗೆ ಕರಂ ಮನೋಹರಂ (ಅರ್ಧನೇ. ೨-೭೦). **ನ್ಯಾರೆ$_1$** : 'ನ್ಯಾರೇಭತ್ತ'ಪರಾ.

[?]

ನೇರೆ$_2$, ನ್ಯಾರಿ, ನ್ಯಾರೆ$_2$, ನ್ಯಾಹರಿ, ನ್ಯಾಹರೆ (ನಾ). ಬೆಳಗಿನ ಉಪಾಹಾರ; ತಿಂಡಿ; ನಾಷ್ಟ: ಒಮ್ಮೆ ಕೃಷ್ಣನು ಬೆಳಗಿನ ನೇರೆಯನ್ನು (ಅಲ್ಪಾಹಾರ) ವೃಂದಾವನದಲ್ಲಿಯೇ ಮಾಡಬೇಕೆಂದು ಯೋಚಿಸಿ ತಾನು ನಸಿಕಿನಲ್ಲಿ ಕರುಗಳನ್ನು ಅಟ್ಟಕೊಂಡು ಅಡವಿಗೆ ಹೊರಟು, ಉಳಿದವರು ಬೇಗನೆ ಬರಬೇಕೆಂದು ಕೊಳಲೂದಿದನು (ಭಾಮೃತ.೩೧೩); ಅವರ ಮಕ್ಕಳು ಮರಿಗಳಿಗೆ ಬೆಳಗಿನ ನೇರೆಗೆ ರೊಟ್ಟಿಗಳು ದೊರೆಯುವುವು (ಮುಂಬಯಿ, ೫-೧೭೭); ಬೆಳಗಿನ ನೇರೆಗೂ ಸಂಜೆಯ ಊಟಕ್ಕೂ ರೊಟ್ಟಿ, ಕಾರದ ಬೇಳೆ, ಉಳ್ಳೇಗಡ್ಡಿ, ಬೆಳ್ಳುಳ್ಳಿಯ ಕಾರ ಇಷ್ಟಿದ್ದರೆ ಸಾಕು(ಕಭಾಗ.೨೯೨). **ನ್ಯಾರಿ** : ವಿಷ್ಣು 'ನ್ಯಾರಿ'ಯ ಪೇಳೆಯಾಗುವ ತನಕ ಅಲ್ಲಿಯೇ ಹಡಗದ ಮೇಲೆ ಅತ್ತಿತ್ತ ತಿರುಗಾಡಿದ (ಸಮಜೀ. ೫೭೮); ಬಂದವನೆ ನಿತ್ಯದಂತೆ ನ್ಯಾರಿಯನ್ನು ಮುಗಿಸಿದೆನು (ಮೊಪಾಸಾ. ೮೫); ಪಾಪ, ಹುಡುಗರ ನ್ಯಾರಿಯೇ ಆಗಿರಲಿಲ್ಲ (ಶ್ರೀಮಾಶ್ರ. ೧೯೭). **ನ್ಯಾರೆ$_2$** : ಪಿಚ್ಚು ತುಂಬಿದ ಕಣ್ಣುಗಳನ್ನೂ ಜೊಲ್ಲು ಸೋರಿದ ಬಾಯಿಯನ್ನೂ ತೊಳೆಯದೇ ಹಾಗೇ 'ನ್ಯಾರೆ'ಗೆ ಕುಳಿತುಕೊಂಡರು ಹುಡುಗರು (ಪಾತರ. ೮೬). **ನ್ಯಾಹರಿ** : ಬೆಳಗೆದ್ದು ನ್ಯಾಹರಿಯನ್ನು ಮುಗಿಸಿಕೊಂಡು ಮೊದಲು ಸಿಕ್ಕುವ 'ಮೋಟರಬಸ್'ನ್ನು ಹಿಡಿಯುವುದು (ತ್ರೀರಂಗ. ೬೫). **ನ್ಯಾಹರೆ** : ಸಾಕು ಏಳಪಾ ಹಸಿವಾಗಿಲ್ಲೇನು ? ನ್ಯಾಹರೆ ತರಿಸಿದ್ದೀನಿ ಏಳು (ಮಾಡಿಮ. ೧೮೧).

[←ಪಾರ. ನಹಾರ್, ನಹಾರೀ ; ಹಿಂ. ನಹಾರೀ; ಮರಾ. ನ್ಯಾಹರೀ]

ನೇರೇಳ್ (ಕ್ರಿ). ನೇರವಾಗಿ ಏಳು ; ನೆಟ್ಟಗೆ ಏಳು : ಮೊಗಗೆಂಪಾಗಿ ನೇರೆದ್ದು ನಿಂತು, ರಾಗಾಂಬಕಗಳಿಂದೀಕ್ಷಿಸುತ್ತಿದ್ದು, ಮೆಲ್ಲನೆ ತಿಳಿವಟ್ಟು ನಸುನಕ್ಕು, ಸುತ್ತ ವೀಕ್ಷಿಸಿ (ಮಂತ್ರಶ. ೮೯-೧೧).

[ನೇರ್$_3$(<ನೇರಿತ್ತು$_2$)+ಏಳ್$_1$(<ಏಟ್$_1$)]

ನೇರ್ಗಿಱಿದು (ನಾ). (ಇನ್ನೊಂದಕ್ಕಿಂತ) ಸ್ವಲ್ಪ ಮಾತ್ರ ಚಿಕ್ಕದು,—ನಸುವೇ ಕಿರಿಯದು : ಇಂತಾದ ಪೆಂಪಿಂದಮುರ್ವಿದ ಗುಣ್ಪಿಂದಮಿದಬ್ಧಿಗಗ್ಗಳಮೆನಲ್ ಕುಂದೆಂದು ಕಣ್ಕೆತ್ತಿದಂತದಕಂ ನೇರ್ಗಿಱಿದೆಂದೊಡಾವ ತೊಱೆಯುಂ ಸೀತೋದೆಯಂ ಪೋಲ್ಗುಮೇ (ಅದಿಪು. ೧-೫೫); ನಿಖಿಲಾಮರಕಲ್ಪಂಗಳ ಸುಖಮಹಮಿಂದ್ರರ ಸುಖಕ್ಕೆ ಸಮನಾಗದಣಂ ಸುಖಮಯಮೆನಿಸುವ ಸಿದ್ಧರ ಸುಖಕ್ಕೆ ನೇರ್ಗಿಱಿದೆನಿಕ್ಕು ಮಹಮಿಂದ್ರಸುಖಂ(ಅಜಿಪು. ೧೧-೩೧) ; ಆದರದೆ ರಕ್ತೆಯಿಂ ಗಂಗೋದೆ ವರೆಗಮಗಟನಗೆದುಮಾಗಧವಿಭು ಸೀತೋದೆಗೆ ನೇರ್ಗಿಱಿದೆನೆ ಸಂಪಾದಿಸಿದ ಪೋಲೆಸೆದುದಾ ನದೀಜಲಪೂರಂ (ಪಾರ್ಶ್ವಪು. ೧೦-೮೭).

ನೇರ್ಗಿಱಿಯ = ಸ್ವಲ್ಪ ಮಾತ್ರ ಚಿಕ್ಕವನು ; ನಸುವೇ ಕಿರಿಯವನು : ಮತ್ತಮಾ ಕುಮಾರನಿಂ ನೇರ್ಗಿಱಿಯನಾಗಿ . . . ಸರ್ವಾರ್ಥಸಿದ್ಧಿಯೊಳ್ ಪುಟ್ಟಿದಹಮಿಂದ್ರಂ ಬಂದು ವೃಷಭಸೇನನೆಂಬೊಂ ತನಯನಾದೊಂ (ಅದಿಪು. ೮-೪೪ ಪ) ; ವಿಮಲಶ್ರುತಂ ಬಹುಕೈವಲ್ಯವೆಂಬ ಸಂಕಲ್ಪಮಿನಿತೆ ನೇರ್ಗಿಱಿಯಂ ವಿಶ್ವಮನಱಿವ ಮಹಿಮೆಯಿಂ ವರ್ಧಮಾನಜಿನಪತಿಗೆ ವರ್ಧಮಾನಮುನೀಂದ್ರಂ (ಪಂಠಾಮಾ. ೧-೧೫) ; ಪೆಱರಳವೆ ರಾಮನೊಳ್ ತಳ್ತಿಱಿಯಲಿವಂ ರಾವಣಂಗೆ ಶೌರ್ಯದೊಳಂ ನೇರ್ಗಿಱಿಯನೆನೆ ಕುಂಭಕರ್ಣಂ ಮೆಱೆದಂ ಕೋದಂಡ ಬಾಹುದಂಡದ ನೆರವಂ (ಪಂಠಾಮಾ. ೧೪-೨೨) ; ಆ ನಾಗರುದ್ರಮಯ್ಯನಿಂ ನೇರ್ಗಿಱಿಯಂ ಶ್ರೀ ರಮಣೀಪತಿ ಸುಗುಣೋದಾರಂ . . . ಮದ್ದಿಮಯ್ಯಂ ನೆಗಳ್ದಂ (ಎಕ. V, ಹಾಸನ, ೭೧-೭೧ ; 1173 ?). **ನೇರ್ಗಿಱಿಯರ್** = ಸ್ವಲ್ಪ ಮಾತ್ರ ಚಿಕ್ಕವರು ; ನಸು ಕಿರಿಯರು : ದಿಗ್ಭದ್ರಗಜಂಗಳೈದೆ ದಶಭೂಭುಜರಾದರೆನಿಪ್ಪ ತತ್ತ್ವತಾಪದ್ರವಿಣರ್ಗೆ ನೇರ್ಗಿಱಿಯರಾಗಿ ನೆಗಟ್ಟೆಗೆ ನೋಂತ ಕೊಂತಿಯುಂ ಮಾದ್ರಿಯುಮದ್ರಿರಾಜಸುತೆಗಂ ಸತಿಗಂ ಸರಿವಂದರೇಟ್ಗೆಯೊಳ್ (ಅರ್ಧನೇ. ೪-೭೪). **ನೇರ್ಗಿಱಿಯವು** = ಸ್ವಲ್ಪ ಮಾತ್ರ ಚಿಕ್ಕವು ; ಅತ್ಯಲ್ಪ ಕಿರಿಯವು : ಬೇರ್ಗೊಂಡು ಪಣ್ತ ಪಲಸೆಳನೀರ್ಗಾಯಂ ತಳೆದ ತೆಂಗು ತನಿರಸಮೊಸರ್ವಾ ನೇರ್ಗೊನೆಯನಾಂತ ಮಾವಿವು ನೇರ್ಗಿಱಿಯವು ಕಲ್ಪತರುಗೆ ಸಿರಿಯಿಂದೆನಿಕುಂ (ಚಂದ್ರಪು. ೧೫-೨೬) ; ಅದಱಿಂದಂ ನೇರ್ಗಿಱಿಯವೆ[ಸಾಠಾಂ. ಯೆ] ನಿಸಿದುವೆರಡುಂ ದೆಸೆಯೊಳಭವಸವನೋತ್ಸವಮಂ ತ್ರಿದಶಾಧಿಪರಿರ್ದೆಸಗುವ ಸದಮಳಮಣಿವಿಷ್ಟರಂಗಳೆರಡೆಸೆದಿರ್ಕುಂ (ಪಾರ್ಶ್ವಪು. ೧೪-೬೫). **ನೇರ್ಗಿಱಿಯಳ್** = ಸ್ವಲ್ಪಮಾತ್ರ ಚಿಕ್ಕವಳು ; ನಸುವೇ ಚಿಕ್ಕವಳು : ಮುನ್ನಂ ವೃಷಭೇಶ್ವರಂ ವಜ್ರಜಂಘನಾದ ಭವದೊಳಾ ಮಹಾತ್ಮಂಗೆ ತಂಗೆಯಾದ ಸುಂದರಿಯೆ ಕತಿಪಯಭವಪರಿಭ್ರಮಣದಿಂ ಬಂದು ಬಾಹುಬಲಿ ಕುಮಾರನಿಂ ನೇರ್ಗಿಱಿಯಳಾಗಿ . . . ಸುನಂದೆಗಂದು ನಂದನೆಯಾದಳ್ (ಅದಿಪು. ೮-೫೩ ಪ) ; ಸುಭದ್ರಂಗಂ ಸರ್ವಯಶೆಗಂ ಪುಟ್ಟಿದ ಯಶೋಭದ್ರಕುಮಾರನಿಂ ನೇರ್ಗಿಱಿಯಳ್ . . . ಯಶೋಭದ್ರೆ ಮನಮನುಱಿಸೆಱೆವಿಡಿದಳ್ (ಸುಕುಮಾ. ೯-೮೫ ಪ) ; ಬಳಿಕ ಸುಲೋಚನೆಯಿಂ ನೇರ್ಗಿಱಿಯಳ್ ನಳಿನವಿಲೋಚನೆ ಲಕ್ಷ್ಮೀಮತಿಯಂ . . . ಕೈದಾರೆಯನೆಱೆದು (ಜಯಕಾ. ೯-೧); ದುರ್ಗಂಧವೊಡಲ ಮೂಳರಿಗೆ ಮೂಳರ ತಂದು ವರ್ಗಿಸಿ ಸರಿಮಾಡಬಹುದು ನೇರ್ಗಿಱಿಯಳೆ ಮಲಮೂತ್ರವಳಿದ ದೇಹವರ್ಗಗಾರೆಣೆಯೆನಬಹುದು (ಭರಚ. ೯-೯೩). [ನೇರ್$_2$+ಕಿಱಿದು]

ನೇರ್ಗುತ್ತು (ಕ್ರಿ). ನೇರವಾಗಿ ಚುಚ್ಚು,—ತಿವಿ ; ನೆಟ್ಟಗೆ ಹೊಡೆ : ಸಾರ್ದಿದಿರಾದ ಮಹಾರಥನಿಚಯವ ಸಾರ್ದದಟಿಂದೆ ನೇರ್ಗುತ್ತುತೆ ಪರ್ದಿಗೆ ಕಾಕ ಜಂಬುಕ ಭೂತನಿಚಯಕೆ ಬಿರ್ದಿಕ್ಕಿದರೀ ರಿಪುದಳವನು (ತ್ರಿಭುತಿ. ೧೮-೨೭). [ನೇರ್$_3$(<ನೇರಿತ್ತು$_2$)+ಕುತ್ತು$_1$]

ನೇರ್ಗುಱುಪು (ನಾ). ಸರಿಯಾದ ಕುರುಹು,—ಚಿಹ್ನೆ : ಬರ್ಪಕಾರ್ಗಾಲದಾ ನೇರ್ಗುಱುಪನಱಿತರಲ್ಲರ್ ಪೂಬಿಡುವ ವಸಂತದಾ, ಪಣ್ ಬಿಡುವ ಗ್ರೀಷ್ಮದಾ, ಮುನ್ನಱಿವು ಇರ್ದುದಿಲ್ಲಂ (ಬದ್ಧಪ್ರ. ೨೪-೫೧೬).

[ನೇರ್$_2$+ಕುಱುಪು(<ಕುಱಿಪು)]

ನೇರ್ಗೈ (ಕ್ರಿ). ಸರಿಗೊಳಿಸು ; ಸರಿಪಡಿಸು : ನೇರ್ಗೈದು ರಾಜ್ಯವನು ನೆಮ್ಮದಿಯ ನೆಲೆ ನಿಲಿಸು (ಮೂರುನಾ. ೯೯-೫೭).

[ನೇರ್$_3$(<ನೇರಿತ್ತು$_2$)+ಕೈ$_1$(<ಕೆಯ್$_1$)]

ನೇರ್ಗೊಳಿಸು (ಕ್ರಿ). = ನೇರ್ಗೈ: ಹಿಂದಿಲ್ಲ ! ಮುಂದಿಲ್ಲ ! ನಡೆದುದೊಂದೇ ಹಾದಿ ! ಸೊಗದಾಸೆಯೊಂದೆ ನೇರ್ಗೊಳಿಸುವಂಕುಶವು ! (ಕವಿಕಾ. ೬೯-೧೮). [ನೇರ್$_2$+ಕೊಳ್$_1$+-ಇಸು$_3$]

ನೇರ್ಗೋಲ್ (ನಾ). ನೇರವಾಗಿ ಬಂದ ಬಾಣ(?): ಏರ್ಗಳಿಂದೊರ್ಗುಡಿಸಿ ಸಾರಥಿ ಬಿಳಲ್ಕೆ ಕೆನ್ನೀರ್ಗಾಱಿ ದೀರ್ಘಶಯನಂಗೆಯ್ಯೆ ಕುದುರೆಗಳ್ನೇರ್ಗೋಲ ಪೋರ್ಗಳಾ ನೃಪನಂಗದೊಳ್ಕಾಣಿಸಿದುವು ಜಾಳಂದ್ರದಂತೆ (ಜೈಮಿಭಾ. ೪-೩೫). [ನೇರ್$_2$+ಕೋಲ್$_1$]

ನೇರ್ಗೋಲ್ಪರಿ 'ನೇರ್ಗೋಲ್ವರಿ' ನೋ.

ನೇರ್ಗೋಲ್ವರಿ, ನೇರ್ಗೋಲ್ಪರಿ (ಕ್ರಿ). ಬಾಣ, ಕೋಲುಗಳಂತೆ ನೇರವಾಗಿ ಸಾಗು,—ನೆಟ್ಟಗೆ ನುಗ್ಗು : ಅರಿವ ನಡುವುಡಿವ ನೇರ್ಗೋಲ್ವರಿದುರ್ಚುವ ನಟ್ಟು ತೊನೆವ ಕಣೆಗಳ್ಗೆ ಮೊಗಂದಿರಿಯದಿದಿರಿದಿರನದಿರದೆ [ಸು]ರಿಗಿಱುವಂತೆಚ್ಚರಂಬನಂಬಟ್ಟುವಿನಂ (ಪಂಪಭಾ.೧೦-೬೪).

ನೇರ್ಗೋಲ್ಪರಿ : ಜೀರ್ಗರೆಯೆ ತೆಗೆದು ಬಿಲ್ಲಂ ಭೋರ್ಗರೆದು ವರೂಥಯೂಥಮಿಸಲನ್ಯೋನ್ಯಂ ಕೂರ್ಗಣೆ ನಟ್ಟುವು ನೇರ್ದುವು ನೇ[ಪಾಠಾಂ. ನೀ]ರ್ಗೋಲ್ಪರಿದುವು ಪಳಂಚಿದುವು ದಿಕ್ತಟಮಂ (ಜಗವಿ. ೭-೬೩).

[ನೇರ್$_3$(<ನೇರತ್ತು$_2$)+ಕೋಲ್$_1$+ಪರಿ$_2$]

ನೇರ್ಗೋಲ್ವೋಗು (ಕ್ರಿ). = ನೇರ್ಗೋಲ್ವರಿ : ಇಡಿವಾಟ್ಟುರ್ಚುವ ನೇರ್ವ ಸೀಳ್ವರಿವ ನೇರ್ಗೋಲ್ವೋಪ ಪೋಟ್ಟೆಲ್ವಿನೊಳ್ ನಡುವುದ್ದಂ ಬಿರಿವಂಬಿನೊಳ್ ಕಿಡೆ . . . ತಮ್ಮುತಿರ್ವರುಮಗುರ್ವುರ್ವೇಟ್ಟೊನಂ ಕಾದಿದರ್ (ಶಾಂತಿಪು. ೪-೩೫).

[ನೇರ್$_3$(<ನೇರಿತ್ತು$_2$)+ಕೋಲ್$_1$+ಪೋಗು$_1$ (<ಪೋ$_1$)]

ನೇರ್ನಡೆ (ನಾ). ಒಳ್ಳೆಯ ನಡತೆ ; ಸನ್ಮಾರ್ಗದಲ್ಲಿ ಮುನ್ನಡೆಯುವಿಕೆ : ನಡೆವಳಿಯಲ್ಲಿ ನೀನೆ ನೆಱೆಜಾಣನಾದೊಡಂ, ನಿನ್ನ ನೇರ್ನಡೆಗೆಂದು ನಿನಗಿನಿತ ನಾನ್ ತಿಳಿಯವೇಟ್ಟೆನ್ (ಬದ್ಧಪ್ರ. ೧೮-೩೬೦).

[ನೇರ್$_2$+ನಡೆ$_2$]

ನೇರ್ನುಡಿ (ಕ್ರಿ). ಸರಿಯಾದುದನ್ನು ಹೇಳು ; ತಕ್ಕುದನ್ನು ಹೇಳು ; ಸತ್ಯವನ್ನು ಹೇಳು : ನಲ್ನುಡಿದೆ ! ನೇರ್ನುಡಿದೆ ! (ಹೆಬ್ಬೆರ. ೧೪-೧೧೧) ; ನೇರ್ನುಡಿವೊಡಿಂದಿನೀ ಕಷ್ಟಕ್ಕೆ ನಿನ್ನ ಕಲ್ಪಿಗೇನುಂ ಪಟುವು ಪೊರ್ದದೆಂಬೆನ್ (ಬದ್ಧಪ್ರ. ೩-೫೫). [ನೇರ್$_2$+ನುಡಿ$_1$]

ನೇರ್ನುರ್ಗು (ಕ್ರಿ). ನೇರವಾಗಿ ನುಗ್ಗು ; ಸೀದಾ ಆಕ್ರಮಣ ಮಾಡು : ವೈರಿಗಳ ನಡುವೆ ನೇರ್ನುರ್ಗಿ, ಒರ್ಮೆಯ್ಯೆ ಮೂದಲಿಸಿ, ಸುತ್ತಣಿನ್ ಬಂದು ನಡುವಂಬಿನ್ ಬಿಟ್ಟಪೆನೆ ? (ಅಶ್ವತ್ಥಾ. ೧೯-೩೯೪).

[ನೇರ್$_3$(<ನೇರಿತ್ತು$_2$)+ನುರ್ಗು$_1$]

ನೇರ್ಪಡಿಸು 'ನೇರ್ವಡಿಸು' ನೋ.

ನೇರ್ಪಡು$_1$ 'ನೇರ್ವಡು' ನೋ.

ನೇರ್ಪಡು$_2$ (ನಾ). ೧. ಸಾಮರಸ್ಯ ; ಹೊಂದಿಕೆ : 'ನೇರ್ಪಡುಗಿಡು' ಪರಾ. ೨. ಸರಿಯಾದ ಕ್ರಮ ; ಯೋಗ್ಯದಾರಿ ; ಋಜುಮಾರ್ಗ : 'ನೇರ್ಪಡುಗಿಡು' ಪರಾ. [<ನೇರ್ಪಡು$_1$]

ನೇರ್ಪಡುಗಿಡು (ಕ್ರಿ). ೧. ಹೊಂದಾಣಿಕೆಯನ್ನು ಕಳೆದುಕೊಳ್ಳು ; ಸಾಮರಸ್ಯವನ್ನು ಕಳೆದುಕೊಳ್ಳು : ಅಮ್ಮಗನೆನಾಗೆ ಧರ್ಮಜನೇಮ್ಮಗನಲ್ಲನೆ ಬಟುಕ್ಕೆ ನೀಮುಂ ತಾಮುಂ ನಿಮ್ಮೊಳ್ನೇರ್ಪಡುಗಿಡದೆ ಸುಖಮ್ಮುನ್ನಿನ ತೆಱದೆ ಬಾಟ್ಟುದಾಂ ಬೆಸಕೆಯ್ಯೆಂ (ಗದಾಯು. ೪-೧೨). ೨. ಋಜುಮಾರ್ಗವನ್ನು ತೊರೆ ; ಸರಿಯಾದ ಮಾರ್ಗವನ್ನು ಬಿಡು : ನುಡಿ ಕಿತ್ತಡವೆನಿಸದೆ ನೇರ್ಪಡುಗಿಡದೆ ನರೇಂದ್ರನಾಜ್ಞೆಯಿಂದಿರ್ಪುದಿದಂ ಕಡೆಗಣಿಸೆ ಬಟುಕ್ಕಣ್ಣನ ತುಡುವ ಶಿಲೀಮುಖದೊಳುಂಟೆ ಮುಖದಾಕ್ಷಿಣ್ಯಂ (ಪಂರಾಮಾ. ೬-೮೧) ; ಕೀರ್ತಿ ಬಾರ್ತೆಗಿಡೆ ಲಕ್ಷ್ಮಿ ಮೊದಲ್ಗಿಡೆ ಮಾನಸಿಕ್ಕೆ ನೇರ್ಪಡುಗಿಡೆ (ಪಂರಾಮಾ. ೯-೮೫). ೩. ಹದವನ್ನು ಕಳೆದುಕೊಳ್ಳು ; ಹದಗೆಡು ; ಅಂದಗೆಡು : ಲೋಕಾಧಿಪತಿ ದಶಾನನನೇಕಾಕಿಯ ಮೇಲೆ ನಡೆದನೆಂಬಪವಾದಂ ಲೋಕಕ್ಕೆ ಪರ್ವಿ ನಿಜಬಾಹಾಕೌಕ್ಷೇಯಕದ ಕೂರ್ಪು ನೇರ್ಪಡುಗಿಡುಗುಂ (ಪಂರಾಮಾ. ೧೧-೧೩೧). [ನೇರ್ಪಡು$_2$+ಕಿಡು (<ಕೆಡು$_1$)]

ನೇರ್ಪಡೆ (ಕ್ರಿ). ಹೊಂದಿಕೆಯನ್ನು ಪಡೆ ; ಸಾಮಂಜಸ್ಯವನ್ನು ಹೊಂದು : ಜಡೆಯಿಂದೊಪ್ಪುವ ಪುಱ್ಪಚಾಪಸಿತಭಸ್ಮೋದ್ಧೂಳಿತಾಙ್ಗಕ್ಕೆ ನೇರ್ಪ್ಪಡೆದಿರ್ದ್ದಙ್ಗಜಮಿತ್ರ ಚಾರುತರ ಕಾಶಾ ಪ್ರಚ್ಛದಚ್ಛಾದಿತಕ್ಕೆಡೆಗೊಟ್ಟಪ್ಪ ಶಶಾಂಕನೆಂಬ ನುಡಿಯಂ ಲೋಕಕ್ಕೆ ನಿಶ್ಚಯ್ಸಿದಂ ಗಡತಾನೆಂದೊಡದೇವೊಗಳ್ದಪುದೊ ಪೇಳ್ಸರ್ವ್ವೇಶ ಯೋಗೀಂದ್ರನಾ(ಎಕ.VIII, ಸೊರಬ. ೨೭೫-೨೪ ; 1251) ; ಎಡಗಾಲ ತೊಡರ ಬಾವುಲಿ ನಡೆಗೆಸೆವ ವಿಡಾಯಿ ಜಗಮನಂಗೆಯ್ಯೊಳ್ ನೋಟ್ಪೊಡೆ ತೋರ್ಪೆನೆಂಬ ನುಡಿ ನೇರ್ಪಡೆದೊಪ್ಪಿರಲಿಂದ್ರಜಾಲಿಗಂ ಮಿಗೆ ಬಂದಂ(ದಶಕು. ೬-೧೧೧).

[ನೇರ್$_2$+ಪಡೆ$_1$]

ನೇರ್ಪು$_1$, ನೆಪ್ಪು$_3$ (ನಾ). (ಕೊಲೆಯ) ಸೇಡು,—ಮುಯ್ಯಿ ; ವೈರಶುದ್ಧಿ : ಇನತನಯನ ನೇರ್ಪಿಂ[ಪಾಠಾಂ. ನಣ್ಪಿಂ]ದರ್ಜುನನಂ ಮುಂ ಕೊಲ್ವೆನೆನ್ನ ತಮ್ಮನ ನೇರ್ಪಿಂ[ಪಾಠಾಂ.ನಣ್ಪಿಂ]ಗನಿಲಜನಂ ಕೊಲ್ವೆಂ ಕಮಲನಾಭ ನೇರ್ಪಿಂಗೆ [ಪಾಠಾಂ. ನಣ್ಪಿಂಗೆ] ನೇರ್ಪುಗೊಳ್ಳದೆ ಮಾಣೆಂ (ಗದಾಯು. ೭-೪೭). 'ನೇರ್ಪುಗೊಳ್$_1$' ಪರಾ. ನೆಪ್ಪು$_3$: ನೆಪ್ಪಿಂಗೆ ನೆಪ್ಪುಗೊಳ್ಳದೆ ಮಾಣೆನೆಂಬಂತೆ ಬಕಾಸುರನ ಮಗನಳಂಭೂಷ ನರ್ಜುನನ ಮಗನಿಳಾವಂತನನಂತಕಲೋಕಮನೆಯ್ದಿಸುವುದುಂ (ಪಂಪಭಾ. ೧೧-೬೫) ; ಎನ್ನವರೆಣ್ಬರ ತಪ್ಪಿಂಗೆಲವೋ . . . ಆಱರ್ಕಾಱುಗುಡು ಇನ್ನಿರ್ವರ ಸರಿ ನೆಪ್ಪಿನ ನೆಪ್ಪಂ ನಿನ್ನ ಭವಿಷ್ಯಜ್ಜನ್ಮಕೆ ತೀರ್ವೆನುತುನ್ನತಿಕೆಯ ಮುನಿಸಿಂದೆಚ್ಚಂ ಜಯನೃಪತಿಯನಿನಕೀರ್ತಿ (ಜಯಕಾ. ೬-೭).

[ನೇರ್$_1$+-ಪು$_2$]

ನೇರ್ಪು$_2$, ನೆಪ್ಪು$_4$ (ನಾ). ೧. ನೇರವಾಗಿರುವಿಕೆ ; ಋಜುತ್ವ ; ಒಳ್ಳೆಯತನ : "ಸೈತೆನೆ ನೇರ್ಪು" (ಕವಿಕಂ. ೧೭೬) ; ಜಾಣನ ಬೆಡಂಗು ವಿಬುಧಪ್ರೀಣನಕರಮೆನಿಸಿ ನೇರ್ಪು ನೇರ್ವೊಡೆ ಪೇಟ್ಟಿಂ ಪ್ರಾಣಹಿತಾರ್ಥದಿ ನಜಿತಪುರಾಣಮನಳವಟ್ಟ ಕವಿತೆಯಿಂ ಕವಿರತ್ನಂ (ಸುಕುಮಾ. ೧-೩೯). ೨. ಸರಿಯಾಗಿರುವಿಕೆ; ಯುಕ್ತತೆ ; ಔಚಿತ್ಯ : ಇಪ್ಪ ನೆಲೆಗೈದಸುರ ಶರಧಿಯಂ ವರುಣನುಪಸರ್ಪಣಂಗೈದ ಪವಮಾನ ಧನದಾದಿಗಳ್ ನೇರ್ಪಿಂದ[ಪಾಠಾಂ. ನೇರ್ಪಿದರ್] ಹಿಮಶೈಲತಪ್ಪಲಂ ಸಾರಿರ್ದರಾಕಪರ್ದಿಯನು ಕೂಡಿ (ವಂಕಾರಾ.೩-೬-೬) ; ಎನ್ನ ತಾಯನ್ ನೆರೆ ನೆಮ್ಮಿ ಸ್ಯೂಸನಿಷ್ಟಕ್ಕೆ ಎನ್ನಿಷ್ಟಮನ್ ನೆರಪುವುದೆ ಎನಿತೊ ಒಳ್ಳಿತ್ತಾಗಿ ನೇರ್ಪಾಗಿ ಕಂಡತ್ತು (ಬದ್ಧಪ್ರ. ೧೩-೨೬೧). ೩. ನೇರವಾದ ಗುರಿ : ಬರ್ಪ ಸರಳ್ಮಳೆಯ ಬಿರುಘಾಳಿ ಮುರಿದಟ್ಟುವೊಲು ದರ್ಪಕನ ಪುತ್ರನವ ನತ್ತಣಿಂದತ್ತಲೇ ನೇರ್ಪಿನಿಂದುತ್ತರಿಸಿ ಪುಟನೆಗೆವುತಿರಲು (ನವಮೋ. ೨೯-೧೨). ೪. ಸರಿಯಾದುದು ; ಯೋಗ್ಯವಾದುದು : ಮನುಜಂಗೆ ಸ್ನೇಹಮೆಂಬುದು ಪುಸಿಯ ನಚ್ಚು—ಈಗಳೆನಗೆಲ್ಲಮುಂ ನೇರ್ಪಕ್ಕುಂ (ಅಶ್ವತ್ಥಾ. ೨೭-೫೩೯). ೫. ಹೊಂದಾಣಿಕೆ ; ಸಾಮರಸ್ಯ : ನಸುಮುಗಿದಕ್ಷಿ ನಾಸಿಕದೊಳೊಂದಿರೆ ನಿಶ್ಚಲ ಚಿತ್ತವೃತ್ತಿ ನೀಳ್ದ ಸಿತಜಟಾಳಿ ನುರ್ಗಿದ ಬಹಿರ್ವಿಷಯಸ್ಥಿತಿ ನೂತ್ನಮೂರ್ತಿ ನೇರ್ಪೆಸೆದಿರೆ . . . ತನ್ಮುನಿಗೆ ವಂದಿಸಿದಂ ಮಗಧಕ್ಷಿತೀಶ್ವರಂ (ದಶಕು. ೨-೬೩) ; ಸಿಂಧುವಂ ಪೊಕ್ಕನಿನನನ್ಯೋನ್ಯದಾ ನೇರ್ಪಿನೊಲ್ಮೆಯಿಂದ (ಭಾವಚಿಂ. ೭-೧೩). ೬. ಅಂದ ; ಸೊಗಸು ; ಚೆಲುವು : ಮೊಗದಿಂದಂ ನೇರ್ಪನಾಳ್ದಂತುರದಿನಗಲಿತಾದಂತೆ . . . ಮುಂಗಾಲ್ಗಳಿಂದಂ ಮುಗಿಲಂ ಮುಟ್ಟಪ್ಪುದೆಂಬಂತತಿಜವಮಿದಿರೊಳ್ ಬಂದುದಿಂದ್ರಾಯುಧಾಶ್ವಂ (ಕಾದಂಪು.೪೫೬) ; ತೊಳಗುವ ದರ್ಪಣದ ನೇರ್ಪು ನೆಲಸಿತ್ತದ ಜೆಂಗೊಳ್ (ಚಂದ್ರಪು. ೧೩-೩೯) ; ಮಿದಿಯದ ಕೊಟೆ ಮಣ್ಣಿಂದಜಾಯದವರ್ ಚೆಚ್ಚರಮವಜ್ಞೆಯಿಂ ನೋಡದೆ ಮಾಡಿದ ರೂಪಿನಂತೆ ನೇರ್ಪಿಲ್ಲದ ವಿಕಟಾಕೃತಿಯ ಹುಂಡ ಸಂಸ್ಥಾನಂಗಳ್ (ಪರ್ಧಪು.೧೧-೩೭) ; ನೀಳನೀರಜಾಕಳಿತ ತಟಾಕಮಂಗಳದ ಕರ್ಪಿನ ನೇರ್ಪಮರ್ದಂಗಜಂಗೆ ಮಂಡಳಕರ ವರ್ಣಪೂರ ಪರಿಮಂಡಳಮಾಯ್ತು ಸುರಮ್ಯಮಂಡಳಂ (ಅನಂಪು.೧೧-೬).

೭. ಮಾರ್ಗ; ಕ್ರಮ; ರೀತಿ: (ಶ). ೮. ನ್ಯಾಯ; ಸಮದೃಷ್ಟಿ: ಅರೊಳ್ಪು ತಪ್ಪುಗಳ ನೇರ್ಪಿನಂ ನೋಳ್ಪೆನ್ನ ಪೊರೆಯೆ ಮೊರೆಯಿಡುವೆನೆಂದೊರೆದ ತನ್ನಿರವಂ (ತಾಲೂರ.೧೩೪-೩೮೮). **ನೆಪ್ಪು**$_4$: ೪. ತಪ್ಪು ನಡೆಯಲೊಡಂದು ಸಮಯದಿ ನೆಪ್ಪ ಗ್ರಹಿಸುವನಲ್ಲದಲೆ ದ್ವಿಜನಪ್ಪ ಶಾಸ್ತ್ರಜ್ಞಾನಿ ಕೆಡುವನೆ (ಜಜ್ಜಪು. ೭೬-೪); ಅಧುನಿಕ ಶೋಧನೆಗಳು ನಡೆದು ಹಿಂದಿನ ತಪ್ಪು ನೆಪ್ಪುಗಳನ್ನು ತೋರಿಸಿಕೊಡುವ ವರೆಗೆ ಇವನ ಗ್ರಂಥಗಳೇ ಪ್ರಮಾಣಗ್ರಂಥಗಳಾಗಿದ್ದವು (ಪ್ರವಾಜ್ಞ. I, ೧೦೬). ೫. ಬಪ್ಪುದು ಬಾರದೆ ಬಿಡದು ಬಂದೆಯಲ್ಲಿ ತಪ್ಪುಗಾಯ್ದೆನ್ನ ನುಳುಹುವ ಒಪ್ಪ ರಂಗನದಂಬ ಪೊಯ್ಸಾರಗಾತಿಯು ನೆಪ್ಪಿನಿಂದೆಂದು ನೆರೆನೆನೊ (ಶತಸಾಂ. ೩೬-೯೦); ಉಪ್ಪರಿಕೆಯೊಳು ಸಂಚರಿಸುವ ನಾರಿಯ ರೊಪ್ಪದಿ ಬರುವ ಚಂದಿರನ ನೆಪ್ಪಿನಂ ಪಿಡಿದು ಗುಂಡಾದ ಕನ್ನಡಿಯೆಂದು ತಪ್ಪದೆ ನೋಳ್ಪರು ಮುಖವ (ಸೌಗಂಪ. ೧-೧೦). ೬. ಲೆಪ್ಪದ ಪುತ್ತಲಿ ಪೊಲು ಕುಳಿತತ್ತಿತ್ತಲೊಪ್ಪಚ್ಚಿ ದೇಹ ಕಂಪಿಸದೆ ನೆಪ್ಪಜಡಾತ್ಮನ ನೋಡಿ ಸಿದ್ಧಾಂತದೊಳಿಪ್ಪ ಮಂತ್ರವ ಜಪಿಸಿದರು (ಭರಜ. ೩-೧೦೨); ಒಪ್ಪಿಸಿ ದೇಹಮುಂ ತಪದ ತಾಪಕೆ ತನ್ನ ನಭಸ್ವರೂಪಮುಂ ನೆಪ್ಪಜಡಪ್ಪಿಕೊಂಡು ನಿಲೆ (ಅಸಪ. ೧೩); ಒಪ್ಪಾದ ನುಡಿಯೇಕೆ ಪುಪ್ಪವೇಜಾಸಲೇಕೆ ಅರ್ಪಿತದ ಗೊಡವೆ ತನಗೇಕೆ ಲಿಂಗದ ನೆಪ್ಪವಜಾಯದಗೆ (ಸರ್ವಜ್ಞ.೧೧೪೪).

ನೇರ್ಪು ಮಾಡು = ಅಣಿಗೊಳಿಸು; ಸಿದ್ಧಪಡಿಸು: ಕೊರತೆಯೇನೊ ಕಂದ ನಿನಗೆ? ಹುರಿಯನೇಕೆ ತುಯ್ಯುತಿರುವೆ? ಮರೆಯದುಣಲು ಮಲಗ ಲೆಲ್ಲ ನೇರ್ಪು ಮಾಡಿ ಇರುವೆನಲ್ಲ! (ಇಂಗೀತ.೮-೨೨). [ನೇರ್$_2$+–ಪು$_2$]

ನೇರ್ಪುಗೆಡಿಸು (ಕ್ರ). ಅಂದಗೆಡಿಸು; ಹನಗೆಡಿಸು; ಹಾಳು ಮಾಡು: ಸೂಳೆದಿನ್ನಣದಿಂದ ಸುಲಿವ ಬುದ್ಧಿಗಳ ನೀ ಪೇಳಿ ನೇಹವ ನೇರ್ಪುಗೆಡಿಪುದುಚಿತವೆ (ಸಾಂದಪು. ೧೧-೪). [ನೇರ್ಪು$_2$+ಕೆಡಿಸು$_1$]

ನೇರ್ಪುಗೊಳ್$_1$, **ನೆಪ್ಪುಗೊಳ್**$_1$ (ಕ್ರ). (ಕೊಲೆಯ) ಸೇಡು ತೀರಿಸಿಕೊಳ್ಳು; ಪ್ರತಿಹಿಂಸೆ ಮಾಡು; ಪ್ರತೀಕಾರ ಮಾಡು: ಇನತನಯನ ನೇರ್ಪಿಂಗರ್ಜುನನಂ ಮುಂ ಕೊಲ್ವೆನೆನ್ನ ತಮ್ಮನ ನೇರ್ಪಿಂಗ ನಿಲಜನಂ ಕೊಲ್ವಂ ಕಮಲನಾಭ ನೇರ್ಪಿಂಗೆ ನೇರ್ಪುಗೊಳ್ಳದೆ [ಪಾತಾಂ. ಗೋಸದೆ] ಮಾಣಂ (ಗಜಾಯು. ೭-೪೭). **ನೆಪ್ಪುಗೊಳ್**$_1$: ನೆಪ್ಪಿಂಗೆ ನೆಪ್ಪುಗೊಳ್ಳದೆ ಮಾಣನೆಂಬಂತೆ ಬಳಾಸುರನ ಮಗನಳಂಭೂಪನರ್ಜುನನ ಮಗನಳಾವಂತನನಂತಳಲೋಕಮನೆಯ್ದಿಸುವುದುಂ (ಪಂಪಭಾ. ೧೧-೭೨).

[ನೇರ್ಪು$_1$+ಕೊಳ್$_1$]

ನೇರ್ಪುಗೊಳ್$_2$ (ಕ್ರ). ೧. ಹೊಂದಿಕೆಯಾಗು; ಅಳವಡು: 'ನೇರ್ಪುಗೊಳಿಸು' ಪರಾ. ೨. ತಿದ್ದುಪಡಿ ಹೊಂದು; ಸರಿಯಾಗು: ಇದೇ ಕಾಲದಲ್ಲಿ ಪಂಚದ್ರಾವಿಡಭಾಷೆಗಳ ವಿಚಾರದಲ್ಲಿ ಇದ್ದ ತಪ್ಪು ಅಭಿಪ್ರಾಯಗಳೂ ನೇರ್ಪುಗೊಂಡವು (ದ್ರಾವಿವಿ. ೨೦ ಹಿನ್ನೆಲೆ).

[ನೇರ್ಪು$_2$+ಕೊಳ್$_1$]

ನೇರ್ಪುಗೊಳಿಸು (ಕ್ರ). ಹೊಂದಿಸು; ಅಳವಡಿಸು: ತಾವು ಆಯಾ ವಸ್ತುಗಳ ಆಧಿಸಯರೂಪಕಾರ್ಯದಲ್ಲಿ ತಕ್ಕಂತೆ ಪಾತ್ರವನ್ನು ನೇರ್ಪು ಗೊಳಿಸಿರುವ ಕಾರಣ ತಮಗೇನೂ ಕೊರತೆಯುಂಟಾಗಲಾರದು (ಶಾಕುಂತ. ೧-೧೫). [ನೇರ್ಪುಗೊಳ್$_2$+–ಇಸು$_3$]

ನೇರ್ಪುವಡು (ಕ್ರ). ಅಂದವಾಗು; ಚೆಲುವಾಗು: ಎರಲಿದಿಟ್ಟ ಗುಡಿಯಲರ್ಪಿಲ್ಲನಂದಿನ್ನೆವದಿ ನೇರ್ಪುವಟ್ಟ ನಡಿವಾಸೆಯುಳ್ಳರ್ದಗರಳಿಯೂಸೆ ಕಟ್ಟನಿವಾತು ವಿಟರ್ಗೆ ಕೇತು (ಉದ್ಭದೇ. ೫-೧೮). [ನೇರ್ಪು$_2$+ಪಡು$_1$]

ನೇರ್ಪುವಡೆ, ನೆಪ್ಪುವಡೆ (ಕ್ರ). = ನೇರ್ಪುವಡು: ಅಗಳ್ ಮೇಘ ರಥ ಮುನಿನಾಥಂ ದೃಢರಥಯತಿಸಮನ್ವಿತಂ . . . ನಭಸ್ಸ್ರೀಳಕ ನಗಾಗ್ರಮನಾಗಳೇಜಿ ನೇರ್ಪುವಡೆದ ವಿಶಾಲಮಣಿಶಿಲಾಪಟ್ಟದರುಣಕಿರಣಂ ನಿಜಚರಣಪಲ್ಲವಚ್ಛಟೆಗಣದಿಂ ಪಲ್ಲವಿತಂ ಮಾಡಿ (ಶಾಂತೀಶ್ವ. ೧೩-೧೧೧ನ).

ನೆಪ್ಪುವಡೆ: ಕಣ್ಣನುನಯವಾಗಿ ನೆಪ್ಪು ಪಡೆದುಜ್ಜ್ವಲಕಾಂತಿಯಿ ನೊಪ್ಪುವೆತ್ತ ತಪ್ಪನಿತೆಯ ಜಂಗೆಗಳ್ ವಿಟರ ಚಿತ್ತದ ಶಂಕುಗಳಲ್ತೆ ನಂತತಂ (ಸಳಚಂ. ೩೩೭); ನೆಲೆವನೆಯೊಳ್ ನೆಪ್ಪು ವಡೆದ ಚಂದ್ರಕಾಂತದ ಸಡಗರದ ಶಕುನಿಯ ಮುಂಚದಲ್ಲಿ ತೂಳ್ವಾಸಿನ ಮೇಲೆ ಬೆಳ್ದಿಂಗಳೊಂದಿರು ಳೊಳ್ ನಲಿದು ಕವರ್ತಗೊಂಬ ಜೊನ್ನವಕ್ಕಿಯಂತೆ (ವಿಮೂಪಾ. ೭೨).

[ನೇರ್ಪು$_2$+ಪಡೆ$_1$]

ನೇರ್ಪುವೆಱು (ಕ್ರ). ೧. ಔಚಿತ್ಯದಿಂದ ಕೂಡಿರು; ಯೋಗ್ಯವಾಗಿರು; ತಕ್ಕುದಾಗಿರು: ರಸಂಬಡೆದು ಪಂಡಿತನುಂಡಲಿ ಮೆಚ್ಚೆ ನೇರ್ಪುವೆತ್ತಿರಲವಿರೋಧಮಾಗೆ ಕೃತಿವೇಟ್ಕೊಡೆ ಸತ್ಕವಿ ನಾಗಚಂದ್ರ ನಂತರೆ ಪೆಜರಾರ್ ಸರಸ್ವತಿ ಕುದಲ್ ಪಡೆದರ್ ವರಮಂ ಕವೀಶ್ವರರ್ (ಪಂರಾಮಾ. ೧೬-೯೭); ನೇರ್ಪುವೆತ್ತ ಕೈದೋಂಟಯನೊಪ್ಪಿ ಕುಟ್ಟುವ ಕರಂ ಪದನಾಗಿರೆ ಬಿಲ್ಲ ನಾರಿಯಂ ತಾಂಟಿಸಿ ನೋಟ್ಪ ಬೇವಸದೊಳಿ ರ್ದುದು ಪಳ್ಳಿಯ ಧಿಲ್ಲಸಂಕುಳಂ (ದಕಕು. ೩-೧೨೧). ೨. ಅಂದವಾಗು; ಚೆಲುವಾಗು: ಕನ್ನಡಿದೋಱುವಚ್ಚಮುಂದಾರಲತಾಂತಮುಂ ತಳಿವ ಸೇನೆಯನಿಕ್ಕುವ ನೇರ್ಪುವೆತ್ತ, ವ್ಯಂದಾರಕವಾರನಾರಿಯರ ನೊಯ್ಯನೆ ವೀಕ್ಷಿಸಿದಂ ಸುರೋತ್ತಮುಂ (ಶಾಂತೀಶ್ವ. ೭-೫೮).

[ನೇರ್ಪು$_2$+ಪೆಜು$_1$]

ನೇರ್ಮೆ (ನಾ). ೧. ನೇರವಾಗಿರುವಿಕೆ; ಋಜುತ್ವ; ನೇರ್ಪು: ಸೊಲ್ಕೊಂಕಿದಿಲ್ಲದುದು ನೇರ್ಮೆ ಒರ್ನೆಲೆಯಾಗಿ ಮನ ಕೊಂಕಿ ನಿಲ್ಲೆಯನ್ ಪಡೆಯೆ (ಕುಜಿಳ್. ೧-೧೨-೯). ೨. ಯೋಗ್ಯವಾದುದು; ಸರಿಯಾದುದು; ತಕ್ಕುದು: ನೇರ್ಮೆಯನ್ ನೆನೆದು, ನಿಜಾಯುಮನ್, ಆಜಿಮುಮನ್ ಪಿಡಿದು ಎತೆಯೊಳ್ಟೀಸ್ . . . ಮನ್ನಿಸಿದನೆಂಬರ್ (ಆಂತಿಗೊ. ೨-೧೯). [ನೇರ್$_2$+–ಮೆ$_1$]

ನೇರ್ವಡಿಸು, ನೇರ್ಪಡಿಸು (ಕ್ರ). ೧. ಹೊಂದಿಸು; ಸೇರಿಸು; ಅಳವಡಿಸು: ಗೀರ್ವಾಣ ಧನುರ್ವೇದೆಯ ನಿಜಾಮುಗಿಲೊಳು ನೇರ್ವಡಿಸಿದ ಮಾಳ್ಕೆಯೊಳು ಉರ್ವೀದೂರವ ಬಳಸಿದ ನಿಜಾಗಿಕ್ಕಿದಳೂರ್ಪಸಿ ಮಣಿ ಮೇಖಲೆಯ (ಪೀಮಿಸಂ. ೨೨-೪೩). ೨. ಅಂದಗೊಳಿಸು; ಚೆಲುವಾಗಿಸು: ನೇರ್ವಡಿಸಿ [ಪಾತಾಂ. ನೀರ್ವಡಿಸಿ, ನೀರ್ವಡಿಸಿ] ಪಿಡಿದ ಕರಿಯಳಿ ನೀರ್ಪೂವಂ ಚುಂದಿಸುತ್ತೆ ನಾರಿಯ ನಾಣಂ ಸಾರ್ವ ನೋಗಂ ಕಟ್ಟುಲೆಯಂ ಪೀರ್ಪಮ್ಮ ತಕರಂಬೊಲೋಪನಂ ನುಡಿಯಲೊಡಂ (ಅರ್ಧನೇ. ೧-೧೧೫). **ನೇರ್ಪಡಿಸು**: ೧. ಈವಟ್ಟಾಯದಾಗಳುಂ ನಿನಗೆ ದಲ್ ಪದ್ಮಾಸನಂ ತಾನೆ ನೇರ್ಪಡಿಸಲ್ ಕೂಡಿದನಿರ್ಪುದಲ್ತು ನಯವಿನ್ನೀ ಪೊಟ್ಟೆ ಪೊಟ್ಟಾಗೆ ನೀನೊಡಗೊಂಡುಯೆನ್ನುವುದು ಕನ್ನೆಯಂ (ಪಂಪಭಾ. ೫–೨೦); ಬಲಿಕ್ಕೆ ನೇರ್ಪಡಿಸಿದನಂಗದೊಳ್ ವಚನದೊಳ್ ಮನದೊಳ್ ಪರಪೀಡೆ ಪೊರ್ದದೊಪ್ಪದರ್ವಿನೆಗಂ ತ್ರಿಗುಪ್ತಿಗಳುಮಂ ಜಿನ ಶಾಸನರತ್ನದೀಪಕಳಂ (ಅಸಂಪು.೪-೧೨); ಒಪ್ಪಲ ನೂಲನೊರ್ಮೆಬನ ಕಪ್ಪಡ ಮುಂ ಜಿನಸಂಖ್ಯಹಸ್ತದಿಂ ನೇರ್ಪಡಿಸಿದ್ದ ದಂಡಿಗೆಯ ಮೇಲೆ ಪತಾಕೆಯ ನೆಯ್ದಿ ಕಟ್ಟಿ (ಜಿಪ್ಪ.೪-೧); ಇಂತೋರೊಂದು ಪೂಗಳೊಳೋರೊಂದು ಬಗೆಯ ಬಣ್ಣದುಂ ನೇರ್ಪಡಿಸಿದ ಗಾಂಪನಾವಂ? (ರಾಮಾಶ್ವ. ೮-೩೦). ೩. ಕ್ರಮಗೊಳಿಸು; ತಿದ್ದು; ತೀಡು: ಕುಟಿಲಾಳಕಾವಳಿಗಳಂ ನೆತ್ತೊತ್ತಿ ಚೆಲ್ವಾಗೆ ನೇರ್ಪಡಿಸುತ್ತುಂ . . . ತನ್ನಂಗಿ ಕಣ್ಣೊಪ್ಪಿದಳ್ (ಕೃಂಗಾರ. ೨-೫೯); ಕುಂಚಿತ ಕುಂತಳಾಳಿಗಳನೊಯ್ಯನೆ ನೇರ್ಪಡಿಪೊಂದು ಲಕ್ಷ್ಯದಿಂ . . . ಒಪ್ಪದರ್ಪಂಚಶರಂಗಳಂತೆ ನವಯೌವನೆಯರ್ ಗಣಕಾ ನಿಕಾಯದೊಳ್ (ಉದ್ಭಪು. ೧೧-೬೮); ಮುದಾಳಿಮಾಲೆಯಿಂಬಳಕಮು ನೊತ್ತಿ ನೇರ್ಪಡಿಸಿ ತತ್ಸರಸೀರಮೆಯಂಬುಜಾಸ್ಯಮಂಡಳವನುನೋಜಲ್ದು

ಚುಂಬಿಸಿ ಭುಜಂಗನವೋಲ್ಸುಳಿಗುಂ ಸಮೀರಣಂ (ಶಬಶಂ. ೨-೬೦); ಆಧುನಿಕರೀತಿಗನುಗುಣವಾಗಿ ಕಪ್ಪುಕೂದಲನ್ನು ನಿರಿಗೆಯ ಮೇಲೆ ನಿರಿಗೆ ಕೂರುವಂತೆ ನೇರ್ಪಡಿಸಿಕೊಂಡಿದ್ದಳು (ಪುನರು. ೪೨೦). ೪. ಹಸನುಮಾಡು; ಶುದ್ಧಗೊಳಿಸು: ಪಸಿವಿಂ ನಿಲಲಾಱದೆ ಕೂಡೆ ನೋಡಿ ಕಂಡತಿಶಯಮಾಗೆ ನೇರ್ಪಡಿಸಿದಕ್ಕಿಯಿರಲ್ ನೆಱೆ ಬಾಯೆ ಬೇಗ ಲಾರ್ತತೆ ಪಿರಿದಾಗೆ ತೀವಿಕೊಳಲ್ (ಧರ್ಮಪ. ೯-೨೫). ೫. ದುರಸ್ತು ಮಾಡು: "ನೇರ್ಪಡಿಸು; ದುರುಸ್ತುಮಾಡು; ರಿಪೇರಿಮಾಡು" (Repair. ಪತ್ರಿನಿ. ೬೯). ೬. ತಿದ್ದು; ಸರಿಪಡಿಸು: ಹಿಂದೆ ಆಗಿಹೋದುದನ್ನು ಈಗ ನೇರ್ಪಡಿಸುವಂತಿಲ್ಲ (ಹುಲಿಹಾ. ೩೪೯); ಅರಸನು . . . ಮಾಡಿದ ತಪ್ಪನ್ನು ನೇರ್ಪಡಿಸಲು ಹದಿನೈದು ವರ್ಷಗಳು ಬೇಕಾದುವು (ಹಾಹುತ್ತ. ೧೦೭); ನಿನ್ನ ತಪ್ಪು ನಿನಗೆ ಮನವರಿಕೆಯಾಗಿದೆಯಲ್ಲ, ತಪ್ಪನ್ನು ನೇರ್ಪಡಿಸಿಕೊ (ಮಹಾಗ. ೮೭); ನಡೆನುಡಿಯ ತಪ್ಪುಗಳ ನೇರ್ಪಡಿಸಿ ಕಣ್ಣಗೆಯ ಕಡೆಗೆಂತೊ ಕಾಳು ಬಿಗಿದಳಲಿಂದ ಬಂದಂ (ಕಾಲೂರ. ೧೦೯-೨೨೪). ೭. ಸಮಾಧಾನಗೊಳಿಸು; ಸಾಂತ್ವನಗೊಳಿಸು: ಚೆಂದವ್ವೆ . . . ರೋದಿಸುತ್ತಲೇ ಹೋಗಿ ಮಹಾರಾಣಿಯರನ್ನು ನೇರ್ಪಡಿಸುತ್ತಿರುವರು (ವಿಗಡ.೨೫-೧೪). [ನೇರ್ವಡು + -ಇಸು$_3$]

ನೇರ್ವಡು, ನೇರ್ಪಡು$_1$ (ಕ್ರಿ). ೧. ಸೇರು; ಅಳವಡು; ಹೊಂದಿಕೊಳ್ಳು: ನೆಟ್ಟನೆ ಸಚ್ಚಾರಿತ್ರದೊಳಳವಟ್ಟಂ ಲೌಕಿಕದೊಳೆಸೆವ ವೈದಿಕದೊಳ್ ನೇರ್ವ್ವಟ್ಟಂ ಶ್ರೀಸೋಮೇಶ್ವರಭಟ್ಟೋಪಾಧ್ಯಾಯನಾತ್ಮವಂಶ ಪವಿತ್ರಂ (ಎಇ. XV, ೩೫೨-೩೧; 1096); ಬೇರ್ವೆರಸು ಕಿಟ್ಟು ಪಲವುಂ ನೀರ್ವೂಗಳನೊಟ್ಟಿಕೊಂಡು ಬರ್ಪ ಗಜೇಂದ್ರಂ ಸೋರ್ವ ಮದಧಾರೆ ಕಟದೊಳ್ ನೇರ್ವಟ್ಟರೆ ಸುರಕರೀಂದ್ರಮೆನಿಸಿದುದಾಗಳ್ (ಕಾನ್ಯಾವ. ೭೧); ನೇರ್ವಟ್ಟಾ ನರನಾಥನ ಕೂರ್ವಾಳೊಳಳಂಕೆಗೊಂಡ ಧಾರಾಜಲದೊಳ್ ಬೇರ್ವರಿದಿರೆ ಮನದೆಱಕಂ ನೀರ್ವಾನಸೆಯಂತೆ ವಿಜಯವಧು ನೆಲಸಿರ್ಪಳ್ (ಚಂದ್ರಪು. ೩-೨೦). ೨. ಒದಗು; ಉಂಟಾಗು; ಸಂಭವಿಸು: ಲೀಲಾಲಸಿಕೆ ಮನದೊಳಾದಂ ಪುಟ್ಟಿ ನೇರ್ವಟ್ಟ ಕೊರ್ವಿಂ ಬಸಿಱೆಸೆಯೆ ಮೊಗಂ ಬೆಳ್ಪೇಱೆ . . . ಪೆರ್ಚಿತ್ತು ಗರ್ಭಂ (ಚಂದ್ರಪು. ೩-೮೫). ೩. ಚೆಲುವಾಗು; ಸುಂದರವಾಗು; ಶೋಭಿಸು: ಪೂರ್ವಪಶ್ಚಿಮ ಖಂಡದರಸರೊಳ್ಕೆಲಬರಪೂರ್ವವಸ್ತುವ ತಂದರಲ್ಲಿ ನೇರ್ವಟ್ಟ ಪೆಂಗಳ ಕೆಲಬರು ತಂದಿರ್ದರುರ್ವರಾಧೀಶ ಕೇಳ್ನಿನಗೆ (ಭರಚ. ೩೭-೬). **ನೇರ್ಪಡು$_1$**: ೧. "ನೇರ್ಪಡು (ನೇರ್ + ಪಡು)—ಸಂಶ್ಲೇಷೇ (ಹೊಂದಿಕೊಳ್ಳು)" (ಶಪುದಾ); ವಿವಿಧ ಪ್ರಾಣಿಗಣಂಗಳೊಳ್ ಸಮತೆ . . . ಜೀವಿತಾಂತ್ಯದೆಡೆಯೊಳ್ ಸಂನ್ಯಾಸಮಂ ಮಾಟ್ಟುದೆಂಬಿವು ನೇರ್ಪಟ್ಟೆಸೆವನ್ನೆಗಂ ನೆಗಟ್ಟುವಂ ಶಿಕ್ಷಾವ್ರತಂ ನಾಲ್ಕುಮಂ ತಾಳ್ದಿ (ಅದಿಪು. ೬-೯); ಕುಮಾರಲೋಧ್ರ ಸಮರಪ್ರಾರಂಭದೊಳ್ ಬಲ್ಮೆ ನೇರ್ಪಡೆ ಭೂವಲ್ಲಭನಂ ಮನಂಗೊಳಿಸಿದಂ ಶೌರ್ಯೋರ್ಜಿತಂ ಮಲ್ಲಪಂ (ಅಜಿಪು. ೧-೩೦); ಬಯಲೊಳವುಂಕಿ ನೂಂಕಿದುದು . . . ಸೆಲ್ಲದ ಮುಷ್ಟಿ ವಜ್ರಮುಷ್ಟಿಯೊಳೊಡಗೂಡಿದರ್ಚಿಸಿದ ಕೂರಸಿ ನೇರ್ಪಡೆ ಸಾದಿಸಂಕುಳಂ (ವರ್ಧಪು. ೮-೪೭); ಥಳಥಳಿಸಿ ಪೊಳೆವ ಧವಳಚಾಮರಂಗಳ ಚಳಾಚಳವಿಳಸನದಿಂ ನೇರ್ಪಟ್ಟ ಲೀಲೆಯಿಂದೋಲಗಂಗೊಟ್ಟರ್ದು (ಬಾಧಪು. ೨-೬೭ ಪ). ೨. ಪದಿನಾಱಲ್ಲವಲಂಕ್ರಿಯಾರಚನೆ ಮೂವತ್ತಾಱು ನೇರ್ಪಟ್ಟುವೊಂದಿದ ಶೃಂಗಾರಮದಲ್ಲವೊಂದೆ ರಸಂ ಒಂಬತ್ತು (ಗದಾಯು. ೧-೭); ಸಿತಾಬ್ಜಮಂ ಪಿಡಿದು ಮಲ್ಲಿಗೆಯಂ ಮುಡಿದುದ್ಧ, ಶೋಭೆ ನೇರ್ಪಟ್ಟರೆ ದೇವಿ ಭೂಷಣಗೃಹಾಂತರಮಂ ಪೊಱಮಟ್ಟಳಟ್ಟಿಯಿಂ (ಕುಸುಮಾ. ೪-೧೨೫); ಕಾಟ್ಮಿಗಂಗಳೊಳೊಡಂ ಬಾಟ್ಟೊಂದು ಬವಣೆ ನೇರ್ಪಟ್ಟುದೇ (ರಾಮಾಶ್ವ. ೨೮-೧೦). ೩. ಬರ್ಪ ಬಸಂತನಲಂಪಿಂಗೊಳ್ಪಿಂ ವನಲಕ್ಷ್ಮಿಯೊಲ್ದು ಮುತ್ತಿನ ಕಡೆಯಂ ನೇರ್ಪಡಲಿಕ್ಕಿದವೋಲ್ ಸೊಗಸಿರ್ಪುದು ಕುಸುಮಿತ ಸುಮಲ್ಲಿಕಾಲತಿ ಕೌಘಂ (ಉದ್ಭಟ. ೯-೧೦); ಅಲರಂಬಂ ಶಶಿಬಿಂಬದೊಳ್ ಮಸೆದವೊಲ್ . . . ಪೊಸಮುತ್ತನಾಯ್ದು ಮರ್ದಿನೊಳ್ತೊಯ್ದಂತೆ ನೇರ್ಪ[ಪಾಠಾಂ.ರ್ವ]ಟ್ಟ ನಿರ್ಮಲದಂತಚ್ಛವಿ ಬೇಡಿದರ್ಗೆ ವರವೀವಂತಿರ್ಪುವಾ ಕಾಂತೆಯಾ (ಅನಂಪು. ೨-೧೪). ೪. ಸರಿಯಾಗು; ಯೋಗ್ಯವಾಗು; ಉಚಿತವಾಗು: ಪಡೆ ಪಡೆಮೆಚ್ಚೆಗಂಡನೆನೆ ಸಂದರಿಕೇಸರಿಯೆಂಬಗುರ್ವು ನೇರ್ಪಡೆ ನೆಗಟ್ಟೊನಣಂ ಸೆಡೆದು ಮಾಣ್ಬೆನೆ ನಾಳೆ ದಿನೇಶನಸ್ತದತ್ತುಡುಗದ ಮುನ್ನ ಸೈಂಧವನಗುರ್ವಿಸೆ ಕೊಲ್ಲದೊಡೇನೊ ಗಾಂಡಿವಂಬಿಡಿದೆನೆ (ಪಂಪಭಾ. ೧೧-೧೨೨). ೫. ಸೊಗಸಾಗು; ಹಿತವಾಗು: ನಳಿನೀತೀರಲತಾಗೃಹಂಗಳ ನೆಟಲ್ ನೇರ್ಪಟ್ಟರಲ್ ಪಟ್ಟು ಕಾಲ್ಗಳನಿಂಬಿಂ ಪರಿಕಾಲೊಳಿಟ್ಟತಿ ಮುದಂ ಕೈಸಾರೆ . . . ಪಥಾರ್ತರಿರ್ಪರಳಿಕೀರಧ್ವಾನದುದ್ಯಾನದೊಳ್ (ಜಗವಿ. ೯-೮೮); ಪದಂಗಳೆರಡಱಂತರಾಳರೆರಿಫೆಗಳಂ ಕೂಡಿದಂತೆ ಶ್ರುತಿಕಷ್ಟಮಾಗೆ ಸಂಧಿಯಂ ಮಾಡಲಾಗದು; ಕರಡೆಯ ಗಿರ್ಗಟದ ಧ್ವನಿಯಂತಿರವು ನೇರ್ಪಡವು (ಶಪುದ. ೬೩ ವೃತ್ತಿ). ೬. ನೆಲಸು; ನೆಲೆಗೊಳ್ಳು: ವಚನಗಳು ಸಾಹಿತ್ಯದ ಒಂದು ಪ್ರಕಾರವಾಗಿ ನೇರ್ಪಟ್ಟುದು ಕನ್ನಡದಲ್ಲಿಯೆ (ಮಹಾಸಾ. ೧೩ ಪ್ರಸ್ತಾವನೆ). ೭. ಈಡೇರು; ನೆರವೇರು: ತಾವೇ ಶ್ರೇಷ್ಠರೆಂಬ ವಿಚಾರ ಬಹುಕರ್ತೃಗಳಿನೊಂದುಂ ಕಾರಿಯ ನೇರ್ಪಡದು ಪರಶಿವನೊರ್ವನೇ ಕರ್ತಂ (ಕ್ಷೇತ್ರಸು. ೨-೪). ೮. ಒಪ್ಪು; ಸಮ್ಮತಿಸು: (ಕಿ).

ನೇರ್ವಡೆ, ನೇರ್ಪಡೆ = ೧. ಚೆನ್ನಾಗಿ; ಮನೋಹರವಾಗಿ: ಕವಿತ್ವದ ತತ್ವದೊಳ್ಪುದಿದು ನೇರ್ವ್ವಡೆ ಪೇಟಲುರ್ವ್ವಿಗಪೂರ್ವಮಾಗಿರೆ ಬಲ್ಲೋನಪ್ಪುದಱನೋರ್ವ್ವನೆ ವಾಗ್ವಧೂವರವಲ್ಲಭಂ ಜಿನವಲ್ಲಭಂ (ಪ್ರಕರ್ಣಾ. ೫೦-೩-೪೦; ಜಿನವಲ್ಲಭನ ಗಂಗಾಧರದ ಶಿಲಾಶಾಸನ. ಸಾಲು. ೭; 950); ಸಲೆ ಪೂಣ್ದ ಪೂಣ್ಕೆ ನೇರ್ಪಡೆ ನಡೆವನ್ನೆಗಂ ನಡೆದನಳ್ಕದೆ ಬಳ್ಕದೆ ತನ್ನೊಡಲ್ ಪಡಲ್ವಡುವಿನಮಣ್ಮುಗುಂದನೆ ದಲೇನಭಿಮಾನಧನಂ ಸುಯೋಧನಂ (ಪಂಪಭಾ. ೧೩-೯೭); ಶ್ರವಣಕ್ಕಮರ್ದಿನ ಸರಿ ಸುರಿವವೊಲಾಗೆ ವಚೋವಿಲಾಸವಾ ಸಭೆಗತ್ಯುತ್ಸವಮಂ ಕುಡೆ ನೇರ್ಪಡೆ ಬಿನ್ನವಿಸಿದನಾವರಿಸೆ ದಂತರುಚಿ ತತ್ಸಭೆಯಂ (ಪಂರಾಮಾ. ೧೦-೬೭); ಆ ಚಾರುದತ್ತಮತ್ತಮಿತ್ತಂ ನೋಟ್ಪನ್ನೆಗಂ ನೇರ್ಪಡೆ ರತ್ನರಂಜಿತಮಾದ ಹಟತ್ಪೇಟಮಂ ಭೋಂಕೆನೆ ಕಂಡು (ನೇಮಿಪು. ೪-೩೧ ಪ). ೨. ಕ್ರಮವಾಗಿ; ಸರಿಯಾಗಿ: ಉಡೆವಱಿದಂದಿಂ ಬಟಿಕೆಡೆಯುಡುಗದೆ ಜಿನಮುನಿಗಳಿಂ ಜಿನಾಗಮಮಂ ನೇರ್ಪಡೆ ಕೇಳ್ದೋದುವ ಜಿನಮುನಿಗಡಣದೊಳೆ ವಿವೇಕಿಯಾಗಿ ಪೊಟ್ಟಂ ಕಳೆವಂ (ಧರ್ಮಾಮೃ. ೬-೧೫). ೩. ಅಂದವಾಗಿ; ಒಪ್ಪುವಂತೆ: ಕೇಯೂರಾದಿಯಂ ಭೂಷಣೋತ್ಕರಮಂ ನೇರ್ಪಡೆ ಕಟ್ಟ ಪೂಜಿಸಿದರಾದೋರ್ದಂಡಮಂ ಭೀಮನಾ (ಗದಾಯು. ೮-೬೫); ಎಡೆವಱಿಯದಂತವುರದೊಳ್ ಕಡೆಯಿಕ್ಕುವ ತೋರಮುತ್ತು ಕಟ್ಟುವ ಗುಡಿ ನೇರ್ಪಡೆ ಚೆಲ್ವೆತ್ತುವ ತೋರಣವಡಿಗಡಿಗುತ್ಸವದೆ ತಳಿವ ಪಟವಾಸಚಯಂ (ಪುಷ್ಪಪು. ೧೨-೧೮). ೪. ಹೆಚ್ಚಾಗಿ; ವಿಶೇಷವಾಗಿ; ಅತಿಶಯವಾಗಿ: ತಡೆಯದೆ ಸೇದೆಯ ನೇಣಂ ಪಿಡಿದಿರೆ ಪುಲಿ ತೋಯಮೆಂದು ತದ್ವಿಪ್ರಂ ನೇರ್ಪಡೆ ಪೆರ್ಚಿ ತೆಗೆಯೆ ಪುಲಿ ಬಂದೊಡೆ ಭಯದಿಂ ನೋಡುತಿರ್ಪುದುಂ (ಧರ್ಮಾಮೃ. ೧೨-೧೭೨).

[ನೇರ್$_2$ + ಪಡು$_1$]

ನೇರ್ವಣ (ನಾ). ಮುಗಿಯುವುದು; ಪೂರ್ಣಗೊಳ್ಳುವುದು; ಮುಕ್ತಾಯ: ಇನ್ತೀ ದೇವರ ಭೂಮಿಯಲು ಪುಟ್ಟದರ್ತ್ಥದೊಳಗೆ . . . ಅಲ್ಲಿಂ ಮೇಲಾದ ಅರ್ತ್ಥ ದೇವರ ಕಲ್ವೆಸಕ್ಕೆ ನಡೆವುದು ಕಲ್ವೆಸಂ ನೇರ್ವ್ವಣಮಾದ ತದನಂತರಂ ದೇವರ ಗ್ರಾಸನದಲು ಅಪೂರ್ವ್ವಿಗ

ವ್ರಾಹಮ್ಮರು ಪನ್ನಿರ್ವ್ವರ್ಗ್ಗೆ ಸತ್ರಂ ನಡೆವುದು (ಕಇಅ. ೭೯-೧೩-೪೨; ಸು. 1088). [<ನೇರ್$_1$]

ನೇರ್ವರಿ (ಕ್ರಿ). ಒದಗು; ಉಂಟಾಗು; ಸಂಭವಿಸು: ದ್ರೋಣ್ಯೆ ಕಲವ್ಯರ ಸಮಾಗಮಂ ನೇರ್ವರಿಯದೊಂದಲ್ಲ ಒಂದಪಾಯಂ ವೀರ ಬಾಲನಿಗೆ ತಟ್ಟದಿರದು (ಹಬ್ಬೆರ. ೨೨-೧೧೯). [ನೇರ್$_2$+ಪರಿ$_2$]

ನೇಲ್, ನೇಲು$_1$ (ಕ್ರಿ). ನೇತು, ನೇಲ್ದು (ಭೂತನ್ಯೂ). ೧. ಜೋಲು; ಜೋತಾಡು; ತೂಗಾಡು: ಮರದಡ್ಡ ಬಿರ್ದ ಕೊಂಬಂ ಕಂಡರಸಂ ಪಿಡಿದು ನೇ [ಪಾಠಾಂ. ನಿ]ಲ್ದಿರ್ದೋಡಾನೆಯುಂ ಪೆಱತೊಂದು ದೆಸೆಗೆವೋಯ್ತು (ವಡ್ಡಾರಾ. ೧೧೦-೧೪); ತಿಸುಳದೊಳುಚ್ಚಳಿಪ್ಪ ಪೊಸ ನೆತ್ತರೆ ಕೆಂದಳಿರಾಗೆ ಕಣ್ಗಗುರ್ವಿಸುವಿನಮೊಕ್ಕು ನೇಲ್ವ ಕರುಳೋಳಿಯೆ ಬಾಳಮೃಣಾಳಮಾಗೆ (ಪಂಪಭಾ. ೧-೬); ನಿನಗೆ ಬಮ್ಮೇತಿಯಾಗೆ ಸಾವೆ ನೆಂದು ಅವರ ಕಾಣ್ಬಲ್ಲಿಯೊಂದು ಮರದೊಳ್ ಬಳ್ಳಿಯಂ ಕಟ್ಟಿ ಕೊರಲೊಳ್ ಸುತ್ತಿ ನೇಲ್ದು ಸತ್ತಳ್ (ಜೀವಸಂ. ೧೮೦-೧೨); ಬಲ್ವೆಱೆಮೊಗದಬಲೆಯರ್ . . . ನೇಲ್ವ ಮುಡಿಯನೋವದೆ ಬಳಿಕಾ ಬಾಗಿಲ್ವಾಡದ ಕಾಪಿನವರ್ ಬಗ್ಗಿಸಿ ನಿಲ್ಲೆನೆ . . . ಈಕ್ಷಿಸಿದರ್ ನವಮನಸಿಜನಿಭನ (ಜಯಕಾ. ೧೦-೪೮); ಮಾಲೆಗಾರ್ತಿಯರ ಮೇಲ್ಗೈಗಳೊಳ್ ಸಾಲ್ಗೊಂಡು ನೇಲ್ವ ಮಾಲೆದೊಡಂಬೆಯಂ ತೂಗಿ . . . ಪಶ್ಚಿಮಾನಿಲಂ ಮೈದೋಱಲೊಡಂ ಪೊಲ್ಲೆ ಮುಗುಳ್ತುದು (ರಾಮಾಶ್ವ. ೨-೨೪). ೨. ತೂಗುವಂತೆ ಮಾಡು; ಜೋಲಿಸು; ಜೋತಾಡಿಸು: "ನೇಲ್—ಅಲಂಬನೇ (ತೂಗ ಬಿಡು)" (ಶಮಭಾ); ಅದು ಸುರಭೂಜವಲ್ಕವಸನದ್ವಯಮಂತದು ದಂಡಮಲ್ಲಿ ನೇಲಿದುದದು ಜೋಗವಟ್ಟಗೆ . . . ಎಂದು ನೋಡಿದನತಿ ವಿಸ್ಮಯಂಬೆರಸುತದ್ಗುಹೆಯಂ ನೃಪರೂಪಚಂದ್ರಮಂ (ಕಾದಂಪೂ. ೬೯೨).

ನೇಲು$_1$: ೧. ತಲೆಕೆಳಗಾಗಿ ನೇಲುವ [ಪಾಠಾಂ. ನೇಲುತ, ನಿಲುತ] ಮರಗೊಂಬಿನೊಳ್ಬಲುತಪಗೆಯ್ವ ತಾಪಸರ ಒಲಿಸಿ ತಾರೆಂದೊಡೆ ತಂದುಕೊಡುವಳಿಗೆ ಬಲುಹೆ ರಾಮನ ತಹುದೆನಗೆ (ಕುರಾಸಾಂ. ೨೪-೪೫); ಜತನದಪ್ಪದೆ ಕೊನೆವಿಡಿದು ನೇಲುವ ಚರ್ಮಯತನವಕ್ಕಿಯ ಕಂಡು ನಗುತೆ ಮಿತಿಯಿಲ್ಲದಲರ್ದೋಟವ ಪೊಕ್ಕು ಕೊಯ್ದರಾಯತನೇತ್ರೆಯರು ಪುಷ್ಪಚಯವ (ಮೋಹತ. ೨೪-೬೨); ಭೂಮಿಜಂಗಳ್ ಬಾಡಿ ಸೋಲುತಿರ್ದುವು ಲತಾಸ್ತೋಮಂಗಳೊಣಗಿ ಮಿಗೆ ನೇಲುತಿರ್ದುವು ಕೂಡೆ ತಾಮರಸವಾದಿಗಳ್ ಕೊರಗುತಿರ್ದುವು ಮಃಖಮೆಂತಪ್ಪರಂ ಕೆಡಿಸದೆ (ಚಿಬಪು. ೩೫-೩೦); ಇಂದುಮತಿ ಭೂಪನೊಳೊಮ್ಮೆ ಸುಗೋಷ್ಠಿಯಿಂದಿರಲ್ ನಾರದ ಪೊತ್ತ ವೀಣೆಯೊಳು ನೇಲುವ ಪೂಸರ ಬೀಳಲಾಕ್ಷಣಂ ತೀರಳೆ (ಕಱೆಕಂ. ೩೮). 'ನೇಱು' ಪರಾ.

ನೇತಾಡು = ತೂಗಾಡು; ಜೋತಾಡು; ಜೋತುಬೀಳು: ಹರಿಣಾಂಬಕಿ . . . ಪಾತಕರುಗಳ ಕಂಧರ ಚರ್ಮಪಾಶದಿ ನೇತಾಡೆ ಮುಂಬಿಗರಲೆದು ಚೇತನಗಿಡಿಸಿ ಕೊಲ್ಲುತೆ ಕೊಂಡುಪೋಪೆಮದೂತರ ನೋಡುತೈದಿದಳು (ಮೋಹತ. ೨೯-೧೪); ಸಿಂಹವಿಕ್ರಮನು ಹಡಗಿನಿಂದ ಗಿರಿಶಿಖರದ ಮೇಲಕ್ಕೆ ಬರುತ್ತಾನೆ . . . ಒಂದು ಛುರಿಕೆಯು ನಡುವಿನಲ್ಲಿ ನೇತಾಡುತ್ತಿದೆ (ಆರ್ಯಕ. ೧); ಬಾಂಬೇ ಸೈಕಲ್ ಸ್ಟೋರ್ಸ್ ಎಂಬ ತೂಗುಹಲಗೆ ಅದರ ಮುಂದೆ ನೇತಾಡುತ್ತಿತ್ತು (ನಿಸುತ. ೧); ಎರಡು ಮಕ್ಕಳ ವಿನಹ ಉಳಿದವೆಲ್ಲ ಒಂದು ಸಣ್ಣಬೆತ್ತವನ್ನು ಹಿಡಿದುಕೊಂಡು ೧೦ ಸೆಕಂಡುಗಳು ಡೊಂಬರವನು ನೇತಾಡುವಂತೆ ನೇತಾಡುತ್ತಿದ್ದುವು (ಜೀವಾತ್ಮ. ೧೭೮); ನೂಲು ಹಿಡಿದು ಜೋಲುವವನ ಕಾಲುಹಿಡಿದು ನೇತಾಡಿದ (ಗಾದೆ). ನೇತು ಬೀಳು = ನೇತಾಡು: ಕಡಿಮೆ ವಯಸ್ಸಿನವು ೧೨ ಮಕ್ಕಳು ಅರ್ಧನಿಮಿಷ ಮಾತ್ರ ನೇತುಬಿದ್ದಿದ್ದವಂತೆ. ಮೂರು ನಾಲ್ಕು ಮಕ್ಕಳು ೧ ನಿಮಿಷ ನೇತುಬಿದ್ದವು (ಜೀವಾತ್ಮ. ೧೭೮); ವಸಂತ . . . ಏರುಗಚ್ಚೆಹಾಕಿ ಒಂದು ಕಿಡಿಕಿಗೆ ಕಾಲಿಕ್ಕಿ ಅದರ ಕಂಬಿಗಳ ಮೇಲೆ ಹೆಬ್ಬೆರಳುಗಳಿಂದ ಸರಿಯುತ್ತ ಕಿಡಿಕೆಯ ಕಮಾನಿನ ಮಧ್ಯಶಿಲೆಗೆ ನೇತುಬಿದ್ದನು (ಗಂಮಾಯಿ. ೬೯). ನೇತುಹಾಕಿಕೊಳ್ಳು = ೧. ತೂಗುಹಾಕಿಕೊಳ್ಳು: ಎರೋಷ್ಕನು, ಬೇಟೆಗೆ ಹೋಗಿದ್ದವನು ಸೊಂಟದಲ್ಲಿ ಕೆಲವು ಕಾಡುಕೋಳಿಗಳನ್ನು ನೇತುಹಾಕಿಕೊಂಡು . . . ಹಿಂತಿರುಗುತ್ತಿದ್ದನು (ಮಲಿನಾ. ೬೧). ೨. ನೇಣುಹಾಕಿಕೊಳ್ಳು; ಉರುಲು ಹಾಕಿಕೊಳ್ಳು: ಅಪ್ಪ ನೆಟ್ಟ ಅಲದ ಮರಾಂತ ನೇತು ಹಾಕಿಕೊಂಡಂತೆ (ಗಾದೆ). ೩. ಬಲಾತ್ಕಾರಮಾಡು; ಒತ್ತಾಯಮಾಡು; ಪೀಡಿಸು: ಅವನು ಯಾವಾಗಲೂ ದುಡ್ಡಿಗಾಗಿ ಬಂದು ನೇತು ಹಾಕಿಕೊಳ್ಳುತ್ತಾನೆ (ರೂಢಿ). ನೇತು ಹಾಕು = ನೇತಾಡುವಂತೆ ಮಾಡು; ನೇಲಿಸು; ತೂಗುಹಾಕು: ಮೊದಲು ಕಬ್ಬಿಣದ ಪಂಜರದ ಅರ್ಧಭಾಗವನ್ನು ತಂದು ಹಗ್ಗಗಳಿಂದ ಸೂರಿಗೆ ನೇತುಹಾಕಿದರು (ಶಾಲೆಮ. ೧೨೪); ರಂಗಣ್ಣ . . . ಗೋಡೆಗೆ ನೇತು ಹಾಕಿದ್ದ ನಕ್ಷೆಯನ್ನು ನೋಡುತ್ತ . . . ತೀರ್ಮಾನಿಸಿಕೊಂಡನು (ರಂಗಕ. ೨೧).

[ದೇ.॥ ತಮಿ. ನಾಲ್, ಞಾಲ್; ಮಲ. ಞಾಲು; ತುಳು. ನೇಲ್, ನೇಲು]

ನೇಲವತ್ತಿ 'ನೆಲ್ಲವತ್ತಿ' ನೋ.

ನೇಲಿಸು (ಕ್ರಿ). ೧. ನೇತುಹಾಕು; ತೂಗುಹಾಕು: ಆಕೆ ಬರೆದ ಪಟಮಂ ಕೊಂಡಲ್ಲಿ ಬರೆಯದ ವಿನ್ನಾಣಂಗಳಂ ಬೆಸಗೊಂಡು ಪೋಗಿ ನಗರಮಧ್ಯಸ್ಥಿತ ಮಹಾಪೂತ ಜಿನಾಲಯದ ಪಟ್ಟಸಾಲೆಯ ಮುಂದೆ ನೇಲಿಸಿ ಕಾರ್ಯಸಿದ್ಧಿಯಂ ಪಾರುತಿರ್ದಳ್ (ಚಾವುಂಪು. ೧೯); ೨. ಸಿಕ್ಕಿಸು; ನಾನು ಟೊಂಕದಲ್ಲಿ ಕೇಲಿಕ್ಕೆ ಗೊಂಚಲನ್ನು ನೇಲಿಸುತ್ತ ಇದ್ದ—ಬಿದ್ದ ಕೆಲಸ ಮುಗಿಸುತ್ತಿದ್ದೆ (ಸ್ಮೃತಿಚಿ. ೩೩೩). ೩. ಜೋಡಿಸು, ಕೂಡಿಸು (?): ಪ್ರವಿದಿತ ಸಾಹಸೋರ್ಜಿತ ಮಹಾಪುರುಷೋದ್ಧತರಾ ರಸಂಗಳಂ ಸವಿಗಿಡೆ ಸೊಪ್ಪುವಟ್ಟ ಬಗೆಯಿಂದಟಾಗನ್ನಡಗಬ್ಬದೊಳ್ತಗುಳ್ಚುವ ಬೆಸನೇಕೆ ಮಟ್ಟ ಮಿರಲಾಗದೆ ಮತ್ತೆ ನಿರರ್ಥಿಯಾದೊಡಂ ತವರದ [ನಂದದಿಂದೊ]ರೆಯೆ ನೇಲಿಸಲುತ್ತಮ ಪದ್ಮರಾಗದೊಳ್ (ಬಂಹು. ೧-೧೨). [ನೇಲ್+-ಇಸು$_3$]

ನೇಲು$_1$ 'ನೇಲ್' ನೋ.

ನೇಲು$_2$ (ನಾ). ತೂಗುಹಾಕಲು ಆಧಾರವಾಗಿರುವ ಸಾಧನ: ಬಟ್ಟೆಗಳನ್ನು ನೇಲಿನ ಮೇಲೆ ತೂಗುಹಾಕಿದ್ದೇನೆ (ರೂಢಿ). [<ನೇಲ್]

ನೇಲುವತ್ತಿ 'ನೆಲ್ಲವತ್ತಿ' ನೋ.

ನೇಲೆ$_1$ (ನಾ). ಹಾಲು, ಮೊಸರು ಮುಂತಾದುವನ್ನು ಇಟ್ಟು ತೂಗುಹಾಕುವ, ಹಗ್ಗದಿಂದ ಮಾಡಿದ ಸಾಧನ; ನೆಲುವು: ಹಣ್ಣು ಸೌತೇಕಾಯಿ . . . ಮನೆಯ ಕಂಬಕ್ಕೂ ಅದು ತೂಗಿಕೊಂಡಿದೆ, ನೇಲೆಗೂ ತೂಗಿದೆ, ಜಂತಿಗೂ ಅದೇ ತೂಗಿ ಸಾಲು ಸಾಲಾಗಿದೆ (ಮರಮ. ೧೦). 'ನೆಲು' ಪರಾ. [←ತುಳು. ನೇಲೆ, ನೇಲ]

ನೇಲೆ$_2$ (ನಾ). (?): ನೇಲೆಯಂ [ಪಾಠಾಂ. ಲಮಂ] ಹಿಡಿವ ಕಪ್ಪಡ ಮುಡುವ ನಿಂದಿರಲು ಸಾಲದಳವಳಿವ ಬಾಯ್ವಿಡುವ ಸಂಕಟವಿಲ್ಲ . . . ಮರ್ಮಸ್ಥಾನಮಂ ನಿಗುಚುವ ಬಾಲೆಯರ ಹಂಗಿಲ್ಲ ಮೇಲೆ ನಾಣ್ಗೆಡುವ ನಿಘ್ರಾಲಂಬನಿಲ್ಲ ಮಧ್ಯಮರಾತ್ರಿ ಮೆಯ್ದೆಗೆದ ಕಾಲ ಶಯನಸ್ಥಳದೊಳೆಂದಿನಂದದಿ ನಿದ್ರೆಗಟವಟಸುತಿರ್ಪಾಗಳು (ಸಿದ್ಧರಾ. ೧-೫೫).

[ℙ ಇದು 'ಸೇಲೆ (=ವಸ್ತ್ರ)' ಎಂದಿರಬಹುದೇ?]

ನೇಲ್ಕೆ (ನಾ). ನೇಲುವಿಕೆ; ತೂಗಾಡುವಿಕೆ; ಜೋತಾಡುವಿಕೆ: "ಲಂಬಿಃ, ಲಂಬನಂ, ಲಂಬನೀಯಂ ಈ ೩ ನೇಲ್ಕೆ" (ಕಾಶಕೃ. ೧೦೪). [ನೇಲ್+-ಕೆ]

ನೇಲ್ಗಟ್ಟು (ಕ್ರಿ). ನೇಲುವಂತೆ ಕಟ್ಟು ; ತೂಗುಹಾಕು ; ನೇತುಹಾಕು : ತಮ್ಮ ದಿವ್ಯಾಯುಧಂಗಳನೆಲ್ಲಮನಾ ಪುರೋಪವನದ ಪಿತೃವನದ ಕೆಲದ ಶಮೀವೃಕ್ಷದ ಮೇಲೆ ಪುರುಷಾಕೃತಿಯಾಗಿ ನೇ[ಲ್ಗ] [ಪಾಠಾಂ. ಲಗ]ಟ್ಟಿ . . . ಪೊಟಲಂ ಪೊಕ್ಕು (ಪಂಪಭಾ. ೮-೫೨ ಪ).

[ನೇಲ್ + ಕಟ್ಟು]

ನೇಲ್ದು 'ನೇಲ್' ಪರಾ.

ನೇವಚ್ಚ (ನಾ). ಉಡುಗೆತೊಡುಗೆ ; ವೇಷಭೂಷಣ ; ಅಲಂಕಾರ : ಎಲೆ ಅರಸಿ . . . ನಿನ್ನ ನೇವಚ್ಚದಿಂ ನೀನೆಂದೇ ತಿಳಿದು ಇಂತು ಮೋಸವೋಗಿ ಅನಿಲ್ಲಿಗೆ ಬಂದೆಂ (ಮಿತ್ರಗೋ. ೪೯-೧೫).

[<ಪ್ರಾ. ಜೇವಚ್ಛ./ಸಂ. ನೇಪಥ್ಯ]

ನೇವಣ 'ನೇವಳ' ನೋ.

ನೇವಣಿ 'ನೇವಣೆ' ನೋ.

ನೇವಣೆ, ನೆವಣಿ, ನೆವಣೆ, ನೇವಣಿ (ನಾ). ೧. ನೈಪುಣ್ಯ ; ಕೌಶಲ ; ಚಾತುರ್ಯ ; ಪ್ರಾವೀಣ್ಯ : ಪಣಿಯಷ್ಟಮಿಯ ಚಂದ್ರಗೆಣೆ ಪದಿರ್ನುಡಿಯ ನೇವಣೆ ಮದನನೆಸುಗೆಯುರವಣೆ . . . ಎನಿಪ ಜವ್ವನದ ಗಣಿಕೆಯರು ಬಂದರು (ಸೌಂದಪು. ೬-೩೮). ೨. ಒಯ್ಯಾರ ; ಬೆಡಗು ; ಬಿನ್ನಾಣ : ನೆಳಲ ರೂಪಿನ ನೇವಣೆಯ ಸುರಸ್ತ್ರೀಯರೆಳಲತೆಯಸುವಡೆದಂತೆ ನಳನಳಿಸುವ ಮೆಯ್ಯ ಸುರತಾಳಸುತೆಯ ಮುಂದೆಳಸಬಲ್ಲರೆ ನವಮದನ (ಕುರಾಸಾಂ. ೪೪-೩೩). ೩. [ಸಂಗೀತ] (?) : ಭಣಿತೆ ಬೆಡಂಗು ಕಾಕು ಖಚರಂ ಗಮಕಂ ತಿರುಪಿಂಪು ನುಣ್ಪು ನೇವಣೆ . . . ಗೀತಿ ಜತಿ ಜೋಕೆ ನಯಂ ಬಹುಲಾಯಿ ದೇಸೆ ಪೆಲ್ಲಣೆ ಕಳೆಯೆಂಬಿವಂ ಮೆಱೆದು ಬಾಜಿಸಿದಂ ಮುರವೈರಿ ವಾಸಮಂ (ಜಗವಿ. ೫-೩); ತಂತ್ರಿಯಂ ಸುತಂತ್ರಿಯಂ ಮಾಡಿ . . . ಕರಂಗಳ ಬಹುರೇಖಯ ಚಾರಣೆಯ ಧಿಕ್ಕವಣೆಯ ನೇವಣೆ ಬೊಲ್ಲವಣೆಯ ಬೆಡಂಗು ಬಿತ್ತರಿಕೆಯಂ ಬೀಱೆ ಬಾಜಿಸುತ್ತಿರೆಯುಂ (ಶಾಂತೀಶ್ವ. ೭-೯೩ ಪ); ತರಂಗಿಸುವ ತಾನಮಾನಂಗಳ ಸುಗೀತಂಗಳಾ ರಂಗು ನೇವಣೆ ಬಜಾವಣೆ ಭಣಿತೆ ಬೆಡಗು ಗಮಕಂಗಳಿಂದಶ್ವತರ ಕಂಬಳರು ಪಾಡುತಿರೆ ಭೃಂಗಿ ನಾಟ್ಯವನಾಡೆ ರಂಜಿಸಿತು ತೂರ್ಯತ್ರಯಂಗಳಿಂ ಶಿವನೋಲಗ (ಸೌಂದಪು. ೧-೪೦); ತುಂಬುರಾದಿಗಳ ಬೆಡಗು ನೇವಣೆ ಬಜಾವಣೆಯ ವೀಣಾಧ್ವನಿಯನುಡುಗದಾ ಕರ್ಣಸುತೆ ನಿರುಪಮಸುಖಾರ್ಣವದೊಳೊಪ್ಪಿದನಪರ್ಣೇಶನು (ಕೊಟ್ಟೂಬ. ೧-೬೩); ಲಳಿತೆ ಧನ್ಯಾಸಿಗಳಿಂದಾ ನಲಿದು ನೇವಣೆಯಿಂಪು ಕಾರಾಳಿಯಿಂದವೆ ಇಳಿಗೀಸನ ಪಾಡಿದರು (ತರ್ಕಕೌ. ೪-೭೬). ೪. [ನಾಟ್ಯ] ನೃತ್ಯದ ಒಂದು ಭಂಗಿ (?) : ಮುರುಹು ತಿರುಹು ಚಾರಿ ಕೈಲಾಗು ನೇವಣೆ [ಪಾಠಾಂ. ಣೆ] ಕರಣ ಭ್ರಮರಿಗಳನಱಿದು ತರುಣಿ ರಂಗಸ್ಥಲದಿ ನರ್ತಿಸಿದಳು ಧರಣೀಶರು ಮೆಚ್ಚುವಂತೆ (ಜೀವಂಸಾಂ. ೯-೯೪); ಕರಣೆ ನೇವಣೆ ಭ್ರಮರಿ ನೆಲೆ ಸಲೆ ತಿರುಪು ಚಿತ್ರದ ಲಾಗು ಲಳಿ ಮಿಗೆ ಮುರಜಗಟ್ಟಳೆ ತಾಳ ಸಂಗೀತಗಳ ಪವಣಿನಲಿ ಭರತಶಾಸ್ತ್ರಕ್ರಮವ ತಿಳಿಪುವ ಪರಿಯೊಲಾ ಸತಿ ರಂಭೆಯೂರ್ವಶಿಯರಿಗೆ ಮಿಗಿಲೆಂದೆನಿಪ ರಚನೆಯ ತೋಱು ನಟಿಸಿದಳು (ಸನತ್ಕು. ೪-೨೦). **ನೆವಣೆ :** ೩. ವಿಪ್ಪನ್ನಗಾನರುಱೆರಂಗು ನೆವಣೆ ಭಜಾವಣೆಗಳಿಂ ಪಾಡಿ ಮುದದೆ (ಏಕೋಪು. ೧-೨೯); ಮುಖ್ಯ ಸುರರುಪಜೀವಿಯರು ರಂಗು ನೆವಣೆ ಭಜಾವಣೆಯಿ ಗೀತಂ ವಾದ್ಯದ (ಏಕೋಪು. ೨-೫೬). **ನೆವಣೆ :** ೧. ನುಡಿವ ಚದುರು ನೆಲೆಗೊಳಿಸುವ ಬಗೆ ನೆವವಿಡುವ ನೆವಣೆ ಕಣ್ಬನಿಯ ಬಿಡುವ ಬೆಡಗು ಬಯಲಕ್ಕೆ ಮೆಱೆಯಲಾ ಮಡದಿ ನುಡಿದಳು ಪುಸಿಗಳ (ಕುರಾಸಾಂ. ೩೪-೧೧೦). **ನೇವಣೆ :** ೩. ಗತಿ ಗಹಗಹಿಸಲ್ ಕಳಸೋನ್ನತಿ ಗಮಕಂ ವಹಣೆ ಕೊಂಕುಬಾಯ್ ನುಣ್ಪನುಜಾಯ್ ಜತಿ ನೇವಣೆ ಮಿಗೆ ಸೊಂಪಾಹತ ಕಂಪಿತಮುಣ್ಮೆ ಪಾಡಿದಂ ಮುನಿಯಷಭಂ (ವೀರವಿ. ೬-೯೦); ರಂಗು ನೇವಣೆ ಭಜಾವಣೆ ಸಂಗೀತದಿಂಗಿತವನಱಿದು ಪಾಡುವ ರಸಿಕಗಾನರಿಂ (ಏಕೋಪು. ೫-೩ "ಮದ್ದಳೆ ಬಾರಿಸುವ ಕೌಶಲ" (ಪ್ರಭಣ್ಣ).

[<ಪ್ರಾ. ಜೇಉಣ್ಣ./ಸಂ. ನೈಪುಣ್ಯ]

ನೇವಣೆದೋಱು (ಕ್ರಿ). ಕೌಶಲವನ್ನು ತೋರು ; ಚಾತುರ್ಯವನ್ನು ಪ್ರದರ್ಶಿಸು : ನಗೆದೋಱು ಬಗೆದೋಱು ನಟಣೆ ನೇವಣೆದೋಱು ಹೊಗರು ಬಜಾವಣೆದೋಱು ಒಗೆದುಂಚದಿಂದಿಷ್ಟು ಸ್ವಗದಿಂದಿಂದ್ರನ ತೆಗೆವಂತೆ ಸೊಗಸಿ ಹಾಡಿದರು (ಭರಚ. ೧೩-೩೩).

[ನೇವಣೆ + ತೋಱು]

ನೇವರಿಕೆ (ನಾ). ನೇವರಿಸುವಿಕೆ; ಮೃದುವಾಗಿ ಕೈಯಿಂದ ಸವರುವಿಕೆ : ನೇವರಿಕೆಯ ಬಯಸುತ್ತಿರುವಂತಿಹುದೀ ಹರಿಣ ಅಗೊ ನೋಡ ಎಂಥ ಹರಿಣ (ಹಂಸದ. ೬೨-೨೨); ನಿಸ್ತಬ್ಧನೆನ್ನೆಡೆಗೆ ಬಹ ಭೀರುಭಾಗಳ ಕೆಳೆಯ ನೋನೋಡೆಂದು ಸರಸ ಕೌತುಕದಿ ನುಡಿಬೆರಳ ನೇವರಿಕೆಗವಡುವ ಹಲಕೆಲವನಾದರಿಸಿ ತೋರುತಿಹೆ ವೃತ್ತವೃತ್ತದೊಳು (ಮಲೆದೇ ೪೫-೫).

[<ನೇವರಿಸು + -ಇಕೆ]

ನೇವರಿಸು, ನ್ಯಾವರಿಸು (ಕ್ರಿ). ೧. (ಪ್ರೀತಿ, ಕರುಣೆಗಳನ್ನು ಸೂಚಿಸುವಾಗ ಕೈಯಿಂದ) ಮೃದುವಾಗಿ ಸವರು,—ನೀವು : ವಕ್ಷೋಜಮಂ ನಿಟ್ಕೆ ನೇವರಿಸುತ್ತುಂ ನೆಲೆವೆರ್ಚಿ ಕಾಮುಕನವೊಲ್ ನೀರೇಱುತಿರ್ದತ್ತು ತತ್ತರುಣೀಸಂಕುಳಮೆಲ್ಲಮೀಗಳೊಳಗಾಯ್ತೆಂಬಂತೆ ಪದ್ಮಾಕರಂ (ಚಂದ್ರಪು. ೭-೧೨೬); ಪರಸಿ ಕುಮಾರನಂ ಪರಮಹರ್ಷದೊಳಾಗಳೆ ಕೌಶಿಕವ್ರತೀಶ್ವರಂ . . . ಕರಾಗ್ರದಿಂ ಕದಪನೊಯ್ಯನೆ ನೇವರಿಸುತ್ತುಮಿರ್ದಂ (ಕುಸುಮಾ. ೭-೯೨); ನಿಟಲಮಂ ನೇವರಿಸುತಂಗುಲಿಯ ತುದಿಯಿಂದೆನೋಡುತ್ತೆ ತುಟವಿಡಿದು ನೋಡುತ್ತೆ . . . ಕುಟಲಕುಂತಳದ ಜಾರೆಯರೈದಿ ಬರುತಿರ್ದರಲ್ಲಲ್ಲಿ ಕತ್ತಲೆಯೊಳು (ಜೈಮಿಭಾ. ೨೬-೧೨); ಆ ಗಜವು ಹೆಣ್ಣಾನೆಗಳಂ ಸೊಂಡಿಲಿನಿಂದ ನೇವರಿಸುತ್ತಿರಲು (ಸೌಗಂಧಿ. ೨೪೫-೨೧); ತಂಗಿಯ ತಲೆ ನೇವರಿಸಿ ಮೇಲೆ ನಡೆದ ರಾಜಣ್ಣ (ದುರಳಿ. ೧೦೨). ೨. (ನಯವಾಗಿ) ತಿದ್ದು; ತೀಡು; ಸರಿಪಡಿಸು : ಕುರುಳ ನೇವರಿಸಿದನು ಗಲ್ಲವನೊರಸಿ ಮುಂಡಾಡಿದನು (ಕುವ್ಯಾವಿ. ೩-೬೭); ಕೋಕನಯನಂಗೆಱಗಿ ನೊಸಲಲಿ ಕೋಕನದ ಕರ್ಣಿಕೆಯನಿಟ್ಟು ನಿರಾಕುಳದಿ ನೋಡಿದಳು ನೆಳಲನು ನೇವರಿಸಿ ನವಿರ (ತೊರರಾ. ೩-೮-೨೩); ಅಳಕಮಂ ನೇವರಿಸಿ ಮೆಯ್ಯ ರಜಮಂ ತೊಡೆದು . . . ಬರುತಿರ್ದರಾತ್ಮಮಂದಿಕಂದು ಬಂಧಕಿಯರು (ಚಿಬಪು. ೯-೧೬); ನಿಟಲತಟದೊಳುಯ್ಯಲಾಡುವ ಮುಂಗುರುಳನುಗುರ್ಗೊನೆಯಿಂ ತಿರ್ದಿಯುಂ, ಕೆಲಕ್ಕೊಂದಿದೆಕ್ಕಸರಮಂ ಸೈತು ನೇವರಿಸಿಯುಂ (ರಾಮಾಶ್ವ. ೨೦-೧೬); ರಾಣಿಮಗಳನ್ನು ಹಿಡಿದೆತ್ತಿದಳು; ಕೂದಲನ್ನು ನೇವರಿಸಿದಳು (ಹಾಹುತ್ತ. ೧೧೦). ೩. ತಗುಲಿಸು ; ಸೇರಿಸು ; ಅಂಟಿಸು ; ಸಂಪರ್ಕವನ್ನುಂಟುಮಾಡು : ತಾನೇ ಕರ್ಮಕರ್ತನು ಭೋಗಿ ತಾನೇ ದುಃಖಿ ಸುಖಿಯೆಂದು ನಿರ್ಮಳಾತ್ಮನೊಳೀಯಹಂಕೃತಿಧರ್ಮವನೆ ನೇವರಿಸಿ ಮಱುಗುವ ದುರ್ಮತಿಗಳನು ಪಶುಗಳೆಂದರೆ ಖೇದವೇಕೆಂದ (ಕುವ್ಯಾಕ. ೬-೨೬). ೪. ತೊಡೆ ; ಲೇಪಿಸು ; ಬಳಿ : ಕೋವಣಮುಂ ಗುಂಡಿಗೆಯುಂ ನೇವರಿಸಿದ ಬೂದಿಯುಂ ಜಲಕ್ಕನೆ ಚೆಲ್ವಿಂ ತೀವಿರೆ ಬಿಸುಗಣ್ಗೊರವಂ ಕಾವನ ತೋಳ್ವಲಮನಱಿವೆನೆಂದೇಟ್ಟಿಂದಂ (ಕಬ್ಬಿಕಾ. ೨೯೦); ಕಮಲಾಕ್ಷಿಯರು ಪೂರಿತ ಪರಿಮಳದ ತೈಲವನು ಮೊಗದು ಮನೋಭವನಂ ಪಿತನ ಆರಸಿಯಾಗೆಂದೊಸಗೆವಱೆಗಳಸರಭಸದ ಸೌರಂಭದಲಿ ನೇವರಿಸಿದರು ಸೆಳ್ಳುಗುರ್ಗಳಲಿ ಶಶಿಮುಖಿಯ ಸಿರಿಮುಡಿಯ (ತೊರರಾ. ೧-೧೪-೧೩); ಡಾಕ್ಟರರೂ . . . ಕಾಫಿಯ ರುಚಿಯ ಸಿಹಿಲೇಪನವನ್ನು ನಾಲಿಗೆಗೆ ನೇವರಿಸುತ್ತ ಕಾಫಿ

ಕುಡಿದರು (ಬಾಬಲ. ೭೬). ೫. (ಬಿಲ್ಲಿನ ಹೆದೆಯನ್ನು) ಏರಿಸು,—ಅಣಿಗೊಳಿಸು : ಮತ್ತೆ ಧರ್ಮಜ ಬಿಲುದಿರುವ ನೇವರಿಸಿ ನಿಂದನು ಸಮರ ಕನುವಾಗಿ (ಕುವ್ಯಾಕ.೪-೩೮) ; ಧನುವ ನೇವರಿಸಿದನು ಕೊಪ್ಪಿನ ಕೊನೆಯ ನಾರ್ಯೆದು ಭಯದಲಿ ಸಿಂಜಿನಿಯ ದನಿದೋಱಿಸಿದನು . . . ರಘುಜ (ತೊರರಾ. ೩-೬-೭); ಕಂಡ ಮಾತ್ರದಿ ಖಳರಾಯ ನೇವರಿಸಿ ಕೋದಂಡವ ತೀವಿ ಜೇವೊಡೆಯೆ ಸೊಂಡಿಲ ನೆಗಹಿ ಭೂಮಿಯ ಹೊತ್ತ ಸತ್ವವೇತಂಡಗ ಕೊಱಲಿದಂತಾಯ್ತು (ಮೋಹತ. ೧೨-೫೨). ೬. ಸಮಾಧಾನ ಗೊಳಿಸು ; ಸಾಂತ್ವನಗೊಳಿಸು : ಕಣ್ಣಿನಲಿ ಒಸರಿದ ನೀರು ಹೊರಗೆ ಕಾಣದಂತೆ ತಡೆದು, ಮೃದುವಾಧ ನೇವರಿಸುವ ಧ್ವನಿಯಲ್ಲಿ ಹೇಳಿದರು (ಹಂಗೀತೆ. ೧೬೯). ೭. ಬೆರಸು ; ಕೂಡಿಸು ; ಸೇರಿಸು : ಭರವಸದ ಸುತನಿಂಗೆಂದನಾ ಮುನಿ ನಸುನಗೆಯ ನೇವರಿಸಿ ನುಡಿದನು ದೈವಗತಿಯಿಂದ (ಕೃಷ್ಣಾಕಾ. ೯-೪೬) ; ಸೆಳೆದು ಬಿಗಿಯಪ್ಪುತ್ತ ಪೇಳಿದನಿಳೆ ಗಧಿಕ ಕೌತುಕವ ಕೇಳೆಂದೆಳೆನಗೆಯ ನೇವರಿಸಿ ನುಡಿದನು ಪೂರ್ವಪದ್ಧತಿಯ (ಕೃಷ್ಣಾಕಾ. ೧೨-೮). **ನ್ಯಾವರಿಸು :** ೧. ಎದೆಯ ನ್ಯಾವರಿಸುತ್ತ ಪುರಹರ ಕದಲಿದಂ ಹಿನ್ನೆಲೆಗೆ ಹರಿಯನು ಬೆದಕಿದಂ (ಅಂಬಿಕಾ. ೩೮-೪೧) ೫. ಸ್ಮರನ ಕರದಿಂದ ನ್ಯಾವರಿಸಿದ ಚಾಪಮೆನೆ ಎರಡು ಪೆರ್ಬುಬ್ಬುಗಳು. ತಿರುಹುತಿಪ್ಪುದ ಕಂಡೆ (ತೀರ್ಥಮ. ೧೧೭). [ನೇವರಣ್ಯ + —ಇಸು$_3$]

ನೇವಲೆ (ನಾ). (?) : ಕಡಿತಲೆ ಕೆಯ್ಯ ನೇವಲೆಗೆ ಸೆಕ್ಕಿದ ಚಿಕ್ಕಸಿಧೇನು . . . ನಸುಗೆಂಪಡರ್ದರ್ವಿಪ ಬಿಟ್ಟ ದಿಟ್ಟ ನೂರ್ಮಡಿಸೆ ಪೊಡರ್ಪನಿಂತು ನಡೆದರ್ನಲವಿಂ ಪತಿಗಂಗರಕ್ಷಕರ್ (ಶಾಂತೀಶ್ವ. ೧೫-೮೮). [?]

ನೇವಸ (ನಾ). (ಕರಾ) ದಮ್ಮು ; ಉಬ್ಬಸ : ಮೊದಲೇ ನೇವಸದ ಆಳು. ಬಂಗಲೆಯಲ್ಲಿ ಕುಳಿತು, ಗುಡುಗುಡಿ ಸೇದುವಾಗಲೆಲ್ಲ ಮೈ ನಡುಗುತ್ತದೆ, ಕೆಮ್ಮು ಬರುತ್ತದೆ (ಜಾರುದಾ. ೨೦೪). [←ತುಳು. ನೇವಸೊ]

ನೇವಳ, ನೇವಣ, ನೇವಳೆ, ನೇವಾಳ, ನೇವುಳು, ನ್ಯಾವಣ, ನ್ಯಾವಳ, ನ್ಯಾವಳಿ, ಲೇವಣ, ಲೇವಳ (ನಾ). ೧. ಚಿನ್ನ ಅಥವಾ ಬೆಳ್ಳಿಯ ಹಾರ,—ಸರ : "ನೇ[ಪಾಠಾಂ.ಲೇ]ವಳಂ ಪದಕ ಸರಪಳಿ ಪಟ್ಟಕಾದಿಗಳ್ ಗ್ರೈವೇಯಮಕ್ಕು" (ಮಂಗರಾ. ೧೦೦-೨೫) ; ಹುತ್ತದಲ್ಲಿ ಕೈಯ್ಯನಿಕ್ಕಿ ಸರ್ಪನ ತೆಗೆವಾಗ ಸರ್ಪನ ಒಪ್ಪ ತಪ್ಪಿ ಮತ್ತೆ ವಸ್ತುವಿನ ನೇವಳ ಅಭರಣವಾಹಲ್ಲಿ ಅದಾರ ದೃಷ್ಟ (ಮೋಳಿಮಾ. ೫೮-೨೪೨); ತೋಳ ಬಂದಿಯ ಬಾಲಿಕೆ ಹುಲಿಯುಗುರ ಸುಲಲಿತೆ ನೇವಳದ ನಾಯಿಕೆ . . . ಪೆಣ್ಣಳ ಪುಣ್ಯಾಕಾರೆಯುಮೆನಿಸಿ ಮನಂಗೊಳಿಸುತ್ತಿದ್ದಳು (ಉದ್ಭಟ. ೫-೫೩ಪ); ಕಾವನನು ಕೊಲಬಗೆಯೆ ನೇವಳ ಹಾವಿನಂದದಿ ಹರಿವುದು (ಕೌತಿರಾ. ೩೬-೬೦) ; ಬೆಳ್ಳಿಯ ಅಥವಾ ಚಿನ್ನದ ಸರಿಗೆಗಳನ್ನು ನೆಯ್ದು ಮಾಡಿರುವ ದಪ್ಪದ ದಾರವೇ ನೇವಳ (ಸಂಶೋಧ. ೧೭೯). ೨. ನಡುಪಟ್ಟಿ ; ಕಟಿಸೂತ್ರ ; ಉಡೆನೂಲು : ಎರಡು ಬೆಟ್ಟವ ಮುಟ್ಟ ಕಾಮನ ಬಿಲ್ಲು ಶೇಖರಿಸಿ ಮೂಡಿದುದೊಯೆಂಬಂತೆ ಬೆರಕೆವರಲ ಹೊನ್ನ ನೇವಳ ಹೊಳೆದುದಾ ತರುಣಿಯ ಕಟಿತಟಾಗ್ರದೊಳು (ಭರಚ. ೪೦-೫೮) ; ನೇವಳದೊಳ್ ನೇಲ್ವ ಪೊಂಗಿಱುಗಂಟೆ ಉಲಿಯದಂತೊರ್ಕೆಯ್ಯೊಳ್ ಪಿಡಿದು . . . ಬಂದ ನಂದವಧು ಕಂದಲೊಡೆದುದಂ ಕಂಡು (ಚಿಕಸಂ. ೬೬-೧೬) ; ಅಕ್ಕಿ ಸಣ್ಣರಳಿಗೆ ಮುತ್ತು ಸಣಕೊರಳಿಗೆ ನೇವಳ ಸಣ್ಣ ನಡುವಿಗೆ (ಹಳ್ಳಿಯ. ೧೦೮). ೩. (ಚಿನ್ನದ ಅಥವಾ ಬೆಳ್ಳಿಯ)ಉಡಿದಾರ : ರುಕ್ಮಾಂಗದಂ ಬಾಸಿಗಮಂ ತೋಳ ಬಂದಿಯಂ ಕೊರಲ ಪದಗಮಂ ನೇವಳಮುಮನೆತ್ತಿಟ್ಟು . . . ಕೆಳದಿಯರೊಡಗೂಡಿ ನೀರೊಳಾಟಂಬೊಕ್ಕಂ (ರಾಮಾಶ್ವ. ೧೨೩-೨೧) ; ಒಂದು ಚಿನ್ನದ ನೇವಳ ಉಡಿದಾರದಂತೆ, ಸುತ್ತಿದ್ದ ಪಂಚೆಯ ಮೇಲೆ . . . ಹೊಳೆಯುತ್ತಿತ್ತು (ಮಲಿಸು. ೧೬೭). **ನೇವಣ :** ೧. ವಾರಮುಂ ಉಱಚೆಲ್ಲಿಯುಂ ನೇವಣಮುಂ ಲೀಲೆವಡೆಯೆ . . . ಮುಕುಂದಂ ನಗಯಜ್ಞೋಪಯೋಗ್ಯ ದ್ರವ್ಯಂಗಳಂ ತಂದು ಮುಂದೆ ನಿಂದಿರ್ದ ನಂದಗೋಪಪುರೋಗಮರನನು ರಾಗದಿಂ ನೋಡಿ (ಜಗವಿ. ೪-೮೦ ಪ) ; ತೋಳಬಂದಿಯ ಬಾಲಕಿಗೆ ಪುಲಿಯುಗುರ ಸುಲಲಿತೆಗೆ ನೇವಣ[ಪಾಠಾ.ಳ]ದ ನಾಯಕಿಗೆ . . . ರುದ್ರಾಣಿಗೆ ರಕ್ಷಣಾರ್ಥಂ ತಂದೆ ನಿಯಾಮಿಸಿ ಕೊಟ್ಟ . . . ಹೋಡಶಸಹಸ್ರ ವಿಳಾಸಿನಿಯರ್ವೆರಸು ನಡೆತಂದು (ಗಿರಿಕ. ೩-೯೧ ಪ) ; ನೇವುರದ ನುಣ್ಣನಿಯ ಕಾಂಚಿಯ ಕೇವಣದ ಕಿಂಕಿಣಿಯ ರಭಸದ ನೇವಣಗಳುಲುಹುಗಳ . . . ಡೊಳ್ಳಾಸಕಾತಿಯರಾ ವಿಬುಧಪತಿಯೋಲಗವ ಹೊಕ್ಕರು ನವಾಯಿಯಲಿ (ಕುವ್ಯಾಅ. ೭-೯೦). **ನೇವಳೆ :** ೩. ಅಜ್ಜನ...ಸೊಂಟದ ನೇವಳೆ ಮತ್ತು ಕಿವಿಯ ಒಂಟಗಳೆಲ್ಲಾ ಅಡವಿಗೆ ಹೋಗಿದ್ದವು (ನಾಚಿಕೆ.೪). **ನೇವಾಳ :** ೧. ನೇ[ಪಾಠಾಂ. ಲೇ]ವಾಳಮೆಂದು ಕೆಲಬರ್ ಪಾವಂ ಪಿಡಿವಂತೆ ದೇವ ನೀನಲ್ಲದರಂ ದೇವರಿವರೆಂದು ಪಿಡಿದಿನ್ನೇವಿಧಿವಟ್ಟಪರೋ ಮೋಹಮೂರ್ಛೆಯಿನರುಹಾ (ಪಂರಾಮಾ. ೭-೪೧) ; ಅಭೀಳಕಾಳೋರಗನಂ ನೇವಾಳವೆಂದೆತ್ತುವ (ಚಂದ್ರನಾ. ೬) ; ಮೇಲೆ ಬಿಟ್ಟ ಪಾವುಂ ನೇವಾಳಮಾಗೆ (ಕಬ್ಬಿಕಾ. ೧೪೫). ೨. ಭೂರಮೆಯ ನೇವಾಳಮೆಂಬಿನಂ ಪೊನಲ್ವರಿವ ಪಯೋಷ್ಣೀನದಿಯ ಕೂಲದೊಳ್ (ರಾಮಾಶ್ವ. ೬೪-೧). ೩. ನೇವಾಳ ಕೊಟ್ಟದ್ದು ಸುಶೀಲಳಿಗಲ್ಲವಲ್ಲ (ಅಬೋಲೀ. ೬೯). **ನೇವುಳು :** ೧. ಉರಗ ನೇವುಳಾಯಿತೆನಲು ಉರಗ ನೇವುಳಾಯಿತೆಂಬೆ ಗರಳ ಮಧುರವಪ್ಪುದೆನಲು ಅಪ್ಪುದೆಂಬೆನು (ಸುಸಾರ. ೧೯-೨). **ನ್ಯಾವಣ :** ೩. ರಾಜಿಸುವ ಚಿನ್ನದೀ ನ್ಯಾವಣವ ನೋಡು ಕಾಂತೆ (ಅರ್ಜಾವಿ.೨೪-೨೨). **ನ್ಯಾವಳ :** ೧. ತುಲಸೀದಾಮಾಹಾರ ಸರಿಗೆ ನ್ಯಾವಳ ವನಮಾಲೆ ವೈಜಯಂತಿ . . . ಧರಿಸಿದವನ ಕಂಡೆ (ತೀರ್ಥಮ. ೨೨೧). **ನ್ಯಾವಳಿ :** ೧. ಥಳಥಳಿಸುವ ಕೊರಳೊಳು ತ್ರಿವಳಿ ನ್ಯಾವಳಿ ತಾಯಿತು (ವಿದಾಕೃ ೭೧-೨). **ಲೇವಣ :** ೧. ಮುತ್ತಿನಸಮಹಾರಾವಳಿಯನುಜ್ವಲಿಪ ಲೇವಣಮನುಸುರಲೇಂ ನಕ್ಷತ್ರಮಾಲೆಯಂ ಕಂಠಾಭರಣಮನಳವಡಲಮರ್ಚಿ (ಪದ್ಮರಾ. ೩-೪೬) ; ಹಾವಿನುದಯಾಸ್ತವಾ ಲೇವಣಕ್ಕಿಲ್ಲವಾ ಲೇವಣದೊಳಾದ ತೆಱನಂತೆ ಲೋಕಂ ಚಿದಾವಲಂಬನದೊಳಿಹುದೈಸೆ (ಅನುಸಾ. ೧-೬-೫) ; ಹುತ್ತದೊಳಗಣ ಹಾವ ಚಿಕ್ಕಸಂಗೈಯ್ಯ ತೆಗೆವುತ್ತೀಯೆ ಲೇವಣವ ಮಾಡಿ ಸೇವೆಯನೆಸಗೆ ಮತ್ತೆ ನೃಪ ಕರೆಸಿ ಕೇಳಲ್ಕದೇ ಹಾವಾಗಿ ಹೊಡೆಯೆ ಬಸವಗೆ ನಮಿಸಿದಂ (ವೀಶೈಪು. ೮-೪-೧೯). **ಲೇವಳ :** ೧. ಹಾವೆಂದಱಿಯದೆ ಲೇವಳವೆಂದಱಿಯದೆ ಕ್ಷಣ ನಾಗಭೂಷಣೆಯಾದಳವ್ವೆ(ಸರ್ವಸ.೬೮-೩೬೬); ಅಂಗನಾಮಣಿಗಂಗನೆಯರು ಸುರಂಗ ಮೌಕ್ತಿಕ ಹಾರ ಮಣಿಪದಕಂಗಳಂ ಲೇ[ಪಾಠಾಂ.ನೇ]ವಳವನನುಸಂಧಿಸಿದರನುವಾಗಿ (ಬಸಪು. ೫-೩೭) ; ಬಸವನಂ ಕರೆಸಿ ತಾ ಪದಕಮಂ ತೋಱಿಮೆನೆ ವಿಷದ ಕಾಳೋರಗಂ ಮುದ್ರೆಯಿಂ ಪೊಱಮಡಲು ವಸುಧೇಶ ಬೆದಱೆ ಮತ್ತದುವೆ ಲೇವಳ[ಪಾಠಾಂ. ನೇವಣ]ವಾಗೆ ಬೆಱಗಾದನಾ ಬಿಜ್ಜಳ (ಲತಿಚಿಂ.೩೨-೮೩). [ದೇ.॥ ತುಳು. ನೇವಳ, ನೇವಳೊ, ನೆವಲ ; ತೆಲು. ನೇವಳ, ನೇವಡ]

ನೇವಳೆ 'ನೇವಳ' ನೋ.

ನೇವಾಳ 'ನೇವಳ' ನೋ.

ನೇವುರ (ನಾ). ಕಾಲಂದುಗೆ ; ಕಾಲುಕಡಗ ; ನೂಪುರ : "ಕಟಲೆಂದುಂ ನೇವುರಮೆಂದುಂ ನೂಪುರಂ" (ಕಶಸಾ. ೬೩-೪೧೩) ; ಅರಸಂಚೆಗಳೊಡವರೆ ನೇವುರದಿಂಚರಕೊಲ್ದು ಪೋಗಲಾಂ ಕಿಱಿದೆಡೆಯಂ ಸರಸಿಗೆ ಮಿಾಯಲ್ಕೆಂದೈತರುತಿರ್ದಂ ಮುಂದೆ ಮುನಿಕುಮಾರಕನೊರ್ವಂ (ಕಾದಂಪೂ. ೭೨೫) ; ನೇವುರದ ಕನ್ನವುರದೆಕ್ಕಾವಳಿಯ . . . ಘನಸ್ತನೆಯರ್ ಭಾವಜಗಜಘಟೆಯನಿಳಿಸಿ ಕಣ್ಗೊಳಿಸಿರ್ದರ್ (ಪಾರ್ಶ್ವಪು.೧೨-೧೦) ; ಕನ್ನೆಯ ಚರಣದ ಸೊಬಗಿಂತೆನ್ನರ ಮಕುಟಕ್ಕೆ ಸಾರ್ವುದೆಂದುಲಿವಂತ

ತ್ಯುನ್ನತಪದದೊಳ್ ಮೆಱೆಗುಂ ರನ್ನದ ನೇವುರದ ದನಿ ಸರೋಜಾನನೆಯಾ (ದಶಕು.೬-೫೬); ಭೂರಿ ಭೇರೀವಾದ್ಯರವ ಕೈವಾರಿಗಳ ಕಳಕಳದೊಳಡಗಿತು ನಾರಿಯರ ನೇವುರದ ಮೊಳಗಿನೊಳದ್ದುದಾ ರಭಸ (ಕುಮ್ಯಾಸ. ೧೨-೧೦೧).

[<ಪ್ರಾ. ಣೇಉರ./ಸಂ. ನೂಪುರ]

ನೇವುವುಗಟ್ಟು (ಕ್ರಿ). ಗರ್ಭಿಣಿಸ್ತ್ರೀಗೆ ಸೀಮಂತಕರ್ಮವನ್ನು ಮಾಡು (?): ಉರಗ ರಸಾಂತ್ಯವಲ್ಲದೆಡೆಯೊಳ್ ನೆಱೆ ಕೂಡೆ ಶುಭಗ್ರಹಂಗಳ್ . . . ಚಂದ್ರನೊಳ್ಪ ನಾಳ್ದಿರೆ ಶುಭವಾಸರಂ ನೆಗಟೆ ನೇವುವುಗಟ್ಟು [ಪಾಠಾಂ. ಉಟ್ಟಗೆಗೆಟ್ಟು, ನೇಉಉಗಟ್ಟು]ವುದೆಂಟುತಿಂಗಳೊಳ್ (ಲೋಕೋಪ. ೨-೨೫). [<ನೇವುವುಗೆ + ಕಟ್ಟು$_1$]

ನೇವುವುಗೆ (ನಾ). ಗರ್ಭಿಣಿಸ್ತ್ರೀಗೆ ಮಾಡುವ ಸೀಮಂತಕರ್ಮ(?): ಸೀಮಂತಕರ್ಮಂ ಮಾಡುವೊಡೆ . . . ಆ ಕರ್ಮಮಂ ಮಾಡುವ ಲಗ್ನಕ್ಕೆ ಚಂದ್ರನುದಯಮಾಗಲ್ ಲೇಸ ಬಯಸುವವಂ ಎಂಟನೆಯ ತಿಂಗಳಲ್ಲಿ ನೇವುವುಗೆಯಂ ಮಾಡುವುದು [ಪಾಠಾಂ. ತಿಂಗಳಿಗೆ ಗರ್ಭವಾದೊಡೆ, ತಿಂಗಳಿಗೆ ಉಟಗೆಯ ಕಟ್ಟು] (ಲೋಕೋಪ. ೨-೨೫ ಟೀಕೆ). 'ನೇವುವುಗಟ್ಟು' ಪರಾ. [?]

ನೇವುಳು 'ನೇವಳ' ನೋ.

ನೇವೇದ್ಯ (ನಾ). = ನೈವೇದ್ಯ ೨: ಮೋದಕನೇವೇದ್ಯವನಣಗೈಯೆ ನೆಪವೇನಂ ಪೇಳಲಿ ನಾನರಿಯೆ (ಗಣೇಶ. ೩-೫೫).

[<ಪ್ರಾ.ಣೇವಜ್ಜ./ಸಂ. ನೈವೇದ್ಯ]

ನೇಶ್ವತಂತ್ರ (ನಾ). (?): ಅಶ್ವತಂತ್ರ ಪದಾರ್ಥರಾಜಿಯು ನೇಶ್ವತಂತ್ರ ಪದಾರ್ಥರಾಜಿಯನೇ ಸ್ವತಂತ್ರಜ್ಞಾನದೊಡನೆ ಸಮಸ್ವಭಾವಮೆನ್ನುವರ ವರಮಾತಿಂಗೆಳೆಯ ಮಧ್ಯದಲಿ ವಿಶ್ವಾಸಿಸಬಾರದು ಪಯಣದೊನಶ್ವ ಶಬ್ದಮರಾದವೀವುದು ಸುಸ್ವಸಿತಮಂ ಶಕುನದರಿಂತಿದು ನಿಕೃಷ್ಟವಲಾ (ವಿವೇಧ. ೮-೪೭). [?]

ನೇಷ್ಟಾರ (ನಾ). ಋತ್ವಿಜ; ಪುರೋಹಿತ: ಕರ್ತೃ-ಕರ್ತಾರನು; ಭೋಕ್ತೃ-ಭೋಕ್ತಾರನು; ನೇಷ್ಟೃ-ನೇಷ್ಟಾರನು (ಹೊನುಗ. ೧೦೬).

[<ಸಂ. ನೇಷ್ಟೃ]

ನೇಸಣ 'ನಿವೇಶಣ' ನೋ.

ನೇಸನ್ನಿಕೆ (ನಾ). ಸ್ನೇಹ; ಪ್ರೀತಿ; ವಿಶ್ವಾಸ(?): ಬೇಸಱದಾಸಱದೆ ವನಾವಾಸಂಗಳೊಳುನ್ನತಿಕ್ಕೆ ನಿಲೆ ನಮೆದವರೊಳ್ ನೇಸನ್ನಿ [ಪಾಠಾಂ.ನೀಸನ್ನಿ, ನೀಶಂ]ಕೆಯಿಂ ಕುರುಪತಿ ಬೀಸರಮಂ ನುಡಿಯದೊಳ್ಳಿತಂ ನುಡಿದಪನೇ (ಕಾನ್ಯಾವ. ೩೪೭).

[ನೇಸನ್ನಂ (ℙ←ಮಲ. ನೇಶನ್)+-ಇಕೆ]

ನೇಸರ್ 'ನೇಸಱ್' ನೋ.

ನೇಸರ 'ನೇಸಱ್' ನೋ.

ನೇಸರಣುಗ 'ನೇಸಱಣುಗ' ನೋ.

ನೇಸರು 'ನೇಸಱ್' ನೋ.

ನೇಸರ್ಗದಿರ್ (ನಾ). ಸೂರ್ಯನ ಕಿರಣ,—ರಶ್ಮಿ: ಪಸದಿಂ ನೇಸರ್ಗದಿರ್ಗಳ ಸಸಿಜೊನ್ನಂಗಳ ಪೊದಟ್ಟ ಮಲರ್ಗಂಪುಗಳೊಂದೆಸಕಮನೆಣೆಗೊಂಡೆಡೆವಿಡದೆಸೆದರ್ ದೊಡದೇವಭೂಭೃದಮೃತಾಂಬಿಕೆಗಳ್ (ಚಿಕವಿ. ೩-೨೫). [ನೇಸಱ್ + ಕದಿರ್$_2$]

ನೇಸರ್ಗಲ್ (ನಾ). ಸೂರ್ಯಕಾಂತ ಶಿಲೆ: "ನೇಸರ್ಗಲ್, ಬಿಸುಗಲ್-ಈ ೨ ಸೂರ್ಯಕಾಂತಂ" (ಕಶಸಾ. ೫೦-೫೪); "ನೇಸರ್ಗಲ್ಮಾರ್ತಾಂಡೋಪಲಾಖ್ಯಂ" (ಚತುನಿ. ೮೫). [ನೇಸಱ್ + ಕಲ್$_3$]

ನೇಸರ್ಗುವರ (ನಾ). ಸೂರ್ಯನ ಮಗ; ಯಮ: "ಜಕ್ಕಂದೊಟಲಿದೇರ ಕಾರ್ಮಡುವಿನಣ್ಣಂ ಜವಂ ನೇಸರ್ಗುವರನಱಂ ತಾನೆಂದು ಯಮನ ನಾಮಂ" (ಕಬ್ಬಿಕೈ. ೧೪); "ತವೆ ನೇಸರ್ಗುವರನಱಂ ಜವ ಜಕ್ಕಂದೊಟಲಿದೇರನೆನೆ ಯಮನಕ್ಕುಂ" (ಕವಿಕಂ. ೩೬). [ನೇಸಱ್ + ಕುವರ$_2$]

ನೇಸರ್ದಾಣ (ನಾ) ಸೂರ್ಯನಿರುವ ಸ್ಥಳ,—ಜಾಗ: ನೇಸರ್ವೋಲ್, ಬಾಸುಟ್ಟ್‌ವೋಲ್, ನೇಸರ್ದಾಣಂ, ಬಾಸುಟ್ಟ್‌ಗಂಟು (ಶಬ್ದಾನು. ೭೩ ಪ್ರಯೋ). [ನೇಸಱ್ + ತಾಣ]

ನೇಸರ್ಬಟ್ಟು, ನೇಸಱಬಟ್ಟು, ನೇಸಱವಟ್ಟು (ನಾ). ಸೂರ್ಯಮಂಡಲ; ರವಿಬಿಂಬ: ನೇಸಱು + ಬಟ್ಟು, ನೇಸರ್ಬಟ್ಟು (ಶಬ್ದಾನು. ೮೨ ಪ್ರಯೋ). **ನೇಸಱಬಟ್ಟು**: ಇಳೆ ಘೂರ್ಮಿಸಿತೊ ನೇಸಱಬಟ್ಟು [ಪಾಠಾಂ. ಱುಬಟ್ಟ, ಱಬಟ್ಟ] ಕೆಡೆದುದೊ ಜಲಧಿ ಮೇರೆಯ ಮೀಱಿದುದೊ . . . ಎನಲುಱೆ ಮೊಳಗಿದವಂದು ವಾದ್ಯಗಳು (ಕುರಾಸಾಂ. ೧೨-೪೯). **ನೇಸಱವಟ್ಟು**: ಪರಿಭಾವಿಸೆ ನಿನಗಾತಂಗೇನಂತರವೆನ್ನೆರ್ದೆ ದಾವರೆಯನಹರ್ನಿಶಮರಲಿಪ ನೇಸಱವಟ್ಟೇ ಕಟ್ಟಾಣ್ಮಾ ಮಟ್ಟಮಿರೆನಲು (ಉದ್ಭದೇ. ೩-೬೮). [ನೇಸಱ್ + ಬಟ್ಟು$_1$]

ನೇಸರ್ಬಳಿ 'ನೇಸರ್ಬಟಿ' ನೋ.

ನೇಸರ್ಬಟಿ, ನೇಸರ್ಬಳಿ (ನಾ). ಸೂರ್ಯನ ವಂಶ; ಇನಕುಲ; ರವಿಕುಲ: ಮುನ್ನಮಿ ಪೊಡವಿಯೊಳ್ ತ್ರಿಶಂಕುವೆಂಬೊರ್ವಂ ನೇಸರ್ಬಟಿಯ ರಾಯಂ ಪಲವುಂ ಪಗಲರಸುಗೆಯ್ಯುತ್ತುಮಿರ್ದಂ (ಅದ್ಭುತ ೩-೨೪). **ನೇಸರ್ಬಳಿ**: ಬಾಳ್ವೆಯ ಸೊಡರ್ ತಾನಾರ್ವ ಮುನ್ನಮಿನ್ನೊಂದು ಬತ್ತಿಯ ಕುಡಿಗೆ ದೀಪಾಂಕುರಂಗೈದು ಪೊತ್ತಿಸದೆ ಪೋದೊಡಾಂ ನೆಲದರಿಕೆ ನೇಸರ್ಬಳಿಗೆ ಕಳ್ತಲೆಯನಡಕಿ ಪೋದಂತುಟಲ್ತೆ? (ಶ್ರೀರಾಮಾ. ೮-೨೧೫). [ನೇಸಱ್ + ಬಟ್ಟಿ$_3$]

ನೇಸರ್ಮಯಣ (ನಾ). ಗ್ರೀಷ್ಮಋತು; ಬೇಸಿಗೆ ಕಾಲ: ರೇಫಕ್ಕೆ-ಕೆಸರ್ಮಲ್ಲಿಗೆ, ನೇಸರ್ಮಯಣ (ಶಮದ. ೧೮೩ ಪ್ರಯೋ).

[ನೇಸಱ್ + ಮಯಣ]

ನೇಸಲ್, ನೇಸಲು (ನಾ). ಅಸ್ಪಷ್ಟವಾದ ರೇಖೆ,—ಆಕೃತಿ: ಮೌನಿಯಾದಳ್ ಸೀತೆ; ಅನಿಲಜನ ಕರಪುಟದಿ ಮಿರುಗುತಿರ್ದವತಂಸಮಂ ಬಿಚ್ಚುಗಣ್ಣಳಿಂ ನೋಡುತಿರ್ದಿರ್ದಂತೆ, ನಗೆಯ ನೇಸಲ್ ಸುಳಿಯೆ ಕಣ್ಮುಚ್ಚಿದಳ್ ಸ್ಮರಸುಖಸ್ಮರಣಸುಖಿ (ಶ್ರೀರಾಮಾ. ೫೨೩-೬೧೬). **ನೇಸಲು**: ಹೊರಗೆ ಜಗಲಿಯಲ್ಲಿ ಮತ್ತು ಅದಕ್ಕೂ ಕೆಳಗೆ ಅಂಗಳದಲ್ಲಿ ಕತ್ತಲೆ ಬರಬರುತ್ತಾ ಕಡಮೆಯಾಗಿ ಕಣ್ಣಿಗೆ ವಸ್ತುಗಳ ನೇಸಲು ಗೊತ್ತಾಗುವಂತಿತ್ತು (ಮಲೆಮ. ೨೮೧). [?]

ನೇಸಲು 'ನೇಸಲ್' ನೋ.

ನೇಸಱ್, ನೇಸರ್, ನೇಸರ, ನೇಸರು, ನೇಸಱ, ನೇಸಱು (ನಾ). ೧. ಸೂರ್ಯ; ರವಿ; ಭಾನು: "ನೇಸಱ್ ದಿನೇಶಾಹ್ವಯಂ" (ಕರ್ಣಾನಿ. ೬೧); ಇಂತಾಱುದಿವಸಂ ಪೋದ ಬಟಿಕ್ಕೇಟನೆಯ ದಿವಸದಂದು ನೇಸಱ್ ಮೂಡಿದೊಡೆ ಭಟ್ಟಾರರಲ್ಲಿಗೆ ನಂದಿಮಿತ್ರಂ ವಂದು ಬಂದಿಸಿ ಇಂತೆಂದಂ (ವಡ್ಡಾರಾ. ೮೨-೧೯); ನೇಸಱ್ ಮೂಡಿದುದು ಬಕಂಗೆ ಮಿಟ್ಟು ಮೂಡುವ ತೆಱದಿಂ (ಪಂಪಭಾ.೩-೨೬); ಧನಮಂ ಬಂಚಿಸಿ ಕೊಂಡೆನ್ನ ಮನೆಗುಯ್ವೆನೆಂಬನ್ನೆಗಂ ನೇಸರ್ಮೂಡಿದೊಡುಯ್ಯಲಿಂಬಿಲ್ಲದೆ ಮರದ ಪೊಟಲೊಳಗಿಟ್ಟು ಬಂದು ಮಱುದಿವಸಂ . . . ಕೊಳಲಂಜಿ ಪೋದೆಂ (ಪಂಚತಂ. ೧೬೬-೧೩); ಕುಮುದಂಗಳ ನಗೆ ಬತ್ತಿದುವು ಪಾಯ್ವ ನೇಸಱನಾಗಳ್ [ಪಾಠಾಂ. ಮುನ್ನೇಸಱನೊಳ್] (ಲೀಲಾವ. ೩-೫); ಕಡಲೊಳ್ ನೇಸಱನಟ್ಟಲುಂ ಪೊಡವಿಯಂ ನುರ್ಗೊತ್ತಲುಂ . . . ಪೊತ್ತು ಬಾನೆಡೆಯಂ ಬೇಗದಿನೆತ್ತಲುಂ ಬಗೆದನಾಗಳ್ ದಪ್ಪದಿಂ ದಪ್ಪಗಂ (ಕಬ್ಬಿಕಾ. ೧೫೨). ೨. ಸೂರ್ಯನಿರುವಷ್ಟು ಕಾಲ; ಹಗಲಿನ ಸಮಯ: ನೇಸಱಂದೊಳಗಾಂ ದಿನಕರಸುತನನಿಕ್ಕಿ ಬಂದಲ್ಲದೆ ಕಾಣಂ

ದಲ್ ಭವತ್ಪದಾಬ್ಜಮಂ (ಪಂಪಭಾ. ೧೨-೧೩೪); ಇಂದಿನ ನೇಸಱಂದೊಳಗರಾತಿಯನಿಕ್ಕದೆ ಮಾ[ಣ್ಡ]ಮಪ್ಪೊಡಿನ್ನೆಂದುಮಸಾಧ್ಯಂ (ಪಂಪಭಾ. ೧೩-೭೫). **ನೇಸರ್ :** ೧. ಆ ಸಮಯದೊಳ್ ನೇಸರಪರಾಬ್ಧಿಗಿಳಿಯಲ್ (ರುಕ್ಮಾಂಗ. ೧೨-೨೮); ನೇಸರ್ಪೆರೆಗಳಿಂ ಸೊಡರ ಬೆಳಗಿ ತೀವಿರಲ್ ನರುಗಂಪು ತುಳಿಲ್ಗೆಯ್ಯುತೆದೆತುಂಬಿ ಕಾವನಂ ಬಗೆದತ್ತು ಬರೆಯುತಿದೆ ಸುಗ್ಗಿ (ಕಾಲೂರ.೧೨೦-೨೫೨). **ನೇಸರ:** ೧. ನೆಲ ಬಾನ ತಳ್ಳೆಯಲಿ ನೇಸರನು ಬಿಡುಗಣ್ಣನಾಗುತಿರಲು (ಭಾವಜೀ. ೧-೬); ಪೇಟೆಯಲ್ಲಿ ಸ್ವಲ್ಪ ಸುತ್ತಾಡಿಕೊಂಡು ಬರುವ ಹೊತ್ತಿಗೆ ನೇಸರ ನಡುನೆತ್ತಿಗೆ ಬರುವ ಹವಣಾಕೆಯಲ್ಲಿದ್ದ (ನಿರೀಕ್ಷೆ.೧೪೯); ಅವಗಂ ತಿರುತಿರುಗುತಾಗಸದೆ ದೇವಿ ! ನಿನ್ನೀ ವನಜಮುಖಕೆ ನೀರಾಜನವನು . . . ತಂಗದಿರ ನೇಸರರ್ ತಾವು ಕಡುಹರುಸದಿಂದೆಸಗುತಿರಲು (ಕವಿಕಾ. ೨-೧). **ನೇಸರು :** ೧. "ನೇಸರೆನೆ ಜಲಜಬಾಂಧವನಕ್ಕು" (ಕಶರ. ೫೭); ವಾಸುದೇವನ ಪಾದಪುಂಡರೀಕಧ್ಯಾನ ನೇಸರಿನ ಬೆಳಗಿನೋಳ್ಪಥವಿಡಿದು ಬಂದು (ತುರಂಗ. ೯೧-೩); ಎಳೆಯ ನೇಸರು ಹತ್ತುಕೋಟಿಯ ಕಳೆಯೊಳೆಸೆದಿಹ ಆತ್ಮನೊಳು ಹೊಳೆ ಹೊಳೆವುತಿರ್ದುದು (ಮುಲ್ಲಾಶಾ. ೨-೧೧); ಮೂಡಣದಲ್ಲಿ ನೇಸರುದಿಸಿ ತನ್ನ ಹೊಂಗಿರಣಗಳನ್ನು ಹರಡುತ್ತಿದ್ದ (ಹಾಹುತ್ತ.೫೮). **ನೇಸಱ :** ೧. ನೇಸಱ ಉಳ್ಳನೆಗ ಬಿಟ್ಟ ಇದು ಬಲ್ಲಹನ ದತ್ತಿ (ಸೌಇಇ. IX-1, ೫೪-೬; ೨ನೆಯ ಶತ); ಬೆಱಗುವಡೆದಿರೆ ನೆಯ್ದಿಲೆಗೆ ನೇಸಱನ ನೆಮ್ಮುಗೆಯಾದ ತೆಱನಲಿ ಮುಱುವಡೆದ ಮಾಯಾಂಗನೆಯ ಮುಖಭಂಗವನೆ ಕಂಡು ಮಱುಗುತಿರ್ದರು ಕೂಡೆ ಕೆಳದಿಯರು (ಪ್ರಭುಲೀ. ೬-೭೧). **ನೇಸಱು :** ೧. "ತಾವರೆಗೆಳೆಯಂ, ಪಗಲ ಬೊಜಂಗಂ, ಬೆಂಗದಿರಂ, ನೇಸಱು . . . ಗರಂಗಳಾಣ್ಮಂ-ಈ ೧೧ ಸೂರ್ಯನ ಪೆಸರ್" (ಕಶಸಾ. ೪೮-೨೮); ಜಲಧಿಗಳ ಕುಡಿದುದು ಸಭೋಮಂಡಲವ ಸೆಳೆದುದು . . . ನೇಸಱನ ಕಂಗಳನು ಕದುಕಿತು ನೆನೆಯಬಾರದು ನಳಿನಭವ ಹರನಾದನೆನಲುಚ್ಚಳಿಸೆ ಪದಧೂಳಿ (ಕುಮ್ಕಾಭೀ. ೧-೪೮); ಆ ಸಮಾಧಿಯ ಭಾವದಲಿ ನವಮಾಸ ಪೂರಿತವಾಗಿ ನೆನಹಿನ ನೇಸಱನ ಬಲುಬಿಸಿಲು ಬೆಳಗಿದುದಂತರಂಗದಲಿ (ಪ್ರಭುಲೀ. ೬-೨೦); ಪೊಂಗುವ ಪೊಸ ನೇಸಱನಾಂತು ಮೂಡದೆಸೆ ಮಸಗುವವೋಲ್ . . . ಅಮೃತಮಾಂಬೆ ಪೆಂಪಿಡಿದೆಸೆದಳ್ (ಚಿಕವಿ. ೪-೫).

ನೇಸಱ ಕುಲಜ = ಸೂರ್ಯವಂಶದಲ್ಲಿ ಹುಟ್ಟಿದವನು : ನೆಱೆ ನಿನ್ನ ನಂಬಿ ನಚ್ಚಿರ್ದ ಪರಿವಾರಮಂ ಮಱೆದೆಯೋ ತೊಱೆದೆಯೋ ಮಾಱೆದೆಯೊ ಪೇಳು ನೇಸಱ ಕುಲಜ [ಪಾಠಾಂ. ನೇಸಱುಗುಲಜ] ಎಂದೆಂದು ನುಡಿನುಡಿದು ಮಿಡುಮಿಡನೆ ಮಿಡುಕಿತ್ತು ಪೌರಜನವು (ಹಚಕಾ. ೯-೫).

[ದೇ.॥ ತಮಿ. ಞಾಯಿಱು, ನಾಯಿಱು ; ಮಲ. ಞಾಯಿಱು, ಞಾಯಿಱು, ಞಾಱು ; ತುಳು. ನೆಸುರು = ಬೆಳಗ್ಗೆ ; ಮಲ್ತೊ. ನೀಱು = ಬಿಸಿಲು, ಶಾಖ./ಪ್ರಾ. ಣೇಸರ]

ನೇಸಱ 'ನೇಸಱ್' ನೋ.

ನೇಸಱಣುಗ, ನೇಸರಣುಗ (ನಾ). ಸೂರ್ಯನ ಮಗ ; ಯಮ : "ಜವನಱಂ ದಮ್ಮನು ದಡಿಗಱ್ಕು ಜಕ್ಕಂದೊಟಲಿದೇರನ್ನೆದೆ ಕಾರ್ಮಡು ವಿನಣ್ಣಂ ನೇಸಱಣುಗನೆನಲಂತಕನೊಳೆಡವಿಡದ ನಾಮ" (ಶಬ್ದಮಂ.೧೩); **ನೇಸರಣುಗ :** "ನೇಸರಣುಗನೆನಲಂತಕಂ" (ಕಶರ. ೫೭); ನಿರುತಿ ಪೆರಸಾರ್ನೇಸರಣುಗ ನೀಂ ಸಂತಮಿರು (ಕುಮಾಪು. ೧-೬೩).

[ನೇಸಱ್ + ಅಣುಗ(< ಅಣುಂಗ)]

ನೇಸಱಬಟ್ಟು 'ನೇಸರ್ಬಟ್ಟು' ನೋ.

ನೇಸಱವಟ್ಟು 'ನೇಸರ್ಬಟ್ಟು' ನೋ.

ನೇಸಱು 'ನೇಸಱ್' ನೋ.

ನೇಸಱುಪಳ್ಳ (ನಾ). ಒಂದು ಹಳ್ಳದ ಹೆಸರು : ಅಸ್ಯ ಗ್ರಾಮಸ್ಯ ಪ್ರಾಚ್ಯಾದಿ ಸೀಮಾವ್ಯವಸ್ಥಾ . . . ಪೂರ್ವ್ವಭಾಗ ಇಗ್ಗರೆ ನದೀಂಗತ್ವಾ ಸೈವನದ್ಯೇವ ದಕ್ಷಿಣಸೀಮಾವೆಳ್ಳೆಱೆ ನಾಮ್ನೈವ ಪಶ್ಚಿಮಸೀಮ್ನೈವ ಗತ್ವಾ ಬೆಮ್ಬಪ್ಪಾಟ್ಸಹಿತಂ ಪೆರಾಲ್ಗೊಲ್ಲಿಂ ಗತ್ವಾ ಉತ್ತರತ್ನೇಸಱುಪಳ್ಳಂ (ಎಕ. III, ಮಂಡ್ಯ. ೧೧೩-೫೯ ; 713). [ನೇಸಱು$_0$+ಪಳ್ಳ]

ನೇಹ (ನಾ). ೧. ಗೆಳೆತನ ; ಸ್ನೇಹ ; ಮೈತ್ರಿ : "ಸ್ನೇಹದೊಳ್ ನೇಹಮಕ್ಕುಂ" (ಕರ್ಣಾನಿ. ೪೧); ಚಪಲಕಪಿ ತನಗದುವೆ ವಿನೋದಮಾಗೆ ಮತ್ತಂ ಅತ್ತಿಯ ಪಣ್ಗಳನೀಡಾಡುತಿರ್ದುಮಾ ಪಣ್ಗಳಂ ಕ್ರಕಚನೆಂಬುದೊಂದು ಮೊಸಳೆ ಪ್ರತಿದಿನಮೊಲ್ದು ಮೆಲ್ದುಕೆಲವಾನುಂ ದಿನಕ್ಕವೆರಡರ್ಕಂ ನೇಹಮಾಗೆ (ಪಂಚತಂ. ೨೭೭-೨೨). ೨. ಪ್ರೀತಿ ; ಒಲುಮೆ ; ಅನುರಾಗ : "ನೇಹಮೆನೆ ಪ್ರೀತಿಯಕ್ಕುಂ" (ಕಶರ. ೫೭); ಇನಿಸೊಗೆ ತರ್ಪ ಕಣ್ಬನಿಗಳಿಂದಮೆ ನೇಹಮನುಂಟುಮಾಡುವಂಗನೆಯರೊಳೇನಪಾರ ಭವಭೋಗಮನಿಂತಿರೆ ಪತ್ತುವಿಟ್ಟು . . . ಶರೀರಮಂ ಕಱುತ್ತಿನಿವಿರಿದೊಂದು ಘೋರ ತಪಕೊಡ್ಡಿದೆ ನಿನ್ನವೊಲಾರ್ ಕೃತಜ್ಞೆಯರ್(ಕಾದಂಪೂ. ೯೬೦); ಒಲವಿಲ್ಲದ ಪೂಜೆ ನೇ[ಪಾಠಾಂ.ಸ್ನೇ]ಹವಿಲ್ಲದ ಮಾಟ ಆ ಪೂಜೆಯು ಆ ಮಾಟವು ಚಿತ್ರದ ರೂಹು ಕಾಣಿರಣ್ಣಾ (ಬಸವ. ೧೨೬); ಒಲವಿಂದ ನಡೆತಂದು ಶಿವನಿಳಯಮಂ ಪೊಕ್ಕು ನಲಿನಲಿದು ನೇಹವಂಕುರಿಸುತಿರೆ ಕೈಮಿಕ್ಕು (ಬಸರ. ೬-೪೦); ಮಿಗೆ ನುಡಿಗಳಿಂದೊಲಿಸಿ ನೇಹಂ ನಿಗುರ್ದುಕೂಟದ ಮನವನಿತ್ತಾವಗವೊಲುಮೆಯಂ ತೋಱೆ (ಬಸಪು. ೪೨-೧೫). ೩. ಎಣ್ಣೆ ; ತೈಲ : ಅವಚಱಿಸಿ ಪೊಯ್ದ ನೇಹಂ ತವೆಯಲೊಡಂ ಗುಣಮನುರುಪಿ ಪಿರಿದಾಗಿರೆ ಪೆರ್ಚುವ ಸೊಡರ್ಗಳ ಪೆರ್ಚಂ ನಗುವವೊಲು ಜ್ಜಳಿಸಿದುವು ವಿಮಳಮಣಿದೀಪಿಕೆಗಳ್ (ಲೀಲಾವ. ೬-೨೦); ನೇಹವಿಲ್ಲದ ಸೊಡರ ತೆರದಿ (ಮಲ್ಲಾರಿ. ೪-೧೨). [< ಪ್ರಾ. ಣೇಹ./ಸಂ.ಸ್ನೇಹ]

ನೇಹಂದಳೆ (ಕ್ರಿ). ಪ್ರೇಮವನ್ನು ಪಡೆ ; ಒಲವನ್ನು ಹೊಂದು : ಮನೋಜವಾರಣಸೌಮ್ಯಗಮನೆ ನೇಹಂದಳೆದು ಮೇಲ್ವರಿದು ಬರೆ . . . ಕಿಱುನಗೆ ಮೊಗದೊಳೆಸೆಯೆ ನುಡಿದಂ (ಭಾವಚಿಂ. ೬-೧೬). [ನೇಹ + ತಳೆ$_1$]

ನೇಹಂಬಡೆ (ಕ್ರಿ). ಪ್ರೀತಿಯನ್ನು ಹೊಂದು ; ಒಲವನ್ನು ತಾಳು : ಅಲಘುಭುಜಂ ವಿಜಯ ಜಯಂತಾವರಜರೊಳಿನಿಸುಂ ಬಿಡದೆ ಸಲೆ ನೇಹಂಬಡೆದೆಸಕಂಬಡೆದಂ ಲಲನಾಜನಸುಮನಶ್ಚಾಪಂ (ಜಯಕಾ. ೨-೭೨).

[ನೇಹ + ಪಡೆ$_1$]

ನೇಹಕಟ್ಟು (ನಾ). ಸ್ನೇಹದ ಕಟ್ಟು ; ಗೆಳೆತನದ ಬಂಧ : ಬಾಲ ಪ್ರೇಮಿಗಳ ನೇಹಕಟ್ಟು ಕಡಿದುಹೋಗುವದರ ಬದಲು ಇನ್ನಿಷ್ಟು ಗಟ್ಟಿಯಾಗತೊಡಗಿತು (ಭೂಮಿತಾ. ೫೧). [ನೇಹ + ಕಟ್ಟು$_2$]

ನೇಹಗಲಹ (ನಾ). ಪ್ರೇಮಕಲಹ ; ಪ್ರಣಯಕಲಹ : ನಳಿನ ನೇತ್ರೆಯರೊಳು ನೇಹಗಲಹವಾಂತು ಮುಳಿದರೆ ಸ್ಮರ ತಮ್ಮದಿಸಲು ಬಳಿಯ ಕಬ್ಬುಗಳು ಬಿಲ್ಲಹವೆಂದು ಮಸೆದ ಕಂದುಳಿಯಿಂದ ಕಡಿದ ಜೂದಿನಲಿ (ಮೋಹತ. ೨೦-೨೩); ಹೊರೆಗಾಣದಿಹ ನೇಹಗಲಹದೆ ಮೊಗಂಗೊಡದ ಗಿರಿಸುತೆಯ ಬೆಂಗಡೆಗೆ ಸೊಪ್ಪುಳಾಗದ ತೆಱದೊಳಿರದೆ ಬಳಿಸಂದು ತನ್ನಯನಾಬ್ಜಮಂ ನಿಜಾಂಜಲಿಯಿಂದೆ ಬಾಸಣಿಸಲು (ಚಿಬಪು. ೩೮-೧); ನಲ್ಲನಲ್ಲರ ನೇಹಗಲಹದೊಳ್ಮುನಿದು ರತಿಗೊಲ್ಲದೊಲ್ಲದ ಕಾಂತೆಯರ ಮನಂತರಹರಿಸಿ ನಿಲ್ಲನಿಲ್ಲದವೊಲಂಗಜನುಱುಬತೊಡಗಿದಂ (ಜೈಮಿಭಾ. ೨೬-೫).

[ನೇಹ + ಕಲಹ]

ನೇಹಗೆಯ್ (ಕ್ರಿ). ಪ್ರೀತಿಮಾಡು ; ಪ್ರೀತಿಸು : ಪರೀತಾಪಮಂ ಚಿತ್ತ ನೀನೇಕೆ ಸಾರ್ವಯ್ ತೆರಳ್ಗುಂ ನಿಶೀಥಂ ಮಹೀನಾಥನೆತ್ತಂ ನರರ್ತ್ಯಕ್ತ ಸತ್ಯರ್ಬಹುಸ್ತ್ರೀವಿಲೋಲರ್ಕರುತ್ತೀತನೊಳ್ನೇಹಗೆಯ್ದಾನೆ ಗಾಂಪಳ್ (ನರಚ. ೯೪-೨೫೧). [ನೇಹ + ಕೆಯ್$_1$]

ನೇಹದೋಟ(ನಾ). = ನೇಹಗಲಹ : ಪರವೆ . . . ಉರವಣಿಸಿ ಕದಪಿನೊಳಗಶ್ರುಧಾರೆಗಳು ಸೈವರಿಯೆ ಮುನಿಸಂ ಮಸೆದು ನೇಹದೋಟಿಯನು ಸೌಂದರನೊಡನೆ ರಚಿಸಿ ನಸುನಗೆಯನುಣ್ಮಿಸಿದಳಾತನ ಮೊಗದೊಳಾ ಪದದೊಳು (ಸೌಂದಪು. ೧೫-೩೧). [ನೇಹ+ತೋಟ$_1$]

ನೇಹನೋಟ (ನಾ). ಸ್ನೇಹದಿಂದ ಕೂಡಿದ ನೋಟ; ಪ್ರೀತಿಯಿಂದ ಕೂಡಿದ ದೃಷ್ಟಿ : ಚೇರೆಡೆಯಿಟ್ಟ ದಿಟ್ಟಯಿನಭೀಕ್ಷಿಸುವಾಕೆಯ ನೇಹನೋಟಮುಂ . . . ಸಾರದಿರೆಂದು ತನ್ನ ಸಖಿಗುತ್ತರವಂ ಮುನಿದಾಕೆಯಿತ್ತುದಂ ತೋರಿದುದೆನ್ನದಾಗಹಹ ಕಾಮುಕನೀಕ್ಷಿಪನಲ್ತೆ ನೈಜಮಂ (ಶಾಕುಂತ. ೨೦-೩೬). [ನೇಹ+ನೋಟ]

ನೇಹಮಿ$_1$, ನೇಹಮಿಾ (ನಾ). ವಾಡಿಕೆ ; ನಿತ್ಯರೂಢಿ ; ಕಾಯಂ ಪದ್ಧತಿ : ಬಸವಂತಿ ತನ್ನ ನೇಹಮಿಯ ಮುಗುಳುನಗೆಯರಳಿಸಿ . . . ಆಹಾರ-ಪಾನೀಯ, ಶರೀರ-ಸಂಗೋಪನದ ಮೇಲೆ ತನ್ನ ಭಾಷ್ಯ ಮಾಡುತ್ತಿದ್ದಳು (ದೀಪಹ. II, ೧೭೬). **ನೇಹಮಿಾ** : ರಾಪಜೀಕಾಕಾ ಗೋವಿಂದಭಟ್ಟನಿಗೆ ವಾಡೆಯ ಪೂಜೆಯನ್ನು ನೇಹಮಿಾಯಂತೆ ಸಾಗಿಸಿಕೊಂಡು ಹೋಗಲು ಫರ್ಮಾಯಿಸಿದ್ದರು (ದೀಪಹ. II, ೮).

[<ನೇಹಮಿ$_2$]

ನೇಹಮಿ$_2$ (ಅ). ಯಾವಾಗಲೂ ; ಸದಾ ; ಸತತವಾಗಿ: ಈ ಪ್ರಕಾರದ ಬೊಬ್ಬಾಟಗಳು ಪತ್ರದ್ವಾರದಿಂದ ನೇಹಮಿ ನಡೆದಿರುತ್ತವೆ (ಮುಂಬಪ್ಯಾ. ೮ ಪ್ರಸ್ತಾವನೆ). [←ಮರಾ. ನೇಹಮಿಾ]

ನೇಹಮಿಾ 'ನೇಹಮಿ$_1$' ನೋ.

ನೇಹಾಸ್ಪದ (ನಾ). ಸ್ನೇಹಕ್ಕೆ ಅರ್ಹನಾದವನು; ಸ್ನೇಹಯೋಗ್ಯ: ನಂಟನತಿನೇಹಾಸ್ಪದನು ನಿಷ್ಕಂಟಕದ ರಮಣನು ವಿಚಾರವಿದುಂಟೆ ಮನದಲಿ ಹರಿ ನಿಜಾತುಮನೆಂಬ ಕಥನದಲಿ (ನಿಭಾಗ. ೧೧-೧೫-೧೭).

[ನೇಹ+ಆಸ್ಪದ]

ನೇಹಿ 'ನೆಮ್ಮಿ' ನೋ.

ನೇಹಿಗ (ನಾ). ಗೆಳೆಯ; ಸ್ನೇಹಿತ; ಮಿತ್ರ : ಪ್ರಾಣಾನುಕೂಲ ನೇಹಿಗರೊಂದುಗೂಡಿ ಚಿತ್ತಜನಾತ್ಮಸಂಭವ ಬರ್ಪ ವೀಧಿಯೊಳುತ್ತಮ ಜಾರನಾರಿಯರು . . . ಸುಳಿದಾಡುತಿಹರು (ಮೋಹತ. ೧೮-೨೧); ಅರಸಂ ನೇಹಿಗನೊಲ್ಮೆಗಂ ನೆರವಿಗಂ ಕಾವಂ ಹಿತಂ . . . ಬಿರುದಂತೆಂಬರ ಗಂಡನಪ್ರತಿಮವೀರಂ ಬಲ್ಲರೊಳ್ಬಲ್ಲಹಂ (ಅಪ್ರತಿ. ೧೪-೨೩); ಪಗೆವರ್ ನೇಹಿಗರೆನ್ನದೆ ಸುಗುಣರ್ ಗುಣಹೀನರೆನ್ನದಾರಾರೇನಂ ನಿಗದಿಸೆಯುಂ ಕೇಳ್ದದಱಲ್ಲಿ ಗುಣಗ್ರಹಣಮನೆಸಪ್ಪುದೇ ಅಱಿವೆನಿಕುಂ (ನೀತಿಮಂ. II ೩೦೩); ನಂಟರೆಲ್ಲರುಂ ನೇಹಿಗರ್, ನಾಡಿಗರ್ ನುಡಿಯೊಳ್ ನಡೆವರ್ (ರಾಮಾಶ್ವ. ೧೨-೯); ಅದೊ ಅವನ ನೇಹಿಗನ ನಗೆನುಡಿ-ಅಗಲಿದರು—ಬಹನಿತ್ತೆಡೆ ! (ಗಣೇಶ. ೪೯-೧). [ನೇಹ+-ಇಗ]

ನೇಹಿತ (ನಾ). = ನೇಹಿಗ : ಸುರನಾಥಸಖನ ತಾತನಡಿದಾವರೆಗೆ ಮಣಿದು ವಂದಿಸಿದೆ ಸಹಜಾತಹರ್ಷದೊಳೆಂದು ಬಿನ್ನವಿಸಯೋಧ್ಯಾಧಿನಾಥ ಭರತಂಗೆಮ್ಮ ಕೌಶಲವ ವಿಸ್ತರಿಸು ಮತ್ತಖಿಲನೇಹಿತರಿಗೆ (ವೆಂಕಾರಾ. ೨-೨೨-೨೩). [<ಸಂ. ಸ್ನೇಹಿತ]

ನೇಳಲ್$_1$ 'ನೇಟಲ್' ನೋ.

ನೇಳಲ್$_2$ (?) (?). (?) : ಕಟಿಯದು ಮೊಲ್ಲೆ ಮಲ್ಲಿಗೆ ಮುಗುಳ್ತುದು . . . ನೇಳಲಂಗೊಟಿಯದೆ ಮಾವು ಬಂದುದದಱಿಂ ಶಿಶಿರಾಧಮನಂ ಜಡಾತ್ಮನೆಂದುಟಿಯದು ಬಸಂತನಂ ಕರೆದಳಕ್ಕುಮೆ ಭೂವಧು ವೇಶ್ಯೆಯಂದದಿಂ (ಅರ್ಧನೇ. ೩-೫೯). [?]

ನೇಱಳು 'ನೇಱಾಲ್' ನೋ.

ನೇಱಳೆ 'ನೇಱಾಲ್' ನೋ.

ನೇಱಿಡು (ಕ್ರಿ). ತೂಗುಹಾಕು ; ನೇತುಹಾಕು ; ಜೋತುಬಿಡು : ನಾಗಶರ್ಮನೆಂಬ ಪಾರ್ವಂ . . . ಒಂದು ಕೊಡಂ ತೀವಿದ ಸತ್ತುಗದ ಪುಡಿಯಂ ಪಡೆದು ಆ ಕೊಡನಂ ತನ್ನ ಪಟ್ಟಪೆಡೆಯೊಳ್ ಕಟ್ಟ ನೇಱಿಟ್ಟು [ಪಾಠಾಂ. ನೇಲ್ದಿಟ್ಟು] . . . ತನ್ನೊಡನೆಯ ಬಡಪಾರ್ವಂಗಿಂತೆಂದಂ (ಪಂಚತಂ. ೧೮೫-೨೩). [ನೇಱು+ಇಡು$_1$]

ನೇಱಾಲ್, ನೀರಲ, ನೀಱಲು, ನೇರಲು, ನೇರಲೆ, ನೇರಳೆ, ನೇರಿಲು, ನೇರಿಲೆ, ನೇರಿಳೆ, ನೇಱಳು, ನೇಱಳೆ, ನೇಱಾಲು, ನೇಱಾಲೆ$_1$, ನೇಱಾಳೆ (ನಾ). ಒಂದು ಬಗೆಯ ಮರ ಮತ್ತು ಅದರ ಹಣ್ಣು ; ಜಂಬು : "ಜಂಬೂನಾಮಂ ನೇಱಾಲ್" (ವಸ್ತುಕೋ. ೩೪-೧೦); ಪುಟ್ಟುಂಗುರುಡಿ . . . ಒಂದು ದಿವಸಮುದ್ಯಾನವನಕ್ಕೆ ಪೋಗಿ ನೇಱಾಲ ಪಣ್ಣಳಂ ತಡವರಿಸಿಯಾಯ್ದಾಯ್ದು ತಿನ್ನುತ್ತಿರ್ಪಳ್ (ವಡ್ಡಾರಾ. ೯-೮); ಎತ್ತಿದಶೋಕಪಲ್ಲವಪತಾಕೆಯೊಳಂ ನೇಱಾಲ ರಕ್ತಚಾಮರಂಗಳೊಳಂ ಬಿಗಿದ ನಾರಂಗದ ಮೇಲ್ಕಟ್ಟನೊಳಂ . . . ಕಾಮದೇವನನತಿಪ್ರೀತಿಯಿಂದರ್ಚಿಸಿ (ಕಾದಂಉ. ೭೮೧); ಹುಲಿಗಿಲ ಬೇಳೆಗಳಂ ನೇಱಾಲ ಬೀಜಂ ಕಡಸಿಗೆಯನ ಬೇರಂ ಸುಣ್ಣಂ ಜಲಮಿವಱಿಂ ತೆಗೆಯಲ್ ವಿಷಮಟಿಗುಂ (ಲೋಕೋಪ. ೮-೨೩); ಬಾಟೆಯ ಪಣ್ಣದೊಂದು ರುಚಿ ನೇಱಾಲ ಪಣ್ಣೊಳಗುಂಟೆ (ಧರ್ಮಾಮೃ. ೪-೧೨೭). 'ಅರನೇಱಾಲ್' ಪರಾ. **ನೀರಲ** : ನೀರಲದ ಹಣ್ಣು ಬಲು ಕಪ್ಪು ಇದ್ದರು ತಿಂದು ನೋಡಿದರ ರುಚಿ ಭಾಳ (ಗರತಿ. ೧೨೮); ನೀರಲ ಹಣ್ಣು ತಿನ್ನಲು ಬಲು ರುಚಿ (ರೂಢಿ). **ನೀಱಲು** : ನೀಱಲ ಫಲ ಉತ್ತತ್ತಿ ಮಾವಿನ ಹಣ್ಣಿನಂತೆ ಇರುವರು ಮರ್ತ್ಯರು ಹಲಸು ತೆಂಗು ದಾಳಿಂಬರದಂತೆ ಇರುವರು ಸ್ವರ್ಗದವರು (ವಡಸಂ. ೪೮೭-೨೧೯). **ನೇರಲು** : 'ಪನ್ನೇರಲು' ಪರಾ. **ನೇರಲೆ** : (ಕ). **ನೇರಳೆ** : ಜಂಬುನೇರಳೆ, ನೇರಳೆ (ಮೈಔಗಿ. ೭೩-೧೪೯೪); ನೇರಳೆ ಹಣ್ಣಿನ ಶರಬತ್ತು ಉರಿಮೂತ್ರಕ್ಕೆ ಬಹಳ ಒಳ್ಳೆಯ ಔಷಧಿ (ರೂಢಿ). 'ಜಂಬುನೇರಳೆ' ಪರಾ. **ನೇರಿಲು** : ಅದರ ಎಲೆಗಳು . . . ನೇರಿಲ ಎಲೆಯ ಹಾಗೆ ಇದ್ದು ದೇಂಟನ ಬುಡದಿಂದ ತುದಿಯ ತನಕ ಎರಡೆರಡರಂತೆ ಸಾಲುಗೊಂಡಿರುತ್ತವೆ (ಮುಂಬಯಿ. ೪-೫೪). **ನೇರಿಲೆ** : ಹಲಸು ಮಾವು ನೇರಿಲೆ ಹುಣಿಸೆ ಬಾಳೆ ಬದಣ ಮುಂತಾದ ಏನುಳ್ಳ ಕೀಳುಪಟ್ಟೆ ತೃಣಕಾಷ್ಠ ಮುಂತಾದ ಧಾನ್ಯದ (ಎಕ. VII, ಶಿವಮೊ. ೭೧-೨೮ ; 1431). **ನೇರಿಳೆ** : "ಅಪರಾಜಿತಾ—ಗಿರಿಕರ್ಣ ; ನೇರಿಳೆಹಣ್ಣು" (ಓಷಧಿ. ೭). **ನೇಱಳು** : ರಕ್ತಾತಿಸಾರದಲ್ಲಿ ಕೈಯಿಂದ ಕೊಡಹಿದ ಹಸುವಿನ ಮಜ್ಜಿಗೆಯಲ್ಲಿ ಹುಣಿಸೆಬೇರನಾದರೂ ನೇಱಳ[ಪಾಠಾಂ. ಬೇಲದ] ಚಿಗುರನಾದರೂ . . . ಅರೆದು ಕುಡಿಯಿಸಲು ಹಿತವಹುದು (ವೈದ್ಯಸಾ. I, ೨೨೧). **ನೇಱಳೆ** : ಮಾವಿನ ಬೀಜ, ನೇಱಳೆಬೀಜ, ಪದ್ಮಕ, ಲೋಧ್ರ; ಬೆಲ್ಲವತ್ತದ ಕಾಯ ತಿರುಳು, ಇದೊಂದು ಪ್ರಯೋಗ (ವೈದ್ಯಸಾ. I, ೨೦೯). **ನೇಱಾಲು** : "ಜಂಬುವೆನೆ ನೇಱಾಲು" (ಮಂಗರಾ. ೩೫-೧೩); ಬಸಿಱ ಬಾಳುವೆಗೆ ನಿಮ್ಮಲ್ಲಿ ಮಸಿಯ ಹೂಸಿ ನೇಱಾಲ ಹಣ್ಣ ಮಾಱುವಂತೆ ಕಾಲ ಸಾಲ ದಾರಿದ್ರ್ಯಕ್ಕಂಜಿ ನಿಮ್ಮ ಮಱೆಹೊಕ್ಕೆನಯ್ಯಾ (ಬಸವ. ೨೯೩); ನೆಲ್ಲಿ ನೇಱಾಲು ನಗರೆ ಕಡಸಿಗೆ ಕಲ್ಲರಳಿ ಕರ್ಪೂರ ಕದಳಿಗಳಲ್ಲಿ ನೋಡಿವೆ ಭೂಮಿಸುತೆ ಭೂಜಾತಸಂತತಿಯ (ತೊರರಾ. ೩-೧-೨೯); ನವರಸ ದಾಳಿಂಬದ ಬಿತ್ತಂ ನೇಱಾಲ ಪೊಸದೋರೆಯನಿಮ್ಮಾವಿನ ಪಣ್ಣಂ ತರಿಸಿ ಕುಡುಕುಗೊಡಲು (ಜಯಕಾ. ೨-೨೩); ಹುಲ್ಲೆಹಳ್ಳಿಯ ಸೀಮೆಯ ನೆಲ್ಲಿಯ ಮರದ ಮೂಡ ಹಾಸನದ ಗದ್ದೆಯ ನೇಱಾಲ ಸೊಸಿಯಿಂದಂ ಛಳಿಯ ಹಳ್ಳದಿಂದಂ ತೆಂಕಯಿಂತೀ ಚತುಸ್ಸೀಮೆ (ಎಕ. V, ಹಾಸನ. ೧೩-೧೩ ; 1516). **ನೇಱಾಲೆ$_1$** : 'ಜಂಬುನೇಱಾಲೆ' ಪರಾ. **ನೇಱಾಳೆ** : ವನದೊಳ್

ನೇಱಾಳವಣ್ಣನಗ್ನಿಜೆ ಬಹು ಪ್ರಖ್ಯಾತಿಯಿಂ ಪತ್ತಿಸಲ್ ದನುಜಾರಾತಿ ಸ್ಯಮಂತರತ್ನವ ನೃಪಂಗೀಯಲ್ಕೆ ದೂಱ್ ಪೋದುದೇ (ಸೋಮೇಶ. ೮೩); ಮೆಲುವಡೆ ಬೆಳಲ ತನಿವಣ್ಣು ಮಾವಿನ ಹಣ್ಣು ನೇಱಾಳೆ [ಪಾಠಾಂ. ಲ] ಹಣ್ಣು . . . ಇಪ್ಪೆಯ ಹಣ್ಣದಱ ಹೂ ಮಧುರ ಮಧುವುಂಟು (ಬಸಪು. ೧೮-೧೬).

[ದೇ.॥ ತಮಿ. ನಾವಲ್ ; ಮಲ. ಞೇಱಲ್, ಞಾಱಲ್ ; ತುಳು. ನೇರೊಲು, ನೇರೊಳು ; ಕೊಡ. ನೇರು ; ತೆಲು. ನೇರೆಡು, ನೇರೇಡು]

ನೇಱಾಲ ಕೆಱೆ 'ನೇಱಾಲ್ಗೆಱೆ' ನೋ.

ನೇಱಾಲಗೆ (ನಾ). ಒಂದು ಸ್ಥಳದ ಹೆಸರು : ಕಾಳೆಗದೊಳಣ್ಣವಸಯ್ಯ . . . ಕಾದಿ ಸತ್ತಂ ಅತನ ಮಗಂ ಬೂತುಗಱ್ಗೆ ನೇಱಾಲಗೆಯ ಕಲ್ನಾಡು ಕೊಟ್ಟ ಚನ್ದ್ರಾರ್ಕ್ಕ ತಾರಂಬರಂ (ಎಕ.XV, ಅರಸೀ. ೨೩೭-೮ ; 971). 'ನೇಱಾಲೆ$_2$', 'ನೇಱಾಲ್ಗೆಱೆ' ಪರಾ. [?]

ನೇಱಾಲು 'ನೇಱಾಲ್' ನೋ.

ನೇಱಾಲುಗುಂಡಿ (ನಾ). ಒಂದು ಸ್ಥಳದ ಹೆಸರು ; ℗ ಈಗಿನ ಹೊನ್ನಾಳಿ ತಾಲ್ಲೂಕಿನ 'ನೆರಳುಗುಂಡಿ' ಗ್ರಾಮ : ಸಕವರಿಸ ೯೮೬ ಜಯಸಂವಚರದ ×× ಹೆಯ ನೇಱಾಲುಗುಣ್ಡಿಯ ವೂರೊಡೆಯ ಹಿಟ್ಟಮಯ್ಯ . . . ಮಾಡಿಕೊಟ್ಟ ಗೊ××ಸಸನ (ಎಕ. VII, ಹೊನ್ನಾಳಿ. ೧೧-೯೨೬ ; 1054 ?). [?]

ನೇಱಾಲೆ$_1$ 'ನೇಱಾಲ್' ನೋ.

ನೇಱಾಲೆ$_2$ (ನಾ). ಒಂದು ಸ್ಥಳದ ಹೆಸರು : ಬಡಗ ಅಲದ ಮರಂ ಪಡುವ ಮೊಗದೆ ಪೋಗಿ ಕಲ್ಕುಪ್ಪೆಯಿಂ ಬಡಗ ಮೊಗದೆ ಪೋಗಿ ಪಳ್ಳದ ಮೂಡನೇಱಾಲೆಬಟಾಯಂ ಬಡಗ ಮೊಗದೆ ಪೋಗಿ ಕಡೆಕೊಳಂ ಮರಿಯಿಸೆ ಎರಡೂರ ಇರ್ಕ್ಕೂಡು (ಮೈಅರಿ. ೧೯೩೪, ೩೮-೧೨ ; 10ನೆಯ ಶತ); ಶ್ರೀಮತ್ ಜೀಮೂತವಾಹನ ಸೇನವಾರಂ ಚಿತ್ತವಳ್ಳಿಯೊಳ್ ದೇಗುಲವಂ ಮಾಡಿ ಜೀವಿತೇಶ್ವರಕ್ಕೆ ನೇಱಾಲೆಯುಂ ಕಿಱಾಯ ಒರಲ್ಗೋಡುವಂ ಕೊಟ್ಟಂ (ಎಕ. VI, ಚಿಕ್ಕಮ. ೯೫-೯ ; ಸು. 1025). 'ನೇಱಾಲಗೆ', 'ನೇಱಾಲ್ಗೆಱೆ' ಪರಾ. [?]

ನೇಱಾಲ್ಗೆಱೆ, ನೇಱಾಲ ಕೆಱೆ (ನಾ). ಒಂದು ಕೆರೆಯ ಹೆಸರು : ತಸ್ಯ ಕ್ಷೇತ್ರಸ್ಯ ಸೀಮಾ ಪೂರ್ವೋತ್ತರದಿಗ್ಭಾಗೇ ಸಿರಿಗಾಳುಗ್ರಾಮ . . . ತತಃ ಪ್ರಾಗ್ಗತ್ವಾ ನೇಱಾಲ್ಗೆಱೆ ತತಃ ಕುರುಪಕೆಱೆ (ಎಕ. XI, ದಾವಣ. ೬೬-೩೩ ; 694). **ನೇಱಾಲ ಕೆಱೆ** : ಮನೆಯ ನೆಲಸಣಂ ಮೂಡಣ ಪೆರ್ಬಾಗಲಿಂ ಪೊಱಗು ತೆಂಕ ಸೇತುವಿನ ಬಡಗಣ ಕೋಡಿಂ ಮೂಡ ದೇವಾಲಯಂ ಬಡಗ ನೇಱಾಲ ಕೆಱೆ ನಂದಾದೀವಿಗೆ ಗಾಣಂ ಮ ೬೫ (ಎಕ. VII, ಶಿಕಾರಿ. ೨೦-೧೭ ; 1032). [ನೇಱಾಲ್? + ಕೆಱೆ]

ನೇಱಾಲ್ವರ (ನಾ). ನೇರಳೆಯ ಮರ ; ಜಂಬೂವೃಕ್ಷ : ಕಳಿದುಗು ವಲರ್ವುಡಿ ತಳೆದ ಭಸಿತದ ಸೊಗಸನುಗಿಸೆ ತುಂಬಿಗಳ ಸವಿ ಮೊಳೆವ ಝುಂಕೃತಿ ಕಿವಿದೊಡವುವಾವುಗಳ ಪಾಡಿನಳವಡಿಕೆ ದುಡುಕೆ ಶಿವಚಿಹ್ನ ವಾಂತಂತೆ ನೇಱಾಲ್ವರಂ ಚೆಲ್ವಾದುದು (ಪದ್ಮರಾ. ೮-೩೧).

[ನೇಱಾಲ್+ಮರ$_1$]

ನೇಱಾಸು (ಕ್ರಿ). ನೇತುಬಿಡು ; ತೂಗುಹಾಕು : ಶ್ರೀಮತಿಯಂ ಪಂಡಿತೆ ಬಂದು ಕಂಡು ನಿನ್ನ ಬರೆದ ಪಟಮಂ ಮಹಾಪೂತ ಜಿನಾಲಯದ ಮುಂದೆ ನೇಱಾಸಿದೆಂ[ಪಾಠಾಂ. ನೇಲಿದೆಂ] . . . ಎಂಬುದುಂ (ಚಾವುಂಪು. ೨೩); ವಾನಪ್ರಸ್ಥಜನಂಗಳ ಧೌತವಸ್ತ್ರ ಪವಿತ್ರಾಕ್ಷಸೂತ್ರಂಗಳಂ ಕಮ್ಮ ಕವಲ್ಗೊಂಬುಗಳೊಳ್ ನೇಱಾಸಿಕೊಂಡಿಂಬಿನೊಳವರೊಡನೆ ನಡೆವ ಸಾರಂಗಸಮೂಹಮುಮಂ (ಪಂಚತಂ.೧೧೯-೩).

[ನೇಱು + -ಇಸು$_3$]

ನೇಱಾಳೆ 'ನೇಱಾಲ್' ನೋ.

ನೇಱು (ಕ್ರಿ). ೧. ನೇತುಹಾಕು ; ತೂಗುಹಾಕು ; ಜೋತುಬಿಡು : "ಎಱಲ್ದುದು ನೇಱಾದುದೆಂದುಂ ಬಟಾಕಂ ತಾಂ ನೇಲ್ದುದೆನ್ನಲದು ನೇತುದು" (ಕವಿಕಂ. ೨೫೬) ; ಪಂಡಿತೆ . . . ಬಂದನೇಕಧೂರ್ತ ಜನಮನಸ್ಸಮ್ಮೋಹನತಮಃಪಟಮಂ ಚಿತ್ರಪಟಮನಾ ಚೈತ್ಯಾಲಯದ ಕೆಲದ ಪಟ್ಟಸಾಲೆಯ ಮುಂತೆ ನೇಱಾ ನಿಜಾಭಿಲಷಿತಕಾರ್ಯಸಿದ್ಧಿಯನೆ ಪಾರುತ್ತಮಿರ್ದಳ್ (ಆದಿಪು. ೩-೪೫ ಪ) ; ಅದು ಸುರಭೂಜವಲ್ಕವಸನ ದ್ವಯಮಂತದು ದಂಡಮಲ್ಲಿ ನೇಱಾ[ಪಾಠಾಂ. ಲಿ]ದುದದು ಜೋಗವಟ್ಟಗೆ (ಕಾದಂಪೂ. ೬೯೨); ಸೂಳೆಯ ಕೊರಳಲ್ಲಿ ಏಳುನೂಱೆಪ್ಪತ್ತಾನೆ ನೇಱಾತ್ತ ಕಂಡೆ (ಅವಚಂ. ೧೦-೩೮) ; ವಜ್ರಲೇಪದ ಕುಮಾರಧಾರೆಗಳ ನೇಱಾದ ನೆಲಹಿನಾಯುಧದ ಕುಳಿಯ . . . ತಾಣಂಗಳಂ ತೋಱಾದಂ ಭೈರವಂ ಸಿದ್ಧಪತಿಗೆ (ಸಿದ್ಧರಾ. ೩-೧). ೨. ತೂಗುಬೀಳು; ಜೋತುಬೀಳು; ನೇತುಬೀಳು : ಗಿರಿ ಹರಿಯ ಪವಿಯ ಹತಿಗೆಂದಿರಿಸಿದ ಠಾಣಾಂತರಕ್ಕೆ ನೇಱಾರ್ದ ಪಲವುಂ ಹರಿಗೆಗಳೆನಲ್ಕೆ ನಭದೋವರಿಯೊಳ್ ಪೆಜ್ಜೇನು ಹುಟ್ಟ ರಂಜಿಸುತಿರ್ಕುಂ (ಮಲ್ಲಕಾ. ೩-೩೧) ; ತಳತಳಿಸಿ ಪೊಳೆವ ನಿರ್ಮಳಫಳಕಂ ನೇಱಾರ್ದೊಡಂತದಂ ತೆಗೆದದಱೊಳ್ ಬಳಪದಿನಾಗಳ್ ಬರೆದೆಂ ಲಳನೆಯ ರೂಪಾತಿಶಯಮನೆನ್ನಱಾವನಿತಂ (ದಶಕು. ೮-೩೦೦). ೩. ನೀಡು ; ಚಾಚು : ದುರ್ಯೋಧನನಂ ಕೊಲ್ಲದಿರೆನೆಂದು ಭಾರತಮಲ್ಲಂ ಗಾಂಡಿವಕೆ ನೇಱಾದಂ ಕರತಳಮಂ (ಗದಾಯು. ೮-೨೬). 'ನೇಲ್' ಪರಾ.

[ದೇ.॥ ತಮಿ. ಞಾಱ್ಱು, ನಾಱ್ಱು ; ಮಲ. ಞೇಱ್ಱು]

ನೇಟಲ್, ನೆಳಲು$_2$, ನೆಟಲ್$_2$, ನೇಳಲ್$_1$ (ನಾ). ಒಂದು ಬಗೆಯ ಮರ ; ಪ್ರಿಯಂಗು : "ಪ್ರಿಯಂಗು ಶ್ಯಾಮೆ ಫಲಿನಿ ನೇಟ[ಪಾಠಾಂ. ಕೇಳ, ಸೆಳ]ಲಕ್ಕು" (ಮಂಗರಾ. ೩೪-೯) ; ಪೊನ್ನೆಯ ಕಮ್ಮರದಾರ ಕೇರ ನೇಟ[ಪಾಠಾಂ.ರಿ]ಲ ಸಿರಿತಾಳೆಯಿಂಗುಳದ ನೆಲ್ಲಿಯ . . . ಮರಂಗಳ ಕೊಂಬುಗಳಂಬರಂಬರಂ ಪುದಿದು . . . ಕಱಂಗಿ ಕಟ್ಟಲಿಸುತಿರ್ದುದು ಕಾನನವೆತ್ತ ನೋಟ್ಪೊಡಂ (ಲೀಲಾವ.೬-೨೧). **ನೆಳಲು$_2$** : ನೇಱಾಲ ತೊಕ್ಕು, ಮಾವಿನ ಬಿತ್ತಣ, ಹೆಮ್ಮರದ ತೊಕ್ಕು, ನೆಳಲ ತೊಕ್ಕು . . . ಬಲವಱಾತು ಸೇವಿಸಲು ರಕ್ತಪಿತ್ತ . . . ಗ್ರಹಣಿ ಮೊದಲಾದ ವ್ಯಾಧಿಗಳು ಪರಿಹರ (ವೈದ್ಯಸಾ.I,೨೨೨). **ನೆಟಲ್$_2$** : "ನೆಟಲ್ = ಆತಪತ್ರಾದಿ ಛಾಯೆ; ಜಳದರ್ಪಣ ಪ್ರತಿಬಿಂಬಂ ; ಒಂದು ಮರಂ" (ಶಮದ. ಪರಿ. ೧); "ನೆಟಲ ಮರ – ಶ್ಯಾಮೆ, ಮಹಿಲೆ, ಲತೆ, ಗೋವಂದನಿ, ಗುಂದ್ರೆ, ಪ್ರಿಯಂಗು . . . ಪ್ರಿಯಕ" (ನಾಚಿಂಾ. ೬) ; "ಉಂಬಟಾ ಕೊಡಗೆ ನೆಟಲೆನಲ್ಕೊಂದು ವೃಕ್ಷಂ" (ಸಂಜೀವ. ೫). **ನೇಳಲ್$_1$** : ಪಲಸು ಪಡ್ಡಳಿಯರನೇಱಾಲ್ ನೇಳಲ್ ನೆಲ್ಲಿ . . . ಸಿರಿಸ ದಾಳಿಂಬದ ಸಾಲ್ಗಳ್ ಸಲೆ ಸೊಗಸಿದುವಲ್ಲಿ (ಜಯಕಾ. ೧೫-೪೩).

[ದೇ.॥ ತಮಿ. ಞಾಟಲ್, ನಾಟಲ್ ; ಮಲ. ಞಾಟಲ್]

ನೈ 'ನೆಯ್$_2$' ನೋ.

ನೈಋತ, ನೈರುತ (ನಾ). ೧. ಅಸುರ ; ರಾಕ್ಷಸ : "ರಕ್ಷಃ ಕೋಣಪ ನೈಋತ ರಾಕ್ಷಸ . . . ಕ್ಷಣದಾಚರರೆಂದು ಸದೃಕ್ಷಾರ್ಥಂಗಳ್ ನಿಶಾಟ ಪರ್ಯಾಯಂಗಳ್" (ಪಸ್ತುಕೋ.೮-೪೨). ೨. ನೈಋತ್ಯ ದಿಕ್ಪಾಲಕ ; ನಿಋತಿ: ಇಂದ್ರಃ, ಅನಲಃ, ಯಮಃ, ನೈಋತಃ, ವರುಣಃ, ಮರುತ್, ಧನದಃ, ರುದ್ರಃ—ಈ ೮ ಮೂಡಲ್ ಮೊದಲಾದೆಂಟು ದೆಸೆಗಂ ಕ್ರಮದಿಂದೊಡೆಯರ್ (ಹಲಾಯು.೧೭-೧೦೦). **ನೈರುತ** : 'ನೈರುತಾಗಮ' ಪರಾ. [<ಸಂ. ನೈರ್ಋತ]

ನೈಋತಿ, ನೈರಿತಿ, ನೈರಿತ್ತೆ, ನೈರುತಿ (ನಾ). ೧. ಪಶ್ಚಿಮ ಮತ್ತು ದಕ್ಷಿಣಗಳ ನಡುವೆ ಇರುವ ವಿದಿಕ್ಕು,—ಉಪದಿಕ್ಕು; ನೈಋತ್ಯ :

ನೋಡಿ ಹಯ ನೈಋತಿಯಂ ನೀಡುಂ ಕಿಳಿಱುತ್ತುಮಿರ್ಪೊಡಪರಾಹ್ಣ ದೊಳಂ ಮಾಡುಗುಮಪಾರ ಭಯಮಂ ಮಾಡುಗುಮಧಿಪತಿಗೆ ತುರಗ ಮಭಿನವಚಂದ್ರಾ (ಅಶ್ವಶಾ. ೪-೫೨). ೨. = ನೈಋತ ೨ : "ಯಾತು, ಯಾತುಧಾನಃ . . . ನೈಋತಃ, ಕೋಣಪಕಃ, ಕೈಕಸೇಯಃ—ಈ ೯ ನೈಋತಿಯ ಪೆಸರ್" (ಹಲಾಯು. ೧೩-೬೩). **ನೈರಿತಿ** : ೧. ಅಲ್ಲಿಂ ಪಡುವಲು ಸೀವಟ್ಟದ ಸನ್ನಿನೊಳು ನೈರಿತಿಯ ಗುಡ್ಡೆ ಅಲ್ಲಿಂ ಬಡಗಲು ಸೀವಟ್ಟದ ತದ್ದರ ಪೊಲದ ಸಂದಿನಲು ವಾಯವ್ಯದ ಗುಡ್ಡೆ (ಸೌಇಇ. XX, ೧೮-೩೯; 980); ತೆಂಕ ಪಾಲ್ವಳ್ಳಂ ನೈರಿತಿಯೊಳ್ವರವುಲಿಗೆಜೆಯ ತೆಂಕಣ ಕೋಡಿಯಿಂ ಬಡಗಲ್ಬರೆಯೆರದ ಕೊಳನುಂ . . . ಮೇರೆಯಾಗೆ (ಸೌಇಇ. XI-i, ೫೨-೫೬; 1007). **ನೈರಿತ್ತೆ** : ೧. ಆಗ್ನೇಯದೆಸೆ ಪುಲ್ಲಾಯಟ್ ದಕ್ಷಿಣದೆಸೆ ತಳ(?) ಅಣ್ಣಯ್ ನೈರಿತ್ತೆದೆಸೆ ನೆಲುಮುಟ್ಟು ಗೂರ್ ಪ್ರತಿಚಿದೆಸೆ ಪೆದ್ದಾಣ (ಎಕ. X (S), ಮುಳಬಾ. ೩೨೮-೫೧; ಸು. 650). **ನೈರುತಿ** : ೧. "ನೈರುತಿ-ನೈರ್ಋತಿ = ಒಂದು ದಿಕ್ಕು" (ತದ್ಭಕೋ. ೨೩). ೨. ಶತಮಖ ಹುತವಹ ಯಮ ನೈರುತಿ ವರುಣ ಮರುತ್ಕುಬೇರ ಶೂಲಧರರ್ ದಿಕ್ಪತಿಗಳ್ (ವಸ್ತುಕೋ. ೯-೪೮). ಸುರಪತಿಯ ಭೋಗ ವಹ್ನಿಯ ತೇಜವಂಧಕಾಸುರನದಟು ನೈರುತಿಯ ಕಾಯ್ಪು . . . ಚಂದ್ರನ ಶಾಂತಿವರಿಸಿ ರೂಪಾದುದೆನಿಸುವ ಹರಿಶ್ಚಂದ್ರ ಭೂವರನಾ ಪುರಕ್ಕೊಡೆಯನು (ಹಡಕಾ. ೧-೪೦). [<ಸಂ. ನೈರ್ಋತೀ]

ನೈಋತ್ಯ, ನೈರುತ್ಯ (ನಾ). = ನೈಋತಿ ೧ : ಆ ರಾಜಗೃಹಂಗಳಂ ಕಟ್ಟುವೊಡೆ . . . ತೆಂಕಲ್ ಪವಡಿಸುವ ಮನೆ ನೈಋತ್ಯದಲ್ಲಿ ಆಯುಧಂ ಗಳನಿರಿಸುವ ಮನೆ . . . ಕಟ್ಟಿಸುವುದು (ಲೋಕೋಪ.೩-೧೮ ಟೀಕೆ); ನಿರುತಂ ಕುಮುದಶೋಭಿ ನೈಋತ್ಯದಂತೆ ವಾನರಸೈನ್ಯದಂತೆ . . . ಹರಿಜನ್ಮಭೂಮಿ ಗೋಕುಲದಂತೆ ವನದಂತೆ ತತ್ಸರಂ ಕಂಗೊಳಿಸಿತು (ಜೈಮಿಭಾ. ೧೫-೧೧). **ನೈರುತ್ಯ** : ಶ್ರೀಗಿರಿಯ ನೈರು[ಪಾಠಾಂ.ಋ]ತ್ಯ ದಿಗುಭೂಭಾಗದೊಳೆಸೆವ ಗಣ್ಯಪುಣ್ಯವಿಭಾಗವಾ ಕ್ಷೇತ್ರಂ . . . ನಂದಿಮಂಡಲವೆಂಬ ಪೆಸರಾಯ್ತು (ಬಸಪು. ೨-೨೮); ತೊಲಗಿತಾ ಓ ಲಕ್ಷ್ಮಣಾ ದಿನಂ . . . ಶಕುನಿವಾಣಿಯೆ ಶಕುನಮಲ್ತೆ ನಡೆದರೊ ನೆಮ್ಮಿ ನೈರುತ್ಯಮಂ (ಶ್ರೀರಾಮಾ. ೨೬೩-೫).

[<ಸಂ. ನೈರ್ಋತ್ಯ]

ನೈಕ (ಗು). ಏಕವಲ್ಲದ; ಅನೇಕ; ಬಹಳ; ಹೆಚ್ಚಾದ : ನೈಕ ಶತಮಾನದಿಂ ಭೀಷ್ಮಪವಮಾನಹತಿಯಂ ಪ್ರತಿಭಟಿಸಿ ಮಲೆತು ನಿಮಿರಿರ್ದ ಗರುವ ತರುವರಕುಲಂ ಮೂಲಮಂ ತಿರಿಪಿ ಮೀಂಟಿದವೋಲ್ ನೆಲ ಕ್ಕುರುಳಿದುವು (ಚಿತ್ರಾಂಗ. ೪೮-೧೩೧೧). [ಸಂ.]

ನೈಕುಣಿಕೆ (ನಾ). ಒಂದು ಬಗೆಯ ಮರ (?) : ನಲಿವ ಕೆಂದಡಸ ಭೂತಾಳೆ ಧುಂದುರ ಹಿತದಿ ಕಿಲುಬದರಿ ಬಿದುರು ಬೆತ್ತರ ಬಿಲ್ಲ ಕಲ್ಲತ್ತಿ ಬಿಲುವರ ಕಪಿತ್ಥ ನೈಕುಣಿಕೆ[ಪಾಠಾಂ.ನೈಕುಣಿ](ರುಕ್ಮಾಂಗ. ೧೦-೨).[?]

ನೈಗಮ (ಗು). ೧. ನಿಗಮಕ್ಕೆ ಸಂಬಂಧಿಸಿದ; ವೇದಕ್ಕೆ ಸಂಬಂಧಿಸಿದ. (ನಾ). ೨. ಬೀದಿ; ದಾರಿ; ರಸ್ತೆ. ೩. ಪಟ್ಟಣಿಗ; ನಾಗರಿಕ; ಪೌರ. ೪. ವರ್ತಕ; ವ್ಯಾಪಾರಿ : "ಪಣ್ಯಾಜೀವಃ . . . ನೈಗಮಃ, ವೈದೇಹಃ—ಈ ೫ ಹರದಂ" (ಹಲಾಯು. ೯೩-೪೧೭); "ಬಣಂಜಿಸುವವಂ ವಿಪಣಿಕಂ ನೈಗಮಂ ವಣಿಜನಕ್ಕು"(ಮಂಗರಾ.೧೦೨-೧). ೫. [ಜೈನ] ನಯಗಳಲ್ಲಿ ಒಂದು; ನೈಗಮ, ಸಂಗ್ರಹ ಮತ್ತು ವ್ಯವಹಾರ ಎಂಬ ದ್ರವ್ಯಾರ್ಥಕನಯದ ಮೂರು ಭೇದಗಳಲ್ಲಿ ಒಂದು; ಈ ಪದಾರ್ಥಗಳನ್ನು ಪ್ರತ್ಯೇಕವಾಗಿ ನಿರ್ದೇಶಿಸದೆ ಗೌಣ ಮಾಡಿ, ಅವುಗಳ ಉದ್ದೇಶ ಅಥವಾ ಸಂಕಲ್ಪವನ್ನು ಹೇಳುವ ಅಥವಾ ಗ್ರಹಣ ಮಾಡುವ ಜ್ಞಾನ : ನೈಗಮ ಸಂಗ್ರಹ ವ್ಯವಹಾರ ಋಜುಸೂತ್ರ ಶಬ್ದ ಸಮಭಿರೂಢೈವಂಭೂತಾದಿ ನಯವಿಭೇದದಿಂ ನಾಮ ಸ್ಥಾಪನಾದ್ರವ್ಯಭಾವದಿಂ . . . ನಿರ್ಮಳಮಪ್ಪ ಸಮ್ಯಕ್ತ್ವರತ್ನಮಂ ಕೈಕೊಂಡು(ಸುಕುಮಾ.೩-೩೯ ಪ); ವಸ್ತುವಿನ ಸ್ವರೂಪವನ್ನು ವಿವೇಚಿಸದೆ ಯಾವುದೊಂದು ಬಾಹ್ಯವಿಷಯದ ಸಂಬಂಧದಿಂದ ವಿಚಾರಮಾಡುವುದು ನೈಗಮವು (ಜೈನಧ. IX, ಉಪೋದ್ಘಾತ). [ಸಂ.]

ನೈಗಮನಯ (ನಾ). = ನೈಗಮ ೫ : ತತ್ತ್ವಾರ್ಥಸೂತ್ರದಲ್ಲಿ ನೈಗಮ ನಯ ೧ನೆಯದು . . . ಕಟ್ಟಿಗೆ, ನೀರು, ಅಕ್ಕಿಗಳನ್ನು ಇಟ್ಟುಕೊಂಡಿ ರುವ ಮನುಷ್ಯನಿಗೆ 'ನೀನು ಏನು ಮಾಡುವಿ?' ಎಂದು ಕೇಳಿದರೆ, 'ಅನ್ನ ಮಾಡುವೆ' ಎಂದು ಹೇಳುವನು. ಈ ಹೇಳಿಕೆಯು ನೈಗಮನಯಕ್ಕೆ ಅನುಸರಿಸಿ ಇದೆ (ಜೈನಪ. ೨೨೪). [ನೈಗಮ + ನಯ$_2$]

ನೈಗೆ 'ನೇಯ್ಗೆ' ನೋ.

ನೈಚಿಕಿ (ನಾ). ೧. ಶ್ರೇಷ್ಠವಾದ ಗೋವು,—ಹಸು : "ಶ್ರೇಷ್ಠಾ: ನೈಚಿಕೀ—ಈ ೨ ತಲೆಯಾವು" (ಹಲಾಯು. ೪೫-೧೧೬); "ನೈಚಿಕಿ ಶ್ರೇಷ್ಠೆಯೆನೆ ತಲೆಯಾವೆನಿಕ್ಕು" (ಮಂಗರಾ. ೫೪-೪). ೨. ಎತ್ತಿನ ಹಣೆ,—ತಲೆ : "ಹಣೆ ನೈಚಿಕಿಯೆನಿಕ್ಕು" (ಮಂಗರಾ. ೫೩-೨).

[ಸಂ. ನೈಚಿಕೀ]

ನೈಚಿಕೆ (ನಾ). ೧. ಶ್ರೇಷ್ಠವಾದ ಹಸು; ಉತ್ತಮವಾದ ಗೋವು: "ಗೋಮತಲ್ಲಿಕೆ ಭದ್ರಾಖ್ಯಾನಂ ನೈಚಿಕೆಯೆನಿಕುಂ ತಾನು[ತ್ತ]ಮಮ ದುವೆ" (ವಸ್ತುಕೋ. ೯೦-೭); ಅಲಘುಕಾಂಚನರಾಶಿಗಳನುಜ್ವಲವೆನಿಪ ಮಣಿಭೂಷಣಾಳಿಯ ಲಲಿತಪಟ್ಟಾಂಶುಕಸಮೂಹವನಗ್ರಹಾರಗಳ ಸಲೆ ಘಟೋಧ್ನಿಗಳಾದ ನೈಚಿ[ಚಿ]ಕೆಗಳನು ದಣಿವಂದದಲಿ ವಿಪ್ರಾವಳಿಗೆ ಸಿರಿದೆ ನಲಂಬಿಕಾಸುತನಿತ್ತನೊಲವಿನಲಿ (ತಿಮ್ಮಶ್ರ. ೨-೨೭). ೨. ಎತ್ತಿನ ಹಣೆ, —ತಲೆ : (ಕಿ). [<ಸಂ. ನೈಚಿಕೀ]

ನೈಚ್ಯ (ನಾ). ಸಣ್ಣತನ; ನೀಚತನ; ಕ್ಷುಲ್ಲಕತೆ : ನೈಚ್ಯವನ್ನು ಸೂಚಿಸುವುದಕ್ಕಾಗಿ ಗಂಡಸರ ಹೆಸರಿಗೆ ಇಗ, ಹೆಂಗಸರ ಹೆಸರಿಗೆ ಇ ತುಣುಕು ಗಳನ್ನು ಸೇರಿಸುವುದುಂಟು (ನಮ್ಮನು. ೨೧೭); ಹೊಗಳಲೆ ನಾಡಿನ ನೈಚ್ಯವನಳಿಸಿದ ಕಾರ್ಯವ ಹೊಗಳಲೆ ನರಪಶು ಮಾನವನೆನಿಸಿದ ಕಾರ್ಯವ (ಅಮತಂ. ೫೪-೧೪).; ಪಾಳಯಗಾರರು . . . ನಮ್ಮ ಕನ್ನಡ ನಾಡುಗಳಲ್ಲಿ ಈ ಶಬ್ದದ ಪ್ರಯೋಗವು ಅಷ್ಟು ನೈಚ್ಯವನ್ನು ಹೊಂದದೆ 'ಪ್ರಸಿದ್ಧ' ಎಂಬ ಅರ್ಥವನ್ನೇ ಒಳಗೊಂಡಿದೆ (ಪಾಳಗಾ. ೩). [ಸಂ.]

ನೈಚ್ಯಭಾವ (ನಾ). ತಾನು ಕೀಳೆಂಬ ಭಾವ : ಇಂದು ಸುಶಿಕ್ಷಿತರೆನಿಸಿ ಕೊಳ್ಳುವ ಆಂಗ್ಲವಿದ್ಯಾವಂತರಲ್ಲಿ ಕೀಳುತನದ ಭಾವ ಅಥವಾ ನೈಚ್ಯ ಭಾವ (Inferiority complex) ಎಂಬ ಶಬ್ದವು ಬಹಳವಾಗಿ ಬಳಕೆ ಯಲ್ಲಿ ಬಂದಿರುವುದಷ್ಟೆ (ಮನೋರೋ. ೩೪). 'ನೈಚ್ಯಾನುಸಂಧಾನ' ಪರಾ. [ನೈಚ್ಯ + ಭಾವ$_2$]

ನೈಚ್ಯಾನುಸಂಧಾನ (ನಾ). ಕೀಳ್ತನದ ಭಾವನೆಯನ್ನು ತನ್ನಲ್ಲಿ ಆರೋಪಿಸಿಕೊಳ್ಳುವುದು; ತಾನು ಸಣ್ಣವನು ಎಂದು ಭಾವಿಸಿ ಕೊಳ್ಳುವುದು : "ದಾಸರ ದಾಸನು ನಾನು ದೋಷಿಗಳಗ್ರೇಸರ ನಾನು" ಎಂದು ನೈಚ್ಯಾನುಸಂಧಾನ ಮಾಡಿ ಮಾತನಾಡುತ್ತಿದ್ದರು (ಕಥವಿ.I, ೧೫೪); ಹರಿಸಿಂಗನೂ ಆತನ ಕಡೆಯವರೂ . . . ನೈಚ್ಯಾನುಸಂಧಾನ ದಿಂದಲೇ ದೊಡ್ಡ ಪದವಿಗೇರಿದನೆಂದು ಹೇಳುತ್ತ, ಸಮಯ ಬಂದಂತೆ ಹೈದರನಿಗೆ ಹೆಚ್ಚು ಹೆಚ್ಚು ಅಧಿಕಾರವನ್ನು ಕೊಡುವುದು ಯುಕ್ತವಲ್ಲ ವೆಂದು ದೇವರಾಜಯ್ಯನಿಗೆ ಹೇಳುತ್ತಿದ್ದರು (ಒಡಕ.೭೮); ಕಲಾಧರಾ. . . ನೀನು ಆಕೆಯು ಮೆಚ್ಚುವಂತೆ ವಾದ್ಯವನ್ನು ನುಡಿಸಲು ಶಕ್ತನಾಗಿದ್ದೀಯೆ. ಹೀಗೆ ನೀನು ನೈಚ್ಯಾನುಸಂಧಾನವನ್ನು ಮಾಡಿಕೊಳ್ಳಬೇಡ; ತೆಗೆದುಕೋ ವಾದ್ಯವನ್ನು (ಕಲಾಧ. ೨೪). [ನೈಚ್ಯ + ಅನುಸಂಧಾನ]

ನೈಜ (ಗು). ೧. ಸ್ವಂತದ; ತನ್ನದೇ ಆದ; ಸ್ವಕೀಯ : ರೇಣುಕೆಯಂ ಜಾನಕಿಯಂ . . . ಕ್ಷೋಣಿಯೊಳಧಮಚರಿತ್ರದ ಜಾಣೆಯರಂ ಜಱೆದು ನೈಜ ನೀತಿಯೊಳೆಸೆದಳ್(ಹಮ್ಮೀರ.೨-೩೬); ಸಕಲಾಗಮಾರ್ಥವನೀವ ಷಟ್ಸ್ಥಲದ ಗುರುವೆ ನೈಜಾಂಘ್ರಿಶರಣಾಗತರನುರೆ ಪೊರೆವ (ಕುಮಾಪು. ೧-೨೬). ೨. ನಿಜವಾದ; ಸಹಜವಾದ; ಸ್ವಾಭಾವಿಕವಾದ; ಕೃತ್ರಿಮವಲ್ಲದ : ಇವುಗಳಲ್ಲಿ ಕೇವಲ ಕಲ್ಪನೆಗಳ ಹುಚ್ಚಾಟವಿರದೆ ನೈಜಭಾವದ ನಾವೀನ್ಯವು ತುಂಬಿ ಹರಿಯುವುದು (ಕನ್ನಜಾ. ೮೪). ೩. ಸ್ವತಸ್ಸಿದ್ಧವಾದ; ಆಗಂತುಕವಲ್ಲದ : ಶ್ರೀತರುಣಿವಲ್ಲಭನ ಪರಮವಿಭೂತಿರೂಪವ ಕಂಡಕಂಡಲ್ಲೀ ತೆಱದಿ ಚಿಂತಿಸುತ ಮನದಲಿ ನೋಡು ಸಂಭ್ರಮದಿ ನೀತ ಸಾಧಾರಣ ವಿಶೇಷ ಸಜಾತಿ ನೈಜಾಹಿತವು ಸಹಜ ವಿಜಾತಿ ಖಂಡಾಖಂಡ ಬಗೆಗಳನಱಿತು ಬುಧರಿಂದ (ಹಸಾರ. ೫-೧); ಕನ್ನಡದ ಒಂದೆರಡು ವಿಭಕ್ತಿಗಳು ನೈಜಸೃಷ್ಟಿಯಾಗಿರದೆ ಕೇವಲ ವೈಯಾಕರಣರು ಸಂಸ್ಕೃತಾನುಕರಣೆಯಿಂದ ಮಾಡಿಕೊಂಡ ಕೃತಕವ್ಯವಸ್ಥೆಯಾಗಿದೆ (ದ್ರಾವಿವಿ. ೨೧೨). (ನಾ). ೪. ನಿಜ; ಸತ್ಯ; ದಿಟ : "ಸತ್ಯಕ್ಕೆ ನೈಜಂ ನನ್ನಿಯೆಂದಕ್ಕು" (ಕಬ್ಬಿಕೈ. ೪೭); ಮೂಜಗಕೆ ರುದ್ರಾಕ್ಷಿಸಿತ ರಕ್ಷಾಜಟಾವಳಿ ನಿತ್ಯಮುಕ್ತಿಗೆ ನೈಜವಪ್ಪನುಸಾರಿವೇಷವು ಭವನಿವಾರಣವು (ಬಸಪು. ೩-೬೮); ಅಸ್ವಭಾವಕಮಲ್ಲ ನೈಜಮಿದು ತನಗೆನೆ ತಪಸ್ವಿಗಳ ಮೌಳಿಮಣಿ ನಾರದಂ ಪೋಗಿ ವೈವಸ್ವತಂಗಱಿಪಿ . . . ವೀರವರ್ಮನಂ ಕಂಡು ಸತ್ಯತನಾಗಿ ವಿವರಿಸಿದನು (ಜೈಮಿಭಾ. ೨೭-೨೦). ೫. ಸಹಜವಾದುದು; ಸ್ವಾಭಾವಿಕವಾದುದು : ಭೇದಕರ್ ಬಹುವಿಧದೆ ಪರಿಕಿಸಲೊಳಗುಗಾಣದಂತೆ ಛಿದ್ರಿಸಿ ತೆಗೆವ ಜಾಣ್ಮೆ ಕಡುನೈಜಮಾಗೆ ಪರಮಲಂಚವೆ ತಮಗೆ ಜೀವನಮದೆನಿಸಿ ಚಚ್ಚರದಿಂದಲೈಶ್ವರ್ಯಮಂ ಪಡೆದು ನೆಱೆ ಬಾಳ್ವ ಕರಣಿಕಶಿರೋಮಣಿಗಳೊಪ್ಪಿರ್ದರು (ಚಬಪು. ೭-೭); ಮರದಿ ನನೆ ನೈಜದಿಂದರಳೆ ಸೊಗವೆಲ್ಲರ್ಗೆ ಸೆರೆಮನೆಯ ನೇಮವೇಂ? (ಮಂಕುಕ. ೮೪೫). [ಸಂ.]

ನೈಜಗುಣ (ನಾ). ಸಹಜವಾದ ಗುಣ; ನಿಜಸ್ವಭಾವ : ಬಾಹ್ಯತರದ ಬೆಡಗನೊಂದೆ ಬಗೆದು ಬೆಲೆಯ ಕಟ್ಟ ಮುಂದೆ ತೋರುತಿರುವ ನೈಜಗುಣವನರಿಯದಿದ್ದೆನು (ಕವಿಕಾ. ೪೫-೧೫). [ನೈಜ+ಗುಣ]

ನೈಜಚಿತ್ರ (ನಾ). ಸಹಜವಾದ ಚಿತ್ರ; ವಾಸ್ತವ ಚಿತ್ರ : ಜೀವನದ ವಿವಿಧ ನೈಜಚಿತ್ರಗಳನ್ನು ಚಿತ್ರಿಸುವ ಈ ಹಾಡುಗಳು ರೈತನಿಗೆ ಆನಂದವಾದಾಗಾಗಲಿ, ಇಲ್ಲವೆ ದಿನದ ದುಡಿಮೆಯ ದಣಿವನ್ನಾರಿಸಿಕೊಳ್ಳುವುದಕ್ಕಾಗಲಿ ಹೊರಹೊಮ್ಮಿದವುಗಳು (ಕನ್ನಜಾ. ೧೮೦). [ನೈಜ+ಚಿತ್ರ]

ನೈಜರೂಪ (ನಾ). ಪ್ರಕೃತಿ ರೂಪ; ಮೂಲ ರೂಪ : ಕನ್ನಡದಲ್ಲಿ ಇರುವಂತೆ ಉಳಿದ ದ್ರಾವಿಡಭಾಷೆಗಳಲ್ಲೂ ಶಬ್ದದ ನೈಜರೂಪವೇ ಏಕವಚನದಲ್ಲಿ—ಪ್ರಥಮಾವಿಭಕ್ತಿರೂಪವಾಗುತ್ತದೆ (ದ್ರಾವಿವಿ. ೨೧೨). [ನೈಜ+ರೂಪ]

ನೈಜಸಾಹಿತ್ಯ (ನಾ). ಸೃಜನಶೀಲವಾದ ಸಾಹಿತ್ಯ : ವೈಯಕ್ತಿಕ ಅನುಭವ ಎಲ್ಲ ನೈಜಸಾಹಿತ್ಯದ ಅಡಿಗಲ್ಲು (ಸಾಹಿಪ್ರ. ೧೦). [ನೈಜ+ಸಾಹಿತ್ಯ]

ನೈಜಸ್ಥಿತಿ (ನಾ). ಸಹಜವಾದ ಸ್ಥಿತಿ; ವಾಸ್ತವ ಸ್ಥಿತಿ : ಮಕ್ಕಳು . . . ನೈಜಸ್ಥಿತಿಗೂ ಕಲ್ಪನಾಸ್ವರೂಪಕ್ಕೂ ವ್ಯತ್ಯಾಸವನ್ನು ಕಂಡುಕೊಳ್ಳುತ್ತಾರೆ (ಶಿಕ್ಷದ. ೧೧೦). [ನೈಜ+ಸ್ಥಿತಿ]

ನೈಜಸ್ವರೂಪ (ನಾ). ಸಹಜವಾದ ಸ್ವರೂಪ; ವಾಸ್ತವ ಸ್ವರೂಪ : ಕೇಶಿರಾಜ . . . ಬಣ್ಣದ ಕನ್ನಡಕ ಉಪಯೋಗಿಸದೆ ಬರಿಗಣ್ಣಿನಿಂದ ಕನ್ನಡನುಡಿಯ ಸೌಷ್ಠವವನ್ನು ಅವಲೋಕಿಸಿದ್ದರೆ ಕನ್ನಡದ ಇನ್ನೂ ಅನೇಕ ಬೆರಗುಗಳನ್ನು ಗುರುತಿಸಲೂ ಹಾಗೂ ಕನ್ನಡದ ನೈಜಸ್ವರೂಪವನ್ನು ಚೆನ್ನಾಗಿ ನೋಡಲೂ ಸಾಧ್ಯವಾಗುತ್ತಿತ್ತು (ದ್ರಾವಿವಿ. ೨೯೨). [ನೈಜ+ಸ್ವರೂಪ]

ನೈತಿಕ (ಗು). ನೀತಿ ಸಂಬಂಧವಾದ; ತಾತ್ತ್ವಿಕವಾದ : ಈ ಕೃತಿಯಲ್ಲಿ . . . ನೈತಿಕ ಮತ್ತು ಸಾಮಾಜಿಕ ಮೌಲ್ಯಗಳಿಗೇ ಹೆಚ್ಚಿನ ಅವಕಾಶ ಕಲ್ಪಿಸಿಕೊಂಡಿದೆ (ಶಿಕ್ಷದ. VI, ಮುನ್ನುಡಿ); ಅಲ್ಲಿರಬಹುದಾದ ನೈತಿಕ ಮತ್ತು ಸಾಮಾಜಿಕ ಅಂಶಗಳನ್ನು ಕುರಿತು ಉಪಾಧ್ಯಾಯರು ಮಕ್ಕಳಿಗೆ . . . ಹೇಳುವುದು ಅನುಚಿತವಾಗಲಾರದು (ಶಿಕ್ಷದ. ೨೪೨). [ಸಂ.]

ನೈತಿಕದೃಷ್ಟಿ (ನಾ). ನೀತಿನಿಷ್ಠವಾದ ದೃಷ್ಟಿ; ತತ್ವನಿಷ್ಠವಾದ ದೃಷ್ಟಿ : ಅಪರಾಧಿಯ ಗುಣಸ್ವಭಾವಗಳ ಮತ್ತು ನೈತಿಕದೃಷ್ಟಿಯ ವಿವರಣೆ ಕ್ರಿಮಿನಲ್ ಮೊಕದ್ದಮೆಗಳಲ್ಲಿ . . . ಪ್ರತಿಪಾದಿಸಿದೆ (ಪುನರು. ೨೦೩); ನೈತಿಕದೃಷ್ಟಿಯಿಂದ ಅವನ ವ್ಯಕ್ತಿತ್ವ ಕೇಶವನಿಗಿಂತ ಹೆಚ್ಚು ಗಟ್ಟಮುಟ್ಟಾದದ್ದು (ಹೊಸಕ್ಷಿ. ೨೯೫). [ನೈತಿಕ+ದೃಷ್ಟಿ]

ನೈತಿಕಧೈರ್ಯ (ನಾ). ನೀತಿಯಲ್ಲಿನ ಶ್ರದ್ಧೆಯಿಂದ ಬರುವ ಧೈರ್ಯ; ತಾತ್ತ್ವಿಕ ಬಲ,—ಸ್ಥೈರ್ಯ : ಅವರೆದುರು ನಿಲ್ಲುವ ನೈತಿಕಧೈರ್ಯ ಆ ಕಳ್ಳಹೃದಯಕ್ಕೆ ಇದ್ದರಲ್ಲವೆ? (ಹೊಸಕ್ಷಿ. ೨೫). [ನೈತಿಕ+ಧೈರ್ಯ]

ನೈತಿಕಪ್ರಜ್ಞೆ (ನಾ). ನೀತಿ ಸಂಬಂಧವಾದ ಅರಿವು : ತನ್ನ ನಾಗರಿಕತೆಯ ದುರ್ಬಲತೆಗಳೇನು ಎಂಬುದನ್ನು ಚರ್ಚಿಸುವಷ್ಟು ಬುದ್ಧಿಶಕ್ತಿ ಮತ್ತು ನೈತಿಕಪ್ರಜ್ಞೆ ಅವನಲ್ಲಿವೆ (ಹೊಸಕ್ಷಿ. ೨೯೫). [ನೈತಿಕ+ಪ್ರಜ್ಞೆ]

ನೈತಿಕಬಲ (ನಾ). ನೀತಿಯನ್ನು ಅನುಸರಿಸುವುದರಿಂದ ಬರುವ ಶಕ್ತಿ; ತಾತ್ತ್ವಿಕವಾದ ಬಲ,—ಸ್ಥೈರ್ಯ : ನೈತಿಕಬಲವಿಲ್ಲದ ವ್ಯಕ್ತಿ ಏಳಿಗೆ ಹೊಂದಲಾರನು (ರೂಢಿ). [ನೈತಿಕ+ಬಲ$_3$]

ನೈತಿಕಭೂಮಿಕೆ (ನಾ). ನೀತಿಯ ಮಟ್ಟ,—ಅಂತಸ್ತು : ಜನಸಾಮಾನ್ಯದ ಮಟ್ಟವನ್ನು ಮೀರಿ, ಅವರಿಗೆಟುಕದ ನೈತಿಕಭೂಮಿಕೆಯಲ್ಲಿದ್ದರೆಂಬ ಕಾರಣದಿಂದ ನಾಲ್ಕನೆಯ ಗುಂಪಿನ ಜನರಿಗೆ ಶಿಕ್ಷೆ ವಿಧಿಸಲಾಗಿತ್ತು (ಪುನರು. ೪೧೩). [ನೈತಿಕ+ಭೂಮಿಕೆ]

ನೈತಿಕಮಟ್ಟ (ನಾ). ನೀತಿಯ ಸ್ಥಾನಮಾನ : ಎಲ್ಲ ವ್ಯವಹಾರಗಳಲ್ಲೂ ನಮ್ಮ ನೈತಿಕಮಟ್ಟವನ್ನು ಕಾಯ್ದುಕೊಳ್ಳಬೇಕು (ರೂಢಿ). [ನೈತಿಕ+ಮಟ್ಟ$_1$]

ನೈತಿಕಮಾರ್ಗ (ನಾ). ನೀತಿಯುಕ್ತವಾದ ಮಾರ್ಗ; ಧರ್ಮಮಾರ್ಗ; ನೀತಿಗೆ ಅನುಸಾರವಾದ ದಾರಿ : ತಮ್ಮ ಸಂಸಿದ್ಧಿಗಳನ್ನು ನೀತಿಯುತವಾದ ಮಾರ್ಗದಲ್ಲಿ ಪ್ರಯೋಗಿಸುವ ಸ್ವಾತಂತ್ರ್ಯ ವಿಜ್ಞಾನಿಗಳಿಗಿಲ್ಲವಾಗಿದೆ. ಇಂತಹ ನೈತಿಕಮಾರ್ಗವನ್ನು ತೋರಿಸಲು ಅವಶ್ಯಕವಾದ ಆಧ್ಯಾತ್ಮಿಕ ಹಿನ್ನೆಲೆಯೂ ಈ ವಿಜ್ಞಾನಿಗಳಿಗಿಲ್ಲ (ಚುಕ್ಸಾರ. ೪೨ ಪೀಠಿಕೆ). [ನೈತಿಕ+ಮಾರ್ಗ]

ನೈತಿಕಾಂಶ (ನಾ). ನೀತಿಸಂಬಂಧವಾದ ಅಂಶ; ನೀತಿಯ ವಿಚಾರ: ಮೂಲಶಿಕ್ಷಣಶಾಲೆಯಲ್ಲಿ . . . ಧಾರ್ಮಿಕಶಿಕ್ಷಣವನ್ನು ಕಡ್ಡಾಯವಾಗಿ ಸೇರಿಸಿಲ್ಲ. ಆದರೆ, ಎಲ್ಲರಿಗೂ ಸಾಮಾನ್ಯವೆನಿಸುವ ನೈತಿಕಾಂಶಗಳನ್ನು ಬೋಧಿಸುವುದನ್ನು ಅದು ಒಪ್ಪುವುದು (ಶಿಕ್ಷದ. ೬೧೯). [ನೈತಿಕ+ಅಂಶ]

ನೈದಿಧ್ಯಾಸ (ನಾ). ಚೆನ್ನಾಗಿ ಅನುಸಂಧಾನ ಮಾಡುವುದು; ಪದೇ ಪದೇ ನೆನಸಿಕೊಳ್ಳುವುದು,—ಆಲೋಚನೆ ಮಾಡುವುದು: ಈ ಸೊಬಗಿನಿಂ ಮೆರವ ನೈದಿಧ್ಯಾಸ ಮನನ ಶ್ರವಣಮಲ್ಲದೆ ವಾಸುದೇವನ ನೆಲೆಯನೈದಲಸಾಧ್ಯಮನ್ಯದಲೀ(ಗಗತಾ.೧೬-೫೯). 'ನಿದಿಧ್ಯಾಸ'ಪರಾ. [ಸಂ.]

ನೈದಿಲ್ 'ನೆಯ್ದಿಲ್' ನೋ.

ನೈದಿಲು 'ನೆಯ್ದಿಲ್' ನೋ.

ನೈದಿಲೆ 'ನೆಯ್ದಿಲ್' ನೋ.

ನೈದಿಲೆಗೆಡ್ಡೆ (ನಾ). ನೆಯ್ದಿಲೆಯ ಗಡ್ಡೆ : ಭದ್ರಮುಸ್ತೆ, ನೈದಿಲೆ ಗೆಡ್ಡೆ, ಅಮರದವಳ್ಳಿ . . . ಶ್ರೀಗಂಧ, ಪರ್ಪಾಟಕ ಸಹ ಕಷಾಯ ಕಾಯಿಸಿ ತೆಗೆದುಕೊಳ್ಳಲು ಪಿತ್ತಜ್ವರ ಪರಿಹಾರವಾಗುವುದು(ಸಕವೈ. ೭೯).

[ನೈದಿಲೆ(<ನೆಯ್ದಿಲ್)+ಗೆಡ್ಡೆ(<ಗಡ್ಡೆ)]

ನೈದಿಲೆಗೋಲ್ 'ನೆಯ್ದಿಲ್‌ಗೋಲ್' ನೋ.

ನೈದಿಲ್ಗೊಳ 'ನೆಯ್ದಿಲ್ಗೊಳ' ನೋ.

ನೈಪಥ್ಯ (ನಾ). ಅಲಂಕಾರಕ್ಕಾಗಿ ಬಳಸುವ ಆಭರಣ, ಉಡುಗೆ ತೊಡುಗೆ, ವೇಷಭೂಷಣ, ಲೇಪನ ಇತ್ಯಾದಿ : ಕುಡುಮಿಂಚಂ ಪಲವಂ ವಿಗುರ್ವಿಸಿದನಿಂದ್ರಂ ಪುಷ್ಪಬಾಣಂಗಳಿಂ ಪಡೆದಂ ಪೆಣ್ಪಡೆಯಂ ಮನೋಜನೆನೆ ನೈಪಥ್ಯಂ ಬೆಡಂಗಪ್ಪಿನಂ ನಡೆಗೊಂಡತ್ತು . . . ನಾನಾ ನರ್ತಕೀಸೈನಿಕಂ (ಮಲ್ಲಿಪು. ೧೨-೭೭) ; ಸತ್ಯ ಶೌಚಾಚಾರ ಕುಲವೇದ ಶಾಸ್ತ್ರಪಾಂಡಿತ್ಯದ ಸುವಿಪ್ರರಿಪ್ಪತ್ತು ಸಾವಿರಕೆ ನೈಪಥ್ಯವಸ್ತ್ರಾದಿ ಪೂಜೆಗಳಿಂದೆ ಸತ್ಕರಿಸಿ . . . ಸಾಲಂಕಾರಗೋಸಹಸ್ರವನೊಂದು ಭಾರ ಪೊನ್ನಂ ಕುಡುವುದು (ಜೈಮಿಭಾ. ೨-೨೭) ; ನಿಱಿ ಕರಂ ಜಾಱೆ ನೈ[ಪಠಾಂ. ನೇ]ಪಥ್ಯಮಂ ತಾಂ ತೊಡೆದಿರ್ದಿರ್ದಂತೆ ಬಂದಂದವನಿಪತಿಯನಬ್ಜಾಕ್ಷಿ ನೋಡುತ್ತಮಿರ್ದಳ್ (ರಾಜಶೇ. ೬-೮). 'ನೈಪಥ್ಯಗೃಹ' ಪರಾ. [ಸಂ.]

ನೈಪಥ್ಯಂಗೆಯ್ (ಕ್ರಿ). ಅಲಂಕಾರ ಮಾಡಿಕೊಳ್ಳು ; ವೇಷಭೂಷಣಗಳನ್ನು ಧರಿಸು : ಸಮಯ ಸಮುಚಿತ ನೈಪಥ್ಯಂಗೆಯ್ದು ಝುಗಝುಗಿಪ ಜವನಿಕೆಯ ಮಱೆಯೊಳ್ ಕಂದರ್ಪವಿವಾಹದೊಳಂದಂಬಡೆದ ಪೊಂದೆರೆಯಂ ಮಱೆಗೊಂಡು ನಿಂದ ರತಿಯಂ ಪೋಲ್ತು ನಿಂದಿರ್ಪುದುಂ (ರಾಜಶೇ. ೫-೧೯ ವ). [ನೈಪಥ್ಯ+ಕೆಯ್$_1$]

ನೈಪಥ್ಯಂದಳೆ (ಕ್ರಿ). = ನೈಪಥ್ಯಂಗೆಯ್ : ರಾಜಶೇಖರರಾಜೇಂದ್ರ ನೋಜೆಯಿಂದಾಜಿಸನ್ನದ್ಧನಾಗಿ ಯಥೋಚಿತ ನೈಪಥ್ಯಂದಳೆದಮಾತ್ಯ ಸಮೇತಂ ಪಣ್ಣಿ ಬಂದಿಭೇಂದ್ರಮನೇಱಿ . . . ಶಿಬಿರಕ್ಕೆ ನಡೆತರ್ಪಾಗಳ್ (ರಾಜಶೇ. ೬-೧೧ ವ). [ನೈಪಥ್ಯ+ತಳೆ$_1$]

ನೈಪಥ್ಯಂಬಡೆ (ಕ್ರಿ). = ನೈಪಥ್ಯಂಗೆಯ್ : ಘೋಳಾಯಿಲರ್ ನೆರೆದು . . . ಸಮರಸಮಯಸಮುಚಿತ ನೈ[ಪಠಾಂ.ನೇ]ಪಥ್ಯಂಬಡೆದಬ್ಬರಿಸಿ ಬೊಬ್ಬೆಗೊಟ್ಟೇಱಿ ಸರಭಸಂ ಪರಿಯಿಪಾಗಳ್ (ರಾಜಶೇ. ೬-೧೧ ವ).

[ನೈಪಥ್ಯ+ಪಡೆ$_1$]

ನೈಪಥ್ಯಗೃಹ (ನಾ). ಅಲಂಕಾರಮಂದಿರ ; ವೇಷಭೂಷಣಗಳನ್ನು ಧರಿಸುವ ಸ್ಥಳ ; ಪ್ರಸಾಧನ ಗೃಹ : ಮಜ್ಜನಂಬೊಳ್ಳು ನೈಪಥ್ಯಗೃಹಕ್ಕೆ ವಂದು ಕೈಗೆಯ್ಯಲೊಡಂ ಆ ರಾಜಶೇಖರಂಗೇಂ ರಾರಾಜಿಸಿದುದೊ ವಿಚಿತ್ರಮಣಿಗಣರಚನೋದಾರಂ ಶೇಖರಮುಜ್ವಳಮೇರು ಶಿಖರಿ ಶಿಖರರತ್ನದೊಳ್ ಸರಿವರುತುಂ (ಚಂದ್ರಪು. ೬-೫೫ ವ).

[ನೈಪಥ್ಯ+ಗೃಹ]

ನೈಪಥ್ಯನಿಳಯ (ನಾ). = ನೈಪಥ್ಯಗೃಹ : ಅನಂತರಂ ನೈಪಥ್ಯನಿಳಯಕ್ಕೆ ವಂದು . . . ನೆನೆಯಿಸಿದಂ ಮುಕುಂದನಮೃತಾಬ್ಧಿಯೊಳಿರ್ಪ ನಿಜಾದಿಮೂರ್ತಿಯಂ (ಜಗವಿ. ೧೦-೧೦೦ ವ).

[ನೈಪಥ್ಯ+ನಿಳಯ(=ನಿಲಯ)]

ನೈಪಥ್ಯವರ್ಗ (ನಾ). ಅಲಂಕಾರ ಮಾಡುವವರ ಗುಂಪು,— ಸಮೂಹ : ಕಳಿಪುವನಿಂದ್ರ ನೈಪಥ್ಯ[ಪಾಠಾಂ. ನೈವದೈ]ವರ್ಗವನವತಳೆದು ಲೀಲೆಯೊಳು ವಾಸರವ ಕಳಿಪಲು ಜವ್ವನ ಮೊಳೆತುದು ಸುರಕುಜದೊಳು ಮೂಡುವಂತೆ ಪುದ್ಗಾಳಿ (ವರ್ಧಚ. ೧೧-೨೯).

[ನೈಪಥ್ಯ+ವರ್ಗ]

ನೈಪಾಲಿ, ನೈಪಾಳಿ (ನಾ). ೧. ನೇಪಾಳ ದೇಶದವನು ; ನೇಪಾಳಿ. ೨. ಮಣಿಶಿಲೆ. ನೈಪಾಳಿ : ೨. "ನೈಪಾಳೀ, ಕುನಟೀ, ಗೋಳಾ – ೩ ನೇಪಾಳದೇಶದಲ್ಲಿ ಹುಟ್ಟಿದ ಮಣಿಶಿಲೆ" (ಸಿದ್ಧಾಂತಿ. ೩೦೭).

[ಸಂ. ನೈಪಾಲೀ]

ನೈಪಾಳಿ 'ನೈಪಾಲಿ' ನೋ.

ನೈಪುಣ್ಯ (ನಾ). ಜಾಣತನ ; ನಿಪುಣತೆ ; ಕೌಶಲ : ಪಾಪೇಭ ಕಂಠೀರವಂ . . . ಎಯ್ತರ್ಪರಂ ಶಾತಭಲ್ಲಸಹಸ್ರಂಗಳಿನಂಬರಕ್ಕೆ ತಲೆ ಭೂಭಾಗಕ್ಕೊಡಲ್ ಬಿಟ್ಟು ಪೊಂಗೆ ಸುರರ್ ಬಣ್ಣಿಸೆ ಬಿರ್ದಮೆಚ್ಚು ಮೆಱೆದಂ ಕೋದಂಡನೈಪುಣ್ಯಮಂ (ಶಾಂತಿಪು. ೪-೯) ; ಪಿಂದುಂ ಗೌರವಮುಂ ಬೆಡಂಗಿಡಿದು ತೋರ್ಪೊಂದಂದದಿಂ ನಾಡೆ ಬಂಧುರಮಾಯ್ತಾ ನೃಪಕಾಂತೆಯೊಳ್ ಬಹುಕಲಾನೈಪುಣ್ಯಮುಂ ಪುಣ್ಯಮುಂ (ಚಂದ್ರಪು. ೩-೨೭) ; ಈ ಕೆಲಸದಲ್ಲಿ ದುಡಿದು ದುಡಿದೂ ತರಬೇತಾಗಿ ನಾನು ಇಷ್ಟೊಂದು ನೈಪುಣ್ಯ ಗಳಿಸಿದ್ದೇನಲ್ಲ (ದೇಕನೈ. ೩೨). [ಸಂ.]

ನೈಮಿತ್ತ (ಗು). ನಿಮಿತ್ತದಿಂದ ಉಂಟಾದ ; ನಿರ್ದಿಷ್ಟ ಕಾರಣದಿಂದ ಉಂಟಾದ : 'ನೈಮಿತ್ತಕರ್ಮ' ಪರಾ. [ಸಂ.]

ನೈಮಿತ್ತಕರ್ಮ (ನಾ). ಒಂದು ನಿರ್ದಿಷ್ಟ ಕಾರಣದಿಂದ ಮತ್ತು ನಿರ್ದಿಷ್ಟ ಕಾಲದಲ್ಲಿ ಮಾಡಬೇಕಾದ ಕರ್ಮ : ಈ ನಿಮಿತ್ತದೊಳಿದನೆಸಗುವುದೆಂಬುದು ತಾನೈಸೆ ನೈಮಿತ್ತಕರ್ಮ ಆ ನಿಮಿತ್ತದೊಳಾಚರಿಸುವುದೆಲ್ಲರುಮಾ ನೈಮಿತ್ತಕರ್ಮವನು (ಹದಿಬ. ೯-೧೨) ; ಇಂತು ಮುಕ್ತಿಯನೆಳಸುವರು ಕಾಮ್ಯವನುಳಿದಂತರಂಗದ ಶುದ್ಧಿಯೊಳು ಚಿಂತೆಗೊಳದೆ ನಿತ್ಯನೈಮಿತ್ತಕರ್ಮವ ಸಂತಸದೊಡನೆಸಗುವುದು (ಹದಿಬ. ೯-೧೩).

[ನೈಮಿತ್ತ+ಕರ್ಮ]

ನೈಮಿತ್ತಿಕ (ಗು). ೧. ನಿರ್ದಿಷ್ಟಕಾಲಕ್ಕೆ ಸಂಬಂಧಿಸಿದ : 'ನೈಮಿತ್ತಿಕಪೂಜೆ' ಪರಾ. (ನಾ). ೨. = ನೈಮಿತ್ತಕರ್ಮ : ಉತ್ತಮ ನಿಮಿತ್ತಮಂ ನೈಮಿತ್ತಿಕಮುಂ ಪೋಲ್ಕುಮೆನಿಸಿ ಸೊಡರಿಂ ಸೊಡರಂ ಪೊತ್ತಿಸಿ ತಂದುಪಮೆಯೊಳಚ್ಚೊತ್ತಿದುವವಂತರಂಗ ಬಹಿರಂಗಂಗಳ್ (ಶಾಂತಿಪು. ೭-೧೨೨) ; ಬನ್ದತಿಥಿಸತ್ಕಾರಂ ಜಗನ್ನೂತವಿಶ್ರುತನೈಮಿತ್ತಿಕಮೆಂದು ಸಂದ ನಿಗಮಾನುಷ್ಠಾನಮಂ ಮಾಡಲಾಕೃತಕೃತ್ಯಾತ್ಮಕನೀ ಧರಿತ್ರಿಗೆ ಪವಿತ್ರಂ ತದ್ಗೃಹಸ್ಥಾಶ್ರಮಂ (ಕಇಅ. ೩-೨-೮೮ ; 1058) ; ವೇದೋಕ್ತವಾದ ಕರ್ಮಗಳನ್ನು ನಿತ್ಯ, ನೈಮಿತ್ತಿಕ, ಕಾಮ್ಯ ಎಂದು ಮೂರು ಪ್ರಕಾರ ವಿಭಾಗಿಸಿರುವರು (ಹಿಂದಸಾ. ೧೬೪). ೩. ನಿಮಿತ್ತಗಳನ್ನು ವಿವರಿಸುವವನು ; ಶಕುನಗಳನ್ನು ತಿಳಿಸುವವನು ; ಭವಿಷ್ಯಜ್ಞ ; ಜ್ಯೋತಿಷ್ಕ : ಮತ್ತೊಂದು ದಿವಸಂ ನೈಮಿತ್ತಿಕನನರಸಂ ಬೆಸಗೊಂಡನೆನ್ನ ಮಕ್ಕಳೊಳಗೆ ರಾಜ್ಯಾರ್ಹರಾರೆಂದು (ವಡ್ಡಾರಾ. ೧೬೪-೨೦) ; ನೈಮಿತ್ತಿಕನಿರೂಪಿತ ಶುಭದಿನಮುಹೂರ್ತದೊಳ್ . . . ಇಂದ್ರಾಕೃತಿ ಸೀರಪಾಣಿ ಮಹಿಮಾವಷ್ಟಂಭದಿಂ ಸಿಂಹಪೀಠಮಂದೇಱಿದನುತ್ಸವೋದಯಕರಂ ಸೌಜನ್ಯಕಂದಾಂಕುರಂ (ಶಾಂತಿಪು. ೧-೯೫ ವ) ; ಪಗಲುಳ್ಳಂ ಬೀಟ್ಟುದಂ ಧಾರಿಣಿ ನಡುಗುವುದಂ . . . ಮಾಡದ ಮಣಿಕಲಶಂ ಬೀಟ್ಟುದಂ ಕಂಡು ತಮ್ಮೊಳ್ ಬಗೆದರ್ ನೈಮಿತ್ತಿಕರ್ ನಾಳಿನ ಕದನದೊಳಕ್ಕುಂ ದಶಾಸ್ಯಂಗಪಾಯಂ (ಪಂಚಾಮಾ. ೧೪-೧೨೨). [ಸಂ.]

ನೈಮಿತ್ತಿಕಕರ್ಮ (ನಾ). = ನೈಮಿತ್ತಕರ್ಮ : ಗೃಹಸ್ಥನಿಂದನುಷ್ಠಿಸಲ್ತಕ್ಕ ಕರ್ಮವಾದೊಡೆ – ನಿತ್ಯ ನೈಮಿತ್ತಿಕ ಪ್ರಾಯಶ್ಚಿತ್ತ ಕಾಮ್ಯ ನಿರ್ಮಲವೆಂದು ಪಂಚವಿಧವಾಗಿಹುದದಜಲ್ಲಿ . . . ಶುಭಕಾಲದೇಶಾಧಿಕದಲ್ಲಿ ಮಾಳ್ಪ ವಿಧಿವಿಶೇಷವೇ ನೈಮಿತ್ತಿಕಕರ್ಮವೆನಿಸುವುದು (ವಿವೇಕ. ೧೪೭) ; ಕರ್ಮಗಳಲ್ಲಿ ನಿತ್ಯ, ನೈಮಿತ್ತಿಕವೆಂದು ಎರಡು ವಿಧ . . . ವಿಷ್ಣುಪಂಚಕ ಮೊದಲಾದವು ನೈಮಿತ್ತಿಕಕರ್ಮ (ಹಸಾರ. ೯-೧೬) ;

ವಯೋವೃದ್ಧ, ತಪೋವೃದ್ಧ, ಆಚಾರವೃದ್ಧ, ಜ್ಞಾನವೃದ್ಧ, ದೇವತೆ ಗಳಿತ್ಯಾದಿಕರಾಗಮನಕಾಲದಲ್ಲಿ ದಾನ, ಪೂಜನ, ಮಹೋತ್ಸವಾದಿಗಳಂ ಮಾಡುವುದೇ ನೈಮಿತ್ತಿಕಕರ್ಮವು (ನಿಗಮ. ೧-೪-೧); ಗ್ರಹಣಗಳ ನಿಮಿತ್ತವಾಗಿ ಏರ್ಪಡುವ ಸಮಯಗಳಲ್ಲಿ ಮಾತ್ರ ಆಚರಿಸಬೇಕಾದ ಸ್ನಾನ ನೈಮಿತ್ತಿಕಕರ್ಮವಾಗುತ್ತದೆ (ತತ್ವಪ್ರಾ. ೨೮೪).

[ನೈಮಿತ್ತಿಕ+ಕರ್ಮ]

ನೈಮಿತ್ತಿಕಪೂಜೆ (ನಾ). ನಿರ್ದಿಷ್ಟಕಾಲಗಳಲ್ಲಿ ಮಾಡುವ ಪೂಜೆ,—ವ್ರತ: ರಾಜರೂ, ಅಧಿಕಾರಿಗಳಾದವರೂ, ಧನಿಕರೂ ದೇವಾಲಯಗಳನ್ನು ಕಟ್ಟಿಸಿ, ಅವುಗಳ ನಿತ್ಯ ನೈಮಿತ್ತಿಕಪೂಜೆಪುನಸ್ಕಾರ ಗಳಿಗಾಗಿ ಭೂಮಿಯನ್ನು ಉಂಬಳಿಯಾಗಿ ಬಿಡುವುದು ಒಂದು ಪುಣ್ಯ ಕಾರ್ಯವೆಂಬ ನಂಬುಗೆಯು ನಮ್ಮ ದೇಶದಲ್ಲಿ ಬಹಳ ಹಿಂದಿನ ಕಾಲ ದಿಂದಲೂ ಇದೆ (ಸಾಹಿಸ. ೧೧). [ನೈಮಿತ್ತಿಕ+ಪೂಜೆ]

ನೈಮಿತ್ತಿಕಪ್ರಲಯ (ನಾ). ನಿತ್ಯಪ್ರಲಯ, ಪ್ರಾಕೃತಪ್ರಲಯ, ನೈಮಿತ್ತಿಕಪ್ರಲಯ ಮತ್ತು ಆತ್ಯಂತಿಕಪ್ರಲಯವೆಂಬ ನಾಲ್ಕು ಬಗೆಯ ಪ್ರಲಯಗಳಲ್ಲಿ ಒಂದು: ನೈಮಿತ್ತಿಕಪ್ರಲಯವೆಂದರೆ ಬ್ರಹ್ಮನ ಅಹೋರಾತ್ರಿಗಳಲ್ಲಿ ನಡೆಯುವ ಲೋಕತ್ರಯಪ್ರಲಯ (ಹಿಂದಸಾ. ೧೯೮). [ನೈಮಿತ್ತಿಕ+ಪ್ರಲಯ]

ನೈಮಿತ್ತಿಕಲಯ (ನಾ). = ನೈಮಿತ್ತಿಕಪ್ರಲಯ: ಕಾರ್ಯ ಬ್ರಹ್ಮನಿಗೆ ಚತುರ್ಯುಗಗಳು ಒಂದು ಸಾವಿರ ಸಲ ತಿರುಗಿದರೆ ಒಂದು ದಿನ ಮುಗಿಯುವುದು, ಇದಕ್ಕೆ ನೈಮಿತ್ತಿಕಲಯ ಎಂದು ಹೆಸರು (ಭಾತತ್ತ್ವ. ೬೧೪). [ನೈಮಿತ್ತಿಕ+ಲಯ]

ನೈಮಿತ್ತಿಕವಚನ (ನಾ). ಭವಿಷ್ಯಜ್ಞನ ವಚನ; ಜ್ಯೋತಿಷಿಯ ಹೇಳಿಕೆ,—ಆದೇಶ: ನೈಮಿತ್ತಿಕವಚನದಿಂ ಶುಭತಿಥಿಮುಹೂರ್ತದೊಳ್ ರಾಮ ಲಕ್ಷ್ಮಣರಂ ಚತುರಂಗಬಲಸಹಿತಂ ಮಿಥಿಳೆಗೆ ಕಟಿಪೆ (ಚಾವುಂಪು. ೨೯೯); ರಾಮನಸಹಾಯನಾಗಿ ಬನದೊಳೊರ್ವನೆ ತೊಟಲುತ್ತಮಿರ್ದ ನೆಂದಱಿಪೆ ನೈಮಿತ್ತಿಕವಚನದಿಂ ನಿಮ್ಮಲ್ಲಿಗೆನ್ನನಟ್ಟಿದೊಂ(ಚಾವುಂಪು.೩೦೫).

[ನೈಮಿತ್ತಿಕ+ವಚನ]

ನೈಮಿತ್ತಿಕಾದೇಶ (ನಾ). ಭವಿಷ್ಯಜ್ಞನ ಆದೇಶ; ಜ್ಯೋತಿಷ್ಕನ ನುಡಿ; ಭವಿಷ್ಯ ವಚನ: ಸೀತೆಯೆಂ ಪತಿವಿಯೋಗಕೃಶಾನು ಸುಡಲ್ಕೆ ಬೆಂದಪೆಂ ಎನೆ ವಿಭೀಷಣಂ ನೈಮಿತ್ತಿಕಾದೇಶಮಂ ನೆನೆದು ಭಯಚಕಿತಚಿತ್ತ ನಾಗಿ . . . ಬಿನ್ನವಿಸೆ (ಪಂರಾಮಾ. ೯-೧೯೧ ಪ).

[ನೈಮಿತ್ತಿಕ+ಆದೇಶ]

ನೈಮಿಶವನ (ನಾ). = ನೈಮಿಷ ೨: ಬಳಿಕ ಭೃಗು ನಿಜಬಂಧು ಮಿತ್ರಾವಳಿಗಱುಹಿ ಬೀಳ್ಕೊಂಡು ತೀರ್ಥಂಗಳನನೇಕವ ಕಳೆದು ನೈಮಿಶ ವನದೊಳೈತಂದು (ತಿಮ್ಮಶಾಂ. ೧೦-೪೨). [ಸಂ.]

ನೈಮಿಷ (ಗು). ೧. ನಿಮಿಷಕಾಲದ; ನಿಮಿಷಕ್ಕೆ ಸಂಬಂಧಿಸಿದ. (ನಾ). ೨. ಪುರಾಣಪ್ರಸಿದ್ಧವಾದ ಒಂದು ಅರಣ್ಯದ ಹೆಸರು: ಸಂಸಾರಚಕ್ರದಂತೆ ಭರಿತಪಾತಕಬಂಧಮಯಮಾಗಿ . . . ವಿಸ್ತರದ ನೈಮಿಷದಂತೆ ಪ್ರಾವೃತ ವಿರಕ್ತಮಯಮಾಗಿ ರಣಮಸೆದಿರ್ದುದು (ಜೈಮಿಭಾ. ೨೨-೨೨). [ಸಂ.]

ನೈಮಿಷಾರಣ್ಯ (ನಾ). = ನೈಮಿಷ ೨: ಆಗ ಆತನು ಮಗನಿಗೆ ಆಗ್ರಹದಿಂದ ರಾಜ್ಯವನ್ನು ಕೊಟ್ಟು ಹೆಂಡತಿಯೊಡನೆ ನೈಮಿಷಾರಣ್ಯ ವನ್ನು ಕುರಿತು ಪ್ರಯಾಣ ಮಾಡಿದನು (ತುಳಸೀ. ೪೨).

[ನೈಮಿಷ+ಅರಣ್ಯ]

ನೈಮೇಯ (ನಾ). ಅದಲು ಬದಲು ವ್ಯಾಪಾರ; ವಿನಿಮಯ ವ್ಯಾಪಾರ: "ಪರಿದಾನಂ, ಪರೀವರ್ತಃ, ನೈಮೇಯಃ, ನಿಮಯಃ-ಅ ಒಂದು ಬಗೇ ಜಿನುಸು ಕೊಟ್ಟು ಅದಕ್ಕೆ ಬದಲಾಗಿ ಮತ್ತೊಂದು ಬಗೇ ಜಿನುಸು ತೆಗೆದುಕೊಳ್ಳುವಿಕೆ" (ಸಿದ್ಧಾಂತಿ. ೨೯೭). [ಸಂ.]

ನೈಯಗ್ರೋಧ (ನಾ). ನ್ಯಗ್ರೋಧಕ್ಕೆ ಸಂಬಂಧಿಸಿದುದು; ಆಲದ ಮರದ ಫಲ: "ಅಶ್ವತ್ಥಂ, ವೈಣವಂ, ಪ್ಲಾಕ್ಷಂ, ನೈಯಗ್ರೋಧಂ, ಐಂಗುದಂ, ಬಾರ್ಹಸಂ-೬ ಈಯೂರು ಕ್ರಮವಾಗಿ ಅಶ್ವತ್ಥಾದಿ ವೃಕ್ಷಗಳ ಫಲಗಳಿಗೆ ಹೆಸರುಗಳು" (ಸಿದ್ಧಾಂತಿ. ೧೧೫). [ಸಂ.]

ನೈಯಾಯಿಕ (ನಾ). ೧. ತರ್ಕಶಾಸ್ತ್ರಜ್ಞ: 'ನೈಯಾಯಿಕ ಬುದ್ಧಿ' ಪರಾ. ೨. ಷಡ್ದರ್ಶನಗಳಲ್ಲಿ ಒಂದಾದ ನ್ಯಾಯ ಸಿದ್ಧಾಂತವನ್ನು ಬಲ್ಲವನು: ಷಡಭಿಜ್ಞಂ ಕ್ಷಣಿಕಂ ಜಡಾತ್ಮನೆನಿಪಂ ನೈಯಾಯಿಕಂ . . . ನೋಟಿಪ್ಪೊಡೆಂದೊಲ್ಲದೊಳ್ಪಡರ್ವನ್ನಂ ಶ್ರುತ ಕೀರ್ತಿದೇವನೊಳೆ ನಿಂದಳ್ ವಾಣಿಯೇಂ ಜಾಣೆಯೋ (ಚಂದ್ರಪು.೧-೨೫); ನೈಯಾಯಿಕರಿಗೆ ಈಶ್ವರತತ್ತ್ವ ಅನುಮಾನಗಮ್ಯವಾಯಿತೆ ವಿನಾ ಅನುಭವವಿಷಯವಾಗಲಿಲ್ಲ (ಪುಕ್ಸಾರ. ೧೦೦ ಪೀಠಿಕೆ); ನೈಯಾಯಿಕರು ಸಹಕಾರಿ ಕಾರಣಗಳೇ ಮೊದಲಾದ ಪದಾರ್ಥಗಳ ಸನ್ನಿಧಾನ ಬಂದಾಗ ವಸ್ತುವು ಕಾರ್ಯಕಾರಿಯಾಗುವುದೆಂದು ಹೇಳುವರು (ಭಾತತ್ತ್ವ. ೧೯೮).

[ಸಂ.]

ನೈಯಾಯಿಕಬುದ್ಧಿ (ನಾ). ತರ್ಕಬುದ್ಧಿ; ವೈಚಾರಿಕ ಬುದ್ಧಿ: 'ನೀನು ಹೇಳುತ್ತಿರುವುದೇ ಉತ್ತಮ' ಎಂದು ಅವಳ ನೈಯಾಯಿಕ ಬುದ್ಧಿ, ಸಲಹೆ ನೀಡಿತು (ಬೆಂದಜೀ. ೬೨). [ನೈಯಾಯಿಕ+ಬುದ್ಧಿ]

ನೈಯೆಣ್ಣೆ (ನಾ). ಮದುವೆಯ ಅಂಗವಾಗಿ ಮದುಮಕ್ಕಳಿಗೆ ಮುತ್ತೈದೆಯರು ಅಂಬಿನ ಕೋಲಿನಿಂದ ಹಚ್ಚುವ ಎಣ್ಣೆ: ಗುರುವೀಗೆ ನೆನೆಯೂತ ಹರನೀಗೆ ನುತಿಸೂತ ಪರಮಪಾವನಗೆ ನೈಯೆಣ್ಣೆ ಎರೆಯೂತ ಕರುಣೆಯ ಕೋರಿದರು ಸತಿಪತಿಗೆ (ಸಿದ್ಧಪು. ೧-೬೯); ಶ್ರೀಗುರುದೇವನಿಗೆ ಶ್ರೀಗಿರಿಜಾವಲ್ಲಭಗೆ ಶ್ರೀ ಗಣಪತಿಯ ತಂದೆಗೆ— ನೈಯೆಣ್ಣೆ ಸುಗುಣೆಯರೇ ನೀವು ಹಚ್ಚಿರೆ (ಸಿದ್ಧಪು. ೧೯-೯೯ ನೈಯೆಣ್ಣೆ ಪದ); "ಎಣ್ಣೆ, ಅರಿಷಿಣ ಹಚ್ಚಿ ಎರೆಯುವುದು" (ಸಿದ್ಧಪು. ಕೋಶ). 'ಎಣ್ಣೆಶಾಸ್ತ್ರ', 'ನೈಯೆಣ್ಣೆಪದ' ಪರಾ.

[ನೈ(<ನೆಯ್$_2$)+ಎಣ್ಣೆ]

ನೈಯೆಣ್ಣೆಪದ (ನಾ). (ಮದುಮಕ್ಕಳಿಗೆ) ನೆಯ್ಯೆರೆಯುವಾಗ ಹೇಳುವ ಪದ,—ಹಾಡು: ನೈಯೆಣ್ಣೆಪದ (ಸಿದ್ಧಪು. ೧೯-೯೯).

[ನೈಯೆಣ್ಣೆ+ಪದ$_2$]

ನೈಯೇಱಿಸು 'ನೆಯ್ಯೇಱಿಸು' ನೋ.

ನೈರಂತರ್ಯ (ನಾ). ೧. ನಿರಂತರವಾಗಿರುವಿಕೆ; ಎಡೆಬಿಡದೆ ಇರುವಿಕೆ; ಅನುಸ್ಯೂತವಾಗಿರುವಿಕೆ: ಒಂದಾದ ಮೇಲೊಂದು ಬರುವುದರಲ್ಲಿಯೇ ವಿರೋಧ ಕಾಣುವಂತಹ ರಸವಿದ್ದರೆ, ಆಗ ಅವೆರಡರ ನಡುವೆ ಮತ್ತೊಂದು ರಸವು ಬಂದು ಅವುಗಳ ನೈರಂತರ್ಯವನ್ನು ತಪ್ಪಿ ಸುವಂತೆ ಪ್ರಬಂಧವನ್ನು ರಚಿಸಬೇಕು (ಧ್ವನ್ಯಾಲೋ.೧೮೨). ೨. ತಣಿವು; ತೃಪ್ತಿ; ತುಷ್ಟಿ; ಸಮೃದ್ಧಿ: ಸಮುದಿತ ನವವಿಧಪುಣ್ಯಂ ಕ್ರಮ ಸಪ್ತಗುಣಾಬ್ಧಿ ಭವ್ಯಜನಕುಲಲಕ್ಷ್ಮೀರಮಣಂ ತಣಿವೆ ಸಹಸ್ರಂ ಸಮು ದಾಯಕ್ಕಾದುದೆಯ್ದೆ ನೈರಂತರ್ಯಂ (ಅನಂಪು. ೯-೮೮). [ಸಂ.]

ನೈರಸ್ಯ (ನಾ). ನೀರಸತೆ; ಅರುಚಿ; ಅನಾಸಕ್ತಿ: ಸರ್ವಸುಖ ಭೋಗಂಗಳೊಳುಂ ಕೊಱತೆಯಿಲ್ಲಮಾದೊಡಂ ಬಹುಕಾಲಕೆ ಸಂತಾನಂ ತಲೆದೋರ್ದುದಿಲ್ಲಮೆಂಬ ಕುಂದೊಂದೆಯೆ ಎಲ್ಲಾ ಭೋಗಂಗಳೊಳುಂ ನೈರಸ್ಯಮಂ ಪುಟ್ಟಿಸಿದುದು (ಅದ್ಭುತ. ೪-೫). [ಸಂ.]

ನೈರಾಜ್ಯ (ನಾ). ಅರಾಜಕತೆ; ರಾಜನಿಲ್ಲದಿರುವಿಕೆ: 'ನೈರಾಜ್ಯ ಪಂಥಿ' ಪರಾ. [ಸಂ.]

ನೈರಾಜ್ಯಪಂಥಿ (ನಾ). ಅರಾಜಕತೆಯ ಪಂಥಕ್ಕೆ ಸೇರಿದುದು; ರಾಜ ಅಥವಾ ಸರ್ಕಾರದ ಅಗತ್ಯವಿಲ್ಲವೆನ್ನುವ ಗುಂಪಿಗೆ ಸೇರಿದುದು: ಪ್ರಕೃತಿಯ ಶಾಸನದ ವಿಷಯದಲ್ಲಿ ಬೌದ್ಧಧರ್ಮ ಮೊದಲಿನಿಂದಲೂ ಪೂರ್ತಿಯಾಗಿ ನೈರಾಜ್ಯಪಂಥಿ (Anarchist)(ನಿಬಂಧ. I, ೩೮೬).

[ಸಂ. ನೈರಾಜ್ಯಪಂಥಿನ್]

ನೈರಾತ್ಮ್ಯ (ನಾ). ೧. [ಬೌದ್ಧ] ವಸ್ತುಗಳಿಗೆ ನಿಜಸ್ವರೂಪವಿಲ್ಲದಿರುವಿಕೆ,—ಪಾರಮಾರ್ಥಿಕ ಸ್ವರೂಪವಿಲ್ಲದಿರುವಿಕೆ; ಶೂನ್ಯ. ೨. =ನೈರಾತ್ಮ್ಯವಾದ: ಸಾರ್ಜಾತ್ಮ್ಯ, ನೈರಾತ್ಮ್ಯ, ಏಕದೇಶ ಎಂದು ಮೂರು ಮಾರ್ಗಗಳು ಸಾಮರಸ್ಯೋಪಾಯಗಳೆಂದು ಅಭಿಪ್ರಾಯವಾಗುವುದು (ಹಿಂದಸಾ. ೬). [ಸಂ.]

ನೈರಾತ್ಮ್ಯವಾದ (ನಾ). [ಬೌದ್ಧ] ವಸ್ತುಗಳಿಗೆ ಪಾರಮಾರ್ಥಿಕ ಸ್ವರೂಪವಿಲ್ಲವೆನ್ನುವ ವಾದ; ಶೂನ್ಯವಾದ: ಕೆಲವರು ಸಕಲವಸ್ತುಗಳೂ, ಅವುಗಳ ಸ್ವಭಾವಗಳೂ ಪರಮಾರ್ಥಗಳಲ್ಲ, ವಸ್ತುವೆಂಬುದೇ ಇಲ್ಲದಿರುವುದರಿಂದ ವಿರೋಧವಿಲ್ಲ ಎಂದು ಹೇಳುವರು. ಇದಕ್ಕೆ ನೈರಾತ್ಮ್ಯವಾದವೆಂದೂ, ಶೂನ್ಯವಾದವೆಂದೂ ಹೆಸರು (ಹಿಂದಸಾ. ೬).

[ನೈರಾತ್ಮ್ಯ+ವಾದ್ಯ]

ನೈರಾಶ್ಯ (ನಾ). ಹತಾಶೆ; ನಿರಾಶಾಭಾವ: ಇದು ನಿರ್ಜನತೆಯಲ್ತು; ನೈರಾಶ್ಯದಾಕಳಿಕೆ! ಇದು ಮೌನಮಲ್ತಲ್ತು! ರವಶವಂ! (ಶ್ರೀರಾಮಾ. ೨೬೩-೧೦); ಅಮ್ಮ ಏಕೆ ಸಾಯಬೇಕು? ತಾನೇ ಏಕೆ ಸತ್ತುಹೋಗಬಾರದು? ಎನ್ನುವಷ್ಟು ನೈರಾಶ್ಯ, ದುಃಖ (ಮಹಾಗ. ೧೬೫). [ಸಂ.]

ನೈರಾಶ್ಯನಿರತ (ನಾ). ನಿರಾಶೆಯಿಂದ ಕೂಡಿರುವವನು; ನಿರಾಶೆಯನ್ನು ಹೊಂದಿರುವವನು; ನಿರಾಶಾವಾದಿ: ನೈರಾಶ್ಯನಿರತಂಗೆ ದೇವತೆಗಳಿಂದೇನು? ವೈರಾಗ್ಯಪಥಿಕಂಗೆ ನಷ್ಟ ಭಯವೇನು? (ಮಂಕುಕ. ೭೯೦). [ನೈರಾಶ್ಯ+ನಿರತ]

ನೈರಿತಿ 'ನೈಋತಿ' ನೋ.

ನೈರಿತ್ತೆ 'ನೈಋತಿ' ನೋ.

ನೈರುತ 'ನೈಋತ' ನೋ.

ನೈರುತಾಗಮ (ನಾ). ಕಿರಣಾಗಮದ ಒಂಬತ್ತು ಭೇದಗಳಲ್ಲಿ ಒಂದು: ಗರುಡಾಗಮ ನೈರುತಾಗಮ ನೀಲತಂತ್ರ ರೂಕ್ಷಾಗಮ . . . ಕಾಲತಂತ್ರವೆಂದು ಕಿರಣಾಗಮದ ನವಭೇದಂಗಳು (ವಿವೇಕ. ೭೬).

[ನೈರುತ(<ನೈಋತ)+ಆಗಮ]

ನೈರುತಿ 'ನೈಋತಿ' ನೋ.

ನೈರುತ್ಯ 'ನೈಋತ್ಯ' ನೋ.

ನೈರ್ಋತ (ಗು). ೧. ನಿಋತಿಗೆ ಸಂಬಂಧಿಸಿದ; ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳ ನಡುವಿನ; ನೈಋತ್ಯ ದಿಕ್ಕಿನ. (ನಾ). ೨. ನೈಋತ್ಯ ದಿಕ್ಕಿನ ಅಧಿಪತಿ; ನೈಋತ್ಯದಿಕ್ಪಾಲಕ: "ಇಂದ್ರಃ, ವಹ್ನಿಃ, ಪಿತೃಪತಿಃ, ನೈರ್ಋತಃ, ವರುಣಃ, ಮರುತ್, ಕುಬೇರಃ, ಈಶಃ—ಅ . . . ವಿದಿಕ್ಕುಗಳೊಡಗೂಡಿದ ಮೂಡಲು ಮುಂತಾದ ದಿಕ್ಕುಗಳಿಗಧಿಪತಿಗಳು, ಅಂದರೆ ಅಷ್ಟದಿಕ್ಪಾಲಕರು" (ಸಿದ್ಧಾಂತಿ. ೨೭).

[ಸಂ.]

ನೈರ್ಋತಿ (ನಾ). ೧. ನೈಋತ್ಯದಿಕ್ಕು. ೨. ನೈಋತ್ಯ ದಿಕ್ಪಾಲಕ: ಭೋರೆನೆ ತೂರ್ಯವಂಚೆಯನಜಂ ಗಜಮಂ ಬಳವೈರಿ ಮೇಷಮಂ ಮಾರುತಬಂಧು ಸೈರಿಭಮನಂಬುಜಮಿತ್ರಸುತಂ ನೃವಾಹಮಂ ನೈರ್ಋತಿ [ಪಾಠಾಂ. ರುತಿ, ರೃತಿ]ಯಬ್ಧಿಪಂ ಮಕರಮಂ ಮೃಗಮಂ ಪವನಂ ವಿಮಾನಮಂ ಮಾರಹರಪ್ರಿಯಂ ವೃಷಭನಂ ಹರನೇಱಿ ನಭಕ್ಕೆ ಸಲ್ವುದುಂ (ಜಗವಿ. ೧-೩೬). ೩. ರಾಕ್ಷಸ; ಅಸುರ. [ಸಂ. ನೈರ್ಋತೀ]

ನೈರ್ಋತ್ಯ (ನಾ). ದಕ್ಷಿಣ ಪಶ್ಚಿಮಗಳ ನಡುವಿನ ವಿದಿಕ್ಕು; ನೈಋತ್ಯ. [ಸಂ.]

ನೈರ್ಗ್ರಂಥ್ಯ (ನಾ). [ಜೈನ] ಸಂನ್ಯಾಸ: ಬಗೆ ತತ್ವಾರ್ಥವಿನಿಶ್ಚಯಂಬಡೆಯೆ ನೈರ್ಗ್ರಂಥ್ಯಂ ಪೊದಟ್ಟುತ್ತು (ಪುಷ್ಪಪು. ೧-೫). [ಸಂ.]

ನೈರ್ಘೃಣ್ಯ (ನಾ). ಕರುಣೆಯಿಲ್ಲದಿರುವಿಕೆ; ದಯೆಯಿಲ್ಲದಿರುವಿಕೆ; ನಿರ್ದಯತೆ; ನಿಷ್ಕರುಣೆ: ಪರಮಾತ್ಮನು . . . ಕೆಲವರಿಗೆ ಸುಖ, ಕೆಲವರಿಗೆ ದುಃಖ ಮುಂತಾದುದನ್ನು ಕೊಡುವುದಾದರೆ ಒಂದು ನಿಮಿತ್ತ ಬೇಕು; ಹಾಗಿಲ್ಲದಿದ್ದರೆ ಅವನಿಗೆ ವೈಷಮ್ಯ ಮತ್ತು ನೈರ್ಘೃಣ್ಯ ಬರುವುವು ಎಂಬೀ ಮುಂತಾದ ವಾದಗಳು ಸರ್ವೇಶ್ವರ ಪರಮಾತ್ಮತತ್ವಕ್ಕೆ ಸಂಗತವಲ್ಲ (ಭಾತತ್ತ್ವ. ೪೯೨); ಧರ್ಮವು ಯಾವ ವೈಷಮ್ಯ ನೈರ್ಘೃಣ್ಯವನ್ನು ಬುದ್ಧಿವಾದದಿಂದ ತಳ್ಳಬೇಕೆನ್ನುವದೋ ಅಂಥ ಪರಿಣಾಮವನ್ನು ಕವಿಯು ಎದೆ ಕರಗಿಸಿ, ರಸಮಯವಾಗಿ ಮಾಡಿ, ಮಾಡುವನು (ಸಾಹಿವಿ. ೩೯). [ಸಂ.]

ನೈರ್ಮಲ್ಯ (ನಾ). ನಿರ್ಮಲವಾಗಿರುವಿಕೆ; ಕೊಳೆಯಿಲ್ಲದಿರುವಿಕೆ; ಶುದ್ಧವಾಗಿರುವಿಕೆ; ಸ್ವಚ್ಛತೆ: ಕುಂಡಲೀಶಾದಿ ದುರ್ಜನ ಹಸ್ತಶೆಹಿತ ಚಿತ್ಪಿಂಡಶಿವನೆನಿಪ ಮೇಲಣ ಗವಿಯ ಶಾಂತನಂಜುಂಡದೇಶಿಕಚಕ್ರವರ್ತಿ ಜಯವಿಗತಾ ನೈರ್ಮಲ್ಯಪುಣ್ಯಕೀರ್ತಿ (ವೀಶೃಪು. ೭-೬-೨); ಧರ್ಮಸುಕೃತಂ ಪ್ರಖ್ಯಾತ ನೈರ್ಮಲ್ಯ ಚಲ್ವಾವಾಸಂಗಳು ಪುಣ್ಯಮಕ್ಕು (ನಾನಾರ. ೬೯); ಅನಂತಾನಂತವಾದ ಸಾಧ್ಯತೆಯುಳ್ಳ ಭವ್ಯಭವಿಷ್ಯವುಳ್ಳ ಬಾಳನ್ನೂ, ಆ ಬಾಳಿನ ನಾವೀನ್ಯ ನೈರ್ಮಲ್ಯಗಳನ್ನವನು ಮತ್ತೆ ಅನುಭವಿಸಿದಂತಾಯಿತು (ಪುನರು. ೨೭೪). [ಸಂ.]

ನೈರ್ಮಲ್ಯಸ್ವರೂಪ (ನಾ). ನಿರ್ಮಲವಾದ ಸ್ವರೂಪ; ಪರಿಶುದ್ಧವಾದ ಸ್ವರೂಪ: ಅವಿರತಾನಂದಸ್ವರೂಪನನಾವನಱಿವವನು ನಿತ್ಯತಾನೆಲ್ಲರು ಅನಿತ್ಯರು ಸತ್ಯವೀ ಜನವಱಿಯಲೆನುತಂ ನಿತ್ಯ ನೈರ್ಮಲ್ಯಸ್ವರೂಪ ವಿನಿಶ್ಚಿತಂ ದೃಷ್ಟಪ್ರತ್ಯಯವಲಾ (ಒಸಪು. ೫೪-೫೯).

[ನೈರ್ಮಲ್ಯ+ಸ್ವರೂಪ]

ನೈರ್ವಿಣ್ಯ (ನಾ). ದುಃಖ; ಖೇದ; ಖಿನ್ನತೆ; ನಿರ್ವಿಣ್ಣತೆ: ತಾರುಣ್ಯದಿಂ ನಿನ್ನನುದ್ಧರಿಸಲೆಂದಚ್ಯುತಂ ಕೊಟ್ಟ ತನ್ನವತಾರದ ಪುಣ್ಯದಿಂ ಮಡಿದು ಮುಕ್ತಿಗೆ ಸಂದನಿದಕೆ ನೈರ್ವಿಣ್ಯ[ಪಾಠಾಂ. ನಿರ್ವಿಣ್ಣ, ನಿರ್ವಿಣ್ಯ] ವೆಮಗಿಲ್ಲ ನಾವಿನ್ನು ಹಯಮಂ ಬಿಡಲರಣ್ಯವಾಸಿಗಳಲ್ಲ (ಜೈಮಿಭಾ. ೧೪-೧೦). [ಸಂ.]

ನೈಲ (ಗು). ೧. ನೀಲಿ ಬಣ್ಣಕ್ಕೆ ಸಂಬಂಧಿಸಿದ: ಭೋಂಕನೆಯೆ ಗೋಚರಿಸಿತಾ ಮಹೇಂದ್ರಾದ್ರಿ, ದಕ್ಷಿಣದಿಶಾನೈಶನೈರಾಶ್ಯ ಯಮದೇಹ ಗೋಪುರಮೆನಲ್ ಗ್ರಂಥಿತ ಕಳೇಬರದ ನೈಲ ವೈಶಾಲ್ಯದಿಂ ದೃಷ್ಟಿಗೆ ದಿಗಂತಮನೊಡರ್ಚಿ (ಶ್ರೀರಾಮಾ. ೩೬೬-೧೨೦). (ನಾ). ೨. ನೀಲವರ್ಣ; ಶ್ಯಾಮಲವರ್ಣ. [ಸಂ.]

ನೈಲಂಗಲ (ನಾ). ಚೆಲುವು; ಸೌಂದರ್ಯ: "ನೈಲಂಗಲಮೆನೆ ಚೆಲ್ವಿಕೆ" (ರನ್ನಕಂ. ೧೧). [?]

ನೈಲಾನ್ (ನಾ). ೧. ಕೃತಕವಾಗಿ ನೀರು, ಕಲ್ಲಿದ್ದಲುಗಳ ಸಂಯೋಜನೆಯಿಂದ ತಯಾರಿಸಿದ ನೂಲು: ಕಲ್ಲಿದ್ದಲು ಕರಗಿದ ದ್ರಾವಕವನ್ನು ಲೋಮನಾಳಗಳಲ್ಲಿ ಹಾಯಿಸಿ ಹೊರಗಿಡುವ ಎಳೆಯೇ ನೈಲಾನ್ (ಗೃಹವಿ. ೭೧). ೨. =ನೈಲಾನ್ ಬಟ್ಟೆ: ನೈಲಾನ್ ಉಟ್ಟ ನಾಜೂಕ ನಾರಿಯಂತೆ ಬಳುಕುತ್ತ ಹೋಗುವ ಇದರ ಒಯ್ಯಾರ ಪ್ರೇಕ್ಷಣೀಯವಾಗಿದ್ದರೂ ಅದನ್ನು ನೋಡಿ ನಲಿಯಲು ಬಲು ಮಂದಿ ನೆರೆಯರೆಂಬುದು ಪಟಧಾರಿಗೆ ವಿಷಾದದ ವಿಷಯ (ಗಾಳಿಪ. ೬).

[←ಇಂ. Nylon]

ನೈಲಾನ್‌ಬಟ್ಟೆ (ನಾ). ನೈಲಾನ್ ಎಂಬ ಕೃತಕ ನೂಲಿನಿಂದ ತಯಾರಿಸಿದ ಬಟ್ಟೆ: ನೈಲಾನ್‌ಬಟ್ಟೆಗಳು—ಇವು ಬಹಳ ನವುರಾಗಿ, ನುಯವಾಗಿ,ನುಣುಪಾಗಿರುವುವು (ಗೃಹವಿ. ೭೧). [ನೈಲಾನ್+ಬಟ್ಟೆ$_2$]

ನೈಲ್ಯ (ನಾ). ನೀಲಿಯ ಬಣ್ಣ; ಶ್ಯಾಮವರ್ಣ. [ಸಂ.]

ನೈವಾಳಿ 'ನಿವಾಳಿ' ನೋ.

ನೈವೇದ್ಯ (ನಾ). ೧. (ಪೂಜಾವಿಧಿಯಲ್ಲಿ) ದೇವರಿಗೆ ಮಾಡುವ ಹಣ್ಣು,ಕಾಯಿ, ಭಕ್ಷ್ಯ,ಭೋಜ್ಯಾದಿಗಳ ಸಮರ್ಪಣೆ: ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯ ನೀನು (ಮಹಾದೇ.ಬ.೧೨-೯), ಏಳೇಳ್, ಮಹಾಯೋಗಿ, ನಿಃಸ್ವಾರ್ಥಕಾರಣಕೆ ನಿನ್ನ ಸಿದ್ಧಿಯನಿಲ್ಲಿ ನೈವೇದ್ಯಮಂ ನೀಡಿ, ಪಡೆ ಪರಮಸಿದ್ಧಿಯಂ (ಶ್ರೀರಾಮಾ. ೩೯೮-೯೭೪). ೨. ದೇವರಿಗೆ ನಿವೇದಿಸಿದ ಹಣ್ಣು, ಕಾಯಿ, ಹವಿಸ್ಸು ಮೊದಲಾದ ದ್ರವ್ಯ: ದೇವರಿಗೆ ತಕ್ಕ ನೈವೇದ್ಯ! ಮಾರಿಗೆ ಕೋಣ, ಸೂರ್ಯನಿಗೆ ಅರ್ಘ್ಯ (ಧ್ವನ್ಯಾಲೋ. XIX ಪೀಠಿಕೆ). ೩. (ಆಲಂ) ಊಟ; ಭೋಜನ: ನೈವೇದ್ಯಂತೂ ಪಂತಮಾಮಾ ಅವರಲ್ಲೆ ಆಗತದ. ಇನ್ನ ಅರಿವಿ ಅಂಚಡಿಗೂ ಅನ್ನದಾತಾನ ದಾತಾ(ದೀಪಹ.II,೧೧). ೪. ಏನೂ ಇಲ್ಲದಿರುವಿಕೆ; ಶೂನ್ಯ; ಸೊನ್ನೆ: ಅವನಿಗೆ ವಿದ್ಯೆ ನೈವೇದ್ಯವಾಗಿದೆ (ರೂಢಿ).

ನೈವೇದ್ಯ ಮಾಡು=(ದೇವರಿಗೆ ಹಣ್ಣು,ಕಾಯಿ ಮೊದಲಾದುವುಗಳನ್ನು) ಅರ್ಪಿಸು; ಸಮರ್ಪಣೆ ಮಾಡು: ನಿತ್ಯವೂ ದೇವರಿಗೆ ನೈವೇದ್ಯ ಮಾಡಿ ಪ್ರಸಾದವನ್ನು ಸ್ವೀಕರಿಸುವುದು ನಮ್ಮ ಹಿರಿಯರ ಪದ್ಧತಿ (ರೂಢಿ). [ಸಂ.]

ನೈವೇದ್ಯಭಾಗಿ (ನಾ). ಅರ್ಪಿಸಿದುದರಲ್ಲಿ ಭಾಗವನ್ನು ಪಡೆಯುವವನು: ಜೀವನವದೊಂದು ಪರಮೈಶ್ವರ್ಯ ಬೊಮ್ಮನದು ಸೇವೆಯದನೂರ್ಜಿತಂಗೊಳಿಸುವೆಲ್ಲೆಸಕ ಈವರಾರ್ ಕೊಳುವರಾರೆಲ್ಲರೊಂದಾಗಿರಲು? ನೈವೇದ್ಯಭಾಗಿ ನೀಂ (ಮಂಕುಕ. ೨೫೦). [ನೈವೇದ್ಯ+ಭಾಗಿ]

ನೈವೇದ್ಯವೇಳೆ (ನಾ). ದೇವರಿಗೆ ನೈವೇದ್ಯವನ್ನು ಅರ್ಪಿಸುವ ಸಮಯ,—ಕಾಲ: ಅಮಳಲಿಂಗಾರ್ಚನ ಸಮಯದಲಿ ಸಮುಚಿತದ ನೈವೇದ್ಯವೇಳೆಯೊಳಮರ್ದು ಮೆಱವಣೆಯಲಿ ಸುರಗಿಯಂ ಕಿತ್ತು ಹರಣಕ್ಕೆ ಅಮಮವೊರೆಯಂ ಕೊಯ್ವವೋಲುತ್ತಮನದಂ ಕೆಲದಲಿ ಮಡಗಿ ಜಂಗಮದ ಲಿಂಗಾವಸರಮಂ ಮಾಡಿಸುವವೊಲು (ಬಸಪು. ೩೩-೧೦).

[ನೈವೇದ್ಯ+ವೇಳೆ (=ವೇಲೆ)]

ನೈಶಾಟ (ನಾ). ೧. ನಿಶಾಟರಿಗೆ ಸಂಬಂಧಿಸಿದುದು; ರಾಕ್ಷಸ ಸಂಬಂಧವಾದುದು. ೨. ರಾಕ್ಷಸರ ಸಮೂಹ,—ಗುಂಪು: ನಡೆ ಸುಮಿತ್ರಾಸೂನು . . . ತೊಡೆವೆನೀ ತೋರ್ಪೀ ನಿಶಾಚರಪಡೆಯ ಭಾಗ್ಯದ ಭಾಳಲಿಪಿಯನು ನೆಡಿಸುವೆನು ನೈಶಾಟವಿಜಯಸ್ತಂಬಡಂಬರವ (ತೊರರಾ. ೩-೬-೪). [ಸಂ.]

ನೈಶ್ರೇಯಸ (ನಾ). ಮೋಕ್ಷಸಂಬಂಧಿಯಾದುದು: ಅದಱೊಳಗೆ ನೈಶ್ರೇಯಸವೆನಿಪ್ಪುದು ಮಹಾವನವಖಿಳಕಾಮಪ್ರದವೆನಿಪ ವರಕಲ್ಪ ವೃಕ್ಷಂಗಳಲಿ . . . ಕಮಲಾಕರದ ತೋಭೆಯಲಿ (ನಿಭಾಗ. ೩-೪-೪೩).

[ಸಂ.]

ನೈಷಂಗ (ನಾ). ಬತ್ತಳಿಕೆ; ತೂಣೀರ: ಮಾರ್ಗಣಾಡಂಬರದಿಂ ನೈಷಂಗಮಂ ಸತ್ಕವಿಕಳಿತಕಳಾರಂಭದಿಂ ಶುಂಭದಬ್ಜಾಕರಮಂ ಪೋಲ್ವಂ ಮಹೀಭಾಸುರಗುಣನಿಳಯಂ ಶಾಂತನುತ್ಕೀರ್ತಿಕಾಂತಂ (ಪುಷ್ಪಪು.೧-೮೨).

[ಸಂ.]

ನೈಷಧ (ನಾ). ೧. ನಿಷಧದೇಶಕ್ಕೆ ಸಂಬಂಧಿಸಿದುದು. ೨. ನಿಷಧ ದೇಶದ ಒಬ್ಬ ಪ್ರಸಿದ್ಧ ರಾಜ; ನಳ: ಸ್ಮರನ ರೂಪಿನ ನೈಷಧನ ಕಂಡರು ಮನೋರಾಗದಲಿ (ನಳಚ. ೩-೧೫). ೩. ಶ್ರೀಹರ್ಷನಿಂದ ರಚಿಸಲ್ಪಟ್ಟ ಒಂದು ಸಂಸ್ಕೃತಕಾವ್ಯ; ಈ ಸಂಸ್ಕೃತದಲ್ಲಿ ಪ್ರಸಿದ್ಧವಾದ ಪಂಚಮಹಾಕಾವ್ಯಗಳಲ್ಲಿ ಒಂದು. [ಸಂ.]

ನೈಷ್ಕರ್ಮ್ಯ (ನಾ). ಫಲಾಪೇಕ್ಷೆಯಿಲ್ಲದೆ ಕೆಲಸ ಮಾಡುವಿಕೆ: ಫಲಾಪೇಕ್ಷೆ ಇಲ್ಲದೆ ಕರ್ಮ ಮಾಡುವುದಕ್ಕೆ ನೈಷ್ಕರ್ಮ್ಯವೆಂದು ಹೆಸರು (ಹಸಾರ. ೨-೭ ಟೀಕೆ): ನೈಷ್ಕರ್ಮ್ಯ ಬೇರೆ, ನಿಷ್ಕ್ರಿಯತೆ ಬೇರೆ ಎಂಬುದನ್ನು ತಿಳಿಯುವ ಶಕ್ತಿ ಜನಸಾಮಾನ್ಯರಲ್ಲಿ ಉಳಿದಿರಲಿಲ್ಲ (ಕರ್ನಾಕ.೩೮).

[ಸಂ.]

ನೈಷ್ಕಿಕ (ನಾ). ಟಂಕಸಾಲೆಯ ಅಧಿಕಾರಿ: "ರೂಪ್ಯಾಧ್ಯಕ್ಷ:—ಟಂಕಸಾಲೆಗೆ ಅಧಿಕಾರಿಯು, ನೈಷ್ಕಿಕನೆನ್ನಲ್ಪಡುವನು" (ಗುರುಬಾ. ೨೬೨). [ಸಂ.]

ನೈಷ್ಟಿಕಮಠ (ನಾ). ಅಖಂಡಬ್ರಹ್ಮಚರ್ಯವನ್ನು ಪಾಲಿಸುವವನು ಇರುವ ಮಠ: ಮಠವಿಂದು ನೈಷ್ಟಿಕಮಠಂ ಈ ಮಠದೊಡೆಯಂ ಬ್ರಹ್ಮಚರ್ಯ್ಯಮಿಲ್ಲದೊಡಂದೀ ಮಠದಿಂ ಪೊಱಮಡಿಸುವುದು (ಎಕ. VII, ತಿಕಾರಿ, ೨೭೬; 1143). [ನೈಷ್ಟಿಕ$_0$+ಮಠ]

ನೈಷ್ಟಿಕಸ್ಥಾನ (ನಾ). =ನೈಷ್ಠಿಕಸ್ಥಾನ: ನೂಱುಬಳ್ಳಿಯ ತೋಂಟಂ ಪತ್ತುಂ ಮನೆಯನೆ ××× ವರ್ಗ್ಗೆ ಕಾಲಂ ಕಟ್ಟು ಕೊಟ್ಟದವರೀ ನೈಷ್ಟಿಕಸ್ಥಾನಮಂ (ಸೌಇಇ.XX,೨೪-೩೮; 1034). [<ನೈಷ್ಠಿಕಸ್ಥಾನ]

ನೈಷ್ಠಿಕ (ಗು). ೧. ಕೊನೆಯದಾದ; ಅಂತಿಮವಾದ. ೨. ನಿಷ್ಕೃಷ್ಟವಾದ; ಸ್ಪಷ್ಟವಾದ; ನಿರ್ಣಾಯಕವಾದ. ೩. ಸ್ಥಿರವಾದ; ದೃಢವಾದ; ಅಚಲವಾದ. ೪. ಸಮಗ್ರವಾದ; ಅಖಂಡವಾದ. ೫. ನುರಿತ; ಪಳಗಿಧ; ನಿಷ್ಣಾತ. ೬. ಮಾಡಲೇಬೇಕಾದ. ೭. ಅಖಂಡಬ್ರಹ್ಮಚರ್ಯವನ್ನು ತೊಟ್ಟ; ಆಜೀವಬ್ರಹ್ಮಚರ್ಯವನ್ನು ಕೈಕೊಂಡ. ೮. ನಿಷ್ಠೆಯಿಂದ ಕೂಡಿದ: 'ನೈಷ್ಠಿಕತನ' ಪರಾ. (ನಾ). ೯. =ನೈಷ್ಠಿಕಬ್ರಹ್ಮಚಾರಿ ೧. ೧೦. ಒಂದು ಬಗೆಯ ಆಯುಧ: ತನಗೆ ದೇವೇಂದ್ರನಿತ್ತ ಐಂದ್ರಮೆಂಬ ದಿವ್ಯಾಸ್ತ್ರಮುಮಂ ನೈಷ್ಠಿಕಮೆಂಬ ಮುಷ್ಟಿಯುಮಂ ಕೆಯ್ಕೊಂಡು (ಸಂಪಭಾ. ೮-೩೬ವ). ೧೧. =ನೈಷ್ಠಿಕಬ್ರಹ್ಮಚಾರಿ ೨: ಉಪನಯಾವಲಂಬಾದೀಕ್ಷಾಗೂಢನೈಷ್ಠಿಕಭೇದದಿಂ ಬ್ರಹ್ಮಚಾರಿಗಳ್ ಐದು ತೆಱಂ (ತತ್ತ್ವಪ್ರ. ೨೮೭). ೧೨. =ನೈಷ್ಠಿಕಶ್ರಾವಕ: ಶ್ರಾವಕರಲ್ಲಿ ಪಾಕ್ಷಿಕನೈಷ್ಠಿಕ ಮತ್ತು ಸಾಧಕರೆಂದು ಮೂರು ಗುಂಪುಗಳಾಗುತ್ತವೆ (ಜೈನಪ. ೪೬೪). [ಸಂ.]

ನೈಷ್ಠಿಕತನ (ನಾ). ನಿಷ್ಠೆಯಿಂದ ಕೂಡಿರುವಿಕೆ;ನಿಷ್ಠಾವಂತಿಕೆ:(ಕಿ).

[ನೈಷ್ಠಿಕ+-ತನ]

ನೈಷ್ಠಿಕತಪೋಧನ (ನಾ). ಅಖಂಡ ಬ್ರಹ್ಮಚಾರಿಯಾದ ತಪಸ್ವಿ: ನೈಷ್ಟಿ(ಷ್ಠಿ)ಕತಪೋಧನಬ್ರಾಹ್ಮಣರ್ಗ್ಗಮ್ ಅವಿಶೇಷದಾನಮಮ್ ಮಾಡುವುದುತ್ತಮಪಕ್ಷಮ್ (ಎಇ. XVI, ೪-೨೪; 978); ಇನ್ನೆನಿಸಿದ ಕಾಳಾಮುಖ ನೈಷ್ಠಿಕತಪೋಧನರ್ಗ್ಗವಲ್ಲಿಯ ಚ್ಛಾತ್ರರ್ಗ್ಗವಲ್ಲಿಯ ಪಾವುಳಕ್ಕಂ . . . ಶ್ರೀಸ್ವಯಂಭುಸೋಮೇಶ್ವರದೇವರ್ಗ್ಗೆ ಧಾರಾಪೂರ್ವಕಂ ಮಾಡಿ ಬಿಟ್ಟು ಕೊಟ್ಟರ್ (ಸೌಇಇ. XX, ೪೯-೫೯; ಸು. 1076).

[ನೈಷ್ಠಿಕ+ತಪೋಧನ]

ನೈಷ್ಠಿಕಬ್ರಹ್ಮಚರ್ಯ (ನಾ). ಯಾವಜ್ಜೀವವೂ (ಗುರುಕುಲದಲ್ಲಿದ್ದುಕೊಂಡು) ಪಾಲಿಸುವ ಬ್ರಹ್ಮಚರ್ಯ; ಅಖಂಡವಾದ ಬ್ರಹ್ಮಚರ್ಯ: ಬ್ರಹ್ಮಚರ್ಯದಲ್ಲಿ ನೈಷ್ಠಿಕಬ್ರಹ್ಮಚರ್ಯ ಅಥವಾ ಆಜೀವಬ್ರಹ್ಮಚರ್ಯ ಎಂಬ ಕಟ್ಟುನಿಟ್ಟಾದ ಒಂದು ಆಶ್ರಮವಿದೆ (ಬಂಕಿಮ. ೨೮೩); ಭೀಷ್ಮನು . . . ಮುಂದೆ ತನ್ನ ಕಡೆಯಿಂದ

ರಾಜ್ಯಾಧಿಕಾರಕ್ಕೆ ಹೋರಾಡಬಹುದಾಪ ಸಂತತಿಯುಂಟಾಗದಂತೆ ತಾನು ನೈಷ್ಠಿಕಬ್ರಹ್ಮಚರ್ಯದಲ್ಲಿಯೇ ಇರುವೆನೆಂದೂ ಮಾತು ಕೊಟ್ಟು . . . ಬೇಡರ ದೊರೆಯ ಮಗಳಾದ ಸತ್ಯವತಿಯೆಂಬಾಕೆಯನ್ನು ತಂದು ತನ್ನ ತಂದೆಗೆ ಮದುವೆಯನ್ನು ಮಾಡಿದನು (ತೀಗಟ್ಟು. ೩೨).

[ನೈಷ್ಠಿಕ+ಬ್ರಹ್ಮಚರ್ಯ]

ನೈಷ್ಠಿಕಬ್ರಹ್ಮಚಾರಿ (ನಾ). ೧. ಯಾವಜ್ಜೀವವೂ (ಗುರುಕುಲದಲ್ಲಿದ್ದುಕೊಂಡು) ಬ್ರಹ್ಮಚರ್ಯವನ್ನು ಪಾಲಿಸುವವನು; ನೈಷ್ಠಿಕಬ್ರಹ್ಮಚರ್ಯವನ್ನು ಪಾಲಿಸುವವನು; ಅಖಂಡಬ್ರಹ್ಮಚಾರಿ: ಸಾಧಕನು ಗೃಹಸ್ಥಾಶ್ರಮವನ್ನು ಸ್ವೀಕರಿಸದೆಯೇ ಬದುಕಿರುವವರೆಗೂ ಗುರುಕುಲದಲ್ಲಿಯೇ ಇದ್ದು ಅಧ್ಯಾಪನದಲ್ಲಿಯೇ ಜೀವನವನ್ನು ಕಳೆದರೆ ನೈಷ್ಠಿಕಬ್ರಹ್ಮಚಾರಿ ಎನಿಸುವನು (ಭಗವದ್ಗೀ. ೧೫೯); ಗೋಪಾಲಕೃಷ್ಣ ಭಾರತಿಯವರು ನೈಷ್ಠಿಕಬ್ರಹ್ಮಚಾರಿ(ಸಂಗೀತ.೧೨೨). ೨. [ಜೈನ] ಉಪನಯನಬ್ರಹ್ಮಚಾರಿ, ಅವಲಂಬನಬ್ರಹ್ಮಚಾರಿ, ಅದೀಕ್ಷಾಬ್ರಹ್ಮಚಾರಿ, ಗೂಢಬ್ರಹ್ಮಚಾರಿ ಮತ್ತು ನೈಷ್ಠಿಕಬ್ರಹ್ಮಚಾರಿ ಎಂಬ ಐದು ಬಗೆಯ ಬ್ರಹ್ಮಚಾರಿಗಳಲ್ಲಿ ಕಡೆಯ ಗುಂಪಿಗೆ ಸೇರಿದವನು; ಈ ಐದು ಬಗೆಯ ಬ್ರಹ್ಮಚಾರಿಗಳಿರುವರೆಂದು ಜೈನಮತವು ಗುರುತಿಸುತ್ತದೆ. ೧. ಉಪನಯನಬ್ರಹ್ಮಚಾರಿ: ಇವನು ಗಣಧರಸೂತ್ರ ಅಥವಾ ಜನಿವಾರವನ್ನು ಧರಿಸಿ ಪರಮಾಗಮವನ್ನು ಅಭ್ಯಾಸಮಾಡಿ ಅನಂತರ ಗೃಹಸ್ಥನಾಗುತ್ತಾನೆ. ೨. ಅವಲಂಬನ ಬ್ರಹ್ಮಚಾರಿ: ಇವನು ಕೌಪೀನ, ಖಂಡವಸ್ತ್ರಾದಿಗಳನ್ನು ಧರಿಸಿ ಆಗಮಾಭ್ಯಾಸ ಮಾಡಿ ಬಳಿಕ ಗೃಹಸ್ಥನಾಗುತ್ತಾನೆ. ೩. ಅದೀಕ್ಷಾಬ್ರಹ್ಮಚಾರಿ: ಇವನು ವೇಷವಿಲ್ಲದೆ ಪರಮಾಗಮದ ಅಭ್ಯಾಸವನ್ನು ಮಾಡಿ ಅನಂತರ ಗೃಹಸ್ಥನಾಗುತ್ತಾನೆ. ೪. ಗೂಢಬ್ರಹ್ಮಚಾರಿ: ಇವನು ಕೌಮಾರಾವಸ್ಥೆಯಲ್ಲಿಯೇ ಮುನಿಯಾಗಿ,ಶಾಸ್ತ್ರಾಭ್ಯಾಸ ಮಾಡಿ ಅನಂತರ ಇತರರ ಬಲವಂತಕ್ಕೊಳಗಾಗಿ ಅಥವಾ ಪರೀಷಹಗಳನ್ನು ತಾಳಲಾರದೆ ಗೃಹಸ್ಥನಾಗುತ್ತಾನೆ. ೫. ನೈಷ್ಠಿಕಬ್ರಹ್ಮಚಾರಿ: ಇವನು ಜುಟ್ಟು, ಜನಿವಾರಗಳನ್ನು ಧರಿಸಿ, ಬಿಳಿಯ ಅಥವಾ ಕೆಂಪುಬಣ್ಣದ ಬಟ್ಟೆಯುಟ್ಟು ಭಿಕ್ಷಾಟನೆ ಮಾಡುತ್ತ ಜಿನಾರ್ಚನೆಯಲ್ಲಿ ನಿರತನಾಗಿ, ಆಜೀವಬ್ರಹ್ಮಚರ್ಯದಲ್ಲಿ ನೆಲಸುತ್ತಾನೆ: ನೈಷ್ಠಿಕಬ್ರಹ್ಮಚಾರಿಯೆಂಬೊಂ ಶಿಖಾಧರನುಂ ಧವಳರಕ್ತವಸ್ತ್ರ ಖಂಡಕೌಪೀನಧರಕಟಲಿಂಗನುಂ ಸ್ನಾತಕನುಂ ಯಜ್ಞೋಪವೀತಲಕ್ಷಿತವಕ್ಷಸ್ಥಳನುಂ ಭಿಕ್ಷಾವೃತ್ತಿನಿರತನುಂ ದೇವತಾರ್ಚನಾಪರನುಮಕ್ಕುಂ (ಜಾವುಂಪು. ೨೨೪). [ನೈಷ್ಠಿಕ+ಬ್ರಹ್ಮಚಾರಿ]

ನೈಷ್ಠಿಕಭಕ್ತಿ (ನಾ). [ವೀಶೈ] ಆರುವಿಧವಾದ ಭಕ್ತಿಗಳಲ್ಲಿ ಒಂದು ಬಗೆ; ನಿಷ್ಠಾಭಕ್ತಿ: ಭಕ್ತಿ ಆರು ವಿಧವಾಗಿದೆ. ಶ್ರದ್ಧಾಭಕ್ತಿ, ನೈಷ್ಠಿಕಭಕ್ತಿ . . . ಸಮರಸಭಕ್ತಿ, ಭಗವತ್ತಾದಾತ್ಮ್ಯವೇ ಭಕ್ತಿಯ ಅಂತಿಮಗಮ್ಯ (ಭಾರದ. ೧೧೯). [ನೈಷ್ಠಿಕ+ಭಕ್ತಿ]

ನೈಷ್ಠಿಕಭಾವ (ನಾ). ನಿಷ್ಠೆಯಿಂದ ಕೂಡಿರುವಿಕೆ; ನಿಷ್ಠತೆ: ಬಹಿರಂಗದ ಮೇಲಿದ್ದ ಇಷ್ಟಲಿಂಗದಲ್ಲಿ ನೈಷ್ಠಿಕಭಾವವಿಂಬುಗೊಂಡು ಅನಿಮಿಷದೃಷ್ಟಿ ಅಚಲಿತವಾಗಿ ಬಲಿದಿರಲು . . . ಷಡ್‌ವಿಧಲಿಂಗವಾಗಿ ನೆಲೆಗೊಂಬುದು (ಅಖಂಡೇ. ೧೯೪-೪). [ನೈಷ್ಠಿಕ+ಭಾವ]

ನೈಷ್ಠಿಕಮುನೀಶ್ವರ (ನಾ). =ನೈಷ್ಠಿಕತಪೋಧನ: ಜಳನಿಧಿಪರೀತ ವಸುಧಾತಳದೊಳು ನೈಷ್ಠಿಕಮುನಿ(ನೀ)ಶ್ವರಾರಾಧ್ಯಮರ್ ಶ್ರೀಕಳಶೇಶ ದೇವಪ[ಪಾ]ದಕಮಳಭೃಙ್ಗ ಸೋಮೇಶ್ವರಬ್ರತೀಶಮರ್ ಸ್ತುತ್ಯಮರ್ (ಎಇ. XVIII, ೧೯೮-೨೩; 1107). [ನೈಷ್ಠಿಕ+ಮುನೀಶ್ವರ]

ನೈಷ್ಠಿಕಶ್ರಾವಕ (ನಾ). [ಜೈನ] ಪಾಕ್ಷಿಕ, ನೈಷ್ಠಿಕ ಮತ್ತು ಸಾಧಕರೆಂಬ ಮೂರು ಬಗೆಯ (ತರಗತಿಯ) ಶ್ರಾವಕ(ಗೃಹಸ್ಥ)ರಲ್ಲಿ ಮಧ್ಯದ ಗುಂಪಿಗೆ ಸೇರಿದವನು; ಅತಿಚಾರರಹಿತವಾದ ಶ್ರಾವಕಧರ್ಮವನ್ನು ಪಾಲಿಸುವವನು; ಈನೈಷ್ಠಿಕಶ್ರಾವಕರಲ್ಲಿ ಹನ್ನೊಂದು ತರಗತಿಗಳುಂಟು. ಈ ಹನ್ನೊಂದು ಸ್ತರಗಳಲ್ಲಿ ಅವನು ತನ್ನ ಆಧ್ಯಾತ್ಮಿಕಜೈತನ್ಯವನ್ನು ಹೆಚ್ಚಿಸಿಕೊಳ್ಳುತ್ತಾನೆ. ೧. ದಾರ್ಶನಿಕ. ೨. ವ್ರತಿಕ (ಏಳು ಶೀಲವ್ರತಗಳನ್ನೂ ಉಳ್ಳವನು). ೩. ಸಾಮಾಯಿಕಿ. ೪. ಪ್ರೋಷಧೋಪವಾಸಿ. ೫. ಸಚಿತ್ತವಿರತ. ೬. ದಿವಾಮೈಥುನವಿರತ. ೭. ಬ್ರಹ್ಮಚಾರಿ. ೮. ಆರಂಭವಿರತ. ೯. ಪರಿಗ್ರಹವಿರತ. ೧೦. ಅನುಮತಿವಿರತ. ೧೧. ಉದ್ದಿಷ್ಟವಿರತ. ಈ ಹನ್ನೊಂದು ತರಗತಿಗಳಿಗೆ ಜೈನ ಪರಿಭಾಷೆಯಲ್ಲಿ 'ಪ್ರತಿಮೆ'ಗಳೆಂದು ಕರೆಯುವರು: ಅತಿಚಾರರಹಿತ ಶ್ರಾವಕಧರ್ಮವನ್ನು ಪಾಲಿಸುವವನು ನೈಷ್ಠಿಕಶ್ರಾವಕನು (ಜೈಸಿ.೪೬೪).

[ನೈಷ್ಠಿಕ+ಶ್ರಾವಕ]

ನೈಷ್ಠಿಕಸಂಯಮಿ (ನಾ). =ನೈಷ್ಠಿಕತಪೋಧನ: ಅಂಭೋನಿಧಿ ಪರಿವ್ರಿತ ವಿಶ್ವಂಭರೆಯೊಳ್ ನೆಗ[ದ್ದ]ದ್ದ ಲಿಂಗವಂ ಪೊಗಟ್ಟುರ್ . . . ಅದು ನೈಷ್ಠಿಕಸಂಯಮಿಯಲ್ಲದಗ್ಗೆಗ್ ಪೂಜಿಸುವುದರಿದು (ಸೌಇ. XX, ೪೯-೪೬; 1076 ?). [ನೈಷ್ಠಿಕ+ಸಂಯಮಿ]

ನೈಷ್ಠಿಕಸ್ಥಾನ (ನಾ). ನೈಷ್ಠಿಕಬ್ರಹ್ಮಚಾರಿಗಳ ನೆಲೆ; ಅಖಂಡಬ್ರಹ್ಮಚಾರಿಗಳ ನಿವಾಸ: ಶ್ರೀಮತ್ಪೊನ್ನೇಮೇಶ್ವರಪಣ್ಡಿತದೇವರ್ಗ್ಗೆ ಶ್ರೀಮದರಿಕೇಸರಿದೇವರು ಕಾಲಂ ಕಟ್ಟಿ ಧಾರಾಪೂರ್ವ್ವಕದಿಂ ಪ್ರಧಾನರು ಮಿಟ್ಟು ನೈಷ್ಠಿಕಸ್ಥಾನಂ ಮಾಡಿ ಪೂರ್ವ್ವಭುಕ್ತಿಯೊಳು . . . ಸರ್ವ್ವನಮಸ್ಯಮಾಗೆ ಬಿಟ್ಟರ್ (ಕಇ. I, ೧೭-೩೩; 1055); ಶೈವಗುರುಗಳು ಅಖಂಡಬ್ರಹ್ಮಚಾರಿಗಳಾಗಿದ್ದುಕೊಂಡು ಬ್ರಹ್ಮಚಾರಿವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತಿದ್ದ ಸ್ಥಾನವೇ'ನೈಷ್ಠಿಕಸ್ಥಾನ' . . . ರಾಜನೂ ಅವನ ಅಧಿಕಾರಿಗಳೂ ಸೇರಿ ದೇವಸ್ಥಾನಗಳನ್ನು 'ನೈಷ್ಠಿಕಸ್ಥಾನ'ಗಳನ್ನಾಗಿ ಪರಿವರ್ತಿಸಿದ ಉದಾಹರಣೆಗಳು ಕೆಲವು ದೊರೆಯುತ್ತವೆ (ಕಶಾಅ. ೧೪೦). [ನೈಷ್ಠಿಕ+ಸ್ಥಾನ]

ನೈಷ್ಠಿಕೆ (ನಾ). ನಿಷ್ಠೆಯಿಂದ ನಡೆದುಕೊಳ್ಳುವಿಕೆ: ಶಿವಧರ್ಮವಾ ಭೂತಿಕಂ ನೈಷ್ಠಿ[ಷ್ಠಿ]ಕೆಯುಮೆನುತ್ತವು ಯುಗ್ಮವಲ್ಲಿ ಭೂತಿಕವೆ ಸುವ್ರತ ಮೋಕ್ಷವಿವು ಯುಗಳಯುಕ್ತವಾ ವ್ರತವದಂಗವನುಳ್ಳ ತನಿಕ ನಡಪುದ ನೈಷ್ಠಿ[ಷ್ಠಿ]ಕೆ (ವೀಶೈಪು. ೬-೬-೬೨). [ಸಂ. ನೈಷ್ಠಿಕ]

ನೈಷ್ಠೆ (ನಾ). ನಿಷ್ಠೆಯಿಂದ ಕೂಡಿರುವಿಕೆ: ತನುವಿನ ಕಾಂಕ್ಷೆಯ ಸುಟ್ಟುರುಹಿ . . . ಸದ್ಭಕ್ತಿಯ ನಿಜನಿಷ್ಠೆಯ ತಿಳಿದು ಸತಿ ಸುತಂಗೆ ಸದಾಚಾರ ಸನ್ಮಾರ್ಗವ ತೋಱಿ ನಿರ್ವಂಚಕದಿಂದ ಆಱುದಾಚರಿಸಬಲ್ಲಾತನೇ ಆಜ್ಞ ಕರಣ ನೋಡಾ (ಸಚಸಂ. ೪೫೬-೯೭); ಭಕ್ತಂಗೆ ವಿಶ್ವಾಸ ಮಾಹೇಶ್ವರಂಗೆ ನೈಷ್ಠೆ . . . ಐಕ್ಯಂಗೆ ಕಂಜುಹುಗೊಂಬುದಕ್ಕೆ ಮುನ್ನವೆ ನಿರಾಳ (ಪಡಗೂಡಿ. ೪-೧೧೮). 'ನಿಟ್ಠೆ' ಪರಾ. [<ಸಂ. ನಿಷ್ಠಾ]

ನೈಸರ್ಗಿಕ (ಗು). ೧. ಸಹಜವಾದ; ಸ್ವಾಭಾವಿಕವಾದ; ನೈಜವಾದ: 'ನೈಸರ್ಗಿಕಕಾರಣ' ಪರಾ. ೨. ನಿಸರ್ಗಕ್ಕೆ ಸಂಬಂಧಿಸಿದ; ಪ್ರಾಕೃತಿಕವಾದ: ನೈಸರ್ಗಿಕ ನಿಯಮದಲ್ಲಿ ಈಶ್ವರಸಂಕಲ್ಪವನ್ನು ಕಂಡು ಆನಂದಿಸುವ ಭಾವುಕತೆ, ಆತ್ಮಾನುಭವಗಳು ವಿಜ್ಞಾನಗಳಿಗಿರಲಿಲ್ಲ (ಮುಕ್ಸಾರ. ೧೧ ಪೀಠಿಕೆ). (ನಾ). ೩. ಸಹಜವಾದುದು; ಸ್ವಾಭಾವಿಕವಾದುದು: ಮಾಂತ್ರಿಕ ದೈವಿಕ ನೈಸರ್ಗಿಕ ಯೌಕ್ತಿಕ ವಾಸ್ತವಿಕಗಳೆಂಬ ಪಂಚಭೇದಸಾಧನಂಗಳಿಂದಲುಂ ಪರಧಯುಂಕರವೇಷ ಭಾಷಾಕಾರಂಗಳುಳ್ಳ ಘನದೇವರ್ಕಳಿರ್ಕುಂ(ಪಪೇಕ. ೨೪೧); ಖಜೂರದಲ್ಲಿ

ಬಹಳ ಪ್ರಮಾಣದಲ್ಲಿ ನೈಸರ್ಗಿಕವಾದ ಸಕ್ಕರೆಯಿರುವುದರಿಂದ ಅದು ಮಕ್ಕಳಿಗೂ ದೊಡ್ಡವರಿಗೂ ಒಳ್ಳೆಯ ಆಹಾರ (ಆಡುಸೌ. ೭೯). [ಸಂ.]

ನೈಸರ್ಗಿಕಕಾರಣ (ನಾ). ಸಹಜವಾದ ಕಾರಣ ; ಸ್ವಾಭಾವಿಕವಾದ ಕಾರಣ : ಭಾಷೆ ವ್ಯತ್ಯಾಸ ಹೊಂದುವುದಕ್ಕೆ . . . ಮಾನವ ಸಾಮಾನ್ಯವಾದ ಸೌಲಭ್ಯಾಕಾಂಕ್ಷೆಯೂ ವೈಯಕ್ತಿಕವಾದ ಉಚ್ಚಾರಣಾ ಭೇದವೂ ಮುಖ್ಯವಾದ ಆಂತರಿಕ ಅಥವಾ ನೈಸರ್ಗಿಕಕಾರಣವಾಗಿರುತ್ತವೆ (ಕೃಪಿಡಿ. ೨೯೫). [ನೈಸರ್ಗಿಕ+ಕಾರಣ$_1$]

ನೈಸರ್ಗಿಕಸಮ್ಯಕ್ತ್ವ (ನಾ). [ಜೈನ] ವಿಮರ್ಶೆ, ಉಪದೇಶಾದಿಗಳಿಲ್ಲದೆ ಸ್ವಾಭಾವಿಕವಾಗಿಯೇ ಜೈನಧರ್ಮದಲ್ಲಿ ನಂಬಿಕೆಯನ್ನು ಹೊಂದಿರುವಿಕೆ : ಸತ್ಯಸ್ವರೂಪದ ಮೇಲೆ ಶ್ರದ್ಧೆಯಿಡುವುದೇ ಸಮ್ಯಕ್ತ್ವ ಎನಿಸುವುದು. ಇದೊಂದು ಸತ್ಯನಿಷ್ಠೆಯಾಗಿದೆ. ಈ ನಿಷ್ಠೆಯು ಸ್ವಾಭಾವಿಕವಾಗಿರುವ ಜೀವಿಗಳು ನೈಸರ್ಗಿಕಸಮ್ಯಕ್ತ್ವವುಳ್ಳವರು (ಜೈನಸ. ೩೦೦). [ನೈಸರ್ಗಿಕ+ಸಮ್ಯಕ್ತ್ವ]

ನೈಸರ್ಗಿಕಸೌಂದರ್ಯ (ನಾ). ಸಹಜವಾದ ಸೌಂದರ್ಯ ; ನಿಸರ್ಗ ಸೌಂದರ್ಯ : ಆಲಿಕಾದರನು . . . ಆ ವನದ ನೈಸರ್ಗಿಕ ಸೌಂದರ್ಯಾತಿಶಯವನ್ನು ನೋಡುತ್ತಾ ಸ್ವಲ್ಪ ಹೊತ್ತು ಕಳೆದನು (ಮಣಿಸ. ೩೫). [ನೈಸರ್ಗಿಕ+ಸೌಂದರ್ಯ]

ನೈಸರ್ಪ (ನಾ). [ಜೈನ] ಚಕ್ರವರ್ತಿಯ ನವನಿಧಿಗಳಲ್ಲಿ ಒಂದು ; ಶಯ್ಯೆ, ಆಸನ, ಭವನ ಮುಂತಾದುವನ್ನು ಒದಗಿಸುವ ನಿಧಿ : ಅನುಕ್ರಮದಿಂದಂ ಶ್ರೀಗೃಹದೊಳ್ ಪುಟ್ಟಿದ ಕಾಳ ಮಹಾಕಾಳ ನೈಸರ್ಪ ಪಾಂಡುಕ ಪದ್ಮ ಪಿಂಗಳ ಮಾಣವಕ ಶಂಖ ಸರ್ವರತ್ನಂಗಳೆಂಬ ನವನಿಧಿಗಳುಂ (ಆದಿಪು. ೧೫-೩ ವ) ; ಕಾಳ ಮಹಾಕಾಳ ಪಾಂಡುಕ ಪಿಂಗಳ ನೈಸರ್ಪ ಪದ್ಮ ಮಾಣವಕ ಶಂಖ ಸರ್ವರತ್ನ ನವನಿಧಿಪರಿಪೂರ್ಣಮುಂ (ಅಜಿಪು. ೭-೨೦ ವ) ; ಸಮುಚಿತೋಪಭೋಗದ್ರವ್ಯಂಗಳಂ ಕುಡುವ ಕಾಳನಿಧಿಯುಂ ನಾನಾಪ್ರಸಾದಭೋಜನೋಪಕರಣಂಗಳನೀವ ಮಹಾಕಾಳಮುಂ ದಿವ್ಯಶಯ್ಯಾಸನಪ್ರಭೇದಂಗಳಂ ಪಡೆವ ನೈಸರ್ಪಮುಂ . . . ಕನಕಮಣಿಮುಕ್ತಾದಿ ನಾನಾವಸ್ತುವಂ ಕುಡುವ ಭಾರೋಪನಿಚಿತಮಪ್ಪ ಸರ್ವರತ್ನಮುಮೆಂ[ಬೊಂಬ]ತ್ತುಂ ಮಹಾನಿಧಿಗಳುಂ(ವರ್ಧಮಾ.೧೦-೩ವ); ಕಾಳ ಮಹಾಕಾಳ ಪದ್ಮ ಪಾಂಡುಕ ನೈಸರ್ಪ ಮಾಣವಕ ಪಿಂಗಳಶಂಖ ಸರ್ವರತ್ನಗಳೆಂಬೊಂಬತ್ತು ನಿಧಿಗಳುಮನನುಕ್ರಮದೊಳರ್ಚಿಸಿ .(ಚಂದ್ರಪು. ೬-೧೦೧ ವ). [ಸಂ.]

ನೈಸೇಸ (ನಾ). ರಾತ್ರಿಯ ಒಡೆಯ ; ನಿಶೆಯ ಈಶ ; ಚಂದ್ರ : ನೇಸರ್ಬೀಸಿದ ಕೈಗಳಿಂದುರಿಪುವಂ ಲೋಕಂಗಳಂ ಚಿತ್ತಮಂ ನೈಸೇಸಂ ಸೆಳೆವಂ ಮುಟುಂಗೆ ಸತತಂ ನೀರೊಟ್ಟುಗೆ ಮೇಱೊಂದುಗುಂ ಏಸೋ ಸಾಂತಿಯನೆಯ್ದಿಹಂ ಮದನನುಂ ರಯ್ಯಂ ಮಿಗಿಲ್ಸಂಜೆಯುಂ ಬಾಸಿಪ್ಪಾಯುರಿ ವೇಗೆಯಂದೆ ಯುವಕರ್ಚಂಡಾಟಕೊಲ್ಲಾಡುವರ್ (ಮೈಸೂಮೆ. ೩-೪೯).

[<ಸಂ. ನೈಶೇಶ]

ನೈಸ್ತ್ರಿಂಶಿಕ (ನಾ). ಕತ್ತಿಯನ್ನು ಧರಿಸಿದವನು ; ಖಡ್ಗಧಾರಿ : "ನೈಸ್ತ್ರಿಂಶಿಕಃ—೧ ಅಸಿಹೇತಿಃ—ಕತ್ತಿಯೇ ಆಯುಧವಾಗಿ ಉಳ್ಳವನು, ಅಡ್ಡಾಯುಧದವನು" (ಸಿದ್ಧಾಂತಿ. ೨೫೭). [ಸಂ.]

ನೈಸ್ಪೃಹ್ಯ (ನಾ). ನಿಸ್ಪೃಹತೆ ; ಪ್ರಾಮಾಣಿಕತೆ ; ಸತ್ಯವಂತಿಕೆ: ಇಲ್ಲಿ ಶ್ಲಾಘನೆಗೆ ಅರ್ಹವಾದ್ದು ಆ ದೊರೆಯ ಧಾರಾಳವೋ ಆ ಶೂರರ ನೈಸ್ಪೃಹ್ಯವೋ ಹೇಳುವುದು ಕಷ್ಟ (ಚಿತ್ರಪಾ. ೯೫). [ಸಂ.]

ನೈಹಂಚಿ (ನಾ). ಒಂದು ಬಗೆಯ ಸಸ್ಯ : ನೊಸೆ ನೈಹಂಚಿ[ಪಾಠಾಂ. ನೈವಂಚಿ] ಕಣಗಿಲೆ ನಾಲೆ ಗರುಗ . . . ಎಸೆದಿಹವಾ ವಿಪಿನದೊಳು (ಶ್ರೀಪಾಲ. ೭-೧೪). [?]

ನೊಂದ 'ನೋ' ಪರಾ.

ನೊಂದಣಿ 'ನೋಂದಣಿ' ನೋ.

ನೊಂದಾಯಿಸು 'ನೋಂದಾಯಿಸು' ನೋ.

ನೊಂದಿಸು 'ನಂದಿಸು$_1$' ನೋ.

ನೊಂದು$_1$ 'ನಂದು' ನೋ.

ನೊಂದು$_2$ 'ನೋ' ಪರಾ.

ನೊಕ್ಕಿಗೋಡು (ನಾ). ಒಂದು ಊರಿನ ಹೆಸರು (?) : ಕಿಟ್ಟುಕೆಱೆ ಗುಡಗತಾಣಮ್ ನೊಕ್ಕಿಗೋಡು ಮಣಲಿ ಮಕ್ಕಿಯಸ್ಯ (ಮೈಆರಿ. ೧೯೦೮, ೧೦ ; 700). [?]

ನೊಕ್ಕು (ನಾ). ಚೂರು ; ಚಕ್ಕೆ ; ತುಂಡು (?) : ವರ್ಷದ ಹಿಂದೆ ಅವನೇ ಕೊಟ್ಟದ್ದುದು ಅದು, ಅದರ ಬಣ್ಣ ಒಂದೆರಡು ಕಡೆ ಎದ್ದು ಹೋಗಿತ್ತು. ನೊಕ್ಕು ನೊಕ್ಕುಗಳಾಗಿ ಹೋಗಿದ್ದವು (ಸ್ವಾಮಿಸ್ನೇ.೨೧೩). 'ನುಱುಗ್ಗು$_2$' ಪರಾ.

[ದೇ.॥ ತಮಿ. ನುಕ್ಕು ; ಮಲ. ನೊಕ್ಕು = ಪುಡಿಮಾಡು]

ನೊಗ, ನೊಗನು, ನೊಗೆ$_1$ (ನಾ). ೧. ಬಂಡಿಯನ್ನಾಗಲಿ, ನೇಗಿಲನ್ನಾಗಲಿ ಎಳೆಯಲು ಎತ್ತು, ಕುದುರೆ ಮೊದಲಾದುವುಗಳ ಕತ್ತಿನ ಮೇಲೆ ಇಡುವ ಉದ್ದವಾದ ಮರದ ದಿಂಡು ; ಯುಗ ; ಧುರ : "ನೊಗನೆಂಬುದು ಯುಗನಾಮಂ" (ವಸ್ತುಕೋ. ೮೭-೨೯) ; ಉಡಿದಿರ್ದಚ್ಚಟಾದೀಸು ತಟ್ಟಿದ ನೊಗಂ ಜೀಱಿಟ್ಟ ಚಕ್ರಂ ಸಿಡಿಲ್ ಪೊಡೆದಂತೊರ್ಮೆಯೆ ಸೂಸಿ ಪಾಱಿದ ಮಡಂ . . . ಕಣ್ಗೊಂಡು ದುಗ್ರಾಜಿಯೊಳ್ (ಪಂಪಭಾ. ೧೦-೯೧) ; ತೆಗೆನೆಱೆದೆಚ್ಚ ಕೂರ್ಗಣೆಗಳಂ ರಥದಚ್ಚುಡಿದು . . . ನೊಗಂ ನೆಱೆ ನುರ್ಗಿ ಪಡಲ್ವಡಲ್ಕೆ ಕಾಳೆಗಮತಿ ರೌದ್ರಮಾಯ್ತು (ಮಹಾನೇ. ೧೨-೪೩) ; ತೇಜಿಗಳಂ ತೇರ ನೊಗಕೆ ಹೂಡುವ ಕುದುರೆಗೆ ಕುಱುಹಿನ ಸಂಜೋಗಗಳಂ ಸೇರಿಸುತುಂ . . . ನಾಲ್ಡೆಱದತಿಬಲರೆಸಗಿದರು (ಜಯಕಾ. ೬-೧೫). ೨. ಒಂದು ನೊಗದ ಅಳತೆ ; ಒಂದೂವರೆ ಮಾರು ; ನಾಲ್ಕು ಹಸ್ತ : ಸಂಯಮೋಪಕರಣಕ್ಕೆಡಗೈ ಬಲಗೈ ಪೆಗಲ್ಗೆ ನೇರ್ಪಡೆ ನೊಗದಂತರಂ ನಡೆಯೆ ಕಣ್ಣ್ ಕೆಸಱಂ ಕಱುವಿಟ್ಟ ಜಂತ್ರಮಂ ನಡೆಯಿಸುವಂತೆ ವರ್ತಿಪನರಣ್ಯದೊಳೇಕ ವಿಹಾರಿ ತಾಪಸಂ (ಅನಂಪು. ೪-೨೪) ; ನೊಗದಂತರದ ಭೂಮಿಯ ಮುಂದೆ ನೋಡುತ (ಜ್ಞಾನಚ. ೨-೮೨). ೩. ಆಕಾಶಭಾಗ : ಎಲೌ ಪೂಜ್ಯಳೆ, ಸೂರ್ಯನಾದರೆ ನೊಗದ ಮಧ್ಯಕ್ಕೆ ಹತ್ತಿದನು, ಬೇಗ ನಡೆ (ಶಾಕುಂತ. ೫೮-೩). ೪. ದಾಸ್ಯ ; ಬಂಧನ : ಮೇಣಿದುವೆ ನೆವಗೆಯ್ದಿವರು ನಮ್ಮ ನೊಗದಿಂ ತಮ್ಮ ಬಿಡುಗಡೆಗೆ ಹೆಣಗಾಡೆ (ಗೊಲ್ಗೊಥಾ. ೮-೧೯೯). ೫. ಭಾರ; ಹೊರೆ: ಮೈಮನದ ಸೊಗವನ್ನು, ಕೊರಳೊಳಿಹ ನೊಗವನ್ನು ಪುಣ್ಯವನು ಪಾಪವನು, ತಾಪ-ಸಂತಾಪವನು (ನವ್ಯಧ್ವ. ೨-೧೩). **ನೊಗನು** : ೧. ಗಾಲಿಯ ಗಜಱು ಘೀಳಿಡೆ ನೊಗನ ಹೆಗಲಲಿ ಕುಣಿದವಶ್ವಚಯ (ಕುಪ್ಯಾಶ. ೨-೪); ಮಿಳಿ ನೊಗನು ಕೀಲಚ್ಚು ಕೂಬರ ಬಳೆಮೊಳೆಯನಾರೈದು ಹೆಱೆಯನು ಬಳಿದು ಹೂಡಿದರಿದ್ದೆಸೆಯಲೆಂಭತ್ತು ಸಾವಿರವ (ಶೊರರಾ. ೫-೭-೫) ; ಭಾನು ಚಂದ್ರರ ಮಂಡಲಂಗಳೇ ಗಾಲಿ ನೊಗನಾ ನಿಸಿ ದಿವಸ . . . ಶಾಸ್ತ್ರಮೇ ಕೀಲಾದುವು (ಚಿಬಪು.೪೧-೪೧). **ನೊಗೆ$_1$** : ೬. ಒಂದು ಬಗೆಯ ಆಯುಧ : ಒಂದು ದಿಕ್ಕಿನಲ್ಲಿ ಮಹಾರಥಿಕರು ನೊಗೆಯನ್ನು ನೊಗೆಯಿಂದಲೂ ನೇಗಲನ್ನು ನೇಗಲಿಂದಲೂ . . . ತಾಕಿಸಿ . . . ಹೋರುತ್ತಿದ್ದರು (ಕೃಪಾಭೀ. ೭೪). 'ಜುಗ' ಪರಾ. [<ಸಂ. ಯುಗ]

ನೊಗಗೊಳ್ (ಕ್ರಿ). ನೊಗಕ್ಕೆ ಜೋಡಿಸಲ್ಪಡು,—ಹೂಡಲ್ಪಡು : ನೀನೊ, ಪೊಸತೆ ನೊಗಗೊಂಡ ಕುದುರೆಮಱ ತನತು ಕಡಿವಾಣಮನ್

ಕಟಕಟನೆ ಕಡಿವುತ್ತುಮೇಯಿರ್ಪಂತೆ ಅಳವಿಗಟಾದುದ್ಧತನ್ (ಬದ್ಧಪ್ರ. ೫೪-೧೧೬೭). [ನೊಗ+ಕೊಳ್$_1$]

ನೊಗನು 'ನೊಗ' ನೋ.

ನೊಗಪಟ್ಟ (ನಾ). ನೊಗಕ್ಕೆ ಹಾಗೂ ಎತ್ತಿನ ಕುತ್ತಿಗೆಗೆ ಸೇರಿಸಿ ಕಟ್ಟುವ ಹಗ್ಗ,—ಚರ್ಮದ ಪಟ್ಟ; ಅಗಡುಕಣ್ಣಿ; ಹೊತ್ತಗೆ: (ಕ). [ನೊಗ+ಪಟ್ಟ$_2$]

ನೊಗಭಾರ (ನಾ). ನೊಗದ ಹೊರೆ; ನೊಗದ ಭಾರ: ಹೊತ್ತಿಗ್ಯಾಗ ಬರಿ ಶಾಸ್ತ್ರದಾಧಾರ ಕುತ್ತಿಗಿ ಮ್ಯಾಲೈತಿ ನೊಗಭಾರ . . . ನಂಬಗೀನ ಸೋರಿದದ ಬಲ ಇಲ್ಲಾ (ಮುಕ್ತಕಂ. ೪೫-೧೬). [ನೊಗ+ಭಾರ]

ನೊಗವರಿ (ಕ್ರಿ). ನೊಗವನ್ನು ಇಳಿಸು; ಪ್ರಯಾಣವನ್ನು ಮುಗಿಸು: ಭಾಸ್ಕರಂ ನೊಗವರಿದನಾದೊಡಂ ಬಾಂದಳದ ಬಿಸುಮುಗಿಲ ಮುಸುಕಿನ್ನು ತೆಗೆದಿಲ್ಲ (ಹಬ್ಬೆರ. ೨೨-೧೨೫). [ನೊಗ+ಪರಿ$_1$(<ಪಱಿ$_1$)]

ನೊಗವಿಕ್ಕು (ಕ್ರಿ). ನೊಗಕ್ಕೆ ಹೂಡು; ನೊಗವನ್ನು ಕಟ್ಟು; ಆರು ಕಟ್ಟು: ಸೋಮಶೇಖರನೆತ್ತ ತಂದಾ ಭೂಮಿಯಲಿ ನೊಗವಿಕ್ಕಿಯುಳುವರು ತಾಮಸರು ಬೇಸಱಿಸುತಿರ್ಪರು ಮೂಱುಲೋಕವನು (ಸಂಭಪ. ೬-೧೬). [ನೊಗ+ಇಕ್ಕು]

ನೊಗವೊರು 'ನೊಗವೊಱು' ನೋ.

ನೊಗವೊಱು, ನೊಗವೊರು (ಕ್ರಿ). ೧. ಬಂಡಿಯ ಅಥವಾ ನೇಗಿಲಿನ ನೊಗವನ್ನು ಹೊರು,—ಹೊತ್ತುಕೊಳ್ಳು: ಪರಮ ದೂರ್ವಾಸನಂ ವರರಥದೊಳಿರಿಸಿ ನಿಜಕೊರಲ್ಗಳೊಳು ನೊಗವೊತ್ತು ಪುರದೊಳೆಲ್ಲಂ ಹರಿರುಕುಮಿಣಿಗಳುವಾದರಿಸಿ ಮೆಱೆಯಿಸಿತನಾ[ದಾ] ಹರನ ಶ್ರೀಸ್ಕಂದಾದಿ ಪೌರಾಣದಿಂ ಪ್ರಸಿದ್ಧಂ (ಸಾನಂಚ. ೨-೧೧೧). **ನೊಗವೊರು:** ೨. (ಆಲಂ) ಹೊರೆಯನ್ನು ಹೊರು; ಜವಾಬ್ದಾರಿಯನ್ನು ಹೊತ್ತುಕೊಳ್ಳು: ತನ್ನಿಷ್ಟದೇವತೆಯ ಸೇವೆಯಂ ನೊಗವೊತ್ತ ಪೆಗಲೊಳೆಯೆ ಸತ್ತರಾ ಸಾವುಮುತ್ತಮಗತಿಯೆ, ನಾಸ್ತಿಕನಲ್ಲದಾತ್ಮನಿಷ್ಠಂಗೆ (ಶ್ರೀರಾಮಾ. ೩೭೫-೩೫೧). [ನೊಗ+ಪೊಱು]

ನೊಗಹಣ (ನಾ). ಒಂದು ಬಗೆಯ ತೆರಿಗೆ; ನೊಗದ ಮೇಲೆ ಹಾಕುವ ಸುಂಕ: ನಾರಾಯಣಭಟ್ಟರು ಇ ಎಱದು ಕೊಟ್ಟ ಸ್ಥಳಂಗಳಿಂಗೆ ತೆಱು ಮುಡಗಡಿ ದೇವರ ಧರ್ಮ್ಮ ಅರುಗಡಿ [ಮ]ನೆಹಣ ನೊಗಹಣ ವೊಕ್ಕಲುಗುತ್ತಗೆ ಕಾಣಿಕೆ (ಕಇ. I, ೫೩-೨೬; 1433); ಶಾಸನಗಳಲ್ಲಿ ಬರುವ ತೆರುವಣಗಳು:—ತೆರು, ಮುಡಗಡಿ, ಅರುಗಡಿ, ದೇವರ ಧರ್ಮ, ಮನೆಹಣ, ನೊಗಹಣ, ಒಕ್ಕಲಗುತ್ತಿಗೆ (ತುಳುನಾ. ೨೭೧). [ನೊಗ+ಹಣ(<ಪಣವು$_1$)]

ನೊಗೆ$_1$ 'ನೊಗ' ನೋ.

ನೊಗೆ$_2$ (ನಾ). ಒಂದು ಬಗೆಯ ಔಷಧಿ ಸಸ್ಯ: ಕೆಂಪುಗಂಧಗಿರಿ, ನಂದಿವೃಕ್ಷ, ಟೊನಮರ, ನೊಗೆ, ನಂದುರಿ, ಬೆಳಂದಿ, ಗಂಧಗರಿಗೆ (ಮೈಔಗಿ. ೧೯-೩೪೮); ಸಂಕೀರ್ಣ . . . ನಂಜಿನ ಗಿಡ, ಕಾಡುಮೆಣಸು, ಅಂಗಾರಕ, ಇಂಗಳೀಕ, ಸಾಂಬ್ರಾಣಿ, ನೊಗೆ, ಹುರಗಲು, ಕಂಗೊಂದಿ (ನಮ್ಮನು. ೨೩೮). [?]

ನೊಗೆಕೂಲಿ (ನಾ). ನೊಗದ ಕೆಲಸವನ್ನು ಮಾಡುವವನು; (ಜೀವನಕ್ಕಾಗಿ) ಗಾಡಿಯನ್ನು ಹೊಡೆಯುವವನು: ಬಳಲಿದ ಒಬ್ಬ ನೊಗೆಕೂಲಿಯು ಕಾಡಿನಲ್ಲಿ ಬಿದಿರನ್ನು ಕಡಿದು ತುಂಬಿಕೊಂಡು, ತನ್ನ ಕಿರುಗುಟ್ಟುತ್ತಿರುವ ಗಾಡಿಯನ್ನು . . . ಅಂಗಳಕ್ಕೆ ಹೊಡೆದು ತಲೆಯನ್ನು ಅಲ್ಲಾಡಿಸುತ್ತಿರುವ ಎತ್ತಿನ ನೊಗವನ್ನು ಬಿಡುತ್ತಾನೆ (ಮಲೆನಾ. ೨೫). [ನೊಗೆ$_1$(<ನೊಗ)+ಕೂಲಿ$_1$]

ನೊಗ್ಗು (ಕ್ರಿ). ಕುಗ್ಗು; ಕುಸಿ: ತರುಣಿಯರಿಗಾ ಸತಿಯ ರೂಪನು ಧರಿಸಿ ಬಳಲದು ಚಿತ್ತ ದೇಹದಿ ಚರಿಸಿ ನೊಗ್ಗದು ನೋಟ (ಜೀವಂಚ. ೮-೧೦). 'ನಗ್ಗು$_1$' ಪರಾ. [?]

ನೊಚ್ಚಗೆ (ಅ). ಹಿತವಾಗಿ; ಹಾಯಾಗಿ: ಮುಂಜುಗಡ್ಡೆಯಂತೆ ಕಠಿಣವಾದ ನರಸಮ್ಮನ ಹೃದಯ ಕರಗಿ . . . ಮಂಗಳಿ ಮಾತೇ ಅವಳ ಕಿವೀಗೆ ನೊಚ್ಚಗೆ ಎಂದುಬಿಟ್ಟಳು (ಸರ್ವಮಂ. ೩೩೯); ನುಚ್ಚಗೆ ಬೆಚ್ಚುವವ ನೊಚ್ಚಗೆ ಮಾತಾಡಿದರೂ ನಚ್ಚಗೆ ಸಾಲದು (ಗಾದೆ).

ನೊಚ್ಚಗಾಗು = ೧. ಹಿತವಾಗು; ಇಷ್ಟವಾಗು: ಕಾತ್ಯೂಷಾ . . . "ತುರುಚೆಯ ಕಡಿತ ನೊಚ್ಚಗಾಯಿತೆ?" ಎಂದಳು (ಪುನರು. ೫೬); ಅವನಿಗೆ ಮೈಗೆ ಬೆಚ್ಚಗಾದದ್ದಕ್ಕಿಂತಲೂ ಮನಸ್ಸಿಗೆ ನೊಚ್ಚಗಾಗಿ ಇಬ್ಬರೂ ಸವಿನಿದ್ದೆ ಮಾಡಿದ್ದರು (ಮಲೆಮ. ೨೫೭). ೨. ಹಿತವನ್ನು ಹೊಂದು; ಹಾಯಾಗು: ಮೆಚ್ಚಿದಿನಿಯಳೊಂದು ಹುಚ್ಚ ನುಡಿದರೆದೆ ನೊಚ್ಚಗಾಗಿ ಹುದು ನಲ್ಲರಿಗೆ ಅಚ್ಚಗಾನವನಾಕೆ ಪಾಡುತಿರಲು ಕೇಳ್ದು ಮೆಚ್ಚದಿಹನೆ ಚಕ್ರಧರನು (ಭರಚ. ೧೧-೩೯). [<ನೊಚ್ಚಿತು+-ಅಗೆ$_3$]

ನೊಚ್ಚನಡೆ (ನಾ). ಹಗುರವಾದ ನಡಗೆ; ಮೃದುವಾದ ನಡಗೆ: ಅಚ್ಚರಿಯ ನಡೆಯಂಚೆನಡೆ ಮನಮೆಚ್ಚಿಸುವ ನಡೆಯಳಿನಡೆ ಕಿರುನೊಚ್ಚನಡೆ ಮೃದುಗತಿಯ ನಡೆಯಂದೆಳೆಯ ನಡೆಯಂದು (ಜಿರಾಮಾ. ೧೭-೬೬). [<ನೊಚ್ಚಿತು+ನಡೆ$_2$]

ನೊಚ್ಚನೆ (ಅ). = ನೊಚ್ಚಗೆ: ಕಲಾಧರಂ ಚೆಚ್ಚರಮಿಟಿತಂದು ಪಚ್ಚೆಗಪ್ಪುರಂ ತೀವಿದ ಕೆಂದಳಿರ್ವೆರಲಿಂ ಮುಚ್ಚಿದ ಕಣ್ಗಳಂ ತಡವಿ ಪೋಪುದುಂ ಬೆಚ್ಚೆವೆಗಳ್ ನೊಚ್ಚನೆ ತಪ್ಪೇಱೆ ತನ್ನಿಂ ಮುಂಚುವ ರೋಮಾಂಚಮಂ (ಚಿಕವಿ. ೬-೨೦೫ವ).

ನೊಚ್ಚನಾಗು = ೧. ಹಗುರವಾಗು; ಲಘುವಾಗು: ಇದಱ ಜವಕ್ಕೆ ಸೋಲ್ತು ಗರುಡಂ ಗಱಿಯಿಂ ಕಡುನೊಚ್ಚನಾದನೇಱುದನಿದ ಱೊಳ್ ಕಡಂಗಿ ಪರಿದಾಱನೆ ಕಾಲ್ನಡೆಗೆಟ್ಟು ಗಾಳಿ ಮಾಳದ ಮಱುವುಲ್ಲೆ ವೋರಿಯನೆನಲ್ (ಮಲ್ಲಿಪು. ೮-೧೫೮). ೨. ಹಿತವಾಗು; ಇಷ್ಟವಾಗು: ಅದಂ ಕಂಡು ವಿದೂಷಕನಿವಳರ್ಚನೆಯಾಡೆ ಪೀಠಮರ್ದನಂಗೆ ನೊಚ್ಚನಾದುದೆಂದು ನಗಿಸುತ್ತಂ ಪೋಗೆ (ಅನಂಪು. ೮-೩೦ವ). ೩. ಹಿತವನ್ನು ಹೊಂದು; ಹಾಯಾಗು: ಕೋಱು ಬಯಲಾದುದೆಂದು ಚಕ್ರೇಶಗೆಲ್ಲವ ತೀರಲೊರೆದಾ ನೊಚ್ಚನಾಯ್ತೆದೆ ಸಾಕು ಕುಳಿತು ಮುಂದಾದುನುಚ್ಚರಿಸೆನಲು (ಭರಚ. ೫೭-೯೬). [<ನೊಚ್ಚಿತು+-ಅನೆ$_1$]

ನೊಚ್ಚಿತು, ನೊಚ್ಚಿತ್ತು (ನಾ). ೧. ಹಗುರಾದುದು; ಲಘುವಾದುದು. ೨. ಕ್ಷುಲ್ಲಕವಾದುದು; ಕೀಳಾದುದು: ಎಮ್ಮ ಪಿತಾಮಹನಪ್ಪ ಮಾಲಿಯಂ ಮುಂ ಕಡುಕೆಯ್ದು ಕೊಂದೆಟೆದು ಕೊಂಡನನಿಕ್ಕಿ[ಕ್ಕ]ದೊಡೆನ್ನ ಬಾಹುವೀರ್ಯಂ ಕಡುನೊಚ್ಚಿತಕ್ಕುಮೆ ನುತುಂ ಮನದುಮ್ಮಳದಿಂ ಕನಲ್ದು ವೀತಾಂಕುಶನೆತ್ತಿದಂ ಮುಳಿದು ಲಂಕೆಗನೂನ ಬಲಂ ದಶಾನನಂ (ಪಂರಾಮಾ. ೧೦-೧೫೩); ವಿಷಂ ದುಷ್ಟನಾಶಯದಿಂದುಗ್ರಮೆ ಬೇಡಿ ಬಾಟ್ವ ನರನಿಂ ಪುಲ್ ನೊಚ್ಚಿತೇ ಮಾನುಷಕ್ರಿಯೆಯಿಂದಪ್ಪ ಮಹೇಂದ್ರಜಾಲಮದುವೀ ಸಂಸಾರದಿಂ ಚೋದ್ಯಮೊ (ಜೀವಸಂ. ೮೪-೨೦). ೩. ನಯವಾದುದು; ಮೃದುವಾದುದು: 'ನೊಚ್ಚನಡೆ' ಪರಾ. ೪. ಹಿತವಾದುದು. ೫. ಸೂಕ್ಷ್ಮವಾದುದು (?): ನಿಚ್ಚಟದ ರೂಹಿಂದೆ ಹೊಗೆ ಬಲು ನೊಚ್ಚಿತವು ಹೊಗಬಾರದೆನಲತಿ ಚರ್ಚೆಯಿಂದಿರುತಿಹುದು ಘನಪಾತಾಳದೊಳು ಲಂಕೆ (ಮೈರಾಕಾ. ೩-೫೮). **ನೊಚ್ಚಿತ್ತು:** ೧. ಆಗುರುಲಘು-ಬಿಣ್ಪತ್ತುಂ ನೊಚ್ಚಿತ್ತುಮಲ್ಲದ ಶರೀರಮಂ ಮಾಟ್ಪ ಆಗುರುಲಘು

ನಾಮಮಂ (ತಸೂಪ್ಯ. ೨೫೮); ಅಗುರುಲಘುಕನಾಮಕರ್ಮಂ ತಂತಮ್ಮುದಯದೊಳು ಬಿಣ್ಣತ್ತುಂ ನೊಚ್ಚಿತ್ತುಮಲ್ಲದ ಶರೀರಮಂ ಮಾಟ್ಟುದು (ಪಸಾರ. ೧೬).

ನೊಚ್ಚಿತಾಗು = ೧. ಹಗುರವಾಗು; ಲಘುವಾಗು. ೨. ಕೀಳಾಗು; ಕ್ಷುಲ್ಲಕವಾಗು: ಸುರರಾಜಂ ಬಯಸಲ್ಕೆ ತಕ್ಕ ಸಿರಿಯಂ ಪುಲ್ಲಿಂ ಗಡಂ ನೊಚ್ಚಿತಾಗಿರೆ ಕಂಡಂ (ಪುಲ್ಲಿಪು. ೧೦-೪೩); ಆ ನೃಪಾಳೋತ್ತಮನಿಂತು . . . ಪುಲ್ಲಿಂದಂ ಕಡು ನೊಚ್ಚಿತಾಗಿ ಬಗೆದಂ ಭೂಭಾರಮಂ (ಬಾಧಪು. ೫-೭೩). ೩. ಹಿತವಾಗು; ನೆಮ್ಮದಿಯಾಗು: ಪರಮಗುಣಾಂಬುರಾಶಿ ಖಳನಿಕ್ಕಿದ ಮರ್ದಿನ ತೀವ್ರಮಪ್ಪ ನಿಷ್ಠುರವಿಷದುಕ್ಕು ಪೋಗೆ ತನು ಘಮ್ಮೆನಲೊರ್ಮೆಯೆ ನೊಚ್ಚಿತಾಗೆ ತದ್ಗಿರಿಯೊಳ್ ನಿಂದೆನೆಂಬ ಬಗೆಯಿಂ ಮುಱಿದೊಯ್ಯನೆ ಮೆಯ್ಯನಾದರಂ ಬೆರಸು ನಿಮಿರ್ಚೆ (ಧರ್ಮಾಮೃ. ೧೧-೧೨೮). ೪. ಸ್ಪಷ್ಟವಾಗು; ನಿಚ್ಚಳವಾಗು: ಅಚ್ಚ ಬೆಳಗಿನಲ್ಲಿ ತೋರ್ಪನೊಡನೆ ಕರ್ಮ ಮುಚ್ಚೆ ಮಾಸುವ ಕೂಡೆ ಹೊಳೆವ ನೊಚ್ಚ[ಚ್ಚಿ]ತಾಗಿರೆ ತೋರ್ಪ ಹೆಚ್ಚಿ ತೋರ್ಪನು ಹುಲ್ಲ ಕಿಚ್ಚಿನಂತಾಗ ಧ್ಯಾನದೊಳು (ಭರಚ. ೬೨-೪೫). **ನೊಚ್ಚಿದನ್** = ಅಲ್ಪನಾದವನು; ಕ್ಷುದ್ರನಾದ ವ್ಯಕ್ತಿ: ಸಿರಿಯ ತವಿಲಿಂ ಮಕ್ಕಳ್ ಕೈಮಿಕ್ಕು ಪೇಟ್ಟುದು ಗೆಯ್ಯದಿರ್ಪಿರವನವನೀ ದೇವಾಮ್ನಾಯಕ್ಕೆ ನೊಚ್ಚಿದನಾಗಿ ಮೆಯ್ಗರೆವೆಸಕದಿಂ ನಿಚ್ಚಂ ಬೆಂಬಿರ್ದು ಚಿಂತಿಸಿ ದುಃಖದೊಳ್ ಪಿರಿದುಮವರಿಂ ಕಣ್ಗೆಟ್ಟಂ ಭಟ್ಟಂ ನಿಕೃಷ್ಟರ ದೂಸಱಿಂ (ಸುಕುಮಾ. ೨-೯); 'ತಱಗೆಲೆಯಂತೆ ನೊಚ್ಚ[ಚ್ಚಿ]ದನಾಗದೆ [ಪಾಠಾಂ. ಪಟೆಯ ಸೀರೆಯಂತೆ ಗುಣದೊಳ್ ನೂನಮಾಗದೆ] ಕಾಗೆಯಂತೆ ಪೆಱರ್ಗೆ ಪೀಡೆಯಂ ಮಾಡದೆ (ಧರ್ಮಾಮೃ. ೫-೯೯); ಪರಾಂಗನಾಲಿಂಗನಸಂಗಕೃತರತಿಯಪ್ಪಂ ವೈರಾನುಬಂಧಿಗಳ ದೆಸೆಯಿಂ ಲಿಂಗಚ್ಛೇದನ ವಧ ಬಂಧನ ಸರ್ವಸ್ವಹರಣಾದಿಗಳಂ ಇಲ್ಲಿಯೆ ಪಡೆಗುಂ ಮಱುಭವದೊಳ್ ದುರ್ಗತಿಗೆ ಸಲ್ಗುಂ ಪುಲ್ಲಿಂ ನೊಚ್ಚಿದನುಮಕ್ಕುಂ (ತತ್ತ್ವಪ್ರ. ೨೬೨). **ನೊಚ್ಚಿದರ್** (ಬಹುವ): ತಾಯ ಮೊಗಮನಾವ ಮೊಗದೊಳ್ ನೋಡುವಮೆಂದು ನಾಣ್ಚಿ ಚಿಂತಿಸುವ ಚಿಂತೆಯೊಳತಿಬಳನೃಪಾಸ್ಥಾಯಿಕೆಯೊಳ್ ಪುಲ್ಲಿಂ ನೊಚ್ಚಿದರಾದೆವೆಂಬೇವದೊಳಂ ತಮ್ಮನುಱಿಸೆಱೆಗೆಯ್ದು (ಸುಕುಮಾ. ೨-೩೨ ಪ); ಗಱಿಯಿಂ ನೊಚ್ಚಿದರೆನೆ[ಪಾಠಾಂ. ನೋರ್ಚಿದರೆನೆ, ಸೋರ್ಚಿದುದೆನೆ] ಕೆಂಗಱಿಯಂ ಬೆಟ್ಟಟ್ಟೆ ರಾಜಸುತ ಸಂದೋಹಂ ಗಱಿಸೋಂಕದೆ ಬೆಳ್ಳೆರಲೆಗೆ ಗಱಿ ಮೂಡಿದ ತೆಱದಿನೋಡಿ ಪೋದತ್ತಾಗಳ್ (ಪಂಠಾಮಾ. ೩-೫೬); ವಸುದೇವಕುಮಾರನ ರೂಪುಗಂಡು ಸೋಲ್ತಿನ್ನರುವನ್ನರೆನ್ನದೆ ಪುರಾಂಗನೆಯರ್ ನೆಱೆ ಕಾಮಶಸ್ತ್ರಸಂಭನ್ನತೆವೆತ್ತು ಕೂಡಿ ಗಱಿಯಿಂ ಕಡುನೊಚ್ಚಿದರಾದರ್ (ಶೇಮಿಪು. ೩-೧೩೫). **ನೊಚ್ಚಿದಳ್** = ಲಘುವಾದವಳು; ಕೀಳಾದವಳು: ಭೋಗಕಾಂಕ್ಷೆಯಿಂ ಮದುವೆಗೆ ಮನಂದಂದಂದಬಲಾಬಾಲಗೋಪಾಲಜನಂ ಮೊದಲಾಗೆನ್ನಂ ಪುಲ್ಲಿಂದಂ ನೊಚ್ಚಿದಳಂ ಕಲ್ಲಿಂದಂ ಬೆಟ್ಟದಳುಮಾಗಿ ಬಗೆವರ್ (ಶಾಂತಿಪು. ೪-೬೯ ಪ). **ನೊಚ್ಚಿದುವು** = ೧. ಹಗುರಾದುವು; ಲಘುವಾದುವು: ತುಂಗನಿತಂಬದಿಂ ಕುಚದ ಬಿಣ್ಪೊಱೆಯಿಂ ಪೊಡರಲ್ಕಮಾಱದಿರ್ಪಂಗನೆಯರ್ ಸರೋಜಲದೊಳಂದವು ನೊಚ್ಚಿ [ಪಾಠಾಂ. ಪ್ಪಿ]ದುವಾಗೆ ರಾಗದಿಂ ಪೊಂಗಿ ಪೊದಟ್ಟು ಪಾಱಿ ಪೊಳೆದಾಡಿದರ್ (ಲೀಲಾವ. ೧೩-೧೨೪; ಸೂಕ್ತಿಸು. ೧೨-೬೪ ನೋ). ೨. ಹಿತವಾದವು: ಪೊನ್ನ ಸಿಪ್ಪಿನ ಕತ್ತುರಿಯಂ ಕೊಂಡು ಬೊಟ್ಟನಿಟ್ಟು ಬೆಲೆಗೆ ಬಿಣ್ಣದುವುಂ ಮೆಯ್ಗೆ ನೊಚ್ಚಿದುವುಮಪ್ಪ ದೇವಾಂಗ ಮನುಡಿಸಿ ಮಾಣಿಕದೊಡಿಗೆಯಂ ತೊಡಿಸಿಯಮೃತಾನ್ನಮನೂಡಿ . . . ಉಣಲುಮಿತ್ತು (ಆರ್ಧನೇ. ೮-೨೧ ಪ).

ನೊಚ್ಚಿತ್ತು 'ನೊಚ್ಚಿತು' ನೋ.

ನೊಜೆ 'ನೊದೆ' ನೋ.

ನೊಜೆಹುಲ್ಲು 'ನೊದೆಹುಲ್ಲು' ನೋ.

ನೊಟಗೂಲಿ (ನಾ). ಒಂದು ಬಗೆಯ ಮಾನ್ಯ (?): ಹದಿಕೆ ಜೋಡಿಗ್ರಾಸ ನೊಟಗೂಲಿ ಮಾದಾಱಿಕೆವಟ್ಟ ಕಟ್ಟಗೆ ದಂಣಾಯರ ಸಾಂಮ್ಯ ಹೊದಕೆ ಹದಿನೆಂಟು . . . ಉಂಬಳಿಯ ಕಳೆದು (ಎಕ. VIII, ತೀರ್ಥಹ. ೧೯೬-೩೦; 1404). [?]

ನೊಟನಪಾರಿವಾಳ 'ಲೊಟನ್ಪಾರಿವಾಳ' ನೋ.

ನೊಣ 'ನೊಳವು' ನೋ.

ನೊಣಂಬ 'ನೊಟಂಬ' ನೋ.

ನೊಣಂಬವಾಡಿ 'ನೊಟಂಬವಾಡಿ' ನೋ.

ನೊಣಕಸ (ನಾ). ಒಂದು ಬಗೆಯ ಸಸ್ಯ: (ಕಿ).
[ನೊಣ (<ನೊಳವು)+ಕಸ]

ನೊಣಗೇಡಿ (ನಾ). (ಆಲಂ) ಅಲ್ಪನಾದವನು; ಕ್ಷುದ್ರ: ಸತಿಯ ಳೋರ್ವಳ ಸಲಹದ ನೊಣಗೇಡಿಗಳ್ ಕ್ಷಿತಿಯೊಳಿನ್ನುಂಟೆಯಿಂಥವರು (ಯವಿಸ. ೨೧). [ನೊಣ (<ನೊಳವು) + ಕೇಡಿ$_1$]

ನೊಣಗೇಡಿತನ (ನಾ). ನೀಚತನ; ಅಲ್ಪತನ; ಹೀನಸ್ವಭಾವ: ಸಿಕ್ಕೆವು ನಾವಿಂಥಾ ನೊಣಗೇಡಿತನಕೆ ನೀ ದುಃಖಿಸಬೇಡವಿಲ್ಲಿ(ಯವಿಸ. ೨೧).
[ನೊಣಗೇಡಿ+-ತನ]

ನೊಣಚಿ (ನಾ). ದನಗಳ ರಕ್ತವನ್ನು ಹೀರುವ ಒಂದು ಬಗೆಯ ಕೀಟ,—ಹುಳು; ತೊಣಚಿ: ಆದರೆ ಹೆಂಡತಿಯ ಸೂಚನೆ ನೊಣಚಿಯಂತೆ ಅವರನ್ನು ಹೊಕ್ಕು ಕಾಡಿತು. ಏನೇ ನಾಶವಾಗಲಿ, ಪುತ್ರನಾಶಬೇಕಾದರೂ ಆಗಲಿ, ತನ್ನ ಬ್ರಾಹ್ಮಣ್ಯದ ನಾಶಕ್ಕೆ ಅವನು ತಯ್ಯಾರಿಲ್ಲ (ಸಂಸ್ಕಾರ. ೩೧). 'ತೊನಸೆ' ಪರಾ. [<ತೊಣಚಿ ?]

ನೊಣಬ 'ನೊಟಂಬ' ನೋ.

ನೊಣಬುಲಿ (ನಾ). ನೊಣವನ್ನು ಹಿಡಿದು ತಿನ್ನುವ ಒಂದು ಬಗೆಯ ಹುಳು; ನೊಣದ ಹುಲಿ: ನೊಣಬುಲಿಯ ಲಂಘನೆಗೆ ಮೃಗಗಣ ಜುಣುಗುವವೆ ಮಝು ನಿನ್ನ ಹುಲುಪರೆ ಕಣೆಗೆ ಖಳನಾಯಕರು ಮುರಿವೆವೆ ಬಣಗ ಹೋಗೆನುತ ಕಣುಗಳಲಿ ಕಿಡಿಸೂಸಿ (ಅಂಬಿಕಾ. ೨೭-೧೦). [ನೊಣ (<ನೊಳವು)+ಪುಲಿ]

ನೊಣರೋಗ (ನಾ). ಸಸ್ಯಗಳಿಗೆ ನೊಣಗಳಿಂದುಂಟಾಗುವ ಒಂದು ಬಗೆಯ ರೋಗ: ಅನೇಕ ತೆರದ ನೊಣಗಳಿಂದುಂಟಾದ ಸಸ್ಯವ್ಯಾಧಿಗಳು: ನೊಣರೋಗ (Fly. ಇಂಕನಿ). [ನೊಣ (<ನೊಳವು)+ರೋಗ]

ನೊಣವು 'ನೊಳವು' ನೋ.

ನೊಣಸುತ್ತ (ನಾ). ಒಂದು ಬಗೆಯ ಸಸ್ಯ: (ಪಂಡಿತ. ೧೦೪).
[ದೇ.॥ ತಮಿ. ತೆಲು. ನೊಣಸುತ್ತು]

ನೊಣಸುತ್ತಕ (ನಾ). = ನೊಣಸುತ್ತ: ನೊಣಸುತ್ತಕವೆಂಬ ವನಸ್ಪತಿಯ ಎಲೆಗಳ ಮೇಲೆ ಅಂಟನಿಂದ ಜಿಗಟುಪದಾರ್ಥವೂ ಸುಂಕವೂ ಇರುವದುಂಟು (ಮುಂಬಯಿ. ೬-೨೬೫). [<ನೊಣಸುತ್ತ]

ನೊಣೆ, ನೊನೆ (ಕ್ರಿ). ೧. ನುಂಗು; ಕಬಳಿಸು: "ನೊಣೆ—ಗಿಲನೇ (ನುಂಗು)" (ಶಮಧಾ); ಅನಿಲಸುತಂ ಸವಿಸವಿದು ಬಿಕ್ಕಬಿಕ್ಕನೆ ಸವಿನೋಡೆನ್ನಾಣೆಯೆಂದು ರಕ್ಕಸಿಗಮದಂ ಸವಿದೋಱಿ ನೆತ್ತರೆಲ್ಲಂ ತವೆ ಮುಳಿಸಿಂದವನ ಕರುಳ ಪಿಣಿಲಂ ನೊಣೆದಂ (ಪಂಪಭಾ. ೧೨-೧೫೮); ಮೀರ್ತ್ತು ಮೀಱಿದರನಡುರ್ತ್ತು ಹೊಯ್ವ ಸಿಡಿಲುದ್ಧತರಂ ನೊಣೆವುಗ್ರರಾಹುವೆಂಬುದನೆನೆ ಮತ್ತನನ್ತನೊಳನನ್ತಪರಾಕ್ರಮನೊಳ್ . . . ಕಾದುವ ಮೆಯ್ಗಲಿಯಾರ್ದ್ಧರಿತ್ರಿಯೊಳ್(ಸೌಇಇ. XX, ೭೪-೨೪; 1112);

ಗಾಳಿ ರಭಸವಾಗಿ ಬೀಸುತ್ತಿದ್ದರಿಂದ ಬೆಂಕಿ ತನ್ನ ರಕ್ತನಾಲಗೆಗಳನ್ನು ಮರದ ರೆಂಬೆರೆಂಬೆಗೆ ಚಾಚಿ ನೊಣೆಯುತ್ತಿತ್ತು (ಸರ್ವಮಂ.೩೨). ೨. (ಆಲಂ) ಸಂಪೂರ್ಣವಾಗಿ ನಾಶಮಾಡು ; ಹಾಳು ಮಾಡು : ಮಕ್ಕಳ ಮೊಮ್ಮಕ್ಕಳ ರಥಮೆಕ್ಕೆಯಿನೆಡೆಗೊಂಡೊಡವರನೋವದೆ ರಣದೊಳ್ ಮಕ್ಕಳನಾಂ ಕೊಂದೊಡೆ ತನ್ನಿಕ್ಕಿದ ತತ್ತಿಯನೆ ಪಾವು ನೊಣೆ ವಂತಕ್ಕುಂ (ಪಂಪಭಾ. ೧೦-೧೩) ; ಕರಿಯಂ ನುಂಗಿ ಕಳಿಂಗನಂ ನೊಣೆದ ದರ್ಪಕ್ಕೊಂದುಗೊಳ್ . . . ಎಂದು ಮಚ್ಚರದಿಂದೋವದೆ ಪೊಯ್ದನೆತ್ತಿ ಗದೆಯಂ ದುರ್ಯೋಧನಂ ಭೀಮನಂ (ಗದಾಯು. ೮-೧೮) ; ಇಱಿದು ನೊಣೆದು ಕಣಿಯದೆ ಮತ್ತಂ ದ್ರೋಹರನಱಸುತ್ತಿರ್ಪುದು (ಎಕ.VIII, ಸಾಗರ. ೧೦೮-೧೮ ; 1631) ; ಇಂತು ನೀನವರ ಚಿತ್ತಕ್ಕೆ ನೆಱೆ ಮಱಪಿಟ್ಟು ಕಂತುಹರನೇ ಬಸವನಂ ನೊಣದೆಯಲ್ಲದೊಡೆ ಮುಂತುಗೊಂಡಾ ಶರಣರೀವರೇ ಬಸವಣ್ಣನಂ (ಅರಾಚ.೪-೧೦-೩೪). **ನೊನೆ** : ೨. ತನಗೆ ವೈರಿಗಳ ಹರೆಯವರನು ನೊನೆದು ಕಳೆಯಲು ಬೇಕು (ತಿಮ್ಮಅ. ೧೦-೩೩). ೩. (?) : ತನಗೆ ನಿಶ್ಚೈಸಿದಮ್ಮದು ಕಾರಣಂ ಶಾಪ ಜನಿಸಿರ್ದುದನ್ನರಿದು ನೊನೆಯರದಕಂ ತಾನು ಚಿನುಮಯಂ ಪರಿಹರಿಸದಿರ್ದಧಿಕಸಂತೋಷಮಂ ತಾಳ್ದು ತನ್ನನದೊಳು (ತುರಂಗ. ೮೬-೧೩).

ನೊಣೆದು ನುಂಗು = ಸಂಪೂರ್ಣವಾಗಿ ನುಂಗು ; ಕಣ್ಣ ನೀರೊಡ ನೊಡನುರ್ಚಿ ಪಾಯೆ ಮುಳಿಸಿಂದದನೊಯ್ಯನೆ ತಾಳ್ದಿ ಕಾಯ್ಪಿನೊಳ್ ಕಡಗಿ ಜಗಂಗಳಂ ನೊಣೆದು ನುಂಗಲುಮಾಟಿಸಿದಂ ಸುಯೋಧನಂ (ಪಂಪಭಾ. ೧೧-೧೦೦) ; ಮಿಕ್ಕವರಿಗೆ ಬಂದದ್ದು ಏಕೆ ಜನ್ಮಕ್ಕೆ ಹತ್ತಿ ಶನಿಯಾಗಿ ನೊಣೆದು ನುಂಗಿಬಿಡುತ್ತದೆ ? (ಬಂಕಿಮ. ೧೦೮).

[ದೇ.॥ ತಮಿ. ನೊಳ್ ; ಮಲ. ನುಣ ; ಕುರುಖ್. ನುಲ್ಯಾ]

ನೊಣೆನೆಕ್ಕು (ಕ್ರಿ). ಸಂಪೂರ್ಣವಾಗಿ ನಾಶಮಾಡು,—ಹಾಳು ಮಾಡು : ಬಿರುಗಾಳಿ ತರಗೆಲೆಗಳಂ ಬೀಸುತೆಳ್ಪಟ್ಟುವೋಲ್, ಕಾಳ್ಗಿಚ್ಚು ಕರಡಬೆಣಮಂ ನೊಣೆನೆಕ್ಕಿ ಕರಿಕುವರಿಪೋಲ್ ಕಲ್ತ ಮಾಯಾಸಮಸ್ತ ವಿದ್ಯೆಯನವರ ಮೇಲ್ ವ್ಯಯಿಸುವೆನ್ (ಶ್ರೀರಾಮಾ. ೫೭೧-೫೨೨).

[ನೊಣೆ + ನೆಕ್ಕು$_1$ (<ನಕ್ಕು$_1$)]

ನೊಣೆಪ (ನಾ). ನುಂಗುವಿಕೆ ; ಕಬಳಿಸುವಿಕೆ : ತಡೆಪಂ, ಅಣೆಪಂ, ನೊಣೆಪಂ, ಪೊರೆಪಂ . . . ಒರೆಪಂ (ಶಬ್ದಾನು. ೫೬೧ ಪ್ರಯೋ).

[ನೊಣೆ + -ಪ$_2$]

ನೊತೆ 'ನೊದೆ' ನೋ.

ನೊತೆಹುಲ್ಲು 'ನೊದೆಹುಲ್ಲು' ನೋ.

ನೊದೆ, ನೊಜೆ, ನೊತೆ, ನೊಸೆ$_2$ (ನಾ). ಒಂದು ಬಗೆಯ ಹುಲ್ಲು ; ಜೊಂಡು ; ಮುಂಜಾಹುಲ್ಲು : "ದೃಢಮೂಲಃ—ನೊ (ಮೊ?)ದೆ, ವಡವರ್" (ಓಷಧಿ. ೭೯) ; ನೊ(ಮೊ)ದೆ ಗೆಂಕು ಬೆಳೆಯೆ ನೀರಿಲ್ಲದ ನೆಲದೊಳ್ ಪುಟ್ಟದಾಗಳವಱಡಿಯೊಳ್ ತೋಡಿದೊಡೆ ಜಲವೊಂದೆ ಪುರುಷದೊಳುದಯಿಕ್ಕುಂ (ಜಟ್ಟಮ. ೧೧-೨೫) ; ಲಾಮಜ್ಜಕ, ಲಾಮಂಚ, ಮುಂಜ, ನೊದೆ, ವಲ್ಲಭ, ಬಲ್ಲಹ (ಶಬ್ದಾನು. ೧೬೦ ಪ್ರಯೋ) ; ಮುಂಜ—ನೊದೆ, ವಲ್ಲಭ-ಬಲ್ಲಹ (ಹೊನುಗ.೧೧೮). **ನೊಜೆ** : 'ನೊಜೆಹುಲ್ಲು' ಪರಾ. **ನೊತೆ** : 'ನೊತೆಹುಲ್ಲು' ಪರಾ. **ನೊಸೆ$_2$** : ನೊಸೆ ನೈಹಂಚಿ ಕಣಿಗಿಲೆ . . . ಕವಲ್ಗೊಟ್ಟ ಮರದಾರಕ್ಕೆವುಲ್ಲೆಯೆಸೆದಿಹವಾ ವಿಪಿನದೊಳು (ಶ್ರೀಪಾಲ. ೭-೧೪) ; ಗಂಗ್ವಾಡೀ ಬಸವೈನ ಕಟ್ಟಿಗೆ ತೆಂಗಂಗ್ವಾಯಲ್ಲೆವತ್ತು ಮರಳ ಹೊಲದರೆ ಕಲ್ಲಿಗೆ ಪ ನೊಸೆಬಳಿಯ ಲಿಂಗಮುದ್ರೆ ಬಳಿ ಬಡಗಮುಖನೆ (ಎಕ. III, ತಿರುಮ. ೬೩-೪೮೪ ; 1748) ; ಹಂಚಿ, ಗರಿಕೆ, ನೊಸೆ, ಜಂಡು, ಬಿದಿರು (ನಮ್ಮನು. ೨೩೮). 'ಮೊದೆ' ಪರಾ.

ನೊದೆಹುಲ್ಲು, ನೊಜೆಹುಲ್ಲು, ನೊತೆಹುಲ್ಲು, ನೊಸೆಹುಲ್ಲು (ನಾ). =ನೊದೆ : ಆ ಮುಂಗುಸಿಗೆ ಹರಿತ ಎಂದು ಹೆಸರು . . . ಅದರ ಮೈತುಂಬ ನೊದೆಹುಲ್ಲಿನಂತಹ ಕೂದಲು (ನಾಳೀಜಂ.೪೪). **ನೊಜೆಹುಲ್ಲು** : ಒಂದು ಸಣ್ಣ ಕೊಳದಿಯ ಮೂಲಕ ಹೋಗಿ, ಬೆಂಚಿನ ಮೇಲೆ ಹಾಸಿದ್ದ ವರ್ತುಲಾಕಾರವಾದ ನೊಜೆಹುಲ್ಲಿನ ಆಸನಗಳ ಮೇಲೆ ಕುಳಿತೆವು (ನಿಬಂಧ. II, ೧೮೭). **ನೊತೆಹುಲ್ಲು** : ನೊಸೆಹುಲ್ಲು, ನೊತೆಹುಲ್ಲು (ಮೈಔಗಿ.೬೦-೧೨೦೯). **ನೊಸೆಹುಲ್ಲು** : ಕೊಡಿಮರಹುಲ್ಲು, ಗೊಡುರಹುಲ್ಲು, ಜರಿಹುಲ್ಲು, ನೊಸೆಹುಲ್ಲು (ಮೈಔಗಿ. ೩೪-೬೫೪).

[ನೊದೆ + ಹುಲ್ಲು (<ಪುಲ್)]

ನೊನೆ 'ನೊಣೆ' ನೋ.

ನೊಪ್ಪ (ನಾ). (?) : ಪರಿಹರಮಂ ಕಟಾಕ್ಷದಲರುಹಬೇಕೆನಲಾರ್ಯನಸುನಗುತ ಶಂಕಿಪಲು ಬರಿವಾರ್ತೆ ನೊಪ್ಪದ ಬಿಂಕವೇ ಶ್ರುತಿವಚನ ಸಮ್ಮತಿ ಝೇಂಕರಿಸಲಯಮಾತುಮಾ ಬ್ರಹ್ಮಾ ಮಹಾವಾಕ್ಯ (ಗಗತಾ. ೧೩-೪೬). [?]

ನೊಪ್ಪನೆ (ಅ).೧. ಹಗುರವಾಗಿ ; ಲಘುವಾಗಿ. ೨. ಶೀಘ್ರವಾಗಿ; ವೇಗವಾಗಿ ; ತಟ್ಟನೆ: ಅರ್ಥಮುಳ್ಳಿನಂ ಪೊರ್ದಿ ಮಾಡುತುಂ ಪಱಿಯೆತಿಂದು ನೊಪ್ಪ[ಪಾಠಾಂ. ಚ್ಚ]ನೆ ನೆಗೆವರ್ (ಸಮಸ, ೧೨-೪೦).

ನೊಪ್ಪನೊಪ್ಪನೆ (ದ್ವಿರುಕ್ತಿ) : ೧. ಕೀಳಾಗಿ ; ಹೀನವಾಗಿ : ಮೋಹನವನಪ್ಪಿದ ಘನರೂಪಿನಿದಿರೊಳಂಗಜರೂಪು ನೊಪ್ಪನೊಪ್ಪನೆ ಗಭೀರತೆಯಿದಿರೊಳಂಬುನಿಧಿ ತೆಳ್ಳತೆಳ್ಳನೆ ಶಾಂತಿಯಿದಿರ ಶಶಿ ಬೆಚ್ಚಬೆಚ್ಚನೆಯೆನೆ ಹರಿಶ್ಚಂದ್ರನೆಸೆದಿರ್ದನು(ಹಚಕಾ.೧-೪೧). ೨.ವೇಗವಾಗಿ; ಶೀಘ್ರವಾಗಿ : ತೊಪ್ಪತೊಪ್ಪನೆ, ತೆಪ್ಪತೆಪ್ಪನೆ ಪುರುಳ್, ನೊಪ್ಪನೊಪ್ಪನೆ ಪೇಟೆಂದು (ಶಮದ. ೧೯೩ ಪ್ರಯೋ). [<ನೊಪ್ಪಿತು + -ಅನೆ$_1$]

ನೊಪ್ಪಿತು (ನಾ). ಹಗುರ ; ಲಘು : ಕಂಡು ಮಾಗಧ ಕರೆದನೀ ಧನು ಚಂಡಿಯಿದು ನಮಗಲ್ಲ ನಾವ್ ಮುಂಕೊಂಡು ತಪ್ಪಿತು ನೊಪ್ಪಿತಾದುದು ಭಾರಿಯಗ್ಗಳಿಕೆ (ಕುಪ್ಯಾಅ. ೧೪-೧೬).

ನೊಪ್ಪಿತಾಗು = ಬಲಹೀನವಾಗು ; ಶಕ್ತಿಗುಂದು : ತಪ್ಪಿ ರಥವನು ತಾಗಿದಡೆ ನೆಲ ನೊಪ್ಪುಗೊಂಡುದು ರಥಹಯವು ಸಹಿತೊಪ್ಪುವನಾಧ್ವಜಸಹಿತ ಸಮರಚ್ಛತ್ರಧಾರಿಗಳ ನೊಪ್ಪಿತಾದುದು ಜೀವ ನೃಪನೊಡಲೊಪ್ಪವಳಿದುದು (ನಿಭಾಗ. ೧೦-೪೯-೪೯). ನೊಪ್ಪಿದುವು = ಹಗುರವಾದವು; ಲಘುವಾದವು : ತುಂಗನಿತಂಬದಿಂ ಕುಚದ ಬಿಣ್ಪೊಱೆಯಿಂ ಪೊಡರಲ್ಕಮಾಱದಿರ್ಪಂಗನೆಯರ್ ಸರೋಜಲದೊಳಂದವು ನೊಪ್ಪಿ [ಪಾಠಾಂ.ಚ್ಚಿ]ದುವಾಗೆ (ಲೀಲಾವ. ೧೩-೧೨೪). [?]

ನೊಪ್ಪು 'ನೋಪ್ಪು' ನೋ.

ನೊಪ್ಪುನೆಗೆ (ಕ್ರಿ). ಲಘುವಾಗಿ ಹಾರು ; ಹಗುರಾಗಿ ಕುಪ್ಪಳಿಸು (?) : ಪಂದಿಯ ಬಳಿಯೊಳ್ ನೊಪ್ಪುನೆಗೆದುರ್ದಿ ಪಾಯುತೆ ಚಪ್ಪರಿಸುತ್ತುಗಿದು ಬಗಿದು ತೆಗೆದುವು ನಾಯ್ಗಳ್ (ಗಿರಿಕ. ೧-೧೦೩).

[<ನೊಪ್ಪಿತು + ನೆಗೆ$_1$]

ನೊಯ್ಪಡು (ಕ್ರಿ). ಕಷ್ಟವನ್ನು ಅನುಭವಿಸು ; ತೊಂದರೆಗೊಳಗಾಗು ; ನೋಯು : ನೀವಿಂತು ನೊಯ್ಪಟ್ಟುಮನ್ನವೊಲು ನಿಮ್ಮೊಳಾರೊರ್ವನುಂ ಪಟ್ಟರನ್ (ಪೂರುನಾ. ೯೯-೬೮).

[ನೊಯ್$_0$ (<ನೋವು) + ಪಡು$_1$]

ನೊಯ್ಯವಾಲ (ನಾ). ಒಂದು ವಂಶದ ಹೆಸರು (?) : ಇದುವೆ ಸೂದೂಱು ನೊಯ್ಯವಾಲರಯ್ಯಮ್ಮನ್ನೆ ಧರ್ಮ್ಮತೂಂಬುಂ ಕೊಟ್ಟರ್ (ಎಕ. XIV, ತಿರುಮ. ೨೫೩-೧೧ ; ಸು. 800). [?]

ನೊರಂಜು, ನೊರಜು$_1$ (ನಾ).೧.ಒಂದು ಬಗೆಯ ಸೊಳ್ಳೆ ಜಾತಿಯ ಸಣ್ಣ ಕೀಟ ; ದೋಮೆ: ವಿಕಲ್ಪಬಿಂದುಗೆ . . . ನೊರಂಜು, ನೊರಜು;

ಜಿನುಂಗು, ಜಿನುಗು (ಶಮದ. ೩೬ ಪ್ರಯೋ); ಬಣಂಜು, ಬಣಜು, ನೊರಂಜು, ನೊರಜು (ಶಬ್ದಾನು.೮೦ ಪ್ರಯೋ). **ನೊರಜು$_1$** :೧."ಆವಿ ಚಿಕ್ಕಾಡು ರಹಿ ತೊನಸೆ ತುಷಮೆನೆ ನೊರಜು" (ಮಂಗರಾ. ೫೩-೧೧); ಬೆಳೆದ ಭಾರದ ಬಿದ್ದ ಮೊಲೆಯನೆಳಲುವ ತುಟಿಯ ಬೆಳುಗಣ್ಣ ಜೋಲ್ವ ಕಿವಿಯುಸುರು ಮಸಗಿದ ಬಾಯ ಒಳಗೆ ಸುಳಿವ ನೊರಜಂ ನೂಂಕಿ (ಸೋಮಚ. ೪-೪೨); ಕುಕವಿಗಳಾರ್ ಗಣಿಸಿದಪರ್ ಮುಸುಱು ಪರೆವ ನೊರಜಂ ನೊಳಮಂ (ಪುಷ್ಪಪು. ೧-೪೫); ಎಲೆ ಮರುಳೆ ಭೂಪಾಲ ನೊರಜಿನ ಕಳಕಳಕೆ ಕರಿ ಬೆಚ್ಚುವುದೆ (ಕುಮ್ಯಾಸ. ೮-೪೬); ಅವರು ಕೊಡಗಿನ ದೊರೆ ಎಂಬ ನೊರಜನ್ನು ಒರಸಿ ಹಾಕಿ, ತಮಗೆ ಗೆಲುವಿನ ಮಂಗಳದ ಒಸಗೆಯನ್ನು ತರುವರು (ಹುಲಿಹಾ. ೨೩೫). ೨. (ಆಲಂ) ಅಲ್ಪವಾದುದು; ಕ್ಷುದ್ರ: ರಾಮನ ಪಡೆಯನೆಣಿಪರೆ ಕಟ್ಟಕಡೆಯಣ ನೊರಜು ತಾನೆಂದ (ಕೌತಿರಾ. ೧೧-೫೨); ಹರಿಗಿರಿಯಜಗಿಜ ಸುರಗಿರ ಪದವಿಯ ನೊರಜೆಂದು ಜಜ್ಜಿದು ಶಿವನೊಳು ಬೆರಸಿ ತಮ್ಮಿಂ ತಾವೆ ರಾಜಿಪ ಶರಣರ ಪುರವ ಕಂಡನು ಧರಣೀಶ (ಮೋಳಿಪು. ೫-೫೭); ನೊರಜು ನಾಂ (ವೆಂಕಾರಾ. ೬-೯-೧೨). (ಗು). ೩. ಕ್ಷುದ್ರವಾದ; ಕೀಳಾದ; ಕಳಪೆಯಾದ: ಧುರದೊಳು ಹಿರಣ್ಯನ ಕರುಳನುಗಿಯಲೆಂದರವಿಂದನಾಭನು ಪಡೆದಾ ನರಹರಿರೂಪಮಲ್ಲದೆ ಲೋಕದೊಳುಳ್ಳ ನೊರಜುಸಿಂಗಧ ಪರಿಯಲ್ಲ (ಅಂಜಚ. ೧೦-೧೬); ಕರಣಾಭಿಮಾನಿಗಳ ಜಯಿಸಿದ ಜಗಜ್ಜೀವ ನೊರಜು ದಾನವರ ಗೆದ್ದದ್ದು ಮಹಾಸೊಬಗೆ (ವಿದಾಕೃ. ೧೧೩-೨).

ನೊರಕಾಟ (ನಾ). ಸಂಕಟ; ನೋವು; ವೇದನೆ: ಸ್ಮರನ ಕಲೆ ಸವಿಯೂಟ ಸೊಂಪಡಗೆ ನೊರಕಾಟ ತಿರುಗಿ ಬೀಳುಗುಮಾಟ ತಿಪ್ಪೆಯೊಳ ಗಣ ಕಾಟ (ತುರಂಗ. ೩೫-೨೫). [ನೊರಕು + ಆಟ]

ನೊರಕಿಸು (ಕ್ರಿ). ನೋಯಿಸು; ಹಿಂಸೆಪಡಿಸು; ಬಾಧೆಪಡಿಸು: ಮರುತಜನ ಬಿಲ್ಗೊಪ್ಪಿನಿಂದಿರಿದ ನೃಪತಿಯಂ ನೊರಕಿಸಿದನಡಿಗಡಿಗೆ ಕಣೆ ಗರೆದು (ತುರಂಗ. ೭೦-೩೦); ಅರಸ ಕೇಳ್ಗುರುನಂದನಂ ತಡದು ಭೀಮನಂ ನೊರಕಿಸಿದನೆಂಟಂಬಿನಿಂದೆಚ್ಚು (ತುರಂಗ.೭೨-೧೯).[ನೊರಕು + -ಇಸು$_2$]

ನೊರಕು (ಕ್ರಿ). ನರಳು; ಸಂಕಟಪಡು; ಬಾಧೆಪಡು: ಕುರು ನೃಪತಿ . . . ಗಂಧರ್ವರೋಳ್ಸಿಕ್ಕಿ ನೊರಕುತಿರಲರ್ಜುನಂ ಬಿಡಿಸೆ ಮಾನಂ ಪೋಗಿ ಹಸ್ತಿನಾಪುರಿಗೆ ಬಂದಂ (ತುರಂಗ. ೩೪ ಸೂಚನೆ); ಶಕುನಿ ಸೈಂಧವಂ ಗುರುಸೂನು ಮುಂತಾಗಿ ಘಾಯದಿಂದ ನೊರಕುತಿರಲಿತ್ತ ತುರುವಿಂಡುಗಳನರ್ಜುನಂ ಪುರಕೆ ಕಳುಹಿದನು (ತುರಂಗ. ೩೭-೩೪).

[<ನರಕು]

ನೊರಕೆ (ನಾ). ಬಾಧೆ; ನೋವು; ವೇದನೆ: ರಣಹಂಬಲಂ ಮರದ ಮಾದ್ರೇಶ್ವರಂ ದುಶ್ಶಾಸನೆಂಬವಂ ಸಾವನುಳಿವನೊ ಕಾಣೆ ನೊರಕೆಯಿಂ ಮಲಗಿದನು ಮೂರ್ಛೆಯಿಂದ (ತುರಂಗ. ೫೧-೩೭). [<ನೊರಕು]

ನೊರಜು$_1$ 'ನೊರಂಜು' ನೋ.

ನೊರಜು$_2$ 'ನುರುಜು' ನೋ.

ನೊರಜುಗಣ್ಣು (ನಾ). ನೊರಜು ಮುತ್ತುತ್ತಿರುವ ಕಣ್ಣು; ಪಿಸುರುಗಣ್ಣು (?): ನೊರಜುಗಣ್ಣಿನ ನಳಿದ ಮೂಗಿನೆಳಲುವ ತುಟಿಯ ಕುರುಟುವಲ್ಲಿನ ಕರಿಯ ಕಬ್ಬಾಯವೊಳಸರಿದ ಹಱಿದಲೆಯ . . . ನಾಱುವ ಬಾಯ ನೊರೆ ಸೂಸುತಿರ್ದಳು (ಹಚಕಾ. ೪-೨೮).

[ನೊರಜು$_1$(<ನೊರಂಜು)+ಕಣ್ಣು(<ಕಣ್)]

ನೊರಜುಗಲ್ಲು 'ನುರುಜುಗಲ್ಲು' ನೋ.

ನೊರಜುವುಟು (ನಾ). = ನೊರಂಜು ೧: ಮಱಿದು ಬಾಯ್ದೆಱಿದ ಬಗ್ಗದ ಬಾಯೊಳ್ ಬೀಟಲ್ ಬರ್ಪ ನೊರಜುವುಟುಗಳಂತೆ ಬಂದರಲಾ (ಅದ್ಭುತ. ೪೩-೬). [ನೊರಜು$_1$(<ನೊರಂಜು)+ಪುಟು]

ನೊರೆ$_1$ (ಕ್ರಿ). ಬುರುಗು ಏಳು; ನೊರೆ ಮೇಲಕ್ಕೆ ಬರು: ಕರ ತಾವರೆ ಕರುಳ್ವಳ್ಳಿ ತೋಳ್ದೆರೆ ಪಯೋಧರ ಮೀನು ಗಜತುಂಡು ಮೊಸಳೆ ನೊರೆತ ರೋಹಿತ ಫೇನ ಕಡಿದಲೆ ಕಮಠ ಸಂಗರವಿದ್ದು ದಂಬುಧಿಯಂತೆ (ಮೋಹತ. ೩೫-೨೩); ಹೊರಳಿ ನಿದ್ದೆವೊಲಿರಲಿ, ಮೊರೆಯದೆಯೆ, ನೊರೆಯದೆಯೆ, ತುಂಬುದೆರೆಯುಬ್ಬುಹೊನಲು, ಕರೆ ಯಿಲ್ಲದಾಳದಿಂದೆದ್ದು ಹೊರಬಿದ್ದುದದು ಮರಳಿ ಮನೆಗೆಯ್ದುವಾಗ! (ಇಂಗೀತ. ೯೮-೫); ಜಲ, ಅಹುದೊ ಅಹುದೋ, ಎಂದು ಮೊರೆಯುತ ಲಿತ್ತು ಮೇಲ್ವಾಯ್ದು ಹೊರಳಿ. ಮೇಲ್ವಾಯ್ದು ಹೊರಳುತ್ತ ಮೊರೆದು ನೊರೆಯುತ್ತ ಹೊರಳಿ ಬಹ ಹೊತ್ತ ಕಾದಿದೆ ಊರ ಮಿತ್ತು (ಸನರಾ. IV, ೨೯-೧೫). [ದೇ.॥ ತಮಿ. ನುರೈ; ಮಲ. ನುರೆ]

ನೊರೆ$_2$ (ನಾ).೧.ಬುರುಗು; ಫೇನ: "ಫೇನಃ, ಡಿಂಡೀರಃ-ಈ ೨ ನೊರೆ" (ಹಲಾಯು.೧೧೦-೪೬); ಪನಿಪುಲ್ಲ ಮುಗಿಲ ಸಂಜೆಯ ಕನಸಿನ ಸುರಧನುವ ನೆಗೆದ ನೊರೆಗಳ ನೆಱನಂತನಿತುಂ ನಿಲ್ಲವು ಬಗೆವೊಡೆ ಮನುಜರ ಯೌವನಮು ಮರ್ಥಮುಂ ಬಾಟ್ಕಿಗಳುಂ (ವಡ್ಡಾರಾ. ೧೧೩-೧೧); ಪಾಲ್ಗಡಲ ತೆರೆಯ ನೊರೆಯ ದೊರೆಯ ದುಕೂಲಾಂಬರದೊಳಿಂಬಾಗಿ ಚಲ್ಲಣಮ ನುಟ್ಟು ಪುಡಿಗತ್ತುರಿಯಂ ತಲೆಯೊಳ್ ತೀವೆ (ಪಂಪಭಾ.೧೨-೧೦೮ ವ); ಹಾಲ ತೊಱೆಗೆ ಬೆಲ್ಲದ ಕೆಸಱು ಸಕ್ಕರೆಯ ಮಳಲು ತವರಾಜದ ನೊರೆತೆರೆಯಂತೆ ಆದ್ಯರ ವಚನವಿರಲು ಬೇಜ್ ಬಾವಿಯ ತೋಡಿ ಉಪ್ಪು ನೀರನುಂಡವನ ವಿಧಿಯಂತೆ ಆಯಿತ್ತೆನ್ನ ಮತಿ (ಬಸವ. ೨೯೦); ತಿರುಗಿ ನೋಡಲೊಬ್ಬೆಯಾಚೆ, ಒಬ್ಬಳಲ್ಲಿ ಹೆಣ್ಣುಮಗಳು ನೊರೆಯ ಬಿಳುಪು ಕುರಿಯ ಮರಿಯ ತಲೆಯ ತಡವುತಿದ್ದಳು (ಇಂಗೀತ. ೮-೪). ೨. ಎಳೆಯದು; ಹೊಸದಾದುದು; ತಾಜಾ: 'ನೊರೆಮೀಸೆ', 'ನೊರೆಹುಲ್ಲು' ಪರಾ. ೩. ಹೊಸದಾಗಿ ಬಂದ ಹುಲ್ಲು; ಎಳೆಯ ಹುಲ್ಲು; ಚಿಗುರುಹುಲ್ಲು: ಬದುವಿನಲ್ಲಿ ನೊರೆಯೇ ಬಂದಿಲ್ಲ (ಬೂಢಿ). [<ನೊರೆ$_1$./ತಮಿ. ನುರೈ; ಮಲ. ನುರ, ನುರಿ; ತುಳು. ನುರೆ; ತೆಲು. ನುರುಗು, ನುರುವು; ಕೊಡ. ನೆರೆ]

ನೊರೆಕಾಯಿ (ನಾ). ನೀರಿನಲ್ಲಿ ನೆನೆಯಿಸಿ ಉಜ್ಜಿದಾಗ ನೊರೆ ಬರುವ (ಬಟ್ಟೆ ಒಗೆಯಲು ಉಪಯೋಗಿಸುವ) ಒಂದು ಬಗೆಯ ಕಾಯಿ; ಅಂಟುವಾಳದ ಕಾಯಿ: ಕೂಗಟಿಮರ, ಅಂಟುವಾಳ, ನೊರೆಕಾಯಿ (ಮೈಔಗಿ. ೬೮-೧೩೮೩); ಮಕ್ಕಳೆಲ್ಲ ತಮ್ಮ ಅಂಗಿ ವಸ್ತ್ರಗಳನ್ನು ನೊರೆಕಾಯಿ ಹಾಕಿ ಬಂಡೆಕಲ್ಲಿನಲ್ಲಿ ಒಗೆದಾಯಿತು(ರಕ್ತರೂ.೪೭).

[ನೊರೆ$_2$+ಕಾಯಿ$_4$(<ಕಾಯ್$_4$)]

ನೊರೆಗಟ್ಟು (ಕ್ರಿ). ನೊರೆಯುಂಟಾಗು: ಸಖೀಜನಂ ಕೆಯ್ಗೊಟ್ಟೆಯ್ತಂದು ಕೊಳನಂ ಪುಗಿಸೆ ಮೆಯ್ಯ ಬೆಂಕಿಯಿಂ ಚುಯ್ಯೆಂದು ನೊರೆಗಟ್ಟಿ ಬಿಸಿಯ ತೆರೆ ತನುಮುಟ್ಟ ಸೆಕೆಯುಸಿರ್ ಭುಗಿಲನೊಗೆದು ಕಾದ ನೀರ್ ಕಾಯಮಂ ಸುಡೆ (ಗಿರಿಕ. ೪-೧೧೮ ವ); ಸಾಮಾನ್ಯಗುಣಗಳು-ಮೂತ್ರವು ವಾತರೋಗದಲ್ಲಿ ಬಿಳಿದಾಗಿಯೂ ಶ್ಲೇಷ್ಮರೋಗದಲ್ಲಿ ನೊರೆಗಟ್ಟಿ ಕೊಂಡೂ ಪಿತ್ತರೋಗದಲ್ಲಿ ಕೆಂಪಾಗಿಯೂ ದ್ವಂದ್ವರೋಗಗಳಲ್ಲಿ ಮಿಶ್ರವಾಗಿಯೂ ಇರುವುದು (ಸಕವೈ. ೧೪); ಅಂಟುವಾಳದ ಕಾಯಿ: ಈ ಕಾಯಿಯನ್ನು ಜಜ್ಜಿ ನೀರಿನಲ್ಲಿ ನೆನೆಸಿದಾಗ ನೀರು ನೊರೆಗಟ್ಟುತ್ತದೆ (ಗೃಹವಿ. ೮೬). [ನೊರೆ$_2$+ಕಟ್ಟು$_1$]

ನೊರೆಗಡಿಯಣ (ನಾ). (ಕುದುರೆಯ ಬಾಯಿಯ) ನೊರೆಯಿಂದ ಕೂಡಿದ ಕಡಿವಾಣ; ಬುರುಗು ಸಮೇತವಾದ ಕಡಿವಾಣ: ಪಚ್ಚಳದುಪ್ಪರದ ಮುಖದ ದೃಢಗತಿಯ ದೃಷ್ಟಿಗಳ ಕೋಪದಿ ಸಿಡಿವ ಕಿವಿಗಳ ನಿಟ್ಟುಸುರ ನೊರೆಗಡಿಯಣದ ಹಯವಂಜಿಸಿತು ಹರಿಹಯ ತುರಂಗಮವ (ತೊರರಾ. ೬-೩೦-೧೦). [ನೊರೆ$_2$+ಕಡಿಯಣ(<ಕಡಿವಾಣ)]

ನೊರೆನೆತ್ತರ್, ನೊರೆನೆತ್ತರು (ನಾ). ನೊರೆಯಿಂದ ಕೂಡಿದ ರಕ್ತ; ಬುರುಗು ತುಂಬಿದ ರಕ್ತ : ಮುನ್ನಂ ಪರಶುರಾಮನೀ ನೆಲದೊಳುಳ್ಳರಸುವಕ್ಕಳೆಲ್ಲರುಮನಿರ್ಪತ್ತೊಂದು ಸೂಟ್ವರೆಗಂ ಪಿಳ್ಳೆಪೆಸರಿಲ್ಲದಂತು ಕೊಂದವಂದಿರ ನೊರೆನೆತ್ತರೊಳ್ ಕೀವಿ (ಗದಾಯು. ೬-೨೮ ಪ); ಬಿಸುನೆತ್ತರುಣ್ಮೆ ನೊರೆನೆತ್ತರ್ ಸೂಸೆ ಕರ್ನೆತ್ತರಂ ಬಿರಿವಿಟ್ಟರ್ವಿಸೆ ಕೂಡೆ ಬಿಲ್ವಡೆ ಪಡಲ್ವಟ್ಟತ್ತು ಸಂಗ್ರಾಮದೊಳ್ (ಪಂಠಾಮಾ.೧೩-೪೭); ಕಡುಮುಳಿದು ನೆನೆಯದೆಯೆನ್ನ ತನೂಭವನೆಂಬುದನನಿತಂ ಮಾಡಿದ ದೇಸಿಗರೀರ್ವರ ಮನುಜರ ನೊರೆನೆತ್ತರ ಕುಡಿದೀಗಳೆ ಬಪ್ಪೆ ನಾನೆಂದನೆ ದನುಜಂ (ಕುಮುಂಾ. ೯-೧೯); ಕರುಳು ಕರುಳಲಿ ತೊಡಕಿ ನೊರೆನೆತ್ತರಲಿ ನೆತ್ತರು ಕೂಡಿ ಕಡಿಯಲಿ ಬೆರಸಿ ಕಡಿ ಪಲ್ಲಟಿಸೆ ಕಾದುವೆನಿಂದು ಹಗೆಯೊಡನೆ (ಕುವ್ಯಾಕ. ೮-೩೮). **ನೊರೆನೆತ್ತರು :** ಉರಿವ ಕೋಪಾಗ್ನಿಯಲಿ ಕರ್ಣನ ಶಿರದ ಭಾಂಡದಲಿವನ ನೊರೆನೆತ್ತರಿನಲಿವನಗ್ರಜನ ಕೊಬ್ಬಿದ ನೆಣನ ಕೊಯ್ಕೊಯ್ದು ಮಹೋಗ್ರಭೂತದ ನೆರವಿಗುಣಲಿಕ್ಕುವೆನು (ಕುವ್ಯಾಸ. ೧೫-೩೪); ನರಕದಲಿ ಪಶುನಿಕರ ಕೊಲುವವು ಪರಿಪರಿಯ ವಧಗಳಲಿ ನೊರೆನೆತ್ತರನು ಕುಡಿವವು ಕೇಳು ರಕ್ಷೋಗಣಗಳುಱ್ ಕಡಿದು (ನಿಭಾಗ. ೫-೧೧-೩೭). [ನೊರೆ$_2$+ನೆತ್ತರ್]

ನೊರೆನೆತ್ತರು 'ನೊರೆನೆತ್ತರ್' ನೋ.

ನೊರೆಪಾಲು 'ನೊರೆವಾಲ್' ನೋ.

ನೊರೆಬಾಯಿ 'ನೊರೆವಾಯ್' ನೋ.

ನೊರೆಮಾಲೆ(ನಾ). ಬುರುಗಿನ ಸಾಲು; ನೊರೆಯ ಮಾಲೆ : ಪಕ್ಕಜಲ್ಲಿಗಳಿಂ ಪರಿಶೋಭೆವಡೆದು ಪರಿವ ತುರಂಗಸಂಘದಿಂ ನೊರೆಮಾಲೆ ವೆರಸಿ ತರಂಗೊಂಡು ತರಂಗಸಂಘಾತಂ ಬಳಜಳಧಿಯೊಳ್ನೆಗೆದಂತೆಯುಂ (ರಾಜಶೇ. ೧೩-೭೭ ಪ): [ನೊರೆ$_2$+ಮಾಲೆ]

ನೊರೆಮೀಸೆ (ನಾ). ಚಿಗುರುಮೀಸೆ; ಎಳೆಮೀಸೆ; ತುಪ್ಪುಳುಮೀಸೆ : ನಿತ್ಯ ಚಿಂತೆಯ ಕಂತೆಯಲ್ಲಿ (೧೮ ವರ್ಷದ ಬಾಲಕರು ಮೀಸೆ ಮೂಡುವ ಮೊದಲೇ ನೊರೆಮೀಸೆ ತಾಳುವ ಈ ದಿನದಲ್ಲಿ) ನಮ್ಮ ಚಿಂತೆಯನ್ನು ಎರಡು ತಾಸಿನ ಅವಧಿಯ ತನಕ ನಗುವಿನಿಂದ ಮರೆಯಿಸುವವರು ಬೇಕು (ಕನ್ನನು. I, ೧೩೩). [ನೊರೆ$_2$+ಮೀಸೆ]

ನೊರೆಯಡಕೆ (ನಾ). ಎಳೆಯದಾದ (ಬೇಯಿಸದ) ಅಡಕೆ; ಹಾಲಡಕೆ : ಕೈರಗುಳಿಗೆ ನೊರೆಯಡಕೆ ಮುತ್ತಿನ ಸುಣ್ಣ ನೇರದ ಚವರಿ ಮುಂತಾದ ಭೂರಿಯೊಳೆನಗಿದು ತನಗಿದೆಂದೆಲ್ಲರು ಕೋಱುಟ್ಟು ವ್ರತವ ಮಾಡಿದರು (ಭರಚ. ೨೧-೩೧). [ನೊರೆ$_2$+ಅಡಕೆ$_1$]

ನೊರೆಯಾಱು (ಕ್ರಿ). ೧. ನೊರೆಯು ಇಲ್ಲವಾಗು,—ಅಡಗು. ೨. (ಆಲಂ) ಬಿಸುಪನ್ನು ಕಳೆದುಕೊಳ್ಳು; ತಣ್ಣಗಾಗು; ಕುಗ್ಗು : ಹಾಱುತಾಯುಧವೆಂದು ಭೀತಿಗೆ ಮಾಱುಹೋದನೆ ವೀರರಸ ನೊರೆಯಾಱುತೇ ನಿಜಬಾಹುಶಕ್ತಿಯೊಳುಂಟೆ ಖಯಖೋಡಿ (ಕುವ್ಯಾಅ. ೬-೨೫). [ನೊರೆ$_2$+ಆಱು$_1$]

ನೊರೆಯಿಡು (ಕ್ರಿ). ನೊರೆಬಿಡು; ಬುರುಗಾಗು : ಮೇಳಿಸಿ ಪೊರ್ದಿದಾಳಿಯರ ಮೈ ಬಿಸುಪೇಱು ಬೆಮರ್ತುವಂಗದೊಳ್ ಬಾಳಮೃಣಾಳಿಕಾ ಸಮಿತಿ ಚುಯ್ಯೆನುತುಂ ನೊರೆಯಿ[ಪಾಠಾಂ. ವಿ]ಟ್ಟುದಶ್ರುಧಾರಾಳಿ ಕಪೋಲದೊಳ್ ಕುದಿದು ಬತ್ತಿದುದೊಯ್ಯನೆ ಬೀಸುತಿರ್ಪ ಪೊಂಬಾಟೆಯ ಚಾಮರಂಗಳರೆಸೀದುವು ತನ್ನಿಯ ದೇಹದಾಹದಿಂ (ಜಗವಿ. ೧೧-೨೧; ಕಾವ್ಯಸಾ. ೫೮೯ ನೋ). [ನೊರೆ$_2$+ಇಡು$_1$]

ನೊರೆರಕುತ (ನಾ). =ನೊರೆನೆತ್ತರ್ : ಮಂಡಿಸಿತು ನೊರೆರಕುತ ಕರುಳಿನ ಜೊಂಡು ಮಸಗಿತು ಕಡಿದ ಖಂಡದ ದಿಂಡು ತಳಿತುದು (ಕುವ್ಯಾಭೀ. ೯-೧೩); ನೊರೆರಕುತ ಸುಳಿ ಮಸಗಿ . . . ಕರುಳ ಬಂಬಲು ಖಂಡದಿಂಡೆಯ ತುಱುಗಿದೆಲುವಿನ ತಳಿತ ಚರ್ಮದ ಶಿರದ ತಡಿಗಳಲಡಸಿ ಹರಿದುದು ವೈರಿಸೇನೆಯಲಿ (ಕುವ್ಯಾದ್ರೋ.೨-೫೭). [ನೊರೆ$_2$+ರಕುತ]

ನೊರೆವನಿ(ನಾ). ನೊರೆಯ ಹನಿ,—ತುಂತುರು; ಬುರುಗಿನ ಕಣ: ಅತುಳ ಕರಧೂತೃತಾನಿಲಹತಿಯಿಂ ನೆಱೆ ಸೂಸೆ ಪತ್ತಿದಿನ[ವಾಹ] ಮುಖೋದ್ಗತದ ನೊರೆವನಿಗಳೆನೆ ಮಾರುತಪಥದೊಳ್ ತುಱುಗಿ ಮಿಱುಗಿದುವು ತಾರಗೆಗಳ್ (ಕುಸುಮಾ. ೧೧-೧೩೦); ಬಂದುದೀ ಮೃಗಪೋತ . . . ಕೊಳಗುದಾಗಿದ ಕಲ್ಲ ರತುನಾವಳಿಯ ಮಾಡುತ ನೊರೆವನಿಯಲು ಜ್ವಲಸುಮುಕ್ತಾಫಲವ ಕೆದಱುತ . . . ಐದಿತು ನಿತಂಬಿನಿಯ (ತೊರರಾ. ೩-೮-೨೯). [ನೊರೆ$_2$+ಪನಿ$_2$]

ನೊರೆವಳಿ (ನಾ). ನೊರೆಯು ಬಿದ್ದಿರುವ ಜಾಗ,—ಸ್ಥಳ : ತೊಳಗು ಪಜ್ಜೆಯನುದಿರ್ದ ತುಪ್ಪಳ ಬಳಿಯ ಮಲಗಿದು ಮೆಲುಕಿಱುದ ನೊರೆವಳಿಯ ನೊಣವಿಱುದಾಡಿದೊಗುನೆತ್ತರಿನ ಬೆಂಬಳಿಯ ನೆಲನನಿಕ್ಕೆಯ ಹಕ್ಕೆಯಾಡುಂಬೊಲನ ಮರಗಾಡುಗಳೊಳಗೆ . . . ಹೊಕ್ಕುದಗಲಕೆ ಶಬರ ಸಂದೋಹ (ತೊರರಾ.೩-೩-೧೧). [ನೊರೆ$_2$+ಬಳ್ಳಿ$_3$(<ಬಟ್ಟು$_3$)]

ನೊರೆವಾಯ್, ನೊರೆಬಾಯಿ (ನಾ). ೧. ನೊರೆಯನ್ನು ಒಳಗೊಂಡಿರುವ ಬಾಯಿ; ಬುರುಗು ಆವರಿಸಿರುವ ಬಾಯಿ : ನರೆಗೊರಳ ನೊರೆವಾಯ ಹಾವಸೆವರಿದ ಪಲ್ಗಳ . . . ಕಾರೊಡಲ ಕುಱುಬನು (ಬಸಪು. ೨೦-೧೧); ನೊರೆವಾಯ್ಜೋಲ್ದುಟಿ ಪೆರ್ಮೂಗರಲ್ದ ಕೆಮ್ಮಿಸೆ ಕೆದರ್ದ ಪಱುಗಡ್ಡಂ ಕರ್ಬುರರುಚಿಯನುಗುಳ್ವ ಕಾರೊಡಲಿರೆ (ವೃಷವಿ. ೧೧-೬೧). **ನೊರೆಬಾಯಿ :** ೨. ನೀರು ಸುರಿಯುವ ಬಾಯಿ; ನೀರೂರುವ ಬಾಯಿ; ಜೊಲ್ಲುಬಾಯಿ.

ನೊರೆಬಾಯ ಏಳಿಸು=ಬಾಯಲ್ಲಿ ನೀರೂರಿಸು; ಆಸೆಯನ್ನು ಹುಟ್ಟಿಸು : ಮೇಲೆ ಇಪ್ಪತ್ತೈದು ಲಕ್ಷದ ಸಾಲ ಹರಿವಾಣದಲಿ ಲಕ್ಷ್ಮೀಲೋಲಗರ್ಪಿಸಿದನ್ನ ಬಡಿಸಿತು ಸುರರ ನೊರೆಬಾಯ ಏಳಿಸುವ ದಿವ್ಯಾನ್ನ ದೆಡೆಗಳಿಗಾಳುಸಹಿತೈತಂದು ನೃಪಜನದೋಳಿಯಲಿ ಭೋಜನವ ಮಾಡಿದನು (ಸಂಭಪ. ೨೪-೬೨). [ನೊರೆ$_2$+ಬಾಯ್]

ನೊರೆವಾಲ್, ನೊರೆಪಾಲು, ನೊರೆವಾಲು, ನೊರೆಹಾಲು (ನಾ). ನೊರೆಯಿಂದ ಕೂಡಿದ ಹಾಲು; ಆಗ ತಾನೇ ಹಿಂಡಿದ ಹಾಲು; ತಾಜಾಹಾಲು : ಬೇವಿನ ಗಿಡುವಂ ತಂದಿಟ್ಟಾವಿನ ನೊರೆವಾಲನೆಱೆದು ನಡಪಿದೊಡಂ ಕೇಳ್ ಬೇವಿಂಗೆ ಕೈಪೆ ಪಿಂಗದು ಭೂವಳಯದೊಳ್ (ಧರ್ಮಾಮೃ. ೫-೧೫೬); ನೊರೆವಾಲ ಮೊಸರ ತುಪ್ಪದ ಪರಿವೊನಲಾಗಿರಿಯ ಪಿರಿಯ ಸಾನುಗಳೊಳ್ ನಿರ್ಝರಮೆಂಬ ನೆವದಿನಿನ್ನುಂ ಪರಿದ ಪುವೇಂ ಪಿರಿದೊ ಜಿನನ ಜನ್ಮಸ್ಥಾನಂ (ಪುಷ್ಪಪು. ೧೧-೪೨). **ನೊರೆಪಾಲು :** ದನದ ಕಣ್ಣಿಗೆ :—ದನಗಳಿಗೆ ನೊರೆಪಾಲು, ಕೊಂಡಿಯ ರಸ, ಜಾಜಿ, ಉತ್ತ(ರಣಿರ)ಸ, ಇಷ್ಟನ್ನು ಅರೆದು ಹಚ್ಚಲು ಕಣ್ಣುಹೂವು ಮಾಣ್ಗುಂ (ವಿವೈವಿ. ೭೯). **ನೊರೆವಾಲು :** ಉಣ್ಣ ಕೆಚ್ಚಲು ಹತ್ತಿ ಉಂಬುದೇ ನೊರೆವಾಲ ಪುಣ್ಯಕ್ಷೇತ್ರದಲ್ಲಿ ಹುಟ್ಟ ಉಣ್ಣದವನು ಆ ಉಣ್ಣಿಯಿಂದ ಕರಕಷ್ಟ (ದೇದಾವ. ೪೧-೬೯); ಎಣ್ಣೆಯ ತಲೆಗೂಡಿದುದಿಲ್ಲ ನೊರೆವಾಲು ಬೆಣ್ಣೆಯ ಮೆಲಿಸಿದುದಿಲ್ಲ ಕಣ್ಣವೆ ಹಳಚಿ ನೋಡಿದುದಿಲ್ಲ ಮಗನ ಲಾವಣ್ಯವನೆಂದಳಲಿದಳು (ಮೋಹತ. ೪-೮೦); ಜ್ವರ ಬಂದ ಮನುಜಂಗೆ ನೊರೆವಾಲು ಕಹಿಯಕ್ಕು ನರಕದಲಿ ಬೀಳ್ವ ಅಧಮಂಗೆ ಶಿವಭಕ್ತಿ ಹಿರಿದು ಕಹಿಯಕ್ಕು (ಸರ್ವಜ್ಞ. ೨೫೦); 'ಅಂಬೆ' 'ಅಂಬೆ' ಎಂದೊರಲಿ ಬರುವವೋ ಇಲ್ಲಿ ನೂರು ಕರುವು. ನಂಬಿದವಗೆ ತಂಬಿಗೆಯ ತುಂಬ ನೊರೆವಾಲು ಕರುಣೆ ಕುರುಹು (ನೆಲಮು. ೩೮-೨). **ನೊರೆಹಾಲು :** ಹಿಡಕೋ ಬಿಡಬೇಡ ರಂಗನ ಪಾದ . . . ಮಕ್ಕಳೊಳಗೆ ಪುಂಡ ಮನೆ ಮನೆಗಳ ಹೊಕ್ಕು ಸಕ್ಕರೆ ನೊರೆಹಾಲು ಸವಿಸವಿದು . . . ತಾ ಮೆದ್ದು

ಸಿಕ್ಕದೆ ಜಿಗಿದೋಡಿ ಪೋಗುವ ಕಳ್ಳನ (ಪುರಂದ. ೨-೭೬-೪).

[ನೊರೆ$_2$ + ಪಾಲ್$_1$]

ನೊರೆವಾಲು 'ನೊರೆವಾಲ್' ನೋ.

ನೊರೆವಿಂಡು (ನಾ). ಬುರುಗಿನ ರಾಶಿ; ನೊರೆಯ ಸಮೂಹ; ಫೇನರಾಶಿ: ನೊರೆವಿಂಡುಟ್ಟ ದುಕೂಲಮಾಗೆ ಸಲಿಲಂ ಮೆಯ್ಯಾಗೆ ಹಂಸಾವಳೀವಿರುತಂ . ನೂಪುರನಾದಮಾಗೆ ತೆರೆಗಳ್ ತೋಳಾಗೆ ಒರ್ವಳ್ ಮನೋಜಾಂಬುಜಾಕರದಂತಾ ನೃಪನಂದನಂಗೆ ಪಡೆದಳ್ ಬೇಱೊಂದತಪ್ರೀತಿಯಂ (ತಾಂತಿಪು. ೮-೭೬); ಗಗನಪಯೋನಿಧಿಯೊಳು ಮಿಗೆ ಸೊಗಯಿಪ ನೊರೆವಿಂಡಿದೆನಿಪ ಪಾಂಡುರವರ್ಣಂ ಮುಗಿಲೊಗೆದು . . . ಪಡೆದುದತಿಕೌತುಕಮಂ (ಪರ್ಧಪು. ೧೩-೫); ತುಂಗತರಂಗಂ ಸುಟಿಪ ತುರಂಗಂ ನೊರೆವಿಂಡು ನೃಪರ ಬೆಳ್ಗೊಡೆಯಾಗಲ್ ಗಂಗಾ ಪ್ರವಾಹಮೆನಿಪುದು ಸಂಗತಜನಕಳಕಳಂ ಪ್ರತೋಳೀವಳಯಂ (ಪುಷ್ಪಪು. ೨-೬೮). [ನೊರೆ$_2$ + ಪಿಂಡು$_2$]

ನೊರೆವುಲ್, ನೊರೆಹುಲ್ಲು (ನಾ). ಎಳೆಯ ಹುಲ್ಲು; ಮೃದುವಾದ ಹುಲ್ಲು: ನೊರೆವುಲ್ಲಂ ಮೇದೆರಟ್ಕಣ್ ತುಮುಟಿ ಕುಡಿದು ಪೂರಾಂಬುವಂ . . . ಮಾಹಿಷೀಸಂತತಿ ವಿಪಿನಭವಂ ಕಣ್ಗಗುರ್ವಾಯ್ತು ಕಾರೊಳ್ (ಚಂದ್ರಪು. ೪-೪೮). **ನೊರೆಹುಲ್ಲು**: ಬದುಗಳ ಮೇಲೆ ತೇವದಿಂದ ಕೂಡಿದ ನೊರೆಹುಲ್ಲು ಇರುತ್ತದೆ (ರೂಢಿ).

[ನೊರೆ$_2$ + ಪುಲ್]

ನೊರೆವೆರೆ (ಕ್ರಿ). ಬುರುಗಿನಿಂದ ಕೂಡು; ನೊರೆಯನ್ನು ಹೊಂದು: ಪಿರಿದೆನಿಪ ಲಯಸಮುದ್ರದ ತೆರೆಗಳ್ ನೊರೆವೆರೆದು ನೆರೆದು ನೆಗೆದಪುವೆಂ ಬಂತಿರೆ ಫೇನಪುಂಜಧವಳಿತ ತುರಂಗಸಂದೋಹಸೈನ್ಯಮೆಸೆದತ್ತಾಗಳ್ (ಕಾದಂಪೂ. ೪೬೭). [ನೊರೆ$_2$ + ಬೆರೆ$_1$]

ನೊರೆವೇಱು (ಕ್ರಿ). ನೊರೆಯು ರಾಶಿಯಾಗು; ಬುರುಗು ಒಟ್ಟಲಾಗು: ಗಿಡುಗಳೊಳ್ ದನಿದೋಱ್ ಗೊಡಲೆಯೊಳ್ನೊರೆವೇಱ್ ನಿಱಿ ನಿಱಿದು ತೆರೆಯಿಱಿದು ಕಿಱುಮಟಲ ದಿಣ್ಣೆಯೊಳ್ ಪರಿವ ಬರಿವೊನಲೆಸೆದು ಪೋರೊಂದುತಾಣದೊಳ್ (ಅನಂಪು. ೯-೧೬ ರಗಳೆ).

[ನೊರೆ$_2$ + ಪೇಱು$_1$]

ನೊರೆಸಂಡಗೆ (ನಾ). ಒಂದು ಬಗೆಯ ಅಕ್ಕಿಸಂಡಿಗೆ: ನೊರೆಸಂಡಗೆಯನು ಹುರಿಸಂಡಗೆಯ ಬಾಳಕವನು ತಪ್ಪದೆಲ್ಲಾ ಸಾಧನವನು ಸಂವರಿಸಿ ತಂದೊಪ್ಪಿಸಿದಡೆ (ಸಿದ್ಧರಾ. ೮-೫೨). [ನೊರೆ$_2$ + ಸಂಡಗೆ]

ನೊರೆಹಪ್ಪಳ (ನಾ). ಒಂದು ಬಗೆಯ ಅಕ್ಕಿ ಹಪ್ಪಳ: (ಕಿ).

[ನೊರೆ$_2$ + ಹಪ್ಪಳ(<ಪಪ್ಪಡ)]

ನೊರೆಹಾಲು 'ನೊರೆವಾಲ್' ನೋ.

ನೊರೆಹುಲ್ಲು 'ನೊರೆವುಲ್' ನೋ.

ನೊಲಿ 'ನೊಲ್ಲಿ' ನೋ.

ನೊಲೆನಾಡು (ನಾ). ಒಂದು ನಾಡಿನ ಹೆಸರು; ನವಿಲೆನಾಡು: ಸ್ವಸ್ತಿಶ್ರೀನೊಲೆನಾಡ ಕುಡಲುರ ನಿಗಳಣ್ಕಮಲ್ಲ ಚಂಗಾಳ್ವ ಪರಿವು ಪಯ್ದನ್ದು (ಎಕ. IV, ಹೆಗ್ಗಡ. ೧೦೪-೫; 1037). [<ನವಿಲೆನಾಡು]

ನೊಲ್ಲಿ, ನೊಲಿ (ನಾ). ಒಂದು ಬಗೆಯ ಹುಲ್ಲು: ಗೋದಿಯನ್ನು ಬಿತ್ತುವ ಸಮಯದಲ್ಲಿ ಹುಲ್ಲು ಸದಿ ನೊಲ್ಲಿ ಮುಂತಾದ ಕಸಪದಾರ್ಥಗಳು ಮೊಳೆತಿದ್ದರೆ ಮತ್ತೊಂದು ಸಾಲು ಹರಗಿ ಬಿತ್ತಬೇಕು (ಕೃಷಿಪ್ರ. ೮೩). **ನೊಲಿ**: ಪೊನ್ನಳ್ಳಿನಾಮಗ್ರಾಮಸ್ಸರ್ವ್ವ ಪರಿಹಾರೋಪೇತೋದತ್ತಃ ತಸ್ಯ ಸೀಮಾನ್ತಠಾಣಿ ಪೂರ್ವ್ವಸ್ಯಾಂ ದಿಶಿ ನೊಲಿ ಬೆಳೆದಾ ಬೆಳ್ಗಲ್ಮೊಱಡಿ (ಎಕ. IV, ನಾಗಮಂ. ೮೫-೬೧; 776). [?]

ನೊಸಗೊನ್ನೆ 'ನಸುಗುನ್ನಿ' ನೋ.

ನೊಸಲ್, ನೊಸಲು, ನೊಸಳು (ನಾ). ಹಣೆ; ಲಲಾಟ. "ಲಲಾಟಂ, ಅಳಿಕಂ—ಈ ೨ ನೊಸಲ್" (ಹಲಾಯು. ೮೭-೩೭೧); ನೊಸಲಂ ತೊಂಗಲ್ಗುರುಳ್ ಮೇಲುದನೊಗೆವ ಕುಚಂ ಬೆನ್ನನಾ ನೀಳಕೇಶಪ್ರಸರಂ . . . ಉರಮಂ ಸಂಚಳತ್ತಾರಹಾರಂ ಪಸರಂಬೆತ್ತೆತ್ತ ಮೋರಂತಲೆಯೆ ಭರತನಂ ನೋಡಲೈತಂದಳೊರ್ವಳ್ (ಆದಿಪು. ೧೧-೧೬); ಅಸುಹೃತ್ಸೇನೆಗೆ ಸಾಲ್ವನೊರ್ವನೆ ಗಡಂ ರುದ್ರಾವತಾರಂ ಗಡಂ ನೊಸಲೊಳ್ಕಣ್ಗಡಮೆಂದು ನಚ್ಚಿ ಪೊರೆದೆಂ . . . ಹೋಳದ ಪಾಟಿಯಂ ಬಗೆದರಿಲ್ಲಾ ದ್ರೌಣಿಯುಂ ದ್ರೋಣನುಂ (ಗದಾಯು. ೩-೧೧); ಅನತಾರಾತಿ ಮಯೂರ ತಾರಕಹ ××× ನಂಗೆ ಮಾಱಾಂತು ಕಾಯಿವರೊಳಾಟಂದಿದಿರಾಂಪವಂಗೆ ನೊಸಲೊಳ್ ಕಣ್ ನೀಳಕಂಠಂ ಗಜಾಜಿನಮಮ್ ಸೇಂಧು ಜಟಾಗ್ರಮುಗ್ರಫಣಿಹಾರಂ ವ್ಯಾಘ್ರಚರ್ಮ್ಮಂ ತ್ರಿಶೂಳ ×× ಗ್ರಾಯುಧಮೆಂಬಿಮೇನೊಳವೆ ಪೇಳ್ಸಂಗ್ರಾಮರಂಗಾಗ್ರದೊಳ್ (ಎಕ. VIII, ಸಾಗರ. ೧೦೯-೨೦; 1042); ಕೊಂಡಾಡಿ ಕೊಂಡಾಡಿ ಮಜ್ಜನಕ್ಕೆಱೆವುತಂ ಮುಂಡಾಡಿ ಮುಂಡಾಡಿ ನೊಸಲೊಳಚ್ಚೊತ್ತುತಂ (ಬಸರ. ೩-೫೨). **ನೊಸಲು**: "ಲಲಾಟಂ ಅಳಿಕಂ ಗೋಧಿಃ—ಈ ಮೂಱು ನೊಸಲು" (ನಾಚಿರಾ. ೧೨೨); ನಮ್ಮ ಕೂಡಲಸಂಗನ ಶರಣರಿಗೆ ನೊಸಲ ವಿಭೂತಿಯೇ ಶೃಂಗಾರ (ಬಸವ. ೭೪); ಪೊಟ್ಟಜೆಯಿಂ ನುಡಿವಹಿತರ ನಿಟ್ಟೋಡುವರದೆಂದು ವೀರಲಕ್ಷ್ಮಿಯ ನೊಸಲೊಳು ಬೊಟ್ಟಟ್ಟಂದದೊಸ ಮಾರನಗುರನ ಕಟ್ಟದಿರೊಳು ನಿಲುವ ಗಣ್ಣನಾವಂ ಧುರದೊಳು (ಎಕ. XVI, ಚಿಕ್ಕನಾ. ೧೦೬-೩; 1243); ಕರವ ನೆಗಹಿದನಕಟ ಹೋ ಹೋ ಬಿರುದ ರಂಜದಿರಂಜದಿರಿ ನಿಮ್ಮರಿಭಟಗೆ ನಾಲ್ಕಿಲ್ಲ ಕೈ ಕಣ್ಣಿಲ್ಲ ನೊಸಲಿನಲಿ . . . ವೃಥಾ ಭಯವೇಕೆನುತ ಕುರುರಾಯನನುವಾದ (ಕುವ್ಯಾಕ. ೪-೨೬); ಮುಟ್ಟ ಶ್ರೀಗಂಧವನು ಇಟ್ಟು ತಾ ನೊಸಲೊಳಗೆ ನೆಟ್ಟನೆಯೆ ಸ್ವರ್ಗಪಡೆವಡೆ ಸಾಣಿಕಲ್ ಕೆಟ್ಟ ಕೇಡೇನು (ಸರ್ವಜ್ಞ. ೯೨೪); ನೊಸಲು ನೊಸಲಿನಲಿರಿಸಿ ಸುಸಿಲಾಡುವವು ಹೂವು (ಉಯ್ಯಾಲೆ. ೯-೧). **ನೊಸಳು**: ಅವಳ ನೊಸಳೊಳಗಿನ ಗೋರೋಚನದ ಬೊಟ್ಟು (ಮುಂಬಯಿ. ೫-೨೦೦).

ನೊಸಲ ಕಣ್ಣ ದೇವ = ಹಣೆಯಲ್ಲಿ ಕಣ್ಣುಳ್ಳವನು; ಶಿವ: ಸಂಬಂಧದ ಸಂಬಂಧಕ್ಕೆ—ನೊಸಲ ಕಣ್ಣ ದೇವಂ, ತೋಳ ಬಾಳ ಕಾಂತಿ, ಹರಿಯ ಪೊಕ್ಕುಟ ತಾವರೆ (ಶನುದ. ೧೩೨ ಪ್ರಯೋ). **ನೊಸಲ ಕಣ್ಣವರು** = ಹಣೆಯಲ್ಲಿ ಕಣ್ಣುಳ್ಳವರು: ತಮತಮಗೆಲ್ಲ ನೊಸಲ ಕಣ್ಣವರು ತಮತಮಗೆಲ್ಲ ನಂದಿವಾಹನರು ತಮತಮಗೆಲ್ಲಾ ಖಟ್ವಾಂಗ ಕಪಾಲ ತ್ರಿಶೂಲ ಧರರು ದೇವರಾರು ಭಕ್ತರಾರು ಹೇಳಿರಯ್ಯಾ (ಬಸವ. ೮೧೮). **ನೊಸಲ ಕಣ್ಣಾತ** = ನೊಸಲ ಕಣ್ಣ ದೇವ: ಇದು ಕೈಲಾಸಂ ಭವಾನೀಧವನ ನೆಲೆ ಮನೋಜಾತನಂ ಬೂದಿಮಾಡಿ[ತ್ತಿ]ದಱೊಳ್ ದಕ್ಷಾಧ್ವರ ಧ್ವಂಸಕನ ನೊಸಲ ಕಣ್ಣಾತ[ನೊಳ್]ತನ್ನ ದೋರ್ಗರ್ವದಗುರ್ವಂ [ಪ್ರಾ]ಕಟಂ ಮಾಡುವ ಬಗೆಯೊಳಿದಂ ಪತ್ತಿ [ಕಿಟ್ಟೊ]ತ್ತಿ ಪೊ[ತ್ತೆ]ತ್ತಿ ದೊಡಿತ್ತಂ [ಮೆಚ್ಚಿ ಲಂಕಾಧಿಪತಿಗೆ ಬರವಂ ರಾಗದಿಂ] ನೀಳಕಂಠಂ (ಪಂಪಭಾ. ೭-೭೪). **ನೊಸಲ ಕಣ್ಪಾಯ್ದವ** = (ಶಿವನ) ಹಣೆಗಣ್ಣಿನಿಂದ ಹುಟ್ಟಿದವನು; ವೀರಭದ್ರ: ಪೂಗಣಿಯನೆತ್ತಿ ಬಂದುದ ನಾಗಳೆ ಸಿವನಱಿದು ನೊಸಲ ಕಣ್ಪಾಯ್ದ[ಪಾಠಾಂ. ಗಣ್ಣಾಯ್ದ]ವನಂ ಬೇಗದೆ ನಡೆದವನೊಳ್ ನೀಂ ತಾನೆನೆ (ಕಬ್ಬಿಕಾ. ೨೩೯). **ನೊಸಲಗಣ್ಣವ, ನೊಸಲ ಕಣ್ಣವ** = ನೊಸಲ ಕಣ್ಣ ದೇವ: ನೊಸಲಗಣ್ಣವನ ಸುತನೆಂಬುದಂ ಧರೆಗೆ ಸೂಚಿಸುವೊಲುಜ್ವಲಿಸುವರಳೆಲೆಯೊಪ್ಪೆ . . . ಬಾಲಕಂ ಕಣ್ಗೆಸೆದನು (ಚಿಬಪು. ೫-೩೭); ನೊಸಲೊಳೆಂ ನಿಮಗುಂಟೆ ಕಂಗಳು ನೊಸಲ ಕಣ್ಣವ ಕಂಸರಾಯನ ವಸನಗಳನೆಳೆದುಡುವಡಾಜದೆ ತೊಗಲ ನುಟ್ಟನೆನೆ . . . ಕೃಷ್ಣನು ನಸುನಗುತಲಾ ವಸನಗಳನೆಳೆದಿತ್ತ ಗೋವರಿಗೆ

(ಸಾಳ್ವಭಾ. ೨೨-೬೧). **ನೊಸಲಗಣ್ಣು, ನೊಸಲ ಕಣ್, ನೊಸಲ ಕಣ್ಣು** = ಹಣೆಯಲ್ಲಿರುವ ಕಣ್ಣು ; ಹಣೆಗಣ್ಣು ; ಫಾಲನೇತ್ರ : ಹರನು ನೆಟ್ಟನೆ ಮುನಿದು ತ್ರಿಪುರವನುರುಹುವಂದಿನ ನೊಸಲಗಣ್ಣಿಂದುರ ವಣಿಸಲಲ್ಲಿಂದ ಸಡಲಿದ ಕಿಡಿಗಳೆಲ್ಲವನು ಪರಿಗಣಿಸೆ (ಕುವ್ಯಾದ್ರೋ. ಓರಿಇ. ೧೫-೪೯ ಅಡಿಪದ್ಯ) ; ಅಶ್ವತ್ಥಾಮಂ . . . ಅಗಳುರಿಯುರುಳಿಯಂತಪ್ಪ ತನ್ನ. ನೊಸಲ ಕಣ್ಣಂ ತೋಱಿ ತನ್ನ ಸಾಹಸಮಂ ತೋಱಲೆಂದು ನಾರಾಯಣಾಸ್ತ್ರಮಂ ತೊಟ್ಟೆಚ್ಚಾಗಳ್ (ಪಂಪಭಾ. ೧೨-೩೧ ವ); ತ್ರಿಪುರದ ಕೋಟೆ ಬಲ್ಲಿತ್ತೆಂದರೆ ನೊಸಲ ಕಂಗಳಲುರುಹಿದನವ್ವ (ಮಹಾದೇ. ಬ. ೧೧-೬) ; ನೊಸಲ ಕಣ್ಣಭವನೊಬ್ಬನೆ ನಮ್ಮ ಕೂಡಲಸಂಗಮದೇವ (ಬಸವ. ೫೬೫) ; ವಿಷವಲಾ ಬ್ರಹ್ಮಸ್ವವೆಂಬುದು . . . ನೊಸಲ ಕಣ್ಣ ಮಹೇಶ್ವರಗೆ ಸೈರಿಸದು ಮಿಕ್ಕ ಮನುಷ್ಯರಿಗೆ ಜೀರ್ಣಿಸುವುದೇ (ನಿಭಾಗ. ೧೦-೮೩-೪೫). **ನೊಸಲ ನಯನ** = ೧. ಹಣೆಗಣ್ಣು : ಬವರಭೈರವನಾತನತಿಬಲ ಶಿವನ ನೊಸಲ ನಯನದೊಳಿವನು [ಪಾಠಾಂ. ನೊಸಲಂದದಲಿ] · ಮೆಱೆವವನಿವನು ಚಿತಸಂಗ್ರಾಮನಶ್ವತ್ಥಾಮ ನೋಡೆಂದ (ಕುವ್ಯಾವಿ. ೬-೫೫) ; ನೊಸಲ ನಯನದಂತೊಪ್ಪುವ ಕುಂಕುಮರಸದ ಲಲಾಮದಿ ನಿಡುಮುಡಿಯೊಳು ರಂಜಿಸುವ ಹಸುಳೆವೆಱೆಯಂತೆ ವಿರಾಜಿಪ ಬೆಳರ್ಗೇದಗೆಯೆಸಳಂ . . . ವಸುಧಾಧಿಪಸತಿಯಂದಿನ ದುರ್ಗಾಂಬಿಕೆಯಂತೊಪ್ಪಿದಳು (ಜಯಕಾ. ೨-೧೧). ೨. ಹಣೆಯಲ್ಲಿ ಕಣ್ಣುಳ್ಳವನು ; ಹಣೆಗಣ್ಣ ; ಶಿವ : ತ್ರಿಶೂಲ ಡಮರುಗಧರಾ ನೊಸಲ ನಯನ ವಿಕಸಿತಾಂಬುಜಮುಖ ಶಶಿಧರಾ (ವಿಪಕೀ. ೩೯-೧). **ನೊಸಲ ಪಟ್ಟ, ನೊಸಲಪಟ್ಟಿ** = ಹಣೆಯಲ್ಲಿ ಕಟ್ಟುವ ಪಟ್ಟ; ಲಲಾಟ ಪಟ್ಟ : (ಕಿ); ಧಾನ್ಯವಂ ಕಟ್ಟಿ ಪುಷ್ಪಗಳಿಂದಲೂ ಆಭರಣಗಳಿಂದಲೂ ಅಲಂಕರಿಸಿ ನೊಸಲ ಪಟ್ಟಿಯಂ ಕಟ್ಟಿರುವ ಆ ಆನೆ ಕುದುರೆಗಳನ್ನೂ . . . ಪೂಜೆ ಮಾಡಿದನು (ಮಹಾವಂ. I, ೩೫). **ನೊಸಲ ಬರೆಹ, ನೊಸಲಿನ ಬರಹ** = ನೊಸಲಕ್ಕರ : ಜಗದೇವಂಗೆ ಬೆಸನಿತ್ತು ತನ್ನ ರೇಂದ್ರನ ನೊಸಲ ಬರೆ[ಪಾಠಾಂ. ರ]ಹವ ಮುನ್ನೊರೆಸಿ ಬಿಜ್ಜಳನ ಸಾಮ್ರಾಜ್ಯೋನ್ನತಿಯನೀಶನ ಕವಳಿಗೆಯೊಳಂತು ತೊಡೆಯಿಸುತ (ಬಸಪು. ೬೧-೭) ; ನೊಸಲ ಬರೆಹಮಿದೆಂದು ತಡೆತಡೆದು ನಡೆದುದಂ ಉಸುರಿದಳ್ (ಕಾಲೂರ. ೧೩೨-೨೮೩) ; ನೊಸಲಿನ ಬರಹ ಬಸಲೆಯಿಂದ ಒರಸಬಹುದೇ ? (ಗಾದೆ). **ನೊಸಲ ಬೊಟ್ಟು** = ಹಣೆಯಲ್ಲಿಡುವ ಬೊಟ್ಟು, — ತಿಲಕ : ಗೋರೋಜನ ಸುಗಂಧದಿಂದ ರಚಿಸಿದ ನೊಸಲ ಬೊಟ್ಟು (ರಾಘಚ. ೧೭-೬೫). **ನೊಸಲುರಿಗಣ್** = ಹಣೆಯಲ್ಲಿರುವ ಉರಿಗಣ್ಣು : ಕೊರಲ ಕಱೆ ಶಿರದ ಪೆಱೆ ನೊಸಲುರಿಗಣ್ ಧೃತಚಾಪ ಹಸ್ತ ಶಾಕ್ವರಚಿಹ್ನಂ ವಿರಚಿಸೆ ಕೃಪಕೃತವರ್ಮರ್ಬೆರಸಾಗಳ್ ಮುಳಿದು ಬಂದನಶ್ವತ್ಥಾಮಂ (ಗದಾಯು. ೯-೨) ; ನೊಸಲಲ್ಲಿ ನಟ್ಟ ಶರಮಂ ಮಿಸುಗದೆ ನಾಂ ಕೀಳೆ ರಕ್ತಪ್ರಸರಂ ಮಸಗಿ ಕೆಂಪಾಗಿ ತೋಱಲ್ ನೊಸಲುರಿಗಣ್ಣಿಗೆದ ಶಿವನವೊಲ್ ಭಟನಿರ್ದಂ (ಬಾಧಪು. ೧೩-೮೨). **ನೊಸಲೊಳ್ ಬರೆದಕ್ಕರ** = ನೊಸಲಕ್ಕರ : ನೋವಱಿದಂಜುವುದೇಕೆ ನಿಂದರೇಂ ತಪ್ಪುದೊ ಪೇಱಮಯ್ಯ ನೊಸಲೊಳ್ ಬರೆದಕ್ಕರಮಾ ವಿಧಾತ್ರನಾ (ಪಂಪಭಾ. ೧೩-೧೯).

[ದೇ.॥ ತಮಿ. ಮಲ. ನುತಲ್ ; ತುಳು. ನೆಸಲು, ನಸುಡಿ ; ತೆಲು. ನೊಸಲು, ನುದುರು]

ನೊಸಲಕ್ಕರ (ನಾ). ಹಣೆಯ ಬರಹ ; ವಿಧಿಲಿಖಿತ : ಉರವಣಿಸಿ ತಮ್ಮನಟಿಗುಂ ಧುರದೊಳಿದೆಂದಂಜಿ ಹೊಗರ ನೆವದಿಂ ರಿಪುಭೂಪರ ನೊಸಲಕ್ಕರದಿರ್ಪುವು ನೆರೆದು ಶರಣ್ಪೊಕ್ಕಿಳಾಧಿಪನ ಕೂರಸಿಯೊಳ್ (ವರ್ಧಪು. ೬-೩೦) ; ಬಿಡು ಮಹಾಹವವೆನಗೆ ನೂಕದು ತೊಡೆಯದಿರು ನೊಸಲಕ್ಕರವ ನೀನೊಡೆಯ ಕಿಂಕರರಾಗಿಹೆವು ನಾವಿಂದು ಮೊದಲಾಗಿ (ಕುವ್ಯಾವಿ. ಓರಿಇ. ೬-೩೩); ಬಿದಿ ಬರೆದ ನೊಸಲಕ್ಕರವ ತೊಡೆವಧಟನಾವನೊ (ಸಾಳ್ವಭಾ. ೨೮-೩೩); ಇಂತಹ ಮಹಾಸ್ವಾಮಿಯವರಯ್ಯೂರ್ವರ ನೊಸಲಕ್ಕರದ ಸೃಷ್ಟಿಸ್ಥಿತಿಪ್ರಳಯಾಧಿಕಾರವನ್ನಾಳುವ ದೇಶದಕ್ಷರು ನಾವು (ಮಂತ್ರಶ. ೧೦-೧೮). [ನೊಸಲ್ + ಅಕ್ಕರ$_2$]

ನೊಸಲಿಕ್ಕು (ಕ್ರಿ). [ವೀಶೈ] ಹಣೆಗೆ ವಿಭೂತಿಯಿಟ್ಟು ಶುದ್ಧೀಕರಣದ ಸಂಸ್ಕಾರವನ್ನು ಮಾಡು : ಒಡೇರಮ್ಮನು ಬಂದು ಶವಕ್ಕೆ ನೊಸಲಿಕ್ಕಿದರು (ರೂಢಿ). [ನೊಸಲು (<ನೊಸಲ್) + ಇಕ್ಕು]

ನೊಸಲು 'ನೊಸಲ್' ನೋ.

ನೊಸಲೆಗಲ್ಲು (ನಾ). ಒಂದು ಬಗೆಯ ಕಲ್ಲು : ಮೂಡಲು ಹೂವಿನ ಹಳ್ಳಿಯ ತೆಂಕಲು ನೆಟ್ಟ ಸಾಲುಗಲ್ಲವೊಳಗಣ ನೊಸಲೆಗಲ್ಲು (ಎಕ. V, ಹಾಸನ. ೧೩೩-೬೯ ; 1406). 'ನೊಸೆಕಲ್' ಪರಾ.

[ನೊಸಲೆ? + ಕಲ್ಲು (<ಕಲ್$_3$)]

ನೊಸಲ್ಗಣ್ (ನಾ). ಹಣೆಯಲ್ಲಿರುವ ಕಣ್ಣು ; ಹಣೆಗಣ್ಣು : 'ನೊಸಲ್ಗಣ್ಣ' ಪರಾ. [ನೊಸಲ್+ಕಣ್]

ನೊಸಲ್ಗಣ್ಣ (ನಾ). ಹಣೆಯಲ್ಲಿ ಕಣ್ಣುಳ್ಳವನು; ಶಿವ: ಮುಖ್ಯವಾದ ಗೋಮಯವಾವುದೆಂಬುದನು ಬೆಸಸಿಳೆಯೊಳೆಂದು ಬಿನ್ನೈಸಿದನು ನಂಬಿಯಣ್ಣನು ನೊಸಲ್ಗಣ್ಣ ನೊಡನೆ(ಸೌಂದಪು. ೫-೭೪).[ನೊಸಲ್ಗಣ್ + -ಅ$_7$]

ನೊಸಲ್ಚಾರ್ಚು (ಕ್ರಿ). ಹಣೆಯನ್ನು ಚಾಚು ; ವಂದಿಸು ; ನಮಸ್ಕರಿಸು : ಅಲರ್ಗೋಲನತಿತವಕದಿಂದೆದ್ದುಯಡಿಗಡಿಗೆ ಬಲುಭಕ್ತಿರಸ ತುಳುಂಕುತ್ತೆ ಪೊಡಮಡುತೆದ್ದು ಸಲ್ಲೀಲೆಯಿಂದಂಘ್ರಿಪಲ್ಲವಗಳ್ಗೆ ನೊಸಲ್ಚಾರ್ಚಿ ತತ್ಪಾದರೇಣುಮುಮನೂ ವುತ್ತಮಾಂಗದಿ ತಳೆದು (ನವನೋ. ೫-೫). [ನೊಸಲ್ + ಸಾರ್ಚು]

ನೊಸಳು 'ನೊಸಲ್' ನೋ.

ನೊಸೆ 'ನೊದೆ' ನೋ.

ನೊಸೆಕಲ್ (ನಾ). ಒಂದು ಬಗೆಯ ಕಲ್ಲು : ಮುಗ್ಗುಡ್ಡೆಯ ನೊಸೆಕಲ್ಲೆಂಬ ಬಿಳಿಯ ಕಲ್ಲು (ಮೈಅರಿ. ೧೯೨೧, ೧೦-೧೭೯; 962). 'ನೊಸಲೆಗಲ್ಲು' ಪರಾ. [ನೊಸೆ ? + ಕಲ್$_3$]

ನೊಸೆಪಳ್ಳ (ನಾ). ಒಂದು ಹಳ್ಳದ ಹೆಸರು : ತೆಂಕಲು ನೊಸೆಪಳ್ಳ ಆಗ್ನೇಯಾಂದಿಶಿ ಗದಿಗನ ಮಲೆಯ ಪಡುವಣ ಭಾಗೆ ನಾಲೆ ಗೋಡಲಮ್ ನಡಣ ಭಾಗೆ (ಎಕ. XIV, ಏಳಂದೂ. ೧೭೦-೯ ; ಸು. 965 ?).

[ನೊಸೆ? + ಪಳ್ಳ]

ನೊಸೆಮಾಳ (ನಾ). ನೊದೆಹುಲ್ಲು ಬೆಳೆದಿರುವ ಪ್ರದೇಶ, — ಜಾಗ: ಇದರ ಪನಬವತ್ತಿಗಂಗ್ವಾಯರಗಂ ೨ ಯಲ್ಲೇ ಬಳೀ ನೊಸೆಮಾಳ ಬಸವೈನ ಕಟ್ಟಿಗೆ ಪ ಗಂ (ಎಕ. III, ತಿರುಮ. ೬೩-೪೮೬; 1748).

[ನೊಸೆ + ಮಾಳ$_3$ (= ಮಾಲ$_2$)]

ನೊಸೆಯಱೆ (ನಾ). = ನೊಸೆಕಲ್ : ಗ್ರಾಮಸ್ಯ ಸೀಮಾನ್ತರಮ್ ಪುರ್ವ್ವಸ್ಯದಿಶಿ ನೊಸೆಯಱೆ ಏ ಅನ್ತೆ ಬನ್ದು ಬೆಟಿಯ ಎಟಿಗಲ್ಲೆ ಆಗ್ನೇಯಾ ದಿಶಿ (ಮೈಅರಿ. ೧೯೨೦, ೯-೨೧ ; 267?). [ನೊಸೆ ? + ಅಱೆ$_4$]

ನೊಸೆಹುಲ್ಲು 'ನೊದೆಹುಲ್ಲು' ನೋ.

ನೊಳ 'ನೊಳವು' ನೋ.

ನೊಳಂಬ 'ನೊಟಂಬ' ನೋ.

ನೊಳಂಬರಸ (ನಾ). ಒಬ್ಬಾತನ ಹೆಸರು : ಸ್ವಸ್ತಿ ಸಮಧಿಗತ ಪಞ್ಚ ಮಹಾಶಬ್ದ ಶ್ರೀಪಲ್ಲವ × × × ನೊಳಮ್ಬರಸರು ಊರಜನಉಂ ಮಡುವ ಬರಸಗೆ × × × ಪಾರ್ವರ್ಗ್ಗೆಉಮ್ ಕೊಟ್ಟ ಮಣ್ಣು (ಮೈಅರಿ. ೧೯೨೯, ೩೬-೩ ; ?). [ನೊಳಂಬ(<ನೊಟಂಬ) + ಅರಸ$_1$]

ನೊಳಂಬವಾಡಿ 'ನೊಟಂಬವಾಡಿ' ನೋ.

ನೊಳಗ (ನಾ). ದನಕರುಗಳಿಗೆ ದ್ರವಪದಾರ್ಥಗಳನ್ನು ಕುಡಿಯಿಸಲು ಬಳಸುವ ಸಾಧನ; ಗೊಟ್ಟ : ನೊಳಗ (ನಾಟಯಿಂದ ಮಾಡಿದ ಬಳಲೆ)ದಲ್ಲಿ ಹಾಲು ಹಾಕಿ ಕರುವಿಗೆ ಕುಡಿಸಲೆತ್ನಿಸಿದ (ಸಂಸ್ಕಾಳ. ೧೦೨). [<ಸಂ. ನಾಲಕ]

ನೊಳಗಾಡು (ನಾ). ನೊಣಗಳಿಂದ ಕೂಡಿದ ಪ್ರದೇಶ (?) : ತಱವೊನ್, ಬಡನಡು, ನೊಳಗಾಡು, ಎಟ್ಟರದಿಟ್ಟ (ಶಬ್ದಾನು. ೩೩೨ ವ್ಯಾಖ್ಯಾ). [ನೊಳ(<ನೊಳವು)+ಕಾಡು$_2$]

ನೊಳಲೆ (ನಾ). ನೀರಿನಲ್ಲಿ ವಾಸಿಸುವ ಒಂದು ಬಗೆಯ ಹುಳು : 'ನಾಯ್ನೊಳಲೆ' ಪಠಾ. [?]

ನೊಳವು, ನೊಣ, ನೊಣವು, ನೊಳ (ನಾ). ಒಂದು ಬಗೆಯ ಹಾರುವ ಕೀಟ; ಮಕ್ಷಿಕ : "ನೊಳವು ಮಚ್ಚೆಂದಕ್ಕು" (ಕಬ್ಬಿಕ್ಕೆ. ೮೪); ತಾಂ ತೊನ್ನನಾಗಿ ಮುರುಂಟಿದ ಕೈಯುಂ ಕಾಲುಂ ಬೆರಸು ಮೂಗೊಳಗರ್ದುರಸಿಗೆ ಸುರಿಯೆ ನೊಳವುಗಳ್ ಮುಸುಱಿಕೊಂಡು ತಿನೆ (ವಡ್ಡಾರಾ. ೧೨೨-೨೩); ಸುಯೋಧನಂ . . . ಮನದೊಳಾದೇವದಿಂ ದೇವಕೀನಂದನನ ಮೇಲೆವಾಯ್ವುದುಂ ನಂಜಿನ ಮೇಲೆವಾಯ್ವ ನೊಳವಿನಂತುರುಳ್ತರೆ ಪಾಯ್ದು (ಪಂಪಭಾ. ೯-೫೯ ಪ); ನರವುಂ ನೆರವುಂ ದೇವರ ಬರವುಂ ತೆರವುಂ ನೆಗಟ್ತೆಯೆಟ್ಟರವುಂ ಸಂಚರಿಸುವ ನೊಳವುಂ ತಾಮರೆಬರ ಮತದಿಂದಂತ್ಯವರ್ಣಲೋಪಮನಾಳ್ಗುಂ (ಶಮದ. ೪೬). **ನೊಣ** : ಕಳೆದುಂಬುದು ಕೂಟೊಳಗಣ ನೊಣ[ಪಾಠಾಂ.ಳ]ವಂ (ಸಮಪ. ೬-೧೦); ವಿಷದ ಹುಟ್ಟಯೊಳೆಱಿಗಿ ನೊಣ ಜೀವಿಸುವುದೇ (ಕುಪ್ಯಾದ್ರೋ. ೬-೪೦); ಬೆಲ್ಲವೆ ನೀ ಮುದ್ದುವೆಂಗಳ ಮೃದುವಾಯ ಬೆಲ್ಲವಾಗಿರದೆ ಬಂದಿಲ್ಲಿ ಹೊಲ್ಲೆಹ ನೊಣನ ಮುತ್ತಿಸಿಕೊಳಬೇಡೆಂದು ಬೆಲ್ಲವನೊಡೆಯೆ ಗುದ್ದಿದನು (ಮೋಹತ. ೨೦-೨೪); ಗಂಧವನು ತೇವಲ್ಲಿ ಒಂದು ನೊಣವನು ಕಾಣೆ (ಸರ್ವಜ್ಞ. ೮೧೮); ನೊಣವು ಅತ್ಯಂತ ಅಸಹ್ಯಕರವಾದ ಹುಳು (ಗೃಹವಿ. ೧೮೮). **ನೊಣವು** : ಪಶುವಿನೊಳಲ್ಲಿರಲೇಂ ತಾನೆಂತೊ ತೊನಸೆಯೋ ನೊಣವುಗಳೋ (ಸಮಪ. ೯-೬೧); ಹೋಮಮಂ ಮಾಡುವ ಬ್ರಾಹ್ಮಣಂ ನೊಣವು ಬೆನ್ನನೂಱಾದೊಡೆ ಸೈರಿಸಲಾಱದೆ ಬೆನ್ನಂ ಪೊಯ್ದುಕೊಳ್ವುದುಂ (ಧರ್ಮಾಮೃ. ೧೧-೫೩); ಇನಿತು ಲಿಂಗಸದರ್ಥನಾಗಿಯು ಘನದರಿದ್ರತೆಯಾದುದಯ್ಯೋ ಮನೆಯೊಳಗೆ ನೋಡಲು ತವುಡು ನೊಣವಿಂಗೆಱಗಲಿಲ್ಲ (ಬಸಪು. ೨೩-೬). **ನೊಳ** : "ಮಚ್ಚೆನೆ ನೊಳಂ" (ಶಬ್ದಮಂ. ೪೫); ಜೇನ ನೊಳಂಗಳ್ ತುಪ್ಪವನಿರಿಸಿದೊಡೆ ಲೋಗರ್ ಕೊಂಡು ಪೋಪರ್ (ಪಂಚತಂ. ೭೨-೮); ಸದಗುಪ್ಪೆಯನುಪ್ಪಂ ತುಪ್ಪದೊಳಂ ಮೇಣ್ ಮೆಣಸು ನಾಗರಂ ನಂದ್ಯಾವರ್ತದ ಕುಸುಮಮೆಂಬಿವಂ ಪೂಸಿದಂದು ನೊಳ(ಣ)ನಿಱಿದ ನೋವನಿರದುಪಶಮಿಕುಂ (ಲೋಕೋಪ. ೧೦-೩೦); ವಿಬುಧಸಭೆಯೊಳ್ ತಾಮೇಂ ಗಣನೀಯರೆ ಕುಕವಿಗಳಾರ್ ಗಣಿಸಿದಪರ್ ಮುಸುಱಿ ಪರೆವ ನೊರಜಂ ನೊಳಮಂ (ಪುಷ್ಪಪು. ೧-೪೫).

ನೊಣಪ್ರತಿ = ಮೂಲದ ತದ್ವತ್ತಾದ ನಕಲು; ಮಕ್ಕೀಕಾ ಮಕ್ಕೀ. ನೊಣವಿನ ಚೂರ್ಣ = ಒಂದು ಬಗೆಯ ಔಷಧಿ : ನೊಣವಿನ ಚೂರ್ಣವಂ ಕರಿಯಗಸೆವೆಳನಾರಿನ ರಸದಿಂ ಕಲಸಿ ತನ್ನ ಯಿಂದ್ರಿಯ ಸಹಿತ ಸುಣ್ಣದೊಳಗಿಕ್ಕೆ ವಶ್ಯಂ (ಕಾಮಶಾ. ೨೬೨).

[ದೇ.॥ ತಮಿ. ನುಳಮ್ಬು, ನುಳ್ಳಲ್, ನೊಳ್ಳಲ್; ಮಲ. ನುಟಮ್ಬು; ಕೋಲಾ. ನುಲ್ಲೆ]

ನೊಳ್ಳಿ (ನಾ). ಶಾಸನ, ಹಸ್ತಪ್ರತಿಗಳಲ್ಲಿ ಉಪಯೋಗಿಸುವ ದ್ವಿತ್ವಾಕ್ಷರಸೂಚಕವಾದ ಚಿಹ್ನೆ; ಸಾಮಾನ್ಯವಾಗಿ ಬಳಸುವ ಸೊನ್ನೆಗಿಂತ ದಪ್ಪವಾದ ಸೊನ್ನೆ. [?]

ನೊಟಂಬ, ನೊಣಂಬ, ನೊಳಂಬ (ನಾ). ೧. ಒಂದು ರಾಜವಂಶದ ಹೆಸರು : ಪೋಳಲ್ಲೋರನೆಮ್ಬ ನೊಟಮ್ಬಮಹಾಸಾಮನ್ತನ್ ಈನಾ ××× ನಾಡಾಳುತ್ತ ××× ಟೂರ ಮೇಗೆ ಎಟ್ಟು ಕೋಟೆಯ ಕೊಳ್ವನ್ದು (ಎಕ. XII, ತಿಪಟೂ. ೪೭-೬; ಸು. 880). ೨. ನೊಳಂಬದೇಶದವನು : ಅಜವರ್ಮ್ಮ ಗಙ್ಗರ ಬೆಸದೆ . . . ನೊಟಮ್ಬಕೆ ಕಾದಿ ಸತ್ತೊಡೆ . . . ಅಜವರ್ಮ್ಮನ ಕಲ್ಲ ನೊಟಂಬರ್ ಸುಟ್ಟೊಡೆ ಇವ್ವೆರ್ಗೆ ಈ ಕಲ್ಲು ನಟ್ಟುದು (ಎಕ. XI, ಜಗಳೂ. ೧೯-೫; 907) ೩. ಒಬ್ಬಾತನ ಹೆಸರು : ಆಹವಮಲ್ಲ ನೊಟಂಬನ ದನ್ತಿಯ ಮುನ್ತ್ ××× ಬ್ಯೂಹಮಗುರ್ಬ್ಬಿಸಲ್ಕೆ (ಎಕ. XII, ತಿರಾ. ೨೬-೧; ಸು. 980 ?). **ನೊಣಂಬ** : ೩. ನೊಣಂಬನಾಳಿಮ್ ಮುನಿಱಿವ ಬಮ್ಮದೇವ ಚೋಳಮಹಾರಾಜರು ಗೋವಿಂದವಾಡಿಯ ರಾಜ್ಯಂಗೆಯ್ಯುತ್ತಮಿರೆ (ಎಕ. XII, ತಿರಾ. ೩೭-೧೩; ಸು.1040). **ನೊಳಂಬ** : ೩. ಮುಳಿದಪನೆನುತಂ ಕೊಂಕಣಮ್ ಸಂಕೆಯಿಂ ಗೂಡುಗೊಳ್ಳುತ್ತಿರ್ದ್ದಪುದೇಮ್ ಬಲ್ಲಿದನೋ ಚಕಿತವಿದ್ವಿಷ್ಟನೆಂದೀ ನೊಳಂಬಂ (ಮೈಆರಿ. ೧೯೨೯, ೬೫-೩೫; 1081).

ನೊಳಂಬವಟ್ಟ = ನೊಳಂಬರಾಜನು ಕೊಟ್ಟ ಒಂದು ಪ್ರಶಸ್ತಿ,— ಅಧಿಕಾರ (?) : ಒಸೆದು ಶಿವಲಿಂಗಮಂ ಪೂಜಿಸುವ ಶಿವಬ್ರತಿಗೆ ಭಕ್ತಿಯಿಂ ಮಾಳ್ಪ ಜಗಕ್ಕೆಸೆಯೆ ಶಿವಾಲಯಮಂ ಮಾಡಿಸುವಂಗೆ ನೊಳಂಬವಟ್ಟಮೆಂಬುದು ಬರಿದೇ (ಸೌಇಇ. XX, ೪೯-೬೭; 1076). ನೊಟಂಬಕುಳಾಂತಕ, ನೊಣಂಬ ಕುಳಾಂತಕ = ನೊಳಂಬವಂಶಕ್ಕೆ ಮೃತ್ಯುಸ್ವರೂಪನಾದವನು; ಒಂದು ಬಿರುದು : ಶ್ರೀಮನ್ನೊಟಂಬಕುಳಾನ್ತಕದೇವಂ ಪಲವೆಡೆಗಳೊಳಂ ಬಸದಿಗಳುಂ ಮಾನಸ್ತಂಭಙ್ಗಳುವಂ ಮಾಡಿಸಿದಂ (ಎಕ. II, ೫೯-೧೦೭; 974); ಗಂಗಕುಳಾಚಳಶಿಖರಶೇಖರರುಂ ಗಂಗಚೂಡಾಮಣಿಯುಂ ಜಗದೇಕವೀರರುಂ ಧರ್ಮಾನುರಾಗನುಮೆನಿಸಿದ ನೊಣಂ[ಪಾಠಾಂ.ಳೊಂ]ಬಕುಲಾಂ[ಪಾಠಾಂ.ಳಾಂ]ತಕದೇವನೆ ತನಗೆ ಪರಮಸ್ವಾಮಿಯಾಗೆ (ಚಾವುಂಪು. ೪). ನೊಟಂಬದೊಡ್ಡ = ನೊಳಂಬರಾಜನು ಕೊಟ್ಟ ಒಂದು ಬಿರುದು : ಶ್ರೀವೀರ ನೊ(ಟ)ಮ್ಬಾಧಿರಾಜರಾಜಪರಮೇಶ್ವರ ಬೆದ್ದುಗೊನ್ದೆಯ ಕೆಱೆಯ ಕಟ್ಟಿಪ್ಪನ್ದು ಅಜ್ಜಪರ್ವರ ಭಿದಿಯೆಱೆಯರ ನೊಟಮ್ಬದೊಡ್ಡನೆನ್ದು ಕಡಗಮಿಟ್ಟರ್ (ಸೌಇಇ.IX-1, ೧೭-೯; 9ನೆಯ ಶತ). ನೊಟಂಬಿದಡಿಗ = ನೊಳಂಬರಲ್ಲಿ ಪರಾಕ್ರಮಿಯಾದವನು; ಒಂದು ಬಿರುದು : ಮಹಾರಾಜರುಂ ಬಾಣರಸರುಂ ಸೋರೆಮಟೆ ಕೋಟ್ಟೆಯಿಟ್ಟಲ್ಲಿ ನೊಟಂಬಿದಡಿಗ ರಾಡಮಲ್ಲಂ ಮಯಿನ್ದಡಿಗುಂಡಿಗೆಗುಳ್ಳ ಎನೆಬರು ಸಮಸ್ತಬಲಂ ಬೆಱಸಿ ಬಿಟ್ಟೊಡೆ (ಎಇ. XXIV, ೨೬-೬; ಸು. 885). [?]

ನೊಟಂಬಗಾಮುಂಡ, ನೊಟಂಬಗಾವುಂಡ (ನಾ). ಒಬ್ಬಾತನ ಹೆಸರು : ತ್ರಿಭುವನಕರ್ತ್ತರ ಭಟಾರರ್ ಆ ವನ್ಯದ ಸ್ಥಾನಮನಾಳುತ್ತಿರೆ ಮಸೆಕಲಿ ××× ಪ್ಪದೇವರ ××× ಜಿಗನ ಮಗಂ ನೊಟಂಬಗಾಮುಣ್ಡ ಬಲ್ಲದ ಊರಟುವಿನೊಳ್ ಕಾದಿ ಸತ್ತು ಸ್ವರ್ಗಸ್ಥನಾದಂ (ಎಕ. X, ಮುಳಬಾ. ೯೧-೬; 1007). **ನೊಟಂಬಗಾವುಂಡ** : ಪೆಂಞ್ಜಱುವಿನ ನೊಟಮ್ಬಗಾವುಣ್ಡನುಂ ಕಲಿ ನೊಟಮ್ಬಗಾವುಣ್ಡನುಂ ಸೀಯವುರದ ಮಾಗಿಗಾವುಣ್ಡನುಂ . . . ಇನ್ತಿವರ್ನಡದರ್ ಸರ್ವ್ವಪಾದಪರಿಹಾರ ಪಡೆದರ್ ಚಿಲ್ಲುಕಭಟಾರರ್ (ಎಕ. XII, ತಿರಾ. ೨೮-೪೭; 943); ಕಿರ್ತ್ತಿಗಾ[ಮು]ಣ್ಡನ ಮಗಂಗೆ ಪಟ್ಟವಂ ಕಟ್ಟ ಪುಲಿನಾಟ್ಟಕೆಱೆಯಂ ಬೆಳಗಟೂರಂ ನೊಟಂಬಗಾವುಣ್ಡರೆ ಕೊಡಗೆಯ ಗೆಯ್ದಮ್ (ಸೌಇಇ. IX-1, ೩೯-೧೩; ?). [ನೊಟಂಬ+ಗಾಮುಂಡ]

ನೊಟಂಬಗಾವುಂಡ 'ನೊಟಂಬಗಾಮುಂಡ' ನೋ.

ನೊಟಂಬವಾಡಿ, ನೊಣಂಬವಾಡಿ, ನೊಳಂಬವಾಡಿ (ನಾ). ಒಂದು ನಾಡಿನ ಹೆಸರು; ℙ ಈಗಿನ ಬಳ್ಳಾರಿ, ತುಮಕೂರು, ಚಿತ್ರದುರ್ಗ ಜಿಲ್ಲೆಗಳ ಪ್ರದೇಶಗಳನ್ನೊಳಗೊಂಡಿದ್ದ ಪ್ರದೇಶ: ಶ್ರೀಮನ್ನುದ ಯಾದಿತ್ಯದೇವ ವೀರರಾಜೇಂದ್ರ ವೀರನೊಟಂಬ ಪಲ್ಲವ ಪೆರ್ಮ್ಮಾನಡಿ ನೊಟಂಬವಾಡಿಮೂವತ್ತಿರ್ಚ್ಛಾಸಿರವಂ ದುಷ್ಟನಿಗ್ರಹ ವಿಶಿಷ್ಟಪ್ರತಿಪಾಲನಂ ಗೆಯ್ದು (ಎಕ. XII, ಶಿರಾ. ೯-೬; 1072). **ನೊಣಂಬವಾಡಿ:** ಶ್ರೀಮತ್ತ್ರಿಭುವನಮಲ್ಲ ತಲೆಕಾಡು ಕೊಂಗು ನಂಗಲಿ ನೊಣಂಬವಾಡಿ ಬನವಸೆ ಹಾನುಂಗಲ್ಲುಗೊಂಡ ಭುಜಬಳವೀರಗಂಗಪ್ರತಾಪಹೊಯ್ಸಳ ಬಿಟ್ಟದೇವರು . . . ರಾಜ್ಯಂಗೆಯ್ಯುತ್ತಮಿರೆ (ಎಕ. XII, ತಿಪಟೂ. ೫೮-೩೦; ಸು. 1120). **ನೊಳಂಬವಾಡಿ:** ಶ್ರೀಮಜ್ಜಗದೇಕ ಮಲ್ಲದೇವರ ಪಾದಪ[ದ್ಮೋಪ]ಜೀವಿಗಳಪ್ಪ ಘಟಿಯಂಕಕಾಱ ನೊಳಂಬ (ಭ)ರಸ ನೊಳಂಬವಾಡಿ[ಯು] ಕರಿವಿರಿಮೂವತ್ತನಾಳುತ್ತಮಿರೆ (ಸೌಇಇ. XI-1, ೬೧-೪೬; ಸು. 1024); ಶ್ರೀವಿಷ್ಣುವರ್ದ್ಧನಮಹಾರಾಜ ವಿಜಯಾದಿತ್ಯದೇವರ್ ನೊಳಂಬವಾಡಿ ಮೂವತ್ತಿರ್ಚ್ಛಾಸಿರಮಂ ಸುಖ ಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರೆ (ಎಕ. XI, ದಾವಣ. ೧೧-೧೩; 1066).

ನೊಣಂಬವಾಡಿಗೊಂಡ = ನೊಳಂಬವಾಡಿಯನ್ನು ಜಯಿಸಿದವನು; ಒಂದು ಬಿರುದು: ಗಂಗವಾಡಿ ನೊಣಂಬವಾಡಿಗೊಂಡ . . . ನಿಸ್ಸಂಕಪ್ರತಾಪ ವೀರಬಲಾಳದೇವರು ದೋರಸಮುದ್ರದ ವೀಡಿನೊಳು ನಿಲೆ (ಎಕ. III (R), ನಂಜನ. ೧೫೬-೨; 1198).

[ನೊಟಂಬ+ಪಾಡಿ$_2$]

ನೊಟಂಬಸೆಟ್ಟಿ (ನಾ). ಒಬ್ಬಾತನ ಹೆಸರು: ಶ್ರೀಮತ್ ನನ್ನಿ ನೊಟಂಬಂ×××ಟ್ಟಂಗಟ್ಟಿ ಪ್ರಿಥ್ವೀರಾಜ್ಯಂಗೆಯ್ಯುತ್ತಿರೆ ಸಕಪಾದಿಗೆಟವ ಪೊಗಟ್ಮಲ್ಲೆನಂಬೇ ಮಗಂ ನೊಟಂಬಸೆಟ್ಟಿ ಉತ್ತನೂರ ಮಹಾಜನಂ ಪನ್ನಿರ್ಬ್ಬರ್ಗ್ಗಂ ನೂಱುಗದ್ಯಾಣಂ ಪೊನ್ನ ಕೊಟ್ಟನ್ (ಎಕ. X, ಮುಳಬಾ. ೧೨೨-೬; 969); ಅನ್ದಾದಿಯರ ನೊಟಂಬಸೆಟ್ಟಿಯಮಗಂ ನಿರುಗುನ್ದಸೆಟ್ಟಿಯುಂ ಮಣಿಯಬ್ಬೆಯುಂ ಇವರಿಬ್ಬರು ಕಾರಪಕರಾಗಿ ಗೆಯ್ಸಿದರ್ (ಎಕ. IX, ಹೊಸಕೋ. ೧೦-೧೬; 1023).

[ನೊಟಂಬ+ಸೆಟ್ಟಿ]

ನೊಟಂಬಳ್ಗೆ (ನಾ). ಒಂದು ನಾಡಿನ ಹೆಸರು: ಶ್ರೀಪ್ರಿಥಿವೀವಲ್ಲಭ ಪರಮೇಶ್ವರ ಪಲ್ಲವದಿಯರನ್ನೊಟಂಬಳ್ಗೆ ಸಾಸಿರಮುನ್ನಿರ್ಗ್ಗುನ್ದನಾಡು ಮೂನೂಱುಮನಾಳೆ (ಎಕ. XI, ಚಳ್ಳಕೆ. ೩೩-೩೬; ಸು. 815). 'ನೊಟಂಬೆ' ಪರಾ. [<ನೊಟಂಬ]

ನೊಟಂಬಾಧಿರಾಜ (ನಾ). ನೊಳಂಬರ ದೊರೆ: ಎಱೆಯಂಗಪ್ಪನ ಮಗಂ ಮಾಚಿಗಂ ಗುತ್ತಿಯ ಗಂಗನ ಬೆಸದೊಳ್ತುಟುನ್ದವೊಟಲ ಕಾಳೆಗದೊಳ್ನೊಟಂಬಾಧಿರಾಜ ರಾಜರೊಳ್ಕಾದಿ ಸತ್ತಂ (ಎಕ. III (R), ಹೆಗ್ಗಡ. ೨೬-೧೩; ಸು. 9ನೆಯ ಶತ); ಸ್ವಸ್ತಿಶ್ರೀಮದಾಹವಮಲ್ಲ ನೊಟಂಬಾಧಿರಾಜ ಪೃಥುವೀರಾಜ್ಯಂಗೆಯ್ಯುತ್ತಿರೆ (ಎಕ. XII, ಶಿರಾ. ೨೯-೨; ಸು. 980 ?). [ನೊಟಂಬ+ಅಧಿರಾಜ]

ನೊಟಂಬೆ (ನಾ). ಒಂದು ಊರಿನ ಹೆಸರು: ಕಿಱುವುಸೂರ ಪೆರ್ಗ್ಗಲಿಯರ ಬಿಜಯಿತಗಾವುಣ್ಡನ ಮಗಂ ಅಮ್ಮಡಿಗಾವುಣ್ಡಂ ನೊಟಂಬೆಯ ಗ್ವಾರ್ಮ್ಮಣ್ಡನ ಭಾಗದ ದಸ್ಸಿವಭಾಗಂಗೊಣ್ಡು ಕೆಱೆಯ ಕಟ್ಟಿಸಿದಂ (ಮೈಶಿಂ. ೧೯೩೧, ೪೩-೬; 993). 'ನೊಟಂಬಳ್ಗೆ' ಪರಾ.

[<ನೊಟಂಬ]

ನೊಟಮ್ಮ (ನಾ). ಒಬ್ಬಾತನ ಹೆಸರು: ಶ್ರೀಮತ್ ಪೆರ್ಮ್ಮನಡಿಗಳ ಪಟ್ಟಂಗಟ್ಟಿದ ಇಪ್ಪತ್ತೆ ರಡನೆ ವರಿಷ××× ರಿಳ್ಳಗರ ಕೋಟೆಯೊಳ್ ನೊಟಮ್ಮನೊಳ್ ಕಾದಿ ರಾಚೆಯ ಗಜ್ಜ ಸತ್ತೊಡೆ (ಎಕ. III, ನಂಜನ. ೧೩೯-೩: 915 ?). [<ನೊಟಂಬ+ಅಮ್ಮ$_1$]

ನೋ, ನೋಯು (ಕ್ರಿ). ನೊಂದ (ಭೂತಕೃ), ನೊಂದು$_2$ (ಭೂತನ್ಯೂ). ೧. ಬಾಧೆಪಡು; ದುಃಖಪಡು; ಯಾತನೆಪಡು: "ನೋ—ವ್ಯಥನೇ" (ಶಮಧಾ); ಮಿನ್ನಳಂತೆ ಗಾಳದೊಳ್ ತೊಡರ್ದಿರ್ದ್ ಪಾದರಿಗರಿಂ ಮಹಿಷಾಸುರನಂತೆ ಸೂಲದೊಳ್ ನೊಂದು ನರಳ್ವ ಕಳ್ಳರಿಂ (ಕಾವ್ಯಸಾ. ೫೨೯ ಶೂದ್ರಕ); ಯುದ್ಧದಾಳ್ಗೆ ರೋದನ ಮೆನಗಾವುದಯ್ಯನೆನಗೇಕೆಯೊ ಶೋಕಿಪನೆಂದು ಧರ್ಮನಂದನ ನರನಂದನಂ ನಿನಗೆ ಸಗ್ಗದೊಳೇನಭಿಮನ್ಯು ನೋಯನೇ (ಪಂಪಭಾ. ೧೧-೧೦೭); ಅಲ್ಲಿಯೆ ನೊಂದು ಬಸವಟಿದರ್ದ್ ಬಲಿಭುಗ್ಬಲಪ್ರಧಾನರಂ ಕಂಡು ಬೆಱಗಾಗಿರ್ದ್ ವಾಯಸಾಧೀಶ್ವರನಲ್ಲಿಗೆ ಕೆಲವು ವಾಯಸಂಗಳ್ ಬಿಱುತೋಡಿ . . . ಬಿನ್ನಪಂಗೆಯ್ಯೆ (ಪಂಚತಂ. ೨೦೩-೧೫); ಏಕೆ ಧರ್ಮಜ ನೋವೆ ನೀನವಿವೇಕಿಯೆ ಬೇಡಿನ್ನು ಚಿತ್ತವ್ಯಾಕುಲವ ಬಿಡು ಕೇಳು ನಿನಗೀ ಕೃಷ್ಣನೊಲಿದಿಹನು (ತಿಮ್ಮಶಾಂ. ೧-೪೦). ೨. ಗಾಯಗೊಳ್ಳು; ಘಾಸಿಹೊಂದು: ಎಂದುಂ ಪೋಗೆಂದನೆ ಮಾಣೆಂದನೆ ಪೆಱತೊಂದನೀವೆ ನೆಂದನೆ ನೊಂದಃ ಎಂದನೆ ಸೆರಗಿಲ್ಲದೆ ಪಿಡಿಯೆಂದನಿದೇಂ ಕಲಿಯೊ ಚಾಗಿಯೋ ರವಿತನಯಂ (ಪಂಪಭಾ. ೧-೧೦೨); ತೊಲಗದೆ ನಿಂದ ವೀರನಂ ತಲೆಗಡಿದುರುಳ್ಚುವ ಮೂದಲಿಪ ವೀರನಂ ತೌದಲೆಗಾಣಿಪ ಮಾಯದ ವೀರನಂ ನೋಯಲಿಱುದು ಕೆಡಪುವ . . . ಪಲಬಿರುದು ಗಳ್ನೆಗಳ್ತೆವಡೆಯೆ (ರಾಜಶೇ. ೬-೧೧ ವ). ೩. ಕಷ್ಟಪಡು; ಶ್ರಮಪಡು; ದಣಿ: ಮಾಯಮನೆ ಬೀಸಿ ಪೆಱರನುಪಾಯದೆ ಶಕ್ತಿಕ್ಕಿ ದೇವ ಕಾರ್ಯದೊಳಿನಿಸುಂ ನೋಯದೆ ಸುಖಿಯಿಪ ಸವಣರುಪಾಯಮನಿಂ ನಿನ್ನೊಳಣ್ಣ ಭಾವಿಸಿ ನೋಡಾ (ಧರ್ಮಾಮೃ. ೧-೧೧೨). **ನೋಯು:** ೧. ಚಂದನವ ಕಡಿದು ಕೊಱೆದು ತೇದೊಡೆ ನೊಂದೆನೆಂದು ಕಂಪ ಬಿಟ್ಟತ್ತೆ (ಮಹಾದೇ. ಬ. ೨೮-೫೮). ೨. ಎಡದ ಕೈಯಲಿ ನಿಗಳವನಿಕ್ಕಿ ಬಲದ ಕೈಯ ಕಡಿದುಕೊಂಡಡೆ ನೋಯದಿಪ್ಪುದೆ (ಬಸವ. ೪೦೫); ನೋಯಲೊಱಲುವ ಶರಭ ಸಿಂಹ ಲುಲಾಯ ವೃಕ ಶಾರ್ದೂಲ ಶಶ ಗೋಮಾಯು ಮೊದಲಾದಖಿಳಮೃಗರವ ತುಂಬಿತಂಬರವ (ಕುಮ್ಮಾಅ. ೧೩-೨೮); ಬೋಳನ ಆಲೋಚನೆಯ ಆಕಾಶದ ಬಣ್ಣವು ಬದಲುತ್ತಾ ಇದ್ದಂತೆ ನೋಯುತ್ತಾ ತನ್ನ ಮನೆಗೆ ನಡೆದನು (ಕಾಲೂರ. ೧೨ ಕಥಾಸಾರ).

ನೊಂದ ಹಾವು = ಕೆಣಕಿದ ಹಾವು; ಪೆಟ್ಟು ತಿಂದ ಹಾವು: ಕರಿಯ ಸೊಗಡಿನ ಮೃಗಪತಿಗೆ ಮೈಹಱಿದ ಹಂದಿಗೆ ನೊಂದ ಹಾವಿಂಗರಸ ಮೈಚಾಚಿದೆಯಲಾ ನೀನೆಂದನಾ ಶಕುನಿ (ಕುಮ್ಮಾಸ. ೧೬-೪). **ನೊಂದುಕೊಳ್ಳು** = ದುಃಖಪಡು; ಸಂಕಟಪಡು: ನನ್ನ ದುಡ್ಡಿನ ದರ್ಪ ನನ್ನ ದವಡೆಯನ್ನೇ ಮುರಿಯಿತು ಎಂದು ಬಹುವಾಗಿ ನೊಂದುಕೊಳ್ಳುತ್ತಿದ್ದರು (ಪದ್ಮಸ. ೨೦೪); ವಿಚಾರಪರರು . . . ಬೇರೆ ಅರ್ಥವಿವರಣೆಯನ್ನು ಕಾಣದೆ ಬಹುವಾಗಿ ನೊಂದುಕೊಳ್ಳುತ್ತಲೂ ಇದ್ದರು (ಜಗದಾ. ೪೫). **ನೋಯೆ ನುಡಿ** = ನೋವಾಗುವಂತೆ ಮಾತನಾಡು; ಮರ್ಮಭೇದಿಯಾಗಿ ಮಾತನಾಡು: ಆಮ್ಮಾತಱಿಯದೆ ಮುಳಿದುಂ ನಿಮ್ಮಡಿಯಂ ನೋಯೆ ನುಡಿದೆನುಱದೇಳಿಸಲೇನೆಮ್ಮಳವೆ ಮಱೆವುದಾ ಮನದುಮ್ಮಚ್ಚರಮಜ್ಜ ನಿಮ್ಮನೆರೆಯಲೆ ಬಂದೆಂ (ಪಂಪಭಾ. ೧೨-೫೪); ತನ್ನ ನೋಯೆ ನುಡಿದ ನಿಜಾಗ್ರಜನ ನುಡಿಗೆ ಮನದೊಳೇವೈಸಿಯುಮೇ ವೈಸದೆ ವಿನಯಮನೆ ಮುಂದಿಟ್ಟು ವಿನಯವಿಭೂಷಣನಿಂತೆಂದಂ (ಪಂಪಭಾ. ೧೨-೧೩೦ ವ).

[ದೇ.॥ ತಮಿ. ನೋ, ನೋಯ್; ಮಲ. ನೋ, ನೋವು, ನೋವಿ; ತುಳು. ನೋಪು, ನೋಪಿ, ನೋಯಿಪಿ; ಕೊಡ. ನೊ; ತೆಲು. ನೋಯು]

△ **ನೋಂಟ** 'ನೋಟ' ನೋ.

ನೋಂತ 'ನೋನ್' ಪರಾ.

ನೋಂತು 'ನೋನ್' ಪರಾ.

ನೋಂದ, ನೋಂದು (ನಾ). ಅಧಿಕೃತವಾದ ದಾಖಲು; ರಿಜಿಸ್ಟರು : ೬೦೦ಕ್ಕೆ ಒಪ್ಪಿ ಆ ಪ್ರಕಾರ ಕರಾರುಪತ್ರ ನೋಂದ ಕೂಡಾ ಆಗಿದೆ (ದಾಸಹು. ೬೫); ರಶೀದಿಯಲ್ಲಿ ಬರಿದ ತಪಶೀಲದ ಪ್ರಕಾರ ಬಿಲ್ಲ ಬಂದ ಕೂಡಲೆ ನೋಂದ ತಕ್ಕೊಳ್ಳಬೇಕಾಗುತ್ತದೆ (ಮುಂಬಪ್ಯಾ. ೯೧). **ನೋಂದು :** 'ನೋಂದಿಸು' ಪರಾ.

ನೋಂದಾಗು = ಅಧಿಕೃತವಾಗಿ ದಾಖಲಾಗು; ರಿಜಿಸ್ಟರು ಆಗು : ಅವನ ಹೆಸರಿಲೆ ಈ ಗುರ್ತು ನೋಂದಾದದ್ದನ್ನು ನಾನು ಕಣ್ಮುಟ್ಟ ನೋಡಿ ಬಂದಿದ್ದೇನೆ (ಬಂಗಾಹೆ. ೪೮). [←ಮರಾ. ನೋಂದ]

ನೋಂದಣಿ, ನೊಂದಣಿ (ನಾ). ದಾಖಲು ಮಾಡುವಿಕೆ; ರಿಜಿಸ್ಟರು ಮಾಡುವಿಕೆ : ಪತ್ರಗಳ ನೋಂದಣಿಯ (ರಿಜಿಸ್ಟ್ರೇಷನ್) ಬಗ್ಗೆಯೂ ಒಂದು ಸಾರ್ವತ್ರಿಕ ನಿಯಮವೇರ್ಪಟ್ಟಿತು (ಕವಿಕೋ. I, ೬೪). **ನೊಂದಣಿ :** ೧೧ ತಾಲೂಕುಗಳಲ್ಲಿ ಪೊಬ್ಬೊಬ್ಬ ಸಬರಜಿಷ್ಟ್ರಾರನೆಂಬ ನೊಂದಣೀಕಾರಕೂನನಿರುತ್ತಾನೆ (ಕಭಾಗೆ. ೩೮೦); ಸರಕಾರದವರು ಛಾಪೆಕಾಗದ ನೊಂದಣಿ ಮುಂತಾದ ಕಾಯದೆಗಳನ್ನು ಮಾಡಿದರು (ಮುಂಬಯಿ. ೬-೧೦೧); ಇದರಂತೆ ನಾನು ಕರಾರಪತ್ರವನ್ನು ಬರೆದು ನೊಂದಣಿ ಮಾಡಿಸಿ ಕೊಡುತ್ತೇನೆ (ಮೋಹಿನೀ. ೮೫).

ನೋಂದಣಿ ಮಾಡು = ಅಧಿಕೃತವಾಗಿ ದಾಖಲು ಮಾಡು; ರಿಜಿಸ್ಟರು ಮಾಡು : "ರಿಜಿಸ್ಟರು ಮಾಡು; ನೋಂದಣಿ ಮಾಡು" (Register. ಪತ್ರಿನಿ. ೬೮); ಕಾಗದ ನೋಂದಣಿ ಮಾಡುವದನ್ನು ಮಾಡಿ ಕೊಡಲಿಕ್ಕೆ ಬೇಕೇ ಬೇಕು. (ಅಶೋಕ. ೩೬).

[←ಮರಾ. ನೋಂದಣೀ]

ನೋಂದಣಿಕಚೇರಿ (ನಾ). ದಾಖಲು ಮಾಡಿಸುವ ಕಾರ್ಯಾಲಯ; ರಿಜಿಸ್ಟರು ಮಾಡಿಸುವ ಕಚೇರಿ; ಸಬ್‌ರಿಜಿಸ್ಟ್ರಾರು ಕಚೇರಿ : ಸಬ್‌ರಿಜಿಸ್ಟರ ಅಥವಾ ನೋಂದಣಿಕಚೇರಿ (ಲಂಚಪ್ರ. ೧೧); ನೋಂದಣೀಕಚೇರಿ ಆಗತದಂತಲ್ಲೋ ಸಾವಕಾರ ಈ ಊರಿಗೆ (ಬೆಳಭಾ. ೯೭). [ನೋಂದಣಿ + ಕಚೇರಿ]

ನೋಂದಣಿವಿವಾಹ (ನಾ). ಸಬ್‌ರಿಜಿಸ್ಟ್ರಾರು ಕಚೇರಿಯಲ್ಲಿ ಅಧಿಕೃತವಾಗಿ ದಾಖಲೆ ಮಾಡಿ ಆಗುವ ಮದುವೆ; ದಾಖಲೆ ಮದುವೆ; ರಿಜಿಸ್ಟರ್ ಮದುವೆ : ನೀವೊಂದು ಕೆಲಸ ಮಾಡಿರಿ, ನೋಂದಣಿವಿವಾಹ ಮಾಡಿಕೊಳ್ಳಿರಿ ಮೊದಲು, ಆಮೇಲೆ ನಾನು ಬಂದು ಶಾಸ್ತ್ರೋಕ್ತವಾಗಿ ಮದುವೆ ಸಾಂಗ ಮಾಡುತ್ತೇನೆ (ಎರಸೆ. ೭೫).

[ನೋಂದಣಿ + ವಿವಾಹ]

ನೋಂದಾಯಿಸು, ನೊಂದಾಯಿಸು (ಕ್ರಿ). ಅಧಿಕೃತವಾಗಿ ದಾಖಲು ಮಾಡು; ನೋಂದಣಿ ಮಾಡು : ನೋಂದಾಯಿಸಲಾದ ಕ್ರಿಯಾಶೀಲಸದಸ್ಯರ ಸಮಿತಿಯು ಈ ಗೊತ್ತುವಳಿಯನ್ನು ನಿರ್ಣಯಿಸಿತು (ರೂಢಿ). **ನೊಂದಾಯಿಸು :** ತಮ್ಮ ಪೀಠಕ್ಕೆ ಇವರೇ ಉತ್ತರಾಧಿಕಾರಕ್ಕೆ ಯೋಗ್ಯರೆಂದೂ, ಮುಂದೆ ಇವರಿಗೇ ಮಾಡತಕ್ಕದೆಂದೂ ವಿಲ್ಲು ದಸ್ತವೇಜನ್ನು ಬರೆದು ನೊಂದಾಯಿಸಿ . . . ಶಿವಸಾಯುಜ್ಯ ಹೊಂದಿದರು (ಗುರುದ. ೪೬); ಗ್ರಂಥಪರಿಗ್ರಹಣ ರಜಿಸ್ಟರಿನಲ್ಲಿ (Accession Register) ನೊಂದಾಯಿಸಿ ಆ ಗ್ರಂಥದ ಪರಿಗ್ರಹಣ ಸಮಂಕವನ್ನು . . . ಬರೆಯಲಾಗುವದು (ಗ್ರಂಥಾಲ. ೧೫); ಈ ಗುರ್ತು ಫಪ್ ಬ್ರೇಬರನ ಹೆಸರಿನಲ್ಲಿ ನೊಂದಾಯಿಸಲ್ಪಟ್ಟಿದೆ (ಬಂಗಾಹೆ. ೪೭).

[ನೋಂದಾವಣೆ$_0$ + -ಇಸು$_3$]

ನೋಂದಿಸು (ಕ್ರಿ). = ನೋಂದಾಯಿಸು : ಮರುದಿನ ಪ್ರೇಮಶಂಕರರಿಗೆ ಒಂದು ನೋಂದಿಸಿದ ಪಾಕೀಟು ಬಂದಿತು (ಪ್ರೇಮಾಶ್ರ. ೧೧೫).

[ನೋಂದು (<ನೋಂದ) + -ಇಸು$_3$]

ನೋಂದು 'ನೋಂದ' ನೋ.

ನೋಂಪ 'ನೋನ್' ಪರಾ.

ನೋಂಪಿ, ನೋಹಿ (ನಾ). ವ್ರತ; ನಿಯಮ : ನೆಱೆದಾದ ವ್ರತಶೀಲ ನೋನ್ಪಿಗುಣದಿಂ ಸ್ವಾಧ್ಯಾಯಸಮ್ಪತ್ತಿನಿಮ್ ಕಱೆ ಇಲ್ಲಲ್ತಪ ಧರ್ಮ್ಮದಾಸಸಿಮತಿಶ್ರೀಗನ್ತಿಯರ್ವ್ವನ್ನು (ಎಕ. II, ೭೬-೧; ಸು. 700); ಕ್ಷೀರ ಕುಮಾರನೆಂಬೊನಾತಂ . . . ಬ್ರಹ್ಮಚರ್ಯಂ ಮೊದಲಾಗೊಡೆಯ ಬ್ರತಂಗಳಂ ಪ್ರತಿಪಾಳಿಸಿ ಆಚಾಮ್ಲವರ್ಧನಮೆಂಬ ನೋಂಪಿಯಂ ಪನ್ನೆರಡು ವರ್ಷಂಬರಂ ನೋಂತು ಸಮಾಧಿಮರಣದಿಂದಂ ಮುಡಿಪೆ (ಪಡ್ಡಾರಾ. ೬೬-೧೭); ಒರ್ವನಗಲ್ದ ತನ್ನ ಮನೋವಲ್ಲಭೆಯಂ ನೆನೆದು . . . ಇನಿಯಳಂ ಪತ್ತಿರ್ಪ ಸೈಪೇಕೆ ಸಂಗಳಿಕುಂ ಮೌನದೆ ಮುನ್ನ ಮಾನವರ ನೋಂತಾ ನೋಂಪಿಯಂ ನೋಂತೆನೇ ಎಂದು ಪಂಬಲಿಸುತ್ತಿರ್ದಂ (ಅದಿಪು. ೧೨-೩೯); ಧಿಗಿಲನೆದ್ದಳು ಕುಸುಮಾಜಿ ಕೈಮುಗಿದಿಂದು ಹಗಲೊಂದು ನೋಂಪಿಯುಂಟಿನಗೆ ಸುಗತನಿವಾಸಕೆ ಪೋಪೆನೆಂದಳು (ಭರಚ. ೬-೧೧); ಅಕ್ಕನವರು . . . ನನ್ನನ್ನು ನೋಡಿ, 'ಮಾಚಿ, ನಿನ್ನ ಎಷ್ಟು ತಪಸ್ಸಿನ ಫಲವೇ ಇದು! ಯಾವ ನೋಂಪಿಯ ಫಲವೆ?' ಎಂದು ಕೇಳಿದರು (ಶಾಂತಲಾ. ೮). **ನೋಹಿ :** ಭಾದ್ರಪದಶುದ್ಧ ಚತುರ್ದ್ದಶಿ ಅನಂತನ ನೋಹಿ ಕಲಶಪ್ರಭಾವನೆ ಮಹಾಆರಾಧನೆ ಮುಂತಾದ್ದಕ್ಕೆ . . . ಚತುಸ್ಸೀಮೆ ವಿವರ (ಎಕ. XI, ಹೊಳಲ್ಕೆ. ೧-೨೦; 1154); ಈ ವಿಧಿಯೆ ಪಾಂಡವರಿಗಕಟಾ ಸಾವು ಸೇರದು ತನಗೆ ತಾ ಮುನ್ನಾವ ನೋಹಿಯನಳಿದೆನೋ ಭವಭವಸಹಸ್ರದಲಿ . . . ಎನುತ ಮಿಗೆ ಮಱುಗಿದನು ಧೃತರಾಷ್ಟ್ರ (ಕುಪ್ಯಾಅ. ೧೭-೬); ನೋಹಿಯಾತನದು-ತನ್ನರಮನೆಯ ಹಸಗೆಯ್ದು ಬೆಳಗಿದಂತೆಯೆ, ಬೆಳಗಿ ಊರ, ನಾಡ, ಹಸಗೆಯ್ವೆ, ಹೊಸಗೆಯ್ವೆನೆಂಬೊಲುಮೆ (ಹೊಂಗಳು. ೬-೧೦). 'ನೋಂಪು' ಪರಾ.

[ನೋನ್ + -ಪಿ]

ನೋಂಪು (ನಾ). = ನೋಂಪಿ : ಯದುಕ್ತೋಣಿಪಾಳಕಚೂಡಾಮಣಿ ನಾರಸಿಙ್ಗನೆನಲೇನ್ನೋಂಪುಳ್ಳನೋ ಹುಳ್ಳಪಂ (ಎಕ. II, ೬೪-೧೦೭, 1163); ತೀರ್ಥವಂದನೆ ನೋಂಪು[ಪಾಠಾಂ. ಪಿ]ಜಪ ದೇವತಾವಂದನಾರ್ಥವೆಲ್ಲವು ಪುಣ್ಯಯೋಗ (ಭರಚ. ೬೮-೯೭). 'ನೋಂಪಿ' ಪರಾ.

[ನೋನ್ + -ಪು$_2$. /ತಮಿ. ಮಲ. ನೋನ್ಪು, ನೋಮ್ಪು; ತುಳು. ನೋಂಪು; ತೆಲು. ನೋಮು]

ನೋಕನೀಯ (ನಾ). ಕನಿಷ್ಠನಲ್ಲದವನು; ಶ್ರೇಷ್ಠ : ನೋಕನೀಯನ್ನ ಮಹಲೀಲೆ ಕೊಂಡಾಡುವಂಥ ವಿಕಮನವ ಕೊಡು ಶೀಲೆ (ವಿದಾಕೃ. ೬-೨). [ಸಂ.]

ನೋಕರ 'ನೌಕರ' ನೋ.

ನೋಕರಿ 'ನೌಕರಿ' ನೋ.

ನೋಕರ್ಮ (ನಾ). [ಜೈನ] ದೇಹ, ವಚನ, ದ್ರವ್ಯ, ಮನಸ್ಸುಗಳ ರಚನೆಗೆ ಬೇಕಾಗುವ ಒಂದು ಬಗೆಯ ಕರ್ಮಾಣು : ನೋಕರ್ಮ ವಿದೂರೋಹಂ ಸಪ್ತಧಾತು ಕಲಿತೌದಾರಿಕಾದಿ ನೋಕರ್ಮ ವಿದೂರನೆ ನಾಂ (ತತ್ತ್ವಪ್ರ. ೩೭೬); ಕೂರುಗೊಂಡೆಂಟುಕರ್ಮವೆ ದ್ರವ್ಯಕರ್ಮವೀ ಮೂಱುಕರ್ಮವೆ ಭಾವಕರ್ಮ ತೋಱುವ ದೇಹ ನೋಕರ್ಮ ಕರ್ಮಗಳಿಂತು ಮೂಱುಕಾಂಡಗಳಹುವೊಮ್ಮೆ ನೋಕರ್ಮಗಾಣದಂತಾ ದ್ರವ್ಯಕರ್ಮವಾಲೋಕಿಸೆ ಹಿಂಡಿಯಂತಿಹುವು ಹೋಕಿನ ಭಾವಕರ್ಮಗಳೆಣ್ಣಯಂತೊಳಗಾಕಾಶದಂತಾತ್ಮನಿಹನು (ಭರಚ. ೬೭-೧೧೧).

ಆತ್ಮನಿಗೆ ಶರೀರನಾಮಕರ್ಮದ ಉದಯವಾಗುವುದು. ಅದರಿಂದ ದೇಹ, ವಚನ, ದ್ರವ್ಯ, ಮನಸ್ಸುಗಳ ರಚನೆಗೆ ಬೇಕಾಗುವ 'ನೋಕರ್ಮ' ಎಂಬ ಕರ್ಮಾಣುಗಳು ಅಂಟಿಕೊಳ್ಳುವುವು (ಜೈನಪ. ೩೦೦). [ಸಂ.]

ನೋಕಷಾಯ (ನಾ). [ಜೈನ] ಚಾರಿತ್ರಮೋಹನೀಯದಲ್ಲಿ ಒಂದು ಭೇದ ; ಕಿಂಚಿತ್ ಕಷಾಯ : ಮತ್ತಮಂತರ್ಮುಹೂರ್ತ ದಿನಪ್ರತ್ಯಾಖ್ಯಾನಕ್ರೋಧಮಾನಮಾಯಾಲೋಭಂಗಳಂ ನಿರಾಕರಿಸಿ ಬಳಿಯಂ ಸಂಜ್ವಳನಕಷಾಯಚತುಷ್ಕನೋಕಷಾಯ ನವಕನಾಮ ತ್ರಯೋದಶಪ್ರಕೃತಿಗಳನರೆದು (ಶಾಂತಿಪು.೧೧-೧೧೧ಪ) ; ಚಾರಿತ್ರ್ಯಮೋಹ ನೀಯದಲ್ಲಿ ಕಷಾಯ ಮತ್ತು ನೋಕಷಾಯ ಎಂದು ಎರಡು ಭೇದಗಳು . . . ನೋಕಷಾಯ ಎಂದರೆ ಕಿಂಚಿತ್‌ಕಷಾಯ. ಇದರಲ್ಲಿ ಹಾಸ್ಯ, ರತಿ, ಅರತಿ, ಶೋಕ, ಭಯ, ಜುಗುಪ್ಸೆ, ಸ್ತ್ರೀವೇದ, ಪುಂವೇದ, ನಪುಂಸಕವೇದ ಗಳೆಂದು ಒಂಬತ್ತು ಭೇದಗಳಿವೆ (ಜೈನಪ. ೩೬೬). [ಸಂ.]

ನೋಕಷಾಯವೇದನೀಯ (ನಾ). = ನೋಕಷಾಯ : ಕಷಾಯ ವೇದನೀಯಮುಂ ನೋಕಷಾಯವೇದನೀಯಮುಂ ಎಂದು ಚಾರಿತ್ರ ಮೋಹನೀಯಂ ದ್ವಿವಿಧಂ (ತತ್ತ್ವಪ್ರ. ೭೯).

[ನೋಕಷಾಯ + ವೇದನೀಯ]

ನೋಗು (ನಾ). [ಸಂಗೀತ] (?) : ಕಳಪಿಕಪಂಚಮಾಂಚಿತ ಮೃದು ಧ್ವನಿಯಂ ಗೆಲೆವಂದು ಸುಸ್ವರಂ ಲಳಿ ಲುಳಿ ಧಾತು ರೀತಿ ಗತಿಯೋಜೆ ಬಜಾವಣೆ ಶಾಯ ಸುಟ್ಟ ಕೋಮಳ ವಳಿ ಲಾಗು ನೋಗು ಪಸರಂ ಪರಿ ಪಾಂಗು ಬೆಡಂಗು ಭಂಗಿ ಸಂಗಳಿಸೆ ಸುಕಂಠೆ ಪಾಡಿ ಪುದಿದಳ್ ಮುದಮಂ ನರನಾಥಚಿತ್ತದೊಳ್ (ಕುಸುಮಾ. ೧-೩೭). [?]

ನೋಚ್ಚಿ (ನಾ). ಒಂದು ಬಗೆಯ ಸಸ್ಯ : ನೀರ್ಗುಂಡಿ, ನೋಚ್ಚಿ, ನೀರ್ಲಕ್ಕಿ (ಮೈಔಗಿ. ೭೮-೧೬೦೧). [?]

ನೋಟ, ನೋಂಟ (ನಾ). ೧. ನೋಡುವಿಕೆ ; ಅವಲೋಕನ ; ಕಾಣುವಿಕೆ ; ದರ್ಶನ : "ನಿಭಾಳನಂ, ನಿಶಮನಂ, ನಿಧ್ಯಾನಂ, ಅವಲೋಕನಂ, ಲಕ್ಷಣಂ, ದರ್ಶನಂ, ದೃಷ್ಟಿಃ, ದ್ಯೋತನಂ-ಈ ಲ ನೋಟಂ" (ಹಲಾಯು. ೯೩-೪೧೨) ; ನುಡಿಯಂ ತಗುಳ್ಚಿ ನೋಟಂ ನುಡಿ ಪರಿಚಯಮಂ ತಗುಳ್ಚಿ ಪರಿಚಯಮಳಿಪಂ ತಡೆಯದೆ ತಗುಳ್ಚಿ ಮನದಳಿಪೊಡಗೂ[ಡಿದು]ದಂ ತಗುಳ್ಚುಗುಂ ಕಾಮಿಗಳಾ (ಕವಿರಾ. ೩-೨೦೩) ; ನೋಟದೊಳ್ಳುಜಂಬಡೆದು ಮೆಲ್ನುಡಿಯೊಳ್ ಬಗೆವೊಕ್ಕು ಜಾಣೊಳಳ್ಳಾಟಮನೆಲ್ಲಮಂ ಕಿಡಿಸಿ . . . ಕೂಟಸುಖಂಗಳಂ ಪಡೆದನೇಂ ಚದುರಂ ಗಳ ಬದ್ದೆದಲ್ಲಟಿಂ (ಪಂಪಭಾ. ೫-೮೨) ; ಜಂಗಮವಿಲ್ಲದ ಮಾಟ ಕಂಗಳಿಲ್ಲದ ನೋಟ ಹಿಂಗಿತ್ತು (ಬಸವ. ೪೨೬) ; ನೋಟವಿದು ಲೇಸಲ್ಲ ದೈತ್ಯರ ಕೋಟಿಗದು ಗಂಟಲನು ಕೊಯ್ಯಲಿಕಾಟವಿದು ಪರಸತಿಯ ನೋಟವು ಸಲ್ಲದಿಹಪರಕೆ (ಸಂಭಪ. ೫-೧೨೫) ; ನೋಟದೊಳಾ ವುದೊ ವೇದನೆ ತೋರಿತು ನಾನದ ಬಣ್ಣಿಸಲರಿಯೆ (ಇಂಚಾಪ. ೪೩-೫); ನೋಟ ನೆಟ್ಟಗಿದ್ದರೆ ಕಾಟವೇಕೆ ಬಂದೀತು ? (ಗಾದೆ). ೨. ನೋಡುವ ಅಂಗ ; ಕಣ್ಣು ; ನೇತ್ರ : ಮಲ್ಲಿಗೆಯ ತುಂಬಿಯ ಕೂಟಮೆ ನೋಟ ಮಾದ ನಂದನವನಲಕ್ಷ್ಮಿ ಕಣ್ಣೆಸೆದು ತನ್ನನೆ ನೋಡಿಸಿದಳ್ ತದಾರ್ಯರಿಂ (ಶಾಂತಿಪು. ೭-೧೦) ; ದೂರದಿಂ ತವೆ ನೋಳ್ಪ ನೋಟವು ದೂರದಲಿ ಸಲೆ ಕೇಳ್ವ ಕರ್ಣಂ ದೂರದಿಂದಱಿವಱಿವು ಮೊದಲಾದಖಿಳಸಿದ್ಧಿಗಳು (ಬಸಪು. ೧೦-೫೫) ; ಹೊಕ್ಕುಳಲಿ ಮಗವುಂಟಿ ಹಣೆಯಲಿ ನೋಟವೇ ಹಗೆಗೆ (ಕುಮ್ಯಾಕ. ೧೩-೧೦). ೩. ದೃಶ್ಯ : ಆ ಸಂಜೆಬಿಸಿಲಿನಲ್ಲಿ ಆ ಕಾಡಿನಲ್ಲಿ ಎತ್ತ ನೋಡಿದರೂ ಸುಂದರವಾದ ನೋಟವೇ ಕಾಣುತ್ತಿತ್ತು ! (ಕಳಹು. ೩) ; ಆ ನೋಟ ನೋಡಲು ತುಂಬ ಸುಂದರವಾಗಿದೆ (ರೂಢಿ). ೪. ದೃಷ್ಟಿಕೋನ : ಆರ್ಥಿಕ ಉದ್ಯಮಗಳನ್ನು ಹಣದ ಕಡೆಯಿಂದ ನೋಡುವ ನೋಟ ಮಾತ್ರ ಇಲ್ಲಿನದು (ಹಣಪ್ರ. XI, ಅರಿಕೆ). ೫. (ನಾಣ್ಯ, ರತ್ನ ಮೊದಲಾದುವುಗಳ) ಪರೀಕ್ಷೆ ; ವಿಮರ್ಶೆ : ಸಾಧಾರಣಸಂವತ್ಸರದ ಫಾಲ್ಗುಣ ಸು ೧ ಆರಲೆಹದರೆಂಮರ್ಸರ ಮಗ ನೋಟದ ಪಡರಿದೇವನು (ಮೈಆರಿ. ೧೯೩೯, ೬೩-೪ ; ಸು. 1371) ; ಗ ಡುಪಣ ತಳವಾಱಿಕೆಯ ಹಣ ಅಕ್ಕಸಾಲೆಯ ನೋಟದ ಹಣ ಕೆರೆಯ ಭಣ್ಡಿಯ ಹಣಯಿವು ಮುನ್ತಾದ ಸಮಸ್ತಸುಜ್ಞಸ್ವಾಮ್ಯವನು . . . ಪಾಲಿಸಿ ಬಿಟ್ಟ ಧರ್ಮಶಾಸನ (ಎಕ. XII, ಚಿಕ್ಕನಾ. ೫-೧೬ ; 1535) ; ನಾಣ್ಯದ ನೋಟ ಬಲ್ಲವನೇ ಸೆಟ್ಟಿ (ಗಾದೆ). ೬. ಚಿತ್ರ, ನಾಟಕ ಮೊದಲಾದುವುಗಳ ಪ್ರದರ್ಶನ : ಆ ಹಳ್ಳಿಯ ಬಹಳ ಜನ ಇಂದು ನೋಟ ನೋಡಲು ಹೋಗಿದ್ದರು (ರೂಢಿ). ೭. ರೂಪ ; ಆಕೃತಿ : ಅಂಗದ ನೋಟವು ಸಿಂಗದ ಗಾತ್ರವು ಹಿರಗದು ಮನದಲ್ಲಿ ನಾನಾ ವಿಕಾರವು (ಬಸವ. ೪೨). ೮. ನಾಟಕದಲ್ಲಿಯ ದೃಶ್ಯ ; ಅಂಕದಲ್ಲಿಯ ಭಾಗ: ನೋಟ ೨ : ೧ನೆಯ ನೋಟದ ೬-೮ ದಿನಗಳ ಬಳಿಕ (ಹೆಬ್ಬೆರ. ೮); ನೋಟ ೩: ೨ನೆಯ ನೋಟದ ಸುಮಾರು ೧-೨ ವರ್ಷಗಳ ಬಳಿಕ ೧ನೆಯ ನೋಟದಲ್ಲಿ ಹೇಳಿದ ಭಿಲ್ಲರ ಹಳ್ಳಿಯಲ್ಲಿ . . . ಕುಳಿತುಕೊಂಡಿರುತ್ತಾರೆ (ಹೆಬ್ಬೆರ. ೧೫). △ ನೋಂಟ : ೧. ಚಂಡವೇಗಂ ಕರುಮಾಡದ ಮೇಗಣ ನೆಲೆಯೊಳಿರ್ದು ನೋಂಟಕ್ಕೆ ಗೆಂಟುಪೋಗೆ [ಪಾಠಾಂ. ವಿನೋದದಿಂ ಗೆಂಟಱೊಳು] ಚಕ್ರಮನಿಟ್ಟೊಡೆ (ಪಡ್ಡಾರಾ. ೧೨೧-೭).

ನೋಟದಳತೆ = ದೃಷ್ಟಿಗೆ ಎಟುಕುವಷ್ಟು ದೂರ ; ಕಣ್ಣಳವು : ಇಂತು ರಥಂ ಪೋಗೆಪೋಗೆ ನೋಟದಳತೆಯೊಳ್ . . . ತ್ರಿಪಥಗೆ ಕಾಣಿಸಿಕೊಂಡಳ್ (ರಾಮಾಶ್ವ. ೩೦-೧೦).

[<ನೋಡು./ ತಮಿ. ಮಲ. ನೋಟ್ಟ ; ತುಳು. ನೋಟ]

ನೋಟಂದೆಗೆ (ಕ್ರಿ). ಕಣ್ಣನ್ನು ತೆರೆ ; ಕಣ್ಣು ಬಿಡು : ಬಗೆಗುಂದಿ ಚಕ್ರಮಿಥುನಂ ಮಿಗೆ ನೊಂದೊಂದೊಂದನಗಲಲಾಱದೆ ನೋಟಂದೆಗೆ ಯುತ್ತಳಲುತ್ತೊಱಲುತ್ತಗಲ್ದುವು ಉಱೆ ಪಗಲನಱಸಿ ತಿರುಗುವ ತೆಱದಿಂ (ಗಿರಿಕ. ೪-೬೯). [ನೋಟ + ತೆಗೆ$_1$]

ನೋಟಕ (ನಾ). ೧. ನೋಡುವವನು ; ವೀಕ್ಷಿಸುವವನು ; ಪ್ರೇಕ್ಷಕ : ಸರಿಗೆಯೊಳ್ ಸಮೆದಕ್ಷಮಾಲಿಕೆ ಪೊನ್ನ ಮುಂಚಿ . . . ದುಕೂಲದ ಕೋವಣಂ ಕರಮೊಡಂಬಡೆ ನೋಟಕರ್ಕಳನಾ ತಪಸ್ವಿ ಮರುಳ್ಚಿದಂ (ಪಂಪಭಾ. ೬-೮) ; ತೊಟ್ಟಯ ಸುತ್ತುವೆತ್ತ ಪಸುರ್ವಂದಲ ಮುತ್ತಿನ ಮಂಟಪಂಗಳೊಳ್ . . . ನೇರ್ಪಟ್ಟುದು ನೋಟಕರ್ಗೊಸಗೆ ಯುಬ್ಬಣಮಪ್ಪಿನಮಾ ವಿವಾಹದೊಳ್ (ಸೂಕ್ತಿಸು. ೬-೨೨) ; ಕಱೆ ಗೊರಳಭವನಾ ಶರಣನಂ ಮೆಱೆಯಿಸಲು ಬಗೆದೊಂದುದಿನದಲಿ ಕಿಱು ಕುಲನವೊಲು ಸತ್ತ ಕಱುವಂ ಹೊತ್ತು ನೋಟಕರು ಹೊಱಗೆ ನೋಡಲು ರುದ್ರಮುದ್ರೆಯ ಕುಱುಹಿನಲಿ ನಡೆತರಲು (ಬಸಪು. ೫೬-೩೨) ; ದ್ಯುಮಣಿ ಪರಿಯಂತೇಕೆ ರಶ್ಮಿಗೆ ತಿಮಿರವಿದಿರೇ ನೀವು ನೋಟಕರೆಮಗೆ ರಣದೆಖ್ಖಾಳ ವೆಂದನು ಕರ್ಣ ಗುರುಸುತಗೆ (ಕುಮ್ಯಾಕ. ೧೦-೨೧). ೨. ನಾಟಕಾದಿ ಗಳನ್ನು ನೋಡುವವನು ; ಪ್ರೇಕ್ಷಕ : ಗಗನಂ ನಾಟ್ಯನಿಕೇತನಂ ದಿವಿಜರೆಲ್ಲರ್ ನೋಟಕರ್ ದೇವ ನೀನೆ ಗಡಂ ನಟ್ಟುವನಾಗೆ . . . ನಿನ್ನ ಗದಾನರ್ತಕಿ ನರ್ತಿಸಲ್ ಪದೆದಪಳ್ ರಕ್ಷಶ್ಶಿರೋರಂಗದೊಳ್ (ಜಗವಿ. ೧೧-೬೬) ; ನಾಟಕವ ನೋಡು ಬ್ರಹ್ಮಾಂಡರಂಗಸ್ಥಲದಿ ಕೋಟಿನಟ ರಾಂತಿಹರು ಚಿತ್ರಪಾತ್ರಗಳ ಆಟಕ್ಕೆ ಕಥೆಯಿಲ್ಲ ಮೊದಲಿಲ್ಲ ಕಡೆಯಿಲ್ಲ ನೋಟಕರು ಮಾಟಕರೆ (ಮಂಕುಕ. ೨೫೪).

ನೋಟಕಜನ = ನೋಡುವವರು ; ಪ್ರೇಕ್ಷಕರು : ಸದಮಳಾತ್ಮನು ಕಿನ್ನರಯ್ಯನು ಮದನಮರ್ದನನಂ ನುಡಿಸಿದಲ್ಲದೆ ಬಿಡಂ ತಾನೆನುತ ನೋಟಕಜನರು ಕೀರ್ತಿಸಲು (ಬಸಪು. ೨೮-೫೧) ; ಉಲಿವ ವಾದ್ಯದಲೆಡ

ಬಲದ ಹೆಕ್ಕಳದ ನೋಟಕಜನದಲಾ ನೃಪಕುಲಶಿರೋಮಣಿ ಹೊಕ್ಕನ ನುಪಮ ರಾಜಮಂದಿರವ (ತೊರರಾ. ೧-೧೭-೨೨). [ನೋಟ+-ಕ್ಕ$_3$]

ನೋಟಕಾತಿ 'ನೋಟಗಾತಿ' ನೋ.

ನೋಟಕೂಟ(ನಾ). ೧. ದೃಷ್ಟಿ ಬೆರೆಯುವಿಕೆ,—ಒಂದಾಗುವಿಕೆ. ೨. ದರ್ಶನದಿಂದ ಪಡೆಯುವ ಐಕ್ಯ,-ಸಾಕ್ಷಾತ್ಕಾರ : ಮಾಟಕೂಟ ಬಸವಣ್ಣಂಗಾಯಿತ್ತು ನೋಟಕೂಟ ಪ್ರಭುದೇವರಿಗಾಯಿತ್ತು (ಮಹಾದೇ.ಬ. ೬೭-೧೯೩). [ನೋಟ+ಕೂಟ$_1$]

ನೋಟಗ (ನಾ). = ನೋಟಗಾರ ೨ : ಸಲ್ಲದಾ ಹೊನ್ನುಗಳಿಗೆ ಬಂದರು ಮೂಱು ನೋಟಗರು ಇಬ್ಬರು ಕುರುಡರು ಒಬ್ಬಗೆ ಕಣ್ಣೆ ಇಲ್ಲ (ಪುರಂದ. ೩-೨೭-೫). [ನೋಟ+-ಗ$_2$]

ನೋಟಗಾತಿ, ನೋಟಕಾತಿ (ನಾ). (ರೋಗಾದಿಗಳನ್ನು ಉಂಟು ಮಾಡುವ ಭೂತಪ್ರೇತಾದಿಗಳನ್ನು ಬಲಿ, ನೈವೇದ್ಯ ಮುಂತಾದುವುಗಳಿಂದ ತೃಪ್ತಿಪಡಿಸುವ) ಮಾಟಗಾತಿ ; ಮಂತ್ರಗಾತಿ(?): ಲೋಕದ ಬುದ್ಧಿಗೇಡಿ ಮನುಜರೆಲ್ಲರು ಶುದ್ಧಚಿತ್ತ ಬಂಗಮಲಿಂಗದ ಮಾತ ಕೇಳದೆ ಅದ್ದನ ಹೋಳ ಅರೆಮಾನ ಎಣ್ಣೆಯ ಕೊಂಡು ನೋಟಗಾ[ಪಾಠಾಂ.ಕಾ]ತಿಯರ ಮನೆಗೆ ಹೋಗಿ ಅವರು ಹೇಳಿದ ತಾತು ಭೂತದ ಕೋಟಲೆಗೊಳಗಾಗಿ ಕೈಕೊಂಡು ಬಂದು ಅವಕ್ಕೆ ಊಟವನಿಕ್ಕಿ ಮಿಕ್ಕ ಕೂಳ ತಮ್ಮ ಲಿಂಗಕ್ಕೆ ತೋಱುವ ಲಿಂಗದ್ರೋಹಿಯ ಮಾತ ಕೇಳಲಾಗದು (ಮಡಿಮಾ. ೨೪-೩೪; ಪಚಸಂ. ೩೭೯-೪೩ ನೋ). **ನೋಟಕಾತಿ :** ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ನೋಟ+-ಕಾತಿ$_5$]

ನೋಟಗಾರ (ನಾ). ೧ = ನೋಟಕ ೧ : ಕೆಲಂಬರು ನೋಟಗಾರರು (ಸೌಗಂಧಿ. ೧೩೨-೯) ; ದಕ್ಷಿಣದಲ್ಲಿನ ತ್ರಿಭಂಗಭಂಗಿಯಲ್ಲಿನ ದೇವಿಯರ ಪ್ರತಿಮೆಗಳು, ತಮ್ಮ ನಿಲುವಿನಿಂದ ಮನಮೋಹಕವಾಗಿರುವುವಲ್ಲದೆ, ತಮ್ಮ ಸರಳ ನಡೆಯಿಂದ ನೋಟಗಾರನ "ನೇತ್ರಕೌಮುದಿ"ಯಾಗಿ ಪರಿಣಮಿಸಿವೆ (ಭಾರದ. ೫೧೯). ೨. ನಾಣ್ಯ, ರತ್ನ ಮೊದಲಾದುವುಗಳ ಪರೀಕ್ಷಕ ; ಸರಾಫ : ಕಂದಾಚಾರದ ಶ್ಯಾನುಭಾಗರ ಜನ ೩ಕೆ . . . ನೋಟಗಾರನ ಜನ ೧ಕೆ (ಮೈಅರಿ. ೧೯೩೩,೩೧-೩೨ ; 1737) ; ಕತ್ತೆ ಚಿತ್ರಗಾರನ ಮಿಂಡ, ಹಣ ನೋಟಗಾರನ ಮಿಂಡ, ಟವಣೆ ಶಾನಭೋಗನ ಮಿಂಡ (ಗಾದೆ). [ನೋಟ+-ಕಾರ(<-ಕಾಱ)]

ನೋಟಬೇಟ (ನಾ). ನೋಡಿದೊಡನೆ ಉಂಟಾಗುವ ಮೋಹ ; ಕಣ್ಬೇಟ ; ಚಕ್ಷುಃಪ್ರೀತಿ : ಯುವತಿಯಲಿ ನೋಟಬೇಟದಿ ಕೂಟವನು ಪಡೆದು ಕಾಯವವಳಿಗಧೀನವಾಗಿರೆ ಗಾಯವಡೆದಂಗಜನ ಬಾಣಕೆ ಬಾಯ ಕಿಸಿದಾಯಾಸಗೊಂಬುದೆ ಮಾಯೆ ಕೇಳೆಂದ (ಅದ್ಭುತ. ೨-೬೮) ; ನೋಟಬೇಟವು ತನಗೆ ನಾಟಿಸಿದ ಬಳಿಕೆಲ್ಲಿ ಸಾಟಿಯೆ ಕಾಮನೆಸುಗೆಗೆ ಒಲುಮೆಗೆ ನೋಟವೇ ಮುಖ್ಯ (ಸರ್ವಜ್ಞ. ೧೬೯೩). [ನೋಟ+ಬೇಟ$_1$(<ಬೇಂಟ)]

ನೋಟವಟ್ಟೆ (ನಾ). ದೃಷ್ಟಿಪಥ ; ಕಣ್ಬೊಲ : ನಿಟ್ಟಿಸಿ ನೆರೆ ರಂಗಯೆಂಬಂಗನೆಯ ನೋಟವಟ್ಟೆಗಾನೆಂದು ಸಂದಿಪೆನೊ (ಶತಸಾಂ. ೩೨-೬೭). [ನೋಟ+ಬಟ್ಟೆ$_1$]

ನೋಟವಣ (ನಾ). ಒಂದು ಬಗೆಯ ತೆರಿಗೆ ; ನಾಣ್ಯಪರೀಕ್ಷೆಗೆ ತೆರುವ ಹಣ : ಶ್ರೀಮನ್ಮಹಾ ಪಸಾಯಿತರುಮಪ್ಪ ತಮ್ಮ ಕುಳವ ಸಾಯಣ್ಣನವರಿಗೆ ಆ ಶ್ರೀ ವೀರಬಲ್ಲಾಳದೇವರಸರು ಆ ಸ್ತಳದ ಖಾಣ ಪ ೩೫ ಕಿಱುಕುಳ ತೂಕ ನೋಟವಣ ಅಭ್ಯಾಗತ ಪಳಮಿಳಿ ತುಪ್ಪ ನೂಲು . . . ಧಾರಾಪೂರ್ಬ್ಬಕಂ ಮಾಡಿ ಕೊಟ್ಟರು (ಎಕ. VI, ಕಡೂರು. ೪೯-೪೦ ; 1291) ; ನಾಡು ತಳವಾರಿಕೆ ಹಣ ಸಟ್ಟವಣ ನೋಟವಣ ತಳವಾರಿಕೆ ಹಣ . . . ಇಪ್ಪನು ದಿಟ್ಟಿವು (ಎಕ. VI, ಕಡೂರು. ೧೫೮-೧೦ ; 1542). [ನೋಟ+ಪಣ$_3$]

ನೋಟಸನ್ನೆ (ನಾ). ಕಣ್ಣಿನಿಂದ ಮಾಡುವ ಸೂಚನೆ ; ಕಣ್ಸನ್ನೆ : ನೆಟ್ಟನಾಕೆಯ ನೋಟಸನ್ನೆಯ ದಿಟ್ಟಿಗವದಿರು ಮರುಳುಗೊಂಡರು ಕೆಟ್ಟ ಕೇಡಿಂಗೇನ ಹೇಳುವೆ ದೈತ್ಯಕೋಟಿಗಳ (ಸಂಭವ. ೫-೧೨೦). [ನೋಟ+ಸನ್ನೆ$_2$]

ನೋಟಸಲಿಕೆ (ನಾ). (?) : ದೊರೆಗಳವರು ರಾಮಾಯಣ ಪಾರಾಯಣದಲ್ಲಿಯೇ ಕಾಲವನ್ನು ಕಳೆದು ಎರಡು ಸಾವಿರ ವರಹ ಬಂದ ಬಳಿಕ, ಪರಾಂಬರಿಸಿ ನೋಟಸಲಿಕೆಯನ್ನು ಮಾಡಿಸಿ . . . ದಾನಧರ್ಮಗಳನ್ನು ಮಾಡುತ್ತಿದ್ದರು (ಮಹಾದಂ. I, ೧೨೬). [?]

ನೋಟೀಸು (ನಾ). ೧. ಸೂಚನಾಪತ್ರ ; ತಿಳಿವಳಿಕೆಯ ಪತ್ರ ; ಎಚ್ಚರಿಕೆಯ ಪತ್ರ : "ಸದಾನಂದನನ್ನು ಕೆಲಸದಿಂದ ತೆಗೆದು ಹಾಕಿರುವರು", "ಕಾರಣವೇನಂತೆ ? ನೋಟೀಸೇನೂ ಕೊಟ್ಟಲ್ಲವೇ ?" "ನೋಟೀಸೂ ಇಲ್ಲ ಕಾರಣವೂ ಇಲ್ಲ" (ದೀಪದ. ೬೮) ; ಏನೋ ನೋಟೀಸು ಅದೆ (ಅಶೋಕ. ೨೪೪) ; ಎಲ್ಲಾ ಸಮನುಗಳು, ನೋಟೀಸುಗಳು ಮುಂತಾದವುಗಳನ್ನು ತನ್ನ ಸ್ವಂತ ಹೆಸರಿನಲ್ಲಿ ಸಾದರ್ಮಾಡತಕ್ಕದ್ದು (ಗ್ರಾಮಾಕ. ೧೮). ೨. ಪ್ರಕಟಣೆ ; ಜಾಹೀರಾತು : ಹಳೆಯ ನೋಟೀಸುಗಳನ್ನು ಹೊರಗೆ ಕಂಬಕ್ಕೆ ಗೋಡೆಗೆ ಅಂಟಿಸಿದ ಕುರುಹುಗಳು ನಿಮ್ಮ ಕಣ್ಣನ್ನು ಕುಕ್ಕುವುವು (ಗಾಳಿಗು. ೧). [←ಇಂ. Notice]

ನೋಟು (ನಾ). ೧. ಟಿಪ್ಪಣಿ ; ಗುರುತು ; ಮುಖ್ಯಾಂಶಗಳ ಪಟ್ಟಿ : ಅವರು ಭಾಷಣಕ್ಕಾಗಿ ಮಾಡಿಕೊಂಡ ನೋಟು ಸಿಕ್ಕಿದೆ (ರೂಢಿ). ೨. ಹಣದ ರೂಪದಲ್ಲಿ ಚಲಾವಣೆಯಲ್ಲಿರುವ ಕಾಗದ; ಕಾಗದದ ಹಣ : ನೋಟವನೆಸೆದನು ನೋಟು ತೋರಿಸಿದನು ನುಡಿದನು ಚತುರ ಚಾಟುವನು ಆದರು ಆ ಸೇರೆಗಾರನಿಗೊಲಿಯದೆ ಈಕೆ ನಿಂತಳು ಶೀಲಗೆಡದೆ (ಚಂದ್ರವೀ. ೨೪-೯೫) ; ನೋಟುಗಳ ಕಟ್ಟುಗಳನ್ನು ಒಂದು ಕಡೆ ಗುಂಪುಗೂಡಿಸಿ ಇಟ್ಟಿದ್ದರು (ರತ್ನಗೋ. ೯೭) ; ನೋಟನ್ನು ಚಲಾವಣೆಗೆ ತರುವ ಅಧಿಕಾರ ಎಲ್ಲ ಬ್ಯಾಂಕುಗಳಿಗೂ ಇರುವುದಿಲ್ಲ (ಹಣಪ್ರ. ೩೦). ೩. ಕರಾರುಪತ್ರ; ಲಿಖಿತ ಒಪ್ಪಂದ : "ಹಣದ ಇಮ್ಮಡಿಯ ನೋಟು ಬರೆದುಕೊಡಬೇಕು ನಮಗೆ" ಎಂದು ಒಬ್ಬ ಸಾವುಕಾರನ ಆಶೆ ಹೊರಹೊಮ್ಮಿತು . . . ನೋಟುಗಳನ್ನು ಬರೆದು ಪ್ರಭುವಿನ ಒಪ್ಪಿತ ಹಾಕಿದನು (ಬೆಟ್ಟಹೊ. ೬೧).

ನೋಟು ಹಾಕಿಕೊಳ್ಳು = (ಸಂಕ್ಷೇಪವಾಗಿ) ಟಿಪ್ಪಣಿ ಮಾಡಿಕೊಳ್ಳು ; ಗುರುತುಮಾಡಿಕೊಳ್ಳು : ಆತ ಉಪಾಧ್ಯಾಯರು ಹೇಳಿದ್ದನ್ನೆಲ್ಲವನ್ನು ನೋಟು ಹಾಕಿಕೊಂಡಿದ್ದ (ರೂಢಿ). ನೋಟ್ಸು = ೧. ಟಿಪ್ಪಣಿ : ಉಪಾಧ್ಯಾಯರು ಪಠ್ಯವಿಷಯಗಳ ಬಗ್ಗೆ ನೋಟ್ಸು ಬರೆಸುತ್ತಾರೆ (ರೂಢಿ). ೨. ಟಿಪ್ಪಣಿ ಪುಸ್ತಕ : ನಿನ್ನ ನೋಟ್ಸನ್ನು ಕೊಟ್ಟರೆ ಸ್ವಲ್ಪ ಬರೆದುಕೊಂಡು ಕೊಡುತ್ತೇನೆ (ರೂಢಿ). [←ಇಂ. Note]

ನೋಟುಪುಸ್ತಕ (ನಾ). ಟಿಪ್ಪಣಿ ಮೊದಲಾದುವನ್ನು ಬರೆದುಕೊಳ್ಳುವುದಕ್ಕಾಗಿ ಹಾಳೆಗಳನ್ನು ಕೂಡಿಸಿ ಕಟ್ಟಿದ ಪುಸ್ತಕ : ಅವರ ನೋಟುಪುಸ್ತಕಗಳನ್ನು ಪರಿಶೀಲಿಸುತ್ತಿರಬೇಕು (ಶಿಕ್ಷದ. ೨೮೭) ; ನನಗೆ ಶಾಲೆಯಲ್ಲಿ ಬರೆದುಕೊಳ್ಳುವುದಕ್ಕೆ ನೋಟುಪುಸ್ತಕ ಬೇಕಾಗಿದೆ (ರೂಢಿ). [ನೋಟು+ಪುಸ್ತಕ]

ನೋಟುಬುಕ್ಕು (ನಾ). = ನೋಟುಪುಸ್ತಕ : ಅವನು ನೋಟು ಬುಕ್ಕಿನ ತುಂಬ ಚಿತ್ರಗಳನ್ನು ಬಿಡಿಸಿದ್ದಾನೆ (ರೂಢಿ). [ನೋಟು+ಬುಕ್ಕು$_2$]

ನೋಡಿಸು (ಕ್ರಿ). ೧. ಕಾಣುವಂತೆ ಮಾಡು ; ನೋಡುವಂತೆ ಮಾಡು: "ನೋಡಿಸು-ಲೋಚನಕ್ರಿಯಾಯಾಂ" (ಶಮಧಾ); ದುರ್ಯೋಧನಂ : . . . ಕಾಡೊಳ್ ಬೇಡರಂತೆ ತೊಟಲ್ವ ದಾಯಿಗರ ಕಂದಿ ಕುಂದಿದ ಮೊಗಂಗಳಂ ನೋಡುವುದುಮೆನ್ನನವರಿಂ ನೋಡಿಸುವುದುಮಿಾಯೆರಡೆ ಸಂಸಾರಫಲಮೆಂದು . . . ನಂದನವನದೊಳ್ ಪಾಂಡವರ್ಗೆ ಸಮೀಪಮಾಗೆ ಬೀಡಂ ಬಿಟ್ಟು (ಪಂಪಭಾ. ೭-೩೨ ವ) ; ನಂದನವನಲಕ್ಷ್ಮಿ ಕಣ್ಗೆಸೆದು ತನ್ನನೆ ನೋಡಿಸಿದಳ್ ತದಾರ್ಯರಿಂ (ಶಾಂತಿಪು. ೭-೧೦) ; ನಾನು ದೀಪಾರತಿಯ ನೋಡುವುದಕ್ಕೆ ಮುನ್ನವೇ ಜಂಗಮಕ್ಕೆ ಆರತಿಯ ನೋಡಿಸುವೆ (ಮಹಾದೇ. ಬ. ೮೯-೨೧೫). ೨. ಹುಡುಕಿಸು ; ಶೋಧನೆ ಮಾಡಿಸು : ಆಯುಧಂಗಳಂ ಪೂಟ್ಟಿರ್ದರಪ್ಪುದಱಿಂ ಕೂರ್ಪರನಟ್ಟ ಅವರೋದುವ ಕ್ಷೇತ್ರದೆ ಬಳಸಿಯುಂ ನೋಡಿಸುವುದೆಂದು ಪೇಟ್ಟೊಡೆ (ವಡ್ಡಾರಾ. ೧೭೬-೨೨). ೩. ಪರೀಕ್ಷಿಸಿ ನೋಡಲು ಹೇಳು ; ಪರಾಮರ್ಶಿಸಿ ನೋಡಲು ಹೇಳು : ಬೆಸಗೊಳ್ವಳ್ ಋಷಿಸಂಘಮಂ ನಯದೆ ಸಿದ್ಧಾದೇಶಮಾದಂತೆ ಮನ್ನಿಸುವಳ್ ತಾನೊಲವಿಂ ಸಮಸ್ತಶಕುನಜ್ಞಾನೀಕಮಂ ಕೂಡೆ ನೋಡಿಸುವಳ್ (ಕಾದಂಪೂ. ೩೬೮); ಗಣಿತಜ್ಞರಂ ಕರೆಸಿ ನೋಡಿಸಿದನಾಗಳನುಗುಣಮಾದ ರಾಶಿಕೂಟವನಮಲಲಗ್ನಮಂ (ಜೈಮಿಭಾ. ೩೦-೫೩) ; ಹುಡುಗಿಯ ಜಾತಕ ನೋಡಿಸಿದರು (ರೂಢಿ).

[ನೋಡು + -ಇಸು$_3$]

ನೋಡು (ಕ್ರಿ). ನೋರ್ಪ, ನೋಳ್ಪ, ನೋಟ್ಪ (ಭವಿಕೃ). ೧. ಈಕ್ಷಿಸು; ಕಾಣು; ದೃಷ್ಟಿಸು : "ನೋಡು—ಪ್ರೇಕ್ಷಣೇ" (ಶಮಧಾ); ಕೊಳದೊಳಗೇನಂ ನೋಟ್ಪೆಗ ವಿಳಾಸಿನೀ ನಿನ್ನವೋಲದೇನತಿಶಯಮೋ (ಕವಿಾ. ೧-೮೮) ; ಅನಿಬರುಂ . . . ಒಂದು ಕೆಲದಿಂದೊಂದು ಕೆಲಕ್ಕೆ ಮಗುಟದೆ ಕುಳ್ಳಿರದೆ ನಿಂದಿರದೆ ನುಡಿಯದೆ ಕೆಲಂಗಳಂ ನೋಡದಿಂತು ಪ್ರಾಯೋಪಗಮನಂಗೆಯ್ದು ಪದಿನಯ್ದು ದಿವಸಂ ಮೆಯ್ಯಂ ತೊಱೆದಿರ್ದೊರ್ (ವಡ್ಡಾರಾ. ೧೦೧-೧೩) ; ನೋರ್ಪ್ಪರ ಕಣ್ (ಎಇ. XIII, ೩೩೧-೨೮ ; 929) ; ಪಡೆ ನೋಡಲ್ ಬಂದವರಂ ಗುಡಿವೊಱಿಸಿದರೆಂಬುದಾಯ್ತು ನಿನ್ನೆನ್ನೆಡೆಯೊಳ್ (ಪಂಪಭಾ. ೩-೧೫) ; ನೆಱೆದ ನಿಜಸೇನಾಧಿಪರ ಸಂವರಣೆಗಳ ನೋಡಿದನು ನೀಡಿದನರಿಬಿರುದಮಂಡಳಿಕರಿಗೆ ಕಾಳೆಗದ ವೀಳೆಯವ (ಕುಪ್ಯಾದ್ರೋ. ೪-೧೫) ; ಮರಗಳ ಎಲೆ ಟೊಂಗೆ ಮೊದಲಾದವುಗಳು ಅಲ್ಲಾಡುವುದನ್ನು ನಾವು ದಿನಾಲು ನೋಡುತ್ತೇವೆ (ಮುಂಬಯಿ. ೪-೫೮). ೨. ಪರೀಕ್ಷಿಸು ; ಪರಾಮರ್ಶಿಸು : ನಕುಳ ಸಹದೇವರಿರ್ವರುಂ ಬಂದಾಂತೊಡಿವರನೇಗೆಯ್ವುದೆಂದು ಕರುಣಿಸಿ ಶಲ್ಯನ ಮನಮಂ ನೋಡಲೆಂದು ಬೆಸಗೊಂಡೊಡೆ (ಪಂಪಭಾ. ೧೨-೧೧೬ ವ) ; ಒಳಪೊಕ್ಕು ನೋಡೆ ಭಾರತದೊಳಗಣ ಕಥೆಯೆಲ್ಲಮಿಾ ಗದಾಯುದ್ಧದೊಳಂತೊಳಕೊಂಡತ್ತೆನೆ ಸಿಂಹಾವಲೋಕನಕ್ರಮದಿನಱಿಪಿದಂ ಕವಿ ರನ್ನಂ (ಗದಾಯು. ೧-೪೫) ; ಜೀವಂ ಕರ್ತೃ ಭೋಕ್ತೃವೆಂಬೀ ಸೂಕ್ತಂ ಜಿನವಚನದೊಳಲ್ಲದೆ ಮತ್ತಿನ ಕುಮತದೊಳುಂಟೆ ನೋಟ್ಪಡೆಲ್ಲಂದದೊಳಂ (ಸಮಸ. ೩-೨೦) ; ಆ ದಿವಿಜ ಕ್ಷಿತಿಜಕ್ಕೆ ನೋರ್ಪ್ಪಡಾ ವನಧಿಯ ಗುಣ್ಪು ಮೇರುವಿನ ಪೆಂಪು . . . ಧರಾತಳದೊಳಾರ್ದ್ದೊರೆ ಹೆಗ್ಗಡೆ ಕಾಳಿಮಯ್ಯನೊಳ್ (ಎಕ. V, ಹಾಸನ. ೫೩-೪೨ ; 1170) ; ಶಂಕರಂಗಿಂತೀಗ ಮಸ್ತಕವಂ ಕಡಿದು ಕೊಟ್ಟೇಗ . . . ಬಳಿಕ ಶಿರವಂ ಪಡೆದಪೆಂ ಭೂತಳದ ಜನವಱಿಯಲ್ಕೆ ಹೇಳಿದೆನೆಲವೊ ನೋಡಲು ಶಕ್ತಿಯುಳ್ಳಡೆ ನೋಡಿ ಭೋ ಮುಂದೆ (ಬಸಪು. ೫೨-೩೬) ; ಅರಿದನಿದ ನಾವ್ ನೋಡಬೇಕೆಂದರಸನುತ್ತಮವಾಜಿ ಹೂಡಲಿ ವರವರೂಥಕ್ಕೆನಲು ತಂದನು ಸೂತನುರುಹಯವ (ತೊರಂಾ. ೩-೨-೧೯) ; ಕತ್ತಲೆಯ ಪಾಳೆಯಮೆತ್ತಲೋಡಿದುದೊ ನೋಡಿದಪಂ (ಜೈಮಿಭಾ. ೨-೬೫). ೩. ಆಲೋಚಿಸು ; ವಿಚಾರ ಮಾಡು : ಶ್ರುತದೊಳ್ ಭಾವಿಸಿ ನೋಟ್ಪೊಡೆ ಸತತಂ ಕವಿವೃಷಭರಾ ಪ್ರಯೋಗಂಗಳೊಳಂ ಕೃತಪರಿಚಯಬಲನಪ್ಪನನತಿಶಯಧವಳನ ಸಭಾಸದರ್ ಮನ್ನಿಸುವರ್ (ಕವಿಾ. ೧-೫) ; ಪರಮೇಷ್ಠಿಸ್ವಾಮಿಗಳೀ ಭರತಾವನಿಯೊಳಗೆ ನೋಟ್ಪೊಡಿವರೆಂದಿಂತೀ ಧರೆ ಬಣ್ಣಿಸೆ ನೆಗಟ್ಟರ್ಕವಿಪರಮೇಷ್ಠಿಸ್ವಾಮಿಗಳ್ ಸಮಸ್ತಾವನಿಯೊಳ್ (ಸುಕುಮಾ. ೧-೧೮) ; ಕೆಲವಂ ಸುಜ್ಞಾನದಿಂ ನೋಡುತಂ ಕೆಲವಂ ಸಜ್ಜನಸಂಗದಿಂದಲಱಿಯಲ್ ಸರ್ವಜ್ಞನಪ್ಪಂ ನರಂ (ಸೋಮೇಶ. ೧) ; ಕುಲವ ನೋಡಿದಡಿಲ್ಲ ತನ್ನಯ ಬಲುಹ ನೋಡಿದಡಿಲ್ಲ ಕದನದೊಳುಳಿವ ನೋಡಿದರಿಲ್ಲಲಾ ಪತಿಯೆಂಬ ಪಾತಕಿಯ (ಕುಪ್ಯಾದ್ರೋ. ೫-೮೧); ಶ್ರುತಮಂ ನೋಳ್ಪ ತದರ್ಥಮಂ ತಿಳಿವ ತನ್ಮರ್ಯಾದೆಯೊಳ್ಪೋಪ ಸುವ್ರತಮಂ ಪಾಲಿಪ . . . ಜೀವಹಿತಮಂ ಪೇಳ್ವಾತನೇ ಮದ್ಗುರು (ರತ್ನಾಶ. ೧೦೬). ೪. ಭೇಟಿ ಮಾಡು ; ಸಂಧಿಸು : ನೋಡುವೆನಾ ಮಹೀಪತಿಯನರ್ಥಿಗಳಾರ್ಥಿತ ಕಲ್ಪವೃಕ್ಷನಂ ಬೇಡುವೆನರ್ಥಸಂಚಯಮನೆಂಬುದಿದುತ್ತರಮಾರ್ಗವಾಚಕಂ (ಕವಿಾ. ೨-೧೦೨) ; ಇವರ ಕಂಡೆನಗೀ ಸುಖಂ ಪುಟ್ಟಲೇಕಿವರು ಶಿವನ ಸಮ್ಮುಖರಾಗದಿರರು ನೋಡುವೆನೆಂದು ಕವಿಕುಲಲಲಾಮಂ ಹರಿಶ್ಚಂದ್ರನಾ ಮುನೀಶ್ವರನೆಡೆಗೆ ಬರುತಿರ್ದನು (ಹಚಕಾ. ೫-೫೯). ೫. ಎದುರಿಸಲು ಸಮರ್ಥವಾಗಿರು ; ಪ್ರತಿಭಟಿಸಲು ಸಿದ್ಧವಾಗಿರು; ವಿಚಾರಿಸಿಕೊಳ್ಳು : ಬರ್ಕೆ ನಿನ್ನ ಪಿರಿಯಣ್ಣನೆ ಪಣ್ಣನೆ ನೋಟ್ಪಮಾತನೊಡ್ಡಟಿಯದ ಗಂಡವಾತಂ (ಪಂಪಭಾ. ೩-೧೬) ; ಕಲುಷ ಜೈನರ ನಿಚಯದಗ್ಗದ ಬಲುಹನೀಗಳೆ ನೋಡುವೆನು (ಬಸಪು. ೫೦-೨೫) ; ಸಾರಿರೈ ನಮ್ಮೊಡನೆ ಕೈ ಮನವಾರೆ ಕಾದುವ ಬಳಿಕ ಮೊದಲೊಳುದಾರ ಭೀಮಾರ್ಜುನರ ನೋಡುವೆನೆನುತ ಕೈಕೊಂಡ (ಕುಪ್ಯಾದ್ರೋ. ೧-೫೪). ೬. ತಿಳಿ ; ಅರಿ : ಎನ್ನ ನಡೆಯೊಂದು ಪರಿ ಎನ್ನ ನುಡಿಯೊಂದು ಪರಿ ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ (ಬಸವ. ೩೦) ; ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರನೆಱೆದಡೆ ಮೇಲೆ ಪಲ್ಲವಿಸಿತ್ತು ನೋಡಾ (ಬಸವ. ೪೨೦). ೭. ಹುಡುಕು ; ಅರಸು : ಸಗರರಂದು ಮಹಾಧ್ವರಾಶ್ವವ ಜಗವೆರಡಱಲಿ ನೋಡಿ ಕಾಣದೆ (ತೊರಂಾ. ೧-೯-೧೭). ೮. ಆರೈಕೆ ಮಾಡು ; ಯೋಗಕ್ಷೇಮವನ್ನು ನೋಡಿಕೊಳ್ಳು : ಕಂದಿದೆನಯ್ಯಾ ಎನ್ನ ನೋಡುವರಿಲ್ಲದೆ (ಬಸವ. ೪೩೧) ; ಕೂಡಲೊಬ್ಬಳು ಸತಿಯು ನೋಡಲೊಬ್ಬನು ನೆಂಟ ಬೇಡಿದನು ಕೊಡುವ ನೃಪತಿಯು ಭಕ್ತಿಯ ಮಾಡಿದರಿಗುಂಟು (ಸರ್ವಜ್ಞ. ೨೯೩). ೯. ಲಕ್ಷ್ಯಕ್ಕೆ ತೆಗೆದುಕೊಳ್ಳು ; ಗಮನಿಸು ; ಎಣಿಸು : ಕ್ರಮಮಂ ವಿಕ್ರಮದಿಂದೆ ತಾಳ್ದುವ ಮಗಂ ಗಾಂಗೇಯನಿರ್ದಂತೆ ನೋಡ ಮರುಳ್ ಶಂತನು ತನ್ನದೊಂದು ಸವಿಗಂ ಸೋಲಕ್ಕಮಿತ್ತಂ ನಿಜಕ್ರಮಮಂ ತನ್ನಯ ಬೇಟದಾಕೆಯ ಮಗಂಗೆ (ಪಂಪಭಾ.೧-೭೧); ನೋಡಿರೆ ಪೇಟ್ವ ಮೂಱುವರೆ ಭಾಷೆಗಳಂ ಪೆಱರರ್ಥಮಂ ಪೆಱರ್ ಮಾಡಿದ ದೇಸೆಯಂ . . . ಕಡಂ ಮಾಡುವ ಕಳ್ವ ಕೊಳ್ವ ಖಳರಿರ್ಕೆಮ ಕಬ್ಬಿಗಗಳ್ಳರೆಂದು ಕೂಸಾಡಿಸಬಾರದಕ್ಕರದ ರಾಜ್ಯದೊಳೀ ಕವಿಚಕ್ರವರ್ತಿಯಾ (ಶಾಂತಿಪು. ೧೨-೭೭) ; ಪ್ರಜಾಕ್ಷೋಭಂಗಳಂ ನೋಡದೆಲ್ಲರು ವಿಶ್ವಾಸಿಗಳೆಂದು ನಂಬಿ ಬಹುದಂ ಪೋದಪ್ಪುದಂ ಕಾಣದಾತುರದಿಂದುಂಡತಿನಿದ್ರೆಗೆಯ್ದು ಮದನಂಗಾಳಾಗಿಹಂ ಲೋಕದೊಳ್ ದೊರೆಯೇ ಸೊಕ್ಕಿದ ಕೋಣನ್ನೆ (ಸೋಮೇಶ. ೫೫) ; ಹೀಹಾಳಿಗೆಡಿಸಿದೆನಂದು ಸಭೆಯಲಿ ಖೂಳನವಗುಣಶತವ ನೋಡದೆ ನಿಮ್ಮ ಮೆಱೆಯೆಂದ (ಕುಪ್ಯಾದ್ರೋ. ೧-೨೬) ; ಕೃತಿಯ ಪೇಳ್ವಾತ ಸಾಮಾನ್ಯನಹುದು ಕಾವ್ಯಪತಿ ಚಕ್ರಿ ಸಾಮಾನ್ಯನಲ್ಲ ಕೃತಿಗಾದಿನಾಥನ ಕೂರ್ತು ಕೇಳ್ವುದು ಕಾವ್ಯಕೃತನ ದೋಷವ ನೋಡಬೇಡ (ಭರಚ. ೧-೧೬). ೧೦. ಅನುಭವದಿಂದ ತಿಳಿ,—ಕಂಡುಕೊಳ್ಳು : ಮದುವೆ ಮಾಡಿ ನೋಡು, ಮನೆ ಕಟ್ಟ ನೋಡು (ಗಾದೆ).

ನೋಡಿ = ಗುಂಟ ; ಅನುಸರಿಸಿ : ಪಡುವಯ್ ಅಳರಿವದಿಯ್ಯೆ ಬ್ರ್ಯಳ್ಳಗಾಯ್ನೋಡಿ ನಡದುದು ಬೆಟ್ಟು ಪೊಟ್ಟಾಗ ಮೂಡಾಯ್ ನೋಡಿ ನಡದು (ಎಕ. IV, ಹಗ್ಗಡ. ೪-೯ ; ಸು. 750). **ನೋಡಿಕೊಳ್, ನೋಡಿಕೊಳ್ಳು** = ೧. ಕಾಣು ; ಈಕ್ಷಿಸು : ಬಾಲೆಯೊರ್ವಳು ತನ್ನ ಲಲಿತಗೇಹದ ಭದ್ರಶಾಲೆಯೊಳ್ ನಿಂದು ನುಣ್ಮೊಲೆಯ ಮೇಲಿಹ ಸೆಜಗ ಸಿದಿದು ನೋಡಿದಳು ರತಿಗೋಲೆಯ ನೋಡಿಕೊಂಬಂತೆ (ಮೋಹತ. ೧೮-೩೭). ೨. ಪರೀಕ್ಷಿಸು ; ಪರಿಶೀಲಿಸು : ಇದು ರತ್ನಭಂಡಾರವಿದು ಹೇಮಭಂಡಾರ . . . ಇದು ಪದಾತಿವ್ರಾತವಿದ ನೋಡಿಕೊಳ್ಳೆ [ಪಾಂಡಾ. ಕೋಯೆ] ನುತ್ತೊಪ್ಪಿಸಿದನಾ ಮುನಿಗೆ ಭೂನಾಥಕಂದರ್ಪನು (ಹಚಕಾ. ೯-೩) ; ಮುನ್ನಂ ತಾಂ ಬರೆಸಿ ಕಳುಹಿದ ಪತ್ರಮಂ ತರಿಸಿ ನೋಡಿ ಕೊಂಡದಱೊಳೆರ್ದ ಭಿನ್ನಿಸಿದ ಭಾವಾರ್ಥಮಂ ತಿಳಿದು . . . ಬಿಸುಸುಯ್ದು ಬೆಱಗಾದನು (ಜೈಮಿಭಾ. ೩೧-೩೫). ೩. ಮಾಡು ; ಆಚರಿಸು : ಆತನಂ ಕರೆವುದಕ್ಕೇನುಪಾಯಂ ನಾವು ಸೋತೆವೆನೆ ಬಂದಪಂ ಬಂದು ಪುಟವೆದ್ದು ಹರುಷಾತುರದಿ ಕದದೆಱೆದಪಂ ತೆಱೆದ ಬಳಿಕದಕೆ ತಕ್ಕುದಂ ನೋಡಿಕೊಂಬಂ (ಸೋಸುಚ. ೪-೬೦). ೪. ಹುಡುಕು ; ಅರಸು : ಸ್ತನ ಜಘನನ ಪೊತ್ತ ಪದಯುಗಳಕ್ಕೆ ಲೋಚನತಪ್ತಜಲವ ಸಿಂಪಿಸುತ ಘನ ಪರಿತಾಪದೆ ರತಿದೇವಿ ಬಂದಳು ಮನದೆಱೆಯನ ನೋಡಿಕೊಳುತ (ಮೋಹತ. ೯-೩೭). ೫. ಆರೈಕೆ, ಶುಶ್ರೂಷೆ, ಆದರೋಪಚಾರ ಮುಂತಾದುವುಗಳನ್ನು ಮಾಡು : ಮಡದಿಯನಾರೈವೆ ಮಕ್ಕಳಿಗುಣಿಸೀವೆ ಬಂದವರನು ನೋಡಿಕೊಳುವೆ (ಇಂಚಾಪ. ೫೯-೮೨). ೬. ಪ್ರತೀಕಾರಕ್ಕೆ ಸಿದ್ಧವಾಗಿರು ; ಪ್ರತ್ಯುಪಾಯಕ್ಕೆ ಸಮರ್ಥವಾಗಿರು : ನನ್ನ ಹತ್ತಿರಕ್ಕೆ ಬಾ, ನಿನ್ನನ್ನು ನೋಡಿಕೊಳ್ಳುತ್ತೇನೆ (ರೂಢಿ). ೭. ಮೇಲ್ವಿಚಾರಣೆ ನಡೆಸು ; ಉಸ್ತುವಾರಿ ಮಾಡು ; ಗಮನಿಸಿಕೊಳ್ಳು : ಅವನು ನಮ್ಮ ಕೋಟ, ಗದ್ದೆಗಳನ್ನು ನೋಡಿಕೊಳ್ಳುತ್ತಾನೆ (ರೂಢಿ). **ನೋಡುತ್ತೆ ಗೆಲ್ವ** = ನೋಡುತ್ತಿರುವಂತೆಯೇ ಗೆಲ್ಲುವವನು; ಬಹಳ ಬೇಗನೆ ಗೆಲ್ಲುವವನು ; ಅರ್ಜುನನ ಒಂದು ಬಿರುದು : ಎಂತಪ್ಪ ಮಾರ್ವಲಂಗಳುಮಂ ನೋಡುತ್ತೆ ಗೆಲ್ವುದಱಂ ನೋಡುತ್ತೆ ಗೆಲ್ವನುಂ . . . ಅರಿಕೇಸರಿಯುಮಾಗಿ . . . ಭೋಗಿಸಿದಂ ಗುಣಾರ್ಣವಂ (ಪಂಪಭಾ. ೧೪-೩೭ ಪ).

[ದೇ.॥ ತಮಿ. ಮಲ. ನೋಕ್ಕು ; ಕೊಡ. ಕೋತ. ನೊಟ್]

ನೋಡುಗ (ನಾ). ನೋಡುವವನು; ವೀಕ್ಷಕ : ಶಿಸ್ತು ಅಚ್ಚುಕಟ್ಟುತನ ಆ ಪಾಠಶಾಲೆಯಲ್ಲಿ ಬಂದು ನೋಡುಗರಿಗೆ ಒಳ್ಳೇ ಅಚ್ಚರಿಯಾಗುವಂತಿತ್ತು (ಗಳಗ. ೨೯) ; ಮೈಯ ಬಣ್ಣ ತೀರ ಕಪ್ಪು. ಮುಖವು ದುಂಡಗಿದ್ದು ಅದರಲ್ಲಿ ಎರಡು ಹೊಳೆವ ಕಣ್ಣುಗಳು ನೋಡುಗರನ್ನು ಬೆರಗುಗೊಳಿಸುತ್ತವೆ (ರಕ್ತಧ್ವ. ೧). [ನೋಡು+-ಗ$_2$]

ನೋಡುಗಂಡಿ (ನಾ). ಈಕ್ಷಿಸಲು ಅನುಕೂಲವಾದ ರಂಧ್ರ,—ತೂತು : "ನೋಡುಗಂಡಿ ; ಇಣಕುಗಂಡಿ" (Eye-hole. ಇಂಕನಿ).

[ನೋಡು + ಕಂಡಿ$_1$]

ನೋಡುಗಬೇರು (ನಾ). ಒಂದು ಬಗೆಯ ಮೂಲಿಕೆ : ನೋಡುಗ ಬೇರನ್ನು ಮೇಕೆಹಾಲಿನಲ್ಲಿ ಅರೆದು ಕುಡಿಯಲು ಕಲ್ಲು ಬೀಳುವುದು (ಸಕವೆ ಪರಿ ೪೯೬). [?+ಬೇರು(<ಬೇರ್)]

ನೋಡುಗುದುರೆ (ನಾ). (ಕೇವಲ) ಪ್ರದರ್ಶನಕ್ಕೆ ಅರ್ಹವಾದ ಕುದುರೆ : ನೋಡುಗುದುರೆಯಲ್ಲದದು ಸಂಗರಭೂಮಿಗೀಡಹ ಕುದುರೆಯಲ್ಲ ಗಡ ಕೇಡಹುದದಱಿಂದ ನಿನಗೆ ನೀನದಱ ಮಾತಾಡಬೇಡ (ಕುರಾಸಾಂ. ೯-೬೪). [ನೋಡು + ಕುದುರೆ]

ನೋತು 'ನೋನ್' ಪರಾ.

ನೋದನ (ನಾ). ೧. ಉತ್ತೇಜನಗೊಳಿಸುವುದು ; ಪ್ರೇರಣೆ ; ೨. ಮುಂದಕ್ಕೆ ತಳ್ಳುವುದು,—ನೂಕುವುದು. ೩. ಕತ್ತರಿಸುವುದು ; ತುಂಡುಮಾಡುವುದು. ೪. [ನ್ಯಾಯ] ಸಂಯೋಗದಲ್ಲಿ ಒಂದು ಬಗೆ ; ಶಬ್ದವಿರದ ಸಂಯೋಗ : ಸಂಯೋಗದಿಂದ ಉಂಟಾಗುವ ಸಂಯೋಗವು ಕೆಲವು ವೇಳೆ ಶಬ್ದವನ್ನು ಹುಟ್ಟಿಸುವುದು ; ಕೆಲವು ವೇಳೆ ಇಲ್ಲ. ಶಬ್ದವನ್ನು ಹುಟ್ಟಿಸಿದಾಗ ಇದು ಅಭಿಘಾತ ಎನಿಸುವುದು ; ಇತರ ವೇಳೆ ನೋದನ ಎನಿಸುವುದು (ಭಾತತ್ತ್ವ. ೩೦೦). [ಸಂ.]

ನೋದುಃಖ (ನಾ). ದುಃಖವಿಲ್ಲದುದು : ಅರ್ಯರಾರ್ಯಚರಿತರ್ ನೋಕರ್ಮ ನೋದುಃಖ ಭೀಷಣಮೆಂದುಂ ಸುರನಿರ್ವಿಶೇಷ ಸುಖ ಸರ್ವಸ್ವಂ ಕುರೂರ್ವೀತಳಂ (ಶಾಂತಿಪು. ೬-೧೨೨). [ಸಂ.]

ನೋನ್, ನೋನು (ಕ್ರಿ). ನೋಂಡ (ಭೂತಕೃ), ನೋಂತು, ನೋತು (ಭೂತನ್ಯೂ), ನೋಂಪ (ಭವಿಕೃ). ೧. ವ್ರತವನ್ನು ಕೈಕೊಳ್ಳು ; ವ್ರತವನ್ನು ಹಿಡಿ: "ನೋನ್—ವ್ರತಾಚರಣೆ" (ಶಮಭಾ); ಸಸಿಮತಿಶ್ರೀಗನ್ನಿಯರ್. . . ಕಟ್ಟಸ್ಥಿನೊಳ್ ತೊಜದಾರಾಧನೆ ನೋನ್ತು ತೀರ್ಥಗಿರಿ ಮೇಲ್ಸ್ವರ್ಗಾಲಯಕ್ಕೇಱುದಾರ್ (ಎಕ. II, ೭೬-೪ ; ಸು. 700) ; ಶ್ರೀಸರ್ವನನ್ದಿಭಟಾರರ್ . . . ಪಲಕಾಲನ್ತಪಂಗೆಯ್ದು ಸನ್ಯಾಸನ ನೋನ್ತು ಮುಡಿಸಿದರ್ (ಕಇಶ. ೭೧-೬-೪ ;881); ದಂಡಕರಿಸಿಯರ್ . . . ನೋಂಪಿಯಂ ನೋಂತು ವಿಹಾರಿಸುತ್ತಂ ಪೋಗಿ ನರ್ಮದೆಯ ತಡಿಯೊಳ್ ಮಾಮರದ ಕೆಱಗೆ ಸ್ವಾಧ್ಯಾಯಂ ಗೆಯ್ಯುತಿರ್ದರ್ (ವಡ್ಡಾರಾ. ೧೭೨-೧೩) ; ನೋನದೆ ಗುಣಾರ್ಣವನ ಪಡೆಯಲ್ಕೆ ತೀರ್ಗುಮೆ (ಪಂಪಭಾ. ೧-೧೩೬) ; ನೆರಪಲ್ಬಾರದ ವಿತ್ತಂ ದೊರೆಕೊಂಡುದು . . . ಮೆಚ್ಚದಂದದಿಂ ಭೋಗಿಸುವೆಂ ಎಂದು ಮನದೊಳ್ ಪಾಲ್ಬುಡಿದು ನೋಂಪಿಯಂ ನೋಂಪ ಕ್ರಮಮಂ ಪೇಱುಮೆನೆ ವೈಶ್ಯ ವಂಶಲಲಾಮನಿಂತೆಂದಂ (ಧರ್ಮಾಮೃ. ೧-೧೩೨) ; ಕೋಮಲಲತಾಂಗಿ . . . ದೃಢದಿಂದೆ ಹೈಮವತಿಯಂ ಕುಱುತು ಚಿರತಪವನೆಸಗುತ್ತ ಗೌರಿ ನೋಂಪಿಯ ನೋನಲು (ಪ್ರೌಢರಾ. ೧೦-೫೫). ೨. ಪುಣ್ಯಮಾಡು ; ಪುಣ್ಯವನ್ನು ಗಳಿಸು : ಎರೆದಿಂತಟ್ಟಲೆವೇಟ್ಟ ಕನ್ನೆ ಬಟಱಯಂ ಬಂದಳ್ ಮರುಳ್ಗಂಬುಹೋದರನಿಂತಟ್ಟದನಿಂತು ನೋಂತರೊಳರೇ ಸೈಪಿಂಗೆ (ಪಂಪಭಾ. ೫-೨೪); ಜಿನನಾಥರುಮೆಂದುಂ ಚಕ್ರನಾಥರುಂ ಕುಂದರೆನೆ ತದುರ್ವರೆಯುಮೊಲಾವ ನೆಲಂ ನೋಂತುದೊ ನಿರುಪಮಮೆನಿಪ ಪವಿತ್ರತೆಗಮನಿತು ನಕ್ಷತ್ರತೆಗಂ (ಚಂದ್ರಪ್ರ. ೧-೭೭); ಅನುಗುಣಕೆ ಪಡಿಯೆನಿಸಿ ತನ್ನಂ ತನಯನಾಗಲು ನೋಂತಳಬುಜಾನನೆಯ ಸುಕೃತವನೇನನೆಂಬೆನು (ಬಸವ. ೨-೫೭) ; ಎಳವರೆಯದೊಳೆಳೆಯರ್ಕಳನೆಳಸುತೆ ನಳಿದೋಳ್ಗಳಿಂದೆ ಬಿಗಿದಪ್ಪಿ ಮನಂಗೊಳೆ ತಳ್ತು ನೋಡಿ ಮುದ್ದಿಪ ವಿಳಾಸಮೊಂದಕ್ಕೆ ನೋಂತು ದಿಲ್ಲಾಂ ಕೆಳದೀ (ರಾಜಶೇ. ೩-೪೬) ; ವಿಷ್ಣುದೂತರಾ ತುಂಬುರನಂ ಕೆಯ್ವಿಡಿದು ಕರೆದುಯ್ಯೆ, ಸಿಮ್ಮೆಯ್ಯೋಳೇಂ ನೋಂತನೋ ! (ಅದ್ಭುತ. ೨೦-೧೨). **ನೋನು** : ೧. ಸರ್ವಾಧ್ವರಕೆ ನೋತವನದಾರು (ತುರಂಗ. ೩-೧). ೨. ಜನನದಂತಸ್ವಜಱಯದವರೇ ವೃದ್ಧರಿಗೆ ಈತನೆಂತು ಮಗನಾದನೆಂದೆಲ್ಲರುಂ ನಗಲು ನೋಂತೆನೆ (ಸಿದ್ಧರಾ. ೨-೫೦) ; ಸುರನರೋರಗರೊಳಗೆ ನಿಮ್ಮೈವರಿಗೆ ಸರಿಯಿಲ್ಲಬಲೆಯೊಬ್ಬಳ ಹರಿಬದಲಿ ಹಂಗಾದಿರೆಂಬಪದೆಸೆಗೆ ನೋನುವರೆ (ಕುಮಾಬಾ. ೬-೨೪) ; ಪೀತಾಂಬರತಲ್ಪದೊಳುರುಳ್ವೆಳೆಯನನೆತ್ತುವ ಭಾಗ್ಯಂ ಮುನ್ನಂ ನೋನದರ್ಗುಂಟೇ (ಜಯಕಾ. ೨-೩೬). ೩. ಆರಾಧನೆ ಮಾಡು ; ಪೂಜಿಸು ; ಅರ್ಚಿಸು : ಗೌರಿಯ ನೋನುವ ಬನ್ನರೇ (ಬಸವ. ೮೨) ; ಅತಿಮುಗುದೆಯಪ್ಪೆನ್ನ ಮಗಳ ಕಾಮಜ್ವರೋರ್ಜಿತ ತಾಪವಾಱದಡೆ ಕಾಮನಂ ನೋನುವೆಂ ರತಿಯನರ್ಚಿಸುವೆ (ಹಚಕಾ. ೪-೨೬) ; ಸೂನು ಬದುಕಿದಡಿಂದು ನಿನ್ನಂ ನೋನುವೆವು

ಗುಡ್ಡವ್ವೆ (ಬಸವ. ೪೮-೧೯); ಲಲನೆಯ ಸ್ಮರತಾಪವಿಳಿದಿರೆ ಚಂದ್ರನ ಬಲಗೊಂಡು ರತಿಯ ನೋನುವೆನು (ಜೀವಂಸಾಂ. ೧೨-೬೮).

[ದೇ.॥ ತಮಿ. ಮಲ. ನೋಲ್; ತೆಲು. ನೋಚು]

ನೋನಿಸು (ಕ್ರಿ). ವ್ರತವನ್ನು ಕೈಗೊಳ್ಳುವಂತೆ ಮಾಡು; ವ್ರತವನ್ನು ಹಿಡಿಸು: ಈಗಳ್ ನೀನಿರ್ದು ನೋನಿಸೆ ನೋಂಕು ಮಹಾಬಲಂ ಲಲಿತಾಂಗಂ . . . ಸರ್ವಾರ್ಥಸಿದ್ಧಿಯೊಳ್ ಪುಟ್ಟಿ ಭರತದೊಳಿನ್ನಾದಿ ದೇವನಪ್ಪೊಂ (ಆದಿಪು. ೨-೪೪); ಮನುಷ್ಯಕ್ಷೇತ್ರದಲ್ಲಿ ಪ್ರವರ್ತಿಸೆಂದಾಕೆಯನಯ್ತುದಿವಸಪರಿಯಂತರಂ ನೋನಿಸಲದಂ [ಪಾಶಾಂ. ವಿಸೆ ಅದಂ] ಕಂಡು ಸಂತುಷ್ಟರಾಗಿ ದೇವರ್ಕಳ್ ನಿಜನಿವಾಸಕ್ಕೆ ಪೋದರ್ (ಪುಣ್ಯಾಸ್ರ. ೧-೧೦೫ ವ); ಇಂದ್ರನ್ನೆರಾವತವ ಧರಣಿಗೆ ತಂದು ನಿಜಮಾತೆಯನು ನೋನಿಸಲೆಂದು ಫಲುಗುಣ ಕೀರ್ತಿವಡೆದನು ಮೂಜುಲೋಕದಲಿ (ಸಂಭವ. ೨೦ ಸೂಡನಿ). [ನೋನ್+-ಇಸು$_3$]

ನೋನು 'ನೋನ್' ನೋ.

ನೋಯಿಸು, ನೋವಿಸು, ನೋಹಿಸು (ಕ್ರಿ). ೧. ನೋವನ್ನುಂಟುಮಾಡು; ಬಾಧೆಪಡಿಸು: ಓವದೆ ಕಾಯದೆ ಕೂರಕರ್ಮದಿಂ ಸೊನೆ ಸುರಿವನ್ನೆಗಂ ಪಜಿಂದು ನೋಯಿಸಿ ಕಾಡಿದೆವಿನ್ನದೊಂದುಮಂ ನೆನೆಯದೆ ನೀನುಮಾಮುಮೊಡನಿರ್ದಿರವಂ ನೆನೆ ಬಾಳಜೂತಮೇ (ಆದಿಪು.೧೧-೧೨೮); ಅಲರಂ ನೋಯಿಸದೊಯ್ಯನೊಯ್ಯನಳಿಗಳ್ ಬಂಡುಣ್ಬುವು (ಸಂಪಭಾ. ೫-೮೧); ತನುವ ನೋಯಿಸಿ ಮನವ ಬಳಲಿಸಿ ನಿಮ್ಮ ಪಾದವಿಡಿದವರೊಳರೆ (ಬಸವ. ೪೦೬); ಅವ ಗಿಡುವಂ ನೋಯಿಸಿದಡಂ ಭಾವಿಸುವಡಿದು ಹಿಂಸೆಯೆನುತಂತೋವಿ ಹೂಗಿಡುಗಳ ಕೆಳಗೆ ಸುತ್ತುವರೆ ಸಾರಿಸುತ (ಬಸವ. ೩೬-೧೦); ಮಾಯೆ ಎನ್ನ ಕಾಯವನ್ನುಪಾಯದಿಂದ ನೋಯಿಸಿ ಬಾಯಿ ಮುಚ್ಚಿ ಕೊಲ್ಲುತಾಳೆ ಕಾಯೊ ಲಕ್ಷ್ಮಿಯರಸನೆ (ಪುರಂದ. ೧-೧೭೬-೧). ೨. ಗಾಯಗೊಳಿಸು; ಘಾಸಿ ಮಾಡು: ತಾಯಿ ಮಾತನು ಮೀಱಿ ನಿನ್ನನು ನೋಯಿಸಿದೆನದೆ ಸಾಕು ಜೀವವ ಕಾಯಿದೆನು ಬಿಟ್ಟೆನು ವೃಕೋದರ ಹೋಗು ಹೋಗು (ಕುಮಾ್ರವ್ರೋ. ೧೩-೬೪); ಕಾಕುತ್ಸ್ಥಂ ಕೆರಳ್ದು ಕುಶಲವರ ಮೇಲೆ ಎಚ್ಚೊಡಾ ಕೋಲ್ಗಳಂ ಬಾಲಕರ್ ಮಧ್ಯದೊಳ್ಕೊಚ್ಚಿ ರಾಮಣರಿಪುವಿನಂಗಮಂ ನೋಯಿಸಿದರ್ (ಜೈಮಿಭಾ. ೨೧-೩೪). ೩. ದುಃಖಪಡುವಂತೆ ಮಾಡು; ವ್ಯಥೆಗೊಳ್ಳುವಂತೆ ಮಾಡು: ಕಾಯಕ್ಲೇಶದಿನಡವಿಯ ಕಾಯಂ ಪಣ್ಣುಮನುದಿರ್ಪ ತಿಂದಗಲದೆ ನಿಂದೀ ಯಮಳರಾವ ತೆಜದಿಂ ನೋಯಿಸರಯ್ ನಿನ್ನ ಸನ್ನಿಕಾಜನ ಮನಮಂ (ಪಂಪಭಾ. ೭-೪೮); ದೇವಿ ನಿನ್ನ ಯುವರಾಜಂ ನಿನ್ನ ಕುಸುಮಸುಕುಮಾರಮಪ್ಪ ಮನವ ನೇತಜಜಂ ನೋಯಿಸಿದಂ (ಕಾದಂಬ. ೩೦೩); ಅಂತರ್ದೂಡದನೆ ದೋಷಂಗೆಯ್ದು ರೋಷಗ್ರಹಾವೇಶನಾಗಿ ನಿಷ್ಕಾರಣಂ ಪರಿಭವಿಸಿ ನೋಯಿಸಿದೆ (ಪಂಚತಂ. ೭೬-೧೦); ಮೃಡನನೊಂದವಸರಕೆ ಬಗೆಯದ ಕಡುಹುಕಾಱರು ನಿನ್ನವರು ಕೆಡೆನುಡಿದು ನೋಯಿಸಲೇತಕೆ (ಕುಮಾ್ರವ್ರೋ. ೧೩-೨೬); ನೋಯಿಸಿ ನುಡಿಸದೆ ನೋಡದುಚಿತಗಳ ಬೀಯವೆಸಗಿ ಬೇಸಱಸದೆ ಆಯವಜಱತು ತರಲಱಯದ ಪತಿಯೊಳಸೂಯೆಗೊಳದೆ ಸುಖಿಸುವುದು (ಹರಿಚಿ. ೩-೨೬). ೪. (ದೇಹವನ್ನು) ದಂಡಿಸು; ಶಿಕ್ಷಿಸು: ತನ್ನ ತಪದಿಂ ನೋಯಿಸದುನ್ನತಿಯ ದಿವ್ಯಭೋಗಮಂ ಬಯಸುವ ಗಾಂಪಂ ನೆಱೆ ಪೋಲ್ಕುಂ ಸಾಲಿಸದಿನ್ನಳಿಪಿಂ ಬಡ್ಡವೇಡಿ ಮಱುಗುವ ಮರುಳಂ (ಧರ್ಮಾಮೃ. ೬-೧೫೬). **ನೋವಿಸು**: ೫. ನೀವು ಮಾಡಿದ ಪಾಪ ನಿಮ್ಮನು ನೋವಿಸುವುದ್ಯೆ . . . ಸರ್ವಜ್ಞರಾದೊಡೆ ನೋವಿಸದೆ ಕಾಯೆಂದು ವಾಣೀದೇವಿಯರು ಕಳುಹಿದರು ಕಮಲಜನಾಜ್ಞೆಗೊಂಡವರ (ಸಂಭವ. ೫೫-೪). **ನೋಹಿಸು**: ೧. ಸಲೆ ಜಗತ್ರಯಂಗಳಂ ಮೋಹಿಸಿತು ನೋಹಿಸಿತು ಯತಿಗಳಂ ಮನಸಿಜನ ಬಾಣ ಸೌಭಾಗ್ಯವು ವಸಂತದೊಳಗೆ (ತುರಂಗ. ೮೧-೧೩).

[ನೋ+-ಇಸು$_3$]

ನೋಯು 'ನೋ' ನೋ.

ನೋರೆ (ನಾ). (?): ಬಿಡಿನಡುವಿನ ಪರ್ಮೊಲೆವೆಣ್ಗಳು ಹೋ ಹಿಡಿ ನೋರೆಗಳೊ [ಪಾಶಾಂ. ನೊರೆಗಳಲ್ಲೊ]ಗ್ಗಯ್ಯ ಪಿಡಿದರನೇಕ ಸತ್ವರಿಕರಗಳ ತಂದು ಬಡಿಸಿದರತಿವೇಗದಲಿ (ಮೋಹತ. ೧೪-೧೦). [?]

ನೋಪ್ಪುರ್, ನೊಪ್ಪು (ನಾ). ಸ್ಪರ್ಧೆ; ಪೈಪೋಟಿ (?): ಪುಸಿ ನಸುವಂಚನೆ ನೋರ್ಪನುವಸಿದಗಲಿತು ತಕ್ಕುದಕ್ಕು ಪಗೆ ಕೆಯ್ಯಗೆ ಕೆಯ್ಯುಸುರಿ ನುಸುಳೆಂಬ ಕೇಣದ ಕುಸುರಿಯನಱಿಂದಿಱದು ಮೆಱೆದು ನೆಱೆದುಱದರೆ ಬರ್ (ಪಂಪಭಾ. ೧೦-೮೧); ಕಿಱಿಪುವ ಗೇಣ ಕೇಣಮಿವರಿಂ ನವಯೌವನ ಯೋಗ್ಯಮಾಯ್ತು ಕಣ್ಣಱೆದುದು ರೂಪುಗೊಂಡುದನೆ ಚಾರಿ ಪುಗಿಲ್ ನೆಲೆ ನೋರ್ಪುರ ದಂಡೆ ಸೂಟ್ . . . ಎಂದಿವಂ ಮೆಱೆವೊಪಜರ್ಕಳೇಂ ಕಲಿಸುತರ್ಪರೊ ಚಟ್ಟರನಟ್ಟುವಟ್ಟರಂ (ಪುಷ್ಪಪು.೨-೬೧). **ನೊಪ್ಪು**: ಬೊಬ್ಬಿಱುವ ಬೇಡರರ ಕಳಕಳಿಸುವ ಬೇಡರಿಯರ ತುಮುಳರವದೊಳ್ ತೊಡರ್ದು ಪರಿವಂತೆ ಮನದೊಳ್ಕಟ್ಟರಿಸಿ ಪಾಱುವಂತೆ ನುಸುಳಂ ನೊಪ್ಪು ಮನಪ್ಪುಕೆಯ್ದು (ಅರ್ಧನೇ. ೬-೧೬ ವ). [?]

ನೋವಿ (ನಾ). = ನೋಂಪಿ: ಅವದಾವರ ಹರಿಫಲವನು ತೆಗೆದುಕೊಂಡು ನೀವಾನು ಅವರವರ ನೋವಿಯ ನೂತಂತೆ ಜೀವಗಳಿಗೆ ಭಿನ್ನಾದಿ ದೇವ ವಿಜಯವಿಠ್ಠಲನ್ನ ಭಾವದಲ್ಲಿ ತಿಳಿದು ಭಾಗವತರ ಕೇಳು (ವಿಸಾಸು. ೪೦-೭). [<ನೋಂಪಿ]

ನೋವಿಸು 'ನೋಯಿಸು' ನೋ.

ನೋವು (ನಾ). ೧. ಬೇನೆ; ಶೂಲೆ; ಬಾಧೆ: "ಕ್ಲಮಥು ಗ್ಲಾನಿಯೆಂದೆನಲು ನೋವೆನಿಕ್ಕುಂ" (ಮಂಗರಾ. ೧೧೩-೧); ನಡೆ ನಾರಾಚದ ನೋವಿನ ಸಡುಕಂ ಪಿರಿದಾಯ್ತು (ಪಂಪಭಾ.೧೨-೭೧); ಕೂರಂಬೊಂದು ಬಂದು ನಡೆ ನೋವಿಂ ಬಿದ್ದಂ ಸಾವ ಪೊತ್ತನಾವಂ ಬಲ್ಲಂ (ಧರ್ಮಾಮೃ. ೧-೨೦೯); ಶಿವಭಕ್ತರ ನೋವೆ ಅದು ಲಿಂಗದ ನೋವು (ಬಸವ. ೪೦೬); ಅನಿರೆ ಮಹಾದೇವ ನಿನಗೆ ನೋವಪ್ಪುದೇ (ಕಣ್ಣರ. ದೇ. ೧೪೭-೧೮); ಅಹಹ ಮುರಹರ ಪಾರ್ಥನಿಸುವ ಬಾಣಕೆ ನಿನ್ನ ಬಹಳಸುಕೃತವನಿತ್ತೆ ಲೇಸಾದುದಿದನಱಿಯಬಹುದೆ ನೋವಿಲ್ಲಲಾ ನಿನಗೆ (ಜೈಮಿಭಾ. ೧೩-೩೮). ೨. ದುಃಖ; ವ್ಯಥೆ; ಅಳಲು: "ತರ್ಜ-ವ್ಯಥನೇ, ನೋವಿನೊಳ್" (ಶಾಶಕ್ಯ. ೧೩); ಕೆಳೆಯುಂ ಗುಱಿಯುಂ ಗೊಟ್ಟೆಯುಮಳವಿಗೆ ಪಿರಿದಾಗೆ ತನಗೆ ದುರ್ಯೋಧನನೊಳ್ ಮುಳಿಸುಂ ನೋವುಂ ಕಲುಷಮುಮುಳುಂಬಮೆನೆ ತನಗರಾತಿಕಾಳಾನಳನೊಳ್ (ಪಂಪಭಾ. ೨-೫೮); ಯತೋಭದ್ರ ಮಕ್ಕಳಿಲ್ಲದೆ ನೋವಿಂ ಪಱುದು ಬಿಸುಟ್ಟೆಳಲೆತೊಲ್ ಕಱಂಗಿ ಕಡುಗಂದಿ ಕುಂದಿ ತೆಜಮಱಿದರ್ದಳ್ (ಸುಕುಮಾ. ೯-೯೬); ನೋವಂ ಮಾಗದಿ ಭಾರ್ಗವೊಳ್ಪನೊಳಕೊಳ್ (ಜೀವಸಂ. ೧೦-೧೫); ಇಳೆಯೊಳಿಂತಹ ಕರುಣವುಳ್ಳವರೊಳರೆ ಚರಜೀವಿಗಳಿಗೆಲ್ಲಂ ಬಳಿಕ ಸಾವುಂ ನೋವು ಸಂಯೆಂದುಲಿವುತಿರ್ದಪನು (ಬಸವ. ೨೬-೧೫); ನಿಮ್ಮಿಷ್ಟಸಿದ್ಧಿಯ ಬೆಳಸು ಫಲವಾಯ್ತೇಕೆ ನೋವಿನ್ನು (ಕುಮಾ್ರವ್ರೋ. ೬-೧೪); ನೋವು ಮಾಯ್ವುದು; ಸಂದೆಯಮಣಿಮಿಲ್ಲಂ (ರಾಮಾಶ್ವ. ೨-೧೬); ನೋವಿನಿಂದ ತುಂಬಿದ ಹುಡುಗರ ಈ ಗಾಂಭೀರ್ಯವನ್ನು ನೋಡಿ ದೊಡ್ಡವರಿಗೆ ಬಹಳ ದುಃಖವಾಗುತ್ತಿತ್ತು (ಕಳಹು. ೯೦);

[ನೋ+-ವು$_2$./ತಮಿ. ನೋವು, ನೊವ್ವು; ಮಲ. ತುಳು. ನೋವು; ತೆಲು. ನೊವ್ವಿ, ನೊವ್ವು, ನೋವಿ, ನೋವು; ಕುಇ. ನೋವ; ಕುವಿ. ನೋಹಿ; ಮಲ್ತೊ. ನುಂಜ; ಕೋತ. ನೊವ್; ತೊದ. ನು]

ನೋವುಗಂಟು (ನಾ). ಬಾಧೆಯಿಂದಾಗುವ ಗಂಟು ; ನೋವಿನಿಂದಾಗುವ ಗಂಟು : ಲೇಹ್ಯವನ್ನು ನೋವು ಆದ ಕಾಲಿಗೆ ಉಜ್ಜುವುದು. ಕೂಲೆ, ನೋವುಗಂಟು, ಮುಂಡುಬು ಇವು ಗುಣ (ವಿಷ್ಣು.೧೫೧). [ನೋವು+ಗಂಟು]

ನೋವುಣ್ಣು (ಕ್ರಿ). ನೋವನ್ನು ಅನುಭವಿಸು : ಹೆರರು ನೋವುಂಡರು ಬಂದೆವು ನಾವೆಲ್ಲ ಮತ್ತೆ ಹೋಪೆವು ನೊಂದು ನಾವೆ (ಇಂಚಾಪ. ೧೩೧-೪೫). [ನೋವು+ಉಣ್ಣು (<ಉಣ್)]

ನೋಸಂಸಾರ (ನಾ). ಸಂಸಾರವಿಲ್ಲದುದು : ಚತುರ್ಗತಿಭ್ರಮಣಮುಂ ಸಂಸಾರಾವಸಾನಪ್ರಾಪ್ತಿಯುಂ ಇಲ್ಲಪ್ಪುದಱಂ ಸಯೋಗಕೇವಲಿಜಿನಾವಸ್ಥಾನಂ ನೋಸಂಸಾರಂ (ತತ್ತ್ವಪ್ರ. ೩೨೬). [ಸಂ.]

ನೋಹಿ 'ನೋಂಪಿ' ನೋ.

ನೋಹಿಸು 'ನೋಯಿಸು' ನೋ.

ನೋಳ್ (ಕ್ರಿ). ನೋಳ್ದು2 (ಭೂತನ್ಯೂ). ೧. ಮುಂದೆ ನುಗ್ಗು ; ಮುಂದುವರಿ : 'ನೋಳಿಸು' ಪರಾ. ೨. ಮುಂದಾಳಾಗು ; ಮುಂದಾಳುತನವನ್ನು ವಹಿಸು ; ಅಗ್ರಗಾಮಿಯಾಗು : "ನೋಳ್—ಅಗ್ರಗಮನೇ (ಮುಂದರಿ)" (ಶಮುಧಾ) ; ನೋಳ್ದನೆನೆ ಮುಂದೆ ಪೋದಂ (ಸಂಜೀವ. ೨೫) ; ಜನ್ನಗುಡುರೆ . . . ನೆಲ್ಲಿಯ ಕಂಳೆಲ್ಲಿಯ ನೇಜಾಲ ನೆಲಿಂ ಕಟ್ಟಲಿಸಿದ ಪಟುವೊಕ್ಕೊಂದು ಪಟ್ಟಲಂ ನುಗ್ಗಿ ನೋಳ್ದು ಪೊದಱಂ ಪಾಯ್ದು . . . ಮುಚಿಯಜಿಯೊಳ್ ತಾಂಟಿದನ್ (ರಾಮಾಶ್ವ. ೧೩೫-೨೭). [?]

ನೋಳಿಯ (ನಾ). (ಕರಾ) ನೆಲದಡಿಯಲ್ಲೇ ಗಿಡಗಳ ಬುಡವನ್ನು ಕತ್ತರಿಸುವ ಒಂದು ಬಗೆಯ ಹುಳು. [?]

ನೋಳಿಸು (ಕ್ರಿ). ಮುಂದೆ ನುಗ್ಗಿಸು ; ವೇಗವಾಗಿ ಮುಂದುವರಿಯುವಂತೆ ಮಾಡು : ಕಾರ ಕರ್ಮುಗಿಲೊಡ್ಡಿನಲ್ಕೆಡ್ಡ ಮೆಸೆವ ಪೇರಾನೆಗಳ ಘಟಿಯಂ ನೋಳ್ಪಿ[ಪಾಠಾಂ.ನೊಳ್ಪಿ]ಸುತುಂ (ರಾಸೂಶ್ವ. ೯೦-೨೨). [ನೋಳ್+-ಇಸು]

ನೋಳ್ದು1 (ಕ್ರಿ). ೧.=ನೋಳ್ ೧ : ಕಳರಿ ವಿರಹಿನ್ಯಂದಂ ಪುಟ್ಟಿತಾ ಶೋಕದಿಂದಂ ಕಳರೆ ಕುಸುಮಜಾಳಂ ಬಾಳಜೂತಪ್ರವಾಳಂ ಪೊಳೆಯೆ ಪುಟಿಲ ತಣ್ಪಂ ನೋಳ್ದ ಕಟ್ಟಿಸಿ ಬಿನ್ಪಂ ಬಳೆಯೆ ಮುದನದಾಹಂ ದೀಸುಗುಂ ಗಂಧವಾಹಂ (ಕಾವ್ಯಾವ. ೫೫೮) ; ನೋಳ್ದನೆಂದಿದಿರ್ಚ ನಡೆದಂ (ಶಮುದ. ಪರಿ.೧). ೨.ಬಳಿಸಾರು;ಸವಿಸಾಪಿಸು: ನೋಳ್ದಿಕೊಂಡು ಬೆನ್ನೊಳ್ಳಿಲ್ಲಂ ಗಾಂಡೀವಿ (ಶಮುದ. ೨೪೧ ಪ್ರಯೋ). [<ನೋಳ್]

ನೋಳ್ದು2 'ನೋಳ್' ಪರಾ.

ನೋಳ್ಪು (ಕ್ರಿ). ಮುನ್ನುಗ್ಗು ; ಎದುರಿಸಿ ನಡೆ ; ಪ್ರತಿಭಟಿಸಿ ನಡೆ : "ನೋಳ್ಪೆದಂ=ಇದಿರ್ಚ ನಡೆದಂ" (ಶಮುದ. ಸಂ. ೨).

[ನೋಳ್+-ಪು]

ನೌ (ನಾ). ೧. ಹಡಗು; ದೋಣಿ : "ನೌ ತರಣಿ ಯಾನಪಾತ್ರಂ ಪೋತಂ ಪ್ರವಹಣಮನಿಪ್ಪುದಱಿಗೆ ವಹಿತ್ರಂ" (ಸಮ್ಯಕ್ತ್ವ.೨೩-೧೦) ; ಔಕಾರಕ್ಕೆ — ನೌಪತೇಜಾದಂ ; ಗ್ಲೌಪಂ ನೋಡಿದಂ (ಶಮುದ. ೫೫ ಪ್ರಯೋ) ; ತರಳಕರಾಳನಿಸ್ತುತರಂಗಸುರಂಗನಗೋತ್ಕರೇಭಮಿಸ್ತರಬಹು ವಾರಿಜಂತುಭಟನೌರಥವ್ಯಂದನಸಮನ್ವಿತಾಬ್ಧಿ ಭೂವರನಖಿಳೋರು ಭೋಜ ನವಭೇರಿಯ ರಾವದೆ ಬಂದು ನಿಂದಿರಲ್ (ಹರಿಶ್ಚ. ೧-೧೪-೨೭). ೨. ಒಂದು ನಕ್ಷತ್ರಪುಂಜ : 'ನೌಭವ', 'ನೌಯೋಗ' ಪರಾ. [ಸಂ.]

ನೌಕರ, ನವುಕರ, ನೋಕರ (ನಾ). ವೇತನವನ್ನು ಪಡೆದು ಸೇವಾವೃತ್ತಿಯಲ್ಲಿರುವವನು ; ಚಾಕರ ; ಕರ್ಮಚಾರಿ : ಗ್ರಾಮಾಧಿಕಾರಿಗಳು ಮತ್ತು ಗ್ರಾಮನೌಕರರು ೪ ವಿಧಗಳಾಗಿ ವಿಂಗಡಿಸಲ್ಪಟ್ಟಿರುವರು (ಗ್ರಾಮಾಕ. ೧) ; ಹಾಗಾದರೆ ಆಫೀಸಿನಲ್ಲಿ ಕೆಲಸ ಮಾಡುವ ನೌಕರರ ಗತಿ ? (ಮುಗಮಾಂ. ೬೧). **ನವುಕರ** : ಗ್ರಾಮಮುನಸಿಫನ ಹುಕುಂ ಮೇರೆಗೆ ನಡೆಯುವುದು ಸಹ ವಾಡಿಕೆಯಾಗಿ ಕಾಗದಪತ್ರಗಳನ್ನು ತೆಗೆದುಕೊಂಡು ಹೋಗುವ ಗ್ರಾಮನವುಕರನ ಕರ್ತವ್ಯವಾಗಿರತಕ್ಕದ್ದು (ಗ್ರಾಮಾಕ. ೧೯). **ನೋಕರ** : ನಿನ್ನ ಮುತ್ತಜ್ಜನು ಸರಕಾರೀ ನೋಕರನಾದ್ದನೇನು ? (ಉದಪ್ರ. ೫). [←ಪಾರ. ಹಿಂ. ನೌಕರ್ ; ಮರಾ. ನೌಕರ್, ನೋಕರ್]

ನೌಕರವರ್ಗ (ನಾ). ಸೇವಕವರ್ಗ ; ಸಿಬ್ಬಂದಿ : "ನೌಕರವರ್ಗ, ಸಿಬ್ಬಂದಿ" (Staff. ಪತ್ರಿನಿ. ೭೭). [ನೌಕರ+ವರ್ಗ]

ನೌಕರಶಾಹಿ, ನೌಕರಷಾಹಿ (ನಾ). ಸರ್ಕಾರೀ ಹುದ್ದೇದಾರರಲ್ಲಿ ಅಧಿಕಾರವು ಕೇಂದ್ರೀಕೃತವಾಗಿರುವ ಆಡಳಿತ ; ಅಧಿಕಾರಿಗಳ ಆಡಳಿತ : 'ನೌಕರಶಾಹೀಸರಕಾರ್' ಪರಾ. **ನೌಕರಷಾಹಿ** : ಮುಸಲ್ಮಾನರ ಆಳುಂತಸ್ಯಾಮ್ಯ ಸ್ವಚ್ಛಂದಪ್ರಭುತ್ವ ಮತ್ತು ನೌಕರ ಷಾಹಿಯ . . . ಪರಿಣಾಮವಾಗಿ, ಜೀವನದಲ್ಲಿ ಸಂಕಟಗಳೂ ದಾರುಣವಾದ ವೇದನೆಯೂ ತಲೆದೋರಿದವು (ಭಾರದ. ೩೭೩). [←ಪಾರ.ಹಿಂ. ನೌಕರಶಾಹೀ;ಮರಾ. ನೌಕರಶಾಹೀ, ನೋಕರಶಾಹೀ]

ನೌಕರಶಾಹೀಸರಕಾರ (ನಾ). ಸರ್ಕಾರೀ ಹುದ್ದೇದಾರರಲ್ಲಿ ಆಡಳಿತದ ಅಧಿಕಾರವು ಕೇಂದ್ರೀಕೃತವಾಗಿರುವ ಸರಕಾರ ; ಅಧಿಕಾರಿಗಳು ಆಡಳಿತ ನಡೆಸುವ ಸರಕಾರ : ಆ ಅವಧಿಯಲ್ಲಿ . . . ನೌಕರಶಾಹೀಸರಕಾರವು ಹೆಚ್ಚಿನ ಅಡ್ಡಿ ತಡೆಗಳನ್ನು ತಂದೊಡ್ಡಲಿಲ್ಲ (ರಾಜವ. ೪೬). [ನೌಕರಶಾಹಿ+ಸರಕಾರ್(<ಸರ್ಕಾರ)]

ನೌಕರಷಾಹಿ 'ನೌಕರಶಾಹಿ' ನೋ.

ನೌಕರಿ, ನವಕರಿ, ನವುಕರಿ, ನೋಕರಿ (ನಾ). ಉಪಜೀವನಕ್ಕಾಗಿ ಹಿಡಿದ ಸೇವಾವೃತ್ತಿ,—ಉದ್ಯೋಗ : ಶ್ರೀಮನ್ಮಹಾರಾಜರವರು . . . ಅಯಾ ನೌಕರಿಗಳಿಗೆ ಯೋಗ್ಯರನ್ನು ನೇಮಿಸುತ್ತ ಬಂದರು (ಮಹಾವಂ. II, ೩೮) ; ಅವನಿಗೆ ನೌಕರಿಯು ಮೇಲೆ ಅಸ್ಥಿ ಇರಲಿಲ್ಲ (ರಂಗರೋ. ೬೦);ಅರಂಭ ಬುಡ ಕಷ್ಟ, ವ್ಯಾಪಾರ ತುದಿ ಕಷ್ಟ, ನೌಕರಿ ಯಾವಾಗಲೂ ಕಷ್ಟ (ಗಾಪ). **ನವಕರಿ** : ಕಾಲೇಜಿನ ಮುಟ್ಟಿಲನ್ನು ಇಳಿಯುವಷ್ಟರೊಂದೇ ಸಹ ನವಕರಿಯಲು ಸಿಕ್ಕಿತು (ವಾಸನಾ. ೯) ; ಇಂಥ ಕಾಲದಲ್ಲಿ ಬಾಬಣ್ಣ ನವಕರಿ ಕಳೆದುಕೊಂಡು ಮನೆಗೆ ಮರಳಿದ್ದ (ಆಕೋಳ. ೧೬೬). **ನವುಕರಿ** : ನನ್ನ ಭಾವ-ಮೈದುನರಿಗೆ . . . ಒಂದು ನವುಕರಿ ದೊರೆಯುವಂತೆ ಮಾಡು (ಹನ್ನೊಂದ. ೧೩೫) ; ಸೋದರಮಾವ ಕೊಡಿಸಿದ ನವುಕರಿ, ರಾಜಾಮಿಲ್ಲಿನಲ್ಲಿ ಫೋರ್‌ಮನ್ ಕೆಲಸ (ಜೆಂಗಬ. ೧೬). **ನೋಕರಿ** : ನೋಕರಿಗಾಗಿ ಕೋರಾಣ್ಯ ಮಾಡಿದರೂ ಹೋಗೆಯಲ್ಲೇನೂ ದೀಕಲಿಲ್ಲ (ಮೂಮೋ. ೪) ; ನನಗೇನು ನೋಕರಿ ಬ್ಯಾಡಾಗ್ಯದೇನು ? (ಸೀಸಮು. ೩೧೪). [←ಪಾರ. ಹಿಂ. ನೌಕರೀ ; ಮರಾ. ನವಕರೀ]

ನೌಕಾಂಗಣ (ನಾ). ಹಡಗನ್ನು ನಿರ್ಮಿಸುವ ಹಾಗೂ ದುರಸ್ತು ಮಾಡುವ ಸ್ಥಳ : "ಹಡಗುಕಟ್ಟೆ, ನೌಕಾಂಗಣ" (Ship yard. ಪತ್ರಿನಿ. ೭೫). [ಸಂ.]

ನೌಕಾಗಾರ (ನಾ). (ಸಮುದ್ರದಲ್ಲಿ) ಹಡಗುಗಳನ್ನು ಭರ್ತಿ ಮಾಡುವುದಕ್ಕೂ, ಅವುಗಳಿಂದ ಸಾಮಾನು ಇಳಿಸುವುದಕ್ಕೂ ಅಥವಾ ಅವನ್ನು ದುರಸ್ತುಮಾಡುವುದಕ್ಕೂ ಅನುಕೂಲಿಸುವಂತೆ ನೀರನ್ನು ಒಳಕ್ಕೆ ಬಿಡುವುದಕ್ಕಾಗಲಿ ಹೊರಕ್ಕೆ ಹೊರಡಿಸುವುದಕ್ಕಾಗಲಿ ತಕ್ಕ ಬಾಗಿಲುಗಳೆ ಏರ್ಪಾಟುಳ್ಳ ಹೊಂಡದಂಥ ಕಟ್ಟೆ; ಹಡಗುಕಟ್ಟೆ : (Dock. ಇಂಪತ್ರ). [ಸಂ.]

ನೌಕಾದಂಡ (ನಾ). ಹರಿಗೋಲು, ದೋಣಿ ಮುಂತಾದುವನ್ನು ನಡೆಸುವ ಗಳೆ; ಹುಟ್ಟು: "ನೌಕಾದಂಡಃ, ಕ್ಷೇಪಣೀ-೨ ಹಡಗು ನಡಿಸುವ ಗಡೇ ಹೆಸರುಗಳು. ಅಂದರೆ ಹಡಗು ಮುಂದಕ್ಕೆ ಹಾಯುವಂತೆ ಕೆಳಗಡೇ ನೀರನ್ನು ಹಿಂದಕ್ಕೆ ತಳ್ಳುವ ಮರಮುಟ್ಟು ಸಾಮಾನು" (ಸಿದ್ಧಾಂತಿ. ೭೯). [ಸಂ.]

ನೌಕಾಧಿಕರಣ (ನಾ). ನೌಕಾಪಡೆಯ ನ್ಯಾಯಪೀಠ: ಈ ಸೂಚಿಯಲ್ಲಿನ ಯಾವುದೊಂದು ವಿಷಯವನ್ನು ಕುರಿತು . . . ನ್ಯಾಯಾಲಯಗಳ ಅಧಿಕಾರವ್ಯಾಪ್ತಿ ಮತ್ತು ಶಕ್ತಿಗಳು; ನೌಕಾಧಿಕರಣದ ಅಧಿಕಾರವ್ಯಾಪ್ತಿ (ಭಾಧಾನ. ೨೮೭). [ಸಂ.]

ನೌಕಾನಯನ (ನಾ). ಹಡಗನ್ನು ನಡೆಸುವಿಕೆ. [ಸಂ.]

ನೌಕಾಪಡೆ (ನಾ). ಹಡಗಿನ ಮೂಲಕ ಸಮುದ್ರದ ಮೇಲೆ ಯುದ್ಧ ಮಾಡುವ ಸೇನೆ; ನೌಕಾದಳ: ಅವರ ಕಷ್ಟಕರವಾದ ಈ ದೀರ್ಘಪ್ರಯಾಣದಲ್ಲಿ ನೌಕಾಪಡೆಯಲ್ಲಿದ್ದ ಆರುನೂರುಜನರಲ್ಲಿ ಎಂಟು ಜನ ಬಿಟ್ಟು ಉಳಿದವರೆಲ್ಲರೂ . . . ಸತ್ತು ಹೋದರು (ಪ್ರವಾಇ. II,೯). [ಸಂ. ನೌಕಾ+ಪಡೆ$_2$. / ℙ ಈಚೆಗೆ ಕನ್ನಡದಲ್ಲಿ 'ಕೈಗಾರಿಕಾಇಲಾಖೆ', 'ನೌಕಾಪಡೆ', 'ಸಲಹಾ ಸಮಿತಿ'-ಇಂತಹ ಅನೇಕ ಪದಗಳು ನಿರ್ಮಾಣವಾಗುತ್ತಿವೆ. ಇವು ವ್ಯಾಕರಣವಿರೋಧವಾದರೂ ಪ್ರಯೋಗಪ್ರಸಿದ್ಧವಾಗಿವೆ]

ನೌಕಾಪರಿವಹಣ (ನಾ). ಹಡಗುಗಳ ಚಲನವಲನ; ನೌಕಾ ಸಂಚಾರ: ಯಂತ್ರದಿಂದ ನಡೆಯಿಸುವ ಜಲಯಾನಗಳ ವಿಷಯದಲ್ಲಿ ಸಂಸತ್ತಿನಿಂದ ರಾಷ್ಟ್ರೀಯ ಜಲಪಥಗಳೆಂದು ಘೋಷಿತವಾದ ಒಳನಾಡಿನ ಜಲಪಥಗಳ ಮೇಲೆ ನೌಕಾವಹನ ಮತ್ತು ನೌಕಾಪರಿವಹಣ; ಅಂಥ ಜಲಪಥಗಳಲ್ಲಿ ಪಥನಿಯಮ (ಭಾಧಾನ. ೨೮೦). [ಸಂ.]

ನೌಕಾಬಲ (ನಾ). = ನೌಕಾಪಡೆ: "ನೌಕಾಬಲ, ಹಡಗುಪಡೆ" (Navy. ಪತ್ರಿನಿ. ೫೭). [ಸಂ.]

ನೌಕಾಯಾನ (ನಾ). ಹಡಗಿನ ಪ್ರಯಾಣ; ಜಲಯಾನ: (Navigation. ಪತ್ರಿನಿ. ೫೭). [ಸಂ.]

ನೌಕಾರೋಹಿ (ನಾ). ನಾವಿಕ: ನೌಕಾರೋಹಿಗಳ ಗದ್ದಲವು ಮತ್ತಷ್ಟು ಹೆಚ್ಚಾಯಿತು. ಯುವಕನು ಅವರನ್ನು ಸ್ವಲ್ಪ ಸಮಾಧಾನಗೊಳಿಸಿ, ನೌಕೆಯನ್ನು ನಡೆಯಿಸುತ್ತಿದ್ದವರನ್ನು ಕುರಿತು . . . ಹೇಳಿದನು (ಕಪಾಕುಂ. ೪). [ಸಂ. ನೌಕಾರೋಹಿನ್]

ನೌಕಾವಹನ (ನಾ). ಹಡಗುಗಳ ಸಂಚಾರ: ಒಳನಾಡಿನ ಜಲಪಥಗಳ ಮೇಲೆ ನೌಕಾವಹನ ಮತ್ತು ನೌಕಾಪರಿವಹಣ; ಅಂಥ ಜಲಪಥಗಳಲ್ಲಿ ಪಥನಿಯಮ (ಭಾಧಾನ. ೨೮೦). [ಸಂ.]

ನೌಕಾಶ್ರಯ (ನಾ). ಹಡಗುಕಟ್ಟೆ; ಬಂದರು: ಆಸ್ಟ್ರೇಲಿಯದ ಸಿಡ್ನಿ ನೌಕಾಶ್ರಯ (Harbour)ದಲ್ಲೂ ಈ ರೀತಿಯ ಭಾರಿ ಎರಡು ಸೇತುವೆಗಳಿವೆ (ಬಾಲಪ್ರ. I, ೨೮೮). [ಸಂ.]

ನೌಕಾಸ್ಫೋಟ (ನಾ). ಹಡಗಿಗೆ ಗುರಿಯಿಟ್ಟು ನೀರಿನೊಳಗಡೆಯಿಂದ ಪ್ರಯೋಗಿಸುವ, ಅದಕ್ಕೆ ತಗುಲಿದೊಡನೆ ಸಿಡಿಯುವ, ಸಮುದ್ರದ ತಳದಲ್ಲಿ ನೆಟ್ಟ, ಚುಟ್ಟದ ಆಕಾರದ ಸ್ವಯಂಚಾಲಿತ ಅಸ್ತ್ರ: "ಕಡಲ ತಳದಲ್ಲಿ ನೆಟ್ಟ ನೌಕಾಸ್ಫೋಟ; ಹಡಗುಕೊರೆ" (Ground-Torpedo. ಇಂಕನಿ). [<ಸಂ. ನೌಕಾಸ್ಫೋಟ]

ನೌಕೆ (ನಾ). ೧. ಹಡಗು; ನಾವೆ; ದೋಣಿ: ಪ್ರೇಮ ತುಂಬಿದ ದಾಂಪತ್ಯ ಜೀವನವೇ ನೌಕೆಯಾಗುವುದು (ಕನ್ನಜಾ. ೧೧೯); ನಾನು ಮುಳುಗುವ ನೌಕೆ ನಾವಿಕ ಆಡಿಯ ಕಡಲಿದೊ ಭೀಕರ (ಮಾನಸ. ೪೧-೧). ೨. ಒಂದು ನಕ್ಷತ್ರಪುಂಜ: ಇದಕ್ಕೆ ಪಶ್ಚಿಮದಲ್ಲಿರುವ ಗಣವೇ 'ನೌಕಾ' (Argo) ಎಂಬ ಪುಂಜ (ಜ್ಯೋತಿರ್ವಿ. ೪೮). [ಸಂ. ನೌಕಾ]

ನೌಕ್ಕಿಗೆಱೆ (ನಾ). ಒಂದು ಸ್ಥಳದ ಹೆಸರು: ತತಃ ನೌಕ್ಕಿಗೆಱೆ ದಕ್ಷಿಣನ್ತ ಭಾಗತತಃ ತೇನನ್ಹಾಕಗೆಱೆ ದಕ್ಷಿಣಾನ್ತ ಭಾಗತತಃ (ಮೈಆರಿ. ೧೯೪೨, ೭೫-೧೧೬; 819). [?]

ನೌತಾರ್ಯ (ನಾ). ನೌಕಾಯಾನಕ್ಕೆ ತಕ್ಕುದಾದುದು; ಹಡಗು ಸಂಚಾರಕ್ಕೆ ಯೋಗ್ಯವಾದುದು: "ನೌತಾರ್ಯಂ ನಾವ್ಯಂ" (ಸಸ್ತುಕೋ. ೧೧೦-೭೨). [ಸಂ.]

ನೌದಂಡ (ನಾ). = ನೌಕಾದಂಡ. [ಸಂ.]

ನೌಪತ್ತು 'ನೌಬತ್ತು' ನೋ.

ನೌಪೂರಿ 'ನಪಿರಿ' ನೋ.

ನೌಬತ್ 'ನೌಬತ್ತು' ನೋ.

ನೌಬತು 'ನೌಬತ್ತು' ನೋ.

ನೌಬತುಖಾನೆ (ನಾ). ನೌಬತ್ತುಗಳನ್ನು ಬಾರಿಸುವ ಸ್ಥಳ: ಅಷ್ಟರಲ್ಲಿ ನೌಬತುಖಾನೆಯೊಳಗೆ ನೌಬತು ಬಾರಿಸಹತ್ತಿತು. ಕೊಂಬು, ತುತೂರೆಗಳು ಊದಹತ್ತಿದವು (ಭತ್ರಪ. ೧೩೭). 'ನವಪತ್ತುಖಾನೆ' ಪರಾ. [ನೌಬತು(<ನೌಬತ್ತು)+ಖಾನೆ]

ನೌಬತ್ತು, ನಪತ್ತು, ನವಪತ್, ನವಪತ್ತು, ನವಬತ್ತು, ನವುಬತ್ತು, ನೌಪತ್ತು, ನೌಬತ್, ನೌಬತು (ನಾ). ಒಂದು ಬಗೆಯ ಚರ್ಮವಾದ್ಯ; ಅರಮನೆ, ದೇವಾಲಯ ಮೊದಲಾದುವುಗಳ ಮುಂದೆ ನಿಗದಿಯಾದ ಸಮಯಕ್ಕೆ ಬಾರಿಸುವ ನಗಾರಿ: ಆ ನಳರಾಜನ ಮಂದಿ ಮಾರ್ಬಲ ನಗಾರಿ ನೌಬತ್ತು ಮ್ಯಾಳ ತಾಳದಿಂದ ಬರುವ ವಿಸ್ತಾರಮಂ ಪೇಳ್ವೆನು (ಯನಳ. ೩೮); ನಗಾರಿ, ನೌಬತ್ತು, ಚೌಗಡಗಳು ಪ್ರತಿಧ್ವನಿಗೊಡಬೇಕು (ಕನ್ನಜಾ. ೯); ನಗಾರಿ ನೌಬತ್ತುಗಳನ್ನೂ, ಇವರು ಕಳುಹಿಕೊಟ್ಟದ್ದಕ್ಕಿಂತ ಇಮ್ಮಡಿಯಾಗಿ ನೀರಾಜಿ ಖಿಲ್ಲತ್ತು ನವರತ್ನಾಭರಣಗಳನ್ನೂ . . . ಕಳುಹಿಸಿ ಕೊಟ್ಟರು (ಮಹಾವಂ. I, ೧೪೪). **ನಪತ್ತು**: ಆನೆ ಕುದುರೆ ಕೈವಾಡದ ಜನರು ದೇವಸ್ಥಾನದಲ್ಲಿ ೪ ವೇಳೆ ನಪತ್ತು ಮುಂತಾದ ಕೆಲಸಗಳಲ್ಲಿ ನೆಲೆಗೊಂಡಿರುವ ಜನಗಳ ಜೀವನ (ಚಾಮವಂ. ೨೮೨). **ನವಪತ್**: ರಾಜಬಿರುದುಗಳು ನವಪತ್, ಮೋರ್ಚಾಲೆ, ಸೂರ್ಯಪಾನ . . . ಆಪ್ತಾಗಿರಿ (ಗುರುವ.೧೦). **ನವಪತ್ತು**: ಪಟಹ ಡಿಂಡಿಮ ಢಕ್ಕ ಕಹಳೆ ನವಪತ್ತುಗಳ್ . . . ಚಟುಲಮಾದೋಲಗಗಳುಂ ಕೂಡಿ ಸಕಲದಿಕ್ತಟಗಳೋಳ್ಮೊಳಗುತಿವೆ (ಅರ್ಚಾವಿ. ೨೪-೩೧); ನಾಗಾರಿ ನುಡಿದಾವು ನವಪತ್ತು ನುಡಿದಾವು ಬೇಗ ತಿರಗೀ ಬೇಗ (ಹುಟ್ಟಹ. ೨೪). **ನವಬತ್ತು**: ಎಡೆವಿಡದೆ ಪಗಲಿರುಳ್ ಮೂರುದಿನಂಬರಂ ನವಬತ್ತುಗಳ ನಿನಾದಮಂ ಪೂರ್ಣಂಗೆಯ್ಸಿ (ಕೆಳನ್ನ. ೧೦-೬೧). **ನವುಬತ್ತು**: "ನವುಬತ್ತು—ನಗಾರಿಯಂಥವಾದ್ಯ" (ಜಾನಕೋ. ೯). **ನೌಪತ್ತು**: ಈ ಎರಡು ಕಡೆಯಲ್ಲಿಯೂ ಪೂಜೆ ಮತ್ತು ನಾಲ್ಕುವೇಳೆ ನೌಪತ್ತು ನಡೆವಂತೆ ಕಟ್ಟಳೆ ಮಾಡಿದರು (ಮಹಾವಂ. II, ೧೪೬); ರಾಯಭಾರಿಯು . . . ಪದ್ಧತಿಯಂತೆ ನಗಾರಿ ನೌಪತ್ತುಗಳ ಸಮೇತ ಅರಮನೆಯನ್ನು ಪ್ರವೇಶಿಸಿದನು (ಪ್ರವಾಇ. II, ೪೦೫); ನಗಾರಿ ನೌಪತ್ತುಗಳ 'ಬಾಜಾಬಜಂತ್ರಿ'ಯೊಂದಿಗೆ ದುರ್ಗಾಪೂಜೆ ಸಾಂಗವಾಗಿ ಶಾಸ್ತ್ರೋಕ್ತವಾಗಿ ನಡೆಯುತ್ತದೆ (ಬೆಳುಸು. ೧೧೧). **ನೌಬತ್**: ಜಯಜಯವೆನ್ನುತ ಬಿರುದುಗ್ಗಡಿಸಲು ವಂದಿಗಳೊಲವಿಂದ ನೆಲ ನಡುಗಿಸಿದವು ನಗಾರಿ ನೌಬತ್ ಗುಡುಗಿನ ದನಿಯಿಂದ (ನಾಪದ. ೧೭೧). **ನೌಬತು**: 'ನೌಬತುಖಾನೆ' ಪರಾ.

[←ಪಾರ. ಹಿಂ. ಮರಾ. ನೌಬತ್]

ನೌಬಲ (ನಾ). = ನೌಕಾಪಡೆ: ನೌಬಲಾಧಿಪತಿ; ನೌಬಲದ ಪ್ರಧಾನಾಧಿಕಾರಿ (Admiral. ಇಂಕನಿ). [ಸಂ.]

ನೌಬಲಾಧಿಪತಿ (ನಾ). ನೌಕಾದಳದ ಅಧಿಪತಿ; ಹಡಗಿನ ಸೈನ್ಯದ ಮುಖ್ಯಾಧಿಕಾರಿ: "(ರಾಜ್ಯದ) ನೌಬಲಾಧಿಪತಿ; ನೌಬಲದ ಪ್ರಧಾನಾಧಿಕಾರಿ; ನೌಗಣದ ಅಧಿಪತಿ" (Admiral. ಇಂಕಸಿ).
[ನೌಬಲ+ಅಧಿಪತಿ]

ನೌಭವ (ನಾ). [ಜ್ಯೋತಿ] ನೌಗಣ ನಕ್ಷತ್ರದಲ್ಲಿ ಹುಟ್ಟಿದವನು: ವಿತತಯಶೋರ್ಥಿ ನೌ[ಪಾಠಾಂ. ನೋ]ಭವಂ (ಜಾತಕ. ೧೩-೧೪). [ಸಂ.]

ನೌಮಿ 'ನಾಮ್ಮಿ' ನೋ.

ನೌಯೋಗ (ನಾ). [ಜ್ಯೋತಿ] ಲಗ್ನದಿಂದ ಮೊದಲು ಮಾಡಿ ಏಳುರಾಶಿಗಳಲ್ಲೂ ಗ್ರಹವಿರುವ ಯೋಗ: ನೌಯೋಗದಲ್ಲಿ ಎಲ್ಲ ಗ್ರಹಗಳೂ ಸಾಲಾಗಿ ಅದೃಶ್ಯಚಕ್ರಾರ್ಧದಲ್ಲಿರುತ್ತವೆ (ಜಾತಕ. ೧೩-೧೪ ಅಡಿಟಿ); ನೌಯೋಗದಲ್ಲಿ ಹುಟ್ಟಿದವನು ಕೀರ್ತಿವಂತನಾಗುತ್ತಾನೆ (ಜಾತಕ. ೧೩-೧೪ ಅಡಿಟಿ). [ಸಂ.]

ನೌರಸ (?). (?): ಹಾಲು ಬೇಕೇನೊ ನಿನಗೆ ಸೀಗ ಬಿಡೊ ಕರವ ಪಿಡಿ ವರೆನ್ನ ನೌರಸ ಮುತ್ತಿನ ಸರಗಳು ಹಿಂದಾವು ಮುಟ್ಟದಿರೊ ರಂಗ (ಧರಂದ. ೩-೬೪-೧). [?]

ನೌರು 'ನವಿರು' ನೋ.

ನೌಲಾದಿ (ನಾ). ಒಂದು ಬಗೆಯ ಸಸ್ಯ: (ಮೃಡಿಗಿ. ೬೪-೧೩೦). [?]

ನೌವಾಹ್ಯ (ನಾ). = ನೌತಾರ್ಯ: ಯಾವ ನದಿ ಆಳವಾದ್ದೂ ಆ ನದಿಯೇ ನೌವಾಹ್ಯ (Navigable). ಅದರಗಭೀರತೆಯೇ ಅದನ್ನು ದಾಟಲು ಅನುಕೂಲವನ್ನೊದಗಿಸುತ್ತದೆ (ಸಿಬಂಧ. I, ೩೮೭). [ಸಂ.]

ನೌಸಾಧನ (ನಾ). ನೌಕೆಗಳ ಬಲ: ನೌಸಾಧನೋದ್ಧತರನಂತಾ ಸೇನಾನಿ ತ್ರಿವಂಶರಂ ಕಿಟ್ಟು ಗತಾಯಾಸಂ ನಟ್ಟಂ ಸ್ವಪಜಯಶಾಸನಮುಂ ಗಂಗೆಯೆರಡುತಡಿಯೊಳಮೊಗದೊಳ್ (ಶಾಂತಿಪು. ೧೦-೧೩೦). [ಸಂ.]

ನೌಸ್ತಂಭ (ನಾ). ಹಗ್ಗವನ್ನು ಎಳೆದು ಕಟ್ಟುವ ಹಡಗಿನ ಮಧ್ಯ ಭಾಗದ ಕಂಬ; ಕೂವೆಕಂಬ: ನೌಸ್ತಂಭದ ಕಾಕನೊಲಂತರ್ಮುಖದಿಂ ಪರವಶವಿಹ ಮನದೇಣಾಗ್ರತೆಯೆ ವಿಲಾಯಿನಿಯು (ಕೃಕವ. ೫-೧೮-೪). [ಸಂ.]

ನೌಳಿಕ (ನಾ). [ಯೋಗ] ದೇಹವನ್ನು ಶುಚಿಗೊಳಿಸುವ ಕ್ರಿಯೆಗಳಲ್ಲಿ ಒಂದು: ಆಧಾರಾಕುಂಚನದಿಂದಾದಂ ಪೊಡಪೊಕ್ಕ ನೀರನೆ ಕುಲಕಿಯನುವಿಂ ಶ್ರೀದಂ ನೌಳಿಕದಿಂದಂ ಬಾಧೆವಡೆಯದಂತೊಡರಿಪನಾ ಬಸ್ತಿಕಮಂ (ಮೈಸೂಮ. ೫-೧೪೩). [?./ಮರಾ. ನೌಲಿ]

ನ್ಯಂಕು (ನಾ). ಎರಳೆ; ಜಿಂಕೆ; ಚಿಗರೆ: "ನ್ಯಂಕುಃ, ರಂಕುಃ—ಈ ೨ ಮರೆ" (ಹಲಾಯು. ೩೯-೬೭); "ಆ ರಂಕು ನ್ಯಂಕುವೆನೆ ಮರೆಗೆ [ಪಾಠಾಂ. ಮುಂಕುರಮೆನಲ್ ಮೆರೆಗೆ, ರಂಕು ರುಂಕುವೆನೆ ಮರೆಗೆ, ನಂಕು ವೆನೆ ಮರೆಯ]ಪೆಸರಕ್ಕುಂ" (ಮಂಗರಾ. ೪೮-೧೧). [ಸಂ.]

ನ್ಯಂಚಿತ (ನಾ). ೧. ಕೆಳಕ್ಕೆ ಎಸೆದುದು. ೨. ಬಗ್ಗಿದುದು; ಬಾಗಿದುದು. ೩. ನೆಗ್ಗಿದುದು; ತಗ್ಗಿಹೋದುದು: "ನ್ಯಂಚಿತಂ, ಅಧಃಕ್ಷಿಪ್ತಂ—ಈ ೨ ನೆಗ್ಗಿದುದು" (ಹಲಾಯು. ೧೨೬-೪೩). [ಸಂ.]

ನ್ಯಕ್ಕರಿಸು (ಕ್ರಿ). ತಿರಸ್ಕರಿಸು; ಉಪೇಕ್ಷಿಸು: ಮಗಧನಂ ಧಿಕ್ಕರಿಸಿ ನಗರನಂ ನ್ಯಕ್ಕರಿಸಿ ಪಾಂಡ್ಯನಂ ಪರಿಹರಿಸಿ . . . ಭೂವಿನುತರೂಪನಂ ಭಾವಿಸುತ್ತೊಪನಂ . . . ನೋಡುತ್ತೆ (ಜಗವಿ. ೧೭-೧೧೮ ರಗಳೆ). 'ನೀಕರಿಸು' ಪರಾ. [ಸಂ. ನ್ಯಕ್ಕರಣ+ಇಸು]

ನ್ಯಕ್ಷ (ಗು). ೧. ಕೀಳಾದ; ಕೆಳಮಟ್ಟದ; ನಿಕೃಷ್ಟ. (ನಾ). ೨. ಪೂರ್ಣವಾದುದು; ಇಡಿಯಾದುದು; ಸಮಗ್ರವಾದುದು: "ನಿಕ್ಕೇಸಂ, ನ್ಯಕ್ಷಂ—ಈ ೨ ಉಟ್ಟಾಯೆದುದು" (ಹಲಾಯು. ೧೨೬-೪೫); "ನಿಕ್ಕೇಸಂ ನ್ಯಕ್ಷಮೆನಲುಟ್ಟಾಯೆದಿಹುದಕ್ಕೆ ನಾಮಂ" (ಸುಂಗರಾ. ೧೩೪-೩೧). ೩. ಕೋಣ. ೪. ಪರಶುರಾಮ. ೫. ಒಂದು ಬಗೆಯ ಹುಲ್ಲು. [ಸಂ.]

ನ್ಯಗ್ಭೂತ (ಗು). ಕೀಳಾದ; ಕೆಳಮಟ್ಟದ: ನ್ಯಗ್ಭೂತಸುರಪುರಂ ಸುವರ್ಣಗ್ಯಾನಿ ಸಮಸ್ತವಸ್ತು ಪರಿಪೂರ್ಣಂ ಸಮ್ಯಗ್ಭವನರುಚಿರಮುತ್ತರದಿಗ್ಭಾಗದೊಳಂತು ಮುಧುರೆಯೆಂಬುದು ನಗರಂ (ಪಂಚತಂ. ೧೬೯-೩೩). [ಸಂ.]

ನ್ಯಗ್ರೋಧ (ನಾ). ೧. ಆಲದ ಮರ; ವಟವೃಕ್ಷ: "ನ್ಯಗ್ರೋಧಃ, ವಟಃ—ಈ ೨ ಆಲಂ" (ಹಲಾಯು. ೩೩-೪೩); ನ್ಯಗ್ರೋಧರಮ್ಯಪಾವಾರ ಖದಿರಾದಿ ಶುಷ್ಕಸಮಿತ್ತುಗಳುಮಂ . . . ಕೊಂಡು ಧೇನುಗಳಂ ಮುಂಕೊಂಡು ಬರ್ಪ ಶಿಷ್ಯಸಮೂಹಂಗಳುಮಂ (ಪಂಚತಂ. ೧೧೩-೩೧); ಉಡುರಾಜಂ ಕಳೆಗುಂದಿ ಪೆರ್ಚದಿಪನೇ ನ್ಯಗ್ರೋಧಬೀಜಂ ಕೆಲಂ ಸಿದಿದುಂ ಪೆರ್ಮಾರನಾಗದೇ (ಸೋಮೇಶ. ೩೫), ನ್ಯಗ್ರೋಧಬೀಜೋದರಗತಮೆನಿಪಾ ವೃಕ್ಷದಂತೊಂದಿ ನಿನ್ನೊಳ್ ಹರಿಯಾಳಲ್ವಾಂತವಲ್ಲಿರ್ದೊಡನೆ ಪಸರಿಕುಂ ಸೃಷ್ಟಿಯೊಳ್ ಸ್ವಾವಿ ನಿನ್ನಿಂ (ವಿಷ್ಣುಪು. ೧-೩-೧೩೪); ಮುಂದೆ ಗೋಚರಿಪುದೊಂದು ನ್ಯಗ್ರೋಧಭೂರುಹಂ (ಶ್ರೀರಾಮಾ. ೧೯೩-೪೬೩). ೨. ಮುತ್ತುಗದ ಮರ; ಪಲಾಶವೃಕ್ಷ. ೩. ಒಂದು ಮಾರು ಅಳತೆ. ೪. ಬನ್ನಿಮರ; ಶಮೀವೃಕ್ಷ. ೫. ವಿಷ್ಣು; ನಾರಾಯಣ. ೬. ದಾರಿ; ಹಾದಿ. ೭. ಚಂದ್ರ. ೮. ದಿಕ್ಕು. ೯. ಫಲ; ಹಟ. ೧೦. ಕಾಡು; ಅಡವಿ: "ಶಶಿ ಮಾರ್ಗಂ ದಿಕ್ ಪಲಾಶಂ ಫಲ ವಟ ವನಮಿಂತೈದೆ ನ್ಯಗ್ರೋಧಮಕ್ಕುಂ" (ನಾನಾರ್ಥ. ೪೩). [ಸಂ.]

ನ್ಯಗ್ರೋಧಪರಿಮಂಡಲ (ನಾ). ದೇಹದ ಸುತ್ತಳತೆಯು ಅರು ಅಡಿಯಷ್ಟಾಗುವ ಗಾತ್ರ: ಚತುರಸ್ರಮುಂ ನ್ಯಗ್ರೋಧಪರಿಮಂಡಲಮುಂ ಸ್ವಾತಿಯುಂ ವಾಮನನುಂ ಕುಬ್ಜಮುಂ ಪುಂಡಮುಮೆಂದು ಸಂಸ್ಥಾನನಾಮಂ ಪಡ್ವಿಧಮಕ್ಕುಂ (ಆಪಿಪು. ೧೧-೩ ಪ); ತಮ್ಮ ಬಾರು ಅಳತೆಯೂ ಎತ್ತರವೂ ಸರಿಹೋಗುವುದಕ್ಕೆ ನ್ಯಗ್ರೋಧಪರಿಮಂಡಲವೆನ್ನುವರು (ಹಸಾರ. ೧-೩ ವೀಪ್ರಾರ್ಥ). [ಸಂ.]

ನ್ಯಗ್ರೋಧಪರಿಮಂಡಲಿ (ನಾ). ಮನೋಹರಳಾದವಳು; ಚೆಲುವೆ; P ಕಠಿನಕುಚಗಳೂ ವಿಶಾಲನಿತಂಬಗಳೂ ತೆಳುವಾದ ನಡುವೂ ಕರುಕೆಯ ದೇಟನಂತೆ ವರ್ಣವೂ ಇರುವ ಸುಂದರಿ: ಈಕೆ [ನ್ಯಗ್ರೋಧ] ಪರಿಮಂಡಲೆಯುಮವಧೀರಿತ ಮಹೀಪಾಲಕುಮಾರ ಮಂಡಲೆಯುಮಾದಳ್ (ಶಾಂತಿಪು. ೪-೪೪ ಪ).
[ಸಂ. ನ್ಯಗ್ರೋಧಪರಿಮಂಡಲಾ (ನ್ಯಗ್ರೋಧ+ಪರಿಮಂಡಲ+-)]

ನ್ಯಗ್ರೋಧಿ (ನಾ). ಒಂದು ಬಗೆಯ ಮರ; ಇಲಿಯಾಲ: "ಆಖು ಕರ್ಣೀ, ಮೂಷಿಕ ಕರ್ಣೀ" (ಪಂಡಿತ. ೨೬೫). [ಸಂ. ನ್ಯಗ್ರೋಧೀ]

ನ್ಯರ್ಬುದ (ನಾ). [ಗಣಿತ] ಒಂದು ಸಂಖ್ಯೆ; ಹತ್ತುಸಾವಿರ ಕೋಟಿ; ನಿರ್ಬುದ: ಎಕ್ಕಂ ದಾಹಂ ಶತಂ ಸಾವಿರ . . . ಅರ್ಬುದ ನ್ಯರ್ಬುದ ಖರ್ವ . . . ಮಹಾಪರಿನಿತ ಈ ೪೦ ಸ್ಥಾನದ ಉಗ್ಗಡಣೆ (ನ್ಯವಹಾ. ೮-೨೩); ಎಕ್ಕಂ ದಹಂ ಶತಂ ಸಾವಿರ ದಹಸಾವಿರ ಲಕ್ಷ ದಹಂಲಕ್ಷ ಕೋಟಿ ದಹಂಕೋಟಿ ಶತಂಕೋಟಿ ಅರ್ಬುದ ನ್ಯ[ಪಾಠಾಂ. ನಿ]ರ್ಬುದ ಖರ್ವ . . . ಮಹಾಶ್ರತುವೆಂದಿವೇ ಉಗ್ಗಡಣೆಗಳು (ವಿಸೇಶ. ೬); ಅಂಕೆಗಳ ಶ್ರೇಣಿ ಹದಿನೆಂಟಿರವರೆಗೂ ಹೋಗುತ್ತದೆ. ಈ ಹದಿನೆಂಟು ಶ್ರೇಣಿಗಳು ಯಾವುವೆಂದರೆ ಏಕಂ, ದಶಂ . . . ಕೋಟಿ, ನ್ಯರ್ಬುದ (ಪ್ರವಾಇ. I, ೩೫೭). [ಸಂ.]

ನ್ಯಸನ (ನಾ). ೧. ಇರಿಸುವಿಕೆ; ಇಡುವಿಕೆ; ಸ್ಥಾಪನೆ: ಪ್ರತಿಪಸ್ತೂಪಮೆಸಾಮ್ಯಪ್ರತೀತಿಯಿಂದಂ ಸಮಾನವಸ್ತು ನ್ಯಸನಂ ಪ್ರತಿಪಾದಿಸು

ವುದಭೇದಾತ್ಮತೆಯಿಂದುಪಮೆಯನದಲ್ತೆ ರೂಪಕಮಕ್ಕುಂ (ಕಾವ್ಯಾವ. ೬೮೫). ೨. ಎಸೆಯುವಿಕೆ ; ಪ್ರಯೋಗಿಸುವಿಕೆ. ೩. ಒಪ್ಪಿಸುವಿಕೆ ; ವಹಿಸುವಿಕೆ. ೪. ಬಿಟ್ಟುಕೊಡುವಿಕೆ ; ತ್ಯಾಗ. [ಸಂ.]

ನ್ಯಸ್ತ (ಗು). ೧. ಇಡಲ್ಪಟ್ಟ ; ಇಟ್ಟ: ತನ್ನಿವಾಸಿಗಳಪ್ಪ ಯಕ್ಷಕಿನ್ನರಾದಿಗಳ್ ಮಸ್ತಕದೊಳ್ ನ್ಯಸ್ತಹಸ್ತರ್ಕಳಾಗಿ . . . ಕುಮಾರನಂ ಪೂಜಿಸಿದರ್ (ವಡ್ಡಾರಾ. ೫೭-೨) ; ಸೂರ್ಯಮಿತ್ರದ್ವಿಜಂ . . . ಸುಧರ್ಮಮುನಿ ಮುಖ್ಯರಂ ಕಂಡು ಮೂಜುಸೂಟ್ ಬಲಗೊಂಡು ಭಕ್ತಿಭರವಿನಮಿತ ಮಸ್ತಕನ್ಯಸ್ತಹಸ್ತಪುಟನಾಗಿ (ಸುಕುಮಾ. ೩-೨೩ ವ); ಸತತಂ ಹಾನಿ ಮದೇಭದಿಂ ಸಕಲಭೂಭೃನ್ಮಸ್ತಕನ್ಯಸ್ತಪಾದತಳಂ ಕೇಸರಿಯಿಂ . . . ಸತ್ಕಲಾ ಚತುರಂ ಚಂದ್ರನಿನಾದಪಂ (ಪಂರಾಮಾ. ೩-೯೧) ; ಚತುರರ ಚಾತುರಂಗಾನ್ವಿತಂ ಮಂಜುಳಖಡ್ಗನ್ಯಸ್ತಹಸ್ತಂ ತಳರ್ದನಹಿತಸೇನಾಬ್ಜಿನೀಕುಂಜರೇಂದ್ರಂ (ರಾಜಶೇ. ೬-೧೨) ; ಶತ್ರುಘ್ನ ! ಇಂತು ಜಾಬಾಲಿಯೊಂದುಪದೇಶಮಂ ಗುರೂಪದೇಶಮೆಂದೇ ಬಗೆದು ಯತಂಭರಂ ದೈವನ್ಯಸ್ತನಿಜಭಕ್ತಿಭರಂ ಸುಲಕ್ಷಣಲಕ್ಷಿತಮಾದ ಅವನಾಗಳುಂ ಸೇವಿಸುತುಮಿರ್ದಂ (ರಾಮಾಶ್ವ. ೧೦೭-೨೬). (ನಾ). ೨. ಇರಿಸಿದುದು ; ಇಟ್ಟುದು : "ಆಹಿತಂ, ನಿಹಿತಂ, ನ್ಯಸ್ತಂ, ಆರೋಪಿತಂ—ಈ ೪ ಏಱಿಸಲ್ಪಟ್ಟುದು" (ಹಲಾಯು. ೧೨೩-೬೨) ; ಚಿತ್ತಕಾಶಚಿತ್ಕಲಾಲಿಂಗವನು ಯೆನ್ನ ಆತ್ಮಸ್ಥಲದಲ್ಲಿ ಮೆಲ್ಲನೆ ತಂದು ನ್ಯಸ್ತವ ಮಾಡಿದನಯ್ಯಾ (ಪದಗೋ. ೬-೨೫೦) ; ಜನಚಿತ್ತಾಹ್ಲಾದಪಾದಂ ಸಕಲಧರಣಿಭೃನ್ಮಸ್ತಕನ್ಯಸ್ತಮಾಗಿರ್ಪಿನಂ . . . ಒಳ್ಪಂ ಪೆತ್ತುದಾತ್ತಂ ಬೆಳಗುಗೆ ಜಗಮಂ ಗೋಪಮಾರ್ತಂಡದೇವಂ (ಜಗವಿ. ೧-೪). ೩. ರವಾನಿಸಲ್ಪಟ್ಟುದು ; ಒಪ್ಪಿಸಲ್ಪಟ್ಟುದು ; ತಲಪಿಸಲ್ಪಟ್ಟುದು. [ಸಂ.]

ನ್ಯಸ್ತಭರ (ನಾ). ಬೇರೆಯವರಿಗೆ ಜವಾಬ್ದಾರಿಯನ್ನು ವಹಿಸಿಕೊಟ್ಟವನು ; ತನ್ನ ಹೊಣೆಗಾರಿಕೆಯನ್ನು ಕಳೆದುಕೊಂಡವನು: ಮನವ ನಿನ್ನಲಿಟ್ಟು ತನುವ ನಿನಗೆ ತೆತ್ತು ಧನಧಾನ್ಯಸಕಲವಸ್ತುಗಳ ನಿನಗೆ ಸಮರ್ಪಿಸಿ ನ್ಯಸ್ತಭರನು ಆಗಿಪ್ಪನುವ ಪಾಲಿಸು ರಂಗಧಾಮ (ಶತಸಾಂ. ೧೦-೫೭). [ಸಂ.]

ನ್ಯಸ್ತಾವಶೇಷ (ನಾ). ಹುದುಗಿದ ಪಳೆಯುಳಿಕೆ ; ಅಡಗಿರುವ ಅವಶೇಷ : ಭೂಗರ್ಭದೊಳಗೆ ಅತ್ಯದ್ಭುತವಾದ ನ್ಯಸ್ತಾವಶೇಷಗಳಿರುತ್ತವೆಂತಲೂ ಅವುಗಳಿಂದ ಆಶ್ಚರ್ಯಕರವಾದ ಸಂಗತಿಗಳು ತಿಳಿಯುತ್ತವೆಂತಲೂ (ಮುಂಬಯಿ. ೬-೨೪೧). [ನ್ಯಸ್ತ + ಅವಶೇಷ]

ನ್ಯಾದ (ನಾ). ಆಹಾರ ; ಊಟ : "ಜಗ್ಧಿಃ, ಭೋಜನಂ . . . ನ್ಯಾದಃ—೭ ಭೋಜನದ ಹೆಸರುಗಳು. ಊಟ, ಆರೋಗಣೆ" (ಸಿದ್ಧಾಂತಿ. ೨೯೧). [ಸಂ.]

ನ್ಯಾನಿ (ನಾ). ತಿಳಿದವನು ; ಜ್ಞಾನಿ : ದಾನಿಗಳಿಂ ಮಾನಿಗಳಿಂ ನ್ಯಾನಿಗಳಿಂ (ಬೊಂಕಶಾ. ೧೯೪೪, ಬಂಕಾಪುರ, ೨೧-೧೪ ; 1069).

[<ಸಂ. ಜ್ಞಾನಿನ್]

ನ್ಯಾಪ್‌ಕಿನ್ (ನಾ). ಚಿಕ್ಕ ಆಕಾರದ ಟವೆಲು ; ಸಣ್ಣ ಚೌಕ : ತಾಯಿಗೆ ಹಾಸಿಗೆ, ಮಡಿಬಟ್ಟೆಗಳು . . . ಮಗುವಿಗೆ ನ್ಯಾಪ್‌ಕಿನ್, ಹತ್ತಿ . . . ಇವುಗಳನ್ನು ಸಿದ್ಧಮಾಡಿಕೊಳ್ಳಬೇಕು (ಗೃಹವಿ. ೧೦೨).

[←ಇಂ. Knapkin]

ನ್ಯಾಪ್‌ಚಾಕ್, ನಾಕಚಾಪು, ನಾಕ್ಚಾಪ್ (ನಾ). (ಸಿಪಾಯಿಯ ಅಥವಾ ಪ್ರಯಾಣಿಕನ) ಆವಶ್ಯಕವಾದ ಸಾಮಾನುಗಳನ್ನು ಒಯ್ಯುವ, ರಟ್ಟುಬಟ್ಟೆಯ ಅಥವಾ ತೊಗಲಿನ, ಬೆನ್ನಿಗೆ ಕಟ್ಟಿಕೊಳ್ಳುವ ಚೀಲ ; ಬೆನ್ನುಚೀಲ : "ನ್ಯಾಪ್‌ಚಾಕ್" (Knapsack) ಎಂಬ ಚಕ್ಕಳದ ಚೀಲಗಳಲ್ಲಿ ಸಾಮಾನನ್ನು ಇಟ್ಟುಕೊಂಡು ಸಿಪಾಯಿಗಳು ಹೊರಡುತ್ತಿದ್ದರೆಂದು ಹಳೇಗ್ರಂಥದಲ್ಲಿ ಬರೆದಿದೆ (ಪಾಳಗಾ. ೪೯). **ನಾಕಚಾಪು** : ನಾಕಚಾಪು – ಚಿಲ್ಲರೆ ಸಾಮಾನುಗಳನ್ನು ಹಾಕಿ ಸಿಪಾಯಿಗಳು ಬೆನ್ನಿಗೆ ಕಟ್ಟಿಕೊಳ್ಳುವ ಚೀಲ. ನ್ಯಾಪ್‌ಸ್ಯಾಕ್ ಎಂಬ ಇಂಗ್ಲೀಷ್ ಶಬ್ದ ಕೆಟ್ಟು ಈ ಶಬ್ದ ಹುಟ್ಟಿರುವಂತೆ ಕಾಣುತ್ತೆ (ಚಿತ್ರಪಾ. ಅನುಬಂಧ ೨). **ನಾಕ್ಚಾಪ್** : ಈ ಭಟರು . . . ಮೂರುದಿನದ ರೊಟ್ಟಿಬುತ್ತಿಯನ್ನು "ನಾಕ್‌ಚಾಪ್" ಚೀಲದಲ್ಲಿ ಹಾಕಿ ಬೆನ್ನಿಗೆ ಕಟ್ಟಿಕೊಂಡು . . . ಹೊರಟರು (ಚಿತ್ರಪಾ. ೬೭). [←ಇಂ. Knapsack]

ನ್ಯಾಬಳ್ಳಿ (ನಾ). ಕಟುವಾಸನೆಯುಳ್ಳ ಒಂದು ಬಗೆಯ ಬಳ್ಳಿ ; ಅಜಗಂಧಿಕೆ ; ನಾರುಂಬೇಳೆ : "ಅಜಗಂಧಿಕೆ = ನ್ಯಾಬಳ್ಳಿ" (ಗಂಗಾಮ. ೫). [? + ಬಳ್ಳಿ]

ನ್ಯಾಮಕ (ನಾ). ಎಲ್ಲರನ್ನೂ ಹತೋಟಿಯಲ್ಲಿಟ್ಟುಕೊಳ್ಳುವವನು; ನಿಯಾಮಕ : ಹಲಬರರಿಯದಂತೆ ಉಳ್ಳ ನೃಪನ ತೆರದಿ ಬಲು ಬಲ್ಲಿದ ಗ್ರಹಕುಲದಲ್ಲಿ ಒಳಗೆ ನ್ಯಾಮಕನಾಗಿ (ಪ್ರೇರಕನಾಗಿ) . . . ವಿಜಯವಿಠ್ಠಲ ನೀನೆ ನೆಲೆಯಾಗಿ ಗ್ರಹದಿಂದ ಕೊಲಿಸಲು ನಾನಂಜೆ (ಮೋಕ್ಷದೀ. ೩೭-೩). [<ಸಂ. ನಿಯಾಮಕ]

ನ್ಯಾಮತಿ (ನಾ). ಒಂದು ಬಗೆಯ ಮರ : ಕುಂಕುಮದ ಮರ, ಕಪಿಲಾರಂಗು, ಹುಲೀಚಂಡು, ಚಂದ್ರಹಿಟ್ಟು, ಊರಬತ್ತಿ, ನ್ಯಾಮತಿ (ಮೈಔಗಿ. ೫೨-೧೦೩೯). [?]

ನ್ಯಾಮದಡಿ (ನಾ). ಬಟ್ಟೆಯ ಅಂಚುಗಳಲ್ಲಿ ಒಂದು ಪ್ರಕಾರ,—ಬಗೆ : ದಟ್ಟ ಪಟ್ಟಾಳ ಸೀರಿ ಎಚ್ಚದಡಿಯ ನ್ಯಾಮದಡಿಯ ಜರತಾರ ಸೀರಿ ಚಾಯೊ ಕುಟ್ಟು ಜಾಣೆ ನಿನ್ನ ಕರಿಯ ಬಂದೆ (ಲೋಕಗೀ. ೧೩೯). 'ಎಚ್ಚದಡಿ' ಪರಾ. [ನ್ಯಾಮ್ಯ + ದಡಿ$_2$ (<ತಡಿ$_2$)]

ನ್ಯಾಯ (ನಾ). ೧. ತಿಳಿದವರು ಒಡಂಬಡಲು ಯೋಗ್ಯವಾದುದು,—ಒಪ್ಪತಕ್ಕುದು. ೨. ನಿಯಮ ; ಕಟ್ಟಳೆ : ಗ್ರಾಮೇಕರಾತ್ರಂ ನಗರೇ ಪಂಚರಾತ್ರಂ ಅಟವ್ಯಾಂ ದಶರಾತ್ರಮೆಂಬೀ ನ್ಯಾಯದಿಂ ವಿಹಾರಿಸುತ್ತುಂ . . . ಇರ್ದರ್ ಮುನೀಂದ್ರರೊರ್ವರ್ ಸುಧರ್ಮನಾಮಾಚಾರ್ಯರ್ (ಸುಕುಮಾ. ೩-೭ ವ). ೩. ಸರಿಯಾದುದು ; ಯೋಗ್ಯವಾದುದು ; ಉಚಿತವಾದುದು : "ನ್ಯಾಯವುಚಿತಂ ಯುಕ್ತಮೆನೆ ಪ್ರಾಪ್ತಮಕ್ಕು" (ಮಂಗರಾ. ೧೩೫-೩೮) ; ನ್ಯಾ[ಪಾಠಾಂ. ನೋ]ಯದೆ ಪಡೆದೊಡಮೆಯನನ್ಯಾಯದೆ ಕೊಳಲಿರ್ಪರೆಲ್ಲರ್ (ಜೀವಸಂ. ೧೩-೨೪) ; ನ್ಯಾಯಂ ಮಂತ್ರಿಗಳುಕ್ತಿ ಬಪ್ಪನ ಮತಂ ಕಾಲೋಚಿತಂ ನಿಮ್ಮಭಿಪ್ರಾಯಂ ನೆಟ್ಟನಲಂಘ್ಯಮಿಂತಿನಿತನೀಗಳ್ಮೀಱಿದಂ (ಅನಂಪು. ೧೩-೬೧) ; ನ್ಯಾಯವ ಬಿಟ್ಟನ್ಯಾಯವ ಪೇಳುವ ನಾಯಿಗೆ ನರಕವು ತಪ್ಪೀತೆ (ಕನಕ. ೨೫-೪) ; ಇವುಗಳಲ್ಲಿ ನ್ಯಾಯವಾಗಿ ಅರ್ಥ, ಕಾಮ, ಧರ್ಮ, ಮೋಕ್ಷವೆಂದು ಕ್ರಮವಿರಬೇಕು (ಹಿಂದಸಾ. ೧೪೮). ೪. ನೀತಿ ; ಧರ್ಮ : ನ್ಯಾಯದಿನೆಯ್ದೆ ರಕ್ಷಿಸು ಸಮಸ್ತಧರಾತಳಮಂ (ಬಾಧಪು. ೬-೨೯) ; ನ್ಯಾಯವು ಧರ್ಮವೆಂಬುದರ ಒಂದು ರೂಪ. ಅನ್ಯೋನ್ಯವ್ಯವಹಾರದ ಧರ್ಮವೇ ನ್ಯಾಯ (ರಾಜ್ಯಶಾ. ೫೬). ೫. (ನ್ಯಾಯಾಲಯದ) ನಿರ್ಣಯ; ತೀರ್ಪು; ತೀರ್ಮಾನ : ನ್ಯಾಯ ನಮ್ಮ ಕಡೆಗೇ ಆಯಿತು (ರೂಢಿ). ೬. ಷಡ್ದರ್ಶನಗಳಲ್ಲಿ ಒಂದು ; ಗೌತಮರಿಂದ ರೂಪಿಸಲ್ಪಟ್ಟ ತಾತ್ತ್ವಿಕ ಸಿದ್ಧಾಂತ ; ನ್ಯಾಯದರ್ಶನ : ವೇದ ವೇದಾಂತಾದಿ ಸಿದ್ಧಾಂತಾದಿ ತರ್ಕವಿವಾದದಿಂ ಸಂವಾದಿಸುತ್ತಾ ನ್ಯಾಯ ವೈಶೇಷಿಕ ಮುಖಾನೇಕವಾದವಾಗ್ದೃಷ್ಟಾದಿ ವಿಧಿಯುಕ್ತಾದಿಗಳಿನೊಡಬಡಿಸುತಂ ಮೇಲಾದ ವಸ್ತುಸಮಸ್ತಕಧಿಕಂ ರಾಮನಾಥನಲಾ (ಬಸಪು. ೫೧-೧೨); ವೈಶೇಷಿಕ, ನ್ಯಾಯ, ವೇದಾಂತ, ಸಾಂಖ್ಯ, ಯೋಗ, ವೇದ ಎಂದು ಆರು ದರ್ಶನಗಳು (ಹಿಂದಸಾ. ೯). ೭. ತರ್ಕಶಾಸ್ತ್ರ ; ನ್ಯಾಯಶಾಸ್ತ್ರ :

ನ್ಯಾಯವೆಂದರೆ ಬುದ್ಧಿಯ ಒರೆಗಲ್ಲಿನ ಮೇಲೆ ಬಂಗಾರವೆನಿಸಿದ್ದನ್ನು ತಿಕ್ಕಿ ನೋಡಿ ಬಂಗಾರವೇ ಎಂದು ನಿರ್ಣಯಿಸತಕ್ಕ ಯುಕ್ತಿಯುಕ್ತವಾದ ರೀತಿ (ಭಾರದ. ೧೨೩); ನ್ಯಾಯವೆಂದರೆ ಪ್ರಮಾಣಗಳಿಂದ ಪದಾರ್ಥಗಳನ್ನು ಪರೀಕ್ಷೆ ಮಾಡುವ ಶಾಸ್ತ್ರವೆಂದರ್ಥ (ಹಿಂದಸಾ. ೧೧೧). ೮. ತರ್ಕಬದ್ಧವಾದ ವಾದ; ತಾರ್ಕಿಕರ ವಾದ. ೯. ಕಾನೂನು; ಕಾಯಿದೆ : 'ನ್ಯಾಯಪ್ರಕ್ರಿಯೆ' ಪರಾ. ೧೦. ಲೋಕಪ್ರಸಿದ್ಧವಾದ ದೃಷ್ಟಾಂತ; ಲೋಕೋಕ್ತಿ : ಆಗಮಸಮಯನ್ಯಾಯವಿಭಾಗಳಳಾಕಾಲಲೋಕದೇಶವಿರುದ್ಧಂ ಭೋಗಿವಿಷಂಬೋಲ್ಪ್ರಾಣತ್ಯಾಗಮನಾಗಿಸುಗುಮಮಳಕೃತಿವಳುಗಿನಿತುಂ(ಕವಿರಾ.೧-೭೦). ೧೧. ಪ್ರಸಿದ್ಧವಾದ ದೃಷ್ಟಾಂತದಿಂದ ವಿಷಯವನ್ನು ಸ್ಪಷ್ಟಪಡಿಸುವ ರೀತಿ : 'ಕಾಕತಾಲೀಯ ನ್ಯಾಯ' ಪರಾ. ೧೨. ಒಂದು ಬಗೆಯ ತೆರಿಗೆ : ಆ ಎರಡು ವ್ರಿತ್ತಿಗೆ ಹಳಿ ಹಿರಿ ಊರೊಳಗಣ ಕೊಡಗಿದೆಱ್ ಬಿನಂಗುದೆಱ್ ಖಾಣ ಅಭ್ಯಾಗತೆ ಸೇಸೆ ಸಿಧಾಯ ಅಳಿಉ ನ್ಯಾಯ ಮೊದಲಾಗಿ ಏನು ಬಂ[ದ] ಆ ಬೊಂಮಂಣ ಮಾದಂಣಂಗಳು ತಾವೆ ಎತ್ತಿಕೊಂಬರು (ಎಕ. VI (R), ಕೃಷ್ಣರಾ. ೪೬-೧೧; 1179); ಯಿಂನೆಯ ಗದ್ದೆ ಬೆದ್ದಲಿಂಗೆ ನ್ಯಾಯ ಅಂನ್ಯಾಯ ಅವ ತೆಱುಗೆಯಿಲ್ಲೆಂದು ವೀರಣ್ಣಂ[ಗ]ಳಿಗೆ ಆ ಮಹಾಜನಗಳು ಧಾರಾಪೂರ್ವಕಂ ಮಾಡಿ . . . ಬರಸಿದ ಶಾಸನ (ಎಕ. IV (R), ಪಿರಿಯಾ. ೪೫-೮; ಸು. 14ನೆಯ ಶತ). 'ಅನಾಯ', 'ಸನಾಯ' ಪರಾ. ೧೩.(ಅಲಂ) ಜಗಳ; ತಂಟೆ; ತಕರಾರು; ವ್ಯಾಜ್ಯ : ಹಾಗೆ ಮಾತಿಗೆ ಮಾತು ಹೊರಟು ಅವನಿಗೂ ನನಗೂ ಭಾರಿ ನ್ಯಾಯವಾಯಿತು (ಕಾಲಚ. ೫೩).

ನ್ಯಾಯ ತೀರಿಸು = ವ್ಯಾಜ್ಯವನ್ನು ಇತ್ಯರ್ಥಗೊಳಿಸು; ವ್ಯಾಜ್ಯ ಮುಗಿಸು : ಗ್ರಾಮದಲ್ಲಿ ಉಂಟಾಗುವ ಜಗಳಗಳಲ್ಲಿ ನ್ಯಾಯ ತೀರಿಸುವ ಅಧಿಕಾರ ಪಟೇಲರದು (ರೂಢಿ). ನ್ಯಾಯ ತೆಗೆ = ನ್ಯಾಯ ಹೂಡು : ನನ್ನ ನಾಸೇಂದ್ರಿಯವು ಅನ್ಯಾಯವಾಗಿ ನ್ಯಾಯ ತೆಗೆದು ಸಂಪು ಹೂಡಿ ಬಿಟ್ಟಿತು (ದೇಕನ್ಯೆ. ೯). ನ್ಯಾಯ ಹೂಡು = ತಕರಾರು ಹೂಡು; ವ್ಯಾಜ್ಯವನ್ನು ತೆಗೆ : ಅವನು ಜಮೀನಿನ ಬಗ್ಗೆ ಕೋರ್ಟಿನಲ್ಲಿ ನ್ಯಾಯ ಹೂಡಿದ್ದಾನೆ (ರೂಢಿ). [ಸಂ.]

ನ್ಯಾಯಕಾರ (ನಾ). ನ್ಯಾಯಶಾಸ್ತ್ರವನ್ನು ತಿಳಿದವನು : "ನೈಯಾಯಿಕಃ = ನ್ಯಾಯಕಾರಂ" (ಕಾಶಕೃ. ೧೬೫). [ಸಂ.]

ನ್ಯಾಯಖಾತೆ (ನಾ). ನ್ಯಾಯನಿರ್ಣಯ ನೀಡುವ ವಿಭಾಗ : ಶ್ರೀಯುತರು ಕರ್ನಾಟಕ ಸರ್ಕಾರದ ನ್ಯಾಯಖಾತೆಯಲ್ಲಿದ್ದು ನಿವೃತ್ತರಾದವರು (ರೂಢಿ). [ನ್ಯಾಯ + ಖಾತೆ$_2$]

ನ್ಯಾಯಗಂಟ (ನಾ). ಜಗಳಗಂಟ : ಅವನು ನ್ಯಾಯಗಂಟನಿದ್ದಂತೆ ಎಡೆಗಾರನೂ ಇದ್ದ (ಜಮೀನ್ದಾ; ೧೧೮). [ನ್ಯಾಯ + -ಗಂಟ$_2$]

ನ್ಯಾಯದರ್ಶನ (ನಾ). = ನ್ಯಾಯ ೬ : ಗೌತಮನ ನ್ಯಾಯದರ್ಶನ, ಕಣಾದನ ವೈಶೇಷಿಕದರ್ಶನ, ಕಪಿಲನ ಸಾಂಖ್ಯದರ್ಶನ, ಪತಂಜಲಿಯ ಯೋಗದರ್ಶನ, ಜೈಮಿನಿಯ ಪೂರ್ವ ಮೀಮಾಂಸಾ ದರ್ಶನ, ಬಾದರಾಯಣನ ಉತ್ತರಮೀಮಾಂಸಾ ದರ್ಶನ—ಇವೇ ಷಡ್ದರ್ಶನಗಳು (ಭಾರದ. ೧೨೧); ನ್ಯಾಯದರ್ಶನದಲ್ಲಿ ಪ್ರಮಾಣ ಪ್ರಮೇಯ ಸಂಶಯ ಪ್ರಯೋಜನ ದೃಷ್ಟಾಂತ ಸಿದ್ಧಾಂತ ಅವಯವ ತರ್ಕ ನಿರ್ಣಯವಾದ ಜಲ್ಪ ವಿತಂಡಾ ಹೇತ್ವಾಭಾಸ ಛಲ ಜಾತಿ ನಿಗ್ರಹ ಸ್ಥಾನ ಎಂದು ಹದಿನಾರು ಪದಾರ್ಥಗಳನ್ನು ನಿರೂಪಿಸಿರುವರು (ಹಿಂದಸಾ. ೧೧೨). [ನ್ಯಾಯ + ದರ್ಶನ]

ನ್ಯಾಯದರ್ಶಿ (ನಾ). ನ್ಯಾಯಸ್ಥಾನದ ಸದಸ್ಯ : ನೆಕ್ಲುದೋವ್ ತನ್ನ ಹೆಸರನ್ನು ತಿಳಿಸಿ, ನ್ಯಾಯದರ್ಶಿಗಳ ಕೊಟಡಿಗೆ ಹೋದನು (ಪುನರು. ೨೩). [ಸಂ. ನ್ಯಾಯದರ್ಶಿನ್]

ನ್ಯಾಯದಾತ (ನಾ). ನ್ಯಾಯನಿರ್ಣಯ ನೀಡುವವನು; ನ್ಯಾಯಾಧಿಪತಿ : ಓ! ನ್ಯಾಯದಾತಾ! ನೀನೇ ನಿಷ್ಪಕ್ಷಪಾತವುಳ್ಳ ಬುದ್ಧಿಯುಳ್ಳವನು (ಕವಿಕ. ೧೮). [<ಸಂ. ನ್ಯಾಯದಾತೃ]

ನ್ಯಾಯದೂರ (ನಾ). ನ್ಯಾಯವನ್ನು ಬಿಟ್ಟವನು; ಅನ್ಯಾಯ ಮಾಡುವವನು : ಕಾಯಿ ಕಾಯ್ಕಂಗಾಣದಹ್ಹಾನಾಯತರನಪಗತಮತಿಗಳನು . . . ನ್ಯಾಯದೂರರನಪಜಯರನನ್ಯಾಯಕಾರರನಧಿಕಳಪಟೋಪಾಯರಂ (ಬಸಪು. ೨೮-೬೩). [ನ್ಯಾಯ + ದೂರ]

ನ್ಯಾಯನಿಯುಕ್ತ (ನಾ). ನ್ಯಾಯದಿಂದ ಕೂಡಿದುದು; ನೀತಿಯುಕ್ತವಾದುದು : ಉಕ್ತವಿಚಾರಂ ನ್ಯಾಯನಿ[ಪಾಠಾಂ. ವಿ]ಯುಕ್ತಂ ಕ್ರಮವಿನ್ನದಕ್ಕೆ ಬಾರದುವೆಲ್ಲಂ ವ್ಯಕ್ತಂ ನ್ಯಾಯವಿರುದ್ಧಂ ಪ್ರೋಕ್ತಮಹಾದೋಷಮಂತು ಪೇಟಿಲ್ಕೆಂತುಂ (ಕವಿರಾ. ೧-೧೦೬). [ಸಂ.]

ನ್ಯಾಯನಿರ್ಣಯ (ನಾ). (ನ್ಯಾಯಾಲಯದ) ವ್ಯಾಜ್ಯಕ್ಕೆ ಸಂಬಂಧಿಸಿದ ನಿರ್ಧಾರ,—ತೀರ್ಮಾನ,—ತೀರ್ಪು : ಬಿಸನಪುರದ ತಾನೇದಾರ ಹಮೀದಖಾನ . . . ದುಡ್ಡು ನೋಡಿ ನ್ಯಾಯನಿರ್ಣಯ ಕೊಡುತ್ತಿದ್ದ (ಜಮೀನ್ದಾ. ೧೧೮). [ನ್ಯಾಯ + ನಿರ್ಣಯ]

ನ್ಯಾಯನಿರ್ಣಾಯಕ (ನಾ). ನ್ಯಾಯನಿರ್ಣಯ ಮಾಡುವವನು; ನ್ಯಾಯಾಧಿಪತಿ : "ಪ್ರಾಡ್ವಿವಾಕಃ, ಅಕ್ಷದರ್ಶಕಃ—೨ ವ್ಯವಹಾರಾಣಾಂ ದ್ರಷ್ಟರಿ—ನ್ಯಾಯನಿರ್ಣಾಯಕನ ಹೆಸರುಗಳು. ಜಡ್ಜಿ, ಮುನಸೀಫ್, ಧರ್ಮಾಧಿಕಾರಿ" (ಸಿದ್ಧಾಂತಿ. ೨೩೬). [ನ್ಯಾಯ + ನಿರ್ಣಾಯಕ]

ನ್ಯಾಯನಿಷ್ಠ (ನಾ). ನ್ಯಾಯಕ್ಕೆ ನಿಷ್ಠನಾಗಿರುವವನು; ನೀತಿಯುಕ್ತವಾದ ಮಾರ್ಗದಲ್ಲಿ ನಡೆಯುವವನು : ಅವನು ತುಂಬ ನ್ಯಾಯನಿಷ್ಠನಾಗಿ ಬಾಳಿದ ವ್ಯಕ್ತಿ (ರೂಢಿ). [ಸಂ.]

ನ್ಯಾಯನಿಷ್ಠುರ (ನಾ). ನ್ಯಾಯವಿಷಯದಲ್ಲಿ ನಿರ್ದಾಕ್ಷಿಣ್ಯನಾಗಿರುವವನು : 'ನ್ಯಾಯನಿಷ್ಠುರಿ' ಪರಾ. [ಸಂ.]

ನ್ಯಾಯನಿಷ್ಠುರತೆ (ನಾ). ನ್ಯಾಯವಿಷಯದಲ್ಲಿ ನಿರ್ದಾಕ್ಷಿಣ್ಯದಿಂದಿರುವಿಕೆ : ಒಲವು ಮಿಗಿಲಾದುದು ಗೆಲವು ಮಿಗಿಲಾದುದು . . . ನೋಳ್ಪಡೆ ಮತ್ತಿನದೆಲ್ಲಕೆ ಜಗದೊಳು ನ್ಯಾಯನಿಷ್ಠುರತೆಯೆ ಮಿಗಿಲು (ಇಂಚಾಪ. ೧೬೨-೪೯). [ಸಂ. ನ್ಯಾಯನಿಷ್ಠುರತಾ]

ನ್ಯಾಯನಿಷ್ಠುರಿ (ನಾ). = ನ್ಯಾಯನಿಷ್ಠುರ : ನ್ಯಾಯನಿಷ್ಠುರಿ ದಾಕ್ಷಿಣ್ಯಪರನು ನಾನಲ್ಲ ಲೋಕವಿರೋಧಿ ಶರಣನಾರಿಗಂಜುವನಲ್ಲ (ಬಸಪ. ೭೫೬). [<ನ್ಯಾಯನಿಷ್ಠುರ]

ನ್ಯಾಯಪದ್ಧತಿ (ನಾ). ೧. ನೀತಿಯುಕ್ತವಾದ ಮಾರ್ಗ. ೨. ಒಳ್ಳೆಯ ನಡತೆಯ ಬಗ್ಗೆ ಇರುವ ಕೈಪಿಡಿ ಅಥವಾ ಮಾರ್ಗದರ್ಶಕ ಪುಸ್ತಕ; ನೀತಿಪುಸ್ತಕ : (ಕಿ). [ನ್ಯಾಯ + ಪದ್ಧತಿ]

ನ್ಯಾಯಪರತೆ (ನಾ). ನ್ಯಾಯಕ್ಕೆ ಅಂಟಿಕೊಂಡಿರುವಿಕೆ; ನ್ಯಾಯದೃಷ್ಟಿಯನ್ನು ಹೊಂದಿರುವಿಕೆ : ಮನವಚನಕಾಯಗಳಲ್ಲೂ ಸತ್ಯನಿಷ್ಠೆ, ಧರ್ಮದೃಷ್ಟಿ, ನ್ಯಾಯಪರತೆ—ಇವು ವ್ಯಾಪಿಸಿದಲ್ಲದೆ ಶಿವಾನುಗ್ರಹದೊರೆಯದು (ಶಕ್ತಿವಿ. ೭೪). [ಸಂ. ನ್ಯಾಯಪರತಾ]

ನ್ಯಾಯಪಾಲಿಕೆ (ನಾ). ನ್ಯಾಯವನ್ನು ಪಾಲಿಸುವ ಆಡಳಿತ ವಿಭಾಗ; ನ್ಯಾಯದ ಇಲಾಖೆ; ನ್ಯಾಯಾಂಗ : ರಾಜ್ಯದ ಲೋಕಸೇವಾವ್ಯವಸ್ಥೆಯಲ್ಲಿ ನ್ಯಾಯಪಾಲಿಕೆಯನ್ನು ಕಾರ್ಯಪಾಲಿಕೆಯಿಂದ ಪ್ರತ್ಯೇಕಿಸಲು ರಾಜ್ಯವು ಕ್ರಮ ಜರುಗಿಸತಕ್ಕುದು(ಭಾಧಾನ.೨೫). [ಸಂ. ನ್ಯಾಯಪಾಲಿಕಾ]

ನ್ಯಾಯಪೀಠ (ನಾ). ನ್ಯಾಯಾಧಿಪತಿಯ ಸ್ಥಾನ,—ಗದ್ದುಗೆ : (Judgement Seat. ಪತ್ರಿನಿ. ೪೯). [ನ್ಯಾಯ + ಪೀಠ]

ನ್ಯಾಯಪುರುಷ (ನಾ). ನಿಷ್ಪಕ್ಷಪಾತವಾಗಿ ನ್ಯಾಯಕ್ಕೆ ತೀರ್ಪು ಕೊಡುವವನು,—ನ್ಯಾಯವನ್ನು ನಿರ್ಣಯ ಮಾಡುವವನು : ದೇವರೆ ಗುಂಡು ಗುಜಿಗುಜಿಗೊಂಡು ಪೋಗಬೆ? ನ್ಯಾಯಪುರುಷಸಂತಾನ ವೃಸನಸಸ್ಥಾನಂ ಬಿಲ್ಮುಟ್ಟ ಲಕ್ಷಣೋಪೇತಂ ಬಗೆ ಬಾಗವಸಮೆಂ ಬಿವನಱಿದು ಧನುರ್ವಿದ್ಯೆಯೇ ರೂಪುಗೊಂಡಂತಿರ್ದರುಂ ಕಾದೆ (ಕಾಂತಿಪು. ೪-೪೫ ಪ). [ಸಂ.]

ನ್ಯಾಯಪ್ರಕ್ರಿಯೆ (ನಾ). ಕಾನೂನಿಗೆ ಬದ್ಧವಾದ ಕ್ರಮ : ನ್ಯಾಯಪ್ರಕ್ರಿಯೆ (ಪ್ರೊಸೀಜರ್) ದೃಷ್ಟಿಯಿಂದ ಇವುಗಳನ್ನು ಅಪರಾಧವೆಂತಲೇ ಎಣಿಸಬೇಕಾಗುತ್ತದೆ (ಕವಿಕೃ. I, ೩೫೬). [ನ್ಯಾಯ + ಪ್ರಕ್ರಿಯೆ]

ನ್ಯಾಯಬಾಹಿರ (ಗು). ಕ್ರಮವಲ್ಲದ ; ಕಾನೂನಿಗೆ ಹೊರತಾದ : "ಶಾಸನಬಾಹಿರ ; ನ್ಯಾಯಬಾಹಿರ ; ಅಕ್ರಮ" (Unlawful. ಪತ್ರಿಸಿ. ೪೬). [ನ್ಯಾಯ + ಬಾಹಿರ]

ನ್ಯಾಯಬೆಲೆ (ನಾ). ಯೋಗ್ಯವಾದ ಬೆಲೆ ; ಉಚಿತವಾದ ಬೆಲೆ : ಸಕ್ಕರೆ ಬಳಕೆಯನ್ನು ಉತ್ತೇಜಿಸುವ ಜಾಗು ಉತ್ಪನ್ನರಾಷ್ಟ್ರಗಳಿಗೆ ನ್ಯಾಯಬೆಲೆ ದೊರಕಿಸುವಂತಹ ಮಟ್ಟದಲ್ಲಿ ಬೆಲೆಯನ್ನು ಸ್ಥಿಮಿತಗೊಳಿಸುವುದು (ಅಂತಸಂ. ೧೯೪). ನ್ಯಾಯಬೆಲೆ ಅಂಗಡಿ = ನಿಗದಿಯಾದ ಬೆಲೆಯಲ್ಲಿ ಕ್ಲುಪ್ತ ಪ್ರಮಾಣದಲ್ಲಿ ಜನರಿಗೆ ದಿನಸಿಗಳನ್ನು ಒದಗಿಸಲು ಸರ್ಕಾರವು ಗೊತ್ತುಪಡಿಸಿದ ಅಂಗಡಿ : ಜನರ ಅನುಕೂಲಕ್ಕಾಗಿ ಸರ್ಕಾರವು ಹೆಚ್ಚು ಹೆಚ್ಚು ನ್ಯಾಯಬೆಲೆ ಅಂಗಡಿಗಳನ್ನು ತೆರೆಯಬೇಕು (ರೂಢಿ). [ನ್ಯಾಯ + ಬೆಲೆ]

ನ್ಯಾಯಮಾರ್ಗ (ನಾ). ಸರಿಯಾದ ಹಾದಿ ; ಋಜುಮಾರ್ಗ : ಧೀರರಾದವರು ನ್ಯಾಯಮಾರ್ಗದಲ್ಲಿಟ್ಟ ಹೆಜ್ಜೆಯನ್ನು ಎಂದಿಗೂ ಜಾರಿಸುವುದಿಲ್ಲ (ನೀತಿಬಂ. XI, ೪). [ನ್ಯಾಯ + ಮಾರ್ಗ]

ನ್ಯಾಯಮೂರ್ತಿ (ನಾ). = ನ್ಯಾಯನಿರ್ಣಾಯಕ : "ನ್ಯಾಯಾಧಿಪತಿ, ನ್ಯಾಯಮೂರ್ತಿ" (Justice . ಪತ್ರಿಸಿ. ೪೯). [ನ್ಯಾಯ + ಮೂರ್ತಿ]

ನ್ಯಾಯರಕ್ತ (ನಾ). ನ್ಯಾಯಮಾರ್ಗದಲ್ಲಿ ಆಸಕ್ತಿಯುಳ್ಳವನು : ಸರಿಯೊಡೆಯನಾಗಿಯುಂ ದರ್ಪರಹಿತನೋದೊಡೆಯನಾಗಿಯುಂ ವಿಗಳಿತ ಮತ್ಸರನಧಿಕನಾಗಿಯುಂ ನ್ಯಾಯರಕ್ತನೇಂ ಪಿರಿಯನೊ ಱಗೇಂದ್ರಾಧೀಶಂ (ಕಾಂತಿಪು. ೩-೪೬). [ಸಂ.]

ನ್ಯಾಯವಂತ (ನಾ). ಪ್ರಾಮಾಣಿಕನಾದ ವ್ಯಕ್ತಿ ; ಯೋಗ್ಯನಾದವನು : ಉಭಯಕುಲವಿಶುದ್ಧರ್ ನ್ಯಾಯವಂತರ್ ಜಿತಾತ್ಮರ್ ಪ್ರಭುಗಳಧಿಕಪುಣ್ಯರ್ ಮುನ್ನೆ ನಿಮ್ಮಜ್ಜ ಪಜ್ಜರ್ . . . ಅದಱಿಂದೀ ದುರ್ಯಶಕ್ಕೆಂತು ನೋಂತ್ಪೆ (ಕಾಂತಿಪು. ೩-೭೬). [ನ್ಯಾಯ + -ವಂತ]

ನ್ಯಾಯವರ್ತಿ (ನಾ). ನ್ಯಾಯಮಾರ್ಗದಲ್ಲಿರುವವನು; ಸದ್ವರ್ತನೆಯುಳ್ಳವನು. [ಸಂ. ನ್ಯಾಯವರ್ತಿನ್]

ನ್ಯಾಯವಾಕ್ಯ (ನಾ). ವಾದವನ್ನು ಪ್ರತಿಪಾದಿಸುವ ವಾಕ್ಯ ; ಪಕ್ಷವನ್ನು ಸ್ಥಾಪಿಸುವ ಮಾತು : ಈ ಅನುಮಾನಪ್ರಮಾಣದಲ್ಲಿ ನ್ಯಾಯವಾಕ್ಯವೆಂದು ಕೆಲವು ವಾಕ್ಯಗಳನ್ನು ವಾದಿ ಪ್ರತಿವಾದಿಗಳು ವಾದಕಾಲದಲ್ಲಿ ಉಪಯೋಗಿಸುವರು. ಎಂದರೆ, ಅವರವರ ಪಕ್ಷವನ್ನು ಸ್ಥಾಪಿಸುವ ವಾಕ್ಯವೆಂದರ್ಥ (ಹಿಂದಸಾ. ೧೪೨). [ನ್ಯಾಯ + ವಾಕ್ಯ]

ನ್ಯಾಯವಾದಿ (ನಾ). ೧. (ನ್ಯಾಯಸಂಬಂಧದಲ್ಲಿ) ವ್ಯವಹಾರ ಪ್ರತಿನಿಧಿ ; "ನ್ಯಾಯವೃತ್ತಿಯವನು ; ನ್ಯಾಯವಾದಿ; ವಕೀಲ; ನ್ಯಾಯಶಾಸ್ತ್ರಪಂಡಿತ" (Lawyer. ಇಂಕಾ) : ನ್ಯಾಯಾಲಯಗಳಲ್ಲಿ ವೃತ್ತಿಯನ್ನು ನಡೆಯಿಸಲು ತಕ್ಕ ನ್ಯಾಯವಾದಿಗಳಿಗೂ ಅಧಿವಕ್ತರುಗಳಿಗೂ ವಕೀಲರುಗಳಿಗೂ ಕೊಡಬಹುದಾದ ಫೀಜುಗಳ ಪಟ್ಟಿಗಳನ್ನು ಸಹ ನಿರ್ಧರಿಸಬಹುದು (ಭಾಧಾನ. ೧೨೪). ೨. ನ್ಯಾಯ ಪಕ್ಷಪಾತಿ ; ನ್ಯಾಯವಂತ ; ಪ್ರಾಮಾಣಿಕ : ಪ್ರಾಯ ಬಂದ ಹುಡುಗಿಯ ಮನೆಯಲ್ಲಿ ಗಂಡಿದ್ದರೆ ಅವರಿಬ್ಬರೂ ನ್ಯಾಯವಾದಿಗಳಾಗಿದ್ದರೂ ಸಮಾಜ ಅದನ್ನು ನಂಬುವುದಿಲ್ಲ (ಕಾವೇಂ. ೩೭). [ಸಂ. ನ್ಯಾಯವಾದಿನ್]

ನ್ಯಾಯವಿದ (ನಾ). ೧. ನ್ಯಾಯಶಾಸ್ತ್ರವನ್ನು ಅರಿತವನು ; ನ್ಯಾಯಶಾಸ್ತ್ರಜ್ಞ : "ಅರ್ಥಜ್ಞಾ ಪ್ರಾಜ್ಞಿವಾಕಂ ನ್ಯಾಯವಿದನಳ್ಕು" (ಮುಂಗಂಾ. ೭೯-೭). ೨. ನ್ಯಾಯಾಧಿಪತಿ ; ನ್ಯಾಯನಿರ್ಣಾಯಕ. [ಸಂ. ನ್ಯಾಯವಿದ್]

ನ್ಯಾಯವಿದ್ಯೆ (ನಾ). = ನ್ಯಾಯ ೩ : ನ್ಯಾಯವಿದ್ಯೆಯೂ ಆತ್ಮಾನಾತ್ಮಸ್ವರೂಪವನ್ನು ವಿಚಾರಪೂರ್ವಕವಾಗಿ ನಿರ್ಣಯಿಸುವ ವಿದ್ಯೆಯಾದುದರಿಂದ ಆತ್ಮವಿದ್ಯೆಯೆಂದೆನಿಸಿರುವುದು (ಹಿಂದಸಾ. ೧೧೩). [ನ್ಯಾಯ + ವಿದ್ಯೆ]

ನ್ಯಾಯವಿಧಾಯಕ (ಗು). ಶಾಸನ ರಚನೆಯ ; ಕಾನೂನು ರಚನೆಯ : 'ನ್ಯಾಯವಿಧಾಯಕ ಸಭೆ' ಪರಾ. [ನ್ಯಾಯ + ವಿಧಾಯಕ]

ನ್ಯಾಯವಿಧಾಯಕಸಭೆ (ನಾ). ಕಾನೂನುಗಳನ್ನು ರೂಪಿಸುವ ಸಭೆ ; ಶಾಸನಸಭೆ. [ನ್ಯಾಯವಿಧಾಯಕ + ಸಭೆ]

ನ್ಯಾಯವಿರುದ್ಧ (ಗು). ೧. ಕಾನೂನನ್ನು ಪ್ರತಿಭಟಿಸುವ ; ಕಾಯಿದೆಯನ್ನು ವಿರೋಧಿಸುವ : "ನ್ಯಾಯವಲ್ಲದ ; ನ್ಯಾಯವಿರುದ್ಧ ; ಕಾನೂನಿಗೆ ವಿರುದ್ಧವಾದ; ನಿರ್‌ನ್ಯಾಯ" (Illegal. ಇಂಕಾ); "ಕಾನೂನು ವಿರುದ್ಧ, ನ್ಯಾಯವಿರುದ್ಧ, ಬೇಕಾಯಿದೇಶೀರ್" (Illegal. ಪತ್ರಿಸಿ. ೪೩). (ನಾ). ೨. ನ್ಯಾಯಕ್ಕೆ ವಿರೋಧವಾದುದು ; ನೀತಿಯುಕ್ತವಲ್ಲದುದು : ಉಕ್ತವಿಚಾರಂ ನ್ಯಾಯನಿಯುಕ್ತಂ ಕ್ರಮವಿನ್ನದಕ್ಕೆ ಬಾರದುವೆಲ್ಲಂ ವ್ಯಕ್ತಂ ನ್ಯಾಯವಿರುದ್ಧಂ ಪ್ರೋಕ್ತಮಹಾದೋಷಮಂತು ಪೇಬಲ್ಕೆಂತುಂ (ಕವಿಾ.೧-೧೦೬). [ನ್ಯಾಯ + ವಿರುದ್ಧ]

ನ್ಯಾಯಶಾಲೆ (ನಾ). ನ್ಯಾಯನಿರ್ಣಯ ಮಾಡುವ ಸ್ಥಳ ; ನ್ಯಾಯಾಲಯ : ಧರ್ಮಶಾಸ್ತ್ರಾನುಸಾರವಾಗಿ ಅರ್ಥಶಾಸ್ತ್ರವನ್ನು ವಿವೇಚಿಸಿ ಪ್ರಯೋಗಿಸುವ ಸ್ಥಾನವು ನ್ಯಾಯಶಾಲೆ ಎನ್ನಿಸುವುದು ಎಂದು ಹೇಳಿದೆ (ಭಾರದ. ೩೫೪). [ನ್ಯಾಯ + ಶಾಲೆ]

ನ್ಯಾಯಶಾಸ್ತ್ರ (ನಾ). ೧. = ನ್ಯಾಯ ೩ : ನ್ಯಾಯಶಾಸ್ತ್ರದಲ್ಲಿ ವಿದ್ಯೆ ಅನ್ವೀಕ್ಷಕೀ ತ್ರಯಾ ವಾರ್ತಾ ದಂಡನೀತಿ ಎಂದು ಸಾಮಾನ್ಯವಾಗಿ ಸಾಲ್ಕು ವಿಧವೆಂದು ವಿಂಗಡಿಸಿರುವರು . . . ನ್ಯಾಯಶಾಸ್ತ್ರವನ್ನು ಆತ್ಮಶಾಸ್ತ್ರವೆಂದು ಹೇಳುತ್ತಾರೆ (ಹಿಂದಸಾ. ೧೧೩). ೨. ಕಾನೂನುಗಳನ್ನು ತಿಳಿಸುವ ಶಾಸ್ತ್ರ : "ಒಂದು ಸಮಾಜವು ಅನುಸರಿಸಲು ಅಂಗೀಕರಿಸಿರುವ ಶಾಸನಸಭಾರಚಿತವಾದ ಅಥವಾ ಸಂಪ್ರದಾಯರೂಢವಾದ ವಿಧಿಗಳು, ಕಟ್ಟಳೆಗಳು; ವ್ಯವಹಾರ ನಿಬಂಧನೆ ; ನ್ಯಾಯಶಾಸ್ತ್ರ" (Law. ಇಂಕಾ). [ನ್ಯಾಯ + ಶಾಸ್ತ್ರ]

ನ್ಯಾಯಸಮ್ಮತ (ನಾ). ಉಚಿತವಾದುದು; ಯೋಗ್ಯವಾದುದು; ನ್ಯಾಯವಾದುದು : ನ್ಯಾಯಸಮ್ಮತವಲ್ಲದಂತಹ ಹೊಗಳಿಕೆ ಬೇಸಲ್ಲವೆಂದಿಗು ತಗದು ನ್ಯಾಯಸಮ್ಮತವೆನ್ನುವಂತಹ ತೆಗಳಿಕೆಯದಕಿಂತ ಬೇಸೆನ್ನಿಸುವುದು (ಇಂಚಾಸ. ೭೭-೭೩) ; ಸರ್ಕಾರದಿಂದ ಉಚಿತವಾಗಿ ತನಗೆ ಸಲ್ಲಬೇಕಾದ್ದು ನ್ಯಾಯಸಮ್ಮತವೆಂದು ಅವನು ತಿಳಿದುಕೊಂಡಿದ್ದನು (ಪುಸರು. ೩೩೪). [ನ್ಯಾಯ + ಸಮ್ಮತ]

ನ್ಯಾಯಸ್ಥ (ನಾ). = ನ್ಯಾಯವಂತ : ಪ್ರಾಯಸ್ಥನಾದವ ನ್ಯಾಯಸ್ಥನಾಗಿರಬೇಕು (ಗಾದೆ). [ಸಂ.]

ನ್ಯಾಯಸ್ಥಾನ (ನಾ). ವ್ಯವಹಾರಗಳನ್ನು ವಿಚಾರಣೆ ಮಾಡಿ ಕಾನೂನುಬದ್ಧವಾಗಿ ತೀರ್ಪು ಕೊಡುವ ಸ್ಥಳ; ನ್ಯಾಯಾಲಯ; ಕೋರ್ಟು: ನ್ಯಾಯಸ್ಥಾನದಲ್ಲಿ ವ್ಯವಹರಿಸಿ ಅವನ ಸಹೋದರನಿಂದ ಒಂದು ತೋಟ ಹೊಡೆದಿದ್ದಾನೆ (ಪುವಿಕಾ. ೧೦೨). [ನ್ಯಾಯ+ಸ್ಥಾನ]

ನ್ಯಾಯಾಂಗ (ನಾ). ಶಾಸನಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗವೆಂಬ ರಾಜ್ಯಾಡಳಿತದ ಮೂರು ಅಂಗಗಳಲ್ಲಿ ಒಂದು; ವ್ಯಾಜ್ಯ, ವ್ಯವಹಾರಗಳನ್ನು ವಿಧಿವತ್ತಾದ ಶಾಸನಗಳ ಮೇರೆಗೆ ನಿರ್ಣಯಿಸುವ ಅಂಗ: "(ಒಂದು ರಾಜ್ಯದ ಎಲ್ಲ) ನ್ಯಾಯಾಧಿಪತಿಗಳು; (ಪಾರಿ) ನ್ಯಾಯಾಂಗ" (Judiciary. ಪತ್ರಿಸಿ. ೪೯).

[ನ್ಯಾಯ + ಅಂಗ]

ನ್ಯಾಯಾಧಿಕರಣ (ನಾ). = ನ್ಯಾಯಸ್ಥಾನ: ದೋಷಾರೋಪದ ಅನುಸಂಧಾನಕ್ಕಾಗಿ . . . ನಾನೋದ್ದಿಷ್ಟವಾದ ಯಾವುದೊಂದು ನ್ಯಾಯಾಲಯವು ನ್ಯಾಯಾಧಿಕರಣವು ಅಥವಾ ನಿಕಾಯವು ರಾಷ್ಟ್ರಪತಿಯವರ ಆಚರಣೆಯನ್ನು ಪುನರ್ವಿಲೋಕನಕ್ಕೆ ಒಳಪಡಿಸಬಹುದು(ಭಾಧಾನ. ೨೧೪). [ನ್ಯಾಯ + ಅಧಿಕರಣ]

ನ್ಯಾಯಾಧಿಪತಿ (ನಾ). = ನ್ಯಾಯನಿರ್ಣಾಯಕ: "೧. ನ್ಯಾಯಾಧೀಶ, ನ್ಯಾಯಾಧಿಪತಿ, ತೀರ್ಪುಗಾರ. ೨. ಪರೀಕ್ಷಕ" (Judge. ಪತ್ರಿಸಿ.೪೯). [ನ್ಯಾಯ+ಅಧಿಪತಿ]

ನ್ಯಾಯಾಧೀಶ (ನಾ). = ನ್ಯಾಯನಿರ್ಣಾಯಕ: "೧. ನ್ಯಾಯಾಧೀಶ, ನ್ಯಾಯಾಧಿಪತಿ, ತೀರ್ಪುಗಾರ. ೨. ಪರೀಕ್ಷಕ" (Judge. ಪತ್ರಿಸಿ. ೪೯). [ನ್ಯಾಯ+ಅಧೀಶ]

ನ್ಯಾಯಾಧ್ಯಕ್ಷ (ನಾ). = ನ್ಯಾಯನಿರ್ಣಾಯಕ: "ಪ್ರಾಡ್ವಿವಾಕಃ, ಅರ್ಥದೃಕ್, ಸ್ಮೃತಿಯಃ, ನ್ಯಾಯಾಧ್ಯಕ್ಷಃ—ಈ ೪ ನ್ಯಾಯಾಧ್ಯಕ್ಷಂ" (ಹಲಾಯು. ೭೧–೭೭). [ನ್ಯಾಯ+ಅಧ್ಯಕ್ಷ]

ನ್ಯಾಯಾನಪೇತ (ನಾ). ನ್ಯಾಯದಿಂದ ಕೂಡಿದುದು; ನ್ಯಾಯಾನ್ವಿತವಾದುದು: "ಸಾರಮದುತ್ಯಸ್ಪಬಲಂ ಸಾರಂ ನ್ಯಾಯಾನಪೇತಮುಂ ತಾನಕ್ಕುಂ" (ಪಸ್ತು.ಕೋ.೧೨೬–೫೨). [ನ್ಯಾಯ+ಅನಪೇತ]

ನ್ಯಾಯಾನ್ವಿತ (ಗು). ೧. ನ್ಯಾಯದಿಂದ ಕೂಡಿದ: ನ್ಯಾಯಾನ್ವಿತ ತತ್ಸಾಧಿಪ್ರಾಯಂ ಪಸರಿಪುದು ಭಾಷೆ ಸಾಧುಜನಶ್ರದ್ಧೇಯಂ ಪರಪ್ರಮಾಣಾಧೇಯಂ ಸರ್ವಾರ್ಥಮಾಗವಿಷಯಂ ಶ್ರೇಯಂ (ಜಂದ್ರಪು. ೧೬–೨೭). (ನಾ). ೨. ನ್ಯಾಯದಿಂದ ಕೂಡಿರುವವನು; ನೀತಿವಂತ: ಕುಲಮುಂ ನಾಭಿತನೂಭವಂ ಮಹಿಮೆಯುಂ ಸತ್ಪಾತ್ರದಾನಂ ನಿರಾಕುಲಮುಂ ಜೀವದಯಾರಸಂ ವಿಭವಮುಂ ಸಂಭಾಂಗಮುಂತ್ಯಂ ಚತುರ್ಬಲಮುಂ ಸ್ವಾಭವಮೆಯ್ದೆ ಮಾಡೆ ಪಡೆದಂ ನ್ಯಾಯಾನ್ವಿತಂ ತೊಟ್ಟನಾ ಬಲೆಯೊರ್ವಂ ತೆಗೆದಂತೆ ಬಂದುದು ವಯೋವಿಭ್ರಾಜಕಂ ರಾಜಕಂ (ಶಾಂತಿಪು. ೫–೭೫). [ನ್ಯಾಯ + ಅನ್ವಿತ]

ನ್ಯಾಯಾರ್ಜಿತ (ಗು). ನೀತಿಯುಕ್ತವಾದ ಮಾರ್ಗದಲ್ಲಿ ಸಂಪಾದಿಸಿದ; ಉಚಿತಮಾರ್ಗದಲ್ಲಿ ಗಳಿಸಿದ: ನ್ಯಾಯಾರ್ಜಿತವಿತ್ತಂ ಧರ್ಮಾಯತ್ತಮೆನಿಪ್ಪ ರಾಜವೃತ್ತಂ ತನಗೇಕಾಯತ್ತನಾಗೆ ಧರೆಯಂ ಜೀಯೆನಿಸಿದನಿಂತುದಾತ್ತ ಚರಿತರುಮೊಳರೇ (ಪಂಂಪಾಮಾ. ೨–೭೦). [ನ್ಯಾಯ + ಅರ್ಜಿತ]

ನ್ಯಾಯಾಲಯ (ನಾ). = ನ್ಯಾಯಸ್ಥಾನ: "ನ್ಯಾಯಾಲಯ, ನ್ಯಾಯಸ್ಥಾನ" (Judicature. ಪತ್ರಿಸಿ.೪೯).

ನ್ಯಾಯಾಲಯ ಅವಮಾನ = ನ್ಯಾಯಾಸ್ಥಾನದ ಆದೇಶ ಅಥವಾ ಕ್ರಮಗಳನ್ನು ಉಲ್ಲಂಘಿಸುವಿಕೆ: ಉಪಖಂಡದಲ್ಲಿ ಹೇಳಿರುವುದು ಯಾವುದೊಂದು ಕೂಡ, ಅಪಮಾನಲೇಖ, ಅಪಮಾನವಚನ, ಮಾನಹಾನಿ, ನ್ಯಾಯಾಲಯ ಅವಮಾನ, ಇವಕ್ಕೆ ಸಂಬಂಧಪಟ್ಟ ಮಟ್ಟಿಗೆ ಮತ್ತು ಶಿಷ್ಟಾಚಾರಕ್ಕೆ . . . ಭಂಗವನ್ನುಂಟುಮಾಡುವಂಥ . . . ಯಾವುದಾದರೂ ವಿಧಿಯ ಅಮಲಿಗೆ ಅಡ್ಡಿಯಾಗಿರತಕ್ಕುದಲ್ಲ (ಭಾಧಾನ. ೧೧೦). ನ್ಯಾಯಾಲಯದ ನಿಂದನೆ = ನ್ಯಾಯಾಲಯ ಅವಮಾನ: "ನ್ಯಾಯಾಲಯಕ್ಕೆ ಆಗೌರವ (ತೋರುವುದು); ನ್ಯಾಯಾಲಯದ ನಿಂದನೆ" (Contempt of Court. ಪತ್ರಿಸಿ. ೨೩). [ನ್ಯಾಯ+ಆಲಯ]

ನ್ಯಾಯಾಸನ (ನಾ). ನ್ಯಾಯಾಧೀಶನ ಪೀಠ. [ನ್ಯಾಯ+ಆಸನ]

ನ್ಯಾಯಾಸ್ಥಾನ (ನಾ). = ನ್ಯಾಯಸ್ಥಾನ. [ನ್ಯಾಯ + ಆಸ್ಥಾನ]

ನ್ಯಾಯಿಕ(ಗು). ನ್ಯಾಯಕ್ಕೆ ಸಂಬಂಧಪಟ್ಟ; ಕಾನೂನಿಗೆ ಸಂಬಂಧಿಸಿದ: "ನ್ಯಾಯಾಸ್ಥಾನದ, ನ್ಯಾಯಿಕ" (Judicial. ಪತ್ರಿಸಿ. ೪೯). [ಸಂ.]

ನ್ಯಾಯಿಕಪದ (ನಾ). ನ್ಯಾಯಾಲಯಕ್ಕೆ ಸಂಬಂಧಪಟ್ಟ ಅಧಿಕಾರ ಅಥವಾ ಪದವಿ: ವಿವರಣೆ ೨–ಈ ಖಂಡದ ಉದ್ದೇಶಕ್ಕಾಗಿ, ಯಾರೊಬ್ಬರೇ ಆಗಲಿ . . . ಅವರು ಅಧಿನಕ್ಕರಾದ ಮೇಲೆ ಜಿಲ್ಲಾ ನ್ಯಾಯಾಧೀಶಪದಕ್ಕೆ ಕಡಿಮೆಯಿಲ್ಲದ ನ್ಯಾಯಿಕಪದವನ್ನು ಧಾರಣ ಮಾಡಿದ್ದ ಅವಧಿಯನ್ನೂ ಸೇರಿಸತಕ್ಕುದು (ಭಾಧಾನ. ೬೭). [ನ್ಯಾಯಿಕ + ಪದ]

ನ್ಯಾಯಿಕಸೇವೆ (ನಾ). ನ್ಯಾಯಾಲಯಕ್ಕೆ ಸಂಬಂಧಿಸಿದ ಸೇವೆ: "ನ್ಯಾಯಿಕಸೇವೆ" ಎಂಬ ಪದಗಳಿಗೆ, ಜಿಲ್ಲಾನ್ಯಾಯಾಧೀಶರ ಸ್ಥಾನವನ್ನು ಮತ್ತು ಜಿಲ್ಲಾನ್ಯಾಯಾಧೀಶರ ಸ್ಥಾನಕ್ಕಿಂತ ಕಡಮೆಯಾದ ವ್ಯವಹಾರ ನ್ಯಾಯಿಕಸ್ಥಾನಗಳನ್ನು ಭರ್ತಿ ಮಾಡಲು ಉದ್ದೇಶಿಸಿರತಕ್ಕ ಜನಗಳನ್ನೇ ಕೇವಲ ಒಳಗೊಂಡಿರತಕ್ಕ ಸೇವೆ ಎಂದರ್ಥ (ಭಾಧಾನ. ೧೨೯). [ನ್ಯಾಯಿಕ + ಸೇವೆ]

ನ್ಯಾಯಿಗ (ನಾ). ನ್ಯಾಯವನ್ನು ನಿರ್ಣಯಿಸುವವನು: ಇದು ಹಿಂದೊಂದು ತಪ್ಪೆಂದು ನ್ಯಾಯಿಗರು ಎಣಿಸಿದರು (ಸವಿಾ. IV, ೫೯–೨೧). [ನ್ಯಾಯ+–ಇಗ]

ನ್ಯಾಯೋಪಾರ್ಜಿತ (ಗು). = ನ್ಯಾಯಾರ್ಜಿತ: ಅಂತಾತನಿಪ್ರಬುದ್ಧಂ ಧನಕನಕಸಮೃದ್ಧಿಯೊಳ್ ನೆಜೀದಿಪ್ಪ ವಿಷಯಕಾಮುಭೋಗಂಗಳನನುಭವಿಸುತ್ತುಂ ನ್ಯಾಯೋಪಾರ್ಜಿತವಿತ್ತನುಂ ಧರ್ಮೂಪಾದಿತಚಿತ್ತನುಮಾಗಿ ಕೆಲವುಕಾಲಂ ಸುಖಸಂಕಥಾವಿನೋದದಿನಿರ್ದು (ಪಂಡತಂ.೨೨–೭). [ನ್ಯಾಯ + ಉಪಾರ್ಜಿತ]

ನ್ಯಾಯೋಲ್ಲಂಘನೆ (ನಾ). ನ್ಯಾಯವನ್ನು ವಿಾರುವಿಕೆ; ಕಾನೂನನ್ನು ಅತಿಕ್ರಮಿಸುವಿಕೆ: ಇಂಥ ತೀರ್ಪಿಗೆ ನ್ಯಾಯೋಲ್ಲಂಘನೆಯೆ ಮತ್ತು ಕಾನೂನಿನ ದೋಷಗಳೆ ಪೂರ್ಣಕಾರಣವೆಂಬುದು ಸುಸ್ಪಷ್ಟ (ಪುಸರು. ೨೦೩). [ನ್ಯಾಯ+ಉಲ್ಲಂಘನೆ]

ನ್ಯಾಯ್ಯ (ನಾ). ೧. = ನ್ಯಾಯ ೧: "ಯುಕ್ತಂ, ಔಪಯಿಕಂ, ಲಭ್ಯಂ, ಭಜಮಾನಂ, ಅಧಿನೀತಂ, ನ್ಯಾಯ್ಯಂ—೬ ತ್ರಿನ್ಯಾಯದಿಂದೊಡಗೂಡಿದ್ದಕ್ಕೆ ಹೆಸರುಗಳು, ತಿಳುವಳಿಕೆಯುಳ್ಳವರು ಪಡಂಬಡತಕ್ಕಂಥಾದ್ದು" (ನಿದ್ಗಾಂತಿ. ೨೪೨). ೨. ಕ್ರಮವಾದುದು; ಯೋಗ್ಯವಾದುದು; ಅರ್ಹವಾದುದು; ಉಚಿತವಾದುದು: "ಯುಕ್ತಂ, ಉಚಿತಂ, ನ್ಯಾಯ್ಯಂ, ಪ್ರಾಪ್ತಂ, ಔಪಯಿಕಂ—ಈ ೫ ಉಚಿತಂ" (ಹಲಾಯು. ೧೨೬–೬೧). [ಸಂ.]

ನ್ಯಾಯ್ಯಯುಕ್ತ (ನಾ). ಉಚಿತವೂ ನ್ಯಾಯವೂ ಆದುದು; ಯೋಗ್ಯವಾದುದು: ಸುಮಂತ್ರನು . . . ಸಾವಧಾನದಿಂದ ಪರ್ಯಾಲೋಚಿಸಿ ನ್ಯಾಯ್ಯಯುಕ್ತವಾಗಿ ಮಾತನಾಡಿದ (ಕವಿಕ. ೨೭). [ನ್ಯಾಯ್ಯ + ಯುಕ್ತ]

ನ್ಯಾರಿ 'ನೇರ್ಪ' ನೋ.

ನ್ಯಾರೆ$_1$ 'ನೇರೆ$_1$' ನೋ.

ನ್ಯಾರೆ$_2$ 'ನೇರೆ$_2$' ನೋ.

ನ್ಯಾರೇಭತ್ತ (ನಾ). ಒಂದು ಬಗೆಯ ಬತ್ತ ; ನೀವಾರ : ನೀವಾರ (ನ್ಯಾರೇಭತ್ತ). . .ಕಫ ಪಿತ್ತಗಳನ್ನು ನಾಶಮಾಡುವುವು(ಅಷ್ಟಾಂಗ.೧೧೪). [ನ್ಯಾರೆ$_1$(<ನೇರೆ$_1$)+ಭತ್ತ$_1$(<ಬತ್ತ$_1$)]

ನ್ಯಾವಣ 'ನೇವಳ' ನೋ.

ನ್ಯಾವಣಿಸು (ಕ್ರಿ). (ಬೆಡಗು, ಒಯ್ಯಾರಗಳಿಂದ) ನಿಧಾನಿಸು ; ತಡಮಾಡು : ಅವಳು ಮದುವೆಮಂಟಪಕ್ಕೆ ಬರಲು ತುಂಬ ನ್ಯಾವಣಿಸುತ್ತಿದ್ದಾಳೆ (ರೂಢಿ). [ನ್ಯಾವಣೆ$_0$(<ನೇವಣೆ)+-ಇಸು$_3$]

ನ್ಯಾವರಿಸು 'ನೇವರಿಸು' ನೋ.

ನ್ಯಾವಳ 'ನೇವಳ' ನೋ.

ನ್ಯಾವಳಸರ (ನಾ). ಒಂದು ಬಗೆಯ ಕಂಠಾಭರಣ : ನ್ಯಾವಳಸರ ಕಂಠಮಾಲೆ ಪದಕ ಕಂಬುಗ್ರೀವ ಸರಿಗೆ ದಿವ್ಯಚಂದನ ಲೇಪಿಸಿ (ವಿದಾಕೃ. ೧೧-೨). [ನ್ಯಾವಳ(<ನೇವಳ)+ಸರ$_3$]

ನ್ಯಾವಳಿ 'ನೇವಳ' ನೋ.

ನ್ಯಾಸ (ನಾ). ೧. ಇಡುವಿಕೆ ; ಇರಿಸುವಿಕೆ. ೨.ಕೇಳಿದಾಗ ಕೊಡುವಂತೆ ಹೇಳಿ, ನಂಬಿಕೆಯಿಂದ ಕಾಪಾಡುವುದಕ್ಕಾಗಿ ಇನ್ನೊಬ್ಬರಲ್ಲಿ ಇಟ್ಟ ವಸ್ತು : ಪೆತ್ತರೊಳ್ ಪೆಣ್ಣೊಡಮೆಯಿದು ನ್ಯಾಸಮಲ್ತೆ (ರಾಮಾಶ್ವ. ೬೮-೯) ; ಭರತನು ತನ್ನಲ್ಲಿ ನ್ಯಾಸವಾಗಿದ್ದ ರಾಜ್ಯವನ್ನು ಸಂತೋಷದಿಂದ ರಾಮನಿಗೆ ಒಪ್ಪಿಸಿದನು (ವಚಭಾ. ೪೧೪); ಒಡವೆಯನ್ನು ನ್ಯಾಸವಾಗಿಟ್ಟವರು ಬಂದು ಕೇಳಿದಾಗ ಹಿಂತೆಗೆಯುವುದು ... ಸಾಧುವಲ್ಲ (ಕುಮಾಸಾಂ. ೬೨). ೩. ಹೊಂದುವ ಉಪಾಯ ; ಪಡೆಯುವ ಉಪಾಯ : ಅಧಿಗಮೋಪಾಯಮಂ ನ್ಯಾಸಮೆಂಬುದು (ತಸ್ಕೃವ.೩೦); ಪ್ರಮಾಣಮಂ ಜ್ಞಾನವೆಂಬುದು, ಅಧಿಗಮೋಪಾಯಮಂ ನ್ಯಾಸಮೆಂಬುದು, ಅಱಿವನ ಅಭಿಪ್ರಾಯಮಂ ನಯಮೆಂಬುದು (ತತ್ತ್ವಪ್ರ. ೭೬). ೪. ಜಪ ಮತ್ತು ಪೂಜೆಯ ಕಾಲಗಳಲ್ಲಿ ಮಂತ್ರಪೂರ್ವಕವಾಗಿ ಅಂಗಗಳನ್ನು ಮುಟ್ಟಿಕೊಳ್ಳುವಿಕೆ,— ಸ್ಪರ್ಶಿಸಿಕೊಳ್ಳುವಿಕೆ : ಮೇಲಾ ಮಂತ್ರದಿಂ ಕರನ್ಯಾಸಂಗೈವಲ್ಲಿ . . . ಆದಿಮಧ್ಯಾಂತರಪರ್ವಗಳಲ್ಲಿ ಪ್ರತ್ಯೇಕ ಬಿಂದುಯುಕ್ತಮಾದ ಅಕಾರ ಉಕಾರ ಮಕಾರಂಗಳಂ ನ್ಯಾಸಂ ಮಾಡಿ ಬಳಿಕಾ ಬಿಂದುಯುಕ್ತ ಪ್ರಣವವನಾ ಸರ್ವಾಂಗುಳಿಗಳಲ್ಲಿಯೂ ನ್ಯಾಸಂಗೈದು(ವಿವೇಕ. ೮೯) ; ಶತಪಂಚಾಕ್ಷರಿಯ ಜಪಿಸಿ ಲಿಂಗಬೀಜಾಕ್ಷರಗಳಿಂ ನ್ಯಾಸಮಂ ಮಾಡಿ ಪೂರ್ವದೋಷವನಳಿಯುತಂ (ಮಹಾವಿ. ೯-೨೦) ; ಆಸನದ ಸ್ಥಿತಿಯೂ ಒಂದು ನ್ಯಾಸವಾಗಿರುತ್ತದೆ. ನ್ಯಾಸಗಳಿಂದ ಶರೀರದಲ್ಲಿ ಮಾರ್ದವ ಮತ್ತು ಸುವ್ಯವಸ್ಥಿತವಾದ ಆಸನಸಿದ್ಧಿಯೂ ಉಂಟಾಗುತ್ತದೆ (ಭಾರದ. ೧೫೬). 'ಅಂಗನ್ಯಾಸ', 'ಕರನ್ಯಾಸ' ಪರಾ. ೫. ವಿಧಾನ ; ರಚನೆ ; ರೀತಿ ; ಬಗೆ : ನ್ಯಾಸವೊಳ್ಳಿತು ಗುರುವಿನಭಿವಿನ್ಯಾಸಮೆಂತುಟೊ ಶಿವಶಿವಾ ಕಾಳಾಸ ತಪ್ಪದ ಕಳವಿನೆಸುಗೆಯ ಚಿತ್ರ ಲೇಸೆಂದ (ತೊರರಾ. ೪-೪-೩೫) ; ಕಲ್ ಬಂಡೆ, ರೂಪಾಂತರಂಬೆತ್ತು ಹೊಂಚಿರ್ಪ ಛದ್ಮನೆಯ ಕಾಪಿನೋಲಂತೆ, ನಾನಾನ್ಯಾಸಮಂ ರಚಿಸಿ ಚಿತ್ರಮಾದುವು ಕಣ್ಗೆ (ಶ್ರೀರಾಮಾ. ೨೯೨-೧೯೩); ಮೊದಲಲ್ಲಿ ಕಠಿನತೆಯಿಂದ ಕೂಡಿದ್ದ ಇವರ ಮನಸ್ಸು . . . ಕೊನೆಗೆ ಅಪರಂಜಿಯಾಯಿತು. ಅದು ಹೀಗಾದ ವಿಚಿತ್ರನ್ಯಾಸವನ್ನು ನಾನು ಹೇಗೆ ವಿವರಿಸಬಹುದು ? (ಸುಬ್ಬಣ್ಣ. ೨). ೬. ಇಡುಗಂಟು ; ಠೇವಣಿ : 'ನ್ಯಾಸಕಾರಿ' ಪರಾ. ೭. ಧರ್ಮದರ್ಶಿಗಳ ಮಂಡಲಿ; ವಿಶ್ವಸ್ತಸಮಿತಿ : ಮೇಲಿನ (೧) ನೆಯ ಖಂಡದಲ್ಲಿ ಹೇಳಿರುವುದು ಯಾವುದೊಂದೂ, ಒಂದು ವಿದ್ಯಾಸಂಸ್ಥೆಯ ಆಡಳಿತವು ರಾಜ್ಯದಿಂದ ನಡೆಯುತ್ತಿದ್ದರೂ, ಅದರಲ್ಲಿ ಧಾರ್ಮಿಕ ಶಿಕ್ಷಣವನ್ನು ಕೊಡಬೇಕಾದ ಕಟ್ಟುಪಾಡುಗಳ ಯಾವುದಾದರೂ ಧರ್ಮಸ್ವಕ್ಕೆ ಅಥವಾ ನ್ಯಾಸಕ್ಕೆ ಅಧೀನವಾಗಿ ಆ ಸಂಸ್ಥೆಯು ಸ್ಥಾಪಿತವಾಗಿದ್ದಲ್ಲಿ ಆ ವಿದ್ಯಾಸಂಸ್ಥೆಗೆ ಅನ್ವಯಿಸತಕ್ಕುದಲ್ಲ (ಭಾಧಾನ. ೧೬). ೮. ವ್ಯಾಖ್ಯಾನ ; ಭಾಷ್ಯ ; ಟೀಕೆ ; ಪಂಚಿಕೆ : 'ನ್ಯಾಸಕಾರ' ಪರಾ. ೯. ಕಾದಂಬರಿ : ಇಂದು ಹಲಸಂಗಿಯ ಧೂಲಾಸಾಹೇಬರು ಇದೇ ಸಂಪ್ರದಾಯವನ್ನು ಅನುಸರಿಸಿ ಕನ್ನಡದಲ್ಲಿ ಕಾವ್ಯ, ಕತೆ, ನ್ಯಾಸಗಳನ್ನು ಬರೆಯುತ್ತಿದ್ದಾರೆ(ಕನ್ನನು.I,೩೯). ೧೦. 'ಕಾಶಕೃತ್ಸ್ನ' ಗ್ರಂಥಕ್ಕೆ ಜಿನೇಂದ್ರಬುದ್ಧಿಯು ಬರೆದ ವ್ಯಾಖ್ಯಾನ,—ಭಾಷ್ಯ : ತದುಪಾಧ್ಯಾಯಿಗಳು ೩ ಭಟ್ಟದರ್ಶನ ನ್ಯಾ[ಸ] ಪ್ರಭಾಕರವ್ಯಾಖ್ಯಾತೃಗಳ್ಮೂವರ್ಗ್ಗಂ . . . ಸರ್ವ್ವನಮಸ್ಯಮಾಗಿ ಕೊಟ್ಟ ಕೆಯ್ಮಾಣಿಕೇಶ್ವರದಗಟಿಂ ಬಡ[ಗ]ಮತ್ತರು ೧೦೦೦ . . . ಭಾಟ್ಟದರ್ಶನವ್ಯಾಖ್ಯಾತೃಗೆ ಮತ್ತರು ೩೫ ನ್ಯಾಸವ್ಯಾಖ್ಯಾತೃಗೆ ಮತ್ತರು ೩೦ ಪ್ರಭಾಕರವ್ಯಾಖ್ಯಾತೃಗೆ ಮತ್ತರು ೪೫ (ಕಇಅ.೬-೨-೧೯೩; 1058) ; ಭಟ್ಟಪ್ರತ್ತಿ ನ್ಯಾಸದೆರೆ ಮತ್ತರು ೧೫ ಹರಳ್ಮತ್ತರು ೧೦ ಪ್ರಭಾಕರದೆರೆ ಮತ್ತ ೨೦ ಪರಳ್ಮತ್ತ ೧೦ ವೇದಾನ್ತದೆರೆ ಮತ್ತ ೧೫ ಹರಳ್ಮತ್ತರು ೧೦ (ಸೌಇಅ. XX,೩೦೦-೧೩ ; ಸು. 17ನೆಯ ಶತ). ೧೧. [ಸಂಗೀತ] ಗ್ರಹಸ್ವರ, ಹಂಸಸ್ವರ, ನ್ಯಾಸಸ್ವರವೆಂಬ ಪ್ರಧಾನಸ್ವರಗಳಲ್ಲಿ ಒಂದು : ಗ್ರಹ, ಅಂಶ, ಮಂದ್ರ, ತಾರ ಹಾಗೆಯೇ ನ್ಯಾಸ, ಅಪನ್ಯಾಸ ನಂತರ ಸನ್ಯಾಸ, ವಿನ್ಯಾಸಗಳು, ಬಹುತ್ವ ಹಾಗೆಯೇ ಅಲ್ಪತ್ವ ರಾಗಗಳ ಈ ಹತ್ತು ಲಕ್ಷಣಗಳನ್ನು ಮುನಿಗಳು ಹೇಳಿದರು (ಚತುಪ್ರ.೫೪) ; ಒಂದೊಂದು ರಾಗಕ್ಕೂ ಹಾಡಲು ಪ್ರಾರಂಭಿಸಬೇಕಾದ ಸ್ವರ (ಗ್ರಹ), ಸ್ವರೂಪವನ್ನು ಚಿತ್ರಿಸಲು ಸಾಧ್ಯವಾಗುವ ಸ್ವರ (ಅಂಶ), ಒಂದೊಂದಕ್ಕೂ ಎರಡೆರಡರಷ್ಟು ಧ್ವನಿಪ್ರಮಾಣ ಹೆಚ್ಚುವ ಸ್ವರಸಪ್ತಕದ ಶ್ರೇಣಿ (ಮಂದ್ರ, ಮಧ್ಯ, ತಾರ), ಅಲ್ಲಲ್ಲಿ ನಿಲ್ಲಲು ಉಪಯುಕ್ತ ಸ್ವರಗಳು (ನ್ಯಾಸ, ಅಪನ್ಯಾಸ, ವಿನ್ಯಾಸ), ಸಪ್ತಸ್ವರಗಳಲ್ಲಿ ಎಷ್ಟು ಬಗೆಯ ರೂಪಕಗಳು ರಚಿತವಾಗಲು ಸಾಧ್ಯವೋ ಅರಿಯಲು ಪ್ರಸ್ತಾರ . . . ನಿಷ್ಕರ್ಷಿಸಲ್ಪಟ್ಟವು (ಭಾರದ. ೫೪೧) ; ನ್ಯಾಸ-ಅಂಶಸ್ವರದ ಸಂಬಂಧ ಹೊಂದಿ ರಾಗವನ್ನು ಮುಕ್ತಾಯಗೊಳಿಸುವ ಸ್ವರ (ಸಂಗೀಚಂ. ೨೩). 'ನ್ಯಾಸಸ್ವರ' ಪರಾ. ೧೨. [ಗಣಿತ] ಅಗಲದ ಅಳತೆ : ನ್ಯಾಸವೆಂದರೆ ಅಡ್ಡಗಲವೆನಿಸುವದು (ಕ್ಷೇತ್ರಗ. ೫೬-೬). [ಸಂ.]

ನ್ಯಾಸಕಾರ (ನಾ). ವ್ಯಾಖ್ಯಾನಕಾರ; ವಿವರಣೆಕಾರ; ಭಾಷ್ಯಕಾರ: ಈ ನುಡಿ ನಿನಗಲ್ಲದೆ ದಿವಿಜಾನೀಕಕ್ಕಮರದವರ ವಚನಂ ಜಡಸಂಸ್ಥಾನಮ ವಿಜ್ಞೇಯಮದರ್ಕೇನಾನುಂ ನ್ಯಾಸಕಾರರಂ ತರವೇಟ್ಕುಂ (ಶಾಂತಿಪು. ೧೦-೧೮೦). [ಸಂ.]

ನ್ಯಾಸಕಾರಿ (ನಾ). ಠೇವಣಿ ಇಡುವವನು : "(ಹಣ,ಆಸ್ತಿ,ಮೊ.ನ್ನು) ನ್ಯಾಸವಿಡುವವನು; ನ್ಯಾಸಕಾರಿ; ಠೇವಣಿಗ; ಠೇವಣಿದಾರ" (Depositor. ಇಂಕನಿ). [ಸಂ. ನ್ಯಾಸಕಾರಿನ್]

ನ್ಯಾಸಧಾರಿ (ನಾ). ತನಗೆ ವಹಿಸಿಕೊಟ್ಟ ವ್ಯಕ್ತಿ, ವಸ್ತುಗಳನ್ನು ನಂಬಿಕೆಯಿಂದ ಪಾಲಿಸುವವನು ; ವಿಶ್ವಸ್ತ : "ಯಾವನಿಗೆ ವಸ್ತುವನ್ನು ವಹಿಸಿದೆಯೊ ಅವನು : ನ್ಯಾಸಧಾರಿ" (Depository. ಇಂಕನಿ); ನೆಕ್ಲುದೋವನನ್ನು ಕಾನೂನುಬದ್ಧವಾದ ನ್ಯಾಸಧಾರಿಗೆ ವಶಪಡಿಸಬೇಕೆಂದು ರಾಗೊಜಿನ್‌ಸ್ಕಿ ತೀವ್ರಾಲೋಚನೆ ನಡೆಸಿದನು (ಪುನರು. ೪೧೯). [ಸಂ. ನ್ಯಾಸಧಾರಿನ್]

ನ್ಯಾಸನಿರ್ವಾಹಕ (ನಾ). = ನ್ಯಾಸಧಾರಿ : ಈಗ ನಾನೊಬ್ಬ ನ್ಯಾಸನಿರ್ವಾಹಕ . . . ನಾನೆ ಅವನ ವ್ಯವಹಾರವನ್ನೆಲ್ಲ ನಡೆಸುತ್ತಿದ್ದೇನೆ (ಪುನರು. ೩೧೧). [ನ್ಯಾಸ+ನಿರ್ವಾಹಕ]

ನ್ಯಾಸಪೂರಿತ (ನಾ). ಜಪ ಮತ್ತು ಪೂಜೆಯ ಕಾಲಗಳಲ್ಲಿ ಮಂತ್ರ ಪೂರ್ವಕವಾಗಿ ಅಂಗಾಂಗಗಳನ್ನು ಸ್ಪರ್ಶಿಸಿಕೊಳ್ಳುವ ಕ್ರಿಯಾ ವಿಶೇಷ : ಸಂತತಂ ಸಕಲಮಂತ್ರಗಳಿಗೆ ಮಾತೆಯಪ್ಪಂತ ಪ್ರಣಮೋಕ್ತ ಪಂಚಾಕ್ಷರದ ನ್ಯಾಸಪೂರಿತಮಾಗಿ (ಸವಮೋ.೧೮-೨೬). [ನ್ಯಾಸ+ಪೂರಿತ]

ನ್ಯಾಸವಸ್ತು (ನಾ). ನಂಬಿಕೆಯಿಂದ ಕಾಯ್ದಿಡಲು ಕೊಟ್ಟ ವಸ್ತು : ನಿಜವಾಗಿ ಅದೊಂದು ನ್ಯಾಸವಸ್ತು. ಗೌರವದಿಂದ ಬೆಳೆಸಬಹುದು . . . ಕಡೆಗೆ ಇನ್ನೊಬ್ಬರ ಸ್ವಾಧೀನಮಾಡಬೇಕು (ಜಯಂತ. ೨೯೩). [ನ್ಯಾಸ+ವಸ್ತು]

ನ್ಯಾಸವಿದ್ಯೆ (ನಾ).[ವೇದಾಂತ]ಎಲ್ಲವನ್ನೂ ಪರಮಾತ್ಮನಿಗೆ ಒಪ್ಪಿಸುವ ವಿದ್ಯೆ ; ಶರಣಾಗತಿ ವಿದ್ಯೆ : ಈ ವಿದ್ಯೆಗಳಲ್ಲಿ ತೈತ್ತಿರೀಯ ಉಪನಿಷತ್ತಿನಲ್ಲಿ ವಿವರಿಸಿರುವಂತೆ ನ್ಯಾಸವಿದ್ಯೆಯು ಶರಣಾಗತಿವಿದ್ಯೆಯೆಂದು ಪ್ರಸಿದ್ಧಿಯಾಗಿದೆ (ಭಾರದ. ೨೬೪) ; ವೇದಾಂತದಲ್ಲಿ ಅಲ್ಲಲ್ಲಿ ಸಂಕ್ಷೇಪವಾಗಿ ಉಪದೇಶಿಸಲ್ಪಟ್ಟಿರುವ ನ್ಯಾಸವಿದ್ಯಾ, ಶರಣಾಗತಿ, ಪ್ರಪತ್ತಿ ಮೊದಲಾದ ಪದಗಳಿಂದ ವ್ಯವಹರಿಸಲ್ಪಡುವ ಸುಲಭವಾದ ಮೋಕ್ಷಸಾಧನವನ್ನು ವಿಸ್ತರಿಸಿ ಪಾಂಚರಾತ್ರಶಾಸ್ತ್ರವೆಂಬ ಭಗವಚ್ಛಾಸ್ತ್ರದಲ್ಲಿ ಭಗವಂತನು ಉಪದೇಶಿಸಿರುವನು (ಹಿಂದಸಾ. ೨೬೦). [ನ್ಯಾಸ+ವಿದ್ಯೆ]

ನ್ಯಾಸಸ್ವರ (ನಾ).=ನ್ಯಾಸ ೧೧ : ರಾಗಕ್ಕೆ ಮೂರುವಿಧ ಪ್ರಧಾನ ಸ್ವರಗಳುಂಟು. ಕ್ರಮವಾಗಿ ಅವು (೧) ಗ್ರಹಸ್ವರ, (೨) ಅಂಶಸ್ವರ, (೩) ನ್ಯಾಸಸ್ವರ . . . ರಾಗವನ್ನು ಮುಕ್ತಾಯಗೊಳಿಸುವ ಸ್ವರವೇ ನ್ಯಾಸಸ್ವರ (ಸಂಗೀಚಂ. ೨೨). [ನ್ಯಾಸ+ಸ್ವರ$_2$]

ನ್ಯಾಸಾಪಹಾರ (ನಾ). ನಂಬಿಕೆಯಿಂದ ಕಾಯ್ದಿಡಲು ಕೊಟ್ಟ ವಸ್ತುವನ್ನು ಮರಳಿ ಕೊಡದೆ ವಂಚಿಸುವಿಕೆ,—ಅಪಹರಿಸುವಿಕೆ: ನಾನಾಮಿಥ್ಯೋಪದೇಶಂ ಪುದಿದೊದವಿದ ಸಾಕಾರಮಂತ್ರಂ ರಹೋವ್ಯಾಖ್ಯಾನಂ ನ್ಯಾಸಾಪಹಾರಕ್ರಮಮನುಗತಿಯಿಂ ಕೂಟಲೇಖಕ್ರಿಯಾವಿಜ್ಞಾನಂ ಸತ್ಯವ್ರತಕ್ಕಿಂತಿವು ಪರಿವಿಡಿಯಿಂದಯ್ದತೀಚಾರಮಕ್ಕುಂ (ಸುಕುಮಾ. ೬-೧೪) ; ಬಯ್ಕೆಗೊಟ್ಟಾತಂ ಮಱೆದು ಕಿಱಿದಂ ಪೇಟ್ಟಡನಿತನೆ ಕೊಟ್ಟುಱಿದುದಂ ವಂಚಿಸುವುದು ನ್ಯಾಸಾಪಹಾರಮಕ್ಕುಂ (ಶ್ರಾವಕಾ. ೧೨೬-೨). [ನ್ಯಾಸ+ಅಪಹಾರ]

ನ್ಯಾಸಾರ್ಪಣ (ನಾ).ನಂಬಿಕೆಯಿಂದ ಕಾಯ್ದಿಡಲು ಕೊಟ್ಟುದನ್ನು ಹಿಂದಕ್ಕೆ ಕೊಡುವಿಕೆ,-ಮರಳಿ ಒಪ್ಪಿಸುವಿಕೆ:(ಕಿ).[ನ್ಯಾಸ+ಅರ್ಪಣ]

ನ್ಯಾಸಿ (ನಾ).=ನ್ಯಾಸಧಾರಿ : ೧೦. ನ್ಯಾಸ ಮತ್ತು ನ್ಯಾಸಿಗಳು. ೧೧. ಮಹಾಪ್ರಶಾಸಕರು ಮತ್ತು ಸರ್ಕಾರಿ ನ್ಯಾಸಿಗಳು (ಭಾಧಾನ. ೨೯೪). [ಸಂ. ನ್ಯಾಸಿನ್]

ನ್ಯಾಸ್ತಾ (ನಾ). ಸ್ನೇಹ ; ಗೆಳೆತನ : ಇವರ ನ್ಯಾಸ್ತಾ ಬಾಳಾ ಬೆಳೀತಿದೆ (ಚಂದತೋ. ೧೭೩). [?]

ನ್ಯಾಹರಿ 'ನೇರೆ$_2$' ನೋ.

ನ್ಯಾಹರೆ 'ನೇರೆ$_2$' ನೋ.

ನ್ಯುಬ್ಜ (ನಾ). ೧. ಕೆಳಗೆ ಬಾಗಿದುದು,—ಬಗ್ಗಿದುದು ; ಅಧೋಮುಖವಾದುದು. ೨. ತಲೆಬಾಗಿದವನು ; ಅಧೋವದನನಾದವನು : "ನ್ಯುಬ್ಜಃ, ಅಧೋಮುಖಃ—ಈ ೨ ತಲೆಯಂ ಬಾಗಿರ್ಪವಂ" (ಹಲಾಯು. ೬೩-೨೩೦). ೩. ಕುಳ್ಳ ; ಕುಬ್ಜ ; ಗಿಡ್ಡ. ೪. ಬೆನ್ನು ಬಾಗಿದವನು ; ಗೂನ. ೫. ಒಂದು ಬಗೆಯ ನಿಂಬೆ. ೬. ಆಲದ ಮರ ; ನ್ಯಗ್ರೋಧ. ೭. ರೋಗದಿಂದ ಕುಗ್ಗಿದವನು,—ಕಂದಿದವನು : "ನ್ಯುಬ್ಜಃ-ರುಜಾಭುಗ್ನೇ-ರೋಗದಿಂದ ದುರ್ಬಲನಾಗಿ ಬೊಗ್ಗಿ ಹೋದವನ ಹೆಸರುಗಳು, ರೋಗದಿಂದ ಕಂದಿದವನು" (ಸಿದ್ಧಾಂತಿ.೧೮೬). [ಸಂ.]

ನ್ಯುಮೋನಿಯ, ನಿಮೋನಿಯ (ನಾ). ಶ್ವಾಸಕೋಶಕ್ಕೆ ಸಂಬಂಧಿಸಿದ ಒಂದು ಬಗೆಯ ರೋಗ ; ಶ್ವಾಸಕೋಶದ ಉರಿಯೂತ : ಆ ಮಗು ನ್ಯುಮೋನಿಯಾದಿಂದ ನರಳುತ್ತಿದೆ (ರೂಢಿ). **ನಿಮೋನಿಯ:** ಮಗುವು ಜ್ವರದಿಂದ ನರಳುತ್ತಿದ್ದರೂ ನಿಮೋನಿಯಾದಿಂದ ಏದುತ್ತಿದ್ದರೂ ಮನೆಯಲ್ಲಿರುವ ಮುದುಕರು ಮಗುವಿಗೆ ಇಂಜೆಕ್ಷನ್ನನ್ನಾಗಲೀ, ಔಷಧವನ್ನಾಗಲೀ ಕೊಡಲು ಅವಕಾಶವನ್ನೇ ಕೊಡುವುದಿಲ್ಲ (ಕೆಲರೋ. ೧). [←ಇಂ. Pneumonia]

ನ್ಯೂನ (ಗು). ೧. ಕೊರತೆಯುಳ್ಳ ; ಕಡಮೆಯ ; ಸಮಗ್ರವಲ್ಲದ. ೨. ಕೀಳಾದ ; ತುಚ್ಛವಾದ. (ನಾ). ೩. ಕೊರತೆ ; ದೋಷ : ಇಲ್ಲಿ 'ಅಪೂರ್ವವಿರಿಂಚ'ನೆಂದು ಹೇಳಿರುವುದರಿಂದ ಬ್ರಹ್ಮನಿಗೆ ಅಸಾಧಾರಣವಾದ ಚತುರ್ವದನತ್ವಾದಿಗಳಿಲ್ಲದಿರುವುದು ನ್ಯೂನವಾಗಿ ಕಾಣುತ್ತದೆ (ಕೃಪಿಡಿ. ೨೬೪).

ನ್ಯೂನಾತಿರೇಕ=ಕಡಮೆ ಮತ್ತು ಹೆಚ್ಚು ; ಹೆಚ್ಚು ಕಡಮೆ ; ಏರುಪೇರು : ನ್ಯೂನಾತಿರೇಕಗಳು ಎಲ್ಲರಲ್ಲಿಯೂ ಇರುತ್ತವೆ (ರೂಢಿ). ನ್ಯೂನಾಧಿಕ್ಯ=ನ್ಯೂನಾತಿರೇಕ : ಇದರಿಂದ ಹವೆಯ ಸ್ಥಿರತ್ವದಲ್ಲಿ ನ್ಯೂನಾಧಿಕ್ಯವಾದಂತೆ, ಸಮುದ್ರದ ಸ್ಥಿರತ್ವದಲ್ಲಿಯೂ ನ್ಯೂನಾಧಿಕ್ಯವಾಗುತ್ತದೆಂದು ತಿಳಿಯುತ್ತದೆ (ಮುಂಬಯಿ. ೬-೨೦೦). [ಸಂ.]

ನ್ಯೂನಗಂಡ (ನಾ). ಉಳಿದವರಿಗಿಂತ ತಾನು ಕೀಳೆಂಬ ಭಾವನೆ ; ನೈಚ್ಯಾನುಸಂಧಾನ : ಶತಮಾನಗಳಿಂದ ಅಂಧಶ್ರದ್ಧೆ, ಅಜ್ಞಾನ, ದಾಸ್ಯ . . . ನ್ಯೂನಗಂಡ, ಮೂಢಭಾವನೆ . . . ಇವನ್ನೆ ಪುರುಷಾರ್ಥವೆಂದೂ ಪರಮಾರ್ಥವೆಂದೂ ಭಾವಿಸಿ, ಅನುಭವಿಸಿ ಬದುಕಿ ಬಂದ ಜನತೆಯಲ್ಲಿ . . . ರಾಜಕಾರಣಕ್ಕೆ ಎಲ್ಲೂ ಇಲ್ಲದ ಎಂದೂ ಸಲ್ಲದ ಮಹತ್ವ ಬರುತ್ತದೆ (ವಿಚಾಪಾ. ೮೮). [ನ್ಯೂನ+ಗಂಡ?]

ನ್ಯೂನತಾದ್ರೂಪ್ಯರೂಪಕ (ನಾ). [ಕಾವ್ಯಮೀ] ತಾದ್ರೂಪ್ಯರೂಪಕಾಲಂಕಾರಗಳಲ್ಲಿ ಒಂದು ಬಗೆ ; ಆರೋಪ ಮಾಡುವ ವಸ್ತುವಿಗಿಂತ ಆರೋಪಿಸಿಕೊಳ್ಳುವ ವಸ್ತುವಿನಲ್ಲಿ ನ್ಯೂನತೆ ತೋರುವ ತಾದ್ರೂಪ್ಯರೂಪಕ : ಇಂತು ತಾದ್ರೂಪ್ಯರೂಪಕಮುಂ ಅನುಭಯತಾದ್ರೂಪ್ಯರೂಪಕಮೆಂದುಂ ನ್ಯೂನತಾದ್ರೂಪ್ಯರೂಪಕಮೆಂದುಂ ಅಧಿಕತಾದ್ರೂಪ್ಯರೂಪಕಮೆಂದುಂ ಮೂಱುಂ ತೆಱಂ (ಅಪ್ರತಿ. ೪೨-೯) ; ವದನಚತುಷ್ಕವಿಲ್ಲದ ರಜೋಗುಣವಿಲ್ಲದ ಪದ್ಮಪೀಠವಿಲ್ಲದ ಕಳಹಂಸವಿಲ್ಲದ ಕಮಂಡಲುವಿಲ್ಲದ ಪಾಶರಜ್ಜುವಿಲ್ಲದ ವಿಮಳಾಕ್ಷಮಾಲಿಕೆಯುಮಿಲ್ಲದಪೂರ್ವವಿರಿಂಚಧರ್ಮಕೋವಿದ ನಯಯುಕ್ತದಾನಪತಿ ಪೇಟ್ಟಪೆನಾಂ ನಿನಗೊಂದು ಕಾರ್ಯಮಂ—ಇಲ್ಲಿ 'ಅಪೂರ್ವವಿರಿಂಚ'ನೆಂದು ಹೇಳಿರುವುದರಿಂದ ಬ್ರಹ್ಮನಿಗೆ ಅಸಾಧಾರಣವಾದ ಚತುರ್ವದನತ್ವಾದಿಗಳಿಲ್ಲದಿರುವದು ನ್ಯೂನವಾಗಿ ಕಾಣುತ್ತದೆ. ಆದ್ದರಿಂದ ಇದು ನ್ಯೂನತಾದ್ರೂಪ್ಯರೂಪಕ (ಕೃಪಿಡಿ. ೨೬೪). [ಸಂ.]

ನ್ಯೂನತೆ (ನಾ). ಕೊರತೆ ; ಅಪೂರ್ಣತೆ ; ಲೋಪ : ಮೆದುಳಿನ ಯಾವುದಾದರೊಂದು ವಿಶೇಷಾಂಶ ನಷ್ಟವಾದಲ್ಲಿ ಸ್ಮೃತಿಯೇ ಮೊದಲಾದ ಮೆದುಳಿನ ಶಕ್ತಿಗಳಲ್ಲಿ ನ್ಯೂನತೆ ಉಂಟಾಗುತ್ತದೆ (ಜೀವಾತ್ಮ. ೫೮) ; ಈ ಪದ್ಧತಿಯಲ್ಲಿರುವ ಮುಖ್ಯ ನ್ಯೂನತೆ : ಒಂದು ನಕ್ಷತ್ರದ ದಿಗಂಶಕೋನೋನ್ನತಿಗಳು ವಿಕಕಾಲದಲ್ಲಿ ಒಂದೊಂದು ವೀಕ್ಷಣಸ್ಥಾನಕ್ಕೂ ಬೇರೆ ಬೇರೆಯಾಗಿರುತ್ತವೆ, ಒಂದೇ ಸ್ಥಾನದಲ್ಲಿ ಕಾಲಕಾಲಕ್ಕೂ ಬೇರೆ ಬೇರೆಯಾಗುತ್ತಿರುತ್ತವೆ ಎಂಬುದು (ನಕ್ಷತ್ರ. ೬೬); ಪದಗಳ ಅರ್ಥ ಮಬ್ಬು ಮಬ್ಬಾಗಿ ತಿಳಿದಿರುವುದೂ ಒಂದು ನ್ಯೂನತೆಯೇ (ತಿಕ್ಷದ. ೫೪೪). [ಸಂ. ನ್ಯೂನತಾ]

ನ್ಯೂನಪದ (ನಾ). [ಕಾವ್ಯಮೀ] ಕಾವ್ಯರಚನೆಯ ದೋಷಗಳಲ್ಲಿ ಒಂದು; "ಪ್ರಕೃತಾರ್ಥವನ್ನು ತಿಳಿಸುವುದಕ್ಕೆ ಸಾಕಾಗುವಷ್ಟು ಪದಗಳನ್ನು ಉಪಯೋಗಿಸಿಲ್ಲದಿರುವುದು" (ಕೈಪಿಡಿ. ೨೨೮).

[ನ್ಯೂನ + ಪದ$_2$]

ನ್ಯೂನಪೂರ್ತಿ (ನಾ). ಕಡಮೆಯಾಗಿರುವುದನ್ನು ತುಂಬಿ ಪೂರ್ಣಗೊಳಿಸುವಿಕೆ; ಕೊರತೆಯನ್ನು ನಿವಾರಿಸುವಿಕೆ: ಇದರಿಂದ ಕೇವಲ ಅಲಂಕಾರಕ್ಕೋಸ್ಕರವಲ್ಲದೆ, ನ್ಯೂನಪೂರ್ತಿಯ ಸಲುವಾಗಿ ಸಂಸ್ಕೃತ ಶಬ್ದಗಳು ದ್ರವಿಡಭಾಷೆಗಳಲ್ಲಿ ಸೇರಿಸಲ್ಪಡಲಿಲ್ಲವೆಂದು ತಿಳಿಯುವುದು (ಮುಂಬಯಿ. ೫-೨೪೦). [ನ್ಯೂನ + ಪೂರ್ತಿ$_1$]

ನ್ಯೂನಪೋಷಣೆ (ನಾ). (ತಕ್ಕಷ್ಟು ಆಹಾರ)ಪೋಷಣೆ ಇಲ್ಲದಿರುವಿಕೆ: "ತಕ್ಕಷ್ಟು, ಸರಿಯಾದ, ಆಹಾರಪೋಷಣೆ ಇಲ್ಲದಿರುವುದು: ನ್ಯೂನಪೋಷಣೆ" (Malnutrition. ಇಂಕನಿ). [ನ್ಯೂನ + ಪೋಷಣೆ]

ನ್ಯೂನಭ್ರೂಣ (ನಾ). ಸರಿಯಾಗಿ ಬೆಳೆಯದಿರುವ ಭ್ರೂಣ; ಅಪೂರ್ಣಭ್ರೂಣ: ಅಂಡ ಒಂದು ಶಬಲಚಿತ್ರದಂತಾಗಿ (Mosaic) ಜೀವಕಣಗಳು ಆಯಾ ಸ್ಥಳದಲ್ಲಿ ಸೇರಿರುವ ಆಧಾರದ ಮೇಲೆ ಅವುಗಳ ಮುಂದಿನ ಕಾರ್ಯಗಳನ್ನು ಮುನ್ಸೂಚಿಸಬಹುದು. ಯಾವುದೇ ಭಾಗ ಕೆಟ್ಟರೆ ನ್ಯೂನಭ್ರೂಣ ಉತ್ಪತ್ತಿಯಾಗುತ್ತದೆ (ಕೇಟಬೆ. ೧೦೫).

[ನ್ಯೂನ + ಭ್ರೂಣ]

ನ್ಯೂನಶ್ರುತಿ (ನಾ). [ಸಂಗೀತ] ಪ್ರಮಾಣ, ನ್ಯೂನ ಹಾಗೂ ಪೂರ್ಣವೆಂಬ ಶ್ರುತಿಯ ಮೂರು ಹಂತಗಳಲ್ಲಿ ಒಂದು: ಇವುಗಳಲ್ಲಿ ಮೊದಲ ಹಂತ, 'ಪ್ರಮಾಣಶ್ರುತಿ', ಎರಡನೆಯದು 'ನ್ಯೂನಶ್ರುತಿ' ಮತ್ತು ಮೂರನೆಯದು 'ಪೂರ್ಣಶ್ರುತಿ'—ಹೀಗಿದೆ ಪ್ರಾಚೀನಶಾಸ್ತ್ರಕಾರರ ಒಂದು ಶ್ರುತಿಯಲ್ಲಿನ ಕ್ರಮವಾದ ಹಂತಗಳ ವಿಭಜನೆ (ಸಂಗೀಚಂ. ೮).

[ನ್ಯೂನ + ಶ್ರುತಿ]

ನ್ಯೂನಾಕ್ಷರ (ನಾ). [ಛಂದ] ಪದ್ಯದಲ್ಲಿ ಅಕ್ಷರ ಕಡಮೆಯಾದ ಪದ ಅಥವಾ ಪಾದ: ಮೊದಲ ಪದಂ ನ್ಯೂನಾಕ್ಷರಮದಱಿಂದೆ ಬಱಿಕ್ಕಮರ್ಧಮಧಿಕಾಕ್ಷರಮಿಂತಿದಱಿಂ ಛಂದೋಭಂಗಂ ಪದನಱಿದದ ನಿಂತು ಸಮಱಿ ಪೇಟ್ಟೊಡೆ ಚೆಲ್ವಂ (ಕವಿಶಾ. ೧-೯೨); ಪದ್ಯಪಾದದ ಕಡೆಯ ಗಣದಲ್ಲಿ ಒಂದು ಅಕ್ಷರ ಸಾಲದಿರುವ: ನ್ಯೂನಾಕ್ಷರ (Catalectic. ಇಂಕನಿ). 'ಅಧಿಕಾಕ್ಷರ' ಪರಾ. [ನ್ಯೂನ + ಅಕ್ಷರ]

ನ್ಯೂನಾಭಿವೃದ್ಧ (ಗು). ಚೆನ್ನಾಗಿ ಬೆಳೆಯದ; ಅಭಿವೃದ್ಧಿ ಕುಂಠಿತವಾದ: "ಅಭಿವೃದ್ಧಿ ಕೊರೆಯಾದ; ನ್ಯೂನಾಭಿವೃದ್ಧ" (Under-developed. ಪತ್ರಿನಿ. ೮೬). [ಸಂ.]

ನ್ಯೂನಾಭಿವೃದ್ಧಿ (ನಾ). ಏಳಿಗೆಯಲ್ಲಿನ ಕೊರತೆ; ಅಭಿವೃದ್ಧಿಯಲ್ಲಿ ಅಭಾವವಿರುವಿಕೆ: "ಅಲ್ಪಾಭಿವೃದ್ಧಿ; ನ್ಯೂನಾಭಿವೃದ್ಧಿ" (Under-development. ಪತ್ರಿನಿ. ೮೬). [ನ್ಯೂನ + ಅಭಿವೃದ್ಧಿ]

ನ್ರಿತ್ಯಮಂಟಪ (ನಾ). ನರ್ತನಶಾಲೆ: ಗ್ರಿಹ×××ದಿಂ ಬ[ಳ]ಸಿದ ಪರಿಸೂತ್ರ ನ್ರಿತ್ಯಮಂಟಪದಿಂದಂ ಜಳರುಹನಾಭನ ಭವನದ ಮಿಳಿರ್ವ್ವ ×××ಳೊಳೆಸೆಗುವತಿಶಯದಿಂದ (ಸೌಇಇ. XX, ೧೧೧-೪೨; 1140).

[<ಸಂ. ನೃತ್ಯಮಂಡಪ]

ನ್ರಿಪತಿ (ನಾ). ರಾಜ; ದೊರೆ: 'ಪರನ್ರಿಪತಿ' ಪರಾ.

[<ಸಂ. ನೃಪತಿ]

★

ಪ₁ (ನಾ). ೧. ಕನ್ನಡ ವರ್ಣಮಾಲೆಯ ನಲವತ್ತೊಂದನೆಯ ಅಕ್ಷರ; ಪಕಾರ: ಅಚ್ಚಗನ್ನಡದಲ್ಲಿ ೪೭ ಅಕ್ಷರಗಳಿವೆಯೆಂದು ಕೇಶಿರಾಜನು ಹೇಳಿರುತ್ತಾನೆ. ಆ ಅಕ್ಷರಗಳು ಯಾವುವೆಂದರೆ . . . (ii) ವ್ಯಂಜನಗಳು :— ವರ್ಗೀಯ : ಕ ಖ . . . ಪ ಫ ಬ ಭ ಮ (ಕೈಪಿಡಿ. ೩). ೨. ಶಾಸನಗಳಲ್ಲಿ ಬರುವ 'ಪಣ' ಎಂಬುದರ ಸಂಕ್ಷಿಪ್ತರೂಪ : ದಾಸಯ ಶಣಂಗಿಯರ ಬಿದ್ದಣ್ಣಂ ಬಿಟ್ಟ ಗ ೧ ಪ ೫ (ಸೌಇಇ. XI–ii, ೧೮೯–೫; 1106). ೩. [ಗಣಿತ] ಒಂದು ಎಂಬ ಸಂಖ್ಯೆಯ ಸಂಕೇತ : "ನಿರುತದಿಂ ಕಟಪ[ಯ]ಮೆನಲ್ಕೊಂದು" (ಮಂಗರಾ. ೧೦೪–೧೦). ೪. [ಸಂಗೀತ] ಸಪ್ತಸ್ವರಗಳಲ್ಲಿ ಒಂದು; ಪಂಚಮಸ್ವರ : "ಷಡ್ಜಮಾ ಯಷಭಮಾ ಗಾಂಧಾರಮಾ ಮಧ್ಯಮಂ ಮಿಾಱಿಪ್ಪ ಪಂಚಮಂ ಧೈವತಂ ಸುನಿಷಾದಮೋರಂತೆ ಸಪ್ತಸ್ವರಂಗಳಕ್ಕ ವಱಲ್ಲಿ ತೋಱುವಕ್ಷರಾದಿ ಸಂಜ್ಞೆಗಳು ಪುಟ್ಟಿದುವು ಸರಿಗಮಪಧನಿಸಯೆಂಬಿವು" (ಮಂಗರಾ. ೨೩–೩); ಸಪ್ತಸ್ವರಗಳು ಏರಿಕೆಯ ಕ್ರಮದಲ್ಲಿ ಅನುಕ್ರಮಿಸುವುದು ಆರೋಹಣವೆನಿಸುತ್ತದೆ. ಉದಾ :— ಸ ರಿ ಗ ಮ ಪ ಧ ನಿ ಸ (ಸಂಗೀಚಂ. ೧೭).

ಪ₂, –ಹ₂ (ಪ್ರ). ಒಂದು ಕೃದಂತಭಾವನಾಮ ಪ್ರತ್ಯಯ : ಕುದಿಪ, ಕುದಿಪಂಗಳ್; ಮಿದಿಪ, ಮಿದಿಪಂಗಳ್ (ಶಬ್ದಾನು. ೫೬೨ ವೃತ್ತಿ); ಭಾವಾರ್ಥದ ಕೃತ್ಪ್ರತ್ಯಯಗಳು ಅನೇಕವಾಗಿರುವುವು. ಅವುಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸಿದೆ . . . ಪ—ಬರೆ–ಬರೆಪ (ಕೈಪಿಡಿ. ೧೬). –ಹ₂ : 'ಅಪ್ಪಿಕೊಳುಹ', 'ಪಿಡಿಹ', 'ಪಿಸುಣಾಡುಹ' ಪರಾ.

ಪ₃ (ಪ್ರ). ಒಂದು ಭಾವನಾಮ ಪ್ರತ್ಯಯ; ℙ ಸಂಸ್ಕೃತದಲ್ಲಿಯ 'ಧರಣಿಪ', 'ಭೂಮಿಪ' ಮೊದಲಾದ ಶಬ್ದಗಳ ಅನುಕರಣದಿಂದ 'ಪೊಡವಿಪ', 'ಮಲೆಪ' ಮೊದಲಾದ ದೇಶ್ಯ ಶಬ್ದಗಳಲ್ಲಿ ಕಂಡುಬರುವ ಒಂದು ಪ್ರತ್ಯಯ.

ಪಉಜುದಾರ 'ಫೌಜುದಾರ' ನೋ.

ಪಉಳಿ 'ಪೌಳಿ₁' ನೋ.

ಪಂ 'ಪನ್₂' ನೋ.

ಪಂಕ₁ (ನಾ). ೧. ಕೆಸರು; ರಾಡಿ; ಕರ್ದಮ : "ಪಂಕಃ, ಸಾದಃ, ನಿಷದ್ವರಃ, ಜಂಬಾಳಃ, ಕರ್ದಮಃ, ಅವಕಿಲಃ—ಈ ೬ ಕೆಸಱು" (ಹಲಾಯು. ೧೧೨–೫೬); ಬಡಪಸು ಪಂಕದಲ್ಲಿ ಬಿದ್ದೊಡೆ ಕಾಲ ಬಡಿವುದಲ್ಲದೆ ಬೇಱೆ ಗತಿಯುಂಟೆ (ಬಸವ. ೫೩); ಕಪಿಲೇಶಲಿಂಗದಭಿಷೇಕಕ್ಕೆ ಭಕುತಿಯಿಂದೋರ್ವ ಪನ್ನೊಂದು ಸಾಸಿರಕುಂಭಕ್ಷೀರವನು ಎಱೆಯಲಾಗ ವಸುಧೆಯೊಳು ಪರಿದು ಪಂಕಮದಾಗೆ (ಪ್ರೌಢರಾ. ೨೧–೪); ಓ ಭಾವ ಗಂಗಾವೇಣಿ . . . ಮುಟ್ಟಿದರೆ ನಿನ್ನ ಮೆಯ್, ರಾಮಾಂಘ್ರಿ ಸೋಂಕಿದೊಡನೆಯೆ ಕಲ್ಲು ಕಡುಚೆಲ್ವು ಪೆಣ್ಣಾಗಿ ಸಂಭವಿಸಿದೋಲ್ ಪಂಕದಿಂ ಕಲಾಪಂಕಜಂ ಕಂಗೊಳಿಪುದಯ್ (ಶ್ರೀರಾಮಾ. ೫–೧೩೨). ೨. (ಗಂಧವೇ ಮೊದಲಾದ ಮುಂದವಾದ) ವಿಲೇಪನ ದ್ರವ್ಯ; ದೇಹಕ್ಕೆ ಬಳಿದುಕೊಳ್ಳುವ ಕಲ್ಕ: ಚಂದನಪಂಕಾರ್ದ್ರಂಗಳಪ್ಪ ಕರಕಮಲಂಗಳಂ ಮುಗಿದು (ಕಾದಂಪೂ. ೮೮೫); ಮಾಸರಮೊಕ್ಕ ಕತ್ತುರಿಯ ಪಂಕಮನಲ್ಲದೆ ಪಂಕಮಂ . . . ಅಱಿಯಂ (ಸುಕುಮಾ. ೧೦–೧೦೭); ಗಿರಿಜಾ ಸುಸ್ತನವಿಲೇಪ ನವ ಕಸ್ತೂರಿ ಪಂಕಾಂಕ ಹಸ್ತಪಲ್ಲವಯುಗ . . . ನಮಸ್ತೇ ವಿರೂಪಾಕ್ಷ (ಚೆಬಪು. ೩೭–೧). ೩. ಕೊಳೆ; ಹೊಲಸು; ಮಲ : ಪೊಡೆಯೊಳ್ ತುಂಬಿರೆ ಪಂಕ ಮೇಲೆ ತೊಳೆಯಲ್ ತಾಂ ಶುದ್ಧನೇನಪ್ಪನೇ (ಸೋಮೇಶ. ೯೭). ೪. ಪಾಪ; ಪಾತಕ : "ಪಂಕಂ, ಪಾಪಂ . . . ದುಷ್ಕೃತಂ–೧೨ ಪಾಪದ ಹೆಸರುಗಳು" (ಸಿದ್ಧಾಂತಿ. ೪೨); ಮುಟ್ಟಿ ಸೇವಿಪರ ಪಂಕಮನೊರ್ಮೊದಲೊಳ್ ಪಾಟ್ಗೊಡಿಸುತುಂ . . . ವಿಶ್ವರೂಪಿಣಿಯೆನೆ ಮೆಱೆವ ನೆಲೆಗಾಣದ ನಿನ್ನೀ ಮೈಮೆಯಂ ಬಣ್ಣಿಸಲಾವಂ ಸಾಲ್ವಂ (ರಾಮಾಶ್ವ. ೩೧–೩). ೫. (ಆಲಂ) ಕ್ಲೇಶ, ಬಾಧೆ : ಜನರಿವರು ಬಡತನದ ಪಂಕದಲಿ ಮಿಳಮಿಳನೆ ಪುಳುಗಳಂತುದಿಸುವರು ಸಾಯುವರು (ನಾಗರಿ. ೪೧–೧೯); ನೀವು ಹೀಗೆಯೇ ಪಾರತಂತ್ರ್ಯದ ಪಂಕದಲ್ಲಿ ಚಿರಕಾಲ ಕೊಳೆಯಹತ್ತಿ . . . ನಿಮ್ಮ ಧರ್ಮದ ಪದ್ಧತಿಯನ್ನು. ನಿಮ್ಮ ಕೈಯಿಂದಲೇ ಮುರಿಯುವಷ್ಟು ನಾಸ್ತಿಕರು ನೀವಾಗಬೇಕಾದೀತು (ಧಾರ್ಮಿತೇ. ೨೦೫). [ಸಂ.]

ಪಂಕ₂ 'ಪಂಖ' ನೋ.

ಪಂಕಜ (ನಾ). ೧. ಕೆಸರಿನಲ್ಲಿ ಹುಟ್ಟಿದುದು; ತಾವರೆ; ಕಮಲ: "ಸಹಸ್ರಪತ್ರಂ . . . ಅರವಿಂದಂ, ಪದ್ಮಂ, ಪಂಕಜಂ—ಈ ೧೭ ತಾವರೆ" (ಹಲಾಯು. ೧೧೨–೫೭); ಪಂಕಜಮುಂ ಸುಹೃದ್ವದನಪಂಕಜಮುಂ ಮುಗಿವನ್ನಮುಗ್ರತೇಜಂ ಕಿಡುತಿರ್ಪಿನಂ . . . ಕುರುಕುಲಾರ್ಕನುಮರ್ಕನುಮಸ್ತಮೆಯ್ದಿದರ್ (ಗದಾಯು. ೯–೩೫); ಚಿಪ್ಪಿನೊಳ್ ಮುತ್ತು ಕಾಸಾರದೊಳ್ ಪಂಕಜಂ . . . ಪುಟ್ಟುವಂತಿರೆ ಪುಟ್ಟಿದಂ ಶಿವನ ಶಿಶುವಲ್ಲಿ (ಬಸರ. ೧–೧೨೫). ೨. [ಛಂದ] ಸಂಕೃತಿ ಎಂಬ ಅಕ್ಷರ ಛಂದಸ್ಸಿನಲ್ಲಿ ಒಂದು ವೃತ್ತ; ಪ್ರತಿಪಾದದಲ್ಲೂ ಇಪ್ಪತ್ತುನಾಲ್ಕು ಅಕ್ಷರಗಳ ನ, ಜ, ಭ, ಜ, ಜ, ಜ, ರ, ಸ ಗಣಗಳ ಒಂದು ವೃತ್ತ : ಅಮರಗಣಾರ್ಕ ಶೀತಕರ ಭಾನುಗಣತ್ರಿತಯಾಂತ್ಯಪಾವಕಂ ಪವನಂ ಸಮುದಿತವಿಶ್ರಮಂ ನೆಲಸಿ ದಿಕ್ಕರಿಯೊಳ್ ಕರಮೊಪ್ಪೆ ರಾಗದಿಂದವನೀ ಸಮದೊಳೆ ನಾಗವರ್ಮನ ಮತಂ ಪರೆದತ್ತು ಸಮಸ್ತಧಾತ್ರಿಗೆಲ್ಲಮಿದುಂ ಕ್ರಮದೊಳಗಾದುದಿಂತಿದನೆ ಪೇಟ್ದನೆ ಸತ್ಕವಿವರ್ಯ ಕೇಳ ಪಂಕಜಮಂ (ಛಂದೋಂಬು. ೨–೧೪೨). [ಸಂ.]

ಪಂಕಜಗರ್ಭ (ನಾ). ಕಮಲದಲ್ಲಿ ಹುಟ್ಟಿದವನು; ಬ್ರಹ್ಮ; ಅಬ್ಜಯೋನಿ. [ಪಂಕಜ+ಗರ್ಭ]

ಪಂಕಜನಂದನ (ನಾ). ಬ್ರಹ್ಮ : ಪಂಕಜನಂದನ ದಾನವಾರಿ ರುದ್ರರ್ ಪೊಂಕದ ಬೋಳೆಯರಾದಿಕಾರಣಾಂಗರ್ ಬಿಂಕದ ಮೂವರಿವರ್ಗೆ ಬೀಜನಿಾಶಂ ಸಂಕಥಿತರ್ ಶ್ರುತಿರಾಜಿಯೊಳ್ಸತತ್ತ್ವರ್ (ಹಾಲಾಸ್ಯ. ೧–೧೭–೨೬). [ಪಂಕಜ+ನಂದನ]

ಪಂಕಜನಾಭ (ನಾ). ಕಮಲವು ಹೊಕ್ಕುಳಲ್ಲಿರುವವನು; ಪದ್ಮನಾಭ; ವಿಷ್ಣು. [ಸಂ.]

ಪಂಕಜನೇತ್ರೆ (ನಾ). ಕಮಲದಂತೆ ಸುಂದರವಾದ ಕಣ್ಣುಳ್ಳವಳು; ಅಂಬುಜನೇತ್ರೆ : ಪಂಕಜನೇತ್ರೆ ಹಂಸಗಮನಾನ್ವಿತೆ . . . ಪೇಟ್ಟೆ ಭ್ರಮರಜಾಳಮನೇಟಿಸಿ ಪೋಗಲೀಗುಮೇ (ಪಾರ್ಶ್ವಪು. ೧೦–೫೧). [ಸಂ. ಪಂಕಜನೇತ್ರಾ]

ಪಂಕಜಪಾಣಿ (ನಾ). ಕಮಲದಂತೆ ಕೈಯುಳ್ಳವಳು ; ಕೋಮಲವಾದ ಹಸ್ತವುಳ್ಳವಳು : ಇಂತೊಪ್ಪುವ ಸುಕುಮಾರಂಗೆ . . . ಶೋಣಪಂಕಜಪಾಣಿ ಶಿವಮಂತ್ರವಾಣಿ ಕಾಂತಾತಿರೋಮಣಿ ಕಾಂಭೋಜರಾಜನ ಪುತ್ರಿ ಕಾಂತ ಗೌರೀದೇವಿಯೆಂಬ ತರುಣಿಯಂ ಮುದುವೆಯಂ ಮಾಡಿ (ಪಪಾ೨ರ. ೨-೩೨ ಪ). [ಪಂಕಜ + ಪಾಣಿ೨]

ಪಂಕಜಬಾಣ (ನಾ). ಕಮಲವೇ ಬಾಣವಾಗಿರುವವನು ; ಮನ್ಮಥ : ಕಂದಿಕಾತಿಯರುಗಳ ಸಡಗರವನಾರು ಪೇಳುವರೆ ಪಂಕಜ ಬಾಣನಂಕದಾನೆಯು ಪೊಲ್ಲಳ್ (ನಸಮೋ. ೪-೩೮).

[ಪಂಕಜ + ಬಾಣ]

ಪಂಕಜಬೀಜ (ನಾ). ತಾವರೆಬೀಜ : ಬಜೆ ಕೋಷ್ಠಂ ಶಂಖಂ ಪಂಕಜಬೀಜಂ ಲೋಹಮೆಂದಿವಂ ಕೊರಲೊಳ್ ಕಟ್ಟೆ ಜಗರಮುಂ ಗ್ರಹಗಣಮುಂ ದ್ವಿಜಗಣಮುಂ ಪೊರ್ದಲಣ್ಮವಾ ಬಾಲಕನಂ (ಕೀಕೋಪ. ೯-೧೪೪).

[ಪಂಕಜ + ಬೀಜ]

ಪಂಕಜಭವ (ನಾ). = ಪಂಕಜಗರ್ಭ : ಪಂಕಜಭವ ಅಲಿಂಕಂಕಣನುತ ಪದಪಂಕಜ ತೋರೋ ಮಿಸಾನಾಂಕನ ಜನಕ (ವಿವಾಳ್ಕ. ೫೯ ಆಸುಪಲ್ಲವಿ).

[ಪಂಕಜ + ಭವ]

ಪಂಕಜಮುಖಿ (ನಾ). ಕಮಲದಂತೆ ಸುಂದರವಾದ ಮುಖವುಳ್ಳವಳು ; ಕಮಲಮುಖಿ : ಪಂಕಜಮುಖಿ ಬಾ ಎನೆ ತಾಯಂ ಕಾವಿನಿ ಪಡಿಯೆ (ಕ್ರಿಪುವಿ. ೨೪-೧೨೮) ; ಪಂಕಜಮುಖಿಯರೆಲ್ಲರು ಬಂದು ಲಕ್ಷ್ಮೀವೇಂಕಟರಮಣಗಾರತಿಯೆತ್ತಿರೆ (ಪುರಂದ. ೪-೨೦೩ ಪಲ್ಲವಿ) ; ಕೊಂಕುಗುರಿನ ರಂಭೆ ಕಂಕಣವು ಕಟಿಸೂತ್ರ ಪಂಕಜಮುಖಿಯು[ಪಾಕಾಂ. ಪಂಕಜಾ ಗಂಧಿಯು]ಎನಬೇಡ ತಾನೊಲಿದ ಮಂಕೆ ಮಾಡಿಕವು (ನಸಚಜ್ಞ. ೧೭೧೦). [ಸಂ. ಪಂಕಜಮುಖೀ]

ಪಂಕಜವಿಷ್ಟರ(ನಾ). ೧. ತಾವರೆಯ ಪೀಠ,—ಆಸನ. ೨. ತಾವರೆಯನ್ನೇ ಆಸನವನ್ನಾಗಿ ಮಾಡಿಕೊಂಡಿರುವವನು; ಕಮಲಾಸನ ; ಬ್ರಹ್ಮ : ಪದ್ಮವಿಷ್ಟರದಿಂ ಪಂಕಜವಿಷ್ಟರಂ ನತವಿನೇಯವ್ರಾತ ಜೇತಸ್ತೋಹರನಾಗಿರ್ದುದಜಂ ಹರಂ ಭವಹರಂ ಮಾಣಿಕ್ಯದೇವಂ ವಸುಂಧರೆಗಿಂತೊರ್ವನೆ ದೇವನಾಗಿರೆ ಜಯಂ ಭದ್ರಂ ಶುಭಂ ಮಂಗಳಂ (ಆದಿಪು. ೧೬-೬). [ಪಂಕಜ + ವಿಷ್ಟರ]

ಪಂಕಜವೈರಿ (ನಾ). ಕಮಲಗಳಿಗೆ ಶತ್ರುವಾಗಿರುವವನು ; ಚಂದ್ರ. [ಪಂಕಜ + ವೈರಿ]

ಪಂಕಜಸಂಭವ (ನಾ). = ಪಂಕಜಗರ್ಭ : ಪಂಕಜಸಂಭವಂ ನಿನಗೆ ಪಾಸಟಿಯಲ್ಲದ ರಾಘವಂಗೆ ನಿನ್ನಂ ಕೂಡೆ ಕಂಡು ಸ್ಮೆರಿಸದೆ ಚಿತ್ತಭವಂ ದಶಕಂಧರಂಗೆ ಕೊಟ್ಟಂ (ಪಂರಾಮಾ. ೯-೧೩೪). [ಪಂಕಜ + ಸಂಭವ]

ಪಂಕಜಾಕರ (ನಾ). ತಾವರೆಗಳಿಗೆ ಆಶ್ರಯಸ್ಥಾನವಾದುದು ; ತಾವರೆಗೊಳ; ಕಮಲಾಕರ : ಅಂಚೆಗಳಿಲ್ಲದಂಬುರುಹವನಂಬುಜಮಿಲ್ಲದ ಪಂಕಜಾಕರಂ ವಿಲಂಬುವ ಪಂಕಜಾಕರಮದಿಲ್ಲದ ನಲ್ಬನಂ . . . ಸಮತುಂಬಿ ಪೊಬಲ್ಗಳಿಲ್ಲದ ಮಹೀತಳಮಿಲ್ಲ ತದೀಯರಾಜ್ಯದೊಳ್ (ಉದ್ಭವ. ೩-೬) ; ಶರನಿಧಿಯಲ್ಲಿ ವೈಕ್ಷತತಿಯಲ್ಲಿ ಮರುತ್ಪಥದಲ್ಲಿ ಪಂಕಜಾಕರದೆಡೆಯಲ್ಲಿ ತತ್ತ ತಿಳಿಜೊನ್ನನುನಂಜೆಗಳುನ್ಮದಾಳಿಗಳ್ ಸುರಮುನಿಗಳ್ಗ ಜಂಗಳೊಸೆದೀಂಟಲುಮಾರ್ದಜಗಲ್ಮುಳುಂಗಲಾತುರಿಸಿ ಕರಾಗ್ರದಿಂದುದಿಯಲಾಟಪುವು (ರಾಜಶೇ. ೧೩-೪೩). [ಪಂಕಜ + ಆಕರ೨]

ಪಂಕಜಾಕ್ಷ(ನಾ). ಕಮಲದಂತೆ ಕಣ್ಣು ಳ್ಳವನು; ಕೃಷ್ಣ ; ವಿಷ್ಣು : ವೇಣುವಂ ಬಾಜಿಸುತ್ತುಂ ತುಜುಗಾದಂ ಗೋಪವೇಷೋಚಿತ ವನಕುಸುಮಾಲಂಕೃತಂ ಪಂಕಜಾಕ್ಷಂ (ಜಗವಿ. ೪-೩೮).

[ಸಂ. (ಪಂಕಜ + ಅಕ್ಷಿ + -)]

ಪಂಕಜಾತ (ನಾ). = ಪಂಕಜ ೧ : ಖರಖುರಘಾತಜಾತ ಧರಣೀತಳರೇಣುವಜಾಂಡ ಪಂಕಜಾತವಿದೆಂದಿನಂ ನೆಗೆದು ತೀವಿರೆ (ರಾಜಶೇ. ೧೩-೯೦). [ಪಂಕ + ಜಾತ]

ಪಂಕಜಾನನೆ (ನಾ). ಕಮಲದಂತೆ ಸುಂದರವಾದ ಮುಖವುಳ್ಳವಳು : ಪಂಕಜಾನನೆ ನಿನ್ನ ಸ್ವಾಮಿಗಳಂ ಕಳುಹಿ ಕಳಿ ನೀನೆನಲು (ಬಸಪು. ೫೧-೬). [ಸಂ. ಪಂಕಜಾನನಾ]

ಪಂಕಜಾಪ್ತ (ನಾ). ಕಮಲಗಳಿಗೆ ಬಂಧುವಾದವನು ; ಸೂರ್ಯ. [ಪಂಕಜ + ಆಪ್ತ]

ಪಂಕಜಾರಿ (ನಾ). = ಪಂಕಜವೈರಿ. [ಪಂಕಜ + ಅರಿ೨]

ಪಂಕಜಾಸನ (ನಾ). = ಪಂಕಜವಿಷ್ಟರ ೨ : ಜನಪ ನಿನಗೆಚ್ಚಜಜಾಪೆನಾದಿಯೊಳ್ ಪಂಕಜಾಸನನ ಮಾನಸಪುತ್ರನಾದನಂಗಿರಂ (ಜೈಮಿಭಾ. ೫-೨೬); ಪಂಕಜೇಕ್ಷಣ ಪಂಕಜಾಸನ ಪಾಕಶಾಸನ ಮುಖ್ಯರಾ ಬಿಂಕಮುಂ ತೃಣಮಿಟ್ಟು ಯಕ್ಷನ ರೂಪಿನಿಂ ಮುಜ್ಜಾದಂ ಮಹೇಶಂ (ವೃಷವಿ. ೩೭-೧೦೭). [ಪಂಕಜ + ಆಸನ]

ಪಂಕಜಿನಿ (ನಾ). ಕಮಲದ ಬಳ್ಳಿ ; ತಾವರೆ ಬಳ್ಳಿ ; ಕಮಲಿನಿ : "ಅಬ್ಜಿನೀ, ಕಮಲಿನೀ, ಸರೋಜಿನೀ, ಪಂಕಜಿನೀ, ಪುಷ್ಕರಿಣೀ, ಅಂಭೋಜಿನೀ ಮುಂತಾದ ಶಬ್ದಗಳೂ ತಾವರೇಬಳ್ಳಿಗೆ ಹೆಸರುಗಳು" (ವಿದ್ಯಾಂತಿ. ೪೯) ; ರಕ್ತ ಪಂಕರುಹಮನಾಂತ ಪಂಕಜಿನಿಯಂತೆ ನವೋದಿತ ಚಂದ್ರಬಿಂಬಮಂ ಭರಿಯಿಸಿದಿಂದ್ರದಿಗ್ವನಿತೆಯಂತೆಸೆದಳ್ ಮಧುಪಾನ ಗೋಷ್ಠಿಯೊಳ್ (ಕಾವ್ಯಸಾ. ೯೬೨). [ಸಂ. ಪಂಕಜಿನೀ]

ಪಂಕಜೇಕ್ಷಣ (ನಾ). = ಪಂಕಜಾಕ್ಷ : ಪಂಕಜೇಕ್ಷಣ ಪಂಕಜಾಸನ ಪಾಕಶಾಸನ ಮುಖ್ಯರಾ ಬಿಂಕಮುಂ ತೃಣಮಿಟ್ಟು ಯಕ್ಷನ ರೂಪಿನಿಂ ಮುಜ್ಜಾದಂ ಮಹೇಶಂ (ವೃಷವಿ. ೩೭-೧೦೭). [ಪಂಕಜ + ಈಕ್ಷಣ]

ಪಂಕಜೋದರ (ನಾ). ಕಮಲವನ್ನು ಹೊಟ್ಟೆಯಲ್ಲಿ ಹೊಂದಿರುವವನು ; ವಿಷ್ಣು . [ಪಂಕಜ + ಉದರ]

ಪಂಕಜೋದ್ಭವ (ನಾ). ಕಮಲದಲ್ಲಿ ಹುಟ್ಟಿದವನು ; ಬ್ರಹ್ಮ : ಮುದದೊಳೇನುವನಜಾಯದವರು ತಮ್ಮೊಳು ತಾವೆ ಮೊದಲೊಳೊಗೆದುದು ಹರಿಗೆ ಪಂಕಜೋದ್ಭವಗೆಯುಂತದಜ ತಜುವಾಯ ಬಳಿಕೆನಗೆ ನಿನಗೆಂದು ಭಾಗೆಯ ಮಾಡಿಕೊಂತ ಮಥಿಸೆ (ಲತಿಚಂ.೧೨-೭). [ಪಂಕಜ + ಉದ್ಭವ]

ಪಂಕಪ್ರಭೆ (ನಾ).[ಜೈನ]ಒಂದು ನರಕದ ಹೆಸರು ; P ರತ್ನಪ್ರಭೆ, ಶರ್ಕರಾಪ್ರಭೆ, ವಾಲುಕಾಪ್ರಭೆ, ಪಂಕಪ್ರಭೆ, ಧೂಮಪ್ರಭೆ, ತಮಃಪ್ರಭೆ,ಮಹಾತಮಃಪ್ರಭೆ ಎಂಬ ಏಳು ನರಕಗಳಲ್ಲಿ ನಾಲ್ಕನೆಯದು : ಪಂಕಪ್ರಭೆಯೊಳ್ ದಶಾಬ್ಧ್ಯುಪಮೆಯಿಂ ದುಃಖಾಗ್ನಿಯೊಳ್ ಬೆಂದು ಮತ್ತವನಲ್ಲಿಂ ಪೊಮಮಟ್ಟು ಮುನ್ನ ಧನುಮಂ ಬಯ್ತು ರ್ದಗಾರಣ್ಯದೊಳ್ ಪುಲಿಯಾಗಿ ಶಿಟ್ಟ (ಆದಿಪು. ೫-೪) ; ಲಕ್ಷ್ಮಣಂ ನಮ್ಮ ಪಂಕಪ್ರಭೆಯೊಳ್ ಪುಟ್ಟದೊಂ (ಜಾವುಂಪು. ೩೧೬). [ಪಂಕ೨ + ಪ್ರಭೆ]

ಪಂಕಭಾಗ (ನಾ). [ಜೈನ] ರತ್ನಪ್ರಭೆಯೆಂಬ ನರಕಭೂಮಿಯ ಮೂರು ಭಾಗಗಳಲ್ಲಿ ಒಂದು ; ಎಂಬತ್ತ್ನಾಲ್ಕು ಸಾವಿರ ಯೋಜನಪ್ರಮಾಣವಿರುವ ಪ್ರದೇಶ : ರತ್ನಪ್ರಭೆಯೆಂಬ ಪೃಥ್ವಿಯಿರ್ಕುಮಾ ಪೃಥ್ವಿ ವಜ್ರಖರ ಪಂಕಜಲಬಹುಳಭಾಗದಿಂ ತ್ರಿವಿಧಮುಳ್ಳು ಮಲ್ಲಿ . . . ಪಂಕಭಾಗಮೆಂಬ್ಪತ್ತ ನಾಲ್ಕುಸಾಸಿರ ಯೋಜನಂ (ಸುಕುಮಾ. ೧೧-೪೧ ಪ). [ಪಂಕ೧ + ಭಾಗ]

ಪಂಕಭೂಮಿ (ನಾ). ಕೆಸರುಳ್ಳ ಭೂಮಿ ; ಹಸಿಯಾದ ನೆಲ : ಅಂಕುರಬೀಜದೊಳಿರುತದೆ ಭೂಮಿಯಲಿ ಸೋಂಕದಿರ್ದರೆ ವೃಕ್ಷವಹುದೆ ಪಂಕಭೂಮಿಯ ಸೋಂಕಲಾ ಬೀಜದಿಂದೊಡೆದಂಕುರಿಪುದು ವೃಕ್ಷವಹುದು (ಭರಜ. ೬೯-೧೧೫). [ಪಂಕ೧ + ಭೂಮಿ]

ಪಂಕರುಹ (ನಾ). = ಪಂಕಜ ೧ : ತನ್ನ ಸದ್ಭಾವದಿನೆನ್ನನಾಳ್ದನ ಮಗಳ್ ಪದಪಿಂದಮೆ ತಂದಳಿಂತಿದಂ ದೇವರ ಪಾದಪಂಕರುಹದಲ್ಲಿಗೆ (ಕಾದಂಪೂ. ೫೭) ; ಪರಹಿತರೆಂದುದಾತ್ತಯಶರೆಂದು ಜಿತೇಂದ್ರಿಯರೆಂದು ಯೋಗಪಂಕರುಹ ದಿನೇಶರೆಂದು. . .ದೇವಸಿಂಗಿಜೀಯರ ಪದಯುಗ್ಮಮಂ ಪಡೆದು ಕಚ್ಚಿದರರ್ತ್ಥಿಯೆ ಪುಣ್ಯಮೂರ್ತ್ತಿಗಳ್ (ಸೌಇಇ. XX, ೪೯-೫೭ ; ಸು. 1076 ?). [ಸಂ.]

ಪಂಕರುಹಗರ್ಭ (ನಾ). = ಪಂಕಜಗರ್ಭ : ತನ್ನ ಮುನ್ನಿನ ಕರ್ಮವನಗಲ್ಚಿ ಮರಳಿ ತೊಡೆಯಲು ಕಾಯಲುಂ ಪಂಕರುಹಗರ್ಭಂಗಾಗದು (ಬಸಪು. ೪೬-೧೩). [ಪಂಕರುಹ+ಗರ್ಭ]

ಪಂಕರುಹನಾಭ (ನಾ). = ಪಂಕಜನಾಭ : ತರುಣಿಯರು ಕೆಂದಳಿರ ಕಲಶದ ಕರತಳದ ಗರುವಾಯಿಯಲಿ ಪಂಕರುಹನಾಭನಿದಿರುಗೊಂಡರು (ಕುಸ್ಯಾಉ. ೭-೨೦). [ಸಂ.]

ಪಂಕರುಹಪತ್ರ (ನಾ). ತಾವರೆಯ ಎಲೆ ; ಕಮಲದ ಎಲೆ : ನರೇಂದ್ರನರ್ಥಮಂ ಪೊರೆದಿರವಲ್ಲಿ ಪಂಕರುಹಪತ್ರದ ನೀರವೊಲಪ್ಪುದು . . . ನಿಜಾಭಿಮಾನಮಂ ಧರಿಯಿಸುವಲ್ಲಿ ಚಾದಗೆವೊಲಪ್ಪುದು ತಪ್ಪದ ಮಾತ್ಯಲಕ್ಷಣಂ (ಕಾವ್ಯಸಾ. ೪೨೨). [ಪಂಕರುಹ+ಪತ್ರ]

ಪಂಕರುಹಮುಖಿ (ನಾ). = ಪಂಕಜಮುಖಿ : ಕೃಷ್ಣನ ವರ ಸುಧಾಮಯವಚನವನು ಪಂಕರುಹಮುಖಿ ಕೇಳುತ್ತೆ ನನೆದಳು ನಯನ ವಾರಿಯಲಿ (ಕುಸ್ಯಾಉ. ೮-೨೪). [ಸಂ. ಪಂಕರುಹಮುಖೀ]

ಪಂಕರುಹಾರಾತಿ (ನಾ). = ಪಂಕಜವೈರಿ : 'ಪಂಕರುಹಾರಾತಿಸುತ' ಪರಾ. [ಪಂಕರುಹ+ಅರಾತಿ]

ಪಂಕರುಹಾರಾತಿಸುತ (ನಾ). ಚಂದ್ರನ ಮಗ ; ಬುಧ : ಪಂಕರುಹಾರಾತಿಸುತಾಂಶದೊಳ್ ಕಪಟ ದುಶ್ಚಾರಿತ್ರೆ ಶುಕ್ರಾಂಶದೊಳ್ (ಜಾತತಿ. ೨೨-೩). [ಪಂಕರುಹಾರಾತಿ+ಸುತ]

ಪಂಕರುಹವದನೆ (ನಾ). = ಪಂಕಜಮುಖಿ : ಪಂಕರುಹವದನೆ ಮನದಾಶಂಕೆಯಿದೇಂ ಸ್ನೇಹವೆಂಬುದೆರಡಿಲ್ಲೆನ್ನೊಳ್ (ಜಗವಿ. ೧೨-೯೮) ; ಪಂಕರುಹವದನೆಗೆಸೆದುವು ಕುಂಕುಮದಿಂ ತೊಯ್ದು ಚಮರಿಯಂ ಮೋದಿದವೋಲ್ ಕೊಂಕಿ ನಖರೇಖೆ ಕೊರಲೊಳ್ (ಸೂಕ್ತಿಸು. ೧೪-೨೯). [ಸಂ. ಪಂಕರುಹವದನಾ]

ಪಂಕಿಲ, ಪಂಕಿಳ (ಗು). ೧. ಕೆಸರಿನಿಂದ ಕೂಡಿರುವ ; ಕೆಸರಾದ : ವಿಧಿಯ ವಾಹನಗಳಿಗೆ ಗ್ರೀಷ್ಮಾವಧಿಕ ಪಂಕಿಲ ಪಲ್ವಲಸ್ಥಾಂಬು ಧೃತಿಯಲಿ ಸೊಗಸುವುದೆ ಭೇಕಗಳಿಂದ ಸಂಸೇವ್ಯಂ (ವಿವೇಧ. ೮-೨೬). (ನಾ). ೨. ಕೆಸರಿನಿಂದ ಕೂಡಿರುವುದು ; ಕೆಸರುಳ್ಳದು : ಪಂಕಿಲಮಾಗಿ ಗೋಕುಲದ ಗೋಮಯದಿಂ ನಡೆಗೊಳ್ವ ಘಾತದಿಂದಂ ಕದಡಾಗಿ . . . ಕೆಳಗೆ ಪಾಯ್ವ ಪಶುವ್ರಜಮಿಸಿ ಬರ್ಪುದುಂ (ಲೀಲಾವ. ೫-೮೪) ; ಬಲಮಿದೆ ಬಂದುದದ್ರಿ ಪುಡಿಯಪ್ಪಿನಮಗ್ಗದರಣ್ಯಮೆಲ್ಲಮುಂ ನೆಲಸರಿಯಪ್ಪಿನಂ ಘನತರಂಗಿಣಿ ಪಂಕಿಲ[ಪಾಠಾಂ. ೪]ಮಾಗುತಿರ್ಪಿನಂ (ರಾಜಶೇ. ೬-೩೪) ; ತೀವ್ರಮುಂ ಪಂಕಿಲಮುಂ ಪುರಾಣಮೆನಿಪ್ಪೀ ತ್ರಿತಯಂ ಜರಶಾಭಿಧಾನಂ (ನಾನಾರ. ೧೪೭). ೩. ಕೆಸರು ; ಪಂಕ : "ಪಂಕಿಲಃ, ಜಂಬಾಲೆ—ಕೆಸರಿನಿಂದೊಡಗೂಡಿದ ದೇಶಕ್ಕೆ ಹೆಸರು" (ಸಿದ್ಧಾಂತಿ. ೯೫) ; ಇಳೆ ದಣಿವುತೋಂಕರಿಸಿತೆನೆ ಪಂಕಿಲಗಳುಬ್ಬಿದವಖಿಳ ಜೀವರ ತೊಳಲಲೀಯದೆ ನಡುಗಿಸಿತು ಪರ್ಜನ್ಯನಾಟೋಪ (ಅನಂರಾ. ೪-೨-೯). **ಪಂಕಿಳ :** ೨. ರಾಜವಿದ್ಯಾಧರಂ . . . ದಕ್ಷಿಣಪಾಣಿಶೋಣಮದಿಂ ಕುಂಕುಮ ಪಂಕಿಳಂ ಮಾಟ್ಟಿಂತೆ ಕಂಧರಮನಪ್ಪಳಿಸುತ್ತುಂ (ಮಲ್ಲಿಪು. ೯-೫೦) ; ತಳರಲ್ಕೆಂದಡಿಯಿಟ್ಟು ಜಾಱಿ ಜವದಿಂ ಕೈಯೂಱಿ ಬಿಳ್ದೇಳ್ದು ಪಂಕಿಳ ಮಾದಂಶುಕಮಂ ಪೊನಲ್ವರಿವ ನೀರೊಳ್ಕರ್ಚಿ . . . ಕೋಲ್ಗಳನಾಂತೈದುವ ಪಾಂಥರಂ ನಗುವರಾ ಹರ್ಮ್ಯಾಗ್ರದಬ್ಜಾಕ್ಷಿಯರ್ (ರಾಜಶೇ. ೮-೧೨೪). ೩. 'ಪಂಕಿಳಿಸು' ಪರಾ. ೪. (ಆಲಂ) ದೋಷಯುಕ್ತನಾದವನು : ಆರ್ಪ್ಪಿನೊಳು . . . ಬಲದೊಳು ಮಾಧವಭಟ್ಟನೇಂದನುಜನೊಳು ದಾನಕ್ಕೆ ಕೋಡಿಟ್ಟನಂ ಕಲಿಕಾಲೇಯ ಕಳಂಕಪಂಕಿಳರ ನೆನ್ತುಂ ಪೋಲಿಸಲು ಬಲ್ಲರೇ (ಸೌಇಇ. XV, ೫-೫ ; 1105). [ಸಂ.]

ಪಂಕಿಲತೆ (ನಾ). ಕೊಳಕು ; ಮಲಿನತೆ : ತೊಱೆದು ಕಳಂಕಪಂಕಿಲತೆಯಂ ಮಱೆಗಾಲದ ಸೊಂಪನೇಳಿಸಲ್ ನೆಱೆದನುಬಂಧಮಂ ಮೆಱೆದ ನಚ್ಚರಿ ಲಾಂಗಲಪಾಣಿ ಸೀತೆಯೊಳ್ (ಪಂರಾಮಾ. ೭-೧೩೮). [ಸಂ. ಪಂಕಿಲತಾ]

ಪಂಕಿಳ 'ಪಂಕಿಲ' ನೋ.

ಪಂಕಿಳಿಸು (ಕ್ರಿ). ಕೆಸರುಮಾಡು ; ರಾಡಿಯಾಗಿಸು : ಬಂದುಗೊಂದಳದಿಂ ಕಿನ್ನರ ಖೇಚರ ಪ್ರಮದೆಯರ್ಪೊಕ್ಕಾಡೆ ಪೀನಸ್ತನಂಗಳ ಮೇಲೊಟ್ಟಿದ ಯಕ್ಷಕರ್ದಮದ ಪಂಕಂ ನೂಂಕಿ ತೇಂಕಾಡಿ ಪಂಕ[ಕಿ]ಳಿಸು [ಪಾಠಾಂ. ಸಂಕಳಿಸು]ತ್ತಿರ್ಪುದು ನಿಸ್ತರಂಗತಟ ಧೂಳೀಚಿತ್ರಪತ್ರಂಗಳಂ (ಅನಂಪು. ೧೦-೨೮). [ಪಂಕಿಳ(=ಪಂಕಿಲ)+-ಇಸು$_3$]

ಪಂಕೇಜ (ನಾ). = ಪಂಕಜ ೧ : ಪಂಕೇಜದಿಂ ಶ್ರೀವಧೂಧವನಾವಾರಿಧಿಯಿಂದಪಾರಮಹಿಮಂ . . . ಪುಟ್ಟುಗುಂ ನಂದನಂ (ಜಗವಿ. ೨-೮೩) ; ಇದು ಸಕಲಭಕ್ತಪದಪಂಕೇಜರೇಣುಮಸ್ತದ ಮಲ್ಲಣಾರ್ಯನಾಚೇರಮಾಂಕಂಗೆ ಬೆಸಸಿದ ಭಕ್ತಸತ್ಯೇಂದ್ರಚೋಳಕೃತಿ ಭಾವಚಿಂತಾರತ್ನವು (ಭಾವಚಿಂ. ೯-೬೫). [ಸಂ.]

ಪಂಕೇಜವಕ್ತ್ರೆ (ನಾ). = ಪಂಕಜಮುಖಿ : ಆ ನೀಚನಾ ದ್ರೋಹನಾ ಚಂಡಾಲನಾ ಪಾತಕನಿರವನಿದಂ ನೋಡು ಪಂಕೇಜವಕ್ತ್ರೇ (ಗದಾಯು. ೮-೪೫). [ಸಂ. ಪಂಕೇಜವಕ್ತ್ರಾ]

ಪಂಕೇಜಸಖ (ನಾ). = ಪಂಕಜಾಪ್ತ : ಪಂಕೇಜಸಖಕುಲದ ಪೀಳಿಗೆಯ ರಾಯರ್ಗೆ ವೀರಸಿರಿ ಸಲೆ ನಲಿದು ಕೈಗೈದು (ಹಚಕಾ. ೧-೩೫). [ಪಂಕೇಜ+ಸಖ]

ಪಂಕೇಜಾತ (ನಾ). = ಪಂಕಜ ೧ : ಶಿವಕವಿನಿಕರಪಾದಪಂಕೇಜಾತ ಭೃಂಗ . . . ವಿರುಪೆಯ ಲಿಂಗ ಪೇಟೆನಲ್ ಬಲ್ಲರಿದನಾಂ ಪೇಟ್ಡೆನು (ಕಬ್ಬಿಕೈ. ೨) ; ವಿಷಯಂಗಳಂ ಗೆದ್ದ ನಿರ್ಮಲತಪಸ್ವಿಗಳ ನಿಶ್ಚಲ ಹೃದಯಮಧ್ಯಪಂಕೇಜಾತದ ಗದ್ದುಗೆಯೊಳೆಸೆವ ಚಿದ್ರೂಪನಂ . . . ಕಂಡನು (ಜೈಮಿಭಾ. ೫-೯). [ಸಂ.]

ಪಂಕೇರುಹ (ನಾ). = ಪಂಕಜ ೧ : "ಪದ್ಮಂ, ನಳಿನಂ . . . ಪಂಕೇರುಹಂ, ತಾಮರಸಂ . . . ಅಂಭೋರುಹಂ—೧೬ ತಾವರೇ ಹುವ್ವಿನ ಹೆಸರುಗಳು" (ಸಿದ್ಧಾಂತಿ. ೯೦) ; ನಾರದಾದಿ ಮುನಿಪಾವನತ ಪಾದಪಂಕೇರುಹದ್ವಂದ್ವಂ . . . ದೇವಗಂಗಾಧರಂ ಬಿಡದೆ ಸಲಹುಗೆ ನಮ್ಮನು (ಜೈಮಿಭಾ. ೧-೨). [ಸಂ.]

ಪಂಕೇರುಹಜಾತ (ನಾ). ಕಮಲದಲ್ಲಿ ಹುಟ್ಟಿದವನು ; ಬ್ರಹ್ಮ : ಪಂಕೇರುಹಜಾತ ಪಾಪಿಷ್ಠ ಮನೆಗೊರ್ವ ಮಂಕತೊಡರ್ಚಿದ ತನ್ನಸೋಂಕಲೊಪ್ಪುವ ಕಾಂತನ ವೈವಾಹಕೆ ಕಂಕಣಗಟ್ಟೆಂದರಳುತ (ಮೋಹತ. ೧೮-೨೮). [ಸಂ.]

ಪಂಕ್ತಿ (ನಾ). ೧. ಸಾಲು ; ಶ್ರೇಣಿ : "ಆಳೀ(ಃ), ಶ್ರೇಣೀ(ಃ), ಆವಳಿಃ, ಪಂಕ್ತಿಃ, ವೀಥೀ, ರಾಜೀ—ಈ ೬ ಪಂತಿ" (ಹಲಾಯು. ೧೧೯-೩೬) ; ಈ ಮಹಾಕ್ರತುವರವ ನೀ ಮಾಡಾ ಮಹೀಶ್ವರ ಪಂಕ್ತಿಯಲ್ಲಿ ನಿರಾಮಯನು ನಿಮ್ಮಯ್ಯನಿಹನು ಸತೇಜದಲಿ ಬಳಿಕ (ಕುಸ್ಯಾಸ. ೧-೯೨) ; ಅಳಿಯನು ಸಾಮಾನ್ಯರ ಪಂಕ್ತಿಗೆ ಸೇರಿದವನಲ್ಲದ ಕಾರಣ ಅಂತಹವನು ಕೋಪಿಸಿಕೊಂಡರೆ ಅನರ್ಥವಾದೀತೆಂದು ಭಯ (ತುರಾಯಿ. ೬೯) ;

ಬಭ್ರುವಾಹನ ಸೇನೆಯೊಂದು ಕಡೆ ; ಸಮ್ಮುಖದಿ ಫಲ್ಗುಣವರೂಥಿನಿಯ ಪಂಕ್ತಿ (ಚಿತ್ರಾಂಗ.೮೧-೨೨೩೪). ೨. ಹಿಂಡು; ಗುಂಪು ; ಸಮೂಹ : ಸರಯೂ ತರಂಗಿಣಿಗೆ ಹಿಮಗಿರಿಯ ದೂರದಿಂದೈತಂದುವೆಡೆಬಿಡದೆ ಕ್ರೌಂಚ ಸಾರಸ ಪಂಕ್ತಿ (ಕ್ರೀರಾಮಾ.೧೫-೩೯೮). ೩. ಊಟಕ್ಕೆ ಕುಳಿತಿರುವ ಜನರ ಸಾಲು : ಬಂದಳೆ ದೇವಿ ಪಂಕ್ತಿಗೆಡೆಮಾಡಿಸಿದಪ್ಪಳೆ ಚಂಡ ಶಾಸನಂ ಬಂದನೆಯೆಂದು ಮಂದಿರ ಮಹತ್ತರರಂ ಬೆಸಗೊಳ್ವಿನಂ(ಆಸಂಪು. ೧೧-೬೪) ; ಹರಗಣ ಪಂಕ್ತಿಯ ನಡುವೆ ಕುಳ್ಳಿರ್ದು ನಾನು ಒಡೆಯತನದ ನಾಯ ತೇಜವ ಹೊತ್ತುಕೊಂಡು ಮಡದಿಯೆನ್ನಗಲೊಳಗೆ ಸಕಲದೇವಾನ್ನವ ಒಡೆಯರಿಂದಲೂ ಮಿಗಿಲಾಗಿಕ್ಕಲು ತೆಗೆದಿರಿಸಿದೆನು (ಬಸವ. ೪೩೯); ನಾವು ಎಲ್ಲರೂ ಒಂದೇ ಪಂಕ್ತಿಯಲ್ಲಿ ಕುಳಿತು ಭೋಜನ ಮಾಡಿದೆವು (ಪ್ರತಾಪ. ೨೦) ; ಪಂಕ್ತೀ ಊಟವಾದರೂ ಸಂಗ್ತೀ ಗುಣ ಬಿಡಲಿಲ್ಲ (ಗಾದೆ). ೪. ಪುಸ್ತಕದಲ್ಲಿಯ ಅಕ್ಷರಗಳ ಸಾಲು. ೫. ಕೀರ್ತಿ; ಪ್ರಸಿದ್ಧಿ. ೬. ಐದೈದರ ಗುಂಪು,—ಸಾಲು. ೭. [ಗಣಿತ] ಐದು ಎಂಬ ಸಂಖ್ಯೆಯ ಸಂಕೇತ. ೮. ಹತ್ತುಎಂಬ ಸಂಖ್ಯೆಯ ಸಂಕೇತ : 'ಪಂಕ್ತಿರಥ' ಪರಾ. ೯. [ಛಂದ] ಅಕ್ಷರಛಂದಸ್ಸಿನಲ್ಲಿ ಹತ್ತನೆಯ ಛಂದಸ್ಸಿನ ಹೆಸರು ; ಒಂದು ಪಾದದಲ್ಲಿ ಹತ್ತು ಅಕ್ಷರಗಳಿರುವ ಸಮವೃತ್ತಗಳ ವರ್ಗ; ಇಪ್ಪತ್ತೇಳು ಬಗೆಯ ವರ್ಣಛಂದಸ್ಸಿನಲ್ಲಿ ಹತ್ತನೆಯದು: ವಿತತೋಕ್ತಮತ್ಯುಕ್ತ ಮಧ್ಯಮಪ್ರತಿಷ್ಠೆ . . . ಪಂಕ್ತಿ ತ್ರಿಷ್ಟುಪ್ ಜಗತಿ ಉತ್ಕೃತಿಗಳೆಂದೆನಿಪುವಿಪ್ಪತ್ತಾಱು ಛಂದಂಗಳಕ್ಕುಂ" (ಮಂಗರಾ.೧೦೬-೧೮); ಅಲ್ಲಿ ಸಮಂ ಅರ್ಧಸಮಂ ವಿಷಮಮೆಂದು ವೃತ್ತಂ ಮೂಱು ತೆಱನಕ್ಕುಂ ಅಲ್ಲಿ ಉಕ್ತೆ ಅತ್ಯುಕ್ತೆ ಮಧ್ಯೆ ಪ್ರತಿಷ್ಠೆ ಸುಪ್ರತಿಷ್ಠೆ ಗಾಯತ್ರಿ ಉಷ್ಣಿಕ್ ಅನುಷ್ಟುಪ್ ಬೃಹತಿ ಪಂಕ್ತಿ . . . ಉತ್ಕೃತಿ ಎಂದಿಪ್ಪತ್ತಾಱು ಛಂದಂಗಳಕ್ಕುಂ (ಛಂದೋಂಬು. ೨-೪೬ ಪ); ೧೦ನೆಯ ಪಂಕ್ತಿಯಲ್ಲಿ :— (೧) ವೀರವಿಲಸಿತಂ ಭಸಂಜಗಂ (ಕೈಪಿಡಿ. ೭೯). ೧೦. ಪ್ರತಿಪಾದದಲ್ಲಿ ಎಂಟು ಅಕ್ಷರಗಳಿರುವ ಐದು ಪಾದಗಳ ವೈದಿಕ ಛಂದಸ್ಸಿನ ಒಂದು ವೃತ್ತದ ಹೆಸರು.

ಪಂಕ್ತಿಯೊಳ್ ಪರಪಂಚಮಂಮಾಡು, ಪಂಕ್ತಿಯಲ್ಲಿ ಪರಪಂಚ ಮಾಡು=ಪಂಕ್ತಿಯಲ್ಲಿ ಪಕ್ಷಪಾತ ಮಾಡು,— ತಾರತಮ್ಯ ತೋರಿಸು : ಗರಳಮಂ . . . ಅವಳ್ಕೊಂಡು ಬಂದು ಗರುವೆಯ ದರ್ಶಕ್ಷಿಣ್ಯಮಂ ಮಾಡಿ ಪಂಕ್ತಿಯೊಳ್ ಪರಪಂಚಮಂ ಮಾಡೆ ಹೋಷ ಮೆಂದೆಲ್ಲರ್ಗೆ ಸರಿಯಾಗಿ ಬಡಿಸಲವರುಂಡು ಕೈದೊಳೆವ ಸಮಯದೊಳು ಮೈಮಱೆದುರುಳ್ದರು (ಸಮ್ಯಕೌ. ೯-೪೩) ; ಪಂಕ್ತಿಯಲ್ಲಿ ಪರಪಂಚ ಮಾಡಿದವನು ನರಕಕ್ಕೆ ಹೋಗುತ್ತಾನೆ (ರೂಢಿ). [ಸಂ.]

ಪಂಕ್ತಿಕೆ (ನಾ). ಸಾಲು. [ಸಂ. ಪಂಕ್ತಿಕಾ]

ಪಂಕ್ತಿಗ್ರೀವ (ನಾ). ಸಾಲಾಗಿ ಹತ್ತುತಲೆಗಳುಳ್ಳವನು ; ರಾವಣ; ದಶಗ್ರೀವ. [ಪಂಕ್ತಿ+ಗ್ರೀವ]

ಪಂಕ್ತಿಭೇದ (ನಾ). ೧. ಊಟ ಮೊದಲಾದ ಸಂದರ್ಭಗಳಲ್ಲಿ ಸಾಲಾಗಿ ಕುಳಿತಿರುವವರಲ್ಲಿ ಒಬ್ಬೊಬ್ಬರಿಗೆ ಒಂದೊಂದು ತಾರತಮ್ಯವನ್ನು ತೋರಿಸುವುದು,—ಪಕ್ಷಪಾತ ಮಾಡುವುದು : ಅನುವನಱಿಯದೆ ಪಂಕ್ತಿಭೇದವನಿನಿತ ಮಾಡಿದನೇ (ಬಸಪು. ೪೫-೧೪) ; ಪಂಕ್ತಿಭೇದವನ್ನು ಮಾಡತಕ್ಕವನು . . . ವೇದವನ್ನು ಕ್ರಯಮಾಡುವವನು, ಇವರೈವರೂ ಬ್ರಹ್ಮಘಾತಕರು (ನೀತಿಚಿಂ. X, ೧೪ ಅಡಿಟ). ೨. ಬರವಣಿಗೆಯಲ್ಲಿ ಒಂದೊಂದು ಸಾಲು ಬೇರೆ ಬೇರೆ ಆಗಿರುವುದು ; ಸಾಲುಗಳ ವ್ಯತ್ಯಾಸ. ೧, ೨ : ವಕ್ರಚಾರಂ ಸರ್ಪಂಗಳೊಳ್ ಪಂಕ್ತಿಭೇದಂ ಲಿಪಿಗಳೊಳ್ ಅಕ್ಕುಮಲ್ಲದೆ ಜನಪದದ ಜನಂಗಳೊಳಿಲ್ಲ (ಜಗವಿ. ೨-೧ ಪ). [ಪಂಕ್ತಿ+ಭೇದ]

ಪಂಕ್ತಿಭೋಜನ (ನಾ). ೧. ಸಾಲಾಗಿ ಕುಳಿತುಕೊಂಡು ಮಾಡುವ ಊಟ ; ಸಾಮೂಹಿಕ ಭೋಜನ : ರಥೋತ್ಸವ ಕಾಲದಲ್ಲಿ ಪಂಕ್ತಿಭೋಜನ ನಡೆಯುತ್ತದೆ (ರೂಢಿ). ೨. ಒಬ್ಬರ ಜೊತೆಯಲ್ಲಿ ಕುಳಿತುಕೊಂಡು ಮಾಡುವ ಊಟ : ಕೆಳೆಯನ ಪಂಕ್ತಿಭೋಜನ ದೊಳೊರ್ಮೆ ವಿಳಾಸದೆ ಬಡ್ಡಿಸುತ್ತುಮಿರ್ಪೆಳೆಯಳ ತೋಳ ಮೂಲದ ಪೊಗರ್ . . . ಕಣ್ಗೆ ಕುಡೆ ಕೌತುಕಮಂ (ಆಸಂಪು. ೧೧-೨೮).

[ಪಂಕ್ತಿ + ಭೋಜನ]

ಪಂಕ್ತಿಭ್ರಷ್ಟ (ನಾ). ಸಾಲಿನಲ್ಲಿ ಸೇರಲು ಅನರ್ಹನಾದವನು ; ಯಾವುದಾದರೂ ದೋಷದಿಂದ ಶಿಷ್ಟರ ಜೊತೆಯಲ್ಲಿ ಸೇರಲು ಅಯೋಗ್ಯನಾದವನು : ದೇವಲಕನೆಂದೆನಿಸಿಕೊಂಡು . . . ದೇವರ ಭಂಡಾರದಿಂದ ಜೀವಿಸುವವನಾಗಿ ಕೀಳುಮಟ್ಟದವನಾಗಿ ಸಕಲ ಕರ್ಮಗಳಲ್ಲಿಯೂ ಪಂಕ್ತಿಭ್ರಷ್ಟನಾಗಿರುವನೆಂದು ತಿಳಿಯತಕ್ಕದು (ತುಳುನಾ. ೨೩೩). [ಪಂಕ್ತಿ+ಭ್ರಷ್ಟ]

ಪಂಕ್ತಿಯೋಗ್ಯ (ನಾ). ಉತ್ತಮರೊಂದಿಗೆ ವ್ಯವಹರಿಸಲು ಅರ್ಹನಾದವನು ; ಸಾಲಿನ ಜೊತೆಯಲ್ಲಿ ಕುಳಿತುಕೊಂಡು ಊಟ ಮಾಡಲು ಅರ್ಹನಾದವನು ; ಅರ್ಹ ; ಶಿಷ್ಟ : ಆಂಗ್ಲ ಹುಡುಗಿಯನ್ನು ಮದುವೆ ಮಾಡಿಕೊಂಡಿರುವುದರಿಂದ ಅವನು ಪಂಕ್ತಿಯೋಗ್ಯನಲ್ಲ (ರೂಢಿ). [ಪಂಕ್ತಿ + ಯೋಗ್ಯ]

ಪಂಕ್ತಿರಥ (ನಾ). ಹತ್ತು ದಿಕ್ಕುಗಳಲ್ಲೂ ತಡೆಯಿಲ್ಲದೆ ರಥವನ್ನು ನಡೆಸಿಕೊಂಡು ಹೋಗುವವನು ; ದಶರಥ : ರಾಮನಂ ವೀಕ್ಷಿಸುತಲೊಂದು ದಿನ ಪಂಕ್ತಿರಥನು (ವೆಂಕಾರಾ. ೧-೩-೮). [ಪಂಕ್ತಿ + ರಥ]

ಪಂಕ್ತಿವಿಭೇದ (ನಾ). ಪಂಕ್ತಿಯಲ್ಲಿ ಉಂಟಾಗುವ ವ್ಯತ್ಯಾಸ : ಬರೆದ ಕಾವ್ಯದಿ ಹಸ್ತದೋಷವು ಇರಲು ತಿದ್ದುವುದಲ್ಲಿ ಬುಧತತಿ ಮಱೆದು ಪಂಕ್ತಿವಿಭೇದವಾಗಿರೆ ಶುದ್ಧಗೊಳಿಸುವುದು (ಕವಿಚ. III, ೧೮೪).

[ಪಂಕ್ತಿ + ವಿಭೇದ]

ಪಂಕ್ತ್ಯವಸ್ಥೆ (ನಾ). ಹತ್ತು ವಿಧವಾದ ಕಾಮದೆಸೆಗಳು : ℙ(i) ಅಭಿಲಾಷಾ, ಚಿಂತಾ, ಅನುಸ್ಮೃತಿ, ಗುಣಕೀರ್ತನ, ಉದ್ವೇಗ, ವಿಲಾಪ, ಉನ್ಮಾದ, ವ್ಯಾಧಿ, ಜಡತಾ, ಮರಣ. ಅಥವಾ (ii) ಅಭಿಲಾಷೆ, ಚಿಂತೆ, ಸಂಸ್ಕೃತಿ, ವಿಜುಗುಣಸ್ಮೃತಿ (ಕೀರ್ತನ), ಸಂತಾಪನ, ಕ್ರಿಯಾದ್ವೇಷ, ವಿಕಲತೆ, ಮೌನ, ಮೂರ್ಛೆ, ಮರಣ ಎಂದು ಹತ್ತು ಬಗೆಯ ಮದನಾವಸ್ಥೆಗಳು : ಪಂಕ್ತ್ಯವಸ್ಥೆಗಳ್ಗೆ ಹೇತು ಪಂಚಪುಷ್ಪಲತಿಕಾಸ್ತ್ರಮೆಂದು ಕೋವಿದಾಳಿ ಪೇಟ್ಗುಮಂಗನೇ (ಅನುಮು. ೨೯). 'ದಶಾವಸ್ಥೆ' ಪರಾ. [ಪಂಕ್ತಿ + ಅವಸ್ಥೆ]

ಪಂಖ, ಪಂಕ್ಕ, ಪಂಖಾ (ನಾ). ೧. ಗಾಳಿ ಬೀಸುವ ಸಾಧನ ; ಬೀಸಣಿಗೆ : ರೈಲು ವೇಗವಾಗಿ ಓಡುತ್ತಿದ್ದರೂ ತಲೆಯ ಮೇಲೆ ಪಂಖಗಳು ಗಿರಿಗಿರಿ ತಿರುಗುತ್ತಿದ್ದರೂ ಬೆವರು ಹರಿಯುತ್ತಿತ್ತು (ಬದುಜ. ೯) ; ಧನಿಕರೆಲ್ಲರೂ ಬೆಟ್ಟಗಳ ಮೇಲಿನ ಪಟ್ಟಣಗಳನ್ನು ಸೇರಿ ಬಂಗಲೆಗಳಲ್ಲಿ ವಾಸಮಾಡುತ್ತಾ ಪಂಖಗಳಿಂದ ಬೀಸಿಸಿಕೊಳ್ಳುವುದು (ತಾಪ್ಯಾರಿ. ೧೨೯). **ಪಂಕ್ಕ** : ೧. "ಮರದ ಪೆಟ್ಟಿಗೆ ನಿರಿಗೆಯ ಬಟ್ಟೆಯನ್ನಳವಡಿಸಿ ತೂಗ ಹಾಕಿರುವುದನ್ನು ಹಗ್ಗದಿಂದ ಎಳೆದು ಗಾಳಿ ಬೀಸುವ ದೊಡ್ಡ ಬೀಸಣಿಗೆ ; ಪಂಕ" (Punka. ಇಂಕನಿ) ; ಅನಾದಿ ಕಾಲದಲ್ಲಿ ರೈಲುಬಂಡಿಗೆ ತೊಡಿಸಿದ್ದ ಇಲೆಕ್ಟ್ರಿಕ್ ಪಂಕಗಳು ನಾವು ಬಂಡಿ ಏರಿದ ಗಳಿಗೆಯಿಂದ ತಿರುಗುತ್ತಲೇ ಇದ್ದುವು (ಅಬೂಬ. ೧) ; ಬಂಡಿಯ ಮುಚ್ಚಿಗೆಗೆ ತೂಗಿದ ಪಂಕಗಳಂತು ತಿರುಗುತ್ತಲೇ ಇದ್ದವು (ಅಳನಿ. ೫೬) ; ಹಂದರಮ್ಯಾಲಲ್ಲಿ ಹೋಡೆದ್ದುಗಿಣಿ ಕೂತು ಪಂಕನಲ್ಲಾಡಿ ನಗತಾವ ಅವು ಮಾತಾಡ್ಯಾವ ಅಕ್ಕ ಭಾವಗವರನಂದ (ಮಲ್ಲಿಗೆ. ೮೦). **ಪಂಖಾ** : ೧. ನೀವು ಮಾತ್ರ ಆಫೀಸಿಗೆ

ಹೋಗಿ ಸುಖವಾಗಿ ಕುಳಿತು ಬಿಡಿ, ಪಂಖಾದ ಬುಡದಲ್ಲಿ (ಪಸ್ನೊಂದ.೫೬). [<ಪ್ರಾ. ಪಂಖು./ಸಂ. ಪಕ್ಷ./ಹಿಂ. ಪಂಖಿ, ಪಂಖಾ; ಮರಾ. ಪಂಖಿ, ಪಂಖಾ, ಪಖ]

ಪಂಖಾ 'ಪಂಖಿ' ನೋ.

ಪಂಗ$_1$, ಪಂಗು$_1$, ಪಾಂಗ, ಹಂಗ$_1$ (ನಾ). ೧. ರಾಜನಿಗೆ ಸಲ್ಲ ಬೇಕಾದ ಕರದ ಭಾಗ; ರಾಜಾದಾಯ: ಬ್ರಹ್ಮದೇಯ ಸಮುಯೇನ ಅಭಟಪ್ರವೇಶಮನ್ನಪ್ಯರವಿಷ್ಕಿಕಮ್ಪಂಥಿಕ ಪಙ್ಕ್ಯೋಪೈತಿಮ್ ದತ್ತವಾನ್ (ಎಇ. IV, ಹುಣಸೂ. ೧೪-೧೪ ; ಸು. 450 ?); ಜ್ಯೇಷ್ಠ ಪವುರ್ಣ ಮಾಸ್ಯಾಮುಪಳಪೂರ್ವಳವಮ್ ಸರ್ವಪಂಗ ಪರಿಹೃತೋ ದತ್ತೋ (ಎಇ. XXXI, ೨೩೬-೧೨; ೬೨೮ ಶತ ?); ಪಂಗಮು ಸರ್ವಮಾನ[ಕ]ಂಬು ಗ ತೋಂಟಕು ಪಂಗಂ ಸರ್ವಮಾಷ[ಕ]ಮು(ಸೌಇಇ. X, ೪೪೯-೧೨; 1280); ಪಂಗವಿದ್ದಲಿದ್ದಕ್ಕಂದಿರುವರು ತುಂಗಮಾತ್ಯವ್ರಾತಮದಿದಂದಿಂಗಿತಮದೇನುಂಟೆ ನಡವುದು ವಿಜನಪದಕ್ಕತ್ಯಂ (ವಿನೇಧ. ೧೦-೧೩); ನೆನೆ ನೆನೆಯಿಸಿ ಪಂಗಂ ಕೆತ್ತಡಂ ಕಯ್ವೆ ದುಃಖಂ ಕನಲಿಸೆ ಪಗೆದೂಳ್ವೋ ! ಕದ್ಬಿಗಂ ಕೇಳ್ ಕೃತಜ್ಞಂ (ಸಂಸಪ.೧೧-೨೭). **ಪಂಗು**$_1$: ೧. ಪಙ್ಗು ಮಾ ಪೊನ್ ಕೊಡು ದಣ್ಣಾಯ×××ತ್ತೋಮ್×(ಎಇ. VI (R), ಪಾಂಡವ. ೨೨೬-೧೩ ; 1273). **ಪಾಂಗ**: ೧. ತದ್ ಗ್ರಾಮಾತ್ ಸೋನ್ನಾರ [ಜ್ಞ]ವೀ ಚಞ್ಚುಖಣ್ಣೀತಿ ಪಾಲಣಮ್ ಶತಾತ್ ಕ್ರೀತ್ವಾದದವು ಸರ್ವಮೇತತ್ ಪಾಂಗಾದಿ ವರ್ಜಿತಮ್ (ಎಇ. XXX, ೭೭-೨೭ ; 1107). **ಹಂಗ**$_1$: ೨. ಒಂದು ಬಗೆಯ ತೆರಿಗೆ : ××× ಕೆಡೆಯೊಳಗೆ ಬಿಟ್ಟ ಹಂಗದ ಮತ್ತರು ೩ ವೂರೊಳಗಣ ಗಾಣ . . . ೧೫ ಲೆಕ್ಕದೆ ಬಿಟ್ಟ ಪಳಗೆ ೧ (ಸೌಇಇ. XX, ೧೭೮-೫೨ ; 1192). 'ಪನ್ನಾಯ', 'ಪಾಗ' ಪರಾ. [ದೇ.॥ ತಮಿ. ಪಙ್ಕು; ಮಲ. ಪಙ್ಗು; ತುಳು. ಪಾಂಗಳ; ತೆಲು. ಪಂಗ]

ಪಂಗ$_2$ (ನಾ). ಕವಲು ; ಟಿಸಿಲು : 'ಪಂಗನಾಮು' ಪರಾ.

[←ತೆಲು. ಪಂಗ, ಪ್ರಂಗ, ಪ್ರಗ್ಗ]

ಪಂಗ$_3$ (ನಾ). ಕಾಲಿಲ್ಲದವನು; ಹೆಳವ ; ಕುಂಟ : ಅಂಗಡಿಯ ಬೀದಿಯಲ್ಲಿ ಕೊಂಗಿತಿ ಕುಳಿತು ಭಂಗವ (ಭಂಗಿಯ) ಮಾಜುತಿಪ್ಪಳು ನೋಡಾ ಅಕೆಗೆ ಹರಿಗೆಯ ಪಂಗನೆಂಬವ ಗಂಡನಾಗಿಪ್ಪನು ನೋಡಾ (ಏಪ್ರೆಪ. ೧೧೦-೩೪೨). [<ಸಂ. ಪಂಗು]

△ **ಪಂಗ**$_4$ 'ಹಂಗ$_2$' ನೋ.

ಪಂಗಡ 'ವಂಗಡ' ನೋ.

ಪಂಗಣಿಗಪ್ಪು (ನಾ). ಆನೆಯನ್ನು ಹಿಡಿಯುವುದಕ್ಕಾಗಿ ತೋಡಿರುವ ಕುಳಿ,—ಹಳ್ಳ ; ಖೆಡ್ಡಾ : ಪಿಡಿವರ್ಪಂಗಣಿಗಪ್ಪುಗಳೆಡೆಯೊಳ್ಕಲರಾನೆವಿಂಡುಂಟಯಪ್ರತಿಮುಂ ಪಿಡಿದಂ ಪೆರ್ಬಲೆವಳಸಿನೊಳಡವಾಯ್ದಿರ್ಕೇರಿಯವರ ಪೇರಾನೆಗಳಂ (ಅಪ್ರತಿ. ೧೧-೯೨). [P ಇದು' ಪಂಗಣಿ' ಹಾಗೂ 'ಕಪ್ಪು' ಎಂದೇ ಅರ್ಥದಲ್ಲಿ ಬಳಸಿರುವ ಕೂಡುನುಡಿ.

[ಪಂಗಣಿ$_0$ (P ←ತೆಲು. ಪಂಗಿಡಿ, ಪಂಗೆನೆ) + ಕಪ್ಪು$_3$]

ಪಂಗತಪ್ಪು (ನಾ). ರಾಜನಿಗೆ ಕೊಡಬೇಕಾದ ರಾಜಪಾಲು ತಪ್ಪಿದಲ್ಲಿ ಹಾಕುವ ತಪ್ಪಿನ ದಂಡ. [ಪಂಗ$_1$ + ತಪ್ಪು$_2$]

ಪಂಗತಿ 'ಪಂತಿ' ನೋ.

ಪಂಗನಾಮು, ಪೆಂಗ್‌ನಾಮು, ಪೆಂಗಿನಾಮು (ನಾ). ೧. ಹಣೆಗೆ ಹಾಕಿಕೊಳ್ಳುವ ಕವಲುಗಳುಳ್ಳ ಲಾಂಛನ; ಶ್ರೀವೈಷ್ಣವರು ಧರಿಸುವ ತಿರುನಾಮ : ಒಮ್ಮೆ ಆದವಾಣಿಯಲ್ಲಿ ಪಂಗನಾಮದ ತಿಮ್ಮಣ್ಣನವರ (ವೇಣುಗೋಪಾಲವಿಠಲ) ಮನೆಯಲ್ಲಿ ಶ್ರೀವಿಜಯದಾಸರ ಸಂದರ್ಶನವಾಯಿತು (ಜಗದಾ. ೧೩೭). 'ಗೂಟನಾಮು' ಪರಾ. ೨. (ಆಲಂ)ಮೋಸ; ವಂಚನೆ: ಪದ್ಮಾಗೆ ಪ್ರಾಯಶ್ಚಿತ್ತ ಪಂಗನಾಮ (ಸತವಾ. I,೫೨೧); ಆತನನ್ನು ವ್ಯಾಪಾರಕ್ಕೆ ಸೇರಿಸಿಕೊಂಡುದರಿಂದ ಮೂಲಧನಕ್ಕೇ ಪಂಗನಾಮವನ್ನು ಹಾಕಿಸಿಕೊಂಡರು (ರೂಢಿ). **ಪೆಂಗ್‌ನಾಮ** : ೨. ನಮಗೆಲ್ಲ ಕೂಲಿನಾಲೀ ಬವುನೇಸ್ ಎಲ್ಲಕ್ಕೂ ಪೆಂಗ್‌ನಾಮ (ಚಂಗೂರಿ. ೪೬). **ಪೆಂಗಿನಾಮ** : ೧. "ನನ್ನ ಮನೆಗೆ ನಾನೇ ದಾಸ, ಬೆಕ್ಕಿಗಿಡೋ ಪೆಂಗಿನಾಮ" ಎಂಬ ಸೂಳೆಯರ ಗಾದೆಯಂತೆ (ಕೃಷಿಪ್ರ. ೩೦೨).

ಪಂಗನಾಮ ಹಾಕು = ಮೋಸ ಮಾಡು ; ಇಲ್ಲದಂತೆ ಮಾಡು : ತೋಟೇ ಇನಾಂತೀಗೆ ಪಂಗನಾಮ ಹಾಕಬೇಕಾಗುತ್ತೆ ಇನ್ನು (ಸಪ್ಪಳ್ಳಿ. ೯). [ಪಂಗ$_2$ + ನಾಮ./ತೆಲು. ಪಂಗನಾಮು]

ಪೆಂಗರ (ನಾ). (?) : ಪೊಂಗೈಸಾಸಿರ ಅಡಕೆಯ ಅಂಗೈ ಅಂಗಡಿಯೊಳು ವಂದು ನೂಜುಲಾಲಳ್ಕುಂ ಪಂಗರದೊಳುಟ್ಟು ಮಾಜಲು ಪಿಂಗದೆ ಲಕ್ಕೆಯೀನು ಪೊಂಗಳು ಬಳ್ಕುಂ (ಭಾಸ್ಯಪ. ೨೪-೨). [?]

ಪೆಂಗರಿಕೆ (ನಾ). ಒಂದು ಊರಿನ ಹೆಸರು : ಉಪ್ಪಲಿಕಾಶತ ತ್ರಯಾಸ್ತ್ರಗ್ಧತವುಲತಲ್ಲ ದ್ವಾದಶಮಧೀಃ ಪಂಗರಿಕಾ ನಾಮಗ್ರಾಮಃ (ಇಆ. XII, ೨೬೬-೫೨ ; 972). [?]

ಪೆಂಗಲು (ನಾ). ಕವಲು; ಟಿಸಿಲು : ಈ ಮರ ತುಂಬಾ ಪಂಗಲು ಪಂಗಲಾಗಿದೆ (ರೂಢಿ). [ಪಂಗ$_2$ + -ಅಲು(<-ಅಲ್$_2$)]

△ **ಪೆಂಗಾಗೆ** 'ಹಂಗಾಗೆ' ನೋ.

ಪೆಂಗಾಯ್ (ನಾ). ಹಸುರುಕಾಯಿ ; ಎಳಗಾಯಿ ; ಹೀಚು : ಕಚ್ಚನೆ ತೆಂಗು, ಕೆಂದೆಂಗು. ಏವಂ ಕೆಂದಳಿರ್, ಕೆಂಬೊನ್; ಪಂದಲೆ ಪಂದೊವಲ್, ಪಂಗಾಯ್ (ಶಬ್ದಾನು. ೩೪೧ ಪ್ರಯೋ).

[ಪಂ (<ಪಸ್$_3$) + ಕಾಯ್$_4$]

ಪೆಂಗಾವಣ (ನಾ). ಹಸುರುವಾಣಿ ಚಪ್ಪರ : ಆ ನಗರಲಕ್ಷ್ಮಿ ರಾಜಮರ್ಯಾದೆಯಿಂ ತಮಗೆ ಶೀತೋಪಚಾರಮನೆಸಗಲ್ಕೆರಡುಂ ಕೆಲದೊಳೋರಣದಿಂ ಪರುಶವಿಸಿದ ಪಂಗಾವಣಂಗಳೆಂಬಂತೆ ಕಂಗೊಳಿಪ ಸಾಲ ಮರಂಗಳಿಂ (ಸುರಾಚ. ೧೧-೧೩ ವ). [ಪಂ (<ಪಸ್$_3$) + ಕಾವಣ$_1$]

ಪೆಂಗಿಗ, ಹಂಗಿಗ (ನಾ). ೧. ಹಂಗಿಗೆ ಸಿಕ್ಕಿದವನು ; ದಾಕ್ಷಿಣ್ಯಕ್ಕೆ ಕಟ್ಟುಬಿದ್ದವನು; ಋಣಿ. ೨. ಅಧೀನನಾದವನು; ವಶವರ್ತಿ; ಪರಾಧೀನ : ಅಜಸಿ ಕೊಲುತಿರ್ಪ ಜಪನೆಂಬುಕೆಯು ಪಗೆವಂಗದೆಂತು ಪಂಗಿಗನಪ್ಪೆಂ (ಅಪಾಪ. ೪-೭೭). **ಹಂಗಿಗ** : ೧. ಗುರುವೆಂಬೆನೆ ಕಂಡ ಕಂಡವಂಗೆ ಲಿಂಗವ ಕೊಟ್ಟು ಪ್ರಸಾದಕ್ಕೆ ಹಂಗಿಗನಾದ (ಮೋಳಮಾ. ೧೫೮-೫೯೪) ; ನಿನ್ನ ಹಂಗಿಗನು ಸಿರಿಯಾಳಸಟ್ಟಿಯ ಹಾಂಗೆ ಎನ್ನಂ ನೋಡದಾ ಮತಿ ಹಿಂಗಿದವಳೇ ನಿಂದಿ ಶರಣರ ನಿಂದಿ ನಾನಯ್ಯ (ಬಸಪು. ೨೪-೭೪) ; ನಿನಗೆ ಹಂಗಿಗನಾದೆ ನಾನು (ಅಕ್ಕೂಚ. ೮-೫೪) ; ನಾವು ರೂಪಿಗನಲ್ಲ ಸೀಮೆ ಹಂಗಿಗನಲ್ಲ . . . ಸ್ವಾಮಿ ಚರಮೂರ್ತಿ ಜಂಗಮ ದೇವನು (ಪ್ರಿಲಾಚ. ೧೩೧-೧). ೩. ನಾನದಾವುದು ಧರ್ಮತತ್ವನಿಧಾನವೆಂದಜ್ಞಾಯದೆ ಕೃತಾಂತಂಗಾನು ಹಂಗಿಗನಾದೆನೆಂದೊಜಲಿದನು ಯಮ ಸೂನು (ಕುಮ್ಮಾಭಾ. ೧೦-೨೦) ; ಕಂಗಳ್‌ಕ್ಷಿಸಲಮ್ಯತಕರನುತ್ತುಂಗಬಿಂಬ ವನಜಜ ನಡುವೆ ಕುರಂಗವದೆ ಕುಜುಹೀ ಜಗತ್ರಯಕರಸ ಚತ್ರೈಸು ಹಂಗಿಗನೆ ಹುಸಿಯೆ[ಗೆ]ನಲು (ತೊರಂಗ. ೩-೧೧-೫೨); ಈ ನಳಿನಲೋಚನ ನಾಜುಮುಡಿ ಭಂಗಿಗನು ಭಕ್ತರಿಗೆ (ಸಭಾಗ.೩-೧-೩೯). [ಪಂಗು$_2$ + -ಇಗ]

ಪಂಗು$_1$ 'ಪಂಗ$_1$' ನೋ.

ಪಂಗು$_2$, **ಹಂಗು** (ನಾ). ೧. ದಾಕ್ಷಿಣ್ಯ; ಉಪಾರ; ಋಣ : ಮುಂಗಿಲ್ಲಳ ಪಂಗಿನಿಸುಂಟಿ ಕೇಕಿಯೂಹಾಲ್ಲಾದದೆ ಕಂಡು ನರ್ತಿಪುದಿದಲ್ತೆ ಸಮಾನ ವಯಃಪ್ರವರ್ತನಂ (ರಾಜಶೇ.೮-೧೨೨); ಶಿವಯರಸ ನಿನ್ನ ಪಂಗಿನೊಳೆಯ್ದಿ ಬಿಡದೆ ತಾನವಿರತಂ ಬಾಳ್ವ ಬಡಸಿರಿಯನಳ್ವನಂತೆನ್ನನೇಕೆ ಸೋಡುವೆ

ಮಹೇಶ (ಕುಮಾಪು. ೫-೧೨೩). ೨. ಅಗತ್ಯ ; ಆವಶ್ಯಕತೆ : ಸುರಭಿ ಸರಂಗಳಂ ಮುಗುಳದೇಕೆ ಪೊತ್ತನೊ ತಾಳ್ದಿರಲ್ಕೆ ಮುಂಬರಿಸಿದನಕ್ಕು ಮಿಕ್ಷುಧನುವಂ ಶಶಿಬಿಂಬದ ಪಂಗದೇಕೆ ಚಪ್ಪರಿಕೆಯೊಳಪ್ಪುದೇಂ (ಲೀಲಾವ. ೧೧-೭೫). **ಹಂಗು** : ೧. ಒಲ್ಲೆನೊಲ್ಲೆ ಮರ್ತ್ಯದ ಹಂಗ (ಅವಚಂ. ೨೭೮-೧೨೭೬) ; ಬೆಳ್ದಿಂಗಳ ಹಂಗಿನ ಚಂದ್ರಕಾಂತಮಂ ನಗುವಂತಿರ್ದ ಸ್ವಭಾವ ರಸಾಂಗಿಯ ಲಜ್ಜೆಯ ಲಂಚಗುಳಿಯ ನೋಟದ . . . ಮನಮಂ ತನ್ನತ್ತ ಸೆಳೆದು (ನಂಬಿರ. ೧೪-೪೫) ; ಕರುಣಾಸಮುದ್ರನು ನೀನಿರಲು ಕಮಲಾಸನನ ಹಂಗೇಕೆ (ಹರಿಸಾ. ೬೩) ; ಹಂಗಿನರಮನೆಯಿಂದ ವಿಂಗಡದ ಗುಡಿ ಲೇಸು (ಸರ್ವಜ್ಞ. ೧೫೩೪) ; ಕತ್ತಲೆಯ ಮಂದಿರದಿ ಕೆಡಹಿದ ವಿತ್ತಮಂ ಕಾಣಲ್ಕೆ ಬೆಳಗಿನ ವರ್ತಿ ತಾ ಪಿಡಿದರಸಿ ಕೆಡದಾ ವಸ್ತು ದೊರದಲ್ಲಿ ವರ್ತಿಬೆಳಗಿನ ಹಂಗದೇತಕೆ (ಗಗಶಾ. ೧೬-೪೯) . ೨. ಜಾತ್ಯಶ್ವಂಗಳ ವಳಯಮಂ ಸೋಂಕದಂಕಣಯ ಹಂಗಿಲ್ಲದೆ ಭೋಂಕನೇಱಿ . . . ನಿಂದ ತಾರಕಾಸುರನ ಚಾತುರಂಗಬಲವೆಂತಿರ್ದುದೆಂತೆಂದೊಡೆ (ಗಿರಿಕ. ೬-೫೫ಸ); ಗೂಡಾರ ಗುಡಿಗಳ ಹಂಗಿಲ್ಲದೆಲ್ಲರು ಬೀಡಾರಗಳ ಹೊಕ್ಕರೊಸೆದು (ಭರಚ. ೨೨-೭೫) ; ಒಲ್ಲೆನಯ್ಯ ಜಗದ ಹಂಗಿನ ಭೋಗೋಪಭೋಗವನು (ಅಖಂಡೇ. ೧೪೪-೧೩೧) ; ದೇವರ ಹಂಗು ನಮಗೇನು ಎಂದು ವಾದಿಸುವವರನ್ನೂ ಗೀತೆಯು ಎತ್ತಿ ಹಿಡಿಯುವುದಿಲ್ಲ (ಗೀತಾಸಂ. ೧೭) ; ಹಂಗು ಹರಿದ ಮೇಲೆ ತೊಂಗೇನು, ತೊಡರೇನು ? (ಗಾದೆ). ೩. ಸಹಾಯ; ಉಪಕಾರ : ಮಂಗಳಾತ್ಮಕ ಕೇಳು ನಿನ್ನಯ ಹಂಗನೊಲ್ಲೆನು (ಕುಮ್ಯಾಭೀ. ೬-೪೪) ; ಸಾಕಿದೇತಕೆ ಹಂಗು ಹೋರಲದೇಕೆ ಹೊರೆಯೊಳು ನಿಧಿಯಿರಲು ತಿರಿದೇಕೆ ಬಳಲುವೆನೆನುತ ಬಹಳಾಟೋಪದಲಿ ಜಡಿದು (ನಿಭಾಗ. ೧೦-೭೧-೪೨) ; ನಿನ್ನಂಥ ಅಣ್ಣ ಇರುವಾಗ ನನಗೆ ಹಂಗಿನ ಹೆದರಿಕೆಯಿದೆಯೆ ? (ವಾತ್ಸಲ್ಯ. ೯೩) ; ಲಿಂಗ ಹರಿದ ಮೇಲೆ ಜಂಗಮನ ಹಂಗೇನು ? (ಗಾದೆ). ೪. ಆಶೆ ; ಬಯಕೆ ; ಇಚ್ಛೆ : ಆರ್ಹಂತ್ಯಕ್ಕೆ ಹಂಗೇಕೆ ಯೋ ಭಾವಸ್ಸೋ ಭವಮೆಂಬ ವಾಕ್ಯಮೆ ವಲಂ ಮೂಢಪ್ರಬೋಧಾವಹಂ (ಅನಂಪು. ೧-೬೧) ; ಧಾತ್ರಿಯ ಹಂಗೆ ಹೂವಿನ ಹಂಗೆ ಚಿನ್ಮಯಗಾತ್ರಗೆ ಹಂಗಳಿದವಗೆ (ಭರಚ. ೧-೯೧) ; ಉದಂಕನೆ ನಿನ್ನ ಸಚ್ಚರಿತ್ರವೇ ನನಗೆ ಗುರುಕಾಣಿಕೆ. ನನಗೆ ಬೇರೆ ಗುರುದಕ್ಷಿಣೆಯ ಹಂಗೇಕೆ (ಮಣಿಸ. ೬೪) ; ಎರಡು ಸೇನೆಗಳೂ ಜೀವದ ಹಂಗನ್ನು ತೊರೆದು ಭಯಂಕರವಾದ ಯುದ್ಧವನ್ನುಪಕ್ರಮಿಸಿದವು (ಶಾಂತಲಾ. ೧೫೧). ೫. ಆಶ್ರಯ ; ಅವಲಂಬನ : ಕ್ರೈಸ್ತಮತ ವಿಚಾರದಲ್ಲೂ ಮತಾಧಿಕಾರಿಗಳ ಹಂಗಿಲ್ಲದೆ ನೇರವಾಗಿ ಯೇಸುಕ್ರಿಸ್ತನ ಮಾತುಗಳಿಂದಲೇ ಪ್ರಚೋದನೆ ಪಡೆಯುವ ಹಕ್ಕು ಉಂಟೆಂದು ಮಾರ್ಟಿನ್‌ಲ್ಯೂಥರ್ . . . ಸಾರಿದ (ಕವಿಕೋ. I, ೭೬೮). ೬. ಸಂಬಂಧ ; ನಂಟು : ಪಕ್ಷ ಮಾಸಾಬ್ದತತಿಗಳ ಹಂಗು ಹೊದ್ದದು (ಸಿದ್ಧರಾ. ೨-೧೧) ; ಹಳತರ ಹಂಗನ್ನು ಹರಿದೊಗೆದು ಹೊಸ ಸೃಷ್ಟಿಯನ್ನೇ ಸ್ಥಾಪಿಸ ಹೊರಟರುವ ಈ ನವನಡೆಯ ಉತ್ಸಾಹವನ್ನು ನೋಡು (ಕತ್ತಬೆ. ೧೫).

ಪಂಗಾಗು, ಹಂಗಾಗು = ಅಧೀನವಾಗು ; ವಶವಾಗು : ಜೋಲ್ವ ಕಚಭರಮನುರದೆಗೊಂಡು ನೆಗಪಲ್ ಪೋಪ ನಲ್ಲರಳಿಪಂ ತೋಱಿ ತುಡುಕಿ ತೆಗೆದಪಾಂಗಕ್ಕೆ ಪಂಗಾಗಿ[ಪಾಠಾಂ. ಪಕ್ಕಾಗಿಸಿ](ಲೀಲಾವ. ೩-೨೦ ಪ) ; ಅಬಲೆಯೊಬ್ಬಳ ಹರಿಬವಲಿ ಹಂಗಾದಿರೆಂಬಪದೆಸೆಗೆ ನೋನುವರೇ(ಕುಮ್ಯಾಉ. ೬-೨೪). ಹಂಗ ತಿದ್ದು = ಋಣವನ್ನು ತೀರಿಸು; ಋಣತಿದ್ದು : ಅಂಗವ ತುಱಿಸಲ್ಕೆ ತುಱಿಸುವ ಕೈಗಳ್ಗೆ ಹಂಗ ತಿದ್ದುವ ಶಾಸ್ತ್ರವುಂಟೆ (ಮೋಹಶ. ೩೦-೪೦). ಹಂಗ ಮಗುಚು = ಋಣ ತೀರಿಸು : ಹಂಗ ಮಗುಚುವೆನೆಂದು ಭೂಮಿ ಕೈನೀಡಿ ಮೇಘಂಗಳಿಗೆ ಕೊಡುವಮೃತಕಲಶ ಸಂಕುಳವೊ . . . ಎನಿಸಿ ಫಲಿತ ಚೆಂದೆಂಗೆಸೆದುವು (ಹಚಕಾ. ೩-೨೮) ; ಹಂಗಿನ ಕೂಳು = ಋಣದ ಅನ್ನ,—ಆಹಾರ : ಅವರಿವರ ಮನೆ ಹಿಟ್ಟೆತ್ತಿಕೊಂಡು ಹಂಗಿನ ಕೂಳು ತಿಂದುಕೊಂಡು ವಿದ್ಯಾಭ್ಯಾಸ ಮಾಡದಿದ್ದರೂ ಆಗ್ತದೆ (ಚಿಂಗಾಳ್ವ. ೬). ಹಂಗಿನವನು = ಋಣದಲ್ಲಿರುವವನು ; ಋಣಿ : ಬಡಹಾರುವನೇಸು ಭಕ್ತನಾದಡೆಯೂ ನೇಣಿನ ಹಂಗಬಿಡ . . . ನಾನಾವ ಹಂಗಿನವನಲ್ಲ ನಿಮ್ಮ ಶರಣರ ಹಂಗಿನವನಯ್ಯಾ (ಬಸವ. ೪೫೦). [ದೇ.॥ ತುಳು. ಹಂಗ್]

ಪಂಗು$_3$ (ಗು). ೧. ಅಸಮರ್ಪಕವಾದ ; ಕುಂಠಿತವಾದ : ಕವಿಯ ವರ್ಣನೆಗಳವೆ ಚಿತ್ರಿಸಲತೀಂದ್ರಿಯವ್ಯಾಪಾರಮಂ ಮನುಜಕಲ್ಪಿತ ಮರ್ತ್ಯಭಾಷೆಯ ಪಂಗುಲಿಪಿಯಲ್ಲಿ ?(ಶ್ರೀರಾಮಾ. ೭೧೬-೨೧೨). (ನಾ). ೨. ಕಾಲಿಲ್ಲದವನು ; ಹೆಳವ; ಕುಂಟ : "ಖಂಜಃ, ಪಂಗುಃ, ಶ್ರೋಣಿಃ—ಈ ೩ ಪೆಟವಂ" (ಹಲಾಯು. ೧೦೦-೪೫೬) ; ಕುಲಹೀನಂ ದೀನಮಾನಂ . . . ಜಡಮತಿ ಕಿವುಡಂ ಪಂಗು ಮೂಕಂ . . . ನಿತ್ಯರೋಗಾಕುಳನೆಂಬೀ ನಾಮನಾಮಾವಳಿಗೆ ನಿಳಯನಕ್ಕುಂ ವ್ರತವ್ರಾತಹೀನಂ (ಪಡ್ಡಾರಾ. ೧೦-೩೦) ; ಮನುಜಜನ್ಮದೊಳುದ್ಭವಿಸಿರ್ದು ಮೂಗನಾಗದೆ ಸಲೆಯಂಧನಾಗದಿರೆ ಪಂಗುವುಮಾ[ಪಾಠಾಂ. ಪಂಗುಳನಾ]ಗದೆ . . . ಮೆಱೆವಲ್ಲಿ ಪೂಜಿಸು ಮಹೋತ್ಸವದಿಂದೆಲೆ ಹಂಪೆಯಾಳ್ದನಂ (ಪಂಪಾಶ. ೬೫) ; ಮೂಕಾಂಧ ಬಧಿರ ಪಂಗು ಕುಬ್ಜ ವೃದ್ಧ ಸರೋಗ ದಾರಿದ್ರ್ಯಾಭಿಭೂತ ಕ್ಷುತ್ತೃಡ್ವಧ ಬಂಧನಾದಿ ವಿಪತ್ಪೀಡಾಕ್ರಾಂತ ನಾಸ್ತಿಕಜೀವಂಗಳೊಳು ದಯಾರಹಿತತ್ಯುಂ . . . ಮೊದಲಾದ ದುಷ್ಟವರ್ತನೆಯೊಳು ವರ್ತಿಸುವ ಜೀವನ ಪರಿಣತಿಯಂ ಕೃಷ್ಣಲೇಶ್ಯಾಪರಿಣಾಮಮೆಂದುಱುವುದು (ಪಸಾರ. ೪೧೩) ; ಕುರುಡನಾ ಕೈಕಾಲು ಮುದುಡಿ ರಮಿಸಲು ಪಂಗು ತರುಣನಪ್ಪಂ (ವೀಶ್ವಪು. ೪-೨೧-೩೦) ; ಮಹಾತ್ಮರಾದ ನಿಮ್ಮ ದಯೆಯು ಪಂಗುವಿನಲ್ಲಿ ಗಂಗೆ ಬಂದು ಬಿದ್ದಂತೆ ನನ್ನಲ್ಲಿ ಉಂಟಾಯಿತು (ಮುದ್ರಾಮಂ. ೬೫). ೩. ಶನಿಗ್ರಹ : "ಅಸಿತಃ, ಕ್ರೋಡಃ, ಪಂಗುಃ, ಛಾಯಾತನಯಃ, ಶನೈಶ್ಚರಃ, ಶೌರಿಃ—ಈ ೬ ಶನಿಯ ಪೆಸರ್" (ಹಲಾಯು. ೯-೪೮) ; ಅಂಗಾರಕ ಬುಧ ಗುರು ಭೃಗು ಪಂಗುಗಳಿಂದುವನೆ ಭೇದಿಸಲ್ ಜಗದೀಶರ್ ಸಂಗರದೊಳಿಱಿದು ಮಡಿವರ್ (ಜಿಟ್ಟಮ. ೭-೧೧೩). ೪. (ಆಲಂ) ಪ್ರಗತಿಯಿಲ್ಲದಿರುವುದು : ಅವರನ್ನು ಸೇರಿಸಿಕೊಳ್ಳಬೇಡ. ಸೇರಿಸಿಕೊಂಡರೆ ನಿನ್ನ ಉದ್ಯೋಗ ಪಂಗು ಆಗಿಬಿಟ್ಟೇತು (ಶ್ರೀಕಾಂತ. ೨೪೩). ೫. ಮುಂದುವರಿಯಲು ಶಕ್ತಿಯಿಲ್ಲದವನು ; ಕುಂಠಿತವಾದ ಶಕ್ತಿಯುಳ್ಳವನು ; ಅಭಿವೃದ್ಧಿಹೊಂದದವನು : ಆಧ್ಯಾತ್ಮಿಕ ಕ್ಷೇತ್ರದಲ್ಲಿ ಅವನನ್ನು ಕೃತ್ರಿಮ ಉಪಾಯಗಳಿಂದ ಮೂಢನನ್ನಾಗಿ ಪಂಗುವನ್ನಾಗಿ ಮಾಡಿಟ್ಟಂತಾಗದೆ ? (ನಿಬಂಧ. I, ೨೨೮) ; ಮಾಧವರಾಯ ಮಂಡ್ಯಕ್ಕೆ ಹೋದುದು ಪಂಗುಗಳಾಗಿದ್ದ ಕಿರಿಯ ವಕೀಲರಿಗೆ ರೆಕ್ಕೆ ಬಂದಂತಾಯಿತು (ಗೃಹಲ. ೨೬೮).

ಪಂಗ್ವಂಧರ ನೀತಿ = ಕುಂಟ, ಕುರುಡರ ನ್ಯಾಯ; ೫ ಹೆಳವನಿಗೆ ಕಣ್ಣಿದೆ, ನಡೆಯಲಾಗುವುದಿಲ್ಲ. ಕುರುಡನಿಗೆ ನಡೆಯಲಾಗುತ್ತದೆ, ದಾರಿಯನ್ನು ಕಾಣಲು ಕಣ್ಣಿಲ್ಲ. ಕುರುಡನು ಹೆಳವನನ್ನು ಬೆನ್ನ ಮೇಲೆ ಕುಳ್ಳಿರಿಸಿಕೊಂಡು ಹೊರಟರೆ ಪರಸ್ಪರ ಸಹಾಯವಾಗಿ ಪ್ರಯಾಣ ಸಾಗುತ್ತದೆ. ಇದು ಈ ದೃಷ್ಟಾಂತದಿಂದ ಗೊತ್ತಾಗುವ ನ್ಯಾಯ ; ಪರಸ್ಪರ ಸಹಾಯದಿಂದ ಉಭಯರ ಕಾರ್ಯಸಾಧನೆಯೂ ಆಗುವುದು : ನಮಗೊಪ್ಪಿತು ಪಂಗ್ವಂಧರ ನೀತಿ ಒಯ್ಯನ್ನನು ನಿನಗೊಪ್ಪುವ ರೀತಿ (ಅಹಲ್ಯೆ. IV ಅರ್ಪಣೆ).

[ಸಂ.]

ಪಂಗುತ್ವ (ನಾ). ೧. ಹೆಳವವು; ಕುಂಟು. ೨. (ಆಲಂ) ಪ್ರಗತಿಹೀನತೆ ; ಮುಂದುವರಿಯಲು ಆಗದಿರುವಿಕೆ ; ಕುಂಠಿತತನ :

ತಾಯಿಗೆ . . . ಈ ಎಲ್ಲ ಅನುಷ್ಠಾನಗಳ ಪಂಗುತ್ವವನ್ನೂ ತಥ್ಯಶೂನ್ಯತೆಯನ್ನೂ ಎತ್ತಿ ಬೈದಿದ್ದಾರೆ (ಇಪ್ಪಕ. ೪೭೪). [ಸಂ.]

ಪಂಗುನಿ (ನಾ). ಸೌರಮಾನದ ಕೊನೆಯ ತಿಂಗಳು; ಮೀನಮಾಸ; ತಮಿಳು ಫಾಲ್ಗುಣಮಾಸ : ಮೊದಲ ಪಂಗುನಿ[ಪಾಠಾಂ. ಲಿ]ಯ ತಿರುನಾಳ್ ಬರಲು ನಲ್ಮೆಯಿಂ ಮುದದಿಂದ ಪಟ್ಟಣಂ ಕೈಗೆಯ್ಯಲೊಲ್ಮೆಯಿಂ . . . ಇಂತೆಂದಳಾ ಪೂರ್ಣಶಶಿಮುಖಿಗೆ (ನಂಬಿರ. ೧೧–೧೧); ಒಂದು ಪಂಗುನಿಮಾಸ ಉತ್ಸವಕಾಲದಲ್ಲಿ ಸ್ವಾಮಿಸೇವೆಯನ್ನು ಮಾಡಿಕೊಂಡು ಮನೆಗೆ ಹೋಗಿಬೀದಿಯಜಗಿಲಿನಲ್ಲಿ ಕುಳಿತಿದ್ದರು(ಪುಂಗಾವಿ.೧೪೪). [←ತಮಿ. ಪಙ್ಕುನಿ; ಮಲ. ಪಙ್ಗುನಿ./ಪ್ರಾ. ಫಗ್ಗುಣೇ, ಫಾಲ್ಗುನೀ]

ಪಂಗುಳ (ನಾ). ಕಾಲಿಲ್ಲದವನು; ಹೆಳವ : ಅನಿಲನ ಕುಂದಿಂದೆ ಪಂಗುಳಾಂಧ ಕೃಶಂ ವಾಮನ ಕುಬ್ಜ ಬಧಿರ ಮೂಕರುಮನೇಕವಿಧದಂಗಹೀನರುಂ ಜನಿಯಿಸುವರ್ (ಮದತಿ. ೧–೮೫); ನಿಮ್ಮ ವೇಷಧಾರಿಯ ಮನೆಯ ಪಂಗುಳ ನಾನಯ್ಯಾ (ಬಸವ. ೩೪೧); ತನುವಿಕಾರಿಯನಂಗಹೀನನ ಪಂಗುಳಾಂಧಕನ ಘನರುಜಾಂಗನ . . . ಉಪ್ಪವಡಿಸುವ ಸಮಯದೊಳಿನಿಬರನು ಕಾಣ್ಬುದು ಮಹೀಶರಿಗಂಗವಲ್ಲೆಂದ (ಕುಪ್ಯಾಉ. ೩–೧೦೭); ತಿಪ್ಪೆಯೊಳಗಿರ್ಪ ಪಂಗುಳನು ಮಿಱುಗುವ ರನ್ನದುಪ್ಪರಿಗೆಯೊಳ್ ನಿಂದು ರಾಜಿಪ ಕುಮಾರಿಯ ಬಿಗಿಯಪ್ಪುವೆನುಮೆಂದು ಕೈನೀಡಿದರೆ ಬರ್ಪಳೆ (ವಿಕೋಪು. ೧೪–೮೯). [ಸಂ. ಪಂಗುಲ]

ಪಂಗುಳೆ 'ಪಂಗೋಳಿ' ನೋ.

ಪಂಗೂಳಿ 'ಪಂಗೋಳಿ' ನೋ.

ಪಂಗೋಳಿ, ಪಂಗುಳೆ, ಪಂಗೂಳಿ (ನಾ). ತುಚ್ಛ; ನಿಂದ್ಯ; ಅಯೋಗ್ಯ : ಯಾವನೋ ಪಂಗೋಳಿ ಮನಸ್ಸು ಬಂದ ಹಾಗೆ ಬರೆದಿದ್ದಾನೆ (ನಟಸಾ. ೫೭೦); ಒಳ್ಳೆ ಪಂಗೋಳಿಗಳನ್ನು ಸೇರಿಸಿದೆ ಬಿಡು (ಕಾಮಿಕಾಂ. ೧೦೫). **ಪಂಗುಳೆ :** ಆ ಪಂಗುಳೆ ಮನುಷ್ಯನಿಂದ ಯಾವ ಕೆಲಸವನ್ನೂ ಮಾಡಿಸಲು ಸಾಧ್ಯವಿಲ್ಲ (ರೂಢಿ). **ಪಂಗೂಳಿ :** ಆ ಪಂಗೂಳಿ ಮನುಷ್ಯನ ಜೊತೆ ಸೇರಬೇಡ (ರೂಢಿ). [?]

ಪಂಚ$_1$ (ನಾ). ಅಪೂರ್ವವಾದುದು; ಅಪರೂಪವಾದುದು; ಸಿಕ್ಕಲಾರದುದು : "ಪಂಚಮಪೂರ್ವಂ" (ಚತುನಿ. ೬೭); ಪಿರಿದುಮಿಾ ಪುರದೊಳಾನೊರ್ವಳಲ್ಲದೆ ನಿನಗೆ ವರಯುವತಿಯರ್ಪಂಚಮೆಯೆಲವೊ ಗುರುಭಕ್ತ (ಅರಾಚ. ೨–೫–೩೩); ಎಚ್ಚಂತೆ ಮುಂ ಧೂರ್ಜಟಿಪುತ್ರಂ ಕ್ರೌಂಚಮಂ ಪಂಚಮನೆ ರಿಪುಮಹಾಕಲ್ಪಕಾಲಾಗ್ನಿರುದ್ರಂ (ರಾಜಶೇ. ೬–೮೯); ಮಾಂಸಲದ ಮೆಯ್ಸಿರಿಗೆ ಬೀಗಿ ಪರಿಪುಷ್ಟಮಾದೆನ್ನ ವಕ್ಷಸ್ಥಳಕೆ ಬಿಸುಡೆ ಬಿಮ್ಮನೆ ಬಿಳ್ದುದಾಳಾಳಿಗಂ ಪಂಚಮಿದು ದಿಟ್ಟಗೀಗಳೇನುಂಟೆ? (ಸಂಸಪ. ೩೫–೨೨೮). 'ಪಂಚೆ$_2$' ಪರಾ.

ಪಂಚ$_2$ (ನಾ). ೧. ಒಂದು ಸಂಖ್ಯೆ; ಐದು : ಪಂಚಪ್ರಕಾರದುಃಖಮೆ ಪಂಚಮಹಾಭೂತಮಾಗೆ ಪುಟ್ಟಿದರ್ (ಚಂದ್ರಪು. ೧೬–೧೧); ಪುರಹರ ವಕ್ತ್ರಂ, ಪಂಚಂ . . . ಪಾಂಡವ ಪುರವೈರಿಮುಖಂಗಳೈದಜ ನಾಮಂ (ಸ್ಯಪಹಾ. ೯–೫); ಪಂಚನಳರೆಲ್ಲರಿಂದಂ ಮುಂಚುವೆವೆಂದು ಸ್ವಯಂವರಾಲಯದ ಲಸತ್ಕಾಂಚನಸಿಂಹಾಸನದೊಳ್ ಸಂಚಲಿಸದೆ ನೆಲಸಿದರ್ (ನಳಚಂ. ೩೧೧); ಶಿವಶರಣರಿಗೆ ಕ್ಷೇತ್ರವಿತ್ತವ ಪಂಚಸುರಕುಜಕೆ ಧವನೆನಿಪ ಶಿವಭಕ್ತರಿಗೆ ದ್ರವ್ಯವನೊಲಿದು ಕೊಟ್ಟು (ಶಂಕದಾ. ೯–೭೪). ೨. ಪಂಚಾಯಿತಿಯ ಸದಸ್ಯ : ಅಇಬಗೆ ಕಿಕೇರಿ ಒಳುದಯ ಇಂ ಧರ್ಮ್ಮದ ನಿಂಮ್ಮ ಹೊಬುಹಂಗಳ್ ಶ್ರೀ ಬ್ರಹ್ಮೇಸ್ವರದ ಮಾರ್ಕ್ಕೆ ಒಳು ಪಂಚರ್ಗದೆಮಲ್ಲಿ ಬಳಾಲ ಆ ವಿಳಾಸಂಗಳಿಂ (ಎಕ. VI(R), ಕೃಷ್ಣರಾ. ೩೭–೧೭; 1095); ಅಷಾಢಪೌರ್ಣಮೆಯು ಜಾತ್ರೆಯ ದಿನವೆಂದು ಪಂಚರು ಗೊತ್ತುಪಡಿಸಿದ್ದರು (ಸಂಜೀವಿ. ೧೩೦); ಪಂಚರು ಯಾರ ಸ್ನೇಹಿತರೂ ಅಲ್ಲ, ಯಾರ ವೈರಿಗಳೂ ಅಲ್ಲ (ಗೃಹದಾ. ೩೧); ಜಗಳ ತೀರಿಸಲೆಂದು ಬಂದು ನೆರೆದ ಪಂಚರ ಪರಿವಾರ . . . ತುಂಟರ ನೆರವಿ ಇವೆಲ್ಲ ಕಾಣುವುವು ಚಾವಡಿಯಲ್ಲಿ (ಗಾಳಿಗು. ೩); ಜನ ಅವನನ್ನು ಊರಿನ ಪಂಚನಾಗುವುದಕ್ಕೆ ಹೇಳಿದರು (ಮಹಾತ್ಮಾ. ೬೦). 'ಪಂಚಾಯಿತಿ' ಪರಾ. ೩. ಗುಡಿ, ಶಾಲೆ ಮೊದಲಾದ ಸಾರ್ವಜನಿಕ ಸಂಸ್ಥೆಗಳ ಮೇಲ್ವಿಚಾರಣೆಗಾಗಿ ಏರ್ಪಡಿಸಿರುವ ಸಮಿತಿಯ ಸದಸ್ಯ : ನೀವು ಸಾಲೆಯ ಪಂಚರೆಂದು ನಿಮ್ಮ ಬೆಟ್ಟಗೆ ಬರಲಿಲ್ಲ ಗೌಡರೆ (ಹಬ್ಬಿಬ. ೨೭೬).

ಪಂಚಕನ್ಯೆಯರು = ಅಹಲ್ಯೆ, ದ್ರೌಪದಿ, ಸೀತೆ, ತಾರೆ ಮತ್ತು ಮಂಡೋದರಿ ಅಥವಾ ಅಹಲ್ಯೆ, ದ್ರೌಪದಿ, ತಾರೆ, ತಾರೆ, ಮಂಡೋದರಿ ಎಂಬ ಪುರಾಣಪ್ರಸಿದ್ಧರಾದ ಐವರು ಮಹಿಳೆಯರು; ℙ ಇವರ ಸ್ಮರಣೆಯಿಂದ ಪಾಪಪರಿಹಾರವಾಗುವುದೆಂದು ನಂಬಿಕೆಯಿದೆ : ನನ್ನ ತಂಗಿ ತಾರಾ (ಅಹಹ! ಪಂಚಕನ್ಯೆಯರಲ್ಲೊಬ್ಬಳೇನೋ!) ಸ್ವತಃ ನೋಡಿದ್ದು (ಮೂರುದಾ. ೧೬೩). ಪಂಚಯ್ಯರು, ಪಂಚೈವರು = ಐದು ಜನ : ಎನ್ನ ಪಂಚಯ್ಯರ ಭಕ್ತರ ಮಾಡು (ಬಸವ. ೪೬); ಪಿನಾಕಿ ಅಲ್ಲಟ ಪಲ್ಲಟದಿಂದ ಪಂಚೈವರ ಪ್ರಾಣಂಗಳು ಸಂಚಗೆಡವೆ (ಸಕವ. II, ೬೦೭–೭೦); ನಾಲ್ಕು ಗ್ರಾಮದ ಪಟ್ಟಣಕ್ಕೆ ಪಂಚೈವರ ಕಾವಲು ನೋಡಾ (ಚನ್ನವ. ೭೫–೧೩); ಎನ್ನ ಮನ ಒಪ್ಪಿ ಪಂಚೈವರು ಸಾಕ್ಷಿಯಾಗಿ ನುಡಿಯುತಿಪ್ಪೆನಯ್ಯ (ಘನವ.೯–೬).

[ಸಂ. ಪಂಚನ್]

ಪಂಚ$_3$ (ಗು). ವಿಸ್ತಾರವಾದ; ವಿಶಾಲವಾದ; ಅಗಲವಾದ : 'ಪಂಚಪಾತ್ರೆ$_2$', 'ಪಂಚಾನನ$_2$' ಪರಾ. [ಸಂ.]

ಪಂಚಉಷಃಕಾಲ (ನಾ). "ದಿವಸದ ೫೫ನೆಯ ಗಳಿಗೆ, ಎಂದರೆ ಸೂರ್ಯೋದಯಕ್ಕೆ ಐದು ಗಳಿಗೆಯ ಹಿಂದಿನ ಹೊತ್ತು" (ಶ್ರೀವತ್ಸ. ೨೪೩). [ಪಂಚ$_2$+ಉಷಃಕಾಲ]

ಪಂಚಕ (ನಾ). ೧. ಐದರ ಗುಂಪು; ಐದು ವಸ್ತುಗಳ ಸಮೂಹ : ಅಮರಗಣಾರ್ಕ ಶೀತಕರ ಭಾನು ಪಾವಕೋತ್ತಮ ಗಣಪಂಚಕಂ [ಪಾಠಾಂ. ಸಂಚಯಂ] ನೆರೆಯೆ . . . ಸುಕೇಸರಂ (ಭಂದೋಂಬು. ೨–೧೫೬); ಸೌಮಿತ್ರಿ ಕೇಳ್ದು ಕಡುಮುಳಿದು ನಿಮ್ಮಡಿಗಳವಿವೇಕಿಗಳಂತರ್ಥನಾಶಾದಿ ವಚನಪಂಚಕಂಗಳಂ ನುಡಿಯಲಾಗದದ ನಿಂತೇಕೆ ನುಡಿವಿರೆಂದು ಮತ್ತಮಿಂತೆಂದಂ (ಪಂರಾಮಾ. ೧೫–೬೮ ವ); ಇಪ್ಪತ್ತನಾಲ್ಕು ಸಂವತ್ಸರ ೨೫ ಪರ್ಯ್ಯಂತರವು ಬಂದಂತಹ ವುಂಡಿಗೆಯನು ಹಂನೆರಡು ಪಂಚಕದವರೊಳಗೆ ಆರುಂ ಆ ಅಳಿಹಲಾಗ(ದು) (ಎಕ. VI, ಕಡೂರು. ೧೩೩–೭; 1247 ?); ಪ್ರಕಟತರ ವ್ಯಂಜನ ಸಂಜ್ಞೆಕಕಾರದಿನಾ ಳಕಾರಪರ್ಯಂತಂ ಪಂಚಕಪಂಚಕಂಗಳಿಂ ಪಂಚಕಮಕ್ಕುಂ ವರ್ಗಮಂತ್ಯವರ್ಣಮವರ್ಗಂ (ಶಮದ. ೧೩); ನಾಗಭೂಷಣನ ಪರಮಯೋಗಚಲನಗೆ ಭರದಿ ಪೂಗೋಲ ಪಂಚಕಂಗಳ ಪ್ರಯೋಗಿಸಲು (ಸವಮೋ. ೪–೨೧). ೨. ಐದು ಸಂಖ್ಯೆಗೆ ಸಂಬಂಧಿಸಿದುದು; ಐದರಿಂದ ಮಾಡಿದುದು. ೩. ರಣರಂಗ; ಯುದ್ಧಭೂಮಿ : ಏನ ಹೇಳುವೆ ಗಜಘಟಾಪ್ರತಿಮಾನದಲಿ ಕೋದಂಬುಗಳು ಹಿಂಡಾನೆಗಳ ನೇಳಂಟನೊದೆದೋಡಿದವು ಪಂಚಕಕೆ (ಕುಪ್ಯಾಶ. ೩–೧೫). ೪. ಐದು ಶ್ಲೋಕಗಳುಳ್ಳ ದೇವರ ಸ್ತೋತ್ರ : ಗಣೇಶಪಂಚಕ ಬಹಳ ಚೆನ್ನಾಗಿದೆ (ರೂಢಿ). ೫. ಕಾಗದ ಮೊದಲಾದುವುಗಳ ಕಟ್ಟು,—ಗಂಟು. ೬. ಧಾನ್ಯದ ಒಂದು ಅಳತೆ : ೧ ಖಂಡುಗ = ೪ ಪಂಚಕ, ೧ ಪಂಚಕ = ೫ ಕೊಳಗ (ಸ್ಯಪಹಾ. ೮ ಮುನ್ನುಡಿ); ಪೊನ್ನಿಗೆ ಪಂಚಕವೆರಡುಂ ಚೆನ್ನಾಗಿಯೆ ಪಣವು × × × (ಪಂ)ಚಕ ಶಶಿಗಂ (ಸ್ಯಪಹಾ. ಅನುಬಂಧ ೧). ೭. ಮಾನ್ಯವಾಗಿ ಬಂದ ಭೂಮಿ,—ಪ್ರದೇಶ :

ನಮಗೆ ತೆರಕಣಾಂಬಿಯ ಸೀಮೆಯಪಡುಗು ನಾಡಸ್ಥಳದ ಹುಲ್ಲಾನಕ್ಕೆ ಪ್ರತಿನಾಮವಾದ ಕಾಮಲಾಪುರದ ಅಘ್ಕಾರದಲೂ ನಮಗೆ ಸರ್ವಮಾನ್ಯವಾಗಿ ತಾಸ[ನ]ಸ್ಥವಾಗಿ ನಡವ ಬಹ ಪಂಡಿತರ ಪಂಚಕರ ಯೆಲ್ಲಿಯು ತೋಟದ ವ್ರಿತ್ತಿ ೧ ಗೋವಣಗಳ ಪಂಚಕದಲ್ಲಿ ನಮಗೆ ಧಾರಾಸಹಿತವಾಗಿ ನಡೆದು ಬಹ ಅತ್ತಿತಾಳ ತೋಟವ್ರಿತ್ತಿ ೪೧೯ (ಎಕ.III(R), ಗುಂಡ್ಲು ೫೬. ೧೩೬-೧ ; 1535) ; ಯಿಂ ಯೆರಡು ವ್ರಿತ್ತಿಗೆ ಸಲ್ಲು[ವ] ಸ್ಥಳಗಳ ವಿವರ ಕಾಲುವೆ ಕೆಳಗೆ ಕೊಟಗೆಯವರ ಪಂಚಕದ ಸ್ಥಳ ೧೫ಕ್ಕೆ ಬೀಜವರಿ . . . ಸಮರ್ಪಿಸಿದೆಯು (ಸಾಇಇ. IV, ೨೪೫-೧೩ ; 1541). ೪. [ಗಣಿತ] ಐದು ಎಂಬ ಸಂಖ್ಯೆಯ ಸಂಕೇತ. ೯. [ಜ್ಯೋತಿ] ಐದು ನಕ್ಷತ್ರಗಳ ಗುಂಪು,—ಸಮೂಹ ; ☞ ಮೃಗಶಿರಾ, ಆರ್ದ್ರಾ, ಪುನರ್ವಸು, ಪುಷ್ಯ, ಆಶ್ಲೇಷಾ ಎಂಬ ಐದು ನಕ್ಷತ್ರಗಳಿಂದಲೂ ಮಘಾ, ಪೂರ್ವಫಲ್ಗುನೀ, ಉತ್ತರಫಲ್ಗುನೀ, ಹಸ್ತ, ಚಿತ್ರಾ ಎಂಬ ಐದು ನಕ್ಷತ್ರಗಳಿಂದಲೂ ಆರಂಭವಾಗುವ ಮಳೆಗಳು ಚಿತ್ತನೆಗೆ ಬಹಳ ಯೋಗ್ಯವೆಂದೂ ಧನಿಷ್ಠೆ, ಶತಭಿಷೆ, ಪೂರ್ವಾಭಾದ್ರೆ, ಉತ್ತರಾಭಾದ್ರೆ ಮತ್ತು ರೇವತಿ ಎಂಬ ಐದು ನಕ್ಷತ್ರಗಳು ಅನಿಷ್ಟಕಾರಕವೆಂದೂ ಈ ನಕ್ಷತ್ರಗಳಲ್ಲಿ ಮರಣವು ಸಂಭವಿಸಿದರೆ ಮನೆ ಬಿಡಬೇಕೆಂದೂ ಸೂಚಿಸುತ್ತಾರೆ : ಪಂಚಕದಲ್ಲಿ ಮರಣವಾಗಿರುವುದರಿಂದ ಮನೆ ಬಿಡಬೇಕೆಂದು ಶಾಸ್ತ್ರಿಗಳು ಹೇಳಿದ್ದಾರೆ (ಕೂಡಿ). 'ಮೃಗಪಂಚಕ' ಪರಾ. [ಸಂ.]

ಪಂಚಕಂಚುಕ (ನಾ). [ವೀಶೈ] ಕವಚವು ಶರೀರವನ್ನು ಮುಚ್ಚುವಂತೆ ಜೀವವನ್ನು ಆವರಿಸಿರುವ ಐದು ಪದಾರ್ಥಗಳು : ಕಾಲ, ನಿಯತಿ, ಕಲಾ, ವಿದ್ಯಾ ಮತ್ತು ರಾಗ ಇವುಗಳಿಗೆ ಪಂಚಕಂಚುಕಗಳೆಂದು ಹೆಸರು (ಭೌತತ್ತ್ವ. ೬೬೫) ; ಶಿವನ ಚಿಚ್ಛಕ್ತಿ, ಆನಂದಶಕ್ತಿ, ಇಚ್ಛಾ ಜ್ಞಾನ ಕ್ರಿಯಾಶಕ್ತಿಗಳು . . . ಈ ಶಕ್ತಿ ಸಂಕೋಚಗಳೇ ಪಂಚಕಂಚುಕಗಳಾಗಿಯೂ ಮೂರು ಮಲಗಳಾಗಿಯೂ ಪರಿಣಮಿಸಿದವು (ಭಾರದ. ೨೧೩). [ಪಂಚ$_2$+ಕಂಚುಕ]

ಪಂಚಕಚೇರಿ (ನಾ). ಪಂಚಾಯಿತಿಯ ಕಾರ್ಯಾಲಯ,—ಕಚೇರಿ : (ಮುಂಬಯಿ. ಕ. ೪-೧೪೬). [ಪಂಚ$_2$+ಕಚೇರಿ]

ಪಂಚಕಚ್ಚೆ (ನಾ). ಒಂದು ವಿಶಿಷ್ಟ ರೀತಿಯಲ್ಲಿ ಐದು ಕಡೆ ಸಿಕ್ಕಿಸಿ ಕಚ್ಚೆ ಉಡುವ ವಿಧಾನ : ನೆರೆ ಹಿಡಿದುಟ್ಟಿಹ ಪಂಚಕಚ್ಚೆಯ ಧೋತ್ರ ನಾಮ ವಿಭೂತಿಯ ಬೆಳಕು (ಚಿದಾಪ. ೪೨-೬). [ಪಂಚ$_2$+ಕಚ್ಚೆ]

ಪಂಚಕಜ್ಜಾಯ 'ಪಂಚಗಜ್ಜಾಯ' ನೋ.

ಪಂಚಕಠಾರಿ (ನಾ). ಒಂದು ಬಗೆಯ ಆಯುಧ : ಪಂಚರಾಯುಧ (ಮೈಸೂರು ಅರಮನೆಯ ಆಯುಧಾಗಾರದಲ್ಲಿ 'ಪಂಚಕಠಾರಿ'ಯೆಂಬ ಆಯುಧವಿದೆ) (ಕಠಾಪ. ೨೭೬). [ಪಂಚ$_2$+ಕಠಾರಿ]

ಪಂಚಕರಣ (ನಾ). ೧. ಕಣ್ಣು, ಕಿವಿ, ಮೂಗು, ನಾಲಗೆ ಮತ್ತು ಚರ್ಮ ಎಂಬ ಐದು ಇಂದ್ರಿಯಗಳು : ಪಂಚಭೂತಂಗಳ ಪೂರ್ವಾಶ್ರಯವಳಿದು ಪಂಚ[ಸಾಕಾಂ. ಚೀ]ಕರಣಂಗಳ ಹಂಚುಹಬು ಮಾಡಿ (ಅಖಂಡೇ. ೧೯೩-೧೪) ; ಸುಖದ ವಿಷವು ದುಃಖ ವಿಷವು ಹಿಗ್ಗಿ ಪ್ರಾಣ ಪೂರಣಾ ಪಂಚಕರಣಗಳೇ ಗಡಣಕಟ್ಟಿತು ಗುಡಿತೋರಣಾ (ಗರಿ. ೧೧೩-೧೦) ; ಇನ್ನೈದುಗಳಿಗೆಯೊಲಿ ಇದರ ಹರಣ ಗಾಳಿಮಳೆಗೂಡುವವು ಪಂಚಕರಣ (ಏಪಾಸ. ೪೩-೪). ೨. ವಾಕ್ಕು, ಪಾಣಿ, ಪಾದ, ಪಾಯು ಮತ್ತು ಉಪಸ್ಥ ಎಂಬ ಐದು ಕರ್ಮೇಂದ್ರಿಯಗಳು. ೩. ಚಿತ್ತ, ಬುದ್ಧಿ, ಅಹಂಕಾರ, ಮನ ಮತ್ತು ಜ್ಞಾನ ಎಂಬ ಐದು ಅಂತಃಕರಣಗಳು : ಪಂಚಕರಣಂಗಳು : ಚಿತ್ತ, ಬುದ್ಧಿ, ಅಹಂಕಾರ, ಮನ, ಜ್ಞಾನ (ಮಹಾಸಾ. ಅನುಬಂಧ. ೨). [ಪಂಚ$_2$+ಕರಣ]

ಪಂಚಕರ್ಣ (ನಾ). [ರೇಖಾಗ] ಐದುಭುಜಗಳ ಸರಳರೇಖಾಕೃತಿ ; ಪಂಚಕೋಣ : ಎರಡು ತ್ರಿಕೋಣ ಅಥವಾ "ಪಂಚಕರ್ಣ" (Pentagon) ಕ್ಷೇತ್ರಫಲಗಳ ಮೊತ್ತವುಳ್ಳಂತೆ ಚಚ್ಚೌಕವನ್ನು ರಚಿಸುವಿಕೆ (ಗಣಿತ. ೧೪೪). [ಪಂಚ$_2$+ಕರ್ಣ$_2$]

ಪಂಚಕರ್ಮ (ನಾ). [ವೈದ್ಯಶಾ] ಆಯುರ್ವೇದಚಿಕಿತ್ಸಾಕ್ರಮದಲ್ಲಿನ ಸ್ನೇಹ, ಸ್ವೇದನ, ವಮನ, ವಿರೇಚನ ಮತ್ತು ನಸ್ಯ ಎಂಬ ಐದು ಬಗೆಯ ಚಿಕಿತ್ಸಾಕ್ರಮ : ಈ ಪಂಚಕರ್ಮಗಳು ಸಕಲರೋಗಗಳಲ್ಲಿಯೂ ಪ್ರಯೋಗಿಸುವ ಮುಖ್ಯ ಚಿಕಿತ್ಸೆಗಳು (ಸಕಸ್ವ. ೨೪) ; ನಾಡೀಪರೀಕ್ಷೆ. ಪಂಚಕರ್ಮ, ಲೋಹಾದಿಗಳ ಭಸ್ಮಪ್ರಯೋಗಗಳು ಚಿಕಿತ್ಸೆಯಲ್ಲಿ ಬಹಳ ಉಪಯುಕ್ತವಾಗಿವೆ (ಕವಿಕೋ. I, ೪೫೦). [ಪಂಚ$_2$+ಕರ್ಮ]

ಪಂಚಕಲಶ, ಪಂಚಕಳಶ (ನಾ). ೧. ವ್ರತ ಮತ್ತು ಸಮಾರಂಭಗಳಲ್ಲಿ ಪೂಜೆಗಾಗಿ ಸ್ಥಾಪಿಸುವ ಐದು ಪೂರ್ಣಕುಂಭಗಳು : ಮುಂಬೆ ಮಗುವಿಗೆ ಎಂಟು ವರ್ಷಗಳು ಕಳೆದ ಮೇಲೆ ಕ್ರಮವಾಗಿ ಕುಂಡ, ಮಂಡಪ, ಪಂಚಕಲಶಗಳನ್ನು ಸ್ಥಾಪಿಸಿ . . . ಲಿಂಗವನ್ನು ಮುಂತ್ರೋಪದೇಶಪೂರ್ವಕವಾಗಿ ನೆಲೆಗೊಳಿಸುವನು (ಭಾರದ. ೨೪೯). ೨. [ವೀಶೈ] ಶುಭಕಾರ್ಯಗಳಲ್ಲಿ ಪಂಚಾಚಾರ್ಯರ ಹೆಸರಿನಲ್ಲಿ ಸ್ಥಾಪಿಸುವ ಐದು ಕಲಶಗಳು. ೩. ಶಿವನ ಪಂಚಮುಖಗಳ ಸಂಕೇತವಾಗಿ ಇರಿಸುವ ಐದುಕಲಶಗಳು : ದೀಕ್ಷೆ, ಲಗ್ನ ಮೊದಲಾದ ಕಾಲಗಳಲ್ಲಿ ಪಂಚಕಲಶಗಳನ್ನು ಸ್ಥಾಪಿಸುವುದುಂಟಷ್ಟೇ. ಆಗ ಅವು ಪರಶಿವನ ಪಂಚಮುಖಗಳೆಂದು ಭಾವಿಸಲ್ಪಡುತ್ತವೆ (ವಿಪಾಕೋ. ೨೧೫). **ಪಂಚಕಳಶ** : ೧. ಪಂಚಕಳಶ ಸ್ಥಾಪನೆಯಾಗಬೇಕು(ಕೂಡಿ). [ಪಂಚ$_2$+ಕಲಶ]

ಪಂಚಕಲೆ (ನಾ). ಪೃಥ್ವಿ, ಅಪ್ಪು, ತೇಜಸ್ಸು, ವಾಯು ಮತ್ತು ಆಕಾಶಗಳಿಗೆ ಕ್ರಮವಾಗಿ ಹೇಳಿರುವ ನಿವೃತ್ತಿ, ಪ್ರತಿಷ್ಠೆ, ವಿದ್ಯೆ, ಶಾಂತಿ ಮತ್ತು ಶಾಂತ್ಯತೀತ ಎಂಬ ಐದು ಬಗೆಯ ಕಲೆಗಳು : ಆ ಪಂಡಮುಖದಿಂದವೆ ಪಂಚಾಕ್ಷರಿ ಉತ್ಪತ್ತಿ ಆ ಪಂಚಾಕ್ಷರಿಯಿಂದವೇ ಪಂಚಕಲೆಗಳುತ್ಪತ್ತಿ ಆ ಪಂಚಕಲೆಗಳಿಂದಲೇ ಪಂಚಶಕ್ತಿಗಳುತ್ಪತ್ತಿ (ಸುಪಾದೇ. ಬ. ೧೦೨-೨೩೫). [ಪಂಚ$_2$+ಕಲೆ$_3$]

ಪಂಚಕಲ್ಯಾಣ (ನಾ). ೧. ಮುಖವೂ ಕಾಲುಗಳೂ ಬೆಳ್ಳಗಿರುವ ಒಂದು ಬಗೆಯ ಕುದುರೆ : ವದನದೊಳಂ ನಾಲ್ಕುಂ ಪಾದದೊಳಂ ಬೆಳ್ವಾಗೆ ಪಂಚಕಲ್ಯಾಣಂ (ಅಶ್ವಶಾ. ೨-೧೪). ೨. ಶುಭಲಕ್ಷಣಸಂಪನ್ನವಾದ ಒಂದು ಬಗೆಯ ಆನೆ : ಸುರಕರೀಂದ್ರಮನೆ ಕಟ್ಟಲ್ ನಟ್ಟ ಪಾರಿಜಾತದ ಮುಂಡಗಂಧಂಗಳಂ ಪೋಲ್ತೊಪ್ಪಿ ಸಾಹಣೌಘದೊಳ್ ನಿಚ್ಚ ಮೋಲಗಿಸುವ ಪಂಚಕಲ್ಯಾಣಂಗಳುಮಂ . . . ನೋಡಿ ಪೊಗಟ್ಟು (ಶಾಂತಿಪು. ೩-೧೯೭ ಪ). ೩. [ಜೈನ] ತೀರ್ಥಂಕರನಿಗೆ ಸಂಬಂಧಿಸಿದಂತೆ ನಡೆಸುವ ಗರ್ಭಾವತರಣ, ಜನ್ಮಾಭಿಷೇಕ, ನಿಷ್ಕ್ರಮಣ, ಕೇವಲಜ್ಞಾನೋತ್ಪತ್ತಿ ಮತ್ತು ಪರಿನಿರ್ವಾಣಕಾಲಗಳೆಂಬ ಐದು ಬಗೆಯ ಸಮಾರಂಭಗಳು ಮತ್ತು ಅಂದು ಇಂದ್ರಾದಿಗಳು ನಡೆಸುವ ಉತ್ಸವ : ಜಿನಕ್ಷೇತ್ರ ಪೂಜಾವಿಧಿಯಂ ನಿರ್ವರ್ತಿಸಿ ತದ್ಭೂಪ ಪೂಚೂರ್ಣಪಂಚಕಲ್ಯಾಣಭಾಗಿಗಳಪ್ಪೆವೆಂದು . . . ಸೌಧರ್ಮೇಂದ್ರಂ ಪರಿನಿರ್ವಾಣಕಲ್ಯಾಣದೊಳಾನಂದನೃತ್ಯಮನಾಡಿ ಪೋದಂ (ಜಾವುಂಪು. ೪೪) ; ಮೂಱವತ್ತನಾಲ್ಕತಿಶಯ ಪಂಚಕಲ್ಯಾಣ ತೀವಿದ ಹಲವತಿಶಯದ ದೇವಜಿನರ ನಾಟಕವನೇಳನೆಯೂ ಕಾವಿನಲ್ಲಿ ಆಡುನರು (ದ್ವಾದಶಾ. ೧೧-೬೪೩) ; ಸಲ್ಲಲಿತ ಶ್ರೀಪಂಚಕಲ್ಯಾಣೆಲ್ಲ ಪೂಜಾವೈಭವಂಗಳ . . . ನಡಸಿದರಧಿಕಭಕ್ತಿಯಲಿ (ಬಜ್ಜಪು. ೧೧೪-೧೦೩). [ಪಂಚ$_2$+ಕಲ್ಯಾಣ]

ಪಂಚಕಲ್ಯಾಣಮಹೋತ್ಸವ (ನಾ). ೧. = ಪಂಚಕಲ್ಯಾಣ ೩ : ಸಮನಿಸಿತು ಪಂಚಕಲ್ಯಾಣಮಹೋತ್ಸವ ವರ್ಣನಂಗಳಂ ಕೇಳ್ವಿಷ್ಟಂ ರಮಣಿಗೆ (ಚಂದ್ರಪು. ೩-೯೨). ೨. ಬಸದಿಗಳಲ್ಲಿ ಪಂಚಕಲ್ಯಾಣದ ಸ್ಮೃತಿಗಾಗಿ ಮಾಡುವ ಉತ್ಸವ : ಭಗವಾನ್ ಶಾಂತಿನಾಥಸ್ವಾಮಿಯವರ ಪಂಚಕಲ್ಯಾಣಮಹೋತ್ಸವವು ಅತ್ಯಂತ ವೈಭವದಿಂದ ನೆರವೇರಿತು (ನಿಟ್ಟೂಶಾಂ. III, ಅರಿಕೆ). [ಪಂಚಕಲ್ಯಾಣ + ಮಹೋತ್ಸವ]

ಪಂಚಕಲ್ಯಾಣಿ (ನಾ). = ಪಂಚಕಲ್ಯಾಣ ೧ : ತವೆ ಮುಖದೊಳ್ ಚರಣದೊಳಂ ಧವಳತೆಯಿರಲದುವೆ ಪಂಚಕಲ್ಯಾಣಿಯಲ್ಲೆ (ಹಾಲಾಸ್ಯ. ೪-೧೧-೬೭). [ಪಂಚ$_2$ + ಕಲ್ಯಾಣಿ$_1$]

ಪಂಚಕಲ್ಯಾಣೋತ್ಸವ (ನಾ). = ಪಂಚಕಲ್ಯಾಣ ೩ : ಪಂಚಕಲ್ಯಾಣೋತ್ಸವಕ್ಕಮಚ್ಯುತೇಂದ್ರನೊಡನೆ ನಿಜಪೂಜಾವಿಳಾಸಮಂ ಮೆಱೆಯಲೆಂದು ಪೋಗಿ (ಆದಿಪು. ೨-೬೬ವ). [ಪಂಚಕಲ್ಯಾಣ + ಉತ್ಸವ]

ಪಂಚಕಸೆ (ನಾ). = ಪಂಚಕಚ್ಚೆ : ರಾಜನು ಆನೆಯ ಮೇಲೆ ಸತುವಿನ ಅಂಬಾರಿಯಲ್ಲಿ ಕೂತು ಸವಾರಿ ಹೊರಟನು. ಆಗ ಖಾಸಾಹಜರತ್ತು ಮುಕ್ಕಣ್ಣ ಸುತ್ತು ಪಂಚಕಸೆ ಯಡಭರ್ಜಿ ಬಲಭರ್ಜಿಯವರೂ . . . ಹೊರಟರು (ಚಿತ್ರಪಾ. ೯೭). [ಪಂಚ$_2$ + ಕಸೆ$_2$]

ಪಂಚಕಳಶ 'ಪಂಚಕಲಶ' ನೋ.

ಪಂಚಕಳಸ (ನಾ). = ಪಂಚಕಲಶ ೩ : ಪರಮೇಶ್ವರನ ಪಂಚಮುಖವನೆ ಪಂಚಕಳಸವಾಗಿ ಮೂರ್ತಿಗೊಳಿಸಿ ಆ ಗಣಂಗಳು ಸಾಕ್ಷಿಯಾಗಿ ಕರಸ್ಥಲದಲ್ಲಿ ಶಿವಲಿಂಗವ ಕೊಟ್ಟು ಈ ಲಿಂಗವೆ ಗಂಡ ನೀನೆ ಹೆಂಡತಿ ಎಂದು ಹೇಳಿ . . . ಪಾದೋದಕ ಪ್ರಸಾದವನಿತ್ತು ಎಂದೆಂದಿಗೂ ಸತಿಪತಿಭಾವ ತಪ್ಪದಿರಲಿ ಎಂದು ನಿರೂಪಿಸಿದನಯ್ಯ (ಸಿದ್ಧೇವ. ೬೨-೧೮೦).

[ಪಂಚ$_2$ + ಕಳಸ$_1$ (<ಕಲಸ)]

ಪಂಚಕಾರುಕ (ನಾ). ೧. (ಗ್ರಾಮಗಳಲ್ಲಿರುವ) ಐದು ವರ್ಗದ ಕೆಲಸಗಾರರು ; ೫ ಬಡಗಿ, ಅಕ್ಕಸಾಲೆ, ಕಮ್ಮಾರ, ಕಲ್ಲುಕುಟಿಕ ಹಾಗೂ ಕಂಚುಗಾರ ಅಥವಾ ಬಡಗಿ, ನೆಯ್ಗೆಕಾರ, ಕ್ಷೌರಿಕ, ಅಗಸ ಹಾಗೂ ಚಮ್ಮಾರ. ೨. ಕಾರುಕರು ಕೊಡಬೇಕಾದ ಉದ್ಯೋಗ ತೆರಿಗೆ : ಹೆಗ್ಗಡೆ ಜಂನಯನುಂ ಆ ದೇವರ ಪುರದ ಸಾದಬಣ್ಣಗೆ ಮಗ್ಗ ಪಂಚಕಾರುಕ ರಾಣದೆಱೆಯಂ ಶ್ರೀಮದ್ರಾಜಗುರು ಲೋಕಾಭರಣ ಗುರುದೇವರ್ಗ್ಗೆ . . . ಧಾರಾಪೂರ್ವ್ವಕಂ ಮಾಡಿ ಬಿಟ್ಟ ಧರ್ಮ್ಮ (ಸೌಇಇ. IX-i, ೩೨೩-೫ ; 1197) ; ಮಗ್ಗತೆಱೆ ಹೊಗೆದೆಱೆ ಲವಣ ಪಂಚಕಾರುಕ ಕಾಳು ಕೈಬಣ್ಣ ನೂಲು . . . ಮುಖ್ಯವಾದ ಸರ್ವ್ವ ಆಯವನು ಆ ಚೂಡನಾಥ ದೇವರಿಗೆ ಸರ್ಬ್ಬಮಾನ್ಯಂ ಮಾಡಿ (ಎಕ. IX, ಚನ್ನಪ. ೬೬-೧೪ ; 1288) ; ಸುಂಕಕಾರುಕ ಗ್ರಾಮಗದ್ಯಾಣ ಪಂಚಕಾರುಕ ಗಾಣದೆಱೆ . . . ಮುಂತಾದ ಏನುಳ್ಳ ಸುಂಕ (ಎಕ. VII, ಶಿವಮೊ. ೭೧-೩೦ ; 1431).

ಪಂಚಕಾರುಕರ ಮನೆ = ಬಡಗಿಯೇ ಮೊದಲಾದ ಉದ್ಯೋಗಿಗಳು ಕೆಲಸ ಮಾಡುವ ಸ್ಥಳ ; ಕರ್ಮಶಾಲೆ ; ಕಮ್ಮಟ : "ಆ ಪಂಚಕಾರುಕರ ಮನೆ ಕರ್ಮಶಾಲೆಯಕ್ಕು" (ಮಂಗರಾ. ೫೮-೧೦).

[ಪಂಚ$_2$ + ಕಾರುಕ$_2$]

ಪಂಚಕೃತ್ಯ (ನಾ). ೧. ಪರಮೇಶ್ವರನಿಗೇ ಮೀಸಲಾಗಿರುವ ಐದು ಕಾರ್ಯಗಳು ; ಪರಮಾತ್ಮ ಮಾತ್ರ ನಿರ್ವಹಿಸ ಬಲ್ಲ ಸೃಷ್ಟಿ, ಸ್ಥಿತಿ, ಸಂಹಾರ, ತಿರೋಭಾವ ಮತ್ತು ಅನುಗ್ರಹಕರಣವೆಂಬ ಐದು ಕಾರ್ಯಗಳು : ಇವರು ನಿನ್ನಿಂದ ಹುಟ್ಟಿದ ಪಂಚಕೃತ್ಯಂಗಳಿಗೊಳಗಾದರು (ಶಿವಗೀ. ೧೬೨-೮೦೨ ಪ) ; ಜಯ ಪಂಚಕೃತ್ಯ ಸಂಸ್ತುತ್ಯ ಯೆಂದಂ ಚೋಳರಾಯ ನೈರ್ಮಲ್ಯಕಾಯ (ಭಾವಚಿಂ. ೯-೫೨). ೨. ಅಸಿ, ಮಸಿ ಕೃಷಿ, ವಾಣಿಜ್ಯ ಮತ್ತು ದೇವನಿರ್ಮಾಣವೆಂಬ ಐದು ಬಗೆಯ ಕೃತ್ಯಗಳು : ಅಸಿ ಮಸಿ ಕೃಷಿ ವಾಣಿಜ್ಯ ದೇವನಿರ್ಮಾಣವೆಂಬ ಪಂಚಕೃತ್ಯನಿಯಾಮಕರಾಗಿರ್ಕುಂ (ವಿವೇಕ. ೨೪೫). ೩. ನಲವತ್ತೈದು ಮಂತ್ರಸಾಧನಗಳಲ್ಲಿ ಒಂದು : ಬಳಿಕ ಮಂತ್ರಸಿದ್ಧಿ ಸೂಚಕಮಾರ ಮಾತೃಕಾಚಕ್ರ . . . ಪಂಚಪಾದ ಪಂಚಕೃತ್ಯ ಪಂಚರ ಮಾಲಿಕೆ ಮೂಲಿಕೆ ತಂತ್ರಬಲಿ ಆತ್ಮೈಕ್ಯಗಳೆಂಬ ಪಂಚಚತ್ವಾರಿಂಶನ್ಮಂತ್ರಸಾಧನಂಗಳೊಳು ಪ್ರಜ್ಞೆಗೊಂಡು (ವಿವೇಕ. ೮೦).

[ಪಂಚ$_2$ + ಕೃತ್ಯ$_2$]

ಪಂಚಕೋಣ (ನಾ). ೧. ಐದು ಮೂಲೆಗಳು. ೨. [ರೇಖಾಗ] ಐದು ಭುಜವುಳ್ಳ ಒಂದು ಆಕೃತಿ. ೩. ಒಂದು ನರಕದ ಹೆಸರು : ಮತ್ತಂ ಮಹಾಚೂರ್ಣ ಮೂಲಸಂಚೂರ್ಣ ಪಟಪಕ್ಷಪ್ರಮರ್ದನತಪ್ತಶೈಲ ತಪ್ತಶೈಲವೆಂಬೈದು ಮಂತ್ರಿನರಕಂಗಳಿಂ ಜೊತೆಗೊಂಡು ಪಂಚಕೋಣವೆಂಬರಸುನರಕವಿಹುದು (ವಿವೇಕ. ೧೮೧). [ಪಂಚ$_2$ + ಕೋಣ$_2$]

ಪಂಚಕೋಲ (ನಾ). ಔಷಧಗಳಿಗೆ ಉಪಯೋಗಿಸುವ ಹಿಪ್ಪಲಿ, ಮೋಡಿ, ಚವ್ಯ, ಚಿತ್ರಮೂಲ ಮತ್ತು ಶುಂಠಿ ಎಂಬ ಐದು ಬಗೆಯ ಗ್ರಂದಿಗೆ ಪದಾರ್ಥಗಳು : ಹಿಪ್ಪಲಿಮೂಲಂ ಚವ್ಯಂ ಪಿಪ್ಪಲಿ ದಹನಂ ಮಹೌಷಧಂ ಸಮಭಾಗಂ ತಪ್ಪದೆ ಕೂಡಿದೊಡಯ್ದು ಮಿವಪ್ಪುವು ಮುಂಪೇಟ್ದ ಪಂಚಕೋಲದ ಪೆಸರ್ಗಳ್ (ಅಶ್ವಶಾ. ೧೧-೩೦); ಪಂಚಕೋಲವೆಂದರೆ ಹಿಪ್ಪಲಿ, ಹಿಪ್ಪಲೀಮೂಲ, ಚವ್ಯ, ಚಿತ್ರಮೂಲ, ಶುಂಠಿ (ವೈದ್ಯಸಾ. I, ೩೦೩) ; ಎಸಗದ ಬೇರು, ಕತ್ತರಿಬೇರು . . . ಬಜೆ, ಪಂಚಕೋಲ ಇವಂ ಸಮಾನ ಕಷಾಯಂ ಕಾಸಿ ಕುಡಿಯಲು ಅಭಿನ್ಯಾಸಸನ್ನಿ ಪರಿಹರಮಕ್ಕು (ಸಕವೈ. ೧೬೮). [ಪಂಚ$_2$ + ಕೋಲ$_2$]

ಪಂಚಕೋಶ (ನಾ). [ವೇದಾಂತ] ಶರೀರಾಂತರ್ಗತನಾದ ಆತ್ಮನನ್ನು ಆವರಿಸಿಕೊಂಡಿರುವ ಐದು ಪದರಗಳು; ಜೀವನಿಗಿರುವ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯವೆಂಬ ಐದು ಆವರಣಗಳು : ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯಂಗಳೆಂಬಿವೆ ಪಂಚಕೋಶಂಗಳೆನಿಕುಂ (ಮನೋವಿ. ೫-೩೮ ಟೀಕು); ಕೇಳು ಶುಕ ದೃಗ್ಧೃಶ್ಯ ಭೇದವ ಪೇಳುವೆನು . . . ವಿವೇಕವ ಪಂಚಕೋಶಗಳ (ಅಮೃತ. ೩-೧೮) ; ಸೂಕ್ಷ್ಮಶರೀರವೂ ಸ್ಥೂಲಶರೀರವೂ ಸೇರಿ ಚೈತನ್ಯಕ್ಕೆ ಆವರಣವಾಗಿರುವುದರಿಂದ ಪಂಚಕೋಶವೆಂದು ಉಪದೇಶಿಸುವರು (ಹಿಂದಸಾ. ೧೯೬).

[ಪಂಚ$_2$ + ಕೋಶ$_2$]

ಪಂಚಕ್ಲೇಶ (ನಾ). ಯೋಗಶಾಸ್ತ್ರದಲ್ಲಿ ಹೇಳಿರುವ ಐದು ಬಗೆಯ ಕ್ಲೇಶಗಳು; ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ ಮತ್ತು ಅಭಿನಿವೇಶಗಳೆಂಬ ಐದು ಕಷ್ಟಗಳು : ಇಂತೀ ಪಂಚಕ್ಲೇಶವೆ ಸರ್ವಜೀವರುಗಳಲ್ಲಿಯೂ ಬೆಳೆದು ಪಲ್ಲವಿಸಿ ಹುದುಗಿಕೊಂಡಿಹುದು (ಚನ್ನಪ. ಕ. ಪರಿ. ೬೮೧) ; ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ, ಅಭಿನಿವೇಶಂಗಳೆಂಬಿವೆ ಪಂಚಕ್ಲೇಶಂಗಳೆನಿಸುಗುಂ (ಮನೋವಿ. ೫-೩೬ ಟೀಕು) ; ಪಂಚಕೋಶ ಪಂಚಕ್ಲೇಶಂಗಳ ಪರಿಹರಿಸಿ (ಅಖಂಡೇ. ೧೯೩-೧೩) ; ದೇಶ ಕಾಲಾದಿಗಳಿಗಂಜದೆ . . . ಪಂಚಕ್ಲೇಶಗಳಿಗೆಡೆಗೊಡದೆ (ಗಗಶಾ. ೧೫-೧).

[ಪಂಚ$_2$ + ಕ್ಲೇಶ]

ಪಂಚಕ್ಷೇತ್ರ (ನಾ). [ಶೈವ] ಶ್ರೀಶೈಲ, ಕಾಶಿ, ಕೇದಾರ, ಕಾಳಹಸ್ತಿ ಮತ್ತು ಪಟ್ಟಿಸ ಎಂಬ ಐದು ಪುಣ್ಯಕ್ಷೇತ್ರಗಳು : ಪಡೆದು ಮುತ್ತಿನ ಪಂಚತಾವಡವ ಸತ್ತಿರ್ದ ಘಟಸರ್ಪಗಸುವಿತ್ತು ಪೊಳಲ್ಗುಂದದಾ ಶಕ್ತಿಗೊಡನೆ ಕೃಪೆಯಾದ ಪಂಚಕ್ಷೇತ್ರದವಸರವನೊರೆದೊಂದು ಲಗ್ನದಲ್ಲಿ (ಗುರುಚಾ. ೧೩-೮೮). [ಪಂಚ$_2$ + ಕ್ಷೇತ್ರ]

ಪಂಚಗಜ್ಜಾಯ, ಪಂಚಕಜ್ಜಾಯ (ನಾ). ದೇವರ ನೈವೇದ್ಯಕ್ಕಾಗಿ ತಯಾರಿಸುವ ಅವಲಕ್ಕಿ (ಅಥವಾ ನೆಲಗಡಲೆ), ಬೆಲ್ಲ, ಕೊಬ್ಬರಿ, ಕಡಲೆ ಮತ್ತು ಎಳ್ಳು–ಈ ಐದು ಪದಾರ್ಥಗಳನ್ನು ಸೇರಿಸಿ ಮಾಡುವ ಒಂದು ಬಗೆಯ ಸಿಹಿತಿಂಡಿ : ವೆಂಕಟಲಕ್ಷ್ಮಮ್ಮ ಪಂಚಗಜ್ಜಾಯ ಹಂಚುತ್ತಾ ಹೇಳಿದರು (ಬಾಳಿವೃ. ೨೦೬). **ಪಂಚಕಜ್ಜಾಯ :** ಪಂಚಕಜ್ಜಾಯದ ಪರಿಪಾಣ್ಯ ಪಳಂಚಲರ್ಚನೆ ಮಾಡಿದಾಗ ಪಂಚವರ್ಣದ ಮುಗಿಲಿದ್ರಿಗೆ ಕವಿದಂತದೇಂ ಚೊಕ್ಕನಾದುದೊ ಪೂಜೆ (ಭರತ. ೭೩–೫೨); ಶಿವದೇವಾಲಯದ ಮಹಾಮಂಗಳಾರತಿ ಬೇಗ ಮುಗಿದಿತ್ತು . . . ಪಂಚಕಜ್ಜಾಯದ ವಿನಿಯೋಗ ಆಗುವಾಗಲೇ ರಾತ್ರಿ ನಾಲ್ಕು ಗಳಿಗೆ ಕಳೆದು ಹೋಗಿತ್ತು (ದೇವಹಂ. ೯); ಅಂತರಂಗದ ಶುದ್ಧಿಯಾಗಲೆಂದು ಆಂಡ್ರೂಸರ ಅಲ್ಕಲೈನ್‌ಪುಡಿಯನ್ನು ಪಂಚಕಜ್ಜಾಯದಂತೆ ಪೂರೈಸಿದನು (ತುಂಬಿಕೊ. ೬೬). [ಪಂಚ$_2$ + ಕಜ್ಜಾಯ]

ಪಂಚಗಟ್ಟೆ (ನಾ). ಪಂಚಾಯಿತಿ ಕಟ್ಟೆ ; ಚಾವಡಿ : ಏನ ಇರೂದು ಇನ್ನ ಮುಂದೆ ಪಂಚಗಟ್ಟೆ ಕೈಯಾಗ ಬರೂ ಹಾದೀನ ನೋಡತಿದ್ದೆ (ನಡೆದಾ. I, ೨೬೭). [ಪಂಚ$_2$+ಕಟ್ಟೆ$_1$]

ಪಂಚಗವ್ಯ (ನಾ). ಹಸುವಿನಿಂದ ಉತ್ಪತ್ತಿಯಾಗುವ ಹಾಲು, ಮೊಸರು, ತುಪ್ಪ, ಗಂಜಲ ಮತ್ತು ಸಗಣಿ ಎಂಬ ಐದು ವಸ್ತುಗಳು : ಪೊಟಲ ಬೀದಿಗಳೊಳೆಲ್ಲಂ ಗಂಧೋದಕ ಪಂಚಗವ್ಯಂಗಳಂ ತಳಿಯಿಸಿ (ಪಂಪಭಾ. ೪–೫೫); ಪಂಚಗವ್ಯವಾವುದೆಂದೊಡೆ . . . ಕಪಿಲೆಯಾವಿನ ಸಗಣ ಗೋಮೂತ್ರಂ ಘೃತ (ಆ ತುಪ್ಪ) ಕ್ಷೀರ (ಆ ಹಾಲು) ದಧಿ (ಆ ಮೊಸರು) ಇವು ಪಂಚಗವ್ಯಂಗಳು (ಪ್ರತಿಷ್ಠಾ. ೭–೧೦); ವಿದಿತವಹ ಪಂಚಗವ್ಯಂ ಸುಭೆಗಳ್ಬೆದುಮಂತೊದಗಿದಾ ಹವ್ಯಕವ್ಯವನು ಕಾಯಂ ಮುಟ್ಟೆ ಮುದಗೆಡುಗುಮೆಲ್ಲಾಮಶುದ್ಧಮೆಂದಱಿಪುವನ ಚರಣಾಂಬುಜಕ್ಕೆ ಶರಣು (ಲಕ್ಷಿಂ. ೫೯–೪೭); ಪಂಚಗವ್ಯವ ತಾನು ಸ್ವೀಕರಿಸೆ ಸಕಲವಿದ್ಯೆಯು ಬಹುದು (ಗಗತಾ. ೪–೫೦); ನೀನು ವಿಧಿವತ್ತಾಗಿ ಪಂಚಗವ್ಯ ಇವುಗಳನ್ನು ಸ್ವೀಕರಿಸಿ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗುವುದು (ಝೂಂಗಾಚಿ. ೫೨). ☞ ಪಂಚಗವ್ಯಪ್ರಾಶನದಿಂದ ಸಕಲಪಾಪ ನಿವೃತ್ತಿಯಾಗುವುದೆಂಬ ನಂಬಿಕೆಯಿದೆ.

[ಪಂಚ$_2$+ ಗವ್ಯ]

ಪಂಚಗಾರ್ತಿ (ನಾ). ೧. ಪಂಚಕಾರುಕವರ್ಗಕ್ಕೆ ಸೇರಿದವನ ಹೆಂಡತಿ. ೨. ಪಂಚಕಾರುಕವರ್ಗಕ್ಕೆ ಸೇರಿದ ಹೆಂಗಸು : ಮಾಲೆಗಾಱನೆಂಬುದಱ ಜಕಾರಕ್ಕೆ ರೇಫಮಾದುದಾಗಿ ಮಾಲೆಗಾರ್ತಿ; ಕಂಚಗಾರ್ತಿ, ಪಂಚಗಾರ್ತಿ (ಪಮದ. ೨೦೯ ಪ್ರಯೋ).

[ಪಂಚಗಾಱ + –ತಿ$_1$(<–ಇತ್ತಿ)]

ಪಂಚಗಾಲು (ನಾ). = ಪಂಚರಂಗಿ ೨ : ನಾಲ್ಕು ಕಾಲಿನಲ್ಲೂ ಗೊರಸಿನ ಹತ್ತಿರ ಬಿಳಿಯ ಬಣ್ಣವಿದ್ದು ಹಣೆಯಲ್ಲಿ ಮೂಗಿನ ಮೇಲೆ ಬಿಳಿಯ ಪಟ್ಟಿಯಿದ್ದಿತು. ಅಂಥ ಕುದುರೆಗೆ ಪಂಚರಂಗಿಯೆಂದೂ ಕರೆಯುವವಾದಿಕೆ. ಅದನ್ನು ಪಂಚಗಾಲು ಕುದುರೆಯೆಂದೂ ಕರೆಯುತ್ತಿದ್ದರು (ಚಂಗಾಳ್ವ. ೨೫). [<ಪಂಚಕಲ್ಯಾಣ?]

ಪಂಚಗಾಱ (ನಾ). ಪಂಚಕಾರುಕರಲ್ಲಿ ಒಬ್ಬ : 'ಪಂಚಗಾರ್ತಿ' ಪರಾ. ☞ ಇದು 'ಪಂಚಕಾರುಕ' ಶಬ್ದಕ್ಕೆ ಸಂಬಂಧಿಸಿರಬಹುದೆ ? [ಪಂಚ$_2$+–ಕಾಱ]

ಪಂಚಗುಂಡಿಗೆ (ನಾ). (ಆಲಂ) ಅತಿದಿಟ್ಟತನ; ಬಹಳ ಧೈರ್ಯ : ಪಂಚಬಾಣನ ಕುಮಾರಕನಾದ ಕಾರಣ ಪಂಚಸಾಯಕವ ತೋಱಿಸಿದೆ ಪಂಚಗುಂಡಿಗೆಯಿಂದ ಕಾದುಕೋ ಎನುತಲಿ ಪಂಚಸಾಯಕದೊಳಿಕ್ಕಿದನು (ಪೋಹಕ. ೩೪–೧೫). 'ಎಂಟೆರ್ದೆ' ಪರಾ. [ಪಂಚ$_2$+ಗುಂಡಿಗೆ$_1$]

ಪಂಚಗುಪ್ತ (ನಾ). ೧. ನಾಲ್ಕು ಕಾಲುಗಳು ಮತ್ತು ತಲೆಯನ್ನು ಗುಪ್ತವಾಗಿರಿಸಿಕೊಳ್ಳ ಬಲ್ಲ ಪ್ರಾಣಿ ; ಆಮೆ. ೨. ಚಾರ್ವಾಕರ ಭೌತವಾದದ ಸಿದ್ಧಾಂತ ; ಚಾರ್ವಾಕಮತ. [ಪಂಚ$_2$ + ಗುಪ್ತ]

ಪಂಚಗುರು (ನಾ). [ಜೈನ] ಅರ್ಹಂತ, ಆಚಾರ್ಯ, ಉಪಾಧ್ಯಾಯ, ಸರ್ವಸಾಧು ಮತ್ತು ಸಿದ್ಧ ಎಂಬ ಐವರು ಗುರುಗಳು; ಪಂಚಪರಮೇಷ್ಠಿಗಳು : ಆಗಳಾ ಸ್ವಯಂಬುದ್ಧಂ ನಿರ್ಯಾಪಕಾಚಾರ್ಯನಾಗಿ ಪಂಚಗುರುಸಮಕ್ಷದೊಳ್ . . . ಚತುರ್ವಿಧಾಹಾರಶರೀರ ಪ್ರತ್ಯಾಖ್ಯಾನಮಂ ಕೊಟ್ಟು (ಆದಿಪು. ೨–೫೧ ಪ); ಈ ಪಂಚಗುರು ನಾಮಪದದುಚ್ಚರಣೆಯಿನಾ ಪೊತ್ತು ನೆನೆವ ಮನುಜರ ಅಪತ್ತು ಸಂಸಾರ ಭ್ರಮಣರೂಪಮಪ್ಪ ಪಾಪ ಕೆಟ್ಟು ಮುಕ್ತಿಯಹುದು(ದ್ವಾದಶಾ.೧–೬); ಭಕ್ತಿಯಲಿ ಶ್ರೀ ಪಂಚಗುರುಗಳವ್ಯಕ್ತದಿಂದಲಿ ಭಜಿಸಿ (ಬಜ್ಜಪು. ೨–೮).

[ಪಂಚ$_2$ + ಗುರು$_2$]

ಪಂಚಗುಲ್ಮ (ನಾ). ಒಂದು ಬಗೆಯ ಗುಲ್ಮರೋಗ ; ಜಠರವು ವಿಸ್ತಾರವಾಗುವ ರೋಗ : ಶಂಖಭಸ್ಮ :—ಹುಣಸೆ ಸುಟ್ಟ ಬೂದಿಯೊಳಗೆ . . . ಗಂಧಕ, ವತ್ಸನಾಭಿ ಇವೆಲ್ಲವಂ ನಿಂಬೇಹುಳಿಯಲ್ಲಿ ಮರ್ದಿಸಿ . . . ಒಂದು ಗುಳಿಗೆಯಂ ಅಲ್ಲದ ರಸದಲ್ಲಿ ಕೊಳ್ಳಲು ಸರ್ವಶೂಲೆ, ಪಂಚಗುಲ್ಮ . . . ಇವೆಲ್ಲವೂ ಮಾಣುವುವು (ವಿವೈವಿ. ೫೦); ಈ ಲೋಹ ಸಿಂಧೂರದ ಹತ್ತು ತೂಕಕ್ಕೆ ಶುಂಠಿ ಹಿಪ್ಪಲಿ . . . ಆಡಿಕೆಪ್ರಮಾಣ ಗುಳಿಗೆಯನ್ನು ಮಾಡಿ ನಿತ್ಯವೂ ಸೇವಿಸೆ . . . ಪಂಚಗುಲ್ಮ ಶ್ವಾಸ ಕಾಸ . . . ವಾತರೋಗಗಳು ಸಹ ಗುಣವಾಗುವುವು (ಸಕವೈ. ೯೫).

[ಪಂಚ$_3$+ಗುಲ್ಮ]

ಪಂಚಗೌಡ (ನಾ). ೧. ಸಾರಸ್ವತ, ಕಾನ್ಯಕುಬ್ಜ, ಗೌಡ, ಉತ್ಕಲ ಮತ್ತು ಮೈಥಿಲ ಎಂಬ ಐದು ಪ್ರದೇಶಗಳು. ೨. ಆ ಪ್ರದೇಶಗಳಿಂದ ಬಂದುವೆಂದು ನಂಬಲಾದ ಬ್ರಾಹ್ಮಣ ಜಾತಿಗಳು : ಅವರು ಪಂಚಗೌಡಾದಿ ಬ್ರಾಹ್ಮಣರಲ್ಲಿ ಒಂದು ಶಾಖೆಯವರು. ಈ ಪಂಚಗೌಡ ಬ್ರಾಹ್ಮಣರ ಮೊದಲಿಗರು ಸಾರಸ್ವತರು (ತುಳುನಾ.೧೬೦). ೩. ಆ ಪ್ರದೇಶದ ಭಾಷೆಗಳು : ಪಂಚಗೌಡ ಮೊದಲಾದ ಆ ದೇಶಭಾಷೆಗಳು ಸಂಸ್ಕೃತಾಪಭ್ರಂಶವಾಗಿವೆ (ಹೊಸಗ. ೧೦೦). [ಪಂಚ$_2$+ಗೌಡ$_2$]

ಪಂಚಗೌಳ (ನಾ). = ಪಂಚಗೌಡ ೧ : ಧಾಳಿ ಹರಿದುದು ಪಂಚಗೌಳ ವರಾಳ ಮೊದ್ಲಿಯರಾಂಧ್ರ ಜಾಳಾಂದ್ರಾಳಿಗಳನಪ್ಪಳಿಸಿ ಹೂಡಿಸಿದನು ಮಹಾಧನವ (ಕುಮ್ಯಾಸ. ೪–೧೧). [ಪಂಚ$_2$+ಗೌಳ$_1$]

ಪಂಚಘಂಟೆ (ನಾ). ಆನೆಗೆ ತೊಡಿಸುವ ದೊಡ್ಡ ಗಂಟೆಗಳಿಂದ ಕೂಡಿದ ಒಂದು ಬಗೆಯ ಅಲಂಕಾರ : ಹೊನ್ನ ಮಿಳಿ ಸಹಿತ ಕೆತ್ತಿಸಿದ ಬಿಳ್ಳೆಲದಲಂದಱುವತ್ತು ಸಾವಿರ ಪಂಚಘಂಟೆಯ ಮತ್ತಗಜ ಶೃಂಗರಿಸಿತು (ಸಂಭವ. ೨೦–೯೨); ತಳಸಂಕಲೆ ಪಂಚಘಂಟೆ ತೊಡರು ಬೆನ್ನ ಮಿಳಿ ಕೈಪಟ್ಟಿಯವೆಸೆಯೆ ತಳಾವಡಾವೆಗಳ ಸೂಕಿದರಾರ್ದು ಹೋದರು ಕಲಿ ರಾಮನಾಥನ ಮೇಲೆ (ಕುರಾಸಾಂ. ೧೬–೪೭). [ಪಂಚ$_3$+ಘಂಟೆ]

ಪಂಚಚಕ್ರ (ನಾ). [ಯೋಗ] ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ ಮತ್ತು ವಿಶುದ್ಧ ಎಂಬ, ಪಂಚಭೂತಗಳಿಗೆ ಸಂಬಂಧಿಸಿದಂತೆ ಬರುವ ಐದು ಬಗೆಯ ಚಕ್ರಗಳು : ಇವರು ನಿನ್ನೊಳಗಿಪ್ಪರಮ್ಮ ಪಂಚಭೂತಂಗಳಿಗೊಡೆಯರಮ್ಮ ಪಂಚಚಕ್ರಗಳಿಗಧಿಕಾರಿಗಳಮ್ಮ (ಶಿಗೀ. ೧೬೬–೮೦೨ ಪ).

[ಪಂಚ$_2$ + ಚಕ್ರ$_1$]

ಪಂಚಚಾಮರ (ನಾ).[ಛಂದ]ವರ್ಣಛಂದಸ್ಸಿನಲ್ಲಿ ಹದಿನಾರನೆಯದಾದ 'ಅಷ್ಟಿ'ಗೆ ಸೇರಿದ ಒಂದು ವೃತ್ತ ; ಜ ರ ಜ ರ ಜ ಗಣಗಳು, ಗುರು ಹೀಗೆ ನಾಲ್ಕು ಪಾದಗಳಲ್ಲೂ ಬರುವ ವೃತ್ತ:

ಪಂಚಚಾಮರಂ—ಜರಜರಜಗಂ (ಭಂಡೋಂಬ. ೨-೧೬೬ ಅಧಿಕ); ಜರಂ ಜರಂಜಗಂ ಬರಲ್ ನೆಗಟ್ಟು ಪಂಚಚಾಮರಂ (ಕೃಷ್ಣದೇ. ೮೪). [ಸಂ.]

ಪಂಚಚಾರಿತ್ರ (ನಾ). [ಜೈನ] ಸಂಸಾರಕಾರಣಗಳನ್ನು ದೂರೀಕರಿಸಿ ಸಮ್ಯಗ್‌ಜ್ಞಾನವನ್ನು ಪಡೆಯಲು ಸಾಧಕವಾದ ಸಾಮಾಯಿಕ, ಛೇದೋಪಸ್ಥಾಪನೆ, ಪರಿಹಾರ ವಿಶುದ್ಧಿ, ಸೂಕ್ಷ್ಮ ಸಾಂಪರಾಯ ಮತ್ತು ಯಥಾಖ್ಯಾತಚಾರಿತ್ರ ಎಂಬ ಐದು ನಡವಳಿಕೆಗಳು : ಜೈನಮತದಲ್ಲಿ ತ್ರಿಗುಪ್ತಿಗಳು, ಪಂಚಸಮಿತಿಗಳು . . . ಪಂಚಚಾರಿತ್ರಗಳು, ದ್ವಾದಶತಪಗಳು ಇವುಗಳಿಂದ ಸಂವರವು ಸಾಧಿಸಲ್ಪಡುವುದು (ಜೈನಧ. ೩). [ಪಂಚ$_2$ + ಚಾರಿತ್ರ]

ಪಂಚಛಲ್ಲಿ (ನಾ). ಐದು ಬಗೆಯ ಮರಗಳ ತೊಗಟೆ,—ಸಿಪ್ಪೆ : ಸರ್ವೌಷಧಿ ಗೋರೋಚನ ಸಿದ್ಧಾರ್ಥ ಪಂಚಪಲ್ಲವ ಪಂಚಛಲ್ಲಿ ಪಂಚಗವ್ಯ ವೇಲಾದಿ ಚಂದನಾದಿ ಮರಗಳ ದ್ರವ್ಯಂಗಳನಿಕಿ (ಎಕ. VII, ತಿಕಾರಿ. ೧೮೫-೩೫ ; 1158). [ಪಂಚ$_2$ + ಛಲ್ಲಿ$_2$]

ಪಂಚಜಡೆ (ನಾ). ಮಕ್ಕಳಿಗೆ ಅಲಂಕಾರಕ್ಕಾಗಿ ಹಾಕುವ ಒಂದು ಬಗೆಯ ಜಡೆ (?) : ತೊಡರ್ದಮುರ್ದ ಬಾಳವಣ್ಣದ ತುಡುಗೆ ಪಳಂಚಲೆವ ಪಂಚಜಡೆ ನೊಸಲೊಳೊಡಂಬಡುವರಳೆಲೆಯಿಪಜಾಂ ಚೆಲ್ವಿದಿರ್ದುದು ಬಾಳಕೇಳಿ ಧರ್ಮಾತ್ಮಜನಾ (ಸಂಪಭಾ.೨-೪). [ಪಂಚ$_2$+ಜಡೆ$_1$]

ಪಂಚಜನ (ನಾ). ೧. ದೇವ, ಮನುಷ್ಯ, ಗಂಧರ್ವ, ನಾಗ ಮತ್ತು ಪಿತೃದೇವತೆಗಳೆಂಬ ಐದು ವರ್ಗದ ಜೀವಿಗಳು. ೨. ಮನುಷ್ಯ ; ಮಾನವ : "ಮನುಷ್ಯಃ . . . ಪಂಚಜನಃ, ನಾ, ಪುರುಷಃ, ಪೂರುಷಃ, ವಿಟ್—ಈ ೧೨ ಮಾನಸರ್" (ಹಲಾಯು. ೫೫-೧೭೬). ೩. ಕೃಷ್ಣನಿಂದ ಹತನಾದ, ಪಾಂಚಜನ್ಯವೆಂಬ ಶಂಖವನ್ನು ಉದರದಲ್ಲಿ ಹೊಂದಿದ್ದ ಒಬ್ಬ ರಾಕ್ಷಸ : ಸಾಂದೀಪನಿತನಯನ ನೆನ್ನೊಳಿರ್ಪ ಪಂಚಜನನೆಂಬ ನಕ್ರಂಚರಂ ನುಂಗಿದಂ (ಜಗವಿ. ೬-೧೮ ಸ). [ಸಂ.]

ಪಂಚಜನಭಂಜನ (ನಾ). ಪಂಚಜನನೆಂಬ ರಾಕ್ಷಸನನ್ನು ಸಂಹರಿಸಿದವನು ; ಕೃಷ್ಣ : ಪಂಚಜನಭಂಜನ ವಿರಿಂಚಿಮುಖನಿರ್ಜರಸಮಂಚಿತ ಪದಾಂಬುಜ . . . ಪೂರೆ ಪಂಚಮುಖ ಮಂತ್ರರಸನಾಂಚಲವೃಷೇಂದ್ರಾ (ಪೃಹವಿ. ೫-೧೦೧). [ಪಂಚಜನ + ಭಂಜನ]

ಪಂಚಜನೀನ (ನಾ). ೧. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮತ್ತು ರಥಕಾರ ಕುಲಗಳಿಗೆ ಭಕ್ತಿಯಿಂದ ನಡೆದುಕೊಳ್ಳುವವನು. ೨. ಗಾಯಕ, ವಾದಕ, ನರ್ತಕ, ವೇಶ್ಯೆ ಮತ್ತು ವಿದೂಷಕ—ಈ ಐದುಜನರೊಡನೆ ವ್ಯವಹರಿಸುವವನು ; ನಟ : "ಆಡಿಗನಂ ಪಂಚಜನೀನನೆಂಬುದು" (ಹಲಾಯು. ೬೦-೨೧೩). [ಸಂ.]

ಪಂಚಜ್ಞಾನ (ನಾ). ೧. ಐದು ಬಗೆಯ ಜ್ಞಾನ : ಜ್ಞಾನ ವಿಜ್ಞಾನ ಸುಜ್ಞಾನ ಮಹಾಜ್ಞಾನ ಅಪರಜ್ಞಾನ ಇಂತೀ ಪಂಚಜ್ಞಾನವ ದಹ್ಯಮಾಡಿ ಬ್ರಹ್ಮಲಿಖಿತವ ತೊಡೆವಂತೆ ಧರಿಸುವದೆ ತ್ರಿಪುಂಡ್ರ (ಮೋಕಿಮಾ. ೧೫೪-೫೫೧). ೨. ಐದು ಬಗೆಯ ಜ್ಞಾನವುಳ್ಳವನು; ಬುದ್ಧ. ೩. [ವೀಶೈ] ಶಿವಜ್ಞಾನ, ಸ್ವಯಜ್ಞಾನ, ಸಮ್ಯಗ್‌ಜ್ಞಾನ, ಅವಧಿಜ್ಞಾನ ಮತ್ತು ಪರಜ್ಞಾನ ಎಂಬ ಐದು ಬಗೆಯ ಜ್ಞಾನಗಳು. ೪. ಪಾಶುಪತಜ್ಞಾನವನ್ನು ಉಳ್ಳವನು,—ತಿಳಿದವನು. ೫. [ಜೈನ] ಮತಿ, ಶ್ರುತ, ಅವಧಿ, ಮನಃಪರ್ಯಯ ಮತ್ತು ಕೇವಲ ಎಂಬ ಐದು ಬಗೆಯ ಜ್ಞಾನಗಳು : ಅಲ್ಲಿ ಪಂಚಜ್ಞಾನೈಕತ್ವಂ ಉಪಾದೇಯಮೆಂಬುದಭಿಪ್ರಾಯಂ (ತತ್ತ್ವಪ್ರ. ೫೩). [ಪಂಚ$_2$ + ಜ್ಞಾನ]

ಪಂಚಜ್ಞಾನಾವರಣ (ನಾ). [ಜೈನ] ಮತಿಜ್ಞಾನಾವರಣ, ಶ್ರುತಜ್ಞಾನಾವರಣ, ಅವಧಿಜ್ಞಾನಾವರಣ, ಮನಃಪರ್ಯಾಯ ಜ್ಞಾನಾವರಣ ಮತ್ತು ಕೇವಲ ಜ್ಞಾನಾವರಣಗಳೆಂಬ ಐದು ಬಗೆಯ ಜ್ಞಾನಾವರಣಗಳು : ಪಂಚಜ್ಞಾನಾವರಣಂಗಳುಂ ದ್ವಿವೇದನೀಯಂಗಳುಂ ಅಷ್ಟಾವಿಂಶತಿಮೋಹನೀಯಂಗಳುಂ. . . ಸರ್ವಜ್ಞರಿಂದಂ ನಿರೂಪಿಸಲ್ಪಟ್ಟವು (ಗೂಮ್ಮಸಾ. ೬-೮). [ಪಂಚ$_2$ + ಜ್ಞಾನಾವರಣ]

ಪಂಚತಂತ್ರ (ನಾ). ೧. [ರಾಜನೀ] ಮಿತ್ರಲಾಭ, ಮಿತ್ರಭೇದ, ಸಂಧಿವಿಗ್ರಹ, ಲಬ್ಧನಾಶ ಮತ್ತು ಅಸಂಪ್ರೇಕ್ಷ್ಯಕಾರಿತ್ವಗಳೆಂಬ ರಾಜನೀತಿಯ ಐದು ಉಪಾಯಗಳು : ಅತೀಂದ್ರಿಯಗುಣಮುಮನಿಸುವುಂ ಗೆಲಲಾರ್ಕುಂ ಮನಮುಂ ಗೆಲ್ವೊಡೆ ನಾಯಕನನೆ ಗೆಲ್ವೊಡೆ ಪಂಚತಂತ್ರಮುಂ ಗೆಲಲರಿದೆ (ಅಜಿಪು. ೨-೮೮). ೨. ರಾಜನೀತಿಕೋಶವೆನಿಸಿದ, ದುರ್ಗಸಿಂಹನ ಒಂದು ಗ್ರಂಥದ ಹೆಸರು : ಪೊಸತಾಗಿರೆ ವಿರಚಿಸುವೆಂ ವಸುಮತಿಯೊಳ್ ಪಂಚತಂತ್ರಮುಂ ಕನ್ನಡದಿಂ (ಪಂಚತಂ. ೧೩-೮). [ಪಂಚ$_2$ + ತಂತ್ರ]

ಪಂಚತತ್ತ್ವ (ನಾ). ೧. = ಪಂಚಭೂತ. ೨. [ಶೈವ] ಶುದ್ಧ ಸೃಷ್ಟಿಯಲ್ಲಿರುವ ಐದು ಬಗೆಯ ಪದಾರ್ಥಗಳು : ಸೃಷ್ಟಿ ಶುದ್ಧ, ಅಶುದ್ಧವೆಂದು ಎರಡು ಪ್ರಕಾರ. ಶುದ್ಧಸೃಷ್ಟಿಯಲ್ಲಿ ಬಿಂದು ಮಹಾಮಾಯೆಯೆಂಬ ಶಿವತತ್ತ್ವ, ಶಕ್ತಿತತ್ತ್ವ, ಸದಾಶಿವತತ್ತ್ವ, ಈಶ್ವರತತ್ತ್ವ, ವಿದ್ಯಾತತ್ತ್ವಗಳಾಗಿ ಪರಿಣಮಿಸಿ ಪಂಚತತ್ತ್ವಗಳಾಗುವುವು (ಛಂದಸಾ. ೨೯೬). [ಪಂಚ$_2$ + ತತ್ತ್ವ]

ಪಂಚತತ್ತ್ವ (ನಾ). = ಪಂಚಭೂತ : ಪಂಚತತ್ತ್ವದಲ್ಲಿದ್ದು ಪರತತ್ತ್ವನಱಯಬೇಕು (ಅಱಪೂಾ. ೧೪೩-೧೪೬); ಪಂಚತತ್ತ್ವಂಗಳ ಮೇಲಿಪ್ಪ ಆಚಾರಲಿಂಗದ ನಿಷ್ಠೆಯ ಬಲದಿಂದ . . . ತ್ಯಾಗಾಂಗಿಯಾದೆ (ಪಸವ. ೩೮-೩೨). [ಪಂಚ$_2$ + ತತ್ತ್ವ$_1$]

ಪಂಚತನ್ಮಾತ್ರ (ನಾ). [ತತ್ತ್ವಶಾ] (ಅಹಂಕಾರವೆಂಬ ತತ್ತ್ವದಿಂದ ಹುಟ್ಟುವ ಹಾಗೂ) ಪಂಚಮಹಾಭೂತಗಳ ಉತ್ಪತ್ತಿಗೆ ಕಾರಣವಾದ ಶಬ್ದ, ರಸ, ಸ್ಪರ್ಶ, ರೂಪ ಮತ್ತು ಗಂಧಗಳೆಂಬ ಐದು ಪದಾರ್ಥಗಳು : ಪುರುಷನ . . . ಸನ್ನಿಧಾನದಿಂದ ಪ್ರಕೃತಿಯು ಮಹತ್, ಅಹಂಕಾರ, ಏಕಾದಶೇಂದ್ರಿಯ, ಪಂಚತನ್ಮಾತ್ರ ಮತ್ತು ಪಂಚಭೂತಂಗಳ ರೂಪವಾಗಿ ಪರಿಣಾಮವನ್ನು ಹೊಂದುವುದು (ಭಾತತ್ತ್ವ. ೩೦೭); ಈ ಅಹಂಕಾರತತ್ತ್ವದಿಂದ ಹುಟ್ಟುವ ತತ್ತ್ವಗಳು . . . ಪಂಚತನ್ಮಾತ್ರಗಳು ಮತ್ತು ಪಂಚಭೂತಗಳು (ಭಾರದ. ೨೧೪). [ಪಂಚ$_2$ + ತನ್ಮಾತ್ರ]

ಪಂಚತನ್ಮಾತ್ರೆ (ನಾ). = ಪಂಚತನ್ಮಾತ್ರ : ಶಬ್ದ ಸ್ಪರುಶ ರೂಪ ರಸ ಗಂಧವು ಪ್ರೇಮದಿಂದುದಿಸಿದವು ಪಂಚತನ್ಮಾತ್ರೆಗಳು (ಲಿಚಿಂ. ೨೬-೫); ಸತ್ಯಸಂಕಲ್ಪದಿಂ ಪ್ರಕೃತಿಯೊಳ್ ಪೊಕ್ಕು ಮಹದಹಂಕಾರಂಗಳಂ ಪಂಚತನ್ಮಾತ್ರೆಗಳಂ ಪಂಚಮಹಾಭೂತಂಗಳನುಂಟು ಮಾಡಿ (ಚಿಕಬ. ೯). [ಪಂಚ$_2$ + ತನ್ಮಾತ್ರೆ]

ಪಂಚತರು (ನಾ). ದೇವಲೋಕದ ಮಂದಾರ, ಪಾರಿಜಾತ, ಸಂತಾನ, ಕಲ್ಪವೃಕ್ಷ ಮತ್ತು ಹರಿಚಂದನ ಎಂಬ ಐದು ಮರಗಳು. [ಪಂಚ$_2$ + ತರು$_2$]

ಪಂಚತಾರೆ (ನಾ). = ಪಂಚಕಳ : ಪಂಚತಾರೆಯು ಮೃಗದ ಲಾಂಛನವು ಸಹ ತಾರೆ ಕಂಚಿಯಿಂದತ್ತ ಮಳೆಯಿಲ್ಲ ಭತ್ತವನು ಸಂಚಯಿಪುದೊಳಿತು (ಸರ್ವಜ್ಞ. ೧೫೯೪). [ಪಂಚ$_2$ + ತಾರೆ$_2$]

ಪಂಚತಾವಡ (ನಾ). ಐದು ಎಳೆಗಳುಳ್ಳ ಒಂದು ಬಗೆಯ ಹಾರ ; ಹೇಗದಿಂದೆನ್ನ ಮುತ್ತಿನ ಪಂಚತಾವಡವನೀಗಳಾತಂಗೆ ಭಸಿತವನಿತ್ತು

ಕೊಡುವುದೆನಲು (ಸಿದ್ಧೇಪು. ೩-೮); ಬಡಗದೇಶದ ಮಾಬಳೇಶಲಿಂಗದ ಶಿರದೊಳಡಿಯಿಟ್ಟು ಜಲವ ಬರಿಸಿದನು ದ್ರಾವಿಡದೊಳಣ್ಣಾಮಲೇಶ್ವರ ಲಿಂಗದಿ ಪಡೆದು ಮುತ್ತಿನ ಪಂಚತಾವಡವ (ಗುರುಚಾ. ೧೩-೮೮).

[ಪಂಚ$_2$ + ತಾವಡ]

ಪಂಚತಿಕ್ತ(ನಾ). ಬೇವು, ನೆಲ್ಲಿ, ಆಡುಸೋಗೆ, ಪಟೋಲ, ಹೆಗ್ಗುಳ್ಳ ಎಂಬ ಐದು ಕಹಿ ಪದಾರ್ಥಗಳು : "ಪಂಚತಿಕ್ತ–ನಿಂಬಾ; ೨ ಅಮೃತ; ೩ ವೃಷ; ೪ ಪಟೋಲ; ೫ ನಿದಿಗ್ಧಕ" (ನಾನಾಶ. ೨೮೮).

[ಪಂಚ$_2$ + ತಿಕ್ತ]

ಪಂಚತೀರ್ಥ (ನಾ). ೧. ಕಾಶಿಯಲ್ಲಿರುವ ಜ್ಞಾನವಾಪಿ, ನಂದಿಕೇಶ, ತಾರಕೇಶ, ಮಹಾಕಾಲೇಶ್ವರ, ದಂಡಪಾಣಿ ಎಂಬ ಐದು ಪವಿತ್ರ ಸ್ಥಳಗಳು. ೨. ಗಂಗಾದ್ವಾರ, ಕುಶಾವರ್ತ, ಬಿಲ್ವಕ, ನೀಲಪರ್ವತ ಮತ್ತು ಕನಖಲ ಎಂಬ ಐದು ಪುಣ್ಯಕ್ಷೇತ್ರಗಳು. ℙ ಆಯಾ ದೇಶದ ಪರಂಪರೆಯ ಮೇರೆಗೆ ಈ ಹೆಸರುಗಳು ಬದಲಾಗುತ್ತವೆ. ೩. ದೇವ, ಪಿತೃ, ಋಷಿ, ಭೂತ ಮತ್ತು ಮನುಷ್ಯನ ತೃಪ್ತಿಗಾಗಿ ಬೇರೆ ಬೇರೆ ವಿಧಾನದಿಂದ ಕೊಡುವ ತರ್ಪಣ : ಈ ಪಂಚತೀರ್ಥಗಳ ತಿಳಿದು ಅಪರದ್ವಾರಾ ಮಾಡಿದ ಕರ್ಮ ಅಕ್ಷಯವಾಗುತ್ತದೆ (ಅಧ್ಯಾಮಾ. ೨೫). [ಪಂಚ$_2$ + ತೀರ್ಥ]

ಪಂಚತೆ (ನಾ). ೧. ಐದರ ಮೊತ್ತ. ೨. ಐದು ಮಡಿ; ಐದು ಪಟ್ಟು. ೩. = ಪಂಚಭೂತ. ೪. ಸಾವು; ಮರಣ : "ಪಂಚತಾ, ಕಾಲಧರ್ಮಃ . . . ಮರಣಂ, ನಿಧನಃ—೧೦ ಸಾಯುವದಕ್ಕೆ ಹೆಸರುಗಳು, ಸಾವು, ಮರಣ" (ಸಿದ್ಧಾಂತಿ. ೨೭೨); ಅಂತದು ಕಡುಪಿಂ ಪಂಚತೆಯಾಗದೆ ಮಾಣ್ಗುಮೆ ವಶಗತಂಗೆ ಪಂಚೇಂದ್ರಿಯದಿಂ (ಅಜಿಪು. ೨-೮೭); ಸಹಜಂ ಶಾರೀರಜಂ ಮಾನಸೋದ್ಭವಾಗಂತುಕಮುಗ್ರರಾಕ್ಷಸಕೃತಂ ತಾನೆಂಬ ದುಃಖಾಗ್ನಿ ಪಂಚವಿಧಂ ಪಂಚತೆ ಮುಟ್ಟ ಪಂಚುಪಱಿ ಮಾಟ್ಕುಂ ನಾರಕಾನೀಕಮಂ (ಅನಂಪು. ೯-೪೧); ಉತ್ತುಂಗ ಹೋಳ ಕ್ಷಿತೀಶ್ವರನ ಪಿರಿಯರಸಿ ಪಂಚತೆಯನೆಯ್ದಲ್ಕೆ ಸಂಸ್ಕರಿಸಿ (ಸೌಂದಪು. ೧೫-೫೪). [ಸಂ. ಪಂಚತಾ]

ಪಂಚತ್ವ (ನಾ). ೧. = ಪಂಚತೆ ೧ : ಪಂಚತ್ವಮನಾನದೆಯುಂ ಪಂಚತ್ವಮನಾಂತು ಪರಮಪಂಚಾಕ್ಷರಮಂ ಪಂಚಮೆನೆ ಜಪಿಪ ತಲೆಗಳ್ ಪಂಚಮುಖಧ್ಯಾನಿ ಚೋಳನೃಪನೀಕ್ಷಿಸಿದಂ (ರಾಜಶೇ. ೧೪-೭೭). ೨. = ಪಂಚತೆ ೪ : "ನಿಧನಂ, ನಾಶಃ, ಮೃತ್ಯುಃ, ಮರಣಂ; ಪಂಚತ್ವಂ . . . ದೀರ್ಘನಿದ್ರಾ–ಈ ೧೨ ಸಾವು" (ಹಲಾಯು. ೧೦೩-೬); ಖಳಂ ಪಂಚತ್ವಮನೈದಿ ಮರುಚ್ಚಂಚಲಮನನೀಗಳಲ್ತೆ ವಾನರನಾದಂ (ಅದಿಪು. ೫-೧೮); ಅಂತು ಪಂಚಾಸ್ಯನಂ ಪಂಚತ್ವಮೆಯ್ದಿಸಿ . . . ಬರುತ್ತಂ (ಪರ್ಧಮಾ. ೩-೪೫ ಪ); ಪಂಚಮಹಾಪಾತಕಫಲದಿಂ ಪಂಚತ್ವಮಂ ಪೊರ್ದಿದ ಮನುಷ್ಯರಂ ಕಂಡು (ಸುಕುಮಾ. ೮-೧ ಪ); ಇವಱನೈದಱಿಂ ರಕ್ಕಸಂ ಪಂಚತ್ವಮನೈದಿದಂ (ರಾಮಾಶ್ವ. ೧೧೪-೭); ಪೊರ್ದಿದುದು ಪಂಚತ್ವಮಂ, ಅಹಂಕೃತಿಲಯದಿ ಪಂಚೇಂದ್ರಿಯಪ್ರಪಂಚಂ (ಶ್ರೀರಾಮಾ. ೬೯೬-೫೦೭). ೧, ೨ : ದುರ್ಯೋಧನಾನುಜ ದುಶ್ಶಾಸನ ಭೀಮ ಭೀಮಗದೆಯಿಂ ಪಂಚತ್ವಮಂ ಪೊರ್ದಿದ್ಯೆ (ಗದಾಯು. ೫-೫). [ಸಂ.]

ಪಂಚದಶ(ಗು). ೧. ಹದಿನೈದನೆಯ : ಇಂದ್ರಪ್ರಸ್ಥಪ್ರಯಾಣವರ್ಣನಂ ಪಂಚದಶಾಶ್ವಾಸಂ (ಜಗವಿ. ೧೫-೮೦ ಪ); ಶ್ರೀಮದ್ ಬಸವರಾಜವಿಜಯ ಮಹಾಪುರಾಣದೊಳ್ ಹಲಾಯುಧವೃತ್ತಾಂತವರ್ಣನಂ ಪಂಚದಶಾಶ್ವಾಸಂ ಸಮಾಪ್ತಂ (ವೃಷವಿ. ೧೫-೪೫ ಪ). (ನಾ). ೨. ಒಂದು ಸಂಖ್ಯೆ; ಹದಿನೈದು : "ಆ ಘಟಿಗೆ ಷಷ್ಟಿಸಂಖ್ಯೆಗೆಯ ಹೋರಾತ್ರಮಕ್ಕವು ಪಂಚದಶಮಾಗೆ ಪಕ್ಷಮಕ್ಕುಂ" (ಮಂಗರಾ. ೧೯-೫). [ಪಂಚ$_2$ + ದಶ]

ಪಂಚದಶಪ್ರಮಾದ (ನಾ). [ಜೈನ]ಹದಿನೈದು ಪ್ರಮಾದಗಳು; ℙ ಧರ್ಮಕ್ರಿಯೆಯಲ್ಲಿ ಅನಾದರವನ್ನು ಹುಟ್ಟಿಸುವ ಕ್ರೋಧ, ಮಾನ, ಮಾಯೆ ಮತ್ತು ಲೋಭ ಎಂಬ ನಾಲ್ಕು ಕಷಾಯಗಳು; ಸ್ತ್ರೀಕಥೆ, ಭೋಜನಕಥೆ, ರಾಷ್ಟ್ರಕಥೆ ಮತ್ತು ರಾಜಕಥೆ ಎಂಬ ನಾಲ್ಕು ವಿಕಥೆಗಳು; ಸ್ಪರ್ಶೇಂದ್ರಿಯ, ರಸನೇಂದ್ರಿಯ, ಘ್ರಾಣೇಂದ್ರಿಯ, ಚಕ್ಷುರಿಂದ್ರಿಯ, ಮತ್ತು ಕರ್ಣೇಂದ್ರಿಯ ಎಂಬ ಐದು ಇಂದ್ರಿಯಗಳು; ನಿದ್ರೆ ಮತ್ತು ಸ್ನೇಹ ಸೇರಿ ಆಗುವ ಹದಿನೈದು ಪ್ರಮಾದಗಳು : ಅಷ್ಟಾದಶಸಹಸ್ರಶೀಲರತ್ನಾಕರನುಮಾಗಿ ಪಂಚದಶಪ್ರಮಾದಂಗಳಂ ಬಂಚಿಸಿ (ಅದಿಪು. ೬-೨೯ ಪ); ಪಂಚದಶಪ್ರಮಾದವರ್ಜಿತನುಮಾಗಿ ದರುಶನವಿಶುದ್ಧಿಪ್ರಭೃತಿ ಷೋಡಶಭಾವನೆಗಂ ತೀರ್ಥಕರಪುಣ್ಯಕಾರಣಂಗಳಂ ಭಾವಿಸುತ್ತಂ (ಪರ್ಧಮಾ. ೧೦-೫೬ ಪ).

[ಪಂಚದಶ + ಪ್ರಮಾದ]

ಪಂಚದಶಿ (ನಾ). ಪ್ರತಿಪಕ್ಷದ ಹದಿನೈದನೆಯ ದಿನ; ಹುಣ್ಣಿಮೆ ಅಥವಾ ಅಮಾವಾಸ್ಯೆ : "ಪಕ್ಷಾಂತೌ, ಪಂಚದಶೌ—ಈ ೨ ಅಮಾವಾಸ್ಯೆ, ಹುಣ್ಣಿಮೆಗಳ ಹೆಸರುಗಳು" (ಸಿದ್ಧಾಂತಿ. ೩೬).

[ಸಂ. ಪಂಚದಶೀ]

ಪಂಚದಶೀತೋಪು (ನಾ) ಒಂದು ಬಗೆಯ ತೋಪು,—ಫಿರಂಗಿ : ಹಣ ಫವುಜು ಸಹಾ ಜಾಸ್ತಿ ಮಾಡುತ್ತಾ ತಿರಚನಾಪಲ್ಲಿಯಿಂದಾ ಕಾರೇಗಾರರ ಕರಸಿ ಹೊಸ್ತಾಗಿ ಪಂಚದಶೀ ತೋಪುಗಳನ್ನು ಮಾಡಿಸುತ್ತಾಯಿದ್ದರು (ಹೈದರ. ೩೫). [? + ತೋಪು$_3$]

ಪಂಚದಾರ 'ಪಂಚಧಾರೆ,' ನೋ.

ಪಂಚದೀಪಾರತಿ (ನಾ). = ಪಂಚಾರತಿ : ಪರಮತೇಜೋಮಯದ ಪಂಚದೀಪಾರತಿಯ ಹರುಷದಿಂ ಬೆಳಗಿ (ನವಮೋ. ೨೪-೮೭).

[ಪಂಚ$_2$ + ದೀಪಾರತಿ]

ಪಂಚದೀವಟಿಗೆ (ನಾ). ಗೌರವಾರ್ಥವಾಗಿ ಮೆರವಣಿಗೆ ಮೊದಲಾದ ಸಂದರ್ಭಗಳಲ್ಲಿ ಹಿಡಿಯುವ ಐದು ದೀವಟಿಗೆಗಳು : ಅನು[ಪ]ಮತೇಜೋನಿಧಿಯೆಂದೆನಿಸಿದ ವರಪಂಚದೀವಟಿಗೆ ನಿನಗಿರಲೆಂದನಿತರೊಳ್ ತರಿಸಿ ಕೊಟ್ಟರ್ ಘನಮಹಿಮಾಸ್ಪದಗೆ ಘಂಟಿನೃಪವರಗಾಗಳ್ (ಬೀಳವಂ. ೧-೧೦೪). [ಪಂಚ$_2$ + ದೀವಟಿಗೆ]

ಪಂಚದೇವತೆ (ನಾ). ಶಿವ, ವಿಷ್ಣು, ಸ್ಕಂದ, ಗಣಪತಿ ಮತ್ತು ಭಾಸ್ಕರ ಎಂಬ ಐದು ದೇವತೆಗಳು : ಅವರ ಆಳ್ವಿಕೆಯ ಕಾಲದಲ್ಲಿ ಶಿವ, ವಿಷ್ಣು, ಸ್ಕಂದ, ಗಣಪತಿ, ಭಾಸ್ಕರ ಪಂಚದೇವತೆಗಳ ಆರಾಧನೆಯು ಹೆಚ್ಚಿನ ಪ್ರಾಮುಖ್ಯತೆಯನ್ನು ಹೇಗೆ ಪಡೆಯಿತೆಂದೂ ಮೇಲೆ ನಿರೂಪಿಸಿದೆ (ತುಳುನಾ. ೮೮). [ಪಂಚ$_2$ + ದೇವತೆ]

ಪಂಚದ್ರಾವಿಡ (ನಾ). ೧. ಕನ್ನಡ, ತಮಿಳು, ಮಲಯಾಳ, ತುಳು ಮತ್ತು ತೆಲುಗು ಎಂಬ ದ್ರಾವಿಡಭಾಷಾವರ್ಗದ ಐದು ಮುಖ್ಯಭಾಷೆಗಳು : ಕನ್ನಡಭಾಷೆ ಪಂಚದ್ರಾವಿಡವೆಂದು ಪ್ರಖ್ಯಾತವಾಗಿರುವ ಭಾಷೆಗಳಲ್ಲಿ ಒಂದಾಗಿದೆ. ಈ ಭಾಷಾವರ್ಗಕ್ಕೆ ತಮಿಳು, ತೆಲುಗು, ಮಲೆಯಾಳ, ತುಳು ಇವೂ ಸೇರಿವೆ (ಕವಿಚ. I, ಅವತರಣಿಕೆ); ಕೇರಳ ತೌಳವ ಕರ್ಣಾಟಕಾಂಧ್ರಗಳೆಂಬ ನಾಲ್ಕು ಭಾಷೆಗಳಾದವು; ಇವು ದ್ರಮಿಡಾಭಾಸಗಳಾದ್ದರಿಂದಲೇ ಈ ಭಾಷೆಗಳೂ ದ್ರಮಿಡವೂ ಸೇರಿ ಪಂಚದ್ರಾವಿಡವೆಂಬ ಪ್ರಸಿದ್ಧಿಯನ್ನು ಹೊಂದಿದವು (ಹೊಸುಗ. III ಪೀಠಿಕೆ). ೨. ತಮಿಳು, ಕನ್ನಡ, ಗುಜರಾಥಿ, ತೆಲುಗು ಮತ್ತು ಮರಾಠಿ ಎಂಬ ಐದು ದಾಕ್ಷಿಣಾತ್ಯ ಭಾಷೆಗಳು. ೩. ದಕ್ಷಿಣಭಾರತದ ಬ್ರಾಹ್ಮಣರ ಐದು ವರ್ಗಗಳಾದ ದ್ರಾವಿಡ, ಕರ್ಣಾಟ, ಗುರ್ಜರ, ಆಂಧ್ರ ಮತ್ತು ಮಹಾರಾಷ್ಟ್ರ. [ಪಂಚ$_2$ + ದ್ರಾವಿಡ]

ಪಂಚದ್ವಯ (ನಾ). ಐದರ ಎರಡು ; ಎರಡೈದು ; ಹತ್ತು : ಪಂಚದ್ವಯಭುಜದಿಂದೆಸೆದು ಸಂಚರಿಸುತಿಹನಾ ಶಿವನ ತತ್ವವ ಮಿಂಚಿನಿಂದಾವರಿಪುದೊಂದರ್ಬುದವಧಿಕವೆನಿಸಿ (ಗಗತಾ. ೬-೮೬). [ಪಂಚ$_2$+ದ್ವಯ]

ಪಂಚದ್ವಾರ (ನಾ). ೧. ಐದು ಬಾಗಿಲುಗಳು. ೨. (ಆಲಂ)ದೇಹದಲ್ಲಿಯ ಐದು ರಂಧ್ರಗಳು : ಪಂಚದ್ವಾರಂಗಳಿಂ ಬರುವ ಪಂಚಶಬ್ದಾದಿ ವಿಷಯಂಗಳೊಳೊಂದಕ್ಕೊಂದಕ್ಕೆ ಗುಣತ್ರಯಂಗಳಿಂ ಮೂಱು ತೆಱನಾದವು (ಪಂಚೀಕ. ೨೫). [ಪಂಚ$_2$+ದ್ವಾರ]

ಪಂಚಧಾರೆ$_1$, ಪಂಚದಾರ (ನಾ). ಒಂದು ಬಗೆಯ ಸಕ್ಕರೆ : ಬಿಸಿ ನೀರನೆಱೆದು ಕಿವಿಚಿದ ಪುಲ್ಲ ಸೊಜ್ಜಿಗೆಯ ರಸದೊಳಗೆ ಅರೆದಕ್ಕಿಯಂ ಸಮಂಗೂಡಿ ಸೋದಿಸಿಕೊಂಡು ಪಂಚಧಾರೆಯ ಸಕ್ಕರೆಯನಿಕ್ಕಿ (ಸೂಪಶಾ. ೧-೩೬); ಮುದ್ದುನಾಲುಕುಮೂಲೆಯಾದಂತೆ ತನಿಬೆಲ್ಲದುದ್ದುಕ ವರ ಪಂಚಧಾರೆ ಬಿದ್ದಿಹುದಾಲೆಯ ಮನೆಮನೆಗಳ ಮುಂದೆ ಹೆದ್ದೊಱೆ ಮಳಲೊಟ್ಟಲಂತೆ (ಮೋಹತ. ೨-೫೧). **ಪಂಚದಾರ** : "ಶರ್ಕರಾ, ಸಿತಾ—೨ ತವರಾಜನೆಂಬ ಸಕ್ಕರೆ, ರಾಯಿಪುಡೀಸಕ್ಕರೆ, ಅಂಧ್ರದಲ್ಲಿ ಪಂಚದಾರ" (ಸಿದ್ಧಾಂತಿ.೨೮೬). 'ಅಯಿದಾರೆ', 'ಪಂಚಸಾರ' ಪರಾ. [ದೇ.॥ ತಮಿ. ಪಞ್ಚತಾರೈ ; ಮಲ. ಪಞ್ಚತಾರ ; ತೆಲು. ಪಂಚದಾರ]

ಪಂಚಧಾರೆ$_2$ (ನಾ). ಕುದುರೆಯ ಐದು ಬಗೆಯ ನಡಗೆಗಳು ; ೫ ಆಸ್ಕಂದಿತ (ಎಳೆನಡಿಗೆ), ಧೌರಿತಕ (ಬಿರುನಡಿಗೆ), ರೇಚಿತ (ಲಯಕ್ಕೆ ಸರಿಯಾಗಿ ನಡೆಯುವುದು, ಬಿಗುನಡಿಗೆ), ವಲ್ಗಿತ (ಕಾಲನ್ನು ಹಾರಿಸುತ್ತಾ ನಡೆಯುವುದು), ಪ್ಲುತ (ಕುಣಿಯುವಂತೆ ನಡೆಯುವುದು)ಎಂಬುವು : ಅತಿವೇಗವೆಂದೆಂಬ ಪಂಚಧಾರೆಯದೊಂದು ಮತವಱುದೇಱುದನಾಗ (ತ್ರೀಪಾಲ. ೪-೧೧); ಅಂಚಿತದ ಹಲ್ಲಣದ ಗಮಕದಿಂ ಹೊಳಕಿದುವು ಪಂಚಧಾರಾಪ್ತೌಢವಾಜಿಗಳ್ (ಜೆಬಪು. ೨೬-೧೩); ಪರಿಯಿಪ ನೆಟ್ಟ ನಟ್ಟುವಿದಿರೇಱುಪ . . . ಪಂಚಧಾರೆಯೊಳ್ ಪರಿಣತಿದೋರ್ಪ ವಾಹಳಿತನಂ ಬಗೆಗೊಂಡುದು ಮಂತ್ರಿಪುತ್ರನಾ (ರಾಜಶೇ. ೧೩-೮೨). 'ಧಾರಾಪಂಚಕ' ಪರಾ. [ಪಂಚ$_2$+ಧಾರೆ]

ಪಂಚನಖ (ನಾ). ೧. ಐದು ಉಗುರು. ೨. ಐದು ಉಗುರುಳ್ಳ ಪ್ರಾಣಿ ; ಆನೆ, ಹುಲಿ, ಸಿಂಹ, ಆಮೆ, ಮುಳ್ಳುಹಂದಿ, ಮೊಲ ಮೊದಲಾದುವು. [ಪಂಚ$_2$+ನಖ]

ಪಂಚನಖಯೋಗ (ನಾ). [ಕಾಮಶಾ] ನಖಕ್ಷತಗಳಲ್ಲಿ ಒಂದು : ಉಱುಸುವಂದದೆ ರೇಖೆ ಮಿಱುಗುವಂದದೆ ಮೊಲೆಯನುಱೆ ನಾಲ್ಕು ಬೆರಳೊಳುಂಗುಟದೊಳೊತ್ತಿ ತಱತಱಿಸಿ ಸುರತದೊಳ್ ನೆಱೆವಾಗಲೆಳೆಯಲದು ನೆಱೆ ಪಂಚನಖಯೋಗಮೆನಿಪುದು (ಜನವ. ೬-೩೬) ; ಪಂಚನಖಯೋಗ . . . ಉತ್ಪಲವೆಂಬ ಸಪ್ತವಿಧನಖೋಪಕ್ಷತವಿಹಿತರಿಂ (ವಿವೇಕ. ೨೩೦). [ಪಂಚನಖ+ಯೋಗ]

ಪಂಚನಖಾಗ್ರಸಂಯೋಗ (ನಾ). = ಪಂಚನಖಯೋಗ : ತರ್ಜನ್ಯಾದಿ ನಾಲ್ಕುಬೆರಳುಗುರೊಡನೆ ಹೆಬ್ಬೆರಳುಗುರಂ ತಾಟಿಸುವುದು ಪಂಚನಖಾಗ್ರಸಂಯೋಗಮೆಂಬುದು (ಕಾಮಶಾ. ೨೨೬). [ಪಂಚನಖ+ಅಗ್ರ$_1$+ಸಂಯೋಗ]

ಪಂಚನಮಸ್ಕಾರ (ನಾ). ೧. ಎರಡು ಕೈ, ಎರಡು ಮೊಳಕಾಲು, ತಲೆ, ಎದೆ ಮತ್ತು ಕಣ್ಣುಗಳಿಂದ ಮಾಡುವ (ಸಾಷ್ಟಾಂಗ) ನಮಸ್ಕಾರ. ೨. [ಜೈನ] ಪಂಚಪರಮೇಷ್ಠಿಗಳಿಗೆ ಮಾಡುವ ನಮಸ್ಕಾರ ಮತ್ತು ಆಗ ಹೇಳುವ ಐದು ಮಂತ್ರ : ಕಿತ್ತಯ್ಯಾ ನಿಮಗೀಗಳ್ ಪ್ರಾಣಂ ಪೋಗಲ್ ಬಗೆದಪ್ಪುದು ದೇವರಂ ಜಾನಿಸುವುದು ಪಂಚನಮಸ್ಕಾರಮನೋದುತ್ತ ಮುಚ್ಚಾರಿಸುವುದಂ ಕೇಳುತ್ತ ಮಿರಿಮೆಂದು ಕಲ್ಪಿಸಿ ಭಟ್ಟಾರರ್ ಪಂಚನಮಸ್ಕಾರಮಂ ಪಿರಿದು ಬೇಗಂ ಪೇೞೆ (ವಡ್ಡಾರಾ. ೮೩-೧೨) ; ಮುಕುಳೀಕೃತಕರಕಮಳನಾಗಿ ಪಂಚನಮಸ್ಕಾರಮನುಚ್ಚರಿಸುತ್ತಮದೃಶ್ಯನಾಗಿ ಬಂದು (ಜಾವುಂಪು. ೧೬) ; ತರಂಗತಮನೆಂಬ ವಿದ್ಯಾಧರಂ ಕಂಡು ಸಮೀಪಕ್ಕೆ ಬಂದು ಪಂಚನಮಸ್ಕಾರಮಂ ಪೇೞ್ವುದುಮುಪಶಮಚಿತ್ತದಿಂ ಸತ್ತು (ಪಂರಾಮಾ. ೧೬-೩೯ ಪ) ; ಪಂಚನಮಸ್ಕಾರವನ್ನುಳಿದು ಬೇರೆ ಮಂತ್ರವನ್ನು ನೆನೆಯುವವರಲ್ಲ (ಕಸಾಚಿ. ೧೦೧). [ಪಂಚ$_2$+ನಮಸ್ಕಾರ]

ಪಂಚನಮಸ್ಕೃತಿ (ನಾ). = ಪಂಚನಮಸ್ಕಾರ ೨ : ಮುನಿವೃಂದೋಚ್ಚಾರಿತಪಂಚನಮಸ್ಕೃತಿಗಾಂತು ಕಿವಿಯನರ್ಹತ್ಪದಮಂ ನೆನೆಯುತ್ತಂ . . . ಸೇಸೆಗೊಳ್ ಖಚರಪತೀ (ಅದಿಪು. ೨-೫೭) ; ಅಂತು ನಿಬಿಡ ನಿಬದ್ಧ ಪಲ್ಯಂಕಾಸನನಾಗಿ . . . ಮೇಣ್ಮುನಿಜನಂಗಳೋದುವ ಪಂಚನಮಸ್ಕೃತಿಗಳಂ ಕೇಳ್ವುದು (ಪಸಾರ. ೩೬೯); ಸಾವಾತಂಗೆ ಪಂಚನಮಸ್ಕೃತಿಯ ಪೇಳೆ ತ್ರಿದಶಪದವಿಗೆ ಪೋದಂ (ಸಾಳ್ವಭಾ. ೧೬-೬೬). [ಪಂಚ$_2$+ನಮಸ್ಕೃತಿ]

ಪಂಚನಾಮೆ (ನಾ). ಪಂಚಾಯಿತರು ತೀರ್ಪು ಬರೆದಿರುವ ವರದಿ ಅಥವಾ ಪಂಚಾಯಿತರ ಸಮಕ್ಷದಲ್ಲಿ ಸರಕಾರಿ ಅಧಿಕಾರಿಗಳು ತನಿಖೆ ಮಾಡಿ ಸಿದ್ಧಗೊಳಿಸಿದ ವರದಿ; ಮಹಜರು : ಯಾರಾದರೂ ಕದ್ದು ತಂದಿದ್ದರೆ ಅದನ್ನು ಪತ್ತೆ ಹಚ್ಚಿ ಪಂಚನಾಮೆ ಮಾಡಿ, ಜಪ್ತ ಮಾಡಲು ಗುಪ್ತವೇಷದ ಒಂದು ಸಿಬ್ಬಂದಿಯನ್ನು ಇಡಬೇಕಾದೀತು (ಗಾಳಿಪ. ೩೮) ; ಹಗ್ಗವನ್ನು ಕತ್ತರಿಸಿ ಶವವನ್ನು ಹೊರಗಡೆ ತಂದು, ನಡೆಯಬೇಕಾದ 'ಪಂಚನಾಮೆ' ನಡೆಯಬೇಕಾದರೆ ಸುಮಾರು ಒಂದು ಗಂಟೆಯ ಮೇಲೆ ಹಿಡಿಯಿತು (ಸ್ವರ್ಗಬಾ. ೨೦೫). [←ಹಿಂ. ಮರಾ. ಪಂಚನಾಮಾ]

ಪಂಚನಾರೀತುರಗ (ನಾ). ಮುಖ, ಕಾಲು, ಬಾಲ ಮೊದಲಾದ ಐದು ಅವಯವಗಳಲ್ಲಿ ಸ್ತ್ರೀಯರ ಆಕೃತಿ ಕಾಣುವಂತೆ ನಿರ್ಮಿಸಿದ ಕುದುರೆಯ ವಿಗ್ರಹ : ಪಂಚನಾರೀತುರಗದಂದದಿ ಪಂಚರೂಪಾತ್ಮಕನು ತಾ . . . ರಮಿಸುವನು (ಹಸಾರ. ೬-೮). [ಸಂ.]

ಪಂಚನಿವಾರಣ (ನಾ). [ಬೌದ್ಧ] ಪರಿಹಾರದ ಐದು ಬಗೆಯ ಆಲೋಚನೆಗಳು,—ಚಿಂತನೆಗಳು : ಅಭಿಧ್ಯೆ, ವ್ಯಾಪಾದಪ್ರದೋಷ, ಸ್ತ್ಯಾನಮಿದ್ಧ, ಔದ್ಧೃತ್ಯಕೌಕೃತ್ಯ, ವಿಚಿಕಿತ್ಸೆ—ಎಂಬ . . . ಪಂಚನಿವಾರಣಗಳು ಹೋದ ಮೇಲೆ, ತಾನು . . . ಕ್ಷೇಮಾಂತಭೂಮಿಗಳಲ್ಲಿ ಇದ್ದಂತೆ ಕಾಣುವನು (ಬುದ್ಧಪ. ೧೯೩). [ಪಂಚ$_2$+ನಿವಾರಣ]

ಪಂಚನಿಶಾನಿ (ನಾ). ರಾಜರು, ಮಠಾಧಿಪತಿಗಳು ಮೊದಲಾದವರು ಇಟ್ಟುಕೊಳ್ಳುವ ಗೌರವಸೂಚಕವಾದ ಛತ್ರಿ, ಪಂಜು, ಭೇರಿ, ಕಹಳೆ ಮೊದಲಾದ ಐದು ಬಗೆಯ ಲಾಂಛನಗಳು : (ಸಾಧಾರಣ ಬಿರುದುಗಳು). . . ಕತ್ತಿ ವಗ್ಗೆರೆ ೫೦, ಮಾಯಾಮರತಾಪು, ಪಂಚನಿಶಾನಿ, ಡವಣೆ, ಅರಲಿವಸ್ತ್ರ (ಗುರುದ. ೧೧). [ಪಂಚ$_2$+ನಿಶಾನಿ]

ಪಂಚಪಕ್ವಾನ್ನ (ನಾ). ಐದು ಬಗೆಯ ಪಕ್ವಾನ್ನಗಳು ; ೫ ಅಮೃತಾನ್ನ, ಭೋಜ್ಯಾನ್ನ, ದೇವಾನ್ನ, ದಿವ್ಯಾನ್ನ ಮತ್ತು ಅಮೃತರಸಾಯನ ಎಂದೂ ಚಿತ್ರಾನ್ನ, ದಧ್ಯನ್ನ, ಶರ್ಕರಾನ್ನ, ಮಾಷೋದನ (ಉದ್ದಿನ ಹುಡಿಅನ್ನ), ತಿಲೋದನ (ಎಳ್ಳು ಹುಡಿ ಅನ್ನ) ಎಂದು ಎರಡು ವಿಧಗಳಿವೆ : ಹೊಸಹೊನ್ನ ಪರಿಯಾಣಮನಳವಡಿಸಿ ಪಂಚಪಕ್ವಾನ್ನಮನಮಳದೇವಾನ್ನ ದಿಬ್ಯಾನ್ನಂಗಳಂ ಬಡಿಸಿ (ಬಸಪು.೮-೧೪); ಪಂಚಪಕ್ವಾನ್ನವನು ಬಿಕ್ಕೆಯಲಿ ಕಂಡಾಗ ಅಮೃತಾನ್ನ ಉಂಡಿರುವೆಯಾ ? (ಸೂರ್ಯಪಾ. ೬೮-೫). [ಪಂಚ$_2$+ಪಕ್ವಾನ್ನ]

ಪಂಚಪಕ್ಷಿಸ್ವನ(ನಾ).೧. ಐದು ಬಗೆಯ ಪಕ್ಷಿಧ್ವನಿ.೨.[ಕಾಮಶಾ] ರತಿ ಕಾಲದಲ್ಲಿ ಹೊಮ್ಮುವ ಐದು ಬಗೆಯ ಪಕ್ಷಿಗಳ ಸ್ವರದಂತಹ ಶಬ್ದ : ಪಂಚಾಂಗುಲೀಹತಂ ಪಂಚಪಕ್ಷಿಸ್ವನಂ ಪಂಚವಿಧ ತಾಡನಂ . . . ಚದುರರಿವನಱಿವುದು (ಜನವ. ೮-೫೧). [ಪಂಚ$_2$+ಪಕ್ಷಿ+ಸ್ವನ]

ಪಂಚಪತ್ರ (ನಾ). ೧. ಮಾವು, ಬಿಲ್ವ, ನೆಲ್ಲಿ, ದರ್ಭೆ ಮತ್ತು ಉತ್ತರಣೆ ಎಂಬ ಐದು ಬಗೆಯ ಪತ್ರೆಗಳು.೨.(ಪತ್ರವನ್ನು) ಬರೆಯುವವನು, ಬರೆದುಕೊಡುವವನು, ಬರೆಸಿಕೊಳ್ಳುವವನು, ಇಬ್ಬರು ಸಾಕ್ಷಿಗಳು ಹೀಗೆ ಐದು ಜನ ಸೇರಿ ಬರೆಯುವ ಪತ್ರ : "ಪಂಚಪತ್ರ–ಬರೆಕೊಡುವವ, ಬರೆಕೊಂಬವ, ಎರಡುಸಾಕ್ಷಿ , ಬರವವ" (ನಾನಾಶ. ೨೮' [ಪಂಚ$_2$+ಪತ್ರ]

ಪಂಚಪತ್ರೆ (ನಾ). ಅಗಲವಾದ ಎಲೆಯುಳ್ಳ ಒಂದು ಬಗೆಯ ಗಿಡ: "ದೇವಪತ್ರಂ ಪಂಚಪತ್ರೆ" (ಮಂಗರಾ. ೪೦-೩೦). [ಪಂಚ$_3$+ಪತ್ರೆ]

ಪಂಚಪದ (ನಾ). = ಪಂಚನಮಸ್ಕಾರ ೨ : ಮಂಗಳಕಾರಣಪಂಚಪದಂಗಳನಪವರ್ಗಮಾರ್ಗವಿರಚಿತಸೋಪಾನಂಗಳಂ . . . ಓದುವುದು (ಆದಿಪು. ೨-೫೪) ; ತಪಸ್ವಿನಿ ಸಮಾಧಿ ಸಮನಿಸೆ ಮನದೊಳ್ ಪಿಂಗದೆ ನೆಲಸಿರೆ ಪಂಚಪದಂಗಳ್ ನಾಲಿಗೆಯೊಳಱಿವೆ ಮೆಯ್ಯಾಗಿರ್ದಳ್(ಪಂರಾಮಾ. ೧೪-೫೭) ; ಬಾಗಿಲ ಮುಂದೆ ಬೀಳಲು ಶ್ವಾನನ ಕಂಡು ನಾಗಶ್ರೀ ಪಂಚಪದಗಳ ಆಗ ಪೇಳಲು ಲಾಲಿಸಿ ಸುರಲೋಕಕ್ಕೆ ಬೇಗ ಪೋದುದ ಕೇಳ್ದಱಿಯ (ದ್ವಾದಶಾ. ೪-೯). [ಪಂಚ$_2$+ಪದ$_2$]

ಪಂಚಪದಾರ್ಥ (ನಾ). ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ ಎಂಬ ಐದು ಬಗೆಯ ಪದಾರ್ಥಗಳು : ಪಂಚಭೂತವಂಗವಾಗಿಪ್ಪ ಆತ್ಮಂಗೆ . . . ಪಂಚವಿಷಯವು ಪೂಜೆ ಪಂಚಪದಾರ್ಥವೇ ಭೋಗ (ಉರಿಪೆ. ಕ. ೨೦೧-೨೭೭). [ಪಂಚ$_2$+ಪದಾರ್ಥ]

ಪಂಚಪರಮೇಷ್ಠಿ (ನಾ). = ಪಂಚಗುರು : ಮಂದರದಂತಚಲಿತ ಧೈರ್ಯರಾಗಿರ್ದು ವಿದ್ಯೆಗಳಂ ಸಾಧಿಸಿ ಸಿದ್ಧವಿದ್ಯರ್ ಪಂಚಪರಮೇಷ್ಠಿಗಳಂ ಪೂಜಿಸಿದಂ ಬಱಿಯಂ (ಪಂರಾಮಾ. ೧೦-೧೪೭ ವ) ; ಶ್ರೀಮನ್ನಿತ್ಯ ಪೂಜಾನಿಮಿತ್ತಂ ಶ್ರೀಮತ್ಪಞ್ಚಪರಮೇಷ್ಠಿ ಪ್ರತಿಬಿಂಬಮಾನದುತಞ್ಜನಗರ್‌ಮ ಪೆರುಮಾಳ ಶ್ರಾವಕರಾಲ ಶೇವಿತ್ತ ಉಭಯಂ (ಎಕ. II (R), ೪೮೮-೮ ; 1858) ; ಜೈನರು ಅರಹಂತರು, ಸಿದ್ಧರು, ಆಚಾರ್ಯರು, ಉಪಾಧ್ಯಾಯರು, ಸರ್ವಸಾಧುಗಳೆಂಬ ಪಂಚಪರಮೇಷ್ಠಿಗಳನ್ನು ಪೂಜಿಸುತ್ತಾರೆ (ಭಾರದ. ೧೭೯). [ಪಂಚ$_2$+ಪರಮೇಷ್ಠಿ]

ಪಂಚಪರುಷ(ನಾ).ಮುಟ್ಟಿದುದನ್ನು ಪವಿತ್ರಗೊಳಿಸುವಮನಸ್ಸು, ವಾಕ್ಕು, ಹಸ್ತ, ದೃಷ್ಟಿ ಮತ್ತು ಭಾವ ಎಂಬ ಐದು ಬಗೆಯ ಸ್ಪರ್ಶಗಳಿಂದಾಗುವ ಸಿದ್ಧಿ : ಬಸವರಾಜನ ಕರೆದು ನೀಂ ಭಕ್ತಿಲೀಲೆಯನು ಧರಣಿಯೊಳು ನಟಿಸಪೋಗೈ ಎಂದು ನೀಲಗಳ ಪಂಚಪರುಷವನಿತ್ತು ಪ್ರಮಥಗಣವೆರಸಿ ಬೀಳ್ಕೊಟ್ಟನಾಗ (ಪ್ರೌಢರಾ. ೨-೩) ; ಇವರಿಗಾದರೂ ಮನಪರುಷ, ವಾಕ್ಪರುಷ, ಹಸ್ತಪರುಷ,ದೃಷ್ಟಿಪರುಷ, ಭಾವಪರುಷಂಗಳು ಎಂಬ ಪಂಚಪರುಷಂಗಳನ್ನು ಜಗದೀಶ್ವರನು ಕೊಟ್ಟಿರುವನಾಗಿ ಈ ಶಿವ ಭಕ್ತರ ಅಂಗಣವೇ ಕೈಲಾಸ (ಕೃಷಿಪ್ರ. ೨೭೫). [ಪಂಚ$_2$+ಪರುಷ$_1$]

ಪಂಚಪರ್ಬ (ನಾ). ೧. = ಪಂಚಪರ್ವ. ೨. ದೇವಸ್ಥಾನಗಳಲ್ಲಿ ನಡೆಯುವ ದವನ, ವಸಂತ, ಪವಿತ್ರಾರೋಪಣ, ದೀಪೋತ್ಸವ, ನವಾನ್ನವೆಂಬ ಸಮಾರಂಭಗಳು,—ಉತ್ಸವಗಳು : ಆ ಮಹಾಜನಗಳು ಶ್ರೀರಾಮಕೃಷ್ಣಪ್ರಭುಗಳ ವೃಂದಾವನದ ಶ್ರೀಗೋಪಾಳ ದೇವರ ಅಮೃತಪಡಿ ದೀಪೋತ್ಸವ ಚೈತ್ರಪವಿತ್ರ ಒಳಗಾದ ಪಂಚಪರ್ಬಕೆ ವರ್ಷಂಪ್ರತಿ ಎಂದೆಂದೂ ನೆಲೆಯಾಗಿ ಕೊಡುವರು (ಎಕ. XVI, ಚಿಕ್ಕನಾ. ೭೧-೨೪ ; ?). [ಪಂಚ$_2$+ಪರ್ಬ]

ಪಂಚಪರ್ವ (ನಾ). ೧. ಚತುರ್ದಶಿ, ಅಷ್ಟಮಿ, ಅಮಾವಾಸ್ಯೆ, ಪೌರ್ಣಮಿ ಮತ್ತು ಸಂಕ್ರಾಂತಿ ಎಂಬ ಐದು ಪರ್ವಕಾಲಗಳು : 'ಪಂಚಪರ್ವತಿಥಿ' ಪರಾ. ೨. = ಪಂಚಪರ್ಬ ೨ : ಶ್ರೀನಂದೀಶ್ವರ ದೇವರಿಗೆ . . . ನಿತ್ಯಕಟ್ಲೆ ಅಮೃತಪಡಿ ನಂದಾದೀಪ ವಿಶೇಷಕಟ್ಲೆ ಪಂಚಪರ್ವ ಸಂಬಳಗಾರಜನಕ್ಕೆ ಸಹ ಅಪಜೆ ಕೊಡಿಸಿಯಿರುವ ಕಂಠೀರಾಯಿ ೧೨೨೧ (ಎಕ. I, ೧೧-೨೦ ; 1816). ೩. [ವೇದಾಂತ] ಐದು ಬಗೆಯ ಅಜ್ಞಾನಗಳು : ಯಾ ಲಿಂಗದಲ್ಲಿ ಯರಡು ಆಚ್ಛಾದನಗಳು ಅವೆ (ಜೀವಾಚ್ಛಾದಿತ, ಪರಮಾಚ್ಛಾದಿತ) ಯಲ್ಲಿ ಮೋಹ ಮಹಾಮೋಹ ತಮೋಮೋಹತಾಮಿಶ್ರ ಅಂಧತಾಮಿಶ್ರಯಾ ಪಂಚಪರ್ವಗಳು ಅಂದರೆ ಅಜ್ಞಾನಗಳು ಅವೆ (ಅಧ್ಯಾಮಾ. ೧೨). [ಪಂಚ$_2$+ಪರ್ವ]

ಪಂಚಪರ್ವತಿಥಿ (ನಾ). = ಪಂಚಪರ್ವ ೧ : ಇದು ಕಾರಣನಿತ್ಯ ನೈಮಿತ್ತಿಕ ಪಂಚಪರ್ವತಿಥಿಗಳಲ್ಲಿ ಅವ ದಿನದಲ್ಲಿಯೂ ಎಂದೆಂದೂ ಅಷ್ಟವಿಧಾರ್ಚನೆ ಷೋಡಶೋಪಚಾರವೇ ಕರ್ತವ್ಯ ನೋಡಾ (ಉರಿಪೆ. ಕ. ೨೪-೪೬). [ಪಂಚಪರ್ವ+ತಿಥಿ]

ಪಂಚಪಲ್ಲವ (ನಾ). ಕಲಶಪ್ರತಿಷ್ಠೆ ಮೊದಲಾದ ಸಂದರ್ಭಗಳಲ್ಲಿ ಉಪಯೋಗಿಸುವ ಆಲ, ಅರಳಿ, ಬಸರಿ, ನೇರಿಳೆ, ಮಾವು ಅಥವಾ ನೇರಿಳೆ, ಮಾವು, ಬೇಲ, ಮಾದಲ, ಬಿಲ್ವ ಅಥವಾ ಆಲ, ಅತ್ತಿ, ಅರಳಿ, ಗೋಣಿ, ಬಸರಿ ಮರಗಳ ಚಿಗುರು : ಸರ್ಪ್ಪೌಷಧಿ ಗೋರೋಚನ ಸಿದ್ಧಾರ್ತ್ಥ ಪಂಚಪಲ್ಲವ ಪಂಚಭಲ್ಲಿ ಪಂಚಗವ್ಯ ಮೇಲಾದಿ ಚಂದನಾದಿ ಮಂಗಳದ್ರವ್ಯಂಗಳನಿಕಿ (ಎಕ. VII, ಶಿಕಾರಿ. ೧೮೫-೭೫ ; 1158) ; ಪಂಚಾಮೃತಂಗಳ ತರಿಸಿ ಪರಿಮಿಶ್ರಮಂ ಮಾಡಿ ಶಿಷ್ಯಮೂರ್ಧ್ನಿಯೊಳು ತದ್ಗುರುಮೂರ್ತಿ ಪಂಚಪಲ್ಲವಗಳಿಂ ಸಂಪ್ರೋಕ್ಷಿಸುವುದು ಶಿಷ್ಯನ ಶಿರಕ್ಕೆ (ವೀಶೈಪು. ೭-೧೨-೧೦); ಕೊತ್ತಂಬರಿ ಬೀಜ, ಜೀರಿಗೆ . . . ಪಂಚಪಲ್ಲವಗಳು, ನೆಲ್ಲೀಕಾಯಿ, ಆಲದ ಬಿಳಲು ಇವನ್ನು ಕಷಾಯವಿಟ್ಟು ಸೇವಿಸಿದರೆ ಶ್ಲೇಷ್ಮಭರ್ಧಿ, ಸಕಲಭರ್ದಿ ಸಹ ನಿಲ್ಲುವವು (ಸಕವೈ. ಪರಿ. ೪೫೭).

ಪಂಚಪಲ್ಲವದ ಕುದುರೆ = ಪಂಚಕಲ್ಯಾಣ ೧ : ಮೂವತ್ತೆರಡು ಪಂಚಪಲ್ಲವದ ಕುದುರೆಗಳು (ಸುಗುಗಂ. ೧೪-೯). ℙ ಇದು 'ಪಂಚಕಲ್ಯಾಣಿ' ಯಿಂದ ಬೇರೆಯಾದ ಐದು ಶುಭಲಕ್ಷಣಗಳಿಂದ ಕೂಡಿರಬಹುದೆ ? ಪಂಚಪಲ್ಲವದ ವಾಜಿ = ಪಂಚಪಲ್ಲವದ ಕುದುರೆ: "ಪಂಚಪಲ್ಲವದ ವಾಜಿಗಳ್ = ರಾಜವಾಹನಂಗಳ್" (ಶಮದ.ಪರಿ. ೨); "ಪಂಚಪಲ್ಲವದ ವಾಜಿಗಳೆನಲ್ ರಾಜವಾಹನಂ" (ಕಬ್ಬಿಕೈ. ೭೭).

[ಪಂಚ$_2$+ಪಲ್ಲವ]

ಪಂಚಪಾಂಡವ (ನಾ).೧.ಪಾಂಡುರಾಜನ ಐದು ಜನ ಮಕ್ಕಳು ; (ಮಹಾಭಾರತದ ಕಥಾನಾಯಕರಾದ) ಯುಧಿಷ್ಠಿರ, ಭೀಮ, ಅರ್ಜುನ, ನಕುಲ ಮತ್ತು ಸಹದೇವ : ಪಂಚರಾತ್ರಾಗಮಪೂಜೆಗಳಿಂದ ಕಿಂಚಿತು ಭಕುತಿಯಿಂದಲೆ ಮಾಡಲು ಚಂಚಲಮನವ ಮಾಡಗೊಡಲು ಬೇಡ ಪಂಚಪಾಂಡವಪ್ರಿಯ ವಿರಿಂಚಾಧೀಶನೆ (ಪುರಂದ. ೩-೮೩-೧) ; ಪಂಚಪಾಂಡವರು ಇರ್ದಂತೆ ದ್ರೌಪತಿಯು . . . ಕರ್ಣಂಗೆ ಮನ ಸೋಲಳೇ (ಪ್ರಭುಪು.೫-೪೩); ಪಂಚಪಾಂಡವರೆಂದರೆ ಮಂಚದ ಕಾಲಿನಂತೆ ಮೂರುಜನ ಅಂದ ಹಾಗೆ (ಗಾದೆ). ೨.ದ್ರೌಪದಿಯ ಮಕ್ಕಳಾದ ಪ್ರತಿವಿಂಧ್ಯ, ಸುತಸೋಮ, ಶ್ರುತಕೀರ್ತಿ, ಶತಾನೀಕ ಮತ್ತು ಶ್ರುತಸೇನ ಎಂಬ ಐವರು ಉಪಪಾಂಡವರು: ಅಶ್ವತ್ಥಾಮಂ . . . ಶ್ರುತ ಸೋಮಕ ಪ್ರಮುಖರಪ್ಪ ಪಂಚಪಾಂಡವರಂ ಪಾಂಡವರೆ ಗೆತ್ತು ಕೊಂದು ತದುತ್ತಮಾಂಗಂಗಳಂ ಕೊಂಡು . . . ಕೊಳ್ ನಿನ್ನ ನಚ್ಚಿನ ಪಾಂಡವರ ತಲೆಗಳನೆಂದು ಮುಂದಿಕ್ಕಿದಾಗಳ್ ದುರ್ಯೋಧನಂ ನೋಡಿ

(ಪಂಪಭಾ. ೧೩-೧೦೬ ವ) ; ಪಾಂಡವರ ಶಂಕೆಯಿಂ ಶ್ರುತ ಸೋನುಕ ಪ್ರಭೃತಿಗಳಪ್ಪ ಪಂಚಪಾಂಡವರೆ ತಲೆಗಳಂ ಕೊಂಡು . . . ದುರ್ಯೋಧನನ ಮುಂದಿಕ್ಕಿದೊಡೆ (ಗದಾಯು. ೯-೩೨ ವ). [ಪಂಚ + ಪಾಂಡವ]

ಪಂಚಪಾಣಿ (ನಾ). [ಸಂಗೀತ]ನೂರೆಂಟು ತಾಳಗಳಲ್ಲಿ ಒಂದು : ಚಂಚತ್ಪುಟ ಚಾಚತ್ಪುಟ ಧ್ರುವ . . . ವಿಳಂಬ ಸಪ್ತ ತಾಳಭೇದಂಗಳಂ ಅವುಗಳೊಳು ಪಂಚಪಾಣಿ . . . ಜಯಾಳನೆಂದಿವು ಮೊದಲಾದ ನೂಱೆಂಟು ತಾಳಂಗಳುಂ (ವಿನೇ. ೨೩೮). [ಸಂ.]

ಪಂಚಪಾತಕ (ನಾ). = ಪಂಚಮಹಾಪಾತಕ ೧ : ಹುಸಿದು ಮಾಡುವ ಮಹಾಯಜ್ಞಶತವೆಯ್ದೆ ಪಂಚಪಾತಕ ಸತ್ಯವೆರಸಿದ ನ್ಯಾಯವದು ಲಿಂಗಾರ್ಚನೆ (ಪಡಿಕಾ.೧೪-೧೦) ; ದುರಿತಕೋಟಿಗಳೊಡನೆ ಪಂಚಪಾತಕ ಮುಖ್ಯದೊರೆಗಳಟ್ಟಿಸಲಗಡತರೋಗಸಂಕುಲಂವೆರಸಿ ನಿಗೆ ರಾಜಕ್ಷಯಮಾದಿ ನಿಖಿಳವ್ಯಾಧಿನಾಯಕರ್ಬಳಿಸಂದರು (ಜೈಮಿಭಾ.೨೭-೨೪). [ಪಂಚ + ಪಾತಕ]

ಪಂಚಪಾತ್ರೆ$_1$ (ನಾ). ಐದು ಭರಣಿಗಳು ಕೂಡಿರುವ ಪಾತ್ರೆ ; ಪಂಚವಾಳ : ಪಂಚಪಾತ್ರೆಯಲ್ಲಿ ಪಲ್ಕಗಳನ್ನು ಹಾಕಿಕೊಂಡರೆ ಬಡಿಸುವುದಕ್ಕೆ ಸುಲಭ (ರೂಢಿ). [ಪಂಚ + ಪಾತ್ರೆ]

ಪಂಚಪಾತ್ರೆ$_2$ (ನಾ). ೧. ಅಗಲವಾದ ಬಾಯುಳ್ಳ ಹಿತ್ತಾಳೆ, ಕಾಮ್ಯ ಮೊದಲಾದ ಲೋಹಗಳಿಂದ ಮಾಡಿದ ಒಂದು ಬಗೆಯ ದೊಡ್ಡ ಪಾತ್ರೆ ; ಕೊಳಗದಪ್ಪಲೆ : ಹಿಡಿಗೆ ಜಲ್ಲಡಿ ಪಂಚಪಾತ್ರೆ (ಪಿದ್ಧಕಾ. ೧೩-೪೪). ೨. ಅಗಲವಾದ ಬಾಯುಳ್ಳ (ಕೊಳಗದಪ್ಪಲೆಯಾಕಾರದ) ಸಣ್ಣ ಪಾತ್ರೆ : ಬಸವ . . . ಕ್ಷಣ ಬಿಟ್ಟು ಒಂದು ಪಂಚಪಾತ್ರೆಯಲ್ಲಿ ತುಂಬ ನೀರನ್ನು ತಂದನು (ಚಳಕಾ. ೧೩೭). [ಪಂಚ + ಪಾತ್ರೆ]

ಪಂಚಪಾದ (ನಾ). ನಲವತ್ತೈದು ಮಂತ್ರಸಾಧನಗಳಲ್ಲಿ ಒಂದು: ಮೇಲೆ ಪಡಾಮ್ನಾಯಮೂಲ . . . ಪಂಚಪಾದ ಪಂಚಕೃತ್ಯ ಪಂಜರ ಮಾಲಿಕೆ ಮೂಲಿಕೆ ತಂತ್ರ ಬಲಿ ಆತ್ಮೈಕ್ಯಗಳೆಂಬ ಪಂಚಚತ್ವಾರಿಂಶನ್ಮಂತ್ರಸಾಧನಂಗಳೊಳು ಪ್ರಜ್ಞೆಗೊಂಡು (ವಿನೇ. ೪೧). [?]

ಪಂಚಪಾಶ (ನಾ). ಮಲ, ಮಾಯಾ, ಕರ್ಮ, ತಿರೋಧಾನ ಮತ್ತು ಬಿಂದು ಎಂಬ ಐದು ಬಗೆಯ ಪಾಶಗಳು : "ಮಲ (ಜ್ಞಾನಕ್ರಿಯೆಗಳನ್ನು ಮುಚ್ಚಿ ಹಾಕುವದು), ಮಾಯಾ (ಪ್ರಪಂಚದ ತತ್ತ್ವಗಳಿಗೆಲ್ಲ ಉಪಾದಾನಕಾರಣವಾಗಿ ಸತ್ಯವಾಗಿರುವದು), ಕರ್ಮ (ಧರ್ಮಾಧರ್ಮಾತ್ಮಕವಾದದ್ದು), ತಿರೋಧಾಯಿಕ (ಭೋಗವನ್ನುಂಟು ಮಾಡುವದು), ಬಿಂದು (ಮೋಕ್ಷವನ್ನು ಕೊಡುವ ಈಶ್ವರತತ್ತ್ವ—ಮೋಕ್ಷವನ್ನು ಕೊಡುವದು ಈಶ್ವರನಧೀನವೆಂಬುದೂ ಒಂದು ಪಾಶವೆ) ಇವು ಪಂಚಪಾಶಗಳೆಂದು . . . ಗ್ರಹಿಸಬಹುದು (ಅಪ್ಯಃ. ೩-೧೫೦ ಅಡಿಟಿ). [ಪಂಚ + ಪಾಶ]

ಪಂಚಪಾಳಿ, ಪಂಚವಾಳ (ನಾ). (ದೇವರ ಪೂಜೆ ಮೊದಲಾದ ಸಂದರ್ಭಗಳಲ್ಲಿ) ಅರಿಶಿನ, ಕುಂಕುಮ, ಚಂದ್ರ, ಮಂತ್ರಾಕ್ಷತೆ ಮತ್ತು ಗಂಧಗಳನ್ನು ಇಟ್ಟುಕೊಳ್ಳಲು ಐದು ಬಟ್ಟಲುಗಳನ್ನು ಜೋಡಿಸಿ ಮಾಡಿರುವ ಲೋಹದ ಅಥವಾ ಮರದ ಉಪಕರಣ; ಪಂಚವಣಿಗೆ ಬಟ್ಟಲು : ಆಕೆ ಎಡದ ಕೈಯಲ್ಲೊಂದು ಅರಿಸಿಣ ಕುಂಕುಮ ಅಕ್ಕೀಕಾಳುಗಳಿಂದ ತುಂಬಿದ ಪಂಚಪಾಳೆಯನ್ನು ಹಿಡಿದಿದ್ದಳು (ಗಂಗಾಸಾ. ೬). **ಪಂಚವಾಳ** : ಹೂವು, ಹಣ್ಣು, ಪಂಚವಾಳಗಳಿಂದ ಕೂಡಿದ ತಟ್ಟೆ ಕೈಲಿ ಹಿಡಿದು ಪ್ರವೇಶಿಸಿ (ಪಾಂಗಲ್ಯ. ೫೭) ; ಕಂಕುಳಲ್ಲಿ ಒಂದು ಮಡಿ ಪೆಟ್ಟಗೆಯೊಳಗೆ ಒಂದು ಸಣ್ಣ ಗೌರೀ ಪೆಟ್ಟಗೆ, ಅರಿಸಿನ ಕುಂಕುಮದ ಪಂಚವಾಳ(ಇಬದು.೧). [←ಮರಾ.ಪಂಚಪಾಳೇ]

ಪಂಚಪಿತೃ (ನಾ). ತಂದೆಯೆಂಬ ಗೌರವಕ್ಕೆ ಯೋಗ್ಯರಾದ ಐವರು ಪಿತೃಗಳು ; ತಂದೆ ಹಾಗೂ ತಂದೆಗೆ ಸಮಾನರಾದ ನಾಲ್ವರು ; ℙ ೧. ಜನಕ, ೨. ಉಪನಯನ ಮಾಡಿದ ಆಚಾರ್ಯ, ೩. ವಿದ್ಯಾದಾನ ಮಾಡಿದ ಗುರು, ೪. ಅನ್ನದಾನ ಮಾಡಿದವನು, ೫. ಭಯದಿಂದ ರಕ್ಷಿಸಿದವನು ಎಂದೂ ೧. ಜನಕ, ೨. ಉಪನಯನ ಮಾಡಿದ ಆಚಾರ್ಯ, ೩. ಕನ್ಯಾದಾನ ಮಾಡಿದವನು, ೪. ಅನ್ನದಾನ ಮಾಡಿದವನು, ೫. ಭಯದಿಂದ ರಕ್ಷಿಸಿದವನು ಎಂದೂ ಎರಡು ವಿಧ ? ಪಂಚಪಿತೃ ಜನಕ; ೨ ಉಪನೇತ ; ೩ ಕನ್ಯಾದಾತಾ ; ೪ ಅನ್ನದಾತ ; ೫ ಭಯತ್ರಾತಾ" (ನಾನಾಶ. ೨೭೪) [ಪಂಚ + ಪಿತೃ]

ಪಂಚಪೀಠ (ನಾ). [ವೀರಶೈ] ಕಾಶಿ, ಕೇದಾರ, ಉಜ್ಜಯಿನಿ, ಶ್ರೀಶೈಲ, ರಂಭಾಪುರಿ (ಬಾಳೆಹೊನ್ನೂರು) ಎಂದು ಪ್ರಸಿದ್ಧವಾದ ಐದು ವೀರಶೈವ ಪೀಠಗಳು. [ಪಂಚ + ಪೀಠ]

ಪಂಚಪೀರ (ನಾ). ಸಮುದ್ರಕ್ಕೆ ಅಭಿಮಾನಿಗಳೆಂದು ಮಹಮದೀಯರು ಭಾವಿಸಿರುವ ಐವರು ಮಹಾತ್ಮರು : ನಾವೆಯನ್ನು ನಡೆಯಿಸುವವರು ಒಮ್ಮಿಂದೊಮ್ಮೆ ಸಮುದ್ರದ ಪಂಚಪೀರರ.ಹೆಸರನ್ನು ಕೀರ್ತನೆ ಮಾಡಿದರು (ಕಪಾಕುಂ. ೪). ℙ "ಪೀರ್ ಅಂದರೆ ಮುಸಲ್ಮಾನರಲ್ಲಿ ಮಹಾತ್ಮರಿಗೆ ಹೆಸರು. ಮುಸಲ್ಮಾನ ಅಂಬಿಗರು ಸಮುದ್ರಕ್ಕೆ ಐದು ಮಂದಿ ಮಹಾತ್ಮರಿದ್ದಾರೆಂದು ನಂಬಿದ್ದು ಕಷ್ಟ ಬಂದಾಗ ಅವರ ಹೆಸರನ್ನು ಸ್ಮರಿಸಿಕೊಳ್ಳುತ್ತಾರೆ" (ಕಪಾಕುಂ. ೪ ಅಡಿಟಿ). [ಪಂಚ + ಪೀರ (ℙ←ಹಿಂ.ಪೀರ್)]

ಪಂಚಪುಟ್ಟ (ನಾ). (?) : ಅಷ್ಟಾದಶಪಟ್ಟಣಾಧಿಷ್ಠಿತ ಪಂಚಪುಟ್ಟಗಾದಿ ಬಾವನ್ನವೀರಂ . . . ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ಮಹಾಸಾಮಂತಂ ಮಾರ್ತ್ತಂಡಯ್ಯಂ (ಸೌಇಇ. XI-i, ೬೮-೮೨ ; 1045). [?]

ಪಂಚಪುರುಷಾರ್ಥ (ನಾ). ಧರ್ಮ, ಅರ್ಥ, ಕಾಮ, ಮೋಕ್ಷ ಹಾಗೂ ಪರಾಭಕ್ತಿ ಎಂಬ ಐದು ಬಗೆಯ ಪುರುಷಾರ್ಥಗಳು : ಚರಿತದಿಂ ಧರ್ಮಾರ್ಥ ಕಾಮ ಮೋಕ್ಷಂಗಳಿಂ ಪಿರಿದೆನಿಪ ಪರಮಸುಖಲಕ್ಷಣ ಪರಾಭಕ್ತಿ ದೊರೆವಡೆದ ಪಂಚಪುರುಷಾರ್ಥವೆಂದೊರೆದವನ ಚರಣಾಂಬುಜಕ್ಕೆ ಶರಣು (ಲಕುಂ. ೫೪-೪೪). [ಪಂಚ + ಪುರುಷಾರ್ಥ]

ಪಂಚಪ್ರಪಂಚ (ನಾ). [ಸಂಗೀತ] (?): ಪಂಚಪ್ರಪಂಚಮದಿಂಬಾಗಿರೆ ತೇನತೇನಮೊದವಲ್ತಾನಂ ಲಯಂ ಮುಂಚಿ ಸಂಭ್ರಮದಿಂ ಬಾಜಿಸಿದಳ್ ಬಜಾವಣೆಯಿನಂದಂದೆತ್ತವಳ್ವೀಣೆಯಂ (ರಾಜಶೇ. ೧೦-೩೨). [ಪಂಚ ?+ಪ್ರಪಂಚ]

ಪಂಚಪ್ರಮೆ (ನಾ). ೧. ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ ಎಂಬ ಐದು ಪ್ರತ್ಯಕ್ಷಜನಕವಾದ ಪ್ರಮಾಣಗಳು. ೨. ಪಿಪೀಲಿಕಾಜ್ಞಾನ, ವಿಹಂಗಮಜ್ಞಾನ, ಮರ್ಕಟಜ್ಞಾನ, ಗಜಜ್ಞಾನ, ಪೂರ್ಣಜ್ಞಾನ ಎಂಬ ಐದು ಬಗೆಯ ಪ್ರಮಾಜ್ಞಾನಗಳು : ಪಂಚಪ್ರಮಾಮಂಜರೀ . . . ಪಂಚಾಕ್ಷರೀಪಾಠವಃ (ರಾಜಶೇ. ೪-೧೧೩). [ಪಂಚ + ಪ್ರಮೆ]

ಪಂಚಪ್ರಾಣ (ನಾ). ೧. ಶರೀರದಲ್ಲಿರುವ ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನವೆಂಬ ಐದು ವಾಯುಗಳು : ಸಮುದಾಯದಿಂದ ಪ್ರಾಣಾಪಾನ ವ್ಯಾನೋದಾನ ಸಮಾನಗಳೆಂಬ ಪಂಚಪ್ರಾಣಗಳು ಹುಟ್ಟುವುವು(ಹಿಂದಸಾ.೧೯೬). ೨. (ಆಲಂ)ಒಬ್ಬ ವ್ಯಕ್ತಿಗೆ ಕನ್ನ ಪ್ರಾಣದ ಮೇಲೆ ಎಷ್ಟು ಇಷ್ಟವೋ ಅಷ್ಟೇ ಇಷ್ಟವುಳ್ಳ ವಸ್ತು, ವ್ಯಕ್ತಿ ಇತ್ಯಾದಿ ; ಸರ್ವಸ್ವವಾಗಿರುವುದು : ಅವ್ವನಿಗೆ ಜನರೆಂದರೆ ಪಂಚಪ್ರಾಣ (ಸ್ಮೃತಿಚಿ. ೧೭) ; ಹೆಣ್ಣುಮಕ್ಕಳಿಗಂತೂ ಹೂ

ಗಳೆಂದರೆ ಪಂಚಪ್ರಾಣ (ಕಪಪು. ೬-೧೦೮) ; ಮಗಳಿಗೆ ಕಥೆ ಎಂದರೆ ಪಂಚಪ್ರಾಣ ಎನ್ನುವುದು ತಾಯಿಗೆ ಗೊತ್ತು (ಕಥಕ. ೪೭).[ಪಂಚ$_2$+ಪ್ರಾಣ]

ಪಂಚಫಕೀರ (ನಾ). ಅತಿಯಾದ ತುಂಟ : "ಪಂಚಫಕೀರ=ಉಡಾಳ, ತುಂಟ" (ಜಾನಕೋ. ೧೩). [ಪಂಚ$_3$+ ಫಕೀರ(<ಪಕೀರ)]

ಪಂಚಬಲ (ನಾ). [ಬೌದ್ಧ] ಶ್ರದ್ಧಾಬಲ, ವೀರ್ಯಬಲ, ಸ್ಮೃತಿಬಲ, ಸಮಾಧಿಬಲ ಮತ್ತು ಪ್ರಜ್ಞಾಬಲ ಎಂಬ ಐದು ಬಗೆಯ ಬಲಗಳು : ಇವು ನಾಲ್ಕು ಸಮ್ಯಕ್ಪ್ರಧಾನಗಳು, ಇವು ನಾಲ್ಕು ಋದ್ಧಿಪಾದಗಳು, ಇವು ಪಂಚೇಂದ್ರಿಯಗಳು, ಇವು ಪಂಚಬಲಗಳು . . . ಎಂದು ಕುಶಲವಾದ ಧರ್ಮಗಳನ್ನೂ ಅಕುಶಲವಾದವುಗಳನ್ನೂ . . . ಮೇಲಿಂದ ಮೇಲೆ ಹೇಳಿಕೊಳ್ಳುವನು (ಬುದ್ಧಪ. ಮಿಲಿಂದ. ೪೯). [ಪಂಚ$_2$+ಬಲ$_3$]

ಪಂಚಬಲಿ (ನಾ). ಕಾಳಿಕಾದೇವಿಗೆ ಬಲಿಯಾಗಿ ಕೊಡುವ ಕೋಣ, ಕುರಿ, ಆಡು, ಕಬ್ಬು ಮತ್ತು ಕುಂಬಳಕಾಯಿ ಎಂಬುವು : ಕಾಲೀಪೂಜೆಯ ದಿನ ಪಂಚಬಲಿ ಕೊಡುವ ಪದ್ಧತಿಯನ್ನು ವಂಶಲೋಚನರು ಇನ್ನೂ ಬಿಟ್ಟಿಲ್ಲ. ಒಂದೊಂದು ಕೋಣ, ಕುರಿ, ಆಡು, ಕಬ್ಬು, ಕುಂಬಳಕಾಯಿ ಈ ಐದನ್ನು ಬಲಿಕೊಟ್ಟು ಪೂಜೆ ಸಾಂಗವಾಗುತ್ತಿದೆ (ಎರಸ. ೧). [ಪಂಚ$_2$+ಬಲ್ಲಿ$_3$]

ಪಂಚಬಾಣ (ನಾ). ೧. ಐದು ಬಾಣಗಳು : ಪಂಚಬಾಣಂಗಳು ಪಂಚೇಂದ್ರಿಯಂಗಳು ಕರ್ಣ ನಾಸಿಕ ದೃಗು ಜಿಹ್ವೆ ತ್ವಚಂಗಳು (ಮದತಿ. ೧-೬೭) ; ಅಂಗ ಮನ ಪ್ರಾಣ ನೇತ್ರ ಚಿತ್ತಂಗಳೊಳು ಪಂಚಮುಖವೆಂಬ ಪಂಚಬಾಣಂಗಳು ನೆಟ್ಟವಯ್ಯಾ (ಘನವ. ೨-೧). ೨. ತಾವರೆ, ಅಶೋಕ, ಮಾವು, ಮಲ್ಲಿಗೆ ಮತ್ತು ಕನ್ನೈದಿಲೆ ಎಂಬ ಮನ್ಮಥನ ಐದು ಬಾಣಗಳು : ವಿಷಮಾಸ್ತ್ರಂ ಪಂಚಬಾಣಕ್ಕೆ ಮಾಣದೆ ಕಣ್ಗಾದಿರಿಸಿಟ್ಟ ಮಲ್ಲಿಗೆ ಮನೋಜಂ ಸ್ವಚ್ಛ ವಾಃಕೇಳಿಸಮ್ಮದಕೆಂದೋವಿದ ಪದ್ಮಷಂಡಮೆಸೆಗುಂ ತನ್ನಂದನೋಪಾಂತದೊಳ್ (ಚಂದ್ರಪು. ೧-೧೦೪) ; ಮತ್ತಮಲ್ಲಿ . . . ಪಂಚಬಾಣಕ್ಕೆ ತಕ್ಕ ಕುಸುಮಶರಮಂ ಬೆಸಲೆಯಾಗದ ಮಲ್ಲೀವಲ್ಲರಿಗಳಿಲ್ಲ (ಪುಷ್ಪಪು. ೯-೨೧ ಪ). ೩. ಸಮ್ಮೋಹನ, ಸಂತಾಪನ, ಸಂದೀಪನ, ಸಂಶೋಷಣ ಮತ್ತು ದ್ರಾವಣ ಎಂಬ ಮನ್ಮಥನ ಐದು ಬಾಣಗಳು : ಘನಸಮ್ಮೋಹನ ಸಂತಾಪನ ಸಂದೀಪನವತೀವ ಸಂಶೋಷಣ ಸಂಜನಿತ ದ್ರಾವಣಮೆನೆ ಕಾಮನ ಸಮ್ಯಙ್ಮಂತ್ರ ಪಂಚಬಾಣಾಖ್ಯಂಗಳ್ (ಮನ್ಮವಿ. ೩-೭). ೪. ಐದು ಬಾಣಗಳನ್ನು ಹೊಂದಿರುವವನು ; ಮನ್ಮಥ ; ಕಾಮ : ಪಂಚಬಾಣನೆ ಪರಮಾತ್ಮನು (ಮದತಿ. ೧-೬೭) ; ಮನಮಂ ಕಟ್ಟಿ ಗುಣಂಗಳಿಂ ತುಟಿದು ಪಂಚಾಚಾರದಿಂ ಪಂಚಬಾಣನ ಬಾಹಾಬಲಮಂ . . . ದಯೆಗೆಯ್ವರಕ್ಕೆ . . . ಮಹಾಮಹಿಮೆವೆತ್ತಾಚಾರ್ಯರಾಚಾರಮಂ (ಪಂರಾಮಾ. ೧-೩) ; ಪಂಚಬಾಣನ ಕುಮಾರಕನಾದ ಕಾರಣ ಪಂಚಸಾಯಕವ ತೋಱಿಸಿದೆ (ಮೋಹತ. ೩೪-೧೫) ; ಪಂಚಬಾಣನೆ ನೀನು ? ರತಿರಮಣನಲ್ಲದಿರೆ ನನ್ನೆದೆ ಅದೇಕಿಂತು . . . ನಡುಗುತಿದೆ ? (ಚಿತ್ರಾಂಗ. ೨೬-೭೨೨).

[ಪಂಚ$_2$+ಬಾಣ]

ಪಂಚಬಾಣಾಹವ (ನಾ). ರತಿಕ್ರೀಡೆ ; ಸುರತ ; ಸಂಭೋಗ : ಪಂಚಾಂಗುಲೀಹತಂ . . . ಪಂಚಬಾಣಾಹವ[ಪಾಠಾಂ. ಗಮ]ದೊಳಂ ಚೆಚ್ಚರಂ ಸಲ್ವುವಂಚೆನಡೆಯಳೆ ಚದುರರಿವನಱುವುದು (ಜನವ. ೮-೫೧).

[ಪಂಚಬಾಣ+ಆಹವ]

ಪಂಚಬಾಬು (ನಾ). ರಾಜ್ಯಕ್ಕೆ ಆದಾಯ ಕೊಡುವ ಕಂದಾಯ ಇಲಾಖೆಯ ಸಾರಾಯಿ, ಮಾದಕಪಾನೀಯ, ಅಫೀಮು, ಗಾಂಜಾ ಮತ್ತು ಸುಂಕ ಎಂಬ ಐದು ಬಾಬುಗಳು : (ಕಿ).

[ಪಂಚ$_2$+ಬಾಬು$_1$]

ಪಂಚಬಾಬುಕಚೇರಿ (ನಾ). ಐದು ಬಾಬುಗಳಿಂದ ಬರುವ ಹಣವನ್ನು ವಸೂಲುಮಾಡುವ ಕಾರ್ಯಾಲಯ : (ಕಿ).

[ಪಂಚಬಾಬು + ಕಚೇರಿ]

ಪಂಚಬಿಲ್ವ (ನಾ). ಐದು ಬಗೆಯ(ಮರದ)ಪತ್ರೆಗಳು ; ೧ ಬೆಳಲು, ಕರಮರ್ದ, ಶಂಖಿನಿ, ಸಿಂಧುವಾರ ಮತ್ತು ಗಿರಿಚೂತ ಅಥವಾ ತುಳಸಿ, ಬಿಲ್ವ, ನಿರ್ಗುಂಡಿ ನಿಂಬೆ, ಮತ್ತು ನೆಲ್ಲಿ ಎಂಬ ಐದು ಪತ್ರೆಗಳು : ಬೆಳಲು ಕರಮರ್ದ ಶಂಖಿನಿ ಸಿಂಧುವಾರ ಗಿರಿಚೂತಂಗಳೂ ನುಡಿಸಿಕೊಂಬವು ಪಂಚಬಿಲ್ವವೆಂದಾರು ಶಿವನಡಿಯನಿವಱಿಂ ಭಜಿಸೆ ಬೆಲ್ಲಪತ್ರೆಯ ಫಲವ ಕೊಡುವವೈ (ವೀಶೈಪು. ೭-೧೦-೩೭).

[ಪಂಚ$_2$+ಬಿಲ್ವ]

ಪಂಚಬ್ರಹ್ಮ (ನಾ). ೧.[ವೀಶೈ]ಸದಾಶಿವ, ಶಿವ, ರುದ್ರ, ವಿಷ್ಣು, ಮತ್ತು ಬ್ರಹ್ಮ ಎಂಬ ಪರಮಾತ್ಮನ ಐದು ಸ್ವರೂಪಗಳು : ಪಂಚಭೂತಂಗಳಲಿ ಪಂಚಬ್ರಹ್ಮನನಿರಿಸಿದಿರಾಗಿ ಭೂತಶುದ್ಧಿಯಾಯಿತ್ತೆನಗೆ (ಚನ್ನವ.೨೪-೫೫) ; ಮುಖಚತುಷ್ಟಯ ಭುಜಚತುಷ್ಟಯದ ವಾರಿಜಾಸನ ವಿಷ್ಣು ರುದ್ರಾಧಾರನೀಶ್ವರ ಪಂಚವಕ್ತ್ರಾಕಾರದಲಿ ಶಿವ ಮೆಱೆದ ಪಂಚಬ್ರಹ್ಮರೂಪದಲಿ (ಕುವ್ಯಾಅ.೬-೭೪). ೨. ಪಂಚಬ್ರಹ್ಮರೂಪನಾದ ಪರಮಾತ್ಮ ; ಪರಶಿವ : ಪಂಚಬ್ರಹ್ಮವ ಕೆಡಿಸಿತ್ತು ಪ್ರಣವಮಂತ್ರವ ನೀಡಾಡಿತ್ತಲ್ಲಾ (ಬಸವ. ೭೪೮) ; ಪಂಚಬ್ರಹ್ಮಂಗಮೈದಲ್ಕರಿದೆನಿಪ ಭವತ್ಪಾದಮಂ . . . ಬಲ್ಲವೊಲುಱೆಪೊಗಟ್ಟಿಂ ತಾಯೆ ರಕ್ಷಿಪುದೆನ್ನಂ (ಉದ್ಭಟ. ೩-೪೯) ; ಪಂಚೇಂದ್ರಿಯಂಗಳಲ್ಲಿ ಪಂಚಲಿಂಗಂಗಳಂ ಪ್ರತಿಷ್ಠಿಸಿ ಪಂಚಬ್ರಹ್ಮದ ಮೂಲವನಱಿದು (ಅಖಂಡೇ. ೮೭-೯೦). ೩. ಪರಮಾತ್ಮನ ಸದ್ಯೋಜಾತ, ವಾಮದೇವ, ಅಘೋರ, ತತ್ಪರುಷ, ಈಶಾನ ಎಂಬ ಐದು ಮುಖಗಳು : ಇದು ಗುಣತ್ರಯವನತಿಗಳೆದಿರ್ಪ ಪರಶಿವನ ಮೊದಲಲಿಹ ಓಂಕಾರದಕ್ಷರೇಶಾನಾದಿ ವದನವಿಂತಿದುವೆ ಪಂಚಬ್ರಹ್ಮ ಸೂಕ್ಷ್ಮದಕ್ಷರ (ಲತಿಚಿಂ. ೪೦-೪). ೪. ಬಿಂದುವಿನಿಂದ ಹುಟ್ಟುವ ಮೂರ್ತಿ ಬ್ರಹ್ಮ, ಪಿಂಡಬ್ರಹ್ಮ, ವಿಜ್ಞಾನಬ್ರಹ್ಮ, ಕಲಾಬ್ರಹ್ಮ ಮತ್ತು ಆನಂದಬ್ರಹ್ಮಗಳೆಂಬ ಸದಾಶಿವತತ್ತ್ವ : ಎಸೆವ ಲಕ್ಷಣವೈದಯಸಗೊಂಡು ಬಿಂದು ರಾಜಿಸಿತವಱೊಳುದಯ ಪಂಚಬ್ರಹ್ಮವು (ಮನೋವಿ. ೨-೩೯). ೫. ಒಂದು ಉಪನಿಷತ್ತಿನ ಹೆಸರು : ಶ್ರೀರುದ್ರ . . . ಪಂಚಬ್ರಹ್ಮ ಮುಂಡಕವೆಂಬಿವು ಮೊದಲಾದವೇ ಶತೋಪನಿಷತ್ತುಗಳು (ವಿವೇಕ. ೫). [ಪಂಚ$_2$+ಬ್ರಹ್ಮ]

ಪಂಚಭಕ್ಷ (ನಾ). = ಪಂಚಭಕ್ಷ್ಯ ೨ : ಸನ್ನುತೋಜ್ವಳ ಮಂಗಳಾರತಿಯಂ ನಿವಾಳಿಸಿ ಪಂಚಭಕ್ಷ ರಸಾನ್ನಯುತ ನೈವೇದ್ಯಮಂ ಸೌರಾಷ್ಟ್ರಪತಿಗಿತ್ತು (ಬಸಪು. ೪೩-೨೦). [ಪಂಚ$_2$+ಭಕ್ಷ]

ಪಂಚಭಕ್ಷ್ಯ (ನಾ). ೧. ಭಕ್ಷ್ಯ, ಭೋಜ್ಯ, ಲೇಹ್ಯ, ಚೋಷ್ಯ ಮತ್ತು ಪಾನೀಯವೆಂಬ ಐದು ಬಗೆಯ ಆಹಾರ. ೨. ಅತಿರಸ, ಹೋಳಿಗೆ, ಲಡ್ಡು, ಜಿಲೇಬಿ ಮತ್ತು ಅಪೂಪ ಎಂಬ ಐದು ಬಗೆಯ ಭಕ್ಷ್ಯಗಳು : ಪಂಚಭಕ್ಷ್ಯವನು ಪರಮಾನ್ನಾಯ ರಸರಸಾಯನಂ ಚದುರಿನಿಂದೆ ಪರಿಪಾಕಮಂಗೈದು (ನವಮೋ. ೯-೫); ಹತ್ತಿಪ್ಪತ್ತು ಜನರಿಗಾಗುವಷ್ಟು ಪಂಚಭಕ್ಷ್ಯಗಳು ಬಡಿಸಿ ಬಂದಿದ್ದವು (ಸ್ಮೃತಿಚಿ. ೮೩).

[ಪಂಚ$_2$+ಭಕ್ಷ್ಯ]

ಪಂಚಭಾವ (ನಾ). [ಜೈನ] ಔಪಶಮಿಕ, ಕ್ಷಾಯಿಕ, ಕ್ಷಾಯೋಪಶಮಿಕ, ಔದಯಿಕ ಮತ್ತು ಪಾರಿಣಾಮಿಕ ಎಂಬ ಐದು ಬಗೆಯ ಜೀವಪರಿಣಾಮ : ಪಂಚಭಾವದ ಭೇದಮೆಂತೆನೆ ಔಪಶಮಿಕ ಕ್ಷಾಯಿಕ ಕ್ಷಾಯೋಪಶಮಿಕ ಔದಯಿಕ ಪಾರಿಣಾಮಿಕಮೆಂದಯ್ದು ಭೇದಂ (ಪಸಾರ. ೧೧೪). [ಪಂಚ$_2$+ಭಾವ$_2$]

ಪಂಚಭುಜ(ನಾ). [ರೇಖಾಗ] ಐದು ಕೋನಗಳನ್ನು ಉಳ್ಳುದು: 'ಪಂಚಭುಜಾಕೃತಿ' ಪರಾ. [ಪಂಚ$_2$+ಭುಜ]

ಪಂಚಭುಜಾಕೃತಿ (ನಾ). [ರೇಖಾಗ] ಐದು ಕೋನವುಳ್ಳ ಒಂದು ಆಕೃತಿ: ಸಹದೇವರಾಶಿಯಲ್ಲಿ ಸ್ವಾತಿಯನ್ನುಳಿದು ಇತರ ಐದು ನಕ್ಷತ್ರಗಳು ಒಂದು ಪಂಚಭುಜಾಕೃತಿಯಲ್ಲಿವೆ (ನಕ್ಷತ್ರ. ೬೯). [ಪಂಚಭುಜ+ಆಕೃತಿ]

ಪಂಚಭುಜಿ (ನಾ). = ಪಂಚಭುಜಾಕೃತಿ: ನೌಕಾಪೃಷ್ಠದ ಪ್ರಧಾನ ನಕ್ಷತ್ರಗಳು ನೌಕಾಪಟ ತೃತೀಯದೊಂದಿಗೆ ಸೇರಿ ಒಂದು ಪಂಚಭುಜಿಯಾಗುತ್ತದೆ, ನೌಕಾಪೃಷ್ಠವು ಪಂಚಭುಜಿಯ ಮೇಲೆ (ಉತ್ತರಕ್ಕೆ) ಏಕಶೃಂಗಿಯವರೆಗೂ ಹಬ್ಬಿದೆ (ನಕ್ಷತ್ರ. ೬೫). [<ಪಂಚಭುಜ]

ಪಂಚಭೂತ (ನಾ). ಪ್ರಪಂಚದಲ್ಲಿ ಪದಾರ್ಥಗಳ ಮೂಲವಸ್ತುಗಳೆನಿಸಿದ ಪೃಥ್ವಿ (ಭೂಮಿ), ಅಪ್ಪು (ನೀರು), ತೇಜಸ್ಸು (ಪ್ರಕಾಶ), ವಾಯು ಮತ್ತು ಆಕಾಶಗಳೆಂಬ ಐದು ವಸ್ತುಗಳು: ಪರಮಾನಂದಪರಂಪರೆ ದೊರೆಕೊಂಡಂತಿತ್ತು ಪಂಚಭೂತಂಗಳೊಳಂ (ಅದಿಪು. ೭-೩೭); ಪಂಚಭೂತಮಯಮಾಗಿಯುಮಿಾ ತನುವಿಂದುಕಾಂತಿಯಂತಿರೆ ಪೊಳೆಯುತ್ತಮಿರ್ದಪುದಿದೇಂ (ಕಾದಂಪೂ. ೬೯೮); ಸುರಕುಲಂ ಮುನಿಕುಲಂ ಪಂಚಭೂತಂಗಳಿಂ ಖರಕರಂ ಹಿಮಕರಂ ಯಜಮಾನವೆರಸಿ ಶಂಬರಹರನನುರುಪಿದೆಡೆಯಂ ತೋಱಿ (ಹಚಕಾ. ೫-೭೭); ಪಂಚಭೂತಂಗಳೊಳಸಂಚಲವನಱಿಯದಲೆ ಹಂಚನೆ ಹಿಡಿದು ತಿರಿದುಂಬ ಜ್ಞಾನಿ ತಾ ಹಂಚುಹಱಿಯಹನು (ಸರ್ವಜ್ಞ. ೩೪೮). [ಪಂಚ$_2$+ಭೂತ]

ಪಂಚಭೂತಾತ್ಮಕ (ನಾ). ಪಂಚಭೂತ ಸ್ವರೂಪವಾದುದು; ಪಂಚಭೂತರೂಪವಾಗಿರುವುದು: ಆತ್ಮವದು ತಾ ಪಂಚಭೂತಾತ್ಮಕವದೆಂದೆನಿಸಿ . . . ಶಿವನಲ್ಲ ಹೋಗಲಿ ಸಲ್ಲದೀ ಮಾತು (ಒಸಪು. ೫೧-೩೦); ವಿಶ್ವವ್ಯಾಪಕವಾದ ನಿಷ್ಕಲಲಿಂಗವು . . . ವಿಶ್ವದ ಎಲ್ಲಾ ಕಡೆಗಳಲ್ಲೂ ಪಂಚಭೂತಾತ್ಮಕವಾಗಿ ನೆಲಸಿ . . . ಜೀವರಿಗೆ ಅನುಗ್ರಹಮಾಡುತ್ತಿರುವುವು (ಶಕ್ತಿವಿ. ೨೬). [ಸಂ.]

ಪಂಚಭೇದ (ನಾ). [ದ್ವೈತ] ಪ್ರಪಂಚದಲ್ಲಿರುವ ಐದು ಬಗೆಯ ಭೇದ: ಪಂಚಭೇದಾತ್ಮಕ ಪ್ರಪಂಚಕೆ ಎಂಬಲ್ಲಿ ಪಂಚಭೇದಗಳ ವಿವರ:- ಜೀವನಿಗೂ ಈಶ್ವರನಿಗೂ ಭೇದ, ಜೀವನಿಗೂ ಜೀವನಿಗೂ ಪರಸ್ಪರ ಭೇದ, ಜೀವನಿಗೂ ಜಡಕ್ಕೂ ಭೇದ, ಜಡಕ್ಕೂ ಈಶ್ವರನಿಗೂ ಭೇದ, ಜಡ ಜಡಕ್ಕೂ ಪರಸ್ಪರ ಭೇದ ಹೀಗೆ ಐದು ಭೇದಗಳು (ಹಸಾರ. ೧-೯ ತಾತ್ಪರ್ಯ); ಮಿಕ್ಕ ದಾಸರ ಕೃತಿಗಳಲ್ಲಿ ರಾಶಿರಾಶಿಯಾಗಿ ಕಂಡು ಬರುವ ಪಂಚಭೇದ . . . ಮುಂತಾದ ಮಾಧ್ವತತ್ತ್ವಜ್ಞಾನದ ಪ್ರಮೇಯಗಳನ್ನು ಕನಕದಾಸರು ಚರ್ಚಿಸುವ ಇಲ್ಲವೆ ಪ್ರಸ್ತಾಪಿಸುವ ಗೊಡವೆಗೆ ಹೋದಂತಿಲ್ಲ (ಕರ್ಣಾಜ. ೬೭). [ಪಂಚ$_2$+ಭೇದ]

ಪಂಚಮ (ಗು). ೧. ಐದನೆಯ: ಷೋಡಶತೀರ್ಥನಾಥ ಮದನತ್ವದ ಪಂಚಮಚಕ್ರವರ್ತಿ . . . ಶಾಂತಿನಾಥಜಿನಚಂದ್ರಮುನೀಂದ್ರನದೇಂ ಕೃತಾರ್ಥನೋ (ಶಾಂತಿಪು. ೧೨-೫೮); ಕಮಲಗರ್ಭಂ ಗರ್ವಿಸಿದಡಂ ಪ್ರಮಥನಾಥನು ಮುನ್ನವರ ಪಂಚಮಶಿರವನಾಗ್ರಹಿಸುತಾಗಳೆ ಚಿವುಟಿ ಬಿಸುಟನಲಾ (ಬಸಪು. ೫೪-೪೮). ೨. ಮಂಗಳವಾದ: 'ಪಂಚಮ ಮಾಂಗಲ್ಯ' ಪರಾ. (ನಾ). ೩. ಐದನ್ನು ಪೂರ್ಣಗೊಳಿಸುವುದು; ಐದರ ಪೂರಣ; ಐದನೆಯದು. ೪. ಶೂದ್ರ: "ತುಟಿಲ್ಸಂದಂ = ವೀರಂ; ಪಂಚಮಂ" (ಶಮದ. ಪರಿ. ೧); "ನೆಱೆ ಪಂಚಮಂ ಪದ್ಯನಕ್ಕು" (ಮಂಗರಾ. ೧೧೦-೬). ೫. ಸುಂದರವಾದುದು; ಕಾಂತಿಯುತವಾದುದು; ಮನೋಹರವಾದುದು. ೬. ನಿಪುಣ; ಜಾಣ; ಕುಶಲ. ೭. ಸಂಭೋಗ; ಮೈಥುನ. ೮. ಅಂತ್ಯಜ; ಚಂಡಾಲ: ಒಕ್ಕಲಿಗನಕ್ಕೆ ಪಂಚಮನಕ್ಕೆಮ ಸದೃಷ್ಟಿಯಾಗೆ ಕಾಲಂ ಕರ್ಚಲ್ತಕ್ಕುದು ಜೈನಂಗೆ (ಸಮಪ. ೫-೧೪೧); ಇಲ್ಲಿ ಈ ಭೂಮಿಯಲಿ ಅಧಿಕಾರ ಬಲ ದರ್ಪ ಐಶ್ವರ್ಯವಿನಿತಿರದ ಪಂಚಮನ ಗುಡಿಸಿಲಲಿ ಬೆಂಕಿಯು ವಿಧೇಯತೆಯೊಳುರಿವಂತೆ (ಕೋಗಿಲೆ. ೧೨-೨೨)೯. [ವ್ಯಾಕ] ವರ್ಗದ ಐದನೆಯ ಅಕ್ಷರ; ಅನುನಾಸಿಕ. ೧೦. [ಸಂಗೀತ] ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ ಮತ್ತು ನಿಷಾದ ಎಂಬ ಏಳು ಸ್ವರಗಳಲ್ಲಿ ಒಂದು: ಷಡ್ಜ ವೃಷಭ ಗಾಂಧಾರ ಮಧ್ಯಮ ಪಂಚಮ ಧೈವತ ನಿಷಾದಂಗಳೆಂಬ ಸಪ್ತಸ್ವರಮುಮಂ . . . ಸೌಧರ್ಮಕಲ್ಪೇಶ್ವರಂ ಪ್ರತ್ಯಕ್ಷಂ ಮಾಡಿದಾಗಳ್ (ಅಜಿಪು. ೫-೩೦ ವ); ಷಡ್ಜಮಾ ಋಷಭಮಾ ಗಾಂಧಾರಮಾ ಮಧ್ಯಮಂ ಮೀಱಿಪ್ಪ ಪಂಚಮಂ ಧೈವತಂ ಸುನಿಷಾದಮೋರಂತೆ ಸಪ್ತಸ್ವರಂಗಳಕ್ಕು (ಮಂಗರಾ. ೨೩-೩); ಷಡ್ಜ, ಮಧ್ಯಮ, ಪಂಚಮಗಳಿಗೆ ನಾಲ್ಕು ನಾಲ್ಕು ಶ್ರುತಿಗಳ ಅಂತರವಿರುವ 'ಖರಹರಪ್ರಿಯ' ರಾಗದಿಂದ ಅಭ್ಯಾಸವನ್ನಾರಂಭಿಸುವುದು ಸ್ವಲ್ಪ ಕಷ್ಟ (ಹೇಮಕೂ. ೧೦೪). ೧೧. ಒಂದು ರಾಗದ ಹೆಸರು: ಠಕ್ಕೆ ಸೈಂಧವಿ, ರಾಗದ ಪಂಚಮ ಷಾಡವ ದೇವಗುಪ್ತ ಗಾಂಧಾರ ಗುಪ್ತ ಕೌಶಿಕಗುಪ್ತ ಉಪಾಂಗವೆಂಬೆಂಟು ಷಟ್ಸ್ವರ ಜಾತಿಯಿಂದಾದ ರಾಗಂಗಳುಂ (ವಿವೇಕ. ೧೮೭).

ಪಂಚಮದ ಶನಿ = ಜನ್ಮರಾಶಿಯಿಂದ ಐದನೆಯ ಸ್ಥಾನದಲ್ಲಿರುವ ಶನಿಗ್ರಹ; P ಇವನು ಕೆಟ್ಟಫಲಗಳನ್ನುಂಟು ಮಾಡುತ್ತಾನೆ ಎಂಬ ನಂಬಿಕೆಯಿದೆ: ಪಂಚಮದ ಶನಿ ಹಂಚಿನಲ್ಲಿ ಉಣಿಸ್ಯಾನು (ಗಾದೆ). [ಸಂ.]

ಪಂಚಮಂಡಲ (ನಾ). (?): ತನ್ನ ನಾಲ್ಕುದಿಕ್ಕಿನೊಳಂ ನಾಲ್ಕು(ವಿ)ದಿಕ್ಕುಗಳೊಳಂ ಒಪ್ಪುತಿಪ್ಪ ಹಂಕಾರಂ . . . ಪಂಚಮಂಡಲ ಲಕ್ಷಣಂ (ಪ್ರತಿಷ್ಠಾ. ೧೦-೫೫); ಪಂಚಮಂಡಲತ್ರೈಗುಣಂಗಳ ಹಂಚಿ ಕೂಡಲಿಕಷ್ಟದಳಗಳ ಸಂಚು ನೋಡಿದು ಧ್ಯಾನರೂಪಕೆ ಕಾರಣವಿದಹುದು (ಗಗತಾ. ೨೦-೬೭). [ಪಂಚ? + ಮಂಡಲ]

ಪಂಚಮಂಬೊರೆ (ಕ್ರಿ). ಪಂಚಮಸ್ವರವನ್ನು ಹೊಂದು; ಪಂಚಮಸ್ವರದಿಂದ ಕೂಡಿರು: ಪುರವನಿತಾಜನಂ ರುಚಿರಹರ್ಮ್ಯ ಗೃಹಾಗ್ರತಳಂಗಳಲ್ಲಿಗಾವರಿಸುವ ಪಂಚಮಂಬೊರೆದ ನುಣ್ಚರಮಂ ನಸುಗೇಳ್ದು ಸೋಲ್ತು (ಚಂದ್ರಪು. ೧-೧೨೪). [ಪಂಚಮ + ಪೊರೆ$_2$]

ಪಂಚಮಕಾರ (ನಾ). ಮತ್ಸ್ಯ, ಮಾಂಸ, ಮದ್ಯ, ಮುದ್ರೆ ಮತ್ತುಮೈಥುನ ಎಂಬ ಐದು ಬಗೆಯ ತಾಂತ್ರಿಕ ಆಚರಣೆಗಳು: ಪಂಚ ಮಕಾರಗಳು (ಮತ್ಸ್ಯ, ಮಾಂಸ, ಮದ್ಯ, ಮುದ್ರೆ, ಮೈಥುನ) ಈ ತಾಂತ್ರಿಕ ಆಚರಣೆಗಳಲ್ಲಿ ಸೇರಿಹೋಗಿ ಅನೇಕ ಭೀಭತ್ಸ ಕರ್ಮಗಳು ಕಾಣಿಸಿಕೊಂಡವು (ಕಶಾಅ. ೧೨೦); ಪಂಚ ಮಕಾರ (ತಾಂತ್ರಿಕ)— ಮದ್ಯ; ೨. ಮಾಂಸ; ೩. ಮತ್ಸ್ಯ; ೪. ಮುದ್ರಾ; ೫. ಮೈಥುನ (ನಾನಾಶ. ೨೮೮). [ಪಂಚ$_2$ + ಮಕಾರ]

ಪಂಚಮಕಾಲ (ನಾ). [ಜೈನ] ಅವಸರ್ಪಿಣಿಯಲ್ಲಿ ಬರುವ ಸುಷಮಸುಷಮ, ಸುಷಮ, ಸುಷಮದುಷ್ಷಮ, ದುಷ್ಷಮ ಸುಷಮ, ದುಷ್ಷಮ, ಅತಿದುಷ್ಷಮ ಎಂಬ ಕಾಲಭೇದಗಳಲ್ಲಿ ಐದನೆಯದು: ಧರಣೀಪಾಲಕಮುನಿಪರ್ ಪಂಚಮಕಾಲದೊಳಣ ಮಾಗರಲ್ತೆ ಋದ್ಧಿಪ್ರಾಪ್ತರ್ (ಅದಿಪು. ೧೫-೪೧). [ಪಂಚಮ + ಕಾಲ]

ಪಂಚಮಗತಿ (ನಾ). ಐದನೆಯ ಅವಸ್ಥೆ; ದೇವ, ಮಾನುಷ, ತಿರ್ಯಂಚ ಮತ್ತು ನಾರಕ ಎಂಬ ನಾಲ್ಕು ಅವಸ್ಥೆಗಳನ್ನು ಮೀರಿದ ಅವಸ್ಥೆ; ಮೋಕ್ಷ: ಈ ನಾರಕ ತಿರ್ಯಗ್ಗತಿಗೀ ನರಸುರಗತಿಗೆ ಪೇಸಿದೆಂ ದರ್ಶನದಿಂ ಜ್ಞಾನದಿನೊಪ್ಪುವ ಪರಮಸ್ಥಾನಮನಾಂ ಪಡೆವನಕ್ಕೆ

ಪಂಚಮಗತಿಯಂ (ಅಜಿಪು. ೨-೭೩) ; ಅಮಳಜ್ಞಾನಂಗಿದು ಪಂಚಮಗತಿ ರಾಜ್ಯಾಭಿಷೇಕಂ (ಚಂದ್ರಪು. ೧೨-೧೧೯) ; ಅಂತು ಪಂಚಶರಪ್ರಮಾದ ವಿಜಯಿ ಪಂಚಮಗತಿಪ್ರಾಪ್ತಿಗೆ ಸಂಚಕರಮಂ ಕೊಳ್ವಂತೆ ದೀಕ್ಷೆಯಂ ಕೆಯ್ಕೊಳಲೊಡಂ (ಪುಷ್ಪಪು. ೧೩-೧೧೩ ವ). [ಪಂಚಮ+ಗತಿ]

ಪಂಚಮಗಾಂಧಾರ (ನಾ). [ಸಂಗೀತ] ಒಂದು ರಾಗದ ಹೆಸರು : ನರ್ತಕಿ . . . ಪಂಚಮಭ್ರಮಾಳ ಪಂಚಮಗಾಂಧಾರ ರೂಪಸಾಧಾರಣ ವೆಂಬೇಳು ಸಪ್ತಸಾಧಾರಣಜಾತಿಯಿಂದಾದ ರಾಗಂಗಳು (ವಿವೇಕ. ೧೮೭).

[ಪಂಚಮ+ಗಾಂಧಾರ]

ಪಂಚಮಗಾಂಧಾರಿ (ನಾ). [ಸಂಗೀತ] ಒಂದು ರಾಗದ ಹೆಸರು : ಗಾಂಧಾರಿ ರಕ್ಷಗಾಂಧಾರಿ. . .ಮಧ್ಯಮಗಾಂಧಾರಿ, ದಿವ್ಯಾವತಿ, ಮಧ್ಯಮ ದಿವ್ಯಾವತಿ, ಪಂಚಮಗಾಂಧಾರಿ . . . ಕೌಶಿಕೆ ಎಂಬ ಹತ್ತೇ ಮಧ್ಯಮ ಗ್ರಾಮದಿಂದಾದ ರಾಗಂಗಳು (ವಿವೇಕ. ೧೮೭).

[ಪಂಚಮ+ಗಾಂಧಾರಿ]

ಪಂಚಮಜಲಧಿ, ಪಂಚಮಜಳಧಿ (ನಾ). [ಜೈನ] ಲವಣೋದ, ಕಾಲೋದ, ಪುಷ್ಕರೋದ, ವಾರುಣೋದ, ಕ್ಷೀರೋದ, ಘೃತೋದ ಮತ್ತು ಕ್ಷೋಧೋದ ಎಂಬ ಏಳು ಸಮುದ್ರಗಳಲ್ಲಿ ಐದನೆಯ ಸಮುದ್ರ; ಕ್ಷೀರಸಮುದ್ರ: ನೀರೊಳ್ ಪಂಚಮಜಲಧಿಯ ನೀರೆ ಪವಿತ್ರಂ (ಶಾಂತಿಪು. ೧೦-೩೮); ಪಂಚಮಜಲಧಿಯ ಪಾಲ್ಮೊಗೆದಂಚಿರ ಮಾದೊಡೆ ಬಟಿಕ್ಕೆ ತೀರ್ಥಜಲಂಗಳ್ ಪಿಂಚಿದರ್ಗಿಲ್ಲೆಂಬಂತಿರೆ (ಅನಂಪು. ೫-೭೫). **ಪಂಚಮಜಳಧಿ :** ಅಮಳಜ್ಞಾನಂಗಿದು ಪಂಚಮಗತಿ ರಾಜ್ಯಾಭಿಷೇಕಮಿಂತಿಲ್ಲಿಗೆ ಪಂಚಮಜಳಧಿ ಜಳಮೆ ಯೋಗ್ಯಂ ಸುಮರ್ಜನ ಕ್ಕೆಂದು ಬೆಸಸಿದಂ ಸೌಧರ್ಮಂ(ಚಂದ್ರಪು. ೧೨-೧೧೯).

[ಪಂಚಮ+ಜಲಧಿ]

ಪಂಚಮಜಲನಿಧಿ (ನಾ). = ಪಂಚಮಜಲಧಿ : ಪಂಚಮಜಲನಿಧಿ ಯಲ್ಲದೆ ಪಂಚಮಗತಿಪತಿಯ ಸವನಕೆಯ್ದಿಸವು ಪಯಃಸಂಚಯಮನುಟಿದ ತೊಱೆ ಕೆಱೆ ಬೆಂಚೆ ಕೊಳಂ ಕೂಪಂ (ಪುಷ್ಪಪು. ೧೧-೭).

[ಪಂಚಮ+ಜಲನಿಧಿ]

ಪಂಚಮಜಳಧಿ 'ಪಂಚಮಜಲಧಿ' ನೋ.

ಪಂಚಮಠ (ನಾ). ಊರಿನ ಹಿರಿಯ ಮಠ : ಸಮಸ್ತನಗರವೂ ಸೇರಿ ಆ ಊರಿನ ಪಂಚಮಠ, ಹಿರಿಯ ಮಠ, ಭೇರುಂಡೇಶ್ವರದಾಚಾರ್ಯ ಮೂಲಿಗ ಮಧುಕೇಶ್ವರಪಂಡಿತದೇವರು ಮುಂತಾದ ಮಠಾಧಿಪತಿಗಳ ಮುಂದೆ, ಜೀರ್ಣೋದ್ಧಾರದ ಕಾರ್ಯವನ್ನು 'ತಮ್ಮ ಧರ್ಮವಾಗಿ ಕೊಂಡು' . . . ಅದಕ್ಕೆ ಗವರೇಶ್ವರದೇವರೆಂದು ಹೆಸರಿಡುತ್ತಾರೆ (ಕಶಾಅ. ೧೭೮). [ಪಂಚ$_3$+ಮಠ]

ಪಂಚಮಠಸ್ಥಾನ (ನಾ). = ಪಂಚಮಠ: ರಾಜಗಾವುಣ್ಡನುಂ ××× ವಗಾವುಣ್ಡಗಳುಂ ಪಂಚಮಠಸ್ಥಾನಮುಖ್ಯವಾಗಿ ದೇವರು ನಿವೇದ್ಯ ××× ವಳ್ಳದಿಂ . . . ಸರ್ವ್ವನಮಸ್ಯವಾಗಿ ಬಿಟ್ಟ ಕಂಮ್ಮ (ಸೌಇಇ. XX, ೩೮-೪೧; 1058); ಇಂತಿನಿತುಮಂ ನಗರಮಹಾಜನ ಪಂಚ ಮಠಸ್ಥಾ[ನಮಾಚಂ]ದ್ರಾರ್ಕ್ಕಸ್ಥಾಯಿವರಂ ನಡೆಯಿಸುವರು (ಕಇಅ. ೯೨-೧-೫೯ ; 1082) ; ಆ ಮಹಾರಾಜಧಾನಿ ಬಳ್ಳಿಗಾವೆಯ ಪಂಚ ಮಠಸ್ಥಾನದೊಳ್ ಪಿರಿಯ ಮಠದಾಚಾರ್ಯ್ಯ ಶಾನ್ತಶಿವಪಣ್ಡಿತರುಂ (ಎಕ. VII, ತಿಕಾರಿ. ೯೯-೪೨ ; 1113). [ಪಂಚಮಠ+ಸ್ಥಾನ]

ಪಂಚಮತಂತಿ (ನಾ). ವೀಣೆಯಲ್ಲಿ ಪಂಚಮಸ್ವರವನ್ನುಂಟು ಮಾಡುವ ತಂತಿ : ವೆಂಕಟರಮಣದಾಸರು . . . ಪಂಚಮತಂತಿಯ ನ್ನೊಮ್ಮೆ ಸಾರಣೆಯ ತಂತಿಯನ್ನೊಮ್ಮೆ ಮೀಟುತ್ತಾ ನುಡಿಸಿದರು (ಸಂಗೀತ. ೬೯). [ಪಂಚಮ+ತಂತಿ]

ಪಂಚಮದಳ (ನಾ). ಗೂಢಚಾರರ ತಂಡ,—ಸೈನ್ಯ : ಆ ಮರು ದಿನ ಪ್ರತಾಪಚಂದ್ರ ಬ್ರಿಟಿಷರ 'ಪಂಚಮದಳ'ಕ್ಕೆ ಸೇರಿದವನೆಂಬ ಆರೋಪವೂ ಹುಟ್ಟಿಕೊಂಡಿತು (ಗೊಂಡಾರ. ೫).

[ಪಂಚಮ+ದಳ$_2$(=ದಲ)]

ಪಂಚಮಭ್ರಮಾಳ (ನಾ). [ಸಂಗೀತ] ಒಂದು ರಾಗದ ಹೆಸರು : ನರ್ತಕಿ . . . ಪಂಚಮಭ್ರಮಾಳ ಪಂಚಮಗಾಂಧಾರ ರೂಪಸಾಧಾರಣ ವೆಂಬೇಳು ಸಪ್ತಸಾಧಾರಣಜಾತಿಯಿಂದಾದ ರಾಗಂಗಳು (ವಿವೇಕ. ೧೮೭).

[ಪಂಚಮ+ಭ್ರಮಾಳ]

ಪಂಚಮಮಾಂಗಲ್ಯ (ನಾ). ಶುಭಕರವಾದ ಉತ್ಸವ ; ಮಂಗ ಳೋತ್ಸವ : ಪಂಚಮಮಾಂಗಲ್ಯದೊಳಿಂದ್ರಗಾಯಕರದೇನಿಂಬಿಂ ನಯಂ ಬೆತ್ತರೋ (ಶಾಂತಿಪು. ೧೦-೩೫). [ಪಂಚಮ+ಮಾಂಗಲ್ಯ]

ಪಂಚಮಲ (ನಾ). ೧. ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ—ಇವುಗಳಿಂದ ಬರುವ ದೇಹದ ಐದು ಬಗೆಯ ಮಲಗಳು: ಏರಂಡಮೂಲಮಂ ಹ್ರೂಂ ರೂಂ ಎನುತ್ತೆ ರವಿವಾರದೊಳ್ ತಂದಲ್ಲಿ ಪಂಚ ಮಲಮಂ ಸೇರಿಸುತ್ತುದಯದೊಳ್ ನಾರಿಗಿಕ್ಕಲು ವಶ್ಯಂ(ಜನವ.೧೩-೪೭); ರುದ್ರಜಟಿಯಂ ಕೃತಾಂಜಲಿ ಎಂದು ಮುಟ್ಟಿದರೆ ಮುರುಟುವನು ತುಪ್ಪದಿಂ ಜೇನುತುಪ್ಪದಿಂ ಕೂಡಿ ತನ್ನ ದೇಹದ ಪಂಚಮಲಮಂ ಕೂಡಿ ತಿಲಕವನಿಡಲು ತ್ರೈಲೋಕ್ಯವಶಮಪ್ಪುದು (ಕಾಮಶಾ. ೨೬೨). ೨. [ವೀಶೈ]ರೋಧಮಲ, ಬಿಂದುಮಲ, ಕರ್ಮಮಲ, ಮಾಯಾ ಮಲ ಮತ್ತು ಆಣವಮಲಗಳೆಂಬ ಐದು ಬಗೆಯ ಮಲಗಳು : ಅಷ್ಟಭೋಗಂಗಳ ಶಕ್ತಿ ಕೆಟ್ಟಲ್ಲಿ ರೋಧಮಲ ನಷ್ಟ . . . ಪದವಸ್ತುವಿನ ಕಳೆ ತನ್ನಲ್ಲಿ ಬೆಳಗಿದಲ್ಲಿ ಆಣವಮಲ ನಷ್ಟ ಇಂತೀ ಪಂಚಮಲಂಗಳು ನಷ್ಟ ವಾದಲ್ಲಿ ಸೌರಾಷ್ಟ್ರಸೋಮೇಶ್ವರಲಿಂಗ ಸಮ್ಯಕ್‌ದೃಷ್ಟ (ಅದವ. ೧೧೬-೧೯೫). [ಪಂಚ$_2$+ಮಲ$_3$]

ಪಂಚಮವೇದ (ನಾ). ೧. ನಾಲ್ಕುವೇದಗಳಂತೆಯೆ ಧರ್ಮವನ್ನು ಬೋಧಿಸುವ ಪುರಾಣಗಳು : ಪುರಾಣಗಳನ್ನು ಇಂಥವರೇ ರಚಿಸಿದ ರೆಂದು ಹೇಳಲಾಗುವುದಿಲ್ಲ . . . ಅದ್ದರಿಂದಲೇ ಇವುಗಳನ್ನು ಪಂಚಮ ವೇದವೆಂದು ಕರೆದಿರುವುದು (ಭಾರದ. ೧೪೭). ೨. ಮಹಾಭಾರತ : ಪಂಚಮವೇದವೆಂದು ಪ್ರಖ್ಯಾತವಾಗಿರುವ ಮಹಾಭಾರತದಲ್ಲಿರುವ ಧರ್ಮ ವ್ಯಾಧೋಪಾಖ್ಯಾನವೊಂದೇ ಸಾಕು ಜಾತಿಗಳ ಗೊಂದಲದಿಂದ ಭಾರತೀಯ ಸಾಮಾಜಿಕಜೀವನವು ಹಾಳಾಯಿತೆಂದು ಆಕ್ಷೇಪಿಸುವವರಿಗೆ ಸಮಾಧಾನ ಹೇಳುವುದಕ್ಕೆ (ಭಾರದ. ೩೮೯) ; ಉತ್ತಮಸಂದೇಶವನ್ನು ನೀಡುವ ಭಗವದ್ಗೀತೆಯೊಡನೆ ಕೂಡಿದ ಮಹಾಭಾರತ ಪಂಚಮವೇದವೆನಿಸಿ ಕೊಂಡಿತು (ಯಕ್ಸಾರ. ೧೦೩ ಪೀಠಿಕೆ). ೩. ನಾಟಕ : ಭರತನಾಟ್ಯ ಶಾಸ್ತ್ರದಲ್ಲಿ ನಾಟಕವನ್ನು ಸಾರ್ವವರ್ಣಿಕ, ಪಂಚಮವೇದ ಎಂದು ಮೊದಲಾಗಿ ಬಣ್ಣಿಸಲಾಗಿದೆ (ಭಾರದ. ೫೭೦). [ಪಂಚಮ+ವೇದ]

ಪಂಚಮಶ್ರುತಿ (ನಾ). ೧. = ಪಂಚಮವೇದ ೨: ಸ್ತುತಿಗೆಯ್ವಂ ಕೃತ ಪಂಚಮಶ್ರುತಿಪುರಾಣವ್ಯಾಸನಂ ವ್ಯಾಸನಂ (ಜಗವಿ. ೧-೮) ; ತಿಳಿಯ ಹೇಳುವೆ ಕೃಷ್ಣಕಥೆಯನು ಇಳೆಯ ಜಾಣರು ಮೆಚ್ಚುವಂತಿರೆ ನೆಲೆಗೆ ಪಂಚಮಶ್ರುತಿಯನೊರೆವೆನು ಕೃಷ್ಣ ಮೆಚ್ಚಲಿಕೆ (ಕುವ್ಯಾಅ. ೧-೧೩). ೨. [ಸಂಗೀತ] ಪಂಚಮಸ್ವರದಿಂದ ಪ್ರಾರಂಭವಾಗುವ ನಾದ ವಿಶೇಷ,—ಶ್ರುತಿ : ಪಂಚಮಶ್ರುತಿ ತಂಬೂರಿ (ಸಂಗೀತ. ೧೧೦).

[ಪಂಚಮ+ಶ್ರುತಿ]

ಪಂಚಮಸಮುದ್ರ (ನಾ). = ಪಂಚಮಜಲಧಿ : ಪಂಚಮಸಮುದ್ರ ದೊಳ್ ಕೂಡಿ ಮುನೀಂದ್ರನನಭಿವಂದಿಸಿ ಬಲಗೊಂಡು ನಾಕಪತಿಗಳ್ ದಿವಕ್ಕೆ ತಳರ್ವುದುಂ (ಶಾಂತಿಪು. ೯-೬೭). [ಪಂಚಮ+ಸಮುದ್ರ$_1$]

ಪಂಚಮಸಾಧಾರಣ (ನಾ). [ಸಂಗೀತ] ಒಂದು ಬಗೆಯ ರಾಗ : ಷಡ್ಜಗ್ರಾಮ . . . ಪಂಚಮಸಾಧಾರಣ . . . ಮಾಳವ ಕೌಶಿಕಿಯೆಂಬಾಱು ಶುದ್ಧಜಾತಿಯಿಂದಾದ ರಾಗಂಗಳು (ವಿವೇಕ. ೨೩೩).
[ಪಂಚಮ + ಸಾಧಾರಣ]

ಪಂಚಮಸ್ಥಾನ (ನಾ). = ಪಂಚಮಗತಿ : ಪಂಚಮಸ್ಥಾನಗಳ ಪಡೆದರ . . . ತೀರ್ಥಕರೊಲಿದು ಭಜಿಸುವೆ ಚಂಚಲವನಳಿದು (ಬಿಜ್ಜಪು. ೧-೩). [ಪಂಚಮ + ಸ್ಥಾನ]

ಪಂಚಮಸ್ವನ (ನಾ). = ಪಂಚಮಶ್ರುತಿ ೨ : ಸತ್ತಿಗೆ ಗಗ್ಗರಂ ಕರುಳ ಬಕ್ಕಳೆ . . . ನೆತ್ತರ ತಳ್ತ ಬಲ್ದಲೆಯ ಬಿಂದಿಗೆ ಪಾವುಗೆ ಪಂಚಮಸ್ವನಂ ಬೆತ್ತದ ಕೋಲಿವೊಂದಿ ನಿಲೆ ಸಾಧಕಿ ಬತ್ತಲೆ ಬರ್ಪಳೊಪ್ಪಿದಳ್ (ಕಾವ್ಯಸಾ. ೫೩೩). [ಪಂಚಮ + ಸ್ವನ]

ಪಂಚಮಸ್ವರ (ನಾ) ೧. = ಪಂಚಮ ೧೦. : ವರಾಲೀ ಮಧ್ಯಮವೊಂದೇ ಪಂಚಮ (ಸ್ವರ)ದ ಪ್ರದೇಶದಲ್ಲಿ ಹುಟ್ಟುತ್ತದೆ (ಚತುಪ್ರ. ೨೧). ೨. = ಪಂಚಮಶ್ರುತಿ ೨ : ಪಂಜರದಲ್ಲಿ ಕಾಗೆ ಇಟ್ಟರೆ ಪಂಚಮಸ್ವರ ಕೊಟ್ಟೀತೆ ? (ನೀತಿಚಿಂ. X, ೮). [ಪಂಚಮ + ಸ್ವರ$_2$]

ಪಂಚಮಹಪಾತಕ (ನಾ) ೧. = ಪಂಚಮಹಾಪಾತಕ ೧: ಆ ತರುಣಿಗಂ ಕೆಲವು ಕಾಲಕ್ಕೆ ಪಂಚಮಹಪಾತಕಂಗಳೆ ಕೂಡಿ ಪುಟ್ಟುವಂದದೊಳೊಗೆದರೈ ತನುಜರೈವರು (ವೀಶೈಪು. ೨-೬-೧೬). ೨. = ಪಂಚಮಹಾಪಾತಕ ೩ : ಪಂಚಕರ ನಿಜವೇದಬಾಹಿರ ಹಂಚುಗಳ ಸನ್ಮಾರ್ಗವಿಲ್ಲದ ಪಂಚಮಹಪಾತಕರ ಜೈನರ ಹಿಂಡು ನೆರೆದು (ಬಸಪು. ೫೧-೫೪).
[<ಸಂ. ಪಂಚಮಹಾಪಾತಕ]

ಪಂಚಮಹವಾದ್ಯ (ನಾ). = ಪಂಚಮಹಾವಾದ್ಯ : ಮೂಡಲರು ಜೋದಯವದತ್ತಲಿತ್ತಂ ಹರಿದು ತೀಡಿತ್ತು ತಂಬೆಲರು ಪಂಚಮಹವಾದ್ಯಗಳು ನಾಡೆ ಮೊಳಗಿದವು (ಹಚಕಾ. ೪-೫೫); ಮುಂಗಡೆಯೊಳುಲಿವ ಪಂಚಮಹವಾದ್ಯದಿ[ಪಾಠಾಂ. ಪಂಚಮವಾದ್ಯದಿಂ]ನವರಸಂಗಳಭಿನಯಿಸುವೆಡೆಯೊಳು (ಭಾವಚಿಂ. ೧-೩೬). [<ಸಂ. ಪಂಚಮಹಾವಾದ್ಯ]

ಪಂಚಮಹಾಕಲ್ಯಾಣ (ನಾ). = ಪಂಚಕಲ್ಯಾಣ ೩ : ಉಪೋಷಿತವ್ರತಮಂ ಕೈಕೊಂಡು . . . ಪಂಚಮಹಾಕಲ್ಯಾಣಂಗಳುಮಂ ನಾಮೋದ್ದೇಶಂಗೆಯ್ದು ಪಾರಣೆಯ ದಿವಸಮಲ್ಲದಱುವತ್ತು ಮೂಱುದಿವಸದುಪವಾಸದಿಂ ಸಮೆಯೆ (ಆದಿಪು. ೩-೪೦ ಪ); ದೇವೇಂದ್ರರಿಂ ವರ್ಣಸಲ್ಪಟ್ಟ ಕೀರ್ತಿಯನುಳ್ಳ ಪಂಚಮಹಾಕಲ್ಯಾಣಂ ಗಣಮಹಾಪೂಜೆಗಳನೆಯ್ದಿದ ಪರಮಜಿನೇಶ್ವರಂ (ಪ್ರತಿಷ್ಠಾ. ೮-೧೧). [ಪಂಚ$_2$ + ಮಹಾಕಲ್ಯಾಣ]

ಪಂಚಮಹಾನಕ (ನಾ). = ಪಂಚಮಹಾವಾದ್ಯ : ಮಹಾಪತಾಕೆಗಳುಮೊಪ್ಪುವ ಪಂಚಮಹಾನಕಂಗಳುಂ ಸುರುಚಿರಚಾಮರಪ್ರಕರಮುಂ ಧವಲಾತಪವಾರಣಂಗಳುಂ (ಜೀವಸಂ. ೧-೩೩). [ಪಂಚ$_2$ + ಮಹಾನಕ]

ಪಂಚಮಹಾನಿನದ (ನಾ). ಪಂಚಮಹಾವಾದ್ಯಗಳ ಧ್ವನಿ : ಕೋಂಟೆಯೊಳಾಳ್ವರಿಯ ಮೇಲೆ ಸೇನೆಯಂ ನೆರೆಯಿಸಿ ಬಳಸುತಸಮಾನ ವಿಕ್ರಮದಿಂದೆ ಪಂಚಮಹಾನಿನದವಾಕ್ರಮಿಸುತಿರೆ ಬಲುದುರ್ಗಮಂ ಬಲಿದು (ಬಸಪು. ೧೬-೧೪). [ಪಂಚ$_2$ + ಮಹಾನಿನದ]

ಪಂಚಮಹಾಪಾತಕ (ನಾ). ೧. ಬ್ರಹ್ಮಹತ್ಯೆ (ಬ್ರಾಹ್ಮಣನನ್ನು ಕೊಲ್ಲುವುದು), ಸುರಾಪಾನ (ಹೆಂಡ ಕುಡಿಯುವುದು), ಸ್ವರ್ಣಸ್ತೇಯ (ಚಿನ್ನವನ್ನು ಕದಿಯುವುದು), ಗುರುಪತ್ನೀಗಮನ (ಗುರುವಿನ ಹೆಂಡತಿಯನ್ನು ಕೂಡುವುದು) ಮತ್ತು ಇವುಗಳನ್ನು ಮಾಡಿದವರ ಸಂಸರ್ಗ — ಇವುಗಳಿಂದುಂಟಾಗುವ ಐದು ದೊಡ್ಡ ಪಾಪಗಳು : ಪಂಚಮಹಾಪಾತಕವಂಜುವುದು ಕೂಡಲಸಂಗನ ನಾಮಕ್ಕಯ್ಯಾ (ಬಸವ. ೭೫); ಪಂಚಮಹಾಪಾತಕಂಗಳ ಮಾಡಿದವನಾದಡಾಗಲಿ. . . ಒಬ್ಬ ಶಿವಭಕ್ತನ ದರ್ಶನವಾದಲ್ಲಿ ಆ ಪಾತಕಂಗಳು ಬೆಂದು ಭಸ್ಮವಾಗಿಹೋಗುವವು ನೋಡಾ (ಅಖಂಡೇ. ೫೭-೫). ೨. ಪರಧನ, ಪರಸತಿ, ಪರದೈವ, ಪರನಿಂದೆ ಮತ್ತು ಪರಹಿಂಸೆ ಎಂಬ ಐದು ಪಾಪಗಳು: ಪರಧನ ಪರಸತಿ ಪರದೈವ ಪರನಿಂದೆ ಪರಹಿಂಸೆ ಎಂಬ ಪಂಚಮಹಾಪಾತಕಂಗಳೊಡನೆ ಚರಿಸುವಂತಹದ್ದೇ ವರ್ತಿನಿ ಎಂಬ ಮದವು (ವಚಶಾ. II, ೧೨೧). ೩. ಮೇಲ್ಕಂಡ ಐದು ಮಹಾಪಾಪಗಳನ್ನು ಮಾಡಿರುವ ವ್ಯಕ್ತಿ ; ಬಹಳ ದೊಡ್ಡ ಪಾಪಗಳನ್ನು ಮಾಡಿರುವ ವ್ಯಕ್ತಿ : ಈ ಧರ್ಮಮಾನ್ನಿರಕ್ಷಿಚ್ಚಿದೋನ್ನಡಿ ಎನ್ಮಂಡೆಲೊ ಈ ಧರ್ಮಮಾನ್ನಬಾವೋನ್ ಪಞ್ಚಮಹಾಪಾತಕನಕ್ಕು (ಎಕ. X, ಕೋಲಾರ. ೬-೧೧; 753) ; ನಿಮ್ಮಡಿ ನಿಮ್ಮನಾ ಪಂಚಮಹಾಪಾತಕನ ಮನೆಗೊಡಗೊಂಡುಯ್ದುನೇಕಾಪವಾದೋಪಸರ್ಗಂಗಳಂ ಮಾಡಿದೆಂ (ಸುಕುಮಾ. ೪-೩೮ ಪ) ; ಅಂಗದ ಮೇಲೆ ಲಿಂಗಪ್ರತಿಷ್ಠೆಯ ಮಾಡಿದ ಬಳಿಕ ಒಳಗೆ ಪ್ರಾಣಲಿಂಗವುಂಟೆಂಬ ಪಂಚಮಹಾಪಾತಕರ ನುಡಿಯ ಕೇಳಲಾಗದು (ಚನ್ನವ.ಕ. ೧೯೫-೪೩೪) ; ಗುರುವಿನಲ್ಲಿ ಗುಣವನಱಸಿದಡೆ ಒಂದನೆಯ ಪಾತಕ . . . ಪ್ರಸಾದದಲ್ಲಿ ರುಚಿಯನಱಸಿದಡೆ ಐದನೆಯ ಪಾತಕ ಇಂತೀ ಪಂಚಮಹಾಪಾತಕರ ಎನಗೊಮ್ಮೆಯೂ ತೋಱದಿರಯ್ಯ (ಅಖಂಡೇ. ೭೫-೫೦). ೪. [ಜೈನ] ಬಾಲವಧೆ, ಸ್ತ್ರೀವಧೆ, ಗೋವಧೆ, ಬ್ರಾಹ್ಮಣವಧೆ ಮತ್ತು ಋಷಿವಧೆ ಎಂಬ ಐದು ಮಹಾಪಾಪಗಳು : ಮಧು ಮದ್ಯ ಮಾಂಸಂಗಳಂ ಸೇವಿಸುವರುಂ ಬಾಲವಧೆ ಸ್ತ್ರೀವಧೆ ಗೋವಧೆ ಬ್ರಾಹ್ಮಣವಧೆಯೆಂದೀ ಪಂಚಮಹಾಪಾತಕಂಗಳಂಗೆಯ್ದುವರುಂ . . . ದುಃಖಂಗಳನನುಭವಿಸುವರ್ (ವಡ್ಡಾರಾ. ೯೬-೨೩).
[ಪಂಚ$_2$ + ಮಹಾಪಾತಕ]

ಪಂಚಮಹಾಪಾತಕಿ (ನಾ). = ಪಂಚಮಹಾಪಾತಕ ೩ : ವಕ್ಷಃಸ್ಥಳದ ಶ್ರೀಲಾಂಛನಮಂ ಕಂಡು ಜಾತಿಸ್ಮರೆಯಾಗಿ ಮೂರ್ಛೆಗೆಸಂದು ನೀಡಱಿಂದೆಟ್ಟರ್ತು ಹಾ ಪಂಚಮಹಾಪಾತಕಿಯೆನೆನ್ನ ಮಗನಂ ಪೋಟ್ಟು ತಿಂದೆನೆಂದು ತನ್ನಂ ತಾಂ ನಿಂದಿಸಿ (ವಡ್ಡಾರಾ. ೪೮-೨೮) ; ಪಂಚಮಹಾಪಾತಕಿಯಂ ವಂಚಕನಂ ನುಡಿದು ಪುಸಿವನಂ ಸಂಗರದೊಳ್ ಹಿಂಚುವನಂ ಪುಟುಗೊಂಡದ ಸಂಚದೊಳಿಕ್ಕಾವ ಕಾಲಮೇಟದ ತೆಱದಿಂ (ದಶಕು. ೩-೧೮) ; ಪಂಚಮಹಾಪಾತಕಿಗೆ ಎಂತು ಬುದ್ಧಿಯ ಪೇಳೆ ತನ್ನ ವಂಚನೆಯಿಂದಲಿ ತನಗೆ ತಾನೆ ಕೆಟ್ಟುಹೋಹನು (ಪುರಂದ. ೫-೫೬ ಪಲ್ಲವಿ). [ಸಂ. ಪಂಚಮಹಾಪಾತಕಿನ್]

ಪಂಚಮಹಾಪಾಪ (ನಾ). = ಪಂಚಮಹಾಪಾತಕ ೧ : ಪ್ರಪಂಚ ಬಿಡುತ್ತೇನೆಂದು ಪಂಚಮಹಾಪಾಪ ಹೊಂದಿಕೊಂಡ (ಗಾದೆ).
[ಪಂಚ$_2$ + ಮಹಾಪಾಪ]

ಪಂಚಮಹಾಭೂತ (ನಾ). = ಪಂಚಭೂತ : ಆದರ ದೆಸೆಯಿಂದ ಪಂಚಮಹಾಭೂತಗಳು . . . ಇಪ್ಪತ್ತು ನಾಲ್ಕು ತತ್ವಗಳೂ ತತ್ವಾಭಿಮಾನಿ ದೇವತೆಗಳೂ ಹುಟ್ಟಿದರು (ಹಸಾರ. ೩-೧ ವಿಶೇಷಾರ್ಥ) ; ಪಂಚತನ್ಮಾತ್ರೆಗಳಿಂದ ಆಕಾಶ, ವಾಯು, ತೇಜಸ್ಸು, ಜಲ, ಪೃಥ್ವಿ ಎಂಬ ಪಂಚಮಹಾಭೂತಗಳು ಹುಟ್ಟುವುವು (ಹಿಂದಸಾ. ೫೬) ; ಪುರುಷ, ಅವ್ಯಕ್ತ ಹಾಗೂ ಪ್ರಕೃತಿ, ಅಹಂಕಾರ, ಪಂಚಮಹಾಭೂತಗಳು . . . ಸೇರಿದರೆ ತತ್ವ (ಪ್ರವಾಇ. I, ೩೪೦). [ಪಂಚ$_2$ + ಮಹಾಭೂತ]

ಪಂಚಮಹಾಯಜ್ಞ (ನಾ). ೧. ದೇವತೆಗಳ ಪ್ರೀತ್ಯರ್ಥವಾಗಿ ಗೃಹಸ್ಥನು ನಡೆಸಬೇಕಾದ ದೇವಯಜ್ಞ (ಹೋಮ), ಪಿತೃಯಜ್ಞ (ತರ್ಪಣ), ಭೂತಯಜ್ಞ (ಬಲಿ), ಮನುಷ್ಯಯಜ್ಞ (ಅತಿಥಿ ಪೂಜನ) ಮತ್ತು ಬ್ರಹ್ಮಯಜ್ಞ (ಅಧ್ಯಾಪನ) ಎಂಬ ಐದು ಬಗೆಯ ಧಾರ್ಮಿಕಕೃತ್ಯಗಳು : ಪ್ರತಿದಿನ ಕ್ರಿಯಮಾಣ

ಪಂಚಮಹಾಯಜ್ಞ ಪವಿತ್ರೀಕ್ರಿ . . . ದಿವಾಕರಭಟ್ಟೋಪಾಧ್ಯಾಯರ್ಗ್ಗೆ . . . ಬಿಟ್ಟ ತೋಂಟಂ (ಸೌಇಇ. XX, ೬೫-೩; 1101); ಪಂಚಮಹಾಯಜ್ಞ ಗೃಹಸ್ಥನಿಗೆ ವಿಧಿವಿಹಿತ (ಪುಕ್ಸಾರ. ೯೦ ಪೀಠಿಕೆ); ಸಕಲಧರ್ಮಶಾಸ್ತ್ರಗಳಲ್ಲೂ ಶೂದ್ರರಿಗೆ ಪಂಚಮಹಾಯಜ್ಞಗಳು . . . ವೇದೋಕ್ತ ಧರ್ಮಾಧಿಕಾರವು ಅಪಾರವಾಗಿರುವುದು (ಹಿಂದಸಾ.೧೬೨). ೨. [ವೀಶೈ] ಭಕ್ತನು ಆಚರಿಸಬೇಕಾದ ಶಿವವ್ರತ, ಶಿವಧ್ಯಾನ, ಶಿವಜ್ಞಾನ, ಶಿವಭಕ್ತಿ ಮತ್ತು ಶಿವಾರ್ಚನ ಎಂಬ ಐದು ಬಗೆಯ ಪತಿಧರ್ಮಗಳು : ಶ್ರೀ ರೇಣುಕಾಚಾರ್ಯರು . . . ಈ ಐದು ಪತಿಧರ್ಮಗಳನ್ನೇ ಪಂಚಮಹಾಯಜ್ಞಗಳೆಂದು ವಿವರಿಸಿರುತ್ತಾರೆ (ಭಾರದ. ೨೪೧).

[ಪಂಚ$_2$ + ಮಹಾಯಜ್ಞ]

ಪಂಚಮಹಾವಾದ್ಯ (ನಾ). ರಾಜಮರ್ಯಾದೆಯನ್ನು ಸೂಚಿಸುವ ಸಲುವಾಗಿ ಬಾರಿಸುವ ಶೃಂಗವಾದ್ಯ(ಕೊಂಬು), ತಮ್ಮಟ (ಹಲಗೆ), ಶಂಖ (ಧವಳ), ಭೇರಿ(ಬಾಜಾ), ಜಯಘಂಟೆ (ಜಾಗಟೆ) ಅಥವಾ ಭೇರಿ, ಶಂಖ, ಕಹಳೆ, ಗಂಟೆ ಮತ್ತು ವೀಣೆ ಎಂಬ ಐದು ಬಗೆಯ ವಾದ್ಯಗಳು : ಹೊಲೆಯ ಮಾದಿಗ ಭಕ್ತನಾದರೆ ಆತನ ಮನೆಯ ಸೊಣಗಂಗೆ ಪಂಚಮಹಾವಾದ್ಯದಲಿ ಸನ್ಮಾನವ ಮಾಡೆನೆ (ಬಸವ. ೫೯೩); ಗುರುಮಠಂ ದೇವತಾಭವನಂಗಳಗಣಿತಂ ಮೊಱೆವ ಶಂಖಂ ಭೇರಿ ಪಂಚಮಹಾವಾದ್ಯದಿಂದಿರುಳುಂ ಪಗಲುಂ ಮಹಾಭರಿತ ದರ್ಚನೆಗಳಿಂ . . . ಮೆಱೆವುದು (ಲಕಿಚಿಂ. ೩೧-೧೧); ಪಂಚಮಹಾವಾದ್ಯ ನೃತ್ಯಗೀತಂಗಳಿಂದತಿಶೋಭನಮಾಗೆ ಚಿತ್ತವೃತ್ತಿಯಿಂ ಶಿವನಂ ಭಜಿಸಿ (ಹಮ್ಮೀರ. ೨-೫೫ ವ). [ಪಂಚ$_2$ + ಮಹಾವಾದ್ಯ]

ಪಂಚಮಹಾವ್ರತ (ನಾ). [ಜೈನ] ಸಾಧುಗಳು ಆಚರಿಸುವ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಎಂಬ ಐದು ಬಗೆಯ ವ್ರತಗಳು : ಪಂಚಮಹಾವ್ರತ ಪಂಚಸಮಿತಿ ಮಿಳಿತ ತ್ರಿಗುಪ್ತಿಗುಪ್ತಂ ಮುನಿಪಂ (ಶಾಂತಿಪು. ೯-೧೧೧); ಗುಪ್ತಿಗಳಂ ಪಾಲಿಸಿ ಪಂಚಮಹಾವ್ರತಲೀಲೆಯಿನೆಸೆದಂ ಪ್ರಮಾದವಿಲ್ಲೆನೆ ಮುನಿಪಂ (ಮಲ್ಲಿಪು.೧೧-೧೩); ಪಂಚಮಹಾವ್ರತ ಯತಿ ನಿಲೆ ಸಂಚಿತಪುಣ್ಯಾಗಮಕ್ಕೆ ಮುನ್ನಮೆ ದಿವದಿಂ ಸಂಚಕರಂ ಬರ್ಪಂತಿರೆ ಪಂಚವಿಧಂ ರತ್ನರಾಶಿ ಸುರಿದತ್ತಾಗಳ್ (ಬಂಹರಿ.೧೩-೨೯); ಪಂಚೇಂದ್ರಿಯವೆಂಬ ಮದಗಜವಿಜಯರು ಪಂಚಬಾಣನ ಭಂಜನರು ಪಂಚಮಹಾವ್ರತ ಸಮಿತಿ ಸಮೇತರು ಪಂಚಸೂನು ವರ್ಜಿತರು (ದ್ವಾದಶಾ. ೧೬೭-೩೩೦). 'ಅಣುವ್ರತ', 'ಮಹಾವ್ರತ' ಪರಾ. [ಪಂಚ$_2$ + ಮಹಾವ್ರತ]

ಪಂಚಮಹಾಶಬ್ದ (ನಾ). ೧. ಅರಮನೆ, ದೇವಾಲಯ ಮೊದಲಾದ ಕಡೆಗಳಲ್ಲಿ ಗೌರವಸೂಚಕವಾಗಿ ಬಾರಿಸುವ ಐದು ಬಗೆಯ ವಾದ್ಯಗಳ ಧ್ವನಿ ; ಕೊಂಬು, ತಮಟೆ, ಶಂಖ, ಭೇರಿ, ಜಯಘಂಟೆ ಅಥವಾ ಭೇರಿ, ಶಂಖ, ಕಹಳೆ, ಗಂಟೆ ಮತ್ತು ವೀಣೆಗಳ ಶಬ್ದ,-ಮಂಗಳಧ್ವನಿ; P ಇದೊಂದು ರಾಜಮರ್ಯಾದೆಯೆಂದು ಪರಿಗಣಿಸಲ್ಪಟ್ಟಿದೆ : ಸ್ವಸ್ತಿ ಸಮಧಿಗತ ಪಞ್ಚಮಹಾಶಬ್ದ ಮಹಾಸಾಮನ್ತಾಧಿಪತಿ ಪ್ರಭೂತ ವರಿಷ ಶ್ರೀಮಾನ್ಗೋಯಿನ್ದರಸರ್ (ಮೈಅರಿ. ೧೯೪೨, ೪೭-೩; ಸು. 790); ಸಮನೆನಿಸುವ[ರ್] ಪ್ರಶಸ್ತಿಕ್ರಮದೊಳ್ ಸ್ವಸ್ತಿ ಸಮಧಿಗತ ಪಂಚ[ಮಹಾ]ಶಬ್ದ ಮಹಾಸಾಮಂತರೆನಲ್ ಸಮನೆನಿಪರೆ ಗುಣದೊಳರಿಗನೊಳ್ ಸಾಮಂತರ್ (ಪಂಪಭಾ.೧-೪೯); ಸಮಧಿಗತ ಪಂಚಮಹಾಶಬ್ದ ಮಹಾಸಾಮಂತಾಧಿಪತಿ ಮಹಾಪ್ರಚಣ್ಡದಣ್ಡನಾಯಕಂ (ಸೌಇಇ. XX, ೪೬-೩೨; 1072); ಪಂಚಮಹಾಶಬ್ದಂ ದಿಕ್ಸಂಚಯಮಂ ತೀವೆ ಯಮಜನಾಜ್ಞೆಯಿನಿತ್ತಂ ಕಾಂಚನಭಾಜನದಿಂ ನಕ್ತಂಚರರಿಪುಗಗ್ರಪೂಜೆಯಂ ಸಹದೇವಂ (ಜಗವಿ. ೧೭-೩೧); ತತ್ಸಮಯದೊಳಮರಪತಿ ಜಗತ್ಪತಿಯ ಮಧುಕರನೀಳಕುಂತಳಪ್ರಪಂಚಮಂ ಪಂಚಪಯೋರಾಶಿಯೊಳ್ ಪಂಚಮಹಾಶಬ್ದದೊಡನೆ ಪಸರಿಸಲೊಡಂ (ಚಂದ್ರಪು. ೧೩-೧೧೪ ವ). ೨. ಮಂಗಳಧ್ವನಿಯನ್ನುಂಟುಮಾಡುವ ಐದು ಬಗೆಯ ವಾದ್ಯಗಳು : ಪಂಚಮಹಾಶಬ್ದಂಗಳುಂ ಬದ್ದವಣದ ಪಱೆಗಳುಂ ಬಾಜಿಸೆ ಅರಮನೆಯಂ ಪೊಕ್ಕು (ವಡ್ಡಾರಾ. ೧೩೧-೨೧); ಪಂಚಮಹಾಶಬ್ದವಿಜೃಂಭಿತಧ್ವನಿ ಲಸದ್ಗಾಂಧಾರನಾದಂ . . . ಅಯ್ತೆತ್ತಂ ತ್ರಿಯಾಮಾಂತ್ಯದೊಳ್ (ಆದಿಪು. ೧೨-೪೮); ಪಂಚಮಹಾಶಬ್ದದ ನಡುವಿಂಚರದಿಂದೆಸೆವ ಕನಕಕಾಹಳಜಯಘಂಟಾಂಚಿತಮಂಗಳಪಟುಪಟಹಂ ಚಕ್ರಿಯ ಮುಂದೆ ವರ್ಧಮಾನನಿನಾದಂ (ಶಾಂತಿಪು. ೧೦-೧೫೧); ಪಂಚಮಹಾಶಬ್ದವ ಬಾಜಿಸಿದರೇನೋ ಕಿವುಡಂಗೆ ಕೂಡಲಸಂಗಯ್ಯನ ಪಥವಿನ್ನಾವುದೆಂದಱಿಯದವಂಗೆ (ಬಸವ. ೬೩೩).

[ಪಂಚ$_2$+ಮಹಾಶಬ್ದ]

ಪಂಚಮಹಾಸಬ್ದ (ನಾ). = ಪಂಚಮಹಾಶಬ್ದ ೧ : ಸ್ವಸ್ತಿ ಸಮಧಿಗತ ಪಂಚಮಹಾಸಬ್ದಂ ಮಹಾಸಾಮಂತ ಅಗ್ರಗಣ್ಯ (ಎಕ. II, ೫೬-೧; 1100). [<ಸಂ. ಪಂಚಮಹಾಶಬ್ದ]

ಪಂಚಮಾಂಚಿತ (ಗು). ಪಂಚಮಸ್ವರದಿಂದ ರಮಣೀಯವಾದ,—ಮನೋಹರವಾದ : ಅದೊರ್ಮೆ ಮೃದುಪಂಚಮಾಂಚಿತ ವಿಪಂಚಿಕಾನಾದದಿಂದದೊರ್ಮೆ ರಸಭಾವಕಂಚುಕಿತ ಚಿತ್ರಕರ್ಮಂಗಳಿಂ. . . ಕಳೆವನಿಂತು ಪೊಟ್ಟಂ ನೃಪಂ (ಕಾದಂಪೂ. ೨೧). [ಪಂಚಮ + ಅಂಚಿತ$_1$]

ಪಂಚಮಾಬ್ಧಿ (ನಾ). = ಪಂಚಮಜಲಧಿ : ಅಂತಾ ಪರಮೇಶ್ವರನ . . . ಕುಂತಳಂಗಳನುತ್ತರ ದಕ್ಷಿಣೇಂದ್ರರ್ ಪಂಚರತ್ನದ ಪಡಲಿಗೆಗಳೊಳಾಂತು ಪಂಚಮಾಬ್ಧಿಯೊಳಿಕ್ಕಿದರ್ (ಶಾಂತಿಪು. ೮-೧೨೩ ವ).

[ಪಂಚಮ+ಅಬ್ಧಿ]

ಪಂಚಮಾಯೆ (ನಾ). ಒಂದು ಕ್ಷುದ್ರದೇವತೆ : ಕೊಂಕಣೀ ಕುಣಬಿಗಳಿಗೆ ಕಾಳೆ ಕುಣಬೀಯೆಂತಲೂ ಅನ್ನುವರು . . . ಬಿರಾಮಣಿ, ಪಂಚಮಾಯಾ, ಸಾತೆರಿಯೆಂಬ ದೇವತೆಗಳಿಗೆ ನಡಕೊಳ್ಳುವರು (ಕಭಾಗೆ.೧೨೯).

[ಪಂಚ ? + ಮಾಯೆ]

ಪಂಚಮಾಶಬ್ದ (ನಾ). = ಪಂಚಮಹಾಶಬ್ದ ೧ : ಪಂಚಮಾಶಬ್ದದಿಂದಂ ಬೇಗಮೆಚ್ಚತ್ತು ಮಂಚದಿನೆರ್ದು ಬೆಳಗಾಗಿ ಕೆಯ್ಗೆಯ್ದು ಕಾಂಚನ ಕುಂಭಕುಚೆ ಕಂಡಳ್ (ಬಂಹರಿ. ೯-೧೦೮).

[ಪಂಚ$_2$ + ಮ್ಯಾ$_3$ + ಶಬ್ದ]

ಪಂಚಮಿ (ನಾ). ೧.ಮಾಸದ ಶುಕ್ಲ ಕೃಷ್ಣ ಪಕ್ಷಗಳ ಐದನೆಯ ದಿನ: ಸಿತಪಕ್ಷದ ಪಂಚಮಿ ದಿನಪತಿವಾರಂ ಶುಭದ ಮೂಲನಕ್ಷತ್ರದೊಳನ್ವಿತಮಾಗೆ ನೆಗಟ್ಟುದೀ ಮತ್ಯತಿ (ಆದಿಪು.೧೬-೭೭); ಶುಕ್ಲ ಕೃಷ್ಣ ಭೇದದಿಂದಿತ್ತೆಱನಾಗಿರ್ಪುದಾ ಪಕ್ಷಂಗಳು ಮಿಗೆ ಅಗ್ನಿಯೇ ದೇವತೆಯಾಗುಳ್ಳ ಪಾಡ್ಯ . . . ಲಕ್ಷ್ಮಿ ಅಧಿದೇವತೆಯಾಗಿಹ ಪಂಚಮಿ . . . ಚಂದ್ರನಧಿದೇವತೆಯಾದ ಪೌರ್ಣಮೆ (ವಿವೇಕ. ೩೨೦). ೨. ನಾಗರ ಪಂಚಮಿ : ನಾಳೆ ಪಂಚಮಿಯಾದ್ದರಿಂದ ನಾಗನಿಗೆ ತನಿ ಎರೆಯಬೇಕು (ರೂಢಿ). ೩. ಚದುರಂಗದ ಆಟದಲ್ಲಿ ಉಪಯೋಗಿಸುವ ಚಚ್ಚೌಕವಾದ ಹಾಸುಬಟ್ಟೆ ಅಥವಾ ಹಲಗೆ. ೪. [ವ್ಯಾಕ] ಏಳು ಬಗೆಯ ವಿಭಕ್ತಿಗಳಲ್ಲಿ ಐದನೆಯದು; ಪಂಚಮೀವಿಭಕ್ತಿ : ಆತ್ತಣಿಮೆಂದನುಸಂಧಿಸಿಯೊತ್ತಂಬರದಿಂ ತಗುಳ್ಚುವರ್ ಪಂಚಮಿಯೊಳ್ (ಕಾವ್ಯಾವ.೧೧೭); ಫಿಂತೆ ಪೇಟ್ಡ ನಾನಾ ತೆಱದ ಲಿಂಗಂಗಳ್ಗೆ ಪರವಾಗಿ ನಾಮವಿಭಕ್ತಿಗಳ್ . . . ಪ್ರಥಮೆಗಂ, ದ್ವಿತೀಯೆಗಂ, ತೃತೀಯೆಗಂ, ಚತುರ್ಥಿಗಂ, ಪಂಚಮಿಗಂ, ಷಷ್ಠಿಗಂ, ಸಪ್ತಮಿಗಂ-ಏಟಾಗಿ ಕಾರಕವಶದಿಂ ಪತ್ತುಗುಂ (ಶಮದ. ೯೩ ವೃತ್ತಿ). [ಸಂ. ಪಂಚಮೀ]

ಪಂಚಮಿಗ (ನಾ). ಅಂತ್ಯಜ : 'ಪಂಚಮಿಗಿತಿ' ಪರಾ.

[ಪಂಚಮ+-ಇಗ]

ಪಂಚಮಿಗಿತಿ (ನಾ). ಪಂಚಮನ ಹೆಂಡತಿ : ಇತಿಗೆ—ಚಾಮುರಿಗಿತಿ . . . ಪಂಚಮಿಗಿತಿ, ವೇರುಗಿತಿ (ಶಮುದ. ೫೦೮ ಪ್ರಯೋ).

[ಪಂಚಮಿಗ+-ಇತಿ$_1$(<-ಇತ್ತಿ)]

ಪಂಚಮಿಸೆ (ನಾ). ಇಪ್ಪತ್ತೈದು : ನೋಡಿದರೇಸ್ರಿ ದೊಡ್ಡನ್ಮ ನೋರೇ . . . ಇದಕ್ಕಿನ್ನೂ ಪೈರೆ ಪಂಚಮಿಸೆ, ಆಗಲೇ ಹತ್ತಿದರೊಂದು; ಇಳಿದರೊಂದು (ಪುಲ್ಲಿ. ೨೫೫).

[←ಮರಾ. ಪಂಚವಿಶೀ./ಸಂ. ಪಂಚವಿಂಶತಿ]

ಪಂಚಮಿಸಾವಿಭಕ್ತಿ (ನಾ). =ಪಂಚಮಿ ೪ : ಪಂಚಮಿಸಾವಿಭಕ್ತಿ :- ಇದು ಅಪಾದಾನ ನಿಮಿತ್ತಗಳನ್ನು ತಿಳಿಸುವಾಗಲೂ ಭಯ, ಆಧಿಕ್ಯ ಮೊದಲಾದ ಅರ್ಥಗಳುಳ್ಳ ಶಬ್ದಗಳು ಪ್ರಯೋಗವಾದಾಗಲೂ ಬರುವುದು (ಕೈಪಡಿ. ೫೫); 'ಹೊಳೆಯ ದೆಸೆಯಿಂದ' ಎನ್ನುವುದು ಪಂಚಮಿಸಾವಿಭಕ್ತಿಯ ರೂಪವೆಂದೂ, '-ದೆಸೆಯಿಂದ' ಎನ್ನುವುದು ಇಲ್ಲಿಯ ವಿಭಕ್ತಿ ಪ್ರತ್ಯಯವೆಂದೂ ಹೇಳುವುದುಂಟು (ಪುಧ್ಯಮು. ೫೪). [ಸಂ.]

ಪಂಚಮುಖ$_1$ (ನಾ). ೧. ಐದು ಮುಖಗಳು. ೨. ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ ಎಂಬ ಪರಮೇಶ್ವರನಿಗಿರುವ ಐದು ಮುಖಗಳು : ಆ ಪಂಚಲಿಂಗಪ್ರಕಾಶವೇ ಪಂಚಮುಖವೆನಿಸಿತ್ತು ಆ ಪಂಚಮುಖದಿಂದವೆ ಪಂಚಾಕ್ಷರಿ ಉತ್ಪತ್ತಿ (ಪುಹಾದೇ. ಬ. ೧೦೨-೨೩೫). ೩. ಐದು ಪಕ್ಕ,-ಮಗ್ಗುಲು : ಅಯ್ಯಾ ನಿಮ್ಮ ಪಂಚವಕ್ತ್ರಗಳೇ ಪಂಚಮುಖದ ರುದ್ರಾಕ್ಷಿಗಳಾದುವಾಗಿ . . . ಎನ್ನ ಮುಕ್ತಿಪಥಕ್ಕೆ ಈ ರುದ್ರಾಕ್ಷಿ ಸಾಧನವಯ್ಯಾ (ಬಸವ. ಕ. ೧೦೨೫). ೪. ದೇವರ ಪೂಜೆ ಮೊದಲಾದ ಸಂದರ್ಭಗಳಲ್ಲಿ ಎತ್ತುವ ಐದು ಕುಡಿಗಳುಳ್ಳ ಆರತಿ; ಪಂಚಾರತಿ: ಪಂಚಮುಖದ ಜ್ಯೋತಿ ಬೆಳಗಲು (ಪುರಂದ. ೨-೪೨-೩). ೫. ಐದು ಮುಖಗಳುಳ್ಳವನು ; ಶಿವ ; ಪರಮೇಶ್ವರ : ಪಂಚಾಕ್ಷರಗಳೊಳಗೆ ಸಂದರಾ ಭರವೆಯರು ಪಂಚಮುಖ ನಿರ್ದೆಡೆಗೆ ಪೋದರಾ ಪರವೆಯರು (ಸಂಬಿರ. ೧೩-೧೨೩); ಮುಂಜಿ ಕಿನ್ನರೆ ಶರಜನಸುವಂ ಹಿಂಜಿ ಬನವರಸನ ಹರಣವಂ ಪಂಚಮುಖನಲಿ ಪಡೆದು ಮೆಱೆದನು ಮಾಚಿದೇವಯ್ಯ (ಬಸಪು. ೩೩ ಸೂಚನೆ); ಪಂಚಮುಖ ದಶಪಂಚನೇತ್ರ ದಶಭುಜ ಎಸೆವ ಕೆಂಜೆಡೆಗಳ ಶಶಿಮೌಳಿ . . . ಬಂದಿರಯ್ಯ ಎನ್ನ ಕರಸ್ಥಲಕ್ಕೆ ಅಖಂಡೇಶ್ವರಾ (ಅಖಂಡೇ. ೩೧-೧೩). [ಪಂಚ$_2$+ಮುಖ]

ಪಂಚಮುಖ$_2$ (ನಾ). ಅಗಲವಾದ ಮುಖವುಳ್ಳದು ; ಸಿಂಹ : ಯಮುನಾವಾರಿಯಂ . . . ಪೀರ್ದಂ ಗಜಾರಾತಿ . ಪಂಚಮುಖಂ ತೀಕ್ಷ್ಣನಖಂ (ಪಂಚತಂ. ೫೪-೧೩); ಸಾರೆ ಹೇಳೋ ರಾಯಳುವರ ಮುರಾರಿ ದುಶ್ಶಾಸನ ಕರ್ಣಾ ಭಡ ವೈರಿಭೀಮದ್ವಿರದಕುಂಭಸ್ಥಳಕೆ ಪಂಚಮುಖ (ಕುಸ್ಯಾಕ. ೧೯-೮). [ಪಂಚ$_2$+ಮುಖ]

ಪಂಚಮುಖವಾದ್ಯ (ನಾ). ಈಶ್ವರನ ಐದು ಮುಖಗಳ ಹೆಸರುಗಳನ್ನು ಹೊಂದಿರುವ, ಐದು ಮದ್ದಳೆಗಳನ್ನು ಕೂಡಿಸಿ ಮಾಡಿರುವ ಒಂದು ಬಗೆಯ ಚರ್ಮವಾದ್ಯ : 'ಸರ್ವವಾದ್ಯಸೇವೆ', 'ಪಂಚಮುಖವಾದ್ಯ' (೫ ದೊಡ್ಡ ಮದ್ದಳೆಗಳನ್ನು ಜೋಡಿಸಿ ಬಂಡಿಯಲ್ಲಿ ತಂದು ಬಾಜಿಸುವ) ಸೇವೆಗಳು ದಕ್ಷಿಣದೇಶದ ಅನೇಕ ದೇವಸ್ಥಾನಗಳಲ್ಲಿ ರೂಢಿಯಲ್ಲಿವೆ (ಸಂಗೀಚಂ. ೧೯೩); ಮದ್ರಾಸಿನ ಸರ್ಕಾರಿ ಮ್ಯೂಜಿಯಮ್ಮಿನಲ್ಲಿರುವ 'ಪಂಚಮುಖವಾದ್ಯ'ವೆಂಬುದು, ಹೆಸರೇ ಹೇಳುವಂತೆ, ಐದು ಬಾಯಿಗಳಿರುವ ಒಂದು ವಾದ್ಯವನ್ನು ಸೂಚಿಸುತ್ತದೆ (ಸಂಪೋತ. ೨೪೬). [ಪಂಚಮುಖ$_1$+ವಾದ್ಯ]

ಪಂಚಮುಖಿ (ನಾ). ಐದು ಮುಖಗಳುಳ್ಳದು : ತೀರ ಇತ್ತೀಚಿಗೆ ಪಂಚಮುಖಿಯು ಗಣಪತಿ ವಿಗ್ರಹವೊಂದು ದೊರಕಿದೆ (ಪೂಢಿ).

[ಸಂ. ಪಂಚಮುಖೀ]

ಪಂಚಮುಖೀಮುದ್ರೆ (ನಾ). ಮಂತ್ರ, ಜಪ ಮೊದಲಾದ ಕಾಲಗಳಲ್ಲಿ ಪ್ರಯೋಗಿಸುವ ಒಂದು ಬಗೆಯ ಕರವಿನ್ಯಾಸ : ಸಂಹಾರ ಮುದ್ರೆ ಪಂಚಮುಖೀಮುದ್ರೆ ಸುರಭಿಮುದ್ರೆ . . . ಎಂಬಾದಿಯಾಗಿ ಸಕಲ ಮುದ್ರೋಪದಮುದ್ರಾಬಂಧಲಕ್ಷಣಂಗಳಂ ಗುರುಮುಖದಿಂದಱಿತು (ವಿವೇಕ. ೧೦೩). [ಸಂ. ಪಂಚಮುಖೀಮುದ್ರಾ]

ಪಂಚಮುದ್ರಿಕೆ (ನಾ). =ಪಂಚಮುದ್ರೆ ೨ : ಶಿವನಿರೂಪದಿ ಕುಮಾರೇಶನತಿಪ್ರೇಮದಿಂ . . . ನೆರೆ ಪಂಚಮುದ್ರಿ[ಕೆಗಳನಾಂತು]ಪಟ್ಟಳಂಗಳನಂದನು (ಕುಮಾಪು. ೨ ಸೂಚನೆ). [ಪಂಚ$_2$+ಮುದ್ರಿಕೆ]

ಪಂಚಮುದ್ರೆ (ನಾ). ೧. ಆವಾಹನೀ, ಸ್ಥಾಪನೀ, ಸನ್ನಿಧಾಪನೀ, ಸಂಬೋಧನೀ, ಸಂಮುಖೀಕರಣೀ ಎಂಬ ದೇವರ ಪೂಜಾಕಾಲದಲ್ಲಿ ಮಾಡುವ ಐದು ಬಗೆಯ ಅಂಗುಳೀವಿನ್ಯಾಸಗಳು ; P (i) ಪುಷ್ಪಗಳಿಂದ ತುಂಬಿದ ಅಂಜಲಿಯು ಆವಾಹನೀಮುದ್ರೆ, (ii) ಕೆಳಮುಖವಾದ ಅಂಜಲಿಯು ಸ್ಥಾಪನೀಮುದ್ರೆ, (iii) ಮೇಲು ಮುಖವಾದ ಅಂಗುಷ್ಠಗಳಿಂದ ಕೂಡಿದ ಮುಷ್ಟಿಬಂಧವು ಸನ್ನಿಧಾಪನೀ ಮುದ್ರೆ, (iv) ಅಂಗುಷ್ಠಗಳನ್ನು ಒಳಗಡೆ ಸೇರಿಸಿದ ಮುಷ್ಟಿಬಂಧವು ಸಂಬೋಧನೀಮುದ್ರೆ , (v) ಮೇಲುಮುಖವಾದ ಮುಷ್ಟಿಯ ಜೋಡಣೆಯು ಸಂಮುಖೀಕರಣ ಮುದ್ರೆ—ಇವು ಪೂಜಾಕಾಲದ ಪಂಚಮುದ್ರೆಗಳು. ೨. [ವೀಶೈ]ವೀರಶೈವ ದೀಕ್ಷೆಗೆ ಅಂಗವಾದ ಭಸ್ಮಳುಟಿಕೆ, ಕಂಥೆ, ದಂಡ, ಭಿಕ್ಷಾಪಾತ್ರೆ ಮತ್ತು ಕಮಂಡಲು ಎಂಬ ಐದು ಬಗೆಯ ಬಾಹ್ಯ ಚಿಹ್ನೆಗಳು : ಶೈವರಂದದಿ ಪಂಚಮುದ್ರೆಗಳೋವಿವೊಪ್ಪುತವಿಪ್ಪರಂ . . . ಕಳುಹಲು (ಬಸಪು. ೨೭-೩೪); ಕಂಥೆ ದಂಡ ಕಮಂಡಲು ಭಿಕ್ಷಾಪಾತ್ರೆ ಭಸ್ಮಳುಟಿಕೆಯೆಂಬ ಬಾಹ್ಯಪಂಚಮುದ್ರೆಗಳಂ ಆಯಾ ಮಂತ್ರಪೂರ್ವಕವಾಗಿ ಧರಿಸಿ (ವಿವೇಕ.೧೨೬); ಬಹಿರಂಗದಲ್ಲಿ ಕಂಥೆ ಕರ್ಪರ ದಂಡ ಕಮಂಡಲು ಭಸ್ಮದ ಗುಂಡಿಗೆ ಎಂಬ ಪಂಚಮುದ್ರೆಗಳ ಧರಿಸಿಧರೆಯ ಮಂಡಲದೊಳಗೆ ಚರಿಸುವ ಅಣ್ಣಗಳ ಕಂಡು ಬೆಜಗಾದನಯ್ಯಾ (ಅಖಂಡೇ. ೨೯೯-೩೪). ೩. ಲಿಂಗ, ಜಡೆ, ರುದ್ರಾಕ್ಷಿ, ಭಸ್ಮ ಮತ್ತು ಉಪವೀತಗಳೆಂಬ ಐದು ಚಿಹ್ನೆಗಳು : ಲಿಂಗ ಜಡೆ ರುದ್ರಾಕ್ಷಿ ಭಸಿತಂ ಕಂಗೊಳಿಸುವುಪವೀತವೆಂಬ ಶಿವಾಂಗವಹ ಶ್ರೀಪಂಚಮುದ್ರೆಯಂ ಗುರುಮುಖದಿ ಮಗನೆ ಅಂಗದೊಳು ಧರಿಸಿದರೆ ಮಾಯಾಸಂಗ ಬಿಡುವುದು (ಶಂಕದಾ.೩-೩೨). ೪. [ದ್ವೈತ] ಶರೀರದಲ್ಲಿ ಗೋಪೀಚಂದನದಿಂದ ಧರಿಸುವ ಶಂಖ, ಚಕ್ರ, ಗದೆ, ಪದ್ಮ ಮತ್ತು ನಾರಾಯಣ ಎಂಬ ಐದು ಮುದ್ರೆಗಳು : ಪಂಚಮುದ್ರೆಗಳನ್ನು ಧಾರಣ ಮಾಡುವಾಗ ಅವುಗಳಲ್ಲಿ ಚಿಂತಿಸಬೇಕಾದ ಭಗವದ್ರೂಪಗಳನ್ನು ಹೇಳುತ್ತಾರೆ (ಹಸಾರ. ೨-೨೪ ತಾತ್ಪರ್ಯ); ಅವರಲ್ಲಿಯ ಕೆಲವರು 'ಘನವಟ್ಟೆನಾವುತಿರುಚೂರ್ಣ'ಗಳನ್ನೂ ಇನ್ನು ಕೆಲವರು 'ಗೋಪೀಚಂದನ-ಪಂಚಮುದ್ರೆ'ಗಳನ್ನೂ ಬೇರೆಯ ಕೆಲವರು 'ಭಸಿತ-ಗಂಧಾಕ್ಷತೆ'ಗಳನ್ನೂ 'ಭಾಳಲಾಂಛನ'ವನ್ನಾಗಿ ಮಾಡಿಕೊಂಡರು (ಕರ್ನಾಜ. ೧೭). [ಪಂಚ$_2$+ಮುದ್ರೆ]

ಪಂಚಮುಷ್ಟಿ (ನಾ). ೧. ಐದು ಹಿಡಿ. ೨. [ವೈನ] ಕೇಶಲುಂಚನದಲ್ಲಿ ಉಪಯೋಗಿಸುವ ಐದು ಹಿಡಿ ; P ಎರಡು ಮುಟ್ಟಿಗೆಗಳಿಂದ ತಲೆಯ ಕೂದಲುಗಳನ್ನು ಕಿತ್ತುಕೊಳ್ಳುವುದು, ಎರಡು ಮುಟ್ಟಿಗೆಗಳಿಂದ ಎರಡೂ ಮಗ್ಗಲಿನ ಮಿಾಸೆಯ ಕೂದಲುಗಳನ್ನು ಕಿತ್ತುಕೊಳ್ಳುವುದು, ಇನ್ನೊಂದು ಮುಟ್ಟಿಗೆಯಿಂದ

ಗದ್ದದ ಕೂದಲುಗಳನ್ನು ಕಿತ್ತುಕೊಳ್ಳುವುದು. ಇದು ಪಂಚ ಮುಷ್ಟಿಲೋಚವಾಗಿದೆ : ಆ ಜಗತ್ಪತಿ . . . ಆತ್ಮಕೇಶಕಳಾಪಂ ಬರೆ ಪಂಚಮುಷ್ಟಿಗೆ ಜಿನಶ್ರೀದೀಕ್ಷೆಯಂ ತಾಳ್ದಿದಂ (ಶಾಂತಿಪು. ೮-೧೨೩). ೩. ದೇಹದ ಐದು ಅಂಗಗಳಿಂದ ಮಾಡುವ ನಮಸ್ಕಾರ : ಅಂತರ್ಚಿಸಿ ಗುರುಭಕ್ತಿಪೂರ್ವಕಂ ಪಂಚಮುಷ್ಟಿಯಿಂ ವಂದಿಸುವುದುಂ (ಪುಷ್ಪಪು. ೯-೫ ಪ) ; ಪಂಚಮುಷ್ಟಿ ಪರಿನಿಷ್ಠಿತಾಂಗಯಷ್ಟಿಯಾಗಿ ವಂದನೆಯಂ ಮಾಡಿ ಮುಂದೆ ನೆಲದೊಳ್ ಕುಳ್ಳಿರ್ದು (ಬಾಧಪು. ೩-೪೮ ಪ).

[ಪಂಚ$_2$ + ಮುಷ್ಟಿ$_2$]

ಪಂಚಮೂರ್ತಿ (ನಾ). [ಶೈವ] ಪಂಚಕೃತ್ಯಗಳನ್ನು ನೆರವೇರಿಸುವ ಬ್ರಹ್ಮ, ವಿಷ್ಣು, ರುದ್ರ, ಮಹೇಶ್ವರ ಮತ್ತು ಸದಾಶಿವ ಎಂಬ ಐವರು ದೇವರು : ಆ ಪಂಚಶಕ್ತಿಯರಿಗೆ ಪಂಚಮೂರ್ತಿಯರ ಕೈಗೊಳಿಸಿದಾತ ನಮ್ಮ ಬಸವಯ್ಯನು (ನೀಲವ. ೨೫-೧) ; ಪರಮೇಶ್ವರನು . . . ಪಂಚಕೃತ್ಯಗಳನ್ನು ಬ್ರಹ್ಮ, ವಿಷ್ಣು, ರುದ್ರ, ಮಹೇಶ್ವರ, ಸದಾಶಿವರೆಂಬ ಪಂಚಮೂರ್ತಿಗಳಿಂದ ನೆರವೇರಿಸುತ್ತ ಭಕ್ತಾನುಗ್ರಹ ಮಾಡುತ್ತಾನೆಂಬುದು ಶೈವಾಗಮದ ಸಿದ್ಧಾಂತ (ಭಾರದ. ೭೫).

[ಪಂಚ$_2$ + ಮೂರ್ತಿ]

ಪಂಚಮೂಲ(ನಾ).[ವೈದ್ಯ]ಗುಳ್ಳ, ನೆಲಗುಳ್ಳ, ಎರಡೆಲೆಹೊನ್ನೆ, ಮೂರೆಲೆಹೊನ್ನೆ ಮತ್ತು ನೆಗ್ಗಿಲುಗಳ ಐದು ಬಗೆಯ ಬೇರುಗಳು ; ℙ ಪಂಚಮೂಲಗಳಲ್ಲಿ ಲಘುಪಂಚಮೂಲ, ಬೃಹತ್ ಪಂಚಮೂಲ, ಶತಾವರ್ಯಾದಿ ಪಂಚಮೂಲ, ತೃಣಪಂಚಮೂಲ, ಜೀವಿಕಾದಿ ಪಂಚಮೂಲ, ಪುನರ್ನವಾದಿ ಪಂಚಮೂಲ, ಗೋಕ್ಷುರಾದಿ ಪಂಚಮೂಲ, ವಲ್ಲೀಪಂಚಮೂಲ ಎಂದು ಎಂಟು ಭೇದಗಳಿವೆ : ಗುಳ್ಳ ನೆಲಗುಳ್ಳ ಎರಡೆಲೆಹೊನ್ನೆ ಮೂಱೆಲೆಹೊನ್ನೆ ನೆಗ್ಗಿಲು ಇವು ಲಘುಪಂಚಮೂಲವೆನಿಸಿಕೊಂಬುವು (ವೈದ್ಯಸಾ. I, ೬೩). [ಪಂಚ$_2$ + ಮೂಲ]

ಪಂಚಮೇಂದ್ರಿಯನಂದಿನಿ (ನಾ). [ಸಂಗೀತ] ಒಂದು ರಾಗದ ಹೆಸರು : ಗಾಂಧಾರಿ . . . ಪಂಚಮೇಂದ್ರಿಯನಂದಿನಿ . . . ಕೌಶಿಕಿಯೆಂಬ ಹತ್ತು ರಾಗಂಗಳು ಮಧ್ಯಮಗ್ರಾಮದಿಂ ಪುಟ್ಟಿದವು(ವಿವೇಕ.೨೩೩).

[ಸಂ. ಪಂಚಮೇಂದ್ರಿಯನಂದಿನೀ]

ಪಂಚಯಜ್ಞ (ನಾ). = ಪಂಚಮಹಾಯಜ್ಞ ೧ : ಷಟ್ಕರ್ಮ ಸಹಿತನಾದ ವಿಪ್ರನು ಕೃಷಿಕರ್ಮವನ್ನೂ ಮಾಡಬಹುದು . . . ಅವನು ತಾನೇ ನೆಲವನ್ನು ಉತ್ತು ಹದಮಾಡಿ ತಾನೇ ಸಂಪಾದಿಸಿದ ಬೀಜಗಳನ್ನು ಬಿತ್ತಿ ಪಂಚಯಜ್ಞಗಳನ್ನಾಚರಿಸಬೇಕು (ಭಾರದ. ೫೫) ; ಉತ್ತರಸಹ್ಯಾದ್ರಿಯಲ್ಲಿ ಹೇಳಿದಂತೆ ಪಾಟಾಳಿಯು ದಾಸಿಪುತ್ರನಾದುದು. . . ಪಂಚಯಜ್ಞ ತರ್ಪಣ . . . ಕಾಮವ್ರತಾದಿಗಳ ಆಚರಣೆ–ಇತ್ಯಾದಿಗಳನ್ನು ಮಾಡಬಾರದವನಾದುದು, ನೀಚಮಾರ್ಗಾವಲಂಬಿಯಾದುದು ಹೇಗೆ ಎಂಬುದು ವಿಚಾರಕ್ಕೆ ನಿಲುಕದಾಗಿದೆ (ತುಳುನಾ. ೧೦೯).

[ಪಂಚ$_2$ + ಯಜ್ಞ]

ಪಂಚಯೋಗ (ನಾ). ೧.ಐದು ಪದಾರ್ಥಗಳ ಸಂಯೋಗ. ೨.ಐದು ಬಗೆಯ ಯೋಗಗಳು ; ℙ ಭಕ್ತಿಯೋಗ, ಕರ್ಮಯೋಗ, ರಾಜಯೋಗ, ಜ್ಞಾನಯೋಗ, ಮತ್ತು ಹಠಯೋಗ ಅಥವಾ ಮಂತ್ರಯೋಗ, ಲಯಯೋಗ, ಹಠಯೋಗ, ರಾಜಯೋಗ ಮತ್ತು ಶಿವಯೋಗ ಎಂದು ಬೇರೆಬೇರೆ ಉಲ್ಲೇಖಗಳಿವೆ : ಗಗನ ಹುಚ್ಚನೆ ಪಂಚಯೋಗಗಳು (ಗಗತಾ. ೧-೯) ; ಕೇಳು ಬಳಿಕ ಪಂಚಯೋಗವಿದನು ಮಾಡಲಾಳಲಹುದು ಮುಕ್ತಿಪದವನು (ಸುಜ್ಞಾಚಂ. ೧೨೭ ಪಲ್ಲವಿ). [ಪಂಚ$_2$ + ಯೋಗ]

ಪಂಚರಂಗ (ನಾ). ಬಿಳುಪು, ಕಪ್ಪು, ಕೆಂಪು, ಹಳದಿ ಮತ್ತು ಹಸುರು ಎಂಬ ಐದುಬಣ್ಣಗಳು : ೪ ತಳಿಗೆಯಲು ಪಂಚರಂಗದಕ್ಕಿಯಿಂ ದೊಪ್ಪಂಮಾಡಿ ಹಿಟ್ಟನ ಸೊಡರದಧಿದೂರ್ವ್ವವೆರಸಾರಿತಿ ನಿವಾಳಿಸುವಲ್ಲಿ (ಎಕ. VII, ತಿಕಾರಿ. ೧೮೫-೭೯ ; 1158) ; ಬಿಡಲುಪಟ್ಟ ಬೇಂಟೆಯ ನುಳ್ಳ ಪುರುಷನು ಪಂಚರಂಗದ ವಸ್ತ್ರ ನಾಣೆಯ ಶಿಲೆ ಲೆಪ್ಪ ಕಾಷ್ಟ ಮೊದಲಾದವರಲ್ಲಿ ಸ್ಥಾಪಿಸಲ್ಪಟ್ಟ ಜೀವಂಗಳ ಭೇದ ಮೊದಲಾದವನ್ನು ಮಾಡಲಾಗದು (ಸಾಗಾಧ. ೩೪) ; ಪಂಚರಂಗದ ಚೂಣಿಕೆ . . . ಮಂಟಪ ಸುಂದರವಾಗಿ ರಾರಾಜಿಸುತ್ತಿತ್ತು (ಗಿರಿನ. ೧೨೩).

[ಪಂಚ$_2$ + ರಂಗ]

ಪಂಚರಂಗಿ (ನಾ). ೧.ಐದು ಬಣ್ಣಗಳುಳ್ಳದು. ೨. ದೇಹದ ಮೇಲೆ ಐದು ಕಡೆ ಬಿಳಿಯ ಮಚ್ಚೆಗಳುಳ್ಳ ಕುದುರೆ ; ಪಂಚಕಲ್ಯಾಣಿ : ನಾಲ್ಕು ಕಾಲಿನಲ್ಲೂ ಗೊರಸಿನ ಹತ್ತಿರ ಬಿಳಿಯ ಬಣ್ಣವಿದ್ದು ಹಣೆಯಲ್ಲಿ ಮೂಗಿನ ಮೇಲೆ ಬಿಳಿಯ ಪಟ್ಟೆಯಿದ್ದಿತು. ಅಂಥ ಕುದುರೆಗೆ ಪಂಚರಂಗಿಯೆಂದು ಕರೆಯುವ ವಾಡಿಕೆ (ಚಂಗಾಳ್ವ. ೨೫). ೩. ಉತ್ತಮ ನಡತೆಯ ಖೈದಿ : ಜೇಲಿನಲ್ಲಿ ದೀರ್ಘಾವಧಿ ಶಿಕ್ಷೆಗೆ ಒಳಗಾದವರು, ಜೇಲಿನ ಅಧಿಕಾರಿಗಳಿಂದ ಉತ್ತಮನಡತೆಗೆ ಪ್ರಶಸ್ತಿ ದೊರಕಿಸಿಕೊಂಡವರು 'ಪಂಚರಂಗಿ'ಗಳೆಂದು ಕರೆಯಿಸಿಕೊಂಡು ಸಹಾಯಕರಾಗಿ ಕೆಲಸ ಮಾಡುತ್ತಾರೆ. ಖೈದಿಗಳನ್ನು ಪೀಡಿಸಲು ಪಂಚರಂಗಿಗಳ ಪಾತ್ರವು ಮುಖ್ಯ (ಆತ್ಮಾರ್ಪ. ೭). [ಸಂ. ಪಂಚರಂಗಿನ್]

ಪಂಚರತ್ನ (ನಾ). ೧. ಐದು ಬಗೆಯ ರತ್ನಗಳು ; ℙ ನೀಲ, ವಜ್ರ, ಪದ್ಮರಾಗ, ಮುತ್ತು, ಹವಳ ಅಥವಾ ಚಿನ್ನ, ಬೆಳ್ಳಿ, ಮುತ್ತು, ಮಾಣಿಕ್ಯ, ಹವಳ ಅಥವಾ ಚಿನ್ನ, ವಜ್ರ, ನೀಲ, ಪದ್ಮರಾಗ, ಮುತ್ತು ಹೀಗೆ ವಿವರಗಳಲ್ಲಿ ಅನೇಕ ಭೇದಗಳಿವೆ: ಪಂಚರತ್ನಂಗಳುಮಂ ಪುದುಂಗೊಳಿಸಿ ಪೊಂಗಳಸಂಗಳೊಳಿರ್ದ ಪುಣ್ಯತೋಯಂಗಳೊಳಟ್ಟಿಱಿಂ ಮಿಸಿಸಿ ಕಟ್ಟಿದನಾ ವಿಭು ವೀರಪಟ್ಟಮಂ (ಪಂಪಭಾ. ೧೦-೧೫) ; ಪಸರಿಸಿದ ಪಂಚರತ್ನದ ಪಸರದ ಪೃಥುರಾಶಿ ಗಗನಮಂ ತಾಗೆ (ಶಾಂತಿಪು. ೯-೨೦೮) ಪುಣ್ಯತೀರ್ತ್ಥಂಗಳೊಳ್ ಸಾಸಿರ ಕವಿಲೆಯ ಕೋಡುಂ ಕೊಳಗುಮಂ ಪಂಚರತ್ನದೊಳ್ ಕಟ್ಟಿಸಿ (ಸೌಇಇ. XX, ೭೪-೩೮ ; 1112); ಧೃತ ಪಂಚರತ್ನಮಂ ರಾಗಿತೆಯೊಳ್ ಭೂಷಣಮನಾಂಪ ತೆಱದಿಂದೆ . . . ಅಂತನಾ ವಿಭು ತಪಮಂ (ಚಂದ್ರಪು. ೧೧-೨) ; ಮುತ್ತು ಪಚ್ಚೆ ಪವಳಂ ವಜ್ರ ಸುನೀಲಂ ತರಂತರದಿಂ ಸಾಲಿಡೆ ಪಂಚರತ್ನಮಯ ಧಾರಾಸಾರಮೇ ನೊಪ್ಪಿತೋ (ಪುಷ್ಪಪು. ೯-೫೪). ೨. ಐದು ಶ್ಲೋಕಗಳ ಗುಂಪು, —ಪುಂಜ : ಇಂತೆಂದಾ ಪಾಂಡ್ಯರಾಜಂ ಸುಲಲಿತತರ ಸತ್ಪಂಚರತ್ನಂಗಳಿಂದಂ ಕಾಂತೋದ್ಯದ್ಭಕ್ತಿಯುಕ್ತಂ ನುತಿಸೆ (ಹಾಲಾಸ್ಯ. ೨-೫-೪೦) ; ಅವಳು ಗಣೇಶ ಪಂಚರತ್ನವನ್ನು ಬಹಳ ಚೆನ್ನಾಗಿ ಹಾಡುತ್ತಾಳೆ(ರೂಢಿ).

ಪಂಚರತ್ನ ಕೃತಿ = ನಾಟ, ಗೌಳ, ವರಾಳಿ, ಆರಭಿ ಮತ್ತು ಶ್ರೀರಾಗ ಎಂಬ ಐದು ಘನರಾಗಗಳಲ್ಲಿ ರಚಿತವಾದ ತ್ಯಾಗರಾಜರ ಐದು ಕೃತಿಗಳು : ಅಲ್ಲಿನ ಅಧಿದೇವತೆಗಳೆಲ್ಲರ ಪರ ತ್ಯಾಗರಾಜರು ಕೃತಿರಚನೆ ಮಾಡಿದ್ದಾರೆ. ಸ್ಥೂಲವಾಗಿ ಆ ಕೃತಿಗಳನ್ನು ಹೀಗೆ ವಿಂಗಡಿಸಬಹುದು :–೧. ತಿರುವಟ್ಟಿಯೂರು ಪಂಚರತ್ನ ಕೃತಿಗಳು. ೨. ಚೆನ್ನಪಟ್ಟಣ (ಮದ್ರಾಸ್) ಕೃತಿಗಳು. ೩. ಕೋವೂರು ಪಂಚರತ್ನ ಕೃತಿಗಳು . . . ೧೦. ಸೋಲಿಂಗರ್ ಕ್ಷೇತ್ರ ಕೃತಿಗಳು (ಸಂಗೀಚಂ. ೨೩೮).

[ಪಂಚ$_2$ + ರತ್ನ]

ಪಂಚರಸ (ನಾ). ೧. ತುಪ್ಪ, ಹಾಲು, ಜೇನುತುಪ್ಪ, ಎಣ್ಣೆ,— ಮತ್ತು ಮದ್ಯ ಎಂಬ ಐದು ಬಗೆಯ ದ್ರವಪದಾರ್ಥಗಳು. ೨. [ವೈದ್ಯ] ಕಹಿ, ಹುಳಿ, ಕಾರ, ಸಿಹಿ ಮತ್ತು ಒಗಚು ಎಂಬ

ಐದು ಬಗೆಯ ರಸಗಳು; ☞ "ರಸ—೫: (ಅ) ಘೃತ, ಕ್ಷೀರ ಮಧು, ತೈಲ, ಮದ್ಯ (ಕೆ). (ಆ) ಲಾಲಾರಸ,ಮಧುರರಸ, ಜಠರರಸ, ಪೈತ್ಯರಸ, ಆಂತ್ರರಸ (ವಿದ್ಯಾಕ. ೬೮). (ಇ) ಯಶಸ್ಸು, ತೇಜ, ಇಂದ್ರಿಯ, ವೀರ್ಯ, ಅನ್ನಾದ್ಯ (ಛಾಂದೋಗ್ಯ. ೩-೧೨-೩). (ಈ) ಮಧುರ, ಆಮ್ಲ, ಕಟು, ಕಷಾಯ, ತಿಕ್ತ-ಈ ರಸಗುಣಗಳಿರುವ ನೆಲ್ಲಿಕಾಯಿ (ಚರಕ. ೧,೧-೨೮,೩೫).(ಉ)ತಿಕ್ತ, ಆಮ್ಲ,ಕಟುಕ,ಮಧುರ, ಕಷಾಯ (ತತ್ತ್ವಪ್ರ. ೫-೨೪೨)." (ಶ್ರೀಪತ್ಸ. ೩೩೯). [ಪಂಚ್+ರಸ]

ಪಂಚರಸಿ (ನಾ). ಚಿನ್ನ, ಬೆಳ್ಳಿ, ಕಬ್ಬಿಣ, ತಾಮ್ರ ಮತ್ತು ತವರ ಎಂಬ ಐದು ಬಗೆಯ ಲೋಹಗಳು : ಪರಾಭವ ಸಂ ಭಾದ್ರಪದ ಶು ೧೪ ಲು ಸುಬಾಚಾರಿ ಮಡಿದ ರುಪಾಯಿ ಮಡವ ಪಂಚರಸಿಯ ಸಳಾಕೆ ಮ ೨೪ ನೆಗೆ ೯ (ಮೈಆ. ೧೯೩೧, ೬೨-೧ ; 1726).

[←ಮರಾ. ಪಂಚರಸೀ]

ಪಂಚರಾತ್ರ (ನಾ). ೧. ಐದು ರಾತ್ರಿಗಳು. ೨. ವಾಶಿಷ್ಠ, ನಾರದೀಯ, ಕಾಪಿಲ, ಗೌತಮಿನಾಯಕ, ಸನತ್ಕುಮಾರೀಯ ಎಂಬ ಐದು ವಿಧವಾದ ಜ್ಞಾನಗಳನ್ನು ಉಪದೇಶಿಸುವ ಒಂದು ತತ್ತ್ವಶಾಸ್ತ್ರ : ಪಂಚರಾತ್ರಶಾಸ್ತ್ರವನ್ನು ಭಗವಂತನು ಪ್ಲಾಹ ವಾಸುದೇವಾವತಾರದಲ್ಲಿ ಉಪದೇಶಿಸಿರುವನು . . . ಈ ನಾಲ್ಕು ಅಂಶಗಳನ್ನೂ ಪರಸ್ಪರ ಅನುಕೂಲವಾಗಿ ಸೇರಿಸಿ ಒಂದು ತತ್ತ್ವವನ್ನಾಗಿ ಮಾಡಿ ಉಪದೇಶಿಸುವುದಕ್ಕಾಗಿಯೇ ಹೊರಟಿರುವುದು ಪಂಚರಾತ್ರಶಾಸ್ತ್ರ (ಹಿಂದಸಾ. ೨೪೩).೩. ಐದು ವಿಧವಾದ ಜ್ಞಾನಗಳು : "ಪಂಚರಾತ್ರಗಳು ಎಂದರೆ ಪಂಚವಿಧ ಜ್ಞಾನಗಳು : ಸಾತ್ತ್ವಿಕ, ಸಾತ್ತ್ವಿಕ, ಸೈರ್ಗುಣ್ಯ, ರಾಜಸಿಕ, ತಾಮಸ (ಶಕದ್ರು.IV, ೧೩)." (ಶ್ರೀಪತ್ಸ. ೩೩೬). [ಸಂ.]

ಪಂಚರಾಯುಧ (ನಾ).ಒಂದು ಬಗೆಯ ಆಯುಧ(?): ತೊಳಗುವ ಬಾಳ್ ಕಟುತ್ತಟುಪ ಕಳ್ಕಡೆ ಬುಂಭುಕದೊಳ್ ತಗುಳ್ದು ಪಜ್ಜಳಿಸುವ ಪಂಚರಾಯುಧಂ . . . ಭಯಂಗೊಳಿಸೆ ಕಡಂಗಿ ತಾಗಿದುದಸುಂಗೊಳೆ ತುಂಗತುರಂಗಸಾಧನಂ (ಪಂಪಭಾ. ೧೦-೩೩) ; ಪಂಚರಾಯುಧಂ ಬೆರಸೆಸೆನಟ್ಟಿ . . . ಪೊರೆದಿರೆ ಬಿನ್ನಣಂ ನೆಗಟಿ ತಳ್ತೆಱದರ್ ಕೆಲರಾಜಿರಂಗ ದೊಳ್ (ಪಂಪಭಾ. ೧೦-೩೮). [?]

ಪಂಚರಾಶಿ (ನಾ). [ಗಣಿತ] ಒಂದು ಬಗೆಯ ಲೆಕ್ಕ ; ಐದು ಹಂತಗಳ ರಚನೆಯಿಂದ ಉತ್ತರವನ್ನು ಪಡೆಯುವ ಲೆಕ್ಕ ; ದ್ವಿಗುಣಿತ ತ್ರೈರಾಶಿ : ಪಂಚರಾಶಿ . . ; ನಿಮಗೆ ಪಂಚಸಪ್ತ ನವರಾಶಿಗಳೊಳ್ ಪಡುವುಟಾಯ ಬೇಜಿವೇಜಾಕ್ಕೆಲದೊಳ್ ನೆಗಟ್ಟುರ್ದ್ದ ರಾಶಿ ತವೊಳ್ ನಿಮಗೆ ಗುಣಯಿಸಲೊಡ್ಡಿದಲ್ತೆ ರಾಜಾದಿತ್ಯಾ ? (ವ್ಯವಹಾ. ೩೩-೨). [ಪಂಚ್+ರಾಶಿ]

ಪಂಚರಾಶಿಕ (ನಾ). = ಪಂಚರಾಶಿ : ಇನ್ನು ಮುಂದೆ ರಾಜಾದಿತ್ಯದ ಗಣಿತದಲ್ಲಿ ಕ್ರಯವಿರಾಶಿಕ ಬೆಸ್ತತ್ರಯವಿರಾಶಿಕ ಪಂಚರಾಶಿಕ ಬೆಸ್ತ ಪಂಚರಾಶಿಕ (ವ್ಯವಹಾ. ಅನುಬಂಧ. I,೧೧೧-೧೧೦) ; ನಿಮಗೆ ಪಂಚರಾಶಿಕದೊಳಗೆ ನಿಮಗೆ ಮುಳ್ಕದ ರಾಶಿಯನೆ ತಂದು (ವ್ಯವಹಾ. ಅನುಬಂಧ. I, ೩೪-೨).

[ಸಂ.]

ಪಂಚರೂಪ(ನಾ)೧. ಐದು ಆಕಾರಗಳು : ಮಾತಂಶ್ವನು ಪಂಚರೂಪದಿ ಪಾತಕಗಳಿಂಬರಿಗಳನು ಸಂಹರಿಪ ತಳವಾರ (ಪಸಾರ. ೫-೨೦). ೨. [ದ್ವೈತ] ಪರಮಾತ್ಮನ ಐದು ರೂಪಗಳು : ಪಂಚರೂಪಗಳು -ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ, ನಾರಾಯಣನೆಂಬ ಪರಮಾತ್ಮನ ಐದು ರೂಪಗಳು (ಪಸಾರ. ೧-೯ ತಾತ್ಪರ್ಯ).

[ಪಂಚ್+ರೂಪ]

ಪಂಚಲಕ್ಷಣ (ನಾ). ೧. ಪುರಾಣಗಳ ಸರ್ಗ, ಪ್ರತಿಸರ್ಗ, ವಂಶ, ಮನ್ವಂತರ ಮತ್ತು ವಂಶಾನುಚರಿತ ಎಂಬ ಐದು ಲಕ್ಷಣಗಳು : ಮತ್ತಮಾ ಪುರಾಣಂಗಳ್ಗಿ ಸರ್ಗ ಪ್ರತಿಸರ್ಗ ವಂಶ ಮನ್ವಂತರ ವಂಶಾನುಚರಿತಗಳೆಂಬ ಪಂಚಲಕ್ಷಣಂಗಳುಂ . . . ವಿದಿತಂಗಳಕ್ಕುಂ (ವಿವೇ. ೯) ; "ಪುರಾಣಂ, ಪಂಚಲಕ್ಷಣಂ . . . ಪಂಚಲಕ್ಷಣಗಳಿಂದೊಡಗೂಡಿದ ಸ್ಕಾಂದಾದಿ ಪುರಾಣಗಳ ಹೆಸರುಗಳು" (ಪಿದ್ಧಾಂತ. ೫೦). ೨. ಪುರಾಣ: ಪುರಾಣವೆಂದರೆ . . . ವ್ಯಾಸರೇ ಮೊದಲಾದ ಮುನಿಗಳಿಂದ ರಚಿತವಾದ ಪಂಚಲಕ್ಷಣ ಸಮನ್ವಿತವಾದ ಶಾಸ್ತ್ರ ಎಂದೂ ಪುರಾಣಶಬ್ದಕ್ಕೆ ನಿರ್ವಚನವನ್ನು ಹೇಳುತ್ತಾರೆ (ಭಾರದ. ೧೩೪). ೩. ಪರಮಾತ್ಮ ನಿಗಿರುವ ಸತ್, ಚಿತ್, ಆನಂದ, ನಿತ್ಯತ್ವ ಮತ್ತು ಪರಿಪೂರ್ಣತ್ವ ಎಂಬ ಐದು ಲಕ್ಷಣಗಳು,—ಧರ್ಮಗಳು : ಸಚ್ಚಿದಾನಂದ ನಿತ್ಯ ಪರಿಪೂರ್ಣತ್ವಮೆಂಬ ಪಂಚಲಕ್ಷಣಾಂಚಿತಮಾಗಿ ಬಿಂದುವೊಪ್ಪಿತ್ತು (ಮುನೋವಿ. ೨-೩೯ ಟೀಕು). [ಪಂಚ್+ಲಕ್ಷಣ]

ಪಂಚಲಪನ$_1$ (ನಾ). ಪಂಚಮುಖಗಳುಳ್ಳವನು; ಶಿವ : ಪಂಚಲಪನನ ಪಂಚಮುಖಯೆವಂಗಳಿಗೆ ಗುರಿ ಸಂಚು ತಪ್ಪದ ತೆರದಿ ಲಕ್ಷಿಯೆ ತನ್ನಯ ಪಂಚವಿಶಿಖಂಗಳನು ಸರ್ವಶಕ್ತಿಯ ಬಲದಿಯೆಚ್ಚೆಚ್ಚು ಬೊಪ್ಪಿರಿಯಲು (ನಪನೋ. ೬-೪೯). [ಪಂಚ್+ಲಪನ]

ಪಂಚಲಪನ$_2$ (ನಾ). = ಪಂಚಮುಖ$_2$: ಸದಾಭ್ರಾಂತ ಬೌದ್ಧಾದಿಮತ ಕುಂಭವಿದಳನ ಪಂಚಲಪನನನುಪಮವೀರನು (ಅರಾಜ. ೨-೩-೩೩).

[ಪಂಚ್+ಲಪನ]

ಪಂಚಲಬ್ಧಿ (ನಾ). [ಜೈನ] ಕ್ಷಯೋಪಶಮ, ವಿಶುದ್ಧಿ, ದೇಶನೆ, ಪ್ರಾಯೋಗ್ಯತೆ ಮತ್ತು ಕರಣ ಎಂಬ ಸಮ್ಯಕ್ತ್ವಕ್ಕೆ ಕಾರಣವಾದ ಐದು ಲಬ್ಧಿಗಳು ; ☞ಪಂಚೇಂದ್ರಿಯಗಳು ಬುದ್ಧಿಶಕ್ತಿಗೊಳಗಾಗಿರುವುದು ಅಥವಾ ಪಾಪದ ಉದಯವನ್ನು ನಶಿಸುವಂಥದು ಕ್ಷಯೋಪಶಮ, ಅಶುಭವನ್ನುಳಿದು ಶುಭದ ಕಡೆ ಚಲಿಸುವಂಥದು ವಿಶುದ್ಧಿ, ಜಿನವಾಣಿಯನ್ನು ಅರಿತುಕೊಳ್ಳುವುದು ಅಥವಾ ಮನನ ಮಾಡುವ ತೀವ್ರಾಸಕ್ತಿಯೇ ದೇಶನಾ, ವಿಶೇಷವಾದ ಮನನದಿಂದ ಕರ್ಮಸ್ಥಿತಿಯನ್ನು ತೊಡೆದುಕೊಳ್ಳುವುದು ಪ್ರಾಯೋಗ್ಯ, ಅಧಃ, ಅಪೂರ್ವ, ಅನಿವೃತ್ತಿ ಎಂಬ ಕರಣಗಳನ್ನು ಪಡೆಯುವುದು ಅಂದರೆ ಅನಂತಗುಣವಿಶುದ್ಧಿಯ ಸಮಯದಲ್ಲಿ ಉಂಟಾಗುವ ಪರಿಣಾಮಗಳ ಪ್ರಾಪ್ತಿಯೇ ಕರಣ: ಕ್ಷಯೋಪಶಮ ವಿಶೋಧಿ ದೇಶನಾ ಪ್ರಾಯೋಗ್ಯ ಕರಣಾಭಿಧಾನ ಪಂಚ ಲಬ್ಧಿಗಳಪ್ಪುವು (ತತ್ತ್ವಪ್ರ. ೪೦) ; ಕ್ಷಯೋಪಶಮ ಲಬ್ಧಿ . . . ಕರಣ ಲಬ್ಧಿಗಳೆಂದು ಪಂಚಲಬ್ಧಿಗಳಂ ಪಡೆದಂ (ಪಸಾರ. ೩೪). [ಪಂಚ್+ಲಬ್ಧಿ]

ಪಂಚಲವಣ (ನಾ). ಕಾಚಕ, ಸೈಂಧವ, ಸಾಮುದ್ರ, ಬಿಡ ಮತ್ತು ಸೌವರ್ಚಲ ಎಂಬ ಐದು ಬಗೆಯ ಉಪ್ಪುಗಳು: ಇಂಗು ಬಜೆ ಪಂಚಲವಣಂ ಶೃಂಗಿಯ ಬೇರುಂ . . . ಪಿಂಗಿಸುಗುಂ ಶೂಲವೇನೆಯಂ ತತ್ಕ್ಷಣದೊಳ್ (ಅಶ್ವಶಾ. ೧೧-೧೩).[ಪಂಚ್+ಲವಣ]

ಪಂಚಲಾಂಗಲದಾನ (ನಾ). ಷೋಡಶ ಮಹಾದಾನಗಳಲ್ಲಿ ಒಂದು ; ಚಿನ್ನ, ಬೆಳ್ಳಿ ಮೊದಲಾದುವುಗಳ ಆಭರಣಗಳಿಂದ ಅಲಂಕರಿಸಲ್ಪಟ್ಟ ಐದು ಜೊತೆ ಎತ್ತುಗಳಿಂದ ಕೂಡಿದ ಐದು ಶ್ರೇಷ್ಠವಾದ ನೇಗಿಲುಗಳನ್ನು ತಕ್ಕಷ್ಟು ಭೂಮಿಯೊಂದಿಗೆ ದಾನ ಮಾಡುವುದು : ಷೋಡಶ ಮಹಾದಾನಗಳನ್ನು ಮಾಡಬೇಕೆಂದು ಸಂಕಲ್ಪಿಸಿ, ಆಯಾ ಪುಣ್ಯಕಾಲದಲ್ಲಿ ಪರ್ವಕ್ಕೆ ಎರಡು ಮೂರರ ಮೇರೆಗೆ ರಂಗ ನಾಥಸ್ವಾಮಿ ಸನ್ನಿಧಿಯಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ (೧) ತುಲಾಪುರುಷ ದಾನ . . . (೧೦) ಪಂಚಲಾಂಗಲದಾನ . . . ಶಾಸ್ತ್ರಕ್ಕೆ ಸ್ವಲ್ಪವೂ

ನ್ಮೂನತೆ ಇಲ್ಲದಂತೆ ಮಾಡಿ ಸತ್ಕೃತ್ಯಂ ಪಡೆದರು (ಪುಹಾವಂ.I,೧೦೧).
[ಪಂಚ$_2$+ಅಂಗಲ+ದಾನ]

ಪಂಚಲಿಂಗ(ನಾ). ೧. ಗಜಾರಣ್ಯವೆಂದು ಪ್ರಸಿದ್ಧವಾದ ತಲಕಾಡಿನಲ್ಲಿರುವ ಐದು ಲಿಂಗಗಳು; ಅರ್ಕೇಶ್ವರ, ಪಾತಾಳೇಶ್ವರ, ಮರಳೇಶ್ವರ, ಮಲ್ಲಿಕಾರ್ಜುನೇಶ್ವರ ಮತ್ತು ವೈದ್ಯೇಶ್ವರ ಎಂಬ ಲಿಂಗಗಳು: ಹನ್ನೆರಡುವರ್ಷಕ್ಕೊಮ್ಮೆ ತಲಕಾಡಿನಲ್ಲಿ ಪಂಚಲಿಂಗದರ್ಶನವೆಂಬ ಜಾತ್ರೆ ನಡೆಯುತ್ತದೆ (ರೂಢಿ). ೨. ತಮಿಳುನಾಡಿನಲ್ಲಿರುವ ಪ್ರಸಿದ್ಧವಾದ ಐದುಲಿಂಗಗಳು; ಪಂಚಭೂತಲಿಂಗಗಳು. ☞"ಪೃಥ್ವೀಲಿಂಗ (ಕಾಂಚೀವರಂ), ಅಪ್ಪೋಲಿಂಗ (ಜಂಬುಕೇಶ್ವರ), ತೇಜೋಲಿಂಗ (ಅರುಣಾಚಲಂ), ವಾಯುಲಿಂಗ (ಕಾಳಹಸ್ತಿ), ಆಕಾಶಲಿಂಗ (ಚಿದಂಬರ)" (ಶ್ರೀವತ್ಸ. ೩೮೪). ೩. [ವೀಶೈ] ಪಂಚೇಂದ್ರಿಯಗಳಲ್ಲಿ ಭಾವಿಸುವ ಪ್ರಸಾದಲಿಂಗ, ಜಂಗಮಲಿಂಗ, ಶಿವಲಿಂಗ, ಗುರುಲಿಂಗ ಮತ್ತು ಆಚಾರಲಿಂಗ ಎಂಬ ಐದು ಲಿಂಗಗಳು: ಶ್ರೋತ್ರ ತ್ವಕ್ಕು ಚಕ್ಷು ಜಿಹ್ವೆ ಘ್ರಾಣವೆಂಬ ಪಂಚೇಂದ್ರಿಯಂಗಳಲ್ಲಿ ಪ್ರಸಾದಲಿಂಗ ಜಂಗಮಲಿಂಗ ಶಿವಲಿಂಗ ಗುರುಲಿಂಗ ಆಚಾರಲಿಂಗವೆಂಬ ಪಂಚಲಿಂಗಗಳು ತಮ್ಮ ತಮ್ಮ ಮುಖದೊಳು ನಿಂದು . . . ಸರ್ವೇಂದ್ರಿಯಂಗಳು ಲಿಂಗವಶವಾಗಿಪ್ಪರಯ್ಯಾ (ಅದನ.ಮು. ೨೦೪-೩೫೮); ಪಂಚೇಂದ್ರಿಯಂಗಳಲ್ಲಿ ಪಂಚಲಿಂಗಂಗಳ ಪ್ರತಿಷ್ಠಿಸಿ . . . ಮೂಲೋಕದೊಡೆಯನಲ್ಲಿ ಮನವಡಗಿರ್ಪ ಮಹಾಶರಣರ ಶ್ರೀಪಾದಕ್ಕೆ ನಮೋ ನಮಃ ಎಂಬೆನಯ್ಯಾ (ಅಖಂಡೇ. ೮೭-೯೦). [ಪಂಚ$_2$+ಲಿಂಗ]

ಪಂಚಲೋಭಿ (ನಾ). ಬಹಳ ದುರಾಶೆಯುಳ್ಳವನು; ಕಡು ಲೋಭಿ: "ದೀನಂ ಕದರ್ಯಂ ಪಂಚಲೋಭಿ[ಪಾಠಾಂ. ಲೋಭಿ]ಕೀನಾಶನಕ್ಕುಂ" (ಮುಂಗರಾ. ೬೮-೭). [ಪಂಚ$_3$+ಲೋಭಿ]

ಪಂಚಲೋಹ(ನಾ).೧. ತಾಮ್ರ, ಹಿತ್ತಾಳೆ, ತವರ, ಸೀಸ ಮತ್ತು ಕಬ್ಬಿಣ ಎಂಬ ಐದು ಬಗೆಯ ಪ್ರಸಿದ್ಧವಾದ ಲೋಹಗಳು: "ಇಳೆಯಾದಿ ಭೂತಂಗಳಲಿ ಪಂಚಲೋಹದಲಿ . . . ಧಾತುವೆಂಬಭಿಧಾನವರ್ತಿಸಿರ್ಕುಂ" (ಮುಂಗರಾ. ೧೪೬-೩೪). ೨. ವಿಗ್ರಹ ಮೊದಲಾದುವನ್ನು ಮಾಡುವುದಕ್ಕಾಗಿ ಐದು ಲೋಹಗಳನ್ನು ಸೇರಿಸಿ ಮಾಡುವ ಒಂದು ಮಿಶ್ರಲೋಹ: ಗಂಗರ ಕಾಲದ ಪಂಚಲೋಹದ ಮೂರ್ತಿಗಳು ಇಲ್ಲವೇ ಇಲ್ಲವೆಂದು ಹೇಳಬಹುದು (ಧಾರವ. ೫೦೩).
[ಪಂಚ$_2$+ಲೋಹ]

ಪಂಚವಕ್ತ್ರ$_1$ (ನಾ). =ಪಂಚಲಪನ$_1$: ಉಮಾಧಿನಾಥರು ಕೋಟಿ ಪಂಚವಕ್ತ್ರರು ಕೋಟಿ ನಂದಿವಾಹನರೊಂದು ಕೋಟಿ ನೋಡಯ್ಯಾ (ಬಸವ. ೯೨೦); ಮುಂತೆ ಶಿವಮೂರ್ತಿ ಜಗವೆಲ್ಲಂಗೊಳು ತೊಳತೊಳಗೆ ದಶಭುಜಂ ಪಂಚವಕ್ತ್ರಂ ತ್ರಿನೇತ್ರದಿನೊಪ್ಪೆ (ನಂಬಿರ. ೬-೧೨೫).
[ಪಂಚ$_2$+ವಕ್ತ್ರ]

ಪಂಚವಕ್ತ್ರ$_2$ (ನಾ). = ಪಂಚಮುಖ$_2$: "ಹರಿ ನ್ಯಗ್ರೋಧೇಂದ್ರಂ ಪಂಚವಕ್ತ್ರಂ ನಖಾಯುಧಂ . . . ಕೇಸರಿಯೆನಲ್ ಸಿಂಹಮೆನಿಸಿಕ್ಕುಂ" (ಮುಂಗರಾ. ೪೭-೬). [ಪಂಚ$_3$+ವಕ್ತ್ರ]

ಪಂಚವಕ್ತ್ರರಸ (ನಾ). ಒಂದು ಬಗೆಯ ಔಷಧ: ಪಂಚವಕ್ತ್ರರಸ:— ಇದನ್ನು ಮಾಡುವ ಕ್ರಮ – ೧ ತೊಳ, ಗಂಧಕ ೧, ವಿಳಿಯ ಮೆಣಸು ೧, ಶುದ್ಧ ಬಿಳುಗಾರದ ಹಳುಕು ೧, ಹಿಪ್ಪಲಿ ೧, ಇವೆಲ್ಲವನ್ನು ಸಮಗೊಂಡು ಮರ್ದಿಸಿ . . . ಹಸಿ ಶುಂಠಿರಸದಲ್ಲಿ ಕೊಡುವುದು (ವಿವೈವಿ. ೩೬).
[ಪಂಚವಕ್ತ್ರ+ರಸ]

ಪಂಚವಟಿ$_1$ (ನಾ). "ಕೂದಲಿನಿಂದ ವಿಶಾಲವಾಗಿ ಮಾಡಿಸಿ ಎದೆಯಲ್ಲಿ ಧರಿಸಿಕೊಳ್ಳುವ ದಾರವು"(ಪುಂವಿ. ೨೮೫): ಆಗ ಮಹಾವ್ರತಿ ಆ ಯುವತಿಯ ಕೂದಲನ್ನು ಕಂಡು "ಇದು ನಮ್ಮ ಪಂಚವಟಿಗೆ ಉಪಯೋಗವಾಗುವುದು" ಎಂದನು (ಪುಂವಿ. ೯೩).
[<ಸಂ. ಪಂಚವಟಿ=ಯಜ್ಞೋಪವೀತ]

ಪಂಚವಟಿ$_2$ (ನಾ). ೧. ಅಶ್ವತ್ಥ, ಬಿಲ್ವ, ವಟ, ಧಾತ್ರೀ ಮತ್ತು ಅಶೋಕ ಎಂಬ ಐದು ಮರಗಳು. ೨. ಶ್ರೀರಾಮನು ವಾಸ ಮಾಡಿದ ಗೋದಾವರೀನದಿಯ ದಡದಲ್ಲಿರುವ ಪಂಚವಟಿ ವೃಕ್ಷಗಳನ್ನು ಒಳಗೊಂಡಿದ್ದ ಒಂದು ಅರಣ್ಯಪ್ರದೇಶ; ☞ ಈಗಿನ ನಾಸಿಕ ಜಿಲ್ಲೆಯ ಒಂದು ಪ್ರದೇಶ: ಸುದತಿ ಕಿಷ್ಕಿಂಧೆಯನು ನೋಡಾ ಇದುವೆ ಬಾಲಿಯ ಸದನ ಮುಂದಿಹುದದುವೆ ಪಂಚವಟಿಯು (ಕಾಶಿಂ. ೪೪-೪೯); ತರಣಿವಂಶಜರತ್ರಿಮುನಿಯುಪಚರಣೆಯನು ಕೈಗೊಂಡು ರಜನೀಚರ ವಿರಾಧನ ಮುಖದಿಂದು ಸಾರ್ದರು ಪಂಚವಟಿವನವ (ತೊರಂರಾ. ೩-೧ ಸೂಚನೆ). [ಸಂ. ಪಂಚವಟೀ]

ಪಂಚವರ್ಣ (ನಾ). =ಪಂಚವರ್ಣ ೧: "ಪಂಚವರ್ಣ-ಪಂಚವರ್ಣ" (ತಪ್ಪ್ಯಕೋ. ೨೩); ಪಂಚವರ್ಣದ ಪಟ್ಟೆಯ ಬಿರುದಿನ ವೀರಗಚ್ಚೆಗಟ್ಟಿರ್ದ ಸಿರಿಯ ನೇಜೆಯನುನೋಜೆಯಿಂದೆತ್ತಿ ಪಿಡಿದು (ರಾಜಶೇ. ೬-೧೧ ಸ).
[<ಸಂ. ಪಂಚವರ್ಣ]

ಪಂಚವರ್ಣಗೆ (ನಾ). ೧. ಐದು ಬಗೆಯ ಬಣ್ಣಗಳು; ಪಂಚವರ್ಣ: ಪಂಚವರ್ಣಗೆಯು ಪುಲ್ಲಿಯ ಚಿಲ್ಲಣದಿಂ ಕಟೀತಟಂ ನಸುನಗೆ ಸಿಂಹಬಂಹಿಮಳಟೀತಟಮಂ ಭುಜದಂಗದಂಗಳಾಗಿಸೆ ಪುರದೊಳ್ ಪುರಂದರ ಶರಾಸನಮಂ ನಿಜರಶ್ಮಿರಶ್ಮಿಯಿಂ (ಪುಹಾನೇ.೬-೬೧). ೨. ಒಂದು ಬಗೆಯ ಅಲಂಕಾರ; ಐದು ಬಣ್ಣಗಳಿಂದ ಮಾಡಿದ ವರ್ಣರಚನೆ.—ಚಿತ್ರರಚನೆ: ಕಟ್ಟಿದ ಪಂಚವರ್ಣಗೆಯ ಪಟ್ಟೆಯ ಕೊಂಗ ಲೊಳಿಂಪ್ರಚಾಪಮಂ ಪುಟ್ಟಿಸಿ . . . ಲೋಹಿತವೃಷ್ಟಿಯನಾಸವಾರಿಗಳ್ ಪುಟ್ಟಿಸೆ (ಪಂರಾಪು. ೧೩-೫೯); ತೆಗೆದು ತರಂಗೊಳಿಸಿದ ಪಂಚವರ್ಣಗೆಯ ಪಟ್ಟೆಯಂ ಸಿಂಗರಿಸಿದ ಮಕರತೋರಣದ ಸಂಗಳಿಸಿದ ಸನಿಯ ಸೂಸಕಂಗಳ . . . ಗಾಡಿವಡೆದ ಮಂಟಪದ ಮಧ್ಯದಲ್ಲಿ ನೆರೆದವಿಬುಧರಿಂ (ರಾಜಶೇ. ೪-೫೮). ೩. ಮಂಗಳಸಮಾರಂಭಗಳಲ್ಲಿ ನೆಲದ ಮೇಲೆ ಬರೆಯುವ ಐದು ಬಣ್ಣಗಳ ಹಿಟ್ಟು, ರಂಗೋಲೆ ಮೊದಲಾದುವುಗಳ ಮಂಡಲ; ನಾರಿಯರು ಬಂದು ಅಂಗಳ ಬಳಿದು ಗಂಧದ ಸಾರನೆಯದಳಿದು ಮುತ್ತಿನ ರಂಗವಾಲೆ ವಿಸ್ತಾರದಿಂದಲಿ ಪಂಚವರ್ಣಗೆಯ ಬಿಟ್ಟು (ವಿರಾಪ್ಯ. ೯೨-೩); ಗಂಗೋದಕವ ತಳಿದು ರಂಗವ ನಿಕ್ಕಿ ನವ ಪಂಚವರ್ಣಗೆಯ ನೆಲೆನೆಲೆಯೊಳಂ ರಚಿಸಿ (ಪರಶು. ೩೩-೨). ೪. ಒಂದು ಮುಠದ ಹೆಸರು: ಪರತರ ಪರಂಜ್ಯೋತಿ ಪಂಚವರ್ಣಗೆ ಯಾರ್ಯ ನಂಜೇಶ ಸಲಹುಗೆಮ್ಮ (ರಾಷಡ. ೧-೩).
[<ಸಂ. ಪಂಚವರ್ಣಕಾ]

ಪಂಚವತ್ಸರ (ನಾ). ೧. ಐದು ವರ್ಷಗಳು. ೨. ಐದು ವರ್ಷದವನು; ಬಾಲಕ: ಪಂಚವತ್ಸರನಾದ ಪುತ್ರನನಂದು ಗೌಡಿಯರಾತ್ಮಜರ್ ಪಂಚಸುತ್ತೆ ಸಮಸ್ತವಸ್ತುಗಳುಂ ಬಗಲ್ಗಳವಟ್ಟಿರಲ್ ಸಂಚಯಗೊಳುತೋಡಿದರ್ (ಹಾಲಾಸ್ಯ. ೨-೧-೪). [ಪಂಚ$_2$+ವತ್ಸರ]

ಪಂಚವದನ$_1$ (ನಾ). ೧. ಐದು ಮುಖಗಳು: ಪೃಥೆ ಅಪ್ಪ ತೇಜ ವಾಯುವಾಕಾಶವೆಂಬ ಪಂಚತ್ವವೇ ಪಂಚವದನವಾಗಿ ಆ ಪಂಚವದನವೇ ಪಂಚೀಕೃತವನೆಯ್ದಿ ಜಗದಾದಿ ಸೃಷ್ಟಿಯನನುಮಾಡುವುದಕ್ಕೆ ಕರ್ತನಾದ ನಮ್ಮ ಬಸವಯ್ಯನು (ಶೀಲವ. ೨೫-೧); ಪಂಚವದನಂಗಳೆಂದೆಸೆದು ಕೈಪಂಚನಯನಂಗಳಿಂ ವಿರಾಜಿಪ ಪಂಚವರ್ಣಂಗಳಿಂದೆಸೆದು ಬಲ್ಮಿಂಚನಂದದಲಿ (ಗಗಶಾ. ೬-೪೬). ೨. ಐದು ಮುಖವುಳ್ಳವನು; ಶಿವ: ಪಂಚವದನನ ಭಕ್ತರಿಗೆ ಸರ್ವಂಚಕದೊಳರ್ಥಂಗಳಿಲ್ಲವನಂಚತಸ್ರಿಯದಿಂದ

ವಾರಾಧಿಸಿ ನಮೆಯಲೊಡನೆ (ಬಸಪು. ೨೮-೫); ಪಂಚವದನನ ಪರಮ ಯೋಗಮುದ್ರೆಯನೊಡೆದು ಕರಣಂಗಳೆಲ್ಲ ಕದಡಿ (ನಸಮೋ. ೪-೧೬).

[ಪಂಚ₂ + ವದನ]

ಪಂಚವದನ₃(ನಾ). = ಪಂಚಮುಖಿ₂ : ಪರಮಪಂಚಾಕ್ಷರಿಯು ನೀವು ಮಜಿಯದಿರಟ್ಟಿಯಿಂ ಪಜಿಯದು ತಲೆ ಬೀಳುವಾ ವೇಳೆಯವಧಾನವೇ ಬೇಹುದದು ದೋಸಕರಿಪಂಚವದನನೆನಲು (ಭಾಪಚಂ. ೯-೩೩); ವೀರೇಶ್ವರಂ ಸಿಂಹವಾಗುತ್ತಲಂತದಲಿ ಮಸ್ತಕವನಿಬ್ಬಗೆಯಾಗಿ ಸೀಳಲುರಗಂ ಬಳಿಕ್ಕುಗ್ರಪಂಚವದನನಾಗಲ ಶರಭನಾಗಿ ರುದ್ರಂ ಸೀಳಲು (ವೀಶೈಪು. ೬-೮-೧೪). [ಪಂಚ₃ + ವದನ]

ಪಂಚವರ್ಗ (ನಾ). ೧. ಐದರ ಗುಂಪು. ೨. [ವ್ಯಾಕ]ಕಕಾರದಿಂದ ಮಕಾರದವರೆಗಿರುವ ಐದು ಐದು ಅಕ್ಷರಗಳ ಐದು ಗುಂಪು; ಕವರ್ಗ, ಚವರ್ಗ, ಟವರ್ಗ, ತವರ್ಗ, ಪವರ್ಗ. ೩. [ರಾಜನೀ] ಕಾಪಟಿಕ, ಉದಾಸ್ಥಿತ, ಗೃಹಪತಿಕ, ವೈದೇಹಕ ಮತ್ತು ತಾಪಸ ಎಂಬ ಐದು ಬಗೆಯ ಗೂಢಚಾರರ ಗುಂಪು: ಸಾಮ, ದಾನ, ಭೇದ, ದಂಡ ಎಂಬ ನಾಲ್ಕು ಉಪಾಯಗಳು, ಅಷ್ಟವರ್ಗ ಮತ್ತು ಪಂಚವರ್ಗಗಳು ಮತ್ತು ತೀರ್ಥಗಳು—ಇವುಗಳ ವಿವರಣೆಯಿಂದ ರಾಜನೀತಿಯ ಅರಿವು ಉಂಟಾಗುತ್ತದೆ (ಭಾರದ. ೩೬೯). [ಪಂಚ₂ + ವರ್ಗ]

ಪಂಚವರ್ಣ(ನಾ). ೧. ಬಿಳುಪು, ಹಳದಿ, ಕೆಂಪು, ಹಸುರು ಮತ್ತು ಕಪ್ಪು ಎಂಬ ಐದು ಬಗೆಯ ಬಣ್ಣಗಳು: ತದೀಯ ಶಿರಂ ವರಪಂಚವರ್ಣ ಪಂಜರಮೆನೆ ಪಂಚವರ್ಣಶುಕಮೊಪ್ಪಿದುದಲ್ಲಿ (ರಾಜಶೇ. ೧೪-೭೯). ೨. ಐದು ಅಕ್ಷರಗಳು. ೩. ಐದು ಅಕ್ಷರಗಳಿಂದ ಕೂಡಿರುವ ಒಂದು ಮಂತ್ರ; ಶಿವಪಂಚಾಕ್ಷರಮಂತ್ರ : ಭೂಪನಾನಂದದಿಂದಂ . . . ಶ್ರೀಪಂಚವರ್ಣಮಂ ಜಿಹ್ವೆಯೊಳ್ ಜಪಿಸುತ್ತಿರಲು (ಭಾಪಚಂ. ೪-೩೧); ಚಿದ್ಘನಲಿಂಗಕ್ಕಿದು ಪೆಸರೆಂದೆನೆ ಬಜ್ಜಿ ಪರಾರೊ ಪಂಚವರ್ಣದ ಘನಮಂ (ರಾಜಶೇ. ೪-೨೪). [ಪಂಚ₂ + ವರ್ಣ]

ಪಂಚವರ್ಣಗಿಳಿ(ನಾ). ಐದು ಬಗೆಯ ಬಣ್ಣಗಳ ಗರಿಗಳನ್ನುಳ್ಳ ಗಿಳಿ: ಮುಂಡಕೆ ಚಕ್ರವಾಳ ಬಕದಾರ ಮುರಾಳನು ಜಕ್ಕವಕ್ಕಿಯಂ ಕೊಂಡಿಗ ಪಂಚವರ್ಣಗಿಳಿ ಕೋಕಿಲ . . . ಒಪ್ಪುತಿಹುದಲ್ಲಿಯ ರೌದ್ರವರಣ್ಯಮನುಧ್ಯದೊಳ್ (ಸುಬ್ಬಕಾ. ೩-೧೪೧).

[ಪಂಚವರ್ಣ + ಗಿಳಿ]

ಪಂಚವರ್ಣೆ (ನಾ). ಐದು ಬಣ್ಣಗಳಿಂದ ಕೂಡಿಕೊಂಡಿರುವವಳು : ಚಂಚನ್ನಿಜಪಂಚವರ್ಣೆ ಪಡೆಗುಂ ಚಿತ್ರಾಂಗನಾಶಂಕೆಯಂ (ಅಜಿಪು. ೨-೪೪). [ಸಂ. ಪಂಚವರ್ಣಾ]

ಪಂಚವರ್ಣ (ನಾ). = ಪಂಚವರ್ಣ ೩ : ವರಧರ್ಮಸುಗುಣ ದಾನೋಹದೊಳು ಸಂಪನ್ನರುರು ಪಂಚವರ್ಣಪಡ್ವರ್ಣ ಮೂಲಪ್ರಣಮ ದಿವ್ಯಾತ್ಮಸದ್ರೂಪರು (ವೀಶೈಪು.೧-೧-೨೪); ಪಂಚವರ್ಣ ಸ್ವರೂಪಕ ಯನ್ನ ಹೃತ್ಸರಸಿಯೊಳಗೆ ನೆಲಸಿರ್ಕಳ್ಕರಿಂ (ನಸಮೋ. ೧-೬). [ಪಂಚ₂ + ವರ್ಣ]

ಪಂಚವಲ್ಕಲ (ನಾ). ಆಲ, ಅತ್ತಿ, ಅರಳಿ, ಗೋಣಿ ಮತ್ತು ಬಸರಿ ಎಂಬ ಐದು ಮರದ ತೊಗಟೆಗಳು; P ಆಲ, ಅತ್ತಿ, ಅರಳಿ, ಬಸರಿ ಮತ್ತು ಪಿಪ್ಪಲ ಎಂದೂ ಭೇದಗಳುಂಟು : ಕೊತ್ತಂಬರಿ ಬೀಜ, ಜೀರಿಗೆ. . . ಪಂಚವಲ್ಕಲಗಳು, ಪಂಚಪಲ್ಲವಗಳು, ನೆಲ್ಲೀಕಾಯಿ, ಆಲದ ಬಿಳಲು ಇವನ್ನು ಕಷಾಯವಿಟ್ಟು ಸೇವಿಸಿದರೆ ಶ್ಲೇಷ್ಮಭರ್ಧಿ. ಸಕಲ ಭರ್ಧಿ ಸಹ ನಿಲ್ಲುವುವು (ಸಳವೈ. ೪೫೭). [ಪಂಚ₂ + ವಲ್ಕಲ]

ಪಂಚವಳ್ಳಿ (ನಾ). ಒಂದು ಬಗೆಯ ಬಳ್ಳಿ : ಇತ್ತಡೆ ನಿನ್ನನಾಂ ನಡಸಿದೆಂ ಮೊಲೆಯಾಗದುದೆಲ್ಲಿಪಂದುದೋ ಚಿತ್ತಜ ನಿನ್ನನೊಲ್ದು ಪೊಣ್ಮಿಯಿಟ್ಟಪೆ ನೀನೆನಗಕ್ಕಟೆಂಬುದಾಪತ್ತಿನೊಳಪ್ಪದಂ ಫಲಮನುಣ್ಣಪೆ ಸಾವರೆ ಪಂಚವಳ್ಕಿಯಂ ಪಿತ್ತಿಲೊಳಿಟ್ಟರುಂ ಮರನನಿಟ್ಟರುಮೇಂ ಫಲಮುಂಬರಲ್ಲರೋ (ಬಂಪರಿ. ೮-೬೧). [ಸಂ. ಪಂಚವಲ್ಲೀ]

ಪಂಚವಾದ್ಯ (ನಾ). = ಪಂಚಮಹಾವಾದ್ಯ : ಜಯಘಮುದ್ದಳೆಯ, ಕಾಳೆಯ, ಪಂಚವಾದ್ಯದ, ಬಿರುದಿನ ಬಾವುಲಿಯ ಸಡಗರದಿಂ ಬಂದು ಶತ್ರುಳ್ಳಂ ಮುಂಚಪ್ಪಗೆ ಕಾಣಿಸಿಕೊಂಡು (ರಾಮೂಶ್ವ. ೧೦೪-೩೯).

[ಪಂಚ₂ + ವಾದ್ಯ]

ಪಂಚವಾಯು (ನಾ). ಶರೀರದಲ್ಲಿರುವ ಐದು ಬಗೆಯ ವಾಯುಗಳು; P ಶರೀರದಲ್ಲಿ ಪ್ರಾಣ, ಅಪಾನ, ಸಮಾನ, ಉದಾನ ಮತ್ತು ವ್ಯಾನ ಎಂಬ ವಾಯುಗಳಲ್ಲದೆ, ಶರೀರವ್ಯಾಪಾರಕ್ಕೆ ಸಾಧಕವಾದ ಬೇರೆ ಐದು ಬಗೆಯ ವಾಯುಗಳಿವೆ. ಅವೇ ನಾಗ, ಕೂರ್ಮ, ಕೃಕರ, ದೇವದತ್ತ ಮತ್ತು ಧನಂಜಯ ವಾಯುಗಳು. ಇವುಗಳಲ್ಲಿ ನಾಗವು ತೇಗನ್ನು ಉಂಟುಮಾಡುತ್ತದೆ, ಕೂರ್ಮವು ಕಣ್ಣು ತೆರೆಯುವುದಕ್ಕೆ ಸಾಧಕವಾಗಿದೆ, ಕೃಕರವು ಸೀನು ಬರಲು ಕಾರಣವಾಗಿದೆ, ದೇವದತ್ತವು ಆಕಳಿಕೆಯನ್ನುಂಟು ಮಾಡುತ್ತದೆ, ಧನಂಜಯವು ಶರೀರವನ್ನೆಲ್ಲಾ ವ್ಯಾಪಿಸಿ ಕೊಂಡಿರುತ್ತದೆ—ಮನುಷ್ಯನ ಪ್ರಾಣವಾಯು ಹೋದರೂ ಧನಂಜಯವು ಇನ್ನೂ ಸ್ವಲ್ಪಕಾಲ ಇರುತ್ತದೆ : ಚಚ್ಛಕ್ತಿಯು ಮಥನದಿಂದ ನಾಗ ಕೂರ್ಮ ಕೃಕರ ದೇವದತ್ತ ಧನಂಜಯ ಎಂಬ ಪಂಚವಾಯುಗಳ ನಿಲಿಸಿ (ಜನ್ನಪ. ಪರಿ.೪. ೧-೬೧೦); ನಾಗ ಕೂರ್ಮ ಕೃಕರ ದೇವದತ್ತ ಧನಂಜಯಗಳುಯುಂಬ ಪಂಚವಾಯುಗಳುಂಟು (ಈಶ್ವಸ್ತ. ೧೫-೩೨). [ಪಂಚ₂ + ವಾಯು]

ಪಂಚವಾರ್ಷಿಕ (ಗು). ಐದು ವರ್ಷಕ್ಕೆ ಸಂಬಂಧಿಸಿದ : 'ಪಂಚವಾರ್ಷಿಕಯೋಜನೆ' ಪರಾ. [ಸಂ.]

ಪಂಚವಾರ್ಷಿಕಯೋಜನೆ (ನಾ). ವ್ಯವಸ್ಥಿತವಾಗಿ ಮಾಡಬೇಕಾದ ಕಾರ್ಯಗಳ ರೂಪರೇಷೆಯ ವಿಧಾನಗಳನ್ನು ಐದು ವರ್ಷಗಳಿಗೆ ಒಮ್ಮೆ ಮುಂಚಿತವಾಗಿ ರೂಪಿಸಿಕೊಳ್ಳುವುದು : ಮೊದಲ ಪಂಚವಾರ್ಷಿಕಯೋಜನೆ ಮುಗಿದ ಹೊತ್ತಿಗೆ ಹೊರಗಿನವರು ನಮಗೆ ಕೊಟ್ಟ ಸಾಲ ಮತ್ತು ಗ್ರಾಂಟು ನೆರವು ಸುಮಾರು ೬೦೦ ಕೋಟಿ ರೂಪಾಯಿಪ್ಪು (ಹಣಪ್ರ. ೬೭೬). [ಪಂಚವಾರ್ಷಿಕ + ಯೋಜನೆ]

ಪಂಚವಾಳೆ 'ಪಂಚಪಾಳೆ' ನೋ.

ಪಂಚವಿಂಶ (ನಾ). ಇಪ್ಪತ್ತೈದು : ಶಂಖಿಕಾರ್ಯೆಯುಂ ಸೌಧರ್ಮ ಕಲ್ಪದೊಳ್ ಪಂಚವಿಂಶ ಪಲ್ಯೋಪಮಾಯುಷ್ಯದಿಂ ಪುಟ್ಟಿ (ಶಾಂತಿಪು. ೯-೪೪ ಪ). [ಪಂಚ₂+ವಿಂಶ]

ಪಂಚವಿಂಶತಿ (ನಾ). ಇಪ್ಪತ್ತೈದು : ತೆಂಕಣೊಗದೆ ಬಂದು ವೃಷಭಾಚಲಮಂ ಕಂಡನದು . . . ಪಂಚವಿಂಶತಿಶತಯೋಜನಾವಗಾಹಮುಮಾಗಿ ನಂದು (ಆದಿಪು. ೧೩-೬೯ ಪ); ನವಯೌವನಮಾದಂತುನ್ನತ ಪಂಚವಿಂಶತಿಪ್ರಾಯಮನಾಗಿ (ಸಂಬಿರ. ೧೦-೫).

[ಪಂಚ₂ + ವಿಂಶತಿ]

ಪಂಚವಿಂಶತಿಕ್ರಿಯೆ (ನಾ). [ಜೈನ] ಜೈನರು ತಮ್ಮ ಬಾಳಿನಲ್ಲಿ ಅನುಸರಿಸಬೇಕಾದ ಇಪ್ಪತ್ತೈದು ವಿಧವಾದ ಕ್ರಿಯೆಗಳು; P "ಪಂಚವಿಂಶತಿಕ್ರಿಯೆಗಳು—೧ ಸಮ್ಯಕ್ತ್ವಕ್ರಿಯೆ (ದೇವ ಗುರುಶಾಸ್ತ್ರಾದಿ ಪೂಜೆ) ೨ ಮಿಥ್ಯಾತ್ವಕ್ರಿಯೆ (ಅನ್ಯದೇವ ಗುರುಶಾಸ್ತ್ರಾದಿ ಪೂಜೆ) ೩ ಪ್ರಯೋಗಕ್ರಿಯೆ (ಗಮನಾಗಮನ) ೪ ಸಮಾದಾನ (ವಿರತನು ಅವಿರತನಾಗುವುದಕ್ಕೆ ಅಭಿಮುಖನಾಗುವುದು) ೫ ಈರ್ಯಾಪಥ (ಗಮನ) ೬ ಪ್ರಾದೋಷಿಕ (ಕ್ರೋಧಾವೇಶದಲ್ಲಾಗುವ ಪ್ರಮಾದ)೭ ಕಾಯಿಕಿ(ಕುಕರ್ಮೋ

ದ್ಯೋಗ) ೮ ಆಧಿಕರಣಿಕೆ (ಶಸ್ತ್ರಧಾರಣ) ೯ ಪರಿತಾಪಿಕೆ (ಪರದುಃಖೋತ್ಪಾದನ) ೧೦ ಪ್ರಾಣಾತಿಪಾತ (ಆಯುಸ್ಸು, ಇಂದ್ರಿಯಶಕ್ತಿ, ಪ್ರಾಣ ಇವುಗಳ ವಿಯೋಗಕ್ರಿಯೆ) ೧೧ ದರ್ಶನ (ರಮಣೀಯಸ್ವರೂಪಾವಲೋಕನ) ೧೨ ಸ್ಪರ್ಶನ ೧೩ ಪ್ರಾತ್ಯಯಿಕೆ (ಭೋಗ್ಯವಸ್ತುಸಂಗ್ರಹ) ೧೪ ಸಮಂತಾನುಪಾತ (ಪ್ರಾಣಿಗಳು ವಾಸಿಸುವಲ್ಲಿ ಮಲಮೂತ್ರತ್ಯಾಗ) ೧೫ ಅನಾಭೋಗ (ಪಿಂಛಾದಿಯಿಂದ ಪೆಲವನ್ನುಡುಗದೆ ಕುಳ್ಳಿರುವುದು, ಮುಂ) ೧೬ ಸ್ವಹಸ್ತಕ್ರಿಯೆ (ಪರರು ಮಾಡಬಹುದಾದ್ದನ್ನು ತಾನು ಮಾಡುವುದು) ೧೭ ನಿಸರ್ಗ (ಪಾಪೋತ್ಪಾದಕ ಕ್ರಿಯೆಯನ್ನು ತಾನು ಸಾಧುವೆಂದು ತಿಳಿವುದೂ ಪರರಿಗೆ ಮಾಡಲಪ್ಪಣೆಯಿವುದೂ) ೧೮ ವಿದಾರಣ (ಆಲಸ್ಯದಿಂದ ಶ್ರೇಯಸ್ಕರಕ್ರಿಯೆಯನ್ನು ಮಾಡದಿರುವುದು ಮತ್ತು ಅನ್ಯರ ಪಾಪಕರ್ಮವನ್ನು ಪ್ರಕಟಿಸುವುದು) ೧೯ ಅಜ್ಞಾವ್ಯಾಪಾದಿಕೆ (ಶಾಸ್ತ್ರಾನುಮತ ಕ್ರಿಯೆಯನ್ನು ಮಾಡದೆ ಅನ್ಯವಿಧವಾಗಿ ಮಾಡುವುದು) ೨೦ ಅನಾಕಾಂಕ್ಷೆ (ಅರ್ಹಂತರು ವರ್ಣಿಸಿದ ಕ್ರಿಯೆಯಲ್ಲಿ ಅನಾದರ) ೨೧ ಪ್ರಾರಂಭ (ಸ್ವಕೃತ—ಪರಕೃತ ಛೇದನ ಭೇದನಗಳಲ್ಲಿ ಹರ್ಷ) ೨೨ ಪಾರಿಗ್ರಾಹಿಕೆ (ಪರಿಗ್ರಹರಕ್ಷಣಕ್ಕಾಗಿ ಪ್ರವೃತ್ತನಾಗುವುದು) ೨೩ ಮಾಯೆ (ಜ್ಞಾನದರ್ಶನಾದಿಗಳಲ್ಲಿ ಕಪಟೋಪಾಯ) ೨೪ ಮಿಥ್ಯಾದರ್ಶನ (ಪರರ ಮಿಥ್ಯಾತ್ವಕ್ರಿಯೆಗೆ ಉತ್ತೇಜನ) ೨೫ ಅಪ್ರತ್ಯಾಖ್ಯಾನ (ಸಂಯಮದಲ್ಲಿ ಉದ್ಯುಕ್ತನಾಗದಿರುವುದು" (ಜೈನಧ. ೬೩). [ಪಂಚವಿಂಶತಿ+ಕ್ರಿಯೆ]

ಪಂಚವಿಂಶತಿಗುಗ್ಗುಳಚೂರ್ಣ (ನಾ). [ವೈದ್ಯಶಾ] ಗುಗ್ಗುಳವೇ ಮೊದಲಾದ ಇಪ್ಪತ್ತೈದು ಪದಾರ್ಥಗಳನ್ನು ಸೇರಿಸಿ ಮಾಡುವ ಚೂರ್ಣ : ಪಂಚವಿಂಶತಿಗುಗ್ಗುಳಚೂರ್ಣ–ತ್ರಿಕಟುಕ, ತ್ರಿಫಲ . . . ಇವೆಲ್ಲಕ್ಕೂ ಸಮ ಮಹಿಷಾಕ್ಷಿ ಗುಗ್ಗುಳು ಎಲ್ಲಾ ಒಟ್ಟು ಸೇರಿಸಿ . . . ತೆಗೆದುಕೊಳ್ಳಲು . . . ಎಂಬತ್ತು ವಿಧ ವಾತಗಳೂ ಸಹ ಮಾಣುವುವು (ಸಕಲೈ.ಪರಿ. ೪೩೭). [ಪಂಚವಿಂಶತಿ+ಗುಗ್ಗುಳ(=ಗುಗ್ಗುಲ)+ಚೂರ್ಣ$_2$]

ಪಂಚವಿಂಶತಿತತ್ತ್ವ (ನಾ). = ಪಂಚವಿಂಶತಿತತ್ವ : ಪಂಚವಿಂಶತಿತತ್ತ್ವಂಗಳ ವಂಚನೆಯನೆಯಿದು ಹತ್ತುನಾಡಿಗಳ ಪ್ಯಕ್ತೀಕರಿಸಿ (ಅಖಂಡೇ. ೧೯೩–೧೪). [ಪಂಚವಿಂಶತಿ+ತತ್ತ್ವ]

ಪಂಚವಿಂಶತಿತತ್ವ (ನಾ). [ತತ್ತ್ವಶಾ] ಸಾಂಖ್ಯರ ಮೇರೆಗೆ ಜಗತ್ತಿಗೆ ಮೂಲವಾದ ಇಪ್ಪತ್ತೈದು ತತ್ವಗಳು ; ಅಷ್ಟಪ್ರಕೃತಿಗಳು, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಮನಸ್ಸು, ಪಂಚವಿಷಯ, ಪುರುಷ ಎಂಬುವುಗಳಿಂದ ಕೂಡಿ ಆದ ತತ್ವ : ಪಂಚವಿಂಶತಿತತ್ವರೂಪದ ಸಂಚದಜಾಯದೆ ನೀತಿಮುಖದಲಿ ರಂಜಿಗಾಣದೆ ಸಗುಣಮಯ ನೀಹಾರದಲಿ ಮುಳುಗಿ . . . ಆತುಮ ವಂಚಕರು ನೀವ್ ಪಕುಗಳೆಂದರೆ ಖೇದವೇಕೆ (ಕುವ್ಯಾಕ. ೬–೨೭) ; ಪಂಚವಿಂಶತಿತತ್ವಂಗಳೆಂಬ ಮಾಯಾಸುಭಟರ ಸುಡಕೊಂದು (ಘನನ. ೩೮–೩೧). [ಪಂಚವಿಂಶತಿ+ತತ್ತ್ವ$_1$]

ಪಂಚವಿಂಶತಿಮಳ (ನಾ). [ಜೈನ] ಸಮ್ಯಗ್ದರ್ಶನಕ್ಕೆ ಬಾಧಕವಾದ ಇಪ್ಪತ್ತೈದು ದೋಷಗಳು ; ಮಿಥ್ಯಾದರ್ಶನವೇ ಮೊದಲಾದುವು : ಒಳಕೊಂಡ ಪಂಚವಿಂಶತಿಮಳದಿಂದಂ ಪಿಂಗಿ . . . ಬೆಳಗುಗುವಿಸಾ ತೆಜದೆ ನಿನ್ನ ದರ್ಶನರತ್ನಂ (ಸುಕುಸು. ೬–೪೬); ☞"ಮಿಥ್ಯಾದರ್ಶನ, ಮಿಥ್ಯಾಜ್ಞಾನ, ಮಿಥ್ಯಾಚಾರಿತ್ರ, ಮಿಥ್ಯಾದೃಷ್ಟಿಯುಳ್ಳವನು, ಮಿಥ್ಯಾಜ್ಞಾನಿಯಾದವನು, ಮಿಥ್ಯಾಚಾರಿತ್ರವಂತನು (ಈ ಆರು ಅನಾಯತನಗಳು); ದೇವಮೂಢ, ಗುರು ಮೂಢ, ಸಮಯಮೂಢ (ಈ ಮೂರು ಮೂಢಗಳು) ; ಜ್ಞಾನ, ಕುಲ, ಬಲ, ಪೂಜೆ, ಜಾತಿ, ಐಶ್ವರ್ಯ, ತಪ, ಶರೀರ (ಈ ಎಂಟು ಮದಗಳು) ; ಶಂಕೆ, ಕಾಂಕ್ಷೆ, ಅನ್ಯದೃಷ್ಟಿಪ್ರಶಂಸೆ, ಸಂಸ್ತವ, ವಿಚಿಕಿತ್ಸೆ (ಈ ಎಂಟು ಶಂಕಾದಿಕ ದೋಷಗಳು) (ಸಿದ್ಧಾಂತಸಾರ. ೧-೩೮-೫೦)" (ತ್ರಿಪಸ್ತ. ೨೧೩). [ಪಂಚವಿಂಶತಿ+ಮಳ(=ಮಲ)]

ಪಂಚವಿಧಜ್ಞಾನ (ನಾ). [ಜೈನ] ಮತಿಜ್ಞಾನ, ಶ್ರುತಜ್ಞಾನ, ಅವಧಿಜ್ಞಾನ, ಮನಃಪರ್ಯಾಯಜ್ಞಾನ, ಕೇವಲಜ್ಞಾನ ಎಂಬ ಐದು ಬಗೆಯ ಜ್ಞಾನಗಳು : ಈ ಪಂಚವಿಧಜ್ಞಾನಮುಂ ತದ್ಭೇದಾದಿಗಳುಂ ಮುಂತೆ ಪೇಟಿಪಡೆಗುಂ(ತತ್ತ್ವಪ್ರ.೫೩). [ಪಂಚ+ವಿಧ+ಜ್ಞಾನ]

ಪಂಚವಿಧಜ್ಯೋತಿಷ್ಕ (ನಾ). ಚಂದ್ರ, ಸೂರ್ಯ, ಗ್ರಹ, ನಕ್ಷತ್ರ, ಪ್ರಕೀರ್ಣಕಗಳೆಂಬ ಐದು ಬಗೆಯ ಜ್ಯೋತಿಷ್ಕರು : ಚಂದ್ರಾದಿತ್ಯಗ್ರಹನಕ್ಷತ್ರಪ್ರಕೀರ್ಣಕಂಗಳೆಂಬ ಪಂಚವಿಧಜ್ಯೋತಿಷ್ಕರಿಂ ಪರಿವಾರಿತಂಗಳಪ್ಪ (ಪ್ರತಿಷ್ಠಾ. ೪–೧೬) .[ಪಂಚ+ವಿಧ+ಜ್ಯೋತಿಷ್ಕ$_1$]

ಪಂಚವಿರುತಿ (ನಾ). = ಪಂಚಪಕ್ಷಿಸ್ವನ ೨ : ಪಂಚವಿರುತಿಯಿಂ ತಾಳ ಗತಿಗುರವಣಿಸಲಿರ್ವರದು ಸುರತಾಧಿಕಂ (ಜಸನ.೧೦–೨೪); ಪಂಚವಿರುತಿಗಳ ಸಂಚ ಶಕುನಿಮಂಚದಿಂಚರಸ್ತನಿತ ಸೀತ್ಕಾರ ಮುಂಚುವ . . .ಸುಸಿಲೇಳ್ವ (ಭೈರಸೂ. ೨೯೭). [ಪಂಚ$_2$+ವಿರುತಿ]

ಪಂಚವಿಶಿಖ(ನಾ). = ಪಂಚಬಾಣ ೧ : 'ಪಂಚವಿಶಿಖಾಸ್ತ್ರ' ಪರಾ. [ಪಂಚ$_2$+ವಿಶಿಖ]

ಪಂಚವಿಶಿಖಾಸ್ತ್ರ (ನಾ). ಐದು ಬಾಣಗಳೇ ಆಯುಧವಾಗಿ ಉಳ್ಳವನು ; ಮನ್ಮಥ : ಪಂಚವಿಶಿಖಾಸ್ತ್ರನೆಡೆಗಖಿಳಪಕ್ಷಿಯ ನಾಯಕರನು ಕರೆತಂದೊಪ್ಪಿಸಿ (ನಸಮೋ. ೫–೪೧). [ಪಂಚವಿಶಿಖ+ಅಸ್ತ್ರ]

ಪಂಚವಿಷಯ (ನಾ). ಐದು ಬಗೆಯ ಜ್ಞಾನೇಂದ್ರಿಯಗಳಾದ ಶ್ರೋತ್ರ (ಕಿವಿ), ತ್ವಕ್ಕು (ಚರ್ಮ), ಚಕ್ಷು (ಕಣ್ಣು), ಜಿಹ್ವೆ (ನಾಲಗೆ), ಘ್ರಾಣ (ಮೂಗು)ವೆಂಬ ಪಂಚೇಂದ್ರಿಯಗಳಿಗೆ ಕ್ರಮವಾಗಿ ಗೋಚರವಾಗುವ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ಐದು ಬಗೆಯ ಗುಣಗಳು : ಪಂಚಭೂತವಂಗವಾಗಿಪ್ಪ ಆತ್ಮಂಗೆ ಪಂಚೇಂದ್ರಿಯಂಗಳೇ ಮುಖಗಳು ಕರಣಂಗಳೇ ಕೈಗಳು ಪಂಚವಿಷಯವು ಪೂಜೆ (ಉರಿಪ. ಕ. ೨೦೧–೨೭೬) ; ರೂಪಾದಿ ಪಂಚವಿಷಯ ಪ್ರಾಪಣದಿಂದಲ್ಲದಾಗದಖಿಲೇಂದ್ರಿಯಸೌಖ್ಯೋಪಚಯಂ (ಚಂದ್ರಪ್ರ. ೧೧–೨೭). [ಪಂಚ$_2$+ವಿಷಯ]

ಪಂಚವೃತ್ತಿ (ನಾ). ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ ಎಂಬ ಐದು ಬಗೆಯನ್ನು ಹೊಂದಿರುವುದು ; ಪ್ರಾಣವಾಯು : ಇನ್ನು ಪ್ರಾಣಶಬ್ದವು ಪಂಚವೃತ್ತಿಯ (ವಾಯುವಿಕಾರದಲ್ಲಿ) ಹೆಚ್ಚು ಪ್ರಸಿದ್ಧವಾಗಿದೆ ಎಂದಿರಲ್ಲ, ಅದಕ್ಕೆ(ಹಿಂದಿನ ಆಧಿಕರಣದಲ್ಲಿ) ಆಕಾಶ ಶಬ್ದ(ದ ವಿಷಯಕ್ಕೆ ಹೇಳಿ)ದಂತೆಯೇ ಪರಿಹಾರವನ್ನು ಮಾಡಿಕೊಳ್ಳಬೇಕು (ಬ್ರಹ್ಮಭಾ. ೧೯೪). [ಪಂಚ$_2$+ವೃತ್ತಿ]

ಪಂಚವೆ (ನಾ). = ಪಂಚಮಿ : ಇತ್ಪಕ್ಕೆತ್ವಂ . . . ಪಂಚವಿ—ಪಂಚವೆ; ಪುಷ್ಕರಿಣಿ—ಪೊಕ್ಕರಣಿ (ಕನುಪ. ೨೬೯ ಪ್ರಯೋ). [<ಸಂ. ಪಂಚಮಿ]

ಪಂಚವ್ಯೂಹ (ನಾ). [ವಿಶಿಷ್ಟಾ] ಪರಮಾತ್ಮನಿಗಿರುವ ಪರ, ವ್ಯೂಹ, ಅಂತರ್ಯಾಮಿ, ವಿಭವ ಮತ್ತು ಅರ್ಚಾ ಎಂಬ ಐದು ಬಗೆಯ ವ್ಯೂಹಗಳು : ಈ ಸಂಪ್ರದಾಯದಂತೆ ಪರಮಾತ್ಮನು ಪಂಚವ್ಯೂಹರೂಪದಿಂದ ವಿಶ್ವಾತ್ಮಕನಾಗಿಯೂ ವಿಶ್ವಾತೀತನಾಗಿಯೂ ಇರುತ್ತಾನೆ. ಪರ, ವ್ಯೂಹ, ಅಂತರ್ಯಾಮಿ, ವಿಭವ, ಅರ್ಚಾ ಎಂಬುವುಗಳೇ ಪಂಚವ್ಯೂಹಗಳು (ಭಾರದ. ೨೬೭) [ಪಂಚ$_2$+ವ್ಯೂಹ]

ಪಂಚಶಕ್ತಿ (ನಾ). ೧. [ವೀಶೈ] ಜ್ಞಾನಶಕ್ತಿ, ಇಚ್ಛಾಶಕ್ತಿ, ಕ್ರಿಯಾಶಕ್ತಿ, ಆದಿಶಕ್ತಿ ಮತ್ತು ಪರಾಶಕ್ತಿ ಎಂಬ ಐದು ಬಗೆಯ ಶಕ್ತಿಗಳು : ಆ ಪಂಚಕಲೆಗಳಿಂದವೇ ಪಂಚಶಕ್ತಿಗಳುತ್ಪತ್ತಿ. ಆ ಪಂಚಶಕ್ತಿಗಳಿಂದವೇ ಜ್ಞಾನ ಮನ ಬುದ್ಧಿ ಚಿತ್ತ ಅಹಂಕಾರಂಗಳ ಜನನ (ಮಹಾದೇ.ಬ. ೧೦೨-೨೩೫); ಪರಶಿವ ಸದಾಶಿವ ಮಹಾಮಹಿಮ ಪಂಚಶಕ್ತ್ಯಾಧಾರ ನೆನಿಪ ಮಾಹೇಶಲೀಲಾವಿಗ್ರಹ (ವೀಶೈಪು.೧-೧-೧); ಆ ಸೃಷ್ಟಿಯ ಮುಖವ ಕಂಡು ಸೃಜಿಸಲು ಪುಟ್ಟಿದರು ಪಂಚಶಕ್ತಿಯರು, ಆ ಪಂಚಶಕ್ತಿಯರಿಗೆ ಪಂಚಮೂರ್ತಿಯರ ಕೈಗೊಳಿಸಿದಾತ ನಮ್ಮ ಬಸವಯ್ಯನು (ನೀಲವ. ೨೫-೧). ೨. ಈ ಐದು ಶಕ್ತಿಗಳ ಅಧಿದೇವತೆಗಳು [ಪಂಚ$_2$ + ಶಕ್ತಿ]

ಪಂಚಶತ (ನಾ). ಒಂದು ಸಂಖ್ಯೆ; ಐದುನೂರು : ಅಪಾರವೀರ್ಯನುಂ ಪಂಚಶತ ಚಾಪೋತ್ಸೇಧನುಂ . . . ಅಪ್ರತಿಹತಶಾಸನನುಮಾಗಿ (ಅವಿಪು. ೧೫-೩೨), ಇತ್ತಲ್ ಬಟಿಕ್ಕ ಪಂಚಶತೋತ್ತಮ ಯತಿಸಮಿತಿವೆರಸು ಗಮನ ಪ್ರಾಯಶ್ಚಿತ್ತನಿಮಿತ್ತಂ ಬಂದು ಸುದತ್ತಾಚಾರ್ಯರ್ ಪುರೋಪವನಮಂ ಸಾರ್ದರ್ (ಯಶೋಚ. ೧-೪೪). [ಪಂಚ$_2$ + ಶತ]

ಪಂಚಶಯನ (ನಾ). = ಪಂಚಶಯ್ಯೆ ೨ : ಪಂಚಶಯನ–[ಐದು ಬಗೆಯ ಹಾಸುಗೆ] ಎಂದರೆ ಅಂದ, ಶೈತ್ಯ, ಮಾರ್ದವ, ಪರಿಮಳ, ಶುಭ್ರತೆ—ಈ ಐದು ಗುಣವುಳ್ಳ . . . ಹಾಸುಗೆ ಎಂಬ ವ್ಯವಹಾರವು ತಮಿಳರಲ್ಲಿ ಮಾತ್ರವಿದೆ (ಜೀವಸಂ. ೮. ಮುನ್ನುಡಿ). [ಪಂಚ$_2$+ಶಯನ]

ಪಂಚಶಯ್ಯೆ (ನಾ). ೧. ಅಂಡಜ, ಪಿಂಡಜ, ವಾಳಜ, ವಲ್ಕಜ ಮತ್ತು ರೋಮಜ ಎಂಬ ಐದು ವಸ್ತುಗಳಿಂದ ನಿರ್ಮಿಸಿದ ಹಾಸುಗೆ. ೨. ಅಂದ, ಶೈತ್ಯ, ಮಾರ್ದವ, ಪರಿಮಳ ಮತ್ತು ಶುಭ್ರತೆ ಎಂಬ ಐದು ಗುಣವುಳ್ಳ ಹಾಸುಗೆ : ಪಂಚಶಯ್ಯೆಯೊಳಗೊ ಆಗುವಿಂಬದುವೆತ್ತ ಹಾ ಪರಲ ಮೊನೆಯೊತ್ತೆ ನೆಲವಟ್ಕೆ(ಕ್ಕೆ)ಯಿರವೆತ್ತ (ಜೀವಸಂ. ೧೨೦-೧೪ ರಗಳೆ). [ಪಂಚ$_2$+ಶಯ್ಯೆ]

ಪಂಚಶರ (ನಾ). ೧. ತಾವರೆ, ಅಶೋಕ, ಮಾವು, ಮಲ್ಲಿಗೆ ಮತ್ತು ನೈದಿಲೆಗಳೆಂಬ ಐದು ಹೂಬಾಣ. ೨. ಇಂಥ ಬಾಣಗಳುಳ್ಳವನು ; ಮನ್ಮಥ : "ಮದನಃ, ಮನ್ಮಥಃ, ಮಾರಃ, ಪ್ರದ್ಯುಮ್ನಃ, ಮೀನಕೇತನಃ, ಕಂದರ್ಪಃ, ದರ್ಪಕಃ, ಅನಂಗಃ, ಕಾಮಃ, ಪಂಚಶರಃ . . . ವಿಶ್ವಕೇತುಃ—೨೧ ಮನ್ಮಥನ ಹೆಸರುಗಳು" (ಸಿದ್ಧಾಂತಿ. ೧೭); ಪಂಚಶರಂಗೆ ಮಾರ್ಸರಲದಾಗಿ ವಿಜೃಂಭಿಸುವೆಮ್ಮ ಕಣ್ಣಂಚಿನಕಾಂತಿಗೊಂದಿನಿತು ಸಾಮ್ಯವ ನೋಡಿ(ಉದ್ಭಟ.೧-೬೩); ಅವನಿಪ ರೂಪ ಪಂಚಶರನೋಲಗದಿಂ ನಡೆತಂದಳ್ತಿಯಿಂ (ರಾಜಶೇ. ೧೧-೭೦). [ಪಂಚ$_2$+ಶರ]

ಪಂಚಶಾಖ (ನಾ). ಬೆರಳುಗಳೆಂಬ ಐದು ಟಿಸಿಲುಗಳುಳ್ಳದು ; ಕೈ ; ಹಸ್ತ : "ಪಾಣಿಶಯಃ, ಪಂಚಶಾಖಃ, ಕರಃ, ಹಸ್ತಃ—ಈ ೪ ಕೆಯರ್"(ಹಲಾಯು. ೮೪-೩೫೭); "ಪಂಚಶಾಖಃ, ಶಯಃ, ಪಾಣಿ—೩ ಮಣಿಕಟ್ಟಿನಿಂದಲೂ ಬೆರಳುಗಳಿಂದಲೂ ಕೂಡಿದ ಸಂಪೂರ್ಣ ಹಸ್ತದ ಹೆಸರುಗಳು" (ಸಿದ್ಧಾಂತಿ. ೧೯೩). [ಸಂ.]

ಪಂಚಶಾಖೆ (ನಾ). = ಪಂಚಶಾಖ : "ಪಾಣಿಹಸ್ತಂ ಪಂಚಶಾಖೆ ಕರ ಮೆನಲು ಕೈ" (ಮಂಗರಾ. ೯೫-೮). [ಸಂ. ಪಂಚಶಾಖಾ]

ಪಂಚಶಿಕ್ಷೆ (ನಾ). [ಬೌದ್ಧ] ಉಪಾಸಕರಿಗೆ ವಿಧಿಸುವ ಅಹಿಂಸೆ (ಹಿಂಸಿಸದಿರುವುದು), ಅಚೌರ್ಯ (ಕದಿಯದಿರುವುದು), ಬ್ರಹ್ಮಚರ್ಯ, ಸತ್ಯ (ದಿಟವನ್ನೇ ನುಡಿಯುವುದು) ಮತ್ತು ಮಧುಮದ್ಯತ್ಯಾಗ (ಜೇನು ಮತ್ತು ಮದ್ಯಕುಡಿಯದಿರುವುದು) ಎಂಬ ಐದು ಬಗೆಯ ಆಚರಣೆ: ಯಾವ ಬೌದ್ಧನಿಗೆ ಪಂಚಶಿಕ್ಷೆಯನ್ನು ಕೊಡತಕ್ಕುದು (ಕಸಾಪ. I, ೩೧೦). [ಪಂಚ$_2$+ಶಿಕ್ಷೆ]

ಪಂಚಶಿಖ (ನಾ). ಸಂಪ್ರದಾಯದಂತೆ ತಲೆಯಲ್ಲಿ ಐದು ಜುಟ್ಟನ್ನು ಹೊಂದಿರುವವನು : ಆತನ ತನೂಜನುಪಮಾತೀತಂ ನೆಗಟ್ಟಂ ಹಾರಿತ ನಾತಂಗೆ ಜಗನ್ನೂತ ಪಾದಾಬ್ಜಂ ತ್ರಿಜಗಖ್ಯಾತಂ ಹಾರೀತಿ ಪುಟ್ಟದಂ ಪಂಚಶಿಖಂ (ಕಇಅ. ೧-೨-೧೧ ; 1058). [ಸಂ.]

ಪಂಚಶಿಖಿ (ನಾ). ೧. ಐದು ತುದಿಗಳು : ಪರಮೇಶ್ವರನುಂ ಕಾರ್ತಸ್ವರದ ಚತುಷ್ಕೋಣಕಲಶಮುಂ ಪೋಲ್ತುವೆ ಮಂದರಶಿಖರಪಂಚಶಿಖಿಯಂ ಪರಿಮಳಮಿಳಿತಾಳಿಪಟಳರುಚಿ ಜಟಳತೆಯಂ (ಅಜಿಪು. ೪-೭೦). ೨. [ತತ್ತ್ವಶಾ] ಷಡಧ್ವದಲ್ಲಿ ಒಂದಾದ ಭುವನಾಧ್ವದ ಇನ್ನೂರು ಇಪ್ಪತ್ತುನಾಲ್ಕು ಭೇದಗಳಲ್ಲಿ ಒಂದು : ವರಪಂಚಶಿಖಿಯಾ ಪ್ರಪಂಚಾತ್ಮಕಂ ತೀಕ್ಷ್ಣನುರುತರ ಸುಸೂಕ್ಷ್ಮಂ (ವೀಶೈಪು. ೬-೪-೨೧). [ಪಂಚ$_2$+ಶಿಖಿ]

ಪಂಚಶಿಖೆ (ನಾ). ಆಚಾರವಂತರು ತಲೆಯಲ್ಲಿ ಬಿಡುವ ಐದು ಜುಟ್ಟು : (ಕಿ). [ಪಂಚ$_2$ + ಶಿಖೆ]

ಪಂಚಶಿಲ್ಪ (ನಾ). ೧. ಐದು ಬಗೆಯ ಕೈಗೆಲಸಗಳು ; ℙ ಬಡಗಿ, ಅಕ್ಕಸಾಲೆ, ಕಮ್ಮಾರ, ಕಂಚುಗಾರ, ಕಲ್ಲುಕುಟಕ ಅಥವಾ ಬಡಗಿ, ನೇಕಾರ, ನಾಯಿಂದ, ಅಗಸ, ಚಮ್ಮಾರ ಇವರುಗಳ ಕೈಗೆಲಸ : ಪಂಚಶಿಲ್ಪಗಳಾದಿ ಲೋಕಪ್ರಪಂಚವೆಲ್ಲವ ತಿಳುಹಿ (ಬಿಜ್ಜಪು. ೧೧-೪೫). [ಪಂಚ$_2$ + ಶಿಲ್ಪ]

ಪಂಚಶೀಲ (ನಾ). ೧. = ಪಂಚಶಿಕ್ಷೆ. ೨. [ಜೈನ] ನೀತಿಶಾಸ್ತ್ರದಲ್ಲಿ ಮುನಿಗಳು ಗೃಹಸ್ಥರಿಗೆ ಹೇಳಿರುವ ಅಹಿಂಸೆ, ಸತ್ಯ, ಅಸ್ತೇಯ (ಕದಿಯದಿರುವುದು), ಬ್ರಹ್ಮಚರ್ಯ ಮತ್ತು ಅಪರಿಗ್ರಹ (ಸಂಗ್ರಹ ಬುದ್ಧಿಯಿಲ್ಲದಿರುವುದು) ಎಂಬ ಐದು ಬಗೆಯ ವ್ರತಗಳು : ಜೈನ ನೀತಿಶಾಸ್ತ್ರವು ಅಹಿಂಸೆ . . . ಅಪರಿಗ್ರಹ ಎಂಬ ಪಂಚಶೀಲಗಳ ಮೇಲೆ ನಿಂತಿದೆ (ಭಾರದ. ೧೪೨). ೩. [ರಾಜನೀ] ಪರಸ್ಪರ ಪ್ರದೇಶ ಮತ್ತು ಸಾರ್ವಭೌಮತ್ವವನ್ನು ಮನ್ನಿಸುವುದು, ಅನಾಕ್ರಮಣ, ಪರಸ್ಪರ ಆಂತರಿಕ ಕಾರ್ಯಭಾರಗಳಲ್ಲಿ ಹಸ್ತಕ್ಷೇಪ ಮಾಡದಿರುವುದು, ಸಮಾನತೆ ಮತ್ತು ಪರಸ್ಪರ ಅಭಿವೃದ್ಧಿಗಾಗಿ ಶ್ರಮಿಸುವುದು ಎಂಬ ಅಂಶಗಳನ್ನು ಅನುಸರಿಸುವುದು ; ಶಾಂತಿಯುತ ಸಹಜೀವನ : ಕೆಡುಕಿಗೆ ಅಧಿಕಾರ ಬಂತು, ಅಧಿಕಜೀವಜಾತದಿ ಪಂಚಶೀಲಪಾಂಚಾಲಿಯ ವಸ್ತ್ರಹರಣ ನಡೆದಿದೆ (ಕಲ್ಲೋಲ. ೫೭-೫) ; ಮಹಾತ್ಮಗಾಂಧಿಯವರ ಉಪದೇಶದ ಮಹತ್ತಿನಿಂದ ಭಾರತೀಯರು ಶಾಂತಿಪ್ರಿಯರಾಗಿ ಇತರ ದೇಶದವರೊಡನೆ ಪಂಚಶೀಲನೀತಿಯನ್ನು ಅನುಸರಿಸುತ್ತಿದ್ದಾರೆ (ಭಾರದ. ೩೩೬). [ಪಂಚ$_2$ + ಶೀಲ]

ಪಂಚಶುದ್ಧಿ (ನಾ). ೧. ಐದು ಬಗೆಯ ಶುದ್ಧಿಗಳು : ಪಂಚಶುದ್ಧ್ಯನ್ವಿತಾ = ಮನಃಶುದ್ಧಿ, ವಚನಶುದ್ಧಿ, ಶರೀರಶುದ್ಧಿ, ದ್ರವ್ಯಶುದ್ಧಿ, ಕ್ರಿಯಾಶುದ್ಧಿಗಳೆಂಬಯ್ದುಂ ಶುದ್ಧಿಗಳಿಂ ಕೂಡಿದ (ಪ್ರತಿಷ್ಠಾ. ೧-೧೭). ೨. ಆತ್ಮಶುದ್ಧಿ, ಸ್ಥಾನಶುದ್ಧಿ, ದ್ರವ್ಯಶುದ್ಧಿ, ಲಿಂಗಶುದ್ಧಿ, ಮತ್ತು ಮಂತ್ರಶುದ್ಧಿ ಎಂಬ ಐದು ಬಗೆಯ ಶುದ್ಧಿ : ಆತ್ಮಶುದ್ಧಿ ಸ್ಥಾನಶುದ್ಧಿ ದ್ರವ್ಯಶುದ್ಧಿ ಲಿಂಗಶುದ್ಧಿ ಮಂತ್ರಶುದ್ಧಿಗಳೆಂಬ ಪಂಚಶುದ್ಧಿಗಳಂ ವಿಸ್ತರಿಸುವದಱಲ್ಲಿ (ವಿನೇಕ. ೧೦೩). [ಪಂಚ$_2$ + ಶುದ್ಧಿ]

ಪಂಚಶೂಲೆ (ನಾ). ಒಂದು ಬಗೆಯ ರೋಗ : ಹಿಪ್ಪಲಿ, ಹಿಪ್ಪಲೀಮೂಲ, ಚವ್ಯ, ಚಿತ್ರಮೂಲ, ಶುಂಠಿ—ಈ ೫ ಜ ಕಷಾಯವಂ ಕಾಸಿಕೊಳ್ಳೆ ಪಂಚಶೂಲೆ ಮಾಣ್ಗುಂ (ವಿನೈವಿ. ೭೧). [ಪಂಚ$_2$ + ಶೂಲೆ$_1$]

ಪಂಚಸಂಸ್ಕಾರ (ನಾ). [ವಿಶಿಷ್ಟಾ] ತಪ, ಪುಂಡ್ರ, ನಾಮ, ಮಂತ್ರ ಮತ್ತು ಯಾಗ ಎಂಬ ಐದು ಬಗೆಯ ಧಾರ್ಮಿಕ ಆಚಾರಗಳು ;

ℙ ೧. ತಪ: ಮಹಾವಿಷ್ಣುವಿನ ಆಯುಧಗಳಾದ ಶಂಖ, ಚಕ್ರಗಳ ಲಾಂಛನವನ್ನು ತೋಳಿನಲ್ಲಿ ಧರಿಸುವುದು. ೨. ಪುಂಡ್ರ: ನಾಮವನ್ನು ಇಟ್ಟುಕೊಳ್ಳುವುದು. ೩. ನಾಮ: ವಿಷ್ಣುವಿನ ಹೆಸರನ್ನು ಇಟ್ಟುಕೊಳ್ಳುವುದು. ಪುರುಷನು ವಿಷ್ಣುವಿನ ದಾಸನೆಂತಲೂ, ಸ್ತ್ರೀಯರು ವಿಷ್ಣುವಿನ ದಾಸಿಯೆಂತಲೂ ಹೇಳಿಕೊಳ್ಳಬೇಕು. ೪. ಮಂತ್ರ: ವಿಷ್ಣುವಿಗೆ ಸಂಬಂಧಿಸಿದ ಮೂರು ವಿಧದ ಮಂತ್ರಗಳು. ೫. ಯಾಗ: ವಿಷ್ಣುವಿನ ಪೂಜೆ: ಪಂಚಸಂಸ್ಕಾರಗಳನು ಪಡೆದೊಡನರ್ಥಪಂಚಕತತ್ವಮನಱಿತು . . . ನಿಶ್ಚಂಚಲಚಿತ್ತದೊಳಿಹುದು (ಹನಿಬ.೯-೪೬); ಅವರ ವಿವಾದದಲ್ಲಿ ವೈಷ್ಣವನಾದ ವಿಷ್ಣುಚಿತ್ತನು ಗೆದ್ದನು. ಸರಿ, ಆ ಕ್ಷಣವೇ ಈತನು ಆತನ ಶಿಷ್ಯನಾಗಿ ಪಂಚಸಂಸ್ಕಾರಗಳನ್ನು ಹೊಂದಿದನು (ಸಾಹಿಜೀ. ೯೪). [ಪಂಚ$_2$ + ಸಂಸ್ಕಾರ]

ಪಂಚಸಮಿತಿ (ನಾ). [ಜೈನ] ಈರ್ಯಾಸಮಿತಿ, ಭಾಷಾಸಮಿತಿ, ಏಷಣಾಸಮಿತಿ, ಆದಾನನಿಕ್ಷೇಪಣಸಮಿತಿ ಮತ್ತು ಉತ್ಸರ್ಗಸಮಿತಿ ಎಂಬ ಐದು ಬಗೆಯ ಧಾರ್ಮಿಕ ಪ್ರವೃತ್ತಿಗಳು,— ಪ್ರಾಣಿಪೀಡಾಪರಿಹಾರೋಪಾಯಗಳು: ಕಸವರಮಂ ಕಸಮಂ ಪೂಜಿಸುವನುಮೇಳಿಸುವನುಂ ಸಮಾನಂ ಪ್ರತಿಭಾಷಿಸೆ ಪಂಚಮಹಾವ್ರತ ಪಂಚಸಮಿತಿಮಿಳಿತ ತ್ರಿಗುಪ್ತಿಗುಪ್ತಂ ಮುನಿಪಂ (ಶಾಂತಿಪು. ೯-೧೧೧): ಇಂ ಕಷಾಯದರ್ಪದಳನನುಂ ಪಂಚಸಮಿತಿನಿಯತನುಂ . . . ಷೋಡಶ ತೀರ್ಥಕರಭಾವನೆಯುಮಂ ಭಾವಿಸಲ್ ಬಗೆದು (ಅಜಿಪು.೩-೧ ವ).

[ಪಂಚ$_2$ + ಸಮಿತಿ]

ಪಂಚಸರ (ನಾ). ೧. = ಪಂಚಶರ ೨: "ಆಯ್ಯಂಬಂ ಪಂಚಸ[ಪಾಠಾಂ.ಶ]ರಂ" (ಚತುನಿ. ೫೧); ಮೊದಲ ಪದನಪಭ್ರಂಶಕ್ಕೆ ಬಾರದೆ ಪರಪದಂ ತದ್ಭವಮಾದ ಸಮಾಸಕ್ಕೆ . . . ಪಂಚಶರ-ಪಂಚಸರ (ಶಮದ. ೨೮೯ ಪ್ರಯೋ). ೨. ಐದು ಎಳೆಗಳ ಹಾರ: ತರಳೆಯ ಮೊಗ್ಗೆ ಮೊಲೆಯ ಮುಸುಕಿದಳೊರ್ವ ತರುಣಿ ಮುತ್ತಿನ ಪಂಚಸರದಿಂದೆ (ತ್ರಿಭುತಿ. ೨೨-೫೧); ಹಾರ ತಿಸರ ಪಂಚಸರ ಕಂಠಮಾಲೆಯ . . . ರಾಯನಿತ್ತ ನಂದನೆಗೆ (ರಾಮವಿ. ೮-೪೬); ನವರತ್ನದ ಪುಸ್ತಿ ಕಟ್ಟಾಣಿಮುತ್ತಿನ ಖವಖವಿಸುವ ಪಂಚಸರದ . . . ಕುವಲಯನೇತ್ರೆಯೊಪ್ಪಿದಳು (ಕಂನವಿ. ೯-೭೨).

[ಪಂಚ$_2$ + ಸರ$_3$]

ಪಂಚಸಾದಾಖ್ಯ (ನಾ). [ವೀಶೈ] ಶಿವ, ಅಮೂರ್ತಿ, ಮೂರ್ತಿ, ಕರ್ತೃ, ಕರ್ಮಗಳೆಂಬ ಐದು ಸಾದಾಖ್ಯಗಳು: ಆ ಮಹಾಲಿಂಗವೇ ಪಂಚಸಾದಾಖ್ಯವೆನಿಸಿತ್ತು ಆ ಪಂಚ ಸಾದಾಖ್ಯವೇ ಪಂಚಲಿಂಗಪ್ರಕಾಶವೆನಿಸಿತ್ತು (ಮಹಾದೇ. ಬ. ೧೦೨-೨೩೫); ' ಪಂಚಸಾದಾಖ್ಯಂಗಳನೊಳಗೊಂಡು ಸಾಕಾರವಾಗಿ ಬಂದ ಇಷ್ಟಲಿಂಗವೇ [ಆ] ಶಿವನು (ಘನವ. ೩೦-೨೪); ಕಡೆಯ ನಾದದ ಸಹಸ್ರಾಂಶದೊಳು ಕೂರ್ಪಿನಿಂದೆಡೆವಿಡದೆ ಪಂಚಸಾದಾಖ್ಯಂಗಳೊಂದೊಂದೆಱೊಡನೆ ಸಾವಿರ ಭಾಗೆ ಭಾಗೆಯಿಂದೊಗೆದು . . . ಮಹೇಶ್ವರನುದಿಸಿ ಸೃಜಿಸತೊಡಗಿದನಖಿಳವಂ (ವೀಶೈಪು. ೧-೬-೪೦). [ಪಂಚ$_2$ + ಸಾದಾಖ್ಯ]

ಪಂಚಸಾಮ (ನಾ). ಉದ್ಗೀಥ, ಪ್ರಸ್ತಾವ, ಹಿಂಕಾರ, ಪ್ರತಿಹಾರ ಮತ್ತು ನಿಧನಗಳೆಂಬ ಐದು ಬಗೆಯ ಸಾಮಗಳು; ℙಸಾಮ— ೫ ವಿಧ: ಗುಣಸಂಕೀರ್ತನ (ಗುಣಕೀರ್ತನ ಮಾಡುವುದು), ಸಂಬಂಧೋಪಾಖ್ಯಾನ (ಸಂಬಂಧಗಳನ್ನು ತಿಳಿಸುವುದು), ಪರಸ್ಪರೋಪಕಾರ ಸಂದರ್ಶನ (ಪರಸ್ಪರೋಪಕಾರವನ್ನು ಮನಗಾಣಿಸುವುದು), ಆಯತಿಪ್ರದರ್ಶನ (ಒಳ್ಳೆಯತನವನ್ನೆಸಗುವುದು), ಆತ್ಮೋಪನಿಧಾನ (ನಾನು ನಿನ್ನವನೆಂದು ಒಳ್ಳೆಯ ಮಾತುಗಳನ್ನಾಡುವುದು) (ಅರ್ಥಶಾ.೭೪-೨-೧೦)" (ಶ್ರೀವತ್ಸ. ೪೮೩): ಗೋವುಗಳೊಳುದ್ಗೀಥನಿಹ ಪ್ರಸ್ತಾವ ಹಿಂಕಾರೆರಡು ರೂಪದಲಾವಿಯಜಗಳೊಳಗಿಹನು ಪ್ರತಿಹಾರಂ ಹಯಗಳೊಳು ಜೀವನಪ್ರದ ನಿಧನ ಮನುಜರೊಳೀ ವಿಧದಲಿಹ ಪಂಚಸಾಮವ ಜ್ಞಾಂವಜ್ಞಾಂವಕೆ ನೆನವರಿಗೆಯೈದಿಸನು ಜನುಮಗಳ (ಹಸಾರ. ೬-೧೪). [ಪಂಚ$_2$ + ಸಾಮ$_3$]

ಪಂಚಸಾಯಕ (ನಾ). ೧. = ಪಂಚಬಾಣ ೧: ಧನುವನೇರಿಸಿ ಪುಷ್ಪಶರಗಳ ಕೊನೆಯ ಮಂತ್ರಿಸಿ ಪಂಚಸಾಯಕವನು ಸೆಳದು ಕರ್ಣಾಂತ ಮುಷ್ಟಿಯಲಾಗ ಮನಸಿಜನು (ಜ್ಞಾನಸಿಂ. ೪೩-೧೪೮). ೨. = ಪಂಚಬಾಣ ೫: ನೀನುಂ ನನೆಗೋಲ್ಗಳಂ ಸಿಡಿಲ್ಗೆ ಸಾಟಯನಾಗಿಪೆ ಪಂಚಸಾಯಕಾ (ಶಾಕುಂತ. ೩೨-೫೬). [ಪಂಚ$_2$ + ಸಾಯಕ]

ಪಂಚಸಾರ (ನಾ.). ೧. [ವೈದ್ಯಶಾ] ಪಿಪ್ಪಲಿ (ಹಿಪ್ಪಲಿ), ಸರ್ಪಿ (ತುಪ್ಪ), ಸಿತ (ಸಕ್ಕರೆ), ಕ್ಷೌದ್ರ (ಜೇನು) ಮತ್ತು ಪಯಸ್ಸು (ಹಾಲು) ಗಳೆಂಬ ಐದು ಬಗೆಯ ಸಾರಗಳು. ೨. ಪಂಚಸಾರಗಳ ಮಿಶ್ರಣದಿಂದಾದ ಔಷಧಃ ಪಂಚಸಾರಕ್ಕೆ:— ಹಾಲು, ಜೇನುತುಪ್ಪ, ತುಪ್ಪ, ಹಿಪ್ಪಲಿ, ಸಕ್ಕರೆ ಇಷ್ಟನ್ನೂ ಕೂಡಿ ಇಟ್ಟು ಲೇಹ್ಯಂ ಮಾಡಿ ಕೊಡುವುದು (ವಿವೈವಿ. ೧೪೪). ೩. [ವೀಶೈ] (?): ನವಸಾರ ಅಷ್ಟಸಾರ ದಶಸಾರ ಪಂಚಸಾರ ಚತುಸ್ಸಾರ ಮೇಕಸಾರಯಿಂತಿವನತಿಗಳೆದ ಮಹಾಮಹಿಮನ ನಿಲವು ಲಿಂಗದಲ್ಲಿ ಸಂಪೂರ್ಣ (ಪದಗೋ. ೧೩-೧೭೩). [ಪಂಚ$_2$ + ಸಾರ$_2$]

ಪಂಚಸಿದ್ಧಾಂತ (ನಾ). ೧. [ಜ್ಯೋತಿ] ಜ್ಯೋತಿಷಗ್ರಂಥಗಳಲ್ಲಿ ಪ್ರತಿಪಾದಿತವಾಗಿರುವ ರೋಮಕ, ಪೈತಾಮಹ, ವಾಸಿಷ್ಠ, ಪೌಲಿಶ ಮತ್ತು ಸೌರಗಳೆಂಬ ಐದು ಸಿದ್ಧಾಂತಗಳು: ಈ ಮತದಲ್ಲಿ ಪಂಚಸಿದ್ಧಾಂತಗಳೆಂಬ ಜ್ಯೋತಿಶ್ಶಾಸ್ತ್ರ ಸಿದ್ಧಾಂತಗಳಲ್ಲಿ ಒಂದು ಸಿದ್ಧಾಂತದ ಪ್ರಕಾರ . . . ಅತಿವಿಸ್ತರವಿರುವುದಾದರೂ ಆಧುನಿಕ ಸಂಸ್ಕಾರಕ್ಕೆ ಅನಾವಶ್ಯಕವೆಂದು ಅದರಲ್ಲಿ ಪ್ರವರ್ತಿಸಲಿಲ್ಲ(ಹಿಂದಸಾ.೯೧). ೨. [ತತ್ತ್ವಶಾ] ಆಧ್ಯಾತ್ಮವಿಚಾರಕ್ಕೆ ಪ್ರವರ್ತಿಸಿರುವ ವೇದ, ಪಾಂಚರಾತ್ರ, ಸಾಂಖ್ಯ, ಯೋಗ ಮತ್ತು ಪಾಶುಪತಗಳೆಂಬ ಐದು ಸಂಪ್ರದಾಯಗಳು: ವೇದಂಗಳುಂ ಶ್ರೀ ಪಾಂಚರಾತ್ರಮುಂ ಸಾಂಖ್ಯಮುಂ, ಯೋಗಮುಂ, ಪಾಶುಪತಮೆಂಬೀ ಪಂಚಸಿದ್ಧಾಂತಂಗಳುಂ ಪರಸ್ಪರ ವಿರುದ್ಧಮಾದ ತತ್ವದ ನೆಲೆಗಳಂ ಪ್ರತಿಪಾದಿಸುವುವೋ? (ಚಿಕಬಿ. ೨೧). [ಪಂಚ$_2$ + ಸಿದ್ಧಾಂತ]

ಪಂಚಸುಜ್ಞಾನ (ನಾ). [ಜೈನ] ಮತಿಜ್ಞಾನ, ಶ್ರುತಜ್ಞಾನ, ಅವಧಿಜ್ಞಾನ, ಮನಃಪರ್ಯಾಯಜ್ಞಾನ ಮತ್ತು ಕೇವಲಜ್ಞಾನಗಳೆಂಬ ಐದು ಬಗೆಯ ಜ್ಞಾನಗಳು: ಪಂಚಕಲ್ಯಾಣಗಳಿಗಾಶ್ರಯ ಪಂಚಸುಜ್ಞಾನಗಳ ಸಲೆ ನೆಲೆ ಪಂಚಮಸ್ಥಾನಗಳ ಪಡೆದರ . . . ತೀರ್ಥಕರೊಲಿದು ಭಜಿಸುವೆ (ಬಿಜ್ಜಪು. ೧-೩). 'ಪಂಚವಿಧಜ್ಞಾನ' ಪರಾ. [ಪಂಚ$_2$ + ಸುಜ್ಞಾನ]

ಪಂಚಸೂತಕ (ನಾ). ಜನನಸೂತಕ, ಮರಣಸೂತಕ, ರಜಸ್ಸೂತಕ, ಉಚ್ಛಿಷ್ಟಸೂತಕ ಮತ್ತು ಜಾತಿಸೂತಕಗಳೆಂಬ ಐದು ಬಗೆಯ ಸೂತಕಗಳು; ℙಈ ಐದು ಸೂತಕಗಳ ಹೆಸರುಗಳ ಪಟ್ಟಿಯಲ್ಲಿ ಕೆಲವು ವ್ಯತ್ಯಾಸಗಳು ಕಂಡುಬರುತ್ತವೆ. ಉದಾಹರಣೆಗೆ: "ಸೂತಕ—೫: (ಅ) ಜಾತ, ಮೃತ, ರಜಃ, ಉಚ್ಛಿಷ್ಟ, ಜಾತಿ (ವಿದ್ಯಾಕ. ೫೩). (ಆ) ಮಧುಪಾನ, ಅನೃತ, ದೇವಲಕಸ್ಪರ್ಶ, ಯೂಪಸ್ತಂಭಸ್ಪರ್ಶ, ಶವದರ್ಶನ (ವಿದ್ಯಾಕ. ೫೩). (ಇ) ಜಾತಿ, ಜನನ, ಮರಣ, ನಿತ್ಯ, ನೈಮಿತ್ತಿಕ (ಸಂಜ್ಞಾ. ೮೩). (ಈ) ಜಾತಿ, ಜನನ, ಪ್ರೇತ, ಉಚ್ಛಿಷ್ಟ, ಪ್ರಜಾ (ವಿಚಿಂ. ೨-೧೮೩)" (ಶ್ರೀವತ್ಸ. ೪೯೧): ಜಾತಿಸೂತಕ ಜನನಸೂತಕ

ಪ್ರೇತಸೂತಕ ಎಂಜಲ ಸೂತಕ ರಜಸ್ಸೂತಕವೆಂಬ ಪಂಚಸೂತಕವುಳ್ಳ ಮಹಾನುಭಾವಿಗಳು . . . ಭವಿಮಿಶ್ರವ ಕಳೆದೆವೆಂತೆನ್ನಬಹುದೆ (ಚನ್ನವ. ೨೨-೨); ಜಾತಿಸೂತಕ ಪ್ರೇತಸೂತಕ ಜನನಸೂತಕ ಉಚ್ಛಿಷ್ಟಸೂತಕ ರಜಸ್ಸೂತಕವೆಂಬ ಪಂಚಸೂತಕಂಗಳಂ ಕಳೆದು (ಅಖಂಡೇ. ೮೬-೯೦); ವೀರಶೈವ ಸ್ತ್ರೀಪುರುಷರೆಲ್ಲರೂ . . . ಲಿಂಗಪೂಜೆಯನ್ನು ಮಾಡಲೇ ಬೇಕೆಂಬ ಪ್ರಬಲವಿಧಿಯಿರುವುದರಿಂದ ಇವರಿಗೆ ಲಿಂಗಧಾರಣ, ಲಿಂಗಪೂಜೆಗಳಲ್ಲಿ ಪಂಚಸೂತಕ ನಿರ್ಬಂಧವಿಲ್ಲ (ಭಾರದ. ೨೫೧).

[ಪಂಚ$_2$ + ಸೂತಕ]

ಪಂಚಸೂತ್ರ (ನಾ). [ವೀಶೈ] ಶಿವಲಿಂಗಗಳ ಪ್ರತಿಷ್ಠಾಕಾಲದಲ್ಲಿ ಗಮನಿಸುವ ಲಿಂಗೋಚ್ಚತೆ, ಲಿಂಗವಿಸ್ತಾರ, ಲಿಂಗಸ್ಥೌಲ್ಯ, ಪೀಠವಿಸ್ತಾರ, ಪ್ರನಾಲಿಕಾಮಾನಗಳೆಂಬ ಐದು ಸೂತ್ರಗಳು; ℙ ಈ ಐದು ಸೂತ್ರಗಳ ಹೆಸರುಗಳ ಪಟ್ಟಿಯಲ್ಲಿ ಕೆಲವು ವ್ಯತ್ಯಾಸಗಳು ಕಂಡುಬರುತ್ತವೆ. ಉದಾಹರಣೆಗೆ : "ಸೂತ್ರ- ೫ : (ಅ) ಲಿಂಗೋಚ್ಚತೆ, ಲಿಂಗವಿಸ್ತಾರ, ಲಿಂಗಸ್ಥೌಲ್ಯ, ಪೀಠವಿಸ್ತಾರ, ಪ್ರನಾಲಿಕಾಮಾನ (ಧರ್ಮಸಿಂ. ೩ ಪೂ—೨೫೬). (ಆ) ಪಡ್ವಿಡಿ, ವೃಷ್ಟಿ, ಮುಕ್ತಾಗುಚ್ಛ, ಲಂಬನ, ಪಂಚವರ್ಣ (ವೀಸಾಇ. ।-೮೬). (ಇ) ಸಂಕಲ್ಪ, ಮಾರ್ಜನ, ವರುಣಸೂಕ್ತ, ಅಘಮರ್ಷಣ, ಸ್ನಾನಾಂಗತರ್ಪಣ (ವಿದ್ಯಾಕ.೫೩)" (ಶ್ರೀವತ್ಸ. ೪೯೨) : ಎಲೇ ಹಿರಿಯರುಗಳಿರಾ ಕೈಯಲ್ಲಿರುವುದು ಪಂಚಸೂತ್ರಪ್ರಮಾಣದಿಂದ ಕಟದು ತಿದ್ದಿ ತೀರ್ಚಿ ಒಪ್ಪವಿಟ್ಟುದು ಲಿಂಗವೆಂದಲ್ಲಿ ಅಹುದೆಂಬರು (ಮೋಳಿಮಾ. ೧೮೫-೬೯೪ ಟೀಕು); ಸ್ವಶಾಖೀಯ ಗುರುಗಳು . . . ಪಂಚಸೂತ್ರಘಟಿತವಾದ ಲಿಂಗವನ್ನು ಸಾಮಾನ್ಯಾಕಾರದಿಂದ ಸಂಸ್ಕರಿಸಿ ಗರ್ಭಿಣಿಯರ ವಶಕ್ಕೆ ಕೊಡುವರು (ಭಾರದ. ೨೪೯).

[ಪಂಚ$_2$ + ಸೂತ್ರ]

ಪಂಚಸೂನ (ನಾ). "ಕುಟ್ಟುವುದು, ಕೇರುವುದು, ಬೀಸುವುದು, ಒಲೆ ಹೊತ್ತಿಸುವುದು, ನೀರು ತುಂಬುವುದು—ಈ ಐದು ಕ್ರಿಯೆಗಳಿಗೆ ಪಂಚಸೂನವೆಂದು ಹೆಸರು" (ದ್ವಾದಶಾ. ಕೋಶ); ℙ "ಸೂನಾ—೫ : ಗೃಹಸ್ಥನು ತಾನು ಮಾಡದೆಯೇ (ಪ್ರಾಣಿಹಿಂಸೆಯ ದೋಷವನ್ನು) ಹೊಂದುವ, ಐದು ಪ್ರಾಣಿಹಿಂಸೆಯ ಸ್ಥಾನಗಳು : ಚುಲ್ಲೀ (ಒಲೆ), ಪೇಷಣೀ (ಅರೆಯುವ ಕಲ್ಲು), ಉಪಸ್ಕರಃ (ಪೊರಕೆ), ಕಂಡನೀ (ಒರಳು ಮತ್ತು ಒನಕೆ), ಉದಕುಂಭ (ನೀರಿನ ಕೊಡ) (ಮನು. ೩-೬೮; ಧರ್ಮಸಿಂ. ೩ ಪೂ—೨೪೬). ಉದ್ವಾಹನೀ, ದೃಷದುಪಲಾತ್ಮಿಕಾ, ಗೃಹೋಪಕರಣ ಕುಂಡಸಂಮಾರ್ಜನ್ಯಾದಿ, ಉಲೂಖಲ ಮುಸಲ, ಜಲಾಧಾರ ಕಲಶ (ಮನು. ೩-೬೮ ವ್ಯಾ). ಕಂಡನೀ, ಪೇಷಣೀ, ಚುಲ್ಲೀ, ಉದಕುಂಭ, ಮಾರ್ಜನೀ (ಪರಾಶರಸ್ಮೃತಿ. ೨-೧೧)" (ಶ್ರೀವತ್ಸ. ೪೯೩) : ಪಂಚೇಂದ್ರಿಯವೆಂಬ ಮದಗಜವಿಜಯರು ಪಂಚಬಾಣನ ಭಂಜನರು ಪಂಚಮಹಾವ್ರತಸಮಿತಿಸಮೇತರು ಪಂಚಸೂನು [ನ]ವರ್ಜಿತರು (ದ್ವಾದಶಾ. ೧-೩೩೦). 'ಪಂಚಸೂನಾದೋಷ' ಪರಾ. [ಸಂ. ಪಂಚಸೂನಾ]

ಪಂಚಸೂನಾದೋಷ (ನಾ). ೧. ಪ್ರಾಣಿಹತ್ಯೆಗೆ ಆಸ್ಪದವಾದರೂ ಗೃಹಸ್ಥನು ವಿಧಿಯಿಲ್ಲದೆ ಪ್ರತಿದಿನವೂ ಮಾಡಬೇಕಾದ ಐದು ದೋಷಗಳು,—ಪಾಪಗಳು; ℙ ಚುಲ್ಲೀ(ಒಲೆ), ಪೇಷಣೀ (ಅರೆಯುವ ಕಲ್ಲು), ಉಪಸ್ಕರ (ಪೊರಕೆ), ಕಂಡನೀ (ಒರಳು ಮತ್ತು ಒನಕೆ), ಉದಕುಂಭ (ನೀರಿನ ಕೊಡ)—ಈ ವಸ್ತುಗಳಿಂದ ಗೃಹಸ್ಥನು ಐದು ಬಗೆಯಲ್ಲಿ ಉಂಟುಮಾಡುವ ಪ್ರಾಣಿಹಿಂಸೆ. ಇವುಗಳಿಂದಾದ ಪ್ರಾಣಿಹಿಂಸಾಪಾಪಪರಿಹಾರಕ್ಕಾಗಿ ದೇವರಿಗೆ ನೈವೇದ್ಯ, ವೈಶ್ವದೇವ ಕರ್ಮಗಳನ್ನು ಮಾಡಬೇಕೆಂದು ವಿಧಿಯಿದೆ. ೨. (ಬತ್ತವನ್ನು) ಕೊಯ್ಯುವುದು, ತುಳಿಯುವುದು, ಕುಟ್ಟುವುದು, ಪೋಟುಹಾಕುವುದು, ಬೇಯಿಸುವುದು ಎಂಬ ಐದು ಕ್ರಿಯೆಗಳಿಂದುಂಟಾಗುವ ದೋಷ,—ಪಾಪ : ನೆಲ್ಲನ್ನು (ಭತ್ತವನ್ನು) ಕೊಯ್ಯುವುದು ೧. ತುಳಿಸುವದು ೨. ಕುಟ್ಟುವದು ೩. ಪೋಟುಹಾಕುವದು ೪. ಬೇಯಿಸುವುದೆಂಬ ಪಂಚಸೂನಾದೋಷವು ಬರುವುದು (ಹಸಾರ. ೨೨-೨೯ ತಾತ್ಪರ್ಯ). [ಸಂ.]

ಪಂಚಸೂಳ್ಗವಣೆ (ನಾ). ಐದು ಸಲ ಕ್ರಮವಾಗಿ ಬಿಡುವ ಬಾಣ : ಎನ್ನ ಕೋಮಲಶರೀರ ಶಿವನಕ್ಷಿಗಾಹುತಿಯಾದೊಡಾಗಲಿ ಮತ್ಕ್ರೂರಪಂಚಸೂಳ್ಗಣಗಳೆಚ್ಚ ಭವನತ್ಯುಗ್ರತಪೋಭ್ರಷ್ಟನಂ ಮಾಡುವೆ(ನಮೋ. ೫-೩೫).

[ಪಂಚ$_2$ + ಸೂಳ್$_2$ (< ಸೂಟ್^{೮}) + ಕಣೆ$_1$]

ಪಂಚಸೌಗಂಧ (ನಾ). ಐದು ಬಗೆಯ ಸುಗಂಧಗಳು; ℙ "ಸುಗಂಧ ೫ : (ಅ) ಕರ್ಪೂರ, ಕಕ್ಕೋಲ, ಲವಂಗಪುಷ್ಪ, ಗುವಾಕ, ಜಾತೀಫಲ (ರಾಜನಿ.—ಶಕದ್ರು, IV-೧೫). (ಆ) ಲವಂಗ ಕುಸುಮ, ಕಕ್ಕೋಲ, ಕಾಂಡ, ಜಾತೀಫಲ, ಕರ್ಪೂರ (ಶಬ್ದಚಂದ್ರಿಕಾ,—ಶಕದ್ರು. (IV-೧೫). (ಇ) ಶ್ರೀಗಂಧ, ತಕ್ಕೋಲ, ಜಾಯಿಫಲ, ಪದ್ಮಕೇಸರ, ತಾವರೆಯ ಕೇಸರ (ಓಕೋ. ೯೩). (ಈ) ಕುಂಕುಮದ ಹೂವು, ಅಗರು, ಪಚ್ಚಕರ್ಪೂರ, ಕಸ್ತೂರಿ, ಚಂದನ (ವಸ್ತುಪ್ರ. ೭೦೪)" (ಶ್ರೀವತ್ಸ. ೪೯೦) : ದೇವರ್ಗ್ಗೆ . . . ಮಂಗಳಾಭಿಷೇಕಮಂ ಮಾಡಿ ಪಂಚಸೌಗಂಧಗಂಧಂಗಳಿಂ ಪೂಸಿ ವಸ್ತ್ರಾಳಂಕಾರಮುಪವೀತ ಮಧುಪರ್ಕ್ಕವಾಚಮನೀಯ ಪುಟ್ಟಪೂಜೆ ಪುಟ್ಟ ಫಳಪಕ್ವಾಂನ ಮಂಟಪ ಧೂಪ ಘೃತ ದೀಪಾರಿತಿಗಳಂ ಕೊಟ್ಟು (ಎಕ. VII, ಶಿಕಾರಿ. ೧೮೫-೭೮; 1158). [ಪಂಚ$_2$ + ಸೌಗಂಧ]

ಪಂಚಸೌಜ್ಞೆ (ನಾ). [ವೀಶೈ] ಪರಮೇಶ್ವರನಿಗಿರುವ ಪರ, ಗೂಢ, ಶರೀರಸ್ಥ, ಲಿಂಗಕ್ಷೇತ್ರ, ಅನಾದಿಗಳೆಂಬ ಐದು ಸಂಜ್ಞೆಗಳು : ಆ ಶಿವನೇ ಮಹಾಲಿಂಗವು ತವೆ ಮಹತ್ಸೌಜ್ಞೆಯಂ ಪಂಚಸೌಜ್ಞೆಯನುಳ್ಳುದು (ವೀಶೈಪು. ೧-೮-೧೩). [ಪಂಚ$_2$ + ಸೌಜ್ಞೆ]

ಪಂಚಸ್ಥಾನ (ನಾ). ೧. ಯುದ್ಧಮಾಡುವಾಗ ನಿಂತುಕೊಳ್ಳುವ ಐದು ವಿಧವಾದ ಕ್ರಮಸ್ಥಾನಗಳು; ℙ ಸ್ಥಾನ—೫ : ಆಲೀಢ, ಪ್ರತ್ಯಾಲೀಢ, ಸಮಪಾದ, ವೈಷ್ಣವ, ಮಂಡಲಾಗ್ರ (ಗದಾಯು. ೮-೧ವ). ಆಲೀಢ ಪ್ರತ್ಯಾಲೀಢ, ಸಮಪಾದ, ವಿಶಾಖ, ಮಂಡಲ (ಶಬ್ದರ.೧೧೧೭)" (ಶ್ರೀವತ್ಸ. ೫೦೦). ೨. [ಯೋಗ] ತಾರಕ, ದಂಡಕ, ಕುಂಡಲಿ, ಪ್ರಣವ ಮತ್ತು ಬಿಂದುಗಳೆಂಬ ಐದು ಸ್ಥಾನಗಳು : ಇರುವ ಪಂಚಸ್ಥಾನಮರ್ಮವ ಕರತಳಾಮಳಕದೊಲು ಕೃಪೆಯಿಂದರುಹಿಸಲಹುದೆನಲು (ಗಗತಾ. ೨೦-೩೯). ೩. [ವೀಶೈ] ಇಷ್ಟಲಿಂಗವನ್ನು ಧರಿಸುವ ಶರೀರದ ಐದುಭಾಗಗಳು; ತಲೆ, ಕರ್ಣ, ಉರ (ಎದೆ), ಅಮಳೋಕ್ಯ (ಬಾಯಿ) ಮತ್ತು ಕಕ್ಷ (ಕಂಕುಳು): ಪಂಚಸ್ಥಾನದಲ್ಲಿಪ್ಪ ಲಿಂಗವ ಕರಸ್ಥಲದಲ್ಲಿ ಮೂರ್ತಿಗೊಳ್ಳಲಿಕ್ಕಾಗಿ (ಮದೇವ.೨೮೬-೬೭). [ಪಂಚ$_2$ + ಸ್ಥಾನ]

ಪಂಚಸ್ಥಾವರ (ನಾ). [ಜೈನ] ಕೇವಲ ಸ್ಪರ್ಶೇಂದ್ರಿಯವನ್ನು ಹೊಂದಿರುವ ಪೃಥ್ವಿಕಾಯ, ಅಪ್ಕಾಯ, ತೇಜಃಕಾಯ, ವಾಯುಕಾಯ ಮತ್ತು ವನಸ್ಪತಿಕಾಯಗಳೆಂಬ ಐದು ಚೈತನ್ಯವಸ್ತುಗಳು : ಕಾಯಾನುವಾದದಿಂ ಪಂಚಸ್ಥಾವರಂಗಳ್ಗೆ ಗುಣಸ್ಥಾನಭೇದಾಭಾವದಿಂ ಅಲ್ಪಬಹುತ್ವಾಭಾವಮುಕ್ಕುಂ (ತತ್ತ್ವಪ್ರ. ೪೯).

[ಪಂಚ$_2$ + ಸ್ಥಾವರ]

ಪಂಚಸ್ವರ (ನಾ). ಪಂಚಭೂತಗಳಿಗೆ ಸಂಬಂಧಿಸಿದ ನಾಳಗಳಿಂದ ಹೊರಡುವ ಪೃಥ್ವೀಸ್ವರ, ಅಪ್ಪುಸ್ವರ, ತೇಜಸ್ಸಿನ ಸ್ವರ, ವಾಯುವಿನ ಸ್ವರ ಮತ್ತು ಆಕಾಶಸ್ವರಗಳೆಂಬ ಐದು ಬಗೆಯ ಸ್ವರಗಳು : ಒಂದೊಂದು ನಾಳದಲ್ಲಿ ಪೃಥ್ವೀಸ್ವರ ಅಪ್ಪುಸ್ವರ ತೇಜಸ್ಸಿನ ಸ್ವರ ವಾಯುವಿನ ಸ್ವರ ಆಕಾಶಸ್ವರ ಇಂತೀ ಪಂಚಸ್ವರಸಂಜ್ಞೆಯಂ ತಾಳಿ (ವಿವೇಕ. ೧೯೭). [ಪಂಚ$_2$+ಸ್ವರ$_2$]

ಪಂಚಳ 'ಪಂಚಾಲ' ನೋ.

ಪಂಚಾಂಗ (ನಾ). ೧. ಐದು ಭಾಗಗಳಿಂದ ಕೂಡಿದುದು : 'ಪಂಚಾಂಗಮಂತ್ರ' ಪರಾ. ೨. [ಜ್ಯೋತಿ] ತಿಥಿ, ವಾರ, ನಕ್ಷತ್ರ, ಯೋಗ, ಕರಣಗಳೆಂಬ ಐದು ಅಂಶಗಳು : "ನಾಡಿಯ ಉಪವತ್ತಕ್ಕೆ ಒಂದು ತಿಥಿಯಕ್ಕು . . . ಭವಾದಿಗಳು ಕರಣವಕ್ಕೆವು ಕ್ರಮದಿ ಕೂಡೆ ನವಗ್ರಹದ ಸಂಚಾರಕೆಡೆಯುಪ್ಪ ಪಂಚಾಂಗಮೆಂದೆನಿಕ್ಕುಂ" (ಮಂಗರಾ. ೨೧-೯). ೩. ಪ್ರತಿದಿನದ ತಿಥಿ, ವಾರ, ನಕ್ಷತ್ರ, ಯೋಗ, ಕರಣಗಳನ್ನು ತಿಳಿಸುವ ಹೊತ್ತಿಗೆ,-ಕೈಪಿಡಿ : ಇವನದೇಂ ಪಂಚಾಂಗಮಂ ಪೇಟೆ ಮಾವಿನ ಪಣ್ ಬೀಟ್ಟುದೇ ಕೊಲ್ಲಿಮೆಂಬನಿತ ಱೊಳ್ (ದಿವ್ಯಚ. ೭-೫೭); ಇಂದು ಬಿಟ್ಟರೆ ಈ ತಿಂಗಳಲ್ಲಿ ಮುಹೂರ್ತವೇ ಇಲ್ಲವೆಂದು ಪಂಚಾಂಗ ನೋಡಿ ಹೇಳಿದರು (ಪರಿಣೇ. ೫೫); ನಾವು ಪಂಚಾಂಗವನ್ನು ತೆಗೆದು ನೋಡಿದರೆ ಪ್ರತಿ ದಿನಾಂಕದಲ್ಲಿಯೂ ವಾರದ – ದಿವಸದ ಹೆಸರು, ತಿಥಿ ಮತ್ತು ನಕ್ಷತ್ರಗಳ ವಿವರ ಕೊಟ್ಟಿರುವುದನ್ನು ನೋಡುತ್ತೇವೆ (ಅಕಾಶ. ೮೩); ಪಂಚಾಂಗ ಹೋದರೆ ನಕ್ಷತ್ರ ಹೋದೀತೇ ? (ಗಾದೆ) ೪. ದಿನಾಂಕ ಮೊದಲಾದುವನ್ನು ತಿಳಿಸುವ ಪಟ್ಟಿ : ಪಂಚಾಂಗ (Calendar. ಇಂಕನಿ); ಈಜಿಪ್ಟ್ ದೇಶದಲ್ಲಿ ಪಂಚಾಂಗ (Calendar) ವೊಂದನ್ನು ತಯಾರಿಸಲಾಯಿತು (ಗಣಿಶ. ೪). ೫. (ಅಲಂ) ಪೊಳ್ಳುಮಾತು ; ಬುರುಡೆಮಾತು ; ಹರಟೆ : ನಿನ್ನ ಪಂಚಾಂಗ ಸಾಕು. ನಾನು ಇಲ್ಲಿಂದ ಉಲುಕುವುದಿಲ್ಲ. ಇದು ನಿನಗೆ ತಿಳಿದಿರಲಿ (ಮುಂಬಯಿ. ೫-೪೮); ಅಮೇಲೆ ಅವರು ತಮ್ಮ ಪಂಚಾಗವನ್ನೇ ಬಿಚ್ಚಿದರು (ಕನಸು. ೮). ೬. [ವೈದ್ಯಶಾ] ಮರದ ತೊಗಟೆ, ಎಲೆ, ಹೂವು, ಬೇರು, ಹಣ್ಣು ಅಥವಾ ಕಾಯಿ ಎಂಬ ಐದು ಅಂಶಗಳು : ಕರಬೇವಿನ ಪಂಚಾಂಗವನ್ನು ಜೇನುತುಪ್ಪ ಗಂಮಜ್ಜಿಗೆಯಲ್ಲರೆದು ಕಡಿಕೊಡುವುದು(ವಿನ್ಯೆವಿ.೧೫೪). ೭. [ವಾಸ್ತು] ಗೃಹಾರಂಭದಲ್ಲಿ ಮಾಡುವ ಪಂಚಶಿಲಾಸ್ಥಾಪನೆ,—ಶಂಕುಸ್ಥಾಪನೆ ; ತಳಹದಿ : "ಪಂಚಾಂಗ-ತಳಹದಿ, ಪಾಯ" (ಸಿರಿಕೋ. ೩೨೮); ಚಚ್ಚೌಕವಾದ ಪಂಚಾಂಗದಿಂದ ಏರಿ ಏರಿ ಚೂಪಾಗುವ ಶಿಖರಗಳಂತೆ ಈ ಮಂದಿರಗಳು ಕಾಣುವುವು (ಬಾಲಪ್ರ. I, ೪೭೭).

ಪಂಚಾಂಗ ಕೇಳು = ತಿಥಿ, ವಾರ, ನಕ್ಷತ್ರಾದಿಗಳನ್ನು ಕೇಳಿ ತಿಳಿದುಕೊಳ್ಳು : ತಂದೆಯವರು ಪಂಚಾಂಗ ಕೇಳಿ ಬರಲು ಜೋಯಿಸರ ಮನೆಗೆ ಹೋಗಿದ್ದಾರೆ (ರೂಢಿ). ಪಂಚಾಂಗದವನು = ೧. ಪಂಚಾಂಗವನ್ನು ಹೇಳುವವನು ; ಜೋಯಿಸ : ಇವರ ವಕಾಲತ್ತು ವಹಿಸಿಕೊಂಡಿರುವೆಯೊ ಪಂಚಾಂಗದವನೇ (ರಂಗರೋ. ೫); ಪಾಂಚಾಲದೇಶದ ಪಾಲಕನಾದರೆ ಪಂಚಾಂಗದವನಿಗೇನು ? (ಗಾದೆ). ೨. ಬಡಪಾಯಿ : (ಕ). ಪಂಚಾಂಗ ಹೇಳು = ೧. ತಿಥಿ, ವಾರ, ನಕ್ಷತ್ರಾದಿಗಳನ್ನು ತಿಳಿಸು,—ವಿವರಿಸು. ೨. ಸಂದರ್ಭಕ್ಕೆ ತಕ್ಕಂತೆ ಏನನ್ನಾದರೂ ಹೇಳು ; ಬಾಯಿಗೆ ಬಂದಂತೆ ಹೇಳು : (ಕ). [ಪಂಚ$_2$+ಅಂಗ$_2$]

ಪಂಚಾಂಗಕರ್ತ (ನಾ). ಪಂಚಾಂಗದ ಹೊತ್ತಿಗೆಯನ್ನು ರಚಿಸುವವನು,—ತಯಾರಿಸುವವನು : ನೇಯ್ಗಾರರೂ, ಪಂಚಾಂಗಕರ್ತರೂ, ವರ್ಣಗಾರರೂ (ತುಳುನಾ. ೧೭೩). [ಪಂಚಾಂಗ+ಕರ್ತ]

ಪಂಚಾಂಗಚೂರ್ಣ (ನಾ). [ವೈದ್ಯಶಾ] ಯಾವುದಾದರೂ ಒಂದು ಮರದ ತೊಗಟೆ, ಎಲೆ, ಹೂವು, ಬೇರು ಮತ್ತು ಫಲಗಳ ಪುಡಿ: ಇದನ್ನು ಒಂದು ತೂಕ ತಂಗಡಿ ಪಂಚಾಂಗಚೂರ್ಣದೊಂದಿಗೆ ಕೊಟ್ಟರೆ ಬಹುಮೂತ್ರ ನಿಲ್ಲುವುದು (ಸಕವೈ. ೫೦೦). [ಪಂಚಾಂಗ+ಚೂರ್ಣ$_2$]

ಪಂಚಾಂಗಪ್ರಣಾಮ (ನಾ). ಎರಡು ಕೈ, ಎರಡು ಮಂಡಿ, ತಲೆ, ಮಾತು ಮತ್ತು ದೃಷ್ಟಿಗಳೆಂಬ ಐದರಿಂದ ಮಾಡುವ ನಮಸ್ಕಾರ : ರಾಜಮಾತೆ . . . ದೇವಿಗೆ ಪಂಚಾಂಗಪ್ರಣಾಮವನ್ನು ಸಲ್ಲಿಸಿ ಸಂತೋಷಚಿತ್ತರಾಗಿ ಅರಮನೆಗೆ ಹಿಂದಿರುಗಿದರು(ಶಾಂತಲಾ. ೨೪). [ಪಂಚಾಂಗ+ಪ್ರಣಾಮ]

ಪಂಚಾಂಗಮಂತ್ರ (ನಾ). [ರಾಜನೀ] ರಾಜನಿಗೆ ಇರಬೇಕಾದ ಕರ್ಮಾರಂಭೋಪಾಯ, ಪುರುಷದ್ರವ್ಯಸಂಪತ್ತು, ದೇಶಕಾಲ ವಿಭಾಗ, ವಿನಿಪಾತಪ್ರತೀಕಾರ ಮತ್ತು ಕಾರ್ಯಸಿದ್ಧಿಗಳೆಂಬ ಐದು ಬಗೆಯ ರಾಜನೀತಿಗಳು ; ರಾಜನೀತಿಯಲ್ಲಿ ಗಮನಿಸಬೇಕಾದ ಐದು ಅಂಗಗಳ ವಿಚಾರ : ನಾಲ್ಕುಂ ಸ್ವಪವಿದ್ಯೆಯೊಂದು ಬಲದಿಂ ಪಂಚಾಂಗಮಂತ್ರಂ ಮನಂಬುಗೆ ಬೇಱೊಂದೆಡೆಗಾಣದುದ್ಧತರಿಪುಶ್ರೀಕಾಂತೆ ತನ್ನಂ ಶರಣ್ಬುಗೆ ಪೊಕ್ಕಂ ಯುತಮಂತ್ರಿಮಂತ್ರಗೃಹಮಂ ಸೌಜನ್ಯಕಂದಾಂಕುರಂ (ಶಾಂತಿಪು. ೨-೨೮); ಸಮನುಂ ಮಾಡೆ ಸುಮಂತ್ರಿವರ್ಗಮರಿಷಡ್ವರ್ಗಕ್ಕೆ ಪಂಚಾಂಗಮಂತ್ರಮೆ ಸಪ್ತಾಂಗಸಮೃದ್ಧಿಯಂ ಕುಡೆ . . . ಶೌರ್ಯಮಾಜಮೆ ತನ್ನೊಳ್ ದಳವೇಱುದತ್ತೆನಿಸಿದಂ ಶಕ್ತಿತ್ರಯಾಧೀಶ್ವರಂ . (ಚಂದ್ರಪ್ರ. ೨-೭); ವರ ಸಾಡ್ಗುಣ್ಯಂ ಸಪ್ತಾಂಗ ರಾಜ್ಯಮೊದವಂ ತ್ರಿಶಕ್ತಿ ಚತುರಂಗಬಲಂ ನಿರುತಮುಪಾಯಚತುಷ್ಕಂ ಧರಣಿಪ ಪಂಚಾಂಗಮಂತ್ರಮಿರ್ಪುದು ನಿನ್ನೊಳ್ (ತ್ರಿಪುವಿ. ೨೪-೨೪೩). [ಪಂಚಾಂಗ+ಮಂತ್ರ]

ಪಂಚಾಂಗರಾಯ (ನಾ). ಅಲಂಕಾರಕ್ಕಾಗಿ ಕಟ್ಟುವ ಐದು ಬಣ್ಣದ ಬಟ್ಟೆಯ ತೋರಣ : ಮಿಱುಗುವ ಪಂಚಾಂಗರಾಯ ಪಟ್ಟಾಳಿಯ ಸರ ಗೊಂಡೆಯ ಝಲ್ಲಿಗಳು ಮೆಱೆದವು ರಥದಂತರಾಂತರದೊಳಗಿಹ ಸುರುಚಿರ ಲೋವೆಗಳೊಳಗೆ (ಕಂನವಿ. ೨೩-೬೮). [?]

ಪಂಚಾಂಗಶುದ್ಧಿ (ನಾ). ೧. [ಜ್ಯೋತಿ] ಇಷ್ಟಕಾಲದಲ್ಲಿ ತಿಥಿ, ವಾರ, ನಕ್ಷತ್ರ, ಯೋಗ, ಕರಣಗಳು ಉತ್ತಮವಾಗಿರುವುದು ; ಪಂಚಾಂಗಕ್ಕೆ ಅನುಸಾರವಾಗಿ ಯಾವ ದೋಷವೂ ಇಲ್ಲದಿರುವುದು,—ನಿರ್ದುಷ್ಟವಾಗಿರುವುದು : ಪಂಚಾಂಗಶುದ್ಧಿ ನೋಡಿ ಮುಹೂರ್ತವನ್ನು ಗೊತ್ತುಮಾಡಬೇಕಾಗಿದೆ (ರೂಢಿ). ೨. [ವೈದ್ಯಶಾ] ಗಿಡಮರಗಳ ತೊಗಟೆ, ಎಲೆ, ಹೂವು, ಬೇರು ಮತ್ತು ಫಲಗಳು ದೋಷರಹಿತವಾಗಿರುವುದು. ೧, ೨ : ಆ ಪಂಡಿತಂ ಕನ್ನಗಳ್ಳನಂತೆ ಬಳಪಮಂ ತೆಗೆದು ಕಬ್ಬಿಗನಂತೆ ಗೋಮೂತ್ರಕವೃತ್ತಾಳಂಕೃತನಾಗಿ ಭಂಡಾರಿಗನಂತಾಯಮಂ ಪಿಡಿದು . . . ವೈದ್ಯನಂತೆ ಪಂಚಾಂಗಶುದ್ಧಿಯಂ ನೋಡಿ ಮಂತ್ರವಾದಿಯಂತೆ ಗ್ರಹಗತಿಯಂ ಕಂಡು(ಸುಕುಮಾ. ೩-೬೨). [ಪಂಚಾಂಗ+ಶುದ್ಧಿ]

ಪಂಚಾಂಗಶ್ರವಣ (ನಾ). ಹೊಸವರ್ಷವು ಪ್ರಾರಂಭವಾಗುವ ಯುಗಾದಿಯ ದಿವಸ ಆ ವರ್ಷದ ಶುಭಾಶುಭಫಲಗಳನ್ನು ಹೇಳುವ ಮತ್ತು ಕೇಳುವ ಒಂದು ವಿಧಿ,—ಸಂಪ್ರದಾಯ : ರಾಮಮಂದಿರದಲ್ಲಿ ಪಂಚಾಂಗಶ್ರವಣ ನಡೆಯುತ್ತದೆ (ರೂಢಿ). [ಪಂಚಾಂಗ+ಶ್ರವಣ$_3$]

ಪಂಚಾಂಗಸನ್ಮಂತ್ರ (ನಾ). ೧. = ಪಂಚಾಂಗಮಂತ್ರ. ೨. ಐದು ವರ್ಣಗಳೆಂಬ ಭಾಗಗಳಿಂದ ಕೂಡಿರುವ ಮಂತ್ರ ; ಪಂಚಾಕ್ಷರ ಮಂತ್ರ. ೧, ೨ : ಅರಿವರ್ಗಧ್ವಂಸಮಂ ಪೂಣ್ದೆಸಗಿ ತಳೆದು ಪಂಚಾಂಗ

ಸನ್ಮಂತ್ರಮುಂ . . . ತಾಳ್ದನೋಳಂ ಪ್ರಭುತ್ವಂ ದೊರೆಕೊಂಡಿವ್ಮಾಳ್ದ ನಾದಲ್ಲಮವಿಧು ವಿರತಿಶ್ರೀಯಮುಂ ಮೂಳ್ಪುದೆಮ್ಮೊಳ್ (ರಾಜಶೇ. ೧-೧೩). [ಪಂಚಾಂಗ+ಸನ್ಮಂತ್ರ]

ಪಂಚಾಂಗಿ (ನಾ). ಪಂಚಾಂಗವನ್ನು ಹೇಳುವವನು ; ಜೋಯಿಸ: ಕರಸಿದಂ ಪಂಚಾಂಗಿಗಳಂ (ಪರಶು. ೯-೧೬). [ಸಂ. ಪಂಚಾಂಗಿನ್]

ಪಂಚಾಂಗುಲ (ನಾ). ೧. ಐದು ಬೆರಳುಗಳು. ೨. ಹರಳುಗಿಡ ; ಔಡಲಗಿಡ : "ವ್ಯಾಘ್ರಪುಚ್ಛಃ . . . ಪಂಚಾಂಗುಲಃ, ಮುಂಡಃ, ವರ್ಧಮಾನಃ, ವ್ಯಡಂಬಕಃ—ಗಂ ಹರಳುಗಿಡದ ಪೆಸರುಗಳು" (ನಿಘಂ. ೧೦೪). [ಪಂಚ್+ಅಂಗುಲ]

ಪಂಚಾಂಡಕ (ನಾ). (?) : ಮನಸಿಜನ ವಿಲೋಳನಾಳರ್ಪಣಸ್ಥಾನದಂತೆ ಪಂಚಾಂಡಕಪರಿಣತಿಯಿಂ ದೃಷ್ಟಶ್ರುತಾತ್ಮವಿದ್ಧದೊಳ್ಕೆಲ್ಪವ ರಸಚಿತ್ರ ದೊಳಂ ಪಡ್ಡಾತೀಯ ಪಂಚವಿಧಪತ್ರಗತಿಯೊಳಮತಿಶಯಮಾದ ಚಿತ್ರ ಶಾಲೆಯಿಂ ಮುನಂಗೊಳಿಸಿ (ಮಲ್ಲಿಪು. ೨-೭೪). [?]

ಪಂಚಾಂಡಿ (ನಾ). ಅಗಲವಾದ ಬಾಯಿಯುಳ್ಳ ಒಂದು ಬಗೆಯ ಪಾತ್ರೆ; ಬಾನಿ: ಗಣಪಯ್ಯ . . . ಎಮ್ಮ ನೀರು ಕುಡಿದು ಪಾಲಿ ಮಾಡಿದ ಪಂಚಾಂಡಿಯನ್ನು ಜೊತೆಗೆ ತಂದ ಕೊಡವನ್ನು ಎತ್ತಿ ಮನೆಯ ಹಾದಿ ಹಿಡಿದ (ಮೂರುದಾ. ೧೫೭). [?]

ಪಂಚಾಕ್ಷರ (ನಾ). ೧. ಐದು ಅಕ್ಷರಗಳು. ೨. 'ನಮಃಶಿವಾಯ' ಎಂಬ ಮಂತ್ರದಲ್ಲಿರುವ ಐದು ಅಕ್ಷರಗಳು : ಪಂಚಾಕ್ಷರಗಳೊಳಗೆ ಸಂದರಾ ಪರವೆಯರು ಪಂಚಮುಖನರ್ದೊಡೆಗೆ ಪೋದಂತಾ ಪರವೆಯರು (ಸಂಬರ. ೧೭-೧೨೫) ; ಶ್ವೇತ ನೀನೀ ದೇವನ ಮಂದಿರವ ಬೋಹರಿಸೆನುತ್ತಲಾ ರಂಭೆಯಾನಂದದಿಂ ನುಡಿದು ತದ್ಭಸಿತ ರುದ್ರಾಕ್ಷೆಗಳ ಸೌಂದರ್ಯ ಪಂಚಾಕ್ಷರಂಗಳಗ್ಗಳವ ಬಿತ್ತರಿಸಿದಳು ನಲವಿಂದ (ವೀರಶೈ. ೨-೬-೨೦). ೩. = ಪಂಚಾಕ್ಷರಿ : ಪಂಚಾಕ್ಷರಾಮೋದವಿಸ್ಫುರಿತಸ್ವಾಂತಪರೋರುಹಂ . . . ರಾಜಶೇಖರಮಹೀಶಂ . . . ಒಪ್ಪಿರ್ದಂ ತದಾಸ್ಥಾನದೊಳ್ (ರಾಜಶೇ. ೧೪-೧೬೧). [ಪಂಚ್+ಅಕ್ಷರ]

ಪಂಚಾಕ್ಷರಿ (ನಾ). ಐದು ಅಕ್ಷರಗಳುಳ್ಳ ಮಹಾಮಂತ್ರ ; 'ನಮಃಶಿವಾಯ' ಎಂಬ ಶಿವಪಂಚಾಕ್ಷರಿಮಂತ್ರ : ಇಂತೀ ಪಂಚಾಕ್ಷರಿಯ ಮೂಲಮಂತ್ರ (ದಲ್ಲಿ ?) ಸಂಬಂಧವಾಗಲಾಗಿ ಅದು ಪ್ರಣವದ ಬೀಜ (ಸರ್ವಜ್ಞ. ೧೩೩-೩೩೬) ; ಎನಿಪ ಪಂಚಾಕ್ಷರಿಯೆ ಪರಮನರಮನೆ (ತಿರುರ. ದೇ. ೩-೪) ; ಶಿವನೆಯಿತಂದು . . . ಅಱುಹಿ ಪಂಚಾಕ್ಷರಿಯನುಪಯೋಕರವ ಶಿರಜೋಳ್ಟು (ಬಸಪು. ೧೪-೩) ; ಪಂಚಾಕ್ಷರಿಯೆಂದಡೆ ಪರತತ್ತ್ವವು (ಅಖಂಡೇ. ೪೯-೧). ಪಂಚಾಕ್ಷರಿಯ ಮಣಿಮಾಲೆ = ರುದ್ರಾಕ್ಷಿಯ ಸರ (?) : ಪಂಚಾಕ್ಷರಿಯ ಮಣಿಮಾಲೆಯೆಲ್ಲಿ ಸಂಚಿತಪ್ರಾರಬ್ಧ ಕರ್ಮವೆಂಬ ದಾರ ನಡುವೆ ನಿಕ್ಕಿ ಮಣಿಯ ತಿರುಗಾಡಿಸುತ್ತದೆ (ಅಜಿಂಪು. ೪. ೧೩೪-೫೧೧). [ಸಂ. ಪಂಚಾಕ್ಷರೀ]

ಪಂಚಾಗ್ನಿ (ನಾ). ೧. ಐದು ವಿಧವಾದ ಅಗ್ನಿ ; P "ಅಗ್ನಿ—೫ : (ಅ) ಪವನ (ಆವಸಥ್ಯ), ಪಾವನ (ಸಭ್ಯ), ಶ್ರೇತಾ (ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯ) (ಗೋಭಿಲ. ೧-೩-೧೧ವ್ಯಾ ; ಅಷ್ಟೆ ವಾಯುಪು. ೮೩-೫ ; ಮತ್ಸ್ಯಪು. ೧೬-೭). (ಅ) ಜಾಠರ ಕಾಲಾಗ್ನಿ, ಬಾಡಬಾಗ್ನಿ, ಭೌಮಾಗ್ನಿ, ವೈದ್ಯುತಾಗ್ನಿ, ಸೂರ್ಯಾಗ್ನಿ (ವಿಚಿಂ. ೨-೨೪೧). (ಇ) ಕಾಲಾಗ್ನಿ, ಸೂರ್ಯ ಸೂರ್ಯಕಾಂತ—, ದಾವ—, ಉದರ— (ವಿಚಿಂ. ೨-೨೪೧). (ಈ) ಗಾಯತ್ರಿಯ ಪಂಚಮುಖಗಳು : ಸೂರ್ಯಾಗ್ನಿ, ಜಠರ—, ವೈದಿಕ—, ಲೌಕಿಕ—, ಜ್ಞಾನ—(ವಿಚಿಂ. ೨-೨೪೧). (ಉ) ಬ್ರಾಹ್ಮ, ಪ್ರಾಜಾಪತ್ಯ, ಗಾರ್ಹಸ್ಥ್ಯ, ದಕ್ಷಿಣಾಗ್ನಿ, ಕ್ರವ್ಯಾದಾಗ್ನಿ (ಸಂಜ್ಞಾ. ೨೨). (ಊ) ವಡವಾಗ್ನಿ, ಮಂದ—, ಜಠರ—, ಶೋಕ—, ಕಾಮ—, (ಕಗೀ. ೨-೩೩). (ಋ) ಪಾಚಕಾಗ್ನಿ (ಜಠರ), ರಂಜಕ—(ರಕ್ತಾಂತರ), ಸಾಧಕ—(ಹೃತ್), ಆಲೋಚನ-(ದೃಕ್), ಭ್ರಾಜಕ-(ತ್ವಕ್) (ಸಂಜ್ಞಾ. ೨೧). (ಋೂ) ಜ್ಞಾನಾಗ್ನಿ (ಆತ್ಮ), ಕಾಲ-(ಪಾದಗಳು), ಕ್ಷುಧಾ—(ನಾಭಿ), ಶೀತ-(ಹೃದಯ), ಕೋಪ—(ನೇತ್ರಗಳು) (ವಿದ್ಯಾಕ. ೫೪)" (ಶ್ರೀಪಸ್ಪ. ೭). ೨. ಋಷಿಗಳು ಬೇಸಿಗೆಯಲ್ಲಿ ತಪಸ್ಸು ಮಾಡುವಾಗ ನಾಲ್ಕು ಕಡೆಗಳಲ್ಲೂ ಇರುತ್ತಿದ್ದ ನಾಲ್ಕು ಅಗ್ನಿ ಮತ್ತು ಮೇಲಿನ ಸೂರ್ಯ : ಪಂಚಾಗ್ನಿತಾಪತಪ್ತ ಮೂನಸರೆಸ್ಪ ತಪೋಧನಜನಕ್ಕೆ ತಪನತಾಪಮನಾಗಲೀಯದೆ ತಳರ್ದೂಜುಗಲಂ ಪೊತ್ತು ನಭದೊಳ್ ನಲಿದಾಡುವ ಸೋಗೆನವಿಲ್ಲಳ ಪಿಂಡುಗಳುಮಂ (ಪಂಚತಂ. ೪೯-೧೬) ; ಮಿಗೆ ಸುತ್ತಿದ ಪವಾಗ್ನಿ . . . ಬೇಸಗೆಯಗ್ನಿಯೆಂದೆನಿಸಿ ತೋಜುತ್ತಿರ್ಪ ಪಂಚಾಗ್ನಿಮಧ್ಯಗತಾಂಘ್ರಿಪ್ರಭೆ ನಿಂದಳುಗ್ರ ತಪದೊಳ್ ಶರ್ವಾಣಿ (ಗಂಗಿ. ೯-೧೧) ; ಪಂಚಾಗ್ನಿಯಲಿ ಕುಳಿತು ವಂಚಿಸಿದ ದೇಹಕ್ಕೆ ಮುಂಜೆ ಉರಿನರಕವನನುಭವಿಸಿದಾ ಮೇಲೆ ಸಂಚಿಸಿದ ಫಲವು (ಸರ್ವಜ್ಞ. ೬೭೬). ೩. ಪಂಚಾಗ್ನಿಯ ನಡುವೆ ಮಾಡುವ ತಪಸ್ಸು ; P "ಅತಪ — ೫ : ನಾಲ್ಕುದಿಕ್ಕುಗಳಲ್ಲಿಯೂ ಯಜ್ಞೋಚಿತವಾದ ದಾರುವಿಶೇಷಗಳಿಂದ ತನಗೆ ಏಕಹಸ್ತಾಂತರದಲ್ಲಿ ಅಗ್ನಿಸ್ಥಾಪನೆ ಮಾಡಿ, ಗಾಢವಸ್ತ್ರಾಚ್ಛಾದನೆ ಮಾಡಿಕೊಂಡು ಅದರ ನಡುವೆ ಕುಳಿತು, ವೈಶ್ವಾನರೇಷ್ಟಿಯನ್ನು ಮಾಡುತ್ತ, ಐದನೆಯ (ಅಗ್ನಿಯಾದ) ಸೂರ್ಯನನ್ನು ನೋಡುತ್ತ, ಗ್ರೀಷ್ಮಋತುವಿನಲ್ಲಿ ಮಾಡುವ ತಪಸ್ಯಾವಿಶೇಷ (ಕಾಲಿಕಾ ಪುರಾಣ. ಅ. ೪೨-ಶಕದ್ರು.೧೬)" (ಶ್ರೀಪಸ್ಪ. ೪೯) : ಪಂಚಾಗ್ನಿಯೇ ಮುಂತಾದ ತಪಸ್ಸಾಧನೆಗಳಿಂದ ಇಂತಹ ಸಿದ್ಧಿ ಬಾರದು. ಇದೊಂದು ಹೊಸ ತಪಸ್ಸೇ ಆಗಿರಬೇಕು (ಧ್ವನ್ಯಾಲೋ. ೪೧ ಅಡಿಟಿ). ೪. ಗೃಹಸ್ಥನು ಅಗ್ನಿಯಂತೆ ಪೂಜ್ಯಭಾವನೆಯಿಂದ ಸೇವಿಸಬೇಕಾದ ಐವರು; ತಾಯಿ, ತಂದೆ, ಗುರು, ಅಗ್ನಿ ಮತ್ತು ಪರಮಾತ್ಮ : ಪಿತನು ಗುರು ಶಿಖಿಯಾತ್ಮ ತಾಯೆಂಬತುಳಪಂಚಾಗ್ನಿಯನು ಕ್ರಮದಿಂ ಪ್ರತಿದಿನಂ ಪರಿಚರಿಯ ಮಾಳ್ಪುದು ಲೇಸ ಬಯಸುವರೆ (ಕುನ್ಯಾಉ. ೩-೩೭). ೫. [ದ್ವೈತ] ನಾರಾಯಣನ ಮೂವತ್ತು ಮೂರ್ತಿಗಳನ್ನು ಧ್ಯಾನಿಸುತ್ತ, ಅಗ್ನಿಯಂತೆ ಭಾವಿಸಬೇಕಾದ ಐದು ವಸ್ತುಗಳು ; ತಾಯಿ, ತಂದೆ, ಭೂಮಿ, ಮೇಘ ಮತ್ತು ಆಕಾಶ : ಜನನಿ ಪಿತ ಭೂವಾರಿದಾಂಬರವೆನಿಪ ಪಂಚಾಗ್ನಿಯಲಿ ನಾರಾಯಣನ ತ್ರಿಂಶತಿಮೂರ್ತಿಗಳ ವ್ಯಾಪಾರವ್ಯಾಪ್ತಿಗಳ ನೆನೆದು (ಹಸಾರ. ೬-೧). ೬. [ವೈದ್ಯಶಾ] ಜೀರ್ಣಶಕ್ತಿಯನ್ನು ಹೆಚ್ಚಿಸುವ ಐದು ಬಗೆಯ ಔಷಧಗಳು : ಮುಂಜಿಯ ಗೆಡ್ಡೆ, ತಸ್ಸಿಲೆ ಹುಲುಗನ ಗೆಡ್ಡೆ, ಚಿತ್ರಮೂಲ, ಸೂರಣ, ಮಂಗರವಳ್ಳಿ . . . (ಪಂಚಾಗ್ನಿ ಎಂದು ಕರೆಯಲ್ಪಡುವ ಈ ಔಷಧಗಳು ಮನುಷ್ಯರ ಹೊಟ್ಟೆಯಲ್ಲಿ ಅಗ್ನಿದೀಪನವಂ ಉಂಟುಮಾಡುವವು) (ವೈದ್ಯಸಾ. I, ೩೨೩).

ಪಂಚಾಗ್ನಿವಿದ್ಯೆ = ಛಾಂದೋಗ್ಯವೆಂಬ ಉಪನಿಷತ್ತಿನಲ್ಲಿ ಹೇಳಿರುವ ಒಂದು ವಿದ್ಯೆ : ಛಾಂದೋಗ್ಯದಲ್ಲಿ ಪಂಚಾಗ್ನಿವಿದ್ಯೆಯಲ್ಲಿ ವಿಧಿಸಿರುವುದರಿಂದ ಸ್ತ್ರೀ ಪುರುಷರನ್ನು ಅಗ್ನಿಯೆಂದು ಭಾವಿಸುವುದು ಒಂದು ಬಗೆಯ ಧ್ಯಾನಕ್ರಿಯೆಯೆಯು (ಬ್ರಹ್ಮಭಾ. ೫೬ ಅಡಿಟಿ) ; ಛಾಂದೋಗ್ಯೋಪನಿಷತ್ತು . . . ಇದರಲ್ಲಿ ಉದ್ಗೀಥೋಪಾಸನೆ, ಸತ್ಯಕಾಮ ಜಾಬಾಲಿಯ ವೃತ್ತಾಂತ, ಉಪಕೋಸಲವಿದ್ಯೆ, ಪಂಚಾಗ್ನಿವಿದ್ಯೆ . . . ಮೊದಲಾದ ವಿಷಯಗಳಿವೆ (ಭಾರದ. ೩೮). ಪಂಚಾಗ್ನಿಸಾಧಕ = ಪಂಚಾಗ್ನಿಗಳ

ಮಧ್ಯದಲ್ಲಿ ತಪಸ್ಸು ಮಾಡುವ ವ್ರತವನ್ನು ಹಿಡಿದಿರುವವನು; ಸಿದ್ಧಿ ಪಡೆಯಲು ಪಂಚಾಗ್ನಿಗಳ ಮಧ್ಯದಲ್ಲಿ ಕುಳಿತು ತಪಸ್ಸು ನಾಡುವವನು: ದೇವರ್ . . . ಪಂಚಾಗ್ನಿಸಾಧಕನಪ್ಪ ತಪೋಧನನಂ ಕಂಡಾನುವಿಂತೆ ತಪಂಗೆಯ್ವೆನೆಂದು ಪಂಚಾಗ್ನಿತಾಪತಪ್ತನಾಗಿ . . . ಖಿಂಗನಾಗಿ ಪುಟ್ಟಿದಿರ್ (ಪಂಚತಂ. ೬೦–೧೧); ತಪಸಿಗೆ ರವಿಯುಗ್ನಿಯು ತೇಜವದಾವಂದೆನಿ ಮುನಿಪ್ರವರರ್ ಪಂಚಾಗ್ನಿಸಾಧಕರ್ ದೇಸಗೆಯೊರ್ (ಜಗ. ೧೬–೬೫). ಪಂಚಾಗ್ನಿಸಾಧನಿ = ಪಂಚಾಗ್ನಿಸಾಧಕ: ಧೂಮ್ರಪಾನಿಗಳೂ ಪಂಚಾಗ್ನಿಸಾಧನಿಗಳೂ ಅದ ನೈಷ್ಠಿಕತಾಪಸಿಗಳಿಗೂ ಸಹಕಾನುತಾಪವನ್ನುಂಟುಮಾಡತಕ್ಕೆ ವಸಂತರಾಜನು ತನ್ನ ಸಂಪೂರ್ಣವೈಭವದಿಂದ ಈ ಉಪವನದಲ್ಲಿ ವಿರಾಜಮಾನನಾಗಿದ್ದಾನೆ (ಪುಂಜುಳ. ೧೧).

[ಪಂಚ್+ಅಗ್ನಿ]

ಪಂಚಾಗ್ನಿಯೋಗ (ನಾ). [ವೈದ್ಯಶಾ] ಅಗ್ನಿಯಂತೆ ಉದ್ದೀಪಕಗಳಾದ ಐದು ವನಸ್ಪತಿಗಳ ಸಂಯೋಗದಿಂದ ಮಾಡುವ ಒಂದು ಬಗೆಯ ಔಷಧ: ಪಂಚಾಗ್ನಿಯೋಗ:–ಹೆಗ್ಗರುಟಿಗೆ, ಇದನ್ನು ಕೆಲವರು ಸವಣಗಡ್ಡೆ ಎಂಬರು. ಗೋಳುಹಿಮ್ಮೆಯ ಗೆಡ್ಡೆ, ಚಿತ್ರಮೂಲ, ಸೂರಣದ ಗೆಣಸು, ಪುಂಗರವಳ್ಳಿ ಎಂದಿವುಗಳ ಚೂರ್ಣವನ್ನು ಉದಯಕಾಲದಲ್ಲಿ ಮಜ್ಜಿಗೆಯಲ್ಲಿ ಕಲಸಿ ಕುಡಿಯಲು . . . ಅಪಾನದ್ವಾರರೋಗಮಂ ಕೆಡಿಸುಗುಂ (ವಿನ್ಯವಿ. ೩೬). [ಪಂಚಾಗ್ನಿ+ಯೋಗ]

ಪಂಚಾಚಾರ (ನಾ). ದಿ. [ಜೈನ] ದರ್ಶನಾಚಾರ, ಜ್ಞಾನಾಚಾರ, ಚಾರಿತ್ರಾಚಾರ, ತಪಾಚಾರ ಮತ್ತು ವೀರ್ಯಾಚಾರಗಳೆಂಬ ಐದು ಬಗೆಯ ಆಚರಣೆಗಳು: ಮನಮಂ ಕಟ್ಟಿ ಗುಣಂಗಳಿಂ ತುಟಿದು ಪಂಚಾಚಾರದಿಂ ಪಂಚಬಾಣನ ಬಾಹಾಬಲಮಂ . . . ಅನವದ್ಯರ್ ದಯೆಗೆಯ್ವರಕ್ಕೆ (ಪಂಚಾಮೃ. ೧–೩); ವರಪಂಚಾಚಾರಮಾಚಾರವನೊಡವಿಸೆ . . . ಲೋಕೋತ್ತರರಾದಾಚಾರ್ಯರೆಮ್ಮಂ ನಿಯಮಿಸುಗೆ ನಿಜಾನುಗ್ರಹಪ್ರೌಢಿಯಿಂದಂ (ಪುಷ್ಪಸ�e.೧–೩); ಆದಿಗೆಱುವೆನು ಪಂಚಾಚಾರವೆಂದೆಂಬ ಪಡಗೇಱು ಭವಸಾಗರವ ತಡೆಯದೆ ದಾಂಟಿ ದಾಂಟುವರಿಗಾ ಮಾರ್ಗವ ಪಿಡಿದೆ ತೋರ್ಪಾಚಾರ್ಯಕರೆ (ನಾಗಕು.೧–೩). ಶಿ.[ವೀಶೈ] ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರಗಳೆಂಬ ಐದು ಬಗೆಯ ಆಚಾರಗಳು; P "ಭೃತ್ಯಾಚಾರ, ಸ್ಮೃತ್ಯಾಚಾರ, ಪೌರಾಣಿಕಾಚಾರ, ಆಗಮಾಚಾರ, ತಂತ್ರಾಚಾರ— ಇವನ್ನು ಪಂಚಾಚಾರಗಳೆಂದು ಹೇಳುವರು (ರಾಜಶೇ. ಪಾರಿಭಾಷಿಕ ವಿಶೇಷಾರ್ಥಗಳು. ೪೪೩): ಗುರುವನಱಿಂದು ಲಿಂಗವನಱಿವವರುಂಟು ಲಿಂಗವನಱಿದು ಪಂಚಾಚಾರವನಱಿವವರುಂಟು (ಮಡಿವ.೩೭೭–೩೯); ಸದಾಚಾರ ಲಿಂಗಾಚಾರ ಶಿವಾಚಾರ ಗಣಾಚಾರ ಭೃತ್ಯಾಚಾರವೆಂಬ ಪಂಚಾಚಾರಂಗಳಳವಟ್ಟು . . . ಮಹಾಶರಣರ ಶ್ರೀಪಾದಕ್ಕೆ ನಮೋನಮಃ ಎಂಬೆನಯ್ಯಾ (ಅಖಂಡೇ. ೪೭–೯೦); ಆಷ್ಟಾವರಣ, ಪಂಚಾಚಾರ, ಷಟ್ಸ್ಥಲಮಾರ್ಗಗಳ ಅನುಷ್ಠಾನದಿಂದ ಶಿವತ್ವವನ್ನು ಹೊಂದಬೇಕೆಂಬುದೇ ಈ ಮತದ ಗುರಿ (ಭಾರತ. ೫೧೭).

[ಪಂಚ್+ಆಚಾರ]

ಪಂಚಾಚಾರ್ಯ (ನಾ). [ವೀಶೈ] ಪ್ರಸಿದ್ಧವಾಗಿರುವ ಪಂಚಪೀಠಗಳ ಐವರು ಮೂಲ ಗುರುಗಳು: "ಪಂಚಾಚಾರ್ಯರು—ರೇಣುಕ, ದಾರುಕ, ಏಕೋರಾಮ, ಮರುಳಾರಾಧ್ಯ, ವಿಶ್ವಾರಾಧ್ಯರು" (ಶರಸಾ. ೨೪–೭). P ಪಂಚಾಚಾರ್ಯರು: i) ಕೃತಯುಗದಲ್ಲಿ: ಏಕಾಕ್ಷರ ಶಿವಾಚಾರ್ಯ, ದ್ವ್ಯಕ್ಷರ ಶಿವಾಚಾರ್ಯ, ತ್ರ್ಯಕ್ಷರ ಶಿವಾಚಾರ್ಯ, ಚತುರಕ್ಷರ ಶಿವಾಚಾರ್ಯ, ಪಂಚಾಕ್ಷರ ಶಿವಾಚಾರ್ಯ. ii) ತ್ರೇತಾಯುಗದಲ್ಲಿ: ಏಕವಕ್ತ್ರ ಶಿವಾಚಾರ್ಯ, ದ್ವಿವಕ್ತ್ರ ಶಿವಾಚಾರ್ಯ, ತ್ರಿವಕ್ತ್ರ ಶಿವಾಚಾರ್ಯ, ಚತುರ್ವಕ್ತ್ರ ಶಿವಾಚಾರ್ಯ, ಪಂಚವಕ್ತ್ರ ಶಿವಾಚಾರ್ಯ. iii) ದ್ವಾಪರಯುಗದಲ್ಲಿ: ರೇಣುಕ ಶಿವಾಚಾರ್ಯ, ದಾರುಕ ಶಿವಾಚಾರ್ಯ, ಶಂಖುಕರ್ಣ ಶಿವಾಚಾರ್ಯ, ಧೇನುಕರ್ಣ ಶಿವಾಚಾರ್ಯ, ವಿಶ್ವಕರ್ಣ ಶಿವಾಚಾರ್ಯ. iv) ಕಲಿಯುಗದಲ್ಲಿ: ರೇವಣಾರಾಧ್ಯ, ಮರುಳಾರಾಧ್ಯ, ಏಕೋರಾಮಾರಾಧ್ಯ, ಪಂಡಿತಾರಾಧ್ಯ, ವಿಶ್ವಾರಾಧ್ಯ" (ರಾಜಶೇ. ಪಾರಿಭಾಷಿಕ ವಿಶೇಷಾರ್ಥಗಳು. ೪೪೪). [ಪಂಚ್+ಆಚಾರ್ಯ]

ಪಂಚಾಟಿ (ನಾ). ತೀರ್ಪು ಕೊಡುವಿಕೆ; ನ್ಯಾಯನಿರ್ಣಯ; ಪಂಚಾಯತಿ ತೀರ್ಮಾನ; ಐತೀರ್ಪು: ಯಾವುದಾದರೂ ನ್ಯಾಯಾಲಯದ ಅಥವಾ ಮಧ್ಯಸ್ಥ ನ್ಯಾಯಾಧಿಕರಣದ ಯಾವುದಾದರೂ ನಿರ್ಣಯ, ಆಜ್ಞಪ್ತಿ ಅಥವಾ ಪಂಚಾಟಿ ಇವುಗಳ ಮೇರೆಗೆ ಪಾವತಿಯಾಗಬೇಕಾದ ಯಾವುದಾದರೂ ಮೊಬಲಗುಗಳು (ಭಾಧಾಸ. ೫೯). [<ಪಂಚಾಯತಿ]

ಪಂಚಾಣುವ್ರತ (ನಾ). [ಜೈನ] ಗೃಹಸ್ಥರು ಅನುಸರಿಸಬೇಕಾದ ಅಹಿಂಸೆ (ಹಿಂಸೆ ಮಾಡದಿರುವುದು), ಸತ್ಯ (ಸುಳ್ಳು ಹೇಳದಿರುವುದು), ಅಸ್ತೇಯ (ಕದಿಯದೆ ಇರುವುದು), ಬ್ರಹ್ಮಚರ್ಯ ಮತ್ತು ಅಪರಿಗ್ರಹ (ಸ್ವೀಕರಿಸದಿರುವುದು) ಗಳೆಂಬ ಐದು ಬಗೆಯ ವ್ರತಗಳು: ಪಂಚಾಣುವ್ರತಾದಿ ಪ್ರವರ್ತನಸ್ವಭಾವಸಂಯಮಮುಮನಶನವೃತ್ತಾದಿತಪೋನುಷ್ಠಾನಮುಂ ಬೆರಸಾರ್ಯಷಟ್ಕರ್ಮಂಗಳಂ ನಿಮಗಿವು ಕುಲಾಚಾರಂಗಳೆಂದಱಯೆ ಪೇಟ್ದು ಕೈಕೊಳಿಸಿ (ಆದಿಪು. ೧೫–೧೬ ಪ); ಸಂಯಮಮೆಂಬುದು ಪಂಚಾಣುವ್ರತಪ್ರವರ್ತನಮಕ್ಕುಂ (ಅಜಿಪು. ೧೨–೧ ಪ); ವರಪಂಚಾಣುವ್ರತಮಂ ನಿರತಿಕ್ರಮಮಾಗೆ ತಾಳ್ದಿ . . . ಶಲ್ಯತ್ರಯವಿರಹಿತನೆರಡನೆಯ ನೆಲೆಯನಂ ತಾಂ ವ್ರತಿಕಂ (ಸುಳುಮಾ. ೬–೨೭). 'ಅಣುವ್ರತ' ಪರಾ.

[ಪಂಚ್+ಅಣುವ್ರತ]

ಪಂಚಾಣೂತ್ತರೆ (ನಾ). [ಜೈನ] ಲೋಕಾಕಾಶದ ತುದಿಯ ನೆಲೆಯಲ್ಲಿರುವ ಐದು ವಿಮಾನಗಳು,— ಪುಣ್ಯವಂತರ ವಾಸಸ್ಥಾನಗಳು: ಪಂಚಾಣೂತ್ತರಭಾಗಿನೋ ಜಿನಗೃಹಾಃ ಪಂಚೈವ ತಾನರ್ಚಯೇ (ಆದಿಪು. ೧೬–೬೬); ಸಮಾಧಿಮರಣದಿಂ ಶರೀರಪರಿತ್ಯಾಗಂಗೆಯ್ದು ಪಂಚಾಣೂತ್ತರೆಗಳೊಳಗಣ ವಿಜಯದೊಳಹಮಿಂದ್ರನಾಗಿ ಪುಟ್ಟ (ಅಜಿಪು. ೬–೨ ಪ); ಅಂತಾ ಸ್ವರ್ಗಸಂಭವರೆಲ್ಲಂ . . . ನವಾಣೂತ್ತರೆ ಪಂಚಾಣೂತ್ತರೆಗಳೊಳಂ ಸಮ್ಯಗ್ದೃಷ್ಟಿಗಳಲ್ಲದೆ ಪುಟ್ಟುವರಲ್ಲರ್ (ಸುಳುಮಾ. ೧೧–೬೧ ಪ); ಪದ್ಮನಾಭಚರನಹಮಿಂದ್ರಂ ತ್ರಯತ್ರಿಂಶದಾಯುರಬ್ಧಿಗಳನುತ್ತರಿಸಿ ಪಂಚಾಣೂತ್ತರೆಗಳೊಳಗಣ ವೈಜಯಂತವಿಮಾನದಿಂ ಚ್ಯಾನತ್ರಯವಮಯಂ ಬಂದು (ಚಂದ್ರಪು. ೧೨–೨೧ ಪ). [ಪಂಚ್+ಅಣೂತ್ತರೆ]

ಪಂಚಾತಿಚಾರ (ನಾ). [ಜೈನ] ಐದು ಬಗೆಯಲ್ಲಿ ದಾರಿತಪ್ಪುವಿಕೆ,—ಮಿಾರಿ ನಡೆಯುವಿಕೆ; P ಸಮ್ಯಗ್ದೃಷ್ಟಿಗೆ ಶಂಕೆ, ಕಾಂಕ್ಷೆ, ನಿರ್ವಿಚಿಕಿತ್ಸೆ, ಅನ್ಯದೃಷ್ಟಿಪ್ರಶಂಸೆ ಮತ್ತು ಅನ್ಯದೃಷ್ಟಿಸಂಸ್ತವನ ಎಂಬುವೇ ಐದು ಅತಿಚಾರಗಳು: ದೇವರೊಳಾದ ಶಂಕೆಯುಂ . . . ಸದೋಷಿಯಖ್ಯಾತನಂ ಪೊಗಟ್ಪಲ್ಲಿ ಅನ್ಯದೃಷ್ಟಿಸಂಸ್ತವನಮುಮೆಂಬ ಪಂಚಾತಿಚಾರದೊಳಂ ಕೂಡದುದುಂ ಒಂದನೆಯ ದಾರ್ಷ್ಟಾನಿಕನೆಂಬ ಶ್ರಾವಕಂಗಕ್ಕುಂ (ಧರ್ಮಾಮೃ. ೫–೧೩ಗ); ಯತಿಪಂ ಪಂಚಾತಿಚಾರಪ್ರಕೃತಿಯಮದಿಂ . . . ಅರ್ಹತ್ಪ್ರತಿಬಿಂಬಧ್ವಾಂತಿಯುಂ ನೂಡಿದನವಯವದಿಂದಿಕ್ಷಣಕ್ಕಾಗಲೆನ್ನಾ (ಚಂದ್ರಪು. ೨–೮೨). 'ಅತಿಚಾರ' ಪರಾ. [ಪಂಚ್+ಅತಿಚಾರ]

ಪಂಚಾನ 'ಪಂಚಾಲ' ನೋ.

ಪಂಚಾನನ, (ನಾ). ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ ಎಂಬ ಹೆಸರುಳ್ಳ ಐದು ಮುಖಗಳುಳ್ಳವನು; ಶಿವ; ಪರಮೇಶ್ವರ : ಪಂಚಾನನಂ ಸೋಮನಾಥನ ಜಠರದೊಳಗೆ ಸುಜ್ಞಾನಕಳೆ ತಾನೆ ಸಂಭವಿಸಿ ರೇವಣಸಿದ್ಧನಾಮಂಬಡೆದ (ಉಪ್ಪ ದೇ. ೩-೫). [ಪಂಚ್+ಆನನ]

ಪಂಚಾನನ, (ನಾ).ವಿ.ವಿಶಾಲವಾದ ಮುಖವುಳ್ಳದು; ಸಿಂಹ; ಷಂಚಾಸ್ಯ : "ಹರಿ, ಮೃಗಪತಿ, ಪಂಚಾನನ: . . . ಕಂಠೀರವ: —ಈ ೯ ಸಿಂಹದ ಪೆಸರ್" (ಹಲಾಯು. ೩೬-೬೧); ಪಂಚಾನನದಂತೆ ಗರ್ಜಿಸಿ ರಘೂದ್ವಹನೇಯಾ ಪರೂಧಮಂ . . . ಜೇವೊಡೆದಂ ನಿಜ ಚಾಪದಂಡಮಂ (ಪಂರಾಮಾ. ೩-೫೦); ಪಂಚಾನನೋಪಸರ್ಗಜಯಂ ಚಿತ್ರಕೃತಿ ವಿಚಿತ್ರಮಂ ಕುಡೆ (ಪಾರ್ವ್ವಭಾ. ೧೩-೭೬); ಪಾನರನ ಹಯ ಕುಂಜರನ ಪಂಚಾನನನ ಮೃಗಪೋತಕನ ಗುಣವಾ ನರೇಂದ್ರನೊಳಿರಲು ಬೇಹುದು (ಕುಪ್ಪಾಳು. ೩-೧೦೯); ಕಂಡಕ್ಕೆ ಕನುಲಾಕ್ಷಿ ಮಿಳವೇತಂಡ ಪಂಚಾನನನ [ಪಾತಾಂ.ಕಂಠೀರವನ] . . . ಮಾಯಾತ್ರಿವಿಕ್ರಮನ(ತೊರಾ. ೬-೧೬-೧೧೦); ಪೇರಾನೆಯ ಕುಂಬತಳಮಂ ತನ್ನೊಂದೆ ಕೈಯ ಪೊಯ್ದುಂ ಸೀಟ್ಟು ಪೋಟ್ಟು ಪಂಚಾನನಂಗಮೆನಗಂ ಪೆಜರ ಕೆಲಚಕ್ಕುಮೆ? (ರಾಮಾಶ್ವ. ೧೧೧-೧೫). ೨. (ಆಲಂ) ಶ್ರೇಷ್ಠ ವ್ಯಕ್ತಿ; ಉತ್ಕೃಷ್ಟನಾದವನು : ಒಪ್ಪಿದಂ ಶಂಭುಸಂಭವ ತದ್ರೇಣುಕರೂಪ ರೇವಣಮಹಾಯೋಗೀಂದ್ರ ಪಂಚಾನನಂ(ರಾಜಶೇ. ೧-೬೬). [ಪಂಚ್+ಆನನ]

ಪಂಚಾಮೃತರಸ (ನಾ). [ವೈದ್ಯಶಾ] ಒಂದು ಬಗೆಯ ಔಷಧ; ರಸ, ಮೆಣಸು, ಹಿಂಪಾವಳಿ, ತಾಮ್ರಭಸ್ಮ ಮತ್ತು ಅರ್ಕಮೂಲರಸ ಇವುಗಳ ಮಿಶ್ರಣ : ಪಂಚಾನನರಸ :—ರಸ ೧೨ ತೂಕ, ಮೆಣಸು ೧೨ ತೂಕ, ಹಿರಾವಳಿ ೧೪ ತೂಕ, ತಾಮ್ರಭಸ್ಮ ೧೨ ತೂಕ, ಇಪ್ಪತ್ತು ಅರ್ಕಮೂಲರಸದಲ್ಲಿ ಲೇಸಾಗಿ ಮರ್ದಿಸಿ, ಗುಂಜಿತೂಕವನ್ನು ಸಕ್ಕರೆ, ಅಲದ ರಸದಲ್ಲಿ ಕೊಡಲು ಸರ್ವಜ್ವರಹರ (ವೈವಿ. ೩೩). [ಪಂಚಾನನ+ರಸ]

ಪಂಚಾಭಿಷೇಕ (ನಾ). ಹಾಲು, ಸಕ್ಕರೆ, ತುಪ್ಪ, ಮೊಸರು ಮತ್ತು ಜೇನು ಎಂಬ ಐದು ವಿಧವಾದ ಮಧುರಪದಾರ್ಥಗಳನ್ನು ಒಂದೊಂದಾಗಿ ಸುರಿದು ಮಾಡುವ ಅಭಿಷೇಕ : ಅಂಬುಜವದನೆ . . . ಬಳುಕುತ ಬಂದು ಪಂಚವಿಧದಮೃತಪಾತ್ರೆಯಿಂದೆ ಲಿಂಗಕ್ಕೆ ಪಂಚಾಭಿಷೇಕವೆರೆದು (ನವಮೋ. ೧೯-೧೦). [ಪಂಚ್+ಅಭಿಷೇಕ]

ಪಂಚಾಮೃತ (ನಾ). ೧. ದೇವರ ಅಭಿಷೇಕಕ್ಕೆ ಉಪಯೋಗಿಸುವ ಐದು ಮಧುರಪದಾರ್ಥಗಳು; ಹಾಲು, ಮೊಸರು, ತುಪ್ಪ, ಜೇನುತುಪ್ಪ ಮತ್ತು ಸಕ್ಕರೆ. ೨. ಈ ಐದು ಮಧುರ ಪದಾರ್ಥಗಳ ಮಿಶ್ರಣ : ನಾಯು ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ (ಬಸವ. ೩೨೩); ವಿನುತ ಪಂಚಾಮೃತಂಗಳನಲ್ಲಿ ಮಾಡಿಸುತೆ ಸಾಲದೆನುತಂ ಸಹಸ್ರಾಭಿಷೇಕವ ಮಾಡಿ (ರುದ್ರರ. ದೇ. ೨೦೪-೬); ಲೇಸಿನಿಂ ವೇದೋಕ್ತಕ್ರಮವಿಡಿದು ಪಂಚಾಮೃತವನೆರೆದು . . . ಮಂಗಳಸೂತ್ರ ಲೇಸಿನಲಿ ಕಂಠದಲಿ ಬಂಧಿಸುತ (ನವಮೋ. ೧೩-೫೬); ಚಕ್ರತೀರ್ಥೇಶ್ವರ ದೇವಸ್ಥಾನಕ್ಕೆ ಹೋಗಿ . . . ಭಟ್ಟರ ಕೈಯಿಂದ ಒಂದು ಪಂಚಾಮೃತದ ಅಭಿಷೇಕ ಮಾಡಿಸುತ್ತೇನೆ (ಮೂರುದಾ. ೩೨೮). ೩. (ಆಲಂ) ಹಿತಕರವಾದುದು; ಆನಂದ ಜನಕವಾದುದು : ನೀವು ನನ್ನನ್ನು ಅರಿಗಳಿಗೆ ಪ್ರೀತಿಯಿಂದ ಪೂತನಾಡಿಸಿದರೆ ನನಗೆ ಅದೇ ಪಂಚಾಮೃತ (ಕಾವೇರಿ. ೧೦೪); ಹೆಣ್ಣು ಗಂಡೂ ಕೂಸುಕುನ್ನಿ ಮುಪ್ಪಿನ ಮುದುಕ ಅವರವರ ಪಾಲಿಗಿದೆ ಪಂಚಾಮೃತ (ನೆಲಮು. ೧೯-೩೦); ಪಾಲಿಗೆ ಬಂದದ್ದು ಪಂಚಾಮೃತ (ಗಾದೆ). ೪. [ವೈದ್ಯಶಾ]ಗೋಮೂತ್ರ, ಗೋಮಯ, ಮೊಸರು, ಹಾಲು, ತುಪ್ಪಗಳೆಂಬ ಐದು ವಸ್ತುಗಳು. ೫. ಹಿಪ್ಪಲಿ, ತುಪ್ಪ, ಸಕ್ಕರೆ, ಜೇನುತುಪ್ಪ, ಹಾಲುಗಳೆಂಬ ಐದು ಪದಾರ್ಥಗಳು. ೬. ಅಭ್ರಕ, ಮಾಕ್ಷಿಕ, ಲೋಹ, ರಸ, ಗಂಧಕಗಳೆಂಬ ಐದು ವಸ್ತುಗಳು.

ಪಂಚಾಮೃತಘೃತ = ಗೋಮೂತ್ರ, ಗೋಮಯ, ಮೊಸರು, ಹಾಲು, ತುಪ್ಪಗಳೆಂಬ ಐದು ವಸ್ತುಗಳನ್ನು ಸೇರಿಸಿ ಮಾಡುವ ಒಂದು ಬಗೆಯ ಔಷಧ: ಪಂಚಾಮೃತಘೃತ . . . ಸಕ್ಕರೆವೆರಸಿ . . . ಸೇವಿಸೆ ಪಿತ್ತಭ್ರಮೆ . . . ಪರಿಹಾರಮಕ್ಕುಂ (ಸಕವೈ. ೧೩೯). ಪಂಚಾಮೃತಯೋಗ = ಹಿಪ್ಪಲಿ, ತುಪ್ಪ, ಸಕ್ಕರೆ, ಜೇನುತುಪ್ಪ, ಹಾಲು–ಈ ಐದು ಪದಾರ್ಥಗಳನ್ನು ಸೇರಿಸಿ ಮಾಡುವ ಒಂದು ಬಗೆಯ ಔಷಧ : ಪಂಚಾಮೃತಯೋಗ . . . ರೂಕ್ಷಜ್ವರನಿವಾರಣಂ (ವೈವಿ. ೩೩). ಪಂಚಾಮೃತರಸ = ಅಭ್ರಕ, ಮಾಕ್ಷಿಕ, ಲೋಹ, ರಸ, ಗಂಧಕಗಳೆಂಬ ಐದು ವಸ್ತುಗಳಿಂದ ತಯಾರಿಸುವ ಔಷಧ: ಪಂಚಾಮೃತ ರಸ . . . ಅಳಲೇಕಾಯಿಂ ಕರಿಯ ಚೂರ್ಣಮಂ ಮಾಡಿ . . . ಕೊಡಲು ಅತಿಸಾರ ಹರ (ವೈವಿ. ೩೩). [ಪಂಚ್+ಅಮೃತ]

ಪಂಚಾಮೃತಾಭಿಷೇಕ (ನಾ). ಪಂಚಾಮೃತದಿಂದ ಮಾಡುವ ಅಭಿಷೇಕ : ಈಕೆಯ ದಾನಧರ್ಮದಿಂದಾಗಿ ದಿನವೂ ಸಹಸ್ರಾರು ಜಿನದಿಂಬಗಳಿಗೆ ಪಂಚಾಮೃತಾಭಿಷೇಕವಾಗುತ್ತಿತ್ತು (ದಾನಚಂ. ೧೩೩). [ಪಂಚಾಮೃತ+ಅಭಿಷೇಕ]

ಪಂಚಾಮ್ಲ (ನಾ). [ವೈದ್ಯಶಾ] ಹಸುವಿನ ಮಜ್ಜಿಗೆ, ಅಂಬಿಲ, ಹುಣಿಸೇಹಣ್ಣು, ದಾಳಿಂಬೆ ಹಣ್ಣು ಮತ್ತು ಮಾದಳಗಳೆಂಬ ಐದು ಬಗೆಯ ಆಮ್ಲ,—ಹುಳಿ; ☞ "ಆಮ್ಲ—೫ : (ಅ) ಅಮ್ಲವೇತಸ, ವೃಕ್ಷಾಮ್ಲ, ಬೃಹಜ್ಜಂಬೀರ, ನಿಂಬುಕ, ಬೀಜಪೂರ (ಭಾವಪ್ರಕಾಶ—ಶಕದ್ರು. ೪೨೦). (ಆ) ಕೋಲ, ದಾಡಿಮ, ವೃಕ್ಷಾಮ್ಲ, ಆಮ್ಲವೇತಸ, ಮಾತುಲುಂಗ (ಶಬ್ದಚಂ—ಶಕದ್ರು. ೧೩೬)" (ಪ್ರೀವಸ್ತ. ೫೧) : ಹಸುವಿನ ಮಜ್ಜಿಗೆ, ಅಂಬಿಲ, ಹುಣಿಸೇಹಣ್ಣು, ದಾಳಿಂಬದ ಹಣ್ಣು, ಮಾದಳದ ಹಣ್ಣು ಇವು ಪಂಚಾಮ್ಲವೆಂದು ಪ್ರಸಿದ್ಧ (ವೈದ್ಯಸಾ. I, ೧೬೨); ಹಸುವಿನ ಮಜ್ಜಿಗೆ, ಅಂಬಿಲ, ಹುಣಿಸೆಹಣ್ಣು, ದಾಳಿಂಬದ ಹಣ್ಣು, ಮಾದಳದ ಹಣ್ಣು ಈ ೫ ಪಂಚಾಮ್ಲವೆನಿಸಿಕೊಂಬುವು (ಸಕವೈ. ೨೮೨). [ಪಂಚ್+ಅಮ್ಲ]

ಪಂಚಾಯತ 'ಪಂಚಾಯಿತಿ' ನೋ.

ಪಂಚಾಯತದಾರ (ನಾ)., ತೀರ್ಮಾನಕ್ಕಾಗಿ ನಿರ್ಮಿಸುವ ಸಮಿತಿಯ ಸದಸ್ಯ: ಕುಸ್ತಿಯ ಪಂಚಾಯತದಾರರು ಇಬ್ಬರ ಬೆನ್ನನ್ನೂ ತಟ್ಟಿದರು (ಭೀಸುಕಾ. ೩). [ಪಂಚಾಯತ(<ಪಂಚಾಯಿತಿ)+-ದಾರ್ಕ]

ಪಂಚಾಯತನ (ನಾ). ೧. ಸ್ಮಾರ್ತ ಸಂಪ್ರದಾಯದ ಹಿಂದುಗಳು ನಿತ್ಯವೂ ಪೂಜಿಸುವ ಐವರು ದೇವರು; ಶಿವ, ಅಂಬಿಕೆ, ವಿಷ್ಣು, ಸೂರ್ಯ ಮತ್ತು ಗಣಪತಿ ದೇವರುಗಳು; ಐದು ದೇವರೆಂಬ ಭಾವನೆಯಿಂದ ಪೂಜಿಸುವ ಪಂಚಶಿಲೆಗಳು : ರಾಮಹುಚ್ಚನೆ ಪಂಚಾಯತನ ದೇವತಾದಿಯು (ಗರಾ. ೧-೪); ಇನ್ನೂ ಹೆಚ್ಚು ಸಂಸ್ಕಾರವಾದವನಿಗೆ ಮೇಲೆ ಹೇಳಿದಂಥಾ ವಿಗ್ರಹಗಳ ಅವಶ್ಯವಿಲ್ಲ. ಆದಿಶಕ್ತಿ, ಮಹಾವಿಷ್ಣು, ಆದಿತ್ಯ, ಗಣಪತಿ, ಮಹಾದೇವ . . . ಎಂಬ ಪಂಚಾಯತನಗಳೇ ಸಾಕು (ಆರ್ಯಧ. ೨೦೩). [ಸಂ.]

ಪಂಚಾಯತಶಾಲೆ (ನಾ). ಗ್ರಾಮಪಂಚಾಯತಿಯು ನಡೆಸುವ ಪಾಠಶಾಲೆ : ಕೇವಲ ಒಂದು ಪಂಚಾಯತಶಾಲೆಯಲ್ಲಿ ಐದನೆಯ ತರಗತಿವರೆಗೆ ಓದಿದ್ದಳು ಅಷ್ಟೆ (ಮುಂಗಾಮು. ೬೫). [ಪಂಚಾಯತ(<ಪಂಚಾಯಿತಿ)+ಶಾಲೆ]

ಪಂಚಾಯತಿ 'ಪಂಚಾಯಿತಿ' ನೋ.

ಪಂಚಾಯತಿಕೆ 'ಪಂಚಾಯಿತಿಕೆ' ನೋ.

ಪಂಚಾಯಿತ, ಪಂಚಾಯ್ತ (ನಾ). = ಪಂಚಾಯತದಾರ : ಪಂಚಾಯಿತರ ತೀರ್ಮಾನಗಳು ನಿಷ್ಪಕ್ಷಪಾತವಾಗಿದ್ದವು (ಕಳಹು. ೯೪); ಪಂಚಾಯಿತರ ಊಟೋಪಚಾರದಲ್ಲಿ ದುಗ್ಗಮ್ಮನಿದ್ದಳು (ಗಂಗಾಳ. ೩೦). **ಪಂಚಾಯ್ತ :** ಇಲ್ಲೇ ಪಂಚಾಯ್ತರು ಕುಳಿತುಕೊಳ್ಳುವುದು (ನನ್ನೂರು. ೧೦). [ಪಂಚಾಯಿತಿ+-ಅ$_7$]

ಪಂಚಾಯಿತಿ, ಪಂಚಾಯತ, ಪಂಚಾಯತಿ, ಪಂಚಾಯ್ತಿ (ನಾ). ೧. ಗ್ರಾಮದ ಅಥವಾ ಗ್ರಾಮಕೂಟದ ಆಡಳಿತವನ್ನು ನಡೆಸುವ ಸ್ಥಳೀಯ ಸಂಸ್ಥೆ : ನಾನು ನಿನ್ನೆ ಪಂಚಾಯಿತಿ ಚುನಾವಣೆಯಲ್ಲಿ ಕೊಟ್ಟ ಓಟಿನ ವಿಚಾರವನ್ನೋ ಕುರಿತು ನಾನು ಯೋಚಿಸಿದರೆ (ಜೀವಾತ್ಮ. ೯೦); ಆ ಪಂಚಾಯಿತಿಗಳನ್ನು ರದ್ದು ಮಾಡಲು ಯಾವ ರಾಜನೂ ಒಪ್ಪುವುದಿಲ್ಲ (ಝಾರಾಣಿ. ೮೪); ಪ್ರತಿಯೊಂದು ಪಂಚಾಯಿತಿಯಲ್ಲಿಯೂ ಗಣಕ, ಲೇಖಕ ಮತ್ತು ಸಾಧ್ಯಪಾಲ ಎಂಬ ಮೂವರನ್ನು ನೇಮಿಸಿರುತ್ತಿದ್ದರು (ಭಾರದ. ೫೯). ೨. ಬೇಸರ ತರುವ ಪ್ರಸಂಗ ; ತಂಟೆ ; ತಕರಾರು : ಲೋ ಸುಮ್ಮನೆ ಪಂಚಾಯಿತಿ ಮಾಡಬೇಡ ಕಾಣೋ (ಸ್ವಾಮಿಸ್ನೇ. ೮೫); ಆ ಹಾಳು ಲೆಖ್ಖದ್ದೇ ಒಂದು ಪಂಚಾಯಿತಿ (ಶಾಲೆಮ. ೧). **ಪಂಚಾಯತ :** ೩. ನಿರ್ಣಯ ; ತೀರ್ಮಾನ : ಮಂತ್ರಿಗಳ ಮಂತ್ರಕ್ಕೆ ಉದುರುವುದೆ ಮಾಂಗಾಯಿ ? ಮಂತ್ರಶಕ್ತಿಯು ದೈವ ಪಂಚಾಯತ (ನೆಲಮು. ೧೯-೨೨). **ಪಂಚಾಯತಿ :** ೨. ಈ ಪಂಚಾಯತಿಯನ್ನು ಧನಿಗಳು ತೋಟಕ್ಕೆ ಬರುವ ಮೊದಲೇ ನಾವು ಬಗೆಹರಿಸದೆ ಹೋದರೆ, ನಾಳೆ ತುಕ್ರನ ಮೀಸೆಯೇ ಮೇಲಾಗುತ್ತದೆ (ಕುಡಿಕೂ. ೧೨೪); ಯಾರು ಯಾವ ಕೆಲಸ ಮಾಡಬೇಕೋ ಅದನ್ನು ಸರಿಯಾಗಿ ಮಾಡಿದರೆ ಈ ಪಂಚಾಯತಿ ಯಾಕೆ ಸ್ವಾಮಿ ? (ಮರಳಿ. ೯). ೪. ದೇವಸ್ಥಾನ ಮೊದಲಾದ ಧರ್ಮ ಸಂಸ್ಥೆಗಳ ಆಡಳಿತಕ್ಕಾಗಿ ಏರ್ಪಡಿಸಿರುವ ಸಮಿತಿ ; ಧರ್ಮದರ್ಶಿಗಳ ಸಮಿತಿ : ಮಿತಸಂಸ್ಥೆ, ಪಂಚಾಯತಿಗಳು (Trusts) ಮೊದಲಾದವುಗಳ ಲೆಕ್ಕವನ್ನು ಬರೆಯಬೇಕು (ತಕ್ಕಡಿ. ೬೫). ೫. ಗೊಡವೆ ; ಉಸಾಬರಿ : ಉಳಿದ ಪಂಚಾಯತಿ ನಮಗೇತಕ್ಕೆ ? (ಪರಿಲ. ೫). ೬. ಜಗಳ : ಅಣ್ಣ ತಮ್ಮಂದಿರ ಪಂಚಾಯತಿ ಕೊನೆಯಾಗಲೇ ಇಲ್ಲ (ರೂಢಿ). ೭. ಸಿಕ್ಕು ; ಗೋಜು ; ಗೊಂದಲ: ಈ ಪಂಚಾಯತಿಯ ತಳ ಬುಡ ತಿಳಿಯುವುದಿಲ್ಲ (ರೂಢಿ). ೮. ತೊಂದರೆ ; ಕಷ್ಟ : ತಿನ್ನಲು ಅನ್ನ ಇಲ್ಲವಾದರೆ ಹೋಗಲಿ ; ಕುಡಿಯಲು ನೀರಿಗೂ ಪಂಚಾಯತಿಯಾಗ ತೊಡಗಿತು (ಸ್ಮೃತಿಚಿ. ೩೦೩). ೯. ಪರಿವೆ ; ಲಕ್ಷ್ಯ ; ಗಮನ : ಗಂಡ ತನ್ನನ್ನು ಬಿಟ್ಟು ಹೋಗಿದ್ದಾನೆ, ತಾನು ಅತ್ತೆ ಮಾವಂದಿರಿಗೆ ಸರಿಯಾಗಿ ನಡೆಯಬೇಕು ಎನ್ನುವ ಪಂಚಾಯತಿಯೇ ಇಲ್ಲ ಈಕೆಗೆ ! (ಮಸಕೂ. ೩೬). **ಪಂಚಾಯ್ತಿ :** ೧. 'ಪಂಚಾಯ್ತಿಮನೆ' ಪರಾ. ೧೦. ಊರಿನ ಜನರಿಗೆಲ್ಲ ಸಂಬಂಧಪಟ್ಟ ವಿಷಯವನ್ನು ಚರ್ಚಿಸಲು ಅಥವಾ ಜನರ ಪರಸ್ಪರ ವಿವಾದಗಳನ್ನು ವಿಚಾರಿಸಿ ತೀರ್ಪು ಕೊಡಲು ಸೇರುವ ಗ್ರಾಮಮುಖಂಡರ ಸಭೆ : ಅದರ ಪಕ್ಕದಲ್ಲಿ ಚಾವಡಿ. ನನ್ನೂರಿನ ನ್ಯಾಯ ಪಂಚಾಯ್ತಿಗಳೆಲ್ಲ ನಡೆಯುವುದೇ ಇಲ್ಲಿ (ನನ್ನೂರು. ೧೦).

ಪಂಚಾಯಿತಿ ತೀರ್ಮಾನ = ಪಂಚಾಯಿತಿಯಲ್ಲಿ ಆದ ನಿರ್ಣಯ : ಪಂಚಾಯಿತಿ ತೀರ್ಮಾನದಂತೆ ನಡೆದುಕೊಳ್ಳಬೇಕು (ರೂಢಿ). ಪಂಚಾಯ್ತಿ ಕಟ್ಟೆ = ನ್ಯಾಯವಿಚಾರಣೆ ಮಾಡುವ ಜಗಲಿ,— ವೇದಿಕೆ : ಅವನು ತಪ್ಪು ಮಾಡಿದ್ದೇ ಅಲ್ಲದೆ, ಪಂಚಾಯ್ತಿ ಕಟ್ಟೆಗೂ ಬಾರದೆ ತಪ್ಪಿಸಿಕೊಂಡಿದ್ದನು (ರೂಢಿ). ಪಂಚಾಯ್ತಿ ಮಾಡು = ವಿಚಾರಣೆ ಮಾಡು,— ನಡೆಸು ; ಚರ್ಚಿಸಿ ತೀರ್ಮಾನಿಸು : ಊರುಮುಖಂಡರು ಬಂದು ಪಂಚಾಯ್ತಿ ಮಾಡಿ ಗಂಡ ಹೆಂಡಿರನ್ನು ಒಂದು ಮಾಡಬೇಕು (ಸುವಸಂ. ೩೧). [←ಹಿಂ. ಪಂಚಾಇತ್, ಪಂಚಾಯತ್, ಪಂಚಾಯತೀ; ಮರಾ. ಪಂಚಾಈತ್, ಪಂಚಾಯತ್]

ಪಂಚಾಯಿತಿಕೆ, ಪಂಚಾಯತಿಕೆ (ನಾ). ಪಂಚಾಯಿತಿ ಮಾಡುವಿಕೆ ; ವಿಚಾರಣೆ ನಡೆಸುವಿಕೆ : ಚುಚ್ಚುನುಡಿಗಳನ್ನು ಪಂಚಾಯಿತಿಕೆಯಾಗುವಾಗ ನನಗಾಗಿ ಹೇಳಿದ (ಕುರುಕಾ. ೧೫೪). ಕೇಳುವುದೇನು— ಎದ್ದಿತು ಪಂಚಾಯಿತಿಕೆ (ಕಂಬಹು. ೬೮). **ಪಂಚಾಯತಿಕೆ :** ಆ ಜೋಡಿಕೊಲೆಯ ಪಂಚಾಯತಿಕೆ ಇಂದಿನಿಂದ ಪ್ರಾರಂಭವಾಗಿದೆ (ರೂಢಿ). [ಪಂಚಾಯಿತಿ+-ಇಕೆ]

ಪಂಚಾಯುಧ (ನಾ). = ಪಂಚಶರ ೨ : ಪಿಡಿವಾಗಳೊಂದು ಪಿಡಿಯಂ ತುಡುವಾಗಳೆರಡು ತೊಟ್ಟನೆ ಸಿಡಿವಾಗಳ್ಮೂಱು ಗುಱಿಯಂ ಕೆಡೆವಾಗಳ್ ನಾಲ್ಕು ಪಂಚಾಯುಧನ ಪೊಸಮಸೆಯ ವಿಶಿಖಂಗಳ್ (ರಾಮಾಶ್ವ. ೫೮-೨೯). [ಪಂಚ$_2$ + ಆಯುಧ]

ಪಂಚಾಯ್ತ 'ಪಂಚಾಯಿತ' ನೋ.

ಪಂಚಾಯ್ತಿ 'ಪಂಚಾಯಿತಿ' ನೋ.

ಪಂಚಾಯ್ತಿಮನೆ (ನಾ). ಪಂಚಾಯಿತರು ತಮ್ಮ ಕಾರ್ಯಕಲಾಪಗಳನ್ನು ನಡೆಸುವ ಕಟ್ಟಡ : ಪಂಚಾಯ್ತಿಮನೆ ಇದೆಯಲ್ಲಾ ಅದರ ಪಕ್ಕದಲ್ಲಿ ದೊಡ್ಡದೊಂದು ಪಾಳುಮನೆ ಇದೆ (ಚಂದತೋ. ೩೧). [ಪಂಚಾಯ್ತಿ (<ಪಂಚಾಯಿತಿ)+ಮನೆ]

ಪಂಚಾರ(ನಾ).(ಪ್ರಾಯದ) ಕುದುರೆ : ಹಳೆಯ ಪಂಚಾರವ ತೆಗೆದಡಿಗಡಿಗೆ ಮತ್ತೆಳೆಗುದುರೆಯ ಕಟ್ಟುವಂತೆ ಪಳಿತ ನಾರಿಯರ ಜಾಱಿಸು ತೆಳೆವಣ್ಣ ಮಂಗಳವಾಗುತಿರ್ದನಾ ಸೊಬಗ (ಭರಚ. ೭೫-೬೮). [?]

ಪಂಚಾರತಿ (ನಾ). ೧. ದೇವರ ಪೂಜೆ ಮೊದಲಾದ ಸಂದರ್ಭಗಳಲ್ಲಿ ಎತ್ತುವ ಐದು ಕುಡಿಗಳುಳ್ಳ ಆರತಿ : ಪಂಚಾರತಿಯನೀಯ್ಯಲಸುರೇಂದ್ರ ಲಿಂಗಕ್ಕೆ ಬೆಳಗಿದನು (ನವನೋ. ೧೯-೨೭); ಪಂಚಾರತಿ, ಗೋಪುರಾರತಿ, ಕರ್ಪೂರಾರತಿ ಮುಂತಾದ ಎಲ್ಲ ಆರತಿಗಳನ್ನೂ ಮಾಡಿಸಿ ಪ್ರಸಾದ ಸ್ವೀಕರಿಸಿದ್ದಾಯಿತು (ಗಂಮಾಯಿ. ೧); ಯಾವ ವಿಶ್ವಮಾತೆ ನಿನ್ನ ಹೆತ್ತಳವಳ ಸಂತತಿ ಎತ್ತದಿಹುದೆ, ಅವಳಿಗೆಂದು ಪ್ರಾಣದ ಪಂಚಾರತಿ ? (ದ್ಯಾಪಾಪ್ಯ. ೧೭-೬); ತಾವು ಪಂಚಾರತಿ ಬೆಳಗಿಸಿಕೊಂಡ ಮೀಸೆ ಹೊತ್ತ ಗಂಡಸರು (ಅಂಬಿಕೆ. ೧೩೦). ೨. ಸಾಲಾದ ಐದು ದೀಪಗಳನ್ನು ಎತ್ತಲು ಅನುಕೂಲವಾಗುವಂತೆ ಮಾಡಿರುವ ಐದು ಮುಖಗಳುಳ್ಳ ಒಂದು ಸಾಧನ : ಪಂಚಾರತಿ ಗಂಟೆಗಳಿಂದ ಮೆಱೆದವು ಕಂಚುಗಾಱರ ಪಸರಗಳು (ಕಂಸವಿ. ೬-೯೯) [ಪಂಚ$_2$+ಆರತಿ$_1$]

ಪಂಚಾರಶೀಲ (ನಾ). (ಕುದುರೆಯಂತೆ). ಕಾಮುಕಸ್ವಭಾವದವನು: ಸ್ತ್ರೀಯ ವೇಶಿಯ ನೆವದಿಂ ಆ ವೇಳೆಯಲ್ಲಿ ಕಾಮದಿ ಅಳವಡಿಸುವಂ ಅಲ್ಲ ಕಾಮಚಿಹ್ನಮಂ ಸೂಚಿಸುವನಂ ಪಂಚಾರಶೀಲನೆಂಬುದು (ಕಾಮಶಾ. ೯-೨೦೩). [ಪಂಚಾರ + ಶೀಲ]

ಪಂಚಾರಿಸು (ಕ್ರಿ). (ಕುದುರೆ) ಪ್ರಾಯಕ್ಕೆ ಬರು : ಆ ಕುದುರೆಗೆ ಐದು ಹಲ್ಲುಗಳು ಹುಟ್ಟಿ ಕಾಂತಿಯು ಪರಾಕ್ರಮವು ಉಳ್ಳುದಾದ ಕಾರಣ ಪಂಚಾರಿಸಿತ್ತೆಂದು ಹೇಳುವರು(ಅಶ್ವಟೀ. ೨೩-೩). [ಪಂಚಾರ + -ಇಸು$_3$/ ಮರಾ. ಪಂಚಾರಣೇ, ಪಂಜಾರಣೇ = (ಕುದುರೆಗೆ) ಐದು ವರ್ಷ ಪ್ರಾಯವಾಗು]

ಪಂಚಾಲ, ಪಂಚಳ, ಪಂಚಾನ, ಪಂಚಾಳ (ನಾ). ೧. = ಪಂಚಕಾರುಕ ೧ : ಅವರು ಪಂಚಾಲವರ್ಗದ ಜನರು (ರೂಢಿ). **ಪಂಚಳ :**

೧. ಕಾಳಿಕ ಚಕ್ರವರ್ತಿ ಕಾಜವನು ಆಳುತಾಯಿರಲು ಪಂದನ ಪಂದು ದಿನದಲ್ಲಿ ಪಂಚಳಪರಬ್ರಹರದವರ ಕರಶಿ ಕಿರಿಟವನು ಮಡಿಯಂಬುದಗಿ ದೊರೆಯವರು ಪ್ರಧಾನಿಯವರು ಹೇಳಿದರ್ರಿಂದ ಪಂಚಳವರುನು ಕೇಳಿದನು (ಎಕ. XVI, ಗುಬ್ಬಿ. ೬೯-೩ ; ?). **ಪಂಚಾನ :** ೧. ದ್ಯಾಮ್ಯೆಯ್ಯನ ಕಲ್ಯೆಯ ಪಂಚಾನದವರೂ ಕಂಮಾರ ರಂಗೈಯ್ಯ ಬಡಗಿ ಬಸವ ಅಕಸಾಲೆ ನಾರಣ್ಯೆಯ್ಯ (ಎಕ. XVI, ಚಿಕ್ಕನಾ. ೯೦-೩೯ ; 1802). **ಪಂಚಾಳ :** ೧. ಪಂಚಾಳ ಕುಲದಲ್ಲಿ ಒಬ್ಬ ಪತ್ತಾರನಿಗೆ ಒಂದು ಸನಗು ಮಾಡಿಕೊಡೆಂದು ಕೊಟ್ಟರೆ (ಪಚಸಂ. ೧೨೬-೧೦೭) ; ಕಂಚಿಯ ಫಲ ಲೇಸು ಮಿಂಚು ಮುಗಿಲಿಗೆ ಲೇಸು . . . ಊರಿಂಗೆ ಪಂಚಾಳ ಲೇಸು (ಸರ್ವಜ್ಞ. ೧೧೩೮) ; ನನ್ನ ತಂದೆಯ ಕೈಕೆಳಗೆ ಥೋಮಸನು ಪಂಚಾಳನ ಉದ್ಯೋಗವನ್ನು ಅವಲಂಬಿಸಿಕೊಂಡು ಬೆಳೆದನು (ಬೆಂಜನ್. ೧೦). ೨. ಅಕ್ಕಸಾಲೆ : ಕನಕವನು ಪಂಚಾಳನಿಗೆ ಕೊಡೆ ತುಣುಕು ತುಣುಕನು ಮಾಡಿ ಕಡಿದೇ ಜಿನಿಸುಜಿನಿಸಿನ ಒಡವೆ ಮಾಡಿದ (ಜ್ಞಾನಸಿಂ. ೬-೮). ೩. ಶಿಲ್ಪಿ : ಪ್ರತಿಮೆಂತು ಯೋಗ್ಯಲ್ಲ ಬ್ರಹ್ಮ ಮಾಡಿಹವು ಪ್ರತಿಮೆಂತು ಯೋಗ್ಯ ಪಂಚಾಳನವು (ಚಿದಾಕೋ. ೭೩-೩). ೪. ಬಡಗಿ : ಪಂಚಾಳರು ದಂಡಿಗೆ ಹತ್ತಿದ ಹಾಗೆ (ಗಾದೆ).

ಪಂಚಾಳಮಿಂಡಿಯ ವೆರ್ಗಡೆ = ಒಂದು ಬಿರುದು : ಶ್ರೀಮಂನ್ನು ಮಹಾಸಬಳ ಪಂಚಾಳಮಿಂಡಿಯವೆರ್ಗ್ಗಡೆ . . . ಶ್ರೀಮತು ಸೋಯಿ ದೇವರ್ಸರು (ಸೌಇಇ. IX-i, ೩೭೪-೫ ; 1265).

[<ಸಂ. ಪಾಂಚಾಲ. / ಹಿಂ. ಪಂಚಾಲ ; ಮರಾ. ಪಂಚಾಳ]

ಪಂಚಾಲಿಕೆ (ನಾ). ಬೊಂಬೆ ; ಪುತ್ತಳಿ : ಸಿಂಗರದಿಂಗದಿರೆನೆ ಮಿಗೆ ಪಸದನದಿಂಗಡಲೆನೆ ಕೈಮಾಟವ[ದ]ಮಂಗಲ ಪಂಚಾವಿ[ಲಿ]ಕೆಯೆನೆ ಸಂಕಿಲೆ ಕಂಗೊಳಿಸಿದಳತಿಶಯಮಾಗಿ (ತ್ರಿಭುತಿ. ೨೨-೬೦). 'ಪಾಂಚಾಲಿಕೆ' ಪರಾ. [ಸಂ. ಪಂಚಾಲಿಕಾ]

ಪಂಚಾವಯವ (ನಾ). ೧. ಮಸ್ತಕ, ಮುಖ, ವಕ್ಷ, ಪೃಷ್ಠ ಮತ್ತು ಹೃದಯಗಳೆಂಬ ದೇಹದ ಐದು ಭಾಗಗಳು,—ಅಂಗಗಳು : ಪಂಚಬಾಣಂಗಳಿಗೆ ಲಕ್ಷ್ಯಸ್ಥಾನಮಾದ ಮಸ್ತಕ ಮುಖ ವಕ್ಷಸ್ಸು ಪೃಷ್ಠ ಹೃದಯವೆಂಬ ಪಂಚಾವಯವಗಳಿಂ (ವಿವೇಕ. ೨೩೦). ೨. [ವೀಶೈ] ಪರಮೇಶ್ವರನಿಗಿರುವ ಸತ್, ಚಿತ್, ಆನಂದ, ನಿತ್ಯ ಮತ್ತು ಪರಿಪೂರ್ಣಗಳೆಂಬ ಐದು ಧರ್ಮಗಳು : ಇವೆ ಕಣಾ ಪಂಚಾವಯವವೆಂಬುವಾದ್ಯರಿಂದವೆ ಕೇಳ್ದು ಪೇಳ್ದೆವು (ಮನೋವಿ. ೨-೪೪) ; ಬ್ರಹ್ಮಕ್ಕೆ ಸ್ಪಂದೆ, ನಾದ, ಕಳೆ, ರಸ, ಬಿಂದುವೆಂಬ ಪಂಚಾವಯವವಾಗಿರ್ಪುವು (ಮನೋವಿ. ೨-೪೪ ಟೀಕು). ೩. [ನ್ಯಾಯ] ಪರಸ್ಪರಾಭಿಪ್ರಾಯಗಳನ್ನು ಬೋಧಿಸಿ ಸಾಧಿಸುವ ನ್ಯಾಯ ವಾಕ್ಯದಲ್ಲಿ ಸೇರಿರುವ ಪ್ರತಿಜ್ಞಾ, ಹೇತು, ಉದಾಹರಣ, ಉಪನಯ ಮತ್ತು ನಿಗಮನಗಳೆಂಬ ಐದು ಚಿಕ್ಕವಾಕ್ಯಗಳು : ತಾರ್ಕಿಕರು ಪಂಚಾವಯವಗಳನ್ನು ಉಪಯೋಗಿಸುವರು. ಪ್ರತಿಜ್ಞಾ, ಹೇತು, ಉದಾಹರಣ, ಉಪನಯ, ನಿಗಮನವೆಂದು ಅವಕ್ಕೆ ಹೆಸರುಗಳು (ಹಿಂದಸಾ. ೧೪೨). [ಪಂಚ$_2$ + ಅವಯವ]

ಪಂಚಾವರಣ (ನಾ). ೧. ಐದು ಸುತ್ತಿನ ಮರೆ,—ಆಚ್ಛಾದನೆ : ಖರಕಿರಣ ಮುಖ್ಯಗ್ರಹಂಗಳು ಗರುಡಕಿನ್ನರಸಿದ್ಧವಿದ್ಯಾಧರರು ಪಂಚಾವರಣರಾಗಿಯಲರ್ದು ಕೀರ್ತಿಸಲು (ಬಸಪು. ೨೫-೪೬) ; ಹರಿ ಮುಖಾಮರ ಪರಿಚರರು ಪಂಚಾವರಣದಲಿವೆರಸಿ ಭಜಿಸುವ ಪಶುಗಳು (ಬಸಪು. ೫೪-೧೮). ೨. [ವೇದಾಂತ] ಐದು ಬಗೆಯ ಆವರಣಗಳು ; ℙ "ಆವರಣ-೫ : ಮಾಯೆ, ಅವಿದ್ಯೆ, ಭ್ರಾಂತಿ, ಅಜ್ಞಾನ, ಸಂವೃತಿ (ಹಿಂದಸಾ. ೩೦)" (ಶ್ರೀವತ್ಸ. ೫೭). [ಪಂಚ$_2$ + ಆವರಣ]

ಪಂಚಾವಸ್ಥೆ (ನಾ). ಐದು ಅವಸ್ಥೆಗಳು, — ಹಂತಗಳು ; ℙ "ಅವಸ್ಥಾ—೫ : (ಅ) ಆತ್ಮನ : ಅವಸ್ಥಾ—೪ (ಅ) + ಉನ್ಮನೀ ಅಥವಾ ತುರ್ಯಾತೀತ (ವಿಚಿಂ. ೧.೫೮). (ಆ) ಕಾಮದ : ಇಷು—೫ (ಆ). (ಇ) ಜೀವಿಗಳ : ಬದ್ಧ, ಕೇವಲ, ಮುಮುಕ್ಷು, ಮುಕ್ತ, ನಿತ್ಯ. (ಈ) ದ್ರವ್ಯದ : ರಸ, ಗುಣ, ವೀರ್ಯ, ವಿಪಾಕ, ಪ್ರಭಾವ (ವಿದ್ಯಾಕ. ೩೮). (ಉ) ಪಂಚಭೂತಗಳ : ನೋ. ಭೂತಗಳು— ೫.(ಊ) ವಯೋಧರ್ಮದ: ಶೈಶವ, ಬಾಲ್ಯ, ಯೌವನ, ಪ್ರೌಢತ್ವ, ವಾರ್ಧಕ್ಯ(ಕಿ).(ಋ) ನಾಟ್ಯಶಾಸ್ತ್ರದ : ಆರಂಭ, ಯತ್ನ, ಪ್ರಾಪ್ತ್ಯಾಶೆ, ನಿಯತಾಪ್ತಿ, ಫಲಾಗಮ (ದಶರೂ. ೧೫). (ಋ) ಸಾಧಕನ : ಶ್ರವಣ, ವರಣ, ಸ್ಮರಣ, ಆಪನ, ಪ್ರಾಪನ (ವಿದ್ಯಾಕ. ೮೩). (ಎ) ಸ್ತ್ರೀಜೀವನದ : ಕನ್ಯಾ, ಭಗಿನೀ, ಪತ್ನೀ, ಮಾತಾ, ಮಾತಾಮಹಿ (ಪಿತಾಮಹಿ) (ಸಂಜ್ಞಾ. ೨೨; ಸಂ. ೭೪)." (ಶ್ರೀವತ್ಸ. ೪೨) : ಮತ್ತಂ ಜಾಗರಣಂ ಸ್ವಪ್ನ ಸುಷುಪ್ತಿ ತೂರ್ಯ ತುರ್ಯಾತೀತಗಳೆಂಬವೇ ಪಂಚಾವಸ್ಥೆಗಳು (ಗಗತಾ. ೧-೪). 'ಪಂಚಾವಸ್ಥೆಗೆದಱು' ಪರಾ.

[ಪಂಚ$_2$ + ಅವಸ್ಥೆ]

ಪಂಚಾವಸ್ಥೆಗೆದಱು (ಕ್ರಿ). ಪಂಚಭೂತಾವಸ್ಥೆಯನ್ನು ಹರಡು,—ಪ್ರಸರಿಸು ; ಪಂಚತ್ವವನ್ನುಂಟುಮಾಡು ; ಮರಣವನ್ನುಂಟುಮಾಡು : ಪಾಂಚಾಳನುಮಂ ಪಂಚಾವಸ್ಥೆಗೆದಱಲುಂ ಕರಂ ಚೆನ್ನೆಯರಾಗಿಯುಂ . . . ಬಲ್ಲವರಾಗಿ (ಶಾಂತಿಪು. ೮-೭೨ ವ).

[ಪಂಚಾವಸ್ಥೆ + ಕೆದಱು$_1$ (<ಕೆದಱ್$_1$)]

ಪಂಚಾಶ್ಚರ್ಯ (ನಾ). [ಜೈನ] ಉತ್ತಮಪಾತ್ರಕ್ಕೆ ಆಹಾರದಾನ ಮಾಡಿದಾಗ ಉಂಟಾಗುವ ಐದು ಬಗೆಯ ಅತಿಮಾನುಷವಾದ ಸೋಜಿಗಗಳು; ℙ ದೇವದುಂದುಭಿ ಮೊಳಗುವುದು, ಹೂವಿನ ಮಳೆ ಕರೆಯುವುದು, ಚಿನ್ನದ ಮಳೆ ಸುರಿಯುವುದು, ಕಮ್ಮನೆಯ ಮೆಲುಗಾಳಿ ಬೀಸುವುದು ಮತ್ತು ದೇವತೆಗಳು ಪ್ರಶಂಸೆ ಮಾಡುವುದು ಎಂಬ ಐದು ಆಶ್ಚರ್ಯಗಳು : ಸುರತೂರ್ಯಧ್ವಾನಮೆಯ್ತರ್ಪಲರ ಸರಿ ಪೊದಟ್ಟೆರ್ದ ರೈಧಾರೆ ದೇವೇಂದ್ರರಹೋದಾನಪ್ರಸಿದ್ಧಧ್ವನಿ ಸುರಭಿಸಮೀರಪ್ರಚಾರಂ ಜಗಕ್ಕಚ್ಚರಿ ಪಂಚಾಶ್ಚರ್ಯಮೆತ್ತಂ ನೆಗಟ್ (ಆದಿಪು. ೪-೯೮) ; ಏನೆಸೆದುದೊ ರೈವೃಷ್ಟಿ ಹಿಮಾನಿಲನಳಿಮಿಲಿತ ಕುಸುಮವರ್ಷಂ ಸುರಭೇರೀನಿನದಂ ದಿವಿಜರಹೋದಾನಶ್ರುತಿ ನೆಗಟ್ ನೆಗಟ್ದ ಪಂಚಾಶ್ಚರ್ಯಂ (ಪಂಠಾಮಾ. ೯-೨) ; ಆ ರಾಜಭವನದೊಳ್ ವಸುಧಾರೆಯ ತಣ್ಣೆಲರ ಪುಷ್ಪವೃಷ್ಟಿಯ ಸುರಭೇರೀರವದ ಪೊಗಟ್ಟ ದೇವರಹೋರಭಸದ ಪುದುವಿನಾಯ್ತು ಪಂಚಾಶ್ಚರ್ಯಂ (ಪುಷ್ಪಪು. ೧೪-೧೧). [ಪಂಚ$_2$ + ಆಶ್ಚರ್ಯ]

ಪಂಚಾಸ್ತಿಕಾಯ (ನಾ). ೧. [ಜೈನ] ಬಹುದೇಶವ್ಯಾಪಿಯಾದ ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು ಆಕಾಶಗಳೆಂಬ ಐದು ಪದಾರ್ಥಗಳು : ಜೀವಾಜೀವ . . . ಪಂಚಾಸ್ತಿಕಾಯ ಷಡ್ದ್ರವ್ಯಂಗಳು ಮೆಂಬಿವಱೊಳಾದಮಾನುಮಱಿತಮುಂ . . . ಗುಣಂಗಳುಮನಱಿಧು (ವಡ್ಡಾರಾ. ೬-೧೯) ; ಷಡ್ದ್ರವ್ಯಮೆನಿಕುಮವೆ ಮತ್ತಂ ಕಾಲಮದಿಲ್ಲದಂದು ಪರಮಾಗಮದೊಳ್ ಪಂಚಾಸ್ತಿಕಾಯಮೆನಿಕುಮಮೋಘಂ (ಚಂದ್ರಪು. ೧೬-೨೦) ; ಭೂತಹಿತಜಿನರ್ . . . ಅವರ್ ಸದ್ಧರ್ಮ ಸ್ವರೂಪಮಂ . . . ಪಂಚಾಸ್ತಿಕಾಯ ಷಡ್ದ್ರವ್ಯ ಸಪ್ತತತ್ವ ನವಪದಾರ್ಥ ಸ ರೂಪಮಂ ನಿರೂಪಿಸುವುದುಂ (ಪುಷ್ಪಪು. ೯-೬ ವ). 'ಅಸ್ತಿಕಾಯ' ಪರಾ. ೨. ಕುಂದಕುಂದಾಚಾರ್ಯರ ಗ್ರಂಥದ ಹೆಸರು.

[ಪಂಚ$_2$ + ಅಸ್ತಿಕಾಯ]

ಪಂಚಾಸ್ತ್ರ (ನಾ). ಪಂಚಾಯುಧ; ಮನ್ಮಥ: ಪಂಚಾಸ್ತ್ರಹೃದ್ಭೀಕರೀ . . . ಮಹಾಸುಖಕರೀ ಪಂಚಾಕ್ಷರೀ ಪಾತುಮಃ (ರಾಜಶೇ. ೪-೧೦೩). [ಪಂಚ್+ಅಸ್ತ್ರ]

ಪಂಚಾಸ್ಯ (ನಾ). ಸಿಂಹ; ಪಂಚಾನನ: ವೈರಿಭೂಭೃತ್ಕದವನ್ಮಾತಂಗ ಕುಂಭಸ್ಥಳದಳನ[ಖ]ರೋಗ್ರಾಸಿ ಪಂಚಾಸ್ಯಧೈರ್ಯಂ . . . ಪರಿಗನರೆ ಬಿಗುರ್ತಾಂಪನಂತಾವಗಂಡಂ (ಪಂಪಭಾ. ೬-೭೭); ಸಮಸ್ತರಿಪುಸ್ಯಪ ಕುಂಭಿಕುಂಭದಳನ ಪಞ್ಚಾಸ್ಯ ಸಮುದಿತ ಶ್ರೀಮ××ಳವಿಮುಕ್ತ ಜೋಳಭೂಪಾಳ (ಎಕ. III, ಮಂಡ್ಯ, ೭೮-೧; 1042); ಹರಿಶ್ಚಂದ್ರ ಭೂವರನಾಪುರಕ್ಕೊಡೆಯನರಿಶರಧಿವಡಬನಾರಾತಿಗಜಪಂಚಾಸ್ಯನು(ಪಚಕಾ. ೧-೪೦); ಕುರುಕುಲಗಜಕೆ ಪಂಚಾಸ್ಯ ಜೀಯ ಬಿನ್ನಹ . . . ಅಖಿಳಕೌರವ ರಾಯದಳವನು ಗೆಲಿದು ಉತ್ತರ ತುಜುವ ಮರೆಬಿದ (ಕುವ್ಯಾವಿ. ೯-೪). [ಪಂಚ್+ಅಸ್ಯ]

ಪಂಚಾಸ್ಯವಾಹಿನಿ (ನಾ). ಸಿಂಹವನ್ನು ವಾಹನವಾಗಿ ಉಳ್ಳವಳು; ಸಿಂಹವಾಹಿನಿ; ದುರ್ಗೆ; ಚಾಮುಂಡಿ: ಪಂಚಾಸ್ಯವಾಹಿನಿಯು ವಾಮಪಾರ್ಶ್ವದಿಯಮರಧುನಿಯುಂಡುಪಮೌಳಿ ಮೃಡನೇ (ನಪಪೋ. ೧-೬). [ಸಂ. ಪಂಚಾಸ್ಯವಾಹಿನೀ]

ಪಂಚಾಸ್ರವ (ನಾ). ಐದು ಬಗೆಯ ಆಸ್ರವಗಳು: ಚಾರಿತ್ರವಂತನೆಂಬೊಂ . . . ನಿರುದ್ಧ ಪಂಚಾಸ್ರವನುಂ ಪಟ್ಟಷಾಯ ಸಂಯತನುಂ . . . ರತ್ನಭೂಷಣನುಮಕ್ಕುಂ (ಚಾವುಂಪು. ೬). ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರ, ಮೋಕ್ಷವೆಂಬ ಜೈನ ಸಿದ್ಧಾಂತದಲ್ಲಿ ಹೇಳಿರುವ ಸಪ್ತತತ್ತ್ವಗಳಲ್ಲಿ ಆಸ್ರವವು ಮೂರನೆಯದು. ಜೀವನಿಗೆ ಶುಭಾಶುಭರೂಪವಾದ ಕರ್ಮವನ್ನು ಗಂಟುಹಾಕುವುದೇ ಆಸ್ರವ. ಒಟ್ಟನಲ್ಲಿ ಮನಸ್ಸು, ವಚನ, ಕಾಯಗಳ ಕ್ರಿಯೆಯೇ ಆಸ್ರವವೆನಿಸುವುದು. ಇದರಲ್ಲಿ ಅನೇಕ ಭೇದಗಳಿವೆ. ಮುಖ್ಯವಾಗಿ ಇಂದ್ರಿಯ, ಕಷಾಯ, ಅವ್ರತ, ಕ್ರಿಯೆಗಳ ಮೂಲಕ ಉಂಟಾಗುವ ಆಸ್ರವಗಳು ಒಟ್ಟು ಸೇರಿದರೆ ಇಂದ್ರಿಯ ಸಂಬಂಧದಿಂದ ೫, ಕಷಾಯದಿಂದ ೪, ಅವ್ರತದಿಂದ ೫, ಕ್ರಿಯೆಯಿಂದ ೨೫—ಹೀಗೆ ಒಟ್ಟು ೪೯ ಭೇದಗಳಾಗುತ್ತವೆ. ಆದರೂ 'ಚಾವುಂಪು:' ಪ್ರಯೋಗದಲ್ಲಿ ಪಂಚಾಸ್ರವವೆಂದು ಮೊದಲಛೆಯದಾದ ಇಂದ್ರಿಯಗಳ ಸಂಬಂಧದ ಐದು ಆಸ್ರವಗಳನ್ನು ಮಾತ್ರ ಮುಖ್ಯವಾಗಿ ಪರಿಗಣಿಸಿ ಹೇಳಿದೆ. [ಪಂಚ್+ಆಸ್ರವ]

ಪಂಚಾಹಿಕಜ್ವರ (ನಾ). ಐದು ದಿನಕ್ಕೊಮ್ಮೆ ಬರುವ ಜ್ವರ: ಕಳ್ಳಂಗಡಲೆ, ಬೋಳಂಗಡಲೆ . . . ಇವುಗಳನ್ನು ಸಮಭಾಗವಾಗಿ ಕಷಾಯವಿಕ್ಕಿ ಕೊಡಲು ಪಂಚಾಹಿಕಜ್ವರ ಗುಣಮುಕ್ಕುಂ (ಸಳವ್ಯ. ೧೦೬). [ಪಂಚ್+ಅಹಿಕ+ಜ್ವರ]

ಪಂಚಾಳ 'ಪಂಚಾಲ' ನೋ.

ಪಂಚಾಳವಳಕೆ (ನಾ). ಪಂಚಾಳರು ಕೊಡಬೇಕಾದ ತೆರಿಗೆ: ಮುನೆದೆಱೆ ಮಗ್ಗದೆಱೆರ××ಪೆಱೆ ಪಂಚಾಳವಳಕೆ ಕಟುಗೂಳು . . . ಕಾನಕೆ ಕಿರುಕುಳ ಏನು ಪದಿಕೆಗಳನೂ ಮುಂದೆ ಹುಟುವ (ಎಕ.IX(೩), ಬೆಂಗಳೂ. ೧೬೯-೨; 1329). [ಪಂಚಾಳ (<ಪಂಚಾಲ)+ಬಳಕೆ (<ಬಟಕೆ)]

ಪಂಚಾಳಿ, (ನಾ). ಬಹಳ ಮಾತನಾಡುವವಳು: "ಮಾತುಗಂಟೆ" (ಚಾನಕೋ. ೧೪). [←ತುಳು. ಪಂಚಾಳಿ. / ಮರಾ. ಪಚಾಲ, ಪಚಾಳ]

ಪಂಚಾಳಿ, (ನಾ). ಒಂದು ಬಗೆಯ ವಾದ್ಯ: ಕಂಚಿನ ಜೌಡುಕ ವಿಂಚುವ ಜಾಂಗೂಟ ಪಂಚಾಳಿ ಕೋಟಿ ಶಬುದವ ಎಲ್ಲವ್ವ ಕೆಂಚ ಜೋಗಾಡ ಬಂದಾಳ (ಕನ್ನಜಾ. ೧೩). [?]

ಪಂಚಿ, ಹಂಚಿ (ನಾ). ಪಗಡೆ ಆಟದಲ್ಲಿ ಐದರ ಗರ: ಬೇಡ ಜೌಳದ ಮಾತು ನಿನಗೆಂದು . . . ಪಂಚೇಂದ್ರಿಯಕೆ ಲಿಂಗಪ್ರಸಾದವನು ಕೂಡಿ ಪಂಚಳ್ಕುವ ತೆಜದೊಳನುಗೂಡಿ ಪಂಚಿಯನಿಕ್ಕಿ ಗುರ್ಜರ ನಾಡುವನು ತಾಂ ಜೌಳದುಗವಂ ಜೌಳದುಗಕಿಕ್ಕಿ (ಬಸಪು. ೪೩-೬); ಪಂಚೆ[ಚಿ]ಯಿದ್ದಾಗ ಜೌಳ ದುಗ ನಟ್ಟು . . . ಈರ್ಕೈದಿನತುಮಂ ಬೇಗದಿಂ ಹಾಯಿಳು (ಕುಮುರಾ. ೧೩-೫೯); ತಡೆಯದೆ ಪಂಚಿಟ್ಟಾಡುವ ಪಂಚಿಯ ಕಡುಸಿಂ ನಾಲ್ಕುಂ ಕರಣದ ಜೀವದ ಕಡೆಯೊಳ್ ಶಂಕರನಂ ನಿಲಿಸುತ್ತಾಡುವ ಜೌಹಂಚಿಯನು (ಉದ್ಭವೇ. ೩-೧೨). **ಹಂಚಿ**, : ವನಿತೆ ಮೆಚ್ಚುಗು ಹಂಚಿಹಾಯ್ಕಿದಡೆನುತ ಚೌಹಂಚಿಯನೊಸೆದು ತಾನನಳ ನಾಡುವನೀ ಪರಿಯ ನೆತ್ತವನಿಳೆಯೊಳು (ಬಸಪು. ೪೩-೪). [<ಪಂಚ್?]

ಪಂಚಿ, (ನಾ). ಹರಟೆ; ವ್ಯರ್ಥವಾದ ಮಾತು: ಇರ್ದಿ ಹೋಗು. ಇಲ್ಲದ್ದೆ ಪಂಚಿ ಉಚ್ಚಬೇಡ (ನಡೆದಾ. I, ೩೭೦). [←ಮರಾ. ಪಂಚೀ = ವಿಸ್ತೃತ ಭಾಷಣ]

ಪಂಚಿ, (ನಾ). ಕರುಳು (?): ಎಳ್ಕಲಂ ಪುಯ್ದು ಪಂಚಿಯಿಂದೆ ಪುಲಿ ವಿಗವನಗಿದುಗಿದ ಪಿಶಿತವಿದೆ (ವಕೋಪು. ೧೦-೩೪). 'ಪಚ್ಚಿ' ಪರಾ. [<ಪಚ್ಚಿ ?]

ಪಂಚಿಕರಣ (ನಾ). = ಪಂಚೀಕರಣ, ೨.: ಪಂಚಿಕರಣವನಿಂತು ವಿವರದಿ . . . ಪೇಳಿದೆನು ತಿಳಿಯೈಯೆಂದ ಸಾಂಬಶಿವ (ಜ್ಞಾನಸಿಂ. ೪-೧೧೯). [<ಸಂ. ಪಂಚೀಕರಣ]

ಪಂಚಿಕೆ (ನಾ). = ಪಂಜಿಕೆ ೨: ಅಕೃತಿಗೆ ಪಂಚಿಕೆವೇಟ್ಪುದದರ್ಕೆ ಟಿಪ್ಪಣಂಬೇಟ್ಪುದು ಟೀಕುವೇಟ್ಪುದೆನೆ ಪೇಟ್ದವನುಂ ಕವಿಯೆಂಬ ಲಿಕ್ಕಮೇ (ಕಾವ್ಯಾವ. ೨೯೯); ಮನುಜರಿತಕ್ಕೆ ವೃತ್ತಿ ನೃಪನೀತಿಗೆ ಪಂಚಿಕೆ ಲೌಕಿಕಪ್ರವರ್ತನೆಗಳ ವಾರ್ತಿಕಂ . . . ಎಂದೊಡಾ ಜನಪತಿ ರತ್ನಶೇಖರನ ರಾಜಗುಣಂ ಬುಧಸೇವ್ಯಮೆನ್ನಿರೇ (ಅನಂಪು. ೩-೨೧); ನಿನ್ನ ಪದ್ಯಕ್ಕೆ ಸದ್ಯಕ್ಕೆ ಟೀಕು ಟಿಪ್ಪಣ ಪಂಚಿಕೆ ಎಲ್ಲವೂ ಬೇಕು (ಪಾಹವಿ. ೭೦). [ಸಂ. ಪಂಚಿಕಾ]

ಪಂಚೀಕರಣ, (ನಾ). ೧. ಐದನ್ನಾಗಿ ಮಾಡುವುದು; ಐದೈದನ್ನು ಕೂಡಿಸುವುದು. ೨. [ವೇದಾಂತ] ಸೂಕ್ಷ್ಮವಾದ ಆಕಾಶ ಮೊದಲಾದ ತನ್ಮಾತ್ರಗಳನ್ನು ಐದೈದರ ಬೆರಕೆಯಿಂದ ಸ್ಥೂಲವನ್ನಾಗಿ ಮಾಡುವುದು; ಪ್ರತ್ಯೇಕವಾದ ಸೂಕ್ಷ್ಮಭೂತಗಳಲ್ಲಿ ಪಂಚ ಭೂತಗಳ ಅಂಶವನ್ನೂ ಸೇರಿಸಿ ಸ್ಥೂಲಭೂತವನ್ನಾಗಿ ಮಾಡುವುದು: 'ಆ ಪಂಚಭೂತಂಗಳೇ ಪಂಚೀಕರಣವನೆಯ್ದಿ ಅತ್ಮಂಗೆ ಅಂಗವಾಯಿತ್ತು (ಮಹಾದೇ. ಬ. ೧೦೩-೨೩೫); ಮಗನೆ ಪಂಚೀಕರಣ ಭಾಗದ ಬಗೆಯ ನಿರ್ಣಯಿಸಿದನು (ಗಗತಾ. ೬ ಸೂಚನೆ); ಪಂಚೀಕರಣವೆಂದರೆ ಒಂದು ಭೂತದ ಅರ್ಧಭಾಗವೂ ಇತರ ಭೂತಗಳ ಅಂಶಗಳಾದ ಅರ್ಧ ಭಾಗವೂ ಸೇರಿ, ಶುದ್ಧಚಿನ್ನ ತಾಮ್ರದೊಡನೆ ಸೇರಿ ಕೆಲಸಕ್ಕೆ ಉಪಯೋಗವಾಗುವಂತೆ, ಬ್ರಹ್ಮಾಂಡಸೃಷ್ಟಿಗೆ ಉಪಯೋಗವಾಗಿರುವುದು (ಹಿಂದಸಾ. ೧೯೬). ೩. [ವೀಶೈ] ವಿಶ್ಲಾರ್ಪಣ, ಪಟ್ಸ್ಥಲ, ಅಷ್ಟಾವರಣ, ಲಿಂಗ ಮತ್ತು ಅಂಗ ಸಾಮರಸ್ಯ ಇವುಗಳ ಸಮೀಕರಣ: ವಿಶ್ಲಾರ್ಪಣ, ಪಟ್ಸ್ಥಲ, ಅಷ್ಟಾವರಣ, ಲಿಂಗಾಂಗಸಾಮರಸ್ಯ ಇವು ಸೇರಿದರೆ ಪಂಚೀಕರಣಗಳು (ಶರಸಾ. ೨೪-೬). [ಸಂ.]

ಪಂಚೀಕರಣ, (ನಾ). ವಿಸ್ತಾರಗೊಳಿಸುವಿಕೆ; ದೊಡ್ಡದು ಮಾಡುವಿಕೆ: 'ಪಂಚೀಕರಿಸು,' ಪರಾ. [ಸಂ.]

ಪಂಚೀಕರಿಸು, (ಕ್ರಿ). [ವೀಶೈ] ಪಂಚೀಕರಣಮಾಡು: ಸದ್ಯೋಜಾತಾದಿಪಂಚಾನನದೆ ಪಡೆದು ಮಹ್ಯಾದಿಭೂತಂಗಳಂ ತಳ್ತು ದ್ಯೋಗಂದೆತ್ತು ಪಂಚೀಕರಿಸಿ ಬೆರಸುತಯ್ದುಯ್ದು ಭೂತಂಗಳಿಂದಂ (ಶಬಶಂ. ೫-೩೧);

ಅನಂತರದಲ್ಲಿ ಪೂರ್ವೋಕ್ತಮಾದ ಪಂಚಭೂತಂಗಳ ಪಂಚೀಕರಿಸುವ ಕ್ರಮವೆಂತೆಂದರೆ ಒಂದೊಂದು ಭೂತವನ್ನು ಯೆರಡೆರಡು ಭಾಗವಂ ಮಾಡಿ ಅರ್ಧಾಂಶದಲ್ಲಿ ನಾಲ್ಕು ನಾಲ್ಕು ಭಾಗೆಯಂ ಮಾಡಿ (ನಾನಾಗು.೧೧-೧೬).

[ಪಂಚೀಕರಣ$_1$ + -ಇಸು$_3$]

ಪಂಚೀಕರಿಸು$_2$ (ಕ್ರಿ). ವಿಸ್ತಾರವಾಗು ; ದೊಡ್ಡದಾಗು : ಮತ್ತಾ ಕಲಲವೈದುದಿನಕ್ಕೆ ಬಬ್ಬುಳಿಕೆಯಹುದು . . . ಇಪ್ಪತ್ತೈದು ದಿನಕ್ಕಲ್ಲಿ ಪಂಚೀಕರಿಸಿ ಮೈದೋರ್ಪುದು[ಸಾಶಾಂ. ಪಂಚಾಂಕುರಸೀಮೆ ದೋರ್ಪುದು] (ವಿದೇಕ. ೩೧೫). [ಪಂಚೀಕರಣ$_2$ + -ಇಸು$_3$]

ಪಂಚೀಕೃತ (ಗು). ೧. ಐದು ಭಾಗವಾದ ; ಪಂಚೀಕರಣವನ್ನು ಹೊಂದಿದ : ಮತ್ತಂ ವಾಯ್ವಂಶಮರ್ಥಮುಂ ಮಿಕ್ಕ ನಾಲ್ಕುಂ ಭೂತಂಗಳಪ್ಪಮಾಂಶಂಗಳ್ ನಾಲ್ಕುಂ ಕೂಡಿ ಪಂಚೀಕೃತವಾಯುವೆನಿಕ್ಕುಂ (ಚಿಕಬಿ. ೨೬) ; ಈ ಪಂಚೀಕೃತ ಭೂತ ಸಮುದ್ಭವರೋಗಂಗಳಾದರೋ ಲವಲವಿಕೆಯಂ ಅನ್ಯಥಾಜ್ಞಾನಮಂ ಸರ್ವತ್ರಾನವಸ್ಥಿತಿಯಂ ಕೊಡುವವು (ಬಾಹಟೀ. ೧-೧ ಪ) ; ಪಂಚೀಕೃತ ಪಂಚಭೂತಗಳಿಂದ ಬ್ರಹ್ಮಾಂಡವೂ ಜರಾಯುಜ, ಅಂಡಜ, ಸ್ವೇದಜ, ಉದ್ಭಿಜಗಳೆಂಬ ನಾಲ್ಕುವಿಧ ಸ್ಥೂಲಶರೀರಗಳೂ ಅವರವರ ಕರ್ಮಾಧೀನವಾಗಿ ಬರುವುವು (ಹಿಂದಸಾ. ೧೯೩). (ನಾ). ೨. ಐದು ಭಾಗವನ್ನು ಹೊಂದಿರುವುದು : ಪಂಚತತ್ತ್ವವೇ ಪಂಚವದನವಾಗಿ ಆ ಪಂಚವದನವೇ ಪಂಚೀಕೃತವನೆಯ್ದಿ ಜಗದಾದಿ ಸೃಷ್ಟಿಯನನುಮಾಡುವುದಕ್ಕೆ ಕರ್ತನಾದ ನಮ್ಮ ಬಸವಯ್ಯನು (ನೀಲಪ. ಕ. ೫-೯) ; ಪಂಚಭೂತಂಗಳು ಪಂಚೀಕೃತವಾಗಿ ವಂದೊಂದು ಭೂತಕ್ಕೆ ಐದು ಐದರ ಲೆಕ್ಕದಿಂದ ಇಪ್ಪತ್ತೈದು ತತ್ವಗಳುಂ ಪುಟ್ಟಿದವು (ತತ್ವಚಿಂ. ೧-೩). [ಸಂ.]

ಪಂಚೀಕೃತಿ (ನಾ). = ಪಂಚೀಕರಣ ೧ : ಸಂಚಲವಿಲ್ಲದೆ ನಿರೀಕ್ಷಿಸಲು ಪಂಚ ಪಂಚೀಕೃತಿಯ ಪ್ರಪಂಚ ಪರಿಹಾರವಾಗಿ ನಿಷ್ಪ್ರಪಂಚ ನಿರ್ಲೇಪಕನಾದೆನು ಕಾಣಾ (ಸಿದ್ಧೇವ. ೩೩-೮೫) ; ಪಂಚಭೂತಗಳ ಪಂಚಾಕ್ಷರಿಯ ಪಂಚೀಕೃತಿಯ ಸಂಚಲ ತಿಳಿದು ಉಳಿದಿರ್ದರಿರವು ಪ್ರಪಂಚಿಗಳು ಬಯಸಲಹುದೇನು (ಗುರುಬೋ.೧-೫೨). [ಸಂ.]

ಪಂಚು$_1$ 'ಪಸು$_1$' ನೋ.

△ **ಪಂಚು$_2$** 'ಹೆಂಚು$_2$' ನೋ.

ಪಂಚು$_3$ (ನಾ). ಕಾಗದ ಮೊದಲಾದುವುಗಳಲ್ಲಿ ತೂತು ಕೊರೆಯುವ ಸಾಧನ : ಈ ಪಿಸ್ಟನ್‌ಗಳು ಪಂಚುಗಳಿರುವ ಪಂಚುಬಾರುಗಳನ್ನು ಮೇಲಕ್ಕೆತ್ತಿ ಕಾಗದದಲ್ಲಿ ಎರಡು ಅಥವಾ ಮೂರು ರಂಧ್ರಗಳನ್ನು ಮಾಡುತ್ತವೆ (ಕವಿಕೋ. I, ೧೯೪) ; ನಮ್ಮ ಕಚೇರಿಗಳಲ್ಲಿ ಕಾಗದಪತ್ರಗಳನ್ನು ಕಡತಗಳಲ್ಲಿ ಅಚ್ಚುಕಟ್ಟಾಗಿ ಇಡುವುದಕ್ಕೆ ಪಂಚುಗಳು ಇರುವುದರಿಂದ ಎಷ್ಟೋ ಸಹಾಯವಾಗಿದೆ (ರೂಡಿ).

[← ಇಂ. Punch]

ಪಂಚುಗೆ 'ಪಸುಗೆ' ನೋ.

ಪಂಚುಗೆಗೊಳ್ 'ಪಸುಗೆಗೊಳ್' ನೋ.

ಪಂಚೆ, ಪಂಚ$_1$, ಪಂಜಿ$_1$, ಪಂಜೆ$_1$ (ನಾ). ಗಂಡಸರು ಉಡುವ ಹಾಗೂ ಹೊದೆಯುವ ಬಟ್ಟೆ : "ಪಂಚೆಯೆಂದಱವೆ" (ಕಬ್ಬಿಕೈ.೫೩); "ಪಂಚೆಯೆನೆ ವಸ್ತ್ರಮಕ್ಕುಂ" (ಕಶರ. ೬೦) ; ರಂಗಣ್ಣ ಸರಿಗೆಯ ಪಂಚೆಯನ್ನು ಉಟ್ಟುಕೊಂಡು . . . ಪೇಟೆಯ ಕಡೆಗೆ ಹೊರಟಿದ್ದಾನೆ (ರಂಗಕ. ೨) ; ಬಾಳಾಜಿಯು ಒಂದು ಪಂಚೆಯನ್ನು ಉಟ್ಟು . . . ಕುರ್ಚಿಯ ಮೇಲೆ ಕುಳಿತಿದ್ದಾನೆ (ರೆಂಟರ. ೧). **ಪಂಚ$_1$** : ನಿಮ್ಮ ಹೆಗಲ ಮೇಲಿನ ಪಂಚವನ್ನು ಅಲ್ಲಿ ಹಾಸಿರಿ . . . ಅತಿಥಿ ತುಟಿ ಬಿಚ್ಚದೆ ಪಂಚವನ್ನು ಹಾಸಿದನು (ಕಂಬಹು. ೫೩). **ಪಂಜಿ$_1$** : ತಲೆಗೆ ಪಂಜೀ ಸುತ್ತಿಕೊಂಡು (ಮುಂಬಯಿ. ೪-೧೭೫) ; ವೆಂಕಟರಮಣ . . . ಉಟ್ಟ ಪಂಜೆಯ ತುದಿಯಿಂದ ಬಾಯಿ ಒರಸಿಕೊಂಡ (ಮೂರುದಾ. ೧೮೩). **ಪಂಜೆ$_1$** : ಗಂಡಸರು ಪಂಜೆ ಉಡುವರು (ಕಭಾಗ. ೮೩) ; ಉದ್ದವೂ ಅಗಲವೂ ಕಡಿಮೆಯಾಗಿ ಉರುಟುನೂಲು ಇದ್ದರೆ ಅವುಗಳಿಗೆ ಪಂಜೆಗಳೆನ್ನುತ್ತಾರೆ (ಮುಂಬಯಿ. ೩-೧೦೦) ; ಯಾರೊಡನೆಯೂ ಮಾತನಾಡದೆ ಪಂಜೆ ತೆಗೆದುಕೊಂಡು ಗೋಮತಿಯ ಕಡೆಗೆ ಹೊರಟರು (ಪ್ರೇಮಾಶ್ರ. ೧೮೫) ; ಕೆಳಗಿಟ್ಟ ಒದ್ದೆಯಾಗಿದ್ದ ಪಂಜೆಯನ್ನು ತಲೆಯ ಮೇಲೆ ಹೊತ್ತುಕೊಂಡರು (ಹೊಸಕ್ಷಿ. ೧೮೯).

[ದೇ.॥ತಮಿ. ಪಞ್ಚು = ಬಿಳಿಯ ಬಟ್ಟೆ, ಪಞ್ಚು = ಬಟ್ಟೆ ; ತೆಲು. ಪಂಚೆ = ಉಡುವ ಬಟ್ಟೆ./ಮರಾ. ಪಂಚಾ = ತುಂಡು ಧೋತ್ರ]

ಪಂಚೇಂದ್ರಿಯ (ನಾ). ೧. ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮಗಳೆಂಬ ಐದು ಬಾಹ್ಯೇಂದ್ರಿಯಗಳು : ಪಂಚೇಂದ್ರಿಯಗಳೊಳಗೆ ಒಂದಕ್ಕೆ ಪ್ರಿಯನಾದರೆ ಸಾಲದೆ (ಮಹಾದೇ. ಬ. ೫೨-೧೨೭) ; ಅರಿಷಡ್ವರ್ಗಮಂ ಬಿಟ್ಟು ಪಂಚೇಂದ್ರಿಯಮಂ ಒಟ್ಟೈಸಿ . . . ತಾಪತ್ರಯಮೆನ್ನೊಳ್ ಪಿಂಗಲಾಂ ದ್ವಂದ್ವಮನುಱದೆನಗಾದೈಕ್ಯದಿಂದೊಂದಿ ನಿಲ್ವೆಂ (ಜಗವಿ. ೯-೫೩) ; ಕೂಡಿರ್ದ ಪಂಚೇಂದ್ರಿಯಗಳೊಳು ನಾಲ್ಕಥಮವೊಂದಧಿಕವೇ ಎಂದರು (ಹಚಕಾ. ೭-೧೯) ; ಪಂಚೇಂದ್ರಿಯವಿಷಯವ್ಯಾಪಾರದಲ್ಲಿ ಲಂಪಟರಾದ ಮನುಜರು ಕೆಟ್ಟ ಕೇಡನೇನೆಂಬೆನಯ್ಯ (ಅಖಂಡೇ. ೭-೪). ೨. ಐದು ಇಂದ್ರಿಯಗಳನ್ನು ಉಳ್ಳ ಜೀವ : ಸ್ಪರ್ಶನ ರಸನ ಘ್ರಾಣ ಚಕ್ಷು ಶ್ರೋತ್ರೇಂದ್ರಿಯ ಸಮೇತಂಗಳಪ್ಪ ಮನುಷ್ಯಾದಿ ಪಂಚೇಂದ್ರಿಯಂಗಳುಮೆಂದಿಂತು ತ್ರಸಜೀವಂಗಳ್ ಚತುರ್ವಿಧಮಕ್ಕುಂ (ಅದಿಪು.೧೦-೬೩ ಪ) ; ಮನುಷ್ಯಂ ಮೊದಲಾದ ಪಂಚೇಂದ್ರಿಯಂಗಳ್ಗಂ (ತನೂಪ್ಯ ೪೩). [ಪಂಚ$_2$ + ಇಂದ್ರಿಯ]

ಪಂಚೇರು (ನಾ). ಐದು ಸೇರಿನ ತೂಕ ; ಐದು ಸೇರು : ಬಸವಶೆಟ್ಟ . . . ಹಸುಬೆಯ ಶೋಧನೆಯಂ ಕೊಟ್ಟು ಐದು ಪಂಚೇರು ತೂಕವಂ ಒಪ್ಪಿಸಿ ಒಳಯಿಂಕೆ ಬಿಡಿಸಿಕೊಂಡು ಬಂದು ಕೇರಿಕೇರಿಯೊಳುಗಂದಿಗೆ ಮಸಾಲೆದ್ರವ್ಯಗಳಂ ಮಾರುತಿರ್ದಪನು (ಶರಲೀ. ೧೯೧-೩ ಪ) ; ಪಕ್ಕಾ ಸೇರುಗಳಿಗೂ ಕಚ್ಚಾ ಸೇರುಗಳಿಗೂ ಕಚ್ಚಾ ಸೇರು, ಪಂಚೇರು, ಧಡೆಯ, ಮಣ ಮುಂತಾದುವುಗಳಿಂದ . . . ವ್ಯಾಪಾರ ಮಾಡುವಂತೆ ಕಟ್ಟಳೆ ಮಾಡಿಸಿದರು (ಚಾಮವಂ. ೧೧೯). [ಪಂಚ$_2$ + ಸೇರು$_2$]

ಪಂಚೇಷು (ನಾ). ೧. ಅರವಿಂದ, ಅಶೋಕ, ಚೂತ, ನವಮಲ್ಲಿಕಾ, ನೀಲೋತ್ಪಲವೆಂಬ ಐದು ಬಗೆಯ ಹೂವಿನ ಬಾಣಗಳು : ಪಂಚೇಷುವಿಂದಂತಗೆವುಗಿಲವೊಲಪ್ಪಂತು ಕಂದರ್ಪನೆಚ್ಚೆಚ್ಚೆಂತುಂ . . . ಕೋದಂಡದಿಂ ಪೊಯ್ದು (ಪಂರಾಮಾ. ೯-೮೪). ೨. ಐದು ಬಗೆಯ ಬಾಣಗಳುಳ್ಳವನು ; ಪಂಚಬಾಣ ; ಮನ್ಮಥ : "ಪ್ರದ್ಯುಮ್ನಃ, ಮಕರಧ್ವಜಃ . . . ಪಂಚೇಷುಃ . . . ಮನೋಭವಃ —ಈ ೨೮ ಕಾಮ(ದೇವ)ನ ಪೆಸರ್" (ಹಲಾಯು. ೭-೩೩) ; ನೀಂ ಚರಮದೇಹಧರನೈ ಪಂಚೇಷುವನಿಕ್ಕಿ ಗೆಲ್ದು ಪಂಚೇಂದ್ರಿಯಮಂ . . . ಪಡೆಯ ಪಂಚಮಗತಿಯಂ (ಅಜಿಪು. ೬-೭೨) ; ಕಾಮಾತುರವ್ರಾತಮಂ ಮೆಲ್ಲೆಲರಿಂ ಪಂಚೇಷು ಗೆಲ್ಲಂಬಡೆವಿನಮೆಸೆಗುಂ (ಜಗವಿ. ೨-೩೩) ; ವಿಜಿತಪಂಚೇಷುವೆನಲ್ . . . ಒರ್ವನುದಂಚತರಾಗದೆ ಸೌರಾಷ್ಟ್ರಪುರಕ್ಕೆಳ್ತಂದು (ಉದ್ಭದೇ. ೩-೨೩). [ಪಂಚ$_2$ + ಇಷು]

ಪಂಚೊಡೆ (ಕ್ರಿ). ಚೆದರು ; ಚೆಲ್ಲಾಪಿಲ್ಲಿಯಾಗು : ಹೊರಗಡೆಯಲ್ಲಿ ಜನಜಾತ್ರೆ ಪಂಚೊಡೆಯುತ್ತಿದ್ದಂತೆ ಜಯಘೋಷಧ್ವನಿಯೂ ಸಣ್ಣದಾಗುತ್ತಿರಲು ರಾಘವಾಂಕನು . . . ನಮಸ್ಕಾರ ಮಾಡಿ ನಿಲ್ಲುವನು (ತುಂಗಭ. ೪೧). [ಪಂಚು$_1$(<ಪಸು$_1$) + ಒಡೆ$_1$]

ಪಂಚೋಟಿಮರ (ನಾ). ಒಂದು ಬಗೆಯ ಮರ : ಪಂಚೋಟಿಮರ, ಹಡಸಾಲೆ, ಹಲುಸಲ್ಲೆ, ಪಲುಚೊಟ್ಟೆ, ನಾಟಗಟ್ಟಪರ್ಚ (ಮೈಔಗಿ. ೫೯-೧೧೮೪). [ಪಂಚೋಟ್ಟ$_0$ + ಮರ$_1$]

ಪಂಚೋಪಚಾರ (ನಾ). ೧. ಉಪಾಸ್ಯದೇವತೆಗೆ ಸಲ್ಲಿಸುವ ಗಂಧ, ಪುಷ್ಪ, ಧೂಪ, ದೀಪ ಮತ್ತು ನೈವೇದ್ಯಗಳೆಂಬ ಐದು ಬಗೆಯ ಸೇವೆ. ೨. ದೇವತಾರ್ಚನೆಯಲ್ಲಿ ಆಹ್ವಾನ, ಸ್ಥಾಪನ, ದೇವತಾ ಸನ್ನಿಧಿಕರಣ, ಪುಷ್ಪಾರ್ಚನ ಮತ್ತು ವಿಸರ್ಜನವೆಂಬ ಐದು ಹಂತಗಳು : ಪಂಚೋಪಚಾರವಿಧಿನಾ–ಆಹ್ವಾನ, ಸ್ಥಾಪನ, ಸನ್ನಿಧೀಕರಣ, ಅರ್ಚನೆ, ವಿಸರ್ಜನೆಗಳೆಂಬ ಪಂಚೋಪಚಾರವಿಧಾನದಿಂ (ಪ್ರತಿಷ್ಠಾ. ೧-೩). [ಪಂಚ$_2$ + ಉಪಚಾರ]

ಪಂಚೋಪಚಾರಪೂಜೆ (ನಾ). ಐದು ಬಗೆಯ ಉಪಚಾರದಿಂದ ಕೂಡಿದ ಪೂಜೆ : ಸುಧಾಕರ್ಮ[ದುಪ]ಭೋಗಕ್ಕಂ ಪಂಚೋಪಚಾರ ಪೂಜೆಗಂ ಪರಮೇಸ್ವರದತ್ತಿಯಾಗಿ (ಕಇಅ. ೧೦೩-೮-೨೨ ; 1076). [ಪಂಚೋಪಚಾರ + ಪೂಜೆ]

ಪಂಚೋಪಸಾಧನ (ನಾ). ಮೋಕ್ಷಕ್ಕೆ ಸಹಾಯಕವಾದ ಉಪರತಿ, ತಿತಿಕ್ಷೆ, ಭಕ್ತಿ, ಸಮಾಧಾನ ಮತ್ತು ಮುಮುಕ್ಷುತ್ವಗಳೆಂಬ ಐದು ಸಹಕಾರಿ ಸಾಧನಗಳು : ಸಾಧನವು ಪಂಚೋಪಸಾಧನ ಅವಯವವು ಅದಕೆ ಸಾಧನಕೆ ಉಪಸಾಧನವನಾಸಾಧಿಸು (ಜ್ಞಾನಸಿಂ. ೧೦-೧೯). [ಪಂಚ$_2$ + ಉಪಸಾಧನ$_0$]

ಪಂಚೌದುಂಬರ (ನಾ). ಅತ್ತಿ, ಅರಳಿ, ಆಲ, ಗೋಣಿ ಮತ್ತು ಬಸರಿಗಳೆಂಬ ಐದು ಬಗೆಯ ಹಾಲುಮರಗಳು : ಪಂಚಪರಮೇಷ್ಠಿಗಳೊಳಂ . . . ಭಕ್ತಿಯುಕ್ತನುಂ ಸಂಸಾರಶರೀರಭೋಗವಿರಕ್ತನುಂ ಪಂಚೌದುಂಬರಸಪ್ತವ್ಯಸನವಿರಕ್ತನುಮಕ್ಕುಂ (ಪಸಾರ. ೨೯೪). [ಪಂಚ$_2$ + ಔದುಂಬರ]

ಪಂಜ$_1$ (ನಾ). = ಪಂಚ$_2$ ೧. : 'ಪಂಜಂಹಿಸ್ಸೆ' ಪರಾ. [←ಪಾರ. ಹಿಂ. ಮರಾ. ಪಂಜ./ಸಂ. ಪಂಚನ್]

ಪಂಜ$_2$ 'ಪಂಜಾ' ನೋ.

ಪಂಜಂಹಿಸ್ಸೆ (ನಾ). ಐದನೆಯ ಒಂದು ಭಾಗ : ಸಂಸ್ಥಾನದ ಸಿಬ್ಬಂದಿ ಮೊದಲಾದ ಬಾಬುಗಳ ಖರ್ಚು ಕಳೆದು ಉಳಿದ ಮೊಬಲಗಿನಲ್ಲಿ ಪಂಜಂಹಿಸ್ಸೆಯೂ . . . ಸಂದಾಯವಾಗಬೇಕೆಂದು ತೀರ್ಮಾನವಾಯಿತು (ಮಹಾಪಂ. II, ೯೮). [ಪಂಜ$_1$ + ಹಿಸ್ಸೆ]

ಪಂಜಮರೇಶಿಮೆ (ನಾ). ರೇಷ್ಮೆಯಲ್ಲಿ ಒಂದು ಬಗೆ ; ಕೀಳು ದರ್ಜೆಯ ರೇಷ್ಮೆ : ರೇಶಿಮೆ ಪೈಕಿ ಪಂಜಮರೇಶಿಮೆಯ ಮೇಲೆ ಇರುವ ಮಾರ್ಕವು ರೇಶಿಮೆಯ ಹೆಸರಿನ ಮೇಲಿಂದ ಆಗಿರುವದಿಲ್ಲ (ಮುಂಬಪ್ಯಾ. ೨೬ ಪ್ರಸ್ತಾವನೆ). [←ಮರಾ. ಪಂಜಮರೇಶಮಾ]

ಪಂಜರ$_1$ (ನಾ). ೧. ಹಕ್ಕಿಗಳನ್ನು ಅಥವಾ ಮೃಗಗಳನ್ನು ಕೂಡುವ ಸಾಧನ : ಪೊನ್ನ ಪಂಜರಮಂ ಪೊತ್ತಿರದೇಟ್ಟಂದಂ ಚಂಡಿಕೆವೆರಸಿದ ಚಂಡಾಲಬಾಲಕಂ ಮತ್ತೊರ್ವಂ (ಕಾದಂಪೂ. ೩೭) ; ಅಂಬರದೊಳಗಾಡುವ ಗಿಳಿ ಪಂಜರದೊಳಗಣ ಬೆಕ್ಕ ನುಂಗಿ ರಂಭೆಯ ತೋಳಿಂದಗಲಿತ್ತು ನೋಡಾ (ಅವಚಂ. ೧೦-೩೬) ; ಕುಮಾರನಂ . . . ಅಖಿಲವಿದ್ಯಾಚಾರ್ಯರಾ ಮುಂದಿಟ್ಟೊಡಗೊಂಡು ಬರ್ಪುದುಂ ಪಂಜರ ವಿಮುಕ್ತ ಕುಂಜರಾರಾತಿಯಂತೆ ಮಂಟಪದಿಂ ನೃಪನಿವಾಸಕ್ಕೆ ಬಂದು (ಪುಷ್ಪಪು. ೪-೭೦) ; ಗಿಳಿಯ ಪಂಜರ ಪಾರಿವಗಳ ಪೊಂಗೂಡು . . . ಸೂಳೆಗೇರಿಯ ಸಾಲಭವನದ ಮಳಿಗೆಗಳೊಳಗೆ ರಾಜಿಪುವು (ಕಂನವಿ. ೬-೯೩) ; ಅಂತು ಪಂಜರನೊಳಾನುಂ ಮಂಜರನೊಳಾನುಂ ಸಾವಕ್ಕೆ (ರಾಮಾಶ್ವ. ೨-೧೨) ; ಗಿಡಗನನ್ನು ಪಂಜರದಲ್ಲಿ ಕೂಡಿದರೆ ಸಲಾಕಿ ಚಿನ್ನವಾದರೇನು ? ಕಬ್ಬಿಣವಾದರೇನು ? ಅದು ಸಲಾಕಿಗಳನ್ನು ಕಡಿಯದೆ ಬಿಟ್ಟೀತೆ ? (ಆರ್ಯಕ. ೪೧) ; ಪಂಜರದಲ್ಲಿ ಕಾಗೆ ಇಟ್ಟರೆ ಪಂಚಮಸ್ವರ ಕೊಟ್ಟೀತೆ? (ಗಾದೆ). ೨. ರಾಣಿವಾಸದವರು ಪ್ರಯಾಣ ಮಾಡುವ ಪಲ್ಲಕ್ಕಿ, ಮೇನೆ ಮೊದಲಾದ ಯಾನಗಳಿಗೆ ಆಚ್ಛಾದಿಸುವ ಮುಸುಕು,—ಗೌಸು : ಪಲ್ಲ ಬೆಳಗು ಪಸರಿಸೆ ಪಂಜರದೊಳು ಪಲ್ಲವಾಧರದ ಕೆಂಪೆಸೆಯ ಪಲ್ಲಕ್ಕಿಯೊಳು ತೆರಳಿತು ಸಾವಿರ ಸರ್ವಪಲ್ಲಭೆಯರು ದಂಡಿನೊಳಗೆ(ಕುರಾಸಾಂ. ೪೧-೫೬). 'ಪಂಜರಿಸು' ಪರಾ. ೩. ಎಲುಬುಗೂಡು; ಅಸ್ಥಿಪಂಜರ. ೪. ನಲವತ್ತೈದು ಮಂತ್ರಸಾಧನಗಳಲ್ಲಿ ಒಂದು : ಮಂತ್ರಸಿದ್ಧಿಸೂಚಕಮಾದ ಮಾತೃಕಾಚಕ್ರ ಪಂಚಕೃತ್ಯ ಪಂಜರ ಮಾಲಿಕೆ ಮೂಲಿಕೆ ತಂತ್ರಬಲಿ ಆತ್ಮೈಕ್ಯಗಳೆಂಬ ಪಂಚಚತ್ವಾರಿಂಶನ್ಮಂತ್ರಸಾಧನಂಗಳೊಳು ಪ್ರಜ್ಞೆಗೊಂಡು (ವಿವೇಕ. ೮೦). ೫. [ಸಂಗೀತ]ಒಂದು ತಾಳದ ಹೆಸರು: 'ಪಂಜರಾಯತ' ಪರಾ. [ಸಂ.]

ಪಂಜರ$_2$ 'ಪಂಜಾ' ನೋ.

ಪಂಜರಂಬಡೆ (ಕ್ರಿ). ಪಂಜರವನ್ನು ಕಟ್ಟು,–ನಿರ್ಮಿಸು ; ಪಂಜರದಂತೆ ಸರಳು ಮೊದಲಾದುವನ್ನು ಜೋಡಿಸು : ಅಸ್ತ್ರಜಾಲದಿಂ ತಡೆಯದೆ ಪಂಜರಂಬಡೆದನಂದು ವಿಯತ್ತಳದೊಳ್ ಗುಣಾರ್ಣವಂ (ಪಂಪಭಾ. ೨-೭೬). [ಪಂಜರ$_1$ + ಪಡೆ$_1$]

ಪಂಜರವಳ್ಳಿ 'ಪಂಜುರ್ಲಿ' ನೋ.

ಪಂಜರಾಖೇಟ (ನಾ). ಮೀನು ಹಿಡಿಯಲು ಉಪಯೋಗಿಸುವ ಬಿದಿರುಕಡ್ಡಿ ಮೊದಲಾದುವುಗಳಿಂದ ಮಾಡಿರುವ ಬುಟ್ಟಿ ; ಕೂಳಿ. [ಸಂ.]

ಪಂಜರಾಯತ (ನಾ). [ಸಂಗೀತ] ಒಂದು ತಾಳದ ಹೆಸರು : ಸಂತತ ಘನರಕ್ತಿ ಪಂತು ಪಂಜರಾಯತ ದೇಶೀಯಾಹತ . . . ತಾರಸ್ವರ ಗರ್ಭಮಧುರ ಸಂಗೀತಶ್ರವಣಲೋಲುಪ ಪರಾಕು (ಯಾದಚಂ. ೩-೧ ಪ). [ಸಂ.]

ಪಂಜರಿಸು (ಕ್ರಿ). ೧. ಮುತ್ತು ; ಕವಿ ; ಆವರಿಸು : ಸುಱಿದ ಸೀಕರಾಸಾರದಿಂ ಮಂಜು ಪಂಜರಿಸಿದಂಜನಾಚಲದಂತಿರ್ಪುದು (ಅನಂಪು. ೧೩-೨೧ಪ) ; ಮಂಜು ಮುಸುಕುವ ತೆಱದಿ ದೈತ್ಯರು ಪಂಜರಿಸಿದರು ದೇವವೃಂದವ ಕಂಜನಾಭನು ಕಂಡು ಕೈವೀಸಿದನು ಸುರಜನಕೆ (ಸಂಭಪ. ೬-೨೬). ೨. ಹರಡು ; ಪ್ರಸರಿಸು ; ವ್ಯಾಪಿಸು : "ಪಂಜರಿಸಿತೆಂದು ಪಸರಿಸಿದುದು" (ಕಶಸಾ. ೬೬-೫೧೨) ; ಪಾಂಡುಕಶಿಲಾತಳ ಕಾಂತಿ ಕವಲ್ದು ಮೇಲೆ ಪಂಜರಿಸಿದುದು (ಅನಂಪು. ೫-೬೧). ೩. ಗುಂಪಾಗು; ಒಗ್ಗೂಡು ; ಪುಂಜೀಭೂತವಾಗು : ಪಂಜರಿಸಿ ಮೆಯ್ಮುದುಡಿ ನೆಲದಿಂದೆ ಮುಗಿಲೆಳ್ದು ಮೆಯ್ವೆರ್ಚಿಯಂಚೆದುಪ್ಪುಳ ದುಗುಲವಾಸಾಗಿ ಧರೆ ಪೀರ್ಗುಮೆನೆ ಕೂನವಾಗಿ ಪೊಚ್ಚರಿಸಿಯುಂ (ಸಂಸಪ. ೩೩-೧). [ಪಂಜರ$_1$ + – ಇಸ್ಸು./ತೆಲು. ಪಂಜಾರಿಂಚು]

ಪಂಜರುಳ್ಳಿ 'ಪಂಜುರ್ಲಿ' ನೋ.

ಪಂಜಲ, ಪಂಜಳ (ನಾ). [ಸಂಗೀತ] ಸಂಗೀತದಲ್ಲಿ ಒಂದು ಕ್ರಮ, — ವಿಧಾನ : ಲಂಘಿತ ಕಾಕು ಜಾಯಸುಜಾಯಿ ಪಂಜಲ [ಪಾಠಾಂ. ೪]ಬಜಾವಣೆ ತಾಳ (ವೃಷವಿ. ೧೧-೯). **ಪಂಜಳ :** ಪೊಸದೇಸಿ ಪಜ್ಜಳಿಸೆ ಪಂಜಳಂ ಪಲ್ಲಯಿಸೆ . . . ಕಾಂತಿ ಕವಲೇಱಿ ಸರಿಯೊಳು ಪಂಜಳವನುಗುಳೆ (ಅನಾರ. ದೇ. ೧೮೨-೫) ; ಗಮಿಪ ಪಂಜಳ ಖಚರ ವಿಷಯಕ್ರಮ ವಿಮೋಕ್ಷಭ ಜವಣೆ ತವಣಗಳಮಮ ಭರಣ ವಿತಾಯಿ ನಿಜವಣೆವಳಿಯು ಮುಂಚಿಯುಮಂ (ಬಸಪು. ೧೯-೧೩) ; ಪೊಂದಾಳಮಂ ಪಿಡಿದು ರಾಗಂಗೆಯ್ದು ಪಂಜಳದಲಿ ಅಂದವಡೆದಿಹ ಕಟ್ಟಣೆಯಲಿ ಕಡು

ಜಾಣ್ಮೆಯ ಸರಂದೋಱಿ (ಸೌಂದಪು. ೧೧-೧೪).

[←ತೆಲು. ಪಂಜಳ./ಸಂ. ಪಂಜರ]

ಪಂಜಳ 'ಪಂಜಲ' ನೋ.

ಪಂಜಾ, ಪಂಜ$_2$, ಪಂಜರ$_2$ (ನಾ). ೧. ಸಿಂಹ ಮೊದಲಾದ ಮೃಗಗಳ ಹಾಗೂ ಪ್ರಾಣಿಗಳ ಉಗುರು ಬೆಳೆಯುವ ಕಾಲಿನ ಉಂಡೆಯಾದ ಭಾಗ,-ಮೆತ್ತೆ : "ಪಂಜಾ" (Pad. ಇಂಕನಿ). **ಪಂಜ$_2$:** ೧. ಪ್ರಾಣಿಗಳು ಸಿಂಹದ ಕೈಗೆ ಸಿಕ್ಕಿದರೆ ತಪ್ಪಿಸಿಕೊಳ್ಳುವುದು ತುಂಬ ಕಷ್ಟ. ಅದರ ಪಂಜಗಳು ಅಷ್ಟು ಉಗ್ರವಾಗಿರುತ್ತವೆ (ಜೀಪಾತ್ಮ. ೨೫೯); ನಿಡುಸುಯ್ಯುತೀ ಕಡಲು ತನ್ನ ಬಂಧಿಸುವರೆಯ ದಡವನಲೆಪಂಜದಿಂ ಪರಚಿ (ಗಣೇಶ. ೩೫-೩); ಸಿಂಹದ ಪಂಜಕ್ಕೆ ಸಿಕ್ಕಿರುವ ಆನೆಯಂತೆ, ತತ್ತರಿಸುತ್ತಿದೆ (ಭಾವಗೀ. ೧೭೬); ಅದಕ್ಕೋಸ್ಕರ ಹುಲಿಯು ತನ್ನ ಉಗುರುಗಳನ್ನು ಪಂಜದೊಳಕ್ಕೆ ಸೆಳೆದುಕೊಂಡು ಸಪ್ಪುಳ ಮಾಡದೆ . . . ನಡೆಯುತ್ತದೆ (ಮನೋನಂ. ೧೭೯). ೨. ಮೊಹರಂ ಸಂದರ್ಭದಲ್ಲಿ ಮುಸಲ್ಮಾನರು ಪೂಜಿಸುವ ಐದು ಬೆರಳುಗಳಿಂದ ಕೂಡಿದ ಲೋಹದ ಹಸ್ತ : ಈ ಸಂದರ್ಭದಲ್ಲಿ ಹಾಕುವ ಹುಲಿವೇಷಗಳಿಗೂ ಇಟ್ಟು ಪೂಜಿಸುವ ಪಂಜಾಗಳಿಗೂ ಈ ಮುಹರ್ರಂ ದಿನಾಚರಣೆಗೂ ಏನೂ ಧಾರ್ಮಿಕವಾದ ಸಂಬಂಧವಿಲ್ಲ (ರಾಮರಾ. ೯೬). **ಪಂಜರ$_2$:** ೧. ಸಿಂಹವು ಎಚ್ಚೆತ್ತು . . . ಆ ಇಲಿಯನ್ನು . . . ತನ್ನ ಪಂಜರದಿಂದ ಹಿಡಿಯಿತು (ಮುಂಬಯಿ. ೪-೮೬); ನಳ್ಳಿಯು ತೆಂಗಿನ ಸಿಪ್ಪೆಯನ್ನು ಮೂರು ಕಣ್ಣುಗಳಿರುವ ಕಡೆಯಿಂದ ಸುಲಿಯಲಾರಂಭಿಸುತ್ತದೆ. ಅನಂತರ ತನ್ನ ಬಲವಾದ ಪಂಜರದಿಂದ ರಂಧ್ರ ಬೀಳುವವರೆಗೂ ಒಂದು ಕಣ್ಣಿನ ಮೇಲೆ ಹೊಡೆಯುತ್ತಿರುತ್ತದೆ (ಜೀಪಾತ್ಮ.೧೯೫); ಮನೆನೊಣದ ಪಂಜರದಲ್ಲಿರುವ ಟೊಳ್ಳು ಕೂದಲುಗಳಿಂದ ಅಂಟು ಸ್ರವಿಸಿ, ನೊಣ ತಲೆಕೆಳಗಾಗಿ ಮತ್ತು ನುಣುಪು ಜಾಗದಲ್ಲಿ ನಡೆಯಬಲ್ಲದು (ಕೇಟಬೆ. ೧೭).

[←ಪಾರ. ಮರಾ. ಪಂಜಾ]

ಪಂಜಾಮುದ್ರೆ (ನಾ). ಪಂಜದ ಗುರುತಿನ ಉಂಗುರ ಮೊದಲಾದುವು; ಹೆಸರನ್ನು ಕೆತ್ತಿರುವ ಉಂಗುರ; ಸೀಲು; ಮೊಹರು; ಹಸ್ತಮುದ್ರಿಕೆ : ಅವರೊಡನೆ ಇದ್ದ ನಿರ್ಮಲಳೂ ಬಂದಳು. ಆದರೆ ತನ್ನಲ್ಲಿದ್ದ ಪಂಜಾಮುದ್ರೆಯನ್ನು ತೋರಿಸಿ . . . ತಪ್ಪಿಸಿಕೊಂಡಳು (ಬಂಕಿಮ. ೨೨೧). [ಪಂಜಾ + ಮುದ್ರೆ]

ಪಂಜಾಮೊಹರು (ನಾ). = ಪಂಜಾಮುದ್ರೆ : ಔರಂಗಜೇಬನ ಪಟ್ಟದ ರಾಣಿಯಾದ ಯೋಧಪುರಿ ಬೇಗಂ . . . ತನ್ನ ಗುರುತಿನ ಹಸ್ತಮುದ್ರಿಕೆ ಅಥವಾ ಪಂಜಾಮೊಹರನ್ನು ಕೊಟ್ಟು . . . ಹೇಳಿಕಳುಹಿಸಿದಳು (ಬಂಕಿಮ. ೨೧೬). [ಪಂಜಾ + ಮೊಹರು]

ಪಂಜೆ$_1$ 'ಪಂಚೆ' ನೋ.

ಪಂಜೆ$_2$ (ನಾ). ನೂಲುವುದಕ್ಕೆ ಸಿದ್ಧಪಡಿಸಿದ ಅರಳೆಯ ಉಂಡೆ; ಹತ್ತಿಯನ್ನು ಹಿಂಜಿ ಮಾಡಿದ ಸುರುಳಿ; ನೂಲಲು ಸಿದ್ಧಮಾಡಿದ ಹತ್ತಿಯ ಬತ್ತಿ; ಹಂಜಿ : ತನು ಪಂಜಿವೊಲ್ ಬೆಳರ್ತಿರ್ಪಿನೆಗಂ ಹಿಮಮೆಕ್ಕಿದರಲೆವೊಲ್ ಪುದಿದಿರೆಯುಂ (ಆದಿಪು. ೬-೩೩); ಪೇರಾನೆಯನವಯವದಿಂ ಪಂಜಿಯೊಳ್ ಕಟ್ಟಿದಂದುಮ್ಮಳದಿಂ ಮತ್ತದ್ವಿಪಂ ನಿಂದಪುದೆ (ಧರ್ಮಾಮೃ. ೧೧-೪೫); ಗುಲಗಂಜೀ ಕೆಂಪು ಗುಲಗಂಜೀ ಬೇಕೇನು ಪಂಜಿ ಬಿಳಿಬಿಳೀ ಪಂಜಿ (ತುಪದ. ೪೮). [ಸಂ. ಪಂಜಿ, ಪಂಜೀ]

ಪಂಜಿಕೆ (ನಾ). ೧. = ಪಂಜ$_2$. ೨. ಪ್ರತಿಯೊಂದು ಪದದ ವಿವರಣೆ ಮತ್ತು ವಿಶ್ಲೇಷಣೆಯೊಂದಿಗೆ ನಿರಂತರವಾಗಿ ಮುಂದುವರಿಯುವ ವ್ಯಾಖ್ಯಾನ : ಮಂಜೀರಕ ಮಂಜುಳ ಮೃದುಸಿಂಜ ಪರಿಸ್ಫುರಿತಮೆಸೆಯೆ ಭರತದ ಪಲವುಂ ಪಂಜಿಕೆಗಳಂತದೇಂ ಸುರಲಂಜಿಕೆಯರ್ ವಿಷಮಮಂ ಸಮಂ ಮಾಡಿದರೋ (ಶಾಂತಿಪು.೭-೩೩). ೩. ದಿನ, ತಿಥಿ, ವಾರ ಮತ್ತು ನಕ್ಷತ್ರಾದಿಗಳನ್ನು ತಿಳಿಸುವ ಕೈಪಿಡಿ; ಪಂಚಾಂಗ. ೪. ಜಮಾಖರ್ಚುಗಳನ್ನು ಬರೆದಿಡುವ ಪುಸ್ತಕ; ದಿನಚರಿ ಪುಸ್ತಕ. ೫. ದಾಖಲೆ ಪುಸ್ತಕ. [ಸಂ. ಪಂಜಿಕಾ]

ಪಂಜಿಗೆಟ್ಟಣಿ (ನಾ). (?) : ಶ್ರೀ ಬಲಿಯ ಪಂಜಿಗೆಟ್ಟಣಿಗೆ ಬಿಟ ತಳವ ವಿ[ವರ] (ಸೌಇಎ. ೧೯೩೦, ಉಡುಪಿ. ೫೭೫-೨೦; ?). [?]

ಪಂಜು (ನಾ). ೧. ಬಟ್ಟೆಯನ್ನು ದಪ್ಪವಾಗಿ ಸುತ್ತಿ ಎಣ್ಣೆ ಸುರಿದು ಉರಿಸುವ ಕೋಲು : ಪಂಜ ಹಿಡಿದವಂಗೆ ಸಂದೇಹವಲ್ಲದೆ ಉರಿವ ಬೆಳಗಿಂಗೆ ಸಂದೇಹವುಂಟೇ (ಸರ್ವವ. ೧೨೫-೬೩೯); ಎಡೆಯ ಪಂಜುಗಳಿರ್ದುವು ನಾಗನಾಥನ ಹೆಡೆವಣಿಗಳ ದೀಪ್ತಿಯಂತೆ (ಮೋಹತ. ೧೫-೨೫); ಗಿರಿಜಾತೆಸಹಿತೆ ನಾನಾವೇದಘೋಷದಿಂದೆ ಥಳಥಳಿಪ ಪಂಜುಗಳ ಮೊತ್ತದಿಂ . . . ಕಾಲ್ನಡೆಯೊಳ್ಳೆದಿ ಬರಲುತ್ಸವದೊಳು (ಚಿಬಪು. ೩೭-೬೦); ಸುಡುವರೆ ಪಂಜಿಹುದು ಬಡಿಯೆ ಭೇರಿಯು ಇಹುದು ಪೊಡವಿಯಾಳುವರ ಮದುವೆಯ ವೆಚ್ಚಕೊಂದಡಿಕೆಲೆಯು ಬೇಡ (ಸರ್ವಜ್ಞ. ೭೪೭); ತಂದೆ ಮದುವೆಗೆ ಪಂಜು ಹಿಡಿಯುವ ಮಗ (ಗಾದೆ). ೨. (?) : ತಡವಡಿಸಿ ಪುಡುಕಿ ಪಂ[ಪಾಠಾಂ. ಪುಂ]ಜಿನ ನಡುಬೀದಿಯೊಳಿರ್ದು ಮಱುಗುತಿರೆ ಕಂಡು ಕೆಲರ್ಬಡಿದೆಡೆಯೊಳೊಡೆದ ಪುಣ್ಗಳಿನೆಡೆಯುಡುಗದೆ ರುಧಿರಮೊಱೆತು ಕಱೆಗಟ್ಟುವಿನಂ (ಸುಕುಮಾ. ೪-೫೮).

ಪಂಜಿನ ಪಂದ್ಯ = ಪುರಾತನ ಗ್ರೀಕರು ನಡೆಸುತ್ತಿದ್ದ ಒಂದು ಪಂದ್ಯ : ಅದು ಪ್ರಮೀತ್ಯೂಸ್ ಬಲಿಪೀಠವೆಂದೇ ಕರೆಯಲ್ಪಡುತ್ತಿತ್ತು. ಪ್ರಮೀತಿಯಾ ಅಥವಾ ಹಿಫೀಸ್ಟಿಯಾ ಎಂದು ಕರೆಯುತ್ತಿದ್ದ 'ಪಂಜಿನ ಪಂದ್ಯ' ಇವನ ಪೂಜೆಯ ಪ್ರಧಾನ ಸಂಗತಿ (ಬದ್ಧಪ್ರ. I ಪೀಠಿಕೆ). ಪಂಜಿನ ಮೆರವಣಿಗೆ = ಪಂಜುಗಳನ್ನು ಹಿಡಿದು ನಡೆಸುವ ಮೆರವಣಿಗೆ : ಮೈಸೂರು ದಸರಾಕಾಲದಲ್ಲಿ ನಡೆಯುತ್ತಿದ್ದ ಪಂಜಿನ ಮೆರವಣಿಗೆ ಸುಪ್ರಸಿದ್ಧವಾದುದು (ರೂಢಿ). ಪಂಜಿನೋಲೆ = ಒಂದು ಬಗೆಯ ಹೊಳೆಯುವ ಕರ್ಣಾಭರಣ : ಹರುಷದಿಂ ಪಂಜಿನೋಲೆಯ ನಿಟ್ಟು ಕರ್ಣದಲಿ ಧರಿಸಿದಳು ಕುಚ್ಚೂ ಮುತ್ತಿನ ಬಾವುಲಿಗಳಾ (ಶ್ರೀಕೃಪಾ. ೫೪). [ದೇ.॥ ತಮಿ. ಪನ್ತ; ಮಲ. ಪನ್ದ; ತುಳು. ಪಂಜಿ, ಪಂಜು; ತೆಲು. ಪಂಜು]

ಪಂಜುಕಳ್ಳ 'ಪಂಜುಗಳ್ಳ' ನೋ.

ಪಂಜುಗಳ್ಳ, ಪಂಜುಕಳ್ಳ (ನಾ). ರಾತ್ರಿಯ ಕಾಲದಲ್ಲಿ ಪಂಜು ಹಿಡಿದುಕೊಂಡು ಗುಂಪಿನಲ್ಲಿ ಬಂದು ಬೆದರಿಸಿ ತುಡುಗು ಮಾಡುವವನು; ದರೋಡೆಖೋರ : ಲಿಂಗದ ಚಿತ್ತದಲ್ಲಿ ಪಂಜುಗಳ್ಳರು ಬಂದು ಮೋಱೆಯ ಸುಟ್ಟು ಬಾಧಿಸಿದಂತಾಯಿತ್ತಯ್ಯ (ವಚಶಾ. I, ೨೨೧); ಧೂರ್ತದುರ್ಜನರೂ ಪಂಜುಗಳ್ಳರೂ ಅವನ ಸಹಾಯಕ್ಕೆ ಬಂದು . . . ಅರಮನೆಯನ್ನು ಸುತ್ತುಗಟ್ಟಿಕೊಳ್ಳುವರು (ಬೆಟ್ಟಅ. ೧೮೯-೧೦). **ಪಂಜುಕಳ್ಳ :** "ಪಂಜುಕಳ್ಳರು-ದರೋಡೆಖೋರರು" (ಜಾನಕೋ. ೧೩). [ಪಂಜು + ಕಳ್ಳ$_1$]

ಪಂಜುಬಳೆ (ನಾ). ಪಂಜು ಉರಿದಂತೆಲ್ಲ ಅನುಕೂಲವಾಗುವಂತೆ ಮಾಡಿರುವ, ಬಳೆಯಂತೆ ದುಂಡಾಗಿ ಸುತ್ತಿರುವ ಬಟ್ಟೆಯ ಸುರುಳಿ : ಅಲ್ಲಿಯ ಪಾತ್ರೆಯಲ್ಲಿ ಎಣ್ಣೆಯಲ್ಲಿ ಚೆನ್ನಾಗಿ ನೆನೆಸಿಟ್ಟಿದ್ದ ಬಟ್ಟೆಯ ಪಂಜುಬಳೆಗಳನ್ನು ಆ ಪಾತ್ರೆಯೊಡನೆ ರಥದಲ್ಲಿರಿಸಿಕೊಂಡರು (ಶಾಂತಲಾ. ೩೨೦). [ಪಂಜು + ಬಳೆ$_2$]

ಪಂಜುರುಳಿ 'ಪಂಜುರ್ಲಿ' ನೋ.

ಪಂಜುರ್ಲಿ, ಪಂಜರವಳ್ಳಿ, ಪಂಜರುಳ್ಳಿ, ಪಂಜುರುಳಿ, ಪಂಜ್ರೊಳ್ಳಿ (ನಾ). (ಕರಾ) ಕರ್ನಾಟಕದ ಮಲೆನಾಡು ಮತ್ತು ಕರಾವಳಿಗಳಲ್ಲಿ

ಉಪದ್ರವಕಾರಿಯೆಂದು ನಂಬಲಾದ ಒಂದು ಬಗೆಯ ಭೂತ,—ದೆವ್ವ,—ಕ್ಷುದ್ರದೇವತೆ : "ಅದು ಮನೆಯ ಮುಂದಿನ ಪಂಜುರ್ಲಿಯ ಉಪದ್ರವ"ವೆಂದು ನಿಶ್ಚಯವಾಯಿತು (ಚೋಮದು. ೩೫); ನನ್ನ ಮನೆ ದೆವ್ವ ಪಂಜುರ್ಲಿ. ಏನೇ ಕಷ್ಟ ಬಂದರೂ ನಾನು ಪಂಜುರ್ಲಿಗೆ ಅಡ್ಡಬೀಳುತ್ತೇನೆ (ಪದ್ಮಸ. ೭೭); ಪಂಜುರ್ಲಿಗೆ ಕೋಳಿಯ ಬಲಿ ಕೊಟ್ಟು ಮುಂದಿನ ಅಮಾಸೆ ಕುರಿ ಕೊಡುತ್ತೇವೆಂದು ಹರಕೆ ಹೇಳಿಕೊಂಡರೂ ಬೆಳ್ಳಿಯ ಅಪ್ಪ ಅವ್ವ . . . ಪ್ರಾಣ ಬಿಟ್ಟವು (ಸಂಸ್ಕಾರ. ೧೧೨). **ಪಂಜರವಳ್ಳಿ** : ಅಂದಿನ ಮಲೆನಾಡಿನಲ್ಲಿ ಭೂತ, ಪ್ರೇತ, ಪಿಶಾಚಿ, ಪಂಜರವಳ್ಳಿ, ರಣಮಾರಿ . . . ಮುಂತಾದ ಹಲವು ಹೆಸರಿನ ಹಲವು ಜಾತಿಯ ದೆವ್ವಗಳಿದ್ದವು (ಪಂಜಪಂ.೨). **ಪಂಜರುಳ್ಳಿ** : ನಂಬಿದ ದೈವಕ್ಕೂ ಕರುಣೆ ಬರಲಿಲ್ಲವೆಂದರೆ ಗುತ್ತೆಮ್ಮನಿಗೆ ಎರಡು ಕುರಿ ಆಯಿತು, ಕಲ್ಕುಡಕನಿಗೆ ಹೇಳಿಕೊಂಡದ್ದಾಯಿತು. ಪಂಜರುಳ್ಳಿಗೆ ತಂಪು ಆಯಿತು (ನಡೆದಾ.II,೧೨೩೦). **ಪಂಜುರುಳಿ** : ಪಂಜುರುಳಿಗೆ ಸಿಹಿಯಪಲಕ್ಕಿ ಆಳುಕಾಳುಗಳಿಗೆ ಸಿಹಿಯೂಟ . . . ಹಂಚುವ ಕೆಲಸ (ಮಲೆಮಂ. ೩೮). **ಪಂಜ್ರೊಳ್ಳಿ** : ದೆವ್ವ, ಭೂತ, ಜಕ್ಕಣಿ, ಪಂಜ್ರೊಳ್ಳಿ ಮೊದಲಾದ ಅಂತರ ಬೆಂತರಗಳಿಗೆಲ್ಲ ಕೋಳಿಗಳನ್ನು ಬಲಿಕೊಟ್ಟದ್ದಾನೆ (ಕಾನೂರು. ೮೫); ನಾಗತ್ತೆಯ ಕೈಯಲ್ಲಿ ನಾಗಕ್ಕ 'ಪಂಜ್ರೊಳ್ಳಿ ಕೈಲಿ ಸಿಕ್ಕ ಜಕಣಿ'ಯಂತಾದಳು (ಮಲೆಮ. ೭೧). [←ತುಳು. ಪಂಜುರ್ಲಿ]

ಪಂಜುಸೇವೆ (ನಾ). ದೇವಸ್ಥಾನಗಳಲ್ಲಿ ನಡೆಯುವ ಒಂದು ಬಗೆಯ ಸೇವೆ ; ಪಂಜಿನ ಸೇವೆ ; ಪಂಜುಗಳಿಂದ ನಿವಾಳಿಸುವುದು : ಕಂಜಾಕ್ಷ ಶ್ರೀಕೃಷ್ಣರಾಯನಿದಿರೊಳು ಸಂಜೆಯ ಕಾಲದಿ ರಂಜಿಪ ರಜತದ ಪಂಜುಸೇವೆಗೆ ಕರಾಂಜಲಿಯನ್ನು ಮುಗಿದು (ಪುರಂದ. ಧಾ. ೩-೮೮-೧). [ಪಂಜು + ಸೇವೆ$_1$]

ಪಂಜುಹಚ್ಚು (ಕ್ರಿ). ೧. ಪಂಜನ್ನು ಹತ್ತಿಸು,—ಉರಿಸು. ೨. (ಆಲಂ) ವೇದನೆಯನ್ನು ಉಂಟುಮಾಡು : ಹಣವನ್ನು . . . ತಾನು ಬೇಡವೆಂದರೂ ಯಜಮಾನರು ಯಾಕೆ ಕೊಟ್ಟರೋ ಎನ್ನುವುದು ಭಾಗೀರಥಿಯಲ್ಲಿ ಪಂಜುಹಚ್ಚತೊಡಗಿತು (ಭಾರಥಿ. ೪೪). [ಪಂಜು + ಹಚ್ಚು$_1$ (<ಪಚ್ಚು$_3$)]

ಪಂಜೆ$_1$ 'ಪಂಜೆ' ನೋ.

ಪಂಜೆ$_2$ (ನಾ). ಒಂದು ಬಗೆಯ ಮರ ; ಹಿಪ್ಪೆ ಮರ (-?) : ಮೊದೆ ಬಾಳಂಕುಸೆ ಗೇರ್ ಪ್ಲವಂ . . . ಕಬ್ಬಾವಾಕು ಪಂಜೆಳ್ಳೆ(ಯಿಪ್ಪೆ)ಯು ದಾತ್ತಾಂಘ್ರಿಪ . . . ಇರಲುಂ(ವುಂ) ಮೂಱಾಳೊಳಕ್ಕುಂ ಜಲಂ (ಉಟ್ಟಮ. ೧೧-೫೬). [←ತೆಲು. ಪಂಜೆ = ಒಂದು ಬಗೆಯ ಮರ, ಭಾರಂಗ]

ಪಂಜೆ$_3$ (ನಾ). ೧. ಕ್ಷುದ್ರ ; ಅಲ್ಪ : ಸುಡು ಪಂಜೆ[ಪಾಠಾಂ.ಚಿ]ಗಳೆಂಜಲ ಹಂಚೆಯೆಂದು ಬಯ್ದು (ಅನಂಪು.೮-೩೧). ೨.(?) : ಹಗಲುದೀವಟಿಯ ಪಂಜೆಯು ಬಗೆಗತಿಶಯಮಾದ ಸಿಂಹಲಕ್ಷ್ಮಪತಾಕಂ . . . ಮುಂಗೈ ಮುರಾರಿಯೆಂಬುದನಿತ್ತಂ (ಬೀಳವಂ. ೧-೧೦೮); ಕುಲಿಶದ ಶಕಲಗಳಂ ವಿಚಕಿಲಕುಂದದ ಕುಟ್ಮಲಂಗಳಂ ಪಂಜೆಗಳಿಂದಲಸದೆ ಬಿದಿ ರಚಿಸಿದನೆನೆ ಚಲಭೀಮನ ರದನಪಂಕ್ತಿಗಿನ್ನೆಣೆಯುಂಟೇ ? (ಬೀಳವಂ. ೨-೫೩); ಪರಲೋಕಕ್ಕೈದುವುದು ಭಾಗವತ ಚರಣ ಪಂಜೆಯ ಫಲಂಬಿದು ಕಣಾ ತಿರುವೇಂಕಟಾಚಾರ್ಯ ಮೌನಿವರ್ಯ (ತಿರುಶ. ೮-೪೯). [?]

ಪಂಜೆತನ (ನಾ). ಹೀನಸ್ಥಿತಿ ; ಬಡತನ ; ಅಲ್ಪತನ : "ಪಂಜೆತನ—ಬಡತನ" (ಕಂನುಹು. ೮೮). [ಪಂಜೆ$_3$ + -ತನ]

ಪಂಜೆಬ್ರಾಹ್ಮಣ (ನಾ). ಬಡ ಬ್ರಾಹ್ಮಣ : ಈ ಪಂಜೆ ಬ್ರಾಹ್ಮಣನು ಎಷ್ಟು ಮಾತ್ರದವನು (ಮುದ್ರಾಮಂ. ೨೮). [ಪಂಜೆ$_3$ + ಬ್ರಾಹ್ಮಣ]

ಪಂಜೇವಾರ್ (ಗು). ಅಲ್ಪ ; ದರಿದ್ರ : ನಾವು ಮಾಡಿರತಕ್ಕ ಕಾರ್ಯ ನಿರ್ವಾಹವನ್ನು ಕೆಡಿಸುವುದಕ್ಕೆ ಆ ಪಂಜೇವಾರ್ ಮನುಷ್ಯನ ಕೈಲೇನಾದೀತು ? (ಮುಸುಗ. ೧೨೧). [ಪಂಜೆ$_3$ + ?]

ಪಂಜ್ರೊಳ್ಳಿ 'ಪಂಜುರ್ಲಿ' ನೋ.

ಪಂಟಿ (ನಾ). ೧. ಊಟ ; ಭೋಜನ : ಭಾರತಿಯೆಂಗುಂ ಅಂತಪ್ಪೊಡೆ ತಳ್ವದೆ ತಱಿದು ಸುಂಟಿಗೆ ಪಂಟಿಗೆ ಸಲ್ವಿನಂ ನಿಮ್ಮನೆ ಬಾಣಸುಗೆಯ್ದು ಪರ್ದಿಂಗೆ ಬಿರ್ದಿಕ್ಕುವೆಂ (ರಾಮಾಶ್ವ. ೧೪೪-೩೦); ಶುಂಠಿ ಪಂಟಿಗೆ ಲೇಸು ದಂಟೆ ಕುರುಡಗೆ ಲೇಸು (ಹಾಸ್ಯಮಂ.೯); ಗಂಟಲ ತಂದಿವರುಗಳಾ ಮಾಂಸದೆಂಟು ಬಗೆಯಲೆಸಗುವೆನು ಶಾಕಗಳಾ ಪಂಟಿಗೆ ಹಾಸಿ ಚರ್ಮಗಳಾ ನಮ್ಮ ನೆಂಟರಿಷ್ಟರಿಗಿಕ್ಕುವೆನು ಕಜ್ಜಾಯಗಳಾ (ವಾಲಿಕಾ. ೩-೨). ೨. (?) : ಪಂಟಿಯ ಮಾಡಿ ಪರಮಸುಂದರಿ ಕಂಬುಕಂಠಿಯ ನವ ವಸ್ತ್ರಗಳ ಗಂಟಿಕ್ಕಿ ಕೆಳದಿಯ ಕರೆತಂದಳು ಕಾಲ ಮಂಟಿಕೆ ಘಲಿರೆಂಬ ರವದಿ (ಮೋಹತ. ೩೧-೪೬); ಪಂಟಿ ಹೊಡೆದು ಕಾದಿರು ನೀನು ಮಗಳು ಹುಟ್ಟಲು ನಿನಗೆ ನಂಬು (ಧಂಡೋಲು. ೧೬). [?]

ಪಂಟಿಮಾರಿಗ (ನಾ). ದುಷ್ಟ ; ಪಟಿಂಗ(?) ಕುಂಟನಾಗಲಿ ಕುರುಡನಾಗಲಿ ಪಂಟಿಮಾರಿಗನಾಗಲೈವತ್ತೆಂಟ ಬೈವವನಾಗಲಳಿವನು ಬಯಸುವರೆ ಮಗಗೆ (ಪ್ರಹ್ಲಾಚ. ೧೦-೨೬). [?]

ಪಂಟಿಸು,ಪಂಠಿಸು (ಕ್ರಿ). ೧. ಮುಚ್ಚು ; ಹೊದೆಸು ; ಆಚ್ಛಾದಿಸು : ನನೆಯಾಗಿರ್ದಾಂ ಮನೋನಾಥನ ಸಿರಿಮುಡಿಯೊಳ್ ವಕ್ಷದೊಳ್ ಹಾರಮಾಗಿರ್ದು ನಿತಂಬಾಭಾಗದೊಳ್ ಪಂಟಿಸಿದ ದುಗುಲಮಾಗಿರ್ದು (ಅನಂಪು. ೮-೧೬). ೨. ಆಕ್ರಮಿಸು ; ಆವರಿಸು ; ಮುತ್ತು ; ಸುತ್ತುವರಿ : ಪಂಟಿಸಿದ ಮದಮುಖರು ಕೆಲಕೆಲರುಂಟು ರಿಪುಗಳು ಧಟ್ಟಿಸುತ ಬಲು ಕಂಟಕದಿ ಕಾಡುವರು ಕಾಯ್ಯೆ ಕಲುಷಸಂಹಾರ (ಹರಿಸಾ. ೭೧); ಪಂಟಿಸಿದ ಬಲ್ಪಿಂ ಕೆಂಗೆರೆಗೋಂಟೆಯನಾ ವೀರಭದ್ರದುರ್ಗದ ನೆರವಿಂ . . . ಲುಂಠಿಸಿದಂ (ಚಿಕವಿ. ೨-೧೨೯); ಗಂಟಿಕ್ಕಿತಾಗುಭಯವೀರರಿಂಗಾಹವಂ ಪಂಟಿಸುತ್ತಾಗೊಡನೆ ಕೆಂಗರಿಯ ಕೋಲ್ಗಳಂ ಜಂಟನಿಂದೈನೂರು ಬಿಲ್ಗಳಿಂ ತೂರಲಂದಾಗ (ಪರಶು. ೧೦-೯). ೩. ನೆರೆ ; ಕೂಡು : ಇರುತೊಂದು ದಿವಸ ಶಿವನಾಸ್ಥಾನಕೈತಂದು ಪಂಟಿಸಿದ ಮುನಿಗಳೊಡನೆ (ಚೋರಬ. ೭-೩೬). ೪. ಎದುರಿಸು ; ಸೆಣಸು ; ಹೋರಾಡು : ಅಂಟಿದ ಜಗಳದೊಳಗೆ ಮಾರ್ಬಲವನು ಪಂಟಿಸಿ ಮುಱಿಯಿಱಿದಾಗ ಒಂಟಂಗದಲಿ ಮೆಱಿದರ ಕೇರಿಯೆಸೆದುವು (ಕಂನವಿ. ೬-೬೦); ಅವತಿ ಶಕುತಿಯಿಂ ಪಂಟಿಸುವೆವೆಂದುದು ಸೇನೆ ಕ್ರತುಭುಜರ (ಅಂಬಿಕಾ. ೪೦-೫೨); ಎನ್ನಳವೆ ಹರಿಯೊಡನೆ ಪಂಟಿಸಿ ನಿನ್ನ ಸಲಹುವುದು (ಕೋಗಯ. ೬-೨೪). ೫. ಹರಡು ; ವ್ಯಾಪಿಸು : ಪ್ರಳಯದಿನದಲಿ ಪಂಟಿಸುವ ಸಿಡಿಲಿಳಿದುದೆನೆ ಬಹುವಿಧದ ವಾದ್ಯದ ಮೊಳಗುಗಳ ತುದಿ ತುಡುಕಿತಾ ಬ್ರಹ್ಮಾಂಡಮಂಡಲವ (ಕುವ್ಯಾಶ. ೨-೪೧); ಪಂಟಿಸಿಯೆ ಕಹಳೆ ಹೆಗ್ಗಾಳೆ ವುಕ್ಕಡಗಹಳೆ . . . ಭೋರ್ಗರೆಯಲ್ (ನವಮೋ. ೧೧-೩೦). ೬. ನಾಶಮಾಡು : ರಘುಪತಿ ನಗೆಮೊಗದಲೊಂದಂಬ ಕಳುಹಿದನಸುರನಿದ್ದೆಡೆಗೆ . . . ಮಿಸುಪ ಧವಳಚ್ಛತ್ರ ಪಂಗ್ತಿಯ ಪಸರಿಕೆಯ ಪಂಟಿಸಿತು (ತೊರರಾ.೬-೯-೧೬). ೭. ಮುಗ್ಗರಿಸು ; ಎಡವು ; ತತ್ತರಿಸು : ನುಸುಳ್ವ ಪೆಡಂಮಗುಟ್ವ ಹೆಱಮೆಟ್ಟುವ ತಟ್ಟುವ ಮೇಲೆ ಪಾಯ್ವ ಪಂಟಿ[ಪಾಠಾಂ.ಠಿ]ಸುವ ಕೆಲಕ್ಕೆ ಸಾರ್ವ . . . ಅತಿದುಷ್ಟಮಪ್ಪ ಹಯಮಂ ಕುಡಲುಂ ಪಡೆದೀಯೆ ಪಾಹಕಂ (ಧರ್ಮಪ. ೮-೧೩); ಕೊಳ್ಳದೀ ಧನುವೀತನುಬ್ಬಿನೊಳಳ್ಳೆಗೊಬ್ಬಿನೊಳೌಕಿ ತೊಡರಿನ ಘಲ್ಲಣೆಯ ಘನಕುಲಿಯೆ ಪಂಟಿಸಿ ನಿಮಿಷಮಾತ್ರದಲಿ ಬಿಲ್ಲು ಬಿಡದವನಿಯಲಿ ಬಿದ್ದನು (ಕುವ್ಯಾಅ. ೧೪-೨೧); ಎಂಟು ಗೇಣು ಶರೀರ ಒಂದು ಗೇಣು ಮಾಡಿ

ಕೊಂಡು ಪಂ[ಸಾತಾಂ. ವಂ]ಟಿಸುತ್ತ ಮೆಲ್ಲಮೆಲ್ಲನೆ ಪೋಗಿ (ಪುರಂದ. ೧-೧೬೪-೨); ಚರಣವ ಅಂತರಂತರಕಿಟ್ಟು ದೂಂಟಿಸುತೆ ಪಂಟಿಸುತೆ . . . ಭೃಂಗಿ ನಟಿಸಿದ ನವನಾಟ್ಯವ (ಸುದೇಪು. ೧-೩೭). **ಪಂಠಿಸು :** ೨. ಕಂಠೀರವೇಂದ್ರನ ಹಳೆಯ ಸೈಕದ ಬಲುವೊಂಟಿಜಂಗಾಜಿ ನಾಯಕರು ಪಂಠಿಸಿ ರಿಪುಗಳ ಮುಂಬಾಯಲಿಱುದು ಮನಕಂಟಿಸಿದರು ಧೀತಿಯನು (ಕಂಕವಿ. ೧೪-೧೦೪). ೪. ನೂಕಿದರೆ ಹೆಜ್ಜೆತೆಗೆವ ಹೆಜ್ಜೆತೆಗೆದೊಳುವೌಕಿದ ಡೊಕ್ಕು ಪೊಕ್ಕಿದಡಾಳ್ಕೆಯಲಿ ಪಂಠಿಸುವ ಪಂಠಿಸೆ ಕೂಡೆ ಸಂಧಿಸುವ . . . ಜೋಕೆಯಲಿ ಳಾದಿದರು ಸಮಬಲರಾಹವಾಗ್ರದಲಿ (ಕುವ್ಯಾಗ. ೬-೨೬) ; ಪಂಠಿಸಿ ನಿಮಗಿದಿರಹರು ದುಷ್ಕೀರ್ತಿಗಳಂಟಿ ನಿರ್ನಾಮರಾಗುವರು (ಕಂಕವಿ. ೧೪-೬೨); ಎಲವೊ ಸಾರಥಿ ಲೋಕಪಾಲರ ಗೆಲಿದು ನೆರೆ ನಿರ್ವಿಘ್ನದಾಯಕ ನೊಳಗೆ ಪಂಠಿಸಿ ಪ್ರಮಥವೀರರ ವಿಸಾರಿ ನಡೆತರಲು (ಆಂಬಿಕಾ.೩೯-೩೯). ೫. ಕಡುತವಕದಿಂದೆ ಮನ್ಮಥನ ಹೂವಿನ ತೇರಿನೆಡದಿಲಡೊಳ್ಪಟ್ಟಣಿ ಪರಿದು ಪಂಠಿಸಿ ಹೊಳಕಿ ನಡೆವ ಕಾಲಾಳ ವಂಗಡದ ಸಂದಣಿಯ ಸಂಭ್ರಮವ ನೇವಣ್ಣಿಸುವೆನು (ಚಿಬಪು.೩೫-೧೧) ; "ಲಾಗಹೊಡಿ" (ಚಿಬಪು.೪೦೭). ೬. ಸ್ಪರ್ಧಿಸು : ಕನಲಿಕೆಯ ಹೊರಿಗೆಯಲಿ ತಮತಮಗೆ ಪಂಠಿಸಿ ವಿರಸದಿಂದಾಡುತ್ತಿರಲಂದರಸ ಗೆಲಿದನು ಸೋತ ಪುಷ್ಕರ ಸಭೆಯ ಮಧ್ಯದಲಿ (ಆಂಬಿಕಾ.೪೮-೩೨). ೯. ತಟ್ಟು ; ಬಡಿ : ತೂಲವನು ಹಿಡಿದಬ್ಬರಿಸಿ . . . ಬೊಬ್ಬೆಯ ತಾಳಿ ಪುನರಪಿ ಪಿಡಿದು ಮಗುಳೆ ಸುರಾಳಿ ಬೆದಬಲಿಕಿಟ್ಟು ಬಲು ಗೈಗಳನು ಪಂಟಿಸಿದ[ಪಾತಾಂ. ಪರಟಿಸಿದ, ರೂಢಿಸಿದ, ವಿರಟಿಸಿದ, ಪಸರಿಸಿದ] (ತೊರಂತಾ. ೬-೪೯-೩೮). ೧೦. ವಿಶ್ರಮ ಮಾಡು : ನಿಶಿತ ಪರಿಮಳ ಮೋದದಿಂ ಮೋದಿಸುವ ಗಂಧಪ್ರವ್ಯದಲಿ ಪಂಠಿಸಿದ ಜೀವನ ಜೀವ ತನ್ನಯ ಜೀವನವೆಯೆಂದು . . . ರಾಜನನೋಲಗಿಸುವವನೆ ಪಾನೀಯಧಾರಕನು (ಕುವ್ಯಾಉ. ೩-೯೩). [ಪಂಟು? + -ಇಸು$_3$]

ಪಂಟು, ಫಂಟೆ (ನಾ). ೧. ಜಂಬದ ಮಾತು ; ಒಣಹೆಮ್ಮೆಯ ಮಾತು : ನಾವು ಇರುವೆವು ಎಂಬ ಪಂಟಿನ ನುಡಿಯು ಸಾಕಾಯ್ತು (ಬಾಸಿಗ. ೪-೩) ; ಸಾಕು ನಿನ್ನ ಪಂಟು ; ಹೇಳುವೆಯೋ ಇಲ್ಲವೋ ? (ಭೂಪಿತಾ. ೧೩) ; ಹೊತ್ತರಗೊ ಗಂಟು ಬಡಿಯಬೇಡಿ ಪಂಟು (ಸೂರ್ಯಪಾ. ೫೦-೧೯). **ಫಂಟೆ :** ೨. ಮೋಸ ; ಕಪಟ : 'ಫಂಟೆತನ' ಪರಾ. [?]

ಪಂಟುಗಲ್ಲು (ನಾ). (?) : ಅಲ್ಲಿಂದಂ ತೆಂಕಲು ತೇಳುಲೋಡಿನ ಪೊಡ್ಡಿನ ಮುಗುಡ್ಡೆಯ ಹೊಲ ಪಂಟುಗಲ್ಲ ಶಾಸನ ಮೇರೆ ಅಲ್ಲಿಂದಂ ಪಡುವಲು ಆಗ್ರಹಾರ (ಸೌಇಇ.IX-II, ೫೩೫-೩೧ ; 1531).

[ಪಂಟು ? + ಕಲ್ಲು(<ಕಲ್$_3$)]

ಪಂಟುನುಡಿ (ನಾ). ಹರಟೆಮಾತು ; ವ್ಯರ್ಥಾಲಾಪ : ಈತೆಯನ್ನು . . . ವಶಗೊಳಿಸಿಕೊಳ್ಳಬೇಕೆಂಬ ಅವನಾಡಿದ ಪಂಟುನುಡಿಗಳು ಅಂಥ ಕಲೆಯ ಎತ್ತರಕ್ಕೆ ಹೋಗುವುದಿಲ್ಲ (ಕನಾಚ. ೨೬೬). [ಪಂಟು + ನುಡಿ$_2$]

ಪಂಟುಬಡಿ, ಪಂಟುಬಡೆ (ಕ್ರಿ). ಹೆಮ್ಮೆಯ ಮಾತನಾಡು; ಜಂಬ ಕೊಚ್ಚಿಕೊಳ್ಳು : ಇಲಿ ಹೋಗು ಪಂಟುಬಡೀಬ್ಯಾಡ (ತಿಮಗು. ೧೫೫); ಇಲಿ ಹೋಗವ್ವಾ ಯಾಳೆ ಪೀಡಿಸುವಿ ನಮಗ ನಿಮ್ಹಂಗ ಒಳಗ ತಿರುಳಿಲ್ಲದೆ ಮೇಲೆ ಮಾತ್ರ ಒಣ ಪಂಟುಬಡಿಯಲಿಕ್ಕೆ ಬರುವುದಿಲ್ಲ (ಕಸ್ನಕ. ೧೫೫); ಒಣಾ ಪಂಟುಬಡೀಬ್ಯಾಡ (ಗಂಗಾಸಾ. ೪೩). **ಪಂಟುಬಡೆ :** ನನ್ನ ಮನಸ್ಸನ್ನು ತನ್ನ ಕಡೆಗೆ ಆಕರ್ಷಿಸಿಕೊಳ್ಳುವುದಕ್ಕಾಗಿ ಈ ಮೇರೆಗೆ ಪಂಟುಬಡೆದಿರಬಹುದು (ಕಮಂಹಾ. ೬೫); ಸುಮ್ಮನೆ ಪಂಟುಬಡೆಯಬೇಡ. ನಿನಗೆಲ್ಲವೂ ಗೊತ್ತಿದೆ (ಹಬ್ಬಬ. ೨೬೫) ; ಇಲ್ಲದ ಪಂಟುಬಡೆದು ನನ್ನ ತಲೆ ಎಬ್ಬಿಸಬೇಡ (ಪುಣ್ಯಪು. ೨೪೯). [ಪಂಟು + ಬಡಿ$_1$]

ಪಂಟುಬಡೆ 'ಪಂಟುಬಡಿ' ನೋ.

ಪಂಟುಹಚ್ಚು (ಕ್ರಿ). = ಪಂಟುಬಡಿ : ಪಂಟುಹಚ್ಚಬೇಡ ; ಮದುವೆ, ಮರಣ ಎರಡರಲ್ಲಿ ಯಾವದು ಬೇಕಾದದ್ದು ಒಪ್ಪಿಕೋ (ಹುಬ್ಬಾಟ. ೬೯).

[ಪಂಟು + ಹಚ್ಚು$_1$(<ಹಚ್ಚು$_3$)]

ಪಂಟುಹೊಡೆ (ಕ್ರಿ). = ಪಂಟುಬಡಿ : ಪಂಟುಹೊಡೆಯಬೇಡಿರಿ ಮಹಾಶಯರೆ (ಕ್ರಿಕಾಂತ. ೧೩) ; ನೀ ಅರೇದವ ಅಂತ ನಿನ್ನ ಮುಂದ ಪಂಟು ಹೊಡಿತಾನ (ಗದಮಾಯಿ. ೧೬) ; ನಮ್ಮ ಹತ್ತಿರ ಹೀಗೆ ಪಂಟುಹೊಡೆಯುವ ಈ ವ್ಯಕ್ತಿ . . . ನಾಯಿಯ ಹಾಗೆ ಇರಬಹುದು (ಪ್ರಶ್ನೆ.೧೩೧).

[ಪಂಟು + ಹೊಡೆ$_1$(<ಪೊಡೆ$_1$)]

ಪಂಟೆ (ನಾ). ಕೊಂಬೆ ; ರೆಂಬೆ : ಹೆತ್ತ ತಾಯಿ ಕರೆದುಕೊಂಡು ಹಿತ್ತಲೊಳಗೆ ಮುತ್ತಿನ ಗಿಡ ತೋಜುವಿದ ಪಂಟಿಪಂಟಿಗೆ ಎಂಟು ಎಂಟು ಗೊಂಡು ಗೊಂಡು ಹೋಲುತಿರಲು ಕಡಿದು ಕಡಿದು ರಾತಿಹಾಕಿದ ಪರಮ ಪುರಂದರವಿಕಲರಾಯ (ಪುರಂದ. ೩-೧೧೬೩-೩). [?]

ಪಂಠಿಸು 'ಪಂಟಿಸು' ನೋ.

ಪಂಡ$_1$ (ನಾ). ನಪುಂಸಕ ; ಷಂಡ. [ಸಂ.]

ಪಂಡ$_2$ (ನಾ). (ಸಾಮಾನ್ಯವಾಗಿ ಉತ್ತರಭಾರತದ ಪುಣ್ಯಕ್ಷೇತ್ರಗಳಲ್ಲಿನ) ಪುರೋಹಿತ : ಪಂಡಿತನೆ ಪಂಡ ಆಥವಾ ಪುಂಡ ಪಶು ಕಲಿಯ ಖಂಡದಲಿ ಮೇಧಸ್ಸು (ಸನ್ಮಧ್ವ. ೧೩-೧೧) ; ಆತ್ತ ಶ್ರೀಯು ಒಂದು ಯಾತ್ರಿಕರ ಗುಂಪನ್ನು ಸೇರಿಕೊಂಡು ಒರಿಸ್ಸಾದ ಶ್ರೀಕ್ಷೇತ್ರದ ಕಡೆಗೆ ಹೋಗುತ್ತಿದ್ದಳು. ಆದರೆ ಆ ಗುಂಪಿನಲ್ಲಿದ್ದ ಪಂಡನು ಆಕೆಯ ಮೇಲೆ ಕಣ್ಣು ಹಾಕಿದ್ದರಿಂದ ಅವರನ್ನು ಬಿಟ್ಟು ಒಬ್ಬಳೇ ಮುಂದುವರಿದಳು (ಬಂಕಪು. ೩೦೩). [←ಹಿಂ. ಪಂಡಾ]

ಪಂಡಕ (ನಾ). = ಪಂಡ$_1$: ವನಿತಾಪಶುಪಂಡಕವರ್ಜ್ಯನಿವಾಸೋದ್ದೇಶದೆಡೆಗಳೊಳ್ ಚರಿಯಿಸುತುಂ ಮುನಿಪತಿ ವಿವಿಕ್ತ ಶಯ್ಯಾಸನಮೆಂಬಯ್ದನೆಯ್ದು ತಪದೊಳುಪಗತನಾದೊಂ (ಸುಕುಪಾ. ೪-೪) ; ಸ್ತ್ರೀಪಶುಪಂಡಕ ವರ್ಜಿತ ಮಾಪತ್ಕರದಂಶಮಶಕ ಶೀತಾದಿಗಳುಂ (ಉಸಾಪ. ೨೨-೧೯೫). [ಸಂ.]

ಪಂಡಮಯ್ಯ (ನಾ). ಒಬ್ಬಾತನ ಹೆಸರು : ಸ್ವಸ್ತಿ ಶ್ರೀ ಪಣ್ಡಮಯ್ಯ ಅಳಟ್ಟಲಿ ಉಳ್ಳನ್ನು (ಎಇ. X, ಚಿಂತಾಮಿ. ೭೭-೧ ; ಸು. 1000?).

[ಪಂಡ? + ಅಮ(<ಅಮ್ಮ$_1$) + ಅಯ್ಯ$_1$]

ಪಂಡಾಣಿ (ನಾ). ಹಸಿಯ ಕೋಲು,—ದೊಣ್ಣೆ : ಪೊಂಜೆಳೆ, ಪಂಡಾಣಿ, ಪೊಂಡವೆಳೆ (ಶಬ್ದಾಸು. ೪೦ ವ್ಯಾಖ್ಯಾನ).

[ಪಂ(<ಪಸಿ$_3$) + ಡಾಣ$_2$(<ಧಾನೆ$_1$)]

ಪಂಡಾಪೂರ್ವ (ನಾ). ೧. ನಿಷ್ಫಲವಾದ ಅದೃಷ್ಟ. ೨. ಪರಲೋಕದಲ್ಲಿ ಯಾವ ಫಲವನ್ನೂ ಕೊಡದಿರುವ (ಇಹಲೋಕದಲ್ಲಿ ಮಾಡುವ) ಕರ್ಮ : ಫಲವಿಲ್ಲದೆ ಬರಿಯ ನಿತ್ಯನೈಮಿತ್ತಿಕಕರ್ಮಾನುಷ್ಠಾನದಿಂದ ನಿನು ಸುಖವೆಂದರೆ . . . ಈ ಲೋಕದಲ್ಲಿ ಯಶಸ್ಸೇ ಮುಖ್ಯವಾಗಿ ಸುಖವಾಗಿರುವುದು . . . ಇದನ್ನೇ ಪಂಡಾಪೂರ್ವವೆಂದು ಆ ಸಿದ್ಧಾಂತದವರ ವ್ಯವಹಾರ (ಹಿಂದಸಾ. ೧೬೭). [ಸಂ.]

ಪಂಡಿತ (ನಾ). ೧. ದೊಡ್ಡ ವಿದ್ವಾಂಸ ; ವಿದ್ವಾಂಸ : "ಧೀರಃ, ಧೀಮಾನ್ . . . ಪಂಡಿತಃ, ಸನ್, ಮನೀಷೀ, ಜ್ಞಃ, ದೋಷಜ್ಞಃ, ಕೋವಿದಃ . . . ಮತಿಮಾನ್—ಈ ೨೮ ವಿದ್ವಾಂಸರ್" (ಹಲಾಯು. ೫೫-೧೬೭) ; ಶೂರನೀತನೆ ಪಂಡಿತನೀತನೇ . . . ಧ್ರುವಮೆಂಬುದಾಧಾರ ಮಿಂತಪಧಾರಣದೊಳ್ ಗುಣಂ (ಕವಿತಾ. ೧-೧೪೦) ; ತೀತನನೆಮಗೊಪ್ಪಿಸಮೆಲ್ಲಾ ಶಾಸ್ತ್ರಂಗಳುಮಂ ಕಲ್ಪಿಸಿ ಪಂಡಿತನಂ ಮಾಡಿ ನಿನುಗೊಪ್ಪಿಸುವೊಂ (ಪಡ್ಡಾರಾ. ೭೪-೭) ; ಪಂಡಿತರುಂ ಮೂರ್ಖರುಮೆಕ್ಕೆಯುಂ ಪೊಗಟೆ ಪೇಟಲ್ ಬಾಜಿಸಲುಂ ಸರಸ್ವತಿಯಂ ಸಾಧಿಸೆ ಸಂದ ಸಯ್ಪು ಸವಣಂಗಕ್ಕುಂ ಪೆಱಂಗಕ್ಕುಮೇ (ಕಾಂತಿಪು. ೧-೪) ; ಪಂಡಿತನಾಗಲಿ ಮೂರ್ಖನಾಗಲಿ

ಸಂಚಿತಕರ್ಮ ಉಂಡಲ್ಲದೆ ಬಿಡದು (ಬಸವ. ೬೬೩) ; ಪಂಡಿತರಂ ಲಾಸ್ಯ ಕಳಾಮಂಡಿತರಂ . . . ತಣಿಪಿದಂ ವೃಷಭೇಂದ್ರಂ (ಪೃಷವಿ. ೪೦-೯೯). ೨. ದೇಶೀಯವೈದ್ಯವನ್ನು ತಿಳಿದಿರುವವನು ; ಆಯುರ್ವೇದವನ್ನು ಬಲ್ಲವನು : ಮೇಗರವಳ್ಳಿಯಲ್ಲಿ ಮಲೆಯಾಳದ ಪಂಡಿತರೆಂದು ಪ್ರಸಿದ್ಧಿ ಪಡೆದಿದ್ದ ಈ ಜ್ಞಾ ಪಂಡಿತರಿಂದ ಔಷಧಿ ತರಿಸಿಕೊಂಡಳು (ಮಲೆಪು. ೩೪) ; ಅಳಲೇಕಾಯಿಪಂಡಿತನಿಗೂ ಮಳಲೀಕೊಪ್ಪದ ಗ್ರಾಮಕ್ಕೂ ಜೋಡಿಯಲ್ಲವೇ ? (ಗಾದ). ೩. ಭಾಷೆ, ಸಾಹಿತ್ಯ, ತರ್ಕ, ವ್ಯಾಕರಣ, ವೇದಾಂತ ಮೊದಲಾದ ವಿಷಯಗಳನ್ನು ಸಾಂಪ್ರದಾಯಿಕ ರೀತಿಯಲ್ಲಿ ಅಭ್ಯಸಿಸಿ ಪರಿಣತನಾಗಿರುವವನು: ಕನ್ನಡ ಪಂಡಿತರು ಇಂದು ಬಂದಿಲ್ಲ (ರೂಢಿ) ; ವ್ಯಾಕರಣಪಂಡಿತರು ತುಂಬಾ ಚೆನ್ನಾಗಿ ಕಲಿಸುತ್ತಾರೆ (ರೂಢಿ). [ಸಂ.]

ಪಂಡಿತಂಮನ್ಯ (ನಾ). ತಾನು ಪಂಡಿತನೆಂದು ಭಾವಿಸಿಕೊಂಡಿರುವವನು ; ವಿದ್ವಾಂಸನಲ್ಲದಿದ್ದರೂ ವಿದ್ವಾಂಸನೆಂಬ ಅಹಂಕಾರವುಳ್ಳವನು : ರಸಿಕತೆ ಸಾಲದ ಪಂಡಿತಂಮನ್ಯರೊಡನೆ ವಿವಾದ ಅನಗತ್ಯ (ಧ್ವನ್ಯಾಲೋ. ೧೨೪ ಆಡಿಟ). [ಸಂ.]

ಪಂಡಿತತ್ವ (ನಾ). ಪಾಂಡಿತ್ಯ ; ವಿದ್ವತ್ತೆ : ಈ ವಿಚಿತ್ರ ಕಳಂಬಖಂಡನ ಪಂಡಿತತ್ವವನು ನೀವು ತೋಱಿರೆ ಸಾಕು (ಕುವ್ಯಾಕ. ೩-೩೬). [ಸಂ.]

ಪಂಡಿತಪುತ್ರ (ನಾ). ೧. ಪಂಡಿತನ ಮಗ. ೨. (ಆಲಂ) ದಡ್ಡ : ಕನ್ನಡಪಲ್ಲೇ ತೇರ್ಗಡೆಯಾಗದ ಪಂಡಿತಪುತ್ರರ ಪಡೆ ನಾವು (ತಿಲಾಲ. ೧೭-೩). [ಪಂಡಿತ+ಪುತ್ರ]

ಪಂಡಿತಮಂಡಳಿ (ನಾ). ವಿದ್ವಾಂಸರ ಸಭೆ ; ಪಂಡಿತರ ಸಮೂಹ: ಪಂಡಿತಮಂಡಳಿಗಂ ಕವಿಮಂಡಳಿಗಂ ತನ್ನ ಮನೆ ತವರ್ಮನೆಯೆನಿಸಿ ಕೆಯ್ಕೊಂಡು ಪೊಗಟ್ಟುವುದು . . . ಮಲ್ಲಪನಂ (ಆದಿಪು. ೩-೨೮) ; ಪಂಡಿತಮಂಡಳಿಯಿಂದಮಖಂಡಿತಸಂಯಮಿಗಳಿಂ ಗುಣಪ್ರಣಯಿಂಗಳಿಂ ಮಂಡಿತಮಾ ಜನಪದಮಾಖಂಡಳನಿಧವಿಧಪವಿಭುಗಳಿಂದನವರತಂ (ನೇಮಿಪು. ೧-೫೭). [ಪಂಡಿತ+ಮಂಡಳಿ(=ಮಂಡಲಿ)]

ಪಂಡಿತಮರಣ (ನಾ). [ಜೈನ] ಜ್ಞಾನಿಯಾಗಿ ಸಲ್ಲೇಖನದಿಂದ ಸಾವನ್ನು ಪಡೆಯುವುದು : ಇಂತಾ ಮಹಾನುಭಾವಂ . . . ಪಂಡಿತಮುನಿಜನಸ್ತುತಚಾರುಚರಣಂ ಪಂಡಿತಮರಣದೊಳ್ ವೀರಸ್ವಾಯೋಪಗಮನಸಂನ್ಯಸನಸಮಾಧಿಯಿಂ . . . ನಿಜಾಯುಃಕ್ಷಾಂತಮೆಯ್ದವರ್ಪುದುಂ (ಸುಕುಮಾ. ೧೨-೪೧ ಪ) ; ಸನ್ಯಸನವಿಧಿಯಿಂ ದಂಡಿತಕರಣನಾಗಿ ಪಂಡಿತಮರಣದಿಂ ಮುಡಿಸಿ ರತ್ನದಂತಿರಾಕಲ್ಪದೊಳುದಯಿಸಿರ್ದನಾ ಮಹಾಬಲ ಚರೇಂದ್ರನುಂ(ಅನಂಪು. ೧೨-೪೩ ಪ) ; ಸಲ್ಲೇಖನವನ್ನು 'ಪಂಡಿತಮರಣ' ವೆಂದೂ ಕರೆಯುತ್ತಾರೆ (ಕಶಾಪ. ೯೨). 'ಬಾಲಮರಣ' ಹೋ. [ಪಂಡಿತ+ಮರಣ]

ಪಂಡಿತವಕ್ಕಿ (ನಾ). ಮಾತನಾಡುವ ಜಾಣ್ಮೆಯುಳ್ಳ ಹಕ್ಕಿ ; ಗಿಣಿ ; ಶುಕ : "ಪಂಡಿತವಕ್ಕಿ ಕೀರನೊಳ್" (ಕರ್ನಾಸಿ. ೬೩) ; ಗಂಡು ಪಂಡಿತವಕ್ಕಿ ಕೇಳ್ ಕಮಲಾಯತಾಂಬಕೆ . . . ನವೇಕ್ಷಣೋದಂಡ ಸನ್ನಿಭನೊರ್ವನೊಪ್ಪಿರಲ್ಕೆದೆ ನಟ್ಟಿಸಿ ನೋಡಿದಳ್ (ಉದ್ಭಟ. ೬-೭೧) ; ಪಂಡಿತವಕ್ಕಿಯ ಮಾತನಾಡಿಸುತವೆ ಚಂಡವಿಕ್ರಮನೊಱಗಿದನು (ಪೋಪತ. ೧೮-೯೯) ; ತೊಂಡುಗೆಡೆವಗ್ಗದ ಪಂಡಿತವಕ್ಕಿ . . . ವಿಯೋಗಿಗೇಂ ಮಾಡದೆ ಪೋಕುಮೇ ಮುದನನಂಡಲೆಯಂ (ಕಬಶಂ. ೧-೫೨). 'ಜಾಣ್ಮಕ್ಕಿ' ಹೋ. [ಪಂಡಿತ+ಪಕ್ಕಿ]

ಪಂಡಿತವರ (ನಾ). ಪಂಡಿತರಲ್ಲಿ ಶ್ರೇಷ್ಠನಾದವನು ; ಉದ್ದಾಮ ವಿದ್ವಾಂಸ : ಪಂಡಿತವರಂ . . . ರಾಜೇಂದ್ರಜಕ್ರೇಶ್ವರಂ (ಪಮ್ಮಿರ. ೧-೨೭). [ಪಂಡಿತ+ವರ್2]

ಪಂಡಿತವರ್ಯ (ನಾ). = ಪಂಡಿತವರ : ಪಂಡಿತವರ್ಯಭೂಸಿತ ಸುಮಂಡಿತರುದ್ರಾಕ್ಷಭೂಷಿತಾಂಗರ್(ಪೃಷವಿ.೪೦-೨೧). [ಪಂಡಿತ+ವರ್ಯ]

ಪಂಡಿತಿಕೆ, ಪಂಡಿತಿಕ್ಕೆ (ನಾ). ಪಾಂಡಿತ್ಯ ; ವಿದ್ವತ್ತು : ಇದು ಪಂಡಿತಿಕೆಯೆಂಬುದುತ್ತರವಾಕ್ಯಂ (ನೀತಿವಾ. ೨೬-೫೩). **ಪಂಡಿತಿಕ್ಕೆ** : ಮಗನೆ ನಿನ್ನ ಪೊಬಲ್ಗೆ ನೀಂ ಪೋಗಿ ನಿನ್ನ ಕಲ್ತ ವಿದ್ಯೆಯಂ ಪಂಡಿತಿಕ್ಕೆ [ಪಾಠಾಂ. ಕೆ]ಯುಮನಾ ಪೊಬಲೊಳ್ ನೆಗಟ್ಟು ನೆಗಟ್ಟ ಪಂಡಿತರ್ಕ ಕೊಡನೆ ವಾದಂಗೆಯ್ದು ಗೆಲ್ದು (ಸಡ್ವಾರಾ. ೬೪-೧೩) ; ಒಂದೆಡೆಯೊಳೊಂದು ಕಂದದ ಮೊದಲುಮಂ ವೃತ್ತದ ತುದಿಯುಮನೊಂದುಪಾಡಿ ಪದಮಿಕ್ಕಿಯೋದಿ ಪಂಡಿತಿಕ್ಕೆಗೆ ಮುಯ್ಯಾಂತುಂ (ಪಂಪಭಾ. ೪-೪೪ ಪ). [ಪಂಡಿತ+-ಇಕೆ]

ಪಂಡಿತಿಕ್ಕೆ 'ಪಂಡಿತಿಕೆ' ನೋ.

ಪಂಡಿತೆ (ನಾ). ವಿದ್ಯಾವಂತಳಾದ ಹೆಂಗಸು ; ವಿದುಷಿ : ಪಂಡಿತೆಯೆಂಬ ಪೆಸರನಾ ಪ್ರಸ್ತಾವದೊಳ್ನಿನ್ನ ಮಾಡಿದ ಪಂಡಿತೆಯುಂಟೆರಸು (ಆದಿಪು. ೪-೪೧ ಪ) ; ಪಂಡಿತೆ ನಾವೆನ್ನು ಮನೆಯೊಳಿದ್ದನ್ನವ ಕೊಂಡ ರೊಳ್ಳಿತೊ ಭುಕ್ತಿಗೆಮ್ಮ ಪೆಂಡಿರೊಳಿರ್ವಳ ಮನೆಗೆ ಹೋಹುದು ಲೇಸೊ ಕಂಡುದನುಸುರು ನೀನು (ಭರಚ. ೪-೬೭). [ಸಂ. ಪಂಡಿತಾ]

ಪಂಡಿತೋಕ್ತಿ (ನಾ). ಪಂಡಿತರ ನುಡಿ ; ವಿದ್ವಾಂಸರ ವಚನ : ಜನಪತಿ ಖನತೀಸಪ್ತಂ ಖನತಿ ಯೆನಲ್ ತಕ್ಕ ಪಂಡಿತೋಕ್ತಿಗೆ ಜೊರೆಯಪ್ಪಿನಮಾಡಲ್ಕೆ (ಶಾಂತಿಪು. ೪-೩೯). [ಪಂಡಿತ+ಉಕ್ತಿ]

ಪಂಡಿಪೊದಱು (ನಾ). ಒಂದು ಊರಿನ ಹೆಸರು : ಪಂಡಿಪೊದಱು ಎಮ್ಮ ತುಜುಗೊಳ್ ಅರಾಉರಸ್ ಅನೆಕಟ್ಟ ಇಕ್ಕಿಸಿ ಸತ್ತನ್ (ಮೈಅರಿ. ೧೯೨೪,೪೭-೬ ; ೨೩ನೆಯ ಶತ). [?]

ಪಂಡ್ರಿಕೆ (ನಾ). ಒಂದು ಬಗೆಯ ತೆರಿಗೆ (?) : ಬೀಜವರಿಯೊಳಗಣ ಮಾಜಿ ಸಹಾ ಸಕಲ ಪಂಡ್ರಿಕೆ ಸುವನರ್ಣದಾಯ ಬಿರಾಡ ಜೋಡಿ ಆಯ ಸ್ವಾಮ್ಯ ಮೊದಲಾದ ರೊಕ ಧಾನ್ಯ ಸಹವಾಗಿ ಸರ್ವಮಾನ್ಯವಾಗಿ ದೇವ ಭಂಡಾರಕ್ಕೆ ಸಮರ್ಪಿಸಿದೆವು (ಸೌಇಇ. IX-ii, ೬೬೮-೫ ; 1559). [?]

ಪಂತ1, ಪಂಥ1, ಪಂದ, ಪಂದ್ಯ, ಪಣೆದ2, ಹಂತ1, ಹಣೆದ2, ಹೊಂತ್ಯ (ನಾ). ೧. ಪಣ ; ಪ್ರತಿಜ್ಞೆ ; ಶಪಥ : ಪಂತ [ಪಾಠಾಂ. ಥ] ವಜಿಪು ಪಾಡಜುದು ಬಂಟರ ಮಿಗೆ ಸಂತ್ಯಪ ಗಡ ಸಮರದೊಳು (ಕುರಾಪಾಂ. ೯-೯) ; ಆ ವೇಳೆಯೊಳಿರ್ವರ್ ಬಿರುದಂಕನಾಯಕಂ ಪಂತಮಂ ಪೇಳುತಿರ್ದಂ (ಪಮ್ಮಿರ. ೩-೩೧ ಪ) ; ಗಂಡಸುತನವೆತ್ತು ನುಡಿದ ಪಂತದ ಜೆಮ್ಮಗಂಡು ವ್ಯಂದಾರಕರುಗಳ ಹಿಂದು ಬದುಕಿತೆಂದು ಜೀವನು ಕಳುಹಿಸಿಕೊಂಡಡರಿದ ಸುರಪುರಿಗೆ (ಪೋಪತ. ೫-೬೨) ; ಎಂತೀ ಮಗುವನು ಸಲಹುವೆನು ಹುಯ್ಯಲು ಇಡುವಾ ಸಾಧ್ವಿಯ ಮಕ್ಕಳ ಪಂತದಿ ಬೆಳೆಯಿಸಿ ನಡೆಸುವೆನು (ಕವಿಸೋ. ೫೫-೪). ೨. ಹಟ ; ಛಲ : ತವೆ ಪಂತವೆ ಪಂಕಜಾಪ್ತಿಯೊಳ್ (ರಾಜಕೀ. ೧೧-೧೪೦) ; ಎಂಟು ಕಿನ್ನೂರು ನುಡಿದ್ದಾಂಗ ನನ ಗೆಳತಿ ಪಂತ ನಿನಗಾಕ ದಪ್ಪಗೋಡ (ಕನ್ನಜಾ. ೫೨) ; ಪಂಕ್ತಿಯಲ್ಲಿರುವವನಿಗೆ ಪಂತವಿರಬಾರದು(ಗಾದೆ). ೩. ಸ್ಪರ್ಧೆ ; ಸೋಲಾಟ: "ಪಂತ(ಥ)—ಪಣತ=ಸ್ಪರ್ಧೆ"(ತದ್ಭವಕೋ.೨೪) ; ಪೊರೆಯುಂ ಪಂತಮುಮಿಲ್ಲದಂತೆ ಮನದೊಳ್ ನಿಷ್ಕಾರಣಂ ಕಾಯ್ವರಂ ಪರಚಿಂತಾಕರ ನಿಹ ಎಂಬ ನುಡಿಯಂ ಮುಂ ಕೇಳ್ದೆನಿಲ್ಲಾಗದೇ (ಪಂಪಭಾ. ೭-೬೫) ; ಹೊಂತ ಕಾಜುಗಳಾಗ ರಾಯಮೋಹರದಲಿ ಪಂತದೊಳೆಸೆದರುಬ್ಬಿನಲಿ (ಕಂನಪಿ. ೧೫-೨೧) ; ಕಾರ್ಮಗಲವ್ವಳಿಪಂತೆ ಪಂತದಿಂದೆಸಗಿತು ಸುತ್ತಮುತ್ತಿಗೆಯ ನೊತ್ತರದಿಂ ಮುಗಿಗೊಡ್ಡುವಂದದಿಂ (ಚಿಕವಿ. ೨-೧೦೬). ೪. ಜೂಜು ; ಪಂದ್ಯ : "ಶಪ—ಕೈತವೇ ಚ, ಜೂಜಿನೊಳ್, ಪಂತದೊಳಂ" (ಕಾಶಬ್ದ. ೨೨). ೫. ಜೂಜಿನಲ್ಲಿ ಒಡ್ಡುವ ವಸ್ತು ; ಪಣ ; ಒತ್ತೆ ; ಬಾಜಿ :

ಮೊದಲು ಧರ್ಮರಾಯನು . . . ದ್ರೌಪದಿಯನ್ನೂ . . . ತಮ್ಮಂದಿರನ್ನೂ ಏಕಕಾಲದಲ್ಲಿ ಪಂತವಾಗೊಡ್ಡಿ ಪಗಡೆಯನ್ನಾಡಿ ಪರಾಜಿತನಾಗಿ ಕ್ಲೇಶಪಟ್ಟದ್ದನ್ನು ನೀನು ಕೇಳಿಯಿಲ್ಲವೇ? (ಕೃಪಾವಿ. ೧೧೭); ಪಂಚಮ ಶಾಲೆಯವರ ಕಂಡು ಪಂತಕ್ಕೆ ಸಿಕ್ಕೀತೇ? (ಗಾದೆ). ೬. ಜಂಬ; ಗರ್ವ; ಅಹಂಕಾರ: "ಉಕ್ಕೆವಂ . . . ಪಂತ . . . ಅದಟು— ಈ ೭ ಗರ್ವಂ" (ಕಶಸಾ.೫೬-೨೩೧). **ಪಂಥ$_1$**: ೧. ಇದು ಕಡಲಂದದೆ ಕಡುಗಡಿದಿದಱೊಳಗಾನಿವನನಿಕ್ಕಿ ಕೋಪಮನಾಱುಪ್ಪುದೆ ಪಂಥಮೆಂದು ಬಂದು ತದಗ್ರದೇಶಕ್ಕೆ ಕೋಣಪಂ (ಚಂದ್ರಪು. ೫-೪೨); ಭಾನುಸನ್ನಿಭ ಮರಳು ಭೂಪನ ಹಾನಿವೃದ್ಧಿಗಳೆಲ್ಲ ನಿನ್ನದು ನೀನು ಪಂಥದ ಜಾಣನಲ್ಲಾ ವಿಜಯನಾಗೆನಲು (ಕುಪ್ಯಾದ್ರೋ. ೧-೩೨); ಅಳಿಯನೆಂದೊಡೆ ಅಳಿಯನೇ ಚಲವಳಿಯ ಚಾಗವನಳಿಯ . . . ಪಂಥವನಳಿಯ (ಸಾಳ್ವಭಾ. ೧-೩೧). ೨. ತರಳರರ್ಜುನ ಸಾತ್ಯಕಿಗಳವದಿರಿಗೆ ಪಂಥವದೇಕೆ ನಿಮ್ಮನು ಗರುಡಿಯಲಿ ವಂದಿಸುವ ವಂದನೆಯುಂಟೆ ಸಮರದಲಿ (ಕುಪ್ಯಾದ್ರೋ. ೧೨-೧೫). ೩. ಪುರುದೇವಂ ದೇವದೇವಂ ಕುಡೆ ಪಡೆದ ನೆಲಕ್ಕಾರೊಳಂ ಪಂಥ ಮುಂಟೇ (ಆದಿಪು. ೧೪-೭೭); ಇಂತೆಸೆವ ಇಂಗಡಲ ಮಧ್ಯದೊಳು ತಾರಾದ್ರಿ ಪಂಥದಿಂ ಬೆಳೆದು ತನಗಾರು ಸರಿಯಿಲ್ಲವೆಂಬಂತೆ (ಪ್ರೌಢಂಾ. ೧-೨೮). ೭. ಸಾರುವುದು; ಘೋಷಣೆ: ಇನ್ನು ಪೇಳುವೆ ಚನ್ನ ರಾಮನ ಕೃತಿಯನು ಚೆನ್ನಾಗಿ ಕೇಳಿ ಸಜ್ಜನರು ಮುನ್ನಿನ ಪಾಂಡವ ಶೌರ್ಯ ಪಂಥದಿ ಬಣ್ಣಿಸುವೆನು ಧರೆಯೊಳಗೆ (ಕುಮಾಸಾಂ. ೧೧). ೮. ಸ್ಪರ್ಧೆಯಿಂದ ಆಡುವ ಕ್ರಿಕೆಟ್, ಕಾಲುಚೆಂಡು ಮುಂತಾದ ಆಟ: ಕಾಲುಚಂಡಿನ ಪಂಥ ನಡೆಯುತ್ತದೆ (ಜೀವಾತ್ಮ. ೩೨). **ಪಂದ**: ೧. ಶ್ರೀಮಹಾಬಲಿ ಬಾಣರಸರ್ ಪೆರ್ಮ್ಮಾನಡಿಗಳ್ಬಾಣರಸರಾ ಮಹಾ ರಾಜರಾನೊಡಗೊಣ್ಡು ನೊಟಮ್ಬ ರಾಚಮಲ್ಲ ಮಯಿನ್ದಾದಿಯ ದಡಿಗನಾ ಮೇಗೆ ಪಂದಮಯ್ದಿ (ಎಕ. X, ಮುಳಬಾ. ೨೨೮-೫; ಸು. 890 ?); ಬೇಡ ಮಗನೆ ಪಂದದ ಮಾತು ಕಲಿಕಾಮ ನಾಡಾಡಿಯಲ್ಲ ಮಾರಾಂತಕ (ತ್ರಿಭುತಿ.೧೭-೪೮). **ಪಂದ್ಯ**: ೪. ಪ್ರಾಣಿಗಳ ಪಂದ್ಯವು ಪ್ರಾಣಿದ್ಯೂತವು (ಗುರುಬಾ. ೩೪೧). ೫. ಭೇದದಲಿ ಕಲಿಪುರುಷ ಮಾಯೋಪಾಧಿಯಲಿ ಪುಷ್ಕರನ ಜೂಜಿನ ವಾದದಿಂದರೆಗಳಿಗೆಯಲಿ ಗೆಲಿಸಿದನು ಪಂದ್ಯ [ಪಾಠಾಂ. ವಸ್ತು]ಗಳ (ನಳಚ. ೪-೨೮); ಉಳಿದವರಿಬ್ಬರೂ . . . ಪಂದ್ಯ ವನ್ನಿಡುವುದಕ್ಕೆ ನಿಶ್ಚಯಿಸಿ ಗೆದ್ದವರಿಗೆ ಸೋತವರು ನೂರು ರೂಪಾಯಿಗಳ ಪಂದ್ಯವನ್ನು ಕೊಡುವುದೆಂದು ಸಮ್ಮತಿಸಿದರು (ಕವಿಕ. ೬೨); ಪಂದ್ಯಕೊಡ್ಡಿರುವ ಸಿರಿಯ ರಾಶಿಯನು ಚದುರ ಜೂಜಿನವ ಕುಗ್ಗಿಪೊಲು ಮನುಜಜೀವನದ ಪರಿಮಿತಿಯಿಳಿಸುತ ದೇವಿಯು ಬರುತಿಹಳು! (ಭಾವಗೀ.೧೦೩). ೮. ಎಂ.ಜಿ.ಎಸ್. ಪಂದ್ಯಕ್ಕೆ ನಾನು ಆ ವರ್ಷ ಹೋಗುವುದಂತೂ ಖಂಡಿತವೇ ಆಗಿತ್ತು (ಅಲಹೂ.೫೩). **ಪಣಿದ$_2$**: ೫. ನೆತ್ತದೊಳ್ ಬಿತ್ತರಂದೋಱುತೆ . . . ಕೊಯ್ಲೆವಿಂಡರಂ ಪಣಿದದಿಂ ಮಣಿಯಿಸುತ್ತೆ ಸುತ್ತೇನೋ ರಸವಕ್ತ್ರ ಹಾಸ್ಯ ಸಗ್ರಾಮ್ಯೋಕ್ತಿವೃತ್ತಿಗಳನೆಸಪ ಸಖರಿರವಱುದು ಮನ್ನಿಸುತೆ ಮತ್ತಶುಕಕೇಕಿ ಹಂಸಾದಿಗಳೊಡನೆ ಬಿನದಿಸುತ್ತೆಸೆದುದಬಲಾಜನಂ (ಪದ್ಮರಾ.೮-೮೮). 'ಪಣಿದಂಬೊಯ್$_2$' ಪರಾ. **ಹಂತ$_1$**: ೧. ದಾಳಿ ಬಂದುದೂ ತಲ್ಲಣಿಸದಿರಿ . . . ಶೂಲಿಭಕ್ತನು ಸತ್ತನೋ ಈ ಕೇಳಿಕೆಗಳೇಂ ಹಂತವಂ ಮುಱುದಾಳಿನಂತೆ ನಿಗುರ್ದಪಿರಿ ಸಂಕಿಸದೆ ಬಿಂಕದಲಿ (ಒಸಪು. ೫೬-೧೬). **ಹಣಿದ$_2$**: ೩. ಹಾಡುವರು ಕೆಲರಲ್ಲಿ ಕೈಹೊಯ್ದಾಡುವರು ಕೆಲರಲ್ಲಿ ಹಣಿದವನಾಡುವರು ಕೆಲರಲ್ಲಿ ಜೂಜಾಡುವರು ಕೆಲವರು (ಕೊಲ್ಲಾಚ.೯೭). **ಹೊಂತ$_2$**: ೩. ಹೊಂತಕಾರ$_2$' ಪರಾ.

ಪಂತ ಮಾಡು = ಪಣ ತೊಡು; ಪ್ರತಿಜ್ಞೆ ಮಾಡು: ಪಂತ ಮಾಡು ತಲವಳು ನೀಡದಿಹ ಹಿರಿಯ ಆಂತರ್ಯಕಾಂತಿಯನು ನೀನು ನೀಡು (ಆರುಣ. ೧೧-೧೭); ಜಯಮಲ್ಲನ ತಲೆಯನ್ನು ಬೆಲೆಗೊಳ್ಳದೆ ಬಿಡೆನೆಂದು ಪಂತ ಮಾಡಿ ಅದರಂತೆಯೇ ಅವನನ್ನು ಕೊಂದನು (ಆರ್ಯಕೀ. ೩೮). ಪಂತವಾಸಿ = ಪ್ರತಿಜ್ಞೆ: ಅಗಸನ ಮನೆ ಕೊಳ್ಳೆಯಾಯಿತು. ನಾಯಿಯ ಪಂತವಾಸಿ ಗೆದ್ದಿತು (ಕಥಾಪುಂ. IV, ೧೯೨). ಹಂತವಂ ಮುಱು, ಹಂತವ ಮುಱು = ಗರ್ವವನ್ನು ಮುರಿ; ಅಹಂಕಾರವನ್ನು ನಾಶಪಡಿಸು: ಸುರಹೊನ್ನೆಬಸದಿಯೊಳಗಿಪ್ಪರುಹನ ಹಂತವಂ ಮುಱುದೊಡೆದು ನಿಲಿಸಿದಪೆನು (ಸೋಮಚ. ೩-೬೪); ಬೇಡವೋ ಇಲಿಚಯ್ಯಾ ನಿನಗಂಜರು ನಿನ್ನ ಗಣಪತಿಗಂಜರು ಕೂಡಲಚನ್ನಸಂಗನ ಶರಣರು ಕಂಡಡೆ ನಿನ್ನ ಹಲ್ಲ ಕಳೆವರು ಹಂತವ ಮುಱುವರು (ಚನ್ನವ. ಕ. ೫೩೮-೧೧೬೬); ಹಂತವ ಮುಱುಯ ಬಂದಸುರರಿಗಿದಿರ್ವಂದು ನಿಂತಿರೆ ಕಂಡು ಸೈರಿಸದೆ (ಮೋಹತ. ೧೨-೩೪).

[ದೇ.॥ ತಮಿ. ಪನ್ತಯ; ಮಲ. ಪಂದಯ; ತುಳು. ಪಂತೊ; ತೆಲು. ಪಂತ, ಪಂದಿಯ, ಪಂದೆಯ, ಪನ್ನಿದ. / ಪ್ರಾ. ಪಣಿಅ. / ಸಂ. ಪಣಿತ]

ಪಂತ$_2$, ಹಂತ$_4$, ಹೊಂತ$_3$ (ನಾ). ೧. ದಾರಿ; ಮಾರ್ಗ: ಪಂಥ = ಪಂತ (ಶಬ್ದಾನು. ೧೪೨ ಪ್ರಯೋ). ೨. ನಡವಳಿಕೆ; ಪದ್ಧತಿ; ಧರ್ಮ: ಪಲಾಯನವಕಟಕಟ ಪಾರ್ಥಿವರ ಪಂತ[ಪಾಠಾಂ. ಥ]ವೆ ಮರಳಿ ನಿಂದಿರು ಕೊಲುವುದಿಲ್ಲೆಂದ (ಕುಪ್ಯಾವಿ. ೮-೭೫); ರಘುಕುಲ ವಾರ್ಧಿರಾಕಾಶಶಾಂಕಂ ತಾನೆ ಮೈದೋಱುವನ್ನೆಬರಂ ಕ್ಷತ್ರಿಯರ ಪಂತಮಂ ಬಿಡದೆ ಬಿಡದೆ ಹಯಮಂ ಕಟ್ಟಿ ಕಾದುವೆನೆಂದು ನೀಡುಂ ಬಗೆದು (ರಾಮಾಶ್ವ. ೧೪೧-೨೫). ೩. ಪದವಿ; ಸ್ಥಾನ; ಅಧಿಕಾರ: ಶ್ರೀಕಲಿವಿಟ್ಟರಸರ ಬೆಸದೊಳತೀತನಾದೊಡಾತನ ಗಾವುಣ್ಡಿಗರಸ ನ್ನಾರ್ಟ್ಗಾವುಣ್ಡ ಪಂತಮನಿತ್ತೊಡೆ ಜಕ್ಕಿಯಬ್ಬೆ ನಾರ್ಟ್ಗಾವುಣ್ಡುಗೆಯ್ಯುತ್ತಿರೆ (ಎಕ. VII. ಶಿಕಾರಿ. ೨೧೯-೧೧; 918). **ಹಂತ$_4$**: ೧. "ಹಂತ (ಹೊಂತ) — ಪಂಥ = ಮಾರ್ಗ" (ತದ್ಭಕೋ. ೪೮); ಪಂಥ = ಹಂತ (ಶಮದ. ೨೫೮ ಪ್ರಯೋ). **ಹೊಂತ$_3$**: ೧. "ಹಂತ (ಹೊಂತ)—ಪಂಥ = ಮಾರ್ಗ" (ತದ್ಭಕೋ.೪೮), "ಹೊಂತ = ಹಾದಿ" (ಜಾನಕೋ.೬೦). [<ಸಂ. ಪಂಥಾ]

ಪಂತ$_3$(ನಾ). ೧. ವಿದ್ವಾಂಸ; ಪಂಡಿತ: (ಕಿ). ೨. ಉಪಾಧ್ಯಾಯ: (ಕಿ). ೩. ಮಹಾರಾಷ್ಟ್ರದ ಕೆಲವು ಬ್ರಾಹ್ಮಣರು ತಮ್ಮ ಹೆಸರಿನ ಮುಂದೆ ಸೇರಿಸಿಕೊಳ್ಳುವ ಒಂದು ಉಪಪದ: ಪಂತರು ಹೊತ್ತುಂಟಲೆ ಮನೆಗೆ ಹೋಗಲಿಕ್ಕೆ ನಮಗೆ ಅಪ್ಪಣೆ ಕೊಟ್ಟರು (ಮುಂಬಯಿ.೧-೩೩). [←ಮರಾ. ಪಂತ./ಸಂ. ಪಂಡಿತ]

ಪಂತಂಗಟ್ಟು, ಪಂತಕಟ್ಟು, ಪಂದ್ಯಕಟ್ಟು (ಕ್ರಿ). ೧. ಸ್ಪರ್ಧಿಸು: ಸಗ್ಗಿಗರಾಣ್ಮನೆಂದು ಸಭೆಯಂ ಶ್ರೀಧರ ಕೃಷ್ಣರಾಜಸಭೆಯಂ ಪೋಲಲ್ಕೆ ಮುಂ ಪುಟ್ಟಿಯುಂ ಪಂತಂಗಟ್ಟಿಯುಮಾಱವಂತೆ ಪೊಸತಂ ಪ್ರಾಚೀನಮೇಂ ಪೋಲ್ಗುಮೇ (ಮೈಸೂಮೆ.೫-೨೯). **ಪಂತಕಟ್ಟು**: ೨. ಜೂಜಿನಲ್ಲಿ ಒತ್ತೆಯನ್ನು ಇಡು; ಪಣವನ್ನು ಒಡ್ಡು. ೩. ಪ್ರತಿಜ್ಞೆ ಮಾಡು; ಪಣತೊಡು: ಹಂತಿಯದು ಹಾಡೆಂದು ಪಂತಕಟ್ಟಲು ಬೇಡ (ಕನ್ನಜಾ. ೨೧೫). **ಪಂದ್ಯಕಟ್ಟು**: ೨. ಪಂದ್ಯಕಟ್ಟುವುದು ಮತ್ತು ಜೂಜು (ಭಾಧಾನ. ೨೯೦). [ಪಂತ$_1$ + ಕಟ್ಟು$_1$]

ಪಂತಕಟ್ಟು 'ಪಂತಂಗಟ್ಟು' ನೋ.

ಪಂತಗಾರ 'ಪಂತಗಾಱ' ನೋ.

ಪಂತಗಾಱ, ಪಂತಗಾರ, ಪಂಥಗಾರ, ಪಂಥಗಾಱ, ಹೊಂತಕಾರ$_2$ (ನಾ). ೧. ಹಟಗಾರ; ಛಲಗಾರ: (ಕಿ). ೨. ಜೂಜುಗಾರ: (ಕಿ). ೩. ಗರ್ವಿ; ಅಹಂಕಾರಿ: (ಕಿ). ೪. ಗ್ರಾಮದ ಆಯಗಾರರಲ್ಲಿ ಒಬ್ಬ: ಸುಂಕ ತಳವಾಱ ಅನುಪು ಮಗಮೆ ಚಲವಾದಿ ಸಂಗೆಡಿ ಪಂತ

ಗಾಜಿರಿಗೂ ಇದೇ ಭಾಜೆ (ಸೌಇಇ. IX-II, ೫೬೨-೨೦ ; 1530).
ಪಂತಗಾರ : ಪ್ರ. ಪ್ರತಿಜ್ಞೆ ಮಾಡುವವನು; ಪಣತೊಡುವವನು : ಪಂತಗಾರರ ಸರಬಲ ಸೆಂತವಿಡುವನು (ಸೌಂದಕಾ.೨-೪೫). **ಪಂಥಗಾರ** : ಪ್ರ. ನಿರ್ದೋಷಳ್ಳತಿಯ ನಿರ್ಮಿಸುವೆನೆನ್ನುವ ಪಂಥಗಾರ ! ಹಂಬಲ ವೇನೊ ಹಿರಿದು (ಉಯ್ಯಾಲೆ. ೨೫-೧). **ಪಂಥಗಾಜು** : ಪ್ರ. ಫಲಫಲ ನುಜ್ಜುವ ಪಲವು ಪಂಥಗಾಜರ ನೆಲೆಗೆಡಿಸುವ . . . ತುರಗವ ಗಣನೆಯಿಲ್ಲದೆ ತೋಚಿದರು (ಅಂಜಚ. ೬-೪೯); ಗಾಯವಡೆದ ಕಾಳ್ಪಂದಿಯಂತಜಂ ಪೊಸರಥದೊಳ್ಕೈದಿ ಬಿಲ್ಲಾಳ್ಪಂಥಗಾಜಿ ನೀನಹುದೆನುತ್ತ (ಚಿಬಪು. ೩೧-೪೯).
ಪೊಂತಕಾರ$_2$: ಪ್ರ. ಹುರುಡಿಸುವವನು; ಸ್ಪರ್ಧಾಳು : ಪೊಂತ ಕಾರರೆಲ್ಲ ಓಟದ ಗದ್ದೆಯಲ್ಲಿ ಒಬ್ಬರ ಮೈಗೆ ಒಬ್ಬರು ಅಂಟಿದಂತೆ ಸಾಲಾಗಿ ನಿಂತರು . . . 'ಪೊಂತಕಾರರೆಲ್ಲ ಬಂದಿರಾ ?' ಗ್ರಾಮಸ್ಥಳ ಕೆಸರಗದ್ದೆ ಗಿಳಿದು ಕೇಳಿದ (ಹುಲಿಹಾ. ೩೧). [ಪಂತ$_1$ + -ಕಾಱ]
ಪಂತಡಿ (ನಾ). [ನಾಟ್ಯ] ಒಂದು ಬಗೆಯ ಲಾಸ್ಯ : ಸಾರಿ ಕುಮ್ಮಿ ಪಂತಡಿ ಇವು ಲಾಸ್ಯಗಳು (ಭಾರದ. ೫೫೭). [?]
ಪೊಂತಪಾಡು, ಪಂಥವಾಡು$_1$ (ನಾ). ೧. ಶಪಥದ ಘೋಷಣೆ; ಪ್ರತಿಜ್ಞಾವಾಕ್ಯ ; ಪ್ರತಿಜ್ಞೆಯ ಉಗ್ಗಡಣೆ : ತಮ್ಮ ಕೇಣದ ಪಂತಪಾಡಿನ ನೇಡನ್ನು ತೀರಿಸಿಕೊಳ್ಳದೆ ಬಿಡುವುದಿಲ್ಲ (ಮಂತ್ರಿಶ. ೪೮-೨೪). **ಪಂಥಪಾಡು**$_1$: ೧. ಹೂಣಿಗಾಳಿಗದ ಭಟರೆತ್ತಿ ದರ್ಪಂಥಪಾಡುಗಳ ನಸಿತಧ್ವಜಂ ನಡೆದನರ್ಜುನನ ಮೇಲೆ (ಜೈಮಿಭಾ. ೯-೧೫೫) ; ನರಸರಾಜನ ಈ ಅಸಮಾನವಾದ ಪರಾಕ್ರಮದ ಅಯತವನ್ನು ನೋಡಿ ರಣದುಲ್ಲಾ ಖಾನನ ಪಂಥಪಾಡುಗಳೆಲ್ಲವೂ ಹೇಳ ಹೆಸರಿಲ್ಲದೆ ಹೋದವು (ಕವೀಚ.೧೧೪). ೨. ಸ್ಪರ್ಧೆ ; ಸೆಣಸಾಟ ; ಜೋರಾಟ : ಮೂಡಿದ ವಿರಕ್ತಿಯಿಂ ನಾಚಿ ಮನದೊಳ್ಪಂತಪಾಡಿವನೊಳಿನ್ನು ಸಲ್ಲದು ತನಗೆ ಕಾರುಣ್ಯಕೀಡಾದ ಬಳಿಕದೇತಕೆ ಸಮರವೆನುತ (ಜೈಮಿಭಾ. ೪-೫೦). 'ಪಾಡುಪಂತ' ಪರಾ. [ಪಂತ$_1$ + ಪಾಡು$_2$]
ಪೊಂತಪೌರುಷ (ನಾ). ಹಟದಿಂದ ಕೂಡಿದ ಪರಾಕ್ರಮ; ಛಲದಿಂದ ಉಂಟಾದ ಶೌರ್ಯ,— ಸಾಹಸ : ಇಂತು ಬಲುಬಗೆಯಿಂದ ತಮ್ಮಯ ಪಂತಪೌರುಷ ಮೆರೆಯೆ . . . ಕಾದಿಹರು ಪಯಪಾಡಿನಲಿ ಸಮವಾಗಿ (ಕೋಗಯ. ೧೧-೫೦). [ಪಂತ$_1$ + ಪೌರುಷ]
ಪೊಂತಪೌರುಸ (ನಾ). = ಪಂತಪೌರುಷ : ಇಂತೆಂದು ಕಂತೀರವ ನರಸೇಂದ್ರನ ಪಂತಪೌರುಸವ ಪೊಗಳುತ (ಕಂನವಿ. ೧೩-೬೯).
[ಪಂತ$_1$ + ಪೌರುಸ]
ಪೊಂತವನೆ (ನಾ). ಅಟ್ಟುಗುಳಿ ಮನೆ : ಪಂತವನೆಗೆ ಹುಣಸೆಬೀಜ ತೆಗೆದುಕೊಂಡು ಬಾ (ರೂಢಿ). [ಪಂತ$_0$ + ಮನೆ]
ಪೊಂತವಾತು (ನಾ). ಪಣತೊಡುವ ಮಾತು ; ಪ್ರತಿಜ್ಞೆ : ಇಂತು ಮಹಿಶೂರಭಟರೋರಂತುಸಿರ್ದರ್ ಪಂತವಾತುಗಳ ಪಸುಗೆಗಳೊಳ್ (ಅಸ್ರತಿ. ೭೧-೧೫). 'ಪಂತಪಾಡು' ಪರಾ. [ಪಂತ$_1$ + ಮಾತು$_1$]
ಪೊಂತವೊಡ್ಡು (ಕ್ರಿ). ಜೂಜು ಮೊದಲಾದ ಸಂದರ್ಭಗಳಲ್ಲಿ ಪಣವೊಡ್ಡು : ಅವನಿಗೆ ಇಸ್ಪೀಟು ಚಟ ಎಷ್ಟು ಇದೆ ಅಂದರೆ ತನ್ನನ್ನೇ ಪಂತವೊಡ್ಡಿ ಕೊಳ್ಳುತ್ತಾನೆ (ರೂಢಿ). [ಪಂತ$_1$ + ಒಡ್ಡು$_1$]
ಪೊಂತಹಾಕು (ಕ್ರಿ). ಪಣತೊಡು; ಪ್ರತಿಜ್ಞೆ ಮಾಡು: ಪಂತ ಹಾಕಿದವರ ಹತ್ತಿರ ಶಾಂತರಾಗಿರಬೇಕು (ಗಾದೆ); ಅವರು ಈ ಸಾರಿ ಓಟು ಬರದಿದ್ದರೆ ನಮ್ಮ ತಾಲ್ಲೂಕಿಗೆ ಕಾಲಿಡುವುದಿಲ್ಲವೆಂದು ಪಂತಹಾಕಿದ್ದರು (ರೂಢಿ).
[ಪಂತ$_1$ + ಹಾಕು (<ಪಾಯ್ಪು$_1$)]
ಪೊಂತಿ, ಪಂಗತಿ, ಪಂಗ್ತಿ, ಬಂತಿ, ಹಂತಿ$_1$ (ನಾ). ೧. ವಸ್ತುಗಳ ಹಾಗೂ ವ್ಯಕ್ತಿಗಳ ಸಾಲು,—ಓಳಿ : "ಆಳ್ (ಟ), ಶ್ರೇಣಿ (ಟ), ಅವಳಿ, ಪಂಕ್ತಿ, ವೀಥಿ, ರಾಜಿ(ಟ)—ಈ ೬ ಪಂತಿ" (ಪಲಾಮು. ೧೧೯-೩೬) ; ಪಶ್ಚಿಮಮುಮುಖದೆ ಸನ್ನ ಬಹುಮೂಲಿಕ ಪನ್ನಿಯೆ . . . ಉತ್ತರಾಮುಖದೆ ಸಂದ ಬಹುಮೂಲಿಕ ಪನ್ನಿಯೆ . . . ಕೂಡಿತ್ತು ಸೀಮಾಸ್ತ್ರರಂ (ಎಳ. I, ೧-೨೪ ; ಸು. 466) ; ಮೆಲ್ಲನಾನನವನಜಾತಮುಂ ಕುರುಳ ಪಂತಿಗಳಂ ಪೊಳೆವಲ್ಲಿಯುಗ್ಮಮುಂ ಕನಕಘಟೋಪಮಸ್ತನಯುಗಂ ಗಳನೀಕ್ಷಿಸುತುಂ (ಧರ್ಮಾಮೃ. ೬-೧೬೧) ; ಬೇಱಬೇಱಗ್ರವಣಿ ಬೇಱಿ ಪುಷ್ಪದ ಪಂತಿ ಬೇಱಲ್ಲಿ ಬೇಱೆ ಶಿವಸಿಂಹಾಸನದ ಕಾಂತಿ (ಏಸರ. ೬-೨೬). ೨. ಊಟಕ್ಕೆ ಕುಳಿತುಕೊಳ್ಳುವ ಜನರ ಸರದಿ,—ಪಾಳಿ; ಭೋಜನ ಪಂಕ್ತಿ : ಆಯ್ನೂರ್ವರ್ ಮಕ್ಕಳ್ಗೊಂದೆ ಪಂತಿಯೊಳ್ ತುಯ್ಯಲಂ ಬಡ್ಡಿಸಿಯಯ್ನೂಱು ನಾಯನವರ ಮೇಗೆ ಬಿಟ್ಟೊಡೆ (ಪಡ್ಡಾರಾ. ೧೬೪-೨೨) ; ನುತ್ತೊಂದು ಸಮಯದೊಳೆಲ್ಲಾ ಕುಮಾರರಂ ಪಂತಿ[ಜಾಕಾಂ.೪]ಯೊಳಿರಿಸಿ ಪಾಯಸಮಂ ಪರಿವಾಣಿಂಗಳನಿಟ್ಟು ಬಡಿಸಿ (ಪುಣ್ಯಾಸ್ರ. ೩-೮ ಸ) ; ದಳಪತಿ ಸಹ ಬಂಧುಗಳು ಕೂಡಿ ಪಂತಿಯೊಳೊಲಿದು ಭೋಜನವನು ಮಾಡಿ (ಕಂನವಿ. ೪-೯೨). ೩. ಸಹಪಂಕ್ತಿ ; ಸಮಪಂಕ್ತಿ : ರವಿತನೂಜನ ಕರಸಿ ಪಂತಿಯಲಿ ಜನಪನಾರೋಗಿಸಿದನು (ಕುವ್ಯಾಭೀ. ೧-೧೩). **ಪೊಂಗತಿ** : ೩. ದೊಡ್ಡ ಅಧಿಕಾರಿಗಳು ಬಹಳ ರೊಕ್ಕ ಗಳಿಸಿದ್ದಾರೆ ಎಂದ ಮಾತ್ರಕ್ಕೆ ಅವರು ಜಾತಿ ಕೆಟ್ಟು ಹೋದರೂ ಅವರ ಪಂಗತಿಗೆ ಕೂತು ತಿನ್ನುವುದೇ ? (ಆಬೋಲೀ. ೧೪೩). **ಪಂಗ್ತಿ** : ೧. ವಿಸುಪ ಧವಳಚ್ಛತ್ರ ಪಂಗ್ತಿಯ ಪಸರಿಕೆಯ ಪಂಟಿಸಿತು ಬಿದಣಾದುದಸುರಬಲವಲ್ಲಲ್ಲಿ ಬಿರುದಿನ ಬಲುಭಟಸ್ತೋಮ (ಕೊರಂತಾ. ೬-೯-೧೬). ೨. ಇನ್ನೂ ಮೊದಲನೆಯ ಪಂಗ್ತಿಯ ಊಟ ಮುಗಿದಿಲ್ಲ (ರೂಢಿ). **ಬಂತಿ** : ೧. "ವೀಥಿಃ, ಆಳಿಃ, ಅವಳಿಃ, ಪಂಕ್ತಿಃ, ಶ್ರೇಣಿಃ—ಈ ಪಂಕ್ತಿ ಮಾತ್ರಕ್ಕೆ ಹೆಸರು, ಬಂತಿ, ಸಾಲು" (ಸಿದ್ಧಾಂತಿ. ೧೧೦) ; ಈ ಕೊನೆಯ ಬಂತಿಗಳನ್ನು ಪದೇ ಪದೇ ನೆನೆವರಿಸುತ್ತದೆ (ಚಕ್ರಸ್ಯ.೬ ಮುನ್ನುಡಿ). **ಹಂತಿ**$_1$: ೧. ಪೊಂಗಳಸವಾಂತ ಕರುಮಾಡಗಳ ಮಣಿವಂಕದಾರಗಳ ಹಂತಿಯಿಂದೊಪ್ಪಿದುದು ಮೋಹನಂ ಸಂಚರಿಪ ದಾರಿಯೂ ಸೂಳೆಗೇರಿ (ಪದ್ಮರಾ. ೮-೮೫) ; ಅಡಕೆ ತುಂಬುವ ಹೇಮಘಟದುಗ್ಗಡದ ಹೊಂಮೋಣಿಗಳ ಹಂತಿಯ ಸಡಗರದ ಸೌರಂಭ ನೆನೆದುದು ಸುತ್ತುವಳಯದಲಿ (ತೊರಂತಾ. ೧-೧೬-೧೦) ; ಅಲ್ಲಿ ಹೊಂಗುಲಾಬಿ ಹಂತಿ; ಇಲ್ಲಿ ಚಿನ್ನವೂಮಳೆ (ಅನಿಕೇ. ೨೦-೧೦). ೨. ಗುಣ ಪಸಾಯದ ಕಾಣಿಕೆಯ ಹರಿಯಣದ ಹಂತಿಯ ದಾಯದೂಟಕೆ ಋಣಿಗಳಾದೆವೆ (ಕುವ್ಯಾಕ.೧೩-೨). ೪. ಗುಂಪು; ಸಮೂಹ: "ಬಂಬಲ್ . . . ಹಂತಿ . . . ಗೊಂದಣ (ಉಂದಲ್)—ಈ ೪೦ ಸಮೂಹಂ" (ಕಕಸಾ. ೫೬-೨೨೨) ; ಹಸಿದವ್ವಳಿಪ ಸಿಂಹದ ಹಂತಿ . . . ಮಹಾರಥರೆಳವಿಗೊಟ್ಟೆ ನೋಡು ದುರ್ಯೋಧನ ಸಹೋದರರ (ಕುವ್ಯಾಭೀ. ೩-೧೩). ೫. ಒಂದಾದ ಮೇಲೆ ಒಂದು ಬರುವುದು ; ಪರಂಪರೆ : ಮುಂದೆಯೊದಗಿದ ಕಷ್ಟಗಳ ಹಂತಿಯನು ನೆನಸಿಕೊಂಡೊಡೆ (ಸನ್ನಪ. ೨೫-೧೧). ೬. ಅಕ್ಷರಗಳ ಸಾಲು,—ಪಂಕ್ತಿ : ಆ ಶಿವಾಗಮಲಿಖಿತ ಹಂತಿಯೆನಿಸುವ ಸಾಧನಂಗಳಿಂದ ನೆಲೆಯಱಿದು (ಭಾಸಚಂ. ೩-೨೪). ೭. ಕಣದಲ್ಲಿ ಬತ್ತ, ರಾಗಿ ಮೊದಲಾದ ಧಾನ್ಯಗಳನ್ನು ಒಕ್ಕುವಾಗ ತುಳಿಸುವುದಕ್ಕಾಗಿ ಸಾಲಾಗಿ ಕಟ್ಟುವ ದನಗಳ ಸಾಲು: ನನ್ನ ತಂದೆಯು ಹಂತಿಯಲ್ಲಿ ಹಾಡುವ ಶಿವಶರಣರ, ಹಾಡುಗಳನ್ನು, ತಾಯಿಯು. . . ಶಿವಸೊಲ್ಲುಗಳನ್ನು ಹಾಕಿ ಶ್ರಾವಣಮಾಸದಲ್ಲಿ ಹಾಡುತ್ತ ಬಂದಿದ್ದರು (ಕನ್ನಜಾ. II, ೨೧೯) ; ಹರಗಿ ಬಿತ್ತಿ ಹಂತಿಯಲಿ ತಿರುಗಿ ನೀ ಸ್ವಂತ ರಾಶಿಮಾಡು (ಶಿಲಮು. ೩೬-೬) ; ಕಾಳು ಪೂರಾ ಬಣಗಿದ ಮೇಲೆ ಖಣವ ಮಾಡಿ ಹಂತಿಯ ಕಟ್ಟಿ ಕಾಳು ತುಳಿಸಿ ತೂರಿಸಿ ಮನೆಗೆ ತೆಗೆದುಕೊಂಡು ಹೋಗುತ್ತಾರೆ (ಮುಂಬಯಿ. ೫-೧೫೬).

ಪಂತಿಯಾಗು = ವರ್ಧಿಸು ; ಮುಂದುವರಿ : ಕಾಂತೆಯಂಗದೊಳುದಿಸಿದ ಗರ್ಭಚಿಹ್ನವು ಪಂತಿಯಾಗಿರುತಿರೆ ಕಂಡು (ಅಂಜಚ. ೯-೧೬). **ಹಂತಿದಪ್ಪು** = ಚೆಲ್ಲಾಪಿಲ್ಲಿಯಾಗು ; ಕೆದರಿಹೋಗು : ಹಂತಿದಪ್ಪಿ ತಾಱುಂಬಱಿಯುಂ ತೆರಳ್ದ ಕುರುಳುಣ್ಮೆ (ಚಂದ್ರಪು. ೮-೭೨). **ಹಂತಿಯ ಹಾಡು** = ತೆನೆ ತುಳಿಸುವಾಗ ಹಾಡುವ ಹಾಡು : ಮಲ್ಲಪ್ಪನ ಹಂತಿಯ ಹಾಡು ಸುತ್ತಮುತ್ತಲಿನ ಹೊಲದಲ್ಲಿದ್ದವರಿಗೂ ಕೇಳಿ ಬರುತ್ತಿತ್ತು (ನಡುಗೋ. ೩೭) ; ಶಿವಶರಣರ ಹಂತಿಯ ಹಾಡುಗಳನ್ನು ಪ್ರತ್ಯೇಕವಾಗಿ ಸಂಕಲಿಸಲಾಗಿದೆ (ಕನ್ನಜಾ. III, ಆರಿಕೆ). [<ಸಂ. ಪಂಕ್ತಿ]

ಪಂತಿಕಂಠ (ನಾ). ಸಾಲಾಗಿ ಹತ್ತು ಕೊರಳುಳ್ಳವನು ; ದಶಕಂಠ; ರಾವಣ : ಅಹಂಕರಿಸಿದಾ ಪಂತಿಕಂಠನ ಶಂಕರಂ ಪಾದಾಂತದಿಂದೊತ್ತಿ ದಡಧಃಸ್ಥಳಕಿಳಿದು ಹೋದನಲ (ಬಸಪು. ೫೪-೫೦). [ಪಂತಿ + ಕಂಠ]

ಪಂತಿಕಾಱ, ಹಂತಿಕಾಱ, ಹಂತಿಗಾಱ (ನಾ). ೧. ಊಟಕ್ಕೆ ಕುಳಿತಿರುವವರಿಗೆ ಬಡಿಸುವ ಏರ್ಪಾಡಿನ ಮೇಲ್ವಿಚಾರಕ. ೨. ಸಾಲಿನಲ್ಲಿ ಊಟಕ್ಕೆ ಕುಳಿತಿರುವವನು : ಎಡೆವಟ್ಟಲ್ಗಡ್ಡಣಿಗೆಗೆ ಪಡಿಗಕ್ಕೆ ತಗುಳ್ದ ಪಟಿಯ ಬಿತ್ತರಿಗೆಗೆ ತಕ್ಕೆಡೆಯಱಿದು ಪಂತಿಕಾಱರನೆಡೆಯಱಿದು ವಿಲಾಸದಿಂದಮಿರಿಸಿದರಾಗಳ್ (ಸುಕುಮಾ. ೧೧-೨೬). **ಹಂತಿಕಾಱ :** ೩. ಜೊತೆಯಲ್ಲಿ ಕುಳಿತುಕೊಳ್ಳುವವನು ; ಸಾಲಿನಲ್ಲಿರುವವನು: ಭ್ರಾಂತಿ ಬಿಗಿದಿದೆ ಚಡುರಚಿತ್ತಕೆ ಚಿಂತೆ ಬೇಱೊಂದಾಯ್ತು ರಾಯನ ಹಂತಿಕಾಱರು ಬರಲಿ ಹಿಡಿಯಲಿ ನಿರಶನವ್ರತವ (ಕುವ್ಯಾಅ. ೨೧-೩೨). **ಹಂತಿಗಾಱ :** ೨. ಕಿಱುಮೊರಡಿ ವಿಸ್ತಾರಪೀಠವು ಹಂತಿಗಾಱರು ಭೂರಿ ಸರ್ಪಾವಳಿಗಳರಮನೆ ಹೊದಱು ಹೊಸ ಮೆಳೆಯ (ಕುವ್ಯಾಅ. ೨೧-೮).

[ಪಂತಿ + -ಕಾಱ]

ಪಂತಿಗಟ್ಟು, ಬಂತಿಗಟ್ಟು, ಹಂತಿಕಟ್ಟು, ಹಂತಿಗಟ್ಟು (ಕ್ರಿ). ೧. ಸಾಲಾಗಿ ನಿಲ್ಲು ; ಸಾಲಾಗು. ೨. ಒಟ್ಟಿಗೆ ಸೇರು ; ಗುಂಪುಗೂಡು ; ಸುತ್ತುಗಟ್ಟು : ಪವನಸುತ ಸಹದೇವ ಸಾತ್ಯಕಿ ದಿವಿಜಪತಿ ಸುತರಾದಿಯಾದವರವಿರಳದ ಶೋಕಾಗ್ನಿತಪ್ತರು ಪಂ[ಪಾಠಾಂ. ಹಂ]ತಿಗಟ್ಟಿದರು (ಕುವ್ಯಾಭೀ. ೧೦-೧೯). ೩. ಸಾಲಾಗಿ ಕಟ್ಟು ; ಸಾಲಾಗಿ ನಿಲ್ಲುವಂತೆ ಮಾಡು : ಪಂತಿಗಟ್ಟಿದರಲ್ಲಿ ಮಿಗಗಳಂ, ಕಾಳ್ಪಂದಿ ಕಾಳ್ಕೋಣ ಕುರಿ ಕೋಳಿ ಗೂಳಿ ಮೊದಲಾಗವಂ ಸುತ್ತುಂಬರಿಸಿ, ಹರಸಿ (ಶ್ರೀರಾಮಾ. ೬೬೮-೧೯೭). **ಬಂತಿಗಟ್ಟು :** ೧. ಕಟ್ಟಱಿವೆ ಬಂತಿಗಟ್ಟಿದರುಂ ತನಗಾಱುತಿಂಗಳೊಳಗನಿಷ್ಟ ತಪ್ಪದು (ವಿವೇಕ. ೧೯೫). **ಹಂತಿಕಟ್ಟು :** ೪. ತೆನೆಗಳನ್ನು ತುಳಿಸುವುದಕ್ಕಾಗಿ ದನಗಳನ್ನು ಸಾಲಾಗಿ ಕಟ್ಟು ; ತೆನೆ ತುಳಿಸು : ಆಳುಗಳನ್ನು ತಕ್ಕೊಂಡು ಹಂತಿಕಟ್ಟುವುದಕ್ಕೆ ಹಿರೇ ಕಮತಿಗನು ಊಟವನ್ನು ಮುಗಿಸಿಕೊಂಡು ಬಂದನು (ಬೆಳಭಾ. ೭೯) ; ಇದುವರೆಗೂ ಯಾರೂ ಈ ರೂಲು ಹೂಡಿ ಹಂತಿಕಟ್ಟಿಲ್ಲ (ರಾಜಾದೇ. ೫೮) ; ಹಂತಿಕಟ್ಟಲಿಕ್ಕೂ ಸುಲಭ (ಅಶೋಕ. ೧೦೯). **ಹಂತಿಗಟ್ಟು :** ೧. ರಣ ಗಜಬಜದ ಗೋಳಾಗೋಳಿ ತಣಿತುದು ಹಂತಿ[ಪಾಠಾಂ. ಪಂಕ್ತಿ]ಗಟ್ಟಿತು ಮತ್ತೆ ನೃಪನಿಕರ (ಕುವ್ಯಾಸ. ೧೧-೧).

[ಪಂತಿ + ಕಟ್ಟು$_1$]

ಪಂತಿಗುರುಳ್ (ನಾ). ಸಾಲಾಗಿರುವ ಮುಂಗುರುಳು : ತಟೀಪಾದಪ ವೀಧಿ ಪಂತಿಗುರುಳಂತಿರೆ . . . ಒಪ್ಪಿರೆ ಕೊಂಕುವೆತ್ತ ಸೀತೋದೆ (ಅರ್ಧನೇ. ೧-೬೧) ; ಹಸುಳೆದುಂಬಿಯ ಪಂತಿಗುರುಳ್ಗಳಿಂ ಗೆಲ್ವಳಾ ಕುಸುಮಶರನ ಮಂತ್ರದೇವಿ (ನಾಗಕು. ೨-೯೦). [ಪಂತಿ + ಕುರುಳ್$_1$]

ಪಂತಿಗೊಡು (ಕ್ರಿ). ಊಟದಲ್ಲಿ ಎಲ್ಲರ ಜೊತೆಯಲ್ಲಿ ಕುಳಿತುಕೊಳ್ಳುವಂತೆ ಮಾಡು ; ಜೊತೆಯಲ್ಲಿ ಕುಳಿತುಕೊಂಡು ಆಹಾರವನ್ನು ಸ್ವೀಕರಿಸುವಂತೆ ಮಾಡು: ಆರಾ ಮುನಿಪಂ ? ಜಂಟದೇವರ್ಗೆ ಎಂದು ಸುರರೊಳ್ ಪಂತಿಗೊಟ್ಟನೇಕೆ ? (ರಾಮಾಶ್ವ. ೬೪-೧೪).

[ಪಂತಿ + ಕೊಡು$_1$]

ಪಂತಿಗೊಳ್, ಹಂತಿಗೊಳ್; ಹಂತಿಗೊಳ್ಳು (ಕ್ರಿ). ಸಾಲುಗಟ್ಟು; ಗುಂಪುಕೂಡು ; ಜೊತೆಗೂಡು : 'ಪಂತಿಗೊಳಿಸು' ಪರಾ. **ಹಂತಿಗೊಳ್ :** ಬಿಳಿಯ ಸತ್ತಿಗೆಗಳ್ ನೊರೆವಿಂಡನಾನೆಗಳ್ ಕೆದಱದೆ ಹಂತಿಗೊಂಡ ನೆಗಟಿಂ . . . ನೆಗಟ್ಟೆ (ಕಬ್ಬಿಕಾ. ೨೦೭). **ಹಂತಿಗೊಳ್ಳು :** ಪಲರಾಣಿಯರೊಳಿಗದ ಪೆಣ್ಗಳುಮಿಕ್ಕೆಲದೊಳು ಹಂತಿ[ಪಾಠಾಂ. ಪಂಕ್ತಿ]ಗೊಂಡೆಸೆಯೆ (ಹದಿಬ. ೧-೧೯); ಗಂಪಣನು ಬಂಕೆಯರಸನೊಡನೆ ತಾನೂ ಹಂತಿಗೊಂಡಿದ್ದನು (ವೀರಬಂ. ೬೬). [ಪಂತಿ + ಕೊಳ್$_1$]

ಪಂತಿಗೊಳಿಸು (ಕ್ರಿ). ಸಾಲುಗಟ್ಟಿಸು ; ಗುಂಪುಗೂಡಿಸು : ಸುಳಿಗುರುಳೆಂಬ ತುಂಬಿಯ ಬಂಬಲಂ ತನ್ನ ಬೆಳ್ವೆಳಗನುಗುಟ್ಟ ಸೆಳ್ಳುಗುರೆಂಬ ಪೊಂಗೇದಗೆಯ ಕುತ್ತುಂಗಱಿಗಳ್ ಪತ್ತೆ ಸಾರ್ಚಿ ಪಂತಿಗೊಳಿಸುವಿನೆಗಂ (ಅನಂಪು. ೬-೬೯ ವ). [ಪಂತಿಗೊಳ್ + -ಇಸು$_3$]

ಪಂತಿದೇರ, ಬಂತಿದೇರ (ನಾ). ಹತ್ತುದಿಕ್ಕುಗಳಲ್ಲೂ ತಡೆಯಿಲ್ಲದೆ ರಥವನ್ನು ಕೊಂಡೊಯ್ಯುವ ಸಾಮರ್ಥ್ಯವುಳ್ಳವನು ; ದಶರಥ : ಸೈರಿಪುದು ಸೈರಿಪುದು ಪಂತಿದೇರಂಗೆ ರಾಮವೆಸರಿಂ ಪುಟ್ಟುವನ್ನಮೆಂದು ಸೈತಿಟ್ಟು (ರಾಮಾಶ್ವ. ೧೪-೭); ಮಲೆತುದು ಮುಂದೆ . . . ಮಹದ್ವನಂ, ಪಂತಿದೇರನ ಸೊಸೆಯ ಕಣ್ಗೆದಗಳರ್ಕೆಯಂ ಬೀರ್ದು (ಶ್ರೀರಾಮಾ. ೧೨೭-೫೮). **ಬಂತಿದೇರ :** ಜನಕಜಾರಾಮರೆಸೆದರಾ ಬಂತಿದೇರನ ಪಟ್ಟದರಸಿಯೆಡಬಲದೊಳ್ (ಶ್ರೀರಾಮ. ೫-೨೯); ರಾಘವಂ ಬಂತಿದೇರಂಗೆ ಪುಟ್ಟದ ಪರಿಯನಱಿತೈ (ಅದ್ಭುತ. ೧೬-೧೧).

[ಪಂತಿ + ತೇರ್$_2$ + -ಱ$_7$]

ಪಂತಿದೋಳ್ (ನಾ). ಸಾಲಾದ ತೋಳು,—ಭುಜ.

ಪಂತಿದೋಳವ = ಎರಡು ಕಡೆಯಲ್ಲೂ ಸಾಲಾದ ಹತ್ತು ಹತ್ತು ತೋಳುಗಳುಳ್ಳವನು ; ರಾವಣ : ಸಂಬುಚೋಳಮಂ ನೆಗಪಿದ ಪಂತಿದೋಳವ ×× ನೇಳಿಪಂ (ಎಕ. VII, ಶಿವಮೊ. ೪-೮೬ ; 1122).

[ಪಂತಿ + ತೋಳ್]

ಪಂತಿಯುಣಿಸು (ನಾ). ಜೊತೆಯಲ್ಲಿ ಊಟಮಾಡುವುದು ; ಸಹಭೋಜನ : ಅಂತು ವಿಕಲ್ಪವಿಲ್ಲದೆ ನಿರಂತರದಿಂ ಕಂತುರೂಪನು ಯೇಕಾಸನದಿ ಪಂತಿಯುಣಿಸು ಸಹಕ್ರೀಡೆಯೊಳಿರ್ದುದನಂತಿಂತುಂತೆನ ಬಹುದೇ (ಅನಂಚ. ೧೬-೮೨). [ಪಂತಿ + ಉಣಿಸು$_2$]

ಪಂತಿಯೂಟ, ಹಂತಿಯೂಟ (ನಾ). = ಪಂತಿಯುಣಿಸು : ನೀಚ ಜಾತಿಯವರೊಡನೆ ಪಂತಿಯೂಟದ ಸವ್ಯವಹಾರವಾಗುವಂತೆ ಎಂತೋ ಏರ್ಪಡಿಸಿ (ಬೆಟ್ಟಅ. ೪೮-೧೯). **ಹಂತಿಯೂಟ :** ಹಂತಿಯೂಟದ ಚಂದ್ರಮನೆಲ್ಲಿ . . . ಇಂತಾಗಲಪ್ಪುದೆ ನಿನ್ನನೊರ್ವನ ಕಾಲಾಂತಕ ಗೊಪ್ಪಿಸಿಕೊಟ್ಟು (ಮೋಹತ. ೮-೧೯). [ಪಂತಿ + ಊಟ]

ಪಂತಿರಥ (ನಾ). = ಪಂತಿದೇರ : (ಕಿ). [ಪಂತಿ + ರಥ]

ಪಂತಿವಲ್ಲು (ನಾ). ಸಾಲಾಗಿರುವ ಹಲ್ಲು; ಓರೆಕೋರೆಗಳಿಲ್ಲದೆ ಸಾಲಾಗಿ ಬೆಳೆದಿರುವ ಹಲ್ಲು ; ದಂತಪಂಕ್ತಿ : ಸುಲಿಪಲ್ಲ ಕೆಂಬಲ್ಲ ಮೊಲ್ಲೆಯ ಮುಗುಳ್ವಲ್ಲಯೆಳೆರನ್ನವಲ್ಲ ಕುಲಿಶದ ಪಂತಿವಲ್ಲ ಕಂಗೊಳಿಪ ಮೊನೆವಲ್ಲುಗಳ ನಾರಿಯರ್ ಶೃಂಗಾರಹಾರಿಯರ್ ಬರುತಿರ್ದರು (ಚಿಬಪು. ೩೭-೪೫). [ಪಂತಿ + ಪಲ್ಲು (<ಪಲ್)]

ಪಂತಿವಿಡಿ, ಹಂತಿವಿಡಿ (ಕ್ರಿ). ಸಾಲುಹಿಡಿ ; ಓಳಿಯಾಗಿ ನಿಲ್ಲು : ಪಂತಿವಿಡಿದ ತರುನಿಕರವ ತೋಱುತ ಸಂತಸದಿಂ ಬರುತಿರಲು (ಅನಂಚ. ೯-೧೬) ; ಪೊಂಜಗಲಿಯೊಳ್ ಮಿಸುಪ ಕಂಬಂಗಳಂ ನೆಮ್ಮಿ ಮಂಟಪ ದಿಕ್ಕೆಲಂಗಳೊಳ್ ಪಂತಿವಿಡಿದು . . . ಶಶಿಮುಖಿಯರಲ್ಲಲ್ಲಿ ಕರುವಿಟ್ಟೆರೆದ

ಪೂಸ ಪೊನ್ನ ಪುತ್ತಳಿಗಳಂತೆ ಕಣ್ಗೊಳಿಸಿದರು (ಚಿಬಪು. ೫-೧೧). **ಹಂತಿವಿಡಿ :** ಕಟದೊಳಗೊಗೆದು ಹಿಂಗದ ಮದಕೆ ಮೊದಲ್ಮುಸುಕಿದ ಬಹುಭೃಂಗಂ ಹಂತಿವಿಡಿದು (ಜಯಕಾ. ೩-೩೬); ಹಂತಿವಿಡಿದು ಬರುತಿರ ಲರ್ಕಕೀರ್ತಿ ತಾನಿಂತೆಂದು ನುಡಿವುತೆಯ್ದುದನು (ಭರಣ. ೪೫-೯೨); ಅರಸುಮಕ್ಕಳು ಭರತನನ್ನು ಹಿಂಬಾಲಿಸಿ ಹೋಗಿ ಹಂತಿವಿಡಿದಿದ್ದರು (ಕಗದ್ಯ. ೧೬೦). [ಪಂತಿ + ಪಿಡಿ$_1$]

ಪಂತಿಸು (ಕ್ರಿ). (?) : ಅಂತಸಂ ತಾಗೆ ಪಂತಿಸೆ ಬಸಮಟಿಂದು ಪಣ್ತ ಕೆಕ್ಕರಿಯಂತೆ ಬಿಕ್ಕನೆ ಬಿರಿ[ದ] ಮೆಯ್ಯುಂ ಬಳೆಯ ಪೇಱಂ ನುಗ್ಗಿದಂತೆ ಕಳ್ಳಳಗಟಲ್ವಸ್ಥಿಬಂಧಮುಂ ಮೀನಬಸೆಯಂತಿನಿಸಿನಿಸುಮೊಸರ್ದು ಬಸಿಯುತ್ತಿರ್ಪ ರಸಿಗೆಯುಂ (ವರ್ಧಮಾ. ೫-೩೫ ವ). [?]

ಪಂತು (ನಾ). [ಸಂಗೀತ] ಒಂದು ರಾಗದ ಹೆಸರು : ತಾಳಮೇಳ ರಾಗಂಗಳ ಪಂತು ಒಪ್ಪಿ ಲಾಲಿಸೆಮಗೆ ಸರ್ವೇಶ್ವರ ಸಂತು (ಪಾದಿಕೀ. ೧೨೬-೨೬). [ಸಂ.]

ಪಂತುವರಾಲಿ, ಪಂತುವರಾಳಿ (ನಾ). [ಸಂಗೀತ] ಒಂದು ರಾಗದ ಹೆಸರು : ಪಂತುವರಾಲಿಯೆಂಬ ರಾಗವು ಸಂಪೂರ್ಣವು, ಪಾಮರರಿಗೆ ಪ್ರಿಯವಾದುದು. ಗೀತ, ಕಾಯ, ಪ್ರಬಂಧಗಳಿಗೂ ಇದಕ್ಕೂ ಬಹು ದೂರವೆಂದು ಸಮ್ಮತಿಸಿದೆ (ಚತುಪ್ರ. ೬೪). **ಪಂತುವರಾಳಿ :** ಶೋಕ ವರಾಳಿ . . . ಪಂತುವರಾಳಿ ನಾಗವರಾಳಿಯೆಂಬ ವರಾಳೀಸಪ್ತಕವೇ ಶುದ್ಧ ವರಾಳಿಗೆ ಮಿಶ್ರಂಗಳು (ವಿವೇಕ. ೨೩೫); ಪ್ರಳಯತಾಂಡವ ಪಂತು ವರಾಳಿ (ವಿಸೀಗೀ. ೩-೨). [ಸಂ. ಪಂತುವರಾಲೀ]

ಪಂತುವರಾಳಿ 'ಪಂತುವರಾಲಿ' ನೋ.

ಪಂತೈಸು (ಕ್ರಿ). ಸಾಲುಗಟ್ಟು ; ಪರಿಧಿಯಂತೆ ಮಂಡಲಿಸು : ರಾಮಚಂದ್ರಂ ಪಂತೈಸಿ ನಗರವಂ ಕವಿಯಲಪ್ಪ ಜೆಯಿತ್ತನು (ವೆಂಕಾರಾ. ೬-೧೫ ಸೂಚನೆ). [ಪಂತಿ + -ಇಸು$_3$]

ಪಂತೋಜಿ (ನಾ). ಶಾಲೆಯ ಉಪಾಧ್ಯಾಯ ; ಪಂಡಿತ : ಮೋತಿ ಚಂದನಂಥ ಪಂತೋಜಿಯು ದೊರಕಿದ ಮೇಲೆ ಕಲಿಯಲಿಕ್ಕೆ ಅಸಾಧ್ಯವೇನು ? (ಮೋಹಿನೀ. ೪೩). [←ಮರಾ. ಪಂತೋಜಿ]

ಪಂಥ$_1$ 'ಪಂತ$_1$' ನೋ.

ಪಂಥ$_2$ (ನಾ). ೧. ದಾರಿ ; ಮಾರ್ಗ : 'ಪಂಥಾತಿಚಾರನಿಯಮ' ಪರಾ. ೨. ಉಚಿತವಾದ ಕ್ರಮ ; ಯೋಗ್ಯವಾದ ಮಾರ್ಗ : ಇದು ಕಡಲಂದದೆ ಕಡುಗಡಿದಿದಱೊಳಗಾನಿವನನಿಕ್ಕಿ ಕೋಪಮನಾಱಪುದೆ ಪಂಥಮೆಂದು ಬಂದಂ ತನಗ್ರದೇಶಕ್ಕೆ ಕೋಣಪಂ (ಚಂದ್ರಪು. ೫-೪೨). ೩. ಮತ ; ಸಂಪ್ರದಾಯ ; ಒಂದು ತತ್ತ್ವವನ್ನು ನಂಬುವವರ ಶಾಖೆ,—ವರ್ಗ : ಚೈತನ್ಯದೇವನ ಪಂಥದಲ್ಲಿ ಪ್ರಸಿದ್ಧರಾದವರು ಸನಾತನ ರೂಪ,ಜೀವಗೋಸ್ವಾಮಿ ಎಂಬುವರು (ಭಾರದ.೨೯೦); ಅಕ್ಕಲಕೋಟೆಯ ಮಹಾರಾಜರು ಮಾಣಿಕಪ್ರಭುಗಳು, ಇತ್ತೀಚಿನ ವಾಸುದೇವಾನಂದ ಸರಸ್ವತಿ ಟೆಂಬೇ ಮಹಾರಾಜರು ಈ ಪಂಥದವರು (ಮಸಾಹಿ. ೨೨). [ಸಂ. ಪಂಥಾ]

ಪಂಥಗಾರ 'ಪಂತಗಾಱ' ನೋ.

ಪಂಥಗಾಱ 'ಪಂತಗಾಱ' ನೋ.

ಪಂಥತೊಡು (ಕ್ರಿ). ಹಟಕಟ್ಟು ; ಪಣತೊಡು; ಪ್ರತಿಜ್ಞೆ ಮಾಡು: ಆಗ ವೆಂಕಟರಮಣದಾಸರು ತಮ್ಮ ವಾದನವನ್ನು ಎಲ್ಲರಿಗೂ ಕೇಳಿಸಿಯೇ ತೀರುವುದಾಗಿ ಪಂಥ ತೊಟ್ಟು, ಬಾಗಿಲುಗಳನ್ನೂ ಕಿಟಕಿಗಳನ್ನೂ ತೆರದೇ ಇರುವಂತೆ ಹೇಳಿದರು (ಸಂಗೀತ. ೭೧). [ಪಂಥ$_1$(<ಪಂತ$_1$) + ತೊಡು$_1$]

ಪಂಥಪಾಡು$_1$ 'ಪಂತಪಾಡು' ನೋ.

ಪಂಥಪಾಡು$_2$ (ನಾ). ಉಚಿತವಾದ ರೀತಿ ; ಯೋಗ್ಯವಾದ ಮಾರ್ಗ : ಘನಯೋಗದಲಿ ಜೀವವ ಬಿಡುವ ಭೂರಿಶ್ರವನ ನೀ ಕಡಿದೆ ಇದು ವಿಚಾರಿಸೆ ರಾಜಧರ್ಮವೆಯಿದು ಸುಭಟರಿಗೆ ಪಂಥಪಾಡೇಯಿದನು ನೀ ಮಱೆದೆನ್ನ ಜಱೆವರೆ ನೀಚ ಹೋಗೆಂದ (ತಿಮ್ಮಮೌ. ೧-೪೯). [ಪಂಥ$_2$ + ಪಾಡು$_3$]

ಪಂಥವಾಡು(ಕ್ರಿ). ಸ್ಪರ್ಧಿಸು ; ಹಟದಿಂದ ಹೋರಾಡು ; ವಿಷಯವನ್ನು ಚರ್ಚಿಸು : ರಾಜಸಭೆ ! ಬ್ರಹ್ಮಸಭೆ ! ಪಂಥ, ಪಂದ್ಯಗಳು !! ಅದಕ್ಕಾಗಿ ಟಗರುಗಳುಂಟು, ಕೋಳಿಗಳುಂಟು, ಪಂಥವಾಡಲಿ. ರಾಜಾಸ್ಥಾನದಲ್ಲಿ ಕವಿ ಪಂಡಿತರೂ ಮೆಯ್ದು ಟಗರುಗಳೆ ? (ತುಂಗಭ. ೬). [ಪಂಥ$_1$(<ಪಂತ$_1$) + ಆಡು$_1$]

ಪಂಥಾತಿಚಾರನಿಯಮ (ನಾ). [ಜೈನ] ಶ್ರವಣರ ಪ್ರಯಾಣದಲ್ಲಿ ಉಂಟಾಗುವ ಕ್ರಿಮಿಕೀಟಾದಿಗಳ ಹಿಂಸೆಗಾಗಿ ಆಚರಿಸುವ ಪ್ರಾಯಶ್ಚಿತ್ತ ; ಗಮನಪ್ರಾಯಶ್ಚಿತ್ತ : ತಪೋವರರೆಂಬ ರಿಸಿಯರ್ . . . ಬಂದು ಪಂಥಾತಿಚಾರನಿಯಮಂಗೆಯ್ದು ಪಗಲ್ ದೇವರಂ ವಂದಿಸಿ (ಪಡ್ಡಾರಾ. ೧೩೬-೨೬); ಉಗ್ರೋಗ್ರತಪಶ್ಚರಣನಿರತರಾಗಿಯುಮತ್ಯಂತ ಶಾಂತರಸಸ್ವರೂಪಮಂ ತಾಳ್ದಿ ಪಂಥಾತಿಚಾರನಿಯಮದಿಂ (ಸುಕುಮಾ. ೩-೭ ವ). [ಪಂಥ$_2$ + ಅತಿಚಾರ + ನಿಯಮ]

ಪಂಥಾತಿಚಾರನೇಮ(ನಾ). = ಪಂಥಾತಿಚಾರನಿಯಮ : ಸಾರಸ್ವತರೆಂಬಾಚಾರ್ಯರ್ . . . ಶ್ರಾವಂತಿಪುರಕ್ಕೆ ಬಂದು ಮನೋಹರೋದ್ಯಾನದೊಳ್ ಲೇಸಪ್ಪ ಶಿಲಾತಳದ ಮೇಲೆ ಕುಳ್ಳಿರ್ದು ಪಂಥಾತಿಚಾರನೇಮಮಂ ಮಾಡುತ್ತಿರ್ಪುದುಂ (ಧರ್ಮಾಮೃ. ೧೪-೪೯). [ಪಂಥ$_2$ + ಅತಿಚಾರ + ನೇಮ]

ಪಂಥಾನ (ನಾ). ದಾರಿ ; ಮಾರ್ಗ : ಶ್ವನ್, ಪಥಿನ್, ಮಥಿನ್ ಶಬ್ದಗಳುಳಿದ ನಕಾರಾಂತಗಳ ನಕಾರಕ್ಕೆ ಲೋಪ ಬರುತ್ತದೆ . . . ಶ್ವಾನವು, ಪಂಥಾನವು, ಮಂಥಾನವು ಎಂದಾಗುತ್ತದೆ (ಹೊನುಗ. ೧೦೭); ಬೇಗಂ ಗಮನಾತೀತಂ ನೋಡಲ್ಕಮಮ ಮನೋರಥಕಮೆನಿಪುವೀ ಪಂಥಾನಂ (ಧ್ವನ್ಯಾಲೋ. ೧೬೧). [ಸಂ.]

ಪಂಥಾಭಿಮಾನಿ (ನಾ). ಮತದ ಮೇಲೆ ಬಹಳ ಪಕ್ಷಪಾತವುಳ್ಳವನು ; ತನ್ನ ಮತವೇ ಹೆಚ್ಚೆಂಬ ಅಭಿಮಾನವುಳ್ಳವನು ; ಸಂಪ್ರದಾಯನಿಷ್ಠ : ಪಂಥಾಭಿಮಾನಿಗಳ ಪ್ರಾರ್ಥನಾಪತ್ರವನ್ನು ಚಕ್ರವರ್ತಿಗೆ ನೇರವಾಗಿ ತಲುಪಿಸುವಂತೆ ನೆಕ್ಲುದೋವ್ ಅವನನ್ನು ಕೇಳಿಕೊಂಡಿದ್ದನು (ಪುನರು. ೩೭೬). [ಸಂ. ಪಂಥಾಭಿಮಾನಿನ್]

ಪಂಥಿ (ನಾ). ಒಂದು ಪಂಥಕ್ಕೆ ಸೇರಿದವನು ; ಒಂದು ಸಂಪ್ರದಾಯಕ್ಕೆ ಸೇರಿದವನು : ನರ್ಮದಾತೀರದವರೆಗೂ ಜೈನ ಪಂಥಿಗಳು ಬಹುಕಾಲ ಕನ್ನುಡಿಯನ್ನು ಅರಿತವರೆ ಆಗಿರುವ ಶಕ್ಯತೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ (ಕರ್ಣಾಟ. ೧೬೮). [ಸಂ. ಪಂಥಿನ್]

ಪಂಥೀಯ(ನಾ). = ಪಂಥಿ : ಅಲ್ಲಿ ನೋಡು . . . ಆ ಈಸಾಯಿಯೂ ಆ ಸಿಖ್ಖ ಪಂಥೀಯನೂ ಕೈಕುಲುಕುತಿರುವರು (ಕೈಲಾಕ. ೬೫). [ಸಂ.]

ಪಂದ 'ಪಂತ$_1$' ನೋ.

ಪಂದಯ್ಯ (ನಾ). ಒಬ್ಬಾತನ ಹೆಸರು : ಪಲರೊಡೆಗಣ್ಣಂ ಪರಬಲದಣುವ ದ್ರೋಹರ ಶೂರ ಸಾಮನ್ತಸರ್ವಜ್ಞ ಶ್ರೀಮತ್ ಪನ್ದಯ್ಯಂ (ಎಕ. XI, ಚಿತ್ರದು. ೫೦-೮ ; 968). [ಪಂದ? + ಅಯ್ಯ$_1$]

ಪಂದರ್, ಪಂದರ, ಪಂದರು, ಪಂದಲ್, ಪಂದಲು, ಹಂದರ್, ಹಂದರ$_1$, ಹಂದರು, ಹಂದಲ, ಹಂದಲು (ನಾ). ಚಪ್ಪರ ; ಕಾವಣ : "ಕಾವಣಮೆಂದುಂ, ಪಂದರೆಂದುಂ ಚಪ್ಪರಂ" (ಕಶಸಾ. ೬೩-೪೦೬); ಆತನುಂ ಪಿರಿಯ ಪಂದರಂ ಮಾಡಿಸಿಯಲ್ಲಿ . . . ದೇವತಾ

ಪ್ರತಿಮೆಯಂ ನಿಱಿಸಿ (ವಡ್ಡಾರಾ. ೧೪೨-೧೦); ಬಾಣಸಿನ ಮಜ್ಜನದ ರಾಣಿವಾಸದ ಮನೆಗಳುಮಂ ನನೆಯ ಪಂದರುಮಂ ತಳಿರ ಕಾವಣಂಗಳುಮಂ (ಪಂಪಭಾ. ೫-೪೭ ವ); ಎಳದಳಿರ್ವಂದರ್ ಪೊದಟ್ಟಂಗಶೃಂಗಾರ ರಸಂ ಕೈನೀರ್ ಮುದಂ ಪೊಂಗಳಸಮೊಲವು ಮೌಹೂರ್ತಮಾಗಲ್ (ಜಗವಿ. ೧೧-೫೩); ಪಡೆ ನಡೆಗೊಳೆ ಪವನಾಧ್ವಮನಡರ್ದುದು ಕೆಂಧೂಳಿಯಂಬರ ಮಸುಳ್ವಿನೆಗಂ ಜಡಿದುದು ಜಗತೀವಳಯಂ ನಡವಿಯ ಪಸುರ್ವಿದಿರ ಪಂದರಂದದಿನಾಗಳ್ (ಮಹಾನೇ. ೧೩-೪೪); ತಳಿರ್ವಂದರ್ ತೋರಣಂ ವೇದಿಕೆ ವಿವಿಧ ಪತಾಕಾಳಿ . . . ಕಂಗೊಳಿಸಲ್ (ದಶಕು. ೪-೧೧೯). **ಪಂದರ:** "ಕಾವಣ ಪಂದರಮುಮೆನಲ್ಕಾವಗ ಚಪ್ಪರ ಮೆನಿಕ್ಕು" (ಕವಿಕಂ. ೧೭೭); ಅದಲ್ಲದೆಯುಂ ಮತ್ತ ಮೊರ್ಮ ಗಾಡಿಕಾರ್ತಿ ಸಂದಣಿಸಿ ಚೆಂದಂಬಡೆದ ಕೆಂದಳಿರ ಪಂ[ಪಾಕಾಂ. ಹಂ]ದರಮಂ ಮೆಯ್ವೆಂಕೆ ಗಂಜಿ ಪತ್ತೆಸಾರ್ದಿಂತೆಂದಳ್ (ಕಬ್ಬಿಕಾ. ೭೦); ಪರಿವಡೆದು ತೋರ್ಪ ಚೆಂದಳಿರ ಪಂದರಂಗಳಿಂ . . . ಪ್ರಪಾಶಾಲೆ ಕಂಗೊಳಿಸಿರ್ದುವು (ಪಾಸೋಪು.೨-೬). **ಪಂದರು:** "ಪಂದರುಯೆನಲ್ಕೆ ಚಪ್ಪರಮಕ್ಕು" (ಕಶರ. ೬೧); "ಪಂದರು ಚಪ್ಪರ" (ಕಲ್ಪದ್ರು. ೨೨೫). **ಪಂದಲ್:** "ಕಾವಣಮೆಂದೆನೆ ಪಂದಲ್" (ಚತುನಿ. ೭೫); "ಚಪ್ಪರಕೆ ಕಾವಣಮೆಂದು ನೆಱೆ ಪಂದಲೆಂ[ಪಾಕಾಂ. ರೆಂ]ದು" (ಕಬ್ಬಿಕೈ. ೨೫); ಕಣ್ಗೆಸೆ ಪತ್ತೆಳದಳಿರ್ದೋರಣಂಗಳಿಂದಾ ಪಂದಲ್ (ಉದ್ಭಟ.೮-೬); ಪಸೆ ಪಂದಲ್ ದಟ್ಟ ಜಾಗಂ ಜಗಲಿ . . . ಕನ್ನಡಿ ಜವಳಿಗಳುದ್ವಾಹದೊಳ್ ವರ್ಣನೀಯಂ (ಸೂಕ್ತಿಸು. ೬-೧). **ಪಂದಲು:** ಉರಿವ ಸೊಡರ ತಿಂಥಿಣಿಯಿಂ ತರಗೊಂಡ ಮರಕತಮಣಿಗಂಬಗಳಿಂ ಪಿರಿದೊಪ್ಪಿತಾ ಪಂದಲು ಚೂತ ಚಂಪಕ ತರುವನವೆಂಬ ಮಾಳ್ಕೆಯೊಳು (ಶ್ರೀಪಾಲ. ೧೦-೧೫); ಮರಕತಮಣಿಕಂಭಗಳ ಮೇಲೆಸೆವ ಕೆಂಬರಲ ಪಂದಲ ಚೆಲ್ವಿನಿಂದ ಅರಮನೆ ಮೆಱೆದುದು (ಚಂಪ್ರಸಾಂ. ೧೨-೨). **ಹಂದರ್:** ಹಕಾರಕ್ಕೆ—ಪಲಗೆ, ಹಲಗೆ; ಪಂದರ್—ಹಂದರ್ (ಶಮದ. ೧೫೯ ಪ್ರಯೋ). **ಹಂದರ$_1$:** ಹಸೆಹಂದರವನಿಕ್ಕಿ ನಿಮ್ಮಡಿಗಳಿಗೆಡೆಮಾಡಿಕೊಂಡಿಪ್ಪೆನಯ್ಯ (ಮಹಾದೇ. ಬ. ೧೩೯-೩೧೪); ಧರೆಯೊಳು ಪೆಸರ್ವೆತ್ತ ರಾಯರ ಮಕುಟವೆಂಬುರುತರಮಪ್ಪ ಹಂದರಕೆ ನರನಾಥ ನಿಮ್ಮಾಜ್ಞೆಯೆನಿಪೊಂದು ಲತೆಯನಾ ತ್ವರಿತದಿ ಹಬ್ಬಿಸಿ ಬಹೆನು (ನಾಗಕು. ೧೧-೨೪); ಯಾಗಶಾಲೆಯಂ ನೇರ್ಪಡಿಸಿ ಕುಂಬೆಯಂ ಬಲಿದು ಹಂದರವೆತ್ತಿ . . . ಯಾಗಂಗಳಂ ನೆರೆಯಿಸುತಿರ್ದರ್ (ರಾಮಾಶ್ವ. ೧೬-೪); ಪ್ರಕೃತಿಯ ಸುಂದರ ಹಂದರದಲ್ಲಿ ವಧುವಾಗಿರುವಳು ಈ ಮುಗುದೆ (ಭಾವಗೀ. ೭). **ಹಂದರು:** ಅಂದವಿಲ್ಲದ ಮಸ್ತು ಹಂದರಿಲ್ಲದ ಮದುವೆ ಕಂದನಿಲ್ಲದಳ ಮನೆವಾರ್ತೆ ಇವು ಮೂಱು ಕುಂದು ಕಾಣಯ್ಯ (ಸರ್ವಜ್ಞ.೧೬೯೧). 'ಹಂದರುವಣ' ಪರಾ. **ಹಂದಲ:** ಹಂದಲವೊಕ್ಕು ವಿವಾಹ ಮಂಟಪಕಾಸಂದದಿ ಬಂದನಾ ನೃಪತಿ (ಶ್ರೀಪಾಲ. ೧೦-೮೪). **ಹಂದಲು:** ಸೊಸೆಗೆ ಬಿಸಿ ಇಲ್ಲ, ಹಂದಲಿಗೆ ಹಸಿ ಇಲ್ಲ (ಗಾದೆ.)

ಪಂದರ ಪಣ, ಹಂದರ ಹಣ, ಹಂದಲ ಹಣ=ಮದುವೆ ಮುಂತಾದ ಸಮಾರಂಭಗಳಲ್ಲಿ ಮನೆಯ ಮುಂದೆ ಚಪ್ಪರ ಹಾಕುವಾಗ ಕೊಡಬೇಕಾದ ತೆರಿಗೆ; ಚಪ್ಪರಹಣ: ಎಟ್ಟಿತ್ತೊಕ್ಕಲ ಮದುವೆಯ ಪನ್ದರ ಪಣಮು ಸೂಳೆಯೆರಲ್ಲಿಯ ಕನ್ನಡಿವಣಮುಮಂ ಚಂದ್ರಾರ್ಕ್ಕತಾರಂ ಬಿಟ್ಟರ್ (ಎಕ. VII, ಶಿಕಾರಿ. ೨೯೫-೨೧; 1074); ಮದುವೆದೆಱೆ—ಮದುವೆಗಳ ಮೇಲಿನ ತೆರಿಗೆ. 'ಪಂದರ ಪಣ' ಎಂದರೂ ಇದೇ ಇರಬಹುದು (ಪಂದರ—ಹಂದರ=ಮದುವೆಯ ಚಪ್ಪರ) (ಕಶಾಅ. ೪೦೨); ಮೇಟಿಗಣ್ಡುಗಮುಮಂ ಹನ್ದರ ಹಣಮುಮಂ ಬಿಟ್ಟರು (ಕಇ. IV, ೩೯-೨೬; 1111); ಘಟ್ಟದೇವರಸರು ಮದುವೆಯಾದಲ್ಲಿ ಹಂದರ ಹಣವಂ . . . ಬಿಟ್ಟರು (ಸೌಇಇ. IX-i, ೨೦೦-೫೦; 1121); ಕೊಡವೀಸ ಹಂದರ ಹಣ ಹರವಿಗೂಳು (ಮೈಆರಿ. ೧೯೩೪, ೨೭-೨೧, 1430); ಅರತೆರೆ ಹಂದಲ ಹಣ ಪರಿಹಾರ (ಎಕ. IX, ಕೊಡಗು. ೩೩-೧೨; 1115 ?). **ಪಂದರವಿಕ್ಕು**=ಚಪ್ಪರವನ್ನು ಕಟ್ಟು,—ರಚಿಸು: ಬಾಣಜಾಲದಿಂ ಪಂದರವಿಕ್ಕಿದಂತಿರೆ ನಭಂ . . . ತಾಗಿದುವಂದೆರಡುಂ ಚತುರ್ಬಲಂ (ಪಂರಾಮಾ. ೪-೬೦); ಘನಮಾರ್ಗದೊಳ್ ಸರಲ ಸಂತತಿ ಪಂದರವಿಕ್ಕಿದಂತೆ ಸಂಧಿಸಿ ನಿಲೆ (ಜಗವಿ. ೮-೬೧). [ದೇ.॥ ತಮಿ. ಪನ್ತರ್, ಪನ್ತಲ್; ಮಲ. ಪನ್ತಲ್; ಕೊಡ. ಪಂದ; ತೆಲು. ಪಂದಿರಿ, ಪಂದಿಲಿ; ಕೋಲಾ. ಪನ್ದ್ರಿ]

ಪಂದರ 'ಪಂದರ್' ನೋ.

ಪಂದರಿಕ್ಕು, ಹಂದರಿಕ್ಕು (ಕ್ರಿ). ಚಪ್ಪರವನ್ನು ಹಾಕು; ಕಾವಣ ಕಟ್ಟು: ಕೂರ್ಗಣೆಯೊಳ್ ಪಂದರಿಕ್ಕಿದಂತಾಯ್ತು ಗಗನಮಂಡಳಮೆಲ್ಲಂ (ಪಂಪಭಾ. ೧೦-೭೨). **ಹಂದರಿಕ್ಕು:** ಶರದೊಳೆ ತಟ್ಟುಗಟ್ಟಿದುದು ದಿಕ್ತಟವಂಬಿನ ಹಂದರಿಕ್ಕಿದಂಬರತಳವೆಂಬಿನಂ ತುಱುಗಿ ಬೀಟ್ಟೊಡೆಯಚ್ಚಲಗಂಬು ತಾಗಿ (ಅನಂಪು. ೧೪-೬). [ಪಂದರ್+ಇಕ್ಕು]

ಪಂದರಿಸು, ಪಂದಲಿಸು, ಹಂಜರಿಸು$_1$ (ಕ್ರಿ). ೧. ಚಪ್ಪರವಾಗು; ಕಾವಣದಂತೆ ಹರಡು: ತಾರಾಪಥಮಂ ಮಂಡಲಮಂ ನೆಱೆ ಪಂದರಿಸಿ ಬೆಳೆದ ನವತರುಗಳ ತುಱುಗಿದ ತೂಱಲ್ಗೊಂಬಿನ ಕೆಲವು ಕವಲ್ಗೊಂಬೊಪ್ಪಿದುವು (ಜಯಕಾ. ೧೫-೨೫). **ಪಂದಲಿಸು:** ೧. ಮದವಣಿಗನ ಮುಂದೆಯ್ದುವ ನೃಪತಿಲಕರ ಪಲವು ಕೊಡೆಯಾಗಸಮಂ ಪಂದಲಿಸುತ್ತಂ ನಡೆತರೆ (ಜಯಕಾ. ೮-೨೭). **ಹಂಜರಿಸು$_1$:** ೨. ಹೆಣೆ: ಉರಿಕರಿಯಾದ ಕಂಕೊಳ್ಳಿಗಳನಱಸಿ ಸಿದ್ದಿಗೆಯ ನುಲಿಯ ಒತ್ತಿ ಬಿಗಿಬಿಗಿದು ಹಂಜರಿಸಿ ತವಗವನಿಕ್ಕಿ ಮತ್ತೆ ಮೇಲೊಂದು ತಲೆಗುಡಿಸಿಲಂ ಕಟ್ಟಿ (ಹಚಕಾ.೧೧-೪೩).

[ಪಂದರ್+-ಇಸು$_3$]

ಪಂದರು 'ಪಂದರ್' ನೋ.

ಪಂದಲ್ 'ಪಂದರ್' ನೋ.

ಪಂದಲಿಡು(ಕ್ರಿ).=ಪಂದರಿಸು ೧: ಮೇಲಾಗಸದೊಳು ಪಂದಲಿಟ್ಟಂತೆ ಮುಸುಕಲು ಶರವಲ್ಲಿ (ನೇಮಿಸಂ. ೨೭-೪೦).

[ಪಂದಲ್(<ಪಂದರ್)+ಇಡು$_1$]

ಪಂದಲಿಸು 'ಪಂದರಿಸು' ನೋ.

ಪಂದಲು 'ಪಂದರ್' ನೋ.

ಪಂದಲೆ, ಪಣ್ದಲೆ, ಹಂದಲೆ (ನಾ). ಹಸಿತಲೆ; ಆಗ ತಾನೇ ಕತ್ತರಿಸಿದ ತಲೆ; ರಕ್ತ ಬಸಿಯುತ್ತಿರುವ ತಲೆ: "ಪಂದಲೆಯೆಂದು ಪಸಿಯ ತಲೆ" (ಕಶಸಾ. ೫೮-೨೭೮); ಮರುಳ್ಗಳಾಟಮಂ ಪಳಪಳನೆಮೆಯಿಕ್ಕದೆ ನೋಡಿ ಮುಗುಳ್ನಗೆ ನಗುವ ವೀರಭಟರ ಪಂದಲೆಗಳುಂ (ಪಂಪಭಾ. ೧೦-೧೧೬ ವ); ಓವದೆ ಕೌಂತೇಯರನಿಕ್ಕಿ ಪಂದಲೆಗಳುಂ ತಂದಿಕ್ಕು (ಗದಾಯು. ೯-೨೯); ಪಂದಲೆಗಳ ಮಾಲೆಯ ಶೂಲದೆ ಕಲಿ ಗಂಜದೆ ಮನವನೆಂತು ಮಾಡಿದೆ ಮುಗ್ಧೇ (ಗಿರಿಕ. ೯-೧೧೪); ಅವರ ಪಂದಲೆಯ ತಿಱಿಕಲ್ಲಾಟದಿಂದ ಮರುಳ್ಪಡೆಗೆ ನಲವೆರ್ಚಿಸುತುಂ ಕಪ್ಪಕಾಣ್ಕೆಗಳನೆಟೆದು ತರ್ಪೆಂ (ರಾಮಾಶ್ವ. ೪೯-೧೮). **ಪಣ್ದಲೆ:** ಮಲೆಯದೆ ಮೀಱಿ ಕೀಱಿ ತಲೆದೋಱದೆ ಕಪ್ಪಮನಿತ್ತು ಬಂದು ಬಾಳ್ದೆಲೆಯನೆ ಕೊಟ್ಟು ಪೊತ್ತುವೆಸಗೆಯ್ವುದದಲ್ಲದೊಡಿಕ್ಕಿ ಮೆಟ್ಟ ಪಣ್ದಲೆಯನೆ ಕೊಳ್ಗುಂ (ಶಾಸಪ. ೧೫-೧೯; ಸು. 1158); ಪಾಡುವ ಭಟರ್ಕ್ಕಳ ಪಣ್ದಲೆಯಿಂದೆ ನೋಡಲಾಸುರಮು[ಮ]ಗುರ್ವ್ವುಮಾಯ್ತಿಱಿದುಗೆಲ್ದೆಡೆ ಬಿಜ್ಜಣದೇವಭೂಪನ (ಕಇ. I, ೨೬-೩೪; 1162); ಪಱಿದ ಪಣ್ದಲೆಯೋಳಿಗಳಿಲ್ಲ ನೋಳ್ಪಡಂ ಕೀಳ್ಗಳನಡ್ಡಗಟ್ಟಿ ಕೆಡದಿರ್ದ್ದ ತುರಂಗದ ಪೇರ್ವ್ವಣಂಗಳಂದಾಳ್ಗಳ ದೇವ ದೇಸುವಿಱಿದಾಹವ[ಅವ]ದ್ಭುತೆಯ್××

ಧಾತ್ರಿಯೊಳ್ (ಎಕ. VIII, ಸಾಗರ. ೧೪೦–೧೮; 1265). **ಹಂದಲೆ:** ಮುಂದಿಳುಹಿದಳು ಹೇಸಿಕೆ ಹೊನಲಿಡುವ ಹಂ[ಪಾಠಾಂ. ಹೆಂ, ಬಲು, ಹಱ]ದಲೆಯನಿದು ನಿನ್ನನುಜ ವೀರ ಖರಾಸುರನ ತಲೆನೋಡೆನಲು(ತೊರಂಗಾ. ೩–೭–೨೧); ಅದಿರದಿದಿರ್ಚಿ ಸಾರ್ಚಿದರ ಹಂದಲೆಯಂ ಹರಿದೆಯ್ದೆ (ಬೊಂಕಶಾ. ೧೯೩೬, ಹಾನುಗ. ೮೪–೮; ?). 'ಬಾಟ್ದಲೆ' ಪರಾ.

[ಪನ್$_2$(<ಪಸ್$_3$)+ತಲೆ$_1$]

ಪಂದಲೆಗೊಳ್ (ಕ್ರಿ). (ಕತ್ತರಿಸಿ) ರಕ್ತ ಬಸಿಯುತ್ತಿರುವ ಹಸಿಯ ತಲೆಯನ್ನು ಪಡೆ,—ಹೊಂದು: ಬಲಿದೆಚ್ಚಾ ಕವಲಂಬರೆಬರ ಪಂದಲೆಗೊಂಡದಜೆಂಗಳಗುಚ್ಚಳಿಸುತ್ತಿರೆ (ಜಯಕಾ. ೬–೪೩).

[ಪಂದಲೆ+ಕೊಳ್$_1$]

ಪಂದಲೆದರ್ (ಕ್ರಿ). (ಕತ್ತರಿಸಿ) ರಕ್ತ ಬಸಿಯುತ್ತಿರುವ ಹಸಿಯ ತಲೆಯನ್ನು ತೆಗೆದುಕೊಂಡು ಬರು: ರಣಾಡಂಬರದಿಂದಮಂಜ ದೊಡೆ ಪಂದಲೆದಂದಪೆನೆಂದು ಪೂಣ್ದು (ಪಂರಾಮಾ. ೧೩–೧೩೫).

[ಪಂದಲೆ+ತರ್]

ಪಂದಲೆಪಚ್ಚ 'ಪಂದಲೆವಚ್ಚ' ನೋ.

ಪಂದಲೆವಚ್ಚ, ಪಂದಲೆಪಚ್ಚ(ನಾ). ಹಸಿಯ ತಲೆಗಳನ್ನು ಆಭರಣವನ್ನಾಗಿ ಮಾಡಿಕೊಂಡಿರುವವನು; ಪರಮೇಶ್ವರ; ಶಿವ: "ಎಣ್ಮಯ್ಯಂ . . . ಪಂದಲೆವಚ್ಚಂ . . . ಅಯ್ಯೊಗಂ—ಈ ೩೩ ಈಶ್ವರಂಗೆ ಪೆಸರ್" (ಕಶಸಾ. ೪೭–೧); "ಪಂದಲೆವಚ್ಚ, ಸಾಂತ, ಬೆಳ್ಳಡಿಯನೆನೆ ಶಿವಗೆ ಪೆಸರ್" (ಕಬ್ಬಿಕೈ. ೫); ಪಂದಲೆವಚ್ಚನ ಪಸಿದೊಗಲ್ದಳೆದನ . . . . ಸೌಂದರ್ಯಶಾಲಿಯ ರಂಗಗೆ ಸಾಟಿಯೆಂಬ ಮಂದಭಾಗ್ಯರ ಮಾತು ನಿಜವೆ (ಶತಸಾಂ. ೮–೪೨); ಪಂದಲೆವಚ್ಚಂಗಚ್ಚಸರಮಂ ತುಡಿಸಿ (ರಾಮಾಶ್ವ. ೧೩೧–೧೨). **ಪಂದಲೆಪಚ್ಚ:** "ಪಂದಲೆಪಚ್ಚ, ಪಂದಲೆವಚ್ಚ = ಹಸಿ ತಲೆಗಳನ್ನು ಆಭರಣ ಮಾಡಿಕೊಂಡವ, ಶಿವ" (ಗಂಗಾಮ. ೧೯೩).

[ಪಂದಲೆ+ಪಚ್ಚ$_2$]

ಪಂದಳಿಗೆ (ನಾ). ಹಸಿಯ ಹುಲ್ಲಿನಿಂದ ಹೆಣೆದುದು; ಹುಲ್ಲುಚಾವೆ: ಪಂದಳಿಗೆನೆಲ ಮಿಂಡೆ ಬಿದ್ದಿನನ ಸವಿನುಡಿಯ ನಿಂದು ನೋಡುವುದೆನಲ್ ಹೊಂಡೆ ಬೆಂದಳಗೆ (ಕಾಲೂರ. ೬೪–೧೦೯). [ಪನ್$_2$(<ಪಸ್$_3$)+ದಳಿಗೆ]

ಪಂದಳಿರ್ (ನಾ). ಹಸುರಾಗಿರುವ ಎಲೆ; ಹೊಸಚಿಗುರು; ನವಪಲ್ಲವ: ಕೆಟಗಣ ಕೆಂದಳಿರ್ ಪುದಿದ ಮೇಗಣ ಪಂದಳಿರೊಂದಿದೊಂದು ಕೆಯ್ಗಟಿದ ಪಸುರ್ಪುಮಂ ಪೊಳೆವ ಕೆಂಪುಮನಾಳ್ದಿರೆ (ಪಂಪಭಾ. ೫–೩೨); ಪಂದಳಿರ ತೋರಣಂ . . . ಮಂಗಳಾನಕದೊಂದು ರವಂ ಬಗೆಗೆ ವಂದುದಂದರಮನೆಯೊಳ್ (ಕಾವ್ಯಾವ. ೨೩೪); ಜನ್ನಸಾಲೆಯ ಬಳಿಯ ಪಂದಳಿರ ಪಂದರದಿ ಸಮೆದ ಬೀಡಾರಕವರಂ ಪುಗಿಸಿ, ಪರಿದರ್ (ಶ್ರೀರಾಮಾ. ೪೦–೩೩೨). [ಪನ್$_2$(<ಪಸ್$_3$)+ತಳಿರ್$_2$]

ಪಂದಿ, ಹಂದಿ (ನಾ). ೧. (ಕಠಿಣವಾದ ಮೂತಿಯುಳ್ಳ ಮತ್ತು ಅದರಿಂದ ನೆಲವನ್ನು ಅಗೆದು ಗೆಡ್ಡೆಗೆಣಸುಗಳನ್ನು ತಿನ್ನುವ) ಒಂದು ಬಗೆಯ ಸಸ್ಯಾಹಾರಿಯಾದ ಪ್ರಾಣಿ; ವರಾಹ; ಸೂಕರ: ಉಪಶ್ರೇಣಿಕಂ ಬೇಂಟೆಯನಾಡಲ್ವೋಗಿಯಡವಿಯೊಳ್ ದುಷ್ಟಾಶ್ವಮನೇಱಿ ಪಂದಿಯ ಬಟಿಯಂ ತಗುಳ್ದೊಡೆ (ವಡ್ಡಾರಾ. ೧೬೨–೧೭); ಮಿನಾವೆ ಪಂದಿಯೆಂದೆನಿತಾನುಂ ತೆಱನಾಗಿ ಡೊಂಬವಿದ್ದೆಯನಾಡಲ್ ನೀನಱಿವೆಯ್ (ಪಂಪಭಾ. ೬–೫೭); ಕೆಟಲೆನಾಡ ಬೆಳತೂರ ಪಡುವಣ ದೆಸೆಯ ಮೊಱಡಿಯೊಳ್ ಪಿರಿಯ ಪನ್ದಿಗೆವಿಟ್ಟೊಡೆ ಪನ್ದಿಯುಂ ನಾಯುಮೊಡಸತ್ತುವು (ಎಕ. III, ಮಂಡ್ಯ. ೪೧–೧೧, 950); ಪಂದಿ ಡುಱುಕೆಂದೊಡೆ ತಾಂ ಡುಱುಕೆಂಬುದೇ ಮಹಾವನಕರಿಯಂ ವಿದಾರಿಸುವ ಸಿಂಹಂ (ಗಿರಿಕ. ೧–೨೯). **೨. ಕಾಡುಹಂದಿ:** ತುಂಗಭದ್ರೆಯಾ ತಡಿಯೊಳ್ ತಾಣಬೀಡುಗಳಿಟ್ಟು ರಾಮೇಶ್ವರ ಎಮ್ಬ ತೀರ್ತ್ಥದಾ ಮೊದಲೊಳ್ ಮೆಪ್ಪಿಕ್ಕಿ ಪೊರದ ಪನ್ದಿಗಳನಿಱಿಯಲ್ ಬನ್ದಲ್ಲೀ (ಲ್ಲಿ) (ಎಇ. XXXIII, ೩೩೧–೧೦; 804). **ಹಂದಿ:** ೧. "ಕೋಳಃ, ಕ್ರೋಡಃ, ಸೂಕರಃ, ವರಾಹಃ, ಪೋತ್ರೀ, ದಂಷ್ಟ್ರೀ, ಘೃಷ್ಟಿಃ, ಕಿರಿಃ—ಈ ೮ ಹಂದಿ" (ಹಲಾಯು. ೩೮–೭೩); ಅವಂ ಸತ್ತೊಡೆ ಹನ್ದಿ ಸತ್ತುದು ನಾಯಿ ಸತ್ತುದು (ಸೌಇಇ. XI–II, ೧೮೭–೧೫; 1104); ಈ ಕ್ರಮದಲ್ಲಿ ನಡೆಯದಾತಂಗೆ ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ . . . ಅವನ ಬಾಳುವೆ ಹಂದಿಯ ಬಾಳುವೆ (ಮಹಾದೇ. ಬ. ೯೦–೨೧೫); ಹಂದಿ . . . ಮಲೆವುತ ಗಜಱಿ ಗರ್ಜಿಸಿತು (ಕುಪ್ಯಾಅ. ೫–೪೫); ಹಂದಿಗೆ ತುಪ್ಪ ಸಕ್ಕರೆ ಉಣಿಸಲು ಗಜೇಂದ್ರನಾಗಬಲ್ಲುದೆ (ಪುರಂದ. ೧–೧೫೬–೧).

ಹಂದಿಯ ಗಡಿಂಬದ ಘಳೆ = ಭೂಮಿಯನ್ನು ಅಳೆಯಲು ಒಂದು ಪ್ರದೇಶದಲ್ಲಿ ಬಳಸುತ್ತಿದ್ದ ಒಂದು ಅಳತೆಯ ಕೋಲು,—ಗಳೆ: ಕಟ್ಟಿದಲಗಿನ ನಾಲ್ವತ್ತುಗೇಣ ಹಂದಿಯ ಗಡಿಂಬದ ಘಳೆಯ ಮತ್ತರಯ್ವತ್ತುಂಕೊಟ್ಟರ್ (ಎಇ. V, ೧೮–೪೩; 1142). **ಹಂದಿಮುಸುಡಿಹುಣ್ಣು** = ಹಂದಿಯ ಮೂತಿಯಂತೆ ಕೆಂಪಾಗಿದ್ದು ಯಾವಾಗಲೂ ಕೀವು ಸೋರುವ ಹುಣ್ಣು,—ವ್ರಣ: ಕಾಲಿನಲ್ಲಿ ಹಂದಿಮುಸುಡಿಹುಣ್ಣಾಗಿ ಕೀವು ಸೋರುತ್ತಿದೆ (ರೂಢಿ). **ಹಂದಿಮೂತಿಹುಣ್ಣು** ಹಂದಿಮುಸುಡಿಹುಣ್ಣು: ಕಾಲಿನಲ್ಲಿ ಹಂದಿಮೂತಿಹುಣ್ಣಾಗಿದೆ (ರೂಢಿ). **ಹಂದಿಯ ಸಲಿಕೆ** = ಒಂದು ಪ್ರದೇಶದಲ್ಲಿ ಬಳಕೆಯಲ್ಲಿದ್ದ ಧಾನ್ಯದ ಒಂದು ಅಳತೆ (?): ಮತ್ತರಿಂಗೆ ಪಂದಿಯ ಸಲಿಕೆಯೊಂದಂ ತಿಱುವರ್(ಎಇ. V, ೧೮–೪೬; 1142).

[ದೇ.॥ ತಮಿ. ಪನ್ಱಿ, ವನ್ಱಿ; ಮಲ. ಪನ್ನಿ; ತುಳು. ಪಂಜಿ; ಕೊಡ.ತೆಲು. ಪಂದಿ; ತೊದ. ಪೊಡಿ; ಕೋತ. ಪಜ್; ಪರ್ಜಿ. ಪೆಂಡ್, ಪೆಂದ್; ಗಡಬ. ಪಂಡ್, ಪಂಡು; ಗೊಂಡಿ. ಪದ್ದೀ; ಕುಇ. ಪಜಿ; ಕುವಿ. ಪಜ್ಜಿ, ಪರ್ಝ್ಝಿ]

ಪಂದಿಗ (ನಾ). ೧. ಒಬ್ಬಾತನ ಹೆಸರು: ಆತಂಗೆ ಮಗಂ ಸನ್ದ ಮಹಾಸಾಮನ್ತಂ ಪನ್ದಿಗನ್ (ಎಕ. XI, ಚಿತ್ರದು. ೭೪–೧೧; 968) ೨. ಒಂದು ಬಗೆಯ ಮೀನು: ಕೊರವಂ . . . ಮುಡಿಲುಂ ಪಂದಿಗನೆಂಬ ಮೀಂದೆಗೆದನಾ ಭಕ್ತಂ ಮಹಾಲೀಲೆಯಿಂ (ತ್ರಿಪುವಿ. ೫೭–೮) 'ಪಂದಿಮೀನ್' ಪರಾ. [ಪಂದಿ+–ಗ$_2$]

ಪಂದಿಗಡ್ಡೆ, ಹಂದಿಗಡ್ಡೆ, ಹಂದಿಗೆಡ್ಡೆ (ನಾ). ಒಂದು ಬಗೆಯ ಗಡ್ಡೆ; ವಾರಾಹಿ: ನಯನಜಲಂಗಳುಣ್ಮುವೊಡೆ . . . ಪಂದಿಗಡ್ಡೆಯ ಪುರುವಳ್ಳಿಯೂಷಜಳಮಕ್ಕುಪಯೋಗಿಸಿದಂದು ಮಟ್ಟುಗುಂ (ಲೋಕೋಪ. ೯–೨೦೫). **ಹಂದಿಗಡ್ಡೆ:** "ವಿಶ್ವಕ್ಸೇನಾ, ಪ್ರಿಯಾ, ಘೃಷ್ಟಿಃ, ವಾರಾವತಾಂಘ್ರಿ, ಬದರೀ—ಈ ೫ ವಾರಾಹಿ, ಹಂದಿಗಡ್ಡೆ" (ನಾಚಿರಾ. ೧೧೨); "ಅಮೃತ—ಬೋಟಗಡಲೆ, ಹಂದಿಗಡ್ಡೆ"(ಓಷಧಿ. ೪). **ಹಂದಿಗೆಡ್ಡೆ:** ಮುನಿಕುಮಾರರ್ಗೆ ಹಂದಿಗೆಡ್ಡೆಯಂ ದಾಡೆಯಿಂದಗುಟ್ಟು ನೀಡುವ ವನವರಾಹಂಗಳಿಂ . . . ಸೊಗಯಿಸುವುದು (ಕಾದಂಪೂ. ೨೨೦). [ಪಂದಿ+ಗಡ್ಡೆ./ತೆಲು. ಪಂದಿಗಡ್ಡ]

ಪಂದಿಗೊಳ (ನಾ). ಒಂದು ಊರಿನ ಹೆಸರು; ℙ ಧಾರವಾಡ ಜಿಲ್ಲೆಯ ಗದಗ ತಾಲ್ಲೂಕಿನ ಈಗಿನ (ಹಿರೇ)ಹಂದಿಗೋಳ: ಶ್ರೀ[ಕೊ]ನ್ತದ ಪೆಗ್ಗಟಯ್ಯಂ ಪನ್ದಿಗೊಳವನಚಳಪ್ರವೃತ್ತಿಯಿನ್ನಾಳುತ್ತುಂ (ಸೌಇಇ. XI–I, ೪೩–೧೫; 970). [ಪಂದಿ+ಕೊಳ$_2$]

ಪಂದಿದಲೆ (ನಾ). ಕೋಟೆಕಾಳಗದಲ್ಲಿ ಬಳಸುತ್ತಿದ್ದ ಒಂದು ಬಗೆಯ ಆಯುಧ; ಹಂದಿಯ ತಲೆಯಾಕಾರದ ಆಯುಧ; ℙ "ಹಂದಿಯ ತಲೆಯ ಶಕ್ತಿಯೂ ಅವುಗಳ ಕೋರೆಹಲ್ಲುಗಳ

ಮೊನೆಯೂ ಅದರಿಂದ ಏಟು ತಿಂದವರಿಗೇ ಗೊತ್ತು. ಅದೇ ಆಕಾರದ ಅದೇ ಶಕ್ತಿಗುಣಗಳುಳ್ಳ ಈ ಆಯುಧಗಳು ಕೋಟೆಯ ಮೇಲೆ ಯಾವಾಗಲೂ ಇದ್ದೇ ಇರುತ್ತಿದ್ದವು" (ಕರ್ಣಾಜ. ೫೮) ; ಕತ್ತರಿ ಪಂದಿದಲೆ ಹಾರೆ . . . ಗೊಂದಣದ ಸಂವರಣೆಯಿಂದಾ ಕೋಂಟೆ ಕಣ್ಗೊಪ್ಪಿತು (ಸಮ್ಯಕೌ. ೮-೨೮); ಬಲಿವ ಪೆಟಲ ಬೆಣೆ ಡೆಂಕಣಿಗ್ಯೆ ಪಂದಿದಲೆ ತಿರುಗುಣಿ ಭೀಮಗದೆಯ ಬಲಿದು ಕೆತ್ತುವ ಬಡಗಿಗಳಿಂದಾ ದುರ್ಗ ಸಲೆ ಮೆಱೆದುದು ಕಣ್ಗಳಿಗೆ (ಕುರಾಸಾಂ. ೩೭-೫೮) ; ಎಡಬಲದೊಳಿಟ್ಟಣಿಪರಂ ಮುಚ್ಚಿದರ್ ಕಲ್ಗುಂಡುವಳೆಗಳಿಂ ಪಂದಿದಲೆಗಳೊಳಿಟ್ಟು ಬೊಬ್ಬಿಱಿದರು (ಚಿಬಪು. ೪೨-೩೩) ; ಮೇಲೊಪ್ಪುತಿಹ ಪಂದಿದಲೆ ದಸಿ ಶೂಲಗಳ್ಮೂಲೋಕ ಕತಿಶಯಮಾಯ್ತು (ಕಂಸವಿ. ೨-೬೬). [ಪಂದಿ+ತಲೆ$_1$]

ಪಂದಿಪುಟ್ಟು 'ಪಂದಿಪೊಟ್ಟು' ನೋ.

ಪಂದಿಪೊಟ್ಟು, ಪಂದಿಪುಟ್ಟು, ಪಂದಿಪೋಟು (ನಾ). ೧. ಹಿಂದಿನ ಕಾಲದಲ್ಲಿ ಕೋಟೆಯ ರಕ್ಷಣೆಗಾಗಿ ಇಡುತ್ತಿದ್ದ ಒಂದು ಉಪಕರಣ,—ಸಾಧನ : ಗದೆ ಪಂದಿದ[ಪಾಠಾಂ. ತ]ಲೆ ಪಂದಿಪೊಟ್ಟಿಟ್ಟ ಡೆಂಕಣಿಗಳ ನಿಲಿಸಿದರು (ಕುರಾಸಾಂ. ೪೨-೩೬). ೨. (ಹಂದಿಯನ್ನು ಬೇಟೆಯಾಡಲು ಬಳಸುವ) ಒಂದು ಬಗೆಯ ಆಯುಧ : ತುಡುಕಿ ಪಿಡಿದು ಪಂದಿಗಳ ಜಾಯಿಲಗಳು ತಡೆದು ನಿಲಿಸಲು ಕಲಿಗಳು ಬಿಡದೆಯ್ತುಂದಿಟ್ಟ ಪಂದಿಪೊಟ್ಟುಗಳಿಂದ ಕಡಿಕೆಯ್ದುಱಿದಾಡಿದರು (ಕುರಾಸಾಂ. ೨೭-೮೯). **ಪಂದಿಪುಟ್ಟು** : ೨. ತಟ್ಟುಗಿದಂಬುಗಳಿಂದೆ ತಿವಿವ ಪಂದಿಪುಟ್ಟುಗಳಿಂದೆ ಕೊರಲು ಕೊಯ್ವವರಿಂದಸುಗಳು ಬಿಟ್ಟು ಪೋದಪುದರೆ ಬರನು (ರಾಮವಿ.೧೬-೨೭). **ಪಂದಿಪೋಟು**: ೧. ಸುರಗಿ ಸಬಳ ಪಂದಿಪೋಟಿಟ್ಟ ಗದೆ ತೊಲೆ ವರಗುಂಡು ಪೆಟಲುಗಳಿಂದ . . . ಲಗ್ಗೆಯನಿಳುಹಿದರು (ಕುರಾಸಾಂ. ೩೯-೨೭). 'ಪಂದಿದಲೆ' ಪರಾ.

[←ತೆಲು. ಪಂದಿಪೋಟು, ಪಂದೀಟ]

ಪಂದಿಪೋಟು 'ಪಂದಿಪೊಟ್ಟು' ನೋ.

ಪಂದಿಮೀನ್, ಹಂದಿಮೀನು (ನಾ). ಒಂದು ಬಗೆಯ ಮೀನು : ಗಱಿಮೀನ್ಸೀಗುಡಿ . . . ಪಂದಿಮೀನ್ಪೆಱೆಮೀನ್ಪಗ್ಗಡೆ ಬಣ್ಣಮೀನೆನಿಪಿವೆಲ್ಲಂ ಬೀಳ್ದುವಾ ತಾಣದೊಳ್ (ರಾಜಶೇ. ೫-೧೧೫). **ಹಂದಿಮೀನು**: ಕೊಡತಿಮೀನು, ಹಂದಿಮೀನುಗಳು ನೋಟಕ್ಕೆ ಇಷ್ಟಿಷ್ಟೂ ಚಂದವಾಗಿಲ್ಲ (ಬಾಲಪ್ರ. II, ೯೬೧). [ಪಂದಿ+ಮೀನ್$_2$]

ಪಂದಿರಿಬೋಯ (ನಾ). ಒಬ್ಬಾತನ ಹೆಸರು : ಪನ್ದಿರಿಬೋಯ [ಸ್ಕ] ಭಾರದ್ವಾಜಗೋತ್ರ ಪವ್ವಶಮ್ಮಣ (ಇಅ. VII, ೧೮೮-೪೨ ; 668). [?+ಬೋಯ]

ಪಂದಿವಿಂಡು (ನಾ). ಹಂದಿಗಳ ಗುಂಪು,—ಸಮೂಹ : ಪಂದಿವಿಂಡುಗಳಗ್ರಗಣ್ಯನೆನಿಪ್ಪ ಮದ್ವಪುವಂ ನೃಪಂ ಬಂದು ಬೀಳಿಪಂ (ಹಾಲಾಸ್ಯ. ೩-೧೩-೨೫). [ಪಂದಿ+ಪಿಂಡು$_2$]

ಪಂದಿವೇಂಟೆ, ಹಂದಿವೇಂಟೆ (ನಾ). ಹಂದಿಯ ಬೇಟೆ: ಮತ್ತಂ ಪಂದಿವೇಂಟೆಯ ಮಾತಂ ಬಿನ್ನಪಂಗೆಯ್ವಂ (ಪಂಪಭಾ. ೫-೪೫ ಪ). **ಹಂದಿವೇಂಟೆ** : ತನತನಗೆ ಹಂದಿವೇಂಟೆಗೆ ವನಚರರೆಯ್ತುಂದು ನಿಂದು (ಗಿರಿಕ. ೧-೯೯). [ಪಂದಿ+ಬೇಂಟೆ]

ಪಂದು (ನಾ). ಹಂಚಿಕೆ ; ಯುಕ್ತಿ ; ಉಪಾಯ : ನನ್ನ ಕರಕೊಂಡು ಹೋಗಿ ಅವರ ಮುಂದೆ ನಿಲ್ಲಿಸೋರಾದರೂ ಯಾರು ? ಅದಕ್ಕಾಗಿ ಒಂದು ಪಂದು ಮಾಡಿದೆ (ಮಲ್ಲಿ.೧೦) ; ತಾನು ಏನಾದರೂ ಒಂದು ಪಂದು ಮಾಡಬೇಕು. ಅವನನ್ನು ಉರುಳಿಸಬೇಕು ಎಂದು ಗೊತ್ತುಮಾಡಿಕೊಂಡನು (ಘಾಟೇಮು.೭೮) ; ಮುಖ್ಯನ್ಯಾಯಾಧೀಶನೇ ಎದುರಿಗೆ ಬಂದು ನಿಂತ ಮೇಲೆ ಇಂಥ ಪಂದು ಮಾಡುವುದಕ್ಕಾಗುವುದಿಲ್ಲವಷ್ಟೆ (ಹೇಕ್ಸ್‌ಪಿ.೨೫೧). [←ತಮಿ. ಪನ್ತು/ಪಾರ. ಮರಾ. ಫಂದ್=ಮೋಸ, ಕುಟಿಲ ; ಹಿಂ. ಪಂದ್, ಫಂದಾ=ಜಾಲ, ಪಾಶ, ಬಲೆ]

ಪಂದೆ, ಹಂದೆ (ನಾ). ಹೇಡಿ ; ಅಂಜುಬುರುಕ ; ಪುಕ್ಕಲ : "ದರಿತಃ . . . ಶಂಕಿತಃ—ಈ ೬ ಪ(ಹ)ಂದೆ" (ಹಲಾಯು. ೫೮-೧೯೯) ; ಕೊಂದು ಜಟಾಯುವನಾತಂ ಮುಂದಿಟ್ಟಾ ಜನಕಸುತೆಯನೊಯ್ದಂ ಮತ್ತಾ ಪಂದೆಯನಂತಕಮುಖದೊಳ್ ತಂದಿಟ್ಟಂದಲ್ಲದುಟಿಗುಮೇ ರೌದ್ರರಸಂ (ಕವಿರಾ. ೩-೧೯೪) ; ನಾಣಿಲಿ ಪಾಣ್ಬಂ ಪಂದೆ (ಪಡ್ಡಾರಾ. ೧೦-೩೦) ; ಕಲಿಯಂ ಪೊರೆದೊಡೆ ಕೂರ್ಪಂ ತೋರ್ಪಂತಿರೆ ತೋರ್ಕುಮೆ ಪಂದೆ ಪತಿಗೆ ಸಂಗರದೆಡೆಯೊಳ್ (ಗದಾಯು. ೨-೨೩) ; ಪೆಣನಂ ಕಂಡ ಪಂದೆಯಂತೆ ಕಣ್ಣಂ ಮುಚ್ಚುತ್ತುಂ (ಧರ್ಮಾಮೃ. ೧-೧೪೪) ; ಪಂದೆಯ ಗೆಂತಂತು ನೀಂ ಕುಱಿ, ಪೆಣ್ಗಂಜುವೆಯಾ ! (ರಾಮಾತ್ವ. ೬೧-೨೧). **ಹಂದೆ** : "ಭೀರು ಭೀತಂ ಹಂದೆ" (ಮಂಗರಾ. ೬೯-೧೨) ; ಹಂದೆಯ ಕೈಯಲ್ಲಿ ಚಂದ್ರಾಯುಧವಿರ್ದು ಫಲವೇನು (ಬಸವ. ೧೦೮) ; ಶರಣರ ಮನೆಯ ಬಿರುದಿನಂಕಕ್ಕೆ ಹಿಮ್ಮೆಟ್ಟದಿರೆಲೆ ದೇವ ಎಲೆ ತಂದೆ ಎಲೆಲೆ ಹಂದೆ ಕೂಡಲಸಂಗ ಸ್ವಯವಾಗು (ಬಸರ. ೧೨-೩೦) ; ಹಂದೆ ಹೋಗೆಲೆ ನಾಯೆ ನಿನಗೇಕಮರಮಾನವರ ದಂದಶೂಕರ ಭುವನದೊಡೆತನ (ತೊರರಾ. ೫-೩-೫೩) ; ನಿಂದು ಕಲಿಗಳ ಕಾಲ್ಗೆಱಗಿ ಬಿಡಿಸಿಕೊಂಡ ಹಂದೆಗಳಿಗೆ ಲೆಕ್ಕವಿಲ್ಲ (ಕಂಸವಿ. ೧೫-೯೮). [ದೇ.॥ ತೆಲು. ಪಂದ]

ಪಂದೆಗಜ್ಜ (ನಾ). ಹೇಡಿಯ ಕೆಲಸ : ಬಗೆದಂದೀ ಪಂದೆಗಜ್ಜಂಗಳ ನಱಿಪುವ ನಿನ್ನುಕ್ತಿಯಂತಿರ್ಕೆ (ಜಗವಿ. ೧೩-೫೬). [ಪಂದೆ+ಕಜ್ಜ$_1$]

ಪಂದೆತನ, ಹಂದೆತನ (ನಾ). ಹೇಡಿತನ ; ಅಂಜುಬುರುಕುತನ ; ಪುಕ್ಕಲುತನ : ನಿನಗೆ ಪಂದೆತನಮೆ ತಾನಾದೊಡಿನಿತಾನುಂ ಭಯಮಿಲ್ಲದೊರ್ಮೆಯೆ ನೆಲಪಿನ ಕಾಲೆಲ್ಲಮಂ ಕೊಯ್ವೆಂ (ಧರ್ಮಾಮೃ. ೨-೧೩೧) ; ಪಂದೆತನವಲಸತನದಿಂದ ಬಿಡುಗಡೆಯೊಂದಿ ಹಿಂದಿನಪಮಾನಗಳ ತೊಳೆಯಿರೇಳಿ (ವಿಸೀಗೀ. ೪೩-೫). **ಹಂದೆತನ** : ನಿನ್ನ ಸಿಂಹವಾಗಿ ಬೆಳೆದು ಎನ್ನ ಹಂದೆತನವ ಕಳೆದು ಮುನ್ನ ನಿನ್ನ ವಾಹನವೆನುವಂತೆ ಸಾಗುವೆ (ಜೀವಲ. ೭೬-೮). [ಪಂದೆ+-ತನ]

ಪಂದೆಮು (ನಾ). (?) : ಸಾಲಮಿಲ್ಲಾ ಮೆಕ್ಕೆ ಸಾಕ್ಷಿ . . . ಕದಂಬೂರಾ ನಾಲ್ಪದಿನ್ಬರು ವಿದತ್ತೂರು ನಾವಿದ ಪಂದೆಮು ಅಱಿಯ ಈರೆ ದೆತ್ತರಾ ಪೊರುಳ××× ಮುನಿಗಿತ್ತು (ಎಕ. X, ಕೋಲಾರ .೭-೯; ಸು. 760). [?]

ಪಂದೆವಾನಿಸ (ನಾ). ಹೇಡಿಯಾದ ಮನುಷ್ಯ ; ಅಂಜುಬುರುಕ : ಪಂದೆವಾನಿಸರ್ ಲೇಸನೆ ಕಾಣರೆಂಬ ಪಟನಾಣ್ಣುಡಿಯಂ ಪಿಡಿಗಟ್ಟುನಳ್ಳದಿರ್ (ಚಿಕವಿ. ೬-೧೪೭). [ಪಂದೆ+ಮಾನಿಸ$_1$(<ಮಾನುಸ)]

ಪಂದೊಗಲ್ 'ಪಂದೋಲ್' ನೋ.

ಪಂದೊವಲ್ 'ಪಂದೋಲ್' ನೋ.

ಪಂದೋಲ್, ಪಂದೊಗಲ್, ಪಂದೊವಲ್, ಹಂದೊಗಲ್ (ನಾ). ಹಸಿಯ ತೊಗಲು ; ಹೊಸದಾಗಿ ಸುಲಿದ ಚರ್ಮ : ಪಂದೋಲ್ ನೆತ್ತರ್ಕೀವಡಗಂದಿನ ತಾಂ ತೊಱೆದ ವಸ್ತು ಸತ್ತ ಕ್ರಿಮಿಗಳ್ ಸಂದಸ್ಥಿಯೆಂಬಿವೇಟುಂ ಕುಂದದೆ ಮುಟ್ಟುಪಡಮುಕ್ಕುಮರ್ಹನ ಮತದಿಂ (ಧರ್ಮಾಮೃ. ೫-೧೩೩) ; ಪಂದೋಲ್, ಪಂದೊವಲ್ (ಶಮದ. ೧೮೨ ಪ್ರಯೋ). **ಪಂದೊಗಲ್** : ಪಂದೊಗಲೊಳ್ಪುಟುವೆರಸು ತೀವಿದಾ ನೀರುಮನುಂಡು ಗಡಂ ತಮ್ಮಾಚಾರಕೆ ××× ಮಿಗಿಲಾಮೆ ಪಿರಿಯರೆಂಬರ್ ಕೆಲಬರ್ (ಸಮಪ. ೬-೧೫). **ಪಂದೊವಲ್** : ನಾಭಿವರೆಗಂ ಬಸಿಱಂ ಪೋಟ್ಟು, ಅಲ್ಲಚಮ್ಮಂ—ಪಂದೊವಲಂ ತೆಗೆದು (ಪಡ್ಡಾರಾ. ೫೦-೫) ; ಆ ಚಂಡಾಲಕನ್ನಿಕೆ ರೋಮಂಬೊರೆದ ಪಂದೊವಲ ಪಂಜರ

ದೊಳಿಕ್ಕಿ . . . ಪಡಿಯಂ ಕೆತ್ತಗುಳಿಯನಿಕ್ಕಿ (ಕಾದಂಉ. ೭೫೦); ಅವರಾಳ್ತನವ ಕಂಡುಱದೆ ಕಣ್ಣಿಟ್ಟು ಕಲ್ಲೇಱಿ ಪಂದೊವಲನಾಂತು ದೆಸೆಯುಟ್ಟಿಗೆಯನುಟ್ಟು ಭವಗೆಟ್ಟ ಭರ್ಗ (ಉದ್ಭದೇ. ೫-೨೯); ನರರ ತಲೆಗಳ ಜಪದ ಸರದಿಂದೆ ಪಂದೊವಲ[ಪಾಠಾಂ.ಪಸಿದೊಗಲ]ಧೋತ್ರದಿಂದ . . . ಭಯಂಕರರೂಪನಾದ ಮೋದೋಹೋತನೈತಂದೊಡೆ(ಜೈಮಿಭಾ.೧೬-೨೪). **ಹಂದೊಗಲ್:** ಹಂದೊಗಲ ಹಾಸಿನೊಳು ಮಂಚಂ ಜಡಿಯೆ ಹೊಲೆಯ ನೋಲಗವಿತ್ತು (ಹಚಕಾ. ೧೧-೩೧).

[ಪನ್$_2$(<ಪಸಿ$_3$)+ತೋಲ್$_1$]

ಪಂದ್ಯ 'ಪಂತ$_1$' ನೋ.

ಪಂದ್ಯಕಟ್ಟು 'ಪಂತಂಗಟ್ಟು' ನೋ.

ಪಂದ್ಯಾಟ (ನಾ). = ಪಂದ್ಯ ೧ : ಇಂದು ಭಾರಿ ಭೋಜನ ; ಆಮೇಲೆ ಪಂದ್ಯಾಟ (ಮಣಿಸ. ೮೩); ಆ ಪುಟ್ಟ ಹುಡುಗನಿಗೆ ಬೇಗನೆ ಪಂದ್ಯಾಟದ ಹುಚ್ಚು ಹಿಡಿಯಿತು (ರಂಗವ. ೨೧೩); ಪಂದ್ಯಾಟದಲ್ಲಿ ಯಾರೂ ಹೆಸರು ಕೊಡಬಹುದು (ನೆಲಮು. ೩೩-೨೨). [ಪಂದ್ಯ (<ಪಂತ$_1$)+ಆಟ]

ಪಂಪ$_1$ (ನಾ). ಸಮಭಾಗ : "ಪಂಪಮೆನಲ್ ಸಮಭಾಗಂ" (ಚತುನಿ.೯); "ಪಂಪಮೆ ಸಮಭಾಗಂ" (ಕವಿಕಂ. ೫೪).

[<ಪಸು$_1$?./ತಮಿ. ಪಯಲ್ ; ತೆಲು. ಪಂಪಕ, ಪಂಪು]

ಪಂಪ$_2$, ಹಂಪ$_1$ (ನಾ). ೧. ಒಬ್ಬಾತನ ಹೆಸರು : 'ಪಂಪಯ್ಯ' ಪರಾ. ೨. ಕನ್ನಡ ಭಾಷೆಯಲ್ಲಿ 'ಆದಿಪುರಾಣ', 'ವಿಕ್ರಮಾರ್ಜುನ ವಿಜಯ'ಗಳೆಂಬ ಕಾವ್ಯಗಳನ್ನು ಬರೆದಿರುವ ಸುಪ್ರಸಿದ್ಧ ಜೈನಕವಿ : ಮುಂ ಸಮಸ್ತ ಭಾರತಮನಪೂರ್ವಮಾಗೆ ಸಲೆ ಪೇೞ್ದ[ಕವೀಶ್ವರರಿ]ಲ್ಲ ವರ್ಣಕಂ ಕತೆಯೊಳೊಡಂಬಡಂ ಪಡೆಯೆ ಪೇೞ್ವೊಡೆ ಪಂಪನೆ ಪೇೞ್ಗುಮೆಂದು ಪಂಡಿತರೆ ತಗುಳ್ದು ಬಿಚ್ಚಟಿಸೆ ಪೇೞಲೊಡರ್ಚ ದೆನೀ ಪ್ರಬಂಧಮಂ (ಪಂಪಭಾ. ೧-೧೧); ನಯದಿಂ ಪಂಪನೊಱಲ್ದು ನಿರ್ಮಿಸಿದ ಪೊನ್ನಂ ಪ್ರೀತಿಯಿಂ ಪೇೞ್ದ ಭಕ್ತಿಯಿನಾ ರತ್ನಕವೀಶ್ವರಂ ಸಮೆದ ತತ್ಕಾವ್ಯತ್ರಯಕ್ಕಂ ಜಗತ್ತ್ರಯಮುಂ ಮುಂ ಬೆಲೆಯಾಗಿ ಪೋಯ್ತೆನೆ (ಚಂದ್ರಪು. ೧-೬೬) ; ಆದಿಕವಿ ಪಂಪನೆಂದನುವಾದಿಸೆ ವಾದಿಸಿ ವಿರೋಧಿ ವಿಪರೀತತೆಯಿಂದೋದೆ ವಿಲೋಮದೆ ಪೆಸರಂ ಮೇದಿನಿಯೊಳವನ ಪೆಸರೆ ಪೆಸರ್ವಡೆದೆಸೆಗುಂ(ಧರ್ಮನಾ.೧-೩೬). **ಹಂಪ$_1$:** ೨. ಶ್ರೀವಿಜಯನ ಹೊನ್ನನ ಹಂಪನ ಸುಜನೋತ್ತಂಸನ ಸುಮಾರ್ಗಮಿದಱೊಳೆ ಲಕ್ಷ್ಯಂ (ಶಮದ. ೫) ; ನೇಮಿಚಂದ್ರನ ಹಂಪನ ನಾಗವರ್ಮಾದಿ ಭೂಮಿಗೊಪ್ಪಿದ ಕವಿಗಳನು ಪ್ರೇಮದಿಂ ಬಲಗೊಂಡು ಬಣ್ಣಿಸೆ (ಜೀವಂಸಾಂ. ೧-೪). [?]

ಪಂಪಕ, ಪಪ್ಪಕ$_1$, ಪಪ್ಪುಕ$_1$ (ನಾ). ೧. ದಟ್ಟವಾದುದು ; ಒತ್ತಾಗಿರುವುದು ; ಸಂದಣಿಸಿದುದು : ಸಂದಣಿಸಿದ ಕುಂದಲತೆಯ ಮೇಳೈಸಿದ ಮಾಲತೀಲತೆಯ ಪಂಪಕಮಾದ ಚಂಪಕಾಲತೆಯ ಪಿಣಲೇಱಿದ ಕರವೀರಲತೆಯ . . . ರತ್ನರಚಿತ ಕೃತಕಾಚಲಂಗಳೊಳ್ (ಅನಂಪು. ೧೦-೨೬ವ). **ಪಪ್ಪಕ$_1$:** ೧. ಪಪ್ಪಕಮಾಗಿರೆ ಪಱಮೆಗಳುಪ್ಪಯಣಂ ಗೆಯ್ದುವಂದು ಪೊಸಮಲ್ಲಿಗೆಯೊಳ್ (ಅಜಿಪು. ೬-೨೧). **ಪಪ್ಪುಕ$_1$:** ೨. ಹೆಚ್ಚಳ; ಆಧಿಕ್ಯ : ಪ[ಪಾಠಾಂ.ಕ]ಪ್ಪುಕಮಪ್ಪಂಗನೆಯ ತೊಳಪ್ಪಡಿದಳಿರ್ಗೆಯ್ದೆ ಸೋಲ್ತು ತಳಿರ್ಗಳ್ ಕೆಂಪಂ ಕಪ್ಪಂಗುಡುವವೊಲೂಡಿದಳೊಪ್ಪಿರೆ ಕೆಂದಳದೊಳಟ್ಟಿಕೊಂಡಲತಗೆಯಂ (ಲೀಲಾವ.೧೨-೭೪); ಮುಡಿದ ಮಲ್ಲಿಗೆಯ ಪರಿಮಳಕ್ಕಮಡಸಿದ ಕಪ್ಪುರದ ಪಪ್ಪುಕಕ್ಕಂ ಮಱಿದುಂಬಿವಿಂಡು ಮುಂದೆ ಮಂಡಳಿಸಿ ಕಟ್ಟ ಬರೆ (ಅನಂಪು. ೨-೨೮ವ). (ಗು). ೩. ಮನೋಹರವಾದ ; ಅತಿಶಯವಾದ : ಅಪ್ಪುವಳಿಕಿನ ಪಪ್ಪುಕ ಜಗಲಿಯೊಳ್ ವನಣನೋದಪ್ರಸಂಗಚತುರ ಪ್ರಸಾದಿತ ಪರಿಜನಪರೀತಂ ಸುಖಾಸೀನನಾಗಿರ್ಪಿನಂ (ಅನಂಪು. ೭-೧೧ ವ).

[ದೇ.॥ ತಮಿ. ಪಮ್ಪು, ಪಮ್ಮು = ದಟ್ಟವಾಗಿರು, ಒತ್ತಾಗಿರು ; ಪಮ್ಪಲ್ ; ತೆಲು. ಪಂಬು, ಪಮ್ಮು = ಅತಿಶಯವಾಗು, ಅಧಿಕವಾಗು]

ಪಂಪಯ್ಯ (ನಾ). ಒಬ್ಬಾತನ ಹೆಸರು : ಚಿಮ್ಮಚನೂರ ಮಹಾರಾಜಯ್ಯನುಂ ಮೊಳಿಯನೂರ ದೇವಯ್ಯನುಂ ಪಂಪಯ್ಯನುಂ(ಎಕ. XI, ಚಿತ್ರದು. ೭೬-೨೦; 937) ; ಪಂಪಯ್ಯಂ ನಾನೊನ್ದಕ್ಷತೆಯನಪ್ಪಂದವಿಾಯೆನೆನ್ದು ತಱಿಸಲಾ ಮಾ(ಂ)ನ್ಯ ದಿಟ್ಟ ಮಹಾಜನಮ ನಮಸ್ಕಾರಂಗೆಯ್ದು (ಸೌಇಇ. XI-i, ೩೬-೭ ; 942). [ಪಂಪ$_2$+ಅಯ್ಯ$_1$]

ಪಂಪಲ 'ಪಣ್$_3$' ಪರಾ.

ಪಂಪಱೆ (ನಾ). ಒಂದು ಬಗೆಯ ವಾದ್ಯ.

ಪಂಪಱೆಘೋಷಣ = ಕರ್ನಾಟಕದ ಚೋಳವಂಶದ ರಾಜರ ಒಂದು ಬಿರುದು : ಕಾಸ್ಯಪಗೋತ್ರಂ ಕಲಿಕಾಲಾನ್ವಯಂ ಕಾವೇರೀವಲ್ಲಭಂ ಪಂಪಱೆಘೋಷಣಂ ಮಯೂರಪಿಂಛಧ್ವಜಂ . . . ಗೊಂದಳಬಡಿವಂ ನಾಮಾದಿ ಸಮಸ್ತಪ್ರಶಸ್ತಿಸಹಿತಂ (ಸೌಇಇ. IX-i, ೨೦೭-೧೦ ; ಸು.1124). [ಪಂಪ್ಯ (P←ತಮಿ. ಪಮ್ಪ್ಯ ; ತೆಲು. ಪಂಬ)+ಪಱೆ$_1$]

ಪಂಪಾದೇವಿ (ನಾ). ಒಬ್ಬಾಕೆಯ ಹೆಸರು : ಶ್ರೀ ಮಚ್ಚಾಳುಕ ಪೆರ್ಮ್ಮಾನಡಿ ದೇವರು ತತ್ಪುತ್ರಿ ಶ್ರೀ ಪಂಪಾದೇವಿಯರ ರಾಜ್ಯಾಭ್ಯುದಯದಂದು (ಎಕ. IV, ಹುಣಸೂ. ೫೦-೩ ; 997). [ಸಂ.ಪಂಪಾದೇವೀ]

ಪಂಪು$_1$(ನಾ).೧. ಮಾಯಾವಿದ್ಯೆ; ಇಂದ್ರಜಾಲ ; ಗಾರುಡಿ:"ಪಂಪು = ಕಣ್ಣುಕಟ್ಟು ; ಗ್ರಹ" (ಕಲ್ಪದ್ರು. ೨೨೬). ೨. ಶಕ್ತಿಪ್ರದರ್ಶನ ; ವಿಜೃಂಭಣೆ ; ವೈಭವ.

ಪಂಪುಮಾಡು = ಶಕ್ತಿಯನ್ನು ಪ್ರದರ್ಶಿಸು ; ವಿಜೃಂಭಿಸು : ಇಂತು ಪ್ರತಿಜ್ಞೆಯಾ ಮಾಡುವನಿತರೊಳು ವಿಷ್ಣುಚಕ್ರವು ಪಂಪುಮಾಡೆ . . . ನೆಟ್ಟನೆ ಪುಲಿಶಿರವರಿದು (ಯನಳ. ೧೧).

[ದೇ.॥ ತಮಿ. ಪಮ್ಪು = ಆಟ, ವಿನೋದ, ಕ್ರೀಡೆ ; ತೆಲು. ಪಂಪು]

ಪಂಪು$_2$ (ನಾ). ೧. ಬಾವಿ, ಹೊಳೆ ಮೊದಲಾದ ಜಲಾಶಯಗಳಿಂದ ನೀರನ್ನು ಮೇಲಕ್ಕೆ ಎತ್ತುವ ಸಾಧನ ; ರೇಚಕಯಂತ್ರ; ಪೂರಕಯಂತ್ರ : ನೀವು ಬಾವೀಗೆ ಪಂಪು ಹಾಕಿಸೋದೂ ಸಾಕು, ಅದರಲ್ಲಿ ನಾಗಪ್ಪ ಬೀಳೋದೂ ಸಾಕು! (ಕಾಬಝಾ. ೨೬). ೨. ಸೀಮೆಯೆಣ್ಣೆ ಮೊದಲಾದುವನ್ನು ಡಬ್ಬದಿಂದ ಮೇಲಕ್ಕೆತ್ತುವ ಸಾಧನ : ಮಗ್ಗುಲಲ್ಲಿ ಸೀಮೆಯೆಣ್ಣೆಯ ಡಬ್ಬ, ಬುದ್ಧಿವಂತ, ಪಂಪು ; ಅದರ ಮಗ್ಗುಲಲ್ಲಿ ಗಳುವಿನ ಮೇಲೆ ನೇತಾಡುವ ಎಲೆಸರ, ಪಂಚೆ ಇತ್ಯಾದಿ (ರಾಮಾನೆ.೧೦೧). ೩. ಬೈಸಿಕಲ್ಲಿನ ಚಕ್ರ ಮೊದಲಾದುವುಗಳಿಗೆ ಗಾಳಿ ತುಂಬುವ ಸಾಧನ : ಚಕ್ರದಲ್ಲಿ ಗಾಳಿಯೇ ಇಲ್ಲ. ಪಂಪು ತೆಗೆದುಕೊಂಡು ಬಾ (ರೂಢಿ). ೪. ಸೊಳ್ಳೆ ಮೊದಲಾದ ವಿಷಕ್ರಿಮಿಗಳನ್ನು ನಾಶಪಡಿಸಲು ದ್ರಾವಕಗಳನ್ನು ಸಿಂಪಡಿಸುವ ಸಾಧನ ; ಪಿಚಕಾರಿ : ಬರಿ ದ್ರಾವಕ ತಂದರೆ ಸೊಳ್ಳೆ ಸಾಯುತ್ತದೆಯೆ ? ಪಂಪು ತೆಗೆದುಕೊಂಡು ಬಾ, ಹೊಡೆಯೋಣ (ರೂಢಿ). ೫. ಅನಿಲವನ್ನಾಗಲಿ, ದ್ರವವಸ್ತುವನ್ನಾಗಲಿ ಹೀರಿ ಹೊರಕ್ಕೆ ಬಿಡುವ ಸಾಧನ, ಯಂತ್ರ : ಗಂಟಲ ಕುಹರ ಚುಚ್ಚುವ, ಹೀರುವ, ಒತ್ತಿ ಹೀರುವ . . . ಕೀಟಗಳಲ್ಲಿ ಹೀರುವ 'ಪಂಪಾ'ಗಿದೆ (ಕೀಟಬೆ. ೨೮).

ಪಂಪು ಮಾಡು = ಪುಸಲಾಯಿಸು : ಅವನನ್ನು ಈ ಕೆಲಸಕ್ಕೆ ಒಪ್ಪಿಸಲು ಎಷ್ಟು ಪಂಪು ಮಾಡಬೇಕಾಯಿತು (ರೂಢಿ). ಪಂಪು ಹೊಡೆ = ಪಂಪುಮಾಡು : ಎಷ್ಟು ಪಂಪು ಹೊಡೆದರೂ ಅವನನ್ನು ಜಗ್ಗಿಸಲಾಗಲಿಲ್ಲ (ರೂಢಿ). [←ಇಂ. Pump]

ಪಂಪೆ (ನಾ). ಪಂಪಾಕ್ಷೇತ್ರ ; ಹಂಪೆ : ಆದಿತ್ಯವಾರ ಸೂರ್ಯ್ಯಗ್ರಹಣದಂದು ಪಂಪೆಯ ತೀರ್ತ್ಥದಲು ಶ್ರೀರಾಜಧಾನಿ ವಿಕ್ರಮಪುರದ ಬ್ರಹ್ಮ

ಪುರಿಯ ನಂದಿಯಣ್ಣ ಪಡಂಗಿ ಭಟ್ಟೋಪಾಧ್ಯಾಯರು ಪ್ರಮುಖಂ ನಾಲ್ವತ್ತಿರ್ವರು ವಿದ್ವಾಂಸರಪ್ಪ ಮಹಾಜನಕ್ಕೆ . . . ಕೊಟ್ಟ ಕೆ[ಇ] ಒಂದು (ಸೌಇ. XI-1, ೪೮-೬ ; 1058) ; ಸೌಂದರವೆರಸಾ ಮೃಡನಂ ಬೀಡ್ಕೊಂಡರಸಂ ಬಿಡದೆ ಮನಂಗೊಳಿಪ ಪಂಪೆಯಂ ಪೊಜಮಟ್ಟಂ (ಉದ್ಭಟ. ೪-೧೩೨). 'ಹಂಪೆ' ಪರಾ. [ಸಂ. ಪಂಪಾ]

ಪೆಂಬಕ್ಕಿ, ಹಂಬಕ್ಕಿ (ನಾ). ಒಂದು ಬಗೆಯ ಹಕ್ಕಿ : ಎಲ್ಲಯ ಮಾರನ್ನೆಪರ ಕೊಂಡು ಪೋದುದೆಂದೆಲ್ಲರು ಪಂಬಕ್ಕಿಯಂತೆ ನಿಲ್ಲದೆ ಬಾಯ್ವಿಡುತಿರೆ (ನೇಮಿಸಂ. ೨೪-೧೧೬). **ಹಂಬಕ್ಕಿ :** ಹಂಬಕ್ಕಿಯಂತೆ ನಾ ಬಾಯಂ ಬಿಡುತ್ತಿದೇನೆ ಬಳಲಿದಿಯಲಾ ಮಗನೇ ಹಂಬಲಿಸದಿರೆಂಬುದು ನಿಮಗಂ ಬಜನಾಯಿತೆ ಪ್ರಸನ್ನಶಂಕರಲಿಂಗಾ (ಶಂಕಳಂ. ೫೮).

[ಪನ್[2]? + ಪಕ್ಕಿ]

ಪೆಂಬದ (ನಾ). ದೆವ್ವ, ಭೂತಗಳ ಆವೇಶಕ್ಕೊಳಗಾಗಿ ಕುಣಿಯುವವನು : ಭೂತಕ್ಕೆ ನರ್ತಿಸುವ ಪಂಬದನಿಗಾದರೂ ಸರಿಯೆ ; ಬಹು ಸಂತೋಷ (ಒಡ್ಡಿಆ. ೩೦). [←ತುಳು. ಪಂಬದೆ]

ಪೆಂಬಲ್, ಹಂಬಲ, ಹಂಬಲು (ನಾ). ೧. ತವಕ ; ಹೆಬ್ಬಯಕೆ ; ಉತ್ಕಟೇಚ್ಛೆ ; ಆಸೆ; ಆಕಾಂಕ್ಷೆ ; ಅಪೇಕ್ಷೆ : ಎಲ್ಲರುಮಿಾ ಕುಮಾರನಂ ಪಿಡಿದಿರಿಮೆನ್ನ ಪಂಬಲನಿದಂ ಬಿಸುಡಿಂ ಬಿಡಿಮೆಂದು ಪೇಚರಂ ಬಿಡಿಸಿ ದನಾಪ್ತರಂ (ಅದಿಪು. ೨-೫೦) ; ಕದನಕ್ಕಳ್ಳಿ ಕೃಷ್ಣಪಪನನಾ ವನೆದ ಪಂಬಲಂ ಬಿಸುಟು ತನ್ನ ಯೂಥಮುಮಂ ಮಱೆದು ತಾನನಾಥನಾಗಿ ನಾರಾವಾರಂಬೋಗಿ (ಪಂಚತಂ.೨೭೭-೧೦) ; ಪಲವುಂ ಶಾಸ್ತ್ರಮನೋದಿದ ಬಲದಿಂ ವೆಯ್ಯೆರ್ಬ ಗರ್ವದಿಂ ಧರ್ಮದ ಪಂಬಲನುಬಿದು (ಧರ್ಮಾಮೃ. ೫-೨೪) ; ನೆಗಟ್ಟಿನಗೆ ತಂದೆ ತಾಯ್ ಸೊಸೆ . . . ಎಂಬೀ ಮೋಹದ ಬಂಬಲ ಪಂಬಲೊಳೇಂ (ಪುಷ್ಪಪು. ೧೩-೪೮). ೨. ಆಸಕ್ತಿ : ಪಗಲಿರುಳೆಂಬೀ ವಿಭೇದಂಗಳಿಲ್ಲಾ ಳರಸೆಂಬೀ ಪಂಬಲಿಲ್ಲಾರ್ಜವರೆ ಮನುಜರೆಲ್ಲಂ . . . ಸುಷಮಸುಷಮಕಾಲಸ್ವಭಾವಪ್ರಭಾವಂ (ಪಂರಾಮಾ.೧-೬೦). **ಹಂಬಲ :** ೧. ಧುರದ ಹಂಬಲ ಬಿಡಿಸಿ ಲಂಕಾಪುರ ಭಯಂಕರನೊಡನೆ ಬಲುಸಂಗರವ ಸಂಘಟಿಸಿದನು (ತೊರಾ. ೬-೩೦-೩೭) ; ಮನೆಯ ಹಂಬಲ ಮಱೆದ ಕೆಳೆಯರನಿನಿಸು ನೆನಸನು (ನಾಳ್ವಭಾ. ೧೭-೨೬) ; ಡಂಭಕ ಹಿರಣ್ಯಕ ಕುಮಾರ ಪ್ರಹ್ಲಾದನ್ನ ಹಂಬಲವಿಲ್ಲದೆ ಬಾಧಿಸ ಬರಲು . . . ಪೊರೆದದ್ದು ಎಲ್ಲಿ-ಕಲಿತೆಯ್ಯ (ಪುರಂದ.೧-೯೬-೯). **ಹಂಬಲು :** ೧. ನಮಗೆಮ್ಮ ಹಂಬಲು ಬೇಡ (ತಿರುರ. ದೇ. ೧೭-೧೪) ; ಶಂಭುಪದ ಭಕ್ತಿ ನಂಬುಗೆಯ ಹಂಬಲು ಬೇಳು (ದೀಕ್ಷಾಬೋ. ೧೬-೨೫೬); ಬಯ್ವ ಹೆಂಡರ ಚಿಂತೆಯಿಲ್ಲದೆ ಹೊಯ್ವ ಕೀರ್ತಿಯ ಹಂಬಲಿಲ್ಲದೆ . . . ಬದುಕುವ ದೈವದೂರರು ನಾವು (ಕುವ್ಯಾಳ. ೧೩-೪) ; ಪರಕಾಮಿನಿಯರ ಹಂಬಲು ಬಿಡಬೇಳು (ಪುರಂದ. ೧-೧೪೪-೨). ೩. ನೆನಪು; ಸ್ಮರಣೆ : ಬೆಂಬಿಡದೆ ಗದೆಯಿಂದ ವಕ್ಷದ ತುಂಬನೆಜಗಲು ಮುಜ್ಜನಿತ್ತಣ ಹಂಬಲನು ಪ್ರದ್ಯುಮ್ನನುರುತರ ಗದೆಯ ಘಾಯದಲಿ (ನಿಭಾಗ. ೧೦-೪೧-೩೩).

[ದೇ.॥ ತುಳು. ಹಂಬಲ್]

ಪೆಂಬಲಿಸು, ಹಂಬಲಿಸು (ಕ್ರಿ). ೧. ತವಕಿಸು ; ತೀವ್ರವಾಗಿ ಬಯಸು ; ಹಾತೊರೆ ; ಉತ್ಕಟೇಚ್ಛೆಯನ್ನು ಹೊಂದು : ಅಲಸದೆ ಮಾಡಿ ಬೇಸಱದೆ ಸಾಲ್ವುವಿದೆನ್ನದೆ ಮೆಯ್ಯೊಗಕ್ಕೆ ಪಂಬಲಿಸದೆ . . . ನಯಮಪ್ರಮಂಗಳಂ ಸಲಿಸಿದರ್ (ಪಂಪಭಾ.೧-೧೩೬); ಎಲೆ ವೈಶಂಪಾಯನ ತನ್ನೊಲವಿಂದಂ ಬಂದನೀಗಳಜಿಸುತ್ತೆ ಕಪಿಂಜಲನಿಲ್ಲಿಗೆ ನಿನ್ನಂ ಪಂಬಲಿಸುತ್ತಂ (ಕಾದಂಬಿ. ೬೧೧); ಕೆಮ್ಮನೆ ದೇವಲೋಕಸುಖಮಂ ಮನದೊಳ್ ಪಂಬಲಿಸಿ ಮಜ್ಜುಗಲೇಂ ಸಮನಿಕುಮೇ (ಧರ್ಮಾಮೃ. ೬-೧೪೪). ೨. ವಿಯೋಗ ಹೊಂದಿದವರನ್ನಾಗಲಿ, ಮೃತರನ್ನಾಗಲಿ ಕುರಿತು ಗೋಳಾಡು—ಅಳು,—ಹಲುಬು,— ರೋದಿಸು : ಆತನನಗ್ಗಳದ, ಮಗನೆ ನಾಂ . . . ಪಡೆಮಾತೇಂ ಪಂಬಲಿಸದೆನ್ನ ಪೇಟ್ದುದು ಗೆಯ್ಯಂ (ಪಂಪಭಾ. ೧೪-೬); ಅದವಟಲೊದವೆ . . . ಪುವಿನಿ ಪಲುಂಬಿ ಪಂಬಲಿಸಿಯುಂ (ಕಾದಂಪೂ. ೯೩೬) ; ಕುಸುಮಕೋದಂಡನ ಸುಧಾಮಯ ಸದ್ಗುಣಂಗಳನೆನೆನೆ

△ **ಪಂಸೆ** (ನಾ): ಹಂಸಪಕ್ಷಿ: ಕಿಂದಾವರೆಯ ಮಿಸುಪ ಮೆಲ್ಮೊಗ್ಗೆಯಂ ಮಾಣದೆಂದುಂ ನಿನಗೀವೇಂ ಪಂಸೆ [ಪಾಣಾಂ.ವೇಣಂಜೆ] (ಕಬ್ಬಿಕಾ. ೩೧೪); ಜಾಣರಿಲ್ಲದ ಜನಪ ಪಂಸೆಯಿಲ್ಲದ ಕೊಳನು (ನಸನೋ. ೨೩-೪೯); ಕೊಳಗಳಿಲ್ಲದ ಬನವು ಅಳಿಗಳ ಬಳಗವೆರಗದ ಪುಷ್ಪವಾಟಿಯುಂ . . . ತೊಳಪ ಕಳಕಂಠಗಳು ಪಂಸೆಯುಂ ಮಿಳಿರ್ವ ಝಿಲ್ಲಿಯ ಮೃಗವು ಕತ್ತುರಿ ಕಲಿತ ಮಿಗಸಂಕುಳಗಳಿಲ್ಲದ ಗಿರಿಗಳಿಲ್ಲ (ನಾಗಚ. ೨-೭). [<ಹಂಸೆ]

ಪಕತ್, ಪಕತ್ತು, ಪಕ್ತ, ಫಕತ, ಫಕ್ತ (ಅ). ೧. ಪೂರ್ಣವಾಗಿ; ಬಹಳವಾಗಿ; ಸಕತ್: ನನ್ನ ಸೋದರ ಪೂರ್ವಾಸಪುರದಲ್ಲಿ ಪಕತ್ ಖಾಹಿಲೆಯಾಗಿ ಮಲಗಿದ್ದಾನೆಂತ ಊಟಕ್ಕೆ ನಾನು ಕೂತಿದ್ದಾಗ ತಿಳಿಯಿತು (ಸಂಸ್ಕಾರ. ೧೪೩). **ಪಕತ್ತು**: ೧. ಪಕತ್ತು ಮೂರು ಸೇರು ಕೊಡುತ್ತದೆಂದು ಹೇಳಿದಾಗ ಅವರು ಇನ್ನೂ ಹಿಗ್ಗಿದರು (ಚೆಂಗಾಳ್ವ. ೧೬೦). **ಪಕ್ತ**: ೧. ಪಕ್ತ ಬೈಗೋಳು ಬಡದಾಟ (ನಾಧಾರಿ. ೯೩). **ಫಕತ**: ೧. ಸುಳ್ಳತದಿಚ್ಛೆಯಿಂದ ಸ್ಯಯಿನಿ ಯುಳುತಿಯಿಂದಲಿ ಭಳುತಿಯಿಂದ ಮೂರು ಕೆರೆಯುಂ ಫಕತ ಕಲ್ಲಿಲಿ (ಕಜಾಗೀ. ೨೧೭). ೨. ಬರಿ; ಕೇವಲ: "ಫಕತ-ಬರೆ, ಕೇವಲ"(ಜಾನಕೋ. ೧೪). **ಫಕ್ತ**: ೨. ಅದರಲ್ಲಿ ಫಕ್ತ ಉಪ್ಪಿನ ಕಲಮಿಗೆ ಮಾತ್ರ (ಮುಂಬಪ್ಯಾ. ೧೧ ಪ್ರಸ್ತಾವನೆ); ಪಬ್ಲಿಕ್ ಲೈಫ್ ಎಂಬುದೇ ಬೇಡ ಆ ಪ್ರಾಣಿಗೆ. ಫಕ್ತ ಕಾಸು ಮಾಡುವುದೊಂದೇ (ಜಾರುದಾ. ೨೪೪).

[←ಅರ. ಹಿಂ. ಫಕತ್; ಮರಾ. ಫಕತ್, ಫಕಸ್ತ]

ಪಕತ್ತು 'ಪಕತ್' ನೋ.

ಪಕಪಕ (ನಾ). ಒಂದು ಅನುಕರಣ ಶಬ್ದ: ಏನು ಹೇಳಿದರೂ ಪಕಪಕ ಅಂತ ಬಾಯಿಬಿಡುತ್ತಾನೆ (ರೂಢಿ).

ಪಕಪಕ ನಗು=ಪಕ ಪಕ ಎಂಬ ಧ್ವನಿ ಬರುವಂತೆ ನಗು; ಗಟ್ಟಿಯಾಗಿ ನಗು: ಪಕಪಕ ನಗುವವರನ್ನು ನೋಡಿ ಬಿಕ್ಕಿಬಿಕ್ಕಿ ಅತ್ತ (ಗಾದೆ).

ಪಕಪಕನೆ (ಅ). ಪಕಪಕ ಎಂದು: ನನಗೆ ಪಕಪಕನೆ ನಗುವುದಕ್ಕೆ ಮಾತ್ರ ಬರುತ್ತದೆ (ರೂಢಿ). [ಪಕಪಕ+-ಅನೆ$_1$]

ಪಕಳ 'ಪಕಳೆ' ನೋ.

ಪಕಳಿ 'ಪಕಳೆ' ನೋ.

ಪಕಳೆ, ಪಕಳ, ಪಕಳಿ (ನಾ). ಹೂವಿನ ದಳ,—ಎಸಳು,—ರೇಕು: ಎರಡೇ ಎಸಳು ನಾಲ್ಕೇ ಪಕಳೆ ಕಳೇವರದೊಳು ಕಂದಿತೊಂದು ಕಳೆ (ಗ. ೯೦-೭); ಬೆಂಗುಲಾಬಿಯ ಪಕಳೆ ಅಕಳಂಕವಾಗಿರುವ ಭಾವ ವೀಣೆಗೆ ಬೆರಳನಾಡಿಸಿತ್ತು (ಭಾವಗೀ. ೧೧೧-೩೦೭); ನೋಡ ನೋಡುತ್ತಲೇ ಹೂವಿನ ಬಣ್ಣ ಮಾಸುತ್ತದೆ; ಪಕಳೆಗಳು ಸಲುಗಿ, ಸಡಿಲವಾಗಿ ಉದುರಿ ಹೋಗುತ್ತವೆ (ಪೌಂದಸ. ೫೭); ನೆಲಕ್ಕೆ ಬಿದ್ದಾಕ್ಷಣ ಹೂವಿನ ಪಕಳೆಗಳು ಅತ್ತಿತ್ತ ಹರಿದಾಡಿ ಬಿದ್ದುವು (ಕನಸು. ೧). **ಪಕಳ**: ಆ ಪ್ರಸೂನರಾಜಿಗಳ ಪಕಳಗಳಲ್ಲಿ ತುಷಾರಬಿಂದುಗಳು ಶೋಭಿಸುತ್ತಿದ್ದುವು (ಶ್ರೀರಾಪ. ೩೮). **ಪಕಳಿ**: ಒಳಗೆ ಹೂವಿನ ಸಣ್ಣ ಸಣ್ಣ ಪಕಳಿಗಳು ಒಂದಕ್ಕೊಂದು ಹೊಂದಿ ಮುದುಡಿಕೊಂಡು ಇರುತ್ತವೆ (ಮುಂಬಯಿ. ೩-೩೩); ಆ ನೋಟ-ಹೂವು ಪಕಳಿಗಳೂ ಪ್ರಾಣದುಂದಿ ಚಟ್ಟಿಯಾಗಿ ಕಾಣುವುವೋ? (ದತ್ತಪಾ. ೨೭); ಹೂವಿನ ಪಕಳಿಗಿಂತ ತಿಳಿವು ತಿಳಿವು ಅಂತ? ಹೂವಿಗೆ ಹೋಗಿ ತಾವ ಗಲ್ಲಾ ತಿವಿತಾವ (ಗ. ೯೬-೧).

ಪಕಳೆಪಕಳೆ (ದ್ವಿರುಕ್ತಿ): ಮುಂಜುಳವಾದ ಕಲ್ಪನಾವಿಲಾಸ ಪಕಳೆಪಕಳೆಯಾಗಿ ಬಿಚ್ಚಿ . . . ಕಂಪು ಹೊರಬರಲು ಹವಣಿಸುತ್ತಿದೆ (ಗಾಳಸು.೨೦೫).

[←ಹಿಂ. ಪಖುಡೀ; ಮರಾ. ಪಾಕಳೀ, ಫಕಡೀ]

ಪಕಾಯಿಸು (ಕ್ರಿ). ಅಡಿಗೆ ಮಾಡು; ಬೇಯಿಸು: "ಸಾಹೇಬರು ಇಲ್ಲೇ ಖಾನಾ ಮಾಡುತ್ತಾರೆ", "ಬಾಳ ಚಲೋದು ಬಾಯಿಜೀ, ಏನು ಪಕಾಯಿಸಲಿ?" (ನಟಸಾ. ೨೬೯).

[ಪಕ್ಕಾ$_0$ (P←ಹಿಂ. ಪಕಾನಾ)+-ಇಸು$_3$]

ಪಕಾರ (ನಾ). 'ಪ' ಎಂಬ ಅಕ್ಷರ: ಪಕಾರದ ತೃತೀಯತ್ವಕ್ಕೆ-ಕಣ್ವನ; ತಣ್ಪುಟಾಲ್ (ಶಪುಡ. ೬೫ ಪ್ರಯೋ). [ಸಂ.]

ಪಕಾಲಿ 'ಪಕ್ಕಲೆ' ನೋ.

ಪಕಾಲಿನೀರು (ನಾ). ಚರ್ಮದ ಚೀಲದಲ್ಲಿ ಹಾಕಿರುವ ನೀರು: ಪಕಾಲಿನೀರು ಕುಡಿಯುವವನಿಗೆ ಪಕ್ಷಪ್ರಾಯಶ್ಚಿತ್ತವೇಕೆ? (ಗಾದೆ).

[ಪಕಾಲಿ (<ಪಕ್ಕಲೆ)+ನೀರು$_1$(<ನೀರ್)]

ಪಕಾಸಿ 'ಪಕಾಸು' ನೋ.

ಪಕಾಸು, ಪಕಾಸಿ (ನಾ). ಮನೆ ಕಟ್ಟಲು ಉಪಯೋಗಿಸುವ ದೂಲ,—ಜಂತೆ,—ತೀರು: ಕಬ್ಬಿಣದ ಸರಳುಗಳು ಸೇತುವೆಯನ್ನು ಹಿಡಿಯುವಂತೆಯೂ, ಮರದ ಜಂತಿ, ಪಕಾಸು, ಕಂಭಗಳು ಮನೆಯನ್ನು ನೆಟ್ಟಗೆ ನಿಲ್ಲಿಸುವಂತೆಯೂ ಇವು ದೇಹವನ್ನು ನಿಲ್ಲಿಸುತ್ತವೆ (ಬಾಲಪ್ರ. I, ೧೯೬); ಮನೆಯ ಸುತ್ತು ಅಡ್ಡಾದಿಡ್ಡಿಯಾಗಿ ಬೆಳೆದ ಹನೆಮರಗಳನ್ನು ಸಿಗಿಸಿದರೆ ಹೆಬ್ಬಾಗಿಲಿಗೆ ಬೇಕಾದಷ್ಟು ಪಕಾಸಾದಾವು (ಸುರಮ. ೧೨೯). **ಪಕಾಸಿ**: ನುಣುಪಾಗಿ ಕೊಯ್ದ ತೊಲೆಗಳು, ಹಲಗೆಗಳು, ರೀಪು ಪಕಾಸಿಗಳು ರಾಶಿರಾಶಿಯಾಗಿ ಸುವ್ಯವಸ್ಥಿತವಾಗಿ ಬಿದ್ದಿವೆ (ಕಾನೂರು. ೪೭); ಹುಲ್ಲುಮಾಡು . . . ಹಳೆಯ ತೊಲೆ ಪಕಾಸಿಗಳು—ಕಿಚ್ಚು ಬಹು ಬೇಗ ಹೊತ್ತಿಕೊಂಡಿತ್ತು (ದೇಸಹಂ. ೧೪).

[←ತುಳು. ಪಕಾಸ್, ಪಕ್ಕಸ್]

ಪಕೀರ, ಫಕೀರ್, ಫಕೀರ (ನಾ). ೧. ಬಡವ; ಗರೀಬ: ಹಾರ ಪದಕ ಭೌಕುಳಿಯನಿಟ್ಟವ ತಮ್ಮ ಕೇರಿಯೊಳಗೆ ಸುಳಿದಾಡೆ ಸೇರಿಸಿ ಕೊಂಡವನೊಡಮೆಯು ನಗುತ ಪಕೀರನ ಮಾಡಿ ಬಿಡುವರು (ಕಂಸವಿ. ೨-೯೪). ೨. (ಮಹಮ್ಮದೀಯರಲ್ಲಿ) ಸಂಸಾರವನ್ನು ತೊರೆದವನು; ವಿರಕ್ತ; ಸಾಧು: ಯಾ ಗ್ರಾಮವನು ನಿರುಪಾಧಿಕ ಸರ್ವಮಾನ್ಯವಾಗಿ ಪಕೀರರ ಧರ್ಮಕ್ಕೊಡಿಸಿಯಿರೊದರಿನ್ದ ನೀನು ಮುನ್ತಾದ ಪಕೀರರು ಯಾ ಧರ್ಮವನ್ನು . . . ಅನುಭವಿಸಿಕೊಣ್ಡು ಬರುವದು (ಎಕ. IX, ಅನೇಕ. ೯೦-೧೧೦ ; 1759); ಅನೇಕ ಜಂಗಮಾತಿಥಿ ಪರಮ ಹಂಸ ಪಕೀರ . . . ಜನರ್ಗನ್ನದಾನವಸ್ತ್ರದಾನಂಗಳಂ ಮಾಳ್ಪಂತು ಸ್ಥಿರಮಾದ ಕಟ್ಟಳೆಯಂ ರಚಿಯಿಸಿ (ಕಳಸ್ಯ.೧೦-೩೦). ೩. ಭಿಕ್ಷೆಬೇಡುವವನು. **ಫಕೀರ್**: ೧. ಆಗಲೇ ಬದುಕಿದರೆ ಬಡೇಸಾಬರು ಕೆಟ್ಟರೆ ಫಕೀರ್‌ಸಾಬರು ಅಂತ ಅವರು ಯಾತಕ್ಕೂ ಜಗ್ಗಲಿಲ್ಲ (ಚೆಂಗೂಲಿ.೧೫೫). ೨. (ರೈಸ್‌ಗೆ. II, ೫೪೪). **ಫಕೀರೆ**: ೨. ಧೀರಂ ವಜೀರನಿಂದು ಫಕೀರಂ ತಾನಪ್ಪಂ (ಚಕವಿ. ೨-೧೧೯); ನೀವು ಮಾಡುವ ಫಕೀರರ ಧರ್ಮಕ್ಕೆ (ಸೌಇವಿ. ೧೯೩೪, ಸೇಲಂ. ೧೪೫-೯ ; 1759); ಗಂಗಾರಾಮನು ಆ ಆಜ್ಞೆಯನ್ನು ಕೇಳಿ ಆದಷ್ಟಾಗಲೆಂದು ನಿರ್ಭೀತನಾಗಿ ಫಕೀರನ ಮುಖದ ಮೇಲೆ ಒಂದು ಸಲ ಒದ್ದನು(ಬಂಕಸು. ೩೦೧).

[←ಅರ. ಹಿಂ. ಮರಾ. ಫಕೀರ್]

ಪಕುಳೆ (ನಾ). ವಸ್ತ್ರ; ಉಡುಪು; ವೇಷ (?): ತನ್ನ ಪೋಲ್ಮೆಯ ವಿನುತಮಪ್ಪುಂದು ಪುತ್ಥಳಿಯ ಅನುಗೆಯ್ದುದಕೆ ಪೂರಿಸಿ ಪಕುಳೆವ ತಾನನುರಾಗದಿಂ ಪವಡಿಸುವ ಮನೆಯನು ಮಾಣಿಕದ ಪಾಸಿನ ಮಂಚದ ಮೇಲೆ ಘನತರಮಪ್ಪ ವಸ್ತ್ರವನು ಹೊದಿಸಿ ಅದನು ಮಲಗಿಸಿ ತಾನು ಬೀಜೋಂದು ಸದನಕಾರಜ್ಞಾಯದಂದದೊಳು ಪದಪಿಂ ಪೋಗಿಯಡಗಿ ಕೊಂಡಿರಲು (ಪ್ರಭಂಜ. ೨-೬೦). [?]

ಪಕೋಡ (ನಾ). (ಈರುಳ್ಳಿ, ಮೆಣಸಿನಕಾಯಿ ಮುಂತಾದುವನ್ನು ಹಾಕಿ) ಕರಿದು ಮಾಡಿದ, ಒಂದು ಬಗೆಯ ಕಡಲೆಹಿಟ್ಟಿನ ತಿಂಡಿ ; ಬೋಂಡ : ಭೀಮಾಚಾರಿ ಹೋಟೆಲ್‌ನಲ್ಲಿ ಪಕೋಡ ಕೊಂಡುಕೊಂಡ (ಇಬದು. ೪೧) ; ಚೌಚೌನಲ್ಲಿದ್ದ ಪಕೋಡಾ ತೆಗೆದುಕೊಂಡು ತಿನ್ನುತ್ತ (ಕಾಮಿಕಾಂ. ೧೭೯).

[←ಹಿಂ. ಪಕೌಡಾ ; ಮರಾ. ಪಕೋಡಾ]

ಪಕ್ಕ₁, ಪಕ್ಕು₅, ಪಕ್ಕೆ₃, ಬಂಕ₂, ವಂಕ₂ (ನಾ). ೧. ಬದಿ; ಮಗ್ಗುಲು; ನೆರೆ ; ಪಾರ್ಶ್ವ : ಎರಡುಂಪಕ್ಕದೊಳೋಲಗಕ್ಕೆ ಪದಪಿಂ ಬಂದಿರ್ದ ಕಾಂತಾಜನೋತ್ಕರರತ್ನಾಭರಣಪ್ರಭಾಪ್ರಸರವಾದಂ ತಳ್ತು (ಕಾದಂಪೂ. ೧೦-೧೧) ; ಎರಡುಂ ಪಕ್ಕದೆ . . . ಚಾಮರಮಂ ಚೆನ್ನೆಯರಿಕ್ಕೆ (ಸಂರಾಮಾ. ೨-೧೧) ; ವಾಸ್ತವವಾಗಿ ತುಳುವಿನಲ್ಲಿ ಪ>ಹ ಆಗಿಲ್ಲ. ಅಂಥ ಪದಗಳೆಲ್ಲಾ ನಿಸ್ಸಂದೇಹವಾಗಿ ಅದರ ಪಕ್ಕದ ಭಾಷೆಯಾದ ಕನ್ನಡದಿಂದ ತೆಗೆದುಕೊಂಡ ಪದಗಳು (ದ್ರಾವಿವಿ. ೧೪೭). ೨. ಹತ್ತಿರ ; ಸನಿಹ ; ಸಾಮೀಪ್ಯ ; ಸನ್ನಿಧಾನ : "ಪೊರ್ದುಗೆ, ಪೊರೆ, ಪಕ್ಕಂ, ಸನಿಹಂ, ಕೆಲಂ — ಈ ೫ ಸಮೀಪಂ" (ಕಶಸಾ. ೬೪-೪೬೪) ; ಗೋವರ್ಧನಭಟ್ಟಾರರ ಪಕ್ಕದೆ ಕುಮಾರಬ್ರಹ್ಮಚಾರಿಯಾಗಿ ಭದ್ರಬಾಹು ತಪಂಬಟ್ಟು (ಪಡ್ಡಾರಾ. ೭೪-೨೧) ; ಅವರ್ಗೆಲ್ಲಂ ಸಂಸ್ಕಾರವಿಧಿಯಂ ನಾನೆ ಪಕ್ಕದೊಳಿರ್ದು ಮಾಡಿಸುವೆಂ (ಪಂಪಭಾ. ೧೪-೮ ಪ) ; ಪಕ್ಕಿಗಳಲ್ಲಿ ತಿಂದುಟಾದ ನೆಲ್ಗಳ ನುಚ್ಚುಗಳಂ ಫಲಂಗಳಂ ಪಕ್ಕದೊಳಿರ್ಪ ಗೂಡುಗಳಿನಾಯ್ದೆನಗಿಕ್ಕುವನಟ್ಟೆಜಾಂದೆ (ಕಾದಂಪೂ. ೧೩೬) ; ಚೆಕ್ಕನೆ ಬಲ್ಲಿದರಂ ಮಟ್ಟೊಕ್ಕೊಡದೋಸರಿಸಿ ಪೋಕುಮಲ್ಲದೆ ನೀನಿಂತಕ್ಕಟಿ ಜಾಕ್ಕಟಿಮಿರ್ದೊಡೆ ಪಕ್ಕಕ್ಕೊಳಗಪ್ಪೆ ಪಸಿದು ಮಸಗಿದ ಜವನಾ (ಚಂದ್ರಪ್ರ. ೧೩-೭೮) ; ಶಿವಭಕ್ತಿ ಮುತ್ತಂತಿರ್ದ ಮುತ್ತಟ್ಟೆಯ ಪಕ್ಕದೊಳು . . . ನಾಲ್ಕೆರಡುವರ್ಷಂ ಸುಖದೊಳಿರೆ (ಬಸರ. ೨-೯). ೩. ಕಡೆ ; ಪಕ್ಷ ; ಬಣ : ಓಜಂ ಗಡ ಚಿಃ ಭಾರದ್ವಾಜಂ ಗಡ ಬಿಲ್ಲ ಬಲ್ಮೆಯುಂ ಕುಲಮುಂ ನಿರ್ವ್ಯಾಜಂ ಮಸುಟ್ಟುವು ಪಾಂಡುತನೂಜರ ಪಕ್ಕದೊಳೆ ಪಾಟಾಗಿಡೆ ನೆಗಟ್ಟುದಜಾಂ (ಗದಾಯು. ೨-೧೮). ೪. ಗರಿ ; ರೆಕ್ಕೆ : "ಅಟ್ಟೆಯೆಱಂಕೆ ತವೆ ಪಕ್ಕಂ" (ಕಬ್ಬಿಗ. ೬೮) ; ಪಕ್ಷಿಗೆ ಪಕ್ಕ ಬಂದಿತ್ತು ಗಗನಕ್ಕೆ ಹಾಱುತ್ತು (ಅಪಚಂ. ೧೭೧-೭೭೮) ; ಪಳಂಚಲೆದೊಲೆದು ಪಕ್ಕಮಂ ಬಿರ್ಚಿ ಲಲ್ಲೆಗೆಯ್ದುತ್ತು ಪಾರಿವಂ ಪಾರಿವದೊಳ್ (ಗಿರಿಕ. ೨-೫೨) ; ಗಿರಿಗಳ ಪಕ್ಕಮಂ ಕಡಿದು ಗೋತ್ರವಿರೋಧಿಯೆನಿಪ್ಪ ನಾಮಮಂ ಧರಿಸಿದ ದೇವವಲ್ಲಭನ ಪತ್ತನ ಕೀಗಳೆ ದಾಟಾಯಿಟ್ಟು (ದಶಕು. ೨-೧೦೫) ; ಬೀಸಣಿಗೆಯ ತಂದು ಬೀಸುವೆನೆಂದರೆ ಬೀಸುತಿಹನು ಖಗ ತನ್ನ ಪಕ್ಕದಲಿ (ಪುರಂದ. ೬-೬೭-೪). ೫. ಚಾಂದ್ರಮಾನದ ತಿಂಗಳಿನ ಅರ್ಧಭಾಗ; ಶುಕ್ಲಪಕ್ಷ ಅಥವಾ ಕೃಷ್ಣಪಕ್ಷ : ಪಕ್ಕಕ್ಕೊಂದುಪವಾಸ ಪುಕ್ಕಟೆ ಶ್ರೀತೊಲಸಿ ಸಿಕ್ಕಿಸಿಕ್ಕಿದಲಿ ಹರಿನಾಮ ಭವಭವದಿ ಸಿಕ್ಕಿ ಸಾಯುವದು (ಸರ್ವಜ್ಞ. ೯೧೪). ೬. ರಂಗಭೂಮಿಯ ಎಡಬಲಗಳಲ್ಲಿ ಕಟ್ಟುವ, ಹೆಚ್ಚು ಅಗಲವಿಲ್ಲದ ಪಟ್ಟಿಕೆ : ರಂಗಭೂಮಿ ಸುಸಜ್ಜಿತವಾಯ್ತು ; ಪರದೆ ಕಟ್ಟಲಾಯಿತು ; ಪಕ್ಕಗಳನ್ನು ನಿಲ್ಲಿಸಲಾಯ್ತು (ಬೆಟ್ಟಹೊ. ೩೫). ೭. ಶರೀರದಲ್ಲಿ ಎದೆಯ ಕೆಳಗಿನ ಎರಡು ಪಾರ್ಶ್ವ ; ಪಕ್ಕೆ ; ಪಕ್ಕೆಲುಬು ; ಪಕ್ಕಡಿ (ಉಕ) : ಪಕ್ಕಂಗಳ್ ಪೊಡೆಯಳಿಕಂ ತಕ್ಕ ಪೆಗಲ್ ಮೂಗು ವಕ್ಷಮಾಜುರ್ಬುಗಳಿವು ಸಿಕ್ಕಿರಲಾತಂಗೈಸಿರಿ ಚಕ್ಕನೆ ಬಂದಿರ್ಪುದಿದುವೆ ತಪ್ಪದಮೋಕ್ಷಂ (ಜಾಲಾಸ್ಯ. ೧-೧೨-೩೮). **ಪಕ್ಕು₅** : ೮. ಜೊತೆ ; ಜೋಡಿ : 'ಪಕ್ಕುವಿಡಿ' ಪರಾ. **ಪಕ್ಕೆ₃** : ೨. ನಮ್ಮಕೈನಸುವ ಸೂಱ್ ಗೊಂಡು ಪಕ್ಕೆಗೆಯ್ದುದೆ ದೂರದೊಳಗಿದ್ದೆ (ಭರಚ. ೯-೩೯). 'ಪಕ್ಕೆಮನೆ' ಪರಾ. ೭. ಪಕ್ಕೆಗೇ ಕೊಂಬು ನೆಟ್ಟು ಬಿಟ್ಟಂತೆ (ಸುವಸಂ. ೪); ತೋಳುಗಳನ್ನು ತನ್ನ ಪಕ್ಕೆಗಳ ಮೇಲೆ ಜಾಡಿಸಿದ (ಏಳಜೇ. ೯೮). **ಬಂಕ₂** : ೧. ಬಳಿಕ್ಕದಜ ಬಂಕದೊಳೊಪ್ಪುಗುಮುಜ್ವಳಾಂಗನನ್ವಿತಬಹುಸಂಖ್ಯರುದ್ರಗಣಸೇವಿತನಗ್ಗದ ನೀಲಲೋಹಿತಂ (ಶಬಶಂ. ೧-೬೭). **ವಂಕ₂** : ೧. ಎಡಬಲವಂಕದೊಳ್ ನೆಲನುಗ್ಗಡಿಪಾಳಿಯರಿಂ ವಿಳಾಸದಿಂದಡಿಯಿಡುವಲ್ಲಿ (ಗಿರಿಕ. ೩-೧೧೮) ; ವೇಲೆಯ ಶಿರವನೊಡೆದುಬ್ಬೇಳ್ವ ಘನಸಾಗರದ ವೊಲು ಪಿಡಿದೊದಜಾ ಕವಿದುದು ಕೂಡೆ ವಂಕದಲಿ ಕರಿ ತುರಂಗ ರಥವಾಜಿ ಕಾಲಾಳು (ಕುವ್ಯಾಅ. ೧೨-೧೯). 'ಎಡವಂಕ', 'ಬಲವಂಕ' ಪರಾ. ೯. ದೆಸೆ ; ದಿಕ್ಕು : 'ತೆಂಕವಂಕ' ಪರಾ.

ಪಕ್ಕಂಗೆದರ್ = ರೆಕ್ಕೆ ಉದುರಿ ಹೋಗು : ಪಕ್ಕಂಗೆದರ್ದನೆಂ, ಮಕ್ಕಳಿರ; ಮುಂದುಳನೆಂ. ಬನ್ನಿಮೆನ್ನಂ ನೆಗಹಿ ; ಕುಳ್ತ ಬಳಿಕೊರೆದಪೆನ್ ನಿಮ್ಮಿಷ್ಟಮುಸ್ (ಶ್ರೀರಾಮಾ. ೩೮೫-೬೨೬). **ಪಕ್ಕಗೂಡಾಗು = (ಹಕ್ಕಿಯು) ಮಗ್ಗುಲಿನ ರೆಕ್ಕೆಗೂಡನ್ನು ನೆಮ್ಮಿ ನಿಲ್ಲು,–ಆಧರಿಸಿ ನಿಂತುಕೊಳ್ಳು** : ಗಜಾ ಪಾಜಲ್ಕಿಲ್ಲ ಕಾಲುಂ ಬಲಿಯವು ನಡೆಯಲ್ ಬೆಟ್ಟ ತೆಂಬಂತೆ ಮೂಗಂ ಮುಜಾವನ್ನಂ ಮುಂದೆ ಮುಗ್ಗುತ್ತೆಡಬಲದೊಳಗಾಂ ಬೀಟುತುಂ ಪಕ್ಕಗೂಡಾಗೊಜಗುತ್ತಂ ಪೋಗಿ (ಕಾದಂಪೂ. ೧೯೨); ಚಳಿಗೆ ಪಕ್ಕಗೂಡಾಗೊರಗಿ ಮಾಗಿಯೆಳವಿಸಿಲ ಕಾಯಿಸುತಿರ್ದ ನರೆನವಿರ ಗರಿಮೆಯ್ಯವಂ . . . ನಿಡುನೋಡಿ (ಶ್ರೀರಾಮಾ. ೩೮೫-೬೨೨). **ಪಕ್ಕುಮಾಡು₂ = ಜೊತೆಮಾಡು; ಒಡಗೂಡಿಸು** : ಆಗಳ್ ಸೌಧರ್ಮೇಂದ್ರ ನೇಜುದೈರಾವತಗಜೇಂದ್ರಕ್ಕೆ ನಿಜಗಜೇಂದ್ರಂಗಳಂ ಪಕ್ಕುಮಾಡಿ (ಆದಿಪು. ೭-೪೯ ಪ) ; ಆಗಳಾ ಗೀರ್ವಾಣಗಣಾಗ್ರಣಿಯೇಱುದೈರಾವಣಕ್ಕಾತ್ಮೀಯ ಮದಮತಂಗಜಮಂ ಪಕ್ಕುಮಾಡಿ (ನೇಮಿಪು. ೮-೧೧೮ ಪ).

[<ಸಂ. ಪಕ್ಷ]

ಪಕ್ಕಂಬಿಡಿ (ಕ್ರಿ). ಮಗ್ಗುಲನ್ನು ಹಿಡಿ ; ಪಕ್ಕವನ್ನು ಆಶ್ರಯಿಸು : ಪೊಜಮಟ್ಟು ತೊಱೆಯ ನಡುವಣ ಕುಟುವಂಗಳ ಕೆಲದೊಳಿರ್ದು ಕಾದುವು ಬಿಸಿಲಂ ಮಱಗಳ್ ಪಕ್ಕಂಬಿಡಿದೆಡೆಗಿಱದಿರೆ ಕುಂಭೀರಕಮಠ ಕರ್ಕಟಂಗಳ್ (ಜಗವಿ. ೧೪-೧೨) ; ಗದ್ದಗಳ ಮಡಿಯ ತಡವಿಡಿದು ಪರಿವ ಪರಿಕಾಲ್ಗಳ ಪಕ್ಕಂಬಿಡಿದು ಕಿಕ್ಕಿಱಗಿಱದು ಪೊಂಗೇದಗೆಯ ಬಾಟ್ಕೀಲಿಗಳ ಕೆಲ್ಲೆಯೊಳಲ್ಲಲ್ಲಿ ಪಲ್ಲವಿಸಿದ ಸುರಹೊನ್ನೆ (ಧರ್ಮನಾ. ೨-೨೯ಪ).

[ಪಕ್ಕ + ಪಿಡಿ₁]

ಪಕ್ಕಗಂಟೆ (ನಾ). ಆನೆಗಳಿಗೆ ಎರಡೂ ಬದಿಗಳಲ್ಲಿ ಜೋಲಾಡುವಂತೆ ಕಟ್ಟಿರುವ ಗಂಟೆ : ತಳಸಂಕಲೆಯ ತೊಡರಂಕಣಯ ಕೊಂಡೆಯ ಪಕ್ಕಗಂಟೆಗಳ . . . ಜೋಡಿಸಿದರುಬ್ಬರದ ಮದಗಜವ (ಕುವ್ಯಾದ್ರೋ. ೩-೨) ; ಕೊರಳ ಹೊರಜಿ ಕುಂಭಸ್ಥಳ ಕೋಹಾಳೆ ಸರಗಂಟೆ ಪಕ್ಕಗಂಟೆಗಳು . . . ಮದಕರಿಯ ಮೇಲೊಡನೆ ಮೆಱೆದುವು (ಕಂಸವಿ. ೨೩-೧೦೨).

[ಪಕ್ಕ + ಗಂಟೆ₂]

ಪಕ್ಕಗೆ (ಅ). = ಪಕ್ಕನೆ : ಪಕ್ಕನೆ, ಪಕ್ಕಗೆ – ಇತಿ ಗಡಾದಿರಾಕೃತಿಗಣಃ (ಶಬ್ದಾನು. ೪೯ ಪ್ರಯೋ). [ಪಕ್₀ + –ಅಗೆ₃]

ಪಕ್ಕಗೊಳ್ (ಕ್ರಿ). ಹತ್ತಿರವನ್ನು ಸೇರು ; ಸಮೀಪಿಸು : ಪಕ್ಕಗೊಂಡೆಲ್ಲರೊಪ್ಪಿದರು ಚಕ್ರಿಯ ಮಂತ್ರಿ ದಕ್ಕಿತು ಛಲ ನಿನಗೆಂದ (ಭರಚ. ೩೮-೯೩). [ಪಕ್ಕ + ಕೊಳ್₁]

ಪಕ್ಕಘಂಟೆ (ನಾ). = ಪಕ್ಕಗಂಟೆ : ಪಕ್ಕಘಂಟೆಯ ಝಂಗೆಯ ಮೊಗರಂಬದ ನವಾಯಿಯ ದಂತಿಯ ಹೆಗಲ ಹೊಂಗದ್ದುಗೆಗೆ ಬಿಜಯಂಗೈದನಾ ಭೂಪ (ಕುವ್ಯಾಸ. ೧೨-೯೭).

[ಪಕ್ಕ + ಘಂಟೆ]

ಪಕ್ಕಜಲ್ಲಿ (ನಾ). ಪಕ್ಕದಲ್ಲಿ ತೂಗಾಡುವ ಕುಚ್ಚು,–ಗೊಂಡೆ : ತಳಿರ್ಗಳಮರ್ಕೆವೆತ್ತ ತಲೆಕಟ್ಟು ಲತಾಂತದ ಮಾಲೆ ಬೆನ್ನ ಬತ್ತಳಿಕೆ

ಮರಂದದಣ್ಪು ಪಸುರಂಗಿಗೆ ಪೀಲಿಯ ಪಕ್ಕಜಲ್ಲಿ ಗೇಣಳವಡೆ (ಶಬಸಂ. ೩-೧೬). [ಪಕ್ಕ + ಜಲ್ಲಿ$_2$]

ಪಕ್ಕಜಿಹ್ವೆ (ನಾ). ಕೀಟಗಳ ಬಾಯಲ್ಲಿರುವ ಒಂದು ಉಪಾಂಗ : ನಾಲ್ಕು ಅಖಂಡ ಅನುಬಂಧಗಳು – ಒಂದು ಮಧ್ಯದ ಜೊತೆ ಜಿಹ್ವೆ . . . ಒಂದು ಪಕ್ಕದ ಜೊತೆ ಪಕ್ಕಜಿಹ್ವೆ (ಕೀಟಪೆ. ೭೨). [ಪಕ್ಕ + ಜಿಹ್ವೆ]

ಪಕ್ಕಟಿಪ್ಪಣಿ (ನಾ). ಬರವಣಿಗೆಯಲ್ಲಿ ಬಿಟ್ಟು ಹೋದ ಅಥವಾ ಬೇರೆ ತಿಳಿಸಬೇಕಾದ ವಿಷಯವನ್ನು ತಿಳಿಸುವುದಕ್ಕಾಗಿ ಪಕ್ಕದಲ್ಲಿ ಬರೆಯುವ ಪುಟ್ಟಬರಹ ; ಮಗ್ಗುಲುಟಿಪ್ಪಣಿ : ಪಾರ್ಶ್ವಟಿಪ್ಪಣಿ ; ಪಕ್ಕ[illegible] (Apostil. ಇಂಕನಿ) ; ಪುಸ್ತಕ ವಿಷಯವನ್ನು ವಿಶದೀಕರಿಸಲು ಕೆಲವು ಟಿಪ್ಪಣಿಗಳನ್ನು ಉಪಯೋಗಿಸುವುದು ಅನಿವಾರ್ಯ . . . ಮುಖ್ಯವಾಗಿ ಪಕ್ಕಟಿಪ್ಪಣಿ, ಹೆಗಲುಟಿಪ್ಪಣಿ (ಮುದ್ರಕ. ೪೪). [ಪಕ್ಕ + ಟಿಪ್ಪಣಿ]

ಪಕ್ಕಡಿ (ನಾ). (ಉಕ) ಎದೆಯ ಕೆಳಗಿನ ಎರಡು ಮಗ್ಗುಲು ; ಪಕ್ಕೆ : ಒಡಲೆಲ್ಲ ಹೊಡೆಮರಳೆ ಸೆಟೆದು ನಿಲ್ಲುತ್ತದೆ. ಪಕ್ಕಡಿ ಮುರಿದು ಹೋದೀತೆಂಬ ಖಬರು ಕೂಡ ಅದಕ್ಕಿದ್ದಂತಿಲ್ಲ (ದೇಕನ್ಕೆ. ೧೩೪) ; ಮಗುವು ಆಕೆಯ ತೊಡೆಯ ಮೇಲೆ ಇರುವಾಗಲೇ ಅದರ ಪಕ್ಕಡಿಯನ್ನು ಮುಟ್ಟಿ ಜ್ವರವನ್ನು ನೋಡಿದನು (ಜಸಜೀ. ೪೩) ; ಪಕ್ಕಡಿಯ ಮೇಲೆ ಮಲಗಬೇಕು (ಭಾರಸಂ. ೧೪೩). [<ಪಕ್ಕ]

ಪಕ್ಕಣ (ನಾ). ೧. ಬೇಡರು ವಾಸಿಸುವ ಹಳ್ಳಿ : "ವನಮಧ್ಯಗತಂ ಶಬರೋಪನಿಚಿತಮುದು ಪಕ್ಕಣಂ ಪುಳಿಂದಸ್ಥಾನಂ" (ವಸ್ತುಕೋ. ೪೫-೩) ; ಕೆಲವೆಡೆ ಕಿನ್ನರೀವಿಹರಣೋಚಿತ ಸೌಂದರಕಂದರಂಗಳಿಂ . . . ಕೆಲವೆಡೆ ಕೂಡೆ ಕ[ಣ್ಣು]ಱುಗುಗುಂ ಶಬರೋ[ಲ್ಪ]ಣ ಪಕ್ಕಣಂಗಳಿಂ (ವರ್ಧಮಾ. ೫-೫೩) ; ಬೆಟ್ಟುಗೂಂಟಮಂ ಬಸಿವ ಪುಳಿಂದಸಂಕುಳದ ಪೆರ್ಕಣದಿಂದೆಸೆದತ್ತು ಪಕ್ಕಣಂ (ಚಂದ್ರಪ್ರ. ೫-೫೪) ; ಸಂತೋಷದಿಂ . . . ಗಮಿಸಿದಂ ಪಕ್ಕಣಕ್ಕಾ ಪುಳಿಂದಂ (ಉದ್ಧಟ. ೪-೧೨೬) ; ಮುತ್ತಕಾಲದೊಳೊರ್ಮೆ ಬೇಂಟೆಯೊಂದು ಬೆಸನದಿಂ ಆ ತೋರ್ಪ ನೆರೆವೆಟ್ಟ ನೆಮ್ಮ ಪಕ್ಕಣದಿಂ ತಳರ್ದು (ರಾಮಾಶ್ವ. ೭೬-೨೨). ೨. ಜಾತಿಯಿಂದ ಬೇಡರಲ್ಲದಿದ್ದರೂ ಪ್ರಾಣಿವಧೆಯಿಂದ ಜೀವಿಸುವ ಚಂಡಾಲ ಮೊದಲಾದ ಕೆಳವರ್ಗದವರು ವಾಸಿಸುವ ಹಳ್ಳಿ : ಅನಂತರಮೆ ತೋಱುತಿಂದ್ರಪುರದಂತಿರಾ ಪಕ್ಕಣಂ (ಕಾದಂಬಿ. ೭೫೭). [ಸಂ.]

ಪಕ್ಕದ್ವಂದ್ವ (ನಾ). ರೆಕ್ಕೆಗಳ ಜೋಡಿ ; ಎರಡು ರೆಕ್ಕೆಗಳು : ಪಕ್ಕದ್ವಂದ್ವಂಗಳಂ ಝಾಡಿಸಿ ಕೆಲಕೆ ನಿಮಿರ್ದೊತ್ತಿ ಮೂಗಿಂದೆ ಗೋಣಂ ಹೆಕ್ಕುತ್ತಂ ಬಂದು . . . ನಗರದೊಳ್ ಕೂಗಿತಾ ತಾಮ್ರಚೂಡಂ (ಸೂಕ್ತಿಸು. ೯-೩೦). [ಪಕ್ಕ + ದ್ವಂದ್ವ]

ಪಕ್ಕನುಸುಳು (ಕ್ರಿ). ಪಕ್ಕಕ್ಕೆ ಬರು ; ಸಮೀಪಕ್ಕೆ ಸಾರು : ಪಕ್ಕನುಸುಳಿದ ಕರ್ಣಕೆಯಂ ಕಾವಲಿರ್ದರಸುಮಕ್ಕಳರನೆಲೆ ಧಾತುಗೆಡಿಸಿ ಸಿಂಹರವದಿ ಬೊಬ್ಬಿಕ್ಕಿದನು (ತುರಂಗ. ೫೧-೧೦). [ಪಕ್ಕ + ನುಸುಳು$_1$ (<ನುಸುಳ್$_1$)]

ಪಕ್ಕನೆ (ಅ). ಇದ್ದಕ್ಕಿದ್ದ ಹಾಗೆಯೆ ; ಒಮ್ಮಿಂದೊಮ್ಮೆಲೆ ; ಹಠಾತ್ತನೆ ; ತಟ್ಟನೆ : ಆ ಸೂಳರಂ ಕಕ್ಕಸದ ಬಾಣದಿಂದೊಕ್ಕು ದೊಡಲಂ ನೆಲಕೆ ಪಕ್ಕನಸುವಂ ಬಿಡಲ್ (ಚಿಬಪು. ೫೩-೩೯) ; ಪಕ್ಕನೆ ನಕ್ಕರದಂ ಕಂಡಕ್ಕಜಮಿಗೆ ಗೊಳ್ಳನೆಲ್ಲರುಂ ಕೈವೊಯ್ದುಂ (ಹಾಲಾಸ್ಯ. ೪-೧೫-೭೧) ; ಅದನು ಕೇಳುತ ನಕ್ಕು ಪಕ್ಕನೆ ಮುಂದಿಯಟ್ಟೆಯುಂ ಪೇಳ್ದನವರಿಗೆ (ಯಚೋರ. ೫೬). [ಪಕ್ಕ$_0$ + –ಅನೆ$_1$./ತೆಲು. ಪಕ್ಕುನ]

ಪಕ್ಕರಂಗ (ನಾ). ರಂಗಸ್ಥಳಕ್ಕೆ ಹೋಗುವ ಮೊದಲು ನಟರು ನಿಂತುಕೊಳ್ಳುವ ರಂಗಸ್ಥಳದ ಮಗ್ಗುಲು ಭಾಗ : ದೃಶ್ಯಸಲಕರಣಗಳನ್ನು ತಂದು ಜಾರಿಸುವ, ನಟರು ರಂಗವನ್ನು ಪ್ರವೇಶಿಸುವುದಕ್ಕೆ ಮೊದಲು ಬಂದು ನಿಂತುಕೊಳ್ಳುವ,—ರಂಗಸ್ಥಳದ ಭಾಗ: ಪಕ್ಕರಂಗ (Slip. ಇಂಕನಿ). [ಪಕ್ಕ + ರಂಗ]

ಪಕ್ಕರಕ್ಕೆ 'ಪಕ್ಕರಿಕೆ' ನೋ.

ಪಕ್ಕರಗೆ 'ಪಕ್ಕರಿಕೆ' ನೋ.

ಪಕ್ಕರಿಕೆ, ಪಕ್ಕರಕ್ಕೆ, ಪಕ್ಕರಗೆ, ಪಕ್ಕರಿಗೆ, ಪಕ್ಕೆರಕ್ಕೆ, ಹಕ್ಕರಕ್ಕೆ, ಹಕ್ಕರಿಕೆ$_2$, ಹಕ್ಕರಿಕ್ಕೆ, ಹಕ್ಕರಿಗ್ಗೆ$_2$, ಹಕ್ಕಲಿಕೆ (ನಾ). ಕುದುರೆ, ಆನೆ ಮೊದಲಾದುವುಗಳಿಗೆ ಹಾಕುವ ರಕ್ಷಾಕವಚ,—ಮೈಜೋಡು : ರನ್ನದ ಪಕ್ಕರಿಕೆ[ಪಾಠಾಂ. ರಕ್ಕೆ]ಯ ಕಟ್ಟದ ಗೆಜ್ಜೆಯ ಸೂಟಿಯ ರವದ ಪೊರ್ಕಳ ಗಂಟೆಯ (ಗಿರಿಕ. ೬-೫೫ ಪ) ; ರಾಜಿಪ ಪಕ್ಕರಿಕೆಯ ರುದ್ರಾಕ್ಷೆಯ ವಾಜಿಗಳಮಲಭಸಿತದಿಂದೆ ತೇಜವಡೆದ ಸಾಮಜತತಿ (ತ್ರಿಭುವ.೨೭-೨೯); ಕಡಿವ ಕಟ್ಟಿಗಳ ಝುರುಝುರು ಧ್ವನಿ ಹೇಷಿತಸ್ವನಂ ಕಟಿವಾಯ ನೊರೆ ರನ್ನವಕ್ಕರಿಕೆಗಳ್ ಮೆಱೆಯೆ ಬಂದತ್ತು ತುರಗಬಲಂ (ಚಿಬಪು. ೪೭-೩೫); ತವೆ ಸೆಡಕಿನ ಝುಲ್ಲಿ ತೆಱೆದ ಪಕ್ಕರಿಕೆಯ ಭುವನೇಶನಶ್ವವೈದಿದುವು (ಕಂಸವಿ. ೨೩-೯೦). **ಪಕ್ಕರಕ್ಕೆ :** ಪಜ್ಜಳಿಸುವ ಪಕ್ಕರಕ್ಕೆಗಳ ಗೆಜ್ಜೆಯ ಬಲ್ಲುಲಿ ನೀಳ್ದು ದಿಕ್ಕಿನೊಳ್ ಬಳಸೆ . . . ತೇಜಿಯ ತಟ್ಟು ತೆರಳ್ದುದೆತ್ತಲುಂ (ಕಬ್ಬಿಕಾ. ೨೦೪) ; ಗಿಳಿಗಳ್ಟಳವೆ ಪಚ್ಚೆಯ ಪಕ್ಕರಕ್ಕೆ. . .ಆಗಲ್ಕತನುಗೆಳಸಿ ಮಧುಯೋಧನನಲಂಕರಿಸಿದಿಡ ಮದಗಜದಂತೆ ಚೂತಮೆಸೆಗುಂ (ಪದ್ಮರಾ. ೮-೩೦). **ಪಕ್ಕರಗೆ :** 'ಪೊಂಬಕ್ಕರಗೆ' ಪರಾ. **ಪಕ್ಕರಿಗೆ :** ನಾಡಾಡಿ ಕುದುರೆಯಿಪ್ಪತ್ತೆಂಟು ಸಾವಿರ ಜೋಡು ಪಕ್ಕರಿಗೆ ಹಲ್ಲಣದಿ ಪಾಡಾಗಿ ಬಂದು ಕಾಳಗಕೊದಗುವದೊಂದು ಗಾಡಿಯನಾರು ಬಣ್ಣಿಪರು (ಅಮುಸಾಂ. ೨-೧೩). 'ಪೊಂಬಕ್ಕರಿಗೆ' ಪರಾ. **ಪಕ್ಕೆರಕ್ಕೆ :** ಹಲ್ಲಣದ ಮೊಗರಂಬಗಳ ಪಕ್ಕೆರಕ್ಕೆಗಳ ಕಡಿಯಣದ ವಾಜಿಗಳ್ (ಚಿಬಪು. ೨೩-೩೮). **ಹಕ್ಕರಕ್ಕೆ :** ಇಲ್ಲಿಡು ಹೊನ್ನ ಹಲ್ಲಣವನೆಟ್ಟಲನಾನಿಸು ಹಕ್ಕರಕ್ಕೆಯಂ ಬಲ್ಲೆಯವಂ ಬಯಲ್ಗೆ ತೆಗೆ (ಸಳಚಂ. ೬೫೧). **ಹಕ್ಕರಿಕೆ$_2$:** "ದಂಶನಂ ಹಕ್ಕರಿಕೆ"–(ಮಂಗರಾ. ೮೬-೩೧) ; "ಗುಟವಾನೆಯ ಹಕ್ಕರಿಕೆಯುಂ" (ಕವಿಕಂ. ೧೨೭) ; ಬಾಯಿಗೆ ಹಲ್ಲಣ . . . ಹಲ್ಲಿಗೆ ಹಕ್ಕರಿಕೆ (ಸುಂಕಬಂ.೬೬೫-೬೪); ಹಱಿದ ಹಕ್ಕರಿಕೆಗಳ . . . ನೆಗ್ಗಿದ ಹರಿಗೆಯನು ಮುಕ್ಕಾದ ಕೈದುವ ತರಿಸಿ ಕಳುಹಿಸು ಕಿರ್ದನಕಿರಭಸದಲಿ ದ್ರೋಣ (ಕುವ್ಯಾದ್ರೋ. ೧೫-೧೮); ಹಸ್ತಿಯ ಮೇಗಡೆ ಹಾಕಿದ ಹಕ್ಕರಿಕೆಗಳತಿ ರಂಜಿಸಿದುವು (ನೇಮಿಸಂ. ೨೭-೬೦) ; ಕುದುರೆಗಳ ಜೀನ ಹಲ್ಲಣ ಲೇವೆ ಕಟ್ಟಿ ಕಂದದ ಹಕ್ಕರಿಕೆ . . . ತುಂಬಿ ಬಂಡಿಗಳಗಣಿತಂ ಬಂದುವು (ಚಿಬಪು. ೪೭-೪೪) ; ಛತ್ರ ಚಾಮರ ಹರಿಗೆ ಹಕ್ಕರಿಕೆ . . . ಯುಗಾಕ್ಷಂಗಳುರಿಗೊಳೆ (ಜೈಮಿಭಾ. ೮-೩೮). **ಹಕ್ಕರಿಕ್ಕೆ :** ರಚಿಸಿದ ಹಕ್ಕರಿಕ್ಕೆಗಳ . . . ವಿಲಾಸದಲಂದಲಂಕರಿಸಿದರು ತೇಜಿಗಳ (ಕುವ್ಯಾಭೀ. ೪-೪೯) ; ಸರಪಳಿ ದರ್ಪಣಂ ಹೊರಜೆ . . . ಘನಸೋಳಹ ಖಂಡದ ಹಕ್ಕರಿಕ್ಕೆ ಝುಲ್ಲರಿ ತುಡಿಸಿರ್ದ . . . ಗಂಧಸಿಂಧುರ (ತ್ರಿಪುವಿ. ೨೪-೨೯೩). **ಹಕ್ಕರಿಗ್ಗೆ$_2$:** ಕಡಿದ ಹರಿಗೆ ಸೀಳಾದ ಸಿಂಗಾಡಿಗಳುಡಿದ ಹಕ್ಕರಿಗೆಯುಂಚೆಗಳ ಬಿಡದೆ ಪಱಿದ ದಟ್ಟದಗಲೆ ಜೋಡುಗಳಿಂದ ಜಡಿದುದು ರಣಭೂಮಿಯೊಗ (ಕಂಸವಿ. ೧೫-೬೪). **ಹಕ್ಕಲಿಕೆ :** ಮೇಲೆ ಸುಳಿಯಿಂ ಸಿಲ್ಕಿ ಮದಶುಂಡಾಲವದ್ದವು ಕೆಲವು ಹಯಗಳು ತೇಲಿದವು ಹಕ್ಕಲಿಕೆ ಹಲ್ಲಣ ಸಹ ಸಮುದ್ರದಲಿ (ಅಂಬಿಕಾ. ೨೧-೬೩) ; ಹಲ್ಲಣಿಸಿದುದು ತುರಗ ಹೀಲಿಯ ಝುಲ್ಲರಿಗಳಿಕ್ಕಿದವು ಚವುಕದ ಪುಲಿವಟ್ಟೆಯ ಹಕ್ಕಲಿಕೆಯಿಕ್ಕಿಲವ ಪಚ್ಚಳದ (ಕೊಲ್ಲಾಚ. ೩೬೪). [ಪಕ್ಕರಿ$_1$ + –ಇಕೆ]

ಪಕ್ಕರಿಗೆ 'ಪಕ್ಕರಿಕೆ' ನೋ.

ಪಕ್ಕರಿಸು (ಕ್ರಿ). ಆನೆ, ಕುದುರೆ ಮೊದಲಾದುವುಗಳಿಗೆ ರಕ್ಷಾಕವಚವನ್ನು ಹಾಕಿ ಸಜ್ಜುಗೊಳಿಸು : ವಾರಿಜಮನಿಟ್ಟು ಕಿವಿಯೊಳ್

ವಾರುವಮಂ ಪೀಲಿಯಿಂದೆ ಪಕ್ಕರಿ [ಪಾಶಾಂ.ಲಿ]ಸಿ . . . ನ್ಯಪಕುಮಾರ ನೇಜುವನೊಲವಿಂ (ಅರ್ಧನೇ. ೪-೧೪೧); ತುರಗವ ಪಕ್ಕರಿಸಲು ಪೇಳು (ವರ್ಧಚ. ೬-೨೪). [ಪಕ್ಕರೆ₁ + -ಇಸು₃]

ಪಕ್ಕರೆ₁, ಪಾಕರ, ಪಾಗರ₂, ಹಕ್ಕರಿ, ಹಕ್ಕರೆ(ನಾ). = ಪಕ್ಕರಿಕೆ : ರನ್ನದ ಪಕ್ಕರೆಯಿಂದಂ ಕಣ್ಣೊಳಿಸುವ ಕರಿಕಳಭದ ತೆಱದಿನೆಸೆದುದಾ ದಿವ್ಯಾಶ್ವಂ (ಕಾದಂಪೂ. ೪೫೪); ಪೊಱಗುವ ರಣಪಟಹಂಗಳಿ ಗುಟವದ ಪಕ್ಕರೆಯ ಸದ್ಗುಣಂಗಳ ಪಲವುಂ ಪಟುಯಿಗೆಯ ಪೊಳಿವ ಕೈದುವ ಘಟಾಯದಿನತಿಭಯದಮಾದುದಾ ಪ್ರತಿಭಯದಂ (ವರ್ಧಪೂ. ೪-೪೨); ಪಕ್ಕರೆ ತೇಜಿವಾರು ಕಟುದಿರ್ಕಡಿಯೊದುವು (ಕಬ್ಬಿಕಾ. ೨೪೦); ಪೊಸ ರನ್ನದ ಪಕ್ಕರೆಯಿಂದ ಮೂಡುವ ಬಿಸಿಗದಿರನ ಬಿಂಬವನು ಮಸುಳಿಪ ದಿವ್ಯವಾಜಿಯ ಬೆಂಗೆವಾಯ್ದನಂದಸಹಾಯಶೂರನಾ ರಾಮ (ಕುರಾಸಾಂ. ೪೬-೬೪). **ಪಾಕರ** : ತನ್ಮಜಾಗಜದಂಗೋಪಾಂಗಂಗಳೊಳ್ತೊಡರ್ಪಾದ ಮಿಳಿ ಪೊರಜೆ ಜೊತ್ತಗಂಗಳುಮಂ ನಿಲುನಿಲುಂಕಿ ಪೊಯ್ಪೊಯ್ದು ಕತ್ತರಿಸಿ ರೆಂಡೆಯಂ ಸಡಲ್ಚಿಸಿ ಪಾಕರಮಂ ಪತನಂಗೈಸಿ ತತ್ಕುಂಜರವನಾತ್ಮನಶಂಗೈವ ನಿತರೊಳ್ (ಕಳಸ್ಯ. ೨-೩೮). **ಪಾಗರ₂** : ಆಗ ಸಡಿಲಿದ ಪಾಗರಗಳೂ ಮುರಿದು ಬೀಳುವ ದಂತಗಳೂ ಸುಂಡಿಲಂಗಳೂ . . . ಉಂಟಾಗಿ ನುದ್ದಾನೆಗಳು . . . ಕಾಣಲ್ಪಟ್ಟವು (ಕೃವಾಭೀ. ೨೪). **ಹಕ್ಕರಿ** : ಕವಿಯ ಕೀಲಿನ ವಾರುವದ ಬಲುವಿಲ್ಲ . . . ಜೋಡು ಹಕ್ಕರಿಯ ಪವಣುಗಳಿದ ತುರಂಗಕೋಟಿಗಳವಯವದಿನೊಯ್ಯೂರದಿಂ ತಳರ್ದುವು (ಕುಸುರಾ. ೪-೨೯); ಹಕ್ಕರಿಯ[ಪಾಶಾಂ.ಕೆ] ಹಯಂಗಳು ತಿರ ನಡು ತೊಡೆ ತುಂಡೇಳೆ ತುರಗಕಾರರು ಸೇರಿ ಕಡಿದಾಡುತಿರಲು (ನಾಗಕು.೧೪೪-೭೩). **ಹಕ್ಕರೆ** : ಲೋಹದ ಸಿಪ್ಪಡಸಿದ ಸನ್ನಾಹಂ ಹಕ್ಕರೆ ಹಯಾಂಗಮಂ ಪೊಯ್ಯಲ್ಕೆ (ಸುಹಾನೇ. ೧೧-೧೩೬).

[<ಪ್ರಾ. ಪಕ್ಖರ./ಸಂ. ಪ್ರಕ್ಷರ, ಪ್ರಕ್ಷರ, ಪ್ರಖರ]

ಪಕ್ಕರೆ₂ 'ಪಕ್ಕಲೆ' ನೋ.

ಪಕ್ಕರೆಯಿಕ್ಕು(ಕ್ರಿ). ರಕ್ಷಾಕವಚದಿಂದ ಕೂಡಿರು; ಮೈ ಜೋಡನ್ನು ಅಳವಡಿಸಿಕೊಂಡಿರು : ಪಕ್ಕರೆಯಿಕ್ಕಿ ಬಂದುವು ಹಯಂ ಘಟಿ ಪಣ್ಣೆದು ವಾಯುಧಂಗಳಂ ತೆಕ್ಕನೆ ತೀವಿ ಬಂದುವು ರಥಂ (ಪಂಪಭಾ. ೩-೬೭); ಪಕ್ಕರೆಯಿಕ್ಕಿದಶ್ವತತಿ ಪಣ್ಣೆದ ದಂತಿಘಟಾಳಿ ಸನ್ನಣಿಬೊಕ್ಕ ಪದಾತಿ (ಜಗವಿ. ೯-೩೧) ; ಪಕ್ಕರೆಯಿಕ್ಕಿ ಬಂದವು ಹಯಂ ಪವಣಿಲ್ಲದೆ ವಾರಣಂಗ ಳಿಕ್ಕಿಕ್ಕೆಯೆಳೆಯೆ ಪಣ್ಣೆ ನಡೆತಂದವು (ಪುನ್ಯಾಸ್ರ. ೧-೪೨).

[ಪಕ್ಕರೆ₁ + ಇಕ್ಕು]

ಪಕ್ಕಲೆ, ಪಕಾಲಿ, ಪಕ್ಕರೆ₂, ಪಕ್ಕಳೆ, ಪಖ್ಖಲೆ (ನಾ). ೧. ಎತ್ತು, ಕುದುರೆ ಮೊದಲಾದ ಪ್ರಾಣಿಗಳ ಮೇಲೆ ನೀರು ಮೊದಲಾದ ದ್ರವಪದಾರ್ಥಗಳನ್ನು ಸಾಗಿಸಲು ಉಪಯೋಗಿಸುವ ಚರ್ಮದ ಚೀಲ : ಕರ್ಪೂರಧೂಳಿಯು ಹೊಳಹುಗಳ ಪನ್ನೀರ ಪಕ್ಕಲೆಯು . . . ಪರಿಮಳಭಾರದಲಿ ಬಿಜಯಂಗಾಳಿ ಕುಸಿದುದು (ಕುವ್ಯಾಳ. ೧೨-೧೧); ತೀರ ತೀರಲಿಕೊಟ್ಟುತಿರ್ದರು ಭಾರಸಂಖ್ಯೆಯ ಬಣ್ಣ ಬೀದಿಸ ಸೀರೆ ಬುದ್ದಣೆ ಹಾಡ ಪಕ್ಕಲೆ ಕಂಬಿಗಳ ಕೊಡನ (ತೊರಾ. ೫-೪-೪) ; ಪಕ್ಕಲೆಯ ಸಗ್ಗಲೆಯೊಳಿಕ್ಕಿದ್ದ ವಾರಿಯನು ಜೊಕ್ಕಟವೆಂದು ಕುಡಿಯಂತಿರೆ ಜೊಲೆ ಯರು ಬಕ್ಕವರು ಹೇಗೆ (ಸರ್ಗಜ್ಞ. ೪೫೫); ಬಳಿಕ ಪಕ್ಕಲೆಗಳಲ್ಲಿ ನೀರನ್ನು ತಂದು ಆದರ ಮೇಲೆ ಸುರಿದು (ಭಾರವೀ. ೧೧೧). ೨. ಒಂದು ಬಗೆಯ ಬಾಯಗಲದ ಪಾತ್ರೆ ; ಕೊಪ್ಪರಿಗೆ ; ದೊಡ್ಡ ಪಾತ್ರೆ : "ಪಕ್ಕಲೆ ಯೆಂದೊಡೆ ಅದು ತಾನಕ್ಕುಂ ಕೊಪ್ಪರಿಗೆ" (ಭಾರತ. ೨೫). ೩. ನೀರಿನ ಒರತೆ; ಚಿಲುಮೆ : "ಪಕ್ಕಲೆಯೆಂದುಂ, ಬಗರಗೆಯೆಂದುಂ, ಒಱಂತೆ ಯೆಂದುಂ ಪಜ್ಜರಂ" (ಕಶಸಾ. ೬೬-೪೭೨); ಪಕ್ಕಲೆಯೆನೆ ಕವಿಗಳೂ ಲಿದು ಬಗರಗೆಯೆಂಬರ್" (ಕವಿಕಂ. ೨೦೧). **ಪಕಾಲಿ** : ೧. ಮಜ್ಜದ ಪಕಾಲಿ (Wine bag. ಇಂಗ್ಲಿ); ದಪ್ಪ ರಜಾನೆಯ ಹಿಂದೆ ಗಂಗಾಜಲದಿಂದ ತುಂಬಿದ ಪಕಾಲಿಗಳನ್ನು ಹೇರಿದ ಎತ್ತುಗಳೂ ಒಂಟೆಗಳೂ ಸಾಗಿದ್ದವು (ರಾಣಾರಾ. ೯೦); ರಘುನಾಥಸಿಂಹರು . . . ಬೆನ್ನಿಗೆ ಪಕಾಲಿಯನ್ನು ಕಟ್ಟಿ ಕೊಂಡು, ಬೇಗನೆ ಪಾನಕವನ್ನು ತಯಾರುಮಾಡಿದರು (ರಘುರಾಜ. ೪೬೩). **ಪಕ್ಕರೆ₂** : ೧. ನಾನಾರತ್ನದಾ ಪೊಱಿಗಳಂ ಪನ್ನೀರವಕ್ಕರೆಗಳಂ ದಿವ್ಯ ಪರಿಮಳದ್ರವ್ಯ ದೇವಾಂಗ ಧನಕನಕವಂ ಜರರಿಂದ ಪೊಱಸಿ ಕಳುಪಿದನು (ಸೌಂದಪು. ೧೫-೨). **ಪಕ್ಕಳೆ** : ೨. ಪಡಪ ಚಾಮರ ಕುಂಜ ಬೀಸಣಿಗೆಯುಂ ಖಡ್ಗ . ಕುಡಿನೀರ ಪಕ್ಕಳೆಯು . . . ಪಿಡಿದಿರುವರಂ (ಸ್ವಭುಪು. ೪-೧೫). **ಪಕ್ಖಲೆ** : ೨. ನೂಱಾಱು ಪಟ್ಟುಲೆಗಳಕ್ಕಿತ್ತ ನೀರಂ ಸುರಿಯೆ (ಪಾಗೀರ. ದೇ. ೨೬೬-೧೦); ಕಂದ ಪಟ್ಟುಲೆಗಳಲಿ ತೀವಿದ ಮಂದರಕುತದ ತೋದ ತಲೆಗಳ ತಿಂದು ಬಿಸುಡುವ . . . ಪೂತನಿಯ್ವಂದವನು ಕಂಡೋಸರಿಸುವನದೊಂದು ದೆಸೆಗಾಗಿ (ಕುಪ್ಯಾಗ. ೩-೧೧) ; ನಟ್ಟ ಗಾಲಿಯಂ ತೀಳುತರೆಗಳ ಕಟ್ಟುತಚ್ಚಿನ ಕಿಚ್ಚನುಜುಬೆಯ ದಟ್ಟಿಕೆಗೆ ಧಾರೆಗಳ ಬಿಡುತೆಣ್ಣೆಗಳ ಪಟ್ಟು[ಪಾಶಾಂ·ಕ್ಕ]ಲೆಯಂ ... ಈ ಪರಿ ನಡೆಸಿ ತಂದರು ವೃಥಪರಾಕ್ರಮವ (ತೊರಾ. ೫-೩-೧೩).

[←ಹಿಂ. ಮರಾ. ಪಖಾಲ್./ತಮಿ. ಪಕ್ಕಾಳಿ ; ತುಳು. ಪಕಾಲಿ ; ತೆಲು. ಪಕಾಲಿ, ಪಕಾಳಿ, ಪಕ್ಕಾಲಿ./ಸಂ. ಪಯಸ್‌ಖಲ್ಲ]

ಪಕ್ಕವಣೆ (ನಾ). ಹಾರದಲ್ಲಿರುವ ನಾಯಕಮಣಿಯ ಪಕ್ಕದಲ್ಲಿರುವ ರತ್ನ ; ಮಧ್ಯಮಣಿಯ ಜೊತೆಯಲ್ಲಿರುವ ಮಣಿ : ಕಲಾಧರಂ ಪಕ್ಕವಣಿಗಳೊಳಂ ತರಳತೆ ತೋರ್ಕುಮೆಂಬುದುಂ ನಾಯಕರತ್ನದ ಪೆರ್ಕಳಮೆಸೆಯೆಂದಿವರ್ ಬಿನದವಾತುಗಳನಾಡುತ್ತಿರೆ (ಜಕವಿ.೩-೧೭೩ ಪ).

[ಪಕ್ಕ+ಮಣಿ₃]

ಪಕ್ಕವಾದಕ (ನಾ). ಸಂಗೀತ, ನರ್ತನಗಳಿಗೆ ಪಕ್ಕವಾದ್ಯವನ್ನು ನುಡಿಸುವವನು ; ಪಕ್ಕವಾದ್ಯಗಾರ : ತದನಂತರಂ ನಾಟ್ಯವಿದ್ಯಾ ವಿಶಾರದರ ಪಕ್ಕವಾದಕಪ್ರಕರಂ ಧ್ವನಿತಮುಧ್ವಲಯವಿಳಂಬಿತಗತಿಗತ ಪ್ರಹರಣಪ್ರಾಗಲ್ಭ್ಯಮುಂ ಪ್ರಕಟೀಕರಿಸುವುದುಂ (ಪುಹಾನೇ. ೪-೫೫ ವ).

[ಪಕ್ಕ+ವಾದಕ]

ಪಕ್ಕವಾದ್ಯ (ನಾ). ಹಾಡು, ನರ್ತನಗಳ ಜೊತೆಯಲ್ಲಿ ಬಾರಿಸುವ ಮೃದಂಗ, ಪಿಟೀಲು, ಘಟ, ತಬಲ ಮೊದಲಾದ ವಾದ್ಯ : ತಿರು ಕ್ಕೋಡಿಕೋವಿಲ್ ಕೃಷ್ಣಯ್ಯರ್ ಮತ್ತು ನಾರಾಯಣಸ್ವಾಮಿಅಪ್ಪ ಇವರೇ ಪಕ್ಕವಾದ್ಯಗಳನ್ನು ನುಡಿಸಿದರೆ ಮಾತ್ರ ಹಾಡಲೊಪ್ಪಿದರು (ಸಂಗೀತ.೧೪೪) ; ಕೊಳಲು ಪಕ್ಕವಾದ್ಯಗಳಿಂದ ಕೂಡಿದ ಈ ನಾಟ್ಯವು ವಿಶ್ವಶಾಂತಿಯನ್ನು ಸೂಚಿಸುತ್ತದೆ (ಭಾರದ. ೫೪೯). [ಪಕ್ಕ + ವಾದ್ಯ]

ಪಕ್ಕವಾದ್ಯಗಾರ (ನಾ). ಸಂಗೀತ, ನರ್ತನಗಳಲ್ಲಿ ಪಕ್ಕವಾದ್ಯವನ್ನು ನುಡಿಸುವವನು : ಮಹಾವೈದ್ಯನಾಥಅಯ್ಯರ್ ಅವರಿಗೆ ಪಕ್ಕವಾದ್ಯಗಾರರಾಗಿದ್ದ . . . ಇವರೇ ಪಕ್ಕವಾದ್ಯಗಳನ್ನು ನುಡಿಸಿದರೆ ಮಾತ್ರ ಹಾಡಲೊಪ್ಪಿದರು (ಸಂಗೀತ. ೧೪೮).

[ಪಕ್ಕವಾದ್ಯ + -ಕಾರ₁(<-ಕಾಜ)]

ಪಕ್ಕಶೂಲೆ, ಪಕ್ಕೆಶೂಲೆ (ನಾ). ದೇಹದ ಎದೆಯ ಕೆಳಗಿನ ಎಡ ಅಥವಾ ಬಲಭಾಗದಲ್ಲಿ ಉಂಟಾಗುವ ನೋವು ; ಪಕ್ಕೆನೋವು ; ಪಕ್ಕಡಿಶೂಲೆ : ಇಂಗು, ಬಜೆ . . . ತಿಗಡೆ ಇವಂ ಚೂರ್ಣವಂ ಮಾಡಿ ಮಾದಳದ ಹುಳಿಯಲ್ಲಿ ಕಲಸಿ ನೆಲ್ಲಿಕಾಯಷ್ಟು ಬಿಸಿನೀರಲ್ಲಿ ಕೊಳ್ಳಲು ಪಕ್ಕಶೂಲೆ ಮಾಣ್ಗುಂ (ವಿವೈವಿ. ೧೨೫); ಆತ ಪಕ್ಕಶೂಲೆ ಬಂದು ಆಸ್ಪತ್ರೆಗೆ ಸೇರಿದ್ದಾನೆ (ರೂಢಿ). **ಪಕ್ಕೆಶೂಲೆ** : ಪಕ್ಕೆಶೂಲೆಗೆ :— ಕಿರುಗುರುಟಿಗೆಯ ಬೇರು, ಬೇವಿನ ಬಡಗಣ ಬೇರಂ ತಂದು ಈ ಎರಡುಂ

ಕಾಳಾಡಿನ ಹಾಲಲ್ಲರೆದು ಮೂಱುದಿನಗಳು ಕುಡಿಯೆ ಪಕ್ಕೆಶೂಲೆ ಹರ (ವಿವೈವಿ. ೧೫೨). [ಪಕ್ಕ + ಶೂಲೆ$_1$]

ಪಕ್ಕಸಾರಿ, ಪಕ್ಕಸಾರೆ, ಪಕ್ಕೆಸಾರಿ, ಪಕ್ಕೆಸಾರೆ (ನಾ). ೧. ಪಕ್ಕದಲ್ಲಿ ಜೊತೆಗೂಡಿ ಬರಲು ಯೋಗ್ಯತೆಯುಳ್ಳದು. ೨. ಪಟ್ಟದಾನೆಯ ಅಕ್ಕಪಕ್ಕಗಳಲ್ಲಿ ಜೊತೆಗೂಡಿ ಬರುವ ಆನೆ: ದಾನವ ರಾಜನೋಲಗದೊಳೆರ್ದಾರೋಹಕರ್ನಿಮ್ಮ ದಂತಿಗಳೊಳ್ ವೈರಿಝಳಪ್ಪನಂ ಕುಳಿಸಿಯುಂ ದೇವರ್ಗೆ ಚೌದಂತನೋಲಗಮೆಂದಂಕುಶಮಿತ್ತನಾಗಳದುವಂ ಕೈಕೊಂಡು ನಿಮ್ಮಲ್ಲಿಗಾ ಜಗದೇಕಪ್ರಭು ಪಕ್ಕ[ಪಾಠಾಂ. ಕೈ] ಸಾರಿಗಿದುವೇಟ್ಟುಂ ತಕ್ಕುದೆಂದಟ್ಟಿದಂ (ಅನಂಪು. ೧೩-೪೩). **ಪಕ್ಕಸಾರೆ:** ೨. ಪಟ್ಟದ ತನ್ನ ಗಜದ ಪಕ್ಕಸಾರೆಗೆ ಪಟ್ಟಗಟ್ಟಲು ಬೇಕೆಂದು ಅಟ್ಟದ ತರಲೆಂದೆನ್ನಧಿರಾಜನು ಪಟ್ಟವರ್ಧನ ಕೇಳು ರಾಯ (ಅನಂಚ. ೨೧-೧೦೫). **ಪಕ್ಕೆಸಾರಿ:** ೨. ಮೇಲಿನ 'ಅನಂಪು. ೧೩-೪೩' ಪ್ರಯೋಗದ ಪಾಠಾಂತರವನ್ನು ನೋಡಿ. **ಪಕ್ಕೆಸಾರೆ:** ೨. ಎರಡುಂ ಕರಿಯ ಗಜಂ ಬಿಳಿಯಾನೆಗೆ ಹರಿನೀಲದ ಪಕ್ಕೆಸಾರೆಯಾಗಿ ಕೈಲದೊಳ್ (ಅನಂಪು. ೫-೩೪). [ಪಕ್ಕ + ಸಾರಿ$_3$]

ಪಕ್ಕಸಾರೆ 'ಪಕ್ಕಸಾರಿ' ನೋ.

ಪಕ್ಕಳಿಸು (ಕ್ರಿ). ಚಿತ್ರದಲ್ಲಿ ಪಕಳೆಗಳನ್ನು ನಿರ್ಮಿಸು,—ರೇಕುಗಳನ್ನು ಬಿಡಿಸು: ಕಿಕ್ಕಿರಿದ ರತ್ನಶೋಭಿತದ ಭಿತ್ತಿಗಳ ಮೇಲ್ಪಕ್ಕಳಿಸಿ ರತ್ನರೇಖೆಗಳ ನಿರ್ಮಿಪೆವೆಂದು ಪೊಕ್ಕಲ್ಲಿ ಪ್ರತಿಬಿಂಬಮಂ ಕಂಡು ಬೆರಗಾಗಿ (ರುಕ್ಮಾಂಗ. ೩-೪೦). ℙ ಇದು ಛಂದಸ್ಸಿಗಾಗಿ ಮಾಡಿಕೊಂಡ ರೂಪ. [ಪಕ್ಕಳ್ಳಿ$_0$(<ಪಕಳೆ)+-ಇಸು$_3$]

ಪಕ್ಕಳೆ 'ಪಕ್ಕಲೆ' ನೋ.

ಪಕ್ಕಾ (ಗು). ೧. ಬೆರಕೆಯಿಲ್ಲದ; ಶುದ್ಧವಾದ; ಅಪ್ಪಟವಾದ: ಪಕ್ಕಾ ಅಂಗ್ರೇಜಿಲೇ ಹೇಳೋದಾದರೆ ಹಾಗೆ ಇನ್ನು ಸುಲಿದ ಬಾಳೆಯ ಹಣ್ಣಿನಂತಹ ತಿಳಿಗನ್ನಡದಲ್ಲಿ ಹೇಳಬೇಕೊಂದ್ರೆ ನೀನಿನ್ನೂ ಜ್ಞಾನದಂತವನ್ನು ಕಡೆದಿಲ್ಲ (ಮಾಸುನೆ. ೧೭೬). ೨. ಅಚ್ಚುಕಟ್ಟಾದ; ಉತ್ತಮವಾದ: ಅಂಗಾಲಿಂದ ಜೀವನದ ಎಳೆತ ಕಡಮೆಯಾದ್ದರಿಂದ ನಾನು ಪಕ್ಕಾ ರಸ್ತೆಯನ್ನು ಪೂರ್ತಿ ಬಿಟ್ಟು ಬಿಡುವ ಸಾಧ್ಯತೆಯನ್ನು ನೋಡಿದೆ (ನಿಬಂಧ. II, ೧೦೨). ೩. ಸಂಪೂರ್ಣವಾದ; ಪೂರ್ತ; ಭಾರಿ; ಪ್ರಚಂಡ: ಅವನು ತಕ್ಕಮಟ್ಟಿಗೆ ಚೆನ್ನಾಗಿದ್ದಾನೆ. ಪಕ್ಕಾ ಘಾಟ(ತುಂಬಿಕೊ.೪೧); ಹಾ ನಮ್ಮ ತಿನ್ನ! ಪಕ್ಕಾವ್ಯಾಪಾರಿ (ಮೂರುದಾ. ೧೩೪); ನೀನು ಪಕ್ಕಾ ಕಳ್ಳ ಕಣೋ (ಮರಳಿ.೧೦೦); ಶ್ರಾದ್ಧದ ದಿನಗಳಲ್ಲಿ ನಾವು ಪಕ್ಕಾ ಸುರಪುರದ ಆಚಾರ್ಯರಾಗಿದಿಡುತ್ತಿದ್ದೆವು (ಫಲಸಂ.೧೭). (ನಾ). ೪. ಕಳಿತಿರುವುದು; ಪಕ್ವವಾದುದು: ಹಣ್ಣೇನು ಪಕ್ಕಾ ಅಲ್ಲ, ಕಾಯಿ (ರೂಢಿ). ೫. ಬೆರಕೆಯಿಲ್ಲದುದು; ಪರಿಶುದ್ಧವಾದುದು: ಹಾಲೂ ಅಸ್ಟೆ ಪಕ್ಕಾ ಎಲ್ಲಿ ಕೊಡುತ್ತಾರೆ, ನೀರು ಬೆರಸಿಯೇ ಕೊಡುವುದು (ರೂಢಿ). ೬. ಖದೀಮ; ಚಾಣಾಕ್ಷ: ನಮ್ಮ ರಾಯರು ಮಹಾ ಪಕ್ಕಾ ಇದ್ದಾರೆ (ಪರಿಲ. ೧೭). ೭. ಸರಿಯಾದುದು; ನಿರ್ದುಷ್ಟವಾದುದು: ಮತ್ತ ಇದು ನೋಡು ಪಕ್ಕಾ ಆಗಬೇಕಾದರೆ ಅದಕ್ಕೆ ಇನ್ನೊಂದು ಮಸಲತ್ತೈತಿ (ದಾಸಹು. ೫೭). ೮. ನಿರ್ಧಾರ; ನಿರ್ಣಯ; ನಿಶ್ಚಯ: ಮಾತು ಪಕ್ಕಾ ಮಾಡಿಕೊಳ್ಳಬೇಕು (ರೂಢಿ).

[←ಹಿಂ. ಮರಾ. ಪಕ್ಕಾ./ಪ್ರಾ. ಪಕ್ಕ./ ಸಂ. ಪಕ್ವ]

ಪಕ್ಕಾಖರಡೆ (ನಾ). ದಿನಚರಿಪುಸ್ತಕದ ಆಧಾರದಿಂದ ರಚಿಸಿದ ಕ್ರಮವಾದ ಖಾತೆ: (ಕ). [ಪಕ್ಕಾ + ಖರಡೆ]

ಪಕ್ಕಾಗು$_1$ 'ಪಕ್ಕು$_3$' ಪರಾ.

ಪಕ್ಕಾಗು$_2$ 'ಪಕ್ಕು$_4$' ಪರಾ.

ಪಕ್ಕಾವಹಿ (ನಾ). ಅಚ್ಚುಕಟ್ಟಾಗಿ ಬರೆದಿಡುವ ಹಾಳೆಗಳನ್ನು ಹೊಲಿದು ಮಾಡಿರುವ ಖಾಲಿ ಪುಸ್ತಕ; ಪರಿಷ್ಕರಿಸಿ ಬರೆಯುವ ನೀಟಾದ ಪುಸ್ತಕ: ರಂಗನು ಅದನ್ನು ಮತ್ತೆ ತಿದ್ದಿ ಬರೆದು ತನ್ನ ಪಕ್ಕಾವಹಿಯಲ್ಲಿ ಸುಂದರವಾಗಿ ಬರೆದಿಡುತ್ತಿದ್ದನು (ರಂಗರೂ. ೩೪). [ಪಕ್ಕಾ + ವಹಿ]

ಪಕ್ಕಾಶೇರು 'ಪಕ್ಕಾಸೇರು' ನೋ.

ಪಕ್ಕಾಸಿಪಾಯಿ (ನಾ). ಅತ್ಯುತ್ತಮ ಯೋಧ; ಶ್ರೇಷ್ಠನಾದ ಭಟ,—ದಂಡಾಳು: ಅ ಕೃಷ್ಣಸಿಂಗ್ ಪಕ್ಕಾಸಿಪಾಯಿ (ರೂಢಿ). [ಪಕ್ಕಾ + ಸಿಪಾಯಿ]

ಪಕ್ಕಾಸೇರು, ಪಕ್ಕಾಶೇರು (ನಾ). ೧. ಕರಾರುವಾಕ್ಕಾದ ಸೇರು; ಸರ್ಕಾರದಿಂದ ಅಧಿಕೃತವಾಗಿ ಮಾನ್ಯತೆ ಪಡೆದ ಸೇರು: ಇಂಥಾ ರಾತಲು ಎರಡಕ್ಕೆ ಪಕ್ಕಾಸೇರು ಒಂದು (ರಾಚೇಂದ್ರ.೧೫೯); ನಿಂಗೆ . . . ದಿನ್ಕೆ ಐದ್ಪಕ್ಕಾಸೇರು ಕುಚ್ಚಕ್ಕಿ ಬೇಕು (ಪಂಜಪಂ. ೧೨). **ಪಕ್ಕಾಶೇರು:** ೨. (ಉಕ) ಒಂದು ನಿರ್ದಿಷ್ಟ ಅಳತೆ; ೮೦ ತೊಲದ ತೂಕ: ಪ್ರವಾಹಿ ಪದಾರ್ಥವನ್ನು ೨೦ರು. ತೂಕ ನೀರು ಹಿಡಿಯುವ ಪಾತ್ರೆಗೆ ತುಂಬಿದರೆ ೧ ಶೇರು ಎನ್ನುತ್ತಾರೆ. ಇಂಥಾ ನಾಲ್ಕು ಶೇರುಗಳಿಗೆ ಪಕ್ಕಾಶೇರು ಎನ್ನುವುದುಂಟು (ಗೃಹವೈ. ೯). [ಪಕ್ಕಾ + ಸೇರು$_2$]

ಪಕ್ಕಿ, ಹಕ್ಕಿ (ನಾ). ಪಕ್ಷಿ; ವಿಹಗ: "ಪಕ್ಕಿ ಪಕ್ಷಿಯೆ" (ಕರ್ಣಾನಿ.೭೨); ನಿನ್ನ ಭರ್ತಾರಂ ಬಂದು ಪಕ್ಕಿಗಳಂ ಕಾಣದೆ ಬಿಟ್ಟು ಕಳೆದರಾರೆಂದು ಬೆಸಗೊಂಡೊಡೆ (ಪಡ್ಡಾಂಾ. ೧೫೧-೭); ಮೆಯ್ಗೊಂಡೊಲವಿಂದಗಲ್ಕೆಗಣ ಮಾಱದೆ ಪಕ್ಕಿಗಳೆಲ್ಲಮಂ ಮರುಳ್ಗೊಂಡವೊಲೂಳ್ದು ಕೂಡೆ ಬೆಸಗೊಂಡು ಬಟಲ್ದುವು ಜಕ್ಕವಕ್ಕಿಗಳ್ (ಪಂಪಭಾ. ೪-೪೮); ಪಕ್ಕಿಗಳಲ್ಲಿ ತಿಂದುಟ್ಟಿದ ನೆಲ್ಗಳ ನುಚ್ಚುಗಳಂ ಫಲಂಗಳಂ ಪಕ್ಕದೊಳ್ದರ್ ಗೂಡುಗಳಿನಾಯ್ದೆನಗಿಕ್ಕುವನಟ್ಟುಟ್ಟಿಂದೆ (ಕಾದಂಪೂ. ೧೩೭); ಕಲುಕುಟಕಾದಿ ತೋಟದ ಪಕ್ಕಿಗಳ ಕೊರಲುಲುಹಾದುದಾ ತಪೋವನದಿ (ವೋಹತ. ೭-೧೭). **ಹಕ್ಕಿ:** "ಹಕ್ಕಿಯೆನಲ್ವಿಹಗಂ" (ರನ್ನಕಂ. ೩); "ಪತತ್ . . . ದ್ವಿಜಃ —ಈ ೨೬ ಹಕ್ಕಿ" (ಹಲಾಯು. ೪೦-೮೫); ಕೊಂಬಿನ ಮೇರ(ಗ)ಳ ಹಕ್ಕಿಯ ಆಕಾಶದ ಮೇರ(ಗ)ಳ ಗಿಡುಗ ಹಿಡಿಯಿತ್ತು (ಅಜಾಮಾ. ಕ. ೧೩೩-೫೦೮); ಹಕ್ಕಿ ಹರಿಣಿಯ ತಱುದ ಗಡ ಕೈಯಿಕ್ಕಿದರೆ ಕಡುಗುದುರೆಯನು ನೆಲಕಿಕ್ಕಿದನೆ (ಕುಸ್ಯಾಸ. ೧೦-೧೪); ಪಿಕ ಚಕೋರಕ ಮಿಾಂಬುಲಿಗ ಹಕ್ಕಿ [ಪಾಠಾಂ.ಪಕ್ಷಿ]ಗಳು ರಂಜಿಸಿತು (ಸಳಚ. ೧-೪೨); ತುಂಗವಿಕ್ರಮದಿಂದೆ ಹಕ್ಕಿ ಹಾವಂ ಸದೆದ ಸಾಹಸದೆ ಬೆಱೆ ತಿರ್ದೊಡೆ (ಜೈಮಿಭಾ. ೭-೫೯); ಹಕ್ಕಿಯಿಲ್ಲದ್ದು ತೋಟವಲ್ಲ, ಮಕ್ಕಳಿಲ್ಲದ್ದು ಮನೆಯಲ್ಲ (ಗಾದೆ).

ಪಕ್ಕಿಗಳರಸ = ಹಕ್ಕಿಗಳ ಒಡೆಯ; ಗರುಡ: "ಗರುಡಂಗೆ ಯೆಲರುಣಿವಗೆಯು ಪರ್ದು ಪಕ್ಕಿಗಳರಸನೆಂದು ತಕ್ಕುದೀ ಪೆಸರು" (ಶಬ್ದಮಂ.೭); "ಪಕ್ಕಿಗಳರಸನೆನಲ್ ಪರ್ದನಲ್ ಗರುಡಂಗೆ ತಕ್ಕ ನಾಮಂ" (ಕಶರ. ೬೩). **ಪಕ್ಕಿಗಳಾಣ್ಮ** = ಪಕ್ಕಿಗಳರಸ: "ಪಕ್ಕಿಗಳಾಣ್ಮಂ, ಎಲರುಣಿವಗೆಯಂ, ಪರ್ದು—ಈ ೩ ಗರುತ್ಮಂಗೆ ಪೆಸರ್" (ಕಶಸಾ. ೪೭-೧೨); "ಎಲರುಣಿವಗೆಯನೆಂದು ಪರ್ದು ಪಕ್ಕಿಗಳಾಣ್ಮ ಬಳ ಗರುಡ" (ಕಬ್ಬಿಕೈ. ೮); **ಹಕ್ಕಿಯ ರೋಗ** = ಮೂಳೆಗಳು ಮೆದುವಾಗುವ ಒಂದು ಬಗೆಯ ಮಕ್ಕಳ ರೋಗ; ಹಕ್ಕಿರೋಗ: ಮೂಳೆಗಳಲ್ಲಿ ಕ್ಯಾಲ್ಸಿಯಂ ಫಾಸ್ಫೇಟ್ (Calcium phosphate) ಎಂಬ ಲವಣವು ಆಡಗಿದೆ. ಇದು ಶೇಖರಿಸಲ್ಪಡದೆ ಇದ್ದರೆ ಮೂಳೆಗಳು ಸರಿಯಾಗಿ ಬೆಳೆಯದೆ ಸಣ್ಣವಾಗಿ, ಸ್ವಲ್ಪ ಪೆಟ್ಟಿಗೆ ಬೇಗನೆ ಮುರಿಯುವುವು. ಒಂದು ಮಾದರಿಯ ಹಕ್ಕಿಯ ರೋಗವು (ricket) ಪ್ರಾಪ್ತವಾಗುತ್ತದೆ (ಗೃಹವಿ. ೨೦).

[<ಪ್ರಾ. ಪಕ್ಖಿ./ಸಂ. ಪಕ್ಷಿನ್]

ಪಕ್ಕಿದೇರ (ನಾ). (ಗರುಡ) ಪಕ್ಷಿಯನ್ನು ವಾಹನವಾಗಿ ಉಳ್ಳವನು ; ಪಕ್ಷಿವಾಹನ ; ವಿಷ್ಣು : ಏ ಪಕ್ಕಿದೇರ, ಎನ್ನೊಡೆಯ, ಮೇಲೆಸಗ್ಗೆ. ಅನಂದಮೂರ್ತಿ ! ನೀನೆ ಅನಂತಂ (ಅದ್ಭುತ. ೬-೨೨).

[ಪಕ್ಕಿ + ತೇರ್$_2$ + -ಅ$_7$]

ಪಕ್ಕಿಯೆರಸ (ನಾ). ಹಕ್ಕಿಗಳ ರಾಜ ; ಗರುಡ : ಪಕ್ಕಿಯರಸನ ಕುಕ್ಕಿ, ಗರಿ ಕಿತ್ತು ನಡುಗಿಸಿತು (ಪಾರಿಜಾ. ೧೨-೨೨೩). [ಪಕ್ಕಿ + ಅರಸ$_1$]

ಪಕ್ಕಿಯೆಱಿಯೆ (ನಾ). = ಪಕ್ಕಿಯರಸ : ಪಕ್ಕಿಯೆಱಿಯನ ತೊರಲ ತೆಱದಂದದಿ ಕಕ್ಕಸಬಲವೆರಸಿರ್ದ (ಪರ್ಥಪು. ೬-೬೪). [ಪಕ್ಕಿ + ಎಱಿಯೆ]

ಪಕ್ಕಿವಡಿಕ (ನಾ). ಪಕ್ಷಿಗಳನ್ನು ಬೇಟೆಯಾಡುವವನು ; ಬೇಡ : ಅಕ್ಕುವುದೆ ಹಾಲಾಹಲ ವ್ಯಗವು ಪೋತಕಕ್ಕೆಲೆ ಮರುಳೆ ಭೂರತಿ ಕೂರ್ತು ಇಕ್ಕುವ ತೊಡವೆತ್ತ ನೀನೆತ್ತ ಪೇಳ್ವುಳುವಕ್ಕಿವಡಿಕೆಯೆಂ [ಪಾಠಾಂ. ಪಕ್ಕಿಬಡಿಗನೆಂ, ಪಕ್ಕಿಬಡಿಕೆಯೆಂ]ದು ಗಜರ್ದರು (ಸೂಬಸೋ. ೨೦-೫೬). [ಪಕ್ಕಿ + – ಬಡಿಕ$_2$]

ಪಕ್ಕಿವನೆ (ನಾ). ಹಕ್ಕಿಯ ಗೂಡು : ತತ್ಪತೋಬಳದ ಮುಂದೂಳ ದಾಟಿಯಾಳ್ಗಳಂತಿರೋಳಿಯೊಳ್ ಕೇಳೀಮಯಮೂರಂಗಳ್ ಉಪ್ಪವೊಗೆದು ಪೊಂಗಡೆಯ ಪಕ್ಕಿವನೆಗೆ ಪಾಜಿಯುಂ (ಪರ್ಥಪು. ೬-೨೬೮).

[ಪಕ್ಕಿ + ಪನೆ$_2$]

ಪಕ್ಕು$_{1,3}$, ಹಕ್ಕು$_1$ (ನಾ). ೧. ಮೂಗು, ಕಣ್ಣು ಮೊದಲಾದುವುಗಳಲ್ಲಿ ಬರುವ ಕೊಳೆ,–ಒಣಮಲ ; ಪಿಚ್ಚು ; ಹೊಕ್ಕು : ಪಡಲಂ ಕವಿದೊಳಪುಗೆ ಕಣ್ಗಡುವೊಡೆ ನೀರ್ ಸುರಿಯೆ ಪಕ್ಕು ಮೆತ್ತಿರೆ ಮುಸ್ಕಂ ಸಡಿಲಿರೆ ತುರಗಕೆ ಮರಣಂ ತಡೆಯದೆ ಸಮನಿಸುಗುಮೆಂದನಭಿನವಚಂದ್ರಂ (ಅಶ್ವಶಾ, ೬-೩೯). **ಹಕ್ಕು$_1$** : ೧. "ಕಿಟ್ಟ, ಮಲ – ಕಣ್ಣ ಹಕ್ಕು ಮೊದಲಾದ ಮೆಯ್ಯ ಮಲಂ" (ನಾಚಂಾ. ೬) ; ನುಂಗದೆ ರಾಹು ಹೇಸಿಯುಗುಟ್ಟಿಂಜಲನತ್ರಿಯ ಕಣ್ಣ ಹಕ್ಕನೇಣಂ ಗತಿಗೆಟ್ಟ ಪೆರ್ಮೊಲನನಾರತವಾಡುವ ಕಾಡನಿಂದುವೆಂದಂಗನೆಯೇಕೆ ಬಣ್ಣಿಸುವೆ (ನಳಚಂ. ೨೦೭). ೨. ಗಾಯವು ಮಾಯುವಾಗ ಮೇಲೆ ಏಳುವ ಪದರ,—ಹುರುಪು : (೬). 'ಹಕ್ಕಳೆ' ಪರಾ. ೩. ದೀಪದ ಬತ್ತಿ ಮೊದಲಾದುವುಗಳ ಕರಿಕಾದ ತುದಿ : (೬).

[ದೇ.॥ ತಮಿ. ತೆಲು. ಪಕ್ಕು ; ತುಳು. ಪುಕ್ಕ, ಪುಳ್ಕು]

ಪಕ್ಕು$_2$ (ನಾ). ಭೇದ ; ವಿಕಲ್ಪ ; ಭಿನ್ನತೆ : ಮನಕಂ ಪಕ್ಕಲ್ಲದೆ ನೆಲನಿಸಾನುಂ ಮೆಚ್ಚಿ ಕಣ್ಣನಂ ನೋಡಿ ನರಂ ನೆನೆದಂ ತನ್ನೊಳ್ ತಾಗಿದ ವಿನಾಕಪಾಣಿಯ ಕಿರಾತ ತನುಸೌಷ್ಠವಮಂ (ಕಾವ್ಯಾವ.೬೧೫).

[< ಪಸು$_1$ ·/ತಮಿ. ಪಕ್ಕು]

ಪಕ್ಕು$_3$ (ನಾ). ೧. ಗುರಿ ; ಈಡು : ಆವಂ ಕುಡುವೊಂ ಕುಡಿಸುವ ನಾವೊಂ . . . ಇರ್ವರುಮೇಕೀಭಾವದಿನಿರೆ ನಿಮ್ಮೊಳಗಿನಿತಾವುದು ಭೇದಕ್ಕೆ ಪಕ್ಕು ಪೆಜತೇಂ ಸ್ವಪತೀ (ಶಾಂತಪು. ೨-೬೯). ೨. ನೆಲೆ ; ಆಶ್ರಯ. ೩. ಅವಕಾಶ ; ಅವಸರ ; ಎಡೆ ; ಸಂದರ್ಭ : 'ಪಕ್ಕುಗಾಣ್' ಪರಾ.

ಪಕ್ಕಾಗಿಸು = ಆಶ್ರಯವಾಗುವಂತೆ ಮಾಡು : ತತ್ಕಾಲೋಪಜಾತ ಪ್ರಚುರಪುಲಕನುಂ ಭೂಷಣಶ್ರೀಗೆ ಪಕ್ಕಾಗಿಸುವೀ ವ್ಯಾಪಾರಸಾರಂ ಸಮನಿಸುಗೆ ಕಾದಂಬರೀದೇವಿಗಾಗಳ್ (ಕಾದಂಉ.೫೧೬). **ಪಕ್ಕಾಗು$_1$** = ೧. ಗುರಿಯಾಗು ; ಒಳಗಾಗು ; ಈಡಾಗು : ವಿಕಾಂತದೊಳ್ ನೂಪುರರವವಿಳಸದ್ವಾಮಪಾದಪ್ರಹಾರಕ್ಕೆದಱಿಂಳ್ ಪಕ್ಕಾಗಿ ಗೋತ್ರಸ್ಖಲನೆ ನೆಗಟ್ ಪೂಮಾಲೆಯಿಂ ಮೋದುವೆತ್ತೆಂ (ಅವಿಪು.೪-೯); ಅಂತೆನಿಸಿದ ಮನಸಿಜನ ನನೆಯಂದಿನ ಕೋಳ್ಗೆ ಪಕ್ಕಾಗಲೊಡನೆ (ಕಾದಂಉ. ೩೧೦) ; ರಾಕ್ಷಸರ ಕಾಲ್ದುಳಿತಕ್ಕೆ ಪಕ್ಕಾದನೇ (ಚಿಒಪು. ೧೧-೨೬) ; ಎಱೆವೆಂದಿರ ನಗೆಗೆನ್ನಂ ಪಕ್ಕಾಗದಂತು ಮಾಡಿ ಗೆಲ್ಲಮೆಣ್ಣಂ ಸವತಿಯನಾಗಿಸೈ (ಲಾವಣಾಶ್ವ. ೪೯-೧೦). ೨. ವಶವಾಗು ; ಅಧೀನವಾಗು ; ಪಗೆಗೆ ಪಕ್ಕಾಗಿ ನಿಷ್ಕಾರಣಂ ಸಾವುದಾವ ಕಾರಣಂ ಬರ್ದನೆ ಬಂಟಂ ಎಂಬ ನಾಟ್ನುಡಿಯುಂಟಂಟು (ಪಂಚತಂ. ೧೧೫-೧೨). ೩. ಆಶ್ರಯವಾಗು : ಮಲ್ಲಿಕಾಲತೆಯ ಜೊಂಪಕ್ಕೆ ಪಕ್ಕಾಗಿ ಕುಳಿರ್ ತೀಗೊಳದ ತಡಿಯ ತಣ್ಪುಟಾಲ ನುಣ್ಮಾಣಲೊಳ್ (ಪುಷ್ಪಪು. ೨-೩೪). ೪. ಮರೆಹೊಗು ; ಆಶ್ರಯಿಸು : ಮನಮೊಲ್ಮಾತನ ಗಾಡಿಯುಂ ದರವುರಂಗಂಡಾಕೆಗಳ್ ಪೂವಿನಂದಿನ ಕೋಳ್ಗಂ . . . ಒಂದೊಂದೆ ತಣ್ಬನಿಯೊಳ್ ಕೋಡಿಸುತಿರ್ಪ ಬಿಜ್ಜಣಗೆಗಂ ಪಕ್ಕಾಗದೇಂ ಪೋಪರೇ (ಅದಪು.೧-೭೫). **ಪಕ್ಕು ಮಾಡು$_1$** = ೧. ಗುರಿಮಾಡು ; ಈಡುಮಾಡು : ಅರೋಪಿತ ಚಾಪನಪ್ಪ ಕುಸುಮಚಾಪಂಗೆ ಪಕ್ಕುಮಾಡಿದ ಚಂದ್ರಾಪೀಡನನಪಾಂಗವಿಕ್ಷೇಪ ತರಳತರತಾರಶಾರೋದರನಯನಂಗಳಿಂದವಿಗವಿಗೆ ನೋಡುತ್ತಮಿರ್ದ (ಕಾದಂಉ. ೫೧). ೨. ಇಂಬುಗೊಡು ; ಒಡ್ಡು ; ಎಡೆಗೊಡು : ನತಾಸ್ಯಾಂಬುಜೆಯಾಗಿ ಭಕ್ತಿಭರದಿಂ ಶೇಷಪ್ರಸೂನ ಪ್ರಸಾಧನಸಂಪತ್ತಿಗೆ ಪಕ್ಕುಮಾಡಿ ಮುಡಿಯಂ ತತ್ಕಾಂತೆ ಕಣ್ಮೊಪ್ಪಿದಳ್(ಶಾಂತೀಶ್ವ.೧೪-೨೧). ೩. ಆಶ್ರಯಿಸುವಂತೆ ಮಾಡು ; ನೆಲೆಗೊಳ್ಳುವಂತೆ ಮಾಡು : ಕೇಳೀವನಕ್ಕೆತಂದೊಂದು ಮನೋಹರಮಪ್ಪ ಚಂದ್ರಕಾಂತದ ಶಿಲಾತಲ ದೊಳ್ಸಜನಿತಂಬನುಂ ಪಕ್ಕುಮಾಡಿ (ತ್ರಿಪುವಿ. ೩-೫೬ ವ).

ಪಕ್ಕು$_4$ (ನಾ). ೧. ಉತ್ತಮವಾದುದು ; ಶ್ರೇಷ್ಠವಾದುದು. ೨. ಚೆನ್ನಾಗಿ ಬೆಂದಿರುವುದು ; ಪಕ್ವವಾದುದು : ಆತುರದಿನಡುಗೆ ಪಕ್ಕಹುದೇ ? (ಮಂಕುಕ. ೬೮೧).

ಪಕ್ಕಾಗು$_2$ = ೧. ಉತ್ತಮವಾಗು ; ಶ್ರೇಷ್ಠವಾಗು : ಪಕ್ಕಾದ ನವೀನತಾನತತಿಯೊಪ್ಪಲ್ ಪಾಡಿದರ್ (ಉದ್ಭಟ.೩-೧೩). ೨. ಪರಿಪಾಕವಾಗು; ಅನುಭವಿಸುವ ಮಟ್ಟಕ್ಕೆ ಬರು : ಮಕ್ಕಳ ಭವಿಷ್ಯಕ್ಕೆ ಕಕ್ಕುಲಿತೆಗೊಳಬೇಡ ಪಕ್ಕಾಗುವುದು ಭಾಗ್ಯವೆಂತೆಂತೊ ಜಗದಿ (ಪುಂಕುಕ.೪೨೦). [< ಸಂ. ಪಕ್ವ]

ಪಕ್ಕು$_5$ 'ಪಕ್ಕ' ನೋ.

△ **ಪಕ್ಕು$_6$** 'ಹಕ್ಕು$_2$' ನೋ.

ಪಕ್ಕುಗಾಣ್ (ಕ್ರಿ). ಅವಕಾಶವನ್ನು ಹೊಂದು : ಅಜಿತನ ನಗೆ ಗಣ್ಗಳ ಚೆಲ್ವನೊಸೆದು ನೋಡಲ್ ಪಡೆಯಲ್ ನಗೆಮೊಗದ ನೀಜಿಯರ್ [ನಗು]ಮೊಗದಿಂದಂ ಪಕ್ಕುಗಾಣದಗಲಗಲಿರ್ದರ್ (ಅಜಿಪು. ೫-೯೨).

[ಪಕ್ಕು$_3$ + ಕಾಣ್]

ಪಕ್ಕುಗುಡು 'ಪಕ್ಕುಗೊಡು' ನೋ.

ಪಕ್ಕುಗೊಡು, ಪಕ್ಕುಗುಡು (ಕ್ರಿ). ೧. ಅವಕಾಶವನ್ನುಂಟುಮಾಡು ; ಆಶ್ರಯ ಕೊಡು : ಮನಂ ಮಱುಳಕ್ಕೆ ನೀಳ್ದ ಕಣ್ಣೊಜೆದುಗುನಪ್ಪುವಾರಿಗೆ ತೊದಳ್ನುಡಿ ಲಲ್ಲೆಗೆ ಪಕ್ಕುಗೊಟ್ಟು ಕಾಳ್ಗೆಜಗಿರೆ (ಪಂಪಭಾ. ೪-೧೨) ; ಒರ್ವ ವ್ಯಾಧನೊಂದು ಪಕ್ಕಿಯುಂ ಪಿಡಿತರೆ ಕರುಣಿಸಿ ಬೇಡಂಗೆ ಬೆಲೆಗುಡಿಸಿ ಬಿಡಿಸಿದೊಡಾ ಪಕ್ಷಿಯುಪಶಮಕ್ಕೆ ಪಕ್ಕುಗೊಟ್ಟ ಸುವಂ ಬಿಟ್ಟು ಬೇಡನಪ್ಪಗೊಡೆಯನಾದುದು (ಪಂರಾಮಾ. ೪-೫೪ ವ). **ಪಕ್ಕುಗುಡು**ಃ ೧. ಕಾಮಾಗಮನಕ್ಕೆ ಪಕ್ಕುಗು[ಪಾಠಾಂ. ಗೊ]ಡುವಂತೆ ಪೊಲಿರ್ದುದು ಸುಯ್ನುರಂತರಂ (ಕಾದಂಪೂ. ೬೪೬) ; ಯುದ್ಧಾಪಜಯಕ್ಕೆ ಪಕ್ಕುಗುಡುವಂತಿರ್ದಂ ಸಹಸ್ರಾಂಬಕಂ (ಜಗದಿ. ೧೩-೬೨) ; ಅದಕ್ಕೆ ಪಕ್ಕುಗುಡದಾ ಸತ್ಕೀರ್ತ್ಯಂದ್ರಶೋಕೇಂದ್ರಸತ್ಪದಪದ್ಮಕ್ಕೆ ಮರಂದಮುಂ ಪಡೆದು (ರಾಜಶೇ. ೪-೧೧೩). ೨. ಅರ್ಪಿಸು ; ಒಪ್ಪಿಸಿಕೊಳ್ಳು : ಜನನಿ ನಿರೀಕ್ಷಿಸಿ ಚಿತ್ತಮನನೂನಹರುಷಕ್ಕೆ ಪಕ್ಕುಗುಡು[ಪಾಠಾಂ. ಪಕ್ಕುದುಡು]ತಿರಲಿರಲಿಂತನುಗತಿಯಿಂದೇಟ್ಗೊಯ ಚಂದ್ರನ ತೆಱದಿಂ ಕೃಷ್ಣ

ನೆಯ್ದೆ ನಿಷ್ಠಾಕತೆಯಂ (ಮಹಾನೇ.೬-೮; ಪದ್ಯಸಾ. II, ೧೫೯ ನೋ).
[ಪಕ್ಕು$_3$+ಕೊಡು$_1$]

ಪಕ್ಕುಮಾಡು$_1$ 'ಪಕ್ಕು$_3$' ಪರಾ.

ಪಕ್ಕುಮಾಡು$_2$ 'ಪಕ್ಕ' ಪರಾ.

ಪಕ್ಕುವಣೆ, ಪಕ್ಕುವಣೆ, ಪಕ್ಕೂವಣೆ(ನಾ). ೧. ನೆಂಟ; ಬಂಧು: "ಪಕ್ಕುವಣೆಯೆಂದುಂ, ಪಕ್ಕೂವಣೆಯೆಂದುಂ ಬಂಧು" (ಕಶಸಾ. ೭೩-೬೬೫). **ಪಕ್ಕುವಣೆ**: ೨. ಬಂಧುವರ್ಗ; ಬಳಗ: "ಪಕ್ಕುವಣೆಯುಮೆನೆ ಬಂಧುವರ್ಗಮುಕ್ಕುಂ" (ಕವಿಕಂ.೨೫೦). **ಪಕ್ಕೂವಣೆ**: ೧. ಒಲವರಿಂದ ಓಲಗಿಸುತ್ತಿರುವ ನಮ್ಮ ಏಕಾನ್ತದ ಬಳಿಯ ನೀ ಪಕ್ಕೂವಣೆ—ತುಂಗನು ಕಯ್ಯಾರಿಸಿದ ಬಿರುದಾವಳಿಯ ಸಮ್ಮೋಹನಕ್ಕೆ ನೀನೇ ಕರಗಿ (ಬೆಟ್ಟಅ. ೨೧೪-೧೦); ತನ್ನ ಪಕ್ಕೂವಣೆಯಿಂದಂ ದಲೆಂಬುತ್ಸುಕದ ಸಂಭ್ರಮದ ಸಂತಸದ (ಸಂಸಪ. ೨೩-೬). [?]

ಪಕ್ಕುವಣೆ 'ಪಕ್ಕುವಣೆ' ನೋ.

ಪಕ್ಕುವಾರು (ಕ್ರಿ). ನಿರೀಕ್ಷಿಸು; ಎದುರುನೋಡು: ಮಾಣ್ದೊರದೆ ಬಳಸಲಿಂ ನಿನ್ನನಾ ಕಾಂತೆಯಂತಾ ನಳಿತೋಳ್ಗಳ್ ಪಕ್ಕುವಾರ್ದರ್ಮುವು ಪಿರಿದು ತೊಡರ್ಪಾದುದಿನ್ನೆತ್ತ ಪೋಪೈ (ಆದಿಪು. ೪-೨೧).
[ಪಕ್ಕು$_3$+ಪಾರು$_1$(<ಪಾರ್$_1$)]

ಪಕ್ಕುವಿಡಿ (ನಾ). ಜೊತೆಯ ಹೆಣ್ಣಾನೆ; ಒಡನಾಡಿಯಾದ ಕರಿಣಿ: ರಜನಿವಿನೋದನಕ್ಕೆ ಮುಳಿದರ್ದ ಲತಾಂಗಿಯನಪ್ಪುಕೆಯ್ದು ಸಾಮಜಪತಿ ಪೊಕ್ಕು ಪಕ್ಕುವಿಡಿಯಂ ನಡೆಸೋಂಕುವವೋಲ್ . . . ಅಮರ್ದಪ್ಪೆ (ಶಾಂತಿಪು. ೮-೧೧೦). [ಪಕ್ಕು$_5$(<ಪಕ್ಕ)+ಪಿಡಿ$_3$]

ಪಕ್ಕುವೆಱು (ಕ್ರಿ). ಅವಕಾಶವನ್ನು ಹೊಂದು,—ಪಡೆ: ವಿಶಾಖನಂದಿರಿಪುಭೂಪರ್ ಪಕ್ಕುವೆತ್ತೆತ್ತಿ ತಟ್ಟಱಿದೆತ್ತಂ ಸೆಱೆಗೆಯ್ದುಕೊಂಡು (ಶಾಂತಿಪು. ೬-೫೯). [ಪಕ್ಕು$_3$+ಪೆಱು$_1$]

ಪಕ್ಕೂವಣೆ 'ಪಕ್ಕುವಣೆ' ನೋ.

ಪಕ್ಕೂವಣೆತನ (ನಾ). ನೆಂಟು; ಬಾಂಧವ್ಯ: ನಮ್ಮವನ ಪಕ್ಕೂವಣೆತನಕ್ಕಾಗಿರುವ ಸೈನ್ಯಭಾಗಗಳನ್ನೆಲ್ಲ ಅವರವರ ಸೇನಾಗಾರಗಳಲ್ಲಿಯೇ ಸೆರೆಗಾವಲ್ಗೊಳಕೊಳಿಸಿ (ಮಂತ್ರಿಶ. ೧೩೪-೧೪).
[ಪಕ್ಕೂವಣೆ(<ಪಕ್ಕುವಣೆ)+-ತನ]

ಪಕ್ಕೆ$_1$ 'ಪಟಕ್ಕೆ' ನೋ.

ಪಕ್ಕೆ$_2$ (ನಾ). ಒಂದು ಬಗೆಯ ಗಿಡ: ಪಿಚುಲ, ಝಾಬುಕ ಶಬ್ದಗಳು ಸಣ್ಣ ಎಲೆಗಳುಳ್ಳ ಪಕ್ಕೆಗಿಡದ ಹೆಸರುಗಳು (ಗುರುಬಾ. ೧೪೪).
[←ತೆಲು. ಪಕ್ಕೆ]

ಪಕ್ಕೆ$_3$ 'ಪಕ್ಕ' ನೋ.

ಪಕ್ಕೆದಲೆ, ಹಕ್ಕೆದಲೆ(ನಾ). ೧. ಮಲಗುವ ಎಡೆ; ಶಯನಸ್ಥಾನ: ಬೆಲೆ ತಲೆಯುದ್ದವಿಲ್ಲವಸರಂ ಮನೆವೊಕ್ಕೊಡೆ ಸೂಳೆಬಂಟರಗ್ಗಲಿಸಿದ ಮಾತೆ ಪಕ್ಕೆದಲೆಯೊಳ್ . . . ಇಚ್ಛೆಯಗ್ಗಲಿಸಿದ ಮಾತೆ ಪಕ್ಕೆದಲೆಯೊಳ್ ವಿನುತಂ ರತಿಯಿಲ್ಲ ಮಿಂಡಿಯೊಳ್ (ಸೂಕ್ತಿಸು. ೮-೩೯೯). **ಹಕ್ಕೆದಲೆ**: ೨. ಪ್ರಾಣಿ, ಪಕ್ಷಿ ಮುಂತಾದುವುಗಳು ತಂಗುವ ಸ್ಥಳ,—ನೆಲೆ,— ಆಶ್ರಯಸ್ಥಾನ; ಇಕ್ಕೆದಾಣ: ಮೇಪುಗಾಡಿಂ ಹಕ್ಕೆ [ಪಾಠಾಂ.ಕ್ಕೆ]ದಲೆಗೆ ಹರಿಯಿಡುವ ಹರಿಣೇಗಣದ ಕಡೆವಾಯೊಳರೆ ಮೆಲ್ದುಟಱಿದೆಳಗಱಂಕೆಯೆಸಟ್ಟಳಂ ಸೆಳೆದು ತಂದಾ ಬಯಲೊಳ್ ಬಳ್ಳವಸಲೆಯಂ ಪೊಸಯಿಸಿಯುಂ (ಚಂದ್ರಪು. ೮-೪ ಪ).
[ಪಕ್ಕೆ$_1$(<ಪಟಕ್ಕೆ)+-ದಲೆ]

ಪಕ್ಕೆಮನೆ (ನಾ). ಪಕ್ಕದ ಮನೆ; ನೆರೆಮನೆ: ತಿಮ್ಮನಿಗೊಮ್ಮೆ ಊರಿಗೆ ಹೋಗಬೇಕಿತ್ತು. ಪಕ್ಕೆಮನೆಯ ರೈಲ್ವೆ ರಂಗರಾಯರು ಪಾಸು ಕೊಟ್ಟರು (ತಿಂಸುತ. ೧೨೪). [ಪಕ್ಕೆ$_3$ (<ಪಕ್ಕ)+ಮನೆ]

ಪಕ್ಕೆಯ (ನಾ). ದೇವರ ಉತ್ಸವ, ರಾಜರ ಮೆರವಣಿಗೆ ಮುಂತಾದ ಸಂದರ್ಭಗಳಲ್ಲಿ ಪಕ್ಕದಲ್ಲಿ ಹಿಡಿಯುವ ಬೀಸಣಿಗೆಯಂತಹ ಅಲಂಕಾರ ಸಾಧನ: ಕರಿಯದೂ ಅಲ್ಲದ ಬಿಳಿಯದೂ ಅಲ್ಲದ ಒಂದು ಕೊಡೆ, ಕೈಬಟ್ಟಲಿನ ಹಾಗೆ ಕಾಣುವ ಎರಡು ಪಕ್ಕೆಯ, ಒಂದು ಅಬ್ಬಾಗಿರಿ—ಇಷ್ಟೂ ನಾಯಕರ ಪಲ್ಲಕ್ಕಿಯ ಬಳಿ ಇರಲೇಬೇಕು (ಬೆಳುಮ.೧೧೨).
[<ಸಂ. ಪಕ್ಷ ?]

ಪಕ್ಕೆರಕ್ಕೆ 'ಪಕ್ಕರಕ್ಕೆ' ನೋ.

ಪಕ್ಕೆವನೆ 'ಪಟಕ್ಕೆವನೆ' ನೋ.

ಪಕ್ಕೆವಾಡ (ನಾ). ಮಲಗುವ ಮನೆ; ಶಯನಗೃಹ: ಪಡುಗಡೆ ಪಗಲಾಣ್ಮನ ಪಕ್ಕೆವಾಡದೊಳೊಡರುವ ಮಣಿವಾಗಿಲೊಳು ತೊಡದ ಮಾಣಿಕತೋರಣದ ಬೆಳಗಿನಂತೆ ಒಡವರಿದುದು ಸಂಜೆಗೆಂಪು (ಕ್ರೀಪಾಲ. ೬-೧೫). [ಪಕ್ಕೆ$_1$(<ಪಟಕ್ಕೆ)+ಮಾಡ$_1$]

ಪಕ್ಕೆವೆಟ್ಟ 'ಪಟಕ್ಕೆವೆಟ್ಟ' ನೋ.

ಪಕ್ಕೆವೆಟ್ಟು 'ಪಟಕ್ಕೆವೆಟ್ಟ' ನೋ.

ಪಕ್ಕೆಶೂಲೆ 'ಪಕ್ಕಶೂಲೆ' ನೋ.

ಪಕ್ಕೆಸಾರಿ 'ಪಕ್ಕಸಾರಿ' ನೋ.

ಪಕ್ಕೆಸಾರೆ 'ಪಕ್ಕಸಾರಿ' ನೋ.

ಪಕ್ಕಾಳನ (ನಾ). ತೊಳೆಯುವುದು; ಶುದ್ಧಿಮಾಡುವುದು: "ಪ್ರಕ್ಷಾಲನ—ಪಕ್ಕಾಳನ" (ಶಬ್ದಾನು. ೧೬೦ ಪ್ಯಾಬ್ಯಾ).
[<ಪ್ರಾ. ಪಕ್ಖಾಣ./ಸಂ. ಪ್ರಕ್ಷಾಲನ]

ಪಕ್ತ 'ಪಕತ್' ನೋ.

ಪಕ್ವ (ಗು). ೧. ಬೇಯಿಸಿದ; ಅಟ್ಟ: ಪೊನ್ನಿಂ ಪೆಣೆದ ಪೆಡಗೆ ಕುಕ್ಕೆ ಗಳಿಂದೆ ಮೃಗಪಕ್ಷಿಪಕ್ವಪರಿಮಳಪಲಾನ್ನಂಗಳಿಂ, ತಂದಡಕಿದರು ರಾಕ್ಷಸರ್, ರಾಕ್ಷಸನ ಮುಂದೆ (ತ್ರೀರಾಮಾ. ೬೭೨-೨೯೦). 'ಪಕ್ವಾನ್ನ' ಪರಾ. ೨. ಕಳಿತ; ಮಾಗಿದ; ಹಣ್ಣಾದ: 'ಪಕ್ವಫಲ' ಪರಾ. ೩. ಪೂರ್ಣವಾಗಿ ಜೀರ್ಣಿಸಿದ. ೪. ನುರಿತ; ಪಳಗಿದ; ಕುಶಲ; ನಿಪುಣ. ೫. ಪರಿಪೂರ್ಣವಾದ ಅನುಭವವುಳ್ಳ. ೬. (ಹಣ್ಣುಗಳು) ಬಿದ್ದುಹೋಗುವಷ್ಟು ಕಳಿತಿರುವ. ೭. (ತಲೆಗೂದಲು) ನರೆತ; ಬೆಳ್ಳಗಾದ. ೮. (ರೋಗವು) ಪರಿಪೂರ್ಣಾವಸ್ಥೆಯನ್ನು ಹೊಂದಿದ; ಅಂತಿಮಘಟ್ಟವನ್ನು ಮುಟ್ಟಿದ; ವಾಸಿಯಾಗುವುದಕ್ಕೆ ಪ್ರಾರಂಭವಾಗುವ ಸ್ಥಿತಿಯಲ್ಲಿರುವ; ರೋಗ ಇಳಿಯಲು ಸಿದ್ಧವಾಗಿರುವ: 'ಪಕ್ವಾತಿಸಾರ' ಪರಾ. (ನಾ). ೯. ಚೆನ್ನಾಗಿ ಬೆಂದಿರುವುದು; ಹದವಾದುದು: ಹೆಸರುಳಟ್ಟು, ಬೇವಿನ ಎಣ್ಣೆಗಳನ್ನು ಸಮನಾಗಿ ತೆಗೆದುಕೊಂಡು ಪಕ್ವವಾಗಿ ಕಾಯಿಸಿ ನಸ್ಯ ಮಾಡಿದರೆ ಮೂಗಿನಿಂದ ಸುರಿಯುವ ರಕ್ತ ನಿಲ್ಲುವುದು (ಸಚಿತ್ರ. ಪರಿ. ೪೩೦); ಸುಟ್ಟ ಕಣಕ ಪಕ್ವವಾಗಿ ರೊಟ್ಟಿಯಾಗುತ್ತದೆ (ಕಲ್ಲೋಲ. ೧೮-೪). ೧೦. ಹಣ್ಣು ಚೆನ್ನಾಗಿ ಮಾಗಿರುವುದು,—ಕಳಿತಿರುವುದು. ೧೧. ಬೇಯಿಸಿದ ಅನ್ನ ಮೊದಲಾದ ಆಹಾರಪದಾರ್ಥ; ಹಸಿಯಲ್ಲದ ಖಾದ್ಯ: ವೇದೋಕ್ತ ಧರ್ಮವನ್ನು ಎಲ್ಲರೂ ಮಾಡಬೇಕು. ಆದರೆ ಮಾಡುವ ಕ್ರಮದಲ್ಲಿ ಕಾಲ ದೇಶ ಶಕ್ತಿ ಶುದ್ಧಿ ಅಶುದ್ಧಿ ಸಹಾಯ ಮೊದಲಾದ ಸಾಮಗ್ರೀಭೇದದಿಂದ ದ್ರವ್ಯ ಪದಾರ್ಥ ಅಮ ಪಕ್ವ ಮೊದಲಾದ ಪ್ರಭೇದಗಳೆಂದು ನಿರ್ಣಯವಿರುವುದು (ಹಿಂದಸಾ. ೧೬೨). ೧೨. ಕಾಸಿದ ತುಪ್ಪ: "ತುಪ್ಪ ಕರಗೆ ಪಕ್ವಂ ದ್ರುತಂ" (ಮಂಗರಾ. ೫೪-೬).

ಪಕ್ವಮಾಗು, ಪಕ್ವವಾಗು—೧.(ಪಾಪ, ಪುಣ್ಯ ಮೊದಲಾದುವುಗಳಲ್ಲಿ) ಫಲ ಕೊಡುವ ಸ್ಥಿತಿಗೆ ಬರು; ಫಲೋನ್ಮುಖತ್ವವನ್ನು ಹೊಂದು: ಅಪ್ಪುದೆ ಪುತ್ರೋತ್ಪತ್ತಿ ಮುನ್ನಂ ನೆರೆಪಿದ ಸುಕೃತಂ

ಪಕ್ವಮಾದಲ್ಲದಂದು (ಪುಷ್ಪಪು.೩-೧೦೧). ೨. (ಮನಸ್ಸು)ಹದವಾಗು; ಸ್ತಿಮಿತಕ್ಕೆ ಬರು : ಸೂಕ್ಕಿನಲಿ ಬೆರತಿಹರಿಗೆಂದಿಗು ಪಕ್ವಮಪ್ಪುದೆ ಮನವು (ಗಗತಾ. ೧೩-೧೯). ೩. (ಹಣ್ಣು) ಚೆನ್ನಾಗಿ ಮಾಗು ; ಕಳಿತಿರು : ಫಲ ಪಕ್ವವಾದಲ್ಲದೆ ಹೊಜಗಣ ಸಿಪ್ಪೆ ಒಪ್ಪಗೆಡದು (ಮಹಾದೇ. ಬ. ೭೩-೧೮೩). ೪. ಪರಿಪೂರ್ಣವಾಗು ; ಸಂಪೂರ್ಣವಾಗು : ಮೊದ ಮೊದಲು ತೃಪ್ತಿಕರವಾಗಿ ಅನುಕರಿಸದಿರಬಹುದು. ಅದರಂತೆ ಆಚರಿಸ ಬೇಕೆಂಬ ಸಂಕಲ್ಪದಿಂದ ಅಭ್ಯಾಸ ನಡಸಿ ಕೊನೆಗೆ ಪಕ್ವವಾಗಿ ಕಲಿಯ ಬಹುದು (ತಿಕ್ಷದ. ೪೨೪). ೫. ಅನುಕೂಲವಾಗು : ಅದರಿಂದ ಸಮಯ ಪಕ್ವವಾಗುವುದನ್ನು ನೋಡಿಕೊಂಡಿದ್ದು . . . ವ್ಯತ್ಯಾಸ ಮಾಡುವುದು ವಾಡಿಕೆ (ಹಣಪ್ರ. ೧೮೮). ೬. ಸ್ವಚ್ಛವಾಗಿರು ; ನಿರ್ದುಷ್ಟವಾಗಿರು : ಉಚ್ಚಾರಣೆ ಪಕ್ವವಾದರೆ ಒಳ್ಳೆಯ ವಾಗ್ಮಿಯಾಗಬಹುದು (ತಿಕ್ಷದ. ೨೪೫).

[ಸಂ.]

ಪಕ್ವಂದಾಳ್ (ಕ್ರಿ). ಹಣ್ಣಾಗು ; ಮಾಗು : ಪಕ್ವಂದಾಳ್ದ ಮಾದಲ ಪಣ್ಣ . . . ಅಂಗಡಿಗಳೊಪ್ಪಿದುವು (ಧರಚ. ೪೭-೨೦). [ಪಕ್ವ+ತಾಳ್$_1$]

ಪಕ್ವಂಬೆಱು (ಕ್ರಿ). = ಪಕ್ವಂದಾಳ್ : ಪಕ್ವಂ[ಪಾಶಾಂ.ಚೆಲ್ವಂ] ಬೆತ್ತಾಲದ ತನಿವಣ್ಣಂ ನಿಗೆ ವಿಭ್ರಾಜಿಸುವಂದದೊಳು (ಜಯಕಾ.೪-೧೧).

[ಪಕ್ವ+ಪೆಱು$_1$]

ಪಕ್ವಗೊಳ್ಳು (ಕ್ರಿ). ಹದವಾಗು : ಜೀವನ ಕೇವಲ ಗ್ರಂಥಪಠನದಿಂದ ಪಕ್ವಗೊಳ್ಳಲಾರದು (ತಿಕ್ಷದ. ೧೩೧). [ಪಕ್ವ+ಕೊಳ್ಳು$_1$ (<ಕೊಳ್$_1$)]

ಪಕ್ವಚೇತನ (ನಾ). ೧. ಹದವಾದ ಮನಸ್ಸು ; ಮಾಗಿದ ಮನಸ್ಸು. ೨. ಮಾಗಿದ ಮನಸ್ಸುಳ್ಳವನು ; ಪರಿಪಾಕ ಗೊಂಡ ಮನಸ್ಸುಳ್ಳವನು : ಕಾಲಕ್ರಮೇಣ ಪಕ್ವಚೇತನನಾದಾಗ ದಿವ್ಯಕಾರುಣ್ಯದೃಷ್ಟಿಯಿಂದ ನಡೆದುಕೊಂಡನೆಂಬುದು ಈಸ್ಕಿಲಸ್‌ನ ಆಶಯ (ಬದ್ಧಪ್ರ.×××IV.ಪೀಠಿಕೆ). [ಪಕ್ವ+ಚೇತನ]

ಪಕ್ವಜ್ವರ (ನಾ). ಪರಮಾವಧಿ ಮಟ್ಟದ ಜ್ವರ ; ಪೂರ್ಣಾವಸ್ಥೆಗೆ ಬಂದ ಜ್ವರ : ಜ್ವರವು ಬಹುವೇಗವಾಗಿ, ಅತಿದಾಹ, ಬಹಳ ಪ್ರಲಾಪ, ಶ್ವಾಸ, ಭ್ರಮೆ, ಮಲಪ್ರವೃತ್ತಿ, ವೆಗ್ಗಳವಾದ ಬಳಲಿಕೆ ಇವುಗಳೆಲ್ಲಾ ಇರುವುದೇ ಪಕ್ವಜ್ವರವೆನಿಸಿಕೊಳ್ಳುವುದು (ಸಕವೈ. ೯೭). [ಪಕ್ವ+ಜ್ವರ]

ಪಕ್ವತೆ (ನಾ). ಪರಿಪೂರ್ಣತೆ : ಪಕ್ವತೆಗೆ ಸ್ವಲ್ಪ ಸಮಯ ಬೇಕಾಗು ತ್ತದೆ (ಪ್ರಕಾಶ. ೩೦). [ಸಂ. ಪಕ್ವತಾ]

ಪಕ್ವಫಲ (ನಾ). ಮಾಗಿದ ಹಣ್ಣು ; ಕಳಿತ ಹಣ್ಣು : ಪೋಗಿ ತಾಳವನಮಂ ಪೊಕ್ಕು ಪಕ್ವಫಲಮಂ ಕಂಡಟ್ಟುವಟ್ಟು (ಜಗವಿ. ೪-೪೦೨); ಪಕ್ವಫಲಂಗಳಿಂದೆ ರಸನೇಂದ್ರಿಯಮಂ ವರಪುಷ್ಪಗಂಧದಿಂ ಮಿಕ್ಕಿರೆ ನಾಸಿಕೇಂದ್ರಿಯಮಂ . . . ಪ್ರವಾಳಸಚ್ಛಕ್ಕಣಶಯ್ಯೆಯಿಂದೆ ಪಪುರಿಂದ್ರಿ ಯಮಂ ತಣಿಪುತ್ತುಮೊಪ್ಪುಗುಂ (ಬಾಧಪು. ೧-೧೧೦) ; ಲಲಿತಶುಕಚಯ ಚಂಚುಪುಟದಿಂ ದಳಿತ ಜಂಬೂಪಕ್ವಫಲರಸಲುಳಿತ ನವಮಕರಂದ ಮಧುರೋರ್ಧುರನಿವಾತದಲಿ . . . ಎಸೆದುದು ಗಜಪುರೋದ್ಯಾನ (ಕುವ್ಯಾಉ. ೬-೨೭). [ಪಕ್ವ+ಫಲ$_1$]

ಪಕ್ವಬಿಂಬ (ನಾ). ಮಾಗಿರುವ (ಕೆಂಬಣ್ಣಕ್ಕೆ ತಿರುಗಿರುವ) ತೊಂಡೆಹಣ್ಣು : ಪಕ್ವಬಿಂಬಚ್ಛವಿಯಂ ಮಾರ್ಕೊಳ್ವುದಧರಮಣಿ ಮುನಿ ವರನಾ (ಕಾದಂಪೂ. ೭೩೩) ; ಪಡೆವನ್ನಂ ಪಕ್ವಬಿಂಬಕ್ಕಧರಮಧರತಾ ವಾಸ್ತಿಯಂ (ಚಂದ್ರಪು.೨-೨೩) ; ಜನಕಾದೇಶದೆ ಬಂದನಲ್ಲಿಗೆ ಕುಮಾರಂ ಪಕ್ವಬಿಂಬಾಧರಂ ತನಿಗೆಂಪಿಂ ಕಿಸುಸಂಜೆಯಂ ಕೆದಱೆ (ಪುಷ್ಪಪು. ೪-೮೦).

[ಪಕ್ವ+ಬಿಂಬ]

ಪಕ್ವಮತಿ (ನಾ). ಪರಿಣತವಾದ ಬುದ್ಧಿಯುಳ್ಳ ವ್ಯಕ್ತಿ ; ಕುಶಲ ಮತಿ: ಈ ಹೊತ್ತಿಗೆಯಲ್ಲಿ ಇದ್ದಿರಬಹುದಾದ ಆಪಕ್ವ ಅಭಿಪ್ರಾಯಗಳನ್ನು ಪಕ್ವಮತಿಗಳು ತೋರಿ ತಿದ್ದಬೇಕು (ದ್ರಾವಿವಿ. XII, ಮೊದಲ ಮಾತು).

[ಪಕ್ವ+ಮತಿ]

ಪಕ್ವರಕ್ತ (ನಾ). ಕೀವು : "ಕೀವಂ, ಕೀವಸಂ, ಕೀವು—ಈ ೩ ಪಕ್ವ ರಕ್ತಂ" (ಕಾಶಕೃ. ೫೩). [ಪಕ್ವ+ರಕ್ತ]

ಪಕ್ವಶಾಳಿ (ನಾ). ಹಣ್ಣಾಗಿರುವ ಬತ್ತದ ಪೈರು ; ಕೊಯ್ಲಿಗೆ ಬಂದಿರುವ ಬತ್ತ : ಪಕ್ವಶಾಳಿ ಕಣಶಾಳೀನಮ್ರಮೊಪ್ಪಿರ್ದದೇಂ ಗೆಲೆವಂದತ್ತೊ ಸುವರ್ಣವರ್ಣದಿನಿಳಾಶ್ರೀಯುಟ್ಟ ಪೊಂಬಟ್ಟೆವೋಲ್ (ಜಗವಿ. ೨-೫). [ಪಕ್ವ+ಶಾಳಿ(=ಶಾಲಿ$_2$)]

ಪಕ್ವಸ್ಥಿತಿ (ನಾ). (ಕಾಯಿಲೆಯ) ಪರಿಪೂರ್ಣಾವಸ್ಥೆ ; ಗರಿಷ್ಠ ಮಟ್ಟ ; ಪರಿಣಾಮಾವಸ್ಥೆ : ಈ ಕಾಯಿಲೆ ಪಕ್ವಸ್ಥಿತಿಗೆ ಬರುವುದಕ್ಕೆ ೭ ರಿಂದ ೧೪ ದಿವಸಗಳು ಬೇಕಾಗುತ್ತವೆ (ಕಲರೋ. ೨೮).[ಪಕ್ವ+ಸ್ಥಿತಿ]

ಪಕ್ವಾಜೀರ್ಣ (ನಾ). ಅತಿಯಾದ ಅಜೀರ್ಣ (?) : ಸಂವತ್ಸರ ಲವಣ, ಇಂಗು, ಶುಂಠಿ ಸಹ ಚೂರ್ಣಮಂ ಮಾಡಿ ಬಿಸಿನೀರಲ್ಲಿ ಕದಡಿ ಕುಡಿಯೆ ಪಕ್ವಾಜೀರ್ಣಂ ಮಾಣ್ಗುಂ(ಸಕವೈ. ೩೬೫). [ಪಕ್ವ+ಅಜೀರ್ಣ]

ಪಕ್ವಾತಿಸಾರ (ನಾ). ಪರಿಣಾಮಾವಸ್ಥೆಯನ್ನು ಮುಟ್ಟಿ, ಇಳಿ ಯುವ ಘಟ್ಟಕ್ಕೆ ಬಂದಿರುವ ಅತಿಯಾದ ಅತಿಸಾರ ; ಬಹಳ ದಿನಗಳಿಂದ ಇರುವ ಅತಿಸಾರ,—ಭೇದಿ : ನೀರಿನಲ್ಲಿ ಮಲವ ಹಾಕಿ ನೋಡಲು ಮುಳುಗಿದರೆ ಆಮಾತಿಸಾರ, ತೇಲಿದರೆ ಪಕ್ವಾತಿಸಾರ ವೆಂದರಿವುದು (ಸಕವೈ. ೩೦೭). [ಪಕ್ವ+ಅತಿಸಾರ]

ಪಕ್ವಾನ್ನ (ನಾ). ೧. ಬೇಯಿಸಿದ ಅನ್ನ; ಖಾದ್ಯ : ಆಜ್ಯರಸಪ್ರಿಯ ಪಕ್ವಾನ್ನಚಯಮನುಂಡೆಂ ತಣಿದೆಂ . . . ಎಂದು . . . ಹರಿ ನುಡಿದಂ (ಜಗವಿ. ೪-೮೩) ; ಆ ದಿವಸ ಲೀಲೆಗೆ ರಾಮುವಿಗಾಗಿ ಎಷ್ಟು ಬಗೆಯ ಪಕ್ವಾನ್ನಗಳನ್ನು ಮಾಡಿಸಿದರೂ ತೃಪ್ತಿಯಾಗಲಿಲ್ಲ (ಶುಂಕುಮ. ೬೦) ; ಅದೆ ಅಕ್ಕಿ, ಜೋಳ, ಗೋಧಿಗಳಿಂದ ವಿಧವಿಧದ ಪಕ್ವಾನ್ನ ಗಮಗಮಿಸು ವುದು (ನೆಲಮು. ೩೨-೧೬). ೨. ತುಪ್ಪದಲ್ಲಿ ಕರಿದ ಲಾಡು, ಚಿರೋಟಿ ಮೊದಲಾದ ಸಿಹಿತಿಂಡಿ ; ಭಕ್ಷ್ಯ : ಔತಣ ವೈಭವಪೂರ್ಣ ವಾಗಿತ್ತು . . . ಶ್ರೀಖಂಡ-ಪುರಿ ಇಂಥ ನಾಲ್ಕು ಬಗೆಯ ಪಕ್ವಾನ್ನ ಗಳು (ಸ್ಮೃತಿಚಿ. ೧೧೮). [ಪಕ್ವ+ಅನ್ನ$_3$]

ಪಕ್ವಾವಸ್ಥೆ (ನಾ). ಫಲ ಕೊಡುವ ಸ್ಥಿತಿ ; ಆರಂಭಿಸಿದ ಕಾರ್ಯ ಸಿದ್ಧಿಸುವ ಕಾಲ ; ಅಭಿವೃದ್ಧಿ ದಶೆ : "ಪಕ್ವಾವಸ್ಥೆ, ಪರಿಪಕ್ವತೆ" (Development. ಪತ್ರಿನಿ. ೩೧). [ಪಕ್ವ+ಅವಸ್ಥೆ]

ಪಕ್ವಾಶಯ (ನಾ). ೧. ಹೊಕ್ಕುಳಿನ ಕೆಳಭಾಗ ; ನಾಭಿಯ ಅಧೋಭಾಗ ; ಕಿಬ್ಬೊಟ್ಟೆ. ೨. ಹೊಟ್ಟೆ ; ಉದರ ; ಜಠರ.

[ಪಕ್ವ+ಆಶಯ]

ಪಕ್ವಿ (ನಾ). ಪಕ್ವತೆಯುಳ್ಳವನು ; ಪರಿಪೂರ್ಣನಾದವನು (?) : ಶಕ್ತಿಗೂಡಿ ಶಿವ ಸಲೆ ತನ್ನ ಪರಿಪೂರ್ಣ ಕೆಡದೆ ಪಕ್ವಿಯ ಚೆಲ್ವ ತಲೆಯೋಹ ಪೂವಿನರಮನೆಯೊಳು ಸುವ್ಯಕ್ತ ಪ್ರಕಾಶಾಂಗನಾಗಿರ್ಪನು (ಏಕೋಪು. ೮-೩೬). [<ಸಂ. ಪಕ್ವ]

ಪಕ್ಷ (ನಾ). ೧. ಹಕ್ಕಿಗಳ ರೆಕ್ಕೆ,—ಗರಿ : "ಪತ್ರ ತನೂರುಹ ವಾಜ ಪತತ್ರಚ್ಛದ ಪಿಂಛ ಪಕ್ಷನಾಮಂ ಗಱಿ" (ಪಸ್ತುಕೋ. ೪೧-೧೦) ; ಚಕಿತೋದ್ಯತ್ಪಕ್ಷಪಕ್ಷಸ್ವನದೊಳಮರ್ದ ಕೋಳಾಹಲಧ್ವಾನದಿಂ ಕೊರ್ವಿ . . . ಪೊಣ್ಕತ್ತು ವಿಂಧ್ಯಂ ನಡುಗೆ ಘಸರವಸ್ಪರ್ಧಿ ಕೈರಾತಘೋಷಂ (ಕಾದಂಪೂ. ೧೫೩) ; ಒದವಿದ ಕೇಗು ನೀಳ್ದ ಕೊರಲೆತ್ತಿದ ಪಕ್ಷ ವೊಜಲ್ಬುತಿರ್ಪಿನಂ . . . ಬಿರ್ಚಿ ಬರ್ಹಮಂ ಪದೆದು ನವಿಲ್ಗಳಾಡೆ (ಜಗವಿ. ೪-೩೦) ; ಆ ಜಟಾಯು . . . ಪಕ್ಷಧ್ವನಿಗೆ ಗಿರಿಗಹ್ವರಂ ಗುಡುಗೆ, ಚೀರ್ದನಿಗೆ ಮಾರ್ದನಿಸೆ ಪುಷ್ಪಕಾಭ್ಯಂತರಂ ಹಾರಿದನು

(ಕ್ರೀರಾಮಾ. ೨೪೮–೫೪೦). ೨. ಬಾಣದ ಹಿಂದೆ ಕಟ್ಟುವ ಗರಿ,—ಪುಂಖ. ೩. (ಯಾವುದಾದರೂ ಒಂದು ವಸ್ತುವಿನ ಅಥವಾ ಮನುಷ್ಯನ) ಮಗ್ಗುಲು; ಪಕ್ಕ; ಬದಿ; ಪಾರ್ಶ್ವ: ಈ ಸ್ಥಾನಗಳ ಭೇದವರಿತು . . . ಬಲ, ಎಡವೆಂಬ ಪಕ್ಷವನ್ನೂ . . . ಮನ್ಮಥ ಕ್ರೀಡಾಸಮೇತನಾದ ಪುರುಷನು ತಿಳಿದಸಗುವುದು (ಸಕವೈ. ೬೦). ೪. ಗುಂಪು; ಬಣ; ಸಂಗಡ: "ಬರಿ ಮಾಸಾರ್ಧ ಸಮೀಪ ಭಿತ್ತಿ ಗಜಾಯುಂ ಪಕ್ಷೀಕರಂ ಪಕ್ಷಮಕ್ಕುಂ" (ನಾನಾರ. ೧೧೩); ಪಕ್ಷವೆರಡೇ ಲೋಕದೊಳ್ ಪಿತೃಪಕ್ಷ ಮೇಣಾ ಮಾತೃಪಕ್ಷ (ಕುಸ್ಯಾಅ. ೮–೧೭); ಕ್ರೂರವರು ದುರಾಶೆಯುಳ್ಳವರು, ಬಹುಕಾಲದಿಂದ ಪಡೆಯನ್ನೂ ಪಕ್ಷವನ್ನೂ ಕಟ್ಟಕೊಂಡಿರುವವರು (ಪಚಭಾ. ೨೪೧); ಪಾರ್ಟಿ, ಪಕ್ಷ, ಗುಂಪು ಗಾರಿಕೆ, ಪಕ್ಷಾಂತರ ನನ್ನೂರಿನಲ್ಲಿಯೂ ಯೋಗ್ಯತಾನುಸಾರ ಇವೆ (ಸನ್ನೂರು. ೩೧೩). ೧,೪: ಜಮದಗ್ನಿರಾಮನಂ ಕಂಡು ಬಲಭದ್ರರಾಮನ ಮೊಗಮಂ ಆಶ್ಚರ್ಯಂ ನೋಡಿ ಈ ಮಹಾಪುರುಷಂ ಕುಭೃತ್ಪಕ್ಷವಿಚ್ಛೇದನನಾಗಿಯುಂ ವಜ್ರಧರನಲ್ತು . . . ಎಂದು (ಜಗವಿ. ೮–೧೦ವ). ೫. ವಿಶಿಷ್ಟ ಧ್ಯೇಯಗಳನ್ನು ಹೊಂದಿರುವರಾಜಕೀಯತಂಡ,—ಬಣ,—ಸಂಗಡ: ಗೌಡರು ಮೊದಲು ಸ್ವತಂತ್ರಪಕ್ಷದಲ್ಲಿದ್ದರು, ಈಗ ರಾಷ್ಟ್ರೀಯಪಕ್ಷಕ್ಕೆ ಸೇರಿದ್ದಾರೆ (ರೂಢಿ). ೬. ಒಂದು ಬಣಕ್ಕೆ ಸೇರಿದವನು; ಪಕ್ಷಾವಲಂಬಿ. ೭. ಒಲವು; ಪಕ್ಷಪಾತ: ದಕ್ಷನ ಜನ್ಮಮಂ ತೊಡೆದು ಪಕ್ಷದಿನೆಯ್ದಿದ ಬೋಳೆಯರ್ಕಳಂ ಶಿಕ್ಷಿಸಿ (ಹಾಲಾಸ್ಯ. ೧–೧–೫); ಪಕ್ಷವಿಲ್ಲದವನಿಗೆ ಲಕ್ಷ್ಯವೇನು? (ಗಾದೆ); ಪಕ್ಷ ಪಾಂಡವರಲ್ಲಿ, ಊಟ ಕೌರವರಲ್ಲಿ (ಗಾದೆ). ೮. ಹಾಗೆ, ಹೀಗೆ ಎಂಬೆರಡರಲ್ಲಿ ಒಂದು; ಒಂದು ವೇಳೆ, ಹೀಗಾಗುವುದಾದರೆ ಎಂಬರ್ಥವನ್ನು ಸೂಚಿಸುವ ಶಬ್ದ: ಜ್ಞಾನಕ್ರಿಯಾಭೋಗಗಳು ಆತ್ಮನ ಗುಣಗಳು . . . ಇದು ನಿಜವಾಗುವ ಪಕ್ಷಕ್ಕೆ ಅಂಗಗಳು ಅಂತರಿಸಿದರೂ ಈ ಶಕ್ತಿಗಳು ಅಂತರಿಸಕೂಡದು (ಜೀವಾತ್ಮ. ೧೬೭). ೯. ಹತ್ತಿರ; ಸಮೀಪ. ೧೦. ಗೋಡೆ; ಭಿತ್ತಿ. ೧೧. ಚಾಂದ್ರಮಾನದಲ್ಲಿ ಒಂದು ತಿಂಗಳಿನ ಅರ್ಧಭಾಗ; ಪಾಡ್ಯದಿಂದ ಹುಣ್ಣಿಮೆಯ ವರೆಗೆ ಅಥವಾ ಪಾಡ್ಯದಿಂದ ಅಮಾವಾಸ್ಯೆಯ ವರೆಗಿರುವ ಹದಿನೈದು ದಿನಗಳ ಕಾಲಮಾನ: "ಪಾಡಿವಮಡಾದಿಯೆನೆ ತಿಥಿ ಪಕ್ಷಸ್ಥಿತಿಯೊಳ್ ಪದಿನೆಯ್ದುಕ್ಕುಂ" (ವಸ್ತುಕೋ. ೧೬–೭); ಪದಿನೈದು ದಿವಸಮಾದೊಡೆ ಪಕ್ಷಂ (ಪಂರಾಸಾ. ೧–೫೧); ಆ ವಾರ ಹದಿನೈದಾಗಲೊಂದುಪಕ್ಷವೆನಿಸುವದು (ವಿವೇಕ. ೩೨೦); ಮಾಸಕೆ ಪಕ್ಷವೆರಡು ತಿಥಿ ಮೂವತ್ತುಂ (ಭಾಸ್ಕರ. ೫೨–೨). "ಗೋಡೆಯಲ್ಲಿ ಗಜಾಗಳಲ್ಲಿ ಮಾಸಾರ್ಧದಲ್ಲಿ ಪರಿಗ್ರಹದಲ್ಲಿ ಬರಿಯಲ್ಲಿ ಆ ಸಮೀಪದಲಿ ಪಕ್ಷಮೆನಿಕ್ಕು" (ಮಂಗರಾ. ೧೪೬–೩೩); "ಬರಿ ಮಾಸಾರ್ಧ ಸಮೀಪ ಭಿತ್ತಿ ಗಜಾಯುಂ ಪಕ್ಷೀಕರಂ ಪಕ್ಷಮಕ್ಕುಂ" (ನಾನಾರ. ೧೧೩). ೧೨. ಮನೆ; ಗೃಹ. ೧೩. ವಿಭಾಗ; ಪಾಲು: "ಪಕ್ಷ–ವಿಭಾಗೇ, ಪಾಲೊಳ್" (ಕಾಶಕೃ. ೧೧೮). ೧೪. ಅಡ್ಡಮುಡಿ; ಓರೆ ದುರುಬು: "ಪಕ್ಷಮೆನಲಡ್ಡಮುಡಿ" (ಮಂಗರಾ. ೯೪–೬). ೧೫. ಪಿತೃಪಕ್ಷ; ಮಹಾಲಯ ಪಕ್ಷ: ನಾಳೆಯಿಂದ ಪಕ್ಷ ಪ್ರಾರಂಭ, ಅಮಾವಾಸ್ಯೆ ಕಳೆದ ಮೇಲೆ ನವರಾತ್ರಿಯಲ್ಲಿ ಬೇರೆ ಮನೆಗೆ ಹೋಗಬಹುದು (ರೂಢಿ). ೧೬. ಮಹಾಲಯದಲ್ಲಿ ಮಾಡುವ ಪಿತೃಕ್ರಿಯೆ; ಮಹಾಲಯ ಶ್ರಾದ್ಧ: ನಾಳೆ ನಮ್ಮ ಮನೆಯಲ್ಲಿ ಪಕ್ಷದ ಕಟ್ಟಳೆ ಮಾಡಬೇಕು (ರೂಢಿ). ೧೭. ವಿಕಲ್ಪ; ಮತಾಂತರ; ಒಮ್ಮೊಮ್ಮೆ; ಒಂದೊಂದು ಸಲ: ಅವಿಶೇಷದಿನಾ ದೀರ್ಘಾವ್ಯವಹೃತಿ ಶಬ್ದಾಂತರಾಳದೊಳ್ ಪಕ್ಷದಿನುದೃವಿಕುಂ (ಶಮದ. ೧೧೮). ೧೮. [ಗಣಿತ] ಹದಿನೈದು ಎಂಬ ಸಂಖ್ಯೆಯ ಸಂಕೇತ: "ಪಕ್ಷ ಹದಿನೈದು" (ಮಂಗರಾ. ೧೦೪–೯); ಮರುದಾಕಾಶದ್ವಯೋಂದ್ರಾನಿಲ ಹುತವಹ ಯುಗ್ಮಾಂಗಜಾ ರಾತಿಯರ್ಕಳ್ ಬರೆ ಪಕ್ಷಸ್ಥಾನದೊಳ್ ನಿಲ್ಲಿರೆ ವಿರತಿ ಮಹಾಸ್ರಗ್ಧರಾ ನಾಮವೃತ್ತಂ (ಛಂದೋಂಬು. ೨–೧೮೩). ೧೯. ಎರಡು ಎಂಬ ಸಂಖ್ಯೆಯ ಸಂಕೇತ: ಯಮ ನಯನ ಕರ್ಣ ಕರ ಪದ ಯಮಳಾಂಘ್ರಿ ದ್ವಿಯಕ್ಷಿ ಪಕ್ಷ ನೇತ್ರಂ . . . ಎರಡಱ ನಾಮರ (ವ್ಯವಹಾ. ೯–೨). ೨೦. [ನ್ಯಾಯ] ಅನುಮಾನಪ್ರಮಾಣವನ್ನು ಪ್ರಯೋಗಿಸುವಾಗ ಸಾಧಿಸಲ್ಪಡುವ ವಸ್ತುವಿರುವ ಸ್ಥಳ: ಯಾವ ಸ್ಥಳದಲ್ಲಿ ಸಾಧ್ಯವು ತಿಳಿಯಲ್ಪಡುವುದೋ ಅದಕ್ಕೆ ಪಕ್ಷವೆಂದು ಹೆಸರು (ಛಂದಸಾ. ೧೪೧); ಸಾಧ್ಯವುಳ್ಳ ವಸ್ತು ಪಕ್ಷವೆನ್ನಿಸುವುದು. ಪರ್ವತವು ವಹ್ನಿ ಉಳ್ಳುದು ಎಂಬಲ್ಲಿ ವಹ್ನಿ ಸಾಧ್ಯ; ಈ ಸಾಧ್ಯವುಳ್ಳ ಪರ್ವತವು ಪಕ್ಷ (ಭಾತತ್ತ್ವ. ೧೭೬). ೨೧. [ಜೈನ] ಮೈತ್ರಿ, ಪ್ರಮೋದ, ಕಾರುಣ್ಯ ಹಾಗೂ ಮಾಧ್ಯಸ್ಥಭಾವದಿಂದ ಎಲ್ಲ ಬಗೆಯ ಹಿಂಸೆಯನ್ನು ತೊರೆಯುವುದು: ಪಕ್ಷಮೆಂಬುದು ಜೈನಂಗೆ ಸರ್ವಹಿಂಸಾವರ್ಜನಂ (ವಿಸರ್ಜನಂ) ಮೈತ್ರಿ ಪ್ರಮೋದ ಕಾರುಣ್ಯ ಮಾಧ್ಯಸ್ಥೋಪಬೃಂಹಿತಂ ಸ್ಥಾಪಬ್ರಹತಂ (ಜಾಪುಂಪು. ೨೨೭).

ಪಕ್ಷ ಹಿಡಿ—ಎರಡು ತಂಡಗಳಲ್ಲಿ ಒಂದಕ್ಕೆ ಬೆಂಬಲವನ್ನು ಕೊಡು; ಒಂದು ಪಕ್ಷವನ್ನು ಅಂಗೀಕರಿಸು,—ವಹಿಸು,—ಸಮರ್ಥಿಸು: ಹೀಗೆ ಪಕ್ಷ ಹಿಡಿದು ಮಾತನಾಡಿದರೆ ನ್ಯಾಯ ತೀರ್ಮಾನವಾಗುವುದಿಲ್ಲ (ರೂಢಿ). **ಪಕ್ಷ ಹಿಡಿದು ವಾದಿಸು** = (ನ್ಯಾಯಾಲಯದಲ್ಲಿ ವಕೀಲನು) ತನ್ನ ಕಕ್ಷಿಗಾರನದೇ ನ್ಯಾಯವೆಂದು ಸಮರ್ಥಿಸು: ಪಕ್ಷ ಹಿಡಿದು ವಾದಿಸುವುದಕ್ಕೇ ಲಾಯರಿರುವುದು (ರೂಢಿ). [ಸಂ.]

ಪಕ್ಷಂ (ಅ). ಹೀಗಾಗುವುದಾದರೆ; ಇಂತಹ ಸಂದರ್ಭದಲ್ಲಿ; ಈ ಪ್ರಸಂಗದಲ್ಲಿ; ☞ ಇದು ಸಾಮಾನ್ಯವಾಗಿ ನಿಯಮ ಅಥವಾ ಶರತ್ತನ್ನು ಹಾಕುವ ಸಂದರ್ಭದಲ್ಲಿ ಬಳಸಲ್ಪಡುತ್ತದೆ: ಸ್ವರ ಮಿದಿರೊಳೆರೆ ವಿಭಕ್ತಿಸ್ವರಕಂ ಪ್ರಕೃತಿಸ್ವರಕ್ಕಮಕ್ಕುಂ ಲೋಪಂ . . . ನಾಮರೂಢಿಯಟಿಯದ ಪಕ್ಷಂ (ಶಮದ. ೫೨). [<ಸಂ. ಪಕ್ಷ]

ಪಕ್ಷಂಗೆಡು (ಕ್ರಿ). ಒಲವು ಇಲ್ಲದಂತಾಗು; ಆಸೆಯನ್ನು ಬಿಡು: ಮಱುದಿವಸಂ ಭಕ್ಷ್ಯದ ದೆಸೆಗೆ ಪಕ್ಷಂಗೆಟ್ಟು ಪಾಲಿಂಗೆ ಬೆರ್ಚ ತುಪ್ಪಕ್ಕಿನಸ ಪ್ಪೊಡಂ ಮನಂದರಲಾಱದೆ ತೃಷೆಯೊಳಾದ ಭೀತಿಯಿಂದೊಲ್ಲೆನೆಂಬುದುಂ (ಧರ್ಮಾಮೃ. ೧–೧೬೨). [ಪಕ್ಷ+ಕೆಡು$_1$]

ಪಕ್ಷಂಗೆದಱು (ಕ್ರಿ). ರೆಕ್ಕೆಯನ್ನು ಬಿಚ್ಚು,—ಪಸರಿಸು: ಭೃಂಗ ಮಿಥುನಮಂಭೋರುಹದೊಳಗೆ ಮಲಂಗಿ ಬಳಿಕ್ಕಾ ನಿದ್ರೆ ತಿಳಿಯೆ ಪಕ್ಷಂಗೆದಱುವ ಭಂಗಿಯ ಕಡುಚೆಲ್ವಂ ನೆನೆಯಿಸುತೊಪ್ಪಿದುವು (ಜಯಕಾ. ೨–೪೩). [ಪಕ್ಷ+ಕೆದಱು$_1$(<ಕೆದಱ್$_1$)]

ಪಕ್ಷಕ (ನಾ). ೧. ಹೆಬ್ಬಾಗಿಲ ಸಮೀಪದಲ್ಲಿ ಮಾಡಿರುವ ಚಿಕ್ಕ ಬಾಗಿಲು; ದಿಡ್ಡಿಬಾಗಿಲು; ಸಾರ್ವಜನಿಕರ ಉಪಯೋಗಕ್ಕಲ್ಲದ ಖಾಸಗಿ ಬಾಗಿಲು: "ಪಕ್ಷದ್ವಾರಂ, ಪಕ್ಷಕಃ–೨ ದಿಡ್ಡೀಬಾಗಿಲ ಹೆಸರು. ರೆಕ್ಕೆಬಾಗಿಲು, ಬಾಗಿಲ ಕದದೊಳಗಾಗಲೀ ಸಮೀಪದೊಳಗಾಗಲೀ ಮಾಡಲ್ಪಟ್ಟಿರುವ ಚಿಕ್ಕ ಬಾಗಿಲು" (ಸಿದ್ಧಾಂತಿ. ೧೦೨). ೨. ಎರಡು ಪಕ್ಷಗಳುಳ್ಳವನು; ಶುಕ್ಲಪಕ್ಷ, ಕೃಷ್ಣಪಕ್ಷವೆಂಬ ಎರಡು ಪಕ್ಷಗಳಿಂದ ಕೂಡಿರುವವನು; ಚಂದ್ರ. ೩,೩: ಸನ್ಮಾರ್ಗದಿಂ ನಡೆದು ದೋಷಾಕರಂ ಮಲಿನನುನ್ಮಾರ್ಗನತಿಜಡಂ ಪಕ್ಷಕಂ ಗರಳಸಹಜನ್ ನೆನಿಸಿದನಂತೆ ಗಡ ಚಂದ್ರನೆಂ ತನ್ನ ಕೊಂಕಿಂದಂ (ಉದ್ಧವದೇ. ೨–೨೩). ೪. ಬೀಸಣಿಗೆ; ಸಂಖ. [ಸಂ.]

ಪಕ್ಷಕಾರ (ನಾ). (ವಕೀಲನಿಗೆ) ತನ್ನ ಪರವಾಗಿ ಕೋರ್ಟನಲ್ಲಿ ವಾದಿಸಲು ವಕಾಲತ್ತು ಕೊಟ್ಟಿರುವವನು; ಕಕ್ಷಿಗಾರ:

ಅದಾರೋ ಒಬ್ಬರು ಬಾಗಿಲನ್ನು ತೆರೆಯುತ್ತ ಒಳಬಂದರು. ಪಕ್ಷಕಾರರಿರದೆ ಬೇರಿನ್ನಾರಿರಬೇಕು ! (ಮೊಪಾಸಾ. ೪೧). [ಸಂ.]

ಪಕ್ಷಕುತ್ಕೀಳ (ನಾ). ಪಕ್ಕದ ಸಣ್ಣ ಬೆಟ್ಟ; ಕಿರುಬೆಟ್ಟ,—ಗುಡ್ಡ : ನಗನಿಕರಂ ಪಕ್ಷಕುತ್ಕೀಳಮೆಂಬಂತಿರೆ . . . ಕಱೆದುದು ಬಹಳಾಸಾರಮಂ ನೀರದೌಘಂ (ಚಂದ್ರಪ್ರ. ೪-೪೧).

[ಪಕ್ಷ+ಕುತ್ಕೀಳ(<ಕುತ್ಕೀಲ)]

ಪಕ್ಷಗಜ (ನಾ). ಪಕ್ಕದ ಆನೆ; ಒಂದು ಗಜದ ಹೊತೆಯಲ್ಲಿ ಬರುತ್ತಿರುವ ಗಜ; ಒತ್ತಿನ ಆನೆ : ಆಗಳ್ ಸೈನ್ಯಾಧಿನಾಥನಧಿನಾಥನ ಕೆಲದೊಳ್ ಪಕ್ಷಗಜಾಧಿರೂಢನಾಗಿ . . . ಅನೇಕದೇಶಾಧೀಶಬಲಂಗಳಂ ಬೀಱೆವೀಱೆ ತೋಱುತ್ತಂ ಬರ್ಪನ್ನೆಗಂ (ಆದಿಪು. ೧೩-೪೫ ಪ) ; ಸನತ್ಕುಮಾರಮಾಹೇಂದ್ರಪತಿಗಳಿಂದ್ರಾಯುಧೋಪಮಾನರಾರ್ಧಮಣಿಮಯೂಖಮಾಳಿಕಾದುರಾಲೋಕನನಕ್ಷತ್ರಮಾಳಾಕಳಾಪ ಕಕ್ಷಂಗಳಪ್ಪ ಪಕ್ಷಗಜಂಗಳನೇಱೆ . . . ಚಾಮರಂಗಳನಿಕ್ಕೆಯುಂ (ಶಾಂತಿಪು. ೧೦-೧೩ ಪ). 'ಪಕ್ಕಸಾರಿ' ಪರಾ. [ಪಕ್ಷ+ಗಜ]

ಪಕ್ಷಘಾತ (ನಾ). ರೆಕ್ಕೆಯ ಹೊಡೆತ,—ಬಡಿತ : ಭೃಂಗೀಶ್ವರಂ ಬೇಡೆ ಖಗವಲ್ಲಭಂ ಪತಿನಿರೂಪವನೊಮ್ಮೆಯುಂ ಮೀರ್ವನಲ್ಲೆಂದತಿಕ್ರಮಿಸಿ ನಡೆಯಲಾ ಪಕ್ಷಘಾತದೊಳಾತನಳವಳಿದನು (ಜೈಮಿಭಾ. ೧೪-೧೯).

[ಪಕ್ಷ+ಘಾತ$_2$]

ಪಕ್ಷಜ (ನಾ). ಚಂದ್ರ; ಶಶಿ. [ಸಂ.]

ಪಕ್ಷತಿ(ನಾ). ೧. ರೆಕ್ಕೆಯ ಬುಡ; ಪಕ್ಷದ ಮೂಲ : "ಪಕ್ಷಮೂಲಂ, ಪಕ್ಷತಿಃ —ಈ ೨ ಎಱೆಯ ಮೊದಲ್" (ಹಲಾಯು. ೪೦-೪೬) ; ಅಳಿಕುಳ ಪಕ್ಷತಿಕ್ಷಪಿತಪದ್ಮಪರಾಗಪರಾಗಮುದಕೋಕಿಳಕಳನಾದಬೃಂಹಿತಂ . . . ಕೋಮಳಮಳಯಾನಿಳಾಂಗಜಗಜಂ ಪರಿಪತ್ತಿದಿರೊಳ್ ಮಹೀಶನಾ (ರಾಜಶೇ. ೧೦-೧೫). ೨. ಪಕ್ಷದ ಮೊದಲನೆಯ ದಿನ; ಪಾಡ್ಯ : "ಪಕ್ಷತಿ, ಪ್ರತಿಪಚ್ಛಬ್ದಗಳು ಪಾಡ್ಯಮಿಯ ಹೆಸರು" (ಗುರುಬಾ. I, ೪೬). [ಸಂ.]

ಪಕ್ಷತ್ಯಾಗ (ನಾ). ೧. ಗುಂಪನ್ನು ಬಿಡುವುದು; ಕೂಟವನ್ನು ತ್ಯಜಿಸುವುದು. ೨. [ರಾಜನೀ] ಯಾವುದಾದರೂ ವೈಮನಸ್ಯದಿಂದ ತಾನು ಸದಸ್ಯನಾಗಿದ್ದ ರಾಜಕೀಯ ಪಕ್ಷವನ್ನು ಬಿಟ್ಟು ಹೋಗುವುದು,—ಬಹಿಷ್ಕರಿಸುವುದು : "ಯಾವುದಾದರೂ ವಿಷಯದಲ್ಲಿ ಸಂದೀಳದೆ ಒಂದು ಪಕ್ಷಕ್ಕೆ ಸೇರಿದ ಕೆಲವರು ಆ ಪಕ್ಷವನ್ನು ಬಿಟ್ಟು ಹೋಗುವುದು: ಪಕ್ಷತ್ಯಾಗ" (Cave. ಇಂಕಸಿ). [ಪಕ್ಷ+ತ್ಯಾಗ]

ಪಕ್ಷದ್ಯೋತ (ನಾ). [ನಾಟ್ಯ] ಮೂವತ್ತುನೃತ್ತಹಸ್ತಗಳಲ್ಲಿ ಒಂದು;"ಎರಡು ತ್ರಿಪತಾಕಹಸ್ತಗಳ ಬೆರಳುಗಳು ಎದುರಾಗಿರುವಂತೆ ಅಂಗೈಗಳನ್ನು ಮೇಲಕ್ಕೆ ಮಾಡಿ ಬೆರಳುತುದಿಗಳನ್ನು ಸೊಂಟದಲ್ಲಿಟ್ಟು ಮತ್ತೆ ಬೆರಳುಗಳನ್ನು ಮೇಲಕ್ಕೆ ನೀಡಿ ಹಮ್ಮುಖವಾಗಿ ಕೈಗಳನ್ನು ಅಲ್ಲೇ ನಿಲ್ಲಿಸುವುದು" (ಲಾಸ್ಯರಂ. ೨೫೨ ಗದ್ಯಾನುವಾದ) : ಬರಿಯೆರಡಕೆ ತ್ರಿಪತಾಕದ ಕರಮವು ಮೇಲ್ಮೊಗಗಳಾಗಿ ಬೆರಲಭಿಮುಖಮಾಗಿರೆ ಮೇಣೂರ್ಧ್ವಾಂಗುಲಿಗಳ್ ಪರಾಙ್ಮುಖಂ ತಾನದಾಗೆ ಪಕ್ಷದ್ಯೋತಂ (ಲಾಸ್ಯರಂ. ೨-೬೨). [ಸಂ.]

ಪಕ್ಷದ್ವಯ (ನಾ). ೧. ರೆಕ್ಕೆಗಳ ಜೋಡಿ; ಎರಡು ರೆಕ್ಕೆಗಳು. ೨. ಒಂದು ತಿಂಗಳಲ್ಲಿ ಬರುವ ಎರಡು ಪಕ್ಷಗಳು : ಈ ಸ್ಥಾನಗಳ ಭೇದವರಿತು . . . ಬಲ ಎಡವೆಂಬ ಪಕ್ಷವನ್ನೂ ಕೃಷ್ಣ ಶುಕ್ಲವೆಂಬ ಪಕ್ಷದ್ವಯಗಳ ನಿರುಗೆಯ ತಾಣ ವಿವರಗಳನ್ನೂ . . . ಪುರುಷನು ತಿಳಿದೆಸಗುವುದು (ಸಕವೈ. ೬೦). [ಪಕ್ಷ+ದ್ವಯ]

ಪಕ್ಷದ್ವಾರ (ನಾ). = ಪಕ್ಷಕ ೧: "ಪಕ್ಷದ್ವಾರಂ, ಪಕ್ಷಕಃ ೨-ದಿಡ್ಡೀಬಾಗಿಲ ಹೆಸರು. ರೆಕ್ಕೆಬಾಗಿಲು. ಬಾಗಿಲ ಕದದೊಳಗಾಗಲೀ ಸಮೀಪದೊಳಗಾಗಲೀ ಮಾಡಲ್ಪಟ್ಟಿರುವ ಚಿಕ್ಕ ಬಾಗಿಲು" (ಸಿದ್ಧಾಂತಿ. ೧೦೨). [ಪಕ್ಷ+ದ್ವಾರ]

ಪಕ್ಷಧರ (ಗು). ೧. ರೆಕ್ಕೆಯನ್ನು ಹೊಂದಿರುವ : ನೋಡೆನ್ನ ಪಕ್ಷಧರ ಚತುಷ್ಪಾದಿಯಿದು ಬಡಿಯತೊಡಗಿರ್ದುದು ಆಭ್ರಾವಕಾಶಮನ್ ಅಗಲಿ ತೆಱೆಗೆಗಳಿಂದೆ (ಬದ್ಧಪ್ರ. ೨೨-೪೫೩). (ನಾ). ೨. ರೆಕ್ಕೆಯನ್ನು ಹೊಂದಿರುವುದು; ಪಕ್ಷಿ. [ಸಂ.]

ಪಕ್ಷಧರೆ (ನಾ). ರೆಕ್ಕೆಯನ್ನು ಧರಿಸಿರುವವಳು : ಅವರ ತಂಗೆಯರ್ ಮೂವರ್, ಪಕ್ಷಧರೆಯರ್ (ಬದ್ಧಪ್ರ. ೪೨-೯೧೬). [ಸಂ. ಪಕ್ಷಧರಾ]

ಪಕ್ಷಪದ್ಧತಿ (ನಾ). [ರಾಜನೀ] ಚುನಾವಣೆಯಲ್ಲಿ ಬಹುಮತ ಗಳಿಸಿರುವ ರಾಜಕೀಯ ಪಕ್ಷವು ರಾಷ್ಟ್ರವನ್ನು ಆಳುವ ಪದ್ಧತಿ,—ವ್ಯವಸ್ಥೆ : ಇಂದಿನ ಪಕ್ಷಪದ್ಧತಿಯು ಆಳಿಕೆಯ ಕಾಲದಲ್ಲಂತೂ "ರಾಜಾಶ್ರಯ"ವು ಎಚ್ಚರಿಕೆಯಿಂದಿರದಿದ್ದರೆ, ಅಪಾಯಕಾರಕವೆ ಆಗಬಹುದು (ಭಾರದ. ೫೬೫). [ಪಕ್ಷ+ಪದ್ಧತಿ]

ಪಕ್ಷಪರಿತ್ಯಾಗ (ನಾ). ವಾದ ಮಾಡುವಾಗ ತನ್ನ ಪಕ್ಷವನ್ನು ಸಾಧಿಸಲಾರದೆ ಅದನ್ನು ಕೈಬಿಡುವುದು : ಪ್ರತಿವಾದಿ ನಿರುತ್ತರನಾಗಿ ಪಕ್ಷಪರಿತ್ಯಾಗಂ ನಿಗ್ರಹಸ್ಥಾನಮೆಂಬುದಱಿಂ ನಿಗ್ರಹಸ್ಥಾನಮನೆಯ್ದುಯುಮಿರದೆ (ಶಾಂತಿಪು. ೮-೧೪೧ ಪ). [ಪಕ್ಷ+ಪರಿತ್ಯಾಗ]

ಪಕ್ಷಪಾತ (ನಾ). ೧. ಹಕ್ಕಿಗಳ ರೆಕ್ಕೆಗಳು ಉದುರುವಿಕೆ,—ಗರಿಗಳು ಕೆಳಕ್ಕೆ ಬೀಳುವಿಕೆ. ೨. ರೆಕ್ಕೆ ಬಡಿಯುವಿಕೆ. ೩. ಒಂದು ಕಡೆಗೆ ಹೆಚ್ಚು ಪ್ರೀತಿಯನ್ನು ತೋರಿಸುವುದು; ಒಂದು ಪಕ್ಷವನ್ನು ವಹಿಸಿಕೊಳ್ಳುವುದು; ಒಬ್ಬರಲ್ಲಿ ಹೆಚ್ಚು ಒಲವನ್ನು ತೋರಿಸುವುದು; ಒಲವರ : ಎನಿತೊಂದು ಪಕ್ಷಪಾತಮೊ ವನಿತೆಯರಂ ಮಾಡುವೆಡೆಯೊಳಬ್ಜಭವಂಗೆ (ಕಾದಂಉ. ೨೩೯) ; ಇವರದಾವನ ಪಕ್ಷಪಾತವ್ಯವಹರಣೆಯವರಲ್ಲ ಕೇಳಿನ್ನಿವರ ನುಡಿಗಳನು (ಕುವ್ಯಾಉ. ೯-೧೪) ; ಶಿಷ್ಯರ ಯೋಗ್ಯತೆಯನರಿದು ಪಕ್ಷಪಾತಗಳಿರದೆ ಬೋಧಿಸಿ ರಕ್ಷಿಸುವನುತ್ತಮನು (ಗಗಾ. ೧೩-೧೩) ; ಅರ್ಜುನನಲ್ಲಿ ಅವರಿಗೆ ಪಕ್ಷಪಾತವಿತ್ತು (ವಚಭಾ. ೨೯೨); ಅವನು ಪಕ್ಷಪಾತವಿಲ್ಲದೆ – ತಡಮಾಡದೆ, ತೀರ್ಪು ಕೊಡುತ್ತಾನೆ (ವೀರಯೋ. ೫೫). ೨, ೩ : ಮತ್ತಂ ದಾನಹೀನತೆ ಕರಿಣಗಣಂಗಳೊಳ್ ಪಕ್ಷಪಾತಂ ಶಿಶಿರಸಮಯಶ್ಯಾಮಕಂಠಂಗಳೊಳ್ ದೋಷಾನುಬಂಧಂ ದ್ವಿಜರಾಜನೊಳ್ . . . ಜಡವೃತ್ತಿ ವರ್ಷಕಾಲದೊಳಲ್ಲದಿಲ್ಲಂ (ಶಾಂತೀಶ್ವ. ೧೩-೧೩೬ ಪ).

ಪಕ್ಷಪಾತ ಮಾಡು = ಒಬ್ಬರಿಗೊಂದು, ಇನ್ನೊಬ್ಬರಿಗೊಂದು ಮಾಡು; ಭೇದಭಾವ ತೋರಿಸು : ತಂದೆಯೆ ಮಕ್ಕಳಲ್ಲಿ ಪಕ್ಷಪಾತ ಮಾಡಿದರೆ ಏನು ಮಾಡುವುದು ? (ರೂಢಿ). [ಪಕ್ಷ+ಪಾತ$_1$]

ಪಕ್ಷಪಾತವಿಧಿ (ನಾ). [ರಾಜನೀ] ಸರಕುಗಳನ್ನು ವಿದೇಶಕ್ಕೆ ಕಳುಹಿಸುವ ಸಂದರ್ಭದಲ್ಲಿ ತೆರಿಗೆ ಹಾಕುವ ವಿಷಯದಲ್ಲಿ ಪಕ್ಷಪಾತವನ್ನು ತೋರಿಸುವ ಬಗ್ಗೆ ದೇಶವು ಮಾಡಿಕೊಂಡಿರುವ ನಿಯಮ,— ಕಾನೂನು : ಈ ತರಹದ 'ಕಸ್ಟಮ್ಸ್ ಸಂಘ' ಮತ್ತು 'ನಿರಾತಂಕ ವ್ಯಾಪಾರ ಕ್ಷೇತ್ರ' ಏರ್ಪಾಡುಗಳನ್ನು ಸಾರ್ವತ್ರಿಕ ಒಪ್ಪಂದದ ಪಕ್ಷಪಾತವಿಧಿಗಳೊಡನೆ (Discriminatory classes) ಸಮನ್ವಯಗೊಳಿಸುವುದು ಅತಿಮುಖ್ಯಪ್ರಶ್ನೆಯಾಗಿದೆ (ಅಂತಸಂ. ೧೩೪).

[ಪಕ್ಷಪಾತ+ವಿಧಿ]

ಪಕ್ಷಪಾತಿ (ಗು). ೧. ಪಕ್ಷಪಾತವನ್ನು ತೋರಿಸುವ; ಒಬ್ಬರಿಗೊಂದು, ಇನ್ನೊಬ್ಬರಿಗೊಂದು ಮಾಡುವ; ಒಬ್ಬರಲ್ಲಿ ಹೆಚ್ಚು ಒಲವನ್ನು ತೋರಿಸುವ,—ಒಲವರ ಮಾಡುವ : ಸ್ಮರಹರನು ಪುರಹರನು . . . ಯಥಾರ್ಥವನೊರೆಯಲೊಲ್ಲನು ಪಕ್ಷಪಾತಿ ಪುರಾಣ

ಭಟ್ಟನಲಾ (ಬಸಪು. ೫೭-೨೮). (ನಾ). ೨. ಪಕ್ಷಪಾತವನ್ನು ಮಾಡುವ ವ್ಯಕ್ತಿ; ಒಲವರ ತೋರಿಸುವ ವ್ಯಕ್ತಿ; ಒಂದು ಪಕ್ಷವನ್ನು ವಹಿಸುವ ವ್ಯಕ್ತಿ: ಆದಿಗಳಾದಿಗಳು ಕಾಮ ಕ್ರೋಧ ಲೋಭಾದೀಷಣತ್ರಯಸಾಧನಂಗಳು ಮಂದಮತಿಗಳು ಪಕ್ಷಪಾತಿಗಳು . . . ಕುತಾಪಿಗಳು (ಬಸಪು. ೪೦-೬೫); ಆ ಚರ್ಚೆಯಲ್ಲಿ ಆನಂದ ಮೋಹಿನಿಯರು ವಿರುದ್ಧ ಪಕ್ಷಪಾತಿಗಳು (ಕನುನಿ. ೨); ಬಹಿರಂಗವಾಗಿ ಈ ಸಿದ್ಧಾಂತವನ್ನು ವಿರೋಧಿಸಿದರೂ ಅನೇಕರು ಇದರ ಪಕ್ಷಪಾತಿಗಳಾಗಿದ್ದರು (ಜೀವಾತ್ಮ. ೮೫). ೩. ಅನುಯಾಯಿ.

[ಸಂ. ಪಕ್ಷಪಾತಿನ್]

ಪಕ್ಷಪ್ರತಿಷ್ಠಾಪನೆ (ನಾ). (ಶಾಸ್ತ್ರಾರ್ಥವಿಚಾರ ನಡೆಸುತ್ತಿರುವಾಗ) ತನ್ನ ಸಿದ್ಧಾಂತವನ್ನು ಯುಕ್ತಿಪೂರ್ವಕವಾಗಿ ಮಂಡಿಸುವುದು: 'ಪಕ್ಷಪ್ರತಿಷ್ಠಾಪನೆಗೆಯ್' ಪರಾ.

[ಪಕ್ಷ+ಪ್ರತಿಷ್ಠಾಪನೆ]

ಪಕ್ಷಪ್ರತಿಷ್ಠಾಪನೆಗೆಯ್ (ಕ್ರಿ). ಪಕ್ಷವನ್ನು ಪ್ರತಿಪಾದಿಸು; ಮತವನ್ನು ಮಂಡಿಸು: ಅನೇಕ ಕುನಯೋಪಪತ್ತಿಗಳಿಂ ಪಕ್ಷಪ್ರತಿಷ್ಠಾಪನೆಗೆಯ್ದು ಕವಳಿಗೆಯ ಭಟ್ಟಂ ನುಡಿಯೆ (ಶಾಂತಿಪು. ೮-೧೩೪ ವ).

[ಪಕ್ಷಪ್ರತಿಷ್ಠಾಪನೆ+ಕೆಯ್$_1$]

ಪಕ್ಷಪ್ರದೋಷ (ನಾ). ಪ್ರತಿಪಕ್ಷದ ತ್ರಯೋದಶಿಯಂದು ಹಗಲು ಉಪವಾಸವಿದ್ದು, ರಾತ್ರಿ ಶಿವಪೂಜೆ ಮಾಡುವ ಒಂದು ವ್ರತ: ಪ್ರತಿ ಸೋಮವಾರವೂ ನಕ್ತಭೋಜನ, ಪಕ್ಷಪ್ರದೋಷ, ಶ್ರಾವಣಮಾಸ ೧ ತಿಂಗಳು, ಕಾರ್ತಿಕಮಾಸ ೧ ತಿಂಗಳು, ಶನಿಪ್ರದೋಷ . . . ಈ ಪ್ರಕಾರ ನಡಿಸುತ್ತಿದ್ದನು (ಚಿತ್ರಸಾ. ೫೮). [ಪಕ್ಷ+ಪ್ರದೋಷ]

ಪಕ್ಷಭಾವನೆ (ನಾ). [ರಾಜನೀ] ತಾನು ಸದಸ್ಯನಾಗಿರುವ ರಾಜಕೀಯ ತಂಡವೇ ಹೆಚ್ಚು, ಅದೇ ರಾಜ್ಯಭಾರ ಮಾಡಬೇಕು ಎಂಬ ಧೋರಣೆ; ಪಕ್ಷಾಭಿಮಾನ: "ಪಕ್ಷಭಾವನೆ, ಪಕ್ಷಾಭಿಮಾನ" (Party-spirit. ಪತ್ರಿನಿ.೬೧); ಈಗಿನ ಜನನಾಯಕರು ಪಕ್ಷಭಾವನೆಯನ್ನು ಬೆಳಸಿಕೊಂಡಿದ್ದಾರೆ (ರೂಢಿ). [ಪಕ್ಷ+ಭಾವನೆ]

ಪಕ್ಷಭೇದ (ನಾ). ೧. ಒಂದು ಬಣದಲ್ಲಿಯ ಬಿರುಕು,—ಅಂತಃಕಲಹ,—ವೈಷಮ್ಯ. ೨. ಎರಡು ಪಕ್ಷಗಳ ನಡುವಿನ ವ್ಯತ್ಯಾಸ,—ತಾರತಮ್ಯ. ೩. ಪಕ್ಷಪಾತ; ಒಲವರ: ಪಕ್ಷಭೇದ ಮಾಡಿದವನಿಗೆ ಶಿಕ್ಷೆ ತಪ್ಪದು (ಗಾದೆ). [ಪಕ್ಷ+ಭೇದ]

ಪಕ್ಷಭ್ರಮೆ (ನಾ). ಇವನು ತನ್ನವನು, ಇವನು ಪರ ಎನ್ನುವ ಭ್ರಮೆ; ಪಕ್ಷಪಾತದ ಭಾವನೆ: ಎಮಗೆ ಸರಿಯಿತ್ತಂಡದಲ್ಲಿಯ ಮಮತೆ ಬೇಱೊಬ್ಬರಲಿ ಪಕ್ಷಭ್ರಮೆಯ ಮಾಡೆವು ಹಿತವ ಬಯಸುವೆವರಡುಸಂತತಿಗೆ (ಕುಪ್ಪಾಉ. ೫-೬). [ಪಕ್ಷ+ಭ್ರಮೆ]

ಪಕ್ಷಮುಖ (ನಾ). ಪಕ್ಷದ ಪ್ರಾರಂಭದ ದಿನ; ಪಾಡ್ಯ: ಗಂಗಾದೇವಿಯರ್ಗೆ . . . ನವಮಾಸ ತೀವಿದ ಪಕ್ಷಮುಖಸಮಯದೊಳು . . . ಸುಪುತ್ರನುದ್ಭವಿಸೆ (ಬಸರ. ೧೦-೧೦೩). [ಪಕ್ಷ+ಮುಖ]

ಪಕ್ಷಮೂಲ (ನಾ). = ಪಕ್ಷತಿ ೧: "ಪಕ್ಷಮೂಲಂ, ಪಕ್ಷತಿ:—ಈ ೨ ಎಱಕೆಯ ಮೊದಲ್" (ಹಲಾಯು.೪೦-೮೬); "ಪಕ್ಷತಿ:, ಪಕ್ಷಮೂಲಂ-೨ ರೆಕ್ಕೆಗಳ ಬುಡಕ್ಕೆ ಹೆಸರುಗಳು" (ಸಿದ್ಧಾಂತಿ. ೧೬೪). [ಸಂ.]

ಪಕ್ಷರಕ್ಷೆ (ನಾ). = ಪಕ್ಕರಿಕೆ: ಅತಿದೀರ್ಘಘ್ರಾಣಹಸ್ತಂ ನಿಶಿತದಶನದಂಷ್ಟ್ರಾಂಕುರಂ ಪಕ್ಷರಕ್ಷಾಯತ ಪಕ್ಷತಾರ್ಕ್ಷ್ಯನಂತೊವನಿಸಿ ತುಳಿಯೆ ತನ್ನಾನೆ (ಎಕ. V, ಬೇಲೂರು. ೧೬-೩; 1136). [ಪಕ್ಷ+ರಕ್ಷೆ]

ಪಕ್ಷವಂಚಿತ (ನಾ). [ನಾಟ್ಯ] ಮೂವತ್ತುಬಗೆಯ ನೃತ್ತಹಸ್ತಗಳಲ್ಲಿ ಒಂದು; "ಎರಡು ತ್ರಿಪತಾಕಹಸ್ತಗಳ ಬೆರಳುತುದಿಗಳನ್ನು ಸೊಂಟದಲ್ಲಿರಿಸುವುದು" (ಲಾಸ್ಯರಂ. ೨೫೫ ಗದ್ಯಾನುವಾದ): ಮತ್ತಾ ತ್ರಿಪತಾಕಂಗಳ್ ಬಿತ್ತರದಿಂ ತುದಿಗಳಿಂದೆ ಕಟಿಗಳನೊಂದಲ್ ವೃತ್ತಸ್ತನದಳೆ ಕೇಳಿದುಮತ್ಯಂತೋನ್ನತದ ಪಕ್ಷವಂಚಿತಮುಕ್ಕುಂ (ಲಾಸ್ಯರಂ. ೨-೬೧).

[ಸಂ.]

ಪಕ್ಷವಧ (ನಾ). ಶರೀರದ ಒಂದು ಪಾರ್ಶ್ವವನ್ನು ನಿಶ್ಚೇತನಗೊಳಿಸುವ ಒಂದು ಬಗೆಯ ರೋಗ; ಪಾರ್ಶ್ವವಾಯು; ಲಕ್ವ: ಸಾಂತೂರು ದೇಜಪ್ಪಸೆಟ್ಟಿಗೆ ಇದ್ದಕ್ಕಿದ್ದಂತೆ 'ಪಕ್ಷವಧ' ಬಡಿಯಿತೆಂಬ ಕೆಡುಸುದ್ದಿ ವೇಣೂರಿಗೆ ಮುಟ್ಟದೊಡನೆ ಬಾಳಪ್ಪಸೆಟ್ರು ಸಿದ್ದಣ್ಣನನ್ನು ಕರೆದುಕೊಂಡು ಅಲ್ಲಿಗೆ ಧಾವಿಸಿದರು (ಒಡ್ಡಿಉ. ೬೪). [ಸಂ.]

ಪಕ್ಷವಾತ (ನಾ). ವಾತರೋಗ; ಸಂಧಿವಾತ: ಕೈಕಾಲುಗಳಿಗೆ ಪಕ್ಷವಾತ ಹಿಡಿದಿರಬೇಕು (ಈಕಥೆ. ೨೬); ಅವಳ ಮಗಳು ಇತ್ತೀಚೆಗೆ ಪಕ್ಷವಾತದಿಂದ ಬಳಲ ತೊಡಗಿದ್ದಳಂತೆ (ಹಳ್ಳಹಾ. ೧೦೬). [ಪಕ್ಷ+ವಾತ]

ಪಕ್ಷವಾಸ (ನಾ). ಹದಿನೈದು ಅಂಗುಲಗಳ ಅಳತೆಯ ಒಂದು ಬಗೆಯ ಕೊಳಲು: ಬಳಿಕ ಹದಿನೆಂಟಂಗುಲ . . . ಒಂದಂಗುಲ ಪ್ರಮಾಣನ ಕ್ರಮವಿಡಿದು ಜಾತಿವಾಸ . . . ಪಕ್ಷವಾಸ . . . ಭುವನಾಧಿಪತಿವಾಸವೆಂಬ ಹದಿನೆಂಟುತೆಱದ ವಾಸಂಗಳ ಲಕ್ಷಣವನಱಿದು (ವಿವೇಕ. ೧೯೧). [ಪಕ್ಷ+ವಾಸ$_1$]

ಪಕ್ಷಶೂಲೆ (ನಾ). ಒಂದು ಬಗೆಯ ರೋಗ; ಪಕ್ಕೆಗಳಲ್ಲಿ ಕಾಣಿಸಿಕೊಳ್ಳುವ ನೋವು; ಪಕ್ಕೆಶೂಲೆ: ಪಕ್ಷಶೂಲೆಗೆ:—ವಿಳಂಗ, ತ್ರಿಫಲೆ, ತ್ರಿಕಟುಕ, ಚಿತ್ರಮೂಲ, ಚವ್ಯ . . . ಮೆಲ್ಲಿಸೆ ಪಕ್ಷಶೂಲೆ ತೀರ್ಗುಂ (ವೈದ್ಯವಿ. ೮೯). [ಪಕ್ಷ+ಶೂಲೆ$_1$]

ಪಕ್ಷಸಂಪುಟ (ನಾ). ರೆಕ್ಕೆಯ ಒಳಭಾಗ: ಅಂತಶ್ರುತಪೂರ್ವಧ್ವನಿಯಂ ತೊಟ್ಟನೆ ಕೇಳ್ದು . . . ಭೀಟಾಡಲ್ಪೊಕ್ಕೆಂ ತಂದೆಯ ಶಿಥಿಲಪಕ್ಷಸಂಪುಟದೆಡೆಯೊಳ್ (ಕಾದಂಪೂ. ೧೫೪). [ಪಕ್ಷ+ಸಂಪುಟ]

ಪಕ್ಷಸಿದ್ಧಿ (ನಾ). (ಶಾಸ್ತ್ರಾರ್ಥ ವಿಚಾರದಲ್ಲಿ) ಒಂದು ಮತವನ್ನು ಸಾಧಿಸುವುದು; ಯುಕ್ತಿಗಳಿಂದ ತನ್ನ ವಾದವೇ ಸರಿಯೆಂದು ತೋರಿಸುವುದು: ಈಗಲ್ಲಿಗೇವಿಧೀಯಂ ಮಾಟ್ಟುದೆಂದು ಪೂರ್ವಪಕ್ಷದ ಪಕ್ಷಸಿದ್ಧಿಯ ವಿಸ್ತಾರಕ್ಕವಕಾಶಮಪ್ಪಂತು ನುಡಿದು (ಶಾಂತಿಪು.೨-೩೫ ವ).

[ಪಕ್ಷ+ಸಿದ್ಧಿ]

ಪಕ್ಷಾಂತ (ನಾ). ಪಕ್ಷದ ಕೊನೆಯ ದಿನ; ಪೌರ್ಣಮಿ ಅಥವಾ ಅಮಾವಾಸ್ಯೆ: "ಪಕ್ಷಾಂತೌ, ಪಂಚದಶ್ಯೌ—ಈ ೨ ಅಮಾವಾಸ್ಯೆ ಹುಣ್ಣಿಮೆಗಳ ಹೆಸರುಗಳು" (ಸಿದ್ಧಾಂತಿ. ೩೬). [ಪಕ್ಷ+ಅಂತ$_2$]

ಪಕ್ಷಾಂತರ (ನಾ). ೧. ಬೇರೊಂದು (ರಾಜಕೀಯ) ಪಕ್ಷ. ೨. ಒಂದು (ರಾಜಕೀಯ) ಪಕ್ಷವನ್ನು ಬಿಟ್ಟು ಮತ್ತೊಂದು ಪಕ್ಷಕ್ಕೆ ಸೇರುವಿಕೆ: ಪಾರ್ಟಿ, ಪಕ್ಷ, ಗುಂಪುಗಾರಿಕೆ, ಪಕ್ಷಾಂತರ ನನ್ನೂರಿನಲ್ಲಿಯೂ ಯೋಗ್ಯತಾನುಸಾರ ಇವೆ (ನನ್ನೂರು. ೩೧೬). ೩. ಒಂದು ವೇಳೆ, ಹೀಗಾದರೆ ಎಂಬರ್ಥ; ವಿಕಲ್ಪಾರ್ಥ: ಸಿರಿದುಂ ಪಕ್ಷಾಂತರಮುಂ ನಿರವಿಕಾರಂ ನಿಜಾಂತಮಾದೊಡೆ ಶಬ್ದಂ ಪರಿಕಿಸೆ ಧಾತ್ವಂತ್ಯದೊಳಾವರಿಸಿರ್ಕುಂ ಲಿಂಗವಚನಪುರುಷಾಯತ್ತಂ (ಶಮದ. ೨೫೦).

ಪಕ್ಷಾಂತರಗೊಳ್ಳು = ಒಂದು (ರಾಜಕೀಯ) ಪಕ್ಷವನ್ನು ಬಿಟ್ಟು ಮತ್ತೊಂದು ಪಕ್ಷಕ್ಕೆ ಸೇರಿಕೊಳ್ಳು: ಆಡಳಿತಪಕ್ಷದ ಹದಿನೈದು ಮಂದಿ ಸದಸ್ಯರು ಪಕ್ಷಾಂತರಗೊಂಡಿದ್ದರಿಂದ ಅದು ಬಹುಮತವನ್ನು ಕಳೆದುಕೊಂಡಿತು (ರೂಢಿ). **ಪಕ್ಷಾಂತರ ಮಾಡು** = ಪಕ್ಷಾಂತರಗೊಳ್ಳು: ಅವರು ಪಕ್ಷಾಂತರ ಮಾಡಿ ಅಧಿಕಾರಕ್ಕೆ ಬಂದರು (ರೂಢಿ). **ಪಕ್ಷಾಂತರ ಹೊಂದು** = ಪಕ್ಷಾಂತರಗೊಳ್ಳು: ಅವರು ವಿರೋಧ

ಪಕ್ಷದಲ್ಲಿದ್ದು ಉಪಯೋಗವಿಲ್ಲವೆಂದು ಅಳುವ ಪಕ್ಷಕ್ಕೆ ಪಕ್ಷಾಂತರ ಹೊಂದಿದರು (ರೂಢಿ). [ಸಂ.]

ಪಕ್ಷಾರ್ಥ (ನಾ). = ಪಕ್ಷಾಂತರ ೩ : ಒಡೆ—ಪಕ್ಷಾರ್ಥವನ್ನು ತಿಳಿಸುವಾಗ ಧಾತುವಿಗೆ ಸಾಮಾನ್ಯವಾಗಿ ಭೂತಭವಿಷ್ಯತ್‌ಕಾಲಸೂಚಕ ಪ್ರತ್ಯಯಗಳ ಮುಂದೆ ಒಡೆ ಎಂಬ ಪ್ರತ್ಯಯವು ಸೇರುತ್ತದೆ (ಕೃಪಡಿ.೫೦).

ಪಕ್ಷಾರ್ಥದ ರೂಪ = ಪಕ್ಷಾರ್ಥವನ್ನು ತಿಳಿಸುವ ರೂಪ: ಸಾಪೇಕ್ಷಕ್ರಿಯಾರೂಪಗಳಿಗೆ ಕಾಲಭೇದ, ಅರ್ಥಭೇದಗಳು ಮಾತ್ರ ಉಂಟು. ಉದಾಹರಣೆಗೆ . . . 'ಹೊರಟರೆ' ಎಂಬುದಕ್ಕೆ ಪಕ್ಷಾರ್ಥದ ರೂಪವೆಂದೂ 'ಹೊರಡಲು' ಎಂಬುದಕ್ಕೆ ಭಾವಾರ್ಥದ ರೂಪವೆಂದೂ ಹೆಸರು (ಮಧ್ಯಮ. ೬೫). [ಪಕ್ಷ + ಅರ್ಥ]

ಪಕ್ಷಾವೇಶಿ (ನಾ). ಒಂದು ಪಕ್ಷವನ್ನು ಕುರಿತು ಉದ್ವೇಗವನ್ನು ಹೊಂದಿರುವವನು,—ತೀವ್ರವಾದ ಅಭಿಮಾನವನ್ನು ಹೊಂದಿರುವವನು: ನಾವಲೇ ಕೌರವನ ಪಕ್ಷಾವೇಶಿಗಳು ಸಾಕಿನ್ನದಂತರಲಿ (ಕುವ್ಯಾಗ. ೬-೬). [ಸಂ. ಪಕ್ಷಾವೇಶಿನ್]

ಪಕ್ಷಾಳ (ನಾ).(?) : ದಿನನಾಥಂ ಮಕರಕ್ಕೆ ಬರ್ಪ ಪದದೊಳ್ ಪಕ್ಷಾ (ಕಲ್ಪಾ)ಳಯೊಳ್ ಸೌಮ್ಯಚಂದ್ರನಿರಲ್ ದ್ವಾದಶದಲ್ಲಿ ಭಾನುಜನಿರಲ್ ನೇಣಂದುಪಂ ಮಂತ್ರಿ ಮೆಲ್ಲನೆ ಪಟ್ಟಪ್ರಕದಲ್ಲಿ ಭಾನು ಶಶಿಗಳ್ ಕುಳ್ಳಿರ್ದೊಡಂ ಮತ್ತೆ ಮೇದಿನಿಯೊಳ್ ಭಾವಿಪೊಡಕ್ಕುಮಲ್ಪಫಲಮುಂ (ಜಿಜ್ಞಮ. ೮-೨೦೩). [?]

ಪಕ್ಷಿ (ನಾ). ರೆಕ್ಕೆಗಳನ್ನು ಹೊಂದಿರುವ (ಆಕಾಶದಲ್ಲಿ ಹಾರುವ ಶಕ್ತಿಯುಳ್ಳ)ಜೀವಿ; ಹಕ್ಕಿ: "ಪತತ್, ಪತಂಗಃ . . . ಪಕ್ಷೀ . . . ದ್ವಿಜಃ—ಈ ೩೬ ಹಕ್ಕಿ" (ಹಲಾಯು. ೪೦-೪೫); ಚಕಿತೋದ್ಯತ್ಪಕ್ಷಿಪಕ್ಷ ಸ್ವನದೊಳಮರ್ದ ಕೋಳಾಹಳಧ್ವನಿದಿಂ ಕೊರ್ದಿ (ಕಾದಂಪೂ. ೧೫೩); ಚರಿಪಾರಣ್ಯದ ಪಕ್ಷಿಗೊಂದು ತರು ಗೊಡ್ಡಾಗಲ್ ಫಲಂ ತೀವಿದಾ ಮರಗಳ್ ಪುಟ್ಟವೆ (ಸೋಮೇಶ. ೨೬); ಪಕ್ಷಿ ಮೊದಲಾಗಿ ಭವದುಃಖಕ್ಷಯಕಾರಣಮಿದೆಂದು ತನ್ನಯ ಶಿಶುವಂ ರಕ್ಷಿಸುತಿರ್ದಪುದು (ದಶಕು. ೧-೫೮); ಪಕ್ಷಿಗೆ ಆಕಾಶವೇ ಬಲ, ಮತ್ಸ್ಯಕ್ಕೆ ನೀರೇ ಬಲ (ಗಾದೆ); ಪಕ್ಷಿಗೆ ಗೂಡು, ಮಕ್ಕಳಿಗೆ ತಾಯಿ (ಗಾದೆ). [ಸಂ. ಪಕ್ಷಿನ್]

ಪಕ್ಷಿಗಾವುದ (ನಾ). ಪಕ್ಷಿಗೆ ಕಾಣಿಸುವಷ್ಟು ದೂರ (?); ಪಕ್ಷಿ ಹಾರುವಷ್ಟು ದೂರ (?): ಪಕ್ಷಿಗಾವುದಕೊಂದು ಪಟ್ಟಣ ಐಂತೀತು ಕೇಳರಣ್ಣಾ (ಕಾಲಸಂ. ೧೦೧-೨). 'ಅಕ್ಷಿಗಾವುದ' ಪರಾ.

[ಪಕ್ಷಿ + ಗಾವುದ]

ಪಕ್ಷಿಗ್ರಹ (ನಾ). ಮಕ್ಕಳಿಗೆ ಬರುವ ಒಂದು ಬಗೆಯ ರೋಗ; ಹಕ್ಕಿರೋಗ; P ಪಕ್ಷಿರೋಗದಿಂದ ಪೀಡಿತವಾದ ಶಿಶುವಿಗೆ ಬಹಳ ಬಾಯಾರಿಕೆ, ಜ್ವರ ಇದ್ದು ಓಕರಿಕೆಯುಂಟಾಗುತ್ತದೆ. ಹೊಟ್ಟೆ ಹಸುರಾಗುವುದು. ಕೈಕಾಲು, ಮೈ ಎಲ್ಲವೂ ಬತ್ತುತ್ತವೆ: ಜಪ್ಪೆ ಸೊಪ್ಪಿನ ರಸವನ್ನೂ ಎಣ್ಣೆಯನ್ನೂ ಕೂಡಿ ಮುಸ್ತಕಕ್ಕೆ ಒತ್ತಿಸಲು ಪಕ್ಷಿಗ್ರಹ ಹರವಹುದು (ವೈದ್ಯಸಾ. II, ೧೪). [ಪಕ್ಷಿ + ಗ್ರಹ]

ಪಕ್ಷಿಗ್ರಹದೋಷ (ನಾ). ಪಕ್ಷಿಗ್ರಹವೆಂಬ ರೋಗದಿಂದ ಉಂಟಾಗುವ ಬಾಧೆ,—ತೊಂದರೆ: ಬೇವಿನ ಹೂವು . . . ಬಳ್ಳಿಸುಂಡಿ, ಇವಱ ರಸವನ್ನೂ ಎಣ್ಣೆಯನ್ನೂ ಕೂಡಿ ಅದಱಿಲ್ಲಿ ಆ ಬೇರುಗಳ ಅರೆದು ಕದಡಿ ಕಾಸಿ ಅಭ್ಯಂಗವ ಮಾಡಿಸಲು ಪಕ್ಷಿಗ್ರಹದೋಷ ಶಮನವಹುದು (ವೈದ್ಯಸಾ. II, ೧೪). [ಪಕ್ಷಿಗ್ರಹ + ದೋಷ]

ಪಕ್ಷಿಗ್ರಹಶಂಕೆ (ನಾ). ಪಕ್ಷಿಗ್ರಹರೋಗದ ಸೂಚನೆ: ಸರ್ವಾಂಗಗಳಲ್ಲಿಯೂ ಬಳಲಿಕೆಯುಂಟಾಗಿ ಇಹುದು. ಕೊರಳು, ಬೆನ್ನು, ನೆತ್ತಿ, ಬಾಯಿ ಕುಳಿ ಬಿದ್ದು ಇಹುದು. ಈ ಲಕ್ಷಣಂಗಳು ಉಂಟಾಗಿ ಇದ್ದರೆ ಇದು ಪಕ್ಷಿಗ್ರಹಶಂಕೆ ಎಂದಱಿಯುದು (ವೈದ್ಯಸಾ. II, ೧೪).

[ಪಕ್ಷಿಗ್ರಹ + ಶಂಕೆ]

ಪಕ್ಷಿಜ್ಯೇಷ್ಠ (ನಾ). ಪಕ್ಷಿಜಾತಿಯಲ್ಲಿ ಹಿರಿಯದು; ಹದ್ದು: "ಪಕ್ಷಿಜ್ಯೇಷ್ಠಂ ಗೃಧ್ರಮೆನಿಸೆ ಹದ್ದು" (ಪುಂಗರಾ. ೫೨-೯).

[ಪಕ್ಷಿ + ಜ್ಯೇಷ್ಠ]

ಪಕ್ಷಿಣಿ (ನಾ). ಎರಡು ಹಗಲಿನಿಂದ ಕೂಡಿದ ರಾತ್ರಿ; ಒಂದೂವರೆ ದಿನ: "ಪಕ್ಷಿಣೀ-ಆಗಾಮಿ ವರ್ತಮಾನಾಹರ್ಯುಕ್ತಾ ರಾತ್ರಿಯಾಂ—ಬರುವ ಹಗಲಿನೊಂದಿಗೂ ಈಗಿನ ಹಗಲಿನೊಂದಿಗೂ ಕೂಡಿದ ನಿಶಿರಾತ್ರಿಯಲ್ಲಿ ವರ್ತಿಸುವುದು, ಅಂದರೆ, ಈಗಿನ ಹಗಲು. ಈ ದಿನ ರಾತ್ರಿ, ನಾಳೆ ಹಗಲು, ಅಂತೂ ೯೦ ಘಳಿಗೆಗಳ ೨ ಹಗಲುಗಳ ಮಧ್ಯೆ ಇರುವ ರಾತ್ರಿಗೆ ಪಕ್ಷಿಣಿಯೆಂದು" (ನಿದ್ದಾಂತಿ. ೬೫). [ಸಂ. ಪಕ್ಷಿಣೀ]

ಪಕ್ಷಿನೋಟ (ನಾ). ೧. ಪಕ್ಷಿಯು ಹಾರುವ ಎತ್ತರದಿಂದ ಕಾಣುವ ಭೂದೃಶ್ಯ,—ನೋಟ. ೨. ಯಾವುದಾದರೊಂದು ವಿಷಯದ ಸ್ಥೂಲವಾದ ವಿವರಣೆ: ವಿಶಾಲದೃಷ್ಟಿಯ ಪಕ್ಷಿನೋಟದಿಂದ ಮೊದಲು ವಿಷಯವನ್ನು ಸಾಮಾನ್ಯವಾಗಿ ಪರಿಚಯ ಮಾಡಿಕೊಂಡು . . . ಸೂಕ್ಷ್ಮವಾಗಿ ಬೋಧಿಸುವುದು ಉಚಿತವೆಂದು ಈ ನಿಯಮ ಸೂಚಿಸುತ್ತದೆ (ಶಿಕ್ಷಪ್ರ.೩೧೯); ಅವರ ಉಪನ್ಯಾಸವು ಕಾದಂಬರಿಯ ವಸ್ತುವಿನ ಪಕ್ಷಿನೋಟವಾಗಿತ್ತು (ರೂಢಿ). 'ವಿಹಂಗಮನೋಟ', 'ಹಕ್ಕಿನೋಟ' ಪರಾ. P ಇದು ಇಂಗ್ಲೀಷಿನ 'Bird's eye view' ಎಂಬುದರ ಅನುವಾದ.

[ಪಕ್ಷಿ + ನೋಟ]

ಪಕ್ಷಿಯಾನ (ನಾ). ೧. ಪಕ್ಷಿಗಳ ಹಾರಾಟ. ೨. ಗರುಡಪಕ್ಷಿಯ ಮೇಲೆ ಪ್ರಯಾಣ ಮಾಡುವವನು; ವಿಷ್ಣು: ಕಕ್ಷ್ಯದಲ್ಲಿ ಸ್ವರ್ನಪುತ್ತಳೆಯ ಪಳಿಯುವ ಪಕ್ಷಿಯಾನತನುಜಸಪ್ಯಶ ಪುತ್ರನೆತ್ತುವೆ (ಕಪಾಕುಂ. ೬೦). [ಪಕ್ಷಿ + ಯಾನ]

ಪಕ್ಷಿರಥ (ನಾ). = ಪಕ್ಕಿದೇರ: ಪಕ್ಷಿರಥ ಪದ್ಮಭವ ಶಕ್ರ ಸುರಮುಖ್ಯರನು ಆ ಕ್ಷಣದಿ ಕರೆದೊಯ್ದು ತನ್ನ ನಿಜಪುರದೊಳಗೆ ದಕ್ಷ ಯಾಗವನೆಸಗೆ (ಪ್ರಾಥಂ. ೧-೧೪); ಘನವಕ್ಷ ಪಕ್ಷಿರಥ ಕಮಲಾಕ್ಷ ಕಿನ್ನರಯಕ್ಷಸುರ ಮುನಿರಕ್ಷ ಸುಜನಾಪೇಕ್ಷ ನರಹರ್ಯಕ್ಷ ಪಾಲಿಸು ಮೋಕ್ಷಪದದಕ್ಷ (ಉರಚಾ. ೨೦-೨೫). [ಪಕ್ಷಿ + ರಥ]

ಪಕ್ಷಿರಾಜ (ನಾ). ಹಕ್ಕಿಗಳ ದೊರೆ; ಗರುಡ. [ಪಕ್ಷಿ + ರಾಜ]

ಪಕ್ಷಿವಾಹನ (ನಾ). ಗರುಡಪಕ್ಷಿಯೇ ವಾಹನವಾಗಿರುವವನು; ವಿಷ್ಣು: ಪಕ್ಷಿವಾಹನನಂ ಗಜಾಸುರರಾಕ್ಷಸರು ನಿರ್ಜಾಡಿಸಿದಪುದಱೀ ಕ್ಷಿತಿಯೆ ಬಲ್ಲುದು (ಬಸಪು. ೫೪-೬೬); ಪಕ್ಷಿವಾಹನ ಲಕ್ಷ್ಮೀರಮಣ ಲಕ್ಷ್ಮಣಿಟ್ಟು ನೋಡೊ (ಪುರಂದ. ೬-೬-೧); ಫಲುಗುಣಂ ಸೇನಾಸಮೂಹಮಂ ಪಿಂದುಳಿಪಿ ರತ್ನನಗರಿಗೆ ಪಕ್ಷಿವಾಹನನ ಕೂಡೆ ನಡೆತಂದನು (ಜೈಮಿಭಾ. ೨೬-೬). [ಪಕ್ಷಿ + ವಾಹನ]

ಪಕ್ಷಿಶಕುನಶಾಸ್ತ್ರ (ನಾ). ಹಕ್ಕಿಗಳ ಚಲನವಲನಾದಿಗಳಿಂದ ಭವಿಷ್ಯದ ಶುಭಾಶುಭಗಳನ್ನು ತಿಳಿಸುವ ಶಾಸ್ತ್ರ: (Ornithoscopy. ಇಂಕಾಸ). [ಪಕ್ಷಿ + ಶಕುನ + ಶಾಸ್ತ್ರ]

ಪಕ್ಷೀಂದ್ರ (ನಾ). = ಪಕ್ಷಿರಾಜ: ಪುರಹರಂ ಕೈಪೆಯೊಳವನಂ ಮತ್ತೆ ಸಂತೈಸಿ ಕರೆದು ವೃಷರಾಜಂಗೆ ಬೆಸಸೆ ಬೆಂಬತ್ತಿದಂ ಪಕ್ಷೀಂದ್ರನಂ ಸಭದೊಳು (ಜೈಮಿಭಾ. ೧೪-೨೦). [ಪಕ್ಷಿ + ಇಂದ್ರ]

ಪಕ್ಷೀಕರ (ನಾ). ಪಕ್ಷಕ್ಕೆ ಸೇರಿದವನು; ಪಕ್ಷವನ್ನು ವಹಿಸಿದವನು; ಪಕ್ಷಾವಲಂಬಿ: "ಬರಿ ಮಾಸಾರ್ಧ ಸಮೀಪ ಭಿತ್ತಿ ಗಜಯುಂ ಪಕ್ಷೀಕರಂ ಪಕ್ಷಮಳ್ಕು" (ನಾನಾರ. ೧೧೩). 'ಪಕ್ಷೀಕರಂಗೊಳ್' ಪರಾ.

[ಸಂ.]

ಪಕ್ಷೀಕರಂಗೊಳ್ (ಕ್ರಿ). ಪಕ್ಷಕ್ಕೆ ಸೇರಿದವನಾಗು ; ಪಕ್ಷವನ್ನು ವಹಿಸು,—ಅಂಗೀಕರಿಸು : ಕುಲಮಂ ಗೋತ್ರಮನುರ್ವಿಯಂ ಬಿರುದುಮಂ ಪಕ್ಷೀಕರಂಗೊಂಡು ತಾನೊಲವಿಂ ತನ್ನವೆನುತ್ತಂ ನಿಂದಿಸಂ ಜೀವನಂಡಲೆದು ಭಕ್ತರ ನಾಲ್ಕುಲಕ್ಷಭವದೊಳ್ಬಂದಲ್ಲಿ ತಾನಾವುದ ರ್ಕೊಲಿವಂ ನಿಂದಿಸನಾವುದಂ (ರತ್ನಾಕ. ೩೦). [ಪಕ್ಷೀಕರ+ಕೊಳ್$_1$]

ಪಕ್ಷೀಕರಿಸು (ಕ್ರಿ). ೧. ಪಕ್ಷಪಾತವನ್ನು ತೋರಿಸು; ಪಕ್ಷ ವಹಿಸು: ಈತನಿನತರ್ಥಮಂ ಕೊಂಬುದುಚಿತವೆ ಹೇಳು ತಾತ ಪಕ್ಷೀಕರಿಸದೆ (ಜಡಶಾ. ೧೧-೯); ಅಕ್ಷರಭೇದವನಱಯದೆನಗೆ ಮತ್ತೆ ಲಕ್ಷಣಗಳು ಗೋಚರವೆ ರಕ್ಷಿಸಿದಾತ ದೋಷವನೀ ಕೃತಿಯೊಳು ಪಕ್ಷೀಕರಿಸಿ[ಪಾಠಾಂ. ಪಕ್ಷವಿಲ್ಲದೆ] ಕೇಳುವುದು (ತ್ರಿಪುಸಾಂ. ೨-೨೨); ಮಾತೆ ಪಿತ ಸತಿ ಪುತ್ರ ಬಂಧುವರ್ಗಂ ಗಳೊಳ್ ಪ್ರೀತಿಯಿಂ ಪಕ್ಷೀಕರಿಸದೆ ಶಿವಧರ್ಮಮಾರ್ಗದೊಳು ಸತ್ಪಥಿಕ ರಾಗಿ (ಲಿಂಗಾಂ. ೩೯-೨೦೮); ಪೆಂಪು ದೀಪಿಸುವೋಜೆವೋದುಗಳೆಂದಿವು ರಂಗ ನೀ ಪಕ್ಷೀಕರಿಸಿದರ್ಗಳ್ಕು (ಶತಸಾಂ.೫೧-೬೦). ೨. ಸಮಭಾಗಿ ಯಾಗು; ಪಾಲುದಾರನಾಗು. [ಪಕ್ಷೀಕರಣ$_0$+-ಇಸು$_3$]

ಪಕ್ಷೀಯ(ಗು). ೧. ಒಂದು ಗುಂಪಿಗೆ ಸೇರಿದ: 'ದ್ವಿಪಕ್ಷೀಯ' ಪರಾ. (ನಾ). ೨. ಪಕ್ಷಕ್ಕೆ ಸಂಬಂಧಿಸಿದುದು ; ಪಕ್ಷಪಾತದಿಂದ ಕೂಡಿ ದುದು ; ಅಭಿಮಾನದಿಂದ ಕೂಡಿದುದು : ಸಮ್ಮಲ್ಲಿಯ ಅನೇಕ ಸುದ್ದಿಗಾರರು "ಶಿಷ್ಟ"ರೆಂದೆನಿಸಿಕೊಂಡು ಸ್ಥಾನಿಕಜೀವನದಲ್ಲಿ ಒಂದೊಂದು ಸ್ಥಾನವನ್ನಾಕ್ರಮಿಸಿದ್ದರಿಂದ, ಅವರ ವರದಿಗಳು ಅನೇಕ ಸಲ ಪಕ್ಷೀಯ ವಾಗಿರುತ್ತವೆ (ಪತ್ರಿಕಾ. ೫೩). [ಸಂ.]

ಪಕ್ಷೋಪಚಾರ (ನಾ). ತನ್ನ ಪಕ್ಷದ ಮೇಲಿನ ಆದರ ; ತನ್ನ ಅಭಿಪ್ರಾಯವೇ ಸರಿಯೆಂಬ ದೃಢವಾದ ವಿಶ್ವಾಸ : ಈ ಪರಿಯ ಲೆರಡಿಟ್ಟ ಜಗದಾಳಾಪವನು ಕರ್ಣಾರ್ಜುನರ ಪಕ್ಷೋಪಚಾರ ಪ್ರಕಟ ಕಲಹಕಠೋರಕಳಕಳವ . . . ಪಿತಾಮಹನಱುದು ಸಂತೈಸಿದನು (ಕುಮಾಕ. ೨೨-೧೪). [ಪಕ್ಷ+ಉಪಚಾರ]

ಪಕ್ಷೋಪವಾಸಿ (ನಾ). [ಜೈನ] ಹದಿನೈದು ದಿನಗಳು ಸತತವಾಗಿ ಉಪವಾಸ ಮಾಡುವ ವ್ರತವನ್ನು ಕೈಗೊಂಡಿರುವವನು : ಪಕ್ಷೋಪವಾಸಿಗಳ್ಪಾಪಕ್ಷಯಕರಮೂರ್ತಿಗಳ್ಸುಹಾವಾಸಿಗಳತ್ಯಕ್ಷುಂಣ ಚರಿತರಾವರೆನ್ದೀ ಕ್ಷಿತಿ ಪೊಗಟ್ಟುವುದು ಗೊಹೆಯ ಭಟ್ಟಾರಕರನ್ (ಎಕ. IV, ನಾಗಮಂ. ೬೭-೨ ; ಸು. 1060 ?). 'ಮಾಸೋಪವಾಸಿ' ಪರಾ. [ಸಂ. ಪಕ್ಷೋಪವಾಸಿನ್]

ಪಕ್ಷ್ಮ (ನಾ). ೧. ರೆಪ್ಪೆಗೂದಲು ; ಎವೆಗೂದಲು ; ಅಕ್ಷಿರೋಮ: "ನಯನರೋಮಂ ಪಕ್ಷ್ಮಂ" (ಪಸ್ತುಕೋ.೭೧-೨೨); ನೀಲದೀರ್ಘಬಾಹು ಳಾಂಚಿತಪಕ್ಷ್ಮನೇತ್ರನುಂ (ಅದಿಪು. ೧೨-೫೬ ಪ); ಅಕ್ಷಿಗಳ್ [ಬಹುಳ] ಪಕ್ಷ್ಮಂಗಳ್ ಕುರಂಗಾಕ್ಷಿಯಾ (ಗದಾಯು.೮-೫೫); ರಾಮಚಂದ್ರಾಂಗನೆ ನೀಳ್ದ ಕಣ್ಮಲರ್ಗಳಿಂದುಗೆ ಕಣ್ಬನಿಗಳ್ ಮಡಲ್ತ ಪಕ್ಷಂಗಳನೊತ್ತಿ (ಪಂಂಾಮಾ. ೯-೧೦೭); ಆ ಲತಾಂಗಿ ದೃಕ್‌ಪಕ್ಷ್ಮಸ್ಪಂದಮನೆ ಮಾಡುತಂ (ತ್ರಿಪುವಿ. ೨-೧೩೬). ೨. ಹೂವಿನ ಕೇಸರ. ೩. ದಾರದ ತುದಿ. ೪. ರೆಕ್ಕೆ ; ಪಕ್ಷ. [ಸಂ. ಪಕ್ಷ್ಮನ್]

ಪಕ್ಷ್ಮಪಾತನ(ನಾ). ರೆಪ್ಪೆ ಹೊಡೆಯುವುದು; ಎವೆಯಿಕ್ಕುವುದು: ವಿಸ್ಮೃತಪಕ್ಷ್ಮಪಾತನವಪೂರ್ವಾ[ಪಾಠಾಂ.ಪಾತಮನಪೂರ್ವಾ] ಲೋಕನಾ ಕೌತುಕಾಕುಲಿತಾಂತಃಕರಣಂ . . . ನೆರೆದತ್ತೆತ್ತಂ ಪುರಸ್ತ್ರೀಜನಂ (ಅದಿಪು. ೪-೬೦). [ಸಂ.]

ಪಕ್ಷ್ಮಪಾಳಿ (ನಾ). ರೆಪ್ಪೆಕೂದಲಿನ ಸಾಲು,—ಪಂಕ್ತಿ : ಅಗ್ರಾ ಧರಪಕ್ಷ್ಮಪಾಳಿ ಪೊಳೆವಾಲಿ ವಿನಿರ್ಮಲಪೂರವಾರಿಯಾಗೆ (ಚಂದ್ರಪು. ೧-೮೨). [ಪಕ್ಷ್ಮ+ಪಾಳಿ$_3$ (=ಪಾಲಿ$_2$)]

ಪಕ್ಷ್ಮಮಾಲೆ (ನಾ). = ಪಕ್ಷ್ಮಪಾಳಿ : ಮರಕತಸರ್ಯಂಕದೊಳವಿರ ಳಾಶ್ರುಬಿಂದುಸಂದೋಹದಂತುರಿತ ಪಕ್ಷ್ಮಮಾಲಾಲುಳಿತನೇತ್ರೆಯುಂ . . . ಆಗರ್ಷಿನೆಗಂ (ಚಂದ್ರಪು. ೩-೫೦ ಪ). [ಸಂ. ಪಕ್ಷ್ಮಮಾಲಾ]

ಪಕ್ಷ್ಮಲ (ಗು). ದಟ್ಟವಾದ ಕೂದಲಿನ ಎವೆಯುಳ್ಳ ; ಸುಂದರ ವಾದ ರೆಪ್ಪೆಯುಳ್ಳ. [ಸಂ.]

ಪಕ್ಷ್ಮಸ್ಪಂದನ (ನಾ). = ಪಕ್ಷ್ಮಪಾತನ: ಅರಮನೆಯಂ ಲಕ್ಷ್ಮೀನಿಳಯ ಮನೀಕ್ಷಿಸಿ ಪಕ್ಷ್ಮಸ್ಪಂದನಮನಾರೊ ಮಱೆಯದರದಱೊಳ್ (ಚಂದ್ರಪು. ೧೧-೮೦). [ಪಕ್ಷ್ಮ+ಸ್ಪಂದನ]

ಪಕ್ಷ್ಮಾಂತರ (ನಾ). ರೆಪ್ಪೆಗೂದಲಿನ ಮಧ್ಯಭಾಗ : ಅರಸೀ . . . ನಿನ್ನಯ ಪಕ್ಷ್ಮಾಂತರಲಗ್ನಬಾಷ್ಪಬಿಂದುವನೊರಸುತಮಿಂದೆನ್ನ ದುಗುಡವಂ ಪರಿಹರಿಪೆಂ (ಶಾಕುಂತ. ೧೧೦-೧೮೮). [ಪಕ್ಷ್ಮ+ಅಂತರ]

ಪಕ್ಷ್ಮಾಳಿ (ನಾ). = ಪಕ್ಷ್ಮಪಾಳಿ : ತುಹಿನಕ್ಷ್ಮಾಧರಜಾತಾಲೋಲೇ ಕ್ಷಣವಿಲಸತ್ಪಕ್ಷ್ಮಾಳೀ ಸಸ್ಮಿತಕೃತನುತ ಚತುರಾಭಿಜ್ಞಮನೋಜ್ಞಾಭಿಲ ವೃಷಭ(ಉದ್ಭಟೇ. ೩-೩). [ಪಕ್ಷ್ಮ+ಆಳಿ$_4$(=ಆಲಿ$_4$)]

ಪಖ್ಖಲೆ 'ಪಕ್ಕಲೆ' ನೋ.

ಪಖ್ಖಳ 'ಪಖ್ಖಾಳ' ನೋ.

ಪಖ್ಖಾಳ, ಪಖ್ಖಳ (ನಾ). ತೊಳೆಯುವುದು ; ಶುದ್ಧಿ ಮಾಡು ವುದು : ವರ್ಗದ್ವಿತೀಯಾಕ್ಷರಂಗಳ್ಗೆ — ವಖ್ಖಾಣಂ, ದೆಖ್ಖಾಣಂ (ದೆಖ್ಖಾಳಂ), ಪಖ್ಖಾಳಂ (ಶಮದ. ೧೫ ವೃತ್ತಿ). **ಪಖ್ಖಳ** : ದ್ವಿತ್ವದ ಖಕಾರಕ್ಕೆ—ಪ್ರಕ್ಷಾಲ-ಪಖ್ಖಾಳ, ಪಖ್ಖಳ (ಶಮದ. ೨೫೨ ಪ್ರಯೋ). [<ಪ್ರಾ. ಪಕ್ಖಾಲ./ಸಂ. ಪ್ರಕ್ಷಾಲ]

ಪಗ 'ಪಗವು' ನೋ.

ಪಗಂಟು 'ಪಗಟು' ನೋ.

ಪಗಂಡಿಱು (ಕ್ರಿ). ೧. ಎದ್ದುಕಾಣು ; ಪ್ರಕಟವಾಗು : ನೆಱೆಯೆ ನೆಗರ್ತ್ತೆವೆತ್ತುದು ನಿಯೋಗಮಗುಂದಲೆಯೊಯ್ತು ತೇಜಮಟ್ಟಱುದುದು ಮಿಕ್ಕ ಬಿಷ್ಟತಿಕೆ . . . ದಳಮೇಱುದುದಕ್ಕರಂ ಪಗಣ್ಡಱುದುದು ಪೌರುಷಂ ಸಫಳಮಾದುದು ಮಾಸ್ಯತೆ ಮಾದಿರಾಜನೊಳ್ (ಸೌಇಇ. XI-ii, ೧೪೭-೩೭ ; 1099) ; ಬಱಬಱ ಬತ್ತೆ ಬಾಯ್ ಬೆರಲ ಬಾಸುಟ ಪದ್ಧತಿ ಮಧ್ಯದೊಳ್ ಪಗಂಡಿಱುದಿರೆ(ಪಂಂಾಮಾ.೯-೩೦). ೨. ಹಬ್ಬು ; ಹೆಣೆದುಕೊಳ್ಳು ; ವ್ಯಾಪಿಸು : ಅವರಿಸರ್ದ ಲತೋತ್ಕರಂ ಪಗಂಡಿಱು ವುದು ನಿಂದು ಪಾವನ ತಪೋವನದೊಳ್ (ಚಂದ್ರಪು. ೧೧-೨೦). [ಪಗಂಡು+ಇಱು$_1$]

ಪಗಂಡು (ನಾ). ೧. ಎದ್ದು ಕಾಣುವಿಕೆ; ಪ್ರಕಟವಾಗುವಿಕೆ ; ಚೆನ್ನಾಗಿ ತೋರುವಿಕೆ : 'ಪಗಂಡಿಱು' ಪರಾ. ೨. ಹಬ್ಬುವಿಕೆ ; ವ್ಯಾಪನ : 'ಪಗಂಡುಗೊಳ್' ಪರಾ. [<ಪ್ರಾ. ಪಗಡ./ಸಂ. ಪ್ರಕಟ]

ಪಗಂಡುಗೊಳ್ (ಕ್ರಿ). ಹರಡು ; ವ್ಯಾಪಿಸು ; ತೊಡರಿಕೊಂಡು ಹಬ್ಬು : ಒಪವಿದ ಕೋಪವಹ್ನಿಯುರಿಯುಂ ಪೊಗೆಯುಂ ನೆಗೆವಂತೆ ಪದ್ಮರಾಗದ ಹರಿನೀಲದುನ್ಮುಖಭೂಷಣರಶ್ಮಿ ಪಗಂಡುಗೊಳ್ವಿನಂ (ಪಂಂಾಮಾ. ೯-೭೩) ; ಮೇದಿನೀರುಹಂಗಳ ತಳದಿನಗ್ರಂಬರಂ ನಿಮಿರ್ದು ಪರ್ವಿ ಪರಕಲಿಸಿ ಪಗಂಡುಗೊಂಡು ದಾಂಗುಡಿವಿಡಿದೇಲಾಮಾಲತೀ ಮಲ್ಲಿಕಾದಿ ನಾನಾಲತೆಯ ಕಾವಣಂಗಳ್ (ಧರ್ಮಾನಾ. ೨-೬೧ ಪ). 'ಪಗಂಡೇಟ್' ಪರಾ. [ಪಗಂಡು+ಕೊಳ್$_1$]

ಪಗಂಡೇಟ್ (ಕ್ರಿ). = ಪಗಂಡುಗೊಳ್ : ಪರಿದುಬ್ಬಾರಿಸಿ ಪೊಯ್ದೊ ಡಾಂತ ಕರವಾಳ್ಬಾಳೊಳ್ಪಗಂಡೆಟ್ಟು ಗಗ್ಗರಿಲೆಂದೆತ್ತುವ ಸುತ್ತುವತ್ತಳಿಪು ಸೂಟೊಳ್ಸೀಳ್ದು ಪೋಟ್ಟುರ್ದುಂ (ಅನಂಪು. ೧೧-೬೦). [ಪಗಂಡು+ಏಟ್$_1$]

ಪಗಂತೆವಳ್ಳ (ನಾ). ಒಂದು ಹಳ್ಳದ ಹೆಸರು : ಸಾಲತ್ತ ಕಾಡೇಱುನ ಪೇರೊಟ್ಟೆಯ ಪಗನ್ತೆವಳ್ಳಮೆ ಗೋಸನ್ತನೆ ಕೊಣ್ಡನ್ನಗೆಱೆಯ . . . ಪೆಱ್ಗೋಗೆಯ ಮೊದಲುಳ್ ಬಡಗಾಯ್ಪೆಗ್ಗೋಳ್ಳಿಯೆ ಸನ್ದು ಕಾವೇರಿಯುಳ್ ಕೂಡಿತ್ತು ಸೀಮೆ (ಎಕ. IV, ಎಡತೊ. ೬೦-೬೫ ; ಸು. 890).

[?+ಪಳ್ಳ]

ಪಗಱೆ (ನಾ). ಒಂದು ಬಗೆಯ ಸೊಪ್ಪು : ನರುವಲದ ಸೊಪ್ಪು . . . ಹಳೆಕೀರೆಸೊಪ್ಪು, ಪಗಱೆಸೊಪ್ಪು, ಈರುಳ್ಳಿ . . . ಪಥ್ಯದ್ರವ್ಯಗಳೆಂದು ಮತಾಂತರದಲ್ಲಿ ಹೇಳಲ್ಪಟ್ಟಿದೆ (ಸಕವೈ. ೧೦೨). [?]

ಪಗಟು, ಪಗಂಟು, ಪೊಗಟು (ನಾ). ೧. ಸುಳ್ಳುಮಾತು; ಬಣ್ಣದ ಮಾತು ; ತೋರಿಕೆಯ ಮಾತು : ನಂಬಿಯಣ್ಣಂ ಕೇಳ್ದು ಬಲ್ಲೆ ಬಲ್ಲೆನಿದೆಲ್ಲವಂ ಕೊಳ್ಳೆ ಕೊಳ್ಳೆನೀ ಪಗಟನೆನಗೆ ಸಂಕಿಲಿ ಬೇಡ ಪ್ರಮಾಣ ಪತ್ರವೆ ಸಾಲ್ಸುಂ ಕೊಡುಕೊಡೆಂದು . . . ಸಿಡಿಮಿಡಿಗೊಂಡು (ನಂಬರ. ದೇ. ೪೦೦-೯). **ಪಗಂಟು :** ೨. ಮೋಹ ; ಮಾಯೆ ; ವ್ಯಾಮೋಹ : ಸಂಸೃತಿವಾರ್ಥಿಯೊಳ್ ಜೀವಿಪಾಸೆ ಧನಾಸೆಯೆಂಬ ಪಗಂಟು ಪಣ್ಣಿದ ಕಣ್ಣಿಯಿಂ ಜೀವನಂ ಗಡ ಕಟ್ಟಿ ನೆಟ್ಟನೆ ಕರ್ಮಮಟ್ಟುಗುಮೊರ್ಮೆಯುಂ (ಪರ್ಧಾಪು. ೧೨-೯೪). **ಪೊಗಟು :** ೩. ಜಂಟು; ಗರ್ವ; ಸೊಕ್ಕು : ಯಾಕೆಲೊ ರಂಗ ನಿನಗಿಂತು ನಟನೆಯ ಮಾತು ಮಾಕಾಂತ ಕರೆಸಿದರೆ ಬಾರದಿಹ ಪೊಗಟು(ಕನಕ. ೮೬ ಅನುಪಲ್ಲವಿ). 'ಪೊಗರ್$_2$' ಪರಾ. [ದೇ.॥ತಮಿ. ಪಕಟ್ಟು; ತೆಲು. ಪಗಟು]

ಪಗಡಿ$_1$ (ನಾ). ೧. ತಲೆಗೆ ಸುತ್ತಿಕೊಳ್ಳುವ ರುಮಾಲು ; ಪಾಗು ; ಮುಂಡಾಸು : ಪರಶುರಾಮದೀಕ್ಷಿತನು ಅದನ್ನು ಕೇಳಿ ತನ್ನ ತಲೆಯ ಪಗಡಿಯನ್ನು ತೆಗೆದು ಅಂಗಿಯನ್ನು ಕಳಚಿಬಿಟ್ಟನು (ವಿಧಿವೈ. ೧೨೩) ; ಒಬ್ಬನು ಪಗಡಿಯನ್ನು ಹಾಕಿದ್ದಾನೆ (ಹುಚ್ಚಾಟ. ೧೦) ; ಮುಂದೆ ಕೋಚುಪೆಟ್ಟಿಗೆಯ ಮೇಲೆ, ತಲೆಯಲ್ಲಿ ಓರೆಪಗಡಿಯನ್ನು ಧರಿಸಿ ಕುಳಿತಿರುತ್ತಿದ್ದ ಕೋಚ್‌ಮ್ಯಾನ್ (ನಿಬಂಧ. II, ೩೧) ; ಯಾತ ತಲೆ ತೂಗಿದರೆ ಪಾತಾಳದ ನೀರು ಬಂತು, ತಾತ ತಲೆ ತೂಗಿದರೆ ಪಗಡಿ ಬಿತ್ತು (ಗಾದೆ). ೨. ಶಿರೋಭೂಷಣ : ಪಗಡಿ ಹಾಕಿದ ಗಣಪ್ಪ (ಜೀವಾಕ.೨೯). ೩. ಗೌರವ ; ಸನ್ಮಾನ ; ಮನ್ನಣೆ : ವಿದ್ಯಾಸಾಗರರು ಸಾಹೇಬರಿಂದ 'ಪಗಡಿ' ಸಂಪಾದಿಸಲು ಎಂದೂ ತಲೆ ಬಗ್ಗಿಸಿದವರಲ್ಲ(ನಿಬಂಧ.I,೪೨). 'ಪಗ್ರಿ' ಪರಾ. [←ಹಿಂ. ಮರಾ. ಪಗಡೀ]

ಪಗಡಿ$_2$, ಪಾಗಡಿ (ನಾ). ಮನೆ, ಮಳಿಗೆ ಮೊದಲಾದುವುಗಳನ್ನು ಬಾಡಿಗೆಗೆ ತೆಗೆದುಕೊಳ್ಳುವಾಗ ಕೊಡುವ ವಿಶೇಷರೀತಿಯ ಹಣ: ಕಟ್ಟಡ ಪೂರ್ತಿಯಾಗುವುದಕ್ಕೆ ಮುಂಚೆಯೇ ಮೂರು ನಾಲ್ಕು ತಿಂಗಳ ಬಾಡಿಗೆ, ಮೇಲೆ 'ಪಗಡಿ'ಗಳನ್ನೂ ಕೊಟ್ಟು ಜಾತಕಗಳಂತೆ ಕಾದಿರುತ್ತಿದ್ದರು (ಮರ್ಯಾದೆ. ೨೯೬). **ಪಾಗಡಿ :** ಕಡಿಮೆ ಪಾಗಡಿಯಲ್ಲೊಂದು ಮನೆ ಸಿಗುವ ಸಂದರ್ಭವೊದಗಿತು (ನಡಿಹಾ. II, ೧೨೩೯). 'ಪಗುದಿ' ಪರಾ. [?./ ಮರಾ. ಪಾಗುಡೀ]

ಪಗಡೆ$_1$ 'ಪೊಗಡ' ನೋ.

ಪಗಡೆ$_2$ (ನಾ). ೧. ದಾಳಗಳನ್ನು ಉರುಳಿಸಿ ಅದರ ಗರಗಳಿಗೆ ತಕ್ಕಂತೆ ಹಳದಿ, ಹಸುರು, ಕೆಂಪು ಮತ್ತು ಕಪ್ಪು ಬಣ್ಣದ ನಾಲ್ಕು ತೆರದ ಒಟ್ಟು ಹದಿನಾರು ಕಾಯಿಗಳನ್ನು ಹಾಸಿನ ಮನೆಗಳಲ್ಲಿ ನಡೆಸಿ ಆಡುವ ಒಂದು ಬಗೆಯ ಆಟ ; ಮನೋವಿನೋದಕ್ಕಾಗಿ ಅಥವಾ ಪಣವನ್ನು ಒಡ್ಡಿ ಜೂಜಿನಂತೆ ಆಡುವ ಪ್ರಸಿದ್ಧವಾಗಿರುವ ಅಕ್ಷದ ಆಟ : ಸದ್ಭಕ್ತ ದೈವವೆಂದು ಅರ್ಚಿಸುವ ಕಾವಿನಲ್ಲಿ ಮತ್ತತ್ವ ದುಶ್ಚಾರಿತ್ರ ಪಗಡೆ ಪರಿಹಾಸಕತನ ಚಾಟುಲತನ ಗೆಲ್ಲಸೋಲತನ ಇವೆಲ್ಲವ ಬಿಡಬೇಕು (ಮೋಕಮಾ. ೫೫-೨೨೫) ; ತತ್ಪುರನಿನಶಶಿವೀಧಿಗಳುನ್ನತಿಕೆಯೊಳೊಪ್ಪುವಡೆದ ಪಗಡೆಯ ನಾಲ್ಕರದಂತೊಪ್ಪಿದುವು (ಜಯಕಾ. ೧-೫೫) ; ಚದುರಂಗ ಪಗಡೆಯ ನಾಡುವನಮ್ಮ (ಪುರಂದ.'೧-೧೪೦-೬). ಬೇಸಱ ತವಿಪೊಡೆ ಪಗಡೆಗೆ ಬಂಧ ವಿಲಾಸದ ವಿಟನ ಕೈಪಿಡಿದು (ಕಂನವಿ. ೬-೧೧೭). ೨. ಪಗಡೆಯಾಟದಲ್ಲಿ ದಾಳದ ಮೇಲಿನ ಒಂದು ಎಂಬ ಸಂಖ್ಯೆಯ ಗುರುತು : "(ಪಗಡೆಯಾಟದಲ್ಲಿ ಉಪಯೋಗಿಸುವ) ದಾಳದ ಮೇಲಿನ ಒಂದನೆಯ ಸಂಖ್ಯೆಯ ಗುರುತು; ಪಗಡೆ" (Aco. ಇಂಕನಿ). ೩. ಪಗಡೆಯಾಟದಲ್ಲಿ ಉಪಯೋಗಿಸುವ ದಾಳ ; ನೆತ್ತ : "ಅಕ್ಷ:— ಲೆತ್ತ, ಲೆತ್ತ, ಪಗಡಿ ಮುಂತಾದುವು" (ಗಂಗಾಮ. ೨೧). ೪. ಪಗಡೆ ಆಟದಲ್ಲಿ ಉಪಯೋಗಿಸುವ ಕಾಯಿ ; ಪಗಡೆಕಾಯಿ : ಬೇಗ ಬೇಗ ಪಗಡೆ ನಡೆಸು (ರೂಢಿ). ೫. ಒಂದು ಬಗೆಯ ಸೀರೆ ; ಪಗಡೆಕಾಯಿಯಾಕಾರದ ಚಿತ್ರವಿರುವ ಅಂಚು ಅಥವಾ ಪಗಡೆಹಾಸಿನಂತಹ ಪೊಪ್ಪಳಿಯ ವೈಯುಳ್ಳ ಒಂದು ಬಗೆಯ ಸೀರೆ : ಉಚ್ಚಂಗಿ ಬಣ್ಣದ ಜಾವಳಿ ಹುಲ್ಲೆಳೆ ಮೆಚ್ಚನ ರೇವಣಗಾವಿ ರಚ್ಚೆಗ ವೈರಿ ಗೆರಟು ಪಗಡೆಯುಂ[ಪಾಂಪಾಂ. ಪಗಡಸಾಲೆಯು] ಪೂವು ಅಚ್ಚರಿಯೇನ ಬಣ್ಣಸುವೆ (ಅಮುಸಾಂ. ೪-೨೧).

ಪಗಡೆ ನೆತ್ತ, ಪಗಡೆ ಲೆತ್ತ = ಪಗಡೆಯ ಆಟ : ತಗರ ಕಾದಿಸುವ ಮಲ್ಲರ ಹೋರಿಸುತ್ತಿಹ ಪಗಡೆ ನೆತ್ತಗಳಾಡಿ ನಲಿವ . . . ರಾಜಪುತ್ರರು ಸೊಗಸಿದರಾ ಬೀದಿಯೊಳಗೆ (ಕಂನವಿ. ೨-೭೬) ; ಬತ್ತಿಲಿಹ ಸಲ್ಲನಂ ಮಱೆಪುತಾಡುವ ಪಗಡೆ ಲೆತ್ತ ಚದುರಂಗಂಗಳಂ ಬಿಸುಟ್ಟೋಡುತಿಹ ಚಿತ್ತ ಜಾಗಮದೋಲೆಗಳನೊದ್ದು ನೂಂಕಿ (ಚಿಬಪು. ೧೯-೨೮) ; ಪಗಡೆ ಲೆತ್ತ ಚತುರಂಗಯಿರಡೆ ದಂಪತಿಗಳಾಡಿದರು (ಸೌಂದಕಾ. ೪-೪೬). **ಪಗಡೆಯ ಆಟ** = ಪಗಡೆ$_2$೧ : ಪಗಡೆಯ ಆಟದಲ್ಲಿ ಒಂದು ಕಾಯಿ ಹೋದರೆ ಆಟ ಹೋಯಿತೇ? (ಬಂಕಿಮ. ೧೮೬). **ಪಗಡೆಯ ಕಾಯಿ** = ಪಗಡೆ ಆಟದಲ್ಲಿ ಬಳಸುವ ಕಾಯಿ: ಆಟದಲ್ಲಿ ಒಟ್ಟು ಹದಿನಾರು ಪಗಡೆಯ ಕಾಯಿಗಳಿರುತ್ತವೆ (ರೂಢಿ). **ಪಗಡೆಯ ಕೋಟೆ** = ಪಗಡೆ ಹಾಸಿನ ಮಧ್ಯದಲ್ಲಿರುವ ಹಣ್ಣಾದ ಕಾಯಿಗಳನ್ನು ಇಡುವ ಸ್ಥಳ,—ಚಚ್ಚೌಕವಾದ ಸ್ಥಳ: ಈ ಕಾಯಿ ಪಗಡೆಯ ಕೋಟೆ ಸೇರಿತು (ರೂಢಿ). **ಪಗಡೆಯ ಪಟ್ಟ** = ಪಗಡೆ ಹಾಸು; ಹಾಸಂಗಿ: (ಕ). **ಪಗಡೆಯ ಬೀದಿ** = ಕಾಯಿಗಳನ್ನು ನಡೆಸಲು ಪಗಡೆ ಹಾಸಿನಲ್ಲಿರುವ ಮನೆಗಳ ಸಾಲು. **ಪಗಡೆಯ ಮನೆ** = ಪಗಡೆಯ ಹಾಸಿನಲ್ಲಿರುವ ಚಚ್ಚೌಕವಾದ ಬಣ್ಣಬಣ್ಣದ ಭಾಗ : (ಕ). **ಪಗಡೆಯ ಲೆತ್ತ** = ಪಗಡೆಯ ದಾಳ :"ಅಕ್ಷಂ – ಇಂದ್ರಿಯವು, ಪಗಡೆಯ ಲೆತ್ತಕ್ಕೂ, ಲಂ ಗುಲಗಂಜೀ ತೂಕಕ್ಕೂ, ಬಂಡೀಕಣ್ಣಿಗೂ, ವ್ಯವಹಾರಕ್ಕೂ, ತಾರೇಮರಕ್ಕೂ ಹೆಸರಾದಾಗ ೬" (ಸಿದ್ಧಾಂತಿ. ೪೨೪). **ಪಗಡೆಯ ಸಾಲು** = ಪಗಡೆಯ ಬೀದಿ : (ಕ). **ಪಗಡೆಯ ಹಾಸು** = ಪಗಡೆಯ ಪಟ್ಟ : ನಮ್ಮ ಮನೆಯಲ್ಲಿ ಹೊಸದಾದ ಪಗಡೆಯ ಹಾಸಿದೆ (ರೂಢಿ). **ಪಗಡೆಯಾಟ** = ಪಗಡೆ$_2$ ೧ : ಬರ್ವ ಜಾಣಂ ಪಗಡೆಯಾಟ ನೆವಮಿಟ್ಟು ಲೋಲೆಯ್ದು ಜಱಿದನು (ಚಿಬಪು. ೧೦-೪೭) ; ಜನರು ಅಡಿಗಡಿಗೆ ಪಗಡೆಯಾಟ ಮತ್ತು ಇತರ ಜೂಜಾಟಗಳಲ್ಲಿ ಶ್ರದ್ಧೆಯಿಂದ ನಿರತರಾಗಿದ್ದರು (ದಥಾಇ. ೮೧). **ಪಗಡೆಯಾಡು** = ಪಗಡೆಯಾಟವನ್ನು ಆಡು : ಹಾಸಂಗಿಯಂ ಪಟ್ಟೆಯ ವಿದೂಷಕನುರುಳ್ಚಿದಂ ಬಾಲೆಯರ ಮಚ್ಚಸುವ ಕಟಕಿವಾತುಗಳ ಜಾಣ್ಕೆಗಳಿಂದೆ ಪಗಡೆಯಾಡುವ ನೆವದೊಳು (ಚೈಮಿಭಾ. ೬-೩೧) ; ರಾಯರು ಪಗಡೆಯಾಡುತ್ತಿದ್ದರು (ರಾಯಕ.೨೬); ಪಗಡೆಯಾಡಿ ಪಾಂಡವರು ಕೆಟ್ಟರು (ಗಾಗೆ).

[ದೇ.॥ ತಮಿ. ಪಕ್ಕೆ ; ಮಲ. ತೆಲು. ಪಗಡ, ಪಗಡೆ; ತುಳು. ಪಗಡೆ. / ಮರಾ. ಪಗಡಾ]

ಪಗಡೆಕಾಯಿ (ನಾ). ಪಗಡೆ ಆಟದಲ್ಲಿ ಉಪಯೋಗಿಸುವ, ಮರ ಮುಂತಾದುವುಗಳಿಂದ ಮಾಡಿದ ಬುಗುರಿಯಾಕಾರದ ಸಾಧನ; **ಅಕ್ಷ**: ಕುಲಪರ್ವತಗಳು ಪಗಡೆಕಾಯಿಗಳಂತೆ ಕಾಣಿಸುತ (ಸೌಗಂಧಿ. ೨೯೧–೧೮); ಶಕುನಿಯು ಅದೇ ಪ್ರಕಾರ ಅವರ ಮೂಳೆಯಲ್ಲಿ ಪಗಡೆಕಾಯನ್ನೂ ದಾಳವನ್ನೂ ಮಾಡಿ ಇರಿಸಿಕೊಂಡನು(ಕೀತಚಂ. VIII, ೯).

[ಪಗಡೆ$_2$+ಕಾಯಿ$_4$ (<ಕಾಯ್$_4$)]

ಪಗಡೆಚಾರಿ (ನಾ).ನಿ.=ಪಗಡೆಕಾಯಿ. ೨. ಪಗಡೆಯ ಹಾಸು.—ಹಲಗೆ: ಶಾರಿಫಲಕ ಗಜದಂತ ರಚಿತಮಾಗಿ ಕೃಷ್ಣರೇಖೆಗಳಿಂದ ಕೂಡಿ ಎಲ್ಲರಿಗೂ ವಿನೋದವನ್ನುಂಟುಮಾಡುವ ಪಗಡೆಚಾರಿಯಂ ಹಾಸಿ (ಕೃಪಾವಿ. ೩); ಅಲ್ಲಿ ಅನೇಕ ಜನ ದೊಡ್ಡಮನುಷ್ಯರು ಸೇರಿದ್ದರು. ಪಗಡೆಚಾರಿ ಹಾಸಿತ್ತು. ಒಂದು ಕಡೆ ಚಾರಿಗೆ ಒಬ್ಬ ನಾಯಕಸಾನಿ ಕೂತಿದ್ದಳು (ಅದೂಚ. ೧೫೩). [ಪಗಡೆ$_2$ + ಚಾರಿ$_1$]

ಪಗಡೆದಾಳ (ನಾ). ಪಗಡೆಯಾಟದ ನೈತ್ತ: ಪಗಡೆದಾಳವು ನನಗೆ ಅತಿಶಯವಾದ ಸಂತೋಷವನ್ನುಂಟು ಮಾಡುತ್ತದೆ (ಯಶ್ಸಾರ.೩೦೪).

[ಪಗಡೆ$_2$ + ದಾಳ]

ಪಗಡೆಮರ (ನಾ). ಒಂದು ಬಗೆಯ ಮರ: ಪಗಡೆಮರ, ರಂಜ, ಕೇಸರ (ಪ್ರಬಿಗಿ. ೫೪–೧೪೧). [ಪಗಡೆ$_1$(<ಪೊಗಡ)+ಮರ$_1$]

ಪಗಡೆವಾಸು, ಪಗಡೆಹಾಸು (ನಾ).ಪಗಡೆಯ ಹಾಸು;ಹಾಸಂಗಿ: ಮುಗುಳ್ನಿಲ್ಲನಾ ರತಿದೇವಿಯರಾಡುವ ನಗರಜನಪದ ಸಾರಿಯಿರ್ಪ ಪಗಡೆವಾಸಂದೆನೆ ರವಿಸೋಮವೀಧಿಗಳ್ ಸೊಗಸಿಪವಾ ನಗರಿಯೊಳು (ತ್ರೈಪಾಲ. ೧–೭೫). **ಪಗಡೆಹಾಸು**: ನಮ್ಮ ಮನೆಯ ಪಗಡೆಹಾಸು ಹಂದುಹೋಗಿದೆ (ರೂಢಿ). [ಪಗಡೆ$_2$+ಹಾಸು$_3$(<ಪಾಸು$_2$)]

ಪಗಡೆಹಾಸು 'ಪಗಡೆವಾಸು' ನೋ.

ಪಗದಸ್ತು, ಪೊಗದಸ್ತು (ನಾ). ೧. ಸಮೃದ್ಧವಾದುದು; ಸಮಿಾಚೀನವಾದುದು: ಇದೋ ತನಕ ಪಗದಸ್ತಾಗಿ ಊಟ ಹಾಕಿಬಿಡ್ರಿ (ಮಾಮಸ. ೧೪೧). ೨. ಅಚ್ಚುಕಟ್ಟು; ಓರಣ; ಅಣಿ: ಇದಕ್ಕೋಸ್ಕರವೇ ಮನುಷ್ಯನು ಕೋಣೆಯಲ್ಲಿ ಪಗದಸ್ತಾಗಿ ಕುಳಿತಿರುವಾಗ ಬೀಳ್ಕೊಡುಗೆಯ ವಿಚಾರಾಡು ಕಷ್ಟಕರ (ಶಿಬಂಧ. II, ೧೭೯). **ಪೊಗದಸ್ತು**: ೧. ಊಟ ತಿಂದಿಗಳ್ಳೂ ಆಪ್ಪೆ, ಸುಂದರರಾಯರ ಪೊಗದಸ್ತು ಪ್ರಸಿದ್ಧವಾಗಿತ್ತು (ಸಂಧ್ಯಾರಾ. ೪೪); ಪೊಗದಸ್ತಾಗಿತ್ತು ಕಾಣೊ ಔತಣ (ಹಸುಹೊ. ೬೧೫); ಅವನಿಂದ ಪೊಗದಸ್ತಾಗಿಯೇ ಗಿಟ್ಟಿಸಬಹುದಾಗಿತ್ತು (ಜೀಸಯಾ. ೮೨). ೨. ಆಗ ಮಾತಿನ "ಪೊಗದಸ್ತಿ"ನ . . . ಜೊತೆಗೆ ಮುಖದ ಕಾಂತಿ . . . ಪರವಶಗೊಳಿಸುತ್ತಿದ್ದುವು (ಸುಹಾಗ. V, ಮುನ್ನುಡಿ). ೩. ದಷ್ಟಪುಷ್ಟ; ದೃಢಕಾಯ: ಬಂಡೀಪುರದ ಮಗ್ಗುಲಲ್ಲಿ ಸೂಳೇರು ಪೊಗದಸ್ತಾಗಿರುತಾರೆ ಅಂತಾರೆ (ಪುಲ್ಲಿ. ೩೦). ೪. ಚೆನ್ನಾದುದು; ಆಕರ್ಷಕವಾದುದು: ರಾವಣನ ವಿಾಸೆಯನ್ನು ಪೊಗದಸ್ತಾಗಿ ಬಣ್ಣಿಸಿದ ಮುದ್ದಣಕವಿ ಅತನ ಪೂಗನ್ನೇಕೆ ಮರೆತನು? (ದೇಕಸ್ಮೃ. ೧೯). [←ಮರಾ. ಪಗದಸ್ತ]

ಪಗದಿ 'ಪಗುದಿ' ನೋ.

ಪಗರಣ, ಪಗರಣೆ, ಹಗಣ, ಹಗರಣ$_1$, ಹಗರಣೆ, ಹೆಗರಣೆ (ನಾ). ೧. ಹತ್ತು ಬಗೆಯ ದೃಶ್ಯಕಾವ್ಯಗಳಲ್ಲಿ ಒಂದು; ಶೃಂಗಾರರಸಪ್ರಧಾನವಾದ, ಕಲ್ಪಿತವಾದ ಕಥೆಯಿಂದ ಕೂಡಿದ, ಧೀರಶಾಂತನಾಯಕನನ್ನುಳ್ಳ ಒಂದು ಬಗೆಯ ದೃಶ್ಯ ಪ್ರಬಂಧ; ಪ್ರಕರಣ: ದಿಗೆ ದುಷ್ಕರಕಾವ್ಯಂಗಳೊಳಗರ್ಹಿತಪ್ರಾಯಮುಕ್ಕುಮಾ ಶ್ರುತಿಕಷ್ಟಂ ಪಗರಣದೊಳುಬಿದ ಮುಖಂ ನಗಿಸುಗುಮಮೃತದಜಿನ್ನಲ್ಲಿಗಂತವದೋಷಂ (ಕವಿರಾ.೧–೬೮). ೨. ಹೆಚ್ಚು ಹೆಚ್ಚಾಗಿ ಹಾಸ್ಯ ಪ್ರಕರಣಗಳಿಂದ ಕೂಡಿರುವ ದೃಶ್ಯ; ಯಕ್ಷಗಾನ, ಬಯಲಾಟ ಮುಂತಾದುವು: ಪಗರಣಮಂ ನೋಡುವರಂತೆ ನಗುತ್ತುಮಿಂತೆಂದರ್ (ಧರ್ಮಾಸ್ಯು. ೪–೭೬); ಸಂಸ್ಕೃತದ 'ಪ್ರಕರಣ'ವು ಹಾಸ್ಯರಸಪ್ರಧಾನವಾದ 'ಪಗರಣ'ವಾಗಿ ಪರಿಣಮಿಸಿ ಕನ್ನಡನಾಡಿನಲ್ಲಿ ಬಳಕೆಗೆ ಬಂದಿದ್ದಿತೆ ಎಂಬುದು ವಿಚಾರಣೀಯ (ಕವಿಾ. ೧–೬೪ ಟಿಪ್ಪ). ೩. ನಾಟಕವೇ ಮೊದಲಾದ ದೃಶ್ಯ: ಪಗೆಯೊಮ್ಮೆ ಕಳೆಯುಸಾಗುವ ನೊಮ್ಮೆ ಕಳೆಯನೆ ಪಗೆಯನಾಗುವನದಱಿಂದ ಪಗರಣದಂತಿರ್ಪ ಭವದೊಳಾರ್ ಬಗೆದಱಿಸುವೆವೆಂದರವರು (ಭರಜ. ೬೫–೫೬). 'ನಾಟ್ಯ ಗರಣ' ಪರಾ. ೪. ಗಲಾಟೆ; ಅವಾಂತರ; ಗೊಂದಲ; ಗಲಿಬಿಲಿ; ರಾದ್ಧಾಂತ: ಕವಿ ಲೋಕದಿಂದಪೇಕ್ಷಿಪ ಕೊಳ್ಳ ಭೋಗಿಪಲ್ಪವುಮೆ ಲಾಭಂ ಜನಂ ಪೂಜೆಯಿಂ ಪಗರಣದ ಪವಣ ಪೆರ್ಚ್ಚಿಸಗರ್ಗಳಿಂ ಮೆರೆದಪುದು (ಸಂಸಪ. ೧೧–೬). ೫. ವೇಷ; ತೋರಿಕೆ; ನಟನೆ; ಪ್ರದರ್ಶನ: ಪಗರಣಮುಣ್ಮಮೆಚ್ಚುಪನಪ್ಪುಪ್ಪಿಯೆ ಬೂದಿಯಿ(೦) ಬೊಟ್ಟು ಗಣ್ದಾವಾತುಗಿಬಗಿ ಕೀರ್ತ್ತಿ ಕುಪ್ಪಳುಜಾ ಮುತ್ತರೆ ಮೂಡಲೆ ಪೆಂಪು ವಿಕ್ರಮಂ ಭಗವತಿಯೇಜಾ (ಸೌಇಇ. XI–i, ೫೨–೬೬ ; 1007).

ಪಗರಣೆ: ೬. ೀವಿ; ಬೆಡಗು; ವಿಲಾಸ: ನೊರೆವಿಂಡಿನಂದದಿ ದಿವ್ಯಾಂಬರವನು ದೊರೆ ಪಗರಣೆಯೊಳು ಪೊದೆದು (ಜ್ಞಾನಚ. ೬೯–೯೧).

ಹಗಣ: ೭. ಬಿನ್ನಾಣ; ಒಯ್ಯಾರ: ರಾ. ಕು. ಅವರ ವಾಣಿವಿಲಾಸ ಇಂದಿನ ಕನ್ನಡಕ್ಕೆ ಹೊಸಬೆಡಗು, ಬಿನ್ನಾಣ, ಬಿಬ್ಬೋಕ, ಮುರುಕ, ಹಗಣ, ಹಗುರಗತ್ತಿನಿಂದ ತಿಳಿಸಿಕೊಟ್ಟಿದೆ (ಗಾಳಿಪ. X, ಮುನ್ನುಡಿ). 'ಹೆಗಣಗಿತ್ತಿ' ಪರಾ. **ಹಗರಣ$_1$**: ೨. ನಮ್ಮರಸಂ ಪಾಱುವ ಬಹುರೂಪವಿಕೃತಮಂ ಪಲತೆಱದಿಂ ತೋಱುವ ಹಗರಣಮಿವ ರೊಳ್ ಮಾಱುಾಂತೊಡನೊಡನಾಡೆ ನಗೆಗೆಡೆಯಕ್ಕುಂ (ಸಧರ್ಮ. ೬–೫೭); ಮೊಱೆಯಿಡುವ ಹಗರಣದ ಮರುಳ ಮಂಥಣದಂತೆ ಕುಂಚದ ಕನಿಷ್ಠರುಂ ತಱಿಟನ ವಿಡಂಗರುಂ . . . ಸುತ್ತು ಮುತ್ತಿರಲು . . . ನಡುವೆ ಮೆಱೆದಂ ಧರ್ಮಸೇನಪಂಡಿತನಲ್ಲಿ (ವಾಗಿಕ. ದೇ. ೨೫೪–೨೦); ಮಗನು ಮಾಡಿದ ಮೃಗದ ಮೋಱೆಯಲೊಗೆದುದೀ ರವಿಕೋಟಿತೇಜದಿ ಜಗಕೆ ಸೋಜಿಗವಾಯ್ತು ಬೇಱುನ್ನೇಕೆ ಹಗರಣವು (ಸಂಧಪ. ೮–೧೦೧); ತೋಱುಸುವೆನೆರಳಿಗೆಯಲಿ ನಗೆಗಾಱರಿಗೆ ಹಗರಣವ [ಪಾಂಡಾ.ನಾಟಕವ] ನನ್ನೆಯ ಸಾಱುಕೆಯಿಂದೀಗೆಂದು ಸಂತೈಸಿದನು ಸುಗ್ರೀವ (ತೊರರಾ. ೬–೨೭–೫೮) ; ಸಾಲೆಯಲ್ಲಿ ಅದೇನೋ ನಡೆದಿದೆಯಂತಲ್ಲ—ಹಗರಣವೋ ಠೊಂಬರಾಟವೋ (ಮೂಱುದಾ. ೩೦). ೪. ತ್ರಿಜಗವೆಲ್ಲಾ ನಿಬ್ಬಣ ಹೋಯಿತ್ತು ಗುಹೇಶ್ವರನನಜಾಯವಿದ ಹಗರಣವೊ (ಅವಚಂ.೧೦೨–೪೧೬); ದುಗುಡ ಬೇಡೊಮ್ಮಿಂಗೆ ನಿಮ್ಮಯ ಮಗನುಳಿದ ನಿಮ್ಮಧಿಕರೋಷದ ಹಗರಣದ ಹಗೆ ಹೋಯಿತೆಂದನು ನಗುತ ಮುರವೈರಿ (ಕುಪಾ೧.೧೧–೪೦); ಒಗುವ ಕವಿ ಮೂಗುಗಳ ರಕುತದ ಹಗರಣದ ಹೊಸನಾಟಕದ ಹಲುದೆಗೆದ ರಕ್ಕಸಿ ಬಂದಳೊದಜುತ ಖರನ ಪಟ್ಟಣಕೆ (ತೊರರಾ. ೬–೪–೬೦); ಪುರದಾ ಜೈನರುಗಳೆಲ್ಲ ಬಂದವಳ ಪತಿಪುರುಷನಾತಂಗೆ ಹಗರಣವಿದೇನು ನಿನ್ನಂಗನೆಯಂತೆಂದಮ್ಮ ಜೈನಕುಲಕಳಂಕವೆಂದೆನೆ (ಪ್ರೌಢರಾ. ೧೨–೧೬); ಸದ್ಯ ಸೊಸ್ಯೆಟಿಯಲ್ಲಿ ಯಾವ ಹಗರಣವೂ ಆಗದೆ ಇದ್ದರೆ ಸಾಕು (ಪುರಳ. ೧೫೨). ೫. ಹಗರಣದಮ್ಮಾವಿನ ಹಯನು ಸಯವಪ್ಪುದೇ (ಅವಚಂ. ೯–೬೫); ಕಟ್ಟಸಗಿದ ಗಾಣ ಬಲ್ಲುದೆ ಹಾಲ ಸವಿಯ . . . ಹಗರಣಕ್ಕೆ ಪೂಜಿಸುವರು ಬಲ್ಲರೆ ನಮ್ಮ ಶರಣರ ಸುಳುಹ (ಚನ್ನವ. ೪. ೧೭೧–೩೭೩). ೬. ಹಗರಣದ ನಿಜಗುರುಳ ಬಾಲೆಯರ ಮುಂದೆ ತಿರುಗುತ್ತಿಪ್ಪ ಬಜಾಯಿ ಭುಂಜಕರುಗಳು ಬೀಗಿ ಬೆಜ್ಜೆಯುತ್ತಿಪ್ಪರು (ಪೋಳಪಾ. ೧೪೮–೭೦೯). ೮. ಆಚ್ಚರಿ; ಸೋಜಿಗ: ಜಗವನೊಳಕೊಂಡ ಲಿಂಗವು

ಸೊಗಸಿಂದೆ ಎನ್ನ ಕರಸ್ಥಲಕ್ಕೆ ಬಂದಿರಲು ಕಂಡು ಹಗರಣವಾಯಿತ್ತೆನಗೆ (ಅಖಂಡೇ. ೨೯-೮). ೯. (ದೇವರ) ಆಟ; ಲೀಲೆ: ಜಗದುದರನಹ ವಿಷ್ಣು ಭೂಪರ ಬಗೆಯನಂಗೀಕರಿಸಿ ನೆಲಸಿದ ಹಗರಣವ ಸುರರೆಲ್ಲ ಕೇಳುವುದು (ಕೋಗಳಿ. ೩-೬). ೧೦. ಕೀಟಲೆ; ಕುಚೇಷ್ಟೆ; ಕೆಡಿಗೇಡಿತನ: ಜಗದಧಿನಾಥನ ಬಸುಜಲ್ಲಿ ಬಂದು ನಾಡುಗರ ಮಧ್ಯದೊಳಿಂತು ನಿಂದು ಹಗರಣಕೆಳಸಿದನೆಯೆಂದು ಮೆಲ್ಲಮೆಲ್ಲಗೆ ನೊಂದು ನುಡಿವುತೆಯ್ದಿದನು (ಭರತ. ೫೧-೫೮). ೧೧. ಕದನ; ಯುದ್ಧ: ಶತ್ರುಘ್ನಂ . . . ಲವನಿರದೆ ವಿರಚಿಸಿದ ಹಗರಣವನವರ ಮುಖದಿಂ ತಿಳಿದು ಸುಮತಿಯೊಡನಿಂತೆಂದನು (ಶೇಷರಾ. ೨೮-೧೫); ಅಣ್ಣನ ಕರೆಯಲಗಣಿತಪರಾಕ್ರಮದಿ ಹಗರಣಕೊದಗಿ ತಮ್ಮಗೆ ನುಡಿದ ವಾಲೀ (ವಾಲಿಕಾ. ೪೦). ೧೨. (ಭೀಕರವಾದ) ದೃಶ್ಯ; ನೋಟ: ಆ ಹಗರಣವನ್ನು ನೋಡಿ ಆ ಹೆಂಗಸಿನ ಪರಾಕ್ರಮವನ್ನೂ ಸಾಹಸವನ್ನೂ ಕೊಂಡಾಡಿದರು (ಚತ್ರಪಾ. ೯೩). ೧೩. ತೊಂದರೆ; ಅಪಾಯ; ದುಷ್ಪರಿಣಾಮ: ನೀ ಸುಗುಣಿಯೆನ್ನಿಸಿಕೊಳಲು ವ್ಯಯಮಾಡಿದೆ ಹಗರಣವ ಪಡಿಸಿದರೆ ಸಾಲಗಾಱನು ಬಂದು ಬಗೆಬಗೆಯೊಳವರ ಕಾಲ್ಗೆಱಗಿ ಬಿದ್ದಿರುವೆ (ಪುರಂದ. ೧-೪೪-೪); ಸಿದ್ಧತೆಯಿಲ್ಲದೆ ಕೆಲಸಕೆ ಮುಂದಾಗೆ ಬರಿಯೊಂದು ಹಗರಣವಲ್ತೆ (ಇಂಚಾಪ. ೮೯-೩೪); ಆ ಅವಧಿಯಲ್ಲಿ ಮನಸ್ಸಿನ ಮೇಲೆ ಕೆಟ್ಟ ಪರಿಣಾಮವುಂಟಾಗುವುದು ಹಗರಣಕ್ಕೆ ದಾರಿ (ಕ್ರಿಯಾಶಿ. ೩೧). ೧೪. ವಿರೋಧ; ದ್ವೇಷ: ಮಗನೆ ನಿನ್ನನು ಪಡೆದುದಕೆಯೆನಗೊಗುಮಿಗೆಯ ಶೋಕವನು ಮಾಡಿದೆ ಹಗರಣವು ಭೀಮಾದಿಗಳಿಗೆನ್ನಲ್ಲಿ ಬಲಿದುದಲಾ (ತಿಮ್ಮಸ್ತ್ರೀ. ೧-೮). **ಹಗರಣೆ:** ೫. 'ಹಗರಣೆಯಾಟ' ಪರಾ. **ಹಗರಣೆ:** ೯. ಹಗರಣೆಗೆ ನೀ ಯೆಂಜಲ್ಬಣ್ಣನ್ನು ಮೆದ್ದು ಮೂಜಗದೊಡೆಯನೆನಿಸಿ ಮೆಱೆದೆ ತಿಱಿದೆ (ಪುರಂದ. ೩-೭೩-೨).

ಹಗರಣದರಸ=ನಾಟಕದ ರಾಜ; ರೂಪಕಗಳಲ್ಲಿ ನಟನಿಂದ ಅಭಿನೇಯನಾದ ರಾಜ; ನಿಜವಾದ ರಾಜತ್ವವಿಲ್ಲದ ರಾಜ ವೇಷಧಾರಿ: ಬಗೆಗೊಂಡ ಕುಲಧನಂ ಸಮುದಗಜಂ ಜಾತ್ಯಶ್ವಮೆಂಬಿವಂ ಮತ್ತೊರ್ವಂ ಪಗೆವಂಗೆ ಕೊಟ್ಟು ಚಿಃ ಕೆಮ್ಮುಗೆ ಬೆಸೆವವನರಸದೆಂತೊ ಪಗರಣದರಸಂ (ಆದಿಪು. ೧೨-೯೮); ಅರಸನೆಂಬ ಪೆಸರ್ ಪಗರಣದರಸಂಗಂ ಧಾರಿಣೀಶ್ವರಂಗಂ ಕರಮಾದರದಿಂದಮಕ್ಕುಂ (ಧರ್ಮಾಮೃ. ೧-೧೮೮). **ಪಗರಣದಾಟ, ಹಗರಣದಾಟ**=ವೇಷ ಹಾಕಿಕೊಂಡು ಮಾಡುವ ಅಭಿನಯ,—ನಟನೆ; ಸೋಗು: ಆಗಳಾ ನಗಿಸಿದ ಪಗರಣಿಗಂಗೆ ಸಿರಿದು ಕಸವರಮನಿತ್ತೊನಂದಿಂದಿತ್ತ ಬಾದುಬ್ಬೆಯ ಪರ್ವಮುಂ ಪಗರಣ ದಾಟಪಾಟಮುಮಾದುವು (ಪಡ್ಡಾರಾ. ೧೧೮-೨೨); ಹಗರಣದಾಟವನೆಲ್ಲಿ ಕಲಿತೆಯ್ಯ (ಪುರಂದ. ೧-೯೬-೬). **ಪಗರಣದಾನೆ**=ಕೃತ್ರಿಮವಾದ ಆನೆ; ಆನೆಯಂತೆ ಮಾಡಿರುವ ಆಕಾರ: ತಿಪ್ಪೆಯ ನೀರಂತೆ ಬಡವನ ಮಹಿಮೆಯಂತೆ ಪಗರಣದಾನೆಯಂತೆ . . . ಸನ್ಮಾರ್ಗವಂ ಬಿಟ್ಟು (ಧರ್ಮಾಮೃ. ೮-೯೪). **ಹಗರಣದ ಬೋಹ**=ನಾಟಕದ ವೇಷ,—ಸೋಗು: ಎಂಬತ್ತೆಂಟು ಪವಾಡವ ಮೆಱೆದು ಹಗರಣದ ಬೋಹದಂತಾಯಿತ್ತೆನ್ನ ಭಕ್ತಿ (ಬಸವ. ೮೯೧). **ಹಗರಣದ ಮನೆ**=ನಾಟಕದ ಮನೆ; ನಾಟಕಶಾಲೆ; ನಾಟ್ಯಗೃಹ: ಹಗರಣದ ಮನೆಯ ಕೊಡಗಿಗೆ ಅಳುಪಿದವರು ಕತ್ತೆಯ × × ಯ ತಿಂಬೋರು ಕಳವೆ (ವಿಕ. VII, ೩೭ಮೊ. ೮-೧; ?). **ಹಗರಣದ ರಾಜ**=ನಾಟಕದ ರಾಜ: ಹುಯ್ಯಲಂ ಕಂಡು ಬಿಱುತೋಡಿ ಪುಟ್ಟ ಬೆಟ್ಟಂಗಳಂ ಸಾರ್ದು ಬಾಯ್ದೆಱೆವಂ ರಾಜನೇ ಹಗರಣದ ರಾಜಂ (ಚಿಬಪು. ೮-೧೨). **ಹಗರಣದ ಲಂಕಾರ**=ನಾಟಕದ ಅಲಂಕಾರ,—ಶೃಂಗಾರ: ತಿವಲಿಂಗವಲ್ಲದೀ ಹಗರಣದಲಂಕಾರಮಂ ಬಯಸಿ ತೊಡದಿಹುದು (ವೀಶೈಪು. ೬-೧೩-೧೮). **ಹಗರಣದ ಸಂಸಾರಸುಖ** = ನಾಟಕದ ಕುಟುಂಬಸೌಖ್ಯ; ಕ್ಷಣಿಕವಾದ ಸಂಸಾರಸುಖ: ಹಗರಣದ ಸಂಸಾರಸುಖವು ಬೀದಿಯೊಳಿಟ್ಟ ಸೊಡರಂತದೇಂ ಪೇಳ್ವೆನು (ವಂಶಾರಾ. ೨-೩೫-೧೬). **ಹಗರಣದ ಹಣ್ಣು**= ತೋರಿಕೆಯ ಹಣ್ಣು; ಕೃತ್ರಿಮವಾದ ಹಣ್ಣು: ಹಗರಣದ ಹಣ್ಣ ಮೆದ್ದು ಹಸಿವು ಹೋಯಿತ್ತೆಂದಡೆ ಆರು ಮೆಚ್ಚುವರು ಹೇಳಾ (ಅವಚಂ. ೧೮೫-೮೩೩). **ಹಗರಣ ಮಾಡು**= ೧. ಸೋಗುಹಾಕು; ನಟನೆಮಾಡು: ನಗೆಯು ಬರುತಿದೆ ಎನಗೆ . . . ಜಗದೊಳಿರುವ ಮನುಜರೆಲ್ಲ ಹಗರಣ ಮಾಡುವುದ ಕಂಡು (ಪುರಂದ. ೧-೨೨ ಅನುಪಲ್ಲವಿ). ೨. ರಾದ್ಧಾಂತ ಮಾಡು; ಗೊಂದಲ ಎಬ್ಬಿಸು: ಇಷ್ಟೆಲ್ಲ ಹಗರಣ ಮಾಡಿ ಕೊನೆಗೂ ನಾನು ಸಾಧಿಸಿದ್ದು ಇಷ್ಟೇನೆ? (ಹೊಸಕ್ಷ. ೪೪); ಇಲ್ಲದ ಹಗರಣ ಮಾಡದೇ ಸುಮ್ಮನಿರು (ಭೀಮಕಾ. ೧೧೫). **ಹಗರಣವಾಗು**= ರಾದ್ಧಾಂತವಾಗು; ಗೊಂದಲವಾಗು: ಸೊಗಸನಂತಿಂತೆಂದು ನುಡಿದೆನಾದರೆ ಬಲು ಹಗರಣವಹುದು (ಭರತ. ೧೦-೧೦೦).

[<ಸಂ.ಪ್ರಕರಣ]

ಹಗರಣಿಗ, ಹಗಣಿಗ, ಹಗರಣಿಗ (ನಾ). ೧. ವಿವಿಧ ವೇಷಗಳನ್ನು ಧರಿಸಿ ಅಭಿನಯದಿಂದ ಜನರನ್ನು ನಗಿಸುವವನು; ವೇಷಧಾರಿ: ಲೋಗರ್ ಪಗರಣಿಗರಾಗಿ ಎನಿತಾನುಂ ತೆಱದ ರೂಪುಗಳಂ ಕೈಕೊಂಡು ಮರಮೊಗಂಗಳನಿಟ್ಟು ಬಂದು ಮುಂದೆ ಆಡಿಯುಂ ಪಾಡಿಯುಂ ನಗಿಸಿಯುಂ (ಪಡ್ಡಾರಾ. ೧೧೮-೧೪); ತಪೋಧನರಾಹಾರದಾನಕ್ಕಮ್ಮಾಟ ಕೂಟಕ್ಕಂ ತಱಂಬೆಯ ಪೊಲದ ಹಗರಣಿಗನ ಬಾಗಿಂ ಪಡುವಣದೆಸೆಯಲಿ . . . ಕೊಟ್ಟ ಗುಣಿಗನ ಮತ್ತರ್ ೧೫ (ಸೌಇ. IX-i, ೧೬೫-೪೨; 1099); ಪೊಲೆಯರ್ಬಡಿವ ಪಱೆಯೋಜೆಗಾಡುವ ಪಗರಣಿಗರಂ ಕಂಡ ವರ್ನಗುವರಲ್ಲದೆಯವರಾಟಕ್ಕೆ ಲಕ್ಷಣಮಂ ನೋಡರ್ (ಧರ್ಮಾಮೃ. ೫-೧೦೩); ನಗೆಗೆಡೆಯಾಗಿರೆ ಸಿಂಗದ ಮೊಗಮಂ ಧರಿಯಿಸಿ ನಿಶಾಟನಂ ನೀಂ ಕೊಂದೈ ಪಗರಣಿಗರಲ್ಲದುಟುದರ್ ಮೊಗಮಂ ಪೆಱತೊಂದ ನೆಂತುಮೇಂ ಧರಿಯಿಪರೇ (ಜಗವಿ. ೧೬-೩೭); ಪಡೆವಳ್ಳರ ಪಗರಣಿಗರ ರಸಿಕರ . . . ನಿಡುಗೇರಿಗಳೊಪ್ಪಿದವು (ಕುರಾಸಾಂ.೪-೧೧೧). **ಹಗಣಿಗ:** ೨. ವೇಷಾಂತರದಿಂದ ಮೋಸಗೊಳಿಸುವವನು; ಪ್ರಚ್ಛನ್ನ ವೇಷಧಾರಿ: ಹಗಣಿಗರಾಗಿ ಬರಲು ಜಂಗಮಮುಖದಲ್ಲಿ ಲಿಂಗವ ಮಾಡಿದವರಾರು ಹೇಳಾ (ಸಿದ್ಧಪು. ೨೬-೫೮). **ಹಗರಣಿಗ:** ೧. ಹ[ಪಾಠಾಂ.ಪ]ಗರಣಿಗರಂತೆ ಬಹುರೂಪುಗಳಿಂದಾಡುವರನಾಪ್ತರೆಂದಾ ಪೊತ್ತುಂ ಬಗೆಯದೆ (ಸಮಪ.೮-೨೩೮); ಹಸಿದು ಬಂದ ಗಂಡನಿಗೆ ಉಣಲಿಕ್ಕದೆ ಬಡವಾದನೆಂದು ಮಱುಗುವ ಸತಿಯ ಸ್ನೇಹದಂತೆ ಬಂದುದನಱಿಯಳು ಇದ್ದುದ ಸವಿಸಳು ದುಃಖವಿಲ್ಲದ ಅಕ್ಕೆ ಹಗರಣಿಗನ ತೆಱನಂತೆ (ಬಸವ. ೨೧೮); ಬತ್ತಲೆಯ ಭಂಡರೊ ಮರುಳುಗಳೊ ತಟ್ಟುಗಳ ಹಗರಣಿಗರೊ ಎನಲು ಮಲಧಾರಿಗಳು ಗಜಬಜಿಸಿ ನೆರೆವುತ್ತ (ಬಸಪು. ೫೧-೫೩); ಅಲ್ಲಿಯ ಹಗರಣಿಗ ನಾನಾದೆನದು ನೋಟಕದ ಜನವಾಯ್ತು (ಕುಮ್ಮಾಸ. ೧೨-೪೨); ನಗೆಯ ಸೂಸುವಡಾವು ಲೋಕದ ಹಗರಣಿಗರೇ (ತೊರರಾ. ೧-೯-೩೦). ೨. ಪರವಾದಿ ಬಿಜ್ಜಳನು ಬರೆದುನೋಢಲೆಂದಟ್ಟಿದಡೆ ಹಗರಣಿಗರ ಜಂಗಮ ಮುಖದಲ್ಲಿ ಲಿಂಗವ ಮಾಡಿದವರಾರು ಹೇಳಾ ನೀವಲ್ಲದೆ(ಚನ್ನಬ.ಕ. ೨೪೬-೫೩೪); ಹಗರಣಿಗರು ಕಂಗೊಳಿಪ ಸರ್ವಾಂಗಭಸಿತ ವಾರ್ತಾಕಫಲ ಲಿಂಗಕುರವಣೆಯ ಜೆಡೆಗಳ ಧರಿಸಿ ಬರಲು (ಲಿಚಿಂ. ೩೨-೧); ಮತ್ತೊಮ್ಮೆ ಹಿಗ್ಗುತ್ತೆ ಹಗರಣಿಗರುಂ ತಪಸಿಗಳ ಮಾಡಿ ಬಸವ ಕರೆದೊಯ್ವುದೆನಲು (ಪ್ರಭುಪು. ೬-೪೫); ಹಗರಣಿಗರುಂ . . . ಜಂಗಮಾಕಾರಮುಮನು ಬಗೆಗೊಂಡು ತೋಱುತಿರಲು (ರಾಭಹ.೮-೩೬).

೩. ನಾಟಕ ಮೊದಲಾದುವುಗಳಲ್ಲಿ ಪಾತ್ರಗಳನ್ನು ಧರಿಸುವವನು; ಪಾತ್ರಧಾರಿ; ನಟ. ೪. ನಾಟಕವನ್ನು ಆಡಿಸುವವನು; ಸೂತ್ರಧಾರ: ಅಗಧರನೆ ಶ್ರೀಕಾಂತ ಲೋಕದ ಹಗರಣಿಗ ನೀನೆನ್ಮ ಕಾವುದು (ಸಂಧಪ. ೪-೧೮). ೫. ಹಾಸ್ಯಾಸ್ಪದನಾದವನು; ನಗೆಗೀಡಾದವನು: ಅಳಿದುದೇಳಕ್ಷೋಹಿಣಿ ಗಂಧರ್ವಪಡೆ ಲೋಕದೊಳು ಹಗರಣಿಗನಾದೆನು (ರುಕ್ಮಾಂಗ. ೧೩-೪೮). [ಪಗರಣ+-ಇಗ]

ಪಗರಣೆ 'ಪಗರಣ' ನೋ.

ಪಗರಿ (ನಾ). ಕವಣೆಬಿಲ್ಲು; "ಕಲ್ಲೆಸೆವ ಬಿಲ್ಲು, ಒಂದು ಬಗೆ ಕವಣೆ" (ಸಿರಿಕೋ. ೩೧೦): ನಮ್ಮ ದೇಶದ ಕೆಲವು ಹೊಲೆಯರಲ್ಲಿ ಕಂಕಣ, ಕಂಚಿನ ಪಾತ್ರೆ, ಮೇಲಾಗಿ ಕವಣೆಬಿಲ್ಲು (ಪಗರಿ) ಈ ಮೂರನ್ನು ತಂದು ಹುಡುಗಿಯ ಹಿರಿಯರಿಗೆ ಒಪ್ಪಿಸಬೇಕು (ಬಾಲಪ್ರ.III, ೧೩೧೩); ನಿಮ್ಮ ಪಗರಿ, ಬಿಲ್ಲುಗಳನ್ನು ಒಲೆಗೆ ಹಾಕಿ! ಇದರ ಮುಂದೇನು (ಕುಡಿಕೂ, ೩೫). [ದೇ.॥ ತಮಿ. ಮಲ. ಪಕಟಿ = ಬಾಣ; ತುಳು. ಪಗರಿ = ಬಾಣ, ಈಟಿ, ಭರ್ಜಿ]

ಪಗಲ್, ಪಗಲು, ಹಗಲ್, ಹಗಲು (ನಾ). ೧. ಸೂರ್ಯನು ಹುಟ್ಟಿದ ಕಾಲದಿಂದ ಹಿಡಿದು ಮುಳುಗುವವರೆಗಿನ ಕಾಲ: "ದಿವಸಂ ದಿನಂ ದಿವಾಹಂ ದ್ಯುವಾಸರಂ ಘಸ್ರಮೆನೆ ಪಗಲ್" (ಪಸ್ತುಕೋ.೧೫೪-೪); ನೆನೆದಿರುಳುಂ ಪಗಲುಂ ನಿನ್ನನೆ ಪೀನಮೊಜಲ್ದು ಮಜುಗಿ ಕಾತರಿಸುತ್ತುಂ ಮನದೊಳ್ ಸೈರಿಸಲಾಱೆಂ (ಕವಿಗಾ. ೨-೮೩); ವನಮಂ ಕೋಗಿಲೆ ಜಕ್ಕವಕ್ಕಿ ಪಗಲಂ . . . ನೆನೆವಂತಾಂ ನೆನೆವೆಂ ಸರೋಜಮುಖಿಯಂ ಶ್ಯಾಮಾಂಗಿಯಂ ನಲ್ಲಳಂ (ಆದಿಪು. ೧೨-೩೧); ಉತ್ಸಾಹಿಗಳಪ್ಪ ರಾಜಪುತ್ರರಂ ನಿಯಾಮಿಸುತ್ತಮಿರ್ದು ಪಗಲುಂ ಕಳೆಯೆ ರಜನೀಪ್ರವೇಶದೊಳ್ (ಕಾದಂಉ. ೫೦೧); ಪಗಲ್ ಬಯ್ಗಿರುಳೆನ್ನದೆ ಸಲೆ ಬೆಸಕೆಯ್ಗುಂ ಮುನಿಗಳ್ಗೆ ನಗದ ಮರ್ಕಟನಿಕರಂ (ಗಿರಿಕ. ೧-೬೫); ಪಗಲುಮಿರುಳುಂ ಸುರಿವ ಬಲ್ಮೋನೆಯ ಜಿನುಂಗಿನತ್ತಣೆನ್ನ ಬಗೆಯುಂ ಬೇಸತ್ತುದು (ರಾಮಾಶ್ವ. ೪-೧೫). 'ನಡುವಗಲ್' ಪರಾ. ೨. ಒಂದು ಹಗಲು, ಒಂದು ರಾತ್ರಿ ಕಳೆಯುವಷ್ಟು ಕಾಲ; ಒಂದು ಸೂರ್ಯೋದಯದಿಂದ ಮತ್ತೊಂದು ಸೂರ್ಯೋದಯದವರೆಗೆ ಇರುವ ಇಪ್ಪತ್ತು ನಾಲ್ಕು ಗಂಟೆಗಳ ಕಾಲ; ಒಂದು ದಿವಸ: "ಪಗಲೆನೆ ದಿವಸಮೆಂದಕ್ಕುಂ" (ಕಕರ. ೬೧); ಮುನ್ನಮಿಾ ಪೊಡವಿಯೊಳ್ ಶ್ರೀಶಂಕುವೆಂಬೊರ್ವಂ ನೇಸರ್ಬಟಾಯ ರಾಯಂ ಪಲವುಂ ಪಗಲರಸುಗೆಯ್ಯುತ್ತಮಿರ್ದಂ (ಅದ್ಭುತ. ೩-೨೫); ಒಂದು ಪಗಲೆತ್ತುವುದು, ಒಂದು ಪಗಲು ರುಳಿಪುದು ಮಾನುಷಮನೆಲ್ಲಮನ್ (ಅಶ್ವತ್ಥಾ. ೬-೧೧೫). **ಪಗಲು**: ೧. ಪಗಲಿರುಳೆನ್ನದೆ ಪತಿಯಾಣತಿಯೊಳು ಮೊಗದಿರುಹದೆ ಮೊನೆಗೊಳದೆ . . . ಭಕ್ತಿಯೊಳೆಸಗುವುದು (ಹದಿಬ. ೩-೮); ಮುಳಿದಂ ಪದ್ಮಬಂಧುವೆನೆ ಪಗಲಿನೊಳ್ ತೋರದು ಬಿಸಿಲ್ (ಮಹಾವಿ. ೮-೧೫). ೨. ಹರಭಕ್ತಿಯಂ ಪ್ರತಿಷ್ಠಿಸಿ ದಿವ್ಯಹರ್ಮ್ಯದಿಂದಿರುತೊಂದು ಪಗಲಲ್ಲಿ ತಮ್ಮಯ್ಯನಾದ ಮಲ್ಲರಸರ ವಿರತಿಗೇಳ್ದು (ಪದ್ಮರಾ.೨-೧೨). **ಹಗಲ್**: ೧. 'ಹಗಲ್ದಿವಟಿಗೆ' ಪರಾ. **ಹಗಲು**: ೧. ಸೂರ್ಯ ಚಂದ್ರಮರುಗಳು . . . ಹಗಲಿರುಳು ಉದಯ ಬೈಗುಗಳು ಧರ್ಮವು ಎಂದಿವು ಮನುಷ್ಯರ ನಡೆವಳಿಯನಱಿವುವು (ಪಂಚತಂ. ೧೬೨-೯); ಹಗಲು ನಾಲ್ಕು ಜಾವ ನಿಮ್ಮ ಕಳವಳದಲ್ಲಿಪ್ಪೆನು (ಮಹಾದೇ. ಬ. ೩೭-೭೯); ಹಗಲು ಸವೆದುದು ಪೊಂಬಿಸಿಲು ನೆಱೆ ತೆಗೆದುದತಿವೇಗದಲಿ (ಸಳಚ. ೫-೪೩); ನಿಗಿನಿಗಿ ಮುಗಿಲು ನಿಗಿನಿಗಿ ಹಗಲು ಕೆಂಡವ ಕಾರುವದು (ಸಾದರೀ. ೨೧-೨); ಇರುಳು ಕಂಡ ಬಾವಿಯಲ್ಲಿ ಹಗಲು ಬಿದ್ದ ಹಾಗೆ (ಗಾದೆ).

ಪಗಲ ಕರ = ಸೂರ್ಯ: ದಿವ್ಯವಸ್ತ್ರಗಳಾದಿ ಬಗೆಬಗೆ ನವ್ಯವಸ್ತ್ರಗಳಂಗದೊಳು ಸಂಸೇವ್ಯವಾಗಲು ಪಗಲ ಕರನಂತೆಸೆವ ಸಮಯದಲಿ (ಪಶುಪಾ. ೧೩-೭). **ಪಗಲ ಕೈದೀವಿಗೆ** = ಹಗಲಿನ ಮೆರವಣಿಗೆಯಲ್ಲಿ, ಗೌರವಸೂಚಕವಾಗಿ ಹಿಡಿಯುವ ದೀವಟಿಗೆ; ಹಗಲು ದೀವಟಿಗೆ: ಪಳದಿಯ ಸೀಗುರಿಯು ಪಗಲ ಕೈದೀವಿಗೆಯು ವಜ್ರದಂಕುಶದ . . . ಪೊಡರ್ಪು ಪಡಿತಳಿಸೆ (ರಾಜಶೇ. ೬-೧೧೨). **ಪಗಲ ಬಲ್ಲಹ** = ಸೂರ್ಯ: ಪಗಲ ಬಲ್ಲಹನ ಕೆಂಗದಿರ್ದೋಂಗಲಿನಿಸು ಪುಗದೆ ಗಭೀರಮಾಗಿ ಕಳ್ತಲಿಸಿದ ತಮಾಲದ ತರುಗಳ ತಣ್ಣಳಲೊಳ್ (ಪದ್ಮರಾ. ೮-೨೬); ಮುಗುಳ್ದುವು ಮುನ್ನೀರಣುಗೆಯ ಸೆಜ್ಜೆಗಳಗಲ್ದುವು ಜಕ್ಕವಕ್ಕಿಗಳು ನಗುತಿರ್ದ ವಿಂದೀವರನಸ್ತಮಿಸುವಾ ಪಗಲ ಬಲ್ಲಹನ ಕಾಲದೊಳು (ಶ್ರೀಪಾಲ. ೧೧-೪). **ಪಗಲ ಬೊಜಂಗ** = ಸೂರ್ಯ: "ತಾವರೆಗೆಳೆಯಂ, ಪಗಲ ಬೊಜಂಗಂ . . . ಗರಂಗಳಾಣ್ಮಂ—ಈ ೧೧ ಸೂರ್ಯನ ಪೆಸರ್" (ಕಶಸಾ. ೪೮-೨೮); "ಬೆಂಗದಿರಂ ನೆಱೆ ಪಗಲ ಬೊಜಂಗಂ . . . ನೇಸಱೆಂದು ತಾವರೆಗೆಳೆಯಂ" (ಕವಿಕಂ.೪೦). **ಪಗಲ ಬೋನ** = ಹಗಲಿನ ಊಟ,-ಆಹಾರ: ಮೇಣೇ ನಿನ್ನ ಪಾಟೊಡಲ ನೆತ್ತರ್ ಪಿರಿತಿನಿವಡೆಗೆ ಪಗಲ ಬೋನದೊಂದು ಕಟ್ಟಕ್ಕುಂ (ರಾಮಾಶ್ವ. ೪೬-೨೦). **ಪಗಲವಕ್ಕಿ** = ಗಂಡು, ಹೆಣ್ಣು ಹಕ್ಕಿಗಳು ಹಗಲುವೇಳೆ ಮಾತ್ರ ಸೇರಿ ನಲಿಯುವುವೆನ್ನಲಾದ ಒಂದು ಬಗೆಯ ಪಕ್ಷಿ; ಜಕ್ಕವಕ್ಕಿ; ಚಕ್ರವಾಕ: ಪಗಲವಕ್ಕಿಯ ನೇಳಿಸುವ ಪಯೋಧರೆ ಪಗಲ ಪಂಕೋದ್ಭವವದನೆ (ನೇಮಿಸಂ.೨೨-೭೮). **ಪಗಲ ಸಿರಿ** = ಹಗಲಿನ ಸಂಪತ್ತು; ಹಗಲಿನ ಬೆಳಕು: ಪರಿವೃತ ಕತಿಪಯಪರಿಜನಂ ವಜ್ರಕರ್ಣಂ ವಜ್ರಕುಂಡಲಮರೀಚಿ ಪಗಲ ಸಿರಿಗೆ ಕಣ್ಡಱವಿ ಮಾಡೆ (ಪಂರಾಮಾ. ೭-೬೯ಪ). **ಪಗಲಿರುಳ್, ಪಗಲಿರುಳು, ಹಗಲಿರುಳು** = ೧. ಹಗಲು ಮತ್ತು ರಾತ್ರಿ; ಅಹೋರಾತ್ರಿ: ಪಗಲಿರುಳೆಂಬ ಭೇದಮನಯಂ ಬಡವರ್ . . . ಅಪಮೃತ್ಯುವೆಂಬಿವಲ್ಲಿಗೆ ಪೊಱಗು (ಆದಿಪು. ೫-೩೦); ಪಗಲಿರುಳೆಂಬ ಅಡುಗರ್ಬುಗಳಿಂ ಮಾಸ ಋತುಗಳೆಂಬ ಸಟ್ಟುಗದಿಂ ತೊಱಸುತ್ತುಂ ಭೂತಂಗಳಂ ಜವನಡುತಿರ್ದ ನಿಂತೆಂಬುದೆ ವಾರ್ತೆ (ಪಂಚತಂ. ೬೫-೬); ವಿದ್ರುಮಚ್ಛವಿಯ ಸಂಜೆಗೆಂಪಿನ ಪಗಲಿರುಳ್ಗಳಲ್ಲಿ . . . ಕಾಲಭೇದವನಱಿಯದಾ ಮಹಾಸಭೆ ಸುರಪನೋಲಗದ ಮಂಟಪದ ಸೌಭಾಗ್ಯಕೆಂಟುಮಡಿಯಾಗಿರ್ದುದು (ಜೈಮಿಭಾ. ೧೭-೨೬); ಹಗಲಿರುಳು ಏಳುದಿನಮಲ್ಲಿ ಚೈತ್ಯಾಲಯಂ ಚಿತ್ರಾಂಗದೆಯ ಯಶಶ್ಚೈತ್ರ ಸುರತರುವಂತೆ ಬೆಳೆದುದು (ಚಿತ್ರಾಂಗ. ೯೦-೨೪೮೭). ೨. ಯಾವಾಗಲೂ; ಸದಾ: ಮೊರೆವ ಮಳೆ ಪಗಲಿರುಳ್ ಕಲ್ಮಣ್ಣು ಕೆಸರಾಗೆ (ಕಾಲೂರ. ೪೫-೬೨); ಬೇಟೆ ಕರ್ಣನ ಕೂಡೆ ಹಗಲಿರುಳಾಟ ಕರ್ಣನ ಕೂಡೆ (ಕುವ್ಯಾಆ. ೬-೪೪); ಹಗಲಿರುಳಿ ನೊತ್ತಂಬರದ ಕಾಳಗದವೊಲು ಖಳಕಪಿಕದಂಬದ ವಿಗಡ ರಣ ರಂಜಿಸಿತು ಘನರೌದ್ರಾಭಿಸಾರದಲಿ (ತೊರರಾ. ೬-೩೧-೯). **ಹಗಲ ಚುಕ್ಕೆ** = ಸೂರ್ಯ: ಕೋಟಿ ಚುಕ್ಕೆ ಬರುವವಣ್ಣ ಇರುಳ ಮೈಯ ನೆಕ್ಕುತ ಹಗಲ ಚುಕ್ಕೆಗೀಡೆ ಅದುವು ಬಹುದು ಕಣ್ಣ ಕುಕ್ಕುತ (ಹೃದಸ. ೪೪-೧೧). **ಹಗಲ ಬತ್ತಿ** = ಪಗಲ ಕೈದೀವಿಗೆ: ಲಕ್ಷ ಹಗಲ ಬತ್ತಿಗಾಳು ಹಚ್ಚಯಿಹುದಾನೆ ಕಂಡೆ (ಚಿದಾವ. ೧೩೩-೧೨). **ಹಗಲ ಬಾಣ** = ಉತ್ಸವ ಕಾಲಗಳಲ್ಲಿ ಪ್ರಯೋಗಿಸುವ, ದಿನದಷ್ಟೆ ಬೆಳಕು ಭೀರುವ, ಮದ್ದಿನಿಂದ ಮಾಡಿದ ಒಂದು ಬಗೆಯ ವಸ್ತು: ವೇಳೆವಾದಾವಂದು ಗ್ಯಾನ ಮಾಡಲಿ ಬ್ಯಾಡ ನಾಕೊತ್ತು ಪಂಜುಗಳು ಹಗಲ ಬಾಣ (ಲೋಕಗೀ. ೨೪). **ಹಗಲಿನ ದೀಪ** = ಸೂರ್ಯ: ಹಗಲ ಮೂರನೆಯ ಜಾಮದೊಳ್ ಹಗಲಿನ ದೀಪವಾರಿತೇನೆಂದು ನೆರೆದವರೆಲ್ಲರೆದೆ ನಡುಗೆ (ಗೊಲ್ಲಾಕಥಾ. ೧೩-೩೨೩). **ಹಗಲಿನ ಹಾವಸೆ** = ಮಂಜಿನ ಮಳೆ: "ಹಗಲಿನ ಹಾವಸೆಯೆನೆ ಮಂಜಿನ ಸರಿ" (ಭಾರಾಸಿ. ೧೦).

[ದೇ.॥ ತಮಿ. ಮಲ. ಪಕಲ್; ತುಳು. ತೆಲು. ಪಗಲು]

ಪಗಲಾಣ್ಮ (ನಾ). ಹಗಲಿನ ಒಡೆಯ ; ದಿನಪತಿ ; ಸೂರ್ಯ : ಬಿರಯಿಂಗಳಂಜಿ ತಾಜಿ ಪಗಲಾಣ್ಮನ ಮೆಯ್ಗೆ ಬಿಸುಪೇಱಿ (ಕಬ್ಬಿಕಾ. ೫೩) ; ಪಗಲಾಣ್ಮರೀರಾಜು ಮುಂದಿ . . . ಇರ್ದುದು ಮಹೇಶನೋಲಗದಲ್ಲಿ ಸಂಭ್ರಮದೊಳು (ಸೌಂದಪು. ೧-೩೪) ; ಪಗಲಾಣ್ಮ ಕೋಟಿ ತೇಜೋಮಯಚಕ್ರ ಜಗಜಗಿಸುವ ಜ್ವಾಲೆವೆರಸಿ ನಗರವ ರಕ್ಷಿಸುತಿರೆ ಕಂಡು (ನೋಹತ. ೨೯-೨೮) ; ಪಗಲಾಣ್ಮನೊಡನೊಡನೆಳ್ದು ಗೋದಾವರಿಯ ವಿಂದರ್ (ತ್ರೀಲಾಪು. ೨೨೯-೨೯). [ಪಗಲ್ + ಅಣ್ಮ (<ಆಳ್)]

ಪಗಲು 'ಪಗಲ್' ನೋ.

ಪಗಲುಗೋಲು (ನಾ). ಗುಡಿಸಲು, ಹೆಂಚಿನ ಮನೆ ಮೊದಲಾದ ಕಡೆಗಳಲ್ಲಿ ಕಂಡಿಗಳಿಂದ ತೂರಿ ಬರುವ ಸೂರ್ಯನ ಕಿರಣ ; ಬಿಸಿಲುಕೋಲು : ಮುಗ್ಧೆಯೊರ್ವಳ ನಗೆಗಣ್ಗೊಗೆದಚ್ಚಗದಿರ ಸೊಗಸುಗೊನರು ಹೊನ್ನವಕ್ಕಿವಜ್ರಗಳಲ್ಲಿ ಪಗಲುಗೋ[ದಾತಾಂ. ೫]ಲೆಂದೆಸಗುವವು (ತ್ರೀಪಾಲ. ೯-೨೬).

[ಪಗಲು (<ಪಗಲ್) + ಕೋಲು$_1$ (<ಕೋಲ್$_1$)]

ಪಗಲುವಗೆಯ (ನಾ). ಹಗಲಿನ ಶತ್ರು ; ಚಂದ್ರ : ಪಗಲುವಗೆಯು ನೊಡಲೊಳು ಕಪ್ಪನಾಗಿಸಿ ಜಗುನೆಗೆ ಬಿಡಿಸಲೆಂದಜನು ವಿಂಗೆ ಕಪ್ಪ ಬಿಟ್ಟ ಚಂದಿರನನು ಪಡೆದಂತೆ ನಗೆಮೊಗವೆಸೆವುದಬಲೆಯ (ಪರ್ಶಚ. ೨-೩೪).

[ಪಗಲು (<ಪಗಲ್) + ಪಗೆ$_2$ + -ಅ$_7$]

ಪಗಲುಳ್ಕ (ನಾ). ಹಗಲುಹೊತ್ತಿನಲ್ಲಿ ಆಕಾಶದಿಂದ ಕೆಳಕ್ಕೆ ಬೀಳುವ ತೇಜಃಪುಂಜವಾದ ವಸ್ತು,—ಉಲ್ಕೆ ; ℙ ಅನಿಷ್ಟ ಸೂಚಕವಾದ ಇದು, ಸದ್ಯದಲ್ಲೆ ಒದಗುವ ವಿಪತ್ತನ್ನು ಸೂಚಿಸುವುದೆಂಬ ನಂಬಿಕೆಯಿದೆ : ನೆಲಂ ಮೊಱಗಿದುದೊಂಭತ್ತುಂ ಗ್ರಹಂಗಳಬ್ಬುಾಡುತ್ತಿರ್ದುವು ಬಿದ್ದುವಳ್ಕಿ ಪಗಲುಳ್ಕಂಗಳ್(ತಾಂತಿಪು. ೩-೧೦೩); ಪಗಲುಳ್ಕಮುಳ್ಕುವೆಂದದಿನೊಗೆವ ಗದಾಶುಳ್ಕಮುಳ್ಕೆ . . . ಗದಾಹವ ಮುಗುರ್ವುಮದ್ಭುತಮುಮಾಯ್ತು ಕುರುಪಾಂಡವರಾ (ಗದಾಯು. ೮-೧೨) ; ವಿಜೃಂಗಿದುವು ಪಗಲುಳ್ಕಂಗಳ್ ದಿಸೆಯೊಳಿವಿರಳಪ್ರಸರಂಗಳ್ (ಚಂದ್ರಪು. ೬-೧೬). [ಪಗಲ್ + ಉಳ್ಕ (<ಉಲ್ಕ)]

ಪಗಲುಳ್ಕು, ಹಗಲುಳುಕು (ನಾ). = ಪಗಲುಳ್ಕ : ಸಿಡಿವಿಲ್ವಿಡಿದು ಪುಳಿಂದಿಯಂಡಿ ಗಜವನೌಕ್ಕಿಕಪ ವಿಂಗಂಟಿಯಂಬರದೆಡೆಯೊಳ್ ನಡೆದು ಪಗಲುಳ್ಕು ಬೀಳ್ವವೊಲೊಡನೆಸೆದುದು ಮೃಗದ ಕೇಡನಱಿಪಲ್ ಬನದೊಳ್ (ರಾಜಶೇ.೫-೮೦). **ಹಗಲುಳುಕು** : ಸೂಸಿದವು ಹಗಲುಳುಕು ಮೃಗಗಣವಾಸುರದಲೊದಱಿದವು ಕಂದಿತು ಪಾಸರಪ್ರಭೆ ಕೌರವೇಂದ್ರನ ಪತನಕಾಲದಲಿ (ಕುಮ್ಯಾಗ. ೮-೪). [ಪಗಲ್ + ಉಳುಕು$_4$]

ಪಗಲೂಟ (ನಾ). ಹಗಲಿನ ಊಟ,—ಆಹಾರ.

ಪಗಲೂಟದ ಕೆಯ್ = ಹಗಲಿನ ಊಟದ ಧಾನ್ಯಕ್ಕಾಗಿ ಬಿಟ್ಟ ಗದ್ದೆ : ಕೋಡಿವರ ಪಗಲೂಟದ ಕೆಯ್ಕೊಂದಂ ಬಡಗಲು ಕದಂಬೇಶ್ವರ ದೇವರ ಗೃಹ (ಕಶಾಲ. ೨೦-೮ ; ?). [ಪಗಲ್ + ಊಟ]

ಪಗಲೆರೆಯ 'ಪಗಲೆಜಿಯ' ನೋ.

ಪಗಲೆಜಿಯ, ಪಗಲೆರೆಯ, ಹಗಲೆಜಿಯ (ನಾ). ಹಗಲಿನ ಒಡೆಯ; ದಿನಪತಿ ; ಸೂರ್ಯ : "ನಿನಿವಗೆಯ . . . ಪಗಲೆಜಿಯ ಬಿಸುಗದಿರ ಪಲ್ಲಿಲಿ ಜವನ ತಂದೆ ಜಗುನೆಯಯ್ಯನೆನಲ್ಕೆ ಸೂರ್ಯನಾವುಂ" (ಶಬ್ದಮಂ. ೧೫) ; ಪಗಲೆಜಿಯನುದಯಮಂ ಬಯಸಿ ಕಡುಪೆರ್ಚುತುಂ ಪೊಗರೊಗುವ ಕಲ್ತಲೆಗೆ ಕಣ್ಗಳಂ ಮುಚ್ಚುತುಂ (ಉದ್ಭವ.೧೦-೧೨೬) ; ಪಗಲೆಜಿಯನ ಕಂಡ ಕನಸಿನ ಸುಳ್ಕತದಿಂಪಗಲದ ಸುತನುದ್ಭವಿಪನು (ನೇಮಿಸಂ. ೨೨-೭೮). **ಪಗಲೆರೆಯ** : "ಪಗಲೆರೆಯನೆನಲು ಪಲ್ಲಿಲ್ಲದವನೆನಲು ದಿನನಾಥನಕ್ಕುಂ" (ಕಶಪ. ೬೧). **ಹಗಲೆಜಿಯ** : ನೆಜಿ ತಾಗಿ ತಟ್ಟುರ್ಚಾತೆಂಬ ಶಕ್ತಿಯು ಕೈಮಜಿಯದೆ ಕೃಷ್ಣ ಖಂಡಿಸಿದ ಒಜಿಯೊಳಗಿರ್ದ ಚಕ್ರವ ತೆಗೆದನು ಹಗಲೆಜಿಯನ ಪ್ರಭೆಯ ಕೀಳ್ವಡಿಸೆ (ನೋಹತ. ೪೦-೭೭). [ಪಗಲ್ + ಎಜಿಯ]

ಪಗಲೊಡೆಯ, ಹಗಲೊಡೆಯ (ನಾ). = ಪಗಲೆಜಿಯ : ಗಾಳಿ ನಟ್ಟಿಯೊಳ್ ನಡೆವ ಪಗಲೊಡೆಯನ ಕುದುರೆ ಸೇದೆಯಂ ಪಿಂಗಿಸೆಯುಂ (ಕಬ್ಬಿಕಾ. ೨೮೮). **ಹಗಲೊಡೆಯ** : ಹಗಲೊಡೆಯನಸ್ತವಿಸಲಿನಯನ ನಗಲ್ದ ಪದ್ಮಿನಿಯಿರವನೀಕ್ಷಿಸಿ ನಗುವವೊಲು ನೆಯ್ದಿಲುಗಳೆಯ್ದೆ ವಿಕಾಸವೆಯ್ದಿದವು (ಬಸಪು. ೧೧-೪೭) ; ಹಗಲೊಡೆಯನು ಮೆಲ್ಲನೆ ಮೇಲಕ್ಕೇರುತ್ತಾನೆ (ಜ್ಯೋತಿರಿ. ೨೨೪). [ಪಗಲ್ + ಒಡೆಯ$_1$]

ಪಗಲ್ಗನಸು, ಹಗಲುಗನಸು (ನಾ). ೧. ಎಚ್ಚರವಾಗಿರುವಾಗಲೇ ಕಾಣುವ ಕನಸು ; ಮುಂದೆ ಒಳ್ಳೆಯದಾಗುತ್ತದೆ ಎಂಬುದನ್ನೇ ಕಾಣುವ ಕಲ್ಪನೆ ; ಆಸೆ ಆಕಾಂಕ್ಷೆಗಳ ಲಹರಿ : ಮರಕುಟಿಗವಕ್ಕಿ ದನಿ, ಕಲ್ಲೊಳೆಯ ಮೊರೆ, ಬೇಸಗೆಯ ಕಾಡ ಬೇಸರಿನ ನಿದ್ದೆಯ ಪಗಲ್ಗನಸ ಕನವರಿಕೆಯಾಗಿರಲ್ (ತ್ರೀರಾಮಾ. ೫೨೩-೬೩೧). **ಹಗಲುಗನಸು** : ೧. ಈ ತೆರನಾದ ಮುನಿಸು ಕಿನಿಸುಗಳು ಹಗಲುಗನಸಿನಂತೆ ಮಾಯವಾದುವು (ದ್ರಾವಿವಿ. ೪೩೨). ೨. (ಆಲಂ) ಈಡೇರದ ಬಯಕೆ ; ಗಾಳಿಗೋಪುರ ; ನಡೆಯಲಾರದ ಸಂಕಲ್ಪ ; ವ್ಯರ್ಥವಾದ ಆಲೋಚನೆ : ನಿನ್ನ ಚೆಂದಕೆ ಸೋತು, ಗಗನಕಮಲವೆ ಕೇಳು, ಹಗಲುಗನಸುಗಳನ್ನು ಹಾರಬಿಟ್ಟೆಹೆನು (ಸನ್ನಂ. ೨೪) ; ಅವಳು ಹಬ್ಬದ ಹಗಲುಗನಸಿನಲ್ಲಿ ನಲಿಯುತ್ತಾಳೆ (ಕನ್ನಜಾ. ೧೪೬) ; ಭಾರತದಲ್ಲಿ ನಾರೀವರ್ಗವು . . . ಸಮಾಜಬಂಧನಗಳ ತೊಡಕಿನಲ್ಲಿ ಸಿಲುಕಿರುವವರೆಗೆ ರಾಷ್ಟ್ರೀಯಜೀವನವೆಂಬುದು ಬರಿಯ ಹಗಲುಗನಸು (ಪ್ರಬಂಧ. ೮೫). [ಪಗಲ್ + ಕನಸು]

ಪಗಲ್ಗಳ್ಕ, ಹಗಲುಗಳ್ಕ (ನಾ). ೧. ಹಗಲುಹೊತ್ತಿನಲ್ಲೇ ಕಳ್ಳತನ ಮಾಡುವವನು ; ಹಗಲುದರೋಡೆ ಮಾಡುವವನು ; ಎದುರಿನಲ್ಲೇ ದಿಟ್ಟತನದಿಂದ ಕಳ್ಳತನ ಮಾಡುವವನು : ಜಲಕ್ಕೆ ಕನ್ನವನಿಕ್ಕಿ ಉದಕವ ತಂದು ಲಿಂಗಮಜ್ಜನಕ್ಕೆಱೆವ ಹಗಲು[ಪಾತಾಂ. ಲ] ಗಳ್ಕರಿಗೆ ಮೆಚ್ಚುವನೆ ಚೆನ್ನಮಲ್ಲಿಕಾರ್ಜುನ (ಮಹಾದೇ. ಬ. ೪೬-೧೧೦) ; ಎಲೆಲೆ ಪಗಲ್ಗಳ್ಕ ! ಏತಱಿಂದು ಗೆಯ್ತಂ. ತಾಂ ತಾಂ ಬಟ್ಟೆವಿಡಿವೈದಿ ಪೋಪ ಕುದುರೆಯನಾಂ ನೀಂ ಕಟ್ಟಿಕೊಂಡುಯ್ವ ಬಲ್ಪೇವುದೊ ! (ರಾಮಾಶ್ವ. ೮೩-೧೩). **ಹಗಲುಗಳ್ಕ** : ೨. ಮೋಸಗಾರ ; ವಂಚಕ (?) : ಬ್ರಾಹ್ಮಣನು . . . ಆ ಹಗಲುಗಳ್ಕನನ್ನು ಹಿಂಬಟ್ಟಿ ಕೊಂಡು ಕುದುರೆಯ ಮೇಲೆ ಕೂತು ಹೊರಟನು (ನೀತಿಚಿಂ. VI, ೧೪).

[ಪಗಲ್ + ಕಳ್ಕ$_1$]

ಪಗಲ್ಪಗೆಯ 'ಪಗಲ್ವಗೆಯ' ನೋ.

ಪಗಲ್ಮಣಿ (ನಾ). ಹಗಲಿನ ರತ್ನದಂತಿರುವವನು ; ದಿನಮಣಿ ; ಸೂರ್ಯ : ತನ್ನಯ ಬರ್ದುಳದೇಕೆಂದು ಜೀವನದಿಯಂ ಬಿರ್ದು ಪೋದ ನೆಂದೆನೆ ಪಗಲ್ಮಣಿಯಸ್ತಮಯನಾದನು (ವಿಕೋಪು. ೬-೧೭).

[ಪಗಲ್ + ಮಣಿ$_3$]

ಪಗಲ್ವಕ್ಕಿ (ನಾ). ಹಗಲು ಮಾತ್ರ ರತಿಸುಖವನ್ನು ಪಡೆಯುವುದೆನ್ನಲಾದ ಹಕ್ಕಿ; ಚಕ್ರವಾಕ ಪಕ್ಷಿ : ಗಂಡು ಹೆಣ್ಣಗಲ್ವಕ್ಕಿ ಸ್ವಸ್ಥಾನದೊಳಿಂಬುಗೊಂಡಿರ್ದು . . . ಒಪ್ಪಿದುವು (ನೋಹತ. ೨೭-೩).

[ಪಗಲ್ + ಪಕ್ಕಿ]

ಪಗಲ್ವಗೆಯ, ಪಗಲ್ಪಗೆಯ (ನಾ). ಹಗಲಿಗೆ ಶತ್ರುವಾದವನು ; ಚಂದ್ರ : (೩). **ಪಗಲ್ಪಗೆಯ** : (೩). [ಪಗಲ್ + ಪಗೆ$_2$ + -ಅ$_7$]

ಪಗವು, ಪಗ, ಪಗವ, ಪಗೆವು$_1$, ಹಗ$_1$, ಹಗವ, ಹಗವು, ಹಗಹ, ಹಗ್ಗೆ$_3$, ಹಗೆಯ$_2$, ಹಗೆವು, ಹಗೆಹು, ಹಗೇವ, ಹಗೇವು (ನಾ).

ರಾಗಿ, ಜೋಳ ಮುಂತಾದುವುಗಳನ್ನು ತುಂಬಿಡಲು ಭೂಮಿಯಲ್ಲಿ ಮಾಡಿರುವ ಗುಳಿ : ಬಿಂದಾಧರಂಗಳಿಂ ಪವಳದ ಪಗವಂ ತೆಱೆದಂತೆಯುಂ ಮುಗುಳ್ನಗೆಗಳಿಂ ಬಿಡುವೆಳ್ದಿಂಗಳ ಭಂಡಾರದಂತೆಯುಂ (ಲೀಲಾವ. ೧೨-೧೨ ಪ) ; ರುಚೆಯೆಂಬ ತೇಳ್ಗಳಾ ಪಗವಿನೊಳರ್ಪವೊಲ್ತ ನುವಿನೊಳ್ಕಳಿದಿರ್ದಪನಾತ್ಮನೆಂಬುದಂ ಬಗೆಯದ ಕಾರಣಂ ಬರ್ದುಕುರಂಜಸಿತು (ಅಪಶ. ೪೪). **ಪಗ :** ಅಗರುಧೂಪದ ಪೊಗೆಗಳು ಮಗಮಗಿಸುತ ನೆಗೆದವಲ್ಲಲ್ಲಿ ಬೀದಿಯಲಿ ಸೊಗಸಿತೆಂತೆನೆ ದಿವ್ಯಾಮೋದ ತುಂಬಿದ ಪಗದ ಮುತ್ತುಳ ತೆಗೆದಂತೆ (ರಾಸುವಿ. ೧೯-೫೯). **ಪಗವ :** ಜೈನ ಪುರಾಣಮನೆಯ್ದೆ ತಿಳಿದು ಮನುಜಂ ಬಟಾಯಂ ಕುಪಥಕ್ಕೆಱಗನಿರುಳ್ ಬಿರ್ದ ಪಗವ[ಪಾಠಾಂ. ಪಳ್ಳ]ದೊಳು ಪಗಲುಮಜಾಂಪೊಡಂ ಬಿರ್ದಪನೆ (ಸಮಪ. ೩-೯೬) ; ತೀವಿದ ಕೆಱೆಯಂತೆ ಪಗವಕ್ಕೆ [ಪಾಠಾಂ. ಹಗಹಕ್ಕೆ] ಬಂದ ಧಾನ್ಯದಂತೆ (ಧರ್ಮಾಮೃ. ೯-೩). **ಪಗೆವು₁ :** ಹರಿ ಪಾಯ್ದುಗಿದಪುದುಗುರಿಂ ಮುತ್ತಿನ ಪಗೆವಂ ತೆಗೆವಂತೆ ಕುಂಭಿಕುಂಭಸ್ಥಳಮಂ (ಲೀಲಾವ. ೮-೨೩). **ಹಗ₁ :** ಆ ಫಲವ ಬಯಲ ಕಣದಲೊಕ್ಕಿ ಮನದ ಹಗದಲ್ಲಿ ತುಂಬಿ ಬಾಯಿ ಹಗದಲ್ಲಿ ತೆಗೆದು ಕಣ್ಣನ ಕೊಳಗದಲ್ಲಿ ಅಳೆವುತ್ತಿರಲಾಗಿ (ಸುಂಕಬಂ. ೧-೨೩೧) ; ಬಲ್ಲಿತಾಗಿರ್ದ ಹಗವನು ಪೊಕ್ಕಂತಾಗೆ ನಿಲ್ಲದಲ್ಲಿಂ ಪೋದಳರಸ (ಚಂಪ್ರಸಾಂ. ೧೦-೧೫೩); ಬಡಗುಂಪುವೆತ್ತೊಂದು ಹಗದ ಬಾಯ್ದೆಱೆವಾಗ ಪೊಡವಿಯೊಳ್ಪೆಕೆಯುಹದಜಾಯ (ಭರಜ. ೨೮-೭೬) ; ಹಗ ಪೆಟ್ಟೆಕಣಜದೊಳಿಹ ಬಹುಧಾನ್ಯವ ಬಗೆಯದೆ ಸೂಱೆಯ ಕೊಟ್ಟು . . . ಜನವಂಜಿ ಜಗುಳಿದರು (ಕಂಸವಿ. ೧೧-೪೮) ; ಅರು ಹಗದಲ್ಲಿ ರಾಗಿ ಮಾತ್ರ ಇದೆ (ಚಿಂಗಾಳ್ವ. ೨೮೫). **ಹಗವ :** ಕಿಡಿಯ ಕಡಲಂ ಹೊಗೆಯ ಹ[ಗ]ವ [ಪಾಠಾಂ. ಹೊಗುವ, ಹಗ್ಗ, ಹಳ್ಳ]ಮಂದಳ್ಪುರಿಯ ಮಡುಗಳಂ. . . ಪಾಯ್ದು (ಸಿದ್ಧರಾ. ೩-೯); ಭುವನಗರ್ಭಕುಹರಂ ತಾನಾವಗಮಿಡಿದಡಸಿದ ತುಂತುಱ ಹಗವಮಿದೆನಿಸಿದುದು ಬಿಡದ ಬಡಹದ ಕೊರ್ದಿಂ (ಕುಸುಮಾ. ೬-೪೦) ; ಶರಣಾಗತರಂ ರಕ್ಷಿಪ ಬಿರುದುಧರೆ ಪೊಗಳೆ ಹಗವದೊಳ್ ಸೀಯಲ್ ಕಳ್ಳರೆನಿಪ ಮಾತಂಗರನಂದುರಿಯೊಳ್ ತಾಂ ಪೊಕ್ಕು ಕಾಯ್ದನಾ ಗುರುದೇವಂ (ಮುಂಬರಾ.X, ೨೬-೨೧; 1229). **ಹಗವು :** ಬೆಳೆಯದೆ ಹಗವಂ ತೋಡುವೆನೆಂಬ ಪುಟ್ಟದ ಕೂಸಿಂಗೆ ಪೆಸರಿಡುವೆನೆಂಬ . . . ಮರುಳನಂತೆ (ಧರ್ಮಾಮೃ. ೧೨-೨೪); ಜಗವ ತುಂಬುವ ಪ್ರಭೆಯಿಂದೆ ಇದ ಮೈಯೆಂಬ ಹಗವಿನೊಳ್ತುಂಬಿದರಾರು (ಭರಜ. ೬೦-೩೭). **ಹಗಹ :** ಹಗಹದ ಜೋಳದಂತೆ ಕಿತ್ತ ಪದಿಯಂತೆ . . . ಕಿವಿಯಲಿಕ್ಕಿದೋಲೆಯಂತೆ (ಧರ್ಮಾಮೃ. ೮-೧೪೭ ಅಡಿಟಿ) ; ಹಗ [ಪಾಠಾಂ. ಸಂಗ್ರ]ಹದಲ್ಲಿ ಬಿದ್ದವರ ಮೇಲೆ ಒರಳ ನೂಂಕುವರೆ (ಬಸವ. ೩೧೬). **ಹಗ್ಗೆ :** ಹೇರಿ ಹಗೆಗಳ ತುಂಬಿ ಉಳಿದ ಧಾನ್ಯಮನೆಲ್ಲ ಮಾರಿ (ನಮಪೋ. ೨-೪೩) ; ಅರಿಷಿಣವನ್ನು ನಾಲ್ಕೈದು ತಿಂಗಳವರೆಗೂ ಕಡೆಯಲ್ಲಿ ಇಟ್ಟರೆ ಹುಳ ಹತ್ತುವದೆಂದು ಹಗೆಯಲ್ಲಿ ಹಾಕುತ್ತಾರೆ (ಕೃಷಿಪ್ರ. ೧೮೯); ಬಹುದಿವಸ ಮುಚ್ಚಿದ ಬಾವಿಯೊಳಗೂ ಹಗೆಗಳಲ್ಲಿಯೂ ಈ ಗ್ಯಾಸವು ಬಹುತರವಾಗಿ ಇರುತ್ತದೆ (ಮುಂಬಯಿ.೫-೧೫೮); ಅವನು ಐವತ್ತು ಚೀಲ ಗಟ್ಟಳೆ ಜೋಳವನ್ನು 'ಹಗೆ'ಯಲ್ಲಿ ಹಾಕಿರುತ್ತಿದ್ದ (ಬರಹಾ. ೪೯). **ಹಗೆಯ್ದ₂ :** ಕುರುಡರ ಹಿಡಿದು ಹಾಳ ಹಗೆಯದಲ್ಲಿ ಬೀಳುವ ತೆಱನೆನಗಾಯಿತ್ತು (ಮೋಳಿಮಾ. ೧೬೫-೬೧೫) ; ಹೊಗಬಹುದು ಕಾಳಾಹಿ ತುಂಬಿದ ಹಗೆಯವನು ಹಸಿದಿರ್ದ ಹುಲಿಗಳ ಮೊಗವ . . . ಹೊಗುವಡಳವಲ್ಲಿರುಳು ಲಂಕೆಯನಾವ ವೀರರಿಗೆ (ಕೌಶಿಂಾ. ೧೦-೧೫) ; ಜಗಲಿ ಸೂಳೆಗೆ ಲೇಸು ಹಗೆಯದ ಭತ್ತವುಣ ಲೇಸು ಸತಿಯರಿಗೆ ನಗೆಮೊಗವು ಲೇಸು (ಸರ್ವಜ್ಞ. ೧೬೯೮) ; ತನುವ ನಾನಿನ್ನಿದನು ತಳೆಯಲಾರೆನು ದೇವ . . . ವಂಚನೆಯ ಸೀಮೆ ನಿಷ್ಕುರದ ಚಾವಡಿ ಭೀತಿಯ ಹಗೆಯವು (ಕೈಕವ. ೧-೧೮-೧) ; ಬೇಡಾದ ಬರಡಾದ ಕತ್ತಲೆಯ ಹಗೆಯದಲಿ ಬೇಡಿಗಳ ತೊಡಿಸಿರುವ ತೆರ ನಾವು ನಿಂತಿಹೆವು (ಬಾಹುಗ. ೬೬-೧೩) ; ಹಗೆಯದೊಳಗೆ ಬಿದ್ದ ನಾಯಿ ಹಾಕುವವರನ್ನರಿಯದು ತೆಗೆಯುವವರನ್ನರಿಯದು (ಗಾಜ). **ಹಗೆವು :** ಮುತ್ತು ಮಾಣಿಕ ಹವಳಗಡಿ ತಿಮಿಂಗಿಲ, . . ಮಕರಗಳಡಸಿ ತುಂಬಿದ ಹಗೆವೆನಿಸಿ[ಪಾಠಾಂ. ಹಗೆಯೆನಿಸಿ, ಹಗವೆನಿಸಿ, ಹಗವದೆನಿಸಿ, ಹಡಗಮೆಸೆವ] ಮಹಿಮೆಯಿಂ ಮೆಱೆದುದರೆ ಪಶ್ಚಿಮ ವನನಿಧಿ(ಸೋಮಚಂ. ೧-೬೦). **ಹಗೆಹು :** ಬಲ್ಲಿದನ ಹಗೆಹ[ಪಾಠಾಂ. ಯು] ತೆಗೆವನ್ನಬರ ಬಡವನ ಹರಣ ಹೋದ ತೆಱನಂತಾಯಿತ್ತು (ಮಹಾದೇ. ಬ. ೩೩-೭೧) ; ಕೊಯುವನಯ್ಯಾ ಕೊಱೆವನಯ್ಯಾ ಒಕ್ಕುವನಯ್ಯಾ ಏಳುವನಯ್ಯಾ ಲೋಕಾದಿಲೋಕಗಳ ಹಗೆಹ[ಪಾಠಾಂ. ಯು, ವು]ನಿಕ್ಕುವನಯ್ಯಾ (ಸರ್ವಜ. ೧೬೨-೭೬೯). **ಹಗೇವ :** ಪಾತಕಜೀವಂಗಳ್ ಎಳ್ಳಿನಂತೆ ಗಾಣಕ್ಕೆ ವಂದು . . . ಧಾನ್ಯದಂತೆ ಹಗೇವಕ್ಕೆ ವಂದು (ಧರ್ಮಾಮೃ. ೩-೭೭). **ಹಗೇವು :** ಮರುಕ್ಷಣದಲ್ಲಿಯೆ ಒಂದು ದೊಡ್ಡ ಸುಣ್ಣದ ಹಗೇವು ಸಿದ್ಧವಾಯಿತು (ಕುಮಾಸಾಂ. ೨೧೯) ; ಹಗೇವಿನಲ್ಲಿದ್ದ ಮುಗ್ಗಲುರಾಗಿ ತಿಂದು ಒಬ್ಬಿಬ್ಬರು ಸತ್ತರು (ಕೆಲನೆ. ೨೩೯) ; ಒಂದು ಹೊಸ ಹಗೇವು ತೋಡಿಸಿ ಅದಕ್ಕೆ ಜೋಳ ತುಂಬಿದೆ (ಬೆಳುಮ.೧೧೭). [ದೇ.॥ ತಮಿ. ಪಯಮ್ಬು]

ಪಗಾರ (ನಾ). (ಉಕ) ಸರ್ಕಾರ ಮೊದಲಾದ ಕಡೆಗಳಲ್ಲಿ ಸಲ್ಲಿಸುವ ಸೇವೆಗಾಗಿ, ಅವರಿಂದ ಪಡೆಯುವ ಪ್ರತಿಫಲದ್ರವ್ಯ; ಸಂಬಳ ; ವೇತನ : ಒಂದು ವೇಳೆ ಕೆಲಸ ಸಿಕ್ಕಿದರೂ ಸಿಗುವ ಪಗಾರ ಎಂಭತ್ತು ರೂಪಾಯಿ (ವಾತ್ಸಲ್ಯ. ೬೮) ; ತಿಂಗಳಿಗೆ ಇನ್ನೂರು ರೂಪಾಯಿ ಪಗಾರ ಅವರಿಗೆ ದೊರಕುತಲಿದ್ದಿತು (ಕಾಲಯಾ. ೫) ; ಕೈಯಲ್ಲಿಯ ಪಗಾರವು ಈ ಮೊದಲೇ ತೀರಿತ್ತು(ಅನ್ನ. ೩೬); ಸಾಲಕ್ಕಾಗಿ ಅರ್ಧ ಪಗಾರ ಹೋಗುತ್ತಿದೆ (ಮುತ್ತೈದೆ. ೧೧೭). [<—ಹಿಂ. ಮರಾ. ಪಗಾರ್./ಪೋರ್ಚು Paga]

ಪಗಾರಿ (ಗು). ಸಂಬಳವನ್ನು ಪಡೆಯುವ : ನಾನು ಪಗಾರೀ ಕಾರ್ಯದರ್ಶಿಯಾಗದಿದ್ದರೂ ಸೇಟಸಾಹೇಬರ ಚಿತ್ರಗುಪ್ತನ ಪೀಠದಲ್ಲೂ ಆಗೀಗ ಮಂಡಿಸತೊಡಗಿದೆ (ದೀಪಹ. II, ೩೫೩). [< ಪಗಾರ]

ಪಗಿನ್, ಪಗಿನ, ಹಗಿನ, ಹಗಿನು (ನಾ). ೧. ಗೊಬ್ಬುಳಿ ಮೊದಲಾದ ಮರಗಳ ತೊಗಟೆಯಿಂದ ಸ್ರವಿಸುವ ಜಿಗುಟಾದ ದ್ರವ ; ಅಂಟು ; ಗೋಂದು : ಬೇಡಂ ಮಾಣಿಕಮೊಂದಂ ಕಾಡೊಳ್ ಕಂಡೊರ್ಮೆ ಮೆಲ್ದು ಪಗಿನಲ್ಲೆಂದೀಡಾಡಿದನೆಂಬೀ ನಾಣ್ಣುಡಿ ನಾಡೆಯುಮೆಸೆವುದು ದುರಿತವಶದಿಂದವನೊಳ್ (ಧರ್ಮಾಮೃ. ೧-೧೧೫) ; ಪಚ್ಚೆಯ ಪರಲ್ಮಳಂದದ ಪಗಿನನಿರದುರ್ಚಿ ತಳಿರ ಮೂಡೆಯೊಳೆ ಮಲ್ಲಿಗೆಯ ಮುಗುಳ್ಗಳನೊಟ್ಟೆ (ಲೀಲಾವ. ೧೧-೧೦ ರಗಳೆ) ; ತದುಕಿನ ಮರದ ಮುಱುಗಣ್ಣೊಳೊಗೆದ ಪಗಿನೊಳಗ್ಗಿವೆಗಡಿಂ ಕಾಲ್ದೊಡರ್ದು ಮಿಡುಕಿ ಕಳವಳಿಪ ಕಳವಿಂಕಸಂಕುಳಂಗಳುಂ (ಚಂಪ್ರಪು. ೫-೬೫ ಪ) ; ತಱಯದ ಮತ್ತಿಯ ಮರನೆರಡಱ ಪಗಿನಂ ತ್ರಿಫಳೆ ಪಂಚಮೂಲದಿವಂ ನೀರೆಱೆಯದೆ ಪುಡಿಗೆಯ್ದು (ಅಶ್ವಶಾ. ೧೪-೧೫). **ಪಗಿನ :** ೧. ಕರಿಕರಾಗ್ರದಿಂ ಮುಱಿದ ತಳಿರ ತದುಕಿನ ಮರದ ನಿಡುಗೋಡೊಳಱಯದೆಱಗಿ ಮಱೆವೆರಸಿ ಕುಳ್ಳಿರ್ದು ಪಸಿಯ ಪಗಿನದೊಳ್ ಕಾಲ್ ಜಿಗಿಲ್ತು ತಳ್ಪಂಕಂಗೊಳ್ವ ಸಮಯದೊಳ್ (ರಾಜಶೇ. ೫-೬೫ ಪ). ೨. ಸುಗಂಧ ದ್ರವ್ಯ : ಹಿಮಕರಸುಧಾಕಿರಣದ ತಿರುಳಂತೆ ರಮಣೀಯಮಾದ ಪರಿಮಳದ ಪಗಿನಮಂ (ಶಪಶಂ. ೨-೪೨ ಪ). **ಹಗಿನ :** ೧. "ಪಿಲ್, ಪಿಲಃ, ಪೇಲಃ, ಪೇಲುಃ, ಪಿಲಿಃ, ಪೈಲಂ—ಈ ೬ ಹಗಿನಂ" (ಕಾಶಕೃ. ೪೮); ಅತಸಿ-ಅಗಸೆಯ, ಪಿಚ್ಛಯಾ-ಹಗಿನದಿಂದಲೂ (ಬಾಹಟೀ. ೨-೨-೨೯ ಪ). ೨. ಮರ ತಿಗಡು ಹಗಿನ ಮೊದಲಾದವಱಲ್ಲಿಯು ಗಂಧವನಱುವುದು ಅಚಾರಲಿಂಗದಲ್ಲಿಯ ಗುರುಲಿಂಗ (ಅದವ. ೫-೧೨). **ಹಗಿನು :**

೧. ಬೆರಸೆಲವದ ಹಗಿನೆಲಹುರಿಯಿರವಂತಿಗೆಯೆಂಬಿವಂ (ಖಮದ. ೫-೮೮); ಮಗಧರುಹಂ ಮಧು ಕಕ್ಕೆಯ ಹಗಿನುದಧಿಜ . . . ಇನಿತು ಮರ್ದಿಸಿ ಶಿಶ್ನಿಗೆ ತೊಡೆದೊಂದಲ್ ಭಗದ್ರವಂ ಪಿರಿದಕ್ಕುಂ (ಮನ್ಮಥ. ೧೮-೨೬); ವೃಕ್ಷಂಗಳಿಗೆ ಹಗಿನೀ ಪಾಪ ಕಡಿದಡೆ ಬೆಳೆವ ವರವೆಂದ (ಶಿಭಾಗ. ೬-೯-೫); ಎಲವದ ಹಗಿನು, ಅಷಾಢಗೆಣಸು . . . ಚೂರ್ಣಮಂ ಮಾಡಿ . . . ತೆಗೆದುಕೊಳ್ಳಲು ಪೈತ್ಯದಿಂದಾದ ಗಂಡೆ, ದದ್ದು ಮುಂತಾಗಿ ಮಾಣ್ಗುಂ (ಸಕವೈ. ೧೪೩). ೨. "ನಿರ್ಯಾಸಃ — ಹಗಿನು; ದೇವಧೂಪ" (ಓಷಧಿ. ೮೭); ಸುಗುಣದುರ್ಗುಣವೆಂಬುಭಯದ ಹಗಿನುವ ತೆಗೆದು ನಿಜಸುಗಂಧದ ಧೂಪವನಿಕ್ಕಿ (ಸರ್ವವ. ೫೪-೨೯೦); ಹುಲ್ಲ ಕಿಚ್ಚುವ ಕಲ್ಲ ಬೀಜವ ನೀರ ನೆಳಲುವ ಗಾಳಿಯು ನಾರುವ ಅಗ್ನಿಯ ಹಗಿನು [ಪಾಠಾಂ. ನ]ವ ಬಿಸಿಲಿನ ರುಚಿಯ ತನ್ನ ಬೆಳಗುವನಾರು ಬಲ್ಲರು ಗುಹೇಶ್ವರ ನಿಮ್ಮ ಶರಣರಲ್ಲದೆ (ಅನಚಂ.೧೩೫-೬೧೬). 'ಪಗಿಲ್' ಪರಾ. [ದೇ.॥ ತಮಿ. ಪಚ್ಚೆ, ಪಯಿನ್; ಮಲ. ಪಚ, ಪಯ, ಪಶ; ತುಳು. ಪಯ]

ಪಗಿನ 'ಪಗಿನ್' ನೋ.

ಪಗಿಲ್ (ಕ್ರಿ). ೧. ಅಂಟಿಕೊಳ್ಳು; ಹತ್ತಿಕೊಳ್ಳು: "ಪಗಿಲ್-ಸ್ನಿಗ್ಧ ಸಂಶ್ಲೇಷಯೋಃ" (ಶಮಧಾ. ಸ); "ಪಗಿಲ್ತುದು ಪತ್ತಿದುದಕ್ಕುಂ" (ಕವಿಕಂ. ೬೬); ಬಿಗಿದೊಗೆದ ನಿನ್ನ ಮೊಲೆಗಳ ಮೃಗಮದದ ಪುಳಿಂಚುಗಳ್ ಪ[ಗಿಲ್ತಿ] [ಪಾಠಾಂ. ನಿತ್ತಿ]ರಲ್ (ಪಂಪಭಾ. ೮-೬೭); ಆ ಮನೋಹರನ ಮಂದೈಸಿ ನಿಂದ ಚಂದನದಣ್ಪಿನಿಂ ಪಗಿಲ್ತು ಪತ್ತಿ ಬೆಳ್ಳಱಿಸಿ ರಂಜಿಸುವ ಕೆಂಜೆಡೆಯ ಮೊದಲಿಂ ಬೆಡಂಗುವಡೆದು ಮಿಱುಪ ಜೆಱೆನೊಸಲೊಳಂ (ಕಾದಂಪೂ. ೧೨೬); ಆಗಳಾ ಗಜದ ಪೊರ್ಕುಟಿಯಿನವಯವದೊಳಲ್ಲಲ್ಲಿಗೆ . . . ಪಗಿಲ್ತಿರ್ದ ಕಲಿಲಮಪಸಲಿಲಮುಂ (ಜಗವಿ. ೬-೫೫೫); ಪಗಿಲ್ತ ಕತ್ತುರಿಯ ಪತ್ರಲತಾಂಕುರದಣ್ಕೆ ತಳ್ತು . . . ನಿರವಿಸುತಿರ್ದೊಡಂ (ವರ್ಧಪು. ೬-೫೦); ನೀಂ ಶ್ರೀಲೋಲಂ ಸಿರಿಯಂ ಪಗಿಲ್ತ ತೆರದಿಂದಪ್ಪರ್ಪೆ ಮೇಣ್ಣಕ್ಷದೋಳ್ (ಮೈಸೂಮೆ. ೨-೨೪). ೨. ಸೇರು; ಕೂಡು; ಜೊತೆಯಾಗು; ಒಟ್ಟುಗೂಡು; ಹೆಣೆದುಕೊಳ್ಳು: ಪೊರೆವೊರೆ ಗೊಂಡಿರೆ ಮುಗಿಲ್ ಪಗಿಲ್ತುವು ನಭದೊಳ್ (ಪಂರಾಮಾ. ೭-೧೬೫); ಕರ್ಪೂ ಕಾರ್ಮುಗಿಲ ಮಿಂಚಿನೆ ಕಣ್ಗದಿರುರ್ವಿ ಮಿಂಚೆ ಸಾರ್ದೆಳಸಿ ಪಗಿಲ್ತ ಕೇಕಿಯೆನೆ ಬಲ್ಮುಡಿ ತೋಱೆ (ಶಬಶಂ. ೩-೧೫); ಕನಲ್ವ ಜಾಱುವ ಜವಂ ಗೆಡದೊತ್ತುವ ಪತ್ತುವಣ್ಮನಿಂ ಬಿಗಿವ ತುಡುಂಕುವವ್ವಳಿಪ ಬಿನ್ನಣಮೊಪ್ಪೆ ಪಗಿಲ್ತು ಕಾದಿದರ್ (ಶಬಶಂ. ೪-೭೪); ಕಡಲಿಂ ಬಾಂಬರಂ ನೆಗೆದ ಕರ್ಮುಗಿಲೊಡ್ಡಿಂ ಪಗಿಲ್ತು ಕೊಳನ ನೀರುಣಲೆಂದು ತೇಂಕಿವರ್ಪ ಕಿಱು ಮುಗಿಲ್ (ರಾಮಾಶ್ವ. ೧೦೧-೧೦). ೩. ಹಬ್ಬು; ವ್ಯಾಪಿಸು; ಹರಡು: ಕವಿದು ನಳಿಂಪಕೋಟಿ ಮೊಗೆಯುತ್ತಿರೆ ಶಂಖದ ಬಳ್ಳಿ ತಳ್ತುದೋ ಪವಳದ ಬಳ್ಳಿ ಪರ್ವಿದುದೊ ಪಾವಸೆಬಳ್ಳಿ ಪಗಿಲ್ತುದೋ ಸಮುದ್ರವನೆನೆ (ಪುಷ್ಪಪು. ೧೧-೧೩).

ಪಗುಡಿ (ನಾ). ೧. ಹಾಸ್ಯ; ಕುಚೋದ್ಯ; ಲೇವಡಿ: ಸರಸಸಮ್ಮೇಳ ಪಗುಡಿ ಪರಿಹಾಸಕ ಚದುರಂಗ ನೆತ್ತ ಪಗಡೆ ಜೂಜು ಶಿವಭಕ್ತಗುಂಟೆ (ಏಲೇಶ್ವ.೬೬). ೨. ಹಾಸ್ಯಗಾರ; ಕುಚೋದ್ಯ ಮಾಡುವವನು: ವೇದವ ಪಠಿಸುವಲ್ಲಿ ಶಾಸ್ತ್ರವನೋದುವಲ್ಲಿ ಆಗಮಂಗಳ ತಿಳಿವಲ್ಲಿ ಶಿವಜ್ಞಾನ ಅನುಭಾವವ ಮಾಡುವಲ್ಲಿ ಪಗುಡಿ ಪರಿಹಾಸಕರ ಅರ್ತಿಕಾಱರ ಹೊತ್ತು ಹೋಕನಿಗಾಗಿ ಘಟ್ಟುವರ ಕೂಡಲುಂಟೆ (ಅಂಬಿಗ.ಕ. ೩೮೯-೧೪೬೧); ಶಿವ ಲಿಂಗಪೂಜೆಯ ಮಾಡುವಲ್ಲಿ ಪಗುಡಿ ಪರಿಹಾಸಕರ ವಾಗಾದಿಗಳ ಕೂಡದೆ (ತುಱುಗಾ. ೬-೧೯); ವಿಷಯ ಸೊಕ್ಕಿದಿಲಿಗಳನು ಪಿಡಿವ ಬೆಕ್ಕುಗಳ್ ಪಗುಡಿ ಗುಣತರ್ಕಿಯರ್ ಇಹಪರದೊಳಕ್ಕೆಯರ್ (ಪತಿಲ. ೨-೭೦). [?]

ಪಗುಡಿತನ (ನಾ). ಪರಿಹಾಸ ಮಾಡುವಿಕೆ; ಕುಚೋದ್ಯ ಮಾಡುವಿಕೆ: ಭಕ್ತನು ವಿರಕ್ತಂಗೆ ಜೂಜುವೇಂಟೆ ಕುತರ್ಕ ಕರ್ಕಸ ನೆತ್ತ ಚದುರಂಗ ಪಗಡೆ ಪಗುಡಿತನ ಪರಿಹಾಸಕ ಇಂತೀ ಸಮೇಳ ಸ್ವಸಂ (ಸಂಚಂ) ಗಳ ಮಾಡುತ್ತ (ಸರ್ವವ. ೯೭-೫೫೫). [ಪಗುಡಿ+-ತನ]

ಪಗುದಿ, ಪಗದಿ, ಪೊಗದಿ (ನಾ). ಸಾಮಂತರಾಜರು ಸಾರ್ವಭೌಮನಿಗೆ ಕೊಡುತ್ತಿದ್ದ ಧನರೂಪವಾದ ಕಾಣಿಕೆ,—ಕಪ್ಪ; ಆಶ್ರಿತ ಸಂಸ್ಥಾನವು ಪೋಷಕರಾಷ್ಟ್ರಕ್ಕೆ ಕೊಡುತ್ತಿದ್ದ ವಾರ್ಷಿಕ ಕಪ್ಪ, —ತೆರಿಗೆ: ತುರುಕರಿಗೆ ಪಗುದಿ ತೆರುಥಾರೆಯೆಂಬದರಿಂದ ತಾತ್ಕಾಲಕೆ ಅವರಲ್ಲಿ ಮುನ್ನೂರುವರಹದ ಗ್ರಾಮವನಿರಿಸಿ (ಎಕ. VIII, ತೀರ್ಥಹ. ೯೮-೪೦; 1668); ಯಿಗ ಹೆಚಿದು ಪಗುದಿಯಿಂದ ಹುಟ್ಟವಳಿ ಮೇಲೆ ಗ ೧ಕ್ಕೆ (ಎಕ. VII, ತಿಕಾರಿ. ೨೧೦-೧೩; 1758); ಮತ್ತಂ ಸ್ವರಾಷ್ಟ್ರಂಗಳೊಳಕಾಲಚಕ್ರದೊಳೆತ್ತುವುತ್ತಾರ ಪಗುದಿಯನೆತ್ತದಂತು ನಿಯಾಮಕಮಂ ರಚಿಸಿ (ಕೆಳಸ. ೧೦-೨೦); ಪನ್ನಿಕೆಗೆ ಬಂದ ಅವನಿಂದ ಪಗುದಿಯು ಹಣವು ಬರುವಂತೆ ಖಣ್ಡಣೆ ಮಾಡಿದ್ದರು (ಬೆಟ್ಟಅ. ೪೪-೧೨). **ಪಗದಿ**: ಮುಂಗಿಲ ನಾಡನಿತಕ್ಕೆ ಮೂಗುಬ್ಬಸಗೆಯ್ದು ಪಗದಿ ಚೌದಾಯಿಯ ಪಟ್ಟ ಪಗಲೆ ಕೊಂಡ ವಿಗಡ ಜೇತಜಿ ತನ್ನ ಬಿಂಕದೊಳೆತ್ತರೆ (ಚಿಕಸ. ೨೧); ಪಗದಿ ಮುಂತ್ತಾದನ್ನು ಕ್ಯಾಳದಂತ್ತೆ ಸ್ಥಳಕ್ಕೆ ತಾಕಿತಿ ಮಾಡಿಸಿ (ಮೈಅರಿ. ೧೯೩೦, ೪೪-೮; 1768); ಅರಸುಗಳಿರಾ, ನಮಗೆ ಪಗದಿಗಳಂ ಕೊಡುತ್ತ ಎಂದಿನಂತೆ ನಮ್ಮ ಕಾರ್ಯಕ್ಕೆ ಸಹಾಯಕರಾಗಿ ಇರಿ (ಮುದ್ರಾಮಂ.೧೭೫); ಪಗದಿ ಕೊಡದವನಿಗೆ ನಗದಿ ಮಾಡಿ ಏನು? (ಗಾದೆ). **ಪೊಗದಿ**: ಆ ಚಿಕ್ಕಪ್ಪಶೆಟ್ಟಿಯು ಬಂದು . . . ಮಹೀಶೂರ ಧೊರೆಗಳಿಗೆ ೧೨ ಸಾವಿರ ವರಹಗಳನ್ನು ಪೊಗದಿ ಕೊಡುವಂತೆ ಗೊತ್ತುಮಾಡಿ . . . ಹೊರಟು ಹೋದನು (ಚಾಮವಂ. ೫೩); ರಾಜಬಡೆಯರು . . . ತಾವು ಕೊಡುತ್ತಿದ್ದ ಪೊಗದಿಯನ್ನು ಮೆಲ್ಲಗೆ ತಪ್ಪಿಸಿದರು (ಸಂಸಕ. ೧೩೦); ಗುಮ್ಮ ನಾಯಕನು ವಿಜಯನಗರದ ಅರಸರಿಗೆ ಪೊಗದಿಯನ್ನು ಕೊಡುತ್ತಾ . . . ಕೌಲು ಮಾಡಿಕೊಂಡನು (ಪಾಳಗಾ. ೬). 'ಪಂಗ$_1$' ಪರಾ.

ಪಗದಿಹಣ, ಪೊಗದಿಹಣ = ಸಾಮಂತರಾಜರು ಸಾರ್ವಭೌಮನಿಗೆ ಕಪ್ಪವಾಗಿ ಕೊಡುತ್ತಿದ್ದ ಧನ: ಆನಂದಸಂವತ್ಸರದ ಫಾಲ್ಗುಣ ಶುದ್ಧ ೭ ಶುಕ್ರವಾರದಲ್ಲಿ ಪ್ರಭಾವಳಿತವಾದ ರಾಜ್ಯಗಳನ್ನು ಸ್ವಾಧೀನಮಾಡಿಕೊಂಡು ಪಗದೀಹಣ ಬರುವಂತೆ ಗೊತ್ತುಮಾಡಿದ ರಾಜ್ಯಗಳು (ಚಾಮವಂ.೧); ಪೊಗದಿ ಕೊಡುವ ರಾಜ್ಯದಿಂದ-ಕೊಡುವ ಪೊಗದಿಹಣ ಅಪಹಾರವಾಗುವುದು (ದಾದಾಸ. ೧೩೩).

[ದೇ.॥ ತಮಿ. ಪಕುತಿ; ಮಲ. ಪಗುದಿ; ತುಳು. ಪಗದಿ; ತೆಲು. ಪಗಿದಿ./ಸಂ. ಭಕ್ತಿ]

ಪಗೆ$_1$, ಹಗೆ$_1$ (ಕ್ರಿ). ದ್ವೇಷಿಸು; ವಿರೋಧಿಸು; ಶತ್ರುತ್ವವನ್ನು ಹೊಂದು: ಪಗೆದು ಮೂಱುಂ ಮೆಯ್ಯಂ ಸಮೆದು ಮೇಣ್ಮನಂ ಕಾಣ್ಬುದು ಪೆಱತೊಂದು; ಇವಱೊಳಾವುದು ಮನಕ್ಕೇಱುವುದದಂ ಪೇಱುಮೆನೆ (ರಾಮಾಶ್ವ. ೧೩-೫); ಪಗೆಗಳನ್ ಪಗೆವುದು ಮರುಳೆನಲ್ ನಾನ್ ಮರುಳನೆನ್ (ಬದ್ಧಪ್ರ.೫೨-೧೧೨೬). 'ಪಗೆಯ', 'ಪಗೆವ' ಪರಾ. **ಹಗೆ$_1$**: ಆಡಿ ಕಾಡಿ ಬೇಡಿ ನೀಡಿ, ಒಲಿದೊಡೆ ಹಗೆದೊಡೆ ಅರಕೆಯೊಳ್ ತನ್ನ ಪೂರ್ಣತೆಯನೆ ತೋರಿ, ಹೊಂದಿ ಬಾಳ್ವ ಹರಕೆಯೊಳ್ (ಅಪಲ್ಲೆ. ೮೫-೧೫); ಎಲ್ಲರಲಿ ದಯೆದೋರಿ, ಯಾರನೂ ಹಗೆಯದಿರಿ (ವೈರಾಪಿ. ೮೨-೪೯೩).

[ದೇ.॥ ತಮಿ. ಪಕೈ; ಮಲ. ಪಗೆ]

ಪಗೆ$_2$, ಪಗೆವು$_2$, ಹಗೆ$_2$ (ನಾ). ೧. ದ್ವೇಷ; ಶತ್ರುತ್ವ; ವೈರ: "ವಿದ್ವೇಷಂ ದ್ರೋಹಂ ವೈರಂ ವಿರೋಧಮೆನೆ ಪಗೆಯಕ್ಕುಂ" (ವಸ್ತುಕೋ. ೧೧೧-೪); ಪಗೆ ನೀಗೆಯುಂ ಮುಳಿಸು ಪೋಗೆಯುಂ

ಮಾಯತಿ ಪೆರ್ಚೆಯುಂ . . . ನೃಪರಂ ತವೆ ಕೊಲ್ವುದು (ಪಂಪಭಾ. ೮-೮೮); ಪಗೆಗೆ ಪಕ್ಕಾಗಿ ನಿಷ್ಕಾರಣಂ ಸಾವುದಾವ ಕಾರಣಂ (ಪಂಚತಂ. ೧೧೫-೧೨); ಅಂತು ಪಗೆ ಕೆಳೆಯಿಲ್ಲದೆಲ್ಲಾ ಮೃಗಂಗಳುಂ ಮಿತ್ರತ್ವದೊಳಿರೆ (ಧರ್ಮಾಮೃ. ೩-೯೧); ಪಗೆ ಕೆಳೆಯೆಂಬ ಭೇದಮಿನಿತಾದೊಡಮಿಲ್ಲದೆ ಮೋನದಿಂದಮಿರ್ದು , . . ವಿರಾಜಿಸಿದನಾ ಮುನಿ ಚಂದನವೃಕ್ಷಮೆಂಬಿನಂ (ಬಾಧಪು. ೫-೮೧). ೨. ಶತ್ರು; ವೈರಿ : "ಮಜುವಸಲಂ, ಬೇರಂ, ಪಗೆ-ಈ ೩ ಶತ್ರು" (ಕಶಸಾ. ೫೬-೨೫೮); ಅನಲಾನಿಲ ಸಂಯೋಗಮುರಿಪದಿರ್ಕುಮೆ ಪಗೆಯಂ (ಗದಾಯು. ೧-೬೬); ಪಗೆಯಂತೆ ಭಯಮಂ ಮಾಟ್ಟುದು (ಧರ್ಮಾಮೃ. ೪-೧೭೫); ಪಗೆಯಂ ಬಾಲಕನೆಂಬರೇ (ಸೋಮೇಶ. ೪೧); ಪಗೆಯೊಮ್ಮೆ ಕೆಳೆಯನಾಗುವನೊಮ್ಮೆ ಕೆಳೆಯನೆ ಪಗೆಯನಾಗುವದಱಿಂದ ಪಗರಣದಂತಿರ್ದ ಭವದೊಳಿನ್ನಾರಾರ ಬಗೆದೆಣಿಸುವೆವೆಂದರವರು (ಭರಚ. ೬೫-೫೩); ಆಳಿನಿಕರಕೆ ಪಗೆ ಸರ್ವಜನಕೆ ಸುಖಗಳನೀವೆವು ಸೌರಭದಲಿ . . . ಎಂದಲರೊಪ್ಪಿದುವು ಸಂಪಗೆಗಳ. (ಕಂನವಿ. ೫-೯೩). **ಪಗೆವು₂** : ೨. ಪಗೆವಿನ ಪೆಸರೊಳ್ ರಾವಣಂ ಬರ್ಕ್ಕೆ ಬೆನ್ನಿತ್ತಱಿಯಂ . . . ಕೀರ್ತ್ಯಂಗನಾದೃಕ್‌ಶಫರಸರಸಿ ಮಾರ್ತ್ತಣ್ಡನಾಜಿಪ್ರಚಣ್ಡಂ (ಸೌಇಇ. XI-i, ೭೮-೭೪; ಸು. 1045). **ಹಗೆ₂** : ೧. ಹಗೆ ಕೆಳೆಗಳೆಂದಿಲ್ಲ ಪುರವಡವಿಯೆಂದಿಲ್ಲ (ಸಿದ್ಧರಾ. ೧-೪೦); ಬೊಮ್ಮಗವು[ಡ]ನ ಮಗ ಬೈಚ[ಗ]ವುಡನ ಹಗೆಗೆ ಕವುತೆಯ ಹದ ಮಾದೆಗವುಡ ಗಿನ ಮಲಗವುಡನ ಕೊಂದು (ಮೈಅರಿ. ೧೯೩೨, ೨೨-೭; 1229); ಮುಱಿದುದೈ ರಿಪುರಾಯದಳ ಹಗೆ ಹಱಿದುದೈ ಕುರುಪತಿಗೆ (ಕುವ್ಯಾಕ. ೧೪-೭); ಈಹಾಳುಬದುಕಿಗಾಗಿ ಹಗೆಯು ಬೇಡ ನೀ ತಿಳಿದು ನೋಡೆಚ್ಚಱಿಕೆ (ಪುರಂದ. ೧-೧೬೦-೩); ಕುಳಿತರೆ ನಿಂತರೆ ಹುಳುಕನೆ ಬಗೆವೆ, ತುಸು ತಪ್ಪಾದರು ಕಲಹವ ತೆಗೆವೆ; ಒಲವೋ ಹಗೆಯೋ ಯಾವುದಿದು? (ಒಲುಮೆ. ೨೬-೯). ೨. "ಅಭಿಯಾತಿಃ, ಅರಾತಿಃ . . . ದ್ವಿಷನ್—ಈ ೨೪ ಹಗೆ" (ಹಲಾಯು. ೬೫-೩೦೧); ಭಂಡಾರಂ ಸವೆದೆಡೆ ಪ್ರಜೆ ಕೆಟ್ಟೆಡೆ ಹಗೆ ಸಮೀಪವಾದೆಡೆಯಲಿರಲಾಗದು (ಪಂಚತಂ. ೩೯-೨೨); ತನ್ನಾತ್ಮ ತನಗೆ ಹಗೆಯಾದ ಬಳಿಕ ಬಿನ್ನಾಣವುಂಟೇ (ಬಸವ. ೧೨); ಪರಿಹರಿಸಿ ಮಗುಳೆಚ್ಚನೀತನು ಧರಣಿಪನನವನೀಶನೆಚ್ಚನು ಹಗೆಯ ರಥಹಯವ (ಕುವ್ಯಾಕ. ೧೧-೪೮); ವಿದ್ಯಾರಣ್ಯರು . . . ರಾಜೋಪಾಯಗಳನ್ನು ಕಂಡುಹಿಡಿದು ಹಗೆಗಳ ಪ್ರಾಬಲ್ಯವನ್ನು ಮುರಿದರು (ಶ್ರೀವಿದ್ಯಾ. ೧೪೮).

ಪಗೆಕೋಳಾಹಳ = ಶತ್ರುಗಳಿಗೆ ತಳಮಳವನ್ನುಂಟುಮಾಡುವವನು; ಒಂದು ಬಿರುದು: ನಗುವಳು . . . ಮನದೊಳುಬ್ಬುವಳು ದುಗುಡಕೋಳಾಹಳ ದುರ್ಗಕೋಳಾಹಳ ಪಗೆಕೋಳಾಹಳನ ಮುಂದವಳು (ಭರಚ. ೧೪-೧೧೬). **ಪಗೆ ಮುಟ್ಟಿ ಗಂಡ** = ಶತ್ರುಗಳು ಎದುರಿಸಿದರೆ ಪರಾಕ್ರಮವನ್ನು ತೋರಿಸುವವನು; ಒಂದು ಬಿರುದು: ವೀರ ಶ್ರೀನಿವಾಸ ದಕ್ಷಿಣದೋಟ್ಟಣ್ಡಂ ಪಗೆ ಮುಟ್ಟಿಗಂಡಂ . . . ಶ್ರೀಮಚ್ಚಟ್ಟಯ್ಯದೇವರ್ (ಸೌಇಇ.XI-i, ೭೮-೩೭; 1045). **ಪಗೆ ಮೆಚ್ಚೆ ಗಂಡ** = ಶತ್ರುವೂ ಮೆಚ್ಚಿಕೊಳ್ಳುವ ವೀರ; ಒಂದು ಬಿರುದು: ದೆಖ್ಖಾದೆಖ್ಖಿಯೊಳು ಕಾದಿ ತಳ್ತಱಿದು ಗೆಲ್ದು ತುರಗದಳಮಂ ತಂದ ಪಗೆ ಮೆಚ್ಚೆ ಗಂಡ . . . ರಣರಂಗಸಿಂಗ (ಸೌಇಇ. IX-i, ೩೪೩-೨೨; 1226). **ಹಗೆ ಮಾಡು** = ದ್ವೇಷಿಸು; ವೈರತ್ವ ತಾಳು : ನಿಮಗೆ ಹಗೆ ಮಾಡಿ ತೋಱಿದೆನು ಕೇಳೆಲೇ (ಸರ್ವವ.೧೭೮-೮೨೯). **ಹಗೆಯಾಗು** = ದ್ವೇಷಿಯಾಗು; ಶತ್ರುವಾಗು : ಜಲವಿಳಿಯಲೀ ವನ ಕಲುಷಕಾನನವಾಯ್ತು ಭಾರಿಯ ಖಳರಿಗಾಶ್ರಯವಾಯ್ತು ನಮ್ಮಾಶ್ರಮಕೆ ಹಗೆಯಾಯ್ತು (ತೊರರಾ. ೧-೧೦-೩); ಇಂದು ದಾರಿಯೂ ತನಗೆ ಹಗೆಯಾಯಿತೇ (ಕಾಲೂರ. ೧೧ಕಥಾಸಾರ); ಗೆಳೆಯನಾಗಿ ಬಂದವನು ಹಗೆಯಾಗಿ ಮರಳುವಂತಾಯಿತು (ಹಾಹುತ್ತ. ೨೫). [<ಪಗೆ₁./ತಮಿ. ಪಕೈ, ಪಕೈಮೈ; ಮಲ. ತೆಲು. ಪಗ; ತುಳು. ಪಗೆ]

ಪಗೆಕಾಱ 'ಪಗೆಗಾಱ' ನೋ.

ಪಗೆಗಟ್ಟು (ಕ್ರಿ). ದ್ವೇಷವನ್ನು ಹೊಂದು; ವೈರವನ್ನು ತಾಳು : ನೆವದಿಂ ಜಾನಕಿಯಂ ಪೋಗೊಳಿಸಿ ದಾನವರೊಳ್ ಪಗೆಗಟ್ಟಿ . . . ಕಾದಿ ಬಂಡಣದೊಳನಿಬರಂ ಸೈಮಿನಿಗಟ್ಟಿದುದು ಜನಮೆ ಎಂಗುಂ (ರಾಮಾಶ್ವ. ೧೪-೧೦). [ಪಗೆ₂+ಕಟ್ಟು₁]

ಪಗೆಗಾಱ, ಪಗೆಕಾಱ, ಹಗೆಗಾರ (ನಾ). ಆಗದವನು; ಶತ್ರು; ದ್ವೇಷಿ : ಪುಲ್ಪಂಟನಂ ನಂಬಿ ಬಲ್ಪಂಟನಂ ಬಿಡುವ ಪಗೆಗಾಱನುಮಂ (ಧರ್ಮಾಮೃ. ೮-೫೧); ಪಗೆಗಾಱರ ಮೊನೆಗಾಱರ ಬೀರ! (ರಾಮಾಶ್ವ. ೮೧-೩). **ಪಗೆಕಾಱ** : ಪಾಟಕಾಱನೊಳ್ನುಡಿಕಾಱಂ ಪಗೆಕಾಱನಾಗಿಯುಂ ಕೆಯ್ಮಿಗೆ ತಕ್ಕಂ ಕೆಯ್ದುಕಾಱನೆನಿಸಲ್ಕಾಱಂ (ಕಾವ್ಯಾವ. ೩೨೫); ವ್ಯವಹರಿಪನೆಂಬಲ್ಲಿ ಕಾಱ ಪ್ರತ್ಯಯಮಕ್ಕುಂ. . . ಪಗೆಕಾಱಂ, ಬಗೆಕಾಱಂ (ಶಮದ. ೧೯೯ ಪ್ರಯೋ). **ಹಗೆಗಾರ** : (ಕಿ). [ಪಗೆ₂+-ಕಾಱ₁]

ಪಗೆಗೊಳ್, ಹಗೆಗೊಳ್, ಹಗೆಗೊಳ್ಳು (ಕ್ರಿ). ದ್ವೇಷವನ್ನು ಹೊಂದು; ವೈರವನ್ನು ತಾಳು; ಶತ್ರುತ್ವವನ್ನು ಪಡೆ : ಪಗೆಗೊಂಡಾಡುವ ಶತ್ರುಭೂಪತಿಗಳಂ (ಎಇ. XIII, ೩೨೯-೩; 929); ಪೆಣನನಿಱಿದು ಪಗೆಗೊಂಡರ್ (ಪಂಪಭಾ. ೧೨-೨೯.ವ); ಪಗೆಗೊಂಡ ತುಂಬಿಯಂ . . . ಸೊಗಯಿಸಿ ಕಾಮನ ಪಗೆಯಂ ಬಗೆಯಂ ತೀರ್ಚಿದುವು ಸುಗ್ಗಿಯೊಳ್ಸಂಪಗೆಗಳ್ (ಮಲ್ಲಿಪು.೫-೧೯); ಪಾದಾಶ್ರಿತರಾದರ ತಲೆಗಾದುದು ಪಗೆಗೊಂಡ ನೃಪರ ತಲೆಗೊಂಡುದು ಕೌಮೋದಕಿ ನೀಮದಱಿಂ ಹರಿಪಾದಾಶ್ರಿತರಾಗಿಮಿಲ್ಲದೊಡೆ ಪಗೆಗೊಳ್ಳಿಂ (ಜಗವಿ. ೮-೧೦೫); ಅಕ್ಕಟಾ ಮರುಳ್ದುಂಬಿಗಳೇಕೆ ಸಂಪಗೆಗಳೊಳ್ ಪಗೆಗೊಂಡುವೊ ನಿರ್ನಿಮಿತ್ತದಿಂ (ಶಮದ. ೧೧೭ ಪ್ರಯೋ). **ಹಗೆಗೊಳ್** : ಹರನ ಹಣೆಗಣ್ಣಿನಗ್ನಿಯನು ಹಗೆಗೊಂಬಂದದಿಂ ಇಂದೆನ್ನ ಹಗೆಗೊಂಡೆ (ಹಚಕಾ. ೮-೯). **ಹಗೆಗೊಳ್ಳು** : ಈ ನಿಭೃತಕೋದಂಡಚಂಡಕೃಶಾನುವಿನ ಹೊಯ್ಲಿನಲಿ ಹಗೆಗೊಂಡಾನುವವರಾರು (ತೊರರಾ. ೪-೬-೧೪); ಹರಿಯ ಹಗೆಗೊಂಡು ಕೆಡುವಾಯಸಂ ತನಗೇಱೆ (ಚೈಮಿಭಾ. ೯-೨೩). [ಪಗೆ₂+ಕೊಳ್₁]

ಪಗೆತನ, ಹಗೆತನ (ನಾ). ದ್ವೇಷ; ವೈರ : ವಿಶ್ವತೋಮುಖನೊಡನೆ ಬಲ್ವಗೆತನಂ ಬಂದುದು (ಪದ್ಮರಾ. ೮-೧೮); ಬನಗಳ್ತಲೆಯುಂ ಕಮಳಾಪ್ತನ ಕದಿರುಂ ಕಾದಿ ಮಡಿವುತಳಿಯುಂ ಚಾಂಪೇಯನಿಕಾಯಮಾದುವಲ್ಲದೊಡೆನಸುಂ ತದ್ವಯಕೆ ಪಗೆತನಂ ಸಮನಿಪುದೇ (ರಾಜಶೇ. ೨-೫೪). **ಹಗೆತನ** : ಹಗೆತನವು ನಿನಗೇನು ಕಾರಣ ಚಿಗುರಿದುದು (ತೊರರಾ. ೪-೨-೨೩); ಹಗೆತನದ ಸಾವೊಮ್ಮೆ ಮುಟ್ಟಿಯೋಡುತಲಿತ್ತು (ಕಾಲೂರ. ೨೯-೨೨). [ಪಗೆ₂+-ತನ]

ಪಗೆಬಲ್ಮೆ (ನಾ). ಶತ್ರುವಿನ ಶಕ್ತಿ, — ಪರಾಕ್ರಮ : ನಾನೇಗಳುಂ ಪಗೆಬಲ್ಮೆಯುಂ ಕಿರಿದು ಭಾವಿಸಿದೆನಿಲ್ಲ (ಶ್ರೀರಾಮಾ. ೬೪೭-೧೪೨). [ಪಗೆ₂ + ಬಲ್ಮೆ]

ಪಗೆಯ, ಹಗೆಯ₁ (ನಾ). ಶತ್ರು; ಅರಿ; ದ್ವೇಷಿ : ಪಗೆಯೊಮ್ಮೆ ಕೆಳೆಯನಾಗುವನೊಮ್ಮೆ ಕೆಳೆಯನೆ ಪಗೆಯನಾಗುವನು (ಭರಚ. ೬೫-೫೩). **ಹಗೆಯ₁** : ಹಗೆಯರಲಿ ಹತವಾದನೇ ಹಾ ಸುಗುಣನಿಲ್ಲಿಗೆ ಬಾರನೇ (ಕುವ್ಯಾದ್ರೋ. ೮-೨೦); ಹಗೆಯನಾದರೆ ಕುಂದೆ ಗುಣದಲಿ (ಕೌತಿರಾ. ೩೬-೧೯); ಹಗೆಯರಿಗೆ ವರವೀವರಿಬ್ಬರು ತೆಗೆಯಲರಿಯರು ಕೊಟ್ಟವರಗಳ (ಹರಿಸಾ. ೨೮).

[ಪಗೆ₁ +-ಅ₇./ತಮಿ. ಪಕೈಞನ್; ಮಲ. ಪಗಯನ್]

ಪಗೆವ, ಪಗೆವ (ನಾ). = ಪಗೆಯ : ಶ್ರೀಪ್ರಭುಮಾಣಿ ಪರಮಸುಭಗನ್ ಪಗೆವರ ಗನ್ಧಾಸ್ತಿ ಪಾರ್ವ್ವರ ಇಚ್ಚೆ (ಎಕ. XVI, ಸುದ್ದಿ. ೧೧೮–೨; ೩ನೆಯ ಶತ); ಆಜಿಯೊಡವಂ ಮುನಿಗುಂ ಪಗೆವಂಗೆ (ಕವಿಪಾ. ೧–೭೯); ಪಗೆವರ ಗಂಟಲ ಬಳೆಯನೊಡೆದು ಕಳವಿನುದನಸುಕರಿಸುವಂತೆ ತೀವಿ ತೊಟ್ಟ ಮುಂಗೆಯುಃ ಬಳೆಗಳನೊಡೆದು ಕಳದು (ಪಂಪಭಾ. ೮–೧೦೦೪); ಅರ್ಕ ನಂದನಂಗವಕ್ಷಿತನೂಜ ಸೋಮಸರಸೀಜಸಖರ್ಪಗೆವರ್ ನಿರಂತರಂ (ಜಾತಕ.೨–೧೬); ವೀರವಂ ನೋಟಿಕರ್ ಪೊಗಳ್ ಪಗೆವನ ಸರಳ ಸಾರವಂ ಕಡಿವುತ್ತೆ ವೈರಿಮದಹಸ್ತಿಕಂತೀರವಂ . . . ದೈತ್ಯನಂ ಘಾತಿಸಿದನು (ಚಿಬಪು. ೪೩–೪೬). **ಹಗೆವ** : ನಾಳೆ ಹಗೆವನ ಹೊಯ್ವೆ (ಕುಮಾರವ್ಯಾ.೬. ೪–೪೩); ಕೇಳಿದ್ಯೆ ಸುಗ್ರೀವ ಹಗೆವನ ಮೇಲಣಾಧಿಕಕ್ರೋಧ ದಿನದಿನ ಕೇಳಿ ದಿಟವಹುದೆಂಬ ನಾಣ್ಣುದಿ ನಮ್ಮೊಳಾದುದು (ತೊರವಾ. ೪–೬–೫); ನನ್ನ ಹಗೆವನನ್ನು ಕೊಂದು ನನ್ನ ಕೋಪಾಗ್ನಿಗೆ ಆಹುತಿ ಮಾಡುತ್ತೇನೆ (ಭಾಮಣಿ. ೬೪).

ಪಗೆವರ ಗಂಡಂ = ಶತ್ರುಗಳಲ್ಲಿ ಪರಾಕ್ರಮವನ್ನು ತೋರಿಸುವವನು; ಒಂದು ಬಿರುದು : ಅವನನುಜ ×××ರಿಪುಗೆ ಮಾರಿ ಪಗೆವರ ಗಣ್ಡಂ (ಸೌಇಇ. XX, ೨೪–೨೦; 1034). **ಪಗೆವರಾದಿತ್ಯ** = ಶತ್ರುಗಳೆಂಬ ಕತ್ತಲೆಗೆ ಸೂರ್ಯನಂತಿರುವವನು; ಒಂದು ಬಿರುದು : ಪಗೆವರಾದಿತ್ಯನಾವಾದಿ ಸನುಸ್ತಪ್ರ[ಶ]ಸ್ತಿಸಹಿತ ಶ್ರೀಮನ್ನ ನ್ನೆಯ ನಾಯಿಮರಸ[ನುಂ] (ಸೌಇಇ. XX, ೨೬–೧೧; 1040); ಅಭಿನವ ವಿಕ್ರಮಾದಿತ್ಯ ಪಗೆವರಾದಿತ್ಯ ಶ್ರೀಮತ್ತ್ರೈಲೋಕ್ಯಮಲ್ಲ (ಸೌಇಇ. XX, ೬೯–೨೧; 1064). **ಪಗೆವೊಬ್ಬೆಗಂಡಂ** = ಒಂದು ಬಿರುದು : ಪಗೆವೊಬ್ಬೆ ಗಂಡಂ (ಬೊಂಗಶಾ. ಹಾವೇರಿ, ೧೩೫–೨೫ ; 1155).

[<ಪಗೆ₁. / ಕವಿಃ ಪಕ್ಕೆವನ್; ತೆಲುಃ ಪಗವಾಡು]

ಪಗೆವಡೆ (ನಾ). ಶತ್ರುಸೈನ್ಯ ; ಅರಿಬಲ : ಪಗೆವಡೆಯಿಡು ತಾನೆಂತುಂ ಬಗೆವೊಡೆ ಕೆಱಂದಲ್ಲ (ನೇಮಿಪು. ೧೦–೧೪೮); ಮೆಟ್ಟ ನಡೆದು ಬಹ ಪಗೆವಡೆ ಗಂಡು ಕಣ್ಣೆಟ್ಟಿಡಬಲಕೆ ಕೊಲಗುವ (ಕುಂಬಾಸಾಂ. ೧೧–೫೬); ಬಿಡದಾಗ ಗಡಿಯ ದುರ್ಗಗಳ ಮುತ್ತಿದ ಪಗೆವಡೆಯ ಸನ್ನಾಹವ ಕೇಳಿ (ಕಂಸವಿ. ೩–೪೯). [ಪಗೆ₂+ಪಡೆ₂]

ಪಗೆವನೆ (ನಾ). ಶತ್ರುವಿನ ಮನೆ : ಪಗೆವನೆಯೊಳಗೆ ನರ್ತಿಸುತಿಹ ಬಾಲನ ಬಗೆ ಲೇಸಾಯ್ತು ನೋಳ್ಪರಿಗೆ (ಕೋಚತ. ೧೧–೬೦).

[ಪಗೆ₂+ಮನೆ]

ಪಗೆವಾಡಿ (ನಾ). ಶತ್ರುಗಳ ಪಾಳೆಯ,—ಬಿಡಾರ : ಗುರುಗಳಂ ಕುಲ ವೃದ್ಧರನಾಜಗುಯ್ದು ಕೆಮ್ಮಗೆ ಪಗೆವಾಡಿಯೊಳ್ ನಗಿಸಿಕೊಂಡೊಡೆ ಬಂದಪುದೇಂ ಸುಯೋಧನಾ (ಪಂಪಭಾ. ೧೦–೧೬); ನಗೆ ಪಗೆವಾಡಿ ಗೋಗ್ರಹಣದೊಳ್ ಪೊಜಮಾಡಿದ ಬನ್ನಮೊಂದು ನೆಟ್ಟಗೆ ಮನಮಂ ಪಳಂಚಲೆಯೆ (ಪಂಪಭಾ. ೧೦–೧೧೧). [ಪಗೆ₂+ಪಾಡಿ₂]

ಪಗೆವು₁ 'ಪಗವು' ನೋ.

ಪಗೆವು₂ 'ಪಗೆ₂' ನೋ.

ಪಗೆವೊಯ್ (ಕ್ರಿ). ದ್ವೇಷವನ್ನುಂಟುಮಾಡು; ವಿರೋಧವನ್ನುಂಟುಮಾಡು : ಧನಹೀನಂ ಧನಮಿತ್ರಂ ಧನಮುಳ್ಳವನಾವನ ಸ್ವರೂಪಂ ಚಿದ್ರೂಪ ನಿವಾಸಿಯಾನದರ್ಕಂದೆನಗಮವಂಗಂ ವಿದೊಷಕರ್ ಪಗೆವೊಯ್ದುರ್ (ದಶಕು. ೮–೭೫). [ಪಗೆ₂+ಪೊಯ್₂]

ಪಗೆಸಾಜು (ಕ್ರಿ). ದ್ವೇಷವನ್ನು ಹೋಷಿಸು ; ಶತ್ರುತ್ವವನ್ನು ಸಾರು : ಗೂಗೆಗಳ್ಳಗಲಂ ನಾಸ್ತಿಕರ್ ವೇದಶಾಸ್ತ್ರಂಗಳಂ ಗಾಂಪ ರೊಳ್ಳಬ್ಬವನೆಗ್ಗರಕ್ಷರಿಗರಂ ಪಗೆಸಾಜಿ ಪಂಬಲಿಸಿ ಬಸವಟಿಬಂತೆ ಪಲ ತೆಱದಿಂ ಬನ್ನಂಬಡುವರ್ (ಚಕವಂ. ೨೫–೧೪). [ಪಗೆ₂+ಸಾಜು₁]

ಪಗೆಸುಯ್ (ಕ್ರಿ). ದ್ವೇಷವನ್ನು ತಾರು ; ಶತ್ರುತ್ವವನ್ನು ಹೊಮ್ಮಿಸು : ಕಳ್ ನೆತ್ತಿಗೇಱಿದೊನ್, ಪಗೆಸುಯ್ದು ದ್ವೇಷಮನ್ ತಾಜುತ್ತುಮುಱುಬಿದೊನ್ . . . ಇದೊ ಬಿಟ್ಟು ಕೆಡೆದೊನ್ (ಅಂತಿಗೊ. ೬–೧೩೦). [ಪಗೆ₂+ಸುಯ್₁]

ಪಗೋಡ, ಪೆಗೋಡ (ನಾ). ೧. ಬೌದ್ಧ ದೇವಾಲಯ : ಈ ಬೌದ್ಧರ ದೇವಾಲಯಗಳಿಗೆ ಬ್ರಹ್ಮದೇಶದಲ್ಲಿ "ಪಗೋಡ"ಗಳೆಂದೆನ್ನುವರು (ಎಆಗ್ನೇ. ೬೧). ೨. ಗೋಪುರ : "(ಇಂಡಿಯ, ಚೀನ, ಮೊ. ದೇಶಗಳಲ್ಲಿ) ದೇವಸ್ಥಾನ, ಪವಿತ್ರಭವನ, ಮು. ಚತುರಸ್ರ ಗೋಪುರ ; ಪಗೋಡ" (Pagoda ಇಂಗ್ಲಿ) ; ಒಂದು ಮನುಷ್ಯಜೀವನ ವನ್ನುಳಿಸುವುದೆಂದರೆ ಬಳಂತಸ್ತಿನ ಪಗೋಡವನ್ನು ಕಟ್ಟಿಸುವುದಕ್ಕಿಂತಲೂ ದೊಡ್ಡದು ಎಂಬುದನ್ನು ನೆನಪಿನಲ್ಲಿಟ್ಟುಕೊ (ಚಿತ್ಸ. ೧೧೧). ೩. ದಕ್ಷಿಣ ಭಾರತದಲ್ಲಿ ಬಳಕೆಯಲ್ಲಿದ್ದ ಮೂರುರೂಪಾಯಿಗಳ ಮೌಲ್ಯದ ಒಂದು ನಾಣ್ಯ : "ಪ. ಇಂಡಿಯದಲ್ಲಿ ಹಿಂದೆ ಬಳಕೆಯಲ್ಲಿದ್ದ ಒಂದು ಚಿನ್ನದ ನಾಣ್ಯ : ಪಗೋಡ" (Pagoda. ಇಂಗ್ಲಿ) ; ಸಾವಿರ ಪಗೋಡಾಗಳನ್ನು ಧಕ್ಷೀಸ್ ಕೊಡು (ದಾಲಶ್. ೬೪೬). **ಪೆಗೋಡಃ** ೧. ಆವರ ದೇವಾಲಯಗಳಿಗೆ "ಪೆಗೋಡ" ಎನ್ನುತ್ತಾರೆ. ಇಂಥ ಹಲವು ಪೆಗೋಡಗಳು ಈ ದೇಶದಲ್ಲಿವೆ (ಬಾಲಶ್ರ. I, ೬೮೧). 'ಡಾಗೋಬ' ಪರಾ.

[←ಇಂ. Pagoda ; ಪೋರ್ಚು. Pagode]

ಪಗ್ಗ, ಹಗ್ಗ (ನಾ). ೧. ನಾರನ್ನು ಹೊಸೆದು ಮಾಡಿದ ದಪ್ಪ ಹುರಿ; ಪಾಶ ; ರಜ್ಜು : ಪರಿವ ಮನಕ್ಕೆ ಪಗ್ಗವಿಲ್ಲಂ ನೋಡುವ ಕಣ್ಗಳ್ಗೆಡೆ ಗಟ್ಟಿಲ್ಲಂ (ಅಸಂಪು. ೧೧–೩೨ ಪ); ತರಕಾಱಂಬೊಲಡರ್ತು ಮುಪ್ಪಡಸಿ ಬೇಗಂ ಬಂದು ಕೊಯ್ತಾಳ್ಗಳಂ ಸೆರೆಯೆಂಬಗ್ಗದ ಪಗ್ಗದಿಂ ಬಿಗಿದು ನಂಟರ್ನೋಡನೋಡಲ್ (ಧಮ್ಮನಾ.೫–೪೭). **ಹಗ್ಗ** : ೧. "ಯೋಕ್ತ್ರಂ, ರಶ್ಮಿಃ, ಅಬಂಧಃ — ಈ ೩ ಹಗ್ಗಂ" (ಹಲಾಯು. ೪೪–೪೫೧); ಹರಿವ ಮನಮಂ ಕಟ್ಟಿ ಹಿಡಿವ ಹಗ್ಗಂ ಮಾಡಿ (ಇಳಿರ. ದೇ. ೪೮–೧೬); ಹೊಳೆವ ಹಗ್ಗನೆಯಾದ ಮತ್ಸ್ಯನು (ಸಂಭಪ. ೪–೮) ; ಸುಗ್ಗಾದ ಬಲವ ಕಾಣುತಲಾ ವರುಣನು ಹಗ್ಗದಿಂದಸುರನಾಯಕರಂ ಮಗ್ಗಿಸಿ (ಅಂಜಚ. ೬–೧೪೮); ಹಮ್ಮುಯೆಂಬೊದೆ ಎಮ್ಮೆ ಗಮ್ಮುಯೆಂಬೋದೆ ಹಗ್ಗ ಹೆಮ್ಮೆ ಎಂಬೊದೆ ಅದಕೆ ಧಮ್ಮಗುದ್ದಿ (ಪುರಂದ. ೨–೫೫–೧) ; ಹಸಿಗೂಡಿ ಹಳ್ಳ ನಾರೊಡಗೂಡಿ ಹಗ್ಗ (ಧರಚ. ೪೯–೪೨); ಸಗ್ಗ ಸಗ್ಗ ಸಗ್ಗವದೋ ಅದು ಉರುಲಿನ ಹಗ್ಗ (ಅರಳು. ೪೧೨–೧೨). ೨. ಒಂದು ಬಗೆಯ ಆಯುಧಃ ಭಲ್ಲಿಯೆಂದೂ ಹಗ್ಗ ವೆಂದೂ ಕ್ಷುರಪ್ರವೆಂದೂ . . . ಮೂವತ್ತೆರಡು ಆಯುಧಗಳ ಹೆಸರು (ಪಜ್ಞಟೀ. ೨–೩೭).

ಹಗ್ಗ ಹಾಕು = ಉರುಲು ಬಿಗಿ ; ಗಾಳಹಾಕು : ಕಾಂತ ರಾಜನು ಮತ್ತೆ ಕಾಮಾಕ್ಷಿಯ ಪ್ರಾಪ್ತಿಗಾಗಿ ಹಗ್ಗ ಹಾಕತೊಡಗಿದನು (ಯಧುಂರಾ. ೪೧). [< ಪ್ರಾ. ಪಗ್ಗಹ./ಸಂ. ಪ್ರಗ್ರಹ]

ಪಗ್ರಿ (ನಾ). ರುಮಾಲು ; ಪಗಡಿ : ಧೋತಿಗಳನ್ನುಟ್ಟುಕೊಂಡು ಉತ್ತರೀಯಗಳನ್ನು ಧರಿಸಿ, ಪಗ್ರಿಗಳನ್ನು ಹಾಕಿಕೊಂಡು . . . ಕೀರ್ತನೆಗಳನ್ನು ಹಾಡುತ್ತಾರೆ (ಆಭಾಸ್ಯ.೯೯). [<ಪಗಡಿ₁./ಇಂ. Puggree]

ಪಚಂಪಚಿ (ನಾ). ಮರದರಿಸಿನ : "ಮರದರಿಸಿನಂ ಪಚಂಪಚಿ" (ಸುಂಗರಾ. ೩೯–೨೮) ;"ಪೀತದ್ರುಃ . . . ಪಚಂಪಚಾ, ದಾರುಹರಿದ್ರಾ, ಪರ್ಜನೀ –೩ ಮರದರಿಸಿನ" (ಶಿದ್ಧಾಂತಿ. ೧೩೫). [ಸಂ. ಪಚಂಪಚಾ]

ಪಚಕ್ (ಅ). ಒಂದು ಅನುಕರಣಾವ್ಯಯ : ಕೆಸರನ್ನು ಪಚಕ್ ಎಂದು ತುಳಿದ ಮೇಲೆ ಬಟ್ಟೆಯಿಲ್ಲ ಕೆಸರಾಗದೆ ಇರುತ್ತದೆಯೆ ? (ರೂಢಿ).

ಪಚಗಾರಿಸು 'ಪಚಾರಿಸು₁' ನೋ.

ಪಚಡಿ 'ಪಚ್ಚಡಿ' ನೋ.

ಪಚನ (ನಾ). ೧. ಬೇಯಿಸುವುದು; ಅಡುವುದು: ಅವಕಾಶ, ವ್ಯೂಹನ, ಪಚನ, ಸಂಗ್ರಹಣ, ಧಾರಣವೆಂದು ಆಕಾಶಾದಿ ಪಂಚ ಮಹಾಭೂತಗಳ ಕೃತ್ಯಗಳು (ಹಿಂದಸಾ. ೨೯೪); ನರಪಶುವನ್ನು . . . ತಾಯಿ ಹಿಡಿದುಕೊಂಡು ಇರಲು, ತಂದೆಯು ಖಂಡಿಸಿ ಪಚನವನ್ನು ಮಾಡಿಸಬೇಕು (ಪುಂಸಾ. ೨೦೦). ೨. ತಿಂದ ಆಹಾರವು ಅರಗುವುದು; ಜೀರ್ಣವಾಗುವುದು: ಉಪ್ಪು . . . ಅದರಿಂದ ಅನ್ನಕ್ಕೆ ರುಚಿ ಹುಟ್ಟುವುದಲ್ಲದ ಪಚನವೂ ಆಗುತ್ತದೆ (ಮುಂಬಯಿ. ೪-೧೯೪); ರಕ್ತದ ಸಕ್ಕರೆ ಹೆಚ್ಚಳಿಕೆ, ಸ್ನಾಯುಗಳಿಗೆ ಹೆಚ್ಚು ರಕ್ತ ಹರಿವು, ಪಚನ ಕುಂದುವುದೇ ಮೊದಲಾದುವು ಈ ಪರಿಣಾಮಗಳು (ಕವಿಕೋ, I, ೨೨೩).

ಪಚನವಾಗು = ಅರಗು; ಜೀರ್ಣವಾಗು: ಅನ್ನದಿಂದ ನಮ್ಮ ಮೈಯಲ್ಲಿ ಶಕ್ತಿ ಬರಬೇಕಾದರೆ ಅದು ಪಚನವಾಗಿ ನಮ್ಮ ಹೊಟ್ಟೆಯಲ್ಲಿ ಅದರ ರಸವಾಗಲಿಕ್ಕೆ ಬೇಕು (ಮುಂಬಯಿ. ೪-೩೨). [ಸಂ.]

ಪಚನಂಗೆಯ್, ಪಚನಗೈ (ಕ್ರಿ). ೧. ಬೇಯಿಸು; ಅಡು. ೨. (ಅಲಂ) ಅಡಗಿಸು; ನಾಶಪಡಿಸು: ಶುಚಿ ತಾನಾಗದೆ ಸರ್ವ ಶಾಸ್ತ್ರನಿಪುಣಂ ತಾನಾಗದೇ ಕಾಮಮಂ ಪಚನಂಗೆಯ್ಯದೆ . . . ಪಚನ ಬ್ರಹ್ಮದೆ ಮುಕ್ತಿಯೇ (ಸೂಸುತೆ. ೧೦೦). **ಪಚನಗೈ**: ೧. ಶುಚಿರುಚಿಯಪ್ಪಂತೆ ಸುಯಿಧಾನದೊಳ್ಕೆದೆ ಪಚನಗೈವುದು ಭಾವೆಯರು (ಪದಿಬ. ೪-೨೬). [ಪಚನ + ಕೆಯ್,]

ಪಚನಕ್ರಿಯೆ (ನಾ). ೧. ಅರಗುವ ಕಾರ್ಯ: ಎಚ್ಚೆಯಲ್ಲಿ ಕರಿದ ಪದಾರ್ಥಗಳು ಪಚನಕ್ರಿಯೆಗೆ ಅಡ್ಡಿಯನ್ನುಂಟುಮಾಡುತ್ತವೆ (ರೂಢಿ). ೨. ಅರಗಿಸಿಕೊಳ್ಳುವ ಕೆಲಸ: ಇದೇ ಅಲ್ಲವೇ ಅನುಭವವನ್ನು ಸ್ವೀಕರಿಸುವ ರೀತಿ—ಅದನ್ನು ಅರಗಿಸಿಕೊಳ್ಳುವ ರೀತಿ . . . ಅದೊಂದು ದೊಡ್ಡ ಪಚನಕ್ರಿಯೆ (ಮೂರುದಾ. ೨೦೫). [ಪಚನ + ಕ್ರಿಯೆ]

ಪಚನಗೈ 'ಪಚನಂಗೆಯ್' ನೋ.

ಪಚನರಸ (ನಾ). ಆಹಾರವು ಜೀರ್ಣವಾಗುವಂತೆ ಮಾಡುವ ದೇಹದೊಳಗೆ ಉತ್ಪನ್ನವಾಗುವ ಒಂದು ಬಗೆಯ ದ್ರವವಿಶೇಷ; ಪಿತ್ತರಸ: ಪಿಷ್ಟವು ಪಚನರಸಗಳಿಂದ ಮಾಲ್ಟೋಸ್ ಮತ್ತು ಅಂತ್ಯದಲ್ಲಿ ಗ್ಲೂಕೋಸ್ ಸಕ್ಕರೆಯಾಗಿ ವಿಭಜಿಸಲ್ಪಡುತ್ತದೆ (ಗೃಜಿ. ೧೬). [ಪಚನ + ರಸ]

ಪಚನವ್ಯಾಪಾರ (ನಾ). ಆಹಾರವನ್ನು ಜೀರ್ಣವಾಗಿಸುವ, ಕೆಲಸ,—ಕಾರ್ಯ: ಪಿಷ್ಟಗಳು ಪಚನವ್ಯಾಪಾರದಲ್ಲಿ ಮೊದಲು ಶರ್ಕರೆಯ ಗುಣವನ್ನು ಹೊಂದಿ, ಬಳಿಕ ಜೀರ್ಣವಾಗುತ್ತವೆ (ಮುಂಬಯಿ. ೫-೧೬೩). [ಪಚನ + ವ್ಯಾಪಾರ]

ಪಚನಿಸು (ಕ್ರಿ). = ಪಚನಂಗೆಯ್ ೧: ತನಿವಾಲ ಶರ್ಕರೆಯ ನಾಡೆ ಪಚನಿಸುತ (ಲಿಂಗಪು. ೪-೩); ಕಣಿಕದ ಬಟು ತೆಗದು ಪಣಿಕಸೂಸಲನಕ್ಕೆ ಮುಣಿದು ಸೈತವದ ವರ್ತುಳಭಾಷಣಂಗೈದು ಲಣತಗದಿಯಿಂ ಪಚನಿಸುತ್ತ (ಲಿಂಗಪು. ೪-೧೦). [ಪಚನ + – ಇಸು,]

ಪಚನೆ (ನಾ). ಪಕ್ವಗೊಳಿಸುವಿಕೆ: ಜೇವರನೆರೆಯದೆ ಕಾವ್ಯದ ರಚನೆಯೆನುತಿಯುರಿ ಇಲ್ಲದೆ ಭಾವದ ಪಚನೆಯೆಂ? (ಗಣೇಶ. ೧-೨). [ಸಂ. ಪಚನ]

ಪಚಪಚ (ನಾ). ಕೆಸರು ಮೊದಲಾದ ದ್ರವ ಪದಾರ್ಥಗಳನ್ನು ಒಂದೇ ಸಮನೆ ತುಳಿಯುವಾಗ ಉಂಟಾಗುವ ಧ್ವನಿಯನ್ನು ಅನುಕರಿಸುವ ಶಬ್ದ: ಆ ರಸ್ತೆಗೆ ಟಾರು ಹಾಕಿಲ್ಲ. ಮಳೆ ಬಂದುಬಿಟ್ಟರೆ ಎಲ್ಲರೂ ಪಚಪಚ ಎಂದು ರಾದಿಮಣ್ಣನ್ನು ತುಳಿದುಕೊಂಡು ಓಡಾಡಬೇಕು (ರೂಢಿ).

ಪಚರಿ 'ಪಚ್ಚಾರಿ' ನೋ.

ಪಚಾರ, (ನಾ). ಮೂದಲಿಕೆ; ಅವಹೇಳನ; ನಿಂದೆ: 'ಪಚಾರಿಸು,' ಪರಾ. [<ಪ್ರಾ. ಪಚ್ಚಾರ]

ಪಚಾರ, (ನಾ). ಪ್ರಸಾರ; ಪ್ರಚಾರ: 'ಪಚಾರಿಸು,' ಪರಾ. [<ಸಂ. ಪ್ರಚಾರ]

ಪಚಾರಿಸು, ಪಚಗಾರಿಸು (ಕ್ರಿ). ೧. ಹೀಯಾಳಿಸು; ಮೂದಲಿಸು; ಅವಹೇಳನ ಮಾಡು: ಓಡುವ ಖಳಪರಿವೃಢನಂ ನೋಡಿ ದುಹೀನಾಥನಂದು ಧನುವಂ ಕೈಕೊಂಡೋಡದಿರಿದಿರ್ದೆನುತ್ತುಂ ಕೂಡೆ ಪಚಾರಿಸುತೆ ಬೆಂಬಿಡಿದನತಿಜವದಿಂ (ಉದ್ಭಟ. ೪-೧೦೧); ವನಧಿಪನ ಸೋಲವ ಪಚಾರಿಸಿ ತನಿನಗೆಯೆನುಬ್ಬಿಸುವ ಹಾಸ್ಯದ ವಿನುತಪರಿಜಾನಕರಿ ನೆನೆದುದು ಸಭೆ ದಶಾನನನ (ತೊರಂರಾ. ೬-೧೦-೧೦); ಕರ್ಣಜಂಗಗನದಿಂ ದಿದ್ದಿಳೆಗೆ ಪೊಡವೆಂದಿನಂತೆ ಪುಟನೆಗೆದೆದ್ದು ರೋಷದಿಂ ಖಂಡುಖಂಡಿಸಿ ಪಾರ್ಥಸುತನಂ ಪಚಾರಿಸಿ ಕನಲ್ದು ತೆಗೆದಿಸಲ್ (ಜೈಮಿಭಾ. ೫೩-೧೯); ಇವರ ಮನೆದೇವರು ಸ್ವಪ್ನದಲ್ಲಿ ಪಚಾರಿಸಿ-ನನ್ನ ಹೊತ್ತುಕೊಂಡು ಕಂಡ ಕಡೆಗೆ ಹೋಗಬೇಡ . . . ಎಂದು ಅಪ್ಪಣೆ ಕೊಡಿಸಿ (ಚತ್ರಪಾ. ೪). ೨. ನಿರ್ಲಕ್ಷಿಸು; ಉದಾಸೀನ ಮಾಡು: ದಾನವನಾ ಗದೆಯ ಬೆಂದಿಡದೆ ತೆಗೆದಬ್ಬರಿಸಿ ದೇವನಡಲು ಬಹ ಗದೆಯನು ಪಚಾರಿಸಿ ಹಿಡಿದ ನಸುರಾರಿ (ಪ್ರಹ್ಲಾಜ. ೩-೪೨). ೩. ಅನಾಯಾಸವಾಗಿ ಎದುರಿಸು: ಸಾರಣನ ಮುಪ್ಪತ್ತು ಬಾಣದಿ ಪಚಾರಿಸುತ ಮಾರೀಚನಂ ಪತ್ತು ಮರ್ಗಾಣದಿ ರುಧಿಸುತ (ರಾಪನೋ. ೪೨) ; ಭೂರಿಸರಳ ಸವರುತುರೆ ಪಚಾರಿಸುತ್ತಲೆ ಚಾರಿವರಿವುತಂದು ರವಿಕುಮಾರಕನಲಿ ಭೂಪನೆದೆಯ ಬೀರುವಂತೆ ಯಚ್ಚ ಶರದ ಸಾರಗಟಿಸಲು (ಕರ್ಣಾಶಾ. ೧೧). **ಪಚಗಾರಿಸು**: (ಕ), [ಪಚಾರ, + –ಇಸು,]

ಪಚಾರಿಸು, ಪಚ್ಚರಿಸು (ಕ್ರಿ). ಪ್ರಚಾರಪಡಿಸು; ಪ್ರಸಿದ್ಧಪಡಿಸು: ಮುನ್ನಿನ ಕಲಿವೀರ ಧೀರರು ಕಾದಿದ ರಣಗಳನು ಪರಿಪರಿಯಲಿ ಬಣ್ಣಿಸಿ ಹೇಳಬಹುದಲ್ಲದೆ ಆ ದಳವಿದಿರಾದಲ್ಲಿ ಬಿರಿದ ಪಚಾರಿಸಿ ಕಾದಿ ತೋಜಿಲು ಬಾರದು (ಬಸವ. ೬೭೮); ವ್ಯಾಳಂ ಕೇಳ್ದು ಫಲಗಿರಿಯಂ ಪಣ್ಣೆ ಕಡೆಗಾಲದ ಕೃತಾಂತನಂತೆ ದಂತಿಯಂ ನೂಂಕಿ ತನ್ನ ಪೆಸರಂ ಪಚಾರಿಸುತ್ತಂ ದುಷ್ಪವಾಕ್ಯನ ಸಮ್ಮುಖಕ್ಕೆ ನರೆ (ಪುಣ್ಯಾಸ್ರ. ೭-೬೨ಪ); ಕನಲಿ ನುಡಿಗಳಲಾಲಿ ಬೊಬ್ಬಿರಿದನುವರಿತು ಬಿಲ್ಲಾಳು ಸಮರವನೊರಿಸಿತು ಪಯಪಾಡುಪಂಥಗಳಲಿ ಪಚಾರಿಸುತೆ (ಕೋಗಮ. ೨೧-೪). **ಪಚ್ಚರಿಸು**: ಅನ್ಯದರ್ಶನಮತಂಗಳ ಪುಚ್ಚಳಿಸಿಯೆನ್ನ ಭಕ್ತಿಯಂ ಘನತರಂ ಮಾಡಿ ಪಚ್ಚರಿಸಿ ವರ್ಧನಗೆಯ್ವುದು (ಪಾಸೋಪು. ೧-೫೭). [ಪಚಾರ, + –ಇಸು,]

ಪಚಾಲೆ 'ಪಚ್ಚಾರಿ' ನೋ.

ಪಚಿಪಚಿ (ನಾ). ಒಂದು ಅನುಕರಣ ಶಬ್ದ: ಗೋಡೆ ಹಾಳುವುದಕ್ಕಾಗಿ ಮಣ್ಣನ್ನು ಪಚಿಪಚಿ ಎಂದು ತುಳಿಯಬೇಕು (ರೂಢಿ).

ಪಚಿಯಿಸು, ಪಚಿಸು (ಕ್ರಿ). ೧. ಅಡುಗೆ ಮಾಡು; ಬೇಯಿಸು: ದಹಿಸುವುದಿಂತು ದಾಹಕಮುಂ ಪಚಿಯಿಸುವುದೆಂದಿಂತು ಪಾಚಕಮುಂ ಮೆಂದಿಂತು ವಿಷಯಭೇದದಿಂ ದಾವಾಗ್ನಿದ್ರವ್ಯಂ ದ್ವಿವಿಧಂ (ಪಸಾರ.೩೯೦). **ಪಚಿಸು**: ೧. ಘೃತ ದುಗ್ಧದಲಿ ಪಚಿಸಿದ ಪಲವು ಪರಿಮಳವೆರೆದ ಶಾಕಾದಿಗಳನು ತಂದುಜಿ ಬಡಿಸಿದರು ಬಾವನ್ನಗಂಧಿಯರು (ಸಸತ್ಕು. ೧೪-೭); ಪಚನವಂ ಮಾಡುವಂ ಪಚಿಸುವಂ (ಶಬ್ದಾನು. ೫೩೩ ಪ್ರಯೋ); ಹೊಂಬಟ್ಟಲ್ಲಿ ನರಮಾಂಸವಂ ತಂದು ನನ್ನ ನಶಕ್ಕೆ ಕೊಡಲು ಅದಂ ಪಚಿಸುವುದಕ್ಕೆ ಬಾಣಸದ ಮನೆಗೆ ಕಳುಹಿ (ಶುಕಸ. ೨೧೪); ತನ್ಮಾಗದಂಗಮಂ ಕಡಿದು ಖಂಡಮಂ ತೆಗೆದು . . . ಪೊರ್ಕಿ ಸುಂಟಗೆಯಿಂದೆ ಪಚಿಸಿ (ಕುಮಾಪು. ೪-೨೨೫). ೨. ಅರಗು; ಜೀರ್ಣವಾಗು: ಹಸಿವೆಯಾಗದಿರುವುದು, ಅನ್ನವು ಪಚಿಸದಿರುವುದು (ಬ್ರಹ್ಮಜೀ. ೨೨). 'ಪಚನಿಸು' ಪರಾ. [<ಪಚನ+–ಇಸು,]

ಪಚಿಸು 'ಪಚಿಯಿಸು' ನೋ.

ಪಚ್ಚ$_{1}$, **ಹಚ್ಚ**$_{1}$ (ಸಪೂರೂ). 'ಪಸುರ್' ಎಂಬ ನಾಮವಾಚಕಕ್ಕೆ ಸಮಾಸಗಳಲ್ಲಿ ಬರುವ ಆದೇಶರೂಪ : 'ಪಚ್ಚಗಂಬಳಿ', 'ಪಚ್ಚಗಪ್ಪುರ' ಪರಾ. **ಹಚ್ಚ**$_{1}$: 'ಹಚ್ಚನೆ', 'ಹಚ್ಚಹಸಿ' ಪರಾ.

ಪಚ್ಚ$_{2}$, **ಪಚ್ಚೆ**$_{2}$, **ಹಚ್ಚ**$_{2}$ (ನಾ). ೧. ಲೇಪನ ; ಬಳಿಯುವಿಕೆ : ಓರೊರ್ಮೆ ಕುಳಿರ್ವ ಕಪ್ಪುರದ ಪಚ್ಚಮನಮರ್ಚ ಮನ್ಮಥಜ್ವಲನಶಾತದಿಂ ಮೆಯ್ಗೆ ವಿಗೆ ಪುಗುಟ್ಟುದೆಂಬ ಸಂಕೆಯಂ ಕೆಳದಿಯರ್ಗೆ ಬಳಯಿಸುವಳ್ (ಪರ್ಥಪು. ೪-೫೭ ವ). ೨. ಒಡವೆ ; ಅಭರಣ : "ಪಸದನರ, ಪಚ್ಚಂ, ಕೊಡಂ—೩ ಅಭರಣಂ" (ಕಶಸಾ.೩೩-೪೦೯); ಅಲರ್ವಚ್ಚಂ ಪಚ್ಚಮುಂ ಪೊಚ್ಚಮುಮೆನಿಸದೆ ಮೆಯ್ಯೆತ್ತೊಡಂಬಟ್ಟು ತನ್ನೊಳ್ ನಿಲೆ (ಶಾಂತಪು. ೪-೪೫) ; ಮುಂತ್ತಿನ ಪಚ್ಚಮಂ ತುಡುವುದಂ ಮಜ್ಜಿದೊಪ್ಪಿರೆ (ಕಬ್ಬಕಾ. ೩೩೬) ; ಅಚ್ಚಪೂಗಳನಜಸಿ ಕೊಯ್ದು ತಂದವರಿಂದೆ ಪಚ್ಚಮಂ ಮಾಡಿ ತತ್ತತ್ಸ್ಥಾನಗಳಳವಡಿಸಿ (ಚಬಪು.೩೪-೩೧); ಚರಿಪ ನೀಲಂಪ ಕಾಂತೆಯರ ಪಚ್ಚದ ಪಚ್ಚೆಯ ಕಾಂತಿ ಕಣ್ಗೆ ಮುಂಬರಿಯೆ ಕಜುಂಕೆಗೆತ್ತಿಳಿಸಿ (ರಾಜಶೇ.೧೧-೧೧೯). 'ಪಂದಲೆವಚ್ಚ' ಪರಾ. ೩. ವೇಷ : 'ಪೊಱಿಪಚ್ಚ' ಪರಾ. ೪. ಸಿಂಗಾರ ; ಅಲಂಕಾರ : ಪೊಳೆವ ಪಚ್ಚದೊಳ್ ಸೊಗಯಿಸುವ ನೃಪುತಲ್ಪದೊಳ್ ಲಲಿತಗಂಗಾನದೀಲಹರಿಕಾತಲ್ಪದೊಳ್ . . . ಭಾವಿಜನಜನನ ಸತಿ ಪವಡಿಸಿ ನಿಶಾಂತದೊಳ್ (ಆದಿಪು. ೭-೨೭ ರಗಳೆ).

ಪಚ್ಚೆ$_{2}$: ೨. "ಪಚ್ಚೆಯೆನಲಾಭರಣಮಕ್ಕುಂ" (ಕಶರ. ೫೮) ; ಇಂತು ನೆಗಳಲು ದೇಶದೂರೂರ ಪಚ್ಚೆಗಳು ಸಂತತಂ ಬಂದವಾ ನೃಪನ ಮನದಿಚ್ಚೆಗಳು (ಸಂಬರ. ೧-೧೫) ; ಮಾವಿನ ತಳಿರನುಟ್ಟು ದಂತದ ಬಳೆಯನಿಟ್ಟು ಪೂವಿನ ಪಚ್ಚೆಗಳೊಳಲಂಕರಿಸಿ . . . ಪಾಡುತಿರ್ಪ ವನಚರಿಯರಿಂ ವನಮೆಸೆದುದು (ಚಬಪು. ೫೩-೨೩). **ಹಚ್ಚ**$_{2}$: ೨. ಮಱಿದಿಂಗಳ ಹಚ್ಚಂ ಹೆಮ್ಮೆಯ ಸಮ್ಮಂಗುಡುಗೆಮಗೆ (ಉದ್ಭವೇ. ೭-೩). 'ಕುಳಿರ್ಗಯ್ಯ ಹಚ್ಚ' ಪರಾ. [<ಪಚ್ಚು$_{3}$]

ಪಚ್ಚ$_{5}$ 'ಪಸು$_{1}$' ಪರಾ.

ಪಚ್ಚಕರ್ಪೂರ 'ಪಚ್ಚಗಪ್ಪುರ' ನೋ.

ಪಚ್ಚಕರ್ಪೂರೆ (ನಾ). (ಕರ್ಪೂರವೃಕ್ಷದ ರಸದಿಂದ ಉತ್ಪನ್ನವಾಗುವ ನಸುಹಸುರು ಬಣ್ಣದ) ಒಂದು ಬಗೆಯ ಸುಗಂಧದ್ರವ್ಯ : "ಕರ್ಪೂರಃ, ಘನಸಾರಃ . . . ಹಿಮವಾಲುಕಾ—೫ ಕರ್ಪೂರದ ಹೆಸರು, ಪಚ್ಚಕರ್ಪೂರ" (ನಿಘಂ೦೩.೩೦೮); ಪಚ್ಚಕರ್ಪೂರ, ಅಭ್ರಕಳಭಸ್ಮ . . . ಇವುಗಳಲ್ಲಿ ನಾಲಿಗೆಗೆ ಗಂಡೂಷವನ್ನು ಮಾಡಲು ಪಿತ್ತಜ್ವರ . . . ಮೊದಲಾದುವು ಗುಣವಾಗುವುವು (ಸಳವೈ. ೮೫); ಪಚ್ಚಕರ್ಪೂರ . . . ಪನ್ನೀರು ಮುಂತಾದ ಸಹಜ ಸುಗಂಧದ್ರವ್ಯಗಳಲ್ಲಿ ಮುಳುಗಿ ಕೇಲಿಪವರು ಆ ಕಾಲದವರು (ಸಾಹಿಜೇ. ೫೨). [ಪಚ್ಚ$_{1}$(<ಪಸುರ್$_{2}$)+ಕರ್ಪೂರ]

ಪಚ್ಚಕ್ಖಾಣ, ಪಚ್ಚಖ್ಖಾಣ (ನಾ). [ಜೈನ] ಸೀಮಿತಕಾಲಕ್ಕೆ ಆಹಾರ ಬಿಡುವುದು ಅಥವಾ ದೋಷ—ಕರ್ಮಗಳನ್ನು ಯಾವಜ್ಜೀವ ತ್ಯಾಗಮಾಡುವುದು : 'ಪಚ್ಚಕ್ಖಾಣಂಗುಡು' ಪರಾ. **ಪಚ್ಚಖ್ಖಾಣ** : 'ಪಚ್ಚಖ್ಖಾಣಂಗೊಳ್' ಪರಾ.

[<ಪ್ರಾ. ಪಚ್ಚಕ್ಖಾಣ]

ಪಚ್ಚಕ್ಖಾಣಂಗುಡು (ಕ್ರಿ). [ಜೈನ] ಪಚ್ಚಕ್ಖಾಣ ವ್ರತಕ್ಕೆ ದೀಕ್ಷೆಯನ್ನು ಕೊಡು ; ಆಹಾರನಿವೃತ್ತಿಯ ಪ್ರತಿಜ್ಞೆಯನ್ನು ಮಾಡಿಸು : ಭಟಾರಾ ಇನಿತು ಕಾಲಮುಂಡುದು ಸಾಲ್ದುಮೆಮಗೆ ಯಾವಜ್ಜೀವಂ ಬಾಲ್ದನ್ನೆಗಮುಪವಾಸ ಪಚ್ಚಕ್ಖಾಣಂಗುಡುವುದೆಂದೊಡೆ (ಪಡ್ಡಾರಾ. ೮೨-೨೧). [ಪಚ್ಚಕ್ಖಾಣ+ಕುಡು$_{1}$(<ಕೊಡು$_{1}$)]

ಪಚ್ಚಖ್ಖಾಣ 'ಪಚ್ಚಕ್ಖಾಣ' ನೋ.

ಪಚ್ಚಖ್ಖಾಣಂಗೊಳ್ (ಕ್ರಿ). [ಜೈನ] ಪಚ್ಚಕ್ಖಾಣವ್ರತವನ್ನು ತೊಡು ; ಆಹಾರನಿವೃತ್ತಿಯ ಪ್ರತಿಜ್ಞೆಯನ್ನು ಮಾಡು : ಮತ್ತಂ ತ್ರಿರಾತ್ರಕ್ಕೆ ಪಚ್ಚಖ್ಖಾಣಂ[ಪಾಠಾಂ. ಪ್ರತ್ಯಾಖ್ಯಾನಂ]ಗೊಂಡರ್ (ಪಡ್ಡಾರಾ. ೩೪-೨೭). [ಪಚ್ಚಖ್ಖಾಣ(<ಪಚ್ಚಕ್ಖಾಣ)+ಕೊಳ್$_{1}$]

ಪಚ್ಚಗಂಬಳಿ (ನಾ). ಹಸುರು ಬಣ್ಣದ ಕಂಬಳಿ : ಕೆಳಗೆ ಎಲ್ಲೆಡೆಗೆ ಹುಲ್ಲಿನ ಪಚ್ಚಗಂಬಳಿ ! ನಡುನಡುವೆ ಜೋಡಿಸಿರುವ ರತ್ನಗಳಂತೆ ಕಾಡು ಕುಸುಮಗಳ ಸೊಬಗು (ಚಲುತಿ. ೧೦೮).

[ಪಚ್ಚ$_{1}$(<ಪಸುರ್$_{2}$)+ಕಂಬಳಿ]

ಪಚ್ಚಗಪ್ಪುರೆ, ಪಚ್ಚಕರ್ಪುರ, ಪಚ್ಚಗರ್ಪುರ (ನಾ). = **ಪಚ್ಚಕರ್ಪೂರ** : ಸೊಗಯಿಸುವ ಪಚ್ಚಗಪ್ಪುರದ ಪುಸಿಯಂ ಮೈಗೆ ತಿಗುರಿದೊಡೆ (ಜೈನಿಭಾ. ೩೧-೨). **ಪಚ್ಚಕರ್ಪುರ** : ಪಚ್ಚಕರ್ಪುರದ ಪನ್ನೀರ ಜಳಕಕೆ ಹಿಡಿಸಿ ನಿಷ್ಟುಟದ ಮುಜ್ಜನಕೆಜ್ಜಿದು (ಗುಣಭ. ೨-೪೬). **ಪಚ್ಚಗರ್ಪುರ** : ಬೀಯೆಲೆಗಳಂ . . . ಪಚ್ಚಗರ್ಪುರದ ಪರಿಮಳದ ಹರುಕಂ ಬೆರೆಸಿ ಮೆಚ್ಚುತ್ತ ಶಿವಗಿಕ್ಕು (ಅನೀರ. ದೇ. ೪೪-೩). [ಪಚ್ಚ$_{1}$(<ಪಸುರ್$_{2}$)+ಕರ್ಪುರ]

ಪಚ್ಚಗರ್ಪುರ 'ಪಚ್ಚಗಪ್ಪುರ' ನೋ.

ಪಚ್ಚಗಾಱಿ, ಪಚ್ಚೆಗಾಱಿ (ನಾ). ೧. ವಸ್ತ್ರಾಲಂಕಾರ ಮಾಡುವ ವೃತ್ತಿಯನ್ನು ಅವಲಂಬಿಸಿರುವವನು ; ಸಿಂಗರಿಸುವ ಊಳಿಗವನ್ನು ಮಾಡುವವನು ; ಪ್ರಸಾಧನಗಾರ : "ಪಚ್ಚಾಯ್ಲಂ =ಪಚ್ಚಗಾಱಿಂ" (ಶಮದ.ಪಂ. ೨). ೨. ಅಲಂಕಾರ ಮಾಡಿಕೊಳ್ಳುವ ಚಟವುಳ್ಳವನು : ಗಾಳಿಸು ಗೆಲ್ವನಂ ಹರಹು ಹೂಜೆಗನಂ . . . ಪೂರ್ಣ ಪುಸಿವನಂ ಪೊಸೆದಿಕ್ಕುಗೆ ಪಚ್ಚ[ಪಾಠಾಂ. ಚ್ಚೆ]ಗಾಱಿನಂ (ಲೀಲಾವ. ೨-೧೦೭). **ಪಚ್ಚೆಗಾಱಿ** : ೧. "ಪಚ್ಚಾಯ್ಲಂ ಪಚ್ಚೆಗಾಱಿ ನೀಱಿನೊಳಾರ್ದಂ?" (ಕಣಾರಾತಿ. ೫೪). ೨. ಮೇಲಿನ 'ಲೀಲಾವ.'ಪ್ರಯೋಗದ ಪಾಠಾಂತರವನ್ನು ನೋಡಿ. [ಪಚ್ಚ$_{2}$+-ಕಾಱಿ]

ಪಚ್ಚಗುಪ್ಪಸ (ನಾ). ೧. ಹಸುರು ಬಣ್ಣದ ರವಿಕೆ,—ಕುಪ್ಪಸ: ಅಚ್ಚುಹಾಕಿದ ಸೀರೆ ಪಚ್ಚಗುಪ್ಪಸ ತೊಟ್ಟು ಹೆಜ್ಜಾಗಿ ಮುಜುಕ ಮಾಡುವಳು ಕಾಮನು ನೆಚ್ಚಿದ ಬಾಣ (ಸರ್ವಜ್ಞ.೧೮೨೬). ೨. ಹಸುರು ಬಣ್ಣದ ಅಂಗಿ,—ಕವಚ : ನಳನಳಿಪ ಪೊಸ ಪಚ್ಚ[ಪಾಠಾಂ. ಚ್ಚೆ]ಗುಪ್ಪಸವಳ ವಡುತ್ತಿರೆ ಪಚ್ಚೆಟೊಪ್ಪಿಗೆ ತಲೆಯೊಳಿಸೆಯಲು (ಬಸವ. ೩೪-೨೨).

[ಪಚ್ಚ$_{1}$(<ಪಸುರ್$_{2}$)+ಕುಪ್ಪಸ]

ಪಚ್ಚಟೊಪ್ಪಿಗೆ (ನಾ). ಹಸುರು ಬಣ್ಣದ ಟೋಪಿ : ನಳನಳಿಪ ಪೊಸ ಪಚ್ಚಗುಪ್ಪಸವಳವಡುತ್ತಿರೆ ಪಚ್ಚ[ಪಾಠಾಂ. ಚ್ಚೆ]ಟೊಪ್ಪಿಗೆ ತಲೆಯೊಳಿಸೆಯಲು (ಬಸವ. ೩೪-೨೨).

[ಪಚ್ಚ$_{1}$(<ಪಸುರ್$_{2}$)+ಟೊಪ್ಪಿಗೆ(<ಟೋಪಿ)]

ಪಚ್ಚಡ, ಪಚ್ಚಳ$_{1}$, **ಹಚಡ, ಹಚ್ಚಡ**$_{1}$, **ಹಚ್ಚಡಿ** (ನಾ). ೧. ಹೊದೆಯಲು ಅಥವಾ ಹಾಸಲು ಉಪಯೋಗಿಸುವ (ಸಾಮಾನ್ಯವಾಗಿ ದಪ್ಪವಾಗಿರುವ) ವಸ್ತ್ರ ; ದುಪ್ಪಟಿ ; ಚಾದರ : ದೂಪಕನ ಪೆಣಂ ಕಾಣಲಾಗದೆಂಬಂತೆ ಭೋಂಕನೆ ಪಚ್ಚಡದಿಂ ಮುಸುಂಕಿಕ್ಕಿ (ಜೊಮ್ಮರ. ಹ. ೩೩೪-೧೨) ; ಅರುಣಮಣಿಕಂಕಣಪ್ರಭೆ ಪರೆದಿರೆ ಪಚ್ಚಡಿಸುವಲ್ಲಿ ಕುಂಕುಮರಸದೊಳ್ ಪೊರೆದುದು ಪಚ್ಚಡಮೆಂದೋಸರಿಸಿದಳ್ ಸಚ್ಚೆವಲ್ತಿತನಮೇಂ ಮುಂದ್ದೋ (ಪಪ್ಪಪು. ೯-೪೮). ೨. ಉತ್ತರೀಯ ; ಮೇಲುಹೊದಿಕೆ : ಒರ್ವ ಕಳ್ಳ ನೋಡಿ ಬಂದು ಸೆಟ್ಟಿಯ ಮಜ್ಜಿಯಂ ಪುಗಲಾ ಪರದಂ ಕೃಪಾಭಾವದಿಂ ಪಚ್ಚಡದಿಂ ಮುಚ್ಚಿಕೊಂಡಿರ್ಪನಂ (ಪುಣ್ಯಾಸ್ರ. ೩-೬೭ ಸ); ಎದ್ದನು ಜಿನ ಶರಣೆಂದು ಕೆಲದೊಳಿರಿಸಿದ್ದ ಪಚ್ಚಡದ ಮೇಲ್ಕೊಳುತ (ಭರಚ. ೧೦-೫೯) ; ಉಡುವ ಸೀರೆ, ಪೊದೆವ ಪಚ್ಚಡಂ (ಶಬ್ದಾನು. ೫೮೩

ನ್ಯಾಬ್ಯಾ); ಬಣ್ಣದ ಪಚ್ಚಡವಂ ಬಲ್ಸಣ್ಣಂಬಿದಿರ್ದ ಜೋತ್ರಮಂ ತಾಳ್ದು . . . ಎಯ್ದಿದಂ ವೈಶ್ಯನವೊಲ್(ಹಾಲಾಸ್ಯ.೧-೨-೧೪). 'ಪಚ್ಚವಡ' ಪರಾ. **ಪಚ್ಚಳೆ**[1]: ೧. 'ಪಚ್ಚಳಿತಿ' ಪರಾ. **ಪಚಡ**: ೧. ಏಳು ವರಹದ ಪಚಡ ಕೊಟರು (ಎಕ. VII, ೨೮೫. ೧೦೭-೩೫; 1576 ?). ೩. ಬಟ್ಟೆ; ವಸ್ತ್ರ: ಈ ಎಳೆಯು ಮೇಲೆಯೇ ಇನ್ನೊಂದು ಹರಟೆಯು ಪಚಡವನ್ನು ನೇಯುವ ಇಲ್ಲದೆ ನುಂಗುವ ಹೊತ್ತು ಬಂದೀತು (ಮುಂಗಾಪು. ೪ ಮುನ್ನುಡಿ). ೪. ಒರಟಾದ ಬಟ್ಟೆ: ಮಂತ್ರಿಪದವಿಗಾಗಿ ಮ್ಯಾಂಛೆಸ್ಟರ್ ಬಟ್ಟೆಯನ್ನು ಸಹ ತ್ಯಜಿಸಿ, ಪಚಡವನ್ನುಟ್ಟು ಹೇಲಿಗೆ ಬಂದ ಜಾಣ (ದಾಳಿಪ. ೧೭). **ಪಚ್ಚಡ**: ೧. "ಪಚ್ಚಡಂ ಮುಪ್ಪಟಾಮ್ಬರಂ" (ನುಂಗರಾ. ೧೦೧-೨೪); ಮಡದಿಯು ಪಚ್ಚಡನುಂ ಸುಲಿವೆಡೆಯೊಳ್ಕೇಣ್ಣ ಕವಿಯ ಕೊಪ್ಪಂ ನೀಂ ಕೊಳ್ಳೊಡೆ ನೋಯುದಂತೆ ತೆಗೆಯೆಂದೊಡೆ (ಧಸುಗ. ೯-೨೧). ೨. ಉಡುಗೊಱೆಯ ಪಚ್ಚಡ ೪ (ಎಕ. XV, ಬೇಲೂರು. ೨೪೮-೧೨ ; 1295); ಅಯ್ಕಂಗಳು ಹೊಬೆದ ಪಚ್ಚಡದ ಸೀಗಂ ಪಿಡಿದು. ಕೈಯಿಂದ ಸೆಳಸೆಳೆದು ಜೋಲುತ್ತ ತೆಗೆವಂ (ಬಸಪು. ೪೭-೪೭) ; ಕಳೆದು ಬಿಸುಟರು ಮತ್ತೆ ರತ್ನಾವಳಿಯ . . . ಲಲಿತ ಕೃಷ್ಣಾಜಿನವ ಹೊದೆದರು ಹಾಯ್ಕ ಪಚ್ಚಡವ(ಕುವ್ಯಾಪ.೧೬-೫೯); ಹೂವಿನ ಹೊಸ ಬಣ್ಣದ ಪಚ್ಚಡಮಂ ಹೊದೆದು . . . ಸುಹೃಜ್ಜನ ವಿತತಿ ನಡೆದುದತಿಮುದದಿಂದ (ಜಯಕಾ. ೧೪-೧೯); ಹತ್ತ್ಹತ್ತು ಹೊನ್ನಿನ ಪಚ್ಚಡ ಹೊತ್ತಾರ ಮುತ್ತನಿಟ್ಟಾರ ಕವಿಯಾಗ (ಲೋಕಗೀ. ೧೨). ೩. ಮಾಲಿನಿಯು ಕಸೂತಿ ಅಂಚಿನ ಪಟ್ಟೆಯ ಪಚ್ಚಡವನ್ನು ಉಟ್ಟಿದ್ದರೂ ಮೈಗೆ ಆಭರಣಗಳು ವಿಶೇಷವಾಗಿದ್ದಿಲ್ಲ (ವಿದ್ಯೆ. ೪೨). **ಪಚ್ಚಡಿ**: ೧. ಎದುರಿಗೆ ಹಾಸಿದ ಪಚ್ಚಡಿಯ ಮೇಲೆ ಬಂಗಾರಯ ಮಗು (ವಳಜೀ.೯).

ಪಚ್ಚಡದರವೆ = ಒರಟು ಬಟ್ಟೆ; ಖಾದಿಯ ವಸ್ತ್ರ: ಪಚ್ಚಡದರವೆ (ಖಾದಿ)ಯನ್ನು ಹೊರುವ ಗುರುಗಳು ಹೇಳಿದ ಕಥೆಯಿಂದ ಉದ್ದೀಪಿತನಾಗಿ (ದಾಸಹು. ೮೪).

[<ಸಂ. ಪ್ರಚ್ಛದ. / ಸ್ಯಾ. ಪಚ್ಚದ, ಪಚ್ಚಯ./ಕಮಿ. ಪಚ್ಚಟ; ತುಳು. ಪಚ್ಚಡೆ, ಹಚ್ಚಡೆ; ಕೊಡ. ಪಚ್ಚಡ; ತೆಲು. ಪಚ್ಚಡ, ಪಚ್ಚಳ]

ಪಚ್ಚಡಕೆ (ನಾ). ಹಸುರು ಬಣ್ಣದ ಅಡಕೆ: ಪಚ್ಚಡಕೆ, ಪಚ್ಚೊಟೆಲೆ (ಭಾಷಾಭೂ. ೧೪೬ ಉದಾ); ಸ್ವರಂ ಪರವೂಗೆ ಪಚ್ಚೆನೆ ಶಬ್ದಕ್ಕೆ ಪಚ್ಚೊಟೆಲೆ, ಪಚ್ಚಡಕೆ, ಪಚ್ಚಿಲೆಯೆಂದಪ್ಪುದು (ಶಮಪ. ೧೪೨ ಪ್ರಯೋ).

[ಪಚ್ಚ[1](<ಪಸುರ್[2])+ಅಡಕೆ[1]]

ಪಚ್ಚಡಿ, ಪಚಡಿ (ನಾ). ೧. ಹೊರು; ತುಂಡು: ಇಬ್ಬರೂ ಕೂಡಿ ಮಾವಿನ ಕಾಯಿಂಗಳನ್ನು ಉದುರಿಸಿ, ಪಚ್ಚಡಿ ಮಾಡಿ ತಿಂದು . . . ತೃಪ್ತಿ ತಾಳುತ್ತಾರೆ (ಸ್ವಪ್ನಹೂ. ೪೯). ೨. ಹಸಿಯ ತರಕಾರಿಗಳಿಂದ ಮಾಡುವ ಒಂದು ಬಗೆಯ ವ್ಯಂಜನಪದಾರ್ಥ: ಪೂರಿತಾಮ್ರ ಪ್ರದುಷಿ ಪಡುರಸದೋರಣದ ಶಾಖಗಳು ಪಚ್ಚಡಿ ಭೂರಿಪರಿಕರವಾದ ವಾತ್ಸಣ ಭೂಪನಾಜ್ಞೆಯಲಿ (ಸನತ್ಕು. ೧೪-೩) ; ಪಚ್ಚಡಿಯ ಮೆಲ್ಲಜಜುರುಚಯ ಕೊಂಡಾಡುತ್ತೆ (ಚಿಬಪು. ೫-೬೧); ತಾಳದ ಸೀಕರಣೆ ಕಸರಿ ಪಚ್ಚಡಿಗಳು ಮೇಲಾದ ಪಡುರಸಗಳನು . . . ಲೋಲಾಕ್ಷಿಯರು ಬಡಿಸಿದರು (ಕಂಸವಿ. ೮-೮೫), ಆಚ್ಚ ಸಾಸುನೆಯರೆದು ಮಾಡಿದ ಪಚ್ಚಡಿಯ ಹರಳುಪ್ಪು ಗಾಯ್ಸಳ . . . ಯಶೋದೆ ಬಡಿಸಿದಳಚ್ಚುತಗೆ (ಕೋಗಯ. ೪-೧೪). **ಪಚಡಿ**: ೨. ವರಹಸ್ವಾಮಿಯ ಸನ್ನಿಧಿಯಲು ನಿತ್ಯಕಟ್ಟಳೆಯಾಗಿ ನಡವ ದಧ್ಯನ್ನದ ಅವಸರತಳಿಗೆವೊಂದಕೆ ಅಮ್ರುತಪಡಿ ಪುಜಿ ಕೊಳಗದಳುವೊಕ್ಕುಳ ಮೊಸರು ತುಪ್ಪ ಪಚಡಿ ಸಹ ವರುಷ ೧ ಕೆ ಸಲುಉದು ಗ ೫೪ ವರಹ (ಎಕ. XIV, ಕ್ರೀಡಂಗ. ೨೬೦-೬ ; 1551). ೩. (ಅಲಂ) ಹಾಳು; ನಾಶ ; ನಜ್ಜುಗುಜ್ಜು : ಕೊಡೆ ಹಿಡಿದು ಕಾಯರ್ ಪಲ್ಲೆ ತಂದರೆ, ಪ್ಯಾಂಟು ಕೂಡಲೆ ಪಚಡಿಯು (ನೀಲಮು. ೧೨-೧೬). [ದೇ.॥ ತಮಿ. ಪಚ್ಚಟ; ಕೊಡ. ಮಲ. ತುಳು. ತೆಲು. ಪಚ್ಚಡಿ./ಮರಾ. ಪಚಡೀ]

ಪಚ್ಚಡಿಕೆ, ಪಚ್ಚಡಿಕೆ(ನಾ).೧. = ಪಚ್ಚಡ ೧. : ನೆಜ್ಜೆಯ ಕಾಪಿನವರ್ ಪರಿತಂದು ಶೋಧಿಸಿ ನೋಡಿ ಪಚ್ಚಡಿಕೆಯಂ ಪತ್ತಿರ್ದ ಕೂಜಿಯಂ ಕಂಡು (ಪಂಚತಂ.೧೩೦-೧೪); ತಾನುಣ್ಣದ ಪೆಜರ್ಗಿಕ್ಕದ ಪೇನಿಯ ಪಚ್ಚಡಿಕೆಯೆನಿಪ ಲೋಭಿಯ ಪೊನ್ನಂ ತಾನೊಂದುಮುಂಟಿಯೆಂದಂತಿರೆ ಹೀನಗುಣಂ ಕವರ್ದುಗೊಂಡು ಚಾಗಂಗೆಯ್ವಂ (ಧರ್ಮಾಮೃ. ೨-೩೪) ; ಪಿಸುಗುವ ಪಚ್ಚಡಿಕೆಯು ಮೇಲೆ ಪೊದದಾಕೆಯ ನಳತೋಳ್ವಚ್ಚಡಮಂ ಚದುರಿಂ ಪೊದೆದು (ಜಯಕಾ. ೧೬-೧). **ಪಚ್ಚಡಿಕೆ** : ೧. "ನಿಟೋಲ; ಪ್ರಚ್ಛದಪಟ ಎಂದೊಡೆ ಪಚ್ಚಡಿಕೆಯು ಸೀರೆ; ಪಚ್ಚಡಮೆಂದುಂ ಎಂಬರು" (ನಾಚರಾ.೬); "ಪಚ್ಚಡಿಕೆ-ಪ್ರಚ್ಛಾದಿಕಾ"(ತಪ್ಪ ಕೋ.೪೮). ೨.ಹಾಸುಗೆ; "ಶಲ್ಪ, ಶಯನ" (ನಾಚರಾ. ೬). [ಪಚ್ಚಡ+-ಇಕೆ]

ಪಚ್ಚಡಿಗೆಯ್ಯು (ಕ್ರಿ). ತುಂಡರಿಸು; ಸಂಹರಿಸು: ಕೊಚ್ಚಿ ಪಚ್ಚಡಿಗೆಯ್ದ ನಾನರ್ದರಸುರರಂ ಬಹುಜನ್ಮನವಿಡೆಗೊಂಬವೆ (ಪರಪು. ೩-೧೭).

[ಪಚ್ಚಡಿ+ಗೆಯ್ಯು(<ಕೆಯ್[1])]

ಪಚ್ಚಡಿಸು, ಪಚ್ಚಡಿಸು (ಕ್ರಿ). ೧. ಹೊದಿಸು; ಆಚ್ಛಾದಿಸು: ನನೆಯ ಕೊಡವಂ ಮಾಡೀ ಪಂಕೇಜಪತ್ರಮನೊತ್ತು ಮಾವಿನ ತಳಿರುಮಂ ಪಾಸೀ ಪೂವಿಂದೆ ಪಚ್ಚಡಿಸುತ್ತುಂ (ಲೀಆವ. ೧೧-೧೯). ೨. ಹಾಸು; ಹರಡು: ಪೂವಿನ ನೆಜ್ಜೆಯೊಳು ಪೊಚ್ಚಪೊಸ ನ್ಯುದುವಂ ಪಚ್ಚಡಿಸಿ [ಪಾತಾಂ. ಪಡಿಸಿ]ದ ಹಂಸತೂಳಿದ ಹಾಸುಮಂಚವನಾಸೆಗೆಯ್ವುಪುಂ (ನಂಬಿರ. ೧೦-೭೧) ; ಪೊಳೆವ ತಣ್ಣದಿರ್ಗಲ್ಲ ಪಸೆಯೊಳೇಳಲೆವಾಳೆಯೆಳೆಯೆಲೆಯ ಪಚ್ಚಡಿಸಿ . . . ಪನಿನೀರ್ದಳಿದು ತನ್ನನಿಯನಂ ಕಳವಳಿಪ ಕಾಂತೆಯ ಮಲಂಗಿಸಿ (ಪದ್ಮರಾ. ೮೭-೯೨) ; ಸೇವಂತಿಯೆಸಳ ಪಚ್ಚಡಿಸಿ ಯೊಜಗಿಹನು ಭೂವನಿತೆಯನಪ್ಪು ವಂತೆ (ನೇಮಿನಂ. ೪-೧೨೯) ; ನಡೆವ ಕಾಂತೆಯರ . . . ಬಿಡದಂಗಕಾಂತಿ ಕನಕದ ಭೂಷಣದ ಹಬೆ ಕೂಡೆ ಪೊಂಬಟ್ಟೆ ಚಲುವ ನಡೆಮಡಿಯ ಪಚ್ಚಡಿಸಿದಂತಾಗೆ (ಚಪು. ೨-೬-೫೧). ೩. ಸಿದ್ಧಪಡಿಸು; ಅಣಿಮಾಡು ; ನಜ್ಜು ಗೊಳಿಸು: ಸಿರಿಮಂಚಮಂ ಪಚ್ಚಡಿಸಿ ಕೊಟ್ಟು ಸುಯ್ವುತಂ ತಿರುನೀಳಕಂಕಕುಶವರ ಕೆಲಬೊಳಿಪ್ಪು ತಂ (ತಿರು. ದೇ.೩-೧೬). ೪. ಸಿಂಗರಿಸು; ಅಲಂಕಾರಮಾಡು ; ಪಚ್ಚಡಿಪನೆನೆ ಪಚ್ಚಾಯ್ದು (ಕಬ್ಬಿಕೈ. ೩೫). ೫. ವ್ಯಾಪಿಸು ; ಪಸರಿಸು : ಚಿಂತನೆಯೆನಿಪ್ಪ ಪೊಗೆ ಪಚ್ಚಡಿಸಿರೆ ತಮವೆಂಬ ಶಿಖೆ ಪೊಕ್ಕ . . . ಪಲ ತೆರದೆ ನಂದನಕ್ಕಂ (ಸೌನಂದ. ೭-೧೨). **ಪಚ್ಚಡಿಸು** : ೧. ನಡುವೆ ಮಣಿಮಂಚದಲಿ ಮೇಲ್ವಾಸದಕಲನು ಪಚ್ಚಡಿಸಿದರು (ಕುವ್ಯಾಉ. ೮-೩); ಬೀಯ ಪಸನವ ಬಿಗಿದು ಪಚ್ಚಡಿಸಿ ಸಂಚಳಿವ ಪರಿಮಳದ ತುಂಬಿಗಳಿಂಚರದ . . . ತಾಯ್ವನೆಯೆನಿಸಿದುದು ಸಜ್ಜವನೆಯಂದು (ಸಾಳ್ವಭಾ. ೩-೩೬) ; ತಳದು ದೃಢ ಪರಿಪರಿಯ ಪುಷ್ಪಾವಳಿಯ ತಲ್ಪದ ಮೇಲೆ ಪತ್ರಾವಳಿಯ ಪಚ್ಚಡಿಸುತ್ತ ನಿಂಗೆ ತಂಬೆಲರ ಕೈಕೊಳುತ . . . ನಿನಿಪಳೆ ತಿಳವ ಕಾಲ್ವಿಡಿವಬಲೆಯರ ನಿಟ್ಟಿಸಿದನಸುರಾರಿ (ಅಕ್ರೂಚ. ೬-೮). ೨. ಪೊಸ ಮಾವಳರೆ ಪಚ್ಚಡಿಸಿ ಕುಮಾರಗೆ ದಿಸಜದೆಲೆಗಳಿಂದ ಬೀಸೆ(ಅಂಬಚ.೫-೮೧); ಒಡನೊಪ್ಪುವ ಹಂಸತೂಳಿದ ತಲ್ಪದ ಕಡುಜೆಲ್ವ ಪಿಸುನಮಂಚದಲಿ ಮಡಿಸಿ ಪಚ್ಚಡಿಸಿ ರತ್ನದ ಬಟ್ಟುವೊಱಗ ಸಂಗಡಿಸಿದರತಿಮುದದಿಂದ (ಕಂಸವಿ. ೮-೧೩). ೪. ಪಚ್ಚಡಿಸುವಾತನಕ್ಕುಂ ಪಚ್ಚಾಯ್ದುಂ (ಕವಿಕಂ. ೧೫೮).

[ಪಚ್ಚಡ+-ಇಸು[3]]

ಪಚ್ಚಣ (ನಾ). ರಹಸ್ಯವ್ಯವಹಾರ: ಉಚ್ಚತರಸ್ವರಂ ನೆಗೆಯೆ ತದ್ವಸುದೇವಳುಮಾರಕನೆಂದನೇಪಚ್ಚಣವಣ್ಣನೆನ್ನನವಿಚಾರಕೆಯಿಂ ನೆಲೆ ಯಿಟ್ಟಿ

ಡಾದವುಮ್ಮಚ್ಚದ ಪೆರ್ಚನಿಂದುರಿವ ಕಿರ್ಚನೊಳಿಕ್ಕಿದೆನೆಂದು ಪೇಟಿ (ನೇಮಿಪು. ೩-೧೬೧). [ಪಚ್ಚು$_4$ (< ಪರ್ಚು$_3$)+-ಅಣ]

ಪಚ್ಚತಳಕರ್ಪುರ (ನಾ). = ಪಚ್ಚಕರ್ಪೂರ : ಕಿಚ್ಚನೊಳು ಸುಳ್ಳುತವು ಪಚ್ಚತಳಕರ್ಪುರವು ಅಚ್ಚಳಿದು ನಿಜದಿ ನಿಂದಂತೆ ಭೇದವನು ಮುಚ್ಚುವನೆ ಶರಣ (ಸರ್ವಜ್ಞ. ೧೪೨).

[ಪಚ್ಚ$_1$(<ಪಸುರ್$_2$)+ತಳ?+ಕರ್ಪುರ (<ಕಪ್ಪುರ)]

ಪಚ್ಚನೆ$_1$ 'ಪಚ್ಚನೆಯ' ನೋ.

ಪಚ್ಚನೆ$_2$ (ಅ). ಇದ್ದಕ್ಕಿದಂತೆ ; ಸಾಕ್ಷಾತ್ಕಾರವಾದಂತೆ : ಇನ್ನಂ ಪಚ್ಚನೆಲ್ಲಿಂದೆ ಬಂದನಿವಂ ತಾನಿದು ದುರ್ನಿಮಿತ್ತಂ (ದಿವ್ಯಚ. ೯-೬೬).

[<ಪಚ್$_0$+-ಅನೆ$_1$]

ಪಚ್ಚನೆಯ, ಪಚ್ಚನೆ$_1$, ಹಚ್ಚನೆ, ಹಚ್ಚನೆಯ (ಗು). ಹಸುರು ಬಣ್ಣವುಳ್ಳ ; ಹಸುರಾದ: ಪಚ್ಚನೆಯ ಬಣ್ಣ-ಪಲಾಶ, ಹರಿತ, ಹರಿತ್ (ನಾಚಿರಾ. ೬). **ಪಚ್ಚನೆ$_1$** : ಶುಕಾಳಿಯನಂದು ಬೆರ್ಚಪುಜ್ಜುಗದೊಳೆ ನೋಟ್ಪ ಪಾಮರಿಯ ಚಾರುಕಟಾಕ್ಷಮರೀಚಿ ನೀಳ್ದು ಶೋಭೆಗೆ ನೆಲೆಯಾಯ್ತು ತತ್ಕಳಮಭೂರಮೆಗೆತ್ತಿದ ಪಚ್ಚನಪ್ಪ ಸತ್ತಿಗೆಗಳವಟ್ಟು ತೋರ್ಪ ಶಶಿಕಾಂತದ ಕಾಂತದ ಕಾವಿದೆಂಬಿನಂ (ಚಂದ್ರಪು. ೧-೯೫) ; ದಿನಕರನಂ ಶಶಿಯಂ ಪಚ್ಚನೆವಣ್ಣದೆ ಬಳಸಿ ನಿಂದ ಪರಿವೇಷದೆ ನೆಟ್ಟನೆ ಮಟಿಕೊಳ್ಗುಂ (ಅಟ್ಟಮ. ೫-೧೨) ; ರಾಜಿಸೆ ನೀರ್ದಾಣದೊತ್ತಿನೊಳ್ ಪಚ್ಚನೆ ಬೆಳೆದ ಹರಿತ ಶಾಡ್ವಲಮುಂ . . . ಒಪ್ಪಿರೆ ನದೀಪ್ರದೇಶಂ ಚೆಲ್ವಾಯ್ತು (ರಾಮಾಶ್ವ. ೩೦-೨೧). **ಹಚ್ಚನೆ** : ಹಚ್ಚನೆ ಸೀರೆ ಉಟ್ಟುಕೊಂಡಾಗ ಅವಳು ಎಷ್ಟು ಚೆನ್ನಾಗಿ ಕಾಣುತ್ತಾಳೆ (ರೂಢಿ). **ಹಚ್ಚನೆಯ** : ಹಚ್ಚನೆಯ ವರ್ಣ — ಹರಿಣಿ, ಹರಿತೆ (ನಾಚಿರಾ. ೬) ; ಹಚ್ಚನೆಯ ಬಯಲಲಿ ಹರಡಿ ಬಿದ್ದಿಹುದು ಹಿಮಕರನ ಕಿರಣರಾಶಿ (ಕಗದ್ಯ. ೧೩೮) ; ಹಚ್ಚನೆಯ ಹುಲ್ಲಿನಿಂದ ಮುಚ್ಚಿದ ಮಡಿಯಲ್ಲಿ ನನ್ನನ್ನು ಕರೆದೊಯ್ದಳು (ಪ್ರಣಸ. ೨); ಹಚ್ಚನೆಯ ಹಸಿರು ಅಲ್ಲಿ ಗೋಚರಿಸದು (ಹಾಹುತ್ತ. ೯೯).

ಪಚ್ಚನೆ ಪಸಿ = ಪಚ್ಚಪಸಿ ೨ : ಪಚ್ಚನೆ ಪಸಿಯ ಗೋವನೈ ಕರಮ[ನ]ಯದೆ ನಿನ್ನಳವಿಗಳವನಱಿಯದೆ ನೆಗಟ್ದೈ (ಪಂಪಭಾ.೬-೫೨).

[ಪಚ್ಚ$_1$ (< ಪಸುರ್$_2$) +-ಅನೆಯ$_2$]

ಪಚ್ಚಪಸಿ, ಹಚ್ಚಹಸಿ (ಗು). ೧. ಅಚ್ಚ ಹಸುರಾದ : ಕಡವಾಯ ಲೋಳೆಯೊಳ್ ಪೊರೆದುಗುತರ್ಪ ಪಚ್ಚಪಸಿಯಚ್ಚಗಱುಂಕೆ ಮರಲ್ದ ದಿಟ್ಟ . . . ಸೂಚಿಸಿದಪ್ಪುದು ಸೋಲ್ತ ಭಾವಮಂ (ಕಾದಂಪೂ. ೬೫೧). ೨. ತಿಳಿವಳಿಕೆಯಿಲ್ಲದ ; ಮುಗ್ಧವಾದ : ದೆಸೆದೆಸೆಗೆ ಬೆಸೆವ ಪಚ್ಚಪಸಿಯೆಗ್ಗರುಮಂ ಕಂಡು (ಪಂಪಭಾ. ೪-೯೪ ವ) ; ನಾಲಗೆಯಿಲ್ಲದೆ ನುಡಿವೆನೆಂಬ ಪಱುಗೋಲಿಲ್ಲದೆ ತೊಱೆಯಂ ಪಾಯ್ವೆನೆಂಬ ಪಚ್ಚಪಸಿಯೆಗ್ಗನಂ ಪೋಲ್ಕುಂ (ಧರ್ಮಾಮೃ. ೧-೬೬). ೩. ಹೊಚ್ಚ ಹೊಸದಾದ ; ತಾಜಾ : ಬಚ್ಚಬಱಿಯಚ್ಚಸುಖದ ಪಚ್ಚಪಸಿಯ ಪೊಚ್ಚಪೊಸಹರೆಯದ ಮುಗ್ಧಾಂಗನೆಯರೊಳಂ (ಗಿರಿಕ. ೨-೧೦೫ ವ). 'ಪಚ್ಚಪಸಿವರೆಯ' ಪರಾ. (ನಾ). ೪. ಅನಾಗರಿಕವಾಗಿರುವುದು ; ಒರಟಾಗಿರುವಿಕೆ : ಅಳವಱಿಯದೆಗ್ಗು ಬಳವಳ ಬಳೆವಿನೆಗಂ ಪಚ್ಚಪಸಿಯ ತುಱು ಕಾಱಂಗಗ್ಗಳಿಕೆಯನೆ ಮಾಡಿ ನೀನುಂ ಪಱಿಯಂ ಕಟ್ಟಿದೆಯೊ ಭೂಪರಿನಿಬರ ಕೊರಲೊಳ್ (ಪಂಪಭಾ. ೬-೪೬). **ಹಚ್ಚಹಸಿ** (ಗು). ೫. ಹಸಿಯಾದ; ಒಣಗಿಲ್ಲದ : ಪಿರಿದೆನಿಸುವ ಹಚ್ಚಹಸಿಯ ಬಡಿಗೆಗೊಂಡು ಹರದರೀರ್ವರು ಹೊಯ್ದಾಡಿ ಭರದೊಳು ಸತ್ತು (ನೇಮಿಸಂ. ೭-೧೯).

[ಪಚ್ಚ$_1$ (<ಪಸುರ್$_2$)+ ಪಸಿ$_4$]

ಪಚ್ಚಪಸಿವರೆಯ (ನಾ). ಆಗ ತಾನೆ ಆರಂಭವಾಗಿರುವ ಯೌವನ; ನವಯೌವನ : ವಜ್ರಮಾಣಿಕ್ಯದ ಹೋಲುವೆಯ ದಂತಪಂಕ್ತಿಯ ಪಚ್ಚಪಸಿವರೆಯದ . . . ಪೆಣ್ಗಳೊಪ್ಪಿದರು (ಭಾವಚಿಂ.೫-೨೯) ; ಪಚ್ಚಪಸಿವರೆಯದಲರ್ಗಳ ಪಚ್ಚದ . . . ಸೊಗಯಿಪ್ಪಚ್ಚರಸಿಯರಂತೆ ಮೆಱೆವ ತರುಣಿಯರೆಸೆದರ್ (ರಾಜಶೇ. ೨-೨೨).

[ಪಚ್ಚಪಸಿ+ಹರೆಯ (< ಪರಯ)]

ಪಚ್ಚಬಾಳೆ (ನಾ). = ಪಚ್ಚೆಬಾಳೆ : ಎರಡು ಪಚ್ಚಬಾಳೆಹಣ್ಣುಗಳನ್ನು ಕೊಂಡು ಉತ್ತರೀಯದಲ್ಲಿ ಕಟ್ಟಿದರು (ಏಕಾಂಗಿ. ೫೬).

[ಪಚ್ಚ$_1$(<ಪಸುರ್$_2$)+ಬಾಳೆ$_1$(<ಬಾಟಿ)]

ಪಚ್ಚಯಿಲ (ನಾ). ಅಲಂಕಾರ ಮಾಡುವವನು ; ಸಿಂಗರಿಸುವವನು : ಇಲ ಪ್ರತ್ಯಯಕ್ಕೆ—ಪಚ್ಚಯಿಲಂ, ಪಡೆಯಿಲಂ, ಗಾವಿಲಂ (ಶಮದ. ೨೦೫ ಪ್ರಯೋ) ; ಗಾವಿಲಂ . . . ಪಚ್ಚಯಿಲಂ, ತಟ್ಟುಕಂ (ಶಬ್ದಾನು. ೪೪೧ ಪ್ರಯೋ). [ಪಚ್ಚ$_2$+-ಇಲ]

ಪಚ್ಚರಿಸು 'ಪಚಾರಿಸು$_2$' ನೋ.

ಪಚ್ಚವಡ$_1$, ಹಚ್ಚವಡ, ಹಚ್ಚವಡಿ (ನಾ). ೧. ಬಟ್ಟೆ ; ವಸ್ತ್ರ : 'ಪಚ್ಚವಡತಿ' ಪರಾ. **ಹಚ್ಚವಡ** : ೨. ಹೊದಿಕೆ ; ಆಚ್ಛಾದನೆ: 'ಹಚ್ಚವಡಿಸು' ಪರಾ. **ಹಚ್ಚವಡಿ** : (ಕಿ).

[<ಸಂ. ಪ್ರಚ್ಛದಪಟ./ತಮಿ. ಪಚ್ಚವಟ; ಮಲ. ಪಚ್ಚಪಡ]

ಪಚ್ಚವಡ$_2$ (?). (?) : ಕೀರ್ತ್ತಿಲಲಿತಾಲತೆ ಪರ್ವ್ವೆ ದಿಗಂತರಾಳಮಂ ರೂಡಿಯ ಚಾಮದೇವನಗ್ರತನೂಜರ ವಿಕ್ರಮಕ್ರಮಂ ಪಚ್ಚವಡಂ ಬೆಂಗಾಣದ ನಿಚ್ಚಟಗಲಿ ಮನಹಬಿಟ್ಟದೇವಂ ನೋಡಲ್ ಉಚ್ಚಂಗಿಯ ಮೇಲಿಱಿದಂ ಮಚ್ಚರಿಸುವರೆದೆಯ ಗೂಣ್ಟ ಗೋವಿಯ ಬಣ್ಣಂ (ಎಕ. XII, ಚಿಕ್ಕನಾ. ೨೯-೧೯; 1149). [?]

ಪಚ್ಚವಡತಿ (ನಾ). ವಸ್ತ್ರಾಲಂಕಾರ ಮಾಡುವವಳು ; ಸೈರಂಧ್ರಿ : "ಪಚ್ಚವಡತಿ—ಹಚ್ಚಡಿಸುವಾಕೆ" (ಶಮದ. ಪರಿ. ೨) ; "ಪಚ್ಚವಡತಿಯೆನೆ ಪಚ್ಚವಡಿಸುವ ಸತಿ" (ಕಬ್ಬಕ್ಕೆ. ೯೧).

[ಪಚ್ಚವಡ$_1$ + -ತಿ$_1$ (<-ಇತ್ತಿ)]

ಪಚ್ಚವಡಿಕೆ (ನಾ). ಹಾಸುಗೆಯ ಮೇಲೆ ಹೊದಿಸುವ ಬಟ್ಟೆ,—ಹಚ್ಚಡ : ಆಕೆಯನೆತ್ತಿ ಪಾಸಿನ ಪಚ್ಚವಡಿಕೆಯಂ ನೋಡಿದಾಗಳ್ (ಲೀಲಾವ. ೧೦-೮೨ ವ). [ಪಚ್ಚವಡ$_1$+ -ಇಕೆ]

ಪಚ್ಚವಡಿಗೆ, ಹಚ್ಚವಡಿಗೆ(ನಾ) = ಪಚ್ಚವಡಿಕೆ: ಎನಿತಾನುಂ ದುರ್ಜನನುಂ ನಯಮಂ ಮಾಡುತ್ತಮಿರ್ದನುಂ ಗುಣಿಯೆನಿಕುಂ . . . ಪಾಸಿನ ಪಱಿಪಂ ಪಚ್ಚ [ಸಾಠಾಂ.ಪಾಚ] ವಡಿಗೆ ಮುಚ್ಚುವ ತೆಱದಿಂ (ಸಮಪ. ೧೫-೩೪). **ಹಚ್ಚವಡಿಗೆ**: "ಪ್ರಚ್ಛದಃ, ಉತ್ತರಚ್ಛದಃ-ಈ ೨ ಹಚ್ಚವಡಿಗೆ" (ಹಲಾಯು. ೫೧-೧೫೩). [< ಪಚ್ಚವಡಿಕೆ]

ಪಚ್ಚವಡಿಸು, ಪಚ್ಚೆವಡಿಸು, ಹಚ್ಚವಡಿಸು (ಕ್ರಿ). ೧. ಹೊದಿಸು; ಮುಚ್ಚು ; ಆಚ್ಛಾದಿಸು : ಪಸಿಯ ನೇತ್ರಮಂ ಪಚ್ಚವಡಿಸಿದಂತೆ ಪಸುರ್ಪುವಡೆದ ನೆಲದೊಳ್ ಪದ್ಮರಾಗದ ಪರಲ್ಗಳಂ ಬಲಿಗೆದಱಿದಂತೆ ಉಪಾಶ್ರಯಂಬಡೆದಳಂಕರಿಸುವಿಂದ್ರಗೋಪಂಗಳುಮಂ (ಪಂಪಭಾ. ೬-೨೫ವ) ; ಅಂತು ಬಂದ ವಧೂಕಾಂತರಿರ್ವರುಮಂ ವಿವಾಹವೇದಿಕಾ ಮಧ್ಯದೊಳ್ ದಳಿಂಬದಿಂ ಪಚ್ಚವಡಿಸಿದ ಪಳಿಕಿನ ಪಟ್ಟವಡೆಯೊಳಿರಿಸಿ (ಚಂದ್ರಪು. ೬-೭೦ ವ). ೨. ಹರಡು ; ಹಾಸು : ಪರಾಂಗಣದೊಳ್ ಪಚ್ಚವಡಿಸಿರ್ದಮೃತಾರ್ಣವತರಂಗಸ್ಥೂಲಹಂಸತೂಳತಳ್ಪದೊಳ್ ಮಗ್ನಮೂರ್ತಿಯಾಗಿ ಕುಳ್ಳಿರ್ದ (ಅರ್ಧನೇ. ೪-೫೦ ವ) ; ನವಮಣಿ ಮಂಚದಿಂದೆ ಮಿಸುಪಂಚೆಯ ತುಪ್ಪುಟ ತೂಳೆಯಿಂದೆ ಪಚ್ಚವಡಿಸಿದಚ್ಚ ನುಣ್ದುಗುಲದಿಂದೆ . . . ಎಸೆದಿರ್ದ ಸೆಜ್ಜೆಯೊಳ್ (ಪುಷ್ಪಪು. ೯-೯೬) ; ಅದಱಡಿಯೊಳೆಯ್ದೆ ಪಾಲಾಶಪತ್ರಂಗಳಂ ಪಚ್ಚವಡಿಸಿ (ವೀಶೃಪು. ೪-೬-೩೯). ೩. (ಆಲಂ) ಅಲಂಕರಿಸು; ಸಿಂಗರಿಸು :

ಪಚ್ಚ [ಪಾಠಾಂ. ಚ್ಚೆ]ವಡಿಸಿದುಯ್ಯಲ ಮಣೆಯ ಕಡೆಯಂ ಪಿಡಿದು ಚಿತ್ತ ವಲ್ಲಭನೊತ್ತಿ ಸಾರ್ಚ್ ಮಾಂಗಳಿಕಮನುಗ್ಗಡಿಸೆ ತುಂಗಕುಚಭರಾಲಸಗಮನೆ ನಡೆತಂದು ನಿಂದು ನೋಡಿ (ಅನಂಪು. ೮-೩ ಪ); ಪಚ್ಚವಡತಿಯೆನೆ ಪಚ್ಚ ವಡಿಸುವ ಸತಿ (ಕಬ್ಬಿಕೈ. ೯೧). **ಪಚ್ಚೆವಡಿಸು**: ೨. ಆ ಮಾವಿನಡಿ ಯೊಳಡಿವಾಸಿ (?) ಪೂವಿನ ಪುಡಿಯ ಪುಟಾಲಂ ಜಗಲಿಗಟ್ಟಿ ಪೊಸದಳಿರ ಪಾಸಂ ಕುಸುಮದೆಸಟಾಂ ಪಚ್ಚೆವಡಿಸಿ (ಅರ್ಧನೇ. ೫-೫೬ ಪ). **ಹಚ್ಚವಡಿಸು**: ೨. ದುಕೂಲಚೇಲದಿಂ ತೆರಳದೆ ಕೂಡಿ ಹಚ್ಚವಡಿಸಿರ್ದ ಸಮುಜ್ಜ್ವಳಶಯ್ಯೆಯಿಂದಮೆಟ್ಟು (ಚಂದ್ರಪು.೬-೬೯); ಮನದನ್ನನಿಂದು ಬಂದಪನೆಂದು . . . ಸೆಜ್ಜೆಯಂ ಸಿಂಗರಿಸಿ ಹಾಸುಮಂ ಹಚ್ಚವಡಿಸಿ ವಿನುತ ಪರಿಮಳಪುಷ್ಪತಾಂಬೂಲಮಂ ತರಿಸಿ ಮನಮೊಸೆದು ಕಾದಿರ್ದೆ ನಿನಿತುವರೆಗಂ (ಚಿಬಪು. ೧೦-೩೨). [ಪಚ್ಚವಡ$_1$+-ಇಸು$_3$]

ಪಚ್ಚವಣ 'ಪುಚ್ಚವಣ' ನೋ.

ಪಚ್ಚವಳ 'ಪಚ್ಚಳ$_2$' ನೋ.

ಪಚ್ಚವಾಗಲ್ (ನಾ). ೧. ಮರಕತದ ಸುತ್ತುಗೋಡೆ,— ಪ್ರಾಕಾರ: ಸುತ್ತಲುಂ ಬಳಸಿ ಪರ್ಣದ ಕೇದಗೆ ಪಚ್ಚವಾಗಲೆಂ[ಪಾಠಾಂ. ಕಲೆಂ, ಕಮೆಂ]ಬೆಸಕಮನಾಳ್ದು ಪೂಗಣೆಯನಿರ್ಪ ಪೊಟಲ್ಗೆಣೆಯಾದುದೀ ಬನಂ (ಕಬ್ಬಿಕಾ. ೧೦೧).

[ಪಚ್ಚ$_1$(<ಪಸುರ್$_2$)+ಪಾಗಲ್$_2$(<ಪಾಗಾರ)]

ಪಚ್ಚಳ$_1$ 'ಪಚ್ಚಡ' ನೋ.

ಪಚ್ಚಳ$_2$, ಪಚ್ಚವಳ, ಪಛಳ, ಪೆಚ್ಚಳ$_2$, ಹಚ್ಚಳ (ನಾ). (ಮನುಷ್ಯನ ಅಥವಾ ಪ್ರಾಣಿಯ) ಪೃಷ್ಠಭಾಗ; ನಿತಂಬಪ್ರದೇಶ; ಪಿರ್ರೆ: ಸೋರ್ಮುಡಿ ಸೋರ್ದು ಪಿಂದಲೆಯೆ ಪಚ್ಚಳ[ಪಾಠಾಂ. ಶ್ಚಿಮ]ಮಂ . . . ಒರ್ವಳೋಪನಂ ಪೆರ್ಮೊಲೆ ಬೆನ್ನನುರ್ಚಿದಪುವೆಂಬಿ ನಮಪ್ಪಿದಳಾಗಳಾರ್ತದಿಂ (ಕಾವ್ಯಾವ.೮೨೩); ಮಿಕ್ಕು ಪಚ್ಚಳಕೆತ್ತಿ ಮೆಯ್ ನಿಮಿರಿ . . . ಕಾಡೆಮ್ಮೆಗಳ ತೆಕ್ಕೆಯೊಳು ಕೋಣನಿರೆ (ಹಚಕಾ. ೫-೩೯); ಎತ್ತಿ ಬಾಲವನೆರಡು ಪ[ಪಾಠಾಂ. ವ]ಚ್ಚಳದೊತ್ತಿನಲಿ ಮೋಹಿಸಿದ ಸುರಗಿಯ ನೆತ್ತಿಯಲ್ಲಿ ತೋಱಾದರು (ತೊರಂಗಾ. ೬-೧೩-೩೯); ಪೆಗಲುರ ಪಂಚಕ ಖುರ ಕೋಡು ಕಾಲ್ಕಣ್ಮೊಗ ಪಣೆ ಪಚ್ಚಳ ಪಿಳಿಲು ಸೊಗಯಿಸೆ ಮೆಱೆದುವಂದಲ್ಲಿ ಲುಲಾಯಗಳಗಲದೆ ಕಾಡೆಮ್ಮೆವಿಂಡು (ಕುರಾಸಾಂ. ೨೭-೬೧) **ಪಚ್ಚವಳ**: ಎಚ್ಚಡಾಯುಧಮಂ ಕಿಟ್ಟರಿಯೆನೆ ನೂಂಕೆ ತುರಗಮಂ ತುಕ್ಕಿಡಿಗಳ್ ಪಚ್ಚವಳದೆಡೆಗಳಂ ಮುನ್ನೆಚ್ಚ ಸರಲ್ ತಾಗೆ ಪಱಿದವುಱೆ ಚೆಚ್ಚಱದಿಂ (ಚಂದ್ರಪು. ೧೦-೭೯). **ಪಛಳ**: ಹಾರಿ ಹಾರಿ ಪಾದಪಾರ್ಶ್ವದ್ವಯೇನ ಯರಡುಹಿಮ್ಮಡುಹಿಮ್ಮಡಗಳಿಂದ ನೀಕಂಬ ದ್ವಯತ್ತಾದನಂ ಯರಡು ಪಛಳ ತಾಡಿಸುವದು . . . ಉಪ್ಪರದ ಸಾಧನೆ ಯೆಂಬರು (ಖಡ್ಗಟೀ. ೪-೭೦). **ಪೆಚ್ಚಳ$_2$**: ಸಣ್ಣಗಾಲ್ಗಳಂ ನೆಱೆ ಗೊಳಗುರ್ಬುವೆಚ್ಚಳಮುದಂಚಿತವಾಲಧಿ ಸೂಕ್ಷ್ಮರೋಮದಿಂ ಮೆಱೆದುವು ವೇಗದಿಂ ಜಱೆದುವಾ ಜಘನವಾಜಿಗಳಿಂದ್ರವಾಹಮಂ (ಚಿಕವಿ. ೨-೯೫). **ಹಚ್ಚಳ**: ಚಂದ್ರಾಪೀಡನು ತನ್ನ ಕುದುರೆಯ ಹಚ್ಚಳದ ಮೇಲೆ ಕೈಯಿರಿಸಿಕೊಂಡು . . . ಉಜ್ಜಯಿನಿಪಟ್ಟಣದ ವೃತ್ತಾಂತವ ಕೇಳುತಲೆ ನಡೆದು (ವಚಕಾ. ೮೯).

ಪಚ್ಚಳದ ಮನೆ=ಮಲವಿಸರ್ಜನೆ ಮಾಡುವ ಸ್ಥಳ; ಶೌಚಾಲಯ; ಕಕ್ಕಸು: "ಕಿಟ್ಟಾಲಯಂ ಪಚ್ಚಳದ ಮನೆಯೆನಿಕ್ಕುಂ" (ಮಂಗರಾ. ೫೮-೯).

[<ಸಂ. ಪಶ್ಚಾತ್ತಲ. / ಪ್ರಾ. ಪಚ್ಛಿಲ್ಲ./ತುಳು. ಪಚ್ಚಲ]

ಪಚ್ಚಳತೆ (ನಾ). (?): ದೃಢವಿಡಿದು ಕೆಡಿಸು ಕರಣಂಗಳುಪತಾಪವನು ಮಡಿದು ನೋಡಿ ಪಚ್ಚಳತೆಯ ವಿಷಯವನು ಕೆಡವೊಡೆದು ಮೃಡ ಗುರು ಬಸವನೆ ತಾನೇಕಭಕ್ತನಹನು (ಗುರುಬ. ೬೭-೧೨). [?]

ಪಚ್ಚಳಿತಿ (ನಾ). = ಪಚ್ಚವಡತಿ: "ಪಚ್ಚಡಿಸುವಾಕೆಯಲ್ಲಿಯೆ ಪ[ಪಾಠಾಂ. ವ]ಚ್ಚಳಿತಿಯೆನಲ್ಕೆ" (ಕರ್ಣಾನಿ. ೫೫).

[ಪಚ್ಚಳ$_1$ (< ಪಚ್ಚಡ) +-ಇತಿ$_1$ (<-ಇತ್ತಿ)]

ಪಚ್ಚಟಾ (ಕ್ರಿ). ಹೊಂದಿಕೆಯನ್ನು ಬಿಡು: ಪಟಾಯಂ ಕೇಳ್ದೆನೊ ಮೇಣ್ನಡೆವಟಾಯಂ ತಪ್ಪಿದೆನೊ . . . ಪಚ್ಚಟಾದೆನೊ ಪೇಟ್ಕ್ಯಾಡಿ ನಿನ್ನೊಳಂಗಾಧಿಪತೀ (ಗದಾಯು. ೫-೧೪). [ಪಚ್ಚು$_3$+ಅಟಾ$_1$]

ಪಚ್ಚಾಯಿಲ, ಪಚ್ಚಾಯ್ಲ (ನಾ). = ಪಚ್ಚಯಿಲ: "ಪಚ್ಚಾಯಿಲ ನೆಂದು ಪಚ್ಚಡಿಸುವಾತಂ" (ಕಶಸಾ. ೬೧-೩೪೧); ನನ್ನ ಪುಣ್ಯ, ಅಣ್ಣಯ್ಯನ ಪಚ್ಚಾಯಿಲನು ಇದನ್ನಿಲ್ಲಿಯೇ ಮರೆತು ಹೋಗಿದ್ದಿರಬೇಕು (ಸುಗುಗಂ. ೧೧೧-೮). **ಪಚ್ಚಾಯ್ಲ**: "ಪಚ್ಚಾಯ್ಲಂ=ಪಚ್ಚಗಾಱಂ" (ಶಮದ ಪರಿ. ೨); ಅರಮನೆಯೊಳಿರಿಸುವುದು . . . ಅಂಗರಕ್ಷಕರ ಪಚ್ಚಾಯ್ಲರಂ (ಶೇಷರಾ. ೨-೩೨). [ಪಚ್ಚ$_2$ +-ಆಯಿಲ$_2$]

ಪಚ್ಚಾಯ್ಲ ಪಚ್ಚಾಯಿಲ ನೋ.

ಪಚ್ಚಾರಿ, ಪಚರಿ, ಪಚಾಲೆ, ಪಚ್ಚೇರಿ (ನಾ). ಒಂದು ಬಗೆಯ ಮರ: ಮತ್ತಿ ಮಧುಕಂ ಮಂಗಾರೆ ಪಚ್ಚಾರಿ[ಪಾಠಾಂ. ಲ] . . . ಕಕ್ಕೆ ಬಿಕ್ಕೆ ಬಕುಳಂ ಬೇವೆತ್ತಕಂ ಕಿಂಶುಕಂ (ರಾಜಶೇ. ೫-೫೬); ಎಲವಂ ಮುತ್ತುಗ . . . ಮಾವಿಂಗಳಂ ಬೇಲ ಬೊಬ್ಬುಲಿ ಪಚ್ಚಾರಿ ಪತಂಗಮೆಕ್ಕೆ ಮೊದಲಾದುರ್ವೀರುಹಂ ರಾಜಿಕುಂ (ಯಾದಣಂ. ೪-೪೫); ಕಕ್ಕೆ ಪಚ್ಚಾರಿ ಮೇಲಾದ ಬಿದಿರು . . . ಕಿಕ್ಕರಿಪ ಕಾನನದೊಳು (ನವಮೋ. ೮-೯). **ಪಚರಿ**: ಮರಗಳು . . . ಬೂರಗ, ಹುರಗಲು, ಸೊಳ್ಳೆ, ಬೀಟೆ, ಪಚರಿ (ನಮ್ಮನು. ೨೩೬). **ಪಚಾಲೆ**: ಪಚ್ಚೇರಿ, ಪಚಾಲೆ, ಪದರು ಪಚಾಲಿ (ಮೈಟಿಗಿ. ೨೮-೫೪೯). **ಪಚ್ಚೇರಿ**: ಪಚ್ಚೇರಿ, ಪಚಾಲೆ, ಪದರು ಪಚಾಲಿ (ಮೈಟಿಗಿ. ೨೮-೫೪೯).

[ದೇ.॥ ತಮಿ. ಪಚ್ಚಲ್ಯೆ, ಪಚರಿ; ಮಲ. ತುಳು. ಪಚ್ಚಲ]

ಪಚ್ಚಾಳ್ 'ಪಸು$_1$' ಪರಾ.

ಪಚ್ಚಿ$_1$ (ನಾ). ಪಿತ್ತಕೋಶ; ಈರಿ: "ಪಚ್ಚಿದಕೆಯೊಲಿ[ರಿ]" (ಮಂಗರಾ.೧೧೭-೫); ಹೊಟ್ಟೆ ಬಗೆದು ಪಚ್ಚೀನೂ ಅಲ್ಲೇ ಹಾಕಿದ್ದಾರಲ್ಲೊ . . . ಅವರ ಪಚ್ಚೀನೂ ಹೀಂಗೆ ತೆಗೀಬೇಕು (ಮಲೆಮ. ೪೫೨).

ಪಚ್ಚಿ$_2$ (ನಾ). ಉಪಹಾಸ; ಗೇಲಿ: ಸಚ್ಚರಿತೆಯರ ಭಕ್ತಿಯ ಕಂಡು ಮಾಧವ ಮೆಚ್ಚಿದೆ ಕೇಳಿ ನೀವೆನಲು ಬೆಚ್ಚಿ ಬಿನ್ನವಿಸಲೇತಕೆ ಚಿತ್ತವರಿಯದೆ ಪಚ್ಚಿಗಿಕ್ಕದಿರೆಂದರವರು (ಕೃಷ್ಣಗೋ. ೩-೧೬); ಇವರ ಎಲ್ಲಾರೂ ಕೂಡಿ ಇಲ್ಲದ ಅಂಡ್ರಂಡ್ರಾದ್ನಿ ಮಾಡಿ ನನ್ನ ಪಚ್ಚಿ ಮಾಡಿಬಿಟ್ರು (ಹೊಸಂಸಾ. ೧೨೨). [← ಮರಾ. ಪಚ್ಚೀ]

ಪಚ್ಚಿ$_3$ (ನಾ). ಚಿನ್ನ, ಬೆಳ್ಳಿ ಮುಂತಾದುವುಗಳ ಆಭರಣಗಳಲ್ಲಿ, ಆಯಾ ಧಾತುವಿನ ತೆಳು ತಗಡುಗಳ ಅಂಚನ್ನು ಸುತ್ತಲೂ ಬಾಗಿಸುವುದರಿಂದ ರತ್ನಗಳನ್ನು ಮೆಟ್ಟರುವಿಕೆ: (ಕಿ). [?]

ಪಚ್ಚಿಮ, ಪಚ್ಚಿವ, ಪಶ್ಚಿವ (ನಾ). ೧. ಪಡುವಣ ದಿಕ್ಕು; ಪಶ್ಚಿಮ: ದೇವರ ಪಚ್ಚಿಮಭಾಗದ ಬೆದಲೆ ಅರವತ್ತರು (ಎಕ. XI, ದಾವಣ. ೧೫೫-೨೦; 1124); ಪಚ್ಚಿಮದ ದೆಶೆಗೊಡೆಯ . . . ನೆಗಟ್ಟೇರನೆನೆ ವರುಣನು (ಕಬ್ಬಿಕೈ.೧೪). **ಪಚ್ಚಿವ**: 'ಪಚ್ಚಿವದೆಸೆ' ಪರಾ. **ಪಶ್ಚಿವ**: ೨. ಹಿಂಭಾಗ; ಪೃಷ್ಠ: ವಾಳಮುಂ ವಕ್ಷಮುಂ ಪಶ್ಚಿವಮುಂ ವಿಸ್ತೀರ್ಣಂ. . . ಇಂತಿವು ತನುವೆನಿಪೊಂದಶ್ವಮುರ್ವೀಶಪೂಜ್ಯಂ (ಲೋಕೋಪ. ೧೧-೭೪). [< ಪ್ರಾ. ಪಚ್ಚಿಮ./ಸಂ. ಪಶ್ಚಿಮ]

ಪಚ್ಚಿಮದೆಸೆ, ಪಚ್ಚಿವದೆಸೆ (ನಾ). = ಪಚ್ಚಿಮ ೧. **ಪಚ್ಚಿವದೆಸೆ**.

ಪಚ್ಚಿಮದೆಸೆಗೊಡೆಯ, ಪಚ್ಚಿವದೆಸೆಗೊಡೆಯ = ಪಶ್ಚಿಮದಿಕ್ಕಿನ ಅಧಿಪತಿ; ವರುಣ: "ನೆಗಟ್ಟೇರಂ, ಪಚ್ಚಿಮದೆಸೆಗೊಡೆಯಂ,

ನೀರೊಟ್ಟಲಾಣ್ಮಂ—ಈ ೩ ವರುಣಂಗೆ ಪೆಸರ್" (ಕಶಸಾ. ೪೯–೩೭) ; "ಪಚ್ಚವದೆಸೆಗೊಡೆಯಂ ತಾಂ ನಿಚ್ಚಂ ನೀರೊಟ್ಟಲಾಣ್ಮ ನೆಗಟ್ಟಿರದೆನೆಲ್ ಪಚ್ಚರದೆ ವರುಣನಪ್ಪಂ" (ಕವಿಕಂ. ೩೭). [ಪಚ್ಚಮು + ದೆಸೆ$_2$]

ಪಚ್ಚಿಯ (ನಾ). ಗೂಡೆ ; ಕುಕ್ಕೆ : ಗಣಪತಿ ಪುತ್ತರಿಯ ಪಚ್ಚಿಯದಲ್ಲಿ ಮಾವಿನ ಎಲೆ . . . ಅಚ್ಚಿಯ ನಾರುಗಳನ್ನು ತಂದಿರಿಸಿದ (ಹುಲಿಹಾ. ೧೪೭). [←ಕೊಡ. ಪಚ್ಚಿಯ]

ಪಚ್ಚಿವ 'ಪಚ್ಚಿಮ' ನೋ.

ಪಚ್ಚಿವದೆಸೆ 'ಪಚ್ಚಿಮದೆಸೆ' ನೋ.

ಪಚ್ಚಿಸು$_1$, **ಹಚ್ಚಿಸು**$_1$ (ಕ್ರಿ). ಹೋಗುಮಾಡು ; ಕತ್ತರಿಸು : ಇಂತಪ್ಪ ಸೈವೆಳಗಿನಮಳ ಮುಚ್ಚನಯಿದನು ಕೊಯ್ದು ಪಚ್ಚಿಸಿವುಂಡೊಡೆ ಯೇನಹುದು (ನಸಮೋ. ೧೨–೬). **ಹಚ್ಚಿಸು**$_1$: ಕರಕಾರಿ ಹಚ್ಚಿಸೋದಕ್ಕೆ ಅಡುಗೆ ಅಳುಗಳಿದ್ದಾರೆ (ರೂಢಿ).

[ಪಚ್ಚು$_1$ (< ಪಸು$_1$) +–ಇಸು$_3$]

ಪಚ್ಚಿಸು$_2$, **ಪರ್ಚಿಸು**$_2$, **ಹಚ್ಚಿಸು**$_2$ (ಕ್ರಿ). ೧. ಒಂದರಲ್ಲೊಂದನ್ನು ಅಂಟಿಕೊಳ್ಳುವಂತೆ ಹೊಂದಿಸು ; ಬೆಸೆ : ಕಡುನಿಮಿರ್ದ ತೋರಮೊಲೆಗಳ ನಡುವೆಡೆಯೊಳ್ಪೊಕ್ಕು ಪಚ್ಚಿಸಿದವೊಲ್ತೊಡರ್ದಿರ್ದೂಡ ಮೇನವಂಗೆ ನಡುಕಮನೊಡರಿಸಲಾರ್ತಪುದೆ ನೋಡ ಹಿಮುಮುಂ ಗಿಮುಮುಂ (ಚಾಧಪು. ೪–೭೫). ೨. ಅಂಟಿಕೊಳ್ಳು ; ಹೊಂದಿಕೊಳ್ಳು : ವನಜನಾಭನು . . . ಜೀವರನೆ ಪುಟ್ಟಿಸುವ ಲಿಂಗದೇಹದಿಂದ ಘನವಾಗಿ ಜೀವಕ್ಕೆ ಬಿಡದಂತೆ ತೊಯಿದ ವಸನದೋಪಾದಿಯಲಿ ಪಚ್ಚಿಸುವ ತನುವಿನ ನೆಳಲಂತೆ ಹರಿಯಾಡಲು ಜೀವನ ಪ್ರವರ್ತಿಸುವುದು (ವಿದಾಕ್ಯ. ೪೪–೩). ೩. ಲೇಪಿಸು ; ಬಳಿ : ನರನೊಬ್ಬ ಅಂಜನವ ಮಾಡಿ ತಂದು ತನ್ನ ಕರತಲದಲಿ ಪಚ್ಚಿಸಿಕೊಂಡು ನೋಡಿದರೆ ನರನ ದೂರದಲಿದ್ದ ವಸ್ತು ಕಾಣಿಸುವುದು (ವಿದಾಕ್ಯ. ೧೨೩–೩). **ಪರ್ಚಿಸು**$_2$: ೪. (ದೀಪ, ಉರಿ ಮೊದಲಾದುವನ್ನು) ಹತ್ತಿಸು ; ಹೊತ್ತಿಸು ; ಜ್ವಲಂತಗೊಳಿಸು : ಸೊಡರಂ ಪರ್ಚಿಸಿದಂತಿರೆ ಬೆಡಂಗುವಡೆದೆಸೆವ ಮುನಿಯ ದೇಹದ್ಯುತಿಯಂ ಕಡುಗವಿಲಮಾಗಿ ಕಾಂಚನದಡವಿಯನನುಕರಿಸಿ ತದ್ವನಂ ಸೊಗಯಿಸುಗುಂ (ಕಾದಂಪೂ. ೭೨೯). **ಹಚ್ಚಿಸು**$_2$: ೪. ಕತ್ತಲಾಯಿತು, ದೀಪವನ್ನು ಹಚ್ಚಿಸು (ರೂಢಿ). ೫. ಬಳಿಯುವಂತೆ ಮಾಡು : ಮನೆಗೆ ಸುಣ್ಣ ಹಚ್ಚಿಸಬೇಕು (ರೂಢಿ). ೬. (ಸಸ್ಯಗಳನ್ನು) ಊರುವಂತೆ ಮಾಡು ; ಅಂಟಿಸು: ಬಾಗಿಲ ಬಳಿ ಎರಡೂ ಪಕ್ಕಗಳಲ್ಲಿ ಮಲ್ಲಿಗೆ ಬಳ್ಳಿಯನ್ನು ಹಚ್ಚಿಸಲಾಗಿದೆ (ರೂಢಿ). [ಪಚ್ಚು$_3$ +–ಇಸು$_3$]

ಪಚ್ಚೀಸು(ನಾ). ೧. ಇಪ್ಪತ್ತೈದು. ೨. ಇಪ್ಪತ್ತೈದು ಎಂಬುದೇ ಎಲ್ಲಕ್ಕೂ ಹೆಚ್ಚಿನ ಗರವಾಗಿದ್ದು ಲೆತ್ತಗಳ ಬದಲಾಗಿ ಕವಡೆಗಳನ್ನು ಬಳಸಿ ಆಡುವ ಒಂದು ಬಗೆಯ ಆಟ : (೪).

[← ಹಿಂ. ಪಚ್ಚೀಸ್, ಪಚೀಸ್. / ಪ್ರಾ. ಪಚೀಸ್]

ಪಚ್ಚು$_1$ 'ಪಸು$_1$' ನೋ.

ಪಚ್ಚು$_2$ 'ಪರ್ಚು$_1$' ನೋ.

ಪಚ್ಚು$_3$, **ಪರ್ಚು**$_2$, **ಹಚ್ಚು**$_1$ (ಕ್ರಿ). ೧. ತೊಡಗಿಸು ; ಸೇರಿಸು ; ಹೊಂದಿಸು: 'ಪಚ್ಚಿಸು$_2$' ಪರಾ. ೨. ಬಳಿದುಕೊಳ್ಳು ; ಲೇಪಿಸಿಕೊಳ್ಳು : ಅಚ್ಯುತ ನಿನ್ನಯ ಧ್ಯಾನವಿಲ್ಲದೆ ದ್ವಾದಶನಾಮ ಪಚ್ಚುವೆನು (ಪ್ರಸಕೀ. ೯–೧). △ **ಪರ್ಚು**$_2$: ೩. (ದೀಪವನ್ನು) ಅಂಟಿಸು ; ಹೊತ್ತಿಸು : 'ಪರ್ಚಿಸು$_2$' ಪರಾ. ೪. ಅಂಟಿಕೊಳ್ಳು ; ಸೇರು ; ಬೆಸೆ : ಅವರ ಲಾವಣ್ಯರಸ ಪರಿದೈದಿ ರುಕ್ಮಿಣಿಧವನ ಕಣ್ಮನದೊಳು ತುಂದಿಯತಿಮೋಹಲತೆ ತವೆ ಬಳ್ಳಿವರಿದವರ ತನುಭುಜಗಳನು ಪರ್ಚು (ನಸಮೋ. ೧೦–೫೮). **ಹಚ್ಚು**$_1$: ೧. ಮಗನು ನೌಕರಿಯಿಲ್ಲದೆ ಕುಳಿತಿದ್ದಾನೆ; ಎಲ್ಲಿಯಾದರೂ ಕೆಲಸಕ್ಕೆ ಹಚ್ಚಬೇಕು (ರೂಢಿ). ೨. ತಿಲಕಮಂ ಫಣಿಗೆ ಕಪ್ಪಂ ಕಣ್ಣಿಗುರೆ ಹಚ್ಚದೊಲಪಿನಂ ಕನ್ನಡಿಯನೀಕ್ಷಿಸದೆ . . . ಕುಳಿತು (ಪರಮ. ೬–೪). ೩. ಮಿಂಚಬೇಕೆಂದು ಬಲು ಹೊಗೇತಿಗಳನು ಹಚ್ಚಿ ವಂಚನೆಯಿಂದಲೆ ಪೂಜೆಯ ಮಾಡುವುದು (ಪುರಂದ. ೨–೨೫–೨) ; ತುಪ್ಪದ ದೀವಿಗೆ ಹಚ್ಚೂವೆ ಸಂಕಟಕ ನೆಪ್ಪಿರಲೊ ದೇವ (ಕನ್ನಜಾ. ೧). ೫. ಬಳಿ ; ಲೇಪಿಸು : ಹಚ್ಚಡಿಕ್ಕೆ ಬಚ್ಚಲ ಪಾಲು (ಗಾದೆ). ೬. ಆರಂಭಿಸು; ಮೊದಲುಮಾಡು; ಉಪಕ್ರಮಿಸು : ತಂಹೊತ್ತು ನಮಗೆ ನಾಲ್ಕನೇ ಪುಸ್ತಕವನ್ನು ಹಚ್ಚುತ್ತೀನೆ (ಮುಂಬಯಿ. ೪–೧) ; ಮತ್ತೆ ನಿನ್ನ ರಗಳೆ ರಾಮಾಯಣ ಹಚ್ಚಬೇಡ (ರೂಢಿ). ೭. (ಸಸಿಗಳನ್ನು) ಊರು ; ನೆಡು ; ನಾಟು : ಹಚ್ಚಿದ ವರ್ಷಕ್ಕೆ ಬಾಳೆ ಈಯುತ್ತದೆ (ಮುಂಬಯಿ. ೩–೪೬) ; ಗಾಳಿ ಹಚ್ಚಿದ ಬಳ್ಳಿಗಾರೇನು ನೀರೆರೆವರು ? (ಪಯಣ. ೨೩–೧೦). ೮. ಪಟ್ಟಿಗೆ ಸೇರಿಸು; ನೋಂದಾಯಿಸು : ಅವರು ಈ ಸಮಾಜದ ಸದಸ್ಯರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಹಚ್ಚಿದರು (ರೂಢಿ). [ದೇ.॥ ತುಳು. ಹಚ್ಚು ; ಗಡಬು. ಪರ್ಚ್]

ಪಚ್ಚು$_4$ 'ಪರ್ಚು$_3$' ನೋ.

ಪಚ್ಚು$_5$ (ನಾ). ಸೇರುವೆ ; ಹೊಂದಿಕೆ : ಭವಸಂತಾಪವಿಲೋಪಮಂ ನಯಮದಿಂದಿಚ್ಛಿಪ್ಪವಂ ನಿಚ್ಚಮುಚ್ಚವದಿಂ ತ್ವಚ್ಚರಣೋಚ್ಚಭಕ್ತಿ ರಮಯಂ ಪಚ್ಚಂ[ಪಾಠಾಂ. ಪರ್ಚಂ]ಚರಂ ನಚ್ಚಿ ಮುಚ್ಚಿ ವಲಂ ವರ್ತಿಕೆ (ವರ್ಧಪು. ೧೬–೮೨). [<ಪಚ್ಚು$_3$]

ಪಚ್ಚು$_6$ (ನಾ). (ಸುಕ್ಕಾಗಿ) ಒಳಸೇರುವಿಕೆ ; ಹಳ್ಳ ಬೀಳುವಿಕೆ : ಅವಳ ಗಲ್ಲಗಳು ಪಚ್ಚು ಬಿದ್ದಿವೆ (ಕುರಿಹಿಂ. ೬೭) ; ಆ ಪಚ್ಚು ಬಡೆದ ಗಲ್ಲ, ಸಪ್ಪಗಾದ ಮೊಗ–ನಾಳು, ನಾಳು ! ರಮಾಬಾಯರೇ ಆ ರೂಪವನ್ನು ವರ್ಣಿಸಬೇಕು ! (ನಮಜೀ. ೮). [< ಬಚ್ಚು$_2$]

ಪಚ್ಚುಕುಡು 'ಪಚ್ಚುಗೊಡು' ನೋ.

ಪಚ್ಚುಕೊಡು 'ಪಚ್ಚುಗೊಡು' ನೋ.

ಪಚ್ಚುಕೊಳ್ 'ಪಚ್ಚುಗೊಳ್' ನೋ.

ಪಚ್ಚುಗಂಟು(ನಾ). ಎರಡು ಬೇರೆ ಬೇರೆಯ ಗಂಟು; ವಿಭಾಗಿಸಿದ ಗಂಟು : ಆಕಿನೀಕೋಜ್ವಳ ಸಹಸ್ರಕುಂತಳಂಗಳ್ ಪರಕಲಿಸಿ ಬಂದು ಪೊದಮುಯ್ವನ್ಗಳ್ಕಿಱುಯೆ ಪಚ್ಚುಗಂಟಿಕ್ಕಿ ಗಾಂಡೀವಧನ್ವಂ ಸನ್ನದ್ಧನಾಗಿರ್ಪನ್ನೆಗಂ (ಪಂಪಭಾ. ೧೨–೨೦೨ ಪ).

[ಪಚ್ಚು$_1$ (< ಪಸು$_1$)+ಗಂಟು]

ಪಚ್ಚುಗುಡು 'ಪಚ್ಚುಗೊಡು' ನೋ.

ಪಚ್ಚುಗೂಟು, ಪರ್ಚುಗೂಂಟು (ನಾ). (ಚಿತ್ರವನ್ನು ತೂಗುಹಾಕುವ) ದಸಿ,—ಗೂಟು : ವಕ್ರೋಕ್ತಿಯಿಂದನ್ನಂ ತೆಗಟ್ಟು ತನ್ನಂ ಪೊಗಟ್ಟ ಚಿತ್ರಿಕೆಯ ಚೇತಶ್ಚಕೋರಮಂ ದರಸ್ಮಿತಚಂದ್ರಿಕೆಯಿನಲರ್ಚಿ ಮತ್ತೀಯೆಡೆಯೊಳಚ್ಚಜಾಬಂತಕ್ಕೆಗೆಯ್ದ ಪಚ್ಚುಗೂಟ[ಪಾಠಾಂ. ಪರ್ಚುಗೂಂಟ]ಮಂ ಕಂಡು (ಧರ್ಮನಾ. ೩–೧೪೭ ಪ). **ಪರ್ಚುಗೂಂಟು** : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ.

[ಪಚ್ಚು$_3$ + ಗೂಟು(<ಗೂಂಟು)]

ಪಚ್ಚುಗೆ (ನಾ). ೧. ಮಂತ್ರಾಲೋಚನೆ ; ಏಕಾಂತದ ಮಾತುಕತೆ ; ಗುಪ್ತ ಸಲ್ಲಾಪ : 'ಪಚ್ಚುಗೆಗಾರ್ತಿ' ಪರಾ. ೨. ವಿವಿಕ್ತವಾದ ಸ್ಥಾನ ; ಏಕಾಂತಸ್ಥಳ : (೪).

[ಪಚ್ಚು$_2$(<ಪರ್ಚು$_1$)+–ಗೆ]

ಪಚ್ಚುಗೆಗಾರ್ತಿ (ನಾ). ಏಕಾಂತದಲ್ಲಿ ಸಲಹೆ ಮಾಡುವವಳು : "ಪಚ್ಚುಗೆಗಾರ್ತಿ, ಮುಂತಣಗಾರ್ತಿ—ಈ ೪ ಏಕಾಂತದವಳ್" (ಕಶಸಾ. ೬೨–೬೭ಗ). [ಪಚ್ಚುಗೆ +–ಕಾರ+–ತಿ$_1$ (<–ಇತ್ತಿ)]

ಪಚ್ಚುಗೊಡು, ಪಚ್ಚುಕುಡು, ಪಚ್ಚುಕೊಡು, ಪಚ್ಚುಗುಡು, ಪರ್ಚುಗುಡು, ಪರ್ಚುಗೊಡು (ಕ್ರಿ). ಹಂಚಿ ಕೊಡು; ವಿಭಾಗ ಮಾಡಿ ನೀಡು ; ಪಾಲುಮಾಡಿ ಕೊಡು: ರತ್ನಕಂಬಳಂಗಳಂ ಕೊಂಡು . . . ಮೂವರ್ತ್ತಿರ್ವರ್ ಸೊಸೆವಿರ್ಕಳ್ಗೆ ಪಚ್ಚುಗೊಟ್ಟೊಡೆ (ವಡ್ಡಾರಾ. ೨೫-೨೮) ; ಮತ್ತಮಾ ವೃಷಭನಾಥನುಟಿದಪತ್ಯವರ್ಗಕ್ಕೆಲ್ಲಮಿಳಾತಳ ವಿಭವಮಂ ಪಚ್ಚುಗೊ[ಪಾಠಾಂ.ಕೊ]ಟ್ಟು . . . ಸುದರ್ಶನವೆಂಬ ಶಿಬಿಕೆಯ ನೇಱಿದಾಗಳ್ (ಆದಿಪು. ೯-೬೨ ವ) ; ದಾಮೋದರಂ ಸಿಂಹೋದರಂಗಂ ವಜ್ರಕರ್ಣಂಗಂ . . . ನಾಡುಮಂ ಬೀಡುಮಂ ಪಚ್ಚುಗೊ[ಪಾಠಾಂ. ಕೊ, ಗು]ಟ್ಟು (ಪಂರಾಮಾ.೬-೮೦ ವ); ಪರಿವಿಡಿಯೊಳೆಡೆಗೊಂಡ ಪಂತಿಗೆ ತೀರ್ಥ ಪ್ರಸಾದಂಗಳನೋರಣದಿಂ ಪಚ್ಚುಗೊಟ್ಟುಂ ... ಪೊಱಮಟ್ಟಂ (ರಾಮಾಶ್ವ. ೭೬-೮). **ಪಚ್ಚುಕುಡು** : ಪರಿಜನಕ್ಕೆಡಱಿದೊಡೆ ಪೊರೆವುದುಂ ಪಡೆದುದಂ ಪಚ್ಚುಕುಡುವುದುಂ . . . ಮೊದಲಾಗಿ ಮತ್ತಮುತ್ತಮ ಗುಣಂಗಳೊಳವು (ಪಂಚತಂ. ೨೯೪-೧). **ಪಚ್ಚುಕೊಡು** : ಅನವರ್ಗೆ ಪಟ್ಟಮಂ ಕಟ್ಟ ನೆಲನಂ ಪಚ್ಚುಕೊಡುವಾಗಳಡ್ಡಂ ಬರ್ಪ ಗಂಡರಂ ನೋಟ್ಪೆಂ (ಪಂಪಭಾ. ೪-೭ ವ) ; ಇತ್ತ ಆದಿದೇವಂ ಭರತ ಬಾಹುಬಲಿ ಗಳಂ . . . ಅಧಿರಾಜ ಯುವರಾಜರ್ಮಾಡಿ ನಿಱಿಸಿ ವೃಷಭಸೇನಾದಿಗಳ್ಗ ಮಿಳಾತಳಮಂ ಪಚ್ಚುಕೊಟ್ಟು (ಚಾವುಂಪು. ೩೭). **ಪಚ್ಚುಗುಡು** : ತನಗಂ ಮನೆಗಂ ಕೆಳದಿಯಿಂದಮೆ ಪಚ್ಚುಗುಡಲೆವೇಟ್ಟು ತನಗೆ ನೀಡುವ ಪೂವಂ ತಂದಣ್ಣಂಗೆ ಕುಡಾಂ ಕೆಯ್ಮಾಸಿದೆನೆಂದಳಂ . . . ತೋಱಿ (ಶಾಂತಿಪು. ೮-೮೧ ವ) ; ಸರ್ವಘಾತಿದ್ರವ್ಯಮಂ ದೇಶಘಾತಿಗಂ ಪಚ್ಚು ಗುಡುವುದು(ತತ್ತ್ವಪ್ರ. ೩೧೮); ಹರನುರಿಪಿದೊಡುರಿಪಮನೆಲ್ಲರ ಮೆಯ್ಗಂ ಪಚ್ಚುಗುಡುವವೋಲ್ ಪುಗುತಿರ್ಪಾ ಸ್ಮರನಂ ಪುಗಲಿತ್ತೊಡೆ ಮನಮುರಿ ವುದುಮಂಗಂಗಳುರಿವುದುಂ ವಿಸ್ಮಯಮೇ (ಲೀಲಾವ. ೪-೪೭) ; ರಾಯನುಮತಿ ಹರ್ಷದಿಂದಾ ವೃತ್ತಾಂತಮನಿತುಮನೆಕ್ಕಟಿಯುಸಿರ್ದು ಸಂತಸಮುಂ ಪಚ್ಚುಗುಡುವುದುಂ (ಚಿಕವಿ. ೩-೧೦೪). **ಪರ್ಚುಗುಡು** : ಮಿಕ್ಕಿರೆಯಿಂ ದಾಸಿಯರ್ಗೆ ಪರ್ಚುಗುಡ್ಯೆ (ರಾಮಾಶ್ವ. ೩೮-೧೯) ; ಭೃಂಗಾಯಿವರ್ಣಗಳನ್ನು ತೋಟಗನು ತಂದು ಕೊಡಲು, ಕೃಷ್ಣನು ರುಕ್ಮಿಣಿ-ಸತ್ಯಭಾಮೆಯರಿಗೂ ಮಿಕ್ಕ ರಾಣೀವಾಸದವರಿಗೂ ಪರ್ಚುಗುಡು ವನು (ಕರ್ಣಾಜ. ೧೦೧). **ಪರ್ಚುಗೊಡು** : ತನ್ನ ಮಾಡಿದ ಪಿಶಿತ ಮನವರ್ಗೆಲ್ಲಂ ಪರ್ಚು[ಪಾಠಾಂ.ರ್ಚಿ, ಚ್ಚು]ಗೊಟ್ಟುಮನಿಬರುಮೊಂದಾಗಿ ಪೋಪನ್ನೆಗಂ (ವಡ್ಡಾರಾ. ೧೯-೧೯) ; ತದ್ದೈತ್ಯಾಧಮಂ ನೀಳದಿಂ ಬಿರಿದಂ ಭೂತಗಣಕ್ಕಮಂಡಜಗಣಕ್ಕಂ ಪರ್ಚುಗೊ[ಪಾಠಾಂ. ಚ್ಚುಕೊ] ಟ್ಟಂದದಿಂ (ಜಗವಿ. ೫-೪೬). [ಪಚ್ಚು$_1$(<ಪಸು$_1$)+ಕೊಡು$_1$]

ಪಚ್ಚುಗೊಳ್, ಪಚ್ಚುಕೊಳ್, ಪರ್ಚುಕೊಳ್, ಪರ್ಚುಗೊಳ್, ಹಚ್ಚುಕೊಳ್ (ಕ್ರಿ). ಹಂಚಿಕೊಳ್ಳು ; ಭಾಗ ಮಾಡಿಕೊಳ್ಳು : ಪ್ರತಿದಿನಕ್ಕೊಂದು ಮಲ್ಲಲ ಕೂಟುಮನೊಂದು ಮೊಗಪೆ ನೀರುಮಂ ನೆಲ ಮನೆಯೊಳಗಣ್ಗೆ ನೀಡಿದೊಡನಿಬರು ಪಚ್ಚು[ಪಾಠಾಂ.ರ್ಚು]ಗೊಂಡುಣ್ಬರ್ (ವಡ್ಡಾರಾ. ೧೮೨-೧೧) ; ಮೃಗನಯನೆಯ ಮನದ ಖೇದಮಂ ಪಚ್ಚು ಗೊಳಲ್ ಬಗೆದಂತಾಕುಳಚಿತ್ತಂ ದೃಗಂಬುವಂ ತೊಡೆದು ಮೆಲ್ಲನಿಂತೆಂದಂ (ಚಂದ್ರಪು. ೩-೫೩) ; ನಯನ ತ್ರಿಭಾಗವಾಯ್ತಾದಿಯೊಳಚ್ಚರಿಯಿಂ ತ್ರಿವರ್ಗಮವು ಪಚ್ಚುಗೊಳಲ್ ಪ್ರಿಯದಿಂದಲ್ಲದೊಡಬಲೆಯ ನಯನವಿಭಾ ಗಕ್ಕೆ ಕಾರಣಂ ಪೆಱತುಂಟೇ (ಸಳಚಂ. ೩೬೪). **ಪಚ್ಚುಕೊಳ್** : ಜಕ್ಕ ವಕ್ಕಿಗಳ್ ಸುರತಮಕರಧ್ವಜನ ಸುಭದ್ರೆಯ ವಿರಹಪರಿತಾಪಮಂ ಪಚ್ಚು ಕೊಂಡಸುಂಗೊಂಡಗಲೆ (ಪಂಪಭಾ. ೪-೪೮ ವ) ; ಅರ್ಧರಾತ್ರಿಯೊಳ್ ಧರ್ಮಬುದ್ಧಿ ದುರ್ಬುದ್ಧಿಯಪ್ಪ ದುಷ್ಟಬುದ್ಧಿಯಂ ಕರೆದು ಪೊನ್ನಂಪಚ್ಚು [ಪಾಠಾಂ.ರ್ಚು]ಕೊಳ್ವಮೆನೆ (ಪಂಚತಂ. ೧೬೦-೮). **ಪರ್ಚುಕೊಳ್** : ಮೇಲಿನ 'ಪಂಚತಂ.' ಪ್ರಯೋಗದ ಪಾಠಾಂತರವನ್ನು ನೋಡಿ. **ಪರ್ಚುಗೊಳ್** : ಮದನಾತುರೆಯಪ್ಪೆನ್ನೀ ಹೃದಯದ ರಾಗವನೆ ಪರ್ಚುಗೊಂಡಂತಿರೆ ಕೆಂಪೊಧವಿದ ಪಡುವಣ ದೆಸೆಗೆಯ್ದಿದನರುಣ ರುಚಿಪ್ರಕಾಶನಪ್ಪ ದಿನೇಶಂ (ಕಾದಂಪೂ. ೮೦೮) ; ಸಮಭಾಗಂ ಬರೆ ಹಸ್ತಿ ವಾಜಿ ಸಹಿತಂ ಭಂಡಾರಮಂ ಪರ್ಚುಗೊಂಡು ಮಗಂಗರ್ಧಮನಿತ್ತು (ಅನಂಪು.೧೨-೩೦) ; ಎಂದಿನ ತೆಱನಲ್ಲದಿದೇನಿಂದೀ ವಲ್ಲಭೆಯ ವದನವನಜಂ ಕೊರಗಿತ್ತೆಂದುದನೆ ಪರ್ಚುಗೊಳ್ಪೊಂದಂದದಿನೇನರಸನಾನನಂ ಕೊರಗಿ ದುದೋ (ಪುಷ್ಪಪು. ೩-೬೫); ಕಾಂತೆಯ ಚಿಂತೆಯನಾ ವಿಭು ತಾಂ ಪರ್ಚು ಗೊಂಡು ತಳೆದಿಂತೆಂದಂ (ರಾಜಶೇ. ೩-೭೦). **ಹಚ್ಚುಕೊಳ್** : ಸಮಾನಭಾಗೆಯಲು ಹಚ್ಚುಕೊಂಡುಂಬರ ಮಂಗಳ ಮಹಾಶ್ರೀ (ಎಕ.VI,ಕಡೂರು. ೧೫೭-೭೫; 1191).[ಪಚ್ಚು$_1$(<ಪಸು$_1$)+ಕೊಳ್$_1$]

ಪಚ್ಚುಡಿ (ಕ್ರಿ). ಹಂಚಿಹೋಗು ; ಇಬ್ಭಾಗವಾಗು : ಒಡವುಟ್ಟದ ತಳದಳಿಸುವ ತುಡುಗೆಯ ದುಗುಲದ ನಮೇರುದಾಮಕದೊಳ್ ಪಚ್ಚುಡಿ ದುದು ಪರಾರ್ಧ್ಯಕೂಟದ ಬೆಡಂಗೊಡಂಬಟ್ಟುದಿರ್ವರಹಮಿಂದ್ರರೊಳಂ (ಶಾಂತಿಪು. ೯-೨೩೦). [ಪಚ್ಚು$_1$(<ಪಸು$_1$)+ಉಡಿ$_1$]

ಪಚ್ಚುನುಡಿ$_1$ (ಕ್ರಿ). ಕಿವಿಮಾತನ್ನು ಹೇಳು ; ಪಿಸುಮಾತನ್ನು ಹೇಳು ; ರಹಸ್ಯವಾಗಿ ತಿಳಿಸು : ಅರಸಾ ನಿನ್ನ ಸುಹೃದ್ಭೂವರಜಯ ತರುಣಿಯವಗೆ ನಿಡುನಿದ್ದೆಯನೊದವಿಸಿ ಭರದಿಂ ಬರ್ಪೆನೆನುತುಮೆನ್ನಂ ನಿನ್ನೆಡೆಗಟ್ಟಿದಳೆನುತ ಪಿರಿದುಂ ಪಚ್ಚುನುಡಿವ ತೆಱದಿಂ ಜಯನರಪಾಲಕನಾ ಕರ್ಣಾಂತಂ ತೆಗೆದುರುಕೋದಂಡದ ನಾರಿ ಕರಂ ಕಣ್ಗೆಡ್ಡವಡೆದುದಾಗ (ಜಯಕಾ. ೭-೯). [ಪಚ್ಚು$_4$(<ಪರ್ಚು$_2$)+ನುಡಿ$_4$]

ಪಚ್ಚುನುಡಿ$_2$ (ನಾ). ಪಿಸು ಮಾತು ; ಕಿವಿ ಮಾತು ; ಗುಟ್ಟಿನ ಮಾತು : ಬೆಚ್ಚದೆ ಕೊಲ್ವೆನೆಂದಾ ದಾದಿಯೊಳು ತಾನು ಪಚ್ಚುನುಡಿಯ ನಾಡಿದಳು (ಪ್ರಭಂಜ. ೨-೫೭). [ಪಚ್ಚು$_4$(<ಪರ್ಚು$_4$)+ನುಡಿ$_4$]

ಪಚ್ಚುಮಳಲು (ನಾ). ಸಣ್ಣ ಮರಳು ; ನುಣ್ಮರಳು : ಮೊಳ ಕಾಲುದ್ದದ, ಉಸುಬಿಗಿಂತ ಕೇಡಾಗಿರುವ ಪಚ್ಚುಮಳಲಿನ ಬಯಲಂತೆ, ಅಂತಹ ಮಳಲುನೆಲದಲ್ಲಿ ಆ ಹೇರನ್ನು ಒಂದು ಮಾರುದೂರ ಎಳೆದು ಕೊಂಡು ಹೋದ ಎತ್ತಿಗೆ ಚಿನ್ನದ ಕೋಡಣಸು (ಬೆಳುಮ. ೧೭೬).
[ಪಚ್ಚು?+ಮಳಲು$_2$(<ಮಣಲ್)]

ಪಚ್ಚುವರೆ (ಕ್ರಿ). ಬಿಡಿ ಬಿಡಿಯಾಗಿ ಹರಡು: ಕೆದಱಿದ ಮುಡಿಕಟ್ಟು ಪಚ್ಚುವರೆದು[ಪಾಠಾಂ.ಪರ್ಚಿ ಪರೆದು]ಮುಚ್ಚಿ ಮುಸುಂಕಿ ಭಾಳತಳಮಂ (ಗಿರಿಕೆ. ೮-೭೭ ವ). [ಪಚ್ಚು$_1$(<ಪಸು$_1$)+ಪರೆ$_1$]

ಪಚ್ಚೆ$_1$ 'ಪಸು$_3$' ನೋ.

ಪಚ್ಚೆ$_2$ 'ಪಚ್ಚ$_2$' ನೋ.

ಪಚ್ಚೆ$_3$ 'ಬಚ್ಚೆ$_1$' ನೋ.

ಪಚ್ಚೆಕದಿರು (ನಾ). =ಪಚ್ಚೆತೆನೆ; "ಒಂದು ಸುಗಂಧ ಸಸ್ಯ" (ಸಿರಿಕೋ). [ಪಚ್ಚೆ$_1$(<ಪಸು$_3$)+ಕದಿರು$_2$(<ಕದಿರ್$_1$)]

ಪಚ್ಚೆಕರ್ಪುರ 'ಪಚ್ಚೆಗಪ್ಪುರ' ನೋ.

ಪಚ್ಚೆಕರ್ಪೂರ (ನಾ). =ಪಚ್ಚಕರ್ಪೂರ : "ತುಷಾರಗೌರಃ—ಪಚ್ಚೆ ಕರ್ಪೂರ" (ಓಷಧಿ. ೭೧) ; ಚಾತುರ್ಥಿಕ ಜ್ವರಕ್ಕೆ :-ಪಾಷಾಣ ಹಣ ೧ ತೂಕ, ಕೋಷ್ಠ ಹಣ ೧ ತೂಕ, ಪಚ್ಚೆಕರ್ಪೂರ ಹಣ ೨ ತೂಕ ಇವಿಷ್ಟನ್ನೂ . . . ಮದಕಣಿಕೆಯ ರಸದಲ್ಲಿ ಕೊಡುವುದು (ವಿನೈವಿ. ೧೬೨).
[ಪಚ್ಚೆ$_1$(<ಪಸು$_3$)+ಕರ್ಪೂರ]

ಪಚ್ಚೆಕಾಯಿ 'ಪಚ್ಚೆಗಾಯ್' ನೋ.

ಪಚ್ಚೆಗಂಬಿ (ನಾ). ಕಲಾಬತ್ತಿನ ಹಸಿರಂಚು ; ಹಸಿರು ಬಣ್ಣದ ಕಂಬಿ : ಹಚ್ಚಡವ ಹೊದ್ದವ್ನೆ ಪಚ್ಚೆಗಂಬೀಯಾ ಪಾಗಾನೆ ಸುತ್ತವ್ನೆ (ಹುಟ್ಟಹ. ೨೪). [ಪಚ್ಚೆ$_1$(<ಪಸು$_3$)+ಕಂಬಿ$_1$]

ಪಚ್ಚೆಗನ್ನವಚ್ಚ (ನಾ). ಮರಕತದಿಂದ ಕೂಡಿದ ಕರ್ಣಾಭರಣ : ಎಳಗಲ್ಲದೊಳಿಟ್ಟ ದಿಟ್ಟಬೊಟ್ಟಂ ಕೆಳೆಗೊಂಡೊಪ್ಪುವ ಪಚ್ಚೆಗನ್ನವಚ್ಚಂ (ಚಿಕವಿ. ೩-೪೪). [ಪಚ್ಚೆ$_1$(<ಪಸು$_4$)+ಕನ್ನವಚ್ಚ]

ಪಚ್ಚೆಗಪ್ಪುರ, ಪಚ್ಚೆಕರ್ಪುರ (ನಾ). = ಪಚ್ಚೆಕರ್ಪೂರ: ಪಚ್ಚೆಗಪ್ಪುರ ಪನ್ನೀರು ಮೃಗನಾಭಿ ಮುಖ್ಯಲೇಪನದಿ ತಿಗುರನಿಕ್ಕಿದರಾಳಿಯರು (ವೋಹತ. ೨೩-೧೨). **ಪಚ್ಚೆಕರ್ಪುರ**: ಕಸದ ಕೊಱತೆಗೆ ಪಚ್ಚೆಕರ್ಪುರದ ರಜವನಂಬಿಲದ ಕೊಱತೆಗೆ ಸುಧೆಯನು ಹುಸಿಯ ಕೊಱತೆಗೆ ಸತ್ಯವನು ಕೊಟ್ಟು ಕೆಡಿಸುವಂತೆ (ಅಸೆಪು. ೨-೧೩೨) ; ಪಚ್ಚೆಕರ್ಪುರವಚ್ಚೆಗಳನು ತೊಡರ್ಚಿದಳು ತಂದೋರ್ವ ಸಖಿಯದು ಕಿಚ್ಚು ಪತ್ತಿದ ತೆಱದುರಿಯೆ (ಸಾಳ್ವಭಾ. ೬-೨೦). [ಪಚ್ಚೆ$_1$(<ಪಸು$_4$)+ಕಪ್ಪುರ]

ಪಚ್ಚೆಗಬ್ಬುನ 'ಪಚ್ಚೆಗರ್ಬುನ' ನೋ.

ಪಚ್ಚೆಗರ್ಬುನ, ಪಚ್ಚೆಗಬ್ಬುನ (ನಾ). ಸಂಸ್ಕರಿಸದ ಕಬ್ಬಿಣ ; ಶುದ್ಧವಾಗದ ಕಬ್ಬಿಣ : ತತ್ತರುಣಿಯ ಬಟಿಸಬಟಿಯಂ ಪತ್ತಿ ಹಿತಾಹಿತವಿವೇಕವಿಕಲಂ ಪಟಿಯಂ ಪೆತ್ತಾ ಮುನಿಪಂ ಭ್ರಾಮಕ ದತ್ತೆಳಸುವ ಪಚ್ಚೆಗರ್ಬು[ಪಾಠಾಂ. ಬ್ಬು]ನಕ್ಕೆಣೆಯಾದಂ (ಪಂರಾಮಾ. ೪-೮೩). **ಪಚ್ಚೆಗಬ್ಬುನ** : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಪಚ್ಚೆ$_1$(<ಪಸು$_5$)+ಕರ್ಬುನ(<ಕರ್ವೊನ್)]

ಪಚ್ಚೆಗಾಯ್, ಪಚ್ಚೆಕಾಯಿ (ನಾ). ಹಸಿರು ಕಾಯಿ ; ಮಿಡಿ ಕಾಯಿ : ವೃಕ್ಷಜಾಲಮೆಲ್ಲಂ ತಳಿರ್ನನೆ ಪಚ್ಚೆಗಾಯ್ದೋರೆವಣ್ಗಳಂ ಪಡೆದುವಾಗ (ಸಮ್ಯಕೌ. ೭-೪). **ಪಚ್ಚೆಕಾಯಿ.**

ಪಚ್ಚೆಕಾಯಿಗಿಡ = ಒಂದು ಬಗೆಯ ಸಸ್ಯ : ಅಡಿಕೆಬಾಳೆ . . . ಪಚ್ಚೇಕಾಯಿ ಗಿಡ, ದೊಡ್ಡಮೆಕ್ಕೆ, ಹಾಲ್ಮೆಕ್ಕೆಬಳ್ಳಿ (ಸಸ್ಯನಿ. ೪೨).

[ಪಚ್ಚೆ$_1$(<ಪಸು$_5$)+ಕಾಯ್$_4$]

ಪಚ್ಚೆಗಾಱ 'ಪಚ್ಚಗಾಱ' ನೋ.

ಪಚ್ಚೆಗುಪ್ಪಸ (ನಾ). = ಪಚ್ಚಗುಪ್ಪಸ ೨ : ಮಿಱುಗುವ ಪೀಲಿಗಟ್ಟು ಪೊಸ ನಿಗ್ಗವದೊಳ್ಪಳೆ ಪಚ್ಚೆಗುಪ್ಪಸಂ ಕಿಱುದಳಿರಾಂತ ಚಲ್ಲಣಮದೇಂ ಬಗೆಗೊಂಡುದೊ ತತ್ಕಿರಾತರಾ (ಶಬಶಂ. ೩-೨೭).

[ಪಚ್ಚೆ$_1$(<ಪಸು$_5$)+ಕುಪ್ಪಸ]

ಪಚ್ಚೆಗೆಂಪು (ನಾ). ಒಂದು ಮಿಶ್ರ ಬಣ್ಣ ; ಹಳದಿ ಮತ್ತು ಕೆಂಪು : ಮಿಗೆ ಪಚ್ಚೆಗೆಂಪಲತೆಗೆಯ ಹುರುಡಿಪುದು ತೆಳುಗಲ್ಲವಾ ಸ್ವಯಂಪ್ರಭೆಗೆ (ವರ್ಧಚ. ೪-೮೦). [ಪಚ್ಚೆ$_1$(<ಪಸು$_5$)+ಕೆಂಪು$_1$]

ಪಚ್ಚೆಗೊಂಡಲ (ನಾ). ಮರಕತದಿಂದ ಮಾಡಿದ ತೊಂಡಿಲು(?) : ಅಲರೆಸೆವೆಳದಳಿರೆಲೆಯರಲೆಲೆ ಬಲ್ಮಿಡಿ ಮಿಸುಪ ಪಚ್ಚೆಗೊಂಡಲಮಳಿ ಕಜ್ಜಲ ತಿಲಕಮಾಗೆ ತೋರ್ಪುದು ಸಲೆ ಸೊಗಯಿಸಿ ಬಾಲನಂದದಿಂ ಮಾಕಂದಂ (ಕುಸುಮಾ. ೫-೩೬).

[P ಇದು 'ಪಚ್ಚೆದೊಂಡಲ' ಎಂಬುದರ ಅಪಲಿಖಿತವಿರಬಹುದು]

ಪಚ್ಚೆಗೊಡೆ (ನಾ). ಹಸಿರು ಬಣ್ಣದ ಕೊಡೆ : ಪೊದಟ್ಟ ಪಚ್ಚೆಗೊಡೆಯೆಂಬಂತೆತ್ತಿ ಪಂಕೇಜಿನೀದಳಮಂ ಬಾಳಕರೇಣುವಂ ಬಯಕೆಯೊಳ್ ಕೊಂಡಾಡುತಿರ್ದತ್ತಿಭಂ (ಲೀಲಾವ. ೮-೪).

[ಪಚ್ಚೆ$_1$(<ಪಸು$_5$)+ಕೊಡೆ$_2$]

ಪಚ್ಚೆತೆನೆ 'ಪಚ್ಚೆಯ ತೆನೆ' ನೋ.

ಪಚ್ಚೆತೈಲ (ನಾ). ಕರ್ಪೂರದಿಂದ ತಯಾರಿಸಿದ ತೈಲ : ಪಚ್ಚೆತೈಲ ಹಾಕಿ ಮೂಳೆಯನ್ನು ಸೇರಿಸುವ ಯತ್ನದಲ್ಲಿ ಗಂಟಿಕಾಲ ಉಜ್ಜಿದ ಪಂಡಿತನ ಅಭಿಪ್ರಾಯ . . . ಒಂದು ಕಾಲೇ ಪೃರ್ಥವಾಗುವ ಸಂಭವವೇ ಕಾಣುತ್ತದೆ ಎಂದು (ದೇವಹಿಂ. ೨೪೧). [ಪಚ್ಚೆ$_1$(<ಪಸು$_5$)+ತೈಲ$_1$]

ಪಚ್ಚೆತೋರಣ 'ಪಚ್ಚೆದೋರಣ' ನೋ.

ಪಚ್ಚೆದೇವರು (ನಾ). ಪಚ್ಚೆಯ ಬಣ್ಣದ ಮೈಯುಳ್ಳ ದೇವರು ; ವಿಷ್ಣು : ಹುಚ್ಚನೆಂದರು, ಲುಚ್ಚನೆಂದರು, ಮುಚ್ಚು ಮರೆಯವನೆಂದರು. ಕಚ್ಚಿ ನುಡಿದರು, ಚುಚ್ಚಿ ನುಡಿದರು. ಪಚ್ಚೆದೇವರೆ ಬಲ್ಲನು (ಕಎಪು. ೨೦-೨೯). [ಪಚ್ಚೆ$_1$(<ಪಸು$_5$))+ದೇವರು(<ದೇವರ್)]

ಪಚ್ಚೆದೋರಣ, ಪಚ್ಚೆತೋರಣ (ನಾ). ಹಸಿರಾದ ತೋರಣ ; ಹಸಿರುತೋರಣ : ಕಾಂಸ್ಯತೋರಣ, ತಳಿರ್ದೋರಣ, ಪಚ್ಚೆದೋರಣ, ಮಕರದೋರಣ (ಶಮದ. ೨೯೮ ಪ್ರಯೋ); ತಳಿರ್ದೋರಣಂ ಪಚ್ಚೆದೋರಣ ಕಾಂಸ್ಯಮಕರತೋರಣ (ಕಬ್ಬಿಕೈ. ೯೬). **ಪಚ್ಚೆತೋರಣ** : ಎಲ್ಲೆಲ್ಲೂ ಪಚ್ಚೆತೋರಣಗಳು ರಾರಾಜಿಸುತ್ತಿದ್ದವು (ಗೂಢಿ).

[ಪಚ್ಚೆ$_1$(<ಪಸು$_5$)+ತೋರಣ]

ಪಚ್ಚೆಪಡಿಮೆ (ನಾ). ಹಸಿರುಬಣ್ಣದ ಪ್ರತಿಮೆ : ಯಾವ ಕಾವ್ಯಕೇನು ಕಡಿಮೆ, ರೈತನ ಈ ಹಸುರು ದುಡಿಮೆ, ಶಿಶುಪೈರಿನ ಪಚ್ಚೆಪಡಿಮೆ ? (ಕದಕೆ. ೬೮-೩). [ಪಚ್ಚೆ$_1$(<ಪಸು$_5$)+ಪಡಿಮೆ]

ಪಚ್ಚೆಪಯಿರು (ನಾ). ಹಸಿರಾದ ಬೆಳೆ : ಪಚ್ಚೆಪಯಿರಿನ ನಾಡ ಅಚ್ಚು ಅಚ್ಚ ಒತ್ತಿದ ಮೈಯ ಸಿರಿಯೇ (ನಾದಲೀ. ೯-೩).

[ಪಚ್ಚೆ$_1$(<ಪಸು$_4$)+ಪಯಿರು(<ಪಯಿರ್)]

ಪಚ್ಚೆಬಾಳೆ (ನಾ). ಒಂದು ಬಗೆಯ ಬಾಳೆ ; ಹಸಿರು ಬಣ್ಣದ ಬಾಳೆ : ಪಚ್ಚೆಬಾಳೆ, ನಾಡಬಾಳೆ, ಮಧುರಂಗಬಾಳೆ ಮೊದಲಾದ ನಾನಾ ಜಾತಿಯ ಬಾಳೆಯ ಬನಗಳೂ ಅಲ್ಲೆ ಇದ್ದುವು (ಕರ್ಣಾಜ.೧೫೫).

[ಪಚ್ಚೆ$_1$(<ಪಸು$_3$)+ಬಾಳೆ$_1$(<ಬಾಟೆ)]

ಪಚ್ಚೆಮಾಲೆ (ನಾ). ಹಸಿರು ರತ್ನಗಳ ಮಾಲೆ ; ಮರಕತಮಣಿ ಮಾಲೆ : ಪಚ್ಚೆಮಾಲೆ, ಪೂಮಾಲೆ, ವನಮಾಲೆ (ಶಮದ. ೨೯೮ ಪ್ರಯೋ).

[ಪಚ್ಚೆ$_1$(<ಪಸು$_3$)+ಮಾಲೆ]

ಪಚ್ಚೆಯ 'ಪಾಚ್ಛಾ' ನೋ.

ಪಚ್ಚೆಯತೆನೆ, ಪಚ್ಚೆತೆನೆ, ಪಚ್ಚೇತೆನೆ (ನಾ). (ಹಸಿರು ಬಣ್ಣದ ಕದಿರಿನಿಂದ ಕೂಡಿದ) ಒಂದು ಬಗೆಯ ಸುಗಂಧ ಸಸ್ಯ ಮತ್ತು ಅದರ ತೆನೆ : ಬಲುಗಂಪು ಸೊಂಪು ಮಾಡಿದವೊಲು ಪಚ್ಚೆಯ ತೆನೆ ಗಳೊಪ್ಪಿದುವು(ಮಲ್ಲಕಾ. ೪-೪೧೬). **ಪಚ್ಚೆತೆನೆ**: ಬಿಳಿ ದಾಸವಾಳ ಪಚ್ಚೆತೆನೆ ಬನ್ನಿಪತ್ರಿ ಎಳೆಯ ಶ್ರೀಗಂಧದ ಪತ್ತುರಿ (ಸಿದ್ಧಪು.೧೮-೯೫). **ಪಚ್ಚೇತೆನೆ** : ಮರುಗ ಪಚ್ಚೇತೆನೆ (ಚೆಂಗೂಲಿ. ೫೩). [ಪಚ್ಚೆ$_1$(<ಪಸು$_5$)+ತೆನೆ$_1$]

ಪಚ್ಚೆಯಱೆ (ನಾ). ಮರಕತ ಶಿಲೆ : ಮುತ್ತಿನ ಮತ್ತವಾರಣ ಪುಷ್ಯರಾಗದ ಪುತ್ತಳಿ ಪಚ್ಚೆಯಱೆಗಳ ಉತ್ತಮವೇದಿಕೆ ರತ್ನದುಪ್ಪರಿಗೆ ಮೆಯ್ವೆತ್ತಿರೆ ಮೆಱೆದುದಾ ಭವನ (ಕುರಾಸಾಂ. ೩-೯೪).

[ಪಚ್ಚೆ$_1$(<ಪಸು$_4$)+ಅಱೆ$_4$]

ಪಚ್ಚೆಲೆ (ನಾ). ಹಸಿರು ಬಣ್ಣದ ಎಲೆ ; ಹಸಿರೆಲೆ : ಕೆಂದಳಿರ ತಳಮಿದೇಕೆಂದು ಹಸ್ತಾಗ್ರದೊಳ್ ಪಚ್ಚೆಲೆಯಂ ಕೊಂಡಿಟ್ಟು ಕಟ್ಟುತ್ತೊರೆದು ಸಿಡಿವಿನಂ ಕಯ್ಪೆರಲ್ಪೊಂಗೆ ಮುಂಗೈ ಸುಲಿವನ್ನಂ ಕಾಮನೆಚ್ಚಂ ಪಡಲಿಡುವಿನೆಗಂ ಪೌರನಾರೀನಿಕಾಯಂ (ಅರ್ಧನೇ. ೪-೧೪೫) ; ತಾವರೆಯ ಪಚ್ಚೆ[ಪಾಠಾಂ.ಚ್ಚ]ಲೆಯಂ ಮೆಯ್ಯೊಳಾಂತು . . . ನೀರ್ವೆಣ್ಣಂತಿರ್ಪಳ್ (ಕಬ್ಬಿಕಾ. ೩೧೫) ; ಪಚ್ಚೋಲೆ, ಪಚ್ಚಡಕೆ, ಪಚ್ಚೆಲೆ (ಶಮದ. ೧೮೨ ಪ್ರಯೋ) ; ಹಾವಿನ ಹೆಡೆವಣಿದೊಡವು ಮುಡಿದ ಕಾಡ ಹೂವ ಮೆಯ್ಗೊಱೆದಾನೆಸೊಕ್ಕು ಮಾವಿನ ಪಚ್ಚೆಲೆ ದುಪ್ಪಟಯುಡಿಗೆಯೊಳಾವನಚರಿಯರೊಪ್ಪಿದರು (ಶ್ರೀಪಾಲ.೬-೩೬) ; ಪಚ್ಚೆಲೆಯ ತರುವನೊಣಗಿದ ಮರದ ಪೊರೆಯ ಕಾಳ್ಗಿಚ್ಚು ಕೊಂಡುರಿವೊಲಾ ಜ್ವಾಲೆಯ ಮುಳಿಸಿ ನೊಡನೆ ಪೆಚ್ಚತಮರಾಪಗೆಯ ಕೋಪಂ (ಜೈಮಿಭಾ. ೯-೩೨).

[ಪಚ್ಚ$_1$(<ಪಸುರ್$_2$)+ಎಲೆ$_1$]

ಪಚ್ಚೆಲೆದೊಂಗಲ್ (ನಾ). ಹಸಿರಾದ ಎಲೆಗಳ ಗುಚ್ಛ : ಸಿರಿದುಂ ಪಚ್ಚೆಲೆದೊಂ[ಪಾಠಾಂ. ಪಚ್ಚಲೊರ್ದಂ]ಗಲಂ ಪುಡುಕಿ ಸುಯ್ಯುತ್ತಿರ್ಕುಮೋ ಮುಗ್ಧೆ ಮೈಗರೆದಾನಿರ್ದೆನೆಗೆತ್ತು . . . ಎನುತುಂ ಬಂದಾ ಶುಕಂ ಸೋಂಕಲೊಡನೆ (ಲೀಲಾವ. ೬-೯೬). [ಪಚ್ಚೆಲೆ+ತೊಂಗಲ್]

ಪಚ್ಚೆವ (ನಾ). (?) : ಕೈಮಣಿಗೊಂಡ ಪೆಟವನಂತೆ ಕುಕ್ಕುಱಿಸಿ ಪೊಕ್ಕು ಸಾರ್ವ ಪಚ್ಚೆವದ ಪದಪಿನೊಳಂ ಮೆಚ್ಚಿ ನೋಟ್ಪ ರಾಜರಾಜನ ಕಣ್ಗಳಂಗಣದೊಳ್ ಬೆಡಂಗು ಭಂಗಿವಡೆವಿನಮೇಱಿ ತೋಱಿ (ಅನಂಪು. ೨-೩೦ ವ).

[?]

ಪಚ್ಚೆವಟ್ಟು (ನಾ). ಮರಕತದ ಬಟ್ಟು, — ಉಂಡೆ : ಕಾವಿಕ್ಕಿದಯಸ್ಕಾಂತದ ಪೂವಂ ಚುಂಬಿಸುವ ಪಚ್ಚೆವಟ್ಟುಗಳವೊಲಿಂದೀವರದಿನಬಲೆ ಗೊಂಚಲ ಪೂವುಗಳಂ ಪೊಡೆಯೆ ಪತ್ತಿ ಮುತ್ತಿದುವಳಿಗಳ್(ಲೀಲಾವ. ೧೩-೭೫). [ಪಚ್ಚೆ$_1$ (< ಪಸ್ಸು$_2$)+ಬಟ್ಟು$_2$?]

ಪಚ್ಚೆವಡಿಗ (ನಾ). ಮರಕತದಿಂದ ಮಾಡಿದ ಪೀಕದಾನಿ, — ಉಗುಳುಪಾತ್ರೆ : ಅಲರ್ದ ಮೊಗದಿಂದೆ ನಱುದಂಬುಲಮುಗುಳ್ದಳ್ನಿನಿ ಪಚ್ಚೆವಡಿಗದೊಳೆಂಬಂತಲರ್ದಲರಿಂದುಗುತಂ ಕೀಳೆಲೆಯೊಳ್ಮಧುಮಿಶ್ರ ತದ್ರಜಂ ರಂಜಿಸುಗುಂ (ರಾಜಶೇ. ೨-೭೦).

[ಪಚ್ಚೆ$_1$(<ಪಸ್ಸು$_2$) + ಪಡಿಗ]

ಪಚ್ಚೆವಡಿಸು 'ಪಚ್ಚವಡಿಸು' ನೋ.

ಪಚ್ಚೆವಣ್ಣ (ನಾ). ಹಸಿರು ಬಣ್ಣ : ಪಚ್ಚೆವಣ್ಣದ ಕಿಱುಗೆಯಂ ನಿಱುಗೆವಿಡಿದುಡಿಸಿ (ಮದೇಪು. ೧೭-೬). [ಪಚ್ಚೆ$_1$ (< ಪಸ್ಸು)+ಬಣ್ಣ]

ಪಚ್ಚೆವರಲ್ (ನಾ). ಹಸಿರುರತ್ನ ; ಮರಕತಮಣಿ : ಅಮೃತಸಾರವಾರಿಯಂ ಪಚ್ಚೆವರಲ ಕರಗಂಗಳೊಳ್ ತೀವಿ ತೆಂಬೆಲರ ಪೊಯ್ಲಿನಿಂ ತಣ್ಪುವಡೆಯಲೆಂದು ನೆಱೆಪಿದಂತಿರ್ದ ನೀರ್ಗಾಯ ತುಱುಗಲಿಂದೆಱಗಿದ ನಾಳಿಕೇರಭೂರುಹಂಗಳುಂ (ಚಂದ್ರಪು. ೧-೧೦೫ ವ) ; ವನಲಕ್ಷ್ಮಿ ನಿಜಾನುರಾಗದಿಂ ಕೊರಳ್ದೊಡವಿಂಗೆ ಸಮೆದಿರ್ದ ಪಚ್ಚೆವರಲ ಪದಕಗಳೆಂಬಂತೆ ಪಸುರ್ಗಾಯ ತುಱುಗಲಿಂ ಮೆಱೆವ ಕ್ರಮುಕವೃಂದಂಗಳಿಂ, (ತ್ರಿಪುವಿ. ೭-೬ ವ) ; ಎಸೆವ ಮಿಡಿಗಳ ಪಚ್ಚೆವರಲ ಸೂಸಕಗಳಿಂದ . . . ಚರಿಪ ಮಱಿದುಂಬಿಗಳ ನೀಲಮಣಿಮಾಲೆಯಿಂದೆಸೆವ ಮಾಮರಂಗಳೆ ವಸಂತಂ ಸ್ಮರನ ಬರವಿಂಗೆ ಕೈಗೈದ ಗೂಡಾರಮೆನಲೆಸೆದುವು (ಚಿಬಪು. ೪೫-೨೦).

[ಪಚ್ಚೆ$_1$(<ಪಸ್ಸು$_2$)+ಪರಲ್]

ಪಚ್ಚೆವರಿಗೆ (ನಾ). ಹಸಿರುರತ್ನದ ಗುರಾಣಿ ; ಮರಕತದ ಗುರಾಣಿ : ಅಸುರಕೋಳಾಹಳನ ದೈತ್ಯಮರ್ದನನ ದಾನವಾರಿಯ ರಕ್ಕಸಜೂಜಿನ ಪಚ್ಚೆವರಿಗೆಯ ಪಸದನದ[ಪಾಠಾಂ. ಪಚ್ಚೆಯ ಪರಿಗೆಯ ಪಸರದ] ಪಾರಿಯದೊಯ್ಯಾರದ ಕೆಂದಟ್ಟನ ಪಂತಿಯ . . . ಬಿರುದಿನ ಹರಿಗೆಕಾಱರ ಪರಿವೀಥಿಯೊಳಂ (ಗಿರಿಕ. ೬-೫೪ ವ).

[ಪಚ್ಚೆ$_1$(<ಪಸ್ಸು$_2$)+ಪರಿಗೆ$_3$[

ಪಚ್ಚೆವಲಗೆ (ನಾ). ಮರಕತವನ್ನು ಅಳವಡಿಸಿದ ಹಲಗೆ : ನೀಲಮಣಿಭಿತ್ತಿಗಳ ವಜ್ರದ ಸಾಲುಗಂಬದ ಪಚ್ಚೆವಲಗೆಯ ಮೇಲೆ ಮುತ್ತಿನ ಲೋವೆ ಹವಳದಿ ಕಡೆದ ಬೋದಿಗೆಯ ಸಾಲು ಮಣಿಮಂಟಪದಿ . . . ನಳನ ಚಿಂತೆಯ ತಾಳಿದಂಗನೆ ಸತಿಯರೊಡನರೆ ಕಂಡುದಾ ಪಕ್ಷಿ (ನಳಚ. ೨-೩೦). [ಪಚ್ಚೆ$_1$(<ಪಸ್ಸು$_2$)+ಪಲಗೆ]

ಪಚ್ಚೆವಾಕಲು (ನಾ). ೧. ಬಳ್ಳಿಮನೆ ; ಲತಾಮಂಟಪ. ೨. ಮಲ್ಲಿಗೆಯ ಬಳ್ಳಿ. ೧, ೨ : ಪಚ್ಚೆವಾಕಲುಯೆಂಬ ಶಬ್ದಂ=ತಳಿರಿಂ ಮಾಡಿದ ಮನೆಯಲ್ಲಿಯುಂ, ಮಲ್ಲಿಕಾಲತೆಯಲ್ಲಿಯುಂ (ತಪುದ.ಮ. ೩೧೨). 'ಪಚ್ಚವಾಗಲ್' ಪರಾ.

[ಪಚ್ಚೆ$_1$(<ಪಸ್ಸು$_2$)+ಪಾಕಲು(<ಪಾಗಾರ)]

ಪಚ್ಚೆವಿಲ್ (ನಾ). ಹಸಿರಾದ ಬಿಲ್ಲು; ಕಬ್ಬಿನ ಬಿಲ್ಲು: 'ಪಚ್ಚೆವಿಲ್ಲ' ಪರಾ.

ಪಚ್ಚೆವಿಲ್ಲಣ್ಣ=ಪಚ್ಚೆವಿಲ್ಲ : ಏನೇನು ಝುಂಝೂನಿಲ ಪಚ್ಚೆವಿಲ್ಲಣ್ಣ ನೇನಾದ ಹುಚ್ಚುಗೊಂಡಂತೆಮ್ಮ ಬಿಸುಟುಹೋದನೆ (ಭರಚ. ೫೨-೫೬).

[ಪಚ್ಚೆ$_1$(<ಪಸ್ಸು$_2$)+ಬಿಲ್$_2$]

ಪಚ್ಚೆವಿಲ್ಲ (ನಾ). ಕಬ್ಬಿನ ಬಿಲ್ಲನ್ನು ಹೊಂದಿದವನು ; ಕಾಮ : ಇಚ್ಚೆಗಾರ್ತಿ ಪಚ್ಚೆವಿಲ್ಲರಿಂ ಮಚ್ಚುವಡೆದಚ್ಚರಿ ಮಿಗೆ ತಳರ್ದೊಚ್ಚೇರೆಗಣ್ಣ ಪೆರ್ಚಿನಚ್ಚರಿಯರಿಂ (ರಾಜಶೇ. ೧-೧೩೫ ವ) ; ಎಮ್ಮಶ್ವಪತಿಗೆ ಶತಪಚ್ಚೆವಿಲ್ಲಸಮಾನ ಪುತ್ರರಾಗಲಿ (ಲಕ್ಷ್ಮಭಾ. ೩-೩೧-೩೨) ; ನಿಮ್ಮಣುಗೆ ವಾರಿಜಾಕ್ಷಿಯು ವಿದರ್ಭೆಯನೀಗ ಪಚ್ಚೆವಿಲ್ಲಗೆ ಕೊಡಹೇಳಿರಲದ ಕೇಳಿ ಬೆಚ್ಚಿ ಕೋಪದಿ ಪೇಳ್ದನಿಂತು (ಕಂದಶೊ. ೧೯೩).

ಪಚ್ಚೆವಿಲ್ಲಾಗಮ=ಕಾಮಶಾಸ್ತ್ರ : ಪಚ್ಚೆವಿಲ್ಲಾಗಮದ ಪರಿವಿಡಿಯೊಳಿನಿಸುಳಿಯಂದಚ್ಚರಿಯ ಬೀರಿಯತುಲಾನಂದಗಳ ತೋರಿ (ಲಕ್ಷ್ಮಭಾ. ೧-೧೬-೭). [ಪಚ್ಚೆವಿಲ್+-ಅ$_7$]

ಪಚ್ಚೆವೆಣ್ 'ಬಚ್ಚೆವೆಣ್' ನೋ.

ಪಚ್ಚೆವೋಗು (ಕ್ರಿ). ೧. ಮೈ ಹಸಿರುಗಟ್ಟು;ನಿಸ್ತೇಜವಾಗು : ಮುಚ್ಚೆಯಿಂ ಪಚ್ಚೆವೋದ ಕಿಱುದಮ್ಮನಂ ಬಂದಿಗೊಂಡಿರಕ್ಕುಂ (ರಾಮಾಶ್ವ.೧೫೬-೨೮). ೨. (ಆಲಂ) ನಿರಾಶೆಹೊಂದು ; ಪ್ರತಿಫಲ ಪಡೆಯದೆ ಹೋಗು : ಮೆಚ್ಚಂ ನಚ್ಚಿ ಪಚ್ಚೆವೋದೆಂ. ಆಯ್ತು ನೋಟ್ಪೆಂ (ರಾಮಾಶ್ವ. ೧೪೮-೨೬). [ಪಚ್ಚೆ$_1$(<ಪಸು)+ಪೋಗು$_1$]

ಪಚ್ಚೆಸಾರ (ನಾ). ೧. ಶ್ರೇಷ್ಠವಾದ ಪಚ್ಚೆರತ್ನ ; ಉತ್ತಮವಾದ ಮರಕತಮಣಿ : ಓಳಿದೋರಣಮಾಯ್ತು ಹಾರದ ಪಚ್ಚೆಸಾರದ ಮಾಲೆ (ಪಂಪಭಾ. ೧೪-೧೫); ಪಂಚಶರ ಸಾರ್ವಭೌಮನ ಪಂಚರತ್ನದ ಸಂಚಯಕ್ಕೆ ಪಚ್ಚೆಸಾರದ ಕೇರಂ ಕಟ್ಟದಂತೆ ನಂದನಕ್ಕೆ ಬಾಟ್ವೇಲಿಯಾದ ಕೇದಗೆಯ ಬನದ ಬಳಸಿನೊಳಗೆ (ಅನಂಪು.೧-೯೦ ವ). ೨. (ಮರಕತಮಣಿಯಿಂದ ಮಾಡಿದ) ಒಂದು ಬಗೆಯ ಆಭರಣ (?) : ಪೊಸ ಮಾವಿನ ಮಿಡಿಯೊಳ್ ಪಚ್ಚೆಸಾರಮಂ ಮಾಡುವಟ್ತಿಯಿಂ ಮತ್ತೊರ್ವಳ್ . . . ಮಿಡಿಯಂ ಕೊಯ್ದಳ್ (ಅವಿಪು. ೧೧-೯೮), ಮಾಮಿಡಿಗಳಂ ತೆಗೆದು ಪಚ್ಚೆಸಾರಮನಿಕ್ಕಿ . . . ತೋರಮಲ್ಲಿಗೆಮುಗುಳ ಮೂಕುತಿಯ ನೊಸೆದಿಕ್ಕಿ (ಲೀಲಾವ. ೬-೧೧೪ ರಗಳೆ) ; ಕಾಂಚವಾರದ ಕಾಂಚಿಯುಮಂ ಪಸುರ್ಮಿಡಿಯ ಪಚ್ಚೆಸಾರಮುಮಂ ಚಂಪಕದ ಚಂಪಕಮಾಲೆಯುಮಂ . . . ಮನೋಹರಮೆನೆ ಸಮೆದು ತಮತಮಗೆ ಪಸದನಂಗೊಂಡು (ಚಂದ್ರಪು. ೭-೧೧೪ ವ). [ಪಚ್ಚೆ$_1$(<ಪಸ್ಸು$_2$)+ಸಾರ?]

ಪಚ್ಚೆಹಕ್ಕಿ (ನಾ). ಹಸಿರು ಬಣ್ಣದ ಒಂದು ಬಗೆಯ ಹಕ್ಕಿ : ಪಚ್ಚೆಹಕ್ಕಿಯು ಪಾರಿವಾಳವು ಹೆಚ್ಚಿನಾ ಗೌಜೀನ ಹಕ್ಕಿಯು . . . ಮೆರೆದವರಣ್ಯದಿ (ಗೋಹಾಡು. ೧೩).

[ಪಚ್ಚೆ$_1$(<ಪಸ್ಸು$_2$)+ಹಕ್ಕಿ(<ಪಕ್ಕಿ)]

ಪಚ್ಚೇತೆನೆ 'ಪಚ್ಚೆಯ ತೆನೆ' ನೋ.

ಪಚ್ಚೇರಿ 'ಪಚ್ಚಾರಿ' ನೋ.

ಪಚ್ಚೋಂತಿ, ಪಚ್ಚೋತಿ, ಹಚ್ಚೊತ್ತಿ (ನಾ). (ಹಸಿರು ಬಣ್ಣದ) ಗೋಸುಂಬೆ; ಊಸರವಳ್ಳಿ : ಪಗರಣಿಗರಂತೆ ಪಚ್ಚೋಂತಿಯಂತೆ . . . ಜೀವಂಗಳ್ ಬಗೆದ ಬಣ್ಣಗೆಯಕ್ಕುಮೆಂದು ಪೇಟ್ವ ಸಂಸಾರಮುಮಂ (ಧರ್ಮಾಮೃ. ೧೪-೧೦೪). **ಪಚ್ಚೋತಿ** : ಪಚ್ಚೋತಿಯಂತೆ ಪಲವುಂ ಬಣ್ಣಮಾಗಿ (ಧರ್ಮಾಮೃ.೨-೧೦೫); ಪಚ್ಚೋಲೆ, ಪಚ್ಚೋತಿ(ಭಾಷಾಭೂ. ೧೩೮ ಉದಾ). **ಹಚ್ಚೊತ್ತಿ** : "ಕೃಕಲಾಸಃ-ಓತಿ, ಹಚ್ಚೊತ್ತಿ ?" (ಓಷಧಿ. ೩೮). [ಪಚ್ಚೆ$_1$(<ಪಸ್ಸು$_2$)+ಓಂತಿ]

ಪಚ್ಚೋತಿ 'ಪಚ್ಚೋಂತಿ' ನೋ.

ಪಚ್ಚೋಲೆ (ನಾ). ೧. ಹಸಿರುಬಣ್ಣದ ಓಲೆಗರಿ. ೨. (ಮುತ್ತೈದೆಯರು) ಕಿವಿಗೆ ಆಭರಣದಂತೆ ಧರಿಸುವ ತಾಳೆಗರಿಯ ಸುರುಳಿ: ಸುಲಿವಲ್ ಸೋರ್ಮುಡಿ ತೆಳ್ವಸಿಱ್ ಪೆಱ್ ನೊಸಲ್ ಪೊಂಬಾಳೆ ಪಚ್ಚೋಲೆ . . . ಚೆಲ್ವಾಗಿರೆ ನಿಂದ ಬೇಡಿತಿಯರಂ ಕಂಡಂ ಮಹೀವಲ್ಲಭಂ (ಕಾವ್ಯಾವ. ೨೦೬); ಮೂಲೆಯಂ ನೆಗಪಿ ಕನ್ನಡಿಯಂ ಪಿಡಿದಚ್ಚ ಪಚ್ಚೋಲೆಯಂ ತಳೆದು . . . ಮನೋಹರಮಪ್ಪಿನಂ ಸಾಲಭಂಜಿಕೆಗಳೇನೆಸೆದಿರ್ದುವೊ ಸುತ್ತಲುಂ (ಲೀಲಾವ. ೧೧-೬೯); ರಾಜೀವಲೋಚನಂ ಕ್ರೀಡಿಸಿದಂ ಪೀಲಿಯ ತಲೆಸುತ್ತಿನ ಪಚ್ಚೋಲೆಯ ಪೊಂಬಟ್ಟೆಯುಡೆಯ ಚೆಲ್ವೆಸೆವಿನೆಗಂ (ಜಗವಿ. ೪-೪೭); ತಳಿರ್ಗಳಂ ತಾನುಟ್ಟು ಪಚ್ಚೋಲೆ ದಾಳ್ದೊಡನಾಂತೊಳ್ಗಱಿಯಂಬುಮಂ ಬಿದಿರ ಬಿಲ್ಲಂ ಬೇಡವೆಣ್ಬಂದು ನಿಂದೆಡೆಯೊಳ್ನಿಲ್ವನನಂಗಂ (ರಾಜಶೇ. ೫-೧೧೨). 'ಬಿಚ್ಚೋಲೆ' ಪರಾ. ೩. ಮರಕತದ ಓಲೆ: ಪೊಸಚೀನಮನುಟ್ಟು ಬೆಡಂಗುವೆತ್ತ ಪಚ್ಚೋಲೆಯನಿಕ್ಕಿ ಕಣ್ಣವರೆ ರೂಪು ವಿಳಾಸಮಳುಂಬಮಾಗೆ . . . ಬಾಲಿಕೆ ಬಂದಳೊರ್ವಳ್ (ಧರ್ಮಾಮೃ. ೭-೧೭೭). [ಪಚ್ಚೆ$_1$(<ಪಸ್ಸು$_3$)+ಓಲೆ]

ಪಚ್ಚೋಲೆವಚ್ಚ (ನಾ). = ಪಚ್ಚೋಲೆ ೨: ಪವಿತ್ರಮನಿಟ್ಟು ಪಚ್ಚೋಲೆವಚ್ಚದೊಳೊಡಂಬಡೆ ಬಂದು ವಿದಗ್ಧೆ ಭೂಪಾಲನಂದನನನಂದರು ಣಾಧರೆ ನೋಡಿದಳ್ (ಕಾವ್ಯಾವ. ೨೨೧). [ಪಚ್ಚೋಲೆ + ಪಚ್ಚ$_2$]

ಪಚ್ಛನೂರ್ (ನಾ). ಒಂದು ಊರಿನ ಹೆಸರು: ವೆಳ್ಮಟ್ಟಿಕವಾಡ ಪಚ್ಛ(? ವ್ವ) ನೂರ್ ಗಙ್ಗವೂರ್ ಪುಲಿಗೆಱ್ ಗಣ್ಡವ ಗ್ರಾಮ (ಮಾ) ಇತಿ ಅಸ್ಯ ಭುಕ್ತಿ (ಕ್ತಿಃ) (ಇಅ. VIII, ೨೪೩-೧೮; 634).

[? + ಊರ್]

ಪಛಳ 'ಪಚ್ಚಳ$_2$' ನೋ.

ಪಛಾಡಿಸು (ಕ್ರಿ). ಹಿಂದಕ್ಕೆ ಹಾಕು; ಮೀರು (?): ಚೆನ್ನದಂಡೇಶ್ವರನ ಬಿರುದಿನ ಹನ್ನೆರಡು ಸಾವಿರ ವಜೀರರು ಎನ್ನ ಬಿಡು ತನ್ನ ಬಿಡು ಎಂದೆನುತಾಗ ಹೊಣಕೆಯಲಿ ಭಿನ್ನವಿಲ್ಲದೆ ಒಬ್ಬರೊಬ್ಬರು ಚೆನ್ನದಂಡೇಶನ ಪಛಾಡಿಸಿ ಇನ್ನು ಹೊಕ್ಕರದೇನ ಹೇಳುವೆನವರ ಕಾಳಗವ (ಶರಲೀ. ೫೫೧-೫); ವೀರ ಮಡಿವಾಳಯ್ಯ . . . ಬಿರುದಾಂಕಮಹಿಮರುದಾರ ಚೆನ್ನಣ್ಣನ ಪಛಾಡಿ[ಪಾಠಾಂ. ರಿ]ಸಿ ಭೋರನೆದ್ದರು ಕ್ರೂರ ಜೈನನ ಸಾರಬಲಕಿದಿರ (ಶರಲೀ. ೫೫೩-೧೨). 'ಪಚಾರಿಸು$_1$' ಪರಾ.

[ಪಛಾಡ$_0$ (ℙ← ಮರಾ. ಪಛಾಡಣೇ = ಸೋಲಿಸು) +-ಇಸು$_3$]

ಪಜೀತಿ 'ಫಜೀತಿ' ನೋ.

ಪಜ್ಜ, ಪಿಜ್ಜ, ಹಜ್ಜ (ನಾ). ಅಜ್ಜಿಯ ಅಥವಾ ತಾತನ ತಂದೆ; ಮುತ್ತಜ್ಜ; ಪ್ರಪಿತಾಮಹ: ನ್ಯಾಯವಂತರ್ ಜಿತಾತ್ಮರ್ ಪ್ರಭುಗಳಧಿಕಪುಣ್ಯರ್ ಮುನ್ನೆ ನಿಮ್ಮಜ್ಜ ಪಜ್ಜರ್ (ಶಾಂತಿಪು. ೩-೭೬); ದಿವ್ಯಮಪ್ಪ ಸದ್ಧರ್ಮವೆ ಪಜ್ಜನುತ್ತಮದ ಧರ್ಮಮೆ ಭಾವಿಪೊಡಜ್ಜಂ (ಧರ್ಮಾಮೃ. ೧೩-೮೫); ಅಜ್ಜ ಪಜ್ಜರ ಪೆಂಪಿಂದಮೆ ಪಾಂಗುತಿರ್ದ್ದಪನೆ ತಾನ್ (ಕಇ. II, ೧೨-೩೦; 1114); ರಣೋರ್ವ್ವರೆಯೊಳಂತನಿತುಂ ತನಗಜ್ಜ ಪಜ್ಜರಿಂ ಪಡೆದ ನೆಲಂ ದಲ್ (ಎಕ. VII, ತಿಕಾರಿ. ೧೯೭-೩೩; 1182 ?). **ಪಿಜ್ಜ**: ಊಟಕ್ಕೆ ನಮ್ಮ ಪಿಜ್ಜನ ಮನೆಯಿದೆಯೆಂದು ಹೇಳುತ್ತಾಳಲ್ಲ ಅಮ್ಮ (ಚಿಗುಕ. ೫೪); ನನ್ನ ಅಜ್ಜನೋ, ಪಿಜ್ಜನೋ, ಹಾದಿ ತಪ್ಪಿಯೇ ಇತ್ತ ಬಂದಿರಬೇಕು . . . ಅಜ್ಜ, ಪಿಜ್ಜ ಬಂದರು ಎನ್ನುವುದಕ್ಕಿಂತಲೂ ಪಿಜ್ಜನ ಪಿಜ್ಜ ಎಂದರೂ ಸಮನೇ (ಬೆಟ್ಟಜೀ. ೨೩). **ಹಜ್ಜ**: 'ಅಜ್ಜ ಹಜ್ಜ' ಪರಾ. [ದೇ.॥ ತುಳು. ಪಿಜ್ಜೆ]

ಪಜ್ಜತಿ, ಪಡ್ಡಳಿ$_2$, ಪದ್ದಳಿ (ನಾ). ೧. ಪದ್ಧತಿ; ಕ್ರಮ: ಸೆಜ್ಜೆವಳರ್ ಬಾಣಸಿಗರ್ . . . ಅಂಗರಕ್ಷಕರಾಗಿರ್ಪುಜ್ಜುಗಕಮರರ ಗಣಮನೆ ಪಜ್ಜತಿಯಿಂದಿರಿಸಿ ಶತಮಖಂ ಕೃತಕೃತ್ಯಂ (ಪುಸ್ಪಪು. ೧೨-೫೬). **ಪಡ್ಡಳಿ$_2$**: ೨. [ಛಂದ] ಅಪಭ್ರಂಶಭಾಷೆಯ 'ಪದ್ಧತಿ' ಛಂದಸ್ಸಿಗೆ ಸದೃಶವಾದ ಛಂದಸ್ಸು ಮತ್ತು ಆ ಛಂದಸ್ಸಿನಲ್ಲಿ ರಚಿಸಿದ ರಗಳೆ; ℙ ಇದು 'ಮಂದಾನಿಲರಗಳೆ'ಗೆ ಮೂಲವಾಗಿದ್ದಿರಬಹುದೆಂದು ತೋರುತ್ತದೆ: (ಪಡ್ಡ[ಡ್ಡ]ಳಿಯೆಂದರೆ ಒಂದು ದಂಡಕದ ಹಾಂಗೆ ಓದುವಣ) ಪಡ್ಡ[ಡ್ಡ]ಳಿ (ಅಟ್ಟಮ. ೮-೧೨). **ಪದ್ದಳಿ**: ೨. (ಪದ್ದಳಿ) [ಪಾಠಾಂ. ಪಡ್ಡಳಿ] (ಪಂಚತಂ. ೧೬೧-೧೭); ಪದ್ದಳಿ (ಸುಕುಮಾ. ೮-೬೬).

[<ಸಂ. ಪದ್ಧತಿ].

ಪಜ್ಜಲ (ನಾ). ಪಾದತೀರ್ಥ; ಪಾದೋದಕ: ಕ್ಷೇತ್ರಜ್ಞನ ಮುಂಗುಣಮಂತೊಳವೀರೈದುಂ ಪಜ್ಜಲದೊಡನೆ ಈರೈದೆಂಬೀ ದಾಯಂ ಬೀಳಲ್ಕೆ (ಉದ್ಭದೇ. ೩-೧೦); ಶಿವನ ಪಜ್ಜಲಕೆ ಬಾಯ್ದೆಗೆದಂತೆ ಚಿನ್ನ ಬೆಳ್ಳಿಯ ಮಜ್ಜನದ ಪಾತ್ರೆಯ ನಿವಹದಿಂ . . . ಶಿವನ ಮಹದೈಶ್ವರ್ಯ ಬೆಳಸಿನ ಸ್ಥಾನಮೆನಲೊಪ್ಪಿಪ್ಪ ತದ್ಗೃಹದೊಳು (ಷತಿಲ. ೪-೭೪).

[<ಸಂ. ಪಾದಜಲ]

ಪಜ್ಜಳ (ನಾ). ಹೊಳಪು; ಪ್ರಕಾಶ; ಪ್ರಜ್ವಲತೆ: "ಪಜ್ಜಳ ಮೆಂದುಂ ಪ್ರಜ್ವಲಂ" (ಕಶಸಾ. ೫೬-೨೧೫); ಮಿಱುಪ ಮಣಿಕುಂಡಲಗಳ ಪಜ್ಜಳಕೆ ಪಕ್ಕಾಗಿ ಶ್ರುತಿಯುಗಮೊಪ್ಪುತಿರ್ದುದಾ ಶ್ರೀಪಾರ್ವತೀದೇವಿಯ (ನಂದಿಮಾ. ೯-೧೪); ನವರತ್ನಖಚಿತದ ಕಜ್ಜದಲುಗುವ ಕರ್ಣದೋಲೆಯ ಪಜ್ಜಳದಿ ಮಮಕಾರಮಂ ಪುಟ್ಟಿಸಿದರಾ ದ್ವಿಜಗೆ (ಕಾವೇಮ. ೩೫-೬೫); ಲೊದ್ದದ ಚೆಲ್ವ ಮುಳ್ತುಗದ ಬಂದುಗೆ ಪಜ್ಜಳ ದಾಸಿವಾಣದಾ . . . ನವಲೋಹದ ಗುಂಡಿನ ಢಾಳಮಾಗಿ ತೋರ್ಪುದ್ದುದ ಜಾತರಂಗಮದೆ ಲೋಕದೊಳೆಣ್ಡೆಱನೆಂದೆನಿಪ್ಪುದೈ (ಹಾಲಾಸ್ಯ. ೨-೧-೭೨).

[< ಸಂ. ಪ್ರಜ್ವಲ]

ಪಜ್ಜಳಂಬೆಱು (ಕ್ರಿ). ಉಜ್ವಲತೆಯನ್ನು ಪಡೆ; ಪ್ರಜ್ವಲವಾಗು: ಸಾತ್ವತಿಯೊಳ್ ಪಜ್ಜಳಂಬೆತ್ತು ಭಾರತಿಯೊಳ್ ಕಾಂತಿ ಕೆಯ್ಗಣ್ಮಿ ಆಸ್ಥಾನಮಂ ಕೌತುಕರಸದೊಳ್ ಕರುವಿಟ್ಟಂತಿರಿಸುವ ಸಾಮರ್ಥ್ಯಮನೊಳಕೊಂಡು ಕುಳ್ಳಿರ್ಪ ಗಮಕಿಗಳ ತಂಡದೊಳಂ (ಗಿರಿಕ. ೨-೧೦೫ ವ).

[ಪಜ್ಜಳ + ಪೆಱು$_1$]

ಪಜ್ಜಳಿಕೆ (ನಾ). = ಪಜ್ಜಳ: ಅತನ ಬೆಳ್ಗೊಡೆಯ ಪಜ್ಜಳಿಸುವ ಪಜ್ಜಳಿಕೆಯೆ ತನ್ನೊಳಪೊಕ್ಕಂತೆ ಚಂದ್ರಮಂಡಲಕುಚ್ಚಮಾಗೆ ಪಳಚ್ಚನಪ್ಪ ಬೆಳ್ದಿಂಗಳುಂ (ಅದಿಪು. ೧೧-೫ ವ); ತೊಳಪ ತನಿಗರ್ಪು ಕೇಶಾವಳಿಯೊಳೊತ್ತರಿಸಿ ಪೊಳೆವ ಪಜ್ಜಳಿಕೆ ನಿಡುಗಣ್ಗಳೊಳ್ ಬಿತ್ತರಿಸಿ (ಕುಸುಮಾ. ೭-೧೩೩ ರಗಳೆ); ನುಡಿಯ ಬೆಳಗಿನಿಂ ತೊಢವಿನ ಪಜ್ಜಳಿಕೆಯಿಂ ಬಿಜಯಂಗೈದು ಬರ್ಪ ಮನ್ಮಥನ ಪೌಜಿನಂತೆ (ದಶಾವ. ೬-೪೮ ವ).

[ಪಜ್ಜಳ+-ಇಕೆ]

ಪಜ್ಜಳಿಸು (ಕ್ರಿ). ೧. ಹೊಳೆ; ಥಳಥಳಿಸು; ಪ್ರಜ್ವಲಿಸು; ಚೆನ್ನಾಗಿ ಕಾಣು; ಪ್ರಕಾಶಮಾನವಾಗು: ತೇಜಂ ಪಜ್ಜಳಿಸೆ ತಟತಟಿಸಿ ತೊಳತೊಳತೊಳಗಿದಂ . . . ದಿನಪಸುತಂ (ಪಂಪಭಾ. ೧೨-೨೧೦); ಬೆಳಗುವ ಸೊಡರೊಳ್ಸೊಡರಂ ಬೆಳಗಿ ಪಲರ್ಕೊಂಡು ಪೋಗೆಯುಂ ಕುಂದದೆ ಪಜ್ಜಳಿಸುವವೊಲ್ ಜಗಮೆಲ್ಲಂ ಕೊಳಲುಂ ತವದಿತ್ತು ಮೆಱೆವನಿಱುವ ಬೆಡಂಗಂ (ಗದಾಯು. ೧-೩೦); ತುಪ್ಪೇಱಿದ ದರ್ಪಣದೊಳ್ ಪಜ್ಜಳಿಸಲಾರ್ಪುದೇ ಪ್ರತಿಬಿಂಬಂ (ಯಶೋಚ. ೧-೬೬); ಅವನ ಪಜ್ಜಳಿಪ್ಪ ಜಸಮೆಣ್ದೆಸೆಯೊಳ್ ನೆಲಸಿರ್ಪುದಾತನೀಗಾವಗಮೆನ್ನ ಜಾಣ್ಣುಡಿಗೆ ಮೆಯ್ಸಿರಿಯಂ ನನೆವಿಲ್ಲ ಬಲ್ಲಹಂ (ಕಬ್ಬಿಕಾ.೧); ಕಣ್ಣಾಲಿಯಂ ಪಜ್ಜಳಿಸುವಂತೆ ಮಾಡು (ಸೌಂದಪು.೧೪-೨೮). ೨. ಬೆಳಗಿಸು; ಪ್ರಸಿದ್ಧಿಗೆ ತರು: ನಿಜರುಚಿಯಿಂ ಪಜ್ಜಳಿಸಿ ದಿಗಂಬರಕುಲಮಂ

ಬೆಳಗಿದ ಯೋಗೀಂದ್ರ ದೇವಜಂದ್ರನೆ ವಂದ್ಯಂ (ಪುಷ್ಪಪು. ೧-೩೧). ಕ್ರಿ. ಹೆಚ್ಚಾಗು ; ಅಧಿಕವಾಗು; ಅತಿಶಯವಾಗು : ಮಜ್ಜನನಾಸ್ಪದ ವಾಯುವೆ ತನುವೆನಗಜ್ಜುಗಿಪ ಬ್ರಹ್ಮವೆ ಲಿಂಗಂ ಕೇಳ್ ಪಜ್ಜಳಿಪ ಸ್ಪರ್ಶನವೆ ಪದಾರ್ಥಂ ದಾನಾಮಲಕರದಿಂ (ಕ್ಷತ್ರಸು. ೧೪-೧೦೯) ; ಅಂತು ಚೇತೋನಿಕೇತನದೊಳ್ ಲಜ್ಜೆ ಪಜ್ಜಳಿಸೆ (ವರ್ಧಪು. ೨-೫೬ ಪ) ; ವೇದವಿಜ್ಞನರ್ ಪಜ್ಜಳಿಪಭ್ಯಸಂತಸದೊಳೊಂದಿರೆ ಪಂಡಿತರುರ್ಕೆ . . . ಮೂಡಿದನಧ್ವರಮಂ ಮುನೀಶ್ವರಂ (ಋಷ್ಯ. ೪-೫೪) ; ಲಜ್ಜೆ ಪಜ್ಜಳಿಸುವನ್ನೆಗಮೊಪ್ಪಿರೆ ಸಾಕಿದನ್ನೊೀ ಜೋಡೆ ಕನಲ್ದು ಬಂದು ತಪವಂ ತಳಿವಳ್ ಗಡ (ದಶಕು. ೪-೧೫೫). ೪. ಶುದ್ಧಿಗೊಳಿಸು ; ನಿರ್ಮಲಗೊಳಿಸು : ಎಲ್ಲಾ ಸುತೀರ್ಥಂಗಳಿಗಧಿಕತೀರ್ಥಂ . . . ತಿಳಿಯೆ ಕ್ರಿಮಿಕೂಟಸ್ಥಳಂ ನಿರ್ಮಲದೆ ಶ್ರೇಷ್ಠ ತೆಯಾಗೆನಗೆ ಪಜ್ಜಳಿಪುದಗಜಾದೀಪ ನಿಶ್ಚಯಮಿದನರಿವುದೆಂದ (ಕಾವೇಪು. ೪೫-೧೫೫) ; ನಿರ್ಜರಾಲಯದಮೃತದಿಂ ನನಹಿ ಗೋಧಿಯಂ ಪಜ್ಜಳಿಸುತೊಣಗಿಸುತ ಕುಮ್ಮುತೊಡವುತ ಬೇಗ . . . ಮುದ್ದಿಗ್ಯೆದು (ಲಿಂಗಪು. ೪-೧೬). [ಪಜ್ಜಳ+-ಇಸು೨]

ಪೆಜ್ಜೆ , ಪೆಜ್ಜೆ, ಹಜ್ಜೆ೧, ಹೆಜ್ಜೆ (ನಾ). ೧. ಪಾದವನ್ನು ಊರಿದ ಗುರುತು ; ಕಾಲಿನ ಗುರುತು; ಪಾದಚಿಹ್ನೆ : ಶಂಖಚಕ್ರಹಳಕುಳಿಶ ಲಾಂಛಿತಮಾಗಿರ್ದಡಿವಜ್ಜೆಯಂ ನೋಡಿ ದುರ್ಯೋಧನನ ಪಜ್ಜೆಯಪ್ಪು ದೇನುಂ ತಪ್ಪುಲ್ಲೆಂದು ಕಳಕಳನಿನಾದಂಗಳಿಂದಾರ್ದು (ಪಂಪಭಾ. ೧೩-೭೩ ವ) ; ಒರ್ವಳ್ ನೋಟ್ಪಾಡಂಬರದಡಿಯಿಟ್ಟು ಗವಾಕ್ಷಂಬರಮಲ ತೆಗೆಯ ಪಜ್ಜೆಯಂ ಪಸರಿಸಿದಳ್ (ಶಾಂತಿಪು. ೬-೭) ; ಬರೆದರೊ ಪತ್ರಮ ನೆಂಬಂತಿರೆ ಪಜ್ಜೆಗಳೆಸೆಯೆ ನಾಂದು ನೆತ್ತರೊಳೆತ್ತಂ . . . ತೋಱುದಪುದು ಮೃಗಪತಿಮಾರ್ಗಂ (ಕಾದಂಪೂ. ೧೫೯) ; ಬಾಗಿಲೊಳ್ ನಿಂದು ಪುಲಿಯ ಪಜ್ಜೆಯುಮುಂ ಸೊಪ್ಪಾದ ಬಿಲನುಮುಂ ಕಂಡು (ಪಂಚತಂ. ೩೮-೫) ; ತೊಟಿಯನಿಳಿದು ರೋಧದಲಿ ಗೋವಿನ ಪಜ್ಜೆಯಲಿ ಬೀಳುವ ಮನುಜನಂತೆ (ನಿಭಾಗ.೧೧-೪-೨೫). ೨. ಜಾಡು ; ಹಾದಿ ; ಮಾರ್ಗ: ಸಹದೇವನ ಪೋದ ಪಜ್ಜೆಯನೆ ಪೋಗಿ ಕೊಳದ ತಡಿಯೊಳ್ ಬಿಟ್ಟುರ್ದ ತಮ್ಮನಂ ಕಂಡು (ಪಂಪಭಾ. ೮-೩೯ ಪ) ; ಪಾವು ಪಾವಿನ ಪಜ್ಜೆಯನಱಯವಂತೆಮ್ಮಂದಿಗರ್ಗಲ್ಲದಾತನಧಿಪ್ರಾಯಮಂ ಪೆಜರ್ಗಱಯಲ್ ಬಾರದು (ಪಂಜತಂ. ೧೦೪-೧೭) ; ಅಭಿಮಾನದ ಪಜ್ಜೆಯನೇಂ ತಪ್ಪಿ ಮೆಟ್ಟಲಱಗುಮೆ ತಕ್ಕಂ (ಪಂಠಾಪು. ೬-೧೦೧). ೩. ಅಡಿ ; ಪಾದ : "ಪಜ್ಜೆಯೆನೆ ಹೆಜ್ಜೆಯಕ್ಕುಂ" (ಚತುನಿ.೧೫೨) ; ಪೊಸೆಯದೆ ಪಜ್ಜೆಗಳಂ ನಾಲ್ದೆಸೆಯೊಳಮೆಂಟೆಂಟುದಿವಸಮಿರುಳುಂ ಪಗಲುಂ ಮಿಸುಕದೆ ನಿಲೆ ನಿಂದೆಸೆವಂ ಪಸರಿಸಿದರ್ ಲೋಕದೊಳ್ ಚತುರ್ಮುಖಿವೇವರ್ (ಸಮಪ. ೧-೧೬) ; ಎಡಬಲನನಾರ್ಯೆವುತೊಡನೆ ಪಜ್ಜೆಗಳಿಡುತ. (ವಂಕಾರಾ. ೫-೩-೨೩). ೪. ಗುರುತು ; ಚಿಹ್ನೆ ; ಸುಳಿವು ; ಕುರುಹು : ಸ್ವನಪ ನಿತಂಬದ ಬಿಂಬಂ ವನಜಭವಂ ತೂಗಿ ನೋಡೆ ನಡುವಂ ಪಿಡಿದಾತನ ಬೆರಲ ಪಜ್ಜೆ ಪತ್ತಿದುವೆನೆ ವಳಿಗಳ್ ಕನ್ನೆವಂದುವಾ ಕೋಮಳೆಯಾ (ಲೀಲಾವ. ೩-೨೩) ; ಬಾಯನ್ನುಡಿಯ ಪಜ್ಜೆಯನಾರ್ಯೆವುತಿರ್ದು ತಾಪದೊಳ್ ಪೊರೆದುಱಿ ಸುಯ್ದು ಪೊಯ್ದು ಬಡವಟ್ಟರೆ (ಪುಣ್ಯಾಸ್ರ. ೬-೧೩). **ಪೆಜ್ಜೆ** : ೧. ಉಡುಪವನೆಯರುಯಾಯತನಮಾಗೆ ವಿತ್ರೆಯಳನೊಡಗೂಡಿ ಮಣಿಮಯದ ಪಾವುಗೆಯ ಪೆಜ್ಜೆಯಂ . . . ರಾಜಿಸುತಿರೆ (ಸಪಮೋ. ೨೪-೬೦) ; ಕೆಲರ್ಗೆ ಮನದೊಡನೆ ಪೆಜ್ಜೆಯಂ ಪೆಜ್ಜೆಗಿಟ್ಟುದು (ಅದ್ಭು. ೪೬-೧೩). **ಹಜ್ಜೆ೧** : ೧. ನಡೆದ ಹಜ್ಜೆಯಿಲ್ಲ ಸುಳಿದಡೆ ನೆಳಲಿಲ್ಲದೆ ಬೆಳಗೆ ಸ್ವರೂಪವಾಗಿ ಚರಿಸಾಡುತ್ತ (ಪದಗೋ. ೯೩) ; ನಡೆದಡೆ ನಡೆದ ಹಜ್ಜೆಯಂ ನೋಂಕಿ ಹಿಂಗ್ಗುತ್ತೆ (ಇಹಪ. ದೇ. ೩೩-೧೩) ; ಸಹಸಿಗನ ಹಾವುಗೆಯ ಹಜ್ಜೆಯಿವೆ (ಸಿದ್ಧರಾ. ೨-೩೫). ೨. ಆಹ ಎನ್ನೊಡೆಯರೊಲವಿಂ ನಡೆದ ಹೊಸ ಹಜ್ಜೆ (ಕಾರಿರ. ದೇ. ೨೯೩-೨೪) ; **ಪದ್ಧತಿ-ಪಜ್ಜೆ, ಹಜ್ಜೆ** (ಶಪುದ. ೨೮೩ ಪ್ರಯೋ) ; ಹೋದ ಹಜ್ಜೆಯ ಹೊಲಬ ನಱಯರು ಕವಿರ್ಗಳು (ನಿಭಾಗ. ೪-೮-೧೩). ಕ್ರಿ. ತೆಗೆಯದಿರಿ ಕೊಂಡ ಹಜ್ಜೆಯ (ಚಿಬಪು. ೩೯-೫) ; ಹಿಂದಕ್ಕೆ ಹಜ್ಜೆಯ ತೆಗೆದವರಿಗೆ ಸ್ವರ್ಗ ವೆಂದೆಂದಿಗಿಲ್ಲ (ಕಂಸವಿ. ೧೩-೩೧). ೪. ಗುಜ್ಜುವಡೆದ ಗುರುಕುಚ ವುಗುರ್ವೊಯ್ಗಳ ಹಜ್ಜೆ ಹೊಳೆವ ನಳತೋಳ್ . . . ಒಪ್ಪಿತು ರತ್ನಂತದ ಸತಿಗೆ (ಜಯಕಾ. ೧೪-೮೩). ೫. ನಡಗೆಯಲ್ಲಿ ಎರಡು ಹೆಜ್ಜೆಗಳ ನಡುವಿನ ಅಂತರ : ಕರ್ಣನ ತೆರಳಿದನ್ನೆನೂಱು ಹಜ್ಜೆಯಲಿಂದ್ರಸುತ ಸೂನು (ಕುವ್ಯಾದ್ರೋ. ೬-೫೧) ; ಹೊಸಕೆರೆವಳಗೆರೆ ಭೂಮಿ ಮಾಡ ಬೋಯನ ಆಡು ೧೪೬ ಹಜ್ಜೆ ಕೋಲಿನಲಿ ಸಲೆ ನಿಜಗೋಲು ೬೯೪ (ಎಕ.III, ತಿರುಮ. ೬೩-೧೩೫೩; 1748). ೬.(ಕಾಲಿನ)ಗತಿ ; ಚಲನೆ: ಸಂದ ಸುಭಟರು ಬನ್ನಿ ಸ್ವರ್ಗದ ಬಂದಿಕಾಱರು ಬನ್ನಿ ಮನದಿಂ ಮುಂದೆ ಹಜ್ಜೆಯ ತವಕಿಗರು ಬಹುದೆನ್ನ ಸಂಗಾತ (ಕುವ್ಯಾಳ. ೪-೮೧). ೭. ಆಶ್ರಯ ; ನೆಲೆ : ಇಂದು ಮೊದಲಾಗಿಯಗಲೆಂ ನಿನ್ನ ಹಜ್ಜೆಯಂ (ಕಣ್ಣರ. ಪೀ. ೧೩೦-೧೩). ೮. ಮಲ್ಲಯುದ್ಧದ ವರಸೆಯಲ್ಲಿ ಹೆಜ್ಜೆಯಿಡುವ ಒಂದು ಕ್ರಮ,—ಬಗೆ: "ಕಳಾಸ ಬಾಳೆಯ ಮುಂಡಿ ಸೀರಣಂ ಹೆಜ್ಜೆಯಕ್ಕುಂ" (ಮುಂಗರಂ. ೪೪-೩೪). **ಹೆಜ್ಜೆ** : ೧. ನೀರ ಮೇಲಣ ಹೆಜ್ಜೆಯನಾರು ಬಲ್ಲವರಿಲ್ಲ (ಪ್ರಭುಸ. ೧೫೨) ; ಆತನು ನಿಂದಿರೆ ನೆಳಲಿಲ್ಲ ಸುಳಿದರೆ ಹೆಜ್ಜೆ ಇಲ್ಲ (ಶೂನ್ಯಸಂ. ೪೩-೩೧) ; ಬಂದ ಪಾರ್ಥಿವ ಜನದ ಹೆಜ್ಜೆಯ ಹಿಂದುಗೊಂಡ್ಯೆತಂದು ಕಂಡನು ಮುಂಬೆ ರಾಜಮರಾಳ ನಾದಾಂಬುಜಸರೋವರವ (ಕುವ್ಯಾಆ. ಓರಿಜ. ೪-೪೯). ೨. ಮೆಲ್ಲನೀ ತನು ಕವಿವ ಕತ್ತಲೆಯೊಳಗೆ ಹೆಜ್ಜೆಯ ಸವಸಲಱುದಾ ಸಮಯದಲಿ ಹರಿ ಕಂದಳಾ . . . ಘೋರರಕ್ಕಸಯುವತಿ ಲಂಕಿಣಿಯೆಂಬವಳು (ತೊರಠಾ. ೫-೨-೭) ; ನೀ ಹೆಜ್ಜೆಯನು ಸಾಧಿಪಡೆ ಸಜ್ಜೆಯಲಿ ಶಿವನ ಧರಿಸಿಪ್ಪ ಶರಣರ ಹೆಜ್ಜೆಯಲಿ ನಡೆಯೊ (ಸರ್ವಜ್ಞ. ೨೮೩) ; ಕಳ್ಳನ ಹೆಜ್ಜೆ ಕಳ್ಳನೇ ಬಲ್ಲ (ಗಾದೆ). ೩. ಭಾಗ್ಯದ ಲಕ್ಷ್ಮೀ ಬಾರಮ್ಮ . . . ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ (ಪುರಂದ. ೧-೩೧೧-೧). ೪. ಕಾಲನ್ನು ಇಡುವಿಕೆ; ಪಾದನ್ಯಾಸ: ಉರವಣಿಸುವುದು ಕೊಂಡ ಹೆ[ಪಾಠಾಂ.ಹ]ಜ್ಜೆಗೆ ಮುರಿಯು ಲಾಗದು . . . ಹರಣದಲಿ ಕಳ್ಕುಲಿತೆ ಬೇಡ (ಕುವ್ಯಾದ್ರೋ.೧೫-೩೧). ೧೦. ಸಂಪ್ರದಾಯ ; ಪದ್ಧತಿ : ಹಿಂದಣ ಹೆ[ಪಾಠಾಂ.ಹ]ಜ್ಜೆಯ ನೋಡಿ ಕಂಡಲ್ಲದೆ ನಿಂದ ಹೆಜ್ಜೆಯನಱಯಬಾರದು (ಅವಚಂ. ೧೦೫-೪೬೫). ೧೧. [ನಾಟ್ಯ] ಒಂದು ನೃತ್ಯ ಪದ್ಧತಿ : 'ಹೆಜ್ಜೆ'ಯ 'ಸುಜಲು' ಎದ್ದಿದೆ (ಗಂಗಾಗೌ. ೧೩೧). 'ಹೆಜ್ಜೆ ಕುಣಿತ' ಪರಾ.

ಹಜ್ಜೆ ಹಜ್ಜೆ, ಹೆಜ್ಜೆ ಹೆಜ್ಜೆ (ದ್ವಿರುಕ್ತಿ) : ನೂಪುರವಲುಗದಂತೆ ಹತ್ತೆ ಸಾರುವಳೊಮ್ಮೆ ಸೋಂಕಲೆಂತಹುದೆಂದು ಮತ್ತೆ ಮುರಿದಪಳೊಮ್ಮೆ ಹಜ್ಜೆ ಹಜ್ಜೆ [ಪಾಠಾಂ.ಹೆಜ್ಜೆ ಹೆಜ್ಜೆ]ಯ ಮೇಲೆ ಸಲ್ವಳಮ್ಮದೆ ನಿಲ್ವಳು(ಜೈಮಿಭಾ. ೩೦-೨೩) ; ಇಂತಜ್ಜುದು ರುದ್ರಾಕ್ಷಿಯ ಧರಿಸಿದ ಶಿವಮಹೇಶ್ವರನ ಹೆಜ್ಜೆ ಹೆಜ್ಜೆಂಗೆ ಅಶ್ವಮೇಧದ ಫಲ ತಪ್ಪದಯ್ಯ(ಆದಪ.೧೪೮-೪೫); ತೆಗೆದು ದಾರಿಗೆ ಹೆಜ್ಜೆ ಹೆಜ್ಜೆಗೆ ಬಗುರುದೋಱುವ ತಳಿರ ತಱುತಱುದಗಲದಲಿ ಪಸರಿಸುತ . . . ಜನಕನ ಮಗಳ ನಡೆಸುತ ತಂದರೊಂದು ಮಹಾಸರೋವರಕೆ (ತೊರಠಾ. ೨-೪-೧೯); ವೇಮನನ ಹಾಗೆ ಹೆಜ್ಜೆ ಹೆಜ್ಜೆಗೂ ಬ್ರಹ್ಮನನ್ನು ಬೈಯದೆ ನಮಗೆ ತಿಳಿಯದ ವಿಷಯಗಳನ್ನು ಚಿಂತಿಸಿ . . . ಆವಸ್ಥೆ ಪಡುವುದಕ್ಕಿಂತ ಶಿವ ತೋರಿದಂತಿಹುದೇ ಲೇಸು (ಸಾಹಿಜೀ. ೧೧೩). **ಹಜ್ಜೆಯಾಗು = ಹೆಜ್ಜೆಯಿಡು** : ನದಿ ಸರಸಿಗಳ . . . ತಡಿಯಲ್ ಹಜ್ಜೆಯಾದುದು ಹಗಲು (ಕುವ್ಯಾಆ. ೫-೫). **ಹೆಜ್ಜೆಯ ಕುಣಿತ = ಒಂದು ಬಗೆಯ ನೃತ್ಯ ; ಹೆಜ್ಜೆ ಕುಣಿತ** : ಗುಡಿಯ ಪಟ್ಟಾಂಗಣ

ಪಳ್ಳಿಯ ಯುವತಿಯರ ತಂಡವು ನೆರೆದು, ಹೆಜ್ಜೆಯ ಕುಣಿತವನ್ನು . . . ನೋಡುತ್ತಿತ್ತು (ಜೀವರಂ. ೨೨).

[<ಪ್ರಾ. ಪಜ್ಜಾ./ಸಂ. ಪದ್ಯಾ]

ಪಜ್ಜೆಕಾಱ (ನಾ). ಹೆಜ್ಜೆಯ ಗುರುತನ್ನು ಕಂಡುಹಿಡಿಯುವವನು,-ಜಾಡು ಹಿಡಿಯುವವನು; ಬೇಹುಗಾರ: ತನ್ನ ಪಜ್ಜೆಯಂ ಪಜ್ಜೆಕಾಱರಱಯದಂತು ವಸುದೇವನಕುಮಾರಂ ಪಾಯ್ದು ಪೋದಂ (ಅರ್ಧನೇ. ೫-೪೧ ಪ). [ಪಜ್ಜೆ + -ಕಾಱ]

ಪಜ್ಜೆಗೆಜ್ಜೆ (ನಾ). ಕಾಲಿಗೆ ಕಟ್ಟಿಕೊಳ್ಳುವ ಗೆಜ್ಜೆ : ಬಂದಳಾ ವಿಯಚ್ಚರಯೋಜೆ, ಪಜ್ಜೆಗೆಜ್ಜೆಗಳುಲಿಯ ಪಿಂಕಂ ಬಲೆಯ ಬೀಸೆ (ತ್ರಿಲೋಮಾ. ೨೦೫-೨೦೩). [ಪಜ್ಜೆ + ಗೆಜ್ಜೆ]

ಪಜ್ಜೆಗೆಡು, ಪೆಜ್ಜೆಗೆಡು (ಕ್ರಿ). ಮುಂದೆ ನಡೆಯಲಾರದಿರು; ಸ್ಥಗಿತಗೊಳ್ಳು : ರಾಘವಾವರಜಂ ತಾಂ ಕೈಸೋಲ್ವುದುಂ, ಪಡೆ ಬಡವಪ್ಪುದುಂ, ವಿಡುಕಿನ ಬೆಂಬಲಂ ಪಜ್ಜೆಗೆಟ್ಟು ಬೆಂಗುಡುವುದುಂ (ರಾಮಾಶ್ವ. ೧೩೨-೨೯). **ಪೆಜ್ಜೆಗೆಡು:** ಕೆಲರ್ಗೆ ಮನದೊಡನೆ ಪೆಜ್ಜೆಯುಂ ಪಜ್ಜೆಗೆಟ್ಟುದು (ಅದ್ಭುತ. ೪೬-೧೩). [ಪಜ್ಜೆ + ಕೆಡು]

ಪಜ್ಜೆದೋಱು (ಕ್ರಿ). ಕುರುಹು ತೋರು,—ಮೂಡು: ಕಾಂತನೆಡೆಗೆ ನಸುಲಜ್ಜೆ ನುಂದಸ್ಮಿತಂ ಕಿಱುಬೆವರ್ಕಾತುರಂ ಪಜ್ಜೆದೋಱಲ್ಕೊಗದೊಕ್ಕೆತಂದು ಸಾರ್ದಳೊಯ್ಯನೆ ಮತ್ತಗಜಗಾಮಿನಿ (ಜೈಮಿಭಾ. ೧೪೪-೩೦). [ಪಜ್ಜೆ + ತೋಱು]

ಪಜ್ಜೆಯಿಡು, ಹಜ್ಜೆಯಿಡು, ಹೆಜ್ಜೆಯಿಡು (ಕ್ರಿ). ೧. ಅಡಿಯಿಡು; ನಡೆ : ಪಜ್ಜೆಯಿಡಲಾ ನಮ್ಮ ಮುಂದಕ್ಕೆ (ಸುದೇಪು. ೬-೬೩). ೨. ಪ್ರವರ್ತಿಸು ; ತೊಡಗು ; ಉದ್ಯೋಗಿಸು : ಕಜ್ಜ ಕೈಗೂಡುವನ್ನಬರ. ನಾನಾಪರಿಯುಜ್ಜುಗದೊಳು ಬಲ್ಲವರು ಪಜ್ಜೆಯಿಡುವರು (ಕುರಾಸಾಂ. ೨೬-೫೪); ಮತ್ತಮಾ ನಾರದಂ ನಾರಾಯಣನಾಜ್ಞೆಯಂ ತಿರದೊಳಾಂತು . . . ಜತನದಿಂ ಬಿಜ್ಜೆಯೊಳ್ ಪಜ್ಜೆಯಿಡುತಿರ್ದಂ (ಅದ್ಭುತ. ೨೬-೪). **ಹೆಜ್ಜೆಯಿಡು** : ೧. ಹೊನ್ನ ಹಾವುಗೆವೆರಸಿ ಜಗದೇಕಪರಮಸೌಂದರಿ ಹಜ್ಜೆಯಿಡಲು ಹೊಮ್ಮಿಗ ಹೋದ ಬಟ್ಟೆಯಂತಾಯ್ತು (ಮೋಹತ. ೨೪-೩೬). ೨. ಆ ಹಿಂದಿನ ಪಾಪವೇ ಇಂದು ಲಜ್ಜೆಯಾಗಿ ಹಜ್ಜೆಯಿಟ್ಟಿದೆ (ನಾಡೋಜ. ೧೨). **ಹೆಜ್ಜೆಯಿಡು** : ೧. ಗೆಜ್ಜೆಗಳು ಘಲಘಲೆನೆ ಮೆಲ್ಲನೆ ಹೆ[ಪಾಠಾಂ. ಪ]ಜ್ಜೆಯಿಡೆ . . . ನಾಜ್ಞೆ ಜೊಂಗುತೆ ಬಂದು (ಸಾಳ್ವಭಾ. ೩-೧೪). ೨. ಇಂಥ ಪಶ್ಯವಸ್ತು . . . ದುರಭ್ಯಾಸಗಳ ಕಡೆ ಹೆಜ್ಜೆಯಿಡುವಂತೆ ಮಾಡುತ್ತದೆ (ಶಿಕ್ಷಪ. ೧೩೦). [ಪಜ್ಜೆ + ಇಡು]

ಪಜ್ಜೆವಟ್ಟೆ (ನಾ). ಹೆಜ್ಜೆಯ ಜಾಡು ; ಕಾಲುದಾರಿ : ಪೊಡವಿಗಿಳಿದು ಪಜ್ಜೆ ವಟ್ಟೆಯೊಳಿರ್ವರು . . . ತಡಮಾಡದನುರಾಗದಿಂದ ನಡೆತಂದು (ತ್ರಿಪಾಲ. ೭-೧೪೭); ಅಂತೆಯೆ ಇಳಾತ್ಮಜೆ ಇನಕುಲಾತ್ಮಜನ ಅಡಿಯ ಪಜ್ಜೆ ನಟ್ಟೆಯ ನಡೆಯೆ (ತ್ರಿಲೋಮಾ. ೧೪೪-೩೩೧). [ಪಜ್ಜೆ + ಬಟ್ಟೆ]

ಪಜ್ಜೆವಟ್ಟೆ (ನಾ). = ಪಜ್ಜೆವಟ್ಟೆ ; ಇದೆ ಮರೆ ಹಿಕ್ಕೆಯಿಕ್ಕಿದೆಡೆ ಪುಲ್ಲೆಯ ಬಾಯ ಕಜುಂಕೆ ಸೂಸಿದತ್ತಿದೆ . . . ಎನುತ್ತೆ ಪೆರ್ಚಿದ ವನದಲ್ಲಿ ಪಜ್ಜೆವಟ್ಟೆಯಿಂ ನಡೆಗೊಂಡುದು ಭಿಲ್ಲಸಂಕುಳಂ (ದಶಕು. ೨-೧೧೦). [ಪಜ್ಜೆ + ಬಟ್ಟೆ]

ಪಜ್ಜೆವಿಡಿ, ಹಜ್ಜೆವಿಡಿ, ಹೆಜ್ಜೆವಿಡಿ (ಕ್ರಿ). ೧. ಹೆಜ್ಜೆಯ ಜಾಡನ್ನು ಅನುಸರಿಸು ; ಹೆಜ್ಜೆಯ ಗುರುತು ಹಿಡಿದು ಹಿಂಬಾಲಿಸು : ಆಜ್ಞೋದಸರೋವರದ ತೀರದೊಳಿಂದ್ರಾಯುಧದ ಪಜ್ಜೆವಿಡಿದು ಬಂದು ಬಿಟ್ಟರ್ದ ನಿಜಸ್ಕಂಧಾವಾರಮಂ ಕಂಡು (ಕಾದಂಬ. ೧೪೩); ಪಜ್ಜೆವಿಡಿದು ನಡೆದು ರಾಮಲಕ್ಷ್ಮಣರಂ ಕಂಡು (ಪಂಂಪಾಮೂ. ೯-೩೩ ಪ); ಪಿಡ್ಡಧೇನುಗಳ ತೊರೆದ ಮೊಲೆಯಿಂದಂ ಬರಿವಿಡಿದು ಸುರಿವ ಪಾಲ್ಗೆ ಪಜ್ಜೆವಿಡಿದು ಪರಿವರಣ್ಯಮಾರ್ಜಾರಪೋತಕಂಗಳುಂ (ಚಂದ್ರಪು. ೫-೬೫ ಪ); ಪಿಸುಣು ಪಾಱುವ ಪಜಿಮೆಗಳ ಪಜ್ಜೆವಿಡಿದಜಿ . . . ಪೊರೆವ ಮಧುಕರಪ್ರಕರದಿಂ (ಗಿರಿಪ. ೧-೬೧ ಪ); ನಡೆ ಪ[ಪಾಠಾಂ. ಪೆ]ಜ್ಜೆವಿಡಿ ಪೋಗು . . . ಎಂಬ ನುಡಿಗಳಡಿಗಡಿಗೆ ಕಿವಿಗಿಡಿದುದು (ಜೈವಿಭಾ. ೨೪-೪೫). **ಹಜ್ಜೆವಿಡಿ** : ೨.ನುಳಿವನ್ನು ಕಾಣು : ಕಳವಂ ಕೊಂಡವನೆಯ್ದೆ ಪ[ಪಾಠಾಂ.ಪೆ]ಜ್ಜೆವಿಡಿದಾ ಮರ್ಮಾಂಗಳಂ ಕಾಣದೇ . . . ಪಟುವನ್ಯಾಯವ ನೋಡದನ್ನರೊಳೆ ದೂಱುಟ್ಟಲ್ಲರಂ ಬಾಧಿಪಾ ತಳವಾಱಂ ಬೆಳವಾರನ್ಯೆ (ಸೋಮೇಶ. ೬೬). **ಹೆಜ್ಜೆವಿಡಿ** : ೧. ಸಂಗ್ರಾಮಧೀರನ ಹೆಜ್ಜೆವಿಡಿದು ಮಹೀ ಮನೋಹರನಜಿ ಹೊಕ್ಕನು ಘೋರಕಾನನವ (ಕುವ್ಯಾಅ. ೧೩-೬೬).

[ಪಜ್ಜೆ + ವಿಡಿ]

ಪಜ್ಜೆಹಾಕು, ಹಜ್ಜೆಹಾಕು, ಹೆಜ್ಜೆಹಾಕು (ಕ್ರಿ). ೧. ನಡೆ ; ಸಾಗು : ಅರಸುನೆಯ ಚೋರರುಂ ಪೊಕ್ಕು ಚಾಮೀಕರನವರತ್ನ ಭೂಷಣನ ಕಡ್ಡ . . . ಅಯಯ್ಯನಿರುವಾಶ್ರಮಕೆ ಪಜ್ಜೆಹಾಕಿ ತಾವುಂ ತಳರಲು (ಪ್ರಭುವು. ೯-೧೯). **ಹಜ್ಜೆಹಾಕು** : ೧. ಅವಳು ಭಾರವಾದ ಎದೆಯಿಂದ ಮನೆಯೊಳಗೆ ಹಜ್ಜೆಹಾಕಿದಳು (ಹಾಜುತ್ತ. ೬೩). **ಹೆಜ್ಜೆಹಾಕು** : ೧. ಮೂರ್ತಿ . . . ನವಿನಾಪದ ಬರ್ಸಾತಾಣದ ಕಡೆಗೆ ಹೆಜ್ಜೆ ಹಾಕಿದ (ವಾತ್ಸಲ್ಯ. ೨೦೬); ಅವನ ಮಾತನ್ನು ಕೇಳಹೋಗದೆ ರಭಸದಿಂದ ಹೆಜ್ಜೆ ಹಾಕತೊಡಗಿದಳು (ಕುಸುಸಂ. ೧೧೦). ೨. (ಆಲಂ) ತಾಳಕ್ಕೆ ಸರಿಯಾಗಿ ಕಾಲುಹಾಕು,—ಕುಣಿ.

[ಪಜ್ಜೆ + ಹಾಕು(<ಪಾಯ್ಕು)]

ಪಜ್ಜಟಿಕೆ (ನಾ). [ಛಂದ] ಮಾತ್ರಾಗಣಬದ್ಧವಾದ ನಾಲ್ಕು ಚರಣಗಳುಳ್ಳ ಒಂದು ಸಮವೃತ್ತವಾದವೃತ್ತ : ಪಜ್ಜಟಿಕೆಯು ಸಂಸ್ಕೃತವೃತ್ತಗಳಿಂದ ಭಿನ್ನವಾದ ಪ್ರಾಕೃತ ಮಾತ್ರಾಬಂಧ . . . ಕನ್ನಡದಲ್ಲಿ ಮಂದಾನಿಲವೆಂದು ಹೆಸರುಗೊಂಡ ರಗಳೆಯೂ ಅದರ ಸ್ವಭೇದಗಳೂ ಈ ಅಪಭ್ರಂಶ ಛಂದಸ್ಸಿನ ಪ್ರಭಾವದಿಂದ ರೂಪುಗೊಂಡಿರಬಹುದೆಂದು ಊಹಿಸಲು ಅವಕಾಶವಿದೆ (ಛಂದೋವಿ. ೧೬೬); 'ಜಗನ್ನಾಥವಿಜಯ'ದಲ್ಲಿ . . . ಕೆಲವು ಕೈಬರಹದ ಪ್ರತಿಗಳಲ್ಲಿ ಪಜ್ಜಟಿಕೆಯಂತಿರುವ ರಗಳೆಯೊಂದಿದೆ (ಶಬ್ದವಿ. ೨೯). 'ಪಜ್ಜತಿ' ಪರಾ. [ಸಂ. ಪಜ್ಝಟಿಕಾ]

ಪಟ (ನಾ). ೧. ಬಟ್ಟೆ ; ವಸ್ತ್ರ : "ವಾಸಮಾಚ್ಛಾದನಂ ವಸ್ತ್ರಂ ಪಟಂ . . . ಅಂಬರಮೆನಲ್ಕಾ ಸೀರೆಯಕ್ಕುಂ" (ಮಂಗರಾ. ೧೦೦-೨೬); ಪಟವ ಹಱುದು ತಂತುವ ನೋಡಲದೇಕೆ ಆ ಪಟವೇ ತಂತುವೆಂದಱಯದೊಡೆ ಸಾಲದೇ (ದೇಜಾವ. ೬೦-೧೨೫); ಹೊಡ್ಡೆ ಹರಿಯಲಿಬೇಕು ಕರ್ಮಶೇಷದ ಪಟವ (ಮುಂಕುಶ. ೬೬೬). ೨. ಉತ್ತಮವಾದ ವಸ್ತ್ರ: ೩. ತೆರೆ ; ಪರದೆ; ಜವನಿಕೆ. ೪. ಚಿತ್ರ ಮೊದಲಾದುವನ್ನು ಬರೆಯಲು ಸಿದ್ಧಪಡಿಸಿದ (ನುಣುಪಾದ ಮೇಲ್ಮೈಯುಳ್ಳ)ಬಟ್ಟೆ, ಹಲಗೆ ಇತ್ಯಾದಿ : ಸುಳೇಕಿನಿಯುಂ ತನ್ನ ಮುನ್ನಿನ ಜನ್ಮದೊಳ್ ನೆಗಟ್ಟುದೆಲ್ಲಮಂ ಪಟದೊಳ್ ತಾನೆ ಬರೆದು . . . ಏಕಾಂತದೊಳ್ ನೋಡುತ್ತಿರ್ಪಂ (ಪಡ್ಡಾರಾ. ೩೪-೧೩). ೫. ಲೆಕ್ಕ ಮೊದಲಾದುವುಗಳನ್ನು ಬರೆಯುವುದಕ್ಕಾಗಿ ಚರಿ, ಇದ್ದಿಲು ಮುಂತಾದ ದ್ರವ್ಯಗಳಿಂದ ಸಿದ್ಧಪಡಿಸಿದ ಕರಿಯ ಮೇಲ್ಮೈಯುಳ್ಳ ಹತ್ತಿ ಬಟ್ಟೆ : ಈ ಲೇಖ್ಯವಸ್ತುವಿಗೆ ಪಟ, ಪಟಕಾ, ಕಾರ್ಪಾಸಿಕ ಪಟ ಎಂಬ ಹೆಸರುಗಳು ಸಂಸ್ಕೃತದಲ್ಲಿದ್ದುವಂತೆ (ಕನ್ನಸಂ.೪೦); ಇದನ್ನು ಪಟ, ಪಟಕಾ, ಕಾರ್ಪಾಸಿಕ ಪಟ ಎಂದು ಕರೆಯುತ್ತಿದ್ದರು (ಇಾರಪ. ೧೩). ೬. ಚಿತ್ರ, ನಕ್ಷೆ, ಯೋಜನೆ ಮೊದಲಾದುವುಗಳನ್ನು ಬರೆದ ಹಾಳೆ : ಆ ಭೂಮಿಯ ವನಯವನು ಪಟದಲ್ಲಿ ಬಂದು ನೋಡಿ ಆ ಹೇಮದೇವಾಚಾರ್ಯರ ಕೈಯಲಿಯಿದ್ದ . . .

ಶಾಸನಂಗಳನು ವೋದಿ ನೋಡಲಾಗಿ (ಸೌಇಇ. XX, ೨೬೨-೧೫ ; 1412) ; ಉಪನ್ಯಾಸಗಳ ಯೋಜನೆಯ ಪಟವು, ತಮಗೆ ನಾನು ಕೊಡಲಿರುವ ಭಾಷಣಗಳ ಕ್ರಮವನ್ನು ಅರುಹಬಲ್ಲದು (ಪರಪ. ೧೧). ೫. ಚಿತ್ರ ; ವರ್ಣಚಿತ್ರ : ಚಿಂತಿಸದಿರ್ ತಾ ತೋಟು ನಿನ್ನೀ ಬರೆದ ಪಟಮಂ (ಆದಿಪು. ೬-೪೪) ; ಬರೆದಟ್ಟದೀ ಪಟಮಂ ಪರೀಕ್ಷಿಸೆಂದೀಯೆ (ಮಹಾನೇ. ೯-೧೩೨) ; ರಾಜಯ ರೂಮಿನಲ್ಲಿ ದೇವರ ಕೆಲವು ಹೊಸ ಪಟಗಳಿದ್ದುವು (ಭೀಪುಕಾ. ೨೦೫). ೬. ನೌಕೆಗೆ ಕಟ್ಟುವ ಹಾಯಿ : "ಪಟಂ ಹಾಹೆಯಕ್ಕುಂ" (ಮುಂಗಂಶಾ. ೧೨೧-೫) ; ಏಱಿ ಬಹಿತ್ರಮಂ ಪಟಮ ನೆತ್ತಿಸೆ . . . ಪಯೋಧಿಯೊಳ್ ಪರಿದುದು (ಮಹಾನೇ. ೯-೧೩೬); ಕಟ್ಟಾ ಚಾರಮೆ ತರಣಿಯಜುವೆ ಪಟ . . . ಪುಟ್ಟುಗದಲ ದಾಂಟಿಪ ನಾವಿಕ ತಾನೆಂಬಂತೊಯ್ಯುತಿರೆ (ಉದ್ಭದೇ. ೬-೬) ; ನಾಳೆ ಹಡಗಿನ ಪಟಗಳನ್ನೇರಿ ಕುಪಾರನಗರಕ್ಕೆ ಮರಳುವೆಯಾ ? (ಅಯೋಕ. ೧೦೮). ೯. ಗಾಳಿ ಪಟ : ಆಕಾಶದಲಾಡುವ ಪಟಕ್ಕಾದಡೆಯೂ ಮೂಲಸೂತ್ರ ವಿರಬೇಕು (ಜನ್ನವ. ೪. ೫೯-೧೩೨) ; ಈತನಿದ್ದನು ಸವಡಿಗೈಯಲಿ ಸರಿವ ನೇಣಿನ ನಭದ ಪಟದಂತೆ (ತೊರಶಾ. ೫-೧-೧೬) ; ಹುಡುಗರೂ ದೊಡ್ಡವರೂ ಎಲ್ಲರೂ ಹೊಲಗಳ ಬೈಲಿನಲ್ಲಿ ಪಟ ಆಡಿಸುವ ಸಂತೋಷದಲ್ಲಿದ್ದರು (ಹುಟ್ಟಹ. ೭೧). ೧೦. ಒಂದು ಬಗೆಯ ಸಸ್ಯ. ೧೧. ಚೆನ್ನಾಗಿ ಒಪ್ಪವಾಗಿ ಮಾಡಿದುದು ; ಉತ್ತಮವಾಗಿ ರಚಿತವಾದುದು. ೧೨. ಬಾವುಟ ; ಧ್ವಜ : ಪಟದ ಸೀರೆಯಂತಲ್ಲಾಡಿ ಒಲ್ಲದ ಹೆಂಡತಿಯಂತೆ ಸುಯ್ದು (ಧರ್ಮಾಸ್ಯ. ೧-೧೩೮); ಚಾಮರದ ಧವಳಚ್ಛತ್ರ ಪಟ ಪಳಹರದ ಪದಪಿನಲೌಕಿ ನಡೆದುದು ಮುಂಬೆ ಪಾಯದಳ (ಕುಪ್ಯಾಕ. ೧೪-೩೩) ; ಅಲವಟ್ಟವು ಸತ್ತಿಗೆ ಮದಕರಿಗಳ ಸಾಲ ಪಟಗಳಿನಪ್ರಭೆಯು ತೂಳಗೊಡಪೆ ಮುಸುಕಲು (ಕಂನವಿ. ೧೯-೪೪).

ಪಟದ ಕುಣಿತ = ಬಣ್ಣ ಬಣ್ಣದ ರೇಷ್ಮೆಬಟ್ಟೆಯ ಪಟ್ಟಿಗಳನ್ನು ಸುತ್ತಿಪ ಉದ್ದವಾದ ಬಿದಿರಿನ ಕೋಲುಗಳನ್ನು ಹಿಡಿದುಕೊಂಡು ಮಾಡುವ ಕುಣಿತ : ವೈಷ್ಣವ ಸಂಪ್ರದಾಯದ ಕುಣಿತದಲ್ಲಿ ಒಂದೆಂದು ಹೇಳಲಾಗುವ 'ಪಟದ ಕುಣಿತ' ದಕ್ಷಿಣ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಮಾತ್ರ ಕಂಡುಬರುತ್ತದೆ . . . ಸಾಮಾನ್ಯವಾಗಿ ಒಕ್ಕಲಿಗರಲ್ಲಿ ಪ್ರಚಲಿತವಿರುವ ಪಟದ ಕುಣಿತ ನಡೆಯುವುದು ಹಬ್ಬ ಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ (ಕಜಕ. ೧೦೪). **ಪಟದ ಹುಳು** = ಬಟ್ಟೆಯನ್ನು ಹಾಳು ಮಾಡುವ ಒಂದು ಬಗೆಯ ಹುಳು: ಪತಂಗ, ಜಿರಲೆ, ಗೆದ್ದಲಹುಳು, ಪಟದ ಹುಳು (ಗೃಹವಿ. ೧೪೪). **ಪಟವಾಡಿಸು** = ಗಾಳಿಪಟದಂತೆ ಆಡಿಸು : ಪಟವಾಡಿಪಳ್ ಜೀವನಗಳನಂದೆ, ಅದ್ಯಾಶಕ್ತಿ (ಶ್ರೀರಾಮಾ. ೭೫೫-೧೭೯). [ಸಂ.]

ಪಟಿಂಗೊಳ್ (ಕ್ರಿ).(ಆಲಂ) ಮೆರೆ; ಪ್ರಸಿದ್ಧವಾಗು : ಪರ ಶತವಿಶದ ಯಶಃಪಟಿಂಗಳಂ ನಿನ್ನ ಪಟಿಂಗೊಳ್ವಂತೆ ವಿವಿಧ ಧ್ವಜಪಟಿಂಗಳಂ ಕೊಂಡು ಗೆಲ್ಲಂಗೊಂಡು ತಾನುಮುತ್ತರನುಂ ವಿರಾಟಪುರಕ್ಕೆ ಮಗುಟ್ಟು ಬರ್ದಾಗಳ್ (ಪಂಪಭಾ.೮-೧೦೯ ಪ). [ಪಟ + ಕೊಳ್₁]

ಪಟಿಕ₁ 'ಪಟಕ' ನೋ.

ಪಟಿಕ₂ (ನಾ). ೧. ಹತ್ತಿಯ ಬಟ್ಟೆ. ೨. ಪಾಳೆಯ; ಠಾಣ್ಯ. [ಸಂ.]

ಪಟಿಕ₃, ಪಟಿಕಾ, ಪಟಿಕೆ, ಪಟಿಗ₂, ಪಟಿಗಾ (ನಾ). ತಲೆಗೆ ಸುತ್ತುವ ಉದ್ದವಾದ ರುಮಾಲಿನಂಥ ವಸ್ತ್ರ ; ಪೇಟಾ : ಸಡವಿಗೆ ಸುತ್ತಿಕೊಂಡ ಅಂಚಿನ ಒಲ್ಲಿಯಾಗಲಿ, ತಲೆಗೆ ಸುತ್ತಿದ ತುರಾಯಿಳಟ್ಟಿನ ಪಟಿಕವಾಗಲಿ ಆ ಸಂದರ್ಭದಲ್ಲಿ ತೀರ ಒಪ್ಪುತ್ತವೆ (ಸುಪಣಾ. ೪೧). **ಪಟಿಕಾ:** ಕೇಟು, ಸ್ಯೆಯದ್, ಮೊಗಲ್, ಪಠಾಣ, ಈ ನಾಲ್ಕು ಜಾತಿಗಳ ಜನರು ತಲೆಗೆ ಮುಂಡಾಸ ಹಾಕುವರು, ಇಲ್ಲವೆ ಪಟಿಕಾ ಸುತ್ತುವರು (ಕಭಾಗ. ೨೨೬) ; ಮುಂಡಾಸ, ತುರುಬಿನ ರುಮಾಲು, ಪಟಿಕಾ, ಪಾಗೋಟು ಎಂದು ರುಮಾಲಿನ ವಿಭಾಗಗಳು (ಗೋಯಾತ್ರೆ. ೩೪) ; ಗುಲಾಬಿ-ಕೆತ್ತಳೆ ಬಣ್ಣದ ಪಟಿಕಾ ಸುತ್ತುವನು (ಹೂಬಿಸು. ೭೩). **ಪಟಿಕೆ :** ಪರಮಾನಂದ ಭರಿತನಾಗಿ ಅವನು ತನ್ನ ತಲೆಗೆ ಸುತ್ತಿದ್ದ ಪಟಿಕೆಯನ್ನು ಅವನಿಗೆ ಇನಾಮಾಗಿ ಕೊಟ್ಟನೆಂತಲೂ . . . ಹೇಳುತ್ತಾರೆ (ಬೀರಬ.೧೫೪). **ಪಟಿಗ**₂ : ಶಿವಪುತ್ರ, ಮಾದೇವರಿಗೆ ಹೊಸ ಪರಟು, ಧೋತರ, 'ಪಟಿಗ', ಕೋಟು ಗಳಿಂದ ಅಲಂಕರಿಸಿದರು (ಬರಹಾ. ೧೪೬) ; ಅವನ ಮೈಮೇಲಿನ ಬಟ್ಟೆಗಳು, ತಲೆಗೆ ಸುತ್ತಿದ 'ಪಟಿಗ' ಒಗೆಯಲಾರದೆ ಎಷ್ಟು ದಿನ ಕಳೆದಿದ್ದುವೊ (ಗಂಗಾಸೌ. ೭೫). **ಪಟಿಗಾ:** ಟೊಪ್ಪಿಗೆ ಬೇಡವಾದರೆ 'ಪಟಿಗಾ' ಸುತ್ತುವೆವು (ಗಾಳಿಪ. ೧೩೨) ; ತಲೆಯ ಮೇಲಿನ ಪಟಿಗಾಗಳೆಲ್ಲ ಆಕಾಶದಲ್ಲಿ, ಇವರ ಕೇಕೆಯೊಡನೆ ಹಾರಿದವು (ಗ್ರಾಸೂಯ. ೫೧).

[←ಹಿಂ. ಮರಾ. ಪಟಿಕಾ]

ಪಟಿಕಣ್ಣ 'ಪಟಿಗಣ್ಣ' ನೋ.

ಪಟಿಕಾ 'ಪಟಿಕ₃' ನೋ.

ಪಟಿಕಾರ₁ 'ಪಟಿಕಾರು' ನೋ.

ಪಟಿಕಾರ₂ 'ಪಟಿಕಾರ' ನೋ.

ಪಟಿಕಾರ₃ (ನಾ). ೧. ನೇಕಾರ ; ಜಾಡ : ದೇವಾಂಗರು, ಪಟಿಕಾರರು, ಸಾಲಿಗರು, ನೆಯ್ಗೆಯವರು, ಶೀಲವಂತರು, ಮೊದಲಾದ ಹೆಸರುಗಳಿಂದ ದಕ್ಷಿಣಭಾರತದಲ್ಲೆಲ್ಲ ಪ್ರಸರಿಸಿರುವ ದೇವಾಂಗರು . . . ಭಿನ್ನ ವಿಚ್ಛಿನ್ನರಾಗಿದ್ದರು (ಕರಚ. ೪೩) ; ಜಗತ್ತಿಗೆಲ್ಲ ಮೊಟ್ಟ ಮೊದಲಿಗೆ ಬಟ್ಟೆ ಕೊಟ್ಟವೆನ್ನುವ ಈ ಪಟಿಕಾರರು—ಹಟಕಾರ(ಜಾಡ)ರು ಆರ್ಯಪೂರ್ವ ಜನಾಂಗವೆಂದು ಸಿದ್ಧವಾಗುತ್ತಿಲ್ಲವೆ ? (ಕರ್ನಾಪೂ. ೧೪೫). ೨. ಚಿತ್ರಕಾರ ; ವರ್ಣಚಿತ್ರಗಳನ್ನು ಬರೆಯುವವನು. [ಸಂ.]

ಪಟಿಕಾರು, ಪಟಿಕಾರ₂ (ನಾ). ಚಿಮುಟ ; ತಂಡಸ : "ಇಕ್ಕುಳ, ಚಿಮುಟು, ಪಟಿಕಾರು, ತಂಡಸ" (Tongs. ೧೦೪೩) ; ಬೈರಿಗೆಯ ಅಲಗು ; ಕೋಬಡದ ಉಳಿಯಂಚಲಗು ; ಪಟಿಕಾರು, ಮೊ.ಗಳ ಕೊನೆ ಗತ್ತರಿ (Bit. ೧೦೪೩). **ಪಟಿಕಾರೆ**₁ : "ಯಾವುದಾದರೂ ಪದಾರ್ಥವನ್ನು ಬಿಗಿಯಾಗಿ ಹಿಡಿದುಕೊಳ್ಳುವ ಸಾಧನ ; ಶ್ರವಣ ; ಚಿಮುಟ ; ಪಟಿಕಾರ" (Pincers. ೧೦೪೩).

[←ತೆಲು. ಪಟಿಕಾರು, ಪಟುಕಾರು]

ಪಟಿಕಾಸು, ಪಟಿಕಸು₁ (ಕ್ರಿ). ಬಲವಾಗಿ ಹಿಡಿ ; ಅಮುಕಿ ಹಿಡಿ : ಆಶಿ ಅಗಸಗ ಪಟಿಕಾಸ್ತು . ಜಾರದೆ. ಮನಿ ಮುಂರೀತು (ರಕ್ತಧ್ವ.೬೨೫). **ಪಟಿಕಸು**₁ : ಅದು ಕಾರಸ್ಥಾನ. ನೀನೂ ನನ್ನನ್ನು ಮೋಸದಿಂದಲೇ ಪಟಿಕಿಸುವವ (ರಕ್ತಧ್ವ. ೨೫೬).

[? +-ಇಸು₅./ಮರಾ. ಪಟಕಾವಿಣೇ]

ಪಟಿಕಿ, ಪಟಿಕೆ₃ (ನಾ). ಕಾಲರಾ ರೋಗ : ಪಟಿಕಿಯ ಜುಲಾಬು ಅಕ್ಕೀ ಕಟ್ಟನಂತೆ ಬಹಳ ಪ್ರಮಾಣದಿಂದ ಆಗ ಹತ್ತುತ್ತದೆ. ಕೈಕಾಲಿಗೆ ಒರಟೆ ಬಂದು ಮನುಷ್ಯನು ಗಾಬರಿಯಾಗುತ್ತಾನೆ (ಗೃಹವೈ. ೨೬). 'ಪಟಿಕಿಬೇನೆ' ಪರಾ. **ಪಟಿಕೆ**₃ : ಪಟಿಕೆಯ ಉಪದ್ರವವಿದ್ದ ಕಾಲದಲ್ಲಿ . . . ಕಪ್ಪರ ಸುಡುವದರಿಂದ ಹಿತವಾಗುತ್ತದೆ (ಮುಂಬಯಿ. ೫-೧೫೬).

[←ಮರಾ. ಪಟಿಕೀ]

ಪಟಿಕಿಬೇನೆ (ನಾ). = ಪಟಿಕಿ : ಬೈಲುಸೀಮೆಯಲ್ಲಿ ಪಟಿಕೀಬೇನೆಯ ಉಪದ್ರವವಿದ್ದಷ್ಟು ಉಳಿದ ಮೂರು ವಿಭಾಗಗಳಲ್ಲಿ ಇರುವುದಿಲ್ಲ(ಕಭಾಗ. ೨೧) ; ಈ ಸೀಮೆಯಲ್ಲಿ ಪಟಿಕೀಬೇನೆಯ ಭೀತಿಯು ಮಾತ್ರ ಬಹಳ ಇರುತ್ತದೆ (ಬೆಳವ. ೨೦). [ಪಟಿಕಿ + ಬೇನೆ₁]

ಪಟಿಕಿಸು. 'ಪಟಿಕಾಸು' ನೋ.

ಪಟಕಿಸು$_2$ (ಕ್ರಿ). ಪಟಪಟನೆ ಹೇಳು : ಏನಿವನು ಪಟಕಿಸುವ ಏಳು ಬೀಳಿನ ಮಂತ್ರ ? (ಶಿಲಾಲ. ೬೮-೧೫) ; ನಮ್ಮ ನಾಣಪ್ಪನೋರು ಮಾತು ಮಾತಿಗೂ ಗಾದೆ ಪಟಕಿಸ್ತಾರೆ (ಬೈಸರ್ಸ. ೬೨). [? +-ಇಸು$_3$]

ಪಟಕುಟಿ (ನಾ). (ಬಟ್ಟೆಯಿಂದ ರಚಿಸಿದ) ಗುಡಾರ ; ಡೇರೆ : "ದೂಷ್ಯಂ, ಸ್ಥೂಳಂ, ಪಟಕುಟೀ, ಗುಣಲಯನೀ, ಕೇಳಿಕಾ—ಈ ೫ ಗುಡಿ" (ಹಲಾಯು. ೭೪-೨೯೭) ; ದೇವರಮ್ಮಮೆಂಬ ಪಟಕುಟಿಯುಂ . . . ಎಟ್ಟತ್ತಿಚ್ಛಾಸಿರದುರ್ಗಾಟವಿಗಳುಂ ಪದಿನೆಣ್ಣಾಸಿರಮ್ಲೇಚ್ಛ ರಾಜರುಮಾತ್ಮೀಯಸಾಮ್ರಾಜ್ಯಪರಿಚ್ಛೇದಮಾಗೆ (ಆದಿಪು. ೧೫-೩೮) ; ಅಭ್ರತುಂಗಪಟಕುಟಿಯ ಮಹಾಕನಕದ ಕಂಬಂಬೋಲ್ಮಿಗೆ ಮಿನುಗು ಗುಮುರುಚಾರುಚಂದ್ರಗಿರಿಗಂಭೀರಂ(ಹಮ್ಮೀರ.೧-೩೪) ; ಸುರಪನ ವಿಭವದಿ ಜಯಿಸಿದ ಚಕ್ರಿಗೆ ಹರಿಸದಿ ಗಿರಿಗಳಂಬುಧಿಯ ಪೊಱಟದಿರ್ವಂದಂತೆ ಪಟಕುಟಿಗಳು ಬಂಧುರಮಾದವು ಬೀಡಿನೊಳು (ಚಂಪ್ರಸಾಂ. ೧೫-೧೦೮) ; ಎತ್ತಿ ತಂದರಾ ರಾಕ್ಷಸಶರೀರಮಂ ಪಡೆವಳಂ ಗಂಧಮಾದನನಿರ್ದ ಪಟಕುಟಿಗೆ (ಶ್ರೀರಾಮಾ. ೬೦೩-೭೯). [ಪಟ+ಕುಟಿ$_2$]

ಪಟಕುಟೀರ (ನಾ). = ಪಟಕುಟಿ : ಆ ಸೇನಾಪತಿಯು ಸ್ಥಪತಿರತ್ನದಿಂ ನಿರ್ಮಿತವಾದ ಆ ಪಟಕುಟೀರದೊಳ್ ಪಡಂಗಬಲವನ್ನೂ ಆ ಬಳಿಯೊಳೇ ತಳುಗಿಸಿದನು (ಪುರುಚ. ೧೫೪). [ಪಟ+ಕುಟೀರ]

ಪಟಕೆ 'ಪಟಕ$_3$' ನೋ.

ಪಟಕೋಶಿ (ನಾ). ಬಟ್ಟೆಯ ಚೀಲ : "ಚೀಲಃ = ಪಟಕೋಶೀ" (ಕಾಶಕೃ. ೫೦). [ಸಂ. ಪಟಕೋಶೀ]

ಪಟಕ್ಕನೆ (ಅ). ಒಮ್ಮಿಂದೊಮ್ಮೆಲೆ ; ತಟ್ಟನೆ : ಪಟಕ್ಕನೆ ದೀಪ ಆರಿಹೋಯಿತು (ರೂಢಿ). [ಪಟಕ್$_0$+-ಅನೆ$_1$]

ಪಟಗ$_1$ 'ಪಟಕ' ನೋ.

ಪಟಗ$_2$ 'ಪಟಕ$_3$' ನೋ.

ಪಟಗಣಿ (ನಾ). ಒಂದು ಬಗೆಯ ಸಸ್ಯ : ಪಟಗಣಿ, ಸೊನೆಪಟ್ಟ, ಕಿಗುಡು (ಮೈಡಿಗಿ. ೫೯-೧೧೬೮). [?]

ಪಟಗಣ್ಣಿ, ಪಟಕಣ್ಣಿ (ನಾ). ಎತ್ತಿಗೆ ನೊಗವನ್ನು ಕಟ್ಟುವ ಹಗ್ಗ ; ಜೊತ್ತಗೆ ; ಮಿಳಿ : ಒಂದೇ 'ಹ್ಯಾಟು' ಇದ್ದರೂ ಯಾವ ಎತ್ತಿನ ಕೊರಳಿಗಾದರೂ ಹವಣಾಗುವ 'ಪಟಗಣ್ಣಿ'ಯಂತೆ, ಎಲ್ಲ ಸೂಟಿಗೂ ಹೊಂದಿಕೊಳ್ಳುವಂತಹದು (ಬೆಳುಮ. ೨೫೩). **ಪಟಕಣ್ಣಿ** : ಪಟಕಣ್ಣಿಯನ್ನು ತೆಗೆದುಕೊಂಡು ಬಾ (ರೂಢಿ). [ಪಟ ? + ಕಣ್ಣಿ]

ಪಟಗಾ 'ಪಟಕ$_3$' ನೋ.

ಪಟಗಾರ 'ಪಟಗಾಱ' ನೋ.

ಪಟಗಾಱ, ಪಟಗಾರ (ನಾ). ೧. ಗಾಳಿಪಟವನ್ನು ಹಾರಿಸುವವನು,—ಆಡಿಸುವವನು : ಪಟಗಾಱನುಱೆ ಸೂತ್ರವಿಡಿದಿದ್ದರಾ ಗಾಳಿಪಟ ಗಗನದೊಳಾಡುವಂತೆ ಕುಟಲವಲ್ಲಾತ್ಮ ನಿನ್ನಂಗದೊಳಿರ್ದು ಸಂಘಟಿಸಿ ಮುಕ್ತಿಯೊಳದೆ ಬುದ್ಧಿ (ಭರಚ. ೨-೪೩). **ಪಟಗಾರ** : ೨. ನೇಯ್ಗೆಯವನು ; ನೇಕಾರ ; ಪಟಕಾರ : ಪಟಗಾರ ರಾಯಂಣ ನಾಯ್ಕನಿಗೆ ಬಿಳಿಚತ್ರಿ . . . ಶಾಲು ನಾಮೆ ಸಹ ಕೊಟ್ಟು (ಎಕ. IV (R), ಚಾಮರಾ.೨೯೨-೩೨ ; 1345). [ಪಟ+-ಕಾಱ]

ಪಟಗೃಹ (ನಾ). = ಪಟಕುಟಿ : ಪ್ರಭಾಕಾಂಡವೆಂಬ ಪಟಗೃಹದಲ್ಲಿ ಆ ನಾವೀರ್ವರೂ ಕ್ರೀಡಿಸುವ ರೀತಿಯು ಇದೇ (ಪುರುಚ. ೩೭) ; ಅಧಿಕಾರಿಗಳು ರಾಜಯೋಗ್ಯವಾದ ಪಟಗೃಹವನ್ನು . . . ದೇವಾಲಯದ ಬಳಿಯಲ್ಲಿ ನಿರ್ಮಿಸಿ ತಳಿರು ತೋರಣಗಳಿಂದಲಂಕರಿಸಿದರು (ಕಭವಿ.೪೩೦) ; ತರತರದ ವರ್ಣಂಗಳಿಂದೆಸೆವ ಪಟಗೃಹದ ಪಂಕ್ತಿಯಿಂ . . . ರಣಶಿಬಿರಮೆಸೆದತ್ತು (ಚಿತ್ರಾಂಗ. ೧೭-೪೬೪). [ಪಟ+ಗೃಹ]

ಪಟಚ್ಚರ (ನಾ). ೧. ಹಳೆಯ ಬಟ್ಟೆ : "ಪಟಚ್ಚರಮೆಂಬುದು ಹಟೆಯ ಸೀರೆ" (ಹಲಾಯು. ೯೦-೩೯೬) ; ನೆಱೆಯೆ ಪಟಚ್ಚರದೊದವಿದ ಸೆಱಂಗಿನೊಳ್ ತಂದು ತೀವಿ ಪವನಂ ಹಿಮಮಂ ಸೆಱೆಯಿಟ್ಟಂತಿರೆ ಮೊಗದೊಳ್ ತುಱುಗಿದ ಕಿಱುಬೆಮರದೇಂ ಮನಂಗೊಳಿಸಿದುದೋ (ಶಾಂತಿಪು. ೮-೨೪) ; ವಿವಿಧ ವೈಪಥಪಾಂಸುಗಳಿಂದೆ ನಾಡೆ ಸೀಳಿದ ತಲೆಯುಂ ಕರಂ ಮಲಿನಮಾದ ಪಟಚ್ಚರಮುಂ ನೆಗಟ್ಟಲಂದಿದಿರೊಳೆ ಲೇಖವಾಹನಿವಹಂ ಬರೆ ಕಂಡನಿಳಾಧಿನಾಯಕಂ (ಕಾದಂಉ. ೬೩೬) ; ಜಟಿಳಿತಕೇಶಂ ವೇಷ್ಟಿತ ಪಟಚ್ಛದಂ[ಚ್ಚರಂ] ದೀರ್ಘದೇಹಿ ಜಟ್ಟಗನೆಂಬೋಲ್ ಕುಟಲಗತಿ ಬರುತು ಮಿರ್ದಂ ಭಟನೊರ್ಬಂ ಪೊತ್ತು ಬೆಮರುತುಂ ತದ್ಧ್ವಜಮಂ (ಲೀಲಾವ. ೪-೮೧). ೨. ಕಳ್ಳ ; ಚೋರ. [ಸಂ.]

ಪಟಡಿ 'ಪಟ್ಟಡಿ$_1$' ನೋ.

ಪಟತ್ಕಾರ (ನಾ). ಪಟಪಟ ಎಂಬ ಸದ್ದು,—ಶಬ್ದ : ಝುಷಕೇತನ ಪ[ಪಾಶಾಂ. ಫ]ಟತ್ಕಾರಂ ತರುಣೀಚರಣಮುದ್ರಿಕಾಶಣತ್ಕಾರಂ ತತ್ಕಟಕ ಮಂಜೀರಝುಣತ್ಕಾರಂ . . . ಆಗಸಮಂ ಮುಸುಂಕೆ(ಗಿರಿಕ. ೮-೮ ಪ). [ಸಂ.]

ಪಟಪಟ (ನಾ). ಒಂದು ಅನುಕರಣ ಶಬ್ದ : ಜ್ವರ ಕಾಯುತ್ತಿತ್ತು, ನಾಡಿಯು ಪಟಪಟ ಬಡಿಯುತ್ತಿತ್ತು (ಕತ್ತಬೆ. ೭).

ಪಟಪಟನೆ (ಅ). ೧. ಪಟ ಪಟ ಎಂದು ಸದ್ದಾಗುವಂತೆ : ಇವರ ಅಂಗುಳ ಮೆಟ್ಟ ಪಟಪಟನೆ ಹೊಡಿ ಎಂದಾತ ನಮ್ಮ ದಿಟ್ಟ ಧೀರ ಅಂಬಿಗರ ಚೌಡಯ್ಯ ನಿಜಶರಣನು (ವಚಶಾ. I, ೩೭೦) ; ಚಟುಲಶಿಖಿ ಪಟುದೃಷ್ಟಿಪಾತಕೆ ಕುಟಲದೈವಂಗಳು ಛಿಟಲು ಛಿಟಲೆನುತ ಬೇವುತ್ತ ಪಟಪಟನೆ ಸಲೆ ಬಿರಿವುತಂ ಮೇಣ್ ಛಟಛಟನೆ ಕೆಡೆಯಲ್ಕೆ (ಬಸಪು. ೨೩-೧೬). ೨. ಸರಸರನೆ ; ಬೇಗ ಬೇಗನೆ : ತಟಿತಟಿಯಹ ಲಾಲಸೆಯನು ಸೂಡಿ ಪಟಪಟನೈದಿ ಪರರ ತಾ ಬೇಡಿ (ಅವಧೂ. ೨೯) ; ಮಘಮಘಿಸುವಾ ಮುಗಿದ ಮೊಗ್ಗೀ ಪಟಪಟನೇ ಒಡೆದು (ಗರಿ. ೧-೧೧). [ಪಟಪಟ+-ಅನೆ$_1$]

ಪಟಪಟಿಸು (ಕ್ರಿ). ಪಟ ಪಟ ಎಂದು ಸದ್ದುಮಾಡು : ಗುಬುಟಿನ ಬಾವುಟಗಳು ಪಟಪಟಿಸುತಲೊಲೆದವು ನಲವೆರಚಿ (ನಾಪದ. ೧೬೯). [ಪಟಪಟ+-ಇಸು$_3$]

ಪಟಮಂಟಪ (ನಾ). = ಪಟಕುಟಿ : ಲತಾಮಂಟಪ ದರ್ಪಣಮಂಟಪ ಪಟಮಂಟಪ . . . ತರುವಾಟಿಗಳ ತಣ್ಣೆಳಲ್ಗಳೊಳಗೆಯುಂ (ವಿವೇಕ. ೨೧೩). [ಪಟ+ಮಂಟಪ]

ಪಟಮಂಡಪ (ನಾ). = ಪಟಕುಟಿ : ಭವದೀಯ ವನಾಯುಜ ಹಯ ನಿವಹಂ ಕೇಳ್ ಮೂರಿವಿಟ್ಟು ನಿಶ್ವಾಸಂ ಸೈಂಧವಮಂ ಮಾಸಿಸೆ ಸೊಗಯಿಸಿತು ವಿನಿದ್ರಂ ದೇವ ದೀರ್ಘಪಟಮಂಡಪದೊಳ್ (ಶಾಂತಿಪು. ೫-೯೨). [ಪಟ+ಮಂಡಪ]

ಪಟಮಂದಿರ (ನಾ). = ಪಟಕುಟಿ : ಮಾರನು ದಿಗ್ವಿಜಯಾರ್ಥಮಾಗಿ ಪೊರಟು ಬರುವನೆಂದು ವನದೇವತೆಗಳೆಲ್ಲ ಕೂಡಿ ಮಾಡಿಸಿರುವ ಪದ್ಮರಾಗ ರತ್ನಮಯವಾದ ಪಟಮಂದಿರಗಳೊಯೆಂಬಂತೆ . . . ತೋರುವ ಚಿಗುರುಗಳ ಕೆಂಪಾದ ಕಾಂತಿಗಳು ದಿಕ್ಕುದಿಕ್ಕುಗಳನೆಲ್ಲ ವ್ಯಾಪಿಸುತ್ತಿರಲು (ಸೌಗಂಧಿ. ೪೬೮-೪). [ಪಟ+ಮಂದಿರ$_2$]

ಪಟಲ$_1$ 'ಪಡಲ$_1$' ನೋ.

ಪಟಲ$_2$, ಪಟಳ (ನಾ). ೧. ಮನೆಯ ಮೇಲಿನ ಹೊದಿಕೆ ; ಛಾವಣಿ ; ಮಾಡು. ೨. ಪರದೆ ; ಆವರಣ. ೩. ಕಣ್ಣಿನಲ್ಲಿ ಬರುವ ಪೊರೆ ; ಕಾಚಬಿಂದು : ಪಟಲಂ ಕಣ್ಣೊಳ್ ಕವಿದುಂಗುಟಮಂ ಮೊದಲಾಗಿ ಕಾಣೆನೆಂದೊಡೆ (ಪಂಚತಂ. ೨೭೩-೧೪) ;

ಪಟಲಮೆಂಬುದು ಕಾಚಮೆಂಬುದು ಪಟುತರದ ದೃಷ್ಟಿಯ ನಿರೋಧಿಸಿ ನಟಿಸದಿಹ ಕಂಚುಕವೆನಿಪುದು ದೃಷ್ಟಿಗತದೋಷಂ (ವಿಜೇಭ. ೬-೪೫); ಅರಿಯು, ಪಟಲಂ, ನೀರು ಸುರಿವದು, ಅರ್ಜುನಗಣ್ಣು, ಅದಕ್ಕೆ ಔಷಧಿ (ವಿವೈವಿ. ೧೯೩). ೪. ಗುಂಪು; ಸಮೂಹ; ರಾಶಿ: ನವೀನ ಪ್ರಸೂನ ಮಧುವಿಲೀನಮಧುಕರಪಟಲಕರ್ಬುರಿತ ರತ್ನಪಟಲಿಕೆಗಳಿಂ . . . ಮನಂಗೊಳಿಪ ದೇವಪೂಜಾಗೃಹಮಂ ಪೊಕ್ಕು (ಪಂರಾಮಾ. ೧೨-೨ ಪ); ಷಟ್ತ್ರಿಂಶತ್‌ಪ್ರಭಾಪಟಲದ ಪ್ರಭೆಯು ಬೆಳಗಿದೆ ನೋಡಿರೆ (ಬಸವ. ೯೫೫); ಧವಳಾಂಬುದ ಪಟಲಮೆಸೆದುದಂಬರತಳದೊಳ್ (ಜಗವಿ. ೪-೬೧); ದಾರಿಯಲ್ಲಿ ಇಲ್ಲಿಯೇ ನಮ್ಮದೂ ಪಟಲ ಆ ಸೇನೆಯೊಡನೆ ಸೇರಿಕೊಳ್ಳುತ್ತದೆ (ಸವತಿ. ೬೦). ೫. ಗ್ರಂಥಭಾಗ; ಪ್ರಕರಣ: ವಾತೂಳಾಖ್ಯಪರಮಾಗಮದ ಮೊದಲ ತತ್ತ್ವಪಟಲದ ಭಿತ್ತಿಯ ಕಾಂತಿಯ ಕಳಾನಿಳಯ ವೆನಿಪ ನಾನಾತತ್ತ್ವಚಿಂತಾಮಣಿಯ ಪ್ರಭಾವದೊಳು ಗತಿವಡೆದ ನಿರ್ಭ್ರಾಂತ ಪದವಿಹಿತವಿಶ್ರಾಂತಿಯಜೀವನರ ವಿಮಲಚರಣಾಂಬುಜಕ್ಕೆ ಶರಣು (ಲಕಿಚಂ. ೧-೨೧); ಅನೇಕ ಆಗಮಗಳಲ್ಲಿ ಪ್ರತ್ಯೇಕ ಇಲ್ಲವೆ ಮಿಶ್ರ ಪಟಲಗಳಿರುತ್ತವೆ (ತತ್ತ್ವಪ್ರಾ. ೪೨೪); ಆ ದೇವಿಯರ ಸಂಬಂಧವಾದ ಮಂತ್ರ ಪಟಲಗಳನ್ನೆಲ್ಲ ಸರಹಸ್ಯವಾಗಿ ಉಪದೇಶ ಮಾಡಿದರು (ಮಹಾಣ. ೮೧). ೬. ಪ್ರತಿಬಿಂಬದ ಗ್ರಹಣಕ್ಕಾಗಿ ಕ್ಯಾಮರಾಗಳಲ್ಲಿ ಇಡುವ ತೆಳ್ಳನೆಯ ಸೆಲ್ಯುಲೈಡ್ ಹಾಳೆ; ಫೋಟೋ ಅಚ್ಚು ಮಾಡಲು ಬಳಸುವ ಕಾಗದ: ಮಧ್ಯಪಟಲದ ಒಳಮೈಯಲ್ಲಿ ಪಸರಿಸಿ ಕನ್ನಡಿಯಂಥ ಪಟಲವಾಗಿರುತ್ತದೆ (ಮುಂಬಯಿ. ೬-೧೪೪); ನಾವು ಕ್ಯಾಮರಾವಿನಿಂದ ಫೋಟೋಗಳನ್ನು ತೆಗೆಯುವಾಗ ಒಳಗಿರುವ ಪಟಲದ (Film) ರಾಸಾಯನಿಕಗಳ ಮೇಲೆ ಈ "ಅಲ್ಪಾವಯಲೆಟ್" ಕಿರಣಗಳು ಪ್ರತಿಕ್ರಿಯೆಯನ್ನು ತೋರಿಸುತ್ತವೆ (ಶಿಲ್ಪನಾ. ೧೯೦). ೭. ಬರೆಯಲು ಬಳಸುವ ಪತ್ರ,—ಹಾಳೆ: ಪಾಣಿನಿ ತನ್ನ ಗ್ರಂಥದಲ್ಲಿ . . . "ಪಟಲ" ಎಂಬುದನ್ನು "ಬರೆವ ಹಾಳೆ" (ಪತ್ರ) ಎಂಬ ಅರ್ಥದಲ್ಲಿಯೂ ಪ್ರಯೋಗಿಸಿದ್ದಾನೆ (ಸಂಶೋಧ. ೪). ೮. [ಜೈನ] ನರಕಭೂಮಿಯಲ್ಲಿಯ ಸ್ತರ,—ನೆಲೆ: ಪಟಲಮಧ್ಯದೊಳಿಂದ್ರಕಂಗಳಿರ್ಪುವು (ಶ್ರಾವಕಾ. ೧೯-೧೧); ಹದಿಮೂಱುಪಟಲಗಳೆರಡೆರಡ್ತಗ್ಗಲು ಮೊದಲಿಂದ ತುದಿಯೊಳಗೊಂದು ವಿದಿತರತ್ನಪ್ರಭವಾದಿಯ ಗುಣನಾಮ ಪುದಿದುದಾ ಸಪ್ತಪೃಥ್ವಿಯೊಳು (ವರ್ಧಚ. ೮-೬೭); ಪಟಲವೆಂದರೆ ಅಂತಸ್ತು(ನೆಲೆ)ಎಂದು ಹೇಳಬಹುದು. ಪ್ರತಿಯೊಂದು ನರಕಭೂಮಿಯಲ್ಲಿ . . . ನಡುವೆ ಪಟಲಗಳಿರುತ್ತವೆ (ಜೈನಧ. ೩೫). **ಪಟಳ:** ೧. "ಪೊದಯಿಸಿದಾಚ್ಛಾದನಮುಂ ಛದಿಯುಂ ಪಟಳಮುಮೆನಿಪ್ಪುದು" (ವಸ್ತುಕೋ. ೪೭-೧೫). ೨. ಘಟಿಯ ದಟಿದುಲಿವು ಲಯಘನಘಟಿಗಳ ಮೊಟಗೆನಿಸೆ ಪೊಟ್ಟಗೊಡೆದತ್ತು ರಟತ್ಪಟುಪಟಹಶಂಖಭೇರಿಯ ಚಟುಳಿತದಿಂದಟಳಪಟಳಮಂಬರ ಪಟಳಂ (ಪಂಪಭಾ. ೧೦-೬೭); ಜಳಧರಪಟಳಪಟುರಟನಮಂ ಕೇಳ್ದ ಕಳಹಂಸನಂತೆ ಕ್ಷಿತಿಕಾಂತಂ ಚಕಿತಾಂತರಂಗನತಿವೇಗಂ ಬಂದು (ವರ್ಧಪು. ೨-೫೮ ಪ). ೪. "ಪಟಳಮಂಬು(ದದು) ನಿಚಯದೊಳಂ" (ವಸ್ತುಕೋ. ೧೩೮-೧೨೩); "ನಿಕರಃ, ಪಟಳಂ, ಪೇಟಕಂ . . . ಸ್ತೋಮಃ—ಈ ೩೯ ಸಮೂಹಂ" (ಹಲಾಯು. ೧೧೪-೨). [ಸಂ.]

ಪಟಲಕ, ಪಟಳಕ (ನಾ). ೧. ತೆರೆ; ಪರದೆ; ಜವನಿಕೆ. ೨. ಸಂಪುಟ; ಭರಣಿ: ಆಕೆಯ ಕೆಲದೊಳ್ ಬರ್ಪ ತರಳಿಕೆಯ ಕಯ್ಯಸಿತಾಂಶುಕಾಚ್ಛಾದಿತ ರತ್ನಮಯ ಪಟಲಕದೊಳ್ . . . ಎಸೆದುದುಜ್ವಳಮಾಕ್ತಿಕಹಾರಮಂಡಲಂ (ಕಾದಂಉ. ೧೦೫); ಶೃಂಗಾರಸದನಮಂ ಮಕುಟಾಂಗದ ಮಣಿಹಾರಕಟಕಕುಂಡಲನವದೇವಾಂಗವಸನಾತ್ತ ಪಟಲಕ ಸಂಗತಮಂ ಬಂದು ಲೀಲೆಯಿಂದೊಳಪೊಕ್ಕಂ (ಚಂದ್ರಪು. ೯-೨). ೩. ರಾಶಿ; ಸಮೂಹ: 'ಪಟಲಿಕೆ' ಪರಾ. **ಪಟಳಕ:** ೨. ಆಗಳ್ ಭಂಡಾರಿಗರ್ ವಿವಿಧಪಟಳಕಂಗಳೊಳ್ ತಂದು ಮುಂದಿಟಿಪಿದ ಸುಗಂಧಾನುಲೇಪನಕುಸುಮವಸನಭೂಷಣಂಗಳಿನರಸಿಯುಂ ತಾನುಂ ಶೃಂಗಾರಂಗೆಯ್ದು (ಚಂದ್ರಪು. ೭-೧೪೯ ಪ); ಸುರೇಂದ್ರನೆರ್ದು ರತ್ನಪಟಳಕದೊಳ್ ಕೇಶಪಾಶಮನಿಟ್ಟು ಪಾಲ ಸಮುದ್ರದೊಳಿಕ್ಕಿಮೆಂದು ದೇವರ್ಕೆಯ್ಯೊಳ್ ಕೊಟ್ಟು (ಬಂಹರಿ. ೧೩-೨೮ ಪ). [ಸಂ.]

ಪಟಲಕಣ್ಣು 'ಪಟಲಗಣ್ಣು' ನೋ.

ಪಟಲಗಣ್ಣು, ಪಟಲಕಣ್ಣು (ನಾ). ಕಣ್ಣಿಗೆ ಪೊರೆ ಬರುವ ಒಂದು ಬಗೆಯ ರೋಗ; ಕಾಚಬಿಂದು: ಪಟಲಗಣ್ಣಿಗೆ:—ಉತ್ತುತ್ತ ನಾಲ್ಕು ತೂಕ, ಕಪ್ಪಲಿ ನಾಲ್ಕು ತೂಕ, ನೀಲಾಂಜನ ನಾ(ಲ್ಕು)ತೂಕ, ಇಷ್ಟನ್ನು ಸಣ್ಣನಾಗಿ ಮರ್ದಿಸಿ . . . ಗುಳಿಗೆಯಂ ಮಾಡಿ ಆ ಗುಳಿಗೆಯನ್ನು ಮೊಲೆಯಹಾಲಲ್ಲಿ ತೇದು ಹಚ್ಚಲು ಪಟಲಗಣ್ಣು ಮಾಣ್ಗುಂ(ವಿವೈವಿ. ೭೯). **ಪಟಲಕಣ್ಣು:** ಪಟಲಕಣ್ಣಿಗೆ . . . ಗಿರಿಕರ್ಣಿಕೆಯ ಸಮೂಲ, ಶಂಖ, ಶುಂಠಿ, ಅರಿಸಿನ, ಸಮಾನಂಗೊಂಡು ನೀರಲ್ಲಿ ಅರೆದು ಗುಳಿಗೆಯ ಮಾಡಿ ಕಣ್ಣಿಗೆ ಹಚ್ಚೆ ಕೆಟ್ಟಗಣ್ಣು, ಸರ್ವರೋಗಂಗಳೆಲ್ಲ ಮಾಣುವುವು (ವಿವೈವಿ. ೭೯). [ಪಟಲ$_2$ + ಕಣ್ಣು (<ಕಣ್)]

ಪಟಲಪ್ರಾಂತ(ನಾ). ಚಾವಣಿಯ ತುದಿ,—ಸೂರು: "ವಲೀಕಂ, ನೀವ್ರಂ, ಪಟಲಪ್ರಾಂತಂ— ೩ ವಪ್ಪಾರದ ಚೂರು, ಲೋವೆಚೂರು, ಮನೆಯ ಚುಂಚು, ಹೊದಿಕೆಚೂರು . . . ಇದನ್ನು ಸೂರೆಂತಲೂ ಅನ್ನುವರು" (ಸಿದ್ಧಾಂತಿ. ೧೦೩). [ಸಂ.]

ಪಟಲಾಂ 'ಪಟಾಲಂ' ನೋ.

ಪಟಲಾಂತ (ನಾ). = ಪಟಲಪ್ರಾಂತ: "ನೀವ್ರಂ, ವಳೀಕಂ, ಪಟಲಾಂತಂ — ಈ ೩ಸೂ(ಱು)ರು" (ಹಲಾಯು. ೫೧-೧೪೮).

[ಪಟಲ$_2$ + ಅಂತ$_2$]

ಪಟಲಾರ್ಬುದ (ನಾ). ಕಣ್ಣಿನ ಪೊರೆಯಲ್ಲಾಗುವ ಹುಣ್ಣು; ಒಂದು ಬಗೆಯ ನೇತ್ರರೋಗ: ಅಂಧಕಾರ, ಪಟಲಾರ್ಬುದ ಮೊದಲಾಗಿ ಇವೆಲ್ಲ ಒಳಗಣ ಕೂಟಂಗಳನೆಲ್ಲವಂ ಕೆಡಿಸುಗುಂ (ವಿವೈವಿ. ೧೬೦).

[ಪಟಲ$_2$ + ಅರ್ಬುದ$_2$]

ಪಟಲಿ (ನಾ). ಗುಂಪು; ಸಮೂಹ: ತುಱುಗಿರ್ದ ನೀಲಮೇಘದ ತುಱುಗಲ್ ನೆಱೆ ಪಿಂಗಿ ಪೋಗೆ ತೆಱಪಾದುದಱಿಂದೆಱಗಿದಳಿಪಟಲಿ ಪೋಗಲ್ ತೆಱಪಾದುತ್ಪಲವನಂಬೊಲಿರ್ದುದು ಗಗನಂ (ಜಗವಿ. ೪-೫೯). [ಸಂ. ಪಟಲೀ]

ಪಟಲಿಕೆ, ಪಟಳಿಕೆ(ನಾ). ೧. ಗುಂಪು; ಸಮೂಹ. ೨. ಬುಟ್ಟಿ; ಗೂಡೆ. ೩. ಕರಂಡಕ; ಸಂಪುಟ: ತದುತ್ಪಾಟಿತ ವಿನೀಳಕುಟಿಲಕುಂತಲಂಗಳನಮರತರುಕುಸುಮ ದಾಮೋದ್ದಾಮರಜೋರಂಜಿತಂಗಳನನರ್ಘ್ಯರತ್ನಮಯಪಟಲಿಕೆಯೊಳಾಂತು (ಅದಿಪು. ೯-೬೯ ಪ); ನವೀನಪ್ರಸೂನ ಮಧು ವಿಲೀನಮಧುಕರ ಪಟಲಕರ್ಬುರಿತ ರತ್ನಪಟಲಿಕೆಗಳಿಂ . . . ಮನಂಗೊಳಿಪ ದೇವಪೂಜಾಗೃಹಮಂ ಪೊಕ್ಕು (ಪಂರಾಮಾ. ೧೨-೨ ಪ); ನಳಿನಳಿಸುವ ಪೂವಿನ ಮೀಸಲುಕಂಪನಳಿಗಳೆಂಜಲಿಸುಗುಮೆಂದು ತಳೆದಳೊರ್ವಳು ಚಂಪಕಗಂಧಿ ಕುಸುಮಾಕಳಿತ ಪಟಲಿಕೆಯನೊಸೆದು (ಕುರಾಸಾಂ. ೭-೮೧). 'ಪಟಲಕ' ಪರಾ. **ಪಟಳಿಕೆ:** ೧. ವನದೊಳಗೆ ಪೊಕ್ಕನಧಿಪಂ ಘನಪಟಳಿಕೆಯೊಳಗೆ ಪುಗುವ ಚಂದ್ರನ ತೆಱದಿಂ (ಬಾಧಪು. ೩-೩೮). ೨. ಆಕೆ ದೇವಕಿಯಾನಂದವಸನಂಗಳಂ ಪಟಳಿಕೆಯೊಳಿಕ್ಕಿ ತಂದಿತ್ತ ನೋಟ್ಪುದೆಂದು . . . ತೋಱೆ (ನೇಮಿಪು. ೬-೫ ಪ). [ಸಂ. ಪಟಲಿಕಾ]

ಪಟವಾಸ (ನಾ). ೧. ಸುಗಂಧದ ಹುಡಿ; ಬುಕ್ಕಿ ಹಿಟ್ಟು: "ಪಿಷ್ಟಾತಚೂರ್ಣಮದು ಪಟವಾಸು" (ವಸ್ತುಕೋ. ೭೭-೧೫); ವಿತತೋದ್ಯತ್ಪಟವಾಸವಾಸಿತದಿಶಾಕಾಂತಾಗಣಂ ನಿರ್ಭರೋತ್ಕಿತ ಪಿಷ್ಟಾತಕ

ಪಿಂಜರೀಕೃತ ವಿಯಚ್ಚಕ್ರಂ . . . ಜಗಕ್ಕತಿಚೋದ್ಯಾವಹಮಾಗೆ (ಅದಿಪು. ೭-೩೮); ಕೆದಱುವ ಪಿಷ್ಟಾತಕಚೂರ್ಣಮುಂ ಪಸರಿಸುವ ಪಟವಾಸ ಮುಮೆಸೆಯೆ (ಮಲ್ಲಿಪು. ೪-೧೧೮); ಎಡೆವಱಿಯದು . . . ಅಡಿಗಡಿ ಗುತ್ಸವದೆ ತಳಿವ ಪಟವಾಸಚಯಂ (ಪುಷ್ಪಪು. ೧೨-೧೮). ೨. = ಪಟಕುಟಿ. ೩. ಒಳವಸ್ತ್ರ; ಒಳಪಾವಡೆ. [ಸಂ.]

ಪಟವಾಸಕ (ನಾ). = ಪಟವಾಸ : ೧. "ಪಿಷ್ಟಾತಃ ಪಟವಾಸಕಃ-೨ ಬಟ್ಟೆಗಳಿಗೆ ಪರಿಮಳ ಕಟ್ಟುವ ಗಂಧದ್ರವ್ಯದ ಹೆಸರು" (ಸಿದ್ಧಾಂತಿ. ೨೧೧); ಮಱುದಿವಸವವಭೃತವ ನೆಱೆ ವಿಸ್ತರಿಸಿದರು ಪನ್ನೀರ ಹೊಂಗೊಪ್ಪರಿಗೆಗಳ ಕುಂಕುಮದ ಪ[ಪಾಠಾಂ. ಘ]ಟವಾಸಕದ ರಚನೆಯಲಿ (ಕುಮ್ಯಾವಿ. ೧೦-೮೧). [ಸಂ.]

ಪಟವಾಸಕ್ಷೋದ (ನಾ). = ಪಟವಾಸ ೧ : ಖರಾಂಶು ಪೂಱೆ ಪಟವಾಸಕ್ಷೋದದಿಂ ಕೇಕಿಸಂಕುಳಮಾಡಿತ್ತು ನಟೀಕದಂಬದೊಡವಂದ ಭ್ರಾಗಮಭ್ರಾಂತಿಯಿಂ (ಪುಷ್ಪಪು. ೪-೩೭). [ಪಟವಾಸ + ಕ್ಷೋದ]

ಪಟವಾಸಚೂರ್ಣ (ನಾ). = ಪಟವಾಸ ೧ : ದಿಶಾಯುವತಿಕೇಳಿ ಕೀರ್ಣಪಟವಾಸಚೂರ್ಣಂ . . . ಪೌರಾಂಗನಾವಶೀಕರಣಚೂರ್ಣ ಮಾದುದು ಬಳೌಘಧೂಳೀಚಯಂ (ಅದಿಪು. ೧೧-೧೫); ಪಸರಿಸಿ ಪಟವಾಸ ಚೂರ್ಣಮೆಸೆದುವು ದೆಸೆಯೊಳ್ (ಪುಷ್ಪಪು.೧೨-೧೭); ಪದೆದು ಚೆಲ್ಲುವ ಪಟವಾಸಚೂರ್ಣವು ನೃಪಸದನದೊಳೊಪ್ಪಿದವಾಗ(ಚಂಪ್ರಸಾಂ. ೨೪-೭೧).

[ಪಟವಾಸ + ಚೂರ್ಣ$_2$]

ಪಟವಿದ್ದೆ (ನಾ). ಚಿತ್ರಲೇಖನ ಸಾಮರ್ಥ್ಯ,—ಕೌಶಲ; ಚಿತ್ರ ಕಲೆಯ ಚಾತುರ್ಯ (?) : ಎತ್ತಿದ ತೋಳ ಮೊತ್ತಮೊದಲಂ ಗಜನಂ[ಪಾಠಾಂ.ಲಂ] ಪಟವಿದ್ದೆಗೆತ್ತಿದಂತೆತ್ತಮಪೂರ್ವಮಾಗೆ . . . ಚಲ್ಲ ವಾಡಿ ಪೂವೆತ್ತುವ ಮಾಲೆಗಾರ್ತಿಯರನಂದರಿಕೇಸರಿ ನಿಂದು ನೋಡಿದಂ (ಪಂಪಭಾ. ೪-೮೧). [ಪಟ + ವಿದ್ದೆ (< ಬಿಜ್ಜೆ$_2$)]

ಪಟವಿದ್ಯೆ (ನಾ). = ಪಟವಿದ್ದೆ : ಪಟಮಿದೆ ಸಾಲ್ಗುಮನ್ಯಭವವಲ್ಲ ಭನಂ ಪಟವಿದ್ಯೆಯೆತ್ತಲುಂ ಜಟಮಟಕರ್ಕಳಂ ತೊಡರೆ ಸುತ್ತಲುಮಪ್ಪು ದಱಿಂ ಸಮಸ್ತ ಭೂಪಟಲಮನಾಂ ತೊಟಲ್ದಱಿಸಿ ನಿನ್ನೊಡಗೂಡಿ ನಿಜೇಶನಂ ಯಶಃಪಟಹನಿನಾದಮಂ ಪರಪುವೆಂ ದೆಸೆಯಂತುವರಂ (ಅದಿಪು.೩-೪೫). [ಪಟ + ವಿದ್ಯೆ]

ಪಟವಿಳಿಸು (ಕ್ರಿ). ನೌಕೆಗೆ ಕಟ್ಟಿದ ಹಾಯಿಯನ್ನು ಬಿಚ್ಚು : ಕವಿಯ ಮನಸ್ಸು ಪಟವಿಳಿಸಿದ ಓಡಿನಂತೆ . . . ಇರುವಾಗ, ಅವರು ದೂರದಲ್ಲಿ ಒಂದು ಆಕೃತಿಯನ್ನು ಕಾಣುತ್ತಾರೆ (ಸೌಂದಸ. ೩೭).

[ಪಟ + ಇಳಿಸು$_2$ (< ಇಱಿಸು)]

ಪಟವೆ (ನಾ). ರೇಷ್ಮೆ ವಸ್ತ್ರ : 'ಪಟವೆಗಾರ' ಪರಾ.

[← ಹಿಂ. ಮರಾ. ಪಟವಾ]

ಪಟವೆಗಾರ (ನಾ). ರೇಷ್ಮೆ ವಸ್ತ್ರಗಳನ್ನು ನೇಯುವವನು ; ಪಟ ಕಾರ : ಪಟವೇಗಾರರು.—ಈ ಹೆಸರು ಪಟ್ಟೇಗಾರರು, ಅಂದರೆ ರೇಶಿಮೆ ಮಾಡುವವರು ಯೆಂಬುದರ ಅಪಭ್ರಂಶವಿರುತ್ತದೆಂದು ತೋರುತ್ತದೆ. ಪಟವೇಗಾರರು ತಾವು ಗುಜರಾಥದಿಂದ ಬಂದ ಕ್ಷತ್ರಿಯರೆಂದು ಹೇಳುತ್ತಾರೆ (ಕಭಾಗೆ. ೧೬೬). 'ಪಟ್ಟೆಗಾಱ' ಪರಾ.

[← ಮರಾ. ಪಟವೇಗಾರ್]

ಪಟವೇಂಟೆ (ನಾ). (ಬಟ್ಟೆಯನ್ನು ಬಳಸಿ ಮಾಡುವ) ಒಂದು ಬಗೆಯ ಬೇಟೆ : ಗೋರಿವೇಂಟೆ ಪಳಹರವೇಂಟೆ ಪಟವೇಂಟೆ . . . ಸೋಹುವೇಂಟೆಗಳೆನಿಪ್ಪ ಹೆಸರಂ ಹೊತ್ತು ಮೆಱೆವುತಿಪ್ಪೆಂಟುತೆಱದುಚಿತ ವೇಂಟೆಯನಾಡಿದಂ ಹರಿಶ್ಚಂದ್ರವಸುಧಾಧೀಶನು (ಹಚಿಕಾ. ೫-೪೯).

[ಪಟ + ಬೇಂಟೆ]

ಪಟವೈಶ್ಯಜ (ನಾ). ಬಟ್ಟೆಯ ವ್ಯಾಪಾರ ಮಾಡುವವರ ವಂಶದವನು ; ಜವಳಿ ವ್ಯಾಪಾರಿ : ಒಂದೆಡೆಯೊಳ್ ನವಚಾರುವಸ್ತ್ರಸಂಕುಳ ನಿಭೃತಂಗಳಾಗಿ ಪಟವೈಶ್ಯಜರಂಗಡಿಗಳ್ ನಿರಂತರಂ ತಳೆದವನೂನಸಂಪದಮನಿಂದ್ರನ ಭಾಂಡಗೃಹಂಗಳೆಂಬಿನಂ (ಬಾಧಪು. ೧-೧೨೬).

[ಪಟ + ವೈಶ್ಯಜ]

ಪಟಶಾಲೆ 'ಪಡಸಾಲೆ$_1$' ನೋ.

ಪಟಸಾಲೆ 'ಪಡಸಾಲೆ$_1$' ನೋ.

ಪಟಸ್ತಂಭ (ನಾ). ಹಡಗಿನಲ್ಲಿ ಹಾಯಿಪಟಗಳ ಆಶ್ರಯಕ್ಕಾಗಿ ಹಡಗಿನ ಅಡಿಗಟ್ಟಿನಿಂದ ಎತ್ತರವಾಗಿ ನಿಲ್ಲಿಸಿರುವ ಕಂಬ; ಕೂವೆಕಂಬ: ಬಹಳ ದೊಡ್ಡ ಹಡಗಿಗೆ ಮೂರು ಪಟಸ್ತಂಭಗಳಿರುತ್ತವೆ (ಮುಂಬಯಿ. ೩-೧೧೭); ಗಾಳಿಯ ವೇಗಕ್ಕೆ ನೌಕೆಯೊಳಗಿನ ಪಟಸ್ತಂಭ ಎದುರಿಗೆ ಬಾಗಿ ಮೈಮೇಲೆ ಬೀಳುವಂತಾಯಿತು (ಬಂಕಿಮ. ೧೦೦); ಒಂದು ತರಹ ಬಿದಿರು ಬೆಳೆಯುತ್ತದೆ. ಇದು . . . ಎತ್ತರದಲ್ಲಿ ದೊಡ್ಡ ಹಡಗಿನ ಪಟಸ್ತಂಭದಷ್ಟಿರುತ್ತದೆ (ಪ್ರವಾಇ. I, ೨೦). [ಪಟ + ಸ್ತಂಭ]

ಪಟಹ (ನಾ). ಒಂದು ಬಗೆಯ ಚರ್ಮವಾದ್ಯ : "ಆನಕಃ, ಪಟಹಃ, — ಈ ೨ ಪಡಡಕ್ಕೆ" (ಹಲಾಯು. ೧೭-೯೭); ನೆಗೞ್ದರೆ ಪುಣ್ಯಾಹಸ್ವರ ಮೊಗೆದಿರೆ ಪಟುಪಟಹಕಾಹಳಾರವಮಾಗಳ್ ಪುಗವೇೞ್ದಂ . . . ತನ್ನ ಚಟ್ಟರಂ ಕಳಶಭವಂ (ಪಂಪಭಾ. ೨-೬೯); ಭೇರೀ ಮೃದಂಗ ಮರ್ದಳ ಪಟಹಕಹಳಾಶಂಖರವಜನಿತರಭಸಮುಂ (ಕಾದಂಪೂ. ೪೨೮); ಆಗಿವ ಪಟಹಮೃದಂಗಕಹಳಾದಿಗಳ ಕಳಕಳ . . . ದಶದಿಕ್ಕುಗಳ ಮಾತಾಡಿಸೆ (ಕುಮ್ಯಾಭೀ. ೧-೪೬). [ಸಂ.]

ಪಟಹಡಕ್ಕೆ (ನಾ). ಒಂದು ಬಗೆಯ ವಾದ್ಯ : ಉಭಯಪಕ್ಷದೊಳ್ ಸೂಟ್ಯೆಸುವ ದುಂದುಭಿಗಳ್ ಪೊಡೆವ ಪಟಹಡಕ್ಕೆ [ಪಾಠಾಂ.ಪಡಹಢಕ್ಕೆ, ಪಡಢಕ್ಕೆ]ಗಳ ಬೊಬ್ಬಿಱುವ ಖೇಚರಿಯರ ತುಮುಳರವದೊಳ್ ತೊಡರ್ದು (ಅರ್ಧನೇ. ೩-೧೩ ವ). [ಪಟಹ + ಡಕ್ಕೆ]

ಪಟಹಾರಿ (ನಾ). ಬಟ್ಟೆಯನ್ನು ನಾಶಮಾಡುವಂಥದು ; ಜಿರಲೆ : "ಪಟ[ಪಾಠಾಂ. ಟಾ]ಹಾರಿ ಜಿಱಲೆಯಕ್ಕು" (ಮಂಗರಾ. ೪೯-೧೩).

[ಸಂ. ಪಟಹಾರಿನ್]

ಪಟಳ 'ಪಟಲ$_2$' ನೋ.

ಪಟಳಕ 'ಪಟಲಕ' ನೋ.

ಪಟಳಿಕೆ 'ಪಟಲಿಕೆ' ನೋ.

ಪಟಾಂಗಣ (ನಾ). ವಿಸ್ತಾರವಾದ ಬಯಲು,—ಮೈದಾನ; ಪ್ರಾಂಗಣ : ಗುಡಿಯ ಪಟಾಂಗಣದಲ್ಲಿ ಹಳ್ಳಿಯ ಯುವತಿಯರ ತಂಡವು ನೆರೆದು, ಹೆಜ್ಜೆಯ ಕುಣಿತವನ್ನು . . . ನೋಡುತ್ತಿತ್ತು (ಜೀವರಂ. ೨೨); ಪ್ರಾಥಮಿಕ ಶಾಲೆಯ ಮುಂದಿನ ಪಟಾಂಗಣದಲ್ಲಿ ದೊಡ್ಡದೊಂದು ಸಭೆ ಸೇರಿತು (ಪ್ರಬಂಧ. ೯೭). [← ಮರಾ. ಪಟಾಂಗಣ]

ಪಟಾಕಿ, ಪಟಾಕ್ಷಿ, ಪಠಾಕಿ, ಪಠಾಕ್ಷಿ, ಫಟಾಕ್ಷಿ (ನಾ). ಬೆಂಕಿ ಮುಟ್ಟಿಸಿದ ಕೂಡಲೆ ಹೊತ್ತಿಕೊಂಡು ಡಬ್ ಎಂದು ಸದ್ದು ಮಾಡಿ ಹಾರುವಂತೆ, ಸಿಡಿಮದ್ದು ತುಂಬಿ ತಯಾರಿಸಿದ ಕಾಗದದ ಕೊಳವೆ ; ಪಟಾಸು ; ಗರ್ನಾಲು : ನನಗೆ ಎಷ್ಟೊಂದು ಮತಾಪು, ಪಟಾಕಿ, ಅಪ್ಪ ಕೊಟ್ಟದ್ದಾನೆ (ಪಠಾಕ್ಷಿ. ೪); ಹುಡುಗರು ಈಗಲೇ ಪಟಾಕಿ ಪಟಾಸು ಸುರುಸುರುಬತ್ತಿಗಳನ್ನು ಹತ್ತಿಸುತ್ತಿದ್ದರು (ಹುಟ್ಟಿಹ. ೬೨). **ಪಟಾಕ್ಷಿ** : ಅಲಿಯ ಅಕ್ಷತೆ ಗಿರಿದರಿ ಗಾಯನ ಸಿಡಿಲ ಪಟಾಕ್ಷಿಯು ದಿಶೆಗಳ ನರ್ತನ (ಕರುಶ್ರಾ. ೯೩-೧೨); ಟಳಕರು . . . ಎಲ್ಲ ಪಟಾಕ್ಷಿಗಳನ್ನೂ ಬಾಲಮಿತ್ರರೊಂದಿಗೆ ಹಾರಿಸಿ ಮುಗಿಸಿದರು (ಸ್ಮೃತಿಚಿ. ೧೧೯). **ಪಠಾಕಿ** : "ಹೇಗೆ ಬೇರ್ಣ್ಣ ಪಟಾಯಿ ಪಠಾಕಿ ?" ಎಂದು ಗೋಪಾಲಯ್ಯ

ಕೇಳಿದರು (ಚಿಟ್ಟಜೀ. ೧೯೯). **ಪಠಾಕ್ಷಿ :** ಪಠಾಕ್ಷಿ ಹೊಟ್ಟೆಯೊಡೆದು, ಉರಿದು ಸೀದು ಹೋಯಿತು (ಪಠಾಕ್ಷಿ. ೨). **ಫಟಾಕ್ಷಿ :** ಬರಿ ಒಂದು ಫಟಾಕ್ಷಿಯನ್ನು ಹಾರಿಸಿದರೂ ಹಾರಿಹೋಗುವ ಹಕ್ಕಿಯಂತೆ ಹೃದಯ ಸಂಪನ್ನತೆಯಿದ್ದರೂ ವ್ಯಕ್ತಿಯು ಅಜ್ಞನಾಗುತ್ತಾನೆ (ನನ್ಯಕಾ. ೧೩).

[←ಹಿಂ. ಪಟಾಕಾ, ಪಟಾಖಾ, ಫಟಾಕಾ; ಮರಾ. ಫಟಾಕಾ, ಫಟಾಕೀ]

ಪಟಾಕ್ಷಿ 'ಪಟಾಕಿ' ನೋ.

ಪಟಾಟೋಪ, ಪಟಾಟೋಪು (ನಾ). ಆಡಂಬರ; ಸಡಗರ; ಸಂಭ್ರಮ : ಸೂಕ್ಷ್ಮಶರೀರದ ಫೋಟೋ ತೆಗೆಯುವ ಸಾಹಸವಂತರೂ ಹೊರಟಿದ್ದಾರೆ. ಅಮೆರಿಕ ಮುಂತಾದ ದೇಶಗಳಲ್ಲಿ ಈ ಬಗೆಯ ಪಟಾಟೋಪ ಬಹಳ (ಜೀವಾತ್ಮ. ೨೫೪); ಬಾದಶಹರು ದೇವರ ಸೇವಕರಂತೆ; ನಮಗೇಕೆ ಈ ಪಟಾಟೋಪ ಎನ್ನುತ್ತಾರೆ (ಶಿವಭ. ೪೩); ದಿಲ್ಲಿಯಿಂದ ಕವಿಗಳು ಬಂದು ಸೇರಿದೊಡನೆಯೇ ಕವಿತ್ವದ ಪಟಾಟೋಪವು ಹೆಚ್ಚಿತು (ಉರ್ದುಪಾ. ೧೮). **ಪಟಾಟೋಪು :** ಇವಗೆ ಪುರುಷತ್ವವಿಲ್ಲಾ. ಸುಮ್ಮನೆ ಪಟಾಟೋಪು ಮಾಡುತ್ತಾನೆಯೆಂದು ಉಪಹಾಸ್ಯ ಮಾಡಿ ನಕ್ಕನು (ಶಾತ್ಪನಿ. ೯೭-೧). 'ಅಟಾಟೋಪ' ಪರಾ.

[< ಸಂ. ಫಟಾಟೋಪ. / ತಮಿ. ತೆಲು. ಪಟಾಟೋಪ]

ಪಟಾಟೋಪು 'ಪಟಾಟೋಪ' ನೋ.

ಪಟಾಣಿ 'ಪಠಾಣ' ನೋ.

ಪಟಾಪಟಿ$_1$ 'ಪಟ್ಟಿ$_2$' ಪರಾ.

ಪಟಾಪಟಿ$_2$ (ನಾ). ಪಟಪಟ ಎಂದು ಮಾತನಾಡುವಿಕೆ : ಅವರ ಪಟಾಪಟಿಗೆ ಮರುಳಾಗಿ ನನ್ನ ತಂದೆ ಸಹ . . . ನನಗೆ ಕಾಗದ ಬರೆದೇ ಬಿಟ್ಟರು! (ಸ್ವಪ್ನಹೊ. ೧೭೨). [← ಹಿಂ. ಪಟಾಪಟ್]

ಪಟಾಯಿತ (ಗು). ೧. ನಿಪುಣನಾದ; ಚತುರನಾದ : ಆತನು ಇಂಥ ಪಟಾಯಿತ ಕಳ್ಳನೆಂಬುದು ಮೊದಲೇ ಗೊತ್ತಿದ್ದರೆ ನಾನು . . . ನಿಶ್ಚಿಂತೆಯಿಂದ ಮಲಗಿಕೊಳ್ಳುತ್ತಿರಲಿಲ್ಲ (ಗುಲಾಹೂ. ೮೩). (ನಾ). ೨. ಚತುರ; ನಿಷ್ಣಾತ; ನಿಪುಣ : ನಾನೇ ಅಲ್ಪಾವಧಿಯಲ್ಲಿಯೆ ಲಂಚ ಹೊಡೆಯುವುದರಲ್ಲಿ ಪಟಾಯಿತನಾಗಿ ಬಿಟ್ಟೆ (ನಾಪೋಲೀ. ೧೧೫); ಅಂತೂ ನೀವು ಪಟಾಯಿತರಪ್ಪ ಈ ವಿದ್ಯೆಯಲ್ಲಿ (ಜರತಾ. ೩೮); ಚಟುವಟಿಕೆಗಳಲ್ಲಿ ಪಟಾಯಿತ ಎಂಬ ಮಾತು ಅವರಿಗೆ ಅಪರಿಚಿತವೇನಲ್ಲ (ಗ್ರಾಮಾಯ. ೨೬೬). [←ಮರಾ. ಪಟಾಈತ್, ಪಟ್ಟಾಈತ್]

ಪಟಾಯಿಸು, ಪಟಾಸು$_1$(ಕ್ರಿ). ಮನಸ್ಸಿಗೆ ಬರು; ಒಪ್ಪಿಗೆಯಾಗು; ಮಾನ್ಯವಾಗು : ಅವ್ವನಿಗೂ ನನ್ನ ಮಾತು ಪಟಾಯಿಸಿತು (ವೈನಿ. ೩೦೨); ನಾ ನಿಮಗ ಒಂದು ಮಾತು ಹೇಳತೀನಿ. ಅದು ಪಟಾಯಿಸದಿದ್ದರೆ ನಾ ಜಾನಕೀಬಾಯಿ ಅಲ್ಲ! (ಸಮಜೀ. ೩೪೨). **ಪಟಾಸು**$_1$: ಎಲ್ಲಾ ಜನಕ್ಕ ಈ ವಿಚಾರ ಪಟಾಸೂದಿಲ್ಲ (ಅಪನಾ. ೨೦೧); ರಾವಜೀಕಾಕಾ ಅವರಿಗೆ ಗಿರಿಜಾನ ಸಲಹೆ ಪಟಾಸಿತು (ದೀಪಹ. II, ೪೬); ನಿಮಗ ಹ್ಯಾಂಗ ಅನಸತದ ಈ ಮಾತು? ಪಟಾಸಿದರ ಹೇಳ್ರಿ (ದೀಪನಿ. ೧೫೫).

[ಪಟ್ಯಾ$_0$ (ℙ ← ಮರಾ. ಪಟಣೇ = ಮಾನ್ಯವಾಗು) +- ಇಸು$_3$]

ಪಟಾರನೆ (ಅ). 'ಪಟಾರ್' ಎಂಬ ಶಬ್ದದೊಡನೆ : ಅವನಿಗೆ ಪಟಾರನೆ ಏಟು ಬಿತ್ತು (ರೂಢಿ). [ಪಟಾರ್$_0$+-ಅನೆ$_1$]

ಪಟಾರು (ನಾ). ರೇಷ್ಮೆ ವಸ್ತ್ರ : ಮಳೆಗಾಲದಲ್ಲಿ ಜನರು ಪಟಾರನ್ನು ಮೈಕೈಗೆಲ್ಲಾ ಹೊದೆದುಕೊಳ್ಳುತ್ತಾರೆ (ಪ್ರವಾಇ. II, ೧೭೫).

[←ಹಿಂ. ಪಟೋರ್]

ಪಟಾಲಂ, ಪಟಲಾಂ, ಪಟಾಲಮು, ಪಟಾಲಮ್ಮು (ನಾ). ೧. ಕಾಲ್ದಳದ ಒಂದು ದೊಡ್ಡ ಭಾಗ; (ಸೈನ್ಯದ)ದಳ; ತುಕಡಿ: ಎರಡು ಪಟಾಲಂ ಪೆರಿಯಾಪಟ್ಟಣದ ಕೋಟೆ ಒಳಗೆ ಇಟ್ಟು ಉಳಿಕೆ ಫೌಜು ಸಮೇತ ಪೆರಿಯಾಪಟ್ಟಣದ ಹಳೇಕೋಟೆ ಸಮೀಪದಲ್ಲು ಇಳುಕೊಂಡರು (ರಾಜೇಂದ್ರ. ೬೨); ಪ್ರತಿ ಪಟಾಲಂನಲ್ಲಿಯೂ ೫೦೦ ಮಂದಿಯಂತೆ ಒಟ್ಟು ೪೦೦೦ ಬಾರ್ ಶಿಪಾಯಿಗಳಿದ್ದರು (ಮಹಾವಂ. II, ೫೧). ೨. (ಹಿಂಸೆ ಮಾಡುವ) ಗುಂಪು; (ತುಂಟ ಸ್ವಭಾವದ) ತಂಡ : ಹುಡುಗರು ಇನ್ನೂ ಸ್ಕೂಲು ಬಿಡುವುದಕ್ಕಿಲ್ಲ, ಆಗಲೇ ಅವರು ಒಂದು ಸಣ್ಣ ಪಟಾಲಂನ ತಂದೆಗಳಾಗಿರುತ್ತಾರೆ (ಬಂಕಿಮ. ೪೭೯); ಅವತ್ತು ರೌಡಿಗಳ ಪಟಾಲಂ ಬಂದು ಕಿಟಕಿಯೆಲ್ಲ ಮುರಿದು ಹಾಕಿದರಲ್ಲ (ಸ್ವಾಮಿಸ್ನೇ. ೧೬೪). **ಪಟಲಾಂ :** ೨. ನಿನ್ನನ್ನು . . . ಸಾಬೀತಿನಲ್ಲಿಟ್ಟುಕೊಳ್ಳುವುದು ತೋಮನಿಗೆ ತುಂಬ ಸುಲಭವಲ್ಲ ಈ ಪೋಕ್ರಿಗಳ ಪಟಲಾಂನಲ್ಲಿ (ಹೊಸಕ್ಷಿ. ೫೧). **ಪಟಾಲಮು :** ೧. ಫೌಜುಗಳಿಗೆ ಸೇರಿದ ಜನಗಳ ಆಯುಧಗಳು . . . ಪಟಾಲಮಿನ ಸಂಬಂಧವಾದ ಶಸ್ತ್ರಾಸ್ತ್ರಗಳು (ಗ್ರಾಮಾಕ. ೩೬). ೨. ಆ ಸಾಹೇಬರ ಜೊತೆಗೆ ಪಾಟೀಲ, ಕುಲಕರ್ಣಿ, ನಾಯಕ ಇವರೂ ಮತ್ತೆ ಅವರ ಕೆಲವು ಮಂದಿಯೂ ಸೇರಿ ಒಂದು ಪಟಾಲಮೇ ಬಂದಿತ್ತು (ಸ್ಮೃತಿಚಿ. ೨೩೫). **ಪಟಾಲಮ್ಮು :** ೨. ಕಾಲೇಜಿನಲ್ಲಿ ಆ ಯುವಕ ಪಟಾಲಮ್ಮು . . . Parade ಮಾಡೋವಾಗ (ಕಂಕಕೂ. ೧೮); ಒಂದು ದಿನ ಇದ್ದಕ್ಕಿದ್ದಂತೆ ನನ್ನೂರಿಗೆ ಅವರ ಪಟಾಲಮ್ಮೇ ಬಂದಿಳಿಯಿತು (ನನ್ನೂರು. ೨೦೭).

[←ಇಂ. Battalion./ತಮಿ. ಪಟ್ಟಾಳಮ್; ಮಲ. ಪಟಾಲನ್; ತುಳು. ಪಟಾಲಂ, ಪಟಲಾಂ; ತೆಲು. ಪಟಾಲಮು, ಪಟಾಳಮು]

ಪಟಾಲಮು 'ಪಟಾಲಂ' ನೋ.

ಪಟಾಲಮ್ಮ (ನಾ). ಒಂದು ಕ್ಷುದ್ರ ದೇವತೆಯ ಹೆಸರು : ಪಟಾಲಮ್ಮನ ಗುಡಿಯ ಹತ್ತಿರವೇ ಅವರ ಮನೆ ಇದೆ (ರೂಢಿ). 'ಪಟ್ಲಾಯಿ' ಪರಾ. [? + ಅಮ್ಮ$_2$]

ಪಟಾಲಮ್ಮು 'ಪಟಾಲಂ' ನೋ.

//**ಪಟಾವಳಿ** 'ಪಟ್ಟವಳಿ' ನೋ.//

ಪಟಾವುಜ, ಪಟ್ಟಾವುಜ (ನಾ). ಒಂದು ಬಗೆಯ ಚರ್ಮವಾದ್ಯ : ಡಿಂಡಿಮ ಅವುಜ ಪಟಾವುಜ ಮೃದಂಗ ಮರುಜ ಭೇರಿ ಮೊದಲಾದ ವಾದ್ಯವನಱುವುದು ಪ್ರಸಾದಲಿಂಗದಲ್ಲಿ ಶಿವಲಿಂಗ (ಅದವ. ೬ ೧೨); ಕಂದಾವುಜ ಪಟಾವುಜ ನಿಬದ್ಧಿವಿಡಿದಿರ್ದ ಕುಡುಪಾವುಜವಡಾವುಜಂಗಳು ಶಬ್ದದುಗ್ಪಡಣೆಯ ವೃದ್ಧಿವಡಿಯಿಸೆ (ಸೌಂದಪು. ೮-೬). **ಪಟ್ಟಾವುಜ :** ಕಂದಾವುಜ ಪಟ್ಟಾ[ಪಾಠಾಂ. ಟಾ]ವುಜ ಕುಡುವಾವುಜ ಅಡಾವುಜಮೆಂಬ ನಾಲ್ಕುತೆಱದ ಅವುಜಮನೋಜೆಯಿಂ ಬಾಜಿಸುವಾವುಜಕಾಱರಿಂ (ವಿವೇಕ. ೧೯೧). [<ಪಟಹ + ಅವುಜ]

ಪಟಾಸು$_1$ 'ಪಟಾಯಿಸು' ನೋ.

ಪಟಾಸು$_2$ (ನಾ). 'ಢಂ' ಎಂದು ಶಬ್ದವನ್ನುಂಟುಮಾಡುವ ಪುಡಿಯನ್ನು ಬಟ್ಟೆಯಲ್ಲಿ ಸುತ್ತಿ ಮಾಡಿದ, ಮದ್ದಿನ ಒಂದು ಬಗೆಯ ಸಾಧನ : ಹೊರಗಡೆ ಹುಡುಗರು ಪಟಾಸನ್ನು ಪ್ರಳಯಕಾಲದ ಸಿಡಿಲಿನಂತೆ ಶಬ್ದ ಮಾಡುತ್ತಾರೆ (ಗರುದಾ. ೬೦); ತೌಳದ ಎಲೆಗಳು ಗುಡಿಸಿಲಿನ ಭಾವಣೆ . . . ಒಣಗಿದ ಗಂಡು ಹೂಗುತ್ತಿಗಳು ದೀಪಾವಳಿಯಲ್ಲಿ ಪಟಾಸು (ಹಸುಹೊ. ೩೩೮).

[ದೇ.॥ ತಮಿ. ಪಟಾಚು, ಪಟ್ಟಾಚು; ಮಲ. ಪಟ್ಟಾಸ್]

ಪಟಿ (ನಾ). ೧. ನಾಟಕರಂಗದ ತೆರೆ,—ಪರದೆ. ೨. ಚಿತ್ರ ಲೇಖನಕ್ಕೆ ಬಳಸುವ ಒರಟಾದ ಹಾಗೂ ದಪ್ಪವಾದ ಬಟ್ಟೆ. ೩. ಬಣ್ಣದ ಬಟ್ಟೆ. [ಸಂ.]

ಪಟಿಂಗ 'ಫಟಿಂಗ' ನೋ.

ಪಟಿಂಗತನ 'ಫಟಿಂಗತನ' ನೋ.

ಪಟಿಕ, ಪಟಿಕ$_1$, ಪಟಿಗ$_1$, ಪಟಿಕೆ$_1$, ಪಟುಕ$_1$, ಪಳಕು$_2$, ಪಳಿಕ, ಪಳಿಕು, ಪಳುಕ, ಪಳುಕು, ಪಳ್ಕು, ಫಟಿಕ, ಹಳಕು, ಹಳುಕು (ನಾ). ೧. ಸ್ವಚ್ಛ ಹಾಗೂ ಪಾರದರ್ಶಕವಾದ ನೀರ್ಗಲ್ಲಿನಂತಹ ಒಂದು ಬಗೆಯ ಖನಿಜಶಿಲೆ ; ಸ್ಫಟಿಕ : ಥಳಥಳಿಪ ಪಟಿಕದ[ಪಾತಾಂ. ಳುಕಿನ] ಶಿಲೆಯೊಳಿಹ ವಿಳಸಿತ ಪ್ರತಿಬಿಂಬದಂತೆ . . . . ಎಲ್ಲೆಡೆಯೊಳುಂ ತಾನಿಯನಾಗಿದ್ದ ಹನಲಾ ವಿಶ್ವನಲ್ಲಭಂ (ಬಸಪು.೫೧-೬೬) ; ಅಳಲೆಕಾಯಿ, ಶುಂಠಿ, ಸಕ್ಕರೆ, ಬಿಳಿಗಾರ, ಪಟಿಕ, ಪೆಟ್ಲುಪ್ಪು, ಜೇನುತುಪ್ಪ ಇವನ್ನು ನಿಂಬೆಹಣ್ಣಿನ ರಸದಲ್ಲಿ ಮೃದುವಾಗುವಂತೆ ಅರೆದು ಗಂಡೂಷ ಮಾಡಲು ಛರ್ದಿ ನಾಶವಾಗುವುದು (ಸಕವೈ.ಪರಿ.೪೬೧); ಅಗ್ನಿಪರ್ವತವು ಉಗುಳಿದ ಮಣ್ಣು ಕಲ್ಲು ಲಾವಾಪ್ರವಾಹಗಳಿಂದ ಪಟಿಕ, ಬಿಳಿಗಾರ, ಗಂಧಕ ಮೊದಲಾದ ಪದಾರ್ಥಗಳನ್ನು ತಯಾರಿಸುವರು(ಕಪಪು.೫-೧೪೫). ೨. ಒಂದು ಬಗೆಯ ಹೂವು; ಗೊರಟೆ ; ಸ್ಫಟಿಕ : ಕುರವಕ, ಪಟಿಕವ ಹೂ, ಸ್ಫಟಿಕದ ಹೂ (ಮೈದಿಗಿ. ೧೧-೧೯೫). **ಪಟಿಕ$_1$** : ೧. ಪೊಳಿವ ಪಟಿಕವ ಚರುಬೆ ಕಣ್ಗಳನುಳ್ಕಿಸೆ ಪಿಡಿದು ತಿರುಪುತಿರ್ಪ ಸರಲ್ ಮಾರ್ಪೊಳೆಯೆ ರವಿಕಿರಣ ದೊಳ್ ಕಂಡಳವಿಡಿದತ್ತಂಗಭೂಮಿಪತಿಚತುರಂಗಂ (ಮಹಾನೇ. ೧೩-೨೧೬); ಈ ತಡಸಲದ ಹತ್ತರ ಆಧ್ರಕವೂ ಪಟಿಕವೂ ಹೇರಳವಾಗಿ ಉಂಟು (ಮುಂಬಯಿ. ೫-೬೮) ; ಇದರ ಹೊರ್ತು ಪಟಿಕಾ, ಹೊಬ್ಬರಿ ಎಣ್ಣೆ ಮುಂತಾದವುಗಳ ಪೀಪಾಯಿಗಳು ಇರುತ್ತವೆ (ಮುಂಬವ್ಯಾ. ೨೫೮). **ಪಟಿಗ$_1$** : ೧. ಪಟಿಗ, ಕೆಂಪದು, ಅರಿಸಿದ್ದು (ಮುಂಬವ್ಯಾ. ೧೨೨). **ಪಟಿಕೆ$_1$** : (ಕ). **ಪಟುಕ$_1$** : ೧. ಪಟುಕದ ಫಟದಲ್ಲಿ ರಜನೀದ ತುಂಬೆ ಧವಲ ಪರಿಸೂತ್ರವುಂಟೆ (ಮಜೀಮಿಂ. ೪೭-೧೧). **ಪಳಕು$_2$** : ೧. ಎಳೆ ಮಿಂಚಿನಂದದ ಬೊಂಬೆಯೊ . . . ಪಳಕಿನ ಪುತ್ತಳಿಯೋಯೆನೆ ಕ್ರಮದಿಂದ ಹೊಳೆವುದೊಳಗೆ ತನ್ನ ರೂಪು (ಧರಚ. ೨-೭೭). **ಪಳಿಕ** : ೧. ಪಳಿಕಂ [ಪಾತಾಂ. ಕು], ಪೇಳಗೆ . . . ಪುಳಂ-ಇವು ಅಪಭ್ರಂಶದೊಳ್ ಟಕಾರಕ್ಕೆ ಪುಟ್ಸಯುಂ ಕುಳಂಗಳಾದುವು (ಶಮದ. ೨೨ ವೃತ್ತಿ). **ಪಳಿಕು** : ೧. "ಸ್ಫಟಿಕಕ್ಕೆ ಪಳಿಕಿನಕ್ಕುಂ" (ನಂಜೀವ. ೨೯) ; ತಳತಳಿಸಿ ತೊಳಗಿ ಬೆಳಗುವ ಪಳಿಕಿನ ಸಜ್ಜುಯೊಂದು ಮಜ್ಜೆಯೊಳಿರ್ದರಲೆ ಮಹೋಜ್ಜ್ವಳ ತುಹಿನಕಿರಣಮಂಡಲದೊಳಗಣ ಹರಿಣಂಬೊಲೊಪ್ಪಿ ತೋಜು ತ್ತಾಗಳ್ (ಕಾವ್ಯಸಾ.೧೦೫೦.ಕೂದ್ರಳ); ಜಿನಚಂದ್ರಕುಮಾರಂ ಕ್ಷೀರನೀರಪೂರ ಪ್ಲವಾಂತರಸ್ಥಂ ಪೋಲ್ತಂ ಕನಳರುಚಿಯಿಂದಮಾ ಪಳಿಕಿನ ಕೊಡನೊಳಗಿರ್ದ ನಂದದೀವಿಗೆಯಿರವಂ (ಶಾಂತಿಪು. ೧೦-೪೭) ; ಹರಿನೀಲದ ನೆಲೆಗಟ್ಟಿಬ್ಬ ರಾಗದಡಿಗಲ್ಲ ಕೆಸೆವ ಪಳಿಕಿನ ಕಂಭಂ (ಪಧಮಾ. ೧-೬೯). **ಪಳುಕ** : ೧. ಪಳುಕದಿಂ ಕೈಗೈದು ಮಿಜುಗುವ ಳಳಶದೊಳು ದೀವಿಗೆಯನಿಟ್ಟುಜ್ವಳಿಪ ಬೆಳಗುವಂದದಿ (ಶಂಕಥಾ. ೫-೫). **ಪಳುಕು** : ೧. ಪಳುಕಿನ ಪಾಪೆಯ ನದುರ್ದೀಂ ತೊಳೆದಂತೊರ್ಮೊದಿದ ದಿವ್ಯವಪು . . . ಏಂ ವಿಳಾಸಮಂ ತಾಳ್ದಿದುದೋ (ಅದಿಪು. ೬-೩೯) ; ಪಳುಕಿನ ಪುತ್ಥಳಿಕೆಯಂತೆ ಕರಮೆಸೆದಿರ್ದಳ್ (ಕಾದಂಪೂ. ೬೬೮) ; ಪಳುಕಿನ ಕೇರ್ಗಳ್ ಪವಳದೆಸೆವ ಕಂಬಂ ಳರ್ಕೀತನದ ತೊಲೆ (ಕಾವ್ಯಾವ. ೫೧೮) ; ಪಳು[ಪಾತಾಂ. ಳಿ]ಕಿನ ಪಾಂಗಿನಂತಿರೊಳಗುಂ ಪೊಜಗುಂ ವಿಗೆ ನಿರ್ಮಳತ್ವದಿಂ ತೊಳಗುಗುಂ (ವಿಷ್ಣುಪು. ೫-೨-೨೬). ೩. ಜೊರು; ತುಣುಕು; ಹರಳು: ಎಳವೆಜೆಯ ಮುಜುಗಳನೇಳಿಪ ಕಪ್ಪುರದ ಪಳುಕುಗಳುಮುಂ.' . . ಮುಲಯಜವಿಲೇಪನಮುಮನರಸಂಗೆ ತೋಜಿ (ಕಾದಂಬ.೧೭೮). 'ಕಪ್ಪುರವಳುಕು' ಪರಾ. **ಪಳ್ಕು** : ೩. 'ಕಪ್ಪುರವಳ್ಕು' ಪರಾ. **ಫಟಿಕ** : ೧. ರಾಡಿನೀರೊಳಗೆ ಪಟಿಕದ ಪುಡಿ ಬೆರ್ಲಿದರೆ ರಾಡಿಯು ತಳಕ್ಕೆ ಕೂಡ್ರುತ್ತದೆ ; ಆದರೆ ಫಟಿಕದಿಂದ ನೀರಿನ ರುಚಿ ಕೆಡುತ್ತದೆ (ಮುಂಬಯಿ. ೫-೧೬೦) ; ಫಟಿಕ, ಮುಂಶಿಯ ಮಣ್ಣು, ಕುಂಬಾರರ ಮಣ್ಣು, ಕಾವಿ, ಪೀವಡಿ ಮುಂತಾದ ಮೃತ್ತಿಕೆಗಳು ಈ ಧಾತುವಿನಿಂದ ಹುಟ್ಟುತ್ತವೆ (ಮುಂಬಯಿ. ೬-೧೭). **ಹಳಕು** : ೧. ನಾಲಗೆಯು ತುದಿಯೆ ನೆಲೆಯಾದ ಆಚ್ಚ ಬಿಳಿ ಹಳಕಿನಂಗದವಳ ಸರಸ್ವತಿಯ ಮೈ ಮೂರ್ತ ಮಾಣಿಕವು ಅಹುದು ಕೆಂಡ ಹವಳ ! (ಮುಕ್ತಕಂ. ೨೬-೧೧). ೩. ಲೋಕಸರದ ಹಳಕುಗಳಿಗೆ ಅಳಲೆಕಾಯಿ ಹೂಣ್ಣವನ್ನು ಹಾಕಿಟ್ಟರೆ ನೀರು ಬರುವುದು (ಸಕವೈ.ಪಂ. ೫೦೩); ಉಸಿರೆ ತೇವ ಕಲ್ಲಾಗಿ ಮೈಯ ಕೂದಲ ಮೇಲೆ, ದವಡೆ, ಮುಸುಡಿ, ಕಣ್ಣಿವೆಗಳ ಮೇಲೆ ಹಳಕು ಹಿಮವಾಗಿ ನೆಲೆಸಿತ್ತು (ವಿಜಯ.೯೦); ಕೊರಡು ಅಪ್ಪಳಿಸಿ, ಫಳಾರನೆ ಗಾಜುಗಳನ್ನು ಒಡೆಯಿತು. ಹಳಕುಗಳು ಪಳಪಳ ಉದುರಿದವು (ರಕ್ತಧ್ವ. ೩೬೧). **ಹೆಳುಕು** : ೧. ತರುಣಕುರಂಗದಿಲೋಚನೆಯೊರ್ವಳ್ ಹರಿನದಿ ಹೊಸ ಹಳುಕಿನ ಬಟ್ಟಲೊಳಿಟ್ಟಿರವಂತಿಯು ಪೂವಂ ತೆಗೆದುರು ವೇಣೀಮೂಲದೊಳಿಡಲು (ಜಯಕಾ. ೧೧-೧೬). ೩. ಪಚ್ಚಗರ್ಪೂರದ ಪರಿಮಳದ ಹಳುಕಂ ಬೆರಸಿ (ಆತ್ಮಪ್ರ. ಪೀ. ೪೪-೩) ; ಚಂದದೋಗರ ದೊಳಗೆ ಚಂದ್ರಿಕೆಯು ಹೊಸ ಹಳುಕಿನಂದದೆಮ್ಮೆಯು ಮೊಸರು (ಸಿದ್ಧರಾ. ೨-೩೩) ; ತೊಲಗಿ ನಿಂದರು ಕರ್ಪೂರದ ತನಿಹಳುಕನಣಲೊಳಗಡಸಿ ದಂಡೆಯ ಬಲಿದು ಬಜಸಿಡಿಲಜಳವೆನೆ ತಾಗಿದರು ತವಕದಲಿ (ಕುವ್ಯಾಸ. ೬೦೫. ೨-೧೧೩). ೪. ಬೆಳಕು; ಪ್ರಕಾಶ; ಕಾಂತಿ : "ಕರಂ ಹಳುಕು ಬೆಂಬೆಯೆನಲ್ಕದು ತಾಂ ಪ್ರಕಾಶದೊಳ್" (ಕರ್ನಾಕಿ. ೨೨).

ಪಳಿಕಿನ ಕಲ್ಲು = ಸ್ಫಟಿಕಶಿಲೆ : ರುಕ್ಮಿಣಿ ಸತ್ಯಭಾಮೆಯರುಗಳೋತು ಪಳಿಕಿನ ಕಲ್ಲ ತಣ್ಣೊಳದಿ . . . ತುಳುಕಿದರ್ ಗಂಧೋದಕವ (ಮೋಹತ. ೧೪-೫೦). [<ಸಂ. ಸ್ಫಟಿಕ]

ಪಟಿಕಾರ, ಪಟಿಕಾರ್, ಪಟಿಗಾರ (ನಾ). ಸ್ಫಟಿಕ ; ಪಟಿಕ : "ಶೀತ ಶಿವಂ — ಸೈಂಧವ, ಪಟಿ(ಕಾ)ಕಾರ" (ಓಷಧಿ. ೧೩೬) ; ಮೂಗಿಗೆ ಪಟಿಕಾರ ಮತ್ತು ಬಿಳಿಗಾರದ ನೀರನ್ನು ಹಾಕುವುದು (ಗ್ರಾಮಾಳ. ೧೪೧) ; ಒಂದು ಬಟ್ಟಲಿನಲ್ಲಿ ಒಂದಿಷ್ಟು ಪಟಿಕಾರವನ್ನು ತಂದು, ನೀರಿನಲ್ಲಿ ಹಿಡಿಯುವಷ್ಟನ್ನೆಲ್ಲ ಕರಗಿಸಿ . . . ಒಂದು ಕಡೆಯಲ್ಲಿರಿಸಿದರೆ, ನೀರು ಆರುತ್ತ ಬಂದಂತೆ, ಚಿಕ್ಕಪುಟ್ಟ ಹರಳುಗಳನ್ನು ಬುಡದಲ್ಲಿ ಕಾಣಬಹುದು(ಬಾಲಪ್ರ. I, ೧೦೫). **ಪಟಿಕಾರ$_2$** : (ಕ). **ಪಟಿಗಾರ** : (ಕ).

[<ಸಂ. ಸ್ಫಟಿಕಾರಿ./ಕಮಿ. ಪಟಿಕ್ಕಾರ ; ತುಳು. ತೆಲು. ಪಟಿಕಾರ]

ಪಟಿಕೆ$_1$ 'ಪಟಿಕ' ನೋ.

ಪಟಿಕೆ$_2$ (ನಾ). ೧. ನೆಯ್ದ ಬಟ್ಟೆ. ೨. ಬರೆಯುವುದಕ್ಕಾಗಿ ಲೇಪನ ಮಾಡಿ ಸಿದ್ಧಪಡಿಸಿದ, ಕಡಿತದಂತಹ ಬಟ್ಟೆ : "ಪಳಗೆ—ಪಟಿಕಾ—ವಸ್ತ್ರವಿಶೇಷ" (ತದ್ಭವಕೋ. ೨೫) ; ಹತ್ತಿಯ ಬಟ್ಟೆಗೆ . . . ಇದ್ದಲ ಪುಡಿಯನ್ನೋ ದೀಪದ ಕಾಡಿಗೆಯನ್ನೋ ಬಳಿದು ಕಡಿತಗಳನ್ನು ಸಿದ್ಧಪಡಿಸುತ್ತಿದ್ದರು . . . ಈ ಲೇಖ್ಯಮಸ್ತುವಿಗೆ ಪಟ, ಪಟಿಕಾ, ಕಾರ್ಪಾಸಿಕ ಪಟ ಎಂಬ ಹೆಸರುಗಳು ಸಂಸ್ಕೃತದಲ್ಲಿದ್ದುವಂತೆ (ಕನ್ನಸಂ.೪೦) ; ಇದನ್ನು ಪಟ, ಪಟಿಕಾ, ಕಾರ್ಪಾಸಿಕಪಟ ಎಂದು ಕರೆಯುತ್ತಿದ್ದರು (ಭಾರಪ.೧೩೩).

[ಸಂ. ಪಟಿಕಾ]

ಪಟಿಕೆ$_3$ 'ಪಟಿಕೆ' ನೋ.

ಪಟಿಗಾರ 'ಪಟಿಕಾರ' ನೋ.

ಪಟಿಮ (ನಾ). ೧. ಚಾತುರ್ಯ ; ಕೌಶಲ. ೨. ಚುರುಕುತನ.

[ಸಂ. ಪಟಿಮನ್]

ಪಟಿಲ್ (ನಾ). ಒಂದು ಅನುಕರಣ ಶಬ್ದ : ಪಟಿಲ್ಲನೊ ರಣರಕ್ಕಸಿಯರ ನಾಸಾಪುಟಗಳೊ ಪೊಗೆಯೊ ನಿಟ್ಟುಸಿರೊ ಪಟಲೆಂಬ ದನಿಯೋ ಸಿನರವನೋಯೆನೆ ಭಟರ್ಗಳ ಭಯಗೊಳಿಸಿತ್ತು (ಜಂಪ್ರಸಾಂ.೪-೪೮).

ಪಟಿಲು (ನಾ). ಪೊರೆ ; ಪಟಲ : ''ಪಟಿಲುಗಟ್ಟು'' ಪರಾ.

[<ಸಂ. ಪಟಲ]

ಪಟಲುಗಟ್ಟು (ಕ್ರಿ). ಕಣ್ಣಿಗೆ ಪೊರೆ ಬರು,—ಪೊರೆಗಟ್ಟು : ಪಿರಿದು ಕಂಪಿಸುವ ಪಲ್ ಪಟಲುಗಟ್ಟದ ದಿಟ್ಟ . . . ಮಿಸುಪ ವೃದ್ಧ ವನಚರಿಯೊರ್ವಳಾ ಪಣ್ಗಳಂ ಸವಿದು . . . ಏಱುಂಜವ್ವನಂಬಡೆದಳು (ಸಮ್ಯಕೌ. ೧೦-೪೩). [ಪಟಲು + ಕಟ್ಟು-1]

ಪಟಷ್ಠ (ಗು). ೧. ಬಹಳ ಹರಿತವಾದ; ಅತಿ ತೀಕ್ಷ್ಣವಾದ. ೨. ಅತ್ಯಂತ ಸಮರ್ಥವಾದ; ನಿಪುಣತೆಯುಳ್ಳ : ವನಕರಿಕುಂಭಪಾಟನ ಪಟಷ್ಠಕಠೋರನಖಪ್ರಹಾರಭೇದನಗಳಿತಾ[ಸ್ರ]ರಕ್ತನವಮೌಕ್ತಿಕ ಪಙ್ಕ್ತಿ ವಿಳಾಸಭಾಸುರಾನನಂ (ಪಂಪಭಾ. ೧೩-೫೧); ಅವನಿಗಧಿಪನಾದಂ ವಿದ್ವಿಷತ್ಕುಂಭಿಕುಂಭಪ್ರವಿದಳನಪಟಷ್ಠ ಶ್ರೇಷ್ಠ ವೃತ್ತಪ್ರಕೋಷ್ಠಂ (ವರ್ಧಮಾ. ೪-೯೯), ಆ ನಿಶಾಚರಾಧಿನಾಥಂ ಸ್ವಕೀಯಸಾಂಪರಾಯಕೇಳೀಪಟಷ್ಠ ನಿಷ್ಠುರ ಭುಜಾವಷ್ಟಂಭಸಂಭ್ರಮಸಂಹೃತಾಹಿತಸುಭಟಂ (ಜಗವಿ. ೧೧-೮೧ ವ). [ಸಂ.]

ಪಟೀರ್ (ನಾ). ಒಂದು ಅನುಕರಣ ಶಬ್ದ : ಭೀಮಲಿಂಗದ ಬಳಸಿರ್ದ ಕಟ್ಟು ಪಟೀರೆಂದು ವಡೆಯೆ ಕಟ್ಟಿದಿರೊಳು ಭೀಮಲಿಂಗ ಸೀಳಿತು (ಪೂಜ್ಯಚ. ೩-೧೬೩).

ಪಟೀರ (ನಾ). ೧. ಶ್ರೀಗಂಧ; ಚಂದನ : ಸಾರಗಾನದೊಳಿಂಪು ಜಾತಿ ಪಟೀರದೊಳು ತಂಪು ಶ್ರಿದಶಧರಣೀರುಹದೊಳೊಳುಗಂಪುಮಿರ್ಪವೊಲ್ (ಬಸಪು. ೧-೭); ಪಟೀರಮನಾಲೇಪಂಗೆಯ್ದು ಸ್ತಂಬೇರಮದಾಲಸ ಗಾಮಿನಿಯೊರ್ವಳ್ . . . ತಡಂಬಡೆದಳ್ ನೀಹಾರಮಹೀಧರಮಂ ಪರ್ವಿದ ಶೃಂಗಾರಮರುಲ್ಲತೆಗೆ (ಉದ್ಭದೇ. ೪-೪೪); ಹಾರಹೀರಪಟೀರಧವಳ ಶರೀರೆ . . . ಶಾರದೆ ಪಾಲಿಸು (ಉತ್ತರಾ. ೧-೪). ೨. ಮನ್ಮಥ; ಕಾಮ. ೩. ಹೊಟ್ಟೆ. ೪. ಜರಡಿ; ಒಂದರಿ. ೫. ಹೊಲ; ಕ್ಷೇತ್ರ. ೬. ಮೋಡ; ಮೇಘ : ಸರಸಮತಿಯಂ ಪಟೀರವಿಸರಸಮತನುಕಾಂತಿ ಕಾಂತೆಯಾಗೆಮಗನಿಶಂ (ವಿಷ್ಣುಪು. ೧-೧-೧೪). ೧,೬ : ವರುಣನ ಕುಂತದ . . . ಪಟೀರದೇಳ್ಗೆಯ ಕಪೋತದ ಬೊಟ್ಟನ ಕೆಂಡದ ಬ್ಜಿನೀವರನಭಿಧಾನಮಂ ತಳೆದ ಭೂರುಹಮೊಪ್ಪುಗುಮಾ ವನಾಂತದೊಳ್ (ರಾಜಶೇ. ೫-೫೭). ೭. ಆಟದ ಚೆಂಡು. ೮. ಸಂಧಿವಾತ; ವಾತರೋಗ. ೯. ಎತ್ತರ; ಔನ್ನತ್ಯ. ೧೦. ಕಾಚು. ೧೧. ಮೂಲಂಗಿ. ೧೨. ನೆಗಡಿ; ಶೀತಬಾಧೆ. [ಸಂ.]

ಪಟೀರದ್ರುಮ (ನಾ). ಗಂಧದ ಮರ; ಚಂದನವೃಕ್ಷ : ಇಲ್ಲಿಯೆಸೆವ ಧರಣೀರುಹಂಗಳ್ ನಾಡೆ ಮಂದಾರಮುಖ್ಯ ತರುನಿಕರಂಗಳು ನಿಸದಮಿಲ್ಲಿಯ ಕೊಱಡುಗಳ್ ಪಟೀರದ್ರುಮದ ವಿಸರಂಗಳ್ (ಆರಾಚ. ೫-೧-೨೬); ಪಟೀರದ್ರುಮಪ್ರಕರ . . . ನವಿಲಡಿ ಹೊನ್ನೆಯರುಟಾಳ (ರೇವಣ. ೪-೧೨). [ಪಟೀರ + ದ್ರುಮ]

ಪಟೀರವ (?) (ನಾ). (?) : ಆ ಪಟೀರವದ ಬೆಳಗಿಂದೆಸವ ಕೊತ್ತಳದಿ ರೂಪಿಸುವಪೂರ್ವ ನಗವೆನಲೊಪ್ಪುವಟ್ಟಳೆಯ ಗೋಪುರಾಕೃತಿಯ ಹೆಬ್ಬಾಗಿಲಿಂ ರಂಜಿಪುದುಮಾಪತಿ ಸುಖನಗರವು (ಲಿಂಗಪು. ೧೯-೨). [?]

ಪಟು (ಗು). ೧. ತೀಕ್ಷ್ಣವಾದ; ತೀವ್ರವಾದ; ಉಗ್ರವಾದ : ಪಟುಕೋಪಾಟೋಪ ಬದ್ಧಭ್ರುಕುಟಿ . . . ಪದ್ಮರಾಗಾರುಣವಿಕಟ ಕಟಾಕ್ಷಂ (ರಾಜಶೇ. ೬-೮೯); ಪಟುಗರಳಪಾವಕಪ್ರಸ್ಫುಟಚಲರಸನಾಗ್ರ ಪಾಟಲಸ್ಫಟಚಟುಲೋತ್ಕಟಭೀಕರಮುಖಫಣಿಯಂ ಕುಟಿಲಾತ್ಮರ್ ಘಟದೊಳಿಟ್ಟು ಮುಂದಿಳುಪುತ್ತುಂ (ವೃಷವಿ. ೩೫-೫೭). ೨. ಉಷ್ಣವಾದ; ತಪ್ತವಾದ. ೩. ಪ್ರಚಂಡವಾದ; ಶಕ್ತಿಶಾಲಿಯಾದ: 'ಪಟುಭಟ' ಪರಾ. ೪. ಚಟುವಟಕೆಯುಳ್ಳ; ಚುರುಕುತನವುಳ್ಳ : ಅಸುರಾರಿ ನಲವಿನಲಿ ಪಟುಗತಿಯ ಗಱುವಾಯಿಯಲಿ ಸಂಘಟಿಸಿ ಹಯವನು ಸುಳಿಸಿದನು ಚೌಪಟದೊಳು (ಕುಮಾಭೀ. ೩-೩). ೫. ಅತಿಶಯವಾದ; ಅಧಿಕವಾದ; ಮಹತ್ತಾದ: ಪಟುತರಜ್ವರರೂಪದಿಂದುತ್ಕಟಿಸಿ ಸುಡಲು (ಬಸಪು. ೫೦-೨೬). 'ಪಟುಪ್ರತಾಪ' ಪರಾ. ೬. ಕುಶಲತೆಯುಳ್ಳ; ನಿಪುಣತೆಯುಳ್ಳ; ಚತುರವಾದ : ಪಟುಪುಣ್ಯಪಾಠಕ ಸಮುಚ್ಚಾರ್ಯಮಾಣಮಂಗಳವಚನರಚನಾಸಮಕೃಷ್ಟಶ್ಲಥಬಾಹುನಿದ್ರಾಲಿಂಗನವಿಮುಖನಾಗಿ ಸೆಜ್ಜೆಯಿಂದೆಟ್ಟು (ಶಾಂತಿಪು. ೮-೧೧೪ ವ); ಪಟು + ಏಕವಾಕ್ಯಂ = ಪಟುವೇಕವಾಕ್ಯಂ (ಶಮದ. ೫೨ ಪ್ರಯೋ). ೭. ತೀವ್ರವಾದ ಧ್ವನಿಯುಳ್ಳ : ಗಜರ್ವ ಪಟುಕಹಳೆಯುಂ . . . ತಾಳಮದ್ದಳೆಗಳೆಂಬ ಬಹುವಾದ್ಯದುಬ್ಬಟೆಯುಖಿಳದೆ ಸೆಯೊಳಾವರಿಸಲು (ಚಬಪು. ೫-೬). ೮. ದೃಢವಾದ; ಬಲಿಷ್ಠವಾದ : ಪಟುತರ ಪ್ರಕೃತಿಯಲಿ ಶುದ್ಧಸ್ಫಟಿಕ ಸನ್ನಿಭರಾಗಿ ನಲಿವುತೆ . . . ಶಿವಪುರಿಗಡರ್ದು (ಕಾವೇಮ. ೭-೩೧). 'ಪಟುಭುಜ' ಪರಾ. ೯. ತಂತ್ರಗಾರನಾದ; ಮಾಯಾವಿಯಾದ; ಕಪಟೋಪಾಯಗಳನ್ನು ಬಲ್ಲ. ೧೦. ವಾಕ್ಚಾತುರ್ಯವುಳ್ಳ; ಮಾತುಗಾರಿಕೆಯಲ್ಲಿ ಬಲ್ಲಿದನಾದ. ೧೧. ಆರೋಗ್ಯವಂತವಾದ; ನಿರಾಮಯವಾದ. ೧೨. (ಚುಚ್ಚುಮಾತುಗಳಂತೆ) ವೇಧಕವಾದ; ಕ್ರೂರವಾದ. ೧೩. ಅರಳಿದ; ವಿಸ್ತರಿಸಿದ; ಅಗಲವಾದ. (ನಾ). ೧೪. ಸಮರ್ಥನಾದವನು : "ಪ್ರತಿಭಾನ್ವೀತಂ ಪ್ರಗಲ್ಭಂ ಪಟು" (ವಸ್ತುಕೋ. ೯೯-೬); ಪ್ರತಿಮನುಂ ಪ್ರತಾಪಪ್ರಸರ ಪ್ರಕಟಪಟುವಾಗಿ ಪಲವು ಕಾಲಮರಸುಗೆಯ್ದು (ಪಂಪಭಾ. ೧-೬೫ ವ); ಮದವದ್ವೈರಿನರೇಂದ್ರಸೈನ್ಯವಿಧ್ವಂಸನಪಟುಗಳು ನಾಗವರ್ಮನುಂ ಮಾಧವನುಂ (ನಾಂದೇಡ್. ೩-೬; 1047); ದಿವಿಜವಧಪಟುಗೆ ನಿನಗಭಿಭವಮಿಶಿಶುವಧಂ (ಜಗವಿ. ೨-೫೪). ೧೫. ಕುಶಲನಾದವನು; ಜಾಣ : ಪಟುವೀತಂ, ಗಾಳುವಿವಳ್ (ಭಾಷಾಭೂ. ೨೧ ಉದಾ). ೧೬. ಚಟುವಟಕೆಯುಳ್ಳವನು : "ಪಟುಃ—ಜಡನಲ್ಲದಾತಂ" (ಪ್ರತಿಷ್ಠಾ. ೧-೨೪); "ದಕ್ಷಃ, ಚತುರಃ, ಪೇಶಲಃ, ಪಟುಃ . . . ಆಲಸ್ಯವಿಲ್ಲದವನ ಪೆಸರುಗಳು" (ಸಿದ್ಧಾಂತಿ. ೩೧೨). ೧೭. ನಿರೋಗಿಯಾದವನು; ಆರೋಗ್ಯವಂತ: "ಅರುಜಂ ವಾರ್ತಂ ಕಲ್ಯಂ ನಿರಾಮಯಂ ಪಟುವೆನಿಪ್ಪ ನಾರೋಗ್ಯಮಯಂ" (ವಸ್ತುಕೋ. ೭೨-೩೩). ೧೮. ಸಮರ್ಥವಾದುದು : ಅಜ್ಞಾನಘಟತತಮಃಪಟಲವಿಘಟನಪಟುವುಂ . . . ಕೇವಲಜ್ಞಾನಮುಮೆಂದೀ ಸಂಜ್ಞಾನಪಂಚಕಮುಂ (ಸುಕುಮಾ. ೮-೪ ವ). ೧೯. ಉದ್ದೀಪನ; ಪ್ರಜ್ವಲಿಸುವಿಕೆ : ಪೊಸ ಸುಂಟಿಗೆಗೋಲನೊಂದು ಕೀಸಿ ಪೊಸ ಕಿಚ್ಚಂ ಪೊಸೆದು ಪಟುವಂ ಮಾಡಿ (ತ್ರಿಪುವಿ. ೨೭-೧೨೨ ವ). 'ಪಟುಗೆಯ್' ಪರಾ. ೨೦. ಅಧಿಕವಾದುದು; ಅತಿಶಯವಾದುದು : ಸವೆಯ ದಿಬ್ಬರಿಗಧಟು ಪಟುತರವಾಯ್ತು ಕೋಪಾಗ್ನಿ (ಕೌತಿರಾ. ೩೬-೫೬); ಪಟುತರದ ಭಯದಿಂದ ಕೈಗಳ ನೆಟಗೆಯನು ಮುರಿಮುರಿವ ಕಾರಣ ಕಟಕಿಯೆನ್ನೊಳು ಸಟೆಯನಾಡದೆ ದಿಟವನುಸುರೆ (ಕರಿಕ. ೪೮-೫). ೨೧. ಬಲ; ಸಾಮರ್ಥ್ಯ; ಶಕ್ತಿ : ಶೌರ್ಯದಲ್ಲಿ . . . ಪಾಂಡಿತ್ಯದಲ್ಲಿ ಪಟುತರದಲ್ಲಿ ಪರಾಕ್ರಮದಲ್ಲಿ ಭೀಮನ ಸರಿ ದಾರು ಇಲ್ಲ (ತಾತ್ಪನಿ. ೧೩-೩). ೨೨. ಪ್ರಖರವಾದ ಕಿರಣ : "ತೀವ್ರಂ, ತಿಗ್ಮಂ . . . ಉಷ್ಣಂ, ಪಟು—ಈ ೭ ಉಷ್ಣರಶ್ಮಿ" (ಹಲಾಯು. ೮-೪೦). ೨೩. ಪಡವಲಕಾಯಿ; ಪಟೋಲ : "ಕುಲಕಂ, ಪಟೋಲಃ, ತಿಕ್ತಕಃ, ಪಟುಃ—೪ ಖೈಪಡವಲಗಿಡ. ಹುಚ್ಚುಪಡವಲಗಿಡ" (ಸಿದ್ಧಾಂತಿ. ೧೪೭).

ಪಟು ಮಾಡು = (ಬೆಂಕಿಯನ್ನು) ಉರಿಸು,—ಪ್ರಜ್ವಲಿಸುವಂತೆ ಮಾಡು : ಮನಪವನನಡುಗಬ್ಬನಿಕ್ಕಿ ಅಗ್ನಿಯ ಪಟು ಮಾಡಬಲ್ಲವರನೊಬ್ಬರನೂ ಕಾಣೆ (ಅವಚಂ. ೨೫೯-೧೧೭೫); ಸದೆಬಡಿದು ಮಾಯೆಯನು ಹೃದಯರಸದೊಳಡಗಿದನಲನಂ ಪಟು ಮಾಡಿ ಪದ ನಾಲ್ಕ ನೋಡಿ ನಗುವರು (ಗುರುಬೋ. ೧-೫೮); ಶರ್ವನನರ್ಚಿಸಿ ಧೂಪದ. ಪಾತ್ರದೊಳುರ್ವಿಂ

ಸೆಕ್ಕೆಯ ತೆಕ್ಕೆಯನಿಕ್ಕೆಯಗುರ್ವಿಸುವನಲನ ಪಟುಮಾಡುತೆ (ಉದ್ಭವ. ೩-೫೬). ಪಟುವಾಗು = ೧. ಕುಶಲನಾಗು; ಚತುರನಾಗು: ಕವಿಗೆ ಪಟುವಾದ ನಟನೊಬ್ಬನು ದೊರಕಿ, ನಾಟಕ ಒಂದು ಫಟ್ಟಕ್ಕೆ ಮೊಟ್ಟದ ಹಾಗೆ (ವೀರಯೋ. vii, ಮುನ್ನುಡಿ). ೨. ಸಮರ್ಥವಾಗು: ಪಟುವಾಗಿ ಬಯಲು ತಾನಹ ಪರಿಯದಾವುದು (ಪ್ರಭುಲೀ. ೧೨-೧೫). ೩. ಅಧಿಕವಾಗು; ಅತಿಶಯವಾಗು: ಸುಟವೆತ್ತು ಮುಗಿಲಗಲದಿ ಪರಿವಾಕಾಶಪಟಿನಯ ಬುದ್ಬುದದಂತೆ ಪಟುವಾಗಿ ನಿಪಿಲ ನಕ್ಷತ್ರಸಂದೋಹ ಸಂಘಟಿಸಿತು (ಪೋಷತ. ೧೫-೫); ಪಟುವಾದ ರೂಪಿನಿಂದ . . . ಮೈಯ ಸೊಂಪಿನಿಂದ ಮೆಜ್ಜಿವ ಕುದುರೆ ವೈಶ್ಯಜಾತಿಯೆನಿಸಿಕೊಂಬುದು (ಅಶ್ವಪಟ. ೪೩-೧೦). ೪. ದೃಢವಾಗು; ಗಟ್ಟಿಯಾಗು: ವಜ್ರಮಯವಪ ಪಲ್ಲಕ್ಕಿ ಬಲ್‌ಪಟುವಾಗಿ ಹಲ್ಲಣಿಸಿದಶ್ವರಥ ಗಾದಿಗಳ್ (ಕೃಷ್ಣವಿ. ೨-೨೯); ಹಿಂಸೆ ಹೆಚ್ಚಿದಪ್ಪೂ ಮಹಮ್ಮದನ ಹೃದಯವು ಹುರಿಗೊಡಿ ಪಟುವಾಯಿತು (ಕೃಗಂಬ. ೨೩). [ಸಂ.]

ಪಟುಕ$_1$ 'ಪಟಕ' ನೋ.

ಪಟುಕ$_2$ (ನಾ). ಪಡವಲ; ಪಟೋಲ. [ಸಂ.]

ಪಟುಕರಣ (ನಾ). ಚುರುಕಾದ ಇಂದ್ರಿಯ: ಹಸಿದ ಪಟುಕರಣಗಳ ತಣಿಸಲ್ಕೆ ಬಾರ (ಅಹಲ್ಯೆ. ೭೩-೧೬). [ಪಟು + ಕರಣ]

ಪಟುಕರಣೆ (ನಾ). ಚುರುಕಾದ ಇಂದ್ರಿಯವುಳ್ಳವಳು: ಗರುವೆ ವಿಹಿತಗುಣಜ್ಞೆ ಸರಸೆ ಪಟುಕರಣೆ ಪಂಕರುಹಮುಖಿಯಂವಳಿ ಕನ್ನಡತಿ (ಜನಮ. ೬-೯). [ಪಟುಕರಣ + -ಎ$_2$]

ಪಟುಕೃಷ್ಣಸತ್ತಿ (ನಾ). ಒಬ್ಬಾತನ ಹೆಸರು: ಶ್ರೀ ಬಿಸೆಯಸತ್ತಿ ಕುಮಾರ ವಸುಂಧ್ರಪತಿತನಯ ಪಟುಕೃಷ್ಣಸತ್ತಿಯೂ ಪುತ್ರನತಿಪ್ರಸಿದ್ಧ ಘನ ನಿರ್ಮಲಮಾಗುತ (ಎಕ. XVI, ಪಾವುಗ. ೧೨-೧ ; 754).

[ಪಟುಕೃಷ್ಣ೦ + ಸತ್ತಿ$_2$]

ಪಟುಗೆಯ್, ಪಟುಗೈ (ಕ್ರಿ). ಪ್ರಜ್ವಲಿಸುವಂತೆ ಮಾಡು; ಉದ್ದೀಪನಗೊಳಿಸು: ಕಾಲಾರಿ . . . ಚಳಿಯಿಂದಂ ಕಂಟಿಸುತ್ತಾರ್ತಿವೆತ್ತಿರೆ ಕಿರ್ಚಂ ಪಟುಗೆಯ್ದು ತನ್ನ ಗುಡಿಲಂ ಕಿಲ್ಪಕ್ಕೆ ಪೊತ್ತಿಳ್ಕುತುಂ (ನೃಪವಿ. ೧೬-೬೧). **ಪಟುಗೈ**: ಆ ಸಖಿಯ ಮೂಲಾನಿಲನ ಕೂಡಿ ಪಟುಗೈದು ಭಾಸುರದ ನಾಭಿಕಂದದಲಧೋಮುಖದ ಕುಂಡಲಿಯನೂರ್ಧ್ವಕ್ಕೆ ನೆಗಹಿ (ನಪಮೋ. ೬-೨೬). [ಪಟು + ಕೆಯ್$_1$]

ಪಟುಗೈ 'ಪಟುಗೆಯ್' ನೋ.

ಪಟುಗೊಳಿಸು (ಕ್ರಿ). ೧. ಚುರುಕುಗೊಳಿಸು; ತ್ವರಿತಗೊಳಿಸು: ಮೆಯ್ಯೊಲೆಪುಗಳ ಸುಟಿಯೊಳಾವರ್ತ ತಿರುಪುಗೊಂಡು ನಾಟ್ಯವ ಪಟುಗೊಳಿಸಿದರೇವೆಲ್ಲೆ . (ಕಂಸವಿ. ೨೧-೧೧೪). ೨. ಪ್ರಜ್ವಲಗೊಳಿಸು; ಉದ್ದೀಪನಗೊಳಿಸು: ಭೂಸುರರ್ ಶ್ರುತಿಘೋಷದಿಂದೆ ಹುತಾಶನನ ಪಟುಗೊಳಿಸಿ ಸವಿಧಾಜ್ಞಾನ್ನಪೂರ್ವಕದೆ (ಕಾವೇಮ. ೫೫-೪೩).

[ಪಟು + ಕೊಳ್$_1$ + -ಇಸು$_3$]

ಪಟುತನ (ನಾ). ೧. ಉಗ್ರತೆ; ತೀಕ್ಷ್ಣತೆ: ಪರಶುರಾಮನ ಪಟುತನಕೆ ಮುದ್ದಾರೆದೆನೆಂದೀ ನಟಲನೇತ್ರನ ಭುಜಬಲಕೆ ಸಮಜೋಳಿ ಗಡ ನೀವು (ಕುವ್ಯಾಭೀ. ೯-೩೨); ನಟಲನಯನನ ನೊಸಲ ವಹ್ನಿಯ ಪಟುತನ [ಪಾತಾಂ. ರ]ವ ನಂದಿಸುವ . . . ಸಮರಜಯಸಂಘಟರನ್ಯೆದರ್ಬುದವ ನಗ್ನಿಕುಮಾರ ತೋಜಸಿದ (ತೂರರಾ. ೪-೭-೧೪). ೨. ಚುರುಕುತನ; ಲವಲವಿಕೆ: ಪಟುತನದಿ ಕರಸಿದನು ದಶಮುಖಚಟುವಟಿಕೆಯುಳ್ಳಧಿಕ ಡಾಕಲು ಗುಟಿಕರನು (ಉತ್ತಕ. ೧೨-೧೧). ೩. ಚಾತುರ್ಯ; ಕುಶಲತೆ: ಕಟ ಕಡ ಕುಜಗಳ ಭಾರವನ್ನು ಈಕೆ ಹೊತ್ತು ನೆಗೆದ ಈ ಪಟುತನ ತುಂಬಾ ಲೇಸು (ನೂಮಲ್ಲಿ. ೭೫). ೪. ಕಲಿತನ; ಪರಾಕ್ರಮ; ಸಾಮರ್ಥ್ಯ: ಪಟುತನವು ದೊರಕಿದರೆ ಶುಚಿತನ ಘಟಿಸಲರಿಯದು ಶುಚಿತನವು ಸಂಘಟಿಸಿದರೆ ಪಟುವಾಗದುಭಯಗುಣಂಗಳುಳ್ಳವಗೆ ಘಟಿಸದಧಿಕ ವಿವೇಕ (ತೊರರಾ. ೫-೯-೨೬); ಬಸೆ ನೆಣನನುಜುದಿ ಮೂದಲಿಸುವರ್ ನಿಲಿಸುವರ್ ಪಟುತನವನುಭಯಭಟರು (ಚಿಬಪು. ೩೮-೩೬).

[ಪಟು + -ತನ]

ಪಟುತಪ (ನಾ). ಉಗ್ರವಾದ ತಪಸ್ಸು; ತೀವ್ರವಾದ ತಪಸ್ಸು: ಪಟುತಪದೊಳ್ ತಗುಟ್ಟು ಕೃಪೆಯಿಂದಿಳೆಯಂ ಪಟುಗೆಯಂತೆ ಪನ್ನಗಸ್ಫಟೆ ವಳಿವಂದದಿಂದಿಬ್ಬಾಸನಾತ್ಮಸುತಾಯತ ಬಾಹುಪೀಠದೊಳ್ ಸ್ಫುಟಮೆನಲಿಟ್ಟು ಕಪ್ಪುಜನ ಕಾಕ್ಕೆಗೆ ತಾಂ ಕಡೆಯಾಣೆಯಾದನಂತುಟಿ ಪರಿಭಾವಿಸಲ್ ನಿಯಮದಿಂ ದಯೆಯಿಲ್ಲದ ಧರ್ಮಮೇವುದೋ (ಧರ್ಮನಾ. ೫-೧೨೮).

[ಪಟು + ತಪಸ್ಸು]

ಪಟುತೆ (ನಾ). ೧. ಚುರುಕುತನ; ಲವಲವಿಕೆ: ಫಣಿಯೊಂದು ಘೋರಫಣಾವದನಂ . . . ಪಟುತೆಯಿನಂದಣಿಯರಮಿಳತಂದುದು ಮೇಗಣ ಸಭಪಳಿವಿನಿದು (ನೃಹವಿ. ೩೧-೨೩). ೨. ಕುಶಲತೆ; ದಕ್ಷತೆ: ಪ್ರವಚನಪರಿಪಠನಕ್ಷಮತೆ ವಾಣಿಯಂ ತೀರ್ಥಯಾನದಕ್ಷತೆ ಪದಮಂ ಕವಿಯಂ ಜಿನನರಚರಿತಶ್ರವಣಪಟುತೆ ಸಿಂಗದನ್ನಮಾರ್ಜಿಪನಜನಂ (ಚಂದ್ರಪು. ೪-೧೭) ; ಗುರುಪದಮಂ ತೆಕ್ಕದೆ ದಿಕ್ಕದೆ ಗುಕ್ಕದೆ ತಕ್ಕಳಿಸದೆ ಪಠಿಪ ಪಟುತೆ ಘಟಿಯಿಸುಗೆನ್ನೊಳ್ (ಉಸಾಪ. ೩೦೪). [ಸಂ.ಪಟುತಾ]

ಪಟುತ್ವ (ನಾ). ೧. ಚಟುವಟಿಕೆ; ಲವಲವಿಕೆ: ಸತ್ತ್ವವು ಲಘು, ಪ್ರಕಾಶಕ. ವಸ್ತುಗಳಲ್ಲಿರುವ ಪಟುತ್ವಕ್ಕೆ ಅದೇ ಕಾರಣ(ತತ್ತ್ವಪ್ರಾ.೨೬೨); ಇಂದ್ರಿಯಗಳ ಪಟುತ್ವವನ್ನು ಬೆಳೆಸುವುದು . . . ಹಲವು ಹುಟ್ಟುಗುಣಗಳನ್ನೂ ಸಂವೇದನೆಗಳನ್ನೂ ಉಚಿತರೀತಿಯಲ್ಲಿ ತಿದ್ದುವುದು—ಇವೇ ಅಲ್ಲಿ ಸಾಧಿಸತಕ್ಕ ಮುಖ್ಯಅಂಶಗಳು (ತಿಕ್ಷದ. ೧೮೪). ೨. ನೈಪುಣ್ಯ; ಕೌಶಲ: ರಾಜಕಾರಣಪಟುತ್ವಕ್ಕೆ, ವ್ಯವಹಾರದಕ್ಷತೆಗೆ ಯಾವುದಕ್ಕೂ ಕೊರತೆಯಿಲ್ಲ (ವಿಜಾಪಾ. ೧೧). [ಸಂ.]

ಪಟುದೇಹ (ನಾ). ಚಟುವಟಿಕೆಯುಳ್ಳ ದೇಹ: ಪಟುದೇಹಕ್ಕಸು ವೆಂತುಟಂತುಟಿ ಕುಜಾನೀಕಕ್ಕೆ ಬೇರೆಂತುಟಂತುಟಿ . . . ದರ್ಶನಂ ಸಕಲ ಧರ್ಮಕ್ಕಂ (ಧರ್ಮಾಮೃ. ೧-೭೩). [ಪಟು + ದೇಹ]

ಪಟುಪಟಹ (ನಾ). ತೀಕ್ಷ್ಣವಾಗಿ ಧ್ವನಿಮಾಡುವ ಪಟಹ: ಪಟುಪಟಹತುಣವಭಂಭಾಮರ್ದಳೆ ಝಲ್ಲರಿ . . . ಪಂಚ ವೀಣಾ ಸ್ವರಂಗಳೆಸೆಯೆ (ವಡ್ಡಾರಾ. ೮೫-೨೪); ಪಟುಪಟಹಶಂಖರುತಿ ದಿಕ್ಕಟಮಂ ತಳ್ಪೊಯ್ಯೆ (ಪಂರಾಪು. ೫-೧೦); ಪಟುಪಟಹಂಗಳುಚ್ಚರವಂ . . . ನಿಮಂಜಗತಕುಂಜರವೈರಿಗೆ ಮಾಡೆ ಕೋಪದುತ್ಕಟತೆಯಂ (ಪರ್ಧಪು. ೩-೪೩) ; ಪಟುಪಟಹರವಮೆ ಧೂೀಪಟಮಂ ಮಾಡಿದುದು ರೂಢಿವೆತ್ತ ವನೀಭೃತಕಟಕಮುಮಂ ರಿಪುಭೃತ್ಕಟಕಮುಮುಂ ತನ್ನಿತಂಬಿನಿಕಟಕ ಮುಮುಂ (ಪಾರ್ಶ್ವಪು. ೮-೭೧). [ಪಟು + ಪಟಹ]

ಪಟುಪರ್ಣ (ನಾ). ಒಂದು ಬಗೆಯ ಸಸ್ಯ; ಫಿಂಟಾಮಣಿಸೊಪ್ಪು; ಕಂಕೋಷ್ಮ: "ಪಟುಪರ್ಣೀ, ಹೈಮವತೀ, ಸ್ವರ್ಣಕ್ಷೀರೀ, ಹಿಮಾವತೀ —೪ ಕಂಕೋಷ್ಮದ ಹೆಸರು" (ನಿಘಂ೦ಟು. ೧೪೪); "ಪಟುಪರ್ಣೀ-ಕಂಕುಷ್ಮ" (ಓಷಧಿ. ೯೨). [ಸಂ. ಪಟುಪರ್ಣೀ]

ಪಟುಪ್ರತಾಪ (ನಾ). ೧. ಅತ್ಯಂತ ಪರಾಕ್ರಮ. ೨. ಅತಿ ಪರಾಕ್ರಮವುಳ್ಳವನು: ಆ ನೃಪಂ . . . ಪಟುಪ್ರತಾಪನಾಗಿಯುಂ ಪಟುಪ್ರತಾಪಿಯಲ್ತು (ಪುಸ್ಪಪು. ೯-೩೯ ವ). [ಪಟು + ಪ್ರತಾಪ$_1$]

ಪಟುಪ್ರತಾಪಿ (ನಾ). ಅಧಿಕವಾದ ತಾಪವನ್ನುಂಟುಮಾಡುವವನು; ಅತಿಯಾಗಿ ಬಾಧಿಸುವವನು: ಆ ನೃಪಂ . . . ಪಟುಪ್ರತಾಪನಾಗಿಯುಂ ಪಟುಪ್ರತಾಪಿಯಲ್ತು (ಪುಸ್ಪಪು. ೯-೩೯ ವ).

[ಪಟು + ಪ್ರತಾಪಿ]

ಪಟುಪ್ರಧ್ವಾನ (ನಾ.) ತೀಕ್ಷ್ಣವಾದ ಧ್ವನಿ; ತೀವ್ರವಾದ ನಾದ : ಉರ್ವಿ ಪಟುಪ್ರಧ್ವಾನಮಂ ಬೀಱುದುವು ಕಹಳೆಗಳ್ (ರಾಜಶೇ. ೬-೧೭). [ಪಟು+ಪ್ರಧ್ವಾನ]

ಪಟುಭಕ್ತಿ (ನಾ). ಅಧಿಕವಾದ ಭಕ್ತಿ : ಪಟುಭಕ್ತಿಯಿಂದೆ ನೀಮುತ್ಕಟಮಾಗಿನ್ನಿಂದಿನಿಂದೆ ಲಿಂಗಾರ್ಚನೆಯಂ ಸ್ಫುಟಮಪ್ಪವೊಲೊಡರಿಸಿಂ (ದಿವ್ಯಚ. ೧೦-೫೪). [ಪಟು+ಭಕ್ತಿ]

ಪಟುಭಟ (ನಾ). ಪರಾಕ್ರಮಿಯಾದ ಯೋಧ; ವೀರಭಟ : ಎಷ್ಟು ಪಟುಭಟರಾದರೂ ಸ್ಫಟಿಕದ ಮಱೆಯಲ್ಲಿ ಅಡಗಬೇಕು (ಮೋಳಿಮಾ. ೨೧-೮೨); ಪಟುಭಟಪದೋತ್ಥಧೂಳೀಪಟಳಂ ಕವಿದಂಧಕಾರಮಂ ಪುಟ್ಟಿಸೆ (ದಶಕು. ೬-೧೦); ನಿನಗೀ ನೆರೆದ ಪಟುಭಟರಿದ್ದು ಕಾದುವ ಮನದ ಭರವಿದ್ದು ಹಿರಿದು ಚಿಂತಿಸಲೇಕೆ (ಕೌಶಿಂಾ. ೧೯-೪); ದಿಟಂ ಪಟುಭಟಂ; ನಮಗೆ ಮಲೆಯಲ್ ತಕ್ಕನೀತನದಟಂ (ಶ್ರೀರಾಮಾ. ೪೫೨-೩೨೦). [ಪಟು+ಭಟ$_2$]

ಪಟುಭಟತನ (ನಾ). ಬಹಳ ಪರಾಕ್ರಮ : ಹುತ್ತವನೇಱಿ ಹುಲ್ಲ ಕಚ್ಚಿದಲ್ಲಿ ಪಟುಭಟತನವನಱಸಲಿಲ್ಲ (ಸರ್ವವ. ೧೯೦-೮೯೦).

[ಪಟುಭಟ+-ತನ]

ಪಟುಭುಜ (ನಾ). ಬಲಿಷ್ಠವಾದ ತೋಳುಗಳುಳ್ಳವನು : ಪಟುಭುಜನೊತ್ತಿ ಜೇವೊಡೆದು ಸಿಂಜಿನಿಯಂ ಸೆಳೆದು . . . ಎಚ್ಚೊಡೆ (ರಾಜಶೇ. ೬-೮೭). [ಪಟು+ಭುಜ]

ಪಟುಮತಿ (ನಾ). ತೀಕ್ಷ್ಣವಾದ ಬುದ್ಧಿಯುಳ್ಳವನು; ಬುದ್ಧಿಶಾಲಿ : ವಟುವೇಷಧಾರಿಯಾ[ದಂ] ಪಟುಮತಿ . . . ಅರಮನೆಯ ಬಾಗಿಲೊಳ್ ಬಂದಿರ್ದಂ (ಶಾಂತಿಪು. ೮-೧೨೬); ಸಕಳಕಳಾಪ್ರವೀಣನಪ್ಪ ಪಟುಮತಿಗಮುನ್ಮಾರ್ಗಮನುಪಾದೇಯಮೆಂಬ ಸನ್ಮಾರ್ಗಮಂ . . . ತತ್ವವಿಚಾರದೊಳ್ ಪುಟ್ಟಿಸುವುದು (ಪಸಾರ. ೯೦೪-೧೩); ಘಟಿತಕರ್ಮವ ಸುಟ್ಟರೆಲ್ಲರು ಮುಕ್ತರು ಪಟುಮತಿಯಿಂತಿದ ನಂಬು (ಧರಚ. ೬೮-೨೬).

[ಪಟು+ಮತಿ]

ಪಟುರವ (ನಾ). ತೀವ್ರವಾದ ಧ್ವನಿ; ಗಟ್ಟಿಯಾದ ಧ್ವನಿ : ಆ ವನದ ಪುರದ ನಡುವೆ ಸುಖಾವಹಮತಿವಿಭ್ರಮಂ ವಿಶಾಲಂ ಸರ್ವೋರ್ವೀವರ ಶಸ್ತ್ರಾಭ್ಯಾಸನಿಜಾವಾಸಂ ಸುಭಟಪಟಲಪಟುರವ ಭರಿತಂ (ಗಿರಿಕ. ೨-೭೩); ಪಟುರವದಿಂದೆ ಬೊಬ್ಬೆಗುಡುತಬ್ಬರಿಸುತ್ತೆ . . . ಮಸ್ತಕಮನಾರ್ದನರಿದಾಕ್ಷಣಮಾ ಶಿರಂ ಪರಿಸ್ಫುಟರವದಿಂದೆ ಬೊಬ್ಬಿಱಿದು ಕೀರ್ತಿಸುತಿರ್ದುದು ವಾಮಹಸ್ತದೊಳ್ (ವೃಷವಿ. ೩೬-೬೩). [ಪಟು+ರವ]

ಪಟುವೆರು (ಕ್ರಿ). ಅಧಿಕವಾಗು; ಹೆಚ್ಚಾಗು : ವಟಫಲಾಧರೆಯರು . . . ಪಟುವೆತ್ತು ಕಾಯ್ದು ಘರ್ಮೋದಕವ ಭರ್ಮ್ಯತಂಬುಗೆಗಳಲಿ ಮೊಗೆದೆರೆವುತೆ ವಟಪುತ್ರಿಯಳನುಯೆಬ್ಬಿಸಿ ನಿಲ್ಲಿಸಲು (ನವಮೋ. ೧೩-೪೨).

[ಪಟು+ಪೆರು$_1$(<ಪೆಱು$_1$)]

ಪಟುಸಂರಂಭ (ನಾ). ಅಧಿಕವಾದ ಸಡಗರ,—ಸಂಭ್ರಮ : ಪಟುಸಂರಂಭದಿನಿಂತುತ್ಕಟರಮ್ಯತೆವೆತ್ತು ರಂಜಿಪಾ ಪುರದಾಣ್ಮಂ . . . ಉದ್ಭಟದೇವನೆನಿಪ್ಪ ಪೆಸರ ಧರಣೀನಾಥಂ (ಉದ್ಭಟ. ೧-೮೨).

[ಪಟು+ಸಂರಂಭ]

ಪಟೂಕ್ತಿ (ನಾ). ಚತುರೋಕ್ತಿ; ಜಾಣ್ಣುಡಿ : (ಕಿ).

[ಪಟು+ಉಕ್ತಿ]

ಪಟೆ$_1$ 'ಪಟ್ಟೆ$_2$' ನೋ.

ಪಟೆ$_2$ (ನಾ). ಒಂದು ಬಗೆಯ ಸಸ್ಯ : ಬಕುಳ, ಪಟೆ (ಮೈಟಿಗಿ. ೫೪-೧೦೮೨). [?]

ಪಟೆಯ 'ಪಟ್ಟೆಯ$_2$' ನೋ.

ಪಟೇಲ 'ಪಟ್ಟಾಯಿಲ' ನೋ.

ಪಟೇಲಿ (ನಾ). = ಪಟೇಲಿಕೆ : ಗೌಡರು ಜೋಗೀಪುರದ ಪಟೇಲರಾದರೂ ಆಗಲೇ ಹೇಳಿದಂತೆ ಒಂದು ದಿನವೂ ಪಟೇಲಿ ಮಾಡಲಿಲ್ಲ (ನನ್ನೂರು. ೧೫೩).

[ಪಟೇಲ (<ಪಟ್ಟಾಯಿಲ)+-ಇ$_3$]

ಪಟೇಲಿಕೆ (ನಾ). ಪಟೇಲನ ಹುದ್ದೆ, —ಪದವಿ; ಗೌಡಿಕೆ : ನಿನಗೇನು ಊರಲ್ಲಿ ಜಮೀನುದಾರಿಯೇ? ಪಟೇಲಿಕೆಯೇ? (ಮುಗಿಯು. ೨೧); ಗೌಡರ ಪಟೇಲಿಕೆಯ ಊರಾದ ಜೋಗೀಪುರಕ್ಕೆ ಬೇಡವಾದ್ದು ನನ್ನೂರಿಗೂ ಬೇಡ (ನನ್ನೂರು. ೧೫೩).

[<ಪಟೇಲ (ಪಟ್ಟಾಯಿಲ)+-ಇಕೆ]

ಪಟೇಲಿಕೆಲಸ (ನಾ). = ಪಟೇಲಿಕೆ : ಗೌಡರ ಪಟೇಲಿಕೆಲಸವನ್ನು ಶಾನುಭೋಗರೇ . . . ಮಾಡುತ್ತಿದ್ದರು (ನನ್ನೂರು. ೧೫೩).

[ಪಟೇಲಿ+ಕೆಲಸ]

ಪಟೋಡಿ 'ಪಟ್ಟಡಿ$_1$' ನೋ.

ಪಟೋಲ, ಪಟೋಳ (ನಾ). ಪಡವಲ ಬಳ್ಳಿ ಹಾಗೂ ಅದರ ಕಾಯಿ : "ಪಟೋಲಃ, ಪಟೋಲೀ-ಈ ಯೆರಡುಂ ಪಡಲ" (ಓಷಧಿ. ೯೧); ಇಂಗುಳಮಾಡಸೋಗೆ ಕಟುಕಂ . . . ಚಿತ್ರಕಂ ಪಟೋಲಂಗಳನೊಪ್ಪೆ ತಕ್ರ ಲವಣಂಗಳುಮಂ ತುಟಿದೊಂದುಮಾಡಿ ಸುಸ್ತಂಗಱದಿಕ್ಕೆ ಪೊರ್ದವುವಣಂ ರುಜೆಗಳ್ ಜಠರಾಗ್ನಿ ಪೆರ್ಚುಗುಂ (ಲೋಕೋಪ. ೯-೨೨೦). **ಪಟೋಳ** : "ಕೋಶಾತಕಾಖ್ಯಂ ಕುಲಕಂ ಪಟೋಳಂ" (ಪಸ್ತುಕೋ. ೩೯-೩೭); "ಪಡಳಂ ಪಟೋಳವದು" (ಮಂಗರಾ. ೪೪-೪೪). [ಸಂ.]

ಪಟೋಲಿ, ಪಟೋಳಿ (ನಾ). = ಪಟೋಲ: "ಪಟೋಲಃ, ಪಟೋಲೀ-ಈ ಯೆರಡುಂ ಪಡಲ" (ಓಷಧಿ. ೯೧). **ಪಟೋಳಿ** : "ಕೋಶಾತಕೀ, ಪಟೋಳೀ — ಈ ೨ ಹಡಲಂ" (ಹಲಾಯು. ೩೪-೪೯).

[ಸಂ. ಪಟೋಲೀ]

ಪಟೋಲಿಕೆ, ಪಟೋಳಿಕೆ (ನಾ). = ಪಟೋಲ : "ಜ್ಯೋತ್ಸ್ನೀ, ಪಟೋಲಿಕಾ, ಜಾಲೀ-೩ ಪಡವಲಗಿಡದ ಹೆಸರು" (ಸಿದ್ಧಾಂತಿ. ೧೩೯). **ಪಟೋಳಿಕೆ** : "ಪಟೋಳಿಕೆ = ಪಡವಲಕಾಯಿ" (ಗಂಗಾಮ. ೧೯೪).

[ಸಂ. ಪಟೋಲಿಕಾ]

ಪಟೋಳ 'ಪಟೋಲ' ನೋ.

ಪಟೋಳಿ 'ಪಟೋಲಿ' ನೋ.

ಪಟೋಳಿಕೆ 'ಪಟೋಲಿಕೆ' ನೋ.

ಪಟ್ಟ$_1$ 'ಪಡು$_1$' ಪರಾ.

ಪಟ್ಟ$_2$ 'ಪಟ್ಟೆಯ$_1$' ನೋ.

ಪಟ್ಟ$_3$ (ನಾ). ೧. ಬಟ್ಟೆ; ವಸ್ತ್ರ. ೨. ಉತ್ತಮವಾದ ಬಣ್ಣದ ಬಟ್ಟೆ. ೩. ರೇಷ್ಮೆ ವಸ್ತ್ರ; ರೇಷ್ಮೆ : 'ಪಟ್ಟಗುಚ್ಛ', 'ಪಟ್ಟಸಾಲಿಗ' ಪರಾ. ೪. ಮೇಲೆ ಧರಿಸುವ ವಸ್ತ್ರ; ಹೊರಪಾವುಡೆ. ೫. ಚಿತ್ರಲೇಖನಕ್ಕಾಗಿ ತಯಾರಿಸಿದ ವಸ್ತ್ರದ ಪಟ. ೬. ರಾಜಶಾಸನಗಳನ್ನು ಕಂಡರಿಸುವುದಕ್ಕಾಗಿ ತಯಾರಿಸಿದ ಲೋಹದ ಪಟ ಮತ್ತು ರಾಜಶಾಸನ. ೭. ಪಟ್ಟಾಭಿಷೇಕದ ಪ್ರಸಂಗದಲ್ಲಿ ಅರಸನಿಗೂ ಅರಸಿಗೂ ಕಟ್ಟುವ ಚಿನ್ನದ ಪಟ್ಟ; ಅಧಿಕಾರ ಸೂಚಕವಾದ ಹಣೆಗಟ್ಟು : ಕಟ್ಟಿದ ಪಟ್ಟಮೆ ಸರವಿಗೆ ನೆಟ್ಟನೆ ದೊರೆ (ಪಂಪಭಾ. ೧೦-೧೭); ಒಪ್ಪಿರಲ್ ಕಟ್ಟಿದ ಪಟ್ಟಂ ಬರ್ಪ ಮುಪ್ಪಂ ಮಱೆಯೆನಿಸಿತು (ಶಾದಂಪೂ. ೫೫೪); ತಳೆದಳ್ ಪಟ್ಟಮನೆಸೆದಿರೆ ಗಂಗನ ಪಟ್ಟಮಹಾದೇವಿಯನ್ತು ನೋನ್ತರುಮೊಳರೆ (ಎಕ. VII, ಶಿಪಮೊ. ೯೭-೧೨; 1118); ಪಿರಿಯಾತಂಗೆ ಪಟ್ಟಂ ಭೀಮಂಗೆ ಯುವರಾಜಪಟ್ಟಮರ್ಜುನಂಗೆ [ವೀರ]

ಪಟ್ಟವೆಂದು ಕಾಯ್ದು ಕರ್ವೊನ್ನ ಪಟ್ಟಂಗಳಂ ನೊಸಲೊಳ್ ಕಟ್ಟ (ಬಂಹರಿ. ೧೪-೫೫ ಪ); ಇವರೆಲ್ಲ ಹಗೆಯ ಮಾಡಿ ಮುರಾಂತಕನ ಕಾಳಗದೊಳೆಲ್ಲರನಿಕ್ಕಿ ಪಟ್ಟವ ಬಿಗಿಸಿಕೊಂಡವರಲ್ಲವೇ (ಕುಮಾ್ಯಸ. ೮-೪೯). ೮. (ಅಲಂಕಾರಯುಕ್ತವಾದ) ಹಣೆಗೆ ಕಟ್ಟುವ ಪಟ್ಟಕೆ : ಎನ್ನ ಗಂಡನಂ ಕಣ್ಗಾಣದಂತು ಮಾಡಿದೊಡೆ ನಿನಗೆ ನಾಂ ಪೊನ್ನ ಪಟ್ಟಮಂ ಬೊಟ್ಟುಮನೀವೆಂ (ಪಂಡತಂ. ೨೭೨-೨೩). ೯. ರೇಖೆ ; ಗೆರೆ : 'ವಿಭೂತಿಪಟ್ಟ' ಪರಾ. ೧೦. ತಲೆಗೆ ಸುತ್ತುವ ರೇಷ್ಮೆಯ ವಸ್ತ್ರ,—ಮುಂಡಾಸು. ೧೧. ಸಿಂಹಾಸನ ; ಗದ್ದುಗೆ : 'ಪಟ್ಟವೇಱು' ಪರಾ. ೧೨. ಕಿರೀಟ : ನೀನುಳ್ಳೊಡುಂಟು ರಾಜ್ಯಂ ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟ್ಟೆ (ಗದಾಯು. ೫-೨೦). ೧೩. ಅಧಿಕಾರ ; ಪದವಿ : ಪ್ರವರವಿಹಂಗಮಕುಲಚಕ್ರವರ್ತಿಪಟ್ಟಕ್ಕೆ ಯೋಗ್ಯನಂ ಮಾಡಿ ಮಹೋತ್ಸವದಿಂ ಮಾಡುವುದಭಿಷೇಕಂ (ಪಂಡತಂ. ೨೨೩-೬) ; ಈತನೆ ಯೌವರಾಜ್ಯಪದಪಟ್ಟದ ಪೆರ್ಮ್ಮೆಗೆ ನೋನ್ತಂ (ಎಇ. XXVIII, ೫-೧೮; ಸು.1082); ಅವನಿಯ ಪಟ್ಟ ಜ್ಯೇಷ್ಠರಿಗುರುವುದಲ್ಲದೆ ಬೇಱೆ ಸಲ್ಲದು ತತ್ಕನಿಷ್ಠರಿಗೆ(ತೊರರಾ.೨-೩-೪೩).೧೪. ಉತ್ತಮವಾದುದು ; ಶ್ರೇಷ್ಠವಾದುದು : ಪೀಯೂಷಪೂಷಮನ್ಯುಗ್ಯುಳೂಕ ಸಂಭವಂಗಳುಂ ದೇವಮುನಿಸತ್ವಂಗಳುಮಪ್ಪ ಪಟ್ಟತರದ ವಾರುವಂಗಳ . . . ಏಱ್ಱ ತೋಱ್ಱ (ಅನಂಪು. ೨-೩೦ ಪ). 'ಪಟ್ಟಕರು' ಪರಾ. ೧೫. ನಾಡು ; ಪ್ರಾಂತ ; ರಾಜ್ಯ : ಬಪ್ಪವ್ವಂ ಬನವಾಶಿ ಪನ್ನಿರ್ಪ್ಪತ್ತಿಸಿರದ ಪಟ್ಟಮನಾಳೆ (ಮೈಅರಿ. ೧೯೨೯, ೭೮-೫; 964). ೧೬. ಪಟ್ಟಾಭಿಷೇಕ: ಪಟ್ಟಕೆ ಭದ್ರಹಸ್ತಿಗಳ ಒಂದು ತರಿಸಿಯೆ ಭೂಸುರರ ಮತದಿಂದಲಾ ರಾಜ್ಯಾಭಿಷೇಕವನಂಧು ಮಾಡಿಸಿ ಸರ್ವರನು ಕಾಣಿಸದನೊಲವಿನಲಿ (ಜೀವಂಧ. ೧೮-೧೨) ; ಶತ್ರುಘ್ನನಿಲ್ಲರ್ದೊಡಾತನುಂ ಪಟ್ಟಕ್ಕೆ ವಿಘ್ನವೊಡ್ಡುವನೆಂದು ಭರತನೊಡವೆರಸಟ್ಟಿ ಕಳೆದರಮ್ಮಾ (ತ್ರಿರಾಮಾ. ೬೩-೨೫೫). ೧೭. ನಾಲ್ಕು ಮಾರ್ಗಗಳು ಕೂಡುವ ಸ್ಥಳ; ಚೌಕ; ಬೀದಿಕೂಟ. ೧೮. ಪಟ್ಟಣ ; ನಗರ. ೧೯. (ವೈದ್ಯಕೀಯ ಚಿಕಿತ್ಸೆಯಲ್ಲಿ ಕಟ್ಟುವ) ಪಟ್ಟ,—ಕಟ್ಟು : ನೊಸಲೊಳಿಕ್ಕುವ ಚಂದ್ರಕಾಂತದ ಪಟ್ಟಂಗಳೊಳಂ ಮುಯ್ಪಿನೊಳಮರ್ಚುವ ಮೃಣಾಳದ ತೋಳ್ವಲಯಂಗಳೊಳಂ . . . ಎಂತುಮಾ ಸಂತಾಪಮಂ ಸಂತಯಿಸಲಾಱದೆ (ಕಾದಂಬ. ೭೭೩). ೨೦. ತಾಮ್ರಪಟ ; ತಾಮ್ರಪತ್ರ : ಬೋಧಿಸವೆ ಪೆಱೆವು ಜಿನಗೃಹಕ್ಕಾಧಿಕ್ಯಮದಿಲ್ಲೆನಿಪ್ಪುದಂ ಸನ್ಯಸನಾರಾಧನೆಯ ಜವದಿ ಸನ್ಧ ನಿಶೀಧಿಗೆಯಡ್ಡಣಿಗೆ ತಳಿಗೆ ಪಟ್ಟಮಿವಿ[ನ]ತುಂ (ಸೌಇಇ. XI-1, ೫೨-೭೯ ; 1007). ೨೧. ಅಗಲ ಕಿರಿದಾಗಿ ಉದ್ದ ಹೆಚ್ಚಾಗಿರುವ ಕಾಗದ, ಬಟ್ಟೆ ಮುಂತಾದುವುಗಳ ತುಂಡು,—ಪಟ್ಟೆ. ೨೨. ತೆರೆ ; ಜವನಿಕೆ: (ಕ). ೨೩. ಪಗಡೆ ಮೊದಲಾದುವುಗಳ ಹಾಸು: (ಕ). ೨೪. ಆಳ್ವಿಕೆಯ ಅವಧಿ ; ರಾಜ್ಯಭಾರದ ಕಾಲ (?): ಹರಿಹರಗೆ ಪಟ್ಟವಂ ಕಟ್ಟಲವನಾಳುವಂ ಹದಿಮೂಱು ಪಟ್ಟ ಪರಿಯಂತರಂ ಪೇಳಲೇಂ ತನ್ನ ಸಂತತಿಗೂಡಿ ನೂಱ್ಮೈವತ್ತೈದು ಸಂವತ್ಸರವನು (ಚಿಬಪು. ೬೩-೨).

ಪಟ್ಟಕ್ಕೆ ಕುಳಿತುಕೊಳ್ಳು = ಗದ್ದುಗೆಯನ್ನೇರು ; ಅಧಿಕಾರವನ್ನು ಪಡೆ : (ಕ). ಪಟ್ಟಕ್ಕೆ ಕೂರು = ಪಟ್ಟಕ್ಕೆ ಕುಳಿತುಕೊಳ್ಳು : ಚಿಕ್ಕದೇವರಾಜನು ಸನ್ ೧೬೭೨ ನೇ ಇಸವಿಯಲ್ಲಿ . ಮೈಸೂರು ಸಂಸ್ಥಾನದ ಪಟ್ಟಕ್ಕೆ ಕೂತನು (ಮುಂಬಯಿ. ೪-೮೦). ಪಟ್ಟದ ಕತ್ತಿ = ರಾಜನಿಗೆ ಮಾತ್ರ ಮೀಸಲಾದ (ಶ್ರೇಷ್ಠವಾದ) ಖಡ್ಗ : ಪಟ್ಟದ ಕತ್ತಿಯನ್ನು ಪೂಜಾಸ್ಥಾನಕ್ಕೆ ದೊರೆಗಳವರೇ ತಂದಿರಿಸಿ . . . ಪೂಜಿಸಿದರು (ಮಹಾವಂ. I. ೨೫೯). ಪಟ್ಟದ ಕುದುರೆ = (ಶ್ರೇಷ್ಠವಾದ ಲಕ್ಷಣಗಳಿಂದ ಕೂಡಿದ) ರಾಜನಿಗೆ ಮಾತ್ರ ಮೀಸಲಾದ ಕುದುರೆ : ಪಟ್ಟದ ಕುದುರೆಯಂ . . . ಪಟ್ಟದ ಗದ್ದಿಗೆಯಂ ನೆಱೆ ಕೊಟ್ಟಂ ಧವಳಾತಪತ್ರಮಂ ಚಾಮರಮಂ (ಬಾಧಪು. ೧೨-೧೨೦) ; ದೊರೆಗಳವರು ಆಯುಧವನ್ನೂ ಪಟ್ಟದ ಕುದುರೆ ಆನೆ ಮುಂತಾದ ವಾಹನಗಳನ್ನೂ ಕಲ್ಪೋಕ್ತವಿಧಿಯಿಂದ ಪೂಜಿಸಿದರು (ಮಹಾವಂ. I. ೨೫೯). ಪಟ್ಟದ ಗಜ = (ಶ್ರೇಷ್ಠವಾದ ಲಕ್ಷಣಗಳಿಂದ ಕೂಡಿದ) ರಾಜನಿಗೆ ಮಾತ್ರ ಮೀಸಲಾದ ಆನೆ ; ಪಟ್ಟವರ್ಧನ : "ಪಟ್ಟವರ್ಧನಮೆನಲ್ ಪಟ್ಟದ ಗಜಂ" (ಕಶರ.೬೨). ಪಟ್ಟದ ಚರ = ಪಟ್ಟದ ದೇವರ ಅಧೀನದಲ್ಲಿರುವ ಜಂಗಮ ; ಚರಂತ : ಪಟ್ಟದ ಚರನುಲ್ಲಾಸಂಬೆತ್ತಂತೆಗೆಯ್ವೆ ನಿದಾವ ಗಹನಮಿಂದಾಕ್ಷಣಂ ಬಸವನೆಡೆಗೇಳ್ತಂದು (ವೃಷವಿ.೮-೨೫ ಪ). ಪಟ್ಟದ ದಂತಿ = ಪಟ್ಟದ ಗಜ: ಪಟ್ಟದ ದಂತಿ ಪಟ್ಟದಿಂ ಪೋಗದೆ ಬೆಟ್ಟುದಟ್ಟುವಿಳೆಯೊಳ್ ನಿಧಿಗಳ್ (ಶಾಂತಿಪು.೩-೧೦೪); ಬೊಮ್ಮಂ ತಿರ್ದಿ ತೋರ್ಪ ಪಟ್ಟದ ದಂತಿಯೆಂದೆನಲ್ ಕನಕಾಚಲಂ ಮೆಱೆದುದು (ಚಿಬಪು. ೨-೮). ಪಟ್ಟದ ದೇವರು = (ವೀರಶೈವರಲ್ಲಿ) ಧಾರ್ಮಿಕ ಸಂಸ್ಕಾರವನ್ನು ನೀಡುವ ಅಧಿಕಾರವುಳ್ಳ ಮಠಾಧಿಪತಿ : ಪಟುವಿಗೆ ಸ್ವತಃ ಪಟ್ಟದ ದೇವರೇ ದೀಕ್ಷೆ ನೀಡಿದರು (ರೂಢಿ). ಪಟ್ಟದ ಬಸದಿ = ರಾಜವಂಶದವರಿಗೆ ಸಂಬಂಧಪಟ್ಟ ಚೈತ್ಯಾಲಯ: ಪಟ್ಟದ ಬಸದಿಯ ಪ್ರತಿಬದ್ಧವಾಗಿ ಸಮೋದೇಯರ್ ಮುಖ್ಯವಾಗಿ ಬೆಟ್ಟ ದತ್ತಿ (ಎಕ. VII, ಶಿವಮೊ. ೪-೭೦ ; 1122). ಪಟ್ಟದ ಬಿತ್ತರಿ = ರಾಜನ ಪಟ್ಟದ ಸಿಂಹಾಸನ,—ಗದ್ದುಗೆ: ಆ ಪಟ್ಟದ ಬಿತ್ತರಿಯನ್ನು ನೀನು ಆರೋಹಣ ಮಾಡಲೆಬೇಕು! (ಬೆಟ್ಟಅ. ೧೧೦-೧೧). ಪಟ್ಟದ ಬೊಂಬೆ = ನವರಾತ್ರಿ ಉತ್ಸವದ ಅಂಗವಾಗಿ ಇಟ್ಟು ಪೂಜೆ ಮಾಡುವ (ಕರಿಮರದ ಗಂಡು ಮತ್ತು ಹೆಣ್ಣಿನ) ಬೊಂಬೆಯ ಜೋಡಿ : ಪಟ್ಟದ ಬೊಂಬೆಗೆ ಮಣಸರ ಹಾಕಿ ಅಲಂಕಾರ ಮಾಡು (ರೂಢಿ). ಪಟ್ಟದ ಮೊದಲಿಗ = ರಾಜ್ಯಾಧಿಕಾರಕ್ಕೆ ಮೊದಲ ಹಕ್ಕುದಾರ : ಪಟ್ಟದ ಮೊದಲಿಗ ರಾಜಿಗೆ ಜಟ್ಟಿಗರವೆಂದುಮಾಳ್ವ ಮುನ್ನಿನ ನೆಲನಂ ಕೊಟ್ಟು ಬಟ್ಟಯಟ್ಟು (ಪಂಪಭಾ. ೯-೪೦). ಪಟ್ಟದಯ್ಯ = ಪಟ್ಟದ ದೇವರು : (ಕ). ಪಟ್ಟದರಸಿ = ಅರಸನ ಜೊತೆಗೆ ಪಟ್ಟಾಭಿಷೇಕ ಮಾಡಿಸಿಕೊಂಡು ಸಿಂಹಾಸನದ ಮೇಲೆ ಕುಳಿತುಕೊಳ್ಳುವ ಅಧಿಕಾರವುಳ್ಳ ರಾಣಿ; ಅಗ್ರಮಹಿಷಿ : "ಕೃತಾಭಿಷೇಕಾ, ಮಹೀಷಿ-ಈ ೨ ಪಟ್ಟದರಸಿಯರ್" (ಹಲಾಯು. ೭೯-೩೨೩); ಪಟ್ಟದರಸಿಗೆ ತನೂಜಂ ಪುಟ್ಟದಂ (ಸರ್ಧಮಾ. ೨-೯) ; ಪಟ್ಟದರಸಿಗೆ ಪೊಡವಿಪಗೆ ಪೊಡಮಟ್ಟು ಗುರುಪದಕಳಿನಮಿಸಿ ಪೊಜಮಟ್ಟನಾ ವೈದೇಹಿ ಸಹಿತರಮನೆಯನಾ ರಾಮ (ತೊರರಾ. ೨-೩-೪೩). ಪಟ್ಟದರಸು = ಪಟ್ಟಾಭಿಷೇಕ ಮಾಡಿಸಿಕೊಂಡು ವಿಧ್ಯುಕ್ತವಾಗಿ ರಾಜನಾದವನು : ಪಟ್ಟದರಸಾಗಲ್ಕೆ ಚಂದ್ರಹಾಸಂ ಬಳಿಕ ಪಟ್ಟಣದ ಜನಮಱಿಯಲೆಂದು . . . ಗಜಮಸ್ತಕದ ಮೇಲೆ ನೃಪಸುತೆ ಸಹಿತ ಪೊಜಮಟ್ಟನು (ಜೈಮಿಭಾ. ೩೧-೫೦). ಪಟ್ಟದ ರಾಣಿ = ಪಟ್ಟದರಸಿ : ಪಟ್ಟದ ರಾಣಿಗೆ ಹೇಳಿ ಪದವಿ ಕೊಡಿಸೊ (ಪುರಂದ. ೨-೨೩-೧) ; ಚಿಕದೇವರಾಜಚಂದ್ರಮನ ಪಟ್ಟದ ರಾಣಿ ಸಕಲಸದ್ಗುಣ ಸಂಪನ್ನೆ (ಹವಿಬ. ೧-೧೪) ; ಧವಳಶಂಖ, ಉದ್ದಂಡ, ಪುಂಡರೀಕ, ಕನಕದಂಡ, ಚಾಮರಸ್ತೋಮಗಳು ಪಟ್ಟದ ರಾಣಿಯ ಚಿಹ್ನೆಗಳಾಗಿದ್ದುವು (ಕಶಾಅ. ೪೧೮). ಪಟ್ಟದ ವನಿತೆ = ಪಟ್ಟದರಸಿ : ಪಟ್ಟದ ವನಿತೆ ಕುಮಾರರು ಪುಟ್ಟದ ಚಾರಿತ್ರಮಂ ಮಂತ್ರಿ ಸಮ್ಯಕ್‌ಜ್ಞಾನಂ (ಧರ್ಮಾಮೃ. ೭೬). ಪಟ್ಟದ ಸತಿ = ಪಟ್ಟದರಸಿ : ಪಲಗಣ್ಣನ ಪಟ್ಟದ ಸತಿ ಸಗ್ಗದ ಲಲನೆಯರೊಳಗೋಲಗಮಿರ್ಪಂತೆ (ಜಯಕಾ. ೨-೧೯). ಪಟ್ಟದ ಸಿಂಹಾಸನ = ಪಟ್ಟದ ಬಿತ್ತರಿ : ಪಟ್ಟದ ಸಿಂಹಾಸನಮಳ

ಪಟ್ಟುದು ಪರಿಪರಿಯ ಮಾಣಿಕದ ಪೊಳೆಪಿಂದಂ ದಿಟ್ಟಿಗೆ ಕಡು ಚೋಜಿಗಮುಂ ಪುಟ್ಟಿಸುತುಂ ಬಹಳ ಕಿರಣಜಾಳನಿಮಗ್ನಂ (ಬಾಧಪು. ೧೨-೧೦೦). **ಪಟ್ಟದಾನೆ, ಪಟ್ಟದ ಆನೆ**=೧. ಪಟ್ಟದ ಗಜ : ಮಗನೆ ಮಗನೆ ನಂಬಿ ನಂಬಿ ಪಟ್ಟದಾನೆಗೆ ಪಡಿಸಣವಾದಾ (ಸಂಬಿರ. ೨-೫೪); ದುಷ್ಟಮೂವನ ಮನೆಗ್ಗೊಂಗಲು ಬೇಡ ಪಟ್ಟದಾನೆಗಳಿಂದ ಗಟ್ಟಾಗಿ ಮೇಲ್ತುಳಿಸುವನವ (ಪುರಂದ. ೪-೧೫೬-೩); ಕಾವರಾಯನ ಪಟ್ಟದಾನೆಯೆಂದೆನಲಾ ಭಾವಕಿ ಯೌವನಮದವ ತೀವಿದ ವಿಟದುಂಬಿಗೀಯುತ ಸನ್ಮೋಹನಾವಳಿಯೊಳಗೊಪ್ಪಿದಳು (ಕಂಸವಿ. ೯-೩೬೬); ಪಟ್ಟದಾನೆ ಕುದುರೆಗಳು ಬಂದು ಅಡ್ಡ ಬಿದ್ದು ಅರಮನೆಯೊಳಗೆ ಆರತಿಯನ್ನೆತ್ತಿದ ಮೇಲೆ ಸ್ವಸ್ಥಾನವನ್ನು ಸೇರಲು (ಮಹಾಪಂ. I, ೨೫೬); ಪಟ್ಟದ ಆನೆ ಕುದುರೆಗಳು ಪಾಡ್ಯದ ದಿವಸ ನಡೆಮಡಿಯ ಮೇಲೆ ಬಂದಂತೆ (ಮಹಾಪಂ. I, ೨೫೮). ೨. (ಆಲಂ) ಮೆಚ್ಚಿಗೆಯ ವೀರ; ನೆಚ್ಚಿನ ಯೋಧ : ಮರಳಿದರು ನಿನ್ನಯ ಪಟ್ಟದಾನೆಗಳು ಭೀತಿಗೊಂಡನು ದ್ರೋಣ ಸೋಲಕೆ ಕೇತುವಾದನು ಶಲ್ಯನು (ಕುಮ್ಯಾದ್ರೋ. ೧೬-೧೬); ಪಡಪಡೆತ್ತಲು ಸ್ವಾಮಿದ್ರೋಹರು ಸಿಡಿದರೋ ನಿಜಕುಲದ ಬೇರ್ಗಳ ಕಡಿದರೋ ಕುರುಬಲದ ಕಾಹಿನ ಪಟ್ಟದಾನೆಗಳು (ಕುಮ್ಯಾಕ. ೨-೧೦). **ಪಟ್ಟದೂರ್**=ರಾಜಧಾನಿ : ಅಯೋಧ್ಯಾ=ಸೀತಾರಾಮನ ಪಟ್ಟದೂರ್ (ಕಾಶಕೃ. ೨೦೨). **ಪಟ್ಟದೊಡೆಯ**=ಪಟ್ಟದರಸು : ಕರಿಯ ಕೈಲಿ ಕುಸುಮಮಾಲೆಯಿತ್ತು ಪುರದೊಳು ಬಿಡಲದಾರ ಕೊರಳಿನಲ್ಲಿ ತೊಡರಿಸಲ್ಕೆಯವರ ಪಟ್ಟದೊಡೆಯರನ್ನು ಮಾಳ್ಪೆವೆಂದು ಬಿಟ್ಟರಲ್ಲಿಗೆ (ಕನಕ. ೨೧೩-೨). **ಪಟ್ಟಮಂ ಕಟ್ಟು, ಪಟ್ಟವಂ ಕಟ್ಟು, ಪಟ್ಟವ ಕಟ್ಟು**=ಪಟ್ಟಾಭಿಷೇಕ ಮಾಡು ; (ವಿಧ್ಯುಕ್ತವಾಗಿ) ಸಿಂಹಾಸನದ ಮೇಲೆ ಕೂರಿಸು ; ರಾಜ್ಯಾಧಿಕಾರವನ್ನು ನೀಡುವ ಸಂಕೇತವಾಗಿ ಚಿನ್ನದ ಪಟ್ಟಿಯನ್ನು ಕಟ್ಟು : ಆತ್ಮಜನ್ಮಂಗಧಿಕವಿಭವದಿಂ ಪಟ್ಟಮಂ ಕಟ್ಟಿ ದೀಕ್ಷಾಭರಮಂ ಕೆಯ್ಕೊಂಡು ಗೆಲ್ಲಂಗೊಳಲ್ ಬಗೆದಂ . . . ವಸ್ತುನಾಭಂ (ಅಜಿಪು. ೨-೧೧೬); ಲಲ್ಲೆಗೆಯ್ದು ಬಲ್ಲಾಳ್ತನದಿಂ ಪಟ್ಟಮಂ ಕಟ್ಟಿ . . . ರಾಜ್ಯದೊಳ್ ನಿಜಾಸಿ (ಧರ್ಮಾಮೃ. ೧೧-೧೩೫); ಕುಸುಮಾವತಿಯನೆನಗೆ ಕೊಟ್ಟಲ್ಲಿಯೆ ಪಟ್ಟವಂ ಕಟ್ಟಿ ತಾಂ ಕುಸುಮಪುರಿಗೆ ಪೋದಂ (ದಶಕು. ೫-೮೬ ವ); ಪಟ್ಟವ ಕಟ್ಟಿದ ಬಳಿಕ ಲಕ್ಷಣವನಱಿಸುವರೆ (ಬಸವ. ೧೩೮); ರವಿಕುಲದ ಪೀಳಿಗೆಯೊಳೊಗೆದ ರಾಯರ್ಗೆ ಪಟ್ಟವ [ಪಾಠಾಂ. ಪಟ್ಟವನು] ಕಟ್ಟುವಂದಿದಿಲ್ಲದೊಡರಸುತನ ಸಲ್ಲದು (ಜಡಕಾ. ೬-೧೦). **ಪಟ್ಟವಾಗು**=ರಾಜ್ಯಾಧಿಕಾರ ಬರು : ಆತನ ಮಗನಿಗೆ ಪಟ್ಟವಾಯಿತು (ಮುಂಬಯಿ. ೪-೩). **ಪಟ್ಟವೇರು**=ಸಿಂಹಾಸನವನ್ನು ಏರು; ರಾಜನಾಗು : (ಕಿ).

[ಸಂ.]

ಪಟ್ಟಂಗ, ಪಟ್ಟಾಂಗ (ನಾ). ಋಣಹರಟೆ ; ಖಾಲಿ ಮಾತು, ಸಂಕಪ್ಪಯ್ಯ . . . ಶಾನುಭೋಗನ ಜೊತೆ ಪಟ್ಟಂಗ ಹೊಡೆಯುವ ಇಷ್ಟವಾಗದೆ ಹೊರಟರು (ಪ್ರಶ್ನೆ. ೩೮); ಚಿನ್ನಮ್ಮನ ಮನಃಸ್ಥಿತಿ ವಿನೋದಕ್ಕಾಗಲಿ ಪಟ್ಟಂಗಕ್ಕಾಗಲಿ ಸ್ವಲ್ಪವೂ ಸಿದ್ಧವಾಗಿರಲಿಲ್ಲ(ಮಲೆಸು.೮೪೩). **ಪಟ್ಟಾಂಗ**: ಅವರೊಡನೆ ನಾವು ಪಟ್ಟಾಂಗಕ್ಕೆ ಕುಳಿತರೆ ಮನೆಯ ಕೆಲಸಕ್ಕೆಲ್ಲ ತೊಂದರೆ (ಬೆಟ್ಟಜೀ. ೨೦) ; ಐತಾಳರೋ . . . ಹೆಂಡತಿಯೊಡನೆ ಪಟ್ಟಾಂಗ ಹೊಡೆಯುವ ಹೆಣ್ಣುರುಳರೇ ! (ಮರಮ. ೧೩); ಚಂದ್ರಮತಿಯೊಡನೆ ಅಧ್ವರ್ಯುಗಳ್ ಚಿನ್ನಾಗಿ ಪಟ್ಟಾಂಗ ಹೊಡೆಯುತ್ತಿದ್ದ (ರಾಯಚಾ. ೧೮೦).

[←ತುಳು. ಪಟ್ಟಂಗ, ಪಟಂಗ, ಪಟ್ಟಾಂಗ./ಹಿಂ. ಪಟಾಂಗ್]

ಪಟ್ಟಂಗಟ್ಟಿಸು (ಕ್ರಿ). ಪಟ್ಟವನ್ನು ಕಟ್ಟು ; ಪಟ್ಟಕ್ಕೆ ಕೂರಿಸು : ಪ್ರಿಥಿವಿಸಾಗರನ್ ಪಟ್ಟಂಗಟ್ಟಿಸಿ ಉಡೆಯ ಪುರಮಾನ್ ಪೊಗುತಪ್ಪಲ್ಲಿ (ಎಇ. IX, ೨೦-೩; ಸು. 800). [ಪಟ್ಟಂಗಟ್ಟು+-ಇಸು$_3$]

ಪಟ್ಟಂಗಟ್ಟು, ಪಟ್ಟಗಟ್ಟು (ಕ್ರಿ). ೧. ವಿಧ್ಯುಕ್ತವಾಗಿ (ಅಧಿಕಾರ ಸೂಚಕವಾದ) ಪಟ್ಟಿಯನ್ನು ಹಣೆಗೆ ಕಟ್ಟು : ಇರುಗಱ್ಕಿ ನಾಗತ್ತರಪಟ್ಟಂಗಟ್ಟಿ (ಎಇ. I, ೩೫೦-೫ ; ಸು. 900); ಸಂಪ್ರತಿಚಂದ್ರಗುಪ್ತನೆಂದು ಪೆಸರನಿಟ್ಟು ರಾಜ್ಯಾಭಿಷೇಕಂಗೆಯ್ದು ಪಟ್ಟಂಗಟ್ಟಿ . . . ಕುಣಾಳನುಮನೆಂದಂ (ಪಡ್ಡಾರಾ. ೭೫-೨೫); ಪಗೆವರ ನಿಟ್ಟಿಲ್ಲಂ ಮುಱಿಪೊಡೆನಗೆ ಪಟ್ಟಂಗಟ್ಟಾ (ಪಂಪಭಾ. ೧೦-೧೩); ಪಟ್ಟಂಗಟ್ಟಿದೊಡ ಱಸಳ್ಕೆವೇಟ್ಟುಮೇ ಲಕ್ಷಣಮಂ (ಸಮಪ. ೧-೮೦). ೨. ಪಟ್ಟವನ್ನು ಹೊಂದು ; ಅಧಿಕಾರವು ಬರು : ಶ್ರೀಮತ್ಸಮ್ಮರನಡಿಗಳ್ ಪಟ್ಟಂಗಟ್ಟಿದ ಅಯ್ವನೆಯ ವರಿಷ ಗೆಟ್ಟೆವಡಿಯ ಅಣ್ಣಮನಾಳುತುಮಿರೆ (ಎಕ. III, ಸಂಜಸ. ೯೭-೩ ; 898 ?) ; ಪಟ್ಟಂಗಟ್ಟಿದರಸಿನಂತೆ ಮಹಾಭೂತಿವೆರಸು ಜೀವಿತಂಬಡೆದ ಬಂಟನಂತೆ ರಾಗಿಸಿ (ಧರ್ಮಾಮೃ. ೮-೨೧೫). ೩. ಅಧಿಕಾರವನ್ನು ನೀಡು: ಪಟ್ಟಂಗಟ್ಟಿ ಗಂಗಮಹಾನಾಇಗಗೆ×× ಗಟನಿವೆರಸು ಮೂವತ್ತುಗುಳ ಅಯ್ಯಳ ಪಾಟು ಕೋಟ್ಟೋರ್ ಶ್ರೀಪುರುಷನಾಯಿಗಗೆ ಪಟ್ಟಗಟ್ಟಿ ಕೊಟ್ಟ ಕಟನಿ (ಎಕ. IX, ಹೊಸಕೋ. ೮೬-೩; ಸು. 720) ; ಪ್ರಮಥೇಂದ್ರಪದವಿಗೆ ಚೆನ್ನ ಪಟ್ಟಂಗಟ್ಟಿ ಸರ್ವಜ್ಞತ್ವಮಂ ಕುಡಲು (ಬಸಪು. ೨-೨೫). **ಪಟ್ಟಗಟ್ಟು** : ೨. ಸತ್ಯದ ಬಿತ್ತು ಹುರಿದುದು ಪಟ್ಟಗಟ್ಟಿದುದಾ ಕೃತಘ್ನತೆಗೆ ನೆತ್ತಿ ಕಣ್ಣಾಯ್ತು ಧಮತೆಗೆ (ಕುಮ್ಯಾಅ. ೨೧-೬೯). ೩. ಸಲೆ ಘರ್ಮಜಲ ಸೂಸಿ ಸುರತ ಸಾಮ್ರಾಜ್ಯದ ವಿಲಸಿತ ಪಟ್ಟಗಟ್ಟಿದಳು (ಕಂಸವಿ. ೧೦-೪೯); ಕಾವ್ಯಲೋಕದ ಭವ್ಯಕವಿದೇವಪದವಿಯಲಿ ಪಟ್ಟಗಟ್ಟಿದತ್ತು !(ಅನಿಕೇ. ೫೩-೧೪). ೪. (ಆಲಂ) ಪ್ರಬಲವಾಗಿರು : ಸೃಷ್ಟಿಯಲಿ ಜಿನಧರ್ಮ ಪಟ್ಟಗಟ್ಟಿರುತಿಕ್ಕು ಕೆಟ್ಟರೆ ಕೆಡಗು ಜಗವೆಲ್ಲ ತಲೆ ಹೋದ ಅಟ್ಟೆಯಂತಿಕ್ಕು (ಸರ್ವಜ್ಞ. ೧೦೧೨).

ಪಟ್ಟಂಗಟ್ಟಿದಂ=ಪಟ್ಟಾಭಿಷಿಕ್ತನಾದವನು ; ರಾಜ : ಪಟ್ಟಂಗಟ್ಟಿದನೆಂಗುಮೋ ಬಡವ ನೀಂ ಪೋ ಬಟ್ಟು ಮಾಣಂಗುಮೋ . . . ಕೆಮ್ಮನೇಗೆಟ್ಟೆತ್ತೆಂಬವೊಲಟ್ಟ ಕೊಂದಪನಿವಂ ಮಾಯ್ದುಂತಕಂ ಪಾತಕಂ (ಜೀವಸಂ. ೧೦-೧೩). [ಪಟ್ಟ$_3$+ಕಟ್ಟು$_1$]

ಪಟ್ಟಂಗಿ$_1$ (ನಾ). ಹರಟೆಮಲ್ಲಿ ; "ಮಾತುಗಂಟೆ" (ಜಾಸಕೋ. ೧೪).

[ಪಟ್ಟಂಗ+-ಇ$_2$]

ಪಟ್ಟಂಗಿ$_2$ (ನಾ). =ಪಟ್ಟಂಗ : ಎದಿ ಮ್ಯಾಲ ಕೆಲಸಾ ಇಟಗೊಂಡು ಹೊರಗ ಪಟ್ಟಂಗಿ ಆಡತಾನ (ಬಾಬಲ. ೯); ಜಮಿನ ಐತೆಂತ ಬಲೀ ಪಟ್ಟಂಗಿ ಬಡೀತೈತಿ (ಬಾಬಲ. ೫೨). [<ಪಟ್ಟಂಗ]

ಪಟ್ಟಂಗಿ$_3$ (ನಾ). ರೇಷ್ಮೆಬಟ್ಟೆಯ ಅಂಗಿ : ಅಗಳೊರ್ವನುವರ್ಣತಳಾಲಿಂಗಿತಸರ್ವಾಂಗಂ ದೇಸೆವೆತ್ತ ಮೊಗಸುತ್ತುಂ ಪಟುಂಯ ಪಟ್ಟಂಗಿಯುಂ ಉಟ್ಟ ಪಟ್ಟಣಗೆಯುಂ ಪೊದೆದ ಪಾಣಿಯವಣ್ಣಮುಮೆಸೆಯೆ . . . ನವರಸೋಚಿತಸ್ತವನಮುಖರಮುಖನಾಗಿ (ಮಲ್ಲಿಪು. ೮-೧೫೬).

[ಪಟ್ಟು$_5$(<ಪಟ್ಟ$_2$)+ಅಂಗಿ$_2$]

ಪಟ್ಟಂಗೊಳ್ (ಕ್ರಿ). ರಾಜ್ಯಾಧಿಕಾರವನ್ನು ಕೆತ್ತುಕೊಳ್ಳು : ಪಟ್ಟಂಗೊಳುತಪ್ರತಿಮಂ ಮಟ್ಟಟ್ಟಂ ಮಧುರೆ ಕೆಳದಿ ದೊರೆಗಳ ಬಲ್ಪಂ (ಅಪ್ರತಿ. ೬೧-೫). [ಪಟ್ಟ$_3$+ಕೊಳ್$_1$]

ಪಟ್ಟಂಪಾಱಿಸು 'ಪಟ್ಟಂಬಾಱಿಸು' ನೋ.

ಪಟ್ಟಂಪಾಱು 'ಪಟ್ಟಂಬಾಱು' ನೋ.

ಪಟ್ಟಂಬಾಱಿಸು, ಪಟ್ಟಂಪಾಱಿಸು (ಕ್ರಿ). ಪಟ್ಟನೆ ಹಾರಿಸು ; ಧೂಳೀಪಟಮಾಡು ; ನಾಶಮಾಡು ; ನಿರ್ನಾಮಮಾಡು : ಮಿಂದಿದ ಪಗೆವನ ಪಟ್ಟಂಬಾ[ಪಾಠಾಂ. ಪಾ]ಱಿಸುವೆನೊ ಮುನ್ನಮ ಮರರುಂಡಮೃತಮನೇಂ ಕಾಱಿಸುವೆನೊ (ಗದಾಯು. ೬-೧೭).

ಪಟ್ಟಂಪಾಜುಸು : ಪುಟ್ಟಿಸಿರದಾಂತ ಪಗೆವರ ಪಟ್ಟಂಪಾಜುಸದೆ ಮಾಣ್ಬನೇ ವೈರಿದಿಶಾಪಟ್ಟಂ ರಿಪುಗೋಧೂಮಳಿಪಟ್ಟಂ (ಕಇ. I, ೨೫-೨೫ ; 1186). [ಪಟ್ಟಂಬಾಜು+-ಇಸು$_3$]

ಪಟ್ಟಂಬಾಜು, ಪಟ್ಟಂಪಾಜು (ಕ್ರಿ). ಧೂಳೀಪಟವಾಗು: 'ಪಟ್ಟಂಬಾಜುಸು' ಪರಾ. **ಪಟ್ಟಂಪಾಜು** : ಇಜಯಲೊಂಗುವ ದೈಕ್ಯಹಂಸತತಿ ಪಟ್ಟಂಪಾಜಿ . . . ಕಱಿದಂ ನಿಂದುವಿದಂಬುವಾಹ ಕದವೊಲ್ ಧಾರಾಶರಾಸಾರಮಂ (ಆನಂಪು. ೧೪-೧೪).

[<ಪಟ್ಟನೆ+ಪಾಜು$_1$]

ಪಟ್ಟಕ (ನಾ). ೧. ರಾಜಶಾಸನಕ್ಕಾಗಿ ಬಳಸುವ ತಾಮ್ರ ಮೊದಲಾದ ಲೋಹದ ಪಟ ಮತ್ತು ಅದರಲ್ಲಿ ಬರೆಸಿದ ಶಾಸನ,—ಅಧಿಕಾರಪತ್ರ. ೨. ಪಟ್ಟ ; ಪಟ್ಟಿ : ಪ್ರತಿಬಿಂಬವು ಒಂದು ರೇಖೆಯಂತಿರದೆ ಪಟ್ಟಿಗಳನ್ನು ಬಳಿದಂತೆ ಕಾಣುವುದು . . . ಒಂದೊಂದು ಪಟ್ಟಿಗೂ ಒಂದು ಪಟ್ಟಕವೆಂದು (Band) ಹೆಸರು (ಭೌತವಿ. ೨೧೫). ೩. ಮೂರು ಮೈಯುಳ್ಳ ಕಾಜು; ಲೋಲಕ: "ಪಟ್ಟಕ ; ತ್ರಿಪಾರ್ಶ್ವ; ಮುಪ್ಪಟಿಗಾಜು ; ಲೋಲಕ" (Prism. ಪಾಂಸಿ. ೪೭). ೫. ಆಸನ ; ಪೀಠ : ದೆಸೆಗೆ ಭಿತ್ತಿಗಳನಾಗಸಕೆ ಜಪ್ಪರವಿಳ್ಕಲಿಸೆದಂಬುರಥದ ಪಟ್ಟಕದಿ ಆಸಮವೀರರಿಗೆ ರುಧಿರದ ಕೈಧಾರೆಗಳಿಸಿದವು ವೀರಸಿರಿಯೊಳು (ವರ್ಧಮಾ. ೬-೧೨೩). 'ಪಟ್ಟಿಕೆ' ಪರಾ. [ಸಂ.]

ಪಟ್ಟಕತ್ತಿ 'ಪಟ್ಟಾಕತ್ತಿ' ನೋ.

ಪಟ್ಟಕರು (ನಾ). ಶ್ರೇಷ್ಠವಾದ ಎರಕದ ಬೊಂಬೆ,— ಮೂರ್ತಿ : ಸೃಷ್ಟಿಗತಿಶಯವಾದ ಬೆಲುವಿನ ಪಟ್ಟಕರುವನು ಮಾಡಿ ನಾನಾಪರಿಯ ಬಣ್ಣಗಳನಿಟ್ಟು (ದೇವೀಮ. ೫-೬೯). [ಪಟ್ಟ$_3$+ಕರು$_2$]

ಪಟ್ಟಕರ್ಮ (ನಾ). ರೇಷ್ಮೆಯನ್ನು ನೇಯುವ ಕೆಲಸ : ಇದು ರತ್ನ ಭಂಡಾರವಿದು ಹೇಮಭಂಡಾರವಿದು ಸುನಾಸೆಯ ವರ್ಗವಿದು ಪಟ್ಟಕರ್ಮಕುಲ . . . ನೋಡಿಕೋಯೆನುತೊಪ್ಪಿಸಿದನಾ ಮುನಿಗೆ ಭೂನಾಥ ಕಂದರ್ಪನು (ಹಚಕಾ. ೯-೩). [ಪಟ್ಟ$_3$+ಕರ್ಮ]

ಪಟ್ಟಕಾರ (ನಾ). ಬಟ್ಟೆಯ ವ್ಯಾಪಾರ ಮಾಡುವವನು ; ಜವಳಿ ವ್ಯಾಪಾರಿ : ನಾಲ್ಕುದಿಕ್ಕಿನ ಐವತ್ತಾರುದೇಶದ ಯೆಂಟುಬಗೆ ಪಲರು ಪಟ್ಟಕಾರರು ಕೂಡಿ ಧರ್ಮಶಾಸನದ ಪಟ್ಟೆಯವ ಬರೆಸಿಕೊಟ್ಟ ಕ್ರಮ (ಎಳ. III (R), ಸುಂಡ್ಲು ೫೬. ೮೧-೧೫ ; 1751). [ಸಂ.]

ಪಟ್ಟಕ್ರಮ (ನಾ). ಪಟ್ಟಾಭಿಷೇಕದ ವಿಧಿ : ಪಟ್ಟಕ್ರಮಕ್ಕೆ ಮುನ್ನಂ ಪಟ್ಟದ ನೃಪತನಯನನಂತವಂ ಯುವರಾಜಂ (ಪಸ್ತು.ಕೋ. ೬೦-೪೯).

[ಪಟ್ಟ$_3$+ಕ್ರಮ]

ಪಟ್ಟಗಜ (ನಾ). ಪಟ್ಟದ ಆನೆ ; ಪಟ್ಟವರ್ಧನ : ಬಹಿತ್ರಮನಡರಿ ಬರ್ಪಂತೆ ಪಟ್ಟಗಜವೇರಿ ಹರಿ ಬರುತಿರ್ದನು (ನವಮೋ. ೧೦-೩೫).

[ಪಟ್ಟ$_3$+ಗಜ]

ಪಟ್ಟಗಟ್ಟು 'ಪಟ್ಟಂಗಟ್ಟು' ನೋ.

ಪಟ್ಟಗದ್ದುಗೆ 'ಪಟ್ಟಗದ್ದಿಗೆ' ನೋ.

ಪಟ್ಟಗದ್ದಿಗೆ, ಪಟ್ಟಗದ್ದುಗೆ (ನಾ). ಅರಸನು ಕುಳಿತುಕೊಳ್ಳುವ ಪೀಠ,—ಗದ್ದುಗೆ ; ಸಿಂಹಾಸನ : ಪಟ್ಟಗದ್ದಿಗೆ, ಪಟ್ಟಗೊಜಿ, ಪಟ್ಟಮಹಿಷಿ (ಪಮದ. ೨೯೪ ಪ್ರಯೋ). ಶ್ರೀರಮಣನ ಪಾಲನತತ್ತ್ವ ರಾಧನವಿಧಿಗೆ ನೃಪತಿ ನೆರೆವಂತಾಳಲ್ಕಾರಯ್ಯೆಗಂಕುಶಕ್ಕೆ ಹೇರಿಗನಹಿಪತಿಯೆ ಪಟ್ಟಗದ್ದಿಗೆ ಪುರುಳಿಂ (ಸುಂತ್ರಕ್ಷ. ೧೪೨-೪). **ಪಟ್ಟಗದ್ದುಗೆ**: ಪಟ್ಟಗದ್ದುಗೆಯ ಮೇಲೆ ಕುಮಾರನಂ ಬಿಜಯಂಗೈಸಿ (ಸುಕಥ.ಹ. ೨೨೬-೨೩) ; ದೇವರಮ್ಮನೆಂಬ ಪಟ್ಟಗದ್ದುಗೆ ಶ್ರೀಕ್ಷಾವಾಸವರ್ಧನೂನಾಮ್ನಿ ಮೂಲತ್ತೆ ರಡನುಪಮಚಾಮರ ಯಕ್ಷದೇವರಿಕ್ಕುವರು (ಶಾಂತೀಚ. ೮-೫೯) ; ಪಟ್ಟಗದ್ದುಗೆಯೊಳು ನೃಪನಾ ಮುಟ್ಟಿ ಕುಳ್ಳಿರುವುದೊಂದಾಗ ಬೇಕೆಂದರು (ಭರಚ. ೩೬-೧೧೪) ; ಪಟ್ಟಗದ್ದುಗೆಯನ್ನು ತ್ರಿಪ್ರದಕ್ಷಿಣ ಬಂದು ಅದಕ್ಕೆ ಮತ್ತೊಮ್ಮೆ ಮಹಾರಾಜವಂಶದ ವೀರವನ್ನೆನವೊಪ್ಪಿಸಿ . . . ನಿರುಕಿಸುತ್ತಿರುವನು (ಬಿಜ್ಜಬ. ೧೧೧-೧೬).

[ಪಟ್ಟ$_3$+ಗದ್ದುಗೆ$_2$]

ಪಟ್ಟಗಲ್ (ನಾ). ಗಡಿಯ ಗುರುತಿನ ಕಲ್ಲು (?) : ಅನ್ನೆ ಬನ್ದು ಬೆಂಬನಾಲೆ . . . ಅನ್ನೆ ಬನ್ದು ಪಟ್ಟಗಲ್ಲೆ (ಎಳ-IV (R), ಜಾಮುರಾ. ೩೫೪-೪೩; 906). [ಪಟ್ಟ$_1$+ಕಲ್$_3$]

ಪಟ್ಟಗಾಣಿಕೆ (ನಾ). ಪಟ್ಟಾಭಿಷೇಕವಾದ ಕಾಲದಲ್ಲಿ ಅರಸನು ಕೊಡುವ ಕಾಣಿಕೆ,—ಇನಾಮು : ಆ ಚಿಕ್ಕಂಣನಾಯಕನಿಗೆ . . . ಪಟ್ಟಾ ಕಟ್ಟಿದರು. ಈ ಹೊಸದೊರೆಯು ಸಕಲರಿಗೂ ಅರ್ಥಾಯ ಪಟ್ಟಗಾಣಿಕೆ ಎಂದು ಸಂದಾಯ ಮಾಡಿದನು (ಚತ್ರವಾ. ೨೬).

[ಪಟ್ಟ$_3$+ಕಾಣಿಕೆ(<ಕಾಣ್$_2$)]

ಪಟ್ಟಗಾಜು (ನಾ). ರೇಷ್ಮೆವಸ್ತ್ರಗಳನ್ನು ನೇಯುವವನು ; ನೇಕಾರ: ಮೂಱುಜಾಜ್ಕೀರಿಯೂ ಪಟ್ಟಗಾಜರ ಸೇಱೆಯನಿತ್ತ ಧರ್ಮ್ಮ (ಎಇ. VI, ೧೩೬-೫ ; 793) ; ಸಮಯ ಪಟ್ಟಗಾಜುಗೆ ನೆಲಂಗೊಟ್ಟು (ಎಇ. XIII, ೧೪೭-೧ ; ಸು. 900) ; ತೆಂಕಲು ಪಟ್ಟಗಾಜರ ಕೆಯ್ಯಂ (ಇವಿ. ೧೯೪೭, ಹುಬ್ಬಳ್ಳಿ. ೨೪೫-೩೭ ; 994) ; ಉದ್ವೃತ್ತನಂ ನಾರಸಿಂಹನ ರೂಪಿಂ ನವಿದೊಳ್ ವಿದಾರಿಸಿ ಕುಸುಂಭಾರಕ್ತಮಂ ಪಟ್ಟಗಾಜನೆ ಪಾಸಂ ತವೆ ತೋಡುವಂತೆ ಕರುಳಂ ನೀಂ ತೋಡಿದಯ್ ದೈತ್ಯನಾ (ಕಾಸ್ಕಾವ. ೩೫೫) ; ರೇಷ್ಮೆ ಮುಂತಾದ ನಯವಾದ ವಸ್ತ್ರಗಳನ್ನು ನೇಯುವವರೇ ಪಟ್ಟಗಾಜರು (ಕಶಾಜ. ೪೪೧). [ಪಟ್ಟ$_3$+-ಕಾಜ]

ಪಟ್ಟಗುಚ್ಚೆ (ನಾ). ರೇಷ್ಮೆ ಎಳೆಯ ಕುಚ್ಚು ; ರೇಷ್ಮೆಗೊಂಡೆ : ಪಟ್ಟಗುಚ್ಚೆಂಗಳಂ ವೇಣ್ಯಾಗ್ರದೊಳ್ ತಳೆಯುತೆ ಒಸೆದು ಪೋಪರ್ ಕೆಲರ್ (ಆರಾಜ. ೫-೪-೨೧). [ಪಟ್ಟ$_3$+ಗುಚ್ಚ]

ಪಟ್ಟಗೊಜಿ (ನಾ). ರೇಷ್ಮೆಯ ವಸ್ತ್ರ : ಪಟ್ಟಗದ್ದುಗೆ, ಪಟ್ಟಗೊಜಿ, ಪಟ್ಟಮಹಿಷಿ (ಪಮದ. ೨೯೪ ಪ್ರಯೋ). [ಪಟ್ಟ$_3$+ಕೊಜಿ$_1$(<ಕೂಜಿ)]

ಪಟ್ಟಜಿನಾಲಯ (ನಾ). ರಾಜವಂಶಕ್ಕೆ ಸಂಬಂಧಪಟ್ಟ ಜೈತ್ಯಾಲಯ ; ಪಟ್ಟದ ಬಸದಿ : ಜ[ಪ್ಪ]ರ ಪಟ್ಟಜಿನಾಲಯಕಿಟ್ಟ ಳವಾದಯ್ವ ತೊಳ್ಕಲನುಮತದಿಂದಂ ಕೊಟ್ಟರ್ಜಿನೇಂದ್ರಪೂಜೆಗೆ ನಟ್ಟನೆ ××× (ಸೌಇಇ. XX, ೧೪೮ ; 980). [ಪಟ್ಟ$_3$+ಜಿನಾಲಯ]

ಪಟ್ಟಟಿ (ನಾ). ಒಂದು ಬಗೆಯ ಘನವಾದ್ಯ : ಮೊಱೆವ ಜಯಘಂಟೆ ಪಟ್ಟಟಿ ಪಟ್ಟಶುಕ್ತಿ ಭಾಸುರ ಕುಡುಕ ಕಮ್ಮಾದಿ ಘನಮನಾಪಾಲಿಕೆ . ಮುಹುರಿಶ್ಯೆಂಗವಂಶಕಹಳಾಶಂಖಪಾವಪ್ರಭೃತಿಸುಷಿರವಾದ್ಯ ಜಯಮುಂ . . . ತಳಪಾಟ ಹಸ್ತಪಾಟದ್ವಯದಿನಮರ್ದು(ಪದ್ಮರಾ.೩-೫೩).

[?]

ಪಟ್ಟಡಿ$_1$, ಪಟಡಿ, ಪಟೋಡಿ, ಪಟ್ಟಡೆ, ಪಟ್ಟಳೆ$_1$ (ನಾ). ೧. ನೀರಾವರಿಯ ಭೂಮಿ ; ಗದ್ದೆ : ಆರಗದ ದೇವಸ್ಥಾನದ ಪೀಪು ನಾರಣ ಭಟ್ಟನ ಪಟ್ಟಡಿ ಪಳಗಣ ಬಾವಿಕೈಯಿ ದಾಸನ ಗದ್ದೆಯಿಂದ (ಎಳ. VIII, ತೀರ್ಥಹ. ೬೧-೧೬ ; 1688) ; ಪಟ್ಟಣದ ಸುತ್ತಣ ಪಟ್ಟಡಿಯಿಂದ ಆರಗದ ಕೆರೆ ಕೆಳಗಣ ಗದ್ದೆಯಂದ ಮಲ್ಲಿಸಟ್ಟ ಪಾಲು (ಎಳ. VIII, ತೀರ್ಥಹ. ೫೯-೧೨ ; 1712). ೨. ನೀರಾವರಿಭೂಮಿಯ ಮೇಲೆ ಹಾಕುವ ತೆರಿಗೆ,—ಸುಂಕ : ಬಾಲದೆಱಗೆ ನಾನುಗಾಣಿಕೆ ಗೋಪಾಲ ಸ್ವಾಮಿವರ್ತ್ತನೆಸುಂಕಕ್ಕೆ ಸಲ್ಲುವ ಪಟ್ಟಡಿ ಯೇರುಸುಂಕ ತೆಗೆದ ಬಾಗಿಲ ಹಣ (ಎಳ. III, ಶ್ರೀರಂಗ. ೧೦೦-೧೬ ; 1724). ೩.(ಅಕ್ಕಸಾಲೆಯು ಉಪಯೋಗಿಸುವ) ಅಡಿಗಲ್ಲು ; ಅದ್ದಗಣೆ : 'ಮರಪಟ್ಟಡಿ'

ಪರಾ. ೪. (ಅಕ್ಕಸಾಲೆಯ) ಕಾರ್ಯಾಲಯ ; ಕಾರ್ಖಾನೆ: 'ಪಟ್ಟಡಿಮನೆ' ಪರಾ. **ಪಟಡಿ** : ೧. ಆರಗ ದೇವಸ್ಥಾನಕ್ಕೆ ಬಂದಿದ ಪಟಡಿಗೆ ದೇವಸ್ಥಾನದ ಸ್ವಾಸ್ತ್ಯಿಯಿಂದಲು ಗ ೬೯ ಶುಧ್ಧ ಗ ೬೩ ಅಂತು ಸಿರಿಗಾರ ಪಟಡಿಯಿಂದಲು ಸಿಸ್ತು ಗ ೫೮೩ (ಎಕ. VIII, ತೀರ್ಥಹ. ೭-೧೧೭ ; 1665). **ಪಟೋಡಿ** : ಜ. ಗುಂಪು ; "ಬಣ" (ಜಾನಕೋ. ೧೩). **ಪಟ್ಟಡೆ** : ೧. ಕೋಳಾಲಸೀಮೆಯೊಳಗಣ ಕೊತನೂರ ಪಟ್ಟಡೆ ಸ್ಥಳದ ಕೆಂಪಟ್ಟುಗ್ರಮು ೧ (ಎಕ. X (೬), ಕೋಲಾರ. ೩೦೪-೧೨ ; ಸು. 17ನೆಯ ಶತ). ೩. ವಂಶ ; ಸಂತತಿ : ಒಬ್ಬ ಪ್ರಸಿದ್ಧಪುರುಷನಿಂದ ಅವರ ಮಕ್ಕಳು ಮೊಮ್ಮಕ್ಕಳುಗಳನ್ನು ಇಂತಹವರ ತೆಂಡೆ, ವಟಾರ, ಪಟ್ಟಡೆ ಎಂಬುದಾಗಿ ಕರೆಯುವ ವಾಡಿಕೆ (ಹುಬ್ಬಹ. ೧೫೪). **ಪಟ್ಟಳೆ**₁ : ೩. ತೊಲೆ ; ದೂಲ : 'ಪಟ್ಟಳೆ ಕಂಭ' ಪರಾ.

[ದೇ.॥ ತಮಿ. ಪಟ್ಟಿ, ಪಟ್ಟಙ್ಕಿ, ಪಟ್ಟರೈ ; ತೆಲು. ಪಟ್ಟಡ]

ಪಟ್ಟಡಿ₂, **ಪಟ್ಟಳೆ**₂ (ನಾ). ಎತ್ತು, ಕುದುರೆ ಮೊದಲಾದುವುಗಳ ಮೈಯ ಸುತ್ತಲೂ ಬಿಗಿಯುವ ಪಟ್ಟ,—ಬಾರು; "ತಂಗುಪಟ್ಟ, ನಡುಕಟ್ಟು" (ನಾನಾಶ). **ಪಟ್ಟಳೆ**₂ : "ಉರಪಾಶಮೂ ಪಟ್ಟಳೆಯೆನಿಕ್ಕು" (ಮುಂಗಂಶಾ. ೧೦೨-೩). [<ಪ್ರಾ. ಪಟ್ಟಾಡಾ./ತೆಲು. ಪಟ್ಟಡ]

ಪಟ್ಟಡಿಮನೆ (ನಾ). (ಅಕ್ಕಸಾಲಿಗರ) ಕಾರ್ಯಾಲಯ; ಕಾರ್ಖಾನೆ: "ಅವೇಶನಂ, ಶಿಲ್ಪಶಾಲಾ—ತ ಅಕ್ಕಸಾಲಿಗರ ಕಾರ್ಖಾನೆ, ಪಟ್ಟಡಿಮನೆ; ವಾಜರ ಮನೆ" (ಸಿದ್ಧಾಂತಿ. ೧೦೦). [ಪಟ್ಟಡಿ₁+ಮನೆ]

ಪಟ್ಟಡಿಮರ (ನಾ). "ದೂಲ, ತೀರು, ಮೊ.ಗಳ ಭಾರವನ್ನು ಹೆಂಚಿ ಹಾಕಲು ಗೋಡೆಯಲ್ಲಿ ಉಪಯೋಗಿಸುವ ಅಡ್ಡಮರ ; ಪಟ್ಟಡಿಮರ" (Templet. ಇಂಕನಿ). [ಪಟ್ಟಡಿ₁+ಮರ₁]

ಪಟ್ಟಡೆ 'ಪಟ್ಟಡಿ₁' ನೋ.

ಪಟ್ಟಣ (ನಾ). ೧. ನಗರ; ಪುರ; ಶಹರು: "ಪತ್ತನಂ, ಅಧಿಷ್ಠಾನಂ, ನಿಗಮಃ, ಪುಟಭೇದನಂ . . . ಪುರಂ, ಪುರೀ — ಈ ೧೧ ಪಟ್ಟಣಂ" (ಹಲಾಯು. ೪೮-೧೩೦) ; ತೊಂಭತ್ತಾಱುಕೋಟೆ ಗ್ರಾಮಂಗಳಿಂದಂ ನಾಲ್ವತ್ತೆಣ್ಣಾಸಿರ ಪಟ್ಟಣಂಗಳಿಂದಂ . . . ನೆಜಿದ್ಯೆಶ್ವರ್ಯದ ಮೇಗೆ (ಶಾಂತಿಪು. ೧೧-೪೪ ಪ) ; ಬಟ್ಟೆಯಿಲ್ಲದ ಪಯಣಮುಂ ಪಟ್ಟಣಮಿಲ್ಲದ ರಾಜ್ಯಮುಂ . . . ಒಪ್ಪಲಾರ್ಕುಮೆ (ಧರ್ಮಾಮೃ. ೧-೭೫) ; ನಿಜ್ಜೆಯುಳ್ಳ ಭಕ್ತ ನಟ್ಟಡವಿಯಲ್ಲಿರ್ದಡೇನು ಅದು ಪಟ್ಟಣವೆಂದೆನ್ನಿಸುವದು ನಿಜ್ಜೆ ಇಲ್ಲದ ಭಕ್ತ ಪಟ್ಟಣದಲ್ಲಿದ್ದರೂ ಅದು ನಟ್ಟಡವಿ (ದೇವಾವ. ೪೫-೪೮); ಪೆಸರಾದ ಸಮಸ್ತ ವಸ್ತುವಲ್ಲಿಯೆ ಪೆಜತೊಂದು ಪಟ್ಟಣದೊಳ್ಪಿನೆ ಪಟ್ಟಣಮೊಪ್ಪಿ ತೋಱುಗುಂ (ಸೂಕ್ತಿಸು.೪-೧೦೩); ಸೂಜಿ ಹೋದುದು ನಗರಿ ಒಳರಿಗೆ ಮಾಱುವರು ಪಟ್ಟಣವನಳಟಾ (ಕುವ್ಯಾಳ.೧-೪) ; ಕೆಟ್ಟು ಪಟ್ಟಣ ಸೇರು (ಗಾದೆ). ೨. ಶ್ರೀರಂಗಪಟ್ಟಣ : ರಾಘವಪುರದಿಂ ಪಟ್ಟಣಕ್ಕೆ ಹೋದ ದಾರಿಯ . . . ವತೆಯಲು ಬರದು ನಟ್ಟ ಕಲ್ಲು ೧ (ಎಕ. III (R), ಗುಂಡ್ಲು ಪೇ. ೪೦-೬೪ ; 1320) ; ಪಟ್ಟಣ ಮೈಸೂರು ತೆರಕಣಾಂಬಿಯನಾಳ್ವ ಕಟ್ಟುಗ್ರದಧಟ ಮನ್ನೆಯರು ನೆಟ್ಟನೆ ಲಗ್ಗೆ ಗೇಱುವ ಒಳರನು ಸದೆಗುಟ್ಟುವ ಪರಿಯನೇವೇೞ್ವೆ (ಕಂನವಿ. ೧೪-೫೭). ೩. ಪಟ್ಟಣದ ವ್ಯಾಪಾರಿಸಂಘದ ಸದಸ್ಯ : ಅಸ್ಸಾದಸ ಪಟ್ಟಣರುಂ ಯೆಂಟುನಾಡ ಪದಿನಱು×××ಸ್ವಾಮಿಗಳುಂ ಸೆಟ್ಟಿಯರುಂ (ಸೌಇಇ. XX, ೬೩-೩೧ ; 1098). [<ಪ್ರಾ. ಪಟ್ಟಣ./ಸಂ. ಪಟ್ಟನ]

ಪಟ್ಟಣಗಾಜಿ (ನಾ). ನಗರದಲ್ಲಿ ವಾಸಿಸುವವನು; ಪಟ್ಟಣಿಗ ; ನಗರವಾಸಿ : ಸೂಜಿಯೋದುದು ನಗರಿ ಪಟ್ಟಣಗಾಜಿರಳಿದರು (ತಿಭಾಗ. ೧೦-೪೨-೩೧). [ಪಟ್ಟಣ+-ಕಾಜಿ]

ಪಟ್ಟಣವಾಸ (ನಾ). ನಗರದಲ್ಲಿ ವಾಸಮಾಡುವಿಕೆ ; ನಗರವಾಸ : ಪಟ್ಟಣವಾಸದೋರು ಕಳಿಸೋ ಹಾಗೆ ನಾವು ಕಳಿಸೋಕಾದೀತಾ ಸ್ವಾಮಿ (ಮಾಗಧ. ೪೫). [ಪಟ್ಟಣ+ವಾಸ₂]

ಪಟ್ಟಣವಾಸಿ (ನಾ). = ಪಟ್ಟಣಗಾಜಿ : ಪಟ್ಟಣವಾಸಿಗಳ ಜೀವನ ಬಹುಮಟ್ಟಿಗೆ ಯಾಂತ್ರಿಕವಾಗಿಬಿಟ್ಟಿದೆ (ರೂಢಿ). [ಪಟ್ಟಣ+ವಾಸಿ₂]

ಪಟ್ಟಣವಾಸಿಗ (ನಾ). = ಪಟ್ಟಣಗಾಜಿ : ಪಟ್ಟಣವಾಸಿಗರೂರುಗರೊಡನೊಂದು ಬಟ್ಟೆಯೊಳಗೆ ಹೋಗುವಾಗ ಸಟ್ಟಾಟವಾಡುತ ಹೋದಂತೆ ಮೋಹದ ತಿಟ್ಟವಿಹುದು ಮೋಕ್ಷರತನ (ಭರಚ. ೫-೧೦೧). [ಪಟ್ಟಣವಾಸ+-ಇಗ]

ಪಟ್ಟಣಶೆಟ್ಟಿ 'ಪಟ್ಟಣಸೆಟ್ಟಿ' ನೋ.

ಪಟ್ಟಣಶ್ವಾಮಿ 'ಪಟ್ಟಣಸಾಮಿ' ನೋ.

ಪಟ್ಟಣಸಾಮಿ, ಪಟ್ಟಣಶ್ವಾಮಿ, ಪಟ್ಟಣಸಾವಿ (ನಾ). = ಪಟ್ಟಣಸ್ವಾಮಿ: ಪಟ್ಟಣಸಾಮಿ ಅಂಕಿಸೆಟ್ಟಿ ಮಾಳಿಸೆಟ್ಟಿ ಪ೩ ಮಹದೇವ ಸೆಟ್ಟಿ ಗೋವಿಸೆಟ್ಟಿ ಪ೨ (ಎಕ. II, ೨೩೫-೧೯; ಸು. 1185) ; ಮುಂದಿಂ ಪಟ್ಟಣಸಾಮಿಯೆಂಬ ಪೆಸರಂ ಕಾಳ್ದಿರ್ದ . . . ಮಲ್ಲಿಸೆಟ್ಟಿವಿಭುಗಂ ಲೋಕೋತ್ತಮಾಚಾರಸಂಪದಗೀ ಮಾಚಿವಸೆಟ್ಟಿಕವ್ವೆಗಂ . . . ಪುಟ್ಟದ ಚಂದವ್ವ (ಎಕ. II, ೩೩೫-೩೮ ; 1195) ; ಚಿಮ್ಮತ್ತನಕಲ್ಲ ಪಟ್ಟಣಸಾಮಿ ಸೋಯಿಸೆಟ್ಟಿ (ಎಕ. XI, ಚಿತ್ರದು. ೬-೨೨ ; 1338). **ಪಟ್ಟಣಶ್ವಾಮಿ** : ಪಟ್ಟಣಶ್ವಾಮಿ ನಾಗದೇವ ಹೆಗ್ಗಡೆವುಂ ಕೆಞ್ಞಗೌಡನುಂ (ಎಕ. II, ೪೦೭-೩ ; ಸು. 1250). **ಪಟ್ಟಣಸಾವಿ** : ಶ್ರೀರಾಜಧಾನಿ ಬಳ್ಳಿಗ್ರಾಮೆಯ ಪಟ್ಟಣಸಾವಿ ಮೊದಲಾಗೆ ಸಮಸ್ತನಗರಂ ಪವಿತ್ರಕೆ ಕೊಟ್ಟ ಪಣ (ಎಕ. VII, ತೀಕಾ. ೧೧೧-೨೪ ; ಸು. 1080) ; ಪಟ್ಟಣಸಾವಿ ಮುಖ್ಯಮಾಗಿ ಸಮಸ್ತನಗರಂಗಳುಂ ಗಂಮಂಡಸಾವಿ ಸಂಕರಯ್ಯನುಂ . . . ಇಂತು ಪಟ್ಟಣಮಶೇಷದ ಸನ್ನಿಧಾನದಲು (ಎಕ. VII, ತೀಕಾ. ೧೧೩-೩೦ ; 1098). [ಪಟ್ಟಣ+ಸಾಮಿ]

ಪಟ್ಟಣಸಾವಿ 'ಪಟ್ಟಣಸಾಮಿ' ನೋ.

ಪಟ್ಟಣಸಾಳಿ (ನಾ). ಒಂದು ಬಗೆಯ ಜೋಳ : ಭಗವಂತ, ಪುಲ್ಲರ . . . ಪಟ್ಟಣಸಾಳಿ, ಗೌರೀಕುಲ , . . ಕೊಡಮೂಕನ ಜೋಳ ಈ ಎಂಟು ಜಾತಿಗಳನ್ನು . . . ಹಲಕೆಲವು ಸಾಲುಗಳಾಗಿ ಬಿತ್ತುವರು (ಕಭಾಗೆ. ೨೭೧). [?]

ಪಟ್ಟಣಸೆಟ್ಟಿ, ಪಟ್ಟಣಶೆಟ್ಟಿ (ನಾ). ವರ್ತಕಶ್ರೇಣಿಯ ಪ್ರಮುಖ; ವರ್ತಕರಿಗೆ ಮುಖ್ಯಸ್ಥ : ಪಟ್ಟಣಸೆಟ್ಟಿಯ ಮನೆಯ ಕನ್ನ ಕೊರೆದು (ಮುಂಬಯಿ. ೩-೧೭). **ಪಟ್ಟಣಶೆಟ್ಟಿ** : ಗೌಡ ಶಾನಭೋಗರೆ ಕೈಕೆಳಗೆ ತಳವಾರ, ಪಟ್ಟಣಶೆಟ್ಟಿ, ಹಳಬರು ಮುಂತಾದ ತಿರುಳುಳ್ಳ ಕಾಮದಾರರಿರುತ್ತಾರೆ (ಕಭಾಗೆ. ೩೭೬). [ಪಟ್ಟಣ+ಸೆಟ್ಟಿ]

ಪಟ್ಟಣಸ್ವಾಮಿ (ನಾ). ನಗರಾಧಿಪತಿ ; ನಗರದ ಪ್ರಮುಖ : ದೋರಸಮುದ್ರದ ಪಟ್ಟಣಸ್ವಾಮಿ ಪೊಯ್ಸಳ ಸೆಟ್ಟಿಯರಾದ ನೊಣಂಬಿ ಸೆಟ್ಟಿ (ಎಕ. VI (R), ಕೃಷ್ಣರಾ. ೩-೧೫೫ ; 1118) ; ನಾಕಿಸೆಟ್ಟಿಯರ ಮಗ್ಗ ಪಟ್ಟಣಸ್ವಾಮಿ ಪಾಯಕಣ್ಣ (ಎಕ. VI, ಕೊಪ್ಪ. ೪-೫ ; ಸು. 1300) ; ರಾಯಪುರದ ಪೇಂಕೆಯ ಗೌಡಸೇನಬೋವರು ಸೆಟ್ಟಿ ಪಟ್ಟಣಸ್ವಾಮಿ ನಾನಾಪ್ರಜೆಗಳಿಗೆ . . . ಮಾಡಿ ಕೊಟ್ಟ ಶಿಲಾಶಾಸನದ ಕ್ರಮವೆಂತೆಂದರೆ (ಸೌಇಇ. IX-II, ೫೧೬-೩ ; 1525) ; ಪಟ್ಟಣದ ರಾಜನು ತನಗೆ ವಿವೇಕಿಯೆಂದು ಕಂಡು ಬಂದ ವ್ಯಕ್ತಿಗೆ ಪಟ್ಟಣಸ್ವಾಮಿ ಪಟ್ಟವನ್ನು ಕೊಡುತ್ತಿದ್ದನು (ಕಾಇ. ೩೮೪). [ಪಟ್ಟಣ+ಸ್ವಾಮಿ]

ಪಟ್ಟಣಸ್ವಾಮಿಕೆ (ನಾ). ನಗರಾಧಿಪತಿಯ ಪದವಿ : ಹರದಿಕೆಯು ಪರಿಬಕ್ಕೆ ಮನ್ನಣೆಯು ಮೊದಲಿಂಗೆ ಗರುವಿಕೆಯು ಗತಿಗೆ ಪಟ್ಟಣಸ್ವಾಮಿಕೆಯ

ಪದಕೆ ನೆರೆದು ಪಟ್ಟಂಗಟ್ಟಿ . . . ಪರಿಣತನ ಮಾಡಿದನಯ್ಯನಾದಯ್ಯನ (ನೋಸುಚ. ೧-೯೩). [ಪಟ್ಟಣಸ್ವಾಮಿ+-ಇಕೆ]

ಪಟ್ಟಣಾಧಿಪತಿ (ನಾ). = ಪಟ್ಟಣಸ್ವಾಮಿ : ಸಕಳವಿಷಯಪಟ್ಟಣಾಧಿಪತಿ ಶ್ರೀಮತ್ಕಿಸುವೊಳಲ ಮೂಲಸ್ಥಾನದ ನುಹಾದೇವರುಪಭೋಗಕ್ಕೆ ಸರ್ವಬಾಧಾಪರಿಹಾರಮಾಗೆ ನಮಸ್ಯಂ ಬಿಟ್ಟ . . . ಕೆಯಿ ಮತ್ತ ೧೨ (ಕೊಲ್ಹಾಶಾ. ೨-೧೨ ; 1069) ; ಪ್ರತಿಯೊಬ್ಬ ಗ್ರಾಮಾಧಿಪತಿಯೂ ಪಟ್ಟಣಾಧಿಪತಿಯೂ ತನ್ನ ತಮ್ಮ ಗ್ರಾಮ-ಪಟ್ಟಣಗಳನ್ನು ಕಣ್ಣಟ್ಟು ನೋಡಿಕೊಳ್ಳುತ್ತಿದ್ದರು (ಕರ್ನಾಜ. ೩). [ಪಟ್ಟಣ+ಅಧಿಪತಿ]

ಪಟ್ಟಣಿಗ (ನಾ). = ಪಟ್ಟಣಗಾಣಿ : ಎಗ್ಗು ಗೊಂಡು ಪಟ್ಟಣಿಗರಿದೇಕೆ ಪೋದಪರೊ ಪೇಟೆನುತ್ತಂ ನಡೆತಂದರ್ . . . ಇರ್ವರಗರ್ವಿನ ಪಾರ್ವರಾನಗಂ (ಪುಣ್ಯಾಸ್ರ. ೬-೫೫) ; ಕರಹಡಿಗಂ, ಒಳ್ಪೂರಿಗಂ, ಬಾಸಿಗಂ, ಪಟ್ಟಣಿಗಂ (ಶಬ್ದಾಸು. ೪೧೯ ಪ್ರಯೋ) ; ಇಂದೀಗ ಈ 'ಹೊಸಗನ್ನಡ'ವನ್ನು ಪಟ್ಟಣಿಗರು ಕೆಲವರು ಮನೆಮಾತನ್ನಾಗಿ ಬಳಸುವುದುಂಟು (ಸುಪಣ್ಣ. ೨೮೬). [ಪಟ್ಟಣ+-ಇಗ]

ಪಟ್ಟಣಿಗೆ$_1$ 'ಪಟ್ಟಳಿಗೆ$_1$' ನೋ.

ಪಟ್ಟಣಿಗೆ$_2$ (ನಾ). ಅರಳು ಹುರಿಯುವಾಗ ಕೈಯಾಡಿಸಲು, ತುದಿಗೆ ಬಟ್ಟೆ ಸುತ್ತಿ ಚೆಂಡಿನಂತೆ ಮಾಡಿಕೊಂಡ ಕೋಲು : ಅರಳು ಹುರಿಯಲಿಕ್ಕೆ ಪಟ್ಟಣಿಗೆಗೆ ಆದರೂ ಬರುವುದೆಂದು ಹರಕ ಚಿಂದಿಯನ್ನು ಮಂದೀ ಮನೆಯಿಂದ ಕೂಡಹಾಕುವಾಕೆ, ಗಂಟಿಗೆ ಗಂಟೇ ಹೇಗೆ ಬಿಟ್ಟಳೋ (ರಕ್ತಧ್ವ. ೧೦೯). [?]

ಪಟ್ಟಣಿ ಶ್ರೀಮೂಡಿ (ನಾ). ಬ್ರಾಹ್ಮಣರ ಹುಡುಗಿ,—ಕನ್ಯೆ : ನಾನೇನೂ ಪಟ್ಟಣಿ ಶ್ರೀಮೂಡಿಯಲ್ಲವಲ್ಲ ? ಮಂಗಲವಾಗದಿದ್ದರೆ ಕಣ್ಣು ಕಟ್ಟಿ ಕಾಡಿಗೆ ಬಿಡುತ್ತಾರೆ ಎಂಬ ಹೆದರಿಕೆ ಇಲ್ಲ (ಹುಲಿಹಾ. ೨೬೮).

[← ಕೊಡ. ಪಟ್ಟಣಿ ಶ್ರೀಮೂಡಿ]

ಪಟ್ಟದಳೆ (ನಾ). (?) : ಸ್ವಸ್ತಿಶ್ರೀ ಕೋಡೋತಗವುಣ್ಡರೆ ಮಗ ಎಱೆಯಮ್ಮ ವೆಳಚಿಗವುಣ್ಡನ ಪಟ್ಟದಳ ಪೊನ್ನಚರಿ ಮಾಡಿದಂ (ಎಕ. IX, ಹೊಸಕೋ. ೪೭-೬ ; ಸು. 750). [?]

ಪಟ್ಟದಾಯ (ನಾ). ಬೇಕಾದ ದಾಯ ; ತಕ್ಕ ಗರ ; ಲಾಭದಾಯಕವಾದ ಗರ : ಪಾಪಂ ಪುಣ್ಯವೆಂಬಾ ನಲ್ಲಹಾಸಂಗಿಗಳನೊಯ್ಯನೆ ಹಾಯ್ಕುಲದಱಿಂದ ಒಳ್ಳಿತಾಗಲು ಪ್ರಾಪ್ತಿಸುವ ಫಲದಲ್ಲಿ ಬೀಳಲು ಪಟ್ಟದಾಯಗಳಲ್ಲಿ ಭಕ್ತಿಯೆನಿಪ್ಪುದೊಂದೀರೈದೊದಗಿತೆನುತ . . . ದಾಯವ ನಾಡುವನು (ಬಸಪು. ೪೩-೪). [ಪಟ್ಟ$_3$+ದಾಯ$_1$]

ಪಟ್ಟಧೋತ್ರ (ನಾ). ರೇಷ್ಮೆಯ ಧೋತ್ರ,— ಪಂಚೆ ; ಪೀತಾಂಬರ : ಆಮಳತರಧವಳ ಪಟ್ಟಧೋತ್ರದ ತೊಳಪ ಸುಲಿಪಲ್ಗಳಾವಿಂಚುಪೊರ್ವ್ವಾಂಬಕದ ದಿವ್ಯತಿಲಯೋಗಿತಿಲಕಂ . . . ಆನುದಿನವೀಗೆ ಪಂಡಿತಾರಾಧ್ಯಗುರುರಾಯನೆಮಗಿಷ್ಟಫಲವಾ (ಸೌಂದಪು. ೧-೯).

[ಪಟ್ಟ$_3$+ಧೋತ್ರ]

ಪಟ್ಟನ (ನಾ). ಪಟ್ಟಣ ; ಪುರ ; ನಗರ. [ಸಂ.]

ಪಟ್ಟನೂಲ್ (ನಾ). ರೇಷ್ಮೆಯ ದಾರ; ಪಟ್ಟಸೂತ್ರ : ಪದಿನಾಲ್ಕನೆಯ ಜನೇಂದ್ರಂ ತ್ವದೀಯ ಗುರುವದಱಿನಮಳಸೂತ್ರಾಂತಿಕದೊಳ್ಪದಿನಾಲ್ಕುಂ ಗಂಟನಿಕ್ಕುವುದದು ಕನಕದ ಪಟ್ಟ [ಪಾಠಾಂ. ಟ್ಟು]ನೂಲ ನೂಲಭರಿತಂ (ಆನಂಪು. ೧೦-೬೨). [ಪಟ್ಟ$_3$+ನೂಲ್$_2$]

ಪಟ್ಟನೆ (ಅ). ೧. ಕಟ್ಟನೆ ; ಕೂಡಲೆ ; ಚಕ್ಕನೆ : ಬಿ[ದ್ದಿ] ಮನೆಯ ಮೇಗೇಜು ಕಳ್ಳರೆಂದು ಪುಯ್ಯಲಿಟ್ಟಾಗಳನಬರುಂ ತ್ರಸ್ತಾಭಭೂತರಾಗಿ ಪಟ್ಟನೆ ಪಾಱು[ಪಾಠಾಂ. ಪಟ್ಟಂ ಪರಿ]ಯೋಡಿ . . . ಪಗೆಸಾಟುರ್ದರ್ (ವಡ್ಡಾರಾ. ೧೪-೨೫) ; ವೀರಪಟ್ಟಮಂ ತಡೆಯದೆ ಕಟ್ಟ ವೈರಿಗಳ ಪ[ಪಾಠಾಂ. ತ]ಟ್ಟನೆ ಪಾಱುಸಿ ಕಾವುದೆನ್ನ ಬೆಳ್ಗೊಡೆಯುಮನೆನ್ನ ಪಟ್ಟಮುಮನೆನ್ನುಮಂ (ಪಂಪಭಾ. ೧೨-೫೧). ೨. ಪಟ್ ಎಂಬ ನದ್ದಿನೊಡನೆ : ಮೇಲ್ಸುಟ್ಟಸೊಳ್ ಕೀಲಿಸಿದ ಚಂದನದ ಪೊಟ್ಟಣಂಗಳಂ ಪಟ್ಟನೆ ಪಗಿವ ತಣ್ಪಾನಿಯ ತಂದಲುಂ (ಪರ್ಧಪು. ೫-೬೩ ಪ) ; ತನ್ನ ಕಣ್ಣೊಂದನೊಡೆವೆನೆನುತಂದು ತದ್ರೂಪ ನೆಲದೊಳು ಬರೆದು ನೊಸಲಗಣ್ಣಿಕರದ ಕೋಲಿಂದ ನಿಬ್ಬರದಿ ತಿವಿಯೆ ಪಟ್ಟನೊಡೆಯೆ ಕುರುಡನಾಗುತ ... ಪೇಳಿದನು (ಭೈರವೇ. ೧-೧೪೬) ; ತಪದೆ ಗರ್ಭಂ ಪಟ್ಟನೊಡೆವುದು (ಪತಿಲ. ೧೩-೧೫) ; ಇರುವೆಗಳನ್ನು ಪಟ್ಟನೆ ಬಡಿದು (ಮುಂಬಯಿ. ೬. ೨-೪೩). [ಪಟ್$_3$+-ಅನೆ$_1$]

ಪಟ್ಟಪಗಲ್, ಪಟ್ಟಪಗಲು (ನಾ). ನಿಶ್ಚಳವಾದ ಹಗಲು ; ಹಾಡುಹಗಲು : ಬಲುವಾವ ಪುಲ್ಸರವೆನಿಸುವನು ಪಟ್ಟಪಗಲೆ ನೇಸಱಿನು ಮುಜಿಸುವನು (ನೀತಸಾರ. ೧೯-೧). **ಪಟ್ಟಪಗಲು :** ಪುಣ್ಣವೆಯೊಳುದಿಸುವ ಸುರಾಕೀ[ಕೇಂ]ದುಯಿನರ್ವರೀ ಪಟ್ಟಪಗಲು . . . ಬರುತಿಹರುವರಿಯೆವಿವರಾರೆಂದು (ಸನಪೋ. ೨೪-೭೪).

[ದೇ.॥ ತಮಿ. ಪಟ್ಟಪ್ಪಕಲ್ ; ಮಲ. ಪಟ್ಟಾಪಕಲ್ ; ತೆಲು. ಪಟ್ಟಪಗಲು]

ಪಟ್ಟಪಗಲು 'ಪಟ್ಟಪಗಲ್' ನೋ.

ಪಟ್ಟಪಸೆ (ನಾ). ಸ್ವಲ್ಪ ಹಸಿ : ಧಾರ್ಮಿಕವಾದ ಆತನ ಪುರುಷಾರ್ಥ ಕಾಮದ ಪಟ್ಟಪಸೆಯೂ ಉಳಿದಿಲ್ಲ. ಬದಲಾಗಿ ಅಧಾರ್ಮಿಕವೆನ್ನಿಸಿದ ಶತ್ರುಕಾಮಕ್ಕೆ ರೆಕ್ಕೆ ಮೂಡಿತು (ಪಾರ್ಥಸು. ೬೦). [<ಪಸೆ$_1$]

ಪಟ್ಟಪಜ್ಜಿ (ನಾ). ಚೂರುಚೂರು ; ತುಂಡುತುಂಡು ; ಛಿನ್ನವಿಚ್ಛಿನ್ನ : ತ್ರಿಜಗದ್ಭೂಷಣಗಜಂ ಕ್ರೋಧಿಯೆಂಬ ಮದದೊಳ್ ಮತ್ತನಾಗಿ . . . ಲೋಹದ ಶೃಂಖಲೆಗಳಂ ಪಟ್ಟಪಜ್ಜಿಯಂ [ಪಾಠಾಂ. ಪಟ್ಟುಪಜ್ಜಿ] ಮಾಡಿ ಕಟ್ಟುಪಂಜರದಿಂ ಪೊಱಮಟ್ಟು ಬರುತ್ತ (ಪುಣ್ಯಾಸ್ರ. ೨-೬ ಪ) ; ಸೆಜಿಗ ಹಿಡಿದೊಡೆ ಸೆಣಸೆ ನೀರೆಯ ಪಟ್ಟಪಜ್ಜಿಯಂ ಮಾಡಿದೆ ಗದ ನೀನು ಬರಸೆಳೆದಪ್ಪಿ ಬೈದೊಡೆ ಕೊಟ್ಟ ತೊಡಿಗೆಯ ಮುಜ್ಜಿದಿಟ್ಟಿಗದ ದೆಸೆದೆಸೆಗೆ (ಕುರಾಸಾಂ. ೩೫-೧೦೧). [<ಪಜ್ಜು$_3$]

ಪಟ್ಟಪುಣಿಜ (ನಾ). ೧. ಜರಿ. ೨. ಜರಲೆ : "ಕರ್ಣಜಲೌಕೆ, ಶತಪದಿ ಎಂದೊಡೆ ಪಟ್ಟಪುಣಿಜ ; ಜಱಲೆಯು ಹುಟುವೆಂದೂ ಎಂಬರು" (ನಾಚರಾ.೬). [ಪಟ್ಟ?+ಪುಣಿಜ]

ಪಟ್ಟಬಂಧ (ನಾ). ೧. ರಾಜನನ್ನಾಗಿ ಅಧಿಕಾರಕ್ಕೆ ತರುವ ಸಮಯದಲ್ಲಿ ಆ ವ್ಯಕ್ತಿಯ ಹಣೆಗೆ ಶಾಸ್ತ್ರೋಕ್ತವಾಗಿ ಪಟ್ಟವನ್ನು ಕಟ್ಟುವಿಕೆ ; ವಿಧಿವತ್ತಾಗಿ ರಾಜನೆಂದು ಅಭಿಷೇಕ ಮಾಡಿ ಸಿಂಹಾಸನದಲ್ಲಿ ಕುಳ್ಳಿರಿಸುವುದು ; ಪಟ್ಟಾಭಿಷೇಕ : ಮುಧು ಮನೋಭವರರ್ಮುಮಟ್ಟು ವಟ್ಟು ಮಲ್ಲಿಗೆಗೆ ಬಸಂತದೊಳ್ ಬಯಸಿ ಮಾಡಿದರಲ್ಲರೆ ಪಟ್ಟಬಂಧಮಂ (ಆದಿಪು. ೧೧-೧೦೩) ; ೧ನೆಯ ಶಿವಳುಮಾರನ ಪಟ್ಟಬಂಧದ (ಕ್ರಿ.ಶ. ೬೭೯) ಪೂರ್ವದಲ್ಲಿ . . . ಪೊಲವೀರ ಶ್ರೀವಿಕ್ರಮ ಭೂವಿಕ್ರಮರ ಅಳಿಕೆಗಳು ಮುಗಿದಿದ್ದವು (ಕರ್ನಾಇ. ೨೨). ೨. ಕಿರೀಟ : ಇವಳ ತಲೆಯ ಮೇಲಿರುವ ಪಟ್ಟಬಂಧದಲ್ಲಿ ಹಿಂದು ಮುಂದಕ್ಕೆ ಸರಿಯುವ ಸಣ್ಣ ಉಂಗುರವಿದೆ (ಹೊಯ್ಸಪಾ. ೩೫). [ಪಟ್ಟ$_3$+ಬಂಧ]

ಪಟ್ಟಬಂಧನ (ನಾ). = ಪಟ್ಟಬಂಧ ೧ : ಆದಿವಂಶಾವತಾರಸಂಭವಂ . . . ವೈವಾಹಂ ಯುಂಧಿಷ್ಠಿರೆ ಪಟ್ಟಬಂಧನಂ . . . ಅರ್ಜುನಾಭಿಷೇಕಂ ಪೆಜವುಮುಪಾಖ್ಯಾನಕಥೆಗಳೊಳಮೊಂದುಂ ಕುಂದಲೀಯದೆ ಪೇಟ್ಟಿಂ (ಪಂಪಭಾ. ೧೪-೫೨ ಪ) ; ಕಿಱಿಯಂ ಪಾರ್ಥಂ ಮಹೀನೋಹವಿಲ್ಲೆನಗೀತಂ ಕುರುಯುವುದ್ಧಲಬ್ಧಜಯನೀ ಭೀಮಂಗೆ ನೀಂ ಪಟ್ಟಬಂಧನಮಂ ಮಾಟ್ಪುದು (ಗದಾಯು. ೧೦-೬೩). [ಪಟ್ಟ$_3$+ಬಂಧನ]

ಪಟ್ಟ ಬಂಧೋತ್ಸವ (ನಾ). ಪಟ್ಟಗಟ್ಟುವ ಉತ್ಸವ,—ಸಮಾಠಂಭ : ಶ್ರೀಮದಿನ್ದ್ರರಾಜಪಟ್ಟಬಂಧೋತ್ಸವಸ್ಯ . . . ಶ್ರೀನೊಟಂಬಕು×××ಕದೇವಸ್ಯ ಶೌರ್ಯ್ಯಶಾಸನಂ (ಎಕ. II, ೫೯-೧೩; ಸು. 974); ಸಕಲಸಾಮ್ರಾಜ್ಯಶ್ರೀಯಂ ಶ್ರೀಷೇಣಭೂಪತಿ ನಿಜತನೂಜನೊಳ್ ನಿಯೋಜಿಸಿ ಸಮಸ್ತಸಾಮಂತ ಮಂತ್ರಿಸಂದೋಹಮಂ ಪಟ್ಟಬಂಧೋತ್ಸವಮಂ ಮಾಡಲ್ವೇಟ್ಟು (ಚಂದ್ರಪ್ರ. ೪-೨೪ ಪ); ಆತ್ಮಪುತ್ರಂಗಧಿಕ ಮಹಿಮೆಯಂ ಮಾಡಿದಂ ಪಟ್ಟಬಂಧೋತ್ಸವಮಂ ಸುಗ್ರೀವಭೂಪಾಳಕಂ (ಪುಷ್ಪಪು. ೧೨-೧೧೪). [ಪಟ್ಟಬಂಧ+ಉತ್ಸವ]

ಪಟ್ಟ ಬದ್ಧ, ಪಟ್ಟಬದ (ನಾ). ಒಂದು ಬಗೆಯ ತೆರಿಗೆ (?) : ಕಿಱುಕುಳ ಪಟ್ಟಬದ್ಧ ಪುತ್ರೋತ್ಸಾಹ ಆನೆಯ ಸೇಸೆ ಕುದುರೆಯ ಸೇಸೆ . . . ಎಲ್ಲಾ ತೆಱಿಯನೂ ಎಲ್ಲಾ ಬಾಧೆಯನೂ ಪರಿಹರಿಸಿ ಕೊಟ್ಟು (ಎಕ. VII (R), ನಾಗಮಂ. ೭೪-೩೭; 1271); ಪಟ್ಟಬದ್ಧ ಪುತ್ರೋತ್ಸಾಹದ ವಳಾರದ ಭಂಡಿ ತುಪ್ಪ ದಳಮಿಳಿ . . . ಕಟ್ಟಿಲವಡಿಕೆ ಇಂನ್ತೀಪೊಳಗಾದ ಎಲ್ಲಾ ಹದಿಕೆಯನೂ ಎಲ್ಲಾ ಬಾಧೆಯನೂ ಆ ಮಹಾಜನಂಗಳು ಪರಿಹರ್ಸಿ ಕೊಟ್ಟು (ಎಕ. VII (R), ನಾಗಮಂ. ೭೩-೪೮; 1309). **ಪಟ್ಟಿಬದ :** ಉತ್ಸಾಹ ಪಟ್ಟಬದ ಪುತ್ರೋತ್ಸಾಹ . . . ಆ ಮಹಾಜನಂಗಳು ಆ ದೆವಪ್ಪನವರೂ ತೆತ್ತು (ಎಕ. V (R), ತಿರುಮ. ೨೩೮-೪೭; 1290). [?]

ಪಟ್ಟ ಬಾಸಿಗ (ನಾ). ೧. ಪಟ್ಟದ ಬಾಸಿಂಗ; ರಾಜತ್ವಸೂಚಕವಾದ ಬಾಸಿಂಗ : ಆ ಭರತರಾಜನ ಮಸ್ತಕದೊಳ್ ಪೃಥ್ವೀಸಾಮ್ರಾಜ್ಯವೆಂಬ ಅಭಿಷೇಕವಂ ಮಾಡಿ ಲಲಾಟದೊಳ್ ಪಟ್ಟಬಾಸಿಗಮಂ ಕಟ್ಟಿದನು (ಪುರುಚ. ೮೮). ೨. ಮದುಮಕ್ಕಳ ಹಣೆಗೆ ಕಟ್ಟುವ ಶುಭಸೂಚಕವಾದ ಪಟ್ಟಿ : 'ಪಟ್ಟಬಾಸಿಗಗಟ್ಟು' ಪರಾ. [ಪಟ್ಟ$_3$+ಬಾಸಿಗ$_1$]

ಪಟ್ಟಬಾಸಿಗಗಟ್ಟು (ಕ್ರಿ). ಮದುವೆಯ ಸಮಯದಲ್ಲಿ ಹಣೆಗೆ ಶುಭಸೂಚಕವಾದ ಬಾಸಿಗವನ್ನು ಧರಿಸು : ಪಟ್ಟಬಾಸಿಗಗಟ್ಟ ಮದುವೆಯಪ್ಪುದದೊಂದು ಪಟ್ಟಗದ್ದುಗೆಯೊಳು ನೃಪಸಾ ಮುಟ್ಟಿ ಕುಳ್ಳಿರುವುದೊಂದಾಗಬೇಕೆಂದರು (ಭರತ. ೩೭-೧೧೪).

[ಪಟ್ಟಬಾಸಿಗ+ಕಟ್ಟು$_1$]

ಪಟ್ಟಭದ್ರ (ಗು). ೧. ಅಧಿಕಾರ ಮುಂತಾದುವು ಕೆಲವೇ ವ್ಯಕ್ತಿಗಳ ಕೈಯಲ್ಲಿ ನೆಲೆಯೂರಿ ನಿಂತ,—ಕೆಲವರಿಗೆ ಮಾತ್ರ ಹಕ್ಕು ಅಥವಾ ಬಾಧ್ಯತೆಯಂತೆ ನಡೆದು ಬಂದಿರುವ : ಪಟ್ಟಭದ್ರ ಹಿತಗಳು (Vested interests. ಪತ್ರಿಕೆ. ೪೬). (ನಾ). ೨. ಸ್ಥಿರವಾದ ಅಧಿಕಾರವನ್ನು ಪಡೆದವನು; ಅಧಿಕಾರದಲ್ಲಿ ಸ್ಥಿರವಾಗಿರುವವನು : ಮುಳಲರು ಪಟ್ಟಭದ್ರರಾದ ತರುವಾಯ ಅವರು ಕಲೆಗೆ ಪ್ರೋತ್ಸಾಹ ನೀಡತೊಡಗಿದರು (ಭಾರದ. ೫೫೧). [ಪಟ್ಟ$_3$+ಭದ್ರ]

ಪಟ್ಟಮಹಾದೇವಿ(ನಾ).ಅರಸನ ಜೊತೆಯಲ್ಲಿ ಪಟ್ಟಾಭಿಷಿಕ್ತಳಾದ ರಾಣಿ; ಪಟ್ಟಮಹಿಷಿ; ಹಿರಿಯರಸಿ : "ಭಟ್ಟನಿಯರ್ ನೃಪಸತಿಯರ್ ಪಟ್ಟಮಹಾದೇವಿಯಗ್ರಮಹಿಷಿಯೆನಿಕ್ಕುಂ" (ಪಸ್ತುಕೋ. ೬೦-೪೯); ತ್ರಿಭುವನಮಲ್ಲ ಭುಜಬಳಗಂಗ ಪೆರ್ಮ್ಮಾಡಿದೇವರ ಪಟ್ಟಮಹಾದೇವಿ (ಎಕ. VII, ತಿಪನೂ. ೯೭-೧೧; 1113); ಬಿಟ್ಟದೇವನ ಹಿರಿಯರಸಿ ಪಟ್ಟಮಹಾದೇವಿ ಶಾನ್ತಲದೇವಿಯ ಸದ್ಗುಣವನ್ತೆಗೆ . . . ಉಳಿದ ಸತಿಯರ್ ದೊರೆಯೇ (ಎಕ. II, ೧೪೦-೧೮೨; 1145).

[ಪಟ್ಟ$_3$+ಮಹಾದೇವಿ]

ಪಟ್ಟಮಹಿಷಿ (ನಾ). = ಪಟ್ಟಮಹಾದೇವಿ : ಪಟ್ಟಮಹಿಷಿ, ಪಟ್ಟವಣೆ (ಶಮದ. ೨೯೮ ಪ್ರಯೋ); ನೀನು ಪಟ್ಟಮಹಿಷಿಯಾಗಿರುವಾಗ ನಿನ್ನ ಪಟ್ಟವನ್ನು ಕಿತ್ತು ಇನ್ನೊಬ್ಬರಿಗೆ ಕೊಟ್ಟರೆ, ಜನರು ಇಲ್ಲದ ಸಲ್ಲದ ಕಾರಣಗಳನ್ನು ಕಲ್ಪಿಸಿ ಹರಟುವರು (ಶಾಂತಲಾ. ೨೩೯); ಯುದ್ಧದಲ್ಲಿಗೆದ್ದ ಮೇಲೆ ಪಟ್ಟಮಹಿಷಿ ಆಗುವವಳು ದ್ರೌಪದಿಯಲ್ಲ, ಸುಭದ್ರೆ (ಕಸಾಚ. ೯೫). [ಪಟ್ಟ$_3$+ಮಹಿಷಿ]

ಪಟ್ಟಮಾದೇವಿ (ನಾ). = ಪಟ್ಟಮಹಾದೇವಿ : ಮಹಾಸೇನಮಹಾರಾಜಂ . . . ಮೇಗಣ ನೆಲೆಯುಪ್ಪರಿಗೆಯ ಕಳಕಳರವಮಂ ಕೇಳ್ದು ಪಟ್ಟಮಾದೇವಿಯೋಲಗಸಾಲೆಗಭಿಮುಖನಾಗಿ (ಬಾಧಪು. ೨-೬೮ ಪ).

[ಪಟ್ಟ$_3$+ಮಾದೇವಿ]

ಪಟ್ಟಮಾರ್ಗ (ನಾ). ಪ್ರಧಾನಮಾರ್ಗ; ಮುಖ್ಯಬೀದಿ : ಸಂಚರತ್ತೌರನಿತಂಬಿನ್ಯಂದುಕಾರಾವದಿನತಿಮುಖರಂ ತತ್ಪುರೀಪಟ್ಟಮಾರ್ಗಂ (ಚಂದ್ರಪ್ರ. ೧-೧೩೧). [ಪಟ್ಟ$_3$+ಮಾರ್ಗ]

ಪಟ್ಟಮಾರ್ಗಂಬಿಡಿ (ಕ್ರಿ). ರಾಜಮಾರ್ಗವನ್ನು ಹಿಡಿ : ಸುಬಳಧರಾಧೀಶ್ವರಂ . . . ಪಟ್ಟಮಾರ್ಗಂಬಿಡಿದು ಪಾದಮಾರ್ಗದಿಂ ಸನ್ಮಾರ್ಗಮಾರ್ಗಿಗಳನೆಯ್ದೆವಂದು (ಸುಕುಮಾ. ೮-೪೮ ಪ).[ಪಟ್ಟಮಾರ್ಗ+ಬಿಡಿ$_1$]

ಪಟ್ಟಮುಡುಹು 'ಪೊಟ್ಟಮುಡುಹ' ನೋ.

ಪಟ್ಟರಾಜ (ನಾ). ಪಟ್ಟಾಭಿಷಿಕ್ತನಾದ ರಾಜ; ಪಟ್ಟ ಕಟ್ಟಿಸಿಕೊಂಡ ದೊರೆ : ಯಾವಂ ಪಟ್ಟರಾಜನಂ ರಾಜನೆನ್ನದೆ ತಾನೆ ಅರಸೆನುವನವಗೆ ಮರಣದಿನನ್ಯವಿಧಿಯೆ ? (ಗೊಲ್ಲಾಥಾ. ೬-೧೬೦).

[ಪಟ್ಟ$_3$+ರಾಜ]

ಪಟ್ಟಲ್ (ನಾ). ಒಂದು ಸ್ಥಳದ ಹೆಸರು : ಪಟ್ಟಲ್ಸಾಮಗ್ರಾಮಂ . . . ಮಾದ(ಧ)ವಱೌವೇರಗ್ಗಂ (ಇಅ. XVIII, ೩೬೬-೧೭; ಸು. ೮ನೆಯ ಶತ); ಕಡೆಕೊಳಂ ಮರಿಯಿಸೆ ಪಟ್ಟಲ್ಮೂಱೂರ ಮುಕ್ಕೂಡು . . . ತೆಂಕ ಪೋಗಿ ಕಡೆಕೊಳಂ ಪಟ್ಟಲ್ಪೆಯ್ದುಗೆ ಮುಕ್ಕೂಡು (ಮೈಅರಿ. ೧೯೩೪, ೩೮-೧೫; 11ನೆಯ ಶತ). [?]

ಪಟ್ಟಲು 'ಪಡಲ$_1$' ನೋ.

ಪಟ್ಟಲೆ (ನಾ). ೧. ಜಿಲ್ಲೆ. ೨. ಪಂಗಡ; ಜಾತಿ. [ಸಂ. ಪಟ್ಟಲಾ]

ಪಟ್ಟವಣೆ (ನಾ). ೧. ರಾಜಪೀಠ; ಗದ್ದುಗೆ; ಸಿಂಹಾಸನ : "ಪಟ್ಟವಣೆಯೆಂದುಂ ಬಿತ್ತರಿಯೆಂದುಂ ಸಿಂಹಾಸನಂ" (ಕಶಸಾ.೬೦-೩೨೩); ಕೆಂಬೊನ್ನ ಪಟ್ಟವಣೆಯ ದಳಿಂಬಂ ಪುಡಿಗೆದಱಿ ಪರೆದ ಪೂ[ವ] ತುಱುಂಗಲ್ . . . ಬಗೆಗಳುಂಬಮಾಗೆ ತೋಱುದುವು (ಪರ್ಥಮಾ. ೩-೮೭); ಓಲಗಸಾಲೆಯೊಳ್ ಸಿಂಗರದ ಚೆನ್ನನಾಂತ ಪಟ್ಟವಣೆಯ ಮೇಲೆ ಇಚ್ಛೆಗಾರ್ತಿವೆರಸು ನನೆವಿಲ್ಲ ಬಲ್ಲಹಂ ಕುಳ್ಳಿರಲ್ (ಕಬ್ಬಕಾ. ೩೪೧); ಸಿರಿದುಂ ಪೊಂಪುಱುಯೇಱುಪಟ್ಟವಣೆಯಂ ತಾನೇಱುದಂ ಸದ್ಗುಣಾಕರನಂದಿರ್ಮಂಡಿ ರಾಜರಾಜಂ (ಚಕವಿ. ೨-೮೫); ಏನ್ನನುಱುದೆಂತರೆಮೆಯ್ಯೊಳಿರ್ಪಯ್ ! ಎಂತು ಪಟ್ಟವಣೆಯನೇಱುವಯ್ ! (ರಾಮಾಶ್ವ. ೩೬-೨); ಪಟ್ಟವಣೆಗೆ ಮುಂದಿನ ಉತ್ತರಾಧಿಕಾರಿ ನೀನು, ಅಪ್ಪಾಜಿ (ಕಪಪು. ೬-೮೯). ೨. ವಧೂವರರು ಕುಳಿತುಕೊಳ್ಳಲು ನಿರ್ಮಿಸಿದ ಹಸೆಮಣೆ : ಚೆಂಬೊನ್ನ ಪಟ್ಟವಣೆಯ ಮೇಗಣ ದುಗುಲದ ಪಸೆಯೊಳ್ ಗುಣಾರ್ಣವನನಾ ದ್ರುಪದಜೆಯನೊಡನೆ ಕುಳ್ಳಿರಿಸಿ . . . ಕೆಯ್ಯಾರೆಱೆದು ಪಾಣಿಗ್ರಹಣಂಗೆಯ್ದೆ (ಪಂಪಭಾ. ೩-೭೪ ಪ); ಅಂತು ಬಂದ ವಧೂವಾಂತರರ್ಮರುಮಾ ವಿವಾಹವೇದಿಕಾಮಧ್ಯದೊಳ್ ದಳಿಂಬದಿಂ ಪಚ್ಚವಡಿಸಿದ ಪಳಿಕಿನ ಪಟ್ಟವಣೆಯೊಳಿರಿಸಿ (ಚಂದ್ರಪ್ರ. ೬-೭೦ ಪ); ಅನಂತನಾಥಂ . . . ದುಗುಲದಿಂ ಪಾಸಿದ ಪಟ್ಟವಣೆಯ ಪಸೆಯನಲಂಕರಿಸೆ (ಅನಂಪು.೬-೫೭ಪ). ೩. ಹಲಗೆ; ಮಣೆ : ಕಟ್ಟಿದ ಬೆಳುವಟ್ಟಿಯ ಮೇಲ್ಮಟ್ಟನೊಳಂ ತೀವಿದ ಚೆಂಬೊನ್ನ ದೋಣಿಗಳೊಳಮಳಂಕರಿಸಿದ ಪಳುಕಿನ ಪಟ್ಟವಣೆಗಳೊಳಂ . . . ಎಸೆವ ಮಜ್ಜನಪ್ರದೇಶಕ್ಕೆ . . . ಬಂದು (ಕಾದಂಪೂ. ೭೦).

[ಪಟ್ಟ$_3$+ಮಣೆ]

ಪಟ್ಟವರ್ಧನ (ನಾ). ೧. ಶ್ರೇಷ್ಠಲಕ್ಷಣಗಳಿಂದ ಕೂಡಿದ, ರಾಜನಿಗೆ ಮಾತ್ರ ವಿಹಿತವಾದ ಆನೆ; ಪಟ್ಟದ ಆನೆ; ಪೂಜಾ ಗಜ: "ಪೂಜಾಗಜಂ=ಪಟ್ಟವರ್ಧನಂ" (ಶಸುದ. ಪರಿ. ೨); ಮಂಡನಾ ಯೋಗಂಗಳೊಳಾಯೋಗಂಗೊಂಡು ಬಂದ ಮದಾಂಧಗಂಧಸಿಂಧುರಮಪ್ಪ ಪಟ್ಟವರ್ಧನದ ಬೆಂಗೆವಾಯ್ದು (ಪಂಪಭಾ. ೧೧-೨೬ ಪ); ಪಜ್ರಾಯುಧಂ ಪೋಗಿ ಸಮವಸರಣಭೂಮಿಯನೆಯ್ದಿ ಪಟ್ಟವರ್ಧನದಿಂದಮಿಳಿಯೆ (ಶಾಂತಿಪು. ೪-೧೫೫ ಪ); ಭದ್ರಗಜಮಂ ಕಂಡು ಮನದೆ ಕೊಂಡೆನಗೆ ಪಟ್ಟವರ್ಧನಮಾಗಲಿದುವೆ ತಕ್ಕುದೆಂದು . . . ಅಶ್ರಮದೊಳ್ ಪಿಡಿದು (ಪಂಂಪಮಾ. ೧೦-೧೫೯ ಪ). ೨. (ಗುಹ್ಯಭಾಗ, ಮುಖ ಹಾಗೂ ಕಾಲುಗಳು ಬೆಳ್ಳಗಿರುವ) ಒಂದು ಬಗೆಯ ಉತ್ತಮಜಾತಿಯ ಕುದುರೆ: ಅಭಿಷೇಕಂ ತೋರಣದೊಳ್ ವಿಭೂತಿಯಿಂ ತಂದು ಪಟ್ಟವರ್ಧನಕೆ ಜಗತ್ಪ್ರಭುವಂ ಪೊಡವುಡಿಸುವುದಿರುಳಭಿಮುಖನಾಗಿರ್ದು ಶಾಸ್ತ್ರವೇದ್ಯಂ ವೈದ್ಯಂ (ಅಶ್ವಶಾ. ೪-೨೫). ೩. ಅನೇಕ ಶಾಸ್ತ್ರಪಾರಂಗತನಾದ ಬ್ರಾಹ್ಮಣ: ಸಿಟ್ಟಿಯರಲ್ಲ ಮೇಣು ಪಟ್ಟವರ್ಧನರಿವರು ಬಟ್ಟ ತ್ತಾಗಿಯೆ ಬೊಟ್ಟನಿಟ್ಟಿಹರು (ಸರ್ವಪ. ೧೬೫-೬೮೩). [ಸಂ.]

ಪಟ್ಟವಸ್ತ್ರ (ನಾ). ರೇಷ್ಮೆವಸ್ತ್ರ; ಪಟ್ಟಾವಳಿ: ಸಿಂಹಳನ್ಯಪಂ . . . ತನ್ನ ಕುವರಯರಿರ್ವರಂ ಮುನಿಗಳ ಪಟ್ಟ[ಪಾತಾಂ. ಟ್ಟು]ವಸ್ತ್ರಗಳ . . . ಕೊಟ್ಟು (ಭಾಸಚ. ೫-೨೧). [ಪಟ್ಟ₃+ವಸ್ತ್ರ]

ಪಟ್ಟವಳಿ 'ಪಟ್ಟವಟಿ' ನೋ.

ಪಟ್ಟವಟಿ,ಪ್ರಪಟ್ಟವಳಿ, ಪಟ್ಟವಾಳಿ,ಪಟ್ಟಳಿ,ಪಟ್ಟಲಿ₂, ಪಟ್ಟಾವಳಿ, ಪಟ್ಟಾವಟಿ, ಪಟ್ಟಾವೊಳಿ, ಪಟ್ಟಾಳಿ; ಪಟ್ಟೋಲಿ (ನಾ). ೧. ರೇಷ್ಮೆ; ಕೌಶೇಯ: ಮಿಸುಗುವ ಚೌಕದ ಮುತ್ತಿನ ಪಸೆವಾಸಿನ ಪಟ್ಟವಟಿಯ ದುಗುಲದ ರುಚಿಗಳ್ ಪಸರಿಸೆ ಪೊಂಜಗಲಿ ವಿರಾಜಿಸುತಿರ್ದುದು (ಜಗವಿ. ೧೦-೯೫). **ಪಟ್ಟವಳಿ**: ೨. ರೇಷ್ಮೆವಸ್ತ್ರ; ಪಟ್ಟೆಮಡಿ; ಪೀತಾಂಬರ: ಪಟ್ಟವಳಿಯಂ ಪೊದಿಸಿ (ರೇವಣ. ೧೦೫-೭); ಪಟ್ಟವಳಿಗಳು ಛಿದ್ರವಾದುದ ನಿಟ್ಟಿಸಿದಳೊರ್ ಸತಿ (ಶಂಕರಾ. ೭-೭೪). **ಪಟ್ಟವಾಳಿ**: ೨. ತರಿಸಿ ಸುತ್ತಿದ ಪಟ್ಟವಾಳಿಯನಿರದೆ ಚಿತ್ರಾವಳಿ ಗಜಾವಳಿ ಜರಿಯ ಪುಲ್ಲಿಯ ಸೂಕರಾವಳಿ ಹಲವು ವರ್ಣಗಳ (ಕೌಬಾ. ೧೨-೧೦); ಪಟ್ಟವಾಳಿಯನುಟ್ಟು ಬನ್ನ ಪಟ್ಟಚುಂಗ ಬಿಟ್ಟು ಬನ್ನ ಪಟ್ಟವಸ್ತ್ರದಿ ಪುರಂದರವಿಟ್ಠಲರಾಯನ ನೋಡುವ ಬನ್ನ (ಪುರಂದ.೧-೧೦೭೬-೭). **ಪಟ್ಟಳಿ**: ೧. ತುಂಬುರ ಸಚಿವನು . . . ಮಜ್ಜನವಿಡಿದ ಪಟ್ಟಳಿಯ ತೆರೆಯೊತ್ತಿನಲಿ ನಿಂದನು (ಸೌಂದಪು.೧೩-೪೫); ಮೂರಾರಿಲಿಂಗಕ್ಕೆ ಪಟ್ಟಳಿಯ ಭಕ್ತಿ ಕರ್ಪೂರಸಮ್ಮಿಶ್ರ ಕಾರ್ಪಾಸಭಕ್ತಿಗಳನಾ ನೂಱಾಱುಸಾಹಸ್ರವೆಸೆವ ಲಸದಾರತಿಯನಾ ನಿರಾಜನವೆನಿಸುವ ಚಾರುತರಧಾರತಿಗಳಂ ಬೆಳಗುವಾತಂಗೆ ಸೂರಾಬ್ದ ಶಿವನೇತ್ರನೊಲಿದು . . . ಸರ್ವಸುಖಮಂ ಕೊಡುವನು (ಗುರುಚಾ. ೬-೪೪). **ಪಟ್ಟಲಿ₂**: ೨."ಪಟ್ಟಲಿಯೆನಲ್ಕೆ ದುಗುಲಮದುಂ" (ಚತುರ. ೧೩೧). **ಪಟ್ಟಾವಳಿ**: ೨. ಇಳೆಗೆ ಪಟ್ಟಾವಳಿಯನುಡಿಸಿದವರಿಂತುಂಟೆ ತಿಳಿವಡೆಸ್ನೆಯ ಪೂಜೆಗಳವಡಿಸಿದವರುಂಟೆ (ಆಕೀರ.ವೇ.೧೦೪-೧); ಪಳಿಯು ಪಟ್ಟಾವಳಿಯು ನೇತ್ರಾವಳಿಯು . ಹಂಸಾವಳಿಯು (ಬಸಪು. ೧೧-೨೫); ಸುರಂಗಿನ ಪಟ್ಟ ಪಟ್ಟಾವಳಿಯ ದಿಂಡುಗಳ . . . ಚಿತ್ರಾವಳಿಯ ಸತ್ತಿಗೆ ಹೇಮಘಟಸಂತತಿಯನೊಟ್ಟಿದರು (ಕುನ್ಯಾಸ. ೫-೪೬); ರತ್ನಾರತಿವೆಳಗಿ ದಸರಿ ಪಟ್ಟಾವಳಿ ಚಿತ್ರವಸ್ತ್ರವ ನಿವಳಿಸಿದರಚ್ಯುತನಂಘ್ರಿಗಳಲಿ (ಪೋಹಪ. ೪೨-೨೬). **ಪಟ್ಟಾವಟಿ**: ೨. ಪಟ್ಟಾವಟಿಯನುಟ್ಟು ಕೊಂಡರಸುಮಗನಂ ಪೋಲ್ತು . . . ಇಷ್ಟವಿಷಯ ಕಾಮಭೋಗಂಗಳನನುಭವಿಸುತಿರ್ಪುದುಂ (ಪಂಚತಂ. ೧೪೬-೧೫೫); ಚೀನದ ಮಹಾಚೀನದ ಪಟುಯ ಚಿತ್ರಾವಟುಯ ಪಟ್ಟಾವಟುಯ ಪಟ್ಟಸೂತ್ರದ . . . ಪುಟ್ಟಗೆಗಳನೊಟ್ಟಿ ಬಿಟ್ಟಾಗಿ ಪುಂಜಿಸಿ (ಸುಕುಮಾ. ೧೦-೯೧ಸ); ತಾಂ ದೊಡ್ಡ ವ್ಯವಹಾರಿಯಾಗಿ ಎಲ್ಲಾ ಪರದರಿಗೆ ಮುಖ್ಯನಾಗಿ ಪಟ್ಟಾವಟಿ ಮೊದಲಾದ ವಸ್ತ್ರಂಗಳುಮಂ . . . ಪೇಱುಕೊಂಡು (ಪುಣ್ಯಾಸ್ರ. ೩-೪೩ ಪ). **ಪಟ್ಟಾವೊಳಿ**: ೨. ಭುವನಕೋಶದ ಸೀರೆ ಶುಭ್ರ ಪಟ್ಟಾವೊಳಿ ನವರಂಗವು ಕರ್ಕವಾಡ ಜವುಳವಳಿಯು ಸಿಂಹಳಾಂತಕ ಕಂತಿಯು ಅವುಗಿದೇವನ ಮನೆಯೊಳಗೆ (ಅಮುಸಾಂ.೪-೨೩). **ಪಟ್ಟಾಳಿ**: ೧. ವಿಜಿಗುವ ಪಂಚಾಂಗರಾಯ ಪಟ್ಟಾಳಿಯಂ ಸರಗೊಂಡೆಯ ರುಂಲ್ಲಿಗಳು ಮೆಱೆದುವು ರಥದಂತರಾಂತರದೊಳಗಿಹ ಸುರುಚಿರ ಲೋವೆಗಳೊಳಗೆ (ಕಂನವಿ. ೨೩-೬೪). **ಪಟ್ಟೋಲಿ**: ೧. ಪಟ್ಟೋಲಿಯ ಸರ ಗೊಂಡೆಯದ ಲೋವೆಯಿಂದ ವರರತ್ನದ ಪ್ರತಿಮೆಗಳಿಂದ ಭೂಪನ ಹಿರಿಯ ಪಡಾರವೊಪ್ಪಿದುದು (ಕಂನವಿ. ೬-೩೦); ಪಟ್ಟೋಲಿ ಈ ಸೀರೆ ಪಾಪ ಮುಚ್ಚುಡುವೊಳು (ಲೋಕಗೀ. ೧೨೩). [ಪಟ್ಟ₃+ಪಟ₆]

ಪಟ್ಟವಾಲ (ನಾ). (?): ಲಾಲರು ತೆರುವ ಗ ೧೫ ಪಟ್ಟವಾಲರುಗಳಿಗೆ ಗ ೪ ಅರಿಯರು ತೆರುವ ಗ ೪ ತೀರಬುತ್ತಿಯರು ತೆರುವ ಗ ೧೫ (ಎಕ. XV, ಬೇಲೂರು. ೨೯೮-೭೩ ; 1279). [?]

ಪಟ್ಟವಾಳಿ 'ಪಟ್ಟವಟಿ' ನೋ.

ಪಟ್ಟವೇದಿ (ನಾ). ಅಧಿಕಾರಸೂಚಕವಾದ ಉಂಗುರ; ಮುದ್ರೆಯುಂಗುರ (?): ಕುನ್ದಿಗನೊಳ್ಪಡೆದಂ ನದು[ನಾ][ಡ]ತೀರ್ಥವೀ ಮಹಿಮೆಗಳಂ ಪಟ್ಟವೇದಿಯಂ ಬೆ×× ಬಟ್ಟನ್ದಂ ××× ಕುನ್ದಿಗಂ (ಸೌಇಇ. XX, ೨೪-೧೫೫ ; 1034). [ಪಟ್ಟ₃+ವೇದಿ₂]

ಪಟ್ಟವೇರು 'ಪಟ್ಟವೇಱು' ನೋ.

ಪಟ್ಟವೇಱು, ಪಟ್ಟವೇರು (ಕ್ರಿ). ಸಿಂಹಾಸನವನ್ನು ಹತ್ತು,—ಆರೋಹಿಸು; ರಾಜನಾಗು: ಪೊಸತೆ ಪಟ್ಟವೇಱುದನ ಕಯ್ಮೀಗಳುಂ ಬಿಗಿಯೆ (ಬದ್ಧಪ್ರ. ೨-೪೦). **ಪಟ್ಟವೇರು**: ಮೂರನೆಯ ಗೋವಿಂದನ ಮರಣಾನಂತರ ಅವನ ಮಗ ಅಮೋಘವರ್ಷನೃಪತುಂಗ ಪಟ್ಟವೇರಿದ್ದನು (ಸೊಳಂಬ. ೨೭). [ಪಟ್ಟ₃+ಏಱು₁(<ಏಱ್₁)]

ಪಟ್ಟಶರ (ನಾ). ದೊಡ್ಡ ಕೆರೆ,—ಕೊಳ: "ಪಟ್ಟಸರ—ಪಟ್ಟಶರ=ದೊಡ್ಡ ಕೆರೆ" (ಶಬ್ದಕೋ. ೨೩); ಪಟ್ಟವರ್ಧನ, ಪಟ್ಟಶರ (ಶಮುದ. ೨೯೮ ಪ್ರಯೋ). [ಪಟ್ಟ₃+ಶರ]

ಪಟ್ಟಶಾಲಿ 'ಪಡಸಾಲೆ₂' ನೋ.

ಪಟ್ಟಶಾಲೆ 'ಪಡಸಾಲೆ₁' ನೋ.

ಪಟ್ಟಶಾಳೆ 'ಪಡಸಾಲೆ₁' ನೋ.

ಪಟ್ಟಶಿಲ್ಪಿ (ನಾ). (ಅರಮನೆಯ) ಮುಖ್ಯ ಶಿಲ್ಪಿ; ಪ್ರಧಾನ ಶಿಲ್ಪಿ: ಒಂದನೆ ನರಸಿಂಹನ ಪಟ್ಟಶಿಲ್ಪಿ ಕೇದಾರೋಜನು ೪ ದ್ವಾರಗಳನ್ನೂ ಮುತ್ತು ಜಾಲಂದ್ರಗಳನ್ನೂ ನೇರಿಸಿದನು (ಭಾರದ. ೫೦೬).
[ಪಟ್ಟ₃+ಶಿಲ್ಪಿ₁]

ಪಟ್ಟಶಿಷ್ಯ (ನಾ). ಮೆಚ್ಚಿನ ವಿದ್ಯಾರ್ಥಿ; ಪ್ರಧಾನಶಿಷ್ಯ: ಅರ್ಜುನನು ದ್ರೋಣಾಚಾರ್ಯರ ಪಟ್ಟಶಿಷ್ಯನೆನಿಸಿಕೊಂಡನು (ಕೂಡಿ).
[ಪಟ್ಟ₃+ಶಿಷ್ಯ]

ಪಟ್ಟಸ 'ಪಟ್ಟಸ₁' ನೋ.

ಪಟ್ಟಸ₂ (ನಾ). ಖಡ್ಗದಂತಹ ಒಂದು ಬಗೆಯ ಆಯುಧ: "ಪಟ್ಟಸ—ಪಟ್ಟಶ=ಒಂದಾಯುಧ" (ಶಬ್ದಕೋ. ೨೩); ಶೃಣಾಣ ಪಟ್ಟಸ ಪರಶು ಪಂಳಿ ಗಡಾದಿ ಶಸ್ತ್ರದಿನೆಸದುದಾ ದುರ್ಗ (ತೊರಂಾ. ೬-೭-೬); ಸುರಗಿ ಸೂನಗಿ ಶಕ್ತಿ ಕರವಾಳು ಗದೆ ಖಡ್ಗ ಪರಶು ಪಟ್ಟಸ ಕೊಂತ ಲೌದಿ . . . ಮುದ್ಗರ ಮೊದಲಾದಾಯುಧದೊಳು . . . ಪೊಡದು(ಭೈರವೇ.೩-೯); ಕುಂತಂಗಳಿಂ ಜಂತೆಗಳಂ ಪ್ರಾಸ ಪಟ್ಟಸಂಗಳಿಂ

ಪಾಸುವಲಗೆಗಳಂ . . . ಅಳವಡಿಸಿ (ಚಿಕನಂ. ೫೪-೧೫); ಝುಲ್ಲಿಸುವ ಪಟ್ಟಸದಲಸಿ ಗದೆಯಲ್ಲಿ ತಾಗಿದ ಗಾಯದಲಿ ಬಲುಬಲ್ಲಿದರು ನೆಲಕುರುಳಿ ಹೊರಳುವರುಭಯಕಟಕದಲಿ (ಕೋಗಯ. ೨೧-೨೮).

[<ಸಂ. ಪಟ್ಟಸ]

ಪಟ್ಟಸರ (ನಾ). = ಪಟ್ಟಶರ : "ಪಟ್ಟಸರ—ಪಟ್ಟಶರ = ದೊಡ್ಡ ಕೆರೆ" (ತದ್ಭವ ಕೋ. ೨೩); ಶೋಭಿಸುವ ಪಟ್ಟಸರಮುಂ ಪಟ್ಟಮಹಿಷಿಯುಂ . . . ತೋಱುತಿರ್ಕುಂ (ಕಬ್ಬಿಕೈ. ೧೮). [ಪಟ್ಟ$_3$+ಸರ$_3$]

ಪಟ್ಟಸಹಣ 'ಪಟ್ಟಸಾಹಣ' ನೋ.

ಪಟ್ಟಸಹಣೆ 'ಪಟ್ಟಸಾಹಣೆ' ನೋ.

ಪಟ್ಟಸಾಣೆ (ನಾ). ಉತ್ತಮವಾದ ಜವನಿಕೆ,—ತೆರೆ : ಸುತ್ತಲೂ ಬಣ್ಣಬಣ್ಣದ ಪಟ್ಟಸಾಣೆ (ಪರದೆ) ಗಳನ್ನು ಕಟ್ಟಿ, ದಿವ್ಯವಾದ ಅಲಂಕಾರಗಳಿಂದ ಭೂಷಿತರಾಗಿ (ಬುದ್ಧಜಾ. ೧೦೮). [ಪಟ್ಟ$_3$+ಸಾಣೆ?]

ಪಟ್ಟಸಾಲಿಗ (ನಾ). ಪಟ್ಟೆವಸ್ತ್ರವನ್ನು ನೇಯುವವನು ; ರೇಷ್ಮೆ ನೇಕಾರ : ವೃದ್ಧತಾಪಸನಂ . . . ಅಲ್ಲಿಯ ಮೂಲಿಗನಪ್ಪ ಪಟ್ಟಸಾಲಿಗಂ ಕಂಡು ತನ್ನ ಮನೆಗೊಡಗೊಂಡು ಪೋಗಿ (ಪಂಚತಂ. ೭೩-೮) ; ಶಾಸನ ಪಟ್ಟಸಾಲಿಗ ಸಮಯಸಮುದಿತ ಲಲಾಟಪಟ್ಟಂ . . . ಶ್ರೀಮನ್ಮಹಾಸಾಮನ್ತಂ ಮಾರ್ತ್ತಣ್ಡಯ್ಯಂ (ಸೌಇಇ. XI-i, ೭೮-೮೩ ; 1045) ; ಶ್ರೀಮದ್ರಾಜಧಾನಿ ಅವಂಚೆಯ ಪಟ್ಟಸಾಲಿಗಂ ತ್ರೈಲೋಕ್ಯಮಲ್ಲ ಅಂಗಡಿಸೆಟ್ಟಿಗಂ (ಕಇಅ. ೨೮-೪೦-೩೩ ; 1115) ; ಗಂದಿಗ ನೆರವಣಿಗಂ ಸರವಂದಿಗನಾ ಪಟ್ಟಸಾಲಿಗಂ ಬಾಣಸಿಗಂ ಮಾಂದರಿಗಂ ಹೋಯಿಸಿಗಂ ಸಂದಱಿಕೆಯ ಕಬ್ಬಿಗಂ ಸಮಂಜಸನೊಳನೇ (ಕಾವ್ಯಾವ. ೩೨೩) ; ಪಟುಗಜ್ಜಂ ಪಟ್ಟಸಾಲಿಗರೊಳ್ (ರಾಮಾಶ್ವ. ೭-೨೪).

[ಪಟ್ಟ$_3$+ಸಾಲೆ$_1$(<ಸೇಲೆ)+-ಇಗ]

ಪಟ್ಟಸಾಲಿಗಿತಿ, ಪಟ್ಟಸಾಲಿತಿ (ನಾ). ರೇಷ್ಮೆನೇಕಾರರ ಜಾತಿಯ ಹೆಂಗಸು : ಸರವಂದಿಗಿತಿ, ಪಟ್ಟಸಾಲಿಗಿತಿ, ಗಂದಿಗಿತಿ (ಶಬ್ದಾನು. ೧೯೨ ಪ್ರಯೋ). **ಪಟ್ಟಸಾಲಿತಿ :** ಪಾರ್ವಂತಿ, ಅಕ್ಕಸಾಲಿತಿ, ಪಟ್ಟಸಾಲಿತಿ (ಶಬ್ದಾನು. ೨೦೨ ವ್ಯಾಖ್ಯಾ).[ಪಟ್ಟಸಾಲಿಗ+-ಇತಿ$_1$(<-ಇತ್ತಿ)]

ಪಟ್ಟಸಾಲಿತಿ 'ಪಟ್ಟಸಾಲಿಗಿತಿ' ನೋ.

ಪಟ್ಟಸಾಲೆ 'ಪಡಸಾಲೆ$_1$' ನೋ.

ಪಟ್ಟಸಾಹಣ, ಪಟ್ಟಸಹಣ (ನಾ). ಶ್ರೇಷ್ಠವಾದ ಕುದುರೆಗಳ ಲಾಯ; ಮುಖ್ಯವಾದ ಲಾಯ : 'ಪಟ್ಟಸಾಹಣಾಧೀಶ' ಪರಾ. **ಪಟ್ಟಸಹಣ :** ಪಟ್ಟಸಹಣದ ಹಿರಿಯ ಸಹಣದ ವಿಮಲಸಹಣಗಳವರ ಕರೆ (ಕುಮ್ಯಭೀ. ೪-೪೭). [ಪಟ್ಟ$_3$+ಸಾಹಣ]

ಪಟ್ಟಸಾಹಣಾಧಿಪತಿ (ನಾ). ಪಟ್ಟಸಾಹಣದ ಅಧಿಕಾರಿ ; ಶ್ರೇಷ್ಠವಾದ ಕುದುರೆಗಳ ಲಾಯದ ಅಧಿಕಾರಿ,—ಮುಖ್ಯಸ್ಥ : ಬಾಹತ್ತರನಿಯೋಗಾಧಿಪತಿ ಪಟ್ಟಸಾಹಣಾಧಿಪತಿ . . . ಪೇರಿಯಯ ಸಾಹಣಯರುಂ (ಕೂಲ್ಹಾಶಾ. ೧೬-೩೯ ; 1189).

[ಪಟ್ಟಸಾಹಣ+ಅಧಿಪತಿ]

ಪಟ್ಟಸಾಹಣಾಧೀಶ (ನಾ). = ಪಟ್ಟಸಾಹಣಾಧಿಪತಿ : ಆಯತಕೀರ್ತ್ತಿವಿನೀತಶ್ರೀಯುಕ್ತಂ ಪಟ್ಟಸಾಹಣಾಧೀಶನೆನಲ್ ಪೇರಿಯಯ ಸಾಹಣೆ (ಎಇ. XV, ೩೫-೧೬ ; 1189). [ಪಟ್ಟಸಾಹಣ+ಅಧೀಶ]

ಪಟ್ಟಸಾಹಣಿ, ಪಟ್ಟಸಹಣಿ (ನಾ). = ಪಟ್ಟಸಾಹಣಾಧಿಪತಿ : ಮಹಾಪ್ರಚಂಡದಂಡನಾಯಕಂ ಪಟ್ಟಸಾಹಣಿ ಬಮ್ಮದೇವಯ್ಯ ದಂಡನಾಯಕರ ಪಿರಿಯ ಮಗಂ ರೇಚರಸರು . . . ರಾಜ್ಯಂಗೆಯ್ಯುತ್ತ (ಎಕ. VII (s), ಶಿಕಾರಿ. ೩೩೪-೯ ; 1100) ; ಮಹಾಮಂಡಲೇಶ್ವರಂ ಕರಿತುರಂಗ ಪಟ್ಟಸಾಹಣಿ ಮಲ್ಲಿಯಂಣನ ಪ್ರಧಾನ ಕಂಚೇಗೊಂಡ ಪೈರದ ಪೆರ್ಗ್ಗಡೆ ದಂಡನಾಯಕಂ (ಕಇಅ. ೧೮-೯-೬೧ ; 1127); ಬಲ್ಲಾಳದೇವನ ಪಟ್ಟಸಾಹಣಿಕಳುಂ ಅಯಿಚೆಯ ಸಾಹಣಿ ಶ್ರೀಮಲ್ಲಿಕಾರ್ಜ್ಜುನದೇವರ (ಎಕ. VII, ಶಿಪಮೊ. ೧೦೨-೩೩ ; 1215). **ಪಟ್ಟಸಹಣಿ :** ಸಮುಚಿತಾಸನದೊಳ್ ಕ್ರಮದಿಂ ಕುಳ್ಳಿರ್ದ ಪಟ್ಟಸಹಣಿಯರ ಪರಿವಿಡಿಯೊಳಂ (ಗಿರಿಕ. ೨-೧೦೫ ಪ); ರಾಜವಾಜಿಗಳಂ . . . ಪಟ್ಟಸಹಣಿಗಳಿರ್ಕೆಲದೊಳ್ವಿಡಿದು ತಡೆಯದೆ ತರ್ಪಾಗಳ್ (ರಾಜಶೇ. ೧೩-೬೧ ಪ).[ಪಟ್ಟ$_3$+ಸಾಹಣಿ]

ಪಟ್ಟಸಾಳಿ 'ಪಡಸಾಲೆ$_2$' ನೋ.

ಪಟ್ಟಸು 'ಪಟ್ಟಸ$_1$' ನೋ.

ಪಟ್ಟಸೂತ್ರ (ನಾ). ರೇಷ್ಮೆಯ ಎಳೆ,—ನೂಲು,—ದಾರ : ಪಟ್ಟಸೂತ್ರದೆರೆಡೆಳೆಯುಮಂ ಗಂಟಿಕ್ಕುವಂತೆ ಪರಂಪರಮುಂ ಪಟಮಱೆಪುಮಾದ ನಟ್ಟಂ ಪುನರ್ನವಂ ಮಾಟ್ಟ ಬಗೆಯಿಂ ಎನ್ನನಿಂತೆಂದಟ್ಟದನೆಮ್ಮರಸಂ (ಶಾಂತಿಪು. ೫-೩೨ ಪ) ; ಚಿತ್ರಾವಟಿಯ ಪಟ್ಟಾವಟಿಯ ಪಟ್ಟಸೂತ್ರದ ಚಿತ್ರಸೂತ್ರದ ನೇತ್ರವಟ್ಟಣಿಗೆಯ ಪುಟ್ಟಿಗೆಗಳನೊಟ್ಟ ಬೆಟ್ಟಾಗಿ ಪುಂಜಿಸಿ (ಸುಕುಮಾ. ೧೦-೯೧ ಪ) ; ಪಟ್ಟಸೂತ್ರಂಗಳೊಳು ಪೃಷ್ಠಾಪೃಷ್ಠಿ ಮುಖಮುಖವಱಿದು ಪೋಣಿಸಿ ಪಟ್ಟಗೆಯೊಳಿಡ ದಿವ್ಯರುದ್ರಾಕ್ಷಿಯ ವಿಭೂಷಣವ (ಶಂಕದಾ. ೫-೪೧). [ಪಟ್ಟ$_3$+ಸೂತ್ರ]

ಪಟ್ಟಸೂತ್ರಬಿಸಿಗೆ (ನಾ). ರೇಷ್ಮೆನೂಲಿನ ಒಂದು ತೂಕ; ಹತ್ತು ಪಲದ ತೂಕ : ಪಟ್ಟಸೂತ್ರಬಿಸಿಗೆಗೆ ವಿ ೧೦ ಸುಂಕದ ಪೇಟಂಗೆ ವಿ ೧೦ ಪತ್ತಿಯ ಮಳವೆಗೆ ವಿ ೨ ॥ . . . ಟಂಕಣಕಾರ ಬಿಸಿಗೆಗೆ ವಿ ೭ ॥ (ಕಇಅ. ೧೦೩-೮೦-೨೮ ; 1076). [ಪಟ್ಟಸೂತ್ರ+ಬಿಸಿಗೆ]

ಪಟ್ಟಳಿ 'ಪಟ್ಟವಟಿ' ನೋ.

ಪಟ್ಟಳಿಗೆ$_1$, ಪಟ್ಟಣಿಗೆ$_1$ (ನಾ). ಉತ್ತಮವಾದ ರೇಷ್ಮೆವಸ್ತ್ರ ; ದುಕೂಲ ; ಪಟ್ಟೆವಸ್ತ್ರ : ಮಲ್ಲಿಗೆಯ ಸೋರ್ಮುಡಿ ನಿಪ್ಪೊಸತಪ್ಪ ಮೌಕ್ತಿಕಂಗಳ ತೊಡವುಟ್ಟ ಪಟ್ಟಳಿಗೆ ದಂತಮರೀಚಿಗಳಿಂ ಬೆಳರ್ತ ಬಾಯ್ ಪಳಿಕಿನ ಪೆಣ್ಗೆ ಪಾಸಟೆಯೆನಿಪ್ಪ ವಿಲಾಸಮನೀಯೆ (ಪಂರಾಮಾ. ೩-೭೨); ಸೆಳೆ ಮಂಚವನೇಱುತ್ತಂ ಸೆಳೆದಂ ಮುಸುಕಿಟ್ಟ ಪಟ್ಟಳಿಗೆಯಂ ಮುದದಿಂ (ವೀರವಿ. ೬-೬೮). **ಪಟ್ಟಣಿಗೆ$_1$:** "ಹುಟ್ಟಗೆ, ದುಗುಲಂ, ಪಟ್ಟಣಿಗೆ, ಉಳ್ತುಡಿಗೆ—ಈ ೪ ವಸನಕ್ಕೆ ಪೆಸರ್" (ಕಶಸಾ. ೬೩-೩೯೨); ಮುಸುಕಿಟ್ಟ ಪಟ್ಟಣಿಗೆಯುಂ ಪೊಱಪೊಣ್ಮುವ ಕಣ್ಣ ಬಿಳ್ಪುಮೋಸರ ಮನದೊಳ್ ತೆಱಂಬೊಳೆವ ಬಾಳೆಗಳಂತಿರೆ . . . ಬಂದುದಂದೊಡನೆ ಸಜ್ಜನವೆಂದಿರ ತಂದಂ (ಅದಿಪು. ೧೧-೪೬ ಅಡಿಪದ್ಯ) ; ಯೌವನೋನ್ಮತ್ತೆಯರುಟ್ಟ ಪಟ್ಟಣಿಗೆಯ ನಿಱಿಯ ಕುಟುಂಗಲಂ ನೆಗಪಿ ನುಣ್ದೊಡೆಯ ಚೆಲ್ವಂ ನೋಡಲೆಂದು ಸಿಡಿಮಿಡಿವರ್ಪ ಕಾತರ ವಿಟರ ಕಣ್ಗೆ ಪಾರಣೆಯಂ ಮಾಡಿಸಿಯುಂ . . . ಸಾಯಂತನಸಮಯಸಮಿಾರಣಂ ಸೌಖ್ಯಸಾರಸರ್ವಸ್ವಮೆನಿಸಿದಾಗಳ್ (ಚಂದ್ರಪು. ೮-೪ ಪ). [ಪಟ್ಟ$_3$+ಪಳಿಗೆ$_2$]

ಪಟ್ಟಳಿಗೆ$_2$ 'ಪಡಲಗೆ' ನೋ.

ಪಟ್ಟಳಿ$_1$ 'ಪಟ್ಟಡಿ$_1$' ನೋ.

ಪಟ್ಟಳಿ$_2$ 'ಪಟ್ಟಡಿ$_2$' ನೋ.

ಪಟ್ಟಳಿಕಂಭ (ನಾ). ತೊಲೆಯನ್ನು ಹೊತ್ತಿರುವ ಕಂಭ ; ತೊಲೆಗಂಬ : ಪಳಿಕಿನ ಬದ್ಧಭೂಮಿ ಮಣಿವೇದಿಕೆ ಪಚ್ಚೆಯ ಭಿತ್ತಿ ವಜ್ರದುಜ್ಜಳಿಪ ವಿತಾನಮೂ ನಿಮಿರ್ದ ನೀಲದ ಪಟ್ಟಳಿಕಂಭಮುಂಬುವೆತ್ತಳವಡೆ . . . ಮಂಡಿತಮಾಯ್ತು ವಿವಾಹಮಂಡಪಂ (ಶಾಂತೀಶ್ವ. ೨-೧೩೧).

[ಪಟ್ಟಳಿ$_1$(<ಪಟ್ಟಡಿ$_1$)+ಕಂಭ]

ಪಟ್ಟಟಾ$_1$ (ಕ್ರಿ). ಸಂಪೂರ್ಣವಾಗಿನಾಶವಾಗು; ನಿಶ್ಶೇಷವಾಗು(?). **ಪಟ್ಟಟಾಪಾಯ್ದಂ** = ಸಂಪೂರ್ಣವಾಗಿ ನಾಶವಾಗುವಂತೆ ಹಾಯುವವನು,—ಮೇಲೆ ಬೀಳುವವನು : ಕಾಮಕೋಡನ್

ತಮ್ಮುತ್ತುಮೂವರಾ ಪಾಶುಪಾತಂ ನಮ್ಮ್ರನೋವದೊರಾ ನಾಲಗೆಯನೆ ಕಿಳ್ಪೊನ್ ಪಟ್ಟವೊಡೆಯಂಗೋ ಅ(ವ)ದೊರನ್ ಪಟ್ಟಟಿ ಪಾಯ್ದೊನ್ ಶ್ವೇತವಾಹನನುದಯಪುರಮಾನ್ ಪೊಗುವಲ್ಲಿ ಎಱುದು ಶ್ವರ್ಗಲಯ ಕ್ಕೇಱುದೊನ್ (ಎಇ. IX, ೧೯-೧೧ ; 800). [ಪಟ್ಟ$_3$+ಆಟಿ$_1$]

ಪಟ್ಟಟಿ$_2$ 'ಪಟ್ಟವಟಿ' ನೋ.

ಪಟ್ಟಾ$_1$ 'ಪಟ್ಟೆಯ$_1$' ನೋ.

ಪಟ್ಟಾ$_2$ 'ಪಟ್ಟೆಯ$_2$' ನೋ.

ಪಟ್ಟಾಂಗ 'ಪಟ್ಟಂಗ' ನೋ.

ಪಟ್ಟಾಂಬರ (ನಾ). ಪಟ್ಟೆವಸ್ತ್ರ ; ರೇಷ್ಮೆಯ ಬಟ್ಟೆ ; ಪಟ್ಟಾವಳಿ : ವಸುಧಾತರುಣಿ ನಿಱುವಿಡಿದುಟ್ಟ ಪಟ್ಟಾಂಬರವಿದೆನೆ ಲವಣಾಬ್ಧಿ ಮಿಗೆ ರಂಜಿಸುವುದು (ಜೀವಂಜ. ೨-೧) ; ಸಲ್ಲಲಿತ ಜಂಗಮವಶಂಗತನಾಗಿರೆಂದು ಪಟ್ಟಾಂಬರಾದಿಗಳನಿತ್ತು . . . ನಂಬ್ಯಣ್ಣಂಗೆ ಶಿವನೊಲ್ದು ಕೃಪೆಗೆಯ್ಯಲು (ಅರಾಜ. ೪-೬-೨೩). [ಪಟ್ಟ$_3$+ಅಂಬರ]

ಪಟ್ಟಾಂಶುಕ (ನಾ). = ಪಟ್ಟಾಂಬರ : ವರಪಟ್ಟಾಂಶುಕರಾಶಿಯಂ ಸಮದ ಹಸ್ತಿವ್ರಾತಮಂ ಘೋಟಕೋತ್ಕರಮಂ ರತ್ನಸಮೂಹಮಂ ಪತಿಗೆ ದೂತರ್ ತೋಱುದರ್ (ಚಂದ್ರಪು. ೯-೪) ; ಉಜ್ಜ್ವಲವೆನಿಪ ಮಣಿ ಭೂಷಣಾಳಿಯ ಲಲಿತಪಟ್ಟಾಂಶುಕಸಮೂಹವನು . . . ದಣಿವಂದದಲಿ ವಿಪ್ರಾವಳಿಗೆ ಸಿರಿದೆನಲಂಬಿಕಾಸುತನಿತ್ತ ನೊಲವಿನಲಿ (ತಿಮ್ಮಕ್ರ. ೨-೨೬).

[ಪಟ್ಟ$_3$+ಅಂಶುಕ]

ಪಟ್ಟಾಕತ್ತಿ, ಪಟ್ಟಕತ್ತಿ (ನಾ). ಖಡ್ಗದಂತಹ ಒಂದು ಬಗೆಯ ಆಯುಧ : ಕತ್ತಿ, ಸಾಣಾಕತ್ತಿ, ಫಿರಂಗಿಕತ್ತಿ, ಪಟ್ಟಾಕತ್ತಿ . . . ಮೊದಲಾದ ಆಯುಧಗಳನ್ನೂ ತಂದು (ಕೃಪಾಸ. ೧೧೮) ; ಹುಲ್ಲೇ ಚರ್ಮದಿಂದ ಮುಚ್ಚಲ್ಪಟ್ಟ ಪಟ್ಟಾಕತ್ತಿಯೂ ನಕುಲನ ಆಯುಧ (ಕೃಪಾವಿ. ೭೨). **ಪಟ್ಟಕತ್ತಿ :** ಅವರು ಗುರಾಣಿಗಳನ್ನೂ ಪಟ್ಟಕತ್ತಿಗಳನ್ನೂ ಧರಿಸಿದ್ದರು (ಭಾರವೀ. ೧). [ಪಟ್ಟಾ$_1$(<ಪಟ್ಟೆಯ$_1$)+ಕತ್ತಿ]

ಪಟ್ಟಾಟ (ನಾ). ಹಟ ಹಿಡಿಯುವಿಕೆ ; ಮೊಂಡುತನ : ಅವುಗಳ ಸ್ವಾಭಾವಿಕ ಪಟ್ಟಾಟದಲ್ಲಿ ಕಾರ್ಯಸಾಧನೆಯೇ ಮುಖ್ಯ ಗುರಿ. ವಿವೇಕ ಮತ್ತು ವಿವೇಚನೆ ಇಲ್ಲ . . . ಉದಾ : ನೊಣ ; ಕೈ ಎಷ್ಟೇ ಸಲ ಬೀಸಿದರೂ ಅವು ಮುಖದ ಮೇಲೆ ಹಾರಾಡಲು ಬರುತ್ತವೆ (ಕೀಟಬಿ. ೪).

[ಪಟ್ಟು$_1$+ಆಟ]

ಪಟ್ಟಾಡು (ಕ್ರಿ). ಮೊಂಡು ಹಿಡಿ ; ಹಟ ಮಾಡು ; ಪಟ್ಟು ಹಿಡಿ: ಕೊಟ್ಟಾ ಭಾಷೆಗೆ ನೀನು ಪಟ್ಟಾಡದೀಗಲೆನ್ನ ಧಿಟ್ಟಾದಿಂ ಮಾರಿ ಹಣವ ಕೊಟ್ಟು ಕಳುಹು (ಹಮಚ. ೯೦) ; ನಿನ್ನ ಮನೆ ಉಳಿಸಿ ಒಬ್ಬ ಮನುಷ್ಯನನ್ನಾಗಿ ಮಾಡಬೇಕೂಂತ ನನ್ನ ಮನಸ್ಸಿನಲ್ಲಿ ದೇವರು ಪ್ರೇರೇಪಿಸಿದ. ಅದಕ್ಕೋಸ್ಕರ ನಾನು ಪಟ್ಟಾಡಬೇಕಾಯಿತಪ್ಪಾ (ತಾಯಿಕ. ೨೪).

[ಪಟ್ಟು$_1$+ಆಡು$_1$]

ಪಟ್ಟಾಣಿ 'ಪಠಾಣ' ನೋ.

ಪಟ್ಟಾದಾರ್ (ನಾ). (ಕುಸ್ತಿ ಮಾಡಲು) ತಕ್ಕ ಶಿಫಾರಸು ಪತ್ರವನ್ನು ಹೊಂದಿರುವವನು ; ಪಟ್ಟೆಯನ್ನು ಹೊಂದಿರುವವನು ; ಅಧಿಕಾರ ಹೊಂದಿರುವವನು : ನಿನ್ನ ಉಸ್ತಾದ್ ಯಾರು ಪಟ್ಟಾದಾರ್ ? (ಭೀಮಕಾ. ೫೩).

[ಪಟ್ಟಾ$_2$(<ಪಟ್ಟೆಯ$_2$)+<-ದಾರ$_4$]

ಪಟ್ಟಾಧ್ವರ (ನಾ). ಪಟ್ಟ ಕಟ್ಟುವ ಕಾರ್ಯ ; ಪಟ್ಟಾಭಿಷೇಕದ ಕಲಾಪ : ಸರ್ವಜನಮನದ ಹರುಷಪೂರದ ವೇದಮಂತ್ರೋಚ್ಚರಣ ಸಾರದ ನೃಪನ ಪಟ್ಟಾಧ್ವರವೆಸೆಯಲುತ್ಸವವನೆಸಗಿದನಸುರರಿಪು (ಕುವ್ಯಾಗ. ೧೩-೫). [ಪಟ್ಟ$_3$+ಅಧ್ವರ]

ಪಟ್ಟಾಭಿಷಿಕ್ತ (ನಾ). ಪಟ್ಟಾಭಿಷೇಕ ಮಾಡಿಸಿಕೊಂಡ ವ್ಯಕ್ತಿ : ದೇವೀ, ಕೃತಾಭಿಷೇಕಾಯಾಃ — ಪಟ್ಟಾಭಿಷಿಕ್ತಳಾದ ರಾಣಿಯ ಹೆಸರು (ಸಿದ್ಧಾಂತಿ. ೬೧). [ಪಟ್ಟ$_3$+ಅಭಿಷಿಕ್ತ]

ಪಟ್ಟಾಭಿಷೇಕ (ನಾ). ರಾಜರನ್ನಾಗಲಿ, ಗುರುಗಳನ್ನಾಗಲಿ ಪೀಠಗಳ ಮೇಲೆ ಕುಳ್ಳಿರಿಸಿ, ಪವಿತ್ರಜಲ ಮುಂತಾದುವನ್ನು ಅವರ ತಲೆಯ ಮೇಲೆ ವಿಧ್ಯುಕ್ತವಾಗಿ ಅಭಿಷೇಕ ಮಾಡುವ ಕ್ರಿಯೆ ; ಪಟ್ಟಗಟ್ಟುವಿಕೆ: ಸಮಸ್ತಮುನೀಂದ್ರನಿಕರ ಮಹೀಶನನು ಪಟ್ಟಾಭಿಷೇಕಕೆ ಮನವನೊಡಬಡಿಸಿ . . . ಶುಭಗ್ರಹೋದಯ ಲೇಸೆನಲು ನೋಡಿದರು ಮಿಗೆ ಗಾರ್ಗ್ಯಾದಿ ಜೋಯಿಸರು (ಕುವ್ಯಾಗ. ೧೩-೪) ; ಗುರು ವಸಿಷ್ಠಾದಿಗಳು ಮಾಡಿತು ಹರಗೆ ನಿಜಪಟ್ಟಾಭಿಷೇಕವ (ಕೌಶಿರಾ. ೪೪-೫೧) ; ಪಟ್ಟಾಭಿಷೇಕೋತ್ಕರುಷೆಯಾದುದು ಮೇಲೆ ವಸುಧೆಯ ನರಪತಿಗಳೈತಂದು ಕಂಡರು ರಾಘವೇಶ್ವರನ (ತೊರರಾ. ೧-೩-೨).

[ಪಟ್ಟ$_3$+ಅಭಿಷೇಕ]

ಪಟ್ಟಾಭಿಷೇಚನ (ನಾ). = ಪಟ್ಟಾಭಿಷೇಕ : ರಾವಣಾರಿ ಮೇಲೆ ತಾಳ್ದಂ ಶುಭಮುಹೂರ್ತದೊಳ್ ವಾರಿನಿಧಿ ಮೇರೆಯಾದವನಿಯಂ ಪಟ್ಟಾಭಿಷೇಚನದ ಕಾಲದೊಳ್ ಕಂಡರು ಸಮಸ್ತಮುನಿಗೀರ್ವಾಣ ವಾನರದನುಜಮನುಜರು (ಜೈಮಿಭಾ. ೧೮-೧೧). [ಪಟ್ಟ$_3$+ಅಭಿಷೇಚನ]

ಪಟ್ಟಾಯಿಲ, ಪಟೇಲ, ಪಾಟೇಲ (ನಾ). ಗ್ರಾಮಾಧಿಕಾರಿಗಳಲ್ಲಿ ಮುಖ್ಯನಾದವನು; ಗೌಡ : ವಿಠಲದೇವನಾಯಕರ ನಿರೋಪಿತ ಪಟ್ಟಾಯಿಲಕಂಚಕಾಱ ರೇವಿಸೆಟ್ಟಿಯರು ಪ್ರಭುಮಾನ್ಯಸಮ[ಸ್ತ]ಪ್ರಜೆಗಳು . . . ಚಲವೊಂಗೆ ದತ್ತ ಕೊಳಕೆ ೧೯ ಪ ವ್ರಿತ್ತಿ (ಸೌಇ. XX, ೨೨೫-೮ ; 1304). **ಪಟೇಲ :** ಪಟೇಲನಿಗೆ–ಪಟೇಲ, ಗೌಡ, ನಾಡುಗೌಡ . . . ನಾಯಿಡು ವಗೈರೆ ಹೆಸರುಗಳುಂಟು (ಗ್ರಾಮಾಕ. ೧) ; ಪಟೇಲರು ಅಷ್ಟು ಹೊತ್ತು ಕಾದರು; ಇಷ್ಟು ಹೊತ್ತು ಕಾದರು. ಮಾಂಸವೂ ಇಲ್ಲ; ಸೊಂಬಯ್ಯನೂ ಇಲ್ಲ (ಮಗಮಾಂ. ೨೭). **ಪಾಟೇಲ :** ಮಾಮಲೇದಾರರ ಕಂದಾಯದ ವಸೂಲಿ ಕೆಲಸಕ್ಕೆ ಪ್ರತಿಹಳ್ಳಿಯಲ್ಲಿ ಗೌಡನು (ಪಾಟೇಲ) ಸಹಾಯ ಮಾಡುವನು (ಕಾರವ. ೬೬) ; ಆ ಊರ ಪಾಟೇಲರ ಮನೀಗೆ ಹೋಗಿದ್ದೆ (ತಿಡುಗು. ೫೭) ; ಊರ ಪಾಟೇಲರಾದ ಹೇಮಂತಗೌಡರೂ . . . ಬಾವಿಯ ಮಾರ್ಗವಾಗಿ ನಡೆದರು (ಹಬ್ಬಿಬ. ೮).

[<ಪ್ರಾ. ಪಟ್ಟಇಲ, ಪಟ್ಟಇಲ್ಲ]

ಪಟ್ಟಾವರಸೆ (ನಾ). ಪಟ್ಟಾಕತ್ತಿಯ ವರಸೆ ; ಖಡ್ಗಯುದ್ಧದ ಪಟ್ಟು : ಎರಡೂ ಖಡ್ಗಗಳನ್ನು ಸೆಳೆಮಿಂಚಿನ ಹೊಳೆಸಿದಂಬಂತೆ ಈಳ್ದುಕೊಂಡು ಪಟ್ಟಾವರಸೆ ತಿರುಗಿಸಲಾರಂಭಿಸಿರುವನು (ಬಿರುಗಂ. ೨೨-೮) ; ಪಟ್ಟಾವರಸೆಯಲ್ಲಿ ನೀನು ಅದ್ವಿತೀಯನೆಂದು . . . ಕಾಳಗಕ್ಕೆ ಕರೆದೆನು (ಆರ್ಯಕ. ೪); ಅತಿಚಮತ್ಕಾರವಾದ ಮತ್ತೊಂದು ವಿದ್ಯೆಯು ತಿಳಿದಿತ್ತು. ಅದು ಏನೆಂದರೆ ಪಟ್ಟಾವರಸೆ (ಚಂಗಾಳ್ವ. ೯೩).

[ಪಟ್ಟಾ$_1$(<ಪಟ್ಟೆಯ$_1$)+ವರಸೆ(<ವರಿಸೆ)]

ಪಟ್ಟಾವಳಿ 'ಪಟ್ಟವಟಿ' ನೋ.

ಪಟ್ಟಾವಟಿ 'ಪಟ್ಟವಟಿ' ನೋ.

ಪಟ್ಟಾವುಜ 'ಪಟಾವುಜ' ನೋ.

ಪಟ್ಟಾವೊಳಿ 'ಪಟ್ಟವಟಿ' ನೋ.

ಪಟ್ಟಾಳಿ 'ಪಟ್ಟವಟಿ' ನೋ.

ಪಟ್ಟಿ$_1$, ಹಟ್ಟಿ$_1$ (ನಾ). ೧. ದನ, ಕುರಿ ಮೊದಲಾದುವುಗಳನ್ನು ಕೂಡುವ ಮನೆ ; ದೊಡ್ಡಿ ; ಕೊಟ್ಟಿಗೆ ; ರೊಪ್ಪ : ಮಕ್ಕಣ್ಡ ಕತ್ತು ಮಣಾಮ್ಮನೆಯುಮಾಟುಮ್ಪುಟ್ಟಿಯುನ್ತರಕ್ಕುಮ್ ಒಡೆಅನ್ (ಮೈಅರಿ. ೧೯೪೨. ೩೧-೫೪; ಸು. 610) ; ಬಟ್ಟಿಗಳೊಳ್ ದೇಗುಲದೊಳ್

ಪಟ್ಟಗಳೊಳ್ [ಪಾತಾಂ. ಗೋಕಾಣದೊಳ್] ಬೀದಿಯೆಡೆಯೊಳಜವಟ್ಟಿಗೆಯೊಳ್ ನೆಟ್ಟನೆಯಿಜುಂಬೆಯೇಟಿಲಲ್ ಕೆಟ್ಟಪುದೂರ್ (ಲೋಕೋಪ. ೧೨-೪೩) ; ಪಿರಿಯ ಪಟ್ಟಯೆಲ್ಲಂ ತೀವಿ ಗೋರ್ಜಾಮೇಳಂಬ ಮೃಗದ ಪಿಂಡಂನೇಮಿಕುಮಾರಂ ಕಂಡೀ ಮೃಗನಮೂಹವಿಲ್ಲಿಯೆಂಕ[ರ್ದುದೆಂ]ದು ಬೆಸಗೊಳೆ (ಬಂಹಪು. ೧೩-೨೩ ಪ) ; ಈ ಚತುಸ್ಸೀಮೆಯವೊಳಗುಳ್ಳ ಬಾಳು ಬೆಟ್ಟುಮನೆ ಹಟ್ಟ ಕುಳ ಭಾವಿ . . . ಧಾರೆಯನೆಜದು ಕೊಟಲು (ಸೌಇಇ. IX-ii, ೪೩೦-೩೭ ; 1406) ; ಗೋವಳರು ತುಜುಗಳನು ತಿರುಹಿ ತಂತಮ ಪಟ್ಟಗಳ ಭರವಸದಿಂ ಕೂಡಿಕೊಂಡು (ಜೀನಂಸಾಂ.೮-೭೩). ೨. ಆಶ್ರಯ ಸ್ಥಾನ ; ಇಕ್ಕೆ ; ಹಕ್ಕೆ : ಕಾಡುಕೋಣಂಗಳ ಪಟ್ಟ ಬೆರ್ಬುಲಿಗಳ ಗೂಡು ಕರಡಿಯ ಜಂಗುಳಿಯು ಬೀಡು (ಕುಂತಸಾಂ. ೪-೪). ೩. ಗೊಲ್ಲರ ಹಳ್ಳಿ ; ಬಾಡ: "ಘೋಷಃ, ಆಭೀರಪಲ್ಲೀ-ಈ ೨ ತುಜುಕಾಜರ ಪಟ್ಟ" (ಪಲಾಮು. ೪೩-೧೦೬) ; ಎಮ್ಮ ಕಾಡುಗಳೆಡೆಯ ಪಟ್ಟಯನ್ ಮುಟ್ಟಿ ಎಮ್ಮ ಬೆಟ್ಟದ ಮೇಲೆ ಕೋಯಿಲನ್ ಕಟ್ಟಿ ಸೇಮೆಯನ್ ಮಾಟ್ಟಿಂ (ಆಶ್ವಶ್ವಾ. ೪೯-೯೪೯); ಚಿಕ್ಕಪುಟ್ಟ ಬೇಡ-ಪಟ್ಟಗಳಿಗೆ ಕೂಡ ಎತ್ತರವಾದ ಸುತ್ತುಗೋಡೆಗಳೂ ಒಂದೊ ಎರಡೊ ಆಗಸೆಬಾಗಿಲುಗಳೂ ಇರುತ್ತಿದ್ದವು (ಕರ್ನಾಜ.೫೩) ; ೫೦ ರಿಂದ ೧೦೦ ವರೆಗಿನ ಹಳ್ಳಿಗಳ ವಿಭಾಗಕ್ಕೆ ಗೊಂಡ ಜನರು ಪಟ್ಟ ಎಂದು ಹೇಳುವರು (ಕರ್ನಾಪೂ. ೪೯). ೪. ಒಂದು ಸ್ಥಳದ ಹೆಸರು; ℙ ಈಗಿನ ಶಿವಮೊಗ್ಗ ಜಿಲ್ಲೆಯ ನಗರತಾಲ್ಲೂಕಿನ ಹುಂಚ ಎಂಬ ಗ್ರಾಮದ ಹಳೆಯ ಹೆಸರು: ಪಟ್ಟಯೊಡೆಯೊನ್ಯೊವದೊರನ್ (ಎಇ. IX, ೧೯-೯; ಸು. 800). **ಪಟ್ಟ 1** :ದಿ. ಕರೆಸಿದನು ಕೀಲಾಂಗಳನಾದರಿಸಿ ಪಟ್ಟಯಂ ತುಜುಗಳೆಲ್ಲವ ತರಿಸಿ ನೋಡಿದನು (ಕುವ್ಯಾಆ. ೧೭-೩೫) ; ಅಬಲೆಯ ಪಟ್ಟಯ ಗೊತ್ತಿನೊಳಗೆಯನವರತಂ ಕಟ್ಟಿ ಕಜ್ಜಿವ ಸಗ್ಗದ ಹಸುವಲ್ಲವೆ (ಜಯಕಾ. ೧೪-೫೧) ; ಅವರ ಪಟ್ಟಯಲ್ಲಿ ಹತ್ತು ಎಮ್ಮೆಗಳಿದ್ದುವು (ಈಚಫ.೬೦).೩. ದೇವರಾಜವಡೆಯರಯ್ಯನವರು . . . ದೇವರಿಗೆ ಕೊಟ್ಟ ಪಟ್ಟ(ಎಕ. XIV, ಮಳವ. ೧೪೭-೨೮ ; i669) ; ಅವನು ತನ್ನ ಪಟ್ಟಗೆ ಮುಖಂಡನಾಗಿದ್ದ (ಜವಿಸಾ್ವಾ. ೧೪). ೫. ಗುಡಿಸಿಲು : ನಾನು ಬದುಕಿ ಬಾಳಿದ್ದ ಪಟ್ಟಯೋ ! ಅಲ್ಲಿ ಕಿಟಿಕಿಗಳೇ ಇರಲಿಲ್ಲ (ಅಸ್ನಪೂ. ೭೦); ಬೆಳೆಗಳನ್ನು ಕಾಡುಮೃಗಗಳಿಂದ ಕಾಪಾಡಿಕೊಳ್ಳಲು ಹೊಲಗಳ ಸುತ್ತ ಪಟ್ಟಗಳನ್ನು ಹಾಕಿಕೊಳ್ಳುವುದಲ್ಲದೆ ಹಗಲಿರುಳೂ ಬೆಂಕಿ ಉರಿಸುತ್ತಾರೆ (ಕವಿಕೋ. I, ೭೭೦). ೬. ಮನೆ : ಪಟ್ಟ[ಪಾತಾಂ. ಪೊಟ್ಟ, ಹೂಟ್ಟ]ಯೊಳಿರಿಸಿ ತೂಪಿಜಾದು ಕೌಜಾನ ಹೊಗೆ ಗೊಟ್ಟೊಪವಿದರು ಬಾಲಕನನು (ಶ್ರೀಪಾಲ.೨-೭೭) ; ಪಟ್ಟ ಪಟ್ಟ ತಿರುಗುವವಳ ತನ್ನ ಗಟ್ಟತನದಲಿ ಮಾಜುಮುಲೆತವಳ . . . ಹುಟ್ಟು ಹುಟ್ಟಲಿ ಬಾಯೊಳು ಹೆಟ್ಟಬೇಕವಳ (ಪುರಂದ.೨-೧೪-೩) ; ಅವರೆಲ್ಲರ 'ಜೀವರೇಖೆ'ಯೂ ಪರಭಾರೆಯಾಗಿ ಅಜ್ಜಯ ಆ ರಾಜವಾಡೆಯ ಪಟ್ಟಯಲ್ಲಿ ನಡೆಯುತ್ತಿದೆ (ಕಂಬಹು. ೪೫). ೭. ಮನೆಯ ಮುಂಭಾಗ; ಅಂಗಳ: ಮದುವೆಮನೆಗಳಲ್ಲಿ ಚಪ್ಪರದ ಪಟ್ಟಯಲ್ಲಿ, ಕಾಲುಂಗುರಶಾಸ್ತ್ರ ಮಾಡುವಾಗ . . . ಎಲೆಅಡಿಕೆ ಕೊಡುವುದುಂಟು (ಕವಿಕೋ. I, ೨೧೨). ೮. "ನಾಲ್ಕಾರು ಮನೆಗಳ ಒಂದು ಅವರಣ" (ಸಮ್ಮಸು. ೨೪೧): ಕುರುಬರ ಹಟ್ಟಯು ಎಲ್ಲರೂ ಗ್ರಾಮದೇವತೆಯು ಹಬ್ಬದಲ್ಲಿ ಪಾಲುಗೊಂಡಿದ್ದರು (ರೂಢಿ).

ಪಟ್ಟಯ ಪೂಜೆ = (ದೀಪಾವಳಿಯಂದು ಮಾಡುವ) ಧನದ ಕೊಟ್ಟಗೆಯ ಪೂಜೆ : ಪಟ್ಟಯ ಪೂಜೆ ಶುದ್ಧ ದ್ರಾವಿಡರದು (ಭಾಹಬ್ಬ. ೧೪೯). **ಪಟ್ಟಯ ಹಬ್ಬ** = ಧನದ ಕೊಟ್ಟಗೆಯ ಪೂಜೆ ಮಾಡುವ ಹಬ್ಬ ; ದೀಪಾವಳಿ ; ದೀವಳಿಗೆ : ದೀಪಾವಳಿಯಲ್ಲಿ ದ್ರಾವಿಡ ಸಂಸ್ಕೃತಿಯೂ ಒಡೆದು ತೋರುತ್ತಿದೆ. ಕನ್ನಡನಾಡಿನಲ್ಲಿ ಇದಕ್ಕೆ ಪಟ್ಟಯ ಹಬ್ಬ ಎಂದು ಹೆಸರಿದೆ (ಭಾಹಬ್ಬ. ೧೪೪) ; ನಾಟಕವನ್ನು ಪಟ್ಟಯ ಹಬ್ಬದಲ್ಲಿಯೇ ಆಡಬೇಕೆಂದು ಇಚ್ಛೆಯಿದ್ದ ಮಾಸ್ತರರು . . .ಮುಂತಾದ ಪರಿಗೆ ಇಚ್ಛೆ ಈಡೇರದ್ದಕ್ಕೆ ಅಸಮಾಧಾನವಾಯಿತು (ಗಂಗಾಸಾ. ೧೧೦). [ದೇ.‖ ತಮಿ. ಪಟ್ಟ, ಪಟ್ಟ, ಪಟ್ಟು ; ಮಲ. ಪಟ್ಟ ; ತುಳು. ಪಟ್ಟ, ಪಟ್ಟು ; ತೆಲು. ಪಟ್ಟು ; ಕೋತ. ಪಟ್ಕ್]

ಪಟ್ಟ 2, ಪಟೆ1, ಪಟು3, ಪಾಟ್3, ಹಟ್ಟೆ (ನಾ). ೧. ಗೆರೆ ; ರೇಖೆ ; ಪಟ್ಟೆ : ಹುಲಿಯ . . . ಮೈಮೇಲೆ ಅರಿಸಿನಬಣ್ಣದ ಕಿರಿಗೂದಲು ಇದ್ದೂ ನಡುನಡುವೆ ಕರೇಪಟ್ಟಗಳು ಇರುತ್ತವೆ (ಮುಂಬಯ. ೪-೩೫). ೨. (ಅಲಂಕಾರಕ್ಕಾಗಿ ಕಟ್ಟುವ) ಉದ್ದ ಹೆಚ್ಚಾಗಿ, ಅಗಲ ಕಿರಿದಾಗಿರುವ (ಬಟ್ಟೆ, ಕಾಗದ, ಮರ,ಲೋಹ ಮೊದಲಾದುವುಗಳ) ತುಂಡು : ಅದಕ್ಕೆ ಜರಿಯ ಕಾಗದದಿಂದ ಒಂದು ಪಟ್ಟಯನ್ನು ಮಾಡಿ ಕೊಡುತ್ತೇನೆ (ಶಾಲಪು. ೨೦೨). ೩. ಸ್ತ್ರೀಯರು ಸೊಂಟದಲ್ಲಿ ಧರಿಸುವ ಬೆಳ್ಳಿಯ ಅಥವಾ ಚಿನ್ನದ ಆಭರಣ ; ಡಾಬು : ಪಸ್ತುವರಳೋಲೆ ಪುಸ್ತಿ ಪಟ್ಟ ವೀರ ಮಂಟಿಗೆ . . . ನವರತ್ನಂಗಳ್ ತೀವಿದ ಪೆಂಡೆಯಂ ಮೊದಲಾದ ಸಕಲಾಭರಣಂಗಳನಾ ಶೌಂಡಿಕಂಗೆ ತೋಜಿಲ್ (ಸನ್ನಜಾ. ೩-೧೧೧ ವ). 'ಗೆಜ್ಜೆಪಟ್ಟೆ' ಪರಾ. ೪. ವೀಳೆಯದ ಬೀಡ ; ವೀಡ : ಕರ್ಪೂರ ಮಿಶ್ರಚೂರ್ಣಮನೊರೆದು ಅತಿಶಯದಿಂಪೆಲೆ ಕಾಂಚನೊಳಗೆ ಕಸ್ತುರಿವರೆದ ಗುಳಿಗೆ ಕಾಯ್ದುವಂಗಪತ್ರೆ ಶತಪತ್ರಲಪನೆಯರು ಮಡಿಸಿ ಪಟ್ಟಯ ಕಟ್ಟ (ನವನೋ. ೨೫-೨೯) ; ಖಾದರ್ ಒಂದೆರಡು ಪಟ್ಟೀ ತಗೋ (ದೀಪಹ. II, ೧೩೩). 'ಪಾನಪಟ್ಟೆ' ಪರಾ. ೫. (ಸಮಾರಂಭಗಳಲ್ಲಿ ಫಲತಾಂಬೂಲ ನೀಡುವಾಗ ಕೊಡುವ) ಅಡಕೆ, ವೀಳೆಯದೆಲೆಗಳ ಮಡಿಕೆ : ತಾಂಬೂಲ ಕೊಡಲು ವೀಳೆಯದೆಲೆ ತಂದು ಪಟ್ಟಗಳನ್ನು ಮಾಡಬೇಕು (ರೂಢಿ). ೬. ಜಮಾನಿನ ತುಂಡು,—ಸೀಳು : ಬೇಸಾಯದ ಪಟ್ಟಗಳೆಲ್ಲಾ ಅವನದೇ (ಸನ್ನಜೊ. ೩). ೭. ವಂತಿಗೆ ; ವರ್ಗಣಿ : ಗಣೇಶೋತ್ಸವದ ಪಟ್ಟ ಕೂಡಿಸಲು ಹತ್ತು ಜನ ಹೊರಟಿದ್ದಾರೆ (ರೂಢಿ). ೮. ಸಂಬಳ; ಪಗಾರ: (ಕ). ೯. ವಸ್ತುಗಳು, ವಿಷಯಗಳು ಮೊದಲಾದುವುಗಳ ಯಾದಿ; ತಖ್ತೆ : ಜನರು ಮಾಡಿದ ಪಾಪ ಪುಣ್ಯಗಳನ್ನು ಈ ಚಿತ್ರಗುಪ್ತರು ತಮ್ಮ ಪಟ್ಟಗೆ ಬರೆದುಕೊಳ್ಳುತ್ತಾರೆ (ನೀತಚಿಂ. VI,೩೪); ನನ್ನ ಕೈಯಲ್ಲಿ ಹೆಸರುಗಳನ್ನು ಬರೆದುಕೊಂಡಿದ್ದ ಪಟ್ಟ ಮತ್ತು ರಾಯರ ಕೈಲಿ ಚೀಲ (ರಾಯಕ. ೬೧). ೧೦. ಗಾಯಗಳಿಗೆ ಸುತ್ತಿ ಕಟ್ಟುವ ಬಟ್ಟೆಯ ಉದ್ದನೆಯ ತುಂಡು : ನಾನಾವನ್ನು ಹಾಸಿಗೆಯಲ್ಲಿ ಮಲಗಿಸಿ ಗಾಯವನ್ನು ತೊಳೆದು ಪಟ್ಟ ಕಟ್ಟಿದರು (ಕ್ಷೂಂರಾಣಿ. ೧೬). ೧೧. ಕರ ; ಸುಂಕ ;ತೆರಿಗೆ: "ಕರ . . . ಪಟ್ಟ, ವಂತಿಗೆ, ದಂಡ"(ಕಂಸುಹು. ೪೧); ಸೀಮೆ ಪ್ರಜೆಗಳಲ್ಲಿ ಪರಾಡ ಕಡ ವೆಚ್ಚಾ ವಂಚನೆ ಪಟ್ಟ ಲಂಚಾ . . . ಮುಂತಾದ್ದು ನಿಲ್ಲಿಸಿ (ಕಳವಂ. ೪೫-೨). 'ಮನೆಪಟ್ಟೆ' ಪರಾ. ೧೨. ಕೊಡಬೇಕಾದ ಹಣವನ್ನು ತೋರಿಸುವ ವಿವರವಾದ ಚೀಟಿ : ಕಾಸು ತಪ್ಪದೆ ಪಟ್ಟ ಬಿಡ್ದಿ ಕಾಸು ಬಿಡದೆ ಗಂಟುಕಟ್ಟಿ ದಾಸನೆಂದರೆ ಬಿಡ ಗಟ್ಟಿ ನಮ್ಮ ಕೇಸಕ್ಕಿ ತಿಮ್ಮಪ್ಪನೆಟ್ಟಿ (ಪುರಂದ. ೧-೬೬-೯) ; ತಿಂಗಳ ಅಂತ್ಯದಲ್ಲಿ ಪಟ್ಟಿ ಬಂದಾಗ ನಮಗೆ ಹಣ ಕೊಡಲು ಕಷ್ಟವಾಗಬಹುದು (ಅಡುಸಾ. ೧೨೩). ೧೩. ಚಕ್ರದ ಹೊರಸುತ್ತು ; ನೇಮಿ: ಅದಕಾಗ ತರಣಿ ಚಂದ್ರರೆ ಮೊಳೆಗಳಗ್ನಿಯೇ ಪಟ್ಟಯಾಯ್ತಾ ಚಕ್ರಮಂರುದ್ರನು ಕರದೊಳಗೆ ಪಿಡಿದಾ ಜಲಂಧರನ ಕಂಧರದ ಸರಿಸಕಿಡಲರಿದುದು (ಚಿಬಪು. ೨೬-೪೦). ೧೪. [ಸಂಗೀತ] ಒಂದು ಸ್ವರಗತಿಯ ವಿಶೇಷ (?) : ಕಾಳಿಸಿ ಬೈಸಿಕೆ ಪಟ್ಟ ಕಾಂತಿ . . . ಳಕೆಯೆಂದಿವಂ

ಮೆಱೆದು ಬಾಜಿಸಿದಂ ಮುರವೈರಿ ವಾಸಮುಂ (ಜೈಮಿ. ೫-೩). **ಪಟ್ಟಿ1** : ೧೫. ದಾನ ಕೊಟ್ಟುದಕ್ಕೆ ಬರೆಸಿದ ದಾಖಲೆ ; ದಾನಪತ್ರ : ಪೂರ್ವಮರ್ಯ್ಯಾದೆ ಎಂದು ಕೊಟ್ಟ ಧರ್ಮ್ಮಶಾಸನ ಪಟಿ (ಸೌಇಇ. IX-ii, ೪೭೩-೧೧ ; 1470). **ಪಟ್ಟು2** : ೧. ಪಟ್ಟು ಬರಹ ಚೀನಾಂಬರಗಳ ಬೆನ್ನೊಳಟ್ಟಾಗ ಗಜ ತುರಗಗಳು ಕಟ್ಟಿಸಕದೊಳಗಡತಜಲ ಕೇಳಿಗೆ ತೊಟ್ಟನ್ನೆತಂದುವರ್ತಿಯಲಿ (ಕಂಪವಿ.೨೨-೧೯). ೧೫. 'ಧರ್ಮ ಪಟ್ಟು' ಪರಾ. ೧೬. ರೇಷ್ಮೆ ; ಕೌಶೇಯ : "ಕೌತೇಯಂ= ಪಟ್ಟು" (ಕಾಕಕ್ಕ. ೧೯೩) ; ಭಕ್ತಸೌಮ್ಯನೆಂಬ ಭಕ್ತನೆಯ್ದೆ ಶೂದ್ರರೊಳ್ ಮೇಳಮಾಗಿ ಕೀಟನಲ್ಲಿ ಪಟ್ಟು ಪುಟ್ಟದಂತೆ ತಾನಿನೋಳಿಯಿಂದೆ ಜಾತನಾಗಿ ಯೊಪ್ಪು ತಿರ್ದುನಾಗಳುಂ (ಹಾಲಾಸ್ಯ. ೩-೬-೨). ೧೬. ರೇಷ್ಮೆಯ ಬಟ್ಟೆ ; ಪೀತಾಂಬರ : ಪ್ರಭುಗಳು . . . ಎಳೆಯ ಹಳದಿಬಣ್ಣದ ಪಟ್ಟನ್ನುಟ್ಟು ಮೇಲೆ ನೀಲಿಯ ಕಟಿವಸ್ತ್ರದಿಂದ ಅಲಂಕೃತರಾಗಿದ್ದಾರೆ (ಶಾಂತಲಾ. ೩೪). ೧೪. ತಲೆಯಲ್ಲಿ ಕೂದಲು ಉದುರಿ ಬೋಳಾಗಿರುವಿಕೆ : ಹಣೆಯ ಮೇಲಿಂದ ತಲೆಗೂದಲು ಉದುರಿ ಪಟ್ಟಾಗಿತ್ತು (ದೂಬಟ್ಟ. ೧೪೧). 'ಪಟ್ಟುದಲೆ' ಪರಾ. **ಪಾಟ್ಟ್** : ೧೬. ನೆಲನ ಸೋಂಕುವ ಪಾಟ ಪಾವಡೆ ರಥದೊಳು ತೊಳಗಿದುವತಿಮುದದಿಂದ (ಕಂಪವಿ. ೬೩-೭೧). **ಹಟ್ಟಿ** : ೧೬. 'ಹಟ್ಟಿಗಾಟಿ2' ಪರಾ.

ಪಟ್ಪಾಪಟ್ಪ, ಪಟಾಪಟ1 = ೧. (ಬೇರೆ ಬೇರೆ ಬಣ್ಣಗಳ) ಉದ್ದುದ್ದವಾದ ಪಟ್ಟೆ ; ಪಟ್ಟಿಪಟ್ಟೆ : ಬಲ್ಕಿಮಿಂಚುಗಳಿಂದ ಕೂಡಿರುವ ಕಾಲಮೇಳದಂತಿರ್ಪ ಸರಿಗೆ ಪಟ್ಪಾಪಟ್ಪಗಳಿಂ ಬೆರೆದಿರುವ ಕಪ್ಪಾದ ಕಾಂಡಪಟ್ಟವಂ ಕಟ್ಟಿಸಿ (ಸೌಗಂಧಿ. ೪೮೭-೧೨) ; ಅವರ ಮನೆಯ ಕಿಟಿಕಿಗಳಿಗೆ ಪಟಾಪಟಿಯಾಗಿರುವ ಪರದೆಗಳನ್ನು ಹಾಕಿದ್ದಾರೆ (ದೂಧಿ). ೨. ಹೊರಮೈಯಲ್ಲಿ ಕಪ್ಪಾದ ಗೆರೆಗಳಿರುವ ಒಂದು ಬಗೆಯ ಕಬ್ಬು : ರಸದಾಳಿ, ಪಟ್ಪಾಪಟ್ಟ ಮತ್ತು ಜೇಡಿಕಬ್ಬಲ್ಲದೆ ಈಚೆಗೆ ಅನೇಕ ತಳಿಕಬ್ಬುಗಳನ್ನು ಪ್ರಚಾರಕ್ಕೆ ತಂದಿರುತ್ತಾರೆ (ಸ್ವಸಮ. ೫೧). **ಪಟ್ಪಾಪಟ್ಟಕಬ್ಬು, ಪಟಾಪಟ ಕಬ್ಬು** = ಪಟ್ಪಾಪಟ್ಟು ೨ : ಪಟ್ಪಾಪಟ್ಟಕಬ್ಬು ಹೆಚ್ಚು ಸಿಹಿಯಾಗಿರುತ್ತದೆ (ದೂಧಿ) ; ಪಟಾಪಟಕಬ್ಬನ್ನು ಪಟ್ಪಾವಳಿ ಕಬ್ಬು ಎಂದೂ ಕರೆಯುವರು (ದೂಧಿ). **ಪಟ್ಪಾಪಟ್ಟಸೀರೆ** = ಉದ್ದುದ್ದ ಗೆರೆಗಳಿರುವ ಸೀರೆ : ಪಟ್ಪಾಪಟ್ಟ ಸೀರೆಯನ್ನು ನೀಳವಾಗಿರುವವರು ಉಡುವುದಕ್ಕಿಂತ ಗಿಡ್ಡಾಗಿರುವವರು ಉಟ್ಟರೆ ಚೆನ್ನಾಗಿರುತ್ತದೆ (ದೂಧಿ). **ಪಟ್ಟ ಮಾಡು** = ಕ್ರಮವಾಗಿ ಬರೆದಿಡು ; ಯಾದಿ ತಯಾರಿಸು : ಹೊಸದಾಗಿ ಬಂದ ವಸ್ತುಗಳನ್ನು ಎಣಿಕೆ ಮಾಡಿ ತರುಣನು ಪಟ್ಟ ಮಾಡಿದನು (ಗೋಪುರ. ೩೨) ; ಅವನ ಮಹತ್ಕಾರ್ಯಗಳೆಲ್ಲವನ್ನೂ ಪಟ್ಟ ಮಾಡಿ ಹೇಳುವುದು ಸಾಧ್ಯವಿಲ್ಲ (ದೇಕಸ್ಕೆ. ೨೯).

[<ಸಂ. ಪಟ್ಟ]

ಪಟ್ಟ3 (ನಾ). ೧. ಮುಂದಲೆಗೆ ಹಾಕಿಕೊಳ್ಳುವ ಒಂದು ಬಗೆಯ ಆಭರಣ. ೨. ಕೆಂಪುಅರಗಿನ ಮರ : "ಕ್ರಮುಕಃ, ಪಟ್ಟಕಾಷ್ಠಃ, ಪಟ್ಟಃ, ಲಾಕ್ಷಾಪ್ರಸಾದನಃ- ೪ ಕೆಂಪುಅರಗಿನ ಗಿಡ, ಕೆಂಪುಜಾಲಾರೀ ಗಿಡ, ಪದಕದ ಮರವೆಂದು ಕೆಲವರನ್ನುವರು" (ಸಿದ್ಧಾಂತಿ. ೧೩೧).

[ಸಂ. ಪಟ್ಟ]

ಪಟ್ಟಿಕೆ (ನಾ). ಪೀಠ ; ಪಟ್ಟಿಕೆ ; ಆಸನ : ಕೃಷ್ಣದ್ವೈಪಾಯನನಂ ಕಂಡಜಾತಶಮ್ರು ತನ್ನೆಱುದ ಸ್ಫಟಿಕಶಿಲಾತಳದ ಪಟ್ಟ[ಪಾಠಾಂ. ಟ್ಟ]ಕದಿಂ ದಿಟ್ಟುದು . . . ಸಾಷ್ಟಾಂಗವೆಱಗಿ ಪೊಡವಟ್ಟು (ಪಂಪಭಾ. ೬-೫೯ ಪ).

[ಸಂ. ಪಟ್ಟಿಕಾ]

ಪಟ್ಟಿಕಾಲೋಧ್ರ (ನಾ). ಕೆಂಪುಅರಗಿನ ಮರ : "ಪಟ್ಟೀ-ಪಟ್ಟಿಕಾಲೋಧ್ರ" (ಓಷಧಿ. ೯೦). [ಸಂ.]

ಪಟ್ಟಿಕಾಳಿ (ನಾ). ಗ್ರಾಮಸೇವಕ : ಕಮ್ಮಾಱ ಅಳನು ಆ ನಗರಯನು ಮಿಟ್ಟು ಪಟ್ಟಿಯ ಪಟ್ಟಿಕಾಜಿರುಂ ಅಯ್ಮಣಿ ಮೂಡಿ ಕಲ್ಲುನಂ×××(ಎಕ. III, ಸಂಜನ. ೧೩೧-೧೯ ; 1077). [←ತಮಿ. ಪಟ್ಟಿಕ್ಕಾರ]

ಪಟ್ಟಿಕೆ (ನಾ). ೧. ಚಿನ್ನ, ಬೆಳ್ಳಿ ಮುಂತಾದುವುಗಳ ಪಟ್ಟಿ. ೨. ಒಂದು ಬಗೆಯ ಹಾರ : "ನೇವಳಂ ಪದಕ ಸರಪಳಿ ಪಟ್ಟಿಕಾದಿಗಳ್ ಗ್ರೈವೇಯಮುಮಳ್ತು" (ಮುಂಗರಾ. ೧೦೦-೨೫). ೩. ಯಾದಿ ; ತಪ್ಪೆ ; ಪಟ್ಟಿ : ಪೆಸರ ಪಟ್ಟಿಕೆಯಿ ಸಾಲ್ದುಂ ; ಹಗೆಗೆ ಹೊಳ್ಳುಗಳೆವುದು ಹೃದಯಮುಂ ! (ಶ್ರೀರಾಮಾ. ೫೫೯-೧೯೫). ೪. ಗಾಯಕ್ಕೆ ಸುತ್ತಿ ಕಟ್ಟುವ ಬಟ್ಟೆಯ ಪಟ್ಟಿ : ರಾಜಪುತ್ರನಿಗೂ ಮಂತ್ರಿಗಳಿಗೂ ಗಾಯುಗಳಿಗೆಲ್ಲಾ ಪಥ್ಯವಾದ ಪಟ್ಟಿಕೆಗಳನ್ನು ಕಟ್ಟಿಸಿ, ಬೇಕಾದ ಹಾಗೆ ಉಪಚಾರ ಮಾಡಿದನು (ಕಸಂ. ೧೯೧). ೫. ಮುಂದಲೆಯ ಆಭರಣ. ೬. ಬಟ್ಟೆಯ ತುಂಡು. ೭. ರೇಷ್ಮೆಯ ಬಟ್ಟೆ. ೮. ಶಿಲ್ಪ ಗಳನ್ನು ಕೆತ್ತಲು ಬಳಸುವ ಕಲ್ಲಿನ ಅಲಂಕಾರದ ಸಾಲುಪಟ್ಟೆ ; ಫಲಕ : ಅರ್ಧ ಕೆತ್ತಿದ ಪಟ್ಟಿಕೆಗಳು, ಕಂಭಗಳು, ಜಾಲಂಧ್ರಗಳು, ಬೋದಿಗೆಗಳು ಅಲ್ಲೊಂದು ಇಲ್ಲೊಂದು ಬಿದ್ದಿದ್ದುವು (ಸಸಂ. ೭೮). ೯. ಬಾಗಿಲಿಗೆ ಅಡ್ಡವಾಗಿ, ಮೇಲೂ ಕೆಳಗೂ ಜೋಡಿಸಿರುವ ಮರದ ಪಟ್ಟಿ. ೧೦. ಹಲಗೆ ; ಮಣೆ ; ಪೀಠ : ಪಳಿಕಿನ ಪಟ್ಟಿಕೆಯಲ್ಲಿ ಪೊಂಬಾಳೆಯ ಸುಳಿಯಲ್ಲಿ ರತಿಯ ಕುಳ್ಳಿರಿಸಿ ನಳಿನಾಕ್ಷಿಯರೊಡತಿಯ ಕಾಲೆರಡುಮಾಂದಳಿರನು ಜಲದೊಳದ್ದಿದರು (ಮೋಹತ. ೯-೪೧). ೧೧. ವೇದಿಕೆ ; ಜಗಲಿ : ಪಳಿಕಿನ ಪಟ್ಟಿಕೆ[ಪಾಠಾಂ ಗೆ] ನೀಲದ ನೆಲೆ ಕಟ್ಟು ಕುಲಿಶದ ಕೂಟ ಪಟ್ಟಿಗಳ ಪಳಯಿಗೆ ಪದ್ಮರಾಗದ ಪಟ್ಟಶಾಲೆ ಕಣ್ಗೊಳಿಸಲೆಸೆದುದಾ ನಳಯ (ಕುರಾಸಾಂ. ೩-೯೩). ೧೨. ಟಿಪ್ಪಣಿ ಗಳನ್ನು ಗುರುತಿಸಿಕೊಂಡ ಚೌಕಾಕಾರದ ಕಾಗದ ಅಥವಾ ಕಾರ್ಡು : ನಮ್ಮ ಕಚೇರಿಯಲ್ಲಿ ಲಕ್ಷಾಂತರ ಪಟ್ಟಿಕೆಗಳಿವೆ (ದೂಧಿ).

[ಸಂ. ಪಟ್ಟಿಕಾ]

ಪಟ್ಟಿಗವಣೆ (ನಾ). ಚಿಪ್ಪಟೆಯಾದ ತಳವುಳ್ಳ ಒಂದು ಬಗೆಯ ಕವಣೆ : ತಾವರೆಯ ನೂಲ ನುಲಿಯಮರ್ದಾ ವನರುಹದಳದ ಪಟ್ಟಿಗವಣೆಯೊಳಧಟಂ ತೀವುತೆ ನೈದಿಲ್ಕೊಗ್ಗೆಯನಾ ವನಿತಾತತಿ ಪುಕಾಳಿಯಂ ಬಿಡದಿಡುಗುಂ (ಸ್ವಸಮ. ೪-೩೦). [ಪಟ್ಟಿ2+ಕವಣೆ1]

ಪಟ್ಟಿಗಾಳಿಗೆ (ನಾ). ಹೆಟ್ಟ ಹಟ್ಟಿಗಳ ನಡುವೆ ನಡೆಯುವ ಕಾದಾಟ : ನಾರಕರನನ್ಯಜನ್ಮದ ವೈರಮನೆಚ್ಚಱಿಸಿ ಪ[ಪಾಠಾಂ. ಹ]ಟ್ಟಿಗಾಳಿಗಮಂ ಕಣ್ಣಾರೆ ನೀಕ್ಷಿಪ ತೆಱದಿಂದಾರುತ್ತಿರೆಯಿಸುತಮಿಷ್ಟಪರ್ ದನುಜರ್ಕಳ್" (ಪಾರ್ಶ್ವಪು. ೧೩-೬೪) ; ಪುಟ್ಟದ ನೀಜಿಯರಿಗೆಲ್ಲರಿಗೀ ಪರಿ ಪುಟ್ಟುವುದೊಡನೆ ರೋಗಗಳು ಪಟ್ಟಿಗಾಳಿಗದವರಂದದಿ ಕಡಿದರ ಮುಟ್ಟ ಮೂಡಲಿಸಿ ಕಾದುವರು (ವರ್ಧಮ. ೪-೧೦೩) : [ಪಟ್ಟಿ1+ಕಾಳಿಗ]

ಪಟ್ಟಿಗೆ, ಹಟ್ಟಿಕೆ, ಹಟ್ಟಿಗೆ2 (ನಾ). ೧. ಕೊರಳಿನಲ್ಲಿ ಧರಿಸುವ ಒಂದು ಬಗೆಯ ಆಭರಣ : ಜೋಗಿಯ ಕೊರಲೊಳ್ ಕರವಿಂಬಾಗಿರ್ದುದು ಪೊಳೆವ ಪೊನ್ನ ಪಟ್ಟಿಗೆ (ಲೀಲಾವ. ೪-೬೨) ; ಪುಟ್ಟಗೆಯಂ ಮಣಿಸರಮುಂ ಪಟ್ಟಿಗೆಯಂ ರಕ್ಷೆಯುಂ ಪವಿತ್ರಾದಿಗಳಂ ಕಟ್ಟಿ ಕೊರಲೊಳ್ ವಿರಾಜಿಸೆ ಕಟ್ಟುಗೆ ಪಟ್ಟವ(ಂ) ಲಲಾಟಪಟ್ಟಾಂತರದೊಳ್ (ಅಶ್ವಶಾ. ೪-೧೬). ೨. ಡಾಬು ; ನಡುಪಟ್ಟಿ : ಪಟ್ಟಿಗೆ ಕಟಸೂತ್ರಮೆಂಬಿವು ಮನಂಗೊಳೆ ಮನ್ಮಥಚಕ್ರವರ್ತಿಗೀಕೆಗಳ್ ವಿನೋದದಾಕೆಗಳೆನಲ್ ಮೆಱೆದತ್ತು ವಿಳಾಸಿನೀಜನಂ (ಆದಿಪು. ೧೨-೧೨) ; ಪೊಸ ದೆಸಲಂ ಬೆಡಂಗ ಮರ್ದ ಪ[ಪಾಠಾಂ. ಪೆ]ಟ್ಟಿಗೆ ಪೊನ್ನೊಱಿ ಸೇತಮಾಲೆ ಎಣ್ಣಾ ಸರಮುದಾತ್ತ ಹಸ್ತಕಟಕಂ . . . ತಮಗೊಪ್ಪೆ (ವರ್ಧಮಾ. ೪-೮೩) ; ಮೇರುಮಹೀಧರಂಗೆ ಕಟಸೂತ್ರದ ಪಟ್ಟಗೆಯಂತಿರೆ . . . ಎಸೆದಿರ್ಪುವು ಮೇಖಲೆ

ಕೂಡೆ ನಾಲ್ಕುವಿಸ್ತಾರಮನಾಳ್ದು ಪತ್ಯಕದಧಿತ್ಯಕದಂತರದಂತರಾಳದಾ (ಅನಂಪು. ೫-೪೫); ಮೂಗುತಿ ಸರಿಗೆ ಸಲೆ ಭುಜಕೀರ್ತಿ ಪಟ್ಟಗೆ ಥಳಥಳಿಸುವ ಕೊರಳೊಳು ತ್ರಿವಳಿ ನ್ಯಾವಳಿ ತಾಯಿತು . . . ತೂಗಲು (ವಿಜಾಕ್ಯ. ೭೧-೨). ೩. ಪರಿಧಿ; ಸುತ್ತುಗೆರೆ: 'ನೆತ್ತಿವಟ್ಟಗೆ' ಪರಾ. ೪. ಬೇಟೆಗಾರರು ಮುಂಗೈಗೆ ಕಟ್ಟುವ ತೊಗಲಿನ ಪಟ್ಟ; ಗೋಧ; ಕೈಪೊಡೆ: ತೊಂಗಲಿನಂತೆ ಪಗೆವನ ತಲೆಯಂ ಕೊಂಡು ಪಟ್ಟಗೆಯನ್ತೆ ಪಗೆವನ ಹಸ್ತವಂ ಕಟ್ಟ ಮೆಱೆವರುಂ (ಎಕ. VII, ೨೩೧೨. ೧೧೮-೫೩; 1054); ಪಿಡಿದ ಕರ್ಕಂಬುವಮರ್ಕೆವೆತ್ತ ಪುಲಿದೋಲ ಪಟ್ಟಗೆಯುಮೊಟ್ಟಿದ ಚುಚ್ಚುಂ ಕಟ್ಟಿದ ತೊಂಗಲುಂ ಬೆರಸು . . . ಇದಿರ್ಚಿನಿಂದ ಬಿಲ್ವಡೆಯ ಪೆಱಗೆ ಪಡೆನಾಯಕನಾಗಿ (ಪರ್ಧಮಾ. ೪-೪೨ ಪ). ೫. = ಪಟ್ಟಕೆ ೯: 'ಪಡಿವಟ್ಟಗೆ' ಪರಾ. ಪಟ್ಟಕೆ: ೧. "ಪಟ್ಟಕೆ—ಪಟ್ಟಕಾ = ಪಟ್ಟಗೆ (ತದ್ಭಕೋ. ೪೮); ಪಟ್ಟಕಾ—ಪಟ್ಟಕೆ (ಶಮದ. ೨೫೮ ಪ್ರಯೋ.), ಪಟ್ಟಗೆ₂: ೧. ಕತ್ತುರಿಕಂಪು ಕೈಸುರಿಗೆ ಹೊಂನೊಱೆ ಪಟ್ಟಗೆ ಸಂಣ ಗಗ್ಗರಂ ಮುತ್ತಿನ ದಂಡೆ . . . ಮೆಯುವೆತ್ತಿರೆ (ಎಕ. V, ಅರಸೀ. ೮೮-೧; 1184); ಪಟ್ಟಕೆ, ಪಟ್ಟಗೆ (ಶಬ್ದಾನು. ೧೪೫ ಪ್ರಯೋ).

[<ಸಂ. ಪಟ್ಟಕಾ]

ಪಟ್ಟನಿ (ನಾ). ಒಬ್ಬಾತನ ಹೆಸರು: ಶ್ರೀಮಾಲನೂರ ಪಟ್ಟನಿ ಗುರವಡಿಗಳ ಶಿಷ್ಯರ್ ಉಗ್ರಸೇನ ಗುರವಡಿಗಳ್ ಒನ್ದು ಶಿಷ್ಯಳ್ ಸನ್ಯಾಸನಂ ನೋನ್ತು ಮುಡಿಪ್ಪಿದಾರ್ (ಎಕ. II, ೨೫-೧; ಸು. 700). [?]

ಪಟ್ಟಪೊಂಬುಚ್ಚ 'ಪಟ್ಟಪೊಂಬುಟ್ಟ' ನೋ.

ಪಟ್ಟಪೊಂಬುಟ್ಟ, ಪಟ್ಟಪೊಂಬುಚ್ಚ, ಪಟ್ಟಹೊಂಬುಟ್ಟ (ನಾ). ಒಂದು ಊರಿನ ಹೆಸರು; ಇ ಈಗಿನ ಶಿವಮೊಗ್ಗ ಜಿಲ್ಲೆಯ ನಗರ ತಾಲ್ಲೂಕಿನ ಹುಂಚ ಎಂಬ ಗ್ರಾಮದ ಹಳೆಯ ಹೆಸರು: ಪಟ್ಟಪೊಂಬುಟ್ಟಪುರವರೇಶ್ವರಂ ಪದ್ಮಾವತೀಲಬ್ಧವರಪ್ರಸಾದಂ...ಶ್ರೀಮತ್ ವೀರಸಾನ್ತರದೇವರ್ (ಮೈಅರಿ. ೧೯೩೧, ೭೪-೯; 1053 ?). ಪಟ್ಟಪೊಂಬುಚ್ಚ: ಪಟ್ಟಪೊಂಬುಚ್ಚಪುರವರಾಧೀಶ್ವರ . . . ಶ್ರೀಮನ್ಮಹಾಮಂಡಲೇಶ್ವರಂ ವೀರಸಾಂತ್ತರದೇವರ ವಿಜಯರಾಜ್ಯಂ (ಎಕ. VII, ೨೮೫. ೧೧೬-೫; 1173). ಪಟ್ಟಹೊಂಬುಟ್ಟ: ಪಟ್ಟಹೊಂಬುಟ್ಟಪುರವರೇಶ್ವರ . . . ಶ್ರೀಮದಣ್ಣಲದೇವ (ಎಕ. VII, ೨೩೧೨. ೫೩-೫; 1027). 'ಪಟ್ಟ₁' ಪರಾ. [ಪಟ್ಟ₁ + ಪೊಂಬುಟ್ಟ]

ಪಟ್ಟಬದ 'ಪಟ್ಟಬದ್ಧ' ನೋ.

ಪಟ್ಟಬಳೆ (ನಾ). ಮೇಲುಭಾಗದಲ್ಲಿ ಚಪ್ಪಟೆಯಾಗಿರುವಂತೆ ಶಟ್ಟಿ ಮಾಡಿರುವ ಬಳೆ: ಪಟ್ಟಬಳೆ ಧರಿಸುವುದು ಈಚೆಗೆ ಫ್ಯಾಷನ್ನು ಆಗಿದೆ (ರೂಢಿ). [ಪಟ್ಟ₂ + ಬಳೆ₂]

ಪಟ್ಟರ್ 'ಪಡ್ಯ₁' ಪರಾ.

ಪಟ್ಟರಿಸು 'ಪಡ್ಯ₁' ಪರಾ.

ಪಟ್ಟಲ (ನಾ). ಮಳೆಗಾಲದಲ್ಲಿ ನೀರಿನಲ್ಲಿ ಪೂರ್ಣವಾಗಿ ಮುಳುಗಿದ್ದು ಅನಂತರ ಒಂದು ಬೆಳೆಯಲ್ಲಿ ತುಂಬ ಉತ್ಪತ್ತಿ ಕೊಡುವ ಗದ್ದೆ(?): ಮುಂದಕ್ಕೆ ನಿಂಮ ಬಾಳಿಕೆಯಲು ಪಟ್ಟಲ ಬಿದ ಕಾರು ಬಿತು ಬಳ್ಳ ೩೦ ಅದಲು ಮು ೬೧ ಮಕ್ಕಿ ಕಲ್ಲಿ ಮರು ಮು ೬ ಬೆಟ್ಟು ಮು ೫[೩] ಅ[ಂ]ನ್ತು ಮುಡಿ ತಾದೆ ಮು ೧೨೦ ಅಕ್ಕಾ[ರ]ದಲು ಮೂಡೆ ನೂರಯಿಪ್ಪತನ ನೀಲು ಬಾಳಿ . . . ಕಾಲಕಾಲಕ್ಕೆ ತಪ್ಪದೆ ನಡಸಿ ಬರುಹನೆಂದು ಕಟ್ಟ ಕೊಟ್ಟೆವು (ಸೌಇಇ. IX-ii, ೪೬೦-೧೬; 1465). [?]

ಪಟ್ಟವೀಳ್ಯ (ನಾ). ತಾಂಬೂಲದ ವೀಡ,—ಬೀಡ; ಪಾನ್‌ಪಟ್ಟ: ಪಟ್ಟವೀಳ್ಯಕ್ಕೆಂತ ಹೋಗಿ ಕುಟ್ಟಸಿಕೊಂಡು ಬಂದ (ಗಾದೆ); ಪಟ್ಟವೀಳ್ಯವಾದರೆ ಭಟ್ಟರಿಗಾಗದೆ ? (ಗಾದೆ). [ಪಟ್ಟ₂ + ವೀಳ್ಯ(<ವೀಳೆಯ)]

ಪಟ್ಟಶ(ನಾ). ಬಹಳ ಹರಿತವಾದ ಮೊಳೆಯುಳ್ಳ ಬರ್ಚಿ,—ಈಟಿ: ಬಾಧಿಸುವ ಮುದ್ದರ ಮುಸುಂಡಿ ಪಟ್ಟಶ ಶೂಲ . . . ಪರಶು ಮುಸಲಂಗಳಿಂದಾ ಧರಾನಾಥನಂ ಬಳಸಿ ನಾನಾ ಪರಿಯ ಮಳೆಗರೆವುತಾರ್ಭಟಿಯೊಳು (ವೆಂಕಾರಾ. ೬-೧೧-೧೧); ಥಟ್ಟನೆ ಪಟ್ಟಶವ ಕೊಂಡು ಸಚ್ಚರಿತನಾದ ಸಡ್ವದನನಂ ಪೊಯ್ಯಲ್ (ಮಲ್ಲಾರಿ. ೭-೩೧). [ಸಂ.]

ಪಟ್ಟಶಕ (ನಾ). = ಪಟ್ಟಶ: "ಯಷ್ಟಿಃ, ಪಟ್ಟಶಕಃ . . . ಚಕ್ರಂ— ಇವು ಮೊದಲಾಗುಳ್ಳುವು ಕೆಯ್ಯುದಗಳ ಭೇದಂಗಳ್" (ಹಲಾಯು. ೭೮-೩೨೨). [ಸಂ.]

ಪಟ್ಟಸ₁, ಪಟ್ಟಸ₂, ಪಟ್ಟಸು (ನಾ). ಮಲ್ಲಗಾಳಗದ ಒಂದು ವರಸೆ; ಕುಸ್ತಿಯಲ್ಲಿ ಒಂದು ಪಟ್ಟು: ಪಟ್ಟಸವೆಂಬ ಬಿನ್ನಣದೆ ಕೃಷ್ಣಂ ಗೆಲ್ದು ಪಿಂಗಾಲ್ಗಣಂ ಪಿಡಿದಾರ್ದೆತ್ತಿ ನಿಶಾಟನಂ ತಿರಿಪೆ (ಜಗವಿ. ೬-೬೯); ಡೊಕ್ಕರಂ ಚಡಿಕೆ ತುಳಾಡಿ ಪೊಟ್ಟಮುಡುಹಂ ಮುಹಡಂ ದಣುವಟ್ಟ ಪಟ್ಟಸಂ ಎಂದು ಮಲ್ಲಮಾತಂ ಮಾಡಿ ಪೊಡವಟ್ಟು ಕುಳ್ಳಿರ್ದ ಜಗಜಟ್ಟಗಳ ಗೊಂದಣಂ (ಅನಂಪು. ೨-೨೬); ಪಟ್ಟಸದಿಂದಂ ಪ್ರತಿಮಲ್ಲನಂ ಕೆಡಹುವೆಂ (ಬಾಧಪು. ೧೬-೧೯); ಡೊಕ್ಕರ ಬಾಹುಸೀಸಕ ಪಟ್ಟಸ ಮೊದಲಿಕ್ಕಿ ಬಿನ್ನಣದಿ ಹೆಣಗಿದರು (ಸೊಬಸೋ. ೬-೪೨); ಹರಿ ಚಾಣೂರ ನೊಡನಗ್ಗಳಿಸಿ ಕಾದುತೆ ಪಟ್ಟಸದ ಸಂಚಳತೆಯಲಿ ಕಾಲ್ವಿಡಿದು ಕೆಡಹಿದ ನಂತರಾಳದಲಿ (ಅಕ್ರೂಚ. ೬-೬೮). ಪಟ್ಟಸ₂: ಪಿನ್ನೆಲೆಯಿಂದೊದವಿ ಬಂದು ಡೊಕ್ಕರವಾಯ್ದು ಪಟ್ಟಸ ನಾಗಬಂಧಾದಿ ಬಂಧಗಳಿಂದ . . . ಪೋರುತಿರ್ಪಲ್ಲಿ (ಕಗವಿ. ೭೯ ವಿಷ್ಣುಪುರಾಣಂ); ಪದಿನಾಱುಸಾಸಿರಾಳ್ಗಳ ಕೆಯ್ಯೋಳೀಟ್ಟ ಕುಂತಂಗಳಿಂ ಜಂತೆಗಳಂ . . . ಪ್ರಾಸ ಪಟ್ಟಸಂಗಳಂ . . . ಪಾಸುವಲಗೆಗಳಂ ಅಳವಡಿಸಿ (ಚಕಸಂ. ೫೪-೧೫). ಪಟ್ಟಸು: ಸಂದ ಕೊಕ್ಕಸ ಗುಂಡು ಗೋಣೆಯು ವಿಂದೆಪಟ್ಟಸು ಚೇಣಪಟ್ಟಸುವೆಂದಿನಿಪ ವಿಂದಾಣದಲಿ ಕಾದಿದರು ಜಟ್ಟಗಳು (ಸಾಳ್ವಭಾ. ೨೨-೭೨).

[ದೇ.॥ ತೆಲು. ಪಟ್ಟಸ, ಪಟ್ಟಸ]

ಪಟ್ಟಸ₂ (ನಾ). = ಪಟ್ಟಶ: ಅಸಿ ಪರಶು ಪಟ್ಟಸ ಮುಸುಂಡಿ ಪ್ರಸರ ಧಾರಾಪಾತದಲಿ ಮೈ ಬಸಿಯೆ ರಕುತದ ಸಾರ ಸಾಲಿಡೆ ಬಲದೊಳೊಳ ಹೊಕ್ಕ (ಕುಸ್ಯಾದ್ರೋ. ೧೫-೬೩); ಇಟ್ಟಯಿಂದಿಱ್ಕಿ ಶೂಲದಿಂದಿಡು ಮೆಟ್ಟ ಮುಂದೈತಪ್ಪ ಕಪಿಗಳ ಪಟ್ಟಸದಲಿಡು (ಕಾಶಿರಾ. ೩೨-೨೨); ಅಯುಧಾವಳಿಗಳಿದ್ದವು . . . ಸುರಗಿ ಕರಾಚೂರಿ ಕಡಿತಲೆ ಪಟ್ಟಸ ಪರಶು ಕೊಡಲಿ ಶಕ್ತಿ ಡಾಣೆ (ಭರಚ. ೨೦-೧೩೪). [ಸಂ.]

ಪಟ್ಟಸಭಂಡಾರ (ನಾ). ರೇಷ್ಮೆವಸ್ತ್ರಗಳ ಭಂಡಾರ: ಎನ್ನ ಮಾಡ ಮೆನ್ನ ಪೊಱಲ್ . . . ಸುವರ್ಣಭಂಡಾರಂ ಪಟ್ಟಸಭಂಡಾರಮೆಂದಿವ ಱೊಳ್ ಮೋಹಿಸಿದ ಬುದ್ಧಿಯನೊಡೆಯನಾಗಿಯಾರ್ಜಧ್ಯಾನದಿಂ ಸತ್ತು (ಪಡ್ಡಾರಾ. ೧೪೦-೨೨); ರತ್ನತ್ರಯದ ಬಂಡಾರಮಂ ತೆಱೆವಂತೆ ಪಟ್ಟಸಭಂಡಾರ × × × ಸಮ್ಯಗ್ವ್ರತಂಗಳುವುಂ ತೆಗೆದುಕೊಳ್ವಂತೆ ವಿಚಿತ್ರ ವಸ್ತ್ರಂಗಳಂ ತೆಗೆದುಕೊಂಡು (ಸುಕುಮಾ. ೧೧-೮೩ ಪ); ಸಾರಂ ಸಮಸ್ತ ವಸುಧಾಧಾರಂ ಚಾಳುಕ್ಯಚಕ್ರಗಳ್ಪಯನಿಧಿಭಂಡಾರದ ಮನೆ ಪಟ್ಟಸ ಭಂಡಾರವಿದೆನಿಸುವುದು ಲೊಕ್ಕಿಗುಂಡಿಗ್ರಾಮಂ (ಎಇ.XV, ೩೫೫-೬೪; 1098); ವಣಿಗ್ವಂಶಜರ್ಕಳುಂ . . . ಚಕ್ರವರ್ತಿಗೆ ಯೋಗ್ಯಮಪ್ಪ ಪಟ್ಟಸ ಭಂಡಾರಮಂ ಕೊಂಡು ಮಗುಟ್ಟು ಬಸ್ಪಾಗಳ್ (ಬಂಹಿ. ೧೧-೫೦ ಪ).

[ಪಟ್ಟಸ₂ (ಇ ← ಸಂ. ಪಟ್ಟವಾಸಸ್) + ಭಂಡಾರ]

ಪಟ್ಟಹಾಕು (ಕ್ರಿ). ೧. ಪಟ್ಟ ಮಾಡು; ಯಾದಿ ತಯಾರಿಸು: ಬರಿಯ ಆಲಂಕಾರಗಳನ್ನೇ ಪಟ್ಟಹಾಕುವ ಉದ್ದೇಶದಿಂದ ಹೊರಟವರು ಕೂಡ ಕಾವ್ಯದಲ್ಲಿ ಅವುಗಳ ಸ್ಥಾನವೇನೆಂಬುದನ್ನು ಮರೆಯದಂತಾಯಿತು (ಭಾರವಿಾ.೯). ೨. ಸಾರ್ವಜನಿಕಕಾರ್ಯಕ್ಕಾಗಿ ತಲಾ ಇಷ್ಟೆಂದು

ನಿಗದಿ ಮಾಡಿದ ಹಣವನ್ನು ಕೊಡು; ವರ್ಗಣಿ ಕೊಡು; ಚಂದಾ ಕೊಡು : ಜನರು ಪಟ್ಟೇ ಹಾಕಿ ಹಣ ಕೂಡಿಸಿ ಕೊಡಹತ್ತಿದರು ಈ ಕುಟುಂಬದ ಚರಿತಾರ್ಥಕ್ಕೆ (ಸೇನಾಹ. ೨).

[ಪಟ್ಟ$_2$+ಹಾಕು(<ಪಾಯ್ಕು$_1$)]

ಪಟ್ಟ ಹೊಂಬುಟ್ಟ 'ಪಟ್ಟಪೊಂಬುಟ್ಟ' ನೋ.

ಪಟ್ಟ ಹೊಡೆ (ಕ್ರಿ). ಸಸಿಗಳ ಸಾಲುಗಳ ಎರಡು ಮಗ್ಗುಲುಗಳಲ್ಲಿಯೂ ಹಾಯುವಂತೆ ಕುಂಟೆ ಹೊಡೆ; ಎಡೆಕುಂಟೆ ಹೊಡೆ: ಹೋಳ ಪಟ್ಟ ಹೊಡೆಯಲು ಬಂತು (ರೂಢಿ).

[ಪಟ್ಟ$_1$+ಹೊಡೆ$_1$(<ಪೊಡೆ$_1$)]

ಪಟ್ಟು$_1$ 'ಪಡು$_1$' ಪರಾ.

ಪಟ್ಟು$_2$ (ನಾ). ೧. ಹಿಡಿದುಕೊಳ್ಳುವಿಕೆ; ಹಿಡಿತ; ಬಿಗಿತ : ಪಕ್ಷಿಯು ನುಡಿಗೆ ದಮಯಂತಿಯು ಅಶ್ಚರ್ಯವಂಬಟ್ಟು ಪಕ್ಷಿಯ ಮುದ್ದಾಡಿ ತಾನು ಹಿಡಿದಂತಾ ಪಟ್ಟು ಬಿಟ್ಟು ತೊಡೆಯ ಮೇಲೇರಿಸಿಕೊಂಡು ಯೋನೆನುತಿರ್ದಾಳು (ಯುನಳ. ೨೩); "ಅಷ್ಟಿಷ್ಟು ಹಣವಲ್ಲ ನನಗೆ ಬೇಕಾಗಿರೋದು . . . ಇನ್ನೊಂದಷ್ಟು ಖರ್ಚಿನ ಬಾಬತ್ತಿದೆ"— ಪ್ರಾಣೇಶಾಚಾರ್ಯರು ಅವನ ಪಟ್ಟನಿಂದ ತಪ್ಪಿಸಿಕೊಳ್ಳಲಾರದೆ ಎಂದರು (ಸಂಸ್ಕಾರ.೧೨೫); ಗ್ರೀಕ್‌ಪ್ರತಿಮೆಗಳಲ್ಲಾದರೋ ಬಾಹ್ಯರೂಪ ಮುಖ್ಯ; ನಮ್ಮ ಪ್ರತಿಮೆಗಳಂತೆ ಅವು ಶಾಸ್ತ್ರದ ಪಟ್ಟಿಗೆ ಸಿಕ್ಕಲಿಲ್ಲ (ಭಾರದ. ೫೧೮). ೨. ಚಲ; ನಿರ್ಧಾರ : ಎದ್ದು ಕಾಣುತ್ತಿದ್ದ ಆ ಇಳಿವಾಸೆ ಹಿಡಿದ ಪಟ್ಟನ್ನು ಬಿಡದ ಒರಟುತನಕ್ಕೆ ಸಾಕ್ಷಿಯಾಗಿದ್ದವು (ರೂಪಸ. ೩). ೩. ಹಠ; ಮೊಂಡುತನ : ಯಾರು ಎಷ್ಟು ಬುದ್ಧಿವಾದ ಹೇಳಿದರೂ ಅವಳು ತನ್ನ ಪಟ್ಟನ್ನು ಬಿಡಲಿಲ್ಲ (ರೂಢಿ). ೪. ನೋವನ್ನು ನಿವಾರಿಸಲು ಗಾಯ, ಊತ ಮೊದಲಾದುವುಗಳ ಮೇಲೆ ಲೇಪಿಸುವ ಔಷಧಿದ್ರವ್ಯ : ಕೆಲವು ಪ್ರತಿವೀರರು . . . ಬಾಣಗಳಿಂದ ಜರ್ಝರಿತ ಗಾತ್ರರಾಗಿ ಅರ್ತಿಯನ್ನು ಪಟ್ಟು ಮಾಡತಕ್ಕಂಥಾದ್ದಿಲ್ಲದೆ ಸುಮ್ಮನೆ ಇದ್ದರು (ಕೃಷ್ಣಾಭೀ. ೧೫). ೫. ಹೊಂದಾಣಿಕೆ; ಸುಸಂಬದ್ಧತೆ : ನತ್ತಿ ಮಾತಾಡುವವನ ಮಾತು ಸುತ್ತಿ ತೊಳಲಿದರೆ ಪಟ್ಟು ಆದೀತೇ? (ಗಾದೆ). ೬. ನಿಶ್ಚಿತವಾದುದು; ಖಾತ್ರಿ; ಸ್ಪಷ್ಟ. ೭. ಚರ್ಮಮರಗಟ್ಟಿ ದಪ್ಪವಾಗುವಿಕೆ; ದಡ್ಡುಗಟ್ಟುವಿಕೆ; ಜಡ್ಡುಗಟ್ಟುವಿಕೆ : 'ಪಟ್ಟುಗಟ್ಟು' ಪರಾ. ೮. ಖಡ್ಗಯುದ್ಧ ಹಾಗೂ ಮಲ್ಲಯುದ್ಧಗಳಲ್ಲಿಯ ವರಸೆ,— ಹಿಡಿತ,— ಪೇಚು : ತಟ್ಟುವ ತಡೆವಣಿ ವಸಿಯಂ ಮುಟ್ಟುವ ಪುಸೆಗೆಯ್ವ . . . ಬಹುವಿಧ ಭಣತೆಯ ಪಟ್ಟುಗಳೋರಣಿಸೆ ಪಳಚಿದರ್ ಬಿನ್ನಣದಿಂ (ಕೆಳಗ. ೩-೪೦); ಈ ಇಷ್ಟು ಇಕ್ಕಟ್ಟಾದ ಗರಡಿಯಲ್ಲಿ ಜಟ್ಟ ತನ್ನ ಪಟ್ಟುಗಳನ್ನೆಲ್ಲ ತೋರಿಸುವುದು ಹೇಗೆ? (ಸಮಾಲೋ. ೧೬೫); ಇಬ್ಬರೂ ಸಮರ್ಥರಾದ ಜಟ್ಟಿಗಳು. ಯಾರೂ ಪಟ್ಟಿಗೆ ಸಿಕ್ಕರು (ರಾಜಸೂ. ೨೩); ಜಟ್ಟ ಬಿದ್ದರೂ ಅದೊಂದು ಪಟ್ಟು (ಗಾದೆ). ೯. ಬಣ; ಪಂಗಡ; ಪಕ್ಷ : ಪಟ್ಟುಶಬ್ದಃ ಪಕ್ಷವಚನಃ (ಶಬ್ದಾನು. ೪೪೧ ವ್ಯಾಖ್ಯಾ). 'ಗೌಡಪಟ್ಟು', 'ಪಟ್ಟುಕ' ಪರಾ. ೧೦. ಮೆಚ್ಚು; ಮೆಚ್ಚಿಕೆ : ಪಟ್ಟನಿಂ ತೊಟ್ಟು ತೊಡವಂ ಕಮ್ಮರೆಯನಿಟ್ಟು ಒಟ್ಟನಿಂ ಪೆಣ್ಗಳಣಿಯಾಯ್ತು (ಕಾಲೂರ. ೧೫೦-೩೨೮). ೧೧. (ಕರಾ) ಅಸ್ಪಷ್ಟವಾದ ಮಾತು. ೧೨. [ಸಂಗೀತ] ಆಯಾಯ ಸ್ವರಗಳನ್ನು ಶುದ್ಧವಾಗಿ ಹೊರಡಿಸಲು ಕೊಳಲಿನಲ್ಲಿ ರಂಧ್ರಗಳನ್ನು ಬೆರಳುಗಳಿಂದ ಕಾಲುಭಾಗ, ಅರ್ಧಭಾಗ, ಮುಕ್ಕಾಲುಭಾಗ ಅಥವಾ ಪೂರ್ತಿಯಾಗಿ ಮುಚ್ಚುವಿಕೆ. ೧೩. ಒಂದು ಬಗೆಯ ಲೇಪನದ್ರವ್ಯ (?) : ಮಿಂದು ದಳಿಂಬಮನುಟ್ಟುಂ ಚಂದನಮಂ ಪೂಸಿ ನೆರೆಯೆ ಪಟ್ಟನ ಬೊಟ್ಟಟ್ಟುಂದು ನವಕುಸುಮದಾಕೃತದಿಂದಂ ಬಾಸಿಂಗಮ ನಿಮಿರಿ ಕಟ್ಟಿದ ಬಟುಕಂ (ಜಟ್ಟಮ. ೯-೨೫).

ಪಟ್ಟಾಗಿ = ೧. ಸ್ಥಿರವಾಗಿ; ದೃಢಸಂಕಲ್ಪದಿಂದ ಕೂಡಿ : ಇಬ್ಬರೂ ಪಟ್ಟಾಗಿ ಕುಳಿತು ಲೆಕ್ಕ ಮಾಡುತ್ತಿದ್ದೆವು (ಅಲಹಾ. ೭೭); ಆ ಹಳ್ಳದಲ್ಲೇ ಪಟ್ಟಾಗಿ ನಿಂತುಕೊಂಡು ಕೆರೆಯ ಮುಂಗಟ್ಟನ್ನು ಅಗೆದಗೆದು (ಕಥಾಮಂ. iv, ೮). ೨. ಎಡೆಬಿಡದೆ; ಒಂದೇ ಸಮನೆ : ಮಾರನೆಯ ದಿನ ಜ್ವರ ಪಟ್ಟಾಗಿ ಮಲಗಿಸಿತು (ಅಲಹಾ. ೧೫೪). ೩. ಯಥೇಚ್ಛವಾಗಿ; ಚೆನ್ನಾಗಿ; ಗಡದ್ದಾಗಿ : ಚೆನ್ನಾಗಿ ಅಡುಗೆ ಮಾಡಿ ಪಟ್ಟಾಗಿ ಹೊಡೆದರು (ಪ್ರವಾಇ. II, ೨೧೭); ಪಟ್ಟಾಗಿ ಅವಲಕ್ಕಿ ಮೊಸರು ತಿಂದ ವೆಂಕಮ್ಮ . . . ಮಲಗಿದರು (ಪದ್ಮಸ. ೨೩೨). ಪಟ್ಟಾಗು = ನಿರ್ಧಾರವಾಗಿ ತಿಳಿ; ಸ್ಪಷ್ಟವಾಗು; ಖಾತ್ರಿಯಾಗು: ಈಗಳ್ ನಿನಗೆ ಸೀತಾರಾಮರ್ಕಳ ಪುಟ್ಟು ಪಟ್ಟಾದುದೇ? (ಅದ್ಭುತ. ೩೨-೪). ಪಟ್ಟನಾಟ = ಇಸ್ಪೀಟಾಟದಲ್ಲಿ ಒಂದು ಬಗೆ : ಇಸ್ಪೀಟನಲ್ಲಿ ಯಾವ ಆಟ ಆಡುವಿರಿ? ಪರೇಲೋ? ಪಟ್ಟನಾಟವೋ? (ರೂಢಿ).

[ದೇ.॥ ತಮಿ. ಪಜ್ಜು; ತುಳು. ಪಟ್ಟ್; ತೆಲು. ಪಟ್ಟು]

ಪಟ್ಟು$_3$ (ನಾ). ೧. ಸಲ; ಸರದಿ; ಬಾರಿ : ಈ ವಸಂತಕಂ ಪಲವುಂ ಪಟ್ಟೊರೆದ ಭೈರೂಪದ ಪಳಕುವಟ್ಟನಲ್ಲಿಯಮರ್ಚಿರವೇಟ್ಟುಂ (ಚಕವಿ. ೬-೨೩೫ ವ); ಕೆಲವರಿಗೆ ಒಂದೇ ಪಟ್ಟಿಗೆ ಹಳ್ಳಿಯನ್ನು ಉಜ್ಜಯಿನೀ ಪಟ್ಟಣವನ್ನಾಗಿ ಮಾಡಬೇಕೆಂದು ಇಷ್ಟ (ಹುಬ್ಬಹ. ೧೮೭). ೨. ಪಾಲು; ಮಡಿ : ಕಾಯಿಲೆಯ ನಷ್ಟ ಕೊದಗಿದ ಲಾಭ ಮೂರು ಪಟ್ಟು (ನೆಲಮು. ೮೩-೧೪); ಬೀಜದ ಹತ್ತು ಪಟ್ಟು ಬೆಳೆಯಾಗುವುದಕ್ಕೆ ಸಂಶಯವಿಲ್ಲ (ಕೃಷಿಪ್ರ. ೭೨); ಸೂರ್ಯಗೋಲವು ಪೃಥ್ವಿಗಿಂತ ಸುಮಾರು ೧೭ ಲಕ್ಷ ಪಟ್ಟು ದೊಡ್ಡದಾಗಿರುವುದು (ಮುಂಬಯಿ. ೬-೫೯). 'ದುಪ್ಪಟ್ಟು' ಪರಾ.

ಪಟ್ಟು$_4$ (ನಾ). ೧. ಊರು; ಹಳ್ಳಿ : ಶ್ರೀಕೃಷ್ಣರಾಜಒಡೆಯರು ಹರವು ಮುಂತಾದ ಪಟ್ಟುಗಳ ಪಾಳೆಯಗಾರರನ್ನು ಕಳನಲ್ಲಿ ಗೆದ್ದು ಆ 'ಶೃಂಗಾರಹಾರ' ಎಂಬ ಬಿರುದನ್ನು ಸಂಪಾದಿಸಿದರು (ಬೆಟ್ಟಅ. ೨೮-೧೧). 'ಪಾಳೆಯಪಟ್ಟು' ಪರಾ. ೨. ನೆಲೆ; ಸ್ಥಳ; ಸ್ಥಾನ : ಕೆಟ್ಟ ತಿನ್ನೇನಲ್ಲಿ ಪ್ರಬಲವು ಹುಟ್ಟಿತಿನ್ನೇಯಿಳೆಯು ನನಗಿಹ ಪಟ್ಟು ತೋರುವುದಿಲ್ಲ (ಜಿನಭಾ. ೩೪-೪೬). 'ಪಟ್ಟುಟಾ' ಪರಾ.

[ದೇ.॥ ತಮಿ. ಪಟ್ಟು]

ಪಟ್ಟು$_5$ 'ಪಟ್ಟ$_2$' ನೋ.

ಪಟ್ಟುಕ (ನಾ). ಯಾವುದಾದರೂ ಒಂದು ಪಕ್ಷಕ್ಕೆ ಒಲಿಯುವವನು; ಪಕ್ಷಪಾತ ಮಾಡುವವನು : ಪಟ್ಟುಕ—ಪಟ್ಟುಶಬ್ದಃ ಪಕ್ಷವಚನಃ ತತ್ಕುರ್ವನ್ ಪಕ್ಷಪಾತೀತಿ ಯಾವತ್ (ಶಬ್ದಾನು. ೪೪೧ ವ್ಯಾಖ್ಯಾ).

[ಪಟ್ಟು$_2$+-ಕ$_3$]

ಪಟ್ಟುಕಂಥೆ 'ಪಟ್ಟುಗಂಥೆ' ನೋ.

ಪಟ್ಟುಕಾಱ, ಹಟ್ಟಿಗಾಱ$_2$ (ನಾ). ರೇಷ್ಮೆವಸ್ತ್ರವನ್ನು ನೇಯುವವನು; ಪಟ್ಟಿಗಾರ : ಅಸುರದೊಳಿಂದ್ರಜಾಲದ ಕೂಸುಗಳಂ ಕಂಸನೊಗೆದನಱಿಯೊಳ್ನೆತ್ತರ್ಸೂಸೆ ದೆಸೆದೆಸೆಗೆ ಕೆಂಪಿನ ಪಾಸಂ ಪಿಡಿದೊಗೆವ ಪಟ್ಟುಕಾ[ಪಾರಾಂ. ಟ್ಟಿಗಾ]ಱನ ತೆಱದಿಂ (ಅರ್ಧನೇ. ೬-೩೧). **ಹಟ್ಟಿಗಾಱ$_2$** : ಹಟ್ಟಿಗಾಱರ ಅಟ್ಟಿತ್ರಸರ, ಸೂತ್ರಪ್ರವೇಷ್ಟನ (ನಾಚರಾ.೬.).

[ಪಟ್ಟು$_5$(<ಪಟ್ಟ$_2$)+-ಕಾಱ]

ಪಟ್ಟುಗಂಥೆ, ಪಟ್ಟುಕಂಥೆ (ನಾ). ರೇಷ್ಮೆಯ ಹೊದೆಯುವ ವಸ್ತ್ರ: ಒರ್ವಂ ವೀರಮಾಹೇಶ ಚಿನ್ನದಿಂ ಸವೆದ ಕಂಥೆಯ ಧರಿಸಲವರ ಕರವನಜ ಸಂಭವರು ಚಿನ್ನದ ಕಂಥೆಯಂಶವೆಂಬರು . . . ಪಟ್ಟುಗಂಥೆಯಂ

ಧರಿಸಿದಯ್ಯನ ಶಿಷ್ಯರಾ ಪಟ್ಟುಗಂಥೆ ವರ್ಗಂ (ಗುರುಚಾ. ೩-೨೦).

ಪಟ್ಟುಕಂಥೆ : ಲಿಂಗಣಾರ್ಯಂಗೆ ಪುರಂಗಳ ಕೊಟ್ಟು ಚೆಲ್ವಿನ ಕೊಡಂಗಳ ನೀವುತಂ ಪಟ್ಟುಕಂಥೆಯನಿತ್ತು (ಲಿಂಗಪು. ೩೬-೨೩).

[ಪಟ್ಟು5(<ಪಟ್ಟ2)+ಕಂಥೆ]

ಪಟ್ಟುಗಟ್ಟು (ಕ್ರಿ). ದಡ್ಡುಗಟ್ಟು ; ಜಡ್ಡುಗಟ್ಟು : (ಕ).

[ಪಟ್ಟು2+ಕಟ್ಟು1]

ಪಟ್ಟುಡೆ (ನಾ). ಪಟ್ಟೆವಸ್ತ್ರ ; ರೇಷ್ಮೆಯ ಬಟ್ಟೆ : ಗಟ್ಟಮಗುಟ್ಟುವ ಗಟ್ಟವಲ್ತಿಯರ ಪಟ್ಟುಡೆಯೊಳ್ ಕಟ್ಟುವಡೆದುಂ . . . ಪಶ್ಚಿಮಾನಿಲಂ ಮೈದೋಱಲ್ (ರಾಮಾಶ್ವ. ೨-೨೦). [ಪಟ್ಟು5(<ಪಟ್ಟ2)+ಉಡೆ2]

ಪಟ್ಟುದಲೆ (ನಾ). ಕೂದಲು ಉದುರಿ ಬೋಳಾಗಿರುವ ತಲೆ ; ಬೋಳುದಲೆ : ಅನೆದಂತವ ಸುಟ್ಟು ಕರಿ ಮಾಡಿ ಎಣ್ಣೆಯಿಂದಲಾದರೂ ಜೇನುತುಪ್ಪದಿಂದಲಾದರೂ ನೆಲಗುಳ್ಳದ ಹಣ್ಣಿನ ರಸದಿಂದಲಾದರೂ ಅರೆದು ಲೇಪನಂ ಮಾಡಿಸಲು ಹೇನ ಕೆರೆ, ಪಟ್ಟುದಲೆ ಎಂಬ ರೋಗಂಗಳು ಶಮನವಹವು (ವೈದ್ಯಸಾ. II, ೧೪೬). [ಪಟ್ಟು5(<ಪಟ್ಟ2)+ತಲೆ1]

ಪಟ್ಟುನೂಲು (ನಾ). ರೇಷ್ಮೆಯ ದಾರ : ಕಾಷ್ಠದಲ್ಲಿ ಬೊಂಬೆಯ ಮಾಡಿ ಪಟ್ಟುನೂಲ ಸೂತ್ರವ ಹೂಡಿ ತೆರೆಯ ಮಱೆಯಲ್ಲಿ ನಿಂದು ಸೂತ್ರಿಕನು ಕುಣಿಸಿದಡೆ ಕುಣಿಯುತಿರ್ಪುದಲ್ಲದೆ ಆ ಅಚೇತನಬೊಂಬೆ ತನ್ನ ತಾನೆ ಕುಣಿವುದೆ ಅಯ್ಯಾ (ಅಖಂಡೇ. ೩೦೬-೯೧).

[ಪಟ್ಟು5(<ಪಟ್ಟ2)+ನೂಲು2(<ನೂಲ್2)]

ಪಟ್ಟುವಸ್ತ್ರ (ನಾ). = ಪಟ್ಟುಡೆ : ಸಿಂಹಳನೃಪಂ ಕಟ್ಟರಸರೊಡನೆಮಗೆ ವೈರವೇಕೆಂದು . . . ಪಟ್ಟುವಸ್ತ್ರಗಳ ಗಜ ಹಯ ಮುಖ್ಯವಸ್ತುಗಳ ಕೊಟ್ಟೊಡನೆ . . . ತಿರುಗಿದಂ ಧರ್ಮವತಿಗೆ (ಭಾಪಚಂ. ೫-೨೧) ; ವಾರಣಾಸಿ ಹಸ್ತಿನಾವತಿ ಕ್ಷೇತ್ರಗಳಿಂದ ಬಣ್ಣಬಣ್ಣದ ಪಟ್ಟುವಸ್ತ್ರ ಪೀತಾಂಬರಗಳೂ, ಕುದುರೆ, ಒಂಟೆ, ಆನೆಗಳ ಮೇಲೆ ಹೇರಿ ಹೇರಿ ಬರಿದವು (ಶಾಂತಲಾ. ೧೦೦) ; 'ಮಸ್ಲಿನ್‌ಗಳು' ಎಂಬ ನವುರಾದ ವಸ್ತ್ರಗಳೂ ಪಟ್ಟುವಸ್ತ್ರಗಳೂ . . . ಹಿಂದೂದೇಶದಲ್ಲಿ ಬಹುಕಾಲದಿಂದ ತಯಾರಾಗುತ್ತಲಿವೆ (ಭೂಗೋಳ. ೩೯). [ಪಟ್ಟು5(<ಪಟ್ಟ2)+ವಸ್ತ್ರ]

ಪಟ್ಟುಹ 'ಪಟ್ಟೆಯ1' ನೋ.

ಪಟ್ಟುಹಾಕು (ಕ್ರಿ). ೧. ಊತ, ನೋವುಗಳಿರುವ ಜಾಗಕ್ಕೆ ಔಷಧಿ ಮೊದಲಾದುವನ್ನು ಲೇಪಿಸು,—ಬಳಿ,—ಸವರು : ಚಿಕ್ಕಮ್ಮನಿಗೆ ಅಮೇಲೆ ನೊರೆಹಾಲು ಪಟ್ಟು ಹಾಕಿ, ಕಣ್ಣಿಗೆ ಅಂಜನ ಹಚ್ಚಿದೆವು (ಅಕಾಥೂ. ೧೪). ೨. (ಕುಸ್ತಿಯಲ್ಲಿ) ಪಟ್ಟನ್ನು ಪ್ರಯೋಗಿಸು,—ವರಸೆಯನ್ನು ಹಾಕು : ನಮ್ಮೂರಿನ ಜಟ್ಟಯ್ಯ ಪಟ್ಟು ಹಾಕಿ ಒಂದೇ ಸಾರಿಗೆ ಎದುರಾಳಿಯನ್ನು ಬೀಳಿಸಿದನು (ರೂಢಿ).

[ಪಟ್ಟು2+ಹಾಕು(<ಪಾಯ್ಯು1)]

ಪಟ್ಟು ಹಿಡಿ (ಕ್ರಿ). ೧. ನಿರ್ಧರಿಸು ; ದೃಢಸಂಕಲ್ಪ ಮಾಡು : "ನಾನಂತು ಸತಿಯಾಗುವುದು ಖಂಡಿತ. ಇದೊಂದನ್ನು ಬಿಟ್ಟು ಇನ್ನೇನಿದ್ದರೂ ಹೇಳು" ಎಂದು ಅತ್ತಿಮಬ್ಬೆ ಪಟ್ಟುಹಿಡಿದಳು (ದಾನಚಿಂ. ೧೫೬) ; ಆ ಇನ್‌ಸ್ಪೆಕ್ಟರು ಪಟ್ಟು ಹಿಡಿದು ಕುಳಿತು ನಿನ್ನೆಯ ದಿನದ ಲೆಕ್ಕ ಮುಗಿಸಿ ಕ್ಯಾಷ್ ಪ್ರೊಡ್ಯೂಸ್ ಮಾಡು ಅಂದಿದ್ದರೆ ಏನು ಮಾಡಬೇಕಿತ್ತೋ ದೇವರೇ ಬಲ್ಲ (ಮರಳಿ. ೧೫೬). ೨. ಹಟ ಹಿಡಿ ; ಮೊಂಡುತನ ಮಾಡು : ಸಭೆಯಲ್ಲಿ ಒಂದು ವಿಷಯ ಪಟ್ಟುಹಿಡಿದರೆಂದರೆ, ಬ್ರಹ್ಮ ಬಂದರೂ ಅವರನ್ನಲುಗಿಸಲಾರೆ (ಪುನರು. ೨೯೫). ೩. = ಪಟ್ಟುಹಾಕು ೨ : ಬೇರೆಯ ಊರಿನಿಂದ ಬಂದ ಆ ಪೈಲ್ವಾನನು ಪಟ್ಟುಹಿಡಿದು ಅವನನ್ನು ಉರುಳಿಸಿದನು (ರೂಢಿ).

[ಪಟ್ಟು2+ಹಿಡಿ1(<ಪಿಡಿ1)]

ಪಟ್ಟುಟಾ (ಕ್ರಿ). ನೆಲೆಯನ್ನು ಬಿಟ್ಟು ಹೋಗು ; ಆಶ್ರಯ ತಪ್ಪು : ಪಟ್ಟುಟಱದು ಸಂಚರಿಪ ಬಾಳೆಯಂ . . . ಬಣ್ಣಿಸಲ್ ನೆಜೀಪರಾರೈ (ತ್ರೀರಾಮ. ೩-೨೬). [ಪಟ್ಟು4+ಉಟಾ1]

ಪಟ್ಟೆ1 (ನಾ). ೧. (ಅಡಕೆ, ಬಾಳೆ ಮುಂತಾದುವುಗಳ) ತೊಗಟೆ,—ತಿಗುಡು,—ಸಿಪ್ಪೆ : ಕಾಯಿ ಸುಕ್ಕದಂತೆ ಅದಕೆ ಬಾಳೆಯ ಪಟ್ಟೆಯಂ ತುಂಬಿ ಸಂಭಾರವುದುರದಂದದೊಳು ನಾರ [ಸು]ಪಟ್ಟೆಯಂ ಸುತ್ತಿದುದನು ದಕಬೋನ ನೆಲಹಿನೊಳಿಕ್ಕಿ ಕಟ್ಟ ಹಸನಾಗಿ ಒಲೆಯಂ ಮಾಳ್ಪುದು (ಸೂಪಶಾ. ೫-೨೫). 'ಬಾಳೆಪಟ್ಟೆ' ಪರಾ. ೩. ಅಡಕೆಯ ಹಾಳೆ : ಹಳ್ಳಿಯ ಜನ ಅಡಕೆಪಟ್ಟೆಯಲ್ಲಿ ಊಟ ಮಾಡುತ್ತಾರೆ (ರೂಢಿ).

[ದೇ.॥ ತಮಿ. ಪಟ್ಟೈ ; ಮಲ. ತೆಲು. ಪಟ್ಟ]

ಪಟ್ಟೆ2 'ಪಟ್ಟೆಯ1' ನೋ.

ಪಟ್ಟೆ3 (ನಾ). ೧. (ಅಲಂಕಾರಕ್ಕಾಗಿ ಕಟ್ಟುವ) ಅಗಲ ಕಿರಿದಾಗಿದ್ದು ಉದ್ದವಾಗಿರುವ ಕಾಗದ, ಬಟ್ಟೆ, ರೇಷ್ಮೆ, ಚರ್ಮ, ಲೋಹ ಮೊದಲಾದುವುಗಳ ಪಟ್ಟಿ : ಅಲ್ಲಲ್ಲಿ ಕಟ್ಟಿದ ಪುಲ್ಲಿಯ ಪಟ್ಟೆಗಳ ಮೇಲೆ ಬಳಸಿದ ಮೇಘವಣ್ಣಿಗೆಯ ಚೌಕದ ವಿಳಾಸದ ಕಥಾಯಿಯ ಸುಚ್ಛವಿಯನೀವ ಪಚ್ಚೆಯ ಪಟ್ಟೆಗಳ . . . ಬೆರಕೆವೆಳಗು ಮಂಟಪದೊಳಗಂ ಪೊಱಗಂ ತೆಕ್ಕನೆ ತೀವೆ (ಗಿರಿಕ. ೧೦-೨೮ ಪ) ; ಅಲ್ಲಲ್ಲಿ ಕಟ್ಟಿದ ಚೋಹಗಳಿಂ ನಿಡುಜಲ್ಲಿಗಳಿಂದ ಪಟ್ಟಿಗಳ ಪಲ್ಲವಕೋಟಿಗಳಿಂದಾ ಗಿರಿದುರ್ಗದಲ್ಲಿ ಶೂಲಗಳು ಮೆಱೆದುವು (ಕುಂರಾಸಾಂ. ೨೧-೧೩) ; ಕೊರಳಿಗೆ ಉಣ್ಣೆಯ ಪಟ್ಟೆಯನ್ನು ಅಳವಡಿಸಿ, ನೆತ್ತಿಯ ಮೇಲೆ ಪೇಟವನ್ನು ಬತ್ತಿ ಧರಿಸಿ . . . ಮಹಾಸಭೆಯನ್ನು ಎದುರಿಸಿ ನಿಂತೆ (ನಂಟರು. ೩೯). 'ಪಟ್ಟೆಮಂಚ', 'ಬಿರುದುಪಟ್ಟೆ' ಪರಾ. ೨. ಗೆರೆ ; ರೇಖೆ : ಪ್ರತಿಸ್ಥಾನಗಳಲ್ಲಿಯೂ ವಿಶಾಲಗಳಾದ ಶುಭ್ರವರ್ಣಗಳಾದ ಪಟ್ಟಿಗಳಿಂದ ಪ್ರಕಾಶಿಸುವ ಕುದುರೆಯು . . . ಪ್ರಸಿದ್ಧಿಯ ಪಡದಿರುವದು (ಸೌಗಂಧಿ. ೩೧೧-೧೮) ; ಹೆದ್ದಾರಿಯೊಳು ಮರವಿದ್ದರೆ ಕಡಿವರು ಸೊಪ್ಪಿಗೆ ಸೌದೆಗೆ ಜನರು ಬೆಳ್ಳನೆ ಕಪ್ಪನೆ ಪಟ್ಟೆಯನೆಳೆವರು ಬಣ್ಣದ ಚೀಟಿ ಹಚ್ಚುವರು (ಇಂಚಾಪ. ೧೧೫-೬೩). ೩. ನಾಯಿ, ಕುದುರೆ ಮುಂತಾದ ಪ್ರಾಣಿಗಳ ಕೊರಳಿಗೆ ಅಥವಾ ನಡುವಿಗೆ ಕಟ್ಟುವ ಬಟ್ಟೆಯ ಅಥವಾ ಚರ್ಮದ ಪಟ್ಟೆ; ಕಟ್ಟುಪಟ್ಟೆ : ಕಟ್ಟಿದ ಪಂಚವಣ್ಣಿಗೆಯ ಪಟ್ಟೆಯ ತೊಂಗಲೊಳಿಂದ್ರಚಾಪಮಂ ಪುಟ್ಟಿಸಿ . . . ಮೇರೆದಪ್ಪಿ ಕವಿತಂದುದು ರೌದ್ರರಸಂ ರಣೋರ್ವಿಯೊಳ್ (ಪಂರಾಮಾ. ೧೩-೫೯) ; ಮೇಲುತರದ ಪಟ್ಟೆ ವರಸೂವು ಸಕಲಾತಿ ಜೂಲುಗಳಿಂದೆ ರಂಜಿಸುವ ಕಾಲುವೇಗದ ಶುನಿವಿಡಿದ ಕಿರಾತರು ಸಾಲಿಟ್ಟು ನಡೆದರೊಗ್ಗಿನಲಿ (ಮೋಹತ. ೧೯-೧೦). ೪. ನಡುಪಟ್ಟೆ ; ಸೊಂಟಪಟ್ಟೆ ; ಡಾಬು. ೫. ಜಮಿನಿನ ಒಂದು ತುಂಡು,—ಸೀಳು. ೬. ಚಕ್ರದ ಸುತ್ತಲಿರುವ ಕಬ್ಬಿಣದ ಹೊರವಲಯ,—ಪರಿಧಿ ; ನೇಮಿ : ಎತ್ತಾನೆ ತರಿಸಯ್ಯ ಪಟ್ಟೀಯ ಬಿಗಿಸಯ್ಯ ತಟ್ಟಾನೆ ನಮ್ಮ ಕಳುಹಯ್ಯ ಕಣ್ಣೀರು ಇಟ್ಟಾಡುತೀದೆ ಮನದಲ್ಲಿ (ಹಳ್ಳಿಪ. ೧೧೬). ೭. ರೇಷ್ಮೆ ; ಕೌಶೇಯ : ತರತರದ ಶೃಂಗಾರತೋರಣ ಸುರುಚಿ ಪಟ್ಟೆಯ ಮೇಲು ಗಟ್ಟನ ವಿರಚಿತಾಮಳ ಚಿತ್ರಭಿತ್ತಿಯ ಮದುವೆ ಮಂಟಪದ (ಕೌಶಿರಾ. ೨-೫೮) ; ವಾಣಿಯ ಧವನೆಂಬ ವ್ಯವಹಾರಿ ಪಟ್ಟೆಯ ಗೋಣಿಯೊಳ್ ತುಂಬಿದ ರತ್ನ ಖಣಿಯೊಳ್ ಚೆಲ್ಲಿದಂತಿದೆ ನಿನ್ನ ಕೃತಿಯೆಂಬ ಮಾಣಿಕ ಮನ್ಮನೋನಾಥ (ಮೋಹತ. ೧-೩೪) ; ಒಡನುಟ್ಟ ಪಟ್ಟೆಯ ಚಲ್ಲಣ ಮೋಹನವಡೆದ ಪದಕ ಪೈಠಣಿಯ ಕಡುಸೊಬಗಿನ ಬಲ್ವೇಟದ ಸುಕುಮಾರ ನಡೆದನು ಸಖರ ಮೇಳದಲಿ (ಕಂನವಿ. ೧೦-೨೧) ; ಒಳ್ಳೆಯದಾದ ಒಂದು ಪಟ್ಟೆಯ ಕಣವನ್ನು ತರಿಸಿ ... ಕೊಟ್ಟನು (ಕವಿಕ.೫೫). ೮. ರೇಷ್ಮೆಯ ವಸ್ತ್ರ, ಸೀರೆ ಮುಂತಾದುವು : "ಕ್ಷೌಮಮೆನಲಾ ಸುಪಲಾವಳಿ ದುಕೂಲಮೆನೆ ಪಟ್ಟೆ" (ಮಂಗರಾ. ೧೦೧-೨೭) ; ಸಾಹಿಯಾಣದ ಚೀನದ

ಧವಳವಟ್ಟದ ಹೊಂಗದ ದೇವಾಂಗದ ಸಕಳಪಟ್ಟೆಗಳನೆ ಮೆಟ್ಟುವೆಡೆ ಗಳೊಳೆಲ್ಲಂ . . . ಸೂಸಿದಾಗಳ್(ಅಪಿಪು. ೪-೩೪ ವ); ಬೋನಮನೊಡೆದು ಹಲ್ಲೆಯ ಮಾಡುವ ಪಟ್ಟಿಯಂ ಪಜ್ಜಿದು ಚಂಡಂ ಮಾಡುವ ಕಟ್ಟಿಗ್ಗ ರಂತೆ ಶಾಶ್ವತಮಲ್ಲದ ಶರೀರಮಂ ಪಿಡಿದು ರತ್ನತ್ರಯಂಗಳಂ ಕಿಡಿಸುವುದು (ಧರ್ಮಾಮೃ. ೯-೧೬೨); ಪುದಿದುಪ್ಪಚಿತ್ರದಿಂದೊಪ್ಪುವ ಪಟ್ಟಿಯಂ ಪದೆಪಿನಂ ಸತಿಗಿತ್ತು (ದಶಕು. ೪-೧೦೮); ಕರಿಯ ಪಟ್ಟಿಯನುಟ್ಟು ಕಣ್ಗ ಕಾಡಿಗೆಯಿಟ್ಟು . . . ಬರುವಳೋ ಮಾಯೆಯೆಂಬಂತೆ ಕಳ್ತಲೆಯದೇಂ ಕವಿದುದೋ ಭೂತಳವನು (ವೆಂಕಾರಾ. ೫-೨-೩೧); ಪಟ್ಟಿ ಉಟ್ಟಾರೇನು ಮುತ್ತು ಕೊಟ್ಟಾರೇನು ಹೊಟ್ಟೇಲಿ ಒಂದು ಫಲವಿಲ್ಲ (ಹಳ್ಳಿಯ. ೧೧೭). ೯. ರಾಜಶಾಸನ ಮುಂತಾದುವುಗಳನ್ನು ಬರೆಯಲು ಉಪಯೋಗಿಸುವ ಲೋಹ ಮುಂತಾದುವುಗಳ ಪಟ್ಟಿಕೆ,—ಫಲಕ : ಕಟ್ಟಿಯೋ ಹರಿಸೇನೆ ನಡೆವಾ ಬಟ್ಟಿಯೋ ರಾಘವನ ವೀರದ ಪಟ್ಟಿಯೋ ಎನಲೊಪ್ಪುತಿದ್ದುದು ಜನದ ಕಣು ಮನಕೆ (ಕೌಶಿಂಾ. ೧೬-೨೭). ೧೦. ಒಂದು ಜಮೀನಿನ ನಿರ್ದಿಷ್ಟ ಅಳತೆ, ಸ್ವಾಮಿತ್ವ, ಕಂದಾಯ ಮುಂತಾದ ವಿವರಣೆಗಳನ್ನೊಳಗೊಂಡ ಸರ್ಕಾರಿ ಪತ್ರ,— ಅಧಿಕೃತ ದಾಖಲು ; ಸನ್ನದು : ಮೂಜಡಿ ಮಣ್ಣಿಗೆ ಅಱು ಹೊನ್ನ ತೆತ್ತು . . . ಪಟ್ಟಿಯ ಕೊಟ್ಟ ಮತ್ತೂರಗೂಡಿ ಹದರೆಯ ಬೇಡಿದೆಡೆ ನಾ ಕೊಡಲಿಲ್ಲ ನೀ ಕೊಟ್ಟ ಪಟ್ಟಿ ನಮ್ಮ ನಟ್ಟನಡುವಮನೆಯ ಐದುಕಾಲ ನೆಲಹಿನಲ್ಲಿ ಕಟ್ಟಿಯದೆ (ಸರ್ವಪ. ೧೦೪-೫೬೪); ಕಳಸಾಪುರದ ಸೂರಪ್ಪಗಳ ಪಟ್ಟಿಯ ವೊಳಗೆ ಬೆನಕನ ದಂಡಿಗೆಯದ ಬೀಜವರಿಳ ೬ ದ ನ್ರಿತ್ತಿ ೧ (ಸೌಇಇ. IX-ii, ೪೩೬-೨೦; 1412); ಗ್ರಾಮದ ಸರ್ವೆನಂಬರು ಒಂದು ಒಬ್ಬನ ಹೆಸರಿಗೆ ಪಟ್ಟೆಯಿರುತ್ತಾ ದಾಖಲೆಯಿಲ್ಲದೆ ಒಳಅನುಭವ ದಾರರು ಅನೇಕಮಂದಿಯಿರುತ್ತಾರೆ (ಭೂಮಿಅ. ೩೬). ೧೧. ಕ್ರಯ, ದಾನ, ಗುತ್ತಿಗೆ ಮೊದಲಾದ ವಿವರಗಳನ್ನುಳ್ಳ ದಾಖಲುಪತ್ರ ; ಪರವಾನಗಿ ಪತ್ರ : ನಮ್ಮ ಹೆಸರಲ್ಲೂ ನೀವು ಮಾಡಿದ ಸೋಮ ಶೇಖರಪುರದ ಅಗ್ರಾಹಾರದ ಬ್ರಾಂಹ್ಮರಿಗೆ ನೀವು ಬರಸಿ ಕೊಟ್ಟ ಪಟ್ಟಿ ಪ್ರಮಾಣ (ಎಕ. VII, ತಿನಮೊ. ೮೧-೩೦; 1668); ನಮ್ಮ ಸಂತಾನ ನಿಮ್ಮ ಮಕ್ಕಳು ಮುಂತಾಗಿ ಪಾರಂಪರೆಯಾಗಿ ಸುಖದಿಂದ ಬಾಳ್ದು ಬಹರಿಯೆಂದು ಬರಸಿಕೊಟ್ಟ ಕ್ರಯಧಾರೆ ಪಟ್ಟಿ (ಎಕ. VI, ಮೂಡಗೆ. ೮೩-೧೩; 1733); ಗುತ್ತಿಗೆ ನೇಮಕಾ ಮಾಡಿ ಪಟ್ಟಿ ಬರದು ಕೊಟ್ಟು ಯಿದ್ದದ್ದರಿಮ್ದಾ ಯೀ ಬ್ರಾಂಹ್ಮಣನು . . . ವರುಸಂಪ್ರತಿಯಲೂ ಪಟ್ಟಿ ಮೇರೆಗೆ ಸರಕಾರಕ್ಕೆ ಸಲತಕ್ಕ ಹಣವಂನ್ನು ಸಮ್ದಾಯಮಾಡಿ ಕೊಡುತ್ತಾ ಬಂದು (ಮೈಅರಿ. ೧೯೨೯,೯೪-೧೫; 1813). 'ದಾನಪಟ್ಟಿ', 'ನೆತ್ತರ್ಪಟ್ಟಿ' ಪರಾ. ೧೨. ಚಪ್ಪಟೆಯಾದ ಸಮತಲ. ೧೩. ಕರ ; ಸುಂಕ ; ತೆರಿಗೆ ; ಕಂದಾಯ : ನನ್ನ ಜಮೀನಿನ ಈ ಸಾಲಿನ ಪಟ್ಟಿಯನ್ನು ನಾನಿನ್ನೂ ಸರಕಾರಕ್ಕೆ ಕಟ್ಟಲ್ಲ (ರೂಢಿ). 'ಪಟ್ಟೆ ಗಾಣಿಕೆ' ಪರಾ. ೧೪. ತಾಳೆ, ಅಡಕೆ ಮುಂತಾದ ಮರಗಳ ತೊಲೆ,—ದೂಲ : (ಕ). ೧೫. ತಲೆಯಲ್ಲಿ ಪಟ್ಟಿಯಂತೆ ಕೂದಲನ್ನು ತೆಗೆದ ಜಾಗ,—ಸ್ಥಳ : (ಕ).

ಪಟ್ಟಿಪಟ್ಟಾವಳಿ=ರೇಷ್ಮೆಯ ಬಟ್ಟೆ,—ವಸ್ತ್ರ : ಸುರಂಗಿನ ಪಟ್ಟಿ [ಪಾಠಾಂ. ಟ್ಟಿ] ಪಟ್ಟಾವಳಿಯ ದಿಂಡುಗಳ . . . ಚಿತ್ರಾವಳಿಯ ಸತ್ತಿಗೆ ಹೇಮಘಟಸಂತತಿಯನೊಟ್ಟದರು (ಕುಪ್ಯಾಸ. ೫-೪೭); ಪಟ್ಟಿಪಟ್ಟಾವಳಿ ಬೇಡಲಿಲ್ಲ ನಾನು ಎನ್ನ ಗುಟ್ಟು ಅಭಿಮಾನಗಳ ಕಾಯೊ ನೀನು (ಪುರಂದ. ೧-೩೬-೨). **ಪಟ್ಟಿಸಾವುಡೆಯ ಊಳಿಗ**=ಅರಮನೆಯಲ್ಲಿ ರೇಷ್ಮೆ ಮುಂತಾದ ಬಟ್ಟೆಗಳನ್ನು ಸಿದ್ಧಮಾಡಿ ಒದಗಿಸಿ ಕೊಡುವ ಕೆಲಸ: ಅರಮನೆಯಲ್ಲಿ ಪ್ರತಿದಿನದಲ್ಲಿಯೂ ನಡೆಯುವಂತೆ ಕಟ್ಟು ಮಾಡಿದ ಊಳಿಗಗಳ ವಿವರ . . . ಕುಂಚದ ಊಳಿಗ ಕೈಯಾಲುವಟ್ಟಿಗೆಯ ಊಳಿಗ ಪಟ್ಟೇಸಾವುಡೆಯ ಊಳಿಗ ವಿವರ (ಚಾಮನಂ. ೪೫). **ಪಟ್ಟೆಯ ದಟ್ಟ**= ರೇಷ್ಮೆಯ ವಸ್ತ್ರ,—ಧೋತ್ರ : ಮಲಯಜದಣ್ಪು ಪೊಂದೊಡಿಗೆ ಪಟ್ಟೆಯ ದಟ್ಟ ಪಳಯ ಚಲ್ಲಣ . . . ಮೆಜ್ಜೆಯ ಬಂದರಳವುಳ್ಳ ಮೈಗಾವಲವರು (ಕುಂಾಸಾಂ. ೧೧-೩೬). **ಪಟ್ಟೆಯ ದಾರ**=ಭೂಮಿಯ ಒಡೆತನದ ದಾಖಲುಪತ್ರವುಳ್ಳವನು ; ಜಮೀನಿನ ಒಡೆಯ,— ಅಧಿಕಾರಿ : ವೆಂಕಟಪ್ಪನಾಯಕಂ ... ಸೀಮೆಗಳಂ ಸಾಧಿಸಿ ತತ್ತತ್ಪಟ್ಟೆ ಯದಾರರ್ಕಳಿಂ ಪಣಮಣಹಂಗೊಂಡು . . . ಸ್ಥಳಗಳಲ್ಲಿ ಪರಿಶೋಭಿಪ ಪರಿಸ್ತರಣಂಗಳಂ ರಚನೆಗೈಸಿದನು (ಕಳಸ್ಥ. ೫-೩೯). **ಪಟ್ಟೆಯ ಶಿಪಾಯಿ**= ನೌಕರಿಯ ಲಾಂಛನವಾಗಿ ಹೆಗಲಿನಿಂದ ಸೊಂಟದವರೆಗೆ ಅಡ್ಡ ಪಟ್ಟೆಯನ್ನು ಧರಿಸಿದ ಸಿಪಾಯಿ ; ಡವಾಲಿ : ಒಬ್ಬ ಪಟ್ಟೆಯ ಶಿಪಾಯಿಯು ಬಂದು, ಗುರುಗಳಲ್ಲಿ ಎಂದು ಕೇಳಿದನು (ಜಯಂತ. ೨೩). **ಪಟ್ಟೆಯ ಹುಲಿ**=ಮೈಮೇಲೆ ಪಟ್ಟೆಗಳನ್ನುಳ್ಳ ಒಂದು ಜಾತಿಯ ಹುಲಿ,—ವ್ಯಾಘ್ರ : ದೊಡ್ಡ ಪಟ್ಟೆಯ ಹುಲಿಗಳೇ ಹೆಚ್ಚಿಗಿರುವವು (ಬೆಟ್ಟಜೀ. ೧೯೩).

[ಸಂ. ಪಟ್ಟ. / ತಮಿ. ಪಟ್ಟೈ ; ಮಲ. ಪಟ್ಟ ; ತುಳು. ಪಟ್ಟೆ, ಪಟ ; ತೆಲು. ಪಟ್ಟೆ, ಪಟ್ಟ ; ಕೊಡ, ಕೋಲಾ. ಪಟ್ಟೆ ; ನಾಯ್ಕಿ. ಕುಇ. ಪಟ ; ಪರ್ಜಿ. ಪೆಟ್ಟ ; ಕುರುಖ್. ಪಟ್ವಾ]

ಪಟ್ಟೆಕಂಬಳಿ (ನಾ). ಉದ್ದಗೆರೆಗಳುಳ್ಳ ಕಂಬಳಿ : (ಕ).

[ಪಟ್ಟೆ ೩ + ಕಂಬಳಿ]

ಪಟ್ಟೆಕುಪ್ಪುಸ (ನಾ). ರೇಷ್ಮೆಯ ರವಿಕೆ : ಪಟ್ಟಶಾಲಿಯನುಟ್ಟು ಪಟ್ಟೆ ಕುಪ್ಪುಸ ತೊಟ್ಟು ಬಟ್ಟಮುತ್ತಿನ ತಿಲಕಿಟ್ಟು ಮದುವಳಿಗೆದಿಟ್ಟೇರಾರೂತಿ ಬೆಳಗಿರೆ (ಲೋಕಗೀ. ೧೩). [ಪಟ್ಟೆ ೩ + ಕುಪ್ಪುಸ (<ಕುಪ್ಪಸ)]

ಪಟ್ಟೆಕೌಳುಡೆ (ನಾ). ರೇಷ್ಮೆಯ ಮೆತ್ತೆ,—ದಿಂಬು : ಆ ಐಸಿರಿಯಾ ಪಟ್ಟಮಂಚದಾ ಅಂಚೆದುಪ್ಪುಟ ನಲ್ವಾಸಿನಾ ಪಟ್ಟೆಕೌಳುಡೆಯೂ ಪುಷ್ಪದಾ ಗಂಧದಾ ಸಿರಿಯ ಸುಖಾನುಭವಮನಿನ್ನೆಂತು ಮಱೆಕಿರ್ಪನೋ ? (ರಾಮಾಶ್ವ. ೩೯-೨೬). [ಪಟ್ಟೆ ೩ + ಕೌಳುಡೆ (<ಕವುಳುಡೆ)]

ಪಟ್ಟೆಗಂಡೆಯ (ನಾ). ಒಂದು ಬಗೆಯ ಕತ್ತಿ : ಅಸುರವ್ರಾತವನೆಲ್ಲ ಪಟ್ಟೆಗಂಡೆಯದೊಳುಂ ತಱಿಯಲೋಡಿದರ್ (ಪ್ರಭುಪು. ೫-೬೯).

[ಪಟ್ಟೆ ೨(<ಪಟ್ಟೆಯ ೧)+ಕಂಡೆಯ ೧(<ಖಂಡೆಯ ೨)]

ಪಟ್ಟೆಗಾಣಿಕೆ (ನಾ). ಒಂದು ಬಗೆಯ ತೆರಿಗೆ : ಈಚಲುಕಂದಾಯ ಬಾಲದೆರಿಗೆ ಹೊರಾದಾಯ ಚರಾದಾಯ ಜೋಡಿ ಬೇಡಿಗೆ ಹುಲ್ಲ ಹಣ ಬ್ರಾಹ್ಮಣನಿವೇಶನ ಶೂದ್ರನಿವೇಶನ ಹತ್ತಿ ಪೊಂಮು ಮಾರ್ಗಸುಂಕ ದೇವರಾಯವಟ್ಟ ಪಟ್ಟಿಗಾಣಿಕೆ ಮುದ್ರಿಗಾಣಿಕೆ (ಎಕ. III, ತಿರುಮ. ೬೩-೧೩೬೯; 1748); ಮಾರ್ಗಸುಂಕ ದೇವರಾಯವಟ್ಟ ಪಟ್ಟಿಗಾಣಿಕೆ ಚಿಲುವಾನ ಪೈರು ಮುಂತಾದ ಆ ಸಕಲಸ್ವಾಮ್ಯವು (ಬೆಟ್ಟಅ.ಪರಿ. ೨೪೦).

[ಪಟ್ಟೆ ೩+ಕಾಣಿಕೆ(<ಕಾಣ್ಕೆ)]

ಪಟ್ಟೆಗಾರ 'ಪಟ್ಟಿಗಾಱ' ನೋ.

ಪಟ್ಟೆಗಾಱ, ಪಟ್ಟಿಗಾರ (ನಾ). ರೇಷ್ಮೆವಸ್ತ್ರವನ್ನು ನೇಯುವವನು; ರೇಷ್ಮೆ ನೇಕಾರ : ಶ್ರೇಣಿ=ಸಾಲಿಗ ಪಟ್ಟಿಗಾಱಂ ಮೊದಲಾಗೊಡೆಯ ಸಮಯಿಗಳುಂ (ನೀತಿವಾ. ೨೧-೧೩) ; ಅಸುರದೊಳಿಂದ್ರಜಾಲದ ಕೂಸು ಗಳಂ ಕಂಸನೊಗೆದನಱಿಯೊಳ್ಳೆತ್ತರ್ಸೂಸೆ ದೆಸೆದೆಸೆಗೆ ಕೆಂಪಿನ ಪಾಸಂ ಪಿಡಿ ದೊಗೆವ ಪಟ್ಟಿಗಾ[ಪಾಠಾಂ. ಟ್ಟಿಕಾ]ಱನ ತೆಱದಿಂ (ಅರ್ಧನೇ. ೬-೩೧). **ಪಟ್ಟಿಗಾರ** : ಅಟಕರಿ, ಬಣ್ಣಗಾರ, ಬಳೆಮಗ್ಗ, ದೇವಾಂಗ, ಜಾಡ, ನಗಲಿಕ, ಪಟ್ಟಿಗಾರ, ಸಾಲೆ, ಸೇಣಿಯ (ತುಳುನಾ. ೧೮೩).

[ಪಟ್ಟೆ ೩ + -ಕಾಱ]

ಪಟ್ಟೆಜಲ್ಲಿ, ಪಟ್ಟೆರುಳ್ಲಿ (ನಾ). ರೇಷ್ಮೆಯ ಕುಚ್ಚು,—ಗೊಂಡೆ : ಮುತ್ತಿನ ಪವಳದ ಲಂಬಣಗಳ ಬಲುಮೊತ್ತದಿಂ ಪಟ್ಟೆಜ[ಪಾಠಾಂ. ರುಳ್]ಲ್ಲಿಗಳ ಸುತ್ತ ಕಟ್ಟಿದ ಕುಚ್ಚುಗಳ ಮೋಹರದಿಂದಿತ್ತುದು ಕಣ್ಗೆ ಕೌತುಕವ (ರಾಮವಿ. ೭-೨೫). **ಪಟ್ಟೆರುಳ್ಲಿ** : ಹಲವು ದೀಪ್ತಿಯ ಪಟ್ಟೆರುಳ್ಲಿ ನಾನಾವರ್ಣದಳೆದ ಚಿತ್ರಾಂಬರನಿಚಯ ಸುಲಲಿತದೇವಾಂಗವಸ್ತ್ರದೊಟ್ಟಲ ಸಾಲುಮಳಿಗೆಗಳೆರ್ದುವಿಕ್ಕೆಲದಿ (ಮೋಹತ. ೩-೨೪). [ಪಟ್ಟೆ$_3$ + ಜಲ್ಲಿ$_2$]

ಪಟ್ಟೆರುಳ್ಲಿ 'ಪಟ್ಟೆಜಲ್ಲಿ' ನೋ.

ಪಟ್ಟೆದಟ್ಟ (ನಾ). ರೇಷ್ಮೆಯ ವಸ್ತ್ರ,—ಧೋತ್ರ : ತೊಟ್ಟು ಚಿನ್ನದ ಕಂದಿ ಪಟ್ಟೆದಟ್ಟಿಯನು ಜಗಜಟ್ಟಿಗಳ ತೆರದಿಂದೆ ಮಲ್ಲಗಾಸೆಯು ಬಿಗಿದು . . . ಉಗ್ಗಡಿಪ ಭಟರು (ಸನಮೋ. ೨೩-೫೫). [ಪಟ್ಟೆ$_3$ + ದಟ್ಟ$_1$]

ಪಟ್ಟೆದಾರ (ನಾ). ೧. ಜಮೀನಿನ ಒಡೆತನದ ಬಗ್ಗೆ ಸರಕಾರದ ದಾಖಲುಪತ್ರವನ್ನು ಉಳ್ಳವನು ; ಭೂಮಿಯ ಒಡೆಯ : ಅವರ ಮನೆತನಕ್ಕೆ ಪಟ್ಟೆದಾರರು-ಎಂಬ ಬಿರುದು ಬಹು ಹಿಂದಿನಿಂದಲೂ ಬಂದಿದೆ (ಗೊಂಡಾರ. ೧೮) ; ನಿಮಾನಿಮಿ ಕಂದಾಯವನ್ನು ಪಟ್ಟೆದಾರನಿಗೆ ಇತರ ಕುಳಗಳು ಕೊಡುವುದೆಂದು ಗೊತ್ತುಮಾಡಿಕೊಡುವುದಕ್ಕೆ ಅನುಕೂಲವಾಗಿರುವುದು (ಭೂಮಿಅ. ೩೬). ೨. ಗೇಣಿದಾರ ; ಗುತ್ತಿಗೆದಾರ : ಜಮೀನ್ ಹಿಡುವಳಿದಾರರಿಂದಲೂ ಪಟ್ಟೆದಾರರುಗಳಿಂದಲೂ . . . ಹಣವನ್ನು ತೆಗೆದುಕೊಳ್ಳಬಹುದು (ಗ್ರಾಮಾಕ. ೬೮). [ಪಟ್ಟೆ$_3$ + –ದಾರ$_4$]

ಪಟ್ಟೆಪೀತಾಂಬರ (ನಾ). ರೇಷ್ಮೆಯ ವಸ್ತ್ರ : ಪಟ್ಟೆಪೀತಾಂಬರವ ಸೊಬಗಿಂದುಟ್ಟು ಬೆರಳಿಗೆ ರತುನಮುದ್ರೆಯನಿಟ್ಟು . . . ಖಳ ಜಗಜಟ್ಟಿ ಧನಧಾನ್ಯಾದಿ ವಸ್ತುವ ತುಷ್ಟಿಬಡುವಂದದಲಿ ವಿಪ್ರರಿಗಿತ್ತು ಮನ್ನಿಸಿದ (ಕೌಶಂಕಾ. ೩೬-೩) ; ದೊಡ್ಡದೊಡ್ಡ ಹರಿವಾಣಗಳಲ್ಲಿ ಪಟ್ಟೆಪೀತಾಂಬರ ಮುತ್ತುರತ್ನ . . . ಕಾಣಿಕೆಯಾಗಿ ಕೊಡಲು ಹೊತ್ತು ತರುತ್ತಿದ್ದರು (ಹೇಮಕೂ. ೧೪). [ಪಟ್ಟೆ$_3$ + ಪೀತಾಂಬರ]

ಪಟ್ಟೆಪ್ರತಿ (ನಾ). ಜಮೀನಿನ ವಿವರ, ಒಡೆತನಗಳ ಬಗ್ಗೆ ಇರುವ ಸರ್ಕಾರಿ ದಾಖಲುಪತ್ರದ ಕರಡು,— ನಕಲು : ಶ್ರೀವೀರವೆಂಕಟಪತಿದೇವಮಹಾರಾಯರೈಯ್ಯನವರು ಹರತೀ ವೀರಹೊಟ್ಟೆಣ್ಣನಾಯಕರಿಗೆ ಪಾಲಿಸಿದಂಥಾ ರಾಯಸದ ನಿರೂಪದ ಪಟ್ಟೇಪ್ರತಿ (ಎಕ. XII, ಪಾವುಗ. ೪೬-೪೮ ; 1670). [ಪಟ್ಟೆ$_3$ + ಪ್ರತಿ]

ಪಟ್ಟೆಬಟ್ಟೆ (ನಾ). ರೇಷ್ಮೆಯ ಬಟ್ಟೆ,—ವಸ್ತ್ರ : ಹೆಂಗುಸರು ತಲೆ ಬಾಚುವ ಸಾಹಸವನ್ನು ಮುಗಿಸಿ . . . ಪಟ್ಟೆಬಟ್ಟೆಯನ್ನುಟ್ಟರು (ಕಾಲೂರ. ೧೩ ಕಥಾಸಾರ). [ಪಟ್ಟೆ$_3$ + ಬಟ್ಟೆ$_2$]

ಪಟ್ಟೆಮಂಚ (ನಾ). ರೇಷ್ಮೆಯಿಂದ ಅಲಂಕೃತವಾದ ಮಂಚ : ಕು'ಕ್ಕು'(ರ್ಕು)ರಂಗೆ ಪಟ್ಟೆಮಂಚ ಸುಪ್ಪತ್ತಿಗೆ ಅಮೃತಾನ್ನವನಿಕ್ಕಿ ಸಲಹಿದಡೂ ಹಡುವಿಂಗೆ ಚಿತ್ತವನಿಕ್ಕುವುದೇ ದಿಟ (ಸರ್ವಜ. ೩೫-೧೬೫); ಗುರುಭಕ್ತಯ್ಯನಾ ಗುರುಗಳಿಗೆ ನಮಿಸುತ ಪಟ್ಟೆಮಂಚದ ಮೇಲೆ ಕುಳ್ಳಿರಲು (ಬಸಪು. ೩೯-೪೨) ; ಪಟ್ಟೆಮಂಚ ತಿರುವಿಟ್ಟರೆ ಘಣೆಯೊಳು ಮೆಟ್ಟಿದ ಭ್ರಮಣೆಯು ಬಿಟ್ಟೇತೆ (ಪುರಂದ. ೧-೧೫೭-೨) ; ಆ ಏಸಿರಿಯಾ ಪಟ್ಟೆಮಂಚದಾ ಅಂಚೆದುಪ್ಪುಟ ನಲ್ವಾಸಿನಾ . . . ಸುಖಾನುಭವಮನಿನ್ನೆಂತು ಮಱೆತಿರ್ಪೆನೋ ? (ರಾಮಾಶ್ವ. ೩೯-೨೭). [ಪಟ್ಟೆ$_3$+ಮಂಚ]

ಪಟ್ಟೆಮಡಿ (ನಾ). ಪವಿತ್ರ ಕಾರ್ಯಾಚರಣೆಯ ಸಂದರ್ಭಗಳಲ್ಲಿ ಉಡುವ ರೇಷ್ಮೆಯ ಬಟ್ಟೆ,—ವಸ್ತ್ರ ; ಮಗುಟ : ಗಂಧವನ್ನು ಪೂಸಿಕೊಳ್ಳುತ್ತಿದ್ದ ಮೈತುಂಬ ಈಗ ಧೂಳು; ಬಹುಬೆಲೆಯುಳ್ಳ ಪಟ್ಟೆಮಡಿಗೆ ಬದಲು, ಈಗ ನಾರುಬಟ್ಟೆ (ಪಚಭಾ. ೧೧೭) ; ಉಟ್ಟ ಪಟ್ಟೆಮಡಿಯಲ್ಲೆ ಪ್ರಾಣೇಶಾಚಾರ್ಯರು ಓಡುತ್ತ ಗರುಡಾಚಾರ್ಯನ ಮನೆಗೆ ಹೋಗಿ (ಸಂಸ್ಕಾರ. ೫). [ಪಟ್ಟೆ$_3$+ಮಡಿ$_4$]

ಪಟ್ಟೆಯ$_1$, ಪಟ್ಟ$_2$, ಪಟ್ಟಾ$_1$, ಪಟ್ಟುಹ, ಪಟ್ಟೆ$_2$, ಪಟ್ಟೆಹ (ನಾ). ಖಡ್ಗದಂತಹ ಒಂದು ಬಗೆಯ ಆಯುಧ : ಉಟ್ಟ ಚಲ್ಲಣ ಕೈಯ ಪಟ್ಟೆಯ[ಪಾಠಾಂ. ಹ]ವಿಡಿದು ಗರುಡಿಯ ಕಟ್ಟ ಶ್ರವಣ ಮಾಡುವಂತೆ ತನ್ನ ತಪ್ಪಿಸಿಕೊಂಡರೆ ಶಿವ ಮೆಚ್ಚುವನೆ (ಬಸವ. ೬೩೮) ; ಖಂಡೆಯ ಕೋದಂಡ ಸರಶು ಪಟ್ಟೆಯ ಪ್ರಮುಖ ಬತ್ತೀಸಾಯುಧಭಯಂಕರರ್ ಸರಿತಂದು (ಪಾಹಾಸೇ. ೧೨-೨೩ ಸ) ; ಉಕ್ಕಿನುರುಳಿಯೊಳಿಡುವ ಖಂಡೆಯ ದಿಕ್ಕಡಿಯ ಘಾಯಗಳ ಪಟ್ಟೆಯದಕ್ಕಜದ ಹೊಯಿಲೆಸೆಯೆ ಕಾದಿದವಾನೆಯಾನೆಯೊಳು (ಕುವ್ಯಾಭೀ. ೪-೭೫) ; ತೊಟ್ಟಲಯ್ಯನ ಪಟ್ಟೆಯದ ಕಡುಗಾವಲಲ್ಲಿ – ಹಿಂಗಟ್ಟು ಮುಂಗಟ್ಟುಗಳಿಂದ ಕಟ್ಟುವಡೆದ ಮೂಸರು ಬೆನ್ನೇಲಾಗಿ ಬಿದ್ದಿರುವರು (ಮಂತ್ರಶ. ೧೦೯-೨). **ಪಟ್ಟ$_2$** : ಆಗ ದೊರೆಗಳು ತಮ್ಮ ಸಾಧಕದ ಚಾತುರ್ಯದಿಂದ ಪಟ್ಟವನ್ನು ತಿರುಹಿ, ತಲೆಗಳನ್ನು ಹೊಡೆದು . . . ನಿರ್ಜೀವವಾಗುವಂತೆ ಕೆಡಹಿದರು (ಒಡೆಕ. ೪೦). **ಪಟ್ಟಾ$_1$** : 'ಪಟ್ಟಾಕತ್ತಿ' ಪರಾ. **ಪಟ್ಟುಹ** : ತುರಗಕುಲಮಂ ಬೆನ್ನೆವಾಯ್ದು ಸಿಡಿಲ ಸೆಕ್ಕೆಗಳಂತಿಟ್ಟಣಿಸಿದ ಪಟ್ಟುಹಂಗಳಂ ಪೆಗಲೊಳಿಟ್ಟು ಬಜಸಿಡಿಲ ಬಳಗಂ ಪೊಱಮಡುವಂತೆ . . . ನಡೆತಂದು (ಬೊಮ್ಮರ. ೧೬೫-೨೦). **ಪಟ್ಟೆ$_2$** : ಹಿಟ್ಟುದೋಱುತು ತೇರು ಬಳಿಕವನಿಟ್ಟನಿಟ್ಟ ಮುಸುಂಡಿ ಮುದ್ಗರ ಪಟ್ಟೆ ಪರಿಘ ಪರಶ್ವಧಾದಿ ಮಹಾಯುಧಂಗಳಲಿ (ತೊರರಾ. ೬-೫-೨೬) ; ಕಕ್ಕಡ ಕಡಿತಲೆ ಪಟ್ಟೆ ವಂಕುಡಿವಿಡಿದೊಕ್ಕಯ್ಯ ಪಲಗೆ ಪೆರ್ಬಡಿಗೆ ಎಕ್ಕಟಗರ ಮೇಲೆ ಚಮ್ಮುವ ಚಮರವ ಲೆಕ್ಕವ ಮಾಡುವರಾರು (ಮೋಹತ. ೪೦-೧೫) ; ಗದೆ ಸಬಳ ಪಟ್ಟಸ ಪಟ್ಟೆ ಖಡ್ಗ ಕರವಾಳ . . . ಚಕ್ರ ಬಾಣಾದಿ ರಾಶಿಸುವ ಬತ್ತೀಸಾಯುಧಂಗಳಿಂಜುದು (ಚಿಪು. ೫೬-೪೩). **ಪಟ್ಟೆಹ** : ಪಟ್ಟೆಹವನೊಳವೊಗಿಸುತಂ ಕೊರಳ್ಗಳೊಳಲ್ಲಿ ಅಮ್ಮಮ್ಮ ಕ್ರೂರದಿಂ ಕೊಯ್ದು ಬಿಸುಡುತ್ತಲ್ಲಿ (ಬೊಮ್ಮರ. ೧೭೬-೧೮) ; ಶರ ಮುಸಲ ಜಡಿವ ಪತ್ರದ ಪಟ್ಟೆಹ[ಪಾಠಾಂ. ಟ್ಟಸ]ದ ವೀರಭಟಕೋಟಿ ನಡದು ಧಾಳಿಡಲು (ಲಕಿಚಂ. ೩೬-೨೦) ; ಕತ್ತಿ ಚೂರಿ ಬಾಕು . . . ಪಟ್ಟೆಹಂಗಳಂ ವಲಂ ಮೊತ್ತದಿಂದೆ ತಾಳ್ದು ಮುದ್ಗರಾದಿ ಶಸ್ತ್ರವೃಂದಮಂ ಚಿತ್ತಜಾರಿಸೇನೆಯೆಯ್ದಿತು (ಹಾಲಾಸ್ಯ. ೨-೧೪-೩೩).

[ದೇ.॥ ತಮಿ. ಪಟ್ಟೆಯ ; ತೆಲು. ಪಟ್ಟೆಯ, ಪಟ್ಟಯ]

ಪಟ್ಟೆಯ$_2$, ಪಟೆಯ, ಪಟ್ಟಾ$_2$, ಪಟ್ಟೆಯ (ನಾ). ಕ್ರಯ, ದಾನ, ಗುತ್ತಿಗೆ ಮೊದಲಾದ ವಿವರಗಳನ್ನುಳ್ಳ ದಾಖಲುಪತ್ರ ; ಪರವಾನಗಿಪತ್ರ : ಆ ದೇವರ ಪಟ್ಟೆಯಕ್ಕೆ ಕೂಂಡಿಮೂಸಾಸಿರದೊಳಗೇನೇನು ಹೇಜುಂದಡಂ ಗ್ರಾಸ ಕಾಣಿಕೆಯೆನ್ನದೆ ಸರ್ವನಮಸ್ಕಾರಾಗಿ ನಡೆವಂತು ಕೊಟ್ಟ ಶಾಸನ (ಮುಂಬರಾ. X, ೨೪೯-೭೭ ; 1219). **ಪಟೆಯ** : ಬರಗೆದೇವನಾಯಕವೊಡೆಯರು . . . ಚಿಕಸೋಮಂಣನಾಯಕರಿಗೆ ಕೊಟಪದೆಬೆನಕನವೊರೆ ಗ್ರಾಮಮದೆ ತುಸಬುಳಕಚಿಕ್ಕೆರೆಯ ಸ್ಥಳ ಸಹವಾಗಿ ಕೊಟ ಪಟೆಯ (ಇಅ. IX, ೯೯-೫ ; ?). **ಪಟ್ಟಾ$_2$** : 'ಪಟ್ಟಾದಾರ್' ಪರಾ. **ಪಟ್ಟೆಯ** : ನಾಲ್ಕುದಿಕ್ಕಿನ ಐವತ್ತಾರುದೇಶದಯೆಂಟು ಬಗೆ ಪಲರು ಪಟ್ಟಕಾರರು ಕೂಡಿ ಧರ್ಮಶಾಸನದ ಪಟ್ಟೆಯವ ಬರೆಸಿ ಕೊಟ್ಟ ಕ್ರಮವೆಂತೆಂದರೆ (ಮೈಅರಿ. ೧೯೩೫, ೨೮-೧೫ ; 1751).

ಪಟ್ಟೆಯ ನಾಯಕತನ = ಒಂದು ಅಧಿಕಾರ (?) : ಸನಕರಾಜವಡೆಯವರ ಮಕ್ಕಳು ತಿರುಮಲೆರಾಜವಡೆಯರಿಗೆ ಪಟ್ಟೆಯ ನಾಯಕತನಕ್ಕೆ ಪಾಲಿಸಿದ ವಸುಧಾರೆಯ ಸೀಮೆಯನು (ಎಕ. VI, ಚಿಕ್ಕಮ. ೮೦-೧೦ ; 1539). [<ಪಟ್ಟೆ$_3$]

ಪಟ್ಟೆಯುಡು (ಕ್ರಿ). ರೇಷ್ಮೆಯ ವಸ್ತ್ರವನ್ನು ತೊಡು,—ಧರಿಸು : ಪಟಂಗ ಪಟ್ಟೆಯುಟ್ಟುಕೊಂಡರೆ ಪಟ್ಟಕ್ಕೆ ಸಂದಾನೇ ? (ಗಾದೆ).

[ಪಟ್ಟೆ$_3$ + ಉಡು$_1$]

ಪಟ್ಟವಣೆ (ನಾ). ಸಿಂಹಾಸನ ; ಗದ್ದುಗೆ ; ರಾಜಪೀಠ : "ಬಿತ್ತಂಗೆ ಪಟ್ಟವಣೆಯೆಂದುತ್ತಮವಹ ಸಿಂಹವಿಷ್ಟರಂ" (ಕವಿಕಂ. ೧೪೯).

[< ಪಟ್ಟವಣೆ]

ಪಟ್ಟವಸನ (ನಾ). ರೇಷ್ಮೆಯ ವಸ್ತ್ರ : ನವರತ್ನಭೂಷಣದಾಟದಬಲೆ ಲತಾಂಗಿ ಮೆಱೆದಳು ಪಟ್ಟವಸನದಲಿ(ಸಿಭಾಗ.೧೧-೧-೨೯).[ಪಟ್ಟ$_3$+ವಸನ]

ಪಟ್ಟವಸ್ತ್ರ (ನಾ). = ಪಟ್ಟವಸನ : ಪಟ್ಟವಸ್ತ್ರಗಳನ್ನು ಕಾಣಿಕೆಯಾಗಿ ತಂದ ಶೈಲೇಯನೆಂಬ ಅರಸು . . . ಧರ್ಮರಾಯನ ಸಮುಖವನ್ನು ಸೇರಿದನು (ಕೃವಾಸ. ೧೧೮) ; ನಂಜನ್ನು . . . ಉತ್ತಮವಾದ ಪಟ್ಟವಸ್ತ್ರಗಳನ್ನು ಹೆಕ್ಕಿ ತೆಗೆದಳು (ಹಾಹುತ್ತ. ೪೦). [ಪಟ್ಟ$_3$+ವಸ್ತ್ರ]

ಪಟ್ಟಿವಾಲಾ (ನಾ). ನೌಕರಿಯ ಲಾಂಛನವಾಗಿ ಬಣ್ಣದ ಬಟ್ಟೆಯ ಅಡ್ಡಪಟ್ಟಿಯನ್ನು ಹೆಗಲಿನಿಂದ ಸೊಂಟದವರೆಗೆ ಧರಿಸಿರುವ ನೌಕರ ; ಡವಾಲಿ ; ಚಪ್ರಾಸಿ : ಆ ದೇಶದಲ್ಲಿಯ ಬ್ಯಾಂಕುಗಳಲ್ಲಿ ಕಾಗದಗಳನ್ನು ಅತ್ತಿಂದಿತ್ತ ಒಯ್ಯುವ 'ಪಟ್ಟೀವಾಲಾ' ಜನರಿರುವುದಿಲ್ಲ . . . ನಮ್ಮ ಬ್ಯಾಂಕುಗಳಲ್ಲಿ ಮಾತ್ರ 'ಪಟ್ಟೀವಾಲಾ' ಜನರ ಹಾವಳಿ ಬಹಳ (ಬ್ಯಾಂಕಳ್ಳ. ೬೩) ; ಕಾಶೀಮ, ತಾನಿದ್ದ ಊರ ಮೂಮಲೇದಾರರ ಕಚೇರಿಯಲ್ಲಿ ಪಟ್ಟೀವಾಲಾ ಆಗಿ ಎಷ್ಟು ವರುಷಗಳಾದುವೆಂಬುದನ್ನು ಹೇಗೋ ಲೆಕ್ಕ ಹಾಕಿ ಹೇಳುವುದರಲ್ಲಿಯೇ . . . ಕಾಶೀಮ ನಿವೃತ್ತನಾಗಲು ಬಂದಿದ್ದಾನೆಂದು ತಿಳಿದುಕೊಳ್ಳಬಹುದು! (ಜೀವಪಂ.೧).

[← ಹಿಂ. ಮರಾ. ಪಟ್ಟೀವಾಲಾ]

ಪಟ್ಟೆವುಲಿ, ಪಟ್ಟೆಹುಲಿ (ನಾ). ಮೈಮೇಲೆ ಉದ್ದುದ್ದ ಗೆರೆಗಳಿರುವ ಹುಲಿ : ಉನ್ಮತ್ತರೋಷದಿಂ ಧಾವಿಸಿದನಾ ರಾಕ್ಷಸಾದ್ಭುತನ್ . . . ಪಟ್ಟೆವುಲಿ ಕೋಪಿಯಾಳಂ ಸೀಳಲಬ್ಬರಿಸಿ ಕುಪ್ಪಳಿಸುವಂತೆ ವೋಲ್! (ಕ್ರಿರಾಮಾ. ೬೯೪-೪೩೩). **ಪಟ್ಟೆಹುಲಿ** : ನಮ್ಮ ಊರಲ್ಲಿ ಮೇಯಲು ಬಿಟ್ಟ ಪಶುಗಳನ್ನು ಚಿಟ್ಟೆಹುಲಿಯೋ ಪಟ್ಟೆಹುಲಿಯೋ ಎತ್ತಿಕೊಂಡು ಹೋದದ್ದುಂಟು (ಮೂಕಜ್ಜಿ. ೫೧).

[ಪಟ್ಟ$_3$+ಹುಲಿ(< ಪುಲಿ)]

ಪಟ್ಟೆವೊಯ್ (ಕ್ರಿ). (ಲೋಹವನ್ನು) ಡಾಬಿನಂತೆ ಮಾಡು : ಪಟ್ಟೆಯಂತೆ ಮಾಡು : ಮೇರುನಗವನೆ ಪಟ್ಟೆವೊಯ್ದಾ ಪಾರಿರುಹ ಭವನಾ ಪುರಶ್ರೀ ಚಾರು ತೆರೆ ಸುತ್ತಿಟ್ಟನೆನೆ ಹೊಂಗೋಂಟೆ ರಂಜಿಪುದು (ಸಾಳ್ವಭಾ. ೨-೬). [ಪಟ್ಟ$_3$+ಪೊಯ್$_2$]

ಪಟ್ಟೆಶಾಲು (ನಾ). ರೇಷ್ಮೆಯ ಶಾಲು,— ಹೊದೆಯುವ ವಸ್ತ್ರ : ನಮ್ಮಜ್ಜಿ ಗೊಂದು ತಾಮ್ರದ ಚಿಕ್ಕ ಪೆಟ್ಟಿಗೆಯಿತ್ತು. ಅದರಲ್ಲಿ ಸುಬ್ಬಾ ಜೋಯಿಸರಿಗೆ ಬಹುಮಾನವಾಗಿ ಲಭಿಸಿದ ಪಟ್ಟೆಶಾಲಿನ ಅವಶೇಷಗಳಿದ್ದುವು (ಕುರುಕಾ. ೨೫). [ಪಟ್ಟ$_3$+ಶಾಲು]

ಪಟ್ಟೆಶಾಲೆ (ನಾ). ರೇಷ್ಮೆಯ ಸೀರೆ : ಪಟ್ಟೆಶಾಲೆಯನಾಂತು ಗಟ್ಟಿ ಮುರವಸುಟ್ಟಿ ಕಣ್ಣ ಮುಟ್ಟಾಳೆ ತಲೆಗಿಟ್ಟು ಬಳೆತೊಟ್ಟು ಹೊಂಗದಿರ ಕಳಕೆ ನಡತಂದ (ಜಾನಗೀ. ೨೮). [ಪಟ್ಟ$_3$+ಶಾಲೆ$_1$(< ಸೇಲೆ$_1$)]

ಪಟ್ಟೆಸಾಲೆ (ನಾ). ಗುಡಾರ ; ಡೇರೆ : ನಾಲ್ವರು ಸಚಿವರಿಂದೀ ಧಾರುಣೇಶರ ಕೇತನವು ವಿಸ್ತಾರದಿಂದಲಿ 'ಪಟ್ಟಿಸಾಲೆಗಳಾದಿ ಪೊರದಿಹವು (ಬಜ್ಜಪು. ೨೨-೨೯). [ಪಟ್ಟ$_3$+ಸಾಲೆ$_4$]

ಪಟ್ಟೆಸೀರೆ (ನಾ.). = ಪಟ್ಟೆಶಾಲೆ : ಆದರೆ ಹೋದರೆ, ಹತ್ತು ಬೆಳೆದರೆ, ಅಜ್ಜೀ, ನನಗೊಂದು ಪಟ್ಟೆಸೀರೆ (ಗಾದ). [ಪಟ್ಟ$_3$+ಸೀರೆ$_2$]

ಪಟ್ಟೆಹ 'ಪಟ್ಟೆಯ$_1$' ನೋ.

ಪಟ್ಟೆಹಾವು (ನಾ). ಮೈಮೇಲೆ ಪಟ್ಟೆಗಳನ್ನುಳ್ಳ ಒಂದು ಬಗೆಯ ವಿಷಪೂರಿತವಾದ ಹಾವು ; ದಾಸರಿ ಹಾವು : (೬).

[ಪಟ್ಟ$_3$+ಹಾವು(< ಪಾವು$_1$)]

ಪಟ್ಟೆಹುಲಿ 'ಪಟ್ಟೆವುಲಿ' ನೋ.

ಪಟ್ಟೋತ್ಸವ (ನಾ). ಪಟ್ಟಕಟ್ಟುವ ಸಮಾರಂಭ; ಪಟ್ಟಾಭಿಷೇಕ: ನಿತ್ಯರಾಮಾಯಣದ ರಾಮುಂಗೆ ನಿಷ್ಟಮುಂ ನಡೆವ ಪಟ್ಟೋತ್ಸವ ಸ್ತೋತ್ರಮುಂ, ಅಲಿಸದೂ ! (ಕ್ರಿರಾಮಾ. ೪೭೫-೨೦೪).

[ಪಟ್ಟ$_3$+ಉತ್ಸವ]

ಪಟ್ಟೋಳಿ 'ಪಟ್ಟವಟಿ' ನೋ.

ಪಟ್ಟಾವಳಿ, ಪಟಾವಳಿ, ಪಠಾವಳಿ$_1$, ಪಠ್ಯಾವಳಿ(ನಾ).ಗಿ. ರೇಷ್ಮೆ; ಕೌಶೇಯ : ಪಟ್ಟಾವಳಿಯ ಗೊಂಡೆಯ ಝಗರ್ಝಗಿಸಿದುದು ರವಿಯ ರಥದುರುವಣೆಯ ತೇಜಿಯ ಪೊಲು (ಕೂಲ್ಲಾಡ. ೬೨೯) ; ದಿವ್ಯತರದ ಪಟ್ಟಾವಳಿಯ ಸುಗುಟಗಳ ಹೇರ್ಗಳನು ತಂದು ದೇಶಂಗಳಿಂದ (ಕೃಷ್ಣವಿ. ೨-೪೬). **ಪಟಾವಳಿ** : ೨. ರೇಷ್ಮೆವಸ್ತ್ರ ; ಪಟ್ಟೆಸೀರೆ ; ಪೀತಾಂಬರ : ದೇವರ ಮೂರ್ತಿಗೆ ಪಟಾವಳಿಯನ್ನು ಉಡಿಸಿದ್ದಾರೆ (ರೂಢಿ). **ಪಠಾವಳಿ$_1$** : (೬). **ಪಠ್ಯಾವಳಿ** : ೨. ಮುತ್ತಂ ಆಯ್ದೂ ವ್ಯರ್ಥರು ಬಿಟ್ಟ ಧರ್ಮಮೆಂತೆನೆ ಆನೆ ಮಾಣಿಕ ಪಳಿ ಪಠ್ಯಾವಳಿ ಅಡಕೆ ಮೆಳಸು × × × ಆ ಸ್ಥಳದಲು ನಿಕ್ರಯವಾದೊಡ ಹೊಂಗೆ ಕಾಣಿ (ಕಇ. V, ೩೩-೫೩ ; 1176) ; ಜಲಧರಬಣ್ಣದ ವರದೇವಾಂಗದ ಪುಲಿಪಟ್ಟೆಯ ಪೊಂಬಟ್ಟೆಯ ಪಠ್ಯಾವಳಿಗಳ . . . ಜವಳಿಯ ತಡಗವ ಬೀಡುದರು (ಜ್ಞಾನಚಂ. ೩-೨೩). [< ಪಟ್ಟಮಟಿ]

ಪಟ್ಟಿ (ನಾ).(?): ವಂದು ಆಜಕೆ ವಂದು ದುಡ್ಡಿಗೆ ಕಾಸು ಅಜು ಮುಂದೆ ನಾಂ ಪೇಳ್ವೆ ಗಣುಕಾ ವಂದು ವಳಕೆ ವಂದು ಪಟ್ಟಿಗೇಳು ಹುಂಜ ವಂದು ಹೆಂಟಕ್ಕೆ ವಂದು ಹಣವಿಂಗೆಂಟು ಬೇಳೆ ವಂದಜ ವಂಧತ್ತಉಳೆ ವಂದೆ ಪಾವಿಂಗೆ ಗದ್ಯಾಣ (ಭಾಸ್ಕರ. ೨೩-೭). [?]

ಪಟ್ಟಿಯ 'ಪಟ್ಟಿಯ$_2$' ನೋ.

ಪಟ್ಟಾಯಿ (ನಾ). ಒಬ್ಬ ಕ್ಷುದ್ರದೇವತೆಯ ಹೆಸರು : ಜೊಳ್ಳು ಮತಿಯ ಕೊಡುವ ಜಂಪೆ ಜಡದೈವ ಬಲ್ಲಿ ಉಡಿಗೆ ಉಡುವ ಉಟ್ಟುಗೆ ಪಟ್ಟಾಯಿ ಉಳ್ಳಿ ಮೆಲುವ ಹೀನ ಮದ್ಯಪಾನದ ಭಾಂಡ ಕೊಳ್ಳಿ. ಪಟ್ಟಸಿ ಕೊಂಬ ದೀಪದ ಮಾರಾಯಿ . . . ಎಲ್ಲ ನಾನಾಳದಾ ಕಳ್ಳದೇವತೆಗಳ ನಿಲ್ಲದೆ ಒಲಿಸಿದರು ಪೊಳ್ಳಲ್ಲದೆ ಗತಿ ಇಲ್ಲವೊ ಎಂದಿಗೂ (ವಿಸಾಸು. ೫೮-೨). 'ಪಟಾಲಮ್ಮ' ಪರಾ. [?+ಆಯಿ$_2$]

ಪಟ್ಟಾರಿ (ನಾ). ಗ್ರಾಮದ ಒಬ್ಬ ಅಧಿಕಾರಿ ; ಕುಲಕರಣಿ ; ಶ್ಯಾನುಭೋಗ : ಕಂದಾಯದ ಖಾತೆಯಲ್ಲಿ ಹಲವು ಅಧಿಕಾರಿಗಳಿದ್ದರು. (೧) ಕಾರ್ಕೂನ್ . . . (೩) ಪಟ್ಟಾರಿ ಅಥವಾ ಪೊಖದ್ದವರ್ : ಇವನೇ ಗ್ರಾಮಾಧಿಕಾರಿ (ಇಸ್ಲಾಂಸಂ. ೬೧).

[← ಹಿಂ. ಪಟವಾರೀ, ಪಟವಾರ್ ; ಮರಾ. ಪಟವಾರೀ]

ಪಟ (ನಾ). ೧. ಚಿತ್ರ ; ತನವೀರು : ಅಲ್ಲಿರುವ ಪಟ ನೋಡಿದೆಯಾ ಭಾವ ? ಅದು ನನ್ನ ಮುಖದ ಹಾಗೇ ಇಲ್ಲವೇ ? (ಕ್ರಿಚಕ್ಷ. ೧೧೩); ಅವರ ಮನೆಯ ಗೋಡೆಯ ತುಂಬಾ ದೇವರ ಪಟಗಳನ್ನು ಹಾಕಿದ್ದಾರೆ (ರೂಢಿ). ೨. ಗಾಳಿಪಟ : ಆ ಹುಡುಗ ಪಟವನ್ನು ಆಡಿಸುತ್ತಿದ್ದಾನೆ (ರೂಢಿ). [< ಸಂ. ಪಟ]

ಪಠಣ, ಪಠಣೆ (ನಾ). ಓದುವಿಕೆ ; ಪಠಿಸುವಿಕೆ ; ವಾಚನ : ದೇವರು ಕರುಣಿಸಿದ ಸಂದೇಶಗಳನ್ನು ಹಜರತ್ ಮಹಮ್ಮದರು 'ಪಠಣ' ಮಾಡಿದರು. ಈ ಪಠಣವೇ ಇಂದಿನ ಪವಿತ್ರ ಕುರಾನ್ (ಮುನೋಸಂ. ೨೮೮). **ಪಠಣೆ** : ಪಠಣೆ ಮಾಡುವವರಿಗೆ ಅನುಕೂಲವಾಗಿರಲೆಂದು ಪೂರ್ತಿಯಾದ ಸುಳಾದಿಯನ್ನೂ ಇಲ್ಲಿ ಉಪಹರಿಸಿದೆ (ಕಭವಿ. ೧೨೩).

[< ಸಂ. ಪಠನ]

ಪಠಣೆ 'ಪಠಣ' ನೋ.

ಪಠನ (ನಾ). ೧. ಓದುವಿಕೆ ; ವಾಚನ : 'ಪಠನಪದ್ಧತಿ', 'ಪಠನಾಗಾರ' ಪರಾ. ೨. ಕಂಠಪಾಠ. [ಸಂ.]

ಪಠನಪದ್ಧತಿ (ನಾ). ಓದಿ ಹೇಳುವ ಕ್ರಮ : ಬಹುಸಂಪ್ರದಾಯ ಬದ್ಧವೂ, ಪಾರಂಪರ್ಯವೂ ಆದ ಈ ಪಠನಪದ್ಧತಿಯಿಂದಾಗಿ (Method of oral transmission) ಹಿಂದುಗಳ ಧಾರ್ಮಿಕಸಾಹಿತ್ಯವು ಲೌಕಿಕ ಸಾಹಿತ್ಯಕ್ಕಿಂತ ಹೆಚ್ಚು ಪರಿಶುದ್ಧಮಟ್ಟದಲ್ಲಿ ಉಳಿದು ಬಂದಿತು (ಭಾರಪ. ೨೩). [ಪಠನ+ಪದ್ಧತಿ].

ಪಠನಾಗಾರ (ನಾ). ಓದುವ ಸ್ಥಳ ; ಪಾಠಶಾಲೆ : ಉದಯಕಾಲದೊಳು ಪಠನಾಗಾರಕ್ಕೆದಿ ಪಡ್ವದನನಂ ಗದ್ದುಗೆಯೊಳಿರಿಸಿ . . . ಎನ್ನ ಕೈವಿಡಿದರ್ಥಮಂ ಕೇಳ್ದೊಡೆ ಮೊದಲನ್ನಯಂಗೇಳ್ವ ಮಾತು ಲಳುವೆನೆನ್ನ ಗದಱುತ ಕಶಾದಂಡದಿಂ ಹೊಡೆದನಯ್ಯ (ಭಾಷಿಂ. ೧-೩೮) ; ಸೆಟ್ಟ ಪಠನಾಗಾರದೊಳೋದುವಣುಗನಂ ತರಲೆಂದು ನಡೆಗೊಳ್ಳುದಱಂ ಮುನ್ನ ಮೆತತ್ತಾಪಸಂ ಸೌಮ್ಯವೇಷಂದಳೆದಾ ಚೀಲಾಳನಿರ್ದಲ್ಲಿಗೇಳ್ತಂದು . . . ಇಂತೆಂದಂ (ವೃಷಿ. ೧೪-೩೬ ಪ). [ಪಠನ+ಆಗಾರ]

ಪಠಾಕಿ 'ಪಟಾಕಿ' ನೋ.

ಪಠಾಕ್ಷಿ 'ಪಟಾಕಿ' ನೋ.

ಪಠಾಣ, ಪಟಾಣಿ, ಪಟ್ಟಾಣಿ, ಪಠಾನ್, ಪಠಾನ (ನಾ). ೧. ಭಾರತ ಉಪಖಂಡದ ವಾಯವ್ಯಭಾಗ ಹಾಗೂ ಅಫ್ಘಾನಿಸ್ಥಾನಕ್ಕೆ ಸೇರಿದ, ಮುಸಲ್ಮಾನ ಮತೀಯರಾಗಿರುವ ಒಂದು ಪಂಗಡ ಮತ್ತು ಆ ಪಂಗಡಕ್ಕೆ ಸೇರಿದ ವ್ಯಕ್ತಿ : ಅಕ್ಬರನ ಕಾಲದಲ್ಲಿ ಒರಿಸ್ಸಾದೇಶವು ಪಠಾಣರ ವಶದಲ್ಲಿತ್ತು (ಬಂಕಿಮ. ೧೪೫) ; ಚೈತನ್ಯನ ಪ್ರಭಾವದಿಂದ ಅನೇಕ ಪಠಾಣರೂ ಆತನ ಶಿಷ್ಯರಾದರು. ಅವರಿಗೆ ಪಠಾಣ ವೈಷ್ಣವರೆಂದು ಹೆಸರು (ಭಾರದ. ೨೯೦) ; ಅರಬರು; ಬೆಲುಚಿಯರು, ಚೀನೀಯರು, ಮೊಗಲರು, ಪಾರ್ಸಿ, ಪಠಾಣರು, ಸೈಯದರು, ಶೈಕರು (ತುಳುನಾ. ೧೭೪). **ಪಟಾಣಿ** ೧. ನೆಜೆ ಗುಜ್ಜರಾತಿ ಕನ್ನೋಜಿ ಖುರೇಸಾನ ಬಿರುದಿನ ವರಪಟಾಣಿಗಳು (ಕಂನವಿ ೧೧-೯೮). ೨. ಪಠಾಣರಿಗೆ ಸಂಬಂಧಿಸಿದುದು : (ಕ). **ಪಟ್ಟಾಣಿ** : ೧. ಕಟ್ಟಿದ ಡೊಣೆಯಂಬು ಕೈಯ ಸಿಂಗಾಡಿಯ ಗಟ್ಟಿಯರಿವರಾರೊ ಮಂತ್ರಿ ಸೃಷ್ಟೀಶ್ವರ ಕಂಠೀರವ ಚಿತ್ತೈಸು ಪಟ್ಟಾಣಿಯತುಳ ರಾವುತರು (ಕಂನವಿ. ೧೨-೬೫). **ಪಠಾನ್** : ೧. ಅವಳು . . . ಪಠಾನ್‌ಕುಲಭೂಷಣಪ್ರಾಯಳಾದ ರೂಪರಾಶಿ ನವಾಬನಂದಿನಿ ಆಯೇಷೆಯಂತೆ ತೋರಿದಳೆನ್ನಲೆ ? (ಪ್ರಣಸ.೧). **ಪಠಾನ** : ೧. ಈಚೆಗೆ, ಧಾಳಿಮಾಡುತ್ತಿದ್ದ ಪಠಾನರ ತೊಂದರೆ ಕಡಮೆಯಾಗಿದೆ (ರೂಢಿ). [←ಹಿಂ. ಪಠಾನ್ ; ಮರಾ. ಪಠಾಣ್]

ಪಠಾನ್ 'ಪಠಾಣ' ನೋ.

ಪಠಾನ 'ಪಠಾಣ' ನೋ.

ಪಠಾವಳಿ$_1$ 'ಪಟ್ಟಾವಳಿ' ನೋ.

ಪಠಾವಳಿ$_2$ (ನಾ). ದಂಡು ; ಸೈನ್ಯ (?) : ಸಿರಿಗಿರಿನಾಥ ಒಡೆಯರು ಅರಗದ ರಾಜ್ಯವನು ಪಾಲಿಸುತ್ತಿಹ ಕಾಲದಲ್ಲಿ ಸಾತಳಿಗೆಯ ಸಾಡ ಕೊಳವಳಿಗೆ ಪಠಾವಳಿ ಬಂದು ಕಾದಿದಲ್ಲಿ ಆ ಬೊಮ್ಮರಸಹೆಗ್ಗಡೆಯರ ಮಗ ಪುಟ್ಟಗದೆ ದಳವನು ಮುಱಿದು ಆ ರಣದೊಳಗೆ ಕುಮಾರ ರಾಮನಾಥನ ಪ್ರತಾಪವಾಗಿ ಅಂಬುಗೂಡಾಗಿ ಸ್ವರ್ಗವನು ಸೂಱೆಕೊಂಡ (ಎಕ. VIII, ಕೀರ್ತಿಹ. ೨೩-೫ ; 1432). 'ಪಟಾಲಂ' ಪರಾ. [?]

ಪಠಿತ (ನಾ). ೧. ಓದಲ್ಪಟ್ಟುದು. ೨. ಹೇಳಲ್ಪಟ್ಟುದು : "ಅಗ್ನೇನಯ" ಇತ್ಯಾದಿ ಸನ್ಮಾರ್ಗಪ್ರವರ್ತಕಮಂತ್ರಗಳೂ ಸಂಹಿತೆಯ ಅನುಪೂರ್ವಿಯಲ್ಲಿರುವಂತೆಯೆ ಉಪನಿಷತ್ತುಗಳಲ್ಲಿಯೂ ಪಠಿತವಾಗಿವೆ (ಮಕ್ಕಾಪ. ೮೩ ಪೀಠಿಕೆ). [ಸಂ.]

ಪಠಿಯಿಸು 'ಪಠಿಸು' ನೋ.

ಪಠಿಲ್ (ನಾ). ಒಂದು ಅನುಕರಣ ಶಬ್ದ : ಖಮ್ಮೆನೆ, ಛಟುಲೆನೆ, ಛಿಲ್ಲೆನೆ, ಪಠಿಲೆನೆ (ಭಾಷಾಭೂ. ೧೧ ವೃತ್ತಿ).

ಪಠಿಲ್ಲನೆ (ಅ). 'ಪಠಿಲ್' ಎಂಬ ಸದ್ದಿನೊಂದಿಗೆ : ಅನುಕರಣಕ್ಕೆ— ಖಣ್ಣನೆ . . . ಪಠಿಲ್ಲನೆ, ಢಮ್ಮನೆ (ಕನುದ. ೧೪ ಪ್ರಯೋ). [ಪಠಿಲ್+ –ಅನೆ$_1$]

ಪಠಿಸು, ಪಠಿಯಿಸು (ಕ್ರಿ). ೧. ಓದು ; ವಾಚಿಸು : ಧರೆಯೊಳೀ ಕಣ್ಣಪ್ಪದೇವನ ಚರಿತೆಯಂ ಕೊಂಡಾಡಿದಡೆ ವಿಸ್ತರಿಸಿದಡೆ ಪಠಿಸಿದಡೆ ಬರೆದಡೆ ಹರನ ಕರುಣದಲಿ . . . ಸ್ಥಿರನುನೋರಥ ಸಿದ್ಧಿ ದೊರಕುಗು ನರರಿಗೆ (ಬಸಪು. ೧೮-೧೦೬) ; ಆರಾಧ್ಯರು ಮಾರ್ಕಂಡೇಯಸ್ತುತಿಯಲ್ಲಿ ಸ್ವಲ್ಪ ಪದ್ಯಗಳನ್ನು ಪಠಿಸಿದರು (ಚಂಗಾಳ್ವ. ೩೨) ; ಪಠಿಸಿದಂಥಾ ಶಾಸ್ತ್ರಕ್ಕೆ ವಿವೇಕಕ್ಕೆ ಈ ಜಾರಮಾರ್ಗದಲ್ಲಿ ನಡೆವುದು ಉಚಿತವಲ್ಲಾ (ಬೆಟ್ಟಅ. ಪರಿ. ೨೪೧). ೨. ಹೇಳು ; ನುಡಿ; ಉಚ್ಚರಿಸು : ಮತ್ತಿನ ಗಂಡರ್ಮೋಱೆಯಲ್ಲರೆಂದು ಮನದೊಳಗೆ ಬಟಾನೀರ್ಗುಡಿದ ಬದ್ದೆಯರೀ ಭವಮಿಂತೆ ಪೋದುದು ಮುಱುಭವದೊಳಾದೊಡಮಾತನೊಳೆ ಬೇಟಮಕ್ಕೆಂದು ಪಠಿಸಿ ಪರಿಚ್ಛೇದಿಸಿ ಕಾಮಾಗ್ನಿಯಂ ಪುಗೆಯುಂ (ಅರ್ಧನೇ. ೫-೨ ಪ) ; ಚೇತನದೊಳು ವಿಷ್ಣುನಾಮಚಿಂತನೆ ಶುಚಿರ್ಭೂತರಾದವನೀಸುರರು ಗೀತಾರ್ಥವ ಪಠಿಸುತ್ತ ಬಂದರು ಪ್ರಖ್ಯಾತಸತ್ರದ ಮನೆಗಳಿಗೆ (ನೋಚತ. ೩-೪೬) ; ಇಂತಿವೆಲ್ಲಂ ಚೆನ್ನಬಸವಪೌರಾಣದಾದ್ಯಂತ ಸತ್ಕಥೆಯ . . . ಭಕ್ತಿಯಿಂ ಬರೆದೋದಿ ಪಠಿಸಿದರ್ಗೆ ಸಂತತಂ ಸಕಲಸುಖಮಂ ಸಕಲಭೋಗಮನನಂತ ಸೌಭಾಗ್ಯಮಂ ಕೊಟ್ಟು ರಕ್ಷಿಸುವಂ (ಚಿಒಪು. ೧-೪೦). ೩. ಪುನರುಚ್ಚರಿಸು ; ಮತ್ತೆ ಮತ್ತೆ ಹೇಳು; ಜಪಿಸು : ಸ್ವಾಮಿ ಅಂದು ಆಡಿದ ನುಡಿಯಿದನು ಪ್ರೇಮದಿ ಪಠಿಸುವರಿಂದಿಗು ಇದನು (ಸನಲ್ಲ. ೧೦೦-೧೫). **ಪಠಿಯಿಸು** : ೧. ಏಕಪಶಾಂಗ ಕನಕಂ ಲೌಕಿಕದಾಗಮನೆಲ್ಲ ಪಠಿಯಿಸಿ ನಿಷ್ಠಂ ಆಕಾರವ ಜಿನನಂತೆ ಕೈಕೊಂಡುಂ ನಿಜವ ನೋಡದವನೆಯಭವ್ಯಂ (ಭವ್ಯಾಮೃ. ೫೨). ೨. ಛಾಂದಸನದೊರ್ಬನು ಭೂಸುರೇಂದ್ರನು ಭಿಕ್ಷವಂ ಬೇಡಿ ರಸಿಕದಿಂ ಶ್ರೀರುದ್ರವಂ ಪಠಿಯಿಸುತ ಮನೆಗೆಯ್ತರಲು (ಬಸಪು. ೫೩-೫೯). [ಪಠನ+ –ಇಸು$_3$]

ಪಠ್ಯಾವಳಿ 'ಪಟ್ಟಾವಳಿ' ನೋ.

ಪಠ್ಯ (ಗು). ೧. ಓದಬೇಕಾದ ; ಓದಲರ್ಹವಾದ ; ಅಭ್ಯಾಸಕ್ಕೆ ತಕ್ಕುದಾದ: 'ಪಠ್ಯಕ್ರಮ', 'ಪಠ್ಯಪುಸ್ತಕ' ಪರಾ. (ನಾ). ೨. ಓದುವಿಕೆ ; ವಾಚನ. ೩. ಓದಬೇಕಾದ ಭಾಗ : ಮೇಳ ಜಾಳವನೊಡನೆ ಯೌತಾಣಮಾನಿತಂ ನವತಾಣಮುಂ ಸಂಧಾನಮುಮರಂ ತಾಳಪಠ್ಯಮನೂನಪತ್ರಂ ಪೊಟ್ಟವಣಿ ಸಾರಣಮುಲರ್ದಿರಲು (ಬಸಪು. ೧೯-೮). [ಸಂ.]

ಪಠ್ಯಕ್ರಮ (ನಾ). ಓದಬೇಕಾದ ಭಾಗ ; ಅಭ್ಯಾಸಕ್ಕಾಗಿ ನೇಮಿಸಿದ ವಿಷಯ ; ಪಾಠಸೂಚಿಕೆ : ವಿಶ್ವವಿದ್ಯಾನಿಲಯಗಳ ಪಠ್ಯಕ್ರಮದಲ್ಲಿ ಜಾನಪದ(Folklore)ದ ಅಧ್ಯಯನಕ್ಕೆ ಯಾವಾಗಲೋ ಸ್ಥಾನ ದೊರೆಯಬೇಕಾಗಿತ್ತು (ಸುವರ್ಣ. ೧೭). [ಪಠ್ಯ+ಕ್ರಮ]

ಪಠ್ಯಪುಸ್ತಕ (ನಾ). ೧. ಅಧ್ಯಯನಕ್ಕಾಗಿ ಗೊತ್ತುಮಾಡಿದ ಪುಸ್ತಕ ; ಓದಲೇ ಬೇಕಾದ ಪುಸ್ತಕ : ಶೂನ್ಯಸಂಪಾದನೆ ಹುಟ್ಟಿದ ಸ್ವಲ್ಪಕಾಲದಲ್ಲಿಯೇ ವೀರಶೈವಧರ್ಮವನ್ನು ಅದರ ಪ್ರತಿಪಾದಕರ ಮಾತುಗಳಲ್ಲಿಯೇ ಬೋಧಿಸುವವರಿಗೆ ಮತ್ತು ತಿಳಿದುಕೊಳ್ಳುವವರಿಗೆ ಅನುಕೂಲವಾದ ಪಠ್ಯಪುಸ್ತಕವಾಗಿ ಪರಿಣಮಿಸಿರಬಹುದು (ಶೂನ್ಯಕು. ೧೨೪). ೨. ಶಿಕ್ಷಣಸಂಸ್ಥೆಗಳಲ್ಲಿ ಅಭ್ಯಾಸ ಮಾಡಿಸಲು ಗೊತ್ತುಮಾಡಿದ ಪುಸ್ತಕ : ಮೊದಮೊದಲು ಪಠ್ಯಪುಸ್ತಕಗಳ ರಚನಾಕಾರ್ಯದಲ್ಲಿ ಮಕ್ಕಳು

ಕಲಿಯತಕ್ಕ ವಿಷಯಗಳಿಗೆ ಮಾತ್ರ ಗಮನ ಕೊಡಲಾಗುತ್ತಿತ್ತು (ಕಪಪು. II, iii ಸೂಚನೆ). [ಪಠ್ಯ+ಪುಸ್ತಕ]

ಪಠ್ಯಭಾಗ (ನಾ). ಓದತಕ್ಕ ಭಾಗ : ಈ ಸಲದ ಪರೀಕ್ಷೆಗೆ ಈ ಪಠ್ಯ ಭಾಗವನ್ನು ಸೂಚಿಸಿದ್ದಾರೆ (ರೂಢಿ). [ಪಠ್ಯ+ಭಾಗ]

ಪಠ್ಯವಸ್ತು (ನಾ). ಅಭ್ಯಾಸ ಮಾಡಬೇಕಾದ ವಸ್ತು ; ಓದ ಬೇಕಾದ ವಿಷಯ : ಬೋಧಿಸಬೇಕಾದ ಪಠ್ಯವಸ್ತುವೂ ಅದರಲ್ಲಿ ಯಾವುದಕ್ಕೆ ಪ್ರಾಧಾನ್ಯ ಕೊಡಬೇಕೆಂಬ ಅಂಶವೂ ಶಿಕ್ಷಣತತ್ವದ ದೃಷ್ಟಿ ಯಲ್ಲೇ ನಿರ್ಧರವಾಗಬೇಕು (ಶಿಕ್ಷದ. ೬) ; ಮನೆ, ಶಾಲೆ, ಕ್ರೀಡಾಂಗಣ ಮತ್ತು ಸಮಾಜ – ಈ ಸನ್ನಿವೇಶಗಳಲ್ಲಿ ಬರುವ ದೃಶ್ಯ, ಪ್ರಸಂಗ, ಕಥೆ ಇವುಗಳನ್ನು ಪಠ್ಯವಸ್ತುಗಳನ್ನಾಗಿ ಆಯ್ದುಕೊಳ್ಳಲಾಗಿದೆ (ಕಪಪು. II, iii ಸೂಚನೆ). [ಪಠ್ಯ+ವಸ್ತು]

ಪಠ್ಯವಿಷಯ (ನಾ). = ಪಠ್ಯವಸ್ತು : ಮಕ್ಕಳಿಗೆ ಫಲಪ್ರದವಾದ ಶಿಕ್ಷಣ ವಾಗಬೇಕಾದರೆ ಪಠ್ಯವಿಷಯ ಜೀವನದ ಆವಶ್ಯಕತೆ, ದೃಷ್ಟಿಧ್ಯೇಯ ಮತ್ತು ಮಕ್ಕಳ ಮನೋವ್ಯಾಪಾರದ ಪರಿಚಯ–ಇವೆಲ್ಲವನ್ನೂ ಗಣನೆಗೆ ತೆಗೆದುಕೊಂಡೇ ರೂಪುಗೊಂಡಿರಬೇಕು (ಶಿಕ್ಷದ.೧೨೬). [ಪಠ್ಯ+ವಿಷಯ]

ಪಡ$_1$ 'ಪಡೆ$_3$' ನೋ.

ಪಡ$_2$ 'ಪಡವು$_3$' ನೋ.

ಪಡ$_3$ (ನಾ). ಚಿಕ್ಕದೋಣಿ ; ನಾವೆ : ಅವರಿಗೆ ಮೊದಲಿನಿಂದಲೂ ಹಂಗಾರಕಟ್ಟಿ ಬಂದರಿನ ಭವಿಷ್ಯವನ್ನು, ಬಂದು ಹೋಗುವ ನಗ, ಮಂಜಿ, ಪತ್ತೆಮಾರಿ, ಮಚ್ಚೆಗಳ ಹಾಯಿಗಳನ್ನು ನೋಡಿ ಹೇಳುವ ಗುಣ. 'ಓ ಇದು ಕೋಟಿ, ಇದು ಪಡ, ಇದು ಮಂಜಿ' ಎಂದು ಎಷ್ಟು ದೂರ ದಿಂದಲೇ ಗುರುತಿಸುತ್ತಾರೆ (ಸುರಮ. ೪೯). 'ಪಡಂಗು' ಪರಾ. [←ತುಳು. ಪಡ]

ಪಡ$_4$ (ನಾ). ಬಟ್ಟೆ ; ವಸ್ತ್ರ: 'ಪಡವಳ್$_2$', 'ಪಡಸಾಲೆ$_2$' ಪರಾ. [<ಪ್ರಾ. ಪಡ./ಸಂ. ಪಟ]

ಪಡ$_5$ 'ಫಡ$_1$' ನೋ.

ಪಡಂಗು, ಪಡಗು, ಪಡಹು, ಪಡಾವ, ಪಡಾವು$_1$, ಹಡಗ, ಹಡಗು, ಹಡಹು$_2$ (ನಾ). ೧. ಸಮುದ್ರದ ಮೇಲೆ ಪ್ರಯಾಣ ಮಾಡಲು ಉಪಯೋಗಿಸುವ ತೇಲುವ ಸಾಧನ; ದೊಡ್ಡ ನೌಕೆ: ನಿತ್ಯಬಿಂದುಗೆ—ಬೆಡಂಗು, ಕಡಂಗು . . . ಪಡಂಗು, ಸಿಡುಂಬು(ಶಮದ. ೩೬ ಪ್ರಯೋ) ; ಆ ಪೊಟೆಗಳಂ ಸಮುದ್ರಮಂ ದಾಂಟಲ್ ಪಡಂಗು ಪಱಗೋಲಾದಿಯನೀ ಮರ್ಯಾದೆಯೊಳ್ ಮಾಡಿಮೆಂದುಪದೇಶಿಸಿ (ಪೂರ್ವಪು. ೯) ; ಮನೋವಲ್ಲಭೆಯುಮಾಕೆಯು ದಾದಿಯುಮಾನುಮಿಂತು ಮೂವರುಂ ಪಡಂಗನೇಱಿ ನಡುವಗಲೊಳ್ ಬರ್ಪಾಗಳ್ (ದಶಕು. ೪-೪೫ ಪ); ನೀರ್ವಟ್ಟೆಯೊಳಗಿರದೆ ಚರಿಸುವ ಪಡಂಗುಗಳ ಗಡಣಮೊ ನರರ ಪರಿಕರಮೊ ಕಾಲಭೈರವನ ಬಹುರೂಪಮೋಯೆನೆ ಚತುರ್ಬಲ ಮೆಯ್ದಿತು (ಪದ್ಮರಾ. ೬-೨೮) ; ವನಾಬ್ಧಿಯಲ್ಲಿ ಕಣ್ಗೊಳಿಪ ಪಡಂಗು ಮಾಮರಮದಾಗಿರೆ ಕೋಗಿಲೆ ನಟ್ಟಿಗೊಂಬಿನೊಳ್ ತಳೆದುದು ಕೂವಕಂಬ ದುದಿವತ್ತಿದ ನಾವಿಕನೊಂದು ಲೀಲೆಯಂ (ಶಬಶಂ. ೨-೪೪). **ಪಡಗು :** ೧. ಜಡಧಿವೊಲಿರೆ ಸುರಸೈನ್ಯಂ ಪಡಗುವೊಲಿರೆ ದಿವಿಜವಾರಣಂ ಜಿನಶಿಶು ಕೈಪಿಡಿವೊಲಿರೆ ಪುಣ್ಯಪಣ್ಯದ ಪಡಗಿನ ಸಾಂಯಾತ್ರಿಕಂಬೊಲಿರ್ದಂ ಶಕ್ರಂ (ಚಂದ್ರಪ್ರ. ೧೨-೬೪) ; ಈತ ಕಾಣರೆ ಘನಚರಾಚರಚೇತನತ್ವದಿ ವಿಹಿತ ಬೀಜವ್ರಾತವನು ತುಂಬಿದನು ಪಡಗಿನೊಳೌಕಿ ಬಾಲ್ಯದಲಿ (ಕುವ್ಯಾಸ. ೯-೩೮) ; ಪರಿವ ಮಹಾರಥ ಪಡಗಾಗೆ ಮೆಱೆದುದು ಶರಧಿಯಂದದೊಳಾ ಸೇನೆ (ಚಂಪ್ರಸಾಂ. ೧೫-೮೮) ; ನಿರ್ಗ್ರಂಥರಥಕ್ಕೆ ಸಂದ ಯತಿ ಸೂರ್ಯಂ ಬೋಲ್ ಭವಾಂಭೋಧಿಯಂ ಕಡುವೇಗಂ ಪರಿಲಂಘಿಪಂ ಸುಕೃತ ಕೃದ್ಗಾರ್ಹಸ್ಥನುಂ ಧರ್ಮದಾ ಪಡಗಿಂ ಮೆಲ್ಲನೆ ದಾಂಟದೇ ಇರನಲಾ (ರತ್ನಾಕ. ೪೧). ೨. ನೆಲೆ ; ಆವಾಸ ; ಇರುವ ಜಾಗ : ಪೇಸು ಪತದ ಪಡಗಾಗಿಯುಮಧ್ರುವಮಪ್ಪೊಡಲನಿದಂ ನಚ್ಚುವನಬುಧಂ ವಿಬುಧ ನೆಂತುಮೇಂ ನಚ್ಚುವನೇ (ಶಾಂತೀಶ್ವ. ೧೫-೧೪೨). ೩. ಐಶ್ವರ್ಯದ ನೆಲೆ ; ಸಮೃದ್ಧಿಯ ಸ್ಥಾನ : ಕೊಡುಗೆಯ್ಯ ಸಿರಿವಂತ ಬೊಜಗನ ನೊಲಿಸಿದ ಮಡದಿಯ ಸೈಪನೇನೆಂಬೆ ಪಡ[ಪಾಠಾಂ. ಡೆ]ಗಾಕೆಯ ಮನೆ ಯದಱಿಂದ ಬಡವನ ಬಿಡುವುದಱಿದು ಬೆಲೆವೆಣ್ಣು (ಕುರಾಸಾಂ.೨೮-೬೬). **ಪಡಹು:** ೧. ಹಕಾರಕ್ಕೆ ಗಕಾರಂ—ಸಿಂಹ–ಸಿಂಗ; ಹಡಹು (ಪಡಹು) —ಪಡಗು (ಶಮದ. ೨೬೩ ಪ್ರಯೋ). **ಪಡಾವ :** ೪. ಚಿಕ್ಕನಾವೆ ; ದೋಣಿ :- ಜಲಮಾರ್ಗದಿಂದ ಕಳುಹಿಸುವದಿದ್ದರೆ . . . ಹಡಗದ ತನಕ ಪಡಾವದಲ್ಲಿ ಮಾಲ ಹಾಕಿ ಕಳುಹಿಸಬೇಕಾಗುತ್ತದೆ (ಮುಂಬಪ್ರಾ. ೨೪೧). **ಪಡಾವು$_1$:** ೧. ಈ ಪಾಡ್ಡನದಲ್ಲಿ, ಕಡಲುತೀರದವರಿಗೆ ಪರಿಚಿತವಾದ ಪಡಾವು(ಹಡಗಿನಲ್ಲಿ)ಭೂತ ಬಂದಂತೆ ಚಿತ್ರಿತವಾಗಿದೆ (ಜಾನಗೀ. ೨೨). **ಹಡಗ :** ೧. ನಿನ್ನಯ ಭಕ್ತರೀ ಸಮುದ್ರದೊಳು ಹಡಗಂ ಮುಳುಗು ತಿರೆ ಭಾಗ್ಯವೀ ಸಮಸ್ತಂ ನಿನಗೆ ಪಾಲೆನಲು ಕೈನೀಡಿ ಹಡಗನೆತ್ತಿದನು (ಗುರುಚಾ. ೩-೨೩) ; ಹಡಗವೋ ಧವಾಧ್ಯಿಗೆ ವಿಜಯವಿಠ್ಠಲರೇಯಾ (ವಿಪ್ರಸು. ೧೪-೩), ಗಾಳಿಗೆಷ್ಟು ಹರಿದೀತು ಹಾಹೆ ಹುಟ್ಟಲ್ಲದಾಗೆ ಹಡಗ? (ಸೂರ್ಯಪಾ. ೩೩-೨) ; ಅವರ ಹಡಗವು ಇಂಗ್ಲಿಷ್ ಕಾಲುವೆಯನ್ನು ದಾಟಿ, ಬೊಲೋನ್ ಬಂದರಿನಲ್ಲಿ ತಂಗಿತು (ಮಾನಸಾ. ೩೭) ; ಕಡ ಸಿಕ್ಕೋದಾದರೆ ಹಡಗ ನನಗಿರಲಿ ಅಂದ (ಗಾದೆ). ೩. ತಂದೆ ಮಾಡಿದ ಮದುವೆಯ ಸಾಲಕ್ಕಾಗಿ ಆಸ್ತಿಯೆಲ್ಲ ಸಾಹುಕಾರ ಸಂಕಪ್ಪನ ಹಡಗಕ್ಕೆ ಸೇರಿಕೊಂಡಿತ್ತು (ಬೆಳುಮ.೨); ಅದು ಯಾವ ಕಾಲದಲ್ಲೋ ಸಾಹುಕಾರನ 'ಹಡಗಕ್ಕೆ' ಸೇರಿಕೊಂಡಿದ್ದ ಹೊಲ ಮನೆಗಳು (ಬೆಳುಮ. ೧೫೭). **ಹಡಗು :** ೧. "ಪೋತಮೂ ಪ್ರವಹಣಂ ಭೈತ್ರಮೆನೆ ಹಡಗಕ್ಕು" (ಮಂಗರಾ. ೧೨೦-೪) ; ಎಡಟಡಸಿದಲ್ಲಿ ಶರಣಂ ಕಡೆಗಣಿಸುವೊಡಾರುಮಿಲ್ಲ ಸಂಸಾರಿಗೆ ತಾಂ ಕಡೆಯಿಲ್ಲದಬ್ಧಿಮಧ್ಯದ ಹಡಗಂ ಬಿಟ್ಟಡೆ ಪಕ್ಷಿಗೆಂತಂತೆ ವೊಲಂ (ಬಾಧಪು. ೫-೩೭) ; ಹಡಗು ಜಲಧಿಯೊಳೋಡಿ ಗಿರಿಗಳನೆಡಹಿ ನುಗ್ಗಾದಂತೆ ಸುಭಟರ ಗಡಣ ಗಜವನು ತಾಗಿ ತಾಗಿ ವಿಘಾತಿಯಲಿ ನೊಂದು (ಕುವ್ಯಾದ್ರೋ. ೩-೨೮) ; ದುಡುಕು ಮಾಡಿ ಹಾಲುಮಡಕೆಗಳ ಒಡೆದು ಹಡಗನೇಱಿ ಬಂದು ಉಡುಪಿಲಿ ಇದ್ದನೆ ಮಂಗಳರೇಖೆ ಪಾದಂ ಗಳುಳ್ಳ ನಿಮ್ಮ ರಂಗ (ಪುರಂದ.೨-೩೨-೪); ಕಣ್ಣೆಸಾ ಹಡಗಲು ಬೆಳಕನ್ನು ಪಡೆಯಲು ಹೊರಟಹುದು ಹುಡುಕಲು ಯಾವ ನಡುಗಡ್ಡೆಯಲೊ (ಮೂರ್ತಿಕಾ. ೪೦-೪). **ಹಡಹು$_2$:** ೧. ಹಕಾರಕ್ಕೆ ಗಕಾರಂ— ಸಿಂಹ-ಸಿಂಗ ; ಹಡಹು (ಪಡಹು)–ಪಡಗು (ಶಮದ. ೨೬೩ ಪ್ರಯೋ). [ದೇ.॥ ತಮಿ. ಮಲ. ಪಟಕು, ಪಟವು ; ತುಳು. ಪಡವು, ಹಡಗ, ಅಡಗ್ ; ತೆಲು. ಪಡವ]

ಪಡಂಪು 'ಪಡವು$_1$' ನೋ.

ಪಡಕಣ (ನಾ). ಕಾವು ; ರಕ್ಷಣೆ ; ಕಾವಲು : ಕನ್ನಮಂ ತದ್ಧರಾ ಕಾಂತಗೃಹಕಿಕ್ಕೆ ಪಡಕಣದ ಪಹರಿಯ ಸುಭಟರಂತದಂ ಕಂಡು ಹೆಡಗ ಯ್ಗಟ್ಟಿಯಾ ಕಾಲದಂಡನದ್ದೆಡೆಗೊಯ್ದುರು (ಸಮ್ಯಕೌ. ೧೦-೧೧) ; ಧೀರಮಾರುತಿ . . . ತಳ್ಳಂಕಗೋಸಿ ತತ್ಪುರವ ರಾಜಾಲಯಂಕುಲ್ಲಸ ದಿಂದೆಯ್ದಿದನು ಅದನು ಕಂಡಾ ಪಡಕಣದಾಳ್ಗಳಾ ರಾಜಸದನದ ರಣ ಮಂಡಲಕೆ ಒದಗಿ ತುತ್ತುಜುಬಾಗಿ ನಿಂದು ಬಾಗಿಲನಿಕ್ಕಲು (ನೇಮಿಸಂ. ೨೫-೬೫) ; ಪಾರಿ ಪಡಕಣದಾಳಿಂದ ವಾದ್ಯಗಳಿಂದ ಕೇರಿಕೇರಿಯೊಳು ತಿರುಗುವ ವೀರಭಟಾಳಿಯಿಂದೆಸೆದುದಾ ಕುಮ್ಮಟದಾರಭಟಿಯನೇನೆಂಬೆ (ಕುರಾಸಾಂ. ೩೮-೮೭). [<ಪ್ರಾ. ಪಡಿಕ್ಖಣ./ಸಂ. ಪ್ರತೀಕ್ಷಣ]

ಪಡಕಾನೆ 'ಪಡಖಾನೆ' ನೋ.

ಪಡಕು$_1$ (ಕ್ರಿ). ಕುದುರೆಯನ್ನು ಸವಾರಿಗೆ ಸಿದ್ಧಮಾಡು ; ಕುದುರೆಗೆ ಜೀನು ಏರಿಸು,—ತಡಿಹಾಕು : ಕಡುಗಾಳಿಗೆ ಬಿಟ್ಟಂಬಿಂಗೈದುವ ದಿಟ್ಟಗೆ ನಡೆವ ಮನಕ್ಕಿಮ್ಮಡಿ ಮೂವಡಿ ನಾಲ್ವಡಿಯೈವಡಿ ಜವದೊಳು ಬಲದೊಳು ಬೀದಿಯ ಸರಿಸದೊಳನುಪಮನಚಳಂ ಬಳಿಕೆಯೊಳು ತೊಡೆ ಮಡಕಿಸಿ[ಕಸೆ]ಕಂಬಿಯ ಸರಸನ್ನೆಗಳಾಟದ ತೊಡಕಂ ಹೊದ್ದದೆಯ್ದೆ ದೇಜುಂದರನುವಾಯ್ತೆನೆ ಪಡಕಿದ ತುರಗಂಗಳು ನೆರೆದುವು ನಿಂದವು (ವೀರೇಶ. ೨-೨೯). [?]

ಪಡಕು$_2$, ಪಡಿಕೆ$_1$, ಪಡುಕು, ಫಡಕು (ನಾ). ೧. ಬಾಗಿಲು, ಕಿಟಕಿ ಮೊದಲಾದುವುಗಳ ಕದ,— ರೆಕ್ಕೆ : ಒಂದು ಸಣ್ಣ ಹರಳನ್ನೆತ್ತಿ ಅವಳು ನಿಂತಿದ್ದ ಕಿಡಕಿಯ ಪಡಕಿಗೆ ಬಗೆದ (ಚೀಸಬಾ. ೨೪೦) ; ಬಲವಂತನು . . . ಹೊರಬೀಳುವಾಗ ಅಂಗಡಿಯ ಮಳಿಗೆಯ ಪಡಕುಗಳನ್ನು ಇಕ್ಕಿಕೊಂಡು ಭದ್ರವಾದ ಕೀಲಿ ಹಾಕಿದನು (ಅಂಬಿಕೆ. ೧೧) ; ಮುಂದೆ ಮಾಡಿದ್ದ ಪಡಕುಗಳನ್ನು ಸರಿಸುತ್ತ ಹೊರಗೆ ಬಂದು ನಿಂತುಕೊಂಡಳು (ಹೇಮಂತ. ೨೪೬). **ಪಡಿಕೆ**$_1$: (ಕ). **ಪಡುಕು** : ೧. ಬಿಂಕವನ್ನು ತೃಪ್ತಿಯನ್ನು ಸೂಚಿಸುವ ಮುಗುಳುನಗೆ ತುಟಿಯ ಪಡುಕು ತೆರೆದು ಪ್ರಕಟವಾಗುವುದು (ಕನಕ. ೧೧೮). ೨. ಬಿರುಕು ; ಸಂದು ; ಸೀಳು : ಬಾಗಿಲ ಪಡುಕಿನಂದ ಒಳಗೆ ಉರಿಯುವ ಅಗ್ನಿಜ್ವಾಲೆ ಕಾಣುತ್ತಿತ್ತು (ವೀನಾದ. ೧೪). **ಫಡಕು** : ೧. ತರುಣೋರ್ವಳು ಬಾಗಿಲದ ಫಡಕಿನ ಮರೆಗೆ ನಿಂತು . . . ಮಂಜುಲವಾದ ಧ್ವನಿಯಿಂದ ಹೇಳಿದಳು (ತೊಳಮು. ೭೮) ; ಕಿಡಿಕೆಗಳ ಫಡಕುಗಳು ಗಟ್ಟಿಯಾಗಿ ಇಕ್ಕಿದ್ದವು (ಸ್ವಾಭಮಾ. ೬) ; ಪಾವಿತ್ರ್ಯಮುದ್ರೆಯಲ್ಲಿದ್ದ ಗೂಢ ತೆರೆದಿತ್ತು ತನ್ನ ಫಡಕು (ಅರಳು. ೧೮೨-೬). ೩. ಬಾಳೆ ಎಲೆಯ ತುಂಡು,— ಹಾಳೆ,—ಸೀಳು : ಬಸವಂತಿ . . . ಬಾಳೆಯ ಎಲೆಯ ಒಂದು ದೊಡ್ಡ ಫಡಕಿನಲ್ಲಿ, ಹಿತ್ತಲಲ್ಲಿಯ ಹೂ-ತುಳಸಿ ಹರಿದು ತಂದು, ದೇವರ ಮನೆಯ ಬಾಗಿಲಲ್ಲಿ ಪೂಜೆಗೆಂದು ಇರಿಸುತ್ತಾಳೆ (ದೀಸಹ. II, ೧೭೫) ; ಬಾಳೆಯ ಫಡಕಿನಲ್ಲಿ ಒಂದೆರಡು ದೊಡ್ಡ ಕರದಂಟನ್ನು ಹಾಕಿ ಅವನ ಎದುರಿಗಿಡುತ್ತ ಅಂದಳು (ಬಾಬಲ. ೧೯). [<ಸಂ. ಫಲಕ]

ಪಡಕು$_3$ 'ಪಡಿಕೆ$_3$' ನೋ.

ಪಡಕೆ$_1$ (ನಾ). "ಹಾಸಿಗೆ" (ಸಿರಿಕೋ. ೩೧೨).

[ದೇ.! ತಮಿ. ಪಟುಕ್ಕೈ ; ತೆಲು. ಪಡಕ, ಪಡುಕ]

ಪಡಕೆ$_2$ (ನಾ). ಒಂದು ಬಗೆಯ ಚರ್ಮವಾದ್ಯ : ತೊವಲ ಗಿಲಿಗಿಲಿಕೆಯೆಸವ ನಾದಮುಂ ತೊವಳನೆಳವರೆಯೊಳಾದ ನಾದಮುಂ ಮೊಜವ ಪಡಕೆಗಳ ಕಿಱುವಾ ನಾದಮುಂ ಪೋಲ್ವೊಡಿಲ್ಲ ಮುಟ್ಟೆಯಿಂದ ಱುಟ್ಟುಗಂ (ಱುಟ್ಟುಮ. ೮-೧೨). [←ತಮಿ. ಪಟಕ]

ಪಡಖಾನೆ, ಪಡಕಾನೆ, ಪಡ್ಯಾನೆ (ನಾ). ಹೆಂಡ, ಸಾರಾಯಿ ಮುಂತಾದುವುಗಳನ್ನು ಮಾರುವ ಸ್ಥಳ ; ಮದ್ಯದ ಅಂಗಡಿ ; ಗಡಂಗು : ಹೆಂಡಕುಡುಕರು . . . ಪಡಖಾನೆಯ ಬಳಿಗೆ ಓಡೋಡಿ ಹೋಗುವಂತೆ, ಈ ಇಲಿಯೂ ಕೂಡ ಲೋಹದ ಹಲಗೆಯ ಬಳಿಗೆ ಅನಿರ್ದಾನು ಭವಕ್ಕಾಗಿ ಓಡೋಡಿ ಹೋಗುತ್ತದೆ (ಮನೋಸಂ. ೩೨೨); ಅಧಿಕಾರಿಗಳು ದೇವಾಲಯದ ಮೂರ್ತಿಗಳನ್ನು ಅವುಗಳ ಪೀಠದಿಂದ ಎತ್ತಿಕೊಂಡೊಯ್ದು ತಮ್ಮ ಪಡಖಾನೆಗಳನ್ನು ಅಲಂಕರಿಸುವುದಕ್ಕೆ ಉಪಯೋಗಿಸಿಕೊಂಡರು (ಝಾಂಬಾಣ. ೪೧೬) ; ಇಂದು ನಮ್ಮಾ ನಾಡು ಜಾತ್ರೆ ಗಜಿಬಿಜಿ ಕಳೆದು ಪಡಖಾನೆಯಲ್ಲಿ ಪಟ್ಟ ಜನದ ಪಾಡು : ಬುಂಡೆ ತುಂಬಿದೆ ಹೆಂಡ ; ಕೆಸರು ತುಂಬಿದೆ ಹೊಂಡ (ಸಡಬಂ. ೧೦೦-೨). **ಪಡಕಾನೆ** : ರತ್ನ ಪಡಕಾನೇಗೆ . . . ಓಯ್ತಿದ್ದಂಗೆ ನಿಂತ ! (ಕನ್ನಬಾ. ೧೨೩). **ಪಡ್ಯಾನೆ** : ಒಂದು ಸಲ ದಾಸನ ಪಡ್ಯಾನೆ ಬಿಡುವುದರೊಳಗೆ ಭಾರೀ ಮಳೆ ಬಂದಿತು (ಸನ್ನೂರು. ೧೪೧) ; ಈಶ್ವರನ ಬೊಕ್ಕಸದಲ್ಲಿ ಗಟ್ಟಿ ಹೆಂಡ, ಹುಳಿಗಡಿಗೆ ಅಯ್ತಂತೆ, ಹೋಗಿ ಹೊತ್ತೊಂಡ್ಬಂದ್ಬಿಡಬೇಕು. ಈ ಪಡ್ಯಾನೇಗೆ ಕಾಸು ಕೊಡ ಕಾಗ್ದು (ತಿಪಂಕಾ. ೬೫).

[ಪಡ$_0$(ℙ←ತಮಿ. ಪಟು = ಮದ್ಯ)+ಖಾನೆ]

ಪಡಗ 'ಪಡಿಗ' ನೋ.

ಪಡಗು 'ಪಡಂಗು' ನೋ.

ಪಡಚ 'ಪಡ್ಚ' ನೋ.

ಪಡಜಮೀನು (ನಾ). ವ್ಯವಸಾಯ ಮಾಡದೆ ಹಾಳು ಬಿದ್ದ ಭೂಮಿ ; ಬೀಳುನೆಲ : ಕಲ್ಲುಭೂಮಿಗಳು, ಪಡಜಮೀನುಗಳು, ಕಾಯಿದೆಯಿಂದ ತೊಡಕಾಗಿ ಹೇಗೂ ಕೈಬಿಡುವ ಜಮೀನುಗಳು, ಇವೆಲ್ಲ ಅಲ್ಲಿ ದಾನದ ವಸ್ತುಗಳಾಗಿವೆ (ಮಣ್ಣೆಮ. ೨೧೩).

[<ಪಡು$_2$+ಜಮೀನು]

ಪಡಡಕ್ಕೆ, ಪದಡಕ್ಕೆ, ಪರಡಕ್ಕೆ, ಪರಿಡಕ್ಕೆ (ನಾ). ಒಂದು ಬಗೆಯ ವಾದ್ಯ ; ದೊಡ್ಡ ನಗಾರಿ : "ಅನಕಃ, ಪಟಹಃ — ಈ ೨ ಪಡಡಕ್ಕೆ" (ಹಲಾಯು. ೧೭-೧೭) ; ಸತ್ಯಭಾಮೆ ಚಾಮೀಕರಕಳಶ ಧ್ವನಿಚಾಮರ ಧವಳಾತಪತ್ರ ಪಡಡಕ್ಕಾದಿ ಶ್ರೀಮದ್ವಿಭವಯುತಂ ಪೌಲೋಮಿಯೆ ಬರ್ಪಂದದಂತೆ ಪೊಱಲಿಂ ಬಂದಳ್ (ಬಂಹರಿ. ೬-೭೨). **ಪಡಡಕ್ಕೆ** : "ಪದಡಕ್ಕೆ (ಪಡಡಕ್ಕೆ)-ಪದಡಕ್ಕಾ" (ತದ್ಭವ ಕೋ. ೨೪) ; ದಟದಟಿಸಿ ಮೊಟಗುವ ಜಯಮಂಗಳಘೋಷಮುಂ ಪೊಯ್ವ ಪಡಡಕ್ಕೆಗಳುಂ . . . ಓಪ್ಪಿ ತೋಱೆ (ವರ್ಧಮಾ. ೪-೪೫ ಪ) ; ಬೊಂಬುಳಿಯ ಪದ[ಪಾಠಾಂ. ಡೆ]ಡಕ್ಕೆ ಪಟಹಂಗಳಾವುಜ ಕರಡೆಗಳ ತಾಳ ಕಂಸಾಳರವದೊಳಗೆ ನಡೆದನಪ್ರತಿಮನಚಳಿತಸಿದ್ಧನು (ಸಿದ್ಧರಾ. ೬-೨೦). **ಪರಡಕ್ಕೆ** : ಪರಡಕ್ಕೆ[ಪಾಠಾಂ. ಕೆ]ಡೌಡೆ . . . ಕಂಸಾಳುಗಳ ನಿರವಧಿಧ್ವಾನಂ ಚತುರ್ದಶಭುವನಮನಾ ಭರದಿಂದಲಾವರಿಸೆ (ಕುಮುರಾ. ೧೯-೮). **ಪರಿಡಕ್ಕೆ** : ಕರಡೆಯ ಡಕ್ಕೆಯ ಪವಳದ ಪರಿಡಕ್ಕೆಯಮರ್ದ ದನಿಗಳುಂ ಭೋರ್ಗರೆಯಲ್ (ಧರ್ಮಾಮೃ. ೧೩-೧೯). [<ಪಟಹ+ಡಕ್ಕೆ]

ಪಡಢಕ್ಕೆ, ಪಡೆಢಕ್ಕೆ, ಪದಢಕ್ಕೆ (ನಾ). = ಪಡಡಕ್ಕೆ : ಶತ್ರುರಾಜರಿಂದ ಗಂಗಾಯಮುನಾ ಪಾಳಿಧ್ವಜ ಪಡಢಕ್ಕಾ ಮಹಾಶಬ್ದಚಿಹ್ನಗಳನ್ನೂ ಮಾಣಿಕ್ಯ ಮತಂಗಜಾದಿಗಳನ್ನೂ ಕಸಿದುಕೊಂಡನು (ಕರ್ಣಾಅ. ೮೬). **ಪಡೆಢಕ್ಕೆ** : [ಪಡೆ]ಢಕ್ಕಾ ಪಾಳಿಮಹಾಧ್ವಜ ನಿತ್ಯಶ್ರೀಯುಮೋಳ್ಪವರ್ಷ [ದೇ]ವಸ್ಕ ತಸ್ಕ ಮಹಾ[ಸಾಮ]ನ್ತಃ . . . ಶ್ರೀಮ[ತ್ಕುಪ್ಪೆ]ಯರಸ ಪ್ಪೂರಗೆಱೆ ನಾಡನಾಳುತಿರೆ (ಸೌಇಾ. XI-i, ೧೨-೮ ; 867). **ಪದಢಕ್ಕೆ** : ದಕಾರಕ್ಕೆ ಡತ್ವಂ . . . ಪದಢ[ಪಾಠಾಂ. ಡ]ಕ್ಕೆ = ಪಡಢಕ್ಕೆ (ಶಮದ. ಸ. ೨೮೧ ಪ್ರಯೋ). [<ಪಟಹ+ಢಕ್ಕೆ]

ಪಡಣ, ಹಡಣ (ನಾ). ೧. ಅನಿಷ್ಟ ; ಪೀಡೆ ; ಕೇಡು ; ದೌರ್ಭಾಗ್ಯ : ಮುನಿದೀಶಂ ತವೆ ಸುಟ್ಟು ಮುಂ ಕರುಣದಿಂದಿತ್ತಂ ಪುನರ್ಜನ್ಮಮುಂ ನಿನಗೆಂದಾ [ರ]ತಿ ಪಾಪಮುಂ ಪಡಣಮುಂ ಪೋಪಂತೆ ಕಾಮಂಗೆ ಮಜ್ಜನಕೆಂದೆತ್ತಿದ ಚಂದ್ರಕಾಂತಘಟದೊಳ್ ತಂದಟ್ಟುಯಿಂ ಪುಷ್ಪವಾಸನೆಗೆಂದಿಕ್ಕಿದ ನೀಳನೀರರುಹಮುಂ ಪೋಲ್ದತ್ತು ಕಟ್ಟಾಂದುವಾ (ಪಂಪಭಾ. ೪-೫೧). ೨. ಅನಿಷ್ಟವ್ಯಕ್ತಿ ; ಅಶುಭ ವ್ಯಕ್ತಿ : ಅವನನಪನೀತಿಭವನನನಿವೇಕದೆ ಪೋದ ಪಡಣಮುಂ ತಲೆವಿಡಿವಂತೆವೊಲಜಸಿ ಪೋಪುದಿದು ಮಿಟ್ಟುವನಜಸಿಯೆ ಪೋಪ ತೆಱನನಱಪುಗುಮಲ್ತೇ (ಪಾರ್ಶ್ವಭು. ೪-೪೩). **ಹಡಣ** : ೧. ಹಡಣಂ ಪೋದತ್ತು ಕುತ್ತಂ ಕಟಾಯದು ಶನಿ ಪಿಂಗಿತ್ತು (ಸೂಕ್ತಿಸು. ೮-೪೫೫). ೨. ಈಕೆ ಹುಟ್ಟುಗೆಟ್ಟ ಹುಟ್ಟಗೆಯಂತೆ ಹಡಣಂ (ಲೀಲಾವ. ೨-೧೧೬ ಪ) ; ಬತ್ತಲೆಯ

ಬಾಳ್ವಣಂಗಳು ಸುತ್ತ ಮುತ್ತಿರಲು ಕತ್ತಲಿಪ ಹಾಳೊಡಲ ಹಡಣಗಳು ಕುಳ್ಳಿರಲು . . . ನಡುವೆ ಮೆಱೆದಂ ಧರ್ಮಸೇನಪಂಡಿತಂ (ವಾಗೀರ. ದೇ. ೨೫೫-೨). [?./ಪ್ರಾ. ಪಡಣ./ಸಂ. ಪತನ]

ಪಡಣಿಗೆ, ಹಡಣಿಗೆ(ನಾ). ಅವಲಕ್ಷಣವಾದ ಹೆಂಗಸು; ಅಮಂಗಳೆ: ಬಂಜೆಯಪ್ಪುದುಂ ಬಡತನಮಪ್ಪುದುಂ ಪಡಣಿಗೆಯೆಂದು ಗಂಡನೊಲ್ಲದೆ ಬಿಸುಟ್ಟುದುಮಶುಭಿಯೆಂದು ಪೆಱಮರ್ಪುಟ್ಟಿದಿರ್ಪುದುಂ . . . ಎಲ್ಲಾ ಸ್ತ್ರೀಯರ್ಗಂ ಸಾಧಾರಣಂ (ಜಾಮಂಪು. ೩೦೨). **ಹಡಣಿಗೆ :** "ದುರ್ಭಗಾಭರಣಮಿವ—ಹಡಣಿಗೆಯ ತೊಡವಿನಂತೆ" (ನೀತಿವಾ. ೩೦). [<ಪಡಣ]

ಪಡತರ (ನಾ). ವಸ್ತುವಿನ ಲಾಭಕರವಾದ ಬೆಲೆ,—ಕೆಮ್ಮತ್ತು : ಖರೀದಿಗೆ ಬರದಿರುವ ಮಾಲಿನ ಪಡತರ ಅಂದರೆ ಗಿಟ್ಟುವದು ನೋಡಿ ಯಾವ ಧಾರಣೆಯಿಂದ ಬದಕು ಮಾರಬೇಕು ಇದು ತಿಳಿಯುವದಕ್ಕೆ ಅವರಿಗೆ ಬಹಳ ಕಠಿಣವಾಗುತ್ತದೆ (ಮುಂಬಪ್ರಾ. ೯ ಪ್ರಸ್ತಾವನೆ).

[←ಹಿಂ. ಪಡತ, ಪಡತಾಲ್ ; ಮರಾ. ಫಡತಾರ್, ಫಡತಾಳ್]

ಪಡತೆ (ನಾ). (?) : ಪಡತೆಯನಿಡು ಹೋಡಿಸಿ ಜಾಣ ಕೊಂಡಾಡಿ ಬೆಡಗಿ ನಂಚೆಯನಿದು ಗೆಲಬಲ್ಲ ಗಡಿದಾರನುಲಿದೊಳ್ಳಿದ ಬಗದರನೆಂದು ಮಡದಿ ಮಾಱುಂಬಳಲ್ಲಿ ಪಱಮೆಯ (ಸೊಬಸೋ. ೧೮-೨೯). [?]

ಪಡದೆ 'ಪರದೆ' ನೋ.

ಪಡನೆಲ (ನಾ). = ಪಡಜಮಿನು : ಹಿಂದುಳಿದ ದೇಶಗಳಲ್ಲಿ ಪಡನೆಲ—ಅಡವಿಯ ನೆಲವೇ ಹೆಚ್ಚು (ಮಾಪಾದ. ೧೩೮). [<ಪಡು₂ + ನೆಲ]

ಪಡಪ (ನಾ). ಎಲೆಅಡಿಕೆಯ ಚೀಲ ; ಸಂಚಿ: 'ಪಡಪವಳ' ಪರಾ. [<ಅಡಪ]

ಪಡಪಡ (ನಾ). ಕೋಪ, ಹೆದರಿಕೆ ಮುಂತಾದುವುಗಳನ್ನು ಸೂಚಿಸುವ ಒಂದು ಅನುಕರಣ ಶಬ್ದ : ಎರ್ದೆ ಪಡಪಡ ಪಾರ್ದಪುದೇಕೆ ಕೆಳದಿ ತೋಳುಗಳಂ ಪಿಡಿ ಮೃದುಹಸ್ತತಳದಿ (ಕಾದಂಪೂ. ೪೮೨) ; ಪಡಪಡ ಪಾರ್ವೆರ್ದೆ ತಡಬಡಿಸುವ ನುಡಿ ಕಡುಗಂಪವೆತ್ತಂಗ (ಶಿವಗೀ. ೧೭೧-೮೩೨). 'ಪಡಪಡವಾಯ್', 'ಪಡಪಡಿಸು' ಪರಾ.

ಪಡಪಡಪಾಯ್ 'ಪಡಪಡವಾಯ್' ನೋ.

ಪಡಪಡವಾಯ್, ಪಡಪಡಪಾಯ್ (ಕ್ರಿ). ಪಡಪಡ ಎಂದು ಹೊಡೆದುಕೊಳ್ಳು,— ತುಡಿದುಕೊಳ್ಳು : ಪಡಪಡವಾಯ್ವ ಮೆಲ್ಲೆರ್ದೆಗಳಂ ಕರಯುಗ್ಮದಿನೊತ್ತಿ . . . ಈಶನದೆಲ್ಲದನೆತ್ತವೋದನಾಪಡೆಯನಧೀಶನೆಂದು ಪಲವಾಡಿದುದಂದಚಿತಾಂಗನಾಜನಂ (ಅಜಿಪು. ೬-೧೨೧). **ಪಡಪಡಪಾಯ್ :** ಅಂತಾ ಬಾಲೆ . . . ಪುಲ್ಲೆಯಂತಿರೆರ್ದೆ ಪಡಪಡಪಾಯೆ . . . ಜೀವಂ ಜೀವಿತೇಶ್ವರನಱಿಯಲ್ ಪೋದಂತೆಯುಂ ಇಚ್ಚೆಯಱಿದು ಮುಚ್ಚೆವೋಗಿರ್ಪುದುಂ (ಲೀಲಾವ. ೧೦-೬೧ ಪ) ; ಪಡಪಡ[ಪಾಠಾಂ. ಪಡಪಡೆ]ಪಾಯ್ವ ಮೆಲ್ಲೆರ್ದೆಗೆ ಘರ್ಮಜಲಂ ಕೊನರ್ವಾನನಕ್ಕೆ . . . ಶೀಘ್ರಯಾನಮುದುತಾ ನೆವಮಾದೊಡಮಾಗಳೇಂ ಪಿಸುಣ್ಗೆಡೆದು ತೆರಳ್ದುದಾ ಹರಿಯನೀಕ್ಷಿಪನೀಱೆಯ ಸೋಲ್ತ ಭಾವಮುಂ (ಅನಂಪು. ೧೪-೨೬).

[ಪಡಪಡ + ಪಾಯ್₁]

ಪಡಪಡಿಸು (ಕ್ರಿ). ಕೋಪದಿಂದ ಕೆರಳು ; ಪ್ರಜ್ವಲಿಸು : ಪಡಪಡಿಪ ನಡುನಯನದ ಮಡುವಿಡುವ ಜಲಧಿಯುಂ ಕಡೆವ ಕಡೆಯೊಳ್ಮೂಡಿ ಘುಡುಘುಡಿಸಿ ಪಡೆಯ ಪಡಲಿಡೆ ಕೆಡಪುವುದ ತುಡುಕಿ ಪಿಡಿದೊಡನೆ ಪೊಸೆದುಕೊರಳೆಡೆ ತೊಡೆದ ಹಂಪೆಯ ಮೃಡಂ ಬಿಡದೆ ಸಲಹುಗೆಮ್ಮ (ಹಡಕಾ. ೧-೨). [ಪಡಪಡ + -ಇಸು₃]

ಪಡಪವಳ (ನಾ). ತನ್ನ ಒಡೆಯನ ಎಲೆಯಡಕೆಯ ಚೀಲವನ್ನು ಹಿಡಿಯುವವನು ; ಅಡಪವಳ ; ಸಂಚಿಯವನು: ಅನುಪಮರಾಯ ಮುರಾರಿಯ ಮನದಂಗನೆನಿಪ್ಪ ಸಚಿವನಂ ನೆಗಳ್ದ ಪಸಾಯ್ತನ[ನೊ]ಸೆದು ಪಡಪವಳರೊಡೆಯನನೊಲವಿಂ ಬಂಮ್ಮಿದೇವನಂ ಧರೆ ಪೊಗಳ್ದುಂ (ಕಇಅ. ೭೫-೧೨-೩೩ ; 1170). 'ಅಡಪವಳೆ' ಪರಾ. [ಪಡಪ+-ವಳ]

ಪಡಪಾಳಿ₁, ಪಡೆಪಾಳಿ, ಹಡಹಾಳಿ (ನಾ). ೧. ಗಳಿಸುವವನು ; ಸಂಪಾದಿಸುವವನು ; ಗಳಿಸಾಳಿ : ಓದಾಳಿ, ಜೂದಾಳಿ, ಮಾತಾಳಿ, ಸಿಗ್ಗಾಳಿ, ಏಱ್ಱಾಳಿ, ಪಡಪಾಳಿ (ಭಾಷಾಭೂ. ೧೮೩ ಉದಾ). ೨. ಜಾರ ; ವಿಟ : ಅಮರೇಜ್ಯಾಂಶದೊಳೆರೆ ಚಂದ್ರಮನರ್ಕಾದಿಗಳೆ ವೀಕ್ಷಿಪಂದಧಿಕ ಬಲಂ ಸಮರಕರಂ ಪ್ರಹಸನಶೀಲ ಮಂತ್ರಿ ಪಡ[ಪಾಠಾಂ. ದ]ಪಾಳಿಯಧಿಕ ಕಾಮಿಯೆನಿಕ್ಕುಂ (ಜಾತಕಿ. ೨೦-೨೦). ೩. ಅದೃಷ್ಟಶಾಲಿ ; ಭಾಗ್ಯವಂತ : ಮಾಲಾಳಿಯುಮೋಡಾಳಿಯುಮೇಱಾಳಿಯುಮಪ್ಪನಾಗಿ ಪಡ[ಪಾಠಾಂ. ಡೆ]ಪಾಳಿಯೆ ಕೇಳ್ ನೀಱಂ ಜೂದಾಳಿ ಕರಂ ನೀಱಂ ಮಾತಾಳಿ ಕರೆಯೆ ಸಿಗ್ಗಾಳಿಯವಳ್ (ಶಮದ. ೨೦೩ ಪ್ರಯೋ ; ಕಾವ್ಯಾವ. ೩೫೩ ನೋ). **ಪಡೆಪಾಳಿ:** ೧. ಲಾಭಸಂಸ್ಥಾನದೊಳ್ ವಿದಿತಾತ್ಮಂ ಪಡೆಪಾಳಿ ರಿಃಪದೊಳಸತ್ಯಂ ವಾಮನೇತ್ರಾಂಧಕಂ (ಜಾತಕಿ. ೧೮-೮). ೩. 'ಪಡಪಾಳಿ' ಉಲ್ಲೇಖದ 'ಶಮದ.' ಪ್ರಯೋಗದ ಪಾಠಾಂತರವನ್ನು ನೋಡಿ. 'ಪಡೆಪಾಳಿತನ' ಪರಾ. **ಹಡಹಾಳಿ :** ೧. ಹಡಹಾಳಿ ಸತ್ತ ಮನೆಯಂತೆ ಪ್ರಭು ಕೆಟ್ಟ ನಾಡಂತೆ ಸಂಸಾರದ ಶರೀರದ ಭೋಗದ ಮೇಲೆ ಬೇಸಱುಂ (ಧರ್ಮಾಮೃ. ೫-೧೨೫) ; ಹಡೆದ ಹಲಬರು ಮಕ್ಕಳೊಳಗೊಬ್ಬನೆಂತಕ್ಕೆ ಹಡಹಾಳಿಯಹುದರಿದು (ಸೋಮಚಿ. ೧-೯೭).

[ಪಡಪು₁ + -ಆಳಿ₃]

ಪಡಪಾಳಿ₂, ಹಡಪಾಳಿ (ನಾ). = ಪಡಪವಳ : "ಅಡಪವಳಂ ಪ[ಪಾಠಾಂ. ಪ]ಡಪಾಳಿ" (ಜತುನಿ. ೬೦). 'ಅಡಪಾಳಿ' ಪರಾ. **ಹಡಪಾಳಿ :** ಕೇಳಿ ಬಂದಾರ ಜಱೆದಪೆಯೆನಲು ನಿನ್ನ ಹಡಪಾಳಿಯನದೇಕೆನ್ನಱಿದಱಿದನಾಮಿಕಂಗಾಳಾದಪಾಯೆಂದು ನುಡಿದನಿಂತೆನಬಹುದೆ ಕೀಳುಮೇಲಂ ನೋಡದೆ (ಹಡಕಾ. ೧೧-೨೦). [ಪಡಪ+-ಆಳಿ₃]

ಪಡಪು₁, ಪಡಂಪು, ಪಡೆಪು, ಹಡಹು₁ (ನಾ). ೧. ಪಡೆದುದು ; ಗಳಿಕೆ ; ಸಂಪಾದನೆ ; ಪ್ರಾಪ್ತಿ : ಅನುವಿಪ ತಾಯ ಬಾರಿಸುವ ತಂದೆಯ ಕಾಯ್ದುನೊಳಕ್ಕೆಗುಟ್ಟುವಕ್ಕನ ಪಡಪೆತ್ತಿ ಬಯ್ಯ ಕಿಱುದಂಗೆಯ . . . ತೀನಿಗೆ ಮೆಯ್ಯನೊಡ್ಡಿ (ಶಾಂತಿಪು. ೮-೧೦೫) ; ಗಂಡರ ಚಿತ್ತಮಂ ಪಡೆದೊಡಲ್ಲದೆ ಕೇಳ್ಪಡಪಿಲ್ಲ ಸೂಳೆಯೊಳ್ ಪೆಂಡಿರೊಳಲ್ಲದಿಲ್ಲ ಸುಖಮೆಲ್ಲಿಯುಂ (ಲೀಲಾವ. ೨-೯೯) ; ಗಟಪರೆಯೋಜರಾಗಿ ಆರೊರ್ವರೇನೊಂದಂ ತಂತಮ್ಮ ಪಡಪು ಕಾರಣಮಾಗಿ . . . ಇವರೆಂತವರೆಂತೆಂದವರಾಡಿದುದನಾಡುವುದುಂ ಇದು ಪುಸಿ ನನ್ನ ಗುಣದೋಷಮೆಂಬುದನಱಿಯೆಂದುದು (ಪಸಾರ. ೪೫೯) ; ಇತ್ತ ಭಂಗದ ಪಡಪಿನೊಳು ರಿಪುಮೊತ್ತ ತಿರುಗಿತು ಜವಗೆ ಬಾಣಸವಿತ್ತು ಫಲುಗುಣ ಮತ್ಸ್ಯನಾತ್ಮಜಸಹಿತ ನಡೆತಂದ (ಕುಮ್ಯಾವಿ. ೬೦೧. ೯-೯೩ ಅಡಿಪದ್ಯ). ೨. ಲಾಭ ; ಪ್ರಯೋಜನ; ಫಲ : ಸಿರಿದಪ್ಪೀ ದ್ರವ್ಯಮಂ ಸಾರ್ಚಿ ಮೇದಿನಿಕಾಂತಾಪತಿಯಲ್ಲಿ ಮೆಚ್ಚುಗೊಳುವೆಂ ನಿಷ್ಕಾರಣಂ ಕೊಟ್ಟು ಕೆಮ್ಮನೆ ವಿಪ್ರೋನ್ನತನಲ್ಲಿ ಬರ್ಪ ಪಡಪೇನೆಂದಾ ದುರಾತ್ಮಂ ಮಹೀಶನನಾನಂದದಿನೆಯ್ದಿ ಪೇಟ್ಟೊಡೆ (ಧರ್ಮಾಮೃ. ೧೨-೧೮೬) ; ಕಂದ ನೀನಿಲ್ಲದೆ ಪೇಟ್ಟೇನಪ್ಪುದೀ ರಾಜ್ಯದ [ಪಡಪೆ] [ಪಾಠಾಂ.ಪಡಮೆ]ನಗೆ (ವರ್ಧಮಾ. ೫-೧೪) ; ವಿನಯನಿಧಿ ಮಾಲಿಯಕ್ಕಂ ಅನುಪಮಗುಣವಂತೆ ಬಾಮಿನೆಟ್ಟಗಳಂ ತಾಂ ಜಿನಭಕ್ತಿಯಿಂದೆ ಪಡೆದಳು ಜಿನಭಕ್ತರ್ಪ್ಪಡೆವ ಪಡಪು ಪೊಗಳಲಳುಂಬಂ (ಎಕ. XII, ಗುಬ್ಬಿ. ೫-೮; ಸು. 1200?) ; ನಿನಗೆ ಪಡಪಿಲ್ಲದೆಯೆ, ಬಱಿದೆನ್ನನೇಕಿಂತು ನೋಯಿಪಯ್ ? (ಅಂತಿಗೊ. ೨೫-೫೨೬). ೩. ಹೆಚ್ಚಳ; ಆಧಿಕ್ಯ; ಬಹುಳತೆ : ದಿನಪನುದಯಾಚಲದ ಚಾವಡಿವನೆಗೆ ಬರೆ ಬಲವೆರಡು ಗಳಗರ್ಜನದಿ ಬಂದೊಡ್ಡಿದುವು ಕಳನೊಳು ಖತಿಯ ಪಡಪಿನಲಿ (ಕುಮ್ಯಾಭೀ. ೬-೮) ;

ನೀನು ಮನ ಬಂದಂತೆ ಮಾಡಿನಲಾ ನುಡಿಯ ಕೇಳುತ್ತ ಮೂಲಕ ದಾನವನು ತನ್ನೊಳಗೆ ಯೋಚಿಸಿ ಖತಿಯ ಪಡಪಿನಲಿ (ಮೂಲರಾ. ೧-೧೧). 'ಪಡಪುಗುಂಡು', 'ಪಡಪುದೋಟಿ' ಪರಾ. ೪. ಐಶ್ವರ್ಯ; ಸಂಪತ್ತು; ಧನ: ಅಣಿಲ ಪಡಪು ಬಸುರಿಯ ಪಣ್ಣಂಬಂತೆ ಸುದಂತಿ ಯನೀಗೆಯ್ದುಂ ಬಿಡಲಾಜಿ ನೀಂ ಬೆಳಬೆಂಜನನಾಗಿ ಭೋಗಿಸುವೆನೆಂದು ಕೊಳ್ಳಟಗುದಿವೈ (ಧರ್ಮಾಮೃ. ೭-೨೨೯); ಒಡಲೊಳ್ಳಿತೆ ಚರಕಾಲವಿರದು ಆಯು ತಡವೊಳ್ಳಿತೆ ಸ್ಥಿರವಿಲ್ಲ ಪಡಪೊಳ್ಳಿತೆ ರಾಜ್ಯವಧಿಕನ ಸೊಮ್ಮದು ಬಿಡದೆಂತು ಜೀವಿಪೆ (ಅನಂಜ. ೪-೩೦). ೫. ಹಿರಿಮೆ; ಹೆಗ್ಗಳಿಕೆ; ಅಗ್ಗಳಿಕೆ: ಆತಂ . . . ಬಿರುದರ್ಗರಿದಿನಿಸುವ ಬಾಧೆಯಂ ಮಾಡಿಸುವಂ ವೀರರ ಪಡಪಂ ಪಾಟಿಸುವಂ (ಧರ್ಮಾಮೃ. ೨-೬೭); ಚಾಮರದ ಧವಳ ಚ್ಛತ್ರ ಪಟ ಪಳಹರದ ಪಡಪಿನಲೌಕಿ ನಡೆದುದು ಮುಂಬೆ ಪಾಯದಳ (ಕುಸ್ಯಾಕ.೧೪-೩೩); ಲೋಕಂಗಳಂ ಪಡೆದೆನೆಂಬಗ್ಗಳಿಕೆ ನಮ್ಮೊಡನೆ ಸಲ್ಲದಾ ಪಡಪನುಳಿದೆಚ್ಚಜ್ಞಾಕೆಯಿಂ ಕಾದು (ಚಿಬಪು.೪೯-೨೩). ೬. ಉತ್ಸಾಹ; ಸಡಗರ; ಸಂಭ್ರಮ: ಮಾರ್ಮಗಿಲಾಡದಿಪ್ಪುದು ಬೊಜಂಗರ ಸಂದಣಿ ಪಟ್ಟತಟ್ಟಿಕಾಕರ್ಮದ ರತ್ನಭೂಷಣದ ಕಾಂತಿ ತಳರ್ತಪುದಿಂತು ಮೂಲನೀ ಪೆರ್ಮಗೆ ನೋಂಕಳೀ ಪರೆಯವಿಸಾ ಪಡಪೀ ಸೊಬಗೀ ವಿಳಾ ಸಮೇಂ ಕಾರ್ಮುಟಿಯೊಳ್ಬಸಂತಸವಳಂಗಳದೊಳ್ನೆಲೆಗೊಂಡುದಕ್ಕುಮೇಂ (ಆನಂಪು.೪-೧೯); ಮುಳಿಸಿನ ಬೆಳಸುವೆಜಗಿನ ವಿಪಂಚಿ ಪಡಪಿನ ಪಂಜರಂ . . . ಕುವರಿಯುಪರಿಯೆನಿಪುದಂಗಜನ ಘಾರಾಘಾರಿ ರಾಜಿಸುವ ಸೂಳೆ ಗೇರಿ (ಪದ್ಮರಾ. ೮-೪೬); ಒಡನೆ ತೆರಳಿತು ಭೀಷ್ಮ ಗುರು ಕೃಪ . . . ಪುಶ್ಯಾಸನರು ಮೊದಲಾದ ಪಡೆ ಸಹಿತ ಕರಿರಥತುರಂಗದ ಪಡಪಿನತಿಸನ್ನಾಹ ದಲಿ (ಕೋಗಪು. ೧೬-೪೨). 'ಪಡಪುಗಾರ್ತಿ' ಪರಾ. ೭. ಧೈರ್ಯ; ದಿಟ್ಟತನ: 'ಪಡಪುಗೆಡು' ಪರಾ. ೮. ಶೋಭೆ; ಕಾಂತಿ: ಅಡರುವಜ್ಞಾನತಮಮಂ ತೆನರಿ . . . ಸುಜ್ಞಾನಚಕ್ಷುವೆನಿಪಾ ಪಡಪಿನ ಚಕೋರಿಗಳಿಗೊಳ್ಳುಣಿಸನೀವುತ್ತ ಮೃಡನಪ್ಪ ಶಾಂತಮಲ್ಲೇಶ್ವರನ ಶಾಂತಿ ಮಯವೆಡದಕ್ಷಿಯನ್ನ ಚಿತ್ಕಲೆಯ ಚಂದ್ರಮನಾಗಿ ಬಿಡದಮರ್ದುಗಜಿ ಯಲನಿಶಂ (ವೀಕೈಪು. ೭-೧೧೦-೧). **ಪಡಂಪು**: ೪. ಸುರತಕಲೆಗಳ ಹೆಂಪು ಕಂದರ್ಪಕ ಪಡಂಪು ಪುರಿಯೇಜಿ ದಶದಿಕೆಯ ಪೊಂಪು ಹೊನ್ನಸ ಹೊಂಪು ಮೆಜ್ಜಿದುದು (ನಂದಿಮಾ. ೧೯-೧೧೦). **ಪಡೆಪು**: ೧. ಕಡು ತಪದಿಂದೆ ನಿನ್ನ ಪಡೆಪಾವುದೊ ಗಾವಿಲ ಸಗ್ಗಮುಲ್ಲೆ (ಪಂಸಭಾ. ೭-೧೩); ದರ್ಶನದೊಳಂ ದರ್ಶನದಂಟಿಂಗದೊಳಂ ಹೀನನಾಗಿ ಚಕ್ರವರ್ತಿಪದವಿ ಯುಮುಂ ದೇವೇಂದ್ರಪದವಿಯುಮುಂ ಮಹರ್ಧಿಕಪದವಿಯುಮುಂ ಪಡೆವ ಪಡೆಪಂ ತಿದಿಸದೆ (ಧರ್ಮಾಮೃ. ೯-೩); ಈಯಬಾಯೊಡಲಂ ಕಡು ಮೋಹದೆ ಮುಚ್ಚಿದ್ದೊಡೆ ಪಡೆವೈ ನೀಂ ಮುಚ್ಚುನೆತ್ತ ಕಳ್ಳನ ಪಡೆಪಂ [ಪಾಠಾಂ. ಕಡಪಂ, ಪಡಪುಂ] (ಜೀವಸಂ. ೧೨೫-೭); ಆ ಪಡೆಪುಮಂ ಕಂದು ಬಿಗುರ್ತುಂ ಕೂರ್ತಂತೊಂದೆಡೆಗೊಯ್ದು ಸ್ಫಟಶಿಲಾಗ್ರಮನೇಜಿ ದೊಡಪೂರ್ವಲಾಭಮೆನೆ (ಬಂಹಪು. ೮-೪೦ ವ); ಅಲ್ಲೆಯಪಮಾನಗಳ್ ನಿನ್ನ ಪಡೆಪು (ಬದ್ಧಪ್ರ. ೨೫-೫೭೭); ಗನ್ನಗತಕದಿನಾಳಿಯಿಂದೊಡ ಲ್ವೊರೆದಿಂತು ಜೀನಿಪುದು ಪಡೆಪಾದುದೆನಗೆ (ಸಂಸಪ. ೨೪-೧೩). ೪. ಆಡಿಗಡಿಗೆ ನಡೆವ ಪೆರ್ಮಡಗುಗಳ ಬಿಡಗುಗಳ . . . ತಡಿತಡಿಗಡರ್ವ ಜಲದೊತ್ತುಗಳ ಮುತ್ತುಗಳ ಪಡೆ[ಪಾಠಾಂ. ಡ]ಪಿನಿಂ ಕಡಲೆಸೆದುದು (ಚಿಬಪು. ೨-೪). ೫. ಡಾಳಿಸುವ ವಿವಿಧ ಚಮರಾಳಿಯಿಂ ಪಾಳಿಯಿಂ . . . ಘೀಳಿಡುವ ಬಹುವಿಧದ ವಾದ್ಯದಿಂ ಜೋದ್ಯದಿಂ ಪಡೆ ಪಡಪಿನಿಂ ನಡೆದುದು (ಚಿಬಪು. ೨೬-೧೧). ೯. ಭಾಗ್ಯ; ಅದೃಷ್ಟ: 'ಪಡೆಪಾಳ್' ಪರಾ. **ಪಡಹು**$_1$: ೨. ಮನೆಯನೆಸ್ಪಿಸಿ ಕೊಟ್ಟ ಪಂಗೆ ಹಿಂದೆಸೆಯು ಹಂಗೇಕೆ . . . ಗುಡಿಯ ಕಟ್ಟಿದ ಮತ್ತೆ ಪಡಹಿಲ್ಲದೆ ಅವರಡಿಯನಜಸ ಲೇಕೆ (ಸರ್ವಜ್ಞ. ೩೭-೧೪೩). ೪. ಏರಿದೆಮಗೆ ಕಣ್ಣಾಗಿ ಗತಿಯಾಗಿ ವೊಬ್ಬುಳ್ಳ ತರುಣ ನಿನ್ನನ್ನಗಲ್ದಿರಲಾಜಿವಾವಗಲುದಿರು ಪಡಹು [ಪಾಠಾಂ. ವು] ಬೇಡ (ಸೋಮಚ. ೧-೪೩). ೧೦. ಸೂಳೆಗಾರಿಕೆಯಿಂದ ಬರುವ ಗಳಿಕೆ; ಒತ್ತೆಹಣ: ಒರ್ವಳ್ . . . ಕಾಯ್ದಾಜಿದ ಪಾಲವೊಲ್ಸನಿ ಯನಿನ್ನುಪಭೋಗಿಸಲಾರ್ಗೆ ನೂಡಳೋ ಎಂದು ತನ್ನ ಮಗಳ ಮೇಲಪ್ಪ ಪಡಹಿಂಗೆ ಮುಯ್ಯಾಂತಳ್ (ಲೀಲಾವ. ೨-೯೦ ವ); ಪಡಿಗಳಂ ಕಣಜ ದೊಳಳಿಯಬೇಕೆಮ್ಮ ಮನಹವನು ಕೆಡಿಸಿ ಹೋಗಲು ಬಾರದಿಂತೆರಡೆ ಯೊಳೋಲಗವೆಂತು ನಿನಗಳವಡುವುದಿದು ಬಾಣತಿಯ ಸೂಳೆಯ ಪಡಪಿ ಪ್ರಂದದಲಿ (ಬಸಪು. ೫೩-೧೨); ಅಲಸ್ಯಂ ಗಡ ಹುಸಿ ಗಡ ಪಡಹಿನ ಮೇಲಣ ಚತ್ತಂ ಗಡಯೆನುತೊರ್ವಳ್ ಬಾಲಹರಿಣಲೋಚನೆ ನುಡಿದಳ್ (ಜಯಕಾ, ೧೪-೫೩); ಪೆಡಮೆಟ್ಟಿ ನಿಂದೆ ತಡೆದು ಬಂದೆ ಪೆಸರ ಪಲ್ಲಡಿಸಿ ಕರೆದ ನೀನೆಂದು ಪಡಹಿನಾಸೆಗೆ ತಪ್ಪ ಹೊಜ್ಜಿಸಿ ವಿಟರ ಜಡಿನುಡಿದಳವಳು ಬೆಲೆವೆಣ್ಣ (ಕುರಾಸಾಂ. ೨೮-೭೬).

ಪಡಪಾಗು = ೧. ಲಾಭವಾಗು; ಪ್ರಯೋಜನವಾಗು: ಜಾಣು ಜಗುಳಿತು ಹೊಯ್ಲ ಮೊನೆ ಮುಂಗಾಣಿಕೆಗೆ ಲಟಕಟಿಸಿದುದು ಬರಿ ರೇಣು ಜನನದ ಜಾಡ್ಯವೇ ಪಡಪಾಯ್ತು ಪಯಗತಿಗೆ (ಕುಮ್ಯಾಗ. ೬-೩೦). ೨. ಕಾಂತಿಯುಕ್ತವಾಗು; ಅಂದವಾಗು: ಸಂದಣಿಪ ಛತ್ರ ಧ್ವಜಾಳಿಯಿಂ ಧೂಳಿಯಿಂ ಕುಂದದಿನವದ್ಯುತರಸಂಗಳಿಂ ಕಂಗಳಂ ನೋಡೆ ಪಡೆ ಪಡಪಾಪುದು (ಚಿಬಪು. ೪೫-೨೩).

[ಪಡೆ$_1$ + –ಪು$_2$ · /ತಮಿ. ಪಟ್ಟಿಪ್ಪು; ಮಲ. ಪಡಪ್ಪು; ತೆಲು. ಪಡಪು]

ಪಡಪು$_2$ (ನಾ). ತೋಟ: ಆದರಲ್ಲಿ . . . ಕಬ್ಬಿನ ಹಿತ್ತಿಲುಗಳು ಮತ್ತು ತೆಂಗಿನ ಪಡಪುಗಳು ಸೊಗಸಾಗಿ ಕಂಗೊಳಿಸುತ್ತಿದ್ದುವು (ಈಕಥೆ.೧).

[←ತಮಿ. ಪಟಪ್ಪು, ಪಟಪ್ಪಿ]

ಪಡಪುಗಾರ್ತಿ, ಪಡೆಪುಗಾರ್ತಿ (ನಾ). ೧. ಹಣವನ್ನು ಸಂಪಾದಿ ಸುವ ಹೆಣ್ಣು; ಗಳಿಸುವವಳು: "ಪಡಪುಗಾರ್ತಿಯೆಂದು ಗಟಿಸಾಳಿ ವೆಣ್ಣ" (ಕಶಸಾ. ೬೨-೩೮೦); "ಪಡಪುಗಾರ್ತಿಯೆನೆ ಗಟಿಸಾಳಿವೆಣ್ಣಕ್ಕು" (ಕಬ್ಬಕ್ಕ. ೨೮). ೨. ಸಂಭ್ರಮವುಳ್ಳವಳು; ಉತ್ಸಾಹದಿಂದ ಕೂಡಿದವಳು: "ಪಡಪುಗಾರ್ತಿಯುಮೆನುತ್ತಿಂದೊಡನೆಯೆ ತಾಂ ಹೊನಹುಗಾರ್ತಿಯೆನೆ . . . ಸಂರಂಭವತಿಗೆ ನಾಮವಿದೆಂಬರ್" (ಕವಿಕಂ. ೧೩೯). ೩. ಶೀಘ್ರಯುಳ್ಳವಳು; ಗತ್ತಿನಿಂದ ಕೂಡಿದವಳು: "ಅಧಿಕ ಶೀಘ್ರಯುಳ್ಳಾಕೆಯೊಳ್ ಪಡಪುಗಾರ್ತಿಯೆನಿಕ್ಕು" (ಕಶರ. ೫೯).

ಪಡೆಪುಗಾರ್ತಿ: ೧. "ಗಟಿಸಾಳಿವೆಣ್ಣೆನಲು ಪಡೆ[ಪಾಠಾಂ. ಡ]ಪುಗಾರ್ತಿ ಯೆನಿಕ್ಕು" (ಶಬ್ದಮಂ. ೬೫).

[ಪಡಪು$_1$ + –ಗಾಜ(<–ಕಾಜ) + –ತಿ$_1$(<–ಇತ್ತಿ)]

ಪಡಪುಗುಂದು (ಕ್ರಿ). ಆಧಿಕ್ಯವಿಲ್ಲದಾಗು; ಕುಗ್ಗು: ವರತಪದ ಪೆಂಪಿಂಗೆ ಧರಣಿ ಕಂಪಿಸೆ ಜಲಧಿ ಕರಮೆ ಕದಡಲ್ . . . ಸುರುಚಿರ ವಡವನ್ನಿ ವೆಱೆ ಪಡಪುಗುಂದಲ್ (ಆರಾಜ. ೫-೨-೨೨).

[ಪಡಪು$_1$ + ಕುಂದು$_1$]

ಪಡಪುಗೆಡು, ಪಡೆಪುಗಿಡು (ಕ್ರಿ). ೧. ಗಳಿಕೆಯು ತಪ್ಪು; ಲಾಭ ವಿಲ್ಲದಾಗು. ೨. ಧೈರ್ಯಗೆಡು; ದಿಕ್ಕು ತೋಚದಂತಾಗು; ಕಂಗೆಡು: ಪಡೆ ಪಡಪುಗೆಟ್ಟು ದೆಸೆದೆಸೆಗೋಡುತಿರ್ಪುದಂ ಪಡೆಪಡೆದು ಕಡುಗಲಿಗಳಡಗೆದಡಹುತಿರ್ಪುದಂ . . . ಫಲುಗುಣಂ ನೋಡಿ ಖತಿಯಿಂದೆ ಘಡುಘಳಿಸಿ ಕಡಿಕಡಿಯಾದನು (ಜೈಮಿಭಾ. ೨೨-೪೪). **ಪಡೆಪುಗಿಡುಪು**: ೧. ಬಡಿಯೊಳ್ ನಿಜತನಯನ ತಲೆಯೊಡೆವಿನೆಗಂ ಬಡಿದ ಕಾರಣಂ ಕೊಂಡುಯ್ದರ್ ಪಡೆಪುಗಿಡುವಿನೆಗನೆಂದಾ ಕಡುಲೋಭಂ ತನ್ನ ಕಾಲ್ಕಳಂ ಪಿಡಿದುಡಿಪಂ (ಅದಿಪು. ೫-೨೦). [ಪಡಪು$_1$ + ಕೆಡು$_1$]

ಪಡಪುದೋಱು (ಕ್ರಿ). ಹೆಚ್ಚಳವನ್ನು ತೋರು; ಅತಿಶಯವಾಗಿರು: ರುಂಡಮಾಲೆಗಳಿಂದೆ ಪಡಪುದೋಱುವ ನೀಲಕಂಠಲಿಂಗಂ ಪೊರೆಗೆ ಪೊಡವಿಗಡಣಮನನೆಯರಂ (ಆದಿಚ. ೩-೧೬-೧); ನಿಡಿದು ಮುವ್ವತ್ತು ಯೋಜನವನಿತು ಯೋಜನವೆ ಗಡಿ ಹರಹಿಗುಚ್ಛೈದಪೊಂದು ಯೋಜನದಿಂತು ಪಡಪುದೋಱುವ ಶ್ರೀಗಿರಿಯೊಳು . . . ಭೃಸುರೆ ಯೊಡನೆ ಮಲ್ಲೇಶನರ್ಪಂ (ರಾಭಚ. ೧೩-೪೩). [ಪಡಪು$_1$+ತೋಱು]

ಪಡಪುಟಿ (ಕ್ರಿ). ಗಳಿಕೆ ಇಲ್ಲದಾಗು; ಸಂಪಾದನೆಯನ್ನು ಕಳೆದುಕೊಳ್ಳು: ನುಡಿ ನುಡಿಯೆಂ ಜಲಂ ಜಲಮೆ ಬೇಟ್ಪುದೆ ಬೇಟ್ಪುದದೇಕದಂತೆ ಱ ಪಡಪುಟಿದೆಲ್ಲರಂ ನಗಿಸಿಕೊಂಡಪೆ (ಸೂಕ್ತಿಸು. ೮-೪೪೩).

[ಪಡಪು$_1$+ಉಟು$_1$]

ಪಡಪೆ (ನಾ). [ಅಶ್ವ] (?): ಹೀನಧ್ವನಿಯುಂ ಪ್ರೌಢಸ್ಥಾನ ವಿಳಿತ್ರಯನುಮಳಿಸನುಂ ಪಡಪೆಯುಂ [ಪಾಶಾಂ. ಪಡಪೆಯುಂ, ಪೇಡಿಯುಮಪ್ಪಾ]ಮತ್ಕಾನತಸಿರನುಂ ಲಂಡಸ್ಥಾನಾವರ್ತನುಮದಾಜಾವರ್ದೊಳಬುಗುಂ (ಅಶ್ವಶಾ. ೬-೭). [?]

ಪಡಪೋಶಿ 'ಪಡಪೋಸಿ' ನೋ.

ಪಡಪೋಷಿ 'ಪಡಪೋಸಿ' ನೋ.

ಪಡಪೋಸಿ, ಪಡಪೋಶಿ, ಪಡಪೋಷಿ, ಫಡಪೋಶಿ, ಫಡಪೋಸಿ (ಗು). ೧. ಕೆಲಸಕ್ಕೆ ಬಾರದ; ನಾಡಾಡಿಯಾದ; ತೀರ ಸಾಮಾನ್ಯವಾದ: ಕೋರಾಪಟ್ ಆಗೋದು ಯಾವ ಮಹಾಕಷ್ಟ ಅಂತ . . . ಪಡಪೋಸಿ ಪೆ ಲ್ಲಾನ್ನಿಗಾದ್ರೆ ಅದು ಕಷ್ಟ (ಭೀಮಕಾ.೨೦೭); ತೇಜಪ್ಪನದು 'ಪಡಪೋಸಿ' ವೆಲ್ಲ, ಬೆಳಿಗ್ಗೆ ಎದ್ದರೆ ಸಂಜೆಯವರೆಗೂ ದುಡಿಯುವನು (ನಿಸದು. ೨೦). (ನಾ). ೨. ಎಚ್ಚರಿಕೆಯಿಲ್ಲದಿರುವಿಕೆ; ಅಲಕ್ಷ್ಯ; ಅಜಾಗರೂಕತೆ: ಕೆಲಸ ಹಜ್ಜು ಮಾಡಬೇಕು ಮುತ್ತಮ್ಮ. ಪಡಪೋಸಿ ಮಾಡಿದರೆ ಆಗಾಕಿಲ್ಲ (ಶಾಸಂ. ೧೫೭); ಯಾರ ಹತ್ರವೊ ನಿನ್ನ ಈ ಪಡಪೋಸಿ (ನುಲೆಮು. ೩೯೩). **ಪಡಪೋಶಿ**: ೧. ಏನು ನನ್ನನ್ನು ಪಡಪೋಶಿಜನ ಎಂದು ತಿಳಿದಿದ್ದಾರೆಯೇ ಈ ಹೆಂಗಸರು (ನಡದಾ. II, ೧೨೨೮);ನಮ್ಮ ಸಂಕಪ್ಪಗ್ರಾಡರು ತೀರ ಪಡಪೋಶಿಜನ ಅಲ್ಲವೇ? (ಮುಗಿಯು. ೧೩). **ಪಡಪೋಷಿ**: ೩. ಬೆಲೆಯಿಲ್ಲದುದು; ಕೀಳು; ಕಳಪೆ: ಹಾಲಾಡಿಮೇಳದ ಆಟ ಅಪ್ಪೇನೂ ಪಡಪೋಷಿಯಲ್ಲ (ಸ್ವಪ್ನಹೊ. ೪೦). ೪. ಬೆಲೆಯಿಲ್ಲದ ವ್ಯಕ್ತಿ; ಕೀಳು ವ್ಯಕ್ತಿ: ನಿಮ್ಮನ್ನು 'ಬನ್ನಿ' ಎನ್ನುವುದು ಮನೆಯಲ್ಲಿ ಕಾಯಿಲೆಯಿದ್ದಾಗ ಮಾತ್ರ ಎಂದು ತಿಳಿದಿದ್ದೀರಾ? ಅಷ್ಟು ಪಡಪೋಷಿಯೇ ನಾನು? (ಜಾರುದಾ. ೨೧೪). **ಫಡಪೋಶಿ**: ೨. 'ಫಡಪೋಶಿತನ' ಪರಾ. **ಫಡಪೋಷಿ**: ೧. ಅಪ್ಪರಲ್ಲಿ ಲಕ್ಷಿಪತಯ್ಯ ಫಡಪೋಷಿ ಬಾತ್ಮಿದಾರನೆಂದು ತಿಳಿದು ನಿರಾಳರಿಸಲ್ಪಟ್ಟಿದ್ದ (ಕಲಸಿ. ೧೬೯). ೫. ಬುಟೊಳ; ಸುಳ್ಳ; ಮಾತುಗಂಟಿ" (ಜಾನಕೋ. ೧೪). [←ತುಳು. ಪಡಪೋಸ್, ಪಡಪೋಸು, ಪಡ್ಪೊಸಿ, ಫಡ್ಪೋಸ್, ಫಡ್ಪೋಸಿ]

ಪಡಬೀಳು 'ಪಡುಬೀಳು' ನೋ.

ಪಡಭೂಮಿ 'ಪಡುಭೂಮಿ' ನೋ.

ಪಡಮ (ನಾ). ೧. ಚೀಲ, ಗುಡಾರ ಮೊದಲಾದುವುಗಳಿಗೆ ಉಪಯೋಗಿಸುವ ಒಂದು ಬಗೆಯ ದಪ್ಪವಾದ ಒರಟುಬಟ್ಟೆ: ಆ ಪಟಗಳನ್ನು ಕಾರವಿಯಿಂದಾಗಲಿ ಪಡಮದಿಂದಾಗಲಿ ಮಾಡಿರುತ್ತಾರೆ (ಮುಂಬಯಿ. ೩-೧೧೩). ೨. ಗೋಣಿ; ತಟ್ಟು: ಮನುಷ್ಯನು ಪಡಮದ ಮೇಲೆ ಮಲಿಕೊಳ್ಳುವನು (ಕಭಾಗ. ೫೭).

[←ಹಿಂ. ಮರಾ. ಪಡಮ]

ಪಡಮೂಲೆ (ನಾ). ವ್ಯಾಪಾರದ ಸರಕುಗಳನ್ನು ಶೇಖರಿಸುವ ಸ್ಥಳ; ಒಟ್ಟುಗಟ್ಟಲೆ ವ್ಯಾಪಾರವಾಗುವ ಸ್ಥಳ: ಧಾರವಾಡಜಿಲ್ಲೆಯಲ್ಲಿ ವ್ಯಾಪಾರದ ಮುಖ್ಯಗ್ರಾಮಗಳೆಂದರೆ ಪಡಮೂಲೆ ಹತ್ತು ಇರುತ್ತವೆ (ಕಭಾಗ. ೩೦೪); ಲಾಡಖಾನಪಟ್ಟಣವು ಕಾಳಿನ ಪಡಮೂಲೆಯ ಸ್ಥಳವು (ಮುಂಬಭೂ. ೬೧). [?]

ಪಡಲ$_1$, ಪಟಲ$_1$, ಪಟ್ಟಲು, ಪಡವಲ, ಪಡಳ, ಪಡುವಲ, ಪಡೋಲ, ಹಡಲ (ನಾ). ಒಂದು ಬಗೆಯ ತರಕಾರೀ ಬಳ್ಳಿ ಮತ್ತು ಅದರ ಕಾಯಿ: ಕುದಿಯಿಸುಗೆ ಸುಣ್ಣದಿಂ ಕೈಪೆಯೊಂಡೆಯಂ ಕೋಕಿಲಾಕ್ಷವೆರಸು ನಿತೇರಂಡದ ತೊಟ್ಟೆಯೆಲೆಗಳಿಂ ಪಡಲದ ಕಾಯಂ ತೆಗಪುಗವಲಿ ಕೈಪೆಗಳಟ್ಟುಗುಂ (ಕೋಕೋಪ. ೮-೩೦); ಕಿಜುಕುಸಾಲೆ ಬೇವಿನೆಲೆ ಪಡಲಂ ಕಳ್ಳರೆ ಪಾಟಿಸರ ಕಷಾಯಂ ಪರಿಹರಿಕುಂ ರಕ್ತ ಪಿತ್ತಮಂ ತಕ್ಷಣದಿಂ (ಕಲ್ಯಾಕಾ. ೫-೮); ಚಾರುತರದುಪದಂಶದೊಳಗೆ ಕೂಷ್ಮಾಂಡವಾ ಪಡಲ ಬದನೆಗಳೊಳೆಸವಾ ಕಾರವಲ್ಲಿಗಳಲಾಬುಗಳು ಸೂಕ್ಷ್ಮ ಬ್ರುಹತಿ . . . ಫಲವಿವು ಸೇವ್ಯ (ವೀಶೈಪು. ೬-೧೦-೬೫); ಹೀರೆ ಸೋರೆ ಮುಂತಾದುವಂ ಬಿತ್ತಿದ ಕಾಯ್ಕೊಂಟದೊಳ್ಪೆಳೆದ ಪಡಲ ಹಾಗಲಂ ಮೊದಲಾದೊಳ್ಕಾಯ್ಗಳುಮಂ ಕಳೆವುದು (ಚಳಪಂ. ೧೧೦-೨). **ಪಟಲ**$_1$: ಕೆಂಡಗಾಯ್ ಕುಸುರಿ ಬಜ್ಜಿಗಳ-ಮಿಗೆ ಸವಿವುತಂ ತೊಂಡೆದಾಳಿದಮಂ ಸವಿವುತಂ (ಲಿಂಗಪು. ೧೬-೧೬). **ಪಟ್ಟಲು**: ಹರಿವೆ ಯೊಣಗಿತು ಪಟ್ಟಲಿಟ್ಟಲ್ಲಿ ಪುಳವಾಯ್ತು ಮರಿಸೌತೆ ಮುಸರಾಯ್ತು ಹೀರೆ ನೀರೇರಿದುದು (ಪಲಾಂಡು. ೨೩). **ಪಡವಲ**: "ಪಟೋಲ—ಪಡವಲ"(ಬಾಹಟೀ. ೨-೨-೬೦ಪ); ಬದನೆ ಹೆಗ್ಗುಳ್ಳ ಪಡವಲ ಪಲಸು. . . ತೊಂಡೆಯ ಹಲವು ಫಲಕಂದಗಳ ಶಾಖಾವಳಿಯ ಸವಿಯೊಪ್ಪರಿಕೆ ಭೂಮಿ ಭೂಮಿಸಲಿಕೆ ಬಡಿಸಿದರು (ಅನಂರಾ. ೬-೨೫-೩೯). 'ಕಹಿಪಡವಲ' ಪರಾ. **ಪಡಳ**: "ಪಡಳಂ ಪಟೋಳವದು ಕುಲಕಂ" (ಮುಂಗಂರಾ. ೪೪-೪೪). **ಪಡುವಲ**: "ಪಡವಲ (ಪಡುವಲ)—ಪಟೋಲಿಕಾ" (ತದ್ಭಕೋ. ೨೩); "ಪಟೋಲ, ಪಟೋಲಿಕೆ, ಪಟೋಳ, ಪಟೋಳಿಕೆ—ಪಡುವಲಕಾಯಿ" (ಗಂಗಾಮ. ೧೯೪). **ಪಡೋಲ**: (ಪಂಡಿತ. ೨೮೩). **ಹಡಲ**: "ಕೋಶಾತಕೀ, ಪಟೋಲೀ—ಈ ೨ ಹಡಲಂ" (ಹಲಾಯು.೩೪-೪೯), ಹಾಗಲ ಹಡಲಂ . . . ಬದನೆಗಳಂ ಲೇಸಾಗಿರೆ ಮಾಡಿದ ಸಲೆ ಮೇಲೋಗರಮಂ ತಂದು ಬಡಿಸಿದರ್ ಮಾನಿನಿಯರ್ (ಧರ್ಮಪ. ೨-೫೪); ಕತ್ತರಿಗುಳ್ಳ ಹಡ[ಪಾಶಾಂ. ಮಾಪ]ಲ ಹಾಗಲ ಕೂಗರಿ ಬದನೆ ಮೊದಲಾದ ಕಾಯ್ಕಳ ರಸಂಗಳ ತೆಗೆದು (ಸೂಪಶಾ. ೫-೪೧).

[<ಪ್ರಾ. ಪಡೋಲ./ಸಂ. ಪಟೋಲ./ತಮಿ. ಪುಟಲ್, ಪುಟಲ್ಕೆ, ಪುಟೋಲ್; ಮಲ. ಪುಟ್ಟಲ್, ಪಿಟ್ಟಲ್; ತುಳು. ಪಟ್ಲ; ತೆಲು. ಪೊಟ್ಲ./ಮರಾ. ಪಡವಳ್, ಪಡೋಳ್]

ಪಡಲ$_2$ (ನಾ). ೧. ತಟ್ಟೆ; ಹರಿವಾಣ: ಅಲೆದಮ್ಮತದೊಡನೆ ತಾರಾಲಲನೆಯರಿಡಿಳಿರನೂಡಲೆಂದು ಪದಂಗೆಯ್ದಲತಗೆಯ ಪಡಲದಂತೆವೊಲೆಲೆದುದು ಪರಿಪಕ್ವದಿಂಬಮುಂ ವಿಧುದಿಂಬಂ (ಲೀಲಾಪ.೨-೬). ೨. ಕಣ್ಣಿಗುಡ್ಡೆಯ ಮೇಲಿನ ತೆಳುವಾದ ಪದರ,-ಪೊರೆ: ಪಡಲಂ ಕವಿದೊಳಪುಗೆ ಕಣ್ಗೆಡುಪೊಡೆ ನೀರ್ ಸುರಿಯೆ ಪಕ್ಕು ಮೆತ್ತರೆ ಮುಪ್ಪಂ ಸಲಿರೆ ತುರಗಕೆ ಮರಣಂ ತಡೆಯದೆ ಸಮನಿಸುಗುಂ (ಅಶ್ವಶಾ. ೬-೩೯).

[<ಪ್ರಾ. ಪಡಲ./ಸಂ. ಪಟಲ]

ಪಡಲಗೆ, ಪಟ್ಟಳಿಗೆ$_2$, ಪಡಲಿಕೆ, ಪಡಲಿಗೆ, ಪಡಲ್ಗೆ, ಪಡಳಿಕೆ, ಪಡ್ಡಲಿಗೆ, ಹಡಲಗೆ, ಹಡಲಿಕೆ, ಹಡಲಿಗೆ, ಹಡಳಿಗೆ, ಹಡ್ಡಲಗೆ, ಹಡ್ಡಲಿಗೆ, ಹೆಡಲಿಗೆ, ಹೆಡಳಿಗೆ(ನಾ). ೧.(ಬಿದಿರಿನ)ಅಗಲವಾದ ತಟ್ಟೆ; ಚಿಬ್ಬಲು: ಮುನ್ನಂ ಪೂಜಿಸಿ ಶರಮಂ ರನ್ನದ

ಪಡಲಗೆಯೊಳಿಟ್ಟು ನಿಜಪರಿವಾರಂ ತನ್ನುಳ್ಳನಿತುಂಬೆರಸು ಭಯನ್ನಡುಕ ಮನೀಯೆ ಬಂದು ಕಂಡಂ ದಿವಿಜಂ (ಆದಿಪು. ೧೨-೧೧೦); ಎಡೆಯೆಡೆಯ ಪೊನ್ನ ರನ್ನದ ಪಡಲಗೆಗಳೊಳೊಗೆದ ಜಾಗದಡಕಿಲುಗಳುಂ (ವರ್ಧಮಾ. ೩-೮೬); ಮಾಲೆಗಾರ್ತಿಯರೆತ್ತಿದ ಬೆಲೆಪೂವಿನ ಸರಂಗಳನಲರಂಬಂಗೆ ಪೊದೆಗೆದಱುವಂತೆ ಕೆದಱಿ ಪರಿಮಳಭಂಗಭಯಮನವಳ್ದಿರೊಳ್ ತಗುಳ್ಚಿ ಪಡಲಗೆಯಂ ಮಗುಟಿ ಪುಗಿಯಿಸಿಯುಂ (ಚಂದ್ರಪು. ೮-೪ ಪ). **ಪಟ್ಟಳಿಗೆ₂** : ೨. ಹೂಜಿ; "ಕರಗ" (ಚತುನಿ. ಕಿ. II, ೮೮); "ಪಟ್ಟಳಿಗೆ-ಪಟಲಕ"(ತದ್ಭಕೋ. ೨೩). **ಪಡಲಿಕೆ** : ೧. ರತ್ನದ ಪಡಲಿಕೆಯೊಳಗಿದ್ದ ಪರಮಾತ್ಮ ರತ್ನವರ್ಣನೆಯ ಶಾಸ್ತ್ರವನು ರತ್ನದ ಬೆಳಗಿನೊಳೋದಿದರಬಲಾರತ್ನಗಳಾನಂದದಿಂದ (ಭರಜ. ೧೮-೧೧೬). **ಪಡಲಿಗೆ**: ೧. ಪೊನ್ನ ಪಡಲಿಗೆಗಳೊಳೊಟ್ಟದ ದೇವಾಂಗವಸ್ತ್ರಂಗಳುಮನನೇಕ ವಿಧದ ತುಡುಗೆಗಳುಮನೆನಿತಾನುಂ ತೆಱದ ಸುಗಂಧದ್ರವ್ಯಂಗಳುಮನ ರಸಿಯರ್ಗಮರಸುಮಕ್ಕಳ್ಗಮಿತ್ತು (ಪಂಪಭಾ. ೫-೬೭ ಪ); ಅರಳ ಪಡಲಿಗೆ ಧಾರೆವಟ್ಟಲು ಭರಣಿ. ∴ ಹಿರಿಯ ಚಿತ್ರದ ಭಿತ್ತಿಯಿಂ ಪೊಸಪರಿಯೆನಿಸಿ ರಾಜಿಸಿದಪುದು ಗಣಿಕಾನಿಕೇತನವು (ಬಸಪು. ೧೧-೧೨); ಅತಿಥಿಗಳ ಬರವ ಕಾಣುತಾ ಕಾಂತೆ ಪೂಜಾದ್ರವ್ಯಮಂ ಪಡಲಿಗೆಯೊಳಿಟ್ಟು ಬಾಗಿಲೊಳ್ಬಂದು ನಿಲಲು (ಸಮ್ಯಕೌ. ೫-೩); ಇಳಿದರಗಿಳಿಗಳೆಳಸಿ ಪಾಯೆ ಕಂಕಣದುಲುಪಿಂದ ತೊಲಗಿಸುತವನು ತಳೆದಳೋರ್ವಳು ಪಕ್ವಫಲಗಳಿಂ ತೀವಿದ ತೆಳುವಳುಕಿನ ಪಡಲಿಗೆಯ (ಕುರಾಸಾಂ. ೭-೮೩). **ಪಡಲ್ಗೆ** : ೧. ಮಿಸುಗುವ ಪರ್ಣಶಾಲೆಯೊಳಪೊಕ್ಕು ಪಡಲ್ಗೆಯ ಪೂವನೊಕ್ಕು . . . ಪಲ್ಗಿರಿದೋಡಿ ಪಾಯ್ದು ಲಂಘಿಸಿ ತರುವೇಱಿ ತಾಪಸರ ಮಕ್ಕಳ ನೇಡಿಸಿತೊಂದು ಮರ್ಕಟಂ (ತ್ರಿಪುವಿ. ೧-೬೧). **ಪಡಳಿಕೆ** : ೧. "ಪಡಳಿಕೆಯೆನಲ್ ಚಿಬ್ಬಲದು" (ಮಂಗರಾ. ೬೧-೨೦). **ಪಡ್ಡಲಿಗೆ** : ೧. ತತ್ಪಣ್ಯಾಂಗನೆಯ . . . ಪಳೆ ಪೊಸ ಭುಜಂಗರ್ಕಳಾರಾರು ಮಾತನಾಡಿಸದಾದ ರಾಗ ಬಂಡಾರಚೀಲಂ ಪಡ್ಡಲಿಗೆ ಕರದೆ ಬಂದು ತಿರಿದುಂಡಳಲ್ಪಾವಧಿಯೊಳು (ಮಹಾಂತೇ. ೩೦-೧೯). **ಹಡಲಗೆ** : ೧. "ಹಡಲಗೆ(ಹಡಲಿಗೆ) —ಪಟಲಕ = ಪಡಲಗೆ" (ತದ್ಭಕೋ. ೪೮); ಟಕಾರಕ್ಕೆ ಡಕಾರಂ . . . ಪಟಲಕ—ಹಡಲಗೆ (ಶಮದ. ೨೫೫ ಪ್ರಯೋ). **ಹಡಲಿಕೆ** : ೩. (ವಿಶೇಷವಾಗಿ ಕೆಲವು ಪ್ರದೇಶಗಳಲ್ಲಿ) ಎಲ್ಲಮ್ಮನ ವಿಗ್ರಹವನ್ನು ಕೂರಿಸಿ ಹೊರುವ ಬುಟ್ಟಿ: "ಹಡಲಿಕೆ—ಪಡಲಿಗೆ, ಅಂಚುಳ್ಳ ಚಿಬ್ಬಲು, ಹರಿವಾಣ; ರೇಣುಕಾಭಕ್ತರು ಹೊರುವ ಹಡಲಿಗೆ" (ಕಸ್ತೂಕೋ. ೯೨೬). **ಹಡಲಿಗೆ** : ೧. ಕುಸುಮಸರನ ಪಸುರ್ಗಣೆಯ ಪೊದೆಗೆ ಪುರುಡಿಸುವ ಜಾಗದ ನೆಲೆಯ ಹ[ಪಾಠಾಂ.ಹೆ]ಡಲಿಗೆಗಳೊಳಂ . . . ಸಿರಿಗನ್ನಡಿಯ ತಳಿರ್ಗಳಶದ ವಿಳಾಸದೊಳಮಸದಳಮಾಗಿ (ವರ್ಧಪು. ೬-೩ ಪ); ನವರತ್ನದ ಹ[ಪಾಠಾಂ.ಪ]ಡಲಿಗೆಯೊಳಳಕ ನಿವಹವನಿಟ್ಟು ನಾಲ್ದೆಱದ ದಿವಿಜರ ಜಾತ್ರೆಯೆಲ್ಲವು ಮುದದಿಂ ಪೋಗಿ ಸವಿಗಡಲೊಳು ಬಿಟ್ಟುದಾಗ (ಶ್ರೀಪಾಲ. ೧೪-೧೦೧); ಬಯಲ್ಗೆ ಬಂದ ಕಿತ್ತಲಿಯನಱಿಯಟ್ಟುವ ದಿಟ್ಟದ ಗೊತ್ತಿನ ಕೊತ್ತಿಗೆ ತಡೆಯ ಹಡಲಿಗೆಯೇಂ ಬಲ್ವೆಟ್ಟೆ ? (ರಾಮಾಶ್ವ. ೯೭-೨೯). ೩. ಎಲ್ಲ ಸುಖದುಃಖಗಳ ಹಡಲಿಗೆಯ ಹೊತ್ತೇವು ಭಾರತದ ಭಂಡಾರ ಬೆಳೆಯಲಮ್ಮ (ನೆಲಮು. ೧೯-೧೩). **ಹಡಳಿಗೆ** : ೧. ಶ್ರುತಪೂಜೆ ಗುರುಪೂಜೆಯಂ ಮಾಡಿ ಬಳಿಕ್ಕ ಹದಿನಾಲ್ಕು ಹಡಳಿಗೆಯೊಳು ಪ್ರತ್ಯೇಕಮಾಗಿ ನಾಲ್ಕು ಬಗೆಯ ಭಕ್ಷ ಹದಿನಾಲ್ಕು ಬಗೆಯ ಫಲ (ನೋಂಪಿಕ. ೨೪-೪). **ಹಡ್ಡಲಗೆ** : ೩. ಸುಡುಗಾಡ ಸಿದ್ಧನಲ್ಲ ಶಂಖ ಜಂಗಯ್ಯನಲ್ಲ. . . ಶಿವಶಿವನೆ ಹಡ್ಡಲಗೆ ಹೊತ್ತ ಜೋಗ್ಯಲ್ಲ (ಕನ್ನಜಾ. ೩೭೯). **ಹಡ್ಡಲಿಗೆ** : ೩. ಮಹಾತಾಯಿಯ ಹೆಸರಲ್ಲಿ ಭಕ್ತರು ಅವರಿಗೆ ಕೊಟ್ಟ ಹಡ್ಡಲಿಗೆಯ ದಕ್ಷಿಣೆಯನ್ನು ಹಾಗೆಯೆ ಸಂಗ್ರಹಿಸಿಕೊಂಡು ಅಮಾವಾಸ್ಯೆಗೆ ಊರಿಗೆ ಹಿಂತಿರುಗುತ್ತಾರೆ (ಹೂಬಿಸಿ. ೭೦). **ಹೆಡಲಿಗೆ** : ೧. ಹೂವಿನ ಹೆಡಲಿಗೆಗೆ ಮಾಲೆವೊಂದು (ಎಇ. XIX, ೩೪-೩೨; 1135). **ಹೆಡಳಗೆ** : ೧. ಮೇದರೊಕ್ಕಲುಗಳ್ ಹೂವಿನ ಕರಡಗೆ ಹೆಡಳಗೆ ಮಡಕೆವೆ × × ಕೆರಸಿಯಮ್ ಸದಾಕಾಲಮ್ ನಡಸುವನ್ತಾಗಿ ಕೊಟ್ಟರ್ (ಎಇ. V, ೨೦-೬೦; 1161).

ಹಡ್ಡಲಿಗೆ ತುಂಬು = ದೇವರ ನೈವೇದ್ಯಕ್ಕಾಗಿ ಬಿದಿರಿನ ಚಿಬ್ಬಲು, ಹರಿವಾಣ ಮುಂತಾದುವುಗಳಲ್ಲಿ ಹಣ್ಣು, ಕಾಯಿ, ಆಹಾರ ಮೊದಲಾದುವನ್ನು ತುಂಬು : ನಮ್ಮೂರ ಆಕೆಯ ಒಕ್ಕಲೆನಿಸಿಕೊಳ್ಳುವ ಎಲ್ಲ ಜನರೂ ಅಲ್ಲಿಗೆ ಹೋಗಿ ಸಡಗರದಡಿಗೆ ಮಾಡಿ, ದೇವಿಗೆ ಕಾಯಿ—ಹಣ್ಣುಗಳನ್ನು ಮೀಸಲಿಟ್ಟು, ಹಡ್ಡಲಿಗೆ ತುಂಬಿ ಬರುವರು (ಹೂಬಿಸಿ.೬೦). [<ಪ್ರಾ. ಪಡಲಗ, ಪಡಲಯ, ಪಡಲಿಗ, ಪಡಲಿಯಾ./ ಸಂ. ಪಟಲಕ]

ಪಡಲಿಕೆ 'ಪಡಲಗೆ' ನೋ.

ಪಡಲಿಗೆ 'ಪಡಲಗೆ' ನೋ.

ಪಡಲಿಡಿಸು 'ಪಡು₁' ಪರಾ.

ಪಡಲಿಡು₁ 'ಪಡು₁' ಪರಾ.

ಪಡಲಿರಿಸು 'ಪಡು₁' ಪರಾ.

ಪಡಲ್ಗೆ 'ಪಡಲಗೆ' ನೋ.

ಪಡಲ್ವಡಿಸು 'ಪಡು₁' ಪರಾ.

ಪಡಲ್ವಡು 'ಪಡು₁' ಪರಾ.

ಪಡವಂದ (ನಾ). ನೇಯುವಿಕೆ ; ನೇಯ್ಗೆ : 'ಪಡವಂದಿಗ' ಪರಾ. [<ಸಂ. ಪಟಬಂಧ]

ಪಡವಂದಿಗ (ನಾ). ನೇಕಾರ : ಶಿಲ್ಪೇ—ಪಟಸಾಲಿಗಂ, ಪಡವಂದಿಗಂ, ಪತ್ತಳಿಗಂ, ತೆಲ್ಲಿಗಂ (ಭಾಷಾಭೂ. ೧೭೩ ಪ್ರಯೋ). [ಪಡವಂದ+-ಇಗ]

ಪಡವಲ 'ಪಡಲ₁' ನೋ.

ಪಡವಲು 'ಪಡು₂' ಪರಾ.

ಪಡವಳ₁ 'ಪಡೆವಳ' ನೋ.

ಪಡವಳ₂ (ನಾ). ಉಡುಗೆ, ತೊಡುಗೆಗಳ ಮೇಲ್ವಿಚಾರಕ : "ಪಸಾಯಿತಂ ಪಡವಳಂ" (ಚತುನಿ. ೧೦೮). [ಪಡ₄+-ವಳ]

ಪಡವಳತಿ, ಪಡವಳಿತಿ, ಪಡವಳ್ತಿ, ಪಡೆವಳ್ತಿ, ಹಡವಳತಿ, ಹಡವಳ್ತಿ, ಹಡೆವಳಿತಿ (ನಾ). ಸೇನಾಧಿಪತಿಯ ಪತ್ನಿ ; ದಂಡನಾಯಕನ ಹೆಂಡತಿ : ಬಾಚಲದೇವಿಯ ಜನನಿಗೆ ಸರಿ ದೊರೆ ಸಮಾನಮೆನಲ್ಕೆ ಕೇಳವನಿಯೊಳ್ಪಡವಳತಿ × × ಜನನಿಯು × × ಜನನಿಯ ರೆಣೆಯೆ (ಎಕ. VII, ಶಿವಮೊ. ೯೭-೩೨; 1113). **ಪಡವಳಿತಿ** : ಆತನ ತಂಗೆ ಪಡವಳ ಕೀರ್ತ್ತಿಯಣ್ಣನ ಪಡವಳಿತಿ ಚಟ್ಟಿಕಬ್ಬೆಯುಂ . . ಯೊಡದ ಕೆಱೆಯಂ ಕಟ್ಟಿಸಿ ಪರೋಕ್ಷವಿನೆಯಂಗಳಂ ಮಾಡಿ ಬೀರಗೂಳಿತ್ತಿ ಕಲ್ಲ ನಿಱಿಸಿದಳು (ಎಕ. VIII, ಸೊರಬ. ೪೬೮-೭; 1112). **ಪಡವಳ್ತಿ** : ಮನಸಿಜಸತಿಗಂ ಮಾವೇಧನಜನ ಸರಸತಿಗೆ ನೆಗಳ್ದರುಂಧ[ತಿ]ಗೆ ಸಮಂತನುಸಾರಿ ಪಾಟ ಪಾಸಟ ಎನಿಪಡೆ ಪಡವಳ್ತಿ ಜಕ್ಕಣಬ್ಬೆ ಕ್ರಿತಾರ್ತ್ಥೆ (ಎಕ. VIII, ಸಾಗರ. ೮೦-೩೨; 1096). **ಪಡೆವಳ್ತಿ** : ಮಡಿವಳ್ತಿ, ಸೆಜ್ಜೆವಳ್ತಿ, ಅಡಪವಳ್ತಿ, ಪಡೆವಳ್ತಿ (ಶಬ್ದಾನು. ೨೦೦ ಪ್ರಯೋ). **ಹಡವಳತಿ** : ಹಿರಿಯ ಹಡವಳಂ ಚಾವಿಮಯ್ಯನ ಸರ್ವ್ವಾಂಗಲಕ್ಷ್ಮಿ ಹಿರಿಯ ಹಡವಳತಿ . . . ಜಕ್ಕವ್ವೆಯರು (ಎಕ. V, ಹಾಸನ. ೫೭-೩೬; 1155). **ಹಡವಳ್ತಿ** : ಶ್ರೀಮನ್ಮಹಾಪ್ರಧಾನ ಸೇನಾಧಿಪತಿ ಹಿರಿಯ ಹಡವಳ ಬೋಕಯನ ಹಡವಳ್ತಿ . . . ದ್ವಿತೀಯ ಲಕ್ಷ್ಮೀಸಮಾನೆಯರಪ್ಪ ಹಿರೆಯ ಹಡವಳ್ತಿ ಕನಕವ್ವೆಯರು ದೋರಸಮುದ್ರದಲು ಕಾಲಂ

ಗೆಯ್ಯಲು (ಎಕ. VI, ಚಿಕ್ಕಮ. ೬೬-೨; 1089). **ಹಡೆವಳಿತಿ :** ಪಡವಳ ಹೆಂಮಾಡಿ ತಂಮವ್ವೆ ಕಾಳವ್ವೆ ಹಡೆವಳಿತಿಯ ಹೆಸರಿಂ ಕಾಳೇಶ್ವರದೇವರ ದೇವಾಲಯಮಂ ಮಾಡಿಸಿದಂ (ಎಕ. VII, ಶಿವಮೊ. ೫೫-೭೨; 1167).

[ಪಡವಳ$_1$(<ಪಡೆವಳ)+-ತಿ$_1$(<-ಇತ್ತಿ)]

ಪಡವಳಿತಿ 'ಪಡವಳತಿ' ನೋ.

ಪಡವಳಿಸು 'ಪಡುವಳಿಸು' ನೋ.

ಪಡವಳ್ತಿ 'ಪಡವಳತಿ' ನೋ.

ಪಡವಳ್ಳ 'ಪಡೆವಳ' ನೋ.

ಪಡವಿ (ನಾ). ಮಣಿ ; ಪೀಠ(?) : ಕೆಂಬಟ್ಟೆಯ ಮೃದುತಲ್ಪದೊಳೆಸೆದವಲಂಬಿಪ ಪೊನ್ನ ಪಡವಿಯರುಣಾಭ್ರಂ ಕೊಂಬಿನೊಳಿಟ್ಟ ಕದಂಬ ಮಣಿಯ ರುಚಿಯಾ ರಚನೆಯನಾಂತು ಇಂಬುವಡೆದ ಸುರಧನು ಮತ್ತಲ್ಲಿ ತೆಱಂಬೊಳೆದೊಪ್ಪುವ ಪೊಸ ಕುಡುಮಿಂಚುಮದೆಂಬಂದದಿನದನೇಱಿ ಕುಮಾರಂ ಕಣ್ಗೆ ವಿರಾಜಿಸಿದಂ (ಜಯಕಾ. ೮-೨೫). [?]

ಪಡವು$_1$ 'ಪಡು$_2$' ನೋ.

ಪಡವು$_2$ (ನಾ). ಗಳಿಕೆ ; ಸಂಪಾದನೆ : ಉಡೆಯಂ ನಡೆಯಂ ನುಡಿಯಂ ಪಡವಂ ತೊಡವಂ ಬೆಡಂಗನೆಡೆಯುಡುಗದೊಡಂ ಬಡುಮನೊಡನಿಳಿಸಿ ಱೋಡಿಸಿ ಕಿಡುಕುಮೊಡಂಬಡದವಂಗೆ ತಾಯಿ ಮಗಳೊಲವಂ (ಮದತಿ. ೧೦-೫೯). [<ಪಡೆ$_1$+-ವು]

ಪಡವು$_3$, ಪಡ$_2$ (ನಾ). ೧. ಆಶ್ರಯ ; ನೆಲೆ ; ಮನೆ : ಪಾತಕಕೆ ಪಡವಾಗದಮಳಖ್ಯಾತಿ ನೋಯದೆ ವಿಜಯಸಿರಿ ರಾಗಾತಿಶಯದಲಿ ನಮ್ಮ ರಮಿಸುವ ದೆಸೆಯ ಬೆಸಸೆಂದ (ಕುಮ್ಯಾಗ. ೬-೪೫). ೨. ಮನೆಯ ಒಂದು ಭಾಗ (?) : ಪಡೆದುಣ್ಬ ಪೆಣ್ಣೊಳಿರ್ದಾಗಡಿನೊಪ್ಪಮೆ ಸಾಲ್ವುದುಟಿದುಮೊಳ್ಪಱಸುವನೇಂ ಕಡುಗಾಂಪನೊ ತಣ್ಗೂಟಂ ಪಡವಿನೊಳೆಲೆಗಟ್ಟಿ ಮುಟ್ಟುಪಡೆದಱಸುವುದೇ (ಲೀಲಾವ. ೨-೧೧೫) ; ಪಡವಿನೆಡೆಯೊಳ್ ಕೊರಳಿ[ಪಾಠಾಂ. ಪದಪಿನರಳೆಗಳೊಳ್ ಕೊಯ್ದರಲೆ]ಗಳುಂ ನಾಂದುವ ಬೇವಿನ ಸರಳಿಗೆಗಳುಂ . . . ಪುಂಜಿಸುವ ಕಣಿಶಂಗಳುಮೆಸೆಯೆ . . . ಪಿರಿದುಂ ಕಳವಳಮನಪ್ಪುಕೆಯ್ದ ಪ್ರಸೂತಿಕಾಸದನಕ್ಕೆ ಶೃಂಗಾರಶೇಖರಂ ಬಂದು (ಲೀಲಾವ. ೬-೬೮ ವ). **ಪಡ$_2$** : ೧. ಪಾರಿವಮಂ ಪಡದಿಂ ಬಿಡೆ ಭೋರೆನೆ ಗಗನಕ್ಕೆ ನೆಗೆದು (ಪುಣ್ಯಾಸ್ರ. ೬-೪೫).

[<ಪಡು$_1$./ಹಿಂ. ಮರಾ. ಪಡಾವ್]

ಪಡಶಾಲೆ 'ಪಡಸಾಲೆ$_1$' ನೋ.

ಪಡಸಾದ 'ಪಡಿಸಾದ' ನೋ.

ಪಡಸಾಲೆ$_1$, ಪಟಶಾಲೆ, ಪಟಸಾಲೆ, ಪಟ್ಟಶಾಲೆ, ಪಟ್ಟಶಾಳೆ, ಪಟ್ಟಸಾಲೆ, ಪಡಶಾಲೆ, ಪಡಿಸಾಳ, ಪಡುಸಾಲೆ (ನಾ). ೧. ಮನೆಯ ಮುಖ್ಯವಾದ ಭಾಗ ; ಮೊಗಸಾಲೆ ; ಹಜಾರ : ಯಿಾ ದೇವಾಲ್ಯದ ಮುಂದಣ ಬಾಗಿಲ ಪಡಸಾಲೆ××× ಮಾಡಿಸಿ ಭೋಗ ಮಂಟಪವನೂ ಕಟ್ಟಿಸಿ (ಎಕ. XII, ಗುಬ್ಬಿ. ೨೯-೨೩; 1470) ; ಸುಮಲತೆಯ ಪಸಿರೆಲೆಯೊಳೆಸಗಿದ ವಿತಾನಮುಂ ವಿಮಲತರ ಪಡಸಾಲೆ ಕೋಣೆ ನಡುವಂಗಳಂ . . . ಕಂಗೊಳಿಸೆ (ಭರಭ. ೫-೮೯); ಪಡಸಾಲೆಯ ಗಿಲಾಯಿ ಗೋಡೆಗಳಿಗೆ ಅಂದವಾದ ಬಣ್ಣವನ್ನು ಹಚ್ಚಲಾಗಿತ್ತು (ಜನಜೀ. ೩೪) ; ಪಡಸಾಲೆಯಲ್ಲಿ ರಾಯರು ಮಂಡಿತರಾಗಿದ್ದರು (ಕಂಬಹು. ೧೨೫). ೨. ಮನೆಯ ಮುಂದಿನ ಭಾಗ ; ಹೊರಚಾವಡಿ ; ಜಗಲಿ : ಅವರು ಒಂದುದಿನ ಪಡಸಾಲೆಯೊಳಗೆ ಆಡುತ್ತಿದ್ದರು (ಮುಂಬಯಿ. ೩-೮೦) ; ನಿರ್ಮಲಬಾಬುಗಳು ಹೊರಗೆ ಬಂದರು ; ಊರಿನವರೆಲ್ಲ ಪಡಸಾಲೆಯಲ್ಲಿ ಬಂದು ಕುಳಿತುದನ್ನು ನೋಡಿದರು (ಪೋಡತಿ. ೧೪೭); ಪಡಸಾಲೆ (Verandah) : ಮನೆಯ ಮುಂದೆ ಮತ್ತು ಹಿಂದೆ ಪಡಸಾಲೆಗಳು ಇರುವುದು ಬಹಳ ಉಪಯೋಗಕರ (ಗೃಹವಿ. ೧೬೦). ೩. ದೇವಾಲಯದ ಹೊರಗೋಡೆಗೆ ಒಳಮಗ್ಗುಲಲ್ಲಿ ಹೊಂದಿಕೊಂಡಂತೆ, ಯಾತ್ರಿಕರಿಗಾಗಿ ಕಟ್ಟಿಸಿರುವ ಚಾವಡಿ : ಪ್ರಾಕಾರದ ಸುತ್ತಲೂ ಪಡಸಾಲೆ. ಪಡಸಾಲೆಯಲ್ಲಿ ಯಾತ್ರಿಕರಿಗೆ ವಸತಿ, ಓದುಗರಿಗೆ ಪಾಠಶಾಲೆಯ ಏರ್ಪಾಡು, ಇದೆಲ್ಲಾ ಇರಬಹುದು (ಭಾರದ. ೪೧೨). **ಪಟಶಾಲೆ** : ೧. ಪಳುಕಿನ ಜಗತಿ ಪಚ್ಚೆಯ ಲೋವೆ ಪವಳದ ಪೊಳೆವ ಜವಳಿಪಡಿಯಿಂದ ಥಳಥಳಿಸುವ ರತ್ನದ ಪಟಶಾಲೆಯಿಂದಿಳೆಗತಿ ಚಲುವಾಗಿಹವು (ಅಂಜಚ. ೩-೧೦೨). ೨. ಗಂಡಪೆಂಡಿರ ಪಟ್ಟಬಾಸಿಗ ಬೆಂಬಚ್ಚೆದಂಡೆ . . . ಹೋಗಲೆಂದವ ಹೊಜಪಟಶಾಲೆಯೊಳು ಕೊಟ್ಟು ರಾಗದಿಂದೊಳಗೈದುವಾಗ ಬೇಗ ಗಂಗಾದೇವಿ ಸಿಂಧುದೇವಿಯರೈದಿ ಬಾಗಿಲ ತಡೆದರರ್ತಿಯೊಳು (ಭರಚ. ೪೧-೪೦). **ಪಟಸಾಲೆ** : ೧. ಪಳುಕಿನಱೆಯ ಪಟಸಾಲೆ ಪಚ್ಚೆಯ ಲೋವೆ ಪೊಳೆವ ಪೊಂಬಾಗಿಲುವಾಡ ತಳತಳಿಸುವ ಬಹುಚಿತ್ರಗಳಿಂದಾ ನಿಳಯಮೊಪ್ಪಿದುದಾತನಿಗೆ (ಜೀವಂಸಾಂ. ೨-೬೯) ; ಅರಮನೆಯೊಳಗಾರುವಱಿಯದ ತೆಱನೊಳು ತರುಣಿಯ ಪಟಸಾಲೆಯನು ಧರಣೀಶರು ಪೊಕ್ಕು ಪೊಂಬಾಗಿಲೊಳಿರ್ದು ವರವಧುವನ್ನು ನೋಳ್ಪಾಗ (ಅಂಜಚ. ೮-೨); ಸಾಲುಸಾಲಲಿ ಮೆಱೆದವಗಣಿತ ಸೂಳೆಗೇರಿಗಳುನ್ನತದ ಪಟಸಾಲೆ ತೊಟ್ಟಗಳು (ಪ್ರಹ್ಲಾಚ. ೪-೪೨). ೨. ಪಟಸಾಲೆಯ ಮೇಲೆ ಕುಟಿಲಕುಂತಳೆ ನೆಱೆ ಪುಟಚಂಡನಾಡುವ ಭರಕೆ ನಟಸಲು ನೆಲೆಮೊಲೆಗಳು ನೋಡಿ ನಗುತಾಗ ವಿಟರು ಕೈತಾಳವೊತ್ತುವರು (ಕಂನವಿ. ೨-೯೨). ೩. ಆ ಕಲ್ಲರಸಿಯಮ್ಮನೂ ಯಿಾ ದೇವರಿಗೆ ಸಿಖರ ಪಟಸಾಲೆಯನು ಕಟ್ಟಿಸಿ . . . ಕೊಟ್ಟಂತಾ ಕೊಡಿಗಿ (ಎಕ. XII, ಗುಬ್ಬಿ. ೨೯-೨೮; 1470). **ಪಟ್ಟಶಾಲೆ** : ೧. ಚೈತ್ಯಾಲಯದ ಪಟ್ಟಶಾಲೆಯ ಮುಂದಣ ಪರಿಸೂತ್ರದ ಸುತ್ತಣ ಸರೋವರಂಗಳೊಳ್ (ಪಂಂಾಮಾ. ೬-೪೭ ವ) ; ಅಬ್ಬೆ ಜಾತಿಕ[ಯ್ವೆ]ಗಳಿಗೆ ಮರವೆಸದ ಪಟ್ಟಶಾಲೆಯುಮಂ . . . ಬಾವಿಯುಮನಲ್ಲಿಯ ಲೋಕಪಾಳರುಮಂ ತಧೀಯ ಶುಭದಿನದೊಳ್ ಪ್ರತಿಷ್ಠೆಯಂ ಮಾಡಿ (ಸೌಇಇ.XI-ii, ೧೬೯-೨೦; 1119); ಮದಿಲೊಳು ಮಣಿವಾಡದೊಳು ಪೊಂಬಾಗಿಲ ತುದಿಯೊಳು ಪಟ್ಟಶಾಲೆಯೊಳು . . . ಪುರಸುದತಿಯರವನ ನೋಡಿದರು (ಶ್ರೀಪಾಲ. ೧೩-೩೪) ; ಹೊಂದಗಡಿನ ಹೊದಕೆಯ ಮನೆ ಬಹಳ ನೇರಂದವಡೆದ ಪಟ್ಟಶಾಲೆ (ಮೋಹತ. ೩-೩೪). **ಪಟ್ಟಶಾಳೆ** : ೧. ನಿರ್ಮಮರೆನಿಪ ಮುಮುಕ್ಷುಗಳುತ್ತಮರೊಪ್ಪುವ ರವಜ ಪಟ್ಟಶಾಳಾವಳಿಯೊಳ್ (ಚಂದ್ರಪು.೧-೧೨೩). **ಪಟ್ಟಸಾಲೆ**: ೧. ಆ ಚೈತ್ಯಾಲಯದ ಕೆಲದ ಪಟ್ಟಸಾಲೆಯ ಮುಂತೆ ನೇಱೆ ನಿಜಾಭಿಲಷಿತ ಕಾರ್ಯಸಿದ್ಧಿಯನೆ ಪಾರುತ್ತಮಿರ್ದಳ್ (ಅದಿಪು. ೩-೪೫ ವ) ; ಆತನ ಜನನಿ ನಾಗಿಯಕ್ಕನು ಏಚಿಯಕ್ಕನು . . . ಒಮ್ಮಾಳಿಗೆಯ ಹಳಲು ಪಟ್ಟಸಾಲೆಯ ಮಾಡಿಸಿ . . . ಧಾರಾಪೂರ್ವ್ವಕಂ ಮಾಡಿ ಕೊಟ್ಟರು (ಎಕ. II, ೧೪೧-೭೮ ; 1139) ; ಅವಜ ಘನಪಟ್ಟಸಾಲಾನಿವಹದೊಳುತ್ಯಷ್ಟ ಜೈನಮುನಿಗಳ್ ಭರದಿಂದವಗತಸಮಸ್ತಶಾಸ್ತ್ರರ್ ಪ್ರವರಗುಣಾವಾಸರಿರ್ಪರ್ (ಬಾಧಪು. ೧-೧೩೮); ಅದಱ ಮುಂದಣ ಪಟ್ಟಸಾಲೆಯಲಿ . . . ಸುಗ್ರೀವನೆಂಬವನೊಂದಿ ಪಲಬರು ರಾಜಸುತರಿಗೆ ವೀಣೆಗಲಿಸುತಿರೆ (ಸಾಳ್ವಭಾ. ೧೬-೪೫). ℙ ಸಂಸ್ಕೃತದ 'ಪಟಶಾಲಾ=ಗುಡಾರ' ಎಂಬ ಅರ್ಥದಿಂದ ಬೇರೆಯಾದ 'ಮೊಗಸಾಲೆ' ಎಂಬ ಅರ್ಥದಲ್ಲಿ ಉಪಯೋಗವಾಗಿರುವ ಈ ಟಕಾರಸಹಿತವಾದ ರೂಪಗಳು 'ಪಡಸಾಲೆ' ಎಂಬ ಶಬ್ದದಿಂದ ಪ್ರಭಾವಿತವಾಗಿರಬಹುದು. **ಪಡಶಾಲೆ** : ೧. ಊಟವಾದ ಮೇಲೆ ಪಡಶಾಲೆಯಲ್ಲಿ ತಾಂಬೂಲಕ್ಕೆ ಕುಳಿತಾಗ . . . ಜಿನೇಂದ್ರವಲ್ಲಭನಿಗೆ ಚಣಕಾಲ ಸ್ವರ್ಗಸುಖವನ್ನು ಉಂಡಂತಾಯಿತು (ದಾನಚಿಂ. ೮೮) ; ಗಿರಿಜ ಪಡಶಾಲೆಯ ಬಾಗಿಲು

ತೆರೆದು ಹೊರಬಂದಾಗ ಅವನಿಗೆ ಎಚ್ಚರವಿರಲಿಲ್ಲ (ಪದ್ಮಸ. ೪೦). **ಪಡಿಸಾಳ:** ೩. 'ಪಡಿಸಾಳ' ಎಂದರೆ ಪ್ರಾಚೀನ ಮಹಾರಾಷ್ಟ್ರದೊಳಗೆ, ಪಾಂಥಸ್ಥರಿಗಾಗಿ (ದೇವಸ್ಥಾನದಲ್ಲಿ) ಕಟ್ಟಿದ್ದ ತಂಗುಮನೆಗಳು ಎಂದರೆ ವಿಶ್ರಮಿಸುವ ಸ್ಥಾನಗಳು (ಕರ್ಣಾಟ. ೧೦೧). **ಪಡುಸಾಲೆ :** ೧. ಗೋವಿಂದರಾಯರು . . . ಪಡುಸಾಲೆಗೆ ಬಂದಾಗ ಮೇಲಿನ ಜಂತೆಗಳನ್ನು ಲೆಕ್ಕ ಹಾಕುವರು (ಬಾಳಿಗಿ. ೨೬) ; ಶ್ರೀಮಂತರೊಬ್ಬರೆ ತಮ್ಮ ಮನೆಯ ಪಡುಸಾಲೆಯಲ್ಲಿ ಶತಪಥ ಮಾಡುತ್ತಲಿದ್ದಾರೆ (ತಿಡುಗು. ೩೧); ಪಡುಸಾಲೆ ಊಟ, ನಡುಸಾಲೆ ನಿದ್ರೆ (ಗಾದೆ).

[ದೇ.॥ ತಮಿ. ಪಟ್ಟಚಾಲೈ; ತುಳು. ಪಡಸಾಲೆ ; ತೆಲು. ಪಡಸಾಲ./ ಮರಾ. ಪಡಸಾಲ್, ಪಡಶಾಲಾ]

ಪಡಸಾಲೆ$_2$, ಪಟ್ಟಶಾಲಿ, ಪಟ್ಟಸಾಳಿ, ಪಡಸಾಳಿ (ನಾ). ೧. ರೇಷ್ಮೆಯ ಸೀರೆ ; ಪಟ್ಟಾವಳಿ. ೨. ನೇಕಾರರಲ್ಲಿ ಒಂದು ಪಂಗಡದ ಹೆಸರು: ಶ್ರೀ ಪ್ರಸಂನ ಆಂಜನೇಯಸ್ವಾಮಿಯವರಿಗೆ ಸರ್ಜಾಪುರದಲ್ಲಿರುವ ಪದ್ಮಸಾಲೆಯವರು ಪಡಸಾಲೆಯವರು ರಂಗಯ್ಯ ಸಂಜೀವಯ್ಯ ಮುಂತಾದವರು ಬರೆಸಿ ಕೊಟ್ಟ ದಾನಶಾಸನಕ್ರಮ (ಎಕ IX (8), ಅನೇಕ. ೧೦೭-೪; 1802). **ಪಟ್ಟಶಾಲಿ :** ೧. ಪಟ್ಟಶಾಲಿಯನುಟ್ಟು ಪಟ್ಟೆಕುಪ್ಪುಸ ತೊಟ್ಟು . . . ಮದುವಳಿಗೆ ದಿಟ್ಟೇರಾರೂತಿ ಬೆಳಗಿರೆ (ಲೋಕಗೀ. ೧೩). ೨. "ಪಟ್ಟಶಾಲಿ-ನೇಕಾರರಲ್ಲಿ ಒಂದು ಪಂಗಡ, ಪಟ್ಟಸಾಲಿ (ಳಿ)" (ಕಸ್ತೂಕೋ. ೫೭೦). **ಪಟ್ಟಸಾಳಿ :** ೨. ಪಡಸಾಳಿಗಳು ರೇಶಿಮೆಯ ವಸ್ತ್ರದ ಕೆಲಸ ಮಾಡುವ ಕಾರಣ ಅವರಿಗೆ ಈ ಹೆಸರು (ಪಟ್ಟಸಾಳಿ) ಬಂದದೆ (ಕಭಾಗೆ. ೧೬೦). **ಪಡಸಾಳಿ :** ೨. ಮೇಲಿನ 'ಪಟ್ಟಸಾಳಿ' ಉಲ್ಲೇಖದ 'ಕಭಾಗೆ' ಪ್ರಯೋಗವನ್ನು ನೋಡಿ. [ಪಡ$_4$+ಸಾಲೆ$_2$(<ಸೇಲೆ$_1$)]

ಪಡಸಾಳಿ 'ಪಡಸಾಲೆ$_2$' ನೋ.

ಪಡಸು (ಕ್ರಿ). (?) : ಕಿತಕಂ ದೇವತೆಗೇಕೆ ಪೇಟ್ವರಸಿ ಗಂಡಂ ಬೇಡಿಕೊಂಡೆನ್ನ ಪೆಂಡತಿಗಿತ್ತೈ ಪುಟಾತೊಂದು ಪೆಣ್ಣನಿದನೊಲ್ಲಳ್ನೀನೆ ಕೊಳ್ಳಾದ ದಾವತಿಯಕ್ಕುಂ ತುಱುಗಾಱರೇಂ ಪಡಸಿಕೊಂಡುಂಡಪ್ಪರೇ ಯೊಳ್ಳಿತೊಳ್ಳಿತು ಪೆಣ್ಗೂಸಿದು ಕಾಯಲೋ ಕಱೆಯಲೋ ಬೆನ್ನಟ್ಟಲೋ ಕಟ್ಟಲೋ (ಅರ್ಧನೇ. ೭-೫೦). [?]

ಪಡಹ (ನಾ). (?) : ದೇವ ಮತ್ತಮಾಂಸಮದುಟಾಯೆ ಪಡಹದ ಪಿಳುಕುಟಾಯೆ ಕೊಳಂಬೆಯ ಕೂಕಂಬದ ಕೋಡಂಬೆಯ ಮುಡಿಗೆಯ ತಾಣಂಗಳೊಳ್ ಮೇದು ಮೆಯ್ವೆರ್ಚ್ ಸೊವಡಿಂಗೆ ಸೋಲ್ತು ಕೂಡದೆ ಕವಲ್ದು ಮೇದು ತಣಿದು ಕೊಣಕಿಟ್ಟಾಡುವ ಮೃಗಂಗಳೊಳ್ (ಅನಂಪು. ೧೧-೩೯ ಪ). [?]

ಪಡಹು 'ಪಡಂಗು' ನೋ.

ಪಡಳ 'ಪಡಲ$_1$' ನೋ.

ಪಡಳಿಕೆ 'ಪಡಲಗೆ' ನೋ.

ಪಡಾವ 'ಪಡಂಗು' ನೋ.

ಪಡಾವಳ 'ಪಡೆವಳ' ನೋ.

ಪಡಾವು$_1$ 'ಪಡಂಗು' ನೋ.

ಪಡಾವು$_2$ (ನಾ). ೧. ವಶ ; ಅಧೀನ : ಮುಖದುಂಸಾಹೇಬ ಮೂದಿನಸಾಹೇಬ ಪಡಾವು ಶಿಕ್ಕರು ಸ್ವಲ್ಪ ಸರದಾರು ಶಿಪಾಯಿಗಳು ಪಡಾವು ಸಿಕ್ಕಿದರು (ಮದಚ. ೧೭-೧೦) ; ಚಂದಾಸಾಬರ ದಂಡು ಮುಳುಗಿಸಿದಾಗ ಅಲ್ಲಲ್ಲಿ ಪಡಾವು ಶಿಕ್ಕಿದ ಬಾರುತುಪಾಕಿಗಳನ್ನು ದರ ಮೂರು ನಾಲ್ಕು ರೂಪಾಯಿ ಮ್ಯಾರೆಗೆ ಕ್ರಯಕ್ಕೆ ತೆಗೆದು ಜವಾನರಿಗೆ ಕೊಡುತ್ತಾ (ಹೈದರ. ೬೯). ೨. ಲಾಭ ; ಗಳಿಕೆ : ಕಣಹಂದಿ ಗುದ್ದಿಗೆ ಕೂಡಿಕೊಂಡಿದ್ದಾನೆ ಅಂತಾ ಕಾಣ್ತದೆ! ಹಾಂಗಾದ್ರೆ ಒಂದು ಒಳ್ಳೇ ಪಡಾವಾಯ್ತು! (ಕಾನೂರು. ೩೯೦).

[←ಮರಾ. ಪಡಾವ್=ಯುದ್ಧದಲ್ಲಿ ಸೆರೆಸಿಕ್ಕವನು]

ಪಡಾಳಿ$_1$ 'ಪಡ್ಡಳಿ$_1$' ನೋ.

ಪಡಾಳಿ$_2$, ಫಡಾಳಿ (ನಾ). ೧. "ದೊಡ್ಡ ಅರಿವೆ ; ವಸ್ತ್ರ" (ಜಾನಕೋ. ೧೩). **ಫಡಾಳಿ :** ೨. ಬಟ್ಟೆಯ ತುಂಡು ; ಅರಿವೆಯ ಚೂರು : ಇದು ಯಾರದೊ ಪತ್ತಲದ ಫಡಾಳಿಯಲ್ಲ, ನನ್ನದೇ ಬುಶ್ ಶರ್ಟು (ದೇಕನ್ಕೆ. ೩೦). [←ಮರಾ. ಪಡದಣೀ]

ಪಡಿ$_1$ (ನಾ). ೧. ಒಂದು ನಿರ್ದಿಷ್ಟ ಅಳತೆಯ ಪರಿಮಾಣ; ೧ 'ಪಡಿ'ಯ ಅಳತೆಯು ಪ್ರಾದೇಶಿಕವಾಗಿ ಭಿನ್ನವಾಗುತ್ತದೆ: ಒಂದು ಪಡಿಯುದಕದೊಳಗೊಂದು ಪಡಿಸಕ್ಕರೆಯನೊಂದಿಸಿದ ಬಳಿಕ. . . ಒಮ್ಮಾನ ಹಾಲ ಹುಯಿದು (ಸೂಪಶಾ. ೧-೪೦); ಅಕಾಲ ಚಕ್ರಪಡಿ ಅಡಕೆ ಪಡಿ ಮೆಣಸು (ಬೊಂಕಶಾ. ೧೯೪೦, ಸಿರಸಿ. ೭೫-೨೧ ; 1515) ; ಬಿಡದೆ ಒಂಟಿಯ ಮಾಡಿ ನಿಲಿಸ್ಯಾಳೊ ಒಂದು ಪಡಿ ಭತ್ತಕೆ ಬಾಯ ಬಿಡಿಸ್ಯಾಳಣ್ಣ (ಪುರಂದ. ೧-೧೮೨-೨); ನಿನಗೊಂದು ಪಡಿ ಬಿದಿರ ತಂಡುಲ ಮನಿಕ್ಕಿದ ಮಹತ್ತ್ವದಿಂ ಪೊಡವೀಶ ನಿನ್ನುದರದೊಳ್ ಬಂದೆ ನಾನು (ಚಿಬಪು. ೫೨-೫೯) ; ಪ್ರತಿದಿನ ನನಗೆ ನೂರಿಪ್ಪತ್ತು ಜಂಬೀರದ ಹಣ್ಣು . . . ಒಂದು ಪಡಿ ಮಹಾಶಾಲಿ ಅಕ್ಕಿ ಕೊಡುತ್ತಿದ್ದರು (ಪ್ರವಾಇ. I, ೨೬೯). ೨. ಅರ್ಧಸೇರಿನ ಅಳವನ್ನುಳ್ಳ, ಒಂದು ನಿರ್ದಿಷ್ಟ ಆಕೃತಿಯ ಅಳೆಯುವ ಸಾಧನ: ಪಡಿ. ಅಳೆಯುವ ಪಾತ್ರೆ, ಆ ಅಳತೆ. ಗೊತ್ತಾದ ಭತ್ಯ ಎಂಬ ಅರ್ಥವನ್ನು ಪಡೆದಿದೆ (ನಮ್ಮನು. ೧೩೪) ; ಅಕ್ಕಿಯನ್ನು ಪಡಿಯಲ್ಲಿ ಅಳೆದು ಹಾಕು (ರೂಢಿ). ೩. ಅಳತೆ ; ಪರಿಮಾಣ : ನಡುಮನೆಯಲ್ಲಿ ಸುರಿವಾಗ ಇಪ್ಪತ್ತೈದು ಕೊಳಗವಾಯಿತ್ತು ಪಡುವಣ ಕೋಣೆಯಲ್ಲಿ ಮಡಗಿರಿಸುವಾಗ ಪಡಿಯ ನೋಡಲಾಗಿ ಐಗಳವಾಗಿತ್ತು (ಮೋಳಿಮಾ. ೨೧೭-೭೭೧). ೪. ತೂಕ ಮಾಡಲು ಬಳಸುವ ಬಟ್ಟು; ತೂಗುವ ಬಟ್ಟು : ಗಡಗಡನೆ ಪೊಡವಿ ನಡುಗಿತು ಪಡಿಯನೊಡವೆಯಂ ಸೆಳೆದ ತಕ್ಕಡಿಯಂತೆ (ವೈಶಾಖಿ. ೮೮-೬೭೯). 'ಪಡಿಕಲ್ಲು' ಪರಾ. ೫. ಭೂಮಿಯನ್ನು ಅಳೆಯುವ ಒಂದು ಅಳತೆ : (ರೈಸಾಗೆ. II, ೫೫೮) ; ೧೬ ಪಡಿಗೆ ೧ ಕೂಡೊ (ಭೂಮಿಅ. ೧). ೬. ದಿನಭತ್ಯವಾಗಿ ನೀಡುವ ಆಹಾರಸಾಮಗ್ರಿ: ಮೊಸರು ಬ ೧ ಅಳೆ ಬ ೧ ಅಡಕೆ ೨ ಎಲೆ ೪ ಱ ಪಡಿಯಲು ನಡಸುವನ್ತಾಗಿ ವೇದಪಾರಗರಪ್ಪ ಪದಿನಾಱು ಮಾನಸ ಬ್ರಾಹ್ಮಣರಿಗೆ ಚ್ಛತ್ರಕ್ಕೆ ಬಿಟ್ಟರು (ಸೌಇಇ. IX-i, ೨೪೫-೩೪; 1146) ; ಆ ಬಸವರಸನಾ ಮಂದಿರಕೆ ನೀ ಹೋಗಿ ನಮಗೊಂದೊಂದು ದಿನದಲಿ ಕೊಡುವ ಪಡಿಯಂ ತಂದುಕೊಡು (ಬಸಪು. ೧೧-೨೦); ಎನ್ನ ಚತುರಂಗ ಬಲಕ್ಕೆ ಬೇಡಿದ ಪಡಿ ಕಂದಾಯಮಂ ಕೊಟ್ಟು ಕೊಟ್ಟು ನಷ್ಟವಾಗಿ ಎನಗೆ ಎರಡು ನಲವತ್ತೆರಡು ಲಕ್ಷದ ಭವಜೂಟಾಳದ ಋಣ ಬಿದ್ದಿತು (ಘನವ. ೧೧-೪) ; ಎಮ್ಮಂದಿಗರೆಂತಂತು ಪಸುಗೆಗೊಂಡುಂ ಪಡಿಯನೆ ಚರುಚಾರುಗಂಧಮಂ ಕವರ್ವನೆಂಬೊಂದು ಪುರುಡಿಂ ಜನ್ನಗೊಂಡದಬೇಳುರಿ ಚಟಚಟಸಿ ಕಿಡಿಕಿಡಿವೋಪುದುಂ (ರಾಮಾಶ್ವ. ೪೩-೧) ; "ಹವಿರ್ಭಾಗ" (ರಾಮಾಶ್ವ. ಕೋಶ); ಊಟ ಬೇರೆ, ಪಡಿ ಬೇರೆ (ಗಾದೆ). 'ಪಡಿಕೂಳು' ಪರಾ. ೭. ನಿರ್ದಿಷ್ಟಪಡಿಸಿದ ಆಹಾರ; ಗೊತ್ತುಮಾಡಿದ ಉಣಿಸು: ಗಂಡನಿಕ್ಕಿದ ಪಡಿಯನುಂಡು ಮನೆಗಡೆಯದಿಪ್ಪವಳು ಪತಿವ್ರತೆಯಲ್ಲದೆ ಗಂಡನಿಕ್ಕಿದ ಪಡಿಯನೊಲ್ಲದೆ ಬೆಲ್ಲಗೂಳಿಗಾಸೆ ಮಾಡಿ ನೆರೆಮನೆಗೆ ಹೋಗುವ ಬಲ್ಲಾಳಗಿತ್ತಿಗೆ ಪತಿಭಕ್ತಿ ಅಳವಡುವುದೆ ಅಯ್ಯ (ಘನವ. ೨೦-೧೭). ೮. ಧಾನ್ಯರೂಪದಲ್ಲಿ ಹಂಚುವ ದಿನಗೂಲಿ: ಹೊಲೆಯರೆಲ್ಲ . . . ಯಜಮಾನರ ಹೊಲಗಳಲ್ಲಿ ಬೇಸಾಯ ಮಾಡಿ ಕೊಟ್ಟು, ದೊರೆತ ಪಡಿಯಿಂದ

ತಮ್ಮ ಜೀವನನಿರ್ವಾಹ ಸಾಗಿಸಬೇಕು (ಬೆಂದಯ. ೬೬); ಬೈರ ಸಿದ್ಧ ರಿಬ್ಬರೂ ಆ ದಿನ ಕೆಲಸಕ್ಕೆ ಹೋಗಿದ್ದ ಇತರ ಆಳುಗಳೊಡನೆ 'ಪಡಿ' ಇಸುಕೊಳ್ಳಲು ಮನೆಗೆ ಬಂದರು (ಕಾನೂರು. ೨೦೫); ಧನಿ ಕೊಟ್ಟರೆ ಉಂಟು, ಇಲ್ಲವಾದರೆ ಗೈಮೆಯ ಪಡಿಯೇ ಸೊನ್ನೆಯಾಗಬಹುದು (ಸ. ೬). ೯. ಹಣದ ರೂಪದಲ್ಲಿ ಕೊಡುವ ದಿನದ ಭತ್ಯ: ಸಂಬಿ ಂ. . . ಸರಸರನೆ ನಡತಂದು ಮಾಹೇಶ್ವರರಿಗೆಱಗದೆ ಕೈಮುಗಿಯ ದೀಟ್ಟರನಿಳಯಮಂ ಪೊಕ್ಕು ಪಡಿಯಂ ಬೇಡುತಿರಲಾಗಿ (ಬಸಪು. ೨೬-೧೪); ಕೆಱೆಯ ಪದ್ಮರಸಂ . . . ಮನಸಿಜಾರಿಯನೊಲಿಸಿ ಪನ್ನೆರಡು ಪೊಂಗಳಂ ದಿನದಿನಕೆ ಪಡಿಯಾಗಿ ಪಡೆದು ತದ್ದ್ರವ್ಯದೊಳಗೆನಿತು ಬಗುತರ್ ಬಂದೆರದೊಡವರ್ ಬೇಡಿದುದನಿಲ್ಲೆನ್ನದೀವಂ ಗಡ (ಪದ್ಮರಾ. ೯-೬). ೧೦. ನೈವೇದ್ಯ; ಎಡೆ: ಯಿಂತೀ ನಾಲ್ಕುಗಡಿಯಿಂದ ಒಳಗುಳ್ಳ ಮೂವತ್ತು ಹಾನೆ ಗದ್ದೆಯನೂ ಪಾರ್ಶ್ವದೇವರ ಪಡಿಗೆ ಪಾಯಂಣಂಗಳು ಬಿಡುದೇವಸವಾಗಿ ಬಿಟ್ಟದು (ಕಇ. I, ೪೧-೩೧; 1417 ?). ೧೧. ದಾನವಾಗಿ ಕೊಡುವ ಆಹಾರಸಾಮಗ್ರಿ; ಭಿಕ್ಷೆ: ಪಡಿ ಕೊಡೀಂತ ಅಮ್ಮಾವರನ್ನು ಬೇಡ್ಕೋಬೇಕಲ್ಲಾ ಭಿಕ್ಷುಕಿಯಾಗಿ (ನವನೀ. ೪೭); ಪಡಿಗೆ ಬಂದವನಿಗೆ ಕಡಿ ಅಕ್ಕಿ ಆಗದೇ? (ಗಾದೆ). ೧೨. ರೀತಿ; ಕ್ರಮ; ಮಾದರಿ: ಆತನುವನ್ತೆಗೆಯ್ವೆನೆನ್ದು ಆಣೆ ಪತ್ರಮಂ ಕೊಟ್ಟು ತ್ರಿಪುರಾಂತಕದೇವರ ಬಳಿನೀರಂ ಕುಡಿದೀ ಪಡಿಯಲ್ ಶಾಸನಮಂ ಕುಂದುವನ್ತಾಗಿಯೊಡಂಬಟ್ಟು ಬಂದಂ (ಸೌಇಇ. IX-1, ೧೬೯-೨೬; 1104); ಒಡವುಟ್ಟಿದ ಬಿಸಮಿದನಾಂ ಕಡೆನೂಂಕಲದೇಕೆ ಕೂಡಿ ನಡೆವೆನೆನುತ್ತಂದೊಡಲೊಳಗಿಂಬಿಟ್ಟೆಯ್ದುವ ಪಡಿಯೆನಲೊಪ್ಪಿದುದು ಲಾಂಛನಾಂಕಿತ ಚಂದ್ರಂ (ಗಿರಿಕ. ೪-೧೦೨); ಅಬುಜಜನ ಮಿಡುಕು ಕಂಠದೊಳಾಯ್ತು ಮಂಡಿಯ ಪಡಿಯ ಪದಪದ್ಧ [ಪಾಠಾಂ. ಪಡಿಪದದ ಪದ್ಧ, ಪಡಿಯ ಪಯಪದಹ, ಪಡಿಯ ಪಯಪದ್ಧ, ಸಡಿಯ ಪಯಪದ್ಧ]ತಿಗೆ ಫಣಿಪನ ಹೆಡೆ ನಿಱಲುನಿಟಲೆಂದುದೇನದ್ಭುತವೊ ರಣರಭಸ (ತೊರರಾ. ೪-೩-೮); ಅಕ್ಷರದ ಪಡಿಯನ್ನು ನೋಡಿದರೆ ಇದರ ಕಾಲ ಸು. ೧೫-೧೬ ನೆಯ ಶತಮಾನವಾಗಬಹುದು (ಶಾಸಪ. ೪). ೧೩. ಕುದುರೆಯನ್ನು ಹತ್ತುವುದಕ್ಕಾಗಿ ಅದರ ಪಕ್ಕದಲ್ಲಿ ನೇತುಬಿಟ್ಟರುವ ಬಳೆ; ಅಂಕವಣಿ; ರಿಕಾಪು: (ಕಿ). ೧೪. ಮೆಟ್ಟಲು; ಹಂತ; ಸೋಪಾನ: ಅವಳೆಸಗಿದಾ ಮಹಡಿಪಡಿ ಸದ್ದನೇ ಕೇಳ್ದು (ಸೌನಂದ. ೬-೬).

ಪಡಿ ಬೇಡು = ಶ್ರಾವಣಶನಿವಾರ ಮುಂತಾದ ದಿನಗಳಲ್ಲಿ ದೇವರ ಹೆಸರಿನಲ್ಲಿ ಭಿಕ್ಷೆ ಬೇಡು: ಅವನು ಪ್ರತಿ ಶ್ರಾವಣಶನಿವಾರವೂ ಪಡಿ ಬೇಡುತ್ತಾನೆ (ರೂಢಿ). ಪಡಿಯಕ್ಕಿ = ೧. ಒಂದು ಪಡಿ ಅಳತೆಯ ಅಕ್ಕಿ: ಆನೆ ಕುದುರೆ ಬಂಡಿ ಭಂಡಾರವಿದ್ದಡೇನೋ ತಾನುಂಬುದು ಪಡಿಯಕ್ಕಿ ಒಂದಾವಿನ ಹಾಲು ಮಲಗುವದರ್ಧಮಂಚ (ಮೋಳಿಮಾ. ೧೭-೬೪). ೨. ಭತ್ಯವಾಗಿ ಕೊಡುವ ಅಕ್ಕಿ: ಪಡಿಯಕ್ಕಿಯಂ ತಂದು ತನ್ನ ಮಂತ್ರಿಯ ಕೈಯ ಕೊಡಲಾತನದನೊಂದು ವೃಷಭಂಗೆ ಮೇಯಲಿತ್ತೊಡನೆ ಬಳಿವಿಡಿದದಱ ಗೋಮಯವನೆತ್ತಿ ತಂದು (ಹಚಕಾ. ೧೧-೪೫). ಪಡಿಯ ಬೀಯ = ಆಹಾರಕ್ಕಾಗಿ ಮಾಡುವ ವ್ಯಯ,— ಖರ್ಚು: ನಡೆವಾಗ ದಾರಿತಪ್ಪಿಸಿ ತಿರುಹಿ ಕೆಲವು ದಿನ ಪಡಿಯ ಬೀಯ ಕ್ಕಾಣೆಯಿಟ್ಟಂತು ಕೆಲವು ದಿನ ಕೆಡಿಸಿ ನುಡಿದವಧಿಯಾಯ್ತೆಂದು ಧರೆಯ ಱಯೆ ನೃಪನಂ ಹುಸಿಕನೆನಿಸು (ಹಚಕಾ. ೯-೧೬).

[ದೇ.॥ ತಮಿ. ಮಲ. ಪಟ; ತುಳು. ತೆಲು. ಪಡಿ]

ಪಡಿ$_2$, ಹಡಿ$_1$ (ನಾ). ೧. ಬಾಗಿಲಿನ ಕದ,—ರೆಕ್ಕೆ; ಫಡಕು: "ಪಡಿಯೆಂದು ಕವಾಟಂ" (ಕಶಸಾ. ೬೦-೩೧೪); ತೆಱೆಯದೆ ಮುನ್ನ ಕೆತ್ತ ಪಡಿಗಳ್ ನವಸೌರಭಮುಣ್ಮೆ ಮೊಕ್ಕಳಂ ತೆಱೆದುವು . . . ಆತನ ಪುರಾತನಪುಣ್ಯಫಲಪ್ರಭಾವದಿಂ (ಆದಿಪು. ೨-೬೩); ತೆಱೆಯದೆ ಮುಚ್ಚಿದ ಪಡಿಗಳ್ ತೆಱೆದುವು ನೆಱೆ ಮೋಕ್ಷಗೃಹದ ಸೌಖ್ಯದ ಪಡಿಗಳ್ ತೆಱೆದವೆನೆ ದಿವದ ಪಡಿಗಳ್ ತೆಱೆದುವದೇನರಿದೆ ಜೈನಪದಸೇವನೆಯಿಂ (ಸುಕುಮಾ. ೯-೧೯); ಮಗಳಂ ಮಾಱಿ ಮದುವೆಯಪ್ಪ ಪಡಿಯನೊಡೆದು ಮಣೆಯಂ ಮಾಡುವ . . . ಕಟ್ಟಿಗ್ಗನಂತೆ (ಧರ್ಮಾಮೃ. ೯-೧೬೨); ಸೇನೆಯೊಂದಿರವಂ ತಮತಮಗೆ ಸಂತಸದುರ್ಬಿನಿಂ ಕಾಂತೆಯರ್ ನೆಲೆವಾಡಮನೇ ಱಯುಂ . . . ಅರೆದೆಱೆದ ಪಡಿಯಲ್ಲಿ ಗವಾಕ್ಷದೊಳ್ ನಿಳ್ಕಿಯುಮಿಾಕ್ಷಿ ಸುತಿರ್ದರ್ (ರಾಮಾಶ್ವ. ೫೦-೧೩). ೨. ಬಾಗಿಲಿನ ನಿಲವು,— ಚೌಕಟ್ಟು; ದ್ವಾರಬಂಧ: "ಸಾಮ್ಯದೊಳ್ ಕುಡುಬದೊಳ್ ದ್ವಾರ ಬಂಧದೊಳ್ ಪಡಿಯೆನಿಕ್ಕುಂ" (ಶಬ್ದಮಂ. ೯೬). ೩. ಬಾಗಿಲು; ದ್ವಾರ: ಹಳೆಯ ಹಸ್ತಪತ್ರಿಕೆ ನನ್ನ ಸ್ಮೃತಿಮಂದಿರದ ಪಡಿ ತೆರೆಯುತ್ತದೆ (ಗಾಳಿಪ. ೭೧). 'ಪಡಿವಳ' ಪರಾ. ಹಡಿ$_1$: ೧. ಹಡಿ ಎಡೆಯಲ್ಲಿ ಸಿಕ್ಕಿದ ತುಡುಗುಣಿನಾಯಂತೆ ಮೊಱೆ ಇಡುತ್ತಿದ್ದೇನೆ (ಮೋಳಿಮಾ. ೧೬೬-೬೧೮); ಪಾಡಲಾನತಿನಿಷ್ಠುರವದಾಗಿ ಕೇಳದೀ ಹೂಡಿರ್ದ ಹಡಿಯ ತೆಱದಂ ನಿಮ್ಮ ಸೊಗಸಪ್ಪ ಪಾಡಹತ್ತಂ ಮೋಹದಿಂ ಕೇಳಿ ಮೋಹರಿಸಿ ಕೊಂಡನೀ ಕದವನೀಶಂ (ವೀಶ್ವಪು. ೪-೯-೧೫).

[ದೇ.॥ ತಮಿ. ಪಟಲ್, ಪಟಲೈ; ತುಳು. ಕೊಡ. ಪಡಿ]

ಪಡಿ$_3$, ಪತಿ$_1$, ಪಳಿ$_5$, ಪಱಿ$_6$, ಹಡಿ$_2$ (ನಾ). ೧. ಸಮಾನವಾದುದು; ಎಣೆಯಾದುದು; ಸಾಟಿಯಾದುದು: "ಸರಿ, ದೊರೆ, ಪಡಿ, ಗೆಡೆ, ಪಾಟ, ಪಾಸಟ, ಎಣೆ . . . ಸಂಗಡಂ— ಈ ೧೮ ಸಮಾನಕ್ಕೆ ಪೆಸರ್" (ಕಶಸಾ. ೫೯-೨೯೧); ದುಃಕೀರ್ತ್ತಿಯನಾನ್ತ ಮತ್ತಿನ ಶತರ್ದ್ದುರ್ಬ್ಬೋಧರಸ್ಪೃಶ್ಯರೇಂ ಪಡಿಯೇ ಸದ್ಬುಧಸೇವ್ಯನಪ್ಪ ಬುಧಚಂದ್ರಖ್ಯಾತಯೋಗೀಂದ್ರನೊಳು (ಎಕ. VII, ಶಿವಮೊ. ೪-೬೬; 1122); ತನಗಿಂದ್ರಾಣಿಯೆ ಸರಿ ಗೋಮಿನಿಯೆ ಸಮಾನಂ ಸರಸ್ವತೀದೇವಿಯೆ ನೆಟ್ಟನೆ ಪಡಿ (ವರ್ಧಪು. ೧-೮೮); ಈ ಕಣ್ಗಾ ಕಣ್ಣಾ ಕಣ್ಗೇ ಕಣ್ಣೆರಡಕ್ಕವರಡೆ ಪಡಿ (ಗಿರಿಕ. ೧೦-೫೦); ಶಾರದೆಗೆ ಸಾಟಿಯಿಂದ್ರಾಣಿಗೆಣೆ ಸಿರಿಗೆ ಸರಿಯಾರತಿಗೆ ಪಡಿ . . . ಎನಿಪ್ಪ ಪುರವರ ಮಹಾಸತಿಯರು (ಚೆಬಪು. ೫-೧೬); ಈಶಾನ್ಯಭಾಗದೊಳಂಬರವನು ತುಡುಕುತ ಸರ್ವಸನ್ನಹದೆ ಕಡುಗಲಿ ದಳವಾಯ ಮೇರುವೆಯೊಪ್ಪಿತು ಪಡಿಯಾಗಿ ಕೈಲಾಸಗಿರಿಗೆ (ಕಂನವಿ. ೧೮-೬೯). ೨. ಪ್ರತಿಯಾದುದು; ಬದಲು: ನಿಮ್ಮಾ ಹಿರಿಯತನಕೆ ಪಡಿಯುಂಟೆಯೆಂದವರನೊಡಗೊಂಡು ಬರುತಮಿರೆ (ತಿರುರ. ದೇ. ೧೪-೩); ಸುಡುವ ನೆಲದೆಱಿಗೆ ಹಾಗ ಹೆಣದುಡುಗೆಯಂ ತಂದೆನಗೆ ಕೊಡುವುದಾ ತಲೆಯಕ್ಕಿಯಂ ನಿನ್ನ ಸಂಬಳಕ್ಕೆ ಪಡಿಯಾಗಿ ಕೊಂಡುಂಬುದು (ಹಚಕಾ. ೧೧-೩೬); ಎಲ್ಲ ಧಾನ್ಯವನೆಣಿಸೆ ಹದಿನೆಂಟಲ್ಲಿ ಪಡಿಯಿವರಂದದಿಂದವೆಯೆಲ್ಲ ಮೂವತ್ತಾಱೆ ಎನಿಸುಗು ಲೋಕ ಮೆಚ್ಚಲಿಕೆ (ಸಂಭಪ. ೫-೧೧೩); ತನ್ನಯ ಮಾಯವಿದ್ಯದಿಂದಿವನನಾಂ ಬಿಡದೆ ಮರ್ದಿಪೆನೆಂದು ನೆನದು ಕಲ್ಪಿಸಿದಳಾ ಮೃಡನರಸಿಯಿದಿರೊಳೈತಂದ ಮಹಿಷಾಸುರನ ಪಡಿಯಲಿಮ್ಮಡಿ ರೂಪನೂ (ನವಮೋ. ೧೨-೮೩); ತಾನುಂ ಭಗವದ್ಭಕ್ತನಪ್ಪುದಱಿನವನೊಡನೆ ಪಾಡುತಂ, ಭಿಕ್ಷಾನ್ನಕೆ ಪಡಿಯಾಗಿ ಕೈಯೋಗರವಂ ತಾನೆ ತಂದೀವಂ (ಅದ್ಭುತ. ೧೬-೨೧). 'ಪಡಿನುಡಿ$_2$' ಪರಾ. ೩. ಬರಹದ ಮತ್ತೊಂದು ಪ್ರತಿ; ಪ್ರತಿಲೇಖನ; ನಕಲು: ಆ ಬಲ್ಲಾಳದೇವರು ಕಾರುಣ್ಯಂ ಮಾಡಿ ಕೊಟ್ಟ ತಾಂಬ್ರಶಾಸನದ ಪಡಿಯ ಸಿಲಾಶಾಸನ (ಎಕ. IX(s), ಕಾನಕಾ. ೯೨-೩೭; ಸು. 1300); ಬರಸಿದ ಪಡಿಯಂ ಬರಸಿತ್ತಂ (ಬೊಂಕಶಾ. ೧೯೩೩, ಹಾವೇರಿ. ೬೦-೩೯; ?). 'ಪಡಿಪತ್ರ' ಪರಾ. ಪತಿ$_1$: ೧. ಪತಿಯ ಸುಖದುಃಖಂಗಳೇ ತನಗೆಂಬ ಪತಿವ್ರತೆಗೆ ಪತಿಯ

ಕಾಣೆನು ತ್ರಿಜಗದೊಳರುಂಧತಿಯಳಲ್ಲದೆ (ಶಂಕದಾ. ೨-೧೨). **ಪಳಿ$_5$** : ೨. ಕಂದ ಶಂಕರನ ಶಿರಕೆನ್ನರಿದ ತಲೆರನ್ನದಿಂದ ಸತ್ಕರಿಸಬೇಕಯ್ಯ ಬೊಪ್ಪಯ್ಯ ನೀಂ ಸಂದೆಗಂ ಮಾಡಲನುಚಿತವೆನ್ನ ಮಸ್ತಕವ ಪಱಿದು ಪಳಿಗೀಯೆಂದನು (ಭಾನಚಂ. ೯-೮) ; ತಿರುಕೊಳನಾಚಿ ಮತ್ಸುತಂಗರಸನಣುಗಂ ಸಾಟಯಿಾತಂಗೆ ಪಳಿಯೆನುತೆ ತನ್ನ ತಲೆಯಂ ಕೊಟ್ಟಳು (ಚಿಬಪು. ೫೫-೧೬) ; ಘಳಿಲನೆ ಪಳಿ ಪೊರ್ದದಮಳಚರಿತನಿದಿರ್ಗೆನಂದೆನ್ನ ಶಿರಮಿದಕ್ಕೆ ಪಳಿಯೆಂದು ತೋರ್ಪಂತೆ ಪಣೆವೆಱೆಯೊಳ್ ಕರಾಂಜಲಿಯಿನಮರ್ಚಿನಿಂದು (ರಾಜಶೇ. ೧೪-೧೪ ವ). 'ಪಳಿಗೊಡು' ಪರಾ. **ಪಟಿ$_6$** : ೧. "ಸರಿ, ದೊರೆ, ಪಡಿ . . . ಪಟಿ, ಜೋಡು, ಸರಿಸ . . . ಸಂಗಡಂ—ಈ ೧೮ ಸಮಾನಕ್ಕೆ ಪೆಸರ್" (ಕಶಸಾ. ೫೯-೨೯೧) ; "ಪಡಿ ದೊರೆ . . . ಸಂಗಡಮುಂ ಪಟಿ ಜೋಳಿ ಬುಧರಿನಕ್ಕುಂ ಸಮನುಂ" (ಕವಿಕಂ. ೧೩೬). ೨. 'ಪಟಿಹತ್ತ' ಪರಾ. **ಹಡಿ$_2$** : ೨. 'ಹಡಿಮುಖ' ಪರಾ.

[<ಪ್ರಾ. ಪಡಿ./ಸಂ. ಪ್ರತಿ]

ಪಡಿ$_4$ 'ಪಟಿ$_5$' ನೋ.

ಪಡಿ$_5$ 'ಪಡೆ$_3$' ನೋ.

—ಪಡಿ$_6$ (ಪ್ರ). ಭಾವನಾಮದ ಅರ್ಥವನ್ನು ಕೊಡುವ ಒಂದು ಕೃದಂತ ಪ್ರತ್ಯಯ : 'ತಿದ್ದುಪಡಿ', 'ತೀರ್ಪಡಿ' ಪರಾ.

ಪಡಿಕಟ್ಟು$_1$ 'ಪಡಿಗಟ್ಟು$_1$' ನೋ.

ಪಡಿಕಟ್ಟು$_2$ (ನಾ). ಮಾದರಿ ; ನಮೂನೆ ; ರೀತಿ : ಆ ಲೇಖನದ ಪ್ರಾರಂಭದ ಭಾಗವು ಅಮಲನ ಲೇಖನದ ಪಡಿಕಟ್ಟನಲ್ಲಿ ಕಾವ್ಯಾಡಂಬರದಿಂದ ಕೂಡಿದ್ದಾಗಿತ್ತು (ಇಪ್ಪಕ. ೨೫೨) ; ಇದೇ ಏನು ನಿನ್ನ ದುಷ್ಟ ನಿಗ್ರಹ-ಶಿಷ್ಟಪರಿಪಾಲನಗಳ ಪಡಿಕಟ್ಟು ! (ಕುಮುದಿ. ೮); ಇದು ಹೆಂಡಿರ ಕೃತಘ್ನತೆಯ ಪಡಿಕಟ್ಟಾಯಿತು ; ಇನ್ನು ಅವರ ಉದ್ಧಟತನದ ಪಡಿಕಟ್ಟನ್ನು ಸ್ವಲ್ಪ ನೋಡಬೇಕು (ಕುಟುಂಬ. ೩೩). [ಪಡಿ$_1$+ಕಟ್ಟು$_2$]

ಪಡಿಕಟ್ಟು$_3$ 'ಪಡಿಗಟ್ಟು$_2$' ನೋ.

ಪಡಿಕಮಣ (ನಾ). [ಜೈನ] ಪ್ರಾಯಶ್ಚಿತ್ತಕ್ಕಾಗಿ ಮಾಡುವ ತಪಸ್ಸು ; ತನ್ನ ದೋಷಗಳನ್ನು ತಿಳಿದುಕೊಂಡು ಅವುಗಳನ್ನು ತೊರೆಯುವುದು: 'ಪಡಿಕಮಣಂಗೆಯ್' ಪರಾ.

[<ಪ್ರಾ. ಪಡಿಕ್ಕಮಣ./ಸಂ. ಪ್ರತಿಕ್ರಮಣ]

ಪಡಿಕಮಣಂಗೆಯ್(ಕ್ರಿ).[ಜೈನ]ಪ್ರಾಯಶ್ಚಿತ್ತಕ್ಕಾಗಿತಪಸ್ಸನ್ನು ಆಚರಿಸು : ಗುರುಗಳ್ಗೆ ತಮ್ಮುಕ್ಕೆವದಿಂ ತಪಂಬಟ್ಟುದನಾಳೋಚಿಸಿ ಪ್ರಾಯಶ್ಚಿತ್ತಂಗೊಂಡು ಪಡಿಕಮಣಂಗೆಯ್ದು [ಪಾಠಾಂ. ಕೇಳ್ದು] ಪರಮಾರ್ಥಯತಿವರರಾಗಿ ಪನ್ನೆರಡುವರ್ಷಂಬರಂ ಗುರುಗಳನಗಲದೆ ತಪಂಗೆಯ್ದು (ವಡ್ಡಾರಾ. ೬-೨೭). [ಪಡಿಕಮಣ+ಕೆಯ್$_1$]

ಪಡಿಕಮಣಂಗೇಳ್ (ಕ್ರಿ). [ಜೈನ] ಪ್ರಾಯಶ್ಚಿತ್ತವನ್ನು ಕೇಳು : ಸುಕುಮಾರಸ್ವಾಮಿ . . . ತತ್ಪಾದಮೂಲದೊಳ್ ತಪಂಬಟ್ಟು ಪಂಚಮಹಾಬ್ರತಂಗಳನೇಱಿಸಿಕೊಂಡು ಪಡಿಕಮಣಂಗೇಳ್ದ ತದನಂತರಂ . . . ಸಂನ್ಯಸನಂಗೆಯ್ದು (ವಡ್ಡಾರಾ. ೨೮-೨೬).

[ಪಡಿಕಮಣ+ಕೇಳ್]

ಪಡಿಕಮಣಂಪೇಟ್ (ಕ್ರಿ). [ಜೈನ] ಪ್ರಾಯಶ್ಚಿತ್ತವನ್ನು ಹೇಳು : ದೀಕ್ಷೆಯಂ ಕೊಟ್ಟು ಪಂಚಮಹಾವ್ರತಂಗಳನೇಱಿಸಿ ಪಡಿಕಮಣಂ[ಪಾಠಾಂ.ಪ್ರತಿಕ್ರಮಣಂ]ಪೇಟ್ದು ತದನಂತರಮಿಂ ಕಲ್ಪಿಸಿಮೆಂದೊಡೆ (ವಡ್ಡಾರಾ. ೬-೩). [ಪಡಿಕಮಣ+ಪೇಟ್]

ಪಡಿಕರ (ನಾ). ಒಂದು ಬಗೆಯ ಆಭರಣ; ತೋಳುಬಂದಿ: ಮುತ್ತಿನ ಬೊಟ್ಟು ಬುಗುಡಿಯ ಚಕ್ರ ನವರತ್ನ ಕೆತ್ತಿದ ತೋಳ ಪಡಿಕರವು ಉತ್ತಮ ಭುಜಕೀರ್ತಿ ತೋಳ ಭಾಪುರಿಗಳ ಬಿತ್ತರದಿಂದಳವಡಿಸಿ(ಶಾಂತೀಚ. ೩-೬೯).[?]

ಪಡಿಕಲ್ಲು (ನಾ). ತಕ್ಕಡಿಯ ತಟ್ಟೆಗಳನ್ನು ಸಮತೂಕಗೊಳಿಸುವುದಕ್ಕಾಗಿ, ಕಡಮೆ ತೂಕವಿರುವ ಕಡೆಗೆ ಇಡುವ ಕಲ್ಲು,- ಬಟ್ಟು; ಪೇರುಕಟ್ಟುವ ಕಲ್ಲು : (ಕಿ). [ಪಡಿ$_1$+ಕಲ್ಲು(<ಕಲ್$_3$)]

ಪಡಿಕೂಳು (ನಾ). ನಿರ್ದಿಷ್ಟ ಅಳತೆಯಷ್ಟು ಕೂಳು,— ಆಹಾರ : ನಿನ್ನ ಒಡೆಯ ಲಿಂಗಗೆಡೆಮಾಡದೆ ಪಡಿಕೂಳ ತಿಂದು ನೀ ಕುಡಿದೆ ನೀರ (ಲೋಕಗೀ. ೬೭). [ಪಡಿ$_1$+ಕೂಳು$_2$(<ಕೂಟ್$_1$)]

ಪಡಿಕೆ$_1$ 'ಪಡಕು$_2$' ನೋ.

ಪಡಿಕೆ$_2$ 'ಪಡುಕೆ' ನೋ.

ಪಡಿಕೆ$_3$, ಪಡಕು$_3$, ಫಡಿಕೆ (ನಾ). ೧. ತುಂಡುಬಟ್ಟೆ ; ಚಿಂದಿ : "ಪಡಿಕೆ-ಹರಕ ಬಟ್ಟೆ ; ಚಿಂದರೆ ; ಸೀರೆಯ ತುಂಡು" (ಜಾನಕೋ.೧೩) ; ಚಂಡಾತಕೆ – ಹೆಂಗಸರು ಉಟ್ಟುಕೊಳ್ಳುವ ಪಡಿಕೆ (ಗಂಗಾಮ. ೧೨೬). **ಪಡಕು$_3$** : (ಕಿ). **ಫಡಿಕೆ** : ೨. ಒಂದು ಬಗೆಯ ಉಡುವ ವಸ್ತ್ರ; ಲುಂಗಿ ; ದಟ್ಟೆ : ಖ್ರಿಸ್ತೀ ಜನರ ಉಡಿಗೆಗಳು . . . ಅನುಕೂಲವಿದ್ದವರು ಇಜಾರುಗಳನ್ನು ಹಾಕಿಕೊಳ್ಳುವರು, ಇಲ್ಲವೆ ಫಡಿಕೆಗಳನ್ನು ಉಡುವರು (ಕಭಾಗೆ. ೨೪೮). [←ಮರಾ. ಫಡಕಾ]

ಪಡಿಕೆನಾಱು 'ಪಡುಕೆನಾಱು' ನೋ.

ಪಡಿಗ, ಪಡಗ, ಪಡುಗ (ನಾ). ೧. ಉಗುಳುವ ಪಾತ್ರೆ ; ಪೀಕದಾನಿ : "ಪತದ್ಗ್ರಹಾಖ್ಯಂ ಪಡಿಗಂ" (ವಸ್ತುಕೋ. ೪೯-೨೬) ; ನಾರಾಯಣನುಮುದಾತ್ತನಾರಾಯಣನುಂ . . . ಮೊಗಸಾಲೆಯೊಳಿಟ್ಟ ಪೊನ್ನ ಪಡಿಗಂಗಳೊಳಮಿಕ್ಕಿದ ಪಟಿಯ ಸುಖಾಸನಂಗಳೊಳಂ ಕಟ್ಟಿದ ಚಿನ್ನದ ಬೊಂದರಿಗೆಯೊಳಮೆಸೆದಿರ್ದ ಮಣಿಮಯಪೀಠದೊಳೊಡನೇಱಿ ಕಿಱಿದು ಪೊಟ್ಟು ಕುಳ್ಳಿರ್ದು (ಪಂಪಭಾ. ೪-೪೩ ವ) ; ಪಡಿಯಱವೆಸಗೆಯ್ವ ಪಡಿಗಮಂ ಸಾರ್ಚುವ ಮತ್ತಡಿಗುಟ್ಟುವ ಪಾವುಗೆಯಂ ಪಿಡಿದರ್ಪಿಪ ಬೆಸನೆ ದಿವಿಜಕಾಂತೆಯರ್ಗೆ ಬೆಸಂ (ಚಂದ್ರಪು. ೧೧-೧೩೬) ; ಮಣಿವುಪಕರಣತತಿ ಬಟ್ಟಲು ಪಡಿಗವಡ್ಡಣಿಗೆ. . .ಹಿರಿಯ ಚಿತ್ರದ ಭಿತ್ತಿಯಿಂ ಪೊಸಪರಿಯೆನಿಸಿ ರಾಜಿಸಿದಪುದು ಗಣಿಕಾನಿಕೇತನವು (ಬಸಪು. ೧೨-೧೨), ಸುರಪುರದ ಸೂಳೆಯರ ಪಡಿಗವನಿರಿಸುವರು ಗಂಧರ್ವರು (ಕುವ್ಯಾಅ.೨೧-೬೭). ೨. ಪಾತ್ರೆ; ಭಾಂಡ : ನೆಲಕೆಲ್ಲಮಿಟ್ಟ ಪಡಿಗಂ ನೆಲಕೆಲ್ಲಂ ಸಮೆದ ಪಚ್ಚವಡಮೆನೆ ಮತ್ತಂ ನೆಲನೆನಿತನಿತಱ ಮಯಿಲಗೆ ಬೆಲವೆಂಡತಿ ಬಗೆವೊಡಿಂತು ಕಿಸುಗುಳ ಮುಂಟೇ (ಪಸಾರ. ೨೯೯). ೩. ತಟ್ಟೆ ; ತಳಿಗೆ ; ಹರಿವಾಣ : ಎಡೆವಟ್ಟಲ್ಗಡ್ಡಣಿಗೆಗೆ ಪಡಿಗಕ್ಕೆ ತಗುಳ್ದ ಪಟಿಯ ಬಿತ್ತರಿಗೆಗೆ ತಕ್ಕೆಡೆಯಱಿದು ಪಂತಿಕಾಱರನೆಡೆಯಱಿದು ವಿಲಾಸದಿಂದಮಿರಿಸಿದರಾಗಳ್ (ಸುಕುಮಾ. ೧೧-೨೬) ; ರಾಯನ ಮಡದಿಯರು ಹೊಂಗಳಸಜಲವನು ಪಡಿಗವನು ಹಿಡಿದಸುರರಿಪುವಿನ ಬರವ ಹಾರಿದರು (ಕುವ್ಯಾಉ. ೮-೩) ; ಹೊಂದಂಬಿಗೆಯುದಕವ ತಂದು ಚರಣಾರವಿಂದವ ಪಡಿಗದೆ ತೊಳೆದು ಗಂಧ ಕತ್ತುರಿಯಿಂದೆ ತಿಗುರಿಕ್ಕಿ ಪಾವುಡೆಯಿಂದೊರಸಿದರು ಸೌಖ್ಯದಲಿ (ಮೋಹತ. ೨೬-೩). **ಪಡಗ** : ೧. ಆನು ನಿಮ್ಮ ಬಂಟರ ಬಂಟ ನಾನಯ್ಯಾ . . . ಆನು ನಿಮ್ಮ ತೊತ್ತಿರ ಪಡ[ಪಾಠಾಂ.ಡಿ,ಡು]ಗವ ತೆಗೆವ ಪಡಿದೊತ್ತಯ್ಯಾ (ಬಸವ. ಕ. ೧೦೫೭). ೨. ವನಧಿಯೊಳೊಂದು ವಿಸ್ತೀರ್ನ ಕಂದದ ಮಧ್ಯಕನಕಮಯ ಪಡಗದಂದದಿ ಸೊಗಸುವೆತ್ತು . . . ಸಲೆ ರಾಜಿಪುದು ದ್ವಾರಾವತಿಪುರವು (ನನಮೋ. ೧೦-೮). ೪. ದೊಡ್ಡ ಮಡಕೆ ; ಹರವಿ : ನಿನ ತೋಳ್ ಮೊಸರಿಲಿ ಮುಳುಗಿದೆ ಕಳ್ಳ ಎನಲು ನಮ್ಮೆಳೆಗರು ಮುಳುಗಿದೆ ಪಡಗದಿ ದಣಿ ಹುಡುಕಿದೆ ನಾ ತಿನಲಿಲ್ಲೆಂಬ (ಪ್ರಸಭಾ. ೧೬-೨೧) ; ಮೂಗೂತಿ ಮುರಿದಿತ್ತು ಮುಂಜೆರಗು ಹರಿದಿತ್ತು ಮಜ್ಜೀಗಿ ಪಡಗ ಒಡದಿತ್ತ (ಲೋಕಗೀ. ೧೨೬). **ಪಡುಗ** : ೧. ಭಕ್ತರ ಪಡುಗ ಪಾದ ತ್ರಣು (ತೃಣ) ಪಹರೆ ಬಾಗಿಲು ಬೊಕ್ಕಸ ಬಿಯ್ಯಗ ಮುಂತಾದ

ಕಾಯಕವ ಮಾಡಿಕೊಂಡು (ಸರ್ವಸ. ೧೮೯–೮೮೪); ನೀವೆದ್ದ ಉನ್ಮನಿಯ ಪುರಕ್ಕೆ ಬಂದು ನಿಮ್ಮ ಪಡುಗ ಪಾದರಕ್ಷೆಯಂ ಪಿಡಿದು ನಿಮ್ಮ ಬಾಗಿಲ ಕಾಯ್ದಿಪ್ಪುದೇ ಎನಗೆ ಭಾಷೆ (ಘನವ. ೫–೨); ನಿಮ್ಮ ಶರಣರು ಉಟ್ಟ ಮೈಲಿಗೆಯ ಬಟ್ಟೆ ಉಗುಳಿದ ತಾಂಬೂಲ ಒಕ್ಕು ಮಿಕ್ಕ ಪ್ರಸಾದವನೆ ಕರುಣಿಸಿ ಅವರ ಪಡುಗ[ಪಾಠಾಂ. ಪಡುಗಾವ]ಕಾಯ್ವಂತೆ ಪಾದರಕ್ಷೆಯನೆ ಹಿಡಿವುದಕ್ಕೆ ಯೋಗ್ಯನ ಮಾಡಿ ಅವರ ಕಡೆಯ ಬಾಗಿಲನೆ ಕಾಯುವಂತೆ ಮಾಡಯ್ಯ ಎನ್ನ (ಅಖಂಡೇ. ೮೧–೭೦). ೨. ಆರು ಮೂರು ಪಡುಗಕೆ ಯಸರಿಕ್ಕಿದೆ ವಲೆಯಾನೆ ನಾವೂದಿದೆ (ಚಿದಾವ. ೬೮–೬); ಪಡುಗದೊಳು ಘೃತಮಂ ಸೋದಿಸುತ (ಲಿಂಗಪು. ೮–೨೧).

[<ಪ್ರಾ. ಪಡಿಗ್ಗಹ./ಸಂ. ಪತದ್ಗ್ರಹ]

ಪಡಿಗಚ್ಚು (ನಾ). (?) : ಅಂತಿದಿರಾಂತ ಮಾರ್ಪಡೆಯೆಲ್ಲಮಂ ಜವನ ಪಡೆಗೆ ಪಡಿಗ[ಪಾಠಾಂ. ಗೊ]ಚ್ಚಿಕ್ಕುವಂತಿಕ್ಕಿ ನಿಂದ ನರನಂದನನಂ ಕಂಡು . . . ಲಕ್ಕಣಂ ಮೊದಲಾಗೆ ನೂರ್ವರುಮೊಂದಾಗೆ ಬಂದು ತಾಗಿದಾಗಳ್ (ಪಂಪಭಾ. ೧೧–೯೪). P "ಪಡಿಗಂಚಿಕ್ಕುವಂತೆ ಎಂಬ ಪಾಠ ಇದ್ದಿರಬಹುದು" (ಪಂಪದೀ. ೪೧೩). [?]

ಪಡಿಗಟ್ಟಳೆ (ನಾ). ಸಮಾನ; ಎಣೆ : ತನ್ನೆಯ ತಿಣ್ಪನೇಳ್ಗೆ ಪಡಿಗಟ್ಟಳೆಯಾದುದು ಮಂದರಕ್ಕೆ ತನ್ನುನ್ನತಿ ಮೇರುವಿಂಗೆ ಮಣಿಚೂಣಿಯಾದುದು (ಸೌಇಇ. XI–II, ೧೭೩–೩೬; 1124). [ಪಡಿ$_3$+ಕಟ್ಟಳೆ$_1$]

ಪಡಿಗಟ್ಟು$_1$, ಪಡಿಕಟ್ಟು$_1$, ಹಡಿಕಟ್ಟು (ಕ್ರಿ). ೧. ಹೋಲಿಸು; ತಾಳೆ ನೋಡು : ಸುರವನಿತಾಜನಂಗಳ್ ಸುರೂಪವಿಳಾಸೆಯರೆಂದು ಬೀಗಿ ಧಿಕ್ಕರಿಸುವನಿಂದ್ರನೆಮ್ಮುವನವಂದಿರುಮಂ ಪಡಿಗಟ್ಟೆ ನೋಡುಗೀ ಬರವಿನೊಳಾದ ಚೆಲ್ವು ಮಿಗಿಲಿಲ್ಲಿಯೆ ಕಂಡಪನೆಂದು ತೋರ್ಪವೋಲ್ ನೆರೆದುದು ಪೆಂಡವಾಸದೆಳವೆಂಡಿರ ತಂಡಂ (ಪುಷ್ಪಪು. ೧೨–೨೧); ಬಡನಡುವಿನ ಬಾವನ್ನಗಂಪಿನ ಹೊಂಪಿಡಿದ ಹೊಂಬಳ್ಳಿ ಯೊಳೆಸೆವ ಕಡುಬಿಣ್ಪಿನ ಜಘನದ ಕಾಮಿನಿಗಿಂದು ಪಡಿಗಟ್ಟೆ ಪೇಳುವೆನೇನ (ಜೀವಂಸಾಂ. ೧೦–೨೫); ಮಡಿಗಳ ಕಾವ ಪುಳಿಂದಿನಿಯರ ರೂಪ ಪಡಿಗಟ್ಟೆ ಬಲ್ಲವರಾರು (ಮೋಹತ. ೨–೪೨). ೨. ಸಮಾನವಾಗು; ಸಾಟಿಯಾಗು : ಕಾದಿದರು ಬಿಡದೊಬ್ಬರೊಬ್ಬರೋಳ್ ದುರಾಗ್ರಹದಿಂದ ಸುಭಟರು ಮೇದಿನಿಯೊಳಿದಿರಲ್ಲ ಪಡಿಗಟ್ಟುವರೆ ಪಟುಭಟರು (ಕುವ್ಯಾಸ.ಓರಿಇ.೨–೧೩೪); ಅರಣ್ಯ ಮಧ್ಯದಲ್ಲು ಐತರುವ ಮತ್ತಗಜಗಳ ಸಮೂಹಕ್ಕೆ ತದ್ವಾಹನಾಲಂಕಾರ ಯುಕ್ತದಿಂ ಚಿತ್ತೈಸಿ ಕಂಠೀರವನವೋಲ್ ಪಡಿಗಟ್ಟೆ ಗಜಗಳೆಂಬ ಉಚ್ಚರಣೆಗೆ ನಾಣ್ಣುಡಿ ಕಾಣಿಪಂತೆ (ಎಕ. I, ೩–೮; 1822). **ಪಡಿಕಟ್ಟು$_1$** : ೧. "ಸ್ಕಂಭತೆ = ಪಡಿಕಟ್ಟಿದಪುದು" (ಕಾಶಕೃ. ೧೦೬). **ಹಡಿಕಟ್ಟು** : ೩. ಪ್ರತಿಯಾಗಿ ನಿಲ್ಲು; ಎದುರಿಸು; ಪ್ರತಿಭಟಿಸು : ಜಕ್ಕೆಯ ನಾಯಕಂ ಮೊನೆಯಿಟ್ಟೆಗೊಂಡನಾಯಕರ ಮೇಲೆವಾಯಲು ತಳಿಯ ಮಜ್ಜಿವಿಡಿದು ಹಡಿಕಟ್ಟಿದಾಳೆಚ್ಚು ಗೂಡಂಬಗೊಂಡು ಕೆಡಹಲು (ಮೈಅರಿ. ೧೯೪೧, ೪೨–೧; 13ನೆಯ ಶತ). [ಪಡಿ$_3$+ಕಟ್ಟು$_1$]

ಪಡಿಗಟ್ಟು$_2$, ಪಡಿಕಟ್ಟು$_3$ (ನಾ). ೧. ಸರಿಸಮಾನವಾದುದು; ಸರಿದೊರೆಯಾದುದು: ನೆಟ್ಟನಧಿರಾಜೇಂದ್ರಪಟ್ಟವ ಕಟ್ಟುವೆನು ಕಮಲಾಂಬಕನ ಪಡಿಗಟ್ಟನಗ್ಗದ ರಾಮಚಂದ್ರಂಗೆಂದು ನಿಶ್ಚೈಸಿ (ತೊರರಾ. ೨–೧–೧೧). **ಪಡಿಕಟ್ಟು$_3$** : ೨. ಅಡ್ಡಿಪಡಿಸುವಿಕೆ; ಪ್ರತಿಬಂಧನ : "ಸ್ವಭಿ, ಸ್ಕಭಿ — ಪ್ರತಿಬಂಧೇ, ಪಡಿಕಟ್ಟನೊಳ್" (ಕಾಶಕೃ. ೧೦೬). [ಪಡಿ$_3$+ಕಟ್ಟು$_2$]

ಪಡಿಗಣಿಸು (ಕ್ರಿ). (ಧಾನ್ಯ ಮೊದಲಾದುವನ್ನು) ಅಳೆದುನೋಡು; ಪರೀಕ್ಷಿಸು : ಆ ಮೂಗಳವ ನಡುಮೊಱದಲ್ಲಿ ಸುರಿಯೆ ಪಡಿಗಣಿಸುವಾಗ ಒಕ್ಕುಳವಾಯಿತ್ತು (ಮೋಳಿಮಾ. ೨೧೬–೬೬೧). [ಪಡಿ$_1$+ಗಣಿಸು]

ಪಡಿಗದ (ನಾ). ಬಾಗಿಲಿನ ಕದ,—ರೆಕ್ಕೆ : ನಡುಮನೆಯೊಳಿರ್ದವನ ಕೋಣೆಗೊಡಗೊಂಡೊಯ್ದು ಪಡಿಗದವನಿಕ್ಕಿ ಉಮ್ಮಳಿಸಿ[ಪಾಠಾಂ. ಪದಿಯ ನಿಕ್ಕುತ್ತಲುರವಣಿಸಿ]ಸುಜ್ಞನೆ ಸುಯ್ದು (ಕಲಿರ. ದೇ. ೩೧೧–೨೪).

[ಪಡಿ$_2$+ಕದ(<ಕದವು$_1$)]

ಪಡಿಗಯಿಸು (ಕ್ರಿ). ಸಮಾನವಾಗಿಸು; ಸಮಗೊಳಿಸು : ಅದಂ ಕಂಡು ಕಂಸಂ . . . ಘಟಶೂರ ಚಾಣೂರವಿಕ್ರಮದಿಂ ಸಮಕರ್ತರಿಯ ನೆನ್ನಯ್ಯಂ ಕೊಂಡನೆಂದು ಪಡಿಗಯಿಸಲೊಡನೆ ಸಿಗ್ಗಾಗಿ ಬೇಗಮಾಗಿ ಮನಂಗೆಯ್ದು (ಅರ್ಧನೇ. ೮–೧೦೬ ವ).

[ಪಡಿ$_3$+ಕಯಿಸು(<ಕೆಯ್ಸು)]

ಪಡಿಗಲ್ಲು (ನಾ). ಬಾಗಿಲಿಗೆ ಕದವಾಗಿ ಇಟ್ಟ ಕಲ್ಲು : ಕೊಂದು ಖಳನನು ಬಳಿಕ ಬಾಲರ ವೃಂದವನು ಬಿಲಮುಖದಲತಿಕೃಪೆಯಿಂದ ನೆಗಹಿದ ನೆಲ್ಲರನು ಪಡಿಗಲ್ಲನೀಡಾಡಿ (ನಿಭಾಗ. ೧೦–೩೨–೫೦).

[ಪಡಿ$_2$+ಕಲ್ಲು(<ಕಲ್$_3$)]

ಪಡಿಗವಿಡಿ (ಕ್ರಿ). ಪೀಕದಾನಿಯನ್ನು ಹಿಡಿದು ಸೇವೆ ಮಾಡು : ನಾನಾಸಮುದ್ರಾಂತಚಕ್ರೇಶ್ವರರ್ ಬಹುಜನ್ಮದಾ ಸುಕೃತಮೊದವಲೆಸಗಿದ ಯಜ್ಞಮುಖದೊಳ್ಳೆತಂದಿವರ ಪಡಿಗವಿಡಿವ ದಾಸಿಯರೊಳೊಂದಿವಸಮಿಪ್ಪುದಘಟತಮಪ್ಪುದು (ಚಿಬಪು. ೧೯–೪೫). [ಪಡಿಗ+ಪಿಡಿ$_1$]

ಪಡಿಗಾಣ್$_1$ (ಕ್ರಿ). ಎಣಿಸು; ಲೆಕ್ಕಮಾಡು : ಹಿಡಿಮಿಗವಕ್ಕಿಯ ತುಂಡುತುಂಡುಗಳನು ಸಡಿಲದೆ ಸೊಪ್ಪಿನೊಳ್ಪುದುಗಿ ದಡಿಗಿಕ್ಕಿ ಹೊತ್ತವರನಿತಿನಿತೆಂಬುದ ಪಡಿಗಾಣ್ಬೊಡೆ ಶಕ್ಯವಲ್ಲ (ಮೋಹತ. ೧೯–೮೬).

[ಪಡಿ$_1$+ಕಾಣ್]

ಪಡಿಗಾಣ್$_2$ (ಕ್ರಿ). ಸಮಾನವಾದುದನ್ನು ಕಾಣು : ಕಿಡಿಗಣ್ಣನೊಡ್ಡೋಲಗದಲ್ಲಿ ಸುರವೆಣ್ಗಳಿಡಿಕಿಱಿದಿಹುದು ನಿನ್ನೊರೆಗೆ ಪಡಿಗಾಣೆವು (ಮೋಹತ. ೨೬–೧೮); ಇವಳ ಪುಣ್ಯಕ್ಕೆ ಪಡಿಗಾಣೆವು (ಚತುಪು. ೩–೩–೫೦).

[ಪಡಿ$_3$+ಕಾಣ್]

ಪಡಿಗಿಱು, ಹಡಿಗಿಱು (ಕ್ರಿ). ಬಾಗಿಲನ್ನು ಮುಚ್ಚು; ಕದವಿಕ್ಕು : ಊರೂರ ದೈವಂಗಳುಂ ಪಡಿಗೆತ್ತೋಡಿದುವೀಕೆಗಂಜಿ (ಲೀಲಾವ.೨–೧೦೨); ಇನದೀಪಂ ನಂದಿರೆ ಬಂದು ನಿಶಾರಾಕ್ಷಸಿ ಚರಾಚರೌಘಗ್ರಸನಾರ್ಥಿನಿ ಭುವನಭವನಮಂ ಭೋಂಕನೆ ಪಡಿಗೆತ್ತಂದವಾದುದಂದು ತಮಂಧಂ (ಜಗವಿ. ೧೬–೧೦೧); ಕುಡುಕೆಂದು ತಂದು ಚಂಚೂವಿವರಕ್ಕೆ ಮಾಣಿಕದ ಮುದ್ರಿಕೆಯಂ ಪಡಿಗೆತ್ತು ಭಾರತೀದೇವಿ ನಿರಂತರಂ ಸವಿವಳಾತನ ನವ್ಯ ವಚೋವಿಳಾಸಮಂ (ಧರ್ಮನಾ.೧–೬೩); ತೆಗೆದ ಕಣ್ಗಳ ಬಾಗಿಲಿಂದವನನು ತಂದು ಪುಗಿಸಿ ಮರಳಿ ಪೋಗದಂತೆ ಮಿಗೆ ತುಱುಗೆವೆ ಪಡಿಗೆತ್ತ [ಪಾಠಾಂ. ಪಡಿಗೆಳ್ತ, ಪಡಿಗೆಳ್ತ]ಳೆಂಬಂತಾಗ ಮುಗಿದವು ಕಣ್ಗಳವಳಿಗೆ (ಕುರಾಸಾಂ. ೨೨–೧೫). **ಹಡಿಗಿಱು** : ಬೆದೆವೋದ ಸವಣನಡುಹುಳ್ಳ ಕಂತಿಯನವಚಿ ಕೊಂಡೀಗ ನಾಚಿ ಹಡಿಗೆತ್ತಿರ್ದನೊ (ಸೋಮಚ. ೪–೪೫); ಚಂದ್ರನೊಡಲ ನೆಳಲಿನಿತು ಸೋಂಕಿದೊಡೆನ್ನ ಪತಿ ಮುನಿವನೆಂದು ಸಿರಿ . . . ಅಳ್ಕಿ ಮೇಣಿಸಳ ಹಡಿಗೆತ್ತು ಕೊಂಡಳೆಂಬಂತಲರ್ದ ತಾವರೆಗಳುಡುಪನುದಯಕ್ಕೆ ಮುನ್ನವೆ ಮುಗಿದವು (ಚೇರಮ. ೬–೩೧); ವೇದಪುರುಷರೆಲ್ಲಾ ನಡೆತಂದು ಪೂಜಿಸುತ್ತಾರು ತೆಗೆಯದ ತೆಱದಿ ಹಡಿಗೆತ್ತು ಹೋದ ತದ್ಬ್ರಹ್ಮೇಶ ನಾಲಯದ ಎಡೆಗೆ ಬಂದು (ವೀಶೈಪು. ೪–೯–೧೧). [ಪಡಿ$_2$+ಕಿಱು$_1$]

ಪಡಿಗುಂಜಿ (ನಾ). (ತೂಕವನ್ನು) ಸರಿದೂಗಿಸಲು ಇಟ್ಟ ಗುಲಗುಂಜಿ : ವರುಣಗಿರಿ ಪೂರ್ವಾದ್ರಿಗಳ ಹೆಚ್ಚುಕುಂದಮಂ ಸರಸಿಜಭವಂ ನೋಳ್ಪೆನೆಂದು ತೂಗಲ್ ಸಮಂ ಬರದಿರಲ್ ಪೂರ್ವಾದ್ರಿಗಿಟ್ಟ ಪಡಿಗುಂಜಿಯೋ . . . ಚಂದ್ರಮಂಡಲಂ (ಚಿಬಪು. ೯–೧೬).

[ಪಡಿ$_1$+ಗುಂಜಿ]

ಪಡಿಗುಂಡು (ನಾ). ೧. ಮತ್ತೊಂದು ಕಲ್ಲನ್ನು ಒಡೆಯಲು ಉಪಯೋಗಿಸುವ ದುಂಡಾದ ಕಲ್ಲು: (೬). ೨. ಕಟ್ಟಡದ ತಳಪಾಯಕ್ಕೆ ಬಳಸುವ ಕಲ್ಲು; ಅಡಿಗಲ್ಲು : (೬).

[ಪಡಿ$_3$+ಗುಂಡು]

ಪಡಿಗೊಳ್ (ಕ್ರಿ). ಪ್ರತಿಯಾಗು; ಸದೃಶವಾಗಿರು : ಪೊಣ್ಮೆ ಪಾಯ್ದು ಪೊಜಸೂಸಿ ಪೊದಳ್ದಿಸೆವೊಳ್ಗದಿರ್ಗಳಂ ಮುಣಿಮುಯದೊಪ್ಪು ವೊಂದು ತೊಡವಂ ಪಡಿಗೊಳ್ವುದು ಶಬ್ದಮೆರ್ಬಾನಾ (ಚಕವಿ. ೧-೧೦); ತಾಳ್ಮೆಯೊಳ್ ತಿರೆಯಂತಿರೆ . . . ಸಿಡಿಲ ಪೊಡವುಂ, ಕಡಲ ಗುಣ್ಪು, ಪಡಿಗೊಳೆ ದಶರಥಕುಮಾರಂ ರಾಜ್ಯಮನಾಳುತಿರ್ದಂ(ರಾಮಾಶ್ವ. ೬-೧೮೮).

[ಪಡಿ$_3$ + ಕೊಳ್$_1$]

ಪಡಿಗೋಂಟೆ, ಪಡಿಗೋಟಿ (ನಾ). ೧. ಇನ್ನೊಂದು ಕೋಟೆ; ಮತ್ತೊಂದು ಕೋಟೆ : ಪಡಿಗೋಂಟಿಗೆಯುಂ ಕಡುವಂ ಪಡಿಯಗಟ್ಟಿಸಿ ಯ್ದಳವನಾಪುರ ಕಡುಗೂರ್ಪಗಳಂ ಪಡಿವಡೆಗೆಯ್ದುಂದವರೊಳ್ ಪಡಿಬರಿಸಿ ದರಮನು ವಿಷ್ಣುಜಿಷ್ಣುಗಳನ್ಸರ್ (ಚಕವಿ. ೨-೪೫). ೨. (ಯುದ್ಧದ ಸಂದರ್ಭಗಳಲ್ಲಿ ನಿರ್ಮಿಸುವ) ಕೃತ್ರಿಮವಾದ ಕೋಟೆ,—ದುರ್ಗ: ನಡೆಸಾರಂ ಬದ್ದರಂ ಗೆಗ್ಗೆ ಡೆಂಕಣ ಗುಮ್ಮಂ ಪಡಿಗೋಂಟೆಯೆಂಬ ಬಹು ಕೋಟಾಯಂತ್ರಸಾಮಗ್ರಿ ತಿಂತಿಣಗೊಂಡಾಂತರೆ ಲಗ್ಗೆಗಾರ್ದುಂ ಮನು ಷೇಣಂ ಸಾದುಂ ಸೂಳ್ಕೆಸಿದಂ (ಆಸಂಪು. ೧೧-೮೩); 'ಪಡಿಗೋಂಟೆ' ಎಂದರೆ 'ಪ್ರತಿದುರ್ಗ',ಎಂದರೆ ರಚನೆ ಮಾಡಿದ ಕೃತ್ರಿಮದುರ್ಗ(ಕರ್ನಾಜ. ೨೪). **ಪಡಿಗೋಟೆ** : ೧. ಮಾಟಿನಿಪ ಗಂಧರ್ವರೊಂದೇ ಕೋಟೆ ಕವಿದುದು ಕುರುಬಲಕೆ ಪಡಿಗೋಟೆಯೊದುದು ನೃಪತಿ ಸಿಲುಕಿದನವರ ವೇಡೆಯಲಿ (ಕುವ್ಯಾಆ. ೧೯-೫೦); ಮಿಸುನಿಯೆರಳದಲೆಸೆವ ಪ್ರಾಕಾರ ಸಪ್ತಕಗಳಸುವೀವ ರತ್ನಗಳ ತೆನೆಗಳಂ ವೈಡೂರ್ಯವಸರಮೆನಲಾಳ್ವೇರಿ ನೀಲದಗಳಲ್ಲಲ್ಲಿ ಪಚ್ಚೆಗಳ ಪಡಿಗೋಟೆಯುಂ (ನಂಕಾರಾ. ೫-೨-೪). ೨. ಅಸದಳದ ಪಡಿಗೋಟೆ ಪಡಿಯಗಳಸಮರಣಜೂಟಾಳಸೂತ್ರಪ್ರಸರದಲಿ ನೆಲಗೋಟೆ ಬೆದಱಿಸಿತಮರಸಂತತಿಯ (ತೊರರಾ. ೬-೭-೫).

[ಪಡಿ$_3$ + ಕೋಂಟೆ]

ಪಡಿಗೋಟೆ 'ಪಡಿಗೋಂಟೆ' ನೋ.

ಪಡಿಗ್ಗಹ (ನಾ). ಹಿಡಿಯುವವನು; ವಶಪಡಿಸಿಕೊಳ್ಳುವವನು : ರಿಪುರಾಯದಂಡುಗೆ ಪಡಿಗ್ಗಹನೆಂಬುರುವೀರದೇಟ್ಗೆ ತನ್ನೊಳೆ . . . ನೆಲಸಲ್ಕುದಾತ್ತನೆನೆ ವಿಜ್ಞಳನಾಯಕನರ್ದನುಬ್ಬಿಯೊಳ್ (ಎಇ. XV, ೬೫೧-೪೪ ; 1172).

[<ಪಾಲಿ. ಪಟಿಗ್ಗಹ = ತೆಗೆದುಕೊಳ್ಳುವುದು./ಸಂ. ಪ್ರತಿಗ್ರಹ]

ಪಡಿಚ 'ಫಡ್ಚ' ನೋ.

ಪಡಿಚಂದ, ಪಡಿಛಂದ (ನಾ). ೧. ಪ್ರತಿಚ್ಛಾಯೆ; ಪ್ರತಿಕೃತಿ : "ಪಡಿಚಂದ-ಪ್ರತಿಚ್ಛಂದ = ಪ್ರತಿಚ್ಛಾಯೆ" (ತಪ್ಪ ಕೋ.೨೩); ಅಣ್ಮನ ಪಡೆ ಮಾತದೊಂದೆ ನೆವಮಾಗಿರೆ ಕೆಯ್ದುವನಿಕ್ಕೆ ಸತ್ತ ಸಾವಿನ ಪಡಿಚಂದ ಮಾಗಿಯುಮಿದೇಂ ನಿಮಗಟ್ಟುಯೊ ಗಂಡವಾತುಗಳ್ (ಪಂಪಭಾ. ೧೨-೪೧); ವಿದ್ಯಾಸಂದೋಹದೊಳಣ್ಣನ ಪಡಿಚಂದಂ ಚಕ್ರಾಯುಧಂಗೆ ಗುರು ಪೆಜಸೊಳನೇ (ಶಾಂತಿಪು. ೧೦-೯೪); ಸುರೇಶ್ವರಭವನಕ್ಕೆ ತಾನೆ ಪಡಿಚಂದಮಿದೆಂಬಿನನುಚ್ಚರಕ್ಕೆ ತಾಯ್ಗುರು ಕರುಂಮಾದಮೊಪ್ಪುವುದಳಂಕೃತ ಸಪ್ತತಳಂ ನಿರಾಕುಳಂ (ಪುಷ್ಪಪು. ೨-೯೨); ಎರಡು ಪದಂಗಳಪಚ್ಚಂಶಕ್ಕೆ . . . ಪ್ರತಿಚ್ಛಂದ—ಪಡಿಚಂದ (ಶಮದ. ೨೪೯ ಪ್ರಯೋ). ೨. ಶ್ರೇಷ್ಠವಾದುದು; ಉತ್ತಮವಾದುದು : ಸಹಸ್ರಾಯುಧಂ ಜಿನೇಶ್ವರರೂಪಮಂ ತಾಳ್ದಿ ದುಶ್ಚರತಪಶ್ಚರಣಪರಿಣತವಿಹಾರನಾಗಿ ಮುನಿವೃಂದಕ್ಕೆ ಪಡಿಚಂದಮಾಗಿ ನೆಗಟ್ಟುತ್ತಿರೆ (ಶಾಂತಿಪು. ೯-೨೯ ವ); ಪೂಣ್ದೀ ಮಾತೆ ನುಮಾತಾಗೆ ತಾನಾವಂಗಂ ಪಡಿಚನ್ದಮಾದೆಸಕದೊಳ್ಪೆರ್ಮ್ಮಡಿಗಂಗೊಪ್ಪರೀ (ಎಇ. IV, ನಾಗಮುಂ. ೫೧-೧೨ ; 972) ; ವಸುಧೆಗೆ ನಿತ್ಯಮಂಡಿತಜಿನಾಲಯಮಂ ಪಡಿಚಂದಮಾಗೆ ಕಜ್ಜಿಸಿದರೆ ನೂತ್ನರತ್ನಮಯಮಾಗಿರೆ ಮಾಡಿಸಿ (ಸುಕುಮಾ. ೧೦-೫೫) ; ಆಳಂಕರಣಮಿತ್ತೀಲ್ಗೆಯ್ಮನೆದಿಟ್ಟು ಭವ್ಯ ಮುನ್ಪಿರ್ಗೆ ಪಡಿಚಂದಮಾದ[ವ]ನೆ ಧಾರ್ಮ್ಮಿಕ ಧರ್ಮ್ಮಾಜನೇಂ ಕ್ರಿತಾರ್ತ್ಥನೋ (ಸೌಇಇ. IX-i, ೧೬೧-೪೭ ; 1092) ; ಅಗಣಿತಮಪ್ಪ ಪಾಣ್ಣಿನ ಬಲವರ್ ನೆಜಿ ××× ಧಾತ್ರಿಗೆ ಪಡಿಚನ್ದಮಾಗಿ (ಎಕ.XI, ಹೊಳಲ್ಕೆ. ೧೦೪-೩೪ ; 1228). **ಪಡಿಛಂದೆ** : ೨. ಮುಣ್ಡಲಕ್ಕೆಲ್ಲಂ ಪಡಿಛಂದಮಾಗೆ ತಿಲಾಸ್ತಂಭಂ ಶಾಸನವಾಗೆ ನಟ್ಟಂ (ಎಇ. VI, ೫೧೬-೬೨ ; 1058). [<ಪ್ರಾ. ಪಡಿಚ್ಛಂದ./ಸಂ. ಪ್ರತಿಚ್ಛಂದ]

ಪಡಿಚರ (ನಾ). ೧. ಪ್ರತಿ ಸೇವಕ; ಪ್ರಡಿದೊತ್ತು : ಅಡಕಿವರು ಪಡಿಚರರು ಕುಶಸಮಿಧೆಗಳ ಹೊಜೆಗಳನು (ಕೌತಾ. ೧-೬೦). ೨. ಸೇವಕನ ಕಾರ್ಯ; ಊಳಿಗ : ಮುಂದಣ ರಾಜಕಾರ್ಯವನೆಣ್ಣಿ ಪಡಿಚರದ ಜೋಡಿನವರ್ಪ್ಪುದನು (ಕೃಷ್ಣಾಶ್ವ. ೧೬-೬೦). [ಪಡಿ$_3$ + ಚರ]

ಪಡಿಚಾಯೆ (ನಾ). ಪ್ರತಿಬಿಂಬ; ಪಡಿನೆಳಲು: 'ಪಡಿಚಾಯೆಗೊಳ್' ಪರಾ. [<ಪ್ರಾ. ಪಡಿಚ್ಛಾಯಾ./ಸಂ. ಪ್ರತಿಚ್ಛಾಯಾ]

ಪಡಿಚಾಯೆಗೊಳ್ (ಕ್ರಿ). ಪ್ರತಿಬಿಂಬಿಸು; ಮೂಡು : ಭಾವರಸಂ ಪಡಿಚಾಯೆಗೊಳ್ವನಂ ಪಡೆವುದು ಬಣ್ಣಗಬ್ಬಮದು ನರ್ಘರದೀ ಕವಿಗಳ್ಗೆ ಪರ್ಬಮಂ (ಚಕವಿ. ೧-೧೨). [ಪಡಿಚಾಯೆ + ಕೊಳ್$_1$]

ಪಡಿಚಾರ (ನಾ). = ಪಡಿಚರ ೧ : ಅವನ ಬಾಗಿಲಶಟ್ಟಿಗೆಯು ಪಡಿಚಾರರಿವನೊಡಹುಟ್ಟಿದರು ಸಹಭಂಗ ಬಿಟ್ಟರೆ ನರವ್ಯಕೋದರರ ನಿಟ್ಟಿಸಲು (ಕೃಷ್ಣಾಶ್ವ. ೧೦-೩೦). [ಪಡಿ$_3$+ಚಾರ]

ಪಡಿಛಂದ 'ಪಡಿಚಂದ' ನೋ.

ಪಡಿತನೆ (ನಾ). ಪ್ರತಿಯಾಗಿರುವಿಕೆ; ದ್ವೇಷ : ಸಂಧಿಸಲು ಲಗ್ನೇಶತಾ ರಿಪುಮಂದಿರದಿ ತಸ್ಥಾನನಾಯಕ ಹೊಂದೆ ಲಗ್ನವ ಶತ್ರು ಪಡಿತನವನು ತಿಳಿಯಂದ (ಕೇರಪ್ಪ. ೯-೧೪). [ಪಡಿ$_3$ + -ತನ]

ಪಡಿತರ (ನಾ). ೧. (ದೇವಸ್ಥಾನ ಮುಂತಾದ ಕಡೆಗಳಲ್ಲಿ ಕೆಲಸ ಮಾಡುವವನಿಗೆ) ಧಾನ್ಯರೂಪದಲ್ಲಿ ಕೊಡುವ ದೈನಂದಿನ ಭತ್ಯ: ಶ್ರೀ ನಾರಾಯಣದೇವರಿಗೆ ಪಡಿತರಭೂಮಿಯ ಶ್ರೀವೈಷ್ಣವರು ಕೊಟ್ಟು ತನ್ನ ಕೈಂಕರ್ಯವಾಗಿ ನಡಿಸುವುದು (ಎಇ. XIV, ಶ್ರೀರಂಗ. ೪೭-೧೯ ; 1360 ?) ; ನಗರೇಶ್ವರಸ್ವಾಮಿಯವರಿಗೆ ಪಡಿತರ ದೀಪಾರಾಧನೆ ಅರ್ಚನಾವೃತ್ತಿ ಮೊದಲಾದ ದೇವತಾಕಾವಗೋಸ್ಕರವಾಗಿ . . . ಶ್ರೀರಾಮಚಂದ್ರಸ್ವಾಮಿಯವರಿಗೆ ಸಮರ್ಪಿಸಲಾಗಿ (ಎಕ. IX, ಬೆಂಗಳೂ. ೯೬-೪ ; 1402 ?) ; ಶ್ರೀನಂಜುಂಡೇಶ್ವರಸ್ವಾಮಿಯವರ ಮಹಾನವ್ಯಧಾನಕ್ಕೆ ಅಂತರಂಗನೈವೇದ್ಯ ಪಡಿತರ ದೀಪಾರಾಧನೆ . . . ಮಹಾದಿಮೋತ್ಸವಾದಿ ಕಟ್ಟಳೆಗಳಿಗೋಸ್ಕರವಾಗಿ ವರ್ಷವರ್ಷವೂ ಸಲಿಗೆಯೊಪ್ಪಿಸುವ ದೇವದಾಯದ ಕಾಣಿಕ್ಕೆ (ಬರುಗಂ. ೨೬-೬) ; ವೀರಮಲ್ಲಣ್ಣ ಒಡೆಯನು, ಗಿ ನಂಬಿಗೇ ಸಿದ್ಧೇಶ್ವರನ ಗುಡಿ . . . ಮುಂತಾದ್ದನ್ನು ಕಟ್ಟಿಸಿ, ಇವುಗಳ ಪಡಿತರ ದೀಪಾರಾಧನೆಗೆ ೧ ಮುಸಂಡಿಹಾಳು ೨ ಚಕ್ಕಪುರ, ಈ ಎರಡು ಗ್ರಾಮಗಳನ್ನು ಕೊಟ್ಟನು (ಚತ್ರಪಾ. ೬). ೨. ಸರ್ಕಾರದವರು ನಿಗದಿಯಾದ ಬೆಲೆಯಲ್ಲಿ ಸಾರ್ವಜನಿಕರಿಗೆ ಒದಗಿಸುವ ನಿರ್ದಿಷ್ಟಪ್ರಮಾಣದ ದಿನಸಿ ಮೊದಲಾದುವು : ಹಣದ ಮುಗ್ಗಟ್ಟು ವಿಪರೀತವಾಗಿತ್ತು. ಪೇಟೆಯ ಧಾರಣೆ ಇಳಿದಿದ್ದಾಗ ಸರ್ಕಾರೀ ಡಿಪೋಗಳಲ್ಲಿ ಸೊಸೈಟಿಗಳಲ್ಲಿ ಪಡಿತರ ದಿನಸಿ ಬಟ್ಟೆಬರೆಗಳ ಧಾರಣೆ ಎಂದಿನಂತೆಯೇ ಇತ್ತು (ಸುರಳಿ. ೧೬೦). 'ಪಡಿತರವದ್ಧತಿ' ಪರಾ.

[ದೇ.॥ ತಮಿ. ಪಟತ್ತರ ; ಮಲ. ಪಡಿತ್ತರ ; ತೆಲು. ಪಡಿತರ]

ಪಡಿತರ ಪದ್ಧತಿ (ನಾ). ಸರ್ಕಾರದವರು ನಿಗದಿಯಾದ ಬೆಲೆಯಲ್ಲಿ ಸಾರ್ವಜನಿಕರಿಗೆ ನಿರ್ದಿಷ್ಟ ಪ್ರಮಾಣದಲ್ಲಿ ದಿನಸಿಗಳನ್ನು ಒದಗಿಸುವ ಪದ್ಧತಿ,-ಕ್ರಮ: ಕ್ಷಾಮನಿವಾರಣೆಗೊಳಿಸಿದ ಕೆಲಸ ಪಡಿತರಪದ್ಧತಿ ನಿಲಿಸಿದ ದಿವಸ (ಕುಮಾಕೃ. XIII ಮೊದಲ ನುಡಿ). [ಪಡಿತರ+ಪದ್ಧತಿ]

ಪಡಿತಳ (ನಾ). ೧. ಮುನ್ನುಗ್ಗುವಿಕೆ; ಎದುರುಬೀಳುವಿಕೆ; ಆಕ್ರಮಣ: ಹೊಯ್ದುರೊಡ್ಡಿದ ರಣದ ಮೊನೆಯಲಿ ಹಾಯ್ದುರೊಳಸುಳಿಯಿಂದ ಕಳೆದರು ಕಾಯ್ದು ಹೆಣಗಿದರುಪ್ಪರಕೆ ಜಾಱುದರು ಪಡಿತಳಕೆ ಮೈದೆಗೆದರಡಹೊಯ್ಲಿನಲಿ (ಕುಮ್ಯಾಅ. ೭-೩೫); ಮುತ್ತಿತಾ ರಿಪುಸೇನೆ... ತಿತ್ತಿರಿಯ ತಂಬಟದ ಲಗ್ಗೆಯ ಮತ್ತವಾರಣ ಹಯದ ರಣರಥಪತ್ತಿಗಳ ಪಡಿತಳದ ಭಾರಿಯ ಘೋರಘೋಷದಲಿ (ತೊರರಾ. ೩-೬-೩). ೨. ಇಡಿಕೆರಿದುದು; ಒಟ್ಟಾಗಿರುವುದು: ಬರಬರಲು ತತ್ಪುರದ ಮಧ್ಯದ ಪರಿಸರದ ಪಡಿತಳದ ನಾನಾಪರಿಯ ಪಲ್ಲವಗಳ ಪತಾಕಾವಳಿಯ . . . ಹರ್ಮ್ಯವ ಕಂಡನಿದಿರಿನಲಿ (ತೊರರಾ. ೫-೩-೨).

ಪಡಿತಳವ ಬೀಸು = ಆಕ್ರಮಣವನ್ನು ಸಾರು,— ಘೋಷಿಸು: ಪಡಿತಳವ ಬೀಸಿದರೆ ಕಾಲಿಕ್ಕಡಿ ನಡುವ ತಾಗಿದರೆ ಮಂಡಲವುಡಿದು ಬಿದ್ದುದು ನಿಲುಕಿನುಪ್ಪರ ಶಿರವ ಮನ್ನಿಸದು (ಕುಮ್ಯಾಭೀ. ೪-೩೭).

[?. / ಸಂ. ಪ್ರತಿಸ್ಥಲ?]

ಪಡಿತಳಿಸು (ಕ್ರಿ). ೧. ಮುನ್ನುಗ್ಗು; ಮೇಲೆ ಬೀಳು; ಆಕ್ರಮಿಸು: ಆನೆವಿಂಡಂ ಕಂಡು ಸಿಂಹವೆಯ್ದುವ ತೆಜದೆ ಏನೆಂಬೆನಾ ಬಲಕ್ಕೊಬ್ಬನೆಯ್ದಿದನುಜದೆ ಎಯ್ದಲೆಯ್ದಿತ್ತೊಡನೆ ನಂದೀಶಗಣಕುಲಂ ಎಯ್ದಿತ್ತು ಪಡಿತಳಿಸಿ ಘುಡುಘುಡಿಸುತಾ ಬಲಂ (ಕಲಿರ. ದೇ.೩೦೬-೧೦); ಧುರವ ಗೆಲಿದನು ಪಡಿತಳಿಸಿ ನಾವುರವಣಿಸಲಡಹಾಯ್ದು ನಮ್ಮನು ಹರನ ವರವುಂಟೆಂದು ತಡೆದನು ಸಿಂಧುಭೂಪಾಲ (ಕುಮ್ಯಾದ್ರೋ. ೮-೨೮); ತಱುಬಿ ಪಡಿತಳಿ[ಪಾಠಾಂ. ಬಲಿ]ಸುವ ಭಟಾಳಿಯನುಱುಬಿ ಬೀದಿಯಲಾನುವಧಟರ ಹಱುಬ ಹಸರಿಸಿ ಹೊಕ್ಕರೀಶನ ರಾಜಮಂದಿರವ (ತೊರರಾ. ೪-೯-೩೧); ಇಂತು ಕಡುಗಲಿತನಂ ಕೈಮಿಕ್ಕು ಕಾದುವ ಧನುರ್ಧರರ ಕಡುಪಂ ಕಂಡು . . . ಒಡ್ಡುಗೊಂಡಡ್ಡಣಕಾಱರಾರ್ದು ಸಾರ್ದು ಸಂರಂಭಸಂಭ್ರಮಮಿಂಬುವಡೆಯೆ ತಡೆಯದೆ ಪಡಿತಳಿಸಿ ಗೊಂದಣಿಸಿನಿಂದು (ರಾಜಶೇ. ೬-೫೧ ಪ). ೨. ಕವಿ; ಆವರಿಸು; ವ್ಯಾಪಿಸು: ಅಬ್ಬರಣೆ ಪಡಿತಳಿಸಿದುದು ಪರಬಲವನೀ ಕಪಿಬಲಮಹಾರ್ಣವವ (ತೊರರಾ. ೬-೧೩-೨). ೩. ಒಂದುಗೂಡು; ಒಟ್ಟಾಗು: ಕಲಿಗಳ್ ಕರತಳದಿ ನೊರೆಗಳೆದು ಕುರುಳ್ಚುವ ಕೈದುಗಳ ಬಳ್ಳಿವೆಳಗಿಂ ಗೊಂಚಲ್ಮಿಂಚುಗಳ್ ಸಂಚಳಿಸಿದಂತೆಯುಂ ಪಡಿತಳಿಸಿ ನಡೆಗೊಳ್ವ ಸಿಂಧುರಾರುಣಿತ ಗಂಧಸಿಂಧುರ ಸಂದೋಹದಿಂ ಸಂಧ್ಯಾರುಣಿತ ಪಶ್ಚಿಮಾಚಲಂ ಪಲವು ರೂಪಾಂತು ನಡೆಗೊಳ್ವಂತೆಯುಂ (ರಾಜಶೇ. ೧೩-೭೭ ಪ). ೪. ಹಿಮ್ಮೆಟ್ಟಿಸು: ಆ ಪೊಟ್ಟಾಂಗೆ ಮೂಡಿವರ್ಷ ಸೆಗಳಿಗದಿರನ ತೇಜಮಂ ಪಡಿತಳಿಸಿ ಕಡೆಗಣ್ಮುವ ಸಿರಿಮೊಗದ ಕಾಂತಿಯಿಂ . . . ಚೆಲ್ವಾದ ಭೂಸುರಂ . . . ಬರುತುಮಿರ್ಪುದುಂ (ರಾಮಾಶ್ವ. ೭೫-೧೮). ೫. (?): ತನುವಿದಂ ಕೈವಿಡಿಯದಿರು ನೆನಹಿಂದ ಮೆಲ್ಲನನನ್ಯಲಕ್ಷ್ಯವನು ತುಡುಕುತಿಹುದೆಡೆಗೆಟ್ಟುದೊಡೆ ಮುರಿದಡರಿ ಹಠದಿಂದಡಿಗಡಿಗೆ ಬೆಂಬಿಡದೆ ಪಡಿತಳಿಸುತ್ತಲಿರುತಿಹುದೆಂದ ದೇಶಿಕನು (ಸದ್ಗುರು. ೨-೬). [ಪಡಿತಳ+-ಇಸು$_3$./ಮರಾ. ಪಡತಳಣೇ]

ಪಡಿತಾಳ (ನಾ). ಹೋಲಿಕೆ; ತಾಳೆ ನೋಡುವಿಕೆ: ಸನ್ ೧೮೭೨ನೇ ವರ್ಷದ ಖಾನೇಸುಮಾರಿಗೂ ೧೮೮೧ನೇ ವರ್ಷದ ಖಾನೇಸುಮಾರಿಗೂ ಪಡಿತಾಳ ನೋಡಲಾಗಿ, ವಿಜಾಪುರ ಜಿಲ್ಲೆಯಲ್ಲಿ ಸುಮಾರು ೨೩೪೮೪೧ ಜನ ಸತ್ತರೆಂತಲೂ . . . ತಿಳಿಯುತ್ತದೆ (ಕಭಾಗೆ. ೨೭೮).

[←ಮರಾ. ಪಡತಳ, ಪಡತಾಳಾ]

ಪಡಿತುಳಿಲ್ಗೆಯ್ತು (ನಾ). ಪ್ರತಿಯಾಗಿ ನಮಸ್ಕರಿಸುವಿಕೆ; ಪ್ರತಿನಮಸ್ಕಾರ: ಕನಕರತ್ನಪ್ರಚುರನಾನಾರಣಾಲಂಕಾರರಿಪುಭಯಾಕಾರಮಾವಿಪುಲವಪುವಂ ಮೆಚ್ಚಿ ನೋಡಿ, ಕುಳ್ಳಿರವೇಳ್ದು, ತಲೆಯೊಲೆತದಿಂ ಪಡಿತುಳಿಲ್‌ಗೆಯ್ತುಮಂ ಸಲಿಸಿ ತಾನುಂ ಕುಳಿತನಾ ಕುಬೇರಾರಿ (ಶ್ರೀರಾಮಾ. ೬೨೧-೧೦೩). [ಪಡಿ$_3$+ತುಳಿಲ್(<ತುಟಿಲ್$_1$)+ಕೆಯ್ತು$_1$]

ಪಡಿತೊತ್ತು 'ಪಡಿದೊತ್ತು' ನೋ.

ಪಡಿದಂಡಿ(ನಾ). = ಪಡಿಚರ ೧: ಕೊಡಲೊಡವೆಯ ಕಾಣದೆ ಮೋಹಕ್ಕೆ ಸಿಕ್ಕಿಯೆಡೆಯೆಡೆಗೈದಿ ಬಂದವನ ತೊಡೆ ಕೈಕಾಲನೊತ್ತಿಸಿಕೊಂಡು ನಿನ್ನಯ ಪಡಿದಂಡಿಯ ಮಾಡು ಮಗಳೆ (ಕಂನವಿ. ೬-೧೫೮). [ಪಡಿ$_3$+ದಂಡಿ$_5$]

ಪಡಿದಂಡಿತನ (ನಾ). ಊಳಿಗ; ಸೇವಾವೃತ್ತಿ: ತಳಕಾಡವನ್ನೆಯ ನವರೊಳು ಗರ್ವಿಸಿ ಸ್ಥಳಕುಳವೆಲ್ಲವ ನೀಗಿ ತೆಲುಗರನೋಲೈಸಿ ಪಡಿದಂಡಿತನದಲಿ ನೆಲಸಿರುವುದ ನೀನಱಿಯ (ಕಂನವಿ. ೧೮-೧೩೦).

[ಪಡಿದಂಡಿ+-ತನ]

ಪಡಿದನಿ (ನಾ). ಪ್ರತಿಧ್ವನಿ; ಮಾರ್ದನಿ: "ಪಡಿದನಿ—ಪ್ರತಿಧ್ವನಿ" (ತದ್ಭಕೋ. ೨೩); ಸಿಂಗಮಿರೆ ತನ್ನ ನೆಲೆಯೊಳ್ ಪೊಂಗುವ ಪಡಿದನಿಗೆ ಬೆದಱಿ ಮದಕರಿನಿಕರಂ ಬಂಗಂಬಡೆದೋಡುವ ವೋಲ್ ಕೊಂಗಂ ನೀಂ ಬರ್ಪ ಮಾತಿನಿಂದಮೆ ಪರಿದಂ (ಚಿಕವಿ. ೫-೮೫); ಒಬ್ಬರಿಗೊಬ್ಬರು ಗುದ್ದಾಡುವ ಸದ್ದು ಬೆಟ್ಟಗಳೆಡೆ ಸುಳಿದು ಪಡಿದನಿ ಕೇಳಿಸತೊಡಗಿತು (ಭಾಸರ.೧೦); ಮೊದಲಿನ ತೆರದೊಳೆ ಪಡಿದನಿಯಾದುದು ಬೆಚ್ಚಿಸಿ ಬೆದರಿಸಿ ಬಾಲಿಕೆಯ (ನಲ್ಮೆ. ೧೧-೧೭). [ಪಡಿ$_3$+ದನಿ$_1$./ಸಂ. ಪ್ರತಿಧ್ವನಿ]

ಪಡಿದನಿಗುಟ್ಟು (ಕ್ರಿ). ಪ್ರತಿಧ್ವನಿಯನ್ನು ಕೊಡು; ಮಾರ್ದನಿಗೊಡು: ಕಿವಿಗಳಲ್ಲಿ ಅವಳು ಹಾಡಿದ ಗೀತೆಗಳು ಪಡಿದನಿಗುಟ್ಟಿದುವು (ಹಾಹುತ್ತ. ೭೨). [ಪಡಿದನಿ+ಕುಟ್ಟು$_1$]

ಪಡಿದವಸ (ನಾ). ಮಾಡಿದ ಕಾರ್ಯಕ್ಕೆ ಪ್ರತಿಫಲವಾಗಿ ದೊರಕುವ ದವಸ; ಭತ್ಯದ ಧಾನ್ಯ: ಪಟಂಗನ ಸಂಗಡ ಪಟ್ಟಾಂಗಕ್ಕೆ ಹೋದರೆ ಪಡಿದವಸ ಕೇಡು (ಗಾದೆ). [ಪಡಿ$_1$+ದವಸ]

ಪಡಿದಟ (ನಾ). ಅಧಿಕವಾದ ಸೈನ್ಯ; ಹೆಚ್ಚಿನ ದಳ: ಪಡಿದಟವಾಂತು ಬಂದ ಮಲೆನಾಡಿನ ಸಿಂಗಳರಾಯನಂ ಮೊಗಂಗಿಡಿಸಿ ಜಸಂ ಬೆಸಂಬಡೆಯೆ ಬಲ್ಲಿದನೀ ಪರಿ ಚಲ್ಲವಾಡಿದಂ (ಚಿಕವಿ.೨-೬೮); ತಳಕಾಡವರ ಮಳವಳ್ಳಿಯಂ ವೇಢೈಸಿ ಮುತ್ತಿ ಸುತ್ತುವೇಲಿಯಂ ಬಲಿದು ತಳಿಯನೊತ್ತರಿಸಿ ಪಡಿದಟಮಾಗಿ ಬಂದ ಜಗದೇವರಾಯನ ಪಡೆಯ ನೋಡಿಸಿಯೂರುಗರ್ಗೆ ಕವಲಂಬುಗೆಯನಿತ್ತು (ಚಿಕವಂ. ೫೩-೧೫). 'ಪಡಿಬಲ' ಪರಾ.

[ಪಡಿ$_3$+ದಟ]

ಪಡಿದೆಗೆ (ಕ್ರಿ). ಬಾಗಿಲನ್ನು ತೆಗೆ; ಕದವನ್ನು ತೆರೆ: ತಡೆದಸುಗೀಶಂ ಶಯ್ಯಾಸದನದ ಪಡಿದೆಗೆವನಿತಱೊಳಡಸಿದ ಮುನಿಸಿಂದುಡುಪಾನನೆ ಮಣಿಮಂಚದಿನೆಳ್ದು . . . ಕಾತರದಿಂ ಕೂಡಿದಳಾಗ (ಜಯಕಾ. ೧೪-೭೫).

[ಪಡಿ$_2$+ತೆಗೆ$_1$]

ಪಡಿದೆಱೆ, ಹಡಿದೆಱೆ (ಕ್ರಿ). = ಪಡಿದೆಗೆ: ಪಡಿದೆಱೆವಂದದಿಂದ ಮೆರ್ದೆಯುಂ ತೆಱೆದತ್ತು (ಪಂಪಭಾ. ೫-೧೫); ನಿಜೇಶಂ . . . ಬರ್ಪುದಂ ಕಂಡೆರ್ದೆ ಪಡಿದೆಱೆದಂತಾಗೆ ತಾಂ ಲಜ್ಜೆಯಿಂ ತೆಕ್ಕನೆ ಪೋದಳ್ ಕಾಂತೆ (ಲೀಲಾವ. ೭-೩೮); ಹಸುಳೆದುಂಬಿಗಳೆಚ್ಚಱದಂತೆ ತಾವರೆ ಎಸಳ್ವಡಿದೆಱೆದದಱೊಳಗೆ ಎಸೆವ ಪರಿಮಳವ ತಂದರಸಗೆ ಮೆಲ್ಲನೊಸೆದಿತ್ತುದುದಯ ಸಮೀರ (ಕುರಾಸಾಂ. ೨೭-೧೪೨); ಜಾರಚೋರರತ್ತಣಂ ಭೀತಿಯಣಂ ನಾಡೊಳಿಲ್ಲೆನೆ ಬಾಗಿಲಂ ಪಡಿದೆಱೆದು ಬೊಂಬಾಳಂಗಳನುರಿಯಿಸಿ ತಾಂ ನಿದ್ದೆವೋದ ಸಜ್ಜನರ ಸಜ್ಜುಗೊಂಡ ಬೀಡುಗಳ ಸಾಲ್ಗಳಿಂ . . . ಕೇರಿಗಳ್ ಸೊಗಯಿಸೆ (ರಾಮಾಶ್ವ. ೨೩-೨೦). **ಹಡಿದೆಱೆ**: ಹಡಿದೆಱೆ

ದಂದವಾದುದೆದೆ ಪಾಂಡ್ಯನ ಚೋಳನ ಗಂಡವಾತು ನೂರ್ಮಡಿ ಕುಸಿದತ್ತು (ಎಕ. IV, ಹುಣಸೂ. ೧೩೭-೧೯; 1162); ಬರಲವನ ಚೇಷ್ಟೆಯಂ ಕಾಣುತೆರ್ದೆ ಹಡಿದೆಱೆದು[ಪಾಠಾಂ. ಕಂಡು ಕಾಣುತ ಹೆದರ್ದು, ಕಾಣುತೆದೆ ಹಡಿದೆಱದು, ಕಂಡುಯೆರ್ದೆಹಡಿದೆಱದು]ಪರವೆಯೇ ನಾದಳೆಂತಿರ್ದಳೆನುತುಂ ಮಱೆದು ಕೇಳಲು (ನಂಬಿರ. ೧೭-೧೦೯); ಅಡಸಿದರುಣೋದಯದೊಳತ್ತೆ ಮಾವಂದಿರೆದೆ ಹಡಿದೆಱೆಯೆ ಹಡಿದೆಱೆದು ಹಿರಿಯ ಬಸದಿಯ ಜಿನನ ಕಳೆ ಬಳಿಕ ನಿಲಲಮ್ಮದೆ ನಡುಗಿ ಹುಲಿಗೆಱೆಯಿಂದ ಹೊಱವಡಲು (ಸೋಮಚ. ೨-೧೨೧). [ಪಡಿ$_2$ + ತೆಱೆ$_1$]

ಪಡಿದೊಡೆ (ನಾ). ತೊಡೆಯ ರಕ್ಷಣೆಯ ಒಂದು ಸಾಧನ (?) : ಮಡವ ಮೀಱುವ ಕಚ್ಚೆ ಮಂಡಿಯ ಪಡಿದೊಡೆಯ ತಲೆಮಱೆಯ ಹರಿಗೆಯ ಕಡಿತಲೆಯ ಕಲಿತುಳುವಪಡೆ ಹೊಯ್ದಾಡಿತಿಳೆ ಹಿಳಿಯೆ (ಕುಪ್ಯಾಭೀ. ೪-೩೭). [ಪಡಿ? + ತೊಡೆ$_2$]

ಪಡಿದೊತ್ತು, ಪಡಿತೊತ್ತು (ನಾ). ತೊತ್ತಿನ ತೊತ್ತು ; ಆಳಿನ ಆಳು ; ಪ್ರತಿಸೇವಕ : ಈ ತೊತ್ತಿನ ತೊತ್ತಿನ ಪಡಿದೊತ್ತನೊಪ್ಪಿಸಿದಲ್ಲಿ ಭಕ್ತನಪ್ಪನೆ (ಬಸವ. ೮೩೦); ಏಳುನೂಱೆಪ್ಪತ್ತು ಅಮರಗಣಂಗಳೆನ್ನ ಗತಿಮತಿ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರ ಪಡಿದೊತ್ತಯ್ಯ (ಅದವ. ೧೭-೪೦); ಬಾಡಿ ಬೇಡುವಡೀಯೆ ವಿಜಯವಿಠಲರೇಯ ಹೋಡಿ ನವ ನಾನಲ್ಲ ಪಡಿದೊತ್ತಿನ ತೊತ್ತಿನ ದಾಸ (ವಿಸ್ತೋಸು. ೬೨-೩) ; ಆ ಶಿವನಾಳಿಗೆ ಪರವೆ, ಸಂಕಿಲಿ ಇಬ್ಬರು ಪಡಿದೊತ್ತುಗಳು (ತುಂಗಭ. ೯೧). **ಪಡಿತೊತ್ತು** : ಗಂಡುದೊತ್ತಿಗೆ ಪಡಿತೊತ್ತು ನಾನು (ತುಂಗಭ. ೯೧); ತೊತ್ತಿಗೆ ಒಂದು ಪಡಿತೊತ್ತು (ಗಾದೆ). [ಪಡಿ$_3$ + ತೊತ್ತು$_1$(< ತೊಟ್ಟು)]

ಪಡಿದೊರೆ (ನಾ). ಸರಿಸಾಟಿಯಾದವನು ; ಸಮಾನ : ಕೆಡಿಪುದಘವ ತಾಪವ ದೈನ್ಯವ ಗಂಗೆಯುಡುಪತಿ ಸುರತರುವಿರದೆ ಕೆಡಿಪರಾ ಮೂಱವ ಗುಣವ ಸಜ್ಜನರಿಗೆ ಪಡಿದೊರೆ ಯಾರು ಲೋಕದೊಳು (ರಾಮವಿ. ೧-೬೦). [ಪಡಿ$_3$ + ದೊರೆ$_2$]

ಪಡಿಧರಣಿ (ನಾ). ಇನ್ನೊಂದು ಭೂಮಿ; ಮತ್ತೊಂದು ನೆಲ : ಗಿರಿಗಳಾದುವು ದಂತಿಯಲಿ ಪಡಿಧರಣಿಯಾದವು ಛತ್ರ ಚಮರದಲರರೆ ನೂತನಸೃಷ್ಟಿಯಾಯ್ತು ವಿರಿಂಚಸೃಷ್ಟಿಯಲಿ (ಕುಪ್ಯಾಭೀ. ೧-೪೯). [ಪಡಿ$_3$ + ಧರಣಿ$_1$]

ಪಡಿನಾಯಕ (ನಾ). ಎದುರುಪಕ್ಷದ ಮುಖಂಡ ; ಪ್ರತಿನಾಯಕ: ರಾಯದಳವುಬ್ಬೆದ್ದುದೋ ಪಡಿನಾಯಕರಪ್ಪಳಿಸುವೆನು ರಿಪುವಾಯುಜನ ಗಾಢಣೆಯ ಗರ್ವಗ್ರಹವ ಕಳಚುವೆನು (ಕುಪ್ಯಾಕ. ೧೧-೫). [ಪಡಿ$_3$ + ನಾಯಕ]

ಪಡಿನುಡಿ$_1$ (ಕ್ರಿ). ೧. ಪ್ರತಿಯಾಗಿ ಮಾತನಾಡು ; ಉತ್ತರವನ್ನು ಕೊಡು : ಈ ಕಥೆಯನ್ನು ಹೇಳಿದಾಗ ಒಬ್ಬರು ಹೀಗೆ ಪಡಿನುಡಿದರು (ಸಮಜೀ. ೩) ; ಯಾರೂ ಈ ಸ್ಪಷ್ಟ ಪ್ರಮಾದಪೂರ್ಣ ವ್ಯವಹಾರದ ವಿರುದ್ಧವಾಗಿ ಪಡಿನುಡಿಯುವ ಸಾಹಸ ಮಾಡಲಿಲ್ಲ (ಬಾಣಅ. ೨೩೨) ; ಪೂವಮ್ಮ ಪಡಿನುಡಿಯದೆ ಗಂಡ ಹೊತ್ತಿಸಿ ಇರಿಸಿದ ಲಾಂದ್ರವನ್ನು ಎತ್ತಿ ಕೊಂಡು ಒಳಗೆ ಹೋದಳು (ನಡೆದಾ. II, ೧೧೨೬). ೨. ಪ್ರತಿಧ್ವನಿಯನ್ನು ಕೊಡು ; ಪ್ರತಿಧ್ವನಿಸು: ಅದರ ಸದ್ದು . . . ಹೆಚ್ಚು ಹೆಚ್ಚು ಗಂಭೀರವಾಗಿ ಗಗನಭೇದಿಯಾಗಿ ಗುಡುಗಿ ಗರ್ಜಿಸುತ್ತ ಪಡಿನುಡಿಯುತ್ತಿದೆ (ಮಾವಾದ. ೧೭೦) ; ಜ್ಞಾನಶಂಕರರ ವ್ಯಂಗ್ಯವಚನಗಳು ಜ್ವಾಲಾಸಿಂಹರ ಹೃದಯದಲ್ಲಿ ಇನ್ನೂ ಪಡಿನುಡಿಯುತ್ತಿದ್ದವು (ಶ್ರೀಮಾಶ್ರ. ೪೮). [ಪಡಿ$_3$ + ನುಡಿ$_1$]

ಪಡಿನುಡಿ$_2$ (ನಾ). ೧. ಉತ್ತರ ; ಪ್ರತಿಮಾತು ; ಮರುನುಡಿ : ರಾಘವಂ ಪಡಿನುಡಿಯೊಳ್ ಭಕ್ತಿಯಿಂ—ಬಟ್ಟೆಯೊಳ್ ತಡೆವುದು ನ್ಯಾಯ ಮಲ್ಲೆಂದುಂ . . . ಪೇಟೆ (ಅದ್ಭುತ. ೩೨-೨೧) ; ಸಂಗಮಶರಣನು . . . ಮುಗುಳುನಗೆ ಸೂಸುತ್ತ ಜನಜಂಗುಳಿಗೆ ಪಡಿನುಡಿ ಹೇಳುವುದಕ್ಕೆ ಆರಂಭಿಸುತ್ತಾನೆ (ಬಾಳಬ. ೨೫). ೨. ಪ್ರತಿಧ್ವನಿ ; ಮಾರ್ದನಿ : ಈಗಲೂ ನನ್ನ ಕಿವಿಯಲ್ಲಿ ಕೇಳಿಸುತ್ತಿದೆ ಅವಳ ಮಾತಿನ ಪಡಿನುಡಿ (ನವಸೀ. ೯೩) ; ಶಿವಾಯ ನಮ ಓಂ ಬಯಲಿನಲ್ಲಿ ಪಡಿನುಡಿಯು ಸಿಡಿಯುತಿತ್ತು (ಹೃದಸ. ೭೩-೩). [ಪಡಿ$_3$ + ನುಡಿ$_2$]

ಪಡಿನುಡಿಗುಡು (ಕ್ರಿ). ಉತ್ತರವನ್ನು ಕೊಡು : ಎದುರು ಮಾತನ್ನು ಹೇಳು : ಪತಿಯ ನುಡಿಗೆ ಪಡಿನುಡಿಗುಡದೆ ರಾಜಕಾರ್ಯಂಗಳಲ್ಲಿ ಪತಿಗೆ ಕೇಳ್ಮುಖ್ಯಮಂತ್ರಿಣಿಯೆನಿಸಿರು (ಶೇಷರಾ. ೨೫-೩) ; ನಾರದಂ ಪಡಿನುಡಿಗುಡುತೆ ನಾರಾಯಣನ ಸನ್ನಿಧಿಯೊಳ್ ತನಗೊದವಿದವಮಾನ ಮುಮಂ . . . ಪೇಟ್ದು (ಅದ್ಭುತ. ೨೨-೬). [ಪಡಿನುಡಿ$_2$ + ಕುಡು$_1$(< ಕೊಡು$_1$)]

ಪಡಿನೆಳಲ್ 'ಪಡಿನೆಟಲ್' ನೋ.

ಪಡಿನೆಳಲು 'ಪಡಿನೆಟಲ್' ನೋ.

ಪಡಿನೆಟಲ್, ಪಡಿನೆಳಲ್, ಪಡಿನೆಳಲು (ನಾ). ಪ್ರತಿಬಿಂಬ ; ಪ್ರತಿಚ್ಛಾಯೆ ; ಪಡಿಬಿಂಬ : "ಮಾರ್ಪೊಳೆಪೆಂದುಂ, ಪಡಿನೆಟಲೆಂದುಂ ಪ್ರತಿಬಿಂಬಂ" (ಕಶಸಾ. ೭೦-೫೮೦) ; ಪಳಿಕಿನೆಡೆಗೋಡೆಯ ಮಱೆಯೊಳಿರ್ಪ ರಸಂಚಿವಱಿಯಂ ಪಿಡಿಯಲ್ಕೆ ನೀಡಿದ ಕೈ ಸೋಂಕದೊಡಂ ಪಡಿನೆಟಲಂ ಕಂಡಂಜಿಯದಿತ್ತಲುಮತ್ತಲುಂ ಪರಿಯುತ್ತಿರೆ (ಚಕವಿ. ೪-೮೯) ; ಪಡಿನೆಟಲಂ ಮಾಣಿಕಗನ್ನಡಿ ಪಡೆದವೊಲೊಡನೆ ಪಿಡಿದ ಪದ್ಮಾದಿಗಳಿಂ ಒಡೆಯನೆನೆ ಕುಱುಹುದೋಱುತುಮೆಡೆಗೊಂಡುವು ಗೆಱೆಗಳಲ್ಲಿ ಪದ್ಮಾದಿಗಳಾ(ವಸ್ತವಂ. ೭೩). **ಪಡಿನೆಳಲ್** : "ಪ್ರತಿಬಿಂಬದೊಳ್ ಪಡಿನೆಳಲೆನಿಕ್ಕು"(ಕಶರ. ೫೯) ; ಆ ಸುದತಿಯ ಪಡಿನೆಳಲೊಪ್ಪಿದುದು ಸುಧಾಸೂತಿಯ ತೊಡೆಯೇಱಿ ವಿರಾಜಿಪ ರೋಹಿಣಿಯೆಂಬಂತೆ (ಜಯಕಾ. ೫-೨೪) ; ಪಡಿನೆಳಲಂ ಮಣಿ ಕುಟ್ಟಿಮದೆಡೆಯೊಳ್ನಡೆನೋಡಿ ನೋಡಿ ದಾಯೆನುತಂ ಕೈದುಡುಕಲದು ತುಡುಕೆ ನಗೆ ನಗೆ ಕಡುಬಿನದಂಬಡೆವ ಕಂದನೆಂದಾದಪನೋ (ರಾಜಶೇ. ೩-೫೨). **ಪಡಿನೆಳಲು** : ಮಾರುತಿಯು ಪೋಗುತಿರೆ ನೆಳಲು ಪ್ರತಿಫಲಿಸಲಾ ನೀರಧಿಯೊಳಿರ್ದ ಸಿಂಹಿಕೆ ಕಂಡು ಮನದೊಳಗೆ ತೋರ ಸಂತಸಗೊಂಡು ಹಿಗ್ಗಿದಳ್ಪಡಿನೆಳಲ ಕಾಣುತಾಶ್ಚರ್ಯಗೊಂಡು (ವೆಂಕಾರಾ. ೫-೧-೫೪) ; ಸಲಿಲದರ್ಪಣದಲ್ಲಿ ತನ್ನ ತಾಂ ದರ್ಶಿಸುತೆ ಬೆಚ್ಚಿದಳ್, ಪಡಿನೆಳಲ ಸೊಬಗಿಗಚ್ಚರಿವಟ್ಟು, ಕಯ್ಗಣ್ಮಿದಾಹ್ಲಾದದಿಂ ! (ಚಿತ್ರಾಂಗ. ೩೩-೮೯೨) ; ಸುತ್ತಲಿನ ಶಾಂತತೆ ಅವನ ಜೀವನದ ಏಕಾಂತತೆಯ ಪಡಿನೆಳಲೆಂಬಂತೆ ಹಬ್ಬಿತು (ಕಮನೆ. ೩೫). [ಪಡಿ$_3$ + ನೆಟಲ್]

ಪಡಿನೆಟಲ್ಗೊಳ್ (ಕ್ರಿ). ಪ್ರತಿಬಿಂಬಿಸು ; ಪ್ರತಿಚ್ಛಾಯೆಯನ್ನು ಪಡೆ : ನುಣ್ಬಣಿಗನ್ನಡಿಯೊಳ್ ಪಡಿನೆಟಲ್ಗೊಂಡುದ್ದಂಡನಾಭೀಪುಂಡರೀಕ ತತ್ಕರ್ಣಿಕೆಗಳಂತೆ ಕಣ್ಗೊಳಿಪೂರ್ಧ್ವಪುಂಡ್ರಶ್ರೀಚೂರ್ಣಂಗಳಿಂ (ಚಿಕಪಂ. ೩೩-೧೧). [ಪಡಿನೆಟಲ್ + ಕೊಳ್$_1$]

ಪಡಿನೋಡು (ಕ್ರಿ). ಹೋಲಿಸಿ ನೋಡು ; ತಾಳೆನೋಡು : ಪಡಿನೋಡಲ್ ಹಂಸೆಗಂ ಬೆಳ್ಮುಗಿಲತಿಧವಳಂ (ಜಗವಿ. ೧೨-೬೩). [ಪಡಿ$_3$ + ನೋಡು]

ಪಡಿಪಚ್ಚ 'ಪಡಿಪುಚ್ಛ' ನೋ.

ಪಡಿಪಚ್ಛ 'ಪಡಿಪುಚ್ಛ' ನೋ.

ಪಡಿಪತ್ರ (ನಾ). ಒಂದರ ಪ್ರತಿಯಾಗಿರುವ ಮತ್ತೊಂದು ಪತ್ರ ; ನಕಲು : ಹೋಗದೆಲೆ ಮಗನೆ ಇದು ಪಡಿಪತ್ರವೆಂದೆನುತೆ ಆಗಳೇ ಬುದ್ಧಿಗೊಟ್ಟಳು ತಮ್ಮ ಸತಿಯೆನುತೆ ತಮ್ಮರಸಿಯನಲ್ಲಿ ಪೊಗಳುತುಂ ಪಾಡುತುಂ (ನಂಬಿರ. ೭-೮೭). [ಪಡಿ$_3$ + ಪತ್ರ]

ಪಡಿಪದಾರ್ಥ₁ (ನಾ). ಆಹಾರಸಾಮಗ್ರಿ ; ಭೋಜನ ಪದಾರ್ಥ: ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದರೆ ಮುಂದೆ ಸಕಲಪದಾರ್ಥವನೀವನು (ಬಸವ. ೪೨೦). [ಪಡಿ₁ + ಪದಾರ್ಥ]

ಪಡಿಪದಾರ್ಥ₂(ನಾ). ಪ್ರತಿಯೊಂದು ವಸ್ತು ; ಪ್ರತಿಪದಾರ್ಥ : ನೀನೊಲಿದಡೆ ಕೊಱಡು ಕೊನರುವುದಯ್ಯಾ . . . ನೀನೊಲಿದಡೆ ಸಕಲ ಪಡಿಪದಾರ್ಥ ಇದಿರಲಿರ್ಪುವು (ಬಸವ. ೬೬) ; ಅದು ಬೇಕು ಇದು ಬೇಕು ಎಂದೆಂಬ ಎದೆಗುದಿಹತನ ಬೇಡ ಹದುಳಿಗನಾಗಿದ್ದರೆ ಸಾಕು ಪಡಿಪದಾರ್ಥ ತನ್ನಿಡ್ಡೆಡೆಗೆ ಬಹುದು (ಸಮಾನ. ೧೧-೩). [ಪಡಿ₃+ಪದಾರ್ಥ]

ಪಡಿಪದ್ಧತಿ (ನಾ). = ಪಡಿತರಪದ್ಧತಿ : ಪಡಿಪದ್ಧತಿ ಕಾನೂನಾದೊಡನೆ ಅವನಿಗೆ ಆ ಆಫೀಸಿಗೆ ವರ್ಗವಾಗಿತ್ತು (ಭ್ರಮಾನ. ೧). [ಪಡಿ₁ + ಪದ್ಧತಿ]

ಪಡಿಪಾಟ 'ಪಡಿಪಾಡು' ನೋ.

ಪಡಿಪಾಟಲ 'ಪಡಿಪಾಟಲು' ನೋ.

ಪಡಿಪಾಟಲು, ಪಡಿಪಾಟಲ, ಪಡಿಪಾಟ್ಲು, ಪಡಿಪಾಟ್ಳು, ಪಡುಪಾಟಲು, ಪಡುಪಾಟ್ಲು (ನಾ). = ಪಡಿಪಾಡು ೧ : ಶಿಶುಗಳ ಶಿಖವನು ಪಶುಗಳ ಬಾಲಕೆ ಹೊಸೆದು ಗಂಟನು ಮಿಸುಳಿಸಿ ಕಟ್ಟುವ ನಸುನಗಿಯಲಿ ನಮಗುಸುರುವ ನಿಮ್ಮಯ ಹಸುಳರ ಪಡಿಪಾಟಲ ನೋಡೆನುವ (ಪ್ರಸಭಾ. ೧೭-೧೯) ; ತಮ್ಮಗಳನ್ನು ಅಗಲಿದ ಗಳಿಗೆಯಿಂದ ಹೊಟ್ಟೆಗೆ ಅನ್ನವಿಲ್ಲದೆ . . . ಇಲ್ಲದ ಪಡಿಪಾಟಲನ್ನೂ ಪಟ್ಟೆ (ಮುಸುಗ. ೧೮೭) ; ಮನೆಯಲ್ಲಿ ಹೆಣ್ಣುದಿಕ್ಕಿಲ್ಲದಿದ್ದರೆ ಆಗುವ ಪಡಿಪಾಟಲಿನ ಪರಿಚಯ ಆಗ ಆತನಿಗಾಯಿತು (ರಾಗಿಣಿ. ೬೩). **ಪಡಿಪಾಟಲ :** ಕೂಸು-ಕುನ್ನಿಗಳ ಪಡಿಪಾಟಲಕ್ಕಂತು ನೆಲೆಯಿಲ್ಲದಾಯಿತು (ಕುಮುದಿ.೧೮). **ಪಡಿಪಾಟ್ಲು :** ಆಕಿ ಗಂಡಂದಿಷ್ಟು ಅಡಾವುಡಿ ಆಗೇದ ಅಂತ ಇಷ್ಟು ಪಡಿಪಾಟ್ಲು ಬಡಬೇಕಾಗೇದ ಪಾಪ ! (ದಾಸಕೂ. ೮೧). **ಪಡಿಪಾಟ್ಳು :** ವೈನಾಗ ಬೇಕಂತಾನೇ ಇಷ್ಟೆಲ್ಲ ಪಡಿಪಾಟ್ಳು ಬೀಳೋದು (ದಿವಾಬ. ೭೬). **ಪಡುಪಾಟಲು:** ಈ ಬಡ ಆಚಾರ್ಯರ ಪಡುಪಾಟಲು ನೋಡುವುದೇ ಕಷ್ಟ (ಬೆಂಗಬ. ೭೨) ; ಜೀವನದಲ್ಲಿ ಕಷ್ಟಗಳು ಮತ್ತು ಜಂಜಾಟಗಳು, ಪಡುಪಾಟಲುಗಳು ಇವೆ(ರೂಢಿ) **ಪಡುಪಾಟ್ಲು** (ಕಿ) :

[ಪಡಿಪಾಟು(<ಪಡಿಪಾಡು)+-ಅಲು (<-ಅಲ್₂)]

ಪಡಿಪಾಟು 'ಪಡಿಪಾಡು' ನೋ.

ಪಡಿಪಾಟ್ಲು 'ಪಡಿಪಾಟಲು' ನೋ.

ಪಡಿಪಾಟ್ಳು 'ಪಡಿಪಾಟಲು' ನೋ.

ಪಡಿಪಾಡು, ಪಡಿಪಾಟ, ಪಡಿಪಾಟು, ಪಡುಪಾಟು, ಪಡುಪಾಡು (ನಾ). ೧. ಅಧಿಕವಾದ ಕಷ್ಟ; ಅತಿಯಾದ ಬವಣೆ,-ತೊಂದರೆ: ಹೇಳಲಾರೆನು ಬೆಳೆದ ರೋಗಗಳೋಳಿಯಿಂದಲಿ ಬಳಲಿದಾ ಪಡಿಪಾಡ ಕಷ್ಟಗಳ (ಆರ್ಚಾವಿ. ೮-೨೦). ೨. ಸಮಾನ ; ಸಾಟಿ : ಝೂಡಿಸಿದ ಬಲುವಿದ್ಯೆಯಲಿ ಪಡಿಪಾಡು ಭಾರ್ಗವಗೆನಲು (ಕೋಗಯ. ೨೦-೧೦). **ಪಡಿಪಾಟ :** ೧. ಹಿಂದಿನ ಜನ್ಮದಲ್ಲಿ ಬ್ರಾಹ್ಮಣನಾಗಿ ಹುಟ್ಟಿ ಪಡಿಪಾಟ ಪಟ್ಟದ್ದು ಇನ್ನೂ ನೆನಪಿದೆ (ನಾಡಿಗೇ. ೮). **ಪಡಿಪಾಟು :** ೧. ಮುಪ್ಪಿನ ಗಂಡನ ಒಲ್ಲೆನು ನಾನು ತಪ್ಪದೆ ಪಡಿಪಾಟ ಪಡಲಾಱೆನಕ್ಕ (ಪುರಂದ. ೪-೯೩ ಅನುಪಲ್ಲವಿ) ; ದಮಯಂತಿ ನಳರಾಜರಿಬ್ಬಾರು ಬಾಳುವ ಪಡಿಪಾಟು ನೋಡು ನೀನೆಂದಾ (ಯನಳ.೬೦). **ಪಡುಪಾಟು:** (ಕಿ). **ಪಡುಪಾಡು :** ೧. ನೀಲಾ ವೆಂಕಣ್ಣನ ಪಡುಪಾಡು ನೋಡಿ ತಾನು ಕಛೇರಿ ಮಾಡುವುದಾಗಿ ಹೇಳಿದಳು (ನಟಸಾ. ೫೨೨).

[ಪಡಿ₃ + ಪಾಡು₃]

ಪಡಿಪಾಸು (ಕ್ರಿ). (ನಡೆಮಡಿಯಂತೆ) ಎದುರಿನಲ್ಲಿ ಹಾಸು : ಮಱೆಯೆ ಸುತಶೋಕಮಂ ಮನೆದೆಱಕದಿನಿದಿರ್ವೋಗಿ ಯೋಗಿಪದತಳ ಮಿಳೆಯಂ ನೆಱೆ ಮುಟ್ಟದ ಮುಂ ದುಗುಲದ ಸೆಱಗಂ ಪಡಿಪಾಸಿ ಮೊಟ್ಗುದಂ ಮುನ್ನದಿಯೊಳ್ (ಚಂದ್ರಪು. ೫-೨೨). [ಪಡಿ₃ + ಪಾಸು₁]

ಪಡಿಪುಚ್ಚ 'ಪಡಿಪುಚ್ಛ' ನೋ.

ಪಡಿಪುಚ್ಛ, ಪಡಿಪಚ್ಚ, ಪಡಿಪಚ್ಛ, ಪಡಿಪುಚ್ಚ (ನಾ). ೧. ಎದುರುನುಡಿ ; ಮರುಮಾತು. ೨. ಸರಿಸಾಟಿಯಾದುದು ; ಎಣೆಯಾದುದು ; ಸದೃಶವಾದುದು : ಸೋಮೇಶ್ವರಲಿಂಗಕ್ಕೆ ಪಡಿಪುಚ್ಛವಿಲ್ಲ (ಬಿಬ್ಬಬಾ. ೩-೩) ; ನಡೆನುಡಿ ಸಿದ್ಧಾಂತವಾದ ಶರಣಂಗೆ ಪಡಿಪುಚ್ಛ[ಪಾಠಾಂ. ಚ್ಛ]ವಿಲ್ಲ ಗುಡಿಯೊಡೆಯ ಗುಮ್ಮಟನಾಥನ ಅಗಮ್ಯೇಶ್ವರಲಿಂಗದಲ್ಲಿ ಐಕ್ಯವಾದ ಶರಣಂಗೆ (ಮನುಗುಂ. ಕ. ೨೬೪-೬೯). ೩. ಸಂಶಯ ; ಅನುಮಾನ ; ಸಂದೇಹ : ಅಚ್ಚುತಂಬಡೆವುದಕ್ಕೇನು ಕಾರಣಮಿದೇನಚ್ಚರಿಯೆ ನಾನು ತಹುದಕ್ಕೆ ಈ ಪಂಥ ಪಡಿಪುಚ್ಛ[ಪಾಠಾಂ. ಚ್ಛ]ಮೇ ಕೊಡು ವೀಳೆಯವನು (ಸಮ್ಯಕೌ. ೧೧-೪೪). ೪. ಪರಿಹಾರ ; ನಿವಾರಣೆ ; ಉಪಶಮನ : ಅಱಿದು ಮಾಡುವ ದೋಷಕ್ಕೆ ಪಡಿಪುಚ್ಛವಿಲ್ಲ (ಪ್ರಭೋಗ. ೨೩). **ಪಡಿಪಚ್ಚ :** ೧. ಆ ಸುರೇಶ್ವರ . . . ಈ ಹದಕೆ ಪಡಿಪಚ್ಚ[ಪಾಠಾಂ. ಚ್ಛ]ವಿಲ್ಲವಗಾಹಿಸಲ್ ಖಾಂಡವವ ಹುಲ್ಲೆಯ ಹೂಹೆಗಳು ಹೆಬ್ಬುಲಿಯ ಹಾಯ್ವವೆನುತ್ತ ಗರ್ಜಿಸಿದ (ಕುವ್ಯಾಅ. ೨೦-೩೨). **ಪಡಿಪಚ್ಛ :** ೧. ಮೇಲಿನ 'ಕುವ್ಯಾಅ.' ಪ್ರಯೋಗದ ಪಾಠಾಂತರವನ್ನು ನೋಡಿ. **ಪಡಿಪುಚ್ಚ :** ೧. ಸರ್ವವ್ಯವಧಾನವ ತಿಳಿದು ತಾ ಹಿಡಿದ ಕ್ರಿಯೆಗೆ ಪಡಿಪುಚ್ಚವಿಲ್ಲದೆ (ಏಲೇಶ್ವ. ೧೭೦) ; ಇದ್ದೂ ಇದಿರಿಂಗೆ ಒಡಲೆಡೆಗೊಡದ ಅಗಮ್ಯಂಗೆ ಪಡಿಪುಚ್ಚವಿಲ್ಲ (ಸರ್ವವ.೯೯-೫೪೧). ೨. "ಪಡಿಪುಚ್ಚಮೆನಲು ಸಂಶಯ" (ಚತುಸಿ. ೨೦೨) ; ಕ್ರೀವಂತಂಗೆ ಪಡಿಪುಚ್ಚಕ್ಕೆ ಬಂದಾಗವೇ ಆಚಾರಕ್ಕೆ ಭಂಗ (ಮೋಳಿಮಾ. ೬೩-೨೫೭) ; ಮುಚ್ಚುಮಱೆಯಿದೇಕೆನಗೀ ವಿರಹದ ಕಿಚ್ಚ ನಿರೀಕ್ಷಿಸಿ ನೋಡೆ ಆಚ್ಚೊತ್ತಿದಂತಿದೆ ನಿನ್ನ ಮೈಯೊಳು ಪಡಿಪುಚ್ಚವೇಕಿದನುಸುರಬಲೆ (ನೇಮಿಸಂ. ೧೯-೩೫) ; ನಿನ್ನ ದುರಾಗ್ರಹದಿಂದ ವೊಚ್ಚತಂ ನಿನ್ನರಸುತನಕೆ ಕೇಡಹುದು ಪಡಿ[ಪಾಠಾಂ.ರಿ]ಪುಚ್ಚವೇಕಿದಕೆಯದಱಿಂದ ನೃಪನೀತಿಯಂ ಮೀಱಬೇಡವನಿಪಾಲ (ಸಮ್ಯಕೌ.೧-೪೫). ೫. ವ್ಯತ್ಯಾಸ ; ತಾರತಮ್ಯ : ಇಂತು ಆಚಾರಕ್ಕೂ ಅಱಿವಿಂಗೂ ಪಡಿಪುಚ್ಚವಿಲ್ಲವಾಗಿ ಆಚಾರವೆ ಕುಲ ಅನಾಚಾರವೇ ಹೊಲೆ ಇದಕ್ಕೆ ಒಲವರವಿಲ್ಲ (ಏಲೇಶ್ವ. ಕ. ೪೪೩-೬೦) ; ನಾನೊಡೆಯ ಇವನಡಿಗನೆಂದು ಪಡಿಪುಚ್ಚವ ಮಾಡುವನ್ನಕ್ಕ ಅದು ತುಡುಗುಣಿಯ ಸವಿತ (ಮೋಳಿಮಾ. ೧೮-೬೮). ೬. ಪುನಃ ಪರಿಶೀಲಿಸುವಿಕೆ : ಪಡುವಣ ಕೋಣೆಯಲ್ಲಿ ಮಡಗಿರಿಸುವಾಗ ಪಡಿಯ ನೋಡಲಾಗಿ ಐಗಳವಾಗಿತ್ತು ಅದು ಬಿಡು ಬಿಸಿಲಿನಲ್ಲಿ ಒಣಗೆ ಪಡಿಪುಚ್ಚಕ್ಕೆ ಮೂಗಳವಾಯಿತ್ತು (ಮೋಳಿಮಾ. ೨೧೭-೭೭೧). ೭. ಅಡ್ಡಿ ; ವಿರೋಧ : ನುಡಿವಲ್ಲಿ ಕಿಂಕಲವನಱಿ . . . ಮತ್ತೊಂದನೊಡಗೂಡುವಲ್ಲಿ ಒಡಗೂಡಿ ಬಿಡುವಲ್ಲಿ ಸರ್ವದಯಕ್ಕೆ ಪಡಿಪುಚ್ಚವಿಲ್ಲದಿರಬೇಕು (ಸರ್ವವ. ೫೪-೨೮೯).

[<ಪ್ರಾ. ಪಡಿಪುಚ್ಛಾ./ಸಂ. ಪ್ರತಿಪೃಚ್ಛಾ]

ಪಡಿಬಂದ, ಪಡಿವಂದ (ನಾ). ಪ್ರತಿಬಂಧ ; ಅಡ್ಡಿ ; ಅಡಚಣೆ : ಪಡಿಯೆಡೆಯ ಪಡಿಯಱತಿಯರ್ . . . ಮಾಣ್ ಮಾಣಮೆಂದು ಗದಱಲೊಡಮಾಂಜನೇಯಂ ಕಿನಿಸಿಂ—ಇಂತುಮೊಂದು ಪಡಿಬಂದಮೇಂ ? . . . ಎಂದಂ (ರಾಮಾಶ್ವ. ೧೨೧-೧೯). **ಪಡಿವಂದ :** ಅಟ್ಟದೆಲೆಯ ಮಾತನ್ನೆಟ್ಟನೆ ಕೇಳ್ದಿನ್ತು ದಟ್ಟಳ್ಸೆರಗುಂ ಬೆರಗುವಂ ಬಗೆಯದೆ ಕಟ್ಟಳ್ಸೆತ್ತ ನೆಱೆಯಮ್ಮ ನೋಡವೆಳೆಗೆದಪ್ಪಿ ರೂಢಿಯೊಳೆಸೆದಿರ್ಪ್ಪ ×× ನೀಂ ಪೊಗಟದೆ ×× ತೆ ಪಡಿವನ್ದಮ್ಮಾಡಿ (ಸೌಇಇ. IX-1, ೩೧-೧೩ ; 966).

[<ಪ್ರಾ. ಪಡಿಬಂಧ./ಸಂ. ಪ್ರತಿಬಂಧ]

ಪಡಿಬರಿಸು, ಪಡಿಬಲಿಸು (ಕ್ರಿ). ಪ್ರತಿಭಟಿಸು; ಎದುರಿಸು; ಎದುರು ಬೀಳು : ನಡೆಯಿಂ ಚಿಕದೇವೇಂದ್ರಂಗಡಿಗೆಱಗಿಂ ತಡೆವಳಲ್ತು ಪಡಿಬರಿಸಿ ದೊಡಾನೊಡವರ್ಪೆನೆಂದು ಜೈತಜಿಯೊಡನಾಡಿದಳವನ ಮಡದಿ ಪೊಱ ಮಡುವೆಡೆಯೊಳ್ (ಅಪ್ರತಿ. ೭೭-೧೪); ಹರನ ಸಾಹಸಕಂಜದೆ ಪಲವಗಲು ಮುಪ್ಪುರ ಪಡಿಬರಿಸಿ ಪೋರಿದುದು ಪುರದೊಳಗಿರ್ಪ ಪುಣ್ಯಾಂಗನೆಯರ ಸಚ್ಚರಿತದ ಸಲಿಗೆಯಿಂದೈಸೆ (ಹದಿಬ. ೨-೪೮); ಪಡಿಗೋಂಟೆಗೆಯ್ದು ಕಡುಪಂ ಪಡಿಯಗಟ್ಟೆಯ್ದುಳವನಾರ್ಪು ಕಡುಗೂರ್ಪಗಳಂ ಪಡಿವಡೆಗೆಯ್ದಂದವರೊಳ್ ಪಡಿಬರಿಸಿದರಮಮ ವಿಷ್ಣು ಜಿಷ್ಣುಗಳನ್ನರ್ (ಚಿಕವಿ. ೨-೪೫); ಪಡಿಬರಿಸಿ ಖೇಚರನ ಬಲವೊಗ್ಗೊಡೆಯದೈತಂದಗಣಿತಾಸ್ತ್ರದಿ ಬಿಡದೆಸುತ(ದೇವೀಮ. ೨-೩೫). **ಪಡಿಬಲಿಸು :** ಮುರಿವುದಸುರರ ಸೇನೆಯೊರ್ಮೆ ದಿವಿಜರ ದಳಂ ಪೆಱದೆಗೆವುದೊರ್ಮೆ ಪಡಿ[ಪಾಠಾಂ. ಡೆ]ಬಲಿಸಿ ನೂಂಕುವುದೊರ್ಮೆ (ಚಿಬಪು. ೨೬-೧೯); ಪಡಿಬಲಿಸಿ ಸುರಭಟರ್ ಮುತ್ತುವರ್ ಕಡುಗಿ ರಾಕ್ಷಸಭಟರ್ ನೂಂಕುವರ್ ತಾಂಕುವರ್ (ಚಿಬಪು. ೪೨-೩೯). [<ಪ್ರತಿಭಟಿಸು]

ಪಡಿಬಲ, ಪಡಿಬಳ(ನಾ). ೧. ಅಗತ್ಯಕ್ಕೆ ಸಹಾಯಕವಾಗಿ ಬರುವ ದೊಡ್ಡ ಪಡೆ : ಪಡಿಬಲವ ಬರಲೀಯದನಿಲಜನೊಡನೆ ಸೈಂಧವ ಕಾದುತಿರಲಿಮ್ಮಡಿಸಿತಾಹವವಿತ್ತ ಮೋಹರಮಧ್ಯರಂಗದಲಿ (ಕುಪ್ಯಾದ್ರೋ.೫-೬೬); ಬಲಿದುದನಿತಱ ಮೇಲೆ ರಣ ಕಡುಗಲಿಗಳಿಬ್ಬರಿಗೊಡನೆ ಪಡಿಬಲ ನಿಲುಕಿತು (ತೊರರಾ. ೬-೩೩-೩); ಭಾರಣೆಯ ಗಂಡಶೈಲಗಳೆಲ್ಲ ಗಮನದುರು ಮಾರುತನ ಗತಿವಿಡಿದು ಪಡಿಬಲವು ಮುಂಕೊಂಡು ಧಾರಿಣೀಶನ ಸುತ್ತಿ ಪೋಪಂತದೇಂ ಬೆಡಗ ತೋರುವುದೊ ತತ್ಸಮಯದಿ (ವೆಂಕಾರಾ.೫-೧-೨೧); ಚಿತ್ರ ಚಿತ್ರಾಂಗ ಸುಕೇತುಗಳ್ ಮುಂತಪ್ಪ ಸಂದ ಮಹಾರಥರುಮತಿರಥರುಂ ಜೋದರುಂ ನಿಚ್ಚದ ಕಾಹಿನ ಬಂಟರನುಟಿಂದು ಪಡಿಬಲಮಂ ಕೂಡಿ ತೆರಳ್ದರ್ (ರಾಮಾಶ್ವ.೯೪-೨). ೨. ಪ್ರತಿಬಲ; ಎದುರು ಪಡೆ; ಶತ್ರುಸೈನ್ಯ : ಭಾಳಲೋಚನನಾದೊಡಂ ಕಾದಿ ತಂದಪೆವು ಎಂದು ಗದ್ದುಗೆವೊಯಿದು ನೆರೆದುದಾಕೆಯ ಕುಲಂ ಬಂದು ಕೂಡಿತು ಶಿವದ್ರೋಹಿಗಳ ಪಡಿಬಲಂ (ಇಹರ. ದೇ.೩೭-೧೦); ನಾಡ ಕೋಂಟೆಯಂ ಬಾಗಿಲ್ಗಟ್ಟಿ ಮುಂಬರಿವ ಪಡಿಬಲದಿರವನಱಿತಾಗಳಣಿಯಿರ್ದ ರಾಯಮೋಹರಂ ಮುಂದೊತ್ತಿ ತಾಗಿ ಕೋಲ್ಮಟಿಗಱಿದು ದೆಸೆಗಿಡುವಿನಂ ಕಾದುವುದುಂ (ರಾಮಾಶ್ವ. ೧೨೭-೨೦). ೩. ಬೆಂಬಲ; ಸಹಾಯ; ನೆರವು : ಮುಗ್ಧೆಯ ಕಪೋಲದ ಕೋಪಂ ಕಣ್ಗಳ ಖಾತಿ ಮೊಗದ ಮುನಿಸು ಸುಯ್ಯ ಕಶಿ[ನ]ಂ ಪುಟ್ಟುವನುರಾಗಕ್ಕೆ ಪಡಿಬಲಮಾಗೆ (ನಂಬಿರ. ೧೪-೫೮); ಎಲವೊ ಕರ್ಣಾತ್ಮಜನ ಹೊಯ್ದುಗ್ಗಳಿಕೆಯಲಿ ಹೊರೆಯೇಱದಿರು ಪಡಿಬಲಕೆ ಕರಸಾ ಕೃಷ್ಣ ಪಾರ್ಥರ ನಿನ್ನಲೇನಹುದು (ಕುಪ್ಯಾಕ. ೧೦-೪೪); ದುಂದುಭಿ ಮೊಳಗೆ ಬೆರಲ ತುಟಗಳ ದನಿಯಿಂದ ನಡೆವ ಕಾಲಾಳು ಮುಂದುವರಿಯೆ ಮೇಲವರು ಸಂಗಮದೇವ ಬಂದನು ಪಡಿಬಲವಾಗಿ (ಕುರಾಸಾಂ. ೧೩-೨೪). **ಪಡಿಬಳ :** ೨. "ಪಡಿಬಳ-ಪ್ರತಿಬಲ" (ತದ್ಭಕೋ. ೨೩). [ಪಡಿ$_3$+ಬಲ್ಯ./ಸಂ. ಪ್ರತಿಬಲ]

ಪಡಿಬಲಿಸು 'ಪಡಿಬರಿಸು' ನೋ.

ಪಡಿಬಳ 'ಪಡಿಬಲ' ನೋ.

ಪಡಿಬಾಹಿರ (ನಾ). ಅನಧಿಕಾರಿ; ಅಯೋಗ್ಯ; ತುಚ್ಛ : ನಾವು ಪಡಿಬಾಹಿರರು ಬೀಯದ ಸೇವಕರು ಸಮಹಂತಿಗಾಱರಿಗೀವುದೈ ದೃಢಮುದ್ರಿತಾಂತರ್ಮಾನಸಾಮೃತವ (ಕುಪ್ಯಾಅ. ೨೧-೪೪).

[<ಪ್ರಾ. ಪಡಿಬಾಹಿರ./ಸಂ. ಪ್ರತಿಬಾಹ್ಯ]

ಪಡಿಬಿಂಬ, ಪತಿಬಿಂಬ (ನಾ). ಪ್ರತಿಬಿಂಬ; ಪ್ರತಿರೂಪ : ಎಲ್ಲ ನೃಪರಂತಲ್ಲ ಲಕ್ಷ್ಮೀವಲ್ಲಭನ ಪಡಿ[ಪಾಠಾಂ. ಪ್ರತಿ]ಬಿಂಬ ನಿನ್ನಲಿ ನಿಲ್ಲಬಲ್ಲನೆ ಕಲಿಪುರುಷನತಿಬೇಗ ತೆರಳಿದನು (ನಳಚ. ೯-೧೦). **ಪತಿಬಿಂಬ :** ಪುರಹರನ ಪ[ಪಾಠಾಂ. ಪ್ರ]ತಿಬಿಂಬವೆನಿಸಿದ ಶರಣರಂ ಧಿಕ್ಕರಿಸಿ ನಿಂದಿಸಿ ನರಕಭಾಜನರಾದಿರೀಶ್ವರದೂಷಕರು ನೀವು (ಬಸಪು. ೫೭-೪೦).

[<ಪ್ರಾ. ಪಡಿಬಿಂಬ./ಸಂ. ಪ್ರತಿಬಿಂಬ]

ಪಡಿಬೀಡಾರ (ನಾ). ಸರಿಸಮಾನವಾದ ಬಿಡದಿಮನೆ; ಎಣೆಯಾದ ವಸತಿಗೃಹ : ಪಡಿಬೀಡಾರದಿಂದುಡುಗೊಱೆಯಿಂದ ಮೆಲ್ನುಡಿಯಿಂದ ವನನು ಸತ್ಕರಿಸಿ (ಕುರಾಸಾಂ. ೯-೭೯); ಹಿಮವಂತನು . . . ಅಂತರಂತರವಱಿದು ಬಂದ ನಿಬ್ಬಣಿಗರ್ಗನಂತಮಾಗಿರ್ದ ಪಡಿಬೀಡಾರಮಂ ತೋಱೆ ಸಂತಸದೊಳೀಶ್ವರಂ ಹರಿಯಜೇಂದ್ರಾದ್ಯರೊಡನೊಡ್ಡೋಲಗದೊಳೆಸೆದನು (ಚಿಬಪು. ೩೭-೬). [ಪಡಿ$_3$+ಬೀಡಾರ]

ಪಡಿಬೀಡಾರಗೈಸು (ಕ್ರಿ). ಸರಿಸಮಾನವಾದ ಬಿಡದಿಮನೆಯನ್ನು ಸಿದ್ಧಪಡಿಸು : ಗಮ್ಮನೀತಗೆ ಪಡಿಬೀಡಾರಗೈಸೆಂದು ಕಮ್ಮಗೋಲನು ಮಂತ್ರಿಗೊರೆದ (ಭರಚ. ೪೭-೧೨೩).

[ಪಡಿಬೀಡಾರ+ಕೈಸು(<ಕೆಯ್ಸು)]

ಪಡಿಭತ್ಯ (ನಾ). ಆಹಾರಧಾನ್ಯಗಳ ರೂಪದಲ್ಲಿ ಕೊಡುವ ಸಂಭಾವನೆ : ಅನವಶ್ಯವಾಗಿ ಈ ಬ್ರಾಹ್ಮಣರಿಗೆಲ್ಲಾ ಪಡಿಭತ್ಯವೇಕೆಂದು ಪ್ರಶ್ನಿಸಲಾರಂಭಿಸಿದನು. ಈ ಕಾರಣದಿಂದ ಇತರರೆಲ್ಲರಿಗೆ ಆದಂತೆ ಆನಂದದಾಸರ ಮನೆಗೆ ಸಲ್ಲುತ್ತಿದ್ದ ಉಪಾಯನವೂ ನಿಂತುಹೋಯಿತು (ಕಭವಿ. II, ೬೧೧). [ಪಡಿ$_1$+ಭತ್ಯ(<ಬತ್ತಾಯ)]

ಪಡಿಮಟ್ಟೆಯ, ಪಡಿಮಠೆಯ (ನಾ). [ಸಂಗೀತ] ಒಂದು ಬಗೆಯ ದೇಶೀತಾಳ : ಅವರವಸರಮಱಿದು ರಚ್ಛೆಯ ಮಟ್ಟೆಯ ಪಡಿಮಟ್ಟೆಯ ಝುಂಪೆಯಮಡ್ಡತಾಳ ರೂಪಕಮೆಕ್ಕತಾಳಂಗಳೆಂಬ ಸಪ್ತ ತಾಳಂಗಳಂ ನಿವರ್ತನಗೆಯ್ದು (ಬಾಧಪು. ೯-೧ ವ). **ಪಡಿಮಠೆಯ :** ಬೇಗದಿ ಧೃವಮಠೆಯವು ಪಡಿಮಠೆಯವು ಯೇಗೈಯಲಡತಾಳಗಳು(ತರ್ಕಕೌ. ೭-೫೬). [<ಸಂ. ಪ್ರತಿಮಟ್ಟ]

ಪಡಿಮಠೆಯ 'ಪಡಿಮಟ್ಟೆಯ' ನೋ.

ಪಡಿಮದ್ದಳೆ (ನಾ). ಸರಿಸಮಾನವಾದ ಮದ್ದಳೆ (?) : ಎಲೆಲೆ ಹಾರುವನೇಕೆ ಹರಿಮೇಖಳೆಯ ಕೇಳಿಕೆಯೇಕೆ ಪಡಿ[ಪಾಠಾಂ. ಫಡ, ಬಡಿ] ಮದ್ದಳೆಯ ಬಡಿಕರ ಬಿಂಕ ಮೇಳವವಿಲ್ಲಲಾ ನಿನಗೆ . . . ಎನುತ ಬಾಣಾವಳಿಯ ನಿಮಿಷಕೆ ಕಡಿದು ಗುರುಜನನೆಚ್ಚನಾ ಭೀಮ (ಕುಪ್ಯಾಕ. ೩-೨೨).

[ಪಡಿ$_3$+ಮದ್ದಳೆ$_1$(<ಮದ್ದಲೆ$_1$)]

ಪಡಿಮದ್ದು (ನಾ). ಪ್ರತಿಯಾದ ಔಷಧ; ಬೇರೆ ಮದ್ದು.

ಪಡಿಮದ್ದು ಅರೆ=ಬೇರೆ ಉಪಾಯವನ್ನು ಮಾಡು : ನಮ್ಮ ಹೊಲದ ಬೆಳೆಯನ್ನು ಅವನ ಹೊಲಕ್ಕೆ ಸಾಗಿಸುತ್ತಿರಬೇಕು. ಇದಕ್ಕೆ ಏನಾದರೂ ಪಡಿಮದ್ದು ಅರೆಯಬೇಕು (ಬೆಳುಮ. ೫೮).

[ಪಡಿ$_3$+ಮದ್ದು(<ಮರ್ದು)]

ಪಡಿಮಲ್ಲ(ನಾ).ಸರಿಸಮಾನನಾದ ವೀರ.—ಪರಾಕ್ರಮಿ: ಬನ್ದಿರ್ತ್ತ ಮ್ಮುತ್ತಿರ್ವ್ವರುಳ್ಪಿರಿಯಾತಮ್ಬಿಕ್ಕುಳ್ಳಿ ವಿಗ್ರಹದಣ್ಡವೀರಸಿಂಹಾಸನಿಗ ಪಡಿಮಲ್ಲಂ ನೋಡಿ ಕೊಮರಮ ××× (ಎಕ. XI, ಚಳ್ಳಕೆ. ೮-೩; ಸು. 810 ?). [<ಸಂ. ಪ್ರತಿಮಲ್ಲ]

ಪಡಿಮಾಟ (ನಾ). ಪ್ರತಿಯಾಗಿ ಮಾಡುವ ಕ್ರಿಯೆ; ಬದಲಾಗಿ ಮಾಡುವ ಕಾರ್ಯ : ಒಡಲಂ ದುಃಖಿತಮಂ ಚಂಚಲಮಂ ಕೊಂಡುಯ್ವುದರೊಳ್ ಪಡೆಯಂ ಸೌಖ್ಯಮನಿನಿತುಂ ನಿಜದಿಂ ಪಡಿಮಾಟಂ ದುಃಖಕ್ಕೊಡ್ಡಿರೆ ದುಃಖಂ ಮುದುಡಿಡಿದಿರ್ದೋಡೆ ಸುಖಮೆಂದದನೇ ಕಲ್ಪಿಸುಗುಂ (ಸೌನಂದ. ೯-೪೦). [ಪಡಿ$_3$+ಮಾಟ$_1$]

ಪಡಿಮಾತು 'ಪಡಿವಾತು' ನೋ.

ಪಡಿಮಿಡಿ (ಕ್ರಿ). ಪ್ರತಿಯಾಗಿ ಸ್ಪಂದಿಸು; ಪ್ರತಿಸ್ಪಂದನವನ್ನು ನೀಡು : ಆದೊಂದು ರೀತಿಯಲ್ಲಿ ಆಂದಂದಿನ ಅನುಭವಕ್ಕೆ ಅನಾಯಾಸವಾಗಿ ಪಡಿಮಿಡಿದ ಪ್ರತಿಕ್ರಿಯಾರೂಪದ ಸಾಹಿತ್ಯ (ಪರಿಶೀ. ೮೫); ಕೆಲವು ಬಣ್ಣಗಳನ್ನು ಕಂಡೊಡನೇ ನಮ್ಮ ಕಣ್ಣು ಅರಳುತ್ತವೆ. ನಮ್ಮ ಇಂದ್ರಿಯಗಳು ಪಡಿಮಿಡಿಯುತ್ತವೆ (ಸೌಂದಸ. ೨). [ಪಡಿ$_3$ + ಮಿಡಿ$_1$]

ಪಡಿಮುಖ, ಹಡಿಮುಖ (ನಾ). ೧. ಎದುರು; ಅಭಿಮುಖ; ಮುಂಭಾಗ : ಅಂಜುವೆವು ನಿಮಗರಸರೇ ಬಲಪಂಜರದ ಗಿಣಿ ನೀವು ನಿಮಗೀ ಮಂಜರನ ಪಡಿಮುಖಕೆ ನಿಲುವುದು ನೀತಿಯೇ ನಿಮಗೆ (ಕುಪ್ಯಾಕ. ೧೧-೪೨); ಎಲೆಲೆ ರಾಯನ ಪಡಿಮುಖದೊಳಿಟ್ಟಳಿಸಿತೋ ಹಯ ಬದುಕಿನಾಸೆಯ ಬಳಿಯ ಬಿಡಿರೋ (ತೊರರಾ. ೬-೩೦-೩೪); ರಥವಳಿದು ಕೈದುವ ಬಿಟ್ಟು ಕಾಲಾಳಾಗಿ ಹರಿಯನು ಮುಟ್ಟಿ ಕಾದಲು ಬಂದನಾ ಕಡುಪಾಪಿ ಪಡಿಮುಖಕೆ[ಪಾಠಾಂ. ಕಡುಮುಳಿದು] (ನಿಭಾಗ. ೧೦-೫೧-೪೪). ೨. ಪ್ರತಿಪಕ್ಷ; ಎದುರುಪಕ್ಷ; ಶತ್ರುಪಕ್ಷ : ಹತ್ತುಸಾವಿರ ತುರಗ ಸರಿಸದಲೇಱಿದವು ಪಡಿಮುಖದ ಬಲ ಬೆದಱೆ (ಕುಪ್ಯಾಕ. ೩-೩); ಪಡಿಮುಖದ ಹಳೆಗಲೆಯ ಕರುಳ್ಗಳನಡಸಿ ಬಸುಱಲಿ ಹೊಲಿದ ಹೊಲಿಗೆಯ ದಡಿಗರಕ್ಕಸರಾಯರಿದ್ದುದು ಕೋಟಿಸಂಖ್ಯೆಯಲಿ (ತೊರರಾ. ೩-೭-೫). ೩. ಅಭಿಮುಖನಾದವನು; ಎದುರಾದವನು : ಕೊಡಬೇಡ ಕೊಳಬೇಡ ಸುರವಿಜಯ ವಿಠ್ಠಲನ್ನ ಅಡಿಗಳನ್ನು ನಂಬಿ ಪಡಿಮುಖನಾಗು ಗತಿಗೆ (ವಿಸಾಸು. ೮೯-೧). ೪. ಬೇರೆ ಕಡೆಗೆ ತಿರುಗಿಸಿದ ಮುಖ; ವಿಮುಖ : ಭಾರಿಧನುವಿದೆ ಭಾಮಿನಿಯ ಮುಂದೆ ಎವಗೆ ತವಗಿದು ವಶವೆ ಬಾವನ್ನವನು ವೇಷ್ಟಿಸಿ ಭುಜಗವಿದೆ ಯೆಂದವನಿಪರು ಹೊಱಗುಂದಿದರು ಪಡಿ[ಪಾಠಾಂ. ಭಯ]ಮುಖದ ದುಗುಡದಲಿ (ಕುಪ್ಯಾಆ. ೧೪-೨೫). **ಹಡಿಮುಖ** : ೨. ರಂಗಿಣಿಯ ಕೊಮ್ಬಲ್ಲಿ ತುರಕರ ಕೂಡೆ ಕಾದಿ ದಳವ ಮುಱಿಯಲಿಱಿದು ಹಡಿಮುಖದ ಘಾಯದಿಂದ ಸ್ವಾಮಿಕಾರ್ಯ್ಯಕೆ ದೇಹವನೊಪ್ಪಿಸಿ ಕೊಟ್ಟು ಚೆನ್ನೆಯ ನಾಯಕರು ಶ್ರೀವಯಿಕುಂಠವನು ಎಯಿದಿದರು (ಎಕ. XII, ತಿಪಟೂ. ೪೪-೬; 1295). [ಪಡಿ$_3$ + ಮುಖ]

ಪಡಿಮೂಡಿಸು (ಕ್ರಿ). ಪ್ರತಿಯಾಗಿ ಮೂಡಿಸು; ಪ್ರತಿಬಿಂಬಿಸು : ಪರಮಾಜರ ಮಹಡಿ ರಸಿಕನ ಜೀವನವನ್ನು ಪಡಿಮೂಡಿಸಿತ್ತು (ಬಾಬಲ. ೬೮); ಅಂತಹ ಅನುಭವವನ್ನು ಪಡೆದ ಇನ್ನೊಬ್ಬ ಕನ್ನಡ ರಸಿಕರು ಪಾಶ್ಚಾತ್ಯಸಮಾಜದ ಬಗೆಬಗೆಯ ಪದರುಗಳನ್ನು ಕನ್ನಡ ಸಾಹಿತ್ಯಕೃತಿಗಳಲ್ಲಿ ಪಡಿಮೂಡಿಸಿದ್ದಾರೆ (ಸಾಸಮಾ. ೧೪). [ಪಡಿಮೂಡು + -ಇಸು$_3$]

ಪಡಿಮೂಡು (ಕ್ರಿ). ಪ್ರತಿಯಾಗಿ ಮೂಡು; ಪ್ರತಿಬಿಂಬವಾಗು : ತನ್ನ ಆನಂದವು ಅವರ ಮನ ಮೊಗಗಳಲ್ಲಿ ಪಡಿಮೂಡಬೇಕೆಂಬುದು ಅವನ ಮನೀಷೆ (ಎರಸೆ. ೧೦೧); ಅಲ್ಲಿ ಕಲೆತಿರುವ ಜನಗಳ ನೆರಳೂ ಪಕ್ಕದ 'ಫಡಿ'ಯೊಂದರ ಮೇಲೆ ಪಡಿಮೂಡಿ ಅಲುಗಾಡುತ್ತಿತ್ತು (ಬನಸಿ. ೨೫). [ಪಡಿ$_3$ + ಮೂಡು$_1$]

ಪಡಿಮೆ, ಪತುಮೆ, ಪ್ರತುಮೆ (ನಾ). ೧. ಪ್ರತಿಮೆ; ಮೂರ್ತಿ; ವಿಗ್ರಹ: ಹಾಲುಗಲ್ಲಲಿ ಕಡೆದ ಪಡಿಮೆಯನೆ ಕುಳಿತಿಹಳು(ಚಂದ್ರಸ.೮೩-೧೧). ೨. ಪ್ರತೀಕ; ಸಂಕೇತ; ಕುರುಹು : ಆ ಸಂಜೆಯಿಂದಾ ಬಂಡೆ, ಕಲ್ಲವಸಿ, ಊರ್ಮಿಳೆಗೆ ಮೇಣವಳ ಸಂಯಮಕೆ ಪಡಿಮೆಯಾದುದು (ಶ್ರೀರಾಮಾ. ೧೪೬-೧೧೯). **ಪತುಮೆ** : ೧. ಅವನ ಆಯ್ದತ್ತು ಗಂಜನದ ಪತುಮೆಯ ಕಟ್ಟಿ ತನ್ದು ಅಟ್ಟಿಗೆ ಕೊಟ್ಟ ರಾಜೇನ್ದ್ರಚೋಳನಾಟ್ಟರೆಯಂ (ಎಕ. IV (R), ಹುಣಸೂ. ೫-೨೦; 1020); ಚೆನ್ನಾಗಿ ಪುಳಿದೊಡೆ ದೊಪ್ಪವಿಕ್ಕಿದ ಚೊಕ್ಕ ಚಿನ್ನದ ಪತುಮೆಗಳಂತೆ ರನ್ನದ ಮುತ್ತ ಹಾರವನಿಟ್ಟು ಸುಗುಣಸಂಪನ್ನೆಯರಿರ್ದಂಕ್ಕೆಲದಿ(ಮೋಹತ.೧೮-೩೬). **ಪ್ರತುಮೆ**: ೧. ಈ ಲೇಖೆಯ ಪ್ರತುಮೆಯ ಕಂಡರಿಸಿದ ಮಾಳವೆಯ ಮಲೆಯ (ಎಕ. XVI, ಗುಬ್ಬಿ. ೬೬-೧; 12ನೆಯ ಶತ); ಶ್ರೀ ಚಂದ್ರನಾಥನ ಚೈತ್ಯಾಲಯದಲೂ ತೊಳಹರ ಬಳಿಯ ಅನಕಸೆಟ್ಟಿಯ ಮಗ ಆದಿಸೆಟ್ಟಿಯಾಯೆರಗಿಸಿದ ಚತುರ್ವಿಂಶತಿ ತೀರ್ಥಂಕರರ ಪ್ರತುಮೆಯನುಯಿರಿಸಿ ಕ್ರುತಾರ್ತ್ಥನಾದೆನು (ಮೈಆರಿ. ೧೯೪೬, ೯-೨; ಸು. 14ನೆಯ ಶತ); ನಸುನಗು ತೀಶನಗಜೆಯೊಳ್ ಸರಸವಾಡುತ್ತೆ ಸರ್ವಾಂಗದೊಳ್ ನಿರ್ಮಳೋದಕವನಿರದೊತ್ತೆ ಚಂದ್ರಿಕೆ ಬಳಸಿ ನಿಂದ ನೀಲದ ಪ್ರತುಮೆಯಂದಮಂ ಪೋಲ್ತು (ಚಬಪು. ೪೫-೫೫). [<ಪ್ರಾ. ಪಟಮಾ, ಪಡಿಮಾ./ಸಂ. ಪ್ರತಿಮಾ./ತಮಿ. ಪತಿಮ್ಮೆ, ಪತುಮ್ಮೆ; ತೆಲು. ಪತಿಮ]

ಪಡಿಮೆಚ್ಚು (ನಾ). ತೀರ್ಮಾನವಾಗದುದು; ಅನುಮಾನದಿಂದ ಕೂಡಿದುದು : "ಪಡಿಮೆ[ಪಾಠಾಂ. ಮ]ಚ್ಚೆನಲದು ಸಂಶಯಂ" (ಭಾರನಿ. ೬೦). [P ಇದು 'ಪಡಿಪುಚ್ಚ' ಎಂಬುದರ ಅಪಲಿಖಿತ ವಿರಬಹುದೆ ?]

ಪಡಿಮೇಲ್ (ನಾ). ಪ್ರತ್ಯುಪಕಾರ : ಆದೊಡೀ ಮೇಲ್ಗೇಂ ಪಡಿಮೇಲೆನ್ನತ್ತಣಿನಪ್ಪುದಿರ್ಪುದು, ಅಂತದಂ ಸಲಿಸುತೆ, ನಿನ್ನೊಲ್ಮೆಯಂ ಪಡೆಯಲ್ತಕ್ಕುದದಱಿಂ ನಿನ್ನಯ ಬಯಕೆಯಂ ಕೂರ್ಮೆಯಿಂ ಬೆಸಸುವುದು (ಅದ್ಭುತ. ೨೫-೧೨). [ಪಡಿ$_3$ + ಮೇಲ್]

ಪಡಿಮೊಗ, ಹಡಿಮೊಖ (ನಾ). ೧. ಅಭಿಮುಖ; ಎದುರು : "ಪಡಿಮೊಗ—ಪ್ರತಿಮುಖ = ಅಭಿಮುಖ" (ತದ್ಭಕೋ. ೨೩); ಹರಿಭೇದಂಗೆಯ್ಯೆ ಬಿರ್ದೋಪನ ಪಡಿಮೊಗದೊಳ್ ತುಂತುಱಂ ತೂಱಿ ಸುಯ್ಯಂ ಕರದಿಂದಾರಯ್ದು . . . ಶೋಕಾತುರೆ ದುಃಖೋದ್ರೇಕದಿಂದಂ ಬಸೆ ಪರವಸೆ ಬೀಸಿತ್ತು ಕರ್ಣಾಗ್ರದಿಂದಂ (ಲೀಲಾವ. ೮-೨೦); ಪಡಿಮೊಗ ಮಾಗಲೊಡಂ ಕನ್ನಡಿಯಂ ನೋಡುವರ ತೆಱದೆ ಮೆಯ್ಯುಂದುವರುಗ್ಗಡದರಸುಮಕ್ಕಳೆನೆ ಬಾಳ್ವಿಡಿದಾರ್ ಬಾಟ್ಡಿಪ್ಪರಾತನಿದಿರೊಳ್ ಪಗೆವರ್ (ಕಬ್ಬಿಕಾ. ೪೯); ಎಂದಿಗವನ ಪಡಿಮೊಗದೊಳು ಸಂದಪೆನೆಂದೆಡೆವಿಡದೆ ಜಾನಿಪಳು (ಹದಿಬ.೭-೨೯). ೨. ಪ್ರತಿಯಾದ ಮುಖ; ಪ್ರತಿಬಿಂಬ: ಕನ್ನಡಿಯಲ್ಲಿ ತನ್ನ ಪಡಿಮೊಗವನ್ನು ನೋಡಿದಾಗಲೆಲ್ಲ ಅವರ ಮನದೊಳಗೆ 'ಚುರುಚರು' ಅನ್ನುತ್ತಿತ್ತು (ಚಿಗುಬ. ೧). ೩. ಶತ್ರುಪಕ್ಷ; ವಿರುದ್ಧಪಕ್ಷ: ಆ ಕಂಣಯನಾಯಕನ ತಂಮನು ಸ×××× ಆಸೆಮಾಡುವ ಕುಮಾರರ ಗಂಡ ಹಡಿಮೊಖದ ಘಾಯವಿಲ್ಲದ [ವೀ]ರರ ಗಂಡ (ಮೈಆರಿ. ೧೯೩೮, ೫-೯; 13ನೆಯ ಶತ). 'ಪಡಿಮುಖ' ಪರಾ. [ಪಡಿ$_3$ + ಮೊಗ]

ಪಡಿಯಗಳು 'ಪಡಿಯಗಟ್' ನೋ.

ಪಡಿಯಗಟ್, ಪಡಿಯಗಳು (ನಾ). ೧. ಬೇರೆಯ ಅಗಳು; ಮತ್ತೊಂದು ಕಂದಕ : ಪಡಿಗೋಂಟೆಗೆಯ್ದು ಕಡುಪಂ ಪಡಿಯಗಟ್ಗೆಯ್ದಳವನಾರ್ಪು ಕಡುಗೂರ್ಪಗಳಂ ಪಡಿವಡೆಗೆಯ್ದಂದವರೊಳ್ ಪಡಿಬರಿಸಿದರಮಮ ವಿಪ್ಡುಜಿಪ್ಡುಗಳನ್ನರ್ (ಚಿಕವಿ. ೨-೪೫). **ಪಡಿಯಗಳು** : ೧. ಕಳನ ಸವೆದರು ಮೂಱುಯೋಜನ ವಳಯದಲಿ ಪಡಿಯಗಳು ಕೋಟಾವಳಯ ಸುಯ್ಧಾನದಲಿ ಹೊಯ್ದರು ರತ್ನಕಾಂಚನವ (ಕುಪ್ಯಾಸ. ೬-೧೪). ೨. ಅಳವಾದ ಅಗಳು,—ಕಂದಕ : ಬೀಡಿನ ತೆಕ್ಕೆ ಬಿಗಿದುದು ಪಾಳೆಯದ ಬಲುಹೊದಕೆ ಹೊಱವಳಯದಲಿ ಕಲುಗೋಟೆ ಮೇಲೆ ಪಡಿಯಗಳಾಶ್ರಯಿಕೆ ಮುಳುವೇಲಿ ದೀಹದ ಸಿಂಹಶರಭ ವ್ಯಾಳ ಶಾರ್ದೂಲಾವಳಿಯ ಸುಯಿಧಾನವೊಪ್ಪಿದವು (ಕುಪ್ಯಾಉ. ೧೧-೪೭); ಸುತ್ತ ಕತ್ತರಿವಾಣಿ ಪಡಿಯಗಳುತ್ತರಿಸಲಮರಾಳಿಗರಿದೆನೆ ಕೊತ್ತಳದ ಹುಲಿಮುಖದ ಹರಹಿನಲೆಸೆದುದಾ ದುರ್ಗ (ತೊರರಾ. ೬-೭-೧೬). [ಪಡಿ$_3$ + ಅಗಟ್$_2$(<ಅಗುಟ್$_3$)]

ಪಡಿಯಚ್ಚು (ನಾ). ೧. (ಮೂಲದ ಆಕೃತಿಗೆ) ಸರಿಸಮಾನವಾದ ಆಕೃತಿ ; ಪ್ರತಿರೂಪ : ತರು ಪಾಷಾಣಾದಿ ಕರ್ಮ್ಮಾಂತರ ಪರಿಣತಿಯಂ ಪದ್ಮಜಂ ಲೋಕದೊಳ್ಪಿತ್ತರಿಸಲ್ವೇಟ್ಕುಂ ದಲೆಂದಿಂತಿದಱೊಳ್ ಪಡಿಯಚ್ಚಾಗಿ ಮಾಡಿಟ್ಟನೆಂಬಂತಿರೆ . . . ಮಾಡಿಸಿದನೆಸೆಯೆ ದಣ್ಡಾಧಿಪಂ ಕೇಶಿರಾಜಂ (ಎಕ. VII, ಶಿಕಾರಿ. ೧೨೩-೫೨ ; 1179) ; ವೀರ್ಯ ಪರಾಕ್ರಮಗಳಲ್ಲಿ ಕೃಷ್ಣಪ್ಪನಾಯಕರ ಪಡಿಯಚ್ಚು ನೀನು ! (ಶ್ರೀರಾಯ. ೩೧೪) ; ಅವರ ಮಕ್ಕಳೇ ಎಂದು ಹೇಳಿದರು. ಮುಖವೂ ಸಹ ಅವರ ಪಡಿಯಚ್ಚಿನಂತಿತ್ತು (ಪತಂಗ. ೬). ೨. ಮರದಲ್ಲಿ ಅಥವಾ ಲೋಹದಲ್ಲಿ ಬೇಕಾದ ಆಕಾರವನ್ನು ಕೊರೆದು, ಅದರಲ್ಲಿ ಎರಕವನ್ನು ಅಥವಾ ಕರಗಿಸಿದ ದ್ರವವನ್ನು ಹೊಯ್ದು ಆ ಆಕಾರದ ಬಿಂಬವನ್ನು ಮಾಡಿಕೊಳ್ಳುವ ಸಾಧನ : ಈ ಮುದ್ರಣವಸ್ತುವು ಅಚ್ಚು ಮೊಳೆಗಳ ಸಮೂಹ, ಪಡಿಯಚ್ಚು ಮತ್ತು ಫಲಕಗಳು ಇವುಗಳಿಂದ ಕೂಡಿರುವುದರಿಂದ ಅದು ಅತಿ ಸುಲಭವಾಗಿ ಬಳಸಲನುಕೂಲವಾಗಿರುವುದಿಲ್ಲ (ಮುದ್ರಕ. ೨). ೩. ಒರೆಗಲ್ಲು ; ನಿಕಷ : "ಒರೆಗಲ್ಲ ಪೆಸರು ಪಡಿಯಚ್ಚೆಂಬುದಕ್ಕು"(ಕಶರ. ೫೮). [ಪಡಿ$_3$+ಅಚ್ಚು$_3$]

ಪಡಿಯಚ್ಚುವಡೆ (ಕ್ರಿ). ಪ್ರತಿರೂಪವನ್ನು ಹೊಂದು ; ಸಮಾನವಾದ ಆಕೃತಿಯನ್ನು ಪಡೆ : ಕದ್ದೈಸದೆ ನೋಡು ಸ್ಮರನ ಬಾಯೊಳ ಗುರ್ಚಿ ಬಿದ್ದಂತೆ ಪಡಿಯಚ್ಚುವಡೆದ ಮುಗ್ಧಾಸ್ಪದೆ ಕಮನೀಯರೂಪ ನನನಿರುದ್ಧನ ನೋಡು (ಮೋಹತ. ೩೦-೩೨). [ಪಡಿಯಚ್ಚು + ಪಡೆ$_1$]

ಪಡಿಯಚ್ಚುವಿಡಿ(ಕ್ರಿ). = ಪಡಿಯಚ್ಚುವಡೆ: ಕ್ಷಣಿಕೈಕಾಂತವಾದಮಂ ಪಡಿಯಚ್ಚುವಿಡಿದು ನುಡಿವ ಬೌದ್ಧನೇಕಾಂತಮಿಥ್ಯಾತ್ವಮಂ(ಪಸಾರ.೪). [ಪಡಿಯಚ್ಚು+ಪಿಡಿ$_1$]

ಪಡಿಯಟ್ಟಣೆ (ನಾ). ಪ್ರತಿಯಾಗಿ ನಿರ್ಮಿಸಿದ ಅಟ್ಟಣೆ : ನಡೆಗೋಂಟೆಗಳ ಮೊಗ್ಗರಂ ನೂಂಕಿದುವು ಪುರದ ಪೊಱಬಳಸಿನೊಳ್ ಪಡಿಯಟ್ಟಣೆಗಳೆದ್ದುವು (ಚಿಬಪು. ೪೨-೨೪). [ಪಡಿ$_3$+ಅಟ್ಟಣೆ$_1$(<ಅಟ್ಟಳೆ)]

ಪಡಿಯದೆ, ಹಡದಿ$_2$, ಹಡದೆ, ಹಡಿಯದೆ (ನಾ). ೧. ಒಂದು ಬಗೆಯ ಆದಾಯ ತೆರಿಗೆ (?) : ಗ್ರಾಮಾಸ (?)ರ್ವ ೨೦೦೦ ಮಗಿಲು ಗ್ರಿಹೇ ಹಸ್ತ ೪೦ ಘಾಣಾ ಹಟ್ಟಾ ಮುಲಾ ಪಡಿಯದೆ ಪಾರಿಕ್ಷಾಯ ಅಷ್ಟಭೋಗ ತೇಜಸಾಮ್ಯ ಸರ್ಬ ಮೂಲಿಕಾ ಭೂಮಿ ೨೦೦೦ . . . ಗ[ಗಾ]ಣ ೧ ಪಡಿಯದೆ ೧ ಹಟ್ಟಾ ೧ ಮಲಾ ೧ (ಇಅ.XIV, ೧೪೧-೨೫; ಸು. 12ನೆಯ ಶತ). **ಹಡದಿ$_2$** : ೨. ಗ್ರಾಮದ ಅಗಸ, ನಾಯಿಂದ ಮೊದಲಾದವರಿಗೆ ಗ್ರಾಮಸ್ಥರು ಕೊಡುವ (ಧಾನ್ಯರೂಪದ) ವರ್ಷಾವಧಿ ಸಂಭಾವನೆ,—ಪಡಿ : ಮಾಯಿ ಸರಿಯಾಗಿ ಹಡದಿ ಕೊಡುತ್ತಿರಲಿಲ್ಲ . . . "ನಿನ್ನ ಚೌರಕ್ಕೆ ಹಡದಿ ಬೇರೆ ದಂಡ" —ಈ ರೀತಿ ಹಂಗಿಸುತ್ತಿದ್ದಳು (ನನ್ನೂರು. ೨೩೫). **ಹಡದೆ** : ೧. ಸೊಲಿಗೆ ಗುಡ್ಡೆಯ ಆಯ, ಹಡದೆ, ಲಂಚಪಂಚೆ (ಬೆಟ್ಟಅ. ೧೫೫-೨೩). ೨. ತೋಟ ತಳವಾರ ಹೊರತು ಮಿಗಿಲಾದ ಜನಗಳಿಗೆ ಹಡದೆಯನ್ನು ನಿಬಂಧನೆಯ ಮೇರೆಗೆ ಕೊಡುವಂತೆಯೂ ನೇಮಕ ಮಾಡಿಸಿದರು (ಚಾಮಪಂ. ೧೧೮) ; 'ಹಡದೆ'ಯು ಐದು ಬಳ್ಳದಿಂದ ಮೂರಕ್ಕೆ ಮುಟ್ಟಿತು (ಗರುದಾ. ೧೧೬). ೩. ಪಡಿಯಾಗಿ ಕೊಡುವ ತೆನೆಯ ಹುಲ್ಲು: ಈ ಹಡದೇ(ಭತ್ತ ಸಹಿತವಾದ ಹುಲ್ಲು) ಹೊತ್ತುಕೊಂಡು ಬರುವವನಿಗೆ ಹಡದೇ ಒಕ್ಕಲೆಂದು ಹೆಸರು (ಹುಟ್ಟಹ. ೬೪). **ಹಡಿಯದೆ** : ೧. ಮದುವೆಯಾಯ ಮಾನೆಂಣ್ಣೆ ಹಡಿಯದೆ ತಿಪ್ಪೆ ಸುಂಕ (ಎಇ. XXIII, ೩೦-೬೧ ; 1265) ; ಶ್ರೀಮತು ಕೂಮಣೇಶ್ವರದ[ಲಚ]ಧ್ಯಾರ ಮನೆಯ ಸಿಲೆಯಣ ಗವುಂಡ ಹಡಿಯದೆ ಇಕ್ಕೊಳ ಜೋಳ (ಸೌಇಇ. XX, ೩೫೧-೩ ; 13ನೆಯ ಶತ). [?]

ಪಡಿಯರ 'ಪಡಿಯಱ' ನೋ.

ಪಡಿಯರತಿ 'ಪಡಿಯಱತಿ' ನೋ.

ಪಡಿಯರವಕ್ಕಿ 'ಪಡಿಯಱವಕ್ಕಿ' ನೋ.

ಪಡಿಯಲೆ (ನಾ). ಪ್ರತಿದಿನ ಅರ್ಪಿಸಬೇಕಾದ ವೀಳೆಯದೆಲೆ : ಶ್ರೀಮದನಾದಿಯಗ್ರಹಾರಂ ತೊಣ್ಡನೂರ ನಡುವಣ×××ಯಾದ ಪಡಿಯಲೆಯ ವೀಳೆಯಕ್ಕ ಬಿಲ್ಕುಂಬಳಿಯ ತೋಟದಲು ಎಲೆಯಗುಳಿ ಇನೂರು ಗುಳಿಯಂ×××ಯ ಕುಳಿಯಗಾಡವಗದೆ ಮೂವತುಗುಳಿಯುಂ ಅನ್ತು ಇನ್ನೂರ ಎಂಭತು ಗುಳಿಯ ಪನ್ನಾಯವಂ ಸರ್ಬಬಾಧಾಪರಿಹಾರವಾಗಿ ಧಾ××ರ್ಪಕಂ ಮಾಡಿಕೊಟ್ಟರು (ಎಕ. XIV, ಶ್ರೀರಂಗ. ೬೧-೬ ; ಸು. 1175). [ಪಡಿ$_1$+<ಎಲೆ$_1$]

ಪಡಿಯಳೆ (ನಾ). ಒಂದು ಬಗೆಯ ಆದಾಯ ತೆರಿಗೆ : ಊರೊಡೆಯರ್ಗ್ಗೆ ಮಾನ್ಯದ ಕೆಯ್ಮತ್ತರಿನ್ನೂಱು ಮನೆಗೆಣ್ಗಯ್ಯಗಲವಿರ್ಪ್ಪತ್ತೈಗೈ ನೀಳದ ನಿವೇಶನಂ ಮೂರು ಸಾಶ್ವತ ಸುಂಕಂ ಗಾಣವೆಯಿಲಿಗೆ ಕೊಣ್ಡ ಮುಟ್ಟಿಗೆ ಪಡಿಯಳೆ ಯಜ್ಞದಲೊನ್ದು ಗದ್ಯಾಣಂ××× ಅಯ್ದು ಪಣಂ ಮದುವೆಯಲೆರಡು ಪಣಂ ಮಾಣಿಯಲೊನ್ದು ಪಣಂ (ಎಇ. XX,೬-೩೪; 1012). 'ಪಡಿಯದೆ' ಪರಾ. [?]

ಪಡಿಯಱ, ಪಡಿಯರ, ಪಡಿಯಾಱ, ಪಡಿಹಱ, ಪಡಿಹಾಱ, ಪಳಿಯಱ, ಪಱಿಯಱ, ಹಡಿಯರ, ಹಡಿಯಱ, ಹಡಿಯಾಱ, ಹಡಿಹಾಱ (ನಾ). ೧. ಬಾಗಿಲು ಕಾಯುವವನು; ಪ್ರತೀಹಾರಿ; ದ್ವಾರಪಾಲಕ : "ದ್ವಾರನಿಯುಕ್ತಂ ತಾಂ ಪ್ರತಿಹಾರಂ ದೌವಾರಪಾಳಕಂ ದ್ವಾರ್ಸ್ಥಂ ದೌವಾರಿಕನೆನೆ ಪಡಿಯಱಂ" (ವಸ್ತುಕೋ. ೬೧-೫೫); ಮುಂದಣ ಮಾನಸರಂ ಪಡಿಯಱರ್ ತೊಲಗಿಸುತ್ತಂ ಬರೆ (ನಡ್ಡಾರಾ. ೮೦-೧೨) ; ಮೂಱನೆಯ ಬಾಗಿಲೊಳ್ ಬಂದಿರ್ದನಂತನ ಬರವಂ ಪಡಿಯಱಂ ಬಿನ್ನಪಂಗೆಯ್ಯೆ (ಪಂಪಭಾ. ೯-೨೯ ವ) ; ಉಲಿವ ಕೋಕಿಲ ಪಾಠಕರ . . . ಜಡಿವ ಕೊಳರ್ವಕ್ಕಿಗಳ ಪಡಿಯಱರ ಅಲರ್ದ ಹೊಂದಾವರೆಯ ನವಪರಿಮಳದ ಸಿಂಹಾಸನದಿ ಲಕ್ಷ್ಮೀಲಲನೆಯೋಲಗಶಾಲೆಯಂತಿರೆ ಮೆಱೆದುದಾ ಸರಸಿ (ಕುವ್ಯಾಗ. ೩-೩೮); ಮೈತ್ರಾವರುಣಿ ಶಿಷ್ಯಂಧೂಡಿ ಬರುತಮಿರ್ಪುದಂ ಕಟ್ಟಿದಿರೊಳ್ಕಂಡು ಪಡಿಯಱಂ ಚಚ್ಚರಮೆಟ್ಟು . . . ಬಿನ್ನಯಿಸಿದಂ (ರಾಮಾಶ್ವ. ೧೦-೨೪). ೨. ಬಾಗಿಲು ಕಾಯುವ ಕೆಲಸ ; ಕಾವಲು : ಬನದ ಪಡಿಯಱನನಂಗಂ ನಿನಗಿತ್ತೊಡೆ ಪುಗಲಿಮೆಂಬುದೇಂ ದೋಷಮೆ ಚಿಃ ನೆನೆಯೆವದಂ ನಿನ್ನಿಂಚರಮನೆ ಮನದೊಳ್ ನೆನೆವೆವಾಗಳುಂ ಪರಭೃತಮೇ (ಅದಿಪು. ೧೧-೧೩೧) ; ಪಡಿಯಱನಿತ್ತಳೇ ನಿನಗೆ ಮತ್ಪ್ರಿಯೆಯಾಂ ಬರೆ ಬಾರಿಸೆಂದು ನೀಂ ಜಡಿದೆಡೆದೋಱುದ್ದೆ ಪ್ರಿಯೆಗೆ ಪೇಟ್ವೆನಿದಂ ಪರಿಭಾವಿಸೇಕೆ ನಿನ್ನೊಡನೆ ವಿರೋಧಮೋಪಳ ಮನಂಬಡೆವೆಂ ನಿನಗಿಂದೆ ಲಂಚಮಂ ಕುಡುವೆನಪಾರಕೋರಕಮನೇಕೆ ಪುಗಿಲ್ಪುಗಿಲೆಂದಪೈ ಪಿಕಾ(ಲೀಲಾವ. ೧೪-೩೬). **ಪಡಿಯರ** : ೧. "ಪಡಿಯರ (ಪಡಿವಳ-ಯಾರ-ಹಾರ)—ಪ್ರತಿಹಾರ (ಪ್ರತೀಹಾರ) = ದ್ವಾರಪಾಲಕ" (ತದ್ಭಕೋ. ೨೪) ; ಪಾಡುವರ್ಗ್ಗೆ ಮತ್ತರು ೧೦ ವಂಸಕಾಱಂಗೆ ಮತ್ತರು ೫ ಪಡಿಯರಂಗೆ ಮತ್ತರು ೫ ಮಾಲಗಾರಂಗೆ ಮತ್ತ ೩ ಕುಂಬಾಱಂಗೆ ಮತ್ತರು ೨ (ಸೌಇಇ. IX-i, ೧೩೩-೩೧ ; 1068). **ಪಡಿಯಾಱ**: ೧. ಪಡೆವಳ್ಳರ್ ನೃಪಗುಣಮಂ ಬಿಡೆ ನಾಳ್ಗಡಿಗಳೆವ ತೆಱದೆ ನಡೆನಡೆಯೆಂಬರ್ ಜಡಿವರಾ ಸಾಧೂಕ್ತಿಗಳಂ ನುಡಿವವರಂ ಮಾಣಿಪಂದದಿಂ ಪಡಿಯಾಱರ್ (ಕಾದಂಪೂ. ೫೫೬) ; ವೀರಬಲ್ಲಾಳರಾಯನ ದಿವ್ಯಶ್ರೀಪಾದಪದುಮೋಪಜೀವಿಯಪ್ಪ ಮಹಾಪ್ರಧಾನ ಹಿರಿಯ ಪಡಿಯಾರ××× ಮಾರಯ××× ಅನ್ವಯಮೆನ್ತೆಂದೊಡೆ (ಎಕ. VII, ಶಿವಮೊ. ೮೮-೧೯ ; 1203) ; ಪಡಿಯಾ[ಪಾಠಾಂ. ಹಾ]ಱನ ನೋಡಿ ಪೇಳ್ದನಾ ದಂಡೇಶ

(ಲಿಶಿಂ. ೩೭-೩೪). **ಪಡಿಹಜ :** ೧. "ಪ್ರತೀಹಾರಃ, ದ್ವಾರಪಾಲಃ, ದ್ವಾಸ್ಥಃ, ದ್ವಾಸ್ಥಿತಃ, ದರ್ಶಕಃ — ಈ ೫ ಪಡಿಹಜನು" (ನಾಚರಾ.೧೩೧) ; ಸೋಮನಾಥದೇವರ ಪಡಿಹಜ[ಸ್ತವರಂ]ಗೆ(ಬೊಂಕಶಾ. ೧೯೩೦, ಮುದ್ದೆಬಿಹಾಳ್. ೩೬-೩೩ ; 1181). **ಪಡಿಹಾಜ :** ೧. "ದ್ವಾಸ್ಥಃ, ದೌವಾರಿಕಃ . . . ದ್ವಾರಪಾಲಃ, ಪ್ರತೀಹಾರಃ— ಈ ೮ ಪಡಿ(ಯ)ಹಾಜಂ" (ಹಲಾಯು. ೭೦-೨೮೦); ಶ್ರೀಮನ್ಮಹಾಮಂಡಲೇಶ್ವರಂ ಹಲ್ಲವರಸರ ಪಡಿಹಾಜ ನಾಗದೇವನಾಯ್ಕನ ಮಡವಳಗೆ ಚಾಕಮನು ... ಕೊಟ್ಟ ಮತ್ತರು ಒಂದು(ಕಇಅ.೧೨೨-೨೮-೧೪; 1151); ಗರುಡರ ಗಡಣ ಯಕ್ಷ ರಾಕ್ಷಸರ ಕಳವಳವ ಜಡಿಯುತ್ತಿರ್ಪ ಪಡಿಹಾಜರಿಂ . . . ಹರನ ಸಭೆ ಸುಖದ ಸೊಗಸಿನ ಜೊಮ್ಮುವಿಡಿದು ಮೆಜ್ಜೆದಿರಲು (ಸಿದ್ಧರಾ. ೧-೨೩) ; ಇರುಳು ಗುಪಿತದಲವನಿಪತಿ . . . ಕರೆದು ಪಡಿಹಾಜಂಗೆ ಬಂದುದನಱುಹಲವದಿರು ಹೊಕ್ಕು ಸಮಯವನಱಂದು ಭೀಷ್ಮಂಗೀಹದನ ಬಿನ್ನಹವ ಮಾಡಿದರು (ಕುಜ್ಞಾಭೀ. ೬-೧೪) ; ಪಡಿಹಾಜರ್ಕೆತಂದು ತಡೆಯದಾ ವೀರಸಂಗಯ್ಯನ ಪದಕೆ ನಮಿಸಿ (ಪ್ರೌಢರಾ. ೧೩-೨೩). **ಪಳಿಯಜ:** ೧. ಕುಳಿರ್ವೆಟ್ಟು ಮುನ್ನೀರ್ಗಟ್ಟೆಯ ನಡುವಣ ಇಳೆಯಾಣ್ಮರು ಬೇಗದಿಂದ ತಳರ್ದರೋಲಗಕೆ ಗಾಜಿನ ಬಾಗಿಲ ಬಲು ಪಳಿಯಜರನು ಮತಿಯಿಂದ (ಕುರಾಸಾಂ. ೧೮-೩೦). **ಪಟಾಯಜ :** ೧. "ಪಟಾಯಜಂ[ಪಾಠಾಂ.ಪಡಿಯಟಂ]ಪಡಿಯಜಂ" (ಸಂಜೀವ.೨೧). **ಹಡಿಯರ:** ೧. ಹಲರ ಬೆಸದಿಂದ ಹಡಿಯರ××ರಾಹುತ ಹೋಹಲ್ಲಿ ಮಾಡಿದ ವೀರತ್ವ (ಎಕ. VII, ತಿಪಮೊ. ೫೦-೧ ; ?) **ಹಡಿಯಜ :** ೧. ಶ್ರೀ ವಿಷ್ಣುವರ್ದ್ಧನದೇವರ ಹಿರಿಯ ಹಡಿಯಜ ರೇವಿಮಯ್ಯಂಗಳು (ಎಕ. VI, ಕಡೂರು. ೯೯-೩೬ ; 1143) ; ವೀರಬಲ್ಲಾಳರಾಯನ ಹಿರಿಯ ಹಡಿಯಜ×××ಮಾರಯಂ ತಂನ ತಮ್ಮಂ . . . ಮಹಾಪಸಾಯ್ತ ಬಲ್ಲಾಳದೇವನ ಪಾದಾರಾಧಕನಪ್ಪ ಪಡಿಯಜ ಚಿಕ್ಕಕ××× (ಎಕ. VII, ತಿಪಮೊ. ೮೮-೩೩ ; 1203). **ಹಡಿಯಾಜ :** ೧. ಆ ಹಡಿಯಾಜ ರೇವಿಮಯ್ಯನ ಕೆಜ್ಜೆಯ ಹಿಂದೆ . . . ಬಿಟ್ಟ ಬೆದ್ದಲೆ ಮತ್ತರು ಒಂದು (ಎಕ. VI, ಕಡೂರು. ೯೯-೪೧; 1143). **ಹಡಿಹಾಜ:** ೧. ಇವರೆಲ್ಲರಂ ಆ ಮಂಡೇಶ್ವರದೇವರ ಸ್ಥಾನಿಕರಾಗಿ ಕಾಲಂ ಕರ್ಚಧಾರಾಪೂರ್ವಕಂ ಮಾಡಿ ಹಡಿಹಾಜ ಲಲಾಲದೇವನ ತಂಮ (ಎಕ. XII, ತಿಪಟೂ. ೧೨-೪೭ ; 1285).

[<ಪ್ರಾ. ಪಡಿಹಾರ./ಸಂ. ಪ್ರತೀಹಾರ]

ಪಡಿಯಜಗಟ್ಟುಗೆ (ನಾ). ದ್ವಾರಪಾಲಕನ (ಕೈಯಲ್ಲಿರುವ) ಕೋಲು,—ದಂಡ : ಎಡಱಾದರನಟ್ಟ ಮೋದುವ ಪಡಿಯಜಗಟ್ಟುಗೆಗಳ್ (ಶಸುದ. ೮ ಪ್ರಯೋ). [ಪಡಿಯಜ + ಕಟ್ಟುಗೆ]

ಪಡಿಯಜತಿ, ಪಡಿಯರತಿ, ಪಡಿಯಜಾತಿ (ನಾ). ಬಾಗಿಲು ಕಾಯುವವಳು ; ದ್ವಾರಪಾಲಕಿ : ಚಂಡಾಲಕನ್ಯೆಯನೊಡಗೊಂಡು ಬಾಯೆಂದು ಮುಂದಿರ್ದ ಪಡಿಯಜತಿಗೆ ಬೆಸಸುವುದುಂ (ಕಾದಂಬು.೭೭೦); ಕಡುಚೆಲ್ವಿನ ಮಂಡಪಂ ನಡೆನೋಡಲ್ ಬಂದು ಬಾಗಿಲೊಳ್ ಪುತ್ತಱಯಂ ಪಡಿಯಜತಿಯರೆಂದರೆಬರ್ ನುಡಿಯಿಸೆ ನುಡಿಯದೊಡೆ ನಾಣ್ಚಿ ನೆಲನಂ ನೋಟ್ಟರ್ (ಅನಂಪು. ೬-೪೨) ; ಮಾಣಿಕಗಂಡ ಬಡನಡುವಿನ ಭಾಮಿನಿ ತಳರ್ಗೈಯೊಳ್ ಪಿಡಿದಪರಂಜಿಯ ಸೆಳೆಯಲರ್ವಿಲ್ಲನ ಪಡಿಯಜತಿಯ ಕೈಯೊಳಗೊಪ್ಪುವ ಸೆಳೆಯಂತೆ ವಿರಾಜಿಸಿತು (ಜಯಕಾ. ೨-೪೭) ; ಪಡಿಯೆಡೆಯ ಪಡಿಯಜತಿಯರ್ . . . ಕೆಯ್ಯ ಕಂಬಿಯೊಳ್—ಮಾಣ್ ಮಾಣಿಮೆಂದು ಗದಜಲೊಡಂ (ರಾಮಾಶ್ವ. ೧೨೧-೧೭). **ಪಡಿಯರತಿ :** ಪಡಿಯರತಿಯೊಲೆದೆಬಾಗಿಲ ಬಳಿ ನಿಂದಿರೆ ಸಿರಿಯು ತನುಮನ ನಡೆಸಲು ಸರಸತಿಯು (ಗಣೇಶ. ೫೬-೧೮) ; ಅವನ ಆಜ್ಞೆಯಂತೆ ಪಡಿಯರತಿಯು ಆ ಚಂಡಾಲಕನ್ಯೆಯನ್ನು ಮತ್ತೊಮ್ಮೆ ಕರೆತಂದು ಶೂದ್ರಕರಾಜನ ಮುಂದೆ ನಿಲ್ಲಿಸಲು (ನಾಗಕಾ. ೮೭) ; ಇಟ್ಟಯ ಪಡಿಯರತಿಯೊಬ್ಬಳು ತಲೆವಾಗಿ ಅಂತಿಯನ್ನು ಬೇಡಿದಳು (ಸವಿ.೭). **ಪಡಿಯಜಾತಿ :** ಬರ್ವಳ್ ಕನ್ನೆ ಚಂಡಾಲೆ ದರ್ಶನತಾತ್ಪರ್ಯದೆ ರಾಜಕೀರಸಹಿತಂ ಬಂದಿರ್ದಪಳ್ ಬಾಗಿಲೊಳ್ ಎಂದು ಪಡಿಯಜಾತಿ ಬಿನ್ನವಿಸೆ (ಕಾದಂಪೂ. ೨೫) ; ಅಸಿಯ ಸೆಳೆ ತಳದೊಳತಿರಂಜಿಸೆ ಪುರ್ವಪ್ಪಳಿಸೆ ಪತ್ತೆ ಸಾರ್ವರಂ ತರ್ಜಿಸಿ ಕಾಮನ ಪಡಿಯಜಾ[ಪಾಠಾಂ. ಜ]ತಿವೊಲೆಸೆದಳ್ ಪೊಸದೇಸೆಕಾರ್ತಿ ಪೊಸಕಿಟ್ಟಳದೊಳ್ (ಅರ್ಧನೇ.೨-೧೩) ; ಅನ್ತೆನಿಸಿ ನೆಗಳ್ದ ಪಡಿಯಜ ಸಾವನ್ತ ಮಾರತತ್ಕುಲವಧು . . . ಪಡಿಯಜಾತಿ ಚೀತಿಯಕ್ಕಂ ಮೆಜ್ಜೆವಳ್ (ಮೃಅರಿ. ೧೯೩೬,೨೬-೩೨ ; 1196). [ಪಡಿಯಜ + -ತಿ₁(<-ಇತ್ತಿ)]

ಪಡಿಯಜವಕ್ಕಿ, ಪಡಿಯರವಕ್ಕಿ (ನಾ). ಕೋಗಿಲೆ ; ಪಿಕ; ಪ್ರ ವನದಲ್ಲಿ ಕೋಗಿಲೆಯು ಪಡಿಯಜನ(=ದ್ವಾರಪಾಲಕನ)ಕೆಲಸವನ್ನು ನಿರ್ವಹಿಸುತ್ತದೆ ಎಂಬುದು ಕವಿಸಮಯ : "ಪಡಿಯಜವಕ್ಕಿಯೆ ನಲ್ಕೆ ಕೋಕಿಲನಕ್ಕುಂ" (ರನ್ನಕಂ. ೯) ; "ಪಡಿಯಜವಕ್ಕಿ, ಪೋರ್ಕುಱವಕ್ಕಿ, ಕೆಂಗಣ್ಣಲರ್ವಕ್ಕಿ, ಸುಗ್ಗಿವಕ್ಕಿ,ಪರಪುಟ್ಟಂ—ಈ ೫ ಪಿಕಂ"(ಕಶಸಾ. ೫೫-೨೦೫) ; ವನಕೇಳಿಗುಱ್ಱುಗಂಗೆಯ್ದು ಪಡಿಯಜವಕ್ಕಿಯಂ ಕರೆದು ಸಖೀಜನಮಂ ಸಾಱ ಕರೆಯಿಮೆಂಬುದುಂ (ಲೀಲಾವ. ೧೩-೫೨ ಪ) ; ಪೊಡೆಯಲರಣಾಗನ ನಾಟಕಗೃಹದೊಳ್ ಪಡಿಯಜವಕ್ಕಿಯುಲುಹಿನುಗ್ಗಡಣೆಗೆ ಗಡಣದೆ ಕುಲಿಶ ಪಿನದ್ಧ ಮುರಜಮಂ ನುಡಿಸುವ ತೆಱನಾಯ್ತು (ಜಯಕಾ. ೧೧-೭) ; ಬಂದ ಸೀಮಾವಿನಳ್ಳೆಗೊಂಬಿನೊಳಿರ್ದು ಕಣ್ಮುಗಿದು ಕೊನರ ಕನರ್ಸೋನೆಯಂ ಚಂಚೂಪುಟದಿನಡಗಿಡಗೆ ಮೇದೊಲ್ದು ಪುಯಲ್ದುವ ಪಡಿಯಜವಕ್ಕಿಗಳ ತಂಡದಿಂ . . . ಬನಂ ಮನಂಗೊಂಡುದು (ರಾಮಾಶ್ವ. ೫೪-೧೦). **ಪಡಿಯರವಕ್ಕಿ :** "ಕೋಗಿಲೆ ಪೆಸರು ಪರಪುಟ್ಟವೆಂದು ಪಡಿಯರವಕ್ಕಿಯೆಂದಪ್ಪುದು" (ಕಶರ. ೬೨) ; ಮಾವಿನ ಮರವು ವಸಂತರಾಜನಿಗೆ ಕೇರು ಎನಿಸಿತು. ಕೋಗಿಲೆಯು ಆತನಿಗೆ ಪ್ರತಿಹಾರಿಯಾಗಿ 'ಪಡಿಯರವಕ್ಕಿ' ಎನಿಸಿಕೊಂಡಿತು (ಕಥಸ. ೨೯).

[ಪಡಿಯಜ+ಪಕ್ಕಿ]

ಪಡಿಯಜವೆಣ್ (ನಾ). = ಪಡಿಯಜತಿ : ಅರಸನುಮರಸಿಯುಮಿಪರಿ ಸರಸಂ ಮಿಗೆ ಪೋದ ಪೊಟ್ಟನಱಯದೆ ಕಳೆಯುತ್ತಿರೆ ಪಡಿಯಜವೆಣ್ಣೊರ್ವಳ್ ಭರದಿಂ ಬಂದೊಸಗೆಯೊಸಗೆಯೆಂದುಸಿರ್ವಿನೆಗಂ (ಚಕವಿ. ೯-೧೬) ; ಪಡಿಯಜವೆಣ್ಣೊರ್ವಳ್ ಸಡಗರದೊಳ್ ಬಂದು ತನ್ನ ಕೆಯ್ಯ ಪೊಂಬೆತ್ತದಿಂ ನೆಲಗಟ್ಟನ ಪಳಕಿನಜ್ಜೆಯನೊಯ್ಯನೆ ಪೊಯ್ದು (ಚಕವಂ. ೧೪೬-೧೦). [ಪಡಿಯಜ + ಪೆಣ್]

ಪಡಿಯಜವೆಸ (ನಾ). ಬಾಗಿಲನ್ನು ಕಾಯುವ ಕೆಲಸ : ದ್ವಾರಪಾಲಕ ವೃತ್ತಿ : ನಿಱಸಿದ ವಿಚಿತ್ರವೇತ್ರದ ತುಱುಗಲ್ ಪೊಸಲತೆಯ ಬೀಟಲಂ ಪೋಲ್ತಿರೆ ಕಣ್ಣಱಂದು ಮಹಾದೇವಿಗೆ ಪಡಿಯಜವೆಸನಂ ಕೆಲಬರಮರಿಯರ್ ಕೈಕೊಂಡರ್ (ಶಾಂತಿಪು ೯-೧೧೨) ; ನಿಯತಂ ಪಡಿಯಜವೆ[ಪಾಠಾಂ. ಬೆ]ಸನಾದಿಯಾಗೆ ಬೆಸನೆನಿತನಿತ್ತುಮಂ ಸಲೆ ಸುರಕಾಂತೆಯರೆ ತನಗೆಸಪರೆನೆ ತತ್ಪ್ರಯುಕಾರಣಯಂತೆ ಕಾಂತೆಯರ್ನೋಂತವರಾರ್(ಪರ್ಧಪು. ೧೩-೫೪); ಬಿರಯಿಂಗಳ ಮೆಯ್ ಸುಯ್ಯ ಬೆಂಕೆ ಸೋಂಕೆ ಕಱೆಗಂದಿದಂತೆ ಕಪ್ಪುವಿಡಿದಂಗಮೆಸೆಯೆ ಕುಸುಮಶರಸಖನ ಪಡಿಯಜವೆಸಕೆ ಪಕ್ಕಾಗಿ ಪುಗಲ್ ಪುಗಲೆಂದು ಬಂಡಳಿಸಿ ತೊಂಡುಗೆಡೆವ ಗಂಡುಗೋಗಿಲೆಗಳುಂ (ಪುಷ್ಪಪು. ೨-೩೯ ಪ). [ಪಡಿಯಜ + ಪೆಸ]

ಪಡಿಯಜವೆಸಗೆಯ್ (ಕ್ರಿ). ಬಾಗಿಲುಕಾಯುವ ಕೆಲಸವನ್ನು ಮಾಡು; ದ್ವಾರಪಾಲಕ ವೃತ್ತಿಯನ್ನು ನಡೆಸು: ರಮಣಿಗೆ ಪಡಿಯಜವೆಸಗೆಯ್ವುಮರಿಯರ ವಿಚಿತ್ರವೇತ್ರದಂಡಂಗಳವೇನಮರ್ದುವೊ ಮದನ

ಜಯಶ್ರೀರಮಣಯ ಕೆಳದಿಯರ ಕೆಯ್ಯ ಕರ್ಕಡಿಗಳವೋಲ್ (ಪುಷ್ಪ. ೯-೭೦). [ಪಡಿಯಜವೆಸ+ಕೆಯ್[1]]

ಪಡಿಯಜಿ (ಕ್ರಿ). ರೀತಿಯನ್ನು ಅರಿ; ಕ್ರಮವನ್ನು ತಿಳಿ: ಎಡವಕ್ಕದ ಬಲವಕ್ಕದ ಪಡಿಯಜಿ ದೆಡೆಯಜಿದು ನಡೆಯಿಪಿಂದ್ರನ ಪಲರುಂ ಪಡೆವಳರೆ ಜಡಿದು ನಡೆಯಿಪ ಪಡಿಯಜಿರುಲಿ ಗೆರಿಪುದುಲಿವ ಜಲನಿಧಿಯು ಲಿಯಂ (ಪುಷ್ಪ. ೧೦-೪೦). [ಪಡಿ[1] + ಅಜಿ[1]]

ಪಡಿಯಜಿಕೆ, ಪಡಿಹಾಜಿಕೆ (ನಾ). =ಪಡಿಯಜವೆಸ: ಪಡಿಯಜಿಕೆಯ ಸೀಗುರಿವಿಡಿವಡಪದ ಕನ್ನಡಿಯ ಪಡಿಗದಾಕೆಗಳೆಲ್ಲಂ ನಿಡುಕಲಣ ಮಜಿಯದಿರ್ದೆಡೆಯೊಳ್ ಬೆಜಗಾಗಿ ಮೂಗರಂದದಿನಿರ್ದರ್ (ಕಾದಂಪು. ೬೨೯); ಮಲ್ಲಿಕಾರ್ಜುನದೇವರ ಭೂಮಿಯೊಳಗೆ ತುಪ್ಪದ ಚಂಡೆಯ ನಾಯಕಂಗೆ ದೇವಗ್ಗೆ೯ ಬೆಸಕೆಯ್ದುಣ್ಣ ಪಡಿಯ[ಜಿ]ಕೆಯಂ ಕೆಯಿ ಮತ್ತರು (ಕಇಶ. ೬೭-೧೨-೭೫; 1170); ಪಡಿಯಜಿಕೆಯ ಸುರವಧೂಟಿ ಕಟ್ಟಿ ಗೆವಿಡಿದಳ್ (ಅಸಂಪು. ೪-೪೧). **ಪಡಿಹಾಜಿಕೆ**: ವೈರೋಚನಿಯ ಪಡಿಹಾಜಿಕೆ ಕಿರೀಟಿಯ ಮನೆಯ ಬಂದಿಯ ಬೋವನಾದನು ವೀರ ನಾರಯಣ (ಕುವಾಳು. ೧-೪೫). [ಪಡಿಯಜಿ+-ಇಕೆ]

ಪಡಿಯಜಿತಿ 'ಪಡಿಯಜಿತಿ' ನೋ.

ಪಡಿಯಳು[1] (ನಾ). ಧಾನ್ಯವನ್ನು ಕೂಲಿಯಾಗಿ ಪಡೆದು ಬದುಕುವ ಆಳು; "ಜೀತದ ಆಳು" (ಜಾಸಕೋ. ೧೩). [ಪಡಿ[1]+ಆಳು[3](<ಆಳ್[3])./ಕವಿ. ಪಟಿಯಾಳ್]

ಪಡಿಯಾಳು[2] (ನಾ). ಹೆಚ್ಚಿನ ಆಳು; ಸಹಾಯಕ್ಕೆ ಇರುವ ಸೇವಕ: ಕೇಳು ಗಂಡರ ಸೂರ್ಯ ಬಿಜ್ಜಣನಾಳು ಕುದುರೆಯ ಮೋಹರಕೆ ಪಡಿಯಾಳ ನಿನ್ನಲಿ ಬೇಡೆನೊಂದಾಶ್ಚರ್ಯವನು ನೋಡ (ಕೊಲ್ಲಾಜ. ೨೬೨). [ಪಡಿ[3]+ಆಳು[3](<ಆಳ್[3])]

ಪಡಿಯಾಜಿ 'ಪಡಿಯಜಿ' ನೋ.

ಪಡಿಯಿಡು (ಕ್ರಿ). ೧. ಸಮವಾಗು; ಸಾಟಿಯಾಗು: ಪಡಿಯಿಡೆ ನಿಮ್ಮನೆಮ್ಮವಯವಂಗಳನೇದಿಸಿ ಕಾಡುತಿರ್ದುದಂ ಕಡುದಿಟಮೆಂದು ನೋಯದೊಡನಾಡಿದ ನಿಜ್ಜನೆ ನೋಟ್ಪು ದೆಂಬಿನಂ ನುಡಿದನುನ್ಮೆಸಿದರ್ ಳುಸುಮಕೋಮಳೆಯರ್ . . . ಚಂಪಕಂಗಳಂ (ಪುಷ್ಪ. ೧೩-೧೦೦). ೨. ಸರಿಸಮಾನಗೊಳಿಸು; ಪ್ರತಿಯಾಗಿಸು: ನುಡಿಯಂ ಕೋಕಿಲ ರುತಿಯೊಳ್ ಪಡಿಯಿಡಲೊಡನುಯ್ವ ತನುಭ ಜನಕಾತ್ಮಜೆಯಂ(ಪಂರಾಮಾ. ೬-೧೩). ೩. ಹೋಲಿಸು; ತಾಳೆನೋಡು: ಕಡುಗುಣ್ಪು ಪೆಂಪಿ ನಿಂದೆಯೊದಡೇನು ಪಾಲ್ಗಡಲು ದಿವಿಜರ ಕಯಿಂದ ಕಡೆಯಿಸಿಕೊಂಡುದಾ ನೈಪಗಾನದನೆಂತು ಪಡಿಯಿಡುವೆನು ಗುಣದಿಂದ (ಕುವಾಸಾಂ. ೫-೫೨); ಅವನೆಡದ ಕಾಯಕಾ ಬಲದ ಕಡೆಯ ಕಾಯಮಣಿಯಲ್ಲದಿಂ ಪಡಿಯಿಡುವ ವಸ್ತು ವಿನ್ನೀಯಂಬುಜಭವಕೋಟಿ ಸೃಷ್ಟಿಯೊಳಗಿಲ್ಲ (ಚಬಭ. ೧೯-೨೧). ೪. ವಿರೋಧಿಸು; ಪ್ರತಿಭಟಿಸು: ಪಡಿಯಿಟ್ಟುದೊಂದುನಿಮಿಷದೊಳು ಗಾಂಧರ್ವದಳ ಮುಡಿದುದಂಬರದೊಳು ಹಾಳು ಕಂಡು ನಡುಗಿ ಗಂಧರ್ವ ನೊಪ್ಪಿಸಿದ (ಪಾಂಡಪ. ೧೮-೧೬). [ಪಡಿ[3]+ಇಡು[1]]

ಪಡಿಯುತ್ತರೆ (ನಾ). ಪ್ರತ್ಯುತ್ತರ; ಮಾರುತ್ತರ; ಮರುಜವಾಬು: ಕಪಿ ತಲೆಗುತ್ತಿ ದೇವರಿಗಿನ್ನು ತಾಪಡಿಯುತ್ತರಕೆ ಪಾಸಟಿಯ ಪತಿಕರಿಸೆಂದು ಕೈಮುಗಿದ (ತೊರಂರಾ. ೪-೨-೪೯). [ಪಡಿ[3]+ಉತ್ತರೆ]

ಪಡಿಯೊರೆ[1] (ನಾ). ಪ್ರತಿಹೇಳಿಕೆ; ಬದಲುನುಡಿ; ಪ್ರತ್ಯುತ್ತರ: ಆಗಳಾನುರುಳ್ವ ಬಾಂಗಿಟ್ಟಿನೀ ಮೊರೆಯಂ—'ಏ ಸೊಡರನೆತ್ತಿ ವಿಧಿ ಬಲೆ ವಿಡಿಸಿತರಿಯೆಂ ಕತ್ತಲೆಯೊಳೆಡಹುತಿಹ ತನ್ನ ಹಸುಳೆಗಳಂ ?'–'ಅಂಧಮತಿ' ಎಂದು ಕೇಳಿಸಿತು ಪಡಿಯೊರೆಯಿಂ (ಗಿಪಿಂ. ೧೨೦-೨೪). [ಪಡಿ[3]+ಒರೆ[4]]

ಪಡಿಯೊರೆ[2] (ನಾ). ಪ್ರತಿಯಾದ ಹೋಲಿಕೆ; ಸರಿಸಮ; ಸರಿಸಾಟಿ: ಮರುಳಲಾ ಸವಮಾನಸುತ ನಿನ್ನೊರೆಗೆ ಪಡಿಯೊರೆ[ಪಾಕಾಂ. ಒರೆಸರಿ]ತೂಕ ತೂಕಕೆ ಸರಿಸರಾವಿರೆ ಕನಕಗಿರಿಪರಿಯಂತ ಮಾತೇಕೆ (ಕುವಾಕ. ೧೦-೩೭). [ಪಡಿ[3]+ಒರೆ[7]]

ಪಡಿರೂಪ (ನಾ). ಪ್ರತಿರೂಪ; ಪ್ರತಿಕೃತಿ: ಮನುಜನ ಪಡಿರೂಪ ನಿನ್ನಯ ಮನಕೆ ಬಂದ ಚಲುವನ (ಕುಶ. ೨೪-೧); ರಾಮನ ಮತ್ತು ಅವನ ಪರಿವಾರದವರ ಪಡಿರೂಪಗಳು ಸೃಷ್ಟಿಯಾದವು (ನಂಜುಂಡ. ೪೯). [ಪಡಿ[3] + ರೂಪ]

ಪಡಿರೂಪು (ನಾ).=ಪಡಿರೂಪ: ಭೂಚಕ್ರಾಧೀಶ್ವರನಂದನರೊಳಗೀ ಚಿತ್ರದ ಪಡಿರೂಪಂ ಧರಿಯಿಸಿದಾ ಚಿನ್ನಿಗನಲ್ಲದೆಯುಳಿದವರೆನ್ನಯ ಸೋದರರು (ಜಯಕಾ. ೬-೭೫); ಅವರನಾ ಮನೆಯೊಳಿರಿಸಿ ಮಂತ್ರಿಯೆಡೆಗಾ ದಿವಿಜನೆಯ್ತಂದು ಮತ್ತವರ ಹವಣಿನ ಪಡಿರೂಪ ತೋಜಿಸಲಾ ಮಂತ್ರಿ ತಪೆ ನಲಿದನು ಮನದೊಳಗೆ (ಕುರಾಸಾಂ. ೩೬-೬೧). [ಪಡಿ[3] + ರೂಪು]

ಪಡಿಲಯ್ಯ (ನಾ). ಒಬ್ಬಾತನ ಹೆಸರು: ಕೊಸಿಗಗೆಜಿಯ ಬಡಗಣ ಕಡೆಗೋಡ ತೋಣ್ಮ ಇನಿತು ಮಣ್ಣ ಬಿಡಿಸಿದ ಪ್ರಭುಗಳಂಕನಾವಂ ಬೂವ ಗಾವುಣ್ಮ ಪಡಿಲಯ್ಯ ಪದುದೆಯ್ಮ ತಯ××ನ ಈ ಮಣ್ಣಂ ಅವ ಗೊಣ್ಮೋನು ಅಬಿಡೋನುಂ (ಎಕ: V, ಅರಕ. ೨೪-೧೬ ; ಸು. 900). [? + ಅಯ್ಯ[1]]

ಪಡಿಲೇಖಿಸು(ಕ್ರಿ).೧. ಪ್ರತಿಬಿಂಬವನ್ನುಂಟುಮಾಡು: ಪೆಟ್ಟದೊಡಕ್ಕುಂ ತ್ರಸನಂಘಟ್ಟನಮೆಂದೋವುವಂತೆ ಮೆಲ್ಮೆಲನನಘಂ ದಟ್ಟಿಡಿಯಿಡೆ ಪದನುರುಚಿಕುಟ್ಟಿಮದೊಳ್ ನಿಮಿರ್ದುವೊಡನೆ ಪಡಿಲೇಖಿಪವೋಲ್ (ಪುಷ್ಪ. ೧೨-೬೭). ೨. ಚೆನ್ನಾಗಿ ಶುದ್ಧಿಗೊಳಿಸು: ಸಂಯಮಜ್ಞಾನೋಪ ಕರಣಾದಿಗಳಂ ಕೊಳ್ವಲ್ಲಿಯುಂ ಬೈಡಿದುವಲ್ಲಿಯಂ ನೋಡಿ ಪಡಿಲೇಖಿಸಿ ನೆಗಟ್ಟುದು ಆದಾನನಿಕ್ಷೇಪಣಸಮಿತಿ (ತತ್ತ್ವಪ್ರ. ೬೨೫); ನೋಡದೆ ಪಡಿ[ಪಾಕಾಂ. ಪ್ರತಿ]ಲೇಖಿಸದೆ ತಂತಮ್ಮ ಪುಟ್ಟರ್ಪ ಸಂಸ್ತರಮನಿಕ್ಕುವ ಅಪ್ರಕ್ಷವೇಕ್ಷಿತಾಪ್ರಮಾರ್ಜಿತಸಂಸ್ತರೋಪಕ್ರಮಣಮುಂ . . . ಪ್ರೋಷ ಧೋಪವಾಸದತಿಚಾರಮುಕ್ಕುಂ (ಪಸಾರ-೩೧೬; ಶಾಸ್ತ್ರಟೀ. ೬೨-೬ ನೋ). [<ಪ್ರತಿಲೇಖಿಸು]

ಪಡಿವಂದ 'ಪಡಿಬಂದ' ನೋ.

ಪಡಿವಟ್ಟಗೆ (ನಾ). ಬಾಗಿಲುವಾಡ; ದ್ವಾರಬಂಧ: ಹೊಸ ಹಳದಿಯ ಮಾಡಿಕದ ಸರಮುಜ್ಜ್ವಲವಜ್ರದ ಪಡಿವಟ್ಟಗೆ ಮರಕತರತ್ನದ ಕೇರ್ ವೈಡೂರ್ಯದ ಪರಘಲಕಂ ರಚಿಯಿಸಲೊಪ್ಪಿ ದುದಲ್ಲಿಯ ಮಂಗಲಸದನಂ (ಜಯಕಾ. ೮-೩). 'ದ್ವಾರಪಟ್ಟ', 'ದ್ವಾರವಾಟಿಕೆ' ಪರಾ. [ಪಡಿ[2] + ಪಟ್ಟಗೆ]

ಪಡಿವಡೆ[1] (ಕ್ರಿ). ೧. ಭತ್ತವನ್ನು ಪಡೆ,—ಹೊಂದು: ಬಂದಾ ಸೌಂದರ ತಿರುಪಹ್ಮಾರನಾಥನ ಮುಂದಿರಕಥಿಕಸಂಧ್ಯನುದಿಂದೆ ವಂದಿಸಿ ತಾಳವಿಡಿದು ಪಡಿವಡೆದನು ನಂದಿಯುಂಡಿಗೆಯುಳ್ಳ ಪಡಿವೊನ್ನ (ತ್ರಿಭುತ. ೨೦-೯). ೨. ಅಂಗೀಕರಿಸು; ಒಪ್ಪಿಕೊಳ್ಳು; ಸಮ್ಮತಿಸು: "ಪಡಿವಡೆವುದೆನಲಿಕಂಗೀಕರಿಪುದರ ಪೆಸರ್" (ಕಕರ. ೬೨). [ಪಡಿ[1] + ಪಡೆ[1]]

ಪಡಿವಡೆ[2] (ನಾ). ೧. ಹೆಚ್ಚಿನ ಸೈನ್ಯ; ಅಧಿಕಸೈನ್ಯ: ಪಡಿಗೋಂಟಿಗೆಯ್ದುಕಡುಜಂ ಪಡಿಯಗಬ್ಗೆಯ್ದುಳವನಾರ್ಭ ಕಡುಗೂರ್ಪಗಳಂ ಪಡಿವಡೆಗೆಯ್ದಂದವರೊಳ್ ಪಡಿಬರಿಸಿದರಮನು ವಿಷ್ಣುಜಿಷ್ಣುಗಳನ್ನರ್ (ಚಕವಿ. ೨-೪೫). ೨. ಪ್ರತಿಪಕ್ಷದ ಸೈನ್ಯ; ಶತ್ರುದಳ: ಅರಿಕೇಸರಿ ಯೆಂಬಂ ಸುಂದರಾಂಗನತ್ಯಂತವಸ್ತ್ರಂ ಮುದಕರಿಯಂ ಹರಿಯಂ ಪಡಿವಡೆ ಗುರ್ಚಿದ ಕರವಾಳನೆ ತೋಜಿ ನೃಪತಿ ಗೆಲ್ಲಂಗೊಂಡಂ (ಪಂಪಭಾ.೧-೧೯). [ಪಡಿ[3]+ಪಡೆ[2]]

ಪಡಿವರ್ (ಕ್ರಿ). ಸದೃಶವಾಗು ; ಸರಿಸಮವಾಗು ; ಹೋಲು : ಮಾರಲದೇವಿಯಂ ಮನಮ್ಮುಗೆ ವಿಭು ಬಲ್ಲೆಯಂಗೆ ಸತಿ ಮಾಡಿದ ನೊಪ್ಪೆ ವಿಧಾತ್ರನೆನ್ದೊಡೀ ಜಗದೊಳಗಿಂತು ದಂಪತಿಗಳಾರ್ ಪಡಿವರ್ಪರೊ ನೋರ್ಪ್ಪಡಿರ್ವರೊಳ್(ಎಕ.XII,ಚಕ್ರನಾ. ೧೬-೩೪ ; 1194).

[ಪಡಿ$_3$ + ಬರ್ (<ವರ್)]

ಪಡಿವರಿಜು (ನಾ). ಪ್ರತಿರೂಪ ; ಪ್ರತಿಕೃತಿ : ಕಂಗೊಳಿಪಚ್ಛೋದ ಸರಸಿಗೆ ಜನನಿವೆರಸು ಮಜ್ಜನಕ್ಕೆಂದು ನಡೆತಂದು ನೋಟ್ಪಲ್ಲಿ ಶಿಖರಿರಾಜನಂದಿನಿ ಪೂಜಿಸಲೆಂದು ತಟಶಿಲಾತಲದೊಳ್ ಬರೆದ ಮೃಡನ ಪಡಿವರಿಜಂ ಕಂಡು (ಕಾದಂಪು. ೭೨೧) ; ಬರ್ಪ ತರುಣ ವಸಂತೋತ್ಸವ ಸಮಯದಲ್ಲಿ ಪೂಜಿಸಲೋಸುಗಂ ಅಲರಂಬನ ಪಡಿವರಿಜಂ ಬರೆಯಲ್ಪೋಗೆಂದು ಸಖಿಗೆ ಪೇಳಿ (ಸರಚ. ೫೬-೧೩೪ ವೃತ್ತಿ) ; ತಾಂ ಮೂವರುಂ ಮೈಯಟ್ಟಲೊಡಂ ಬಗೆಯಲ್ಬಾರದ ಪಡಿವರಿಜುಗಳೆನೆ ಒಂದಚ್ಚಿನೊಳಿಜಕಂಬೊಯ್ದು ಮೂಱುಂ ಪೊಂಬಾಪೆಯೆನೆ ಮೂವರುಮೊಂದೆ ರೂಪಿನೊಳೊಗೆದು ಮರಲ್ದುಟಜದೆಡೆಗೆಯ್ತಂದರ್ (ರಾಮಾಶ್ವ. ೬೯-೯). [ಪಡಿ$_3$ + ಪರಿಜು]

ಪಡಿವಳ (ನಾ). ಬಾಗಿಲು ಕಾಯುವವನು ; ದ್ವಾರಪಾಲಕ ; ಪ್ರತೀಹಾರಿ : "ಪಡಿವಳನೆಂದು ಪ್ರತೀಹಾರಂ" (ಕಶಸಾ. ೬೧-೩೪೭) ; ಕಳುಹಿದಳು ಕೃಷ್ಣಾಂಘ್ರಿಸನ್ನಿಧಿಗೊಲಿದು ವಿಪ್ರೋತ್ತಮನನು. . . ತಿಳಿದು ಕಾರ್ಯವಿಶೇಷವನು ಪಡಿವಳರು ಹೊಗಿಸಲು ಬಂದು ಕಂಡನು ಲಲಿತಸಿಂಹಾಸನದಲೆಸೆವ ಮುಕುಂದನಂಘ್ರಿಗಳ (ಸಭಾಗ. ೧೦-೫೮-೨೬) ; ಮಿಂಡೆಟ್ಟ ಪಡೆವಳರೆಲ್ಲರುರವಣಿಸಿ ಮುಂಬರಿದೊಡ್ಡಿ ನಿಂದರಾಗೆ ಕಾದಿ ಮೋದಿ ತಾಂ ತಮಗೆ ಜವಹುರದ ಪಡಿವಳರಾದರ್ (ರಾಮಾಶ್ವ. ೧೪೩-೨೯).

[ಪಡಿ$_2$ + -ವಳ]

ಪಡಿವಳಕಟ್ಟಿಗೆ 'ಪಡಿವಳಗಟ್ಟಿಗೆ' ನೋ.

ಪಡಿವಳಗಟ್ಟಿಗೆ, ಪಡಿವಳಕಟ್ಟಿಗೆ (ನಾ). = ಪಡಿಯಱಗಟ್ಟಿಗೆ : ಮುಂದೆ ಪರಿವ ಪಡೆವಳಗಟ್ಟ[ಪಡಿವಳಗಟ್ಟಿಗೆ]ಯ ಪೀಲಿಯ ಕರಗದುಪ್ಪರಿಗುಡಿಯೊಜ್ಜರದ ರಾಜಸಿಂಧದ ಸಂಪಣಿಯುಮೆಸೆಯೆ (ಚಂದ್ರಪು. ೭-೮೦ ಪ) ; ಮುಂದೆ ಪರಿವ ಕೊಲ್ಲಡಿಗೆಯ ಭಲ್ಲೆಯದ ಪಡ[ಡಿ]ವಳಗಟ್ಟಿಗೆಯ ಬಿರುದಿನ ಸಿಂದದ ಸಂದಣಿಯ ಕೋಳಾಹಳದ ರಭಸಮೆಸೆಯೆ (ಬಾಧಪು. ೧೪-೫೨ ಪ). **ಪಡಿವಳಕಟ್ಟಿಗೆ :** ಕಟಾಲೆ ಬಳೆದ ಪರ್ವತಿರಸುರ್ವ್ ಪಡೆ[ಡಿ]ವಳಕಟ್ಟಿಗೆಯಾಗೆಯುಂ ಕಿಸುಗಣ್ಣವಿಡೆ ಜಡಿಯುತ್ತಿಪ್ಪ ಗಂಡಗೋಗಿಲೆಗಳೆ ಮಹಾಪ್ರಾತಿಹಾರ್ಯರಾಗೆಯುಂ (ಪರ್ಧಸಾ. ೫-೪೧ ಪ). [ಪಡಿವಳ + ಕಟ್ಟಿಗೆ$_1$]

ಪಡಿವಳತನ (ನಾ). ಬಾಗಿಲು ಕಾಯುವ ಕೆಲಸ ; ದ್ವಾರಪಾಲಕ ವೃತ್ತಿ : ಹೊಗುತ ಕಂಡನು ಬಾಗಿಲಲಿ . . . ಮಕರಕುಂಡಲದ ಜಗದ ಪತಿ ಪಡಿವಳತನದ ಲೀಲೆಗೆ ಸಮಾಹಿತನಾಗಿ ಕಂಬಿಯ ಹೆಗಲಲಿರಲೋರಂತೆ ಬಲು ಬೆಟಗಾಗಿ ನೋಡಿದನು (ಸಭಾಗ. ೮-೨೦-೩೨).

[ಪಡಿವಳ + -ತನ]

ಪಡಿವಾಳೆ (ನಾ). ಕುದುರೆಯ ಮುಖಕ್ಕೆ ಕಟ್ಟುವ ಚರ್ಮದ ಪಟ್ಟು,—ಮುಖವಾಡ : ಸೆಳೆದು ಪಡಿವಾಳೆಯಲಿ ತುರಗಾವಳಿಯ ನನುಕೊಳಿಸಿದನು ಹರಿ ಕೈಚಳಕದಲಿ ತುಡುಕಿದನು ಫಲುಗುಣನತುಳಗಾಂಡವವ (ಕುಪ್ಯಾದ್ರೋ. ೧೦-೩೦) ; ನೆಲಕಿಳಿದು ಪಡಿವಾಳೆಯಂ ಪಿಡಿದರಸುಮಕ್ಕಳಂ ಬೀಳೆ ಹೊಯ್ದು ತತ್ತುರಗಮಂ ಕೊಂಡು ಚಿಗಿದ ನಾಗಸಕೆ ಸರದತ್ತಣಿಂದಂಚೆ ಬೆಳ್ದಾವರೆಯನಳ್ತಿಯಿಂ ಕಿತ್ತು ನಭಕೇಳ್ವಂತೆ ಮೇಘನಾದಂ ಭೀಮಕರ್ಣಜರ್ಬೆಱಗಾಗಲು (ಜೈಮಿಭಾ. ೪-೧೨).

[ಪಡಿ$_3$ + ವಾಳೆ]

ಪಡಿವಾತು, ಪಡಿಮಾತು (ನಾ). ೧. ಪ್ರತಿಯಾದ ಮಾತು : ಬೇರೆ ಮಾತು ; ವಿರುದ್ಧವಚನ : ದಿಕ್ಪಾಲಕಶ್ರೇಣಿ ನೀಂ ನೆರವಾಗೇಂ ಪಡಿವಾತೆಲೇ ರವಿಯಲೇ ಮಾದೇವೆಲೇ ಬೊಮ್ಮ ಕೇಳ್ದಿರೆ . . . ಎಂದು ಸಾಜುವವೊಲಾಯ್ತಾ ಪಾಂಚಜನ್ಯಸ್ವನಂ (ಜಗವಿ. ೧೩-೪೯) : ಬಡತನ ಮೆಂಬುದು ನಡುವಿನೊಳೆಡೆಗಿಱುವುದು ಬಿಗಿದ ಮೊಲೆಯೊಳತಿಕುಟಿಲತ್ವಂ ಮಡದಿಯರ ಕುರುಳೊಳಲ್ಲದೆ ಪಡಿವಾತೇಂ ಜನರ ದೆಸೆಯೊಳಿಲ್ಲಾ ನಾಡೊಳ್ (ಸೂಕ್ತಿಸು. ೪-೨೦). **ಪಡಿಮಾತು :** ೧. ಆ ಪದಕಂ ಬಂದೊಡೆ ಕೇಳೇಪೊತ್ತುಂ ಕೊಡಲೆವೇಟ್ಕುಮಟಱದೊಡೆ ನಿನ್ನಂ ಭೂಪತಿ ಕೊಲ್ಲುಂ ಕವರುಗುಮೇ ಪಡಿಮಾತದಱ ಪಂಬಲಂ ಬಿಡು ನಯದಿಂ (ಧರ್ಮಾಮೃ. ೨-೧೧೯) ; ಕುಡುವೆಡೆಯೊಳ್ ಸಂಪದಮಂ ಬಡತನಮಂ ಕುಲಮನಾದಿಯೊಳೆ ತಿಳಿದೊಲವಿಂ ಕುಡುವುದು ಕೊಟ್ಟ ಬಟಱಕ್ಕಂ ಪಡಿಮಾತಾಡುವುದು ನೀತಿಧರ್ಮವಿರೋಧಂ (ದಶಕು. ೮-೧೧೦) ; ಈತಂ ನರನಕ್ಕುಮೊ ಪಡಿಮಾತೇಂ ಮಗುಳ್ದಾನ್ ಶಬರನಪ್ಪೆನೊ (ಶಬಶಂ. ೪-೯೭) ; ಕಾರ್ಯಂ ಗೆಲುಂಬಡಿಯಲ್ಕೆಂದಘನಾಶನೀ ಸರಸಿಯಂ ಮೇಣ್ಬಂದ್ರಮೌಳೀಶನಂ ಪಡಿಮಾತೇಂ ಭಜಕರ್ಗೆ ಮುಕ್ತಿಪದಮಂ ತೋರಲ್ಕಂದಂಗೈದಪಂ (ಎಕ. XVI, ಗುಬ್ಬಿ. ೬೨-೧೦ ; 1896). ೨. ಬದಲುಮಾತು ; ಪ್ರತ್ಯುತ್ತರ : ದಡದಡಿಪಡಿ ಪಡಿಮಾತಂ ಪಡೆಯಲೊಡರ್ಚುವ ಮನಂ ತಡಂಬಡಿಪ ತಳರ್ನುಡಿ . . . ಇರೆ ನುಡಿದನಾಗಳಾ ಚರಮುಖ್ಯಂ (ರಾಜಶೇ.೬-೩೩);ಬಾಲೆ ಪತಿಗೃಹಕೆ ಪೋಪುದ ಪೇಳಲ್ ವನವಾಸಬಂಧುವೀ ತರುವೃಂದಂ ಕೇಳುತನುಮತಿಸಿ ಕಲಕಂಠಾಲಾಪದ ನೆವದೆ ನುಡಿವುದಿದೊ ಪಡಿಮಾತಂ (ಶಾಕುಂತ.೫೩-೮೮). [ಪಡಿ$_3$+ಮಾತು$_1$]

ಪಡಿವಾವಿ (ನಾ). ಸಮಾನವಾದ ನಂಟು,—ಬಂಧುತ್ವ : ತಂಗಿಯಿದರ ತಂಗಿ, ಬಂಧುಗಳನು ಮರುಂಗಿ ಶೂನ್ಯಮಾದೆದೆಯ ಪಡಿವಾವಿ ಕವಿತೆಯದೊಂದೆ ! (ಗಿಳಿವಿಂ. ೨೩-೩). [ಪಡಿ$_2$ + ವಾವಿ$_2$]

ಪಡಿವಿಡಿ (ಕ್ರಿ). ಅನುಸರಿಸು ; ಹಿಂಬಾಲಿಸು ; ಅನುಸರಣೆ ಮಾಡು : ಸಂಗ್ರಹಿಸಿತೆನ್ನಯ ಪುಣ್ಯಫಲದಿಂದದನೆ ಪಡಿವಿಡಿದುಮಹಿತ ನಿನ್ನಯ ಚರಣದರ್ಶನವಹುದಿದೆನ್ನಯ ಸುಕೃತಫಲದಿಂದುದಿಸಿದರೆ ಫಲವೇನು ತನಗೆ (ಕುವ್ಯಾಸ. ೬೨೮. ೭-೧೫) ; ಎಡೆವಿಡದಿನಿಯನಡಿಯ ನೆಳಲನು ಪಡಿವಿಡಿವ ಮಡದಿಯ ಮನ್ನಿಪುದು (ಹರಿಬ. ೬-೪೫).

[ಪಡಿ$_3$ + ಪಿಡಿ$_1$]

ಪಡಿವೆದೆ (ನಾ). ಬೇರೆ ಹೆದೆ ; ಮತ್ತೊಂದು ಬಿಲ್ಲಿನ ಹಗ್ಗ (?) : ಬಿಲ್ಲಂಬು ಬಿಗಿದ ಕೈಪೊಡೆ ಪಡಿವೆದೆಯುಡಿಝುಲ್ಲಿ ಬತ್ತಳಿಕೆ ಕಯ್ಯಂಬು ನಿಲ್ಲದೆಸೆಯೆ ಪೊಱಮಟ್ಟರು ರಾಯನ ಬಿಲ್ಲವರಂದು ಬಿಂಕದೊಳು (ಕುರಾಸಾಂ. ೧೯-೧೯) ; ಉಡಿಝುಲ್ಲಿ ಕಟ್ಟಿದ ಸುರಗಿ ಕೈಪೊಡೆ ಪೊಂದೊಡಹದಂಬಿನ ಬತ್ತಳಿಕೆ ಪ[ಪಾಶಾಂ.ಪಿ]ಡಿವೆದೆ ಪಿಡಿದ ಬಿಲ್ಲೆಸೆಯೆ ಬಿಲ್ಲವರಲ್ಲಿ ಬಿಡದೆ ಮೆಱೆದೊಗ್ಗಿಸಲಿ (ಕುರಾಸಾಂ. ೨೭-೨೬). [ಪಡಿ$_3$ + ಪೆದೆ]

ಪಡಿವೆಸ (ನಾ). ಸೇವೆಯ ಕೆಲಸ ; ಸೇವಾಕಾರ್ಯ ; ಪರಿಚಾರಿಕೆ : ಸುಪ್ರಣೀತೆಯುಂ ಯಶೋಧರೆಯುಂ . . . ಚತ್ರೆಯುಮೆಂಬೀ ದೇವರ ನಂಬಿಕೆಯ ಸೀಗುರಿಯ ಸಿರಿಮುಡಿಯ . . . ಅಡಿಯೂಟದ ಪಡಿವೆಸಕ್ಕೆ ಬೆಸಸಿದಂ (ಅನಂಪು. ೪-೭೬ ಪ). [ಪಡಿ? + ಬೆಸ$_1$]

ಪಡಿವೇಡು (ಕ್ರಿ). ಧಾನ್ಯವನ್ನು ಬೇಡು,—ಯಾಚಿಸು ; ಭಿಕ್ಷೆ ಬೇಡು : ಧರಣಿಯೊಳು ಗುಡ್ಡವ್ವೆಯೆಂಬ ವಿಖ್ಯಾತಭಕ್ತೆ . . . ನಾವಿಟಕಿಯೆಂಬಾ ಪೊಳಲ್ಗೆಯ್ದಿ ಪಡಿವೇಡುತಿರಲು (ಅಂಗಾಚ. ೧-೯-೧೨).

[ಪಡಿ$_1$ + ಬೇಡು$_1$]

ಪಡಿವೊತ್ತಿಸು (ಕ್ರಿ). ಪ್ರತಿಯಾಗಿ ಹೊತ್ತಿಸು ; ಎದುರಾಗಿ ಉರಿಸು : ದವಾಗ್ನಿಗಿದಿರಗ್ನಿಯಂ ಪಡಿವೊತ್ತಿಸಲ್ ಮನಂದಂದು ನಡೆ

ವುದು ಪಳ್ಳಿ ಕೈಗೊಳ್ಳಿಗಳನಾಂತು ಕರಡವುಲ್ ಬೆಳೆದೊಣಗಿ ನಿಂದ ತುರು ಮೇವು ಮಾಸಲ ಸಿರಿಯು ತಪ್ಪಲಿಗೆ (ಶ್ರೀರಾಮಾ. ೭೧೩-೧೧೧).

[ಪಡಿ+ಪೊತ್ತಿಸು]

ಪಡಿವೊನ್, ಪಡಿಹೊನ್ನು (ನಾ). ದಿನದಿನದ ಭತ್ಯವಾಗಿ ಪಡೆಯುವ ಹೊನ್ನು,—ಹಣ : ನಲವಿಂದೆ ಪಾಡುತುಂ ಪಡಿವೊಂಗಳು ಕೊಳುತುಂ ಶಿವನ ಸೆಜ್ಜೆಯಂತಿರ್ದ ತಿರುವಾರೂರ್ಗೆ ನಡೆತಪ್ಪಾಗಳು (ಸಂಬಿರ. ೪-೬೪) ; ಬಂದಾ ಸ್ಾಂದರ ತಿರುಪತ್ತೂರನಾಥನ ಮಂದಿರಕಧಿಕ ಸಂಭ್ರಮದಿಂದೆ ವಂದಿಸಿ ತಾಳವಿಡಿದು ಪಡಿಪಡಿದನು ನಂದಿಯುಂದಿಗೆಯುಳ್ಳ ಪಡಿವೊನ್ನ (ತ್ರಿಭುತಿ. ೫೦-೯). **ಪಡಿಹೊನ್ನು** : ಆದು . . . ರಾಜರನ್ನು ಹೊಗಳಿ ಮೆಚ್ಚಿಸಿ ಅವರಿಂದ ಪಡಿಹೊನ್ನು ಪಡೆಯುವುದಕ್ಕಾಗಿ ಬರೆದ ಕೀಳುಕಥೆ (ತುಂಗಭ. ೪೩). [ಪಡಿ$_1$ + ಪೊನ್]

ಪಡಿಸಣ$_1$ (ನಾ). ೧. ಪರೀಕ್ಷೆ; ಪರಿಶೀಲನೆ : "ಪಡಿಸಣಮೆ ಪರೀಕ್ಷೆ" (ಜಯಪಿ. ೧೫೪) ; ಕುಸುಮಕ್ಕೆ ಪರಿಮಳಂ ಪಡಿಸಣಮೆ ಅಮೃತಕ್ಕೆ ಸ್ವಾದು ಸಂಕಲ್ಪಮೆ ಶರ್ವಂಗೆ ಪಾರ್ವತಿಯೆರವೆ (ಗಿರಿಕ. ೧೦-೨೬ವ) ; ಹಡ ಪದನುಲೇಪನದ ಕುಸುಮಮಾಲೆಗಳ ಕನ್ನಡಿಯ ಸಿರಿಮುಡಿ ಪಡಿಸಣದ ಹಂತಿಯು ಹಲವು ತೊಡಿಗೆಗಳ . . . ವನಿತೆಯರ ನಡುವೆನೆವ ನಾಯಕ ಸ್ತ್ರೀಯರನ್ನೀಕ್ಷಿಸುತ ಭೂಮಿಪಂ ನಡೆತಂದನು (ಹಜಕಾ. ೪-೩೯) ; ನೀ ಮರುಳೆ ವಿದುರ ಭವದ್ಪಚೋವಿಸ್ತರಕೆ ಪಡಿಸಣವುಂಟೆ ಶಿವಶಿವ ಯೆಂದನಾ ಭೂಪ (ಕುಪ್ಯಾಸ. ೧೨-೯೨) ; ಅಂ ಜವಂ. ಇಂತಿವರ್ಗೊಂದು ಪಡಿಸಣದುಜ್ಜುಗದಿನೆ ಬಂದೆಂ (ರಾಮಾಶ್ವ. ೧೪೧-೪). ೨. ರಾಜರು ಮುಂತಾದವರು ಆಹಾರವನ್ನು ಸೇವಿಸುವ ಮೊದಲು ಬೇರೆ ವ್ಯಕ್ತಿ ಅಥವಾ ಪ್ರಾಣಿಗೆ ಕೊಟ್ಟು, ಆಹಾರವು ವಿಷಮಿಶ್ರಿತವಾಗಿದೆಯೇ ಎಂದು ಪರೀಕ್ಷಿಸುವಿಕೆ: ಎನಗೆ ಪುತ್ರಂ ನೀನೆ ಎನಗೆ ಮಿತ್ರಂ ನೀನೆ ನಿನ್ನ ಪಡಿಸಣವೇ ಪಡಿಸಣ ನೋಡಿತೆಯೆನಗೆ ನಿನ್ನ ಮೊಗದಗ್ಗಣೆಯೇ ಅಗ್ಗಣೆಯೆನಗೆ (ಕಣ್ಣ.ರ.ವೇ.೧೪೯-೨೩); ವಿಷದುಷ್ಟದಿಂ ಬೇಗಂ ಪಕ್ವಫಲ ಮೂಗೆಯದಂ ವನಪಾಲಕಂ ತಂದು ಅರಸಂಗೀಯೆ ಆದನೊರ್ವ ವೃದ್ಧಂಗೆ ಪಡಿಸಣಮಂ ಕುಡೆ ಮೆಲಿದವನಾಗಳೆ ಸಾಯೆ (ಧರ್ಮಪ. ೬-೪ ವ) ; ಗರುಡನಾರೋಗಣೆಯ ಬೋನಕೆ ಮರಳಿ ಪಡಿಸಣವೇಕೆ ನೂತಿನ ಮುರಿವುಗಳು ಗೆಲ್ಲವರೆ ನೀ ನೆಲೆ ನೋಡು ಕೈಗುಣವ (ಕುಪ್ಯಾದ್ರೋ.೧೧-೫೩). ೩. ಆಹಾರ ; ಭೋಜನ : ಎನಗೆ ಪುತ್ರಂ ನೀನೆ ಎನಗೆ ಮಿತ್ರಂ ನೀನೆ ನಿನ್ನ ಪಡಿಸಣವೇ ಪಡಿಸಣ ನೋಡಿತೆಯೆನಗೆ ನಿನ್ನ ಮೊಗದಗ್ಗಣೆಯೇ ಅಗ್ಗಣೆಯೆನಗೆ(ಕಣ್ಣ.ರ. ವೇ. ೧೪೯-೨೩) ; ಮೊದಲ್ತೋಱುವ ಪಡಿಸಣಮಂ ಮುಮತೆಯೋೞಂಟುವ ಭಂಗಿಯವೊಲ್ ಸಂಭ್ರಮದಿಂ ಸವಿದುವು ಚಾರುಚಕೋರಂ ಚಂದ್ರಕರಂಗಳನು (ಜಯಭಾ. ೧೪-೧೪). 'ಪಡಿಸಣಿ' ಪರಾ.

ಪಡಿಸಣದಾಳು = ರಾಜನೇ ಮುಂತಾದವರು ಆಹಾರ ಸ್ವೀಕರಿಸುವ ಮೊದಲು ಅದನ್ನು ಸೇವಿಸಿ ಪರೀಕ್ಷಿಸುವವನು : ಓಗರದ ಪಡಿಸಣದಾಳು ಚೆನ್ನಯ್ಯಂ ಜಗತ್ಪ್ರಯಪಾಲ ನಿಮ್ಮುವನುಣಬಡಿಸುವಳು ನೀರ ಜೋಳವ್ವೆ (ಜಸಪು. ೯-೪೦). ಪಡಿಸಣವಾಗು = ಆಹಾರವಾಗು ; ಬಲಿಯಾಗು : ಮಗನೆ ನಂಬಿ ನಂಬಿ ಪಟ್ಟದಾನೆಗೆ ಪಡಿಸಣವಾದಪ ಎಂದು ಜೆಡೆಯ ನಾಯನಾರುಂ ಯಸ್ಯಜ್ಞಾನಿವೇನಿಯರುಂ ಪಳವಿಸಿ ಪಲುಂಬುತುಂ ಪರಿತಂದು (ಸಂಬಿರ. ೨-೫೪). [< ಸಂ. ಪ್ರತೀಕ್ಷಣ]

ಪಡಿಸಣ$_2$ (ನಾ). ೧. (ಯಜಮಾನನು) ಊಟ ಮಾಡಿದ ಸ್ಥಳದಲ್ಲೆಯೆ ಕುಳಿತು, ಅವನು ಬಿಟ್ಟ ಆಹಾರವನ್ನು ಊಟ ಮಾಡುವಿಕೆ : ಪಡಿಸಣನುನಾಚರಿಪಂ ಪಡಿಸಣಿಗಂ . . . ತದುಚ್ಛಿಷ್ಟ ಭೋಜನಂ ಪ್ರತಿಸ್ಥಾಸ್ಯಮುಜ್ಯತೇ ತದೇಷ ಪಡಿಸಣಂ ತದಾಚರನ್ ಪಡಿಸಣಿಗ ಇತಿ ಭುಜಿಷ್ಯ ಉಚ್ಯತೇ (ಶಬ್ದಾನು. ೪೦೭ ಪ್ರಯೋ). 'ಪಡಿಸಣಿಗ' ಪರಾ. ೨. ಯಜಮಾನನು ಬಿಟ್ಟ ಊಟವನ್ನು ಭುಜಿಸುವ ಸೇವಕ : "ಪಡಿಸಣ—ಪ್ರತಿಸ್ಥಾನ=ಬಿಟ್ಟುದನ್ನುಣ್ಣುವ ಆಳು" (ತದ್ಭವಕೋ.೨೪).

[< ಸಂ. ಪ್ರತಿಸ್ಥಾನ]

ಪಡಿಸಣಂಗಳೆ (ಕ್ರಿ). ಆಹಾರವು ವಿಷಮಿಶ್ರಿತವಲ್ಲವೆಂದು ಸಿದ್ಧ ಪಡಿಸು : ಮುನೋಹರಿಯಂ ಪಡಿಸಣಂಗಳೆಯಲುಂ[ಪಾಠಾಂ. ಪಡಿಸಣವಂಗೆಯ್ಯಲುಂ] ಮಾಳತಿಯಂ ಬಡ್ಡಿಸಲುಂ ಉತ್ಪಳಿಕೆಯುಂ ಕಯ್ಯಿಟ್ಟು ನೀಡಲುಂ . . . ಇಂತಿವು ಮೊದಲಾಗೆ ಪೆಱವು ಮಿಸುವೆಸಂಗಳನವರ್ಗ ನರ್ಗೆ ತಕ್ಕುವಂ ಪೇಟ್ಟಾಗಳ್ (ಆದಿಪು. ೬-೩೧ ಪ). [ಪಡಿಸಣ$_1$ + ಕಳೆ$_1$]

ಪಡಿಸಣಗೈ (ಕ್ರಿ). (ಆಹ್ವಾಣಿಸಿ) ಆಯ್ಕೆಮಾಡು ; ಪರೀಕ್ಷಿಸಿ ಆರಿಸು : ಚಾರುಕುಂಕುಮದ ಶೋಧಿಸಿದ ಕಾರಣೆಯ ಕಡವಲಿಗೈದ ಪೊಸಮುತ್ತುಗಳ ಪಡಿಸ[ಪಾಠಾಂ.ಪ]ಣಗೈದ ಧೂಪದ ಧೂಮಪವನದಲೆಸೆದುದಾ ನಗರ (ತೊರಣಾ. ೨-೧೧-೧೬). [ಪಡಿಸಣ$_1$ + ಗೈ(< ಕೆಯ್$_1$)]

ಪಡಿಸಣಗೊಡು (ಕ್ರಿ). ಆಹಾರವನ್ನು ನೀಡು ; ಆಹಾರದಾನ ಮಾಡು : ಪಡಿಸಣ[ಪಾಠಾಂ. ಡೆದಣ]ಗೊಡುಮಂಬರಂತಿ ಲೋಕಕೆ ಸುಖಗೊಡುತಿಸುಖವ ಭೋಗಿಸುವ ಕಡುಸುಖ ನನ್ನಿದೆಯೊಳು ನಿಂದು ಸುಖವ ಸಂಗಡಿಸು ಚಿದಂಬರಪುರುಷಾ (ಭಾಚ. ೪೮-೧೫೨). [ಪಡಿಸಣ$_1$ + ಕೊಡು$_1$]

ಪಡಿಸಣದೋಜು (ಕ್ರಿ). ಶೋಧಿಸು ; ಸೋಸು (?) : ಎಳೆಯಲ್ಲಯಿಂಗುಳ್ಳಿ ಕರಿಬೇವು . . . ಕಸ್ತೂರಿಯ[ನು] ಬೆರಸಿ ಪನ್ನೀರ ಹೊಯ್ದು ಕೊಂಜು ತಿಳಿನೀರ ಸೆಪೆಯಳಗೆಗೆಜ್ಜಿದು ಹಾಕೆಯ ಕಟ್ಟ ಬಳಿಕದಂ ಮಡಗಿ ಚೆನ್ನಾಗಿ ಪಾಕವ ಮಾಡಿ ಯಿಳಿಹಿ ಪಡಿ[ಪಾಠಾಂ. ಪಡೆದ, ಪಡಿ]ಸಣದೋಜಿ ಲಂತದುವೆ ತಾನೊಂದು ತೆಜುದೀರ ಪನಸಪಾಕ (ಸೂಪಶಾ. ೫-೬೪).

[ಪಡಿಸಣ$_1$ + ತೋಜು]

ಪಡಿಸಣಿ (ನಾ). ಅಡಿಗೆಯವನು ; ಬಾಣಸಿಗ : ಭೂತಕೇಶನ ಮನೆಯೊಳಗಿರುಳತೀತವಾಗಲಿಕಾಗಳಾತನ ಪ್ರೀತಿಕರ ಪಡಿಸಣಿಯ ಕಂಡನು ಮುನಿಪ ಹಸಿದಿರುತ (ಸಂಭಪ. ೨೫-೧೨) ; ಮಲ್ಲ ಗೆದ್ದನು ಈ ಕ್ಷಣದಿ ಗೆಲವಿಲ್ಲ ವಲಲನಗಾಯ್ತು ಹೋ ಹೋ ನಿಲ್ಲು ಪಡಿಸಣಿ ಗೆದ್ದನಾಗಲೆ ಗೆದ್ದನಾ ವಲಲ (ಕುಪ್ಯಾವಿ. ೬೧೫. ೪-೭೫). [ಪಡಿಸಣ$_1$ + -ಇ$_3$]

ಪಡಿಸಣಿಗ (ನಾ). (ಯಜಮಾನನು) ಊಟ ಮಾಡಿದ ಸ್ಥಳದಲ್ಲೇ ಕುಳಿತು, ಅವನು ಬಿಟ್ಟ ಎಂಜಲನ್ನು ಊಟ ಮಾಡುವವನು ; ಪಡಿಸಣವನ್ನಾಚರಿಸುವವನು : ಪಡಿಸಣಿಗಂ, ಸುಂಕಿಗಂ (ಭಾಷಾಭೂ. ೧೩೮ ಉದಾ) ; ಪಡಿಸಣಮನಾಚರಿಪಂ, ಪಡಿಸಣಿಗಂ (ಶಬ್ದಾನು. ೪೦೭ ಪ್ರಯೋ). [ಪಡಿಸಣ$_1$ + -ಇಗ]

ಪಡಿಸಣಿಸು (ಕ್ರಿ). ತಿರುಳನ್ನು ಕಂಡುಹಿಡಿ ; ಸಾಮರ್ಥ್ಯವನ್ನು ನಿರ್ಧರಿಸು,—ಪರೀಕ್ಷಿಸು : ಎಂಟುಸಾವಿರ ಸವಣರುಂ ಕೂಡಿ ಖಾಪಮಂ ಪಡಿಸಣಿಸಿ ನೋಳ್ಪಂತೆ ಆತ್ಮದ್ರೋಹಮನೊಡರ್ಚುವಂತೆ. . . ಪುಷ್ಪಾಂಜುಳಿಯೆಂಬ ನರಕಪರ್ವಮನುಪಕ್ರಮಿಸುತ್ತಿರೆ (ಪೊನ್ನ.ರ. ೧೭೫-೧೬). [ಪಡಿಸಣ$_1$ + -ಇಸು$_5$]

ಪಡಿಸನ್ನೆ (ನಾ). ಪ್ರತಿಯಾಗಿ ಮಾಡುವ ಸನ್ನೆ,—ಸಂಕೇತ : ಚೆನ್ನೆಯರ ಕುಡಿನೋಟದೊಡನಾಡಿ ಪಾಡುತಲ್ ನಲಿದು ಸನ್ನೆ ಪಡಿಸನ್ನೆಯಿಂ ಮುದದಿ ಕೇಳಿಯಾಡುವುದು (ವಿಸೇಗೀ. ೨-೬).

[ಪಡಿ$_1$ + ಸನ್ನೆ$_2$]

ಪಡಿಸರಲ್, ಪಡಿಸರಳ್ (ನಾ). ಇನ್ನೊಂದು ಬಾಣ; ಮತ್ತೊಂದು ಕಣೆ : ಪವನಂ ಎಡಸಂ ಬಲಸಂ ಪಿರುಗಿಯುಂ ಸಾರ್ದುಂ ಪಣಿಸರಲಂ ಜೋಡಿಸಿಯುಂ ದಯ್ಯನೆ ಬರ್ಪ ಪಗೆಯ ಪೊಸ ಕಣೆಗಳಂ ಖಂಡಿಸಿಯುಂ ವೀಸರ್ಕಳ್ ಪೊಗಟ್ಟುನ್ನಂ ಸಸುವಂಯಿರ್ಕ್ಕಳ್ಪೊಣರ್ದಂ(ಪಾಸುಪ್ರ.೯೩-೫).

ಪಡಿಸರಳ್ : ಪೊಗರುಗುವ ಕಣಗಳ್ ಸಾರ್ತಪ್ಪುದಂ ಕಾಣುತೆ ರಾಘವಂ ಪಡಿಸರಳಂ ತುಡುತೆ ಬಿಡದೋರೊಂದು ಪಗೆಗೋಲಂ ನಡುದಾರಿಯೊಳ್ ಇರ್ಕಡಿಗೆಯ್ವುಂ (ಅದ್ಭುತ. ೪೯-೨೨). [ಪಡಿ$_3$+ಸರಲ್$_1$]

ಪಡಿಸರಳ್ 'ಪಡಿಸರಲ್' ನೋ.

ಪಡಿಸಲಿಕೆ (ನಾ). ಭತ್ಯವನ್ನು ನೀಡುವಿಕೆ : ಗೌಣ್ಡುಗಳು ಅಱುವತ್ತೊಕ್ಕಲುಮಿದ್ದುಂ ಹನ್ನೆರಡು ಮತ್ತರು ಕೆಯ್ಯ ಜೀರ್ಣೋದ್ಧಾರಕ್ಕಂ ಪಡಿಸಲಿಕೆ×××ಸಲಿಸುತ್ತಮಿರ್ಪ್ಪರು (ಸೌಇಇ. XX, ೩೨-೪೧; 1045); ಧಾರೆಯನೆಱೆದು ಹೆಗ್ಗಡೆಗೇಣ್ಣನು ಸಿದ್ಧೇಸ್ವರದೇವರ್ಗ್ಗೆ ಪಡಿಸಲಿಕೆ ಭೋಗನಿವೇದ್ಯಕೆ ಬಿಟ್ಟ ದತ್ತಿ (ಎಕ. VII, ಶಿವಮೊ. ೫೧-೧೮; 1108 ?).

[ಪಡಿ$_1$+ಸಲಿಕೆ$_1$(<ಸಲ್ಕೆ)]

ಪಡಿಸಲಿಸು$_1$ (ಕ್ರಿ). (ದೇವಸ್ಥಾನದ ಜೀರ್ಣೋದ್ಧಾರ ಮೊದಲಾದುವುಗಳಿಗಾಗಿ) ಭತ್ಯವನ್ನು ಸಲ್ಲಿಸು ; ಪಡಿಯನ್ನು ನೀಡು : ರಾಜಮಾರಮ್ ಅಯ್ಯತ್ತಲ್ ಕೆಯ್ಯಮ್ ಕೊಟ್ಟರ್ ಅದ ಮಾರಿದರ ಕಿರಿಪುರುಷನ ಮಗ ದೇವಾತಿ ಪಡಿಸಲಿಸಿಯುಣ್ಟೊನ್(ಎಕ. VIII,ಸೊರಬ. ೮೫-೯ ; 876) ;. ಕೊಟ್ಟ ಈಪ್ಪತ್ತು ಕಣ್ಣುಗದೊ[ಳೆ] ಪಡಿಸಲಿಸ[ಮತ್ತ] ಕೊಳಗುರ ದೇಗುಲಕ್ಕೆ ಕಣ್ಣಪೀಟ ಪಣಿಯವಟ್ಟಮಿನಿತುವಂ ಕೊಟ್ಟು ಪ್ರತಿಟ್ಟೆಗೆಯಿಸಿದ (ಸೌಇಇ. XI-i, ೩೫-೧೪ ; 933) ; ಚಿಲ್ಲುಕೇಶ್ವರ ದೇವರ್ಗೆ ತುಮ್ಬಿನ ಮೊದಲೊಳಱುಕಣ್ಣುಗ ಮಣ್ಣು ಕೊಟ್ಟರ್ ಪಡಿಸಲಿಸಿಯುಣ್ಟೊರ್ (ಎಕ. XII, ತಿರಾ. ೯-೪೬ ; 1072).

[ಪಡಿ$_1$+ಸಲಿಸು]

ಪಡಿಸಲಿಸು$_2$, ಹಡಿಸಲಿಸು (ಕ್ರಿ). ೧. (ಪೂರ್ವಾಚಾರಕ್ಕನುಗುಣವಾಗಿ) ನಡೆಸಿಕೊಂಡು ಬರು : ಧರ್ಮ್ಮಮಂ ಪಡಿಸಲಿಸುತ್ತಿರೆ (ಇಎ. ೧೯೪೭, ಹಾನುಗಲ್. ೩೧೨-೧೪ ; 850) ; ಕೌಣ್ಡಿಲ್ಯಗೋತ್ರದ ಗಾಮುಣ್ಡಸಾಮಿಗಳ ಮಗನ್ನಾಗಮ್ಮಯ್ಯ ಕಲ್ಲ ದೇಗುಲಮಮ್ಮಾಡಿಸಿ ಪಡಿಸಲಿಸಲೆನ್ದು ಕೊಟ್ಟ ಮಣ್ಣು ಒಕ್ಕಣ್ಣುಗ (ಎಕ. XIV, ಮಂಡ್ಯ. ೧೩-೧೦ ; 895) ; ಜಕ್ಕಗೋಸಿಯಂ ಕರೆದು ನೀನೆನಗೆ ಪುತ್ರನ ಸಮಾನನೆನ್ನ ಮಾಡುವ ಧರ್ಮ್ಮಕೆ ಸಹಾಯನಾಗಿ ಪಡಿಸಲಿಸುತ್ತುಮಿರೆನ್ದು ತಲೆಯೊಳ್ ಕೆಯ್ಯನಿಟ್ಟು (ಮೈಆರಿ.೧೯೩೦, ೩೬-೪೩; 1080); ಮುನ್ನಂ ದಡಿಗ ಮಾಧವರ್ಮ್ಮಾಡಿಸಿದ ಬಸದಿಯಂ ತಮ್ಮ ಗಂಗಾನ್ವಯದವರ್ಪ್ಪಡಿಸಲಿಸುತ್ತಂ ಬರಲು (ಎಕ. VII, ಶಿವಮೊ. ೪-೬೯ ; 1122). ೨. ಮೊದಲಿದ್ದಂತೆ ಮಾಡು; ಜೀರ್ಣೋದ್ಧಾರ ಮಾಡು; ಪುನರ್ನಿರ್ಮಾಣ ಮಾಡು : ಸೋಮಸಿಂಘಭಳಾರರ ಕಾಲಂ ಕಟ್ಟಿಸಿ ಧಾರೆಯನೆಱೆಯಿಸಿ ಕೆಱೆಗೊಡಂಗೆಯ್ದುಸವಂಧವಂ ಕೊಣ್ಡ ಕೆಱೆಗಳಂ ಪಡಿಸಲಿಸುವರ್ (ಸೌಇಇ. IX-i, ೮೦-೨೬ ; 1028); ಶ್ರೀಮನ್ಮಹಾಸಾಮನ್ತಂ ಮಾರ್ತ್ತಣ್ಡಯ್ಯಂ ತಮ್ಮ ಮುತ್ತಯ್ಯಂ ಮಾಡಿಸಿದ ಬಸದಿಯಂ ಪಡಿಸಲಿಸಿ ನಾಟಕಶಾಲೆಯಂ ಮಾಡಿಸಿ ತನ್ನ ಕೀರ್ತಿಶಿಳಾಸ್ತಂಭಮನಾಚನ್ದ್ರಾರ್ಕ್ಕತಾರಂಬರಂ ನಿಲಿಸಿದ (ಸೌಇಇ.XI-i, ೬೮-೮೬; ಸು.1045) ; ಪುಱಗೂರ ವೀರ ಜಿನಾಲಯಮುಮಂ ಕುಂದುರಗೆಯ ಜಿನಮಂದಿರಮುಮಂ ಪೊಸತಾಗೆ ಪೊಸತಾಗೆ ಪಡಿ[ಸಲಿಸಿ] (ಸೌಇಇ. XI-i, ೧೦೩-೩೫ ; ?). ೩. ಒಟ್ಟಾಗಿ ಕೂಡು ; ಜೊತೆಯಾಗಿ ಸೇರು : ಸತ್ವವೃದ್ಧಿಗಳಾವ ನೊಬ್ಬನ ತತ್ವವನು ಕಾಣಸಲು ನೆರೆಯಲು ಚಿತ್ತವೆಯ್ದುದು ವೇದಮಸ್ತಕದೊಡನೆ ಪಡಿಸಲಿಸಿ (ನಿಭಾಗ. ೬-೩-೨೫). **ಹಡಿಸಲಿಸು :** ೨. ಶ್ರೀ ಬಲೇಸ್ವರದೇವರ ದೇಗುಲವಂ ಹಡಿಸಲಿಸಲು ಬಡಗಿ ಮಲೋಜಗೆ ಅಕೆಯೊಳಗೆ ಮತ್ತರು ೬ (ಸೌಇಇ. XI-i, ೬೮-೨೬ ; 1033) ; ಐದು ದೇಗುಲಂಗಳ ಬಡಗಿವೆಸದೊಳ್ ಹಡಿಸಲಿಸುವ ಮಂಡಳಿಕ ಮಾಣಿಕಾಚಾರಿ ಹೊಂನೋಜ (ಎಕ.VIII,ಸಾಗರ.೧೦೦-೬೪ ; 1042). [ಪಡಿ$_3$+ಸಲಿಸು]

ಪಡಿಸಾದ, ಪಡಸಾದ (ನಾ). ಪ್ರತಿಧ್ವನಿ ; ಪ್ರತಿಶಬ್ದ : ವಿಧಿಯ ಯಾವ ವಿಲಾಸಲಾಸ್ಯವೊ ಕದಿಯುತಿದೆ ಹೃನ್ಮನದ ಬಿನದವ ; ಅದು ಅದೋ ದಿಕ್ಕೆಲ್ಲ ಒಂದೇ ನಾದ ಪಡಿಸಾದ (ಅರಳು. ೫೭-೧೮) ; ಏಳೊ ಏಳು ಗೆಳೆಯ, ಕೇಳು ಕರೆವ ತೂರ್ಯನಾದವ ; ಗೋಳಗುಮುಟದಂತೆ ಸೃಷ್ಟಿ ನುಡಿಸುವ ಪಡಿಸಾದವ (ಅರಳು. ೪೯೫-೧೦). **ಪಡಸಾದ :** ಅಂತಃಪುರದೊಳು ಕೇಳಿಸುತಿದೆ ನೂಪುರನಾದ. ಏತರ ಒಸಗೆಯು ಇದು ? ಯಾ ಹಿಗ್ಗಿನ ಪಡಸಾದ ? (ಹೃದಸ. ೮-೮).

[←ಮರಾ. ಪಡಿಸಾದ್, ಪಡಸಾದ್./ಸಂ. ಪ್ರತಿಶಬ್ದ]

ಪಡಿಸಾರಿಕೆ (ನಾ). ಜೊತೆಗೆ ಬರುವಿಕೆ ; ನೆರವು : ಭಾರಿಯಂಕವು ದಳಪತಿಗೆ ಪಡಿಸಾರಿಕೆ[ಪಾತಾಂ. ಗೆ]ಯ ಭಟರಿಲ್ಲಲಾ ಪರಿವಾರಕಿದು ಪಂಥವೆ ಎನುತ ಕುರುರಾಯ ಮೂಡಲಿಸೆ (ಕುವ್ಯಾಕ. ೧೦-೪೩).

[ಪಡಿ$_3$+ಸಾರ್$_1$+-ಇಕೆ]

ಪಡಿಸಾಳ 'ಪಡಸಾಲೆ$_1$' ನೋ.

ಪಡಿಸು (ಕ್ರಿ). ೧. ಮಲಗಿಸು ; ಮಲಗುವಂತೆ ಮಾಡು : ಉದರಮೆ ತೊಟ್ಟಿಲಾಗೆ ಭುವನತ್ರಯಮಂ ನೆಱೆ ತಾಳ್ದಿ ದೇಹವರ್ಗದ ಕೃತ ಪಾಪ ಪುಣ್ಯಫಲಮಂ ಸಲೆ ತೂಗುವ ಕರ್ಮಸಾಕ್ಷಿಯಂ ಪದುಳದೆ ತೊಟ್ಟಿಲೊಳ್ ಪಡಿಸಿ ತೂಗಿದರ್ ... ಲತಾಂಗಿಯರ್ (ಜಗವಿ. ೩-೨೮). ೨. ಬೀಳಿಸು; ಕೆಡಹು : ಕಡಸಿ ಕಾಮಾಟಗರಿಂಗಿಡುತರು ಅತಿಗಳ ಇಡಿಕಿರ್ದ ಗುಂಡುಗಳ ಪಡ[ಡಿ]ಸಿ ಕಲ್ಮುಟಗರಿಂ ಪಾತಾಳಗುಹೆಗಳ ಬಿಡದೆ ಹೂಳಿಸಿ ಸಮಗೊಳಿಸಿ (ಗೊಮ್ಮಟ. ೨-೧೩). ೩. ಉಂಟುಮಾಡು ; ಅನುಭವಿಸುವಂತೆ ಮಾಡು ; ಹೊಂದುವಂತೆ ಮಾಡು : ಈತಿಃ—ಡಿಂಬ, ಅತಿವೃಷ್ಟಿ ಮುಂತಾದ ಬಾಧೆ, ಎಲೇ ಮಕ್ಕಳು ಪಡಿಸುವ ವೇಧೆ, ಪರಸ್ಥಳವಾಸ (ಸಿದ್ಧಾಂತಿ. ೬೯೧). [ಪಡು$_1$+-ಇಸು$_3$]

ಪಡಿಸೂಳು (ನಾ). ಪುನಃ ಪುನಃ ಹೇಳುವ ಧ್ವನಿ; ಪುನರುಚ್ಚಾರ: ಮೇಳವದ ತನಿವೆಳಗುಗಳ ಮಣಿಮೌಳಿಮಂಡಿತರುಪ್ಪರದ ಪಡಿಸೂಳು ಪಾಯವಧಾರಿನಲಿ [ಪಾಶಾಂ. ರೆನಲು] ಹೊಕ್ಕರು ಸ್ವಭಾಸ್ಥಳವ (ಕುವ್ಯಾಸ. ೨-೧). [ಪಡಿ$_3$+ಸೂಳು$_1$(<ಸೂಳ್$_1$)]

ಪಡಿಹರಿ 'ಪಡಿಹಾಱು' ನೋ.

ಪಡಿಹಱ 'ಪಡಿಯಱ' ನೋ.

ಪಡಿಹಱು 'ಪಡಿಹಾಱು' ನೋ.

ಪಡಿಹಾರಿ 'ಪಡಿಹಾಱು' ನೋ.

ಪಡಿಹಾಱ 'ಪಡಿಯಱ' ನೋ.

ಪಡಿಹಾಱು, ಪಡಿಹರಿ, ಪಡಿಹಱು, ಪಡಿಹಾರಿ (ನಾ).೧. ಬಾಗಿಲು ಕಾಯುವವನು ; ಪ್ರತೀಹಾರಿ ; ದ್ವಾರಪಾಲಕ : ಏಲೇಶ್ವರದ ಕೇತಯ್ಯ ದ್ವಾರಪಾಲನು ಶಿವ ನಿಮಗೆ ಪಡಿಹಾಱು ಬಸವಯ್ಯಂ ಮನೆಯ ಭಂಡಾರಿ ಬಲದೇವಂ ಮಧುವರಸನಾಲವಟ್ಟದವ (ಬಸಪು. ೯-೪೮) ; ಬಸವೇಶನಳ್ಕೆಯಿಂದಿರೆ ಮಾಚಿದೇವಂಗಳೊಸೆದಾಗ್ರಹಿಸಿಯುಸುವ ಬಿಡಲು ಪಡಿಹಾಱು ಬಂದುಸಿರೆ ಬಸವನ ಕಿನ್ನರನ ಹರಣಮಂ ಪಡೆದನಭವನಿಂ ಮಾಚಿದೇವಂ (ಪಾಸೋಪು. ೪-೮೮) ; ಈತನೇ ಪಡಿಹಾಱುಯುತ್ತಣ್ಣನು (ಚಿಬಪು. ೫೬-೫೯). ೨. ಊಳಿಗ ; ಸೇವೆ : ಸಂಪನ್ನ ಮಂತ್ರೀಶ ಪಡಿಹಾಱು ಪುತ್ತಣ್ಣನಂ ಕಳುಹಿ ಕರೆಸಿದಡೆ (ಲಕಚಿಂ. ೩೨-೬೫). **ಪಡಿಹರಿ :** ೧. "ಪಡಿಹರಿ (ಪಡಿಹಾರಿ)-ಪ್ರತೀಹಾರೀ"(ಶಬ್ದಕೋಸ.೨೪). **ಪಡಿಹಱು :** ೧. ಅವ ಪಡಿಹಱುಗಿಂತಧ್ಯಕ್ಷಾಭಾವನತೆ ದೊರಕೊಂಬುದೇ ಜಿತಭಾವಜಂಗಲ್ಲದೆಯೆನುತ ನಿಶ್ಚೈಸಿ ಮನಸಿನಲಿ (ಬಸಪು. ೫೩-೨೨). ೨. ಮಡದಿ ಗೌರಿಪುರಾತಿ ಪಾರ್ವತಿ ಪಡಿಹಱುಯ ದಾನವ್ವೆ ದುಗ್ಗಳೆ ಬಡರಿಚುವುದೇಂ ಕೇಳಿಕೆಯನೀ ನರ್ತನೋಚಿತಕೆ (ಬಸಪು. ೧೨-೪೨).

ಪಡಿಹಾರಿ : ೧. ನಂದಿಬಟ್ಟಲ ಹಿಡಿದು ಬಂದನಾ ಪಡಿಹಾರಿ (ಕನ್ನಜಾ. ೨೬೯). ೩. ರಾಜನ ಬಳಿ ಇರುವ ವಿದೂಷಕ,—ಹಾಸ್ಯಗಾರ: (ಕಿ). 'ಪಡಿಯಱ' ಪರಾ. [<ಸಂ. ಪ್ರತೀಹಾರೀ]

ಪಡಿಹಾಱಿಕೆ 'ಪಡಿಯಱಿಕೆ' ನೋ.

ಪಡಿಹೊನ್ನು 'ಪಡಿವೊನ್' ನೋ.

ಪಡು$_1$, ಹಡು$_1$ (ಕ್ರಿ). ಪಟ್ಟ$_1$ (ಭೂತಕೃ); ಪಟ್ಟು$_1$, ಹಟ್ಟು (ಭೂತನ್ಯೂ) ೧. ಮಲಗು ; ಒರಗು ; ಶಯನಿಸು : "ಪಡು—ಮರಣೇ, ಶಯನೇ ಚ" (ಶಮಧಾ) ; ಮರಲ್ದೆನೆ ತೂಗುಂದೊಟ್ಟಲೊಳ್ ಪಟ್ಟ ಪುತ್ರನ ವಕ್ತ್ರೇಂದುವನಂಜನಾಂಕಿತಮನಾನಿನ್ನೆಂದು ಪೇಱ್ ಕಾಣ್ಬೆನೋ (ಕಾದಂಪೂ. ೩೫೫) ; ಎರ್ಮೆಯಡೆಗೊಳ್ ತಾನುಂ ಪಟ್ಟು ಮೆಲ್ಪೊತ್ತು ತಿರ್ಪ ಜವಹುರದ ಜಕ್ಕಂದೊಟಲಿಯಂ ಗೆಲೆವರ್ಪ ಕಾಱ್ಕೋಣ ವಳಗದಿಂದೆಯುಂ (ರಾಮಾಶ್ವ. ೩-೨೪) ; ಈ ಇರುಳ್ ನಡೆದುದೊಂದ ದ್ಭುತಂ ಪಟ್ಟ ಪಡೆ ಪಟ್ಟಂತೆ ಪೊಯ್ದುತ್ತು (ಅಶ್ವತ್ಥಾ. ೧-೧೨). ೨. ಬೀಳು; ಕೆಡೆ : ಸುಯೋಧನನ ಮಹಾದೇವಿ ಭಾನುಮತಿ ಬಾಯಟಱದು ಪುಯ್ಯಲಿಡುತುಂ ಬಂದು ಧರ್ಮನಂದನನ ಕಾಲ ಮೇಲೆ, ಕವಿದು ಪಟ್ಟು (ಪಂಪಭಾ. ೩-೩೩ ಪ) ; ಕೆಟ್ಟ ದೇಗುಲಮಂ ಮಾಡಿಸಿ ಕೆಟ್ಟು ಪಟ್ಟ ಲಿಂಗ್ಗಮಂ ಪ್ರತಿಷ್ಠೆಗೆಯ್ದು (ಎಕ. IV, ಹೆಗ್ಗಡ. ೧೬-೫ ; 1021) ; ನಿಂದೆರಡು ಬಲುಪುರುಷಮೃಗಗಳನೊಂದೆ ಕೋಲಲಿ ತರುವುಳಿದು ಕೆಡ ವಂದದಿಂ ಪಡಲೆಸುವೆ ವಾಗುರೆ ನೋಡು (ಸಾಳ್ವಭಾ. ೫-೩೮) ; ಬಟ್ಟೆ ತುದಿಯನು ಹೇಗೆ ಮುಟ್ಟಲಾಪುದೆ ನೋಡು ! ಕಟ್ಟಕಡೆಗಿರಲಿ ಜಯ್ ! ಪಟ್ಟರಲಿ ಸೋಲು ! (ಕಏಪು. ೨-೨೦). ೩. (ಸೂರ್ಯನು) ಮುಳುಗು ; ಅಸ್ತವಾಗು : ಇತ್ತ ನೇಸಱು ಪಟ್ಟೊಡೆ ಕಿತ್ತಯ್ಯಂ ಗಳ್ಗಾಸನ್ನಕಾಲಮಾದುದೆಂಬುದಂ ಭಟಾರರಱಿದು (ಪಡ್ಡಾರಾ. ೮೩-೧೦); ಅಂತಮೋಘಾಸ್ತ್ರ ಧನಂಜಯನೆಚ್ಚ ಶರಸಂಘಾತದಿನೊಗೆದ ರಣಗಟ್ಟಲೆಯೆ ಮೊಲಗಟ್ಟಲೆಯಂ ಮಾಡೆ ನೇಸಱ್ ಪಟ್ಟತ್ತು ವಿಜಯಂ ಸೋಲ್ತನೆಂದು ಕೌರವಬಲಮಾರ್ದೊಡೆ (ಪಂಪಭಾ. ೧೧-೧೪೮ ವ) ; ಪಗಲೆಲ್ಲಂ ಸಂತಸ ದಿಂದಿರ್ದು ನೇಸರ್ಪಟ್ಟೊಂದು ಜಾವಕ್ಕೆ ತೊಟ್ಟನೆ ಅಸದಳಮೆನಿಸುವ ತೀವ್ರದ ತೃಷೆ ಮೊಕ್ಕಳಮಾಗೆ (ಧರ್ಮಾಮೃ. ೧-೧೫೪) ; ಪುಡಿಯಡರೆ ನಿಮಿರ್ದ ಪುತ್ತಿನ ಪುಡಿ ಕೆಡೆದತ್ತಾಲಮೊಲೆದುದದಱಿಯೊಳ್ ತೂಂಕಡಿಪ ಮಿಗಂ ಮುಂದಣ್ಗೋರ್ಗುಡಿಸಿದುದೋ ಪಡುವ ಪಡುವ ಮೃಗಲಾಂಛನನಾ (ಲೀಲಾವ. ೩-೪) ; ಸೂರ್ಯನು ಮೂಡುತ್ತಾನೆ ಪಡುತ್ತಾನೆ—ಎಂಬುದು ಎಲ್ಲರ ಕಣ್ಣಿಗೆ ಕಾಣಿಸುವ ಸತ್ಯವಾದರೂ ಇದು ಭ್ರಾಂತಿಸತ್ಯ (ಸಂಶೋಧ. ೧೯೨). ೪. ಸಾಯು ; ಮರಣಹೊಂದು : "ಪಡು–ಮರಣೇ, ಶಯನೇ ಚ" (ಶಮಧಾ) ; "ಮರಣ ಶಯನಗಳೊಳು ಪಡು" (ಶಬ್ದಮಂ. ೧೩). ೫. ಸಂಭೋಗಿಸು ; ರಮಿಸು : ನೋಡೆ ಪ[ಸಾಕಾಂ. ಬ] ಟ್ಟೆಡೆಯೊಳು ನಖದಂತಹತಿಗಳ ಮಾಡನು ಕಲೆಯಾಗುವಂತೆ (ಭರತ. ೫-೯೨) ; ಇಂತು ಸತಿಪತಿ ಸಮುಚ್ಚಯದ ದೃಢವ್ರತ ಸಮಾಧಿಗಳ ನಿರ್ಮೂಲನಂಗೆಯ್ಯೆ ಪಡವಳಿಸಿ ಬಾಲನೃದ್ಧಂ ಜತಿಗಳಂ ಕೂಡಿ ತೊಡಗಿ ದರು ಪಡುಪೆಗ್ಗಮಂ (ಪ್ರಭುಸಿ. ೪-೩೭). ೬. (ಸ್ಥಿತಿಯನ್ನು) ಹೊಂದು ; ಪಡೆ ; ಅನುಭವಿಸು : ಈಯವಸರದೊಳ್ ವೈಶಂಪಾಯ ನನುಂ ಪತ್ರಲೇಖೆಯುಂ ಭೂಪರುಮಾನೀಯಂದದಿನಗಲಲ್ಕೆನಿತಾಯಸಮಂ ಪಡುವರೆಂದು ಚಿಂತಿಸುತಿರ್ದಂ (ಕಾದಂಪೂ. ೯೮೫) ; ನೆಲನಚ್ಚರಿಯಂ ಪಡೆಯಂಡಲೆದಂ ಚಕದೇವನಾ ಮರಾಟರ ಪಡೆಯಂ ಛಲದಿಂ ಕಾಣಿಸಿ ಕಡೆಯಂ (ಅಪ್ರತಿ. ೬-೧೨) ; ಪಟ್ಟ ಪಾಡೆಲ್ಲವು ಹುಟ್ಟು-ಹಾಡಾಗುತ ಹೊಸವಾಗಿ ರಸವಾಗಿ ಹರಿಯುತಿವೆ (ಸಿಱೀಗೀ. ೧-೭) ; ಅವನು ಸುಖ ವಾಗಿರಲೆಂದು ತಾನು ಅಪಾಯಕ್ಕೆ ಒಳಗಾಗಿ ಪಡಬಾರದ ಕಷ್ಟವನ್ನೆಲ್ಲಾ ಪಟ್ಟಳು (ಬಂಕಿಸು. ೨೦೧). 'ಓಳಿವಡು', 'ಕಷ್ಟಂಬಡು', 'ಸಂತಸ ಬಡು' ಪರಾ. **ಹಡು**$_1$: ೫. ಪರಧನವನೊಲ್ಲದಿಪ್ಪುದೆ ವ್ರತ ಪರ ಸ್ತ್ರೀಯರ ಹ[ಸಾಕಾಂ. ಕೂ]ಡದಿಪ್ಪುದೆ ಶೀಲ (ತಿಪಮಂ. ೧೯೩-೭೪೦) ; ಶುಂಠಿ ಪಂಟೆಗೆ ಲೇಸು ದಂಟೆ ಕುಂಟೆಗೆ ಲೇಸು ಕುಂಟಯಾ ಹುಡುಗಿ ಹಡ ಲೇಸು (ಹಾಸ್ಯಮಂ. ೯) ; ಕಡಿ, ಹಡು ಮೊದಲಾದ ಧಾತುಗಳಿಗೆ ಉಳ ಪ್ರತ್ಯಯ ಬರುತ್ತದೆ. ಕಡಿಯುವವನು ಕಡುಕನು, ಹಡುವವನು ಹಡುಕನು (ಹೊನಗ. ೭೪). ℙ ಧಾತುಗಳಿಗೆ 'ಎ' ಅಥವಾ 'ಅಲ್' ಪ್ರತ್ಯಯದ ಮುಂದೆ 'ಪಡು' ಸೇರಿ ಕರ್ಮಣಿ ಪ್ರಯೋಗವು ಸಿದ್ಧಿಸುತ್ತದೆ.

ಪಟ್ಟಱಿ = ಪಡುಶಿಲೆ : ಅನ್ತೆ ಬರೆ ಕುಡುಕುಱುಕೆ ಅನ್ತೆ ಬರೆ ಪುಣ ಸೆಬೆಯ ಕಗ್ಗ್ಯಾಲ ಅನ್ತು ಬರೆ ಪಟ್ಟಱಿ ಇಪ್ಪರ್ ಅದಱ ತದನಾನ್ತರ ಮಟ್ಟಿಗಡಪು (ಸೌಇಇ. IX-1, ೪೧-೨೦ ; 11ನೆಯ ಶತ). **ಪಟ್ಟರ್** = ಮಲಗಿರು ; ಒರಗಿರು : ಕುಮಾರನುಂ ಪಸಿವುಂ ನೀರಟ್ಟೆಯಿಂದ ಮಾದಂ ಬಾಧಿಸೆಪಟ್ಟು ಬಸಮಟಱದು ಪಿಡಿದೊಂದಾಲದ ಮರದ ಕೆಟಗೆ ಶಿಲಾತಳದ ಮೇಗೆ ಪಟ್ಟರ್ದಂ[ಪಾಕಾಂ. ನಿದ್ರೆಗೆಯ್ದಂ](ಪಡ್ಡಾರಾ. ೫೬-೧೦); ಸೆಣಸುಳ್ಳುದ್ಯುದ್ಧರುತ್ತರಂ ತಳ್ತಱಱಯದೆ . . . ಒರ್ವಂ ಗುಣಮುಂಟೆಂ ದುಂಡು ಪಟ್ಟರ್ಜನನಣಮೆ ನಿರುದ್ಯೋಗಿಯಂ ಭೂಪನೆಂಬರ್ (ಪಂಪಭಾ. ೪-೧೧) ; ಅದೆಲ್ಲಮನಲ್ಲಿ ಪಟ್ಟರ್ದ ವೃದ್ಧತಾಪಸಂ ಕಂಡು (ಪಂಚತಂ. ೭೮-೪). **ಪಟ್ಟರಿಸು** = ಮಲಗಿಸು ; ಒರಗಿಸು : ಕರ್ಬೊನ್ನ ಕೀಲ್ಗಳಂ ಕೊಂಡು ಬಂದು ಕ್ಷಮಾಂಗನಾಲಿಂಗಿತನಪ್ಪ ಮಹಾಮುನಿಯಂ ಮಲರ್ಚಿ ಪಟ್ಟರಿಸಿಯುರೇಸ್ಥಲಮಂ ನಾಭಿವರೆಗಂ ವಿದಾರಿಸಿ (ಪಡ್ಡಾರಾ. ೫೧-೨೭) ; ಆ ಕುಮಾರಿಯಂ ದೇವಕಿಯ ಮುಂದೆ ಪಟ್ಟರಿಸಿ ಪೋದ ಬಂದ ವೃತ್ತಾಂತಮಂ ಪೇಳ್ದು (ಜಗವಿ. ೩-೧೧ ಪ) ; ಪಾಸಿನ ಮೇಲೆ ಪಟ್ಟರಿಸಿ ಪಾಲೆಱ್ದೆನ್ನೊಡಗೂಡಿ ಬಾಲಿಕಾಭ್ಯಾಸದಿನೆತ್ತಿ ಸತ್ತಿಗೆಯ ತಣ್ಣೆಳಲೊಳ್ ಬಳೆವಂತು ಮಾಡಿ (ಗಿರಿಕ. ೧-೧೦೭) ; ವರದುಕೂಲವನುಡಿಸಿ ಮಸುಧಾಸ್ತ ರಣದಲಿ ಪಟ್ಟರಿಸಿ ಜಾಡ್ಯಸ್ವರುಷನೆಂದೂರೊಳಗೆ ಹರಹಿದರುದಯಕಾಲದಲಿ (ತೊರರಾ. ೨-೬-೨) ; ಪುತ್ರಚಿಂತಾಮಣಿಯ . . . ತೊಟ್ಟಲೊಳು ಪಟ್ಟರಿಸಿ ನಾಮಕರಣಂಗೈಯ್ದೆ (ನವನೋ. ೧೫-೩೮). **ಪಡಲಿಡಿಸು** = ಚೆಲ್ಲಾಪಿಲ್ಲಿಯಾಗಿ ಬೀಳುವಂತೆ ಮಾಡು ; ಅಸ್ತವ್ಯಸ್ತವಾಗಿ ಚೆದರಿ ಹೋಗುವಂತೆ ಮಾಡು ; ನಾಶಗೊಳಿಸು : ಕಾಳಶಂಬರನಾನೆ ಕುದುರೆ ರಥಾಶ್ವವನು ಪಡಲಿಡಿಸೆ (ಸಾಳ್ವಭಾ. ೨೯-೫೨) ; ಸರ್ವಾಂಗ ಸುಂದರದ ಮೆಡದಿಯಂ ಪಿಡಿದಡಕಿ ಪುಷ್ಪಕ ಜಡಿಯಲವರವರಾಪ್ತವರ್ಗವ ಪಡ ಲಿಡಿಸಿ ನಡೆದನು ದಶಾನನನಧ್ರಮಾರ್ಗದಲಿ (ಉರರಾ. ೭-೬೪). **ಪಡಲಿಡು** = ೧. ಚೆಲ್ಲಾಪಿಲ್ಲಿಯಾಗಿ ಬೀಳು ; ಅಸ್ತವ್ಯಸ್ತವಾಗಿ ಚೆದರಿ ಬೀಳು:"ಪಡಲಿಡು(ಪಡಲ್ + ಇಡು)-ವಿಕೀರ್ಣಪತನೇ(ಚದರಿ ಹೋಗು)" (ಶಮಧಾ) ; ನಿಚ್ಚಂ ಧರಾಧೀಶರಂ ಪಡಲಿಟ್ಟಂತಿರೆ ಮಾಟ್ಟಿನೋವದೆ ಪಯಿಂಛಾಸಿರ್ವರಂ ಯುದ್ಧದೊಳ್ (ಪಂಪಭಾ.೧೦-೨೫) ; ಸುಡುವಿಡುವ ಜಲಧಿಯಂ ಕಡೆವ ಕಡೆಯೊಳ್ಮೂಡಿ ಘುಡುಘುಡಿಸಿ ಪಡೆಯ ಪಡಲಿಡೆ ಕೆಡಪುವುದ ತುಡುಕಿ ಪಿಡಿದೊಡನೆ ಪೊಸೆದು ಕೊರೆಳೆಡೆ ತೊಡೆದ ಹಂಪೆಯ ಮೃಡಂ ಬಿಡದೆ ಸಲಹುಗೆಮ್ಮ (ಹಚಕಾ. ೧-೨) ; ಪಚ್ಚೆಯ ಪಾಸಱ್ ಯೊಳ್ ಭಾಸ್ವಚ್ಚಾರುಮುರೀಚರಾಜಿ ಪಡಲಿಟ್ಟಾಗಳ್ ಬೆಚ್ಚರದಿಂ ಪುಟ ನೆಗೆದವೊಲಚ್ಚಿಗೆ ಸೊಬಗಿತ್ತುದಮರ್ದ ಕೆಂದೆನೆಗೊಂಳಲ್ (ಉಭಟ. ೩-೧೮) ; ಪಡಲಿಡೆ ತೇರ್ಗಳಂ ಪೊಡೆದು ಸಾರಥಿಯಂ ತಿವಿದು . . . ಇದಿರಾಂತ ತದ್ರಥಿಕರಂ ತಲೆಗೊಂಡನಖಂಡವಿಕ್ರಮಂ (ರಾಜಶೇ. ೬-೧೦೨). ೨. ನಾಶವಾಗು ; ಸಾಯು : ಪವನಜನಿಂದೆ ಕೌರವಕುಲಂ ಪಡಲಿಟ್ಟ ವೊಲಕ್ಕುಂ (ಪಂಪಭಾ. ೧೦-೬೩) ; ತನುಮಧ್ಯೆಯರ್ ಮನೋಜನೊಳಿದಿ

ರೊಡ್ಡಿ ಕಾದಿ ಪಡಲಿಟ್ಟವೊಲಿರ್ದರನೂನನಿದ್ರೆಯಿಂ (ದಶಕು. ೧೧-೧೧); ಕಡುಗುದುರೆ ಕೂರಾನೆಗಳ ದಳದೊಡನೆ ಕಾಳಯವನು ಜಗಳವನು ಕೊಡಲು ಪಡಲಿಟ್ಟವು ಮುರಾರಿಯ ಕೋಲ ಮುರಪುಟಕೆ (ಸಾಳ್ವಭೂ. ೨೩-೩೯); ಇಂತೀ ಸಪ್ತತಂತುವಿಂ ಪಂಚಪಾತಕಂಗಳುಮೊರ್ಮೊದಲೊಳೆ ಪಡಲಿಡುಗುಂ (ರಾಮಾಶ್ವ. ೧೪-೨೮). **ಪಡಲಿರಿಸು** = ಮಲಗುವಂತೆ ಮಾಡು; ಮಲಗಿಸು: ನಿಜಸತಿಯೊಡಲನೊಯ್ಯನೆ ತನ್ನ ಕರಯುಗದಿಂದ ತೆಗೆದೆತ್ತಿ ತೊಡೆಯ ಮಂಚದೊಳೊಯ್ಯನೊಯ್ಯನೆ ಪಡಲಿರಿಸಿದನು (ಅಜಚ. ೩-೪೧). **ಪಡಲ್ಗೆಡೆ** = ಚೆದರಿ ಹೋಗು; ಚೆಲ್ಲಾಪಿಲ್ಲಿಯಾಗಿ ಬೀಳು: ನಡುತುಂ ಮೊಗಮಂ ಪೇಚಕದೆಡೆಯಿಂದೊಂದೊಂಡೆ ನಾರಚಂ ನುಸುಳೆ ಪಡಲ್ಗೆಡೆದುದಿಭಮಾಲೆ ಜೀವಮುಮೊಡಲಿಂ ಬೇಱಾಲ್ಲ ದಂತೊರ್ಮೆಯೆ ಧುರದೊಳ್ (ಜಗವಿ. ೧೨-೨೦). **ಪಡಲ್ವಾಣ** = ಮಲಗುವ ಸ್ಥಳ: ಊರೂರ್ಗಳ್ದಪ್ಪದೆ ಮಾದಾರಂ ಬೆಳೆವತ್ತರಂ ಪಡಲ್ವಾಣ ಮನಾಹಾರಮು ಸಾರ್ವಡೆಯುಮನಿವಾರಿತಮರ್ತ್ಯೀವರೆಂದುಮಾ ನಾಡವರ್ಗಳ್ (ಧರ್ಮಾ. ೧೧-೮). **ಪಡಲ್ವಡಿಸು, ಪಡಲ್ಪಡಿಸು** = ೧. ಮಲಗುವಂತೆ ಮಾಡು; ಮಲಗಿಸು: ತುಡುಕಿ ತುಱುಂಬ ನೀಟ್ಟೆಲೆಗೆ ಸಿಲ್ಕಿದೆಯೆಂದಲರ್ವಾಸಿನೊಳ್ ಪಡಲ್ವಡಿಸಿ (ಚಕವಿ.೬-೨೬೨). ೨. ಚೆದರಿಸು; ಚೆಲ್ಲಾಪಿಲ್ಲಿಯಾಗುವಂತೆ ಮಾಡು; ದಿಕ್ಕುಗೆಡಿಸು; ದಿಕ್ಪಾಲಾಗಿಸು: ದೇವರನಡಿಗೆಜಗಿಸಿ ಸಕಳಾವನಿತಳದದಟರಂ ಪಡಲ್ವಡಿಸಿದ ಶೌರ್ಯಾಪಷ್ಟಂಭದೊಳಾನಿರೆ ಗೋವಳಿಗಂಗಗ್ರಪೂಜೆಯಂ ನೀನ್ ಕುಡುವಾ (ಪಂಪಭಾ. ೬-೪೭); ಹರಿ ಬಾಲಕನಾದೊಡಂ ಪಡಲ್ವಡಿಸನೆ ಗಂಧಸಿಂಧುರಘಟಾವಳಿಯಂ (ಪಂರಾಮಾ. ೪-೪೦); ಬಡಿವೆನಿಂದ್ರನ ತಡೆಗಡಿವೆನಗ್ನಿಯ ಪಡಲ್ವಡಿಪೆ [ಪಾಠಾಂ. ಲ್ವಡಿವೆನೆ]ಯಮನ ನೈರುತಿಯ ಕೊಡಹಿ ವರುಣನ ಕಂಗೆಡಿಸಿ ವಾಯವ್ಯನ ಪಿಡಿದುತಹೆನುವಹಿಲದಲಿ(ತ್ರಿಪುಸಾಂ ೧೧-೧೨೬); ಹರಿಮುಖ್ಯಾಮರರಂ ಪಡಲ್ವ[ಪಾಠಾಂ:ಲ್ವ]ಡಿಸಿ ಲೋಕಾನೀಕಮಂ ಪರ್ಬಿ. . . ದೇವಸತಿಯರ್ ಸೀಮಂತಸಿಂಧೂರರಾಗರಜಶ್ರೀಯನದೆಂತು ತಾಳ್ದಪರೊ (ರಾಜಶೇ. ೩-೩೯). ೩. ಹಾಳುಮಾಡು; ನಾಶಮಾಡು: ಖಳಕರ್ಮಾಷ್ಟಕಮಂ ಪಡಲ್ವಡಿಸಿ ಸಂಸಾರಾಬ್ಧಿಯಂ ದಾಂಟಿ ನಿಶ್ಚಳಸೌಖ್ಯಾಸ್ಪದಮಂ ತ್ವದೀಯಜನಕಂ ಕೈಕೊಂಡೊಡೀ ದೇವಸಂಕುಳಮಿಂದ್ರಂಬೆರಸಾಡಿದಪ್ಪುದು (ಆದಿಪು. ೧೬-೫೫); ತರಳವಿಶಾಲಲೋಚನದ ಬೆಳ್ಪು . . . ಕಣ್ಗೆವಂದಿರೆ ವಿಟರಂ ಪಡಲ್ವಡಿಸಲೆಂದು ಮನೋಜನ ದಾಟಿ ಬರ್ಪವೊಲ್ ಪರಮಜಿನೇಂದ್ರನೋಲಗಕೆ ಬರ್ಪ ವಿದಗ್ಧೆಯರೊಪ್ಪಿ ತೋಱುವರ್ (ಧರ್ಮಾಮೃ. ೫-೪೮); ಲಯಕಾಲಾಭೀಳಭೈರವಾಕಾರದಿಂ ಪಡೆಯೆಲ್ಲಮಂ ಪಡಲ್ವಡಿಸುತುಂ ವೀರರಾಕ್ಷಸಾಕಾರದಿಂ ಬಲಮೆಲ್ಲಮಂ ಭಯಂಗೊಳಿಸುತ್ತುಂ (ಶಾಂತೀಶ್ವ. ೮-೧೦೧ ಪ); ಪೊದಳ್ದು ಪೊಯ್ ಪುಲಿಯನಿಟ್ಟಯೊಳಾನೆಯನಿಟ್ಟು ನೀಂ ಪಡಲ್ವಡಿಸು (ವೆಂಕಮ. ೪-೧೨). ೪. ಕೆಡಹು; ಬೀಳಿಸು: ಭುಜಬಳಗಂಗಸೆರ್ಮ್ಮಾಡಿ ಬರ್ಮ್ಮದೇವ ಬಳವದ್ವೈರಿಗಳಂ ಪಡಲ್ವಡಿಸಿ ಗೆಲ್ದುಗ್ರಾಜಿಯೊಳು ಮಾಣ್ದನೇ (ಎಕ.VII, ೨೮ಮೊ. ೫೭-೩೬; 1115); ಅರಿ ಹರಿಣಂಗಳಂ ಗ(ಜ)ಜಾ ಬೆರ್ಚಿಸಿ ವೀರವಿರೋಧಿಗಂಧಸಿಂಧುರಗಣಮಂ ಪಡಲ್ವಡಿಸಿ . . . ವೀರಲಕ್ಷ್ಮಿಯೆಂಬುರುವನ ಸಿಂಹಿಯಂ ಸ್ವಭುಜಪಂಜರದೊಳ್ ಸೆಱೆಗೆಯ್ದುನಾ ನೃಪಂ (ಪುಷ್ಪಪು. ೯-೩೭). **ಪಡಲ್ವಡು, ಪಡಲ್ವಡು** = ೧. ಚೆಲ್ಲಾಪಿಲ್ಲಿಯಾಗು: ಬಲ್ವರಿಕೆಯೊಳರಿನೃಪರ ಪಡಲ್ವಡೆ ತಳ್ತಿಱಿದು ರಣದೊಳಾ ವಿಕ್ರಮಮಂ ಸೊಲ್ವಿನ ಮಾರ್ಜಿಸಿದಂ ನಾಲ್ವತ್ತೆರಡಱುಕೆಗಾಳೆಗಂಗಳೊಳೀತಂ (ಪಂಪಭಾ. ೧-೨೫); ತುರಗದಳಂ ಪಡಲ್ವಡೆ ಕಡಂಗಿ ಘಟಾವಳಿ ತಾಗಿ ಮತ್ತೆ ನಿತ್ತರಸದೆ ಭೀತಿಯಿಂ ಪೆಳಱಾ ಬಾಯಿವಿಡೆ . . . ಸಂಗರರಂಗಭೂಮಿಯೊಳ್ಪರಿದುದು ಭಾಪ್ಪು ಭಾಪ್ಪು ಮರ್ಪು ಭಾಪ್ಪೆನಲಂಜನ ಗಂಧವಾರಣಂ (ಎಕ. VIII, ಸಾಗರ. ೧೦೯-೨೫; 1042); ಕೇರ ಗೊಟ್ಟೆ ಕರಂಜದ ಬೀಜಂ . . . ಪೂಸುಗೆ ಬೆಚ್ಚನೆ ಮಾಡಿ ನೀರ್ ಸೋರುತಿರ್ಪ . . . ಪುಣ್ಗಳ್ ಕ(ಖ)ಜ್ಜಕಱಂಗಿದ ತರ್ದುಗಳ್ ನೀರಡಂ ಪವನಂಗೆ ಪಡಲ್ವಟ್ಟೋಡುವವೋಲ್ ಪರೆದೋಡುಗುಂ (ಅಶ್ವಶಾ. ೧೨-೨೨); ಆ ಪೊಟಲಂ ಬಳಸಿ ಬಲ್ಪೊಟೆ . . . ಪಡಲ್ವಡುವ ಪಲವಕ್ಕಿಗಳ ಮೊತ್ತಮಂ ತುತ್ತಲೆಂದು ಸಿಡಿವ ಸೀರ್ಮಿನ್ನಳಿಂ . . . ಅತಿಭೀಕರಮೆನಿಸಿಯಲಂಘನೀಯಮಾಗಿರ್ಪುದು (ಚಕವಂ. ೪-೧). ೨. ಹಾಳಾಗು; ಧ್ವಂಸಗೊಳ್ಳು: ಭೀಮನುಮೊತ್ತಿ ಕಿಟ್ಟು ಬೇರೊಡನೆ ಮಹೀಜಮೊಂದನಿಡೆಯುಂ ಬಿಡೆ ಪೊಯ್ಯುಯುಮಾ ಬನಂ ಪಡಲ್ವಡುತಿರೆ ಕಲ್ಲೋಳಂ ಮರದೊಳಂ ಬಡಿದೊಯ್ಯನೆ ಜೋಲ್ದ ದೈತ್ಯನಂ ಪಿಡಿದು . . . ಸೀಳ್ದು ಬೀಸಿದಂ (ಪಂಪಭಾ. ೩-೧೮); ಕುರುನೃಪಾನೀಕಂ ಪಡಲ್ವಟ್ಟು ಜೀರಿಗೆಯೊಕ್ಕಲ್ಗೆಣೆಯಾಗಿ ಬಿಟ್ಟಭಟರಿಂ ಬಿಟ್ಟಶ್ವದಿಂ ಬಿಟ್ಟ ದಂತಿಗಳಿಂದಂ ಜವನುಂಡು ಕಾಱುದಪೊಲಾಯ್ತ್ತುಂ ಕುರುಕ್ಷೇತ್ರದೊಳ್ (ಗದಾಯು. ೩-೨); ನೇರ್ದಿಕ್ಕೆ ಸರ್ವಾಂಗಮಂ ಶರಜಾಲಂ . . . ಕೂಡೆ ಬಿಲ್ವಡೆ ಪಡಲ್ವಟ್ಟತ್ತು ಸಂಗ್ರಾಮದೊಳ್ (ಪಂರಾಮಾ. ೧೩-೪೩); ನೆಟ್ಟನೆ ನಡೆಯುತ್ತೆ ಪಡಲ್ವಟ್ಟರ ಪೇರಟ್ಟಿಗಳನೆ ಮೆಟ್ಟುಗೆಗೆಯ್ದಾ ತಿಟ್ಟನೊಳಿಟ್ಟೇಣಗಳಂ ಕಟ್ಟುಱದಿಂದಿಟ್ಟರಡರ್ದರಟ್ಟಳೆವರೆಗಂ. (ಚಕವಿ. ೨-೧೦೯). ೩. ಕುಗ್ಗು; ಕುಸಿ; ಬಾಗು: ಕೆಡೆಮೆಟ್ಟೆ ತಜ್ಜನಾರ್ದನನದನೇಱ ಪಟ್ಟರೆ ಮಹೋರಗನರ್ವಿಸುವುರ್ವುಗೆಟ್ಟು ತೊಟ್ಟನೆ ಪೆಡೆಗಳ್ ಪಡಲ್ವಡಲೆ ಪೊಂಗಱಾದಿರ್ಪುದುಂ (ನೇಮಿಪು. ೬-೧೧೮); ತಳ್ತೈಕಿಲ ಭರದೆ ಪಡಲ್ವ[ಪಾಠಾಂ. ಲ್ವ]ಟ್ಟುಗೇಣಾಗಿ ಪಾಂಥರ್ತೊಡೆತೋಳ್ಗಳ್ಕೂಡೆ ಜಾನುಪ್ರಹಿತಶಿರರದೇನರ್ದರೋ ಶೀತಭೀತರ್ (ರಾಜಶೇ. ೯-೨೨). ೪. ಸುರಿ; ಚೆಲ್ಲು; ಸೋರು: ಮಿನುಪ ತಟಿದ್ವಿಲೋಚನದ ಶಕ್ರಶರಾಸನಶೃಂಗದಂಬುದಸ್ವನಬಹುಹುಂಕೃತೋನ್ನತಿಯ ಮೇಘಘಟೋಧ್ನಿಯನಿಂದ್ರಗೋಪನೊಯ್ಯನೆ ಕಱಿಯಲ್ಪಡಲ್ಪಡುವ ಪಾಲ್ಗಡಲ ಧಾರೆಯದೆಂಬ ಪಾಂಗಿನಿಂ ಘನತರಮಾದ ವೃಷ್ಟಿ ಸುರಿದತ್ತು ಧರಾತಳದೊಳ್ನಿರಂತರಂ (ಉದ್ಭಟ. ೯-೧೩೭). **ಪಡೆಪೊಯ್** = ಬೀಳುವಂತೆ ಹೊಡೆ; ಕೆಡೆಯುವಂತೆ ಏಟು ಕೊಡು: ಮುಳಿದಿದಿರಾದುದಾದೊಡಿದಿರಂ ಮುಳಿಸಿಂದಮನನ್ತಪಾಳನಾಗಳೆ ××ಕೆಯ್ಯುಮಾಗಳೆ ಕಡಂಗುಗುಂ . . . ಆಗಳೆ ಪಡೆಪೊಯ್ಯುಮಾಗಳೆ ಪೊರಳ್ಚುಗುಮಾಗಳೆ ಕೊಂದು ಕೂಗುಗು (ಕಾ. V, ೧೪-೭; 1099). [ದೇ.॥ತಮಿ. ಪಟು; ಮಲ. ತೆಲು. ಪಡು; ಕೊಡ. ಕೋಲಾ. ಪಡೆ]

ಪಡು₂, ಪಡವು₁, ಪಡು₂ (ನಾ). ೧. ವ್ಯವಸಾಯ ಮಾಡದೆ ಪಾಳುಬಿದ್ದ ಭೂಮಿ; ಸಾಗುವಳಿಯಿಲ್ಲದ ನೆಲ; ಬೀಳುನೆಲ: ಚಕ್ರವರ್ತಿಗಳ ಸಿಂಹಪೀಠವು, ಜಗದ್ಗುರುಪೀಠನ, ಕಲ್ಲಾಟಿಸಿದ ವೀರರಾಡಿದಾಡುಂಬೊಲವು, ಮಾಸತಿಯ ನಿಸದಿಗೆಯ ಭೂಮಿ, ಪಾಳ್, ಪಡು, ಬರಡು (ಉಯ್ಯಾಲೆ.೬೫-೧೫). 'ಪಡುಬೀಳು' ಪರಾ. ೨. (ಸೂರ್ಯನು) ಮುಳುಗುವ ದಿಕ್ಕು; ಪಶ್ಚಿಮದಿಕ್ಕು: ದಕ್ಷಿಣಸ್ಯಂದಿಶಿ ಪಡುವ ನೋಡಿ ಪೋದ ಪೇಱೊಜ್ಜಿಯೆ ಅನ್ತೆ ತುಟ್ಟಾಲ ಪೇಱೊಜ್ಜಿಯೆ ಕೆಂಧರೆಯ ಗುಮಿ ಪುಣಸೆಯೆ (ಎಕ. XVI, ೨ಪಟೂ. ೧೪೦-೬೮; ಸು. 900); ನುಡಿವಳಿಗೆ ನರನ ರಥಮಂ ಪಡುವೆಣ್ಣಾವುದುವರಂ ಸಿಡಿಲ್ವಿನಮೆಚ್ಚಟ್ಟುಡಿಯೆ ಭುಜಬಲದೆ ಹರಿಯುರವೆಡೆಯಂ ಬಿರಿಯೆಚ್ಚು ಮೆಱೆದನಳವಂ ಭೀಷ್ಮಂ (ಪಂಪಭಾ.೧೧-೨೦); ಪಡುವ ಮೊಗಮಾಗಿ ರೋಮಂ ಗಡ ತಲೆಯಂ ಪೆಕ್ಕಲೊಡನೆ ಸಿರಿಯುಂ ಪೋದಂ ತೊಡನಾರು ನುಡಿವರುಮಿಲ್ಲಡವಿಗೆ ಲಕ್ಷ್ಮಣನೆ ಪೋದನೆಂಬರ್ ಮೂಢರ್ (ಸಮಸ.ಅನುಬಂಧ I, ೩೮೩-೪೬); ಜ್ವರ-ಜಾಪತ್ತು ಎಂಬುದಕ್ಕೆ ಮೂಡು ಪಡು ಎಲ್ಲವೂ ಒಂದೇ (ಮರಸು. ೬೧). **ಪಡವು₁** : ೧. ಹಾಳು ಬೀಳ

ಪಡವು ಬಂಜೆ ಹಕ್ಕಲೊಕ್ಕಲೆಲ್ಲವೂ ವ್ಯಾಪ್ತವಾಯ್ತು ಹೂವ ಹೂವ ರಾಸಲೀಲೆಗೆಲ್ಲವೂ (ಸಮೀಗೀ. ೮೧-೧೧). **ಪಡು$_2$:** ೧. ನಿಡಿಲು ಹಕಲು ಹಡು ಸಹವಾಗಿ (ಸೌಇಎ. ೧೯೬೨, ಉಡುಸಿ. ೬೨೬-೨೪; 1364); ಗದ್ದೆ ಮನೆ ಹಕ್ಕಲು ಹಡು ಬೆಟ್ಟುಮೆಂದು ಮರ ಫಲ ನಿಧಿ ನಿಕ್ಷೇಪ ಜಲ ಪಾಶಾಣ ಅಕ್ಷೀಣ ಆಗಾಮಿಕೆ ಸಿದ್ಧ ಸಾಧ್ಯಯೇನುಳ್ಳಂಥಾದು ಸಹಿತ ವಾಗಿ . . . ಧಾರಾಪೂರ್ವ್ವಕವಾಗಿ ಮೂಲವನುಯೆಜದು ಕೊಟರು (ಸೌಇಇ. IX-II, ೪೪೯-೧೬; 1444). ೨. ಕೂಚಿಗೋಳನ ಹಿರಿಯ ಕೆಱೆಯ ಹಡುವ×××ರೆಯಾಗಿ ಬಡಗಣ ಮೂಡಣ ಕೋಣೆ ಅಂತು (ಸೌಇಇ.IX-I,೨೪೭-೪೪; 1147); ಹಡುವ ತೆಂಕಲಾಗಿ ಹಡುವ ಗೋಡಿಯೋಳ ನೂಱು ಕುಂಭ ಬೆದ್ದಲು ಸಹಿತ . . . ಶ್ರೀಕೇಶವದೇವರ್ಗ್ಗೆ ಧಾರಾಪೂರ್ವ್ವಕಂ ಮಾಡಿ ಹೆಗ್ಗಡೆಲಕುಮಯ್ಯಂ ಕೊಟ್ಟ ವ್ರಿತ್ತಿ (ಎಕ. V, ಹಾಸನ. ೬೬-೪೬; ಸು. 1170 ?).

ಪಡುವಣ್ = ಸೂರ್ಯನು ಮುಳುಗುವ ದಿಕ್ಕು; ಪಶ್ಚಿಮ ದಿಕ್ಕು : ಮೇರು ಪಡುವಣ್ಣ ಸೀತಾತೀರಂ ತೆಂಕಣ್ಣ ನೀಲಗಿರಿ ಬಡ ಗಣ್ಣ . . . ಸೀಮೆಯೆನಿಕ್ಕುಂ(ಸುಲ್ಲಿಪು.೨-೧೨). **ಪಡುವಣ, ಹಡುವಣ** = ೧. ಪಶ್ಚಿಮದಿಕ್ಕಿನ; ಪಶ್ಚಿಮಕ್ಕೆ ಇರುವ : ಹಳಮುಖ ನೆಂಬ ಪಾರ್ವಂ . . . ಬೆಟ್ಟದ ಪಡುವಣ[ಪಾಠಾಂ. ಪಕ್ಕಣ]ಕೆಯ್ಯನುಬೆಲ್ ಪೋಗುತ್ತಂ ತನ್ನ ಕೆಯ್ಯ ಸಾರೆ (ಪಡ್ಡಾರಾ. ೧೫೨-೧೭) ; ಅಬುಜಪ್ರತತಿ ಯುತ್ಸಹವಡಗೆ ಪಡುವಣ ಕಡಲೊಳಿನನಿಳಿದ (ಕುಮ್ಯಾಭೀ. ೧-೧೫) ; ಪಡುವಣ ಮನೆಗೆ ಮೂಡಣ ದೀಪ (ಗಾಪ) ; ಮಾಣಿಕ ಓಜರ ಮೈಲ ಬೋವಂಗೆ ಕಟ್ಟಿಯ ತೆಂಕಣೇರಿಯಡಿಯ ಕಾಲ ಹಡುವಣ ಕೂಡಲಿಂ ಮೂಡಲಾ ಗಳೆಯು×××ಸರ್ವನಮಸ್ಕಂ ಮಾಡಿ ಕೊಟ್ಟೆನ್ (ಎಕ. VIII, ಸಾಗರ. ೧೦೯-೬೬; 1042) ; ಸಾವದೇವಿಯ ಕೆಱೆಯ ಬಡಗಣ ಕೋಡಿಯ ಕಲ್ಲದೇವರ್ಗ್ಗೆ ಗೌಡುಗಳು ಬಿಟ್ಟ ಗದ್ದೆ ೫ ೫ ಯೂ ಕೆಱೆಯ ಹಡುವಣ ಹಿರಿಯ ಕೆಯಿ ಒಂದು (ಎಕ.XII, ಚಿಕ್ಕನಾ. ೧೭-೭೫; 1215?). ೨. ಪಶ್ಚಿಮದಿಕ್ಕು : ಕರಣಸಹಿತಮಾಗಿ ಹವಿರಕ್ಷತ ಗಂಧಪುಷ್ಪಾದಿಗಳ್ಗೆ ಕರ್ಮ್ಮಗಳೂರಾ ಪಡುವಣ (ಇಆ. XI, ೭೦-೧೮ ; ಸು. 567); ನೀಲಾ ಚಲಕ್ಕೆ ತೆಂಕಣದು ಬೆಡಂಗೊಡರಿಪ ವಕ್ಷಾರಾದ್ರಿಗೆ ಪಡುವಣದದು ಸುಜನನಿಲಯಮಪಗತವಿಲಯಂ (ಆದಿಪು. ೧-೫೬) ; ಪಡುವಣಕೆ ಸಂದ ರವಿ ಮೂಡಣದಿ ಎದ್ದ (ನೆಲಮು. ೫-೧೮). **ಪಡುವಣಂ** = ಪಶ್ಚಿಮಕ್ಕೆ ಸಂಬಂಧಿಸಿದವನು; ಪಶ್ಚಿಮದವನು : ಅಣ್ಪತ್ತಿದ ದಿಗ್ವಾಚಕಂ ಪುಲ್ಲಿಂಗಮಪ್ಪೆಡೆಯೊಳ್ ಅಕಾರಮಂ ಕೈಕೊಳ್ಳುಂ . . . ಮೂಡಣಂ, ತೆಂಕಣಂ, ಬಡಗಣಂ, ಪಡುವಣಂ (ಶಸಿದ.೧೧೧ಪ್ರಯೋ.); ಮೂಡಲಾದಂ ಪುಟ್ಟದಂ ಮೇಣ್ ಮೂಡಣಂ. ಏವಂ ತೆಂಕಣಂ, ಪಡುವಣಂ. . . . ಇತ್ತಣಂ (ಶಬ್ದಾನು. ೪೨೧ ಪ್ರಯೋ.). **ಪಡುವಣ ಗಿರಿ** = ಪಶ್ಚಿಮಬೆಟ್ಟ ; ಪಶ್ಚಿಮಾದ್ರಿ : ತರಣಿಯಿಷ್ಟವ ಬಿಟ್ಟು ಕ್ಷಮೆದಾಳಿ ಪಡುವಣ ಗಿರಿಯತ್ತ ಸಾರಿದನಂದು (ಜೀವಂಸಾಂ. ೨-೬೬). **ಪಡುವಣ ಗೊಂಟು, ಹಡುವಣ ಗೋಟು** = ಪಶ್ಚಿಮ ದಿಕ್ಕು ಪರುಣಃ = ಪಡುವಣ ಗೊಂಟ ನಾಳ್ದಂ (ಕಾಶಕೃ. ೨೦೮) ; ಅಲ್ಲಿಂ ಪಡುವಲ್ ತೆಂಕಣ ಹಡುವಣ ಗೋಟಿನ ಮೇರೆ ಬೆದವಟ್ಟಿಯ ಹೊಲವೆರೆಯ . . . ಹೊರೆಯಣ ಕವಿಲೆಯ ಕಲ್ (ಕಇಶ. ೧೨-೬೬-೫೬ ; 1170). **ಪಡುವಣ ಬಡಗಣ ದೇಶ** = ವಾಯವ್ಯದಿಕ್ಕಿನ ಪ್ರದೇಶ ; "ಪಶ್ಚಿಮೋತ್ತರ ದೇಶ" (ನಾಚರಾ. ೬). **ಪಡುವಣಿಗ** = ಪಶ್ಚಿಮದೇಶದವನು ; ಪಾಶ್ಚಾತ್ಯ; ಪಾಶ್ಚಿಮಾತ್ಯ : ನಮ್ಮ ಆಚಾರ್ಯರೊಡನೆ ಹೋಲಿಸಿದರೆ ಧರ್ಮದೃಷ್ಟಿ ಎರಡೂ ಕಡೆಗೆ ಇಲ್ಲದಿದ್ದರೂ ಪಡುವಣಿಗರಲ್ಲಿ ಎದ್ದು ಕಾಣುವ ಕೆಲವು ಸದ್ಗುಣಗಳನ್ನು ನಾವು ತಿಳಿದುಕೊಳ್ಳಬಹುದು (ಸಮಜೀ. ೧೫ ಪೀಠಿಕೆ).

ಪಡುವಣ್ಣಾ ಸೀಮೆ = ಪಶ್ಚಿಮದ ಸೀಮೆ : ಮನೆದಾಣಮುಂ ಪಲಗೆ ಗಣ್ವಂ ಮೊದಲಾಗೆ ಕಟನಿಯುಂ ಪಡಗಣ್ಣಾ ಸೀಮೆ ಪೆರಮುಱೆ ಪಡು ವಣ್ಣಾ ಸೀಮೆ ತಣ್ವಳ್ಳಿಗಾರ ಪಾಱು (ಎಇ. XXI, ೨೯-೧೨ ; ಸು. ೫ನೆಯ ಶತ). **ಪಡುವಲ್, ಪಡವಲು, ಪಡುವಲು, ಪಡೂಲು, ಹಡುವಲ್, ಹಡುವಲು** = ಪಶ್ಚಿಮ ದಿಕ್ಕು: "ಪ್ರತ್ಯಚ್ ಪ್ರತೀಚಿಯೆನೆ ಪಡುವಲ್ [ಪಾಠಾಂ. ಪಣ]" (ಮಂಗರಾ. ೧೭-೧೯) ; ಬಡಗಲ್ ಮೂಡಲ್ ತೆಂಕಲ್ ಪಡುವಲ್ ವಿಪ್ರಾದಿ ವರ್ಣಗೃಹದೊಳ್ ಮುನ್ನಂ ನಡುವುದು ಕಂಭಮ ನೊಂದಂ (ಲೋಕೋಪ. ೬-೨೬); ಪಡುವಲ್ ಚಂದ್ರನ ಬೆಳ್ಳಿಗಗೊಡರಿಸು ವರುಣೋದಯಾಂಶು ಮೂಡಲ್ ಕೈಕೊಂಡೆಡೆಯಣ ತಮುಮೊಪ್ಪಿದು ದಿರುಳುಡುಗಿದ ಕತ್ತಲೆಯ ಬಟಿಯ ಮಜೀಗಳಿವೆನಿಸಲ್ (ಅನಂಪು. ೮-೬೨) ; ಪಡವಲ ಗಡಿಯ ಕಡೆಯ ತರಣಿ ನೋಡಿ (ವಿವಾಕೃ. ೬೫-೬) ; ಯೀಶಾಂಸ್ಯ ಆದಿಹೊಳಲವಾಡಿಯ ಸೀಮೆ ದೇವರಾಯನ ಪುರದ ಚಕ ಯನ ಕೆಱೆಯ ಏರಿ ಮೊದಲಾಗಿ ಅಂಕವ್ವೆ ದೇವಿಯ ಪಾಲಪರಿಯಂತರ ಹಾಕಿದ ಸೀಮೆಗಲ್ಲಿಂದ ಪಡುವಲು ಸಲುಉದು(ಮೈಅರಿ. ೧೯೪೬, ೧೮-೧೨; 1488) ; ನಾಗರಸರು ಪುರದಿಂ ಪಡುವಲು ತೊಱೆಯ ಕೂಡಿದ ಹಳ್ಳ ನೀರುವರಿ ಏ ಮೇರೆಯಾಗಿ ಮೇಗೆ ಕಲು ಕಟಗೆಱೆ ಬಸವಗೋಡಿ ಬಡಗಲು ಮೊಸರಗುತ್ತಿ ಏ . . . ಕೊಟ್ಟ ಸಾಸನ (ಎಇ. XXI, ೨-೬೬ ; 1260) ; ಬಿದ್ದುದಗಣತಸೇನೆ ಪಡುವಲು ಹೊದ್ದಿದನು ರವಿ (ಕುಮ್ಯಾಭೀ. ೭-೪) ; ಬಪ್ಪಣನು ಪ್ರಭಾಚಂದ್ರರಲ್ಲಿಗೆ ಹೋಗಿ ಸೂರ್ಯನು ಪಡುವ ಲಲ್ಲಿ ಬಿದ್ದ ಮೇಲೆ ಆ ಇಬ್ಬರೂ ಅರಮನೆಯಿಂದ ನೇರವಾಗಿ ಬರುವುದನ್ನು ಹೇಳಿದನು (ಸಪಶಿ. ೨೦) ; ವಡ್ಡರಹಳ್ಳಿಯೊಳಗಾದ ಚತುಂಸೀಮದೊಳಗೆ ×××ರಿಡ ಪಡೂಲು ಹೊಯಸಣೇಶ್ವರದೇವರ್ಗ್ಗಂ ಬ್ರಮೇಶ್ವರ ದೇವರ್ಗಂ . . . ಧಾರಾಪೂರ್ವಕಂ ಮಾಡಿ ಬಿಟ್ಟ ದತ್ತಿ (ಎಕ. XVI, ಚಿಕ್ಕನಾ. ೫೪-೬ ; 1292) ; ಜಯದೇವಗಾವುಣ್ಡನೂರ ಮೂಡಲ್ ಬಿಟ್ಟ ಪುಣಾಸೆ ಹಡುವಲಾಲದ ಮರಂ ಮೇರೆ (ಸೌಇಇ. XI-II, ೧೨೮-೧೯ ; 1082); ಹಡುವಲಡ್ಡವಸುಗೆ ಮೇರೆ (ಎಇ. XIII, ೪೮-೬೮ ; 1112) ; ಅಲ್ಲಿಂದಂ ಹಡುವಲು ಸವಣನ ಕೆರೆಯ ತಾಯಿ ವಳ್ಳಂ ಮೇರೆ (ಎಕ. VII, ತಿಪಟೊ. ೫೬-೬೮ ; 1115) ; ಬುಕ್ಕಜನ ಕೆಱೆ ಯಿಂದ ಹಡುವಲು ಬೆದ್ದಲು ಮತ್ತರು ಮೂಱು ೩ (ಕಇ. IV, ೧೩-೬೩ ; ಸು. 1165). [<ಪಡು$_1$]

ಪಡುಂಕೆ 'ಪಡುಕೆ' ನೋ.

ಪಡುಕಿನಾರೆ (ನಾ). ಪಶ್ಚಿಮದ ದಂಡೆ,— ತೀರ : ಮೇಲುಬಾಳಿನ ಆಸೆ ಹೊತ್ತು ತನ್ನಿರಿ, ಅಣ್ಣ, ಅಸಾಧದಲಿ ಕೊಳ್ಳಿದೆವ್ವದಂದ, ಪಡು ಕಿನಾರೆಯ ಮುಚ್ಚಿಲಗಳಿಂದ (ಸಡಬಂ. ೬೬-೩).

[ಪಡು$_2$ + ಕಿನಾರೆ(<ಕಿನಾರ)]

ಪಡುಕು 'ಪಡಕು$_2$' ನೋ.

ಪಡುಕುಳಿ, ಹಡುಕುಳಿ (ನಾ). ಮಲಗುವುದೇ ಸ್ವಭಾವವಾಗಿರು ವುದು ; ಸೋಮಾರಿಯಾದುದು : 'ಪಡುಕುಳಿಯೆತ್ತು' ಪರಾ. **ಹಡುಕುಳಿ** : "ಗಲಿತಃ = ಹಡುಕುಳಿಯಾದ" (ನೀತಿಸಾ. ೯-೨೧).

[ಪಡು$_1$ + -ಕುಳಿ$_3$]

ಪಡುಕುಳಿಯೆತ್ತು (ನಾ). ಮಲಗುವ ಸ್ವಭಾವದ ಎತ್ತು ; ಸೋಮಾರಿಯಾದ ಗೂಳಿ : ಪಡುಕುಳಿಯೆತ್ತು ಕಂಟಿಸುವ ಬಂಟನದೇ ನುಮನೇನನೆಂದೊಡಂ ಮಿಡುಕದ ತೊತ್ತು (ಸೂಕ್ತಿಸು. ೧೮-೬೨).

[ಪಡುಕುಳಿ+ಎತ್ತು$_2$(<ಎಱ್ತು$_1$)]

ಪಡುಕೆ, ಪಡಿಕೆ$_2$, ಪಡುಂಕೆ, ಹಡಕೆ, ಹಡಕು, ಹಡಕೆ, ಹಡಿಂಕೆ, ಹಡಿಕೆ$_1$, ಹಡಿಕು, ಹಡಿಕೆ$_1$, ಹಡುಕು, ಹಡುಕೆ (ನಾ).

೧. ಕೆಟ್ಟ ವಾಸನೆ ; ದುರ್ಗಂಧ : ಮೊಡೆನಾರ್ಪ ಕೊಟ್ಟೆದಗುರ್ವಿನ ಪಡುಕೆಗಳ್ (ಪರ್ಧಾಮಾ. ೫-೩೮), ದೆಸೆಗೆಲ್ಲಮಂ ಪಡುಕೆಯಿನಿಡಿದಿಡುತೀವಿದಂತಿರ್ದ ನಾರಕರ ಮೆಯ್ಯ ಪೂತಿಗಂಧಂಗಳುಂ (ಪರ್ಧಪು.೧೧-೪೭ಎ). ೨. ಅಮೇಧ್ಯ ; ಮಲ : ಎನಿತೊಳವು ಕೊಟ್ಟೆವ ಪಡುಕೆಗಳನಿತಱ ದುರ್ಗಂಧಮವರ ಮೆಯ್ಯ ನಿಸರ್ಗಾತ್ಯನುಪಮಘಾತಿಯ ಪಟುಗಟ್ಟಿದ ನಾತಮುಂ ಪೋಲವವರದೇಂ ಕಿಸುಗುಳರೋ (ಶಾಂತಿಪು. ೬-೧೦೦) ; ಸಮಾಧಿಗುಪ್ತಯತಿಪತಿಗಳಧ್ಯಯನಂ ನಿನಗನಿಷ್ಟಮಾದೊಡದಂ ಮಾಣಸಲೆಂದು ನಾಯ ಪಡುಕೆಯನಿಕ್ಕಿದೊಡವರ್ನಿನ್ನ ಪಾಪೋಪಚಯಮನಱಿದು ಬಗ್ಗಿಸಿದೊಡೆ ನೀಂ ಬೆರ್ಚ ಬೇಗಮದನೆಟ್ಟೆದು ಕಳೆದು (ಚಾವುಂಪು. ೧೮). ೩. ಹೊಲಸು ; ಕೊಳಕು ; ಹೇಸಿಗೆ : ಒಡಲೆಲ್ಲ ಒಡೆದಾಗ ಕೀವು ರಕುತಗಳು ಬಿಡದೆ ಸುರಿವವು ದುರ್ಗಂಧ ಕಡುಬೇಗದಿಂ ಮನೆಯೆಲ್ಲವು ತುಂಬಲು ಪಡುಕೆಯ ನಾತಕೆ ಪೇಸಿ (ಜ್ಞಾನಚಿ. ೩೭-೨೪). **ಪಡಿಕೆ₂** : ೧. ಚಂಡಾಲರ ಕಯ್ಯೊಳ್ ಬೀಟ್ಟ, ತೋಲ್ಪಂಜರದ ಪಡಿಕೆಯೊಳ್ ನಿಲ್ವ ದುರ್ವಾರದುಃಖೋತ್ಕರಮೆಲ್ಲಂ ನೋಡಲೆನ್ನಿಂದ್ರಿಯನಿವಹದ ದೋಷಂದಲ್ (ಕಾದಂಉ. ೭೫೨). ೨. ಪ್ರಾಣಮುಮೊಳ್ಗುಣಂಗಳುಮವೊರ್ಮೆಯೆ ಪೋದೊಡೆ ನಾಯ ಬಾಯ್ಗೆ ತಾಂ ಮಾಣದೆ ಬಂದೊಡಲ್ ಪಡಿ[ಪಾಠಾಂ. ಡು]ಕೆಯೆಂಬರಿದೇಂ ತನು ಕಷ್ಟಮಾದುದೋ (ಜೀವಸಂ. ೧೩೦-೨೪) ; ತೊಡೆಯೊಳಿಳಿದು ಬರುವ ಪಡಿಕೆಗೆ ಕೈಯ ಕಡುಲೋಭದಿಂದಿಕ್ಕಿಕ್ಕಿ (ಜ್ಞಾನಚಿ. ೧೪-೭೪). ೩. ಒಡಲಪ್ಪೊಡಶುಚಿ ನಿಲ್ಲದು ಪಡಿಕೆಕರಂ ಜಂತಿನಾಗರಂ ಪೆರ್ವೇಲಿರ್ಪೆಡೆ ಕ್ರಿಮಿಯ ರಾಶಿ ಮೂತ್ರದ ಮಡಕೆಯದಂ ನಂಬಿ ಚಪಳರೇಕೆಯೊ ಕಿಡುವರ್ (ಧರ್ಮಾಮೃ. ೬-೧೩೯). ೪. ಕಳಪೆಯಾದ ವಸ್ತು ; ತುಚ್ಛವಾದ ಪದಾರ್ಥ ; ಕಸ : ಪಡುಮಾವೆಂದೆಂದಡಮಿಯ ಪಡಿಕೆ[ಪಾಠಾಂ.ಪಡುಕೆ (ಕ)]ಗಳಂ ತಂ(ತಿಂ)ದು ತಿಂದು ಜನ್ನದೊಳಾಡಂ ಕಡಿದಿಕ್ಕಿ ಮತ್ತೆ ಸಗ್ಗಂಬಡೆಯಲ್ಕಾಟಿಸುವ ಪಾರ್ವರೇಂ ಗಾವಿಲರೋ (ಚಾವುಂಪು.೨೪೦). **ಪಡುಂಕೆ** : ೧. ಎಱಗವು ಮಕ್ಷಿಕಂ ಕುಸುಮಧೂಪಜವಾದಿ ಸುಗಂಧವಸ್ತುವಿಂಗೆಱಗುವವೋಲ್ ಮೇಧ್ಯದ ಸುಗಂಧದ ಕೆಟ್ಟ ಪಡುಂಕೆಯತ್ತಲ್ (ಜೀವಸಂ. ಪರಿ. ೨೩೮). **ಹಡಕಿ** : ೧. ಹಡಕಿಯ ಕೊಳಕಿನ ತೊಗಲ ಹೊದಿಕೆಯ ಹೊಱೆಯೊಳಗೆ ಅಱಸಿ ಕಂಡಿಹೆನೆಂಬ ಕುಱುಕರ ನೋಡಾ (ವೋಳಿಮಾ. ೩೩-೧೩೯). ೫. ತುಚ್ಛವಾದುದು : ಒಡೆಯ ಲಿಂಗಾರ್ಪಿತದೊಳು ಭಿಕ್ಷವೆನ್ನೆ ನಡೆಯಯ್ಯ ಮುಂದಕ್ಕೆಂಬುವೆ ಹಡಕಿ ಮನವೆ (ಮೈಲಾರ. ೧೯೭-೪). **ಹಡಕು** : ೨. ಹಡಕಿಗೆ[ಪಾಠಾಂ. ಡಿಕೆಗೆ] ಮೆಚ್ಚದ ಸೊಣಗ ಅಮೃತದ ಸವಿಯ ಬಲ್ಲುದೆ (ಬಸವ.೩೧೩). **ಹಡಕೆ** : ೧. ಸತ್ತ ಹೆಣನ ಮುಟ್ಟಿ ಮನೆಗಳೊಳಗೆ ಹೂಳಿ ಮತ್ತದರ ಹಡಕೆಯನ್ನು ನಿತ್ಯದಿ ಕುಡಿದು ಹೇಸದೆ ಕೂಳ ತಿಂಬುದು ಎತ್ತಲಿರ್ಪುದು ಹೊಲಗೇರಿ (ಭಕ್ತಿಬ. ೮೭). **ಹಡಿಂಕೆ** : ೧. ಜವ್ವಾದಿಯಾದಿ ಸುಗಂಧವಸ್ತುಗಳಂ ನೋಡದೆಯವಕ್ಕೆರಗದೆ ಅಮೇಧ್ಯದ ದುರ್ಗಂಧ ಕೆಟ್ಟ ಹಡಿಂಕೆಯತ್ತಲೆರಗುವವಾತೆರದಿ (ಧರ್ಮಾಮೃ. ೧೦-೧೯೯). **ಹಡಿಕಿ₁** : ೧. "ಪೂತಿಃ = ಹಡಿಕಿ" (ಕಾಶಕ್ಯ. ೨೪೩). **ಹಡಿಕು** : ೧. 'ಹಡಿಕುನಾರು' ಪರಾ. **ಹಡಿಕೆ₁** : ೧. ಅಮೇಧ್ಯದ ಹಡಿಕೆ [ಪಾಠಾಂ. ಮಡಕೆ] ಮೂತ್ರದ ಕುಡಿಕೆ ಎಲುವಿನ ತಡಿಕೆ ಕೀವಿನ ಹಡಿಕೆ (ಮಹಾದೇ. ಬ. ೪೬-೧೦೮) ; ಹಸಿದೊಡಲು ತಱೆದ ತಲೆ ಕೀಣವಲ್ಲುಂ ಹಡಿಕೆಯೆಸೆವ ಬಾಯುಟ್ಟ ತಟ್ಟುಂ (ರಾಘಚಿ. ೧೩-೪೬) ; ಅವನ ಬಾಯಿಂದ ಉಗುತ್ತಿದ್ದ ಸಾರಾಯಿಯ ವಾಸನೆ ಬೆರೆತ ಉಸಿರಗಟ್ಟು ಹಡಿಕೆಯನ್ನೂ ತುಟಿ ಪಿಟಕ್ಕೆನ್ನದೆ ಸಹಿಸಿಕೊಂಡಿದ್ದನು (ಸಲೀಮ. ೨೦೬). ೨. ಪಶುವಿನ ಹಡಿ[ಪಾಠಾಂ. ಪಡು]ಕೆಯ ನಾತಕ್ಕಲಸದೆ ಪರಿದೆಯ್ದಲಾಗಲೊಯ್ಯನೆ ನಡೆದಂಗಸಮಸುಖಾಸ್ಪದ ಮಕ್ಕುಂ (ಸಮಪ. ೯-೬೪) ; ಹಂದಿ ಭಕ್ತನಾದರೆ ಹಡಿಕೆಯ ತಿಂಬುದ ಮಾಣ್ಬುದೆ (ಬಸಹಿ. ೩೨-೮೬) ; ಹಡಿಕೆಯ ತಾಣಮೆಯ್ದೆ ಕೊಟ್ಟೆನಿತ್ತರ ಕೀವಿನ ಭಾಜನಂ . . . ತನುವೆನ್ನದಿದೆಂದು ವಿಮೋಚಿಸಂ ಜಡಂ (ಬಾಧಪು. ೫-೩೦) ; ಬಲುಮೆಯಾಗಿಯೆ ಭ್ರಮೆಯೊಳೊಂದಿದ ಹೊಲೆ ಮನಕೆ ಹೋಲಿಕೆಯ ಪೇಳುವೆ ಕೊಳೆತು ನಾಱುವ ಹಡಿಕೆಗಳಸುವ ಹಳೆಯ ನಾಯಂತೆ (ಅಮೃತ. ೨-೮೨) ; ಹಂದಿ ಹಡಿಕೆಯ ನೆನೆಸಿ ಹಾಳಗೇರಿಗೆ ಹೋಗುವಂತೆ ಪ್ರಪಂಚನತ್ತ ಓಡಾಡುತಿರ್ಪುವಯ್ಯ ಏನ್ನ ದುರ್ಗುಣಂಗಳು (ಅಖಂಡೇ. ೧೭-೧೭). ೩. ಮನುಜರಾ ಶುಂಭತ್ವದಿಂ ಹಡಿಕೆಯಾದಂಗಮಂ ನಾಡೆ ಸಿಂಗರಿಸುತಿರ್ಪರಕಟ (ವೀರಶೈಪು. ೪-೨೧-೫೬). ೬. ಹೊಲಸು ವ್ಯಕ್ತಿ ; ಕೊಳಕ ; ಶ್ವಪಚ : ಧಾತುಗಾಣಿಸಿ ಕೊಳದ ಮಜಡುಗಳೋತು ನೋಡಲ್ಬಹಳಗೊಜಡುಗಳಾತುರದ ಬಾಯ್ಬಡಿತೆಯರು ಹಡಿಕೆಯರು ಮೂರ್ತಿಗಳೆ (ದೇವಪು. ೬-೧೭). **ಹಡುಕು** : ೨. ಕೋಳಿಯ ತಂದು ಹಂಜರವ ಕೂಡಿ ಅಮೃತಾನ್ನವನಿಕ್ಕಿ ಸಲಹಿದಡೆ ಅದು ತಾನೆ ಮತ್ತೆ ತಿಂಬ ಹಡುಕಿಂಗೆ ಚಿತ್ತವನಿಕ್ಕುವದ ಮಾಣ್ಬುದೆ (ಬಸಹಿ. ೩೨-೮೬). ೩. 'ಹಡುಕುನಾತ' ಪರಾ. **ಹಡುಕೆ** : ೨. ಹ[ಪಾಠಾಂ. ಪ]ಡುಕೆಯಕೆಲದೊಳ್ಗೋಹಳೆಯೆಡೆಯೊಳ್ ಭೋರೆಂದು ಸಕಳವಿಪ್ರಜನಂಗಳ್ ಬಿಡದೋದುವರೆಂತೋ ಶುಚಿಗೆಡೆಯಾಯ್ತೂ ವೇದಮುಪ್ಪಡಂತೋದುವರೇ (ಸಮಪ. ೧೧-೧೫ ಅಡವಿಯೊಳಾಡು ಮೇವಡೆ ಹಿಡಿದೊಳ್ಳಿದವಪ್ಪುವೆಲ್ಲಮಂ ತಿನ್ನದೆ ತಾಂ ಬಡಮಱಯೊಂದಂ ತಂದಡೆ ಹಡುಕೆಗೆ ನಾಯಿ ಬಪ್ಪ ತೆಱದಿ ದೇವತೆ ಬರ್ಪಳು (ಶ್ರಾವಕಾ. ೧೦೬-೧೨).

[ದೇ.॥ ತುಳು. ಪಡಿಕೆ, ಪಟಕೆ]

ಪಡುಕೆನಾಱು, ಪಡಿಕೆನಾಱು, ಹಡಿಕುನಾರು, ಹಡಿಕೆನಾಱು(ಕ್ರಿ). ದುರ್ಗಂಧವನ್ನು ಬೀರು ; ದುರ್ವಾಸನೆಯನ್ನು ಹೊರಸೂಸು : ಎಲ್ಲಿನೊಳ್ ಮಾಡಿಱ ಪಸಿಯ ತೊವಲೊಳ್ ಪೊದಯಿಸಿದ ಪಡುಕೆನಾರ್ಪ ಗುಡಿಸಿಟ್ಟೊಳಿರಿಸಿದೊಡೆ (ಜೀವಸಂ. ೫೬-೩೬ ಎ) ; ಯೋನಿಗಳಧೋವಕ್ತ್ರಂಗಳಾಗಿರ್ಕುಮಾವಗಮತ್ಯಂತಜುಗುಪ್ಸೆಯಿಂ ಪಡುಕೆನಾಱುತ್ತುಂ ಕ್ರಿಮಿಶ್ರೇಣಿಯಿಂ (ಶಾಂತೀಶ್ವ. ೯-೭೫) ; ಉಂಬರಕುಷ್ಠಂ ಮೂಡಿದೊಡೆ . . . ಬಾತು ಕೀತೊಡದೆಲ್ಲಂ [ಪಿಂಬ]ರಿದು ಪಡುಕೆನಾಱುತ್ತುಂ ಬೇಗಂ ಪುಳುಂದು ಕೊಟ್ಟೆದು ನಮೆಯುತ್ತಿರ್ದಳ್ (ಬಂಹರಿ. ೧೩-೩೪). **ಪಡಿಕೆನಾಱು** : ಪುಣ್ಣಳ ಬಾಯಿಂ ಪಡಿಕೆನಾರ್ಪ ರಸಿಗೆಗಳೊಸರ್ಗುಂ (ಪರ್ಧಪು. ೧೧-೩೮). **ಹಡಿಕುನಾರು** : ಕುರೂಪಿಯ ಮೂರ್ಖನ ಹಡಿಕುನಾರುವನ ಕೀಳು ಜಾತಿಯವನ ರೋಗದವನ ಇಂತಿರ್ಪನ ಹೆಂಡರು . . . ಆಯಾ ಯತ್ನದಿಂ ಸಾಧ್ಯರಹರು (ಕಾಮಶಾ.೨೫೩). **ಹಡಿಕೆನಾಱು** : ಹರನ ದೇಗುಲದೊಳಗೆನಿತು ದಿನವಿರುತಲಿರ್ದೊಡೆ ಹಡಿಕೆನಾಱುತ ನರರಿಗಾರಿಗೆ ಸಾರ್ದುಮುಟ್ಟಲು ಬಾರದೆಂದೆನುತ(ಬಸವ.೩೨-೫೪) ; ಅಡಗುನೆತ್ತರ ಹೊಯಲ್ಲಿಂ ಮಿಡುಕುವಾತ್ಮಸಸಿವಹದಿಂ ಹಡಿಕೆನಾಱುವೆ ಮಿಡುಳಿಂದಾ (ಅನುಶ್ರೇ.೪೩); ಪಿಡಿದ ಶೂಲದಿ ಪೆಣ ಹಡಿಕೆನಾಱುವ ತಲೆ ಸುಡುಗಾಡಿನೊಳಗಿಹ ಬೂದಿ ಬಿಡದೆ ಅಂಗದಿ ಧರಿಸಿದ ಶಿವಯೆನ್ನಯ ಒಡೆಯನೆಂಬುದು ನಿನಗೇಕೊ (ಅಬ್ಬಲೂ. ೪-೨೩). [ಪಡುಕೆ + ನಾಱು₁]

ಪಡುಕೋಣೆ (ನಾ). ಮಲಗುವ ಕೋಣೆ : ಪಡುಕೋಣೆಯಲ್ಲಿದ್ದ ಮಂಜರಿಗೆ ಕಾಮಾಕ್ಷಿ ಬಂದಿರುವ ವಿಚಾರ ತಿಳಿಯಿತು (ಪದ್ಮಸ. ೧೬೫).

[ಪಡು₁ + ಕೋಣೆ₂(<ಕೋಣ್)]

ಪಡುಗ 'ಪಡಿಗ' ನೋ.

ಪಡುಗಡಲ್, ಪಡುಗಡಲು (ನಾ). ಪಶ್ಚಿಮದಿಕ್ಕಿನ ಸಮುದ್ರ : ಸೂರ್ಯನು ಮುಳುಗುವ ದಿಕ್ಕಿನ ಸಾಗರ : ಇಟಾದಂ ಕುಂದದೆ ಪಡುಗಡಲೊಳೊಪ್ಪುವಂಬುಜಮಿತ್ರಂ (ಉದ್ಭಟ.೫-೧೨) ; ಗಗನದೆ ಬರ್ಪ

ನಾರದನ ಕಾಣುತ ಸೂರ್ಯಭಗವಾನು ತನಗೊಬ್ಬರೊಡನೆ ಜಗಳವ ಗಂಟಿಕ್ಕದೆ ಬಿಡನೆಂದಂಜಿ ಹುಗಲೊಡರ್ಬಾದ ಪಡುಗಡಲ (ನೋಹಿತ. ೧೧-೧೬) ; ಇಂತೀ ಯೊಡವರ್ ಪಡುಗಡಲ ಮಡುವಿನೆಡೆಯೊಳಿಡದ ಕಡಲೊಡೆಯನ ಬೀಡಿನ ಪಡಿನೆಲಂತೆ ಕಡುಬೆಡಂಗುವಡೆದ ದ್ವಾರಾವತೀಪುರಮಂ ಪರಿಪಾಲಿಸುತ್ತುಮಿರ್ದು (ಚಕವಿ. ೧-೮೯). **ಪಡುಗಡಲು :** ದಿನನಾಯಕನಾಕ್ಷಣ ಪಡುಗಡಲೆಡೆಯ ಸಾರಿದನು (ಕಂಸವಿ. ೧೦-೮) ; ಪಡುಗಡಲಿನ ತೆರೆ ಮುದ್ದಾಡುವ ಕರೆ, ಹೊಳೆಹಾಲಿಳಿಯುವ ಭಟ್ಟದೆಡೆ (ಹೊಂಗಳು. ೧೧-೮). [ಪಡು$_1$ + ಕಡಲ್$_2$]

ಪಡುಗಡಲು 'ಪಡುಗಡಲ್' ನೋ.

ಪಡುಗಡೆ (ನಾ). ಪಶ್ಚಿಮ ದೆಸೆ ; ಪಡುವಣ ಭಾಗ : ರವಿಕೀರ್ತಿನೃಪಂ ಪಡುಗಡೆ ಗತತೇಜಂಬಡೆದ ಪಗಲ ಬಲ್ಲಹನಂದದೊಳರ್ದಂ (ಜಯಕಾ. ೬-೩೫) ; ಪಡುಗಡೆಯ ಕೋಂಟೆಯಂ ಕೊಂಡರವರೆಂದು ಸುರರುಲಿಯೆ ಖತಿಯಿಂದಲಾಖಂಡಲಂ ಬಿಟ್ಟ ಸೂಟಯೊಳ್ಬೆದಿದಂ ನೆರೆದ ಮಂತ್ರಿಗಳ ಗಡಣದಿಂದೆ (ಚಿಬಪು. ೨೪-೨೯) ; ಪಡುಗಡೆಗೆಯ್ದಿ ಮೋದಿ ಕೊಡಗಂಗುಡುಗಾಡಿಸಿ . . . ಬಲ್ಲಿದನೀ ಪರಿ ಚಲ್ಲವಾಡಿದಂ (ಚಕವಿ. ೨-೬೮).

[ಪಡು$_2$ + ಕಡೆ$_3$]

ಪಡುಗಣೆವಜ್ಜೆ? (ನಾ). ಕುದುರೆಯ ಒಂದು ಬಗೆಯ ನಡಗೆ(?) : ಧೈರ್ಯವೆಂದೆನಿಪ ಚಮ್ಮಟಿಗೆವಿಡಿದು ಹರುಷದಿಂ ಪಜ್ಜೆಯ ತುರಂಗಮವನಡರಿ ಚಿತ್ರರದ ಪಡುಗಣೆವಜ್ಜೆ ದೂವ್ವಾಳಿ ಪೇರೆಯಿದ ಪರಿಯ ಕಾಣಿಸಿ ನಭೋಮಂಡಲವನ್ನೆದಿದನು ಚೇರಮಮಹೀಪಾಲನು(ಸೌಂದಪು.೧೯-೧೮).

[?]

ಪಡುಗಲ್ (ನಾ). ಒಂದು ಸ್ಥಳದ ಹೆಸರು : ನೊಟಮ್ಬವಾಡಿಯೊಳಯ್ಯಪದೇವ[ನ] ಮಗನಣ್ಣಿಗನ್ . . . ಪಡುಗಲ್ಲ ಕಾದುತಿರೆ (ಸೌಇಇ. IX-i, ೫೭-೮ ; 922) ; ನೊಟಂಬವಾಡಿಯಯ್ಯಪ್ಪದೇವನ ಮಗನಪ್ಪಣ್ಣಿಗನ್ ಪರಿಬನ್ದು ಪಡುಗಲ್ಲ ಮುತ್ತಿದೊಡೆ (ಸೌಇಇ. IX-i, ೫೮-೯ ; 922). [ಪಡು$_2$ + ಕಲ್$_3$]

ಪಡುಗಾಳಿ (ನಾ). ಪಶ್ಚಿಮದಿಕ್ಕಿನಿಂದ ಬೀಸುವ ಗಾಳಿ ; ಪಡುವಣ ಗಾಳಿ : ಪಡುಗಾಳಿ ಹಾಡಿತು ಗಿಡಬಳ್ಳಿ ಆಡಿತು ಹೊಲ-ಹುಲ್ಲು ನೋಡಿತು ಲೀಲೆಯೊಳೆ. (ಸಬೀಗೀ. ೨೧-೨೮೨). [ಪಡು$_2$+ಗಾಳಿ$_1$]

ಪಡುಗು (ನಾ). ತೋಪು : ಕುಪ್ಪರಸನುವಿಟ್ಟು ಸತ್ತಿಯೂರ ಮಹಾದೇವರ್ಗ್ಗೆ ಬನದ ಭಳಾರಿಯ ಬಡಗಣ ದೆಸೆಯಲುಂ ಎರಡು ಖಣ್ಡುಗವೆದೆಗಟ್ಟೆಯು ಮಾವಿನ ಪಡುಗಿನ ಬಡಗಣ ದೆಸೆಯಲು ಪನ್ನಿರ್ಮ್ಮತ್ತರ್ಬೆದ್ದಲೆಯು . . . ಧಾರಾಪೂರ್ವ್ವಕಂ ಮಾಡಿ ಬಿಟ್ಟರ್ (ಸೌಇಇ. IX-i, ೯೯-೨೧ ; 1044). [?]

ಪಡುಗೆಂಪು(ನಾ). ಸೂರ್ಯನು ಮುಳುಗುವಾಗ ಪಶ್ಚಿಮದಿಕ್ಕಿನಲ್ಲಿ ಉಂಟಾಗುವ ಕೆಂಪುಬಣ್ಣ ; ಸಂಜೆಗೆಂಪು : ಪಜ್ಜಳಿಸೆ ಪಡುಗೆಂಪು ಪಕ್ಕಿ ಪಕ್ಕೆಗೆ ಸಾರೆ ಜಜ್ಜರಿಯೆ ಜಕ್ಕವಕ್ಕಿಯು ಜೋಡು . . . ಪಶ್ಚಿಮಾಂಬುಧಿಯ ಸಡುಮಡುವ ಹೊಕ್ಕನಾ ಪಗಲೊಡೆಯನು(ಸಮ್ಯಕ್ಕಾ. ೧-೩೭) ; ಪಡುಗೆಂಪು ಚಂದ್ರಗಾವಿಯ ಸೀರೆ ಕೆಂಬಲ್ಲ ಗಡಣ ಕೆಂದಾರೆಗಳಾಗೆ ಮಡದಿಯೊರ್ವಳು ಬಾಗಿಲಲಿ ಸಂಜೆವೆಣ್ಣನ ಕಡುಚಲುವಿಕೆಯ ಬೀಱುದಳು (ಕಂಸವಿ. ೬-೧೦೦) ; ರವಿ ಮುಳುಗಿ, ಮೂಡಣ ದೆಸೆಗೆ ಪಡುಗೆಂಪು ಪಸರಿಸುತ್ತಿರೆ (ತ್ರೈರಾಮಾ. ೮೨೩-೩೦೭). [ಪಡು$_2$ + ಕೆಂಪು$_1$]

ಪಡುಗೇರಿ (ನಾ). ಪಶ್ಚಿಮಭಾಗದಲ್ಲಿರುವ ಕೇರಿ,—ಬೀದಿ : ಇರ್ಪತ್ತು ಮತ್ತರ್ಕೈಯ್ಯ[ಂ] ಸರ್ವ್ವಬಾಧಾಪರಿಹಾರಮಾಗೆ ದಯೆಗೆಯ್ಯೆ ಪಡೆದು . . . ಪಡುಗೇರಿಯ ಮನೆಯುಮಂ ಧರ್ಮ್ಮದೊಳೆ ಯೋಜಿಸುವಂ (ಸೌಇಇ.XI-i,೭೩-೩೫ ; ಸು. 1040) ; ಆ ನಟಗುನ್ದದೊಳ್ಪಡುಗೇರಿಯ ವಿಪ್ರಸಮೂಹ× × ×[ನೋ]ದಿಗಳ್ಮನುಚರಿತ್ರರನಂಗಸಮಾನಗಾತ್ರರುರ್ವ್ವೀನುತ× × ×(ಕಇ.V, ೧೧-೧೪; 1078). [ಪಡು$_2$ + ಕೇರಿ]

ಪಡುಗೊಲೆ (ನಾ). ಕ್ರೂರವಾದ ಕೊಲೆ ; ಕಡುಗೊಲೆ : ಪಡುಗೊಲೆಯನೇನೆಂಬೆನೀ ನೆರವಿ ನೋಡುತಿರೆ ಕೊಡಲಿಯಿಂದೀಯೊಂಡಿ ತಲೆಯನರಿದಂ ದೇವ (ಇಜಿಶಾ. ದೇ. ೧೦೮-೨೫) ; ಪ[ಸಾಹಾಂ.ಕ]ಡುಗೊಲೆಯ ಕಾಲನುಸಿಲಂ ನುಡಿವರ್ ತೆಂಗಾಳಿಯೆಂದು ಪಾಪಿಗಳಕಟಾಜಿಡಿಗಳ್ ಬೆಂಬತ್ತಿರ್ಸೀಮುಡಿಗನೊಳುಂ ಕೆಳದಿ ಲೇಸನಜಸಿದರುಂಟೆ (ತ್ರಿಪುವಿ. ೬-೧೦೮).

[ಪಡು? + ಕೊಲೆ$_2$]

ಪಡುಚ (ನಾ). ಚಿಕ್ಕವನು; ಹುಡುಗ ; ಬಾಲಕ : ಕೋಪವಿನ್ನೇತಕೆ ಮಗನೆ ನಿನ್ನೊಳು ಕಾದಲಾಪರೆ ಸುರುಸರೋರಗರು ಈ ಪಡುಚನ ಕೆಯ್ಯ ಕಾರ್ಯವೇನೆಂಬುದ ನೀ ಪರಿಕಿಸಿ ಕೇಳ್ದಱಿಯ (ದೋಹಿತ.೧೨-೧೨).

[←ತೆಲು. ಪಡುಚು]

ಪಡುತರ್ (ಕ್ರಿ). (ಸೂರ್ಯನು) ಮುಳುಗು ; ಅಸ್ತವಾಗು : ತಡದಿರಬಾರದು ನೇಸಱ್ ಪಡುತಂದುದು ಪೊಟ್ಟು ಪೋಯ್ತು ಪೋದಪೆಂ (ಕಾದಂಪೂ. ೮೬೯). [ಪಡು$_1$ + ತರ್]

ಪಡುದಳಿ (ನಾ). ಪ್ರತಿಯಾದ ಹಗ್ಗ,—ಸಂಕೋಲೆ : ಮೌನವೆಂದೆನಿಸುವ ಘುಸ್ತಯಿದೆ ಸಹಿತಾಗಿ ಜ್ಞಾನ ಪಡುದಳೆಯ ಬಿಗಿಯಣ್ಣಾ (ಚಿದಾಕೋ. ೫೪-೮). [<ಪಡಿ$_3$ + ತಳೆ$_3$]

ಪಡುದೆಸೆ (ನಾ). ಪಶ್ಚಿಮದಿಕ್ಕು ; ಪಡುವಲು : ಅನಿತಱೊಳಳಿಯೆ ಪಗಲ್ ಪಡುದೆಸೆಯೊಳ್ ಮಿನುಗುವ ಕೆಂಪು ಮುಗಿವ ನೂಱೆಸಳ್ವು . . . ಕರಂ ಕಣ್ಗೊಳಿಸಿದುದು (ಜಯಕಾ.೧೧-೫೮); ವರುಣನರಮನೆಯ ನವಪದ್ಮರಾಗರತ್ನಮಯದೀಪ್ರಕಲಶಮಿದೆಂಬಂತಿರೆ ಪಡುದೆಸೆಯೊಳ್ದಿವ ಸೇಶ್ವರಬಿಂಬಂ ತೋರಿದತ್ತು ಸಂಧ್ಯಾರುಣತಂ (ಮರಾಚ. ೮-೫೦) ; ಪಡುದೆಸೆಯಲ್ಲಿ ಒಂದು ದ್ವೀಪವಿತ್ತು (ಮಣಿಸ. ೯೭).

ಪಡುದೆಸೆಗೊಡೆಯ=ಪಶ್ಚಿಮದಿಕ್ಕಿನ ಅಧಿಪತಿ ; ಅಷ್ಟದಿಕ್ಪಾಲಕರಲ್ಲಿ ಒಬ್ಬ ; ವರುಣ : "ನೇಣ್ಗಯ್ಯ ಮುನ್ನೀರೆಱೆಯ ಕರ ಮೆಸೆವ ನೆಗಟ್ಟೀರ ಪಡು[ಸಾಹಾಂ. ಪಡುವ]ದೆಸೆಗೊಡೆಯನೆನೆ ವರುಣ ನಾಮಂ" (ಶಬ್ದಮಂ. ೧೪). [ಪಡು$_2$ + ದೆಸೆ]

ಪಡುನೇಸರ್ 'ಪಡುನೇಸಱ್' ನೋ.

ಪಡುನೇಸಱ್, ಪಡುನೇಸರ್(ನಾ). ೧. ಮುಳುಗುವ ಸೂರ್ಯ; ಅಸ್ತನಾಗುವ ಸೂರ್ಯ : "ಸಿಂಗೊಟ್ಟಿಂದು ಪಡುನೇಸಱ್" (ಕಕಸಾ. ೫೭-೨೫೩) ; ಅರುಣಾಂಶುಗಳಿಂ ಪಶ್ಚಿಮಗಿರಿಕೂಟಮನರ್ಕಪೂರ್ವಪಲ್ಲವಚಯದಿಂ ನೆರಪಿ ಪಡುನೇಸಱೆಸೆದುದು ಶರನಿಧಿನಾಥಂಗೆ ಸಿಡಿದ ಮಾಣಿಕಗೊಡೆವೋಲ್ (ಜಗವಿ. ೪-೧೧೧) ; ಮಡುಗಟ್ಟಿ ಸುರಿವ ನೆತ್ತರ ಕಡಲೊಳ್ ತೇಂಕಾಡುತಿರ್ಪ ರಥದೊಳ್ ಗಾಯಂಬಡೆದೆನಸುಂ ಬಟಲುತಿರ್ದಂ ಪಡುನೇಸಱ ತೆಱದೆ ರಾಜಹಂಸನರೇಂದ್ರಂ (ದಶಕು. ೨-೩೬). ೨. ಸೂರ್ಯಾಸ್ತವಾಗುವ ಸಮಯ ; ಸಂಜೆ : ಉರಿವರಿವ ಬಿಸಿಲ್ ಸುಡೆ ಸೀಕರಿನೋದುವಿವೆನಿಸಿ ತುಂಬಿಯುಂ ಕೋಗಿಲೆಯುಂ ಮರಗಳೆಲೆವಜ್ಜೆಗಳೊಳ್ ಮೆಯ್ಗರೆದುವು ಪಡುನೇಸಱಸ್ಪಿನಂ ಬೇಸಗೆಯೊಳ್(ಪಂರಾಮಾ. ೬-೮೯) ; ಬಿಱೆದುಗುವ ಬಾಷ್ಪವಾರಿಯಿನೆಂಜಂಕೆಗಳ್ ನಾಂದು ಮಗುಟಿ ವಿರಹಾನಳನಿಂ ನೆಱೆ ಬಱವಾಗಿರೆ ಪಡುನೇಸಱೊಳರ್ದುಮಗಲ್ದು ಚಕ್ರವಾಕದ್ವಂದ್ವಂ (ಚಂದ್ರಪು.೮-೬). **ಪಡುನೇಸರ್:** ೧. ಪಡುನೇಸರೆಸೆವ ಆ ಪಡುವೆಟ್ಟದಂಚಿನಲಿ ಕಾಣಲ್ಲಿ ಶೋಭಿಸಿದೆ ಶುಭಚಿಹ್ನೆ (ತ್ರೈರಾಮಾ. ೮೦೬-೧೬೮). [ಪಡು$_1$ + ನೇಸಱ್]

ಪಡುಪಾಟಲು 'ಪಡಿಪಾಟಲು' ನೋ.

ಪಡುಪಾಟು 'ಪಡಿಪಾಡು' ನೋ.

ಪಡುಪಾಟ್ಲು 'ಪಡಿಪಾಟಲು' ನೋ.

ಪಡುಪಾಡು 'ಪಡಿಪಾಡು' ನೋ.

ಪಡುಬೀಳು, ಪಡಬೀಳು, ಹಡುಬೀಳು (ಕ್ರಿ). ವ್ಯವಸಾಯ ಮಾಡದೆ ಪಾಳುಬೀಳು ; ಸಾಗುವಳಿಯಿಲ್ಲದೆ ಇರು; ಬೀಳಾಗು: ಇಷ್ಟೊಂದು ಒಳ್ಳೆಯ ಭೂಮಿಗಳು ಪಡುಬೀಳಬೇಕೆ ! (ಚಿಗುಕ. ೮೨) ; ಅಲ್ಪಸ್ವಲ್ಪ ಮಳೆಯಿಂದ ಅವರಿಗೆ ಬೆಳೆಯುವುದು ಸಾಧ್ಯವಾಗುತ್ತಿರಲಿಲ್ಲ. ಅವರ ಭೂಮಿಗಳೆಲ್ಲ ಪಡುಬೀಳುತ್ತಿದ್ದವು (ಮಣ್ಣಿಮ. ೯೯). **ಪಡಬೀಳು:** ಒಳಗಡೆಯಲ್ಲಿ ಬಹು ಜನರು ಭೂಮಿಯನ್ನು ಬೇಡುತ್ತಿದ್ದಾಗ್ಯೂ ಪಡಬಿದ್ದ ಭೂಮಿಯಲ್ಲಿ ಅಡವಿಯನ್ನು ಬೆಳಿಸುವ ಉದ್ದೇಶವಿರುವ ಕಾರಣ ಬೇಡುವವರಿಗೆ ಭೂಮಿಯನ್ನು ಬಹುತರ ಕೊಟ್ಟಿಲ್ಲ (ಕಭಾಗೆ. ೩೯೫) ; ಮೇಲ್ವಿಚಾರಕರ ಮತ್ತು ಗುಮಾಸ್ತರ ಅಸಡ್ಡೆಯಿಂದ ಬಹಳ ಭೂಮಿ ಪಡಬಿದ್ದಿತು (ಪ್ರೇಮಾಶ್ರ. ೧೨೧) : ಅಪೀಲಿನ ನಿರ್ಣಯ ಹೊರಬೀಳುವವರೆಗೆ ತೋಟವು ಕಬಜೆ ತಕರಾರಿನ ಕಾರಣದಿಂದ ಪಡಬಿದ್ದಿತು (ಮನೆಬೆ. ೧೦). **ಹಡುಬೀಳು:** ಸಾಗುಮಾಡದೆ ಹಡುಬಿದ್ದ ಭೂಮಿ ಅದು (ದೇವಹೆಂ. ೫೯). 'ಹಡುಬೀಳಿಸು' ಪರಾ. [ಪಡು$_2$ + ಬೀಳು$_1$(<ಬೀಟ್$^{ಟ್}_1$)]

ಪಡುಭೂಮಿ, ಪಡಭೂಮಿ, ಹಡುಭೂಮಿ (ನಾ). ವ್ಯವಸಾಯವಿಲ್ಲದೆ ಪಾಳುಬಿದ್ದ ಭೂಮಿ; ಸಾಗುವಳಿ ಮಾಡದ ನೆಲ ; ಬೀಳು : ಸರಕಾರದ ಪಡುಭೂಮಿಯನ್ನು ನಾಲ್ಕೈದು ಎಕರೆಗಳ ತುಂಡುಗಳನ್ನಾಗಿ ಮಾಡಿ ಕೃಷಿಮಾಡಲು ಬಯಸುವ, ಹೊಸಬರಿಗೆ ಹಂಚುವ ನಿರ್ಣಯ ಮಾಡಿದರು (ಗೊಂಡಾರ.೨೦೮). **ಪಡಭೂಮಿ:** ಇಪ್ಪತ್ತಯ್ದು ಬಿಘೆ ಪಡಭೂಮಿ ತೆಗೆದುಕೊಂಡರೆ ಎರಡು ಎರಡೂವರೆ ಸಾವಿರದಲ್ಲಿ ಬಗೆಹರಿಯುತ್ತದೆ (ಪ್ರೇಮಾಶ್ರ. ೯೩). **ಹಡುಭೂಮಿ:** ಗಂಡು ಮಕ್ಕಳಾದರೆ ಸರಕಾರದಿಂದ ಹಡುಭೂಮಿಯನ್ನು ದರಖಾಸ್ತು ಪಡೆದು ಅಲ್ಲಿ ವ್ಯವಹಾರ ಮಾಡುವ ತಮ್ಮ ಗುರಿ . . . ಬಗ್ಗೆ ವಿವರವಾಗಿ ಹೇಳುತ್ತಲೇ ಇದ್ದರು (ದೇವಹೆಂ. ೧೨೨) [ಪಡು$_2$ + ಭೂಮಿ]

ಪಡುಮಲೆ (ನಾ). ಪಶ್ಚಿಮದಲ್ಲಿರುವ ಬೆಟ್ಟ ; ಪಶ್ಚಿಮಾದ್ರಿ ; ಪಡುವೆಟ್ಟ : ಪೊಳ್ತು ತನ್ನ ಪಾದಾಗ್ರಮಂ ಪಡುಮಲೆಯ ನೆತ್ತಿಯೊಳ್ ಮಡಗಿ ದಿನಮಣಿಯಾಗುತಿರ್ದತ್ತು (ಶ್ರೀರಾಮಾ. ೮೨೩-೩೧೭).

[ಪಡು$_2$ + ಮಲೆ$_5$]

ಪಡುಮಾವು (ನಾ). ಒಂದು ಬಗೆಯ ಮಾವು (?) : ಪಡುಮಾವೆಂದೆಂದಡವಿಯ ಪಡುಕೆ(ಕಿ)ಗಳಂ ತಂ(ತಿಂ)ದು ತಿಂದು ಜನ್ನದೊಳಾಡಂ ಕಡಿದಿಕ್ಕಿ ಮತ್ತೆ ಸಗ್ಗಂಬಡೆಯಲ್ಕಾಟಸುವ ಪಾರ್ವರೇಂ ಗಾವಿಲರೋ (ಚಾವುಂಪು. ೨೪೦). [ಪಡು? + ಮಾವು]

ಪಡುಮಿಗ (ನಾ). (ಬೇಟೆಯಲ್ಲಿ ಸಿಕ್ಕಿ) ಬೀಳುವ ಪ್ರಾಣಿ. 'ಪಡುಮಿಗಂಗುಡು' ಪರಾ. [ಪಡು$_1$ + ಮಿಗ]

ಪಡುಮಿಗಂಗುಡು (ಕ್ರಿ). ಪ್ರಾಣಿಯು ತಾನಾಗಿ ಬೇಟೆಯಲ್ಲಿ ಸಿಕ್ಕಿಕೊಳ್ಳು : ಒಂದೊಂದೆಡೆಯ ಮುಳ್ಗಿಡುಗಳೊಳ್ ತೊಡರ್ದ ಪೆಯ್ನವಿರ್ ಪಱಿಗುಮೆಂದು ಮಿಡುಕಲೊಲ್ಲದಲ್ಲಿಯೆ ನಿಂದು ಬಿಲ್ಲರ್ಗೆ ತಮ್ಮಿಂ ತಾಮೆ ಪಡುಮಿಗಂಗುಡುವ ಚಮರೀಮೃಗಂಗಳುಂ (ಚಂದ್ರಪು. ೫-೭೫ ಪ). [ಪಡುಮಿಗ + ಕುಡು$_1$(<ಕೊಡು$_1$)]

ಪಡುವಣ್ 'ಪಡು$_2$' ಪರಾ.

ಪಡುವಣ 'ಪಡು$_2$' ಪರಾ.

ಪಡುವಣಿಗೆ (ನಾ). ಸಮಾನವಾದುದು ; ಸದೃಶವಾದುದು ; ಸಾಟಿಯಾದುದು (?) : ಮೊಡೆನಾರ್ಪ ಕೊಟ್ಟಿದಗುರ್ವಿನ ಪಡುಕೆಗಳೆನೇಳವವನಿತು ಪೂತಂಗಳೆದೊಂದೊಡಲೊಡನಿರ್ದಾ ನಾತದ ಪಡುವಣಿಗೆಗೆ ಬಾರವಿಂತು ಕಿಸುಗುಳರೊಳರೇ (ಪರ್ಧಮಾ. ೫-೩೮). "ಆವಾಸಸ್ಥಾನ ; ನೆಲೆ (?)"(ಪರ್ಧಮಾ. ಕೋಶ). [<ಪಡಿ$_3$?+-ವಣಿಗೆ]

ಪಡುವನೆ (ನಾ). ಮಲಗುವ ಮನೆ : ಪಡುವನೆಯೊಳಿರ್ಪವರ್ ಮಲಗಿರ್ಪರೆಂದೆಣಿಸಿ ಸಡಗರದಿ ಬರೆ ಬಿದ್ದಿನಂ ಕಣ್ಣ ತೆರೆದಂ (ಕಾಲೂರ.೬೮-೧೧೯).

[ಪಡು$_1$ + ಮನೆ]

ಪಡುವಯ್ 'ಪಡುವಾಯ್' ನೋ.

ಪಡುವಲ 'ಪಡಲ$_1$' ನೋ.

ಪಡುವಳಿಸು, ಪಡವಳಿಸು (ಕ್ರಿ). (?) : ಪಡುವಳಿಸಿ ಕಸ್ತೂರಿ ಬಾವನ್ನ ಕರ್ದಮದೊಳಿಡಿ ತಳಿರ ಕಕ್ಕಡಗೆ ಬಡಿ ವನಜಕೋರಕದ ಕಡುಸಬಳಮೊನೆಯೊಳಗೆ ಇಱಿಯೆಂಬ ಮೋಹನಾಂಗಿಯರಿಗಿದಿರಾಂತು (ಪ್ರಭುಪು. ೪-೧೧೩). **ಪಡವಳಿಸು :** ದಡದಡಿಸಿದರುಮಿಂತು ಸತಿಪತಿಸಮುಚ್ಚಯದ ದೃಢವ್ರತ ಸಮಾಧಿಗಳ ನಿರ್ಮೂಲನಂಗೆಯ್ಯೆ ಪಡವಳಿಸೆ ಬಾಲವೃದ್ಧಂ ಜತಿಗಳಂ ಕೂಡಿ ತೊಡಗಿದಿರು ಪಡುಪೆಗ್ನಮಂ (ಪ್ರಭುಪು. ೪-೩೭). [? + -ಇಸು$_3$]

ಪಡುವಾಯ್, ಪಡುವಯ್ (ಗು). ಪಶ್ಚಿಮ ದಿಕ್ಕಿನ ; ಪಡುವಣದ : ಶ್ರೀವುರದಾ ದುಣ್ಡುಗಾಮುಣ್ಡರಾ ತೋಣ್ಟದಾ ಪಡುವಾಯೊನ್ದು ತೋಣ್ಟ ಶ್ರೀವುರದಾ ವಯಲುಳ್ಳಮ್ಮರ್ಗ್ಗಟ್ಟನಲ್ಲಿ ಇರ್ಕ್ಕಣ್ಡುಗಂ ಕಟನಿ . . . ಬೆದೆ ಅದವು (ಎಕ. IV, ನಾಗಮಂ. ೮೫-೬೭ ; 776) ; ಪೆರ್ವಟ್ಟಾಯ ತೆಂಕಾಯೊಟ್ಟಿಎ ಪಡುವಾಯ್ವೊಟ್ವೀಲಿಯೆ ಸನ್ದು ಪೆರ್ಗ್ಗೊಲ್ಲಿಯುಳ್ಳೂಡಿತ್ತು . . . ಸೀಮೆ (ಎಕ. IV, ಎಡತೊ. ೬೦-೭೫ ; ಸು. 890) ; ಮುತ್ತರಸರ್ಮ್ಮನೆಯಿಂ ಪಡುವಾಯ್ಮನೆಯುಂ ಮುತ್ತರಸರ ಊರುಂ ಇಱ್ದು (ಎಕ. III, ತಿರುಮ. ೧೧೫-೪ ; ಸು. 900). **ಪಡುವಯ್ :** ತಸ್ಯ ಸೀಮೆ ಮೂಡಾಯ್ಪೆರ್ವ್ವಳ್ಳಮೆ ಪೊಟವಾಡಿಯ ಸೀಮೆಯುಳ್ ಕೂಡಿತ್ತು ಪಡುವಯ್ ಆಳರಿವದಿಯ್ಯೆರ್ಬ್ಬಳ್ಳಗಾಯ್ನೋಡಿ ನಡದುದು (ಎಕ. IV, ಹೆಗ್ಗಡ. ೪-೭ ; ಸು. 750) ; ತೆಱ್ಕ್ಕೆ ಪೆರ್ಮ್ಮಿದ್ದಿಲ್ ಪೆಟ್ನನ್ದಿಯ ಕಿಱುನನ್ದಿಯ ಸೊಡಲಿಯದಾ ಮೂಱುಂ ಕುಡಿದಾ ಒಟ್ಟೆ ಪಡುವಯ್ನಡದು ಪಡಸೆ ಪಡುವಯಂಕೋಲೆ ಎವಡಗೈ ನಡದು ಮಾಡದಿ ಮೂಡೈಯ್ನೋಕ್ಕಿ ದಿಣ್ಡೆ (ಎಕ.X (S), ಚಿಕ್ಕಬ.೬೬-೧೮ ; ಸು. 850); ಮೂಡೈದೆಸೆ ಎಲವೆ ಕಿಱುವಱ್ಗರ್ಕ್ಕೆಱ್ ಎ ತೆಂಕಾ ಅದರುಳ್ನಡುಗಲ್ಲೆ ಮುಚ್ಚನ್ದಿನ್ನಡುಗಲ್ಲೆ ಪಡುವಯಾಲೆ ತಾಯನ್ದೆ ಕೆಱ್ಯೆ (ಎಕ. X (S), ಚಿಕ್ಕಬ. ೧೦೬-೬೪ ; 850). 'ತೆಂಕಾಯ್' ಪರಾ.

[ಪಡು$_2$ + -ಆಯ್$_2$]

ಪಡುವೆಟ್ಟ, ಪಡುವೆಟ್ಟು (ನಾ). ಪಶ್ಚಿಮದ ಬೆಟ್ಟ ; ಪಡುವಣಗಿರಿ ; ಪಶ್ಚಿಮಾದ್ರಿ ; ಅಸ್ತಾಚಲ : ಚಿತ್ರಲೇಖೆಯ ಮಾತ ಮನ್ನಿಸುವೊಡೆ ಕಂಜಮಿತ್ರ ತನ್ನಯ ವರರಥವ ಸತ್ರಾಣಿಸಿಕೊಂಡು ತೆರಳಿದ ವಿಘಳಿಗೆ ಮಾತ್ರದಿ ಪಡುವೆಟ್ಟದೆಡೆಗೆ (ಮೋಹತ. ೨೭-೨೦) ; ಪಡುನೇಸರೆಸೆವ ಆ ಪಡುವೆಟ್ಟದಂಚಿನಲಿ ಕಾಣಲ್ಲಿ ತೋಭಿಸಿದೆ ಶುಭಚಿಹ್ನೆ (ಶ್ರೀರಾಮಾ. ೮೦೬-೧೬೮). **ಪಡುವೆಟ್ಟು :** "ಪಡುವೆಟ್ಟೆಂದು ಪಶ್ಚಿಮಾಚಲಂ"(ಕಶಸಾ. ೪೯-೫೧) ; ಆಱ್ಯಮಟ್ಟ ಖಳರ ಖಂಡಿಸಿ ಬಿಸಿರಕುತ ಕೆಂದೊಱ್ಯೊಳು ತೊಳೆದ ಚಕ್ರವನು ಒಱ್ಯೊಳು ಕೃಷ್ಣ ಬೈತಿಡುವಂತೆ ಪಡುವೆಟ್ಟ ಮಱ್ಗೊಂಡು ರವಿ ಮುಳುಗಿದನು (ಮೋಹತ. ೧೫-೩) ; ಪಡುವೆಟ್ಟನೆಡೆಯೊಳೊಪ್ಪುವ ಕಡಲೊಡೆಯನ ಮಡದಿ ತೇಧ ಸಿಂದೂರದ ಕೆಂಪಿಡಿದೆಸೆವ ಸಾಣಿಗೆಯಿದನೆ ಬೆಡಂಗುವಡೆದಿರ್ದುದಸ್ತ ಭಾಸ್ಕರಬಿಂಬಂ (ರಾಜಶೇ.೧೧-೩).

[ಪಡು$_2$ + ಬೆಟ್ಟ]

ಪಡುವೆಟ್ಟು 'ಪಡುವೆಟ್ಟ' ನೋ.

ಪಡುಶಿಲೆ (ನಾ). ಹಾಸುಗಲ್ಲು ; ಅಗಲವಾದ ಶಿಲೆ,— ಶಿಲಾ ಪಟ್ಟಕ : ಈ ಮುತ್ತಿನ ಪಡುಶಿಲೆಯೊಳ್ ದೇವ ಕುಳ್ಳಿರ್ಪುದು (ಕಾದಂಉ. ೧೪೭). [ಪಡು$_1$ + ಶಿಲೆ]

ಪಡುಸಾಲೆ 'ಪಡಸಾಲೆ' ನೋ.

ಪಡುಸಿಲೆ (ನಾ). – ಪಡುಶಿಲೆ : ಪಳಿಕಿನ ಪಾಸಱೆಗೆತ್ತು ಪಾಱು ಬಂದೆಱಗಿದ ಕಮಳಮನಗೆಯಿಡುವಂತೆ ಕಾಲನಿಟ್ಟಗಿದು ನೆಗೆದು ಕೆಲದ ಮುತ್ತಿನ ಪಡುಸಿಲೆ[ಪಾಶಾಂ. ಸೆಳೆ]ಗಳೊಳ್ ಮುಡಿಯ ಮುಗುಳನೀಡಾಡಿಯವತರಿಸುವ ವಿದಗ್ಧವಿದ್ಯಾಧರಿಯರುಮಂ (ಲೀಲಾವ. ೯–೫೨ ಪ).

[ಪಡು₁+ಸಿಲೆ₁]

ಪಡೆ₁, ಹಡೆ₁ (ಕ್ರಿ). ೧. ಹೊಂದು ; ತಾಳು : ಪಡೆದೊಂ ಶ್ರೀಪುರುಷಯ್ಯಲಾಮ್ಮು ಮೊದಲೊಳ್ ಕಲ್ಯಾಡನ್ (ಎಕ. III, ಮೈಸೂರು. ೬–೬ ; ಸು. 750) ; ವರ್ಣಕಂ ಕತೆಯೊಳೊಡಂಬಡಂ ಪಡೆಯೆ ಪೇಟಱ್ದೊಡೆ ಪಂಪನೆ ಪೇಟ್ಗುಮೆಂದು ಪಂಡಿತರೆ ತಗುಳ್ದು ಬಿಚ್ಚಟಾಸೆ ಪೇಟಲೊಡರ್ಚಿದೆನೀ ಪ್ರಬಂಧಮಂ (ಪಂಪಭಾ. ೧–೧೧); ಮೋಕ್ಷದ ಕಡೆಯಿಲ್ಲದ ಪರಮಸುಖಮನೀಗಳೆ ಪಡೆವೆಂ (ಸುಕುಮಾ. ೧೧–೮೧) ; ನಿಜದಿಂ ವರ್ಣಂಗಳ ಕಾರಾದ್ಯಾಪೂರ್ಣತೆಯಂ ಪಡೆವುವಾ ಳಕಾರಂ ಬರೆಗಂ (ಶಮಪ. ೪) ; ಬಳಿಕ ಪರಮಾನಂದವನು ಪಡೆದಾ ಮಹಿಪನರವಿಂದನಾಭನ ಭಜಿಸಿದನು ನಿಜಭಾವಶುದ್ಧಿಯಲಿ (ತೊರಂಗಾ. ೧–೪–೧೩) ; ಹಗೆಗೊಲೆಗೆ ತಾಯಿಯಾಶೀರ್ವಾದಮಂ ಪಡೆಯೆ ಪುರವನದ ನಡುವಿರ್ದ ಪರ್ಣಶಾಲೆಗೆ ಜವದಿರಯಗತಿಯಿನೈತಂದನಾ ಇಂದ್ರಜತನೂಜಂ (ಚಿತ್ರಾಂಗ. ೭೪–೨೦೪೫). ೨. ಗಳಿಸು ; ಸಂಪಾದಿಸು ; ದೊರಕಿಸಿಕೊಳ್ಳು : "ಪಡೆ–ಉಪಾರ್ಜನೇ, ಬಲೇ ಚ (ಸೈನ್ಯ)" (ಶಮಧಾ) ; ಉದಿತ ಶ್ರೀಕಟ್ಟಪ್ಪಿನುಳ್ಳೇರಿಸಿಗಿರಿಶಿಲೆ ಮೇಲ್ನೋನ್ತು ತನ್ದೇಹಮಿಕ್ಕಿ ನಿರವದ್ಯನ್ನೇಱಿ ಸ್ವರ್ಗ್ಗಾಂಶಿವನಿಲೆ ಪಡೆದಾನ್ಸಾಧುಗಳ್ಪೂಜ್ಯಮಾನನಾ(ಎಕ. II, ೮೪–೨ ; ಸು.700); ಅರ್ಥರಾಶಿಯಂ ಪಡೆವವರೆಲ್ಲಮೋಗದಿಸದೀವೊಡಮಾಜಿಯೊಳುರ್ಚಿ ಕೈದುವಂ ಸಿಡಿವವರೆಲ್ಲಮಣ್ಮುವೊಡನಿಾ ಯುಗಮೇಕೆ ಕನಿಷ್ಟಮಪ್ಪುದೋ (ಕಾವ್ಯಸಾ. ೪೨೩ ಶಾದ್ರಕ) ; ನಿನಗಮೆನಗಂ ಸಮಭಾಗಂ ಪುಣ್ಯಮೆಂದುಸಿರೆ ನೀಮೇಕೆನಗಿಂದು ಸಮಭಾಗಮಿಾಯದಾದಿರೀ ಪುಣ್ಯಮನಾನಿಂದುನಿಱಿಸಿ ಪಡೆವೆಂ [ಪಾಶಾಂ. ಕೈಕೊಳ್ವೆಂ] ನೀಂ ನಾಳೆ ನಿಱಿಸೆಂದು ನುಡಿದು (ಪಡ್ಡಾರಾ. ೮೦–೬) ; ತೊಡರೆ ನೃಪನಾಪ್ತಪರಿಜನಮೊಡವರೆ ಜಿನಪತಿಗೆ ಪೂಜೆಯಂ ಮಾಡಿ ಮಗುಟ್ಟಡಿಗೆಱಗಲೊಡಂ ಪಡೆದಂ ಗಡಮುವಧಿಯನಧಿಕಭಕ್ತರೇನಂ ಪಡೆಯರ್ (ಆದಿಪು. ೬–೨೯) ; ಭಕ್ತರೊಲವ ಪಡೆವೆನೆ ಭಕ್ತಿಯ ಪಥವನಱಿವೆನು (ಬಸವ. ೨೯೧) ; ನಾನೀಗ ಸಿದ್ಧರಸದೊಳುಲೋಹವನದ್ದಿದಂತಾತ್ಮಸಿದ್ಧಿಯ ಪಡೆವೆನಿನ್ನೇನು (ಭರಜ. ೧–೨). ೩. (ದಾನ ಮೊದಲಾದುವನ್ನು) ತೆಗೆದುಕೊಳ್ಳು ; ಸ್ವೀಕರಿಸು ; ಸ್ವೀಕಾರಮಾಡು : ಚನ್ನಿಯಮ್ಮರಸರ್ದೇವರ್ಗ್ಗೆ ಮಣ್ಣುಮ್ ಕೊಟ್ಟ ಸ್ಥಱ್ಗಳ್ನಾಡಂ ಪಿಟ್ಟಗೆಱೆ ಪನ್ನೆರಡು ಗಾಮುಣ್ಡ ಪ್ರಜೆರ್ಸಕ್ಷಿವೋಪ ಕಾವಾಳಗ ಭಟಾರರ್ಪಡೆದೋರ್ಮ್ಮಣ್ಣುಮ್ (ಎಕ. XI, ಚಿತ್ರದು. ೨೪–೨ ; ಸು. 500) ; ಮಱುಧರ್ಮ್ಮ ತುಸವನಿನ್ ಪಡೆದೆಪ್ಪಟ್ಟಾದು ಒಂದು ಗಾಣದುಳ್ ಒನ್ದು ಸೊಂಟಗೆ ತೇ(ತೈ)ಲಮಾಗೆ ಕೊಟ್(ಟ್ಟಾ)ರ(ರ್) (ಇಎ. VIII, ೨೮೫–೪ ; 706) ; ಕುಡವೇಟ್ಟನ ಕುಡುವನ ಕುಡೆ ಪಡೆವನ ಪೆಂಪೇಂ ನೆಗೆಟ್ಟೆವಡೆಗುಮೊ (ಪಂಪಭಾ. ೬–೪೯) ; ಪಡೆಯೆಡೆಯ ಕಡೆಯ ಬಡವರ್ ಕುಡೆ ಪಡೆದನೊ ಚಕ್ರವರ್ತಿಯೊಳ್ ತೈಲಪನೊಳ್ ಪಡೆದಂ ಮಹಿಮೋನ್ನತಿಯಂ ಪಡೆದಂ ಕವಿಚಕ್ರವರ್ತಿವೆಸರಂ ರನ್ನಂ (ಗದಾಯು. ೧–೩೭). ೪. ದೈವದತ್ತವಾಗಿ ಹೊಂದು ; ಪೂರ್ವಕರ್ಮಾನುಸಾರವಾಗಿ ಗಳಿಸು : ಕಡಲೇಱಂ ಮಗುಚಟ್ಟೊಡಂ ಕಲಿಯೆ ನಾನಾಹೃದ್ಯವಿದ್ಯಂಗಳಂ ಪಡೆದಪ್ಪಲ್ಲದೆ ಬರ್ಪುದೇ (ಸೋಮೇಶ. ೨೮) ; ಮೃಡತಾಂ ಭಿಕ್ಷವ ಬೇಡನೇ. . . ಸುಡುಗಾಡಿಕ್ಕೆಗೆ ಭಂಟನಾಗನೆ ಹರಿಶ್ಚಂದ್ರಂ ನರರ್ ಪೂರ್ವದೊಳ್ ಪಡೆದಪ್ಪುಣ್ಣದೆ ಪೋಪರೆ (ಸೋಮೇಶ. ೩೭) ; ಎನ್ನ ಭಕ್ತರಿತ್ತ ಸೀರೆಯೊಗೆಯಲಾನು ಪಡೆದೆನೆನುತೆ ತನ್ನ ಮನದೊಳುತ್ಸವಂ ಬಡುತ್ತವಿಂತು ಸಂದೆನೆನುತೆ ಒಗೆವುತಿರ್ದನು (ತಿರುತೊಂ. ದೇ. ೨೩೪–೬); ಪಡೆದು ದುಡಿದವ ಜಾಣ ವ್ಯಸ್ತನಾದವ ಕೋಣ ಆಗಬಾರದು ಏಂತೆ–ಮುಂತೆಯಾಗಿ (ಸೂರ್ಯಪಾ. ೧೧–೭). ೫. ಹೆರು ; ಜನ್ಮಕೊಡು : ಪಡೆದರ್ ತಾಯುಂ ತಂದೆಯುಮೊದಲಂ ಪ್ರಾಣಮುಮನವರವು (ಪಂಪಭಾ. ೯–೮೧) ; ಈ ಕೊಡಂ ತೀವಿದ ಸತ್ತುಗದ ಪುಡಿಯಂ ಪತ್ತು ಪಣನಿಂಗೆ ಮಾಱು ಪತ್ತಾಡಂ ಕೊಳ್ವೆಂ ಅವು ವರುಷಕ್ಕರ್ಮೆ ಮಱಯಂ ಪಡೆವುವು (ಪಂಚತಂ. ೧೮೬–೬) ; ಪಡೆವೊಡೆ ಸಿಂಹಮೊಲ್ಪಡೆವುದಾತ್ಮಜರಂ ಬಱಂದೇಕೆ ಮಕ್ಕಳಂ ಪಡೆದಪೆನೆಂದು ಹಿಗ್ಗುವರೊ (ಅನಂಪು. ೧೨–೬೬) ; ಗಾಂಧಾರಿ ನೆಱೆ ನೋಂಪಿಯಲಿ ಪಡೆದಳು ಕೌರವೇಶ್ವರನ (ಕುನ್ಯದ್ರೋ. ೨–೬೦) ; ಕೊಡವಾಲು ಪುಳಿವೆರೆದೇವುದಲ್ಲದೆ ಪಾಲ್ಗಡಲು ನಾಶವನ್ನೆದುವುದೆ ಬಡವಂಗೆ ಕೃತಿದೋಷವಲ್ಲದೆ ಬೊಮ್ಮನ ಪಡೆದಾತಗೇತಱ ದೋಷ (ಸೋಹತ. ೧–೩೦). ೬. ಸೃಷ್ಟಿಸು ; ನಿರ್ಮಿಸು ; ರಚಿಸು : ಪಡೆದಂ ಬ್ರಹ್ಮಂ ಜಗಮಂ ಪಡೆಯಲ್ ತಾನಾರ್ತನಿಲ್ಲ ಪೆಂಪಂ ನಿಮ್ಮಂ ಪಡೆದಲ್ತೆ ಪಡೆದನೆನಿಸಿದ ಕಡುಪೆಂಪಿನ ಮೊಱೆಗೆ ನೀವು ಮೊದಲಿಗರಾದಿರ್ (ಪಂಪಭಾ. ೬–೧೨) ; ಕಡಲಂ ಪೀರ್ದನಗಸ್ತ್ಯನೆಂಬ ಪುರುಡಿಂ ಮತ್ತೊಂದನಟ್ಟೋದ್ಭವಂ ಪಡೆದಂ ಪೆರ್ಗಡಲಂ (ಕಾದಂಪು. ೧೧೬) ; ಸುಡುವಂ ಜಗಮಂ ಮತ್ತಂ ಪಡೆವಂ ತ್ರಿಗುಣಾತ್ಮನೊಲ್ದ ತೆಱನಪ್ಪಂ ತಾನಡಿಗಡಿಗೆನುತಂ ಸುಖಮಂ ಕುಡುವನುಮಿಾಯಂದದಿಂದಮಳ್ಕುಮೆ ಪೊಗಟಲ್ (ಸಮುಪ. ೮–೫೬) ; ಕವಿತರ್ಪರಾತಿಚತುರಂಗಪತಾಕಿನಿಯಂ ಮುಕುಂದ ನೀಕ್ಷಿಸಿ ಮುಳಿದೆಚ್ಚನಾ ಪಡೆಗೆ ಮಾರ್ಪಡೆಯಂ ಪಡೆದೈಂದ್ರಬಾಣದಿಂ (ಜಗವಿ. ೧೮–೪೯) ; ಗರುಡನ ಮೂಗು ಕೊಂಕಿದೊಡೆ ತಿರ್ದಿದುದಿಲ್ಲ ಮುರಾರಿ ಚಂದ್ರನೊಳ್ ಪೊರೆದ ಕಲಂಕಮಂ ಕಳೆದುದಿಲ್ಲ ಮಹೇಶ್ವರ ನರ್ಕನಟ್ಟಱಿಂದರುಣನ ಕಾಲ್ಗಳಂ ಪಡೆದನಿಲ್ಲಮದೆಂತೆನೆ ಪುಣ್ಯಹೀನನೇ ದೊರೆಗಳನಾಸೆಗೆಯ್ದೊಡಮಗಲ್ಪುದೆ ಪೂರ್ವದ ಕರ್ಮಬಂಧನಂ (ಕಾವ್ಯಸಾ. ೪೨೭). ೭. ಉಂಟುಮಾಡು ; ಒದಗಿಸು ; ದೊರಕಿಸು; ನೀಡು : ತಾಯ್ಗಂ. ತಂದೆಗಮೆಲ್ಲಾ ನಂಟರ್ಗೆಯುತ್ಸಾಹಮುಂ ಸುಖಮುಂ ವಿಭವಮುಮಂ ಪಡೆವುದಱಿಂದಮಾ ಕೂಸಿಂಗೆ ಭದ್ರಬಾಹುವೆಂಬ ಪೆಸರನೆಲ್ಲರುಂ ನೆರೆದಿಟ್ಟೊಡೆ (ಪಡ್ಡಾರಾ. ೭೩–೧೮) ; ಕಡೆಗಣ್ಣ ಬೆಳ್ಪುಗಳ್ ಸೊಗಯಿಸುವ ಕುವಳಯದಳನಯನೆಯ ನೋಟಂ ತನ್ನ ಮನದೊಳಳ್ಳಾಟಮಂ ಪಡೆಯೆ (ಪಂಪಭಾ. ೪–೪೧ಪ); ಕುಂದದ ನಿಷ್ಪೊಸತಪ್ಪ ಜವ್ವನಂ ತನಗೆ ವಿಲಾಸಮಂ ಪಡೆಯೆ ಭೋಗಿಸಿದಂ ಸುರಲೋಕಭೋಗಮಂ (ಸುಕುಮಾ. ೯–೪೪) ; ಉಡುಪತಿಯುಮನುಡುಗಣಮುಮನೆಡೆಯುಡುಗದೆ ತೋಱೆ ತೋಱೆ ಕಿಱುಗೂಸುಗಳಂ ನುಡಿಗಲಿಸಿದಂ ತೊದಲ್ನುಡಿ ಪಡೆವಿನೆಗಂ ಪಿತೃಯುಗಕ್ಕೆ ಕರ್ಣಾಮೃತಮಂ (ಪಂಂಮಾ. ೧–೭೯) ; ತಮರೂರ್ಗೆವೋಪ ಕುಲಜಾಂಗನೆಯರ್ ಕಮಲೋದರಂಗೆ ಪಡೆದರ್ ಮುದಮಂ (ಶಮದ. ೬೭ ಪ್ರಯೋ). ೮. ಗೆಲ್ಲು; ಜಯಿಸು; ವಶಪಡಿಸಿಕೊಳ್ಳು ; ಒಲಿಸು : ಮಡದಿ ಮನೋನಾಥನ ವಾಕ್ಯವ ಕೇಳಿಯೊಡಗೊಂಡು ಬಂದಳಾಲಯಕೆ ಸಡಗರದಿಂದುಪಚರಿಸುತೆ ಮೆಲ್ಲನೆ ಪಡೆದಳಾ ರತಿಯ ಚಿತ್ತವನು (ಸೋಹತ. ೧೦–೧೯) ; ಜನನುತ ಮಹಾಮಂಡಲೇಶ್ವರನನುಪಮಿತಗುಣಧಾಮನೀ ಭೂವನಿತೆಯನು ಪಡೆದಾಳು ಭೈರವರಾಯನಂದೆಸೆದ (ಸಾಳ್ವಭಾ. ೧–೨೫). ೯. ಸಮರ್ಥವಾಗು ; ಸಾಮರ್ಥ್ಯವನ್ನು ಹೊಂದು ; ಸಾಧ್ಯವಾಗು : ಪಸುವೆಂಬರಸಂ... ಒಂದು ದಿವಸಮಿಂದ್ರನೋಲಗಕ್ಕೆ ಪೋಗಿ ಋತುಕಾಲಪ್ರಾಪ್ತೆಯಾಗಿರ್ದನಲ್ಲಳಲ್ಲಿಗೆ ಬರಲ್ ಪಡೆಯದೆ (ಪಂಪಭಾ. ೧–೬೮ ಪ) ; ಒಡಲಂ ದಂಡಿಸಿ ತಪದೊಳ್ ನಡೆವ ತಪಸ್ವಿಗಳುಮೆಯ್ದೆ ಮನಮಂ ತ[ತೆ]ಗೆಯಲ್

ಪಡೆಯರೆನೆ ಚಪಳರಕ್ಕಟ ಪಡೆದಪರೆ ಗೃಹಸ್ಥರೆಂತೊ ಸರ್ವಾಮಸ್ಕರ್(ಅಜಿಪು. ೨-೯೧) ; ದಿಣ್ಮುಖಂ ನಡುವಿರುಳಂತೆ ಕಟ್ಟಲಿಸೆ ಪಟ್ಟಪಗಲ್ ರಣಮಂ ನಿರೀಕ್ಷಿಸಲ್ಪಡೆಯದೆ ದೇವರುಂ ದಿವಿಜಕಾಂತೆಯರುಂ ಬೆಜಗಾಗೆ (ಪಂಂಾಸಾ. ೧೩-೪೪) ; ಪುಷ್ಪಶರೋತ್ಕರಮೆಂದು ಮನ್ಮಥಂ ಮುತಿಗಿಡುವಂ ಗೆಲಲ್ ಪಡೆಯದಾ ನಯಸೇನ ಮುಮುಕ್ಷುಮುಖ್ಯನಂ (ಚಂದ್ರಪು. ೧-೨೬). **ಪಡೆ1** : ೧. ಪಾಯಿಸೆಟ್ಟಿಯರು ಕೊಟ್ಟು ಪಡೆದ ಮತ್ತರಾಜು (ಸೌಇಇ. XX, ೨೦೨-೯೫ ; 1124) ; ಪಡೆವುದರಿದು ನರಜನ್ಮವ ಪಡೆವುದರಿದು ಗುರುಕಾರುಣ್ಯವ ಪಡೆವುದರಿದು ಲಿಂಗಜಂಗಮಸೇವೆಯ (ಮಹಾದೇ. ಭ. ೭೬-೧೯೨) ; ಮುಂತೆ ಕಾಣಿಸುವಿಷ್ಟಲಿಂಗದ ಚಿಂತೆಯಲಿ ಚರನಾಗಿ ತನ್ನಯ ಚಿಂತಿತಾರ್ಥವ ಪಡೆಯಬೇಹುದು (ಪ್ರಭುಲಿ.೧೩-೫೦); ಸತತಂ ಸುಖಿಯಿಪ ಪಾರಿವನಕ್ಕಿಗೆ ರತಿವರನುಂ ರತಿಸೇನೆಯುವೆಂಬುನ್ನತಿಯೆಂ ಹೆಸರಂ ಪಡೆದು ಜನಿಸಿ ಬೆಳೆದುವು ನಿಮ್ಮೊತ್ತಿನೊಳು (ಜಯಭಾ. ೧೨-೬೮). ೨. ಇನ್ತೀ ದಮ[ರ್]ವಂ ಸದರ್ಮದಿಂ ಪ್ರತಿಪಾಳಿಸಿದಪರ್ಗ್ಗೆ . . . ಸಹಸ್ರವೇದಪಾರಿಗರಪ್ಪ ಬ್ರಾಹ್ಮಣರ್ಗ್ಗೆ ಕೊಟ್ಟ ಫಲಂ ಪಡೆವರು (ಸೌಇಇ. XI-i, ೬೮-೨೦ ; 1033) ; ಗುರುಕರುಣದಿಂದ ವೀಯತೆ ಎಂಬ ಸುಜ್ಞಾನವ ಪಡೆದು ಗುರುಪಾದೋದಕದಿಂದ ಕ್ಷೀಯತೆ ಎಂದು ಮಲತ್ರಯವ ಕ್ಷಯ ಮಾಡುವ (ಅದಸ. ೨೫-೭೩) ; ನಮ್ಮೊಡನೆ ಮೆಟ್ಟಿಸಿ ಬಳಿಕ ಪಡೆಯಿರೆ ಬಿರುದನೆನುತವೆ ಫಲುಗುಣನು ಕೈಯಿಕ್ಕಿದನು ಗಂಗಾಕುಮಾರನಲಿ (ಕುಪ್ಯಾಭೀ. ೯-೩೦) ; ಕೂಸು ಕಾಸು ಪಡೆಯದು, ಜೋಗುಳಮುಗಿಲು ಮುಟ್ಟಿತು (ಗಾದೆ). ೩. ಕೋಬೂರ ತಿಲ್ಲೆನಾಯಕರ ಮಗಂ ಶಿವ ಕಲ್ಯಾಣನಂಬಿ ಪಡದ ವೃತ್ತಿ (ಎಕ. XI, ದಾಪಣ. ೬-೩೨ ; 1169) ; ಶ್ರೀಮನ್ಮಹಾಪ್ರಧಾನಂ ಹೆಗ್ಗಡೆ ಲಕುಮಯ್ಯಂ ಪೊಯ್ಸಳನಾರಸಿಂಹದೇವಂಗೆ ರಾಜ್ಯಮಂ ನಿಷ್ಕಂಟಕಂ ಮಾಡಿ ಪ್ರತಿಷ್ಠಾಪಿಸಿ ಪ್ರಸಾದ ದಾನಂ ಧಾರಾಪೂರ್ವ್ವಕಮಾಗಿ ಪಡದು (ಎಕ. V, ಹಾಸನ. ೬೬-೪೦ ; ಸು. 1170 ?) ; ಸಾತೆಯನ ಹಳ್ಳಿಯ ಹಿರಿಹರೇಶ್ವರದೇವರ ಧರ್ಮ್ಮ ಪ್ರಸಂಗವಂ ಬಿನಸಂಗೆಯ್ದು ಆ ದೇವರ ಶ್ರೀಕಾರ್ಯಕ್ಕೆ ಪಡೆದ ವೃತ್ತಿ (ಕಇ. IV, ೧-೧೦೦ ; 1204); ಪ್ರಸಿದ್ಧಸೀಮಾಸಮನ್ವಿತಸಹಿತ ಶಿವಪುರವ ಮಾಡಿ ಸರ್ವ್ವನಮಸ್ಯವಾಗಿ ಧಾರಾಪೂರ್ವಕವಾಗಿ ಪಡದು (ಎಕ. XVI, ಗುಬ್ಬಿ. ೬೬-೧೩ ; 1252). ೫. ಪಡೆದಿರ್ದ ಶಿಸುವ ಕೊಡಗೂಸ ನುಂಗಿತ್ತ ಕಂಡೆ (ಆದಪು. ೩೪-೯೯) ; ಇನ್ನು ನಾನೆತ್ತ ಮಗನಂ ಪಡೆವುದೆತ್ತಲು (ಸಿದ್ಧರಾ. ೧-೪೧) ; ಹಾವು ಹಲವನು ಪಡೆದು ಲೋಕಕೆ ಸಾವ ತಪವೊಲು ನೂಜು ಪುಕ್ಕಳನಾವ ಪರಿಯಲಿ ಪಡೆದು ಕೆಡಿಸಿದೆ ಭೂಮಿಭಾರಕರ (ಕುಪ್ಯಾಉ. ೩-೪) ; ಪಡೆದ ತಾಯಿಲ್ಲ ತಾಯುಳ್ಕೊಡೆ ತಲೆ ಹೀಗೆ ಜಡೆಗಟ್ಟಿಕೊಂಡು ಮಾಸಿಹುದೇ (ನೋಪತ. ೨೧-೨೫) ; ಪಡೆಯದ ಹೆಣ್ಣು ಗಂಡನ ಮನೆಗೆ ಭಾಡಿಗೆಯು ಎತ್ತು (ಕನ್ನಜಾ. ೧೦೩). ೬. ನೀನು ಮುನ್ನಲಿ ನಿನ್ನ ತಾಮಸಗುಣದ ಮಾಯೆಯನು ಏನು ಕಾರಣ ಕಳುಹಿ ಭಾಷೆಗೆ ಹೀನವನು ನೀ ಪಡೆದೆ (ಪ್ರಭುಲಿ. ೪-೧೬). ೭. ನರ್ತನದಿಂ ನವಶಕ್ತಿಯು ಹೊಮ್ಮಿ ಸೃಷ್ಟಿಸ್ಥಿತಿಲಯಚಕ್ರಂ ಚಿಮ್ಮಿ ಜಡಜೀವತನರೂಪುಗಳಾಗೊಡೆದು ತೋರ್ಪುದು ಸುಖ ದುಃಖಿಗಳನು ಪಡೆದು ! (ಪಾಂಚಜ. ೧೯-೧೪). ೮. ಎಡವಿದಡೆ ಬೇಡಿ ಕಾಡುವಿರಾದಡಿನ್ನು ಕೇಳ್ ಕಡೆಗೆನ್ನ ಸರ್ವರಾಜ್ಯವನಾದಡಂ ನಿನಗೆ ಕೊಡಹಡೆವೆನ್ನೆ ಸಲ್ಲದೀಯೊಂದು ತೇಜಮಂ ಕೊಡೆನು (ಹಚಕಾ. ೪-೬೨) ; ಅಜ ಹರಿಗಳಾದ್ಯಂತಮಂ ಕಾಣ ಪಡೆಯರೀಶ್ವರನ ನಿಜಮಂ ಕಂಡು ಕೈವಲ್ಯಮೊಡೆಯನಾದೆಂ ನಿಮ್ಮ ಕರುಣದಿಂದೆಂದರಸನಾ ಮುನಿಗೆ ಕೈ ಮುಗಿದನು (ಹಚಕಾ. ೧೪-೧೭). ೧೦. ದೊರಕು; ಲಭಿಸು; ಸಿಗು; ಪ್ರಾಪ್ತವಾಗು: ಗಾಳಿ ಪಡಪಲ್ಲಿ ತೂಜುಕೊಳ್ಳಿರೇ . . . ಶಿವಶರಣೆಂಬುದೊಂದು ಗಾಳಿ ಪಡಪಲ್ಲಿ ಬೇಗ ತೂಜುಂದನಂದಿಗರ ಜೌಡಯ್ಯ (ಲಿಂಗಲೀ. ೧೬೫-೨೨) ; ಸುನವೆಯ್ದೆ ಮೇಲಾದ ತತ್ವದೊಳು ಪಡೆಯಲು · ಪಟ್ಟ ಲಕ್ಷವುಳ್ಳ ಬಾಗಿಯಂಡಗುತ್ತಿರ್ಪುದು (ವೀಶ್ವಶಿ. ೬-೩-೬೬).

ಪಡೆದಪ್ಪ, ಪಡೆದಪ್ಪ = ೧. (ದೇವರ) ಅನುಗ್ರಹವನ್ನು ಹೊಂದಿದವನು ; ಪುಣ್ಯವಂತನಾದವನು ; ಭಾಗ್ಯವಂತ : ಎರೆಯುವೆನು ಬಾ ನಿನ್ನ, ನಮ್ಮ ಪಟ್ಟದ ಮರಿಯೆ ಸಕಲ ತೀರ್ಥದ ಕ್ಷೀರ ನೀರ ತಂದು ಬೆರಗಾಗಿ ಬೆರೆತು ಆ ಶಿವನಲ್ಲಿ, ದೇವನಲಿ 'ಪಡೆದಪ್ಪನಾಗು' ಎಂದು (ಸೂರ್ಯಪಾ. ೮೭-೪). ೨. ಜನ್ಮ ಕೊಟ್ಟ ತಂದೆ; ಪಿತ; ಜನಕ: ಎಳ್ಳು ಬಿತ್ತಲಿಲ್ಲ ಎಳ್ಳು ಬೆಳೆಯಲಿಲ್ಲ ಎಳ್ಳು ಹೂ ಸೀರೆ ಉಡಲಿಲ್ಲ ಪಡೆದಪ್ಪ ಒಳ್ಳೆಮನೆ ನೋಡಿ ಕೊಡಲಿಲ್ಲ (ಹಳ್ಳಿಬಾ. ೬೬) ; ಬಿಡವಲ್ಲ ಪಾದಗಳ ದೃಢದಿಂದ ಹಿಡಿದನು ಅಡಿಗಳ ಮೇಲೆ ಉರುಳಾಡಿ ಎಂದನು ಪಡೆದಪ್ಪ ನೀ ನನಗೆ ಆಗಲದಿರು (ಸಿದ್ಧಪು. ೫-೧೫). **ಪಡೆವಂ, ಪಡೆವಂ** = ೧. ಗಳಿಸಿದವನು; ಧನವಂತ: "ವಿಂದನ್, ವಿತ್ತಃ, ವಿತ್ತವಾನ್–ಈ ೩ ಪಡೆವಂ" (ಕಾಶಕೃ: ೨೧೩). ೨. ಗಳಿಸುವವನು ; ಸಂಪಾದಿಸುವವನು : ದೊರಕಿಸಿಕೊಳ್ಳುವವನು : "ಲಭಕಃ, ಲಾಭಕಃ, ಲಭಮಾನಃ—ಈ ೩ ಪಡೆವಂ" (ಕಾಶಕೃ.೧೩೦). **ಪಡೆದ ತಾಯಿ** = ಜನ್ಮಕೊಟ್ಟ ತಾಯಿ; ಮಾತೆ ; ಜನನಿ : ತೊತ್ತುವೇಟಕೆ ಪಡೆದ ತಾಯನು ತೊಜಿಸಿದರೊ ಮೌಕ್ತಿಕದ ಮಣಿಗಣವ ಕೊಡಹಿ ಬಿಸುಟರೊ ದಾರಕೋಸುಗ . . . ಎನುತ ನೊಜೆಯಿಟ್ಟಳಾ ತಾರೆ (ತೊರಂಾ. ೪-೫-೧೧). **ಪಡೆದಪ್ಪೆ** = ಪಡೆದ ತಾಯಿ : ಪಡೆದಪ್ಪೆಗೆ ಬೇಡವಾದ ಮಕ್ಕಳು ನೀವು (ಮೂಕಜ್ಜಿ. ೧೫೮). **ಪಡೆದವನು** = ಪಡೆದಪ್ಪ ೨ : ಪಡೆದವ್ವನು ಪಡೆದವನಿಗೆ ಪಡಿ ಕೂಸನ್ನು ಹತ್ತು ದಿವಸದಲ್ಲಿಯೋ ತಿಂಗಳಲ್ಲಿಯೋ ತೋರಿಸುವ ವಿಧಾನವು ಬಂದಿರಬೇಕು (ಸಾಹಸಂ. ೧೩೧). **ಪಡೆದವರು** = ಜನ್ಮಕೊಟ್ಟವರು ; ತಂದೆ ತಾಯಿ : ಪಡೆದವರು ಪಡೆಬರಹ ತಿದ್ದುವರೇ ? (ಗಾದೆ); ಪಡೆದವರೇನು ಹಣೆಯಲ್ಲಿ ಬರೆಯುವರೇ ? (ಗಾದೆ). **ಪಡೆದವಳು** = ಪಡೆದೆ ತಾಯಿ : ರಮಣನಿಲ್ಲದ ನಾರಿ ಪರರ ಕಣ್ಣಿಗೆ ಮಾರಿ ಪಡೆದವಳ ಎದೆ ಕೊರಳ ಕೊಯ್ವಂಥ ಚೂರಿ (ಪುರಂದ. ೧-೧೪೪ ಅನುಪಲ್ಲವಿ); ಪಡೆದವಳು ತೊಟ್ಟಯನ್ನು ಸೇರಿ ತೊಟ್ಟಿಲಲಿ ಮಗುವನ್ನಿಡುವ ದಿನ ತಂದೆಯೂ ಮಗನ ಮುಖವನ್ನು ನೋಡುತ್ತಿರಬೇಕು (ಸಾಹಸಂ. ೧೩೧). **ಪಡೆದವ್ವ, ಪಡದವ್ವ** = ಪಡೆದೆ ತಾಯಿ : ಪಡೆದವ್ವನು ಪಡೆದವನಿಗೆ ಪಡಿಕೂಸನ್ನು ಹತ್ತು ದಿವಸದಲ್ಲಿಯೋ ತಿಂಗಳಲ್ಲಿಯೋ ತೋರಿಸುವ ವಿಧಾನವು ಬಂದಿರಬೇಕು (ಸಾಹಸಂ. ೧೩೧) ; ಎನಗಿನಿತು ಸಂಪತ್ತು ಸಡಗರಂ ಬಂದುದೀ ಮಲ್ಲಮ್ಮನಿಂದೀಕೆಯೆನಗೆ ಪಡದವ್ವನಿವಳುಪಕಾರವ ಎಂದೆಂದು ಮರೆಯೆನು (ಮಲ್ಲಚ. ೧೪೪-೩).

[ದೇ.॥ ತಮಿ. ಪಟ್ಟ; ಮಲ. ತುಳು. ಪಡೆ; ಕೆಲು. ಪಡಚು, ಪಡಯು] **ಪಡೆ2, ಹಡೆ2** (ನಾ). ೧. ಸೈನ್ಯ ; ಬಲ.; ದಂಡು : "ಪಡೆಯಲ್ಲಿಯುಂ ಕಟಕಮೆಂಬುದು" (ಹಲಾಜು. ೧೩೧-೪), ಪಡೆಯಜುಯಲಾದೊಡ [ರಿ]ಯಂ ಕಿಡಿಸುಗುಮಂತಃಕಳಂಕ ನೃಪಮಂಡಲಮಂ ತಡೆಯದೆ ತಮಸ್ಸ್ವಭಾನಂ ಕಿಡಿಸುವವೋಲರಿದು ರಾಹು ಶಶಿಮಂಡಲಮಂ(ಕವಿಾ. ೬-೧೪೭) ; ಆಕೆಗಮಿಂತಪ್ಪುದೊಂದು ಬಯಕೆಯಾದಪುದು ಮಟಿಗಾಲದೊಳಾನೆಯನೇಜುಂಬೆಯಲ್ಲಾ ಪಡೆಯೊಡನೆಯುಡವಿಗೆ ಪೋಗಿಯಾಲದ ಮರದ ಪಣ್ಗಳಂ ಕೊಯ್ವಂತಪ್ಪ (ಪಜ್ಜಾದಾ.೧೫೬-೧೪); ಅಂತೆರಡುಂ ಪಡೆಗಳುಂ ಪಣ್ಣಪಣ್ಣನೆ ಪಣ್ಣೆ ಕಾಳೆಗಕ್ಕೆ ಸಡೆಯಲೊಡರಿಸಿದಾಗಳ್ (ಪಂಪಭಾ. ೧೦-೫೦ ವ) ; ಕಾಳರಾತ್ರಿಯ ಕಟಕವೋ ಮೇಣ್ ಕಾಲರುದ್ರನ ಪಡೆಯೊ ದಾನವನಾಳನಗ್ಗಳಿಕೆಗಳ ಬಣ್ಣಿಸಬಲ್ಲ ಕವಿ ಯಾರು (ಕುಪ್ಯಾದ್ರೌ. ೧೫-೧೭) ; ಒಡಸಿಕ್ಕೇರಿಯ ಸೆಳೆದಾಗ ತುರುಕರ ಪಡೆ ನಡೆದುದು ಕನ್ನಡಕೆ

(ಕಂನವಿ. ೧೧ ಸೂಚನೆ). ೨. ಗುಂಪು ; ನೆರವಿ ; ಸಮೂಹ : ಸುರರ ಪಡೆ ನೆರೆದಿರಲು ಕರಿಗಳೆನಿತನಿತಱೊಳೆ ಖರಕರಸಮೀರಣಪದಾಂತಂ ಪುರ ಮಥನನಿದೆ[ರೆ] ಬಟಱಕ ನೆರೆದು ಯತಿ ದಶಮುಖೊಳೆ ತರತರದಿನೊಪ್ಪಿ ನಿಲೆ ಸಂತಂ (ಭಂದೋಂಬು.೩-೨೦೫) ; ವಡಬಾನಲನ ಪಡೆಯಂತೆ ಕಾಲಾಗ್ನಿಯ ಮಾಲೆಯಂತೆ . . . ಭೈರವನ ಬಳಗದಂತೆ ಮುಂತಿರ್ದ ರಕ್ಕಸವಡೆಯ ನಡುವೆ ನಿಂದ ವೀರತಾರಕಾಸುರಂ (ಗಿರಿಕ. ೬-೫೫ವ) ; ಕಡೆಯ ಪೆಂಡೆಯದ ನಟ್ಟುವರು ಮದ್ದಳೆಗರು ಗಡಣಯ ತಾಳಧಾರಿಗಳು ಬಿಡಯವಿಲ್ಲದ ಗೀತವಾದ್ಯವಿದ್ಯಾಧಿಕಪಡೆಯಿರ್ದುಪೊಡ್ಡೋಲಗದಿ (ಮೋಹತ. ೨೦-೩೭); ದಿನದಿನವೂ ಸುಳ್ಳುಸಾಕ್ಷಿಗಳ ಪಡೆಯು ಹೆಚ್ಚಾಗುತ್ತಾ ಬಂತು (ಪಂಚಾಮೃ. ೩೦). **ಪಡೆ$_2$** : ೧. ಮೇಲೇಱುವ ಬಗೆ ಮಿಗೆ ತಿವುರಿನ ಹೊಂಬಳೆಗಳ ಭಾಳದ ಚಂದ್ರದ ಚಿತ್ರದ ಮೊಗರಂಬದ ಕೈದಾಳಿನ ಕಾಲ್ಗಾಪಿಂ ಹಡೆಯಂ ಹಣ್ಣಿದ ಕರಿಘಟೆ ನೆರೆದುವು ಬಲದೊಳಗೆ (ವೀರೇಚ. ೨-೨೮). ೩. ವಂಶ ; ಬಳಗ ; ಮನೆತನ : ಊರವರು "ಶಾನು ಭೋಗನ ಪಡೆ ಹಾಳಾಗ, ಇಸ್ಕೂಲು ಮಟ ಬಾಗಿಲು ಹಾಕಿಸಿದ" ಎಂಬುದಾಗಿ ಶಪಿಸುತ್ತಾರೆ (ಗರುದಾ. ೧೦೬).

ಪಡೆ ನೋಡೆ ಗಂಡಂ = ಸೈನ್ಯದ ಎದುರಿನಲ್ಲಿ ಪರಾಕ್ರಮವನ್ನು ತೋರಿಸುವವನು : ಪಡೆ ನೋಡೆ ಗಣ್ಡಂ ಗಣ್ಡರ ಸಿಂಘಂ ಅಸಹಾಯ ಸಾಹಸಂ (ಎಇ. VI, ೨೫೯-೩ ; 975). **ಪಡೆ ಮೆಚ್ಚೆ ಗಂಡಂ** = ಸೈನ್ಯವು ಮೆಚ್ಚುವಂತಹ ಶೂರನಾದವನು ; ಪರಾಕ್ರಮಿ ; ಒಂದು ಬಿರುದು : ಗಂಡಗಾಡಿ ನೂರ್ಮಡಿ ಮಿಗಿಲಾದುದಾ ರಥಮನೇಱಲೊಡಂ ಪಡೆ ಮೆಚ್ಚೆ ಗಂಡನಾ (ಪಂಪಭಾ. ೮-೧೦೧) ; ಒಡನುಂಡಂಗೆ[ಡಱಾ] ದಡೆ ಕಡುಗಲಿ ಕಡೆಗಡನಲಾಗದೆಂದುತ್ಸವದಿಂ ಪಡೆ ಮೆಚ್ಚೆಗಂಡನಾಹವದೆಡೆಯೊಳ್ ಸಿತಗರ್ಗ್ಗೆ ಗಂಡನೆಸೆದಂ ಮಸಣ (ಕಇ. IV, ೧೭-೧೧ ; 1166) ; **ಪಡೆಯಂಕಕಾಱ** = ಸೈನ್ಯದಲ್ಲಿ ಮಹಾಶೂರನಾದವನು: ಶ್ರೀಮತ್ಪಡೆಯಂಕಕಾಱ ನೊಟಂಬಾಧಿರಾಜಂ ಪೆರ್ಬ್ಬೆಣ್ಣಯಂ ತಾ×××ಸೂರೆಕಾಱ ಕಾದಿಯಣ್ಣಂಗೆ ಕೊಟ್ಟೊಡೆ (ಎಕ. X, ಮುಳಬಾ. ೨೦೮-೯ ; 1000).

[ದೇ.॥ ತಮಿ. ಪಟ್ಟೆ ; ಮಲ. ಪಡ ; ತುಳು. ಪಡೆ ; ತೆಲು. ಪಡವ]

ಪಡೆ$_3$, ಪಡ$_1$, ಪಡಿ$_5$, ಫಡಿ(ನಾ). ೧. (ಕಲ್ಲುಬಂಡೆಗಳ) ಸಂದು,—ಬಿರುಕು : "ಪಡೆಯೆಂದು ಕಲ್ಲ ಮಱೆ" (ಕಶಸಾ. ೫೦-೩೩) ; "ಪಡೆಯೆನೆ ಕಲ್ಲ ಮಱೆಯುಮೆನಿಕ್ಕುಂ" (ಕವಿಕಂ. ೫೪) ; ಎಲ್ಲಿ ನೋಡಲು ಸರಿ ಜರಿ ಹಳ್ಳ ಬರೆಗಳು ಕಲ್ಲ ಪಡೆಗಳು ಗುಹೆಗಳು (ಕಂನವಿ. ೧೮-೪೩). ೨. ಕಲ್ಲಿನ ಹಾಸು ; ಹಾಸುಗಲ್ಲು ; ಚಪ್ಪಡಿ : ಕಲ್ಲಿನ ಪಡೆಯ ಮೇಲಿಂದ ನೀರಿನ ಪ್ರವಾಹವು ಹರಿಯುತ್ತಿದ್ದರೆ, ಆ ಪಡೆಯು ನೀರಿನ ಘರ್ಷಣದಿಂದಲೂ ಅದರಲ್ಲಿ ಬಂದು ಹೋಗುವ ಹರಳು ಉಸುಬುಗಳ ಘರ್ಷಣದಿಂದಲೂ ಸವೆದು ನುಣುಪಾಗುತ್ತದೆ (ಮುಂಬಯಿ.೬-೧೮೦). **ಪಡೆ$_1$** : ೩. ಹಳ್ಳ ; ಕುಳಿ ; ತಗ್ಗು : ಈ ತಾವು ಪಡಾ ಬಿಟ್ಟೇ ಅಲ್ಲಾ . . . ಇಲ್ಲೆ ನೀರು ಹರಿಯೂದುಲ್ಲಾ ? (ಬಾಬಲ. ೧೨). ೪. ಒಂದು ಮರದ ತುಂಡಿನ ತುದಿಯನ್ನು ಇನ್ನೊಂದು ಮರದ ತುಂಡಿನ ತುದಿಯಲ್ಲಿ ಕೂರಿಸಲು ತೋಡಿರುವ ಕುಳಿ,—ವೆಜ್ಜ ; ಕೂರು : (ತ). **ಪಡೆ$_3$** : ೧. ನಡೆವೆತ್ತ ನೀಲಾಚಲಶಿಖರದ ಕಲ್ಲ ಪಡೆಯೊಳಗಿದ್ದ ಕೆನ್ನೀರು ಒಡೆವಾಯ್ವಂತೆ ರೋಹಿತಧಾರೆ ಸುರಿದು ಕಿಗ್ಗಡಲಲ್ಲಿ ವಾಹಿನಿಯಾಯ್ತು (ಮೋಹತ. ೧೨-೬೦). **ಫಡಿ** : ೧. ಕಿಡಿಕಿಯ ಹತ್ತಿರವೇ ಕಲ್ಲುಫಡಿಯೊಳಗಿಂದ ಒಂದು ಗಿಡವು ಬೆಳೆದಿತ್ತು (ಮೇದಿಮ. ೧೨೩). ೨. ಚಿಕ್ಕ ಚಿಕ್ಕ 'ಫಡಿ'ಗಳನ್ನೇರಿ ಆತ ಮೇಲೆ ಬಂದ (ಬಸಸಿ. ೨೪); ಆ ಪ್ರದೇಶದಲ್ಲಿಯ ಜನರೆಲ್ಲರೂ ಅದನ್ನು 'ಸಾಕ್ಷಿಯ ಫಡಿ (ಕಲ್ಲು)' ಎಂದು ಕರೆಯುವರು (ಮಾಹನಾ. ೨). ೫. ಕಲ್ಲುಗಳಿಂದ ಕಟ್ಟಿರುವ ಕಟ್ಟೆ ; ಘಟ್ಟ : ತಗ್ಗು, ದಿನ್ನೆ, ಕಟ್ಟೆ, ಫಡಿಗಳೆಲ್ಲವೂ ಅವಳಿಗೆ ಪರಿಚಿತವಾಗಿದ್ದವು (ಬಾಬಲ. ೧೧೧) ; ಕೆಳಗಿಳಿದು ಬಂದು ಅಲ್ಲಿಯೇ ಜುಳುಜುಳು ಹರಿಯುತ್ತಿರುವ ಅಗಸರ ಫಡಿಯಲ್ಲಿ ನೀರಿನೊಡನೆ ಚಲ್ಲಾಟವಾಡುತ್ತಿದ್ದನು (ರಂಗರೋ. ೩೩) ; ಮಹಾರಾಜರ ದರ್ಶನಾಪೇಕ್ಷೆಯಿಂದ ಹರಗೋಲ ಫಡಿಯ ಹತ್ತರ ಸಮ್ಮಿಲಿತರಾದ ಜನರಿಗೆ ಮಾತ್ರ ಇದರಿಂದ ತೀವ್ರವಾದ ನಿರಾಶೆಯಾಯಿತು (ಗ್ರಾಸೂಯ. ೩೮೮). [ದೇ.॥ತೆಲು. ಪಡಕು, ಪಡುಕು]

ಪಡೆ$_4$ (ನಾ). ಒಂದು ಬಗೆಯ ಭೂಮಿ : ಎರಿ ಮತ್ತು ಉಸ್ಕುಕುಭೂಮಿ ಹಾಗೂ ಚಲೋ ವಂಡು ಪಡೆಯಾದರೂ ಮಸಾರಿಯಾದರೂ ಕುರಿ ತರುಬಿ ವಿಶೇಷ ಗೊಬ್ಬರ ಹಾಕಿದರೆ ಮೆಣಸಿನ ಗಿಡಗಳನ್ನು ಹಚ್ಚಬೇಕು (ಕೃಷಿಧ್ರ. ೭೧). [?]

—ಪಡೆ$_5$ (ಪ್ರ). ಒಂದು ಕೃದಂತಭಾವನಾಮಪ್ರತ್ಯಯ : 'ತಿದ್ದುಪಡೆ' ಪರಾ.

ಪಡೆಕಳಿ (ನಾ). "ಕಾಳೆಗದ ಆಟ ; ಅಣಕುಯುದ್ಧ" (ಹುಲಿಹಾ. ಕೋಶ): ತೆಂಗಿನ ಕಾಯಿಗೆ ಈಡು ಹೊಡೆಯುವುದನ್ನು, ಪಡೆಕಳಿಯಾಡುವುದನ್ನು ನೋಡಲು ಪೂವಿಯೂ ಅಲ್ಲಿಗೆ ಬಂದಿದ್ದಳು (ಹುಲಿಹಾ. ೩೬).

[←ಕೊಡ. ಪಡೆಕಳಿ]

ಪಡೆಗಲ್ಲು (ನಾ). ಸಮೂಹವಾಗಿ ಬಿದ್ದಿರುವ (ಚಿಕ್ಕ ಚಿಕ್ಕ) ಬಂಡೆ: ಗಿರಿಯ ಪಡೆಗಲ್ಲಿವಕೆ ನಿಜಮಂದಿರವಣಲ್ಗಳೆ ಸಂಬಳವು . . . ಇವರ ಬಲದಲಿ ಧಾರವ ಜಯಿಸುವುದರಿದು ದೇವರಿಗೆಂದರಾ ಚರರು (ತೊರಾ. ೬-೬-೩೬). [ಪಡೆ$_2$ + ಕಲ್ಲು(<ಕಲ್$_3$)]

ಪಡೆಗವಿ (ನಾ). ಕಲ್ಲಿನ ಗವಿ,—ಗುಹೆ : ಅಡವಿಯ ತೊಪ್ಪಲ ತಿರಿತಂದು ತಿಂದುಂಡು ಒಡಲ ದಂಡಿಸಿಕೊಂಡು ಪಡೆಗವಿಯೊಳಗೆ ತಪವನ್ನೈದಿಹೆನೆಂದು ಕಡುಹೆಮ್ಮೆಯಲಿ ನುಡಿವ ಅಣ್ಣಗಳು ನೀವು ಕೇಳಿರೊ (ಪಚಸಂ. ೬೧೭-೨೮). [ಪಡೆ$_3$ + ಗವಿ$_2$]

ಪಡೆಗೆಯ್ (ಕ್ರಿ). ದಂಡೆತ್ತಿ ಹೋಗು ; ದಾಳಿಯಿಡು : ರಾಚಮಲ್ಲ ಪೆರ್ಮ್ಮಾನಡಿ×××ಸದೊಳ್ಕಳ್ಳಯಾಮೇಗೆ ಪಡೆಗೆಯ್ದಾಕೊಯ್ದಾಳು ಕಾದು×××ಬಲ ಮೇಗೆ ಎಟ್ಟನ್ದವು (ಎಕ. X (S), ಬಾಗೆಪ. ೮೬-೫ ; ಸು. 820). [ಪಡೆ$_2$ + ಕೆಯ್$_1$]

ಪಡೆಗೊಳ್ಳು (ಕ್ರಿ). ಸೈನ್ಯವನ್ನು ಕೂಡಿಕೊಳ್ಳು ; ಸೇನಾಸಮೇತವಾಗು : ಮಲ್ಲರಾಯನನ್ನು ಬಗ್ಗುಬಡಿಯಲು ಕೃಷ್ಣದೇವರಾಯ ಪಡೆಗೊಂಡು ಮುನ್ನುಗ್ಗಿ, ಒಂದೇ ದಿನದ ದಾಳಿಯಲ್ಲಿ ಶಿವಸಮುದ್ರ ಕೋಟೆಯನ್ನು ಸ್ವಾಧೀನಪಡಿಸಿಕೊಂಡನು (ಅಳೌಳ. ೧೬).

[ಪಡೆ$_2$ + ಕೊಳ್ಳು$_1$(<ಕೊಳ್$_1$)]

ಪಡೆಢಕ್ಕೆ 'ಪಡಢಕ್ಕೆ' ನೋ.

ಪಡೆದೋರ್ಕೆ (ನಾ). ಸೈನ್ಯದ ತೋರಿಕೆ,—ಪ್ರದರ್ಶನ : ವಂಕದಾರದೆರಡಂ ದೆಸೆಯೊಳಂ ತುರಗಾಸುರನ ಪಡೆದೋರ್ಕೆಯಂತಿರ್ದ ದಿವ್ಯಾಶ್ವಂಗಳ ಕಟ್ಟುವ ದೀರ್ಘಪಟಮಂಡಪಂಗಳಿಂದಂ (ಶಾಂತಿಪು. ೧೦-೧೯೭ ವ).

[ಪಡೆ$_2$ + ತೋರ್ಕೆ]

ಪಡೆನುಡಿ (ನಾ). ಜನಬಳಕೆಯ ಮಾತು ; ನುಡಿಗಟ್ಟು ; ಆಡುನುಡಿ : ಬ್ರಹ್ಮಶಿವನ 'ಸಮಯಪರೀಕ್ಷೆ'ಯಲ್ಲಿ . . . ಲೌಕಿಕವಾದ ಹೋಲಿಕೆ, ಗಾದೆಮಾತು, ಪಡೆನುಡಿಗಳನ್ನು ಸಮುಚಿತವಾಗಿ ಕವಿ ಬಳಸಿದ್ದಾನೆ (ಕಸಾಚ. ೧೯೮); ಈ ಇಂಗ್ಲಿಷ್‌ಪ್ರಭಾವವು ಎಷ್ಟೋ ಸಲ ವಾಕ್ಯರಚನಾಪದ್ಧತಿಯಲ್ಲೂ ಪಡೆನುಡಿಗಳಲ್ಲೂ ಕೂಡ ಕಂಡುಬರುತ್ತಿದೆ (ಭಾಷಾಶಾ. ೧೬೪); ನವ್ಯಕವಿಯು ಒಮ್ಮೊಮ್ಮೆ ಅನ್ಯಕವಿಗಳ ಇಂಥ ಶಬ್ದ ಸಮುಚ್ಚಯಗಳನ್ನಾಗಲಿ ಪಡೆನುಡಿಗಳನ್ನಾಗಲಿ ಬಳಸಿಕೊಳ್ಳುತ್ತಾನೆ (ನವ್ಯಕಾ. ೩೩). 'ಪಡೆವಾತು' ಪರಾ. [ಪಡೆ$_2$ + ನುಡಿ$_2$]

ಪಡೆನೆರಪು (ಕ್ರಿ). ಸೈನ್ಯವನ್ನು ಒಟ್ಟುಗೂಡಿಸು ; ದಂಡನ್ನು ಒಂದುಗೂಡಿಸು : ಆ ಯವನರನ್ ಮುರಿದು, ಅವರೂರ್ಗಳನ್ ಕೊಳಲ್ ಪಡೆನೆರಪಿ ತಾನತ್ತ ಪೋಗೆ ಮಗನ್, ಎನಗಿತ್ತ ತಪ್ಪದೆಯೆ ಇರುಳಿರುಳ್ ಸುಳಿಯುವುವು ಕನಸುಗಳ್ (ಹಾರಸಿ. ೯-೧೯೭).

[ಪಡೆ$_2$+ನೆರಪು$_1$]

ಪಡೆನೋಡು (ಕ್ರಿ). ಸೈನ್ಯವನ್ನು ನೋಡು; ದಂಡನ್ನು ಕಾಣು: ಪಿಡಿದಡಸಿ ತಿನಲ್ ಬಂದಿರ್ದಡೆಯೊಳ್ ನಿನಗಾಗಿ ಮದನನೆನ್ನನೆ ತಿನೆ ಕೇಳ್ ಪಡೆನೋಡಲ್ ಬಂದವರಂ ಗುಡಿವೊಱಸಿದರೆಂಬುದಾಯ್ತು ನಿನ್ನೆನ್ನೆಡೆಯೊಳ್ (ಪಂಪಭಾ. ೩-೧೫). [ಪಡೆ$_2$+ನೋಡು]

ಪಡೆಪಾಳಿ 'ಪಡಪಾಳಿ$_1$' ನೋ.

ಪಡೆಪಾಳಿತನ (ನಾ). ಗಳಿಸುವಿಕೆ ; ಸಂಪಾದನೆ ಮಾಡುವಿಕೆ : ಕುಂಟಣಯೊರ್ವಳ್ ತನ್ನ ಮಗಳ ಸೊಬಗಿನ ಸೊಂಪಿನ ಪಡೆಪಾಳಿತನಮನೆ ನುಡಿವುದುಂ (ಅನಂಪು. ೮-೨೪ ಪ). [ಪಡೆಪಾಳಿ(<ಪಡಪಾಳಿ$_1$)+-ತನ]

ಪಡೆಪು 'ಪಡಪು$_1$' ನೋ.

ಪಡೆಪುಗಾತಿ (ನಾ). ಗಳಿಸುವವಳು ; ಹಣವನ್ನು ಸಂಪಾದಿಸುವ ಹೆಣ್ಣು : "ಪಡೆಪುಗಾತಿ=ಗಳಿಸುವ ಹೆಣ್ಣು" (ಗಂಗಾಮ. ೧೯೫).

[ಪಡೆಪು(<ಪಡಪು$_1$)+-ಕಾತಿ$_5$]

ಪಡೆಪುಗಾರ್ತಿ 'ಪಡಪುಗಾರ್ತಿ' ನೋ.

ಪಡೆಪುಗಿಡಿಸು (ಕ್ರಿ). ಗಳಿಕೆಯನ್ನು ತಪ್ಪಿಸು ; ಲಾಭವನ್ನು ಕಸಿದುಕೊಳ್ಳು : ತನ್ನ ಮಗಂಗಿಟ್ಟಗೆಗೊಳ್ವ ಬೆಸನಂ ಪೇಟ್ಟೊಡವನೊಂದುಮಂ ಕೊಳ್ಳದಿರೆ ಮುಳಿದವನ ತಲೆಯನೊಡೆಯೆ ಬಡಿದೆನ್ನ ಪಡೆಪುಗಿ[ಪಾಠಾಂ. ಪಡಪು ಗೆ]ಡಿಸಿಕೊಂಡು ಪೋದುದೆಂದು ತನ್ನ ಕಾಲ ಪಿಡಿವುದುಡಿವುದುಂ (ಚಾವುಂಪು. ೨೬).

[ಪಡೆಪುಗಿಡು(<ಪಡಪುಗೆಡು)+-ಇಸು$_3$]

ಪಡೆಪುಗಿಡು 'ಪಡಪುಗೆಡು' ನೋ.

ಪಡೆಮಾತು 'ಪಡೆವಾತು' ನೋ.

ಪಡೆಮಾತುಗೇಳ್ (ಕ್ರಿ). ೧.ಸುದ್ದಿಯನ್ನು ಕೇಳು ; ಸಮಾಚಾರವನ್ನು ತಿಳಿ ; ವೃತ್ತಾಂತವನ್ನು ಅರಿತುಕೊಳ್ಳು : ಸೈಂಧವನವರಂ ಧಿಕ್ರಿಸಲೆಂದು ಮೆಯ್ಗರೆದು ಬಂದು . . . ತೊಟ್ಟಗೆ ಪಾಂಚಾಳಿಯನೆತ್ತಿ ತನ್ನ ರಥದೊಳ್ ತಂದಿಟ್ಟುಕೊಂಡುಯ್ದುದನ್ನೆಗಮಂತಾ ಪಡೆಮಾತುಗೇಳ್ದು ತಿಬಳರ್ ಭೀಮಾರ್ಜುನರ್ . . . ಎಯ್ದಿದರ್ (ಪಂಪಭಾ. ೭-೩೧). ೨. ಪ್ರಸಿದ್ಧಿಯನ್ನು ಕೇಳು ; ಕೀರ್ತಿಯನ್ನು ತಿಳಿದುಕೊಳ್ಳು : ಅಡಿಗಡಿಗೆ ಬಗೆದು ಭಾವಿಸಿ ತೊಡರ್ವರ×ರಲ್ಲೆ ನಿನ್ನ ಕೂರಸಿಯೆಂಬೀ ಪಡೆಮಾತುಗೇಳ್ದುದು ಗೋನುಗ ಪುಡುಕೆಯ ಮೊಲದಂತೆ××ಬುತಿರ್ಪರ್ಮ್ಮಲೆಪರ್ (ಎಕ. VIII, ಸಾಗರ. ೧೦೯-೧೯ ; 1082).

[ಪಡೆಮಾತು(<ಪಡೆವಾತು)+ಕೇಳ್]

ಪಡೆಮಾತುಗೊಳ್ (ಕ್ರಿ). ಸುದ್ದಿಯನ್ನು ಎತ್ತು ; ಸಮಾಚಾರವನ್ನು ಪ್ರಸ್ತಾಪಿಸು : ಕಿಡುವೊಡಲ ಕಿಡುವ ರಾಜ್ಯದ ಪಡೆಮಾತುಗೊಳಲ್ಕುಮೆನ್ನ ಮೆಯ್ಯಗಿದಪುದೀಗಡೆ ಜೈನದೀಕ್ಷೆಯಂ ಕೊಂಡಡಿಗೆಜಗಿಸುವೆಂ ಸಮಸ್ತಸುರಸಮುದಯಮಂ (ಆದಿಪು. ೧೪-೧೨೭).

[ಪಡೆಮಾತು(<ಪಡೆವಾತು)+ಕೊಳ್$_1$]

ಪಡೆಯ(ನಾ). ಆದಾಯ; ಗಳಿಕೆ (?) : ಭಟಾರರ ಶ್ರೀನಕ್ಷತ್ರದೊಳ್ ನ್ನಿರ್ವ್ವ ಪಾರ್ವ್ವರುಣ್ಣೋಂ ತಿಂಗಳ್ಗೆ ಏಕಭೋಗಂಮಿದಱಾ ಪಡೆಯಂ ವರ್ಷಕ್ಕೆ ಪತ್ತುಗದ್ಯಾಣಂ ತೆಱೆ (ಎಕ. IV, ಹೆಗ್ಗಡ. ೪-೬ ; ಸು. 750) ; ಕೆಸುಗೊಳವೊಡೆಯ ಮಹಾಜನಕ್ಕೆ ಪೆರ್ವ್ವಟ್ಟಯೂರುಂ ಮರ್ದೂರುಮಂ ಬ್ರಹ್ಮದೇಯಂ ಪೊಯ್ದಂ ಅವಱಾ ಪಡೆಯಂ ಪೆರ್ವ್ವಟ್ಟಯೂರುನ್ದು ತೆಱೆ ಪೆರ್ನ್ನಿನ್ದು ಎರಡು ತೆಱುವುದು (ಎಕ. IV,ಹೆಗ್ಗಡ. ೪-೨೧ ; ಸು. 750) ; ಕೊಳಗುಪ್ಪೆ ಪೆಟ್ಟವಸಿ ಅರ್ಧಂ ಕಾನಸೊಪ್ಪಿನರ್ಧಂ ವಾರಲರ್ಧಂ ಕರ್ಸಸಿಣ್ಡಂ ನೂರಿಪ್ಪತ್ತೆಣ್ಬು ಕೊಂಬೆಗಾರೊಡಂ ಪಡೆಯಂಮೆಣ್ಬು ಮಲಾಡೆ ಜಮಳಿ ಒನ್ದು ಇದು ಗೋಪಾಲದೇವರಾ ದತ್ತಿ (ಎಇ. XXI, ೧೭೦-೧೫ ; ಸು. ೩೫ಯ ಶತ); ಉಪ್ಪವಳ್ಳಿಯ ಹವಿಗಂಗೆ ಕೊಟ್ಟ ಸ್ತಿತಿ ಕ್ರಮಮಾವುದೆಂದೊಡೆ ಅಮ್ಮೆಳಿಯ ಪತ್ತಣ್ಣ ತೆಱುವ ಅಯ್ನೂಱು ಭತ್ತ ಪಡೆಯಂ ಯಿದಕ್ಕೆ ಸಾಕ್ಷಿ ಮುಗುಳ ಚಣ್ಣಯೂರ ಪಲ್ಕಾಡಿ ಅಮ್ಮಾಳೆ (ಎಕ. VI, ಚಿಕ್ಕಸು. ೪೨-೧೯ ; 959). [<ಪಡೆ$_1$]

ಪಡೆಯಿಲ (ನಾ). ೧. ಸೈನಿಕ ; ಭಟ; ಯೋಧ : ಇಲ ಪ್ರತ್ಯಯಕ್ಕೆ -ಪಚ್ಚಯಿಲಂ, ಪಡೆಯಿಲಂ, ಗಾವಿಲಂ (ಶಪಾದ. ೨೦೫ ಪ್ರಯೋ). ೨. ಪೋಲೀಸು ; ಪೇದೆ : ಪೆಣ್ಗಳಳ್ಳಿರಿಯುವೆದೆಯಿಂದ ಪಡೆಯಿಲರ ಬರವಂ ಅಳ್ಳಿಯಂ ಕೊಳ್ಳಿಯಿಂದಿರಿವವೋಲ್ ಪೇಳಿದರ್ (ಕಾಲೂರ. ೧೫೮-೩೫೦). [ಪಡೆ$_2$+-ಇಲ]

ಪಡೆಯಿಸು, ಹಡೆಯಿಸು (ಕ್ರಿ). ಪಡೆಯುವಂತೆ ಮಾಡು ; ಹೊಂದುವಂತೆ ಮಾಡು ; ಉಂಟು ಮಾಡು : ಮಂತ್ರಸಿದ್ಧನ ವಿದ್ಯಂ ಸತ್ಯಮಪ್ಪುದಱೊಳ್ ಸಂದೆಯಮಿಲ್ಲದಱಂದೀ ಸಿಂಹಮಂ ಪ್ರಾಣಮಂ ಪಡೆಯಿಸಿ ನೋಟ್ಟ ವಿನೋದಮೆಂತುಂ ಬೇಡೆಂಬುದುಂ (ಪಂಚತಂ.೨೫೧-೨೧); ಈಶ್ವರನಿಂ ಮುನ್ನವೆ ಮಣ್ಣಳಿಗೊಂಡ ಮದನಂಗಾ ಮಱುವುಟ್ಟಂ ಪಡೆಯಿಸಲೊದವಿದ ಜೀವನವಾಯುವಿದೆನೆ ಕಡುಚದುರರ ಚಿತ್ತಂಗೊಳಿಸಿದುದಾ ಬನದೊಳು ಸುಳಿವಳಗಾಳಿ (ಜಯಕಾ. ೧-೫೧). **ಹಡೆಯಿಸು** : ಕಡು ರಂಜಿಪ ಧರ್ಮಚಕ್ರಸಮನ್ವಿತ ನಡೆದು ನೆಲಕೆ ಸುಭಿಕ್ಷವನು ಹಡೆಯಿಸುತಾರ್ಯಾಖಂಡದ ಜನಪದಕದರಿಸಿದನು ಧರ್ಮವನು (ನೇಮಿಸಂ. ೩೨-೧೨೪). [ಪಡೆ$_1$+-ಇಸು$_3$]

ಪಡೆವಳ, ಪಡವಳ$_1$, ಪಡವಳ್ಳ, ಪಡಾವಳ, ಪಡೆವಳ್ಳ, ಪಡೆವಾಳ, ಹಡವಳ, ಹಡೆವಳ (ನಾ). ೧.ಸೇನಾಧಿಪತಿ ; ದಂಡನಾಯಕ ; ಸೇನಾನಿ : "ಸೇನಾನಿ ವಾಹಿನೀಪತಿ ತಾನಕ್ಕುಂ ಪಡೆವಳಂ" (ಪಸ್ತುಕೋ. ೬೧-೫೪); ಅಂತು ವಿರಾಟನಂದನನಂ ಧರ್ಮನಂದನಂ ಸೇನಾನಾಯಕನಂ ಮಾಡೆ ನಾಳೆ ಕಾಳೆಗಮೆಂದು ಪಡೆವಳರ್ ಪೋಗಿ ಸಾಱುಮೆಂಬುದುಂ (ಪಂಪಭಾ. ೧೦-೩೪ ಪ) ; ಪಡೆವಳರಾಕ್ಷಣದೊಳ್ ಕೈವೀಸಲ್ . . . ಅಬಲ್ವಡೆ ಎರಡುಂ ತಾಂಗಿದುವಾರುಬಟಿಯಿನದುಬುತಮಪ್ಪಂತೆ (ಜಯಕಾ. ೬-೨೮); ಹಂತಿಗೊಂಡು ತಿಂತಿಣಿಸಿ ತುಟುಲ್ಗೆಯ್ವ್ ...ಪಡೆವಳರಂ ಘೋಟ್ಟಾಯ್ಗರಂ ಝುಳಂಬಾಯ್ತರಂ ಪಸಾಯ್ತರಂ ಪ್ರೇಮದಿಂದವರವರಂತರವ ಱಂತು ಮಧುರೋಕ್ತಿಗಳಿಂ ಸಂತಸವಡಿಸುತ್ತ (ಚಿಕಪಂ.೬೪-೯); ಮಾರಿಯ ಕೋಱೆವಲ್ಲಂ ಮುಱವ, ಭೈರವನ ನಿಡುಜಡೆಯಂ ಪಿಡಿವ, ಕಾಳರಕ್ಕಸಿಯ ಕೂರ್ವಾಳಂ ಸೆಳೆವ ಪಡೆವಳರೊಳರ್ (ರಾಮಾಶ್ವ.೧೨-೬). **ಪಡೆವಳ$_1$** : ೧. ಮಣ್ಡಳೇಸ್ವರಂ ಸರಿಕ ನಡೆವರ ಪಡವಳ ಗು[ಗ್ಗ]ಯ್ಯನುಂ (ಇಎ. ೧೯೪೬, ಹಾನಗಲ್. ೨೫೦-೨೮ ; 993) ; ಆ ಪರಮೇಶ್ವರಿಗೆ ಜಗದ್ವ್ಯಾಪಕ ಶುದ್ಧೇಂದುಕೀರ್ತ್ತಿ ಪಿರಿಯ ಮಗಂ ಲಕ್ಷ್ಮೀಪತಿ ಸಮಗ್ರವಿಜಯಶ್ರೀಪತಿಯೆನೆ ಧರೆಗೆ ನೆಗೞ್ದ ಪಡವಳ ತೈಲಂ (ಸೌಇಇ. XI-i, ೫೨-೩೩ ; 1007) ; ಮಹಾಮಣ್ಡಳೇಸ್ವರಂ ಕೀರ್ತ್ತಿದೇವರ ಪಿರಿಯ ಪಡವಳ ಕೀರ್ತಿಯಣ್ಣಂ . . . ಕಪ್ಪಮಂ ತರಲು ಪೋದಲ್ಲಿ ಪಡವಳ ಕೀರ್ತಿಯಣ್ಣನ ಮಯ್ದುನ ಬಿಂಜಿಮಯ್ಯನ ಮಗ ಪೇಮಣ್ಣಂ ಬಯಲ ಬವರದಲು ಮಾರ್ಬಲಮನೆರದಾಳಿಂ ಮುಂನದಿಱಾದು ಸುರಲೋಕಪ್ರಾಪ್ತನಾದ (ಎಕ. VIII, ಸೊರಬ. ೪೬೮-೨ ; 1112) ; ಪಡವಳ ಬಂದಿದ್ದಾರೆ ಒಡೆಯರೆ (ಚಿಕರಾ. ೧೬೪). **ಪಡವಳ್ಳ** : ೧. ಅಂತೇಱಾ ನಡೆಯೆ ಸಂಧಿಸಿ ಪಡವಳ್ಳರ ಸಂತಾನ ಪಡಿಯಱರುಗಳ ತಿಂಥಿಣಿಯಡಪ

ವಳ್ಳರ ಕಬ್ಬಿಗರ ಬಲುಸಂತತಿ ಮುಂದೆಯ್ದಿದುದು (ಆನಂಚ. ೯-೬೨).
ಪಡಾವಳ : ೧. ಕದಂಬಕುಳ್ಕೇರವಂ ಕೀರ್ತ್ತಿದೇವನ ಪಡಾವಳ ಗೊರವರ ಕಿತ್ತಿಗನ ಭಂಟಂ ಶಾಮನ್ತ ಕುಪ್ಪ×××ವಾಗದೊಳು ಪುಟ್ಟಿದ ಸೆಣುವಗೆಯಲೂ ಪುಟದ ಧೀವರಾ ಪಡಾವಳ ಭಿಲ್ಲ ಭರ್ಮ್ಮನ ಪುತ್ರ ಗೋತ್ರಪವಿತ್ರಮ್. (ಎಕ. VIII, ಸಾಗರ. ೭೧-೩; 1173 ?). **ಪಡೆವಳ್ಳ : ೧.** ಪಡೆವಳ್ಳಂ ಗಡಮಾ ಬಲಕ್ಕೆ ದಲೆ ಧೃಷ್ಟದ್ಯುಮ್ನನೆಂಬೊಳ್ಳೆ (ಪಂಪಭಾ. ೧೦-೪); ನೆಗೞ್ದಿತ್ತಿಮಬ್ಬೆಯ ತನಯಂ ಪಡೆವಳ್ಳ ತೈಲನಣ್ಣಗದೇವಂ ವಿನಯಾರ್ಣವನೂರ್ಜಿತಶೌರ್ಯನಿದಾನಂ ಚಕ್ರವರ್ತಿ ಸೈನ್ಯಾಧೀಶಂ (ಅಜಿಪು. ೧೨-೨೦); ಪಡೆವಳ್ಳಂ ಡಂಗುರಂಬೊಯ್ಸಿದಂ (ಅನಂಪು. ೯-೫೯); ಬಿಡು ಮಾಗಧನ ಗೆಲ್ದುದಾವ ಗಹನವೆಲೆ ಪಡೆವಳ್ಳ ಕೇಳ್ಮಂತ್ರಿ ಕೇಳು (ಭರತ. ೨೪-೩); ಆ ವೇಳೆಗೆ ಅಂಬಿಗರ . . . ಕೈದುಗಾಱರ ಪಡೆವೆಱಸು ಪಡೆವಳ್ಳರ್ ರಾವುತ್ತರ್ ಸಾದಿಗಳ್ ತೇರಾಳ್ಗಳ್ ದಂಡೆತ್ತಿ ಪೋದರ್ (ರಾಮಾಶ್ವ. ೯೩-೨೯). **೨. ಅಧಿಕಾರಿ; ಹೆಗ್ಗಡೆ :** ಮಳೆಯರಾಜನ ಮನೆಯ ಪಡೆವಳ್ಳನೋ ಬಳಿಕ್ಕಿಳೆಯ ದಂಗುಡಿಮಾರನಣುಗಾಳೊ . . . ನೀನೆನುತ್ತೆ (ಅರಾಶ. ೨-೧೧-೨೭).
ಪಡೆವಾಳ : ೧. ಪಡೆವಾಳನಾದಿದ ಮಾತನು ಕೇಳುತ ಕಡುಬೇಗದೊಳು ಪೋದನೋರ್ವ (ಜಿಸಂರಾ. ೬-೩೩); ಪಡೆವಾಳ ನೀಂ ಮುಳಿಯಲೇಸು ಈನ ಮನುಜರಂ ತಡೆಗಡಿದು ಕುಟುಕುಗೊಂಬೆನು ನಿಮುಸಮಾತ್ರದೊಳ್ ಕೊಡುಯೆನಗೆ ನೇಮಮಂತದನು (ಘೋರಾಸು. ೮). **ಹಡವಳ : ೧.** ಜಯಕೇಸಿದೇವರಸರುಂ ತಂತ್ರಪಾಳ ಚಟ್ಟಮಯ್ಯ ನಾಯಕನುಂ ಹಡವಳ ಮಲ್ಲಿಯಣ ತೊಟ್ಟಗವುಂಡ ಎಱಭಟ್ಟನು (ಸೌಇಇ. XX, ೧೦೭-೪೨; 1138); ಶ್ರೀಮನ್ಮಹಾಪ್ರಧಾನಂ ಹಿರಿಯ ಹಡವಳಂ ಚಾವಿಮಯ್ಯನ ನೆಗರ್ತ್ತೆಯೆನ್ತಂದಡೆ (ಎಕ. V, ಹಾಸನ. ೫೭-೯; 1155); ಚಿಡ್ಡಳಿಗೆ ಎಪ್ಪತ್ತಱ ಬಳಿಯ ಬಾಡ ಹಿರ್ಯ್ಯ ಸಕುಣವ ಕಾವದೇವನ ನಾಯಕ ಹಡವಳ ಮಾಚೆಯನಿಱುದು ತುಱುವಂ ಕೊಣ್ಡು ಹೋಹಲ್ಲಿ (ಎಕ. VIII, ಸೊರಬ. ೩೦-೬; 1193); ಬೊಪ್ಪಗೌಡ ಗೋವಿಂದಗೌಡ ಹಡವಳ×××ಕಂ ಸಿದ್ಧೇಶ್ವರದೇವರ ದೇವಾಲ್ಯದ ಖಂಡಸ್ಫುಟಿತ ಜೀರ್ಣೋದ್ಧಾರಕ್ಕಂ (ಎಕ. VII, ಶಿವಮೊ. ೪೧-೬೬; 1203 ?). **ಹಡೆವಳ : ೧.** ಅಂತು ಹಡೆವಳನವರು ಹಡದ ಪೂರ್ವದ ಜನ್ಮಭೂಮಿಯೂರ್ಗ್ಗಳು ಬಿದಿರೆಯಡವಿಗಾವೆ (ಎಕ. VII, ಶಿವಮೊ. ೫೫-೭೯; 1167); ಹಡೆವಳ ಗೊಗ್ಗಿ ತಾಂ ನೆಗಳ್ದ ರಕ್ಕಸಗಂಗನ ರಾಜ್ಯ ವಿಸ್ತರಕ್ಕಡುಗಲಿ ಗಂಡ ರಾಚಣನೂರ್ಜ್ಜಿತಕೀರ್ತ್ತಿವಿಳಾಸಮೂರ್ತ್ತಿಯಂ . . . ಪೊಗಳೆ ಮೂರ್ತ್ತಿಸಿದರಕ್ಕಸಧರ್ತ್ತಿವಲ್ಲಭ (ಎಕ. VII, ಶಿವಮೊ. ೫-೨೧; 1218). [ಪಡೆ$_2$ + -ವಳ./ತೆಲು. ಪಡವಲ, ಪಡವಾಲು, ಪಡಾಲು]

ಪಡೆವಳ್ತಿ 'ಪಡವಳತಿ' ನೋ.

ಪಡೆವಳ್ಳ 'ಪಡೆವಳ' ನೋ.

ಪಡೆವಾತು, ಪಡೆಮಾತು, ಹಡೆಮಾತು (ನಾ). ೧. ಜನಜನಿತವಾದ ಮಾತು ; ಪ್ರಸಿದ್ಧಿ ; ಕೀರ್ತಿ ; ಹೆಸರುವಾಸಿ : ಕಡುಗಲಿ ತನಮುಂ ಚಾಗದ ಪೊಡರ್ಪೂಮೊಳ್ನುಡಿಯೊಳಾದ ಮಾನಸಿಕೆಯುಮುರ್ಕುಡುಗದ ಶೌಚಮುಮಾಯದ ಪಡೆವಾ[ಪಾಠಾಂ. ಮಾ]ತುಂ ಪೆರ್ಮ್ಮ ವಡೆದುವವನಿಂದಿಳೆಯೊಳ್ (ಅದಿಪು. ೧೨-೧೦೪; ಕಾವ್ಯಾವ. ೩೪೪ ನೋ). **೨. ವ್ಯರ್ಥವಾದ ಮಾತು ; ಅನಗತ್ಯವಾದ ನುಡಿ :** ನಿನ್ನ ನಚ್ಚಿನ ಶರೀರಮೆ ಮುನ್ನಿನ ಮಾಟ್ಕಿಯಲ್ತದೇತೆಱ ಪಡೆವಾ[ಪಾಠಾಂ. ಮಾ]ತಪಾಯಮೆನಿಸರ್ದವು ನಿನ್ನವೆ ಬೇಱವೆಲ್ಲವೆಂದಱುದೆಲೆ ಭವ್ಯ ನಿನ್ನೊಡನೆ ಬಪ್ಪವನಪ್ಪಿಸ ಸುವ್ರತಂಗಳಂ (ಸಮಪ. ೫-೮೯); ಆಂ ಪೋಗಿ ನುಡಿವೆನಪ್ಪೊಡೆ ತಾಂ ಪಿರಿದನುರಾಗಮಾಗಿ ಬಾರದೆ ಮಾಣ್ದಂದೇಂ ಪಡೆವಾತೊ ನಿನಗೀವೆಂ ಪೊನ್ನಂ ಲಕ್ಕಲೆಕ್ಕದಿಂ (ಜೀವಸಂ. ೧೧೬-೫೫); ಪಾಪಗ್ರಹಾಂಶಮುದಯಿಸಿ ಪಾಪಗ್ರಹಮುದಯಮಾಗೆಯುಂ ವಿಕ್ರಿಸೆಯುಂ ವ್ಯಾಪಿಸುತೊಳ್ಮಟ್ಟೆ ಕೊಂಡೊಡದೇಂ ಪಡೆವಾತೊಳ್ಳಿತೆಂದನೊಳ್ಳಿನ ಬಟ್ಟಂ (ಬಟ್ಟಮ. ೬-೨); ಪಡೆವಾತೇಂ ತನ್ನಾಣೆಯನಿಡೆ ತೊಟ್ಟನೆ ದುಷ್ಟಭೂಭುಜಂಗರ್ ಭಯದಿಂ ಪಡೆಯುಡುಗುವರಾಕ್ಷಣವೆಂದೊಡದೇಂ ಸನ್ಮಂತ್ರತಂತ್ರಸಿದ್ಧನೋ ಭೂಪಂ (ಧರ್ಮನಾ. ೩-೪೦). **ಪಡೆವಾತು: ೧.** ಕರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ (ಪಂಪಭಾ. ೧೨-೨೧೭); ಬಡಬಾನಲಂಗೆ ಸೆಡೆದಿಂಗಡಲೆ ಸರಣ್ಬೊಕ್ಕುದಮರಶೈಲಮೆನೆಂಬೀ ಪಡೆಮಾತಂ ನೀರ್ಗಾದಿಗೆ ಪಡೆಯುತ್ತುಂ ಪೊನ್ನ ಕೋಂಟೆಯುಂ ಬಳಸಿರ್ಕುಂ (ಪಂರಾಮಾ. ೧-೧೧೩); ಒಮ್ಮೆ ಚಂದ್ರನ ಕವಿಯೆ ಧೂಮಕೇತು ಸ್ತಿಮಿತವಾಗಿಹುದವನ ಹಿರಿಯ ಪಡೆಮಾತು ! (ಪಯಣ. ೧೬-೧೦). 'ಪಡೆಮಾತುಗೇಳ್' ಪರಾ. **೨.** ಭೀದಿಸಲೆಂದೆದಲ್ ನುಡಿದರೆನ್ನದಿರೊಯ್ಯನೆ ಕೇಳ ಕರ್ಣ ನಿನ್ನಾದಿಯೊಳಬ್ಬೆ ಕೊಂತಿ ನಿನಗಮ್ಮನಹರ್ಪತಿ . . . ಪೆಱತೇಂ ಪಡೆಮಾತೊ ನಿನ್ನದೀ ಮೇದಿನಿ ಪಟ್ಟಮುಂ ನಿನತೆ ನೀನಿರೆ ಮತ್ತೆ ಪೆಱರ್ ನರೇಂದ್ರರೇ (ಪಂಪಭಾ. ೯-೬೪); ಕುಡುವುದು ಕಿಚ್ಚಂ ದೇವರ್ ತಡೆಯದೆ ಕತ್ತಿಗೆಯನೆಮಗೆ ಬೆಸಸುವುದಿನ್ನೇಂ ಪಡೆಮಾತೊ ತನಯರಿಲ್ಲದೆ ತಡೆದಿರ್ಪುದು ತಕ್ಕುದಲ್ತು ಭುವನಾಧಿಪತೀ (ಅಜಿಪು. ೧೦-೪೦); ಭೂಪತಿಗಳಂದು ಶೌರ್ಯಟೋಪ ದಿನರಿನ್ಯಪಕಳಾಪಮುಂ ಲೋಪಿಸಿ ಮತ್ತೇ ಪಡೆಮಾತೋ ತಪದೊಳಮಾಪುರುಷರ ತೆಱದಿನೆಸೆವರಾರೆನೆ ನೆಗೞ್ದರ್ (ನೇಮಿಪು. ೧೪-೧೩೬); ಪಡೆ[ಪಾಠಾಂ.ಡಿ]ಮಾತೇನಿದು ಕೃಷ್ಣನಾಜ್ಞೆಯೊಳೆ ವಿದ್ವಿಟ್ಸೇನೆಯುಂ ಸುಟ್ಟು ಮಾಣ್ಬೊಡೆ ಮಾಣ್ಬುಂ ... ತತ್ಸಾಯಕಂ ಕಿಡಿಯುಂ ಕೇಸುರಿ ಸೂಸೆ ಬಂದಳುರ್ದುರ್ ಕೊಂದತ್ತಾ ಚತುಸ್ಸೈನ್ಯಮಂ (ಜಗವಿ. ೯-೩೩). **೩. ಸುದ್ದಿ ; ಸಮಾಚಾರ; ವದಂತಿ:** ಅಲ್ಲಿ ಪಾಂಡವರ ಪಡೆಮಾತಾವುದು ಧೃತರಾಷ್ಟ್ರ ಸುಯೋಧನರಿರ್ಪಂದಮಾವುದೆಂದು ಬೆಸಗೊಳೆ (ಪಂಪಭಾ. ೩-೩೧ ಪ); ಸ್ವಾಗತಕುಶಲಸಂಭಾಷಣಾನಂತರಂ ಪಡೆಮಾತು ಮಾತುಗಳ್ ತಗುಳೆ ಮಾತುಮಾತಾಗೆ ನಾರದನಿಂತೆಂದಂ (ಶಾಂತಿಪು. ೨-೨೧ ಪ); ಈ ತೆಱನಾತನೊಳ್ಪಡೆಮಾತಂ ಪೇಱ್ದೆನ್ನ ಸುಖದಿನರ್ದಪೆನೆಂದಂ(?)ದಾ ತರುಣಿಯಿಂದೆ ಬೀಱ್ಕೊಂಡಾತುರದಿಂ ಹೊನ್ನ ಹಂಸೆ ಪೋದುದಲಂಪಿಂ (ನಳಚಂ. ೧೭೩); ಸಿವಡುಗಟ್ಟೆ ಜನವು ನಿಂತಲ್ಲೆಲ್ಲ ಅದೇ ಪಡೆಮಾತೇ (ಕನಕ. ೩೦). **೪. ಪ್ರಸಂಗ ; ಪ್ರಸ್ತಾಪ ; ವಿಷಯ :** ಒಡೆಯರಿವರೆಂಬ ಭಯಮುಮನೊಡವೆಯ ಲೋಭಮುಮನುಟ್ಟುದು ನಿಮ್ಮಭಿಮತಮುಂ ನುಡಿದುಂ ಭಯಲೋಭಂಗಳ ಪಡೆಮಾತಱುಂಪಂಗಮೊಪ್ಪಮುಲ್ತೆಱುಂಪಂಗಂ (ಅನಂಪು. ೧೩-೫೬); ಪೊದರ್ಪತ್ಯುದ್ಧತರಾಜವಂಶವನಮಂ ನಿರ್ಮೂಲಿಸಲ್ ಪೋಪೆನೆಂಬೊಡದಂ ಮುನ್ನಮೆ ನಿಮ್ಮ ವಿಕ್ರಮದವಾಗ್ನಿಜ್ವಾಲೆ ತಳ್ತರ್ದುದಾ ಪಡೆಮಾತಿರ್ಕೆ . . . ಅನುಗ್ರಹಿಪುದೆನ್ನಂ ದೇವ ಕಾರುಣ್ಯದಿಂ (ಪುಷ್ಪಪು. ೫-೩). **೫. = ಪಡೆನುಡಿ :** ಅಪರಲ್ಲಿ ಕನ್ನಡದ ಪಡೆಮಾತು ಪಡಿನೆಳಲಾಗಿ ತೋರಿದೆ (ತನಿ. ೩೧); ಕಂನುಡಿಯೊಳಗಿನ ಕುರುಬರ ಬಗೆಗಿನ ಗಾದೆ, ಪಡೆಮಾತುಗಳಿಂದ ಈ ಜನದ ಬಗೆಗೆ ಮೇಲಣ ಹಂತದವರೆಂಬ ಕರ್ನಾಟಕದಲ್ಲಿ ಇದ್ದ-ಇರುವ ಮನೋಭಾವವು ಬಯಲಿಗೆ ಬರುವುದು (ಕರ್ನಾಟ. ೩೪೩); ಇಲ್ಲಿ ಕನ್ನಡ ಪಡೆಮಾತಿನ ಬೆಡಗನ್ನು ಕಾಣಬಹುದು (ಕನ್ನಜಾ.೧೯೨). **೬. ಚೌಕವಾದ ಮಾತು; ವೈಯಾರದ ಮಾತು :** ಪಡೆಮಾತಿನ ಬಡಿವಾರದ ಮಿಂಡರ ಮೊದಲಿಗ! ಕುಸುಮಾಸ್ತ್ರನ ಬೆಸೆಗಾರದ ಬೆಸೆಗಾರ! (ಪಂತ್ರಶ. ೬೧-೪). **ಹಡೆಮಾತು : ೫.** ಬಸರೂರಿನ ಗಂಗೆ ಪ್ರವೀರರಾಚಾರ್ಯರಿಗೆ ಒಲಿದಿದ್ದರೆ ಅವಳ ಮಗಳು ಪುಟ್ಟ ಶಾಮಭಟ್ಟರು ಪ್ರಸಂಗ ಮಾಡುವ ತೆರವಿ, ಅವರ ಹಡೆಮಾತಿನ ಚಮತ್ಕಾರಕ್ಕೆ ಸೋತಿದ್ದಳು (ಪ್ರಶ್ನೆ. ೧೩೫). [ಪಡೆ$_2$ + ಮಾತು$_1$]

ಪಡೆವಾಳ 'ಪಡೆವಳ' ನೋ.

ಪಡೆವೆರಸು (ಕ್ರಿ). ಸೈನ್ಯದೊಂದಿಗೆ ಕೂಡಿಕೊಳ್ಳು ; ಸೇನಾ ಸನೇತನಾಗು : ಪಡೆವೆರಸಿ. ನಡೆವುದು ಅಭಿಷೇಣನಮೆಂಬುದು (ಪಲಾಯು. ೩೩-೩೦೭). [ಪಡೆ[2] + ಬೆರಸು[1] (< ಬೆರೆಯಿಸು)]

ಪಡೆವೋಗು (ಕ್ರಿ). ಸೈನ್ಯದೊಂದಿಗೆ ಹೋಗು; ದಂಡೆತ್ತಿಹೋಗು: ಕಂಪ್ಪಿಲಿಗೆ ಪಡೆವೋದಲ್ಲಿ ಕೊಮಾಲರಾ ಮಗನ್ ಪಾಣ್ಡಪ್ಪನ್ ಕಾಳೆಗ ದೊಳ್ಸತ್ತಲ್ಲಿ (ಎಳ. X, ಮುಳಬಾ. ೨೫೫-೭ ; ಸು. 750).

[ಪಡೆ[2] + ಪೋಗು[1] (< ಪೋ[1])]

ಪಡೆವೋಲ 'ಪಡಲ[1]' ನೋ.

ಪಡೆವೋಸಿ (ನಾ). ಪಕ್ಕದ ಮನೆಯವನು ; ನೆರೆಮನೆಯಾತ ; ನೆರೆಯವನು : ರಾತ್ರಿ ಮುನಿಗೆ ಬಂದಾಗ ನಮ್ಮ ಪಡೆವೋಸಿ ಮುನಿಯ ಗಡಿಯಾರ 'ಡಣ್' ಎಂದಿತು (ನಾಡಿಗೇ. ೧೩೪).

[← ಹಿಂ. ಮರಾ. ಪಡೋಸೀ]

ಪಡ್ಯಾನೆ 'ಪಡಪಾನೆ' ನೋ.

ಪಡ್ಡ 'ಫಡ್ಡ' ನೋ.

ಪಡ್ಡ (ಗು). ಬಾಗಿದ ; ಡೊಂಕಾದ ; ವಕ್ರವಾದ (?) : ಡೊಡ್ಡ ಹೊಟ್ಟೆಯ ಗೂನು ಬೆನ್ನಿನ ಅಡ್ಡಮೋಜಿಯ ಗಂಟುಮೂಗಿನ ಪಡ್ಡ [ಪಾಠಾಂ. ಡೊಡ್ಡ, ಮೊಂಡು] ಕೈಕಾಲುಗಳ ವುದುರಿದ ರೋಮವಿನಾಸೆಗಳ ಜಿಡ್ಡುದೇಹದ ಗುಜ್ಜುಗೊರಲಿನ ಗಿಡ್ಡುರೂಪಿನ - ಹಜುಕುಗಡ್ಡದ ಹೆಡ್ಡನಾದ ಕುರೂಪಿತನದಲಿ ನೃಪತಿ ವಿಷದಿಂದ (ನಳಚ. ೬-೧೪). 'ಅಡ್ಡಪಿಡ್ಡಗೆ' ಪರಾ. [?]

ಪಡ್ಡಲಿಗೆ 'ಪಡಲಗೆ' ನೋ.

ಪಡ್ಡವ (ನಾ). ಒಂದು ಬಗೆಯ ಖಾದ್ಯ (?) : ಇಡ್ಡಲಿಗೆ ದೋಸೆ ಹೂರಣಗಡುಬು ಸೇವಗೆಗಳೊಡ್ಡಿದೌಗಿನ ಸಣ್ಣ ಜೊಲ್ಲೆ ವಿಟ್ಟಿನ ಹುರಿಯ ದೊಡ್ಡ ತಂಬಿಟ್ಟ ಕೈದೊಡಕರಳಿನುಂಡೆಗಳ ಪಡ್ಡವದ ಸಸಿದಪ್ಪೆಯ ಅಡ್ಡಕೊಂಕಣ ಕಡುಬ . . . ಭೋಜನದಿ ಪಡ್ಡಳಿಪ್ರಿಯಗರ್ಪಿಸಿ (ಲಿಂಗಪು. ೪-೨೦). [?]

ಪಡ್ಡಳಿ[1], ಪಡಾಳಿ[1], ಪಡ್ಡಳೆ, ಫಡ್ಡಳಿ (ನಾ). ಒಂದು ಬಗೆಯ ಗಿಡ ಮತ್ತು ಸುವಾಸನೆಯಿಂದ ಕೂಡಿದ ಅದರ ಹೂವು ; ಕಣಿಗಿಲೆ ; ಕರವೀರ : "ಪಡ್ಡಳಿಯಿಂದು ಕಣಿಗಿಲೆ" (ಕಶಸಾ. ೫೪-೧೪೪) ; ಬಿಳಿಯ ಕತ್ತುರಿ ತಾನೆನಿಸುವ ಪಡ್ಡಳಿಯರಲಂ ತಿಜಿಬದಳ್ ಭವಾನಿ ಶಿವ ಪೂಜಾರ್ಥಂ (ಗಿರಿಕ. ೫-೫೬) ; ಒಂದರಳು ಇರವತಿಗೆ ಪಡ್ಡಳಿ ಒಂದರಳು ಸೇವತಿಗೆ ಜಂಪಳ ಒಂದರಳು ಸುರಹೊನ್ನೆ ಬಂದುಗೆ ಒಂದರಳು (ಜಸಪು. ೧೯-೬೫) ; ಪಾದರಿಯ ವನಸಂಪಗೆಯ ಪೊಂಗೇದಗೆಯ ಪಡ್ಡಳಿಯ . . . ಬಂದುಗೆಯಾದಿಯಾದ ಸಮಸ್ತ ಪೂಜೆಯೊಳಿಸೆದನಾ ಶಿವನು (ಶಂಕರಾ. ೨-೫೧) ; ಪಾದರಿಯ ಪಡ್ಡಳಿಯ ಗಿಡುಗಳ ಪಂತಿಗಳ್ ತೋಂಟದೊಳ್ ಪೂವೆಂದುಂ ಮುಡಿಯೆದೆಸೆವ . . . ಋಷ್ಯಾಶ್ರಮೋಪವನಂ ಪೀತೆಗೆ ಕಣ್ಗೆನಿಂದತ್ತು (ರಾಮಾಶ್ವ. ೪೩-೧೧). **ಪಡಾಳಿ[1]** : ಮಾವು ಮಾದಲ ನಿಂಬೆ ಕಂಚಯು ಬಾವನ್ನವು ಕಾಳಸಂಪಿಗೆ ತೀವಿ ಸುರ ಹೊನ್ನೆ ಪಡಾಳಿಯು ಪಾರಿಜಾತಗಳು (ನಂದಿಲೀ. ೮-೨೬). **ಪಡ್ಡಳೆ** : ಪಡ್ಡಳೆ ದಶವಪ್ಪಸಂಕುಳ ನಿಖಿಳವ ಪಡ್ಡಳೆ ಪುಷ್ಪಾರ್ಪಣವು (ದೇವಪು. ೬-೫೯) ; ಕಣಗಿಲು(-ಲೆ), ಕಣಿಗಿನ, ಕಣಿಗಳು, ಗಣಿಗಳು ಕರವೀರ, ಪಡ್ಡಳಿಗಿಡ (ಸ್ಯಕ್ಲಾಸ. ೩೨). **ಫಡ್ಡಳಿ** : ಕರವೀರಾದಿ—ಫಡ್ಡಳಿ ನೊದಲಾದ, ಸುಮನಃ—ಪುಷ್ಪಂ (ಪ್ರತಿಷ್ಠಾ. ೬-೨೪). 'ಪ್ರತೀಹಾಸ' ಪರಾ.

ಪಡ್ಡಳಿ[2] 'ಪಜ್ಜತಿ' ನೋ.

ಪಡ್ಡಳಿಗೆ (ನಾ). = ಪಡ್ಡಳಿ[1] : ಕೆಂಜಾಜಿ ಪಾದರಿ ಪಡ್ಡೆ ಪಡ್ಡಳಿಗೆ (ರುಕ್ಮಾಂಗ. ೩-೨೮). [< ಪಡ್ಡಳಿ[1]]

ಪಡ್ಡಳಿಪ್ರಿಯ (ನಾ). ಕರವೀರಪುಷ್ಪವು ಪ್ರಿಯವಾದವನು ; ಶಿವ; ಈಶ್ವರ : ಇಡ್ಡಲಿಗೆ ದೋಸೆ ಹೂರಣಗಡುಬು . . . ತುಪ್ಪಮಂ ಕಲಸಿ ಭೋಜನದಿ ಪಡ್ಡಳಿಪ್ರಿಯಗರ್ಪಿಸಿ (ಲಿಂಗಪು. ೪-೨೦).

[ಪಡ್ಡಳಿ[1] + ಪ್ರಿಯ]

ಪಡ್ಡಳೆ 'ಪಡ್ಡಳಿ[1]' ನೋ.

ಪಡ್ಡಾಗೆ (ನಾ). ಒಂದು ಸ್ಥಳದ ಹೆಸರು : ಪಡ್ಡಾಗೆ ಕೊಯತೂರು ಪನ್ನಿಚ್ಚಾಸಿದ ಭೂವಿಯನ್ ಅಳೆ (ನೃಆರಿ. ೧೯೧೪, ೧೨-೧೩ ; 810).

[?]

ಪಡ್ಡಿಲಾಗ(?) (?). (?) : ಜೆಳಪಿಳೆರಾಯಸ್ವಾಮಿಯ ಶ್ರೀಪಾದಕ್ಕೆ ಪದ್ಮಪೀಠ ರತ್ನಪಡಿ ಸಹ ತೂಕ ವರಹ ಪಡ್ಡಿಲಾಗ ೧೪೪ ೨ ೧ ತೂಕ ಮೈಸೂರ ರಾಜುವ ಸೇವೆ (ನೃಆರಿ. ೧೯೪೦, ೩೪-೩ ; 1614). [?]

ಪಡ್ಡು (ನಾ). ಒಂದು ಬಗೆಯ ಖಾದ್ಯ : ನಮ್ಮ ಮನೆಯಲ್ಲಿ ಇವತ್ತು ಪಡ್ಡು ಮಾಡಿದ್ದರು (ರೂಢಿ). 'ಪುಟ್ಟು[4]' ಪರಾ. [< ಬಟ್ಟು[1] ?]

ಪಡ್ಡೆ, ಹಡ್ಡೆ (ನಾ). ೧. ಪ್ರಾಯಕ್ಕೆ ಬಂದಿರುವ ವ್ಯಕ್ತಿ ಅಥವಾ ಪ್ರಾಣಿ : ಈ ಜಂತುಗಳನ್ನು ಬೆದರಿಸಿ ಓಡಿಸಿ ಪೈರನ್ನು ಕಾಯಲು ಹತ್ತಿಪ್ಪತ್ತು ಜನ ಪಡ್ಡೆಯಾದ ಹುಡುಗರೆಲ್ಲಾ ನೇರಿ ಹೊರಟೆವು (ಸುಮಜ. ೬೦೩) ; ನಮ್ಮ ದೂರದ ಸಂಬಂಧದ ಒಂದು ಹೆಣ್ಣು ಇರಬಹುದು. ನಾನು ಎರಡು ವರ್ಷದ ಹಿಂದೆ ಮೆಳೆಯಮ್ಮನ ಹಬ್ಬಕ್ಕೆ ಹೋಗಿದ್ದಾಗ ಸುಮಾರಾಗಿ ಪಡ್ಡೆ ಆಗಿತ್ತು (ನನ್ನೂರು. ೧೩೧). ೨. (?) : ಆ ದುಃಖ ಜೀವಂಗಳು ಉದಧಿಗೆಜೆಯೆನಿಸಿದಾಯುಷ್ಯದ ಕಡೆವರೆಮೆಯ್ದೆ ಪಡ್ಡೆಗಳಾಗದ ವಂದಡಿನ ಶುಭಕರ್ಮದಾ ವೇಷದೆ ನೊರ್ಮರಿಱಿದು ನಮೆಯುಂ ತ್ರಿಪುರು (ಶ್ರಾವಕಾ. ೨೧-೧೪). (ಗು). ೩. ಪ್ರಾಯಕ್ಕೆ ಬಂದ; ಯೌವನಕ್ಕೆ ಕಾಲಿಟ್ಟ : ಅವರೆಲ್ಲಾ ಪಡ್ಡೆ ಹುಡುಗರು, ಉತ್ಸಾಹಿಗಳು (ಬೈಸರೆ. ೧೧೩) ; ರಾಮಲೀಲಾ ಉತ್ಸವಕ್ಕೆ ಮೂರುಜನ ಪಡ್ಡೆ ಹುಡುಗಿಯರನ್ನು ಕರೆದುಕೊಂಡು ಹೋಗಿದ್ದರು ದೊಡ್ಡಬಾಬು (ಸಾಹೇಬ್. ೧೩೦) ; ಬೇಟೆಯಲ್ಲಿ ಹಿಡಿದುಕೊಂಡು ಬಂದಿರುವ ಪಡ್ಡೆ ಹುಲಿಯನ್ನು ಪೆಟ್ಟಿಗೆಯಲ್ಲಿ ಹಾಕಿಸಿ . . . ಸುಖವಾಗಿದ್ದನು (ಕಥಾಮಂ. IV, ೫೩). **ಹಡ್ಡೆ** : ೩. ಕನ್ಯಕೆ ಆಗಲಿ ಹಡ್ಡೆ ಹುಡುಗಿ ಆಗಲಿ ಕೈಹಿಡಿದುಕೊಂಡ ಹಾಗೆ ಕಂಡರೆ ಐಶ್ವರ್ಯ ಬರುವದು (ಸಾಗಂಧಿ. ೫೯೩-೧೪).

[ದೇ.॥ ತೆಲು. ಪಡ್ಡ]

ಪಣ್[1] 'ಪಣ್ಣು[1]' ನೋ.

ಪಣ್[2], ಹಣ್[1], ಹಣು[1], ಹಣ್ಣು[2] (ಕ್ರಿ). ಪಣ್ತು (ಭೂತಕೃ), ಪಣ್ತುಂ (ಭೂತನ್ಯೂ), ಪಣ್ವ (ಭವಿಕೃ). ೧. ಹಣ್ಣು ಬಿಡು ; ಫಲವನ್ನು ಕೊಡು : ಬೇಟಮೆಂಬೆಳಲತೆ ಕೂಟದೊಳ್ ಪದೆದು ಪಣ್ತೆರ್ದೆಗಿಂಪಿನಲಂಪನೀಯದೇ (ಆದಿಪು. ೧೨-೨೦) ; ಮತ್ತೌತ್ಪನ್ನಾದನಖಿಳ ಜಗತ್ಪತಿ ಮರದಾವಗೊಂಬು ಪಣ್ತೊಡಮೇನೆಂದುತ್ಪನ್ನಾನಂದಂ ತ್ರಿಜಗತ್ಪೂಜ್ಯಂಗಿಟ್ಟುದು ಪೀಠದಿಂ ಪೊಡೆವಟ್ಟಂ (ಶಾಂತಿಪು. ೯-೨೪) ; ಪುದಿದಿರೆ ಪಣ್ತಿಂದುವ ಬಿಂಬದಾಲದಿಂ ಪಣ್ಗಳುದಿರ್ದುವೆನೆ ಸೊಗಯಿಸಿದತ್ತುದಯದೊಳೊದವಿದ ಕೆಂಪಿಂ ಪುದಿದೊಪ್ಪುವ ತಾರಕೋತ್ಕರಂ ಕೆಲಗೆಲದೊಳ್ (ಚಂದ್ರಪು. ೪-೨೮) ; ಆಲರ್ಗಳಿಂ ಫಲವನೆಯ್ದುವ ಮರಗಳನಂಡಲೆವುತ ಗಿಳಿನುಡಿಯಿಂದ ಸಲೆ ಮೆಜ್ಜಿದವು ಪಣ್ತ ಬಕ್ಕೆವಲಸುಗಳ ಬಳಗವಾ ಬನದೆಡೆಯೊಳಗೆ (ಕುರಾಸಾಂ.೩-೪೭) ; ಆವ ಮರಮಿದು? . . . ಸಕಲ ರಿತುವೊಳು ಪೂವ ಪಣ್ಣ ಪುರವೇನು ? (ಗಿಳಿವಿಂ. ೨೪-೧೪). ೨. ಹಣ್ಣಾಗು ; ಪಕ್ವವಾಗು ; ಮಾಗು : "ಪಣ್ತುದೆಂದು ಪಣ್ಣಾದುದು" (ಕಶಸಾ.

೫೫-೧೯೪) ; ಗೊಲೆಯೊಳ್ ಪಣ್ತುದು ಮ್ಯೆಂದವಾಱೆ ಪಥಿಕರ್ಬರ್ಕೆಂದು ಭೃಂಗಂಗಳಿಂದುಲಿವಂತಿರ್ದುದು ಪಣ್ತ ಬಕ್ಕೆ (ಆದಿಪು. ೧೧-೬೬) ; ಭೂಲತಾಂಗಿ ತೆಗೆದತ್ತಿಟ್ಟ ರಸಕಳಶವೋಯೆನಿಸಿ ಪಣ್ತ ಚೆಂದೆಂಗೆಸೆದುದು (ಸೋಮೇಶ. ೨-೭೬) ; ರಂಜಿಪ ಚೈತ್ರನ ಕಾನ್ಮೆಗೆ ಸಂಜನಿತಾಂಕುರದ ಪುಳಕವಾಂತು ವನಶ್ರೀ ತಾಂ ಜವದೆ ತಳೆದ ನೀಲದ ಮಂಜರಿಯೆನೆ ಪಣ್ತ ನೇಱುಲೇನೊಪ್ಪಿದುದೋ (ಉಷಾ ಪ. ೯-೨೬) ; ಸಕ್ಕರೆಯ ಧಾರಾನೀಕ ಸುರಿವಂತೆ ರಸದಾಳಿ ಪಣ್ತೊಡೆದು ಸೋನೆಗಜೆವಂತೆ ಪಾಡಿದರು ಗಾಯಕಿಯರಿಗೆ ನಾಯಕಿಯರೆಂದನಿಸುವ ಮಾನಿನಿಯರುಗಳು (ಸೌಂದಪು. ೮-೪). ೩. (ಎಲೆ ಮೊದಲಾದುವು) ಹಣ್ಣಾಗಿ ಜೀರ್ಣವಾಗು ; ಹಳತಾಗಿ ಬಣ್ಣಗೆಡು : ಕೊನೆಯೊಳ್ಕೊನೆಗೊಂಬಿನ ಸಂದಿನೊಳೆಲೆ ಪಣ್ತುದಿರ್ದು ಪೋದ ನೆಲೆಯೊಳ್ಕೊನರ್ಗಳ್ ಕೊನೆದೋಱೆ ಮದನನಲಗಿನ ಮೊನೆದೋಱದನೊಡನೆ ಬಿರಯಿಗೆಳಮಾವುಗಳೊಳ್ (ಮಲ್ಲಿಪು. ೫-೧೧). ೪. (ಅಲಂ) ಹೆಚ್ಚಾಗು ; ಅಧಿಕವಾಗು : ಮತ್ತಮೊರ್ಮಳ್ ಇದು ನಿನ್ನೀಯೋಣ ನೆನ್ನೀಕ್ಷಣಕೆ ಸೆಣಸಿ ತಾಂ ಬೆರ್ಚ ನೋಟ್ಪೊಂದು ದರ್ಪಕ್ಕಿದು ನಿನ್ನೀಯಾಲವೆನ್ನೀಯಧರದಳದೊಳಾದೀರ್ಸೆಯಿಂ ಪಣ್ತ ಗರ್ವಕ್ಕಿದು ನೀನೆನ್ನಾಸ್ಯದೊಳ್ ಮಚ್ಚರಿಸುವ ಮಱುಕಕ್ಕೆಂದು ಕಾಲ್ಗಾಲೊಳೀವಂದದೆ ಚಂದ್ರಂ ಗುತ್ತಹಾರಂಗಳನೊದೆದೊಲವಿಂದುಯ್ಯಲಾಡುತ್ತುಮಿರ್ದಳ್ (ಲೀಲಾವ. ೨-೪೬). ೫. (ಧ್ವನಿಯು) ಮಧುರವಾಗು; ಇಂಪಾಗು ; ಹದವಾಗು : ನಲಿದು ನವಿಲ್ ಜಗುರ್ತುದು ಪಿಕಧ್ವನಿ ಪಣ್ತುದು ಮಿಂಚು ಕಣ್ಗಳೊಳ್ ಮೊಳೆತುದು (ಅರ್ಧನೇ. ೪-೬೦) ; ಮತ್ತಮಾತಂ ಸರಿಯೊಳಾದೊಡಮಂಚೆಯೆಂಬುದಂ . . . ಚಪ್ಪರಣೆಯೊಳಾದೊಡಂ ಪಣ್ತೆಂಬುದಂ ಸೈರಿಸಂ (ಕಬ್ಬಿಗಾ. ೧೪೮). ☞ ಇಲ್ಲಿ 'ಪಣ್$_1$' ಉಲ್ಲೇಖದಲ್ಲಿ ಬರುವ ಶೃಂಗಾರಮಾಡು ; ಸಿಂಗರಿಸು ; ಅಲಂಕರಿಸು ಎಂಬರ್ಥವೂ ಶ್ಲೇಷೆಯಾಗಿ ಬರುತ್ತದೆ. ೬. ಕಾಂತಿಯುಕ್ತವಾಗು : 'ಪಣ್ಗುಡಿ' ಪರಾ. ಹಣ್$_1$: ೧. ಕುವೆಂಪು ಅವರ 'ರಾಮಾಯಣದರ್ಶನ' . . . ಮತ್ತಿತರ ಕವಿತಾ ರಚನೆಗಳು–ಇವೆಲ್ಲ ಸ್ವಾತಂತ್ರ್ಯಪೂರ್ವದಲ್ಲಿಯೆ ಚೆನ್ನಾಗಿ ಬೇರುಬಿಟ್ಟು ಹೂತು ಹಣ್ತ ಹೊಸ ಕಾವ್ಯವೃಕ್ಷದ ಈಚಿನ ತನಿವಣ್ಣುಗಳು (ಸುವರ್ಣ. ೧೫೬). ಹಣ್ಣು$_1$: ೩. ಬೆಳೆದ ಕತ್ತಲೆ ಮುತ್ತು ಹಣತುದೋ . . . ಚಕೋರಿಗಳ ನಿರ್ಮಳಹರುಷ ಬೆಳೆಯುತೋಯೆಂದೆಂಬ ಸಂದೇಹಕೊಳಗಾಗಿ ಚೌಪಟಂಬರಿದು ಪಸರಿಸಿತು ಬೆಳುದಿಂಗಳೆಲ್ಲಾ ದೆಸೆಯೊಳು (ಹಚಕಾ. ೩-೮೪). ಹಣ್ಣು$_2$: ೧. ಬ್ರಿಟಿಶರು ಅಂದು ಬಿತ್ತಿದ ವಿಷಬೀಜವು ಮೊಳೆತು ಮರವಾಗಿ ಹಣ್ಣಲು ೫೦ ವರುಷಗಳು ಬೇಕಾದುವು (ಯಕ್ಷಸ್ವ. ೧೮).

ಪಣ್ತೆಲೆ = ಹಣ್ಣಾಗಿ ಜೀರ್ಣವಾದ ಎಲೆ; ಹಳತಾಗಿ ಬಣ್ಣಗೆಟ್ಟ ಎಲೆ : ಮಲಯಾನಿಲನೊಯ್ಯನೆ ಪಣ್ತೆಲೆಯಂ ನೆಲೆಯಿಂ ಕಟಲ್ಬುಗುಂ ವಿಟಸಿಗಳೊಳ್ (ಕವಿಗಾ. ೩-೫೪) ; ಇಟಾದೇಟುಮೊಟಂ ಗಂಡರೊಳಳಿ ಪೆಂಬುದು ತನಗೆ ಮುತ್ತ ಮುದುಗೂಂಟಣ ತಾಂ ಕಟಾವಣ್ ಮುತ್ತದ ಪಣ್ತೆಲೆ ಪಟವಱುಗೋಲ್ ಪಱುದ ಭೇರಿ ನೀರ್ ತೆಗೆದ ಕೊಳಂ (ಸೂಕ್ತಿಸು. ೮-೩೮೨). [ದೇ.॥ ತಮಿ. ಮಲ. ಪಟು ; ತುಳು. ಪರ್ನ್ದು, ಪರ್ನ್ದಾವು ; ತೆಲು. ಪಂಡು ; ಕುರುಖ್. ಪನ್ನಾ ; ಮಲ್ತೊ. ಪನೆ]

ಪಣ್$_3$, ಪಣ್ಣು$_2$, ಹಣ್$_2$, ಹಣ್ಣು$_2$, ಹಣ್ಣು$_3$ (ನಾ). ೧. ಪಕ್ವವಾದ ಫಲ ; ಮಾಗಿದ ಫಲ : ಮಧುಮದ್ಯಮಾಂಸಂಗಳುಮಯ್ದು ಪಾಲ್ಮರದ ಪಣ್ಗಳುಮಾಳುಂಬೆಯುಂ ಸಣಂಬಿನ ಪೂವುಮೆಂದಿವಂ ಸೇವಿಸುವರುಂ . . . ಐಟುಂ ನರಕಂಗಳೊಳ್ ಪುಟ್ಟ ಡುಃಖಂಗಳನೆಯ್ದುವರ್ (ಪಡ್ಡಾರಾ. ೧೨೬-೧೭) ; ಚಾಗದೊಳ್ಪಿನಚ್ಚೊತ್ತದೆ ಮಾಣ್ದು ಬಾಟ್ಟ ಪುಟುವಾನಸನೆಂಬನಜಾಂಡಮೆಂಬುದೊಂದತ್ತಿಯ ಪಣ್ಣೊಳರ್ ಪುಟುವಲ್ಲದೆ ಮಾನಸನೇ (ಪಂಪಭಾ. ೫-೭೫) ; ಧರೆ ಬೀಜಂಗಳ ನುಂಗೆ . . . ತರುವೇ ಪಣ್ಗಳ ಮೆಲ್ಲೆ ಮಾತೆ ವಿಷಮಂ ಪೆತ್ತರ್ಭಕಂಗೂಡಿಸಲ್ ಹರ ಕೊಲ್ಲಲ್ ಪರ ಕಾಯ್ವನೇ (ಸೋಮೇಶ. ೨೯) ; ತುಜುಗಿದ ಕಾಯಿ ಪಣ್ಗಳ ಸಾಲವೃಕ್ಷವ ಮುಱುದು ದೂಳಿಯ ಚೆಲ್ಲಿಕೊಳುತ ಸುರಿವ ಸೊಂದಿಲ ನೀರ್ಗಱೆಯುತ ಬಂದುದು ಬಿಜುಗಾಳಿ ಮದಗಜದಂತೆ (ಪೋಕಚ. ೪-೩೭) ; ಪುಷ್ಪಗರ್ಭಿತ ನವವಸಂತದ ಲಸಲ್ಲತೆಗೆ ಪಣ್ ಬೀತುವೋದ ಮಾಗಿಯ ಮುರದ ಸಾಮ್ಯಮೇಂ ? (ಚಿತ್ರಾಂಗ. ೭೪-೨೦೩೬). ಪಣ್ಣು$_2$: ೧. ಶುಕ ಶಂಖಂ . . . ಪೂವಣ್ಣು ವಿಪ್ರದ್ವಯಂ ಮುಕುರಂ ಮಾಂಸವು ಮದ್ಯ ತುಂಬಿದ ಕೊಡಂ ಪೆರ್ಗಿಚ್ಚಸಾರ್ ಕಂಡೊಡಂ ಶಕುನಂ ಶೋಭನಕಾಸ್ಪದಂ (ಸೋಮೇಶ. ೬೭). ಹಣ್$_2$: ೧. ಅತ್ತಿಯ ಹ[ಪಾಠಾಂ.ಪ]ಣ್ಣಂದದಿನೊಳ್ಪಿತ್ತಪ್ಪುದು ಪೊಱಗೆ ನೋಟ್ಪೆನೆಂದೊಳಗಣದೊಳ್ಪಿತ್ತಲ್ತದನ್ಯಸಮಯದ ಪೊತ್ತಗೆಗಳ್ (ಸಮಸ. ೩-೭೨) ; ಕಾಳೆಗಧೊಳು ನಿಸಾತ ಕರವಾಳಹತಕ್ಕೆ ಹತಪ್ರಭರ್ಮ್ಮಹೀಪಾಳ ಕರೋಡಿ ಪೊಕ್ಕು ಗಹನಾನ್ತರದೊಳು ಕ್ಷುಧೆಯೊಳುವೆ ವಂನ್ಯಭೂಜಾಳ ದೊಳಿರ್ದ್ದ ಹಣ್ಗಳನೆ ಹಣ್ಣೆನಲಮ್ಮದೆ ಕಾಯಿಕಾಯಿ ಬಲ್ಲಾಳನೃಪಾಳ ಯೆಂಬಿದನೆ ಪಂಬಲಿಸಿದುದು ವೈರಿಸಂಕುಳಂ (ಮೈಅರಿ. ೧೯೪೩, ೨೯-೧೮; 1174). ಹಣ್ಣು$_2$: 'ಹಣುಹಂಪಲು' ಪರಾ. ಹಣ್ಣು$_3$: ೧. ಹಣ್ಣಮೆದ್ದ ಬಳಿಕ ಆ ಮರನ ಅರು ತಱುದರೇನು (ಮಹಾದೇ.ಪ. ೪೯-೧೧೭) ; ಭೂಪಾಲ ಮುನಿಪನಂಘ್ರಿಯಲೆಱಗಿ ಯಾ ಹಣ್ಣನಲಿ ಹೊಟ್ಟೆಯ ಹೊಱೆಯಲಾಱೆನು ದನುಜಹರನೇ ಶಿವಶಿವಾಯ ನಮಶ್ಶಿವಾಯೆಂದ (ಕುಮಾಅ. ೬೦೩. ೪-೨೪) ; ಎಳೆಯ ಹೂಮಿಡಿಗಳಂ ಕಱುದು ಹಣ್ಣಂ ಮಾಡಲಳವೆ (ಚೆಪು. ೬-೯) ; ಹಣ್ಣು ಜಾರಿ ಹಾಲಲ್ಲಿ ಬಿದ್ದ ಹಾಗೆ (ಗಾಥೆ). ೨. ವಯಸ್ಸಾಗಿರುವಿಕೆ; ಮುಪ್ಪು ; ಮುದಿತನ: 'ಹಣ್ಣುಗರಡಿ' ಪರಾ. ೩. ಕೈಗೂಡಿದುದು ; ಸಫಲತೆ ; ಗೆಲವು : ಹೋದ ಕೆಲಸ ಹಣ್ಣೋ ಕಾಯೋ ? (ರೂಢಿ).

ಪಂಪಲ, ಪಣ್ಪಲ, ಪಣ್ಪಳ, ಪಣ್ಪುಲ, ಹಂಪಲು = ಹಣ್ಣು ; ಪಕ್ವವಾದ ಫಲ : ಹಾಲು ಅನಿಲ ಕಂದಮೂಲ ಪರ್ಣಾಂಬು ಪಂಪ(ಪಣ್ ಫ)ಲಾದಿಗಳನೇ ಆಹಾರವ ಕೊಂಡು ಮುಕ್ತರಾದೇವೆಂಬ ಅಣ್ಣಗಳು ನೀವು ಕೇಳಿರೆ (ಸರ್ವಜ. ೨೦೦-೯೧೪) ; ಊರ ಬಿಟ್ಟಡವಿಯಾಶ್ರಯಿಸಿಯುಂ ಸತಿ ಸುತರನಾರೈದುದಂ ಕೆಡದು ಜಪ ತಪ ಸಮಾಧಿಯೊಳು ಪೂರಾಯವಾಗಿರ್ದು ಕಂದಮೂಲಂ ಪಂಪಲಾದಿಗಳ ಬಜ ಹಜುಯದು (ಪ್ರಭುಪು. ೮-೧೮೬) ; ಅವಡವಿಗಳೊಳ್ ಪಣ್ಪಲಮಾವಗಮೊಳವಲ್ಲಿಗಱಸಿ ಪರಿಪರಿದು ಕರಂ ತಾವಡಿಗೊಳ್ಳೇ ಭೀಮನ ಬೇವಸವಿದು ನಿನ್ನ ಮನಮನೊನಲಿಸಿತಿಲ್ಲಾ (ಪಂಪಭಾ. ೭-೪೬) ; ಅನುದಿನಮೊರ್ಮಳ್ ಗೀರ್ವಾಣನಾಥವಧು ನಾಕಲೋಕದಿಂ ಬಂದರ್ಹಜ್ಜುನನಿಗೆ ನಂದನವನಗತ ವನಲತೆವೋಲ್ ತಂದು ನೀಡುಗುಂ ಪಣ್ಪಲಮಂ (ಶಾಂತಿಪು. ೯-೧೮೧) ; ಹಿರಣ್ಯರೋಮಂ ಬಿಲದಿಂ ಪೊಱಮಡಲೊಡಂ ವಾಯುಸಂ ರಾಗರಸಮಯನಾಗಿ ಪಣ್ಪಳಂಗಳಂ ಮುಂದಿಟ್ಟು ಪೊಡೆಮಡಲು (ಪಂಚತಂ. ೨೯೭-೧೮) ; ಅಂತು ತೀವಿದ ಭಿಕ್ಷಾಪಾತ್ರದ ಪಣ್ಪ[ಪಾಠಾಂ. ಣ್ಪ]ಲಂಗಳಂ ತಂದು ಕುಡೆ (ಕಾದಂಪು. ೬೯೫) ; ಕೈಯೊಳ್ ಸಂಬಳವಿಲ್ಲದೆ ಮಱುಗಿ ಸೈರಿಸಲಾಱದೆ ಪಸಿವಿಂ ತಂತಮ್ಮ ಭೃತ್ಯರ್ಗೆ ಪೇರಡವಿಯೊಳ್ ಪಣ್ಪಲಂಗಳನಱಸಿ ತನ್ನಿಮೆಂದು ಪೇಟ್ಟುದುಂ (ಧರ್ಮಾಮೃ. ೨-೧೮೩) ; ಕೆಂಪು ಹಂಪಲಿನೊಳಗೆ ಕೆಂಪು ಇಟ್ಟಯ ಹಣ್ಣು ಕೆಂಪುಂಟು ಒಳಗೆ ವಿಷವುಂಟು ದುರ್ಜನರ ಪೆಂಪು ಇಂತೆಂದ (ಸರ್ವಜ್ಞ. ೮೩೨). ☞ ಇದು ಒಂದೇ ಅರ್ಥದ ಎರಡು ಶಬ್ದಗಳಿಂದಾದ ಕೂಡುನುಡಿ. ಪಣ್ಕಾಯ್, ಹಣ್ಣುಕಾಯಿ = (ದೇವರಿಗೆ ನೈವೇದ್ಯ ಮಾಡುವ) ಹಣ್ಣು ಮತ್ತು ಕಾಯಿ ; ಬಾಳೆಹಣ್ಣು, ತೆಂಗಿನ

ಕಾಯಿ ಮುಂತಾದ ಫಲ : ಹೂವೆಲೆಯ ಚೆಲ್ಲಾಡಿ ಪಣ್ಣಾಯ ಕಾಣ್ಕೆಯಿಂದೋವಿ ನೇಸರ್ಪರೆಗಳಂ ಸೊಡರ ಬೆಳಗಿ (ಕಾಲೂರ. ೧೨೦-೨೫೨); ತನ್ನ ಮನೆದೇವರಿಗೆ ಹಣ್ಣುಕಾಯಿ, ಪೂಜೆ ಪುರಸ್ಕಾರ ಒಪ್ಪಿಸುವುದಲ್ಲದೆ . . . ಸೇವೆ ಸಲ್ಲಿಸುತ್ತಾನೆ (ಭಾರದ. ೬); ಇದು ಮಲೆದೈವದ ಕಾಟವೆಂದೊಬ್ಬನು ಹರಕೆ ಕೊಡಲು ಹಣ್ಣುಕಾಯಿಗಳನ್ನು ಸಂಗ್ರಹಿಸಿದನು (ಕಾಲೂರ. ೬ ಕಥಾಸಾರ). ಪಣ್ಣಾಗು, ಹಣ್ಣಾಗು = ೧. (ಕಾಯಿ ಬಲಿತು) ಪಕ್ವಸ್ಥಿತಿಗೆ ಬರು ; ಮಾಗು ; ಫಲವಾಗು : ಎಳೆಗಱುಂ ಎತ್ತಾಗದೇ ಲೋಕದೊಳ್ ಮಿಡಿ ಪಣ್ಣಾಗದೇ (ಸೋಮೇಶ. ೩೫) ; ಕಾಯಿಗಳು ಬಲಿತು ಹಣ್ಣಾಗಲಿಕ್ಕೆ ಹೆಚ್ಚು ಕಡಿಮೆ ಎರಡು ತಿಂಗಳು ಬೇಕಾಗುತ್ತದೆ (ಮುಂಬಯಿ. ೪-೨೬). ೨. (ಕಾಲ ಮೊದಲಾದುವು) ಕೂಡಿಬರು ; ಹದವಾಗು : ಗಣ್ಯಾತೀತರ್ ಶಿವಲಾವಣ್ಯದೆ ಸರ್ವಾಂಗಭಸಿತದಿಂ ನರೆಯಿಂ ಕಾರುಣ್ಯದಿನತಿಧವಲಿಮದಿಂ ಪುಣ್ಯಂ ಪಣ್ಣಾದ ತೆಱದೆ ತಾಪಸರಿರ್ಪರ್ (ಗಿರಿ. ೧-೬೩) ; ಧರೆಗಧಿಕ ವೃದ್ಧಾಪ್ಯತೆಯನನುಕರಿಸಲೆಂದು ಧರಿಸಿದನೊ ನುತ ಪುಣ್ಯ ಹಣ್ಣಾಯ್ತೊ ಹೇಳಿಸಿ ವರವೃದ್ಧವೇಷದೀಶ್ವರನಾದಿಮಯ್ಯನಿದ್ದಾಲದ ಮರೆ ನಡೆದನು (ಸೋಮಸಿ. ೩-೭೯) ; ನಮ್ಮ ವಿಷಯದಲ್ಲಿ ಮಾತ್ರ ಕಾಲ ಹಣ್ಣಾಗುವುದು ಸ್ವಲ್ಪ ದೂರವೇ ಅನ್ನಿಸುತ್ತದೆ (ಮರಳಿ. ೮೮). ೩. (ಕಾರ್ಯ, ಬಯಕೆ ಮೊದಲಾದುವು) ಕೈಗೂಡು ; ಸಫಲವಾಗು : ತಾಯಿ ಬೇರು ಕಾಯಬೇಕು ಹಣ್ಣಾಗಲಿ ಹಂಬಲ (ಸೆಲಮು. ೨೫-೧೨) ; ಅವನು ಬಯಕೆ ಹಣ್ಣಾಯಿತೆಂದು ತಿಳಿದು ಅವರಿಗೆ ಊಟಕ್ಕೆ ಬಡಿಸಿದ (ಸ್ಮೃತಿಚಿ. ೨೫) ; ಬಾಳ ಗೆಳತಿ ಎಂದು ಅನ್ನಲು ಇನ್ನೂ ವಿಚಾರ ಹಣ್ಣಾಗಿಲ್ಲ (ಕಪ್ಪಿಹು. ೪೬). ೪. (ಮನಸ್ಸು) ಪಕ್ವವಾಗು ; ಪರಿಪಾಕಗೊಳ್ಳು ; ಪಳಗು : ನುರಿತ, ಪಳಗಿದ, ಹಣ್ಣಾದ, ಹದಕ್ಕೆ ಬಂದ, ಪಾಡಾದ (ಕಂಸುಹು. ೮೭). ೫. ತೃಪ್ತಿಯನ್ನು ಪಡೆ ; ತಣಿ ; ಸಂತೋಷಗೊಳ್ಳು : ಕಣ್ಣು ತಣಿಯೆ ಚಕ್ರಿ ಮಾಳ್ಪೊಸಗೆಯ ನೋಡಿ ಹಣ್ಣಾದುದತ್ತೆಯ ಚಿತ್ತ (ಭರತ. ೪೦-೨೬). ೬. ಕಸುವನ್ನು ಕಳೆದುಕೊಳ್ಳು ; ಜರ್ಜರಿತವಾಗು ; ನಿರ್ವಿಣ್ಣವಾಗು ; ಬಳಲು : ಅವನು . . . ಒಂದರ ಹಿಂದೊಂದರಂತೆ ದುಃಖಪರಂಪರೆಯನ್ನು ಅನುಭವಿಸಿ ಹಣ್ಣಾದನು (ಪಾರ್ಶ್ವ. ೯೧); ಲೋಕಜ್ಞಾನ ವ್ಯವಹಾರ ಜ್ಞಾನ ಬರುವ ಮೊದಲೇ ಮನೆತನದ ಜವಾಬುದಾರಿಯೆಲ್ಲ ಮೈಮೇಲೆ ಬಿದ್ದು ಹಣ್ಣಾದವ (ಮೂರುದಾ. ೫೭) ; ಹಾಡಿ ಹಣ್ಣಾದಿ ನೀ ಜಗದ ಕಣ್ಣಾದಿ ನೀ ದುಡಿದು ಸಣ್ಣಾದಿ ನೀ ಗುರುದೇವಾ (ಸಜೀಗೀ. ೪೭-೧೫) ; ಅವನ ಮುಷ್ಟಿಪ್ರಹಾರದಿಂದ ಗುಡುಗಜ್ಜನು ಹಣ್ಣಾಗಿ ಹೋದನು (ಮಣಿಸ. ೫೮) ; ಹೊತ್ತಿಗೆ ಬಹು ಮುಂಚೆ ಹೋಗಿದ್ದು ದುಡಿವೆವು ಸಂಜೆಗೆ ಹಣ್ಣಾಗಿ ಬಹೆವು (ಇಂಬಾಸ. ೧೪೨-೧೦೦). ೭. ಕುಗ್ಗು ; ಸಂಕೋಚಗೊಳ್ಳು : (ತೀರ ಹಣ್ಣಾಗಿ ನಾಚಿಕೊಂಡು) ಯೆಚ್ಚಾ, ಅದನ್ನೇನ್ಮಾಡ್ತೀ ಬಿಡು (ಕಮ್ಮಟ. ೭). ೮. (ಕೂದಲು) ನರೆ ; ಬೆಳ್ಳಗಾಗು : ನನಗೀಗ ಎಷ್ಟು ವರುಷ ? ಕೂದಲು ಹಣ್ಣಾಗತೊಡಗಿದವು (ಹಳ್ಳಿಹಾ. ೭೨). ೯. (ಎಲೆ ಮೊದಲಾದುವು) ಹಳೆಯದಾಗು,—ವಿವರ್ಣವಾಗು : ಹಣ್ಣಾದ ಎಲೆ ಉದುರುತ್ತದೆ (ರೂಢಿ). ೧೦. (ಮನಸ್ಸು) ಮೃದುವಾಗು ; ಕಾಠಿಣ್ಯವನ್ನು ಕಳೆದುಕೊಳ್ಳು ; ಸೋಲು : ಹೆಣ್ಣ ಬಣ್ಣಿಸಿದರಂತಿಂತು ಲೇಸೆಂದೆದೆ ಹಣ್ಣಾಗಿ ಕೇಳುವರುಂಟು (ಭರತ. ೨-೪೭) ; ಹೋನ್ಸಳ ಈ ನುಡಿಯಿಂದ ಆ ಪಹರೆಯವನು ಹಣ್ಣಾದನು. ಅವನ ಬಾಯಿಗೆ ನೀರೊಡೆಯಿತು (ಅಂಬಿಕೆ.೧೦೦). ೧೧. ಪಗಡೆ, ಚೌಕಾಬಾರ ಮೊದಲಾದ ಆಟಗಳಲ್ಲಿ ಕಾಯಿ ಗುಡಿ ಸೇರು : ನನ್ನ ಮೂರು ಕಾಯಿಗಳು ಆಗಲೇ ಹಣ್ಣಾದವು (ರೂಢಿ).

ಹಣುಹಗಿನು = ಹಣ್ಣು ಹಂಪಲು : ಹಸಿದಳುವ ತನಯಂಗೆ ಹಣುಹಗಿನ ನಿತ್ತು (ಹಚಕಾ.೯-೩೫); ಹಣ್ಣಿಗೆ ತರು = ೧. (ಮನುಷ್ಯ, ಪ್ರಾಣಿ ಮೊದಲಾದುವನ್ನು) ಬಗ್ಗಿಸು,—ಮಣಿಸು : ಮದೋನ್ಮತ್ತ ಗಜರಾಜನನ್ನು ಹಣ್ಣಿಗೆ ತರುವ ಅಂಕುಶವಾದರೂ ದೊಡ್ಡದಿರುವುದಿಲ್ಲ (ತುಳಸೀ. ೩೮) ; ಜಹಂಗೀರನ ಮಗನಾದ ಖುರಾಮನು ಅವನೊಡನೆ ಯುದ್ಧಮಾಡಿ ಕ್ರಿ.ಶ. ೧೬೧೪ರಲ್ಲಿ ಅಮರಸಿಂಗನನ್ನು ಹಣ್ಣಿಗೆ ತಂದನು (ಹಿಂದುಇ.೧೮೩); ಶಿವಾಜಿ ಮಹಾರಾಜನು ಈ ಆದಿಲಶಾಹಿಯನ್ನು ತೀರ ಹಣ್ಣಿಗೆ ತಂದನು (ವಿವರ್ಣ. ೧೦). ೨. ಪಗಡೆ, ಚೌಕಾಬಾರ ಮುಂತಾದ ಆಟಗಳಲ್ಲಿ ಕಾಯಿಯನ್ನು ಗುಡಿಯ ಹತ್ತಿರಕ್ಕೆ ತರು : ಬೇಗ ಬೇಗ ಕಾಯಿಗಳನ್ನು ಹಣ್ಣಿಗೆ ತರು (ರೂಢಿ). ಹಣ್ಣಿಗೆ ಬರು = ೧. (ಕಾಯಿಯು) ಹಣ್ಣಾಗತೊಡಗು ; ಹಣ್ಣುಮೆಟ್ಟು : ಬಾಳೇಕಾಯಿ ಬಲಿತು ಗೊನೆಯ ಮೇಲೇ ಹಣ್ಣಿಗೆ ಬಂದಿದೆ (ರೂಢಿ). ೨. ಪಗಡೆ, ಚೌಕಾಬಾರ ಮುಂತಾದ ಆಟಗಳಲ್ಲಿ ಕಾಯಿಯು ಗುಡಿ ಸೇರುವ ಹಂತಕ್ಕೆ ಬರು : ನನ್ನ ನಾಲ್ಕು ಕಾಯಿಗಳೂ ಹಣ್ಣಿಗೆ ಬಂದಿವೆ (ರೂಢಿ). ಹಣ್ಣಿಗೆ ಹಾಕು = ಕಾಯಿಗಳನ್ನು ಪಕ್ವಗೊಳ್ಳಲು ಅಡೆಹಾಕು ; ಮಾಗಲು ಇಡು : ಬಾಳೆಗೊನೆಯನ್ನು ಹಣ್ಣಿಗೆ ಹಾಕಿದ್ದಾರೆ (ರೂಢಿ). ಹಣ್ಣುಕಾಯಿ ಮಾಡಿಸು = ದೇವರಿಗೆ ಹಣ್ಣು ಮತ್ತು ತೆಂಗಿನ ಕಾಯಿಗಳ ನೈವೇದ್ಯವನ್ನು ಮಾಡಿಸು : ಕೋಳಿ ಕೂಗುವ ಹೊತ್ತಿಗೆ ಪಟೇಲನು ಎಲ್ಲರನ್ನೂ ಏಳಿಸಿ ದೇವರಿಗೆ ಹಣ್ಣುಕಾಯಿ ಮಾಡಿಸಿ . . . ಬೇಡಿಕೊಳ್ಳುವನು (ಹುಟ್ಟಹ. ೧೯). ಹಣ್ಣು ತುಪ್ಪ = ಬಾಳೆಯ ಹಣ್ಣನ್ನು ಬಿಲ್ಲೆಗಳಾಗಿ ಮಾಡಿ ತುಪ್ಪ, ಬೆಲ್ಲದ ಪುಡಿ, ತೆಂಗಿನ ತುರಿ, ಏಲಕ್ಕಿಗಳನ್ನು ಸೇರಿಸಿ ತಯಾರಿಸಿದ ತಿನಿಸು; ರಸಾಯನ: ದೇವಸ್ಥಾನದಲ್ಲಿ ಇಂದು ಹಣ್ಣುತುಪ್ಪವನ್ನು ಹಂಚಿದರು (ರೂಢಿ). ಹಣ್ಣುತುಪ್ಪ ಮಾಡಿಸು = (ದೇವರ ಹೆಸರಿನಲ್ಲಿ ಮೀಸಲಿಟ್ಟ ಬಾಳೆಗೊನೆಯಿಂದ, ಮಾಡಿಕೊಂಡ ಹರಕೆಯನ್ನು ತೀರಿಸಲು) ಹಣ್ಣುತುಪ್ಪವನ್ನು ತಯಾರಿಸಿ ದೇವರಿಗೆ ನೈವೇದ್ಯ ಮಾಡಿಸು : ಅವರು ದೇವಸ್ಥಾನದಲ್ಲಿ ಇಂದು ಹಣ್ಣುತುಪ್ಪ ಮಾಡಿಸಿದ್ದರು (ರೂಢಿ). ಹಣ್ಣು ಮಾಡು = ೧. ಕಾಯನ್ನು ಪಕ್ವಗೊಳಿಸು ; ಮಾಗಿಸು : ಕಾಯನ್ನು ಗುದ್ದಿ ಹಣ್ಣು ಮಾಡಿದ ಹಾಗೆ (ಗಾದೆ). ೨. ಹದಗೊಳಿಸು ; ಪರಿಪಾಕಗೊಳಿಸು ; ಮೆದುವಾಗಿಸು : ಆ ಅನುಭವ ಮನುಷ್ಯನ ಇಡಿಯ ಜೀವಮಾನವನ್ನೇ ಹಣ್ಣುಮಾಡುವ ಅನುಭವ (ರೂಪಸ. ೫). ೩. ಜರ್ಜರಿತಗೊಳಿಸು; ನೋಯಿಸು; ಬಳಲಿಸು: ಶನಿಯು ನಿಮ್ಮನ್ನು ಬಹಳ ಹಣ್ಣುಮಾಡಿದ್ದಾನೆ (ಗಾಳಿಗ. ೧೨) ; ಹೊಡೆದೂ ಬೈದೂ ಸದಾಶಿವನನ್ನು ಚೆನ್ನಾಗಿ ಹಣ್ಣುಮಾಡುತ್ತಿದ್ದ (ತ್ಯಾಗಸಾ. ೧೮೫) ; ಯಾವುದಾದರೂ ಅಪೂರ್ವವಾದ ಬೇಚನ್ನು ಹಾಕಿ, ಶತ್ರುವನ್ನು ಹಣ್ಣುಮಾಡಿ ಸೋಲಿಸುವುದು ಅವನ ವೈಶಿಷ್ಟ್ಯವಾಗಿತ್ತು (ಗ್ರಾಮಾಯ. ೫೨). ಹಣ್ಣುಮೆಟ್ಟು = ಹಣ್ಣಿಗೆ ಬರು ೧ : ನಮ್ಮ ಹಿತ್ತಲಗಿಡದ ಬಾಳೇಗೊನೆ ಹಣ್ಣುಮೆಟ್ಟಿದೆ (ರೂಢಿ). ಹಣ್ಣುಹಂಪಲ್, ಹಣ್ಣುಹಂಪಲು = ಹಣ್ಣು ಮೊದಲಾದುವು; ಫಲಪಕ್ವ : ಮಾಱುವ ಹೆಡಗೆಯ ಹಣ್ಣು ಹಂಪಲ್ ಬಾಡುಕಾಯ್ಗೆ ಹಿಡಿಬಾಡು ಹಿಡಿಹಣ್ಣ ಕೊಟ್ಟರ್ (ಎಇ. V, ೨೦-೬೯; 1161); ಅಡಸಿ ಗಿರಿಗಳ ನುಂಗುವನ ಬಾಯ್ ಹಿಡಿಯದಿಹುದೇ ಹಣ್ಣುಹಂಪಲ ಬಡವಿರಾಟನನಾರು ಬಲ್ಲರು ದ್ರೋಣನಿದಿರಿನಲಿ (ಕುವ್ಯಾದ್ರೋ. ೧೭-೪೦) ; ನೆರೆದುದೈ ನೋಟಕರು ನಗೆಗಳ ಹೊರಳಿಗಳ ಲಂಗಡಿಯ ಹಸರದ ಹುರಿಗಡಲೆ ಗುಡ ಹಣ್ಣುಹಂಪಲುಗಳನು ಹಾಯ್ಕುತಲಿ (ತೊರರಾ. ೫-೫-೩೧); ಅವರ ತೋಟತುಡಿಕೆಗಳು ಹಣ್ಣು ಹಂಪಲುಗಳಿಂದ ತುಂಬಿ ತುಳುಕಲಿ (ಹುಟ್ಟಹ. ೧೬೦). ಹಣ್ಣುಹಣ್ಣಾಗು =

ನೋಯು ; ಬಳಲು : ಮುದುಕಿಯು ಈ ವಿಪರೀತ ಸಂಗತಿಯಿಂದ ಹಣ್ಣು ಹಣ್ಣಾದಳು (ಜಯಂತ. ೨೧೫). **ಹಣ್ಣು ಹಣ್ಣು ಮುದುಕ** = ತೀರ ಮುಪ್ಪಾದವನು; ಅತಿ ವಯಸ್ಸಾದ ವ್ಯಕ್ತಿ : ಆ ಹಣ್ಣು ಹಣ್ಣು ಮುದುಕರಿಗೆ ಸ್ವಲ್ಪವೂ ಕಣ್ಣು ಕಾಣುವುದಿಲ್ಲ (ರೂಢಿ). **ಹಣ್ಣು ಹಣ್ಣು ಮುದುಕಿ** = ತೀರ ವಯಸ್ಸಾದ ಮುದುಕಿ; ಅತಿ ಮುಪ್ಪಾದ ವ್ಯಕ್ತಿ : ಆ ಹಣ್ಣು ಹಣ್ಣು ಮುದುಕಿಗೆ ತಲೆ ನಡುಗುತ್ತಿದೆ (ರೂಢಿ). **ಹಣ್ಣು ಹಾಗಲಕಾಯಿ ಆಗು** = ಹಣ್ಣಾದ ಹಾಗಲಕಾಯಿಯಂತೆ ಸುಕ್ಕುಗಟ್ಟಿರು ; ಜೀರ್ಣವಾಗು : ಜೀವನ ಅಂಬೋದು ಹಣ್ಣು ಹಾಗಲಕಾಯಿ ಆಗಿಹೋಗಿದೆ (ತಿರುಗು. ೨೪).

[ದೇ.॥ ತಮಿ. ಮಲ. ಪಟ ; ತುಳು. ಪನ್ಡಿ ; ತೆಲು. ಪಂಡು; ಕೋಲಾ. ಪನ್, ಪಂಡುಡ್; ನಾಯ್ಕಿ. ಪಂಡೆ ; ಪರ್ಜಿ. ಪಲ್; ಕುವಿ. ಪಂಡು ; ಕುರುಖ್. ಪಂಜ್ಕಾ./ಸಂ. ಫಲ]

ಪಣ₁ (ನಾ). [ಗಣಿತ] ಐದು ಎಂಬ ಸಂಖ್ಯೆ : ಪಣ—ಅ ಸಿ ಆ ಉ ಸಾ ಎಂಬಯ್ದಕ್ಷರಮಂ ಚೆದು—ಅ ಸಿ ಸಾ ಹೂ ಎಂಬ ನಾಲ್ಕಕ್ಷರಮಂ (ಪಸಾರ. ೫೭೫) ; ಪಣತೀಸಂ ಸೊಳಸವಂ ಪಣ ಚದುದುಗಮೇಗಮೆಂದು ಪೇಳ್ವಾಗಮದಿಂ ಗಣಿಯಿಸುವಡೆ ಸವಿದಂ ಪ್ರಣುತ ಶ್ರೀಪದಮೆನಿಪ್ಪ ತತ್ಪಂಚಪದಂ (ಶ್ರೀಪಪುರಾ. ೫). [<ಪ್ರಾ. ಪಣ./ಸಂ. ಪಂಚ]

ಪಣ₂ 'ಬಣ್ಣ' ನೋ.

ಪಣ್ಯ₃ (ನಾ). ೧. ಹಣ ಅಥವಾ ವಸ್ತುವನ್ನು ಬಾಜಿಯಾಗಿ ಒಡ್ಡಿ ಆಡುವ ಆಟ,–ಪಂದ್ಯ ; ಜೂಜು : "ದ್ಯೂತಃ, ಅಕ್ಷವತೀ, ದ್ಯೈತವಂ, ಪಣಃ— ೪ ಜೂಜಿನ ಹೆಸರು" (ಸಿದ್ಧಾಂತಿ. ೩೧೯). ೨. ಜೂಜು, ಪಂದ್ಯಗಳಲ್ಲಿ ಒಡ್ಡುವ ಹಣ ಅಥವಾ ವಸ್ತು ; ಒತ್ತೆ : ನಂಬುದಂ ನಂಬಿಸಲುಂ ನಂಬಿದುದಂ ಬಿಡಿಸಲುಮೊಳಪುಗುವುದರ್ಕೆಡೆಮಾಡಲುಮೆಡೆಯಾಗದ ಮೃಗಮನವುಂಕಿಸಲುಮೊಲ್ಲ[ಮೊಲ್ಲ]ದ ನಲ್ಲರಂತೆ ಮಿಡುಕಿಸಲುಂ ಪಣಮುಂಡಿದರಂತಡ್ಡಂಮಾಡಲುಮೆಸೆದ ವೆಸಗಳ್ಗೊೀಡಿಸಲುಂ ಕುಮಾರಸ್ವಾಮಿಯಂ ನಿಮ್ಮಡಿಯ ಕೆಲದೊಳಾನೆ ಬಲ್ಲಂ (ಪಂಪಭಾ. ೫–೪೬ ಪ) ; "ಪಣಮುಂಡಿದರಂತೆ = ಜೂಜಿನಲ್ಲಿ ಒತ್ತೆ ಸೋತವರ ಹಾಗೆ" (ಪಂಪದೀ. ೧೪೫) ; ಪಣವುಂಡೆಂ ಬಂದಿಯೆಱ್ಪಾಲಕನೆ ಪಲಗೆ ಜೂಜಾಡಿದಂ ಸೂಳೆಗೆಯ್ದಂ ಪಣೆದಂಬೊಯ್ದಂ ತೊಟಲ್ದಂ (ಅರ್ಧನೇ. ೫–೩೩) ; ಹೇಮಭಾರದ ವಿಮಲರತುನಸ್ತೋಮವಿದೆ ಪಣವೆನಲು ಕೌರವಭೂಮಿಪತಿಯೊಡ್ಡಿದನು ಧರ್ಮಜ ಹೆಸರಿಸಿದ ಧನವ (ಕುವ್ಯಾಸ.೧೩–೪೯) ; ತೀರಿತಿನ್ನೀ ನವನಿಪತಿ ಭಂಡಾರದೊಡವೆ ಸುವಸ್ತು ವೆಲ್ಲವು ನೀರಿತೆನಗಿಂದಿನಲಿ ಪಣನೇನಿನ್ನು ಪೇಳು (ನಳಚ. ೪–೩೧) ; ರಾಜೋಟು ಜೀವಾ ಪಣಕ್ಕ ಒಡ್ಡಿ ತಾನ (ದೀಪಪ. II, ೧೩೯) ; ಪ್ರಾಣವನ್ನೇ ಪಣಕ್ಕೆ ಹಚ್ಚಿದ ಶರಣೆ ಕಾಯಕಜೀವಿ ಲಕ್ಕಮ್ಮ (ಕರ್ನಾಕ. ೧೪೩) ; ಮಲ್ಲಯುದ್ಧವು ಏನಿದ್ದರೂ ಪ್ರಾಣವನ್ನು ಪಣವಾಗಿಟ್ಟು ಮಾಡಿದರೇ ಚೆನ್ನ (ನಡಿವಾ. II, ೧೪೩). 'ಪ್ರಾಣಪಣ' ಪರಿ. ೩. ಪಂಥ ; ಜಿದ್ದು ; ಪಂದ್ಯ ; ಸ್ಪರ್ಧೆ : ಕಣ್ಣ ಕೆಂಪಂ ಮಾಡಲೇಕಕ್ಕ ನಿನಗೆ ಛನ ಕಣ್ಣುಂಟು ನನಗಿಲ್ಲದಾಯ್ತು ನೋಡಲ್ಬರಿದೆ ಬನ್ನೆಯು ಮಾತ ಬಿಡು ಹೇಳು ಪಣವೇನದಕೆ ನಿನಗೆನಗೆ ಶಪಥಂಗಳುಯೇನೆನಲು (ತುರಂಗ. ೩–೨೧) ; ಪಾಂಚಾಲರಾಜನು ರಾಜಧರ್ಮಾನುಸಾರವಾಗಿ ತನ್ನ ಮನಸ್ಸಿಗೆ ಬಂದಂಥ ಒಂದು ಪಣವನ್ನು ಇಟ್ಟು ಅದನ್ನು ಸಾಧಿಸಿದವನಿಗೆ ತನ್ನ ಮಗಳನ್ನು ಕೊಡುತ್ತೇನೆಂದು ಗೊತ್ತು ಮಾಡಿದನು (ಪಚಭಾ. ೫೭) ; ಅವನು ಒಡ್ಡಿದ ಪಣದಲ್ಲಿ ನಾನು ನಿನ್ನನ್ನು ಗೆದ್ದೆ (ಹಾಹುತ್ತ. ೬೯) ; ತಾನು ಮನಸ್ಸಿನಲ್ಲೇ ಕಟ್ಟಿಕೊಂಡ ಪಣವೂ ಸುಳ್ಳಾಗುತ್ತಿಲ್ಲ ! (ಸೂರುಪಾ. ೧೬). ೪. ಪ್ರತಿಜ್ಞೆ ; ಶಪಥ : ಗಣಪತಿ ತನ್ನ ಪಣ ಪೂರ್ತಿಗೊಳಿಸಿಕೊಂಡೇ ಇಂದು ಊರಿಗೆ ಮತ್ತೆ ಮೋರೆ ತೋರಿಸಿದ್ದ (ಹೊಸಕ್ಷಿ. ೪೨) ; ತನ್ನ ಗುರುವಿನ ತತ್ತ್ವ–ಸಂದೇಶವನ್ನು ದೇಶದ, ವಿಶ್ವದ ಮೂಲೆಮೂಲೆಯಲ್ಲಿ ಪಸರಿಸುವ ಪಣವನ್ನು ತೊಟ್ಟ ಧೀರ ನರೇಂದ್ರ (ಧರ್ಮಸಾ. ೪೭) ; ಯಾರು ನೀನು ದಿಟ್ಟ ? ಏನು ಪಣವ ತೊಟ್ಟೆ (ನಡದಾ. I, ೪೫೯) ; ಅಲ್ಲಿಗೆ ಕಾಶ್ಯಾಬಾನ. ಪಣ ಪೂರೈಸಿದ ಹಾಗಾಗಿ ಅವನು ಮತ್ತೆ ಮಿಸೆ ಕಾಯತೊಡಗಿದ (ನಾಪೋಲೀ. ೬೫). ೫. ಭತ್ಯ ; ವೇತನ; ಕೂಲಿ : "ಕರ್ಮಣ್ಯಾ, ವಿಧಾ . . . ಮೂಲ್ಯಂ, ನಿರ್ದೇಶಃ, ಪಣಃ–೧೧ ಕೂಲಿಯ ಪೆಸರುಗಳು, ಮುಜೂರಯು ಕಿಮ್ಮತ್ತು" (ಸಿದ್ಧಾಂತಿ. ೩೧೪). ೬. ನಾಣ್ಯ ಅಥವಾ ಕವಡೆಗಳಿಂದ ಎಣಿಕೆ ಮಾಡುವ ಒಂದು ಮೊತ್ತ,—ಮೊಬಲಗು : (೬). ೭. ನಾಲ್ಕು ಹಾಗ ಅಥವಾ ಗದ್ಯಾಣದ ಹತ್ತನೆಯ ಒಂದು ಭಾಗ (ನಾಲ್ಕು ಆಣೆ, ಎಂಟು ಕಾಸು) ಬೆಲೆಯ, ಚಿನ್ನ ಅಥವಾ ಬೆಳ್ಳಿಯ ಒಂದು ಚಿಕ್ಕ ನಾಣ್ಯ ; ಎಂಬತ್ತು ಕವಡೆಯ ಬೆಲೆಯ ನಾಣ್ಯ ; ಹಣ : ಪಣ ಮೂಱು (ಜೈಅರಿ. ೧೪೩೬, ೨೬–೫೧ ; 872) ; ಎಂಟು ದಮ್ಮಡದ ಪುಳ್ಳಿಯಂ ತಂದೊಡಮೊಂದು ಪಣ[ಸಾಹಾ. ದಮ್ಮ] ಮನಪ್ಪೊಡಂ ಪೆಜದೆ ಬಸಿರ್ಗೂಟ್ಟ ಮುಂಬಲಿಗಮೆಣ್ಣೆಗಂ ಕಟುಗಂ ಕೊಟ್ಟು ಪೋಕುಂ (ನಡ್ಡಾರಾ. ೭೭–೨೧) ; ಸಂಶಯದಿಂ ನಾಳೆ ಬಪ್ಪ ಪೊನ್ನಿಂದ ಮಿಂದು ಬಪ್ಪ ಪಣಮೇ ಲೇಸು (ಮುದಪಿ. ೧–೫೮ ಪ) ; ಸಂದಾದೀವಿಗೆಯ ಸೊಡರೆಣ್ಣೆಗೆ ತಿಂಗಳಿಂಗೆ ಒಂದು ಪಣಮುಂ ಬಿಟ್ಪರ್ (ಸೌಇಇ. XX, ೬೦–೭೭ ; 1088) ; ಪಾಗಂ ನಾಲ್ಕಕ್ಕೆ ಪಣಂ (ವ್ಯವಹಾ. ೫–೩೧) ; ನಿನ್ನಯ ಕಾಷ್ಠ ಭಾರಮುಂ ಕೊಂಡಪೆವದಕ್ಕೆ ಕ್ರಯವೇನೆನಲ್ ಪಣ ಚತುರ್ಥಾಂಶಮೆನೆ (ಚೆಬಪ. ೫೨–೫೦) ; ಹತ್ತು ಪಣ ವೆಚ್ಚಮಾಡಿ, ಹೋಗಿ ಆ ಅರ್ಧ ಪಣವನ್ನು ಹಿಂದಕ್ಕೆ ತಂದನು (ಕಸಂ. ೨೭). ೮. ಎರಡು ತೊಲ ಅಥವಾ ನಾಲ್ಕು ಹಾಗದ ತೂಕ : "ನಿಕ್ಕ ಸಲ್ಪೀಳೆಯೆರಡುಮನೊಂದು ಪಾಗಮುವು ನಾಲ್ಕಾಗೆ ಪಣಮೆನಿಕ್ಕು" (ಮಂಗರಾ. ೧೦೪–೧೧). ೯. ಬೆಲೆ ; ಕಿಮ್ಮತ್ತು ; ಮೌಲ್ಯ ; ಕ್ರಯ. ೧೦. ಹಣ ; ಧನ ; ದ್ರವ್ಯ : ತದ್ದರ್ಶನಮಾತ್ರದಿಂ ಗುಣ ಪಣಕ್ಕಾನಾವಗಂ ಮಾಜುವೋದೆನೊ (ಕಾದಂಬ. ೪೧) ; ಪಣವಿಲ್ಲದೆ ಯಟಮಟಿಸುವ ಬಣಗುಗಳಂ ನೆವನಟ್ಟು ಬಿಟ್ಟು ಧನಿಕರೊಳ್ ಗುಣಮಂ ನೆಗಟ್ಟಿ ಕೊರ್ಮೆಯಿ[ಯ] ಪಣಮಂ ಸಾಧಿಸುವಳಾವಳವದೇ ಬೆಲೆವೆಣ್ (ಉದ್ಭಟ. ೧೦–೬೩) ; ಉಣಮುಡದೊಡಲ ದಂಡಿಸುವಾಯಸವಿಲ್ಲ ಪಣವ ವೆಚ್ಚಿಸುವ ಪಾಡಿಲ್ಲ ಗುಣವಂತೆಯರೆಸಗುವ ಪತಿಶುಶ್ರೂಷೆಗೆಣೆಯಹ ತಪವಿನ್ನೊಳನೆ (ಪದಿಪ. ೨–೨೨) ; ಪೆತ್ತ ಕೊಡಗೂಸಂ ಪಣಕೆ ಮಾಱಾಡಿ ಒಡಲಂ ಪೊರೆವಟ್ಟಾಒಡಲಿಂಗೆ . . . ಕಣ್ಗೆ ಕಾಣಲ್ಪಾರದೊಂದು ಬ್ಬಿಮೆ ಪೆತ್ತು ನಿಂದಿರ್ಕುಂ (ರಾಮಾಶ್ವ. ೭೪–೩). ೧೧. ವ್ಯಾಪಾರದ ವಸ್ತು,—ಸರಕು. ೧೨. ವ್ಯಾಪಾರ ; ವ್ಯವಹಾರ ; ವಾಣಿಜ್ಯ ; ಉದ್ಯಮ: ವಿಪುಳಸುಖದಂದದಿಂ ನಿಜವಪುವಿನೊಳಾತ್ಮನೆ ಬಲಂ ಸ್ವಸಂವೇದ್ಯಂ ತೋರ್ಪುದಚಿತ ಪಣಂಗದೊ[ಳ್ಕೊ]ಳ್ ಬುದ್ಧಪೂರ್ವಚರಿತಂಗಳಿಂ ಸಮಂತನುಮೇಯಂ (ಧರ್ಮನಾ. ೫–೧೧೪). ೧೩. ಮಾರಾಟದ ಸ್ಥಳ; ಅಂಗಡಿ : "ಆ ಪಣಂ ನಿಪಣೆ ಪಣ್ಯವಂಗಡಿಯೆನಿಕ್ಕುಂ" (ಮಂಗರಾ. ೫೮–೪). ೧೪. ಒಂದು ನಿರ್ದಿಷ್ಟ ಅಳತೆ,—ಪ್ರಮಾಣ : "ಪಣಮೆನಲ್ಕೆ ಪ್ರಮಾಣಂ" (ಶಶರ. ೬೩) ; ಭತ್ತ ನಾಲ್ಕಳೆ ವಂದಂ ಕಾಕಣ್ಯಮೆನಿಪುದದು ಮತ್ತೆ ಪಂಚಕಕೊಂದಂ ಪಣಮಕ್ಕುವು ಪಣ ಮೂವತ್ತೆನಿಸಲದು ನಿಷ್ಕ (ಭಾಸ್ವರ. ೭೪–೩). ೧೫. (?) : ಯಾದುರ್ಘಟಂಗಳಾದ ಪಣಂಗಳಂ ಕುರಿಯುವಂತೆ (ಸೌಗಂಧಿ. ೧೭೬–೨೦); ಸೌಗಂಧಿಕಾದೇವಿಯರು ಕೆಲವು ಪಣಂಗಳಂ ಕುರಿತುಯಿರುವರು(ಸೌಗಂಧಿ. ೨೨೬–೨೦). ೧೬. (?) : ಕುದುರೆಗೆ ಕಾಪಟ್ಟು ಎಜಿಯಪ್ಪೆನ ಪಣಮೆ

ಕಾದಿ ಸತ್ತ ನಾಗವರ್ಮ್ಮಕ××ಕೊಟ್ಟಾ ×××ಮತ್ತಮ್ಮ ಅಜವರ್ಮ್ಮ ಗಂಗರ ಬೆಸದ×ಣ್ಡಾ ಚೆಟ×××ಗಜನೊಬಮ್ಮಕೆ ಕಾದಿ ಸತ್ತೊಡೆ (ಎಕ. XI, ಜಗಳೂ. ೧೯-೩ ; 907).

ಪಣಕ್ಕಿಡು=ಪಣವಾಗಿ ಒಡ್ಡು ; ಒತ್ತೆಯಾಗಿ ಇಡು : ಒಬ್ಬ ಸಾಮಾನ್ಯ ದಾಸಿಗಾಗಿ ನಿನ್ನ ಪ್ರಾಣಗಳನ್ನೂ ಪಣಕ್ಕಿಡಲು ಸಾಹಸ ನಿನ್ನಲ್ಲಿ ಇದೆಯೆ ? (ಬಾಣಬ. ೩೨೧) ; ಯಾವತ್ತು ಸಾಧನಗಳಿಂದ ಸರ್ವಸ್ವವನ್ನು ಪಣಕ್ಕಿಟ್ಟು ಘರಂಗಿಗಳನ್ನು ಹಿಂದುಸ್ತಾನದಿಂದ ಹೊರಗೆ ಅಟ್ಟುವುದನ್ನು ನೋಡುವುದೇ ನನ್ನ ತೀವ್ರ ಇಚ್ಛೆಯಾಗಿದೆ (ಪ್ರಬಂಧ. ೫೬).

[ಸಂ.]

ಪಣ$_4$ 'ಪಣಬು' ನೋ.

ಪಣ$_5$ (ಪ್ರ). ಒಂದು ಭಾವವಾಚಕ ಪ್ರತ್ಯಯ : ಒಡ್ಡವಣ,ಚಡ್ಡಣ . . . ಎಂಬ ಶಬ್ದಗಳೂ ಅವುಗಳ 'ಣ' ಅಂತ್ಯವೂ ವೀರಪಣ, ಜಾಣಪಣ, ವಿಸ್ತಾರಪಣ ಈ ಭಾವನಾಮಗಳಲ್ಲಿಯ 'ಪಣ' ಉಪಪದವೂ ಮರಾತಿಯ ಕಂಡಿತವಾದ ಪ್ರಭಾವವನ್ನು ತೋರಿಸುತ್ತವೆ (ಕಸಾಚ. ೨೬೧). 'ಜಾಣಪಣ', 'ತತ್ತುಪಣ' ಪರಾ.

ಪಣಒಡ್ಡು 'ಪಣವೊಡ್ಡು' ನೋ.

ಪಣಂಕು 'ಪಳಂಕು' ನೋ.

ಪಣಂಗುಳಿ (ನಾ). ಜೂಜಾಡುವ ಸ್ವಭಾವದವನು ; ಜೂದಾಳಿ : ಲಂಚಮಂ ಕೊಳ್ವಂ, ಲಂಚಂಗುಳಿ ಏವಂ ಸಾಲಂಗುಳಿ, ಅಟಂಗುಳಿ, ಪಣಂಗುಳಿ, ಪಣ್ಗುಳಿ, ಕಾಯ್ಗುಳಿ (ಶಬ್ದಾನು. ೪೧೪ ಪ್ರಯೋ).

[ಪಣ$_3$+-ಗುಳಿ$_2$(<-ಕುಳಿ$_3$)]

ಪಣಂಚು 'ಪಳಂಚು$_1$' ನೋ.

△ **ಪಣಂಬೆ** 'ಬಣಂಬೆ' ನೋ.

ಪಣಕಟ್ಟು$_1$ (ಕ್ರಿ). ೧. ಜೂಜಿನಲ್ಲಿ ಹಣ ಅಥವಾ ವಸ್ತುವನ್ನು ಒಡ್ಡು ; ಬಾಜಿಕಟ್ಟು : ಪಣ ಕಟ್ಟುವವನ ಹತ್ತರ ಹೆಣಗಬಹುದು, ಹಣ ಕೂಡಿಸುವವನ ಹತ್ತರ ನಿಲ್ಲಲಾಗದು (ಗಾದೆ). ೨. ಪ್ರತಿಜ್ಞೆ ಮಾಡು ; ಪಣತೊಡು : ಮಾಡಿ ಮಡಿಯಲೆಂದು ಪಣ ಕಟ್ಟಿ ದುಡಿದ ಕೆಲವರಲ್ಲಿ 'ಬದುಕಿ ಉಳಿದವರೆ' ನೆರವೂ ಅವರಿಗೆ ಇದೆ (ಸಾಸಮಾ. ೧೬೦).

[ಪಣ$_3$+ಕಟ್ಟು$_1$]

ಪಣಕಟ್ಟು$_2$, ಪಣೆಕಟ್ಟು, ಪಣಕಟ್ಟು (ನಾ). ೧. ಜಾತಿ ಪದ್ಧತಿ,—ಕಟ್ಟಳೆ : (ಕ). ೨. ಗುಂಪು ; ಪಂಗಡ ; ವರ್ಗ ; ಪಕ್ಷ : ಇದರ ವಿಚಾರಣೆಗೂ ಲೆಕ್ಕವನ್ನು ಬರೆಯುದಕ್ಕೂ ಗುರಿಕಾರ, ಶ್ಯಾನಭಾಗ ಮುಂತಾದ ಆಯಾ ಪಣಕಟ್ಟಿನ ಜನಗಳನ್ನು ನೇಮಕ ಮಾಡಿದರು (ಮಹಾವಂ. I, ೧೨೮) ; ಇವನಂತಹ ಸುಸಂಸ್ಕೃತನೂ ವೀರನೂ ಮನ್ತ್ರೋಪಾಯನಿಷ್ಣಾತನೂ ನಮ್ಮ ಅರಮನೆಯ ಪಣಕಟ್ಟಿನಲಿ ಬೇರಾರಿದ್ದಾರೆ ? (ಬೆಟ್ಟಅ. ೧೩೯-೬). 'ಬುಡಕಟ್ಟು' ಪರಾ. **ಪಣೆಕಟ್ಟು** : ೨. ಈ ಗ್ರಾಮದ ಪಣೆಕಟ್ಟು ಆಯಗಾರು ಶಾನಬೋಗ ಪುಟರಂಗಪ ತಳವಾರ ವೋಬಾ ಬೇಗಾರ ದಾಸ ತಿಮ್ಮ ಆಯಗಾರ ಸಹ ನಮ್ಮ ಮೊತ್ತ ನೀನು ಬಂದು ನಮ್ಮ ಸ್ತಳದಲ್ಲಿ ಅಜಿಕೆ ಮಾಡಿಕೊಂಡು (ಎಕ. XI, ಹಿರಿಯೂ. ೩೬-೧೫ ; 1533 ?). **ಪಣಕಟ್ಟು** : ೨. ನಾನಾ ಪಣಕಟ್ಟಿನವರು ಬರಶಿ ಕೊಟ ದಾನಶ್ಯಾಸನದ ಪತ್ರಾ (ಎಕ. XVI, ಗುಬ್ಬಿ. ೮೩-೮೫ ; ಸು. 1672) ; ಅನೆಕಲ್ಲುವುಭಯಪೇಟೆಯಲ್ಲಿಯಿರುವಂಥಾ ಸೆಟ್ಟಿ ವರ್ತಕರು ಮುಂತಾದ ಸಮಸ್ತ ಪಣಕಟ್ಟು ಜನರಿಗೆ ದೇಶದ ಪೇಟೆಯಲ್ಲಿ ನಂದಿಕೋಲು ಮೆರವಣಿಗೆ ನಿಮಿತ್ಯವಾಗಿ . . . ಕಲಹ ಬಂದು (ಎಕ.IX, ಹೊಸಕೋ. ೧೦೫-೯ ; 1693) ; ಮೂಗೂರ ಸೋಮರಾಜೈಯ್ಯ ಅರಶಿನವರ ಕುಮಾರರು ದೇವರಾಜೈಯ್ಯ ಅರಶಿನವರು ಪಣಕಟ್ಟಿನ ಉದ್ಯೋಗಸ್ತರ ಸುಸಂಮ್ಮತದ ಮೇಲೆ ನೇಮಕಾ ಮಾಡಿಸಿದ ದಾನಶಾಸನದ ಕ್ರಮವೆಂತೆಂದರೆ (ಮೈಅರಿ. ೧೯೫೫, ೩೧-೨೯ ; 1737).

[ಪಣ$_2$(<ಬಣ್ಣ)+ಕಟ್ಟು$_2$]

ಪಣಕಾಂತೆ (ನಾ). ವೇಶ್ಯೆ ; ವಾರಸ್ತ್ರೀ : ಭಾವಂ ತಾಂ ತಳರ್ದು ಬೇಡೆ ಶಿವಗಣಚಿಂತಾಮಣಿ ಬಸವನೀವನಂಬರಮನದಂ ಎನೆ ಕೇಳ್ದಾ ಪಣಕಾಂತೆ ದೂತಿಗೆ ಪಸಾಯಂಗೊಟ್ಟು (ಸೃಷಿ. ೮-೨೫). [ಪಣ$_3$+ಕಾಂತೆ]

ಪಣಕ್ಕನೆ (ಅ). ಒಂದು ಅನುಕರಣಾವ್ಯಯ ; ಪಕ್ಕನೆ; ಪುಣಕ್ಕನೆ: ಬೆಕ್ಕು, ಬದುಕಿದೆಯೂ ಬಡಜೀವವೇ ಎಂದು, ಬಲೆ ಬಿಚ್ಚತೋ ಇಲ್ಲವೋ, ಪಣಕ್ಕನೆ ನೆಗೆದು, ಅಲಡ ಮರದಲ್ಲಿ ಮರೆಯಾಯಿತು (ನಾಳೀಜಂ. ೪೮).

[ಪಣಕ್$_0$+-ಅನೆ$_1$]

ಪಣಗೈ (ಕ್ರಿ). ಪಣವಾಗಿ ಒಡ್ಡು ; ಪಂದ್ಯದ ವಸ್ತುವಾಗಿ ಮಾಡು: ಮಾನಿನಿಯ ಶೀಲವನು ಪಣಗೈದು, ತಾಳಿ ಬಾಳಿ ಬದುಕಲು ಏಕೆ ರಾಜ್ಯ ವಾಳುವುದೇಕೆ ? (ನಡಿದಾ. I, ೪೨೬). [ಪಣ$_3$+ಗೈ(<ಕೆಯ್$_1$)]

ಪಣಗೊಳ್ (ಕ್ರಿ). ಒತ್ತೆ ಹಣವನ್ನು ತೆಗೆದುಕೊಳ್ಳು ; ಒತ್ತೆಯಿಟ್ಟುಕೊಳ್ಳು : ಪಣಗೊಳ್ವಳ್ ಚೆಲ್ಲದಿಂದಂ ಚದುರನ ಚದುರಂ ಸೇಸೆಗೊಳ್ವಳ್ . . . ಇಂತೀ ಗಣಕಾಸಂದೋಹದೊತ್ತೇಸೆಯೆ ಪುರುಷಗುಣ ಶ್ರೀಗಳಗ್ರಾಹಿಯಲ್ತೇ (ಲೀಲಾವ. ೨-೯೭). [ಪಣ$_3$+ಕೊಳ್$_1$]

ಪಣತ, ಪಣಥ, ಪಳಥ, ಬಣತ, ಬಳತ (ನಾ). ೧. ದವಸ ಧಾನ್ಯಗಳನ್ನು ಸಂಗ್ರಹಿಸಲು (ಸಾಮಾನ್ಯವಾಗಿ ನೆಲಮಟ್ಟದಿಂದ ಮೇಲೆ) ಕಟ್ಟಿದ, ಮೇಲ್ಭಾಗದಲ್ಲಿ ಬಾಗಿಲುಳ್ಳ ಅಥವಾ ಹಂತಗಳಿಂದ ಕೂಡಿದ ಬಾಗಿಲುಳ್ಳ ಕೊಠಡಿ ; ಕಣಜ : ಭತ್ತದ ಪಣತದ ಮೇಳು ಹತ್ತೆಂಟು ಸೂಚನೆ ದಿಮ್ಮಿಸಾಲೆ (ಕಾಲಸಂ. ೭೮-೮) ; ಎಂಬತ್ತುನಾಲ್ಕು ಲಕ್ಷದ ಜೀವರುಗಳೆಂದೆಂಬ ಬೀಜವ ಸೃಷ್ಟಿಕರ್ತ ಮುಂಬೆಳಸಿಗೆ ಪಣತವ ಕಟ್ಟಿದಂದದಿ ಪೊಂಬೆಟ್ಟ ಕಣ್ಣ ರಂಜಿಸಿತು (ಮೋಹತ. ೨-೧೨) ; ಇಂತರ ಮನೆಯಂ ರಚನೆಗೈಸಿ ತದುಪಯುಕ್ತಮಾದ ಬೊಕ್ಕಸ ಭಂಡಾರ ಲಾಯಗಡಾಶ್ವಶಾಲೆಯುಗ್ರಾಣ ಪಣತ ಮುಂತಾದ ಮಹಲ್ಗಳಂ ನಿರ್ಮಾಣಂಗೈಸಿ (ಕಳಸೃ. ೧-೧೦೫) ; ಅರಮನೆಯನ್ನು ಕಟ್ಟಿಸಿ ಬೊಕ್ಕಸ ಭಂಡಾರವುಗ್ರಾಣ ಜಾನಶಾಲೆ ಪಣತ ಮುಂತಾಗಿ ಕಟ್ಟಿಸಿ (ಕಳವಂ. ೩೨-೨) ; ಮನೆಯ ಒಂದು ಪಕ್ಕದಲ್ಲಿ ಬಚ್ಚಲುಮನೆಯೂ ಇನ್ನೊಂದು ಪಕ್ಕದಲ್ಲಿ ಪಣತದ ಕೊಟ್ಟಿಗೆಯೂ, ಇದ್ದುವು (ಪಂಜಪಂ. ೧೫೪). **ಪಣಥ** : ೧. ಮನೆಯ ಹಿಂಭಾಗದಲ್ಲಿ ಹಸುಗಳ ಕೊಟ್ಟಿಗೆ, ಸ್ನಾನದ ಮನೆ(ಬಚ್ಚಲುಮನೆ), ಸೌದೆಯ ಕೊಟ್ಟಿಗೆ, ಪಣಥ (ಕಣಜ) ಇವು ಮನೆಗೆ ಹೊಂದಿಕೊಂಡು ಇರುವುವು (ಮಲೆಮಂ. ೯). **ಪಳಥ** : ೧. ಕಳುವ ಸಾಯಣ್ಣನವರು ಅಗ್ರಹಾರವ ಮಾಡುವಲ್ಲಿ ಪಳಥ ಬಿಡುಗೊಡೆಯಾಗಿ ಬಿಟ್ಟಿಗ ೨೧೪ (ಎಕ. VI,ಕಡೂರು.೪೯-೩೩; 1291). **ಬಣತ**: ೧. ಅಲ್ಲಿ ಬಣತದ ಮನೆಯಲ್ಲಿ ಕುಳಿತುಕೊಂಡಾಗ, ನೀನು . . . ಅಂಜಿಕೊಳ್ಳಬಹುದು (ಮಹಾತ್ಮಾ. ೪೯). **ಬಳತ** : ೧. ಹಸಿರು ದೊರೆವಾಗ ಅದನ್ನು ಕೊಂಡಾಗಲೀ, ಬೆಳೆದಾಗಲೀ, ಕೆಡದಂತೆ ಮತ್ತು ಬಣಗದಂತೆ, ಬಳತಕ್ಕೆ ಹಾಕಿ . . . ಕಾಯ್ದುರಿಸಿಕೊಳ್ಳಬೇಕಾಗುವುದು (ಗೋಗ್ರಾಸ. ೮೯). ೨. ಬಿದಿರಿನಿಂದ ಅಥವಾ ಚಾಪೆಯಿಂದ ಹೆಣೆದು ಮಾಡಿದ, ಧಾನ್ಯವನ್ನು ಸಂಗ್ರಹಿಸುವ ಸಾಧನ ; ತೊಂಬೆ ; ಗಳಗೆ. ೩. ತೆಳ್ಳಗಿರುವ ಗಳು ; ಬಿದಿರಿನ ಸೀಳು ; ದಬ್ಬೆ : ಯಾಕೋ, ಬಳತದ ಹಾಗೆ ಬಳುಕುತ್ತಿ ? (ರೂಢಿ). [?./ಮರಾ. ಬಳತ, ಬಳದ]

ಪಣತಖಾನೆ (ನಾ). =ಪಣತ ೧ : ಪಣತಖಾನೆಯಲ್ಲಿ ಹಾವು ಸೇರಿಕೊಳ್ಳುವ ಸಂಭವವಿರುವುದರಿಂದ ದೀಪವಿಲ್ಲದೆ ಕತ್ತಲಲ್ಲಿ ಅಲ್ಲಿ ಇಳಿಯುವುದು ಅಪಾಯಕರ (ರೂಢಿ). [ಪಣತ+ಖಾನೆ]

ಪಣತಿ₁ (ನಾ). ಹೆಂಗಸು ; ಸ್ತ್ರೀ : ಪಣತಿ ನಿನ್ನನು ಮತ್ಪುರಕೊಯ್ವೆಣಿಕೆಯಿಂದಾ ಬಂದೆನೇತಕೆ ಬಣಗುಮರ್ತ್ಯನ ಭಜಿಪೆ ಮತ್ತೆಯೆಯಾಗು ನೀನು (ಅರಾಮ. ೩-೭-೩೬) ; ಶಂಖೆಯಿಲ್ಲಾದೆ ಆಳುವಂಥಾ ದಿಂಕಾವಾದಾ ಧೊರೆಗಾಳಿವರೂ ಪಂಕಜಾಕ್ಷಿ ಕೇಳೂ ಯನ್ನುತಾ ಆ ನಳಾರಾಜಾ ಪೊಂಕದಿಂದಾ ಪೇಳ್ದಾ ಪಣತೀಗೆ (ಯನಳ. ೪೬). 'ಮಡದಿ' ಪರಾ. [ದೇ.॥ ತೆಲು. ಪಣಂತಿ, ಪಡಂತಿ]

ಪಣತಿ₂ 'ಪಣತೆ' ನೋ.

ಪಣತೀಸ (ನಾ). ಮೂವತ್ತೈದು ಎಂಬ ಸಂಖ್ಯೆ : ಪಣತೀಸ-ಣಮೋ ಅರಹಂತಾಣಂ ಣಮೋ ಸಿದ್ಧಾಣಂ...ಣಮೋ ಲೋಎ ಸವ್ವಸಾಹೂಣಂ ಎಂಬೀ ಪಂಚಪದದ ಮೂವತ್ತಯ್ದಕ್ಕರಮಂ (ಪಸಾರ. ೫೬೫) ; ಪಣತೀಸಂ ಸೊಳಸವಂ ಪಣ ಚದುದುಗಮೇಗಮೆಂದು ಪೇಳ್ವಾಗಮದಿಂ ಗಣಿಯಿಸುವಡೆ ಸವಿದಂ ಪ್ರಣುತ ಶ್ರೀಪದಮೆನಿಪ್ಪ ತತ್ಪಂಚಪದಂ (ಶ್ರೀಪದಾ. ೫). [<ಪ್ರಾ. ಪಣತೀಸ./ಸಂ. ಪಂಚತ್ರಿಂಶತ್]

ಪಣತೆ 'ಪಣತೆ' ನೋ.

ಪಣತೆಸೊಡರ್, ಹಣತಿಸೊಡರು (ನಾ). ಮಣ್ಣಿನ ಅಥವಾ ಲೋಹದ ದೀಪದ ಬಟ್ಟಲಿನಲ್ಲಿ ಹಚ್ಚಿದ ದೀಪ,— ಜ್ಯೋತಿ : ಮಿಕ್ಕಕ್ಕರೆಗೆ ಪಣತೆಸೊಡರಂ ಪಿಡಿದು ನೋಡಿದಳಯೋಧ್ಯೆಯ ದೇವವಂದಿತ ರೂಪಮಂ (ಶ್ರೀರಾಮಾ. ೧೩೬-೩೨೦).. **ಹಣತಿಸೊಡರು** : ಇರುಳುಗಾಳಿ ಬೀಸುವಾಗ ಹಣತಿಸೊಡರು ಹೆದರಿದಂತೆ ತಾನು ತಣ್ಣಗಾದೇನೆಂದು ಚಳಿಚಳಿ ನಡುಗುತಲಿತ್ತ ಶುಭ ನುಡಿಯೆ ಶುಭ ನುಡಿಯೆ ಶಕುನದ ಹಕ್ಕಿ (ನಾದಲೀ. ೩-೧೧). [ಪಣತೆ(<ಪಣತೆ)+ಸೊಡರ್]

ಪಣತೊಡು (ಕ್ರಿ). ಪ್ರತಿಜ್ಞೆಮಾಡು : ದೃಢಸಂಕಲ್ಪವನ್ನು ಮಾಡು ; ದೃಢನಿಶ್ಚಯವನ್ನು ಹೊಂದು : ಕನ್ನಡನಾಡಿನ ದಂಪತಿಗಳೆಲ್ಲ ಗ್ರಂಥರಾಶಿಯನ್ನು ಉಳಿಸಲು ಹಾಗು ಬೆಳೆಸಲು ಪಣತೊಟ್ಟರು (ವಾಸಚಂ. ೧೭೫) ; ಬೊಪ್ಪಣ . . . ಸ್ವಾಮಿಯ ಸೇವೆಯನ್ನು ತ್ರಿಕರಣಪೂರ್ವಕವಾಗಿ ಮಾಡುವೆನೆಂದು/ ಪಣತೊಟ್ಟ (ಶಾಂತಲಾ. ೧೪೧) : ನಿರ್ದಯೆಯಿಂದ ಭೂಮಿಯನ್ನು ಸುಡಲು ಪಣತೊಟ್ಟ ಸೂರ್ಯನ ಕಿರಣಗಳ ಪ್ರಖರತೆಯಿಂದ ಅವಳಿಗೆ ಕಣ್ಣುಮುಚ್ಚುವಂತೆಯೇ ಆಯಿತು (ಮಣ್ಣೆಮ. ೩) [ಪಣ್₃+ತೊಡು₁]

ಪಣಥ 'ಪಣತ' ನೋ.

ಪಣಬು₂, ಪಣ್₄ (ನಾ). ಚಿಕ್ಕ ಸೇತುವೆ ; ಸಾರ : [ಹಿ]ರಿಯುಕುರ್ವ [ಯೆ]ಕ್ಕೇಕುರ್ವ ಕಲ್ಲೋಲನಾಯಕಿತ್ತಿಕುರ್ವ . . . ಅನುಪಾ ಕಟಿಗೆ ಪಣಬಿನ ಹಜುಗೋಲವರು ಕೊಡುವ ತೆಜ್ಜಿಗೆ ಸಹವಾಗಿ (ಸೌಇಇ. IV, ೨೫೫-೧೧ ; 1513) ; ನಾನು ಕುದುರೆಯಿಂದ ಇಳಿದು, ಅವರ ಸಂಗಡ ಅಲ್ಲಿದ್ದ ಒಂದು ಸಣ್ಣ ಪಣಬಿನ ಕೈಪಿಡಿ ಮೇಲೆ ಕುಳಿತು, ವಿಷಯವೇನೆಂದು ಕೇಳಿದೆ (ಕಲಸಿ. ೨೧೦). **ಪಣ್₄** : ಅಲ್ಲೊಂದು ನದಿ. ಅದನ್ನು ದಾಟುವುದಕ್ಕೆಂದು ಹಾಕಿದ್ದ ಪಣವನ್ನು ಕಿತ್ತು ಹಾಕಿದ್ದಾರೆ (ಫಾಟಕಮು. ೭೫). [?]

ಪಣಭಾಮಿನಿ (ನಾ). — ಪಣಕಾಂತೆ : ಪರಿಮಳಕೊಯ್ಯನಾವರಿಪತುಂಬಿ ಮುಗಿಲ್ಗಣಕಾವಿಲಾಸಮಂದಿರಚಲದಗ್ರಘಂಟೆಯುಲಿ ಮೇಳವನಂ ಪಣಭಾಮಿನೀವಿಲೋಲರುಚಿರಕರ್ಣಪತ್ರರುಚಿ ಮಿಂಚು ನವೋತ್ಪಲನಿರ್ಗಮನತ್ವಸೂನರಸಕಣಾಳಿ ವೃಷ್ಟಿಯೆನೆ ಕಾರವೊಲೊಪ್ಪಿದುದಲ್ಲಿ ತಣ್ಣೆಲರ್ (ಯಾದಚಂ. ೩-೬೮). [ಸಂ. ಪಣಭಾಮಿನೀ]

ಪಣವ 'ಪಣವ₂' ನೋ.

ಪಣರವಾಡಿ (ನಾ). ಒಂದು ಸ್ಥಳದ ಹೆಸರು (?) : ಪಣರವಾಡಿಯರಟ್ಟಗಡನಣ್ಣಪಯ್ಯನ ಮಗ ಅಸಗಯ್ಯ (ಎಕ. V, ಚನ್ನರಾ. ೨೬೬-೧೨ ; 971). [?+ಪಾಡಿ₂]

ಪಣವ₁, ಪಣವು (ನಾ). ಪ್ರಣವ ; ಓಂಕಾರ : "ಪಣವ-ಪ್ರಣವ— ಓಂಕಾರ" (ತತ್ವಕೋ. ೨೪). **ಪಣವು** : ಸೋಪಾನಕ ನೀ ನಡಿಯೆ ಸೊಬಗಿನ ಚಿಂತಾಮಣಿಯೆ ಓಮೆಂಬ ಪಣವು ಒಳಗೆಲ್ಲ ಮುದ್ದುಮುಖದ ಮೋಹನ್ನ ದನಿಯ ಕೊಡ ಬಾರ (ಲೋಕಗೀ. ೧೧). [<ಸಂ. ಪ್ರಣವ]

ಪಣವ₂ (ನಾ). ಒಂದು ಬಗೆಯ ಚರ್ಮವಾದ್ಯ : "ಡಿಂಡಿಮಃ, ಪಣವಃ—ಈ ೨ ಪಳ(ಟ)ಹಂ" (ಹಲಾಯು. ೧೭-೯೭) ; ಅನೇಕ ಶಂಖ ಕಾಹಳಭೇರೀಪಣವಝಲ್ಲರೀಮೃದಂಗತೂರ್ಯಾಂಗಳಂತಕಾಲಾಂತಕವಿಕಟಾಟ್ಟಹಾಸಂಗಳೆಂಬಂತೆ ಮೊಟಗೆ (ಸಂಸಭಾ. ೧೧-೩೩ ಪ) ; ಬರ್ಪ ಪಾಣವಿಕನ ಪೆಗಲ ಪಣವಮಂ ತನ್ನ ಪೆಗಲೊಳ್ ತಗುಳ್ಚಿಕೊಂಡು . . . ಬಾಚಿಸುವ ವಾದ್ಯವಿದ್ಯಾಧರನ ವಾದನವೈದಗ್ಧಿಗಂ ಮರುಳ್ಗೊಂಡು (ಅರ್ಧನೇ. ೬-೩೯ ಪ) ; ಭೇರಿ ಪಟಹ ನಿಸ್ವಾಣ ಕಾಹಳೀ ಮುರಜ ಪಣವ ಮೊದಲಾದ ವಾದ್ಯ (ಸೌಗಂಧಿ. ೨೫೦-೧೩) ; ಅನೆಯ ಮೇಲೆ ಘಂಟೆಯನ್ನೂ ಪಣವವನ್ನೂ ಬಾರಿಸುತ್ತ ಜೌಕಗಳಲ್ಲೆಲ್ಲಾ ನನ್ನ ಜಯವನ್ನು ಘೋಷಿಸಲಿ ! (ಪಚಭಾ. ೨೧೯). [ಸಂ.]

ಪಣವಕ (ನಾ). [ಛಂದ] ಒಂದು ಬಗೆಯ ಛಂದಸ್ಸು ; ಪಂಕ್ತಿ ಎಂಬ ಹತ್ತನೆಯ ಛಂದಸ್ಸಿನಲ್ಲಿ ಹುಟ್ಟಿದ, ಪ್ರತಿಪಾದದಲ್ಲಿ ಮ ನ ಯ ಗಣಗಳು ಮತ್ತು ಒಂದು ಗುರುವಿನಿಂದ ಕೂಡಿದ ಹತ್ತು ಅಕ್ಷರಗಳಿರುವ ಒಂದು ಸಮವೃತ್ತ : ಭೂನಾಕಾಂತದೊಳಿರೆ ತೋಯೇಶಂ ತಾನೆಂದುಂ ಪಣವಕ ನಾಮಂ ಕೇಳ್ನೀನಿಂತೀ ತೆಜನಱಂದೋದೆಂದುಂ ಮಿನಾಕ್ಷೀ ಯತಿ ಗಿರಿಯೊಳ್ನಿಲ್ಕುಂ (ಛಂದೋಂಬು. ೧-೧೦೭). [ಸಂ.]

ಪಣವಧು (ನಾ). ಸೂಳೆ ; ವೇಶ್ಯೆ ; ಗಣಿಕೆ : "ದಾರಕೆ ಲಂಜಿಕೆ ಪಣವಧು ವಾರಾಂಗನೆ ಗಣಿಕೆ ವೇಶ್ಯೆಯೆನೆ ಬೆಲೆವೆಣ್" (ಸಸ್ತಕೋ. ೫೩-೭) ; ಪುರೂರವಸಂಗೂರ್ಮಸಿ ಕರ್ತಾಪಳ್ ಪಣವಧೂಸ್ನೇಹವ್ಯಪೋಹಂಗಳಂ (ಅಸಂಪು. ೮-೫೪) ; ಹರಿದಿಕ್ಪ[ಪಾಶಾಂ. ದೀಕ್ಷ]ಣವ [ಪಾಶಾಂ. ತ]ಧು ಬರೆ ಹಿಮಕರ ಖರಕರರೊಂದೆ ತೆಜದೊಳನುರಕ್ತತೆಯಿಂ ನೆರೆವಳ್ಗಡ ವಸುವಿತ್ತೊಡೆ ಸರಿ ಮೃದುಕಠಿನರ್ಕಳಿರ್ವರುಂ ಗಣಿಕೆಯರೊಳ್ (ರಾಜಶೇ. ೧೨-೨೭). 'ಪಣವಧೂಗೇಹ' ಪರಾ. [ಸಂ. ಪಣವಧೂ]

ಪಣವಧೂಗೇಹ (ನಾ). ಸೂಳೆಯ ಮನೆ ; ವೇಶ್ಯಾಗೃಹ : ಗುರುಸೌರಭ್ಯಸಂದೋಹಭಾರಾಕಳಕಂ ಬಂದೊಯ್ಯನೇನೂದಿದುದೂ ಪಣವಧೂಗೇಹದಿಂ ಗಂಧವಾಹಂ (ಚಂಪ್ರಪು. ೮-೪೫). [ಸಂ.]

ಪಣವಧೂಟಿ (ನಾ). ಪಣವಧು : ಪಲ್ಲವ ಜಂಗಮಂ ಪಣವಧೂಟಿ [ಪಾಶಾಂ. ಟಿ, ತಿ]ಯ ಗೇಹದೊಳಿರ್ದು ಬೆಳಸಿಂದಿಲ್ಲ ಘನಂಗಳಂ ಬಸನಿತ್ತಪಸೀಗಳೆ ಬೇಡಿ ತರ್ಪುದೆಂದಲ್ಲಿಯ ಚೇಟಿಯಂ ಕಳುಪೆ (ಸೃಸಿ. ೮-೨೦). [ಸಂ. ಪಣವಧೂಟೀ]

ಪಣವಬಂಧ (ನಾ). [ಕಾವ್ಯಮೀ] ಚಿತ್ರಕಾವ್ಯದ ಬಂಧಗಳಲ್ಲಿ ಒಂದು ಪ್ರಕಾರ: ಇದು ಪಣವಬಂಧಮುಂ ಗೋಮೂತ್ರಿಕೆಯುಮಕ್ಕುಂ (ಪಾಪಕಿ. ೧-೪೦ ಪ). [<ಸಂ. ಪ್ರಣವಬಂಧ]

ಪಣವು₁, ಪಣ₁, ಹಣ, ಹಣವು (ನಾ). ೧. ದುಡ್ಡು ; ಧನ ; ದ್ರವ್ಯ : ರಕ್ಕಸಿಯರಮನೆಯ ಬೆಲ್ಲದಂತೆ ಕಲ್ಲ ಬಿಡವೆಯೊಳಿರ್ದ ಪಣವಿನಂತೆ ಸಿಡಿಲೊಳಗಿರ್ದ ಸಕ್ಕರೆಯಂತೆ (ಧರ್ಮಾಮೃ. ೧೩-೧೮೫). ೨. ಒಂದು ನಿರ್ದಿಷ್ಟ ಬೆಲೆಯ ನಾಣ್ಯ ; ಪಣ ; ನಾಲ್ಕು ಹಾಗ : ಧಾನ್ಯಮನರ್ಘಮಾದ ಕಾಲದೊಳೀ ಕೊಡಂ ತೀವಿದ ಸತ್ತುಗದ ಪುಡಿಯಂ ಪತ್ತು ಪಣವಿಂಗೆ ಮಾಱಿ ಪತ್ತಾಡುಕೊಳ್ವೆಂ (ಸಂಚತಂ. ೧೮೬-೫) ; ಅಲ್ಲಿ ಕೊಯ್ವುದೆಲೆಯ ಪೇಱಿಂಗೆ ತಮ್ಮ ಪನ್ನಾಯದ ಸುಂಕದೊಳಗೆ ಬಿಟ್ಟ ಪೀಸ ೧೦ ಪೊಱಿಗೆ ಪೀಸ ೫ ಪ[ಣ]ವಿನೆಲೆಗೆ

ವೀಸ ೧(ಸೌಇಇ.XV,೫-೯; 1106); ಪದಿನೆಂಟು ಕೊಳಗದೊಬ್ಬಳಮದು ಪಣವಿಂಗಾಗೆ ನೂಱು ನಾಲ್ಕಂಡುಗನುಂ ಪದಿನೆಂಟು ಕೊಳಗದೊಳ್ಕೂಡಿದ ಮೂಱು ಬಳ್ಳವಿರೆ ಪೊಂಗಳವೇಂ (ಭಾಸ್ಕರ. ೨೧-೮); ಆತನ ಬುದ್ಧಿ ಪೌರುಷಮುಂ ಮೆಚ್ಚಿ ನಾವಿಕಾದಶವಂದಂಗೊಟ್ಟೊಡಾ ಪಣವಿಂಗವರ ಪೊಕ್ಕ ದ್ವೀಪದೊಳ್ ಕೊಂಡು ಪೆಱತು ದ್ವೀಪದೊಳ್ ಮಾಱು (ಬಂಹರಿ. ೪-೧೫ ಪ). **ಪಣ$_1$: ೨.** ಪೂಗಿಫಲದ್ವಿಸಹಸ್ರಂ ಪಾಗಂಗೂಡಿದ ಪಣತ್ರಯ ವೀಸಕ್ಕುಂ ತಾನೆನಿತಾಗಿರೆ ಮೂಱುಂ ಕ್ಷಕ್ಕೆ ಯೊಗಳೆ ತಾವೆನಿತು ಪೊಂಗಳವು ತಾನೆನಿತಕ್ಕುಂ (ಭಾಸ್ಕರ. ೨೩-೭); ನಿಮ್ಮರಸಿ ಈಗ ಪೇಳಿಯಿರುವ ಎಂಟು ಪಣಮುಂ ತರುವೆ (ಸೌಗಂಪ. ೯-೭೬). **ಹಣ : ೧.** ಹಣ ಬಂಗಾರ ವಸ್ತ್ರ ಕಪ್ಪಡ ಬಟ್ಟೆಯಲ್ಲಿ ನೆಟ್ಟನೆ ಬಿದ್ದಿರಲು ಕಂಡು ಕಾತರಿಸಿ ಕೈಮುಟ್ಟ ಎತ್ತದ ಭಾಷೆ (ಆದಪ.೨೧-೫೨); ಬಿರುದ ಹೊಗಳಿಸಿ ಕೊಂಡು ದಾತಾರರ ಹಣವ ಸಲೆ ತಿಂದು ಹೆಟ್ಟಿದ ಹಿರಿಯ ಡೊಳ್ಳಿನ ರಾವುತರ ಕೆಡಹಿದನು ನಿಮಿಷದಲಿ (ಕುಮಾರವ್ಯಾ. ೧೦-೧೪); ಮುದ್ದು ಮಾತಿನಲಿ ಮೋಹವ ಬೀಱುಯವನೊಳಗಿದ್ದ ಹಣಪ ತೆಗೆ ಮಗಳೆ(ಕಂನವಿ. ೬-೧೫೧); ಯಾರಿಗೂ ಸಲ್ಲಬೇಕಾದ ಹಣವನ್ನು ಕೊಡದೆ ಉಳಿಸಿಕೊಳ್ಳಬಾರದು (ಆಡುಸೌ. ೧೨೪); ಹಣವೆಂದರೆ ಹೆಣವೂ ಬಾಯಿ ಬಿಡುತ್ತದೆ (ಗಾದೆ). **೨.** ಮೊಳಗಿರನಲ್ಲಿ ಗುಡಿಂ[ಗೆ] ಹೇಱುಂಗೆ ಅಡ್ಡ ಸೂರು ಗುಡಿಸ ಹೇಱುಂಗೆಹಸಾಬಿಡಿಗವೇಱುಗೆ ಹಣ ಒಂದು (ಕಇಅ. ೩೮-೫೧-೧೮; 1091); ಕಂಬವೊಂದಕ್ಕೆ ಹಣಂ ಮೂಱುಱು ಮರಿಯಾದೆಯಲು . . . ಕಳದು ಕೊಂಡು ಧಾರಾಪೂರ್ವಕವಾಗಿ ಕೊಟ್ಟರು (ಎಕ. VI, ಕಡೂರು.೧೨-೩೭; 1233); ಆ ಕಾಲುವಳಿ ಗ್ರಾಮ ಆಣೆಯೂರು ಗ್ರಾಮವೊಂದಕೆ ನಾಲುವತ್ತ ಎರಡು ಹೊನ್ನು ನಾಲುಕು ಹಣ (ಎಕ. XIV, ಗುಂಡ್ಲುಪೇ. ೧೨೯-೭೪;1521); ಒಂದು ಹಣದ ಉದ್ದು ಒಂದು ಹಣದ ತುಪ್ಪ (ಕಥಾಮಂ. IV, ೧೪). **೩.** ಒಂದು ದೇಶದಲ್ಲಿ ಚಲಾವಣೆಯಲ್ಲಿರುವ ನಾಣ್ಯ ಮತ್ತು ನೋಟು; ಕರೆನ್ಸಿ : ವಸ್ತುಗಳ ಬೆಲೆಯನ್ನು ಅಳೆದು ಎಲ್ಲವನ್ನೂ ಬೇಕುಬೇಕಾದಂತೆ ಸಂಗ್ರಹಿಸಬಲ್ಲ ಧನದ ಪ್ರತಿನಿಧಿ—ಹಣ (ಹಣಪ್ರ. ೨). **ಹಣವು : ೧.** ಅಯ್ದು ಹಣವಿನ ಅಕ್ಕಿ ತುಪ್ಪನ ಬಿಟ್ಟ (ಎಕ. VI, ಚಿಕ್ಕಮ. ೬೧-೨೦; 1058?); ನಾರಸಿಂಹದೇವ ಸೋಮೆಯ್ಯ ಮುಂತಾಗಿ ಹಣವಿನ ಕೆಯ್ಯ ಕಾರುಣ್ಯಗೆಯ್ದರು (ಮೈಅಂ. ೧೯೩೨, ೨೯-೧೦; 1169); ಕೆಟ್ಟಜಾತಿಯನಾರನಾದಡೆ ಮುಟ್ಟಿಕೊಂಬರು ಹಣವಿನಾಸೆಗೆ ಬಟ್ಟಗುತ್ತೆಯರಿಂತು ವಾರಪುರಂಧ್ರಿಯರು (ಬಸಪು. ೪೦-೫೬); ಜಜ್ಜಾರ ಮಾಸಾಳುಗಳು ನಿಜದಾತಾರನವಸರಕೊದಗಿ ಹಣವಿನ ಋಣನ ನೀಗಿದರು (ಕುಮಾರವ್ಯಾ. ೧-೫೦). **೨.** ಮೊಸರ ಕೆನೆಯಂ ಹಣವಿನಗಲದೊಳು ಕತ್ತರಿಸಿಯೆದಱ ಸರಿಮೊಸರೊಳಗೆ ಕಲಸುವುದು (ಸೂಪಶಾ. ೨-೧೧). [<ಸಂ. ಪಣ]

ಪಣವು$_2$ (ನಾ). (?) : ಯೀ ಪಣವಿನ ಗ್ರಾಮವಂನು ಸಿವಾರ್ಪಿತವಾಗಿ ಬಿಟು ಯೀ ಭೂಮಿಗೆ ಲಿಂಗ ಮುದ್ರೆ ಸಿಲಾಸ್ತಮಿತವ ಮಾಡಿಸುವಲಿಗೆ (ಎಕ. VII, ತಿವಮೊ. ೧೬-೧೦; 1696). [?]

ಪಣವೊಡ್ಡು, ಪಣಒಡ್ಡು (ಕ್ರಿ). ಜೂಜು ಅಥವಾ ಪಂದ್ಯದಲ್ಲಿ ಒತ್ತೆಯ ಹಣ ಅಥವಾ ವಸ್ತುವನ್ನು ಒಡ್ಡು; ಪಣಕಟ್ಟು : ಹೆಂಡತಿಯನ್ನು ಪಣವಾಗಿ ಇಟ್ಟು ಯಾರಾದರೂ ಜೂಜಾಡುತ್ತಾರೆಯೇ? ರಾಜನು ಜೂಜಿನ ಮದದಿಂದ ಮೈಮರೆತಿದ್ದರೂ ಅವನಿಗೆ ಪಣವೊಡ್ಡುವುದಕ್ಕೆ ಇನ್ನೇನೂ ಇರಲಿಲ್ಲವೇ? (ಪಚಭಾ. ೯೬); ಈ ಹಲಗೆಗಳ ಹತ್ತಿರ, ಪಣವೊಡ್ಡುವವರು ನಿಲ್ಲಲು ಅನುಕೂಲವಾಗುವ ಎತ್ತರದ ಸೀಠ(ಸ್ಟೂಲ್) ಗಳಿವೆ (ಪ್ರಕಾಶ.೧೪೧). **ಪಣಒಡ್ಡು :** ನನ್ನದೆನ್ನುವ ಯಾವ ಪ್ರಾಣಿಯೂ ಇಲ್ಲ—ಜೂಜಾಟದಲ್ಲಿ ಪಣಒಡ್ಡಲು (ಬಂಗಾಹ. ೫೩). [ಪಣ$_3$ + ಒಡ್ಡು$_1$]

ಪಣಸ (ನಾ). ಬಣ; ಪಂಗಡ (?) : ಯಿದಕೆ ಯರದರು ಅಡ್ಡಿ ಬನ್ದ ಕಾತಿಯಲ್ಲಿ ಗೊಹತ್ಯ ಮಡಿದ ಪಪು ಬನ್ಥಿತೂ ಯೆನ್ದು ಸಿವಯಿತ್ತ ತಮ ಕುಲ ಅದಿನೆಂಟು ಪಣಸದೊಳಿಲ್ಲಯಮ್ಮುವರ ಬಯಿರಿ ಕಥೆ (ಎಕ. XVI, ಗುಬ್ಬಿ. ೬೯-೩೬; ?). [?]

ಪಣಹ (ನಾ). ಒಂದು ಬಗೆಯ ಚರ್ಮವಾದ್ಯ; ಪಣವ : ಮೊಳಗಿದವು ನಿಸ್ವಾಳ ಕೋಳಾಹಳಿಸಿದವು ಕಹಳೆಗಳು ಪರ್ವತ ಹಿಳಿಯೆ ಹೆಟ್ಟಿದ ಪಟಹ ಪಣಹ ಮೃದಂಗ ಡಿಂಡಿಮದ ಉಲಿಯ . . . ಕಳಗರ್ಜಾಯ್ತು ಕೌರವಸೈನ್ಯಶರಧಿಯಲಿ (ಕುಮಾರವ್ಯಾ. ೯-೨೬); ಮುರಜ ತಂಬಟ ಪಣಹ ರಣಮೌರವಿಗಳಬ್ಬರಿಸಿದವು (ತೊರಗ. ೬-೨೦-೪೪); ಚಂಬಳ ಪಟಹ ಪಣಹ ಡಿಂಡಿಮ ಡಮರು ಢಕ್ಕೆ . . . ಬೊಂಬುಳಿರವಂಗಳಿಂದಂಬುಜಭವಾಂಡಮದಿರೆ (ಚಿಪಭಾ. ೩೮-೨೮). [<ಸಂ. ಪಣವ]

ಪಣಾಂಗನೆ (ನಾ). = ಪಣವಧು : ಶ್ವೇತನೆನಿಪ್ಪ ಪಾತಕಿ ಪಣಾಂಗನೆ ಗೆಂದರಲಂ ತರುತ್ತೆ ಧಾತ್ರೀತಳದಲ್ಲಿ ಬೀಳೆ ಗಿರಿಶಂಗೆ ಸಮರ್ಪಣಮೆಂದ ಸೈಪು (ರಾಜಶೇ. ೬-೯೩). [ಸಂ. ಪಣಾಂಗನಾ]

ಪಣಾಚಾರಿಯ (ನಾ). ವರ್ಗದ ಮುಖಂಡ : ಹೊಯ್ಸಣರಾಯ ಸಾಮ್ರಾಜ್ಯಲಕ್ಷ್ಮೀಹರಣ ಪ್ರಚಣ್ಡ ದೋರ್ದ್ದಣ್ಡ ಅರಿರಾಯ ಜಗಜ್ಜಂಪರುಂ ಪಣಾಚಾರಿಯ ಶ್ರೀರಾಯ ನಾರಾಯಣ ಪ್ರೌಢಪ್ರತಾಪ ಚಕ್ರವರ್ತ್ತಿ ಶ್ರೀವೀರರಾಮಚಂದ್ರರಾಯ (ಎಕ. XI, ದಾವಣ. ೫೯-೩೪; 1280). [ಪಣ$_2$(<ಬಣ್ಣ) + ಆಚಾರಿಯ]

ಪಣಾಯಿತ (ನಾ). ೧. ಹೊಗಳಲ್ಪಟ್ಟುದು; ಪ್ರಶಂಸೆಮಾಡಲ್ಪಟ್ಟುದು : "ಪಣಾಯಿತಂ ತಾಂ ಪಣಿತಂ" (ವಸ್ತುಕೋ. ೧೦೬-೫೨); "ಈಡಿತಂ, ಶಸ್ತಂ, ಪಣಾಯಿತಂ . . . ಈಳಿತಂ, ಸ್ತುತಂ—೧೨ ಹೊಗಳಲ್ಪಟ್ಟದ್ದು, ಕೊಂಡಾಡಲ್ಪಟ್ಟದ್ದು, ಬಣ್ಣಿಸಲ್ಪಟ್ಟದ್ದು"(ಸಿದ್ಧಾಂತಿ. ೩೫೨). **೨.** ಹೊಗಳಲ್ಪಟ್ಟವನು; "ಕೊಂಡಾಡಿದವ" (ಗಂಗಾಮ. ೧೯೫). [ಸಂ.]

ಪಣಾರ್ಪಣ (ನಾ). ೧. ಮುಂಗಡ ಕೊಡುವ ಹಣ; ಅಗಾವು; ಸಂಚಕಾರ : "ಪಣಾರ್ಪಣಂ ಸಂಚಕರಂ" (ವಸ್ತುಕೋ. ೬೨-೬೪); "ಪಣಾರ್ಪಣಂ ಸಂಚಕಾರಂ" (ಮಂಗರಾ. ೧೦೨-೧). **೨.** ಕರಾರು ಮಾಡಿಕೊಳ್ಳುವಿಕೆ; ಒಪ್ಪಂದ. [ಸಂ.]

ಪಣಿ$_1$, ಹಣಿ$_1$ (ಕ್ರಿ). ೧. ಬಾಗು; ನಮಿಸು; ನಮಸ್ಕಾರಮಾಡು: ಪ್ರಣತಗುಣಿಗಳ . . . ಮೇರುನಂದಿಗಳಾ ಪಣಿ[ಣಿ]ದಣುವ್ರತೆರಾಗಿಯುಂ ವರಗುಣಧರಸ್ತ್ರಾಯರೆ ದಲೆನಿಸುವ ಗುಣಸಮುದ್ರ ಸಮಂತಭದ್ರರ ಚರಣ ಕೆಱಗುವೆನು (ಸಾಳ್ವಭಾ.೧-೨೧). **ಹಣಿ$_1$: ೧.** ಕೊತ್ತಿ ಮಾಸಲ ಹಾಲ ಮತ್ತೆ ತಾ ಬಿಡುವುದೇ ಹೊತ್ತು ಬಂದಾಗ ಹಣಿವರ ಸಂಗವದು ಕತ್ತಗಳಿಗೆಂದ (ಸರ್ವಜ್ಞ. ೮೪೦). **೨.** ಜಗ್ಗು; ಸಗ್ಗು; ಬಗ್ಗು; ಮಣಿ : ತುಬಾಕಿಯ ಗುಂಡಿಗೆ ಸಹ ಹಣಿಯುವುದಿಲ್ಲ (ಮುಂಬಯಿ. ೪-೧೨೮); ಹಣಿಯುವುದೇನು ದೇವರೂ? ಅದರಮ್ಮ ಹಣಿದಾಳು (ತೊಳಮು. ೭೬); ಚುಚ್ಚುಮದ್ದಾಯಿತು. ಹಣಿಯ ಮೇಲೆ ತಣ್ಣೀರಿನ ಪಟ್ಟಯಾಯಿತು. ಆದರೆ . . . ಯಾವ ಹಂಚಿಕೆಗೂ ಜ್ವರ ಹಣಿಯಲಿಲ್ಲ (ಅಪವಾ. ೫೫). **೩.** ತೃಪ್ತವಾಗು; ದಣಿ; ಸಂತೃಪ್ತಿಯನ್ನು ಹೊಂದು: ಅನುಲೇಪನ ಮಾಲ್ಯಾಂಬರ ರತ್ನಮಂಡನಗಳನಾಂತು ಕಾಂತಾಳಿಗೆ ಮನ ಹಣಿವಂತಿತ್ತು ಸೌಂದರಗಣನಾಥ ವನಭೋಜನಕುದ್ಯತನಾದ (ತ್ರಿಭುವಿ. ೧೫-೫೪).

[ದೇ.॥ ತಮಿ. ಮಲ. ಪಣಿ]

ಪಣಿ$_2$ (ಕ್ರಿ). ೧. ಹೊಡೆ; ಬಡಿ : ಸರಿ ಪಣಿ ಕಡಿ ಮುಡಿ ತೊಱೆಯೆಱೆ . . . ಸುಡು ತಾಱುಂಬಱಯೆಂಬಿವು ಪದದ ಮೊದಲೊಳಿರಲಶುಭಕರಂ (ಕವಿಜಿ. ೩-೩೨). **೨.** ತಾಗು; ಘರ್ಷಿಸು : ಬೇಱೆಬೇಱೆ ನಿಲೆ

ಕಾರಕದೊಳ್ ಕ್ರಿಯೆ ತಳ್ತುಮುಂ ತೋಱ್ ಪೇಟ್ಟವಗುಣಂ ಗುಣರೂಪದೆ ಪೊರ್ದುಗುಂ ಸಾಱುಗಾನೆಯವರೆಲ್ಲರುಮಂ ನೃಪ [ತಾ]ನೆ ಮತ್ತೇಱು[ವಂ] ಪಣೆದೊಡಾನೆಯನೆಂಬು[ದ]ದೂಷಿತಂ (ಕವಿರಾ. ೧-೧೩೪) ; ಬಿಗಿದು ಪುಗಲನುವಿಸುವ ಲವಲವಿಕೆಯುಂ ಕೂಡಿ ಕರಗಿಸಲ್ ಕಾಯ್ವರ ಕಾಯ್ಪುಂ ಬೆರಸಿ ಬೆಚ್ಚಂತಿರಲ್ ಬಯಸುವ ಬಗೆಯುಂ ಪತ್ತಿ ಪಣೆದಣೆಯಿಸುವಳಿಪುಂ ಅಳವಿಗಟಱಯೆ (ಲೀಲಾವ. ೧೦-೪೫ ವ). 'ಹಣೆ$_2$' ಪರಾ.

ಪಣೆ$_3$ (ನಾ). ಒಂದು ಬಗೆಯ ಮರ ; ಅಶ್ವತ್ಥ ; ಅರಳಿ : (ಕ).

[ದೇ.॥ ತಮಿ. ಪಣ್ಣೆ]

ಪಣೆ$_4$ (ನಾ). ೧. ಹಾವು ; ಸರ್ಪ ; ಫಣೆ : ಫಣ-ಪಣ ; ಫಲಕ-ಹಲಗೆ (ಶಮದ. ೨೫೫ ಪ್ರಯೋ) ; ಶಶಿಮೌಳಿ ತ್ರಿಪುರದ ನಿಮಿತ್ತದಿಂ ಕೀಳ್ತೊಯಿದು ಸಸಿನೆ ಪಣೆ ನಾರಿ ತೊಡರಿಸಿ ಬಾಗಿಸಲ್ಕೆ ಬಸದಿಂದ ಲಘುವಾದೆನ್ನಾರಿಗಳ್ಕೆನೆಂದಾಗಸಕೆ ಬೆಳದಿರ್ಪುದು (ನಮೋ. ೨-೧೩). 'ಪಣಿಗಡಗ' ಪರಾ. ೨. ರಾಹು : ಬೆಸಗೊಳ್ಳವರಿರ್ದೆಡೆಯೊಳಗೆಸೆದಿರ್ದೊಡಮಿಂದ್ರಚಾಪಮರ್ಕೇಂದುಗಳಂ ಪುಸಗಿ(ಯೆ) ಪಣೆ ಕೊಳ್ವೊಡೆಯುಂ ಕುಸುಮಾಸ್ತ್ರನ ಚಾಪಮೆಸೆವೊಡೊಳ್ಮಟೆಯಕ್ಕುಂ (ಜಟ್ಟಮ. ೧-೪೨). [<ಸಂ. ಫಣಿನ್]

ಪಣೆ$_5$ (ನಾ). ೧. ರಾಕ್ಷಸರಲ್ಲಿ ಒಂದು ವರ್ಗದ ಹೆಸರು : ಪಣಿಗಳು ಗೋವುಗಳಲ್ಲಿ ಘೃತವನ್ನು ಮೂರು ಪ್ರಕಾರವಾಗಿಟ್ಟು ಅದು ರಹಸ್ಯವಾಗಿರುವಂತೆ ಮಾಡಿದರು (ಋಕ್ಸಾರ. ೧೯೮) ; ಋಗ್ವೇದದಲ್ಲಿ ಕಂಡುಬರುವ ಒಂದು ಪಂಗಡವು ನಮ್ಮ ನಾಡಿನಲ್ಲಿದ್ದಂತೆ ಭಾಸವಾಗುತ್ತದೆ. ಇವರೇ ಪಣಿಗಳು (ತುಳುನಾ. ೧೩). ೨. ವ್ಯಾಪಾರ ಮಾಡುವ ಒಂದು ಜನಾಂಗದ ಹೆಸರು ; ವೈಶ್ಯ : ಕುರಿಗಳವರು ಕ್ಷುದ್ರಶೂದ್ರರಾಗಿಯೂ ಎತ್ತು, ದನಗಳುಳ್ಳವರು ಕೃಷಿ ವಾಣಿಜ್ಯ ಮಾಡುವ ಪಣ-ವಣಕ-ಬಣಂಜು-ವೈಶ್ಯರಾಗಿಯೂ ಮನೆಮಾರು ಬದುಕುಮಾಡಿಕೊಂಡು ಸ್ಥಿರವಾಗುತ್ತ ಬಂದರು (ಸಾಹಿಸಂ. ೧೩೦). [ಸಂ.]

ಪಣಕಟ್ಟು 'ಪಣಕಟ್ಟು$_2$' ನೋ.

ಪಣಿಗಡಗ (ನಾ). ಸರ್ಪದ ಆಕೃತಿಯನ್ನು ಹೊಂದಿರುವ ಕಡಗ,-ಕಂಕಣ : ಕೀಲಕಡಗ ಹಸ್ತಕಡಗ . . . ಗೌಳಸರದ ಪಣಿಗಡಗದ ಸೊಬಗಿನ ನೀಲಕುಂತಳೆಯರೊಪ್ಪಿದರು (ಕಂನವಿ. ೨೪-೩೯).

[ಪಣೆ$_4$ + ಕಡಗ$_1$]

ಪಣಿಗೆ, ಪಣಿಯೆ, ಹಣಿಗೆ, ಹೆಣಿಗೆ$_2$ (ನಾ). ೧. ತಲೆಯನ್ನು ಬಾಚುವ ಸಾಧನ ; ಬಾಚಣಿಗೆ : ಪಸರಿಸಿ ಪಂದಲೆಯಂ ಮೆಟ್ಟಸಿ ವೈರಿಯ ಪಲ್ಲ ಪಣಿಗೆಯಿಂ ಬಾರ್ಚ ಪೊದಟ್ಟೊಸಗೆಯಿನವನ ಕರುಳ್ಗಳೆ ಪೊಸವಾಸಿಗಮಾಗೆ ಕೃಷ್ಣೆಯಂ ಮುಡಿಯಿಸಿದಂ (ಪಂಪಭಾ. ೧೨-೧೫೫) ; ಗರಗಸದಂತೆ ಮೆಯ್ಯಂ ಕೊಱ್ವರ್ ಪಣಿಗೆಯಂತೆ ತಲೆಯಂ ಪತ್ತಿತೆಗೆವರ್ (ಧರ್ಮಾಮೃ. ೩-೭೩) ; ಮುಡಿಯೊ ತೊಡವುದು ಸೀರೆ ಪಡಿಗ ಪಣಿ[ಪಾಠಾಂ. ಪವಣಿ]ಗೆಯವಸರದಾಳೆಯ್ಕುದಿರೆ ನುಡಿಸಲ್ಮಾಣದೆ ಸಾರಿದರು (ಕ್ರೀಪಾಲ. ೨-೩೧). ೨. (ಬಾಳೆಯ) ಚಿಪ್ಪು : ಪಣ್ಣ ಪಣಿಗೆಯ ಬಿಣ್ಪು ತಿಣ್ಣಮಾದಂತೆ ಕೆಲದ ಕುಜಂಗಳೊಳೆಳದೋಳ್ಗಳನಿಟಾಪುವ ಪೊಂಬಾಟೆಗಳುಂ (ಲೀಲಾವ. ೬-೬೦ ವ). **ಪಣಿಯೆ** : ೨. ಒಲೆಯ ಬಳಿಯಲ್ಲೇ ಬಳಕೆ ಕಟ್ಟಿದ ಕೆಲವು ಚೋಕು ಮೈಸೂರು, ಕದಲಿ, ಬೂದುಬಾಳೆಗೊನೆಗಳೂ ಅವರ ದೃಷ್ಟಿಗೆ ಬಿದ್ದುವು. ಮೇಲಿನ ಪಣಿಯೆಗಳಲ್ಲಿ ಇನ್ನೂ ಕಸುಕಾಯಿ (ಬಾಳಿಗಿ.೧೪೮). **ಹಣಿಗೆ** : ೧. "ಕಂಕತ(ಂ)ಃ, ಕೇಶಮಾರ್ಜನಂ—ಈ ೨ ಹಣಿಗೆ" (ಹಲಾಯು.೫೨-೧೫೬) ; ಆಡಿನ ಹಂಸೆಯ ಪಸುವಿನನ್ನರುತ್ತಮರ್ ಒಡೆದ ಕೊಡದ ಶುಕದ 'ಕಲ್ಲ ಮಣ್ಣಂದದವರ್ ಮಧ್ಯಮರ್ ಕೋಣನ ನೊಟ(ಣ)ವಿನ ಸಾರಣೆಯನ್ನರ್ ಕನಿಷ್ಠರ್ ಉರಗನ ಬೆಕ್ಕಿನ ಹಣಿಗೆಯ ಜಿಗುಟೆಯನ್ನರ್ ಅಧಿಕಕನಿಷ್ಠರೆಂದು ನಿರೂಪಿಸೆ (ಜೀವಸಂ. ೨೪೦ ಪರಿ. ೧) ; ಮಡಕೆ ದೈವ ಮೊಜ ದೈವ ಬೀದಿಯ ಕಲ್ಲು ದೈವ ಹಣಿಗೆ ದೈವ . . . ದೈವ ದೈವವೆಂದು ಕಾಲಿಡಲಿಂದಿಲ್ಲಾ ದೈವನೊಬ್ಬನೆ ಕೂಡಲಸಂಗಮದೇವ (ಬಸವ. ೫೬೩) ; ತರುಣಿ ದುಶ್ಶಾಸನನ ನೊರೆನೆತ್ತರಲಿ ನಾದುವೆ ನಿನ್ನ ಮುಂಡೆಯ ಕುರುಳ ಬಾಚುವೆನಿವನ ದಂತದ ಹಣಿಗೆಯಲಿ (ಕುವ್ಯಾಸ. ೬೧೩. ೧೬-೪೮) ; ಕೂದಲುಗಳ ಮೇಲೆ ಹಣಿಗೆಯನ್ನೂ ಆಡಿಸಿರಲಿಲ್ಲ (ಚೆಂದುಟಿ. ೮೭). ೨. ಒಂದೊಂದು ಗೊನೆಯೊಳಗೆ ಹತ್ತು ಹದಿನೈದು ಹಣಿಗೆಗಳು ಇರುವುವು ; ಒಂದೊಂದು ಹಣಿಗೆಗೆ ಹತ್ತು ಹನ್ನೆರಡು ಕಾಯಿಗಳು ಇರುತ್ತವೆ (ಮುಂಬಯಿ. ೨-೪೭). ೩. ನೇಯ್ಗೆಯ ಎಳೆಗಳನ್ನು ಹಾಯಿಸುವ ಸಾಧನ ; ಮಗ್ಗದ ಅಚ್ಚು : ಜೋಡು ಹಣಿಗೆಯು ಕಾಣೊ, ಜೋಡು ಕಣ್ಣಿನ ನೋಟ (ಕನ್ನಜಾ. ೧೯೬). 'ಅಣಿಗೆ', 'ಬಾಚಣಿಗೆ' ಪರಾ. **ಹೆಣಿಗೆ$_2$** : ೨. ಒಂದು ವಾಟಿಬಾಳೆಯ ಗೊನೆಯ ಎರಡು ಹೆಣಿಗೆ ಚೆನ್ನಾಗಿ ಕಳಿತು . . . ಕಂಗೊಳಿಸುತ್ತಿದ್ದುವು (ಮಲೆಮ. ೬೩೫).

[ದೇ.॥ ಮಲ. ಪನ್ಯಾ; ತುಳು. ಪಣ್ಣಿ, ಪಣ್ಣೆ; ತೆಲು. ಪನ್ನೆ; ಕೊಂಡ. ಪನೆ ; ಪೆಂಗೊ. ಪೆನಿಯ ; ಕುವಿ. ಪನಿಯ./ಪ್ರಾ. ಫಣಗ, ಫಣಿಹ]

ಪಣಿಜ (ನಾ). ಮುತ್ತಜ್ಜ : ನಿಮ್ಮ ತಂದೆ ಸತ್ತುದ ನೋಡುತ್ತಿದ್ದಿ ನಿಮ್ಮ ತಂದೆಯ ತಂದೆ ಸತ್ತುದ ಕಾಣುತ್ತಿದ್ದಿ ನಿಮ್ಮ ಅಜ್ಜ ಪಣಿಜ ಸತ್ತುದ ಕೇಳುತ್ತಿದ್ದಿ (ಪಚಶಾ. I, ೨೪೯-೨೩). [<ಪಜ್ಜ]

ಪಣಿಜಿ (ನಾ). ಮುತ್ತಜ್ಜಿ : ನಿಮ್ಮ ತಾಯಿ ಸತ್ತುದ ನೋಡುತ್ತಿದ್ದಿ ನಿಮ್ಮ ತಾಯಿಯ ತಾಯಿ ಸತ್ತುದ ಕಾಣುತ್ತಿದ್ದಿ ನಿಮ್ಮ ಅಯಿ ಪಣಿಜಿ ಸತ್ತುದ ಕೇಳುತ್ತಿದ್ದಿ (ಪಚಶಾ. I, ೨೪೯-೨೩). [ಪಣಿಜ + -ಇ$_2$]

ಪಣಿತ (ನಾ). ೧. ಹೊಗಳಲ್ಪಟ್ಟುದು ; ಗೌರವಿಸಲ್ಪಟ್ಟುದು : "ಪಣಾಯಿತಂ ತಾಂ ಪಣಿತಂ" (ವಸ್ತುಕೋ. ೧೦೬-೫೨) ; "ಈಡಿತಂ, ಶಸ್ತಂ, ಪಣಾಯಿತಂ, ಪನಾಯಿತಂ, ಪ್ರಣುತಂ, ಪಣಿತಂ . . . ಸ್ತುತಂ—೧೨ ಹೊಗಳಲ್ಪಟ್ಟದ್ದು, ಕೊಂಡಾಡಲ್ಪಟ್ಟದು, ಬಣ್ಣಿಸಲ್ಪಟ್ಟದ್ದು" (ಸಿದ್ಧಾಂತಿ. ೩೫೨). ೨. ಹೊಗಳಲ್ಪಟ್ಟವನು ; "ಕೊಂಡಾಡಿದವ" (ಗಂಗಾಮ. ೧೯೫). ೩. ಪಣ ; ಪಂದ್ಯ ; ಪಂಥ ; ಜೂಜು : (ಕ). ೪. ಪಣದಲ್ಲಿ ಒಡ್ಡಿದುದು ; ಬಾಜಿ ಕಟ್ಟಿದುದು : (ಕ).

[ಸಂ.]

ಪಣಿತವ್ಯ (ನಾ). ಕೊಂಡು ಮಾರುವ ವಸ್ತು ; ವಿಕ್ರಯದ ವಸ್ತು ; ಮಾರಾಟದ ಪದಾರ್ಥ : "ಪಣಿತವ್ಯ = ಮಾರುವ ಒಡವೆ" (ಗಂಗಾಮ. ೧೯೫) ; "ವಿಕ್ರೇಯಂ, ಪಣಿತವ್ಯಂ, ಪಣ್ಯಂ—೩ ಮಾರತಕ್ಕ ವಸ್ತುವಿನ ಹೆಸರುಗಳು" (ಸಿದ್ಧಾಂತಿ. ೨೯೮). [ಸಂ.]

ಪಣಿತಿ 'ಪಣಿತೆ' ನೋ.

ಪಣಿತೆ, ಪಣತಿ$_2$, ಪಣತೆ, ಪಣಿತಿ, ಪ್ರಣತಿ$_1$, ಪ್ರಣತೆ, ಪ್ರಣಿತೆ, ಪ್ರಣುತೆ$_1$, ಹಣತಿ, ಹಣತೆ$_1$, ಹಣಿತೆ (ನಾ). ೧. ಬತ್ತಿಯ ದೀಪವನ್ನು ಹಚ್ಚಲು ಬಳಸುವ, ಸಾಮಾನ್ಯವಾಗಿ ಮಣ್ಣಿನ ಅಥವಾ ಲೋಹದ ದೀಪದ ಬಟ್ಟಲು ; ಸೊಡರು : ಪ[ಪಾಠಾಂ.ಪ್ರ]ಣತೆಯೂ ಇದೆ ಬತ್ತಿಯೂ ಇದೆ ಜ್ಯೋತಿಯು ಬೆಳಗುವಡೆ ತೈಲವಿಲ್ಲದೆ ಪ್ರಭೆ ತಾನೆಲ್ಲಿಯದೋ (ಅಪಚಂ. ೧೯-೬೮) ; ಮೂಗಿನ ಕಪ್ಪು ಪಣತೆಯ ಕತ್ತಲೆ ಜ್ಯೋತಿಯೆಂಬರು (ಸರ್ವಸ. ೭೨-೫೭) ; ಕಲ್ಯಾಣವೆಂಬ ಪಣತೆಯೊಳೆಲ್ಲಾ ಶಿವಶರಣರೆಂಬ ಭಕ್ತಿಯ ತೈಲಂ ಬಲ್ಲಿದ ಬಸವನೆ ಜ್ಯೋತಿಯುಳಲ್ಲಿರದೋಡುವದು ಕರ್ಮ ಕತ್ತಲೆಯೆಂಬುದು (?) (ಅಮುಸಾಂ. ೫-೧೧೨). **ಪಣತಿ$_2$** : ೧. ಒಂದಾನೊಂದು ದಿನವೆಜ್ಜೆ ದೀಪಕಿಲ್ಲದೆ ಧೈರ್ಯಂಗುಂದದೆ ಪಿರಿದಾಗಿ ಪಣತಿಯೊಳುದಕವೆಜೆದು ಬತ್ತಿಯಂ ಹರಿಸದಿಂದಿಕ್ಕಿ

ಸೊಡರೆತ್ತಲು (ಸಿದ್ಧೇಪು. ೩-೨); ಭೂಪಾಲ ಎಣ್ಣೆ ಬತ್ತಿಯಿದ್ದ ಪಣತಿ ಮಾರಯ್ಯ ಜ್ಯೋತಿ (ವೋಳಿಮಾ. ೫೭ ಪ್ರಸ್ತಾವನೆ); ಗೂಡು ಗೂಡಲಿ ಪಣತಿಯಿದ್ದುದು ದೃಷ್ಟಿಗೋಚರವಾಯಿತು(ಚಂದ್ರಮಾ.೨೩-೭); ಪಣತಿಯೊಳಗಿನ ಎಣ್ಣೆಯು ಇದೇ ಶಕ್ತಿಯ ಕಾರಣದಿಂದ—ಬತ್ತಿಯೊಳಗಿಂದ ಮೇಲಕ್ಕೇರಿ ಬಂದು ದೀಪಕ್ಕೆ ಮುಟ್ಟುತ್ತದೆ (ಮುಂಬಯಿ.೫-೬೪). ೨. ಮಣ್ಣಿನ ಅಥವಾ ಲೋಹದ ದೀಪದ ಬಟ್ಟಲಿನಲ್ಲಿ ಹಚ್ಚಿದ ದೀಪ,—ಜ್ಯೋತಿ : ಪುಟಪುಟದ ಕಾರಂಜಿ ; ಹಳತು ಹೊಸತನು ಹಿಂಜಿ ಹೊಸೆದು ಹೊತ್ತಿಸಿ ಹಿಡಿದ ಶಾಂತಿಪಣತಿ (ನಿಲಮು. ೫೦-೧೨). **ಪಣತೆ :** ೧. "ಪಣತೆ (ಪಣತೆ)-ಪ್ರಣೀತಾ" (ತದ್ಭವಕೋ. ೨೪); ಸೋಮಣ್ಣನು ತಾನು ಮಾಡಿದ ಗಡಿಗೆ, ಹರವಿ . . . ಹೂಜಿ, ಪಣತೆ ಮೊದಲಾದುವುಗಳನ್ನು ಹೊಂದಿಸಿ ಇಟ್ಟಿದ್ದಾನೆ (ಕಪಪು. ೩-೬೧). 'ಪಣತೆಸೊಡರ್' ಪರಾ. **ಪಣಿತಿ :** ೧. 'ಪೊಂಬಣಿತಿ' ಪರಾ. **ಪ್ರಣತಿ₁ :** ೧. ಸಗ್ಗವೇ ಈ ಪ್ರಣತಿಯನು ಎಣ್ಣೆದುಂಬಿ ಜ್ಯೋತಿಗೊಳಿಸುತ್ತದೆ (ಪ್ರಬಾಗೋ.೧೨೨); ಕರದೊಳಿದೆ ಬರಿ ಹಣತಿ, ಎದೆಗಣ್ಣೊಳಿದೆ ಪ್ರಣತಿ, ಆರತಿಯು ಆರದಿದೆ, ತುಂಬು ಭರತಿ (ಅರಳು. ೨೫೫-೩). ೨. ದೇವಗಿರಿಯ ಯಾದವರು ಹಚ್ಚಿದ ಸ್ವಾತಂತ್ರ್ಯದ ಪ್ರಣತಿಗೆ, ಕಂಪಿಲದವರು ತಮ್ಮ ಆತ್ಮಾರ್ಪಣೆಯ ತೈಲವನ್ನು ಎರೆದಿದ್ದರು (ರಾಜ್ಯೋದ. ೪೭); ಅವಳ ಕೈಯಲ್ಲಿ ಉರಿಯುವ ಪ್ರಣತಿಯಿತ್ತು (ಸ್ಮೃತಿಚಿ. ೭೭). **ಪ್ರಣತೆ :** ೧. ಉಪ್ಪಿನ ಪೊಟ್ಟಣವನುದಕದಲದ್ದುವಂತೆ ಕರ್ಪೂರದ ಪ್ರಣತೆ[ಪಾಠಾಂ. ತೆ]ಯಲ್ಲಿ ಜ್ಯೋತಿಯ ಬೆಳಗುವಂತೆ ಸಿದ್ಧಸೋಮನಾಥ ಲಿಂಗಗ್ರಾಹಿ ಅಗ್ರಾಹಿತಾ (ಸಕಸ. III, ೧೨-೨೪; ಶರಚಿ. ೩೩೪. ನೋ). **ಪ್ರಣೆತೆ :** ೧. ಅನುದಿನಂಗಳೆಂಬವು ಪ್ರಣತೆಯಾಗಿ ವರುಸಂಗಳೆಂಬವು ಬತ್ತಿಯಾಗಿ ಜೀವಜಾತಿಯ ಬೆಳಗಿನ ಬೆಳಗ ಬೆಳಗಿನಲಱಸಬೇಕು (ಲಿಂಗಲೀ. ೮೬-೧೩). **ಪ್ರಣುತೆ₁ :** ೧. ಕರ್ಪೂರದ ಪ್ರಣುತೆಯಲ್ಲಿ ಬತ್ತಿಯ ಹಾಕಿ ಉರುಹಬಹುದೇ (ವಚಶಾ. I, ೧೦೫-೧೦). **ಹಣತಿ :** ೧. ಪ್ರತಿಯೊಬ್ಬರ ಬಾಳ ಹಣತಿಯೂ ಎಣ್ಣೆ ತುಂಬಿ, ಬೆಳಕು ಕೊಟ್ಟರೆ ತಾನೇ ಸಾರ್ವತ್ರಿಕ ಪ್ರಕಾಶ (ಕನ್ನನು.೨-೫೯); ಕರದೊಳಿದೆ ಬರಿ ಹಣತಿ, ಎದೆಗಣ್ಣೊಳಿದೆ ಪ್ರಣತಿ, ಆರತಿಯು ಆರದಿದೆ, ತುಂಬು ಭರತಿ (ಅರಳು. ೨೫೫-೩). ೨. ಆ ಹಿಂದಣ ಕಾಲೂರ ಚೆಲುವೆ ಬಂಗಾರದ ಹರಿವಾಣದಲ್ಲಿ ಹೂಗಳನ್ನು ಕೂಡಿರಿಸಿ ಉರಿಯುವ ಹಣತೆಯನ್ನಿಟ್ಟು ಬಂದು . . . ನೋಡಿದಳು (ಕಾಲೂರ. ೨೦ ಕಥಾಸಾರ); ನಂ ಗುಡಿಸ್ಲು ಬೆಳಗೂವಂಥ ಹಣತೀನ ದೇವ್ರು ಕೊಟ್ಟ (ಹಾಹುತ್ತ. ೬೦). **ಹಣತೆ₂ :** ೧. ಪ್ರಣತ—ಹಣತೆ (ಕಪುದ. ೨೬೧ ಪ್ರಯೋ); ಮೃತ್ತಿಕೆಯ ಹಣತೆಯಲ್ಲಿ ಎಣ್ಣೆಯ ನೀಡಿ, ಬತ್ತಿಯ ಹಾಕಿ, ಅಗ್ನಿಯ ಮುಟ್ಟಿಸಿದರೆ ಬೇರೆ ಬೇರೆ ಉರಿವುದಲ್ಲದೆ, ಘನಸಾರದ ಹಣತೆಯಲ್ಲಿ ಬತ್ತಿಯ ಹಾಕಿ ಉರಿವುದಕ್ಕಾದೀತೇ ? (ವಚಶಾ. I, ೧೦೫-೧೦ ಅರ್ಥ); ಇನ್ನೇನು ಕವಿದು ಬಹ ಕತ್ತಲೆಗಾಗಿ ಎದೆಯ ಹಣತೆಗೆ ಎಣ್ಣೆ ಬತ್ತಿಗಳನೊಡ್ಡಯಿಸಿ ಸೊಡರು ಹೊತ್ತಿಸಿಕೊಳುವ ಹೊತ್ತಾಗಲಿಲ್ಲೇನು,ಹೇಳಿ ಮುದುಕಯ್ಯ ? (ಕೋಗಿಲೆ. ೭೦-೫); ಅಲ್ಲಾವುದ್ದೀನನ ಹಣತೆಯ ಭೂತದಂತೆ ಕೃಷ್ಣನ ಆಸೆ ದೊಡ್ಡದೇಹವನ್ನೂ ಭಯಂಕರರೂಪವನ್ನೂ ತಾಳಿ. . . ಎನ್ನುತ್ತಿದೆ (ರಾಮಾಸಾ. ೫೦); ಯಾರು ಅಹಿತರು ನಿನಗೆ ಈ ಮೂವರೊಳಗೆ ? . . . ಬಾಳ ಹಣತೆಯೊಳೆಣ್ಣೆಯಾಗಿ ಉರಿಯುವ ಹೆಣ್ಣೊ ? (ಕಲ್ಲೋಲ.೨೩-೪). ೨. ಮಿಸುನಿಯ ಕೋಟೆಕೊತ್ತಳ ದಿವ್ಯರತ್ನ ತೆತ್ತಿಸಿದ ಹೊಂಗಳಸವೆ ತನಗೆ ಸಸಿನಿಟ್ಟ ಹಣತೆ ಜ್ಯೋತಿಶ್ಚಕ್ರದಂತೆ ರಂಜಿಸಿತು ರಕ್ಕಸನ ಕಣ್ಮನಕೆ (ವೋಪಶ. ೧೧-೧೯); ದೇವರ ಮುಂದೆ ಎರಡು ಹಣತೆಗಳನ್ನಿಡು(ರೂಢಿ). **ಹಣೆತೆ :** ೧. "ಹಣತೆ (ಹಣತೆ)—ಪ್ರಣೀತಾ = ಪಣತೆ" (ತದ್ಭವಕೋ. ೮೮); ಹಣತೆಯೊಳ್ ಕೂಡಿ ಬತ್ತಿಯಿಂದೆಣ್ಣೆಯಿಂದಂ ಬೆಂಕಿಯಿಂದಂ ಬೆಳಗಿಂದಂ ಸೊಡರೆಂತೊಪ್ಪುಗುಂ (ಧರ್ಮಾಮೃ. ೧೩-೫); ಹಣತೆಣ್ಣೆ ಬತ್ತಿಯ ಹಂಗಗ್ನಿದೀಪಕೆ ಮಣಿದೀಪಕೇತಜ ಹಂಗು (ಧರಚಿ. ೬೬-೧೨೬).

[<ಸಂ. ಪ್ರಣೀತಾ./ಮರಾ. ಪಣತೀ]

ಪಣಿದ₁, ಹಣಿದ₁ (ನಾ). ೧. (ಕಬ್ಬು, ಬಾಳೆ ಮುಂತಾದ) ಕಟಾವು ಮಾಡಬೇಕಾದ ಬೆಳೆ,—ಪೈರು : ಜಿನಭಾವನೆಯೆಂಬ ಬಡಬಾಗ್ನಿಯಿಂ ವಿಷಯಸಾಗರಮುಂ ಪೀರದೆ ಜಿನಾಭಿಷೇಕಮೆಂಬ ಕೂರಲಗಿಂ ಕರ್ಮವೈರಿಯೆಂಬ ಪಣಿದಮನಿಱಿಯದೆ . . . ಶಾಶ್ವತಸುಖಂ ದೊರೆಕೊಳ್ಳದು (ಧರ್ಮಾಮೃ. ೭-೧೭). ೨. ಕತ್ತರಿಸುವಿಕೆ ; ಸಂಹರಿಸುವಿಕೆ : 'ಪಣಿದಂಬೊಯ್₂' ಪರಾ. ೩. ಯುದ್ಧ ; ಇರಿದಾಟ ; ಕಾದಾಟ ; ಕಾಳಗ : ಹಯದ ಮನಕ್ಕಮೇಱದನ ಬಿನ್ನಣಕಂ ದೊರೆಯಾಗಿಯುಂ ನೆಗಟ್ತಿಯ ಪಣಿದಕ್ಕೆ ಮಿಕ್ಕೆಸೆವ ತಕ್ಕಿನ ಬೀರರನಟ್ಟ ಕೊಲ್ವಳುಳ್ಕೆಯ ತಲಿಗೋಲಮಿಲ್ಲದಿರೆಯುಂ ವಿಭುಗಟ್ತಿಯ ಸೆಂಡನಾಡಲಾನೆಯ ಪರಿ ನೋಡಲೆಂದೊಲೆದು ಮಾಡಿದ ವಾಹಳಿಗಳ್ ಮನೋಹರಂ (ಶಾಂತಿಪು. ೯-೧೪೪); ಪಿರಿದಪ್ಪ ಶಕ್ತಿ ತನಗುಳ್ಳೊಡಂ ಸುರಗಿಯಲ್ಲದೆ ಪಣಿದ[ದದ]ಗುರ್ವು ಪಟಾಯದಂತೆ ದೋಷವಿರಹಿತಮಪ್ಪ ಪರಮಾತ್ಮನ ಮತಮಂ ಪೊರ್ದಿದೊಡಲ್ಲದೆ ಸಮಸ್ತಕರ್ಮಂಗಳುಂ ನಿರ್ಮೂಲಮಾಗಲರಿಯವು (ಧರ್ಮಾಮೃ. ೭-೫೦). **ಹಣಿದ₁ :** ೨. ಕಬ್ಬಿನ ಹಣಿದವನಾಡುವರಲ್ಲದೆ ಕಾಯದ ಹಣಿದವನಾಡುವರೆ (ಬಸವ. ೬೭೯); ತೃಣಮುಂ ತೆನೆವೋದ ಬಟಾಕ್ಕೊಣಗುವುದದಱಂದೆ ನರರ ಬಾಟಾ ಲಘುಕಾಲಂ ಹಣಿದದ ಪೊಯಿಲ್ಗೆ ಮೊದಲ್ಗಡು ಕಣಿಯೆನ್ನದಿದೆಳವೆ ಜವ್ವನಂ ಮುಪ್ಪೆನ್ನಂ (ಅನಂಪು. ೩-೭೧); ಕಣಿಮೆಯ ಬಾಗಿಲ ಕಟ್ಟ ಕೊಂಡಾಕ್ಷಣ ಗುಣವಿಹೀನನ ಸರ್ವಬಲವ ಹಣಿದವನಾಡಿ ನಂಜೇಂದ್ರ ಚಂದ್ರಮನಾಗ ರಣಭೂತಗಳಿಗಿತ್ತ ಬಲಿಯ (ಕಂನವಿ. ೧೭-೧೮); ಹೊಣೆ ಬಾರುಗುತ್ತು ಕಬ್ಬಿನ ಹಣಿದಂ ಪಿರಿದೊತ್ತೆಗೊಂಬ ಸೂಳೆಯ ಸಂಗಂ ಕ್ಷಣದೊಳ್ ಕೊಲ್ಲದೆ ಮನುಜನ ತೃಣದಿಂ ಕಡೆ ಮಾಡದಿಹವೆ (ನಿಕಿಸಾ.೨೮೮). ೩. ರಣದೊಳಾವುದು ಕೈದು ಹಿರಿಯುಬ್ಬಣವೊ ಪರಿಘವೊ . . . ಹಣಿದ ಕಾವುದು ಸದರವದಱಲಿ ಕೆಣಕಿ ನೋಡಾ ತನ್ನನೆಂದನು ಭೀಮ ಮಾಗಧನ (ಕುವ್ಯಾಸ. ೨-೯೨); ಖಣಿಖಟಿಲು ದಡದೊಕ್ಕುಗಳ ಬಲುಕಣಿಯ ಶಸ್ತ್ರದ ಕೋಡುಗಲ್ಗಳ ಹಣಿದ[ಪಾಠಾಂ. ತೆ]ಗಳ ಹೆಮ್ಮರನ ಕಣಿಗಳ ಕಲಹದುಬ್ಬರದ ರಣರಭಸ ಹುಟ್ಟಿಸಿತಜಾಂಡದ ಹಣಿಗೆ ಬೇನೆಯನು (ತೊರಾ. ೬-೧೩-೩೫). ೪. ಕತ್ತರಿಸಿದ ಭಾಗ ; ಖಂಡ ; ಭೇದ : ಕುಜಾಯ ಹಣಿದದ ಕೋಳಿ ಕೋಣನ ಮುಱಿದಲೆಯ ಮೀಸಲಿನ ರಕುತದ . . . ಹೊಜಿಗೆ ಬಡಿಸಿದ ಭೂತಬಲಿ ಬೊಬ್ಬಿಱತದೊಡನುಬ್ಬೇಳ್ವ ಲಗ್ಗೆಯ ಹಱಿಗಳಬ್ಬರವಾಯ್ತು ಕರ್ಣನ ಶಸ್ತ್ರಪೂಜೆಯಲಿ (ಕುವ್ಯಾಕ. ೮-೮). ೫. ಕತ್ತರಿಸಿ ಬಿದ್ದ ರಾಶಿ,—ಸಮೂಹ : ಹೆಣನ ಬಗಿದಱಸಿದರು ಕರಿಗಳ ಹಣಿದದಲಿ ನೋಡಿದರು . . . ಅರುಣವಾರಿಯ ಕೆಣಕಿ ಕೂಡಱಸಿದರು ಚಾರರು ಕಳನ ಚೌಕದಲಿ (ಕುವ್ಯಾಗ. ೪-೪೭). ೬. ಪ್ರತಿಭಟನೆ ; ಎದುರಿಸುವಿಕೆ : ರಣಭಯಂಕರನಹಿತಸುಭಟರ ಹಣಿದವನು ಹೊಯ್ದಾಡಿ ಸಾತ್ಯಕಿ ಕೆಣಕಿದನು ಕಲಕಿದನು ಕುರುಸೇನಾಮಹಾರ್ಣವವ (ಕುವ್ಯಾಕ. ೩ ಸೂಚನೆ).

ಹಣಿದವಾಡು—೧. ಕತ್ತರಿಸು ; ಮುರಿ ; ಒಡೆ : ಕೆಣಕಿದನು ಮೈತ್ರೀಯನನು ನೃಪನಣಕಿಸಲು ಶಪಿಸಿದನು ತೊಡೆಗಳ ಹಣಿದವಾಡಲಿಯೆಂದನದು ತಪ್ಪುವುದೆ ಋಷಿವಚನ (ಕುವ್ಯಾಗ. ೮-೩೩). ೨. ನಾಶಮಾಡು ; ಸಂಹರಿಸು : ಸೆಣಸ ಮಾಡಿದೆ ದೈವದಲಿ ಧಾರುಣಿಯ ಹುದುವಿನ ಸಿರಿಗೆ ಸೇರದೆ ಹಣಿದವಾಡಿದೆ ರಾಜವಂಶದ ಕಲ್ಪತರುವನನ (ಕುವ್ಯಾಗ. ೩-೧೯); ರಣದೊಳಸುರರ ಕುಲದ ಹೆಸರುಳಿಯದಂತೆ ರಾವಣ

ಕುಂಭಕರ್ಣ ಮೊದಲಾದ ರಕ್ಕಸರನುಜ್ಜಿ ಹಣಿದವಾಡಿದನುರಪಣಿಸಿ ಧೂಳಿ ಗೋಟೆಯುಂ ಕೊಂಡ ರಘುವೀರನಂದು (ಜೈಮಿಭಾ. ೧೪-೭); ಕೆಣಕಿ ಕೆಟ್ಟವರಂದನೇಳ ಕೃಷ್ಣನನವನೊಳಣಕ ಸಲ್ಲದುಯೆನರ್ ಕುರುರಾಯ ನೆಂದನವನಣುರೇಣುತೃಣಕಾಷ್ಠದೊಳಗೆ ಪರಿಪೂರ್ಣನೆಂದರಿಯೆನೇಯೆನ್ನ ಲಿರ್ದು ಹಣಿದವಾಡಿದನು ಸಂಧಿಯನು ಸರ್ವರಲಿರ್ದು ಕುಣಿಸಿ ನಗಿಸುವ ನಾಟಕವ ಬೀರ್ (ಲಕ್ಷ್ಮಭಾ. ೫-೩-೪೧); ಪಾರುತ ನಭಕೆ ತನಗುಳ್ಳನಿತು ಶಕ್ತಿಯನಾಂತು ರಥವನು ಹಣಿದವಾಡುವೆನೆನುತ ರೆಕ್ಕೆಯೊಳೆರಗುತಪ್ಪಳಿಸೆ (ರಾಮಾಸಂ. ೩-೪-೧೪). ೩. ಹೋರಾಡು ; ಕಾದಾಡು ; ಯುದ್ಧ ಮಾಡು ; ಹೊಡೆದಾಡು : ಕ್ಷಣದಿ ನಿನ್ನ ದೇಹಜದವ ಹಣಿದವಾಡಿ ಓಡಿಸುವೆ (ತಿಪಗೀ. ೧೫೪-೬೧೧); ಅರ್ಥಪ್ರಾಣಾಭಿಮಾನ ವಂಶನೆ ಯುಳ್ಳನ್ನಕ್ಕ ಭಕ್ತನೇ ಹೊನ್ನು ಹೆಣ್ಣು ಮಣ್ಣು ಹಣಿದವಾಡಿದನ್ನಕ್ಕ ಭಕ್ತನೇ (ಪಚಕಾ. I, ೧೪೬-೮೬). [<ಪಣ್$_2$]

ಪಣೆದ$_2$ 'ಪಂತ$_1$' ನೋ.

ಪಣೆದಂಬೊಯ್$_1$, ಹಣಿದಂಬೊಯ್$_1$ (ಕ್ರಿ). ೧. ಕತ್ತರಿಸಿ ಹಾಕು ; ಸಂಹರಿಸು ; ನಾಶ ಮಾಡು : ಪಣೆದಂಬೊಯ್ದನ್ಯಸೈನ್ಯ ದ್ವಿಪಹಯಭಟಸಂದೋಹಮಂ ತನ್ನ ತೋಳೊಳ್ ಕುಣಿಯಲ್ಕುತ್ಸಾಹದಿಂದಂ ಜಯಿಸಿದಿ . . . ಎಡವರಿದೇವಂ ಜಗತ್ಪ್ರತ್ಯನಾದಂ (ಎಕ. VII, ಚನ್ನಗಿ. ೩೯-೪೨ ; 1149) ; ಪಾಯ್ದು ಪೊಯೆ ಪಂದಿ ಬಾಳಿಂ ಪೊಯ್ದಂತಿರೆ ಕಡಿದು ಕೆಡೆಯೆ ಮಿಡಿ ತೊಡೆ ನಡುಗಳ್ ಕಾಯ್ದು ಕೃತಾಂತಂ ಪಣೆದಂಬೊಯ್ದಂತಿರೆ ಬೀಂಟಿಕಾಜಿರರಿರ್ದಿರ್ದರ್ (ಲೀಲಾಪ. ೬-೧೧) ; ಪಸುವೆಂಬೇವದೆ ಕುದುರೆಯ ಪುಸೆಯಂ ಕಾದೊರ್ವರೊರ್ವರಂ ಪೊಯ್ದರ್ ಮಾಮಸಕದೆ ಪಣೆದಂಬೊಯ್ದಂತಸಿಯಿಂ ಪಿಂಗದೆ ತುರಂಗಿಗಳ್ ಸಂಗರದೊಳ್ (ಚಂದ್ರಪ್ರ. ೧೦-೪೧). ೨. ಕಲಹವಾಡು ; ಜಗಳವಾಡು ; ಹೊಡೆದಾಡು : ಪಣವುಂಡಿಂ ಬಂದಿಯೊಳ್ಪಾಲಕನೆ ಪಲಗೆಜೂಜಾಡಿದಂ ಸೂಳೆಗೆಯ್ದಿಂ ಪಣೆದಂಬೊಯ್ದಿಂ ತೊಟಲ್ದಿಂ . . . ಎಂದುರ್ವೃತಿರ್ದಂ (ಅರ್ಧನೇ. ೫-೩೬). **ಹಣಿದಂಬೊಯ್** : ೧. ಹಣಿದಂಬೊಯ್ಕಲ್ ಜವಂ ರಾಯರನೆ ಬಯಸಿ ಬರ್ಪಂತೆ ಸೋಮೇಶ್ವರಂ ತೆಂಕಣರಾಯಂ ಬಂದನಾತಾಜಯಕೆ (ಸೂಕ್ತಿಸು.೧-೨೧).

[ಪಣೆದ$_1$+ಪೊಯ್$_1$]

ಪಣೆದಂಬೊಯ್$_2$ (ಕ್ರಿ). ಪಣವಾಗಿ ಕೊಡು,—ಒಪ್ಪಿಸು : ಈವರುಳತ್ತಿಗೆ ಕಡಿತಂ ಬಂದಂತಾಯ್ತು ಪ್ರದ್ಯೋತನಂಗೆ ಪದ್ಮಿನಿಯಂ ಪಣೆದಂಬೊಯ್ದಂತಾಯ್ತು ಮುಹೂರ್ತಮೆ ಶುಭಮುಹೂರ್ತಮೆಂದು ಮುಂಡೋದರಿ ಬೆಳ್ಕಸಂಬೆಱಗಾಗಿ ನೋಡುತ್ತು ಮಿರೆ (ಅರ್ಧನೇ.೬-೭೧ ಪ).

[ಪಣೆದ$_2$(<ಪಂತ$_1$)+ಪೊಯ್$_1$]

ಪಣೆದಕಾಱ (ನಾ). ಕತ್ತರಿಸುವವನು ; ಕಟಾವು ಮಾಡುವವನು: ಊರುಂ ಮುತ್ತಳೆಯುಂ ತಿಂಬಗುರು ಪಯಗಱಯ ತನಿಗೊಂಬಂ ಬಳೆಗೊಯ್ಯಲ್ ಪೂಣ್ದು ತುದಿಯೊಳ್ಕೋಡಿ ಪೋಪ ಭೀರುವಪ್ಪ ಪಣೆದಕಾಱನಿಂತೆ ವಜ್ರಾಯುಧನ ದಿಕ್ಕರಿಕರಾಕಾರ ಬಾಹುಪರಿಘಯುಗಳಮಂ ತಾಮರೆಯ ನೂಲೊಳಾನೆಗಟ್ಟುವಂತೆ ಕಟ್ಟಿ (ಶಾಂತಿಪು.೮-೪೯ಪ). [ಪಣೆದ$_1$+-ಕಾಱ]

ಪಣೆದರೆ (ನಾ). ಸರ್ಪವನ್ನು ಧರಿಸಿದವನು; ಸರ್ಪಭೂಷಣ; ಶಿವ: ಕಣೆಕಣೆಯನುಗುಟ್ಟಿ ತೆಱದಿಂ ಕಣೆಕಣೆಯಂ ಕಱಿಪ ತೆಱದಿನೆಂಟುಂ ದೆಸೆಯೊಳ್ ಕಣೆಕಣೆಯನೀಂಬ ತೆಱದಿಂ ಪಣೆದರನಗಿದಳರೆ ಕವಿದುವಾಗಳ್ ಕಡಗಳ್ (ಕಬ್ಬಕಾ. ೩೦೫). [<ಸಂ. ಫಣಿಧರ]

ಪಣೆಯವಟ್ಟ (ನಾ). ಪಾಣೆವಟ್ಟಲು : ಕೊಳಗುರದೇಗುಲಕ್ಕೆ ಕಣ್ಣಪೀಟ ಪಣೆಯವಟ್ಟವಿನಿತುವಂ ಕೊಟ್ಟು ಪ್ರತಿಷ್ಠೆಗೆಯಿಸಿದ(ಸೌಇಇ. XI-i, ೩೫-೧೫ ; 933). [<ಪಾಣೆವಟ್ಟ]

ಪಣೆಯಾರ, ಪಣೆವಾರ, ಪಣ್ಯಾರ, ಪನಿವಾರ(ನಾ)-೧. ಭಕ್ಷ್ಯ ; ತಿಂಡಿ : ಒಂದುದಿನ ರಾತ್ರಿ ಕೀಚಕನ ಮನೆಯಲ್ಲಿ ವಿಶೇಷವಾದ ಪಣೆಯಾರ ಗಳನ್ನೂ ಮಧುಪಾನಗಳನ್ನೂ ತಯಾರು ಮಾಡಿ . . . ಕೊಟ್ಟಳು (ಪ್ಯಾಸಭಿ. ೩೨೪). **ಪಣೆವಾರ** : ೨. ದೇವರ ನೈವೇದ್ಯಕ್ಕಾಗಿ ಮಾಡುವ (ಕೋಸಂಬರಿ, ರಸಾಯನ, ಕೊಬ್ಬರಿಸಕ್ಕರೆ ಮೊದಲಾದ) ಚರವು : ಆಗಾಗ್ಗೆ ದೇವರ ನಿವೇದನಕ್ಕಾಗಿ ಬೇಕಾದ ಪಣೆವಾರವನ್ನು ಜೋಯಿಸರ ಮನೆಯವರಿಂದ ಮಾಡಿಸಿ ಅವ್ಮನವರ ಪ್ರಸಾದವೆಂದು ಆ ಊರಲ್ಲಿ ಮನೆಮನೆಗೂ ಗೃಹಪ್ರಾಪ್ತಿಯಾಗಿ ಕಳುಹಿಸುವುದು (ಮಾಸುರಾ. ೪೪). **ಪಣ್ಯಾರ** : ೧. ಅವರಿಗೆಲ್ಲ ಮಂಗಳೆಯೇ ಅಡುಗೆ ಮನೆಯಿಂದ ಪಾನಕ ಪಣ್ಯಾರಗಳನ್ನು ಒದಗಿಸಿದಳು (ಸರ್ಪಮಂ. ೬೪೪) ; ರಮಣಿಗಳು ವಿಧವಿಧವಾದ ಪಣ್ಯಾರಗಳನ್ನು ಮಾಡಿದರು (ದೇವೀಜೌ.೭೩). ೨. ಮನೆಯ ಸಾರಿಸಿ ರಂಗವಲ್ಲಿಯನಿಕ್ಕಿ ಭೋಂಕನೆ ಭಕ್ಷ್ಯಭೋಜ್ಯನವಿದು ನನೆಯಕ್ಕಿ ಕಡಲೆ ಪಣ್ಯಾರದಿ ನಿಖಿಲಾರ್ಚನೆಯು ವಸ್ತುಗಳ ಸಾರ್ಚದರು (ನೋಹತ. ೧೪-೮೩). **ಪನಿವಾರ** : ೧. ದಾರಿಗರನ್ನು ಕರೆಕರೆದು ಕೊಡುವ ತನಿವಣ್ಣು, ಎಳನೀರ, ಕಬ್ಬಿನ ರಸದ, ಪನಿವಾರಗಳ ಅರವಟ್ಟಿಗೆಗಳು (ಶಾಂತಲಾ. ೧೦೪). ೨. ಶರಣಜನರೆಲ್ಲರಿಗುಮಾ ಶರತ್ಸಮಯದೋಳ್ ಪರಿಯುತಿಹ ಬ್ಲಿಂಗಳ್ಗುಗ್ಗಿಯಂ ತಾ ನವಿದು ನಿರುತದಿಂ ಪನಿವಾರಮುಂ ಮಾಡಲು (ಅರ್ಚಾವಿ. ೧-೧೩೪) ; ಅಯ್ಕೋಳ ಗುಡಿಯಲ್ಲಿ ಏನೇನು ಅಡ್ಡೆ ಊಟ ಉದ್ದು ಮತ್ತೆ ಪನಿವಾರ ನೆನೆಯಕ್ಕೆ ನೆನೆಗಡಲೆ ಪನಿವಾರ ನಮ್ಮ ಮುದ್ದು ನರಸಿಂಹನ ಗುಡಿಯಾಗೆ (ಗರುದಾ. ೬೩) ; ಜೋಡು ಕಾಯಿಗಳನ್ನು ಒಡೆದು ಪನಿವಾರ ಹಂಚಿದರು (ಪುಣ್ಣಪು. ೩೫೬).

[ದೇ.॥ ಕಮಿ. ಪಣೆಯಾರ ; ತುಳು. ಪನಿಯಾರೊ, ಪನಿವಾರೊ ;

ತೆಲು. ಪಣ್ಯಾರ, ಪಣ್ಣೀರ, ಪಣ್ಣೀರ]

ಪಣೆಯಾಲ, ಫಣೆಯಾಲ (ನಾ). ಒಂದು ಬಗೆಯ ಮರ ; ಜಡೆಬಸರಿ ಮರ : ಅಲದ ಬೇರು, ಅತ್ತಿಬೇರು, ಅರಳೀಬೇರು, ಬಸುರಿಬೇರು, ಪಣೆಯಾಲದ ಬೇರು, ಈ ಐದು ಬಗೆ ಬೇರುಗಳ ಕೂಡಿ (ವೈದ್ಯಸಾ. II, ೧೪೪) ; ಆಲದಿಂ ತಳ್ತ ಕಂಚಾಲದಿಂ ಪುದಿದ ಪಣೆಯಾಲದಿಂ . . . ವಿವಿಧ ಕುಜಜಾಲದಿಂದತಿಶಯವಿಶಾಲದಿಂದಾ ಶಿವಾಲೀಲಾವನಂ ಮೆಱೆದುದು (ಸಂದಿಸಾ, ೬-೫) ; ಒಂದು ಪಣೆಯಾಲದ ಮರವಿತ್ತು (ಸೀತಚಂ. VIII, ೧೦). **ಫಣೆಯಾಲ:** "ಗರ್ದಭಾಂಡಃ, ಕಂದರಾಲಃ, ಕಪಿತನಃ, ಸುಪಾರ್ಶ್ವಕಃ, ಪ್ಲಕ್ಷಃ—ಱ ಬಸರೀಗಿಡ, ಜಡೇಬಸರೀಮರ, ಇದನ್ನು ಫಣೆಯಾಲವೆನ್ನುವರು" (ನಿದ್ದಾಂತಿ. ೧೨೨) ; ನೆಗ್ಗಿಲ ಬೇರು, ಮಾವಿನ ಬೇರು, ಬೊಬ್ಬುಲಿ ಬೇರು, ಫಣೆಯಾಲದ ಬೇರು . . . ನೀರಿನಲ್ಲಿ ಹಾಕಿ ಕಷಾಯವ ಕಾಸಿ (ಸಕವೈ. ೬೧೧) ; ಎಲ್ಲಾರ ಹಟ್ಟೀಲಿ ಬೆಲ್ಲ ಬೇವಿನ ಮರವು ಪಲ್ಲಣಿಸಿ ಬೆಳೆವ ಫಣೆಯಾಲ ಮರದಡಿಗೆ ನಲ್ಲ ಕೂತವನೆ ಬರಹೇಳಿ (ಹಳ್ಳಿಯ. ೫೭). [ಪಣ್$_3$+ಆಲ$_1$]

ಪಣೆಯಿ 'ಪಣಿಗೆ' ನೋ.

ಪಣೆವಾರ 'ಪಣೆಯಾರ' ನೋ.

ಪಣಸಿವಡು ? (ಕ್ರಿ). (?) : ಪಣವೆ ದಿಟಕ್ಕೆ ಸೂಳೆವನೆಗಲ್ಲದೆತ್ತ ಗುಣಂ ಧನಂಗಳಂ ಗಣಿಯಿಸದಿತ್ತು ಸಾರಸುಖಮುಳ್ಕೊಡೆಯಂತದು ಮಾತೆ ಕೂರ್ತವಂ ಪಣಿಸಿ[ಪಾಠಾಂ.ರಣಿಸಿ]ವಡುತ್ತೆ ಪತ್ತುವೊಡಮರ್ಥಿಗೆ ಕತ್ತಿಗೆ ಸೂಳೆ ಡಾಳೆ ಕೂಂಟಣಿ ತಣಯಂತೆ ಮುತ್ತೆ ಮುನೆ ತೀನ ತವರ್ಮನೆಯಂತು ಪತ್ತುವರ್ (ಲೀಲಾಪ. ೨-೯೫). [?]

ಪಣುಂಕು, ಪಣುಕು, ಹಣಿಕು$_2$, ಹಣಿಗು$_2$, ಹಣುಂಗು, ಹಣುಗು$_2$, ಹಳುಂಗು, ಹುಣಿಗು, ಹುಣುಗು (ಕ್ರಿ). ೧. ಕುಗ್ಗು ; ಕುಸಿ : ತುಮುಟಲ್ಕೈರಾವತಂ ದರ್ಪಮನೆರ್ದೆಯೊಡೆ

ಯಲ್ಪುಂಡರೀಕಂ ಪಣುಂಕಲ್ ಕುಮುದಂ ... ಸುಡುಳ್ದಂ ಸಮದಿಂದ್ರಂ ವಹ್ನಿಕಾಲಂ ದನುಜನುದಧಿಪಂ ವಾಯುಯಕ್ಷಂ ತ್ರಿಯಕ್ಷಂ . (ಲೀಲಾವ. ೬-೪). **ಪಣುಕು** : ೧. ಪಾಱು ಪಣುಕುತ್ತುಮೋರೊಂ[ಪಾಠಾಂ. ಪಣುಗುತ್ತನೊರ್ಮೆಂ]ದಾಱುಲನೋರೊರ್ಮೆ ಬಿದ್ದಮಿಱುಯುತ್ತುಂ ನೀರ್ಗೇಱುದ ಮುಗಿಲೊಂದೊಡ್ಡಂ ಬೀಱುದುದಿಂದ್ರಂಗೆ ಬಿನದಮಂ ನಾಗೇಂದ್ರಂ (ಮಲ್ಲಿಪು. ೧೨-೭೯). **ಹಣಿಕು$_2$** : ೧. 'ಹಣಿಕಿಸು$_2$' ಪರಾ. **ಹಣಿಗು$_2$** : ೨. ಬಾಗು ; ಬಗ್ಗು ; ಮಣಿ : ಮಣಿದು ಕೂಪದ ಜೀವನವ ಕಡೆಗಣಿಸದೇ ಘಟಯಂತ್ರ ಮೃಗರಿಪು ಹಣಿಗಿದರೆ ಹರಿಣಂಗೆ ಗೆಲವೇ (ಕುವ್ಯಾಅ. ೮-೪೦); ಸಿಂಗರಿಸುವ ಬೆಲೆವೆಣ್ಗಳ್ ಬಿನದಕ್ಕಂಗಣಮಂ ಸಾರುವ ಬಿಡುವೆಣ್ಗಳ್ ಪಿಂಗದೆ ಹಣಿಗಿ ನಡೆವ ಬೆಸವೆಣ್ಗಳ್ (ಜಯಕಾ. ೧೨-೧೫). ೩. ಹಿಂಜರಿ ; ಹಿಂದೆಗೆ : ಎಸೆವುದಂ ಬಿಟ್ಟು ಹಣಿಗಿದನೆಂಬ ಗಾದೆಮ್ಮ ದೆಸೆಗಾಯ್ತು (ಸಿಂಗಿರಾ. ೧೪-೧೬). **ಹಣುಂಗು** : ೪. ಅಡಗಿಕೊಂಡು ನಿರೀಕ್ಷಿಸು ; ಹೊಂಚು ಹಾಕು : ಪೆಱತೊಂದೆಡೆಯೊಳೆಳವುಲ್ಲೆಗಳ ಪಾಱುಗೆಯ್ತುಮಂ . . . ಅವಱ ಹಿಂದೆ ಹಿಂದೆ ನೆಲನಂ ಹತ್ತಿ ಹಣುಂ[ಪಾಠಾಂ. ಣ, ಣೆ, ಣು]ಗಿ ಜುಣುಗಿ ಜೂಜಾಡುವ ಕಿಱುವುಲಿಗಳುಮಂ . . . ಕಂಡು ಕಂಡು (ನಂಬಿರ. ೧೮-೯); ಮೆಳೆಯೊಳಗಿರ್ದು ಮೇವ ಮಿಗಮಂ ಮಿಗೆ ಪೆರ್ಬುಲಿ ಕಂಡು ಕಾಣದಂತಳವಿಗೆ ತರ್ಗಿ ಕುರ್ಗುತುಸಿರಿಕ್ಕದೆ ಬಂದು ಹಣುಂಗಿ ಪಾರ್ವ ತನ್ನಳವನಭೀಕ್ಷಿಸುತ್ತೆ (ರಾಜಶೇ. ೫-೯೪). **ಹಣುಗು$_2$** : ೧. ಕುಸಿದ ತಲೆ ಹಣುಗಿದೊಡಲರಳ್ವ ಬಾಯ್ ಸುಗಿದ ಕಿವಿಯುಸುರಿಡದ ಮೂಗು (ಹಚಕಾ. ೫-೩೧); ಮನ ಹಣುಗಿ ತುಟಿಯೊಣಗಿ ನೋಟದ ಮೊನೆ ಮುಱುದು ಝೊಂಪಿಸುತ ಮುಂದಣಿಗೊನೆದು ಬಿದ್ದನು ಭೀಮ ಪಾಂಡವ ಸೇನೆ ಕಳವಳಿಸೆ (ಕುವ್ಯಾಕ. ೩-೨೬). ೪. ಹುಲಿಯ ಹಾರಯಿಸಿ ತಲೆ ದಡವಿ ತೋಱು ಹಾಸವ ತಿವಿದು ದೂರದಿಂ ಕಂಡು ಹಸರಿಸಿ ಹತ್ತಿ ಹಣುಗಿ ನೆಲಕೋರಂತೆಯಡಗಿ (ಹಚಕಾ. ೫-೩೦); ಕಳಚಿ ಹಾಸವನುಬ್ಬರಿಸಲವ್ವಳಿಸಿ ಕಂಠೀರವನ ಮೋಱೆಗೆ ನಿಲುಕಿದವು ಕದುಬಿದವು ಹಾಯ್ದವು ಹಣುಗಿ ತುಡುಕಿದವು (ಕುವ್ಯಾಅ. ೧೩-೨೭). ೫. (ಭಯದಿಂದ) ಅಡಗು ; ಅವಿತುಕೊಳ್ಳು : ಹೆಣಗಳನು ಬಗಿಬಗಿದು ಕಪಿಗಳು ಹ[ಪಾಠಾಂ. ಜ, ಹು]ಣುಗಿದರು ಕೆಲರದ್ರಿಕುಜಸಂದಣಿಗಳೊಳು ಹುದುಗಿದರು (ತೊರರಾ. ೬-೩೫-೪೫). ೬. ಹೆದರು ; ಅಂಜು ; ಭಯಪಡು : ಹಣುಗಿ ಮಱೆಗೊಂಡೆಸುವ ಲುಬ್ಧಕರೆಣಿಕೆಯಲಿ ಕೈಮಾಡುವುದು . ಭೂಷಣವೆ ಭಟರಿಗೆ (ತೊರರಾ. ೪-೪-೩೭); ಕುಣಿಡು ಕುದಿದವು ಶರಧಿ ತಾರಾಗಣಗಳುಡಿದವು ಧರೆಗೆ ದಿವಿಜರು ಹಣುಗಿ ತನು ಕಂಪನದೊಳಿರ್ದುದು ಬೆರದ ಬೆರಗಿನಲಿ (ಅಂಬಿಕಾ. ೧೪-೩೪). **ಹಳುಂಗು** : ೧. ಕಂಠೀರವರವಮಂ ಕೇಳಲಾಗೆ ಬೆಳ್ಳಾಗಿ ಬಿಗುರ್ತು ರಾಗಮಳಿದಗಿದು ಸುಗಿದು ಹಳುಂಗಿ [ಪಾಠಾಂ. ಹಣುಗಿ] ಹಮ್ಮದಂಬೋಗಿ . . . ತಡಂಗೆಡೆದಿರ್ಪ ಮಾತಂಗದಂಪತಿಗಳಿಂ (ಗಿರಿಕ. ೧-೧೨೮ ವ). **ಹುಣಿಗು** : ೭. (ಭಯದಿಂದ ಮೈಯನ್ನು) ಕುಗ್ಗಿಸು ; ಮುದುರಿಕೊಳ್ಳು : ಕಲಿಹನುಮನಂ ನೋಡಿದನು ಮೈ ಹುಣಿಗಿ ನಿಂದಿರ್ದನಾಜಿಯೊಳಗೆ (ತುರಂಗ. ೬೮-೩೫). **ಹುಣುಗು** : ೭. ವೈರಿ ಕರ್ಣನ ರಭಸಕಂಜಿದಂ ಭೀಮ . . . ರಥದ ಕಪಿವೀರ ಮೈಹುಣುಗಿದಂ ಕೃಷ್ಣಾರ್ಜುನರು ಜಪವ ಮಾಡಿದರು ತಾರಕವನು (ತುರಂಗ. ೬೯-೪೫).

ಪಣುಕು 'ಪಣುಂಕು' ನೋ.

ಪಣೆ$_1$, ಫಣೆ$_1$, ಹಣೆ$_1$ (ನಾ). ೧. ನೊಸಲು ; ಫಾಲ ; ಭಾಳ ; ಲಲಾಟ : "ಪಣೆ—ಫಣಾ = ಹಣೆ" (ತದ್ಭಕೋ. ೨೪); ತೆಕ್ಕನೆ ತೀವಿರೆ ತಾಪಕ್ಕಿಕ್ಕಿದ ಸಿರಿಗಂಪು ಪಣೆಯೊಳೆಸೆದುದು ಕೋಪಂ ಮಿಕ್ಕತನು ಬೆಸಸಿದೊಡೆ ನೊಸಲಕ್ಕರಮಂ ಕೊಡೆಯಲೆಂದು ಬಂದಿಂದುವವೋಲ್(ಚಂದ್ರಪು. ೮-೮೬); ಕಸ್ತೂರಿತಿಲಕವೊಪ್ಪದೊಳೆಸೆವೆಱೆಯನ ಪಣೆ ಗೆಲ್ದುದೆನ್ನ (ಭರಚ. ೬-೪೪); ಘನವಾದ ಮಣಿಮಯಪದ್ಮಪೀಠದೊಳಾಗ ಜನನಾಥ ಚೂಡಾರತ್ನ ಮನಹರುಷದಲಿ ಮಂಡಿಸಿ ಕತ್ತುರಿನಾಮವನು ಪಣೆಗಳವಡಿಸಿದನು (ಕಂಸವಿ. ೨೨-೬೧). ೨. ನೊಸಲಿನ ಮೇಲ್ಭಾಗ ; ನೆತ್ತಿ : ಅಡಿ ತೊಡೆ . . . ಕಟ ಮುಮ್ಮಡಂ ಪರಡು ಸಂದಿ ನೊಸಲ್ ಪಣೆ ಕಣ್ ಕದಂಪಿವೆಂಬೆಡೆಯನೆ ನಟ್ಟುವುರ್ಚಿದುವು ನೇರ್ಮವು ಸೀಳ್ದುವು ಪಾರ್ಥನಂಬುಗಳ್ (ಪಂಪಭಾ. ೧೧-೧೩೬). **ಫಣೆ$_1$** : ೧. ಬಸದಿಗಾ ವೈಶ್ಯಕಾಂತೆ ಬಂದು . . . ಯತಿಪತಿಯ ನವನಳಿನೋಪಮಾಂಘ್ರಿದ್ವಯಕ್ಕೆ ಫಣೆಯಂ ಚಾಚಿ (ಸಮ್ಯಕೌ. ೫-೭); ಸರಸಿಜೋದ್ಭವನು ಫಣೆಯೊಳು ಬರೆದು ನಿರ್ಮಿಸಿದ ತೆಱನುಳಿದು ಬೇಱುಂಟೆ ತಾನಱಿದುದೆ (ಕನಕ. ೫೪-೧); ಪಾದೋದಕ ಪ್ರಸಾದಗಳ ಕೊಳ್ಳಿ ಬೂದಿಯ ಫಣೆಯೊಳು ಧರಿಸಿ (ಬಿಜ್ಜರಾ. ೨-೩೩). **ಹಣೆ$_1$** : ೧. "ಭಾಳಮಳಿಕಂ ಲಲಾಟಂ ಹಣೆಯೆನಿಕ್ಕು" (ಮಂಗರಾ. ೯೪-೪); ಬರಬರ ಭಕ್ತಿಯರೆಯಾಯಿತ್ತು ಕಾಣರಣ್ಣಾ ಮೊದಲ ದಿನ ಹಣೆ ಮುಟ್ಟಿ ಮಱುದಿನ ಕೈಯ ಮುಟ್ಟಿ ಮೂಱೆಂಬ ದಿನಕ್ಕೆ ತೂಕಡಿಕೆ ಕಾಣರಣ್ಣಾ (ಬಸವ. ೨೨೦); ರಣದೊಳೊಡ್ಡಿದರಾತಿಗಳನೀ ಹಣೆಯ ಪಟ್ಟದ ವೀರ ಜಯಿಸಲು ಹಣವಿಗಾನೋಲೈಸೆ ಮಾಡುವೆನಡವಿಯಲಿ ತಪವ (ಕುವ್ಯಾಭೀ. ೧-೩೮); ಹಣೆಯೊಡೆದುಗುವ ರೋಹಿತಧಾರೆ ಕಮ್ಮಲರ್ಗಣೆಯನ ಮೇಲೆ ಚೆಲ್ಲಿದುವು (ಮೋಹತ. ೧೨-೮೯); ಜನ್ನಗುದುರೆಯ ಹಣೆಯ ಉರವಣೆಯ ಒಕ್ಕಣೆಯ ಪಟ್ಟಲಿಖಿತದ ಕನಕದೋಲೆಯಂ ತಾನೋದಿ . . . ಐತಂದನಾ ಇಂದ್ರಜತನೂಜಂ (ಚಿತ್ರಾಂಗ. ೭೪-೨೦೪೧). ೨. "ನೀಚಿಕೀ, ಶಿರೋದೇಶಃ — ಈ ೨ ಹಣೆ" (ಹಲಾಯು. ೪೪-೧೧೨). 'ಫಣೆ$_2$' ಪರಾ.

ಪಣೆಗೈಯಾಗು = (ನಮಸ್ಕರಿಸುವುದಕ್ಕಾಗಿ) ಹಣೆಯ ಮೇಲೆ ಕೈಯನ್ನು ಇಟ್ಟುಕೊಳ್ಳು ; ಹಣೆಯವರೆಗೆ ಕೈಯೆತ್ತು : ದಿಗ್ಗನೆ ನಿಂದು ಪಣೆಗೈಯಾಗಿ ಮಣಿದುದು ಬಾಗಿ ಆಸ್ಥಾನ (ಶ್ರೀರಾಮಾ. ೬೭೩-೩೩೯). ಹಣೆಗೆ ಗಟ್ಟಿಸಿಕೊಳ್ಳು = ೧. (ದುಃಖ, ಉದ್ವೇಗಗಳಿಂದ) ಹಣೆಗೆ ಹೊಡೆದುಕೊಳ್ಳು : ಅವಳು ಹಣೆಗೆ ಗಟ್ಟಿಸಿಕೊಂಡು ಅತ್ತಳು (ರೂಢಿ) ೨. (ವ್ಯಂಗ್ಯಾರ್ಥದಲ್ಲಿ) ಉಪಯೋಗ ಮಾಡಿಕೊಳ್ಳು ; ಅನುಕೂಲ ಹೊಂದು : ಇಂಥವನು ಈ ಸಾವುಕಾರನ ಬದುಕು ತಕ್ಕೊಂಡು ಏನು ಹಣೆಗೆ ಗಟ್ಟಿಸಿಕೊಳ್ಳುವನೆಂಬುದನ್ನು ದಣಿಯರು ಆಲೋಚಿಸತಕ್ಕದಿತ್ತು (ಮುಂಬಯಿ. ೪-೧೭೦). ಹಣೆಯ ಬರಹ, ಹಣೆಯ ಬರೆಹ = ವಿಧಿಲಿಖಿತ ; ಅದೃಷ್ಟ : ಎಣಿಸಿ ಮಾಡುವುದೇನು ತಪ್ಪದು ಹಣೆಯ ಬರಹವು (ಕೌತಿರಾ. ೩೭-೪); ಸೃಷ್ಟಿಸಮಯದಿ ಬರೆದ ಹಣೆಯ ಬರಹವಿದೆಂಬ ನಷ್ಟಸತ್ತ್ವರ ತತ್ತ್ವ ದೂಡಿಬಿಡಿರೇಳಿ (ವಿಸೀಗೀ. ೪೨-೧೧); ಬೆಳ್ಳಿಯು ತನ್ನ ಹಣೆಯ ಬರೆಹವನ್ನೂ ದೂರಿ ನಡೆದುದನ್ನೆಲ್ಲ ಹೇಳಿ ಅತ್ತುಬಿಟ್ಟಳು (ಕಾಲೂರ. ೧೦ ಕಥಾಸಾರ). ಹಣೆಹಣೆ ಚಚ್ಚಿಕೊಳ್ಳು = ಹಣೆಹಣೆ ಬಡಿದುಕೊಳ್ಳು : ಅವಳು ಹಣೆಹಣೆ ಚಚ್ಚಿಕೊಂಡು ಅಳುತ್ತಿದ್ದಾಳೆ (ರೂಢಿ). ಹಣೆಹಣೆ ಬಡಿದುಕೊಳ್ಳು = ದುಃಖ, ಉದ್ವೇಗಗಳಿಂದ ಹಣೆ ಚಚ್ಚಿಕೊಳ್ಳು ; ಗೋಳಾಡು : ಆ ದುರಂತವನ್ನು ಕೇಳಿ ಆವರು ಹಣೆಹಣೆ ಬಡಿದುಕೊಂಡರು (ರೂಢಿ).

ಪಣೆ$_2$, ಹಣಿ$_4$, ಹಣೆ$_2$ (ನಾ). ೧. ಮರದ ಕಾಂಡದ ಮೇಲ್ಭಾಗ,—ಕವಲೊಡೆಯುವ ಭಾಗ : "ಪ್ರಘಾಣಃ, ಸ್ಕಂಧಂ — ಈ ೨ ಮರದ ಪಣೆ" (ಹಲಾಯು. ೩೦-೨೮); ತೀವಿರ್ದತ್ತು ಮೊದಲ್ ಮೊದಲ್ಗೆ ಪಣೆಯುಂ ಮೂಗಯ್ಯ ಮೂಗಯ್ಯೆನಿತ್ತಾವಕ್ಕೆಯ್ದೆ ಕವಲ್ ಕವಲ್ತು ಪಲವುಂ

ಕೊಂಬಾದುವೊಳ್ನೊಂಬುಗಳ್ ತೀವಿರ್ದತ್ತು ತಳರ್ ಮೊದಲ್ ಪಣೆ ಕವಲ್ನೊಂಬೆಂಬುವೀ ಕೆಂದಳಿರ ಮಾವಿಂಗಲ್ಲದೆ ಮಾವುಗಳ್ಗೆ ಪೆಜವಕ್ಕಿಂತೇಂ ಬೆಡಂಗಕ್ಕುಮೇ (ಅದಿಪು. ೧೧-೯೫); ಪಲಕಾಲದೊಳಜತಿರ್ದಾಮಲಕದ ಪಣೆಯಂ ಕುಠಾರದಿಂ ಸೀಳ್ದಜಜೊಳ್ ತಿಲಮಧುಳ್ಳೃತಮಂ ಪೂರಿಸೆ ಫಲಮಾ ಮರದೆಲೆಗಳಿಂದಮವು ಪಿರಿದಕ್ಕುಂ (ಲೋಕೋಪ. ೬-೩೯); ಕರಿಯ ಭೂಮಿಯೊಡಗೂಡಿ ಮೊದಲಿಂದಂ ಪಣೆ[ಣೆ]ಯಿಂದಂ ಪೆರ್ಗೊಂಬುಗಳಿಂದಂ [ಕಿಱುಗೊಂಬುಗಳಿಂದಂ] ಅಲದ ಮರನೆಂತೊಪ್ಪುಗುಂ (ಧರ್ಮಾಮೃ. ೧೩-೫); ಬನಮೆಂಬ ಮದನನ್ನ ಪನರಮನೆಯೊಳ್ ಪೊತ್ತಿಸಿದ ದೀಪಮಾಲೆಯ ಮಾಡಕ್ಕನುರೂಪಮಾಗಿ ಪಣೆಯಿಂ ಕೊನೆವರೆಗಂ ಪೂತುವರೆರೆ ಚಂಪಕನಿಕರಂ (ಚಂದ್ರಪು. ೬-೫೩). ೨. ಕಾಡುಮೃಗಗಳು ಮಲಗಿಕೊಳ್ಳುವ ಸ್ಥಳ; ಮೃಗಗಳ ಹಕ್ಕೆ: ಇಂತು ಸಂತತ ಮೊಪ್ಪುವ ಕಾಂತಾರದಂತರಾಳದೊಳ್ ಬಿಯದರ್ ಬೇಂಟೆಯಾಡಲೆಂದು ಸಂಭ್ರಮಂ ಮಿಗೆ ಸರುವಿಡಿದು ಪಣೆಯರ್ಪೆಡೆಗೆಯ್ತಂದು ನಿಂದು (ಶಬಶಂ. ೬-೪೪ ಪ). ೩. ಉಳುವ ನೆಲ; ವ್ಯವಸಾಯದ ಭೂಮಿ; ಕೃಷಿ ಭೂಮಿ :(ಕ). **ಹಣೆ$_1$**: ೧. ಗುಲ್ಮ-ಹಣೆಯಿಲ್ಲದ ಮೆಳೆ ಬಳ್ಳಿ ಗಿಡುಗಳ್ (ನಾಚಿಂಗಾ. ೬). **ಹಣೆ$_2$** : ೨. "ಹಣೆಯೆಂದು ಮಿಗದಿಕ್ಕೆ" (ಕಪಸಾ. ೫೧-೮೫); "ಹಣೆಯೆನಲ್ ಮಿಗಮರ್ಪ ತಾಣ" (ಶಬ್ದಮಂ. ೩೨); ಇಂತಸದಳಮೆಸೆವಾ ಪೇರಡವಿಯಂ ಬೇಂಟೆಯಾಡಲೆಂದು ಬಿಯದರ್ಸಂದಣಿಸಿ ಪೊಕ್ಕು ಮಿಕ್ಕು ಮಿಾಱ ಸಂಭ್ರಮಿಸಿ ಸರುವಿಡಿದು ಹಣೆ[ಪಾತಾಂ. ಣೆ, ರ]ಯಿರ್ಪೆಡೆಗೆಯ್ತಂದು (ರಾಜಶೇ. ೫-೮೦ ವ); ಮಾನಿಸರ ಸುಳಿವಂತಿಳಿದೆಯ್ದೆ ಕಾಯ್ದುರವಣಿಸಿ ಹಣೆಯಿಂ ತೊಟ್ಟನೆ ಪೊರಮಟ್ಟಬ್ಬರಿಸುವ ಪೆರ್ಬುಲಿ ಮೊದಲಪ್ಪ ಕೂರ್ಮಿಗಂಗಳನಲ್ಲಲ್ಲಿ ಕಾಣಲೊಡಂ (ಮಂಗಾಚ. ೧೧-೩೧). ೪. ಸಾಣೆ ಹಿಡಿಯುವ ಕಲ್ಲು; ಮಸೆಗಲ್ಲು : ನಿಡುಗಣ್ಣ ನೋಟ ನವರಸಿಕರ ಗೆಲವಿನೋಟ ಕಡುತೆಳ್ಪುವಡೆದ ಹಣೆ ಕಾವನಲರ್ಗಣೆಗೆ ಹಣೆ . . . ಆ ದ್ವಿಜತನೂಜೆಯ ವಿಲಾಸವನದೇನೆಂಬೆನು (ಸಮ್ಯಕ್ಕಾ. ೬-೧೧).

[ದೇ.॥ ತಮಿ. ಪಣ್ಣೆ, ಪಣ್ಣೈ; ಮಲ. ಪಣ]

ಪಣೆ$_3$ (ನಾ). ದೊಡ್ಡಬಂಡೆಯಿಂದ ಕಲ್ಲನ್ನು ಎಬ್ಬಿ ತೆಗೆಯುವಲ್ಲಿ ಮಾಡಿದ ತೋಡುಹಳ್ಳ; ಬಂಡೆನೆಲೆ; ಕಲ್ಲುಗಣಿ. 'ಕಲ್ಪಣೆ$_1$' ಪರಾ. [ದೇ.॥ ಮಲ. ಪಣ; ತುಳು. ಪಣೆ]

ಪಣೆ$_4$, ಹಣೆ$_3$ (ನಾ). ನೀರನ್ನು ಎತ್ತುವ ಸಾಧನ; ಏತ : ಒಂದು ಬದಿಯಲ್ಲಿ ಗದ್ದೆಗೆ ನೀರು ಎಳೆಯಲು ಪಣೆ ಹಾಕಿರುವರು (ನಾಚಿಕೆ. ೪೮)

ಹಣೆ$_3$: 'ಹಣೆಗುತ್ತಿ' ಪರಾ. [←ತುಳು. ಪಣೆ]

ಪಣೆ$_5$ (ನಾ). ಹಾವಿನ ಹೆಡೆ; ಫಣಿ. 'ನಾಗರು' ಪರಾ.

[<ಸಂ. ಫಣಾ]

ಪಣೆಕಟ್ಟು 'ಪಣೆಗಟ್ಟು' ನೋ.

ಪಣೆಗಂಗಿಡಿ (ನಾ). (ಶಿವನ) ಹಣೆಗಣ್ಣಿನ ಕಿಡಿ; ಹಣೆಗಣ್ಣುರಿ: ಕುಡಿವೆನೇಳಂಬುಧಿಯ ಸೆಣಸಿದೊಡೊದೆವೆನದ್ರಿಯ ಮೃಡನ ಪಣೆಗಂಗಿಡಿಯ ತಣ್ಣೆಸೆನಜನ ಫಾಲಾಕ್ಷರಕೆ ಮುತಿಯಿಡುವೆ (ಅನಂಂಾ. ೧-೫-೩).

[ಪಣೆಗಣ್ + ಕಿಡಿ]

ಪಣೆಗಟ್ಟು, ಪಣೆಕಟ್ಟು, ಫಣೆಕಟ್ಟು, ಹಣೆಕಟ್ಟು (ನಾ). (ಅಲಂಕಾರಕ್ಕಾಗಿ) ಹಣೆಗೆ ಕಟ್ಟುವ ಪಟ್ಟ; ಹಣೆಪಟ್ಟ : ಸಿಡಿಕೆಯರ್ ತೀವಿದ ಕೂರ್ಗಣೆ ಮುಡಕಾಲ್ವರವುಲೆವ ಕಟ್ಟೆ ನಿಡಿಯಂ ಸಿಯೊಜಿ ಕರ್ಪಿಡಿದ ಪಣೆಗಟ್ಟು ಕೆಯ್ವೊಡೆ ಬೆಡಂಗನೊಳಕೊಳೆ ಧನುರ್ಧರರ್ ಪೆಣೆದೆಚ್ಚರ್ (ಪಂಪಭಾ.೧೦-೬೧); ತುಱುವಿನ ಸುಳಿ ಪಣೆಗಟ್ಟು ಕೆನ್ನೆಯ ಗಱ ಹೆಜ್ಜೆ ರವಿ ಮುಸ್ತಕಮಣಿಯ ಮಿಱುಗುವ ಮುತ್ತಿನ ಬಲೆ ಜೂಳಯುವ ಮನದೆಜಕದಿಂದಿತ್ತ ನಂದನಗೆ (ರಾಮವಿ. ೮-೪೯); ಪೆಜ್ಜೆನೊಸಲುಬಿಜ್ ಪಣೆಗಟ್ಟು ಮುತ್ತಿನ ಬೊಟ್ಟು ಮಿಱುಪ ವಂಟಿಯ ವಜ್ರದೋಲೆ ತುಱುವಿನ ಮುತ್ತಿನ ಬಲೆ ಚಿನ್ನಗೇದಗೆಗಱಗಳಿಂ ಸಿಂಗರಿಸಿದಳು (ಕುರಾಸಾಂ. ೨೯-೯೭). **ಪಣೆಕಟ್ಟು** : ತೊಟ್ಟಿಕ್ಕವಡಂ ಮರವಿಲ್ ಕಟ್ಟಿದ ಪಣೆಕಟ್ಟು ಬೇಂಟೆವಜ್ಜ ದೊರೆಯೊಳೊಡಂಬಟ್ಟಸಿಯ ಸುರಗಿ ದಳಿವದ ತೊಟ್ಟಂಗಿಗೆ ತನ್ನೊಳಮರೆ ಬೇಂಟೆಯನೊರ್ವಂ ಬಂದು (ಪಂಪಭಾ. ೫-೩೬); ಉಡೆದೋಲುಂ ಪಣೆಕಟ್ಟುಂ ಮಡಮೇಱುಸಿ ಮೆಟ್ಟದೆಕ್ಕವಡಮುಂ ಕಯ್ಯೊಳ್ ಸಿಡಿದಿರ್ದ ಕುಂಚಮುಂ ತನಗೊಡಂಬಡೆಯೆ ಲೇಖವಾಜಾಕೃತಿಯೊಳ್ (ಪರ್ಧಮಾ. ೨-೪೫); ಪಣೆಕಟ್ಟೊಳ್ವೀಲಿಯಿಂದುಟ್ಟುದು ಪೊಸದಳಿರಿಂ . . . ಸ್ಥಾನಕಂ ದಂತಿದಾನೋತ್ಕಣದಿಂ ಮೆಯ್ವೆತ್ತಿರೆಲ್ (ಪುಷ್ಪಪು. ೫-೧೦೧). **ಫಣೆಕಟ್ಟು** : ತಲೆಬೀದಿ ಮುಂದಲೆಗೆ ಸೊಗಯಿಸುವ ಮೌಕ್ತೀಕ ದಾವಳಿಯ ಫಣೆಕಟ್ಟನಮರಿಸಿದರಾ ಕುವರಿಗೆ (ಸಪಮೋ. ೨೩-೫೫). **ಹಣೆಕಟ್ಟು** : "ಹಣೆಕಟ್ಟು — ಎತ್ತಿನ ಹಣೆಯ ಆಲಂಕಾರ" (ಜಾನಕೋ.೫೨); ಎತ್ತಿಗೆ ಹೊಸ ಬಾಸಿಂಗ, ಹಣೆಕಟ್ಟು, 'ಮಗಡ' (ಮಗುಡ), ಸರುಹಗ್ಗಗಳ ಸಂಭ್ರಮವಾಗುವುದು (ಕನ್ನಜಾ. ೧೬೭). [ಪಣೆ$_1$ + ಕಟ್ಟು$_2$]

ಪಣೆಗಣ್, ಪಣೆಗಣ್ಣು, ಫಣೆಗಣ್ಣು, ಹಣೆಗಣ್ಣು (ನಾ). ೧. ಹಣೆಯಲ್ಲಿರುವ ಕಣ್ಣು; ಶಿವನ ಮೂರನೆಯ ಕಣ್ಣು; ಫಾಲನೇತ್ರ: ಪಣೆಗಣ್ ನದಿ ಶಶಿ ಕೆಂಜೆಡೆ ಫಣಿಗಳ್ಪೆಜ್ಜೆವ್ಯದುಮೊಗದಿ ಶಸ್ತ್ರೌಘದ ಸಂದಣಿಯ ದಶಬಾಹುವಿಂ ವಾರಣಮುಖಸಿತನೋತು ಮೂರ್ತಿಯಿಂ ನಿಂದಿರ್ದಂ (ತ್ರಿಪುವಿ. ೩೮-೭); ಬಾಂದೊಜ್ಜೆ, ಪಣೆಗಣ್, ಕೊರಲ್ಗಜ್ಜೆ . . . ಕಾಲ್ಗೆರೆ ಇತ್ಯಾದಿ (ಶಬ್ದಾನು. ೩೦೫ ವ್ಯಾಖ್ಯಾ); ಪಣೆಗಣ್ಣೆಱು ವೆಜ್ಜೆ ಸುರನದಿ ಫಣಿಭೂಷಣಮಾಂತು ಶಿಸುಳಿ ಮಿಗಮನ್ವಿತಭೀಷಣ ವಿಷಮಿಭಚರ್ಮಾಂಬರಮಣಿಯರಮಮರ್ದೆಸೆಯೆ ರೂಪುದೋಱದೆನಾಗಳ್ (ವೃಷವಿ. ೧೪-೧೦೬). 'ಪಣೆಗಂಗಿಡಿ', 'ಪಣೆಗಣ್ಣುರಿ' ಪರಾ. ೨. ಹಣೆಯ ಕಡೆಗೆ ತಿರುಗಿದ ಕಣ್ಣು; ಮೇಲ್ಗಣ್ಣು : ಪೆಡತಲೆಯನರಂ ತೆಗೆದೊಡೆ ಮಿಡುಕದೆ ಸೈತಿರ್ದು ಬಾಲಮಂ ಕೊರಲುಂ ಮತ್ತೆಡೆವಿಡಿ(ಡ)ದುಡಿರದೆ ಪಣೆಗಣ್ಣಡಸಿ ಕರಂ ಸುಯ್ಯೆ ಬಾಳಲಾಱದು ತುರಗಂ (ಅಶ್ವಶಾ. ೧೩-೨೫). **ಪಣೆಗಣ್ಣು** : ೧. ಗಿರಿಜೆಯಿಂ ಶೃಂಗಾರ ಭೂತಗಣದಿಂ ಹಾಸ್ಯ ಕರುಣಾರಸಂ ನಿಜಾಪಾಂಗದಿಂ ಪಣೆಗಣ್ಣಿನುರುತರಾದ್ಭುತವು . . . ರುದ್ರಗಣದಿರವಿನಿಂ ವೀರರಸಮೆಸೆಯೆ ನವರಸಭರಿತನಾಗಿ ಶಿವನೊಪ್ಪಿರ್ದನು (ಸೌಂದಪು. ೧-೩೬); ಕಂದರ್ಪನ ಸುಟ್ಟ ಪಣೆಗಣ್ಣು ಮುಚ್ಚದೆಂದಾದೊಡೆ ಮತ್ತೆ ತೆಜ್ಜಿದು ಬೆಂದ ಪಾಪಿಯ ಬೇಯಿಸಬೇಡವೆಂದು ಸುಗಂಧಾಕ್ಷತೆಯ ಮೆತ್ತಿದನು (ಮೋಹತ. ೨೧-೨೮); ವಿಲಯಸ್ಫುರಾಂತಕನ ಪಣೆಗಣ್ಣೆಂದೆ ಪೊಱಮಡುವ ದಳ್ಳುರಿಯ ತೆಜದೊಳೆಸೆವ ರಶ್ಮಿಗಳನುಗುಳ್ವಮೋಘದ ಬಾಣಮಂ ಪೂಡುತ (ಹೈಮಿಭಾ. ೨೦-೧೭); ಕಡುಗಲಿ ಕಾಲರುದ್ರನ ಪಣೆಗಣ್ಣಿನ ಕಿಡಿಗಳ ಗಡಣದಂದದಲಿ ಜಡಿವ ಬತ್ತೀಸಾಯುಧಗಳ ಸುಭಟರ ಬೆಡಗಿನ ನಿಕರಮೊಪ್ಪಿಹುವು (ಕಂಸವಿ. ೬-೫೯). **ಫಣೆಗಣ್ಣು** : ೧. ದೂಪಕದಕ್ಷನು ಯಾಗವ ಮಾಡೆ ಕಂಡೀಶನು ಫಣೆಗಣ್ಣ ತೆಜ್ಜಿಯೆ (ಮಾದೇಸಾಂ. ೧-೯). **ಹಣೆಗಣ್ಣು** : ೧. ಹರನ ಹಣೆಗಣ್ಣಿನ ಮಹಾನಲನುರಿಯ ಹೊಯ್ಲಲಿ ಸಾಯಲಾಱದೆ ಪುರುಷತನವನು ಬಿಸುಟು ಮಂಡೋದರಿಯ ರೂಪಕವ ಧರಿಸಿದನೊ ಕಂದರ್ಪನೆನೆ ಸಿಂಗರದ ಸಾರೋದಯದ ಸೊಬಗಿನ ಶರನಿಧಿಯ ಮೌಕ್ತಿಕದವೊಲು ಮೆಜ್ಜಿದಿರ್ದಳಾ ಕಾಂತೆ (ತೊರಂಾ. ೫-೨-೭೬); ಬಿಡದೆ ಕೇಸರಿಯೆಂಬ ದೇವತೆ ಕಡುವಿಗಡದುಷ್ಟಾಶ್ವರೂಪದಿ ಕಡೆಯ ಕಾಲದ ಸಿಡಿಲ ದನಿಯೆನೆ ನೆಜ್ಜಿ ಕೆರಳಿ ಬಂದೂ ಪೊಡೆಯರಲನೊಡವಾಯ್ ಹಣೆಗಣ್ಣೊಡೆಯ ತಿವಿದಡೆ ಕಾಜ್ಜಿ ನೆತ್ತರ ಕೆಡೆದು ಬಿದ್ದೆದ್ದೋಡಿದುದು ಹರಿಯಧಟನೇನೆಂಬೆ

(ಸಾಳ್ವಭಾ. ೨೧-೪೬) ; ಪಣೆಗಣ್ಣಿನ ದಳ್ಳುರಿಗಳು ನಾಲಗೆಯನ್ನು ಜಾಚಿ ಜಾಚಿ, ಲೋಕವೆಲ್ಲವ ಕಾಮನನ್ನು ಹಾ ! ಅನ್ನುವದರೊಳಗೆ ನುಂಗಿಯೇ ಬಿಟ್ಟುವು (ಕನ್ನಜಾ. ೧೭೫). [ಪಣೆ$_1$+ಕಣ್]

ಪಣೆಗಣ್ಣ, ಹಣೆಗಣ್ಣ (ನಾ). ಹಣೆಯಲ್ಲಿ ಕಣ್ಣುಳ್ಳವನು ; ಮುಕ್ಕಣ್ಣ ; ಧಾಲನೇತ್ರ ; ಶಿವ : "ಪಣೆಗಣ್ಣನೆಂದು ಶಂಕರನೊಳೆ" (ಕಣ್ಣಾಸಿ. ೧೩) ; "ಪೆಜಿಪದಲೆಯಂ ಮಾದೇವಂ . . . ಪಣೆಗಣ್ಣಂ ತಱುಸಂದುವೆಂಯಾಣ್ಮನೆಂದು ತಿಳಿ" (ಶತುತಿ. ೬) ; ಪಣೆಯೊಳು ಪುನನ ನಿಟ್ಟಾಕ್ಷನ ನೋಡುವ ಕ್ಷಣಕೆ ಕರ್ಮವ ಸುಟ್ಟ ರುಹನಾ ಪಣೆಗಣ್ಣ ನೆಂಬರು ಬಿಸಿಗಣ್ಣ ನೆಂಬರು ಗುಣನಾಮಗಳ ನೋಡುವಾಗ (ಧರಚ. ೬೬-೧೬೬) ; ಪಣೆಗಣ್ಣ ಪರಮಗುಣನಿಧಿ ಮುಣಮುಕುಟದ ಮಹಿಮನಮಳಚಿನ್ಮಯನಿರ್ದಂ ಗಣಸಭೆಯೊಳೊರ್ಮೆ ಸುಮನೋಗಣನನ್ನತ ಸಿದ್ಧರಾಮನಘನವಧೀಮಂ (ಪೃಷಿ. ೭-೧೪). **ಹಣೆಗಣ್ಣ** : ಶಿವನಿಗೆ ಹಣೆಯಲ್ಲಿ ಕಣ್ಣಿರುವುದರಿಂದ ಹಣೆಗಣ್ಣನೆಂಬ ಹೆಸರು ಬಂದಿತು (ಮಧ್ವಮ. ೧೪೬). [ಪಣೆಗಣ್+-ಅ$_7$]

ಪಣೆಗಣ್ಣು 'ಪಣೆಗಣ್' ನೋ.

ಪಣೆಗಣ್ಣುರಿ (ನಾ). (ಶಿವನ) ಹಣೆಗಣ್ಣಿನ ಉರಿ,—ಜ್ವಾಲೆ : ಪೊಗೆದುದು ಪತ್ತಿದತ್ತು . . . ಮುಟ್ಟಿತು ಸುಟ್ಟಿತು ತಿಂದು ತೇಗಿದತ್ತಗಿಯದೆ ನಿಂದ ಪೂಗಣೆಯನಂ ಪಣೆಗಣ್ಣುರಿ ಹಂಪೆಯಾಳ್ದನಾ (ಗಿರಿಕ. ೮-೪೭) ; ಭವನ ಪಣೆಗಣ್ಣುರಿಯ ಬೆಳಗಿನಿಂ ತಮಮಿರದೆ ಜವದಿಂದಲೋಡು ತಿರೆ (ಜೆಬಪು. ೪೬-೨೩). [ಪಣೆಗಣ್+ಉರಿ$_2$]

ಪಣೆಗಣ್ಣೆರೆ (ಕ್ರಿ). (ಶಿವನು) ಹಣೆಯ ಕಣ್ಣನ್ನು ತೆರೆ,—ಹಣೆಗಣ್ಣನ್ನು ಬಿಡು : ಸ್ಮರನು ಗುರಿಗೊಂಡೆಚ್ಚ ಕಣೆಯೊಂದರಲಿ ಯೋಗನ ನುಳಿದು . . . ಐದರೊಳು ಪಣೆಗಣ್ಣೆರದು ಕೋಪಾಗ್ನಿಯಲಿ ದಹಿಸಿದನ ಭವನಂಗಜನಾ (ಅನಂರಾ. ೧-೧೯-೧೬). [ಪಣೆಗಣ್+ತೆರೆ$_1$(<ತೆಱೆ$_1$)]

ಪಣೆಗಿಚ್ಚು, ಹಣೆಗಿಚ್ಚು (ನಾ). = ಪಣೆಗಣ್ಣುರಿ : ಬೆಮರ್ ತೋಱುದುದು ಪಣೆಗಿಚ್ಚು ಕಾಱುದುದು ಕಣ್ ನಟಣಮೇಱುದುದು (ಚಬಪು. ೩೧-೪). **ಹಣೆಗಿಚ್ಚು** : ಹರನ ಹಣೆಗಿಚ್ಚೊಡಲುಗೊಂಡಂಕುರಿತವಾಯತೊ . . . ಎನಲಿರದೆ ಬೆಳೆದರು ದೈತ್ಯವಂಶೋದ್ಧರಣರಿಬ್ಬರು ತೀವ್ರತೇಜರುದಗ್ರಭುಜಬಲರು (ಕಿಭಾಗ. ೩-೪-೪). [ಪಣೆ$_1$+ಕಿಚ್ಚು]

ಪಣೆಗೊಳ್ (ಕ್ರಿ). ಹಣೆಯನ್ನು ಆವರಿಸು ; ಹಣೆಗೆ ಮುತ್ತಿಕೊಳ್ಳು : ಸುದತಿಯ ಮುಖಾಬ್ಜ ಮದು[ಧು]ಲೋಭದೆ ಪಣೆಗೊಂಡಿರ್ಪ ಪಜಮೆವಜುಗಳವೆನೆ ನುಣ್ಪೊದವಿದಳಕಾಳಿಗಿಕ್ಕಿದಳದೊರ್ವಳಾ ಚಿನ್ನ ಚಿನ್ನ ಪೂಗಳನಾಗಳ್ (ಶಾಂತೀಶ್ವ. ೪-೨೪೩). [ಪಣೆ$_1$+ಕೊಳ್$_1$]

ಪಣೆಮಣಿ (ಕ್ರಿ). (ನಮಸ್ಕಾರಾರ್ಥವಾಗಿ) ಹಣೆಯನ್ನು ಬಾಗಿಸು; ತಲೆಬಾಗು : ಮುತ್ತೆ ಮೈಥಿಲಿಗೆ ಪಣೆಮಣಿದು ಕೈಮುಗಿದು ಬೀಳ್ಕೊಟ್ಟ ನಂಜನಾನಂದನಂ ಪ್ರತಿವಂದನಂಗೆಯ್ದಂ, ಪೂಜ್ಯೆ ರಘುನಂದನಾನಂದೆಯಂ (ತ್ರೀರಾಮಾ. ೪೩೪-೧೯೧). [ಪಣೆ$_1$+ಮಣಿ$_1$]

ಪಣೆಮಚ್ಚು (ನಾ). ಹಣೆಯ ಮಡಿಕೆ,—ಸುಕ್ಕು (?) : ಕರಗಳನೂರಿ ಭೂಧರಕೆ ಗಾತ್ರವ ತೂಗುತ ಬಾರಿಬಾರಿಯಂಬರವ ನಿರೀಕ್ಷಿಸುತ್ತ ಪಣೆಮಚ್ಚುಗಳಂ ಕುಣಿಸುತ್ತ ವಾಲವಂ ಶಿರದಲಿ ರಿಂಖಣಂಗೊಳಿಸಿ ಕಣ್ಗಳೆತ್ತಿ ನಿಮರ್ಚ ಪರ್ಚಿ ಪಲ್ಗಿರಿದು ಸ್ವಜೀವವಮಾರುತನ ಬಂಧಿಸಿ ಲಂಘಿಸಿದಂ ಸುವೇಗದೋಳ್ (ಹನುಮ. ೨೧). [ಪಣೆ$_1$+<ಮಡಚು$_2$]

ಪಣೆಮುಟ್ಟು (ಕ್ರಿ). ೧. ಹಣೆಯನ್ನು ಸಮಿಾಪಿಸು; ಹಣೆಯವರೆಗೆ ಬರು. ೨. ಮರದ ಕಾಂಡದ ತುದಿಯವರೆಗೆ ಬರು,—ಉಂಟಾಗು. ೧, ೨ : ನೆಜಿಯೆ ಪಣೆಮುಟ್ಟೆ ಕೈವಂದೆಜಗಿದುದಿದು ದೇವ ನಿನಗೆ ಹೃದಯಂ ತಾನೆತ್ತಜಾದುದೆನವೇಡ ಧಾರಿಣಿಯೆಜಿಯಂ ಗೆಜಗುವುದು ಚೋದ್ಯಮೇ ಧರಣೀಜಂ (ಚಂದ್ರಪು. ೬-೪೪).

[ಪಣೆ$_1$+ಮುಟ್ಟು$_1$; ಪಣೆ$_2$+ಮುಟ್ಟು$_1$]

ಪಣೆಯಕ್ಕರ (ನಾ). ಹಣೆಯ ಬರಹ ; ವಿಧಿಲಿಖಿತ ; ಅದೃಷ್ಟ : ಎಜಗಿದರಿಗೆ ಪಣೆಯಕ್ಕರ ನೆಲೆಯಿಾತಗೆಜಗದರಿಗೆ ತಲೆಬರಹ ನೆಜಲೋಪವೆಂದಜ ಬರೆದಂತೆ ಪೊಗರಿಂದ ಮೆಜೆವುದಂತಸಿಪತ್ರವದನ (ಪಧಗಿ. ೬-೫೮); ಮತ್ತ ವರಾ ಬರೆದ ಪಣೆಯಕ್ಕರಗಳವೆ ಮಿಗೆ ನೆರೆದು ಪತ್ತಿದುವಳ್ಕುಮುಲ್ಲದೊಡಿರದವರ ನೊಸಲಕ್ಕರಂಗಳು ಮಾಯುವಾದಪುದೇ (ಸಾಳ್ವಭಾ. ೨-೨೩) ; ಫಣಿಕುಲವನಾಶ್ರಮಿಸಿಕೊಂಡು ಬಹೆನಾ ಮುಹಾ ಮುನಿಯಹುದೆಂದೊಡಜಹರಿಪಿನಾಕಿಗಳ ಹಣೆಯಕ್ಕರಂಗಳಂ ತೊಡೆವೆ ನೊರಸುವೆನಪ್ಪೆ ದಿಕ್ಪಾಲರಾಯುಗಳನು (ಜೈಮಿಭಾ. ೨೪-೨೯).

[ಪಣೆ$_1$+ಅಕ್ಕರ$_2$]

ಪಣೆಯಕ್ಕಿ, ಹಣೆಯಕ್ಕಿ (ನಾ). ೧. ಶವಸಂಸ್ಕಾರದ ಕಾಲದಲ್ಲಿ ಶವದ ತಲೆಯ ಬಳಿ ಇಡುವ ಅಕ್ಕಿ : ಸುಡುಗಾಡಿನೋಳ್ಕಾವಲಿಟ್ಟು ಪಣೆಯಕ್ಕಿಯಂ ಪಡಿಗಳಂ ಮಾಡಿಟ್ಟುಕೊಂಡನಾ ವೀರಬಾಹುಳನಾ ಹರಿಶ್ಚಂದ್ರನಂ (ತುರಂಗ. ೩೨-೨೯). **ಹಣೆಯಕ್ಕಿ** : ೧. ಸುಡುವ ನೆಲದೆಜಿಗೆ ಹಾಗ ಹೆಣದುಡುಗೆಯಂ ತಂದೆನಗೆ ಕೊಡುವುದಾ ಹಣೆ [ಪಾಕಾಂ.ತಲೆ]ಯಕ್ಕಿಯಂ ನಿನ್ನ ಸಂಬಳಕ್ಕೆ ಪದಿಯಾಗಿ ಕೊಂಡುಂಬುದು (ಪಜಕಾ. ೧೧೧-೩೩). ೨. ಶುಭಸಂದರ್ಭಗಳಲ್ಲಿ ಆಶೀರ್ವದಿಸಿ, ತಲೆಯ ಮೇಲೆ ತಳೆಯುವ ಅಕ್ಷತೆ ; ಮಂಗಳಾಕ್ಷತೆ : ಹಣೆಯಕ್ಕಿ ಒಪಗಿ ಬಂದರೆ, ಹಡೆದವರನ್ನೂ ಕೇಳೂದಿಲ್ಲ ಅಂತ ಗಾದಿ (ಮಗಸಂ. ೧).

[ಪಣೆ$_1$+ಅಕ್ಕಿ$_1$]

ಪಣೆಯಿಕ್ಕು, ಹಣೆಯಿಕ್ಕು (ಕ್ರಿ). ೧. ತಲೆಯನ್ನು ಮೇಲು ಮಾಡಿ ಪಾರಿವಾಳ ಮೊದಲಾದ ಪಕ್ಷಿಗಳನ್ನು ಹಾರಿಸು : ಆರವೆಯು ಪರ್ಮರದ ನಟ್ಟಿಗೊಂದಿನಿರ್ದೆಡಗಂ ಮೊಗಸುವ ಪಲತೆಜದ ಪಕ್ಕಿಗಳ ಕೊಡುಗಜಯು ತಿಜುಗಾಳಿಯಂ ನಿಜುಪುಗೆಯನ್ನು ದೇವಕುಲದಾದಲೆಯ ನೆಲೆಯ ಕೋಣತಾಣಕ್ಕೆ ಪಾಜುವ ಪಾರಿವಂಗಳಂ ಪಾಜಿ ಪಣೆಯಿಕ್ಕೆಯುಂ ಪೊಂದಾವರೆಯ ರಜದಿಂ ಪುದಿದ ಪೂಗೊಳದ ತಡಿವಿಡಿದು ಸುಟುಯುತ್ತಿರ್ಪಂತೆಯ ತುಪ್ಪುಟಂಚೆಯಂ ಪಳಂಚಲೆದುಂ . . . ಅಪರ ಸಾಂಧ್ಯಗಂಧವಹನೆಳಸೆ (ಸುಲ್ಲಪು. ೭-೪). **ಹಣೆಯಿಕ್ಕು** : ೨. ಕಾಣಿಸಿಕೊಳ್ಳು ; ತಲೆಹಾಕು; ನಡುವೆ ಪ್ರವೇಶಿಸು: ಗೋವರ್ಧನನ ವುನಸ್ಸಿನಲ್ಲಿಯೂ ವಿಪ್ಪಲತೆಯು ನಡುವನಡುವೆ ಈಸತ್ ಆನಂದವು ಹಣೆಯಿಕ್ಕುತ್ತಿತ್ತು (ಎರಸೆ. ೬೬); ತಾರುಣ್ಯಸಹಜವಾದ ಶೃಂಗಾರವು ಎಲ್ಲ ಕತೆಗಳಲ್ಲೂ ಹಣೆಯಿಕ್ಕುವುದು (ಭೂವಿಜಾತಾ. IV ಮುನ್ನುಡಿ) ; ಪುನರುಕ್ತಿ ಶೈಥಿಲ್ಯಗಳೂ ಅಲ್ಲಲ್ಲಿ ಹಣೆಯಿಕ್ಕಿವೆ (ಕಸಾಚ. ೨೮೫). [ಪಣೆ$_1$+ಇಕ್ಕು$_1$]

ಪಣೆಯಿಡು (ಕ್ರಿ). ಹಣೆಯನ್ನು ಇಡು,–ಚಾಚು ; ನಮಸ್ಕರಿಸು : ಇದು ದೇವರ ಗುಡಿ ; ಪಣೆಯಿಡು. ಪೊಡೆವಡು, ಪಾವನವಪ್ಪುದು ನಿನ್ನ ಮುಡಿ (ಅಸಾಕೇ. ೫೦-೫). [ಪಣೆ$_1$+ಇಡು$_1$]

ಪಣ್ಣಾಯ್$_1$ 'ಪಣ್ಣಾಯ್' ನೋ.

ಪಣ್ಣಾಯ್$_2$ 'ಪಣ್$_3$' ಪರಾ.

ಪಣ್ಕೆ (ನಾ). ಮೂಡುವಿಕೆ ; ಸಿದ್ಧಪಡಿಸುವಿಕೆ : ಕಾಣ್ಕೆ, ಪೂಣ್ಕೆ, ಮಾಣ್ಕೆ, ಉಣ್ಕೆ, ಪಣ್ಕೆ (ಶಬ್ದಾನು. ೫೫೭ ಪ್ರಯೋ).

[ಪಣ್$_1$(<ಪಣ್ಣು$_1$)+-ಕೆ]

ಪಣ್ಣಾಯ್, ಪಣ್ಣಾಯ್$_1$, ಹಣ್ಣುಗಾಯಿ (ನಾ). ೧. ಹಣ್ಣಾಗುತ್ತಿರುವ ಕಾಯಿ; ಹಣ್ಣು ನೆಟ್ಟಿರುವ ಕಾಯಿ;ಪಕ್ವವಾಗುತ್ತಿರುವ ಕಾಯಿ ;ದೋರೆಗಾಯಿ: ಪಣ್ಣಾಯ ತಳ್ತ ತುಜುಗಲ ಬಿಣ್ಗೊನೆಯಿಂ ತೂಗಿ ತೊನೆವ ಳೌಂಗಂ ತನ್ನತ್ತಣ್ಗೆ ಬರೆತೆಗೆವ ತೆಜದಿಂ ಕಣ್ಗೊಳಿಸಿದುದೆಳಸಿ ನಾಗಲತೆ ದಾಂಗುಡಿಯಿಂ (ಕಾವ್ಯಾಪ. ೨೧೪) ; ಪಣ್ಣಾಯ ತೀವಿದ

ಬಾಟೆಯ ಬಿಣ್ಗೊನೆ ನಿಜಭರದಿನಿರದೆ ಬಾಟ್ವೀಲಿಯ ಪಿಂದಣ್ಗಾಗಿ ಜೋಲ್ದು ಪಥಿಕರ ಕಣ್ಗೊಳ್ಪಂ ಮನಕೆ ಬಯಕೆಯಂ ಪುಟ್ಟಿಸುಗುಂ (ಚಂದ್ರಪ್ರ. ೧-೧೦೭); ತಾಯೊಡನುಂಬ ತಂದೆಯೊಳು ಭುಂಜಿಸುವ ಕಜ್ಜಾಯ ಪಣ್ಗಾಯ್ಗಳ ಮೆಲುವ ಕಾಯಕಾಂತಿಯ ಪಸರಿಸಿ ಬಳೆದನು ಕಂತುರಾಯನ ಸತ್ಕುಮಾರಕನು (ಮೋಹತ.೧೬-೭೩). **ಪಣ್ಕಾಯ್**$_1$: ೧. ಅಲ್ಲಿ ಹುಲಿಯುವನೊಂದು ಎತ್ತ ಹಿಡಿದುಂಡಿತ್ತು ಒಲ್ಲದಿಹ ಪಣ್ಕಾಯ್ಗೆ ಕಿನಿಸಾಂತುದನಲು (ಕಾಲೂರ.೮೦-೧೪೯). **ಹಣ್ಣುಗಾಯಿ**: ೧. ಸೀಬೆಗಿಡದಲ್ಲಿ ತುಂಬ ಹಣ್ಣುಗಾಯಿಗಳಿವೆ (ರೂಢಿ). ೨. ಹಣ್ಣಾದ ತೆಂಗಿನಕಾಯಿ; ಬಲಿತ ತೆಂಗಿನಕಾಯಿ: ಹಣ್ಣುಗಾಯಿ ಕೊಬ್ಬರಿ ಯಾಗಲು ಒಂಬತ್ತು ತಿಂಗಳು ಬೇಕು (ರೂಢಿ). ೩. ಹಣ್ಣಾದ ತರಕಾರಿ: (ಪ).

ಹಣ್ಣುಗಾಯಿ ನೀರುಗಾಯಿ ಮಾಡು—ಹೊಡೆದು ಜರ್ಝರಿತ ಗೊಳಿಸು,—ತುಂಬ ಗಾಸಿಗೊಳಿಸು: ಭೀಮಾರ್ಜುನರು ಬಿಡದೆ ಅವನನ್ನು ಹಿಡಿದು ಹಣ್ಣುಗಾಯಿ ನೀರುಗಾಯಿ ಮಾಡಿ ಅವಮಾನ ಗೊಳಿಸಿ . . . ಬಿಟ್ಟರು (ವಚಭಾ. ೧೬೫); ಜೀವವನ್ನು ಹಣ್ಣುಗಾಯಿ ನೀರುಗಾಯಿ ಮಾಡಿ, ಒಮ್ಮೆ ಅಧನ್ನು ನೀಗಿ ನಿರಂಬಳವಾಗಬೇಕೆನ್ನುವ ಮಟ್ಟಿಗೂ ಮಜಲು ಹೊಡೆದವು (ದೀಸಹ. II, ೧೪೪); ಇನ್ನು ಮಾತಾಡಿ ದರೆ ಹಣ್ಣುಗಾಯಿ ನೀರುಗಾಯಿ ಮಾಡಿ ಬೀದಿಗೆ ದಬ್ಬಿಸಿಬಿಡುತ್ತೇನೆ (ಅಷಾಭೂ. ೫೭). [ಪಣ್$_2$+ಕಾಯ್$_4$]

ಪಣ್ಣುಡಿ (ನಾ). ಬಳ್ಳಿಯ ಕಾಂತಿಯುಕ್ತವಾದ ಕುಡಿ,—ಹೊಳೆ ಯುವ ತುದಿ,—ಚಿಗುರು: ಅಡಿ ಕೆಂದಳಿರಂ ತನುಲತೆಯಡಕೆಯ ಸಸಿಯಂ ತವಾಳದಳದೊಳ್ಪಪ್ಪಂ ಮುಡಿಯಧರಂ ಪವಳಂ[ಳದ] ಪಣ್ಣುಡಿ [ಪಾಶಾಂ. ದಪ್ಪುಟಿ, ಪಡ್ಪುಟಿ, ಪಣ್ಣುಡಿ, ಪಣ್ಣುಡೆ]ಯಂ ಗೆಲೆ ಖಚರ ರಾಜನಂದನೆಯಾಗಳ್ ಜಿನಪೂಜೆಯಂ ಮಾಡಲ್ ಸಿದ್ಧಕೂಟಕ್ಕೆ ಬಂದು (ಪುಣ್ಯಾಸ್ರ. ೧-೭೭). [ಪಣ್$_3$+ಕುಡಿ$_2$]

ಪಣ್ಗುಳಿ (ನಾ). ಹಣ್ಣನ್ನು ತೆಗೆದುಕೊಳ್ಳುವವನು: ಸಾಲಂಗುಳಿ, ಆಟಂಗುಳಿ, ಪಣಂಗುಳಿ, ಪಣ್ಗುಳಿ, ಕಾಯ್ಗುಳಿ (ಶಬ್ದಾನು. ೪೧೪ ಪ್ರಯೋ). [ಪಣ್$_3$+-ಕುಳಿ$_3$]

ಪಣ್ಗೆಂಡ, ಹಣ್ಗೆಂಡ(ನಾ). ನಿಗಿನಿಗಿ ಕೆಂಡ; ಪ್ರಜ್ವಲಿಸುವ ಕೆಂಡ; ಪೂರ್ತಿ ಕೆಂಪಾಗಿರುವ ಕೆಂಡ: ಪಣ್ಗೆಂಡದಚ್ಚಿಯಂ ತಾಳ್ದ ಪಾವಿನ ಕೊರ್ಬ ನುಣ್ಗೊರಲ್ಮೊಡೆದ ಗೋಡೆಯಡರ್ದ ಪನ್ನೆರಳ್ ಕಣ್ಗಾಸೆ ಪೆತ್ತೆಸವ ತಲೆಸರಂದಳೆದೆಸೆವ ಹರುಸದಿಂ ಪೊರೆಗೆ ತನ್ನ (ನಂದಿಮಾ. ೨೧-೫೨). **ಹಣ್ಗೆಂಡ**: ಹಣ್ಗೆಂಡದ ಮೇಲೆ ರೊಟ್ಟಿ ಸುಟ್ಟರೆ ತಿನ್ನಲು ರುಚಿಯಾಗಿರು ತ್ತದೆ (ರೂಢಿ). [ಪಣ್$_2$+ಕೆಂಡ]

ಪಣ್ಗೊಂಚಲ್ (ನಾ). ಹಣ್ಣಿನ ಗೊಂಚಲು; ಫಲಗುಚ್ಛ: ಆ ನಂದನವನಂ . . . ಕಣ್ಗೊಂಡು ಮೆಜ್ಜೆವ ತೋರಮಪ್ಪ ಪಣ್ಗೊಂಚ ಲಿಂದಂಚರಮಾದ ದ್ರಾಕ್ಷಾನುಂಡಪಂಗಳಿಂ . . . ಅತ್ಯಂತ ರಮಣೀಯ ಮಾಗಿರ್ದುದು (ಬಾಧಪು. ೧-೧೦೯ ವ). [ಪಣ್$_3$+ಗೊಂಚಲ್]

ಪಣ್ಗೊನೆ 'ಪಣ್ಗೊಲೆ' ನೋ.

ಪಣ್ಗೊಲೆ, ಪಣ್ಗೊನೆ, ಹಣ್ಗೊನೆ (ನಾ). = ಪಣ್ಗೊಂಚಲ್: ಕಂಸಿ ನೊಳ್ ನೆಜ್ಜೆದ ರಸಂಗಳಂ ತಳೆದ ಪಣ್ಗೊಲೆಯಂ (ಎಇ.XIII, ೩೩೧-೨೯; 929); ಅಲರ್ದಂಭೋರುಹಷಂಡಮುಳ್ಳಲರ್ದ ಚೆನ್ನೆಯ್ದಿಲ್ಗೊಳಂ ತೂಗಿ ಪಣ್ಗೊಲೆಯಿಂ ಬಳ್ಕುವ ಕೌಂಗು . . . ಎಸೆಗುಂ ವಿದ್ಯಾಧರೋದ್ಯಾನ ದೊಳ್ (ಆದಿಪು. ೧-೬೭); ಅಲರ್ದ ಕಮಲವನಷಂಡಂಗಳಿನುಳ್ಳಲರ್ದ ಕುಮುದವನರಾಜಿಗಳಿಂ ಪಣ್ಗೊ[ಲೆ] [ಪಾಶಾಂ. ನೆ]ಯಿಂ ಬಳುಕುವ ಕೌಂಗುಗಳಿಂ . . . ಆ ನಂದನಮಾನಂದಮನೊದವಿಪುದು (ಕುಮುರಾ. ೫೬ಕಾಸಂಧಿ. ೬೭). **ಪಣ್ಗೊನೆ**: ಫಲಭಾರದಿನುರ್ವಿಗಗುರ್ವು ಪರ್ವೆ ತಳ್ತೆಱಗಿದ ಬಾಟೆಪಣ್ಗೊನೆಗಳಿಂ ಗೊನೆಗೊಂಡ ಕವುಂಗುಕಾಯ್ಗಳಿಂ ತುಜುಗಿದ ತೆಂಗು ಶೋಭಿಪುದನಂಗನ ಮಂಗಳಗೇಹಮೆಂಬಿನಂ (ಸುಕುಮಾ. ೯-೪೭); ಪಸುರೇಱಿದ ಕಾಯ್ಗಳವೆಲ್ಲಿಯಲ್ಲಿ ಪಣ್ಗೊನೆಗಳವೆಲ್ಲಿಯಲ್ಲಿಯೆನೆ ಸೋಲಿಸುಗುಂ ಬಿಡದಾವನಂ ಬನಂ (ಕಬ್ಬಿಕಾ. ೩೨); ಚೆನ್ನ ಪಣ್ಗೊನೆಯ ಭರದಿಂ ಸನ್ನತಮಾಗಿರ್ದು ಬಾಟೆಸಸಿಯೊಳ್ ಮಿಳಿರ್ಗುಂ ತನ್ನ ಶಿಶುವಿಂಗೆ ಮೊಲೆಯಂ ಮನ್ನಿಸಿ ಬಾಗಿರ್ದು ಕೊಡುವ ಬಾಲೆಯ ತೆಱದಿಂ (ಬಾಧಪು. ೧-೧೦೬). **ಹಣ್ಗೊನೆ**: ತೆಂಗುಗಳ ಫಲಭರದಲೊಪ್ಪುವ ಹಣ್ಗೊನೆಯ ಕದಳಿಗಳ . . . ಕಂಗೊಳಿಪ ಬಹುಫಲಕುಸುಮಗಂಧಂಗಳಿಗೆ ಬಳಿ ಸಲುವ ಪಾಡುವ ಭೃಂಗನಿಕರದಲೆಸೆವ ಗಿರಿಯನು ಕಂಡುದಮರಗಣ (ಸಿಭಾಗ. ೪-೩೬-೧೪). [ಪಣ್$_3$+ಗೊಲೆ$_2$]

ಪಣ್ಗೊಳ್, ಹಣ್ಗೊಳ್ (ಕ್ರಿ). ೧. (ಆಲಂ) ಸಫಲವಾಗು; ಫಲಪ್ರದವಾಗು: ಮೊದಲ ಬೇಟದ ಮೊಳಕೆ ಪಣ್ಗೊಂಡ ಕಾನನಂ . . . ಮೊದಲ ಮಿಲನದ ಮತ್ತೆ ವಿರಹದ ಶಿವಾಲಯಂ! (ಚತ್ರಾಂಗ. ೬೨-೧೬೯). 'ಪಣ್ಗೊಳಿಸು' ಪರಾ. **ಹಣ್ಗೊಳ್**: ೨. ಹಣ್ಣಾಗು; ಮಾಗು: 'ಹಣ್ಗೊಳಿಸು' ಪರಾ. [ಪಣ್$_3$+ಕೊಳ್$_1$]

ಪಣ್ಗೊಳಿಸು, ಹಣ್ಗೊಳಿಸು, ಹಣ್ಣುಗೊಳಿಸು (ಕ್ರಿ). ೧. ಸಫಲಗೊಳಿಸು; ಸಾರ್ಥಕಗೊಳಿಸು: ನುಣ್ಗದಸಿನೊಳು ಪೊನ್ನೋಲೆ ಡಾಳಿಸೆ ನಿಡುಗಣ್ಗದಗಿಸಿ ಕಾತರಿಸೆ ಬಿಣ್ಗೊಂಡ ಮೊಲೆ ನಸುಬಿದುರೆ ನೋಟ್ಪುನಿಯಂಗೆ ಪಣ್ಗೊಳಿಸುವುದು ಭಾಗ್ಯವನು (ಚಕವಿ. ೬ ಸಾಂಗತ್ಯ ೬೪). **ಹಣ್ಗೊಳಿಸು**: ೨. ಹಣ್ಣುಮಾಡು; ಪಕ್ವಗೊಳಿಸು; ಮಾಗಿಸು: ಕಾಡ ಅತ್ತಿ ಹಣ್ಗೊಳಿಸುವಂಥ ತಂಗಾಳಿ ಇದಿರು ಬಂದು ದೇವಗಿರಿಯ ಪೊರಿಸುವದಣ್, 'ಬಿಜಮಾಡಿ ತಾವು' ಎಂದು. (ಮೋಘಮಾ. ೧೧-೪೨). **ಹಣ್ಣುಗೊಳಿಸು**: ೩. (ಆಲಂ) ನಿಸ್ಸತ್ವಗೊಳಿಸು; ನಿರ್ವಿಣ್ಣಗೊಳಿಸು: ರಾಘಪ್ಪನ ದೆವ್ವವು ಬಡೆದುಕೊಂಡೀತೆಂಬ ಭೀತಿ ಕೆಲ ದಿನ ಒಳಗಿಂದ ಅವಳನ್ನು ಹಣ್ಣುಗೊಳಿಸಿತು (ಗಂಮಾಯಿ. ೨೯೬).

[ಪಣ್ಗೊಳ್+-ಇಸು$_3$]

ಪಣ್ಣು (ಕ್ರಿ). ಹೊಂದಿಸು; ಜೋಡಿಸು; ಅಳವಡಿಸು; ಅಣಿ ಗೊಳಿಸು: ನೀನಾಗಳುಂ ತುಷ್ಟಿಯಿಂ ವಿಶ್ವಮಂ ಪಣ್ಣುವಯ್ . . . ಹೇ ಕವಿ (ಸಂಸಪ. ೧೩-೧೪); ಬಗೆಯ ಅನ್ತರ್ಕದಲ್ಲಿ ನೆಲೆಗೊಳಿಸಿ ಎಡೆ ಗಿರಿದು ಪರಿಪೋಷಿಸಿಕೊಳ್ಳುತ್ತಿರುವ, ಕಾರ್ಯರೂಪಕ್ಕೆ ಪಣ್ಣದಿರಲಾರದ, ಆ ಮೂಲತಂತ್ರದಾಳೋಚನವನ್ನು ಕಿರುವರಯದ ಅಕ್ಷಮತೆಯ ಕಾಯ್ವು ನಿನ್ನ ನಾಲಗೆಗೆ ಗಳ್ಳನಿಳಿಹಿ, ನಿನ್ನನ್ನು ತೆರೆಗಿಡಿಸಿ ದ್ರೋಹಿಮಾಡಿ ಕೆಡಹಿ ಕೊಂಡು ತೊತ್ತಳಗುಣಿಯಿತು (ಬೆಟ್ಟಅ. ೧೬೬-೩).

[ಪಣ್$_1$(<ಪಣ್ಣು$_1$)+-ಚು$_1$]

ಪಣ್ಣಡಕೆ, ಹಣ್ಣಡಕೆ, ಹಣ್ಣಡಿಕೆ (ನಾ). ಹಣ್ಣಾದ ಅಡಕೆ; ಬಲಿತ ಕ್ರಮುಕ: ಕೋಕಿಳಧ್ವನಿ ಸರಮಾದ ಪಣ್ಣಡಕೆ ಬಾಯ್ದೆಱೆ! ಯಾದೆವನಳ್ಳಿಯೇಳೆ ನೂತನತನುವಾದ . . . ನಂದನವನಲಕ್ಷ್ಮಿ ಕಣ್ಗೆಸೆದು ತನ್ನನೆ ನೋಡಿಸಿದಳ್ ತದಾರ್ಯರಿಂ (ಶಾಂತಿಪು. ೩-೧೨); ಅಲ್ಲಿನ ಗಡುಗಳು ಪಿಂಗಾರ . . . ಪಣ್ಣಡಕೆ, ಗೋಟಡಕೆ, ಕರಿಗೋಟುಗಳನ್ನು ಉಳ್ಳವುಗಳಾಗಿದ್ದುವು (ಭಾಷಾಶಾ.೨೫೬). **ಹಣ್ಣಡಕೆ**: ಕಾರೆಲೆ ಹಣ್ಣಡಕೆ ಬಾಯೊಳಗಿಟ್ಟು ನಾಜುವ ಮೈಯಿಗೆ ಮಲಿನದ ಸೀರೆಯನುಟ್ಟು ತಿನಲವಿಂದ ವಿಟರನು ಸಾರುತಿರ್ದರು ದಾಸಿಯರು(ಜೀಸಂಸಾಂ.೧೯-೧೫). **ಹಣ್ಣಡಿಕೆ**: ಸೂಳೆಸೂತಕನಾಗಿ ಪನ್ನೀರ ಮಡಿಯುಟ್ಟು ಹಣ್ಣಡಿಕೆಗೊನೆಯನೆ ಹಿಡಕೊಂಡು ಚಾಮುಂಡಿ ಸೇರು ಪಾವಡಕೆ ಬಿಳಿಎಲೆ ತಕ್ಕೊಂಡು ಭೋಗದ ನಂಜಯ್ಯ ಬರ ಹೇಳಿ (ನಾಪದ. ೧೦೧). [ಪಣ್$_3$+ಅಡಕೆ$_1$]

ಪಣ್ಣನೆ (ಅ). ೧. ಒಂದು ಅನುಕರಣಾವ್ಯಯ; ಛಂಗನೆ; ತಟ್ಟನೆ: ಹೋಮದ ಕುಂಡದಿಂ ಕಡೆಸಿಡಿಲ್ದು ಪೊದ್ದಿರೆ ಕಂಡು ಕೆಂಡಮಂ ಕಾಮಿಸಿ ಗೇರ ಪಣ್ಣನುತೆ ಪಣ್ಣನೆ ಪೊರ್ದಿ ತುಡುಂಕೆ ಕೈ ಸುಡಲ್ ಭೂಮಿಗೆ ತರ್ಗಿ ಕುರ್ಗಿ . . . ಮುನಿಪುತ್ರರಂ ನಗಿಸಿ ಹಜ್ಜೆನುತೇಡಿಸಿ ತೊಂದು ಕೋಡಗಂ (ರಾಜಶೇ. ೧-೧೨೮); ಪಣ್ಣನೆ ನೆಗೆವ ಕುದುರೆಗಳ ಪಣ್ಣಿಸಿ ಪೋಟಾಯ್ತರೇಱಿ ಮೆಱೆಯುವರೊಟ್ಟಾಂ(ಮೈಸೂಮಂ.೫-೮೨). ೨. ಮೆಲ್ಲನೆ; ಮಂದವಾಗಿ; ನಿಧಾನವಾಗಿ: "ಪಣ್ಣನೆಯೆಂದು [ಪಾಠಾಂ. ಪಣ್ಣಮೆಂದು]ಮೆಲ್ಲನೆ" (ಕಶಸಾ. ೭೦-೫೯೮); ಪಣ್ಣನೆ ತೊಟಲ್ದು ತೀಡುವ ತಣ್ಣೆಲರೊಳೆಲರ್ಜೆ ವನಚರವ್ರಜಮದಱೊಳ್ ತಣ್ಣನೆ ತಣಿದಿರೆ ಬನದೊಳ್ ಪಣ್ಣನೆ ತಿನುತಿರ್ಪುವೆಳಸಿ ತರುಚರಕುಳಮುಂ (ಕಾವ್ಯಾವ. ೨೨೨); ತೆಂಕಣ ಗಾಳಿ ಬೀಸುತಿರೆ ಪಣ್ಣಲೆ ಪಣ್ಣನೆ ಬೀಟೆ (ಜಗವಿ. ೧೪-೨೨); ಕಪ್ಪುರಗಂಪನೆಣ್ದೆಸೆಗೆ ಸಾರಿಡೆ ಪಣ್ಣನೆ ಸುಯ್ಯಲರ್ . . . ಪಾಡಿದರ್ ನಲಿದು ಗಾಯಿನಿಯರ್ ನವಗೀತಜಾಳಮಂ (ಉದ್ಭಟ. ೩-೨); ಬೀಸಿದುದು ತಣ್ಣನೆ ಪಣ್ಣನೆ ಪಶ್ಚಿಮಾನಿಳಂ (ಮಹಾನೇ. ೭-೪೯); ಪಣ್ಣನೆ (ಪೊ)ಯ್ದನುವಾಸಿಸಿದೆಣ್ಣೆ ಮಹಾದಿವ್ಯಮಲ್ತೆ ವಾತಾಪಹರಂ (ಅಶ್ವಶಾ. ೧೧-೬೨). ೩. ಚೆನ್ನಾಗಿ; ಹಸನಾಗಿ: ಬರ್ಕೆ ನಿನ್ನ ಪಿರಿಯಣ್ಣನೆ ಪಣ್ಣನೆ ನೋಟ್ಟಮಾತಕನೊಡ್ಡಟಾಯದ ಗಂಡವಾತಂ (ಸಂಪಭಾ. ೩-೧೩); ಇಂದಿದೇಂ ಮಗನೆ ಪ[ಪಾಠಾಂ. ನು]ಣ್ಣನೆ ನುಣ್ಮೊಗದಲ್ಲಿ ನಿಮಾಸೆಗಳ್ಮೂಡದ ಮುನ್ನ ನಿನ್ನ ಪೆಗಲೊಳ್ ಪೊಸ ಸೂಲಮಿದೆಂತು ಮೂಡಿತೋ (ಅರ್ಧನೇ. ೫-೩೫). ೪. ಶೀಘ್ರವಾಗಿ; ಬೇಗನೆ.

ಪಣ್ಣಪಣ್ಣನೆ (ದ್ವಿರುಕ್ತಿ): ೧. ಮೆಲ್ಲಮೆಲ್ಲನೆ; ನಿಧಾನವಾಗಿ: ಗಿಳಿವೆಣ್ಣ ಕಾಲಂ ಪಿಡಿದು ಪಣ್ಣಪಣ್ಣನೆ ಪೊರ್ದಿ ಪಣ್ಣಂ ಬಾಯ್ವಾಯೊಳ್ ಕುಡುವ ನೆವದಿಂದಂ ಬಿಡಿಸಿ ಚುಂಬಿಸುವ ಕೀರಕಾಮುಕನುಮಂ(ಲೀಲಾವ. ೧೧-೫೫ ವ). ೨. ಚೆನ್ನಾಗಿ; ಹಸನಾಗಿ: ಪಣ್ಣಪಣ್ಣನೆ ತುಪ್ಪದೊಳ್ಪುರಿದಚ್ಚಗಂಪಮರಲ್ . . . ಕ್ಷುಣ್ಣಮಾಂಸನಿಕಾಯವೊಪ್ಪಿದುದಾ ಸುಚಕ್ರದೊಳ್ (ಉದ್ಭಟ. ೫-೬೬). ೩. ಶೀಘ್ರವಾಗಿ: ಅಂತೆರಡುಂ ಪಡೆಗಳುಂ ಪಣ್ಣಪಣ್ಣನೆ ಪಣ್ಣ ಕಾಳೆಗಕ್ಕೆ ನಡೆಯಲೊಡರಿಸಿದಾಗಳ್ (ಸಂಪಭಾ. ೧೦-೫೦ ವ). [ಪಣ್$_0$+-ಅನೆ$_1$]

ಪಣ್ಣಿಕ(ನಾ).೧. ಸಜ್ಜುಗೊಳಿಸುವಿಕೆ; ಅಣಿಮಾಡುವಿಕೆ: "ಪಣ್ಣಿಕಮೆನಲ್ ಸಂವರಣೆ [ಪಾಠಾಂ. ಕೃತಂ, ತಿಲಂ]" (ಕಬ್ಬಿಕೃ. ೬೨); "ಪಣ್ಣಿಕಮೆನಲ್ ಸಂವರಣೆ" (ಶಬ್ದಮಂ. ೪೩). ೨. ಹಣೆಯಲ್ಲಿಟ್ಟುಕೊಳ್ಳುವ ಅಲಂಕಾರದ ಬೊಟ್ಟು; ತಿಲಕ: "ಪಣ್ಣಿಕಮೆಂದು ತಿಲಕಂ [ಪಾಠಾಂ. ತಿಲಂ]" (ಕಶಸಾ. ೭೦-೫೮೮); "ಸಲೆ ಪಣ್ಣಿಕ ತಿಲಕ ಮಕ್ಕು [ಪಾಠಾಂ. ತಿಲಮದಕ್ಕು] ಸತ್ಯವಿವರಂ" (ಕವಿಕಂ. ೨೩೯); ನಿಟ್ಟುಸುತ ಕನ್ನಡಿಯ ನೊಸಲ ನೇವರಿಸುತ್ತ ನಟ್ಟನಡುವಿನೊಳೊಂದು ಪಣ್ಣಿಕವನಿಟ್ಟು ಪಟ್ಟನಿಂ ತೊಟ್ಟು ತೊಡವಂ ಕಮ್ಮರೆಯನಿಟ್ಟು ಒಟ್ಟನಿಂ ಪೆಣ್ಗಳಣಿಯಾಯ್ತು (ಕಾಲೂರ. ೧೫೦-೩೨೮).

[<ಪಣ್ಣು$_1$./ತೆಲು. ಪನ್ನಿಕ]

ಪಣ್ಣಿಕೆ (ನಾ). ಸಿದ್ಧತೆ; ಸಜ್ಜು; ಅಣಿ: ಪಿಣ್ಣಾಕಪದೇವನಾಗಿರ್ದುಗಾಣವ ಹೊಡದು ಕಣ್ಣ ಮೂವರಿಗಿತ್ತು ಲಂಕಾಪುರಿಗೆ ನಡದು ಮಣ್ಣ ಪುತ್ಥಳಿಗೆ ಹರಣವ ಕೊಟ್ಟು ವೈವಾಹಪಣ್ಣಿಕೆಯೊಳಿಸೆದು ಜವದಿ (ಲಿಂಗಪು. ೨೬-೩). 'ಪಣ್ಕೆ' ಪರಾ. [ಪಣ್ಣು$_1$+-ಇಕೆ]

ಪಣ್ಣಿಗ (ನಾ). ಹಣ್ಣು ಮಾರುವವನು; ಹಣ್ಣಿನ ವ್ಯಾಪಾರಿ: ದವಸಿಗಂ, ಪೂಸಿಗಂ, ಕಾಯಿಗಂ, ಪಣ್ಣಿಗಂ (ಶಬ್ದಾನು. ೪೦೫ ಪ್ರಯೋ).

[ಪಣ್ಣು$_2$(<ಪಣ್$_3$)+-ಇಗ]

ಪಣ್ಣಿಗೆ 'ಪಣ್ಣುಗೆ' ನೋ.

ಪಣ್ಣಿಗೆವಿಡಿ (ನಾ). ಅಲಂಕರಿಸಿದ ಹೆಣ್ಣಾನೆ; ಸಿಂಗರಿಸಿದ ಕರಿಣಿ: ಮತ್ತೊರ್ವಳ್ ಕೆಂದಳರ್ವೆಱೆಂಬ ನವಮಾಕಂದದಿನೆಳಗೊಂಬು ನೆಲಕೆ ಪಳಭರದಿಂ ಜೋಲ್ವಂದದಿನಿಟಾದಳ್ ಕುಚಭರದಿಂದಂ ನಡು ಬಳ್ಕೆ ಪೊನ್ನ ಪಣ್ಣಿ[ಪಾಠಾಂ. ಣ್ಣು]ಗೆವಿಡಿಯಂ (ಜಗವಿ. ೧೪-೫೫).

[ಪಣ್ಣಿಗೆ(<ಪಣ್ಣುಗೆ)+ವಿಡಿ$_3$]

ಪಣ್ಣಿಸು$_1$, ಹಣ್ಣಿಸು$_1$ (ಕ್ರಿ). ೧. ಸಿದ್ಧಗೊಳಿಸು; ಅಣಿಗೊಳಿಸು; ಸಜ್ಜುಮಾಡು: ಪ್ರಳಯಶಿಖಿಯ ದಳ್ಳುರಿಯ ಬಳ್ಳಿಯಂತೆ ಮಿಳ್ಳಿಸುವ ಮಸಕದುರಿಯೆಣ್ಣೆಯಂ ಪಣ್ಣಿಸಿಯುಂ (ಪುಷ್ಪಪು. ೭-೬೯ ವ); ಪಣ್ಣನೆ ನೆಗೆವ ಕುದುರೆಗಳ ಪಣ್ಣಿಸಿ ಪೋಟಾಯ್ತರೇಱಿ ಮೆಱೆಯುವರೊಟ್ಟಾಂ (ಮೈಸೂಮಂ. ೫-೮೨). **ಹಣ್ಣಿಸು$_1$**: ೨. ಓದಗಿಸು; ದೊರಕಿಸು; ಉಂಟುಮಾಡು; ಲಭ್ಯಗೊಳಿಸು: ಮೊಲೆಹಾಲಿನೊಡನೆ ಸರ್ವವನು ಹಣ್ಣಿಸಿದಂಥ ದೇವಸ್ವರೂಪ ತಾಯೇ! (ಕೃಷ್ಣಾಕು.೭-೧೬). ೩. ರಚಿಸು; ನಿರ್ಮಿಸು: ಹೆಣ್ಣನ ಹೊನ್ನಿನ ಮಣ್ಣನ ಬಲೆಯನ್ನು ಹಣ್ಣಿಸಿ ಜಗವನದ ಜೊಳು ಹಿಡಿದ ಮುಕ್ಕಣ್ಣನ ನೋಡ (ಸರ್ವಜ್ಞ. ೨೦೮). ೪. ಹೊಂದಿಸು; ಜೋಡಿಸು; ಅಳವಡಿಸು: ಮುನ್ನ ಯೋಗವ ನಡರಿ ದಿಟ್ಟಯ ಹಣ್ಣಿಸುತೆ ನಾಸಾಗ್ರಕಂ ವಿತ್ತನ್ನೆ ತನ್ನುನಿಪನ ನಿರೀಕ್ಷಿಸದಲ್ಲಿ ತಪಸಿದಳು (ಕ.ವೇಮ. ೧೯-೯). ೫. ಅಲಂಕಾರಗೊಳಿಸು; ಸಿಂಗರಿಸು (?): ಬಯಲ ಬಣ್ಣಿಸಿ ಮುಗಿಲ ಹಣ್ಣಿಸುವ ಈ ಕೊರಡು ಗಾಲಿಯಾಗಲು ಹೊರಟು ಬಂತು ತೇರು (ನೆಲಮು. ೨೨-೬).

[ಪಣ್ಣು$_1$+-ಇಸು$_3$]

ಪಣ್ಣಿಸು$_2$, ಹಣ್ಣಿಸು$_2$ (ಕ್ರಿ). ೧. ಹಣ್ಣಾಗುವಂತೆ ಮಾಡು; ಪಕ್ವ ಫಲವನ್ನಾಗಿ ಮಾಡು: ಚಿಗುರಿಸಿ ಹೂವಿಸಿ ಕಾಯಿಸಿ ಪಣ್ಣಿಸಿ ಬಣ್ಣಿಸುವೊಲು ಜೀವವಲ್ಲಕಿಯಾ ಬಲ್ಲವ ಬಲ್ಲನು ವಿಕತಾನದ ನಾದ ಜೀವನದುನ್ಮಾದ ಅನುಭವಿಯಾ (ಸಖೀಗೀ.೨೮-೫೧೭). **ಹಣ್ಣಿಸು$_2$**: ೧. ಮಿಡಿಗಾಯನೊತ್ತಿಟ್ಟು ಹಿಸುಕಿ ಹಣ್ಣಿಸಬಹುದೆ? (ಭಾವಜೀ. ೨೯-೫೬೯). ೨. ಫಲಿಸು; ಸಫಲವಾಗು; ಈಡೇರು: ಆ ತಾಯಿಯ ಕರುಣೆ ಇದ್ದಮಟ್ಟಿಗೆ ಆ ಆಸೆ ಹಣ್ಣಿಸೀತು (ಸೂರ್ಯಪಾ.೪ ಸ್ಮರಣೆ). ೩. ಮಾಗಿಸು; ಮೃದುವಾಗಿಸು: ಹೆಣ್ಣನೊಡನೆ ಇನಿಯನಾಗಿ ನಲ್ಲನಾಗಿ ಗೆಳತನದಿಂದ ಬಾಳುವ ಕಲೆಯನ್ನು ಅರಿತುಕೊಳ್ಳುವ ಅವಶ್ಯಕತೆಯು ಗಂಡಿನ ಒಗರಿನ ಒರಟನ್ನು ಹಣ್ಣಿಸದೆ ಇರದು (ಯಕ್ಷಪ್ರ. ೧೫೭).

[ಪಣ್ಣು$_2$(<ಪಣ್$_3$)+-ಇಸು$_3$]

ಪಣ್ಣು$_1$, ಪಣ್$_1$, ಹಣ್ಣು$_1$ (ಕ್ರಿ). ೧. (ಯುದ್ಧಕ್ಕೆ) ಸಜ್ಜುಗೊಳಿಸು; ಅಣಿಗೊಳಿಸು; ಸಿದ್ಧಪಡಿಸು: ಪಣ್ಣಿದ ಜಾತ್ಯಶ್ವ ರಥಾಶ್ವಸಂಕುಳ ಖಲೀನೋದ್ಧೂತ ಲಾಲಾಜಲಂ ಕದಡಿಟ್ಟತ್ತಮವುಂಕೆ ಬೇಱೆ ಸರಭಾಗಂಬೆತ್ತು ಲೋಕಕ್ಕೆ ಸನ್ನಿದಮಾಗಿರ್ದುವು ಕೌರವಧ್ವಜಿನಿಯೊಳ್ ಕಾಳಿಂದಿಯುಂ ಗಂಗೆಯುಂ (ಪಂಪಭಾ.೧೦-೩೧); ಪಣ್ಣಾನೆಯಂ ಪಲ್ಲಣಿಸು ಕುದುರೆಯಂ ಪೂಡು ತೇರಂ ಭಟರ್ ಕೈದುಗಳಂ ಕೈಕೊಳ್ಳಿಮೆಂಬೀ ಭಟರ ಕಳಕಳಂ ಕೇಳಲಾದತ್ತದೆತ್ತಂ (ಜಗವಿ. ೬-೭೫); ಕರಿಕುಳಮುಂ ಪಣ್ಣುತ್ತಮ ತುರಗಂಗಳನಿರದೆ ನಾಡೆ ಪಲ್ಲಣಿಸನುವಿಂ ವರರಥತತಿಯಂ ಪೂಡಾಸುರದಾಯುಧಹಸ್ತರಾಗಲುಚಿತಂ ಕಲಿಗಳ್ (ಹಮ್ಮೀರ.೩-೨೯); ವಾಜಿಗಳನಿರದೆ ಹಲ್ಲಣಿಸಿದರ್ ಮತ್ತಗಜರಾಜಿಗಂ ಜಂಚಿಕೆಯನಿಕ್ಕಿದರ್ ತೇರ್ಗಳುಮನೋಜಿಯಿಂ ಪಣ್ಣಿದರ್ ಜೋಡುಸೀಸಕವಿಕ್ಕಿ ಕಾಲಾಳ್ಗಳನುವಾದರು (ಚಿಬಪು.೨೩-೨೫). ೨. ಉಂಟಾಗು; ಓದಗು; ಸಂಭವಿಸು: ಇದಿದುಭಯಸೈನ್ಯಕ್ಕಂ ಕೈಗಲಸಿ ತುಮುಲಯುದ್ಧಂ ಪಣ್ಣಲ್ (ಕಳಿಂಗ. ೧-೮೨). ೩. (ಯುದ್ಧಕ್ಕೆ) ಸಿದ್ಧವಾಗು; ಸಜ್ಜಾಗು; ಅಣಿಯಾಗು: ಅಂತಾಯಿರುಳಂ ವಿಜಯಂ ವಿಜಯೋ

ದ್ಯೋಗದೊಳ್ ಕಳೆಯೆ ಬೆಳಗಪ್ಪ ಜಾವದೊಳ್ ಬೀಡುವೀಡುಗಳ್ಗೆಲ್ಲಂ ತೊಟಲ್ದೇಕಿರ್ಪೆರೇಟುಂ ಪಣ್ಣಮೆನೆ (ಪಂಪಭಾ. ೧೦-೪೮ ವ); ಇದಿರಾದರ ಕೊಲುವಂಕದಾನೆಗಳಂದು ಕದನಕೆ ಪಣ್ಣ ನಡೆದವು (ಕುರಾಸಾಂ. ೧೧-೨೯); ಅಣ್ಣತಮ್ಮಂದಿರರ್ವರುಮುರಿಚತುರ್ಬಲಂ ಪಣ್ಣ ಬರೆ ಕಂಡು ಬಿಲ್ಲೊಂಡೆದ್ದು ಕೋಪದಿಂದಣ್ಣಕಲ್ಲಾಡಿದರ್ಪಟುಭಟರ ತಲೆಗಳಂ ಬಾಣಪ್ರಯೋಗದಿಂದೆ (ಜೈಮಿಭಾ. ೨೧-೧೨); ಯಥೋಚಿತ ನೈಪಥ್ಯಂದಳೆದ ಮಾತ್ಯಸಮೇತಂ ಪಣ್ಣ ಬಂದಿಭೇಂದ್ರಮನೇಱಿ ಸಮರಸಮುಚಿತ ಸಂಭ್ರಮಂ ಮಿಗೆ ಶುಭಮುಹೂರ್ತದೊಳ್ ಶಿಬಿರಕ್ಕೆ ನಡೆತರ್ಪಾಗಳ್ (ರಾಜಶೇ.೬-೧೧ವ). ೪. ಮಾಡು; ನಡೆಸು; ಕೈಗೊಳ್ಳು; ನಿರ್ವಹಿಸು: "ಪಣ್ಣೆನೆ ಮಾಡೆಂಬ ವಾಚಿ" (ರನ್ನಕಂ. ೬); ಪಶುವಂ ಕೊಂದದನಟ್ಟು ಸುಟ್ಟು ಪಲರುಂ ತಿಂದೆಂಜಲಂ ತಿಂದು ಕೂಚಿಸುತಂ ತಾಂ ಪರಿವಂದಮೇಂ ಬಹುವಿಧಕೃತ್ಯಂಗಳಂ ತಂದು ಭಕ್ಷಿಸುವೊಂದಂದಮನೆಯ್ದೆ ಪಣ್ಣ [ಪಾಠಾಂ. ಪೂಣ] ಕಡೆಯೊಳ್ಸಾವನ್ನೆಗಂ ಕೂಡೆ ವಿಪ್ರಸಮಾಜಂ ನೆಗೆಟ್ಟುನ್ನೆಗಂ ತಗುಳ್ದು ವೇದಂ ಪೇಟ್ಟುದೊಳ್ಪಿಲ್ಲದೋ (ಸಮಪ.ಅಸುಬಂಧ I, ೩೬೮-೧೯); ಪಿಡಿದೊಯ್ದು ಮೆಟ್ಟುವೆಂ ಪೆರ್ಗೆಱೆಯೊಳ್ ಎಂದು [ರೌದ್ರಾಟೋಪಮಂ ಪಣ್ಣ ನಿಗ್ರಹಂಗೆಯ್ಯಲೆಂದಿರ್ಪುದುಂ ಒಳಗೆ ಪಡಿಯಂ ಪತ್ತಿರ್ದು] ಕೇಳ್ದು (ಧರ್ಮಾಮೃ. ೧೨-೨೩೦); ಪರಿಪರಿಯೂಳಿಗವ ಪಣ್ಣ ತಣವಳು ಪರಮಾನಂದವಡುವಳು (ಹರಿಬ.೬-೪೮). ೫. ರಚನೆ ಮಾಡು; ರಚಿಸು; ನಿರ್ಮಿಸು: ಆಗಳಾಱುಂ ಋತುಗಳ ಪೂಗಳನೊಂದುಮಾಡಿ ಪೂವಿನಂಬುಗಳಂ ಪಣ್ಣಲೆಂದು ಕಾಮದೇವಂ ಮಾಡಿದೋಜನ ಸಾಲೆಯಿರ್ಪಂತಿರ್ದ ಪೂವಿನ ಸಂತೆಯೊಳ್ (ಪಂಪಭಾ. ೪-೮೦ವ); ಗುರು ಪಣ್ಣಿದ ಚಕ್ರವ್ಯೂಹರಚನೆ ಪೆಱರ್ಗರಿದು ಪುಗಲ್(ಗದಾಯು.೪-೫೫); ಚೈತ್ರಂ ಪಣ್ಣಿ ತಂದಂಗಜಂಗಿಳೆಯೊಳ್ ಸಾರ್ಚಿದ ತದ್ವರೂಪಮೆನೆ ಚೆಲ್ವಾದತ್ತು ಚೂತೋತ್ಕರಂ(ಕುಸುಮಾ.೫-೩೫); ನಲ್ವಣ್ಣಗೆವಾಸಿಗಂಗಳ ಮರಲ್ವುಡಿಯಿಂ ಪಲವಣ್ಣ ಜೋಹಮಂ ಪಣ್ಣಿ ಪಳಂಚಿ ಸಂಚರಿಸಿ ನೋಡುತೆ (ಚಕವಿ. ೬-೩೪). ೬. ಯೋಜಿಸು; ಏರ್ಪಡಿಸು: ಕೂಸಿಂಗೆ ಸ್ವಯಂಬರಮಂ ಪಣ್ಣುವಂ (ವಡ್ಡಾರಾ.೪೦-೨೭); ಅವನಿಯೊಳಟಸುತ್ತುಂ ಬಂದೀ ನಿನ್ನನ್ವಯಪ್ರಸಿದ್ಧಿಗಮಿಂತೀ ಸೌಂದರ್ಯಕ್ಕಂ ಪದೆದಾನೊಂದಿದ ಮನದಿಂದಮಿಂತಿದಂ ಪಣ್ಣಿರ್ದೆಂ (ನೇಮಿಪು.೩-೧೮); ಪುಣ್ಯವುಳ್ಳವನಾವ ಕಾರ್ಯವ ಪ[ಪಾಠಾಂ.ನೆ]ಣ್ಣದೊಡೆ ಕೈಸಾರಿ ಬಪ್ಪುದು ತಿಣ್ಣವೇ ಕೃತಪುಣ್ಯನಾವೆಂದರಸನಂದವರ ಕಣ್ಣು ದಣಿವಿನ ನೋಡಿ . . . ಸುಖದೊಳಿರುತಿರ್ದ (ಸಾಳ್ವಭಾ. ೪-೨೪); ಮುಂದೆ ಗಜಪುರದೊಳು ಪಣ್ಣುವಧ್ವರಕೆ ನೀ ಬಂದು ಕನ್ನೈದಿಲೆಯ ಬಣ್ಣದ ಮುರಾರಿಯಂ ಕಂಡು ವಿಷವಧುತನದ ತಿಣ್ಣಮಂ ಕಳೆದೆನ್ನೊಳೊಡಗೂಡು (ಚೈಮಿಭಾ. ೧೬-೧೭). ೭. ಶೃಂಗಾರಮಾಡು; ಸಿಂಗರಿಸು; ಅಲಂಕರಿಸು: ದ್ರುಪದನುಂ ಧೃಷ್ಟದ್ಯುಮ್ನನುಂ ಮುತ್ತಿನಮಾಣಿಕದ ಮಂಡನಾಯೋಗಂಗಳೊಳ್ ನೆಱೆಯೆ ಪಣ್ಣಿದ ಮದಾಂಧಗಂಧಸಿಂಧುರಂಗಳನೇಱಿ ಬರೆ (ಪಂಪಭಾ. ೩-೪೮ ವ); ಎರಡುಂ ಪಕ್ಕದೆ ಪಣ್ಣೆದೋಱೆವಿಡಿಯುಂ ಕೈಗೆಯ್ದು ಬಂದೇಱಿ ಚಾಮರಮಂ ಕನ್ನೆಯರಿಕ್ಕೆ . . . ಬಂದಂ . . . ವಜ್ರಬಾಹುಮಹಿಪಂ (ಪಂರಾಮಾ. ೨-೧೧); ಸುರಕರಿಯಂತೆ ಕಣ್ಗೊಳಿಸಿ ಮುನ್ನಮೆ ಪಣ್ಣ ಸಮಂತು ತಂದ ಸಿಂಧುರಪತಿ ಪಟ್ಟವರ್ಧನಮನಾಗಳೆ ಸಾರ್ಚಿದೊಡೇಱಿ (ಕುಸುಮಾ. ೮-೬); ಪೊಂಬಟ್ಟಮಂ ಪಣ್ಣ ಬಣ್ಣಮಂ ಕೇಳ್ದಯ್? (ರಾಮಾಶ್ವ. ೧೨-೨೪). **ಪಣ್₁**: ೧. "ಪಣ್-ಸಜ್ಜೀಕರಣೇ (ಸಿದ್ಧಮಾಡು), ಫಲೇ ಚ" (ಶಮಧಾ); ಮಾಣ್ಗೆ ನಿಮ್ಮಯ ಭಯಂ ಪೋಪೆವಿದೆ ಕಾಳಿಗಕೆ ಪಣ್ಣಜಾಶ್ವಮನೆನುತೆ ನಡೆದನಾ ಗರುಡವಾಹನ ಮಹಾಸತ್ತ್ವದಿಂದೆ (ಚಿಬಪು. ೩೧-೨೯). ೭. ಅತಂ ಸರಿಯೊಳಾದೊಡಮಂಚೆಯೆಂಬುದಂ . . . ಚಪ್ಪರಣೆಯೊಳಾದೊಡಂ ಪಣ್ಣೆಂಬುದಂ ಸೈರಿಸಂ (ಕಬ್ಬಕಾ. ೧೪೮). ℙ ಇಲ್ಲಿ 'ಪಣ್₂' ಉಲ್ಲೇಖದಲ್ಲಿ ಬರುವ "(ಧ್ವನಿಯು) ಮಧುರವಾಗು; ಹದವಾಗು; ಇಂಪಾಗು" ಎನ್ನುವ ಅರ್ಥವೂ ಶ್ಲೇಷೆಯಾಗಿ ಬರುತ್ತದೆ. **ಹಣ್ಣು₁**: ೧. ಸಜ್ಜಿತಃ, ಕಲ್ಪಿತಃ—ಈ ೨ ಹಣ್ಣದಾನೆ (ಹಲಾಯು. ೩೬-೬೮); ಹಣ್ಣ ಹನ್ನೆರಡಬ್ಬವಾಯಿತು [ಪಾಠಾಂ. ಹನ್ನೆರಡುವರುಷಗಳು ಸಂದಲು] ಶೂನ್ಯಸಿಂಹಾಸನವನಕಟಾ ಎನ್ನ ಗುರುವಿನ್ನೆಂದು ಬಿಜಯಂಗೈದು . . . ಮನ್ನಿಸುವನೋ ಎನುತಲಾ ಬಸವಣ್ಣ ಚಿಂತಿಸಿದ (ಪ್ರಭುಲಿಂ. ೨೨-೩); ಅಣ್ಣನ ಮೊಗವನಯ್ಯನ ಮೊಗವನು ನೋಡಿ ಕಣ್ಣ ನೀರ್ಗುಳುಗುಳಸುಗುತ ಪೊಣ್ಣನೆ ಕಾಲ್ಗೆ ಬಿದ್ದರು ದೀಕ್ಷೆಯೆಂದಿನ್ನು ಹಣ್ಣವು ಕ್ಷಮಿಸೆಂದರಂಜಿ (ಭರತ. ೪೫-೬೫). ೨. ಬಳಿಕ ಸಂತೋಷದಲಿ ತನ್ನಯ ಸಲುಗೆ ಬಿನ್ನಹವೆಂಬ ಬೀಜದ ಬೆಳೆಗೆ ಹದವಳಿ ಹಣ್ಣ ಪಸರಿಸಿತೆನುತೆ ಹರುಷದಲಿ (ಪ್ರಭುಲಿಂ. ೮-೨೨). ೩. ಗಜಘಟೆ ಹಣ್ಣವೆಯೇಳೆಲೆ [ಪಾಠಾಂ. ಗಳು ಹಲ್ಲಣಿಸಿವೆ] ಮಗನೆ ನಿಜಪರಿವಾರಕೆ ಬೆಸಗೊಡು ಮಗನೆ (ಹಚಕಾ. ೧೨-೩೦ ರಗಳೆ); ಆಳು ನೆರೆದುದು ನೆಲ ಕುಸಿಯೆ ರಥಜಾಲ ಜಡಿದುದು ಹಣ್ಣದಾನೆಯ ಸಾಲು ಮೆಱೆದುವು ಕುಣಿವುತಿದ್ದುವು ಕೂಡೆ ವಾಜಿಗಳು (ಕುವ್ಯಾದ್ರೋ. ೧-೪೪); ಉದಯಮುಖದಲಿ ಲಗ್ಗೆವಱೆ ಮೊಳಗಿದವು ದುರ್ಗದ ಮೇಲೆ ಗಜ ಹಣ್ಣದವು ಹಯ ಹಲ್ಲಣಿಸಿದವು ರಥ ಹೂಡಿದವು ರಣಕೆ (ತೊರರಾ. ೬-೧೮-೩). ೪. ಕಾಯವ ದಂಡಿಸಿ ಆತ್ಮನಿಗ್ರಹವ ಮಾಡಿ ಬಟ್ಟಗುತ್ತ ತನವ ಹಣ್ಣ ತಗಹಿನಲ್ಲಿ ಕುಳ್ಳಿರ್ದು ಬೇಡಿಕೊಂಬ ತಪ ತಾನೇಕೆ (ಚನ್ನಬ. ಕ. ೩೨೫-೬೮೩); ಏನ ಹಣ್ಣದೆ ಬಸವಮಂತ್ರಿಯದೇನಿನಿತುಮಂ ತಿಳಿಯ ಪೇಳೆನಲು (ಬಸಪು. ೩೧-೧೭); ಹೆಣ್ಣ ಭೋಗಿಸ ಬಂದವನಲ್ಲ ಕದನವ ಹಣ್ಣಲೋಸುಗ ಬಂದವನು (ಮೋಹತ. ೩೫-೫); ಕಣ್ಣು ಸಣ್ಣದು ಆಗಿ ಹಣ್ಣದಿಹುದೊಂದಿಲ್ಲ ತಣ್ಣಗಿಹ ಮನವನುರಿಸುವದು ಇದನು ಕೊಂದಣ್ಣಗಳು ಯಾರು (ಸರ್ವಜ್ಞ. ೧೨೮೧); ಮನಸು ಮುರಿದು ಹರಿವರಾರು ಇವರು ಹಣ್ಣದಿಚ್ಛೆಯ? (ಪಲಾನ. ೪೫-೮). ೫. ಸುಣ್ಣ ಸೊದೆಗಳ ಸಾರಣೆಯ ಕಾರಣೆಯ ಪಂಚವಣ್ಣಭರಿತದ ರಂಗ[ವಲ್ಲಿ]ಗಳ ವೀಥಿಯೊಳು ಹಣ್ಣರ್ದ ಮಕರತೋರಣ ರತ್ನಕಾಂಸ್ಯತೋರಣವೋರಣಂಗಳಾಗೆ (ಸಿದ್ಧರಾ. ೮-೫೫); ಹೆಂಗುಸಿವಳಿಂತೆಂದು ಬಗೆದಾ ಲಿಂಗ ನಾ ಮರುಳಲ್ಲ ಕೇಳಾವಂಗದಿಂ ಬಹುಕಥೆಗಳಂ ನೀ ಹಣ್ಣದಿರು (ಬಸಪು. ೨೪-೬೪); ಆ ಯುವತಿಯರು ಕಾರ್ಯಗಳ ನೆಱೆ ಬೀಯ ಮಾಳ್ಪರು ಕುಟಲವಿದ್ಯದಿ ಮಾಯೆಗಳ ಹಣ್ಣುವರು ನಿತ್ಯದಿ ಹುಸಿಯನಾಡುವರು (ನಳಚ. ೩-೨೩). ೭. ದಾರಿದೆಗದವು ಮುಂದೆ ಹೂಡಿದ ತೇರುಗಳು ಹಣ್ಣದ ಮದಸ್ತಂಭೇರ ಮಾವಳಿ ಹಲ್ಲಣಿಸಿದ ಹಯಾಳಿ (ತೊರರಾ. ೨-೩-೫೧); ಲಕ್ಷ್ಮಣಂ ತುರಗ ಸಾರಥಿ ಕೇತನಂಗಳಿಂದೆ ಹಣ್ಣದ ವರೂಥಮಂ ತರಿಸಿ ಪೊಜಗಿರಿಸಿ . . . ಆ ಸೀತೆಗಿಂತೆಂದನು (ಜೈಮಿಭಾ. ೧೮-೬೦). ೮. ಉಂಟುಮಾಡು; ಒದಗಿಸು: ಸತಿಯ ಬಿಡದೊಡೆ ರಾಮ ಖಳಕುಲತತಿಗೆ ಕೇಡನು ಹಣ್ಣದುಳಿಯನು (ಕೌತಿಂರಾ. ೨೬-೧೦); ಕಡಲ ತಡಿಯೊಳು ವಿಮಾನವಿಳಿದು ಕಾಲ್ನಡೆಯೊಳು ಮಾಗಧರಾಜ ಒಡೆಯನೊತ್ತಿಗೆ ಬರುತಿರ್ದರಪ್ಪಜೀಯೊಳಿಬ್ಬ ಕೆಡುಕ ಹಣ್ಣದನೊಂದು ನೋಪ (ಭರತ. ೨೫-೫೧); ಯಾದವ ಪಾಂಡವರ ಬಿಂಕದ ಬಣ್ಣಮಂ ಕೆಡಿಸಿ ಕಾಳಗದೊಳುಬ್ಬಸವನುಱೆ ಹಣ್ಣ ಗಲ್ಲದೆ ಮಾಣೆನಿಹತರ್ಗೆ (ಜೈಮಿಭಾ. ೬-೨೯); ಎಣ್ಣಿದಂದದಿ ನುಡಿದು ಕಲಹವ ಹಣ್ಣದನು ದಾರುಕನು (ಕೃಷ್ಣಾಕಾ. ೧೫-೫೨). ೯. (ಬಲೆ ಮೊದಲಾದುವನ್ನು) ಒಡ್ಡು; ಬೀಸು; ಹರಡು: ವ್ಯಾಧನು ಸೂಸಲ ಚೆಲ್ಲಿ ಜಂತ್ರವ ಹಣ್ಣ ಅಡಿಗಲ್ಲಸೊಡ್ಡಿ ಹೋದ ಬಳಿಕ ಸೂಸಲ ಕಂಪಿಗೆ ಹೆಗ್ಗಣ ಬಂದು ಬಿದ್ದಂತೆ ಬಿದ್ದಿರಲ್ಲಾ ಮಾಯದ ಬಲೆಯಲ್ಲಿ (ಅಪಚಂ. ೧೫೯-೬೨೬); ಆ ಬಲೆಯೊಳ್ತವೆ ಸಿಲ್ಕಿದೆಂ ಸಮಂತಾಖುಗೆ ಪಣ್ಣ ಪೋದ

ಸಿಡಿಯೊಳ್ಕಿಗೆ ಬಿಟ್ಟು ಬಿಡಾಲನಂದದಿಂ (ಉದ್ಧಟ. ೬-೧೨೬); ಲಲನೆಯಾ ಲೋಕಂಗಳೋ ವಿಟಕುಲದ ಗಳಪಾಶಂಗಳೋ ಕೋಮಳೆಯ ನೇತ್ರಾಂಶು ಗಳೊ ಹಣ್ಣಿದ ಬಲೆಗಳೋ ತಾವು (ಬಸವು. ೪೦-೫); ಮಣ್ಣಾನೆಯ ನಿಲಿಸಿ ಹಗ್ಗವ ಹಣ್ಣಿ ಹಸರಿಸಿ ಮುಚ್ಚಿದರ್ ಕರಿ ಹೆಣ್ಣನಪ್ಪುವೆನೆಂದು ಬಂದಾ ಕುಳಿಯ ಬೀಳ್ವಂತೆ (ಸಿಭಾಗ. ೧೧-೧೪-೨೧). ೧೦. ಹೂಡು; ಅಳವಡಿಸು: ಜೀವರಥಕೆ ಪ್ರಾಣದಶ್ವ ತಾವೆ ತಾವು ಹಣ್ಣಿವೆ ಎಲ್ಲ ಬೆಳಕು ಎಲ್ಲ ಬಯಲು ಮಣ್ಣ ಕಣಕು ಕಣ್ಣಿವೆ (ಅರಕು. ೪೫-೧೬). ೧೧. ಬಣ್ಣಿಸು; ವರ್ಣಿಸು; ಹೊಗಳು: ತಾಯಿಮಹಿಮೆಯಂ ನೋಡಿರೆಂದೆಲ್ಲಾ ಬಣ್ಣಿಸಲು ಜಂಗಮರು ಆ ಬಸವಣ್ಣಗೀಕ್ಕೆಚ್ಚೆಂದು ಜಗವೇ ಹಣ್ಣುತಿರಲಿನ್ನಿತ್ತ ಬಸವನು ಬಂದನೋಲಗಕೆ (ಬಿಜ್ಜಳ. ೮೦-೧೮).

ಪಣ್ಣವೇಟ್ಟು = ಸಿದ್ಧಪಡಿಸಲು ಹೇಳು; ಸಜ್ಜುಗೊಳಿಸುವಂತೆ ಹೇಳು: ಬರವೇಟ್ಟಿತ್ತಿಯನೆಯ್ದೆ ಪೂಡಿ ತರವೇಟ್ಟೀರೆಲ್ಲಮಂ ಪಣ್ಣವೇಟ್ಟು ಕರಿಯಂ . . . ಬೀಡುವಿಡುವೆಂ ದೇವಾಚಳಪ್ರಸ್ಥದೊಳ್ (ಅರ್ಜುನೇ. ೨-೫೩). ಪಣ್ಣಿಕೊಳ್, ಹಣ್ಣಿಕೊಳ್ಳು = ೧. ಸಿದ್ಧಪಡಿಸಿಕೊಳ್ಳು; ಸಜ್ಜುಗೊಳಿಸಿಕೊಳ್ಳು; ಅಣಿ ಮಾಡಿಕೊಳ್ಳು: ಜಲನಧಿತಲ್ಪನುಂ . . . ಜಲದವರ್ಣನುಮೆಂಬುದನೀ ನಿದಾಘಮಂ ಕಳೆಯಲೆ ಪಣ್ಣಿಕೊಂಡ ನಸುರಾರಿ (ಜಗವಿ. ೧೭-೬೬); ಭರದೆ ಕೈಕೆಯ ತಂದೆ ಶುಭಮತಿಯಿರದೆ ರಥಮಂ ಪಣ್ಣಿಕೊಂಡು ತ್ವರಿತದಿಂದೆಯ್ತಂದು ರಘುಪತಿಗೆಂದನಿಂತೆಂದು (ಕುಮುರಾ. ೨-೪೬). ೨. ವ್ಯಾಪಿಸು; ಹೆಬ್ಬು; ಹರಡಿಕೊಳ್ಳು: ಪಂಚಮಲಂಗಳೆಲ್ಲೆಡೆಯೊಳಂ ನಲ್ವಿನಿಂ ಬಾಸಣಿಸಿ ಹಣ್ಣಿಕೊಂಡಿಹುದಿದೇನೆ ನಲಾಗಿ (ವೀಕೈಪು. ೬-೬-೧೧). ಪಣ್ಣಿಡು = ಸಿದ್ಧಪಡಿಸಿಡು; ತಯಾರಿಸಿಡು: ನಡಿಯರ್ ಬಲ್ಲಾಯದ ಬಲ್ಡಡಿಗರ್ ಪಂದಿರ್ದರಯ್ವರಾಲದ ಕೆಟಗಿಂ ತೊಡರ್ದರ್ ನಮ್ಮಯ ಭಕ್ಷದೊಳಡು ಪಣ್ಣಿಡು ಪೋಗು ನೀನು ಮಾನುಂ ತಿರಿಬಂ (ಪಂಪಭಾ. ೩-೧೨). ಪಣ್ಣಿ ಬರ್ = ೧. (ಯುದ್ಧಕ್ಕೆ) ಸಿದ್ಧವಾಗಿ ಬರು; ಸಜ್ಜಾಗಿ ಬರು: ಚತುರಂಗಬಳಪ್ರಬಳಭಾರ ಭಗ್ನಭೋಗೀಂದ್ರಫಣಾಸಹಸ್ರಪೂತ್ಕಾರಮಂ ಕೇಳಲುತ್ಕಂಠನಾಗಿ ಪಡೆಯಂ ಪಣ್ಣಿ ಬರವೇಟ್ಟೆಂದು ಬಳಾಧ್ಯಕ್ಷಂಗೆ ಬೆಸಸುವುದುಂ (ಮಲ್ಲಿಪು. ೮-೧೩೦). ೨. ಶೃಂಗಾರವಾಗಿ ಬರು; ಅಲಂಕೃತವಾಗಿ ಬರು; ಸಿಂಗರಿಸಿಕೊಂಡು ಬರು: ಅಲ್ಲಲ್ಲಿಗೆ ನೃಪನಂದನರಲ್ಲಲ್ಲಿಗೆ ಪಣ್ಣಿ ಬಂದ ಮದದಾನೆಗಳಂತಲ್ಲಲ್ಲಿಗೆ ಹಯಸಂಕುಳಮಲ್ಲಲ್ಲಿಗೆ ಬರ್ಪ ವಾರವನಿತಾ ನಿಕರಂ (ಧರ್ಮಾಸ್ಯ. ೮-೨೧೮); ರಾಜಮಂದಿರದ್ವಾರದೊಳ್ ಪಣ್ಣಿ ಬಂದಿರ್ದ ಪಟ್ಟವರ್ಧನಗಂಧಸಿಂಧುರಸ್ಕಂಧಾರೂಢನಾಗಿ ಪುರಮಂ ಪೊಱ ಮಟ್ಟು (ಚಂದ್ರಪು. ೨-೧೧೧); ಪಣ್ಣಿ ಬಂದ ಗಂಧಸಿಂಧುರದ ಪೂರ್ವಾಸನ ದೊಳ್ಗಂಗಾಂಬಿಕೆವೆರಸಿ ಮೂರ್ತಿಗೊಳಿಸಿ (ವೃಷವಿ. ೫-೬ ಪ).

[ದೇ.॥ ತಮಿ. ಮಲ. ಪಣ್ಣು; ತೆಲು. ಪನ್ನು]

ಪಣ್ಣು2 'ಪಣ್3' ನೋ.

ಪಣ್ಣುಗೆ, ಪಣ್ಣಿಗೆ (ನಾ). ೧. ಸಿದ್ಧಪಡಿಸುವಿಕೆ; ಸಜ್ಜುಗೊಳಿಸುವಿಕೆ: ಗೆಕಾರಕ್ಕೆ-ಉಡುಗೆ, ಪಣ್ಣುಗೆ, ಪತ್ತುಗೆ (ಶಮದ. ೨೧೧ ಪ್ರಯೋ). ೨. ಅಲಂಕಾರ; ಶೃಂಗಾರ: ಪೊನ್ನ ಪಣ್ಣುಗೆಯ ಪಿಡಿಯನೇಱಿ . . . ರಾಜರಾಜಂ ಮದ್ರರಾಜನ ಮನೆಗೆ ಬರ್ಪುದುಂ (ಪಂಪಭಾ. ೧೨-೮೮ ಪ); ಕರಿಗಳ್ ಪಣ್ಣಿದ ಪೊನ್ನ ಪಣ್ಣುಗೆಯವಂದೇಳೆಣ್ಣು ನೂಱು . . . ತೆರಳ್ತರೆ (ಎಕ. XV, ಅರಸೀ. ೨೧೬-೧೦; ಸಂ. 1195); ಗಾಂಧರ್ವದತ್ತೆಯುಂ ಪೊನ್ನ ಪಣ್ಣುಗೆಯ ಪಿಡಿಯನೇಱಿಸಿ ಚಾರುದತ್ತಂ ಮುಂದೆ ಗೊಂಡಾಕೆಯ ವಿದ್ಯಾಗರ್ಮಮನೆ ಪೊಗೞುತ್ತಂ ಬಂದು (ಬಂಹಂ. ೫-೨ ಪ). ಪಣ್ಣಿಗೆ: ೨. ಎಸೆದೊಪ್ಪಿರ್ದ ವಿಮಾನಮಾಲೆ ಖಚರಾನೀಕಕ್ಕೆ ಚಿಹ್ನಂಗಳಾಗಸದೊಳ್ ಪಣ್ಣಿದ ಪೊನ್ನ ಪಣ್ಣಿಗೆಯಿಭಂಗಳ್ ಚಿಹ್ನ ಮುರ್ವೀಚರಪ್ರಸರಕ್ಕೆ (ಶಾಂತಿಪು. ೫-೩೮); ಪಣ್ಣಿ [ಪಾಠಾಂ. ಣ್ಣು]ಗೆಯ ರತ್ನಚಯದಿಂ ಕಣ್ಣುಳ್ಕೆ ಜಗಂ ತಟಿಲ್ಲತಾಪ್ರಭೆಯಿಂದಂ ಪಣ್ಣಿಗೃಹಾಂಗಣತಟದೊಳ್ ಪಣ್ಣಿರ್ದುದು ಪಟ್ಟವರ್ಧನಂ ಭದ್ರಗಜಂ (ಜಗವಿ.೧೪-೪೮).

[ಪಣ್ಣು1 + -ಗೆ]

ಪಣ್ಣುದೋಱು (ಕ್ರಿ). ಹಣ್ಣು ಬಿಡು; ಫಲಬಿಡು: "ಪಣ್ತುದೆನೆ ಪಣ್ಣುದೋಱುದುದು" (ಶಬ್ದಮಂ. ೨೩).

[ಪಣ್ಣು2 (< ಪಣ್3) + ತೋಱು]

ಪಣ್ಣೆ, ಪಣ್ಣೆಯ1 (ನಾ). ೧. ಗುಂಪು; ಸಮೂಹ; ನೆರವಿ: ಹಲಬರು ಸುಕುಮಾರರವರು ತಮ್ಮೊಳು ತಾವು ಕೆಲಬರೊಂದೊಂದು ಪಣ್ಣೆಯಲಿ ನಲಿದಾಡುತಿಹರು (ಭರಚಿ. ೬೩-೪). ಪಣ್ಣೆಯ1: ೨. ವ್ಯವಸಾಯದ ಭೂಮಿ; ಸಾಗುವಳಿಯ ಜಮೀನು: (ಕ). 'ಪಣ್ಣೆ2' ಪರಾ.

ಪಣ್ಣೆಪಣ್ಣೆ (ದ್ವಿರುಕ್ತಿ): ಬಣ್ಣಿಸಿ ಸುಪಾಕಮಾಡಿದ ಪಿಟ್ಟು ಪಾಯಸಂ ತಣ್ಣನೆಯ ಕಳಲು ಹಸಿಯಲ್ಲಮುಂ ಬಡ್ಡಿಸಲ್ಪಣ್ಣೆಪಣ್ಣೆಯೊಳು ಕುಳ್ಳಿರ್ದು ಪಂಕ್ತಿಯ ಕೊಳ್ಳುತ್ತಿರ್ದುದಾ ಭೂಸುರಾಳಿ (ಸಮ್ಮಳಾ ೬-೨೪); ನುಣ್ಣಿದ ನುಡಿಯ ನೀಱೆಯರಾರತಿಯ ತಂದು ಪಣ್ಣೆಪಣ್ಣೆಯೊಳೆತ್ತಿತವಗೆ (ರಾಮವಿ. ೧೯-೮೧); ಪಣ್ಣಂಚೆಗಳು ಕೊಳದೊಳು ಸುಳಿವಂತೆಳೆವಣ್ಣುಗಳಾ ನೆಲದೊಳಗೆ ಪಣ್ಣೆಪಣ್ಣೆಯೊಳು ಸುಳಿದು ಭರತೇಶಗೆ ಕಣ್ಣಿ ಹಬ್ಬವೆ ಕಾಣಿಸಿದರು (ಭರಚಿ. ೧೩-೧೨೩); ಪಣ್ಣೆಪಣ್ಣೆಯೊಳಲ್ಲಲ್ಲಿ ನಿಂದಾಗೆಳೆವಣ್ಣುಗಳಾಡುತಲಿರಲು ಹುಣ್ಣಿಮೆಚಂದ್ರನ ಕಾಂತಿಯಿಂ ಮಿಗಿಲಾಗಿ ಪಣ್ಣಿರೆ ಹಗಲು ಬತ್ತಿಗಳು (ಜ್ಞಾನಚಿ. ೩೫-೧೭).

[ದೇ.॥ ತಮಿ. ಪಣ್ಣೈ]

ಪಣ್ಣೆಯ1 'ಪಣ್ಣೆ' ನೋ.

ಪಣ್ಣೆಯ2 (ನಾ). ವ್ಯಾಪಾರ; ವ್ಯವಹಾರ; ವೃತ್ತಿ: ನಿಷ್ಠಂ ಪಣ್ಣೆಯದಾ[ವಾ]ಗೆ ಜೂಜು ತನಗಾ ಜೂಜಾಟದಿಂ ಬಂದ ಭಾಸ್ವಚ್ಚಾಮೀಕರದಿಂದೆ ಜಂಗಮಪದಾಚ್ಚಾರಾಧನಂಗೈಯುತುಂ (ಉದ್ಧಟ.೧೨-೯೨).

[< ಸಂ. ಪಣ್ಯ]

ಪಣ್ಣೆಲೆ, ಹಣ್ಣೆಲೆ (ನಾ). ಹಣ್ಣಾದ ಎಲೆ; ಪೂರ್ಣವಾಗಿ ಬಲಿತು ಬಣ್ಣಗೆಟ್ಟ ಎಲೆ; ಮುದಿಯೆಲೆ: ತೆಂಕಣಗಾಳಿ ಬೀಸುತಿರೆ ಪಣ್ಣೆಲೆ ಪಣ್ಣನೆ ಬೀಟಿ (ಜಗವಿ.೧೪-೨೨); ಒರ್ಕುಡಿತೆ ನೀರ್ಗೆ ಪಱಿಪಟ್ಟೆರ್ಕೆಯ ಪಣ್ಣೆಲೆಯ ಮುಱಿಗೆ ದೇಸಿಗರಂ ದೇವರ್ಕಳ್ಗೊಡೆಯರ್ ಮಾಟ್ಟುರೆ ನೀಟ್ಟುರಿಸದೆ ನಿಮ್ಮ ದೊರೆಗೆ ಬೋಟಿಯರೊಳರೇ (ಶಮದ. ೨೪ ಪ್ರಯೋ). ಹಣ್ಣೆಲೆ: ಕೆಲಕೆಲವು ಗಿಡಮರಗಳಿಂದ ಹಣ್ಣೆಲೆಗಳು ಉದುರುತ್ತಿದ್ದುವು (ಬಾಣಭ. ೬೯); ಕೆಲವು ಹಣ್ಣೆಲೆಯಾಗಿ ಕೆಳಕ್ಕೆ ಉದುರುತ್ತವೆ (ರಾಮಾನಿ. ೧೧೫); ಹಣ್ಣೆಲೆ ಉದುರುವಾಗ ಚಿಗುರೆಲೆ ನಗುವುದು (ಗಾದೆ). [ಪಣ್3 + ಎಲೆ1]

ಪಣ್ತಾ 'ಪಣ್2' ಪರಾ.

ಪಣ್ತನ (ನಾ). ಹಣ್ಣಿನ ಸ್ಥಿತಿ; ಮಾಗಿ ಪಕ್ವವಾದ ಸ್ಥಿತಿ; ಕಾಠಿಣ್ಯವನ್ನು ಕಳೆದುಕೊಂಡು ಮೆದುವಾಗಿರುವ ಸ್ಥಿತಿ: ದಶಗ್ರೀವನಾತ್ಮಮುಂ, ತನ್ನ ಕಸುಗಾಯ್ತನದೊಗರ್ ಕಳೆದು, ಪಣ್ತನಕ್ಕೆ ತಿರುಗುತಿರ್ಪೊಂದು ಸೂಚನೆ ತೋರುತಿಹುದೆನಗೆ (ಕ್ರಿರಾಮಾ. ೭೦೬-೨೨೪).

[ಪಣ್3 + -ತನ]

ಪಣ್ತು 'ಪಣ್2' ಪರಾ.

ಪಣ್ದಲೆ 'ಪಂದಲೆ' ನೋ.

ಪಣ್ಣೆನೆ, ಹಣ್ಣೆನೆ (ನಾ). ಹಣ್ಣಾದ ಧಾನ್ಯದ ಹೊಡೆ; ಮಾಗಿದ ಕದಿರು: ಬೆಳಸುಗಳ ಪಣ್ಣೆನೆಗಳ ಮಿಜುಪ ಹೊಂಬಣ್ಣದ ಹರಿದ್ರಾನುಲೇಪನದೆ ಮೆಱೆವ ಮೈಸಿರಿಯ ಮಾಂಗಲ್ಯದಿಂ ಭೂದೇವಿ ನೆಱೆ ಶೋಭಿಸುವ ಶರತ್ಕಾಲದೊಳ್ತಿರುಗಿತಧ್ವರಹಯಂ ಧರೆಯ ಮೇಲೆ

(ಜೈಮಿಭಾ.೨೫-೫). **ಹಣ್ಣೆನೆ:** ರಾತ್ರಿ ಕಳ್ಳರು ಹಣ್ಣೆನೆಗಳನ್ನು ಕೊಯ್ದು ಕೊಂಡು ಹೋಗಿದ್ದಾರೆ (ರೂಢಿ). [ಪಣ್$_2$ + ತೆನೆ$_1$]

ಪಣ್ಪರಸು(?) (ನಾ). (?): ಪುರುಳಿ ಕುಳಿರ್ವಂ ನವಿಲ್ಕೇಕೊರೆಸಣಗಂ ಪಣ್ಪರಸ ವಲೂರಲ್ ವಾವಲ್ ದುರಿಸೆ ಗಿಳಿ ಪರ್ದು ಮರವಂ ಮರ ಕುಟಿಗಂ ಪುಱಲೆ ಬುಱುಗಿ ಹಸುಬಂ ಪುಣಿವುಲ್(ಸೂಕ್ತಿಸು. ೩-೧೪೬).[?]

ಪಣ್ಪಲ 'ಪಣ್$_3$' ಪರಾ.

ಪಣ್ಪಸರ (ನಾ). ಹಣ್ಣಿನ ಸಮೂಹ; ಫಲಗಳ ರಾಶಿ : ಉತ್ತುತ್ತೆ ಖರ್ಜೂರ ದ್ರಾಕ್ಷಿ ಸಕ್ಕರೆ ಬೆಲ್ಲ ಮೆತ್ತೈಸಿದ ಕಾಯ ಭಾಗ ಒತ್ತದೆ ಕಳಿತ ಸಮಸ್ತ ಪಣ್ಪಸರಂ[ಪಾಠಾಂ. ಪಣ್ಗೊನೆ]ಗಳಿತ್ತೆಱದಲಿ ಮಾಱುತಿಹವು (ಮೋಹತ. ೩-೨೦). [ಪಣ್$_3$ + ಪಸರ]

ಪಣ್ಪು 'ಪಂಪು$_1$' ನೋ.

ಪಣ್ಪೇಟ (ನಾ). ಹಣ್ಣಿನ ಮೇಲಿನ ಪ್ರೀತಿ,—ವ್ಯಾಮೋಹ: ಒಂದು ದೆವಸಂ ಕಣ್ಪೇಟಕ್ಕೆ ಪಕ್ಕಾದ ಕರೇಣುಗಳಂತೆ ಪಣ್ಪೇಟಮಾದಾಟಮೆ ನಿನ್ನಂ ವನಿವಂಗೆಯ್ವುದುಂ (ಶಾಂತಿಪು.೪-೬೬ವ).

[ಪಣ್$_3$ + ಬೇಟ$_1$(< ಬೇಂಟ)]

ಪಣ್ಮರ (ನಾ). ಹಣ್ಣು ಬಿಡುವ ಮರ; ಫಲವೃಕ್ಷ: ಪಣ್ಮರಗಳೆ ಪೂಮರಗಳೆ ತಣ್ಮಲೆದಲೆವೆಲರ ಮಿಱುಗಿಪರಳಲರೆ ಪೊದಟ್ಟುಣ್ಮುವ [ಕಂ]ಪೆ ಕರಂ ಕೈಗಣ್ಮುವ ದಂಪತಿಯಲಂಪೆ ನಂದನವನದೊಳ್ (ಬಂಹರಿ. ೧-೨೨); ಕಾಡ ಕಾಯ್ಪಿನ ಬೋಳನಾ ಪೆಣ್ಗಳಂ ಕಂಡು ನಾಡ ಪಣ್ಮರದಡಿಯ ನರಿಯೆನಲ್ ಬಂದಂ(ಕಾಲೂರ.೧೨೬-೨೬೬).[ಪಣ್$_3$ + ಮರ$_1$]

ಪಣ್ಯ (ಗು). ೧. ಮಾರಾಟ ಮಾಡತಕ್ಕ; ವಿಕ್ರಯಿಸತಕ್ಕ; ಕೊಳ್ಳತಕ್ಕ ಅಥವಾ ಮಾರತಕ್ಕ: 'ಪಣ್ಯವಸ್ತು' ಪರಾ.(ನಾ). ೨. ಮಾರಾಟ; ವಿಕ್ರಯ; ವ್ಯಾಪಾರ: ಹೊನ್ನೆಂದು ಜಗದಿ ನೀಂ ಕೈಗೆ ಕೊಂಡುದನು ವಿಧಿ ಮಣ್ಣೆನುವನ್; ಅವನ ವರ ಮಣ್ಣೆನುವೆ ನೀನು ಭಿನ್ನಮಿಂತಿರೆ ವಸ್ತುಮೌಲ್ಯಗಳ ಗಣನೆಯಿಾ ಪಣ್ಯಕ್ಕೆ ಗತಿ ಯೆಂತೊ? (ಮಂಕುಕ. ೨೧); ಮನುಷ್ಯರ ಪಣ್ಯವನ್ನೂ ಬೇಗಾರ ಮತ್ತು ಅದೇ ರೂಪದ ಇತರ ಬಲಾತ್ಕಾರದ ದುಡಿಮೆಯನ್ನೂ ಪ್ರತಿ ಷೇಧಿಸಲಾಗಿದೆ (ಭಾಧಾನ. ೧೫). ೩. ಮಾರಾಟದ ವಸ್ತು; ವ್ಯಾಪಾರದ ವಸ್ತು: "ವಿಕ್ರೇಯಂ, ಪಣಿತವ್ಯಂ, ಪಣ್ಯಂ-೩ ಮಾರತಕ್ಕ ವಸ್ತುವಿನ ಹೆಸರುಗಳು" (ಸಿದ್ಧಾಂತಿ. ೨೯೮); ಅತಿಶಯಮಪ್ಪ ಕಾರ್ತಿಕದ ಪುಣ್ಣಮೆಯೊಳ್ . . . ಬಿಲ್ಲನಂಬನಾಯತಗುಣಪಣ್ಯಮಂ ಪಿಡಿದು ಮಾಱುದೊಡಾಱಱ ತಿಂಗಳಿಂಗದುಂ ಸ್ಥಿತಿಗತಿಯಿಂದಮಯ್ವಡಿಯ ಲಾಭಮನೀಗು(ಗೆ) ಜಗಕ್ಕೆ ನಿಶ್ಚಯಂ (ಱಟ್ಟಮ. ೬-೩೮); ಆಲರಂಬಂ ಪೊಡೆಸೆಂಡುಗೊಂಡೆರ್ದೆಗೆ ಮಾಲ್ಯಂಗೆಯ್ವ . . . ಮೇಣ್ ಜುಮ್ಮೆಂದು ತೆಂಗಾಳಿಯಿಂ ಪುಲಕಂದಾಳ್ದುವ ವಿಶ್ವನಾಟ್ಯಕೊಲೆವಾ ಪುಣ್ಯಂ ದಲೇಂ ಪಣ್ಯಮೇ? (ಸಂಸಪ. ೧೦-೮). ೪. ಬೆಲೆ; ಕ್ರಯ: "ಪಣಿಃ, ಪಣುಃ, ಪಣನಂ, ಪಣನೀಯಂ, ಪಣ್ಯಂ, ಈ ೫ ಬೆಲೆ" (ಕಾಶಕೃ.೧೦೮). ೫. ವ್ಯವಹಾರ; ನಡವಳಿಕೆ: ಹರಿಯನುಗ್ರಹ ಮತ್ತೆ ತಂದೆಯ ವರವು ನಿಜದಲಿ ವೀರನಳಗಿರೆ ತರುಚರೇಶ್ವರರೊಳಗೆ ಮತ್ಸರಪಣ್ಯ ಕೊನೆಯಾಯ್ತು (ಕೌಶಿರಾ. ೧೬-೮). ೬. ಹೊಗಳತಕ್ಕುದು; ಪ್ರಶಂಸೆ ಮಾಡಲು ಯೋಗ್ಯವಾದುದು. ೭. ಮಾರಾಟ ಮಾಡುವ ಸ್ಥಳ; ಅಂಗಡಿ: "ಪಣ್ಯಂ, ವಿಕ್ರಯಶಾಲಾ, ಆಪಣಃ, ವಿಪಣಿಃ—ಈ ೪ ಅಂಗಡಿ" (ಹಲಾಯು. ೪೦-೧೪೧); "ಆಪಣಂ ವಿಪಣಿ ಪಣ್ಯವಂಗಡಿಯೆನಿಕ್ಕುಂ" (ಮಂಗರಾ. ೫೮-೮).

ಪಣ್ಯದ ಅಂಗಡಿ=ಅರಮನೆಯ ಜೀತದವರು ವ್ಯವಹಾರ ನಡೆಸುವ ಅಂಗಡಿ: ಪಣ್ಯದ ಅಂಗಡಿಗೆ ಶ್ಯಾನಭಾಗನನ್ನೂ ವ್ಯಾಪಾರ ಮಾಡುವುದಕ್ಕೆ ಗೊಲ್ಲನನ್ನೂ . . . ನೇಮಕ ಮಾಡಿಸಿ (ಮಹಾವಂ. I, ೧೨೭). ಪಣ್ಯದ ಜನ=ಅರಮನೆಯ ಜೀತದ ಜನ,—ವರ್ಗ: ಬಾಕಿ ಎತ್ತು, ಅಳು ಯಾವತ್ತು, ಸೀಮೆ ಹೆಣ್ಣುಗಂಡುಜನ, ಅರಮನೆ ಪಣ್ಯದ ಜನ ಎತ್ತು ಸಹಾ, ಜಮಾಯಿಸಿ, ಗಟ್ಟದ ಕೆಳಗೆ ಕಲ್ಲುಹಾಳೆ ಬಳಿಯ ಇದ್ದಂಥಾ ರಸದನ್ನು ಹೆಗ್ಗಳಕ್ಕೆ ತಂದು ಹಾಕುವಂತೆ ದೊರೆಗಳು ಅಪ್ಪಣೆ ಕೊಟ್ಟು ಸಾಗಿಸುತ್ತಾ ಇದ್ದರು (ರಾಜೇಂದ್ರ. ೧೪೫). ಪಣ್ಯದ ತೋಟ=ಅರಮನೆಯ ಜೀತದವರಿಗೆ ಸೇರಿದ ತೋಟ: ಗಡಿಗಳಲ್ಲಿ ರುವ ಅರಮನೆಯ ಪಣ್ಯದ ತೋಟಗಳಲ್ಲಿ ಉತ್ಪತ್ತಿಯಾದ ತೆಂಗು, ಹಲಸು . . . ಮುಂತಾದ ಹಸುರುವಾಣಿ ಜಿನಸುಗಳು ಚಿಕ್ಕ ಉಗ್ರಾಣಕ್ಕೆ ಬರುವಂತೆ ಗೊತ್ತು ಮಾಡಿದರು (ಮಹಾವಂ. I, ೧೨೭). [ಸಂ.]

ಪಣ್ಯಂಗೆಱೆ (ನಾ). ಒಂದು ಸ್ಥಳದ ಹೆಸರು: ತಸ್ಯ ಸೀಮಾನ್ತರಾಣಿ ಪೂರ್ವ್ವಸ್ಯಾಂದಿಶಿ ನೊಲಿ ಬೆಳದಾ ಬೆಳ್ಗಲ್ಮೊಱಡಿ ಪೂರ್ವ್ವದಕ್ಷಿಣಸ್ಯಾಂದಿಶಿ ಪಣ್ಯಂಗೆಱೆ (ಎಕ. IV, ನಾಗಮಂ. ೮೫-೬೧; 776). [?]

ಪಣ್ಯಂದ(ನಾ). ಒಂದು ಬಗೆಯ ಹುಲ್ಲು: "ಪರ್ಜನಾ-ಪಣ್ಯಂದತೃಣ, ಮರದರಿಸಿನ" (ಓಷಧಿ. ೯೧); "ಫಣದ-ಪಣ್ಯಂದ ತೃಣ" (ಓಷಧಿ.೧೦೪).

[<ಸಂ. ಪಣ್ಯಂಧ]

ಪಣ್ಯಕರ್ಮ (ನಾ). ವ್ಯಾಪಾರದ ಉದ್ಯೋಗ; ವಾಣಿಜ್ಯದ ಕಸುಬು: ವಣಿಗ್ವಂಶಕ್ಕೆ ಪಾಶುಪಾಲ್ಯ ಕೃಷಿ ಪ[ಪಾಠಾಂ.ಪು]ಣ್ಯ ಕರ್ಮಂಗಳುಮಂ . . . ಯಥಾಯೋಗ್ಯಮುಪದೇಶಂಗೆಯ್ದು (ಆದಿಪು. ೮-೬೪ ವ). [ಪಣ್ಯ+ಕರ್ಮ]

ಪಣ್ಯಕಾವ್ಯ (ನಾ). ಹಣದ ಆಸೆಗೆ ಬರೆದ ಕಾವ್ಯ: ಮಾನ್ಯ ವಾಲ್ಮೀಕಿಯಂತೆ ಧನ್ಯ ಶುಕನೊಲು ಹಾಡು, ಪಣ್ಯಕಾವ್ಯವು ಹಾಡೆ? (ಗರ. ೨೭-೧೨). [ಪಣ್ಯ+ಕಾವ್ಯ]

ಪಣ್ಯದ್ರವ್ಯ (ನಾ). ಮಾರಾಟದ ವಸ್ತು; ವಿಕ್ರಯಿಸತಕ್ಕ ವಸ್ತು; ವ್ಯಾಪಾರದ ಸರಕು: ದಾರಿಯಲ್ಲಿ ಅಡ್ಡಗಟ್ಟಿ ಪಣ್ಯದ್ರವ್ಯಗಳನ್ನು ಸೂರೆಗೊಳ್ಳಲು ತೊಡಗಿದರು (ಆರ್ಯಕೀ. ೬೨). [ಪಣ್ಯ+ದ್ರವ್ಯ]

ಪಣ್ಯನಾರಿ (ನಾ). ಸೂಳೆ; ವಾರಸ್ತ್ರೀ; ಗಣಿಕೆ: "ವಾರಸತಿ . . . ಪಣ್ಯನಾರಿಯೆನೆ ಗಣಿಕೆಯೆನೆ ಸೂಳೆಯಕ್ಕು" (ಮಂಗರಾ. ೯೦-೫); ಅರಣ್ಯದೊಳು ಪಣ್ಯನಾರಿ . . .ಮಾನವ ಮಾರಿ ದಾರಿಗೊಂಡವರ ಸೂರೆ ಗೊಂಬಳು ಗುರುವೆ ಸೇರಿದೆನು ನಿಮ್ಮ (ಮೈಲಾರ. ೪೩-೪೬).

[ಪಣ್ಯ+ನಾರಿ$_2$]

ಪಣ್ಯವಧು (ನಾ).=ಪಣ್ಯನಾರಿ: ವಿದಿತಂ ಪಣ್ಯವಧುವೊಂದೆ ತೆಱ ನಾಗಿರ್ಕುಂ (ಶೃಂಗಾರ. ೩-೨೧); ಮುನಿಸಾಪತ್ನಸಂತಾನಮಂ ತಕ್ಕು ಗೆಡಿಸಿ ರಾಜ್ಯಂಗೆಯ್ವನಾ ಪಣ್ಯವಧುವಾಟಿಯೊಳಗನಂಗಂ (ಉದ್ಭದೇ. ೪-೧೬). [ಸಂ. ಪಣ್ಯವಧೂ]

ಪಣ್ಯವನಿತೆ (ನಾ).=ಪಣ್ಯನಾರಿ: ಮೃದುಪದಗತಿಯಿಂ ರಸಭಾವದ ಪೆರ್ಚಿಂ ಪ[ಪಾಠಾಂ.ಪು]ಣ್ಯವನಿತೆಯೊಳ್ ಕೃತಿಸೌಂದರ್ಯದ ಕಣಿಯೆನೆ ವಿದಗ್ಧಬುಧಜನದ ಮನಮನಲೆಯಲೆವೇಡಾ (ಆದಿಪು. ೧-೧೭); ನಿರ್ವ್ಯಸನ ದೊಳು ಪಾಲನೆಯೊಳು ಧನದೊಳಹಿಕಾಯದೊಳ್ ವ್ಯವಹಾರದೊಳ್ ಪಣ್ಯವನಿತೆಯೊಳು ಪಡೆಯೊಳತಿಸುಖದೊಳಂ ಭೋಗಮಕ್ಕು (ಮಂಗರಾ. ೧೫೦-೫೦). [ಪಣ್ಯ + ವನಿತೆ]

ಪಣ್ಯವಸ್ತು (ನಾ).=ಪಣ್ಯದ್ರವ್ಯ: ಚತುರವ್ಯಾಪಾರಿಗಳಾದ ಗಂಗಪ್ಪ ನವರು ಜ್ಞಾನವಾಗಲಿ, ಕವಿತೆಯಾಗಲಿ, ಪಣ್ಯವಸ್ತುವಲ್ಲವೆಂಬುದನ್ನು ತಿಳಿದುಕೊಂಡಿದ್ದಾರೆ (ಸಾಸಮಾ. ೧೫೧); ಈ ಪಂಚವರ್ಣಗಳ ಸಂಗಮವೇ ಅಹುದು ನಾಂದಿ ಕುಲದೈಕ್ಯ ಜೀವನಕೆ, ಅತಿನವ್ಯ ಚಿತ್ರಕಲೆಗೆ: ಮಣಿಯ ದಿರು ಪಣ್ಯವಸ್ತುವಿನ ಬೆಲೆಗೆ (ಚಿಂತನ. ೭೭-೨೨). [ಪಣ್ಯ + ವಸ್ತು]

ಪಣ್ಯವೀಥಿ₁, ಪಣ್ಯವೀಥಿ₁ (ನಾ). ವೇಶ್ಯೆಯರು ವಾಸಿಸುವ ಬೀದಿ ; ಸೂಳೆಗೇರಿ : ಆ ಪಣ್ಯವೀಥಿಯೊಳ್ ಮಾಪಜಕಾಯ್ದಿಕ್ಷು ಚಾಪ ಕುಸುಮಾಸ್ತ್ರವನಾಂತು ಯೇಪೊತ್ತೆಸೆವ ನವ್ಯರೂಪು ಯೌವನ ಸತ್ಕಲಾಪವಿವರ ದೊರೆಗೆಡಿಸಿ (ಭೈರವೇ. ೨-೯೩). **ಪಣ್ಯವೀಥಿ₁ :** ಅಂಗಸಂಭವನ ಬೀಡುಂದಾಣವೆನಲು ಬೆಡಂಗಾದುದಾ ಪಣ್ಯವೀಥಿ [ಪಾಠಾಂ. ಥಿ] (ತ್ರೀಪಾಲ. ೯-೬) ; ಗಿಳಿಗಿನಿದು ನುಡಿಗಳಂ ಬರಿಸುತಂ... ಪಾಡುತಂ ನೋಡುತಂ ಬೆಲೆವೆಣ್ಗಳೆಸೆದಿರ್ದರಾ ಪಣ್ಯವೀಥಿಯೊಳು (ಚಿಬಪು. ೧೧-೪೦). [<ಸಂ. ಪಣ್ಯವೀಥೀ]

ಪಣ್ಯವೀಥಿ₂ (ನಾ). ವ್ಯಾಪಾರ ನಡೆಯುವ ಬೀದಿ ; ಅಂಗಡಿ ಬೀದಿ ; ಮಾರುಕಟ್ಟೆ : "ವಿಪಣಿ ಪಣ್ಯವೀಥೀ ನಾಮಂ" (ವಸ್ತುಕೋ. ೪೬-೬). [ಸಂ. ಪಣ್ಯವೀಥೀ]

ಪಣ್ಯವೀಥಿ₁ 'ಪಣ್ಯವೀಥಿ₁' ನೋ.

ಪಣ್ಯವೀಥಿ₂ (ನಾ). = ಪಣ್ಯವೀಥಿ₂ : ವನ್ಯಮೃಗಗಳ ನಡುವೆ ಗೋವು ಬಂದೇನಹುದು ಪಣ್ಯವೀಥಿಯಲ್ಲಿ ತಾತ್ತ್ವಿಕನಿಗೇನಹುದು ? (ಮಂಕುಕ. ೩೦೯). [ಪಣ್ಯ+ವೀಥಿ (<ಬೀದಿ)]

ಪಣ್ಯಾಂಗನಾಜನ (ನಾ). ಸೂಳೆಯರ ಗುಂಪು ; ವಾರಸ್ತ್ರೀ ಸಮೂಹ : ಮತ್ತಿತ್ತ ಮಿಂಡಂ ತಟ್ಟ ಮೆಡಱುದಂತೆ ಸುತ್ತಿಱುವ ಕಾಲ್ಗಾಪಿನ ಕಡಿತಲೆಯ ಬಳಸಿದಗಣ್ಯಪಣ್ಯಾಂಗನಾಜನದ ನಡುವೆ ಮಣಿ ಮಯಸೀಕಂಗಳನೇಱಿ (ಪಂಪಭಾ. ೩-೫೫ ಪ) ; ಭೃಂಗಕುಲನೀಲಾಳಕಂಗಳ ನಭಂಗಳ ಬೆಳಂಗಿಸುವ ಮಧುರವಚನಂಗಳರುಣಪ್ರವಾಳಂಗಳ ನಖಂಗಳ ಲತಾಂಗಿಯರೆನಿಪ್ಪ ಪಣ್ಯಾಂಗನಾಜನವೆಸೆದುದು (ಹಡಕಾ. ೪-೪೦) ; ಅಗಣ್ಯಲಾವಣ್ಯಪಣ್ಯಾಂಗನಾಜನದ ಭಾಗ್ಯದ ಸೌಭಾಗ್ಯದ ನಯದ ಬೀಯದ ಚಾಗದುಪಭೋಗದೆಸಕದೊಳಂ (ಪುಷ್ಪಪು. ೨-೭೭ ಪ). [ಸಂ.]

ಪಣ್ಯಾಂಗನಾವೀಥಿ (ನಾ). = ಪಣ್ಯವೀಥಿ₁ : ಸೊಬಗುವೆತ್ತ ಪಣ್ಯಾಂಗನಾ ವೀಥಿಗಳೊಳಂದಂಬಡೆದಿರ್ದುಮತಿಮನೋಹರಮನಪ್ಪುಕೆಯ್ದುರ್ದುದೆಂತೆಂ ದೊಡೆ (ಜಗವಿ. ೨-೩೩ ಪ) ; ಹಂತಿ ಹಂತಿಯ ಭದ್ರವನಗಳನೀಕ್ಷಿಸುತ ಲಂತರಾಂತರದ ಮಣಿಮಾಡಗಳ ಸಾಲುಸಾಲಿಂ ತೋರ್ಕೆವಡೆದ ಪಣ್ಯಾಂಗನಾವೀಥಿಯೊಳು ಬರುತಿರಲು (ಭಕ್ತಾಚ. ೨-೬). [<ಸಂ. ಪಣ್ಯಾಂಗನಾವೀಥೀ]

ಪಣ್ಯಾಂಗನೆ (ನಾ). = ಪಣ್ಯನಾರಿ : "ರೂಪಾಜೀವಾ, ವೇಶ್ಯಾ, ಗಣಿಕಾ, ಪಣ್ಯಾಂಗನಾ, ಕ್ಷುದ್ರಾ – ಈ ೫ ಸೂ(ಟಿ)ಳೆ" (ಹಲಾಯು. ೪೦-೩೩೬) , ಪದ್ಮಾವತಿಯೆಂಬಚ್ಚರಸಿಯೆ ತತ್ಪುರದೊಳ್ ವಸಂತಸೇನೆ ಯೆಂಬ ಪಣ್ಯಾಂಗನೆಯಾಗಿರೆ (ಶಾಂತಿಪು. ೬-೮೬ಪ); ಗೀತನೃತ್ಯಪ್ರಸೂತಿಕಾ ಸುತ ಪಣ್ಯಾಂಗನಾಪಾಪಕರ್ಮದೀನಾನಾಥಜನದಾನಶಾಲಾವಿವಾಹಾದಿ ಮಂಗಳಗೇಹವರ್ಜಿತಮುಂ . . . ಆಪ್ಪ ಭೈಕ್ಷಾಸಿದ್ಧಿಯೊಳು (ಅಜಿಪು. ೭-೧ ಪ) ; ವಿಚಿತ್ರಮಹಿಮಂ ಕೆಲಬರ್ ಗಣೇಶ್ವರರಂ ಕರೆದು ನೀವೆಲ್ಲರುಂ ಮರ್ತ್ಯಲೋಕದೊಳು ಮಂಗಳವಾಡದ ಪಣ್ಯಾಂಗನೆಯರೊಳೊರ್ಬರುಳಿಯ ದಂತೆ ಎಲ್ಲರ್ಗಂ ಬೇಱೆಬೇಱೊತ್ತೆಗಳನಿತ್ತಲ್ಲಲ್ಲಿ ನೆರೆದಿಪ್ಪುದು ಎಂದು ಬೆಸಸಿ (ಒಸರ. ೧೨-೭೩) ; ಪಣ್ಯಾಂಗನೆಯತಿಶಯಲಾವಣ್ಯಮನವಳಂಗ ದಂದಮುಮನಾಕೆಯ ತಾರುಣ್ಯದ ಸೊಬಗಂ ಕಂಡಂ ಘಣ್ಯಧಿಸಾಭರಣ ಚರಣಸರಸಿಜಭೃಂಗಂ (ವೃಷವಿ. ೨೮-೧೭). [ಸಂ. ಪಣ್ಯಾಂಗನಾ]

ಪಣ್ಯಾಕುಲ (ನಾ). ವೇಶ್ಯೆಯರ ಗುಂಪು : ಮುಂತೆ ಮೆಱವ ಪಣ್ಯಾ ಕುಲದ ಕಂತು ಮೋಹನವೀಥಿ ವಿಸ್ತರಿಪಡರಿದು ಜಸದಿಂ. ತೇಜದಿಂ . . . ಶೋಭಿಸೆ ಕುತೂಹಲದೊಳುಂ ತಣಿವ ತಾಣಮೆನಲು (ಲಿಂಗಪು. ೧೧-೨೮). [ಸಂ.]

ಪಣ್ಯಾಗಾರ (ನಾ). ವ್ಯಾಪಾರ ಮಾಡುವ ಸ್ಥಳ ; ಅಂಗಡಿ : ದಿಗವನಿನಭೋಭೋಗಾಭೋಗಂ ಮದನ್ನಯುಮಾಗೆ ವಸ್ತುಗಳ ಬಟಾಯಂ ಪಣ್ಯಾಗಾರ ಸ್ವಪಾಹನದೇವರೊಳ್ ಸೊಗಯಿಸೆ (ಶಾಂತಿಪು. ೧೧-೨೦). [ಪಣ್ಯ + ಆಗಾರ]

ಪಣ್ಯಾಜೀವ (ನಾ). ವ್ಯಾಪಾರದಿಂದ ಜೀವನ ನಡೆಸುವವನು ; ವ್ಯಾಪಾರಿ ; ವರ್ತಕ : "ಪಣ್ಯಾಜೀವಃ, ವಣಿಕ್, ಪ್ರಾಪಣಿಕಃ, ನೈಗಮಃ, ವೈದೇಹಃ – ಈ ೫ ಹರದಂ" (ಹಲಾಯು. ೧೩-೪೧೭) ; "ವೈದೇಹಕಃ, ಸಾರ್ಥವಾಹಃ, ನೈಗಮಃ, ವಾಣಿಜಃ, ವಣಿಕ್, ಪಣ್ಯಾ ಜೀವಃ, ಆಪಣಿಕಃ, ಕ್ರಯವಿಕ್ರಯಿಕಃ – ಆ ವರ್ತಕತನ ಮಾಡುವವನ ಹೆಸರು" (ಸಿದ್ಧಾಂತಿ. ೨೯೭). [ಸಂ.]

ಪಣ್ಯಾಜೀವಿ (ನಾ). = ಪಣ್ಯಾಜೀವ : ತೀವಿದರು ಹೊಜವಳಯದಲಿ . . . ಪಣ್ಯಾಜೀವಿ ವಾಮನ ಮೂಕ ಬಧಿರಾಂಧಾವಳಿಗಳೊಪ್ಪಿದರು ಸಕಲದಿಶಾಸಮಾಗತರು (ಕುವ್ಯಾಆ. ೧೨-೨೧). [ಸಂ. ಪಣ್ಯಾಜೀವಿನ್]

ಪಣ್ಯಾರ 'ಪಣಿಯಾರ' ನೋ.

ಪಣ್ಯೆ (ನಾ). ೧. = ಪಣ್ಯನಾರಿ : ಸಕಳಮಹಿಳಾಪ್ರಪಂಚಂ ಸ್ವಕೀಯೆ ಪರಕೀಯೆ ಪಣ್ಯೆಯೆಂದಿಂತು . . . ಮೂಱುತೆಱನಾಗಿರ್ಕುಂ (ಶೃಂಗಾರ. ೨-೨೦) ; ಪ್ರಕಟತರ ನಾಯಿಕೆಯರಾ ಸ್ವಕೀಯೆ ಪರಕೀಯೆ ಪಣ್ಯೆಯೆನೆ ಮೂಱುತೆಱಂ (ರಸರ. ೩-೮೯) ; ತರಳಾಪಾಂಗಪ್ರಕಾಶಂ ಕೆದಱೆ ಮದನಬಾಣಂಗಳಂ . . . ಬಿಂಬಾಧರರಾಗಂ ರಾಗಮಂ ನೋಳ್ಪರೊಳೆ ಪಡೆವುತಂ ಪೋಯ್ತು ಪಣ್ಯಾ[ಪಾಠಾಂ. ಣ್ಯ]ಪ್ರತಾನಂ (ರಾಜಶೇ.೧೧-೭೮). ೨. ಒಂದು ಬಗೆಯ ಸಸ್ಯ ; ಕಂಗೊಂಗೆ : "ಪಾರಾವತಾಂಘ್ರಿಃ, ಕಟಭಿಃ, ಪಣ್ಯಾ, ಜ್ಯೋತಿಷ್ಮತೀ, ಲತಾ – ೫ ಕಂಗೊಂಗೇಗಿಡ" (ಸಿದ್ಧಾಂತಿ. ೧೪೬) ; "ಅಗ್ನಿಬಳ್ಳಿ, ಇರುಂಬಳ್ಳಿ, ಎರುಂಬಳ್ಳಿ, ಚಿಟಕಿ ಹಂಬು, ಕಂಗು . . . ಪಣ್ಯೆ, ಮಿಂಚಿನ ಬಳ್ಳಿ" (ಸಸ್ಯನಿ. ೨೮). [ಸಂ. ಪಣ್ಯಾ]

ಪಣ್ವ 'ಪಣ್₂' ಪರಾ.

ಪತ₁ 'ಪತ್ತ₁' ನೋ.

ಪತ₂ (ನಾ). ದಾರಿ ; ಹಾದಿ ; ಮಾರ್ಗ : ಪಥ–ಪತ (ಶಮದ. ೨೫೫ ಪ್ರಯೋ) ; ಮಾರ್ಗ ಮೂಱಾಗಿರುತಿಹುದು ಸಂಪೂರ್ಣಧನ ಗುರುಪರಿ ಚರಿಯ ಪರಿವರ್ತನೆಗಳೆಂಬಿನತನತಿಗಳೆದು ತಿರುಗಿ ಬಂದೊಡೆ ನಾಲ್ಕನೆಯ ಪ[ಪಾಠಾಂ. ಮು]ತ ದೊರಕಲರಿಯದು ಕಳೆಗಳನು ಸಂವರಿಸುವ ನರೋ ತ್ತಮರುಂಗಳಿಗೆ (ಕುವ್ಯಾಉ. ೬೧೩. ೪-೮೮). [<ಸಂ. ಪಥ]

ಪತಂಗ₁ (ನಾ). ೧. ಹಕ್ಕಿ ; ಪಕ್ಷಿ : "ಪತತ್, ಪತಂಗಃ, ಪತಗಃ. . . ವಾಜೀ, ದ್ವಿಜಃ – ಈ ೨೬ ಹಕ್ಕಿ" (ಹಲಾಯು. ೪೦-೮೪) ; ಕೊಂದು ಕಾಲಾಂತರಕೆ ಭೂಸುರವೃಂದವೈರಿಯು ಪರಶುರಾಮನ ಚಂದನಜಾಯದೆ ಬಂದು ಹಳಚಿದನಾ ಪತಂಗಗಳ (ಸಂಭಪ. ೨೬-೩೫). 'ಪತಂಗಾಧಿಪ' ಪರಾ. ೨. ಹಾರುವ ಹುಳು ; ಮಿಡತೆ ; ಶಲಭ : "ಶಲಭಂ ಪತಂಗಮೆಂದಱಿಗಱಜೊಳ್" (ವಸ್ತುಕೋ. ೪೬-೨೩) ; "ಶಲಭಮೆಂದೆನೆ ಪತಂಗಕ್ಕೆ ಪೆಸರದು" (ಮಂಗರಾ. ೫೨-೧೦) ; ತುಂಬಿ ಪತಂಗ ನೊಣ . . . ತೊಸನೆ ಮೊದಲಾದುವಕ್ಕೆ ಸ್ಪರ್ಶನ ರಸನ ಘ್ರಾಣಮುಮುಕ್ಕು (ಶಾಸ್ತ್ರಟೀ. ೧೧೭-೬). ೩. (ಬೆಳಕಿನಿಂದ ಆಕರ್ಷಿತವಾಗಿ ದೀಪಕ್ಕೆ ಮುತ್ತುವುದರಿಂದ ರೆಕ್ಕೆ ಉದುರಿ ಹೋಗುವ) ಒಂದು ಬಗೆಯ ರೆಕ್ಕೆಹುಳು ; ದೀಪದ ಹುಳು; ಈಚಲು ಹುಳು : ಅಂತು ತಾಗಿದ ಸಿಂಧುಸಂದನನ ಕೋಪಶಿಖಿಶಿಖಾಕಳಾಪಂಗಳೊಳ್ ಪುಡುಪುಡನಱ್ಗು ಸಾಯಲೆಂದು ಪಾಯ್ವ ಪತಂಗಂಗಳಂತೆ ಸೋಮಕಶ್ರೀಜಯ ಪ್ರಮುಖನಾಯಕರೊಂದಕ್ಷೋಹಿಣೀಬಲಂಬೆರಸು ಭರಂಗೆಯ್ದಾಂತೊಡೆ

(ಸಂಪಭಾ. ೧೧-೩೯ ಪ); ಸರ್ಪನ ಸಂಯೋಗ ಜ್ಯೋತಿಯ ಪತಂಗನ ಬೆಸನದಂತೆ (ಬಸವ. ೮೧೨); ಪಣ್ಣಿಂದು ಭ್ರಮಿಸಿ ಪತಂಗ ದೀಪದಿ ಬಿದ್ದು ಕಣ್ಣುಗೆಡುವುದನು ಕಂಡು ಕಂಡಱಿಯ (ಪುರಂದ. ಧಾ. ೫-೯೫-೪); ನಿನ್ನಂಗರಮ್ಯತಾದೀಪಶಿಖಿ ಪಾರ್ಥನ ವಿರಾಗದ ಪತಂಗಮಂ. . . ಸೆಳೆದೆಳೆದು ಸುಟ್ಟುರಿಸಿ ಜಾಜ್ವಲ್ಯಮಪ್ಪಂತೆವೋಲ್ ನೆಗಳ್ದಪೆಂ (ಚತ್ರಾಂಗ.೨೯-೮೦೦). ೪. ಮೈಯಲ್ಲಿ ಬೆಳಕನ್ನುಳ್ಳ ಒಂದು ಬಗೆಯ ಹಾರುವ ಹುಳು; ಮಿಂಚುಹುಳು; ಹೊನ್ನೆಯ ಹುಳು; ಮಿಣುಕುಹುಳು: ದ್ವಿರದಂ ಮತ್ಸ್ಯಂ ಪತಂಗಂ ಭ್ರಮರನಹಿಯೆನಿಪ್ಪಿಂತಿವೇಕಿಂದ್ರಿಯಾರ್ಥಂ ತಿರುಗುತ್ತಿರ್ದಪ್ಪುವು (ರತ್ನಾಕ. ೨೮). ೫. ಸೂರ್ಯ; ರವಿ: "ರವಿ ಮಾರ್ತಾಂಡಂ ಪತಂಗಂ ತಪಿ ತಪನ . . . ತರಣಿ ಸಪ್ತಾಶ್ವನಾದಿತ್ಯ ನಕ್ಕುಂ" (ಪಸ್ತುಕೋ. ೧೧-೬೪); ಪತಂಗನೂಥವಾಜಿಯು ಕಡೆವಾಯ್ಸಳಿಂದುಗುವ ಭೇಸವಿತಾನದೊಳಾದಮೊಂದಿ ಸಂಶಯಮನೆ ಮಾಟ್ಟುವಾತುರದ ತೂಱಲಗೊಂಬಿನ ತೂಲರಾಶಿಗಳ್ (ಕಾದಂಪೂ. ೧೨೧); ತಂಗದಿರನನಿಮಿಷ ತಾರಕೆಗಳು ಮಸಳಿಸೆ ಪತಂಗ ಪರ್ವತವ ಅಡರಿ ಬಂದನು (ಕನಕ. ೧೬೯ ಪಲ್ಲವಿ); ಜಂಗಮನಿರ್ಗಮನಪ್ರಣಿವರದ ಪತಂಗಮಹಿತಶಶಿವಸುನಯನಾ ಭವಭಂಗ ಮನೋಜ್ಞವಿಹಂಗಗಮನ ನುತಾಂಗ ಮಹಂತ ಜಯ (ಉದ್ಭಟೇ. ೨-೧). ೬. ದುಂಬಿ; ಭ್ರಮರ: ಶ್ರೀಮಹಿಳಾನನ ಮಂಜುಳತಾಮರಸಪತಂಗ ವಿಷ್ಣುಪದಭಕ್ತಿರಸೋದ್ದಾಮ ಪೃಥುವಂಶ ದೇಳ್ಗೆಯನಾ ಮೈತ್ರೀಯಂಗೆ ಶಕ್ತಿಸುತನಿಂತುಸಿರ್ದಂ (ವಿಷ್ಣುಪು.೧-೪-೧). ೭. "ಒಂದು ತರದ ಭತ್ತ" (ಗಂಗಾಮ. ೧೯೬). ೮. ಚಿಟ್ಟೆ; ಪಾತರಗಿತ್ತಿ: ಪತಂಗಕ್ಕೂ ಹಾತೆಗೂ ವಿಶೇಷ ತಾರತಮ್ಯವಿಲ್ಲ. ಪತಂಗವು ವಿಶ್ರಮಿಸುವಾಗ ರೆಕ್ಕೆಗಳನ್ನು ಬೆನ್ನಿನ ಮೇಲೆ ನೆಟ್ಟಗೆ ಹೋಡಿಸಿ ಹಿಡಿಯುವುದು (ಬಾಲಪ್ರ. II, ೧೦೮೪). ೯. ಬಾಣ; ಅಂಬು; ಶರ: "ಶಲಭಂ ಬಾಣ ವಿಹಂಗಮಂ ರವಿ ಪತಂಗಾಖ್ಯಾನ" (ಸಾಸಾರ. ೬೨). ೧೦. ಕಾಗದದಿಂದ ಮಾಡಿದ ಒಂದು ಬಗೆಯ ಗಾಳಿಪಟ: (ಕ). ೧೧. ಒಂದು ಪರ್ವತದ ಹೆಸರು: ತ್ರಿಕೂಟ ಕುರುವಿಂದ ಪತಂಗ ರುಚಕ ನಿಷಧವೆಂಬೈದು ಗಿರಿಗಳೇ ತೆಂಕಣ ಗಂಧಮಾದನ ಶೈಲದ ಪಡುವಲ ವಿಪುಲಾದ್ರಿಯ ಮಧ್ಯಭಾಗದೊಳಗಿಹವು(ವಿವೇಕ.೨೧೪).

ಪತಂಗದ ಹುಳು = ಪತಂಗ ೩: "ಪತಂಗಃ, ಶಲಭಃ-೨ ಪತಂಗದ ಹುಳುವಿನ ಹೆಸರುಗಳು" (ಸಿದ್ಧಾಂತಿ. ೧೬೨). [ಸಂ.]

ಪತಂಗ$_2$, ಪಾತಂಗ (ನಾ). ೧. ಒಂದು ಬಗೆಯ ದೊಡ್ಡ ವೃಕ್ಷ ಮತ್ತು (ಕೆಂಪುಬಣ್ಣವನ್ನು ತಯಾರಿಸುವ) ಅದರ ತೊಗಟೆ: ಬೊಬ್ಬುಲಿ ಪಚ್ಚಾರಿ ಪತಂಗಮೆಕ್ಕೆ ಮೊದಲಾದುರ್ವೀರುಹಂ ರಾಜಿಕುಂ (ಯಾದಚಂ. ೪-೪೫); ಪತಂಗ, ಸಪ್ಪಂಗ (ಮೈಷಿಗಿ. ೧೫-೨೭೬); ಮೆಣಸು, ಅಡಿಕೆ, ಪತಂಗ, ಸಿಂಗಾಪುರಿ (ಮುಂಬಪ್ಯಾ. ೧೧೪). ೨. ಒಂದು ಬಗೆಯ ಗಂಧದ ಮರ; ರಕ್ತಚಂದನ: "ಪತಂಗಃ—ಪತಂಗ, ರಕ್ತಚಂದನ" (ಓಷಧಿ. ೯೧); ಬೆಳಲಾಲಂ ಮತ್ತಿ . . . ಪತಂಗಂ ಪುಲಿಂಗಿಲ್ ತಮಾಲಂ ಮೊಗಾಚಂ ನೆಲ್ಲಿ ನೇಜಂಬೆಲ್ ತದುಕು ಪನೆಗಳೊಪ್ಪಿರ್ಕುಮಾ ಕಾಡೊಳೆತ್ತಂ (ಶಬಶಂ. ೩-೩೨). 'ಪತಂಗ$_1$', 'ಪತ್ರಾಂಗ' ಪರಾ. **ಪಾತಂಗ**: ೩. ಒಂದು ಬಗೆಯ ಮರ: "ಪಾತಂಗ-ಅಲ" (ಓಷಧಿ. ೯೬); ಅತ ಚಿಕ್ಕಯ್ಯನಡಗುವಾರಣ್ಯದ ಜಾತಿವೃಕ್ಷವನೇನೆಂಬೆ ಭೂತಾಳಿ ಬೂರುಡೆ ಮಿಟ್ಟುಲಿಯ ದಿಂಡ ಪಾತಂಗ ಮುಗುಳಿಯ ಮರನು (ನಿಜಸಾಂ. ೧-೫೫).

[ದೇ.?./ ತೆಲು. ಪತಂಗಚೆಕ್ಕ./ಹಿಂ. ಮರಾ. ಪತಂಗ್]

ಪತಂಗಮಂಡಲ (ನಾ). ಸೂರ್ಯಮಂಡಲ: ಪತಂಗಮಂಡಲಮಪರ ಗಿರಿತಟಮನೆಯ್ದುವುದುಂ (ಸಂಪಭಾ.೧೨-೮೮ ಪ). [ಪತಂಗ$_1$ + ಮಂಡಲ]

ಪತಂಗಮಣಿದೀಪಿಕಾನ್ಯಾಯ (ನಾ). [ನ್ಯಾಯ] ದೀಪದ ಹುಳುವು ನಿಜವಾದ ದೀಪವೆಂಬ ಭ್ರಮೆಯಿಂದ ಮಣಿದೀಪಕ್ಕೆ ಮುತ್ತುವುದರಿಂದ ಅಪಾಯವಿಲ್ಲದಿದ್ದರೂ ವ್ಯರ್ಥಪ್ರಯತ್ನವಾಗುವುದೆಂಬ ನ್ಯಾಯ: ಆತನು ಪುನಃ ಪುನಃ ಅಲ್ಲಿಗೆ ಹೋಗುತ್ತಿರುವುದು ಪತಂಗಮಣಿದೀಪಿಕಾನ್ಯಾಯವೆಂದೂ ಕರುವಿಯನ್ ಎಂಬ ಆತನನ್ನು ಎಚ್ಚರಿಸಿಬಿಡಬೇಕು (ಮಂತ್ರಶ. ೧೩೧-೨೦). [ಸಂ.]

ಪತಂಗವೃತ್ತಿ (ನಾ). ೧. ದೀಪದ ಹುಳುವಿನ ನಡವಳಿಕೆ,—ವ್ಯವಹಾರ. ೨. (ಆಲಂ) ಪೂರ್ವಾಪರವಿವೇಚನೆಯಿಲ್ಲದೆ ಮುನ್ನುಗ್ಗುವುದು: ಮತಿಹೀನರಪ್ಪ ಮನುಜರ್ ಪತಂಗವೃತ್ತಿಯನೆ ಕೊಂಡು ಕೊನೆಯುತ್ತಿರ್ಪರ್ ಸತತಮದೆಂತುಂ ವಿಬುಧಪ್ರತತಿಗನಿಷ್ಟಂ ನಯಾಗಮಕ್ಕೆ ವಿರುದ್ಧಂ (ಪಂಚತಂ. ೨೧೬-೨); ನಮ್ಮ ಭುಜಬಲದ ವಿಜಿಗೀಷುವೃತ್ತಿಯನೆ ಮುಂದಿಟ್ಟು ಪತಂಗವೃತ್ತಿಯನೆ ನೆಗಟ್ಟುದುಚಿತಮಲ್ಲದು ಸಮಯೋಚಿತಕ್ಕೆ ತಕ್ಕಂತೆ ನೆಗಟ್ಟುದೆ ಮಂತ್ರಂ (ಆನಂಪು. ೧೩-೫೯ ಪ). [ಪತಂಗ$_1$ + ವೃತ್ತಿ]

ಪತಂಗಸೂತಜ (ನಾ). ಸೂರ್ಯನ ಸಾರಥಿಯಾದ ಅರುಣನ ಮಗ; ಜಟಾಯು: ತೀವಿದುತ್ಸವದಿಂದ ವರರಾಜೀವಲೋಚನನೈದಿದನು ಪರಿಭಾವಶುದ್ಧಿಯ ಮನದ ತಪದ ಪತಂಗಸೂತಜನ (ತೊರಾ. ೩-೧-೪೫). [ಸಂ.]

ಪತಂಗಾಧಿಪ (ನಾ). ಪಕ್ಷಿಗಳ ಒಡೆಯ; ಪಕ್ಷಿರಾಜ; ಗರುಡ: "ಪಿಂಗದೆಯೆಲರುಣವಗೆಯ ಪತಂಗಾಧಿಪ ಗರುಡನಕ್ಕು ಪಕ್ಕಿಗಳಾಣ್ಮಂ" (ಕವಿಕಂ. ೨೬). [ಪತಂಗ$_1$ + ಅಧಿಪ]

ಪತಂಗಿ (ನಾ). ಹಕ್ಕಿ; ಪಕ್ಷಿ: "ಪತಂಗಿ ಪತ್ರಿ[ತ್ರಿ]ಯೆನಿಕ್ಕುಂ" (ಪಸ್ತುಕೋ. ೪೪-೨೪). [ಸಂ. ಪತಂಗಿನ್]

ಪತಂಗಿಕೆ (ನಾ). ೧. ಒಂದು ಬಗೆಯ ಸಣ್ಣ ಪಕ್ಷಿ. ೨. ಒಂದು ಬಗೆಯ ಸಣ್ಣ ಜೇನುನೊಣ; "ಬಿಳೀಜೇನುತುಪ್ಪ ಮಾಡುವ ನೊಣ" (ಗಂಗಾಮ. ೧೯೬). ೩. ಬಿಲ್ಲಿನ ಹೆದೆ. [ಸಂ. ಪತಂಗಿಕಾ]

ಪತಂಗಿಸು (ಕ್ರಿ). ೧. ಆವಿಯಾಗು; ಹಬೆಯಾಗು: ಭೂಮಿಯ ಮೇಲಿನ ನೀರೇ ಸೂರ್ಯಕಿರಣಗಳಿಂದ ಪತಂಗಿಸಿ ಹೋಗಿ ಮೋಡವಾಗಿ ಮತ್ತೆ ಮಳೆಯಾಗಿ ಬರುವುದು (ನಡದಾ. II, ೧೫೫೩). ೨. ಬಟ್ಟೆ ಇಳಿಸು; ಸಾರವನ್ನು ತೆಗೆ: ಎರಡು ಸಾರಿ ಪತಂಗಿಸಿ ತೆಗೆದ ಕಟು ಮದ್ಯಸಾರ (ನಿಬಂಧ. II, ೧೬೯).

[ಪತಂಗ್ $_0$ (P←ತಮಿ. ಪತಙ್ಗ) + -ಇಸು$_3$./ತೆಲು. ಪತಂಗಿಂಚು]

ಪತಕರಿಸು 'ಪತಿಕರಿಸು' ನೋ.

ಪತಗ (ನಾ). ೧. ಹಕ್ಕಿ; ಪಕ್ಷಿ: "ಪತತ್, ಪತಂಗಃ, ಪತಗಃ, ಪತತ್ರೀ . . . ದ್ವಿಜಃ—ಈ ೨೬ ಹಕ್ಕಿ" (ಹಲಾಯು. ೪೦-೮೪); ಪದಪಿನಂ ಕ್ರಿಮಿಕೀಟಪತ[ಪಾಕಾಂ.ತಂ]ಗನಿಕರಕ್ಕೆ ಪಶುವಧಿಕ ಪಶುವಿಗೆ ಮನುಜನಧಿಕ (ಪತಿಲ. ೧೪-೪). ೨. (ಬಣ್ಣಬಣ್ಣದ ರೆಕ್ಕೆಗಳನ್ನುಳ್ಳ) ಹಾರುವ ಕೀಟ; ಚಿಟ್ಟೆ: ಅರಣ್ಯಕದ ಪುಷ್ಪಗಳ ಮೂಸುವವರಾರು? ಅರಿಪರು ಪತಗದುಡುಪನು ಹುಡುಕಿ ಮೆಚ್ಚಲ್? ಬೇರೊಬ್ಬರೆಣೆಕೆಯಿಲ್ಲದೆ ಪ್ರಕೃತಿ ತನಗೆಂದೆ ಸ್ವಾರಸ್ಯವೆನಗುವಳೊ! (ಪಂಕುಕ. ೫೬೬). [ಸಂ.]

ಪತತಿ (ನಾ). (?): ಪ್ರಿಯ ಚೆಲ್ವ ಚೆಲ್ವ ಸಂಪನ್ನ ಕಲಜನವರ್ಜ್ಜಿತನ್ ಧರೆಗೀಶಂಗೆ ಒವದೊರೆ ಪತತಿಯ ಅಱಿದು ಸುರಲೋಕಕ್ಕೆ ಏಱಿದನ್ (ಎಇ. IX, ೨೦-೧೦; ಸು. 800). [?]

ಪತತ್ಪ್ರಕರ್ಷ (ನಾ).[ಕಾವ್ಯಮೀಮಾ] ವಾಕ್ಯದಲ್ಲಿ ಬರುವ ಪದದೋಷಗಳಲ್ಲಿ ಒಂದು; "(ಅಲಂಕಾರವಾಗಲಿ ಬಂಧವಾಗಲಿ) ಮೊದಲು

ಉತ್ಕೃಷ್ಟವಾಗಿದ್ದು, ಅನಂತರ ಬರಬರುತ್ತ ಕೀಳಾಗುವುದು" (ಕೈಪದಿ. ೨೨೮). [ಸಂ.]

ಪತತ್ರ (ನಾ). ಗರಿ; ರೆಕ್ಕೆ; ಪಕ್ಷ: "ತನೂರುಹಂ, ಗರುತ್, ಪತ್ರಂ, ಪತತ್ರಂ . . . ಪಕ್ಷಃ — ಈ ೯ ಎಜ(ಂ)ಕೆ" (ಹಲಾಯು. ೪೦-೪೬); ಎಬಲ್ವ ಪತತ್ರಮೆತ್ತಿ ನಸುನೀಡಿದ ಗೋಣ್ . . . ಒಪ್ಪೆ ನವಾಂಬುದ ಬಿಂದುಪ್ಪಂದಮುಂ ಗಳಗಳನೀಂಟುತಿರ್ದುದು ಮುನಂ ತನಪಂತಿರೆ ಜಾತ ಕೋತ್ಕರಂ (ಶಾಂತೀಶ್ವ. ೧೨-೪೬); ಘನಪಾತೀನಪತತ್ರಕಂಟಿತಪಯೋ ಜಾತಂ ಪಯೋಜಾತಗಂಧನಿಕಾಯಾಶ್ರಿತವಾತಸಯುತಲಸನ್ಮತ್ತಾಳಿ (ಕ್ರಿಪುರಿ. ೧-೫೨). [ಸಂ.]

ಪತತ್ರಿ (ನಾ). ೧. ರೆಕ್ಕೆಯುಳ್ಳದು; ಹಕ್ಕಿ; ಪಕ್ಷಿ: "ಪತತ್, ಪತಂಗಃ, ಪತಗಃ, ಪತತ್ರೀ . . . ದ್ವಿಜಃ—ಈ ೫೬ ಹಕ್ಕಿ" (ಹಲಾಯು. ೪೦-೪೪); ಗೃಹೀತಮಾಂಸಖಂಡಮುಳ್ಳ ಪತತ್ರಿ ತದರ್ಥಿಗಳಪ್ಪ ಪತತ್ರಿಗಳಿಂ ಪರಿಭವಮನೆಯ್ದುವವೋಲ್ ಪರಿಗ್ರಹನುಳ್ಳಂ ತದರ್ಥಿಗಳಪ್ಪ ಚೋರಾದಿಗಳಿಂ ಪರಿಭವಮುಮಂ ಸಾವುಮಂ ಎಯ್ದುಗುಂ (ತತ್ತ್ವಪ್ರ. ೨೬೩); ಜಾರುದತ್ತಂ ಪೊಕ್ಕಿರ್ದ ತಿತ್ತಿಯನೊಯ್ವೇಶಾಕ್ಷಪತತ್ರಿಯಂ ಮಿಕ್ಕಿನ ಭೇರುಂಡಗಳ್ಕಂಡು (ಪುಣ್ಯಾಸ್ರ. ೪-೨೬ ಪ); ದೇವಿ ನೋಡಿದೆ ಮುಂದೆ ಕನಕಗ್ರಾವದಂತಿದೆ ಖಗವಿದೊಂದು ಮಹಾವಿಚಿತ್ರಪತತ್ರಿ (ತೊರರಾ. ೬-೧೧-೩೪). ೨. ಬಾಣ; ಅಂಬು; ಶರ: ಚಕ್ರಿಯ ಚಕ್ರದೊಳಂ ತೊಡರ್ದಾಕ್ರಮಿಸಿದುದೆಚ್ಚ ನಿಜಪತತ್ರಿ ದಲೆನೆ ನಿಮ್ಮಾ ಕ್ರಮ ಕಮಲಕ್ಕೆಱಗದೆ ಪಕ್ಕಿಸಿ ಭೂಚಕ್ರದೊಳಗೆ ಬಾಲ್ವರುಮೊಳರೇ (ಪಂಪಭಾ. ೧೧-೩೦); ನೆಟಿ ಪತತ್ರಿಗಳಿವೆ ಪತತ್ರಿಯ ನುಜುಮೆನರು ನಿನಗಿವರ ಕೇಣಿಗೆ ಕೆಟುಹುಗೊಡು ನೀನೆಂದು ಮಾದ್ರೀತನುಜ ಮಗುಳೆಚ್ಚ (ಕುವ್ಯಾಗ. ೨-೨೮); ಅದ್ದನೋ ದಳಪತಿ ಪತತ್ರಿಯ [ಪಾಠಾಂ. ಪತತ್ರಯಿ, ಶರವ್ರಜ] ವದ್ದಳಪ ವಾರುಧಿಯೊಳೆನುತೊಳಪಿದ್ದು ಹೊಕ್ಕುದು ಹನುಮ ಹರಿಹಯ ನುತಸುತಾದಿಗಳು (ತೊರರಾ. ೬-೧೯-೫೬). ೧, ೨ : ಅಗಧರನ ಪದಾಬ್ಜ ಕ್ಕೆಱಗುಗೆ ನೃಪರೆಱಗದೊಡೆ ಶಾರ್ಙ್ಗಗುಣಮುಕ್ತ ಪತತ್ರಿಗಳೆಱಗುಗುಮೆಱಗೆ ಪತತ್ರಿಗಳುಂ ನಿಮ್ಮಯ ಕಳೇವರಪ್ರತತಿಗಳೊಳ್(ಜಗವಿ. ೪-೧೦೪).

ಪತತ್ರಿ ಮಾಡು = ಪಕ್ಷಿಯನ್ನಾಗಿ ಮಾಡು,— ಪರಿವರ್ತಿಸು: ಪೂರ್ಣಘನಂ ಲಯಸಮಯದ ಘನಾಘನದಂತೆತ್ತಿ ಬಂದಂಬರತಿಲಕಮಂ ಮುತ್ತೆ ಪುತ್ರನಂ ಪುತ್ರಿಯುಮುಂ ವಿದ್ಯೆಯಿಂ ಪತತ್ರಿ ಮಾಡಿ ಪೊಜಮಡಿಸಿ (ಪಂರಾಮಾ. ೧೦-೭೭ ಪ). [ಸಂ. ಪತತ್ರಿನ್]

ಪತತ್ರಿಗೋತ್ರ (ನಾ). ಪಕ್ಷಿಗಳ ಗುಂಪು; ಹಕ್ಕಿಗಳ ಸಮೂಹ: ಇತ್ತಲಾದಿತ್ಯನಪರಗಿರಿಯನೆಯ್ದಲೊಡಂ ಪತತ್ರಿಗೋತ್ರಂಗಳೆಲ್ಲಂ ಬಂದಲ್ಲಿ ಪಾಯ್ದು ಬಲೆಯೊಳ್ ಸಿಲ್ಕಿ (ಪಂಚತಂ. ೨೯೦-೧). [ಪತತ್ರಿ+ಗೋತ್ರ$_1$]

ಪತತ್ರಿಯುಗ್ಮ (ನಾ). ಹಕ್ಕಿಯ ಜೋಡಿ; ಎರಡು ಹಕ್ಕಿ: ಅತಿಥಿಯ ಸತ್ಕರಿಸಿದಾ ಪತತ್ರಿಯುಗ್ಮ[ಪಾಠಾಂ. ಕ್ಕ]ಕ್ಕೆ ಸ್ವರ್ಗವನು ಗೂಡಿದಾ ಸ್ಥಿತಿಯಂ ಕಥೆಯಂ ಕೇಳ್ (ನನ್ನಚಾ. ೬-೧೯೩).

[ಪತತ್ರಿ+ಯುಗ್ಮ]

ಪತದ್ಗ್ರಹ (ನಾ). ಉಗುಳುವ ಪಾತ್ರೆ; ಪೀಕದಾನಿ; ಪಡಿಗ: "ಪತದ್ಗ್ರಹಾಖ್ಯಂ ಪಡಿಗಂ" (ವಸ್ತುಕೋ. ೪೯-೨೬). [ಸಂ.]

ಪತನ (ನಾ). ೧. ಕೆಳಗೆ ಹಾರುವಿಕೆ,-ಬೀಳುವಿಕೆ. ೨. ಕೆಳಗೆ ಇಳಿ ಬೀಳುವಿಕೆ; ಜೋಲು ಬೀಳುವಿಕೆ. ೩. ಅವನತಿ; ಕೇಳುದೆಸೆ; ಅಧೋಗತಿ: ಅತಿಶಯದ ಸುಕೃತವನು ವಿರಚಿಸಿ ಗತಿಪಡೆದು ಸ್ವರ್ಗಾದಿ ಭೋಗೋನ್ನತಿಕೆಯನು ಭೋಗಿಸಿದ ಸಮನಂತರದೊಳವನಿಯಲಿ ಪತನ ತಪ್ಪದು (ಕುವ್ಯಾಲು. ೪-೧೪); ಅವುಗಳ ವಶಕ್ಕೊಳಗಾಗಿ ನಾವು ಅತ್ತಿತ್ತ ತೂಗಾಡುತ್ತಾ ಪತನದಾಳದಲ್ಲಿ ಬಿದ್ದು ಬಿಡುವ ಸಂಭವವಿರುತ್ತದೆ (ಆಶ್ರಮ. ೧೦); ಪೂರ್ವವು ಪಶ್ಚಿಮದ ಅಂತ್ಯವನ್ನು ನೋಡುವುದು ಎಂದರೆ ಪೌರ್ವಾತ್ಯಪ್ರಪಂಚವು ಪಾಶ್ಚಾತ್ಯಜಗತ್ಪತನವನ್ನು ನೋಡುವುದು (ಜಗಸಂ. ೩೧). [ಸಂ.]

ಪತನಕಾರಿ(ನಾ).ಕೀಳುದೆಸೆಗೆ ತರುವಂಥದು; ಅವನತಿಯನ್ನುಂಟು ಮಾಡುವಂಥದು: ಕಾನೂನುಸಮ್ಮತವಾದ ಈ ಅಪರಾಧಿಗಳ ಪತನ ಕಾರಿಯಾದ ಪ್ರಭಾವ ಅಧಿಕಪ್ರಮಾಣದಲ್ಲಿದ್ದರೂ ಪರಸ್ಪರ ಪ್ರೀತಿ ಸಹಾನುಭೂತಿಗಳಿಂದ ಬಾಳುತ್ತಿರುವ ಜನರಿರುವುದರಿಂದಲೇ ಸಮಾಜ ಮತ್ತು ಧರ್ಮಗಳ ಅಸ್ತಿತ್ವ ಸಾಧ್ಯವಾಗಿದೆ (ಪುನರು. ೫೯೨). [ಸಂ. ಪತನಕಾರಿನ್]

ಪತನಕಾಲ (ನಾ). ಅವನತಿಯ ಕಾಲ; ಅವಸಾನಕಾಲ; ವಿನಾಶದ ಸಮಯ: ನಡುಗಿತಿಳೆ ನಿರ್ಘಾತದಲಿ ಬಜಿಸಿದಿಲು ಸುಳಿದುದು . . . ಹೆಮ್ಮರ ನವಾತದಲುದಿದು ಬಿದ್ದಪು ಕೌರವೇಂದ್ರನ ಪತನಕಾಲದಲಿ (ಕುವ್ಯಾಗ. ೮-೩). [ಪತನ+ಕಾಲ]

ಪತನಗತಿ (ನಾ). = ಪತನಮಾರ್ಗ: ಕುಲಗುರುವೆ, ಕೈಬಿಡದಿರೆನ್ನಂ ಪತನಗತಿಗೆ (ಶ್ರೀರಾಮಾ. ೫೦೪-೧೧೧). [ಪತನ+ಗತಿ]

ಪತನಮಾರ್ಗ (ನಾ). ಅವನತಿಯ ಹಾದಿ; ವಿನಾಶದ ಮಾರ್ಗ: ಆತ್ಮವು ಪತನಮಾರ್ಗದ ಕಡೆ ಮುಂದುವರಿಯುವಾಗ ಅದನ್ನು ವಿರೋಧಿಸುವುದು ಕರ್ತವ್ಯವಾಗಿದೆ (ಆನಾಸ. ೧೯). [ಪತನ+ಮಾರ್ಗ]

ಪತನಹೇತು (ನಾ). ಬೀಳುವಿಕೆಗೆ ಕಾರಣವಾದುದು; ಅವನತಿಗೆ ಮೂಲವಾದುದು: ನಿನ್ನೀ ಆಕಾಂಕ್ಷೆ ನಿನ್ನ ಪತನಹೇತುವಲ್ಲವೇ? (ಹೇಪಕೂ. ೩). [ಪತನ+ಹೇತು$_2$]

ಪತನಾಭಿಮುಖಿ (ನಾ). ಅವನತಿಗೆ ಎದುರಾಗಿರುವವನು; ಪತನಮಾರ್ಗಕ್ಕೆ ತಿರುಗಿದವನು:ಸೋರ್ದು ನೆಕ್ತರ್‌ವೊನಲ್ ತತ್ತರಿಸುತಿಹೆನ್ ಪತನಾಭಿಮುಖಿ (ಶ್ರೀರಾಮಾ. ೭೭೦-೯೧); ತಾನು ಬಲೆಯಲ್ಲಿ ಬಂದಿಯೆಂಬುದನ್ನರಿಯದೆಯೆ, ಅವನು ಪತನಾಭಿಮುಖಿಯಾಗಿ ಪ್ರಪಾತಕ್ಕೆ ಧುಮುಕುತ್ತಿದ್ದನು(ಪುನರು. ೧೩೩). [ಪತನ+ಅಭಿಮುಖಿ]

ಪತನೋನ್ಮುಖ (ನಾ). ಪತನಕ್ಕೆ ಅಭಿಮುಖವಾದುದು; ಬೀಳುವ ಸ್ಥಿತಿಯಲ್ಲಿರುವುದು: ಶಿಖರದ ಮೇಲೆ ಹತ್ತುತ್ತಲೇ ಅವನ ಶರೀರದ ಭಾರದಿಂದ ಪತನೋನ್ಮುಖವಾಗಿದ್ದಾ ಸ್ತೂಪಶಿಖರವು ಭಗ್ನವಾಗಿ ಅತಿ ಘೋರಶಬ್ದದಿಂದ ನೆಲಕ್ಕೆ ಬಿದ್ದಿತು(ಕಪಾಕುಂ. ೨೮). [ಸಂ.]

ಪತಯಾಲು, ಪತಯಾಳು(ನಾ). ೧. ಹಾರುವಿಕೆ. ೨. ಬೀಳುವಿಕೆ; ಪತನ ಹೊಂದುವಿಕೆ. ೩. "ಬೀಳುವವ" (ಗಂಗಾಪು. ೧೯೬).

ಪತಯಾಳು: ೩. "ಪತಯಾಳುಃ, ಪಾತುಳಃ-ತ ಬೀಳೋ ಸ್ವಭಾವ ಉಳ್ಳವನ ಹೆಸರು" (ಸಿದ್ಧಾಂತ. ೩೩೦). [ಸಂ.]

ಪತಯಾಳು 'ಪತಯಾಲು' ನೋ.

ಪತರಗುಟ್ಟು 'ಪತರುಗುಟ್ಟು' ನೋ.

ಪತರು 'ಪದಲು$_1$' ನೋ.

ಪತರುಗುಟ್ಟು, ಪತರಗುಟ್ಟು (ಕ್ರಿ). ಒದ್ದಾಡು; ಚಡಪಡಿಸು; ತಳಮಳಿಸು: ನೀನು ಹೇಳೋ ಮಾತು ನಿಜವಾದರೆ, ಪ್ರಪಂಚದಲ್ಲಿ ಮುಳ್ಳಿಲ್ಲದ ಸಹಸ್ರಾರುಜನ ಸ್ವಾಮಿಗಳು ಬ್ರಹ್ಮಚಾರಿಗಳು ಸಾಧು ಸನ್ಯಾಸಿಗಳೆಲ್ಲಾ ಸತ್ತು ಪತರುಗುಟ್ಟುತ್ತಾ . . . ಪ್ರೇತಗಳಾಗುತ್ತಾರೆ (ಪಾಂಗಲ್ಯ. ೨೬). **ಪತರಗುಟ್ಟು** : ಒಂಟಿಹಕ್ಕಿ ಪತರಗುಟ್ಟೋ ಹಂಗೆ ಜೀವ ಬಾಳಾ ಒದ್ದಾಡುತ್ತದೆ (ಮಲ್ಲಿ. ೨೨೯); ಒಂದು ಜೀವ ಪಕ್ಷಿಯ ಪತರಗುಟ್ಟುವಿಕೆ ಕಿವಿಗೆ ಕೇಳಿಸಿದಂತಾಗುತ್ತಿದ್ದ ಆಕ್ರಂದನದ

ಧ್ವನಿ, ಎಲ್ಲವೂ ಅರ್ಥವಾಯಿತು (ಕಾಟೇಮು. ೧೨೪).

[ಪತರು(<ಪದಜ್ಞು$_1$)+ಕುಟ್ಟು$_1$]

ಪತಳ (ನಾ). ವಿರಳವಾದುದು; ತೆಳುವಾದುದು; ಸಾಂದ್ರವಲ್ಲದುದು: "ಪತಳ=ತೆಳ್ಳನ; ತಿಳುವಾದ, ಪ್ರವಾಹಿ" (ಜಾನಕೀಹ.೧೪); ಯದಕ್ಕೆ ಕಾರಣವಾದ ಮಾಯೆ ಪಟ್ಟವೊ ಪತಳವೊ ಬಹುಪತಳವೆಂದು ತಿಳಿ (ಅರಸಾ. ೧-೧೯೪). 'ಪತ್ತಲ' ಪರಾ.

[<ಪ್ರಾ. ಪತ್ತಲ./ಸಂ. ಪಾತ್ರಟ]

ಪತಳೆ 'ಪತ್ತಳೆ$_1$' ನೋ.

ಪತಾಕ$_1$ (ನಾ). ೧. ಧ್ವಜ; ಬಾವುಟ; ನಿಶಾನೆ: "ಕೇತು ಧ್ವಜಂ ಪತಾಕಂ ವೈಜಯಂತಿಯಾ ಕೇತನಂ ಹಟಪಿಗೆಯೆನಿಕ್ಕು" (ಮಂಗರಾ. ೮೫-೨೬); ಪರ್ವತಶೃಂಗದ ಮೇಲೆ ಕಾಣುವ ರಕ್ತಬಣ್ಣದ ಪತಾಕವನ್ನು (ಕೋಹಿಪ್ರ.೪೫). ೨. ಒಂದು ಬಗೆಯ ಆಯುಧ: ಭಲ್ಲ ಪತಾಕ ಚಕ್ರ ಚಾಪ ತಿಲೀಮುಖ ಗಜಾದಾಂಕುಶಾದ್ಯಾಯುಧ ನಿತಿಧಧಾರಾಚೂರ್ಣೋಕೃತ ಮಧುರಾಪುರೀ ಚೊಕ್ಕಲಿಂಗನಾಯಕ ಶಾಂದಮಂಗಲ ರಾಮಚಂದ್ರ ನಾಯಕ ವೇಲಾಪುರ ವೆಂಕಟನಾಯಕ . . . ಪರಾಕು(ಯಾದಚಂ.೩-೧೨).

[ಸಂ. ಪತಾಕಾ]

ಪತಾಕ$_2$ (ನಾ).[ನಾಟ್ಯ] ಇಪ್ಪತ್ತುನಾಲ್ಕು ಅಥವಾ ಇಪ್ಪತ್ತೆಂಟು ಅಸಂಯುತಹಸ್ತಗಳಲ್ಲಿ ಒಂದು; ಹೆಬ್ಬೆರಳನ್ನು ತೋರುಬೆರಳಿನ ಮೂಲಕ್ಕೆ ಇಟ್ಟು ಉಳಿದ ನಾಲ್ಕೂ ಬೆರಳುಗಳನ್ನು ಪತಾಕೆಯಂತೆ ನೇರವಾಗಿ ಎತ್ತಿ ನಿಲ್ಲಿಸುವುದು: "ಬೆರಳ್ಗೆದು ಮಿಳಿತಗೈಯುತ ಕರವಂ ಸರಿಯಾಗಿ ಮುಂದೆ ಚಾಚಿ ಪತಾಕಂ" (ಶತ್ರ್ವಾನಿ. ೪); ಅಂಗೈ ಮೇಗಾಗಿ ಪತಾಕಂಗಳ್ ಮೇಣ್ ಹಂಸಪಕ್ಷಮಾಗಿಯೆ ಬೇಗಂ ಪಿಂಗದೆ ಮುಂಗೈ ತಿರುಗಲ್ ಕಂಗೊಳಿಸುವ ರೇಚಿತಾಖ್ಯಹಸ್ತಮೆನಿಕ್ಕುಂ (ಲಾಸ್ಯರಂ. ೨-೫೩); ಪತಾಕ ಅರ್ಧಚಂದ್ರ . . . ಶಿಖರಹಸ್ತ ಮೊದಲಾದ ನೂರಾರು ಹಸ್ತಮುದ್ರೆಗಳಿವೆ(ಬಾಲಸ್ರ. II, ೧೧೯).[ಸಂ.]

ಪತಾಕಕರ(ನಾ). = ಪತಾಕ$_2$: ಲಲಿತಪತಾಕಕರಂಗಳ್ ಸಲೆ ಭುಜದ್ವಯಂಗಳಲ್ಲಿ ಮೊಳಕೈಗಳೊಳಂ ನೆಲೆಗೊಂಡ ಮುಡುಹಿನೊತ್ತಿನೊಳಲಸಲ್ಲವದಂತೆ ತಿರುಗಲಾವಿದ್ಧಮುಖಂ (ಲಾಸ್ಯರಂ. ೨-೫೧). [ಪತಾಕ$_2$+ಕರ$_3$]

ಪತಾಕಹಸ್ತ (ನಾ). = ಪತಾಕ$_2$: ನಿತ್ಯಂ ಪತಾಕಹಸ್ತಂಗಳಂ ಸ್ವಸ್ತಿಕದಿತ್ತರಂಗೆಯ್ದು (ಲಾಸ್ಯರಂ. ೨-೫೦). [ಪತಾಕ$_2$+ಹಸ್ತ]

ಪತಾಕಾಪಟ (ನಾ). ಬಾವುಟಕ್ಕೆ ಕಟ್ಟಿರುವ ಬಟ್ಟೆ; ಧ್ವಜದ ವಸ್ತ್ರ: ವ್ಯೋಮಂ ಚಿತ್ರಾತಪತ್ರಂಗಳಿನತುಳಪತಾಕಾಪಟಶ್ರೇಣಿಯಿಂ . . . ದಿಕ್ಸೀಮಾಪ್ರಾಂತಂಬರಂ ತಿಂತಿಣಿಯೆನಿಸಿರೆ ಕಾಕಂದಿಗೆಟ್ಟಂದ ನಿಂದ್ರಂ (ಪುಷ್ಪಪು. ೧೦-೮). [ಸಂ.]

ಪತಾಕಾಭಂಗ (ನಾ). ಧ್ವಜಸ್ತಂಭವು ಮುರಿಯುವಿಕೆ; ಬಾವುಟವು ಮುರಿದು ಬೀಳುವಿಕೆ: ಇದೆ ಬಹಳ ಭೂಕಂಪವದುಭುತವಿದೆ ದಿಶಾವಳಿ ಧೂಮಕೇತುಗಳಿದೆ ಪತಾಕಾಭಂಗವಿದೆ ವಿಪರೀತಪರಿವೇಷ (ಕುಸ್ಮಾವಿ. ೬-೩). [ಸಂ.]

ಪತಾಕಾಸ್ಥಾನ (ನಾ). [ಕಾವ್ಯಮೀಮಾ] "ನಡೆಯುತ್ತಿರುವ ಅಥವಾ ಮುಂದೆ ಬರುವ ವಿಷಯನ್ನು ಅನ್ಯೋಕ್ತಿ ಸಮಾಸೋಕ್ತಿಗಳಿಂದ (ಎಂದರೆ, ಒಂದೇ ವಿಧವಾದ ವೃತ್ತಾಂತಕಥನದಿಂದ ಅಥವಾ ಒಂದೇ ವಿಶೇಷಣಪ್ರಯೋಗಗಳಿಂದ) ಸೂಚಿಸುವುದು ಪತಾಕಾಸ್ಥಾನ" (ಕೈಸಿಡಿ. ೨೦೫ ಅಡಿಟಿ). [ಸಂ.]

ಪತಾಕಾಹಸ್ತ (ನಾ). = ಪತಾಕ$_2$: ದಯೆಯಿಂ ಕೃಷ್ಣನಂಗುಷ್ಠಮಂ ಮೆಟ್ಟಿ ಪತಾಕಾಹಸ್ತದಿಂದಂ ನೆಗಪೆ ಮುಖಮನಾ ಕುಬ್ಜೆ ಸೌಮ್ಯಾಂಗಿಯಾದಳ್ (ಜಗವಿ. ೬-೨೩). [ಸಂ.]

ಪತಾಕಿ (ನಾ). ೧. ಧ್ವಜವನ್ನು ಹೊರುವವನು: "ಪತಾಕೀ, ವೈಜಯಂತಿಕಃ -೨ ನಿಶಾನಿ ಹಿಡಿಯುವವನು, ಪತಾಕ ಉಳ್ಳವನು" (ಸಿದ್ಧಾಂತಿ. ೨೫೬). ೨. ಧ್ವಜ; ಬಾವುಟ. [ಸಂ. ಪತಾಕಿನ್]

ಪತಾಕಿಕೆ (ನಾ). ಬಾವುಟ; ಧ್ವಜ: ಮುಂದಕ್ಕೆ ಪೋಪುದು ತನುವಿದು ಪಿಂದೆಸೆಗೋಡುವುದು ಬಳಕೆಗೈದದ ಮನವೇನೆಂದಪೆನೊ ಪವನನಿದಿರೊಳ್ ತಂದ ಪತಾಕಿಕೆಯ ಚೀನವಸನಮಿದೆಂಬೊಲ್ (ಶಾಕುಂತ. ೧೮-೩೪). [ಸಂ. ಪತಾಕಿಕಾ]

ಪತಾಕಿನಿ (ನಾ). ಸೈನ್ಯ; ಬಲ; ದಂಡು: "ಪೃತನಾ, ಸೇನಾ, ಧ್ವಜಿನೀ, ಪತಾಕಿನೀ . . . ಅನೀಕಂ—ಈ ೧೦ ಪಡೆ" (ಹಲಾಯು. ೭೫-೩೦೩); ಆಗಳ್ ಪಾಂಡವಪತಾಕಿನಿಯುಮಿರದೆ ಪೊಱಮಟ್ಟರ್ಧಚಂದ್ರವ್ಯೂಹಮನೊಡ್ಡಿ ನಿಲೆ (ಸಂಪಭಾ. ೧೧-೮೫ ಪ); ಅಪರಿಮಿತಮೆನಿಪ ಚತುರಂಗಪತಾಕಿನಿ ತಮಗೆ ಕದನಕೇಳಿಗೆ ನೆರಮುಲ್ಲುಪಕರಣಮೆನಿಪ ಕೋದಂಡಪಾಣಿಗಳ್ ದಂಡಪಾಣಿಗೆಣೆಯೆನೆ ತಳರ್ದರ್(ಪಂರಾಮಾ.೪-೫೧); ಇಳಿದು ಗಜಹಯರಥದ ಸುಭಟಾವಳಿ ಕೃತಾಂಜಲಿ ನೊಸಲೊಳಿರೆ ಕೆಲಬಲಕೆ ಸಾರ್ದರು ನೋಡಿದರು ಪಾಂಡವಪತಾಕಿನಿಯ (ಕುಸ್ಮಾಗ. ೬-೨). [ಸಂ. ಪತಾಕಿನೀ]

ಪತಾಕಿನೀಪತಿ (ನಾ). ಸೈನ್ಯದ ಅಧಿಪತಿ; ದಳಪತಿ; ಸೇನಾಪತಿ: ಆಗಳ್ ಪತಾಕಿನೀಪತಿಯ ನಿಯಮದಿಂ ಪೂರ್ವದಿಗ್ಭಾಗಸ್ಥಿತಮಂ ಮ್ಲೇಚ್ಛಖಂಡಮನಪ್ರತಿಹತಶಾಸನಾಂಕಿತಮಂ ಮಾಡಿ ಬರೆ (ಆದಿಪು. ೧೩-೮೧ ಪ).

[ಸಂ.]

ಪತಾಕೆ (ನಾ). ೧. ಧ್ವಜ; ಬಾವುಟ; ನಿಶಾನೆ: "ವೈಜಯಂತೀ, ಪತಾಕಾ, ಕೇತುಃ, ಕೇತನಂ, ಧ್ವಜಃ — ಈ ೫ ಪಟ(ಹಟ)ಯಿಗೆ" (ಹಲಾಯು. ೭೫-೩೦೪); ಹಿಮಧವಳಾತಪತ್ರಮನೆ ಪೋಲೆ ಮುಚೇರದುವ ಬೆಳ್ಪು . . . ಪತಾಕೆಯೊಂದು ವಿಭ್ರಮಮನೆ ಪೋಲೆ ಪುರ್ವಿನ ಪೊಡವೊಳಕೊಂಡುದವಳ್ಗೆ ಗರ್ಭಚಿಹ್ನಂ (ಪಂಪಭಾ.೧-೧೨೦); ಮುಗಿಲಂ ಮುಟ್ಟುವ ಪತಾಕೆಯಿಂ ತೋರಣದೋಳಿಗಳಿಂ ರವಿಹಿಮಕರವೀಥಿಗಳಿಂದಂ ಪುರಮದೇಂ ಮನಂಗೊಳಿಸಿದುದೋ (ಜಗವಿ. ೨-೨೦); ಪತಾಕೆಗಳ ತಣ್ಣಳಲ ತಂಪಿನ ನಡುವೆ ಕಾಣಲಾಯ್ತು ಗಜಾಧಿಪತಿ ವಿಶ್ವಪತಿಯ ನಿಳಯದ ಕಳಸ ಕಣ್ಣ ಮಂಗಳವಾಗಲು (ಹಚಕಾ. ೧೦-೩೭). ೨. ಪುರುಷನ ಜನನೇಂದ್ರಿಯ: ಪುರುಷನ ಪತಾಕೆಯೊಱಗಿರೆ ಮಗುಳ್ದು ಮಲಗಿರ್ದ ಗುರುಕುಚೆಯತನುಗೃಹದೆರಡು ಕಡೆಯೊಳು ಸಿರಿದೊತ್ತಲು (ಜನನ. ೯-೧೯). ೩. [ಕಾವ್ಯಮೀಮಾ] ಕಾವ್ಯ, ನಾಟಕಗಳಲ್ಲಿ ಬರುವ ವಿಸ್ತಾರವಾದ ಉಪಕಥೆ: ಪ್ರಾಸಂಗಿಕವೆಂದರೆ, ಮುಖ್ಯ ಕಥೆಗೆ ಅಂಗವಾಗಿ ಮಧ್ಯೆ ಬರತಕ್ಕ ಕಥೆ . . . ಪ್ರಾಸಂಗಿಕವು ದೊಡ್ಡದಾಗಿದ್ದರೆ ಅದಕ್ಕೆ 'ಪತಾಕಾ' ಎಂದೂ, ಸ್ವಲ್ಪವಾಗಿದ್ದರೆ . . . 'ಪ್ರಕರೀ' ಯೆಂದೂ ಹೆಸರು (ಕೈಸಿಡಿ. ೨೦೫); ಪ್ರಾಸಂಗಿಕ ಕಥಾಭಾಗಗಳೆಂದರೆ, 'ಪತಾಕಾ' ಮತ್ತು 'ಪ್ರಕರೀ' ಎಂಬ ಅರ್ಥಪ್ರಕೃತಿಗಳು (ಧ್ವನ್ಯಾಲೋ. ೧೭೭ ಅಡಿಟಿ). [ಸಂ. ಪತಾಕಾ]

ಪತಿ$_1$ 'ಪಡಿ$_3$' ನೋ.

ಪತಿ$_2$ (ನಾ). ೧. ಒಡೆಯ; ಯಜಮಾನ; ಸ್ವಾಮಿ: "ಪ್ರಭು ಪರಿವೃಢನೀಶಂ ಸ್ವಾಮಿ ಭರ್ತೃ ಪತಿ ನಾಥನಧಿಪನೀಶ್ವರನಿಂದ್ರಂ" (ಸಮ್ಯಕ್ತೋ. ೯೯-೯); ಪತಿಯ ಜಯಸ್ತಂಭದ ಪರಿಣತಿ ದಲಿದಲ್ಲದೊಡೆ ಜಳಪಥಂ ಸ್ಥಳಪಥದಂತತಿಸುಗಮಮಾದುದೆನೆ ಪರಿದು ತೋಯರಾಶಿಯೊಳದೇಂ ರಥಂ ಸೊಗಯಿಸಿತೋ (ಆದಿಪು. ೧೨-೮೩); ಜಟಾಯು... ಪತಿ ಕಾಪುವೇಟ್ಟು ಪೋದಂ ಸತಿಯಂ ಕಳ್ದುಯ್ದಪಂ ಖಳಂ ಮಾರ್ಕೊಂಡುದ್ಧತನಂ ಮದೀಯ ತುಂಡಾಹತಿಯಿಂ ಶತಖಂಡಮಾಗೆ ಮಾಟ್ಟಿನೆ

ನುತ್ತುಂ (ಪಂರಾಮಾ. ೯-೧೦೩) ; ಪತಿಗಲ್ಲದೆ ಪೆಱರ್ಗೆಡೆಗುಡದ ತೆಱದೆ ನಡೆವಿಡಿದ ಬೆನ್ನ ಸಂಕಡಿ ಚಂಡಾಕೃತಿಯ ತೆಱನಱಿದು ನಿಮ್ಮೋನ್ನತಿ ವೆತ್ತುದು ಚರಣಕಾಂಡಮಶ್ವಾಗ್ರಣಿಯಾ (ಕುಸುಮಾ. ೮-೫೩) ; ಕೌರವನ ರುಣ ಹಿಂಗೆ ರಣದಲಿ ಸುಭಟಕೋಟಿಯನು ತೀರಿಸಿಯೆ ಪತಿಯುವನರಕ್ಕೆ ಶರೀರವನು ನೂಕುವೆನು (ಕುಸ್ಯಾಉ. ೧೦-೨೦). ೨. ಆಳುವವನು ; ದೊರೆ ; ಪ್ರಭು : ಅವನಲ್ಲಿಗೆ ಪತಿ ಯುಧಿಷ್ಠಿರದೇವನೋ ದುರ್ಯೋಧನನೊ (ಕುಸ್ಯಾಅ. ೧೧-೪). ೩. ಗಂಡ ; ವಲ್ಲಭ : "ಕಾಂತಃ, ಕಮಿತಾ, ಪತಿಃ . . . ಅನುಕಃ – ಈ ೧೪ ಗಂಡಂ" (ಹಲಾಯು. ೮೨-೩೪೩) ; ಜನಕಜೆಯನ್ತೆ ಪತಿಂಗೆ ನೆಗೞ್ದು ಶೀಲದಿಂ (ಎಕ. XIV, ಎಡತೊ. ೩೧-೩ ; ಸು. 800) ; ಸತಿಯಾನು ಪತಿ ನೀನು (ಬಸವ. ೫೦೬); ಪತಿಯುಳ್ಳಿನಮದ್ಭುತ ದೇವತೆಯಂ ಸತಿ ಪೋಲ್ತು ಕರಮಗುವಾಗಿರ್ಕುಂ ಪತಿಯ ಪರೋಕ್ಷದೊಳೊಪ್ಪುವ ಸತಿ ತಾಂ ಚೌವಟದ ಪಣ್ತಮರದಂತಿರ್ಕುಂ (ಬಂಹರಿ. ೧೦-೨೯) ; ಪತಿಗಳೆನ್ನನು ಮಾಱ್ಱ ಧರ್ಮಸ್ಥಿತಿಯ ಕೊಂಡರು (ಕುಸ್ಯಾಸ. ೧೪-೧೦೮) ; ಪತಿಗಳ್ಳವರಿದ್ದರೇನು ಸತಿಯ ಭಂಗಕೊದಗಲಿಲ್ಲ (ಪುರಂದ. ೨-೧೧೬-೧). ೪. [ಶೈವ] ಪರಮಾತ್ಮ ; ಶಿವ : ಬಳಿಕ ಸಕಲಾಗಮಂಗಳಲ್ಲಿಯೂ . . . ಪತಿ ಕುಂಡಲಿನಿ ಮೂಯೆ ಪಶು ಪಾಶ ಕಾಂಕ್ಷೆಯೆಂಬ ಪಟ್ಟ ದಾರ್ಥಂಗಳುಂ... ಪ್ರತಿಪಾದ್ಯಂಗಳಕ್ಕುಂ (ವಿವೇಕ. ೬೨) ; ಪತಿ-ಪಶು-ಪಾಶಗಳೆಂಬ ತತ್ವತ್ರಯಗಳೇ (ತ್ರಿಪದಾರ್ಥಗಳೇ) ಶೈವಾಗಮದ ಮೂಲತತ್ವಗಳು. ಜೀವನೇ ಪಶುವು, ಅವನನ್ನು ಆವರಿಸಿರುವ ಸಂಸಾರಬಂಧನವೇ ಪಾಶ, ಜೀವನ ಸಂಸಾರಪಾಶವನ್ನು ಕಳೆದು ಉದ್ಧರಿಸುವವನೇ ಪತಿಯಾದ ಪರಮೇಶ್ವರ (ಭಾರದ. ೭೩) ; ಈ ದರ್ಶನದಲ್ಲಿ ಪತಿ, ಪಶು, ಪಾಶವೆಂದು ಸಂಗ್ರಹವಾಗಿ ವಿಷಯವು ಮೂರು ವಿಧ-ಪತಿಯೇ ಪರಮಶಿವನು, ಪರಮಾತ್ಮನು, ಸರ್ವಶಕ್ತಿಸಂಪನ್ನನು (ಹಿಂದಸಾ. ೨೯೬).

ಪತಿಗೇಕದೋಡಂ = ಒಂದು ಬಿರುದು (?) : ಚಲಕೆ ಬಲ್ಗಣ್ಡಂ ಶೌರ್ಯಮಾರ್ತ್ತಣ್ಡಂ ಪತಿಗೇಕ[ದೋ]ಡಂ ಸಂಗ್ರಾಮಗರುಡಂ ಮನುಜಮಾನ್ಥಾತಂ ಕೀರ್ತ್ತಿವಿಖ್ಯಾತಂ (ಸೌಇಇ. XX, ೪೭-೭; 1074). ಪತಿ ಮೆಚ್ಚೆ ಗಂಡಂ = ಒಡೆಯನು ಮೆಚ್ಚುವಂಥ ವೀರ ; ತುಂಬ ಪರಾಕ್ರಮಶಾಲಿಯಾದವನು ; ಒಂದು ಬಿರುದು : ಇನ್ತು ನನ್ನ ನಾರಾಯಣಂ ಸಮ್ಯಕ್ತ್ವರತ್ನಾಕರಂ ಪತಿ ಮೆಚ್ಚೆ ಗಣ್ಡನಾಳ್ದನ ಚಕ್ರಂ . . . ಶ್ರೀಮತ್ಪಡೆವಳ್ಳ ತೈಲಪಯ್ಯಂ ಮಾಸವಾಡಿ ನೂಱನಾಲ್ವತ್ತುಮಂ ಬೀಳವೃತ್ತಿಯಿನಾಳುತ್ತಮಿರೆ (ಸೌಇಇ. XI-1, ೫೨-೩೫ ; ಸು. 1007) ; ಮಹಾಪ್ರಚಣ್ಡದಣ್ಡನಾಯಕಂ ಪತಿ ಮೆಚ್ಚೆ ಗಂಡಂ ಶ್ರೀಮದ್ದಣ್ಡನಾಯಕಂ ಕೇಶವಯ್ಯಂಗಳೆ ಬೆಳ್ವೊಲ ಮೂನೂಱುಂ ಪುಲಿಗೆಱೆ ಮೂನೂಱುವಂ ಸುಖಸಂಕಥಾವಿನೋದದಿಂದಾಳುತ್ತಮಿಱ್ದು (ಎಇ. XX, ೬-೬ ; 1012). [ಸಂ.]

ಪತಿಂವರೆ (ನಾ). ೧. ತನ್ನ ಗಂಡನನ್ನು ತಾನೇ ಆರಿಸಿಕೊಳ್ಳುವ ಅವಕಾಶವಿರುವ ಯುವತಿ ; ಸ್ವಯಂವರದ ಅವಕಾಶವಿರುವ ಕನ್ಯೆ : ನಿಜವಿಜಯಶ್ರೀ ಪತಿಂವರಾಪರಿಣಯನೋತ್ಸವಾಲೋಕನ ಕುತೂಹಲಪ್ರಚಲಿತ ಸಮಸ್ತಸಾಮಂತಚಕ್ರನುಂ (ಆದಿಪು. ೧೪-೯೧ ಪ) ; ವರಮುಕ್ತಿಪ್ರಮದೆ ಪತಿಂವರೆ ಪುರುಷನನಱಸಿಕೊಳ್ವವೋಲ್ ವಿಜಯಮುನೀಶ್ವರನಂ ಕೆಯ್ಕೊಂಡಳ್ ದೇವರ ಪಲವುಂ ತೆಱದ ಪಱೆಗಳೊಡನೆಸೆವಿನೆಗಂ (ಶಾಂತಿಪು. ೫-೭೩) ; ಬರವೇಟ್ಟ ಕೆಡಿರದೆ ಪತಿಂ (?) ವರೆಯಂ ಮುಂದಿಟ್ಟು ಪೇಚರಾಧೀಶ್ವರನಂ ಪರಿಣಯನೋತ್ಸವಮಂ ನಾಡೆ ರಯ್ಯಮಪ್ಪಂತು ಮಾಟ್ಟಿಮಾಮುಂ ತಾಮುಂ (ಪರ್ಧಮಾ. ೩-೬೮). ೨. ವಿವಾಹಯೋಗ್ಯಳಾದ ಕನ್ಯೆ ; ವಿವಾಹ ವಯಸ್ಕಳಾದ ಕನ್ಯೆ ; ಉಪವರ ಕನ್ಯೆ : "ಮುನ್ನಂ ಕುಡಲಾದವಳ್ ಪತಿಂವರೆಯೆನಿಕುಂ" (ಪಸ್ತುಕೋ. ೫೩-೧೦) ; ಕೃತಿ ಗಡ ಕೊಳ್ವಂ ಕುಡುವಂ ಕೃತಿ ಗಡ ಭಾವಿಸುವಡಾ ಪತಿಂವರೆಯುಂ ತಾಂ ಕೃತಿ ಗಡೆನಲ್ ಕೊಳ್ಳೊಡೆಯೇನತಿಶಯಮಾದುದೊ ಕೃತಾರ್ಥಮೆನೆ ಭುವನಜನಂ (ಪುಷ್ಪಪು. ೧-೬೮).

[ಸಂ. ಪತಿಂವರಾ]

ಪತಿಕರ, ಪಯಿಕರ (ನಾ). ೧. ಸ್ವೀಕಾರ ; ಅಂಗೀಕಾರ ; ಮಾನ್ಯತೆ : ಪತಿಯಾಜ್ಞೆಯಲ್ಲಿ ಚಂಪ ಸತಿಗೇಕೆ ಪ್ರತಿಜ್ಞೆಯು ಪ್ರತಿಜ್ಞೆಯ ಪತಿಕರದಲ್ಲಿ ಮೋಪದಿರೆ (ಲೋಪದಿರೆ ?) ಯಾತನೆಯಲ್ಲವೆ ಇವಳ ಲಿಂಗನಿಷ್ಠೆ ಇವಳಿಗೆ ನಮ್ಮ ನಿಷ್ಠೆ ಪತಿಯಾಜ್ಞೆಯಲ್ಲಿ ಕಾಣಾ (ಸರ್ವಪ. ೧೯೪-೧೦). ೨. ಕರುಣೆ ; ಅನುಗ್ರಹ. ೩. ಒಲವು. ೪. ಹೊಗಳಿಕೆ ; ಪ್ರಶಂಸೆ : 'ಪತಿಕರಿಸು' ಪರಾ. ಪಯಿಕರ : ೨. ಅಯ್ಯಾ ನಿನ್ನ ನಂಬಿದೆನೊ . . . ಪಯಿಕರವನು ತೋರೊ ಪತಿತರ ಸುರತರು (ಮೋಕ್ಷದೀ. ೧೪-೧). [←ಮರಾ. ಪತಕರ್, ಪತಕರಾ, ಪತಕಾರ್]

ಪತಿಕರಣೆ (ನಾ). ೧. ಸ್ವೀಕಾರ ; ಅಂಗೀಕಾರ : ನೇಮವಾಯಿತು ಮತ್ತೆ ನೃಪತಿಸ್ತೋಮವರ್ಜುನನೊಡನೆ ಕದನೋದ್ದಾಮರುಬ್ಬರಿಸಿದರು ಪತಿಕರಣೆಗೆ ಮಹೀಪತಿಯ (ಕುಸ್ಯಾಕ. ೧೮-೧೦) ; ಪತಿಕರಣೆ ಪಲ್ಲವಿಸೆ ಶರಣಾಗತನ ರಕ್ಷಿಸಿ ರಾಮನಮರಾವತಿಗೆ ಬೀಳ್ಕೊಟ್ಟನು ಬಲಾಸುರರಿಪುಕುಮಾರಕನ (ತೊರರಾ. ೪-೪ ಸೂಚನೆ). ೨. ಗೌರವಿಸುವಿಕೆ ; ಆದರಣೆ : ಕಂಗಳಲಿ ಕುಡಿಮೇಳ ಹುಬ್ಬಿನ ಹೊಂಗಿನಲಿ ಭಂಜವಣೆ ಭಾವದ ಭಂಗಿಯಲಿ ಪತಿಕರಣೆ (ಕುಸ್ಯಾಅ. ೧೩-೨೫).

[ಪತಿಕರಿಸು + -ಅಣೆ]

ಪತಿಕರಿಸು, ಪತಕರಿಸು, ಪತ್ಕರಿಸು (ಕ್ರಿ). ೧. ಅಂಗೀಕರಿಸು ; ಸ್ವೀಕರಿಸು ; ಒಪ್ಪಿಕೊಳ್ಳು : ಆಶೆಯ ಧಿಕ್ಕರಿಸಿ ನಿರಾಶೆಯ ಪತಿ [ಪಾಠಾಂ. ಪ್ರತಿ]ಕರಿಸಿದ ವೇಷವ ಕಂಡಡೆ ನೀ ಸರಿಯೆಂಬೆ (ಚನ್ನವ. ಕ. ೫೬೧-೧೨೨೮) ; ಪೃಥಕ್ ತೈಲ ಜಲ ಧರ್ಮಪಾತ್ರೆಯೊಳಗಿರಲವಂ ಪತಿಕರಿಸಲಿಲ್ಲ ಶಿವಭಕ್ತನಾಗಿರ್ದವಂ(ದೀಕ್ಷಾಬೋ.೨೬-೪೭೦); ಇಂದು ನಿನ್ನಯ ಪಟ್ಟದರಸಿಯಳೆಂದು ಕೊಂಡಾಡುವೊಡೆ ಬಪ್ಪೆನು ಎಂದೆನಲು ಕಾಮಾತುರನು ತಾನಧಿಕತಾಪದಲಿ ಎಂದುದನು ಪತಿಕರಿಸಿ ಕೊಟ್ಟನು (ಸಂಭವ. ೩-೨೦); ಎಲೆ ತಾಪಸವರ್ಯನೆ ನೀನೊಲವಿಂದೀ ನವ್ಯಮಪ್ಪ ಪಟ್ಟಾವಳಿಯಂ ಸಲೆ ಪತಿಕರಿಸುವುದು (ತ್ರಿಪುವಿ. ೯-೪೯). ೨. ಆದರಿಸು ; ಸತ್ಕರಿಸು ; ಉಪಚರಿಸು : ತರಿಸಿ ಸಾದು ಜವಾದಿಯನು ಕರ್ಪೂರದ ವೀಳೆಯವುಡುಗೊಱೆಗಳಲಿ ಹಿರಿದು ಪತಿಕರಿಸಿದನು ಪರಿವಾರವನು ಕಲಿದ್ರೋಣ (ಕುಸ್ಯಾದ್ರೋ. ೧೫-೨೦).; ಭರತಾದಿಗಳ್ವೆರಸಿ ಕುಳ್ಳಿರ್ದ ಬಳಿಕ ಪತಿಕರಿಸಿ ಕಾಕುತ್ಸ್ಥನಂ ಕೊಂಡಾಡಿ...ಮುನಿವರನೊಯ್ಯನಿಂತೆಂದನು (ಜೈಮಿಭಾ. ೨೧-೫೨) ; ಅತಿಥಿಗಳಭ್ಯಾಗತರೊಡನಧವರ ಯತಿಯಾಚಕರೆಲ್ಲರನು ಪತಿಕರಿಸುವುದು ಬಳಿಕ ಸಂತಸದೊಳು ಸತಿಯರು ಸವಿವುದನ್ನವನು (ಹರಿಪ. ೮-೩೨) ; ಮಾಧವೀಮಂಟಪವು ಭೋಗ್ಯವಸ್ತುಗಳಿಂದ ಮನೋಹರವಾಗಿರುವ ಕಾರಣ ನಿಜವಾಗಿ ಕುಶಲಪ್ರಶ್ನಪೂರ್ವಕವಾಗಿ ನಮ್ಮನ್ನು ಪತಿಕರಿಸುವಂತಿದೆ (ಶಾಕುಂತ. ೮೪-೧೪). ೩. ಕೃಪೆ ಮಾಡು ; ಕರುಣೆ ತೋರಿಸು ; ಅನುಗ್ರಹಿಸು : ಹರಪದಾರ್ಚಕರೊಪ್ಪಿಸುವರೇ ಶರಣು ಹೊಗೆ ನರರಾದಡಂ ಪತಿಕರಿಸಿ ಕಾವರು ಸಾವು ನೋವುಂ ಜೀವಿಗಳಿಗೆಲ್ಲ ಸರಿಯಲಾ (ಬಸಪು. ೨೮-೧೨) ; ಹರ ಪತಿಕರಿಸಿ ನುಡಿದುದೆ ಪರಮಪಾವನ ಧರ್ಮತತ್ವವದು (ಕುಸ್ಯಾಅ. ೧೬-೫೩) ; ಕವಿ ತಲೆಗುತ್ತಿ ದೇವರಿಗಿನ್ನು ತಾ ಪಡಿಯುತ್ತರಕೆ ಪಾಸಟಯೆ ಪತಿಕರಿಸೆಂದು ಕೈಮುಗಿದ (ತೊರರಾ. ೪-೨-೪೯) ; ನೀ ಪತಿಕರಿಸೆ ಬಳಿಕಿನ್ನೇನು ಚಿಂತಿಸಲೇಕೆ ರಕ್ಷಿಸು (ಹರಿಸಾ. ೪೦). ೪. ರಕ್ಷಿಸು ; ಕಾಪಾಡು : ಇಂದು ನಿಮ್ಮಂಘ್ರಿಗಳ ಮಱೆವೊಗ

ಬಂದೆನ್ನಲು ಪತಿಕರಿಸಬೇಕೆಂದು ಕೌರವನನುಜ ಬಿನ್ನಯಿಸಿದನು ಭೂಪತಿಗೆ (ಕುವಾ೫ಭೀ. ೨-೩೮); ಶರಣು ಹೊಕ್ಕ ವಿಭೀಷಣನ ಪತಿಕರಿಸಿ ಲಂಕಾವನಿಯ ಜನಪದದರಸುತನವನು ಕೊಟ್ಟು ಮನ್ನಿಸಿದನು ರಘುಪ್ರಭವ (ತೊರರಾ. ೬-೩ ಸೂಚನೆ); ಶಿವಪೂಜೆಯ ಮಾಡೆ ದೀಕ್ಷೆಯೆನಗಿಲ್ಲ ಪಾಪಾತ್ಮನಂ ಪತಿಕರಿಸಿ ಕರುಣದಿಂ ಧರ್ಮಪಥಕೆ ಶಿಕ್ಷಿಸಿದೆ (ಚೆಬಪು. ೫೧-೨೧). ೫. ಸಮರ್ಥಿಸು; ಸಾಧಿಸು: ಭಾಷೆಗಳ ಬಲ್ಲಹನು ಭಕ್ತನಿವಾಸಿ ಬಸವೇಶ್ವರನ ಭಾರಂ ಭಾಷೆಗಳನೆಲ್ಲಂ ಪತಿಕರಿಸಿ ನಮ್ಮ ಸಿವುದಿಯಲಿ (ಬಸಪು. ೩೫-೫೩); ರೂಢಿಯೋಲೆಯಕಾಜನರ್ಜುನನಾದಿ ಪತಿಕರಿಸುವನು (ಕುವಾಕಳ. ೯-೧೫). ೬. ಒಲಿ; ಒಲವುಹೋರು: ಬಳಿಕ ಕೇತಯ್ಯಂಗಳಾ ಗೋಕುಲವನೆಲ್ಲಂ ಪತಿಕರಿಸಿ ಕೈಕೊಳುತಿರಲ್ಕು ದನಜಾದು ಕಜ್ಜುಗಳು ನಿಂದಜಡುತಿರಲು (ಬಸಪು. ೬೦-೬೫); ಕೆಟ್ಟವನು ನಿನ್ನವಗೆ ಲಂಕೆಯ ಪಟ್ಟವನು ಪತಿಕರಿಸಿ ರಘುಪತಿ ತೊಟ್ಟ ಬಾಣಕೆ ಬಂದ ಶರಧಿಯ ಹೂಳಿ ಶೈಲದಲಿ ಕಟ್ಟಿದರು ಸೇತುವನು ಕಪಿಗಳು (ತೊರರಾ. ೬-೬-೫೫). ೭. ಒಲಿಸು; ಮೆಚ್ಚಿಸು: ವರಮನೋರಥಸಿದ್ಧಿಯನು ಪತಿಕರಿಸಿ ಪಡೆವುದು ಕೇಳೆನುತಲಾದರಿಸಿ ಮಾಯೆಗೆ ಹೇಳುತಿರ್ದಳು ವಿಮಳೆ ವಿನಯದಲಿ (ಪ್ರಭುಲೀ. ೬-೩). ೮. ಹೊಗಳು; ಶ್ಲಾಘಿಸು; ಪ್ರಶಂಸೆ ಮಾಡು: ಹಿರಿಯ ಭಕ್ತರ ಮಹಿಮೆಗಳನೊರೆದೊರೆದು ಶಿವನಾಗಯ್ಯನಂ ಪತಿಕರಿಸಿ ಮೆಜ್ಜಿದನು ಬಸವನಾ ಬಿಜ್ಜಳನ ಸಭೆಯೊಳಗೆ (ಬಸಪು. ೫೫ ಸೂಚನೆ); ಜಗದೊಳದ್ಭುತವೀರವಿರವೆಂಬಗಧರನು ಪತಿಕರಿಸಿದನು ಪವನಜನ ಫಲುಗುಣನ (ಕುವಾದ್ರೋ. ೧೫-೪). **ಪತಿಕರಿಸು**: ೧. ಆದರೆ ಈ ವೃತ್ತಿಯನ್ನು ಪತಿಕರಿಸುವಾಗ ನೀವು ಈ ವಿಚಾರವನ್ನು ತಿಳಿದುಕೊಳ್ಳಬೇಕಾಗಿತ್ತು (ರಂಗರೋ. ೫೪); ನಾನು ಒಂದು ಚೀಟಿ ಬಿಡುತ್ತೇನೆ. ಪತಿಕರಿಸೋಣವಾಗಲಿ (ಗಾಳಿಪ. ೫೨). **ಪತ್ಯರಿಸು**: ೧. ಯೋಗ್ಯ ಮನಃಸ್ಥಿತಿಯಲ್ಲಿದ್ದರೆ ನರಹರಿಯು ಸೇಟರೊಡನೆ ಸಂಭಾಷಣೆಯನ್ನು ಬೆಳಸುತ್ತಿದ್ದ. ಆದರೆ ಈಗ ಆ ಕೆಲಸವನ್ನು ಗಾಡಿಯಲ್ಲಿಯ ಉಳಿದ ಪ್ರಯಾಣಿಕರು 'ಪತ್ಯರಿಸಿ'ದ್ದರು (ಸಮಜೀ. ೨೯೮); ನಮಗೆ ಹುಟ್ಟೋ ಮಕ್ಕಳ ಗತಿ ಏನು . . . ಅವರು ಮತ್ತೆ ಬೇರೆ ಜಾತಿ ಪತ್ಯರಿಸಬೇಕಾಗತ್ತೆ ತಿ (ರಕ್ತಧ್ವ. ೧೧೪). [ಪತಿಕರ+-ಇಸು]

ಪತಿಕಾರ್ಯ (ನಾ). ೧. ಒಡೆಯನ ಕೆಲಸ,—ಸೇವೆ; ಸ್ವಾಮಿಕಾರ್ಯ: ವಸುವಂ ದ್ವಿಜನ್ಮದಾನದೆ . . . ನಿನ್ನಸುವಂ ಪತಿಕಾರ್ಯದೆ ವರ್ಜಿಸಿದ್ದೆ (ಗದಾಯು. ೫-೨೨); ಕ್ಷಿತಿಯೊಳಗೀ ಗೋವಿನ್ದನನಿತರ ಜಮೂನಾಥರೆನ್ನುಮೇಂ ಪೋಲ್ವರೆ ವಿತರಣದ ಗುಣದ ಸೌರ್ಯದ ಪತಿಕಾರ್ಯದ ಜಲದ ಬಲದ ಮಹಿಮೋನ್ನತಿಯೊಳ್ (ಸೌಇಇ. XX, ೪೬-೧೯ ; ?). ೨. ಸ್ವಾಮಿಕಾರ್ಯದಲ್ಲಿ ಆಸಕ್ತನಾದವನು; ಒಡೆಯನ ಕೆಲಸದಲ್ಲಿ ನಿರತನಾದವನು: ಚತುರೋಪಾಯಂಗಳಂ ಬಲ್ಲವಂ ಪತಿಕಾರ್ಯಂ ವರಮಂತ್ರಿಯೆ (ಸೋಮೇಶ. ೬೧). [ಪತಿ$_2$+ಕಾರ್ಯ]

ಪತಿಕೆ (ನಾ). ಒಂದು ಬಗೆಯ ಸಸ್ಯ: "ಪತಿಕಾ – ಒಂಜೆಪೆಹೊನ್ನೆ" (ಓಷಧಿ. ೧೧). [ದೇ.॥ ತಮಿ. ಪತಿ, ಪತಿಯ = ಒಂದು ಬಗೆಯ ಸಸ್ಯ; ಅಂತರಗಂಗೆ]

ಪತಿಗೃಹ (ನಾ). ಗಂಡನ ಮನೆ,—ಗೃಹ: ಬಾಲೆ ಪತಿಗೃಹಕೆ ಪೋಪುದ ಪೇಳಲ್ ವನವಾಸಬಂಧುವೀ ತರುವ್ಯಂದಂ ಕೇಳುತನುಮತಿನಿ ಕಲಳಂಕಾ ಲಾಪದ ನೆವದೆ ನುಡಿವುದಿದೊ ಪಡಿಮಾತಂ (ಶಾಕುಂತ. ೫೩-೮೮). [ಪತಿ$_2$+ಗೃಹ]

ಪತಿಘ್ನಿ (ನಾ). ಗಂಡನನ್ನು ಕೊಲ್ಲುವವಳು,—ಕೊಲೆಮಾಡುವವಳು. [ಸಂ. ಪತಿಘ್ನೀ]

ಪತಿತ (ಗು). ೧. ಕೆಳಗೆ ಬಿದ್ದ; ಕೆಡೆದ; ಪತನ ಹೊಂದಿದ. ೨. ಯುದ್ಧದಲ್ಲಿ ಸೋತ; ಪರಾಜಯ ಹೊಂದಿದ: (೬). ೩. ನೀತಿಗೆಟ್ಟ; ಶೀಲಭ್ರಷ್ಟ: ಪತಿತ ದಲಿತನೆಲ್ಲ ಜನದ ಸೋವು ನಲಿವು ನನ್ನವು (ಅಮತಂ. ೪೭-೧೭). ೪. ನೀಚನಾದ; ದುಷ್ಟನಾದ. (ನಾ). ೫. ಬಿದ್ದುದು; ಕೆಡೆದುದು; ಪತನ ಹೊಂದಿದುದು: "ಪತಿತಂ ಪ್ರಸ್ಖನ್ನಂ" (ಪಸ್ತುಕೋ. ೪೨-೫); "ಪತಿತಮೆನೆ ಪನ್ನಮೆನೆ ಬಿದ್ದುದು" (ಸುಂಗರಾ. ೧೩೨-೨೬). ೬. ಕೆಳಗೆ ಬಿದ್ದವನು. ೭. ನೈತಿಕವಾಗಿ ಪತನ ಹೊಂದಿದವನು; ಶೀಲಭ್ರಷ್ಟನಾದವನು: "ಸ್ಖನ್ನಂ ಗಳಿತಂ ಭ್ರಸ್ಟಂ ಪನ್ನಂ ಪತಿತಂ ಪರಾಙ್ಮುತಂ ವಿಗತಾರ್ಥಂ" (ಪಸ್ತುಕೋ. ೧೦೬-೪೮); ದಿನಪಸುದಯಂಕ್ಕೆ ನಲೆ ಪತ್ತನೆಯೆಡೆಯೊಳ್ ಸುಖಸಮನ್ವಿತಂ ರವಿ ಪನ್ನೊಂದನೆಯೆಡೆಯೊಳ್ ಧನ ಪನ್ನೆರಡನೆಯೆಡೆಯೊಳ್ ದಕ್ಷಿಣಾಪ್ತಿರಹಿತಂ ಪತಿತಂ (ಜಾತತ. ೧೪-೪); ನಾನೂ ಪತಿತ. ಅವಳಂತೆಯೇ ನಾನೂ ಇಂಗ್ಲೆಂಡಿನಲ್ಲಿ ಬೇರೊಂದು ಹೆಣ್ಣಿನೊಡನೆ ಸಂಪರ್ಕವಿಟ್ಟುಕೊಂಡಿದ್ದೆ (ಸೋಪುಗೆ. ೧೫೬). ೮. ನೀಚ; ದುಷ್ಟ; ಪಾಪಿ: ಪತಿತನವ ಮುದ್ಯ ಮಾಂಸವನೆ ಭುಂಜಿಸಿದವಂ (ದೀಕ್ಷಾಬೋ. ೨೬-೪೭); ಪಾತಕನು ಪತಿತನು ಕೃತಘ್ನನು ಘಾತಕನು . . . ದೈವದ್ರೋಹಿಯೆಂಬುದು ಭೂತಳದೊಳೇ ನರಕ (ಕುವಾಉ. ೪-೪೧); ಆತನವರಿಗೆ ಕೇಡಿಲ್ಲ ಅವ ಪಾತಕ ಪತಿತಸಂಗವ ಮಾಡ್ವನ್ನೆಲ್ಲ (ಪುರಂಪ. ೧-೪೭-೩); ಪತಿತರ ಪಾವನವಿನಿಸುವ ಬಲ್ಮೆಯೊಳತಿಶಯವಡೆದ ತೀರ್ಥಗಳು ಸತಿಯರ ಪಾದಸಂಸ್ಪರ್ಶದಿಂ ತಮ್ಮ ದುಸ್ಖತವ ಳಕೆಯ ಲೆಳಸುವುವು (ಪದಿಬ. ೨-೩); ಸೋದರದ್ರೋಹದಿಂ ರಾಜವಿದ್ರೋಹದಿಂ ಪತಿತನಾಗಿಹ ಪಾಪಿ ಮರಣಮು ನಿನಗೆ ಶಿಕ್ಷೆ (ಶ್ರೀರಾಪೂ. ೨೪೨-೧೧೧). ೯. ಲೆ: ಜಗದೊಳ್ಳುಶಾಸ್ತ್ರಪ್ರಕರಕೆ ಮೈಗೊಟ್ಟವಂ ಮಿಗೆ ಪತಿತನಾಗದಿರ್ದಪನೆ (ಜೈಮಿಭಾ. ೨೧-೩೧). ೯. ಹಾರಿದುದು; ಜಿಗಿದುದು. ೧೦. [ನಾಟ್ಯ] ಏಳು ಬಗೆಯ ಹುಬ್ಬಿನ ಭೇದಗಳಲ್ಲಿ ಒಂದು; ಹುಬ್ಬನ್ನು ಕೆಳಗಿಳಿಸುವುದು: ಸಹಜ, ಪತಿತ, ಉತ್ಕ್ಷಿಪ್ತ. . . . ಚತುರ – ಈ ಏಳು ಹುಬ್ಬಿನ ಭೇದಂಗಳ್ (ಲಾಸ್ಯರಂ. ೩-೪೩ ಪ); ನಟಿಲದಿಂದಿಳಿದ ಪುರ್ಬುಂ ದಿಟದಿಂ ಕೇಳ್ ಪತಿತಮೆಂಬ ಪೆಸರಂ ಪಡೆಗುಂ (ಲಾಸ್ಯರಂ. ೩-೪೪). ೧೧. ಎಂಟು ಬಗೆಯ ಹಿಮ್ಮಡಿಯ ಭೇದಗಳಲ್ಲಿ ಒಂದು; ಪಾರ್ಷ್ಣಿಭೇದ: ಪರಿಮುತ್ಕ್ಷಿಪ್ತಂ ಪತಿತಂ [ಪಾಠಾಂ. ಪ್ರಮ ಪತಿತಂ] ವಿರಚಿಪುತ್ಕ್ಷಿಪ್ತಂ ನೆಗಳ್ದು ರಾಜಿಪ ಪತಿತಂ . . . ವಿಯುಕ್ತಾಂಗುಲಿಸಂಗತವಿನಾಯೆಂಟುಂ ಸಮಂತು ಪಾರ್ಷ್ಣಿಯ ಭೇದಂ (ಲಾಸ್ಯರಂ. ೩-೧೦೯); ಉತ್ಕ್ಷಿಪ್ತ, ಪತಿತ [ಪಾಠಾಂ. ಅಪತಿತ], ಉತ್ಕ್ಷಿಪ್ತ ಪತಿತ, ಅಂತರ್ಗತ, ಬಹಿರ್ಗತ, ವಿಪರೀತವಿಯುಕ್ತ, ವಿಯುಕ್ತ, ಅಂಗುಲಿ ಸಂಗತ – ಈ ಎಂಟು ಪಾರ್ಷ್ಣಿಯ ಭೇದಂಗಳ್ (ಲಾಸ್ಯರಂ. ೩-೧೧೦ ಪ). ೧೨. ಏಳು ಬಗೆಯ ಕೈ ಬೆರಳುಗಳ ವಿನ್ಯಾಸಗಳಲ್ಲಿ ಒಂದು; ಹಸ್ತಾಂಗುಲಿ ಭೇದ:ಸಲೆ ಸಂಯುತ ವಿಯುತಂಗಳ್ ಸುಲಲಿತವಕ್ರಾಕ್ರು ಪಲಿತ ಪತಿತಾಖ್ಯಂಗಳ್ ಲಲನೇ ಕುಂಚನ್ಮೂಲಂ ಗೆಲೆವಂದ ಪ್ರಸೃತ ಮೆಂದು ಭೆರತದೊಳೆಸೆಗುಂ (ಲಾಸ್ಯರಂ. ೩-೧೧೩); ಸಂಯುತ, ವಿಯುತ, ವಕ್ರ, ವಲಿತ, ಪತಿತ, ಕುಂಚನ್ಮೂಲ, ಪ್ರಸೃತ – ಈ ಏಳು ಹಸ್ತಾಂಗುಲಿಯ ಭೇದಂಗಳ್ (ಲಾಸ್ಯರಂ. ೩-೧೧೩ ಪ). [ಸಂ.]

ಪತಿತತ್ವ (ನಾ). ೧. ಕೆಟ್ಟತನ; ನೀಚತನ. ೨. ಅನೈತಿಕತೆ. [ಸಂ.]

ಪತಿತಪಾವನ (ಗು). ೧. ಪಾಪಿಗಳನ್ನು ಉದ್ಧಾರಮಾಡುವಂಥ; ನೀಚರನ್ನು ಪರಿಶುದ್ಧಗೊಳಿಸುವಂಥ: ಪತಿತಪಾವನ ಪರ್ವತಾಶ್ರಮವಲಿಪ್ಪೆನುನ್ನತ ಮಲ್ಲಿನಾಥನೆಂದೆನ್ನ ನಾಮಂ (ಸಿದ್ಧರಾ. ೫-೨೮); ಪತಿತಪಾವನ ಪಾಹಿ ಪಾಹಿ ಪಾಹಿ

ಪತಿತಪಾವನನಮೂರ್ತಿಯಾಗಿಯೆ ಯತಿಗಳೊಳು ಯತಿಯಾದರಱಯಂ ಜತನದಿಂದಾಚರಿಸುತ (ಗಗತಾ. ೨೧–೧) ; ರಘುಪತಿ ರಾಘವ ರಾಜಾರಾಂ, ಪತಿತ ಪಾವನ ಸೀತಾರಾಂ(ಸಂಗತ.೫೧).(ನಾ). ೨. ಪಾಪಿಗಳನ್ನು ಪರಿಶುದ್ಧ ಗೊಳಿಸುವಂಥವನು,—ನೇಲೆತ್ತುವವನು ; ಪರಮಾತ್ಮ : ಪತಿತ ಪಾವನನೆಂಬ ನಾಮ ಸಕಲಶ್ರುತಿತತಿಗಳಿಗೆಲ್ಲ ನಿಲುಕದೀ ನಾಮ (ಪುರಂದ. ಧಾ. ೩–೩೮–೧). [ಪತಿತ+ಪಾವನ]

ಪತಿತಾಗ್ರ (ನಾ). [ನಾಟ್ಯ] ನೃತ್ಯ ಮಾಡುವಾಗ ತೋರುವ ಅರು ಬಗೆಯ ಅಂಗಾಲಿನ ವಿನ್ಯಾಸಗಳಲ್ಲಿ ಒಂದು; ಪದತಳ ಭೇದ: ಪತಿತಾಗ್ರ, ಉಚ್ಛ್ರಿತಾಗ್ರ, ಭೂಮಿನಿಲಗ್ನ, ಉದ್ವೃತ್ತ, ಕುಂಚಿತಷಡ್ಜ, ತಿರಶ್ಚೀನ—ಈ ಅಱುಂ ಅಂಗಾಲ ಭೇದಂಗಳ್ (ಲಾಸ್ಯರಂ. ೩–೧೩೦ ಪ). [ಸಂ.]

ಪತಿತೆ (ನಾ). ನೈತಿಕವಾಗಿ ಪತನ ಹೊಂದಿದವಳು : ಅವಳು ಪತಿತೆ (ಸೋಮಶೆಗೆ. ೧೫೬). [ಸಂ. ಪತಿತಾ]

ಪತಿತೋದ್ಧಾರ(ನಾ). ನೈತಿಕವಾಗಿ ಪತನಹೊಂದಿದ ವ್ಯಕ್ತಿಯ ಉದ್ಧಾರ,—ರಕ್ಷಣೆ. [ಪತಿತ+ಉದ್ಧಾರ]

ಪತಿತೋದ್ಧಾರಕ (ಗು). ಪಾಪಿಗಳನ್ನು ಉದ್ಧಾರಮಾಡುವ,—ನೇಲೆತ್ತುವ : ಸುಂದರ ಶುಭಕರ ಮೃತಸಂಜೀವಕ ಪತಿತೋದ್ಧಾರಕ ಚೇತನಮೇ! ವಿಳೇಶ್ವ ಮಹಿಮಾನ್ವಿತ ಬಾಲಕ ನಮೋ ನಮೋ ನಿನಗೋ ಶಿವಮೇ! (ಅಪಬ್ಲೈ. ೧೧೦–೨). [ಪತಿತ+ಉದ್ಧಾರಕ]

ಪತಿತ್ವ (ನಾ). ೧. ಒಡೆತನ; ಪ್ರಭುತ್ವ; ಸ್ವಾಮ್ಯ : "ಎಜಿ—ಪ್ರಪದ್ಯಪ್ರದಾನೇ (ಸುರಿ), ಪತಿತ್ವೇ ಚ (ಒಡೆತನ)" (ಶಸುಧಾ); 'ಯತಿಪತಿ' ಯತಿತ್ವಮುಂ ಪಳಯುತ್ತೆ, ಪಾರುತೆ ಪತಿತ್ವಮುಂ, ತನ್ನ ನಿಜಮುಂ ನುಡಿದನತಿಕಾತರತೆಯಿಂದೆ (ಚಕ್ರಾಂಗ. ೬೫–೬೬). ೨. ಮದುವೆಯಾಗಿರುವಿಕೆ ; ವಿವಾಹಿತ ಸ್ಥಿತಿ : (೬). ೩. ಪತಿಯ ಭಾವನೆ ; ಗಂಡನೆಂಬ ಧಾವ : ಪತಿತ್ವಮನಾಳ್ವ ಚಾಟುನಿಸ್ವನಮೆರ್ದೆಗೊಳ್ವ ಚುಂಬನಕೆ ಬೆಂಬಱಯಿಂದಿದಿರ್ವಪ್ಪ ತನ್ನ ಚುಂಬನ[ಮೆ]ಯಾಗೆ ಕಾಂತೆ ಪುರುಷಾಯಿತದೊಳ್ ಕರಮೊಪ್ಪ ತೋಱುದಳ್ (ಸೂಕ್ತಿಸು. ೧೪–೧೭). [ಸಂ.]

ಪತಿದಾನ (ನಾ). ಗಂಡನನ್ನು ದಾನವಾಗಿ ನೀಡುವಿಕೆ,—ಕೊಡುವಿಕೆ : ಆಕೆ ತನ್ನ ಪತಿಯನ್ನು ತನಗೊಪ್ಪಿಸುವಂತೆ ರಾಮಾನಂದನನ್ನು ಬೇಡಿದಳು. ಗುರು ಅವಳಿಗೆ ಪತಿದಾನವನ್ನು ನೀಡಿದನು (ಭಾರದ. ೪೯೨). [ಪತಿ$_2$+ದಾನ]

ಪತಿದ್ರೋಹ (ನಾ). ಗಂಡನಿಗೆ ಮಾಡುವ ದ್ರೋಹ,—ವಂಚನೆ; ಪತಿಯ ವಿಚಾರದಲ್ಲಿ ಮಾಡುವ ಅಪರಾಧ: ಅಮೃತಮತಿಯದು ಪತಿದ್ರೋಹವಾದರೆ ಚಂಡಶಾಸನನದು ಮಿತ್ರದ್ರೋಹ (ಕಾವ್ಯಸ. ೭೭). [ಪತಿ$_2$+ ದ್ರೋಹ]

ಪತಿದ್ರೋಹಿ (ನಾ). ಗಂಡನಿಗೆ ವಂಚನೆ ಮಾಡುವವಳು : ಅವಳು ಪತಿದ್ರೋಹಿ ಎಂದಿಗೂ ಆಲ್ಲ (ಮುತ್ತೈದೆ. ೨೨೪). [ಪತಿ$_2$+ದ್ರೋಹಿ]

ಪತಿಧರ್ಮ (ನಾ).[ವೀಶೈ]ಪರಮಾತ್ಮನನ್ನು ಕುರಿತು ಆಚರಿಸುವ ವಿಧಿ,–ನಿಯಮ: ಇಲ್ಲಿ ಯೋಗನೆಂದರೆ ಪತಿಧರ್ಮ. ಧರ್ಮಗಳಲ್ಲಿ ಪಶು ಧರ್ಮ, ಪತಿಧರ್ಮ ಎಂದು ಎರಡು ವಿಧ . . . ಶಿವವ್ರತ, ಶಿವಧ್ಯಾನ, ಶಿವಜ್ಞಾನ, ಶಿವಭಕ್ತ, ಶಿವಾರ್ಚನ ಇವು ಐದು ಪತಿಧರ್ಮಗಳು (ಭಾರದ. ೨೪೧). [ಪತಿ$_2$+ಧರ್ಮ]

ಪತಿನಿಷ್ಠೆ (ನಾ). ಹೆಂಡತಿಗೆ ಗಂಡನಲ್ಲಿರುವ ಶ್ರದ್ಧೆ: ಸರ್ಮದೆಯ ಕರ್ತೃತ್ವಶಕ್ತಿ . . . ಪತಿನಿಷ್ಠೆಗಳು ರೇವತಿಯ ಚಿತ್ತಭಿತ್ತಿಯ ಮೇಲೆ ತೇಲಿ ತೇಲಿ ಬರಹತ್ತಿದುವು (ಮುತ್ತೈದೆ. ೨೬೪). [ಪತಿ$_2$+ನಿಷ್ಠೆ]

ಪತಿಪರಾಯಣೆ (ನಾ). ಗಂಡನಲ್ಲಿ ಶ್ರದ್ಧೆ ಹೊಂದಿದವಳು; ಪತಿನಿಷ್ಠೆಯುಳ್ಳವಳು : ಅವಳಂತಹ ಪತಿಪರಾಯಣೆಯನ್ನು ನಾನು ಈವರೆಗೂ ನೋಡಿಲ್ಲ (ಮುತ್ತೈದೆ. ೨೨೪). [ಸಂ. ಪತಿಪರಾಯಣಾ]

ಪತಿಪೂಜೆ (ನಾ). ಪತಿಯನ್ನು ಕುರಿತು ಮಾಡುವ ಪೂಜೆ : ಚಾರುಲತೆಯ ಲಕ್ಷ್ಯವನ್ನು ಆಕರ್ಷಿಸುವ ಸಲುವಾಗಿ ಸದಾ ಸರ್ವದಾ ಅವನು ಪ್ರಯತ್ನಪಡದೆ ಇದ್ದರೆಯೇ ತನ್ನ ಪತಿಪೂಜೆ ಚಾರುಲತೆಗೆ ಸಹಜ ಸಾಧ್ಯವಾಗುತ್ತಿತ್ತು (ಇಪ್ಪತ್ತ.೨೮೬). [ಪತಿ$_2$+ಪೂಜೆ]

ಪತಿಪ್ರಾಣತೆ (ನಾ). ಗಂಡನನ್ನು ಪ್ರಾಣಕ್ಕೆ ಸಮವಾಗಿ ಪ್ರೀತಿಸುವಿಕೆ ; ಪತಿಯೇ ಪ್ರಾಣವೆಂಬ ನಂಬಿಕೆಯನ್ನು ಹೊಂದಿರುವಿಕೆ : ಅದರಲ್ಲಿ ಸೂರ್ಯಮುಖಿಯು ಕಮಲಮಣಿಗೆ ತನ್ನ ಪತಿಪ್ರಾಣತೆಯನ್ನು ತಿಳಿಸಿ ಪತ್ರ ಬರೆದ ಸ್ಥಳದಿಂದ ಓದಲು ಮೊದಲು ಮಾಡಿದನು(ಬಂಕಿಮ. ೧೮೮). [ಸಂ. ಪತಿಪ್ರಾಣತಾ]

ಪತಿಬಿಂಬ 'ಪಡಿಬಿಂಬ' ನೋ.

ಪತಿಬ್ರತಾಗುಣ (ನಾ). ಹದಿಬದೆಯ ನಡವಳಿಕೆ,—ಆಚರಣೆ : ಅತನ ಕುಲವಧು ವಿನಯೋಪೇತೆ ಮಹಾಸತಿ ಪತಿಬ್ರತಾಗುಣದಿಡೆಯೊಳ್ ಸೀತೆಯನೆ ಪೋಲ್ತಳ್ (ಸೌಇ. XX, ೧೦೧–೩೩ ; 1129); ಆ ನೆಗಳ್ದ ಮದ್ದಿರಾಜನ ಮಾನಸಕಳಹಂಸೆಯೆನಿಪ ಮಾಕಾಂಬಿಕೆಗಂ ಭೂನುತ ಪತಿಬ್ರತಾಗುಣ ಜಾನಕಿ×××ಜನರ ಪುಣ್ಯದಿಂ ಪಡೆದಳ್ ಸುತರತ್ನ (ಎಕ.VI, ಕಡೂರು, ೫೧–೩೨ ; 1169). [<ಸಂ.ಪತಿವ್ರತಾಗುಣ]

ಪತಿಬ್ರತಿಕೆ (ನಾ). ಹದಿಬದೆತನ; ಪಾತಿವ್ರತ್ಯ: ರನ್ನನ ಸತಿ ಸತ್ಯಗುಣ ಸಂಪನ್ನೆ ಪತಿಬ್ರತಿಕೆಯೊಳು ಮಹಾಸತಿಯೆನಿಸುತ್ತ ×××ನೆಲಿ ಮೆದವಿಮರ್ಶ್ಚನ್ನತಿಯಂ ಪಡೆದು ಪೆಂಪಿಂನಾಗಮಮಾದಳು (ಕಇಲ. ೧೨–೪–೫೮ ; ಸು. 1093). [ಪತಿಬ್ರತೆ(<ಹದಿಬದೆ)+–ಇಕೆ]

ಪತಿಬ್ರತೆ 'ಹದಿಬದೆ' ನೋ.

ಪತಿಭಕ್ತಿ (ನಾ). ಗಂಡನಲ್ಲಿರುವ ಭಕ್ತಿ,—ಶ್ರದ್ಧೆ : ಪತಿಭಕ್ತಿಯುನ್ನತಿಕೆಯಲಿ ನಿತ್ಯತೆಯಲಾ ಸಾವಿತ್ರಿಯಾಕೆಯ ನುತಚರಿತ್ರದವೋಲು ನಿಮ್ಮ ದ್ರೌಪದಾದೇವಿ ಹಿತವನಾಚರಿಪವಳು (ಕುಪ್ಯಾಅ. ೨೬–೨); ಪತಿಭಕ್ತಿ ಇಲ್ಲದಿಹ ಸತಿಯ ಸಂಗ ವ್ರತಗೆಟ್ಟು ನುಖಪಡೆಯಲಿಲ್ಲವೋ ರಂಗ (ಪುರಂದ. ೪–೧೪೪ ಪಲ್ಲವಿ). [ಪತಿ$_2$+ಭಕುತಿ(<ಬಕುತಿ)]

ಪತಿಭಕ್ತಿ (ನಾ). = ಪತಿಭಕುತಿ: ನೆಗಟ್ಟಿತ್ರ ಪತಿಭಕ್ತಿಯ ಮೈಮೆಯು ಮಾನಸಿಕ್ಕೆಯಗ್ಗಲದ ಪೊಗಟ್ಟಿ ತನ್ನದೆನೆ ಪೆಂಪು ಮನೋಹರಿಗಲ್ಲ ದಕ್ಕುಮೇ (ಆದಿಪು. ೧–೭೨); ಪತಿಭಕ್ತಿ ಭವದ್ವಯಕಂ ಹಿತಮೆಂಬುದ ನಱುದು ವಿನಯದಿಂ ವಿಷ್ಣು ಮಹೀಪತಿಯಂ ಪೆಚ್ಚಿಸುತೆ (ಎಕ. V, ಬೇಲೂರು, ೧೩–೨೦; ಸು.1120) ; ಪತಿಭಕ್ತಿಯೊಳರುಂಧತಿಗೆ ಸರಿ . . . ಹಂಶ್ಚಂದ್ರನೃಪನರಸಿ ಚಂದ್ರಮತಿ ಭೂತಳದೊಳ್ (ಹಜಕಾ. ೧–೪೪). [ಪತಿ$_2$+ಭಕ್ತಿ]

ಪತಿಭಕ್ತೆ (ನಾ). ಗಂಡನಲ್ಲಿ ಭಕ್ತಿಯನ್ನುಳ್ಳವಳು; ಗಂಡನಿಗೆ ವಿಧೇಯಳಾಗಿರುವವಳು : ಪುತಿವಂತೆಯ ಧರ್ಮಜ್ಞೆಯ ಪತಿಭಕ್ತೆಯ ಸಂದ ಶೌಚವಂತೆಯ ಸತ್ಯಾನ್ವಿತವಚನೆಯ . ಕಥೆಯನೆ ಪೇಟ್ಸ ತಿಱಯದಿಂ ತನ್ನ ವಧುಗೆ (ಸುದಶ.೮–೧೪೮); ಪತಿಭಕ್ತೆಯಾದರೆ ತನ್ನ ಪತಿಗೆ ಸರ್ವೋಪಚಾರಂಗಳ ಮಾಡಿ . . . ಆತನುಂಡು ವಿಶ್ರುದನಂಬುದೇ ಪತಿವ್ರತಾ ಭಾವ (ಸಿದ್ಧೇಪ. ೬೬–೨೨೬) ; ಪತಿಭಕ್ತೆ ಬಂದಳೆಂಬಾ ಸ್ಥಿತಿಯೆಲ್ಲಿಯು ಪರೆಯಲು (ನನ್ನಚಾ. ೩–೩೦). [ಪತಿ$_2$+ಭಕ್ತೆ]

ಪತಿಭಾವ (ನಾ). ಗಂಡನೆಂಬ ಭಾವನೆ ; ಪತಿ ಎಂಬ ಭಾವ: ನಿತ್ಯ ಪತಿಭಾವ ಶ್ರೀಲಕುಮಿದೇವಿಗಯ್ಯ ನಿತ್ಯ ಪುತ್ರಭಾವ ಬೊಮ್ಮ ಪ್ರಾಣರಿಗೆ (ಪುರಂದ.೫–೫೧ ಉಗಾಭೋಗ). [ಪತಿ$_2$+ಭಾವ$_2$]

ಪತಿಭಿಕ್ಷೆ (ನಾ). ಗಂಡನನ್ನು ಭಿಕ್ಷೆಯಾಗಿ ಬೇಡುವಿಕೆ; ಗಂಡನನ್ನು ಹೊಂದುವುದಕ್ಕಾಗಿ ಮಾಡುವ ಯಾಚನೆ: ನಾನು ತಮ್ಮಲ್ಲಿ ಸೆರಗೊಡ್ಡಿ ಪತಿಭಿಕ್ಷೆಯನ್ನು ಬೇಡುವವಳಾಗಿರುವೆನು (ಬೆನ್ನಬೇ. ೭೦).

[ಪತಿ$_2$ + ಭಿಕ್ಷೆ]

ಪತಿರಾಯ(ನಾ). ಗಂಡ; ಪತಿ: ಹನ್ನೆರಡು ಹೆತ್ತರು ಒಲಿದಿಲ್ಲವಲ್ಲರಿ ಪತಿರಾಯರು (ಇಂಚಾಪ. ೧೫೮-೭೬); ಕಳೆದು ಹೋದ ಆಭರಣಗಳನ್ನು ಪತಿರಾಯನೇ ದೋಚಿಕೊಂಡಿರಬೇಕೆಂಬುದರಲ್ಲಿ ಅವಳಲ್ಲಿ ಸಂದೇಹವಿರಲಿಲ್ಲ (ಮುತ್ತೈದೆ. ೧೯೮); ಆಕಳಂಥಾ ಅತ್ತಿ ಗೋಕುಲದಂಥಾ ಮಾವ ಶ್ರೀಕೃಷ್ಣನಂಥಾ ಪತಿರಾಯನಿದ್ದರ ಸಾಕಿದಾ ತವರ ಮರತೇನ (ಗರತಿ.೭೧).

[ಪತಿ$_2$ + ರಾಯ]

ಪತಿರುಣ (ನಾ). ಒಡೆಯನ ಋಣ ; ಸ್ವಾಮಿಯ ಹಂಗು : ಕೂಡೆ ವೈರಿಗಳ ಕೆಡಹಿ ಪತಿರುಣವ ನೀಗಾಡಿದರಧಟ ಬಿಲ್ಲವರು (ಕಂಸವಿ.೧೯-೬೫).

[ಪತಿ$_2$ + ರುಣ]

ಪತಿವಂಚಕಿ (ನಾ). = ಪತಿದ್ರೋಹಿ : ಪಂಚಪತಿಯರೊ ಮೇಣವರು ಪತಿವಂಚಕಿಯರೋ ಗ್ರೀಷ್ಮಕಾಲದ ಪಂಚತೆಯೊಳಾಲಿಂಗಿಸಿತು ದಿಗ್ವಧುಗಳಂಬುದವ (ಕುಪ್ಯಾಅ. ೧೯-೨೦). [ಪತಿ$_2$ + ವಂಚಕಿ]

ಪತಿವಂತೆ (ನಾ). ಗಂಡನನ್ನುಳ್ಳವಳು; ಸುಮಂಗಲಿ: ತನಗೆ ಕಠೋರ ಶಿಕ್ಷಣ ದೊರೆಯುತ್ತಿದ್ದ ಕಾಲದಲ್ಲಿಯೂ ತಾನು ಪತಿವಂತೆ ಎಂಬುದನ್ನು ಅವಳು ಮರೆತಿರಲಿಲ್ಲ (ಬಂಕಿಸು. ೨೮೯). [ಪತಿ$_2$ + -ವಂತೆ]

ಪತಿವತ್ನಿ (ನಾ). = ಪತಿವಂತೆ : "ಪತಿ(ವತ್ನೀ)ನಾಮೆ ದಲ್ ಭರ್ತೃಸಂಯುತೆ" (ವಸ್ತುಕೋ.೫೩-೬); "ಪತಿವ[ಪಾಠಾಂ.ಪ]ತ್ನಿಯೆನಲೈದೆಯಕ್ಕು" (ಮಂಗರಾ. ೮೯-೩). [ಸಂ.ಪತಿವತ್ನೀ]

ಪತಿವ್ರತ (ನಾ). ಸತಿಗೆ ಪತಿಯಲ್ಲಿರುವ ನಿಷ್ಠೆ,—ಭಕ್ತಿ; ಹದಿಬದೆತನ; ಪಾತಿವ್ರತ್ಯ : ಈ ಧರೆಯೊಳ್ ನೆಗಟ್ತಿವಡೆದಿರ್ದ ಪತಿವ್ರತದುನ್ನತಿಕ್ಕೆ ತಾಂ ಸಾಧನೆವೋಯ್ತು ಮುಂ ನೆಗಟ್ದರುಂಧತಿಯೊಳ್ (ಎಕ. V, ಬೇಲೂರು. ೧೧೨ ; ಸು. 1220). [ಸಂ.]

ಪತಿವ್ರತತ್ವ (ನಾ). = ಪತಿವ್ರತ: ನಿನ್ನ. . . ನಿರ್ಭಿನ್ನತೆಯ ಪತಿವ್ರತತ್ವವನು ಪರಿಕಿಪೆನೆನುತ ನನ್ನಿಯಿಂ ಬರಿಸಿದೆನು (ನವಮೋ.೯-೪೫). [ಸಂ.]

ಪತಿವ್ರತಸ್ಥೆ (ನಾ). ಪಾತಿವ್ರತ್ಯವುಳ್ಳವಳು; ಪತಿವ್ರತೆ; ಸಾಧ್ವಿ: ಎಸೆವ ಪತಿವ್ರತಸ್ಥೆ ದಮಯಂತಿ ಮನಃಪ್ರಿಯನಂ ವಿಚಾರಿಸಲ್ ದೆಸೆದೆಸೆಗಳ್ಗೆ ಭೂಸುರರ ವೇಷದ ಚಾರರನಟ್ಟದಳ್ (ನಳಚಂ. ೬೫೩).

[ಸಂ. ಪತಿವ್ರತಸ್ಥಾ]

ಪತಿವ್ರತಾಗುಣ(ನಾ). = ಪತಿಬ್ರತಾಗುಣ : ದಿವ್ಯಮುನಿಪುಂಗವ[ರಂ] ಬಗೆದೀರ್ಪಿನಂ ನಿಜಾತ್ಯಂತಪತಿವ್ರತಾಗುಣದಿನರ್ಚಿಸಿ ಮೆಚ್ಚಿಸು ನೀಂ (ಪಂಪಭಾ. ೧-೧೧೮); ಸಂದ ಪತಿವ್ರತಾಗುಣವಿಭೂಷಣದಿಂ ನೆಗಟ್ದಬ್ಬಲಬ್ಬೆ ತಾಯ್ (ಅಜಿಪು.೧೨-೪೮). [ಸಂ.]

ಪತಿವ್ರತಾಚರಣ (ನಾ). ಪಾತಿವ್ರತ್ಯದ ಆಚರಣೆ ; ಪತಿವ್ರತೆಯ ನಡವಳಿಕೆ : ವಧುರೋಹಿಣಿ ಬೆನ್ನೊಳಂತೆ ಬಂದಂದಮನಾತ್ಮವಲ್ಲಭನೊಳಾದನುರಕ್ತತೆಯಂ ಮಹತ್ವಮಂ ಸಂದ ಪತಿವ್ರತಾಚರಣಮಂ ಋಜುವೃತ್ತಿಯನಂದು ಭಾವಿಸುತ್ತೊಂದುಮನೆಂದಲ್ಲಿ ಬಟಾಯಂ ಸಿರಿದುಂ ತನಗಾದ ಲಜ್ಜೆಯಿಂ (ಕಾದಂಉ.೮೧೫). [ಸಂ.]

ಪತಿವ್ರತಾಧರ್ಮ (ನಾ). ಪತಿವ್ರತೆಯ ಧರ್ಮ; ಹದಿಬದೆತನ: ಪತಿವ್ರತಾಧರ್ಮಮಂ ಕೈಕೊಂಡು, ನಿಯಮವಜ್ರದೊಳಿಂದ್ರಿಯಂಗಳಂ ಬಿಗಿದು-ದೃಢಮನದಿ, ಸೇವಿಪೆ ನಿನ್ನನ್ (ಶ್ರೀರಾಮಾ.೮೮-೨೬೪). [ಸಂ.]

ಪತಿವ್ರತಾಭಾವ (ನಾ). = ಪತಿಬ್ರತಾಗುಣ : ನಿನ್ನ ಚರಿತವೆ ಪುಣ್ಯಚರಿತವು ನಿನ್ನ ನೆನೆದಂಗನೆಗೆ ಬಹುದು ಪತಿವ್ರತಾಭಾವ(ಕುಪ್ಯಾಅ.೧೬-೫೨); ಪತಿಭಕ್ತೆಯಾದರೆ ತನ್ನ ಪತಿಗೆ ಸರ್ವೋಪಚಾರಂಗಳ ಮಾಡಿ . . . ಆತನುಂಡು ಮಿಕ್ಕುದನುಂಬುದೇ ಪತಿವ್ರತಾಭಾವ (ಸಿದ್ಧೇಸ. ೬೭-೨೨೬); ಅನಸೂಯಾದೇವಿ ಪತಿವ್ರತೆಯಾಗಿ ಶಿವನ ಕೃಪೆಯ ಪಡೆದಳೆಂಬುದ ಅರುಂಧತಿ ಕೇಳಿ, ತಾನು ಪತಿವ್ರತಾಭಾವದಿಂದ ಶಿವನ ಪೂಜಿಸುತ್ತ ಹಿಮಾಚಲದಲ್ಲಿರಲು (ಭೈರಸೂ. II, ೬೬). [ಸಂ.]

ಪತಿವ್ರತಾಲಿಂಗ (ನಾ). [ಜೈನ] ಮುನಿಗಳ ಯೋಗಸಾಧನೆಯ ಒಂದು ವಿಧ : ಸ್ತ್ರೀಲಿಂಗಂ ಸರಸ್ವತಿಲಿಂಗಮೆಂದುಂ ಪತಿವ್ರತಾಲಿಂಗಮೆಂದುಂ ಕೇಶಪ್ರತಿಲಿಂಗಮೆಂದುಂ ಅರಿಂಜಯಲಿಂಗಮೆಂದುಂ ಚತುರ್ವಿಧಲಿಂಗಮಕ್ಕುಮವಜೊಳ್ . . . ಪತಿವ್ರತಾಲಿಂಗಂ ವಿಕಲ್ಪಯೋಗಸಾಧನಂ (ಚಾವುಂಪು. ೨೨೨). 'ಕೇಶಪ್ರತಿಲಿಂಗ' ಪರಾ. [ಸಂ.]

ಪತಿವ್ರತಿಕೆ, ಪತಿವ್ರತಿಕ್ಕೆ (ನಾ). = ಪತಿವ್ರತ : ಸತಿಯರ್ಪತಿವ್ರತಿಕೆಯಂ ನಂಬಿಯಲಗನಿಕ್ಕಿ ತೊಱೆಯೆಯುಂ ಕುಂಟಣಿಯರ್ ಸೋಲ್ತ ಸವಿಗಂಡು ಬೇಟಕ್ಕೆ ಕಂಟಕರಾದೆವೆಂದು ನೀಕರಿಸೆಯುಂ (ಅರ್ಧನೇ. ೫-೨ ಪ).

ಪತಿವ್ರತಿಕ್ಕೆ : ಆಯಂಗೆಟ್ಟು ಪತಿವ್ರತಿಕ್ಕೆಯಳವಂ ತಾಂ ಸುಟ್ಟು . . . ಕಳಂಕಮಾಗೆ ಕುಲಮುಂ ಪೋದಂದದೇನೊಳ್ಳಿತೇ ಶ್ರೀಯುಂ ರೂಪುಮದೇವುದಯ್ಯ ಸಿರಿಗಂ ಶೀಲಕ್ಕಮೇನಂತರಂ (ಜೀವಸಂ. ೨೨೮-೩೮).

[ಪತಿವ್ರತ + -ಇಕೆ]

ಪತಿವ್ರತಿಕ್ಕೆ 'ಪತಿವ್ರತಿಕೆ' ನೋ.

ಪತಿವ್ರತೆ (ನಾ). ಪತಿಸೇವೆಯೇ ವ್ರತವಾಗಿ ಉಳ್ಳವಳು ; ಗರತಿ; ಸಾಧ್ವಿ : "ಕುಲವಧು ಸಾಧ್ವಿ ಪತಿವ್ರತೆ ಕುಲಪಾಳಿಕೆ ಸತಿ ಚರಿತ್ರವತಿಯಕ್ಕುಂ" (ವಸ್ತುಕೋ. ೫೨-೪); ಅನಪತ್ಯೆ ಪತಿವ್ರತೆ ಕೈಯನೆತ್ತಿದಳ್ ತೊಡುಗೆಗಳ್ಗೆ ಕರಮರ್ಥಿನಿ ರೂಪಿನ ಕಣಿ ಸೂಚೀಕರ್ಮಾಯ್ತೆ ನಿಪುಣೆ ಮಿಥುನಾಲಯಾದಿಮದ್ರೇಕ್ಕಾಣಂ (ಜಾತತಿ. ೧೯-೭); ಪತಿಯಿಂ ಪಿಂಬಡಿನೊಳ್ ಪತಿವ್ರತೆಗೆ ಬೇಱೊಂದುಂಟೆ ಕೃತ್ಯಂ ವಿರಾಗತೆಯುಂ ಮೇಣ್ ತದನುಪ್ರಯಾಣವಿಧಿಯುಂ ತಾವಲ್ಲದೆ(ಕಾವ್ಯಾವ.೭೦೬); ಪರಮಪತಿವ್ರತೆಗೆ ಗಂಡನೊಬ್ಬ (ಬಸವ. ೬೧೫). [ಸಂ. ಪತಿವ್ರತಾ]

ಪತಿವ್ರತೆತನ(ನಾ). ಸಾಧ್ವಿಯ ಗುಣ : ವರಸಂಪದದಿಂ ಸಿರಿಯಂ . . . ಪತಿವ್ರತೆತನದಿಂ ನಿರುತಮರುಂಧತಿಯಂ ಪೋಲ್ದಿರುತಿರ್ಪಳ್ ಕೀರ್ತಿವೆತ್ತು ಚೆಂಗಳೆ ಮುದದಿಂ (ತ್ರಿಪುವಿ. ೧೦-೮). [ಪತಿವ್ರತೆ + -ತನ]

ಪತಿಶುಶ್ರೂಷೆ (ನಾ). ಗಂಡನ ಸೇವೆ,—ಉಪಚಾರ : ಪತಿಪಾದ ಭಕ್ತೆಯರೆನಿಸಿ [ಬಣ್ಣನೆ]ವೆತ್ತ ಸತಿಯರೊಲಿದು ಸಮನಿಸುವ ಪತಿಶುಶ್ರೂಷೆಯ ಬಗೆಯನಱಿತು ಸಂಗತಿಗೈದದನು ಬಣ್ಣಿಪೆನು(ಹದಿಬ. ೩-೩).

[ಪತಿ$_2$ + ಶುಶ್ರೂಷೆ]

ಪತಿಸದನ (ನಾ). ಗಂಡನ ಮನೆ ; ಪತಿಗೃಹ : ಹೊಕ್ಕ ಪತಿಸದನದಲಿ ಸುಖ ಶಾಂತಿ ಇರದೆ, ಸೊಕ್ಕಿ ಕುಳಿತಳು ರೋಗರಕ್ಕಸಿಯು ಶಿರದೆ (ಕಎಪು.೩೪-೨). [ಪತಿ$_2$ + ಸದನ]

ಪತಿಸದ್ಮ (ನಾ). = ಪತಿಸದನ : ಆ ಶಕುಂತಳೆ ಪತಿಸದ್ಮಕೈದಿದಪಳಾಕೆಗ ನುಜ್ಜೆಯನೀವುದೆಲ್ಲರುರ (ಶಾಕುಂತ. ೫೩-೮೭). [ಪತಿ$_2$ + ಸದ್ಮ]

ಪತಿಸನ್ನಿಧಿ (ನಾ). ಗಂಡನ ಸಮೀಪ,—ಹತ್ತಿರ: ಕನ್ನೆ ಪೆರನೊಡವೆಗಡ ಪತಿಸನ್ನಿಧಿಗಿಂದವಳ ಕಳುಹಿ ನಿರ್ಮಲವಾದತ್ತೆನ್ನಯ ಮಾನಸಮಾದಂ ತನ್ನಯ ಬಳಿಯಿಟ್ಟೊಡವೆಯ ಮಗುಳಿತ್ತನವೊಲ್ (ಶಾಕುಂತ. ೫೯-೧೦೦).

[ಪತಿ$_2$ + ಸನ್ನಿಧಿ]

ಪತಿಸೇವೆ (ನಾ). ಗಂಡನ ಸೇವೆ,—ಉಪಚಾರ: ಪತಿಸೇವೆಯೊಳಂತು ಪಸಿದ ಪಾರ್ವನ ಮಱೆದತಿ ವಿಳಂಬವನಾಚರಿಸೆ ಸತಿಯರ ಧರ್ಮದ ಸಾರವನ ಱಿಯದೆ ಖತಿಗೊಂಡು ಮುನಿಗಳಪಿದನು (ಹದಿಬ. ೨-೩೯).

[ಪತಿ$_2$ + ಸೇವೆ$_1$]

ಪತಿಹಿತ(ನಾ).೧.ಸ್ವಾಮಿಯ ಹಿತ; ಒಡೆಯನ ಒಳಿತು: ಬಸನಂ ಪತಿಹಿತದಲ್ಲಿಯೆ . . . ಬಸನಂ ನೋಂಪಿಗಳಲ್ಲಿಯೆ ಬಸನಂಗಳು ಶಾಸ್ತ್ರದೇವಿಯೊಳು ಪೆಜಮೊಳವೆ (ಎಕ. V, ಹಾಸನ. ೧೧೬-೩೪ ; 1123); ಪತಿಹಿತಂ ಪೌರಜನದುತ್ಸವಂ ದೇಶದುನ್ನತಿ . . . ಪುಣ್ಯನೀತಿಸಂತತಿಗಳೆಲ್ಲಂ ನೆರೆದು ರೂಪಾದುದೆಂಬಂತೆ ಮತಿವಂತ ಸತ್ಯಕೀರ್ತಿಯೆನಿಪ್ಪ ನೇಕಪ್ರಧಾನನಾ ಭೂನಿಪತಿಗೆ (ಪಚಕಾ.೧-೪೬). ೨.ಸ್ವಾಮಿಯ ಹಿತವನ್ನು ಬಯಸುವವನನು; ಒಡೆಯನಿಗೆ ಒಳ್ಳೆಯದನ್ನುಂಟುಮಾಡುವವನನು : ಪತಿಹಿತನಂಜನಾತನಯನಾ ಪವನಾತ್ಮಜನಂ ಖಗೇಶ್ವರಂ ಪತಿಹಿತನಾ ಮರುತ್ತನಯನಂ ಖಗರಾಜನಿನರ್ಕನಂದನಂ ಪತಿಹಿತನಾ ಮರುತ್ತನಯನಂ ಖಗರಾಜನಿನರ್ಕಜಾತನಂ ಪತಿಹಿತನೀತನೆಂದು ಪೊಗಟ್ಟುಂ ಸಲೆ ದುರ್ಗನನುರ್ವರಾಜನಂ (ಪಂಚತಂ. ೩೧೨-೧); ನಾನಾಯುಧವಿಶಾರದನ ಧರಿತಧೈರ್ಯನ ಪತಿಹಿತನ. . . ಸೇನಾಪತಿಯ ಮಾಡುವುದು (ಕುಪಾಳು.೪-೮೮).

ಪತಿಹಿತಚರಿತ = ಒಡೆಯನ ಹಿತವನ್ನು ಬಯಸುವವನನು; ಒಂದು ಬಿರುದು:ಪರಸೈನ್ಯಜಳಧಿ ಸಂಜಾತ ಭಯಶ್ರೀಪತಿ ಪತಿಹಿತಚರಿತಂ ಶ್ರೀಪತಿದಣ್ಡಾಧಿನಾಥನೆಸೆದಂ ಧರೆಯೊಳ್ (ಸೌಇಇ. XX, ೭೪-೬ ; 1112). **ಪತಿಹಿತನಿಧಿ** = ಒಡೆಯನ ಹಿತವೇ ನಿಧಿಯಾಗುಳ್ಳವನನು; ಒಂದು ಬಿರುದು : ಪರಮಗುಣರತ್ನನೆನಿಸಿದ ಸಿರಿಪತಿ ದಣ್ಡಾಧಿನಾಥತಿಳಕನೆ ಸುಜನಾಭರಣನ ಮಯ್ದುನನೆಸೆದಂ ಪ[ತಿ]ಹಿತನಿಧಿ ನೆಗರ್ದ್ದನನ್ತದಣ್ಡಾಧೀಶ(ಸೌಇಇ.XX, ೭೪-೨೧. 1112). **ಪತಿಹಿತವೈನತೇಯ** = ಸ್ವಾಮಿಗೆ ಹಿತವನ್ನು ಬಯಸುವುದರಲ್ಲಿ ಗರುಡನಂತಿರುವವನನು ; ಒಂದು ಬಿರುದು: ಮಹಾಪ್ರಚಣ್ಡದಣ್ಡನಾಯಕಂ . . . ಪತಿಹಿತವೈನತೇಯಂ ಶೌಚಾಂಜನೇಯಂ (ಸೌಇಇ. XX, ೪೭-೨೧ ; 1072) ; ಪ್ರತಾಪಸಹಾಯಂ ಪತಿಹಿತವೈನತೇಯಂ ಪಿಸುಣರ ಗಣ್ಡಂ . . . ನಾಮಾದಿ ಸಮಸ್ತಪ್ರಶಸ್ತಿ ಸಹಿತಂ ಶ್ರೀಮದ್ದಣ್ಡನಾಯಕಂ ಬನ್ಮ್ಯಾದೇವಂ (ಎಕ. VII, ಶಿಕಾರಿ. ೧೩೪-೧೪ ; 1077). [ಪತಿ$_2$ + ಹಿತ]

ಪತಿಹಿತವ(ನಾ). ಯಜಮಾನನಿಗೆ ಹಿತವನ್ನು ಬಯಸುವ ವ್ಯಕ್ತಿ: ಪತಿಹಿತವರೆನಿಪ ಸಚಿವರ ಸತಿಯರ್ ನಾಲ್ವರ್ ಮಹೋತ್ಸವಂ ಮಿಗೆ ದೈವಸ್ಥಿತಿಯಿಂ ಪುತ್ರರನೆರಡೆರಡು ತಿಂಗಳಿಂ ಹಿಂಬಿ ಪಡೆದರ್ (ಜಕಳು. ೨-೬೫). [ಪತಿ$_2$ + ಹಿತವ]

ಪತಿಹಿತವೆ (ನಾ). ಪತಿಗೆ ಹಿತವನ್ನು ಬಯಸುವವಳು; ಪತಿವ್ರತೆ; ಸಾಧ್ವಿ: ಗಂಗೆ ಹೆಚ್ಚಿದಳು ನರಕಿಗಳು ತನ್ನೊಳಗೆ ತೊಳೆದ ದೋಷ ತವಿಲಾದುದಿಂದು ಪತಿಹಿತವೆಯಹ ಸುದತಿಯನ್ಯತವನಜಾಯದವನೀಶನುಭಯ ಕುಲಶುದ್ಧನಹ ಕುವರನೀ ಸ್ವಾಮಿಹಿತವನಹ ಮಂತ್ರಿಯ ಸೋಂಕು ತನಗೆ ಕೈಸಾರ್ದುದೆಂದು(ಪಚಕಾ.೧೧-೩೨). [ಪತಿ$_2$ + ಹಿತವೆ]

ಪತಿಹಿತಾಚಾರಿ (ನಾ). = ಪತಿಹಿತವೆ : ಜನಕಂ ತಾಂ ದಾಸಿರಾಜಂ ಜನನಿ ಪತಿಹಿತಾಚಾರಿ ದುಗ್ಗಬ್ಬೆ (ಸೌಇಇ. XX, ೧೪೪-೨೪ ; 1165).

[ಪತಿಹಿತ + ಆಚಾರ + -ಎ$_2$]

ಪತಿಹಿತಿಕ್ಕೆ (ನಾ). ಸ್ವಾಮಿಯ ಹಿತವನ್ನು ಬಯಸುವಿಕೆ ; ಸ್ವಾಮಿಭಕ್ತಿ : ಅಳವಜಿವು ಸನ್ನಿ ಪೆಂಪಸ್ಪಳಿತಗುಣಂ ಪತಿಹಿತಿಕ್ಕೆಯೆಂಬವು ತನ್ನೊಳ್ಪೆಳದು ಪುದಿದಿರೆ ಸುಪುತ್ರಃ ಕುಳದೀಪಕನೆನಿಸಿ ಜಾನವೆಗ್ಗಡೆ ನೆಗಟ್ಟಂ (ಎಕ. V, ಮಂಜರಾ. ೪೫-೧ ; ಸು. 1030 ?).

[ಪತಿಹಿತ + -ಇಕ್ಕೆ$_2$(<-ಇಕೆ)]

ಪತಿಹಿತೆ (ನಾ). = ಪತಿಹಿತವೆ : ಪತಿಯ ಕಳಂಕಮನಾತ್ಮದ್ಯುತಿಯಿಂದಪಹರಿಸಳನ್ದು ರೋಹಿಣಿಯಂ ಪತಿಹಿತೆ ಕಾನ್ತಲದೇವಿಯಸಿತಕೀರ್ತ್ಯಿಜ್ಯೋತ್ಸ್ನೆ ಸಂತತಂ ನೆಗುತಿರ್ಕ್ಕುರ್(ಎಕ. V, ಹಾಸನ. ೧೧೬-೩೫; 1123); ಪತಿಹಿತೆಯರೆನಿಪ ಸತಿಯವರತಿದುರ್ಲಭಮೆಂದುಮಿಂತುನುಲ್ಲದೆ ಕುಲಟಾತತಿ ಸುಲಭಂ ಸುಸ್ಪರ್ಶಮದತಿದುರ್ಲಭವಂತೆ ಕಾಜದೇಂ ದುರ್ಲಭಮೇ (ಶಾಶ್ವಪು. ೩-೧೦೯) ; ಪತಿಹಿತೆಯು ರತಿಯೊಳಂ ಪತಿಯೊಳ್ ಪೆಣಗುವಂತೆ (ಪತಿಬ. ೫-೫೭). [ಪತಿಹಿತ+-ಎ$_2$]

ಪತಿಹೀನೆ (ನಾ). ಗಂಡನಿಲ್ಲದವಳು ; ಪತಿಯನ್ನು ಕಳೆದುಕೊಂಡವಳು : "ಮೋಚಾ = ಪತಿಹೀನೆ" (ಕಾಶಕ್ಯ. ೯೪). [ಸಂ. ಪತಿಹೀನಾ]

ಪತುಮೆ 'ಪಡಿಮೆ' ನೋ.

ಪತೂರ, ಪತೂರ್ಯ(ನಾ).ಒಂದು ಬಗೆಯ ಸಸ್ಯ ; ಹೊನ್ನಗನ್ನೆ : "ಪತೂರಃ, ಪತೂರ್ಯಃ—ಈರೆರಡು ಹೊನ್ನಗನ್ನೆ" (ಓಷಧಿ. ೯೧).

ಪತೂರ್ಯ : ನೋಲಿನ ಪ್ರಯೋಗವನ್ನು ನೋಡಿ.

[<ಸಂ. ಪತ್ತೂರ]

ಪತೂರ್ಯ 'ಪತೂರ' ನೋ.

ಪತ್ಕರಿಸು 'ಪತಿಕರಿಸು' ನೋ.

ಪತ್ತ$_1$, **ಪತ**$_1$ (ನಾ). ಪಾತ್ರೆ ; ಭಾಂಡ : ಯಾರ ಕಾಲನೊರಸುವ ಯಾರ ಹಾಸ ಹಾಸುವೆ ? ಯಾರ ಪತ್ತ ಚೀವರವೆತ್ತಿ ಹಿಡಿವೆ ? (ವೈಶಾವ. ೬೭-೩೪೬). **ಪತ**$_1$: ಇಲ್ಲೇ ಬಂದಿಪ್ಪು ಬೂಂದಿ, ಪಕೋಡ ಮಾಡಿಸಿ ಗೂಡೇಲಿ ತುಂಬಿಸಿ ತೆಗೆದುಕೊಂಡು ಹೋಗಬಾರದೇ ! ಅಲ್ಲಿ ಪತಗಳಿದ್ದೇ ಇವೆ. ತುಂಬಿದಾ ಇಟ್ಟ! (ದಿನಾರಾ. ೮೭). [<ಪ್ರಾ. ಪತ್ತ./ಸಂ.ಪಾತ್ರ]

ಪತ್ತ$_2$ 'ಪತ್ತರ$_1$' ನೋ.

ಪತ್ತಂಡ (ನಾ). ಒಬ್ಬಾತನ ಹೆಸರು (?) : ಅಮ್ಮಳಿಯ ಪತ್ತಣ್ಣ ತೆಜುವ ಅಯ್ಯುಜು ಭತ್ತ ಪಡೆಯಂ ಯಿದಕ್ಕೆ ಸಾಕ್ಷಿ ಮುಗುಳಿ ಚೆಣ್ಣಯೂರ ಪಲಾಡಿ ಅಮ್ಮಾಳಿ ಕಿರಿಯ ಮುಗುಳಿ ನುಬ್ಬೆಳ್ಳಿ ನಲ್ಲೂರು ನೂಗುಣ್ಣ ತೇಗುರು ಆರಮಣ್ಣಂ ಬಿಟ್ಟ (ಎಕ. VI, ಚಳ್ಳಕು. ೪೨-೧೭; 959). [?]

ಪತ್ತಣ (ನಾ). ಪಟ್ಟಣ ; ನಗರ : ಹರಿಯ ಪತ್ತಣಕೆ ದೂರ್ವಾಸ ಬಂದು ಹರಿಯರಮನೆಗೆ ಬಿತ್ತರದಿ ಪೋಗಿ ಭಿಕ್ಷಾನ್ನವಂ ಯೋಜಿಸಲ್ (ಏಕೋಪು. ೧೧-೬೭). 'ಪಟ್ಟಣ' ಪರಾ. [<ಸಂ. ಪತ್ತನ]

ಪತ್ತನ(ನಾ). ನಗರ;ಪುರ ; ☞"ಬಂಡಿಗಳಲ್ಲಾಗಲಿ ನಾವೆಗಳಲ್ಲಾಗಲಿ ಪ್ರಯಾಣ ಮಾಡಿ ಸೇರಬಹುದಾದ ಪುರ"(ಪಡ್ಡಾರಾ. ಟಿಪ್ಪಣಿ. ೧೯೯) ; "ಪತ್ತನಂ, ಅಧಿಷ್ಠಾನಂ, ನಿಗಮಃ . . . ಪುರಂ, ಪುರೀ—ಈ ೧೧ ಪಟ್ಟಣಂ" (ಪಲಾಯು. ೪೮-೧೩೦) ; ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪೊರಾ ವಾರಣಾಸಿಗೆ ವಂದು (ಪಡ್ಡಾರಾ. ೧೦೨-೧೬) ; ನಗರ ಚಕ್ರೇಶ್ವರಂ ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖ ಸಂವಾಹನ . . . ಅಷ್ಟಾದಶವಿಷಯಭಾಷಾಸಮನ್ವಿತನಪರಿವೃತ ಪಟ್ಟಂಡಭರಿತಮಪ್ಪ ಭರತಮಂ ಭರತಸಂತೇಕಚ್ಛತ್ರಚ್ಛಾಯಾಯಾ[ಗುಂ ಆಜ್ಞಾವಿಧೇಯಮುಮಂ ಮಾಡಿ (ಅಜಿಪು. ೧೦-೧೫ ಪ) ; ಖೇ[ಟ ಮಟಂಬ ಪತ್ತನ ದ್ರೋಣಾಮುಖ ಸಂವಾಹನಖಯನಿಚಿತಮು. . . . ಮನೋಹರಮುಮೆನಿಸಿದ ಭರತಕ್ಷೇತ್ರದ ಮಧ್ಯದೊಳ್ ಮಧ್ಯದೇಶಮುಂಟು (ಜಗವಿ. ೨-೧೫ ಪ) ; ವಿನುತ ಹಂಸಾವಳಿಯು ನದಿಗಳಿಂ . . . ಅಹಿತವಿಧುರಾಹುವೆನಿಪ ಬಿರುದಿನ ಕೇತುಮಯ ಪತ್ತನಂಗಳಿಂ ದೇಶಂ ನವಗ್ರಹಾತ್ಮಕವೆನಿಸಿತು (ಭಾವಚಿಂ. ೨-೬). [ಸಂ.]

ಪತ್ತನಾಜೆ (ನಾ). (ಕ್ರ) ಸೌರಮಾನದ ಎರಡನೆಯ ತಿಂಗಳಿನ ಹತ್ತನೆಯ ದಿನ ; ವೃಷಭಮಾಸದ ಹತ್ತನೆಯ ದಿನ : ಈ ವರುಷದ ಹಾತ್ರೆ ಮುಗಿದೊಡನೆ ಪತ್ತನಾಜೆಗೇ ನಮ್ಮ ಹೂವಯ್ಕನಿಂದ ಗದ್ದೆಗಳನ್ನು ಬಿಡಿಸಿ ಧೋಮಸನಿಗೆ ಗೇಣಿಗೆ ಕೊಟ್ಟುಬಿಡುವ (ಸಂಪಾಸ. ೩೭). [<-ತುಳು. ಪತ್ತನಾಜೆ, ಪತ್ತನಜೆ, ಪತ್ತನದ್ಕ]

ಪತ್ತರ$_1$, ಪತ್ತ$_2$, ಪತ್ತಿ$_2$ (ನಾ). ೧. ಓಲೆ ; ಪತ್ರ : ತಿಟ್ಟಿನ ಮೇಲೆ ಕುತುಕೊಂಡು (ಒಳ್ಳೆ) ಪತ್ತರ ಓದೋನೇ . . . ನಮ್ಮೂರ ಗೋವಿನ ಸೆರೆಗಳ ಬಿಡಿಸಯ್ಯಾ (ನಾಪದ. ೧೩೫). **ಪತ್ತ$_2$** : ೧. "ಪತ್ತ(ತ್ರಿ)—ಪತ್ರ=ಎಲೆ, ಓಲೆ"(ತದ್ಭವಕೋ. ೨೪). ೨. ಎಲೆ ; ಪರ್ಣ: ಮೇಲಿನ 'ತದ್ಭವಕೋ' ಪ್ರಯೋಗವನ್ನು ನೋಡಿ. **ಪತ್ತಿ$_2$** : ಮೇಲಿನ 'ತದ್ಭವಕೋ' ಪ್ರಯೋಗವನ್ನು ನೋಡಿ.

[<ಪ್ರಾ. ಪತ್ತ./ಸಂ. ಪತ್ರ]

ಪತ್ತರ$_2$ 'ಪತ್ತಿರೆ' ನೋ.

ಪತ್ತಲ, ಪತ್ತಲು, ಪಾತಳು (ನಾ). ಒಂದು ಬಗೆಯ ತೆಳುವಾದ ಸೀರೆ : ಬೀಳುವ ಪತ್ತಲವುಟ್ಟು ಕೆಂಪು ರವಕೆಯ ತೊಟ್ಟು ನೊಸಲಿನಲಿ ತಾರಗೆಯ ತಿಲಕವಿಟ್ಟು (ಕಸನ. ೧೬-೧) ; ಯತೋದ ಬೇರೆ ಮಾತಿಲ್ಲದೆ, ಪತ್ತಲ ಕೂಡ ಬದಲಿಸದೆ ಚಿಕ್ಕಪ್ಪನನ್ನು ಸುರಿಸಿದಳು (ಪಾಪ್ಸಲ್ಯ. ೩೮) ; ಉಡುವುದು ಬೀಳುವ ಹೊಳೆಹೊಳೆಯುವ ರೇಶಿಮೆ ಪತ್ತಲ (ಸಾಹೇಬ್. ೩೦). **ಪತ್ತಲು** : ಅಂದು ಗುಲಾಬಿ ಪತ್ತಲು ಉಟ್ಟಿದ್ದಳು (ಚಂದುಮಿ. ೬೬) ; ಖನ್ನ ಪಾರ್ವತಿದೇವಿಗೆ ಎಣ್ಣೆಪತ್ತಲುಡಿಸಿ ಸೋಬಾನ ಪಾಡ್ಯಾರಲ್ಲ (ಮಲ್ಲಿಗೆ.೫೬). **ಪಾತಳು**: ಓರಣವಾಗಿ ಗೌರವರ್ಣದ ಮೈಗೆ ಬಿಗಿಯಾಗಿ ಒರಗಿದ ಒಂದು ಪಾತಳು (ಮುಂಗಾಪು. ೩೦). [<ಮರಾ. ಪಾತಳ್]

ಪತ್ತಲು 'ಪತ್ತಲ' ನೋ.

ಪತ್ತವಂದ (ನಾ). ಒಂದು ಬಗೆಯ ಸಸ್ಯ : ಕಿ(ತಿ)ರುಳಿಗೆ ಕಾಗದೊಂಡೆ ಯಜದೊಂಡೆ ಪುನರ್ನವಿ ಪತ್ತವಂದವೀಶ್ವರಿ . . . ಕಾತರಿಕೆಯೆನಿಪ್ಪಿವಂ ಮಧುಯುಂತಂ ಶ್ವೆತಕರ್ಪಟ ಶುಲ್ಪ ನಾಗಲೋಹರಜಮನಟ್ಟು ಕಟ್ಟಿ ಕಳೆದಿಕ್ಕುಗುಮಾವಗಮಸ್ಥಿವೃದ್ಧಿಯಂ(ಲೋಕೋಪ.೯-೧೨೯);"ಪತಂಗದ ಮರನ ಬದನಿಗೆ" (ಲೋಕೋಪ. ೬೬೪). [?]

ಪತ್ತಳ (ನಾ). (?) : ಪಳವಳಿಯಂ ಕಟ್ಟಿ ಕಸ್ತುರಿ ಛಳಿಯ ಕುಂಕುಮ ನವ್ಯ ಶ್ರೀಖಂಡ ಪತ್ತಳವ ಮಿಶ್ರಿಸಿದ ಮಂಟಪಂ ಚೆಲ್ವಾಯ್ತು ಕೃತ್ತಿವಾಸನ ಚರಕ್ಕೆ (ಲಿಂಗಪು. ೧೫-೪೮). [?]

ಪತ್ತಳಕರಣ 'ಪತ್ತಳೆಕರಣ' ನೋ.

ಪತ್ತಳಿಕೆ$_1$, ಬತ್ತಲಿಕೆ, ಬತ್ತಳಿಕೆ, ಬತ್ತಳಿಗೆ (ನಾ). ಬಾಣಗಳನ್ನಿಡುವ ಕೋಶ,—ಚೀಲ ; ತೂಣೀರ : "ಅಂಬಿನ ಪತ್ತಳಿಕೆ,ಕಲಾಪ, ತೂಣೀರ" (ಸಾಚರಾ. ೬) ; ಕುಸುಮಶರಂ ತನ್ನ ಪುಷ್ಪಂಗಳೆಂಬ ಬಾಣಂಗಳಂ ತುಂಬಿದ ಪತ್ತಳಿಕೆಗಳನಲ್ಲಿ ತಂದಿರಿಸಿದನೆಂಬಂತೆ ಪಿರಿದಪ್ಪ ಪೂಗಳ ಬಳಗಮನೊಳಕೊಂಡಗುರ್ವುವಡೆದುರ್ಪಿ ಕೊರ್ಪಿ ಪರ್ಪಿದ ಮತಲ್ಲಿಕಾವಲ್ಲೀ ವಲ್ಲರಿಗಳಿಂದತ್ಯಂತರಮಣೀಯಮಾಗಿರ್ದುದು (ಬಾಧಪು. ೧-೧೦೯ ಪ). **ಬತ್ತಲಿಕೆ** : ಭುಗುಭುಗು ಭಟಭಟಲೆಂದು ಲೋಚನದಿಂದೊಗೆದ ದಳ್ಳುರಿ ಸುತ್ತಿ ಸ್ಮರನ ಬಿಗಿದ ಬತ್ತಲಿಕೆ ಕರ್ವುವಿಲ್ಲು ಸಹಿತೆ ಸುಟ್ಟುಗಿದುದು ಉರಿ ನಭಸ್ತಳಕೆ (ಮೋಹತ. ೭-೩೯). **ಬತ್ತಳಿಕೆ** : ೧. ಮನ್ಮಥಭೂಪನು ತಿಳಿದು ಬಿಲು ಬತ್ತಳಿಕೆಗಳನಱಸಿ ತೊಂಡಗಿಳಿಗಳು ಚಂಚ್ಚುವಂ ಮಸೆಯೆ ಮೂಡಿತ್ತು ಋತುಸಂಧಿ (ಹಚಕಾ. ೩-೧೪) ; ನೃಪತಿಲಕ ಬತ್ತಳಿಕೆಯಲಿ ಸೆಳೆದನು ಹೂಡಿದನು ಶರವ (ಕುವ್ಯಾಕ. ೧೧-೪೩) ; ವಿಶಿಖಹತಿಯಲಿ ನೊಂದು ಹಲುಮೊಱೆ ದಸುರನುಗಿದನು ಬತ್ತಳಿಕೆಯಿಂದಸಮನಯನ ಕಳಂಬವನು ಕಳವಳಿಸಿ ಸುರನಿಕರ (ತೊರಾ. ೩-೬-೬೭) ; ಮಾನಕೇತನ ಬಾಣದ ಬತ್ತಳಿಕೆಯನೇನುಳಿಯದೆ ತಳೆದಂತೆ ಮಾನಿನಿಯನುಪಮಜಾನುಯುಗಳವಿಪ್ಪವು (ಅಂಜಚ. ೫-೧೨೫). **ಬತ್ತಳಿಗೆ** : ಬಿಲ್ಲು ತೀರು ಹೆದೆ ಬತ್ತಳಿಗೆ ಸೀಸಕ ವಜ್ರ ಕವಚ . . . ಮಯೂರಿ ಪೇಟಕ ಮುಂತಾದ ಶಸ್ತ್ರ ಜಯೋತ್ಕರಕ್ಕಾದಿ ಸಾಧನವಿಶೇಷಂಗಳಿಂದಲುಂ (ವಿವೇಕ.೨೬೨).

[ದೇ.॥ ತೆಲು. ಬತ್ತಳಿಕ,ಬತ್ತಡಿಕ, ಬತ್ತಳಿ, ಬತ್ತಡಿ]

ಪತ್ತಳಿಕೆ$_2$ (ನಾ). ಕಾಗದ ; ಪತ್ರಿಕೆ : "ಪತ್ತಳಿಕೆಯೆನಲು ಕಾಗದ ಮಕ್ಕು" (ಮಂಗರಾ. ೧೦೫-೧೫) ; "ಪತ್ತಳಿಕೆ (ಪತ್ತಳೆ)—ಪತ್ರಿಕಾ" (ತದ್ಭವಕೋ. ೨೪). [ಪತ್ತಳೆ$_1$+-ಇಕೆ]

ಪತ್ತಳಿಗ (ನಾ). ಕಾಗದ, ಪತ್ರಗಳಲ್ಲಿ ವ್ಯವಹರಿಸುವವನು : ಪಟಸಾಲಿಗಂ, ಪಡವಂದಿಗಂ, ಪತ್ತಳಿಗಂ, ತೆಲ್ಲಿಗಂ(ಭಾಷಾಭೂ. ೧೬೩ ಪ್ರಯೋ).

[ಪತ್ತಳೆ$_1$+-ಇಗ]

ಪತ್ತಳೆ$_1$, ಪತಳೆ, ಪತ್ಥಳೆ$_1$ (ನಾ). ೧. ಎಲೆ ; ಪತ್ರಾವಳಿ ; ಹಚ್ಚೆದೆಲೆ : ಪರಿಪಾಕಮಾದ ಮಾಂಸೋತ್ಕರಮನಪಂ ಮುತ್ತದೆಲೆಯ ಪತ್ತಳೆಯೊಳಗಿಕ್ಕಿರದಾಗಳ್ ಮುಂದಿಟ್ಟಾದರದಿಂದೆನ್ನವನೆ ಪಸಿದೆ ಉಣ್ಣನುತಿರ್ದಂ (ತ್ರಿಪುವಿ. ೨೭-೧೨೪). ೨. ಕಾಗದ ; ಪತ್ರ : 'ಪತ್ತಳಿಕೆ$_2$' ಪರಾ. ೩. ಅಧಿಕಾರಪತ್ರ ; ಶ್ರೀಮುಖ : ಕಾಮ ದೇವನಿತ್ತಂ ಮಧು ಪೆತ್ತನೀ ನೆಲನಿಂತಿದು ಪತ್ತಳೆ[ಪಾಠಾಂ.ಪತ್ತೆಳೆ, ಪೆತ್ತಳೆ, ಪೆತ್ತಿಳೆ]ಯೆಂದು ಸಾಱುವಂದಂ ಮಿಗೆ ಕರ್ಚ ಪಾಱುದುವು ಕೆಂದಳೆರಂ ಗಿಳಿವಿಂಡಿನೋಳಿಗಳ್ (ಪಂಪಭಾ. ೫-೩೧) ; ಉದ್ಯಾನದೇಶಮನಾಳಲೆಂದು ಕಾಮನ ಕೆಯ್ಯೊಳ್ ತೊಳಗಿದ ಪತ್ತಳೆಯಂ ಕೊಂಡು ಜಾದಂ ತೊಡೆದಂತೆ ತಳರ್ತಶೋಕೆಗಳಿಂ (ಅರ್ಧನೇ. ೪-೬೮ ಪ). **ಪತಳೆ** : ೩. ಹಡುವಣ ಮುತ್ತೆರಿಸೀಮೆ ಆತನ ಮು××× ಪಯ್ಯನ್ತ ಸಲುವಂತಾಗಿ ಕೊಟ ಪತಳೆ (ಎಕ. II, ೪೦೬-೭ ; ಸು. 1250). **ಪತ್ಥಳೆ$_1$** : ೩. ಸಮಸ್ತಪ್ರಧಾನರ ಶ್ರೀಮನ್ಮಹಾಮಂಡಳೇಶ್ವರಂ ಕುಮಾರಂ ದಿಜ್ಜಲದೇವರಸರ ಸೌರಸದಿಂ ಪತ್ಥಳೆಸಹಿತಂ ಪಡೆದು ಬರೆದ ಶಾಸನಂ (ಕೊಲ್ಹಾಶಾ. ೮-೫೯ ; 1147). [<ಪ್ರಾ. ಪತ್ತಲ./ಸಂ.ಪತ್ರ]

ಪತ್ತಳೆ$_2$, ಪತ್ಥಳೆ$_2$ (ನಾ). ಒಂದು ಬಗೆಯ ತೆರಿಗೆ: 'ಪತ್ತಳೆಕರಣ' ಪರಾ. **ಪತ್ಥಳೆ$_2$** : ಪ್ರಧಾನಮ್ಮೂಱನೆಯ ಪತ್ಥಳೆಯ ಗೋವಿಪಯ್ಯನಾಯಕನು (ಎಇ. XIII, ೩೨೨-೫೪ ; 1126). 'ಪತ್ಥಳೆಕರಣ'ಪರಾ.

[<ಪ್ರಾ. ಪತ್ತಲೀ]

ಪತ್ತಳೆಕರಣ, ಪತ್ತಳಕರಣ, ಪತ್ಥಳೆಕರಣ (ನಾ). ತೆರಿಗೆಯನ್ನು ವಸೂಲು ಮಾಡುವ ಉದ್ಯೋಗವುಳ್ಳವನು,—ಅಧಿಕಾರವುಳ್ಳವನು: ಶ್ರೀಮನ್ಮಹಾಪ್ರಧಾನಂ ಸಾವಾಸಿಗಳಧಿಷ್ಠಾಯಕಂ ಮನೆವೆರ್ಗ್ಗಡೆ ಪತ್ತಳೆಕರಣಂ ದಣ್ಡನಾಯಕ ಭೀಮಣಯ್ಯಂಗಳು (ಎಇ. XVI, ೩೩-೧೩;1102). **ಪತ್ತಳಕರಣ** : ಸಮಸ್ತಪ್ರಶಸ್ತಿಸಹಿತಂ ಶ್ರೀಮನ್ಮಹಾಪ್ರಧಾನಂ ಸೇನಾಧಿಪತಿ ಪತ್ತಳಕರಣಂ ದಂಡಾಯದ ಹೆರ್ಗ್ಗಡೆ ದಂಡನಾಯಕ ಮಹಾದೇವಯ್ಯಂಗಳುಂ (ಸೌಇ. XI-i, ೫೦-೨೩ ; 1138). **ಪತ್ಥಳೆಕರಣ** : ಲೋಕಸಹವಾಸಿಗಳಧಿಷ್ಠಾಯಕಂ ಪತ್ಥಳೆಕರಣಂ . . . ಶ್ರೀಮನ್ಮಹಾಪ್ರಧಾನಂ ದಣ್ಡನಾಯಕಂ (ಸೌಇ. XX, ೭೪-೧೮ ; 1112). [ಪತ್ತಳೆ$_2$+ಕರಣ]

ಪತ್ತಳೆಗೂಳು (ನಾ). ಎಲೆಯಲ್ಲಿಟ್ಟ ಆಹಾರ ; ಎಡೆ : ಮನೆದೈವಮಪ್ಪ ಕೃತಾಂತನ ಪರ್ವದ ದಿನದೊಳಗಾ ಮೃತ್ಯುದೇವಿ ಮನಮೊಸೆದಿಟ್ಟ ಮಾಸಲ ಪತ್ತಳೆಗೂಳನನುಕರಿಸಿದವು ಪಿಂಡಗಳು (ತ್ರೀಪಾಲ. ೮-೧೪).

[ಪತ್ತಳೆ$_1$+ಕೂಳು$_2$(<ಕೂಟ್$_1$)]

ಪತ್ತಱುಗಾವುದ (ನಾ). ಹದಿನಾರು ಗಾವುದ : ಸೆಱೆಕೋಲ್ ಸೆಱೆಕೋಲಿಂ ಪತ್ತಱುಗಾವುದ ಬಲದ ಪವಣನನಿತಿನೆಂದಾನಱಯೆಂ (ಪಂಪಭಾ. ೧೦-೫೯). [ಪತ್ತು$_3$+ಅಱುಗಾವುದ]

ಪತ್ತಟಿ(ನಾ).ಎಂಜಲು; ಉಚ್ಛಿಷ್ಟ: "ಎವುಟಿಂದುಂ, ತಿನ್ನಮೆಂದುಂ, ಪತ್ತಟಿಯೆಂದುಂ ಎಂಜಲ್" (ಕಕಸಾ. ೬೭-೫೦೮) ; "ಎವುಟಿಂಜಲು ಮೆನ್ನುತ್ತುಂ ತಾವೇನುಂ ಪತ್ತಟಿನ್ನಲುಚ್ಛಿಷ್ಟಕ್ಕಂ" (ಕವಿಕಂ. ೨೦೭).

[?]

ಪತ್ತಾನುಪತ್ತು (ನಾ). ಕೈಯಿಂದ ಕೈಗೆ ಸಾಗಿಸುವ ರೀತಿ,—ವಿಧ(?):ಬರಿಯ ಕಾಗದವಾದರೆ ಪತ್ತಾನುಪತ್ತು ಆಗಿ ಅವರಿಗೆ ಮುಟ್ಟಸಬಹುದಿತ್ತು ಇದು ರಿಜಿಸ್ತ್ರಿ ಹೋಗಿ ದಸ್ಕತು ಪಡೆಯದ ಇರಲು ನಿರ್ವಾಹವುಂಟೇ ? (ಮ. ಯು. ೨೩). [?]

ಪತ್ತಾಯ, ಪತ್ತಾಯಿ (ನಾ). (ಕರಾ) ಧಾನ್ಯಗಳನ್ನು ತುಂಬುವ ಸಾಧನ ; ಕಣಜ ; ಗಳಗೆ : ಅವನು ನೆತ್ತಿಗೆ ಎಲೆವಸ್ತ್ರವನ್ನು ಸುತ್ತಿಕೊಂಡು ಪತ್ತಾಯದ ಮೇಲಿರಿಸಿದ್ದ ಬಾಳು ಮತ್ತು ಬುಟ್ಟಗಳನ್ನು ಎತ್ತಿಕೊಂಡ (ನಡೆದಾ. II, ೧೧೨೫). **ಪತ್ತಾಯಿ :** ಪತ್ತಾಯಿಯ ತುಂಬ ಕಾಳುಗಳಿವೆ (ರೂಢಿ).

[ದೇ.॥ ತಮಿ. ಮಲ. ಕೊಡ. ಪತ್ತಾಯ ; ತುಳು. ಪತಾಯಿ, ಪತ್ತಯ, ಪತ್ತಾಯ, ಪತ್ತಾಯಿ./ಪೋರ್ಚು. ಪತಯಾ]

ಪತ್ತಾಯಿ 'ಪತ್ತಾಯ' ನೋ.

ಪತ್ತಾರ, ಪತ್ತಾರಿ, ಪೊತ್ತಾರ (ನಾ). ೧. ಚಿನ್ನ, ಬೆಳ್ಳಿಯ ಕೆಲಸ ಮಾಡುವವನು; ಅಕ್ಕಸಾಲಿಗ : ಲೌಕಿಕದಲ್ಲಿ ಪಂಚಾಳಕುಲದಲ್ಲಿ ಒಬ್ಬ ಪತ್ತಾರನಿಗೆ ಒಂದು ಸನಗು ಮಾಡಿಕೊಡೆಂದು ಕೊಟ್ಟರೆ ಅವರು ಮಾಡಿಕೊಟ್ಟ ಸನಗು ತಮಗೆ ಪರಿಣಾಮವಪ್ಪಿದರೆ ಇಟ್ಟುಕೊಂಬುವರು ಪರಿಣಾಮವಿಲ್ಲದಾದರೆ ಮರಳಿ ಮತ್ತೊಬ್ಬ ಜಾಣ ಪತ್ತಾರನ ಕೈಯಿಂದ ಮಾಡಿಸಿ ಇಟ್ಟುಕೊಂಬುವರು (ವಚಸಂ. ೧೨೬-೧೦೭) ; ಆದರೆ ಕಿರೀಟ ಕೆಡಿಸದೆ ಪತ್ತಾರನ ಮೋಸವನ್ನು ಬೈಲಿಗೆ ಹಾಕುವ ಮಾರ್ಗವು ಅವನಿಗೆ ತೋರಲಿಲ್ಲ (ಮುಂಬಯಿ. ೫-೬೬) ; ನನ್ನ ನತ್ತು ಮುರಿದಿತ್ತು, ಟಳಕರು ಒಬ್ಬ ಪತ್ತಾರನನ್ನು ಕೂಡಲೆ ಕರೆದು ತಂದರು (ಸ್ಮೃತಿಚಿ. ೬೭). ೨. ಟಂಕಸಾಲೆಯ ಮೇಲ್ವಿಚಾರಕ,—ಅಧಿಕಾರಿ ; ನಾಣ್ಯಗಳ ಪರೀಕ್ಷಕ : ಬಳಿಕ ಪತ್ತಾರನು ಆ ಗಟ್ಟಿಗಳಲ್ಲಿ ಮೊಂದನ್ನು ತಕ್ಕೊಂಡು ನಟ್ಟನಡುವೆ ಕಡಿದು, ಮೊಂದು ರೂಪಾಯಿ ತೂಕ ತುಂಡನ್ನು ಕಡಿದುಕೊಂಡು . . . ಜಾಲಗಾರನ ಕೈಯಲ್ಲಿ ಕರಗಿಸಲಿಕ್ಕೆ ಕೊಡುವನು (ಕಭಾಗೆ. ೨೮೨) ; ಪತ್ತಾರ-ಈತನು ಬೇರೆ ಬೇರೆ ನಾಣ್ಯಗಳ ಪರೀಕ್ಷೆ ಮಾಡಿ ಬೆಲೆ ಗೊತ್ತುಪಡಿಸಲಿಕ್ಕೆ ಗೌಡನಿಗೆ ಸಹಾಯ ಮಾಡುವನು (ಮಭಾರ. ೧೭೨). **ಪತ್ತಾರಿ :** ೩. ತೆರಿಗೆ ಹಣದ ಪರೀಕ್ಷಕ ಮತ್ತು ಸಾರ್ವಜನಿಕರ ದವಸ-ಧಾನ್ಯಗಳನ್ನು ಅಳತೆ ಮಾಡುವವನು : (ಕಿ). **ಪೊತ್ತಾರ :** ೪. ಬಣ್ಣದ ಕೆಲಸ ಮಾಡುವವನು ; ಗಾರೆಯವನು : ಗಣೇಶಚತುರ್ಥಿಯ ಪೂರ್ವದಲ್ಲಿ ದೊಡ್ಡ ಪಟ್ಟಣಗಳಲ್ಲಿ ಪೊತ್ತಾರರು, ಜೀನಗಾರರು ಮುಂತಾದವರು ಗಣಪತಿಗಳನ್ನು ಮಾಡುತ್ತಾರೆ (ಮುಂಬಯಿ. ೫-೨೪೭).

[ದೇ.॥ ತಮಿ. ಪತ್ತರ್; ತೆಲು. ಬತ್ತುಂಡು./ಪ್ರಾ.ಪತ್ತರಕ = ಆಭರಣ]

ಪತ್ತಾರಿ 'ಪತ್ತಾರ' ನೋ.

ಪತ್ತಾರುವಸ್ತ್ರ (ನಾ). ಒಂದು ಜೊತೆ ಬಟ್ಟೆ ; ಜೋಡಿ ವಸ್ತ್ರ : ಮನೆಯ ಯಜಮಾನ ಆ ಕೂಡಲೇ ಒಳಗೆ ಹೋಗಿ ಒಂದು ತಟ್ಟೆಯಲ್ಲಿ ಹಣ್ಣು ಹಂಪಲುಗಳನ್ನೂ ೨೫ ರೂಪಾಯಿಯನ್ನೂ ಒಂದು ಪತ್ತಾರುವಸ್ತ್ರವನ್ನೂ ತಂದು ಸನ್ಮಾನಿಸಿದರು (ನಾಕಲಾ. ೧೯).

[ಪತ್ತಾರು$_0$(P←ತಮಿ. ಪತ್ತಾಱು)+ವಸ್ತ್ರ]

ಪತ್ತಾಸು (ನಾ). ೧. = ಪತ್ತಾಯ : ಈಗ ನಿಮ್ಮ ಚಾವಡಿಯಲ್ಲಿ ಅಕ್ಕಿ ಹಾಕಿರಿಸಲು ಒಂದು ಪತ್ತಾಸಿಲ್ಲವೇ ? ಪತ್ತಾಸಿಲ್ಲದೆ ಚಾವಡಿಗೆ ಲಕ್ಷಣವೇ ಇಲ್ಲ (ಮರಮ. ೧೨೧). ೨. ಪೆಟ್ಟಿಗೆ ; ಪೆಠಾರಿ : ಇವರ ಸಮ್ಮುಖದಲ್ಲಿ ಪತ್ತಾಸಿನಿಂದ ದಪ್ತರುಗಳನ್ನು ಕೆಳಕ್ಕಿಳಿಸಿದರು (ನಂಬಿನಾ. ೨೩೧) ; ಆದರೆ ಆ ಸೀರೆಯನಿಟ್ಟದ್ದ ಪತ್ತಾಸೇ ಉರಿದು ಹೋಗಿತ್ತು (ದೇವಹಂ. ೭೦).

[←ತುಳು. ಪತ್ತಾಸ್]

ಪತ್ತಿ$_1$ 'ಪಟ್ಟಿ' ನೋ.

ಪತ್ತಿ$_2$ 'ಪತ್ತರ$_1$' ನೋ.

ಪತ್ತಿ$_3$ (ನಾ). ೧. ಚಲಿಸುವಿಕೆ ; ಚಲನೆ ; ನಡಗೆ : "ಪತ್ತಿಃ — ನಡಗೆ, ಕಾಲುನಡೆ ಜನ, ಸೇನಾಭೇದ" (ಸಿದ್ಧಾಂತಿ. ೩೯೨). ೨. ಕಾಲಾಳು; ಪದಾತಿ ; ಕಾಲುನಡೆಯ ಸೈನಿಕ : "ಪದಾತಿಃ, ಪತ್ತಿಃ . . . ಪಾದಚಾರೀ – ಈ ಲ ಕಾಲಾಳ್" (ಹಲಾಯು. ೭೬-೨೯೬) ; ಪೊಳೆವ ಮಿಂಚುಗಳಂತಿರೆ ಕೇತುಗಳ್ ಜಳದವೃಂದದವೋಲಿರೆ ಹಸ್ತಿಗಳ್ ಗಳಿತಧಾರೆಗಳಂತಿರೆ ಪತ್ತಿಗಳ್ ಬಳಸಿ ಕಾರ್ಗೆಣೆಯಾಯ್ತು ಮಹಾಹವಂ (ಕವಿರಾ. ೧-೧೪೪) ; ಪತ್ತಿಶತಂಗಳ್ ಕದನೋತ್ಪತ್ತಿಯ ಮಾತೆತ್ತಲೆಂಬಿನಂ ಗಜಘಟೆಯಂ ಪತ್ತಿ ನಡೆತಂದುವೆನೆ ಸಂಪತ್ತಿಗೆ ಕುಳಭವನಮೊಂದೆ ದಲ್ ಜಿನಸವನಂ (ಮಲ್ಲಿಪು. ೧೨-೭೫) ; ಗಣನಾತೀತಮದೇನದೇನೆಸೆದುದೋ . . . ವರೂಥಂಗಳುಲ್ಬಣಶಸ್ತ್ರಾಸ್ತ್ರಗಭಸ್ತಿವಿಸ್ತೃತವಿಯದ್ದಿಗ್ಭಿತ್ತಿಗಳ್ ಪತ್ತಿಗಳ್ (ಪುಷ್ಪಪು. ೫-೧೩). ೩. ಸೈನ್ಯದ ಒಂದು ಅತಿ ಚಿಕ್ಕ ಭಾಗ ; ಒಂದು ರಥ, ಒಂದು ಆನೆ, ಮೂರು ಕುದುರೆ ಮತ್ತು ಐದು ಕಾಲಾಳುಗಳ ಗುಂಪು : "ಒಂದು ಸಾಮಜಮೊಂದು ತೇರ್ ಮೂಜಶ್ವಮೆಯ್ದು ಕಾಲಾಳ್ಗಳ್ ಪತ್ತಿಯಕ್ಕುಂ" (ವಸ್ತುಕೋ. ೮೩-೮) ; ತದ್ಬಲಂಗಳ ಪ್ರಮಾಣಮೆಂತೆನೆ ಪತ್ತಿಯೆಂದುಂ ಸೇನೆಯೆಂದುಂ . . . ಅನೀಕಿನಿಯೆಂದುಮಷ್ಟಪ್ರಕಾರಂ (ಮಹಾನೇ. ೧೧-೧೧೨ ವ). [ಸಂ.]

ಪತ್ತಿ$_4$ (ನಾ). ಹಿಸ್ಸೆ ; ಪಾಲು; ಭಾಗ: ಬನೂಮಾಮಿಯ ಮೈಮೇಲಿನ ಬಂಗಾರವಿತ್ತು. ಸಾಂಗಲಿಯಲ್ಲಿ ಅದನ್ನು ಮಾರಿದ್ದರೆ "ಪತ್ತಿ"ನ ಪ್ರಶ್ನೆ ಬರುತ್ತಿತ್ತು (ದೀಪಹ. I, ೨೩೬). 'ಪತ್ತಿಗ$_2$', 'ಪತ್ತಿಗಾರ' ಪರಾ.

[←ಹಿಂ. ಪತ್ತೀ ; ಮರಾ. ಪಾತೀ]

ಪತ್ತಿ$_5$ (ನಾ). ನಿವೇಶನ (?) : ಬಟಿಕ್ಕೆ ಪತ್ತಿ ಮೂವತ್ತೆರಡುಮನ್ತೆ ಪತ್ತಿಗರವಣಂ ಮೂಱು ಗದ್ಯಾಣಂ ಮಟ್ಟಿ ಪೊರಿಸಂ ಬಿಟ್ಟ ಮರ್ಯಾದೆ ಎಂಟನೆಯ ಶ್ರಾಹೆಗೆ ಪತ್ತಿಗೆ ಮೂಱು ಧರಣಂ ಮೂಱೆನೆಯ ಶ್ರಾಹೆಗೆ ತೆಱೆ ನೆಱೆದು ಮೂಱು ಗದ್ಯಾಣಮಂ ಪತ್ತಿಗೆ ತಿಱುವರೆಲ್ಲಾ ಕಾಲಕ್ಕಮಿದುವೆ ಮರ್ಯ್ಯಾದೆ (ಸೌಇಇ. IX-i, ೭೭-೨೩ ; 992); ಶ್ರೀಪೆರ್ಗ್ಗಡೆಯರ ಮರುಳಿಮಯ್ಯಂ ದೇವರಂ ಪ್ರತಿಷ್ಠೆಮಾಡಿ ಶಿ[ವ]ನಾಗಯ್ಯಗೇರಿಯ ಶತದ ತರ್ಕ್ಕಿಲ್ಗೆಯ್ಯ ಮತ್ತರು ೩ ಮನೆ ಪತ್ತಿ ೩ ಮಂಕಯ್ಯಗೇರಿಯ ಶತದ ಕಿಸುಕಾಡು ತೋಂಟಂ ಮತ್ತ ೧ (ಕಇ. II, ೯-೧೯ ; 1075).

[?]

ಪತ್ತಿಗ$_1$, ಹತ್ತಿಗ(ನಾ). ೧. ಜೊತೆಯವನು; ಸಂಗಡಿಗ; ಸ್ನೇಹಿತ: ವ್ಯಾಪ್ತಿಯುಳ್ಳ ನಮ್ಮ ಮಡಿವಾಳ ಮಾಚಯ್ಯ ನಿನ್ನ ಪತ್ತಿಗರಿ[ಪಾತಾಂ. ನಿನ್ನ ತೆತ್ತಿಗರಿ, ನಿನ್ನಾ ಪತ್ತಿಗಿಱಿ]ವರಯ್ಯಾ (ಒಸವ. ೬೫೧ ; ಪಚಶಾ. I, ೨೨೦-೪ ನೋ). ೨. ನೆಂಟ ; ಬಂಧು : ಪೊರೆವರಾರ್ ಕೌಸಲ್ಯೆ ಸುಮಿತ್ರೆಯರ ಚಿತ್ತದಿರವರಿದು ಪೋಷಿಸುವವನಾರು ಮದ್ಗಮನಸಂಭರಿತ ಹೃತ್ತಾಪದಿಂ ತೊಳಲುತಿಹರುಪಚರಿಪ ದ[ಪ]ತ್ತಿಗರದಾರಿರ್ಪರು (ವೆಂಕಾರಾ. ೨-೧೧-೩೩). ೩. "(ನರ್ತನದಲ್ಲಿ) ಕುಣಿತದ ಜೊತೆ ; ಪತ್ತಿಗರು" (Couple. ಇಂಕನಿ). **ಹತ್ತಿಗ :** ೪. ಉಂಟುಮಾಡುವವನು: ಹೆತ್ತ ನಿನ್ನೊಡಲಿಂಗೆ ತಂಪಿನ ತೆತ್ತಿಗನೊ ಮೇಣ್ ಬಹಳ ತಾಪದ ಹತ್ತಿಗ[ಪಾತಾಂ. ಮುತ್ತಯ]ನೊ ಕುರುರಾಯನೆಲೆ ಧೃತರಾಷ್ಟ್ರ (ಕುಸ್ಯಾದ್ರೋ. ೪-೨). [ಪತ್ತು$_2$+-ಇಗ]

ಪತ್ತಿಗ$_2$ (ನಾ). = ಪತ್ತಿಗಾರ : "ಪತ್ತಿಗ—ಕೋರುಕಾರ ; ಪಾಲಿಗ ; ಪರಿಚಯಸ್ತ" (ಜಾನಕೋ. ೧೪). [ಪತ್ತಿ$_4$+-ಗ$_2$]

ಪತ್ತಿಗಾರ (ನಾ). ಪಾಲುದಾರ ; ಹಿಸ್ಸೇದಾರ : (ಕಿ).

[ಪತ್ತಿ$_4$+-ಗಾರ(<-ಕಾಱ)]

ಪತ್ತಿಗೆ$_1$ 'ಪತ್ತುಗೆ' ನೋ.

ಪತ್ತಿಗೆ$_2$ (ನಾ). ಸ್ನೇಹಿತೆ ; ಜೊತೆಗಾತಿ ; ಒಡನಾಡಿ : ಅತ್ತಿಗೆಯ ಹುದಕ್ಕನಹುದು ತಾಯಹುದಕ್ಕ ಗುತ್ತಿಗೆಗಾತಿ ನೀನಹುದು ಪತ್ತಿಗೆ ಪರಮಾನುಕೂಲೆ ಕೇಳೆಂದು ಕೈಯೆತ್ತಿ ಕೊಂಡಾಡಿದ ಕುಮರ (ವೋಹತ. ೩೧-೫೭). [ಪತ್ತಿಗ$_1$+-ಎ$_2$]

ಪತ್ತಿಗೆ$_3$, ಹತ್ತಿಗೆ$_2$ (ನಾ). ೧. ಕಾಗದ ; ಪತ್ರ ; ಓಲೆ : "ಪತ್ತಿಗೆ—ಪತ್ರಿಕಾ=ಕತ್ತಿಯ ಅಲಗು, ಓಲೆ" (ತದ್ಭಕೋ. ೨೪). ೨. ಕತ್ತಿಯ ಅಲಗು ; ಧಾರೆ : (ಕಿ). ೩. ಚಾಕು ; ಚೂರಿ : (ಕಿ). **ಹತ್ತಿಗೆ$_2$** : ೧. "ಪತ್ರಿಕೆ, ಹತ್ತಿಗೆ" (ಶಬ್ದಾನು. ೧೫೪ ಪ್ರಯೋ); "ಹತ್ತಿಗೆ—ಪತ್ರಿಕಾ=ಪತ್ತಿಗೆ" (ತದ್ಭಕೋ. ೪೮). [<ಸಂ. ಪತ್ರಿಕಾ]

ಪತ್ತಿಗೆ$_4$ (ನಾ). "ಹಿಸ್ಸೆ ; ಪಾಲು" (ಜಾನಕೋ. ೧೪). [<ಪತ್ತಿ$_4$]

ಪತ್ತಿಗೆಯಾರಂಬ (ನಾ). ಜೊತೆಯಾಗಿ ಮಾಡುವ ಉದ್ಯೋಗ ; ಒಟ್ಟಾಗಿ ಮಾಡುವ ಕಸುಬು : (ಕಿ).

[ಪತ್ತಿಗೆ$_1$ (<ಪತ್ತುಗೆ)+ಆರಂಬ]

ಪತ್ತಿನು (ನಾ). (?) : ಕುಮಾರಗಾಣಿಕೆ ಪಣ ೮ ವಿಜಯವೀರವಣ ಪಣ ೪ ಕೊಡತಿವಣ ಪಣ ೧ . . . ಎಳ್ಳು ಸಲಗೆ ೩ ಕೊಳಗ ೧೯ ಕ್ಕಂ ಗದ್ಯಾಣ ೧ ಪಣ ೩ ಹಾ ಜೋಳಕಾರುಣ್ಯ ಬಿಟ್ಟಿಯ ಭಂಡಿ ಗದ್ಯಾಣ ೧ ಪಣ ೯ ಪತ್ತಿನು ಪೊತ್ತರ ಪಣ ೪ ಹಾ (ಎಕ. V, ಬೇಲೂರು. ೭೪-೧೪೪; 1261). 'ಎತ್ತಿಲು' ಪರಾ. [?]

ಪತ್ತಿಯ ಮತ್ತಉರ 'ಪಟ್ಟಿಯ ಮಟ್ಟಿವುರ' ನೋ.

ಪತ್ತಿರ, ಹತ್ತರ$_1$, ಹತ್ತಿರ$_1$, ಹತ್ತಿರು$_2$, ಹತ್ತಿರೆ$_1$, ಹತ್ತಿಲ, ಹತ್ರ$_1$ (ನಾ). ಸಮೀಪ; ಬಳಿ; ಮಗ್ಗುಲು; ಬದಿ : ಮರಳಿ ಪತ್ತಿರ ಶಿಷ್ಯನ ಶಿರದ ಮೇಲೆಯು ತಮ್ಮದಕ್ಷಿಣಕರವ ಚಾಚುತಲಿ(ಗಗತಾ.೨-೩೦). **ಹತ್ತರ$_1$** : ಕಾರವಾಡದ ಹತ್ತರದಲ್ಲಿ ಕಾಳೀನದಿಯ ಮುಖ . . . ಹೊನ್ನಾವರದ ಹತ್ತರದಲ್ಲಿ ಶರಾವತಿಯ ಮುಖ (ಕಭಾಗ. ೪) ; ಇರುಳಿನೊಳು ಪುಲಿ ಸಿಂಗ ಕರಡಿ ನರಿ ತೋಳಗಳ್ತಿರುಗುವವು ಹತ್ತರದೆ ಹೋಡಿಗೋರ್ವರುಮಿಲ್ಲ (ಮಲ್ಲಚ.೧೭-೯); ಖರೇದಿ ಮಾಡುವ ಸ್ಥಳವು ದೂರ ಅಥವಾ ಹತ್ತರ ವಿದ್ದಂತೆ ಭಂಡೀಬಾಡಿಗೆ ಮುಂತಾದ ಖರ್ಚು ಹೆಚ್ಚು ಕಡಿಮೆ ಹತ್ತುವುದರಿಂದ ಖರೇದಿ ಕಾಲದಲ್ಲಿ ಹತ್ತಿದಷ್ಟು ಖರ್ಚು ಹಿಡಿಯಲಾದೀತು (ಮುಂಬವ್ಯಾ. ೬). **ಹತ್ತಿರೆ$_1$** : ಹಸೆಯ ಮೇಲಣ ಮಾತ ಬೆಸಗೊಳಲಟ್ಟದನೆ ಶಶಿಧರನ ಹತ್ತಿರಕ್ಕೆ ಕಳುಹಿದರೆಮ್ಮವರು (ಮಹಾದೇ. ಬ. ೨೫-೪೮) ; ಹತ್ತಿರಕೆ ಪರಿದೆಯ್ದಿಯಲಗಂ ಕಿತ್ತು ತಾಂ ಜಡಿಜಡಿದು ಮೊನೆದೋಱುತ್ತ (ಬಸವು. ೩೨-೫೮) ; ಗರುವರನು ಮಾನ್ಯರನು ರಣಧೀರರನು ದೂರದಲಿರಿಸುವರು ಹತ್ತಿರಕೆ ಕರೆವರು ಬಾಯಿಬಡಿಕರ ಜಗದ ಭಂಡರನು(ಕುವ್ಯಾದ್ರೋ. ೧೫-೮) ; ಇತ್ತರೋಲೆಯನವದಿರವದಿರ ಹತ್ತಿರಕೆ ಕರೆದಯ್ಯನಿರವಿಗೆ ಚಿತ್ತದಲಿ ಶಂಕಿಸುತ ಹದನೇನೆಂದು ಬೆಸಗೊಳಲು (ತೊರರಾ. ೨-೬-೩). **ಹತ್ತಿರು** : ಶಿವನಂ ಸುತ್ತಿ ಸುತ್ತಿ ಬರುತ್ತ ನೋಡುತ ಹತ್ತಿರಿಗೆ ಬಂದು (ಬಸವು. ೧೮-೬೧) ; ಕಿವಿಯ ಹತ್ತಿರಿಗೆಯ್ದಿವಂದುಸಿರುವಂತಿರ್ದುವೊರ್ವ ಗೋಪಾಂಗನೆಯ ನಿಡುಗಣ್ಗಳು (ಭಿಕ್ಷಾಚ. ೩-೨೨) ; ಇತ್ತ ಲಣ್ಣಗೆ ಮಾಲ್ಯವಂತನು ಹತ್ತಿರಲಿ ಕೈಮುಗಿದು (ಆನಂರಾ. ೧-೬-೩೯). **ಹತ್ತಿರೆ$_1$** : ಆಗಳತಿಸಾಕಾರರೂಪವದಾಗಿ ನಡನಡಗುತ್ತ ಹತ್ತಿರೆಗಾಗ ಕೈಸನ್ನೆಯಲಿ ಕರೆವುತ್ತ (ಬಸವು. ೨೬-೨೫) ; ದೊರೆಗೆ ಹತ್ತಿರೆಯಾಯ್ತು ಕಾಳೆಗವರಿದೆನಲು ನಿಸ್ಸಾಳಕೋಟಿಯ ಧರಧುರದ ದೆಖ್ಖಾಳದಲಿ ತಲೆ ದೋಱಿದನು ಪಾರ್ಥ (ಕುವ್ಯಾಕ. ೪-೧೮). **ಹತ್ತಿಲ** : ಕಡುವೆಡೆಗಾದು ದೆಮ್ಮನಶಲಾದುದೆ ವಿತ್ತಮರಾತಿಯಂ[ಪಡಲ್ವೆಡೆ]ಪೆಡೆಗಾದುದೆಂಬ[ಱಃಪ] ಪೊತ್ತಿರಲಾದುದೆ ಕಯ್ದು ಸತ್ಯಮಂ ನುಡಿವೆಡೆಗಾದುದೆಂದುಸಿಯಲಾದುದೆ ನಾಲಗೆಯೆ ಹತ್ತಿಲದಿಂದು ಕೀರ್ತ್ತಿ ಪೊಂಗಡಿವಿಡೆ ರೋಚನೆಂಬಿಸಿನ ನಾರ್ಪ್ಪಿನ ಕೂರ್ಪ್ಪಿನ ಸತ್ಯದೇಳ್ಗೆಯರ (ಕಇಅ. ೨೧-೭-೧೩ ; 1093). **ಹತ್ರ$_1$** : ಸೊಸೆಗೆ ಬುದ್ಧಿ ಹೇಳಿ, ಅತ್ತೆ ಅಗಸನ ಹತ್ರ ಹೋದಂತೆ (ಗಾದೆ).

ಹತ್ತಿರಾಗು=ಸಮೀಪಿಸು ; ಸನಿಹವಾಗು ; ಹತ್ತಿರಕ್ಕೆ ಬರು : ಇತ್ತ ನಿಜಭಾಷೆಗೆ ಪರಾಭವ ಹತ್ತಿರಾಯಿತು ನರ ನಿಧಾನಿಸೆನುತ್ತ ಮುರರಿಪು ರಥವ ಬಿಟ್ಟನು ಕಡೆಯ ಮೋಹರಕೆ (ಕುವ್ಯಾದ್ರೋ. ೧೪-೨೫). ಹತ್ತಿರಿಣ=ಹತ್ತಿರದ ; ಸಮೀಪದ ; ಬಳಿಯ : ಬಡಗಲು ಈಶ್ವರ ಪುರದ ಊರ ಬಳಿಯ ಹತ್ತಿರಿಣ ಹುಣಿಸೆಮರ (ಎಕ. VII, ಶಿವಮೊ. ೨೬-೨೫೦ ; 1524). [<ಪತ್ತು$_1$./ತುಳು. ಹತ್ತರ, ಹತ್ರ]

ಪತ್ತಿರೆ, ಪತ್ತರ$_2$, ಹತ್ತರ$_2$, ಹತ್ತಿರ$_2$, ಹತ್ತಿರೆ$_2$, ಹತ್ರ$_2$ (ಅ). ಸಮೀಪದಲ್ಲಿ ; ಸನಿಹದಲ್ಲಿ ; ಪಕ್ಕದಲ್ಲಿ : ಕರುವನ ಕೇರಿಯಾದಿತ್ಯ ದೇವರ ಕೆಯ್ಯಿಂ ಪತ್ತಿರೆ ಬಡಗ ತೋರಣಗಾವುಂಡಗೆಯಿ ನವಿಲಮತ್ತರು ಹತ್ತು . . . ಮತ್ತರು ಮತ್ತಮೋರ್ವಾಯ ಬಟ್ಟೆಯಿಂ ಪತ್ತಿರೆ ಮೂಡ ಮಣಿಯಗೆಯಿ ನವಿಲ ಮತ್ತರೇಳಜ ಭುಜೆ (ಸೌಇಇ. IX-1, ೧೯೭-೪೬ ; 1119) ; ದೇವರಿಂ ಪತ್ತಿರೆ ಬಡಗಲು ರಾಜಬೀದಿಯಿಂ ಪತ್ತಿರೆ ಮೂಡಲು (ಬೊಂಕಶಾ. ೧೯೩೦, ಬಾಗೆವಾಡಿ. ೧೦೩-೪೫ ; 1165) ; ರಾಜವಾಹನಂ ಸೋಮದತ್ತನಂ ತಟ್ಕೈಸಿಕೊಂಡು ಪತ್ತಿರೆ ಕುಳ್ಳಿರಿಸಿ . . . ಬೆಸಗೊಳಲ್ (ದಶಕು. ೫-೧೨ ವ). **ಪತ್ತರ$_2$** : ಪತ್ತರಿದ್ದವರೆಲ್ಲ ಚಲ್ಲಿದರ್ದೆಸೆದೆಸೆಗೆ (ತುರಂಗ. ೫-೫೬). **ಹತ್ತರ$_2$** : ನನ್ನ ಹತ್ತರ ಒಂದು ಆಣೆ ರೊಕ್ಕ ಅದೆ (ಮುಂಬಯಿ. ೪-೪೪) ; ಅದರ ಹತ್ತರ ಶಸ್ತ್ರಾಸ್ತ್ರ ಸಜ್ಜಿತನಾದ ಒಬ್ಬ ವೀರಯುವಕನು ನಿಂತಿದ್ದನು (ಮಂದಾಕಿ. ೧). **ಹತ್ತಿರ$_2$** : ಹತ್ತಿರಾತನ ನಿಲಿಸಿ ಬಟ್ಟಲಲಿತ್ತು ವೀಳೆಯವನು ಸುಯೋಧನ ಕೆತ್ತು ಕೊಂಡಿರೆ ನುಡಿಸಿದನು ಕಲಿಕರ್ಣನವನಿಪನ (ಕುವ್ಯಾದ್ರೋ. ೧-೧೫) ; ಸಂಶಯದಿಂದೆ ಭೂಪಾಲಕಂ ತನ್ನ ಹತ್ತಿರಿಹ ನಿಜಮಂತ್ರಿ ನಕುಲಕೇತುವ ನೀಕ್ಷಿಸಲ್ಕೆ (ಜೈಮಿಭಾ. ೨೫-೫೮). **ಹತ್ತಿರೆ$_2$** : ಮಾವಿನ ಕೆಱೆಯ ಕೆಳಗೆ ಗುತ್ತೇಶ್ವರದೇವರಗದ್ದೆಯಿಂ ಬಡಗ ಹತ್ತಿರೆ ಒ(ಂ)ಮ್ಮೆರೆಯಲಿ(ಂ) ನ್ನೇಸಱಲು ಗದ್ದೆ ಕಂಮಂ ೧೦೦ (ಸೌಇಇ. IX-1, ೨೭೬-೫೦ ; 1183) ; ನಡೆದಿಹಃಪಗೆಯಾಂಡರೂರ ಹತ್ತಿರೆ ಬಂದು ಮೃಡಮೂರ್ತಿಪುರದ ಬಾಗಿಲ್ವಾಡದೊಳು ನಿಂದು (ಇಹರ. ದೇ. ೩೨-೫) ; ಲಗ್ನವಿದೆ ಹತ್ತಿರೆ(ಕುವ್ಯಾಅ. ೧೩-೮) ; ಹತ್ತಿರೆ ಕರೆದು ಕುಳ್ಳಿರಿಸಿಕೊಂಡಳು ಪ್ರಾಣಪತ್ತುಗೆಗಾತಿಯ ಮುದದಿ (ವೋಹತ. ೨೬-೮). **ಹತ್ರ$_2$** : ಛತ್ರಿ ಚಾಮರ ಢಾಳು ಎತ್ತಿ ಪಿಡಿದಿರುವವರು ಹತ್ರ ಚಿಮ್ಮುವ ಹಾಕು ಪಾವಡಿಗರು . . . ಎಡೆಯಾಡುವರು ಲೆಕ್ಕವಿಲ್ಲ ಸಂದಣಿಯು (ಶರಲೀ. ೨೩೦-೩). [<ಪತ್ತಿರ]

ಪತ್ತಿವರ್ಗ (ನಾ). ಕಾಲಾಳುಗಳ ಗುಂಪು ; ಪದಾತಿ ಸೈನ್ಯ : ಉತ್ತರದೇಶದ ಪತ್ತಿವರ್ಗಂಗಳುಯಿವರು ಪಾಂಡ್ಯದೇಶದ ಪದಾತಿಗಳು (ಸೌಗಂಧಿ. ೧೩೦-೭). [ಪತ್ತಿ$_3$+ವರ್ಗ]

ಪತ್ತಿಸು, ಹತ್ತಿಸು (ಕ್ರಿ). ೧. ಅಂಟಿಕೊಳ್ಳುವಂತೆ ಮಾಡು ; ಅಂಟಿಸು ; ಸೇರಿಕೊಳ್ಳುವಂತೆ ಮಾಡು ; ಲಗತ್ತಿಸು : ಒತ್ತಿದ ತಳ್ಳತ್ತಿದ ತಟ್ಟಿ ಮುತ್ತಿನ ಪೊಸದುಡುಗೆ ತಳಿರ ಸೋರ್ಮುಡಿ ಮನಮಂ ಪತ್ತಿಸಿ ಜೊತ್ತಿಸೆ ಮದನೋನ್ಮತ್ತೆಯರವಯವದೆ ಬಂದರರಸಿಯರರೆಬರ್ (ಪಂಪಭಾ. ೫-೫೯); ವನದೊಳ್ ನೇಱಿಳವಣ್ಣನಗ್ನಿಜೆ ಬಹುಪ್ರಖ್ಯಾತಿಯಿಂ ಪತ್ತಿಸಲ್ . . . ದೂಱ್ ಪೋದುದೇ (ಸೋಮೇಶ. ೮೩) ; ಅದೆ ತನ್ನೇತ್ರಂ ಪದದೊಳ್ ಪತ್ತಿಸಿ ಬಾಳ್ದ ಭಾಪುರೆ ವಿರೂಪಾಕ್ಷಂ ಲಲಾಟೇಕ್ಷಣಂ (ಪಂಪಾಶ. ೩೭). ೨. ಸೇರಿಸು ; ಕೂಡಿಸು : ಗುಂ ಎಂಬುದರ್ಕೆ-ತೆಗಟ್ಗುಂ, ನೆಗಟ್ಗುಂ, ಪೊಗಟ್ಗುಂ, ಎಂಬಂತುಱುದು

ವರ್ಕೆಲ್ಲಂ ಪತ್ತಿಸುವುದು (ಶಮದ. ೪೪ ಪ್ರಯೋ); ಅತ್ತಣಿಮೆಂದು ನಿಮಿರ್ಚುವರೆತ್ತಮದೆಂದುಸಿರ್ವ ಪಂಚಮಿಯನಲ್ಲಿ ಕೆಲರ್ ಪತ್ತಿಸುವರ್ ಮೂದೆಜನಂ ಪೆತ್ತ ತೃತೀಯೆಯನೆಕಾರಮಂ ಪರಿಹರಿಪರ್ (ಶಬ್ದಾನು. ೨೭೧ ವ್ಯಾಖ್ಯಾ). ೩. ಅಳವಡಿಸು; ಹೊಂದಿಸು: ಕತ್ತರಿಸಿ ಚಂದ್ರಕಳೆಯಂ ಪತ್ತಿಸಿದಂತೆಸೆವ ಸತಿಯ ಸುಲಿಪಲ್ (ಮಲ್ಲಿಪು. ೩-೭೫); ಕಳೆಯಂ ಪತ್ತಿಸಿ ಕೋಮಲಾಂಗುಲಿಗಳಿಂದಾ ತಂತಿಯಂ ನೀವಿ ನಿರ್ಮಳಮಂ ಮಾಡಿ . . . ಸುಕಂತೆ ಬಾಜಿಸಿದಳಾ ಜಾಣಂ ಲಸದ್ವೀಣೆಯಂ (ಕುಸುಮಾ. ೧-೩೬); ವನಮಧ್ಯದ ತೆಜಂಬೊಳೆವ ತೆಜಸಿನೊಳಳವಟ್ಟ ಕೊಳವೇರ್ಗಳ ಕೇರ್ಗಳೊಳಗೆ ತಮಾಲದೆಳೆದಳಿರಂ ಕೊಱೆದು ಚಿತ್ರಪತ್ರಮಪ್ಪಂತೆ ಪತ್ತಿಸಿನಟ್ಟ ಪೊಂಬಾಳೆಯ ಬಾಳ್ಗಂಬಂಗಳಿಂ (ರಾಜಶೇ. ೧೦-೩೧ ವ). ೪. ಸೇರಿಸಿಕೊಳ್ಳು; ಹೊಂದಿಸಿಕೊಳ್ಳು: ದುರ್ಯೋಧನಂ . . . ಗಳಿತಗರ್ವನಾಗಿ ಪಾಂಡವರ ಮೊಗಮಂ ನೋಡಲ್ ನಾಣ್ಚಿ ಮದಗಜಪುರಕೆ ಪೋಗಿ ಜೂದಿನೊಳ್ ಗೆಲ್ದ ನೆಲನಂ ನಯಜ್ಞನಾಗಿ ತನ್ನೊಳ್ ಪತ್ತಿಸಿ ದುಶ್ಶಾಸನನಂ ಯುವರಾಜನಂ ಮಾಡಿ ನಿರ್ವ್ಯಾಜಮರಸುಗೆಯ್ಯುತ್ತುಮಿರ್ದಂ (ಪಂಪಭಾ. ೭-೩೯ ವ). ೫. (ದೀಪ, ಬೆಂಕಿ ಮೊದಲಾದುವು) ಹತ್ತಿಕೊಳ್ಳುವಂತೆ ಮಾಡು; ಪುಟಮಾಡು; ಹಚ್ಚು; ಹೊತ್ತಿಸು: ಪತ್ತುಂ ಬೆರಲೊಳ್ ಸೊಡರಂ ಪತ್ತಿಸುವರ್ (ಸಮಪ. ೯-೧೨೩); ಶುದ್ಧಮನಾತ್ಮಪಾತ್ರಗತಮಂ ಸುಸ್ನಿಗ್ಧಮಂ ಚಿತ್ತವರ್ತಿಕೆಯಂ ಪತ್ತಿಸಿ ರಾಗದಿಂ ಬೆಳಗುವೆಂ ಬೋಧಾಮಲಜ್ಯೋತಿಯಂ (ಅರ್ಧನೇ. ೧-೧೧). ೬. ಲೇಪಿಸು; ಬಳಿ; ಸವರು: ತಾವರೆಯ ನೂಲಿಂ ಸುತ್ತಿದ ಸಿರಿಕಂಡದುರುಳಿಯಂ ಪತ್ತಿಸಿದ ಮೃಣಾಳನಾಳವಲಯದಿಂ ಮುದ್ರಿಸಿದ ನಳಿನೀಪತ್ರಪುಟಮಂ ತೆಗೆದು (ಕಾದಂಉ. ೧೮೮); ಕರ್ಣಾವತಂಸದೊಳ್ ಕೀಲಿಸಿದ ನೀಲದುನ್ಮುಖಮಯೂಖಸಂಕುಳಂ ಕೊಡಂಕೆಯೊಳ್ ತಿಂಬಿ ತೆಂಬಂತೆ ಕೊಗ್ಗಿಯ ಕತ್ತುರಿಯಂ ಪತ್ತಿಸಿಯುಂ (ಚಂದ್ರಪು. ೬-೬೩ ವ). ೭. (ಮನಸ್ಸನ್ನು) ತೊಡಗಿಸು; ನಿಲ್ಲಿಸು; ನೆಲೆಯಾಗುವಂತೆ ಮಾಡು: ಉತ್ತಮವಿದ್ಯೆಗಳ್ಗೆ ಗುಱಿಯಾದ ತನೂಭವರೆಯ್ದೆ ಚಿತ್ತಮಂ ಪತ್ತಿಸೆ ಪತ್ತಿದಂಗನೆಯರೊಳ್ ಬೆಸಕೆಯ್ವಮರೇಂದ್ರರಾಗಸಂಪತ್ತು ಮನಂಗೊಳುತ್ತುಮಿರೆ (ಆದಿಪು. ೮-೬೧); ವಿನಯದಿನವಳ ಶ್ರಾವಕತನಮಂ ಲೇಸಾಗಿ ಕಿಡಿಸಿ ತಿಳಿಪಿ ಬಟಿಕ್ಕಾ ವನಿತೆಯನೇಗೆಯ್ದುಂ ಮೆಲ್ಲನೆ ನಯದಿಂದೆನ್ನ ಧರ್ಮದೊಳ್ಪತ್ತಿಸುವೆಂ (ಧರ್ಮಾಮೃ. ೪-೧೯೪); ಒದವಿಸಿ ನಡೆನುಡಿ ನೋಟದ ಪದದಿಂ ಪೆಣ್ಗಳ್ಗೆ ಕಲಿಸುವರ್ ವೈಶಿಕಮಂ ಮುದುಪೆದಲೀ ಕುಂಟಣಿ ಮೆಯ್ಪದುಳದ ಗೆಯ್ಮೆಯೊಳಮಿಂತು ಪತ್ತಿಪಳಮಮಾ (ಚಿಕವಿ. ೬-೮೬). ೮. ವಶಪಡಿಸಿಕೊಳ್ಳು: ಮೇಳದೊಳಪ್ಪುಕೆಯ್ದುಗೊಟ್ಟಯೊಳೊಳಪೊಯ್ದು ಪತ್ತಿಸುವ ಸೂಳೆಯರಂದಮನೆಯ್ದೆ ಪೋಲ್ವ . . . ಸೂಳೆಯರ ನೆಗಟ್ತೆ ನಾಡೆ ತನಗಟ್ತು (ಪಂಪಭಾ. ೪-೯೪); ಬೆಸನಕ್ಕಾಗರಮಾದಳೀಕಸೊಬಗಿಂ ಕೂರ್ತಂದದಿಂ ಮತ್ತೆ ಪತ್ತಿಸಲೆಂದಾಟಿಸಿ ಬಂದಪಂ (ಕಾದಂಉ. ೬೨). ೯. ಕೈಗೊಳ್ಳುವಂತೆ ಮಾಡು; ಹೇರು; ಅಮರಿಸು: ಕ್ಷತ್ರಿಯಧರ್ಮವರ್ತಿಯಪ್ಪ ನಿನಗೆ ಯತಿಧರ್ಮಮಂ ಪತ್ತಿಸಿದಂ (ಪಂಚತಂ. ೧೧೪-೧೯). ೧೦. ಉಂಟುಮಾಡು; ಉತ್ಪತ್ತಿಮಾಡು; ಹುಟ್ಟಿಸು: ಬಸನಂ ಕೈಗಣ್ಮೆ ತಮ್ಮೊಲ್ದರನೆ ಪಿಡಿದು ಬಲ್ಲಂದದಿಂ ನಲ್ಮೆಯಂ ಪತ್ತಿಸಿ ಚಿತ್ತಂಬೆತ್ತು ಮೆಚ್ಚಂ ಸಲಿಸಿ ಸಲುವ ತಾಣಂಗಳೊಳ್ ಜಾಣರಂ ಜೊತ್ತಿಸಿ (ಸಮಪ. ೫-೫೦). ೧೧. ತೊಡಿಸು; ಧರಿಸುವಂತೆ ಮಾಡು: ಚಿತ್ತಜನಪಿತನುತ್ತಮಾಂಗಕೆ ಪತ್ತಿಸಿದ ಮಕುಟಾಗ್ರಕೆತ್ತಿದ ಮುತ್ತಿನಂದದ ಸತ್ತಿಗೆಯೊಳೊಪ್ಪಿದನು ಭುಜಗೇಂದ್ರ (ಅನಂರಾ. ೧-೩-೪೦). ೧೨. (ಏಟು) ತಾಗುವಂತೆ ಮಾಡು,— ಬೀಳುವಂತೆ ಮಾಡು; ಮಿಕ್ಕುದು ವಜ್ರಪಾತಮುಮನೆಂಬಿನಮುಬ್ಬಸಮಾದ ತೋರಹತ್ತಕ್ಕೆ ತಗುಳ್ದು ಪತ್ತಿಸುವ ಮಾನಸಗೋಳಮೆನಿಪ್ಪ ಡೊಕ್ಕರಕ್ಕಿಕ್ಕಿದ ವಜ್ರಲೇಪಮೆನೆ ಪತ್ತುವ ಲಗ್ಗೆಗೆ . . . ಬೆರ್ಚದನವಂ (ಚಂದ್ರಪು. ೫-೮೦). ೧೩. ವ್ಯಯಿಸು; ವೆಚ್ಚಮಾಡು; ವಿನಿಯೋಗಿಸು: ಜಿನಪೂಜೋತ್ಸವಕೆಲ್ಲಿಯುಂ ಜಿನಕಥಾಳಾಪೋತ್ಸವಕೆಲ್ಲಿಯುಂ . . . ಜಿನಮಹಾದಾನೋತ್ಸವಕೆಲ್ಲಿಯುಂ ಧನಮಂ ಪತ್ತಿಸುತಿರ್ಪೆ ನೀನೆ ಪಿರಿಯೈ ಶ್ರೀ ದಾನಚಿಂತಾಮಣೀ (ಅಜಿಪು. ೧೨-೧೬). ಹತ್ತಿಸು: ೧. ಚಂಡವಿಕ್ರಮಭೀಮನದ ಕೈಕೊಂಡು ತಾನವಿವೇಕದಲಿಯುದ್ದಂಡತನದಿಂತಂದ ಹತ್ತಿಸಲರಿದು ನಮಗೆಂದ (ಕುವ್ಯಾಅ. ೩-೧೮); ರತಿರೂಪ ಹರಿದು ಹತ್ತಿಸಿದಂತುಟೆಸೆವ ನಿನ್ನತಿಶಯದ ರೂಪುಗಂಡಿವಳನಾಳುವುದಿಲ್ಲವದಱಿಂದ ಕೊಡುವುದೆನಗೆ ಹಿತವಲ್ಲವೆಂದೆನಲ್ಕೆ (ಸಮ್ಯಕೌ. ೫-೧೬). ೩. ಬೆಸಸಿದೂಳಿಗವನಾ ಪಡಿಹಾಱರಿಂದಲೊದಗಿಸಿ ಕಾರ್ಯಭಾಗವಿಡಿದರಸನಿಚ್ಛೆಯನಱಿದು ಬೆಸುಗೆಬಿಡಿದಂತೆ ಹತ್ತಿಸಿ (ಚಿಬಪು. ೭-೬); ಬತ್ತಿ ಹೆತ್ತುಪ್ಪನು ಹ[ಪಾಠಾಂ. ಹೊ]ತ್ತಿಸಿದ ಫಲವೇನು ಮತ್ತೊಂದು ದೈವಕೆಱಗುವನ ಶಿವಪೂಜೆ ಹತ್ತಿಗೇಡೆಂದ (ಸರ್ವಜ್ಞ. ೧೭೨); ಊದುಬತ್ತಿಯನ್ನು ಹತ್ತಿಸಿಟ್ಟದ್ದಾರೆ (ದೌಲತ್. ೯). ೫. ಸತ್ತು ಪೋಗಿಹಯೆನ್ನ ಪುತ್ರಗೆ ಹತ್ತಿಸುವೆ ಅಗ್ನಿಯನುಯೆಂದರೆ ಹತ್ತಿ ಬೇಯ್ವುದುಯೆನಗೆ ವಡಲುರಿ (ಹಮಚ. ೧೬೪). ೬. ಕಣ್ಣೆವೆ ಬಿಳುಪೇಱೆ ಕಪ್ಪ ಹತ್ತಿಸಿ ಮುಖಕೆಣ್ಣೆಯ ಮಿಂಚುಗಳಿಕ್ಕಿ ಹುಣ್ಣುಗಲೆಯ ಸೀರೆಯಲಿ ಮಱಸಿಹ ಮುದಿಪಣ್ಯಾಂಗನೆಯರೊಪ್ಪಿದರು (ಕಂನವಿ. ೬-೧೯೨); ಬೇರೆ ಬೇರೆ ಅಂಗಾಂಶಗಳ ಒಳಭಾಗಗಳಿಗೆ ಬಣ್ಣ ಹತ್ತಿಸುವ ಅನಿಲೀನ್ ಬಣ್ಣಗಳ ಅನೇಕಾನೇಕ ಬೆರಕೆಗಳಿಂದ ಆಮೇಲೆ ಈ ಕೊಯ್ತಗಳಿಗೆ ಬಣ್ಣ ಕಟ್ಟಬಹುದು (ಕವಿಕೋ. I, ೫೪). ೯. ಅವನು ತನ್ನ ಕೆಲಸವನ್ನು ನನಗೆ ಹತ್ತಿಸಿದನು (ರೂಢಿ). ೧೦. ಅವನು ಇಬ್ಬರ ನಡುವೆ ಜಗಳವನ್ನು ಹತ್ತಿಸಿದನು (ರೂಢಿ), ಸಿಹಿಪದಾರ್ಥ ಮಗುವಿನ ಬಾಯಲ್ಲಿ ರುಚಿ ಹತ್ತಿಸಿತು (ರೂಢಿ). ೧೪. ಏರಿಕೊಳ್ಳುವಂತೆ ಮಾಡು; ಏರಿಸು: ಡೊಂಬರವನು ಹುಡುಗನನ್ನು ಗಳೆಯ ಮೇಲೆ ಹತ್ತಿಸಿದನು (ರೂಢಿ). ೧೫. (ಶಾಖ ಮೊದಲಾದುವನ್ನು) ಕೊಡು; ಒದಗಿಸು: ಉಟ್ಟ ಸೀರೆಯ ಪೊಟ್ಟಣಂಗಟ್ಟಿ ಶೂಲಿಯಕ್ಷಿಗೆ ಬಾಯ ಶೇಖವನೋಳಿಯಿಂ ನಸು ಹತ್ತಿಸುತ್ತಿರೆ ಸೇಲೆಯೆಲ್ಲಂ ನನೆಯಲಚ್ಚರಿವಡುವನೊಡನೊಡನೆ (ಬಸಪು. ೧೮-೬೦). ೧೬. (ಹೆದೆಯನ್ನು) ಬಿಗಿ; ಸಿದ್ಧಗೊಳಿಸು: ಹತ್ತಿಸಿದ ಚಾಪಮಂ ಜೇಗೈದು ಕೂಡೆ ಮಸೆವೆತ್ತ ಕೂರಂಬುಗಳನಾರ್ದಿಸಲ್ಸೇನೆ ಮುಱಿದತ್ತವನ ಬಾಣಘಾತಿಗೆ (ಜೈಮಿಭಾ. ೪-೩೧).

ಪತ್ತಿಸಿಕೊಳ್ಳು, ಹತ್ತಿಸಿಕೊಳ್ಳು = ೧. ಏರಿಕೊಳ್ಳುವಂತೆ ಮಾಡು; ಏರಿಸಿಕೊಳ್ಳು: ಏಡಿ ಬರ್ದುಂಕಿದೆನೆಂದು ಮುಂದೆ ನಿಲೆ ನಿಜಕಂಠತಳಮಂ ಪತ್ತಿಸಿಕೊಂಡು ಶಿಲಾತಳಮನೆಯ್ದೆವರ್ಪುದುಂ (ಪಂಚತಂ. ೮೫-೩); ಇವನು ನನ್ನನ್ನು ತನ್ನ ಹೆಗಲ ಮೇಲೆ ಹತ್ತಿಸಿಕೊಂಡನು (ಮುಂಬಯಿ ೩-೧೨೩). ೨. ಲೇಪಿಸಿಕೊಳ್ಳು; ಬಳಿದುಕೊಳ್ಳು: ಸೊಗಸಾಗಿ ಅಲಂಕಾರ ಮಾಡಿಕೊಂಡು, ಸುಗಂಧವನ್ನು ಹತ್ತಿಸಿಕೊಂಡು, ಒಬ್ಬರೊಡನೆ ಒಬ್ಬರು ಹುರುಡು ಮಾಡುತ್ತ ಎಲ್ಲ ರಾಜರೂ ಕುಳಿತಿದ್ದರು (ವಚಭಾ. ೫೧); ಬಣ್ಣ ಹತ್ತಿಸಿಕೊಂಡ ಪದಾರ್ಥಗಳ ರಾಸಾಯನಿಕ ಗುಣಗಳನ್ನು ಆ ಬಣ್ಣಗಳು ಎಂದಿಗೂ ಸೂಚಿಸುತ್ತಿರಲಿಲ್ಲ (ಕವಿಕೋ. I, ೫೪). ೩. (ಬೆಂಕಿ, ದೀಪ ಮೊದಲಾದುವು) ಹತ್ತಿಕೊಳ್ಳುವಂತೆ ಮಾಡು; ಪುಟಗೊಳ್ಳುವಂತೆ ಮಾಡು: ಅವನು ಕತ್ತಲೆ ಕೋಣೆಯಲ್ಲಿ ಹಣತೆಯನ್ನು ಹತ್ತಿಸಿಕೊಂಡು ಓದುವನು (ರೂಢಿ).

[ಪತ್ತು$_1$ + -ಇಸು$_3$]

ಪತ್ತೀಂದ್ರ (ನಾ). ಕಾಲಾಳುಗಳ ಸೇನೆಯ ಅಧಿಪತಿ; ಪದಾತಿ ನಾಯಕ: ಗಗನಗಹನದೊಳೆ ಗಮಿಯಿಪ ಖಗಕ್ಕೆ ಪತ್ತೀಂದ್ರಧೀವರಂ ಬೀಸಿದ ರೇಣುಗಣನವಜಾಲಕೊಳಗಾಯ್ತೊ ಗುಮಿಗೆಯಿಂದನಿಮಿಷಪ್ರತಾನಂ ಚಿತ್ರಂ (ರಾಜಶೇ. ೬-೪೩). [ಪತ್ತಿ$_3$+ಇಂದ್ರ]

ಪತ್ತು$_1$, ಹತ್ತು$_1$ (ಕ್ರಿ). ೧. ಅಂಟು; ಅಂಟಿಕೊಳ್ಳು: "ಪತ್ತು— ಸಂಶ್ಲೇಷೇ (ಹತ್ತಿಕೊಳ್ಳು), ಕಲಹ, ಸಂಖ್ಯಯೋಃ" (ಶಮಧಾ); "ಪಗಿಲ್ತುದು ಪತ್ತಿದಕ್ಕೆ ನಾಮಂ" (ಶಬ್ದಮಂ. ೨೨); ಅಲ್ಲಿಯೆ ಕಣ್ ಪಳಂಚೆ ಮನಮಲ್ಲಿಯೆ ಕೀಲಿಸೆ ನೆಚ್ಚು ಮೆಚ್ಚು ತಳ್ತಲ್ಲಿಯೆ ಸೋಲ್ತು ಪತ್ತೆ (ಆದಿಪು. ೨-೪೨); ನಡಪಾಡುವ ವನದೇವಿಯರಡಿಯೂಡಿದಲಕ್ತಕ ದ್ರವಂ ಪತ್ತಿದವೋಲ್ ಕಡುಗೆಂಪನಾಳ್ದುವೊಂದೊಂದೆಡೆ ವನಚರವಿದ್ಧ ಮೃಗಗಣಾರುಣಜಳದಿಂ (ಚಂದ್ರಪು. ೫-೪೯). ೨. ಸೇರು; ಕೂಡು: ತಪೆ ಮಾಱಾಂತ ಬಲಂ ಕಱುತ್ತಿಱಿದು ತನ್ನಾಳ್ದಂ ಕರಂ ಮೆಚ್ಚೆ ಗೆಲ್ದವನಂ ಶ್ರೀವಧು ಪತ್ತುಗುಂ (ಪಂಪಭಾ. ೧೦-೧೪); ಪೇನಂತೆ ತಲೆಯಂ ಪತ್ತಿ ಪಲ್ಕಡಿವರ್ ತೇರಣದಂತೆ ತಳಮಂ ಪತ್ತಿ ಕತ್ತರಿಸುವರ್ (ಧರ್ಮಾಮೃ. ೩-೭೩); ಪಕ್ಷಾರ್ಥಮಂ ಪೇಟ್ಟೆಕಾರಂ ಕಡೆಯಾಗು ಳ್ಳೊಡೆ ಶಬ್ದಂ ಲಿಂಗತ್ರಯ ವಚನತ್ರಯ ಪುರುಷತ್ರಯಾನ್ವಿತಮಾಗಿ ಧಾತುವಿನ ಕಡೆಯೊಳ್ ಪತ್ತುಗುಂ (ಶಮದ. ೨೫೦ ವೃತ್ತಿ); ಹೊತ್ತ ದೇಹವ ಬಿಟ್ಟು ಮತ್ತೊಂದು ದೇಹವ ಪತ್ತದೆ ನಿಲ್ವುದು ಮುಕ್ತಿ (ಭರಚ. ೧-೧೧೮). ೩. ಬೆಸುಗೆಯಾಗು; ಬೆಸೆದುಕೊಳ್ಳು: ತೆತ್ತುತನಕ್ಕೆ ತೆತ್ತುತನಮಂ . . . ಆಸೆಗಮಾಸೆಯನಾದಲಂಪಿನಿಂ ಪತ್ತಿದ ಮೆಯ್ಗೆ ಪತ್ತುಗೆಯನುಕ್ಕೆವಕುಕ್ಕೆವಗೆಯ್ತಮಂ ಪೊಣರ್ಚುತ್ತುಮು ಪಾಯದಿಂ ಕಳಿಯೆ ಕೂಡುವನಂ ವಿಭು ಕಂಡು ಮೆಚ್ಚಿದಂ(ಕಾವ್ಯಾಸಾ.೯೮೫ ಶೂದ್ರಕ);ಕಂಭದೊಳ್ ಪತ್ತಿದ ಪೊನ್ನ ಪುತ್ಥಳಿ ತೊಡರ್ಚಿದ ಮುತ್ತಿನ ಸೂಸಕಂ (ಪುಷ್ಪಪು. ೪-೭೮). ೪. ಅಳವಡು; ಹೊಂದಿಕೆಯಾಗು: ಮುತ್ತಿನ ತೋರಣಂ ಗಜದ ನೆತ್ತಿಯ ಮುತ್ತುಗಳೆಲ್ಲ ಪಲ್ಗಳೊಳ್ಪತ್ತಿದ ಪೋಲ್ವೆಯಂ ಪಡೆವ ಗೋಪುರಪಂಚಕಮಾಸ್ಯಮಾಗೆ . . . ಪ್ರತಾಪಮಂ ಪೊತ್ತುದದೊಂದು ಸಿಂಹಪುರಮೆಂಬ ಪುರಂ ಘನಘೋಷಘರ್ಜಿತಂ (ಆರ್ಧನೇ. ೧-೬೭); ಕಂಬುನಿಭಕಂಠಿ ತನುಪುಳಕಂಬೂರಿಸೆ ಮಿಸುನಿ ರನ್ನಮಂ ಪತ್ತುವವೋಲ್ ಲಂಬಾಳಕತತಿ ಮದರೋಲಂಬಾಳಿಯನಿಟಿಸ ಲಪ್ಪಿದಳ್ವಲ್ಲಭನಂ (ಉದ್ಭಟ. ೮-೧೦೮). ೫. ಹಿಡಿ; ಹಿಡಿದುಕೊಳ್ಳು: ಅಂತು ಸತ್ತುಂ ನೆಲನಂ ಪತ್ತುವಿಡೆನೆಂಬಂತೆ ನೆಲನಂ ಪತ್ತಿ ಮೂರ್ಛಾಗತ ನಾಗಿರ್ದ ಕುರುಕುಳಚೂಡಾಮಣಿಯನೇನುಂ ಮಾಣದೆ ಕಿಮ್ಮೀರವೈರಿ ಮುಟ್ಟೆವಂದಾಗಳ್ (ಪಂಪಭಾ. ೧೩-೯೭ಪ); ಉದ್ಯತ್ಕಾಂತಿ ಚಂಚನ್ನಖಗತ ತನುವೆಂತುಂ ಬಿಡಂ ಪತ್ತಿ ಕಾಲಂ ಸತಿ ಬೀಟ್ಟುರ್ದಪ್ಪನಿಂತೀತನ ತೆಱನನಿದಂ ಕಾಣೆ ನೀನುತ್ಪಲಾಕ್ಷೀ (ಕಾದಂಪೂ. ೮೯೭); ತತ್ತಟಿಗುದಿದು ಕಾಯ್ದು ಕಾಯ್ದೊಂಡದೆಣ್ಣೆಯೊಳರ್ದಿ ಬರ್ದಿಸುತ್ತುಮಾಪಾದಮಸ್ತಕಂಬರಂ ಮೃತ್ತಿಸಿ ಪತ್ತಿ ತಿದಿಯುಂಗಿಯುತ್ತೆ (ಅಜಿಪು. ೧೧-೧೦ ಪ); ತನಿವಣ್ಣಳ ಸಾರಮಂಶುಕಾವಳಿ ಸಲೆ ಪತ್ತಿ ಸೀತ್ಕರಿಸಿ ಕಣ್ಗಳನಿಂತರೆಮುಚ್ಚಿ ಸೀರುತುಂ ವಿಳಸಿತಚುಂಬನಾಭಿನಯಮಂ ನೆಱೆ ತೋರ್ಪವೊಲಿರ್ದುದಾಮ್ರದೊಳ್ (ಕುಸುಮಾ. ೫-೮೯). ೬. ತಾಗು; ಸ್ಪರ್ಶಿಸು: ಆಗಸದೊಳಗೊಂದು ಮಹೀಭಾಗದೊಳಿನ್ನೊಂದು ದಾಡೆಯಾಗಿರೆ ಮನದಿಂ ಬೇಗಂ ಬರ್ಪಳ ದಿಟ್ಟಿಗಳಾಗಳೆ ಪತ್ತಿದುವು ಗೆಂಟಱೊಳ್ ಮಾರುತಿಯಂ (ಪಂಪಭಾ. ೩-೧೩); ಧರಣಿಯನೆಯ್ದೆ ಪತ್ತದೊಡೆ ನೀಳ್ದ ಮಡಂ . . . ಕೃಶಂ ತೊಡೆಯೆನಿಪ್ಪೊಡೆ ಪಾಪದ ಪುಂಜಮಂತವಳ್ (ಜೋಕೋಪ. ೧೧-೫೨); ಪಣ್ತ ಕಬ್ಬಿನಂತೆ ನೆಲನಂ ಪತ್ತಿ ಸೆಱೆಸಿಕ್ಕಿದನಂತುಮ್ಮಳಿಸಿ (ಧರ್ಮಾಮೃ. ೫-೧೬೮). ೭. ಒದಗು; ಉಂಟಾಗು; ಬರು: ಖಳಸಂತತಿಯಿಂ ಪತ್ತಿದ ಕಳಂಕಪಂಕಮನೆ ಚೆಚ್ಚರಂ ಭವ್ಯಜನಂಗಳ ವಚನಮೆಂಬ ನಿರ್ಮಳ ಜಳದಿಂ ಕರ್ಚುವುದು ಸೌಖ್ಯಮಂ ಬಯಸುವವಂ (ಸಮಪ. ೬-೧೦೮); ಎಸೆವಾ ವ್ರತಮಂ ಪ್ರತಿಪಾಳಿಸುತ್ತು ಮಿರ್ದಂಗದೊರ್ಮೆ ಕರ್ಮದ ಬಸದಿಂ ನಸಿಗುತ್ತಂ ಪತ್ತಿ ವಿವರ್ಧಿಸುತಿರ್ದುದು ಬಂಧುಜನದ ಮನ ದುಮ್ಮಳಮಂ (ವರ್ಧಪು. ೧೬-೫೬). ೮. ಆವರಿಸು; ಆಕ್ರಮಿಸು; ವ್ಯಾಪಿಸು: ಅಱಿವುಗೆಡಿಸುತ್ತುಮೆಲ್ಲಾ ತೆಱದಿಂ ದೆಸೆಗೆಡಿಸದಿರದು ವಿಷಯ ಸಮೂಹಕ್ಕೆಱಗಿ ಬಿಡದಂತೆ ಪತ್ತುವ ಮಱುಕಂ ದಿಱ್ಮೋಹದಂದದಿಂ ಮಾನಿಸರಂ (ಕಾದಂಪೂ.೫೩೮); ನರರಂ ಪತ್ತಿದ ಪಾಪಂ ಪ್ರಾಯಶ್ಚಿತ್ತಂ ಪೊಱಗಾಗಿ ವಚನದಿಂ ಪೋದಪುದೆ (ಸಮಪ. ೧೧-೮೭); ತಪನಂಗೊಗೆದುದು ಪೆರ್ಚಿದ ತಣ್ಪಿಗ್ನಿಗೆ ಶೀತಂ ಪತ್ತಿತೇನನೆಂಬೆಂ ಹಿಮದೊಳ್ (ಗಿರಿಕ.೯-೭೧). ೯. ಏರು; ಆರೋಹಣ ಮಾಡು; ಮೇಲಕ್ಕೆ ಹೋಗು: ಪತ್ತಿ ಪ್ರಮಾದಫಲಕಮನತ್ಯುಗ್ರಗ್ರಾಹನಿವಹಸಂಕ್ಷೋಭಿತದೊಳ್ ಮತ್ತೀ ರತ್ನಾಕರದೊಳ್ ಪುತ್ರಿಕೆಯೆನೆ ಬಟ್ಟಳಿಂತು ಬಾಟ್ಟುದೆ ಚೋದ್ಯಂ (ಕವಿರಾ. ೨-೩೬); ತೆಱಪುವಡೆದಂಗಜಂ ಕೆಯ್ಸೆಱೆಗೊಳೆ ನೋಟಕರ ಮನಮನಾಗಳ್ ಕೊಳದಿಂ ಪೊಱಮಡೆ ಜಿಗಿಲ್ತು ಪತ್ತಿದ ಕುಱುವಡಿಗಳೆ ಮೆಱೆದುವವರ ನಾಣ್ಗಳ ತೆಱಪಂ (ಪಂಪಭಾ. ೫-೬೭); ಮಕ್ಕಳಂತೆ ವಿಮಾನಮಂ ಬಿಡದೆ ಪತ್ತುತುಂ ಮಹಾಮಂತ್ರಿಯೆಂತೆ ವ್ರತರಕ್ಷಣೋ ಪಾಯಮಂ ಚಿಂತಿಸುತ್ತುಂ (ಧರ್ಮಾಮೃ.೩-೪೬); ಹಣಮಂ . . . ಪತ್ತು ವಂದಣಮಂ ಕೆಂಪಿನ ಪೂವನೆಣ್ಣೆದಲೆ ನೂತ್ನಾಗಾರಮಂ ದೈತ್ಯರಂ ಕನಸೊಳ್ ಕಾಣಲು ಬಾರದೈ (ಸೋಮೇಶ.೭೦). ೧೦. (ದೀಪ, ಬೆಂಕಿ ಮೊದಲಾದುವು) ಹೊತ್ತು; ಉರಿಗೊಳ್ಳು: ಸಂದಣಿಸಿ ಪತ್ತಿದುರಿ ಘರಿಲೆಂದುರುಪಿಡೆ ಬೇಗದಿಂದೆ ಉರಿದಾಕ್ಷಣದೊಳ್ ಬೆಂದ ನುಲಿಯಂತೆ ಮದನಂ ನಿಂದಿರೆ ಕಂಡಭವನೆಯ್ದಿ ಮುಳಿದಂ ತುಳಿದಂ (ಗಿರಿಕ. ೮-೫೨). ೧೧. ಬಳಿದುಕೊಳ್ಳು; ಲೇಪನವಾಗು: ಪಿರಿದಾಗಿ ಪತ್ತೆ ಕೆಂದಳದರಿ ಸಿನವಿರಿಸಿದಳೊ ಪರಿದು ಪೊದೆಯುಂ ರತಿ ತನ್ನರಸನಲಗುಗಳನೆಂಬಂತಿರೆ ಮಗ ಮಗಿಸುವುವು ಪೊಂಗಿ ಪೊಂಗೇದಗೆಗಳ್ (ಲೀಲಾವ. ೬-೧೨೪). ೧೨. ಸ್ನೇಹಮಾಡು; ಸಂಬಂಧವನ್ನು ಹೊಂದು: ಪದನಱಿದು ಪತ್ತುವ ಪತ್ತುಗೆಗಂ ಇಂಬಱಿದು ಸೇವಿಸುವ ಸೇವೆಗಂ ನೆರನಱಿದು ಪಾಡುವ ಪಾಟಕ್ಕಂ ಪೊಟ್ಟಱಿದು ಸಾರ್ವ ಸಾರ್ಕೆಗಂ ಮನಂಬೆಚ್ಚು ಪತ್ತೆ ಪೊಯ್ದಂ ತಾಗಿರೆ(ಶಾಂತಿಪು.೩-೫೯ಪ); ಮುತ್ತರ ಮುತ್ತರಿಂ ಪಡೆದ ವೃತ್ತಿಯನಿಟ್ಟುಳಿ ಗೊಳ್ವರೊಳ್ಕರಂ ಪತ್ತುವವೋಲ್ ವಿಚಾರಿ[ರ]ಪರರಲ್ಲದ ಮೂರ್ಖರ ದೊಂದು ದೆಯ್ವಮಂ ಪತ್ತಿಯುಮಂತದಂ ಪಟಿವರಂ ತಿಳಿಪಲ್ಕಣಮಾಱದಾ ಗಳಾರ್ದತ್ತಲೆ ಬರ್ಪರಂತದಱೊಳಾರ್ಹತರಲ್ಲದರತ್ತ ನೋಟ್ಟಡಂ (ಸಮಪ. ಅನುಬಂಧ. I, ೩೭೩-೪೭); ಪತ್ತಿದ ಗಂಡರ ಚಿತ್ತವ ಕಿಡಲೀಯದಿತ್ತುದೇ ಕೋಟಿ ತನಗೆಂಬ ಸೂಳೆಯ ಹಿತ್ತಿಲಲ್ಲಿರದೆ ಸುರಭೂಜ (ಲೀಲಾವ. ೨-೩೫). ೧೩. (ಬಿಸಿಲು, ಬೆಂಕಿ ಮೊದಲಾದುವು) ಹೆಚ್ಚಾಗು; ಪ್ರಖರ ವಾಗು; ಪ್ರಕರ್ಷವಾಗು: ಪತ್ತಿತು ಬಿಸಿಲುಱೆ ಕಾಲಂ ಮುತ್ತಿತು ನೋವು (ಗಿರಿಕ. ೨-೧೮). ೧೪. ಒಳಸೇರು; ಒಳಕ್ಕೆ ಸೇದಿ ಕೊಂಡಿರು: ಆಕೆಯ ಪತ್ತಿದ ಕಣ್ಣು ಮನುಟ್ಟುದ ಮನಮುಮಂ ಜೋಲ್ದ ನಾಣುಮಂ ನೇಲ್ದ ಸರಮುಮನಱಿದು (ಪಂಪಭಾ. ೪-೪೦ ಪ); ಪತ್ತಿದ ಬಸಿಱ್ ಪೋತಂದ ಕಣ್ . . . ಸರ್ಪಕನದ್ಭೂಷಣಭೀಷಣಂ ಭಯದ ಮಾಯ್ತಾ ದಾಕ್ಷಸೀರೂಪಕಂ (ಕಾವ್ಯಾಪ. ೮೨೨); ನರೆತ ಮಂಡೆಯುನೀರೊ ಗುವ ಕಂಗಳು ಲೋಳಿ ಸುರಿವ ಬಾಯ್ ಸೆರೆಹೊಱಹಾದ ಕೊರಳು ಬೀಳಲು ಪಲ್ಲು ಪತ್ತಿದ ಗಲ್ಲದ ನೆಱೆ ವೃದ್ಧನಡಿಯಿಟ್ಟನೊಲಿದು (ಜೀವಂಸಾಂ. ೧೬-೩೦). ೧೫. ಬೆನ್ನಟ್ಟು; ಹಿಂಬಾಲಿಸು: ಅನುವಿಸೆ ಬೇಟಕಾಱ[ನೊ ಲವಿರ್ಮಡಿಯಪ್ಪುದು . . . ನೂಂಕೆ ಬೇಟಕಾಱನ ಮನವಟ್ಟ ಪತ್ತುವುದು

ದೇಟಿವಿದೇಂ ವಿಪರೀತವೃತ್ತಿಯೋ (ಸಂಪಭಾ. ೪–೧೦೩); ಪತ್ತಿ ಜವನಂತೆ ರಿಪುಬಲಪತ್ತಿಯನಿಸೆ ಲಕ್ಷ್ಮಣಂ ವಿಯುಚ್ಚರಸ್ಯಸ್ಯಂ ಸತ್ತುದು ಪುಣ್ಕೆತ್ತುದು ಬಿನ್ನಿತ್ತುದು ಪೂಣ್ಕೆಱುವುದರಿದು ಗರುಡಧ್ವಜನೊಳ್ (ಪಂರಾಮಾ. ೯–೬೪); ಪತ್ತುತ್ತಂ ಹರಿಯಂ ಕೆಲರೊತ್ತುತ್ತಂ ನೀರೊಳಾಳ್ವಿನಂ ಚಂದನದಿಂ ಮೆತ್ತುತ್ತಂ ಜೀರ್ಕೊಬವಿಯೊಳೊತ್ತುತ್ತಂ ರಾಗದಿಂದಮಾಡಿದ ರಾಗಳ್ (ಬಂಹರಿ.೧೩–೭); ವನಪಾಲನಾನೆ ಕಟ್ಟಿದ ಕಂಭಮಂ ಕಿತ್ತಿಟ್ಟು . . . ಪಿಂದಂ ಪತ್ತಿ ಬಪ್ಪ ಮಂದಿಯಂ ಕೊಂದು ಕೂಗುತ್ತ ಬರ್ಪಾಗಳ್ (ಪುಣ್ಯಾಸ್ರ. ೩–೨೨ ಪ). ೧೩. (ದೆವ್ವ ಮೊದಲಾದುವುಗಳಂತೆ) ಮೆಟ್ಟಿಕೊಳ್ಳು : ಪುಗೆ ನೃಪಸಂಕುಳಂ ಮನಸಿಜಗ್ರಹವಾಗ್ರಹದಿಂದೆ ಪತ್ತಲಂದೊಗೆಯೆ ವಿಕಾರಚೇಷ್ಟೆ (ನೇಮಿಪು. ೯–೮೯).೧೭. ಅನುಸರಿಸು: ಅಂತಾ ಮಾರ್ಗಮಂ ಪತ್ತಿ ಪತ್ತುವಿಡದೆ ನಡೆದು ಜೀವಿತಾವಧಿಯೊಳ್ದೀವಗತಿವಡೆದು (ಪಂರಾಮಾ. ೬–೧೯ ಪ); ಬಸವೇಶಂ ಮಾಚದೇವಂ ಮುಳಿದ ಬಗೆಯನಾಕರ್ಣಿಸುತ್ತುಂ ಮಹಾಸಾಧ್ವಸದಿಂ ಮುಂಗೆಟ್ಟು ಚಿತ್ತಂ ಕದಡೆ ನಡುಗಿ ತನ್ಮಾರ್ಗಮಂ ಪತ್ತಿ . . . ಕಾರ್ಪಣ್ಯಮಂ ಬೀಱುತಾಗಳ್ (ವೃಸವಿ. ೧೩–೭). ೧೮. ತೊಡಗು ; ಪ್ರಾರಂಭಿಸು ; ಮೊದಲು ಮಾಡು : ಮನದೆ ನೆನೆದವರ ಕಿಡುಗುಂ ಜಿನಾಧಿಪಾ ನಿನ್ನ ಪಾಪನಿಚಯಂ ಗುಣಮಂ ಮುನಿಗಳುಮದಱಂ ತತ್ಸೇವನೆಯಂ ಕಿಡಿಪಲ್ಕೆ ಪತ್ತಿದರ್ ಸಂಸ್ಕೃತಿಯಂ (ಕವಿಗಾ. ೧–೯೧). ೧೯. ಆಲಿಂಗಿಸು ; ಅಪ್ಪಿಕೊಳ್ಳು : ಘಟಾಲನೆ ಬರ್ಪನ್ನಂ ಕಂಡಬಲಿರ್ಮಡಿಯಾಗೆ ಪತ್ತಿ ಕೆಳೆಯನ ಕೊರಲಂ ಪಳವಿಸಿ ಕಪಿಂಜಳಂ ಬಾಯಱಿಯದಬ್ರಹ್ಮಣ್ಯಮೆಂದು ಬಿಡೆ ಪುಯ್ಯಲ್ಪಟ್ಟಲ್ (ಕಾದಂಪು. ೯೧೮). ೨೦. ಪ್ರಭಾವ ಬೀರು ; ಪರಿಣಾಮಕಾರಿಯಾಗು : (ಕಿ). ಹತ್ತು1 : ೧. ಹತ್ತದಿರೆ ಫಲ ಬಳಿಕಲಾ ದೇವೋತ್ತಮನು ನಸುನಗುತ ನುಡಿದನು (ಕುಮಾಅ. ೬ರಿಂ. ೪–೪೪) ; ಮತ್ತದಕೆ ಹಾಲು ನೀರೆಱೆದು ಸಂಪಳೆಗಲಸಿಯತ್ತರದ ಮೇಲೆ ದೊನ್ನೆಯನಿರಿಸಿ ತುಪ್ಪವಂ ಹತ್ತದಂದದಿ ತೊಡೆದು ಹೊಯ್ದುಕೊಂಡದ ನಿಡ್ಡಲಿಗೆಯಂತೆ ಬೇಯಿಸುವುದು (ಸೂಪಶಾ. ೬–೭); ಹತ್ತಿದ ಮೆಯ್ದೂಳ ಕೊಡಹಿ ಕರವ ಹಿಡಿದೆತ್ತಿದಳಬುಜಾಯತಾಕ್ಷಿ (ಮೋಹತ. ೮–೨೬). ೨. ಹೊತ್ತುವುದು ಸರಿಯಹುದು ನನೆಗುದಿಯಹುದು ತವುದು ಹ[ಪಾಠಾಂ.ತಡಹು]ತ್ತಿಹುದು . . . ನುಸುಗಂಜಿ ಸುತ್ತಿಹುದುವೋಣಗಿಹುದು ದೋಷವನಕ್ಕೆಂಟು ತೆಱನಪ್ಪುದು (ಸೂಪಶಾ. ೬–೧); ದ್ರಾವಿಡ ಭಾಷೆಗಳಲ್ಲಿ ಪುರುಷವಾಚಕಸರ್ವನಾಮಗಳೇ ರೂಪಾಂತರಗೊಂಡು ಆಖ್ಯಾತ ಪ್ರತ್ಯಯಗಳೆಂಬ ಹೆಸರಿನ ಪುರುಷವಾಚಕಪ್ರತ್ಯಯಗಳಾಗಿ ಧಾತುಗಳಿಗೆ ಹತ್ತುತ್ತವೆಂಬುದನ್ನೂ ಗಮನಿಸಬಹುದು (ದ್ರಾವಿವಿ.೨೫೩) ; ಕೆರೆ, ಬಾವಿ, ಹಳ್ಳ, ಹೊಳೆ ಬತ್ತಿ, ಬೆನ್ನಿಗೆ ಹೊಟ್ಟೆಹತ್ತ ನೆಲವೆದ್ದು ಬಡಿಯುವಂತೆ ! (ನೆಲಮು. ೧೪–೨೬). ೩. ಒಡೆಯರ ಬರವಿಂಗೆ ಕುನ್ನಿ ಬಾಲ ಬಡಿವರೆ ವೆಚ್ಚವೇನು ಹತ್ತುವದು (ಬಸವ. ೨೧೭) ; ಚಳಿ ಹತ್ತಿ ಮಳೆಯೊಳಗೆ ಘಾಸಿಯಾಗುತೆ ಬಂದು ನಡುಗಿ ಹಲು ಹಱಿಗುಟ್ಟ ಬಾಗಿಲೊಳು ನಿಂದಿರಲು (ಇಳೆರ. ದೇ. ೫೨–೮) ಕಳವಳಿಸುತಂ ಬಿದ್ದೊಜಲುವರು ತಲೆಗಳಂ ಸೆಕೆ ಹತ್ತಿ ದಹಿಸಲು ಜ್ವಲನನೇತ್ರನ ದೇಗುಲಂಗಳಿಗೆಯ್ದಿ ಬದುಕುವರು (ಬಸಪು.೫೬–೩೮). ೮. ಜಾತುರಂಗಮಂ ಜಾನಿಸಿ ನೋಡಿ ನೋಡಿ ಹೊಗೆ ಹ[ಪಾಠಾಂ.ಸು]ತ್ತಿದ್ದ ಪುತ್ತಳಿಯಂತೆ ಬಂದನುದ್ಯಾನವನೊಪ್ಪದಿಂ ಕಳೆದು ರಾಜಕುಮಾರನಪಾರಚಿಂತೆಯಿಂ (ಸಂಬರ.೭–೩); ಹರಿಹರಿ ಎಂದೊದಱೊ ಹತ್ತಿದ ಪಾಪಗಳಿಗೆ ಬೆದಱೊ (ಪುರಂದ.೨–೩೩–೧). ೯. ಮುದನು ತಗ್ಗರ್ತಿ ಕೊಶೆಯ ಹತ್ತಿ ಹೆಂಗಳಿಕ್ಕೂಡೆ ಹೇಱೋಳವ ಮಾಡುತ್ತವಿರಲು (ಮೈಅರಿ ೧೯೨೯, ೧೫–೪ ; 12ನೆಯ ಶತ.?); ಕಾಳಿಗದ ಭಂಡಿಯಂ ಹತ್ತಿ ಹೋಹಂ ರಥಿಕನಾ ಸ್ಯಂದನಾರೋಹನೆಂದೆನಿಕ್ಕುಂ (ಸಂಗರಾ. ೭೩–೨೬) ; ಅಲ್ಲಿಂದ ಬಡಗಲಾ ಹರಿದು ಬಿಟ್ಟರು ಹತ್ತಿದರು ಬೇಸಱದೆ ಕಲುದರಿಗಳಲಿ ಬಹಳ ಶ್ವೇತಪರ್ವತವ (ಕುಮಾಸ.೩–೫೭); ಹತ್ತಿದರೊರ್ವರೊಂದೊಂದು ಪಲ್ಲಕಿಯ ಮುತ್ತಿನ ಕುಚ್ಚುಗಳ್ ಮೆಱೆಯೆ (ಮೋಹತ.೨೪–೫). ೧೦. "ಹತ್ತು—ಹೊತ್ತು ; ಉರಿಯೊಗು" (ಜಾನಕೂಟ. ೫೩); ಒಲೆ ಹತ್ತಿಯುರಿದೊಡೆ ನಿಲಬಹುದಲ್ಲದೆ ಧರೆ ಹತ್ತಿಯುರಿದೊಡೆ ನಿಲಬಾರದು (ಬಸವ. ೨೬); ಬೇಗೆ ಹತ್ತಿದಲ್ಲಿ ಹೊಗೆಗೆ ನಿಮಿತ್ಯ ಕೇಳಬೇಕೇ ? (ಗಾದೆ). ೧೧. ಅವನ ಮುಖಕ್ಕೆ ಮಸಿ ಹತ್ತಿದೆ (ರೂಢಿ). ೧೨. ಧಗಿಲು ಭುಗಿಲೆನೆ ಎದ್ದು ಹರಿದು ಹತ್ತುವನಲ್ಲ ನಿರವಯಂಕೆ ಚಯಪದಮಿಲ್ಲ ನಾಲ್ಕನೆಂಟಕೆ ತಂದು ಎಂಟ ಹದಿನಾಱ ಮಾಡಿ ಸೃಷ್ಟಿಸಬಾರದ ಘನಶರಣನು(ತಿಪಗೀ.೧೦೪–೫೦೫). ೧೩. ಬಿಸಿಲು ಹತ್ತಿದ ಮೇಲೆ ಹಪ್ಪಳ ಒಣಗಿಸಬೇಕು (ರೂಢಿ). ೧೫. ಕರೂಷದ ಕೊಬ್ಬಿನವದಿರು ಹಿಂದೆ ಹತ್ತಿದರೆ ಮರಳ ಬಲ್ಲನೆ ಭೀಮನು (ಕುಮಾಕಾ. ೩–೨) ; ಮತ್ತೆ ಚತ್ರಾಂಗದೆಯ ಜಾತನಂ ಧಾತನಂ ಹತ್ತಿ ಹರಿದುದು ಬಲಮುಶೇಷಮುಂ ಘೋಷಮುಂ ಘೋರತರಸಂಗರದೊಳು (ಚೈಮಿಭಾ. ೨೨–೩೬). ೧೭. ತರುಣಿ ಹರಿಣಯುಪದೇಶದಿಂದೆ ಗತಿ ಪಥ ಮುಕ್ತಿಯ ಪಡೆದು ಬಟ್ಟೆಯ ಹತ್ತನೆ ವಿನಾಶಕ್ತಿರಾಯನು (ಬಸವ. ೬೫೬) ; ಮಕ್ಕಳು ಬುದ್ಧಿವಂತರಾಗಿ ಒಳ್ಳೆಯ ಹಾದಿಯನ್ನು ಹತ್ತಿದರೆ ಪೋಷಕರು ನಿಶ್ಚಿಂತರಾಗಿರಬಹುದು (ರೂಢಿ). ೧೮. ಎಂಥಾದೊಡ್ಡ ಮಳೆ ಬರಹತ್ತಿತು (ಮುಂಬಯಿ. ೬. ೧–೨೧) ; ಉದ್ಯಾನಗಳಲ್ಲಿ ಪುಷ್ಪಗಳು ಸುಗಂಧವನ್ನು ಬೀರಹತ್ತಿವೆ (ಮಂಜುಕ. ೨) ; ಭಟ್ಟರು ಹೊದ್ದ ಧೋತರವನ್ನು ಟೊಂಕಕ್ಕೆ ಸುತ್ತ ಹತ್ತುವರು (ಹೊಸಂಸಾ.೫೩); ಈ ಎಲೀ ಹಡ್ಡೂ ಗ್ರಾಮೋದ್ಯೋಗದ ಮ್ಯಾಲ ಪ್ರಬಂಧ ಓದಲಿಕ್ಕೆ ಹತ್ತಿದೇನು ? (ದೀಪಹ. II, ೪). ೨೦. ಅವನಿಗೆ ಪೆಟ್ಟನ ಹುರುಳು ಹತ್ತಿತು (ರೂಢಿ). ೨೧. ಸುಕ್ಕು ; ಸುರುಟು ; ಬಾಡು : ಬತ್ತಿದ ಗಲ್ಲ ಹತ್ತಿದ ಮೊಲೆ . . . ಹೊತ್ತ ಬೆಳ್ಳರೆಕೂದಲಾ ಮುದಿ ಸೂಳೆಯರ ಮೊತ್ತವೊಪ್ಪಿದುದಾಗಲ್ಲಿ (ಕಂಸವಿ. ೬–೧೯೦). ೨೨. ಬೇಕಾಗು ; ಅಗತ್ಯವಾಗು : ಆ ಕಟ್ಟಿಗೆ ಹತ್ತುವ ಧನವನೂ ಶ್ರೀಹರಿಹರದೇವರ ಬ್ರಾಹ್ಮರ ಪ್ರತಿಹಸ್ತವಾಗಿ ಬುಳ್ಳರಸರ ಕೈಯಲ್ಲಿ ಧಾರೆಯನೆಱದು ಕೊಟ್ಟು (ಏಕ. XI, ದಾವಣ. ೨೯–೧೭ ; 1424) ; ಅದರ ಬೆಳವಣಿಗೆ ಪೂರ್ಣವಾಗಲಿಕ್ಕೆ ಐದು ವರ್ಷ ಹತ್ತುವುದು (ಮುಂಬಯಿ. ೪–೪೮) ; ಮುಂದೆ ಕೋರ್ಟನಲ್ಲಿ ನಿರ್ಣಯವಾಗಬೇಕಾದರೆ ಎಷ್ಟು ವರ್ಷ ಹತ್ತೀತೆಂಬ ನಿಯಮವಿಲ್ಲ (ಗ್ರಾಸೂಯ. ೩೫೩). ೨೩. (ಸುದ್ದಿ ಮೊದಲಾದುವು) ತಲುಪು ; ಮುಟ್ಟು : ಮೊತ್ತದರಸುಗಳು ಕೂಡಿ ಬರ್ಪಾ ವಾರ್ತೆ ಹತ್ತಿತು ಭಂಭಾಪುರಕೆ (ಪ್ರಭಂಜ, ೨–೫೦). ೨೪. (ನೆಲ ಮೊದಲಾದುವನ್ನು) ಆಶ್ರಯಿಸು : ಎದೆಯಲಗು ಕೊಂಡಂತಱಲೆಯಮನಿಯ ಹತ್ತಿ ಬಸವಳಿಯೆ (ಕುಮಾದ್ರೋ. ೬ರಿಂ. ೭–೧೧ ಅಡಿಪದ್ಯ). ೨೫. ಓರಗು; ಬೀಳು : ಬತ್ತಿದ ಹರ್ಷಾಶ್ರುಗಳಿಂದೆ ಧರಣಿಗೆ ಹತ್ತಿದಳಾಕೆ ಬೇಗದಲಿ (ಮೋಹತ. ೨೯–೨೦). ೨೬. ಲೆಕ್ಕಕ್ಕೆ ಸಿಗು ; ಗಣನೆಗೆ ಬರು : ಹತ್ತುಸಾವಿರದೇಳು ನೂಱಱುವತ್ತು ಗಜ ಹನ್ನೊಂದುಸಾವಿರ ಹತ್ತದವು ರಥವೆರಡು ಲಕ್ಷವ ನೆಣಸಿದರು ಹಯವ (ಕುಮಾಕ.೨–೬). ೨೭. (ಹಣ ಮೊದಲಾದುವು) ಉಳಿತಾಯವಾಗು ; ದಕ್ಕು : ಊಟಾ-ಉಡಿಗಿ ಪರಭಾರೆ ಹೋಗಿ ಮ್ಯಾಲ ದಹಾ-ಬಾರಾ ರೂಪಾಯಿ ಕೈಗೆ ಹತ್ತತಾವ (ದೀಪಹ. II,೧೩); ಲೆಕ್ಕವಿಲ್ಲದೆ ಪೋಲು ಮಾಡಿದರೆ ಹಣ ಕೈಗೆ ಹತ್ತುವುದಿಲ್ಲ (ರೂಢಿ). ೨೮. (ರುಚಿ ಮೊದಲಾದುವು) ತೋರು ; ಉಂಟಾಗು ; ಆಗು : ನಮ್ಮ ಹಾಲಿನ ಚಹಾ ಕಹಿ ಹತ್ತದೇನ (ದಾಸಹು. ೪೧). ೨೯. ಎದುರಾಗು ; ಕಾಣು : ಹೋಗಹೋಗುತ್ತ ದಾರಿಯಲ್ಲಿ ಒಂದು ಸಭಾ

ಮಂದಿರವು ಹತ್ತಿತು (ಅಸ್ನ. ೧೯). ೩೦. ಸಾಲು ; ಸಾಕಾಗು ; ಪೂರೈಕೆಯಾಗು : ನಿಜಗುಣಿಯು ತನಗೆ ಹತ್ತುವಷ್ಟು ರೊಟ್ಟೀ ಬುತ್ತಿ ಕಟ್ಟಿಸಿಕೊಂಡಿದ್ದನು (ಮುಂಬಯಿ. ೩-೧೨೧) ; ಬರುವ ಸಂಬಳದಲ್ಲಿ ತಿಂಗಳ ಖರ್ಚಿಗೇ ಹಣ ಹತ್ತುವುದಿಲ್ಲ (ರೂಢಿ). ೩೧. (ನೆಲಕ್ಕೆ) ಅಂಟು ; ಬೇರೂರು : ಟೊಂಗೆಗಳನ್ನು ಹಚ್ಚಿದರೆ ಹತ್ತುವವು (ಮುಂಬಯಿ. ೨-೨೨). ೩೨. (ಔಷಧಿ, ಆಹಾರ ಮೊದಲಾದುವು) ಶರೀರಕ್ಕೆ ಒಗ್ಗು ; ಒಂಟು : ಅವನಿಗೆ ಅನಾರೋಗ್ಯದಿಂದ ಆಹಾರ ಮೈಗೆ ಹತ್ತುತ್ತಿಲ್ಲ (ರೂಢಿ). ೩೩. (ಬೆಲೆ ಮೊದಲಾದುವು) ಅಂದಾಜಿಗೆ ಬರು ; ಎಟುಕು ; ಗಿಟ್ಟು : ಇಂದಿನ ಸಂತೆಯಲ್ಲಿ ಅಡಕೆಯ ಧಾರಣೆ ಹತ್ತದಿದ್ದುದರಿಂದ ಮಾಡಿದ ಖರ್ಚೂ ಹತ್ತಲಿಲ್ಲ (ರೂಢಿ). ೩೪. ಸಂಭೋಗಿಸು : ಚಿತ್ತವೃತ್ತಿಯನಱಿದು ಹತ್ತಿವಿಡಿದೋಲಯಿಸು ಚಿತ್ತವನು ಪಡೆದು ನುದವಾಗೆ ಮೊಲ ನಾಯ ಹತ್ತಿದಂತಕ್ಕು (ಸರ್ವಜ್ಞ. ೩೩೧).

ಪತ್ತಿ ಕೊಳ್, ಹತ್ತಿ ಕೊಳ್ಳು = ೧. ನೆಲೆಯಾಗಿರು; ಸ್ಥಿರವಾಗಿರು ; ಸ್ಥಿರವಾಗಿ ನಿಲ್ಲು : ಎಮ್ಮಂತಪ್ಪ ನಿಸ್ಪೃಹರ್ಗೆ ಕೂಟಾಂಗಾಟಸಿ ಮೈ ಸುಖಮಂ ಪಾಟಿಸಿ ಮನ್ನಣೆಗಾಸೆಗೆಯ್ದೊಂದೆಡೆಯೊಳ್ ಪತ್ತಿಕೊಂಡಿರಲಾಗದೂ (ಧರ್ಮಾಮೃ. ೩-೭೧). ೨. ಅಪ್ಪಿಕೊಳ್ಳು : ಒಡಹುಟ್ಟಿದರ ಕಂಡು ಬಿಗಿಯಪ್ಪಿ ಸ್ನೇಹವ ಬಿಡದಿಹ ಸುಜನರಂದದಲಿ ಕಡುತನಕದೆ ಕಂಬುಕಂತವ ಪತ್ತಿಕೊಂಡೊಡನೊಪ್ಪುವುವು ಮುಖ್ತಾಳಿ (ಕಂಸವಿ. ೨೪-೨೩). ೩. ಅಂಟಿಕೊಳ್ಳು ; ಸೇರಿಕೊಳ್ಳು : ಎತ್ತ ಹೋದರು ಮನವ ಹತ್ತಿಕೊಂಡೇ ಬಹದು ಮತ್ತೊಬ್ಬ ಮುನಿದುಕೊಳಲರಿಯ ಜ್ಞಾನದ ಬಿತ್ತು ಲೇಸೆಂದ (ಸರ್ವಜ್ಞ. ೩೨೦) ; ಪಚ್ಚಯು ತೀರ ನನ್ನನ್ನು ಹತ್ತಿಕೊಂಡು ಕುಳಿತಳು (ಮೇದಿಪು. ೧೪೭). ೪. ಉಂಟಾಗು ; ಮೊದಲಾಗು ; ಸಂಭವಿಸು : ನನ್ನ ಮಗನ ದುರ್ಬುದ್ಧಿಯಿಂದಯುದ್ಧ ಹತ್ತಿಕೊಂಡಿತು (ವಚಭಾ. ೩೭೦). ೫. ಆಶ್ರಯಿಸು ; ಅವಲಂಬಿಸು ; ಆಸರೆಗೊಳ್ಳು : ಹೆತ್ತ ತಾಯ್ನೆಲೆ ಮಡಿದು ದುಃಖವನೆತ್ತಲೇನೆಂದಱಿಯದೆನ್ನನೆ ಹತ್ತಿಕೊಂಡಿಹುದಧಿಕವಿಶ್ವಾಸದಲಿ ನೆಜಕೆ ನಂಬಿ (ನಿಭಾಗ. ೫-೫-೩೪). **ಪತ್ತಿರ್ಪು** = ೧. ಅಂಟಿಕೊಂಡಿರು ; ಹತ್ತಿಕೊಂಡಿರು: ಕದಪಂ ಪತ್ತಿರ್ದ ಶಯ್ಯಾತಳಮಲಕುಮುದಕಿಂಜಲ್ಕಮಂ ತಳ್ತ ರೋಮಾಂಚದಿನೀಡಾಡುತ್ತ (ಕಾದಂಬ. ೫೧೭) ; ಅರಿಚರಣಪಾಂಸು ಪತ್ತಿರೆ ಕರಾಗ್ರದಿಂ ತೊಡೆದು ಕಳೆದೆ ವಸ್ತ್ರಾಂಚಲದಿಂ (ಗದಾಯು. ೯-೩೭); ತೀರಮನಡರ್ದು ನಿಡುಗೇಸಂಗಳೊಳ್ ಸುರಿವ ನೀರನಾಜಿಸಿ ನಾಂದು ಕಾಯೆದೊಳ್ ಪತ್ತಿರ್ದ ನೀರೆಯಂ ಕಳೆದು ನವವಸ್ತ್ರಭೂಷಣಕುಸುಮ ಪರಿಮಳದ್ರವ್ಯಂಗಳ ಓರಂತೆ ತೊಟ್ಟು ಟ್ಟು ಮುಡಿದು ಲೇಸಿನಿ (ಚಿಬಪು. ೪೫-೬೬). ೨. ಸೇರಿಕೊಂಡಿರು ; ಕೂಡಿಕೊಂಡಿರು : ಒಡಲೊಳ್ಪತ್ತಿರ್ದಸುನಂ ಬಿಡೆ ಪೊರೆ ನೋನೆಂತುಟೆಂತೆ ವಿಶ್ವಾತ್ಮನುಮಂ ಬಿಡಿಪಡೆಯೊಳಕ್ಕುಮದಱಿಂ ಬಿಡಲಜಾವನೆ ಲಬ್ಧಹೀನನೆಂತುಂ ಜೀವಂ (ಸಮಸ. ೪-೨೩೫) ; ಪಲಬರವರೋಧಕಾಂತೆಯರೊಲವಿಂ ಪತ್ತಿರೆಯುಮಾಕೆಯೊಳ್ ನೃಪನನಿಶಂ ನಲಿದೊಂದಿರ್ದಂ ತಾರಾವಳಿ ತ್ತ್ರರಲಿಂದುಜಂದ್ರಿಕೆಯೊಳೊಂದುವವೋಲ್ (ಪುಸ್ಪಪು. ೩-೬೨) ; ವಿಪ್ರರ್ ಎತ್ತಿದ ಸೇರೆಗೈಯೊಳ್ ಸಂಧ್ಯಾಮಂಡಪಮನಲಂಕರಿಸಿಯುಂ . . . ಬಾಲಕರ್ ಆಟ ಪಾಟಂಗಳಂ ಮುಱಿದು ತಾಯ್ವೊರ್ತ್ತಂ ಪತ್ತಿರೆಯುಂ, ಮುಚ್ಚಂಜೆ ಸೊಗಯಿಸಿದುದು (ರಾಮಾಶ್ವ. ೨೨-೨೨). ೩. ಒದಗಿರು ; ಉಂಟಾಗಿರು : ಕೆಯ್ವತ್ತಿ ನಿಂದಿರೆ ಪತ್ತಿತ್ತು ಸನುಸ್ತ ಧಾತ್ರಿವಳಯಕ್ಕೆಂದುಂ ದಿಶಾದಂತಿಗಳ್ಬರೆಗಂ ತಂದೆಯ ಕೀರ್ತಿಯೇಂ ಬಳೆದುದೋ ಸತ್ಕಾಶ್ರಯಂ ಧನ್ಯನೋ (ಗದಾಯು. ೧-೧೨) ; ಪತ್ತಿರ್ದ ನಂತಭವಮುಮನಿತ್ತೆಯ್ದುಂ ವಿಷಯವೈರಿಗಳ್ಬಾಜ್ಯೆ ನೀಂ ಮತ್ತನ್ನು ಕೇಳ್ ಪರತ್ರೆ ನಿಮಿತ್ತಂ ನಿನಗೊಂದು ಭವಮನೀಯಲ್ಕಾಗಾ (ಜೀವಸಂ. ೪೧-೯). ೪. ನೆಲೆಯಾಗಿರು ; ನೆಲಸು ; ಸ್ಥಿರವಾಗಿರು : ಒಂದೆಡೆಯೊಳ್ ಮೋಹೋದಯದಿಂದಂ ಪತ್ತಿರ್ಪನೆಂಬನುಂ ಸುಖಮುಂ ದೊಂದೆಂದುಂ ಪಾಟಿಸುತಿರ್ಪನುಮೆಂದುಂ ಸುರಲೋಕಮೆಯ್ದಲಾಜಿನ ನೋಳ್ಪಂ (ಧರ್ಮಾಮೃ. ೩-೭೦) ; ಚಿತ್ತಸರೋರುಹದೆಡೆಯೊಳ್ ಚಿತ್ತಜನಿಭ ನುದ್ಭಟೋರ್ವಿಪನ ಮೂರ್ತಿ ಕರಂ ಪತ್ತಿರಲುನ್ನತವಿರಹದೆ ಪತ್ತಿಯಿನಸಪ ಕೆಡೆವಿಡದೆ ಚಿಂತಿಸುತಿರ್ದಳ್ (ಉದ್ಭಟ. ೩-೩೪) **ಹತ್ತ ಕೆಡು** = ಪೂರ್ತಿಯಾಗಿ ಕೆಟ್ಟುಹೋಗು ; ಸಂಪೂರ್ಣವಾಗಿ ಹಾಳಾಗು : (ಕ). **ಹತ್ತ ಗೊಡು** = ೧. ಎರಲು ಅವಕಾಶ ಕೊಡು ; ಮೇಲೇರಲು ಅನುವುಗೊಡು : ಆ ತುಂಟಕುದುರೆ ಸವಾರರನ್ನು ಹತ್ತ ಗೊಡುವುದಿಲ್ಲ (ರೂಢಿ). ೨. ಕೊಡು; ಸೇರು: ನಮ್ಮು ಬೆಣಗೂ ನನಗೂ ಕೈಗೆ ಕೈ ಹತ್ತ ಗೊಟ್ಟರ ಎರಡು ಹೊಡೆತದಾಗ ಅವನ್ನ ನೆಲಕ್ಕುರುಳಿಸಿ ಬಿಟ್ಟೀನು (ಮೇದಿಪು. ೧೩). **ಹತ್ತ ಬಡಿ** = "ಸದೆಬಡಿ; ಹಣ್ಣಿಗೆ ತರು" (ಜಾನಪೋ. ೫೨). **ಹತ್ತಿದರೆ ಮುರುಟುಹ** = ಮುಟ್ಟಿದರೆ ಎಲೆಗಳು ಮುದುರಿಕೊಳ್ಳುವ ಒಂದು ಬಗೆಯ ಸಸ್ಯ ; ಮುಟ್ಟಿದರೆ ಮುನಿ : "ಹತ್ತಿದರೆ ಮುರುಟುಹಂ ರಕ್ತಪದಿ ಕೀಳ್ಪ್ರಿಯದುಂ" (ಮುಂಗರಾ. ೪೩-೪೩). **ಹತ್ತಿದವನು** = ಸಮಾಪದವನು ; ಸಂಬಂಧಿಕ ; ನೆಂಟ : ಅವನೇನು ಹತ್ತಿದವನೂ ಅಲ್ಲ, ಹೊಂದಿದವನೂ ಅಲ್ಲ(ರೂಢಿ). **ಹತ್ತಿ ಬರು** = ೧. ಅನುಸರಿಸು ; ಹಿಂಬಾಲಿಸು : ಒತ್ತರಿಸಿ ಬಂದರಾಹತ್ತು ಸೇನೆಯೊಲು, ನಿತ್ಯರಿಸಿ ಅಳುಕನುಳಿದಿರಾಗುತವನು, ಹತ್ತಿ ಬಹ ಪೆರಳಂತೆ ಮುತ್ತಿ ನಿಮಿಷದೊಳಡಗಿ ಎತ್ತಿ ಹೋಗುವುದದರ ಪಾಡೆಂದು ತಿಳಿದು (ಕವಿಪು. ೫೨-೧೩). ೨. ಹೊಂದಿಕೊಂಡು ಬರು; ಸಮಾಪದಲ್ಲಿರು: ನೇಮೋಜನ ಮನೆಯ ಹತ್ತಿ ಬನ್ದ ಬೀದಿಯೇ ಮೇರೆ (ಪೌಇಜ. XI-೩೫, ೧೪೦-೩೭ ; 1097). ೩. ಹೆಚ್ಚಾಗು ; ಅಧಿಕವಾಗು : ಅಂಥವನ ವಿಚಾರಕ್ಕೆ ಸಣ್ಣಮಾತು ಕೇಳಬೇಕಲ್ಲಾ ಎಂತ ನನ್ನ ಅಳಲು ಹತ್ತಿ ಬರುತ್ತೆ (ಕುಸುಸಂ. ೧೦೧). **ಹತ್ತಿ ಬೀಳು** = ೧. ಒತ್ತಾಯಿಸು ; ಬಲವಂತ ಮಾಡು ; ದುಂಬಾಲು ಬೀಳು : ನಾನು ಭಾವನಿಗೆ ಹತ್ತಿ ಬಿದ್ದು ಕೇಳಿದಾಗ ತಾನು ಆ ಗೊಂದಲಿಗನಿಗೆ ಕೊಟ್ಟದ್ದು ನಿಜವೆಂದು ಒಪ್ಪಿಕೊಂಡರು (ಸ್ವ್ಯತಿಚ.೯೬). ೨. ಶಾಂತಿಯನ್ನು ಕಳೆದುಕೊಳ್ಳು ; ನೆಮ್ಮದಿಯನ್ನು ಕಳೆದುಕೊಳ್ಳು : ಧನ ಎಂಬ ಪದಾರ್ಥ ಒಳ್ಳೆಯದಲ್ಲ. ಧನದಿಂದ ಮನಸ್ಸು ಹತ್ತಿ ಬಿದ್ದು ಹೋಗುತ್ತದೆ (ಇಪ್ಪಕ. ೨೦೯). **ಹತ್ತಿ ಹಿಡಿ** = ಬಿಗಿಯಾಗು ; ಅಂಟಿಕೊಳ್ಳು : ಸರ್ವಾಂಗ ತೊಯ್ದಿದ್ದ ಅವಳ ಪುಷ್ಟವಾದ ಅಂಗಾಂಗಗಳಿಗೆ ಉಟ್ಟ ಸೀರೆ, ತೊಟ್ಟ ರವಕೆಗಳು ಹತ್ತಿ ಹಿಡಿದಿದ್ದವು (ಒಡ್ಡಿಳು. ೪). **ಹತ್ತಿ ಹೊಂದು** = ಆಪ್ತವಾಗಿ ಹೊಂದಿಕೊಂಡಿರು ; ಸಮಾಪವರ್ತಿಯಾಗಿರು : ಇದು ನಿನ್ನ ಹತ್ತಿ ಹೊಂದಿದ ಮನೆ. ನಿನ್ನ ಮನಸ್ಸಿಗೆ ಬಂದಷ್ಟು ದಿನ ನೀನು ಇದ್ದುಕೊ (ಇಪ್ಪಕ. ೨೧೫). **ಹತ್ತಿ ಹೋಗು** = ೧. ಹಿಂಬಾಲಿಸಿ ಹೋಗು ; ಓಡಿ ಹೋಗು : ಎಂದಾದರೂ ಒಂದು ದಿನ ಇವಳೂ ಯಾವನಾದರೊಬ್ಬನೊಡನೆ 'ಹತ್ತಿ' ಹೋಗುತ್ತಾಳೆ (ಕುಸುಸಂ. ೧೯೦). ೨. ತಳಕ್ಕೆ ಅಂಟಿಕೊಳ್ಳು ; ಒಳಸೇರು ; ಬತ್ತು : ನಿತ್ರಾಣದಿಂದ ಅವನ ಕಣ್ಣುಗಳು ಹತ್ತಿ ಹೋಗಿವೆ (ರೂಢಿ). **ಹತ್ತೆಸರು** = ಕುದಿ ಹತ್ತಿ ಅನ್ನವನ್ನು ಹದಕ್ಕೆ ತರುತ್ತಿರುವ ನೀರು : (ಕ). ☞ ಈ ಧಾತು ಅನೇಕ ಶಬ್ದಗಳ ಮುಂದೆ ಸೇರಿ ಸಂಯುಕ್ತ ಧಾತುವಾಗಿ ಬೇರೆ ಬೇರೆ ಅರ್ಥಗಳನ್ನು ಕೊಡುತ್ತದೆ. ಉದಾ.ಕೈಗೆ ಹತ್ತು, ಮೈಗೆ ಹತ್ತು, ನಿದ್ದೆ ಹತ್ತು ಇತ್ಯಾದಿ.

[ದೇ.॥ ತಮಿ. ಮಲ. ಪಜ್ಜು ; ತುಳು. ಪತ್ತು ; ತೆಲು. ಪಟ್ಟು, ಹತ್ತು ; ಕೊಡ. ಪರ್ಜಿ. ಪತ್ತ್ ; ಕೋತ. ತೊದ. ಪತ್]

ಪತ್ತು₂ (ನಾ). ೧. ಅಂಟಿಕೊಳ್ಳುವಿಕೆ ; ಹತ್ತಿಕೊಳ್ಳುವಿಕೆ : "ಅಡರು ಪೊರ್ದುಗೆ ಸಂಖ್ಯೆಗಳು ಪತ್ತು"(ಶಬ್ದಮಂ. ೯೮). ೨. ಸಂಬಂಧ; ಬೆಸುಗೆ ; ಕೂಡಿಕೊಳ್ಳುವಿಕೆ : ಕಣ್ಣಮೆಯಿಕ್ಕುವನಿತು ಪೊಟ್ಟಪ್ಪೊಡಮುಸಿರ್ ಪತ್ತಿ[ಪಾಠಾಂ. ಪತಿ, ಪನಿತಿ]ಲ್ಲದೆ ದುಃಖಂಗಳನನುಭವಿಸುವರ್ (ವಡ್ಡಾರಾ. ೯೬-೨) ; ಪಂಚಪ್ರಕಾರದುಃಖಂಗಳನನೇಕಪ್ರಕಾರದಿನನುಭವಿಸುತ್ತಮರ್ಧನಿಮಿಷಮಾತ್ರಮಪ್ಪೊಡಮುಸಿರ್ಪ[ತ್ತಂ] [ಪಾಠಾಂ. ತಂ]ಬಡೆಯದೆ . . . ಅವಂದಿರ ವೈಕ್ರಿಯಕಶರೀರಂಗಳ್ ಪಾದರಸದ ಮಾರ್ಗದಿಂ ಪತ್ತುತ್ತುಮಿರ್ಕುಂ (ಸುಕುಮಾ. ೧೧-೪೬ ಪ). 'ಉಸಿರ್ಪತ್ತು' ಪರಾ. ೩. ಸಂಪರ್ಕ ; ಸಹವಾಸ ; ಸಂಗ : ಕೆರಳಿದ ಹರಿ ಸೊಕ್ಕಿದ ಕರಿ ದುರ್ಜನನೆರವಿ ಪತ್ತಿನೊಳಿರಲು (ತರ್ಕಕೌ. ೯-೫೧). ೪. ಆಶ್ರಯ: 'ಪತ್ತುಗುಡು' ಪರಾ. ೫. ಯುದ್ಧ ; ಕಲಹ : "ಪತ್ತು - ಸಂಶ್ಲೇಷೇ (ಹತ್ತಿಕೊಳ್ಳು), ಕಲಹ, ಸಂಖ್ಯಯೋಃ" (ಶಮಧಾ). [<ಪತ್ತು₁./ತಮಿ. ಮಲ. ಪಜ್ಜು ; ತೆಲು. ಪಟ್ಟು ; ಕೋತ. ಪತ್]

ಪತ್ತು₃, ಹತು, ಹತ್ತು₂ (ನಾ). ಒಂದು ಸಂಖ್ಯೆ ; ಒಂಬತ್ತರ ಅನಂತರ ಬರುವ ಸಂಖ್ಯೆ ; ದಶ : "ಪತ್ತು - ಸಂಶ್ಲೇಷೇ (ಹತ್ತಿಕೊಳ್ಳು), ಕಲಹ, ಸಂಖ್ಯಯೋಃ" (ಶಮಧಾ) ; ಪತ್ತು ಪಣನಂ (ಎಇ. XIV, ೧೯೧-೧೫ ; 725) ; ಕುದಿಕುದಿದತ್ತಣಿಂ ಕುದುರೆ ನೂಱಱೊಳಾ ಬಲದಾನೆ ಪತ್ತು ತಾಗಿದುವೆನೆ ದೋಷಮಾ ಪಿರಿದು ಸಂಖ್ಯೆಯೊಳೇಕಬಹುತ್ವಸಂಗದಿಂ (ಕವಿಾ. ೧-೧೨೦) ; ಮೊದಲಿಂದಂ ತುದಿಯೆಯ್ದೆ ಸಂದ ನರಕಾಯುಷ್ಯಾಬ್ಧಿ ಕೇಳೊಂದು ಮೂಱುದಱುಂದಂ ಬಱುಕೇಱು ಪತ್ತು ಪದಿನೇಱುಪ್ಪತ್ತೆರಱ್ ಮೂಱು ಪೆರ್ಚಿದ ಮೂವತ್ತೆನೆ . . . ಏಂ ದುಃಖಕ್ಕವರ್ನೋಂತರೋ (ಆದಿಪು. ೫-೯೩) ; ದೊಱೆಯಿಂದಂ ತೆಗೆವಾಗಳೊಂದು ತುಡುವಾಗಳ್ಪತ್ತು ಬಾಣಂ . . . ನಡುವಾಗಳ್ಕೋಟಿ ಸೇನಾಂಗದೊಳ್ ಗಣನಾತೀತಮಿದೆಂದೊಡೇವೊಗಟ್ಟುದೋ ಬಿಲ್ಬಲ್ಮೆಯಂ ಪಾರ್ಥನಾ (ಗದಾಯು. ೩-೩). 'ಅಯ್ವತ್ತು' ಪರಾ. **ಹತು :** ಸಲಗೆ ಎರಡು ಕೊಳಗ ಹತು (ಎಕ. VI, ಕಡೂರು. ೨-೧೯ ; ಸು. 1110). **ಹತ್ತು₂ :** ಒಬ್ಬಳೇ ಹೆಂಡತಿ ಮೂವರ್ ಪುತ್ರರ್ ಎರಡಾರ ಬೆವಸಾಯಂ ಹತ್ತು ಹಸು ಕಱ್ಹ ಮಧ್ಯದೇಶದೊಳ್ ಸುಕ್ಷೇತ್ರಮಪ್ಪ ತಾಣದೊಳಿರ್ಪುದೇ ಸೇವ್ಯಂ (ಪಂಚತಂ. ೬೫-೧೪) ; ಆ ನಿಃಕಲವಪ್ಪ ಶಿವನ ನಿಃಕಲೆಯಪ್ಪ ಕುಂಡಲಿನಿಯ ಹತ್ತಱೊಳೊಂದಂಶದಲ್ಲಿ ಶಿವಸಾದಾಖ್ಯ ಜನಿಸಿತ್ತು (ಆದಪ. ೩-೧೧) ; ಹತ್ತುಂ ಕರಣಂಗಳು ನೆಱ್ ಹತ್ತುಂ ದೆಸೆಗೋಡಿ ಪೋದುವರಿಗಳವಾಱುಂ ಪೊತ್ತಾನಲಾಱದುಳಿದುವು (ಮೈಆರಿ. ೧೯೪೦, ೧-೬೦ ; ಸು. 13ನೆಯ ಶತ) ; ಶ್ರೀಮಹಾಕಾಶಿಯೊಳು ತತ್ಪುರ ಧಾಮವಿಶ್ವೇಶ್ವರನನತಿಶಯನೇಮವಾಗಲು ತನ್ನ ಹತ್ತು ಬೆರಳ್ಗಳಂ ಕಡಿದು ಪ್ರೇಮದಿಂದರ್ಚಿಸಿ ಪಡೆದನಭಿರಾಮವೆನಲು (ಬಸಪು. ೫೩-೫೬) ; ಹತ್ತು ಶರದಲಿ ಧರ್ಮಜನನಿಪ್ಪತ್ತಱಿಂದಭಿಮನ್ಯುವನು . . . ಐವತ್ತು ಶರದಲಿ ಸಕಲ ರಥಿಕರನೆಚ್ಚು ಬೊಬ್ಬಿಱಿದ (ಕುಮ್ಯಾದ್ರೋ. ೩-೩೨).

ಹತ್ತುಹತ್ತು, ಹತ್ತತ್ತು (ದ್ವಿರುಕ್ತಿ) : ಸೋಮೇ[ಶ್ವ]ರಂ ದೇವರ ನಂದಾದೀವಿಗೆಗಲಂದೆಯ ಮುದ್ರಾವಣದ ಸುಂಕದೊಳಗೆ ತಿಂಗಳ್ದಿಂಗಳ್ಗೆ ಹತ್ತುಹತ್ತು ದ್ರ[ವ್ಯಮಂ] ಬಿಟ್ಟಂ (ಎಇ. XXVIII, ೫-೫೬ ; ಸು. 1082) ; ಉತ್ತುಂಗ ಗವಯ ಶತಬಲಿ ಸುಷೇಣರ ಮೇಲೆ ಹತ್ತುಹತ್ತಂ ಬೊಡಲ್ವುಗಲೆಚ್ಚಂ (ಜೈಮಿಭಾ. ೨೧-೧೯) ; ಅವರು ಹಬ್ಬದಲ್ಲಿ ಆಳುಗಳೆಲ್ಲರಿಗೂ ತಲಾ ಹತ್ತತ್ತು ರೂಪಾಯಿ ಕೊಟ್ಟರು (ರೂಢಿ). **ಪತ್ತನೆಯವತೆ** = ಹತ್ತನೆಯ ಅವಸ್ಥೆ ; ದಶಮಾವಸ್ಥೆ ; ಸಾವು : ಪತ್ತುದೇರ್ವೆಸರಾಂತವಗೊಲ್ದು ಪುಟ್ಟಯಿರ್ಪತ್ತುತೋಳ್ ಶಿರ ಪತ್ತರವನ ಪತ್ತನೆಯವತೆಗಾನಿಸಿ ಲೋಕವ ಕಾಯ್ದ ಪತ್ತವತಾರ ಶ್ರೀರಂಗ (ಶತಸಾಂ. ೧೪-೭೭). **ಪತ್ತವತಾರ, ಹತ್ತವತಾರ, ಹತ್ತುಅವತಾರ** = ೧. ಹತ್ತು ಅವತಾರಗಳನ್ನು ತಾಳಿದವನು; ವಿಷ್ಣು : ಪತ್ತುದೇರ್ವೆಸರಾಂತವಗೊಲ್ದು ಪುಟ್ಟಯಿರ್ಪತ್ತು ತೋಳ್ ಶಿರ ಪತ್ತರವನ ಪತ್ತನೆಯವತೆಗಾನಿಸಿ ಲೋಕವ ಕಾಯ್ದ ಪತ್ತವತಾರ ಶ್ರೀರಂಗ (ಶತಸಾಂ. ೧೪-೭೭). ೨. ವಿಷ್ಣುವು ತಾಳಿದ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ ಎಂಬ ಹತ್ತು ಅವತಾರಗಳು ; ದಶಾವತಾರ : ಹತ್ತವತಾರವನೆತ್ತಿದ ನಮ್ಮ ಸತ್ಯಮೂರುತಿ ಪುರಂದರವಿಠಲರಾಯನು(ಪುರಂದ.ಧಾ. ೪-೨೫-೩); ದೇವರ ಹತ್ತವತಾರಗಳ ವರ್ಣನೆಯನ್ನು ಅವಕಾಶವಿದ್ದಲೆಲ್ಲ ಭಕ್ತರು ಮಾಡಿದ್ದಾರೆ (ಕರ್ನಾಕ.೩೫೨) ; ಅಡಿಗಡಿಗೆ ಹತ್ತು ಅವತಾರವ ಮಾಡಿದ ಕಡುಕಪಟಿಯಲ್ಲದೆ ಭಾರಿಗುಣದವನಲ್ಲ (ಪುರಂದ. ಧಾ. ೩-೯೧-೨). **ಪತ್ತುಗೈಯವ** = "ಹತ್ತು ಕೈಗಳುಳ್ಳವ ; ಶಿವ" (ಗಂಗಾಮ. ೧೯೬). **ಪತ್ತುದಿಶೆ** = ಹತ್ತುದಿಕ್ಕುಗಳು ; ದಶದಿಕ್ಕುಗಳು : ಪತ್ತುದಿಶೆ ನಾಲ್ಕುವಾರ್ಧಿ ವಿಯತ್ತಳವೊಂದವನಿಯೊಂದೆ ಕುಳನಗವೇಱುಂ ಮತ್ತೆ ಪೆಱವೆಡೆಗಳಿಲ್ಲವಱತ್ತಡಗಿರಲೆನ್ನ ತಳದೊಳಿರ್ದನೆಯಲ್ತೆ (ನೇಮಿಪು. ೧೨-೬೨). **ಪತ್ತುದೆಸೆ** = ಪತ್ತುದಿಶೆ : ಸಂಖ್ಯೇಯಕ್ಕೆ—ಪತ್ತುದೆಸೆ, ಪತ್ತುದೆಸೆಗಳ್ (ಶಮದ. ೧೩೯ ಪ್ರಯೋ) ; ಪತ್ತುದೆಸೆಯಂ ಬೆಳಗಿಸುವೆ ಪನ್ನೆರಡುರಾಶಿಗೊತ್ತಾಸೆಯಾಗಿರ್ಪೆ (ಜೈಮಿಭಾ. ೨೦-೪೨). **ಪತ್ತುಮಡಿ, ಹತ್ತುಮಡಿ** = ಹತ್ತರಷ್ಟು ; ಹತ್ತುಪಟ್ಟು : ಪದಿನಾಲ್ಕುಂ ಭುವನಂಗಳಿಂದೆಸೆವ ತದ್ಬ್ರಹ್ಮಾಂಡಮಂ ಬಾಹ್ಯದೇಶದೊಳಂತೊಂದಱನೊಂದು ಪತ್ತುಮಡಿಯಿಂ ಪೆರ್ಚಿರ್ಪವು (ವಿಷ್ಣುಪು. ೧-೧-೧೦೮) ; ಹೊಱಗೆ ರಥಿಕರು ರಾಹುತರು ಜೋಧರು ಪದಾತಿಗಳಿದ್ದುದಂದಿನ ಸಿರಿ ಸುರೇಂದ್ರನ ಪಾಡಿಗೈಮಡಿ ಹತ್ತುಮಡಿ (ಕುಮ್ಯಾಸ. ೧೩-೩೨); ಬಲವಿರೋಧಿಸಹಾಯಶೌರ್ಯಾಕಲಿತನರಿನಕುಲದವನಿಪಾಲಕತಿಲಕರವರಿಂದೀ ಮಹೀಪತಿ ಹತ್ತುಮಡಿ (ತೊರರಾ.೧-೩-೨೦). **ಪತ್ತೆಂಟು, ಹತೆಂಟು, ಹತ್ತೆಂಟು** = ಕೆಲವು ; ಹಲವು : ಚಕ್ರೇಶ್ವರಂ ವಾರ್ಧಿಭೂತಲನಾಥಂಗನುರಾಗಮಂ ಬಳೆಯಿಸಲ್ಕರ್ಘ್ಯಕ್ರಿಯಾತಂಡುಲಂಗಳಿವೆಂದಾದರದಿಂದೆ ಕೊಂಡನವಱೊಳ್ ಪತ್ತೆಂಟು ರತ್ನಂಗಳಂ (ಆದಿಪು. ೧೨-೧೨೦) ; ಇನ್ನಿವಱೊಳ್ ಇರದೆ ಪತ್ತೆಣ್ಟುವಳಯಂ ಚಾರಿಸದನ್ನಂ ಭೋಗ ಮಿಕ್ಕವನಲ್ಲನಿನ್ದ್ರರಾಜಂ(ಎಕ. II, ೧೩೩-೧೦೫ ; 982) ; ವ್ಯಾಳಿ ಪತ್ತೆಂಟು ದಿವಸಂ ಪೋದಿಂಬಱಯಂ ಮೆಲ್ಲನೆ ಕನ್ನೆಗಿಂತೆಂದಳ್ (ಧರ್ಮಾಮೃ. ೩-೧೨೫) ; ಬೆಟ್ಟಹಳಿಯೆಂಬ ಗ್ರಾಮಉ ಹಿಂದೆ ಹತೆಂಟುಕಾಲದಿಂದ ನಾಮನಷ್ಟವಾಗಿ ನಿರ್ನಾಮವಾಯಿತು (ಎಕ. IX (೯), ಚನ್ನಪ. ೨೯೯-೧೧ ; 1387) ; ಕರ್ಣಾಟಕಪ್ರಕೃತಿಸ್ವರಲೋಪಕ್ಕೆ . . . ಉಕಾರಕ್ಕೆ — ಸುತ್ತೋಲೆ, ಹತ್ತೆಂಟು (ಶಮದ. ೫೨ ಪ್ರಯೋ) ; ಮಡದಿಯಗಲಿದ ಬಳಿಕ ಹತ್ತೆಂಟಡಿಯ ದಾಂಟುವ ಮರಳಿ ನಿಜಸತಿಯೆಡೆಗೆ ತಿರುಗುವ ಚಂದ್ರಬಿಂಬಾನನೆಯನೀಕ್ಷಿಸುವ (ನಳಚ. ೫-೧೮) ; ತುರಗ ಸಾಸಿರ ನಾಲ್ಕು ಗಜ ಹತ್ತು ಕಾಲಾಳ ನೆರವಿ ಹತ್ತೆಂಟುಸಾವಿರದ ವರಗಣನೆಯ ಮೋಹರವ ಖಾನನ ಪಿತ ಗರುವ ಪರಾತ ತೋಱುದನು (ಕಂನವಿ. ೧೧-೮೩). **ಪತ್ತೆರಡು** = ೧. ಹತ್ತು ಮತ್ತು ಎರಡು ; ಹನ್ನೆರಡು. ೨. ಎರಡು ಹತ್ತುಗಳು ; ಇಪ್ಪತ್ತು : ಪತ್ತೆರಡುಯೋಜನಮನಱಸುತ್ತಲ್ಕಂತಲ್ಲಿ ಕಲ್ಲು ಕಾಣದೆ ತನಗಿರ್ಪತ್ತುಪವಾಸಮದಾಗಲ್ ಚಿತ್ತದೊಳಂದಳ್ಕದಱಸುತಿರ್ದಂ ಭಕ್ತಂ (ತ್ರಿಪುವಿ. ೫೨-೧೫). **ಹತ್ತನೆ ಅವಸ್ಥೆ** = ಪತ್ತನೆಯವತೆ: ವರ್ಷೀಯಾನ್, ದಶಮಿಾ, ಜ್ಯಾಯಾನ್ - ೩ ಶತವೃದ್ಧ, ಬಹಳ

ಮುಮಕ. ಹತ್ತನೇ ಅವಸ್ಥೆ ಸವಿಾಪವಾಗಿ ಉಳ್ಳವನು (ಸಿದ್ಧಾಂತ. ೧೮೦). **ಹತ್ತರ ಕೂಡ ಹನ್ನೊಂದು, ಹತ್ತರ ಕೂಡೆ ಹನ್ನೊಂದು, ಹತ್ತರಗೂಡ ಹನ್ನೊಂದು** = ಹತ್ತರೊಂದಿಗೆ ಹನ್ನೊಂದನೆಯದು ; ಸಾಮಾನ್ಯವಾದುದು ; ಮಹತ್ವವಲ್ಲದುದು : ಹತ್ತರ ಕೂಡ ಹನ್ನೊಂದು, ಪರಸೇ ಕೂಡ ಗೋವಿಂದ (ಗಾದೆ) ; ಹತ್ತರ ಕೂಡೆ ಹನ್ನೊಂದು ; ಪರಿಸೆ ಕೂಡೆ ಗೋವಿಂದ ! (ಅನಾಥ. ೧೬೩) ; ನಾನು ನನ್ನ 'ಹತ್ತರ ಗೂಡ ಹನ್ನೊಂದು, ಪರಿಶಿಯ ಕೂಡ ಗೋವಿಂದ' ತರಗತಿಯ ಆಯುಷ್ಯದಲ್ಲಿಯ ಪ್ರಸಂಗಗಳ ವಿಷಯ ಮಾತಾಡಿದೆನು (ದಾಸಪು.೧೦೧). **ಹತ್ತರಲ್ಲಿ ಹನ್ನೊಂದು** = ಹತ್ತರ ಕೂಡ ಹನ್ನೊಂದು : ಅವನ ಭಾಗಕ್ಕೆ ರೋಷನ್ ಹತ್ತರಲ್ಲಿ ಹನ್ನೊಂದಾಗಿರಲಿಲ್ಲ (ಕೂಪಸ. ೧೩೦). **ಹತ್ತಜುವರು** = ಹಲವರು : ಹಿತವರು ಹತ್ತಜುವರು ತಮ್ಮೊಳು ನನ್ನತದಿಂ ಸಹಭೋಜನವಂ ಮಾಡಿದರ್ (ಯೋಗಾಂವಿ. ೫-೪). **ಹತ್ತ ಜೊಳಗೆ ಹನ್ನೊಂದು** = ಹತ್ತರ ಕೂಡ ಹನ್ನೊಂದು : ಹತ್ತ ಜೊಳಗೆ ಹನ್ನೊಂದಾಗಿ ನೀರ ತಾವರೆಯಂತಿಪ್ಪೆನು (ಮಹಾದೇ. ಬ. ೯೯-೩೩೦). **ಹತ್ತಾರು** = ಅನೇಕ ; ಸಾಕಷ್ಟು : ಕನ್ನಡದ ದಕಾರಾಂತ ಧಾತುಗಳು ಕೃದಂತಭಾವನಾಮಗಳಾಗುವಾಗ ಡ>ಟ ಆಗುವುದಕ್ಕೆ ಹತ್ತಾರು ಉದಾಹರಣೆಗಳು ನಮ್ಮಲ್ಲಿ ಇವೆ (ದ್ರಾವಿವಿ. ೮೩) ; ಹತ್ತಾರು ಸಲ ನೀನು ಬಟ್ಟೆಯನಳೆದರು ಕತ್ತರಿಸುವುದೊಂದೆ ಸಲವೆ (ಇಂಚಾಸ. ೨೦೭-೨೧) **ಹತ್ತಿಪ್ಪತ್ತು** = ಹಲವು ; ಕೆಲವು : ನನ್ನಲ್ಲಿ ಹತ್ತಿಪ್ಪತ್ತು ಪುಸ್ತಕಗಳವೆ (ರೂಢಿ). **ಹತ್ತುಜನ** = ೧. ಅನೇಕ ಮಂದಿ : ಹತ್ತು ಜನರ ಹಲ್ಲು ಕಡ್ದಿ ಒಬ್ಬನ ತಲೆಹೊರೆ (ಗಾದೆ). ೨. = ಹತ್ತುಮಂದಿ ೨ : ಹತ್ತು ಜನ ಎಂಬುವರು ಮುತ್ತಿನ ಸಮಾನ (ಗಾದೆ) ; ಹತ್ತು ಜನರ ಮುಂದೆ ಮಾನ ಕಳೆಯಬೇಡ (ರೂಢಿ). **ಹತ್ತು ಪಟ್ಟು** = ಪತ್ತುಮಡಿ : ಅವನು ನನಗಿಂತ ಹತ್ತು ಪಟ್ಟು ಹೆಚ್ಚಿನ ಶ್ರೀಮಂತ (ರೂಢಿ). **ಹತ್ತು ಮಂದಿ** = ೧. ಅನೇಕ ಜನ ; ಸಾಕಷ್ಟು ಜನ : ಅಕ್ಕಜಿಂದಲಿ ಹತ್ತು ಮಂದಿಯ ಕೂಡಿ ನಕ್ಕರು ಕೆಲೆದರು ತಮತಮಗೆ (ಮಹಾದೇ. ಬ. ೧೬೫-೬೬೩) ; ಮುಂದಿದ್ದ ಕೂಸನ್ನು ಒದ್ದಾಳೊ ಹತ್ತು ಮಂದಿಲಿ ಮಾನವ ಕೆಡಿಸ್ಯಾಳಣ್ಣ (ಪುರಂದ. ೧-೧೪೨-೩) ; ಹತ್ತು ಮಂದಿಯ ತಾಯಿ ಬೀದೀಲಿ ಬಿದ್ದು ಸತ್ತಳಂತೆ (ಗಾದೆ). ೨. ಅನೇಕ ಜನ ಸಭ್ಯರ ಒಕ್ಕೂಟ ; ಸಮಸ್ತರು : ದುಷ್ಟೆ ಕರ್ಕಶಿಸ್ತ್ರೀಯಂಳ ಹೆಸರು ತೆಗೆಯಬಾರದು ಹತ್ತು ಮಂದಿಗಂಜದವನ ಸ್ನೇಹಿಸದಾರದು (ಪುರಂದ. ೨-೫೪-೩) ; ಹತ್ತು ಮಂದಿಯು ಮಾತು ದಿಾರಬೇಡ, ರಾಯರಿಗೆ, ದೇವರಿಗೆ ಸುಳ್ಳಾಡಬೇಡ (ಗಾದೆ). **ಹತ್ತು ಸಮಸ್ತರು** = ಹತ್ತು ಮಂದಿ ೨ : ಅದು ಧಾರ್ಮಿಕವೇ ಆಗಲಿ, ಲೌಕಿಕವೇ ಆಗಲಿ ಅವುಗಳನ್ನು ಸುದರ್ಶನ ಭಟ್ಟರ ಅನಗಾಹನೆಗೆ ತರದೆ, ಅವರ ಸಲಹೆ ತೆಗೆದುಕೊಳ್ಳದೆ ಊರಿನ ಹತ್ತು ಸಮಸ್ತರು ನಿರ್ಣಯಿಸುತ್ತಿರಲಿಲ್ಲ (ರಾಜ್ಯೋದ. ೬). **ಹತ್ತೈದು** = ಕೆಲವು ; ಹಲವು : ಕುಮಾರಂ ತನ್ನ ಮನದನ್ನರಪ್ಪ ಹತ್ತೈದು ಸಖಿಗಳಂ ಕೂಡಿಕೊಂಡು ತುಂಬುರನಂ ಕರೆಯಿಸಿ (ಸಂಬರ. ೪-೧೩) ; ಗಳಿಗೆ ಜಾವಂ ದಿನಂ ಪಕ್ಷ ಮಾಸಾಬ್ದತಿಗಳ ಹಂಗು ಹೊದ್ದ ದೊಂದೆರಡುಸಂವತ್ಸರಂಗಳಲೆ ಹತ್ತೈದು ವರುಷದ ಹರೆಯನಂ ತಳೆದ ನನುಪಮಸ್ವಾತಂತ್ರ್ಯನು (ಸಿದ್ಧರಾ. ೨-೧೧೧).

[ದೇ.ಗೆ ಕವಿ. ಮಲ. ಪತ್ತು ; ತುಳು. ಪತ್ತ್ ; ತೆಲು. ಪದಿ ; ಕೊಡ. ಪತ್ತ್ ; ಕೋತ. ಪತ್ ; ತೊದ. ಪೊತ್ ; ಕೋಲಾ. ಪದಿ, ಪದೀ ; ಗೊಂಡಿ. ಪದ್, ಪದಿ]

ಪತ್ತು₄ 'ಪೊಟ್ಟು' ನೋ.

ಪತ್ತು₅ (ನಾ). ೧. (ವ್ಯವಹಾರದಲ್ಲಿ ಒಬ್ಬ ವ್ಯಕ್ತಿಯ ಪ್ರಾಮಾಣಿಕತೆಯ ಬಗ್ಗೆ ಇಡುವ) ನಂಬಿಕೆ ; ವಿಶ್ವಾಸ ; ಭರವಸೆ : ವ್ಯಾಪಾರಸ್ಥರು ಸಹ ಸಾಲ ಮಾಡುವದುಂಟು. ಆದರೆ ಅವರ ಪತ್ತು ಪೋಕಾಗಿ ಇರುವುದರಿಂದ ಅವರ ಸಾಲದ ಬಡ್ಡಿಯ ದರವು ಹಗುರಾದ್ದಿರುತ್ತದೆ (ಕಭಾಗೆ. ೨೮೬) ; ಇದರಿಂದ ಹಿಂದೂಜನರ ಪತ್ತು ಕೆಡಿಸಿಕೊಂಡನು (ಹಂಪುಸ. ೧೩೨) ; ಆತ ಕೇಳಿದಂತೆ ಎರಡುನೂರು ಮುನ್ನೂರು ರೂಪಾಯಿಗಳವರೆಗೆ ತನ್ನ ಪತ್ತಿನ ಮೇಲೆ ಸಾಲ ತಂದು ಕೊಟ್ಟಿದ್ದನು (ಜೀನಸ್ಮ. ೧೦೦). ೨. ಘನತೆ ; ಗೌರವ ; ಹಿರಿಮೆ : ಅಹಿಂಸಾವ್ರತಿಗಳನ್ನು ಹಿಂಸಿಸಿದರೆ ಸಾಮ್ರಾಜ್ಯದ ಪತ್ತು ಹಾಳಾಗುವುದು, ಅಪ್ರತಿಷ್ಠೆ ಬೆಳೆಯುವದು (ವಿಜಾಮಂ. ೪೨). [←ಮರಾ. ಪತ್]

ಪತ್ತು₆ (ನಾ). ಬಟ್ಟೆಯನ್ನು ಸುತ್ತಿ, ಎಣ್ಣೆಯಲ್ಲಿ ನೆನೆಸಿ ಹೊತ್ತಿಸಿದ ಪಂಜು : ಪತ್ತುತಲೆ ಕಟ್ಟಿಸಿಕೊಂಡು, ಬೀದಿ ಮೇಲೆ ತನುಟೆ ಹೊಡಿಸಿಕೊಂಡು, ಪತ್ತುಗಳಿಗೆ ಗುಗ್ಗುಳ ಹಾಕಿಸಿಕೊಂಡು . . . ಬಂದರೆ ಚಂದ ಅಂತ ಕಾಣಿಸಿತು (ಸಸ್ಮೃರು. ೩೦೦). [?]

ಪತ್ತುಗಾರ (ನಾ). ಚಿನ್ನ, ಬೆಳ್ಳಿಯ ಕೆಲಸ ಮಾಡುವವನು ; ಅಕ್ಕಸಾಲಿಗ : ಒಡವೆ ಮಾಡಿಸಲು ಬಂದವಳನ್ನು ಕೆಡಿಸಿದನೆಂದು ಅಪವಾದ ಹೊತ್ತು ಬಂದ, ಪತ್ತುಗಾರ (ಸಕೂರ. ೫೩). [<ಪತ್ತಾರ]

ಪತ್ತುಗುಡು (ಕ್ರಿ). ಹತ್ತಿಸು ; ಆಶ್ರಯಿಸುವಂತೆ ಮಾಡು ; ಹಬ್ಬಿಸು : ಲೋಕದೆ ಲೋಗರ್ ಕಾಡ ಬೀಟಂ ತಂದು ಊರೆ ಮರ ನೊತ್ತಿಗಿಡುವರುಂಟು. ನೋಡೆ ನಾಡೆಳವಳ್ಳಿಯಂ ಸಮಂತು ಕಾಡ ಕರ್ಮರನೊಳ್ ಪತ್ತುಗುಡುವರೊರೇ ! (ರಾಮಾಶ್ವ. ೬೮-೪).

[ಪತ್ತು₂+ಕುಡು₁(<ಕೊಡು₁)]

ಪತ್ತುಗೆ, ಪತ್ತಿಗೆ₁, ಪತ್ತಿಗೆ₂, ಪತ್ತುಗೆ (ನಾ). ೧. ಸೇರಿಕೊಂಡಿರುವಿಕೆ; ಕೂಡಿಕೊಂಡಿರುವಿಕೆ : ಗೆಳಾರಕ್ಕೆ—ಉಡುಗೆ . . .ಪಣ್ಣುಗೆ, ಪತ್ತುಗೆ (ಶಮದ. ೨೧೧ ಪ್ರಯೋ) ; ಜರಾಯುಗಳ್ ಭೂಭೃತ್ತ್ರಿತಯುಂ ಜ್ಯೋತಿಯೊಡೆವೆರೆದ ಲೋಕಜಯಂ ಪತ್ತುಗೆಯಿನಂದಮಧ್ಯದೊಳತ್ತಂ ಸನದಾಮರಾಸುರರ್ ವರ್ತಿಸುಗುಂ (ವಿಷ್ಣುಪು. ೧-೧-೧೦೬). ೨. ಹೊಂದಿಕೆ ; ಹೊಂದಾಣಿಕೆ: ಮುತ್ತ ಬಿಡುಗಣ್ಣವರ್ ನೆಲದ ಪೊಸ ನಲ್ಲರಂ ಪತ್ತುಗೆಯ ನೋಳ್ಪವೋಲರಿಲುಗಳ್ ಮಿನುಗೆ (ಕಾಲೂರ. ೬೫-೧೧೧). ೩. ಸಂಬಂಧ ; ಸಂಪರ್ಕ : ಪೊಗಬಲ್ ದೇಸಿಗೆ ದೇವರಿಂದುಳಕೆಯಂ ನಿಸ್ಸಾರಮಂ ತಮ್ಮ ಪತ್ತುಗೆಯಿಂದಂ ಪದಿನಾಱನಲ್ಲಿ ಸವಿವರ್ (ಮಲ್ಲಿಪು. ೨-೪೪) ; ಪಣದಾಸೆ ನಂಟುತನದ ಪತ್ತುಗೆ ನೇಹದಿಣಕೆ ಗಳಿಂದೆದೆಗರಗಿ ಗುಣ ಜವ್ವನ ಕುಲ ರೂಪುಗುಂದಿದ ನಡೆವೆಣ್ಣಿಯಲಾಗದು ಪೆಣ್ಣ (ಪದಿಬ.೫-೧೬). ೪. ದೇಹಸಂಬಂಧ ; ಸಮಾಗಮ; ಸಮ್ಮಿಲನ : ತೆತ್ತು ತನಕ್ಕೆ ತೆತ್ತು ತನನುಂ . . . ಪತ್ತಿದ ಮೆಯ್ಗೆ ಪತ್ತುಗೆಯಾಸುಕ್ಕೆವಳುಕ್ಕೆವಗೆಯ್ತ ಮುಂ ಪೋಣರ್ಚುತ್ತುಮುಪಾಯದಿಂ ಕಳೆಯೆ ಕೂಡುವನಂ ವಿಭು ಕಂಡು ಮೆಚ್ಚದಂ (ಕಾವ್ಯನಾ. ೯೮೫ ಕೂದ್ರಳ) ; ಅಮರ್ಕೆಗೆಟ್ಟೊಡಲಪೋದಿದುದೆಂದಗಿವೆನ್ನ ನಿನ್ನ ಪತ್ತುಗೆಯ ತೊಡರ್ಪದಿಂದು ಪಱುದತ್ತು ಮನಂ ಬಱುಕೆಯ್ದೆ ನೊರ್ಕಿದಾನೆಗೆ ಪರಿವಂತಿರಿಂದು ಪಱುದತ್ತೆನಗಂ ನಿನಗಂ ತಳೋದರೀ (ಅದಿಪು. ೧೨-೩೬) ; ಪದನಱುವು ಪತ್ತುನ ಪತ್ತುಗೆಗಂ ಇಂಬಱುದು ಸೇವಿಸುವ ಸೇವೆಗಂ . . . ಮನಂಬೆಱ್ಚು ಪತ್ತೆಪ್ಪೊಯ್ದಂತಾಗಿರೆ (ಶಾಂತಿಪು. ೩-೫೫ ಪ). ೫. ಸ್ನೇಹ ; ಒಲವು ; ಗೆಳೆತನ : ಗುರುವುಂ ತಾನುಂ ಮುನ್ನಂ ಗೊಂದರಾ ನಱುಮಾಂಸಸ್ಥಿತಿಯಪ್ಪ ಪತ್ತುಗೆಗಳಿಂ ಕ್ಷೇಮುಂಕರಾಧೀಶನಂ (ಶಾಂತಿಪು. ೩-೧೩೧) ; ಎಮಗೆ ಪತ್ತುಗೆಯಂ ಮಾಡಿದಿರಪ್ಪೊಡೆ ಸುಖದೊಳ್ ನೆಲಸದೆ ತಿರಿವಿರೆಂದು ಪೇಟ್ಟಂತೆ ಸಂಚಳಿಸುವ ಕಣ್ಗಳುಮಂ ನೋಡಿ ವೈರಾಗ್ಯಂ ಪೆರ್ಚಿ (ಧರ್ಮಾಸ್ಯ. ೧೧-೯೦) ; ನವಿ ತವದನ್ನೆಗಂ

ಮನದ ಪತ್ತುಗೆಗಳ್ ಕಿಡದನ್ನೆಗಂ ಪೆಜಂಗವಳೆಡೆಯಾಗದನ್ನೆಗಂ . . . ತವಿಪುದು ತನ್ನನೊಪ್ಪಿಸುವುದು (ಚಂದ್ರಪ್ರ. ೮-೮೧); ದೊಡ್ಡವರೊಡನೆ ಪತ್ತುಗೆಯನು ಪಡೆಯಬೇಕೆಂದು ಬಯಸಿದುದಕೆ ಇದು ಯೋಗ್ಯವಾದ ದಂಡ (ಇಂದಿರೆ. ೨೮). ೬. ಉಂಟಾಗುವಿಕೆ; ಒಧಗುವಿಕೆ; ಸಂಭವಿಸುವಿಕೆ: ಜಸದಟಾವಂ ಪರಾಭವದ ಪತ್ತುಗೆಯಂ . . . ಜನತಾಪವಾದಮಂ ವ್ಯಸನಿಗಳಾರುಮೆತ್ತಲಱಿವರ್ ವಿಷಯಾಸವಮತ್ತ ಚೇತಸರ್ (ಪಂಚಾಮೃ. ೧೪-೧೧೪). ೭. ಹೊಂದುವಿಕೆ; ಪಡೆಯುವಿಕೆ: ನೆಗೞ್ದಭಯಶ್ರೋಷಕ್ರಿಯೆ ಮಗಳ ಮನೋರಮೆಯ ಮದುವೆಗಂ ರಾಜ್ಯದ ಪತ್ತುಗೆಗಂ ಗುರೂಪರೋಧಕ್ಕಗಿದು ಮನಂದಂದನೇಂ ಜಿತಾತ್ಮನೊ ಪುರುಷಂ (ಆದಿಪು. ೬-೨). ೮. ಹೊಂದಿಕೊಂಡ ಭಾಗ; ಪಕ್ಕ; ಸಮೀಪ: ಕುಂದರಾಜನ ತಂಗೆ ಬೀಚಱಬಸಿಗೆ ಊರಿಂ ಮೂಡಣ ಭೀರುಣ್ಡೇಶ್ವರದ ತಳವೃತ್ತಿ ಪುಲ್ಲೆಯ ಬಯಲ ಮೂಡಣ ಪತ್ತುಗೆಯಲೆ ಭೀರುಣ್ಡಗಳೆಯಲ್ಮೊಟ್ಟ ಗಟ್ಟೆಯ ಮತ್ತರ್ಪತ್ತು (ಎಕ. VII, ತಿಕಾರಿ. ೧೫೧-೮೧; 1047); ತಿಪ್ಪಗಾವುಂಡನ ಸಾತಿಗಾವುಂಡಂ ಆಗಸಗೆಱೆಯ ತಂನ ವಿಸಂಕಾಣಯ ಬಳದೊಳಗೆ ಗೂಗೆಯಬಾಗಿ ಪಡುವಣ ಪತ್ತುಗೆಯೊಳು . . . ಬಿಟ್ಟ ಎರೆಯ ಮತ್ತರೊಂದು (ಕೊಲ್ಹಾಶಾ. ೧೫-೮೧; 1186). ೯. ಆಶ್ರಯ; ಆಧಾರ: ಸೊಗಯಿಪ ಸುರಭೂಜದ ಪತ್ತುಗೆಯಂ ನವಕಲ್ಪಲತಿಕೆ ಪಡೆದಂತಿರೆ ನೆಟ್ಟಗೆ ಖಚರಾಧಿಪನರ್ದೆವತ್ತುಗೆವಡೆದಳ್ ವಾಯುವೇಗವನಿತಾರತ್ನಂ (ಶಾಂತೀಶ್ವ. ೧-೧೫೬). ೧೦. ನಿಷ್ಠೆ; ತತ್ಪರತೆ; ಏಕಚಿತ್ತ: ಎಡೆವಿಡದೆ ನೀಮವರ ಮಕ್ಕಳನ್ ಬಗೆ ಪೊರಳ ದೊಂದೆ ಪತ್ತುಗೆಯಿಂದೆ ಸೇವೆಗೆಯ್ದಿರ್ಪುದುಮ್ ಬಲ್ಲೆನ್ (ಅಂತಿಗೊ. ೯-೧೫೬). ೧೧. ಸ್ಥಿರತೆ; ಅಚಲತೆ; ಶಾಶ್ವತವಾಗಿರುವಿಕೆ: ಮುಗಿಲೊಡ್ಡಿಂದ್ರನ ಧನು ಮಿಂಚುಗಳೇಳೆ ಬಳಿಕ್ಕೆ ವಾರಿವರಲಿಂದಂ ಪೆರ್ಚುಗೆಗೊಂಡ ಕಾಲಮದು ಪತ್ತುಗೆಯಂ ತಳಿಧಿರ್ಭದೆಯಳಿದತ್ತಾಕ್ಷಣದೊಳ್ (ವೀರವಿ. ೬-೧೫). ೧೨. (ರಥದಲ್ಲಿ) ಸಂಬಂಧವನ್ನುಂಟುಮಾಡುವ ಭಾಗ; ಅಡ್ಡಪಟ್ಟ; ಆಚ್ಚು: ಅಡ್ಡವಂದ ನಳಿಗೊಂಬಿನ ಪತ್ತುಗೆ ಜೋಲ್ಲ ಬಳ್ಳಿಗೊಂಬಿನ ಬಳೆ . . . ಕಣ್ಣ ಚೆಲ್ವನೆ ನಡೆತಂದು ವಂದಸುಗೆಯೆಂಬ ನೆಗೞ್ತೆಯ ತೇರ್ಗಳೆತ್ತಲುಂ (ಕಬ್ಬಕಾ. ೨೧೩). **ಪತ್ತಿಗೆ**$_1$: ೧. 'ಪತ್ತಿಗೆಯಾರಂಬ' ಪರಾ. ೧೩. ಹಿಡಿದುಕೊಂಡಿರುವಿಕೆ; ಹಿಡಿತ: (ಕ). **ಪತ್ತಿಗೆ**$_1$: ೩. ಶೋಕದ ಹತ್ತಿಗೆಗೆ ಹೊರೆದೆಗೆದು ಮಱವೆಯ ಚಿತ್ತವನು ಚೇತರಿಸಿ ಮೆಲ್ಲನೆ ನುಡಿಸಿದನು ಮುನಿಪ (ಕುವ್ಯಾಗ. ೧೧-೧೦); ಆತ್ಮನಲ್ಲಿ ಭಾವಲಿಂಗಸಂಬಂಧವ ತಿಳಿದುದಕ್ಕೆ ಜ್ಞಾನಕ್ರಿಯೆಗಳಲ್ಲಿ ಹತ್ತಿಗೆಯುಳ್ಳವನಾಗಿರಬೇಳು (ಮೋಕ್ಷಮಾ. ೭೬-೨೮೮ ಅರ್ಥ). ೧೨. ಬೆಚ್ಚಿದವು ರಥವಾಜಿ ಹತ್ತಿ[ಪಾಠಾಂ.ತ್ತು]ಗೆ ಬಿಚ್ಚಿ ರಥನುಗ್ಗಾಯ್ತು ಶೌರ್ಯದ ಕೆಚ್ಚು ಮುಱಿದುದು ಹಿಂಗಿದರು ಪಾಂಡವ ಕುಮಾರಕರು (ಕುವ್ಯಾಕ.೩-೩೧); ಮುಱಿದ ಬಲುಗುದುರೆಗಳ...ಹತ್ತಿಗೆ ಹಱಿದ ಗಾಲಿಯ ರಥವ ಚಿನಕಡಿವಡೆದ ಕಾಲಾಳ ಅಱಿಹಿದರು ಭೂಪತಿಗೆ (ಕುವ್ಯಾಶ. ೨-೬). ೧೪. ಹತ್ತಿಕೊಂಡಿರುವಿಕೆ; ಅಂಟಿಕೊಂಡಿರುವಿಕೆ: ಹತ್ತಿಗೆಯ ಬಿಡಿಸಿ ಕೆದಱಿಸಿ ಬಿದಿರ ಸಟ್ಟುಗವನಿತ್ತಟ್ಟಿನೊಳು ಬೆಂದುದಂ ಹಿಡಿದು ತೆಗೆದಿರಿಸಿಯುತ್ತಮದ ಸಕ್ಕರೆಯನದ ಪದರೊಳು ತುಂಬಲದು ಬಿಚ್ಚುಪೇಣೆಯಾಯ್ತು (ಸೂಪಶಾ. ೧-೪೯). **ಹತ್ತುಗೆ**: ೧. ಸುತ್ತುಝುಲ್ಲಿಯ ಝುಲ್ಲರಿಯ ಬಲುಹತ್ತುಗೆಯ ಬಿಱುಬುಗಳ ತೇರಿನ ಹತ್ತುಸಾವಿರ ಹೊದಱುದೆಗೆದವು ಶಲ್ಯನೆಡಬಲಕೆ (ಕುವ್ಯಾಶ. ೨-೨೬); ದೇವಿಯಿದ್ದಳು ಬಾಗಿದೊಡಲಿನ ಕೈವೆರಳ ಹತ್ತುಗೆಯ ಕದಿಸಿನ ಜೀವನವನುದುಗಲಿಪ ನಯನದ ಮಣಿದ ಮಸ್ತಕದ (ತೊರಂಗಾ. ೫-೩-೩೩). ೩. ತಮಿಳು—ಕನ್ನಡಗಳ ಹತ್ತುಗೆಯನ್ನೂ ಕನ್ನಡದೇಸಿಯ ಪೆಗ್ಗಳಿಕೆಯನ್ನೂ ಪರೀಕ್ಷಿಸಿದಲ್ಲಿ ಕನ್ನಡಕ್ಕೆ ತನ್ನ ಕಾಲ ಮೇಲೆ ನಿಲ್ಲುವ ಮೂಲಶಕ್ತಿ ಇರುವುದೆಂದು ಊಹಿಸಬಹುದು (ತನಿ. ೫೮); ಪಳ್ಳಿ, 'ಪಾಳ್ಯ—ಪಟ್ಟು' ಈ ನುಡಿಗಳಲ್ಲಿರುವ ಹತ್ತುಗೆಯು ವಿಮರ್ಶಾರ್ಹವಾಗಿದೆ (ಕರ್ಣಾಪೂ.೩೦). ೫. ಒತ್ತಿಗೈತಂದಾಗಲಭಿನವಿಸುತ್ತ ಬಿನ್ನವಿಸಿದನು ತಂದೆಯ ಹತ್ತುಗೆಯ ಬುದ್ಧಿಗಳ ತುದಿ ಮೊದಲಾಗಿ ದಶಶಿರನು (ಉತ್ತಕ. ೧೦-೨೨) ೬. ಆ ಮುನಿವರನು . . . ಉತ್ತಮವು[ದ] ಶ್ರುತಿಯಲಿ[ಲ್ಲಿ] ಭಕ್ತಿಯ ಹತ್ತುಗೆಯು ನಿನಗುಂಟೆಯೆಂದಾ ದ್ವಿಜನ ಕೇಳಿದನು(ತಿಮ್ಮಶಾಂ.೬-೫೯). ೮. ನಿಟ್ಟೂರ ಹೊಲದ ಹತ್ತುಗೆಯ ಹೊಲನಮ್ ಹುಲಿಗೆಱೆಯ ಗಡಿಮ್ಬದ ಗಳೆಯ ನೂಱು ಮತ್ತಕ್ಕೆಯ್ಯಮ್ . . . ಪಾರಮೇಶ್ವರ ದತ್ತಿಯಾಗಿ ಪಡೆದು (ಎಇ. XVI, ೪೮-೫೬; 1147); ಗೂಗೆಯ ಬಾಗಿಂ ಬಡಗಲೆರೆಯ ಮತ್ತರೊಂದು ಮತ್ತಂ ಬಳ್ಳಹಾರದ ಬಡಗಣ ಹತ್ತುಗೆಯೊಳ್ಮತ್ತರೊಂದು (ಕಇ. I, ೨೪-೨೧; 1148). ೯. ಎತ್ತಿದವು ಶರಜಾಲ ಫಲುಗುಣನ ರಥ ಹಯ ಸಮಸ್ತಕಂ ಜೇನ ನೊಣದಂತೆ ಕವಿಯಲ್ಕೆ ಶರ ಹತ್ತುಗೆಗೆ ಪೊಗಲೆಡೆಯ ಕಾಣದೆ ಮುರಧ್ವಂಸಿಯಂ ನೋಡ್ದವಾಹಯಗಳು (ತುರಂಗ. ೬೮-೩೫). ೧೫. ಸೇರಿಸುವಿಕೆ; ಕೂಡಿಸುವಿಕೆ; ಹೊಂದಿಸುವಿಕೆ: ತತ್ತೆನಲ್ ನಾದವದಱೊತ್ತಿನೊಳ್ ತ್ವಂ ಪದವೆ ಮತ್ತೆಸೆವ ಬಿಂದುವೆಂದಿಂತೆರಡನು ಹತ್ತುಗೆಯ ಮಾಳ್ಪಸಿಯೆ ಚಿತ್ತೆಂಬ ಬೆಳಗು (ಮನೋವಿ. ೨-೩೩). ೧೬. ಹೊಡೆತ; ಆಘಾತ: ಸತ್ವ ಸವೆಯದು . . . ತೆತ್ತ ಕೈ ಕಂಪಿಸದು ಮುಷ್ಟಿಯ ಹತ್ತುಗೆಗೆ ಮನ ಝೋಂಪಿಸದು ಮದವೆತ್ತಿ ಮೆಟ್ಟದೊಬ್ಬರೊಬ್ಬರ ಮರ್ಮಘಾತದಲಿ (ಕುವ್ಯಾಸ. ೨-೧೧೧) ೧೭. ನಂಟು; ಮೊರೆ; ಬಂಧುತ್ವ: ದೈತ್ಯರ ಮೊತ್ತ ಶಿಶುಪಾಲಾತ್ಮಜರು ಸಹಿತತ್ಯಧಿಕ ರಣಶೂರರೆನಿಸುವರವರ ಸಂಖ್ಯಾತ ಹತ್ತುಗೆಗೆ ವರದೃಷ್ಟಕೇತು ವರೋತ್ತಮರು ಸಹಿತವರ ಬಲ ಬಲುಮೃತ್ಯುವನು ಕೈಕೊಳ್ಳದವರಕ್ಷೋಣಿಯೊಹುದು (ಕೋಗಯ. ೨೦-೧೯). ೧೮. ಮೇಲೆ ಬೀಳುವಿಕೆ; ಮುತ್ತುವಿಕೆ; ಆಕ್ರಮಿಸುವಿಕೆ: ಮುತ್ತಿತಾ ಬಲಜಲಧಿ ವಡಬನ ಮುತ್ತು ವಂಬುಧಿಯಂತೆ ಬಳಿಕಾ ಹತ್ತುಗೆಯ ಹವಣನಲಿ ಹರಿಸುತನಿರ್ದನು (ತೊರಂಗಾ. ೫-೬-೮); ಬಿತ್ತರಿಸಲರಿದಾದಿವೀರರ ಹತ್ತುಗೆಯ ಹವಣುಗಳ ಸಂಗರವೆತ್ತ ನೋಡಲು ಕೊಲೆಗೆ ಮೇಲದು ಬಲುಹು (ತೊರಂಗಾ. ೬-೧೮-೧೧). [ಪತ್ತು$_1$+-ಗೆ]

ಪತ್ತುಗೆಗಾಱ (ನಾ). ಸಮನಾದವನು; ಅನುರೂಪ; ಹೊಂದಿಕೆಯಾಗುವಂತಹವನು: ತೆತ್ತಿಸಿ ನೋಡಲು ಕುವರಿಯ ರೂಹಿಂಗೆ ಪತ್ತುಗೆಗಾಱರಿಲ್ಲನುತೆ ಬತ್ತಿದ ಹರ್ಷಾಶ್ರುಗಳಿಂದೆ ಧರಣಿಗೆ ಹತ್ತಿದಳಾಕೆ ಬೇಗದಲಿ (ಮೋಹತ. ೨೯-೨೦). [ಪತ್ತುಗೆ+-ಕಾಱ]

ಪತ್ತುಗೆಗುಂದು (ಕ್ರಿ). ಸಂಬಂಧವನ್ನು ಕಳೆದುಕೊಳ್ಳು; ಸಂಪರ್ಕವನ್ನು ಬಿಡು: ಪಗಲೆಂದುಂ ತಲೆಯೆತ್ತಲಣ್ಮಳೆನಸುಂ ಚಂದ್ರಂಗೆ ಕೂರ್ತಂತೆ ಪತ್ತುಗೆಗುಂದಳ್ ನಸೆಯಪ್ಪುದುಂ ಪರಿದುದುಗ್ಗಾಂಭೋಧಿಯೊಳ್ ಕೂಡುವಳ್ . . . ಶೌಮುದಿ (ಲೀಲಾವ. ೨-೫೨); ಕಡುಗೊರ್ಬಿ ಪರ್ಬಿದ ಪರ್ಬುಮಿಗವಕ್ಕೆಗನೊಳಾದ ಪಗೆತನಮಂ ಬಗೆಗೊಂಡು ತಜ್ಜನಕ ವನನಿಧಿಯಂ ಕನಲ್ದು ಸುತ್ತಮೊತ್ತರಿಸಿ ಮೊತ್ತಂಗೊಂಡು ಪತ್ತುಗೆಗುಂದದೊತ್ತಿ ಮುತ್ತಿದುದೆಂಬೊಪ್ಪ ಮನಪ್ಪುಕೆಯ್ದು (ರಾಜಶೇ. ೧-೧೦೨ ವ). [ಪತ್ತುಗೆ+ಕುಂದು$_1$]

ಪತ್ತುಗೆಗೆಡು (ಕ್ರಿ). ಸಂಬಂಧ ತಪ್ಪು; ಜೊತೆ ಕೆಡು: ಪತ್ತುಗೆಗೆಟ್ಟುಮೊಂದುನುಡಿಗೊಂಬತನೆಂದೆರಡೆಂಟನೀಗಳಾನೆತ್ತಱಾವಂದಮೆಂಬ ತೆಱದಿರ್ದಪೆ (ಚಂದ್ರಪ್ರ. ೮-೭೯). [ಪತ್ತುಗೆ+ಕೆಡು$_1$]

ಪತ್ತುಗೆಗೊಳ್ (ಕ್ರಿ). ಹೊಂದಿಕೆಯಾಗು; ಕೂಡಿಕೊಳ್ಳು; ಸೇರಿಕೊಳ್ಳು: ಆವಗಂ ಮದಂ ಜಗುಬದಿಭಂಗಳಾಂತ ಪೊರೆ ನಿಲ್ಲಳೆ ವಕ್ಷದ

ಲಕ್ಷ್ಮಿ ಕೂರ್ತು ಪತ್ತುಗೆಗೊಳೆ ತಳ್ತು ತೋಳೊಳೆಸೆದಳ್ ಧರಣೀವಧು ಪದ್ಮಭೂಪನಾ (ಪುಷ್ಪಪು. ೩-೪); ಧರೆಯಂ ಗಾಲಿಯಸೆತ್ತಿ ವ[ಪ]ತ್ತುಗೆ ಗೊಳುತ್ತುಂ ತಾಗಿಸಲ್ ಲೋಕಮಂ ತುರಗಂಗಳ್ ಖುರಘಟ್ಟನೋಚ್ಚಳಿತ ಧೂಳೀಜಾಳದಿಂ ಪೊಬಲ್ . . ಭರದಿಂ ಬಂದಿದಿರಾಂತು ನಿಂದುವರ ದಂಗಳ್ (ಸುಜಾನೇ. ೧೨-೨೨೧); ಜಗದೇಕವೀರ ನರಪತಿ ಜಗದೀಶ್ವರನಂಶ ಮಕ್ಕುಮಲ್ಲದೊಡಿವನೊಳ್ ಪಗೆ ಪತ್ತುಗೆಗೊಂಡವರುಂ ಸೊಗವಾಳ್ವರೆ ದಿವ್ಯಭೋಗಭಾಗ್ಯೋದಯದೊಳ್ (ಅಪ್ರತಿ. ೫೭-೬).

[ಪತ್ತುಗೆ+ಕೊಳ್$_1$]

ಪತ್ತುಗೆಗೊಳಿಸು (ಕ್ರಿ). ೧. ಹೊಂದಿಸು ; ಕೂಡಿಸು ; ಸೇರಿಸು : ಅತ್ತಿಗೆ ನಾದಿನಿಯರೊಳಂತರಂಗವ ಪತ್ತುಗೆಗೊಳಿಸಿ ಬಾಳುವುದು (ಹದಿಬ. ೪-೨೧); ಆ ತನೂಜಾತರ್ಗೆ ಜಾತಕರ್ಮಮಂ ನೆಗೞ್ಚಿ . . . ಅನ್ವರ್ಥಂಗಳಾದ ನಲ್ವೆಸರ್ಗಳನಿಟ್ಟು ಶಸ್ತ್ರಶಾಸ್ತ್ರವ್ಯುತ್ಪತ್ತಿಯಂ ಪತ್ತುಗೆಗೊಳಿಸಿ (ಚಕವಿ. ೨-೨೪). ೨. ಅಳವಡಿಸು ; ಜೋಡಿಸು : ಕತ್ತುರಿಯಿಂದೆ ಸಮ್ಮಾರ್ಜನೆಗೆಯ್ದು ಪೆರ್ಮುತ್ತುಗಳೊಡನೆ ಮಾಣಿಕವ ಪತ್ತುಗೆಗೊಳಿಸಿರ್ದ ದಯರಂಗಪಾಲಿಯ ಬಿತ್ತರಿಸಿದರು ತೀಕ್ಷಣದಿ (ಮೋಹತ. ೨೧-೫).

[ಪತ್ತುಗೆಗೊಳ್+-ಇಸು$_3$]

ಪತ್ತುಗೆವಿಡು (ಕ್ರಿ). ಸಂಬಂಧವನ್ನು ಕಳೆದುಕೊಳ್ಳು ; ಬೇರ್ಪಡು; ಭಿನ್ನವಾಗು : ಸಂಪುಟಂ ಪತ್ತುಗೆವಿಟ್ಟೋರಂದದಿಂ ಸಿಂಪುಗಳುಗುಟ್ಟಿಸಿಡಿಲ್ಕಂದ ಮುಕ್ತಾಫಲಶ್ರೇಣಿಗಳಿಂದಂ ಪಶ್ಚಿಮಾಂಭೋಧಿಯ ಪುಳಿನಚಯಂ ಬೆಳ್ಪನಾಳ್ದಿರ್ದುವಾಗಳ್ (ಕಾದಂಪೂ. ೧೪೨). [ಪತ್ತುಗೆ+ಬಿಡು$_1$]

ಪತ್ತುಗೆವೆರಸು$_1$ (ಕ್ರಿ). ೧. ನಿಕಟಸಾಮೀಪ್ಯವನ್ನು ಪಡೆ ; ಸಂಬಂಧವನ್ನು ಹೊಂದು : ನಗೆಮೊಗದಿಂದ ಪೊಣ್ಮುವ ಸುಗಂಧದಿಂ ಘ್ರಾಣದಿಚ್ಛೆಯಂ ಸಲಿಸುವ ಪತ್ತುಗೆವೆರಸಿ ಬೆರಸಿಯೊಲಿಸುವ ನೆಗೞ್ತೆಯಿಂ ಮನವನೂನಸುಖಮಂ ಪಡೆಗುಂ (ಪಸಾರ. ೧೮೭). ೨. ಪ್ರೀತಿಯನ್ನುಗಳಿಸು ; ಆಪ್ತವಾಗು : ಅತ್ತೆ ನಾದಿನಿಯರೊಳಳುಕದೆ ಕಾದುವುನ್ಮತ್ತೆಯರೀ ಕೃತಿಗೇಳೆ ಉತ್ತಮಗುಣಗಳಿಂದೊಳಗುಗ್ಗೆದವರೊಳು ಪತ್ತುಗೆವೆರಸಿ ಬಾಳುವರು (ಹದಿಬ. ೧-೫೮).

[ಪತ್ತುಗೆ+ಬೆರಸು$_1$(<ಬೆರೆಯಿಸು)]

ಪತ್ತುಗೆವೆರಸು$_2$ (ಅ). ಸಂಬಂಧವನ್ನು ಹೊಂದಿ ; ಹೊಂದಿಕೆಯಿಂದ ಕೂಡಿ : ತಾಯ ಶಿಶುವಿನಂತೆ ಕಜುವಿನೆಳಗಂದಿಯಂತೆ ಲೋಭಿಯ ಪೊನ್ನಂತೆ ಪಂಚಪರಮೇಷ್ಠಿಗಳೊಳಪ್ಪ ಪತ್ತುಗೆವೆರಸು . . . ಪ್ರಭುಕೆಟ್ಟ ನಾಡಂತೆ ಸಂಸಾರದ ಶರೀರದ ಭೋಗದ ಮೇಲೆ ಬೇಸಱುಂ (ಧರ್ಮಾಮೃ. ೫-೧೨೫). [ಪತ್ತುಗೆ+ಬೆರಸು$_3$]

ಪತ್ತುಗೆವೆಱು (ಕ್ರಿ). ಸ್ನೇಹದಿಂದಿರು ; ಒಲಿದಿರು : ಆ ಕಾಂತೆಯೊಳಾ ಸಕಲಮಹೀಕಾಂತಂ ವಜ್ರಲೇಪದನುಬಂಧಮನಿತ್ತಾ ಕೃತಿಯಿಂ ಪತ್ತುಗೆವೆತ್ತೋಕುಳಿಯಾಡುವನನಂಗರಾಗಾಮೃತದೊಳ್(ಮಲ್ಲಿಪು.೩-೮೬).

[ಪತ್ತುಗೆ+ಪೆಱು$_1$]

ಪತ್ತುಗೇಡು (ನಾ). ನಂಬಿಕೆಯನ್ನು ಕಳೆದುಕೊಳ್ಳುವಿಕೆ.

ಪತ್ತುಗೇಡಾಗು = ನಂಬಿಕೆಯು ಹಾಳಾಗು : ಆ ಅಲಂಕಾರಗಳು ದೊರೆಯದಿದ್ದರೆ ಜನರಲ್ಲಿ ನನ್ನ ಪತ್ತುಗೇಡಾಗುವುದು (ಕಳ್ಳಕಾ. ೪೧).

ಪತ್ತುಗೇಡು ಮಾಡು = ನಂಬಿಕೆಯನ್ನು ಹಾಳುಮಾಡು : ನಾನು ಹಲವು ಬಗೆಗಳಿಂದ ಅವನ ಪತ್ತುಗೇಡು ಮಾಡುವೆನು (ಕಮಲ. ೨೦).

[ಪತ್ತು$_5$+ಕೇಡು]

ಪತ್ತುಗೊರಳ (ನಾ). ಹತ್ತುತಲೆಗಳನ್ನುಳ್ಳವನು ; ದಶಶಿರ ; "ರಾವಣ" (ಗಂಗಾಮ. ೧೯೬).

[ಪತ್ತು$_3$+ಕೊರಳು(<ಕೊರಲ್)+-ಅ$_7$]

ಪತ್ತುಗೊಳ್ (ಕ್ರಿ). ೧. ಸೇರು ; ಕೂಡು : ಬಿತ್ತಿನ್ನದೆ ಬೇರೆನ್ನದ ನಿತ್ತುಂ ಭಾಗಂಗಳಿಂದೆಯುಂ ಕುತ್ತಗಳಂ ತುತ್ತುವ ಗಿಡುವನೊಲಕ್ಕುಂ ಪತ್ತುಗೊಳಲ್ಸಿರಿ ಪರೋಪಕಾರಿಗಳೆಡೆಯೊಳ್ (ನೀತಿಮಂ. II, ೧೭೭). ೨. ಹಿಡಿದುಕೊಳ್ಳು ; ವಶಪಡಿಸಿಕೊಳ್ಳು : ಆರೊಂದು ಹಯಮೆಂಬುದನಾರೈದು ಪೋಗದೆ ಪತ್ತುಗೊಳ್ಳ ನೀಂ ಕಾಲುರಿಚನಕ್ಕುಂ, ಸಾಜಂ (ರಾಮಾಶ್ವ. ೮೬-೧೫). [ಪತ್ತು$_1$+ಕೊಳ್$_1$]

ಪತ್ತುದಲೆಯ (ನಾ). = ಪತ್ತುಗೊರಳ : ಪತ್ತುದಲೆಯನು ಕೀಚಕನು ಮನವಿತ್ತು ಪರವಧುವಿಂಗೆ ಬಾಳ್ವರೆ (ನಾಗಚಂ. ೧೮-೪೯).

[ಪತ್ತು$_3$+ತಲೆ$_1$+-ಅ$_7$]

ಪತ್ತುವರಿಜ (ನಾ). ಹತ್ತು ಅವತಾರಗಳನ್ನು ಎತ್ತಿದವನು ; ವಿಷ್ಣು : "ಎಲರುಣಿವಟ್ಟೆಗ ಪಾಱುಂಬಳೆಗೆಯ್ಕುಂ . . . ಹರಿಯೆಂದು ಪತ್ತುವರಿಜನೆನುತ್ತುಂ" (ಕವಿಕಂ. ೨೫). [ಪತ್ತು$_3$+ಪರಿಜು$_1$+-ಅ$_7$]

ಪತ್ತುವಳಿ (ನಾ). ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಳ್ಳುವಿಕೆ,—ಸ್ವಂತಕ್ಕೆ ಬಳಸಿಕೊಳ್ಳುವಿಕೆ,—ದಸ್ತುಮಾಡುವಿಕೆ; ಛಪಾವಣಿ: ಇದು ತಿಳಿದು ಪತ್ತುವಳಿ ಬಾಬತಿನಲ್ಲಿಯೂ ಬಲವಂತದಿಂದ ಬಿಟ್ಟ ಬೇಗಾರಿಯಲ್ಲಿ ಹೊಲ ಗದ್ದೆಗಳ ಮಾಡಿಸಿಕೊಂಡುಯಿದ್ದಾಗ್ಯು ಸಹ . . . ಮಾಜಿ ಅಮೀಲಗೆ ಅವನ ಅಮಲ್‌ನಲ್ಲಿ ನಡೆದು ಇರುವ ವಿದ್ಯಮಾನಕ್ಕೆ ಮಹಜರು ಬರೆದು ಕೊಡಬೇಕು(ಮಹಾಮಂ.II,೫೯).

[ಪತ್ತು$_2$+-ವಳಿ$_1$]

ಪತ್ತುವಿಡಿ (ಕ್ರಿ). ದೃಢವಾಗಿ ಹಿಡಿದುಕೊಳ್ಳು ; ಅಂಟಿಕೊಂಡಿರು: ಗೊರವನ ಬೆಳ್ಗೊರಲೊಳಮರ್ದ ಹಾಲಾಹಲದ ಕರ್ಮೆಗನುದುಱುಗಲ ಮಾಟ್ಕೆಯಿಂ ಶಂಖಧವಳಕಂಠದೊಳ್ ಪತ್ತುವಿಡಿದೇಕಮುಖೀರುದ್ರಾಕ್ಷಮೊಂದು ತೆಱಂಬೊಳೆಯೆ (ರಾಮಾಶ್ವ. ೪೦-೨೫). [ಪತ್ತು$_2$+ಪಿಡಿ$_1$]

ಪತ್ತುವಿಡಿಸು (ಕ್ರಿ). ಸಂಬಂಧವನ್ನು ತಪ್ಪಿಸು ; ಬೇರ್ಪಡಿಸು ; ಅಗಲಿಸು ; ದೂರ ಮಾಡು : ವನತರುಪತ್ರಂಗಳನೊಯ್ಯನೆ ನೆಲೆಯಿಂ ಪತ್ತುವಿಡಿಸಿ ಕಳಿಕೆಗಮುತ್ಪತ್ತಿನಿಮಿತ್ತಮಾಗಿ ಶಿಶಿರಮುಮಿನಿಸಿನಿಸನೆ ತನ್ನ ನೆಱನನಱಪಿದುದೀಗಳ್ (ಅದಿಪು. ೧೧-೮೯); ಎನಗಾದದೊಂದು ಪರಿಭವ ಮನಾರ್ಗೆ ದೂಱದಪೆನಾರ್ಗೆ ಪೇಟ್ಟಪೆನಿದನಾಂ ನಿನಗುಸಿರ್ದನಂತರಂ ಸುಖದಿನೆನ್ನ ತನುವಿಂದೆ ಪತ್ತುವಿಡಿಸುವೆನಸುವಂ (ಕಾದಂಉ. ೨೯೮); ನಳಕೂಬರನೊಳ್ಕೂಡಿ ಸುಖಮಿರೆಂದಾಕೆಯ ದುಷ್ಪರಿಣಾಮಮಂ ಪತ್ತುವಿಡಿಸಿ . . . ಮನ್ನಿಸಿ ಭಯಮಂ ಕಳೆದಿತ್ತಂ ಭೃತ್ಯಪದವಿಯಂ ದಶವದನಂ (ಪಂರಾಮಾ. ೧೦-೧೯೫ ಪ); ಈತನ ಧನಮುಂ ಬುದ್ಧಿಯುಂ ವೃಥೆಯಾಗದಂತೆನ್ನ ಬಲ್ಲ ಮಾರ್ಗದಿಂ ತಿಳಿಪಿ ಬಟಾಕ್ಕೇ ಧರ್ಮಮಂ ಪತ್ತುವಿಡಿಸಿ ಮದೀಯ ಧರ್ಮದೊಳ್ ಪತ್ತಿಸುವೆಂ (ಧರ್ಮಾಮೃ. ೧-೧೦೯). [ಪತ್ತುವಿಡು+-ಇಸು$_3$]

ಪತ್ತುವಿಡು (ಕ್ರಿ). ೧. ಸಂಬಂಧವನ್ನು ಬಿಡು,—ತೊರೆ,—ತ್ಯಜಿಸು : ಕುಲಜನುಮಲ್ಲಂ ನಪ್ಪಿನ ಬಲಮುಂ ತನಗಿಲ್ಲ ಕಣ್ಮೇಳಿದನಾರೊಳ್ ನೆಲಸಿರನೆಲ್ಲಿಯುಮು[ವನ]ಂ ಚಲವೆಂದುಂ ಪತ್ತುವಿಡದದೊಂದುಂಟು ಗುಣಂ (ಕವಿರಾ. ೩-೧೬೨); ಅಂತು ಸತ್ತುಂ ನೆಲನಂ ಪತ್ತುವಿಡೆನೆಂಬಂತೆ ನೆಲನಂ ಪತ್ತಿ ಮೂರ್ಛಾಗತನಾಗಿರ್ದ ಕುರುಕುಳ ಚೂಡಾಮಣಿಯನೇನುಂ ಮಾಣದೆ ಕಿಮ್ಮಾರವೈರಿ ಮುಟ್ಟಿವಂದಾಗಳ್ (ಪಂಪಭಾ. ೧೩-೯೬ ಪ); ಸಿಂಹಶರಭಶಾರ್ದೂಲವ್ಯಾಳಮೃಗಮಿಥುನಂಗಳ್ ಕಾಲಸ್ವಭಾವದಿಂ ಋಜುಸ್ವಭಾವಮಂ ಪತ್ತುವಿಟ್ಟು ವಿಷಮಸ್ವಭಾವಮನಪ್ಪುಕೆಯ್ದುವುದುಂ (ಪಂರಾಮಾ. ೧-೭೧ ಪ); ಒಂದು ತಿಂಗಳು ಪ್ರಾಯೋಪಗಮನವಿಧಿಯಿಂದ ದೇಹವ ಪತ್ತುವಿಟ್ಟು ಒಂದುಕ್ಷಣದೊಳು ಸರ್ವಾರ್ಥಸಿದ್ಧಿಯೊಳಹಮಿಂದ್ರರಾಗಿರ್ದರ್ (ಶಾಂತೀಶ. ೫-೧೪೮).

೨. ಬೇರ್ಪಡು; ಬೇರೆಯಾಗು; ದೂರವಾಗು; ಅಗಲು: ಶರಪಂಜರದೊಳೊಜಗಿಯುಮೊಡಲಿಂ ಪತ್ತುವಿಟ್ಟು ಪೋಪ ಜೀವಮಂ ಪೋಗಲೀಯದೆ ಸ್ವಚ್ಛಂದವಿಟ್ಟುವಪ್ಪ ಪಜ್ಜಂದುತ್ತರಾಯಣಂ ಬರ್ಪನ್ನ ವಿರಿಸಿದಂ (ಪಂಪಭಾ. ೧೧-೪೬ ಪ); ಜಾತಿಜರಾಮರಣಾನಿಷ್ಟಸಂಯೋಗ ವಿಷ್ಟವಿಯೋಗ ಸಹಜಸವುಂಪ್ಪ ಪಶಾರೀರಮಾನಸಾಗಂತುಕದುಃಖದಿಂ ಪತ್ತುವಿಟ್ಟನಂತಚತುಷ್ಟಯಮುಂ ಪೊರ್ದಲೆಂದು ತಪಂಬಟ್ಟಂ (ಅಜಿಪು. ೧೦-೪ ಪ); ಮತ್ತಹಸ್ತಿಗಳ ಮಸ್ತಕದಿಂ ಬಿದಿರಿಂ ಘಣೇಂದ್ರೋತ್ತಮಾಂಗ ದಿನಗುರ್ವಿಪ ಪಂದಿಯ ಕೋಟ್ಯಿಳಿಂ ಪತ್ತುವಿಟ್ಟಗನಿಳುಂಜದೊಳೊಕ್ಕಿಳ ಮುತ್ತನಾಯುಂತ್ತು ವಿರ್ಪ ಶಬರಪ್ರಿಯಕಾವಿಸಿಯೆರ್ಕಳಂ (ಕಾವ್ಯಾಪ. ೧೧೯); ಒದೆದದ್ರಿಕ್ಷಿತಿಸಂಧಿ ಪತ್ತುವಿಡೆ ಭೈಭ್ಯಯೆಂದಿನಂ ಕಿಟ್ಟು (ಶಪುದ. ೫೩ ಪ್ರಯೋ). ೩. ಇಲ್ಲವಾಗು; ಮರೆಯಾಗು; ಕಾಣದಾಗು: ಅಗಳ್ ತನ್ನ ರಾಗಮುಂ ರಾಗಿಗಳ್ಗಿಲ್ಲಂ ಪಜ್ಜುಕೊಟ್ಟಂತೆ ಕೆಂಪು ಪತ್ತುವಿಟ್ಟಾಗಳ್ (ಪಂಪಭಾ. ೪-೫೦ ಪ). ೪. ನಿವಾರಣೆಯಾಗು; ಪರಿಹಾರವಾಗು: ತಪದೊಳ್ ನಿಂದುಂ ನಿನ್ನ ನೆಲದೊಳ್ ನಿಂದವೆಂಬ ಮಾನಕಷಾಯಮುಮವರ್ಗಿನ್ನುಂ ಪತ್ತುವಿಟ್ಟುದಲ್ತಜ್ಜಂ ಕೇವಲಜ್ಞಾನೋತ್ಪತ್ತಿಯಾಗದಿರ್ದುದು (ಆದಿಪು. ೧೪-೧೪೩ ಪ); ಪಲವು ತೆಱದಿಂ ಸಂಜೀವಕನೊಳಾಪ ಭಯಂ ಪತ್ತುವಿಡೆ ಸಂತಸಂಬಡೆ ನುಡಿದೊಡಂಗೊಂಡು ಬಂದು (ಪಂಚತಂ. ೫೬-೩); ಬೆಸಸಿವಿಂದನೆನ್ನ ಮನದೊಂದು ಸಂಶಯಂ ಪತ್ತುವಿಡುವಿನಂ (ಸುಕುಮಾ. ೫-೩); ಆ ಕನ್ಯಾರತ್ನದ ಕರಸ್ಪರ್ಶನದಿಂ ಪವಿತ್ರಸುರಭಿಸಲಿಲಸೇಚನದಿಂ ಪತ್ತುವಿಡೆ ಮೂರ್ಛೆ (ಪಂಂಪಾಮಾ.೧೪-೭೦); ಕೆಡುವ ಭಂಡದಂತೆ ಮಾಱುವೋಗದು ಪೇನಂತೆ ಪತ್ತುವಿಡದು ಬಣಿಗಿನಂತೆ ನೇರಿತಲ್ಲದು (ಧರ್ಮಾಮೃ. ೪-೧೩೫). ೫. ಕಳೆದುಕೊಳ್ಳು; ನೀಗಿಕೊಳ್ಳು: ಧೈರ್ಯಮುಂ ಪತ್ತುವಿಟ್ಟತಿಪ್ರಲಾಪಂಗೆಯ್ದು ಲಲಿತಾಂಗದೇವನಂ ಸಾಮಾನಿಕದೇವರ್ಕಳೆವಂದು . . . ಎನೆ (ಆದಿಪು. ೩-೫೭ ಪ); ಅರಿಸಡ್ವರ್ಗಂ ಕಾಡುವಂತುಗಿಬಗಿ ಮಾಡಿ ಕಾಡುವಜವರ ಕಾಟಕ್ಕಮಲ ಸದೆಯುಂ ಧೈರ್ಯಮುಂ ಪತ್ತುವಿಡದೆಯುಂ ಇರ್ದು (ಶಾಂತಿಪು. ೪-೬೬ ಪ). ೬. (ಬಾಲ್ಯ ಮೊದಲಾದುವು) ಮುಗಿ; ಕಳೆದುಹೋಗು: ನಿಜಜನನೀಜನಕರ್ . . . ಪುತ್ರನಿಂದಗ್ಗಳಮಪ್ಪ ಪರಮಪ್ರೀತಿಯಿಂ ನಡಪುತ್ತಮಿರೆ ಕೆಲವು ದಿನಸದೊಳವಿದಿತಸ್ನೇಹಶೋಕಾಯಾಸಮಪ್ಪ ಶೈಶವಂ ಪತ್ತುವಿಡುವುದುಂ (ಕಾದಂಪೂ. ೭೧೪). ೭. ಅಗಲಿಸು; ಬೇರ್ಪಡಿಸು; ದೂರಮಾಡು: ತನಯವಿರ್ವರ ವಾರ್ತೆಯನತ್ತ ಕೇಳ್ದುದುಂ ಜೀವಮನಂತೆ ಪತ್ತುವಿಡುಗುಂ ತನುವಿಂದದಱಿಂದವಿನಾಗಳ್ . . . ಸಂತಯಿಸು ಪೋಗಿ ಮುನೋರಮೆಯಂ (ಕಾದಂಬಿ. ೬೫೮). ೯. ನಿವಾರಿಸು; ಹೋಗಲಾಡಿಸು; ಪರಿಹರಿಸು: ಚಕ್ರಿ ಚಕ್ರಿಕಾ ಪರ್ಯಾಯಪ್ಪುದಱಿಂದಾ ವನಾಂತರಾಳಕ್ಕೊರ್ವನೆ ಬಂದು ಮಾಧವೀ ಮಂಟಪಮಂ ಪೊಳ್ಕು ಅವರಿರ್ವರ ನಾಣುಮಂ ನಡುಕಮುಂ ಪತ್ತುವಿಟ್ಟು ನುಡಿದು (ಪಂಪಭಾ. ೫-೧೯ ಪ). ೧೦. (ಬಾಲ್ಯ ಮೊದಲಾದುವನ್ನು) ಮುಗಿಸು; ಪೂರೈಸು; ಕಳೆ: ತತ್ಕುಮಾರನಂ ಕೈಕೊಂಡು ಬಾಲಜನೋಚಿತಕ್ರಿಯೆಗಳಂ ಮಾಡಿ ಜನ್ಮಾನುರೂಪಮಾಗೆ ಪುಂಡರೀಕನೆಂದು ಪೆಸರನಿಟ್ಟು ಶೈಶವಮುಂ ಪತ್ತುವಿಡಲೊಡಮುಪಿಳವಿದ್ಯಾಕಲಾಪದೊಳ್ ಪರಿಣತನುಂ ಮಾಡಿ (ಕಾದಂಪೂ. ೭೬೫); ಪತ್ತುವಿಟ್ಟನಂ ಶೈಶವಮುಂ ಸಮುಜ್ವಳನವಿದ್ಯಾಹ್ಯದ್ಯಪೀಯೂಷಪಸೇವನೆಗೀಗಳ್ ನಿಜಿಯೋಗ್ಯಮಾದನೆನೀ ಕಂದರ್ಪದೇವಂ ದಲ್ (ಕುಸುಮಾ. ೩-೨೫); ಪರ್ವತೈಯ್ಯನೆಂಬ ನಾಮಮುಂ ತಳೆದು ಶಯಿತಪವಲೀಲೆಯಂ ಪತ್ತುವಿಟ್ಟು ಸಕಲಪ್ರಪಂಚತೆಯಂ ಲಘುತರಂ ಮಾಡಿ ತಾಂ ಗುರುತೆನೆತ್ತುದುಂ (ಎಳ. XV, ಹೊಳೆನ. ೧೧೨-೧೪; 1282); ದಿನದಿನದೊಳ್ ಪತ್ತುಮಾಯುಂ ನಡೆಗಲ್ತು ತೊದಳ್ ಪಿಂಗಿ ಶೈಶವಮುಂ ಪತ್ತುವಿಟ್ಟು ಬೆಳೆದಿರ್ದಳ್ (ತ್ರಿಪುವಿ. ೩೫-೫ ಪ). ೧೧. ನಿಲ್ಲಿಸು; ನೆಲೆಗೊಳಿಸು, ಸ್ಥಿರಗೊಳಿಸು: ಶ್ರೀಪರಮಾತ್ಮಚಿಂತೆಯೊಳೆ ಚಿತ್ತಮನಾಗಳೆ ಪತ್ತುವಿಟ್ಟನನ್ಯಾಸ್ಯದಸೌಖ್ಯಮುಂ ಪಡೆವ ಪಜ್ಜಪದಂಗಳನೋದುತಕ್ಕರ್ಯಿಂ (ಎಳ. VIII, ನಗರ. ೪೪-೧೦; 1255). [ಪತ್ತು೨ + ಬಿಡು೧]

ಪತ್ತೂರ (ನಾ). ಒಂದು ಬಗೆಯ ಮರ; ಕೆಂಪುಚಂದನ: "ಪತಂಗಂ-ಪತ್ತೂರ" (ಓಷಧಿ. ೯೧). [ಸಂ.]

ಪತ್ತೆ೧,೨, ಪತ್ತೆ೨ (ಅ). ಸಮೀಪಕ್ಕೆ; ಹತ್ತಿರಕ್ಕೆ; ಬಳಿಗೆ: 'ಪತ್ತೆ ಸಾರ್' ಪರಾ. **ಪತ್ತೆ೨**: ಇತ್ತ ಬಾರಯ್ಯಾ ಇತ್ತ ಬಾರಯ್ಯಾ ಎಂದು ಭಕ್ತರೆಲ್ಲರೂ ಕೂರ್ತು ಪತ್ತೆ ಕರೆಯುತಿರೆ (ಬಸವ. ೨೪೫); ಹಾಜಿಯ ಹಂಸನ ಪತ್ತೆ ಕರೆವುದೊಂದು ಚಂದಮಾನು (ತಿಪಗೀ. ೧೯೪-೯೭೨). 'ಪತ್ತೆಸಾರ್' ಪರಾ. [<ಪತ್ತು೨]

ಪತ್ತೆ೨ (ನಾ). ೧. ಗುರುತು; ಸುಳಿವು; ಚಿಹ್ನೆ; ಮಾಹಿತಿ: ಹದಿನೈದು ದಿನವಾದರೂ ಅವರ ಪತ್ತೆಯೇ ಇಲ್ಲ (ಸ್ವಾತಿ. ೫೮); ಆ ಮಾಸ್ತರರ ತಮ್ಮ ಶ್ರೀಪಾದನ ಪತ್ತೆಯೇ ಇಲ್ಲ! (ಕಸಳ. ೩೦); ಏನೇ ಆಗಲಿ, ತನ್ನ ನಿಜವಾದ ಪತ್ತೇನ ಬಿಟ್ಟುಕೊಡಬಾರದು (ವೀರಯೋ.೮); ಬಹಳ ಸೂಕ್ಷ್ಮವಾಗಿ ನೋಡದಿದ್ದರೆ ಕೋಟಿನಲ್ಲಿ ಹೊಲಿದ ಪತ್ತೆ ಕಾಣಲಾರದು (ಭಾರತಿ. ೧೧೮). ೨. ವಿಳಾಸ; ಅಡ್ರೆಸ್ಸು: ಎಲ್ಲ ಸುದ್ದಿ ತಿಳಿಸಿ ನೀ ಈವರೆಗೆ ಮೂರು ನಾಲ್ಕು ಪತ್ರ ಬರೆದೆ. ಇಲ್ಲಿಯ ನನ್ನ ಪತ್ತೆಗೆ ತಡವಾಗಿ ಆದರೂ ಅವೆಲ್ಲ ಮುಟ್ಟಿದುವು (ಅಸ್ಸ. ೪೫); ನಾನು ಒಬ್ಬರ ಪತ್ತೆ ಕೇಳಲು ಅಲ್ಲಿ ಮನೆಯೊಂದರ ಒಳಗೆ ಹೋದೆ (ಕೂಂದಯಾ. ೫೩). **ಪತ್ತೆ ಕೊಡು**=ವಿಳಾಸವನ್ನು ಕೊಡು: ಪ್ರಭುರಾಯರು ಡ್ರಾಯಿವರನನ್ನು ತಮ್ಮ ಮನೆಗೆ ಕಳುಸಿಕೊಡಲು ಹೇಳಿ, ತಮ್ಮ ಪತ್ತೆ ಕೊಟ್ಟು ಹಿಂತಿರುಗಿ . . . ಹೋದರು (ಕೂಂದಯಾ. ೫೨); ನೆಟ್ಟರೆಂದರೆ ನಮ್ಮೂರ ನೆಟ್ಟರಲ್ಲ . . . ಎಂದು ತಿಳಿಹೇಳಿ ಅವರ ಪತ್ತೆ ಕೊಟ್ಟರು (ಹುಚ್ಚುಹು. ೬೩). **ಪತ್ತೆ ಮಾಡು**=ಗೊತ್ತು ಹಚ್ಚು; ಶೋಧಿಸು; ಕಂಡುಹಿಡಿ; ತಲಾಶು ಮಾಡು: ಇನ್ನು ಯಾರಿಹರೊ ಅವರನಾದರು ಪತ್ತೆಮಾಡಿರಿ ಜವದಿ (ಯಚೋರ. ೪೨); ನಾನು ಆತನನ್ನು ಪತ್ತೆ ಮಾಡಿ ಧರ್ಮಸ್ಥಾನದಲ್ಲಿ ಶಿಕ್ಷೆಗೆ ಗುರಿಮಾಡುವೆನು (ವಿಶಾಪ. ೬); ಸದಾಶಿವ ರಾಯರು ಕಳ್ಳತನವನ್ನು ಪತ್ತೆ ಮಾಡುವಾಗ ಅತ್ಯಂತ ಕ್ರೂರವಾಗಿ ವರ್ತಿಸುತ್ತಿದ್ದರು (ರಂಗಗೋ. ೨೨). **ಪತ್ತೆಯಾಗು**=ಗುರುತು ಸಿಕ್ಕು; ಶೋಧವಾಗು; ಕಂಡುಹಿಡಿಯಲ್ಪಡು; ಗೊತ್ತಾಗು: ಯಾರಿಗೂ ಪತ್ತೆಯಾಗದಷ್ಟು ದೂರ, ಬಹುದೂರ ಹೋಗಬೇಕೆಂಬ ಹಂಬಲವೇ ಆ ಯೋಜನೆಯಲ್ಲಿತ್ತು (ಹೊಸಕ್ತಿ. ೬೩); ನಮ್ಮ ಕಳವಿನ ಮಾಲು ಪತ್ತೆಯಾಗಿದೆ (ಭಾರತಿ.೬೬); ಬೇಟೆಯಾಗದಿದ್ದರೆ ಊರಿಗೆ ಆಳುಗಳು ಬಂದದ್ದೇ ಪತ್ತೆಯಾಗುತ್ತಿರಲಿಲ್ಲ (ಹುಚ್ಚುಹ. ೨೧). **ಪತ್ತೆ ಹಚ್ಚು**=(ರಹಸ್ಯ ವಿಚಾರಗಳನ್ನು) ಕಂಡುಹಿಡಿ,—ಶೋಧಿಸು: ಆಡುನುಡಿಯನ್ನೂ ಅವರ ಸ್ವರೂಪ—ಉಚ್ಚಾರಗಳನ್ನೂ ಪತ್ತೆ ಹಚ್ಚಲು ಇರುವ ಆಧಾರಗಳೇನು? (ದ್ರಾವಿವಿ. ೬೬); ಸುಧಾಕರನು ಗುಪ್ತಚಾರನಾಗಿ ಮಾರುವೇಷದಿಂದ ನಮ್ಮ ಚಲನವಲನಗಳನ್ನು ಪತ್ತೆ ಹಚ್ಚಲು ಈಗಾಗಲೇ ತಿರುಗಾಡುತ್ತಿರುವನು (ದೇಶಭ. ೯೪); ಒಂದು ದಿನ ಮುಂಜಿಯ . . . ದೈವ ತೋರಿಸಿದ ಹೆಣ್ಣನ್ನು ಪತ್ತೆ ಹಚ್ಚಿ, ಮಧ್ಯಸ್ಥಗಾರರನ್ನು ಬಿಟ್ಟು ಚೆನ್ನಿಯನ್ನು ಮದುವೆ ಮಾಡಿಕೊಂಡು ಬಂದೇಬಿಟ್ಟ (ನಡದಾ. II, ೧೦೧೪). **ಪತ್ತೆ ಹತ್ತಿಸು**=ಪತ್ತೆ ಹಚ್ಚು: ಅದರಲ್ಲಿ ಯಾರಾದರೂ ಬಂದು ಅರೆಡಿತುಕೊಂಡು ಇದ್ದರೆ, ಪತ್ತೆ ಹತ್ತಿಸಿ ಹಿಡಿದು, ಅವರನ್ನು ಕಡುದು ಹಾಳುವದು (ರಾಜೇಂದ್ರ. ೨೪೫). [←ಹಿಂ. ಪತಾ; ಮರಾ. ಪತ್ತಾ]

ಪತ್ತೆದಾರ (ನಾ). ರಹಸ್ಯವಾದ ಕೊಲೆ, ಕಳ್ಳತನ ಮೊದಲಾದುವನ್ನು ಗೊತ್ತುಹಚ್ಚುವವನು,—ಕಂಡುಹಿಡಿಯುವವನು : ದಿವಾ ನಿಶಿಯರು ಇದನ್ನು ಬಗೆಹರಿಸುವುದಕ್ಕೆ ಪತ್ತೆದಾರನನ್ನು ಕರೆಸಬೇಕೆಂದು ಸಲಹೆಮಾಡಿದರು (ಒಂಕಿಸು. ೨೬೯); ಈ ನಾಯಕನ ಪೇಟೆಯಲ್ಲಿಯೇ ಲೋಕಪ್ರಸಿದ್ಧನಾದ ಅರಿಂದಮನೆಂಬ ಪತ್ತೇದಾರನು ವಾಸವಾಗಿರುತ್ತಿದ್ದನು (ಪಿಶಾಪ. ೧), ಹರವಲ್ಲಭರಾಯನು ಇಂದು ಪತ್ತೇದಾರನಾಗಿ ಬಂದಿದ್ದಾನೆ (ದೇವೀಚೌ. ೧೪೨). [ಪತ್ತೆ$_2$+–ದಾರ$_4$]

ಪತ್ತೆದಾರಿ (ನಾ). ರಹಸ್ಯವಾದ ಕೊಲೆ, ಕಳ್ಳತನ ಮೊದಲಾದುವನ್ನು ಗೊತ್ತುಹಚ್ಚುವಿಕೆ,— ಕಂಡುಹಿಡಿಯುವಿಕೆ,—ಪತ್ತೆಹಚ್ಚುವಿಕೆ : ಕೆಲವು ಕಾಲ ತಾಲ್ಲೂಕು ಪೋಲೀಸಿನ ಮುಖ್ಯಾಧಿಕಾರಿಯಾಗಿ ನಾನೇ ಅನೇಕ ಘಟನೆಗಳನ್ನು ಸ್ವತಃ ಪರಿಶೋಧಿಸಿ ಪತ್ತೆದಾರಿ ನಡೆಸಿದ್ದೇನೆ (ನಡೆದಾ. II, ೮೫೦); ಇಂತಹ ಒಬ್ಬಿಬ್ಬ ಕಕ್ಷಿಗಾರರು ಇರುವುದಾದರೆ, ನನ್ನ ಪತ್ತೇದಾರಿಯ ಕೆಲಸಕ್ಕೆ ಇಂದೇ ಜಲಾಂಜಲಿಯನ್ನು ಕೊಡಬೇಕಾದೀತು (ಪಿಶಾಪ. ೩). [<ಪತ್ತೆದಾರ]

ಪತ್ತೆಪಾಯ್ (ಕ್ರಿ). ಸಮೀಪಕ್ಕೆ ಹೋಗು ; ಸಮೀಪಿಸು ; ಹತ್ತಿರಕ್ಕೆ ಬರು : ಕತ್ತಲೆಯೆಂಬ ಕಾರ್ಮುಗಿಲೊಳಗಣಂ ಪೊಳೆದು ಪಾಯ್ವೆಳ ಮಿಂಚಿನಂತೆ ಮೇಲ್ವಾಯ್ದು ಲತಾವೇಷ್ಟಿತದೊಳ್ ಪರಿಣತೆಯಪ್ಪುದಱಿಂ ಪತ್ತೆಪಾಯ್ವಂತೆ ಮುರಿದಡರ್ದು ಪತ್ತಿ . . . ಅಡಸಿ ಪಿಡಿದಾಗಳ್ (ಲೀಲಾವ. ೧೪–೧೦೫ ಪ). [ಪತ್ತೆ$_1$+ಪಾಯ್$_1$]

ಪತ್ತೆಪೊಯ್ 'ಪತ್ತೆವೊಯ್' ನೋ.

ಪತ್ತೆವಿಡಿ, ಹತ್ತೆವಿಡಿ, ಹತ್ತೆಹಿಡಿ (ಕ್ರಿ). ೧. ಬಿಗಿಯಾಗಿ ಹಿಡಿ ; ಒತ್ತಿಹಿಡಿ ; ಭದ್ರವಾಗಿ ಹಿಡಿದುಕೊಳ್ಳು : ಬಾಲೆಯೊರ್ವಳ್ . . . ಅರೆಜಾಱಿದ ಮೇಲುದುಮಂ ಸಮಂ ನೇವರಿಸುತುಂ ಪತ್ತೆವಿಡಿದುಡೆ ನೇಣನೊತ್ತು ಸೇರಿಸುತುಂ . . . ಪೊಂಬಟ್ಟಲನೆತ್ತಿ ಬರುತುಮಿರ್ದಳ್ (ರಾಮಾಶ್ವ. ೪೮–೨೭). **ಹತ್ತೆವಿಡಿ** : ೨. ಸಮೀಪದಲ್ಲಿರು ; ಪಕ್ಕದಲ್ಲಿರು ; ಜೊತೆಯಲ್ಲಿರು : ಚಿತ್ತವೃತ್ತಿಯನಱಿದು ಹತ್ತೆವಿಡಿದೋಲಯಿಸು (ಸರ್ವಜ್ಞ. ೭೩೧). **ಹತ್ತೆಹಿಡಿ** : ೨. ಏಕಾದಶಾಕ್ಷೋಹಿಣಿಯ ವಲ್ಲಭನ ಹತ್ತೆಹಿಡಿದೋಲಗಿಸುವರು ವರಮತ್ತಕಾಶಿನಿಯರುಗಳೀಗಳು ಸುತ್ತಮುತ್ತಿತು ಘೂಕ ವಾಯಸ ಜಂಬುಕವ್ರಾತ (ಕುವ್ಯಾಗ. ೧೨–೧೬). [ಪತ್ತೆ$_1$+ಪಿಡಿ$_1$]

ಪತ್ತೆವೊಯ್, ಪತ್ತೆಪೊಯ್ (ಕ್ರಿ). ಒಂದಾಗಿಸು ; ಬೆಸೆ : ಗಳಕಳರವಮಂ ಕೆದಱಿ ಬಲ್ಪಿನಿಂ ಬಾಯಿಂ ಬಾಯಂ ಬಿಡಿಸಿ ಬಾಯ್ಗೆ ಪಾಯ್ದು ಪತ್ತೆವೊಯ್ದಂತೆ ಪತ್ತಿ ತಟ್ಟಿ ತೋಳ ತೊಡಂಕಂ ತಪ್ಪಿಸಿ (ಲೀಲಾವ. ೭–೫೫ ಪ). **ಪತ್ತೆಪೊಯ್** : ಅವರ ಮನಮನಱಿದು ನುಡಿವ ನುಡಿಗಂ . . . ಪೊಟ್ಟಱಿದು ಸಾರ್ವ ಸಾರ್ಕೆಗಂ ಮನಂಬೆಚ್ಚು ಪತ್ತೆಪೊಯ್ದಂತಾಗಿರೆ (ಶಾಂತಿಪು. ೩–೫೯). [ಪತ್ತೆ$_1$+ಪೊಯ್$_2$]

ಪತ್ತೆಸಾರ್, ಹತ್ತೆಸಾರ್, ಹತ್ತೆಸಾರು (ಕ್ರಿ). ಸಮೀಪಿಸು ; ಸನಿಹಕ್ಕೆ ಸೇರು ; ಹತ್ತಿರಕ್ಕೆ ಬರು : ಪ್ರಾಣಪರಿತ್ಯಾಗಕ್ಕೆ ಪೂಣಿಸಿ ಪತ್ತೆಸಾರ್ದು ಸುರಿವ ಬಾಷ್ಪಬಿಂದುಗಳಿಂ ಕೋದೆಱಂಕೆಯ ಮೊದಲುಗಳುಮಂ ಕಂಠದ ತುಪ್ಪುಟುಮಂ ನಾಂದುತ್ತುಮಿರ್ದ ನವವಿಪಂಚಿಯುಮಂ . . . ಇಂತೆಂದಳ್ (ಲೀಲಾವ. ೧೪–೧೨೦ ಪ) ; ಅಂತಿರ್ದಿರವಂ ಕಂಡು ಕಳಭಾಷಿಣಿ ಪತ್ತೆಸಾರ್ದು . . . ನುಡಿಸಿದಳ್ (ಕುಸುಮಾ. ೧೩–೭೯ ಪ) ; ಆ ಸಮಯದೊಳಾ ಮಹಾಸೇನಮಹಾರಾಜಂ . . . ನಿಜತಾಂಬೂಲಿಕ ನೊರ್ವಂಗೂಡಿ ಕರುಮಾಡಮಂ ಪತ್ತೆಸಾರ್ದು ನಿಲ್ವುದುಂ (ಬಾಧಪು. ೨–೬೮ ಪ) ; ಬಿಸುಸುಯ್ದು ಬಟಲ್ದು ಬೇವಸಂಗೊಳುತಿರೆ ಪತ್ತೆಸಾರ್ದ ನರಸಂ ಸರಸಂ ಮಿಗೆಯೆಂದಿನಂದದಿಂ (ಚಿಕವಿ. ೩–೨೮). **ಹತ್ತೆಸಾರ್** : ಗಿರಿಸುತೆ ಬಂದು ಕಂಡು ಬೆಱಗಾಗಿ ಕೃಪಾಕರಚಿತ್ತೆ ಹತ್ತೆಸಾರ್ದು ರತಿಯ ಮೆಯ್ಯುಮಂ ಮೊಗಮುಮಂ ತಡವುತ್ತಿರೆ (ಗಿರಿಕ. ೮–೭೮) ; ಹಲ್ಲಂ ಕಿರಿದರಂ ಕೊಲ್ಲದೆ ಬಿಟ್ಟು ಹುತ್ತವನಡರ್ದರಂ ಹತ್ತೆಸಾರದೆ . . . ಮಾಱಾಂತರಂ ತಾಱುತಟ್ಟಪ್ಪಿನಂ ಮಾಡಿ (ದಶಕು. ೫–೪೪ ಪ) ; ನಂದಿ ನಾಥನ ಹತ್ತೆಸಾರ್ದಿರೆ ಮುಂದೆಯಾತಂ ತನ್ನ ಮನದೊಳಗೊಂದಿದೆಮ್ಮಂ ಕಂಡು ಸಂಭ್ರಮವೆತ್ತಿ . . . ದಂಡಪ್ರಣಾಮವನಿಕ್ಕಿ ವಂದಿಸುತ (ಬಸಪು. ೨–೨೧) ; ವಿಪ್ರರೆಲ್ಲರಱಸುತ್ತಾ ಮಹಾಂತನೆನಿಸುವ ಸಿದ್ಧಲಿಂಗೇಶನಿರ್ಪ ಮರನಂ ಕಂಡು ಹತ್ತೆಸಾರ್ದು . . . ಎಱಗಲು (ಸಿದ್ಧೇಪು. ೪–೪೦). **ಹತ್ತೆಸಾರು** : ಹತ್ತೆಸಾರಿದ ಮೃಗವ ತಾನೆಚ್ಚದೆ ನಾರಿ ಹಱಿದು ಬಿಲ್ಲು ಮುಱಿದು ಹುಲ್ಲೆ ಸತ್ತಿತ್ತು (ಅವಚಂ. ೧೪೫–೬೬೨) ; ಎತ್ತಲೀಯದೆ ತಲೆ ಕೈಗಳ ಬಿಲ್ಲವರೊತ್ತೊತ್ತೆಯಿಂದಾರ್ದೆಸುತ ಹತ್ತೆ[ಸಾಂಗಾಂ.ತ್ತ, ತ್ತಿ] ಸಾರಿದರು ಹತ್ತಿದರು ಕೋಟೆಯನು (ಕುರಾಸಾಂ. ೧೦–೩೩) ; ಸುತ್ತ ನೋಡುವಳೊಮ್ಮೆ ನೂಪುರವಲುಗದಂತೆ ಹತ್ತೆ ಸಾರುವಳೊಮ್ಮೆ (ಜೈಮಿಭಾ. ೩೦–೨೩). [ಪತ್ತೆ$_1$+ಸಾರ್]

ಪತ್ತೇಮಾರಿ 'ಫತ್ತೆಮಾರಿ' ನೋ.

ಪತ್ತೊಂದಿ (ನಾ). ಹತ್ತರಲ್ಲಿ ಒಂದು ಭಾಗ ; ಹತ್ತನೆಯ ಒಂದು ಭಾಗ ; ದಶಮಾಂಶ : ಭಟ್ಟರ್ಗ್ಗೀ ಗಟ್ಟಿ ಒಡ್ಡಲಿ ಆ ಪತ್ತೊನ್ದಿ ಪಿಟ್ಟಾಲ್ (ಮೈಆರಿ. ೧೯೩೬, ೧೬–೧೬ ; ಸು. 450) ; ಅವಱೊಳಗಯ್ಗಣ್ಡುಗಮ್ಮಣ್ಣುಮ್ಪತ್ತೊನ್ದಿಯನಿಕ್ಕಿ ಉಣ್ಬೊ ಉಟಿದ ಮೂವತ್ತುಗಳೊಳಮ್ಪುದುವಿನೊಳೆ ಪತ್ತೊನ್ದಿಯನಿಕ್ಕಿ ಊರ್ಗ್ಗೆ ಅಳವಿಯನಿಕ್ಕಿ ಉಣ್ಬೊ (ಎಕ. III, ಮಂಡ್ಯ. ೧೪–೭ ; 907) ; ಕಿಱುಪೆನ್ನಿರ್ವ್ವರ್ಕ್ಕಮ್ಪುನ್ಪುಲಮೆಲ್ಲ ಪತ್ತೊನ್ದಿ ವಿ× (ಎಕ. XIV, ತಿರುಮ. ೨೫೨–೫ ; ?) ; ಪತ್ತೊನ್ದಿ – ಹತ್ತರಲ್ಲೊಂದು ಭಾಗವೆಂಬ ಭಿನ್ನಾಂಶವನ್ನು ಈ ಪದವು ತೋರಿಸುತ್ತದೆ (ಸಂಭಾನೆ. ೨೦೬). 'ಅಯ್ದೊಂದಿ', 'ದಶವಂಧ' ಪರಾ. [ಪತ್ತು$_3$+ಒಂದು$_3$+–ಇ$_3$]

ಪತ್ತ್ಯಂಗ (ನಾ). ಒಂದು ಆನೆ, ಒಂದು ರಥ, ಮೂರು ಕುದುರೆಗಳು ಹಾಗೂ ಐದು ಕಾಲಾಳುಗಳಿಂದ ಕೂಡಿದ ಸೈನ್ಯದ ಒಂದು ಒಳ ವಿಭಾಗ : ಏಕೇಭ ಎಂದರೆ ಆನೆ ೧ ಏಕರಥ ಎಂದರೆ ರಥ ೧ ತ್ರ್ಯಶ್ಯ ಯೆಂದರೆ ಕುದಿರೆ ೩ (ಮೂಱು) ಪಂಚಪದಾತಿಗಾ ಎಂದರೆ ಕಾಲಾಳು ೫ ಯಿವು ನಾಲ್ಕುಬಗೆಯ ಚತುರಂಗಬಲವೂ ಒಂದು ಪತ್ತ್ಯಂಗವೆನಿಸುವುದು (ವ್ಯವಹಾ. ಅನುಬಂಧ ೧. ೯–೨೬). [ಪತ್ತಿ$_3$+ಅಂಗ$_2$]

ಪತ್ಥಳೆ$_1$ 'ಪತ್ತಳೆ$_1$' ನೋ.

ಪತ್ಥಳೆ$_2$ 'ಪತ್ತಳೆ$_2$' ನೋ.

ಪತ್ಥಳೆಕರಣ 'ಪತ್ತಳೆಕರಣ' ನೋ.

ಪತ್ನಿ (ನಾ). ಹೆಂಡತಿ ; ಮಡದಿ ; ಸಹಧರ್ಮಿಣಿ : "ಸಹಚರಿ ಭಾರ್ಯೆ ಕುಟುಂಬಿನಿ ಸಹಧರ್ಮಿಣಿ ಪತ್ನಿ . . . ಸಜ್ಜನಕ್ಕೆ ಪೆಸರಿಂತಿನಿಸುಂ" (ಪಸ್ತುಕೋ. ೫೨–೩) ; ಪ್ರಿಯ ಕೇಳುತ್ಸವವಾರ್ತೆಯಂ ತನಯನಂ ಪತ್ತಳ್ ಗಣಂ ನಿನ್ನ ಪತ್ನಿ ಯತೋದಾವಧು (ಜಗವಿ. ೩–೨೩) ; ಜಾರತ್ವ ಮಾಡೊ ಪತ್ನಿಯ ಕೂಡಿ ಅಳಬಾರದು (ಪುರಂದ. ೨–೫೮–೨). [ಸಂ. ಪತ್ನೀ]

ಪತ್ನಿಕುಲ (ನಾ). ಹೆಂಡತಿಯ ಕುಲ,—ವಂಶ : ಆ ಪತ್ನಿಕುಲ ಸಾವಿರವಾಗಲು ಗೋಪಾಲಬುಟ್ಟ ಹಿಡಿಸಿದಳಯ್ಯ (ಪುರಂದ. ೧–೯೫–೨). [ಪತ್ನಿ+ಕುಲ]

ಪತ್ನೀತ್ವ (ನಾ). ಹೆಂಡತಿಯಾಗಿರುವಿಕೆ : ಒಮ್ಮೆ ತಾಯಿಯಾದವಳು ಎಂದೆಂದಿಗೂ ತಾಯಿಯೇ. ಅವಳು ಪುನಃ ಕನ್ಯೆಯಂತೆ ಪತ್ನೀತ್ವವನ್ನು ಪ್ರಾರಂಭಿಸುವುದು ಹೇಗೆ ? (ವಂಶವೃ. ೨೫೮). [ಸಂ.]

ಪತ್ನೀಭಾಗ (ನಾ). ಹೆಂಡತಿಗೆ ಸೇರಬೇಕಾದ ಪಾಲು,—ಅಂಶ : ನೀವು ಊಟ ಮಾಡಿ, ಪತ್ನೀಭಾಗ ಅಂತ ನೀವು ಬಿಟ್ಟದ್ದು ನನಗೆ (ದೂರಸ. ೩೨೩). [ಸಂ.]

ಪತ್ನೀಶಾಲೆ (ನಾ). ರಾಣಿವಾಸ ; ಅಂತಃಪುರ : ಮಯನ ಮತದಲಿ ವಿಶ್ವಕರ್ಮನ ನಯವಿವೇಕದಲಿ . . . ಪತ್ನೀಶಾಲೆ ಜನವೇದಿಯ . . . ಬಹಿರ್ವೇದಿಗಳನಳವಡಿಸಿದರು ಸಹಿಲದಲಿ (ಕುಸ್ಯಾಸ. ೬-೨೪).

[ಸಂ. ಪತ್ನೀಶಾಲಾ]

ಪತ್ಯಂಗೆಜಿ (ನಾ). ಒಂದು ಸ್ಥಳದ ಹೆಸರು : ಪತ್ಯಂಗೆಜಿಯೊಡೆಯ ಪಶ್ಚಗೋತ್ರದ ಕಣ್ಣಮ್ಮಯ್ಯನ ಮಗ ನಿರುಗಮಯ್ಯನುಂ (ಎಕ. X, ಕೋಲಾರ. ೫೭-೬ ; ೩೭೫). [ಇದು 'ಪದ್ಯಂಗೆಜಿ' ಎಂದಿರಬಹುದು. [?+ಕೆಜಿ]

ಪತ್ಯ (ನಾ). ೧. ಯೋಗ್ಯವಾದುದು; ಉಚಿತವಾದುದು : ಅಂತಾ ವಿಬುಧವೈರಿ ವಾನರರಿಗೆನಿತಾದರುಂ ಶಾಪನಿಸದುತಹಿತಂ ನುಡಿ ಪತ್ಯಮೆನ್ನಿ ಸದು(ಪಂಕಾರಾ. ೬-೧೬-೪). ೨. ಹಿತವಾದುದು; ಪ್ರಿಯವಾದುದು: ದೂಷಣ ಪತ್ಯವಾಗಿ ಮನದಾಶ್ರಯಕ್ಕೆ ತಂದಾತ ರೇಕಣ್ಣಪ್ರಿಯ ನಾಗಿ ನಾಥಾ ಬನವಣ್ಣನಿಂದ ಬದುಕಿದೆ (ಸರ್ವಸ. ೪೫-೨೬೯). [<ಸಂ. ಪಥ್ಯ]

ಪತ್ರ(ನಾ).೧. ಎಲೆ; ಪರ್ಣ:"ಬರ್ಹಂ . . . ಪತ್ರಂ, ಪಲಾಶಂ, ಛದನಂ, ಛದಃ —ಈ ೭ ಮರದ ಎಲೆ" (ಹಲಾಯು. ೩೧-೩೧); ಲಳಿತವಿಚಿತ್ರಪತ್ರಫಲ ಪುಷ್ಪಯುತಾಟವಿ ಸೊರ್ಕಿದಾನೆಯುಂ ಬೆಳೆವುದು (ಪಂಪಭಾ. ೧-೫೪); ವಿದಿತ ವಿಸ್ತೃತ ಸಾರತರಾಗ್ರಹಾರದಿಂ ನಾಗರಖಣ್ಡ ಪತ್ರಪರಿವೇಷ್ಟನದಿಂ ಜನನೇತ್ರಪುತ್ರಿಕಾರಾಗಮನಿತ್ತು (ಎಕ. VIII, ಸೊರಬ. ೨೮೬-೮ ; 1169), ನಯಮುಂ ತೋರ್ಕೆಯುಂವಿರ್ಪುನೋಡಿದ ನಿದಾಘಾಕ್ರಾಂತ ಭೂಜಾಳಿ ಶೌರಿಯ ಸಂಕಲ್ಪದೆ ಪತ್ರಪುಷ್ಪಫಲಭಾರಾಕ್ರಾಂತಮಾಗಿರ್ಪು ವೊರ್ಮೆಯೆ ವೃಂದಾವನಭೂಮಿಯೊಳ್ (ಜಗವಿ. ೩-೬೭). ೨. ದಳ; ಎನಳು ; ಪಕಳೆ : 'ಶತಪತ್ರ' ಪರಾ. ೩. ಬೆಲ್ಲವೆತ್ತದ ಎಲೆ ; ಪತ್ರೆ : ಪ'ದ'(ರ)ವ ಪತ್ರವೆಂದೆಯಲ್ಲಾ ಪತ್ರಕ್ಕೆ ಗಣನಾಥನ ತಂದೆ ಯಲ್ಲಾ (ಸರ್ವಸ. ೩೦-೪೧). ೪. ಎಲೆಯ ಒಂದು ಭಾಗ ; ಎಲೆಯ ಹೊರತುದಿ,—ಅಂಚು : ಪತ್ರ: ಇದರ ಬಣ್ಣ ಹಸಿರು. ಇದು ಅಗಲವಾಗಿರುವ ಎಲೆಯ ಭಾಗ (ಸಸ್ಯಶಾ. ೩೪). ೫. ತಾಳೆ ಮರದ ಗರಿ ; ಓಲೆಗರಿ. ೬. ಒಂದು ಬಗೆಯ ಸಸ್ಯ ಮತ್ತು ಅದರ ಎಲೆ : "ಬಾಪ್ಪಕ – ಅಂಬಟಿ, ಇಂಗು, ಪತ್ರ, ಕಂಬರಾಜಗೀರೆ" (ಓಷಧಿ. ೧೦೮). ೭. ಲವಂಗ: "ತ್ವಕ್, ಪತ್ರಂ . . . ವರಾಂಗಕಂ — ೬ ಲವಂಗ" (ಸಿದ್ಧಾಂತಿ. ೧೪೬). ೮. ಬರೆದ ಕಾಗದ; ಓಲೆ ; ಲೇಖ್ಯ : "ಓಲೆ ಪತ್ರಮದು ಲೇಖ್ಯಮಳ್ಳು" (ಸುಂಗರಾ. ೧೦೫-೧೫೫) ; ಪತ್ರಮನಿದನವನೀಪತಿ ಸೂತ್ರಿಸಿದಪೊಲುತ್ತಮಾಂಗದೊಳ್ ತಾಳ್ದಿ (ಪಾರ್ಶ್ವಪು. ೨-೬೮) ; ಪತ್ರ ಬರೆದು ಹಾಕಿ ಎಂದಾಗ ಮಾಸ್ತರರಿಗೆ ಎದೆ ತಿವಿದಂತಾಯ್ತು (ಕಾವೇರಿ. ೧೨). ೯. ಪುಸ್ತಕದ ಹಾಳೆ ; ಪಾನು. ೧೦. ದಾಖಲೆ ; ದಸ್ತಾವೇಜು : ಚತ್ರಗುಪ್ತರ ಕೈಯ ಪತ್ರವ ನಿಲಿಸಿತ್ತು ಗುಹೇಶ್ವರನೆಂಬ ಲಿಂಗೈಕ್ಯದ ನಿಲವು (ಅವಚಂ. ೬೬-೨೮೯) ; ಇನ್ನು ಪರ್ಗಾಳಪ್ಪೆನುಂಟುಂಟು ತಪ್ಪುವುದೆ ಇನ್ನೇನಿನೊ ಇವರ ಪತ್ರಂ ಗೆಲ್ಲ ದಿರ್ದಪುದೆ ನೋಡುವೆಂ (ಸಂಬರ. ೭-೬) ; ಅರಸಪ್ಪೊಡೆಯರ ಹೆಸರ ಅಡವು ಮೈಸಾಲದ ಪತ್ರಗಳು ನಮ್ಮ ದಾನವಾಸದ ಸೀಮೆಯು ನಾಡವರ ಹೆಸರ ಪತ್ರಗಳೂ ಸಿಕ್ಕಿ ಇರಲಾಗಿ (ಎಕ. VI, ಕೊಪ್ಪ. ೫-೯ ; 1569) ; ಎಲ್ಲರೂ ಗೋಗರೆದು ಒಂದಕ್ಕೆರಡರಂತೆ ಮತ್ತೆ ಬೇರೆ ಬೇರೆ ಪತ್ರಗಳನ್ನು ಬರೆದು ಕೊಟ್ಟು . . . ನಾಯಕನ ಮನೆಯ ಸೆರೆಯಿಂದ ಬಿಡುಗಡೆಯಾದರು (ಹೇಮಕೂ. ೩೪). ೧೧. ವರ್ತಮಾನ ಪತ್ರಿಕೆ : 'ಪತ್ರಕರ್ತ' ಪರಾ. ೧೨. ಲೋಹದ ಫಲಕ ; ತಗಡು. ೧೩. ಹಕ್ಕಿ ; ಪಕ್ಷಿ. ೧೪. ಹಕ್ಕಿಯ ಗರಿ,—ರೆಕ್ಕೆ : "ತನೂರುಹಂ, ಗರುತ್, ಪತ್ರಂ . . . ಪಕ್ಷಃ – ಈ ೯ ಎಜ(ಂ)ಕೆ" (ಹಲಾಯು. ೪೦-೪೬) ; 'ಪತ್ರಿ' ಪರಾ. ೧೫. ಬಾಣದ ಗರಿ ; ಪುಂಖ. ೧೬. ಕುದುರೆ, ಒಂಟೆ, ರಥ, ಗಾಡಿ ಮುಂತಾದ ವಾಹನ : "ಪತ್ರಂ ವಾಹನ ಹೇತ ಪತತ್ರಂ" (ಸಸ್ತ್ರಕೋ. ೧೩೩-೯೦) ; ಪತ್ರಂ ಭುಜಂಗಸಮಿತಿ ಕಳತ್ರಂ ದಳ್ಳುರಿ ವಿಭೂಷಣಾವಳಿ ಭೂಭೃತ್ಪುತ್ರಿ ಗವಾಧಿಪನಜಿನಂ ನೇತ್ರಂ ನಿಮಿಷನ ಮೆನಿಪ್ಪ ನೊಸೆಗೆಮಗಭವಂ (ಕಾವ್ಯಾಪ. ೪೫೮). ೧೭. ನುತಪುಂಡರೀಕ ವಿಲಸಿತಮಾಗಿ ಕೊಳನಲ್ಲಮತುಳಪತ್ರವಿರಾಜಮಾಗಿ ಮುರನಲ್ಲ . . . ಎನಿಸಿ ಪಡೆ ನಡೆಗೊಂಡುದು (ಚಿಬಪು. ೨೬-೯). ೧೮. ರಥಕ್ಕೆ ಹೂಡುವ ಕುದುರೆ : "ವಾಹನಂ, ಧೋರಣಂ, ಯುಗ್ಯಂ, ಯಾನಂ, ಪತ್ರಂ – ಈ ೫ ರಥವ ಹೂಡುವ ಕುದಿರೆ" (ಹಲಾಯು. ೩೪-೩೯). ೧೯. ಕತ್ತಿ ; ಖಡ್ಗ : "ಅಸಿಪುತ್ರಿಕಾ, ಅಸಿಧೇನುಃ, ಕ್ಷುರಿಕಾ, ಪತ್ರಂ, ಶಸ್ತ್ರಿಕಾ – ಈ ೫ ಸುರಿಗೆ" (ಹಲಾಯು. ೩೪-೩೧೯). ೨೯. ಕತ್ತಿಯ ಅಲಗು ; ಧಾರೆ. ೨೦. ಗರಗಸ : "ಶಣಃ–ಪತ್ರಂ" (ಕಾಶಕೃ. ೩೪). ೨೧. ಹಗೆ ; ಶತ್ರು. ೨೨. ಅಗ್ನಿ. ೨೩. ಪರ್ವತ ; ಗಿರಿ : "ಯೂನ ರಿಪು ಖಡ್ಗ ಪರ್ಣ ಕೃಶಾನು ಗಿರಿಯೂಜು ಪತ್ರಕಬ್ದಂ" (ನಾನಾನಾಕಂ. ೨೦). ೨೪. = ಪತ್ರಭಂಗ: 'ಮಕರಿಕಾಪತ್ರ' ಪರಾ.

ಪತ್ರದೊಡೆ = ಪತ್ರೊಡೆ : ಮೊಸರೊಡೆ ಪತ್ರದೊಡೆ . . . ತಾಳ ಪಾಕವಂ ಸತಿಯರಜುವಂತೊರೆವೆನು (ಸೂಪಶಾ. ೬ ಸೂಚನೆ). ಪತ್ರ ದ್ವಾರದಿಂದ = ಕಾಗದದ ಮೂಲಕವಾಗಿ,—ಮುಖಾಂತರವಾಗಿ : ನಮ್ಮ ಅಸಾಮಿಯವರಿಗೆ ಏನಾದರೂ ಶಂಕೆಯು ಬಂದಿದ್ದಾದರೆ ನಮಗೆ ಪತ್ರದ್ವಾರದಿಂದ ಕೇಳಬೇಕು (ಮುಂಬಸ್ಯ. ೨೮೨). [ಸಂ.]

ಪತ್ರಕ (ನಾ). ೧. ಎಲೆ ; ಪರ್ಣ : "ಪರ್ಣಂ–ಪತ್ರಕ" (ಓಷಧಿ. ೯೦). ೨. ವರ್ಣಲೇಪನದ ಆರು ವಿಧಗಳಲ್ಲಿ ಒಂದು : ಅಖಿಲಕಂ ಪತ್ರಕಂ ಬಿಂದುಕಂ ಧೂಮ್ರಾವರ್ತಕಮುದ್ವರ್ತನಂ ಚಿತ್ರಪ್ರವರ್ತಮೆಂದಾಜುಂ ತೆಜಿದಕ್ಕೆಯುಮುಂ . . . ಪರಿಭಾವಿಸಿ ನೋಡಿ (ಮಲ್ಲಿಪು. ೫-೪೨) ; ಪುಲಕಂ ಪತ್ರಕಂ ಬಿಂದುಕಂ ಧೂಮ್ರಾವರ್ತಂ ಉದ್ವರ್ತನಂ ಚಿತ್ರವರ್ತ ಮೆಂಬಾಯುಮಷ್ಟಗಳೊಳಂ . . . ಅಪೂರ್ವಭಿತ್ತಿಯಂ ತಳೆದು(ಚಂಪ್ರಪು. ೧೫-೬೯ ಪ). ೩. ಒಂದು ಬಗೆಯ ಔಷಧಪದಾರ್ಥ ; ಚಾಳೀಸ ಪತ್ರೆ : "ಪತ್ರಕ, ಪತ್ರಕಾ–ಈ ಯೆರಡುಂ ತಾಳೀಸಪತ್ರೆ" (ಓಷಧಿ.೯೦) ; ಭದ್ರಮುಸ್ತೆ . . . ಪತ್ರಕ, ಕುಂಬಳದ ಬೀಜ, ಇವ್ಯ ಔಷಧಗಳನ್ನು ಸರಿಯಾಗಿ ಕೂಡಿ ಚೂರ್ಣವ ಮಾಡಿ ಗ ೩ ತೂಕವನ್ನು ಜೇನುತುಪ್ಪದಲ್ಲಿ ಕಲಸಿ ಪುಚ್ಚೆ ಗೆಯಲ್ಲಿ ಕದಡಿ ಕೊಡುವುದು(ವಿವೈವಿ. ೪೪). ೪. = ಪತ್ರ ೧೦: "ಕರಾರು, ಪತ್ರಕ" (Bond. ಶಾಂನಿ. ೯). ೫. ಗುರುತಿನ ಚೀಟಿ; ಪಟ್ಟಿಕೆ ; ಕಾರ್ಡ್ : ಗ್ರಂಥಗಳ ಜನಾದರಣೀಯತೆಯನ್ನು ಸೂಚೀ ಕಾರನು ಆರಿತು ಆ ಹೆಸರಿನಲ್ಲಿ ಪತ್ರಕಗಳನ್ನು ಬರೆದರೆ ಸೂಚಿಯು ಉಪ ಯೋಗ ಹೆಚ್ಚು ಸಾರ್ಥಕವಾಗುತ್ತದೆ (ಗ್ರಂಥಾಲ. ೩೪). [ಸಂ.]

ಪತ್ರಕರ್ತ (ನಾ). ಪತ್ರಿಕೆಯ ಉದ್ಯಮದಲ್ಲಿರುವವನು : ಫ್ರಾನ್ಸಿನ ಪತ್ರಕರ್ತನೊಬ್ಬನು ಪ್ರಥಮ ಬಾರಿಗೆ ಇಂಥ ಸ್ಪರ್ಧೆಯನ್ನು ತೊಡಗಿದನು (ಬಾಲಪ್ರ. I, ೪೬೦). [ಪತ್ರ+ಕರ್ತ]

ಪತ್ರಗುಚ್ಛ (ನಾ). ಎಲೆಗಳ ಗೊಂಚಲು : ಸಾಲುಸಾಲಾಗಿ ನಿಂತಿದ್ದ ತಾಲವೃಕ್ಷಗಳು . . . ತುದಿಯಲ್ಲಿ ಕುಚ್ಚಿನಂತೆ ನಿಬಿಡವಾದ ಪತ್ರಗುಚ್ಛ (ಹಸುಹೊ. ೩೩೪). [ಪತ್ರ+ಗುಚ್ಛ]

ಪತ್ರಚ್ಛೆದ (ನಾ). [ಸಂಗೀತ] ನೂರೆಂಟು ತಾಳಗಳಲ್ಲಿ ಒಂದು : ಅವುಗಳೊಳು ಚಂಚತ್ಪುಟ ಚಾಚತ್ಪುಟ ಷಡ್ಪೀತ ಪತ್ರಚ್ಛೆದ . . .

ಜಯಾಳವೆಂಬಿವು ಮೊದಲಾದ ನೂಱೆಂಟು ತಾಳಂಗಳುಂ (ವಿನೇ.೨೩೮).
[?]

ಪತ್ರಚ್ಛೇದ (ನಾ). ಎಲೆಗಳಲ್ಲಿ ಚಿತ್ರವನ್ನು ಬಿಡಿಸುವುದು : ಚಿತ್ರಕರ್ಮ ಪತ್ರಚ್ಛೇದ ಗ್ರಹಗಣಿತ ರತ್ನಪರೀಕ್ಷೆಗಳೊಳಂ . . . ಮುದ್ಗರ ಗದಾದಿ ವಿವಿಧಾಯುಧಂಗಳೊಳಮತಿಪ್ರವೀಣ[ನು]ಮಾರೂಢಸರ್ವಜ್ಞ ಮಹೇಂದ್ರಜಾಣ (?) [ನು]ಮಾಗಿ (ಪಂಪಭಾ. ೨-೩೪ ಪ). "೬೪ ಕಲೆಗಳಲ್ಲಿ ಒಂದು, ಎಲೆಗಳ ಆಕಾರದಲ್ಲಿ ಕತ್ತರಿಸುವುದು ಇತ್ಯಾದಿ" (ಪಂಪದೀ. ೬೯); ಅಕ್ಷರಗಣಿತಗಾಂಧರ್ವಚಿತ್ರಕರ್ಮ ಪತ್ರಚ್ಛೇದಾದಿ ಸಪ್ತತಿಕಳೆಗಳೊಳಂ . . . ಪರಿಣಿತನಾಗಿ (ಧರ್ಮಾಮೃ. ೮-೧೦೭). 'ಚೌಷಷ್ಟಿಕಲೆ' ಪರಾ. [ಪತ್ರ + ಛೇದ]

ಪತ್ರಚ್ಛೇದ್ಯ (ನಾ). = ಪತ್ರಚ್ಛೇದ : ಹಸ್ತಕೌಶಲಕಲಿತಚಿತ್ರಕಳಾಪ ಪತ್ರಚ್ಛೇದ್ಯಾದಿ ಸಮನ್ವಿತಮಪ್ಪ ಶಿಲ್ಪಮುಮಂ ಪಡೆದು (ಆದಿಪು. ೮-೬೪ ಪ). [ಪತ್ರ+ಛೇದ್ಯ]

ಪತ್ರಡೆ 'ಪತ್ರೊಡೆ' ನೋ.

ಪತ್ರನಾಡಿಕೆ (ನಾ). ಎಲೆಯಲ್ಲಿರುವ ನಾರು,—ಎಳೆ.
[ಸಂ. ಪತ್ರನಾಡಿಕಾ]

ಪತ್ರಪಡಿ (ನಾ). ಕಾಗದದ ನಕಲು,—ಪ್ರತಿ; ಪತ್ರ : ಆಚಾರಿ ದೇವಣ್ಣನ ಕಯ್ಯಲು ದೇವರು ಧಾರೆಯನೆಱದು ಸುಖ ಬಾಳುವಂತಾಗಿ ಕೊಟ್ಟ ತಾಂಬ್ರಶಾಸನದ ಪತ್ರಪಡಿ (ಎಕ. XII, ಗುಬ್ಬಿ. ೯-೩೨ ; 1306).
[ಪತ್ರ + ಪಡಿ$_3$]

ಪತ್ರಪರಶು (ನಾ). ಅಕ್ಕಸಾಲಿಗನು ಉಪಯೋಗಿಸುವ ಒಂದು ಬಗೆಯ ನಯವಾದ ಅರ : "ವ್ರಶ್ಚನಃ, ಪತ್ರಪರಶುಃ—ಚೀರ್ಣದ ಹೆಸರು. ಅಗಸಾಲಿಗನ ಕೊರಮುಟ್ಟು" (ಸಿದ್ಧಾಂತಿ. ೩೧೬). [ಸಂ.]

ಪತ್ರಪಾಲಿ, ಪತ್ರಪಾಳಿ (ನಾ). ಬಾಣದ ಗರಿ. **ಪತ್ರಪಾಳಿ:** "ಪತ್ರಪಾಳೀ, ವಾಜಃ—ಈ ೨ ಗಱಿ" (ಹಲಾಯು. ೭೭-೩೧೪) ; "ಗಱಿ ಪತ್ರಪಾಳಿ ವಾಜಮೆನಿಕ್ಕು" (ಮಂಗರಾ. ೮೭-೩೪). [ಸಂ. ಪತ್ರಪಾಲೀ]

ಪತ್ರಪಾಳಿ 'ಪತ್ರಪಾಲಿ' ನೋ.

ಪತ್ರಪುಟಕೆ (ನಾ). ಎಲೆಗಳಿಂದ ಮಾಡಿದ ದೊನ್ನೆ ; ಎಲೆವಟ್ಟಲು : ವನಮಹತ್ತರಂ ವಿಚಿತ್ರಪುಷ್ಪಫಲಹಸ್ತಂ ಬಂದು . . . ವಿವಿಧ ಪತ್ರಪುಟಕಾನಿಹಿತಂಗಳಂ ತಂದು ಮುಂದಿಟಾಪಿ(ಚಂದ್ರಪ್ರ.೨-೭೫). [ಪತ್ರ+ಪುಟಕೆ]

ಪತ್ರಪುಟ್ಟಗೆ(ನಾ). = ಪತ್ರಪುಟಕೆ : ಬೀಸುವ ಕರಾಗ್ರದ ಪತ್ರ ಪುಟ್ಟಗೆಯ[ಪಶಾಂ. ಪುಟಕೆಗಳ]ಒಡಲ ಡಗೆಯಲಿ ತೋಱುತಭಿನವಮೃಡನೊಲು ವಾಲಗಕೆ ಶಿಷ್ಯರ ಗಡಣದಲಿ ನಡೆತಂದು ಕಂಡನು ಮುನಿಪನಳ್ಕುತನ (ಶಿಭಾಗ. ೧೦-೫೪-೪). [ಪತ್ರ + ಪುಟ್ಟಗೆ$_1$(<ಪುಟ್ಟಕೆ)]

ಪತ್ರಭಂಗ (ನಾ). ಕಸ್ತೂರಿ, ಕುಂಕುಮಕೇಸರಿ, ಚಂದನೆ ಮುಂತಾದ ದ್ರವ್ಯಗಳಿಂದ ಸ್ತ್ರೀಯರು ತಮ್ಮ ಮುಖ ಹಾಗೂ ದೇಹದ ಮೇಲೆ ಚಿತ್ರಗಳನ್ನು ಬರೆದು ಮಾಡಿಕೊಳ್ಳುವ ಅಲಂಕಾರ ; ಮಕರಿಕೆ : ಪಟ್ಟದಕುಂತಳೆ ಪತ್ರಭಂಗಪಲ್ಲವಿತ ಕಪೋಲಪತ್ರೆ . . . ನೃಪೇಂದ್ರಕಾಂತೆ ನವಕಲ್ಪಲತಾಕೃತಿಯಿಂದಮೊಪ್ಪಿದಳ್ (ಶಾಂತಿಪು. ೯-೨೦೦) ; ಹರಿನ್ಮಣಿಭಿತ್ತಿಭಾಗದೊಳ್ ಪುರವನಿತಾಜನಂ ಬರೆಯುತಿರ್ಪುದಭಂಗುರಪತ್ರಭಂಗಮಂ (ಪಂಚಾಮೃ. ೧-೧೧೭) ; ಚಿತ್ರಿಸಿದಳ್ ಸುದತಿಯ ಕಪೋಲದೊಳ್ ಸಮ್ಮದದಿಂ ಮೃಗಮದದ ಪತ್ರಭಂಗಮನೊರ್ವಳ್ (ಜಗವಿ. ೧೦-೧೨೨). [ಸಂ.]

ಪತ್ರಭಾಜನ (ನಾ). = ಪತ್ರಪುಟಕೆ : ಭಕ್ತ ಲಿಂಗಾರ್ಪಿತವ ಮಾಡಿದ ಪತ್ರಭಾಜನಮಂ ಶ್ವಾನ ಸೂಕರ ಗಾರ್ದಭ ಕುಕ್ಕುಟ ಮಾರ್ಜಾಲಂಗಳು ಮುಚ್ಚಿ[ಟ್ಟ]ದೊಡೆ ಅವಜ ಕೂಡೆ ಸಹಭೋಜನವ ಮಾಡಿದಂತೆ ಕಾಣಿರಣ್ಣಾ (ಚನ್ನವ. ೩೫-೨) ; ಭಿನ್ನವಳ್ಳತವ ತಂದೆಱೆದರು ಪತ್ರಭಾಜನ ತುಂಬಿ ಕಡೆಗೋಡಿವರಿಯೆ (ಮೋಹತ. ೩-೫೪). [ಪತ್ರ + ಭಾಜನ]

ಪತ್ರರಥ (ನಾ). ಗರಿಗಳ ಸಹಾಯದಿಂದ ಚಲಿಸುವುದು ; ಪಕ್ಷಿ : "ಪತತ್ . . . ಪತ್ರರಥಃ . . . ದ್ವಿಜಃ—ಈ ೨೬ ಪಕ್ಕಿ" (ಹಲಾಯು. ೪೦-೮೪). [ಪತ್ರ + ರಥ]

ಪತ್ರರೇಖೆ (ನಾ). = ಪತ್ರಭಂಗ : ಮೃಗಮದಪತ್ರರೇಖೆಗಳನೇಕೆಗೆ ತಾಳ್ದಿರ[ದಾದು]ವೀ ಕದಂಬುಗಳ್ (ಪಂಪಭಾ. ೪-೬೨). [ಪತ್ರ+ರೇಖೆ]

ಪತ್ರಲೇಖೆ (ನಾ). = ಪತ್ರಭಂಗ: "ಪತ್ರಾಂಗುಳಿ ಪತ್ರಲೇಖೆ ಚರ್ಚಾನುಲೇಪನಂ ಸ್ಥಾಸಕಂ ಪ್ರಬೋಧನಮಕ್ಕುಂ" (ಪಸ್ತುಕೋ. ೭೬-೯) ; ವದನಾಮೋದಕ್ಕೆಱಗುವ ಮದಭೃಂಗದ ಕರ್ಣಪೂರಕ್ಕೆರವದ ನೆಲಲ್ ಪುದಿದತ್ತು ಕಪೋಲದೊಳೆನೆ ಸುದತಿಗೆ ಮೃಗಮದದ ಪತ್ರಲೇಖೆಗಳೆಸೆಗುಂ (ಜಗವಿ. ೧೦-೧೨೩). [ಪತ್ರ + ಲೇಖೆ]

ಪತ್ರವತಿ (ನಾ). ಒಂದು ಬಗೆಯ ಸಸ್ಯ : "ಶಂಬೆ ಪತ್ರವತಿಯಕ್ಕು" (ಮಂಗರಾ. ೪೫-೪೮). [ಸಂ. ಪತ್ರವತೀ]

ಪತ್ರವಲ್ಲಿ (ನಾ). = ಪತ್ರಭಂಗ :"ತೋಳ್ ಮೊಲೆ (ಕೆನ್ನೆ) ಕೊರಳ್ಗಳಲ್ಲಿ ಅನುಲೇಪನದಿಂದಂ ಬರೆದ ರೇಖೆ ಪತ್ರವಲ್ಲೀ ಎಂಬುದು" (ಹಲಾಯು. ೮೯-೩೮೮). [ಸಂ. ಪತ್ರವಲ್ಲೀ]

ಪತ್ರವಾದ್ಯ (ನಾ). ಎಲೆಯಿಂದ ಮಾಡಿದ ವಾದ್ಯ ; ಪೀಪಿ : ಮಧುರಸ್ವನಪತ್ರವಾದ್ಯನಿರತರ್ ಮನೋಜ್ಞಗೋಪಾಲವೇಣುವಾದನ ಸುಭಗರ್ (ಜಗವಿ. ೩-೭೬). [ಪತ್ರ + ವಾದ್ಯ]

ಪತ್ರವಾಹಕ (ಗು). ೧. ಕಾಗದವನ್ನು ಒಯ್ಯುವ,—ಸಾಗಿಸುವ : ಈ ಪತ್ರವಾಹಕ ವ್ಯಕ್ತಿಯಿಂದ ಯಾವ ಕೆಲಸಗಳು ಆಗಿವೆಯೋ ಅವೆಲ್ಲಾ ನನ್ನ ಆಜ್ಞೆಯಿಂದಲೇ ಮತ್ತು ರಾಷ್ಟ್ರದ ಹಿತಕ್ಕಾಗಿಯೇ ಆಗಿವೆ (ಯೋಧಗು. ೧೩೨). (ನಾ). ೨. ಕಾಗದವನ್ನು ಒಯ್ಯುವವನು : ಮೊದಲು ಪತ್ರವಾಹಕ (Errand boy) ನಂತೆ ಕೆಲಸ ಮಾಡುತ್ತಾ ವಾರಕ್ಕೆ ಎರಡೂವರೆ ಷಿಲಿಂಗುಗಳಂತೆ ಸಂಪಾದಿಸತೊಡಗಿದನು (ವಿಜ್ಞಾಕ. ೭೭). [ಪತ್ರ + ವಾಹಕ]

ಪತ್ರವಾಹನ (ನಾ). ಪಕ್ಷಿಯನ್ನು ವಾಹನವನ್ನಾಗಿ ಉಳ್ಳವನು ; ವಿಷ್ಣು : ಧಾತ್ರಿಯಲ್ಲಱಯೆ ಶನಿತ್ಯಯೋದಶಿಯೊಳು. ಪತ್ರವಾಹನ ಪೋಪ ಭಾಳನೇತ್ರನೋಲಗಕೆಯ್ದೆ ಚಿತ್ರವ ತಿಳಿಯೈ (ಭೈರವೇ. ೫-೭೭).

ಪತ್ರವಾಹನನೇತ್ರ = ವಿಷ್ಣುವಿನ ಕಣ್ಣನ್ನು ಹೊಂದಿದವನು ; ಶಿವ : ಪತ್ರವಾಹನನೇತ್ರ ದಶಶತ ಪತ್ರಸಂಚಯ ಮಿತ್ರಮಂಡಲ . . . ಗುರುಸಿದ್ಧೇಶ ಮಾಂ ತ್ರಾಹಿ (ಬಸಪು. ೧೧-೫೯). **ಪತ್ರವಾಹನಪುತ್ರ** = ೧. ವಿಷ್ಣುವಿನ ಮಗ ; ಬ್ರಹ್ಮ. ೨. ಕಾಮ ; ಮನ್ಮಥ : ಪತ್ರವಾಹನಪುತ್ರವಿಗ್ರಹಗೋತ್ರ ಶತಕೋಟಿ ಪತ್ರವಾಹನ ಪುತ್ರಪುತ್ರ ಸ್ತೋತ್ರಪಾತ್ರ . . . ಮಾಂ ತ್ರಾಹಿ (ಬಸಪು. ೧೧-೫೬). **ಪತ್ರವಾಹನಪುತ್ರಪುತ್ರ** = ಬ್ರಹ್ಮನ ಮಗ; ನಾರದ: ಪತ್ರವಾಹನಪುತ್ರಪುತ್ರ . . . ಗುರುಸಿದ್ಧೇಶ ಮಾಂ ತ್ರಾಹಿ (ಬಸಪು. ೧೧-೫೬). [ಪತ್ರ + ವಾಹನ]

ಪತ್ರವ್ಯವಹಾರ (ನಾ). ಅಂಚೆಯ ಮೂಲಕ ನಡೆಯುವ ಕಾಗದಗಳ ವಿನಿಮಯ : ಇವನ ಕಾರ್ಯಕ್ಕೆ ಮೆಚ್ಚಿದ ಸರಕಾರವು ಇವನ ಪತ್ರವ್ಯವಹಾರಕ್ಕೆ ಅಂಚೆಯ ಕಟ್ಟನ್ನು ಕೂಡಾ ಹಾಕಲಿಲ್ಲ (ಪತ್ರಿಕಾ. ೧೪) ; ಪತ್ರವ್ಯವಹಾರದ ಮೂಲಕ ಶಿಕ್ಷಣ ಕೊಡುವ ಪದ್ಧತಿಯು ಈಗ ಜಾರಿಯಲ್ಲಿದೆ (ರೂಢಿ). [ಪತ್ರ + ವ್ಯವಹಾರ]

ಪತ್ರಸಾಸನ (ನಾ). ತಾಮ್ರಶಾಸನ ; ದಾಖಲೆ : ನಾಗಂಣ್ಣವೊಡೆಯರು ಆ ಪುರವರ್ಗದ ಭಕ್ತರಿಗೆ ಕೊಟ್ಟ ಪತ್ರಸಾಸನ (ಮೈಅರಿ. ೧೯೩೬, ೨೪-೩೯ ; 1359). [ಪತ್ರ + ಸಾಸನ]

ಪತ್ರಾಂಕುರ (ನಾ). = ಪತ್ರಭಂಗ : ಗುರುಕುಚತಟದೊಳು ಪತ್ರಾಂಕುರ ಮುಂ ಬರೆದಳನಂಗನ ಯಂತ್ರವ ಬರೆದಂತಿರೆ ಮತ್ತೊರ್ವಳು ನೀತೆಗೆ ಹಂ ಕುಲಯುವತಿ ಲಾವಣ್ಯವತಿ (ಕುಸುಂತಾ. ೪-೮). [ಪತ್ರ + ಅಂಕುರ]

ಪತ್ರಾಂಗ (ನಾ). ೧. ಒಂದು ಬಗೆಯ ಮರ; . ಸಪ್ಪಂಗ. ೨. ಕೆಂಪು ಶ್ರೀಗಂಧ ; ರಕ್ತಚಂದನ : "ತಿಲಪರ್ಣ, ಪತ್ರಾಂಗಂ, ರಂಜನಂ, ರಕ್ತಚಂದನಂ, ಕುಚಂದನಂ—ಈ ಕೆಂಪುಬಣ್ಣದ ಚಂದನವೃಕ್ಷದ ಪೆಸರುಗಳು" (ಸಿದ್ಧಾಂತಿ. ೨೦೪). ೩. ಭೂರ್ಜವೃಕ್ಷ. [ಸಂ.]

ಪತ್ರಾಂಗುಲಿ, ಪತ್ರಾಂಗುಳಿ (ನಾ). ಬೆರಳುಗಳಿಂದ ಹಣೆ, ಕೊರಳು ಮುಂತಾದುವುಗಳ ಮೇಲೆ ಸುಗಂಧದ್ರವ್ಯಗಳಿಂದ ಚಿತ್ರ ವನ್ನು ಬರೆಯುವುದು. **ಪತ್ರಾಂಗುಳಿ** : "ಪತ್ರಾಂಗುಳಿ ಪತ್ರಲೇಪೆ ಚರ್ಚಾನುಲೇಪನಂ ಸ್ವಾಸಕಂ ಪ್ರಬೋಧನಮಕ್ಕುಂ" (ಪಸ್ತು.ಕೋ. ೬೬-೯). [ಸಂ.]

ಪತ್ರಾಂಗುಳಿ 'ಪತ್ರಾಂಗುಲಿ' ನೋ.

ಪತ್ರಾಂಜನ (ನಾ). ಕಾಗದ ಬರೆಯಲು ಉಪಯೋಗಿಸುವ ಮಸಿ; ಶಾಯಿ. [ಪತ್ರ + ಅಂಜನ]

ಪತ್ರಾಗಾರ (ನಾ). ಸಾರ್ವಜನಿಕವಾದ ಕಾಗದಪತ್ರಗಳನ್ನು ಇಟ್ಟಿರುವ ಸ್ಥಳ; ದಫ್ತರಖಾನೆ : ಇವು ಟಿಬೆಟ್ ಮತ್ತು ಚೀನಾ ದೇಶಗಳ ಪತ್ರಾಗಾರ (archives) ಗಳಲ್ಲಿದ್ದ ಟಿಬೆಟಿನ ಭಾಷೆಗೋ ಅಥವಾ ಚೈನೀಭಾಷೆಗೋ ಅನುವಾದಿತವಾಗಿವೆ (ಭಾರಪ. ೩೮). [ಪತ್ರ + ಆಗಾರ]

ಪತ್ರಾಢ್ಯ (ನಾ). ೧. ವಾಹನಸಂಪತ್ತಿನಿಂದ ಕೂಡಿದವನು. ೨. ಖಡ್ಗಪ್ರಯೋಗದಲ್ಲಿ ನಿಪುಣನಾದವನು : ಮದನಕಳಾಗ್ರಂ ಪತ್ರಾಢ್ಯಂ ಕಂಜನಾಮಿ ಭುವನವರೇಣ್ಯಂ (ಹವಿಸ್ಸಾ.ರ. ೮-೪). [ಪತ್ರ + ಆಢ್ಯ]

ಪತ್ರಾನ್ವಿತ (ನಾ). ೧. ಎಲೆಗಳಿಂದ ಕೂಡಿರುವುದು. ೨. ಗರಿಗಳಿಂದ ಕೂಡಿರುವುದು. ೧, ೨ : ಹರಿಯ ಪರಿಯಂಕಮೆಂಬಂತೆ ಪತ್ರಾನ್ವಿತದಿ ನೆರೆವುದಯಾಚಲದಂತೆಯರುಣಫಲಭಾರದಿಂ . . . ಪರಮಯೋಗೀಶ್ವರಂ ತತಿಕಾಂತಿಯಿಂದೊಪ್ಪವೆತ್ತೊಂದು ವಟವೃಕ್ಷವು (ನವಮೋ. ೮-೩೮). ೩. ವಾಹನದಿಂದ ಕೂಡಿರುವುದು : 'ಪರಮಪತ್ರಾನ್ವಿತ' ಪರಾ. [ಪತ್ರ + ಅನ್ವಿತ]

ಪತ್ರಾಲಂಬನ (ನಾ). ವಾದಕ್ಕೆ ಸಿದ್ಧವೆಂಬ ಘೋಷಣಪತ್ರವನ್ನು ಹಿಡಿದುಕೊಂಡಿರುವಿಕೆ ; ವಿವಾದಕ್ಕೆ ಆಹ್ವಾನ ನೀಡುವಿಕೆ; ವಾದಕ್ಕೆ ಕರೆನೀಡುವುದು : ವಿಜಯಜಿಷ್ಣುಸೆಂಬನೊರ್ವ ಪಾದಿ . . . ಅರಮನೆಯ ಬಾಗಿಲೊಳ್ ನಿಂದು ಪತ್ರಾಲಂಬನಂ ಮಾಡಿರ್ದುಂ (ಸುಕುಮಾ. ೨-೧೪ ಪ). [ಪತ್ರ + ಆಲಂಬನ]

ಪತ್ರಾಲಿ (ನಾ). ಎಲೆಗಳ ಸಮೂಹ,—ಗುಂಪು : ಸರಸೀಮಾಲೆಯೊಳೆಸೆದುವು ನವಪತ್ರಾಲಿಯ ತೆಱದಿಂದೆ ತೋರ್ಪ ಕಮಲದ ಮುಗುಳ್ಗಳ್ (ಜಗವಿ. ೪-೬೬). [ಪತ್ರ + ಆಲಿ೩]

ಪತ್ರಾವಳಿ (ನಾ). ೧. ಎಲೆಗಳ ಸಮೂಹ,—ಗುಂಪು ; ಸಾಸುರಾಗ ಪೊಳಪಟ್ಟ ಪಸುರುಡಿಗೆಯನೆ ಧರಾಮಾನಿನಿಯ ಮೊಗದಾವರೆಯ ಮುಸುಕಿಕೊಂಡಿಹ ನವೀನಪತ್ರಾವಳಿಗಳಿನೆ ನಗರಮುಂ ಬಳಸಿದುಪವನಂ ಗಳ್ಮೆಱೆವುವು (ಜೈಮಿಭಾ. ೩-೩೩) ; ಈ ಕೋಮಳೆ ಶಾಮಕ್ಷಿಪ್ಪೆ ಚಿತ್ತಕ್ಕಳಲನೊಲವುಮಂ ಪುಟ್ಟಿಪಳ್ ನೋಡೆ ಪತ್ರಾವಳಿ ಪೋಷಂ ಬೆತ್ತ ಜೈತ್ರಾಗಮುಪವನಪರಿಸ್ಪೃಷ್ಟವಾಸಂತಿಯಾವೋಲ್ (ಶಾಕುಂತ. ೩೫-೩೧). ೨. ಮುತ್ತುಗ, ಆಲ ಮುಂತಾದ ಬಿಡಿಎಲೆಗಳನ್ನು ಜೋಡಿಸಿ ಮಾಡಿದ ಊಟದೆಲೆ ; ಇಸ್ತ್ರಿಎಲೆ ; ಪತ್ರೋಳಿ : ಆಲದ ಎಲೆಗಳು ಹರವು ಇರುವುದರಿಂದ ಪತ್ರಾವಳಿಗೆ ಬರುತ್ತವೆ (ಮುಂಬಯಿ. ೩-೩೯) ; ಸಾಲುಸಾಲಾಗಿ ಪತ್ರಾವಳಿಗಳನ್ನು ಹಾಕಿದ್ದಾರೆ . . . ಕುಂಬಳಕಾಯಿಯ ಪಲ್ಲೆ ಬಡಿಸಿದೆ (ಹೊಸಕ್ತಿ. ೨೦೪). ೩. = ಪತ್ರಭಂಗ : ಸೌಂದರಿಯ ಕದಪುಗಳೊಳೊರ್ಮೆಳ್ ಸುರವಧು ಬರೆದಳ್ ವಿಚಿತ್ರಪತ್ರಾವಳಿಯಂ (ಪುಷ್ಪಪು. ೯-೭೮). [ಪತ್ರ + ಆವಳಿ೩ (= ಆವಲಿ)]

ಪತ್ರಾಶ್ರಯ (ನಾ). ಓಲೆ ಮೊದಲಾದ ಅಲಂಕಾರವಸ್ತುಗಳನ್ನಿಟ್ಟು ಕೊಳ್ಳುವ ಕವಿಯ ಮೆದುವಾದ ತಳಭಾಗ ; ಹಾಲೆ : "ಹಾಲೆ ಪತ್ರಾಶ್ರಯಂ ಲಂಬಿಕಾಖ್ಯಂ" (ಪುಂಗರಾ. ೯೪-೫). [ಪತ್ರ + ಆಶ್ರಯ]

ಪತ್ರಿ (ನಾ). ೧. ಗರಿಗಳನ್ನುಳ್ಳದು ; ಪಕ್ಷಿ : "ಪತತ್, ಪಪತಂಗಃ, ಪಪಗಃ, ಪತತ್ರೀ, ಪತ್ರೀ . . . ದ್ವಿಜಃ – ಈ ೨೬ ಹಕ್ಕಿ" (ಹಲಾಯು. ೪೦-೪೪) ; "ಶಕುನಿ ವಿಹಗಂ ವಿಹಂಗಂ ಪತ್ರಿ . . . ಶಕುಂತಿಯೆನೆ ಪಕ್ಷಿ" (ಪುಂಗರಾ. ೫೦-೧). ೨. ಎಲೆಗಳನ್ನುಳ್ಳದು ; ಮರ, ಗಿಡ ಮುಂತಾದುವು. ೩. ಗಿಡುಗ; ಡೇಗೆ : "ಶಶಾದನಃ, ಪತ್ರೀ, ಶ್ಯೇನ – ೩ ಗಿಡಗನ ಹಕ್ಕಿ" (ಸಿದ್ಧಾಂತಿ. ೧೫೭). ೪. ಬಾಣ ; ಕಣೆ ; ಅಂಬು : "ಕಂಕಪತ್ರಃ . . . ಪತ್ರೀ, ಖಗಃ, ಶೀಘ್ರಮುಖಃ, ರೋಷಃ– ಈ ೧೬ ಅಂಬು" (ಹಲಾಯು. ೬೭-೬೧೨) ; "ಚಿತ್ರಪುಂಖಂ . . . ಪತ್ರಿ . . . ಕಾಂಡಮೆಂದೆನಲ್ಕಂಬೆನಿಕ್ಕುಂ" (ಪುಂಗರಾ.೪೬-೩೪). ೫. ಒಂದು ಬಗೆಯ ಮರ ; ತಾಳೆ : "ತಾಳಧ್ವಜಧ್ವಮುಂ ಪತ್ರಿಯೆನೆ ತಾಳು" (ಪುಂಗರಾ. ೩೪-೯). ೬. ಬೆಟ್ಟ ; ಗಿರಿ. ೭. ಉಕ್ಕಿನ ಲೆಕ್ಕಣಿಕೆ ; ಕಂಠ : "ಪತ್ರಿ[ಪಾಠಾಂ. ಪ್ರತಿ] ನಾರಾಚಮೆನೆ ಕಂಠಂ" (ಪುಂಗರಾ. ೧೦೬-೧೫). ೮. ರಥ. ೯. ರಥಿಕ. [ಸಂ. ಪತ್ರಿನ್]

ಪತ್ರಿಕ (ನಾ). ಬರೆಯುವುದಕ್ಕಾಗಿ ಓಲೆಗಳನ್ನು ತಯಾರಿಸು ವವನು : "ಓಲೆಗಳ ಮಾಟ್ಪವಂ ಪತ್ರಿಕಂ" (ಪುಂಗರಾ. ೧೪೧-೨). [ಪತ್ರ + -ಇಕ]

ಪತ್ರಿಕಾಕರ್ತ (ನಾ). = ಪತ್ರಕರ್ತ : ಸುದ್ದಿಗಾರರು ಜಿಗುಳಿಯಂತಹ ಪ್ರಾಣಿಯೆಂದು ಸಾಮಾನ್ಯವಾಗಿ ಇಂಗ್ಲಿಷ್ ಪತ್ರಿಕಾಕರ್ತರು ಹೇಳುತ್ತಾರೆ (ಪತ್ರಿಕಾ. ೫೨). [ಸಂ.]

ಪತ್ರಿಕಾಗೋಷ್ಠಿ (ನಾ). ಪತ್ರಿಕೆಗಳ ಪ್ರತಿನಿಧಿಗಳನ್ನು ಕರೆಸಿ ನಡೆಸುವ ಸಭೆ : ಶ್ರೀಯುತರು ಪತ್ರಿಕಾಗೋಷ್ಠಿಯೊಂದರಲ್ಲಿ ತಮ್ಮ ನಿಲುವನ್ನು ಸಮರ್ಥಿಸಿಕೊಂಡರು (ರೂಢಿ). [ಸಂ.]

ಪತ್ರಿಕಾವೃತ್ತಿ (ನಾ). ವರ್ತಮಾನಪತ್ರಿಕೆಗಳ ಉದ್ದಿಮೆ,—ವೃತ್ತಿ : "ಪತ್ರಿಕೋದ್ಯೋಗ; ಪತ್ರಿಕಾವೃತ್ತಿ" (Journalism. ಪತ್ರಿನಿ. ೪೮). [ಸಂ.]

ಪತ್ರಿಕಾವ್ಯವಸಾಯ (ನಾ). = ಪತ್ರಿಕಾವೃತ್ತಿ : ಪತ್ರಿಕಾವ್ಯವ ಸಾಯಕ್ಕೂ ಮತ್ತು ವ್ಯವಸಾಯಿಗಳಿಗೂ ಇಂದಿನ ಹಾಗೆ ಒಂದು ನಿಶ್ಚಿತ ಸ್ಥಾನ ಬಂದುದು ೧೩೪೬ ರಲ್ಲಿ (ಪತ್ರಿಕಾ. ೯). [ಸಂ.]

ಪತ್ರಿಕಾವ್ಯವಸಾಯಿ (ನಾ). ವರ್ತಮಾನ ಪತ್ರಿಕೆಗಳ ವೃತ್ತಿಯಲ್ಲಿ ತೊಡಗಿರುವವನು : ಸಾಹಿತಿಗಳಾಗಲೀ ಪತ್ರಿಕಾವ್ಯವಸಾಯಿಗಳಾಗಲೀ ಒಬ್ಬರನ್ನೊಬ್ಬರು ಬಿಟ್ಟು ಸುತರಾಂ ಇರಲಾರರು (ಪತ್ರಿಕಾ. ೫೫). [ಸಂ. ಪತ್ರಿಕಾವ್ಯವಸಾಯಿನ್]

ಪತ್ರಿಕಾಸ್ವಾತಂತ್ರ್ಯ (ನಾ). ಪತ್ರಿಕಾವೃತ್ತಿಯಲ್ಲಿರುವವನಿಗೆ ತನ್ನ ಪತ್ರಿಕೆಯಲ್ಲಿ ಯಾವುದೇ ವಿಚಾರವನ್ನು ಕುರಿತು ಲೇಖನಗಳನ್ನು ಬರೆಯಲು ಇರುವ ಸ್ವಾತಂತ್ರ್ಯ : ಯಾವ ದೇಶದ ಸರಕಾರವೇ ಆಗಲಿ ಪತ್ರಿಕಾಸ್ವಾತಂತ್ರ್ಯವನ್ನು ಕಸಿದುಕೊಳ್ಳಬಾರದು (ರೂಢಿ). [ಸಂ.]

ಪತ್ರಿಕುಲ (ನಾ). ೧. ಎಲೆಗಳ ಗುಂಪು. ೨. ಬಾಣಗಳ ಸಮೂಹ,—ರಾಶಿ. ೧, ೨ : 'ಪತ್ರಿಕುಲಚರಿತ್ರ' ಪರಾ. [ಪತ್ರಿ + ಕುಲ]

ಪತ್ರಿಕುಲಚರಿತ್ರ (ನಾ). ೧. ಎಲೆಗಳಿಂದ ಕೂಡಿರುವುದು. ೨. ಬಾಣಗಳಿಂದ ತುಂಬಿರುವುದು. ೧, ೨ : [ಪರಿಕಲಿತತೀಕ್ಷ್ಣಮುಖವಾನರಚಿಹ್ನಂ ಪತ್ರಿಕುಲಚರಿತ್ರಂ] ರಿಪುಭೀಕರಮೆನಿಪಂತಕಳಕೃತ ನವತರುವಿರ್ಪಂತಿರ್ದುದಲ್ಲಿ ಗಾಂಡಿವಿಯ ರಥಂ (ಗದಾಯು. ೪-೩೪). [ಸಂ.]

ಪತ್ರಿಕೆ (ನಾ). ೧. ಬರೆಯುವ ಕಾಗದ. ೨. ಓಲೆ ; ಪತ್ರ : ನವಯುವತಿ . . . ಪತ್ರಿಕೆಯನು ತವಕದಿಂ ಬಿಟ್ಟು ಮುದ್ರೆಯನೋಸರಿಸಿ ತೆಗೆದು . . . ನಿಂದೋದಿಕೊಳುತಿರ್ದಳು (ಜೈಮಿಭಾ. ೩೦-೨೪). ೩. ವರ್ತಮಾನಪತ್ರ ಮುಂತಾದ ನಿಯತಕಾಲಿಕ : ಇಡೀ ಪತ್ರಿಕೆಗಳನ್ನು ಓದುವಷ್ಟು ಕೂಡ ವಿರಾಮವು ಅನೇಕರಿಗೆ ಇಂದಿನ ದಿವಸದಲ್ಲಿ ಇಲ್ಲ (ಪತ್ರಿಕಾ. ೪೭). ೪. ಬರೆದಿರುವ ಲೋಹದ ತಗಡು, ಓಲೆಯ ಹಾಳೆ ಮುಂತಾದುವು ; ಪಟ್ಟ : ರಘುನಾಥಂ ತುರಂಗಮಂ ಪೂಜೆಗೈದಿಳೆಯೊಳ್ಪರಿಸಲದಱ ಪಣೆಗೆ ತನ್ನಗ್ಗಳಿಕೆಯಂ ಬರೆದ ಪತ್ರಿಕೆಯನು ಅಳವಡಿಸಿ (ಜೈಮಿಭಾ. ೨೦-೪). ೫. ಕತ್ತಿಯ ಅಲಗು,—ಧಾರೆ : (ಕ). ೬. ಒಂದು ಬಗೆಯ ಸುಗಂಧವಸ್ತು ; ಜಾಯಿಪತ್ರೆ : ಲವಂಗಮುಂ ಜಾತಿಫಲ ಜಾತಿಫಲಮುಂ ಪತ್ರಿಕಾ ತಮಾಲಪತ್ರಮುಂ ಕರ್ಪೂರ ಪಚ್ಚಿಕರ್ಪೂರಮುಂ (ಪ್ರತಿಷ್ಠಾ. ೬-೧೧).

ಪತ್ರಿಕಾಮುಖ = ಕಾಗದದ ಮೂಲಕ,—ಮುಖಾಂತರ : ನಡಿಸಿದ ಪೌರಕಾರ್ಯವನ್ನು ಪತ್ರಿಕಾಮುಖದಿಂದ ತಿಳಿಸುವಂತೆ ನಾವು ಹೇಳಿದೆವೆಂದು ಮಂತ್ರಿಗೆ ತಿಳಿಸು(ಶಾಕುಂತ. ೮೩-೧೧). ಪತ್ರಿಕಾಹೇಳಿಕೆ = ವರ್ತಮಾನ ಪತ್ರಿಕೆಗಾಗಿ ಕೊಡುವ ಸಂದೇಶ : ಈ ವಿಷಯವನ್ನು ಅವರು ತಮ್ಮ ಪತ್ರಿಕಾಹೇಳಿಕೆಯಲ್ಲಿ ತಿಳಿಸಿದ್ದಾರೆ (ರೂಢಿ).

[ಸಂ. ಪತ್ರಿಕಾ]

ಪತ್ರಿಕೆಹುಲ್ಲು (ನಾ). ಒಂದು ಬಗೆಯ ಹುಲ್ಲು : ಸಣ್ಣ ಪುರಳೀಹುಲ್ಲು, ಪತ್ರಿಕೆಹುಲ್ಲು, ಕೋತಿಸುಬುತ್ತಿಹುಲ್ಲು (ಮೈಬಿಗಿ. ೩೪-೬೬೦).

[ಪತ್ರಿಕೆ + ಹುಲ್ಲು (<ಪುಲ್)]

ಪತ್ರಿಕೋದ್ಯಮಿ (ನಾ). ವರ್ತಮಾನಪತ್ರಿಕೆಯ ಉದ್ಯಮದಲ್ಲಿ ತೊಡಗಿರುವವನು : ಅಲ್ಲಿ ತನ್ನಂತಿರುವ ಇತರ ಪತ್ರಿಕೋದ್ಯಮಿಗಳನ್ನು ಕೂಡಿಕೊಂಡ (ಒಂಟಿದ. ೧೯). [ಸಂ. ಪತ್ರಿಕೋದ್ಯಮಿನ್]

ಪತ್ರಿಕೋದ್ಯೋಗ (ನಾ). = ಪತ್ರಿಕಾವೃತ್ತಿ : "ಪತ್ರಿಕೋದ್ಯೋಗ ; ಪತ್ರಿಕಾವೃತ್ತಿ" (Journalism. ಪತ್ರಿಕಾ. ೪೮). [ಸಂ.]

ಪತ್ರಿಕೋದ್ಯೋಗಿ (ನಾ). = ಪತ್ರಿಕೋದ್ಯಮಿ : ಅಮಂತ್ರಣಪತ್ರಿಕೆಯಲ್ಲಿ 'ಪತ್ರಿಕೋದ್ಯೋಗಿಗಳ ಭೇಟಿಗಾಗಿ' ಎಂದು ಸ್ಪಷ್ಟವಾಗಿ ಹೇಳಿದೆ (ಒಂಟಿದ. ೨). [ಸಂ. ಪತ್ರಿಕೋದ್ಯೋಗಿನ್]

ಪತ್ರಿಪದ (ನಾ). ಪಕ್ಷಿಯನ್ನು ವಾಹನವಾಗಿ ಉಳ್ಳವನು; ವಿಷ್ಣು.

ಪತ್ರಿಪದಪುತ್ರ = ವಿಷ್ಣುವಿನ ಮಗ; ಮನ್ಮಥ: ಪತ್ರಿಪದಪುತ್ರನುಗೋತ್ರಸ್ವರು ಚಿತ್ರಕರ ಪತ್ರಿರಥನೇತ್ರ ಜಯ (ಗುರುಚಾ. ೬-೧). [ಸಂ.]

ಪತ್ರಿರಥ (ನಾ). = ಪತ್ರಿಪದ.

ಪತ್ರಿರಥನೇತ್ರ = ವಿಷ್ಣುವಿನ ಕಣ್ಣನ್ನು ಹೊಂದಿದವನು ; ಶಿವ : ಪತ್ರಿರಥನೇತ್ರ ಜಯ . . . ತ್ರಿಪುರಶತ್ರು ಜಯ ಸಿದ್ಧನಂಜ (ಗುರುಚಾ. ೬-೧). [ಪತ್ರಿ + ರಥ]

ಪತ್ರೀಂದ್ರ (ನಾ). ಹಕ್ಕಿಗಳ ರಾಜ ; ಗರುಡ.

ಪತ್ರೀಂದ್ರವಾಹನ = ಗರುಡನನ್ನು ವಾಹನವನ್ನಾಗುಳ್ಳವನು ; ವಿಷ್ಣು : ಪತ್ರೀಂದ್ರವಾಹನಂ ಬಳಿಕ್ಕೆದೆ ಪಾಂಡವಧರಿತ್ರೀರಮಣರಿದಿರ್ಗೊಂಡರು (ಜೈಮಿಭಾ. ೨-೪೭). [ಪತ್ರಿ + ಇಂದ್ರ]

ಪತ್ರೆ (ನಾ). ೧. ಎಲೆ ; ಪರ್ಣ : ಬನ್ನಿಯೆಕ್ಕೆಯುತ್ತರಣೆಯ ಬೆಲ್ಲವತ್ತದ ತೊಳಂಬೆಯ ಪತ್ರೆಯನೊಂದನಿತ್ತು ಚಿಚ್ಚರಮಮರತ್ವಮಂ ಪಡೆಯುಂ (ಸಮಪ. ೮-೧೨) ; ಕಾಡ ಪತ್ರೆಯ ನಾಡ ತೀಡೆ ತಿಂದಿರವೆ (ಸಮಾವ. ಕ. ೫೯೦-೭). ೨. ಬಿಲ್ವ, ಬನ್ನಿ, ತುಳಸಿ ಮುಂತಾದುವುಗಳ ಎಲೆ,—ದಳ : ಬಳಸಿದ ಪತ್ರೆಯಂ ಬರುತೆ ಕೆಪ್ಪಿನ ಕಾಲೊಳೆ ನೂಂಕಿ (ಸಮಪ.೧೦-೮೦); ಹೊತ್ತಾರೆ ಎದ್ದು ಅಗ್ಗವಣ ಪತ್ರೆ[ಪಾಕಾಂ. ತ್ತರೆ]ಯ ತಂದು ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ (ಬಸವ. ೧೬೨) ; ಪತ್ರೆಯಿಂ ಪುಷ್ಪದಿಂ ಪೂಜೆಯಂ ಮಾಡುತಂ ಚಿತ್ತಜಹರಂಗೆ ಧೂಪಾರತಿಯ ನೆತ್ತುತಂ (ಕಣ್ಣರ. ದೇ. ೧೪೧-೧೫) ; ಓಹಿಲನರಣ್ಯಕ್ಕೆಂದಿನಂದದೊಳೆಯ್ದು . . . ಪತ್ರೆಯಂ ಕೊಯ್ದು (ಬಸಪು. ೪೩-೮೩) ; ಬಟ್ಟೆಯ ಕಲ್ಲಿಂಗೆ ಒಟ್ಟ ಪತ್ರೆಯನಿಟ್ಟು . . . ಶರಣೆಂಬ ಭ್ರಷ್ಟರನು ನೋಡ (ಸರ್ವಜ್ಞ. ೨೦೨) ; ಪತ್ರೆ ಇಲ್ಲದ ಪೂಜೆ, ಪತ್ರವಿಲ್ಲದ ಸಾಲ (ಗಾದೆ). ೩. ಜಾಯಿಕಾಯಿ ಮುಂತಾದುವುಗಳ ಮೇಲಿನ ತೊಗಟೆ,—ಸಿಪ್ಪೆ : ಈಗ ಮಂಗಗಳು ಇವುಗಳ ಮೇಲಿನ ಪತ್ರೆಯನ್ನು ತಿಂದು, ಬರಿ ಕಾಯಿಗಳನ್ನೇ ಚಲ್ಲಿ ಬಿಟ್ಟಿರುತ್ತವೆ (ಮುಂಬಯಿ. ೫-೨೧೧). ೪. ಸುವಾಸನೆಯಿಂದ ಕೂಡಿದ ಒಂದು ಬಗೆಯ ಔಷಧಿಸಸ್ಯ ; ಮಂಚಿಪತ್ರೆ : "ಮಾಚೀ = ಪತ್ರೆಯುಂ, ದೇವಗಣಕೆಯುಂ, ಶರೀರವುಂ" (ಶಾಶಕೃ. ೯೪). ೫. ಗಾಂಜಾ, ಹೊಗೆಸೊಪ್ಪು ಮುಂತಾದುವುಗಳ ಎಲೆ : ಅವನು ಈಚೆಗೆ ಪತ್ರೆ ಸೇದಲಾರಂಭಿಸಿದ್ದಾನೆ (ರೂಢಿ). ೬. ಲೋಹದ ತಗಡು,—ಹಲಗೆ : ಪತ್ರೆ ಅಂದರೆ ಕಾರೋಗೇಟೆಡ್ ಅಯರ್ನಶೀಟ್ ಇವುಗಳ ಬಗ್ಗೆ ಮಜೂರಿಯ ದರ (ಮುಂಬಪ್ಯಾ. ೧೭ ಪ್ರಸ್ತಾವನೆ) ; ಕೆಲವರು ಅಲ್ಲಿಯೇ ಇರುವ 'ವೀರಶೈವ ಲಿಂಗಾಯತರ ಚಹಾ-ಕಾಫಿ-ಫರಾಳ ದುಕಾನ'ದ ಪತ್ರೆಗಳ ಕೆಳಗೆ ನಿಂತು ಹನಿಗಳಿಂದ ಪಾರಾದರೂ ಒಳಗಿನ ಹೊಗೆ ಅವರ ಕಣ್ಣೊಳಗಿಂದ ನೀರು ತರಿಸಿತು (ಮುಗಿಸು. ೪).

ಪತ್ರೆ ಹಾಕು = ಪೂಜೆಗಾಗಿ ಮನೆಮನೆಗೆ ಬಿಲ್ವ ಮುಂತಾದ ದಳಗಳನ್ನು ತಂದುಕೊಡು,—ಒದಗಿಸು : ಕಿನ್ನರಿ ಬಾರಿಸಿಕೊಂದು ಪಾತ್ರದವರ ಮನೆಗೆ ಪತ್ರೆ ಹಾಕೋದಕ್ಕೆ ಹೋಗುತ್ತೇನೋ(ಬೆಳುಮ.೮೦).

[ಸಂ. ಪತ್ರ]

ಪತ್ರೊಡೆ, ಪತ್ರಡೆ (ನಾ). (ಕರಾ)ಕೆಸುವಿನ ಎಲೆಯಿಂದ ಮಾಡುವ ಒಂದು ಬಗೆಯ ಖಾರದ ಕಡುಬು : ವನಜ . . . ಕೆಸವಿನ ಸೊಪ್ಪಿನ ಪತ್ರೊಡೆಯೊಂದಿಗೆ ಕಡಲೆಯ ಪಾಯಸ ಮಾಡಿ ಬಡಿಸಿದ್ದಳು (ದೇಸಹಿಂ. ೧೧೭) ; ನಾಲ್ಕು ಕೆಸುವಿನ ಎಲೆಗಳನ್ನು ತಂದು . . . ಪತ್ರೊಡೆಗಾರಂಭಿಸಿದರು (ಬಾಳಿಗಿ. ೨೩). **ಪತ್ರಡೆ** : ದಾರಿಯಲ್ಲಿ ಅಜ್ಜ ಮರಕೆಸ ಕಂಡು "ನೋಡಲ್ಲಿ ಪತ್ರಡೆಗೆ ಲಾಯಕ್ಕಾಗಿದೆ" ಎಂದರು (ಪ್ರಕೃ. ೯೮). [←ತುಳು. ಪತ್ರೊಡೆ]

ಪತ್ರೋರ್ಣ (ನಾ). ೧. ಒಂದು ಬಗೆಯ ಮರ; ದಿಂಡಲು. ೨. ರೇಷ್ಮೆವಸ್ತ್ರ : "ಪತ್ರೋರ್ಣಂ. ಧೌತಕೌಶೇಯಂ—ತೊಳೆದ ಪಟ್ಟೇಸೀರೆ ಮುಂತಾದದ್ದು" (ಸಿದ್ಧಾಂತಿ. ೨೦೨). [ಸಂ.]

ಪತ್ರೋಳಿ (ನಾ). = ಪತ್ರಾವಳಿ ೨ : ಹತ್ತ ಪತ್ರೋಳಿ ಅನ್ನಾ ಹಾಕತಾರ ಅನ್ನೊ ಭರೋಸ ಅದ ನನಗ (ದೀಪಹ. II, ೫೩) ; "ಹಳೇ ಪತ್ರೋಳಿ", "ಹರಕುಮೊಚ್ಚೆ"ಗಳ ಮಾಲೆಯಲ್ಲಿಯೇ ಕಸಬರಿಗೆಯನ್ನೂ ಗಯ್ಯಾಳಿಯ ಬಾಯಿಯೂ ಪೋಣಿಸಿದರೆ ಏನಾಯಿತು? (ನಿರಾಭ. ೧೫೪).

[<ಪತ್ರಾವಳಿ]

ಪತ್ವ (ನಾ). [ವ್ಯಾಕ] 'ಪ' ಎಂಬ ಅಕ್ಷರ ; ಪಕಾರ : ನೆಗಟ್ಟುರ್ದ ರೇಫ ಱ ನಾಂತ ಗಾಂತ ಸಾಂತೋತ್ತದಿದಿರ ವತ್ವಂ ಪತ್ವಂ ಪುಗುಗುಂ ದ್ವಿತ್ವಂ (ಶಮದ. ೨೩೨). [ಸಂ.]

ಪಥ (ನಾ). ಹಾದಿ ; ದಾರಿ ; ಮಾರ್ಗ : ನಿಷ್ಠೆಯಿಂದ ಲಿಂಗವ ಪೂಜಿಸಿ ಮತ್ತೊಂದು ಪಥವನಱಯದ ಶರಣರು ಸರ್ಪನ ಹೆಡೆಯ

ಮಾಣಿಕದಂತಿಪ್ಪರು ಭೂಷಣರಾಗಿ (ಬಸವ. ೭೪೫); ಪುಳಕದ ಹಾದಿಗೆಂದು ಪಥವಪ್ಪುದು ಕಣ್ಗಳ ಕೋಡಿಗೆಂದು ನೀರ್ಗಳ ಕಡೆಗಾಣ್ಬುದು(ಪಂಪಾಶ.೨); ವಿದುರನಟ್ಟಿದ ಖನಕ ಬಂದನುಯಿವರ ಸಜ್ಜೆಯ ಮನೆಯಲತಿಗುಪ್ತದಲಿ ನೆಲದೊಳು ಸವೆಸಿದನು ಪಥವ (ಸಂಭವ. ೪-೮೬); ವಿಶ್ವಾನುಭವವೆ ವಿಶ್ವಾತ್ಮಾನುಭವಕೆ ಪಥ (ಮಂಕುಕ. ೪೦೦). [ಸಂ.]

ಪಥಕ (ನಾ). ೧. ಸೈನ್ಯದ ಒಂದು ತುಕಡಿ,—ದಳ: ಜರ್ಮನಿಯು ತನ್ನ ಏರಾಟವನ್ನು ಹೋರಿನಿಂದ ಸಾಗಿಸಿದ್ದರಿಂದ ಇಲ್ಲಿಯ ಒಂದು ಪಥಕವನ್ನು ಫ್ರಾನ್ಸದೇಶಕ್ಕೆ ತೆಗೆದುಕೊಂಡು ಹೋಗುವುದು ನಿಶ್ಚಿತವಾಯಿತು (ಮೇದಿಮ. ೧೯೬). ೨. ತಂಡ; ಸಂಘ; ಗುಂಪು: ಮೊಬರಾದ ಮೇಲೆ ಅವರು ಮಾಡುವ ಯಾವುದೇ ಕನ್ನಡ ಚಟುವಟಿಕೆಗೆ ಕ್ರಿಸಪ್ಟಿ ಎಂಬ ಪಥಕದ ಹೆಸರಿಡಬೇಕು (ಮುಂಗಾಪು. ೬).

[←ಮರಾ. ಪಥಕ, ಪತಕ]

ಪಥಕಲ್ಪನೆ (ನಾ). ಇಂದ್ರಜಾಲ; ಕಣ್ಕಟ್ಟು. [ಸಂ. ಪಥಕಲ್ಪನಾ]

ಪಥಗೊಳಿಸು (ಕ್ರಿ). ಪ್ರಯಾಣಕ್ಕೆ ಮೊದಲು ಮಾಡಿಸು; ಪ್ರಯಾಣ ಹೊರಡಿಸು: ಅರ್ಜುನನುಳಿದ ಸತಿಯರಂ ಶೋಕಗಳ ಹತಗೈಸಿ ದ್ವಾರಕಾಪುರಕೆ ದಾರುಕನೊಡನೆ ಪಥಗೊಳಿಸಿಯೆ ಕಳುಹಿ (ತುರಂಗ. ೯೦-೧೮). [ಪಥ+ಕೊಳ್$_1$+-ಇಸು$_3$]

ಪಥಪರಿಶ್ರಮ (ನಾ). ಮಾರ್ಗಕ್ರಮಣದಿಂದ ಉಂಟಾದ ಬಳಲಿಕೆ,—ದಣಿವು: ನಾನಾವಿಧದ ಪದಿನೊಳ್ ಹರಿಗಾವಗಮಾಜುದುದು ಪಥಪರಿಶ್ರಮಮೆಲ್ಲಂ (ಪಂಪಭಾ. ೯-೨೮). [ಪಥ+ಪರಿಶ್ರಮ]

ಪಥಪ್ರದರ್ಶಕ (ನಾ). ಹಾದಿಯನ್ನು ತೋರಿಸುವವನು; ಮಾರ್ಗದರ್ಶಕ: ತಾವು ಈಗಲೂ ಕೂಡ ನನ್ನ ಆಪ್ತಮಿತ್ರರಾಗಿಯೂ ಪಥಪ್ರದರ್ಶಕರಾಗಿಯೂ ಇರಬೇಕು (ಮೃಜಲ. ೧೪೦).

[ಪಥ+ಪ್ರದರ್ಶಕ]

ಪಥಭೇದ (ನಾ). ೧. ಮಾರ್ಗವನ್ನು ಬದಲಿಸುವ ಮಜಲು,—ಹಂತ: "ಪಥಭೇದದೊಳಗಂಚೆಯುಂ" (ಶಬ್ದಮಂ. ೮೬). ೨. = ಪಥಸಂಖ್ಯೆ: "ಪಥಭೇದಂ ದಿವ್ಯ ಕ್ರೋಶಾಹ್ವಯಂ" (ನಾನಾರ. ೧೧೩).

[ಪಥ+ಭೇದ]

ಪಥಭ್ರಾಂತ (ನಾ). ದಾರಿ ತಿಳಿಯದವನು; ಹಾದಿ ತಪ್ಪಿದವನು: ಪೂರ್ವಪರಿಚಿತವಿಲ್ಲದ ವನದಲ್ಲಿ ತಿರುಗುವುದಕ್ಕೆ ಹೋಗುವವರು ಒಂದು ಕ್ಷಣದಲ್ಲಿ ದಾರಿ ತಪ್ಪಿ ಪಥಭ್ರಾಂತರಾಗುವುದರಲ್ಲಿ ಸಂಶಯವಿಲ್ಲ (ಕಪಾಕುಂ. ೧೭). [ಪಥ+ಭ್ರಾಂತ]

ಪಥಭ್ರಾಂತಿ (ನಾ). ದಾರಿ ತಪ್ಪುವಿಕೆ; ದಿಕ್ಕು ತೋರದಿರುವಿಕೆ: ನವಕುಮಾರನಿಗೆ ಹಾಗೇನೆ ಪಥಭ್ರಾಂತಿಯುಂಟಾಯಿತು (ಕಪಾಕುಂ.೧೭).

[ಪಥ+ಭ್ರಾಂತಿ]

ಪಥಶಿಲ್ಪಿ (ನಾ). ದಾರಿಯನ್ನು ಸಿದ್ಧಪಡಿಸುವವನು; ರಸ್ತೆಯನ್ನು ಮಾಡುವವನು: ಸೈನ್ಯದ ಚಲನೆಯು ಸುಗಮವಾಗಿರುವುದಕ್ಕಾಗಿ ಸಿದ್ಧಪಡಿಸಲು ಸೈನ್ಯಕ್ಕಿಂತ ಮುಂಚೆಯೇ ಪಥಶಿಲ್ಪಿಗಳು ತಮ್ಮ ಸಿಬ್ಬಂದಿಯೊಡನೆ ಹೋಗಿ . . . ಕೆಲಸವನ್ನು ಮಾಡಿಸುತ್ತಿದ್ದರು(ಕಶಾಅ. ೨೫೬).

[ಪಥ+ಶಿಲ್ಪಿ$_1$]

ಪಥಶ್ರಮ (ನಾ). = ಪಥಪರಿಶ್ರಮ: ವೃದ್ಧತಾಪಸನಂ . . . ಅಲ್ಲಿಯ ಮೂಲಿಗನಪ್ಪ ಪಟ್ಟಸಾಲಿಗಂ ಕಂಡು ತನ್ನ ಮನೆಗೊಡಗೊಂಡು ಪೋಗಿ ಪರಮಭಕ್ತಿಯಿಂದಂ ಪಥಶ್ರಮಮನಾಱಿಸಿ (ಪಂಚತಂ. ೭೩-೧೦); ಮಿಗೆ ಬಾಂಬಟ್ಟೆಗರಿದರ್ಮ ಪಥಶ್ರಮದಟ್ಟುಳಿಯಂ ಕಳೆದು ಪೋಪರತಿ ಮುದದಿಂದಂ (ಹಮ್ಮೀರ. ೧-೬೨). [ಪಥ+ಶ್ರಮ]

ಪಥಶ್ರಾಂತ (ಗು). ೧. ಪ್ರಯಾಣದಿಂದ ಬಳಲಿದ,—ದಣಿದ (ನಾ). ೨. = ಪಥಪರಿಶ್ರಮ: ಆ ನದಿಯ ತೀರದೊಳ್ ಕುಳ್ಳಿರ್ದು ಪುಷ್ಕಳೆಯುಂ ಶೌಂಡಿಕನುಂ ಪಥಶ್ರಾಂತಮಂ ವಿಶ್ರಮಿಸಿಕೊಂಡು (ನನ್ನಚಾ. ೩-೧೧೧ ವ). ೩. ಪ್ರಯಾಣದಿಂದ ಬಳಲಿದವನು: ಪುರಹರನು ಸೆಟ್ಟೆಯು ಪಥಶ್ರಾಂತರ ತೆಱದಿ ವೈಶಿಕದ ನಿದ್ರೆಯೊಳಿರಲು (ಬಸಪು. ೨೪-೫೪); ಶ್ರೀಧರಭಟ್ಟನುಂ ನಾರಸಿಂಹಭಟ್ಟರೆಂಬ ಪಾರ್ಮರಿರ್ವರುಂ ಪಥಶ್ರಾಂತರಾಗಿ ಬಂದುಮೂ ಪುಷ್ಕಳೆಯಂ ಕಂಡು (ಪನ್ನಚಾ. ೩-೧೨೧ ವ). [ಪಥ+ಶ್ರಾಂತ]

ಪಥಸಂಖ್ಯೆ (ನಾ). ದೂರವನ್ನು ಅಳೆಯುವ ಒಂದು ಪ್ರಮಾಣ; ಹರದಾರಿ: "ದಿವ್ಯದಲ್ಲಿ ಪಥಸಂಖ್ಯೆಯಲಿ ಕ್ರೋಶಮುಳ್ಕುಂ" (ಮಂಗರಾ. ೧೪೪-೨೫). [ಪಥ+ಸಂಖ್ಯೆ]

ಪಥಾರ್ತ(ನಾ) = ಪಥಶ್ರಾಂತ ೩: ಬಳೆದಿಮ್ಮಾವಿನ ಬಾಟೆ ಯೊಳೆಗಳ ಪಣ್ಣಂ ಪಣ್ಣನೋರೊರ್ಮೆ ಮೆಲ್ದೆಳನೀರೀಂಟಿ ಪಥಾರ್ತರಿರ್ಪರಳಿಕೀರ ಧ್ವಾನದುದ್ಯಾನದೊಳ್ (ಜಗವಿ. ೯-೮೮). [ಪಥ+ಆರ್ತ$_2$]

ಪಥಾಸನ (ನಾ). [ಯೋಗ] ಒಂದು ಬಗೆಯ ಆಸನ: ಯೋಗ ಯೋಗ್ಯಾಸನಗಳಲ್ಲಿ ಪಥಾಸನ . . . ಅರ್ಧಾಸನಾದಿಯೆಂಭತ್ನಾಲ್ಕಾಸನ ಭೇದಂಗಳ್(ವಿವೇಕ. ೧೫೦). [ಪಥ?+ಆಸನ]

ಪಥಿಕ (ನಾ). ದಾರಿಗ; ಪ್ರಯಾಣಿಕ: "ಪಾಂಥಃ . . . ಪಥಿಕಃ-ಈ ೫ ಬಟ್ಟೆ ನಡೆವಾತಂ" (ಹಲಾಯು. ೫೯-೨೦೨); ಮೋಕ್ಷಪುರಪ್ರಸ್ಥಿತ ಭವ್ಯಪಥಿಕಪಾಥೇಯಮಪ್ಪ ಸಮ್ಯಕ್ತ್ವಮುಮಂ . . . ಭಗೀರಥ ಮಹೀಪತಿಕೆಯ್ಕೊಂಡುಂ (ಅಜಿಪು.೧೨-೧ ವ); ಪಥಿಕರ್ ಗಿಳಿಸೋವಬಲಾ ಜನಂಗಳಂ ಕಣ್ಣೆಮೆಯಿಕ್ಕದೀಕ್ಷಿಸೆ (ಪಂರಾಮಾ. ೧-೧೦೭); ಅಸಮ ವೀರರು ಪಥಿಕರಾದರು ಗಗನಮಾರ್ಗದಲಿ (ಕುಪ್ಯಾದ್ರೋ. ೫-೧೫).[ಸಂ.]

ಪಥಿಕಜನ (ನಾ). ದಾರಿಯಲ್ಲಿ ಹೋಗುವ ಜನ; ಪಾಂಥಜನ: ಪಥಿಕಜನದ ಕಣ್ಣಂ ಮನಕ್ಕಂ ಪಸರಂಬಡೆದು ನೆಱೆ ಸೊಗಯಿಸುವ ಸರಸಸರಸೀರುಹಾಕರಂಗಳೊಳ್ (ಶಾಂತಿಪು. ೧-೫೭ವ); ಎಲರೆಲೆಪದಿಂದುರುಳ್ದು ಪರೆದೆಸೆವ ಕುಸುಮರೇಣುಗಳೊಳಂ ಪಥಿಕಜನಂಗಳಂ ಪಸರಿಸಿದ ಲವಂಗಪಲ್ಲವದ ಪಾಸುಗಳೊಳಂ (ಕಾದಂಪೂ. ೯೭); ಅಮೃತ ಕಿರಣಬಿಂದಾಯಮಾನಶೀತಳಚ್ಛಾಯಾಪರಿಚಿತಪಥಿಕಜನಶ್ರಮಜನಿತಸ್ವೇದ ಬಿಂದುಸಂದೋಹಮುಮಪ್ಪ ಪಟವಿಟಪಿಯೆ ತನಗೆ ರಾಜಧಾನಿಯಾಗೆ (ಪಂಚತಂ. ೨೦೨-೧). [ಪಥಿಕ+ಜನ]

ಪಥಿಶ್ರಮ (ನಾ). = ಪಥಪರಿಶ್ರಮ: ಆತನ ಕೀರ್ತಿಪ್ರಮದೆ ಪಥಿಶ್ರಮದಿಂ ವಿಶ್ರಮಿಸಿದಳೀಲಾಲವಂಗಲವಲೀವನದೊಳ್ (ಶಾಂತಿಪು.೮-೫೫).

[ಸಂ.]

ಪಥಿಸು (ಕ್ರಿ). ಹಿತವಾಗು; ಒಗ್ಗು; ಹಿಡಿಸು: ಉಳಿದ ಪುಷ್ಪದ ಪರಿಮಳವು ಪಥಿಸಿದರೆ ಸಂಪಗೆಯರಳ ಪರಿಮಳ ಪಥ್ಯವೇ ತುಂಬಿಗಳ ತಿಂತಿಣಿಗೆ (ಕುಪ್ಯಾದ್ರೋ. ೪-೪೩). [<ಪಥ್ಯ+-ಇಸು$_3$]

ಪಥ್ಯ (ಗು). ೧. ಯೋಗ್ಯವಾದ; ಉಚಿತವಾದ. ೨. ಹಿತವಾದ; ಪ್ರಿಯವಾದ.(ನಾ). ೩. ಯೋಗ್ಯವಾದುದು; ಉಚಿತವಾದುದು: ಬಿಡು ಕನ್ಯಾರತ್ನಮನೀಗಡೆ ಚಕ್ರಿಪದದ್ವಯಕ್ಕೆ ತಡೆದಿರದೆಱಗೇಪಡೆಮಾತೊಬುಂದು ಕಾರ್ಣ ಕಂಡೊಡೆ ಪಥ್ಯಮಪಥ್ಯಮಿಾ ಕನಿಷ್ಠಾಚರಣಂ (ಶಾಂತಿಪು. ೩-೮೯); ಎಲೆ ಭೂಮೀಶ್ವರ ನಿನಗೆ ಪಥ್ಯಮಾವುದದಂ ಮಾಡು (ಯಶೋಧ. ೧-೬೫); ದುರುಳತನವಾರಿಂಗೆ ಪಥ್ಯವು ದಿಟ ವಿಚಾರಿಸಲು (ಕೌಶಾರಾ. ೩೮-೪). ೪. ಹಿತವಾದುದು; ಒಳ್ಳಿತಾದುದು: ಪರಿಣಾಮವೇ ಪಥ್ಯವಾಗಿ ಅಂತರಂಗಶುದ್ಧಪರಿಪೂರ್ಣವಾಗಿ ನಿಂದು ಸಂಸಾರಕ್ಕೆ ಸಿಕ್ಕದೆ . . . ಮಲ್ಲಿಕಾರ್ಜುನನಲ್ಲಿ ಸರ್ವಾಂಗದಲ್ಲಿ ನಿರ್ಲೇಪವಾದುದೇ ಶರಣಸ್ಥಲ (ಮೋಳಿಮಾ. ೧೦೦-೩೯೭); ಸುಜನವಚನಪಥ್ಯಕ್ಕೆ

ತಾಂ ವಕ್ರಿಸುತ್ತುಂ (ರಕ್ಷಾಶ. ೨೬); ಮರಳಿ ತೊಡುತೊಡು ಬೇಗ ಕೌರವನರಸುತನವುಳಿವುದು ಕಣಾ ಹೇವರಿಸದಿರು ಹೇಳುವುದು ಪಥ್ಯವಿದು (ಕುಪ್ಯಾಕ. ೨೫-೧೬); ನಾನು ನಿನಗೆ ಪಥ್ಯವಾದ ಒಂದು ಮಾತನ್ನು ಹೇಳಲೇಬೇಕು (ಸಭಾಪಾ. ೨೯೬). ೫. (ರೋಗಿಯು) ಆಹಾರಕ್ರಮದಲ್ಲಿ ಅನುಸರಿಸುವ ನಿಯಮ,—ಕಟ್ಟುಪಾಡು : ಆಕೆಯು ಅನ್ನಪಾನಾದಿಗಳಲ್ಲಿ ಪಥ್ಯವನ್ನು ಮಾಡಬೇಕಾಗುವದು (ನೀಗಟ್ಟು. ೧೧); ಮಹಾವೈದ್ಯನಾಥಅಯ್ಯರ್ ಅವರು ಊಟದಲ್ಲಿ ಪಥ್ಯದಲ್ಲಿರುತ್ತಿದ್ದರು (ಸಂಗೀತ. ೪). ೬. (ರೋಗಿಯು) ನಿಯಮದಂತೆ ತೆಗೆದುಕೊಳ್ಳುವ ಆಹಾರ, ಔಷಧ ಮುಂತಾದುವು ; ಅನುಪಾನ : ಪಥ್ಯ ಮಜ್ಜಿಗೆಅನ್ನ . . . ಪಥ್ಯ ಮೊಸರ ಕೋಸೆ ನೀರುಮಜ್ಜಿಗೆ (ವಿನೈವಿ. ೨); ಈ ಸನ್ನಿಪಾತಕ್ಕೆ . . . ಔಷಧಿಗಳಂ ಪ್ರಯೋಗಿಸಿ ಹುರಿಯಕ್ಕಿಗಂಜಿಯಂ ಪಥ್ಯಮನಿಕ್ಕಿಸುವುದು (ಸಕವೈ. ೧೫೨); ಹತ್ತಿದ ರೋಗ ಹರಿಯಲಿಲ್ಲ, ಪಥ್ಯದ ಮಡಕೆ ಇಳಿಯಲಿಲ್ಲ (ಗಾದೆ). ೭. ವ್ರತ (?) : ಇಷ್ಟಲಿಂಗವನಱಿದು ಪೂಜೆಯ ಮಾಡಿ ಪ್ರಾಣಲಿಂಗವನಱಿದು ಪಥ್ಯವ ಕೊಂಡು ಜಂಗಮವಾದೆವೆಂಬ ಮಿಥ್ಯತಥ್ಯದ ಅಣ್ಣಗಳು ನೀವು ಕೇಳಿರೋ (ಪೌಲೋಮಾ. ೧೯-೭೩).

ಪಥ್ಯ ಮಾಡಿಸು = ಅನುಪಾನದ ಮೇರೆಗೆ ಅನ್ನಾಹಾರಗಳನ್ನು ಸೇವಿಸುವಂತೆ ಮಾಡು : ಚಿಕ್ಕ ಮಕ್ಕಳಿಗೆ ಕಾಯಿಲೆ ಬಂದರೆ ಪಥ್ಯ ಮಾಡಿಸುವುದು ಕಷ್ಟ (ರೂಢಿ). ಪಥ್ಯ ಮಾಡು = ಪಥ್ಯದ ನಿಯಮಗಳನ್ನು ಅನುಸರಿಸು ; ಕಟ್ಟುನಿಟ್ಟಾಗಿರು : ರೋಗಿಯು ವೈದ್ಯರು ಹೇಳಿದಂತೆ ಪಥ್ಯ ಮಾಡಬೇಕು (ರೂಢಿ). [ಸಂ.]

ಪಥ್ಯಂಗೊಡು (ಕ್ರಿ). ೧. ರೋಗಿಗೆ ಕಟ್ಟುಪಾಡನ್ನು ವಿಧಿಸು,—ಅನುಪಾನವನ್ನು ನಿಯಮಿಸು : ಅಟ್ಟ ವಾತದ ತೈಲವಂ ತಾಂ ಬೊಟ್ಟಡಿಸಿ ಲೇಪಿಸುತ ಪಥ್ಯಂಗೊಟ್ಟದಕೆ ತಕ್ಕನಿತು ಜೋಪಾಸನವ ನಾಱರಿಸಿ (ಬಸಪು. ೧೭-೮). ೨. ಪಥ್ಯವಾದ ಆಹಾರವನ್ನು ಕೊಡು: (ಕ). [ಪಥ್ಯ + ಕೊಡು$_1$]

ಪಥ್ಯಕಾರಿ (ನಾ). ಹಿತಕರವಾದುದು ; ಒಳ್ಳೆಯದು : ಪಡವಲದ ಕಾಯಿ . . . ಆಡಿನ ಹಾಲು, ಮುಂತಾದವೆಲ್ಲಂ ಖಾಸ ಶ್ವಾಸ ಬಿಕ್ಕುಳು ರೋಗವುಂಟಾದವರಿಗೆ ಪಥ್ಯಕಾರಿಗಳೆಂದರಿವುದು (ಸಕವೈ. ೨೪೬). [ಸಂ. ಪಥ್ಯಕಾರಿನ್]

ಪಥ್ಯದ್ರವ್ಯ (ನಾ). ಅನುಪಾನಕ್ಕೆ ತಕ್ಕ ಆಹಾರಪದಾರ್ಥ : ಹುರಿಳಿಕಟ್ಟು . . . ಚಲಿಕೀರೆಸೊಪ್ಪು ಇವುಗಳೆಲ್ಲವೂ ಜ್ವರದವರಿಗೆ ಪಥ್ಯದ್ರವ್ಯಗಳು (ಸಕವೈ. ೧೦೨). [ಪಥ್ಯ + ದ್ರವ್ಯ]

ಪಥ್ಯಾಹಾರ(ನಾ). ೧. ವ್ರತನಿಯಮಗಳಿಗೆ ತಕ್ಕುದಾದ ಆಹಾರ,—ಊಟ : ಅಲ್ಲಿಪ್ಪರ್ ತಪೋಧನರ ಪಥ್ಯಾಹಾರಮೋಷಧನಿಮಿತ್ತಕಮಾಗಿ . . . ಧಾರಾಪೂರ್ವಕಂ ಮಾಡಿ ಬಿಟ್ಟ ನೆಲಂ (ಸೌಇಇ. XX, ೨೧-೫೬ ; 1019). ೨. ರೋಗನಿವಾರಣೆಗೆ ತಕ್ಕ ಆಹಾರ : ವೈದ್ಯರು ಪಥ್ಯಾಹಾರವನ್ನು ಹೇಳಿದ್ದಾರೆ (ರೂಢಿ). [ಪಥ್ಯ + ಆಹಾರ]

ಪಥ್ಯೆ (ನಾ). ಒಂದು ಬಗೆಯ ಮರ ; ಅಳಿಲೆಕಾಯಿ ಮರ : "ಹರೀತಕೀ, ಅಭಯಾ, ಪಥ್ಯಾ—ಈ ೩ ಅಣಿಲೆ" (ಹಲಾಯು. ೧೦೧-೪೬೪); ಎರದೆಳಗಾಯ್ಗೆ ಪಥ್ಯೆ ಲವಣಕ್ಕೆ ತೊಳಂಜೆ ವಿಷಾಪಹಾರಕಂ (ಲೋಕೋಪ. ೮-೨೬). [ಸಂ. ಪಥ್ಯಾ]

ಪದ$_1$, ಪದನ್, ಪದನ, ಪದನು, ಹದ, ಹದನ್, ಹದನ, ಹದನು (ನಾ). ೧. ಸರಿಯಾದ ಸ್ಥಿತಿ ; ಹವಣಾಗಿರುವ ಸ್ಥಿತಿ; ಹಾಳತ : (ಕ). ೨. ಅವಸ್ಥೆ ; ನಿಲವು; ಸ್ಥಿತಿ ; ಪಾಡು : ನಿನ್ನನೀ ಪದಕ್ಕೆ ತಂದುದು ಮುನ್ನಿನ ಗೆಯ್ದ ದೋಷಮಿನ್ನಱಿದು ಜಿನೇಂದ್ರ ಧರ್ಮಜಲದಿಂ ಕಳೆ ಕರ್ಚ ಕಳಂಕಪಂಕಮಂ (ಆದಿಪು. ೩-೪೦). ೩. (ಸರಿಯಾದ) ಸಮಯ ; ವೇಳೆ ; ಕಾಲ : ಕಡುಮುಳಿದು ನಿನ್ನ ತೊಡೆಗಳನುಡಿವೆಡೆಯೊಳ್ ಭೀಮಸೇನ ನಾನಾ ಪದದೊಳ್ ಪಿಡಿಯಲ್ಕೆಂದಿರ್ದೊಂ (ಪಂಪಭಾ. ೯-೫೯); ಅಲರಾಯ್ವ ಪದದೊಳೆರಡನೆಯಂಲರ್ಗಂ ಕೈ ನೀಡಿ ಸೇದೆವಡುವರ್ ಸತಿಯರ್ (ಕಾದಂಪೂ.೧೦೦೫); ರಕ್ಕಸನದಿರೆರ್ದುಕೊಲ್ವ ಪದದೊಳ್ (ಸುಕುಮಾ.೭-೧೭); ಸುರರ್ ತದನಂತರಂ ಸ್ವಕೀಯಾವಾಸಕ್ಕೆ ಪೋಪ ಪದದೊಳ್ (ನೇಮಿಪು. ೫-೨೪ ಪ). ೪. ರೀತಿ; ಕ್ರಮ; ಹವಣು ; ಬಗೆ : ಕೆಯ್ಯ ಮರಗಸಂ ಪುಲ್ಗಸಮೆಂಬೆರಡುಮಂ ಕಳೆದು ಪದದೊಳ್ ಚಿತ್ತದೊಡಂ ಮನದೊಳುಳ್ಳ ರಾಗದ್ವೇಷಮೆಂಬೆರಡುಮಂ ಕಳೆದು ಶುದ್ಧಚಾರಿತ್ರದೊಳ್ ಪತ್ತದೊಡಮಾತಂಗೆ ಬೆಳಸುವಿಾತಂಗೆ ಸುಗತಿಯುಮೆಂತಕ್ಕುಂ (ಜೀವಸಂ. ೪೭-೧೩ ಪ). ೫. (ಆಹಾರಗಳ ವಿಷಯದಲ್ಲಿ) ಪಕ್ವಗೊಂಡ ಸ್ಥಿತಿ ; ಪಕ್ವತೆ ; ಸರಿಯಾಗಿ ಬೆಂದಿರುವ ಸ್ಥಿತಿ : ಅಕ್ಕಿಯನಿಂಬಾಗಿ ಮೂಱು ಸೂಟ್ ಕರ್ಚ ಪೊಯ್ದೊಡೆ [ಕುದಿವೆ]ಸರೊಳುತ್ತಮಮಕ್ಕುಂ ಪದದೊಪ್ಪಲ್ ಸಮರಸನಾಗಿರ್ಕುಕಱಿಯನೆಱಿಯಲ್ಕನ್ನಂ (ಲೋಕೋಪ. ೮-೨). ೬. ಕಳಿತುದು ; ಮಾಗಿದುದು: 'ಪದಗಾಯಿ', ಪದವಣ್' ಪರಾ. ೭. ತೀಕ್ಷ್ಣ ; ಹರಿತ ; ಚೂಪು: 'ಪದಗೊಳಿಸು' ಪರಾ. ೮. "ಆಯುಧಗಳಿಗೆ ಬಾಯ ಹರಿತ ಬರುವುದಕ್ಕೆ ಕುಡಿಸುವ ನೀರು" (ಪ್ರಭಣ್ಣ). ೯. ತೇವ ; ಆರ್ದ್ರತೆ : 'ಪದಂಗೊಳಿಸು' ಪರಾ. ೧೦. ಸುರತದ್ರವ : ರಾಗಮಿಲ್ಲದ ಸುಸಿಲಟ್ಕಱಿಲ್ಲದ ಪದಂ ನೆವಮಿಲ್ಲದ ಕಾಯ್ವು . . . ಕರಂ ಚದುರರುಮಂ ಮನಂಗೊಳಿಪುದೇಂ ಕಡುಜಾಣೆಯರೋ ಲತಾಂಗಿಯರ್ (ಆದಿಪು. ೧೨-೪೫); ಶಯನಂ ಘರ್ಮಾಂಬುವಿಂ ನಾನೆ ಮುನ್ನಮೆ ನಾಣೊ[ಟ್ಕು]ಡಿವೋಗಿ ಸೂಸುವ ಪದಂ ಗಂಗಾಂಬುವಂ ಪೋಲೆ (ಪಂಪಭಾ. ೪-೧೦೯); ಪದಂ ಸೂಸಿ ಪಾಯ್ತರೆ ತಾಮಿಂತು ಸುಖಾಮೃತಾಬ್ಧಿ ವಳಿಯೊಳ್ ತೇಂಕಾಡಿದರ್ (ಶಾಂತೀಶ್ವ. ೫-೧೩೪); ಭಾವೆಯರೊಳ್ . . . ಇಂತೊಡಗೂಡೆ ಪದಂ ತುಳುಂಕುಗುಂ (ಮನ್ಮಥವಿ. ೩-೧೮). 'ನಾಣ್ಬದ' ಪರಾ. ೧೧. ದಯೆ ; ಅನುಗ್ರಹ : "ಒಲುಮೆ ಪದವಕ್ಕು" (ಮಂಗರಾ. ೭೯-೬). **ಪದನ್** : ೧. ಹಳಮುಖನೆಂಬ ಪಾರ್ವಂ ತನ್ನ ಮೂಡಣ ಕೆಯ್ಯನುಟಲೆಂದು ಪೋಗಿ ಕೆಸಱಾದುದಂ ಕಂಡುಟಲ್ ಪದನಲ್ತೆಂದು . . . ಪೋಗುತ್ತಂ (ಪಡ್ಡಾರಾ. ೧೫೨-೧೭). ೩. ಪದನಂ ಕಾಣಿಸಿಕೊಳ್ವವಲ್ಲಿ ಮಱೆಗಳ್(ಆದಿಪು.೧-೫೧). ೪. ತಪ್ಪದೆ ಗುರುವಚನಮುಮಂ ತಪ್ಪಲ್ ಬಸನಿಗೆ ಮದೀಯ ಕೋಪದ ಪದನೇಂ ತಪ್ಪಿದುದೆ (ಶಾಂತಿಪು. ೬-೭೮); ನೋಡುವ ಮಾತಾಡುವ ಬಾಯ್ಮಾಡುವ ಪದನಮೃತಮತಿಗೆ ಪೂರ್ವಸ್ಥಿತಿಯಿಂ ಪಾಡಱಿಯುತ್ತಿರೆ (ಯಶೋಧ. ೨-೪೬); "ಗಗನಮುಖಂ ದುಷ್ಟವೇಶ್ಯಂ" ಎಂದು ಡಂಗುರಮಿರ್ಕುಂ; ಅಡಱಾನೀಗಳೆ ಪೋಪುದು ಪದನಲ್ತು (ರಾಮಾಶ್ವ. ೧-೧೮). ೧೨. ಯೋಗ್ಯವಾದುದು; ಉಚಿತವಾದುದು : ಪಾರ್ದಿರ್ದಪುವೆನ್ನುದಯಮನಾನಿಂ ತಡೆದಿರ್ಪುದು ಪದನಲ್ತೆಂದು ದಿನಪನುದಯಂಗೆಯ್ದುಂ (ಪಂರಾಮಾ. ೧೩-೯೪). **ಪದನ** : ೧. ಕಡುಬಱಿತ ಪದನದಿಂ ರದನದಿಂ ಪದನದಿಂಪಳಿದಧರದಮರನಿಕರಂ . . . ಚೀಱಿ ದೂಱಿ ತೋಱಿದ ರದ್ಯುತಾಕಾರನಂ(ಚಿಒಪು. ೩೧-೩೮). **ಪದನು** : ೩. ಈ ಕಂದರ್ಪಂ ಶಸ್ತ್ರಾಭ್ಯಾಸದೊಳೆಂತುಂ ವಿಸ್ತೃತಮತಿಯಾಗಲಿದುವೆ ಪದನೆಂದು ನೃಪಂ ಬಗೆದು(ಕುಸುಮಾ. ೭-೫೬); ಅಂ ಸಂಧಿಪೊಂದಿದಿನೀ ಪದನೆ ಲೇಸೆಂದಬ್ಧಿ ತನ್ನಾಶ್ರಿತಾದ್ರಿಗಳಂ ಕಾಣಿಸಲಿಂದ್ರನಲ್ಲಿಗೆ ತರುತ್ತಿರ್ದಪ್ಪುದೆಂಬಂತೆ ಮೇರು ಗಿರೀಂದ್ರಾಗತದೇವಕೋಟಿಘಟಕೋಟೀಯೂಥಮೇನೊಪ್ಪಿತೋ(ಪುಷ್ಪಪು. ೧೧-೧೬). ೪. ಪದನಿನುಣ್ಮುವ ಸುಯ್ಯೆಲರ್ಗಂಪುಗಳ್ ದಳಂಗಳನಧಿ

ವಾಸಿಸುತ್ತುಮಿರೆ ಘಟ್ಟಮಗುಟ್ಟುವುದಂಗನಾಜನಂ (ಚಂದ್ರಪು.೧-೩೦). **ಹದ** : ೧. ಹಾಲ ಹದದಲಿ ಹೆಪ್ಪನೆಱೆದರೆ ಮೇಲೆ ತುಪ್ಪವನುಂಬರು (ಪ್ರಭುಲೀ. ೧೭-೨೧). ೩. ಒಬ್ಬಾನೊಬ್ಬ ಹಲಾಯುಧನು ಮಳೆಯ ಹದದಿ ಭೂಮಿಯ ಬೆದೆಯನಱಿದು . . . ಧಾನ್ಯಗಳನ್ನು ಬಿತ್ತಿ(ವಚಶಾ. II, ೭೬); ಶಿಶುಪಾಲ ಕಂಸನ ಮಾವನಿಂತಿವರ ಕೊಲುವಡಿದು ಹದ (ಕುಮ್ಯಾಸ. ೨-೭). ೪. ಮಗನು ರಣದಲಿ ಮಡಿದ ಹದ ಬೀಡುಗಳೊಳಾದುದು ವಾರ್ತೆ(ಕುಮ್ಯಾದ್ರೋ.೭-೧); ನೀಲಿಯ ಮಾಡುವ ಹದವು ಬಹು ಸೋಜಿಗವಾದದ್ದು (ಮುಂಬಯಿ. ಕಿ. ೪-೫೪); ಸರಕಾರದ ಆದಾಯ ವೆಚ್ಚಗಳಿಂದ ಪೇಟೆಯ ಹದ ಕೆಡುವುದು ಸಾಧ್ಯವಾಗದಂತೆ ವ್ಯವಸ್ಥೆ ಮಾಡಬೇಕು (ಹಣಪ್ರ. ೧೬೯). ೫. ಸೊಜ್ಜಿಗೆಯ ಹಿಟ್ಟನೊಳು ಬೆಣ್ಣೆ ಸಕ್ಕರೆಯಿಕ್ಕಿ ಬಟ್ಟವಾಲೊಳಗಂಬಲಿಯ ತೆಱದಿ ಬೆರಸಿಯೊಲೆಯೊಳಗೆ ಗಾರಿಗೆಯ ಹದದೊಳು ತೊಳಸಿ (ಸೂಪಶಾ.೧-೨೦);ಪುತ್ರಜೀವಿ ತಿರುಳನ್ನು ಚೆನ್ನಾಗಿ ಕುಟ್ಟ . . . ಹದವ ನೋಡಿ, ಬಸಿದುಕೊಂಡು (ಸಕವೈ. ೭೦). ೬. ಚಿಗುರುಗಳೆನುವ ಭಲ್ಯಗಳ ಅಲಗುಗಳಂ . . . ವಿರಹಿಗಳ ಹೃದಯವೆಂಬ ಮಡುವಿನಲ್ಲಿರುವ ಕೆಂಪಾದ ನೀರಿನಿಂದ ಹದಂಗಳಂ ಕೊಟ್ಟು (ಸೌಗಂಧಿ. ೪೭೩-೨೧); ಆ ಶಿಖಂಡಿಯು ಕತ್ತೀ ಹದವುಳ್ಳ ಅಂಬಿನಿಂದ ಪೆಟ್ಟು ಬಿದ್ದು (ಕೃಪಾಕ. ೭೭); ಮೊಂಡಪ್ಪನ ಕತ್ತಿ ಬೆಣ್ಣೆ ಕೊಯ್ಯುವಷ್ಟು ಹದವು (ಗಾದೆ). ೧೩. ಅಳವು ; ಪ್ರಮಾಣ : ನೀನು ಸ್ವಲ್ಪ ಬೇಗ್ಗೇ ಬಂದರೆ ನಿನ್ನ ಹದದ್ದೇ ಹಿಟ್ಟು ಮಾಡಬಹುದಿತ್ತು (ಮೂರುದಾ. ೧೩೮); ಎಷ್ಟು ಹೂ ಹಾಕಬೇಕು . . . ಯಾವ ಹದದಲ್ಲಿ ಭಟ್ಟಯಿಳಿಸಬೇಕು (ಹಸುಹೊ. ೧೮೪). ೧೪. ಜಾಣ್ಮೆ ; ಕೌಶಲ : ಕಂಡ ಒಂದೊಂದು ಸಂಗತಿಯನ್ನು ತಟ್ಟನೆ ಪದಕ್ಕೆ ತಿರುಗಿಸುವ ಹದ ಅವರದು (ಷರೀಫ. II, ಮೊದಲ ಮಾತು). ೧೫. (ಲೋಹದ ವಿಷಯದಲ್ಲಿ) ತಕ್ಕ ಗಡುಸು ಮತ್ತು ಸ್ಥಿತಿಸ್ಥಾಪಕತೆಗಳ ಗುಣ : ಸಾಮಾನ್ಯ ಉಕ್ಕನ್ನು ಕಾಯಿಸಿ ನೀರಲ್ಲಿ ಮುಣುಗಿಸಿದರೆ, ಅದರ ಹದವು ನಷ್ಟವಾಗಿ, ಅದು ಬಿರುಸೋ ಮಿದುವೋ ಆಗುವುದು. ಆದರೆ ಈ ಮೆಂಗನೀಸ್ ಮಿಶ್ರವಾದ ಉಕ್ಕಿನ "ಹದ"(Temper)ವು ಬದಲಾಗುವುದಿಲ್ಲ (ಬಾಲಪ್ರ. III, ೧೨೪೫). **ಹದನ್** : ೧೦. ಹದನಂ ಹಸ್ತಾಗ್ರದಿಂ ಘ್ರಾಣಿಸಿ ಬೆದೆವಿಡಿಯಂ ಮೆಚ್ಚಿ ಮೇಂತಕ್ಕೆ ಮೆಯ್ದಾಱದೆ . . . ಕಾಡೊಳ್ ಮದನವ್ಯಾಸಂಗದಿಂದಿರ್ದುದು ಗಿಡಿಗಿಡಿಜಂತ್ರಂಬೊಲಂದೊಂದಿಭೇಂದ್ರಂ (ಲೀಲಾವ.೮-೫). ೧೬. ಸಂಗತಿ; ವರ್ತಮಾನ; ಸುದ್ದಿ : ಈ ಹದನನೆನಗಲ್ಲಿಯೆ ಪೇಟ್ಡಿಯಪ್ಪೊಡೆನ್ನೆರ್ದೆಯನಾಗಳೆ ಕೊಂಡು ಬರ್ಪೆಂ (ಪಂಚತಂ. ೨೮೦-೯); ಗಿಳಿ ಜವದಿಂದೆಟ್ಟು ಮುಂಚೀ ಹದನನಱಿಪುವೆನೆಂದು ಪಾಱಿ ಬಂದಸುಕೆಯ ಪೊಸ ಬನಮಂ ಪೊಕ್ಕು (ಉದ್ಭಟ.೭-೧೨೬ ಪ); ಬಿನ್ನವಿಸಲೆಂದಿರ್ದ ಹದನಂ ಮುನ್ನಱಿದು ಪರಮೇಶ್ವರಂ ಹಿಮಗುನ್ನಯನದಿಂ ನೋಡುವವಸರದೊಳ್ (ಬಸಪು. ೧-೫೫); ಅರಸನಿಂದು ಸಜೀವಿಯೋ ಸುರಪುರನಿವಾಸಿಯೊ ಹದನನೇನೆಂದಱಿಯೆನು (ಕುಮ್ಯಾಕ. ೧೪-೩೮). **ಹದನ** : ೩. ರಾಘವನಿಂದ ಬದುಕುವೆನೆನಲಭಾಗ್ಯಂಗಾದುದೀ ಹದನ ಎಂದು ಮನದೊಳಗಳಲಿ ವಿಭೀಷಣ ನೊಂದು (ಕೌತಿರಾ. ೨೯-೧೯). ೪. ಅರಸನಿಂ ಧನಮಿತ್ರಂ ಬೀಟ್ಕಿಣ್ಕಂಡು ಬಂದು ಕಾರ್ಯದ ಹದನನೆನ್ನೊಳ್ ಪೇಟಲ್ (ದಶಕು. ೮-೧೫೧ ಪ); ಬರುತ ಕಳ್ಳರ ಹೆಜ್ಜೆ ಹದನಮಂ ನೋಳ್ಪಾಗಲರಸು ಮೆಟ್ಟುವ ಪಂಚರತ್ನಮಯಪಾದುಕಂ . . . ಕನ್ನದ ಬಾಯೊಳಿರೆ ಕಂಡು (ಸಮ್ಯಕೌ. ೨-೨೨); ಈ ಹುಮ್ಮಸದ ಕುದುರೆಯನು ಏರುವ ಹದನವನು ಕಲಿಸಯ್ಯಾ (ಅಂತರಾ. ೫೦). ೭. ಹದನವಾಗಿಹ ಬಾಣವನ್ನಾ ಚದುರ ಧನ್ವಿಯು ಪೂಡಿ ಹೆದೆಯಲಿ (ರಘುವಂ. ೯೭-೫೭); ಅದರ ಉಗುರು ಬಹಳ ಹದನ (ಮುಂಬಯಿ. ೧-೩೮); ಹದನವಾದಗಲ ಕತ್ತಿ ಕೈಯೊಳಿದೆ (ನೆಲಮು. ೮೪-೧೧). **ಹದನು** : ೨. ಅವನಿಪತಿ ಪೂರಾಯದುಗುಡದಲಿ ನರನ ಹದನೇನೋ ವೃಕೋದರನಿರವು ತಾನೆಂತೆನುತ ಚಿಂತಾಭರಿತನಿದ್ದನು (ಕುಮ್ಯಾಅ. ೧೧-೨); ಏನ ಮಾಡುವೆನೇನು ದಿಕ್ಕೆನಗೇನು ಹದನೆಂದಳಲಿ ಬಳಲುವ ಹೀನಹೃದಯನನುಪಚರಿಸಲು ವಸಿಷ್ಠನೈತಂದ (ತೊರರಾ. ೧-೪-೪); ಆ ಸಮಯದಿ ಸದ್ಗುರುರಾಯ ನೆನೆದ ಪರಾಶರಮುನಿಗಾದ ಹದನ (ಮೋಹತ. ೫-೨೭); ಜೋಕಿನ ನಾಯಕಿಯರಿರ್ದರಾ ಕೇರಿಯೊಳ್ ಸೋಕಿದವರ ಹದನೇನು (ಕಂನವಿ. ೬-೧೦೮). ೪. ಸುಖವನನುಭವಿಸಿ ಅನು ಸುಖದ ಹದನನು ಕಂಡೆ ದುಃಖವನನುಭವಿಸಿ ಅನು ದುಃಖದ ಹದನನು ಕಂಡೆ (ಸಮಾವ. ಕ. ೫೯೭-೩೩); ದೇವ ನಮ್ಮದು ಧರ್ಮಯುದ್ಧವಿದಾವ ಹದನನು ಬೆಸಸಿದಿರಿ (ಕುಮ್ಯಾದ್ರೋ. ೧೪-೧೨); ರಜಕನಾಡಿದ ದೂಸಱಂ ನೆನೆದು ಕುಲಪತ್ನಿಯಂ ಬಿಡುವ ಹದನಾವುದು (ಜೈಮಿಭಾ. ೧೮-೫೩); ಒಳ್ಳೆಂಡಿರೀ ಧರ್ಮದ ಹದನಱಿತಾಚರಿಸುವುದು (ಹದಿಬ. ೧-೬೧). ೫. ಹದನಾದ ಮಾಂಸಮಂ ಮುಂದಿಡುತ್ತಭವಂಗೆ ಮುದದಿಂದಮರ್ಪಿಸಿದನಾ ಪುಳಿಂದಂ (ಮಹಾವಿ. ೭-೪೪). ೧೨. ಸದೆ ಕೂಡಿಸಲಿಕ್ಕೆ ತಿಳಿಯದವ ಹದನಾದ ಕೆಲಸ ಮಾಡ್ಯಾನೇ ? (ಗಾದೆ). ೧೬. ಪರಮೇಶ್ವರಂಗೀ ಹದನನಱಿಹಬೇಕೆಂದು ನಂದೀಶ್ವರನತಿತ್ವರಿತ ಗಮನದಿಂದೈತಂದು (ಚಿಬಪು. ೩೧-೨); ತಾಳಿಕೊ ಸಖಿ, ಅಂಜಿಕೆಯುಳಿ, ಪೇಳೇನೀ ಹದನು ? (ಅಹಲ್ಯೆ. ೭-೧೫). ೧೭. ಕಾರಣ : ಎಮ್ಮ ಬರಿಸಿದ ಹದನದೇನು (ಕುಮ್ಯಾಅ. ೪-೯೭); ಮೋಹವಿಂತೇಕಿವರೊಳೆನ ಗೆಂಬಾ ಹದನನಱಿವೊಡೆ ಬಗೆದು ಜಿತಮೋಹಿಗಳನಾ ಚತುರನೆಳನಗೆ ತೊಳಗಲಿಂತೆಂದ (ಸಾಳ್ವಭಾ. ೪-೫೦). ೧೮. ಹಂಚಿಕೆ; ಉಪಾಯ: ಇದಕ್ಕೆ ಹದನೇನು ? ಆಲೋಚಿಸಿ ಹೇಳು (ಭೀಷ್ಮಚ. ೧೪೭).

ಪದ ಮಾಡು, ಹದ ಮಾಡು, ಹದನು ಮಾಡು=೧. ಚೂಪು ಮಾಡು ; ಹರಿತಗೊಳಿಸು : ಪದ ಮಾಡಿ ತಳುವಿಕ್ಕಿ ಪೊಳೆವ ಬತ್ತಿ ಸಾಯುಧವಿಡಿದಭ್ಯಾಸಿಗಳ . . . ಕಾದಿಸುವ ಕೋವಿದ ಶಿರೋಮಣಿ (ಮೋಹತ. ೧೭-೮೩); ನಾಲಗೆಯನು ಹದ ಮಾಡು ಜಡವನು ತೊರೆದೇಳು ಜಗ ನಿನಗಡಿಯಾಳು (ಇಂಚಾಪ. ೧೫೩-೫೨). ೨. ಸರಿಮಾಡು ; ಅನುವುಗೊಳಿಸು : ಗಂಧಕುಂಕುಮರಸಭರಿತಗಂಧವ ಗಂಧೋದಕದಿಂದೆ ಹದಮಾಡಿ ಗಂಧವಟ್ಟಲನಿರಿಸಿದಳು (ಮೋಹತ. ೨೧-೯); ಈ ದಿವ್ಯದರ್ಶನಫಲ ಕೈಸೇರಬೇಕಾದರೆ ಸಾಧಕನು ತನ್ನ ಚಿತ್ತಕ್ಷೇತ್ರವನ್ನು ಶುದ್ಧಿ ಮಾಡಿ, ಸಂಯಮ ನಿಯಮಗಳಿಂದ ಹದ ಮಾಡಿ . . . ಕರುಣೆಗೆ ಕಾಯಬೇಕು (ಜಗದಾ. ೨೬); ಹಡೆದಮ್ಮ ನೀರಾ ಹದ ಮಾಡೀ ಏನಂದಾಳೂ (ಹುಟ್ಟಹ. ೧೭೬); ಅಂಕಿ ಅಂಶಗಳನ್ನು ಹದನು ಮಾಡಿ . . . ತರ್ಕಸಮ್ಮತವಾದ ಅನುಮಾನಗಳನ್ನು ಸ್ಥಾಪಿಸುವುದು ಸಂಖ್ಯಾಶಾಸ್ತ್ರದ ಕಾರ್ಯ (ಕವಿಕೋ. I, ೮). **ಹದಕ್ಕೆ ಬರು**=ಸರಿಯಾದ ಸ್ಥಿತಿಗೆ ಬರು : ಕುಟ್ಮಲಃ . . . ತತ್ಕಾಲದಲ್ಲಿ ವಿಕಸಿತವಾಗತಕ್ಕಷ್ಟು ಹದಕ್ಕೆ ಬಂದ ಹುವ್ವಿನ ಮಗ್ಗು (ಸಿದ್ಧಾಂತಿ. ೧೧೫); ಮರಮುಟ್ಟುಗಳ ಬೆಲೆ ಹದಕ್ಕೆ ಬರುವವರೆಗೆ ಆ ಕೆಲಸಕ್ಕೆ ಕೈಹಾಕುವಂಥ ಹುಚ್ಚನಲ್ಲ (ಯೋಧಪು. ೨೫). **ಹದದಡಿಕೆ**=ಚೆನ್ನಾಗಿ ಬಲಿತ ಅಡಿಕೆ : (ಕಿ). **ಹದನಾಗು, ಹದವಾಗು**=೧. ಸರಿಯಾದ ಸ್ಥಿತಿಗೆ ಬರು : ಅವರ ಮನಸ್ಸು ಈ ಕಾರ್ಯಸಾಧನೆಗಾಗಿ ಹದನಾಗುತ್ತಿತ್ತು(ಶ್ರೀವಿದ್ಯಾ.೧೫೯); ಆಧರರದನದೊಳಗಿಟ್ಟು ತಾ ಹದವಾಗಿಯೊದಗಿ ವಕ್ಷಸ್ಥಳಕಾಗ ಎದೆಗಳ ಹೂಡಿ ನಿನ್ನಯ ಮುನಿಸನು ಕಳೆವುದಕೆನ್ನಳವೆ (ಕಂನವಿ. ೬-೧೭೧); ಕಂತನಾದ ಹದವಾಗಲೆಂದು ಮನಸ್ಸಿನಲ್ಲೇ ಹರಸಿಕೊಂಡು ಮುಖವನ್ನು ತಮಟೆಯಂತೆ ಕೆಂಚಗೆ ಕಾಯಿಸಿದೆ (ನಂಟರು. ೩೮). ೨. ತೀಕ್ಷ್ಣವಾಗು ; ಹರಿತವಾಗು : ಅದರ ಕೊಂಬುಗಳ ತುದಿಗಳು, ಎದುರು

ಬರುವ ಶತ್ರುಗಳನ್ನು ಒಂದೇ ತಿವಿತಕ್ಕೆ ಸೀಳಿಬಿಡುವಷ್ಟು ಹದನಾಗಿದ್ದವು (ಬಂಗಾಹೆ. ೩೧). ೩. ನಯವಾಗು ; ನುಣುಪಾಗು : ಕರುಗಳು . . . ಬೇಗನೆ ಮೈಗೂಡುತ್ತವೆ. ಮುಂಡದ ತೂಕ ಹೆಚ್ಚು, ಹದವಾಗುವ ಅಟ್ಟೆ ಭರ್ಜರಿ (ಕವಿಕೋ. I, ೨೨೨).

[ದೇ.॥ ತಮಿ. ಮಲ. ಪತ ; ತೆಲು. ಪದನು, ಪದುನು, ಹದನು ; ಮಲ್ತೊ. ಪತೊ]

ಪದ$_2$ (ನಾ). ೧. ಚರಣ ; ಅಡಿ ; ಪಾದ : "ಚರಣಂ ಕ್ರಮಮಂಘ್ರಿ ಪದಂ" (ವಸ್ತುಕೋ. ೬೭-೨) ; ಅಲೆದುಂ ನೋಡಿ[ಯೊ]ಜಲ್ದುವಿಟ್ಟ ಪದಮುಂ ನೋಳ್ದುಂ ಕಳಲ್ದುಂ ಪಳಂಚಲೆದುಂ ಮುಟ್ಟದ ಸೀಯನಪ್ಪದನಿಯುಂ ಮೇಲ್ವಾಯ್ದುಮೇವೈಸಿಯುಂ ಪಿರಿದುಂ ಲುಂದುವ ಬೇಟದೊಂದು ಸುಸಿಲುಂ ನೋಯಿಕ್ಕುಂ (ಅದಿಪು. ೧೨-೨೩) ; ಪದದಿಂ ನಾಭಿವರಂ ವಾತದ ತಾಣಂ (ಲೋಕೋಪ. ೯-೨) ; ಪದವಂ ಸುಖಾಶ್ರುವಿಂದಂ ತೊಳೆದು (ತಿರುರ. ಹ. ೮-೨) ; ಅಂಬುಜಾಕ್ಷನ ಪದವ ಮಱೆದರೆ ಪಾತಕದ ದುರ್ಗದಲಿ ಕೆಡಹನೆ ನಮ್ಮನು (ಕುಪ್ಯಾಸ.೫-೪೨). ೨. ಹೆಜ್ಜೆ ; ದಾಪು : ಉದ್ಗೃಹೀತತಾಂಬೂಲಕರಂಕವಾಹಿನೀಸ್ಕಂಧವಿನ್ಯಸ್ತಹಸ್ತನುಮಾಗಿ ಕತಿಪಯಪದಂಗಳಂ ನಡೆದು (ಕಾದಂಪೂ. ೬೯). ೩. ಹೆಜ್ಜೆಯ ಗುರುತು ; ಪಾದದ ಜಾಡು : ಪದಮುಮನಿಂಬುಮನಣಮಱಿಯದ [ದೇವು]ದು ಬದ್ದೆ ಬೆಳ್ಮಿಗಂ ಪಜ್ಜೆ ದಲೆಂಬುದನೆರಡುಮನಱಿವಾತನೆ ಚದುರಂ (ಪಂಪಭಾ. ೫-೪೫). ೪. ಹಾದಿ ; ಮಾರ್ಗ : 'ಪದಂಗೆಡು' ಪರಾ. ೫. ಕುರುಹು ; ಸಂಕೇತ ; ಚಿಹ್ನೆ. ೬. ಅಧಿಕಾರ ; ಪದವಿ ; ಹುದ್ದೆ ; ಸ್ಥಾನ : ವಿಪುಳಯಶೋವಿತಾನಗುಣಮಿಲ್ಲದನಂ ಪ್ರಭು ಮಾಡಿ ಪೂರ್ವಭೂಮಿಪರ ಪದಂಗಳಂ ಪುಗಿಸಿ (ಪಂಪಭಾ. ೧-೧೪) ; ಪದಂ ನಿನಗೆ ಮುಕ್ತಿಯೊಂದೆ ಕುಡುತಿರ್ಪೆ ನೀನಂತದಂ ಪದಾಶ್ರಿತರ್ಗೆ (ಚಂದ್ರಪು. ೧೪-೯೭) ; ಪದದ ದರ್ಪದಲಂಬುಜಾಕ್ಷನ ಪದವ ಮಱೆದರೆ ಪಾತಕದ ದುರ್ಗದಲಿ ಕೆಡಹನೆ ನಮ್ಮನು (ಕುಪ್ಯಾಸ. ೫-೪೨) ; ನಿನಗೆ ಕೊಟ್ಟಪೆನು ಪುಸಿಯಲ್ಲ ಚತುರ್ವಿಧಪದಂಗಳನು (ಪ್ರೌಢಂಾ. ೬-೫೬) ; ೭. ಸ್ಥಳ ; ಜಾಗ : ಉಡೆದೊವಲುಟ್ಟು ಕಾಳಿಕೆಯ ಕುಪ್ಪಸವಿಟ್ಟು ಪದಂಗಳಲ್ಲಿ ಮೆಲ್ಲಡಿಗಳ ಸಾರ್ಚಿಕೊಂಡು . . . ಚರಿಸುತಿರ್ದನದೊರ್ವ ಪುಳಿಂದನಾಯಕಂ (ಪುಲ್ಲಕಾ. ೩-೨೦೨). ೮. ಸದ್ಗತಿ ; ಮೋಕ್ಷ : ಗುರುಪಾದಕೆಱಗಿದರೆ . . . ಪರಿಣಾಮವಕ್ಕು ಪದವಕ್ಕು (ಸರ್ವಜ್ಞ.೯೯). ಇದೆ ತುಳಸಿ ಸೇವಿಸಲು ಪೂರ್ವದಲಿ . . . ಒಬ್ಬ ಭೂಸುರ ಪದಕೆ ಪೋದ (ವಿದಾಕೃ. ೯೮-೧೧). ೯. ಅವಕಾಶ ; ಆಸ್ಪದ : ಮೊದಲೊಳ್ ತಮ್ಮನೆ ನೋಡಲಿತ್ತ ಪದದೊಳ್ ಕೈಕೊಂಡವರ್ (ಕಾದಂಪೂ. ೫೬೯). 'ಪದಂಬಡೆ' ಪರಾ. ೧೦. ಮನೆ ; ಆಶ್ರಯ ; ಆವಾಸಸ್ಥಳ. ೧೧. ವಸ್ತು ; ಪದಾರ್ಥ ; ದ್ರವ್ಯ. ೧೨. ಕಾರಣ ; ಹೇತು ; ಮೂಲ ೧೩. ನೆಪ ; ವ್ಯಾಜ. ೧೪. ವ್ಯವಹಾರ ; ಕಾರ್ಯಭಾರ. ೧೫. ರಕ್ಷಣೆ ; ಕಾಪು. ೧೬. ವೇದಮಂತ್ರಗಳನ್ನು ಹೇಳುವ ರೀತಿಗಳಲ್ಲಿ ಒಂದು ಪ್ರಕಾರ : ಬ್ರಹ್ಮರಾಕ್ಷಸನಾಗಿ ಯೊಕ್ಕಲಿಗನೋರ್ವನಂ ಹಿಡಿದು ಬೋಧಿಸಿಕೊಂಡು . . . ನಖಮುಖಗಳಂ ಗಣನೆಯಿಂ ಗುಣಿಸಿ ಪದ ಪಾಳಿ ಸುಜಟಾಕ್ರಮಂ (ವೀಶೈಪು. ೪-೭-೨೧) ; ಉದಾತ್ತ . . . ಪದ ಕ್ರಮ ಜಟೆ ಚರ್ಚೆಯೆಂಬ ಋಗ್ಯಜುಸ್ಸಾಮಾಭಿಧಾನಮುಳ್ಳ ವೇದಶಾಸ್ತ್ರಂಗಳಂ ಪಚಿಸುವೆಂದಡಾಭಾಸರೂಪಮಾದವು (ದಶಾವ. ೨-೧೩ ಪ) ; ಅವನು ಕಲಿಯಬೇಕಾಗಿದ್ದ ವೇದದ ಮಂತ್ರಭಾಗವನ್ನು ಜಟ, ಪದ, ಕ್ರಮಗಳ ರೀತಿಯಾಗಿ . . . ಒಪ್ಪಿಸಿದನು (ಭಾರದ. ೨೭೧). ೧೭. ಕಿರಣ ; ಕದಿರು. ೬, ೧೭ : ಪದಮತ್ಯುತ್ತುಂಗಗೋತ್ರಾಚಳಶಿಖರದೊಳೊಪ್ಪುತ್ತಿರಲು . . . ಜಗದ್ವಂದ್ಯಮಾದತ್ತುದಯಾದಿತ್ಯಪ್ರಭಾವಂ ಪ್ರಕಟಿತಭುವನಾಭೋಗ ತೇಜೋವಿಳಾಸಂ (ಎಕ. V, ಬೇಲೂರು.೧೭-೫೩ ; 1136). ೧೮. ಅಳೆಯುವ ಒಂದು ಪ್ರಮಾಣ ; ಮನೆದಾಯ : ಮನೆಯಗಲದಿಂದೆ ಗುಣಿಯಿಸು ನೀಳಮಂ ಪದಮೆನಿಕ್ಕುಂ (ಲೋಕೋಪ. ೩-೨೦) ; ನಾಲ್ಕು ಪದವು ಪ್ರಮಾಣದಲ್ಲಿದೆ, ಅಗ ಅದ್ಯಂತ ಪದಗಳ ಗುಣಾಕಾರವು ಮಧ್ಯಪದದ ಗುಣಕ್ಕೆ ಸಮವಾಗಿದೆ (ಭೂಮಿಅ. ೫೨). ೧೯. [ವ್ಯಾಕ] ಪ್ರತ್ಯಯಸಹಿತವಾದ ಶಬ್ದ ; ಮಾತು : "ಪ್ರಕೃತಿ ಪ್ರತ್ಯಯಂಗಳೆರಡುಂ ಕೂಡೆ, ಪದಮಕ್ಕುಂ" (ಶಮದ. ೩೫ ವೃತ್ತಿ) ; ಪದಮರ್ಥಪ್ರತಿಪಾದನಪ್ರವಣಮರ್ಥಂ . . . ರಸಪ್ರಸ್ಯಂದಿ ಮಾಟ್ಕುಂ ಮನೋಮುದಮಂ (ಮಲ್ಲಿಪು. ೧-೩೬) ; ಪದಮಂ ಪ್ರಾಸಮುಮಂ ತಪ್ಪದೆ ಬಲ್ಲಂ (ಅನಂಪು. ೧-೪೩) ; ಪದ ಪದದಕ್ಕರಕ್ಕರದ ವಾಕ್ಯದ ವಾಕ್ಯದ ವಿಶ್ರಮಂ ಲಯಂ ಪುದಿದ ಬೆಡಂಗಿನಿಂ . . . ರಸಂಗಳೋಜೆವಡೆದೋದುವನೀ ಚಿಕದೇವಭೂವರಂ (ಚಿಕವಿ. ೪-೯೬) ; ಪ್ರಕೃತಿಯೂ ಪ್ರತ್ಯಯವೂ ಕೂಡಿದರೆ ಪದವಾಗುತ್ತದೆ (ಸುಧ್ಯಮ. ೫). ೨೦. [ಸಂಗೀತ] ಗೀತರಚನೆಯಲ್ಲಿ ಒಂದು ಪ್ರಕಾರ : ಭರತನಾಟ್ಯಕ್ಕೆ ಮೀಸಲಾದ ಈ ಪದಗಳು ಶೃಂಗಾರರಸಪ್ರಧಾನವಾಗಿದ್ದು, ಭಗವಂತನ ಲೀಲಾವಿನೋದಪ್ರಸಂಗಗಳನ್ನು ಒಳಗೊಂಡ ಸಾಹಿತ್ಯದಿಂದ ಕೂಡಿರುತ್ತವೆ (ಸಂಗೀಚಂ. ೭೬) ; ನಿಬದ್ಧಗಾಯನದಲ್ಲಿ (೧) ಬರೇ ರಾಗಲಯಪ್ರಧಾನವಾದ ಪ್ರೌಢಬಂಧಗಳೂ (ಧ್ರುವ, ಪದ . . . ಜಾವಳಿ ಇತ್ಯಾದಿ) ಕೃತಿಗಳೂ ಸೇರುತ್ತವೆ (ಭಾರದ. ೫೪೨). ೨೧. ಪದ್ಯ ; ಹಾಡು ; ಗೀತೆ : ಉದಯಕಾಲದೊಳೆದ್ದೊಲಿದಿಷ್ಟದೈವದ ಪದಗಳ ಪಾಡುವಂದದೊಳು (ಹವಿಬ. ೨-೧೫) ; ಮಗಳೇ, ಸಂಗಣ್ಣಗೆ ನಿನ್ನ ಪದಗಳನ್ನು ಕೇಳೋ ಆಸೆ ಆಗಿದೆ . . . ಎರಡು ಪದಗಳನ್ನು ಹೇಳವ್ವ (ಹಾಹುತ್ತ. ೭೨) ; ಪದದಂತೆ ತಾಳ, ಮನದಂತೆ ಗರ್ವ (ಗಾದೆ). ೨೨. ಪದ್ಯದ ಒಂದು ಪಂಕ್ತಿ,—ಸಾಲು. ೨೩. [ಗಣಿತ] ಎರಡು ಎಂಬ ಸಂಖ್ಯೆಯ ಸಂಕೇತ : ಪದಯುಗಳಂ ಸಮಉಭಯಂ ಬಾಹುಕಿವಿಗಳೆರಡಜ ನಾಮಂ (ವ್ಯವಹಾ. ೯-೨).

ಪದವಾಕ್ಯಪ್ರಮಾಣಜ್ಞ = ವ್ಯಾಕರಣ, ತರ್ಕ ಮತ್ತು ಮೀಮಾಂಸೆಗಳೆಂಬ ಶಾಸ್ತ್ರಗಳನ್ನು ಬಲ್ಲವನು : ಪದವಾಕ್ಯ[ಪಾಠಾಂ.ಕ್ಯಾರ್ಥ] ಪ್ರಮಾಣಜ್ಞನೆಂದೆನ್ನ ಕೋವಿದರು ಕೊಂಡಾಡುವರು (ಕುರಾಸಾಂ. ೧-೭೩). ಪದವಾಕ್ಯವಿದ = ವ್ಯಾಕರಣ ಮತ್ತು ತರ್ಕಶಾಸ್ತ್ರಗಳನ್ನು ಬಲ್ಲವನು : ಪದವಾಕ್ಯವಿದರಾಗ ವಾದಗಡಣೆಯ ಬಿಟ್ಟು ಒದವಿಪರು ದಿಟದರಿವ (ಮಂಕುಕ. ೪೧). [ಸಂ.]

ಪದಂಗಲಿ (ನಾ). ಒಂದು ಸ್ಥಳದ ಹೆಸರು (?) : ಎವಂಙ್ಗಲ್ಲಳೊನ್ದು ದೇಗುಲಕ್ಕೆ ನೆಲನ ಕಟ್ಟಸಿ ಕೊಟ್ಟ ಪದ[ಙ್ಗ]ಲಿಗಂ ಒನ್ದು ನರಯಣನ ದಾನಗೊಟ್ಟ (ಸೌಇಇ. XI-i, ೩೫-೧೦ ; 933). [?]

ಪದಂಗಾಣ್, ಪದಗಾಣ್ (ಕ್ರಿ). ಹದಗೊಳ್ಳು ; ಪಕ್ವವಾಗು : ಕನ್ನಡದೊಳ್ ಬಿಂದುವಿಕಲ್ಪಕ್ಕೆ . . . ಪದಂಗಂಡಂ—ಪದಗಂಡಂ [ಪಾಠಾಂ. ಪದಂಗೊಟ್ಟಂ, ಪದಗೊಟ್ಟಂ, ಪದಂಗೊಂಡಂ, ಪದಗೊಂಡಂ] (ಶಮದ.ಮ.೧೩೮ ಪ್ರಯೋ). **ಪದಗಾಣ್** : ಮೇಲಿನ ಪ್ರಯೋಗವನ್ನು ನೋಡಿ. [ಪದ$_1$+ಕಾಣ್]

ಪದಂಗಾಸು$_1$, ಹದಗಾಸು (ಕ್ರಿ). ೧. ಹದವಾಗುವಂತೆ ಕಾಯಿಸು ; ಪುಟವಿಕ್ಕು : ಉದಯಾದ್ರಿಯೊಳ್ ಪದಂಗಾಸಿದ ಪೊನ್ನ ಪುಂಜಿಯ ವೊಲಿರ್ದುದು ಕಣ್ಗೆ ಹಿಮಾಂಶುಮಂಡಲಂ (ಪಂಪಭಾ. ೩-೮೧). 'ಪಟಂಗಾಸು' ಪರಾ. **ಹದಗಾಸು** : ೨. ಪಕ್ವವಾಗುವಂತೆ ಬೇಯಿಸು ; ಹದಕ್ಕೆ ಬರುವಂತೆ ಅಡು : ನಿಮ್ಮ ವಿಸ್ರಸಾವೇಶದ ಅಂಗಜಾಗ್ನಿಯಿಂದ ಹದಗಾಸಿ ತನಿಪಾಕ ಮಾಡಿಕೊಂಡು ಸವಿನೋಡಿಯೇ ಬಿಡಬೇಕು (ಮಂತ್ರಶ. ೨೯-೧೮). [ಪದ$_1$+ಕಾಸು$_1$]

ಪದಂಗಾಸು$_2$ (ನಾ). ಪುಟವಿಟ್ಟುದು; ಕಾಸಿ ಶುದ್ಧಗೊಳಿಸಿದುದು: ಅನುವಿಸಿ ಕರೆದಟ್ಟುಗೆ ಸೊರ್ಕಿನ ಸಿಂಧುರಮನಿಲಜವದ ವಾಜಿ ಪದಂಗಾಸಿನ ಪೊಂಗಳಲ್ಲದೀಯದೆ ನಿನಗೆಂತುಂ ಲೋಭಮುಂಟೆ ದಾನವಿನೋದ (ಲೀಲಾವ. ೪-೪೩). [<ಪದಂಗಾಸು$_1$]

ಪದಂಗುಟ್ಟು (ಕ್ರಿ). ಹೇಳು; ನುಡಿ: ಪುಷ್ಪಶರವಶೀಕರಣಮಂತ್ರಮಂ ಪದಂಗುಟ್ಟದ ಕೋಗಿಲೆಗಳಿಲ್ಲ (ಪಂರಾಮಾ. ೧-೧೦೭ ಪ); ಚತುರಚತುರಿಕೆಯರೋದಿಸಿದ ಮದನಾಗಮಂಗಳಂ ಪದಂಗುಟ್ಟ ಪರಮಪಂಡಿತಂಗಳೆನಿಪ ಪಂಜರದ ಪಂಡಿತವಕ್ಕಿಗಳ್ (ಪುಷ್ಪಪು. ೨-೬೬ ಪ); ಕುಸುಮಸಾಯಕ ಜನವಶ್ಯಮಂತ್ರಂಗಳನೊಸೆದು ಪದಂಗುಟ್ಟದಿರ್ಪ ಪಸುಳೆಪಾರಿವಗಳಾ ಬನದೊಳಗಿಲ್ಲ (ಕುರಾಸಾಂ. ೩-೨೨). [ಪದ$_2$+ಕುಟ್ಟು$_1$]

ಪದಂಗುಡು 'ಪದಂಗೊಡು' ನೋ.

ಪದಂಗೆಡು (ಕ್ರಿ). ಮಾರ್ಗ ತಪ್ಪು; ಹಾದಿ ತಪ್ಪು: ಕಾಣದವಂ ಗುರ್ವಿದ ಮರ್ಪು ದಿಗ್ಭ್ರಮೆ ಪದಂಗೆಟ್ಟಂಗೆ (ಕಾದಂಪೂ. ೮೦೩). [ಪದ$_2$+ಕೆಡು$_1$]

ಪದಂಗೊಡು, ಪದಂಗುಡು, ಪದಗುಡು, ಪದಗೊಡು, ಹದಗೊಡು (ಕ್ರಿ). ೧. ಸರಿಯಾದ ಸ್ಥಿತಿಗೆ ಬರುವಂತೆ ಮಾಡು; ಹದಗೊಳಿಸು: ಕನ್ನಡತ್ವದೊಳ್ ವಿಕಲ್ಪಬಿಂದುವಿಂಗೆ . . . ಪದಂಗೊಟ್ಟಂ, ಪದಗೊಟ್ಟಂ [ಪಾಠಾಂ. ಪದಂಗಂಡು ಪದಗಂಡಂ, ಪದಂಗೊಂಡಂ, ಪದಗೊಂಡಂ] (ಶಮದ. ಕಿ. ೧೬೭ ಪ್ರಯೋ). **ಪದಂಗುಡು:** (ಕಿ). **ಪದಗುಡು:** ೨. "ಅಲಗಿನ ಬಾಯಿಗೆ ನೀರು ಕುಡಿಸು" (ಪ್ರಭಣ್ಣ). **ಪದಗೊಡು:** ೧. ಮೇಲಿನ 'ಪದಂಗೊಡು' ಉಲ್ಲೇಖದ ಪ್ರಯೋಗವನ್ನು ನೋಡಿ. **ಹದಗೊಡು:** ೧. ಗಿಳಿಹಣ್ಣ ಕದುಕಿ ನುಡಿ ಹದಗೊಡುವದು (ನೆಲಮು. ೨೩-೪). [ಪದ$_1$+ಕೊಡು$_1$]

ಪದಂಗೊಳ್, ಪದಗೊಳ್, ಪದಗೊಳ್ಳು, ಹದಗೊಳ್ಳು (ಕ್ರಿ). ಸರಿಯಾದ ಸ್ಥಿತಿಗೆ ಬರು; ಹದವಾಗು: ಕನ್ನಡದ ಅತ್ವದೊಳ್ ವಿಕಲ್ಪಬಿಂದುವಿಂಗೆ . . . ಪದಂಗೊಂಡಂ, ಪದಗೊಂಡಂ [ಪಾಠಾಂ. ಪದಂಗಂಡಂ, ಪದಗಂಡಂ, ಪದಂಗೊಟ್ಟಂ, ಪದಗೊಟ್ಟಂ] (ಶಮದ. ೧೬೭ ಪ್ರಯೋ). **ಪದಗೊಳ್:** ಮೇಲಿನ ಪ್ರಯೋಗವನ್ನು ನೋಡಿ. **ಪದಗೊಳ್ಳು:** ಎಲೆ ಕಾಂತ ನಿನ್ನ ಸವಿವಚನವರುಷಂಗರೆಯೆ ನಲವಿಂದಲೆನ್ನ ಹೃದ್ಧರಣಯತಿಪದಗೊಂಡು (ನಮೋ. ೬-೩). **ಹದಗೊಳ್ಳು:** ಕಂಡೆನೆನ್ನ ಮನೋರಥದ ಹದಗೊಂಡ ಹೊಂಬೆಳಗೈಯ ಹೊಂಬೆಳಸಿನ ಮಹೋದಯವ (ನಿಭಾಗ. ೧೦-೩೩-೩೭); ಒಸೆದು ಗುಣಿಸಲ್ಕೆ ಕಂಭಮ ಸುಸರದಿ ಹದಗೊಳ್ಳೆ ಸಮದ ಚ ಕಮದಕ್ಕುಂ (ಕ್ಷೇತ್ರಗ. ೩೨-೧೯); ಕುದಿಯುವದು, ಮಿದಿಯುವದು, ಹೊಂದಿ ಹದಗೊಳ್ಳುವದು (ನೆಲಮು. ೩೨-೨೩). [ಪದ$_1$+ಕೊಳ್$_1$]

ಪದಂಗೊಳಿಸು ಪದಗೊಳಿಸು, ಹದಗೊಳಿಸು, ಹದನಗೊಳಿಸು, ಹದನುಗೊಳಿಸು (ಕ್ರಿ). ೧. ಹೊಂದಿಸು; ಅಳವಡಿಸು: ಅಲರಂಬಿಂಗಣಸಂ ಮಣಿಕುಲದಿಂ ಸಮೆದಂಗಜಂ ಪದಂಗೊಳಿಸಿದವೋಲ್ ತಳತಳಿಸಿ ಪೊಳೆಯುತಿರ್ಕುಂ ಲಲನೆಯ ಪೆಂಪೆಸೆವ ಬೆರಳ ಮಣಿಮುದ್ರಿಕೆಗಳ್ (ದಶಕು. ೬-೬೦). ೨. ತೇವಗೊಳಿಸು; ತೋಯಿಸು: ಇಳಿದಿಳೆಯಂ ಪದಂಗೊಳಿಸೆ ದಾನಜಳಂ ಜಳದಂಗಳಂತೆ ಮಂಜುಳಪೃಥುಕೂಟದಂತೆಸೆಯೆ (ರಾಜಶೇ. ೧೩-೬೬). **ಪದಗೊಳಿಸು:** ೨. ಪದಗೊಳಿಸುತ್ತೆ ದಾನರಸದಿಂ ರಸೆಯಂ . . . ಬಂದುದದೊಂದು ಸಿಂಧುರಂ (ಶಬಶಂ. ೩-೪೧). ೩. ಚೂಪು ಮಾಡು; ಹರಿತಗೊಳಿಸು; ತೀಕ್ಷ್ಣಗೊಳಿಸು: ಎಕ್ಕಲಂ ಚಳಿಗದಿರ್ಗಲ್ಲಿನೊಳು ದಾಡೆಯಂ ಮಸೆದು ಪದಗೊಳಿಸುವನಿತಕ್ಕೆ ಜಾಯಿಲ ಕಂಡು ಪಾಯಲ್ (ರಾಘಚ. ೧೭-೭೨). **ಹದಗೊಳಿಸು:** ೪. ಸಿದ್ಧಗೊಳಿಸು; ಅಣಿಮಾಡು: ಗಮಿಸುವಸುವಿನ ಲೋಹಮಂ ಚಿದ್ಧಮನದಿಂ ಹದಗೊಳಿಸುವಾ ಕಮ್ಮಾಱನುಂ ತಾನೆ (ಬಸಪು. ೨೧-೨೯); ಎದೆಗದಡದಜಗಳನು ಮುನ್ನವೆ ಹದಗೊಳಿಸಿ ಈ ರೀತಿಯಲಿ ನೀವೊದಗಿದೊಡೆ ನೀನೆಂದ ಕಾರ್ಯವದಹುದು (ಸಾಳ್ವಭಾ. ೧೭-೭೩); ಮಂದರತಿಯಿಂದ ಹದಗೊಳಿಸಿದನು ಹಸ್ತಿನಿಯ (ಧರಚ. ೧೫-೮೪); ಅಮ್ಮೈಯ್ಯನು ಅವರ ಅಣ್ಣೈಯ್ಯನವರ ಆರೋಗಣೆಗೆ ಹದಗೊಳಿಸುವುದಕ್ಕೆ . . . ಹೋಗಿದ್ದಿರಬೇಕು (ಚಂಗಾಳ್ವ. ೨೬೦). ೫. ಹದಮಾಡು: ಭೂಮಿಯನ್ನು ಹದಗೊಳಿಸುವ ಕೆಲಸದಲ್ಲಿ . . . ಮುಖ್ಯವಾದುದು ಉಳುಮೆ (ವ್ಯವಮ. ೧೩); ಅವರೆಗು ಈ ಹೊಲದ ಬದುಕು ಹದಗೊಳಿಸೋಣ (ನೆಲಮು. ೧೮-೨೦). **ಹದನಗೊಳಿಸು:** ೫. ಇವುಗಳೊಳಗಿನ ಪ್ರತಿಯೊಂದು ಘಟನೆ ಸನ್ನಿವೇಶಗಳು . . . ನಮ್ಮ ಜೀವನವನ್ನು ಹದನಗೊಳಿಸಿಕೊಳ್ಳುವುದಕ್ಕೆ, ಪರಿಶುದ್ಧಗೊಳಿಸಿಕೊಳ್ಳುವುದಕ್ಕೆ ಸಹಾಯಕಗಳಾಗಿರುವುವು (ಪಾರಾಕೃ. ೧). **ಹದನುಗೊಳಿಸು:** ೩. ಹದನುಗೊಳಿಸಿದ ಕೋರೆಯಲಿ ಚಿಮ್ಮಿದಡೆ ಗಗನಾಂಗಣಕೆ ನೆಗೆದುಮ್ಮದವಳಿದು ಬಿದ್ದನು ರಸಾತಳವದುರೆ ಮೂರ್ಛೆಯಲಿ (ಅನಂರಾ. ೧-೪-೨೮). [ಪದಂಗೊಳ್+-ಇಸು$_3$]

ಪದಂದಪ್ಪು, ಹದತಪ್ಪು (ಕ್ರಿ). ೧. ಸರಿಯಾದ ಸಮಯಕ್ಕೆ ಬರದಿರು: ಅಭೀಷ್ಟವೃಷ್ಟಿ ಕರೆಯುತ್ತಿರ್ಕುಂ ಪದಂದಪ್ಪದೆ (ಪುಷ್ಪಪು. ೨-೩). **ಹದತಪ್ಪು:** ೨. ಪಕ್ವವಾಗಿಲ್ಲದಿರು; ಸರಿಯಾಗಿ ಪಾಕವಾಗದಿರು: ಮಹಾಕವಿ ಕೂಡ ಈ ಔಚಿತ್ಯನಿಯಮವನ್ನು ಮೀರಿದರೆ ಅವನ ಕೃತಿಪಾಕವು ಹದತಪ್ಪಿ ಹೋಗಬಹುದು (ಕಾವ್ಯಸ. ೫). [ಪದ$_1$+ತಪ್ಪು$_1$]

ಪದಂದಿರಿ (ಕ್ರಿ). ಹೆಜ್ಜೆಯನ್ನು ಬೇರೆ ಕಡೆಗೆ ತಿರುಗಿಸು,—ಹೊರಳಿಸು: ಅರ್ಕನ ವಾಜಿಗಳ್ ಪದಂದಿರಿಯೆ ಕಡಲ್ ಕಲಂಕೆ ಧರೆ ಕಂಪಿಸಲದ್ಭುತಮಾದುದಾಹವಂ (ಶಾಂತೀಶ್ವ. ೬-೬). [ಪದ$_2$+ತಿರಿ$_1$]

ಪದಂಪು 'ಪದಪು' ನೋ.

ಪದಂಬಡಿಸು, ಪದವಡಿಸು (ಕ್ರಿ). ೧. ಅಣಿಗೊಳಿಸು; ಸಿದ್ಧಮಾಡು: ಆ ಜಿನಾಂಬಿಕೆಯ ಮುಂದೆ ಸಂಗೀತಕಮಂ ಸಂಗಳಿಸಿ ಪದಂಬಡಿಸುವೆಡೆಯೊಳ್ (ಶಾಂತೀಶ್ವ. ೧೩-೨೨೩ ಪ). **ಪದವಡಿಸು:** ೧. ಸುಧಾಶನಾಧೀಶ್ವರನಿಯಮಿತ ನಿಳಿಂಪಪಲ್ಲವತತಿ ಪದವಡಿಪ ನವದಿವ್ಯಾನ್ನದೊಳಂ . . . ಪ್ರವರ್ಧಮಾನಮಾಗಿ ಬಳೆಯೆ ಬಳೆಯೆ (ಶಾಂತೀಶ್ವ. ೧೫-೧೪ ಪ). ೨. ಹದಮಾಡು: ಅನ್ನದಾನಂ . . . ನವವಿಧಮಕ್ಕುಂ ಅದೆಂತೆಂದೊಡೆ ಇದಿರ್ಗೊಂಡುಚ್ಚದೊಳಿರಿಸುವ ಪದಯುಗಮಂ ತೊಳೆವ ಪೂಜಿಪೆಱಪಂಗವ ಚೋಹೃದಯಾನ್ನಶುದ್ಧಿಯಂ ನೆಱೆ ಪದವಡಿಸುವ ಭೇದದಿಂದೆ ಪರಮಾಗಮದೊಳ್ (ಚಂದ್ರಪು. ೩-೩೦); ಕುಸುಮಕಾರ್ಮುಕನ ಪೊಡೆಗೆ ಪದವಡಿಸಿ ಕಾಸಿ ಕಂದಿಸಿದ ಸೆಲಗಿನಂಬಿನಲಗುಗಳಿವೆನಿಸಿ ಕಡುಗಂದಿ ಸೂಸಿದ ಪಾಸಿದೆಳೆದಳಿರ್ಗಳುಂ (ವರ್ಧಪು. ೫-೬೩ ಪ); ಮಣಿಮಯಭಾಜನಂಗಳೊಳ್ ತೀವಿದನರ್ಘ್ಯರತ್ನಂಗಳ ಪದವಡಿಸಿದ ಸುಗಂಧದ್ರವ್ಯಂಗಳ ಕರ್ಪೂರವಾರಿಗಳ (ಮಹಾನೇ. ೯-೪ ಪ). ೩. ಉಪಶಮಿಸು; ಶಾಂತಗೊಳಿಸು; ಸಮಾಧಾನಪಡಿಸು: ಅವಳಂಬಿತಕುಲೀನಧೀರತಾಜಲದಿನೊಯ್ಯನೊಯ್ಯನೆ ತದುದ್ರೇಕಮಂ ಪದವಡಿಸಿ (ಶಾಂತಿಪು. ೩-೬೬ ಪ); ಅಂತು ಕಂತುಸಂತಾಪಕ್ಕೆ ಪಕ್ಕಾಗಿ ಕುಕ್ಕುಟಗುದಿದುರ್ಕದೊಳಗೊಳಗೆ ಬೇವಹೃದಯಮಂ ಪದವಡಿಸಲಾಱದೆ . . . ಕೆಳೆಯಂಗಿಂತೆಂದಂ (ಅನಂಪು. ೧೧-೨೯ ಪ); ಅಱಿಯೆಯಾ, ನೀನ್, ಪ್ರಮೀತ್ಯೂಸ್ ಪದುಳಂಗೆಟ್ಟ ಮನಮನ್ ಪದವಡಿಪ ಒಳ್‌ನುಡಿಗಳೊಳವೆಂಬುದನ್ (ಬದ್ಧಪ್ರ. ೨೧-೪೩೪). ೪. ನೆರವೇರಿಸು; ಪೂರೈಸು; ಪೂರ್ಣಗೊಳಿಸು:

ಅನುಕ್ರಮದಿಂ ನೀರ್ಗುಡಿಸಿ ಯಥಾಕ್ರಮದಿಂ ಪದವಡಿಸಿ ಪಾರಲೌಕಿಕ ವಿಧಿಯಂ (ಶಾಂತಿಪು. ೪-೫೮). ೫. ವಶಪಡಿಸಿಕೊಳ್ಳು ; ಅಧೀನಕ್ಕೆ ಒಳಪಡಿಸು ; ಹತೋಟಿಗೆ ತರು : ಆತನಂ ಸಾಮದಿಂದಮಳವಡಿಸಿ ನೋಡುವೆಂ ಸಾಮದೊಳಂ ಪದವಡದೊಡೆ ಬಟಾಕಿರ್ದಪುದಲ್ತೆ ಪದವಡಿಸಲೆನ್ನ ಬಯಕೆಯ ದಂಡಂ (ಅದಿಪು. ೧೪-೪೩) ; ಕೌಮುದೀಮಹೋತ್ಸವಮಂ ನೋಡುವಟ್ಟಿಯೊಳ್ ಅಕೃತಕಾರಾಮಸಂವರಣನನುಪಲಕ್ಷಿತ ಭಾಷಾಸಂಕೇತಜನಂಗಳ್ವಿಡಿದು ಬರ್ಪೊನಲ್ಲಿ ಪುಲ್ಲಶರನುಮಂ ಚಲ್ಲದೊಳ್ ಪದವಡಿಸಲುಂ (ಶಾಂತಿಪು. ೮-೭೨ ವ) ; ಅದಱೊಡನೆ ಪೋರ್ದು ಬಲ್ಪಿಂ ಪದವಡಿಸಿ ವಶಕ್ಕೆದಂದು (ಮಹಾನೇ. ೪-೭೭).

[ಪದ$_1$ + ಪಡಿಸು]

ಪದಂಬಡೆ (ಕ್ರಿ). ಅವಕಾಶವನ್ನು ಹೊಂದು : ವಿಪಂಚಿಯ ನುಣ್ಣರ ಮೊಂದೆ ಪಾಡಿ ಕೋಮಲಮನೆ ಚಿತ್ರಮಂ ಬರೆದು ತೋಱಿ ಪದಂಬಡೆದೆಯ್ದೆ ಮೇಳದೊಳ್ ನೆಲಸಿದ ಮಾತನಾಡಿ . . . ಓಲಗಿಸಿತ್ತೊಲವಿಂ ಸಖೀಜನಂ (ಚಂದ್ರಪು. ೩-೯೦). [ಪದ$_2$ + ಪಡೆ$_1$]

ಪದಕ (ನಾ). ೧. ಹಾರ ಮೊದಲಾದುವುಗಳ ಮಧ್ಯದಲ್ಲಿ ಅಳವಡಿಸುವ ಅಲಂಕಾರಯುಕ್ತವಾದ ಬಿಲ್ಲೆ ; ಸರದ ನಡುವಿನ ಬಿಲ್ಲೆ : ಸುರಗಿಯಲರ ಮುಗುಳ ಮುತ್ತಿನ ಮಾಲೆಯಿಂ . . . ಕುಂಕುಮದ ಕುಟ್ಮಲದ ಪದಕದಿಂ . . . ಅಲಂಕರಿಸಿ (ಕಾದಂಬು. ೩೮೪) ; ಆ ಪರದಂ . . . ಒಂದುದಿನಂ ವ್ಯಂತರದೇವಂ ಕೊಟ್ಟ ಪದಕಮಂ ಸತಿಗಿತ್ತಂ (ಧರ್ಮಪ. ೧೦-೮೧) ; ತಳಿತ ಚೂತದ ಸಸಿಗಳವನಿಗೆ ಮಲಗುವಂತಿರೆ ರಾಜಪುತ್ರರು ಹೊಳೆವ ಪದಕದ ಕೊರಳ ತಲೆಗಿಂಬಾದ ತೋಳುಗಳ . . . ದಳಿತದಂಷ್ಟಾನನದಲೆಸೆದರು ಸಾಲಶಯನದಲಿ (ಕುಪ್ಯಾದ್ರೋ. ೫-೭೯) ; ಶೃಂಗಾರವಾಗಿದೆ ಸಿರಿರಂಗನ ಮಂಚ . . . ಶಂಕರನ ಕೊರಳಿಗೆ ಪದಕವಾಗಿಹ ಮಂಚ (ಪುರಂದ. ಧಾ. ೧-೧೪-೫) ; ಮುತ್ತಿನ ಹಾರದ ನಡುವೆ ಇದ್ದ ವಜ್ರದ ಪದಕ ನಕ್ಷತ್ರದಂತೆ ಹೊಳೆಯುತ್ತಿದ್ದಿತು (ಹಾಹುತ್ತ. ೭೪). ೨. ಬಹುಮಾನವಾಗಿ ಅಥವಾ ಬಿರುದಾಗಿ ಕೊಡುವ ಬಿಲ್ಲೆ ; ಮೆಡಲು : ವಿಶ್ವವಿದ್ಯಾಲಯದ ಸ್ನಾತಕೋತ್ತರ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳನ್ನೆಲ್ಲ ಬಹು ಹಿಂದೆ ಹಾಕಿ . . . ಬಂಗಾರದ ಪದಕಗಳನ್ನು ದೊರಕಿಸಿಕೊಂಡನು (ಸಸ್ಯಕ. ೧೧೫) ; ಶ್ರೀಯವರಿರಿಸಿದ ಚಿನ್ನದ ಪದಕವು ನನ್ನ ನೀಳ್ಗವನಕೆ ಬಂತು (ಇಂಚಾಪ. ೨೯-೩೨). ೩. ವೇದದ ಪದಪಾಠವನ್ನು ಅಭ್ಯಾಸ ಮಾಡಿದವನು. ೪. ಒಂದು ಬಗೆಯ ಆಭರಣ. ೫. ಒಂದು ಬಗೆಯ ಸಸ್ಯ : "ಕೇದಾರಜಂ – ಪದಕ" (ಓಷಧಿ. ೪೦). ೬. (ಗ್ರಂಥದಲ್ಲಿ ಕೊಡುವ) ಅನುಕ್ರಮಣಿಕೆ ; ಸೂಚಿ : (ಕಿ). ೭. [ಛಂದ] ಛಂದೋವೃತ್ತಗಳಿಗೆ ಸಂಬಂಧಿಸಿದುದು; ಛಂದೋಬದ್ಧವಾದುದು : (ಕಿ). [ಸಂ.]

ಪದಕಟಕ (ನಾ). ಕಾಲಿಗೆ ತೊಡುವ ಕಡಗ ; ಅಂದುಗೆ ; ಕಾಲುಬಳೆ : ಅರುಣಾಂಬುಜನಾಳಮನಾವರಿಸಿದ ನವಫೇನಪಿಂಡಮಾಲೆಯ ಚೆಲ್ವಂ ಪರಿಭವಿಸಿ ಮೆಱೆದುದೇಕಿಲ್ಲರಸಿ ಪದಾಗ್ರದೊಳೆ ಮೌಕ್ತಿಕದ ಪದಕಟಕಂ (ರಾಜಶೇ. ೩-೫೬). [ಪದ$_2$ + ಕಟಕ$_3$]

ಪದಕವಾದ (ನಾ). ಕೇವಲ ಶಾಬ್ದಿಕವಾದ ವಾದ ; ಶಬ್ದಾಡಂಬರದಿಂದ ಕೂಡಿದ ಮಾತು : ವೇದಾಗಮಂಗಳ ಮೂಲವಲ್ಲದಿದು ಪದಕವಾದಮಿದೆಂದು ನೀನುಸುರದಿರು (ಬಸಪು. ೩-೭೮). [ಪದಕ+ವಾದ$_2$]

ಪದಕವಿ (ನಾ). ಹದ ತಿಳಿದ ಕವಿ; ಶ್ರೇಷ್ಠನಾದ ಕವಿ: ಸೊಂಕಿಲ್ಲದೆ ಬಿಱುನುಡಿಗಳನಂಕಿಸದೆ ಮನೋನುರಾಗ ಮೃದುಪದತತಿಯಂ . . . ಕೇವಣಿಸಲ್ಕಂ ಕರ ಕವಿರಸಿಕನೆಂಬರಾ ಪದಕವಿಯಂ (ಕವಿಜಿ. ೧-೫) ; ಮದಹಸ್ತಿಗಳ ಕೈಯ ನೂಕಿ ಬಂಧಿಸುವ ಪೆರ್ಗದ ವಜ್ರಲಾಳವಿಂಡಿಗೆಯ ಅದಟನ ದ್ವಾರಾಷ್ಟಕವ ವರ್ಣಿಸುವೊಡೆ ಪದಕವಿಗಳಿಗಗೋಚರವು (ಮೋಹತ. ೨೦-೧೩). [ಪದ$_1$ + ಕವಿ$_3$]

ಪದಕವಿತೆ (ನಾ). ಹಾಡುಗಬ್ಬ ; ಸಂಗೀತದ ಸಹಾಯದಿಂದ ಶ್ರವ್ಯವಾಗುವ ಕಾವ್ಯ : ಕೋವಿದರು ಕೊಂಡಾಡುವರೊಸೆದು ಚದುರರು ಪೇಳೆನಲೀ ಪದಕವಿತೆಯಮುದದಿಂದಾನುಸುರಿದೆನು(ಕುರಾಸಾಂ. ೧-೭೩). [ಪದ$_2$+ಕವಿತೆ]

ಪದಕೋಶ (ನಾ). (ಪದಗಳ) ಅರ್ಥಕೋಶ ; ಶಬ್ದಕೋಶ ; ನಿಘಂಟು : ಆ ಪೇಳೆಗಾಗಲೆ ಗೋಂಡಿಭಾಷೆಯ ವ್ಯಾಕರಣ ಮತ್ತು ಪದಕೋಶಗಳನ್ನು ಕುರಿತ ಕೃತಿಗಳು ಒಂದೆರಡಾದರೂ ಸಿದ್ಧವಾಗಿದ್ದುವು (ದ್ರಾವಿವಿ. ೧೫೦). [ಪದ$_2$+ಕೋಶ]

ಪದಕ್ರಮ (ನಾ). [ಸಂಗೀತ] ತಾಳಲಯದ ವಿನ್ಯಾಸದಲ್ಲಿ ಒಂದು ಪ್ರಕಾರ : ಸುರೀತಿ ರಕ್ತಿ ಪದಕ್ರಮಂ ವಳಿ ಸುರಂಗಿತಮಾಯತಂ ಮಣಿಕಂಪಿತಂ . . . ಇಂಪು ಲಯಾಸ್ಪದಂ(ವೃಷವಿ. ೧೧-೯). [ಪದ$_2$+ಕ್ರಮ]

ಪದಗ$_1$ (ನಾ). = ಪದಕ ೧ : "ಪದಗಂ ಪದಕಾಭಿಧಾನದೊಳ್" (ಕರ್ಣಾನಿ. ೩೧). [<ಸಂ. ಪದಕ]

ಪದಗ$_2$ (ನಾ). ೧. ಕಾಲುನಡಗೆ. ೨. ಪಾದಚಾರಿ. ೩. ಪದಾತಿ; ಕಾಲಾಳು : "ಪದಾತಿಃ, ಪತ್ತಿಃ, ಪದಗಃ . . . ಪದಿಕಃ – ೭ ಕಾಲುನಡೆಯ ಭಟರ ಹೆಸರುಗಳು" (ಸಿದ್ಧಾಂತಿ. ೨೫೬). [ಸಂ.]

ಪದಗತಪಾತ (ನಾ). [ಛಂದ] ವಿಚ್ಛಿತ್ತಿಚಿತ್ರಕಾವ್ಯದಲ್ಲಿ ಒಂದು ಬಗೆ; ಪದ್ಯಪಾದಗಳಲ್ಲಿ ಅಕ್ಷರಗಳನ್ನೂ ಅನುಸ್ವಾರ, ವಿಸರ್ಗಗಳನ್ನೂ ಲೋಪ ಮಾಡಿರುವುದು : ಶರ ಶೂಲ ಚಾಪ ಚಕ್ರಾಸಿ ರೂಪಮಿಭ ರಥ ತುರಂಗ ಪದಗತಪಾತಂ ಮುರಜಂ ಗೋಮೂತ್ರಿಕೆ ಪುಷ್ಕರಮರ್ಧಭ್ರಮಣ ಸರ್ವತೋಭದ್ರಂಗಳ್ (ಕಾವ್ಯಾವ. ೫೬೯). [ಸಂ.]

ಪದಗತಿ (ನಾ). ೧. ಕಾಲುನಡಗೆ ; ಕಾಲ್ನಡೆ : ಮಂತ್ರಿಯ ಮಾತಕೈಕೊಂಡು ಸದಳವೆಲ್ಲವ ನಿಜನಿವಾಸಕ್ಕೆ ಬೀಳ್ಕೊಟ್ಟು ಪದಗತಿಗಳಲಿ ಗಮಿಸಿ (ಹಚಕಾ. ೪-೧). ೨. ಹೆಜ್ಜೆಯಿಡುವ ಭಂಗಿ,—ರೀತಿ : ಪದಗತಿ ಪಾಠದಕ್ಕರಮನುಗ್ಭಡಿಪಂತಿರೆ ತೂಕದೋಲೆ ಗೀತದ ಲಯಮಾನಮಂ ಪವಣಿಪಂತಿರೆ . . . ನರ್ತಿಪರಲ್ಲಿ ಕಾಂತೆಯರ್ (ವರ್ಧಪು. ೧-೭೧).

[ಪದ$_2$ + ಗತಿ]

ಪದಗರ್ಭ (ನಾ). [ಸಂಗೀತ] "ಪಲ್ಲವಿಗೆ ಪ್ರಥಮ ಮತ್ತು ದ್ವಿತೀಯ ಎರಡು ಅಂಗಗಳು. ಈ ಅಂಗಗಳು ಸಂಧಿಸುವ ಸ್ಥಳಕ್ಕೆ 'ಪದಗರ್ಭ' ಎಂದು ಹೆಸರು" (ಸಂಗೀಚಂ. ೯೧). [ಸಂ.]

ಪದಗಾಣ್ 'ಪದಂಗಾಣ್' ನೋ.

ಪದಗಾಯಿ, ಹದಗಾಯಿ(ನಾ). ಹಣ್ಣಾಗಲು ಬಂದಿರುವ ಕಾಯಿ; ಬಲಿತ ಕಾಯಿ : ಕಾಯಿ ಪದಗಾಯಿ ದೋರೆವಣ್ಣುಗಳಿಂದೆಯತಿ ಪಕ್ವಮಾಂತ ರಸಮೊಸರ್ವ ಪರಿಪರಿ ಫಳಾವಳಿಗಳಿಂದೆ . . . ಒಪ್ಪಿರ್ದುದಾ ಬನಂ (ನವಮೋ. ೮-೨೬) ; ಕಗ್ಗಾಯಿ ಬಲಿಬಲಿದು ಮ್ಯಾಲೆ ಮಧುರತಸ ಬೆರೆದು ಪದಗಾಯಿಯಾದಂತೆ (ನವಮೋ. ೨೨-೩೪). **ಹದಗಾಯಿ** : ಆ ಮರದಲ್ಲಿ ಹದಗಾಯಿಗಳೇ ತುಂಬಿವೆ (ರೂಢಿ).

[ಪದ$_1$+ಕಾಯಿ$_4$(<ಕಾಯ್$_4$)]

ಪದಗಾರ್ತಿ (ನಾ). ಹಾಡು ಹೇಳುವವಳು ; ಹಾಡುಗಾತಿ : ಅಲ್ಲಿದ್ದ ಇನ್ನೊಬ್ಬ ಪದಗಾರ್ತಿ—"ಶಾಸ್ತ್ರ ಮಾಡೋವಾಗ ಪದಾ ಹೇಳಾನವ್ವ . . . ಸಾಕು ಸುಮ್ನಿರು" ಎಂದು ಕೆಂಚಯ ಬಾಯ ಮೇಲೆ ಹೊಡೆದಳು (ಸುವಸಂ. ೫೦).

[ಪದ$_2$+-ಕಾರ$_1$(<-ಕಾಱ)+-ತಿ$_1$(<-ಇತ್ತಿ)]

ಪದಗುಡು 'ಪದಂಗೊಡು' ನೋ.

ಪದಗೆಂಪು, ಹದಗೆಂಪು (ನಾ). ಹದವಾದ ಕೆಂಪುಬಣ್ಣ : ಕಟ್ಟುಸಿದ ಕೀಲು ಕಟ್ಟುಜೆಯೊಳ್ ಪೊಟ್ಟಗೊಡಿದ ತಾಳುಗೆಗಳ ರುಧಿರಜಳದೊಳ್ ಬೆರೆಸಿ ಪದಗೆಂಪನಾಳ್ದ ಜಾತ್ಯಶ್ವದ ದಾಳಾಜಳದೊಳಂ ನೆಲದೊಳಕೊಗೆವ ಧೂಮ ಪೊದಲೂಳಂಗಿಡೆಯುಂ (ಕಂಪಭಾ. ೧೦-೬೦ ಪ). **ಹದಗೆಂಪು :** ನಾಗಸ್ವರಂಗೇಳ್ದ ನಾಗರನ ತೆರವಾಗಿ ಹೆದೆಮುಚ್ಚಿ ತೊಯ್ಯಿಕೊಂಡಿಸಿ ಮೊಗಳೆ ಹದಗೆಂಪು ಜಾಯಿಪತ್ತ ಮುನಿಸು ಲಕ್ಷ್ಮಣ್ (ಶ್ರೀಕಾಮಾ. ೪೩-೧೪೫). [ಪದ್ಮ + ಕೆಂಪು]

ಪದಗೆಡಿಸು, ಹದಗೆಡಿಸು (ಕ್ರಿ). ೧. ಹದವಿಲ್ಲದಂತೆ ಮಾಡು ; ಹಾಳುಮಾಡು ; ನಾಶಗೊಳಿಸು : ಎಮ್ಮ ಬೊಮ್ಮಬರೆಪಂ - ಪದಗೆಡಿಸಿತ್ತು (ಆಪ್ರತಿ.೧೨೫-೬); ಪದಿನಾಱುಂ ಸಾಸಿರ್ವರ ಪದಗೆಡಿಸಿದ ಚದುರಂ (ಚಳಿವಿ. ೬-೨೬೧). **ಹದಗೆಡಿಸು :** ೨. ರೀತಿಯನ್ನು ಕೆಡಿಸು; ವಿರೂಪಗೊಳಿಸು : ಆತ್ಮಕಥೆಯನ್ನು ಹದಗೆಡಿಸದ ಬರೆಯುವುದು ಕಠಿನ (ಸಪಾಬೊಃ.೫೩); ಕೊಲ್ಲುವವನು ಜೀವಿಯನ್ನು ಹದಗೆಡಿಸಿ ನಾಶಗೊಳಿಸುತ್ತಾನೆ (ಹಂಕಥು, ೩೬) ; ಹಲವು ಸಮಗಾರರು ಕೂಡಿ, ತೊಗಲು ಹದಗೆಡಿಸಿದರು (ಗಾಪ). [ಪದ್ಮ + ಕೆಡಿಸು]

ಪದಗೆಡು, ಹದಗಿಡು, ಹದಗೆಡು (ಕ್ರಿ). ೧. ಅವ್ಯವಸ್ಥಿತವಾಗು ; ಕ್ರಮಗೆಡು : ಪದಿನೆಂಟು[ಬಣ್ಣನೆ]ಯೆಂದು ಬನಸಗೊಂಡು ಪದಗೆಟ್ಟು ಬಯಲ ಬಣ್ಣಿಸದೆ . . . ಹದಿಬದೆಯ ಧರ್ಮವ ಬಣ್ಣಿಪೆನು (ಹದಿಬ. ೧-೪೬). **ಹದಗಿಡು :** ೨. "ಅನುಕೂಲದಪ್ಪು" (ಪ್ರಭಣ್ಣ). **ಹದಗೆಡು :** ೧. ಮದಕರಿಗಳು ಕಟ್ಟಿದ ಮಲ್ಲಗಂಭವನೊಡೆದು ಕೆಡಹಿ ಕೊಂಡಾಗ ಬೆದಜು ತವಿಸ್ಪೆಯೊಳಗೆ ದಸೆದಸೆಗೈದಿ ಹದಗೆಟ್ಟೋಡಿಯಾಡಿದುವು (ಕಂನವಿ. ೧೫-೯೨) ; ತಾಲ್ಲೂಕಿನ ಆಡಳಿತ ಹದಗೆಟ್ಟು ಹೋಗಿತ್ತು (ಪಂಜಪಂ. ೧೪೦) ; ಒಂದಕ್ಕೊಂದು ಹದಗೆಟ್ಟದ್ದ ರಿಕಾರ್ಡುಗಳನ್ನು ಸರಿಪಡಿಸಲು ಎರಡುದಿನ ಬೇಕಾಯ್ತು (ಕಾಪೇಂ. ೧೧೬). [ಪದ್ಮ + ಕೆಡು]

ಪದಗೆಯ್, ಹದಗೆಯ್, ಹದಗೈ (ಕ್ರಿ). ಸಿದ್ಧಗೊಳಿಸು; ವ್ಯವಸ್ಥೆ ಮಾಡು ; ಉಪಯೋಗಿಸುವುದಕ್ಕೆ ಹದಮಾಡು : ತನ್ನ ಸಮನಂ ಕರೆದು ಭರದಿನವಳೆಡೆಗೆಯ್ದಿ ಪೊನ್ನಂಟಿನಿತ್ತು ಪದಗೆಯ್ಯೆಂದು ಕಳುಪಲ್ (ಆರಾಜ.೨-೪-೧೦). **ಹದಗೆಯ್ :** ಹುರಿದ ಹೊಸಭಂಗಿ ಹದಗೆಯ್ದ ಪಿನಕೂಟದೊಳ್ ಬೆರೆದಮಲ್ ಜಾಯಿಕಾಯ್ ಪತ್ರೆ . . . ಪರಿಪರಿಯ ಭೋಜನದ್ರವ್ಯಂಗಳಿದ ಭಂಡಿಗಳ್ವೆದೆ ಬರುತಿರ್ದುವು (ಚಪತಿ. ೪೭-೪೫). **ಹದಗೈ :** ಹದಗೈದುಕೊಂಡೆಯ್ದಿ ಸುಜುದಿನ ಕಂಡನು ಮದನನ ನಾಸ್ಥಾನದಲ್ಲಿ (ಭರಚ. ೪೪-೨). [ಪದ್ಮ + ಕೆಯ್]

ಪದಗೊಡು 'ಪದಂಗೊಡು' ನೋ.

ಪದಗೊಳ್ 'ಪದಂಗೊಳ್' ನೋ.

ಪದಗೊಳಿಸು 'ಪದಂಗೊಳಿಸು' ನೋ.

ಪದಗೊಳ್ಳು 'ಪದಂಗೊಳ್' ನೋ.

ಪದಗ್ರಹಣ (ನಾ). ಪದವಿಯನ್ನು ಸ್ವೀಕರಿಸುವುದು : ರಾಷ್ಟ್ರಪತಿಯವರು ತಮ್ಮ ಪದಗ್ರಹಣದ ತಾರೀಖಿನಿಂದ ಐದುವರ್ಷಗಳ ಕಾಲ ರಾಷ್ಟ್ರಪತಿಪದವಿಯಲ್ಲಿರತಕ್ಕುದು (ಭಾಧಾನ. ೩೪). [ಪದ್ಮ + ಗ್ರಹಣ]

ಪದಘಟ್ಟಣೆ (ನಾ). ಕಾಲಿನಿಂದ ಮೆಟ್ಟುವಿಕೆ ; ಪದಾಘಾತ : ನವಸಹಸ್ರತುರಂಗ ಕಾಲಾಳವಗಡಿಸಿತ್ಕೈವತ್ತು ಸಾವಿರವವನಿತಳ ಸುಗ್ಗಾಯ್ತು ಪದಘಟ್ಟಣೆಯಂ ಳಿಲ್ಲಣೆಗೆ (ಕುವ್ಯಾಕ್ಷ. ೩-೭). [ಪದ್ಮ + ಘಟ್ಟಣೆ]

ಪದಘಾತ (ನಾ). = ಪದಘಟ್ಟಣೆ : ಪದಘಾತಕ್ಕಗಿದಳ್ಳೆ ಬಳ್ಳಿದುದಧೋಲೋಕಂ . . . ಭುವನಮಂ ಪರ್ಯಾಕುಲಂ ನೂಡಲಾರ್ತುದೋದುರ್ಯೋಧನ ಭೀಮಸೇನರ ಗದಾಯುದ್ಧಂ ತ್ರಿಥಾಭ್ರಾಂತಿಯಂ (ಗದಾಯು. ೪-೧೦) ; ಪದಘಾತೋದ್ಧೂತಧೂಳಿಪಟಲಮಹಿಮರುಗ್ಪಿಂಬಮಂ ನುಂಗಿ ರೋದೋಂತದೊಳಾದಂ ಧ್ವಾಂತಸಂತಾನಮನೊಡವಿಸೆ . . . ನಡೆದತ್ತಾ ಜಗನ್ನಾಥಸೈನ್ಯಂ (ಜಗವಿ. ೧೫-೬೬) ; ಇದೆ ರಥದ ಪದಘಾತದಲಿ ಹೊಣಮೆದೆಯ ಪಾಯದಳೌಳ ಭೀಮನ ಕದನಪಥ ವಿಜಯೆನುತ ಸಗುತ್ತೈತಂದನಾ ದ್ರೋಣ (ಕುವ್ಯಾದ್ರೋ. ೧೩-೨) ; ಪದಘಾತಕ್ಕೆ ಧರಾತಳಂ ಕುಸಿಯೆ . . . ಜುದ್ಧಂಗೆಯ್ದುರೀಶಾರ್ಜುನರ್ (ಪಚರಂ. ೪-೬೮). [ಪದ್ಮ + ಘಾತ]

ಪದಚತುರೂಢ್ಯ (ನಾ). [ಛಂದ] ಒಂದು ವೃತ್ತದ ಹೆಸರು : ಈ ದಿನಪ ರಾಜ ರಾವಣ ಈರ ಪರಿಸಂಖ್ಯಾಕ್ಷರಂ ಪೊಪಟ್ಟಿಸೆಯೆ ಗಣಾಂತರಿತಂ ಪದಚತುರೂಢ್ಯಂ ಪರಿಸ್ಫುಟಿಂ ಬಗೆದು ಕೇಳ್ವುದು (ಛಂದೋಂಬು. ೩-೨೧೫). [ಸಂ.]

ಪದಚತುಷ್ಟಯ (ನಾ). ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಮತ್ತು ಸಾಯುಜ್ಯಗಳೆಂಬ ಮೋಕ್ಷದ ನಾಲ್ಕು ಪ್ರಕಾರಗಳು : ಎಱೆಯಾಗಿ ಪದಚತುಷ್ಟಯವ ಕೂಡಿ (ಪುನೋವಿ. ೧-೩೦). [ಪದ್ಮ + ಚತುಷ್ಟಯ]

ಪದಚಾರಿ (ನಾ). ೧. ಹೆಜ್ಜೆಯ ಗತಿ,—ಗಮನ ; ನಡೆ : ಪದಚಾರಿಗೆ ಪದಚಾರಿಯನೊಡವಿಸುತುಂ ಗಜಜೆ ಗಜಜುತುಂ . . . ಕೃಷ್ಣ ದಾನವರ್ ಪೊಳ್ಕು ಪೊಯ್ದುರೊರ್ವರನೊರ್ವರ್ (ಜಗವಿ. ೯-೬೨). ೨. [ನಾಟ್ಯ] ಒಂದು ನಾಟ್ಯಭೇದ. [ಪದ್ಮ + ಚಾರಿ]

ಪದಚ್ಛೇದ (ನಾ). [ವ್ಯಾಕ]ವಾಕ್ಯವನ್ನು ಪದಗಳನ್ನಾಗಿ ವಿಂಗಡಿಸುವುದು : (ಪ). [ಪದ್ಮ + ಛೇದ]

ಪದಚ್ಯುತ (ಗು). ೧. ಸ್ಥಾನದಿಂದ ಬಿದ್ದ. (ನಾ). ೨. ಪದವಿಯನ್ನು ಕಳೆದುಕೊಂಡವನು ; ಸ್ಥಾನಭ್ರಷ್ಟ. [ಪದ್ಮ + ಚ್ಯುತ]

ಪದಚ್ಯುತಿ (ನಾ). ಪದವಿಯನ್ನು ಕಳೆದುಕೊಳ್ಳುವುದು ; ಸ್ಥಾನಭ್ರಷ್ಟತೆ: ಪದಚ್ಯುತಿಯ ಆಥವಾ ಇತರ ಕಾರಣದಿಂದ ಉಂಟಾದ ರಾಷ್ಟ್ರಪತಿಪದದ ರಿಕ್ತತೆಯನ್ನು ಪರಿಹಾರ ಮಾಡುವುದಕ್ಕಾಗಿ ನಡೆಯುವ ನರ್ವಾಚನವನ್ನು . . . ತಡವಾಗದಂತೆ ನಡೆಯಿಸತಕ್ಕುದು(ಭಾಧಾನ. ೩೧); ಏವುವುಂ ಎನ್ನಿಂದೆ ಎಂತಾನುಮೊತ್ತಿ ಪೊಜಮಡಿಸಲಾಬದಿರ್, ವಿಧಿನಿಯತಮಪ್ಪವನ ಪದಚ್ಯುತಿಯನ್ ತಪ್ಪಿಸುವ ಯುಕ್ತಿಯನ್ (ಬಜ್ಞಪ್ರ. ೫೬-೧೧೫೦). [ಪದ್ಮ + ಚ್ಯುತಿ]

ಪದಚ್ಯುತಿಗೊಳಿಸು (ಕ್ರಿ). ಅಧಿಕಾರದಿಂದ ತೆಗೆದುಹಾಕು ; ಪದವಿಯಿಂದ ಕೆಳಕ್ಕಿಳಿಸು : ರಾಷ್ಟ್ರಪತಿಯವರನ್ನು . . . ಮಹಾಭಿಯೋಗದ ಮೂಲಕ ಪದಚ್ಯುತಿಗೊಳಿಸಬಹುದು (ಭಾಧಾನ. ೨೪) ; ಮೇಜರ್ ಗೋರ್ಡನ್‌ರು ಅವನನ್ನು ಪದಚ್ಯುತಿಗೊಳಿಸಿದ್ದರು (ಬೆಂಜನ್. ೮೪). [ಪದಚ್ಯುತಿ + ಕೊಳ್ + -ಇಸು]

ಪದಜಾತ (ನಾ). ೧. ಒಂದು ವರ್ಗಕ್ಕೆ ಸೇರಿದ ಶಬ್ದಗಳು. ೨. ಪದಗಳ ಗುಂಪು ; ಶಬ್ದಸಮೂಹ. [ಪದ್ಮ + ಜಾತ]

ಪದಡಕ್ಕೆ 'ಪಡಡಕ್ಕೆ' ನೋ.

ಪದಡಿ 'ಪದಡೆ' ನೋ.

ಪದಡೆ, ಪದಡಿ, ಹದಡಿ, ಹದಡೆ (ನಾ). ಒಂದು ಸ್ಥಳದ ಹೆಸರು ; ℙ ಈಗಿನ ದಾವಣಗೆರೆ ತಾಲ್ಲೂಕಿನ ಹದಡಿ : ಶ್ರೀಮನ್ನನೆವೆಗ್ಗಡೆ ಪಲ್ಲವಾಧರಣ ಬ್ರಹ್ಮಾದಿರಾಜಪ್ರ್ವದಡೆ ಪನ್ನೆರಡುನುನಾಳುತ್ತುವಿರೆ (ಎಇ. XI, ದಾವಣ. ೧೫೬-೧೬೬ ; 1037). **ಪದಡಿ :** ಸಾಕ್ಷಿ ಪದಡಿಯ ಗಾವುಣ್ಡಂ ನಾಗಿಯಣ್ಣನುಂ (ಎಇ.XI, ದಾವಣ.೧೫೪-೪೯ ; ಸು.1042?). **ಹದಡಿ :** ಹದಡಿ ಚಾಳುಕ್ಯರ ಕಾಲದಲ್ಲಿ ಪ್ರಸಿದ್ಧವಾಗಿದ್ದರೂ ಈಗ ಅಲ್ಲಿ ಹಳೆಯ ದೇವಾಲಯಗಳಿಲ್ಲ (ಹೊಯ್ಸವಾ. ೩೩೫). **ಹದಡೆ :** ಹದಡೆಯ

ಕುಱುಬ ಎಱೆಕಗೌಡ ಬಿನ್ನಲಗೆಱೆಯ ದನವ ಕೊಂಡುಹೋಹಲ್ಲಿ (ಎಕ. XI, ದಾವಣ. ೧೨೫-೨ ; ?). [?]

ಪದಢಕ್ಕೆ 'ಪಡಢಕ್ಕೆ' ನೋ.

ಪದತಲ, ಪದತಳ (ನಾ). ೧. ಕಾಲಿಡುವ ಸ್ಥಳ ; ಪಾದಪ್ರದೇಶ : ಪದತಲದೊಳಿದನರ್ಪಿಸುವೆ, ಹೇ ಸದಯ ಗುರುಹೇವ (ವಿಸೀಗೀ. ೧-೧) ; ತನ್ನ ತನುರುಚಿರತೆಯ ಪದತಲದಿ ಪೂಜೆಗೈವಾತನನು ಕಾಣುತಂ ಕನಕರದಿ ಕರದಿದಳ್ ಚಿತ್ರಾಂಗಿ (ಚಿತ್ರಾಂಗ. ೩೮-೧೦೩೦). **ಪದತಳ** : ೨. ಅಂಗಾಲು : ಪದತಳಮುಂ ದಳಮುಂ ನೋಯದೆ ಕಂದದೆ ನಲಿದು ನರ್ತಿಸುತ್ತಿರ್ಪ ಮರುತ್ಸುತಕಿಯುಗ್ಗಿಂದ್ರನ ಹೃತ್ಪದ್ಮದೊಳಾಡುವ ಭಕ್ತಿಲಕ್ಷ್ಮಿ ಲಾಸಿಕೆಯಕ್ಕುಂ (ಆಂದ್ರಪು. ೧೨-೭೦) ; ಚೂತತರೆರಂ ಪೋಲ್ವ ಪದತಳಂಗಳು (ಪ್ರೌಢರಾ. ೯-೫) ; ಹೆಬ್ಬೆಟ್ಟುಗಳು, ಪದತಳಗಳು . . . ಶಿರಸ್ಸು ಮುಂತಾದ ಸ್ಥಾನಗಳೇ ಸ್ತ್ರೀಯರುಗಳಿಗೆ ಕಳಾಸ್ಥಾನಗಳೆನಿಸಿಕೊಂಬುವು (ಸಕವೈ. ೬೦). [ಪದ$_2$ + ತಲ]

ಪದತಳ 'ಪದತಲ' ನೋ.

ಪದತ್ಯಾಗ (ನಾ). ಪದವಿಯನ್ನು ತ್ಯಜಿಸುವುದು ; ಅಧಿಕಾರವನ್ನು ಬಿಟ್ಟುಕೊಡುವುದು ; ರಾಜೀನಾಮೆ ನೀಡುವುದು : ರಾಷ್ಟ್ರಪತಿಯವರು, ತಮ್ಮ ಹಸ್ತಾಕ್ಷರದೊಡನೆ ಉಪರಾಷ್ಟ್ರಪತಿಯವರಿಗೆ ಪತ್ರ ಬರೆದು ತಮ್ಮ ಪದತ್ಯಾಗ ಮಾಡಬಹುದು (ಭಾಧಾಸ. ೨೮). [ಪದ$_2$ + ತ್ಯಾಗ]

ಪದತ್ಯಾಗಪತ್ರ (ನಾ). ಪದವಿಯನ್ನು ಬಿಟ್ಟುಕೊಡುವಾಗ ಬರೆಯುವ ಪತ್ರ ; ರಾಜೀನಾಮೆ ಪತ್ರ : ಮೇಲಿನ . . . ಪರ್ತ್ರಿನ ಖಂಡದ ಮೇರೆಗೆ ಉಪರಾಷ್ಟ್ರಪತಿಯವರಿಗೆ ಬರೆದ ಪದತ್ಯಾಗಪತ್ರದ ಸೂಚನೆಯನ್ನು . . . ಅಧ್ಯಕ್ಷರಿಗೆ ತಿಳಿಸತಕ್ಕುದು (ಭಾಧಾಸ. ೨೮). [ಪದತ್ಯಾಗ + ಪತ್ರ]

ಪದತ್ರಯ (ನಾ). ಮೂರು ಹೆಜ್ಜೆ : ತದಶ್ವಮೇಧದೋಳೀತ ವಾಮನನಾಗಿ ಯಾಚಿಸಿದನು ಪದತ್ರಯವ (ಕುವ್ಯಾಸ. ೯-೪೫). [ಪದ$_2$ + ತ್ರಯ]

ಪದತ್ರಾಣ (ನಾ). ಪಾದರಕ್ಷೆ ; ಜೋಡು ; ಮೆಟ್ಟು : ಶಿರಸ್ತ್ರಾಣ ಮಧ್ಯತ್ರಾಣ ಪದತ್ರಾಣ . . . ಮುಂತಾದ ಶತ್ರುಜಯಾತ್ಮಕ ರಕ್ಷಾದಿ ಸಾಧನವಿಶೇಷಂಗಳಿಂದಲುಂ (ವಿವೇಕ. ೨೬೨). 'ಪಾದತ್ರಾಣ' ಪರಾ. [ಪದ$_2$ + ತ್ರಾಣ]

ಪದದಪ್ಪು (ಕ್ರಿ). ಮಾರ್ಗ ಬಿಟ್ಟುಹೋಗು : ಪದದಪ್ಪದೆಯುಂ ಬಗೆ ಬೆದಱದೆಯುಂ ಕತೆ ಕಿಡದೆಯುಂ . . . ಅ ಜಿನಚಂದ್ರಂ ಇಂತೆಂದಂ (ಶಾಂತಿಪು. ೫-೧೦). [ಪದ$_2$ + ತಪ್ಪು$_1$]

ಪದದರುಶನ (ನಾ). ಪಾದದರ್ಶನ : ನೆನಹದಲ್ಲದೆ ನಿನ್ನ ಪದದರುಶನದ ಭಾಗ್ಯವು ತನ್ನೊಳಾದುದು ಈನಮಹಿಮ ನಮೊಯೆನುತ ಕೈಮುಗಿದಿರ್ದಳಾ ಕಾಂತೆ (ತೊರರಾ. ೧-೧೨-೨೧). [ಪದ$_2$ + ದರುಶನ]

ಪದದಲನ (ನಾ). ಕಾಲಿನ ತುಳಿತ ; ಪಾದಾಘಾತ : ಲೋಕಕ್ರೋಧಮದಹಸ್ತಿ ಪದದಲನರೋಷದಾವಾಗ್ನಿಗಾಹುತಿಯಾಗಿ ಬಿಳ್ದ ನಿನ್ನಾ ಭಸ್ಮರಾಶಿಯಂ ತೊಳೆವುದಿದೊ ಕಣ್ಗಂಗೆ(ತ್ರೈರಾಪೂ.೧೧೫-೮೨).[ಪದ$_2$ + ದಲನ]

ಪದದಳಿತ (ಗು). ಕಾಲಿನಿಂದ ಬಡಿದ,—ಮೆಟ್ಟಿದ : ವಿತತರಥ ಪದದಳಿತ ವಸುಧೋತ್ಪತಿತ ಧೂಳೀಪಟಲಪರಿಚುಂಬಿತ ದಿಶಾಮುಖನೈದಿದನು ಕುರುರಾಯ ಮೋಹರವ (ಕುವ್ಯಾವಿ.೫-೪೮). [ಪದ$_2$ + ದಳಿತ(= ದಲಿತ)]

ಪದದೋಷ (ನಾ). [ಕಾವ್ಯವಿಮಾ] ಪದಗಳ ರಚನೆ ಅಥವಾ ಪ್ರಯೋಗದಲ್ಲಿ ಕಂಡುಬರುವ ದೋಷ,—ತಪ್ಪು : ಪದದೋಷವು ಪದದ ಒಂದು ಭಾಗದಲ್ಲಿ ಮಾತ್ರ ಇರಬಹುದು ಅಥವಾ (ಅನೇಕ ಪದಗಳು ಸೇರಿ ಆಗುವ) ಒಂದು ವಾಕ್ಯದಲ್ಲಿ ಅಥವಾ ಅವುಗಳ ರಚನೆಯಲ್ಲಿ ಇರಬಹುದು(ಕೈಪಿಡಿ. ೨೨೬). [ಪದ$_2$ + ದೋಷ]

ಪದಧಾರಿ (ನಾ). ಯಾವುದಾದರೊಂದು ಸ್ಥಾನವನ್ನು ಹೊಂದಿರುವವನು ; ಅಧಿಕಾರಿ : ಧಾರ್ಮಿಕ ಅಥವಾ ಸಾಂಪ್ರದಾಯಿಕ ಸಂಸ್ಥೆಯ ಕಾರ್ಯಕಲಾಪಗಳ ಸಂಬಂಧದ ಯಾವನಾದರೂ ಪದಧಾರಿಯಾಗಲಿ . . . ಯಾವುದಾದರೂ ವಿಶಿಷ್ಟ ಸಂಪ್ರದಾಯಕ್ಕೆ ಸೇರಿದವನಾಗಿ ಇರಬೇಕೆಂದು ಉಪಬಂಧವನ್ನು ಮಾಡಿರುವ ಯಾವುದೊಂದು ವಿಧಿಯ ಅಮಲಿಗೂ ಬಾಧಕವಾಗತಕ್ಕುದಲ್ಲ (ಭಾಧಾಸ. ೯). [ಸಂ. ಪದಧಾರಿನ್]

ಪದಧೂಲಿ, ಪದಧೂಳಿ (ನಾ). ೧. ಪದಾಘಾತದಿಂದ ಮೇಲಕ್ಕೆ ಎದ್ದ ಧೂಳು : ಪದಧೂಲೀ[ಪಾಶಾಂ. ೪೯]ಕ್ಷೋಭದಿಂ ದಿಗ್ಮುಖವ ಪದನಮಂ ಶ್ಯಾಮಳಂ ಮಾಡಿ . . . ಅತ್ಯುಗ್ರಾಸ್ತ್ರಶಸ್ತ್ರಪ್ರಕರಕಿರಣ ಸಂಘಾತತೀವ್ರಾತಪೋದ್ಯೋತದಿನರ್ಧಶ್ಯಾಮಳಂ ಮಾಡಿದುದು ದಿನಮುಮಂ ಕೂಡೆ ರಾಜೇಂದ್ರಸೈನ್ಯಂ (ಅಪಿಪು. ೧೪-೮೮). **ಪದಧೂಳಿ** : ೧. ಪದಧೂಳೀಪೀತಪಾತಃಪ್ರತತಿ ನದಿಗಳಂ ತೀವುತುಂ (ವರ್ಧಪು. ೮-೬೬). ೨. ಪಾದಧೂಳಿ ; ಪಾದರಜ : ಪದಧೂಳಿಯಲಿ ದೂಟದನಹಲ್ಯಾ ಸತಿಯ ದುಷ್ಕೃತವ (ತೊರರಾ. ೧-೨-೨೦) ; ಪುಣ್ಯವಹುದೆಮ್ಮ ಧರೆ ವಲ್ಲಭನ ಪದಧೂಳಿಯಿಂ (ಚಿತ್ರಾಂಗ. ೬೦-೧೬೪೨). [ಪದ$_2$ + ಧೂಲಿ]

ಪದಧೂಳಿ 'ಪದಧೂಲಿ' ನೋ.

ಪದನ್ 'ಪದ$_1$' ನೋ.

ಪದನ 'ಪದ$_1$' ನೋ.

ಪದನಖ (ನಾ). ಕಾಲಿನ ಉಗುರು : ಪದನಖಮಣಿದರ್ಪಣದೊಳ್ಪದನೇಂದುವನೀಕ್ಷಿಸುತ್ತುಮಿರೆ ಕೋಮಳೆ (ಮಲ್ಲಿಪು. ೪-೨೦) ; ಚರಣದಲಿ ಚಾಚಿದರು ಭೂಮೀಶ್ವರರು ಮಕುಟವನಂತತಾರಾಪರಿವೃತೇಂದುವಿನಂತೆ ಮೆಱೆದುದು ಹರಿಯ ಪದನಖವು (ಕುವ್ಯಾಉ. ೮-೫೫). [ಪದ$_2$ + ನಖ]

ಪದನಖರ (ನಾ). = ಪದನಖ : ಪದನಖರಾಳಿ ಬೇರ್ವರಿಯೆ . . . ಕೇಶಚಯಮಂಗಮನಾವರಿಸುತ್ತೆ ತೋಱೆ ಪಿಂಗದೆ ಶಿವಲಿಂಗದಂಘ್ರಿಯನೆ ಜಾಸಿಸುತಿರ್ದನೆತೀವಭಕ್ತಿಯಿಂ (ವೃಷವಿ. ೨೨-೨೨). [ಪದ$_2$ + ನಖರ$_2$]

ಪದನತ (ಗು). ೧. ಕಾಲಿಗೆ ಬಿದ್ದ,—ನಮಸ್ಕರಿಸಿದ. ೨. ಕಾಲಿನವರೆಗೆ ಇಳಿದು ಬಂದ. ೧, ೨ : ಮದಜಳಸೀಳಳಂಕಳಿತಂ ವಿಷಮಾನಳ ಭೀಮಲೋಚನಂ ಪದನತ ದಾನವಾರಿ ಗಿರಿಶಂ ಗಿರಿಜಾತವಿನೂತಕೇಳಿ ಕಣ್ಗೊದವಿದ ಶೋಭೆಯಂ ಕುಡುತಮಿರ್ಪುದು (ಪಾರ್ಶ್ವಪು. ೪-೧೩೨). [ಪದ$_2$ + ನತ]

ಪದನಱು, ಹದನಱು, ಹದವರಿ, ಹದವಱು (ಕ್ರಿ). ೧. ವಿಷಯವನ್ನು ತಿಳಿ ; ಅಭಿಪ್ರಾಯವನ್ನು ತಿಳಿ : ಪದನಱುದು ನುಡಿಯಲುಂ ನುಡಿದುದನಱುದಾರಯಲುಮಾರ್ಜರಾ ನಾಡವರ್ಗಳ್ (ಕವಿಗಾ. ೧-೩೮). ೨. ಸರಿಯಾದ ಕ್ರಮವನ್ನು ತಿಳಿ : ಸ್ತಂಬಕರ್ಯಾದಿ ನಾನಾವಿಧಧಾನ್ಯಂಗಳಂ ಪದನಱುದುಡುಗುವ ಕಳಂಮಾಡುವೊಕ್ಕುವಡಕುವ . . . ತೆಱಸುಮನಱಯೆ ಬೇಟ್ಟು (ಅದಿಪು. ೬-೭೭ ಪ) ; ಮಾಗಿಯೊಳಬ್ದಕಾಲದೊಳ್ ಭೂಮಿಯೊಳಂ ಪದನಱುತು ನೀರನೆತ್ತುಗೆ ಬಲ್ಲರ್ (ಲೋಕೋಪ. ೬-೮) ೩. ಪ್ರಮಾಣವನ್ನು ತಿಳಿ : ಕ್ರಮದಿಂ ಪಾಲಂ ಕಾಸಿ ಹೆಪ್ಪನಿಟ್ಟು ಕಡೆದು ಬೆಣ್ಣೆಗೊಂಡು ಪದನಱುದು ಕಾಸಿದಾಗಳ್ ತುಪ್ಪಮಕ್ಕುಂ (ಧರ್ಮಾಮೃ. ೯-೧೨೦). ೪. ಸರಿಯಾದ ಕಾಲ ಅಥವಾ ಯೋಗ್ಯವಾದ ಸಮಯವನ್ನು ತಿಳಿ : ಪದನಱುದು ಚಿತ್ತದ ಬೆಳಸುಂ . . . ಮುಯ್ಪುಂ ನೋಡುವ ಮಾಸಿಸರುಂ ತುದಿಯೊಳ್ ಮಹಾದುಃಖಮನೆಯ್ದುವರ್ (ಧರ್ಮಾಮೃ. ೧೧-೪೨). **ಹದನಱು** : ೨. ಸಹಜಾನುಗ್ರಹಸ್ವಾಯತಸಂಬಂಧದ ಮಾಳ್ಪುದೀ ಹದನಱುಯದನನುಗ್ರಹ ಸಲ್ಲ (ಶಿವಗೀ. ೫೪-೨೫೫) ; ಹದನಱುವ ತುರಗದ ವೈದ್ಯತತಿಯೆಚ್ಚಱುಕೆಯಲಿ ಸಂತೈಸಿದರು ವಾಚಿಗಳ ವೇದನೆಯ

(ಕುಸ್ಯಭೀ. ೫-೩೯). ೪. ಪದನಜುದು ಪರಗುವ ದೆಯೆಯನಱುದು ಬಿತ್ತುವ . . . ಲೋಕಾಧಿಲೋಕಗಳ ಪಗೆಯ(ಪಗೆವು)ನಿಕ್ಕುವನಯ್ಯಾ (ಸರ್ವಪ. ೧೬೨-೬೬೪). **ಪದವರಿ** : ೨. ಕಬ್ಬಾಪದಾರ್ಥವನ್ನು ಪದವರಿತು ಉಪಯೋಗಿಸಿಕೊಳ್ಳುವಂತೆ ನಿರ್ದೇಶಿಸಲು . . . ವಿಜ್ಞಾನವನ್ನು ಬಲ್ಲ ಓವರ್‌ಸಿಯರುಗಳೂ ಬೇಕು (ತಕ್ಷಪ. ೧೯೫). **ಪದವಱಿ** : ೨. ಸುಭಕ್ಷ ಸುಪಕ್ವಫಲಗಳ ಮೋಕ್ತುಗಳಿಗೆ ಪದವ[ಪಾಕಾಂ. ನ]ಱಿದಿಕ್ಕಿದನು (ಧರಚ. ೩-೯೧). [ಪದನ್ (<ಪದ$_1$)+ಅಱಿ]

ಪದನಿಮಿತ್ತ (ಅ). ಸ್ಥಾನದ ಕಾರಣವಾಗಿ ; ಅಧಿಕಾರದ ಪ್ರಯುಕ್ತವಾಗಿ : ಭಾರತದ ಉಪರಾಷ್ಟ್ರಪತಿಯವರು ತಮ್ಮ ಪದನಿಮಿತ್ತ ರಾಜ್ಯಪರಿಷತ್ತಿನ ಸಭಾಪತಿಯವರಾಗಿರತಕ್ಕುದು (ಭಾಧಾನ. ೩೨).

[ಸಂ.]

ಪದನಿಮಿತ್ತ ಸದಸ್ಯ (ನಾ). ಸ್ಥಾನದ ಬಲದಿಂದ ಸದಸ್ಯನಾಗಿರುವವನು : "ಅಧಿಕಾರ ಬಲದ ಸದಸ್ಯ, ಪದನಿಮಿತ್ತಸದಸ್ಯ" (Ex-officio member. ಪಕ್ರಾನಿ. ೩೭). [ಪದನಿಮಿತ್ತ+ಸದಸ್ಯ]

ಪದನಿವಾಸ (ನಾ). ಪದವಿಯಲ್ಲಿರುವಾಗ ಸರ್ಕಾರವು ಪುಕ್ಕಟೆಯಾಗಿ ಕೊಡುವ ವಸತಿ : ಉಚ್ಚತಮನ್ಯಾಯಾಲಯದ ಪ್ರತಿಯೊಬ್ಬರು ನ್ಯಾಯಾಧೀಶರೂ ಬಾಡಿಗೆ ಕೊಡದೆಯೇ ಪದನಿವಾಸವನ್ನು ಉಪಯೋಗಿಸಲು ಹಕ್ಕು ಹೊಂದಿರತಕ್ಕುದು (ಭಾಧಾನ. ೨೪೭).

[ಪದ$_2$+ನಿವಾಸ]

ಪದನಿಸು (ಕ್ರಿ). ಅನುಗ್ರಹಿಸುವಂತೆ ಮಾಡು ; ಆಕರ್ಷಿಸು ; ವಶಪಡಿಸಿಕೊಳ್ಳು : ತದಾನನಾಂಬುಜದ ತುಂಬಿಗಳಂ ಸುರಪುಷ್ಪವೃಷ್ಟಿ ತಾಂ ಪದನಿಸಲಾರ್ತುದಿಲ್ಲ ನಿಜಗಂಧದಿನೇನದಱಿಪ್ಪಳುಂಬಮೋ (ಪುಪ್ಪಪು. ೧೨-೩೦). [ಪದನ್ (<ಪದ$_1$)+-ಇಸು$_3$]

ಪದನು 'ಪದ$_1$' ನೋ.

ಪದನೋಟ (ನಾ). ಹಿತವಾದ ದೃಷ್ಟಿ ; ಪ್ರಿಯವಾದ ನೋಟ : ಮುಪದಿ ಪೋಪಿನಿ ಮುಂದುವರಿವೆನ್ನೆರ್ದೆಯಿರವಿದ ನೋಡೀ ಪರಿಯೆಂದು ಇದಿರಿಡುವಂತೆವೋಲೆಳನಗೆಗೂಡಿದ ಪದನೋಟವ ಪರ್ದಿಸುವುದು (ಚಕವಿ. ೬-೧೫೭ ಸಾಂಗತ್ಯ). [ಪದ$_1$+ನೋಟ]

ಪದನ್ಯಸನ (ನಾ). ಹೆಜ್ಜೆಯನ್ನು ಇಡುವಿಕೆ ; ನಡಗೆ ; ಪದವಿನ್ಯಾಸ : ರತಿಯೊಳ್ಪದನ್ಯಸನಮಂ ಕಲ್ತಂಜೆ ಶೀತಾಂಶು ತೀವಿದ ನೆಯ್ದಿಲ್ಲೊಳನಲ್ಲದಿಲ್ಲೆನೆ ಬನಂ ಚಿತ್ತೋತ್ಸವಾಲಂಬನಂ (ಪಲ್ಲಿಪು. ೨-೩೭).

[ಪದ$_2$+ನ್ಯಸನ]

ಪದನ್ಯಾಸ (ನಾ). ೧. = ಪದನ್ಯಸನ : ಸ್ಮರಪಂತ್ರದೇವತೆಯವೋಲಾ ಬಾಹಾಲತಾಂದೋಳನಂ ಬಗೆಯಂ ಬಲ್‌ಸೆಜ್ಜೆಗೆಯ್ಕೆ ಬಾಲೆ ಮೆಜ್ದಳ್ ಲೀಲಾಪದನ್ಯಾಸಮಂ (ಪಂಂಪಾಪು. ೫-೪೨). ೨. ಹೆಜ್ಜೆಯ ಗುರುತು; ಪಾದಚಿಹ್ನೆ : ಸುಹೃತ್ಪದ್ಮದೊಳಿಂಬುವೆತ್ತುದು ಪದನ್ಯಾಸಂ . . . ಶ್ರೀಪೂಜ್ಯಪಾದೇಶನಾ (ಪುಪ್ಪಪು. ೧-೨೪). [ಪದ$_2$+ನ್ಯಾಸ]

ಪದಪದ್ಧತಿ (ನಾ). ೧. ಹೆಜ್ಜೆಯ ಗುರುತು ; ಪಾದಚಿಹ್ನೆ : ನಿನ್ನ ಪೆಡೆದುಜಗಲೊಳೆನ್ನ ಪದಪದ್ಧತಿಗಳರ್ದಪುವು ಇವಂ ಕಂಡೊಡೆ ಪನ್ನಗವಿರೋಧಿಯುಂ ಕಾದು ಳಟಿಪುಗುಂ ಪೋಗು (ಜಗವಿ. ೩-೧೧೩ ಪ). ೨. ಪದಗಳನ್ನು ಜೋಡಿಸುವ ಕ್ರಮ,—ರೀತಿ : ಉಚಿತ ಪುರಾಣ ಮಾರ್ಗ ಪದಪದ್ಧತಿ ಬಂಧುರಬಂಧಮೆಂಬಿನಂ ರಚಿಯಿಸೆ ಪಾಚ್ಯವಾಚಕ ವಿಶೇಷ್ಯವಿಶೇಷಣ ಲಕ್ಷ್ಯಲಕ್ಷಣಪ್ರಭುರತೆ ಕಾಳಿದಾಸನುಮನೇಚಿಸಿತೀ ಕೃತಿ ನಾಗವರ್ಮನಾ (ಛಂದೋಂಬು. ೧-೭). [ಪದ$_2$+ಪದ್ಧತಿ]

ಪದಪದ್ಯ (ನಾ). = ಪದಕವಿತೆ : ಗಗನಗಣಾಗ್ರದೊಳಂ ತಾಂ ಯಗಣಮುನಿದಲಶುಭಮಬ್ಜ ಮುಖಿ ಕರ್ತುಗಂದಗಣಿತಭಯ ಕೇಡಳ್ಕುಂ ಪಗೆವರ್ಗಂ ಪೇಳವೇಡ ಪದಪದ್ಯಗಳೊಳ್ (ಅವಿಜ. ೧-೨೭) ; ಇವನಿಗೆ ವಿನೋದದಲ್ಲಿ ಹೊತ್ತು ಹೋಗುವ ನಿಮಿತ್ತವಾಗಿ . . . ಪದಪದ್ಯಗಳ ನೋದುವ ಪೆಱ್ದುಗಳ ಸಂಗಡಲೆ ಕಳುಹಿಸಿದಿಡು (ಸಚಕಾ. ೬೨).

[ಪದ$_2$+ಪದ್ಯ]

ಪದಪಲ್ಲಟ (ನಾ). ಪದಗಳ ಸ್ಥಾನ ಬದಲಾಗುವುದು : ಈ ಮೇಲಿನ ಪದ್ಯಗಳಲ್ಲಿ ಅಕ್ಷರಪಲ್ಲಟ, ಪದಪಲ್ಲಟ . . . ಕಂಡು ಬರುವುದನ್ನು ಗಮನಿಸಬಹುದು (ಕುಮಾಸಾಂ. ೯೩). [ಪದ$_2$+ಪಲ್ಲಟ]

ಪದಪಾಂಸು (ನಾ). = ಪದಧೂಳಿ ೨ : ಸಮಂತಭದ್ರಜ್ಞಾತರ ಪದಪಾಂಸು ಕಿಡಿಸುಗಳಪಾಂಸುಗಳಂ (ಪಲ್ಲಿಪು. ೧-೧೩).

[ಪದ$_2$+ಪಾಂಸು]

ಪದಪಾಕ (ನಾ). ಸಿದ್ಧವಾದ ಅಡುಗೆ ; ತಯಾರಾದ ಅಡುಗೆ: ನಲಿನಲಿದು ಕಾಸಿ ಪದ[ಪಾಕಾಂ. ಪ್ರತಿ]ಪಾಕಮಂ ನೋಡುತಂ (ಕಬ್ಬಿ.ದೇ. ೧೬೫-೩೪); ಪದಪಾಕಕ್ಕೊಳಗಾಗಿ ಬಾಗಿಸಿದ ರಾಜಾನ್ನಾನ್ನದೊಳ್ ಘಾಸಿಯಾಗದುದಂ ಸಜ್ಜುಳವಾಲ ಳಿಟ್ಟ ಮೊಸರಂ ತಂದಿಕ್ಕಿ (ಪುಚಾನೇ.೧೬-೪೯).

[ಪದ$_1$+ಪಾಕ$_1$]

ಪದಪಾಠ (ನಾ). ವೇದಪಠನದ ಒಂದು ಕ್ರಮ ; ವೇದಸಂಹಿತೆಯನ್ನು ಪದವಿಭಾಗಪೂರ್ವಕವಾಗಿ ಅಧ್ಯಯನ ಮಾಡುವುದು : ವೇದದ ವಾಕ್ಯಗಳನ್ನು ಪದವಿಭಾಗ ಮಾಡಿ ಹೇಳುವ ರೂಢಿ ಬಂತು (ಪದಪಾಠ) (ಭಾರದ. ೩೨). [ಪದ$_2$+ಪಾಠ$_2$]

ಪದಪಾತ (ನಾ). ೧. ಹೆಜ್ಜೆಯಿಡುವುದು. ೨. ಒದೆತ ; ಪಾದಾಘಾತ ; ತುಳಿತ ; ದೋಹದವನ್ನು ತೀರಿಸುವ ಒಂದು ಬಗೆ : ದಯೆಗೆಯ್ ಪದಪಾತಮನಸುಗೆಯೊಳಂತದು ತಳಿರ್ಗುಂ (ಜಂದ್ರಪು. ೬-೭೪); ವನಿತಾ ಪದಪಾತದಿನಾದನುರಾಗಂ ತನ್ನೊಳ್ ತೊದವೆ ಸಾಸಿರ್ಮಡಿಯಾದನಿತಂ ಸೂಚಿಸುತಿರ್ದುದು ಬನದೊಳ್ ವಿಸುಪಸುಗೆ ವಿಸುಪ ಕೆಂದಳಿರ್ವೋಜೆಯಿಂ (ಕುಸುಮಾ. ೫-೯೩). [ಪದ$_2$+ಪಾತ$_1$]

ಪದಪೀಠ (ನಾ). ಕಾಲಿಡುವುದಕ್ಕಾಗಿ ಮಾಡಿದ ಪೀಠ ; ಕಾಲುಮಣೆ ; ಪಾದಪೀಠ: ಪದಪೀಠದ ಸನ್ನಿಧಿಯೊಳ್ ಪದಪಂ ಕುಳ್ಳಿರಿಸಿಕೊಂಡು . . . ಬೆಸಗೊಂಡನಾ ನರೇಂದ್ರಮುಖುಂದಂ (ಕುಸುಮಾ. ೧೫-೧೩೨) ; ದೇವ ಮಾಟ್ಪುದೆನ್ನಿಷ್ಟಮನೆಂದು ಬೇಟ್ಪ ಪದದೊಳ್ ಪದಪೀಠದ ಮಾತುಳುಂಗಮೇಂ ತುಷ್ಟಿಯನಿತ್ತುದೋ ಜಗುಟ್‌ವಂದಿದಿರ್ಗೊಂಡು ಮನಕ್ಕಪೂರ್ವಮುಂ (ಪುಪ್ಪಪು. ೩-೧೦೩).

[ಪದ$_2$+ಪೀಠ]

ಪದಪು, ಪದಂಪು, ಪದಪ್ಪು, ಪದುಪು, ಪದೆಪು, ಹದಹು (ನಾ). ೧. ಆಸೆ ; ಇಷ್ಟ ; ಬಯಕೆ ; ಅಪೇಕ್ಷೆ : ಇದು ಸರ್ಗಕ್ಕೆಂದು ಪದ್ಮೋದ್ಭವಂ ಸುದತೀರತ್ನಸಮೂಹಮುಂ ಪದಪಿನಿಂ ಬೈಚಟ್ಟ ಭಂಡಾರಮಪ್ಪುದೆನಲ್ ಸಂದನಸಿದರ್ ಸುಂದರಿಯರಂ ಕಂಡಂ ನರೇಂದ್ರಾತ್ಮಜಂ (ಕಾದಂಪೂ. ೧೯೮) ; ಕೊಳ್ಳದ . . . ಪರವನಿತೆಯರ್ಗೆ ಪದಪಿಂ ಚಿತ್ತಂ ಸಲ್ಲದ ಪರಿಗ್ರಹಕ್ಕಳಿಪಿಲ್ಲದ ಸುವ್ರತವಿನ್ಯೆದುಮಲ್ಲವೆ ರತ್ನಂ (ಧರ್ಮಾಮೃ. ೧-೪೧); ಅದನೆ ಮುಗುಳ್ಕೊಂದು ಮತದಿಂ ಪದಪಿಂ ಪೇಳಲ್ಕೆ . . . ಭೇದಕಶಾಶಯವಚನಂ (ಸರಚ. ೩೩-೬೬) ; ಮುದುವೆಗುರಲೊಟ್ಟಲಿರಬೇಕೆಂದು ಕೊಳ್ಳಿಗಳ ಪದಪಿನಿಂ ಬೆಳ್ಳಿಯೊಟ್ಟರ್ದುಳ್ (ಕಾಲೂರ. ೧೪೮-೪೧೩). ೨. ಉತ್ಸಾಹ ; ನಡಗರ ; ಸಂಭ್ರಮ : "ಪದಪೆಂದೆನೆ ಸಂರಂಭಂ" (ಜಪುನಿ. ೪೪) ; ರೂಪಂ ಪದಪಿಂದಂ ಮಾಡಿಯುಂ ನೋಡಿಯುಂ ಮನಸ್ಯಶದೊಳ್ ಗರ್ಹಿತಸ್ಪರ್ಶಸಂಭೋಗದೊಳಿಂತೀ ದುಷ್ಟಚಂಡಾಲರ ಕುಲದೊಳಗೇಗೈದನೋ ದುರ್ವಿವೇಕಂ(ಕಾದಂಪೂ.೫೦); ಪದಪಿನಿಂ ಪಶ್ಚಿಮ ಪಯೋಧಿಯೆಂಬಿಂದ್ರನೀಲದ ಪೀಠಮಧ್ಯದೊಳ್ ಮುಂಜ್ಜಂಡೆಯೆಂಬೋಜ

ನುದಿತ ಸಂಭ್ರಮದಿಂದೆ ನಿಱಿಸಿದುರುತರದ ನವಮಾಣಿಕದ ಲಿಂಗಂಬೊಲು . . . ಸಂಜೆಗೆಂಪೆಸೆಯೆ (ಉದ್ಭಟೇ. ೪-೭); ಪೊಡೆವ ತಂಬಟಪಟಹ ಭೇರಿಗಳ ಭೂರಿಗಳ ಪದಪಿಂದೆ ಪಡೆ ನಡೆದುದು (ಜೈಮಿಭಾ. ೨೦-೩೭). ೩. ಪ್ರೀತಿ; ಒಲುಮೆ; ಮೆಚ್ಚುಗೆ: ಪದಪು ಮನಕ್ಕೆ ಸೊರ್ಕುನಯನಕ್ಕೆಸೆಯುತ್ತಿರೆ . . . ಆಡಿಸಿದನಾತನನಂಗಜನೆಂಬ ನಟ್ಟುವಂ (ಆದಿಪು ೪-೧೫): ಮುನಿಸಿಂ ಬಯ್ಯದೆ ಪೊಲ್ಲಮೆಗೆ ಜಱಿಯಲಾರದೆ ಪದಪಿಂ [ಮಗನ ವಿನೋದಮಂ . . . ನೋಡುತುಮಿಂತಿರುತಿರ್ದರಿರ್ವರುಂ] (ಧರ್ಮಾಮೃ. ೨-೧೨); ಜಡೆಯನ್ನೆಸಾರು . . . ಸೌಂದರನಡಿಗಡಿಗೆ ಪದಪಿನಿಂದಪ್ಪಿ ಮುಂಡಾಡಿ . . . ನೋಡಿದರು ಮಗನೆಂಬ ಭಾವದಿಂದ (ಸೌಂದಪು. ೫-೪೦); ಪದಪಲಿ ತಳರ್ದವುಚಿದ ಮಱಿದುಂಬಿಯ ಹದನಂತೆ ಮೆಱೆದುದರ್ತಿಯಲಿ (ಕಂಸವಿ. ೬-೧೧೬). ೪. ಸಂತೋಷ; ಹಿಗ್ಗು; ನಲಿವು: ತ್ರೈಲೋಕ್ಯರಾಜ್ಯಾಭಿಷೇಕಮೆ ಕೈಸಾರ್ದುದಿವಳ್ಗೆ ನುತ್ತೆ ಪದಪಿಂದಾನಾಕೆಯಂ ನೋಡಿದೆಂ (ಕಾದಂಪೂ. ೮೦೪); ಪದಪಿಂ ವಿಚಿತ್ರರತಕೇಳೀವಾರ್ಧಿಯೊಳ್ಮೂಡಿ ಮುಟ್ಟಾಡುತ್ತುಂ . . . ಪ್ರಿಯರಿಂತು ಪೊಟ್ಟುಗಳೆವರ್ನಿಚ್ಚಂ ಪುರೋದ್ಯಾನದೊಳ್ (ಮಲ್ಲಿಪು. ೨-೩೮); ಪದಪಿನೊಳೇಱುವೆಂ ಸುರಗಜೇಂದ್ರಮಂ . . . ಎಂಬ ಮನಮುಳ್ಳೊಡೆ ಪೊರ್ದು ಜಿನೇಂದ್ರಧರ್ಮಮಂ (ಧರ್ಮಾಮೃ. ೬-೧೬೨); ತನ್ಮಜ್ಜನಾಂಬುವೊಳ್ ಪದಪಿಂ ಮುಳುಂಗಿ ಕುಷ್ಠಂ ನೀಗಿದೂಡಯಂಗೆಱಗಿ ಕರುಣಂಬಡೆಯನೇ (ಪದ್ಮಂಪಾ. ೪-೬೦). ೫. ಆದರ; ವಿಶ್ವಾಸ: ಪದಪಿಂ ಧರ್ಮಮನೊಪ್ಪಿನಿಂದೆನಗಘಪ್ರಧ್ವಂಸನೋಪಾಯಸಂಪದಮಂ ತನ್ಮುನಿ ಪೇಟ್ಟಣುವ್ರತಮನಾನೀಗಳ್ ಬಿಸುಟ್ಟಾಗಳ್ (ಸುಕುಮಾ. ೬-೫೦); ಪದಪಿಲ್ಲದ ದಾನಿಯುಂ ಜಿನೇಶ್ವರಪದಸೇವೆಯಿಲ್ಲದವನುಂ ನೆಱೆ ರಂಜಿಸಲಾಱರುರ್ವಿಯೊಳ್ (ಧರ್ಮಾಮೃ. ೧೩-೧೩೬); ಪದಪಿಂ ಮಾಡುವ ದಾನಶಕ್ತಿ ಶಿವಧರ್ಮ್ಮಾಧಾರಕತ್ವಂ (ಕಇ. V, ೩೨-೪೦; 1215); ನೀನಾವ ತಾಣದೊಳಿರ್ದೊಡಾಯೆಡೆಗೆ ಪದಪಿಂದಲಾನು ಬಿಜಯಂಮಾಡಿ ಸೇವೆಯನು ಕೊಂಬೆ (ಸೌಂದಪು. ೧-೪೬); ಪದಪಿನಿಂದಿಪ್ಪ ಲಕ್ಕದ ಮೇಲೆ ತೊಂಬತ್ತಾರ್ಸಾಸಿರ ಸುಜಂಗಮವನು . . . ಕರೆತಂದು (ಚಿಬಪು. ೬-೧೬). ೬. ಮನೋಹರತೆ; ಚೆಲುವು; ಸೊಗಸು: ಇದು ಶುಕ್ರಚಾಪಲತೆ ಪುಟ್ಟಿದ ತಾಯ್ವನೆಯೆನೆ ವಿಚಿತ್ರಮಣಿಗಣರುಚಿಗಳ್ ಪುದಿದ ಲಹರೀ ಸಮಾಜದ ಪದಪಿಂ ರಾಜಿಪುದು ಲವಣಪಾರಾವಾರಂ (ಕುಸುಮಾ. ೧-೨೩); ರನ್ನದ ಘಟಂಗಳ ಕೈಕೈಗೆ ಮಿಗೆ ಕೊಡುವ ಕೊಂಭೊಂದು ಪದಪು ಕಂದುಕಕೇಳಿಯನೆ ತೋಱುದುದು (ಸಾಳ್ವಭಾ. ೩೩-೬೦); ತಡಿತಡಿಗಡರ್ವ ಜಲದೊತ್ತುಗಳ ಮುತ್ತುಗಳ ಪದ[ಪಾಠಾಂ. ಡೆ]ಪಿನಿಂ ಕಡಲೆಸೆದುದು (ಚಿಬಪು. ೨-೪); ಬಿದಿಗಿ ಚಂದ್ರನು ಬೆಳೆದು ಹುದಗಿರುವ ಬೆಳಕನ್ನು ಪದಪಿನಲಿ ಸುತ್ತ ಚೆಲ್ವಂತೆ (ನಾಡಪ. ೧೩). ೭. ಸುಖ; ಕ್ಷೇಮ: ಅಬಲೆ . . . ಮನನೊಂದೆನಗಿವನಿಂದ ಪದ[ಪಾಠಾಂ. ಡ]ಪು ಇಂದು ದೊರೆದುದಿಲ್ಲವೆನುತ ವಿಧಿಯ ಬೈಯುತಂದು ತದ್ಗೃಹಕೈದಿದಳು (ಮೋಳಿಪು. ೧-೮೨). ೮. ಭಕ್ತಿ; ಶ್ರದ್ಧೆ: ಪದಪು ಜಿನೇಂದ್ರಪಾದ ಕಮಲಂಗಳೊಳಾವಗಮಾಗೆ . . . ಕುದಿದಪತೃಷ್ಣೆಯಂ ಕುಸಿದು ಮಾಣಿಸುವಯ್ದುಮಣುವ್ರತಂಗಳಂ (ಆದಿಪು. ೬-೭); ಪದಪಿನಿಂ ಕೇಳ್ವಳ್ ಪುರಾಣಂಗಳಂ (ಕಾದಂಪೂ. ೩೬೮). ೯. ಅಚ್ಚುಕಟ್ಟು; ಒಪ್ಪ: ಗುರುಗುಂಜೆ ಪುನರ್ನವಿ ಪದ್ಮಪತ್ರಮೆಂಬಿನಿತುಮನಿಕ್ಕಿ ಸುಣ್ಣದೊಳವಂ ಪದಪಿಂ ತೆಗಪುತ್ತೆ (ಲೋಕೋಪ. ೮-೩೧); ಉಂಡೆಯೊಂದನೆ ತೆಗೆದು ಬಿದಿರ ನೇತ್ರದ ತೆಱದಿ ಗೇಣಗಲವಂ ಮಾಡಿ ಪದಪಿನಿಂ ಹಂಚಿನೊಳು ತುಪ್ಪವ ತಡಹಿ ಅಡಲು ಮಂಡಗೆಯೆನಿಸಿಕೊಂಡುದು (ಸೂಪಶಾ. ೧-೨೯); ನೋಡು ನನ್ನ ಬಾಳ ಪದಪ (ರಾಮನ. ೪೪). **ಪದಂಪು**: ೩. ಆಡಿಗೆಱಗಿದ ಕೇಯೂರಕನನಿತ್ತ ಬಾಯೆನುತ ಪದಂಪೊದವೆ ತೆಗೆತೆಗೆದು ತಟ್ಕೈಸಿದನಾಗಳ್ ನೃಪತಿ ನಿಬಿಡನಿಜಭುಜಯುಗದಿಂ (ಕಾದಂಉ. ೩೬೦). ೬. ತಂಗಾಳಿಯ ಪದಂಪು ಗಿಳಿಗಳ ರವದ ಸೊಂಪು . . . ಸಂಗಳಿಸಿತೆಲ್ಲೆಲ್ಲಿಯುಂ ಚೈತ್ರಾಗಮಂ ಬರಲ್ (ಚಿಬಪು. ೪೫-೧೫); ಈ ಪದಂಪು, ಈ ತಂಪು ದೂರದ ದಿವಮಂದಾರದ ಗಂಧದ ಗಣಿಯಿಂದ ಬಂತು (ನಡೆಬಂ. ೬-೨೧). **ಪದಪ್ಪು**: ೩. ಆತನ ನುಡಿಯೊಳ್ಪದಪ್ಪನಪವರ್ತಿಪುದಪ್ಪಿನದೊಂದು ನೇರ್ಪು ಚುಂಬನಮನವಜ್ಞೆ ಮಾಡುವುದು (ಚಂದ್ರಪು. ೮-೮೨). **ಪದುಪು**: ೯. ದಿವಭುವನವನು ಪದೆದು ಹಾಸುಹೊಕ್ಕಂತೆ ಪದುಪಿಂದಲೊಂದಿಸುತೊಂದೆ ಮಗ್ಗದಲಿ [illegible] ಕವಿತೆ ಶಬಲಾಂಶುಕವನುಡುತ (ಗಿಳಿವಿಂ. ೨೩-೬೮). **ಪದೆಪು**: ೩. ಉದಾತ್ತರಾಘವನ ಪದೆಪನಾವಂ ಪಡೆವಂ (ಪಂರಾಮಾ. ೧೨-೮೧); ಗೋಪಿಯರ್ ಪದೆಪಿಂ ಜಕ್ಕುಲಿಸೆ ಲಲಿತಾನನಾಂಬುಜಮಲರ್ದೆಸೆದುದು ಮಂದಹಾಸದಿಂ ಮುರಹರನಾ (ಜಗವಿ. ೩-೩೩); ಸೋಮಪ್ರಭಂ ಲೀಲೆಯಿಂದಿರ್ದಾಂದಾನತರಾದ ಸುಪ್ರಭಮಧುಪ್ರಧ್ವಂಸರಂ ಹರ್ಷಬಾಷ್ಪದೆ ಮೆಯ್ವೆರ್ಚಿದಂ . . . ಇಕ್ಕಿದಂ ಪದೆಪಿನಿಂ ಬಾಯ್ವಾಯ ತಾಂಬೂಲಮಂ (ಅನಂಪು. ೧೪-೨೪). ೪. ಕಿವಿಗಿಂಪಂ ಕೆ[ಳೆ] ಗೀತ. . .ತನಿಸೊಕ್ಕು ಮೆಯ್ಗೆ ಪದೆಪಂ ತಂದೀಯೆ ದೇವಾಂಗನಾನಿವ ಹಾಸಂಗದೆ ಸಿಂಹಕೇತು ಪಡೆದಂ ಪಂಚೇಂದ್ರಿಯಪ್ರೀತಿಯಂ (ವರ್ಧಮಾ. ೬-೫೦); ಧನಮಂ ಮರ್ಯಾದೆಯಿಂದಾರ್ಜಿಸಿ ವಿಷಯಸುಖಾಸ್ವಾದನಂ ದೋಷನಿಷ್ಪಾದನಮಲ್ತೆಂಬಂತೆ ಚಿತ್ತಕ್ಕೊದವಿಸೆ ಪದೆಪಂ (ಪಂರಾಮಾ. ೩-೧೬೧); ಲತಾನಿಕೇತನಾಂತದೊಳಾಗಳ್ ಪದೆಪು ಮಿಗೆ ಖಚರದಂಪತಿ ಮದನಸುಖಾಸ್ಪದಮನಾಂತ ಕುಸುಮದ ಪಸೆಯಂ ಭೋಂಕೆನೆ ಕಂಡು ನೋಟ್ಪನ್ನೆಗಂ (ನೇಮಿಪು. ೪-೨೮); ಪದೆಪಿಂ ಪೇಟ್ಟಪೆಂ ರೀತಿ ಭಾವಂ ಛಂದೋಲಂಕಾರಸಾರಂ ಪುದಿದಿರೆ ಗಿರಿಜೋದ್ವಾಹಮಂ ಪ್ರೀತಿಯಿಂದಂ (ಗಿರಿಕ. ೧-೪೨). ೫. ಇಂದೀವರನಯನೆ . . . ಗುಣನಿಳಯನನಂದಾಗಳ್ ನೋಡಿ ಪೋಗಲಾಱದೆ ಪದೆಪಿಂ ಸಾರೆ ಕುಳ್ಳಿರ್ದು (ಧರ್ಮಾಮೃ ೧೦-೧೬೬); ರತ್ನಮಾಲೆಯನಿಂದ್ರಾಣಿಯುಮಿಂದ್ರನುಂ ಪದೆಪಿನಿಂ ಸಂತೈಸಿ (ಅನಂಪು. ೯-೭೯). ೬. ಸಂತತಮಾ ಸುರಾಪಗೆಯ ಬೆಳ್ವೊನಲಂ ಪದೆಪಿಂದುಗುಟ್ಟ ಹೇಮಂತನಗೇಂದ್ರಮಂ ನೆನೆಯಿಸುತ್ತುಂ (ಕುಸುಮಾ. ೧೫-೨೦). ೧೦. ಅತಿಯಾಸೆ; ಮೋಹ: ಈ ಪರದನೆ ಸಖನೆನ್ನದೆ ಪಾಪಯುತಂ ಪೊನ್ನೊಳಾದ ಪದೆಪನೆ ಬಗೆದಂ (ಧರ್ಮಾಮೃ. ೧೨-೭೯). ೧೧. ಸತ್ಕಾರ; ಉಪಚಾರ; ಶುಶ್ರೂಷೆ: ತೀವಿದ ಮಜ್ಜನದಿಂ ಸದ್ಭಾವದಿನೊಸೆದೆತ್ತಿದೊಂದು ಬೋನದೊಳಂ ನಾನಾ ವಿಧದ ಪದೆಪಿನೊಳ್ ಹರಿಗಾವಗಮಾಱುದುದು ಪಥಪರಿಶ್ರಮಮೆಲ್ಲಂ (ಪಂಪಭಾ. ೯-೨೮); ವರ ಪಂಚಾಚಾರಮಂ ರಕ್ಷಿಸುವ ಪದೆಪು ಲೇಸಪ್ಪಿನಂ . . . ವರ್ತಿಸುತ್ತುಂ (ಬಾಧಪು. ೧-೩). **ಹದಹು**: ೨. ಅದನು ಕಂಡಾಧೀವರಂ ನಲಿಯುತೊಂದುದಿನದುದಯದೊಳಗಾ ಹಕ್ಕಿ ದೆಸೆದೆಸೆಗೆ ಮೇಂಬೊಲಕೆ ಹದಹು[ಪಾಠಾಂ. ವು] ಮಿಗೆ ಹಾಱಿಹೋದುದನಱಿತು (ಸಮ್ಯಕೌ. ೨-೩೨). [ಪದೆ$_1$ + -ಪು$_2$]

ಪದಪುಂಜ (ನಾ). ೧. ಪದಗಳ ಗುಂಪು,—ಸಮೂಹ: 'ಸತ್ಯಂ ಶಿವಂ ಸುಂದರಂ' ಎಂಬ ಪದಪುಂಜವನ್ನು ಕವಿ ರವೀಂದ್ರರು ತಮ್ಮ ಲೇಖನಗಳಲ್ಲಿ ಬಳಸಿ ಪ್ರಚುರಕ್ಕೆ ತಂದಿದ್ದಾರೆ (ಸೌಂದಸ. ೪೧೦); ಈ ಪದಪುಂಜಗಳಲ್ಲಿ ಬರುವ ಪೂರ್ವಪದವಾದ 'ಪೂರ್ವ' ಎಂಬುದಕ್ಕೆ ಪೂರ್ವದಿಕ್ಕು ಎಂಬ ಅರ್ಥವನ್ನು ಅನ್ವಯಿಸಬಾರದು (ದ್ರಾವಿವಿ.೬೬ನ್ನೆಲೆ). ೨. [ವ್ಯಾಕ] (ಅಪೂರ್ಣವಾದರೂ) ಹೊಂದಿಕೆಯುಳ್ಳ ಅರ್ಥವನ್ನು ಕೊಡುವ ಪದಗಳ ಗುಂಪು; ಸಮನ್ವಿತವಾದ ಶಬ್ದಗಳ ಸಮೂಹ; ವಾಕ್ಯಾಂಗಭಾಗ; ಪದಸಮುಚ್ಚಯ. [ಪದ$_2$ + ಪುಂಜ$_3$]

ಪದಪುಗಾರ (ನಾ). ಸೊಗಸುಗಾರ; ಒನಪುಗಾರ : ಗದ್ದ ಅಲಗಿಸುತ್ತ ಕೇಳಿದ ಈ ಪದಪುಗಾರ (ಬೆಳುಮ. ೯೨).
[ಪದಪು + -ಕಾರ$_1$(<-ಕಾಱ)]

ಪದಪುಗಾರ್ತಿ, ಪದೆಪುಗಾರ್ತಿ (ನಾ). ೧. ಉತ್ಸಾಹದಿಂದ ಕೂಡಿರುವವಳು:"ಪದಪುಗಾರ್ತಿಯೆಂದುಂ, ಹೊನಹುಗಾರ್ತಿಯೆಂದುಂ, ಸಂರಂಭವತಿ" (ಕಥಸಾ. ೬೨–೩೮೧). **ಪದೆಪುಗಾರ್ತಿ** : ೨. ಸಂತೋಷವನ್ನು ಉಂಟುಮಾಡುವವಳು ; ಗಣಿಕೆ : "ಪದೆಪುಗಾರ್ತಿಯುಮ ಮನಲ್ಕಂದದು ತಾಂ ಗಟಿಸಾಟಿಸೆಟ್ಟಿಗಳ್ಕುಂ ನಾಮಂ" (ಕವಿಕಂ.೧೩೮); ಇವನ್ನು ಅನುಗೆಯ್ದುಕೊಳ್ಳುತ್ತ ನೋಂತ ಭಾಗ್ಯರ ಉಪಭೋಗಕ್ಕಳವಡಿಸಿಯೊಪ್ಪಿಸುವ ತವಕಕ್ಕಾಗಿ ಪದೆಪುಗಾರ್ತಿಯರು ಸಿದ್ಧವಾಗಿರುವರು(ಬೆಟ್ಟಅ. ೮೩–೬). [ಪದಪು + -ಗಾಱ(<-ಕಾಱ) + -ತಿ$_1$(<-ಇತ್ತಿ)]

ಪದಪುಗೊಳ್ (ಕ್ರಿ). ಶೋಭಿಸು ; ಸೊಗಸಾಗು : ಮುಂದ ಹೊಂದೆಸಕಮಂ ಮೊಗದೋಱದೆ ನಿಂದುದೊಲ್ಕೆ ಕೈಮಿಱುದ ಮೇಲದೇಂ ಪದಪುಗೊಂಬುವೆ ಪೆಣ್ಣಳ ಪಂಥ ಪಾಡುಗಳ್ (ಚಕವಿ. ೬–೨೦೯) ; ಅವರ ಪಾದಸ್ಪರ್ಶದಿಂದ ಪದಪುಗೊಂಡಿರುವ ಮಂಜುಲಮಾರ್ಗ ಯಾವುದು ? (ತಂಗಭ. ೮೦). [ಪದಪು + ಕೊಳ್$_1$]

ಪದಪೂರಕ (ನಾ). ಪದ್ಯದ ಒಂದು ಸಾಲನ್ನು ಪೂರ್ಣಗೊಳಿಸಲು ಸೇರಿಸುವ ಪದ ; ಪಾದಪೂರಣಕ್ಕಾಗಿ ಸೇರಿಸುವ ಪದ : ವಿಯತಿ ಪದಪೂರಕಂ . . . ಕ್ರಿಯಾಳಂಕಾರಹೀನವೆನಿಪ್ಪ ಪೊಳ್ಳಂ ತೂಱ ಕಳೆದು (ಬಸಪು. ೧–೧೮). [ಪದ + ಪೂರಕ]

ಪದಪೂರಣ (ನಾ). = ಪದಪೂರಕ : ಪದಪೂರಣಮನಣಂ ಪುಗಿಸದೆ ಕುದಿದು ವೃಥಾಕ್ಷರಂಗಳಂ ಪ್ರಾಸದೊಳಿಕ್ಕದೆ . . . ಪೂಕ್ಕೆಯಿನೋದು ವೇಟ್ಟೊಡ್ಡಾರ್ ಮೆಚ್ಚರಿದಂ (ಜಾತಕಿ. ೧–೧೨). [ಪದ$_2$ + ಪೂರಣ]

ಪದಪ್ಪು 'ಪದಪು' ನೋ.

ಪದಪ್ರಹಾರ (ನಾ). ಒದೆ ; ಒದೆತ : ಬಳಿಕ ನೂಱಾನೆಯಲಿ ನಿನ್ನವನವಿಗೊಟ್ಟನು ಭೀಮಸೇನನ ಚಲಗತಿಯ ಡಾಕುರಚಪೇಟಪದ ಪ್ರಹಾರದಲಿ (ಕುವ್ಯಾಗ. ೪–೨೩). [ಪದ$_2$ + ಪ್ರಹಾರ]

ಪದಬಂಧ (ನಾ). ೧. ಪದಗಳ ಜೋಡಣೆ : ಸದಮಳಯುಕ್ತಿಗೆ ಯತ್ನಂ ಪದಬಂಧದ ಮಂತ್ರಶಕ್ತಿ ಕೃತಿರತಿರತ್ನಂ (ಹಮ್ಮೀರ. ೧–೨೦) ; ಮೃದುಪದಬಂಧವನೆಸಗುವ ಸುದತಿಯ ನಿಮಿರ್ದತ್ತಿದೊಂದು ಪುರ್ವಿಂ ಮೆರೆವೀ ವದನಂ (ಶಾಕುಂತ. ೩೮–೧). ೨. ಪದ್ಯದಲ್ಲಿ ಸಾಲುಗಳ ರಚನೆ : (ಚತುನಿ.ಕ. II, ೧೨೧). ೩. ಕಾಲಿನ ಆಭರಣ : ಅಂಘ್ರಿನಖಿರಣಾಚ್ಛಾರುಣಸಂಕಾಶಮೌಕ್ತಿಕಪದಬಂಧಂ ಆ ದೇವಂ ಶ್ರೀದೇವನಾಮಮಂ ತಾಳ್ದಿ (ಶಾಂತಿಪು. ೬–೧೩ ಪ). [ಪದ$_2$ + ಬಂಧ]

ಪದಬಂಧನ (ನಾ). = ಪದಬಂಧ ೧ : ವ್ಯಾಕರಣಾಂಶಗಳಲ್ಲಿ ಕಾಣುವ ಪದಬಂಧನ(Morphological Constructions)ಇತ್ಯಾದಿಗಳಲ್ಲಿ ಕಾಣುವ ಸಾಮ್ಯ ಮತ್ತು ಭೇದಗಳು (ಸುವರ್ಣ. ೩೩೫). [ಪದ$_2$ + ಬಂಧನ]

ಪದಬರ (ನಾ). (?) : ಶ್ರೀ ಕೇಸ(ಶ)ವೇಶ್ವರದೇವಗ್ಗೆ[ಗ] ದೇವಪೂಜಾನನ್ತರಂ ಪದಬರದೊಳ್ ಧಾರಾಪೂರ್ವ್ವಕದಿನಾಚ[ಂ]ದ್ರಾರ್ಕತಾರಂ ಬರಂ ಬಿಟ್ಟರ್ (ಎಇ. XVI, ೮೫–೩೫ ; 1067). [?]

ಪದಬಲ (ನಾ). ಕಾಲಾಳುಗಳ ಪಡೆ ; ಪದಾತಿಸೈನ್ಯ : ತರಣಿಕುಲರಥ ಘನ ಹರಿ ದ್ವಿರದಾತುಳ ವನಚರಾಗ್ರಪದಬಲದಿಂದಂ ಧರಣೀಶಂ ರಾಮನನೊಲ್ ಸುರಗಣವರವರ್ತ ಶರಧಿಕರಮೆಸೆದರ್ಕುಂ (ಹಮ್ಮೀರ. ೧–೪೦). [ಪದ$_2$ + ಬಲ$_3$]

ಪದಭಜಕ (ನಾ). ಪಾದವನ್ನು ಸೇವಿಸುವವನು,—ಪೂಜಿಸುವವನು; ಪಾದಾರಾಧಕ : ಇದುವೆ ಚರದುಂದುಭಿಯಲಾ ಎರಡನೀಶ್ವರನ ಪದಭಜಕರಾ ಕಾಲವಱುದು ಬಾಱುಸಲಾಗಿ ಮದನಾರಿಯಾ ಭೋಜನಕ್ಕೆ ಸಂತೋಷಿಸುತ್ತವರನಾ ಕೈಲಾಸದಾ ಸದನದೊಳಗಣ ಪದವ ಕೊಡಲಲ್ಲಿ ಸರ್ವಭೋಗದೊರ್ಪರು (ವೀಕ್ಷಪು. ೬–೫–೫೩). [ಪದ$_2$ + ಭಜಕ]

ಪದಭಾರ (ನಾ). ಕಾಲಿನ ಭಾರ : ಏಳಬುಧಿ ಕಡೆಯಾದ ಸರ್ವರಾಜ್ಯ ಶ್ರೀಯ ಮೇಳದೊಳು ವೀರಸಿರಿಯಂ ವಿಜಯಸಿರಿಗಳಂ ತಾಳಲಾರ್ಪದಟುಳ್ಳ ಭುಜವನಾಮಿಳನ ಪದಭಾರಕ್ಕೆ ಬಸವಳಿವುದೇ (ಪಚಕಾ. ೧೧–೬೨).
[ಪದ$_2$ + ಭಾರ]

ಪದಭ್ರಷ್ಟ (ನಾ). ಅಧಿಕಾರವನ್ನು ಕಳೆದುಕೊಂಡವನು ; ಸ್ಥಾನಭ್ರಷ್ಟ : ಮಲ್ಲಿಕಾರ್ಜುನ ಪದಭ್ರಷ್ಟನಾದ (ಶಾಂತಲಾ. ೪೦೧).
[ಪದ$_2$ + ಭ್ರಷ್ಟ]

ಪದಭ್ರಾಂತಿ (ನಾ). ಶಬ್ದಗಳನ್ನು ತಪ್ಪಾಗಿ ಗ್ರಹಿಸುವುದು : ಪದಭ್ರಾಂತಿ : ಎರಡು ಶಬ್ದಗಳಿರುವ ಸಾಮಾನ್ಯ ಸಾದೃಶ್ಯವು ಅವುಗಳ ನಿರ್ದಿಷ್ಟ ವ್ಯತ್ಯಾಸವನ್ನೂ ಮರೆಸುವಂತಿದ್ದಾಗ ಒಂದನ್ನು ಮತ್ತೊಂದಕ್ಕೆ ತಪ್ಪಾಗಿ ಭಾವಿಸುವ ಸಾಧ್ಯತೆಯುಂಟು (ಭಾರಪ. ೭೦).
[ಪದ$_2$ + ಭ್ರಾಂತಿ]

ಪದಮಂಜರಿ (ನಾ). [ಸಂಗೀತ] ಒಂದು ರಾಗದ ಹೆಸರು : ಸಮಸ್ತರಾಗಂಗಳೊಳಗೆ ರಾಮಕ್ರಿಯೆ . . . ಪದ[ಪಾಠಾಂ. ಪಳ, ಫಳ] ಮಂಜರಿ . . . ಮಧ್ಯಮಾವತಿಯೆಂಬ ಮೂವತ್ತಾಱು ರಾಗಂಗಳೇ ಮುಖ್ಯಮಾಗಿ ಬಳಿಕೆಯಿಂದಧುನಾತರಲ್ಲಿ ಪ್ರಸಿದ್ಧಗೊಂಡಿರ್ಪುವು (ವಿವೇಕ. ೨೩೪). 'ಫಲಮಂಜರಿ' ಪರಾ. [ಸಂ.]

ಪದಮಧ್ಯಸಂಧಿ (ನಾ).[ವ್ಯಾಕ] ಪ್ರಕೃತಿ ಮತ್ತು ಪ್ರತ್ಯಯಗಳು ಸೇರುವಾಗ ಉಂಟಾಗುವ ಸಂಧಿ: ಪ್ರಕೃತಿಪ್ರತ್ಯಯಂಗಳ ಮಧ್ಯಮುಂ ಪೂರ್ವಪದದ ಕಡೆಯುಂ ಪರಪದದ ಮೊದಲುಂ ಕೂಡೆ ಪದಮಧ್ಯಸಂಧಿ, ಪದಾಂತಸಂಧಿ ಎಂದು, ಸಂಧಿವಿಷಯಮಿರ್ತೆಱಂ (ಶಮದ. ೫೦ ವೃತ್ತಿ).
[ಪದ$_2$ + ಮಧ್ಯ$_1$ + ಸಂಧಿ]

ಪದಮಸ್ತಕ (ನಾ). ಬಾವಲಿ ; ಕಪ್ಪಟ : "ಪದ[ಪಾಠಾಂ. ಮದ] ಮಸ್ತಕಂ ಬಾವಲೆನಿಸಿಕ್ಕು" (ಮಂಗರಾ. ೫೨–೧೧). [ಸಂ.]

ಪದಮಿಕ್ಕು (ಕ್ರಿ). ಪದವನ್ನು ಜೋಡಿಸು ; ಪದವನ್ನು ರಚಿಸು : ಒಂದೆಡೆಯೊಳೊಂದು ಕಂದದ ಮೊದಲುಮಂ ವೃತ್ತದ ತುದಿಯುಮನೊಂದು ಮಾಡಿ ಪದಮಿಕ್ಕಿಯೋದಿ ಪಂಡಿತಿಕ್ಕೆಗೆ ಮುಯ್ವಾಂತುಂ . . . ದೆಸೆದೆಸೆಗೆ ಬೆಸೆವ ಪಚ್ಚಪಸಿಯೆಗ್ಗರುಮಂ ಕಂಡು (ಪಂಪಭಾ. ೪–೯೪ ಪ).
[ಪದ$_2$ + ಇಕ್ಕು]

ಪದಮಿಡು 'ಪದವಿಡು' ನೋ.

ಪದಮುಖ (ನಾ). ಕಾಲಿನ ತುದಿ : ಪದಮುಖಕೆ ಮುಂಜೆಱಗ ಬಿಟ್ಟನು . . . ಕರ್ಣಾಭರಣ ಚರಣದ ಖಡೆಯದಲಿ ರಂಜಿಸಿದನಾ ಕರ್ಣ (ಕುವ್ಯಾಕ. ೮–೧೬). [ಪದ$_2$ + ಮುಖ]

ಪದಮೆಟ್ಟು (ಕ್ರಿ). ಹಿಂಜರಿ ; ಹಿಂದೆಗೆ ; ಹಿಮ್ಮೆಟ್ಟು ; ಕುಗ್ಗು : ಪದಮೆಟ್ಟದ ಜೌವನದುರ್ಬುಗೊರ್ದಿನಿಂದೊಡಲೊಡಲೊಂದೆ ತೋಱುಸುವೆನೆನ್ನಯ ಪೆಣ್ತನದೊಂದು ಪೆರ್ಮೆಯಂ (ಚಕವಿ. ೬–೨೫೦).
[ಪದ$_2$ + ಮೆಟ್ಟು$_1$]

ಪದಮೇಳ (ನಾ). (ಸಂಗೀತ ಅಥವಾ ನೃತ್ಯದ) ಹಿತವಾದ ಸರಸವಾದ ಗೋಷ್ಠಿ : ಒದಱುವ ದನಿಗೊಳಗರುಡಿಯ ಪದಮೇಳಮನುಱುದು ಬಾಗಿಲೆಡೆಗೇಟ್ಟಂದರ್ . . . ಬೆಲೆವೆಣ್ಗಳ್ (ಚಕವಿ. ೬–೧೨೧).
[ಪದ$_1$ + ಮೇಳ(= ಮೇಲ್$_2$)]

ಪದಮೈತ್ರಿ (ನಾ). [ಕಾವ್ಯಮೀಮಾ] ಪದಗಳಿಗೆ ಇರುವ ಪರಸ್ಪರ ಹೊಂದಾಣಿಕೆ : ಪದಗಳಿಗೆ ಇರತಕ್ಕ ಅನ್ಯೋನ್ಯವಾದ ಮೈತ್ರಿಗೆ ಶಯ್ಯ

ಎಂದು ಹೆಸರು . . . ಶಯ್ಯೆಗೇ 'ಪದಾನುಗುಣ್ಯ'ವೆಂದೂ 'ಪದಮೈತ್ರಿ' ಯೆಂದೂ ಹೆಸರು (ಕೈಸಿಡಿ. ೨೨೪). [ಪದ$_2$+ಮೈತ್ರಿ]

ಪದಯಿದ (ನಾ). ಪ್ರಿಯನಾದವನು ; ಇಷ್ಟನಾದವನು : ಪದಯಿದ ನೆಲ್ಲಿದಂ ಪರಮನೆಲ್ಲಿದಂ . . . ಎಲ್ಲಿದನೋ ಮನಃಪ್ರಿಯಂ (ಅಜಿಪು. ೬-೧೧೮) ; ನಾಯುಣ್ಣದ ದೋಣಿಯೊಳೂಡಿದೊಂಗೆ ಪದಯಿದನೆ ಕರಂ (ಸುಕುಮಾ. ೨-೬೯). [<ಪದೆ+-ದ$_2$. P ಇದು 'ಒಳ್ಳಿದ' 'ಬಲ್ಲಿದ' ಎಂಬುವುಗಳ ಶಬ್ದಸಾಮ್ಯದಿಂದುಂಟಾದ ರೂಪವಿರಬಹುದು]

ಪದಯಿಲ (ನಾ). ಅಧಿಕಾರದಲ್ಲಿರುವವನು ; ಅಧಿಕಾರಸ್ಥ : ಗಾವಿಲಂ, ನಾವಿಲಂ . . . ಪದಯಿಲಂ, ಪಚ್ಚಯಿಲಂ (ಶಬ್ದಾನು. ೪೪೧ ಪ್ರಯೋ). [ಪದ$_2$+-ಇಲ]

ಪದಯಿಸು 'ಪದೆಯಿಸು' ನೋ.

ಪದಯುಗ (ನಾ). ಎರಡು ಪಾದ ; ಪಾದಯುಗ : ಎನಸುಂ ಮಾಣದೆ ಬಾಗಿದಂ ಪದಯುಗಕ್ಕಾರೂಢಸರ್ವಜ್ಞನಾ (ಪಂಪಭಾ. ೩-೩೪) ; ಪದಯುಗರಮ್ಯನಪ್ಪ ಹರಿ ಮುನ್ನಳೆಯಲ್ಕೆ ತದಂಘ್ರಿಗಾದಮೆಯ್ದದ ನೆಲನೆಯ್ದಲಪ್ಪುದೆ ಚತುಶ್ಚರಣಾಂಚಿತದೀ ಹರಿಸ್ಫುರತ್ಪದನಿಕರಕ್ಕೆ (ಕುಸುಮಾ. ೮-೭೯) ; ಧೂತಳವನಲ್ಲಿಂದ ಬಳಿಕ ಪ್ರೀತಿಯಲಿ ಕಮಲಜಕಟಾಹೋದ್ಭೂತ ಚರಣದೊಳಳೆಯಲಾದುದು ಧರಣಿ ಪದಯುಗಕೆ (ಕುವ್ಯಾಸ. ೯-೪೫) ; ತಮ್ಮ ಪದಯುಗ ನೆನಹೆ ಸಕಲೇಪ್ಸಿತವನೊದಗಿಸಲೆನಗೆ ಸಾಧನವೇಕೆ ಬೇರೆ (ಗಗಶಾ. ೧೭-೬೨). [ಪದ$_2$+ಯುಗ]

ಪದಯುಗಳ (ನಾ). = ಪದಯುಗ : ಪದಯುಗಳಂಗಳಂ ತೊಳೆದು ಪೂಜಿಸಿ ಬಂದಿಸಿ ಕಾಂತೆ ಕಾಯವಾಕ್‌ಹೃದಯವಿಶುದ್ಧಿಯಿಂದೆ ನಿರವದ್ಯ ಮನನ್ನಮನೀಯೆ (ವರ್ಧಪು. ೧೫-೫೭) ; ನದಿನದವನುತ್ತರಿಸಿ ಹರಿಹರಪದ ಯುಗಳಕಭಿನಮಿಸಿ . . . ನಡೆತಂದ (ಕುವ್ಯಾಆ. ೧೯-೧೭).

[ಪದ$_2$+ಯುಗಳ(=ಯುಗಲ)]

ಪದಯುಗ್ಮ (ನಾ). = ಪದಯುಗ : ಮಲಯಾಳತಪೋನಿಧಿ ದೇವ ಸಿಂಗಿಜೀಯರ ಪದಯುಗ್ಮಮಂ ಪಡೆದು ಕಚ್ಚಿದರರ್ತ್ಥಿಯೆ ಪುಣ್ಯಮೂರ್ತಿಗಳ್ (ಸೌಇಇ. XX, ೪೯-೫೮ ; 1076) ; ನಾಡೆ ನಿನ್ನ ಪದಯುಗ್ಮಕ್ಕೆ ಕಣ್ಣತ್ತ ಬೇಡ ನಗಧರರೀರ್ವರೊಳಗೆಯಾ ಕಣ್ಣಪಂ ಮಾಡಿದೆಂಜಲನೆ ನೀನುಂಬಗ್ಗಳವನಾತಗಿತ್ತೆ (ವೀಶೈಪು. ೫-೬-೧). [ಪದ$_2$+ಯುಗ್ಮ]

ಪದರ 'ಪದರು$_3$' ನೋ.

ಪದರಕ್ಷೆ (ನಾ). ಮೆಟ್ಟು ; ಪಾದರಕ್ಷೆ : ತಲೆಗೆ ಪದರಕ್ಷೆಯಂ ನಾಣಿಲಿ ಕಟ್ಟಿಸಿಕೊಂಡ ತೆಜದೆ ಲೋಕವಿರುದ್ಧಂ (ಪಾರ್ಶ್ವಪು. ೩-೬೪). [ಪದ$_2$+ರಕ್ಷೆ]

ಪದರಗಲ್ಲು 'ಪದರುಗಲ್ಲು' ನೋ.

ಪದರಚನೆ (ನಾ). ೧. ಪದಗಳನ್ನು ಜೋಡಿಸುವುದು : ಪದರಚನೆ . . . ಮೃದುವೆನೆ ಪೊಸಬಗೆ ರಸಭಾವದೊಳೋಕುಳಿಯಾಡೆ ಪೇಟ್ಟನಭಿನವ ಪಂಪಂ (ಮಲ್ಲಿಪು. ೧-೪೨) ; ಪದದ ತರುವಾಯ ಪದರಚನೆ ತಾವಾಗಿ ಹೊಂದಿ ಬಂದವು (ಇಪ್ಪಕ. ೧೧೦). ೨. ದೇಶೀಯವಾದ ಹಾಡಿನ ನುಡಿ : ಪಂಜಳವೆ ತನಗೆ ರಂಜಿಸುವಧರೋಷ್ಠವಾಗೆ ಪದರಚನೆಯೆ ತನಗೆ ಮ್ರಿದುಪವನವಾಗೆ ಅಂಬುವೆ ತನಗೆ ಕಂಬುಗ್ರೀವವಾಗೆ ಪೂರ್ಣರಾಗವೆ ತನಗೆ ಕರ್ಣಾಭರಣವಾಗೆ (ಕೊಲ್ಹಾಶಾ. ೧-೨೧ ; ?). [ಪದ$_2$+ರಚನೆ]

ಪದರಜ (ನಾ). ೧. = ಪದಧೂಳಿ ೧ : ಪದರಜದಿಂ ಗಿರಿದುರ್ಗಂ . . . ಪುದಿದುತ್ತುಂಗಧ್ವಜದಂಡದಿನದು ವನದುರ್ಗಮೆನಿಸಿದುದು ನೃಪಸೈನ್ಯಂ (ಪಾರ್ಶ್ವಪು. ೮-೮೩) ; ಅಮಮ ಪದರಜ ರವಿಯ ತಿವಿದುದು ದಿವವನಳಿದುದು (ಕುವ್ಯಾಭೀ. ೪ ಸೂಚನೆ). ೨. = ಪದಧೂಳಿ ೨ : ಅವಗೆ ಶಾಪವಿಮೋಚನವು ರಾಘವನ ರಾಣಿಯ ಪದರಜದ ಸೋಂಕವಗೆ ಘಟಿಸಲಿ ಕೆಂಬುದಿದು ತಾನತ್ರಿವಚನವಲ (ತೊರರಾ. ೨-೬-೯). [ಪದ$_2$+ರಜ$_1$]

ಪದರಜ್ಜು (ನಾ). ಕಾಲಿಗೆ ಕಟ್ಟುವ ಹಗ್ಗ,—ಸಂಕೋಲೆ : ಪಿರಿದು ವಾರಾಂಗನಾಕೈತವಂಗಳ್ ನಾಡೆ ನಿರುತದಿಂ ಬಲೆದೊಡಕುಗಳ್ . . . ವಿಟರ ಮನಮೆಂಬ ಕರಿಯ ಪದರಜ್ಜುಗಳ್ (ಅರಾಚ. ೨-೫-೪೧).

[ಪದ$_2$+ರಜ್ಜು]

ಪದರರೂಪ (ನಾ). ಹಾಳೆಯಂತೆ ಅಗಲವಾಗಿರುವ ಆಕಾರ : ತುದಿ ಒಂದೇ ಕಡೆ ದಪ್ಪವಾಗಿ ತಟ್ಟೆಯಂತೆ ಅಗಲವಾಗಿದ್ದರೆ ಪದರರೂಪ (Lamellate) (ಕೀಟಬೆ. ೧೪). [ಪದರ(<ಪದರು$_3$)+ರೂಪ]

ಪದರಾಗ (ನಾ). ಅಂಗಾಲಿನ ಕೆಂಪುಬಣ್ಣ : ಪದರಾಗಂ ಪಲ್ಲವಂ. . . ಮೆಯ್ ಲತೆ ತೊಡೆ ಕದಳೀಸ್ತಂಭಮಾಗಲ್ಕೆ . . . ತತ್ಕಾಂತೆ ಕಣ್ಗೆಡ್ಡ ಮಾದಳ್ (ಲೀಲಾವ. ೬-೬೨). [ಪದ$_2$+ರಾಗ]

ಪದರಾಟ (ನಾ). ಗಡಿಬಿಡಿ ; ಆತುರ : ಇದ್ದಕ್ಕಿದ್ದಂತೆ ಉದ್ಗಾರ, ಒದರಾಟ, ಪದರಾಟ (ಕಬಸಾ. XXIII, ಪೀಠಿಕೆ).

[ಪದರು$_1$(<ಪದಱು$_1$)+ಆಟ]

ಪದರಾಡು (ಕ್ರಿ). ೧. ಕಂಗೆಡು ; ದಿಕ್ಕುಗೆಡು : ಪದರಾಡಿ, ಬಾಯ್ವಿಟ್ಟು, ಮೇಲೆಮೇಲುರುಳ್ವರನ್ ಕೆಳಗೆ ಪಾತಾಳಂ ನುಂಗಿದುದು (ಪಾರಸಿ. ೧೯-೨). ೨. ಅಸಂಬದ್ಧವಾಗಿ ಮಾತನಾಡು : (ಕಿ).

[ಪದರು$_1$(<ಪದಱು$_1$)+ಆಡು$_1$]

ಪದರಿಸು (ಕ್ರಿ). ಗದರಿಸು ; ಝಂಕಿಸು : ಲೇಸೆನಿಪುದೈ ಸಾವು ಸಾಧು ಸಜ್ಜನರೆಡೆಯೊಳು ಪಾತಕಿಯದೆಂತಿರುವೆ ಪದರಿಸಲದೇನೊರೆವೆ (ವೆಂಕಾರಾ. ೪-೮-೨೪). [ಪದರು$_1$(<ಪದಱು$_1$)+-ಇಸು$_3$]

ಪದರು$_1$ 'ಪದಱು$_1$' ನೋ.

ಪದರು$_2$ 'ಪದಿರ್$_1$' ನೋ.

ಪದರು$_3$, ಪದರ (ನಾ). ೧. (ಮರ, ಬಟ್ಟೆ ಮುಂತಾದುವುಗಳ) ಮಡಿಕೆ ; ಪೊರೆ ; ಹಾಳೆ : ಆ ಹೋಳುಗಳ ನಡುವಳಿಯ ಕತ್ತಿಯೊಳು ಸೀಳಿಕೊಂಡಾ ಪದರಿಗಿಡಿದು . . . ನಾರಿಂದವಂ ಬಿಗಿವುದು (ಸೂಪಶಾ. ೫-೧೩) ; ಅಸುಗೆಯ ತಳಿರೊಳ್ಮಲಗಿಸಿ ಪಕ್ಷದ ಪದರೊಳಗಳ ವಡಿಸಿ . . . ಮಚ್ಚಾರಿಕೆ ಮಱುಗಿದುದು (ಜಯಕಾ. ೨-೨೯) ; ಬೆಣಚು ಗಲ್ಲಿನ ಒಂದು ಪದರು ಬೆಳಕಿಗೆ ಹೊಳೆಯುತ್ತಿತ್ತು (ಕುಡಿಕೂ. ೧೬) ; ನಭೋಮಂಡಲದಿಂದ ಕಾರ್ಮೋಡದ ಪದರಿಂದ ಮಿಂಚೊಂದು ಸುಳಿದು ಹೋಯಿತೇನು? (ಮಾಮನೆ. ೧). ೨. ಮಜಲು ; ಹಂತ ; ಸ್ತರ : ತುಳು ನಾಡಿನ ಸಾಮಾಜಿಕ ಪದರುಗಳಲ್ಲಿ ಪ್ರಾಮುಖ್ಯವಾದುವುಗಳನ್ನು . . . ವಿವೇಚಿಸಿದ್ದೇನೆ (ತುಳುನಾ. ೪) ; ಇನ್ನೊಬ್ಬ ಕನ್ನಡ ರಸಿಕರು ಪಾಶ್ಚಾತ್ಯ ಸಮಾಜದ ಬಗೆಬಗೆಯ ಪದರುಗಳನ್ನು ಕನ್ನಡಸಾಹಿತ್ಯ ಕೃತಿಗಳಲ್ಲಿ ಪಡಿಮೂಡಿಸಿದ್ದಾರೆ (ಸಾಸಮಾ. ೧೪). ೩. ಈರುಳ್ಳಿ ಮುಂತಾದುವುಗಳ ಮೇಲಿನ ಸಿಪ್ಪೆ : (ಕಿ). ೪. ಮೀನು, ಮೊಸಳೆ ಮುಂತಾದುವುಗಳ ಹೊರಕವಚ ; ಶಲ್ಕ : ಚರ್ಮದಲ್ಲಿ ಹೊರತೊಗಲು ಒಳತೊಗಲು ಎಂಬ ಎರಡು ಪದರುಗಳಿವೆ (ಸಸ್ಯಶಾ. ೬). ೫. ಸೆರಗು ; ಮಡಿಲು : ಅದರ ಸಂತೋಷದ ಮತ್ತಿನಿಂದಾ ತಮ್ಮ ದೌಲತ್ತಿನ ಪದರನ್ನು ಮಹಾದೇವನು ತುಂಬಿಸಬೇಕು (ರಾಜೇಂದ್ರ. ೨೨೫) ; ಭಾಗ್ಯವಿಧಾತನು ಅವನ ಪಾಲಿನ ಪಂಚಾಮೃತವನ್ನು ಅವನ ಪದರಿನಲ್ಲಿ ಸುರಿಯುವ ಮುಂದೆ ನಾನು ಬೇಡೆಂದು ನುಡಿಯಬಹುದೇ ? (ಜಯಂತ. ೯೧). ೬. ತೆರೆ ; ಪಟಲ : ಕೆಳಮುಖ ಮಾಡಿಕೊಂಡು ಕುಳಿತಿದ್ದಳು ಗಿರಿಜ. ಕಣ್ಣಲ್ಲಿ ನೀರಿನ ಪದರು ಬಂದಿತ್ತು (ಪದ್ಮಸ. ೩೪) ; ರಾಜನಿಗೆ ಕಂಬನಿಯ ಪದರು ಕಣ್ಣಲ್ಲಿ ಬಂದಂತಾಯ್ತು (ಕಾವೇರಿ. ೩೨). ೭. ರಕ್ಷಣೆ ; ವಶ ; ಅಧೀನ : ಈ ಮಗುವಿಗೂ ಅವರ ಪತಿಗಳಿಗೂ ಮಾನ ಬಹುಮಾನದಿಂದಾ ಕಾಪಾಡು ವಂಥಾದ್ದು ತಮ್ಮ ದವಲತ್ತಿನ ಪದರಿಗೆ ಕೂಡಿ ಇದೆ (ರಾಜೇಂದ್ರ. ೨೧೬);

ಪಂಚಮಕುಲದ ವೇಶ್ಯೆಯಾದ ರಂಗಿ ಪಾಳೆಯಗಾರರ ಪದರಿನಲ್ಲಿ ಬೀಳದೆ ಹೋಗಿದ್ದರೆ ರಂಗನಾಯಕಿಯಾಗುತ್ತಿರಲಿಲ್ಲ (ಕಿಲಾಮು. ೬೧); ನಿಮ್ಮ ಪದರಿನಲ್ಲಿ ಶ್ಯಾಮಕಿರಣನನ್ನು ಬಿಟ್ಟು, ಹೋದರೂ ನಿಮ್ಮಲ್ಲಿ ನನ್ನ ಮೇಲೆ ಸ್ವಲ್ಪಾದರೂ ಸಿಟ್ಟಿನ ಅಂಕುರ ತೋರಲೊಲ್ಲದು (ಜೀವಸ್ವ. ೩೮). **ಪದರ :** ೧. ಆತ್ಮ ಪರಮಾತ್ಮನನಱಯಬೇಕೆಂಬರು ಇಂತೀ ಆತ್ಮ ಭೇದವನಱವುದಕ್ಕೆ ಪದರದ ಹೊಱೆಯ ಅಟ್ಟಣೆಯ ಸಂದೆ (ಅವರೇ.ಕ. ೨೫-೬೧); ಈ ಬಣ್ಣದ ಉರಿಯ ಪದರಕ್ಕೆ ವರ್ಣಮಂಡಲ (Chromosphere) ಎಂದು ಹೆಸರು (ಜ್ಯೋತಿಷ್ಯ. ೧೪). ೨. ದಕ್ಷಿಣದ ರಾಗಸ್ವರೂಪವು ಬರೇ ತಿವಿಯ ಮೇಲೆ ಬೀಳುವುದಕ್ಕಿಂದ ಒಂದು ಪದರ ಹೆಚ್ಚಾಗಿ ಒಳಗೆ ಪ್ರವೇಶಿಸಬೇಕು (ಭಾರದ. ೫೪೩); ಅದರ ಒಂದೊಂದು ಪದರವೂ ಅವನ ಕಣ್ಣಿಗೆ ಕಟ್ಟದಂತಾಗಬೇಕು (ಶಗದ್ಯ. ೧೫೪).

ಪದರದ ಚೀಲ = ಹಲವು ಮಡಿಕೆಗಳಿಂದ ಕೂಡಿದ ಚೀಲ: (ಕ). **ಪದರಿಗೆ ಬೀಳು** = ಆಶ್ರಯವನ್ನು ಪಡೆ; ಅಧೀನವಾಗು : ಹೀಗೆ ಬಿಕ್ಕೆ ಬೇಡುತ್ತ ಇವಳು ಯಾರದಾದರೂ ಪದರಿಗೆ ಬೀಳುತ್ತಾಳೆ(ಸ್ಕೃತಿಚಿ. ೨೮೦); ಅವರ ಪದರಿಗೆ ಬಿದ್ದು ಅವರ ಅನುಗ್ರಹಕ್ಕೆ ಪಾತ್ರಳಾಗಬೇಕೆಂದು ನಿರ್ಧರಿಸಿದಳು (ಕಥವಿ. ೪೧೩). **ಪದರಿಗೆ ಹಾಕಿಕೊಳ್ಳು** = ೧. ಮಡಿಲಿಗೆ ಸೇರಿಸಿಕೊಳ್ಳು. ೨. ತನ್ನದಾಗಿ ಮಾಡಿಕೊಳ್ಳು : ಆ ಕ್ರೀಯಸ್ವನ್ನು ತಮ್ಮ ಪದರಿಗೆ ಹಾಕಿಕೊಳ್ಳುವ ಇಚ್ಛೆಯು ಸುಬ್ಬಣಾಚಾರ್ಯರಲ್ಲಿ ಪ್ರಬಲವಾಗಿತ್ತು (ಸಮಜೀ. ೪೪೫).

ಪದರುಗಟ್ಟು (ಕ್ರಿ). (ಮೊಸಳೆ ಮುಂತಾದುವುಗಳ ಚರ್ಮದಂತೆ) ಮಡಿಕೆಗಳಿಂದ ಕೂಡಿರು : ಮೊಸಳೆಯ ಬೆನ್ನು ಬಹು ದಪ್ಪವಾಗಿ ಪದರುಗಟ್ಟಿ ಕಲ್ಲಿನ ಹಾಗೆ ಗಟ್ಟಿಯಾಗಿರುತ್ತದೆ (ಮುಂಬಯಿ. ೪-೧೨೮).

[ಪದರು$_3$ + ಕಟ್ಟು$_1$]

ಪದರುಗಲ್ಲು, ಪದರಗಲ್ಲು (ನಾ). ಸ್ತರಗಳಿಂದ ಕೂಡಿದ ಕಲ್ಲು ; ಹಾಳೆಹಾಳೆಯಾಗಿರುವ ಕಲ್ಲು : (ಲೋಹ . . . ಪದರುಗಲ್ಲು, ಸಸ್ಯದ ಅಂಗವಸ್ತು, ಮೊ.ಗಳ) ತೆಳುತಗಡು (Lamina. ಇಂಕಿ). **ಪದರಗಲ್ಲು :** ಗಾಳಿ, ಹರಿವ ನೀರು ಅಥವ ಸಮುದ್ರದಿಂದ ಪದರ ಪದರವಾಗಿ ಸೇರಿಸಲ್ಪಟ್ಟ ಪರ್ವತರಾಶಿಗೆ ಪದರಗಲ್ಲಿನ ಪರ್ವತಗಳೆಂದು ಹೆಸರು (ಭೂವಿ ೧೩೫). [ಪದರು$_3$ + ಕಲ್ಲು(<ಕಲ್$_3$)]

ಪದರುಗುಂಡು (ನಾ). = ಪದರುಗಲ್ಲು : ನೆಲದ ಹೊಟ್ಟೆಬದುಕ ನೋಡು—ಗಟ್ಟಿಗಲ್ಲು ಹಿಟ್ಟುಮಟ್ಟ ಪದರುಗುಂಡು ದುಂಡಿಬಂಡೆ (ಮೂರ್ತಿಕಾ. ೧೩-೩). [ಪದರು$_3$ + ಗುಂಡು]

ಪದರುಪಚಾಲಿ (ನಾ). ಒಂದು ಬಗೆಯ ಸಸ್ಯ : ಪಚ್ಚೇರಿ, ಪಚಾಲೆ, ಪದರುಪಚಾಲಿ (ಮೈಔಗಿ. ೨೮-೫೪೯). [?]

ಪದರುಬಂಡೆ (ನಾ). = ಪದರುಗಲ್ಲು : ಒಂದು ಪದರಿನ ನಂತರ ಇನ್ನೊಂದು ಪದರು ಬೀಳುತ್ತ ಬರಲು . . . ಮೇಲಿನ ಭಾರದಿಂದ ಈ ಕಲ್ಲು, ಮಣ್ಣು, ಎಲುಬುಗಳೆಲ್ಲಾ ಬಂಡೆಗಳಾಗುವುವು. ಇಂಥವುಗಳಿಗೆ ಪದರುಬಂಡೆ (Stratified rock) ಗಳೆನ್ನುತ್ತಾರೆ (ಬಾಲಪ್ರ. I, ೧೩೯).

[ಪದರು$_3$ + ಬಂಡೆ$_1$]

ಪದರೇಚಿತ (ನಾ). [ನಾಟ್ಯ] ಹೆಜ್ಜೆಯನ್ನು ತಿರುಗಿಸುವ ಕ್ರಮ; ಪ "ಹಿಂದಕ್ಕೂ ಮುಂದಕ್ಕೂ ತೂಗಾಡುವಂತೆ ಕಾಲ್ಬೆರಳು ಮತ್ತು ಹಿಮ್ಮಡಿಗಳ ಮೇಲೆ ಪುನಃ ಪುನಃ ನಿಂತುಕೊಳ್ಳುವುದು" (ಲಾಸ್ಯರಂ. ೨೮೬ ಗದ್ಯಾನುವಾದ); ಮಡಕುದಿ ಬೆರಲ್ಗಳ ತುದಿಗಳ್ ಬಿಡದೇ ಪೊಱಮೆಯ್ಯನೊಳಗುಮೆಯ್ಯಾಗಲ್ ಕೇಳ್ ಕಡುನೀಱೆಯರ ಶಿರೋಮ [ಣಿ]ಯೊಡರ್ಚೆ ಪದರೇಚಿತಮುಮ್ಮುಮೆಂದೆನಿಸಿರ್ಕುಂ (ಲಾಸ್ಯರಂ. ೪-೨೦).

[ಪದ$_2$ + ರೇಚಿತ]

ಪದರೇಣು (ನಾ). = ಪದಧೂಳಿ ೨ : ಆನು ಪೇಳಿದ ಕೃತಿಯೊಳು ತಪ್ಪು ಪುದಿದಿಹುದಾಗಿ ಕೋವಿದರು ಹೃದಯದೊಳಿಳಿಕೆಯ್ಯದೆ ತಿದ್ದಿ ನಿಮ್ಮಯ ಪದರೇಣುವಾನಾದಪೆನು (ತ್ರಿಪುಸಾಂ. ೨-೨೧).

[ಪದ$_2$ + ರೇಣು]

ಪದಲಾಲಿತ್ಯ (ನಾ). ಪದಗಳ ಮೃದುತ್ವ ; ಮೃದುವಾದ ಪದರಚನೆ : ಕಾಲಿದಾಸನ ಉಪಮಾ, ಭಾರವಿಯ ಅರ್ಥಪುಷ್ಟಿ, ದಂಡಿಯ ಪದಲಾಲಿತ್ಯ ಈ ಮೂರುಗುಣಗಳೂ ಈ ಕಾವ್ಯದಲ್ಲಿವೆ (ಭಾರದ. ೪೫೨).

[ಪದ$_2$ + ಲಾಲಿತ್ಯ]

ಪದಲೋಚನ (ನಾ). ಕಾಲಲ್ಲಿ (ವಿಷ್ಣುವಿನ) ಕಣ್ಣನ್ನು ಧರಿಸಿದವನು ; ಶಿವ : ಪದಲೋಚನ ಭವಮೋಚನ . . . ಪರಿಪಾಲಿಸೆಮ್ಮನು (ಹಾಲಾಸ್ಯ. ೧-೫-೧೦). 'ಪಾದಾಕ್ಷ' ಪರಾ. [ಪದ$_2$ + ಲೋಚನ]

ಪದಲ್ಹಾಣ (ನಾ). (?) : ಕೋಸಿಗರಾ ಜಯಮೆಲ್ಲ ಎಮ್ಮೋನ್ ಗೋಸಾಸಿ ಪುದಾರುಂ ಬೆದೆ ಮತ್ತಲುಂ ಪದಲ್ಹಾಣಮುಂ ಕೊಟ್ಟೋನ್ (ಎಕ. VIII, ಸೊರಬ. ೧೧-?; ಸು. 910). [?]

ಪದವಡಿಸು 'ಪದಂಬಡಿಸು' ನೋ.

ಪದವಡು (ಕ್ರಿ). ೧. ಹದವಾಗಿರು; ಅಚ್ಚುಕಟ್ಟಾಗು; ಹೊಂದಿಕೆಯಾಗು : ಅಲರುತ್ತುಮಿರ್ಪ ಪದದೊಳ್ ಪದವಟ್ಟು ಪೊದಟ್ಟು ತೋರಮಲ್ಲಿಗೆಯ ತುಱುಂಬು ರಾಹು ತವೆ ನುಂಗಿದ ಚಂದ್ರನನೊಯ್ಯನೊಯ್ಯ ನಂದುಗುಟ್ಟುವೊಲೊಪ್ಪಿರಲ್ ಬಲದೊಳುರ್ವಸಿ ದೇಸಿಗೆ ದೇಸಿಯಾಡಿದಳ್ (ಪಂಪಭಾ. ೬-೮೭); ಪದವಟ್ಟ ನಾರೆಱಂಕೆಗಳ, ಕಡಲ ಪಯಣದಾಕಪ್ಪಲ್ಗಳನ್ ನಾವಿಕರ್ಗೆಂದು ಮಾಡಿದೆನ್ (ಬದ್ಧಪ್ರ. ೨೫-೫೬೨). ೨. ಹಿತವಾಗು ; ಅಮರಸಮಿತಿವೆರಸೋಲಗಂಗೊಟ್ಟರ್ದಲ್ಲಿ ಮದೀಯ ಸಿಂಹಾಸನಾರ್ಧೈಕದೇಶಮನಳಂಕರಿಸಿ ಪದವಡೆ ಸೋಂಕಿ ಕುಳ್ಳಿರ್ದ ರೂಪುಮಂ (ಅದಿಪು. ೪-೯ ಪ). ೩. ಸಮಯಕ್ಕೆ ತಕ್ಕುದಾಗು ; ಹೆದಗಾಲವನ್ನು ಅನುಸರಿಸು: ಯಥೋಚಿತಮಾಗೆ ದಾನಮಂ ಕೊಟ್ಟು ನನಂತಮಪ್ಪ ಫಲಮಂ ಪಡೆಗುಂ ಪದವಟ್ಟು ಬಿತ್ತಿದಂ ಇಟ್ಟಳವಪ್ಪುದೊಂದು ಬೆಳಸಂ ಪಡೆವಂತೆ (ಸಮಸ. ೬-೬೬). ೪. ವಶವಾಗು ; ಹತೋಟಿಗೆ ಬರು : ಆತನಂ ಸಾಮದಿಂದಮಳವಡಿಸಿ ನೋಡುವೆಂ ಸಾಮದೊಳಂ ಪದವಡದೊಡೆ ಬಟುಃಕಿರ್ದುಪುದಲ್ತೆ ಪದವಡಿಸಲೆನ್ನಬಯಕೆಯ ದಂಡಂ (ಅದಿಪು. ೧೪-೪೬). [ಪದ$_1$ + ಪಡು$_1$]

ಪದವಡೆ (ಕ್ರಿ). ಹದಗೊಳ್ಳು; ಪರಿಪಾಕವಾಗು : ಖಡೆಯ ಪೆಂಡೆಯ ದೊಡವಿನಿಂ ನಿಗ್ಗವದ ಬಡಿಕೋಲ್ವದವಡೆಪ ಬಿಲ್ಲಂಬು ಬಲೆವಿಡಿದಿಹರು ಬೀಯದರು (ಸಾಳ್ವಭಾ.೫-೬). [ಪದ$_1$ + ಪಡೆ$_1$]

ಪದವಣ್ (ನಾ). ಸರಿಯಾಗಿ ಮಾಗಿರುವ ಹಣ್ಣು ; ಪಕ್ವವಾದ ಹಣ್ಣು : ಕುಡಿ ತೋಳ್ ನಯಂ ನಯಂ ನೆಲೆ ನೆಲೆ ಭಂಗಿ ಭಂಗಿ ಪದವಣ್ ಬೆಳವಾಯ್ ಪೆಱತಲ್ಲದೆಂತೊ ಕೋಮಲಲತೆ ಪೇಟುಮೆನ್ನಿನಿಯಳಂ ಮಱೆಗೊಂಡುದೊ ಸೂಱೆಗೊಂಡುದೋ (ಪಂಪಭಾ. ೫-೧೨). ಪದವಣ್ಪುದಿದೀಕೆ . . . ಬೇರಂ ತುದಿಮುಟ್ಟೆ ಕಾಯ್ತು ಪಲಸೆಂದಿಪು ಕುಂದವು ನಂದನಂಗಳೊಳ್ (ಜಗವಿ. ೨-೧೫); ಪದವಣ್ ಪೇಱುರ್ದ ನಾರಂಗದ ತರು ತನಿವಣ್ ಪೇಱುದಿಮ್ಮಾವು . . . ಪುರೋದ್ಯಾನದೊಳ್ ಕುಂದವೆಂದುಂ (ಸೂಕ್ತಿಸು. ೪-೩೮). [ಪದ$_1$ + ಪಣ್$_3$]

ಪದವರ (ನಾ). ಪದಗಳನ್ನು ಚೆನ್ನಾಗಿ ಬಳಸಬಲ್ಲವನು ; ಹೊಗಳುಭಟ್ಟ (?) : ಮಂಗಳಪಾಕಶಪ್ರಕರಧ್ವಾನದೊಳಂ ಜಯ ಜೀಯ ಪಾಯವಧಾರೆಂದಡಿಗಡಿಗುಗ್ಗಡಿಪ ಪದವರರ ಕಳಕಳದೊಳ್ಬಂದನೇಕ ರಾಜಲೋಕಂಬೆರಸೊಳಗಂ ಪೊಕ್ಕು ನೋಳ್ಪನ್ನೆಗಂ (ತ್ರಿಪುವಿ. ೧೯-೪೨ ಪ); "ವಂದಿ" (ತ್ರಿಪುವಿ. ಕೋಶ). [ಸಂ.]

ಪದವರ್ಣ (ನಾ). [ಸಂಗೀತ] ಸಂಗೀತರಚನೆಯಲ್ಲಿ ಒಂದು ಪ್ರಕಾರ: ಪದವರ್ಣ . . . ಸಾಹಿತ್ಯ ಶೃಂಗಾರರಸಪ್ರಧಾನವಾಗಿದ್ದು (ಸ್ತೋತ್ರರೂಪದ ಸಾಹಿತ್ಯವೂ ಉಂಟು) ನಾಟ್ಯಕ್ಕೇ ಮೀಸಲಾಗಿದೆ . . . ಪದವರ್ಣವನ್ನು ಚೌಕವರ್ಣವೆಂದೂ ಕರೆಯುವ ರೂಢಿಯುಂಟು (ಸಂಗೀಚಂ. ೬೨); ಪಟ್ಟಂ ಸುಬ್ರಹ್ಮಣ್ಯಅಯ್ಯರ್ ಅವರು . . . ಪದವರ್ಣಗಳು, ತಿಲ್ಲಾನಗಳು ಮತ್ತು ಜಾವಳಿಗಳನ್ನು ರಚಿಸಿದರು (ಸಂಗೀತ. ೨೦). [ಪದ$_2$ + ವರ್ಣ]

ಪದವಳೆ 'ಪದವಟೆ' ನೋ.

ಪದವಟೆ, ಪದವಳೆ, ಹದಮಳೆ, ಹದವಳೆ (ನಾ). ಕಾಲಕ್ಕೆ ಸರಿಯಾಗಿ, ಕೃಷಿಗೆ ಅನುಕೂಲವಾಗಿ ಬರುವ ಮಳೆ; ಸಂದರ್ಭೋಚಿತವಾದ ಹಾಗೂ ಅನುಕೂಲಕರವಾದ ಮಳೆ: ಅಂತು ಕೊಂಡ ಪದವಟೆಗಳೊಳ್ ಕಳಮಪಷ್ಟಿಕಾದ್ರೀಹಿ . . . ವಿವಿಧ ಧಾನ್ಯ ಭೇದಂಗಳುಂ ಕಲ್ಪವೃಕ್ಷ ಪರಿಕ್ಷಯದೊಳ್ ಪ್ರಜಾಜೀವನೋಪಾಯಹೇತುಗಳಕೃಷ್ಟ ಪಚ್ಯಂಗಳಾಗಿ (ಅದಿಪು. ೬-೭೨ ಪ); ಪದವಟೆ [ಪಾಠಾಂ. ಪುದವಳೆ, ಪುದವಳೆ]ಯಿಂ ಧಾರುಣಿ ಬೆಳೆವುದು ಭರದಿಂದಧಿಕವೃಷ್ಟಿಯಿಂ ಬೆಳೆಯುವ ವೋಲ್ (ಮದಿತ. ೧೦-೮೭); ಪದವಟೆ ಕೊಳ್ಗೆ ಧಾತ್ರಿ ಪಿರಿದುಂ ಬೆಳಗುರ್ವರೆಯಂ ಧರಾಧಿಪರ್ . . . ಪರಿಪಾಲಿಸುತಿರ್ಕೆ (ಪಂಚತಂ. ೩೧೨-೬); ಕೊಳೆ ಪದವಟೆಗಳ್ ಕರ್ವಿನ ಮಡಲಂತೆ ಕವಲ್ತುರ್ವಿದ ಕೆಯ್ವೊಲಗಳೆಸೆಗುಂ (ಕಾವ್ಯಾವ. ೨೦೭); ಪದವಟೆಯಾದುದಿಟ್ಟು ಯನಿತುಂ ಲಯಮಾದುದಕೃಷ್ಟ ಪಚ್ಯಮಾದುದು (ಅಸಂಪು. ೬-೬೬). **ಪದವಳೆ**: ಈತನೆಲ್ಲಿದ್ದನಲ್ಲಿ ಪದವಳೆಯೆಂದುಂ ಕುಂದದಿಪ್ಪಂತು . . . ಮಾಳ್ಪುದು (ಕಇ. I, ೨೫-೩೦; ಸು. 1186). **ಹದಮಳೆ**: ರಾತ್ರಿ ಹದಮಳೆಯಾಯಿತು (ರೂಢಿ). **ಹದವಳೆ**: ತನ್ನಯ ಸಲುಗೆ ಬಿನ್ನಹವೆಂಬ ಬೀಜದ ಬೆಳೆಗೆ ಹದವಳೆ ಹಣ್ಣೆ ಪಸರಿಸಿತೆನುತೆ ಹರುಷದಲಿ ನಲಿದು (ಪ್ರಭುಲಿಂ. ೮-೨೨); ಇದಿರಾಗುತಲುದಧಿಯ ಪತಿಸುತನಂದದಟ ನಿಲಿಸಿದಳೆನಿಪ ಹದವಳೆಯನು ಸುರಿಯಲು ಭೂಮಿಪಾಲರು ಹೆದಱ ಹಿಂದಕೆ ತೆರಳಿದರು (ಅಂಜಜ. ೧೧-೨೦). [ಪದ$_1$ + ಮಟೆ]

ಪದವಾಸನೆ (ನಾ). ಹೆಜ್ಜೆಯ ವಾಸನೆ: ಒಡೆಯನಾವೆಡೆ. ಸಾರ್ದನೆಂದು ಪದವಾಸನೆಯ ತಡಕಿ ಮೂಸುತ ಶುನಕನಲೆದಾಡುವಂತೆ (ಮಂಕುಶ. ೨೨೩). [ಪದ$_2$ + ವಾಸನೆ]

ಪದವಿ (ನಾ). ೧. ದಾರಿ; ಮಾರ್ಗ; ಪಥ: "ಅಧ್ವಾ . . . ಪದವೀ, ಮಾರ್ಗಃ, ಪದ್ಯಾ, ನಿಗಮಃ—ಈ ೧೨ ಬಟ್ಟೆ" (ಹಲಾಯು. ೪೩-೧೦೫). ೨. ಸ್ಥಾನ; ಅಂತಸ್ತು: ಮಾಡಿದೆವು ಗುರುಸೇವೆಯ ಪರಿಂ ರೂಢಿಯೊಳಗೀ ಪದವಿ ಬಂದುದು (ಗಗಶಾ. ೧೯-೩); ದೇಶದ ಹಣವ್ಯವಸ್ಥೆಯಲ್ಲಿ ಚಿನ್ನಕ್ಕೇ ಮೊದಲನೆಯ ಪದವಿ ಇರುವುದು (ಹಣಪ್ರ. ೨೦). ೩. ಅಧಿಕಾರ; ಹುದ್ದೆ: ಬೇಡಿದ ಪದವಿಯನೀವ ಕೂಡಲ ಸಂಗಮದೇವ (ಬಸವ. ೧೮೯); ಪದವಿಯ ರೂಪಿನ ಸೊಬಗಿನ ಮದಮಂ ಮಾಡುವರ ಮೂಗಿನೊಳ್ ಪಾತ್ರಮನಾದೆ ಮಾಣಸನಂಗಂ (ಯಶೋಧ. ೨-೬೨); ಬಲ್ಪನೆರಡನೆಯೀಶ್ವರಂ ಘಣತಲ್ಪ ನಿನ್ನಯ ಪದವಿಯಂ ಸಂಕಲ್ಪಿಸುವನೇ (ಬಸವಪು. ೨-೧೯); ರಾಜಸೇವೆಯ ಪದವಿ ಪಾತಕಫಲವೆನುತ ನೂಕಿದರು ರಥವನು ಹಳಿವು ದರ್ಪದ ಹೇವಮಾರಿಗಳು (ಕುಮಾರವ್ಯಾಸ. ೬-೨೫). ೪. ಮನ್ನಣೆ; ಮರ್ಯಾದೆ; ಗೌರವ: ಕೊತ್ತಿಂಗೆ ಬಲ್ಲಹನೊಲಿದರೆ ಪದವಿಯ ಮಾಡದೆ ಮಾಣ್ಬನೆ (ಬಸವ. ೪೭೪); ದೇವರಾಜನು ದಿಲ್ಲಿಯ ಬಾದಶಹನಿಂದ ರಾಜನೆಂಬ ಪದವಿಯನ್ನೂ . . . ಸಂಪಾದಿಸಿದನು (ಮುಂಬಯಿ. ೪-೮೨); ನಿರಾಯಾಸವಾಗಿ ಪದವಿಯನ್ನು ಪಡೆಯಬಹುದು. ಆದರೆ ಪದವಿಯು ಕೀರ್ತಿಯಲ್ಲ (ಚಿಂಗಾಳ್ವ. ೩). ೫. ಸಂಪತ್ತು; ಐಶ್ವರ್ಯ: ಹದಗಡಕನಗೇ ಪದವಿ ಬಂದರೆ ಹಿಡಿಸಿದ ಹಗಲಲಿ ದೀವಟಿಗೆ (ಜನಸಾ. ೯೧); ಪದವಿ ತಪ್ಪಿದ ಮೇಲೆ ಸಂಟರಿಪ್ಪರೆ ನಮಗೆ ಕಟ್ಟಟ್ಟ ಹಗೆ ಕಾಣ ಕೊನೆಗೆ (ಇಂಚಾಪ. ೧೨-೫೦). ೬. ವಿದ್ಯಾಪೀಠ, ವಿಶ್ವವಿದ್ಯಾನಿಲಯ ಮೊದಲಾದುವುಗಳ ಪರೀಕ್ಷೆಯಲ್ಲಿ ತೇರ್ಗಡೆಯಾದಾಗ ಕೊಡುವ ಪ್ರಶಸ್ತಿ; ಡಿಗ್ರಿ: ಪದವಿಯ ಓದಿಗೆ ಕನ್ನಡವನೆ ಆಯ್ದೆ (ಇಂಚಾಪ. ೨೫-೧೧). ೭. ಗೌರವಕ್ಕಾಗಿ ಕೊಡುವ ಬಿರುದು: ನಾವು ಅವರಿಗೆ ಜಹಗೀರುಗಳನ್ನು ಕೊಡಲಾಗುವುದಿಲ್ಲ. ಆದರೆ ಅದಕ್ಕೆ ತಕ್ಕ ಪದವಿಗಳನ್ನು ಕೊಡಬಹುದು (ರಾಣಿ. ೧೬೨). ೮. ಮೋಕ್ಷ; ಮುಕ್ತಿ: ಹಲವು ಕರ್ಮಗಳಿಂದ ಮೂತ್ರದ ಬಿಲಗಳಲಿ ಸಂಚರಿಸಿ ಪದವಿಯ ಫಲವ ಕಾಣದೆ ಹೊಲಬು ತಪ್ಪಿದೆನು (ಹರಿಸಾ. ೫೯). [ಸಂ.]

ಪದವಿಡಿ (ನಾ). ಬೆದೆಗೆ ಬಂದ ಹೆಣ್ಣಾನೆ: ಪದವಿಡಿಯನಜಸಿ ಪಾರಯ್ವುದಪುದು ಕರಿ ಪೆಜಿಂನೊಲ್ಲದದು (ಬಂಹರಿ. ೨-೪೩). [ಪದ$_1$ + ಪಿಡಿ$_3$]

ಪದವಿಡು, ಪದಮಿಡು (ಕ್ರಿ). ೧. ಹೆಜ್ಜೆಯಿಡು; ಸಾಗು; ಮುಂದುವರಿ; ಗಮಿಸು: ಪದವಿಟ್ಟೆಳ್ಯಿಂದಲಿಂ ತಾವರೆಗೆ ಸಿರಿಲತಾಕೋರಕಗ್ರಂಥಿ ನೀರೇಱುದುವು. . . ಶಿಶಿರದೆಸಕಮಂ ಮಿಳ್ಕುದಕ್ಕುಂ ಬಸಂತಂ (ಮಲ್ಲಿಪು. ೫-೩); ಹರಸನರ್ಚಸಿದ ಪರಿಯಂ ನೆನೆದು ಪದವಿಡುತೆ ತಿರುಗಿ ತಮ್ಮರಮನೆಗೆ ಎಂದಿನಂದದಿ ಬರುತೆ (ತಿರುರ. ದೇ. ೬-೭); ನಡದುದೆ ಮಾರ್ಗಂ ಪದವಿಡಲೊಡರಿಸಿದುದೆ ಭಂಗಿ ಕೇಶವಂಗಿದಿರುಂಟೇ (ಶಮದ. ೨೯೩ ಸಮಸ್ತ ಸಾಕ್ಷಂಗಳ್); ನಳನಲೋಚನೆ ಕಂಡು ಪಕ್ಷಿಯ . . . ಹಿಡಿಯಬೇಕೆಂದೆನುತ ಗಮಿಸಿದಳು ಮೆಲ್ಲಮೆಲ್ಲನೆ ಪದವಿಡುತ [ಪಾಠಾಂ. ಅಡಿಯಿಡುತ] ಕರಪಲ್ಲವವ ಚಾಚಿದಳು (ನಳಚ. ೨-೩೩). ೨. (ಕೃತಿಯಾಗಿ) ಹೇಳು,—ಬರೆ; ಶಬ್ದರೂಪದಲ್ಲಿ ರಚಿಸು: ಪದವಿಡುವೆಡೆಯೊಳ್ ಪಲ್ಲವದೊಳ್ ಪದದೊಳುಭಯಗಣ ಸಮನಾಗಲ್ ಸಲ್ಲಲಿತಕೀರ್ತಿಯೊದವುದಲ್ಲದೊಡಾ ಕೃತಿಗೆ ಹಾನಿ ತಪ್ಪದೆ ಬರ್ಕುಂ (ಛಂದೋಂಬು. ೧-೪೬ ಅಡಿಟಿ); ವೀರೇಶನ ಲೀಲಾಕಥನವ ಪದವಿಡುವೆನು ಚಿತ್ತೈಸುವುದು (ವೀರೇಶ. ೧-೭); ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ ಪದವಿಟ್ಟಳುಪದೊಂದಗ್ಗಳಿಕೆ . . . ಗದುಗಿನ ವೀರನಾರಾಯಣನ ಕಿಂಕರಗೆ (ಕುವ್ಯಾಆ. ೧-೧೫); ಬರಹವನಱಯೆನಾ ಪದವಿಟ್ಟು ಕಡಿತದೊಳ್ ಬರೆದು ಮಾಡಿದ ಕೃತಿಯಲ್ಲ (ಪೋಹತ. ೧-೨೧). **ಪದಮಿಡು**: ೧. ಮೊದಲೊಳಿದೊಂದು ಪತ್ತು ತುಡುವಲ್ಲಿ ಶತಂ ಬಿಡುವಲ್ಲಿ ಸಾಸಿರಂ ಪದಮಿಡುವಲ್ಲಿ ವೈರಿಶರಸಂಹತಿಯಂ ತಱುವಲ್ಲಿ ಲಕ್ಷಮಗ್ಗದ ಗತಿಯಲ್ಲಿ ಕೋಟಿ ಸಮರಾಂಕಣದೊಳ್ ಗಣನಾವಿಹೀನಮಪ್ಪುದು ರಿಪುವೃಂದಮಂ ತವಿಸಿ ನಿನ್ನೆಡೆಗೆಯ್ದುಗುಮೀ ಮಹಾಶರಂ (ಶಬಶಂ. ೫-೫೧). ೨. ಪದಮಿಡಲಱಯಂ ಗಡ . . . ಕುಕವಿ ನವರಸಾನುಭವದೆ ತನ್ನಂ ಪೆಱರೆನೆಂತೊ ಪೇಳ್ಗೆ ತಣಿಸಿದಪಂ (ಪುಷ್ಪಪು. ೧-೪೬). [ಪದ$_2$ + ಇಡು$_1$]

ಪದವಿದ್ಯೆ (ನಾ). ವ್ಯಾಕರಣ ಶಾಸ್ತ್ರ: ಮತ್ತಂ ಸ್ವಯಂಭುವಾಧಿಧಾನ ಪದವಿದ್ಯಾಢ್ಯಂದೋವಿಚಿತ್ರಲಂಕಾರಂಗಳೆಂಬ ಮೂಱಱಂ ಪೆಸರ್ವಡೆದ ವಾಙ್ಮಯಮುಮಂ . . . ತನೂಜರ್ಗೆಲ್ಲಮುಪದೇಶಂಗೆಯ್ದುಂ (ಅದಿಪು. ೮-೬೦ ಪ); ಪದವಿದ್ಯಾಮಾರ್ಗದೊಳ್ ವ್ಯಾಕರಣಪರಿಣತಾಳಾಪದೊಳ್ ಮಿಕ್ಕ ಪಟ್ಟರ್ಕದೊಳಾರ್ಗಂ ದುರ್ಗಮೆಂಬಂತಿರೆ . . . ಅಶ್ಚರ್ಯಮಂ ತಾಳ್ದಿ ನಿಂದಂ (ಸುಕುಮಾ. ೨-೧೫). [ಪದ$_2$ + ವಿದ್ಯೆ]

ಪದವಿಧಿ (ನಾ). [ವ್ಯಾಕ] ಸಮಾಸದಲ್ಲಿ ಪದಗಳನ್ನು ಜೋಡಿಸುವ ನಿಯಮ: ಬೆರಸಿ ಸಮಸಂಸ್ಕೃತಂಗಳ್ ಬರೆ ಕನ್ನಡದೊಳಗೆ ಸಮತೆಯಿಂದಂ ಸಲ್ಗುಂ ನಿರವದ್ಯಮಾಗಿ ಪದವಿಧಿ ವಿರುದ್ಧಮಕ್ಕುಂ ತದನ್ಯಥಾವೃತ್ತಿಗಳೊಳ್ (ಕಾವ್ಯಾವ. ೨೮೨); ಪದವಿಧಿ ಕನ್ನಡಕಂ ಸಕ್ಕದಕ್ಕ

ಮಿಲ್ಲಾದ್ಯರಿಂದೆ ಸಂದುವನಜುಂದಿಪ್ಪುದು ಬಿರುದಾವಳಿಯೊಳ್ ಪೇಟ್ಟುದು ಪೆಜವಜ್ಜೊಳಾಗದಿದು ವಿರುದ್ಧಸಮಾಸಂ (ಕಮದ. ೧೭೪). [ಪದ$_2$+ವಿಧಿ]

ಪದವಿನತ (ನಾ). ಪಾದಗಳಿಗೆ ನಮಸ್ಕರಿಸಿದವನು : ಆ ಜಿನ ಮುನಿಗಳೊಡನೆ ವಾದಿಸಿಯವರು ಸೋಲ್ತು ಪದವಿನತರಾಗಲ್ಕೆ (ವೀಕೃಪು. ೪-೯-೧೬). [ಪದ$_2$+ವಿನತ]

ಪದವಿನ್ಯಾಸ (ನಾ). ೧. ಹೆಜ್ಜೆ ಇಡುವುದು ; ಹೆಜ್ಜೆ ಹಾಕುವುದು: ಪದವಿನ್ಯಾಸದ ತುಟುಗಲ್ ಪೊದಟ್ಟೆ ಲಯಂಬೆರಸು ರಂಗಮಂ ಬಳಸಿದನಾ ತ್ರಿದಶಾಧಿನಾಥಂ (ಅದಿಪು. ೭-೧೧೯); ಪದವಿನ್ಯಾಸದಿನೆಯ್ದೆ ಕಂಪಿಸೆ ಮಹೀಚಕ್ರಂ . . . ಆ ಕೂರ್ಮಕಂಪದಿನಂಭೋಧಿ ಕಲಂಕಿದತ್ತಿನಿಸಿ ತೇನುಚ್ಚಂಡಮೋ ತಾಂಡವಂ (ಪುಷ್ಪಪು. ೧೨-೩೬); ತಾಳನಿರ್ಣಯ, ವೇಗ, ಪದವಿನ್ಯಾಸ ಇವು ಕಥಕ್‌ಪ್ರದರ್ಶನದ ನಿರ್ಣಯಾಂಶಗಳಾದವು (ಭಾರದ.೫೫೮). ೨. ಶಬ್ದಗಳನ್ನು ಜೋಡಿಸುವುದು : ಪದವಿನ್ಯಾಸದ ದೇಸೆ ಮಾರ್ಗದ ವಿಲಾಸಂ ರೂಢಿವೆತ್ತಂಗಹಾರದಲಂಕಾರದ ಬಂಧ ಭಾವ ದೆಸಕಂ . . . ಎಸೆದತ್ತು (ಸೂಕ್ತಿಸು. ೬-೧೧೦). ೧, ೨ : ಪದವಿನ್ಯಾಸ ವಿಶೇಷದೊಳ್ ಪದವಿಲಾಸಂ ಸೊಂಪುವೆತ್ತಿರ್ದ ಕಾವ್ಯದ ಮೆಯ್ಯೊಳ್ ಸಮುದಾಯಶೋಭೆ . . . ಸನ್ನಿಧಿಯಾಗಿರ್ದ ಜಿನೇಂದ್ರವಾಗ್ವನಿತೆ ನಿಲ್ಕಸ್ಮನ್ಮುಖಾಂಭೋಜದೊಳ್ (ಅಸಂಪು. ೧-೮). [ಪದ$_2$+ವಿನ್ಯಾಸ]

ಪದವಿಭಾಗ (ನಾ). ಪದ್ಯದ ಪದಗಳನ್ನು ಛಂದಸ್ಸು ಅಥವಾ ಅರ್ಥಾನುಸಾರವಾಗಿ ಬಿಡಿಸುವುದು : ಈ ಪದ್ಯವನ್ನು ಪದವಿಭಾಗ ಮಾಡಿ ಅರ್ಥ ಹೇಳು (ರೂಢಿ). [ಪದ$_2$+ವಿಭಾಗ]

ಪದವಿಲ್, ಹದವಿಲು, ಹದವಿಲ್ಲು (ನಾ). ಬಾಣಪ್ರಯೋಗಕ್ಕೆ ಹವಣಾದ ಬಿಲ್ಲು : ಮುನಿದೆರಡಂಬಿನೊಳ್ ರಥಮುಮಂ ಪದವಿಲ್ಲು ಮನೆಯ್ದೆ ಪಾರ್ದು ನೆಕ್ಕನೆ ಕಡಿದಿಂದ್ರನಂದನನಳುರ್ಕೆಯಿನಾರ್ದೊಡೆ (ಪಂಪಭಾ. ೧೧-೧೯); ಪದವಿಲ್ಲಂ ನನೆಯಂಬಿನ ಪೊದೆಯಂ ಪಿಡಿದಿರದ ಪದದೊಳಾರ್ನೋಡಿದೊಡಂ ಮದನಂಗಂ ಮಾನಿನಿ ದಶವದನಂಗಂ ರೂಪ ಭೇದಮೇನಾದಪುದೇ (ಪಂರಾಮಾ. ೯-೧೬೬); ಬಳಿಯಂಬು ಪೂವಿನಂಬೆನೆ ತೊಳಗುವ ಪದವಿಲ್ಲ ನನೆಯ ಬಿಲ್ಲೆನೆ ಬೆನ್ನೊಳ್ ತಳೆದು . . . ಮನೋಜ ನಂತಿರೆ ನಡೆದಂ (ಲೀಲಾವ. ೫-೨೦) ; ಪದವಿಲ್ ಕಟ್ಟಿದ ಗೇಣ್ . . . ಪಾಶದ ವಿಶ್ವಕದ್ರು ದೇಸಿಯನೊದವಿಸಿ ನಡೆದತ್ತು ಬೇಂಟೆಗಾಱರ ತಂಡಂ (ಸೂಕ್ತಿಸು. ೩-೧೦೨); ಪದವಿಲ್ ಮೊನೆಯಂಬು ಲತಾಂತಮಾಲೆ ಮಂಜುಲ ಗಜದಂತದೊಳ್ತಳೆ ವಿರಾಜಿಸೆ ಕಜ್ಜಿಸೆದರ್ ಪುಳಿಂದಿಯರ್ (ಶಬಶಂ. ೩-೧೦). **ಹದವಿಲು** : ಬೋಳೆ ಕವಲಂಬುಗಳ ಹದವಿಲು ತಾಳಿಕೆಯ ಕುಪ್ಪಸದ ಬೇಂಟೆಯ ಮೇಳದಲಿ ಭೂಪಾಲ ಹೊಱವಂಟನು (ಕುವ್ಯಾಅ. ೪-೧೨); ಉರು ಹತ್ತಳದ ಕಟ್ಟಿಗೆ ಬೇಂಟೆಗಳ ಹದವಿಲು ತದೀಯ ಶರಾಳಿಗಳ ತಂದಿಳುಹಿದರು ಚೆರರು (ಕುವ್ಯಾಸ. ೫-೪೬). **ಹದವಿಲ್ಲು** : ಹದವಿಲ್ಲ ಬೆನ್ನ ಬತ್ತಳಿಕೆಗಳ . . . ಶಬರಿಯರು ಪದೆದು ಕುಸಿದಡಸಿ ತೋಹುಗಳಲ್ಲಿ ಹರಿವ ಹುಲ್ಲೆಗಳನೆಸುತಿರ್ದರು (ಹಚಶಾ. ೫-೪೬); ಹೊಯ್ದು ತಿರುವನು ಸೆಳೆದು ಕಿವಿವರೆಗೊಯ್ದುನಿದು ಹದವಿಲ್ಲಲಾ ಬಿಲು ಹೊಯ್ದುದಕಟಾ ಬಜಾಂದೆ ಹೆದಱುತು ಮಾಗಧಾದಿಗಳು (ಕುವ್ಯಾಅ. ೧೫-೨೮); ಧ್ರೂಲತೆಯ ಹದವಿಲ್ಲುಗಳ ಹೊಳೆವಾಲಿಗಳ . . . ಬೇಟೆಕಾತಿಯರ್ಕೈದಿದರು ವನವ (ತೊರರಾ. ೧-೫-೩೯) ; ಮದಗಜವಿಂಡು ಬಂದುದ ಕಂಡು ಸ್ಮರಸುತ ಹದವಿಲ್ಲ ಜೇವಡೆಗೆಯ್ದು (ಮೋಹತ. ೩೪-೬).

[ಪದ$_1$ + ಬಿಲ್$_2$]

ಪದವಿಸೃತಿ (ನಾ). ಪದ್ಯದ ಪಾದದ ವಿಸ್ತಾರ : ನಿಯತಸ್ಥಾನಂ ಪದವಿಸೃತಿಯೊಳಾದ ವಿರಾಮಮಱಿಗೆ ಯತಿಯಕ್ಕುಂ (ಕಾವ್ಯಾಸ.೩೬೯).

[ಪದ$_2$+ವಿಸೃತಿ]

ಪದವೀದಾನ (ನಾ). (ಘಟಕೋತ್ಸವದಲ್ಲಿ ವಿಶ್ವವಿದ್ಯಾನಿಲಯವು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ) ಯೋಗ್ಯತಾಪತ್ರವನ್ನು ಕೊಡುವಿಕೆ : ಕುಲಪತಿಗಳು ಪದವೀದಾನ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಹಿತವಚನ ಹೇಳಿದರು (ರೂಢಿ). [ಸಂ.]

ಪದವೀಧರ (ನಾ). (ವಿಶ್ವವಿದ್ಯಾನಿಲಯ ಮೊದಲಾದುವುಗಳಿಂದ) ಪದವಿಯನ್ನು ಪಡೆದವನು : ಅವನು . . . ಪದವೀಧರನಾಗಿ ಮೂರುವರ್ಷಗಳ ಕಾಲ ಗಣಿತಶಾಸ್ತ್ರ ಮತ್ತು ವಿಜ್ಞಾನಶಾಸ್ತ್ರವನ್ನು ಕಲಿಸುತ್ತಿದ್ದನು (ಸಸ್ಯಳ. ೭೧) ; ನೀವು ಈ ಏಕಾಣುಜೀವಿಶಾಸ್ತ್ರದಲ್ಲಿ ಪದವೀಧರರಾಗುವವರೆಗೂ ನಾನು ಕಾದಿದ್ದು ನಿಮ್ಮನ್ನೇ ಮದುವೆಯಾಗುತ್ತೇನೆ (ಜೊಸಕ್ತಿ. ೩). [ಸಂ.]

ಪದವೀಪತ್ರ (ನಾ). (ವಿಶ್ವವಿದ್ಯಾನಿಲಯವು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕೊಡುವ) ಯೋಗ್ಯತಾಪತ್ರ : ಆ ಪದವೀಪತ್ರವನ್ನು ಮೊದಲು ನಿಮ್ಮ ಪಾದಗಳ ಮೇಲಿಟ್ಟು ನಂತರ ಕೈಗೆ ತೆಗೆದುಕೊಳ್ಳುತ್ತೇನೆ (ವಂಶವೃ. ೧೪೨). [ಸಂ.]

ಪದವು (ನಾ). (ಕರಾ) ಸಮತಲಭೂಮಿ ; ಪೃಷ್ಠಭೂಮಿ : ಮೇಲೆ ಪದವನ್ನು ಏರುವ ಏಂದು ಮುಂದುವರಿದ. ಚಿಕ್ಕಗುಡ್ಡವನ್ನೇರಿದರೆ ಮುಂದೆ ಬರುವುದೇ ಪದವು (ಸರಸ. ೮೦). [←ತುಳು. ಪದವು]

ಪದವೆಂಕೆ (ನಾ). ಹದವಾದ ಉರಿ ; ತೀವ್ರವಾದ ಉಷ್ಣತೆ : ಮೆಯ್ಯ ಸುಯ್ಯ ಪದವೆಂಕೆಗಳಂ ಬಿಗಿಯಪ್ಪಿದಪ್ಪುಗಳ್ ಕಳೆದುವು ನಾಣುಮಂ . . . ಚುಂಬನಂ ಕಳೆದುವು (ಪಂಪಭಾ. ೫-೨೬).

[ಪದ$_1$ + ಬೆಂಕೆ]

ಪದವೆಱು$_1$ (ಕ್ರಿ). ಹದವನ್ನು ಪಡೆ ; ಹವಣುಹೊಂದು : ಪದವೆತ್ತಿರ್ದ ಜೀವಮೊಂದೊಡಲೆ ಬೇಱೊಂಬಂತುಟಂ ಮಾಡಿದಂ ಮದನಂ ಗಾವುದು ದೋಷಂ (ಕಾವ್ಯಾವ. ೮೦೫) ; ಪದವೆತ್ತಿರ್ದ ಗಭೀರಭಾವ ಗುಣದಿಂ ಲಾವಣ್ಯಲೀಲಾವಿಲಾಸದಿಂ . . . ತತ್ಕಾವ್ಯಂ ಜಗತ್ಸ್ತೇವ್ಯ ಮಪ್ಪುದು (ಶೃಂಗಾರ.೧-೧೦); ಶುಭಾಂಗಿ ಸರ್ವಮಂಗಳೆ ರತಿಕೋಟಿಯಂ ಪಳಿದು ರಂಜಿಸಿದಳ್ ಪದವೆತ್ತ ಚೆಲ್ವಿನಿಂ (ಶಬಶಂ. ೧-೬೬).

[ಪದ$_1$ + ಪೆಱು$_1$]

ಪದವೆಱು$_2$ (ಕ್ರಿ). ೧. ಸ್ಥಾನವನ್ನು ಪಡೆ; ಎಡೆಯನ್ನು ಹೊಂದು : ವಿದಿತ ವಿಶೇಷಣಪದಮುವು ಮೊದಲ ವಿಭಕ್ತಿಗಳನಾಂತು ವಾಕ್ಯದ ಮೊದಲೊಳ್ ಪದವೆತ್ತುವಗ್ರಕಾರಕ ಪದದ ವಿಭಕ್ತಿಯನೆ ತಳೆವುವನ್ನಯಮುಮುದೊಳ್ (ಶಮದ. ೧೪೦). ೨. ಅವಕಾಶವನ್ನು ಪಡೆ ; ಆಸ್ಪದವನ್ನು ಹೊಂದು : ಪದವೆತ್ತ ನುರಾಗವಿಭ್ರಮಂ ಜನಿಯಿಸಲಾಗಳಾಕುಲತೆಯಂ ತಳೆದೆನ್ನನೊಜಲ್ದು ನೋಡಿದಳ್ (ಕಾದಂಉ. ೩೧೪) ; ಓದೆದು ಕಲಂಕಿ ಪಾಯ್ವ ಪದದೊಳ್ ಪದವೆತ್ತು ಪುಡುಂಕುನೀರನರ್ದಿದಳುಱ್ ಪೋದಿ ಮುಂದಲೆಗೆ ಪಾಯ್ದು ಪೊರಳ್ಚಿದಳ್ . . . ಅವಳಾಱದೋವದವನಂ ವನಿತಾಜನಚಿತ್ತ ಚೋರನಂ(ಲೀಲಾವ. ೧೩-೨೨) ; ತಾಂ ಮೊಗಂಗುಡೆ ಪದವೆತ್ತು ಚುಂಬಿಸಿ (ಚಂದ್ರಪು. ೬-೮೨). [ಪದ$_2$+ಪೆಱು$_1$]

ಪದಶಕ್ತಿ (ನಾ). ಪದಕ್ಕೆ ಇರುವ ವಾಚ್ಯ, ವ್ಯಂಗ್ಯ ಮೊದಲಾದ ಅರ್ಥಗಳನ್ನು ತಿಳಿಸುವ ಸಾಮರ್ಥ್ಯ : ಪದಶಕ್ತಿಯಲ್ಲಿ ಮುಖ್ಯ ಗೌಣಗಳಲ್ಲದೆ ಪರಮುಖ್ಯವೆಂದೊಂದು ಸ್ವೀಕರಿಸಲ್ಪಟ್ಟು ಸಕಲಶಬ್ದವಾಚ್ಯತ್ವವೂ ಪರಮಾತ್ಮನಿಗೆ ಸ್ಥಾಪಿಸಲ್ಪಟ್ಟಿರುವುದು (ಹಿಂದಸಾ. ೨೬೬).

[ಪದ$_2$+ಶಕ್ತಿ]

ಪದಶಬ್ದ (ನಾ). ಕಾಲಿನ ಸಪ್ಪುಳು ; ಹೆಜ್ಜೆಯ ಧ್ವನಿ : ಪದಶಬ್ದ ಕಿವಿಗೆ ಬೀಳುತ್ತಲೇ ಅವಳ ಮನಸು ಬಾಗಿಲ ಕಡೆಗೆ ಎಗರೆಗರಿ ಹೋಗ ತೊಡಗಿತು (ಇಪ್ಪಕ. ೨೬೨). [ಪದ$_2$+ಶಬ್ದ]

ಪದಶಯ್ಯೆ (ನಾ). ಪದಗಳ ಹೊಂದಾಣಿಕೆ ; ಪದಬಂಧ : ಸರಸಪದ ಶಯ್ಯಾದ್ಯಧ್ಯಾಕರಣಯುತಲಾಲಿತ್ಯನಿಯಮಾಕ್ಷರಸಲಕ್ಷಣಭಾವಮಾಗಿರೆ ರಚಿಸುವೆಂ ಕೃತಿಯ (ಬಸಪು. ೧-೧೯). [ಪದ$_2$+ಶಯ್ಯೆ]

ಪದಶಾಸ್ತ್ರ (ನಾ). ವ್ಯಾಕರಣಶಾಸ್ತ್ರ : ವ್ಯಾಕರಣಶಾಸ್ತ್ರವನ್ನು ಪದಶಾಸ್ತ್ರವೆಂದೂ . . . ಪರಿಗಣಿಸುವಂತೆ ಮೀಮಾಂಸಾಶಾಸ್ತ್ರವನ್ನು (ವಾಕ್ಯ) ಪ್ರಮಾಣಶಾಸ್ತ್ರವೆಂದು ನಿಷ್ಕರ್ಷಿಸಿದೆ (ತತ್ವಪ್ರಾ. ೨೦೫). [ಪದ$_2$+ಶಾಸ್ತ್ರ]

ಪದಶಿಲೆ (ನಾ). ಅಡಿಗಲ್ಲು ; ತಳದ ಕಲ್ಲು : ಪೃಥ್ವಿಕುಳಮಂಟಪದ ಮೇಲೆ ಪ[ಶಾಕಾಂ. ಪಾ]ದಶಿಲೆ ಬಿಗಿದು ತಳಕಂಬ ಕಳಶದ ಮೇಲೆ ಕೆಸಱುಗಲ್ಲು (ಅವಜಂ. ೨೭-೧೧೨). [ಪದ$_2$+ಶಿಲೆ]

ಪದಸಂಘಟ್ಟನ (ನಾ). ಕಾಲಿನಿಂದ ಅಪ್ಪಳಿಸುವಿಕೆ,—ಹೊಡೆಯುವಿಕೆ ; ಪದಾಘಾತ : ಪದಸಂಘಟ್ಟನದಿಂದವೆಡ್ಡವನಿಯಂ ಪರ್ವಿರ್ದ ಕೆಂದೂಳಿ ದಿಗ್ರದನಿಪ್ರಾತದ ಕುಂಭಮಂ ಪುದಿದು ತಪ್ಪಿಂಧೂರದಂತಿರ್ದುದು (ನೇಮಿಪು. ೧೧-೧೪೧). [ಪದ$_2$+ಸಂಘಟ್ಟನ]

ಪದಸಂಘಟ್ಟನೆ (ನಾ). = ಪದಸಂಘಟ್ಟನ : ಪದಸಂಘಟ್ಟನೆಯಿಂ ತಿಲೋತ್ತಮೆಯಕುಲಂ ನುರ್ಗಾಗೆ . . . ಮುತ್ತಿದನೊತ್ತಂಬದೆ ರಾಜಹಂಸಪುರಮಂ ಶ್ರೀಮಾಳವಕ್ಷೋಣಿಪಂ (ದಶಕು. ೧-೭೨).

[ಪದ$_2$+ಸಂಘಟ್ಟನೆ]

ಪದಸಂಚಯ (ನಾ). = ಪದಪುಂಜ ೧ : ಉಡುಗಿದುದೀಗಳೀಗಳಿನ ಕಟ್ಟದೊಳ್ಕಟ್ಟಱೆ ಕೆಟ್ಟುದೀಗದೀಗಡಿನ ಕವಿವ್ರಜಕ್ಕೆ ಪದಸಂಚಯಂ (ಶಾಂತಿಪು. ೧೨-೭೯). [ಪದ$_2$+ಸಂಚಯ]

ಪದಸಂಚರಣೆ(ನಾ). ಪದಗಳನ್ನು ಪ್ರಯೋಗಿಸುವ ರೀತಿ,—ಕ್ರಮ: ಪದಸಂಚರಣೆಯಲಿ ಲಿಸಿ ತಿರುಗಿ ನೋಡದ ಬಿರಿದು ಬೇಱೆ ಕುಮಾರವಾಲ್ಮೀಕಿಯ ವಚೋಲಹರಿ (ತೊರರಾ. ೧-೧-೧೦). [ಪದ$_2$+ಸಂಚರಣೆ]

ಪದಸಂಧಾನ (ನಾ). ಪದಗಳ ಹೊಂದಾಣಿಕೆ,—ಜೋಡಣೆ : ಮಾನಿತಪದಮಂ ಪದಸಂಧಾನಮನರ್ಥಪ್ರತೀತಿಯಂ ಕವಿಹೃದಯಸ್ಥಾನಮನಱಿದೋದದೆ ಕಟ್ಟೇನೆಯ ಕರಡಿಯವೊಲೂಟ್ಟಿಪಂ ವಾಚಕನೇ (ಛಂದೋಂಬು. ೧-೩೦ ಅಡಿಟ). [ಪದ$_2$+ಸಂಧಾನ]

ಪದಸಂಪತ್ತು (ನಾ). ಶಬ್ದಸಂಪತ್ತು : ಅವರು ಈ ಭಾಷೆಯ ಪದಸಂಪತ್ತನ್ನೂ ಪಟ್ಟ ಮಾಡಿಕೊಟ್ಟಿದ್ದಾರೆ (ವ್ರಾನಿವಿ. ೧೬೬).

[ಪದ$_2$+ಸಂಪತ್ತು]

ಪದಸಂಯೋಜನೆ (ನಾ). = ಪದಸಂಧಾನ : ಮಹೋನ್ನತವಾದ ಆಲೋಚನೆ ಸರಳ ಸಾಧಾರಣವಾದ ಪದಸಂಯೋಜನೆಯ ಮೂಲಕವೂ ಅಭಿವ್ಯಕ್ತಿಗೊಳ್ಳಬಲ್ಲದು (ಸೌಂದಸ. ೩೯೦). [ಪದ$_2$+ಸಂಯೋಜನೆ]

ಪದಸೋಂಕು (ನಾ). ಕಾಲಿನ ಸ್ಪರ್ಶ; ಪಾದಸ್ಪರ್ಶ: ದಳನಿಳಯವನು ಸಾರಿದು ಮುಂದೆ ಸಂದಿಪ ಹವಣಸಱಯದೆ . . . ಸಾರುತಿರೆ ಪದಸೋಂಕಿಗಾಸತಿ ಕ್ರೂರವಾಯಸಕಂಜಿ ಪತಿಯ ಶರೀರವನು ಬಿಗಿಯಪ್ಪುತಾಚರಿಸಿದಳು ಭೀತಿಯಲಿ (ತೊರರಾ. ೨-೭-೧೦). [ಪದ$_2$+ಸೋಂಕು$_2$]

ಪದಸ್ಖಲನ (ನಾ). ಹೆಜ್ಜೆ ತಪ್ಪುವಿಕೆ : ಪದಸ್ಖಲನಮಾದುದಂಜೆಗಿದಿರೊಳ್ಪಿಕಂ ವಕ್ರಮಂ ತೊದಳ್ಕುಡಿಯುದು (ಮಲ್ಲಿಪು. ೧೪-೩೯).

[ಪದ$_2$+ಸ್ಖಲನ(=ಸ್ಖಲನ)]

ಪದಸ್ತ (ನಾ). ಪದವಿಯಲ್ಲಿರುವವನು ; ಅಧಿಕಾರದಲ್ಲಿರುವವನು ; ಹುದ್ದೆದಾರ : ಸರಸದ ನಾಡು ವೈಸಿಕದ ಬೀಡು ಪದಸ್ತನ ಸೀಮೆ ಬೇಂಟದಾಗರಮುಪಚಾರದಿಕ್ಕೆಯೆನಲೊಪ್ಪುವುದಲ್ಲಿಯ ಸೂಳೆಗೇರಿಗಳ್ (ತ್ರಿಪುವಿ. ೧೭-೩೦) ; ಹಸ್ತಿವಾಹನನಾದಿಯಾದ ಸಮಸ್ತದೇವನಿಕಾಯದೊಳಗೆ ಪದಸ್ತ[ಪಾಕಾಂ. ಪ್ರಶಸ್ತ]ನಾವನು ನಿನ್ನವೋಲ್ (ಹರಿಸಾ. ೨೭).

[<ಸಂ. ಪದಸ್ಥ]

ಪದಸ್ತತನ (ನಾ). ಹಿರಿಮೆ ; ಹೆಚ್ಚುಗಾರಿಕೆ ; ಘನತೆ : ಪೀಡತನವನು ಬಿಡಿಸಿ ಸಲೆ ಕೊಂಡಾಡಿ ಕಾಡಿದನಸುರಜಾತಿಯೊಳೋಡೆ ಪರಿಭವ ತನ್ನದೆಂಬ ಪದಸ್ತತನದಿಂದ (ಕುಮ್ಯಾದ್ರೋ. ೧೫-೬೨). [ಪದಸ್ತ+-ತನ]

ಪದಸ್ತೆ (ನಾ). = ಪದಸ್ಥೆ ೨ : ಇದಕ್ಕೆಲ್ಲಾ ಕೆಟ್ಟು ಮಾಡೋವ ಮೊದಲು ತನ್ನ ಹೆಂಡತಿಗೆ ಮಾಡಲಿ, ನಾವು ಪದಸ್ತೇರು, ಗರತೀರು ಕೆಟ್ಟುಹೋದೆವೆ? (ಮುಸುಗ. ೬೮). [<ಸಂ. ಪದಸ್ಥಾ]

ಪದಸ್ಥ (ಗು). ೧. ಮೇಲ್ತರಗತಿಯ ; ಉತ್ತಮವಾದ : ಕಾಮಶಾಸ್ತ್ರಮಂ ನನ್ನಿಯಳೋದಲ್ . . . ಪದಸ್ಥಗಣಕಾಕುಲಮೊಲ್ದುಱೆ ಕೇಳ್ದುವಾವಗಂ (ಮಲ್ಲಕಾ. ೮-೫೧೨) ; ಗಾವಿಲ ಬಂದು ಪಟ್ಟಣದ ಪದಸ್ಥವೇಶ್ಯಾವನಿತೆಯರ ಕಂಡಂಜಿ ಭಾವಜಕೇಳಿಗೆ ಮೇಲಿಕ್ಕದಿರಲವನಾವ ಸತ್ಪುರುಷ (ಕುಮಾಸಾಂ. ೩೪). (ನಾ). ೨. = ಪದಸ್ತ : ಪದಸ್ಥನೆನೆ ಸತ್ಯಕೌರ್ಯ ಶೌಚಾದಿಗುಣಾಸ್ಪದನೆನೆ ನೆಗೞ್ದಾಹವಮಲ್ಲದೇವನಂ ಮನದೆಗೊಂಡನಣ್ಣಗದೇವಂ (ಅಜಿಪು. ೧೨-೨೩) ; ಘನನಲಾ ಭಗದತ್ತ ಕಾಂಭೋಜನು ಪದಸ್ಥನಲಾ (ಕುಮ್ಯಾಸ. ೧೦-೪೮). ೩. [ಜೈನ] ಪದಸ್ಥ, ಪಿಂಡಸ್ಥ, ರೂಪಸ್ಥ ಮತ್ತು ರೂಪಾತೀತ ಎಂಬ ನಾಲ್ಕು ಬಗೆಯ ಧ್ಯಾನಗಳಲ್ಲಿ ಒಂದು ; ಪಂಚಪದವೆಂಬ ಮಂತ್ರಪೂರ್ವಕವಾದ ಧ್ಯಾನ; ಧರ್ಮಧ್ಯಾನದ ಭೇದ; ಪೂರ್ವಾಚಾರ್ಯರು ಪ್ರಸಿದ್ಧ ಸಿದ್ಧಾಂತದಲ್ಲಿ ಬರೆದಿರುವ ಮಂತ್ರಗಳ ಚಿಂತನೆ : ತಾರಗೆಯಂ ಕ್ಷೀರಾಬ್ಧಿಯ ವಾರಿಯೊಳಿರದೊರಸಿ ಕರ್ಚದಂತೆವೋಲೆಸೆವಾಕಾರದ ಪಂಚಪದಂಗಳನಾರಯ್ದುತಿಶುದ್ಧಮನದೊಳಿರಿಸೆ ಪದಸ್ಥಂ (ಪಸಾರ. ೫೭೩).

[ಸಂ.]

ಪದಸ್ಥಿಕೆ (ನಾ). = ಪದಸ್ತತನ : ಪಾಡಿ ಮೆಚ್ಚಿಸಿದ ಕತದಿಂ ತ್ಯಾಗವಾಸತ್ತು ಬೇಡಿದುದಱಂ ದಾನ ಹವಣಿನ ಪದಸ್ಥಿಕೆಯ ಜೋಡಿಯುಂಟದ ಱೊಳುಸಕಾರ (ಹಜಕಾ. ೭-೧೨). [ಪದಸ್ಥ+-ಇಕೆ]

ಪದಸ್ಥೆ (ನಾ). ೧. ಪದವಿಯನ್ನು ಹೊಂದಿರುವವಳು; ಸ್ಥಾನವನ್ನು ಪಡೆದಿರುವವಳು : ಅಗ್ರಮಹಿಷೀಪದದಲ್ಲಿ ಪದಸ್ಥೆಯಾಗು (ಅಜಿಪು. ೪-೫೬). ೨. ಜಾರೆ ; ಸೂಳೆ : ಅತನು ಬಂದಪೆನೆಂದೊಡನಾರನಾದೊಡಂ ತಡೆಯಿರಿಯೆಂಬ ಗರ್ವದ ಪದಸ್ಥೆಯರಾ ಜೊತೆಯಲ್ಲಿಯೊಪ್ಪುಗುಂ (ಮಲ್ಲಕಾ. ೮-೫೧೩). [ಸಂ. ಪದಸ್ಥಾ]

ಪದಹತ (ಗು). ಪದಾಘಾತಗೊಂಡ : ಪದಹತಧೂಳಿಮಯವಾಕಾಶ ರಥತುರಗಾಳಿಮಯ ದಿಗುಜಾಲವೇನೆಂಬೆನು ಮಹಾದ್ಭುತವ (ಕುಮ್ಯಾಭೀ. ೩-೨೪). [ಪದ$_2$+ಹತ]

ಪದಹತಿ (ನಾ). ಕಾಲಿನ ಹೊಡೆತ ; ಪದಾಘಾತ : ಪದಹತಿಯಿಂ ನೆಲಂನ್ನಡುಗೆ . . . ವಿರೋಧಿಯಂ ತುಳಿದು ಕೊಲ್ವುದು (ಸೌಇಇ. XI-i, ೧೦೩-೧ ; ಸು. 1070) ; ಬಿಜುನಡೆಯ ಪದಹತಿಗಳಿಂದ ಪಲತೆಱದ ಜೀವಿಗಳಿಗೆ ವಿಮೋಕ್ಷಂ ದೊರೆವುದು (ಬಸಪು. ೩೪-೩೬) ; ಪದಹತಿಗೆ ಮಾಹೇಂದ್ರಶೈಲ ಭೂಮಿಯ ತಳದಿ ಹುದುಗಿದುದು (ಪಂಕಾರಾ. ೫-೧-೨೯). [ಪದ$_2$+ಹತಿ]

ಪದಹಾಡು (ಕ್ರಿ). ೧. ಹಾಡನ್ನು ಹೇಳು : ಅಕ್ಕವ್ವ ತನ್ನ ಸವಿಯಾದ ದನಿಯಲ್ಲಿ . . . ಬಸವನ ಮೇಲಿನ ಪದ ಹಾಡುತ್ತಾಳೆ (ಸನ್ನೂರು. ೨೨). ೨.(ಆಲಂ) ಮುಕ್ತಾಯ ಮಾಡು; ಮುಗಿಸು: ಅವನು ಆ ಕೆಲಸಕ್ಕೆ ಪದ ಹಾಡಿದ (ರೂಢಿ). ೩. ಹಿಂಸೆಗೆ ಒಳಗಾಗು ; ಸುಡು ; ಬಿಸಿತಾಗು : ಈ ಉರಿಬಿಸಿಲಲ್ಲಿ ಹೊರಟು ಚಪ್ಪಲಿಯೂ ಕಿತ್ತುಹೋಗಿ ಕಾಲು ಪದಹಾಡುತ್ತಿದೆ (ರೂಢಿ). ೪. ದುಃಖಿಸು ; ಗೋಳಾಡು : ಸದಾ ಕಾಲವೂ ಮಗನಿಗೆ ಕೆಲಸವಾಗಲಿಲ್ಲವೆಂದು ಅವನಿಗೆ ಪದಹಾಡುವುದೇ ಆಯಿತು (ರೂಢಿ). [ಪದ$_2$+ಹಾಡು$_1$(<ಪಾಡು$_1$)]

ಪದಹೇಳಿಸು (ಕ್ರಿ). ೧. ಹಾಡನ್ನು ಹೇಳಿಸು : ಆ ಹೆಣ್ಣು ಅವನನ್ನು ಕರೆದು ತನ್ನ ಮನೆಯ ಹತ್ತಿರ ಕೂರಿಸಿ ಪದಹೇಳಿಸಿ ಭಿಕ್ಷ ಹಾಕಿದಳು (ಸಣ್ಣಕ. IV, ೬೬). ೨. ಗೋಳುಗುಟ್ಟಿಸು; ಅಳಿಸು : ಉರಿ ಬಿಸಿಲಿಗೆ ಕಾಲು ಚುರುಗುಟ್ಟ ಪದಹೇಳಿಸುತ್ತಾ ಇದೆ (ರೂಢಿ).

[ಪದಹೇಳು + -ಇಸು$_3$]

ಪದಹೇಳು (ಕ್ರಿ). ೧. = ಪದಹಾಡು ೧ : ಪದಹೇಳಿದ ಮೇಲೆ ಅವಳು ಇವನಿಗೆ ಸ್ವಲ್ಪ ಎಲೆ ಅಡಕೆ ಕೊಟ್ಟಳು (ಸಣ್ಣಕ. IV, ೬೫); ಪದಹೇಳುವುದಕ್ಕಾಗಿಯೇ ಬೀಗುತಿಯಿಂದ ಆಹ್ವಾನಿತಳಾಗಿದ್ದ ಕೆಂಚಿ ಮುಂದೆ ಬಂದು ಹಾಡಲು ಸಜ್ಜಾಗಿ ಕುಳಿತಳು (ಸುವಸಂ. ೫೦). ೨. (ಆಲಂ) (ನೋವಿನಿಂದ)ಗೋಳಾಡು; ದುಃಖಿಸು : ಕೊಡದೇ ಪದಹೇಳ್ಯಾನು! ನಾ ಬಿಡ್ತೇನೇನು (ತಿಡುಗು. ೬೯). [ಪದ$_2$ + ಹೇಳು(<ಪೇಟ್)]

ಪದಱು$_1$, ಪತರು, ಪದರು$_1$ (ಕ್ರಿ). ೧. ಕ್ಷೋಭೆಗೊಳ್ಳು; ಕಿನಿಸು; ಕೋಪಿಸು; ಉದ್ವಿಗ್ನವಾಗು : ಪದಱಿ ಸಕಲಪ್ರಜೆಯ ನೋಯಿಸಲದು ನೃಪಗೆ ಲೇಸಲ್ಲ . . . ಪದುಳದಲಿ ಭೂಪ್ರಜೆಯು ಕೆಡದಂದದಲಿ ರಕ್ಷಿಪ ಬಗೆಯ ವಿರಚಿಸುವುದೆ ವಿಚಾರಿಸೆ ಧರ್ಮಸಾಧನವೆಂದನಾ ಭೀಷ್ಮ (ತಿಮ್ಮಶಾಂ. ೨-೮೮); ಬಱಿದೊಡಂಬಡಿಕೆಗೊಳಗಾಗದಿರೆಯೆಳ್ದು ಪರಿದೆಯ್ದುವನಿತಱೊಳ್ ಪದಱಿವಂದು . . . ಸೆಜ್ಜೆವನೆಗೆಳೆದೊಯ್ವ (ಮಡಿಕ್ಯಾ. VI, ೧೬೩೦). **ಪತರು** : ೨. ಚಡಪಡಿಸು; ಕಳವಳವನ್ನು ಹೊಂದು; ಒದ್ದಾಡು : 'ಪತರುಗುಟ್ಟು' ಪರಾ. **ಪದರು$_1$** : ೧. ನೀನು ಅವರನ್ನು ಸಂಹಾರ ಮಾಡತಕ್ಕವನೇ ಸರಿ; ಪದರಬೇಡ; ತಾಳಿಕೊ (ಭೀಷ್ಮಚ. ೧೧೧). ೩. ಅಸಂಬದ್ಧವಾಗಿ ಮಾತನಾಡು; ಬಡಬಡಿಸು : ಪರಿಹಾಸ್ಯವನು ಮಾಡಿ ಪದರಲಾಗದು ಅಂತಃಕರಣ ನೀನಿಟ್ಟು ತೆರಳುವುದೆ ಸೌಖ್ಯ (ಶ್ರೀಕೃಪಾ. ೧೯); ತಾನೇನಾದರೂ ಪದರಿಬಿಟ್ಟರೆ ಅವಿವೇಕ. ಏನಾಗುವುದೋ ಎಂದು ಶಂಕಿಸಿ ಮಾತನ್ನೇನೂ ಆಡದೆ ಸರೋಜಳನ್ನು . . . ಕೂಡಿಸಿದನು (ಮಹಾಗ. ೨೬೦). ೪. ಹೆದರು; ನಡುಗು : ಸುದತಿಗಾ ನುಡಿ ನಿಶಿತ ಶೂಲಾಗ್ರದಲಿ ತಿವಿದಂತಾಗೆ . . . ಚಿಂತೆಯಲಿ ಪದರಿ ಹಮ್ಮನೆ ಹರದು ಕಂಗಳೊಳುದುರೆ ಜಲಬಿಂದುಗಳು (ಅನಂಶಾ. ೬-೨೩-೨೧); ಕುಧರಂಗಳೈತಂದ ಮಾಳ್ಕೆಯೊಳ್ ಬರೆ ಕಂಡು ಬೆದರಲನಿಮಿಷನಿಕರಮಾ ಪುರಂ ತಲ್ಲಣಿಸಿ ಪದರದೆ[ಪಾಶಾಂ. ಬೆದರದೆ] ನೃಪಾಗ್ರಣಿ ವಿದೇಹನಂದನನರ್ದನತಿಮನೋಹರ್ಷದಿಂದ (ವೆಂಕಾರಾ. ೧-೧೯-೬); ಪದರಿ ತಲ್ಲಣಗೊಂಡು ಪಶುಗಳು ಚೆದರಿ ಓಡಿಹೋದವು (ಗೋಹಾಡು. ೧೧-೫೧); ನಿನ್ನ ಮನೆಯಲ್ಲಿ ಯಾತಕ್ಕೇನು ಕಡಮೆ? . . . ಯಾಕೆ ಪದರುತ್ತೀಯೆ? (ಅಪೂಟ. ೩೩). ೫. ಅಲುಗಾಡು; ಮಿಸುಕು; ಚಲಿಸು : ಅದ ಕಂಡು ಪಕ್ಷಿಗಳು ಬೆದರಿ ಭೂಮಿಗೆ ಯಿಳಿದು ಪದರಾದೆ ಕುಳಿತಿರಲು ಕಂಡಾ ನಳನಾಗಾ (ಯನಳ.೧೪); ಬಿಳಿಯ ಮಂಚಿನ ಮುಸುಕು ಬಳಸಿದ ಮೆಳೆಯ ಪೊದರಲಿ ಪದರುತ . . . ಮಿನುಕುವ ಮಿಂಚುಹುಳವೆಂದೆಣಿಸಲೋ! (ಇಂಗೀತ. ೧೩-೨). ೬. ಚಂಚಲತೆಯನ್ನು ಹೊಂದು; ಅಸ್ಥಿರವಾಗು : ಆ ಸಮಯದಲ್ಲಿ ಕಾದಂಬರಿಯ ನೀನು ಚಂದ್ರಾಪೀಡನ ಕಂಡು ಪದರಿ ಇದೇನ ತೊಡಗಿದೆ ಎಂದು ಲಜ್ಜೆಯು ನಿಗ್ರಹಿಸುತ್ತಲಿರುವುದು (ಪಚಕಾ. ೬೨); ಯದುಕುಲಾಬ್ಧಿಚಂದ್ರನೆ ಪದರದಲೆ ತಾನಾಡೀದವಧಿಗೆ ಬಂದಾನೆ (ಶ್ರೀಕೃಪಾ. ೨೩).

ಪದಪದರು (ದ್ವಿರುಕ್ತಿ): ಬಳ್ಳಿಗೊಂಚಲಿನಂತೆ ತೀವಿ, ಹಬ್ಬಿದುದು ನಮ್ಮ ತೋಳ್ ಪದಪದರಿ ಬೆದರೆ ಆಥೆನ್ಸ್! (ಪಾರಸಿ. ೩೪-೭೭೩).

[ದೇ.॥ ತಮಿ. ಪತಱು; ಮಲ. ಪದಱು, ಪದರು; ತೆಲು. ಪದಱು, ಪದರು, ಪದುರು; ಮಲ್ತೊ. ಪದ್ರರೆ, ಪದ್ಕರೆ]

ಪದಱು$_2$ (ನಾ). ಉದ್ವಿಗ್ನತೆ; ಆತುರ : ಪದಱಿಂದೊಂದಿದ ಭೀತಿಯಿಂ ನಡುಕಮಂ ಪೆರ್ಚಿಕ್ಕುಮಂಗಕ್ಕೆ ಮಾಸಿದ ಮದ್ದೃಷ್ಟಿಗಳಂ ಕರಂ ಮಱಸುಗುಂ ಹರ್ಷಾಶ್ರುವಿಂ (ಮಿತ್ರಗೋ. ೬೧-೯೨). [<ಪದಱು$_1$]

ಪದಾಂತ (ನಾ). ಪದದ ಕೊನೆಯ ಭಾಗ,—ಅಕ್ಷರ : ತಳಿಗುಮದಂತ ಪದಾಂತಂಗಳೆತ್ವಮುಮನಿತ್ವ ವೃತ್ತಿಯುಮನುತ್ವಮುಮಂ(ಶಮದ. ೨೬೮); ಪದಾಂತವಾದ ಣಕಾರಕ್ಕೆ ಪರವಾದ ನಕಾರಕ್ಕೆಣ್ ಅದೇಶವಾಗುತ್ತದೆ (ಕೈಪಿಡಿ. ೧೧). [ಪದ$_2$ + ಅಂತ$_2$]

ಪದಾಂತರ (ನಾ). ೧. ಮತ್ತೊಂದು ಹೆಜ್ಜೆ. ೨. ಬೇರೆಯ ಶಬ್ದ; ಇನ್ನೊಂದು ಪದ : ಮಱಸುಂದು ಸೂಟಸುಂದನೆ ಪಿಱಿತಿನಿಯೆನೆ ಪೂಱಿಯೆನೆ ಪದಾಂತರದಿಂದಂ ನೆಱೆದು ನಿಲೆ ದುಷ್ಪ್ರತೀತಿಯ ನಱಿಪುವ ಪೆಱಪೆಱವುಮಿನ್ನವೇಗ್ರಾಮ್ಯಂಗಳ್ (ಕಾವ್ಯಾವ. ೪೪೭); ಇಂತಿದೆ ನೆಲೆನೆಲೆಯೆನಗೆಂದುಪದಾಂತರದಿಂದತನು ತನ್ನ ಪೆಸರನದರ್ಕಂ ಸಂತಸದಿನಿಟ್ಟನೆನೆ ಚೆಲ್ವಂ ತಳೆದ ವಿದೇಹನಾಮಮಾ ಮಹಿಗೆಸೆಗುಂ (ಚಂದ್ರಪು. ೧-೬೯). [ಪದ$_2$ + ಅಂತರ]

ಪದಾಂತರೀಕರಣ (ನಾ). ಒಂದು ಪದಕ್ಕೆ ಬದಲು ಮತ್ತೊಂದು ಪದವನ್ನು ಸೇರಿಸುವುದು : ಪ್ರಣುತ ಪದಾಂತರೀಕರಣಮಂತದೆ ತಾಣದೊಳಾದೊಡಂ ಮಹಾಗುಣಮನೆ ತರ್ಕುಮೇಕಬಹುಭೇದವಿಕಲ್ಪಮನಲ್ಲಿ ನೋಡಲಿಂ (ಕವಿರಾ. ೧-೧೨೨). [ಸಂ.]

ಪದಾಂತಸಂಧಿ (ನಾ). [ವ್ಯಾಕ] ಒಂದು ಪದದ ಅಂತ್ಯವರ್ಣವು ಮುಂದಿನ ಪದದ ಆದಿವರ್ಣದೊಂದಿಗೆ ಸೇರಿ ಆಗುವ ಸಂಧಿ : ಪ್ರಕೃತಿ ಪ್ರತ್ಯಯಂಗಳ ಮಧ್ಯಮುಂ, ಪೂರ್ವಪದದ ಕಡೆಯುಂ ಪರಪದದ ಮೊದಲುಂ ಕೂಡೆ ಪದಮಧ್ಯಸಂಧಿ ಪದಾಂತಸಂಧಿ ಎಂದು ಸಂಧಿ ವಿಷಯಮಿರ್ತೆಱಂ (ಶಮದ. ೫೦ ವೃತ್ತಿ); ಪದಾಂತಸಂಧಿಯು ಈಗಿನ ಪದ್ಯರಚನೆಯಲ್ಲಿ ಅನಿತ್ಯವೆಂಬ ಅಭಿಪ್ರಾಯವನ್ನು . . . ತೋರಿಸುತ್ತವೆ (ಕಎಪು. ಪೀಠಿಕೆ). [ಪದಾಂತ + ಸಂಧಿ]

ಪದಾಂತ್ಯ (ನಾ). ೧. = ಪದಾಂತ : ದೀರ್ಘಂ ಪೂರ್ವಪದಾಂತ್ಯದೊಳುತ್ತರಪದದ ಮೊದಲೊಳೊದವಿರೆ ಲೋಪಂ (ಶಮದ. ೨೯೩). ೨. ಪದ್ಯದ ಪಾದದ ಅಂತ್ಯ,—ಕೊನೆ : ಬಿಂದು ವಿಸರ್ಗಂ ವ್ಯಂಜನಮೊಂದಿದ ದಡ್ಡಕ್ಕರಂ ಪದಾಂತ್ಯಂ ದೀರ್ಘಂ ಬಂದೊಡಱಿ ವನಜಮುಖಿ ಗುರುವೆಂದುಂ (ಛಂದೋಂಬು. ೧-೩೫). [ಪದ$_2$ + ಅಂತ್ಯ]

ಪದಾಂತ್ಯಸಂಧಿ (ನಾ). = ಪದಾಂತಸಂಧಿ : ಪದಾಂತ್ಯಸಂಧಿಗೆ : ಅವನ + ಅಳ್ತನಂ, ಅವನಾಳ್ತನಂ (ಶಮದ. ನ. ೬೦ ಪ್ರಯೋ).

[ಪದಾಂತ್ಯ + ಸಂಧಿ]

ಪದಾಕ್ರಾಂತ (ನಾ). ೧. (ಅಧಿಕಾರವು) ಆಕ್ರಮಣಕ್ಕೆ ಒಳಪಟ್ಟುದು : ಚಲುಕ್ಯರಾಜ್ಯಲಕ್ಷ್ಮಿಯು ಪಲ್ಲವರಿಂದ ಪದಾಕ್ರಾಂತವಾದ ಮೇಲೆ ವಿಕ್ರಮಾದಿತ್ಯನು ಹೇಗಾದರೂ ತನ್ನ ವಂಶದ ಕೀರ್ತಿಯನ್ನು ಕಾಪಾಡಬೇಕೆಂಬುದೊಂದೇ ಉದ್ದೇಶದಿಂದ . . . ಪ್ರಯತ್ನಪಟ್ಟನು (ಕರ್ಣಾಅ. ೭೧). ೨. ಆಕ್ರಮಣಕ್ಕೊಳಗಾದ ವ್ಯಕ್ತಿ : ಮದನಂ ಮದಿರಾಕ್ಷಿಯರನೀ ಕ್ಷಣಮಾತ್ರದೊಳೆ ತನ್ನ ಪದಾಕ್ರಾಂತರಂ ಮಾಟ್ಪಮಿತ್ರನ ಚರಿತ್ರಕ್ಕೆ ಮೆಚ್ಚಿ (ಪಾರ್ತ್ವಪು. ೮-೩೦ ಪ). [ಪದ$_2$ + ಅಕ್ರಾಂತ]

ಪದಾಗಮಜ್ಞ (ನಾ). ವ್ಯಾಕರಣದ ನಿಯಮಗಳನ್ನು ಬಲ್ಲವನು : ಅಸಮರ್ಥಮಪ್ರತೀತಂ . . . ನೀರಸಮೆಂದು ದೋಷಮಿವು ಸಮನಿಸುಗುಂ ಪದದೊಳ್ ಪದಾಗಮಜ್ಞರ ಮತದಿಂ (ಕಾವ್ಯಾವ. ೪೩೫).

[ಪದ$_2$ + ಆಗಮಜ್ಞ]

ಪದಾಘಾತ (ನಾ). ೧. ಒದೆತ; ಪಾದಾಘಾತ : ಭೀಮಸೇನನ ಗದಾಘಾತದೊಳೂರುಭಂಗಮುಂ ಪದಾಘಾತದೊಳ್ ಮಕುಟಭಂಗ

ಮುಮಾಗೆ (ಗದಾಯು. ೯-೧೬ ಪ); ನಿಮ್ಮ ಪದಾಘಾತದಿಂದ ಈ ಕೊಡಗು ನುಚ್ಚುನೂರಾಗಿದೆ (ದೌಲತ್. ೩೩೫). [ಪದ$_2$+ಆಘಾತ]

ಪದಾಜಿ (ನಾ). ೧. ಕಾಲಾಳು ; ಪದಾತಿ : "ಪದಿಕಂ ಪತ್ತಿ ಪದಾತಂ ಪದಾತಿ ಪದಾತಿಕಂ ಪದಾಜಿಗೆ ನಾಮಂ" (ವಸ್ತುಕೋ. ೮೩-೧೦). ೨. ಕಾಲ್ನಡಿಗೆಯಲ್ಲಿ ಹೋಗುವವನು ; ಪಾದಚಾರಿ. [ಸಂ.]

ಪದಾತ (ನಾ). = ಪದಾಜಿ ೧ : "ಪದಿಕಂ ಪತ್ತಿ ಪದಾತಂ . . . ಪದಾಜಿಗೆ ನಾಮಂ" (ವಸ್ತುಕೋ. ೮೩-೧೦). [ಸಂ.]

ಪದಾತಿ (ನಾ). ೧. ಕಾಲುನಡೆಯ ಸೈನಿಕ; ಕಾಲಾಳು: "ಪದಾತಿಃ . . . ಪದಿಕಃ, ಪಾದಚಾರೀ – ಈಲ ಕಾಲಾಳ್" (ಹಲಾಯು.೭೪-೨೯೬); ರಥವ್ರಜಮಯಮುಂ ಪದಾತಿಮಯಮುಂ ನೆಱೆಯಾದುದು ಕಾಡು ಕೋಡುಮೂರ್ ತ್ರಿಜಗದೊಳಾಂಪರೀ ಬಲಮನಿನ್ನೆನಿಸಿತ್ತು ಚತುರ್ಬಲಾರ್ಣವಂ (ಪಂಪಭಾ. ೯-೯೮); ನೆರೆದುದು . . . ನಿಜಘುಜಾಲಾಪದ ಪದಾತಿಯೊಡ್ಡುಗಳಲ್ಲಿ (ಇಹರ.ಹ. ೧೩೫-೨೪); ಚೂಣಿಯೊಳೆರಡು ಬಲದ ಪದಾತಿ ಸವೆದುದು (ಕುನ್ಯಾಭೀ.೪-೪೬). ೨. ಕಾಲುನಡಗೆಯವನು; ದಾರಿಗ. [ಸಂ.]

ಪದಾತಿಕ (ನಾ). = ಪದಾಜಿ ೧ : 'ಪಾದಾತಿಕ' ಪರಾ. [ಸಂ.]

ಪದಾತಿನಿ (ನಾ). ಕಾಲಾಳಿನ ಸೈನ್ಯ : ಪಂಕದರದಿಂ ಪೊಱಮಟ್ಟೆಱಾ ವಾಳ್ಗಮಾಂಕೆಯೊಳ್ ಗಡಣಿಸೆ ಕಾದುತಿರ್ದುದು ಮಹೇಂದ್ರಪದಾತಿನಿ ಮುತ್ತಿ ಸುತ್ತಲುಂ (ಚಂದ್ರಪ್ರ. ೫-೧೦೬). [ಸಂ. ಪದಾತಿನೀ]

ಪದಾತಿಪತನ (ನಾ). ಕಾಲಾಳುಗಳ ಸೋಲು,—ನಾಶ : ಮಹಾರಥರು ಮೆದೆಗೆಡೆದುದುಳಿದ ಪದಾತಿಪತನವನಱಯೆ ನಾನೆಂದ (ಕುನ್ಯಾಗ. ೧-೩೮). [ಪದಾತಿ+ಪತನ]

ಪದಾದಿ (ನಾ). ೧. ಪದದ ಆರಂಭ. ೨. ಪದಾರಂಭದ ಅಕ್ಷರ : ಪದಾದಿಯ ಬಕಾರಕ್ಕೆ ಐತ್ವಂಬೆರಿಸಿದ ಭಕಾರಘುಕ್ಕುಂ (ಶಮಿಪ. ೨೭೫ ವೃತ್ತಿ). [ಪದ$_2$+ಆದಿ$_2$]

ಪದಾಧಿಕಾರಿ (ನಾ). ಅಧಿಕಾರದಲ್ಲಿರುವವನು ; ಅಧಿಕಾರಸ್ಥ : ಅವೇದನಪತ್ರದ ಮೇಲೆ ಆ ಪದಾಧಿಕಾರಿಯಿಂದ . . . ಅವನ ಹೆಸರು ರಿಜಿಸ್ಟರು ಮಾಡಲ್ಪಟ್ಟಿರುವ ಸಂದರ್ಭದಲ್ಲಿ (ಭಾಧಾನ. ೫).

[ಪದ$_2$+ಅಧಿಕಾರಿ$_1$]

ಪದಾಧ್ವ (ನಾ). [ವೀಶೈ] ಮಹಾಲಿಂಗದಲ್ಲಿ ಉತ್ಪತ್ತಿಯಾದ ಸಾದಾಖ್ಯಗಳು ಜಗತ್ತಿನಲ್ಲಿ ಪ್ರಕಟವಾಗಲು ಸಹಾಯಕವಾಗಿರುವ ಆರು ಮಾರ್ಗಗಳಲ್ಲಿ ಒಂದು ; ತಿಳಿವಳಿಕೆಯನ್ನುಂಟುಮಾಡುವ ಪದಗಳ ದಾರಿ ; ಮಂತ್ರ, ಪದ, ವರ್ಣ, ಭುವನ, ತತ್ತ್ವ ಮತ್ತು ಕಲಾ ಎಂಬ ಆರು ಮಾರ್ಗಗಳಲ್ಲಿ ಒಂದು : ವರ್ಣಾಧ್ವ, ಪದಾಧ್ವ, ಮಂತ್ರಾಧ್ವ (ಇವು ಮೂರು ಶಬ್ದಾಧ್ವಗಳು) (ಶಿವಾಸಾ. ೨ ಅಡಿಟ). [ಪದ$_2$+ಅಧ್ವ]

ಪದಾನತ (ನಾ). ಪಾದಗಳಿಗೆ ನಮಸ್ಕರಿಸಿದವನು —ಬಾಗಿದವನು: ಇಂದ್ರನಂ ಕಂಡು ಪದಾನತನೆಂದಂ ದಶಮುಖನಪ್ರತಿಮಂ ಬಳರದೊಳಿದಿರ್ಚುವನರಾರವನಂ (ಪಂರಾಮಾ. ೧೦-೧೬೬); ಜರತ್ತೃಣಜುಗುಪ್ಸೆಯಿಂ ಬಿಸುಟಹೀಂದ್ರಮರ್ತ್ಯೇಂದ್ರನಿರ್ಜರೇಂದ್ರಪದಮಂ ಪದಾನತರ್ಗೆ ಮತ್ತೆ ನೀನೀವುದೇಂ ಕರಂ ಬಗೆಯೆ ಚೋದ್ಯಮೇ (ಚಂದ್ರಪ್ರ. ೧೪-೯೩).

[ಪದ$_2$+ಅನತ]

ಪದಾನುಗುಣ್ಯ (ನಾ). = ಪದಮೈತ್ರಿ: ಪದಗಳಿಗೆ ಇರತಕ್ಕ ಅನ್ಯೋನ್ಯವಾದ ಮೈತ್ರಿಗೆ ಶಯ್ಯೆ ಎಂದು ಹೆಸರು . . . ಶಯ್ಯೆಗೇ 'ಪದಾನುಗುಣ್ಯ'ವೆಂದೂ 'ಪದಮೈತ್ರಿ'ಯೆಂದೂ ಹೆಸರು (ಕೈಸಿಡಿ. ೨೨೪).

[ಪದ$_2$+ಅನುಗುಣ್ಯ]

ಪದಾಯುಧ (ನಾ). ಕಾಲನ್ನು ಆಯುಧವನ್ನಾಗಿ ಉಳ್ಳದು ; ಹುಂಜ : "ಕುಕ್ಕುಟಂ ತಾಮ್ರಚೂಡಂ ಪದಾಯುಧಂ ಕೃಕವಾಕು ಕೋಟಿಯಕ್ಕುಂ" (ಪಿಂಗಲಾ. ೫೧-೫) ; ಪದಾಯುಧ ಚಕ್ರವಾಕ ಕಳಿಂಗ . . . ಭರದ್ವಾಜಾದಿ ಪಕ್ಷಿಪ್ರಕರ ಬಿದ್ದುದು ಬಿಗಿದ ಕೇಸುರಂ ಕಣ್ಣವಲೆಗಳಲಿ (ಕುನ್ಯಾಅ. ೨೦-೫೨). 'ಚರಣಾಯುಧ' ಪರಾ.

[ಪದ$_2$+ಅಯುಧ]

ಪದಾರ್ತ (ನಾ). ಅರ್ಪಿಸಿದ ದ್ರವ್ಯ,—ವಸ್ತು : ತಮ್ಮ ಭಕ್ತಿಯಿಂದ ತೋಂಟದ ಶ್ರಾಮಿಗೆ ಕಲ್ಲ ಮಟವ ಕಟ್ಟಬೇಕೆಂದು ಬಿಟ್ಟಗ ದೇವರಿಗೆ ಪದಾರ್ತಮಂ ನಮಸ್ಕಾರಮಂ ಮಾಡಲಾಗಿ ಭಕ್ತಿ ಪದಾರ್ತಮಂ ಕೈಕೊಣ್ಡು . . . ಸಜ್ಜನ ಸತ್ಪುರುಸರು ಯಿ ಮಟದಲಿ ಯಿ ಪದಾರ್ತವ ಅನುಭವಿಸುವರು (ಎಕ. XVI, ಕುಣಿಗ.೪೯-೭೦; ಸು. 1480?). [<ಸಂ. ಪದಾರ್ಥ]

ಪದಾರ್ಥ (ನಾ). ೧. ಪದದ ಅರ್ಥ,—ಅಭಿಪ್ರಾಯ : ಸುಕಥಾಳಾಪಮನೋಜ್ಞ ಪೇಳ್ವುದು ಪದಾರ್ಥೋಕ್ತಿಯಿಂ (ಸುಕುಮಾ. ೧-೪೬) ; ಕಾವ್ಯಮಂ ಕೇಳ್ದು ಮಥಿಸಿ ಜನಿಸಿದ ಪದಾರ್ಥಮಂ ತಿಳಿದು ನೋಡದೆ ವಿನೂತನಕವಿತೆಯೆಂದು ಕುಂದಿಟ್ಟು ಜಱೆದೊಡೆ ಪೇಳ್ದವನೊಳಾವದೂಷಣಿಯಂ (ಶೈಮಿಭಾ. ೧-೬). ೨. ವಸ್ತು ; ದ್ರವ್ಯ : ಇನಿವಿರಿದು ಪರಾಕ್ರಮಮುಳ್ಳ ನಿನಗೆ ತೀರದ ಪದಾರ್ಥಮಿಲ್ಲೆಂಬುದನಾಂ ನೆನೆನೆನೆದು ಲಜ್ಜೆಯಿಂ ಬೇಡೆನಲಱಿದಪೆನಿಲ್ಲ ನಿನ್ನನಿನ್ನುಂ ಬರವಂ (ಚಂದ್ರಪ್ರ. ೫-೮೪) ; ಉಪ್ಪು ಬಹಳ ಉಪಯುಕ್ತವಾದ ಪದಾರ್ಥವು (ಮುಂಬಯಿ. ೪-೧೯೮). ೩. ಸಾರು, ಹುಳಿ ಮುಂತಾದ ಮೇಲೋಗರ : ಹಸಿಯ ಬಿಸಿಲನೆ ಕೊಯ್ದು ಪದಾರ್ಥವ ಮಾಡಿ ಉಸಿರ ಎಸರಲ್ಲಿ ಬಾಗುತ್ತಿಪ್ಪರಯ್ಯ (ಅವಡಂ. ೫೮-೨೫೦). ೪. ಸಿದ್ಧಪಡಿಸಿದ ಆಹಾರವಿಶೇಷ : ಪ್ರಾಣಲಿಂಗಕ್ಕಕ್ಕಱಂ ಪರಿಯಾಣದಲಿ ಪೊಸ ಪೊಸ ಪದಾರ್ಥಶ್ರೇಣಿಯಂ ಲೇಸಾಗಿ . . . ನೀಡುತಿರಲು (ಬಸಪು. ೩೩-೧೧) ; ಉಣ್ಣುವ ಪದಾರ್ಥಗಳನ್ನು ಆಗಾಗ್ಗೆ ಬದಲು ಮಾಡುತ್ತಿರಬೇಕು (ಮುಂಬಯಿ. ೪-೨೫). ೫. [ಗಣಿತ] ಒಂಬತ್ತು ಎಂಬ ಸಂಖ್ಯೆಯ ಸಂಕೇತ : ನವ ಪದಾರ್ಥ ರಂಧ್ರ . . . ನಾಟ್ಯಾಂಗ ಇಂತಿನಿತುಂ ೯ ಕ್ಕೆ ಹೆಸರು (ವ್ಯವಹಾ.೧೧). ೬. ಏಳು ಎಂಬ ಸಂಖ್ಯೆಯ ಸಂಕೇತ: ಬಂದಿರೆ ಶಶಾಂಕ ದಿವಸೇಶ ಮರುದಿಂದ್ರರ್ . . . ಇಂದುವದನೇ ಯತಿ ಪದಾರ್ಥದೊಳೆ ನಿಂದಂದೆಂದುಮಿದ ಕೇಳ ಪೆಸರಿಂ ವನಮಯೂರಂ (ಛಂದೋಂಬು. ೨-೧೪೯). ೭. [ನ್ಯಾಯ] ವಾದದ ಅಂಶಗಳನ್ನು ಒದಗಿಸುವ ವಿಭಾಗ,—ಪ್ರಕರಣ. ೮. = ಪದಾರ್ಥಸಪ್ತಕ : ವೇದೋಕ್ತಧರ್ಮವನ್ನು ಎಲ್ಲರೂ ಮಾಡಬೇಕು. ಆದರೆ ಮಾಡುವ ಕ್ರಮದಲ್ಲಿ ಕಾಲ ದೇಶ ಶಕ್ತಿ ಶುದ್ಧಿ ಅಶುದ್ಧಿ ಸಹಾಯ ಮೊದಲಾದ ಸಾಮಗ್ರೀಭೇದದಿಂದ ದ್ರವ್ಯ ಪದಾರ್ಥ ಆಮ ಪಕ್ವ ಮೊದಲಾದ ಪ್ರಭೇದಗಳೆಂದು ನಿರ್ಣಯವಿರುವುದು (ಛಂದಸಾ. ೧೬೨). ೯. [ಜೈನ] ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರೆ, ಮೋಕ್ಷ, ಪಾಪ ಮತ್ತು ಪುಣ್ಯಗಳೆಂಬ ಒಂಬತ್ತು ಬಗೆಯ ತತ್ತ್ವಗಳು : ಸಮವಾಯಮಪ್ಪುದಲ್ತೆಂದು ಮನಂ ಬಸಮಾಡಿ ದೋಸವಿರಹಿತನಾಪ್ತಂ ಕ್ರಮದಾಪ್ತನೆ ಪೇಳ್ದುದಾಗಮಮಾಗಮದರ್ಥಮಾವುದದುವೆ ಪದಾರ್ಥಂ (ಅಪಿಪು.೫-೫೪); ಜೀವಾದಿ ಪದಾರ್ಥಂಗಳೊಳಾವುದು ಸಂದಿಗ್ಧಮಾದೊಡಂ ಬಲಗೊಳೆ ಭವ್ಯಾವಳಿಗೆ ವಿದಳಮಕ್ಕುಂ (ಅಜಿಪು.೫-೭೦). ೧೦. [ವೀಶೈ] ಹೆಣ್ಣು, ಹೊನ್ನು ಮತ್ತು ಮಣ್ಣುಗಳೆಂಬ ಮೂರು ಬಗೆಯ ಮೂಲದ್ರವ್ಯಗಳು : 'ತ್ರಿವಿಧಪದಾರ್ಥ' ಪರಾ.

ಪದಪದಾರ್ಥ (ದ್ವಿರುಕ್ತಿ): ಒಂದು ಲಕ್ಷದ ಮೇಲೆ ತೊಂಬತ್ತೊಂದು ಸಾವಿರ ಜಂಗಮಕ್ಕೆಂದಂದು ಮಾಡಿದ ಪದಪದಾರ್ಥಾವಳಿಗಳೆಲ್ಲವನು

ಒಂದು ವಿಳಂಗೆಯೊಳಗೆ ಸವೆಯಲು (ಬಸವು. ೮-೧೬) ; ಇನಿದಿನಿಪ ಮೃದುತರರಸರಸಾಯನಪದಪದಾರ್ಥಂಗಳಂ ಪಾವನದ ಪಾನಾದಿಗಳನೊದವಿಸಿ ಕೂಡೆ ಗಡಣಿಸುತ (ಬಸವು. ೩೩-೪). [ಸಂ.]

ಪದಾರ್ಥಪ್ರಸಾದ (ನಾ). [ವೀಶೈ] ಪ್ರಸಾದಗಳಲ್ಲಿ ಒಂದು ಪ್ರಭೇದ ; ಭೋಗಿಸುವ ವಸ್ತುಗಳನ್ನು ಮೊದಲು ಗುರುಲಿಂಗ ಜಂಗಮಕ್ಕರ್ಪಿಸಿ ಅವರು ಉಳಿಸಿದ ಶೇಷವನ್ನು ಪ್ರಸಾದರೂಪವಾಗಿ ತೆಗೆದುಕೊಳ್ಳುವುದು : ಗುರುಲಿಂಗಜಂಗಮಕ್ಕೆ ಸರ್ವ ಪದಾರ್ಥವ ಸರ್ವಭೋಗಂಗಳ ಭೋಗಿಸಲಿತ್ತು ಶೇಷಪ್ರಸಾದವ ಭೋಗಿಸುವುದು ಪದಾರ್ಥಪ್ರಸಾದ (ಉರಿತೆ.ಕ.೧೧೮-೧೯೭). [ಪದಾರ್ಥ+ಪ್ರಸಾದ]

ಪದಾರ್ಥಭಾವಿನಿ (ನಾ). [ತತ್ತ್ವಶಾ] ಶಾಕ್ತಮತದಲ್ಲಿ ಮೋಕ್ಷ ಸಾಧನವೆಂದು ಹೇಳಿರುವ ಏಳು ಜ್ಞಾನಭೂಮಿಕೆಗಳಲ್ಲಿ ಆರನೆಯದು : ಪದಾರ್ಥಭಾವಿನೀ – ಹೊರಗಾಗಲಿ ಒಳಗಾಗಲಿ ಯಾವದೊಂದು ವಿಶೇಷಜ್ಞಾನವೂ ಆಗದಿರುವದು (ಅಮೃತ.೬-೬ ಟೀಕು) ; ಅನುಭವದಿಂದ ತಿಳಿಯತಕ್ಕ ಭೂಮಿಕೆಗಳು ಜ್ಞಾನಭೂಮಿಕೆಗಳು. ಅವುಗಳು "ವಿವಿದಿಷಾ" . . . "ಪದಾರ್ಥಭಾವಿನೀ" "ತುರ್ಯಗಾ" ಎಂದೇಳು (ಭಾರದ. ೨೨೭). [ಸಂ. ಪದಾರ್ಥಭಾವಿನೀ]

ಪದಾರ್ಥಸಪ್ತಕ (ನಾ). [ನ್ಯಾಯ] ಶಾಕ್ತಮತದಲ್ಲಿ ಮೋಕ್ಷ ಸಾಧನವೆಂದು ಹೇಳಿರುವ ವಿವಿದಿಷಾ, ವಿಚಾರಣಾ, ತನುಮಾನಸಾ, ಸತ್ವಾಪತ್ತಿ, ಅಸಂಸಕ್ತಿ, ಪದಾರ್ಥಭಾವಿನೀ ಮತ್ತು ತುರ್ಯಗಾ ಎಂಬ ಏಳು ಜ್ಞಾನಭೂಮಿಕೆಗಳು : ಕಾಣಾದವೆಂಬ ವೈಶೇಷಿಕಶಾಸ್ತ್ರವೇ ದ್ರವ್ಯ ಗುಣ ಕರ್ಮ ಸಾಮಾನ್ಯ ವಿಶೇಷ ಸಮವಾಯ ಅಭಾವಗಳೆಂಬ ಪದಾರ್ಥಸಪ್ತಕಮಂ ಪ್ರತಿಪಾದಿಪುದಱಂ ಪ್ರಪಂಚಸ್ವರೂಪಮಂ ವಿವರಿಸಿ ವಿಭಾಗಿಸುತಿರ್ಕುಂ (ವಿವೇಕ. ೧೦). [ಪದಾರ್ಥ+ಸಪ್ತಕ]

ಪದಾರ್ಪಣ (ನಾ). ಕಾಲನ್ನು ಇಡುವುದು ; ಹೆಜ್ಜೆ ಊರುವುದು : ಅವರ ಹೃದಯದಲ್ಲಿ ಭೀತಿಯ ಪದಾರ್ಪಣವಾಗಿತ್ತು (ಸರ್ವಮಂ. ೩೮).

ಪದಾರ್ಪಣ ಮಾಡು = ಹೆಜ್ಜೆಯಿಡು ; ಕಾಲಿಡು ; ನಡೆ : ಆತನು ಯಾವ ಅನ್ಯಾಯದ ಮಾರ್ಗದಲ್ಲಿಯೂ ಎಂದೂ ಪದಾರ್ಪಣ ಮಾಡಿಲ್ಲವೆಂದು ನಾನು ಶಪಥಮಾಡಿ ಹೇಳುವೆನು (ಬೆನ್ನಬೇ. ೬೩) ; ಹಳತಿಂದ ಹೊಸತಿಗೆ ನಾವು ಪದಾರ್ಪಣ ಮಾಡುತ್ತೇವೆ (ಅತ್ಯಾರ್ಪ. ೧೯೧). [ಪದ$_2$ + ಅರ್ಪಣ]

ಪದಾವಧಿ (ನಾ). ಅಧಿಕಾರದ ಅವಧಿ,—ಕಾಲ : ರಾಷ್ಟ್ರಪತಿಯವರು ತಮ್ಮ ಪದಾವಧಿಯು ಸಮಾಪ್ತವಾದ ಮೇಲೂ ತಮ್ಮ ಉತ್ತರಾಧಿಕಾರಿಯವರು ಪದಗ್ರಹಣ ಮಾಡುವವರೆಗೂ ತಮ್ಮ ಸ್ಥಾನದಲ್ಲಿರತಕ್ಕುದು (ಭಾಧಾಸ. ೨೮). [ಪದ$_2$+ಅವಧಿ]

ಪದಾವನತಿ (ನಾ). ಕಾಲುಗಳಿಗೆ ಬಾಗುವಿಕೆ,—ಎರಗುವಿಕೆ ; ನಮಸ್ಕಾರ : ವನಜಜ ಬನ್ನಿಮಿತ್ತ ಹರ ಕುಳ್ಳಿರಮುನ್ನತಪೀಠದೊಳ್ ಪದಾವನತಿಯಿನೇಱ್ ಮಹೇಂದ್ರ (ಜಗವಿ. ೩-೫೯). [ಪದ$_2$+ಅವನತಿ]

ಪದಾವಾಸ (ನಾ). = ಪದನಿವಾಸ : ರಾಷ್ಟ್ರಪತಿಯವರು ಬಾಡಿಗೆಯನ್ನು ಕೊಡದೆ ತಮ್ಮ ಪದಾವಾಸಗಳ ಉಪಯೋಗಕ್ಕೆ ಹಕ್ಕು ಹೊಂದಿರತಕ್ಕುದು (ಭಾಧಾಸ. ೨೯). [ಪದ$_2$+ಆವಾಸ]

ಪದಾವೃತ್ತಿ (ನಾ). ಪದದ ಪುನರಾವರ್ತನೆ : ಸಮಗೊಂಡರ್ಥ ಪದಾವೃತ್ತಿ ಮತ್ತದಾವೃತ್ತಿಯೆಂಬ ಪೆಸರಂ ಪಡೆಗುಂ (ಕಾವ್ಯಾವ. ೬೫೨). [ಪದ$_2$+ಆವೃತ್ತಿ]

ಪದಿ$_1$, ಹದಿ$_1$ (ಕ್ರಿ). ೧. (ರತ್ನ ಮುಂತಾದುವುಗಳನ್ನು) ಕೂರಿಸು ; ಕೆಚ್ಚು ; ಕುಂದಣಿಸು ; ಮೆಟ್ಟು : ಅಮೃತಲೋಕದ ಮಾತೆ, ಅಳಿಯದರ್ಳ್, ಬಾನ್‌ಬಾಳ ಪೆರ್ಮಗಳ ತಾಯಿ, ತಲೆಯಲ್ಲಿ ಪೊನ್ನ ಮುಡಿ, ಪದಿದರಿಲ ಪೆಂಪು, ಬೆಳ್ಳಾವರೆಯ ಪೊಂಗಯರ್ ! (ಹೊಂಗಳು. ೧೭-೧). **ಹದಿ$_1$** : ೧. ಕೊರಳಿಗೆ ಮತ್ತು ಕಾಲಿಗೆ ಧರಿಸುವ ಆಭರಣಗಳಿಗೆ ವಜ್ರಗಳನ್ನು ಹದಿಯುತ್ತಾರೆ (ಪ್ರವಾಇ. II, ೧೩೬) ; ಕೇಳಿ, ಎದೆಯಲಿ ಹದಿಯರಿ-ಹೊಸ ಅಳ ಬಾಳಲಿ ಹುದಿಯರಿ (ಹೊಂಗಳು. ೨-೧೧). ೨. (ನೆಲಗಟ್ಟಿಗೆ ಹಾಕಲು) ಕಲ್ಲುಗಳನ್ನು ಅಥವಾ ಇಟ್ಟಿಗೆಗಳನ್ನು ಹಾಸು : ದಾರಿಯಲ್ಲಿ ಮತ್ತು ರಂಗದಲ್ಲಿ ಅಲ್ಲಲ್ಲಿ ಬಹಳ ಕಾಲದ ಹಿಂದೆ ಒರಟುಕಲ್ಲುಗಳನ್ನು ಹದ್ದಿದ್ದರು (ಸನ್ನೂರು. ೧೧). ೩. ಹೂಳು ; ಹುಗಿ : ಕಪ್ಪದಲಿ ನೆರವಾಗಲೆಳಸುತ ಅಳಲನಿನ್ನೂ ಹದಿವೆವು (ಬಲುಮ. ೩೨-೨). ೪. ಅಗೆದು ತೆಗೆ : "ಹದಿ – ಖನನ ವಿವರಣೇ (ಹೂಳಿರುವುದನ್ನು ಅಗೆದು ಕಾಣಿಸು)" (ಶಮಭಾ).

[ದೇ.॥ ತಮಿ. ಪತಿ ; ಮಲ. ಪದಿ, ಪದಿಯು]

ಪದಿ$_2$, ಹದಿ$_2$ (ನಾ). ೧. ವಾಸಸ್ಥಳ ; ಹಕ್ಕೆ : ಕಾಲುವಳಿಯ ಪದಿ ಸಹನಾಗಿ ನಿಮಗೆ ಸರ್ವಮಾನ್ಯವಾಗಿ ಕೊಟ್ಟೆವು (ಎಕ. XIV, ಗುಂಡ್ಲುಪೇ. ೧೩೨-೯ ; 1540). ೨. ನೆಲೆ ; ಆಶ್ರಯ : ಪಾದತೀರ್ಥವ ಸಲಿಸಿ ಪಾವನವಾಯಿತ ಜನ್ಮ ರೋಮರೋಮೆಲ್ಲ ರವಿಚನ್ನ ಗುರು ನಿಮ್ಮ ಪಾದದಲಿ ಕಂಡೆ ಪದಿಗೋಳು (ಗರತಿ. ೪೧). **ಹದಿ$_2$** : ೧. ಊರ ಒಡೆಯನ ಹದಿಯಲು ಮನೆಭಾಗದಲು ತೆಱುವ ತೆಱು (ಸೌಇಇ. IX-ii, ೪೨೪-೫೨ ; 1401) ; ಪೊಳಮುಟನ ಹಳಯ ಹದಿಯ ಹಳ (ಎಕ. XIV, ಮಳವ. ೧೪೫-೨೦ ; ?). ೩. ಬುನಾದಿ ; ಅಡಿಪಾಯ ; ತಳ : ಪದಪಿನಿಂ ಬಸದಿಗಳ ಕಿತ್ತು ಕೋಂಟೆಯ ಹದಿಗೆ ಹಾಯ್ಕೆ (ಸಿದ್ಧೇಶ. ೭-೬೩) ; ಮನೆಯ ಹದಿಗೆ ಹಾಕಿರುವ ಕಲ್ಲುಗಳ ಪೊಟರೆಗಳಲ್ಲಿ ಕಿರಿಜೇನು, ದುಂದಿಗಳು ಒಂದು ವಿಧವಾದ ಜೇನನ್ನು ಶೇಖರಿಸಿಡುತ್ತಿದ್ದುವು (ಹುಟ್ಟಹ. ೧೫೪) ; ಈ ಹದಿಯ ಮೇಲೆ ಸಂಭೀದ ಕಾರ್ಯಮಂದಿರವನ್ನು ಕಟ್ಟಿ ಬೆಳಸುವುದು ವಾಡಿಕೆ (ಹಣಪ್ರ. ೧೬೪). 'ತಳಹದಿ' ಪರಾ. [<ಪದಿ$_1$./ತಮಿ. ಪತಿ]

ಪದಿ$_3$ 'ಪದಿನ್' ನೋ.

ಪದಿಂಬು (ನಾ). ಒಂದು ಬಗೆಯ ಮರ : ಸಿರಿಸಂ ಪದಿಂಬು ಕರ್ಮಾರ ಬೆರಸು . . . ಅಶನ ಕಡುಗಡವೆಸಳ್ಗಳೆಂದೀ ಮರಂಗಳುಂ (ಚಟ್ಟಮ. ೧೧-೩೪). [?]

ಪದಿಕ (ನಾ). ೧. ಕಾಲ್ನಡಿಗೆಯಿಂದ ಹೋಗುವವನು ; ಪಾದಚಾರಿ. ೨. ಪದಾತಿ ; ಕಾಲಾಳು : "ಪದಿಕಂ ಪತ್ತಿ . . . ಪದಾಜಿಗೆ ನಾಮಂ" (ವಸ್ತುಕೋ. ೮೩-೧೦). ೩. ಒಂದೇ ಒಂದು ವಿಭಾಗವನ್ನುಳ್ಳುದು. [ಸಂ.]

ಪದಿಕೆ 'ಪೊದಕೆ$_2$' ನೋ.

ಪದಿಕೊಳ 'ಪದಿರ್ಕೊಳ' ನೋ.

ಪದಿಟಿ, ಪದಿಷ್ಟೆ, ಪ್ರತಿಟ್ಟೆ, ಪ್ರದಿಟಿ, ಹದಿಟಿ (ನಾ). ೧. ದೇವತಾ ವಿಗ್ರಹವನ್ನು ಸ್ಥಾಪಿಸುವುದು ; ದೇವತಾಪ್ರತಿಷ್ಠೆ : 'ಪದಿಟಿಗೆಯರ್' ಪರಾ. ೨. ಸ್ಥಾಪಿಸುವುದು ; ಪ್ರತಿಷ್ಠಾಪನೆ : "ಪ್ರತಿಷ್ಠಾ – ಹದಿಟಿ, ಪದಿಟಿ" (ಶಮದ. ೨೮೩ ಪ್ರಯೋ.). ೩. ಗೌರವ ; ಘನತೆ ; ಹಿರಿಮೆ : "ಪದಿಟಿ-ಪ್ರತಿಷ್ಠಾ = ಗೌರವ" (ತದ್ಭಕೋ. ೨೪). **ಪದಿಷ್ಟೆ** : ೧. 'ಪದಿಷ್ಟೆಗೆಯರ್' ಪರಾ. **ಪ್ರತಿಟ್ಟೆ** : ೧. 'ಪ್ರತಿಟ್ಟೆಗೆಯರ್' ಪರಾ. ೪. ಒಬ್ಬ ವ್ಯಕ್ತಿಯ ಉಪಜೀವನಕ್ಕೆ ತಕ್ಕ ಏರ್ಪಾಡು ಮಾಡುವುದು : ಸುಳುಮಾರಪಣ್ಡಿತ ಪ್ರತಿಟ್ಟೆಯಂ ಮಾಡಿ (ಎಕ. XI, ಮೊಳಕಾ. ೨೪-೩ ; ಸು. 1290). **ಪ್ರದಿಟಿ** : ೨. ಮುಮ್ಮಾಡಿ ಚಿಕಪಗೌಡಯನವರ ಪ್ರದಿಟಿ ಹನುಮನ ದೊಣೆ (ಎಕ. XVI, ಮದ್ದಗಿ. ೧೧೬-

೭; ಸು. 1646). **ಹದಿಟೆ:** ೧. ಈಶಕೋಟಿತ್ರಯದ ಹದಿಟೆಗೆಯ್ದೊಲವಿಂ ವಿಭೀಷಣನ ಪಾಲಿಸಿದ (ರೇವಣ. ೨-೪). ೨. "ಪ್ರತಿಷ್ಠೆ ಹದಿಟೆ" (ಕರ್ಣಾನಿ. ೪೯); ಸಾಮಾನ್ಯ ಕಾವ್ಯರೂಢಿಯಲ್ಲಿ ಇಲ್ಲದ ಹದಿಟೆ (ಪ್ರತಿಷ್ಠೆ)...ಮೊದಲಾದ ಅನೇಕ ತದ್ಭವಗಳು ಕಾರಣವಾಗಿವೆ(ತವನಿ.೧೯೭). ೫. (ಧನ ಮುಂತಾದುವನ್ನು) ಭೂಮಿಯಲ್ಲಿ ಹೂಳುವುದು: 'ಹದಿಟೆಗೆಯ್' ಪರಾ. ೬. ಅಹಂಕಾರ; ಸೊಕ್ಕು: ಕವಿತೆಯ ನಾದರಿಸದ ಹದಿಟೆಯ ಮೆರೆವನುಮರಿಯಮೆಯಿಂ (ಸಂಸಪ. ೩೬-೯).

[<ಸಂ. ಪ್ರತಿಷ್ಠಾ]

ಪದಿಟೆಗೆಯ್, ಪದಿಷ್ಟೆಗೆಯ್, ಪ್ರತಿಟ್ಟೆಗೆಯ್, ಹದಿಟೆಗೆಯ್ (ಕ್ರಿ). ೧. ದೇವತಾವಿಗ್ರಹವನ್ನು ಸ್ಥಾಪಿಸು; ದೇವತಾ ಪ್ರತಿಷ್ಠಾಪನೆಯನ್ನು ಮಾಡು: ಲಿಂಗಮನುರುಭಕ್ತಿಯಿನಾ ಮಂಗಲ ದೊಳ್ಪದಿಟೆಗೆಯ್ದು ಪೂಜಿಸಿ (ಹಾಲಾಸ್ಯ. ೧-೩-೫). **ಪದಿಷ್ಟೆಗೆಯ್:** ೧. 'ಪದಿಷ್ಟೆಗೆಯ್ಸು' ಪರಾ. **ಪ್ರತಿಟ್ಟೆಗೆಯ್:** ೧. 'ಪ್ರತಿಟ್ಟೆಗೆಯಿಸು' ಪರಾ. **ಹದಿಟೆಗೆಯ್:** ೧. ಕೂರ್ಮೇಶ್ವರಾಖ್ಯ ತ್ವದಿಂ ವೇದಾತೀತ ಮಹೇಶನಂ ಹದಿಟೆಗೆಯ್ದಿಷ್ಟಾರ್ಥಮಂ ಸಾರ್ದಂ (ಹಮ್ಮೀರ. ೬-೨೮). ೨. (ಧನ ಮುಂತಾದುವನ್ನು) ನೆಲದಲ್ಲಿ ಹೂಳು: ಬಗ್ಗಿನೊಂದು ಸಿರಿಯಂ ಹದಿಟೆಗೆಯ್ವಂತು ದೇವಿಯನಿರಿಸಿ (ರಾಮಾಶ್ವ. ೧೪೯-೧೨). [ಪದಿಟೆ+ಕೆಯ್$_1$]

ಪದಿತೂಪು (ನಾ). ಧಾನ್ಯದ ಒಂದು ಅಳತೆ; ಹತ್ತು ಕೊಳಗ: ಮಂದುವೂರ ತೊಱುಕೊಳ್ವಲ್ಲಿ ವಿಟ್ಟೋರ್ ಪೆರಾಣ್ಕೋವರ್ ಅವಂಗೆ ಪದಿತೂಪು ಕಟಿನಿ ನೆತ್ತಪಡಿ (ಎಕ. X, ಶ್ರೀನಿವಾ. ೨೦-೭; ಸು. 750). 'ಅಯ್ದೂಂಬು' ಪರಾ. [ಪದಿ$_3$(<ಪತ್ತು$_3$)+ತೂಪು(<ತೂಂಬು)]

ಪದಿನ್, ಪದಿ$_3$, ಪದಿರ್$_2$, ಪಧಿ, ಪನ್$_1$, ಪಯಿನ್$_2$, ಹದಿ$_3$, ಹದಿನ್, ಹನ್ (ಸಪೂರೂ). ಸಮಾಸದಲ್ಲಿ 'ಪತ್ತು' ಎಂಬ ನಾಮ ವಾಚಕಕ್ಕೆ ಬರುವ ಆದೇಶರೂಪ: ಕೈವರದೊಳ್ ಒನ್ದು ಮಾನ್ಯಂ ಮಣಮುಂ ಮೂಗಣ್ಡುಗಂ × ಮ್ಮಣ್ನುಮಿರ್ಪ್ಪತ್ತುಗಣ್ಡುಗಮದುವುಂ ಪದಿನ್ಕುಳಂ ಪಾಟುಂ ಇದಂ ಪಡೆದೋರೀಶ್ವರದಾಸರ್ (ಎಕ.X (s),ಚಿಕ್ಕಬ. ೧೦೬-೭೪; 850). **ಪದಿ$_3$:** ಒಂದೆರಡೆಂಬಿವು ಪದದೊಳ್ ಸಂದಿಸೆ ಪತ್ತರ್ಕೆ ಪನ್ನೆನಿಕ್ಕುಂ ರೂಪಂ ಮುಂದೆ ಪೆಱವೊಂದಿ ನಿಲೆ ಪದಿಯೆಂದಕ್ಕುಂ (ಕಾವ್ಯಾವ. ೨೬೫); ಪತ್ತರ್ಕೆ ಪನ್ನೆನಿಕ್ಕುಮದುತ್ತರಕೊಂದೆರಡು ನೆಲಸೆ ಪದಿಯೆಂದಕ್ಕುಂ ಮತ್ತೊದವಿ ಮೂಱು ನಾಲ್ಕಿರೆ ಸುತ್ತೇಂ ಸ್ವರಮಿರೆ ನಕಾರವಿಧಿ ಮುಂದೆಲ್ಲಂ (ಶಮದ.೧೯೨). **ಪದಿರ್$_2$:** 'ಪದಿರ್ಕಂಡುಗ', 'ಪದಿರ್ಕೊಳ', 'ಪದಿರ್ಮಡಿ' ಪರಾ. **ಪಧಿ:** ಮೆಲೂರ ಕೆಱೆ ಕೀಟೆ ಪಧಿ ಕಣ್ಡುಗಂ ವ್ರೀಹಿಭೂಮಿ (ಇಆ. V, ೧೩೬-೨೬; 454). **ಪನ್$_1$:** ಮೇಲಿನ 'ಪದಿ$_3$' ಉಲ್ಲೇಖದ 'ಶಮದ' ಪ್ರಯೋಗವನ್ನು ನೋಡಿ. **ಪಯಿನ್$_2$:** ಸಾಸಿರಮಿರೆ ಮುಂದೊತ್ತಿ ಸಮಾಸದೊಳಕ್ಕುಂ ಪಯಿನ್ (ಕಾವ್ಯಾವ. ೨೬೮); ಪತ್ತರ್ಕೆ ಪಯಿನ್ನೆಂದಾದತ್ತಾದೇಶಂ (ಶಮದ. ೧೯೧). **ಹದಿ$_3$:** 'ಹದಿಮೂಱು' ಪರಾ. **ಹದಿನ್:** 'ಹದಿನಯ್ದು' ಪರಾ. **ಹನ್:** 'ಹನ್ನೊಂದು', 'ಹನ್ನೆರಡು' ಪರಾ.

ಪದಿಂಬರ್, ಪದಿಂಬರು, ಪಯಿಂಬರ್ = ಹತ್ತುಮಂದಿ,—ಜನ: ಪದಿಂಬರ್ ತರ್ಪ ಪೊಱೆಯನೊರ್ವನೆ ತರ್ಪಂ (ವಡ್ಡಾರಾ. ೬೬-೩); ಸಂತಾಪನುಂ . . . ದುರಿತಾಸ್ತ್ರನುಮೆಂಬ ಪದಿಂಬರುಮೋರೋರ್ವರಂ ಗಱಿಸನ್ನೆಗೆಯ್ದು ಕಾದುವಲ್ಲಿ (ಪಂರಾಮಾ.೧೩-೯೭ ವ); ತನಯರ್ ಪದಿಂಬರೆಸೆದರ್ (ವರ್ಧಪು. ೧೫-೪೩); ಚಂಪಕ ಮೋಹಕರ್ ಮುಂತಪ್ಪ ಪದಿಂಬರ್ ಕುವರರ್ವರಸು ತಾನುಂ ಬದ್ಧದಿಂ ಯುದ್ಧಸನ್ನದ್ಧನಾದಂ (ರಾಮಾಶ್ವ. ೧೪೧-೨೮); ಪಂಚಾಣುತ್ತರೆಗಳೊಳ್ಪುಟ್ಟುವ ಪತ್ತು ತೆಱದ ಪದಿಂಬರು (ಶಾಸ್ತ್ರಟೀ. ೧೦೬-೯); ಪಯಿಮ್ಮೆ, ಪಯಿಂಬರ್ (ಶಬ್ದಾನು. ೩೬೩ ಪ್ರಯೋ). [<ಪತ್ತು$_3$]

ಪದಿನಯ್ಗಣೆ (ನಾ). ಹದಿನೈದು ಬಾಣ: ಪದಿನಯ್ಗಣೆಗಳಿಂ ಬಲನ ಕಾಯಮಂ ಸೀಳಿ (ಚಿಬಪು.೪೯-೧೩). [ಪದಿನ್ (<ಪತ್ತು$_3$)+ಅಯ್ಗಣೆ]

ಪದಿನಯ್ಗುಳ (ನಾ). ಹದಿನೈದು ಕೊಳಗ; ಒಂದು ಅಳತೆ: ಬಸವಸೆಟ್ಟಿ ಪದಿನಯ್ಗುಳ ನೀರ್ಮ್ಮಣ್ಣು ಅಯ್ಗುಳ ಪೂಂಬೊಲನುಂ ಪೊನ್ನಱ ಕೊಟ್ಟ ಮಣ್ಣಱಂ ಕೊಣ್ಡುಮ್ (ಎಕ. IV, ಹೆಗ್ಗಡ. ೧೬-೯; 1021). [ಪದಿನ್ (<ಪತ್ತು$_3$)+ಅಯ್ಗುಳ]

ಪದಿನಯ್ದು, ಪದಿನೈದು, ಹದಿನಯ್ದು, ಹದಿನೈದು (ನಾ). ಹತ್ತು ಮತ್ತು ಐದು ಸೇರಿ ಆದ ಸಂಖ್ಯೆ; ಪಂಚದಶ: ಪದಿನಯ್ದು ಕನಿಷ್ಟಮ್ (ಎಇ. XIV, ೧೯೦-೧; 725); ಸ್ವಸ್ತಿ ಸತ್ಯವಾಕ್ಯ ಪೆರ್ಮ್ಮನಡಿಗಳ ಪಟ್ಟಂಗಟ್ಟಿದ ಪದಿನಯ್ದು ವರಿಶದನ್ದು (ಎಕ. II, ೩೯೪-೫; 884?); ಇಂತು ಪ್ರಾಯೋಪಗಮನಂಗೆಯ್ದು ಪದಿನಯ್ದು ದಿವಸಂ ಮೆಯ್ಯಂ ತೊಱೆದಿರ್ಪೊರ್ (ವಡ್ಡಾರಾ. ೧೦೧-೧೩); ಪದಿನಯ್ದು ಕೊಳಗ ಬೆದೆ ಗಟ್ಟೆಯುಂ (ಎಕ. IV, ಹೆಗ್ಗಡ. ೧೬-೧೮; 1021). **ಪದಿನೈದು:** ಇಂತು ಬಾಟುತ್ತಂ ಪದಿನೈದು ಪದಿನಾಱು ವರುಷದ ಪ್ರಾಯದಾತನಾಗಿ (ವಡ್ಡಾರಾ. ೭೬-೨೧); ಪದಿನೈದುದಿವಸಮರಸಂ ಮದದಿಂ ಮೆಯ್ಯಱಿಯದುದಕ್ಕೆ ಪುರಜನಮೆಲ್ಲಂ ಗದಗದಗಂಪಂಗೊಂಡುದು (ಧರ್ಮಾಮೃ. ೯-೧೬೪). **ಹದಿನಯ್ದು:** ಹಂದಿ ಹದಿನಯ್ದು ಈದರೂ ಒಂದೂ ಹಯವಾಗಲಿಲ್ಲ (ಗಾದೆ). **ಹದಿನೈದು:** ಹದಿನೈದು ಕಂಗಳ ವಿಗಡರುದ್ರನು . . . ಭೀಮಪೆಸರಿನಲೈದೆ ಜನಿಸಿದನು (ಕುವ್ಯಾಆ. ೮-೧೨); ಕಾದಿದನು ಸಮಪಾಳಿಯಲಿ ಹದಿನೈದು ದಿನ ಪರಿಯಂತ (ತೊರರಾ. ೧-೮-೩೯).

ಪದಿನಯ್ವರ್, ಪದಿನೈವರ್ = ಹದಿನೈದು ಜನ,—ಮಂದಿ: ಪದಿನಯ್ವರ್ (ಭಾಷಾಭೂ. ೯೦ ವೃತ್ತಿ); ಅಲ್ಲಿ ಚಿತ್ರಸೇನಾದಿಗಳಪ್ಪ ಪದಿನೈವರಿಂ ಪಿರಿಯನೆನಿಸಿ ಚಿತ್ರರಥನೆಂಬನೊರ್ವಂ . . . ಉದಯಿಸಿದಂ (ಕಾದಂಪೂ. ೭೦೮). **ಪದಿನೈದು ಕಣ್ಣುಳ್ಳ** = ಶಿವ; ಈಶ್ವರ: ಪುರವ ನಿಟ್ಟಿಸಿ ನೋಡುವೊಡೆ ನೆಱೆ ಮುಖಾಬ್ಜಗಳೊಳು ಪದಿನೈದು ಕಣ್ಣುಳ್ಳ ಗರಿದು ಮಿಕ್ಕವರ ಪಾಡೇನು (ಕಂನವಿ. ೧೧-೧೪೯).

[ಪದಿನ್(<ಪತ್ತು$_3$)+ಅಯ್ದು$_2$]

ಪದಿನಾಲ್ಕು, ಹದಿನಾಕು, ಹದಿನಾಲ್ಕು (ನಾ). ಹತ್ತು ಮತ್ತು ನಾಲ್ಕು ಸೇರಿ ಆದ ಸಂಖ್ಯೆ; ಚತುರ್ದಶ: ಭದ್ರಬಾಹುವೆಂಬ ಮಾಣಿಯೊಂದು ಬಟ್ಟನ ಮೇಗೆ ಪದಿನಾಲ್ಕು ಬಟ್ಟನೊಂದೊಂದಱ ಮೇಗೋಳಿಯೊಳಿಟ್ಟಾಡುತ್ತಿರ್ಪನ್ನೆಗಂ (ವಡ್ಡಾರಾ. ೭೩-೨೩); ಇಂತೀ ಪದಿನಾಲ್ಕು ಮನತ್ಯಂತಂ ದೃಢಹೃದಯನಾಗಿ ತಾಳ್ದಿರ್ದಂಗೆ (ಧರ್ಮಾಮೃ. ೧-೮೨); ಕೌಸಲೆಯ ಕುವರ ರಾಮಂಗೆ ಪದಿನಾಲ್ಕು ವರ್ಷಂಬರಂ ವಿಪಿನಯಾತ್ರೆ (ಶ್ರೀರಾಮಾ. ೬೫-೩೧೪). **ಹದಿನಾಕು:** ನೂಕಿತೊಂದೇ ವಾಘೆಯಲಿ ರಥ ನಾಕುಸಾವಿರ ಬಲುಗುದುರೆ ಹದಿನಾಕುಸಾವಿರ (ಕುವ್ಯಾಕ. ೨-೯). **ಹದಿನಾಲ್ಕು:** ಕಾದಿಹೆನು ಹದಿನಾಲ್ಕು ವರುಷವು (ತೊರರಾ.೨-೬-೩೩).

ಪದಿನಾಲ್ವರ್ = ಹದಿನಾಲ್ಕು ಮಂದಿ,—ಜನ: ಪದಿನಾಲ್ವರ್ ಪರಿವಿಡಿಯಿಂ ಮನುಗಳಾದರ್ (ಕಾವ್ಯಾವ. ೮).

[ಪದ್ದ$_3$(<ಪತ್ತು$_3$)+ನಾಲ್ಕು]

ಪದಿನಾಲ್ಕು ಜಗ(ನಾ). ಭೂಲೋಕ, ಭುವರ್ಲೋಕ, ಸ್ವರ್ಲೋಕ, ಮಹರ್ಲೋಕ, ಜನಲೋಕ, ತಪೋಲೋಕ ಮತ್ತು ಸತ್ಯಲೋಕ ಎಂಬ ಏಳು ಊರ್ಧ್ವಲೋಕಗಳು, ಅತಲ, ವಿತಲ, ಸುತಲ,

ರಸಾತಲ, ತಲಾತಲ, ಮಹಾತಲ ಮತ್ತು ಪಾತಾಲಗಳೆಂಬ ಏಳು ಅಧೋಲೋಕಗಳು ಕೂಡಿ ಒಟ್ಟು ಹದಿನಾಲ್ಕು ಲೋಕಗಳು : ಪದಿನಾಲ್ಕುಜಗದ ಜನಂಗಳು ಕರುಣಾನಿಧಿಯೆಂದು ನಿನ್ನ ಕೀರ್ತಿಪರು (ಮೋಹತ. ೮–೩೫). [ಪದಿನಾಲ್ಕು+ಜಗ]

ಪದಿನಾಲ್ಕುಲೋಕ, ಹದಿನಾಲ್ಕುಲೋಕ (ನಾ). = ಪದಿನಾಲ್ಕು ಜಗ : ಜೋಡಿಸಿ ನಭಕುಪ್ಪರಿಸಲ್ಕೆ ನಿಲ್ಲದಲ್ಲಾಡಿತು ಪದಿನಾಲ್ಕುಲೋಕ ಕೋಡಿ ಬಿದ್ದುವು ಸಪ್ತಶರಧಿ ದುವ್ವಾಳಿಯ ಮಾಡಿದ ಗರುಡ ವೇಗದಲಿ (ಮೋಹತ. ೪೨–೬) ; ಇವರಿಂದ ಅಧಿಕರಿನ್ನಿಲ್ಲಿಲ್ಲ ಪದಿನಾಲ್ಕುಲೋಕದೊಳ್ ಸತ್ಯ ಸತ್ಯಂ ಸತ್ಯವು (ಷತಿಲ.೪–೯೮). **ಹದಿನಾಲ್ಕುಲೋಕ:** ಹಬ್ಬುಗೆಯ ಹದಿನಾಲ್ಕುಲೋಕದ ಮೊಬ್ಬುಗಳನೀಡಾಡಿ ನಭದೊಳ ಗೊಬ್ಬನೇ ರವಿ ತೊಳಗಿ ಬೆಳಗುವವೋಲು ಪಾಂಡವರ ಕೊಬ್ಬುಗಳ ನಿಲಿಸುವೆನು (ಕುಪ್ಕಾಅ. ೮–೯). 'ಚತುರ್ದಶಲೋಕ' ಪರಾ.

[ಪದಿನಾಲ್ಕು+ಲೋಕ]

ಪದಿನಾಱು, ಹದಿನಾರು, ಹದಿನಾಱು (ನಾ). ಹತ್ತು ಮತ್ತು ಆರು ಸೇರಿ ಆದ ಸಂಖ್ಯೆ ; ಷೋಡಶ : ಅರಸನುಮಾದಿವಸ ದಿರುಳ್ ಪದಿನಾಱುಂ ಪೊಲ್ಲ ಕನಸುಗಳಂ ಕಂಡಂ (ವಡ್ಡಾರಾ.೮೫–೨೧); ಪದಿನಾಱು ನೆಲೆಯ ಮಣಿಮಾಡದಿನೊಪ್ಪುವ ಪೊನ್ನ ರಥ (ಧರ್ಮಾಮೃ. ೮–೨೨೧) ; ಪದಿನಾಱು ದಿಡ್ಡಿ ಬತ್ತೀಸ ಬಿಲದ್ವಾರ ವಿಧುಮಿತ್ರದುಪಲದಿಂ ಬಿಗಿದ ರುಧಿರಾಪುರದಾಳುವೇರಿ (ಮೋಹತ. ೨೦–೧೪). **ಹದಿನಾರು :** ಕುಂಟಗೆ ಎಂಟು ಚೇಷ್ಟೆ, ಕುರುಡಗೆ ಹದಿನಾರು ಚೇಷ್ಟೆ (ಗಾದೆ). **ಹದಿನಾಱು :** ಇಂತೀ ಹದಿನಾಱು ತೆಱನ ಭಕ್ತಿಯನು ಚರಲಿಂಗಕ್ಕೆ ಕೊಟ್ಟು . . . ನಾನು ಪ್ರಸಾದಮುಂತಾಗಿ ಭೋಗಿಸುವೆನು (ಮಹಾದೇ. ಬ. ೯೦–೨೧೫) ; ಹದಿನಾಱಂಬು ಹರಿದವು ಮತ್ತೆ ಬಳಿಸಲಿಸಿ (ಕುಪ್ಕಾಕ. ೪–೧೫) ; ಏಱಿದನು ನಡೆದು . . . ಹದಿನಾಱುಯೋಜನದುದ್ದದುಪ್ಪರಿಗೆಯನು (ತೊರರಾ.೫–೩–೩).

ಪದಿನಱುವರ್, ಪದಿನರುವರ್, ಪದಿನರುವರು, ಪದಿನಱುವರು = ಹದಿನಾರು ಮಂದಿ,—ಜನ : ಸರ್ವ್ವಾಭ್ಯಂತರ ಸಿದ್ಧಿ ಅಂತಪ್ಪುದಂ ಪದಿನೆಣ್ಬರುಂ ಪದಿನಱುವರುಂ ಕಾವರ್ (ಸೌಇಇ. XI–i, ೩೮–೧೫ ; 950) ; ಜಿನಾಳಯಕ್ಕೆ ಪದಿನರುವರ್ಸ್ಸೆಟ್ಟಿಯರ ಮಹಾನಗರದ ಸಮುದಾಯದ ಸಂನ್ನಿಧಾನದೊಳ್ . . . ಕೊಟ್ಟ ಮೊಕ್ಕೆಯ ಪೊಸವೊಂ ಗದ್ಯಾಣ ೩೫ (ಸೌಇಇ. XI–i, ೯೪–೮ ; 1059); ಪದಿನರುವರು (ಲೋಕಸ. ೧೫೩) ; ಧರ್ಮ್ಮವೊಳಲ ಪದಿನಱುವರು(ವರ್)ಸ್ಸೆ(ಸ್ಸೆ)ಟ್ಟಿಗಳು (ಇಅ.X, ೧೮೬–೧೫ ; 1095). **ಹದಿನಾರಾಣೆ** = ಪೂರ್ತಿ; ಅಪ್ಪಟ : ಹದಿನಾರಾಣೆ ವ್ಯವಹಾರ—ಬುದ್ಧಿಯ ವ್ಯಕ್ತಿ (ವಂಶವೃ. ೨೫೪). **ಹದಿನಾಱು ಬಣ್ಣ, ಹದಿನಾರು ಬಣ್ಣ** = ಪೂರ್ಣ ; ಅಪ್ಪಟ : ತೋಱಿದನು ತಾ ಬಳಿಕವಗೆ ಹದಿನಾಱು ಬಣ್ಣದ ಪುಟದ ಚಿನ್ನಕೆ ನೂಱುಮಡಿಯೆನೆ ಹೊಳೆಹೊಳೆವ ರೂಪಕವ(ತೊರರಾ. ೩–೮–೧೪); ಹದಿನಾಱು ಬಣ್ಣದ ಸೊನ್ನೆಯ ಸರಳ್ಗಳ ಕುದಿಗಾಸಿ ನೀರೊಳಿಟ್ಟಂತೆ ಉದಿಸಿತು ಘುಳುಘುಳು ಘುಳುಘುಳು ಧ್ವನಿ ತಂಗೊಳದೊಳು ತನು ತಾಪದಿಂದೆ (ಮೋಹತ. ೯–೪೨) ; ಅವನು ಖಂಡಿತವಾಗಿಯೂ ಹದಿನಾರು ಬಣ್ಣದ ರಾಜಪುತ್ರವಂಶದವನೇ ಸರಿ (ಭಾರವೀ.೫೨).

[ಪದಿನ್(<ಪತ್ತು$_3$)+ಆಱು$_3$]

ಪದಿನಾಱುಭಾವನೆ, ಹದಿನಾರುಭಾವನೆ (ನಾ). [ಜೈನ] ತೀರ್ಥಂಕರತ್ವನಾಮಕರ್ಮದ ದರ್ಶನಶುದ್ಧಿ, ವಿನಯಸಂಪನ್ನತೆ, ಶೀಲವ್ರತೇಷ್ವನತಿಚಾರ, ಅಭೀಕ್ಷ್ಣಜ್ಞಾನೋಪಯೋಗ,ಸಂವೇಗ, ಶಕ್ತಿತಸ್ತ್ಯಾಗ, ಶಕ್ತಿತಸ್ತಪ, ಸಾಧುಸಮಾಧಿ, ವೈಯ್ಯಾವೃತ್ಯಕರಣ, ಅರ್ಹದ್ಭಕ್ತಿ, ಆಚಾರ್ಯಭಕ್ತಿ, ಬಹುಶ್ರುತಭಕ್ತಿ, ಪ್ರವಚನಭಕ್ತಿ, ಆವಶ್ಯಕಾಪರಿಹಾಣಿ, ಮಾರ್ಗಪ್ರಭಾವನೆ ಮತ್ತು ಪ್ರವಚನವತ್ಸಲತ್ವಗಳೆಂಬ ಹದಿನಾರು ಬಗೆಯ ಭಾವನೆಗಳು : ಪದಿನಾಱುಭಾವನೆಯಂ ಬಹುವಿಧಮಱಿದರ್ಹನಿಶಂ ಭಾವಿಸೆ (ಶಾಂತಿಪು. ೯–೧೧೬). **ಹದಿನಾರುಭಾವನೆ :** ಈ ತಿಂಗಳಲ್ಲಿ ಹದಿನಾರುಭಾವನೆಗಳನ್ನು ವ್ರತಸಹಿತ ಜಿನಮಂದಿರಗಳಲ್ಲಿ ಅಭ್ಯಾಸ ಮಾಡಲಾಗುತ್ತಿದೆ (ಜೈನಪ. ೫೭೦). [ಪದಿನಾಱು+ಭಾವನೆ]

ಪದಿನೆಂಟು, ಹದಿನೆಂಟು (ನಾ). ಹತ್ತು ಮತ್ತು ಎಂಟು ಸೇರಿ ಆದ ಸಂಖ್ಯೆ ; ಅಷ್ಟಾದಶ : ಪದಿನೆಂಟು ಧರ್ಮಶಾಸ್ತ್ರಂಗಳುಮಂ ಬಲ್ಲೊಂ ಸೋಮಶರ್ಮನೆಂಬೊಂ (ವಡ್ಡಾರಾ. ೭೩–೧೫) ; ಗದಾಯುದ್ಧಂ ಪರಿಚ್ಛಿನ್ನಮಿಂತು ದಿನಂಗಳ್ ಪದಿನೆಂಟಱಂ ಸಮೆದುದಾ ರೌದ್ರಾಹವಂ ಭಾರತಂ (ಗದಾಯು. ೯–೩೬); ಭಕ್ತಂಗನ್ಯದೇವಸ್ಮರಣೆಯದು ಪದಿನೆಂಟು [ಪಾಠಾಂ. ಹದಿನೆಂಟು, ಇಪ್ಪತ್ತೆಂಟು]ಕೋಟಿ ವಿವರ ನರಕವಹುದು (ಬಸಪು.೩–೭೩); ಪ್ರಚುರದಿ ಪದಿನೆಂಟು ರಚನೆಯ ಕಾವ್ಯಕೆ ರಚಿಸುವರಾನಂತು ಪೇಳೆ (ಭರಚ. ೧–೧೫). **ಹದಿನೆಂಟು :** ಹದಿನೆಣ್ಟು ವಿಷಯದ ದೇಸಿಯು ಕರೆದು (ಮೈಅರಿ. ೧೯೧೫, ೨೧–೧೦ ; 1047) ; ಕರ್ಣ . . . ಪವನಜನ ಘಾಯದಲಿ ಸೋಲಿದು ಬವರಮುಖದಲಿ ಹಿಂಗಿದನು ಹದಿನೆಂಟು ಸೂಳಿನಲಿ (ಕುಪ್ಕಾದ್ರೋ. ೧೩–೫೦).

ಪದಿನೆಣ್ಬರ್ = ಹದಿನೆಂಟು ಜನ,—ಮಂದಿ : ಸರ್ವ್ವಾಭ್ಯಂತರ ಸಿದ್ಧಿ ಅಂತಪ್ಪುದಂ ಪದಿನೆಣ್ಬರುಂ ಪದಿನಱುವರುಂ ಕಾವರ್ (ಸೌಇಇ. XI–i, ೩೮–೧೫ ; 950) ; ಭೂರಮಣರಲ್ಲಿ ವಿನಿಯೋಗಮಂ ತಾಳ್ದು ಪದಿನೆಣ್ಬರ್ ಪ್ರಧಾನರೆನಿಕುಂ (ಮಂಗರಾ. ೮೧–೧೧)

[ಪದಿನ್(<ಪತ್ತು$_3$)+ಎಂಟು]

ಪದಿನೆಂಟುದೋಷ, ಹದಿನೆಂಟುದೋಷ (ನಾ).[ಜೈನ]ಮನುಷ್ಯನಿಗೆ ಉಂಟಾಗುವ ಕ್ಷುಧೆ, ತೃಷೆ, ಭಯ, ದ್ವೇಷ, ರಾಗ,ಮೋಹ, ಚಿಂತೆ, ಜರೆ, ರೋಗ, ಮೃತ್ಯು, ಖೇದ, ಸ್ವೇದ, ಮದ, ಅರತಿ, ವಿಸ್ಮಯ, ಜನ್ಮ, ನಿದ್ರೆ ಮತ್ತು ವಿಷಾದ ಎಂಬ ಹದಿನೆಂಟು ಬಗೆಯ ದೋಷಗಳು : ಪದಿನೆಂಟುದೋಷದಿಂ ಪಿಂಗಿದನಂತ ಚತುಷ್ಟಯಾತ್ಮಕಂ (ಅನಂಪು. ೩–೫೬) ; ಕಲಸಿಪ್ಪ ಪದಿನೆಂಟು ದೋಷದಿಂ ರೋಷದಿಂ ನೆಲಸಿಪ್ಪ ಸತಿಯರಂ ನೀತಿಯಿಂ ಪ್ರೀತಿಯಿಂ ಕೀರ್ತಿಪರ್ ಗುರುವೆ ನರರು (ಷತಿಲ. ೨–೫೨). **ಹದಿನೆಂಟುದೋಷ :** ಇವರಲ್ಲಿ ಕ್ಷುಧೆ . . . ವಿಷಾದ ಎಂಬ ಹದಿನೆಂಟು ದೋಷಗಳೂ ಇರುವುದಿಲ್ಲ (ಜೈನಪ. ೫೦೪). ℙ "ದೋಷ-೧೮ : (ಅ) ಅರ್ಹಂತರಲ್ಲಿರದ : ದಿಗಂಬರಸಂಪ್ರದಾಯದಂತೆ – ಕ್ಷುತ್ (ಹಸಿವು), ಪಿಪಾಸಾ (ನೀರಡಿಕೆ), ಜರಾ (ಮುಪ್ಪು), ಆತಂಕ (ರೋಗ), ಜನ್ಮ (ಹುಟ್ಟು), ಅಂತಕ (ಸಾವು),ಭಯ (ಅಂಜಿಕೆ),ಸ್ಮಯ(ಗರ್ವ). ರಾಗ, ದ್ವೇಷ, ಮೋಹ, ಚಿಂತೆ, ರತಿ, ನಿದ್ರೆ, ವಿಸ್ಮಯ, ವಿಷಾದ, ಸ್ವೇದ, ಖೇದ (ರತ್ನಕ.ದ.ಅ., ೬ ಪ್ಯಾ).ಶ್ವೇತಾಂಬರಸಂಪ್ರದಾಯದಂತೆ ವೀರ್ಯಾಂತರಾಯ,— ಭೋಗಾಂತರಾಯ, ಉಪಭೋಗಾಂತರಾಯ, ದಾನಾಂತರಾಯ, ಲಾಭಾಂತರಾಯ, ನಿದ್ರಾ, ಭಯ, ಅಜ್ಞಾನ, ಜುಗುಪ್ಸಾ, ಹಾಸ್ಯ, ರತಿ, ಅರತಿ, ರಾಗ, ದ್ವೇಷ, ಅವಿರತಿ, ಕಾಮ, ಶೋಕ, ಮಿಥ್ಯಾತ್ವ (ರತ್ನಕ. ದ. ಅ, ೬ ಪ್ಯಾ). (ಆ) ನಿಧನ, ನಿದ್ರೆ, ಚಿಂತೆ, ಲಜ್ಜೆ, ಕ್ಷುಧೆ, ತೃಷೆ, ವಿಷಯ, ಆಧಿ, ವ್ಯಾಧಿ, ದ್ಯೂತೋದ್ಯೋಗ, ದಾಹ, ಶೋಷ, ರತಿ, ಸ್ವೇದ, ಕೋಪ, ಶೋಕ, ಉದ್ಭ್ರಮೆ, ಭಯ (ಅದಯ್ಯ. ೨೬೧). (ಇ). ನೋ. ಕಾವ್ಯದೋಷಗಳು-೧೮" (ಶ್ರೀವತ್ಸ. ೨೧೩). 'ಅಷ್ಟಾದಶದೋಷ' ಪರಾ. [ಪದಿನೆಂಟು+ದೋಷ]

ಪದಿನೆಂಟುವರ್ಣ (ನಾ). ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಲಿಂಗವಂತ, ಬಣಜಿಗ, ಗಂಗಡಿಕಾರವೊಕ್ಕಲಿಗ, ಅಗಸ, ಕೆಲಸಿಗ, ಕುರುಬ, ಕುಂಬಾರ, ಕಟುಕ, ಬಡಗಿ, ಅಕ್ಕಸಾಲೆ, ತೊರೆಯ, ಉಪ್ಪಾರ, ಬೆಸ್ತ, ಹೊಲೆಯ ಮತ್ತು ಮಾದಿಗರೆಂಬ ಹದಿನೆಂಟು ಬಗೆಯ ಜಾತಿಗಳು : ಮಿಕ್ಕಿನ ಲೋಕದೊಳು ಪದಿನೆಂಟುವರ್ಣಾನೀಕ ರೆಲ್ಲಂ ಭಕ್ತಲೋಕವೆ ಕುಲವಲಾ ದಿಟಕೆ (ಬಸಪು. ೫೫-೨೦). 'ಅಷ್ಟಾದಶ ಜಾತಿ' ಪರಾ. [ಪದಿನೆಂಟು + ವರ್ಣ]

ಪದಿನೇಟ್$^{ಟ್}$, ಪದಿನೇಟು, ಪನ್ನೇಳು, ಹದಿನೇಳು, ಹದಿನೇಟು (ನಾ). ಹತ್ತು ಮತ್ತು ಏಳು ಸೇರಿ ಆದ ಸಂಖ್ಯೆ ; ಸಪ್ತದಶ : ಅವರ ಮಗಂ ತಿಪ್ಪಯ್ಯನೆಮ್ಬೊ ಪದಿನೇಟ್ಮಾನಿಸಂ ಬೆರಸಿ ಕಾಳಗದೊಳ್ ಸತ್ತು (ಎಕ. V, ಅರಕ. ೬೧-೬ ; 920) ; ಮೊದಲಿಂದಂ ತುದಿಯೆಯ್ದೆ ಸಂದ ನರಕಾಯುಷ್ಯಾಬ್ಧಿ ಕೇಳ್ . . . ಪದಿನೇಟಾಪ್ಪತ್ತೆರಟ್ ಮೂಱು ಪೆರ್ಚಿದ ಮೂವತ್ತೆನೆ (ಆದಿಪು. ೫-೯೩). **ಪದಿನೇಟು** : ನಕಾರಕ್ಕೆ-ಪದಿನೈದು ಪದಿನಾಱು, ಪದಿನೇಟು (ಶಮದ.೧೯೨ ಪ್ರಯೋ). **ಪನ್ನೇಳು** : ಗಡಿಂಬದ ಕೋಲೊಳ್ ಕೊಣ್ಡು ಕೊಟ್ಟ ಮತ್ತರೆರೆ ಪನ್ನೇಳು (ಸೌಇಇ. XI-i, ೯೭-೩೧ ; 1062). **ಹದಿನೇಳು** : ತ್ರೇತಾಯುಗ ಹದಿನೇಳು ಲಕ್ಷ ಇಪ್ಪತ್ತೆಂಟುಸಾವಿರ ವರುಷದಲ್ಲಿ ಸೇತುರಾಮೇಶ್ವರದೇವರು ಮೂಲಸ್ಥಾನ (ಆದಪ. ೪೬-೧೩೧) ; ಸೀಳಿದನು ಸೌಬಲದೊಳಿಪ್ಪತ್ತೇಳನಾ ಮಾದ್ರೇಶರೊಳು ಹದಿನೇಳನು (ಕುಪ್ಯಾದ್ರೋ. ೬-೪೬). **ಹದಿನೇಟು** : ವಿಷಮ ಪದಯುಗ್ಮಕ್ಕೆ ಸಸಿನೆ ಹದಿನೇಟು (ಛಂದೋಂಬು. ಕಿ. ೫-೩೨೫). [ಪದಿನ್(<ಪತ್ತು$_3$)+ಏಟ್$_2$]

ಪದಿನೇಟು 'ಪದಿನೇಟ್' ನೋ.

ಪದಿನೈದು 'ಪದಿನಯ್ದು' ನೋ.

ಪದಿಪು (ನಾ). (?) : ಈನ್ತಿವಱ ಪದಿಪುಂ ಹಾರಣೆ ಮೊದಲಾಗೆ (ಬೊಂಕಶಾ. ೧೯೩೫, ರಾಣಿಬೆನ್ನೂರು. ೮-೨೧ ; 955). [?]

ಪದಿಮೂಱು, ಹದಿಮೂರು, ಹದಿಮೂಱು (ನಾ). ಹತ್ತು ಮತ್ತು ಮೂರು ಸೇರಿ ಆದ ಸಂಖ್ಯೆ ; ತ್ರಯೋದಶ : ಅನಂತ ವೀರ್ಯನುಂ ರತ್ನಪ್ರಭೆಯುಂ ಘರ್ಮೆಯುಮೆಂಬ ಮೊದಲ ನರಕದ ಪದಿಮೂಱಿಂದ್ರಕಂಗಳೊಳ್ . . . ಪುಟ್ಟದಂ (ಶಾಂತಿಪು. ೪-೧೦೯ ಪ) ; ರತ್ನತ್ರಯಕ್ಕೆ ಕಾಪಾಗಿ ಬಳಸಿದ ಕೋಂಟೆಯಿದೆನಿಸಿರ್ಪ ಪದಿಮೂಱು ಚಾರಿತ್ರಮುಮಂ (ಧರ್ಮಾಮೃ.೧-೧೭೦). **ಹದಿಮೂರು** : ಈ ಪುಸ್ತಕದ ಬೆಲೆ ಹದಿಮೂರು ರೂಪಾಯಿ (ರೂಢಿ). **ಹದಿಮೂಱು** : ದಿವಸ ಹದಿಮೂ[ಪಾಠಾಂ. ನಾ]ಱಱಲಿ ಕೈಕಾಭವನನೊಡಬಡಿಸಿದರು (ತೊರರಾ. ೨-೬-೮).

ಪದಿಮೂವರ್, ಹದಿಮೂವರ್ = ಹದಿಮೂರು ಜನ,-ಮಂದಿ : ಅವರೊಳು ತೇರಸರುಮೆನೆ ಬಿರಿದೆಸೆವ ಪದಿಮೂವರುಂ ತಾವೆಲ್ಲರಂ ನಿಲಿಸಿ (ಬಸಪು. ೫೧-೭೦) ; ಆದಿಯಲರಸಿಯರು ಹದಿಮೂವ[ಪಾಠಾಂ.ಮುವ] ರಾದರು ಪರಮರೀಚಿಸುತಂಗೆ ದಕ್ಷಮುನೀಂದ್ರತನುಜೆಯರು (ತೊರರಾ. ೩-೧-೩೯). [ಪದಿ$_3$(<ಪತ್ತು$_3$)+ಮೂಱು]

ಪದಿಮೊಗ (ನಾ). ಹತ್ತುಮುಖಗಳು.

ಪದಿಮೊಗದವಂ = ಹತ್ತುಮುಖಗಳುಳ್ಳವನು ; ರಾವಣ : ಇವರೊಳ್ ಪಿರಿಯನೊರ್ವಂ ಸಾಸಿರಮೊಗದವಂ, ಕಿಱಿಯಂ ಪದಿಮೊಗದವಂ (ಅದ್ಭುತ. ೪೦-೨). [ಪದಿ$_3$(<ಪತ್ತು$_3$)+ಮೊಗ]

ಪದಿಯಡಿ (ನಾ). (?) : ಸತ್ಯಾಶ್ರಯದೊಳ ಸಗರಕ್ಕೊಲಲ್ಲಿ ತಳಜಱ ಪದಿಯಡಿಯೊನ್ನು ಬೋವಟ್ಗೆ ಪದಿಯಡಿಯೊನ್ನು (ಕಇಅ.೮೬-೭೧-೪೬; ಸು. 932). [?]

ಪದಿಯರಕ್ಕ (ನಾ). (?) : ಪದಿಯರಕ್ಕರ ಜೋಳಯ್ಯಗವುಣ್ಡರ ಮಗಂ ಪಲಯ್ಯಗವುಣ್ಡರ ತಂಗೆ ಮಣ್ಣಿಯಬ್ಬೆ (ಎಕ. IX, ಹೊಸಕೋ. ೧೦-೬ ; 1023). [?]

ಪದಿಯಳೆ (ನಾ). ಒಂದು ಸ್ಥಳದ ಹೆಸರು (?) : ಸತ್ಯವಾಕ್ಯ ಪೆರ್ಮ್ಮನಡಿಗಳ ಪೃಥುವೀರಾಜ್ಯಂಗೆಯ ಬೂತರಸ ತೊಱೆಕಾರಟ್ಟಿಯಂ ಪದಿಯಳೆಯುಂ ನೆಲೆಗೂರು ಮೊಗಪೆ ಆಳೆಯುಮು ಬಿಟ್ಟೆ (ಎಕ. IV, ಗುಂಡ್ಲುಪೇ. ೯೪-೪ ; ಸು. 890). [?]

ಪದಿರ್$_1$, ಪದರು$_2$, ಪದಿರು, ಪದುರು, ಹದರು$_1$, ಹದಿರ್$_1$, ಹದಿರು$_1$, ಹದುರು (ನಾ). ೧. ಎರಡರ್ಥವುಳ್ಳ ಮಾತು ; ದ್ವಂದ್ವಾರ್ಥದ ನುಡಿ : ಒರ್ವ ಜಾರೆ ಮನೆಯವರ್ಗಂಜಿ ಮಹೋತ್ಸಾಹದಿಂ ಪುದಿದ ತಮಮಂ ಪದಿರಿಂ ಪಾಡಿದಳ್ (ಗಿರಿಕ. ೪-೭೦ ವ). ೨. ಒಗಟೆಯಂಥ ಮಾತು : ಯಮದಂಡನೆಂದಂ ದೇವಾ ನೀಂ ಗೆಲ್ಗೆಯಾಂ ಸೋಲ್ತೆನುಂ ಸತ್ತೆನುಮೆಂದಿರ್ವರ್ ಪದಿರಿನಿಂ ನುಡಿವ ಸೂಟ್ಮಾತುಗಳಂ ಕಾಪಿನವರುಂ . . . ಕೇಳ್ದು (ವಡ್ಡಾರಾ. ೧೨೫-೧೦). ೩. ಚಮತ್ಕಾರದ ಮಾತು ; ಜಾಣ್ಮೆಯ ನುಡಿ ; ಚತುರೋಕ್ತಿ : ಮದಮಾನಸಮೆಱಕಂ ಜಾಣ್ಪದಿರೆಂಬುವನಱಿದು ತನ್ನ ಕೊಡೆಗಳ್ಗೆಡೆಗುನ್ಮದಕರಿಯುಂ ಬರ್ದೆಯಮಂ ಮುದದಿಂ ಶ್ರೀ ರೇಚನೃಪತಿ ಬಸಮಾಗಿಸುವಂ (ಮದತಿ.೧-೨೩) ; ಅಲಸಿಕೆ ನೋಟದೊಳ್ . . . ಪೊಲೆಗೆಳೆ ಸೋಲದೊಳ್ ಪದಿರೊಳೊತ್ತಿದಿರೊಳ್ ಪಲಮಾತು ಮಾನದೊಳ್ ಕಲಿತನಮಾಗದಂತಬಲೆ ವರ್ತಿಸಿದಳ್ ಕವಿತಾವಸಂತನೊಳ್ (ಅರ್ಧನೇ. ೫-೭೦) ; ಪದಿರನಾಡುವ ಸೂಟ್ನುಡಿ ದುಷ್ಟ ಚೇಷ್ಟೆಯಂ ಮೆಱೆಯಿಪ ತಮ್ಮ ಭಂಗಿ ಮಱೆವಾಟ ಮನೋಜಸುಖಕ್ಕೆ ಸಂತತಂ ಮಱುಗುವ ಚಿತ್ತದಿಂ ರಜನಿರಂಜನಮಾದುದು ಬಂಧಕೀಜನಂ (ಸೂಕ್ತಿಸು. ೮-೮೫) ; ರಾಗದೋವರಿ ಪದಿರ ಪಾಳೆಯಂ . . . ಎನಿಪುದಂಗಜನ ಘಾರಾಘಾರಿ ರಾಜಿಸುವ ಸೂಳೆಗೇರಿ (ಪದ್ಮರಾ. ೮-೮೬). ೪. ಸಂಕೇತ ; ಸಂಜ್ಞೆ ; ಸೂಚನೆ : ಪದನಖಮಯೂಖ ಲೇಖಾಚ್ಛಲನಂಗುಳಿ ಪ್ರಣಾಳಿಕೆಗಳೊಳ್ ತಿಳಿವಾಲ ಪೊನಲಂ ಬಿಟ್ಟು ಬಿನದದಂಚೆಗಳನಿಂಚರದ ಪದಿರೊಳ್ ಕರೆವ ಪದಪಯೋಜಲಕ್ಷ್ಮಿಯ ಮೃದುನಿನದ ಮೆನಿಸಿ (ವರ್ಧಪು. ೭-೯ ವ). ೫. ಅನೇಕ ಬಗೆಯ ಧ್ವನಿಗಳು ; ನಾದವೈವಿಧ್ಯ : (ಕಿ). ೬. ಧ್ವನಿ ; ನಾದ : 'ಪದಿರಿಕ್ಕು' ಪರಾ. **ಪದರು$_2$** : ೭. ಪರಸ್ಪರ ವಿರೋಧ ; ಇಬ್ಬಗೆ : ಬಯಲು ಬಯಲು ಬೆರೆದಲ್ಲಿ ಮೇರೆಯುಂಟೆ ಅಯ್ಯಾ ಕ್ಷೀರ ಕ್ಷೀರವ ಕೂಡಿದಲ್ಲಿ ಪದರುಂಟೆ ಅಯ್ಯಾ (ಅಖಂಡೇ. ೩೪೧-೫೬). **ಪದಿರು** : ೧. ಇವನಿಲ್ಲನಿಂದು ಬಾರಂ ಘನತಿಮಿರಮಿದಪ್ಪುದಕಟ ನೇಹಮದಿಲ್ಲಂ ಮನೆಯೊಳ್ಸೊಡರಿದೆ ಪೋದುದು ಜನರಹಿತಂ ನೆರೆಯಿದೆಂದು ಪದಿರಿಂ ನುಡಿದಳ್ (ರಾಜಶೇ. ೧೧-೩೨) ; ಸೀರಣಿಗೆ ಕಿವಿಯೋಲೆ ತಾಳಿ ಮೂಗುತಿಯೆನೆ ಆರೆನಲಿ ಪದಿರ ಪುರುಳರಿವು ದೊಡ್ಡಂಗೆ (ಕಾಲೂರ. ೫೨-೭೮). ೪. ಪದಿರಿನೋವರಿಯು . . . ಭಾವದ ಸುಗ್ಗಿಯಪ್ಪುದೆಲೆ ಸುದತಿಯಾಂ ಪೇಳ್ದ ಜನವಶ್ಯಮಿಳೆಗೆ (ಜನವ. ೧೩-೭೯) ; ಒರೆದಳ್ ಪದಿರಿಂದಂ ಕಡೆವರೆಯದ ಬರ್ದೊದವಿದ ಕಾಮಿನಿ ತಡೆಯದೆ ವಿಟರೊಡವೆಯೆನಿಪ ನಿಧಕಿನದಂಜನಮೆನೆ ಸುತೆಗೆ (ಉದ್ಭದೇ. ೪-೩೯). **ಪದುರು** : ೩. ಇದುಗಿಲ್ಲಿಂದಮೆ ಪರ್ವಿತೆಲ್ಲ ಜಗಕಂ ಜಾಣ್ಪೊಂಗಿದತ್ತಿತ್ತಣಂ ಪದುರೀ ತಾಣದೆ ಬಲ್ತುದು (ಚಿಕವಿ. ೬-೬೫). **ಹದರು$_1$** : ೩. ನಿಮಗೆ ಹೊತ್ತು ಹೋಗದೆ . . . ಎನ್ನ ಕೂಡೆ ಹದರು ಚದುರಿನಿಂದೆ ವೇಳೆಯವ ಕಳೆವರೆ ಹೇಳಾ (ಅಖಂಡೇ. ೩೨೬-೨೬). ೮. ವ್ಯಂಗ್ಯವಾದ ಮಾತು ; ಚುಚ್ಚುಮಾತು ; ಮೂದಲಿಕೆ ; ವಿಡಂಬನೆ : ಗುರುಹಿರಿಯರಂ ಕಂಡು ಕನಸಿನೊಳ್ನಮಿಸ ಕಟಕಿಯ ನಾಡುತಂ ಹದರಿನಿಂ ಪರಶಿವನ ಮಂತ್ರ ರುದ್ರಾಕ್ಷಿಯ ವಿಭೂತಿಯಂ

ಉರುಭಾಳ ಜಿಹ್ವೆಯೊಳ್ಥರಿಸನೊಮ್ಮೆಯು (ಪ್ರಭುಪು. ೩-೬೭). **ಹದಿರ್**$_1$: ೩. ಹಲವು ತೊಡಿಗೆಗಳ ಸೀಗುರಿಯ ಚಾಮರಂಗಳ ಹದಿರ ಹಾಡುವಾಡುವ ಸ್ತ್ರೀಯರ (ಹಚಕಾ. ೪-೩೯); ಸೊಕ್ಕುಜವ್ವನೆಯರಾಡುವ ಹದಿರ್ ಚದುರುಗಳ ಹಕ್ಕೆ ಮೋಹನದಿಕ್ಕೆಯೆನಿಪ ವೇಶ್ಯಾಶ್ರಯಂ ಮುಂದೆ ಕಡು ಚೆಲ್ವಾದುದು (ಚಿಬಪು.೧೧-೩೭). ೪. ಪಶುಮೃಗಪಕ್ಷಿಜಾತಿಗಳಲಿಂಗಿತಮಂ ಹದಿರಂ ಸಮಂತು ಭಾವಿಸಿ (ಮದತಿ. ೧೧-೨೭); ಅರಲಂಬಿಂ ಗಱಿಸನ್ನೆದೋಱುವನನಂಗಂ ಚಂದ್ರಮಂ ಕೂಂಕುವಂ ಕರದಿಂ . . . ನಲ್ಲನಗಲ್ದೊಡಿನ್ನುಗಿದು ತಾವೇಗೆಯ್ವೊಡಂ ಪಲ್ಲವಾಧರೆ ಕೇಳಂಜುವಳಲ್ಲೆನೀ ಹದಿರನೋಪಂ ಕಾಣ್ಗುಮೆಂದಂಜುವೆಂ (ಅನಂಪು. ೮-೨೧). **ಹದಿರು**$_1$: ೩. ಹದಿರು[ಪಾಠಾಂ. ಹಾದರೆ] ಸೂಳೆಗೆ ಕಟಕಿ ವಿದ್ಯಾಪಂತಂಗೆ ಮದ್ದುಮರ ಹಾವಡಿಗಂಗೆ ಗೆಲ್ಲ ಸೋಲದ ಮತ್ಸರ ಕೊಲ್ಲಟಗಂ ಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ (ಚನ್ನಪ. ಕ. ೧೬೫-೩೬೦); ಒಳಸರಿದು ಹದಿರನು ನುಡಿವ ಜಾರೆಯನರಸನೀಕ್ಷಿಸಿದ (ಜೀವಂಚ. ೧೩-೧೮); ಹದಿರು ಚದುರು ಗನ್ನಗತಕ ಬಯಲದೊಂದು ಕದನಕರ್ಕಶವನು ಮಾಡಿ ಹೃದಯವ ಕರಗಿಸಿ ಧನವ ಸೆಳೆದುಕೊಂಬ ಚದುರೆಯವರನೇನೆಂಬೆ (ಅಂಜಚ.೩-೧೨೭); ನಲಿದು ಬಂದೆನ್ನ ಕಾಲ್ಗೆಜಗಬೇಕೆಂದು ನಲ್ಲಳ ಕೂಡೆ ಹದಿರನಾಡಿದನು (ಭರಚ. ೧೪-೧೦೦); ಹದಿರು ಚದುರಿನಾಗರ ಠೌಳಿಯ ಪೇಟೆಯೊದವಿದ ಮೋಹನಶಾಲೆ ಮದನನ ಬೆಳ್ಳಾರವಲೆಯಂತೆ ರಾಜಿಸಿ ಸದನಗಳಿಹುವು ಸೂಳೆಯರ (ಕಂನವಿ. ೨-೮೭). ೪. ಕಂಗಳೆಂದೆಂಬ ಬಲೆಗಳ ವಿಸರದಿಂ ಕಟಾಕ್ಷಂಗಳೆಂದೆಂಬ ಬಿಡುಬಾಣಂಗಳಿಂ . . . ಹಿಂಗದೆಳೆನಗೆಗಳೆಂದೆಂಬ ತೆರೆಯಿಂ ವೈಶಿಕಂಗಳೆಂದೆಂಬ ನಾನಾ ಹದಿರಿನಿಂ ವಿಟಜನಂಗಳೆಂಬ ನರಮೃಗ ಬೇಂಟೆಯಾಡುವ ವಾರಾಂಗನೆಯರೆಸೆದಿರ್ದರು (ತುರಂಗ. ೬-೨೧). ೭. ದ್ರೋಹಚಿಂತನೆಯನ್ನು ರೇಮಟ ವೇಂಕಟಾದ್ರಿನಾಯಕನು ಮಾಡಿರುವನೆಂದು ಅಲ್ಲಿಯ ಜನರಿಗೆ ಹೇಳಿ, ಹದಿರನ್ನು ಹುಟ್ಟಿಸಿ (ಸುಗುಗಂ. ೮೭-೧೭). ೮. ಮದನಹರ ಸೋಮಯ್ಯನೇನ ಬಂದಪನೆಂದು ಹದಿರೊಳಣಕದೊಳು ಕಟಕಿಯೊಳು ಗುಡಿಯಂ ಕಟ್ಟಿಸಿದ ಮಹಿಮರೇ (ಸೋಮಚ. ೪-೬೨); ಅಡಬಹುದೇ ಹದಿರ ಅರಸನೋಲಗದಲ್ಲಿ (ಪ್ರೌಢರಾ. ೧-೪೪); ಸದಮಲ ಮಲಪ್ರಹರಿ ಪರಿದು ಬೆಟ್ಟಕ್ಕಾಂತು ಹೋದಳೀ ದಕ್ಷಿಣದೆಸೆಗೆ ಪದವಿಡಲು ಬೆಟ್ಟದ ತುದಿಯ ಮಯೂರ ಕಂಡು ಹದಿರಿಂದ ಕೂಗಿತ್ತಹೋಗಂಗೆ ಬೆಟ್ಟಕ್ಕೆ ಹೆದಱಿ ಬೆಳುವಲದೇಶಮಂ ಪೊಕ್ಕಳೆಂದು (ಗುರುಚಾ. ೧-೧೬). ೯. ರೀತಿ ; ಬಗೆ : ಕುದುರೆಯ ಚದುರೆಯ ಹದಿರೆರಡು ಒಂದಯ್ಯ (ಸರ್ವಜ್ಞ. ೧೭೬೭). ೧೦. ಚಮತ್ಕಾರ ; ಜಾಣ್ಮೆ : ಹಿಡಿವ ಬಿಡುವೊಬ್ಬುಳಿಗೆ ತಹ ಬಲನೆಡಕೆ ಹಾಯ್ಕುವ ಸುತ್ತಲೊತ್ತುವ ತಡೆವ ನಡಸುವ ಸೆಳೆವ ತಿರುಹುವ ಹದಿರ ಜೋಕೆಯಲಿ ಗಡಣಿಸಿದನವನಿಭಪತಿಯನವಗಡಿಸಿ ನೂಕಿದೊಡೆ (ಕುವ್ಯಾದ್ರೋ. ೩-೧೧). **ಹದುರು** : ೩. ಹದುರಿನ ನೆಲ ಚದುರಿನ ಚಾರಚಾವಡಿ ಮುಂದದ ಮಂದಿರ ಮೋಹನದ ಸದನವೆನಿಪ ಸೂಳೆಗೇರಿಯಿತ್ತರದೊಳಗದುಭುತವಾಗಿರುತಿಹುದು (ಅಂಜಚ. ೩-೯೧); ಓರೋರ್ವರು ಸವಿಸವಿಯ ಚದುರ ಹದುರಿನ ಮಾತುಗೊಡುವ ಸುರತವ ನೋಡಿಷ್ಟು ತಡಮಾಡಿ ಬಂದನೊಳರಸ ಮುಗುಳ್ನಗೆವೆತ್ತ (ನಾಗಕು. ೩೧-೧೦೯); ಹದುರಿನೆಡೆ ಗನ್ನಗತಕದ ಪಕ್ಕೆ . . . ರಾಗದ ಭೂಮಿಯಿದೆಯಲ್ಲದಿಲ್ಲೆಂಬ ಪೆಂಪಿಗಾಸ್ಪದವಾದುದಾ ಕೇರಿಕೇರಿಯೆಲ್ಲ (ರಾಘಚ. ೬-೨೫); ಚದುರತನಕೆ ತಾಣ ಹದುರಿನ ಹಸರ . . . ಬಿಂಕದ ವೀದಿಯಿಂ ಮೈಯ ಸದನದಿಂದೆಸೆವುದಾ ಕೇರಿ (ಕರಚಾ. ೬-೮). ೮. ಮೊಳೆನಗೆಯ ಕಟಕಿಗಳ ಹದು[ಪಾಠಾಂ.ದಿ]ರಿನ ಹಳಿವುಗಳ . . . ಮೀಸೆಯೊಳಿಳಿವ ಬೆರಳ್ಗಳ ಕರ್ಣ ಸ್ಪೆಂಧವ ಖಳತಿಲಕ ದುಶ್ಶಾಸನಾದಿಗಳಿದ್ದರೀಚೆಯಲಿ (ಕುವ್ಯಾಸ. ೧೪-೨೯); ಕುಧವ ಬಿಜ್ಜಳ ಕೇಳು ಶಿವಶರಣರೊಳು ನೀನು ಹದುರ ನುಡಿದುದಱಿಂದಲಿಂತಾಯ್ತು ತಿಳಿದು ಸದುಹೃದಯೆ ದಿಂದಾತನಡಿದಾವರೆಗೆ ಮಣಿಯೆ ಪರಿಹರಿಪ ಪೋಗೆನಲು (ಪ್ರೌಢರಾ. ೧೦-೪೧); ಹಲ್ಲು ವಿಷಂ ಫಣಿಪತಿಗಂ ಎಲ್ಲ ವಿಷಂ ದುರ್ಜನಂಗದೆಂತೆನೆ ಪೇಳ್ವೆಂ ಹಲ್ಲಿಂ ಹದುರಿಂ ಸೊಲ್ಲಿಂ ಕೊಲ್ಲದೆ ಮಾಣ್ಡಪನೆ (ನೀತಿಸಾ. ೫೧೬).

ಪದಿರ ಪಱೆ = ಯಾವುದಾದರೂ ಸಂಕೇತವನ್ನು ಸೂಚಿಸುವ ವಾದ್ಯ,—ಹರೆ : ಮತ್ತಂ ಸಸಂಭ್ರಮಪ್ರಚಳಿತ ಸಮದಗಜಘಟಾಘಂಟಾರವಂಗಳಿಂದಂ ತುರಂಗಮಹೇಷಿತಂಗಳಿಂದಂ ಮಹಾಸಾಮಂತರ ಪದಿರ [ಪ][ಪಾಠಾಂ. ವ]ಱೆಗಳಿಂದಮಗುರ್ವಾಗೆ (ಪಂಪಭಾ.೯-೧೦೪ ವ); ಇತ್ತ ಚಕ್ರವರ್ತಿ ಕುಲಧನಂಗಳುಂ ರಾಜ್ಯಚಿಹ್ನಂಗಳುಮುಟಿದುಟಿದ ಮಣಿಕನಕಾದಿ ಸಾರದ್ರವ್ಯಂಗಳಂ ವ್ಯಯಸಾಧ್ಯಸಾಧುವಾದ ಪುಣ್ಯನಿಮಿತ್ತ ಮನೇಕಮಾಗಧವಂದಿಬೃಂದಾರಕಬೃಂದಕ್ಕಿತ್ತು ನಾನಾವಿಧದ ಪದಿರ ಪಱೆಗಳೆಸೆಯೆ . . . ಪೊಱಮಟ್ಟು (ಶಾಂತಿಪು. ೩-೧೦೭ ವ); ತಂತಮ್ಮ ಮೊನೆಯ ನಾಯಕರ ಬಿರುದಿನ ಬೀರವದ್ದಳೆಯ ಪದಿರ ಪಱೆಯ ಕಹಳೆಯ ಕಳಕಳಂ ಕಿವಿ ಶಬ್ದಂಗಿಡೆ (ಪಂರಾಮಾ. ೧೩-೩೪ ವ); ಆಗಳೆರಡುಮೊಡ್ಡುಗಳ ಮೊನೆಗಳೊಳ್ ತಂತಮ್ಮ ಬಿರುದಿನ ಬೀರವದ್ದಳೆಯ ಪದಿರ ಪಱೆಗಳುಂ ನೆಲಂ ಮೊಟಗಿದಂತೆ ಮೊಟಗೆ (ನೇಮಿಪು. ೧೧-೧೪೮ ವ). **ಹದುರ ನುಡಿ** = ಚಮತ್ಕಾರಧ ಮಾತು ; ಚತುರೋಕ್ತಿ : ಸರಸನುಡಿ ಮುರುಕು ನುಡಿ ಹದುರ ನುಡಿಯ . . . ಟವುಳಿನುಡಿಗಳಿಂ ಪುರುಷರನು ಬೆಗಡುಗೊಳಿಸುವ ಬನ್ನಣೆಯ ನುಡಿಯ ಭಾವೆಯರು ಬರುತಿರ್ದರಿಕ್ಕೆಲದೊಳು (ನವಮೋ. ೨೪-೧೫).

[ದೇ.॥ ತಮಿ. ಪುತಿರ್ ; ತುಳು. ಪದರ್; ತೆಲು. ಪದರು]

ಪದಿರ್$_2$ 'ಪದಿನ್' ನೋ.

ಪದಿರಿಕ್ಕು, ಹದರಿಕ್ಕು$_1$, ಹದಿರಿಕ್ಕು (ಕ್ರಿ). ೧. ಧ್ವನಿ ಮಾಡು ; ಸಪ್ಪುಳು ಮಾಡು : ಬಟಿಕ್ಕೆ ಪುಳಿಂದಂ ಮರಮನಿಟಿಪವಸರಮನಾನಱಿದು ಪದಿರಿಕ್ಕಲೊಡಂ ಪವನಜವದಿಂ ಗಗನಕ್ಕೆ ನೆಗೆದು ಪೋಗಿಮೆನೆ (ಪಂಚತಂ.೨೯೦-೧೨);"ಸೂಚಿಸು, ಸಂಕೇತದ ಮಾತುಗಳನ್ನಾಡು" (ಪ್ರಭಣ್ಣ). **ಹದರಿಕ್ಕು**$_1$: ೨. ಮೂದಲಿಸು ; ಕಡೆಗಣಿಸು : ಎಲ್ಲಿಗೆಲವೋ ಹೋಗದಿರು ಕಪಿ . . . ನಿಲ್ಲೆನುತ ಹದರಿಕ್ಕಿ ಹೆಡಕನು ಘಲ್ಲಿಸಲು (ತೊರರಾ. ೫-೧-೨); ದಿವಿಜರಿಪು . . . ಮಾಯಾಯುವತಿಯಂ ಹದರಿಕ್ಕಿ ನುಡಿದನು ಮನದ ಕಡುಹಿನಲಿ (ಅಂಬಿಕಾ. ೪೨-೧). **ಹದಿರಿಕ್ಕು** : ೨. ರೋಷದ ಬಣಿತೆಯಂ ಹದಿರಿಕ್ಕಿ ಶಕ್ರನ ಗದರಿ ಗರ್ಜಿಸುತೆ . . . ಸಾರೆನುತ ತೆಗೆದಚ್ಚನಾ ದೈತ್ಯ (ಅಂಬಿಕಾ. ೨೦-೨೫).

[ಪದಿರ್$_1$+ಇಕ್ಕು]

ಪದಿರು 'ಪದಿರ್$_1$' ನೋ.

ಪದಿರುವಾತು, ಹದಿರುವಾತು (ನಾ). ಚತುರೋಕ್ತಿ ; ಚಮತ್ಕಾರದ ಮಾತು : ಪದಿರುವಾ[ಪಾಠಾಂ. ಸತಿಯ ಮಾ]ತುಗಳಾ ಪೊಸಗಾಡಿಯೆಂಬಿವಂ ಜಾನಿಸಿ ಕಾಣ್ಬುದೇ ನರಕಮಲ್ತೆ (ಶಂಕಶ. ೬೯). **ಹದಿರುವಾತು** : ಜಾಣಂ . . . ಲೋಲೆಯಂ ಹದಿರುವಾತಿಂ ಜಱೆದನು (ಚಿಬಪು. ೧೦-೪೭ ಅ). [ಪದಿರು(<ಪದಿರ್$_1$)+ಮಾತು$_1$]

ಪದಿರ್ಕಂಡುಗ (ನಾ). ಹತ್ತುಖಂಡುಗ : ಸ್ವಸ್ತಿಶ್ರೀ ಅಪ್ಪೋರಯ್ಪ ದಿವರ್ಕ್ಕು ಪದಿರ್ಕ್ಕಣ್ಡುಗ ನಲ್ವತ್ತ ××× (ಎಕ. VI, ಚಿಕ್ಕಪು. ೫೦-೬ ; ಸು. 460 ?); ದುಣ್ಡುಸಮುದ್ರದಾ ವಯಲುಳ್ಳಿಱಿದಾರ್ಱಾಮೆಗೆ ಪದಿರ್ಕ್ಕಣ್ಡುಗಂ ಮಣ್ಣಂ (ಎಕ. IV, ನಾಗಮಂ. ೮೫-೬೬ ; 776); ಪೊಲ್ಲಯ್ಯನ ಮಾಡಿಸಿದ ದೇಗುಲಕ್ಕೆ ಕೊಟ್ಟ ಮಣ್ಣೊರೆಗಾಲಲ್ಪದಿರ್ಕ್ಕಣ್ಡುಗಂ ನೀರ್ಮ್ಮಣ್ಣು (ಎಕ. IV, ಎಳಂದೂ. ೪೧-೩ ; 982).

[ಪದಿರ್$_2$(<ಪತ್ತು$_3$)+ಕಂಡುಗ(<ಖಂಡುಗ)]

ಪದಿರ್ಕಳ 'ಪದಿರ್ಕೊಳ' ನೋ.

ಪದಿರ್ಕೊಳ, ಪದಿಕೊಳ, ಪದಿರ್ಕಳ (ನಾ). ಹತ್ತು ಕೊಳಗ : ಶ್ರೀ ಶಿವಭೀಮಗ ಪ್ರತಿಷ್ಠೆಗೆ ಒಮ್ಮದಿಮ್ಮರುಂ ಬನ್ದು ಪದಿರ್ಕೊಳಂ ಕಟನಿ ಒಕ್ಕಣ್ಡುಗಂ ಕೆಮ್ಮ ಕೊಟ್ಟನ್ (ಎಕ. IX, ಬೆಂಗಳೂ. ೪೨-೨ ; ಸು. 820); ಒಕ್ಕಲೊಳೊನ್ದು ಪೊಱೆಯುಂ ಕೆಯುಂ ಪದಿರ್ಕೊಳಂ ಭತ್ತಮುಂ ಮಿಸಲುಂಬಳವತ್ತಮುಂ ಸಲ್ವದು (ಎಕ. III, ನಂಜನ. ೧೮೩-೧೧ ; 977). **ಪದಿಕೊಳ :** ಮಹಾಜನ ಪದಿಕೊಳ ಕಟನಿ ಕೊಟ್ಟ (ಎಕ. IX, ಹೊಸಕೋಟೆ. ೯-೧೧ ; ಸು. 870). **ಪದಿರ್ಕಳ :** ಶ್ರೀಮತ್ ಬಿಜ್ಜೈಯ್ಯ ಸಾವಿಯಬ್ಬೇಸ್ವರಕ್ಕೆ ಬಿಟ್ಟ ಮಣ್ಣಾವುವೆನ್ದೊಡೆ ಶಿವರಾಯ ಕೆಱೆಯೊಳ್ಪದಿರ್ಕಳವೆಡೆ (ಎಕ. XIV, ಕೃಷ್ಣರಾ. ೩೩-೧೦ ; 1100 ?).

[ಪದಿರ್$_2$(<ಪತ್ತು$_3$)+ಕೊಳ$_1$]

ಪದಿರ್ಕೊಳಗ (ನಾ). = ಪದಿರ್ಕೊಳ : ತುಮಣ್ಣೊಳಗಣ ಮಣ್ಣದು ಬ್ರಮದಾಯ ರಾಜಮನ ಪದಿರ್ಕೊಳಗಾಟ್ಟಿಸೆಗೆ ಗುಣ್ಡಲಊರ್ ಆಳಿಯುಂ ಒಕ್ಕಲು ಸಲಿಪೊ (ಎಕ. X, ಗೋಕರ್ಣ. ೫-೪ ; ಸು. 900).

[ಪದಿರ್$_2$(<ಪತ್ತು$_3$)+ಕೊಳಗ$_1$]

ಪದಿರ್ಮಡಿ (ನಾ). ಹತ್ತರಷ್ಟು ; ಹತ್ತುಪಟ್ಟು : ಚಂದ್ರಭುಕ್ತಂಗೆ ಪೃಥ್ವಿಯೆಲ್ಲಮನಾಳ್ವ ಲಕ್ಷಣಂಗಳೊಳವು ಈತಂಗರಸು ಮಾಡಿದಪೆಂ ನಿಮಗೆಲ್ಲ ಮಿಲ್ಲಿಯ ಬಾ[ಟಾನ್] ಪದಿರ್ಮಡಿ ಬಾಟಂ ಮಾಡುವೆನೆಂದು ಬೋಧಿಸಿ (ಪಡ್ಡಾರಾ. ೧೮೭-೩) ; ಕಾಳಬ್ಬೆಗಾವಿತಿಗೆ ಗುಜ್ಜಣಂ ಪುಟ್ಟ ತಂದೆಗೆ ಪದಿರ್ಮ್ಮಡಿಯಾಗಿ ಸೆರ್ಮ್ಮಾಡಿಗಾವುಣ್ಡನೆಂಬ ಪೆಸರಂ ಪಡೆದಂ (ಎಕ.VII, ಶಿವಮೊ. ೧೦-೩೨ ; 1085) ; ಚೆಲ್ವಿಡಿದಲರ್ಬಿಲ್ಲೆ ಸೋಮ್ಮುಡಿ ಪದಿರ್ಮಡಿ ಸೋಗೆಗೆ ಪುರ್ವು ಕೊರ್ವು ಚೆಲ್ವಡೆಗೆ ನಖಂ ಮುಖಂ ಪತಿಗೆ ತೋಳ್ ಕರವಾಳ್ ಮದನಂಗೆ ಕಾಂತೆಯಾ (ಪುಷ್ಪಪು. ೯-೪೩) ; ಚಂದ್ರಿಕಾಪಟಲಪ ಶೈತ್ಯಮಹರ್ದವಗುಣಕ್ಕೆ ಪದಿರ್ಮಡಿಯಾಗಿ . . . ಎಸೆದಿರ್ಪುದಾ ಕೊಳಂ (ನಳಚಂ. ೧೨೨). [ಪದಿರ್$_2$(<ಪತ್ತು$_3$)+ಮಡಿ$_3$]

ಪದಿರ್ಮಡಿಸು (ಕ್ರಿ). ಹತ್ತುಪಟ್ಟಾಗು ; ಹತ್ತರಷ್ಟಾಗು : ಈ ನೆಗೞ್ದ ಚಮೂತ್ರಿತಯ ಮದಾನೀಕಿನಿಯಳ್ಕುಮದು ಪದಿರ್ಮಡಿಸಲೊಡಂ ತಾನಕ್ಷೌಹಿಣಿಯಳ್ಕುಂ (ಪಂಚಾಮಾ. ೧೩-೮) ; ಆ ದೇವಿ ಮನೋಮುದದಿಂದನಂತನೊಳ್ ಕೂಡಿದಪಳ್ ಯೌವನಮದಂ ಪದಿರ್ಮಡಿಸುವಿನಂ (ಜಗವಿ. ೮-೧೬) ; ಆ ಸರೋವರಂ ಜಲಕೇಳಿಯನೆಳಸುವ ಲಾವಣ್ಯವತಿಯರ ಲಾವಣ್ಯರಸಮಂ ತನ್ನ ಘನರಸದಿಂ ಪದಿರ್ಮಡಿಸಿಯುಂ . . . ಮೆಱೆವುದು (ನಳಚಂ. ೧೨೧ ಪ) ; "ಹರಡಿಕೊಳ್ಳು ; ಹಬ್ಬು" (ಪ್ರಭಣ್ಣ). [ಪದಿರ್ಮಡಿ+-ಇಸು$_3$]

ಪದಿಲ 'ಪದುಳ' ನೋ.

ಪದಿಷ್ಟೆ 'ಪದಿಟೆ' ನೋ.

ಪದಿಷ್ಟೆಗೆಯ್ 'ಪದಿಟೆಗೆಯ್' ನೋ.

ಪದಿಷ್ಟೆಗೆಯ್ಸು, ಪ್ರತಿಟ್ಟೆಗೆಯಿಸು (ಕ್ರಿ). ೧. ದೇವತಾವಿಗ್ರಹವನ್ನು ಪ್ರತಿಷ್ಠಾಪನೆ ಮಾಡಿಸು : ಸ್ವಸ್ತಿಶ್ರೀ ಬಿಜಯಿತನು ಮುರಿಯಸೆಯೊಳ್ ಭಗವತಿಯಂ ಪದಿಷ್ಟೆಗೆಯ್ಸಿದೊಡೆ (ಮೈಅರಿ. ೧೯೨೯,೩೮-೪, ೩೫ಯ ಶತ). **ಪ್ರತಿಟ್ಟೆಗೆಯಿಸು :** ೨. ಸ್ಥಾಪನೆಯಾಗುವಂತೆ ಮಾಡು ; ನೆಲೆಗೊಳಿಸು : ಕೊಳಗುರವೇಗುಲಕ್ಕೆ ಕಣ್ಣಪೀಟ ಪಣಯವಟ್ಟವಿನಿತುವೆಂ ಕೊಟ್ಟು ಪ್ರತಿಟ್ಟೆಗೆಯಿಸಿದ ಬಳ್ಳ[ಜ್ಜ] (ಸೌಇಇ. XI-i, ೩೫-೧೫ ; 933). [ಪದಿಷ್ಟೆಗೆಯ್ (<ಪದಿಟೆಗೆಯ್)+-ಸು$_1$]

ಪದುಂಪಯ (ನಾ). ಒಬ್ಬಾತನ ಹೆಸರು : ಪದುಮ್ಪಯ ಸಲಿಪದು . . . ಅಱ್ಕು ಸತ್ತ (ಎಕ. X, ಚಿಂತಾಮ. ೧೨೩-೨ ; 1010). [ಇದು 'ಪದುಮಪ್ಪಯ್ಯ' ಎಂಬುದರ ಅಪಲಿಪಿತವಿರಬಹುದೆ?]

ಪದುಗು, ಹದಿಗು, ಹದುಗು$_1$ (ಕ್ರಿ). ೧. ಉಡುಗು ; ಕುಗ್ಗು ; ಸಂಕುಚಿಸು : ಪುದುಗಿತೆಣ್ಡೆಸೆಯಾನೆ ಪ[ಪಾಶಾಂ. ಹ]ದುಗಿದಂ ಘೋರಿಪಂ ಗದಗದಿಸಿತಾ ಸಾಯಂಕದ ಬಿಸಿಗೆ ಬ್ರಹ್ಮಾಂಡಮದನೇನ ಬಣ್ಣಿಸುವೆನು (ಜೈಮಿಭಾ. ೧೩-೪೭) ; ಪದಿನಾಱುಂ ಸಾಸಿಮರ ಪದಗೆಡಿಸಿದ ಚದುರನೀಗಳೇ ಕೇರಿಯ ಪೊಕ್ಕಿದೆ ಕೊಳ್ ಕರ್ತೆದೆತ್ತೇಂ ಪದುಗುತ್ತೇ ಕಾಂತಮಿಂತು ಪರಿದಪನಕಟಾ (ಚಿಕವಿ. ೬-೨೭೧). ೨. ಸುಳ್ಳಾಗು ; ತಪ್ಪು : ಸಿರಿಯರಸ ಸದಯನತಿಸತ್ಯಸಂಕಲ್ಪನಾತನ ಭಾಷೆ ಪದುಗುವುದೆ (ವೆಂಕಾರಾ. ೨-೩-೪). **ಹದಿಗು :** ೧. ಮದನನ ಕಡುಧಾಳಿಯಬ್ಬರ ಕೊಳಗಾಗಿ ಹದಿಗಿ ನೋಳ್ಪ ಕಾದಲರ ಉಡೆಗೋಟಿ ಕೋಳುಹೋದುದು (ಚಂಪ್ರಸಾಂ. ೯-೨೦೫). **ಹದುಗು$_1$:** ೧. ಒದವಿ ಕೈಸೋಂಕಿದೊಡನೆ ಹದುಗುವ ಮೆಯ್ಯ . . . ಬೆಚ್ಚುವ ಮನದೆಳೆಯಳ ಎದೆಗರಗಿಪುದಿಚ್ಛೆಯಱಿತು (ಹದಿಬ. ೬-೩೬) ; ತರುಣರಮಣನು ಬಯಂಕೆನೋಟಗಳನು ಸುಳಿಸುತಿರುವನು ನಾಚಿ ಹದುಗಿರುವ ಸತಿಯೆಡೆಗೆ (ಬಲಿಮೆ. ೩೫-೩) ; ಹುಲಿಯನ ನಾಲಗೆಯೂ ಅದರ ಗಂಟಲಿನಲ್ಲಿ ಹದುಗಿ ಮೌನವಾಗಿತ್ತು (ಮಲೆಮ. ೨೫೧). ೩. ಸೆಡೆ ; ಹಿಂದೆಗೆ : ಹರಲೊತ್ತೆ ಹದುಗುವ ಹಜ್ಜೆ . . . ಸುರಿವ ಬೆಮರು ಸೂಸುವ ಸೇದೆಯಿಂದಾ ಸರನಾಥರೆಯ್ತಂದರಾಗ (ನೇಮಿಸಂ. ೩೪-೧೧೯). ೪. ಬಾಗು ; ಮಣಿ : ತಿರುನೀಲಕಂಠಕುಶವರು ಬಂದು . . . ತಲೆಗರೆದು ತಗ್ಗಿ ಹದುಗುತ್ತೆ ಕೈಮುಗಿದರ್ದು ಇರಲು (ತಿರುರ. ದೇ. ೧೫-೨೨). ೫. ಅಡಗು ; ಮರೆಯಾಗು : ಅಲ್ಲಲ್ಲಿ ನೋಡಿದರು ಬಾನ ಕರೆಯಲಿ ಹದುಗಿ ಕಾರ ಮುಗಿಲಂತಿಹವು ಬೆಟ್ಟ ಹಬ್ಬಿ (ಹೊಂಗಳು. ೫-೯) ; ಆ ಮರಗಳ ಮರೆಯಲಿ ನೋಡಲ್ಲಿ ಹದುಗಿದೆ ಕೈ ಹೆಂಚಿನ ಮನೆಗಳ ಬಡಹಳ್ಳಿ (ಕೋಗಿಲೆ. ೯೦-೯) ; ಎಚ್ಚಿ ಕುಂಡದೊಳು ಹದುಗುತ್ತ ಕಳೆಗುಂದಿ ಉತ್ಸಾಹವುಡುಗುತಿಹನು (ಅಹಲ್ಯೆ. ೩೩-೧೪). ೬. ಹಿಮ್ಮೆಟ್ಟು ; ಹಿಂಜರಿ : ನಿಂತೇನು ನೋಡುತಿಹೆ ? ಹದುಗುವರೆ ಇಲ್ಲಿ ? ಮಸಣವಾಗಲಿ ಎದೆಯು ರಣರಂಗದಲ್ಲಿ ! (ಪಾಂಚಜ. ೬-೧೦). ೭. ಒಳಸೇರಿರು ; ಹುದುಗಿರು : ಮುನಿಯೊಳು ಹದುಗಿಹುದೈ ಸತಿಯಾಸೆ ಮಾಗಿಯೊಳಿರುವೊಲು ಬಸಂತದಾಸೆ (ಅಹಲ್ಯೆ. ೨೪-೧).

[ದೇ. ॥ತಮಿ. ಪತುಙ್ಕು, ಪತುಕು ; ಮಲ. ಪದ, ಪದಿ, ಪದುಕ್ಕು ; ತುಳು. ಪದೆ, ಪದ್ದು]

ಪದುದೆಯ್ಯ (ನಾ). ಒಬ್ಬಾತನ ಹೆಸರು : ಇನಿತು ಮಣ್ಣ ಬಿಡಿಸಿದ ಪ್ರಭುಗಳಂಕನಾಮ ಭೂವಗಾವುಣ್ಡ ಪದಲಯ್ಯ ಪದುದೆಯ್ಯ (ಎಕ. V, ಅರಕ. ೨೪-೧೬ ; ಸು. 900). [?]

ಪದುಪು 'ಪದವು' ನೋ.

ಪದುಮ, ಪದುವ (ನಾ). ಕಮಲ ; ತಾವರೆ : ಪದುಮ 'ಪಂಜಳ' (ಪಜ್ಜಳ) ವರ್ಣ ನೆಯಿದಲೆ (ನೈದಿಲೆ) ಯಾಗಿರ್ದಳವ್ವೆ (ಸರ್ವಾಪ. ೬೯-೩೭೪); ಉಕಾರಕ್ಕೆ-ಅಲ್ಪ-ಅಲುಪ, ಪದ್ಮ-ಪದುಮ (ಶಬುದ. ೨೫೪ ಪ್ರಯೋ). **ಪದುವ :** 'ಚೆಂಬದುವ' ಪರಾ. [<ಸಂ. ಪದ್ಮ]

ಪದುಮಜ (ನಾ). ಕಮಲದಲ್ಲಿ ಹುಟ್ಟಿದವನು ; ಬ್ರಹ್ಮ : ಉನ್ನತಿಯ ಪದುಮಜನು ಕಂದನು ಮನ್ನಿಸಿದನಾ ಮನುಜವರ್ಗವನು (ಸಂಭಸ. ೫-೨೬). [<ಸಂ. ಪದ್ಮಜ]

ಪದುಮಣ್ಣ (ನಾ). ಒಬ್ಬಾತನ ಹೆಸರು : ಕುನ್ದಗೆಸೆವೆ ಕಲಿಯಮ್ಮ ಬೆಳ್ಮಣಿಯ ಪದುಮಣ್ಣನ್ . . . ಇನ್ತೀ ಎನೆಬರು ಶ್ರೀಕರಣಸಹಿತಂ ಬಿಟ್ಟಾರ್ (ಎಕ. VIII, ಸೊರಬ. ೧೦-೧೨ ; ಸು. 800).

[ಪದುಮ+ಅಣ್ಣ$_1$]

ಪದುಮನಾಭ (ನಾ). ಹೊಕ್ಕುಳಲ್ಲಿ ಕಮಲವುಳ್ಳವನು ; ವಿಷ್ಣು : ಪದುಮನಾಭನ ಚೋದಿಸುವ ರಥವೇಗದಿಂ ಪದ್ಮವ್ಯೂಹಮನೆಯ್ದುವಂದು

(ಸಂಪಭಾ. ೧೧-೧೩೪ ಪ); ಉದರವೈರಾಗ್ಯವಿದು ನಮ್ಮ ಪದುಮನಾಭನಲಿ ಲೇಶ ಭಕುತಿಯಿಲ್ಲ (ಪುರಂದ. ೨-೨೫ ಪಲ್ಲವಿ). [<ಸಂ. ಪದ್ಮನಾಭ]

ಪದುಮಭವ (ನಾ). = ಪದುಮಜ : ಪದುಮಭವನ್ನೆಯ್ಯನು . . . ನಿಗಮವ ಪೇಳ್ದನೊಲವಿನಲಿ (ನಿಭಾಗ. ೧೧-೨೮-೭೨). [<ಸಂ. ಪದ್ಮಭವ]

ಪದುಮಮಿತ್ರ (ನಾ). ಕಮಲದ ಸ್ನೇಹಿತ ; ಸೂರ್ಯ : ಪದುಮಮಿತ್ರನ ಉದಯ ಹರಿಗಭ್ಯುದಯದಂತಿರೆ ರಾಮ ನಿದ್ದಿಸದುದಯದಿಂದುಪವಾಸವಟ್ಟನು ಮೂಜುದಿನ ತನಕ (ಕೌತಿರಾ. ೧೫-೩೮).

[ಪದುಮ + ಮಿತ್ರ]

ಪದುಮರಾಗ (ನಾ). ನವರತ್ನಗಳಲ್ಲಿ ಒಂದು ; ಮಾಣಿಕ್ಯ ; ಪದ್ಮರಾಗ : ಮುನಿಕುಮಾರರೋದುವ ವೇದವೇದಾಂಗಂಗಳಂ ತಪ್ಪುವಿಡಿದು ಜಡಿದು ಬಗ್ಗಿಸುವ ಪದುಮರಾಗದ ಬಣ್ಣದರಗಿಳಿಗಳುಮಂ . . . ನೋಡಿ (ಪಂಪಭಾ. ೧-೧೧೫ ಪ). [ಪದುಮ + ರಾಗ]

ಪದುಮಲೋಚನ (ನಾ). ಕಮಲದಂತೆ ಕಣ್ಣುಳ್ಳವನು ; ವಿಷ್ಣು : ಇದು ಸಕಲ ವರ್ನಾಶ್ರಮಕೆ ಕಡುಮುದವನೀವುದು . . . ಸ್ತ್ರೀ ಶೂದ್ರರಿಗೆ ಮೊದಲಾಗಿ ಸದರವಿದು ಮಾಡುವರೆ ಪೇಳೆಲೆ ಪದುಮಲೋಚನ ನಿಮ್ಮಡಿಯ ಶ್ರೀವದನದಲಿ ಪೇಳುವುದೆ ಮುಖ್ಯವಿದೆಂದನಾ ಭಕ್ತ (ನಿಭಾಗ. ೧೧-೩೨-೩೬). [ಪದುಮ + ಲೋಚನ]

ಪದುಮವಿಟ್ಟರ (ನಾ). ಕಮಲದ ಆಕಾರದಲ್ಲಿರುವ ಆಸನ,— ಪೀಠ : ಹೊಂಗೆಲಸದ ಪೊಚ್ಚ ಪದುಮವಿಟ್ಟರದೊಳು ಮಂಗಲಮಜ್ಜನಗೆಯ್ದು ಅಂಗಸುವಸ್ತ್ರಭೂಷಿತನಾಗಿ ಶಿವಪೂಜಾರಂಗಸ್ಥಳವ ಸಾರಿದನು (ಮೋಹತ. ೨೧-೩). [ಪದುಮ + ವಿಟ್ಟರ$_2$]

ಪದುಮವ್ಯೂಹ (ನಾ). = ಪದ್ಮವ್ಯೂಹ ೨ : ನಾಲ್ಕುಂಯೋಜನದ ಪದುಮವ್ಯೂಹದೊಳಂಗರಾಜ ಶಲ್ಯ ವೃಷಸೇನ ಕೃಪ ಕೃತವರ್ಮಾಶ್ವತ್ಥಾಮರಂ ದುರ್ಯೋಧನಂ ಬೆರಸಿರಿಸಿ (ಪಂಪಭಾ. ೧೧-೧೩೨ ಪ).

[<ಸಂ. ಪದ್ಮವ್ಯೂಹ]

ಪದುಮಸಂಭವ (ನಾ). = ಪದುಮಜ : ಪದುಮಸಂಭವ ನಾರದಗೆ ನಾರದನು ವಲ್ಮೀಕಜಗೆ . . . ಎನುತ ಪೂರ್ವಾಚಾರಮಾರ್ಗವನನುಸರಿಸಿ ಗೀರ್ವಾಣಭಾಷಾವನಧಿಯೆನೆ ಶೋಭಿಸುವ ರಾಮಾಯಣದ ಸತ್ಕಥೆಯಾ . . . ಉಸುರ್ವೆನು (ಆನಂರಾ. ೧-೧-೧೩). [ಪದುಮ + ಸಂಭವ]

ಪದುಮಸಖ (ನಾ). = ಪದುಮಮಿತ್ರ : ಪದುಮಸಖ ಕೋಟಿ ಪ್ರಕಾಶನು . . . ನಿಗಮವ ಪೇಳ್ದನೊಲವಿನಲಿ (ನಿಭಾಗ. ೧೧-೨೮-೭೨).

[ಪದುಮ + ಸಖ]

ಪದುಮಾಕ್ಷ (ನಾ). ಕಮಲದಂತೆ ಕಣ್ಣುಳ್ಳವನು ; ಕಮಲಲೋಚನ : ನರಹರಿಯಂದುದುಭವಿಸಿದ ಮಾಸ ತಿಥಿಯು ಪುದಿದತಿ ಶುಭವಾರ ಸಂಜೆಯೊಳುದಿಸಿದ ಪದುಮಾಕ್ಷನೀತ ತಾನೈಸೆ (ಕಂನವಿ. ೧-೧೯).

[<ಸಂ. ಪದ್ಮಾಕ್ಷ]

ಪದುಮಾಕ್ಷಿ (ನಾ). ಕಮಲದಂತೆ ಕಣ್ಣುಳ್ಳವಳು : ಚದುರಂಗವಾಡುವ ಬಾರೆಂದೊರ್ವನ ಪದುಮಾಕ್ಷಿ ಪಿಡಿದೆಳದೊಯ್ದು ಮದನಾಗಮದೊಳು ಮಗ್ಗಿಸಿ ಹಣಗಳನುದಿರದೆಗೆದಳವನಿಂದ (ಕಂನವಿ. ೨-೯೭).

[<ಸಂ. ಪದ್ಮಾಕ್ಷೀ]

ಪದುಮಾಲಯೆ (ನಾ). ಕಮಲವೇ ಮನೆಯಾಗಿರುವವಳು ; ಲಕ್ಷ್ಮಿ : ಪಾಲಿಸೆ ಪದುಮಾಲಯೆ ನೀನೇ ಗತಿ (ವಿವಾಕೃ. ೩೯ ಪಲ್ಲವಿ).

[<ಸಂ. ಪದ್ಮಾಲಯಾ]

ಪದುಮಾಸ್ತ್ರ (ನಾ). ಮನ್ಮಥನ ಪಂಚಬಾಣಗಳಲ್ಲಿ ಒಂದು ; ಕಮಲದ ಬಾಣ : ಮದನ ವಿಯೋಗಿಗಳೆದೆಯ ಥಟ್ಟುಗಿದೆಚ್ಚ ಪದುಮಾಸ್ತ್ರದಲಗಿನಗ್ರದಲಿ ಪುದಿದ ಕೆನ್ನೀರೆನಲಲತಿಗೆಯುಗುರ್ಗಳಿಂ ಪದವೆರಳೆಸೆದುವಂಗನೆಯ (ಕಂನವಿ. ೯-೧೮). [ಪದುಮ + ಅಸ್ತ್ರ]

ಪದುಮಿನಿ (ನಾ). ೧. = ಪದುಮ : ಹೃದಯಂಗುಡದುದನಜಾಯದೆ ಪದುಮಿನಿಗಿರದಳಿಪಿ ಕೈಯನಿಕ್ಕುವ ಶಶಿಯಂ ಪದೆದೀಕ್ಷಿಸಿ ಮಿಗೆ ನಗುವಂದದಿನಲರ್ದುದು ನೋಡೆ ನಾಡೆ ಕುವಲಯನಿವಹಂ (ಕುಸುಮಾ. ೪-೪೪). ೨. ಕಮಲವನ್ನು ಕೈಯಲ್ಲಿ ಹಿಡಿದಿರುವವಳು ; ಲಕ್ಷ್ಮಿ : 'ಪದುಮಿನಿವಲ್ಲಭ' ಪರಾ. ೩. [ಕಾಮಶಾ] ಸ್ತ್ರೀಯರ ನಾಲ್ಕು ಜಾತಿಗಳಲ್ಲಿ ಒಂದು ; ಪದ್ಮಿನಿ : ಹೊಲೆಯರೊಳು ಪದುಮಿನಿ ಹೆಣ್ಣು ಹುಟ್ಟದರೇನು (ಪುರಂದ. ಧಾ. ೫-೧೩೭-೧). [<ಸಂ. ಪದ್ಮಿನೀ]

ಪದುಮಿನಿವಲ್ಲಭ (ನಾ). ಲಕ್ಷ್ಮಿಯ ಒಡೆಯ ; ವಿಷ್ಣು : ಮೃದುಮನದೊಳು ನಿಲ್ಲು ಪದುಮಿನಿವಲ್ಲಭ (ವಿವಾಕೃ. ೬೦-೧).

[ಪದುಮಿನಿ + ವಲ್ಲಭ]

ಪದುಮೆ (ನಾ). ಲಕ್ಷ್ಮಿ ; ಪದ್ಮಾವತಿ : ಪದುಮೆಯರಸ ಸನಂದ ನಾರ್ಚಿತ ಪದುಮಸಿರಿಧರ ಗೋಪಿನಾಥನು . . . ನಿಗಮವ ಪೇಳ್ದನೊಲವಿನಲಿ (ನಿಭಾಗ. ೧೧-೨೮-೭೨). [<ಸಂ. ಪದ್ಮಾ]

ಪದುಯ್ಯ (ನಾ). ಒಬ್ಬಾತನ ಹೆಸರು : ಬರೆದಂ ಪೆಗಂ ಖಣ್ಡರಿಸಿದಂ ಪದುಯ್ಯ (ಎಕ. VII, ಕಿಕಾರಿ. ೯-೧೮; 1021). [?]

ಪದುರು 'ಪದಿರ್$_1$' ನೋ.

ಪದುವ 'ಪದುಮ' ನೋ.

ಪದುವಗರೆ (ನಾ). ಒಂದು ಸ್ಥಳದ ಹೆಸರು : ಪದುವಗರೆಯಯ್ನೂ ಜಜ ಭೋಗಪತಿ ಅಯ್ಯಪ ಮಂಗಳಮಂ ಪೂರ್ವ್ವಮರ್ಯ್ಯಾದೆದಪ್ಪಿ ಅಕ್ರಮಂಗೆಯ್ಯೆ (ಎಕ. XI, ಹಿರಿಯೂ. ೧-೧೧; 925).

[ℙ ಇದು 'ಪಡುವಗೆರೆ' ಎಂಬುದರ ಅಪಲಿಖಿತವಿರಬಹುದೆ ?]

ಪದುವಾರ (ನಾ). (?) : ನಾಲ್ಕು ಬರಿಸ ಪರಿಯಾರಮು ಐದಾನೆ ವರಿಸ ಪದುವಾರಮುಂ ಮೇಣ್ಟೆಯು ಸತ್ತಿಗಮು ಇನೆತ್ತುಮಾ [ನ್] ಪ್ರಸಾದಂಗೆಯ್ದಾರ್ (ಸೌಇಇ. IX-1, ೫೦-೧೫ ; ಸು. 9ನೆಯ ಶತ ?).

[?]

ಪದುಳ, ಪದಿಲ, ಹದುಳ, ಹದುಳು (ನಾ). ೧. ಒಳಿತು ; ಸುಖ; ಕ್ಷೇಮ : ಸಂತಮಿರ್ಪುದೆ ನವಗ್ರಹಮಾಶಾದಂತಿಗಳ್ ಪದುಳಮೇ (ಕಾವ್ಯಾವ. ೧೫೧) ; ಸಚಿವಂ ಬಂದು ಹರಭಕ್ತನಂ ಪದುಳದಿಂದೆ ಕಳುಪಿದೆನೆಂದು ಬಿನ್ನಯಿಸೆ ಸೇದಿರಾಜಂ ಸಂತಸಂಬಟ್ಟು (ಸೇದಿರ. ದೇ. ೬೬-೬) ; ವಿಷ್ಣುಪದದಲಿ ಸದಮಳಾತ್ಮಕ ಶಿಂಶುಮಾರನು ಪದುಳದಲಿ ಸಕಲಕೆ ಸಲೆ ಯಾಧಾರವಾಗಿಹನು (ಕುವ್ಯಾಆ. ೭-೬೮) ; ಬಂದಿರೆ ಪರಿಣಾಮವೆ ಮನೆಯೊಳಗಕ್ಕಂದಿರನುವೆ ಮಕ್ಕಳು ಪದುಳವೆ (ಜಯಕಾ. ೧-೨೦) ; ಪದುಳದಳಿಳೆಯಾಳುತಿರ್ದನಾ ನೃಪಚಂದ್ರಂ (ಮರಾಚ. ೬-೨೨). ೨. ನಿರಾತಂಕ; ಸಮಾಧಾನ ; ನೆಮ್ಮದಿ : ಕಾಯಜೀವಂ ಪದುಳವಿರಬೇಕಾಯಿತಾದೊಡೆ ನಿನಗೆ ಪೇಳ್ವೆನುಪಾಯವೊಂದಂ ಕೇಳು ನೀ ಶಿವಭಕ್ತಿಮಾರ್ಗದಲಿ (ಬಸಪು. ೪೯-೨೬) ; ಪರಿದೂರ ಬೀದಿಬೀದಿಯ ಪಲವನೆಯೊಳು ತಿರುಗುವ ದಿಟ್ಟವೆಣ್ಗಳನು ಕರೆದು ಮನ್ನಿಸದೇಕಾಂತವನಾಡದೆ ಪರಿಹರಿಪುದು ಪದುಳದೊಳು (ಹದಿಬ. ೮-೪೩); ಅದುವೇ ನಮ್ಮಿ ಹೊನ್ನಿಯ ಪದುಳದ ಬಾಳುವೆ ತೊರೆಯಲಿ ಸುಳಿಯಾಯ್ತು (ನಲ್ಮೆ. ೧೨-೮). ೩. ಸಂತೋಷ; ಹಿಗ್ಗು : ಉದರಮೆ ತೊಟ್ಟಲಾಗೆ ಭುವನತ್ರಯಮಂ ನೆಜೆ ತಾಳ್ದ ದೇಹಿವರ್ಗದ ಕೃತಪಾಪಪುಣ್ಯಫಲಮಂ ಸಲೆ ತೂಗುವ ಕರ್ಮಸಾಕ್ಷಿಯಂ ಪದುಳದೆ ತೊಟ್ಟಲೊಳ್ ಪಡಿಸಿ ತೂಗಿದರ್ . . . ಲತಾಂಗಿಯರ್ (ಜಗವಿ. ೩-೨೮) ; ಅದು ಸುಕೃತಪ್ರಸಿದ್ಧಿಯ ತವರ್ಮನೆ ಜ್ಞಾನಮಹಾಬ್ಧಿ ತೀರಮಂ ಪದುಳದಿನೊಲ್ದು ತೋಱಿಸುವ ಮಾರ್ಗಂ . . . ಎನಲ್ಕೆ ವಾರಣಸಿ ರಂಜಿಪುದಲ್ತೆ (ದಶಕು. ೯-೪) ; ಷಟ್ಸ್ಥಲಬ್ರಹ್ಮನಿರ್ಣಯವನತಿ

ಮುದದಿಂದ ಶಿವೆಗೆ ಶಿವನಱುಪಿದನದಂ ಶಿಳಿದು ಪದುಳದಿಂದದನೆ ಪೇಳ್ವೆಂ (ಲಶಿಚಿಂ. ೪೮-೧); ಭೂರಮಣಂ ಸತ್ಯಧರ್ಮದಿಂದಂ ಪೊರೆಯಲ್ಕೀ ರಾಜ್ಯಮೆಲ್ಲಮುಂ ಪ್ರಜೆ ರಾರಾಜಿಕುಂ . . . ಪೆಂಡಿರ್ ಮಕ್ಕಳ್ವೆರಸು ಹರಿದಿನದ ಹಬ್ಬದ ಪರಿಪರಿಯುಕ್ಕೆವಮನೆಸಗಿ ಪದುಳದೊಳಿರ್ಕುಂ (ಚಿಕವಿ. ೬-೧೪೧). ೪. ಉತ್ಸಾಹ; ಹುರುಪು: ನಂಜಣಾರ್ಯವಿರಚಿತಮಿದಱೊಳಧಿಕತರ ಸತ್ಕಥಾವಿಸರರತ್ನಂಗಳಂ ಪದುಳದಿಂ ಸರಗೆಯ್ದು ಪಟ್ಟದಿಗಳ್ (ಏಕೋಪು. ೧-೬೭). ೫. ವಿಶ್ವಾಸ; ಪ್ರೀತಿ: ಅದಱಿಂದಲೆಮಗೆ ಕ್ಷೇಮವದೆಲ್ಲಿಯದೆಂದು ಪದುಳದೆ ಪ್ರಾಣಮಿತ್ರನೊಳು ಒದವಿದ ಚಿಂತೆಯನುಸುರೆ ಪ್ರಹ್ಲಾದನು ಮುದವ ತಳೆದು ನಸುನಗುತ (ಅಂಜಚ. ೫-೨೬); ಮುದಿಕುರುಡಿ ಹೊಂಗೆಯನು "ಬಾದಾಮಿ, ಕೋ" ಯೆನುತ ಪದುಳದಿಂ ಮೊಮ್ಮಂಗೆ ಕೊಡಲು ಸಿಹಿಯಹುದೆ? (ಮಂಕುಕ. ೮೬೩). ೬. ಶ್ರದ್ಧೆ; ಭಕ್ತಿ: ಹೃದಯದೊಳು ಧ್ಯಾನಿಸೆನೆ ಗುರುವಂ ಪದುಳದಿಂ ಶಿರವಾಗೆನೆ ಗುರುಪದಕೆ (ಬಸಪು. ೪೫-೧೬); ಭೋಜಶಾಸ್ತ್ರದುದಧಿಸೌಂದರ ಗಣೇಶ್ವರ ಕೇಶಿರಾಜಂಗೆ ಪದುಳದಿ ನಮಸ್ಕರಿಸಿ (ಏಕೋಪು. ೧-೨೦). ೭. ಸೊಗಸು; ಅಂದ; ಚೆಂಡ: ಶಕ್ರನೃತ್ಯದೊಳೊಡಂಬಡೆ ನರ್ತಿಸುವಲ್ಲಿ ಜತ್ತುವಟ್ಟದ ಮಣಿಯಂತದೇಂ ಪದುಳಮಾದುದೊ ದಿವ್ಯವಧೂಕದಂಬಕಂ (ಅದಿಪು. ೭-೧೨೫); ಉದಯಗಿರಿಯ ಮೇಲೆ ಮೆಱೆವ ಭಾನುವಿಗೆ ಮತ್ತಿದಿರಾದ ಪ್ರತಿಸೂರ್ಯನಂತೆ ಪದುಳದುತ್ತುಂಗಸಿಂಹಾಸನವೇಱಿ . . . ಠೀವಿಯೊಳೆಸೆದನಾ ರಾಯ (ಭರಚ. ೧-೩೦); ಪದುಳದೆ ಬಾಲಲೀಲೆಯ ತೋಱಿ ಸಕಲರ್ಗೆ ಚದುರಕುಮಾರರೊಪ್ಪಿದರು (ಕಂಸವಿ. ೪-೮೧). ೮. ಸ್ಥಿರಚಿತ್ತ; ದೃಢಚಿತ್ತ: ಆಯಿರವಿನೊಳ್ ಪದುಳನೊ ಪದುಳನಲ್ಲನೊ ಪರೀಕ್ಷಿಸುವೆನೆಂದು ಬಂದು (ಜೀವಸಂ. ೧೭೭-೧೨). **ಪದಿಲ:** ೧. ನಿರ್ಮಳಹೃದಯರಿಗೆ ವಿಶ್ವಾಕೃತಿಯ ಸದ್ಬ್ರಹ್ಮಭಾವನವು ಪದಿಲದಿಂ ನೆಲೆಗೊಂಡು ಚಲನಾಸ್ಪದಮೀಯದೆ ತುಂಬಿರಲು (ಗಗತಾ. ೧೭-೧೦); ಗೋಕಾಂಬುವೆಂಬ ಪಟ್ಟಣದಿ ಪದಿಲದಿಂದಲಿಯಾಳ್ವ ಭಾನುವಂಶಾಢ್ಯ ಧರಣಿಚಂದ್ರಮನೆಂಬ ಧವಳಸೇನಂಗೆ . . . ಮಂತ್ರಿಗಳಾಗಿ ಇಬ್ಬರು ಇರಲು (ಸಾರಂಗ. ೨೯). ೯. ನಿರ್ಧಾರ; ನಿಶ್ಚಯ: ಮೊದಲೆನ್ನನೀ ತೆರದಿ ಮೊಂಡಾಗು ನೀನೆಂದು ಪದಿಲದಿಂದಲಿ ಬ್ರಹ್ಮ ಬರೆದು ಪುಟ್ಟಿಸಿದ (ಸಾರಂಗ. ೨೭). **ಹದುಳ:** ೧. ಹದುಳವೇ ಪಾರ್ಥಂಗೆ ಹೇರಾಳದಲಿ ಕಾದಿದನಾ ಸುಶರ್ಮನ ಕದನ ಬೆಟ್ಟತು (ಕುವ್ಯಾಕ.೧೬-೧೧); ಮಠಗಳಂ ಹದುಳನಱಿದೊಡನೆ ಕಟ್ಟಿಸಿ . . . ಸುಜಂಗಮವನು . . . ಕರೆತಂದು . . . ಅವರೇನ ಬೇಡಿದಡೀ ಸುವಸ್ತುಗಳನಿತ್ತು ಕಳುಪುವುದು (ಚಿಬಪು. ೬-೧೬); ಹದುಳಕೆ ಹೊಣೆ ಅವನಿರದಿರೆ, ತಿರೆ ಪೋಪುದು ಮಗ್ಗಿ! (ಅಹಲ್ಯೆ. ೨೦-೧೬). ೨. ನೋಡಿ ವಂದಿಸಿ ಹೋಹ ಶಿಷ್ಯಂಗೆ ನೀಂ ಕೃಪೆಯ ಮಾಡುವುದು ಹದುಳದಿಂ (ಹಚಕಾ. ೮-೧೧); ಹ [ಪಾತಾಂ.ಪ] ದುಳದಿಂ ಪದ್ಮಾಸನಾಸೀನದಿರವಂ ಕಲಿವಂತೆ ಕುಳ್ಳಿಹನಿದುವೆರಡನೆಯ ಶಂಭು ವೃಷಭನು ತಾನೆಯೆಂಬವೊಲು (ಬಸಪು. ೩-೩೯). ೪. ಬಿಣ್ಣತ್ತಾದ ಲರ್ಜೊಂಬದ ಕಂಪಂ ಹಣ್ಣ ಹದುಳದಿಂದಾಂತೆಳಸುತ್ತಂ ತಣ್ಣನೆ ಪಣ್ಣನೆ ನುಣ್ಣನೆಗಂಪಿಂ ಸುಳಿಗೆಲರಾ ಬನದೊಳ್ (ಉದ್ಭದೇ.೨-೨೧). ೫. ಒಲವಿಂದ ನಡೆತಂದು . . . ಅಗ್ಘವಣಿಯನೊಲವಿಂದಿಳಿಪಿ ಸಂಗಮೇಶ್ವರನ ಹತ್ತಿರೆ ಹದುಳದಿಂದಿಳಿಪಿ (ಬಸರ. ೩-೪೨). ೬. ಹದುಳವಿಲ್ಲದ ದೇಹರಂ . . . ಪ್ರವರ್ಧನವಹುದೆ ಲೋಕದೊಳು (ಬಸಪು. ೩೭-೩೪). ೧೦. ಶುಭಕರವಾದುದು; ಮಂಗಳಕರವಾದುದು: ಒಗ್ಗದಿರೆ ನಾಲ್ಪಗೆಗೆ ಹುಡುಕಿ ಹದುಳದ ಪೊಳ್ತು (ಕಾಲೂರ. ೭೩-೧೩೩). **ಹದುಳು:** ೧. ಹರಸಿ ಹದುಳಿನಲಿರಿಸಿ ನೀಡುವನ ಪಡೆಯುವನ, ಎರಡುಗುಣದಿಂದ ಸುಕೃತಾರ್ಥವಹುದು (ಕಏಪು. ೫೩). [ದೇ.॥ ತೆಲು. ಪದಿಲ]

ಪದುಳಂ (ಅ). ೧. ಕ್ಷೇಮವಾಗಿ; ಸುಖವಾಗಿ; ಒಳ್ಳಿತಾಗಿ: ಅವನೀಮಣ್ಡಳಮಂ ನಿರಂತರಿತಮಾ ಹೇಮಾದ್ರಿಯಂ ದಕ್ಷಿಣಾಬ್ಧಿವರಂ ದೋರ್ವ್ವಳದರ್ಪ್ಪದಿಂ ಪದುಳಮಾ ಪೂರ್ವ್ವಾಬ್ಧಿಯಂ ಪಶ್ಚಿಮಾಬ್ಧಿವರಂ ಪಾಳಿಸಿದಂ . . . ಆಹವಮಲ್ಲಂ (ಸೌಇಇ. IX-I, ೧೨೬-೨; 1064); ಪದುಳಂ ಪಾಳಿಪನೆಳೆಯಂ . . . ಬಲ್ಲಾಳನೃಪಂ (ಎಕ. V, ಬೇಲೂರು. ೮೬-೨೨; 1177); ತನ್ನೊಂದು ಗರಗರಿಕೆಯ ಸೊಮ್ಮಿನಭ್ಯುದಯದೆ ಪದುಳಮರಸಾಳ್ವ ಬಸಂತರಾಯನುರ್ಕುಂ ಸೊರ್ಕುಂ ಸೋರ್ದು ಬಯೆಲಪ್ಪಿನೆಗಂ ದಾಱಿಗೆಯ್ದು . . . ಗ್ರೀಷ್ಮರಾಜಂ ತಲೆದೋಱಿದಂ (ರಾಮಾಶ್ವ. ೫೧-೧೯). ೨. ನೆಮ್ಮದಿಯಾಗಿ; ನಿಶ್ಚಿಂತೆಯಿಂದ ಕೂಡಿ: ಪದುಳಂ ಕುಳ್ಳಿರ್ದೆಮಗಾಯದ ಮಾತಂ ತಗುಳೆ ಗಟಿಪಿ ಪೋದಂ ಸಂದಿರ್ದ ದಟರೊಳಿಱಿದಱಿಯಂ ತಪ್ಪದೆ ಕಮ್ಮಱಿಯೋಜನೆನಿಸಿದಂ ಬಿಲ್ಲೋಜಂ (ಗದಾಯು. ೨-೧೩); ಪದುಳಂ ಪೀಠಾಗ್ರದೊಳ್ಕುಳ್ಳಿರಲಱಿಯದುದುಂ ಕಣ್ಣ ನೀರಾಗಳುಂ ಸೋರ್ವುದುಂ . . . ಸದ್ವೈದ್ಯರಿಂ ನೋಡಿಸಿ ಪಱಿಪಡಿಸಿ ನಿಶ್ಚಯಂ ಬೇಗಮಿಾಗಳ್ (ಸುಕುಮಾ. ೧೧-೩೪); ಮುದದಿಂ ತತ್ಪದಪಂಕಜಕ್ಕೆಱಗಿ ನೀಂ ನಿನ್ನನ್ವವಾಯೋರ್ವಿಯೊಳ್ ಪದುಳಂ ನಿಂದಿರು ಗೋತ್ರಮಿತ್ರಸಹಿತಂ (ನೇಮಿಪು. ೧೧-೧೦೪); ಅನುಮೆನ್ನೋಪಳುಂ ಪದುಳಂ ಕ್ರೀಡಿಸುತಿರ್ದೆವಂದು ವಿಲಸತ್ಕಲ್ಪದ್ರುಮೋದ್ಯಾನದೊಳ್ (ಪುಷ್ಪಪು. ೬-೨). ೩. ಜೋಪಾನವಾಗಿ; ಎಚ್ಚರಿಕೆಯಿಂದ ಕೂಡಿ: ಮೇನಾಸತಿ ನಿಜಸುತೆಯಂ ನೋಡಿ . . . ಪದುಳಂ ಪೋಗವ್ವ ಪೋಗೆಂದತಿ ಭಯರಸದಿಂ ಬುದ್ಧಿವೇಳುತ್ತುಮಿರ್ದಳ್ (ಗಿರಿಕ. ೫-೧೨). ೪. ಚೆನ್ನಾಗಿ; ಸೊಗಸಾಗಿ: ಅವರ್ಕೆ ಪುಟ್ಟದ ಯುಗಳಂಗಳ್ . . . ಪೆಱವೇಱುದಿವಸಕ್ಕೆ ತಳರ್ನಡೆ ನಡೆದುಂ ಪೆಱವೇಱುದಿವಸದೊಳ್ ಪದುಳಂ ನಡೆದುಂ . . . ತ್ರಿಪಲ್ಯೋಪಮಜೀವಿಗಳುಮಾಗಿ (ಅದಿಪು. ೫-೪೧ ಪ); ಪದುಳಂ ನಿರ್ಝರವಾರಿಯಂ ತಳಿಯುತುಂ ಮಂದಾರಕಾಗಂಧಮಂ ಕೆದಱುತ್ತುಂ . . . ಆ ನಗೇಂದ್ರದ ಮಂದಾನಿಳನಾಱಿಸಿತ್ತು ನಯದಿಂ ದೇವಾಗಮಶ್ರಾಂತಿಯಂ (ಪುಷ್ಪಪು. ೧೦-೫೩). ೫. ಸ್ಥಿರವಾಗಿ; ದೃಢವಾಗಿ: ಪದುಳಂ ತ್ರಿಪ್ರಭೃತಿಗ್ರಹಂಗಳಿರೆ ತಂತಮ್ಮುಚ್ಚದೊಳ್ ಭೂಪವಂಶದವಂ ಭೂಪತಿಯಕ್ಕುಂ (ಜಾತತಿ. ೧೨-೧); ಪದುಳಂ ನಿಂದೆಡಗಯ್ಯೊಳೊತ್ತಿ ರಘುಜಂ ಕೊಪ್ಪಂ ಪದಾಂಗುಷ್ಠಮೂಲದೊಳಿಟ್ಟೇಱಿಸೆ ಕಾಲದಂಡನಿಭಮಂ ಕೋದಂಡಮಂ ಭೂತಳಂ ಪದುಳಂ ನಿಂದುದೆ (ಪಂರಾಮಾ. ೫-೮೭); ಅಂಗುಷ್ಠದ ಕೊನೆಯನೂಱಿ ನೆಲದೊಳ್ ಪದುಳಂ ನಿಂದಿರ್ದು ಮಾಟ್ಪಿನೊರ್ವಂ ತಪಮಂ (ಜಗವಿ. ೧೬-೬೦).

ಪದುಳಂ ಮಾಡು = ಕ್ಷೇಮವಾಗಿರುವಂತೆ ಮಾಡು; ಸುಖವಾಗಿರಿಸು: ಅಂತಾತ್ಮೀಯಭಾಗಿನೇಯನನಾ ರಾಜ್ಯದೊಳ್ ಪದುಳಂ ಮಾಡಿ ಮಹಾಸಾಮಂತಮಂತ್ರಿಮಂಡಳಕ್ಕಪ್ಪಯಿಸಿ ನಿಜವಿಜಯರಾಜಧಾನಿಗುತ್ಪಳಪೇಟಕ್ಕೆ ವಂದು (ಅದಿಪು. ೫-೨೧ ಪ). [<ಪದುಳ]

ಪದುಳಂಗೆಡು (ಕ್ರಿ). ನೆಮ್ಮದಿ ತಪ್ಪು; ಕ್ಷೋಭೆಗೊಳಗಾಗು: ಅಱಿಯೆಯಾ, ನೀನ್, ಪ್ರಮಿಾತ್ಯೂಸ್, ಪದುಳಂಗೆಟ್ಟ ಮನಮನ್ ಪದವಡಿಪ ಒಳ್ನುಡಿಗಳೊಳವೆಂಬುದನ್? (ಬದ್ಧಪ್ರ. ೨೧-೪೩೩).

[ಪದುಳ+ಕೆಡು$_1$]

ಪದುಳಂಗೆಯ್ (ಕ್ರಿ). ನೆಮ್ಮದಿಗೊಳಿಸು: ಎಲ್ಲರುಂ ನೀಡುಂ ನೋಡಿ . . . ಹೃದಯಮಂ ಪದುಳಂಗೆಯ್ದು ನೆಲದೊಳಿರ್ದಳನೆತ್ತಿ ಪಾಸಿನೊಳ್ ಪಟ್ಟಿರಿಸಿ . . . ತಮ್ಮೊಳಿಂತೆಂದರ್ (ಲೀಲಾವ. ೧೦-೬೪ ಪ).

[ಪದುಳ+ಕೆಯ್$_1$]

ಪದುಳಂಗೊಳಿಸು, ಪದುಳಗೊಳಿಸು (ಕ್ರಿ). ೧. (ಸೇವೆಗೆ) ನೀಡು; ಒದಗಿಸು; ದಯಪಾಲಿಸು: ಪದಕಮಲಮಂ ಪದುಳಂ

ಗೊಳಿಪುದು ನಲ್ಮೆಯಿನೊಲ್ದು ಸೇವೆಗೆಯ್ವರ್ಗೆ (ವಸ್ತುವಂ. ೧-೬).
ಪದುಳಗೊಳಿಸು : ೨. ಅಂದಗೊಳಿಸು ; ಚೆಲುವಾಗಿಸು : ಪದುಳಗೊಳಿಸಿ ಪಲಬಗೆ ಪಸದನಗಳ ಪುದುಗಿಸಿ ಪೊಂದೊಡಿಗೆಗಳ ಮದುವೆಗೆ ನೆಱೆದ ಪೆಣ್ಕಳ ನಿಟ್ಟಿಪರೆದೆಗೊಳಿಪಂತೆಸಗುವುದು (ಹರಿಬ. ೫-೧೪).
[ಪದುಳ + ಕೊಳ್$_1$ + -ಇಸು$_3$]

ಪದುಳಂಬಡಿಸು (ಕ್ರಿ). ಸುರಕ್ಷಿತವಾಗಿರುವಂತೆ ಮಾಡು ; ರಕ್ಷಣೆಯನ್ನುಂಟುಮಾಡು : ಇಂತಿರ್ಕೆರಿಯವರನಾಳ್ಗೊಂದು ಪಡುಗಡೆಯಂ ಪದುಳಂಬಡಿಸಿ ದೆಸೆಗೆಲಲೆಂದು ಮೂಡ ಮದನಾರಿಯ ಭಾರಿಯ ಮಾರಿಗಿಕ್ಕಿ . . . ಬಂದಂ (ಚಕವಿ. ೫-೩೧ ಪ). [ಪದುಳ+ಪಡಿಸು]

ಪದುಳಂಬಡೆ, ಪದುಳವಡೆ (ಕ್ರಿ). ೧. ಸಮಾಧಾನಗೊಳ್ಳು : ಕದುಬಂ ಕಳೆ ಕಡುಚಡುರೇ ಪದುಳಂಬಡೆಯೊಸಗೆಯೇನದಂ ಬಿತ್ತರಿಸು (ಚಕವಿ. ೪-೧೮). ೨. ಸಂತೋಷಗೊಳ್ಳು : ಒಲ್ದು ನೋಡಿ ಪದುಳಂಬಡೆದುರ್ವುವ ನೀಳೆ ರಕ್ಷಿಕೆಮ್ಮನಿರಕಂ ಕಟಾಕ್ಷರಸದಿಂ(ವಿಷ್ಣು.೧-೧-೪).
ಪದುಳವಡೆ : ೧. ಮೋಹದೀ ಪರಿಯೊಳೆನ್ನ ಮುಂದುಗೆಡಿಸುತ್ತಿದೆ . . . ಬಜಾಯಿಯವನ ಬಳಿಯ ನಿಂದು ಪದುಳವಡೆಯಲೀಸದು(ಗೀತಗೋ. ೩೦-೧೫). [ಪದುಳ+ಪಡೆ$_1$]

ಪದುಳಂಬೆಱು (ಕ್ರಿ). ಬೆಳೆ ; ಅಭಿವೃದ್ಧಿಯನ್ನು ಹೊಂದು : ಈ ಶಾಪಿಂದೆ ಸಂದಿಷ್ಟಕಂ ಪದುಳಂಬೆತ್ತುದು ಮತ್ತಮೇಂ ಭವಸುಖಂ ಪೆಂಪಾದುದೀ ಬೀದಿಯಿಂ (ಚಕವಿ. ೬-೬೫). [ಪದುಳ+ಪೆಱು$_1$]

ಪದುಳಂಬೋಗು, ಹದುಳಹೋಗು (ಕ್ರಿ). ೧. ಸಮಾಧಾನ ಹೊಂದು,—ಪಡೆ : ಗುದಜನಿತಂ ಭಗಪಾತಕರೊದವಿದ ಕೆಲಸಕ್ಕೆ ನೀಂ ಸಹಾಯನಹೆಯಯ್ ಪದುಳಂಬೋ[ಪಾಠಾಂ. ಪೋ]ಗು ಬೃಹಸ್ಪತಿ ಮುದದಿಂದಂ ಪೇಳು ಕಂಡ ಕಾರ್ಯದ ಹದನಂ (ಗಿರಿಕ. ೬-೩೮ ಅಡಿಪದ್ಯ).
ಹದುಳಹೋಗು : ೨. ಕ್ಷೇಮವಾಗಿ ಹೋಗು ; ಸುಖವಾಗಿ ಹೋಗು: ನೀನಿಲ್ಲಿಂದಂ ಹದುಳಹೋದಡೆ ಸಾವಿರಮುದುವೆಯ ಮಾಡಿದ ಸಂತಸಂ (ಸಂಬಿ. ೬-೭೯); ಹೃದಯವನು ತೋಱಿಸದೆಯಲ್ಲದು ಹದುಳ ಹೋಹನೆ ಕಾಂದೆನೆನುತಲಿ ಮದಮತಿಯಲಾ ಗಿರಿಜೆ ನುಡಿದೊಡೆ(ಪ್ರಭುಲಿಂ. ೨-೩೯). [ಪದುಳ + ಪೋಗು$_1$(<ಪೋ$_1$)]

ಪದುಳಗೊಳಿಸು 'ಪದುಳಂಗೊಳಿಸು' ನೋ.

ಪದುಳಗೊಳು (ಕ್ರಿ). ಸುಲಭವಾಗಿ ದೊರಕು,—ಪ್ರಾಪ್ತವಾಗು : ಎರವಿಲ್ಲದೇಕವೆನಿಸಿ ಧರ್ಮದೊಳು ಸಂಸರಿಸುವ ಸತಿಪತಿಗಳಿಗೆ ಪುರುಷೋತ್ತಮನಡಿಗಳ ಪೂಜೆಯಿಂದಿಹ ಪರಸುಖ ಪದುಳಗೊಳುವುದು (ಹರಿಬ. ೬-೫೦). [ಪದುಳ + ಕೊಳು(<ಕೊಳ್$_1$)]

ಪದುಳತೆ (ನಾ). ಸೌಖ್ಯ : ಇದುವೆ ಪಂಚಾಕಾಶತಾರಕವಿದನು ದೇಶಿಕನಿಂದ ಬಲ್ಲಪ ಪದುಳತೆಯಲಾ ಪಂಚಬ್ರಹ್ಮದ ಪದವನ್ನೆದುವನು (ಗಗಶಾ. ೨೦-೨೧). [ಪದುಳ+-ತೆ$_3$]

ಪದುಳಮಿರ್, ಪದುಳವಿರು, ಪದುಳಿರು, ಹದುಳವಿರು, ಹದುಳಿರ್ (ಕ್ರಿ). ೧. ಸುಖವಾಗಿರು ; ಹಾಯಾಗಿರು : ಆತ್ಮಾಂತರಂಗದೊಳ್ ಪದುಳಮಿರ್ದ ವಲ್ಲಭನಿಧಾನಮಂ ಬಂಚಿಸಿ ಕೃತಾಂತಸಾಧಕಂ ನೆಗಪಿಕೊಂಡುಯ್ಯೆ ಕಲ್ಲನೆ ಕನಲ್ದು (ಪರ್ಧಾಪು. ೯-೬೦ ಪ); ಪದುಳಮಿರ್ದಡೆ ಸಾಲ್ವುದು ಎಂದರಸಂ ನುಡಿಯೆ ಬಸವಣ್ಣಂ ಕೇಳ್ದು ನಸುನಗುತ್ತೆ (ಬಸರ. ೧೦-೫೩); ನೇಸರ್ವೆಜೆಗಳಿರಾ ನೀವಿಸುದಿನಂ ಬವಣೆಗೊಂಡಿರಿಂ ಪದುಳಮಿರಿಂ (ಅಪ್ರತಿ. ೪೦-೧೩). **ಪದುಳವಿರು** : ೧. ನಿನ್ನ ನಿಜ ಭಕ್ತಾಳಿಗಂ ನೀನು ಪದುಳವಿಹುದೆಂದು ಕರುಣಂಗೆಯ್ದು ಪರಶಿವನ ಚರಣಾಂಬುಜಕ್ಕೆ ಶರಣು (ಲಿಂಶಿಂ. ೬-೧೫); ಇಂದುಶೇಖರನು . . . ನಲವಿಂದಮಿರ್ಪಾರು ಪದುಳವಿಪ್ಪಂತೆ ಗೆಯ್ವೆ ನಾನೆಂದು ಸಂತೈಸಿ ಪೋದಂ (ಸೌಂದಪು. ೧೪-೧೩). ೨. ಸಮಾಧಾನದಿಂದ ಕೂಡಿರು ; ನಿಶ್ಚಿಂತನಾಗು ; ಶಾಂತನಾಗು : ಎದೆಗೆಟ್ಟು ದೇವಿಯಂ ದೋಷಿಯೆಂಬರೆ ಜೀಯ ಪದುಳವಿಹುದೆಂದು ವಿನಯದೊಳಗ್ರಜಾತನಂ ಕದುಬಿ ನುಡಿದಂ ಭರತಂ (ಜೈಮಿಭಾ. ೧೮-೫೩). **ಪದುಳಿರು** : ೧. ಸೂಸ್ಯತವಾದ ನುಡಿಯಂ ನಂಬಿ ಪದುಳಿರು ಚಿಂತಿಸದಿರನ್ನು (ಬಸಪು. ೬-೨೦) ; ಜನಕ ಹಿಮವಂತ ಗಿರಿರಾಜನಾದಂ . . . ಓಷಧಿಪ್ರಸ್ಥಪುರವರದೊಳಂ ಪದುಳಿರುತ್ತ (ಲಕಿಂಂ. ೧೪-೬). ೨. ತನುವೆರಡಾತ್ಮನೊಂದಾಗಿರುತಿಹವಾ ತನುವ ನುಳಿದು ಜೀವನವು ಮನಮೊಸೆದೆಡೆಗೆ ಪೋಪುದ ನೋಡಿ ಪದುಳಿಹುದನು ಚಿತವೆಱೊ ಪ್ರಹಸಿತನೆ (ಅಂಜಚ. ೫-೯೯). **ಹದುಳವಿರು** : ೧. ಏನಿ ಬಂದಿರಿ ಹದುಳವಿದ್ದಿರೆ ಎಂದರೆ ನಿಮ್ಮ ಮೈಸಿರಿ ಹಾಱುಹೋಹುದೆ (ಬಸವ. ೨೪೧). **ಹದುಳಿರ್** : ೧. ಕೀಳಾರು ಮೇಲಾರು ಹದುಳಿಪ್ಪ ನಾನು ಚಾಂಡಾಳನೋ ಹುಸಿಯ ಹೊಲೆಯಂ ಹೊಱುವ ನೀನು ಚಾಂಡಾಳನೋ ಹೇಳೆಂದೊಡೆ (ಹಚಕಾ. ೧೧-೨೦). [ಪದುಳಂ+ಇರ್$_1$]

ಪದುಳಮಿರಿಸು, ಪದುಳವಿರಿಸು, ಹದುಳಿರಿಸು (ಕ್ರಿ). ಕ್ಷೇಮವಾಗಿರಿಸು ; ಸುಖದಲ್ಲಿರಿಸು : ಅಖಿಳಧರಾಭಾರಮಂ ತನ್ನ ವಿಕ್ರಾನ್ತದ ಬಲ್ಪ ತನ್ನ ತೋಳೋಳ್ಪದುಳಮಿರಿಸಿದಂ ವಿಕ್ರಮಾದಿತ್ಯದೇವಂ (ಎಕ. VII, ಶಿಕಾಂ. ೧೨೪-೧೧ ; 1077). **ಪದುಳವಿರಿಸು** : ಆ ರಾಜಸಿಖಾಮಣಿ ಪ್ರಿಥ್ವಿರಾಜ್ಯಂಗೆಯ್ದು ಧವಳಛತ್ರಾಧಾರತೆಯಿಂ ಸಕಳ ಮಹೀಭಾರಮುಮಂ ಪದುಳವಿರಿಸಿದಂ ನರಸಿಂಹಂ (ಎಕ.XIV, ನಾಗಮಂ. ೧೪೦-೧೬ ; ಸು. 1224). **ಹದುಳಿರಿಸು** : ಹದುಳಿರಿಸಿಕೊಂಡಿದ್ದ ಭಕ್ತನು ಮದಿಸಿ . . . ಎಮ್ಮುವನಿನಿತು ಬಗೆಗೊಳ್ಳ (ಬಸಪು. ೫೫-೫).
[ಪದುಳಂ+ಇರಿಸು]

ಪದುಳವಡೆ 'ಪದುಳಂಬಡೆ' ನೋ.

ಪದುಳವಿರಿಸು 'ಪದುಳಮಿರಿಸು' ನೋ.

ಪದುಳವಿರು 'ಪದುಳಮಿರ್' ನೋ.

ಪದುಳಿಕೆ (ನಾ). ೧. ಸಮಾಧಾನ ; ಶಾಂತಿ ; ನೆಮ್ಮದಿ : ಕರಮ ಪದುಳಿಕೆಯಂ ಸೊಂಪಾವರಿಸಿದ ನಿಜಸದಯಹೃದಯಸದನದೊಳತ್ಯಾದರದಿಂ ಸಕಳತ್ಯಾಗಸ್ವರೂಪಸನ್ಯಸನದೈವಮಂ ಸ್ಥಾಪಿಸಿದಂ (ಪರ್ಧಾಪು. ೩-೯). ೨. ದೃಢತೆ;ಸ್ಥಿರವಾಗಿರುವಿಕೆ :ಪದುಳಿಕೆಗುಂದದಿರ್ದ ಪಳತಕಳದ ಚೆಲ್ವು ಸಡಿಲ್ದುದಿಲ್ಲ ಕರ್ಮದ ಬಿಗಿಪೊಯ್ಕನೊಯ್ಕನೆ ಸಡಿಲ್ದುದು (ಸುಕುಮಾ, ೯-೧೭) ; ಮರೀಚಿಯುಮುದೃಢಮನಂ ವಿಗಳಿಕಾರ್ಹತಬ್ರತಮಾರ್ಗಂ ಪದುಳಿಕೆಯನುಳಿದು ಕೌಪೀನದಂಡಮೌಂಜಿಕೆಖಾದಿ ವೇಷಮನಾಂತಂ (ಪರ್ಧಾಪು. ೧೦-೪೪) ; ಮನದ ಪದುಳಿಕೆಗೆ ಕಂಟಕಮೆನಿಪ ಬಹಿರ್ವಿಷಯ ವಿಷಮದೇವುದೋ (ಪಸಾರ. ೪೫೬). ೩. ಹೆಸರುವಾಸಿ; ಪ್ರಸಿದ್ಧಿ :ಅದು ನೂಱ ನಾಲ್ವತೆಂದೀ ಪದುಳಿಕೆಯಂ ತಳೆದು ಕಂಪಣ[ಂ] ಶ್ರೀಯಿ[ಂ] ದಳ್ಳುದಯ[ಂ] ಲಕ್ಷ್ಮಿನಿವಾಸಾಸ್ಪದವೆನಲೀ ಬ್ಯಾಸಪುರವರಂ ರಂಜಿಸುಗುಂ (ಕಇ. IV, ೧೦-೧೬ ; 1121). [ಪದುಳ+-ಇಕೆ]

ಪದುಳಿಕೆವೆಱು (ಕ್ರಿ).ಪ್ರಸಿದ್ಧಿಯನ್ನು ಪಡೆ,—ಹೊಂದು ; ಹೆಸರುವಾಸಿಯಾಗು : ದಯಾಪರನೆಂದು ಪುಣ್ಯಸಂಪದದೊವಿಂದೆ ತಾನೆ ಗತಿ ಮಂತ್ರದಿ ತಂತ್ರದಿ ಬಲ್×ನೆಂಬುದಂ ಪದುಳಿಕೆವೆತ್ತ ಪುಣ್ಯನಿಧಿಯಂ ಸಲೆ ಬೇಡಿರೆ ಮಂತ್ರಿ ಘಟ್ಟಯಂ (ಎಕ.XII, ತಿಪಚೂ. ೧೨೮-೫೬;1202).
[ಪದುಳಿಕೆ + ಪೆಱು$_1$]

ಪದುಳಿಗ, ಹದುಳಿಗ (ನಾ). ೧. ಕ್ಷೇಮದಿಂದಿರುವವನು ; ಸುಖವಾಗಿರುವವನು : ಚಡುರನೆನಿಪ್ಪಂ ಪ್ರಖ್ಯಾತ್ವದ ಬಾರಿಗೆ ಪೋಗಿ ಪಿರ್ದು ಸಂಸಾರಸಮುದ್ರದೊಳರ್ದು ಕಿಡದೆ ಮುನ್ನಮೆ ಪದುಳಿಗನಾಗಱುದು ಪಿಡಿವುದೀ ದರ್ಶನಮಂ (ಧರ್ಮಾಮೃ. ೬-೨೦೬) ; ಸಂತಂ ಸತ್ಯತಿಗೊಲ್ಪನೀ

ಪದುಳಿಗಂ ಮುನ್ನಾಂತ ಸನ್ಮಂಗಳಕ್ಕೆಂತುಂ ಪಾತ್ರನುದಾರನೆಂದುಸುರುತುಂ ತಮ್ಮಿಲ್ಲೆ ಪೋದರ್ಜನರ್ (ಮೈಸೂಮಿ. ೬-೧೫೨) ; ಮುದದಿನೀವುತ ನಿನ್ನ ಸತಿಸುತ ಪದುಳಿಗರು ನೀಂ ಸೇವಿಸೆನೆ. ಭೂಸುದತಿಯಾಣ್ಮನ ಸಿಂಹಪೀಠದ ಮೇಲೆ ಕುಳ್ಳಿರಿಸಿ (ದೇವಪು. ೯-೪೪). ೨. ಹಿತವನ್ನುಂಟುಮಾಡುವವನು ; ಹಿತಕಾರಿ : ಪ್ರಿಯಂವದಂ ಪದುಳಿಗ(ನ)ನೆಂತುಮೊಳ್ಳಿದನೆ ನಿಪ್ಪೊಡೆ ದೂತನ ಮಾತದುತ್ತಮಂ (ಲೋಕೋಪ. ೧೦-೫) ; ಸಚಿವಂ ಸುಬುದ್ಧಿಯೆಂಬವಂ . . . ಸಂತತಂ ಪ್ರಜೆಗಳಂ ಪ್ರೀತಿಯಿಂ ಪೊರೆದು ಪರಿಜನಕೆ ಪದುಳಿಗನಾಗಿ ಭೂಪನಂ ಪೋಷಿಸುವನು (ಜೈಮಿಭಾ. ೧೭-೧೩). ೩. ಎಚ್ಚರಿಕೆಯುಳ್ಳವನು ; ಜಾಗರೂಕ : ಬಟ್ಟೆಯೊಳ್ ಭಯಮುಳ್ಳುದನಱಿದಂಜಿ ಕೆಯ್ದುವನೋಸರಿಸಿಕೊಂಡು ಪದುಳಿಗ [ಪಾಠಾಂ.ದ] ನಾಗಿ ನಡೆವಾತಂ ತನ್ನುದ್ದೇಶಿಸಿದೆಡೆಯಂ ಬೇಗಮೆಯ್ದುವಂ (ಜೀವಸಂ. ೧೭೫-೫); ಪದುಳಿಗನಪ್ಪುದೋಜೆಜೆವೆರಸಿಪ್ಪುದು . . . ಲಘುಹಸ್ತನಪ್ಪುದು ವಿಶೇಷಗುಣಂ ಗಣಕಂಗೆ ಲಕ್ಷಣಂ (ಸೂಕ್ತಿಸು. ೧೬-೩೭). **ಹದುಳಿಗ :** ೧. ಹದುಳಿಗನು ದೇವೇಂದ್ರನಾತನ ಸುದತಿಯರು ಸುಖಜೀವಿಗಳು (ಕುವ್ಯಾಅ. ೬೧೩. ೧೨-೨೬) ; ಕುಶಲನೇ ಜನಕಕ್ಷಿತೀಶನು ಕುಶಪತಾಕನು ಹದುಳಿಗನೆ (ತೊರರಾ.೧-೧೬-೪); ತಂಗಿ ಬಂದೌ ತಾಯೆ ಲೇಸಾಯ್ತಂಗಜನಿತ ಹದುಳಿಗನೆ (ಕೋಗಯ. ೧೪-೧೮). ೨. ಪ್ರಜೆಗಳಿಗೆ ಪ್ರಿಯನಾಗಿ ಪರಿಜನಕ್ಕೆ ಹದುಳಿಗನಾಗಿ ರಾಜನನ್ನು ಸುಬುದ್ಧಿ ಪೋಷಿಸುತ್ತಾನೆ (ಬಿದುರಿ. ೮೨). ೪. ದೃಢವಾದ ಮನಸ್ಸಿನಿಂದ ಕೂಡಿದವನು ; ಸ್ಥಿರಚಿತ್ತ : ಹದುಳಿಗನಾಗಿ ಉಳಿದರೆ ಪದವಿಯನೀವ ಕಾಣಾ ಕೂಡಲಸಂಗಮದೇವ (ಬಸವ. ೬೬೦). ೫. ಸಂತೋಷಚಿತ್ತ ; ತೃಪ್ತ : ಅದು ಬೇಕು ಇದು ಬೇಕು ಎಂದೆಂಬ ಎದೆಗುದಿಹತನ ಬೇಡ ಹದುಳಿಗನಾಗಿದ್ದರೆ ಸಾಕು (ಸಮಾವ. ೧-೩) ; ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯ ನೀನು (ಮಹಾದೇ. ಬ. ೧೨-೯) ; ಹದುಳಿಗರು ದಾಸೋಹತನದಲಿ ವಿದಿತ ಕಾಮ ಕ್ರೋಧ ಲೋಭಾಸ್ಪದವಿರಹಿತರವರ್ಗಳಿರವಂ ಕೇಳು (ಬಸಪು. ೨೩-೪೨). [ಪದುಳ + -ಇಗ]

ಪದುಳಿದ, ಹದುಳಿದ (ನಾ). ೧. = ಪದುಳಿಗ ೧ : ಪದಯಿದನೆನೆ ಪದುಳಿದನೆನೆ . . . ನೆಗೞ್ದಾಹವಮಲ್ಲದೇವನಂ ಮನದೆಗೊಂಡನಣ್ಣಗ ದೇವಂ (ಅಜಿಪು. ೧೨-೨೩) ; ಧನಪತಿ ಪದುಳಿದನೂನಾಂಗಿ ನಿಪುಣಮತಿ ನಳನಮುದ್ಭವಂ (ಜಾತಕ. ೧೩-೧೨). ೨. = ಪದುಳಿಗ ೨ : ಇದೇಂ ಪದುಳಿದನೆಂದು ಕೀರ್ತ್ತಿಪುದೊ ಗೋನುಗನಂ ಸಕಳಾವನೀತಳಂ (ಎಕ.VIII, ಸಾಗರ. ೧೦೮-೨೫ ; 1631). ೩. ಸ್ಥಿರಮನಸ್ಸುಳ್ಳವನು ; ದೃಢಚಿತ್ತ : ಪದುಳಿದನಲ್ಲದನಂ ಕಲಿಸಿದೊಡಂ ತಿಳಿಸಿದೊಡಮೇಂ ನಿಲಲ್ಕಱಿಗುಮೆ (ಸಮಪ. ೧೧-೧೫೯). **ಹದುಳಿದ :** ೨. "ವಿಸ್ರಬ್ಧಃ, ಸ್ಥಿರಃ ।-೨ ಹದುಳಿ (ಗ)ದಂ" (ಹಲಾಯು. ೬೧-೨೧೫). 'ಪದಯಿದ' ಪರಾ. [<ಪದುಳ].

ಪದುಳಿರು 'ಪದುಳಮಿರ್' ನೋ.

ಪದುಳಿಸು, ಹದುಳಿಸು (ಕ್ರಿ). ೧. ಕಾಪಾಡು ; ಸುಖವಾಗಿರುವಂತೆ ಮಾಡು : ಮದವದರಿನ್ರಿಪರನಾಜಿಯೊಳದಿರದೆ ಬೆಂಕೊಂಣ್ಡು ಧರೆಯನುನ್ನತಶೌರ್ಯ್ಯಂ ಪದುಳಿಸಿ ಪಾಳಿಸಿ ಕೀರ್ತ್ತಿಯನೊದವಿಸಿದಂ ಗುಣನಿಧಾನಿ ಮನ್ನೆಯ ಸೋಮ (ಎಕ. VII, ಚನ್ನಗಿ. ೩೮-೯; 1149 ?); ಹರಿ ಪದುಮಭವ ರುದ್ರಾಖ್ಯರು . . . ಪದುಳಿಸುವ ಸೃಜಿಸುವ ಸಮಸ್ತವನೊದಗಿಸುವ ಸಂಹರಿಸುವಾ ಕರ್ಮದಲಿ ಸೇರಿದರಾ ಮಹಾಪುರುಷರ ನೇಮದಲಿ (ಸಿಭಾಗ. ೬-೩-೫೫). ೨. ಸಂತೋಷಪಡು ; ಹಿಗ್ಗು : ವರ್ತಿಸಿತು ಪದಪಿನಿಂ ಜಯರವಂ ಲೋಕದೊಳ್ ನಾಕದೊಳ್ ಪದುಳಿಸಿದರಮರರ್ ಪ್ರಮೋದದಿಂ (ಚಿಪಪು.೪೦-೩೨); ಪದುಳಿಸಿದರನಿರುದ್ಧ ಸಾತ್ಯಕಿ ಪ್ರದ್ಯುಮ್ನ ಗದ ಸಾಂಬ ಕೃತವರ್ಮ ನಿಶಠಪ್ರಮುಖರಾದ ಯದುವೀರರು (ಜೈಮಿಭಾ. ೨೪-೬೯). ೩. ತೃಪ್ತಿಹೊಂದು ; ತಣಿ : ತೊಱೆಯೊಳ್ ಪೋಪವಂಗೆ ತಪ್ಪವನಿಕ್ಕಿದಂತಿಕ್ಕಿದ ಗಟ್ಟಗೊಂಡ ಬಲ್ಮೊಸರಂ ಕೊಂಡು ಪದುಳಿಸಿ ನಿಂದ ಬಟಾಕ್ಕಂ (ಧರ್ಮಾಮೃ. ೧-೧೪೮). ೪. ಸಮಾಧಾನಗೊಳ್ಳು ; ನೆಮ್ಮದಿಯನ್ನು ಹೊಂದು ; ಸಂತೈಸಿಕೊಳ್ಳು : ತನ್ನಂತಿರೆ ಬಗೆವುದು ಪೆಱರಂ ಪ್ರಾಣಹಿಂಸೆಯಂ ಮಾಡಲ್ಬೇಡ . . . ಪದುಳಿಸಿ ಕೇಳ್ ಮಗನೆ ಹಿತಮಿದುಭಯಭವಕ್ಕಂ (ಯಶೋಧ. ೪-೩೫). ೫. ಸಾವರಿಸಿಕೊಳ್ಳು ; ಚೇತರಿಸಿಕೊಳ್ಳು : ಆಗಳವರೆಂತಾನುಂ ಸಂತೈಸಿ ಪದುಳಿಸಿ ಮಗುಟ್ಟಿ ಕುಳ್ಳರ್ದು ಮಗಧಪತಿ ಜರಾಸಂಧಂ ಶಿಶುಪಾಲ ಸಾಲ್ವದಂತವಕ್ರಾದಿಗಳ ಮೊಗಮಂ ನೋಡಿ (ಜಗವಿ. ೮-೮೩ ಪ) ; ಅದನೀಕ್ಷಿಸಿ ನಳನರಪತಿಯಿದು ಮತ್ಸಖಿಯೆಂದೊಡಾಕ್ಷಣಂ ಕಡುಪಿಂದಂ ಹೃದಯದ ತಾಪಂ ಪೆರ್ಚಲ್ ಪದುಳಿಸಿಕೊಂಡಂ ಮಗುಟ್ಟು ಧೀರೋದಾತ್ತಂ (ನಳಚಂ. ೭೩). ೬. ಕುಗ್ಗು ; ಕಡಮೆಯಾಗು ; ಶಮನವಾಗು : ಸಿರಿಯಾಳಂ ಹೃದಯದಲಿ ಬೆದಬೆದನೆ ಕುದಿವುತ್ತ ಶೋಕಂ ಪದುಳಿಸದೆ ತಲೆವಾಗಿ ಲಜ್ಜಿಸಿಯಳಲುತಿಂತಿರಲು (ಬಸಪು. ೨೪-೬೬). ೭. ಸಮಸ್ಥಿತಿಗೆ ಬರು : ಪದುಳಿಸದಂಗಮೆಟ್ಟಱದ ಕಣ್ಮಲರ್ . . . ಗಂದೆಯೇಱದ ಕರಭಾತ ಮೊಪ್ಪೆ ಸುಸಿಲಿಂ ತಣಿದೊಯ್ಯನೆ ಜಾರೆ ಜಾಱುದಳ್ (ಲೀಲಾವ. ೩-೧೫); ಪದುಳಿಸದ ತನು ಪುದಿದ ಪುಳಕಾಳಿವೆರಸಿ ಗುರುವಂ ನೋಪ್ಪ ತವಕದಿಂ ಸುರತಾಂತಕಾಂತೆಯರದೇಂ ಬಂದರೋ (ಪದ್ಮರಾ. ೩-೬೦); "ಪ್ರೀತಿಸು" (ಪದ್ಮರಾ. ಕೋಶ). ೮. ಒದಗಿಸು ; ಉಂಟುಮಾಡು : ಹದನಾದ ನಾಣುದಾಣಕೆ ಲಿಂಗಯೋಗವ ಪದುಳಿಸುವಾಗ ಸ್ವರ್ಗವನು ಮಿದಿಯದೆ ಗೇಣು ಚೋಟೆನೆ ತೋಱುತಿದ್ದುದು (ಭರಚ. ೪೧-೬೨). **ಹದುಳಿಸು :** ೪. ಮದನರಿಪು ತನ್ನೊಳಗೆ ಕಿನ್ನರನಸುವನಡಗಿಸಲು ಹೆದಱ ದಂಡಾಧೀಶ್ವರಂ ಮನಗದಡಿ ಬೊಮ್ಮಯ್ಯಗಳನೀಕ್ಷಿಸಿ ಹದುಳಿಸದೆ ನಿಬ್ಬರದ ಶೋಕಾಕ್ರಾಂತನಾಗುತ್ತ (ಬಸಪು. ೩೬-೧) ; ತಾಯೆ ಹದುಳಿಸು ದೇವಲೋಕದಲಾಯದಲಿ ಸಲಿಸಾ ಕುಮಾರರನು (ಕುವ್ಯಾಗ. ೧೧-೧೪); ಹದುಳಿಸೆಲೆ ರಾಜೇಂದ್ರ . . . ನಿನ್ನ ಕುಲಸಂಪದದ ಸಿರಿಗಾಭರಣನಾದನು ಪುತ್ರನೆಂದೆಂಬ ಮುದವಿರಲುಬೇಕು (ತೊರರಾ. ೨-೫-೬) ; ದೇವ ನಿನ್ನ ಮುಖಾಬ್ಜವನು ಬಿಟ್ಟಾವ ಪರಿಯಲಿ ಹದುಳಿಸುವೆನು (ಅಕ್ರೂಚ. ೪-೩೮); ಹರಣ ಹದುಳಿಸೆ ವಿಪ್ರಸುತನಿಗೆ (ಉತ್ತಕ. ೪೩-೨೯). ೫. ರಥದೊಳಗೆ ಮಾದ್ರೇಶನೀ ಸಮರಥನ ಸಂತೈಸಿದನು ಕವಚಪ್ರಥಿತ ಮಂತ್ರೌಷಧಿಗಳಲಿ ಹದುಳಿಸಿದನಾ ಕರ್ಣ (ಕುವ್ಯಾಕ. ೧೨-೩೨) ; ಕರಪುಟ ಮೇಳವಿಸಿ ಮೈಯಿಕ್ಕಿ ಪರಮಕೃಪಾಳುವಿಗೆ ಬಿನ್ನೈಸಿದನು ಹದುಳಿಸುತನಾಗೇಂದ್ರ (ಸಿಭಾಗ. ೧೦-೧೬-೫೩). ೯. ತೃಪ್ತಿಪಡಿಸು ; ತಣಿಸು : ಭೂಮಿಪತಿ ಕೇಳೆಂದು ವರಲಕ್ಷ್ಮೀಮನೋಹರ ಧೌಮ್ಯಮುನಿಯೆನೆ ಪ್ರೇಮದಲಿ ಮುನಿನಿಕರವನೆ ಹದುಳಿಸಿದನೊಲವಿನಲಿ (ಕುವ್ಯಾಅ. ೬೧೩. ೪-೬೦). ೧೦. ನಿಯಂತ್ರಿಸು ; ಹತೋಟಿಯಲ್ಲಿಡು : ನಾವು ವೃದ್ಧರು ನಮ್ಮ ಬಾಲವ ನಾವು ಹದುಳಿಸಲಾಱೆವು (ಕುವ್ಯಾಅ. ೧೦-೧೭) ; ಮದನಾತುರ ಕೈವಿಱಱುದೊಡೆದೆಯೊಳೆ ಹದುಳಿಸಬೇಕಲ್ಲದಿಂತು ಇದಿರಿಗೆ ಕಾಣಿಪುದುಚಿತವೆ (ಕುರಾಸಾಂ. ೨೩-೯೩). ೧೧. ಎಚ್ಚರಿಸು ; ಜಾಗೃತಗೊಳಿಸು : ಅದು ಶಿವೈಕ್ಯರ ಮನೆಗಳಾದಡೆ ಮುದದಿ ಹೆಸರಂ ಹೇಳಿ ವಂದಿಸಿ ಹದುಳಿಸುತ ಬಹನು . . . ಬೊಮ್ಮಯ್ಯ (ಬಸಪು. ೩೧-೨೬).

ಪದುಳಿಸಿಕೊಳು, ಹದುಳಿಸಿಕೊಳು = ೧. ಸಮಾಧಾನಮಾಡಿಕೊಳ್ಳು ; ಸಂತೈಸಿಕೊಳ್ಳು : ಭಾವದಲಿ ಮಿಗೆ ಕಳವಳಿಸಿ ಪದುಳಿಸಿಕೊಳುತ ಭೂಪತಿತಿಲಕ ಚಿಂತಿಸಿ ನೆನೆವುತಿದ್ದನು ವೀರನರಯಣನ

(ಕುವ್ಯಾಸ. ೧-೯೪); ಧರಣಿಪಾಲಕುಮಾರನಾ ಹರಿಚರಣಕಮಲವಿಯೋಗ ಚಿಂತಾತುರನು ತನ್ನಲ್ಲಿ ತಾನೆ ಹದುಳಿಸಿಕೊಂಡು ನಿಜಮನವ . . . ಮರಳಿದನು ನಿಜಪುರಕೆ (ಸಿಭಾಗ. ೪-೮-೩೮). ೨. ಚೇತರಿಸಿಕೊಳ್ಳು; ಸಾವರಿಸಿಕೊಳ್ಳು : ಬಂದೆವೆಲ್ಲಿಂದಿಲ್ಲಿಗಾರೋ ತಂದು ಬಿಸುಟರು ನಮ್ಮ ನಿತ್ತಲು ಮಂದಿರಕೆ . . . ಎಂದು ವಿಸ್ಮಿತರಾಗಿ ಪ್ರಮಥರು ನೊಂದು ಹದುಳಿಸಿಕೊಳುತ ಗಮಿಸಿದರು (ಸಿಭಾಗ. ೧೦-೫೬-೧೩).

[ಪದುಳ+-ಇಸು$_3$]

ಪದೆ, ಹದೆ$_1$ (ಕ್ರಿ). ೧. ಬಯಸು; ಆಸೆಪಡು; ಇಷ್ಟಪಡು; ಅಪೇಕ್ಷಿಸು; "ಪದೆ-ಈಪ್ಸಾಯಾಂ(ಅಪೇಕ್ಷಿಸು)" (ಶಮಧಾ); ಅಲಸದೆ ಪೀನಂ ಪದೆಯದೆ ಪಾಂಗಱಿದು ದೋಷಮಂ ಪಿಂಗಿಸಿ ತಪ್ಪದೆ ಬಗೆದು ಪೇಟ್ಟು ಡಾಗಮಮುದಾರನೃಪಶುಂಗದೇವವಿದಿತಕ್ರಮದಿಂ (ಕವಿರಾ. ೧-೪೪); ಕನ್ನೆಯಂ ಪದೆದೊಡಗೊಂಡು ಪೋಗಿರದಿರೆಂದು ಗುಣಾರ್ಣವಭೂಭುಜಂಗೆ ಕಟ್ಟದಿರೊಳೆ ಬಟ್ಟೆದೋಱುವವೊಲಂದೊಗೆದಂ ಕಮಲೈಕಬಾಂಧವಂ (ಪಂಪಭಾ. ೪-೧೧೧); ದೊರೆಕೊಳ್ಳದುದಕ್ಕಧಿಕರ್ ವಿವೇಕಿಗಳ್ ಪದೆವರೆ (ಅನಂಪು. ೧೨-೬೫); ಕೌಸಲೆ ಕುಮಾರರ ಪದೆದು ಹಡೆದುದೆ ಸಫಲ (ಕುವ್ಯಾಉ. ೮-೨೨); ಘನರಸಮಂ ಪದೆದೇಂಟುವ ವಿನುತಂ ಚಾದಗೆ ಕುವಾರಿಯಂ ಕುಡಿವುದೆ (ಶಬಶಂ. ೧-೨೨); ನಿನ್ನ ಪದೆವಂದೆರೆದ ಬಡತಿರುಳರೆಲ್ಲ ? (ಗಿಳಿವಿಂ. ೩೦-೮೨). ೨. ಉತ್ಸಾಹಿಸು; ಹುರುಪಿನಿಂದ ಕೂಡಿರು; ಹುಮ್ಮಸ್ಸಿನಿಂದ ಕೂಡಿರು : ಪದೆದಡಿಯಿಟ್ಟವೊಲ್ ಕುಸುಮದೊಳ್ ಮದನಾಯುಧಲಕ್ಷ್ಮಿ . . . ನವಯೌವನಲಕ್ಷ್ಮಿ ವಿಳಾಸಲಕ್ಷ್ಮಿಯಂದದಿನಡಿಯಿಟ್ಟುದಂದು ವಸುದೇವನ ಚೆಲ್ವಡರ್ದಂಗಯಷ್ಟಿಯೊಳ್ (ಅರ್ಧನೇ. ೪-೧೩೨); ಪದೆದು ಪೂರೈಪ ಶಂಖಧ್ವಾನವಂದೊಗೆಯೆ (ಇಹರ. ದೇ. ೪೫-೪); ಮೃದುಮೃದಂಗಂ ಬಹಳ ಕಹಳಾರವದ ನಡುವೆ ಪದೆದು ಪೊಣ್ಮುವ ಶಂಖಭೇರೀರವದ ನಡುವೆ . . . ಅಂಗಜಹರಂಗೆ ಮುಕುರಂದೋಱೆ ಮೈಯಿಕ್ಕಿ ನಿಂದು (ಬಸರ. ೩-೭೮). ೩. ಉತ್ಕಂಠೆಯಿಂದ ಕೂಡಿರು; ಉದ್ವಿಗ್ನವಾಗು : ಪವಣಿಲ್ಲದ ದೊಂದೌತ್ಸುಕ್ಯವನೊಳಕೊಂಡೆನ್ನ ಮನಮುಪಾರೂಢಮಹೋತ್ಸವಮಂ ಕೇಳಲ್ಪದೆದುದವನೀಶ ನಿವೇದಿಸು (ಕಾದಂಪೂ. ೩೮೮); ಪದೆದೆಯ್ದಿ ಜಾರೆ ಸಂಕೇತದ ಗೃಹದೊಳ್ಪ್ರಿಯನನಲ್ಲಿ ಕಾಣದೆ ಮನದೊಳ್ ಬೆದಱುತ್ತಂ . . . ಪೋಗುತ್ತಿರ್ದಳ್ (ತ್ರಿಪುವಿ. ೨೪-೧೩೦). ೪. ಒಲಿ; ಮೆಚ್ಚು; ಪ್ರೀತಿಸು : ಪದೆವ ಮನಂಬೆರಸೆಂಗಿದ ಪದದೊಳದೇಂ ಚೆಲ್ವುವಡೆದುವೋ ಚಿನಜನನೀಪದಪಲ್ಲವತಳದೊಳ್ ಸುರಸುದತೀಚಯದಲಕವಲ್ಲರೀಕುಸುಮಂಗಳ್ (ಆದಿಪು. ೭-೪); ಪದೆವರ್ದ ಬತ್ತೆ ಕೆತ್ತುವಧರಂ ದೆಸೆಗೆಟ್ಟಲರ್ಗಣ್ಣ ನೋಟಂ . . . ಈಕೆಯೊಳೀಗಳಾದುದಿಂತಿದು ಕುಸುಮಾಸ್ತ್ರನೆಂಬದಟ ನಿಕ್ಕಿದ ಸೊರ್ಕಿನ ಗೊಡ್ಡಮಾಗದೇ (ಪಂಪಭಾ. ೪-೬೦); ಪದಮಂ ಚಂದ್ರಮಂ . . . ಸೋಂಕಿನೊದವಂ ಮಂದಾನಿಳಂ ಕೊಟ್ಟವೊಲ್ಪದೆದೋರ್ವರೊಳೊರ್ವರಂದು ಪಡೆದರ್ ಪಂಚೇಂದ್ರಿಯಪ್ರೀತಿಯಂ(ಮಲ್ಲಿಪು. ೩-೯೦); ಪಿಣವಿಶಾಲನೇತ್ರೆ ಪದೆದೆನ್ನ ಮನೋಹರವಕ್ತ್ರಪದ್ಮಮಂ ಕೂಣತದೃಷ್ಟಿಯಿಂದಡರ್ದು ನೋಡಲೊಡಂ (ದಶಕು. ೧೨-೩೬); ಆ ಮಂತ್ರಿಮೌಲಿಮಣಿಗೆ . . . ಚೋಳಧರಾಭಾಮಾಧಿಪತಿ ಮನೋಜ್ಞಶ್ರೀಮಹಿತಂ ಪೃಥುಳಭಾಗ್ಯಮಂ ಪದೆದಿತ್ತಂ (ರಾಜಶೇ. ೩-೨೫). ೫. ನಲಿ; ಹಿಗ್ಗು; ಸಂತೋಷದಿಂದಿರು : ಇದಿರ್ಗೊಳ್ಳುದು ಕಾಲ್ಗರ್ಚುವುದು . . . ಪದೆದನ್ನ ಮನೀವುದೆಂಬ ನವವಿಧಪುಣ್ಯಂ, ತಮಗೆ ದೊರೆಕೊಳೆ (ಆದಿಪು. ೪-೯೩); ನಲ್ಲನುತ್ಸವೋಕ್ತಿಗಳವತಂಸಮಾಗೆ ಪುಳಕಾಂಕುರಮೊರ್ಮೊದಲಾದುವಾ ಲತಾಂಗಿಗೆ ಪದೆ[ಪಾಠಾಂ. ಡೆ]ದಾಲಿ ಸಲ್ಪಡೆವರಾರೊ ತನೂಭವಲಾಭವಾರ್ತೆಯಂ (ಮಲ್ಲಿಪು. ೪-೨೯); ಪದೆದಲರ್ದೊಡವಂ ಲತಿಕಾಸ್ಪದಮಂ ನೆಱೆ ಮಾಡಿ ಹರ್ಷದತಿಶಯಮಂ ತೋರ್ಪುದು (ಕುಸುಮಾ. ೧೨-೧೩೬); ಪಾಡಿದರ್ ಪದೆದು ಗಂಧರ್ವರಾನಂದದಿಂ (ಚಿಬಪು. ೪೦-೬೨). ೬. ಚೆಲುವಾಗಿರು; ಸೊಗಸಾಗಿರು: ಇದು ಮಳಯಾಚಳಂ ಮಳಯಜಂ ಮಳಯಾನಿಳನೆಂದು ಪೆಂಪುವೆತ್ತುದು ಸಿರಿಕಂಡಮುಂ ಪ[ದೆ][ಪಾಠಾಂ. ಡೆ]ದು ತೀಡುವ ಗಾಳಿಯುಂ (ಪಂಪಭಾ. ೪-೨೧); ಪದೆದೊಳ್ಪಡೆಗಳ್ ಬಲಿದೊಪ್ಪಿದುವು . . . ಆ ಕುವರಂಗೆ ಶೈಶವಾತಿಕ್ರಮದೊಳ್ (ತ್ರಿಪುವಿ. ೧೭-೧೭೬). ೭. ಬೆಳೆ; ವೃದ್ಧಿಸು; ಹೆಚ್ಚಾಗು : ಅತಿಬಹಳಜಲನ್ತೀವಳಚ್ಚಾಸಮುದ್ರಂ ಪದೆದಾಯಾಸಕ್ಕೆ ಪಕ್ಕಾಗಿರೆ (ಎಕ. X, ಮುಳಬಾ. ೩೮-೨೦; ಸು. 890); ಬಳಸುವ ಬೇಟದೊಳ್ . . . ಗೊಲೆಗೊಂಡ ಬೇಟವೆಂಬೆಳಲತೆ ಕೂಟದೊಳ್ ಪದೆದು ಪಚ್ಚರ್ದೆಗಿಂಪಿನಲಂಪನೀಯದೇ (ಆದಿಪು. ೧೨-೨೦); ಪದೆದನು ತಾಪದಿಂ ತನು ಬೆಳರ್ತುದು (ಸೂಕ್ತಿಸು. ೧೫-೩೪). ೮. ಹೆಚ್ಚಾಗುವಂತೆ ಮಾಡು; ಬೆಳೆಸು : ಅರಗಿನ ಮಾಡದೊಳ್ಪಿಪದ ಲಡ್ಡುಗೆಯೊಳ್ಕೊಲಲೆಂದು ಬಂಧುಮತ್ಸರದೊಳೆ ವೈರಮಂ ಪದೆದು ಭೀಮನನಿನ್ನಿನಿತರ್ಕೆ ತಂದ ನೀಂ ಮರುಳನೊ (ಗದಾಯು. ೪-೪೪). ೯. ಒಳಗೊಳ್ಳು; ತಳೆ; ಹೊಂದು : ಮೆಲ್ಲನೆ ತಣ್ಪಂ ತನಿಗಂಪುಮಂ ಪದೆದು ತೀಡಿತ್ತೊಂದು ಮಂದಾನಿಲಂ (ಸುಕುಮಾ. ೪-೪೫); ಪುದಿದ ತಣ್ಪನಾಲಿಂಗಿಸಿ ತಣ್ಣನೆ ಪದೆದು ಮಂದಗತಿಯಿಂದಂ ಪಣ್ಣನೆ . . . ಮಾರುತನೆಂಬ ಕಾಮುಕಂ ಸುಳಿಗುಮನಾರತಂ (ಸುಕುಮಾ. ೧೦-೫೫ ರಗಳೆ). ೧೦. ವ್ಯಕ್ತವಾಗು; ಪ್ರಕಟವಾಗು : ಉದಯವಪ್ಪ ಸದಮಲಾಮೃತಕರನೊ ಎಂಬಂತೆ ಭೂತಳಕ್ಕುದಯಿಸಿದನಮೃತಕರನಾಗಿ ಸಕಲರು ನಲಿಯೆ ಪದೆದು ಕುವಲಯಲೋಕದಳಿತಮಿರವೋಡೆ ಕರಕಮಲಾಳಿ ಮುಗಿಯಲಂದು (ಸಿದ್ಧರಾ. ೬-೫೧); ಬಲಭಾರಕ್ಕೆ ಧರಾತಳಂ ಕುಸಿಯೆ . . . ಪದೆದೇಳ್ತಂದಂ ನರೇಂದ್ರಾತ್ಮಜಂ (ರಾಜಶೇ. ೧೩-೭೭). ೧೧. ಯತ್ನಿಸು; ಪ್ರಯತ್ನಪಡು : ಗುದದೊಳಗಪಾನಹರಿಯಿರ್ದು ಮಲಮೂತ್ರಮುಮನೊದವಲೀಯದೆ ವಿಸರ್ಜಿಸಿಯೆಧೋದ್ವಾರಮಂ ಪದೆದು ಬಲಿದನ್ನರಸಮಂ ವ್ಯಾಪ್ತಿಯಂ ಮಾಡುತಿಹುದನುದಿನಂ ಪಜೆಯದೆ (ಚಿಬಪು. ೫೮-೨೩). **ಹದೆ$_1$** : ೫. ಸುದತಿಪುತ್ರಮಾತಾಪಿತರು ಹಿತರು ನಿತ್ಯವೆಂದು ಹದೆದು ಕುದಿದು ಕೋಟಲೆಗೊಂಬನ್ನಕ್ಕಂ ಗುರುವೆಂದೇನಯ್ಯ (ಸಿದ್ಧೇಶ. ೭೫-೬).

ಪದೆಪು 'ಪದಪು' ನೋ.

ಪದೆಪುಗಾರ್ತಿ 'ಪದಪುಗಾರ್ತಿ' ನೋ.

ಪದೆಪುಗೆಡು (ಕ್ರಿ). ಸಂತೋಷವು ಹಾಳಾಗು,—ಇಲ್ಲವಾಗು : ಪದೆಪುಗೆಡ[ಲ]ಬ್ಬೆಯೊಡವುಟ್ಟದ ಮಾವನ ಮನೆಯೊಳುಂಡುಟ್ಟುಂ (ಸುಕುಮಾ. ೨-೬೯). [ಪದಪು(<ಪದಪು)+ಕೆಡು$_1$]

ಪದೆಪುದಂಡೆ (ನಾ). ಸೊಗಸಾದ ಹಾರ,—ಮಾಲೆ : ಭಿತ್ತಿಯೊಳ್ ಪೊಱಮಟ್ಟ ಚಾವಡಿ ಮದನಕೈಯೆತ್ತಿದ ಪದೆಪುದಂಡೆಗಳು . . . ರಂಜಿಸಿತು (ಮೋಹಶ. ೨೨-೭). [ಪದಪು(<ಪದಪು)+ದಂಡೆ$_1$]

ಪದೆಯಿಸು, ಪದಯಿಸು (ಕ್ರಿ). ೧. ಬಯಸುವಂತೆ ಮಾಡು; ಆಸೆಯನ್ನು ಹುಟ್ಟಿಸು : "ಪದೆಯಿಸು-ಈಪ್ಸಾಯಾಂ (ಆಶಿಸುವಂತೆ ಮಾಡು)" (ಶಮಧಾ); ಪದೆಯಿಸೆ[ಪಾಠಾಂ. ಸಿ] ಸೊಂಕಿ ಸಂಕೆಗಿಡೆ ಮೇಳಿಸಿ . . . ಅಲಂಪಿನುಬ್ಬದಿಗಮನಾ ಲತಾಂಗಿಗೆ ನೃಪಂ ಪಡೆದಂ ನವಸಂಪ್ರಯೋಗದೊಳ್ (ಕಾವ್ಯಾವ. ೮೦೦). **ಪದಯಿಸು** : ೧. ಪದಯಿಪ ಸೋಂಕು ಚುಂಬಿಸುವಲಂಪು . . . ಮೇರೆದಪ್ಪುದುದೆನೆ ಕೂಡಿದರ್ ಪ್ರಿಯತಮರ್ (ಸೂಕ್ತಿಸು. ೧೪-೪೩). ೨. "ಹದಗೊಳಿಸು"(ಲೀಲಾವ. ಕೋಶ) : ಪದಯಿಸಿ ಪಿಂಡುಗೆಯ್ದು ಸೆಳೆದುಳ್ಳೆಯಂ ತೊಡೆಯಿಂದಿ ಚುಂಕಿ ಸೋಂಕಿದೊಡೆ . . . ಕಾಂತೆಯೇಂ ಪಡೆದೆಳೋ ಮನಕಾದ ಮಲಂಪನೋಪನಾ (ಲೀಲಾವ. ೧೩-೧೩). [ಪದೆ+-ಇಸು$_3$]

ಪದೇಪದೇ (ಅ). ಪುನಃ ಪುನಃ ; ಮತ್ತೆ ಮತ್ತೆ : ಮೋಹನನಿಗೂ ಅವರು ಪದೇಪದೇ ಒತ್ತಾಯ ಪಡಿಸುತ್ತಿದ್ದರು (ಪಂಜಪಂ. ೧೮೧) ; ಗಾಂಧೀಜಿ ... ಹಿಂಸಾಮಾರ್ಗ ಉಚಿತವಲ್ಲವೆಂದು ಪದೇಪದೇ ಹೇಳಿದರು (ಅತ್ಮಾರ್ಪ. ೧೪೪) ; ಪದೇಪದೇ ಹೇಳಿದರೂ ಪದೆ ಕೂಡಿಸೋದು ಬಿಡ (ಗಾದೆ). [ಸಂ.]

ಪದೋದಕ (ನಾ). ಕಾಲುಗಳನ್ನು ತೊಳೆದ ನೀರು; ಪಾದೋದಕ: ಕೈಯೊಡ್ಡಿ ಆ ಅಯ್ಯನ ಪದೋದಕಮಂ ಪ್ರಸಾದಮನನುಭವಿಸುತಂ ತತ್ವಗೋಷ್ಠಿಯೊಳಾ ಬಸವನಿರಲು (ಬಸಪು. ೨೮-೪). [ಪದ$_2$+ಉದಕ$_2$]

ಪದೋನ್ನತಿ (ನಾ). ಪದವಿಯಲ್ಲಿ ಉಂಟಾಗುವ ಏರಿಕೆ,—ಬಡ್ತಿ : ಪದೋನ್ನತಿಗಳನ್ನು ಘುತ್ತು ಒಂದು ಸೇವೆಯಿಂದ ಇನ್ನೊಂದು ಸೇವೆಗೆ ವರ್ಗಾವಣೆಗಳನ್ನು ಮಾಡುವುದರಲ್ಲಿ (ಭಾಧಾಸ. ೧೮೬) ; ಆದರೆ ಕಂಡು ಬಂದಿತು, ಮೇಲಿನವನು ಪ್ರಸನ್ನನಾದರೆ ಒಂದೆರಡು ವರ್ಗಗಳನ್ನು ಜಿಗಿದು ಪದೋನ್ನತಿ ಪಡೆಯಬಹುದೆಂದು (ಇಪ್ಪಕ. ೪೮೪). [ಪದ$_2$+ಉನ್ನತಿ]

ಪದ್ಮಳಿ 'ಪಜ್ಜತಿ' ನೋ.

ಪದ್ದಿ (ನಾ). ಒಂದು ಬಗೆಯ ಹಕ್ಕಿ (?) : ಕೊರದಿಂಬಾಗಿರೆ ಪದ್ದಿಯ ಗಱಯನದಂ ಗುಳಿಗೆ ಮಾಡಿ ಪುಣ್ಣೊಳಗಿಟ್ಟ ತೆಱದಿಂ (ಅಶ್ವಸೈ.೧೬-೭೩). [?]

ಪದ್ದು$_1$ 'ಪರ್ದು' ನೋ.

△ **ಪದ್ದು**$_2$ 'ಹದ್ದು$_2$' ನೋ.

ಪದ್ದುದೇರ 'ಪರ್ದುದೇರ' ನೋ.

ಪದ್ದುಪಾಡು (ನಾ). "ಸುಖದುಃಖ" (ಪ್ರಭಣ್ಣ) : ಪದ್ದುಪಾಡಿಂಗಿಲ್ಲ ದಾಪ್ತನು ಇದ್ದು ಫಲಮೇನು (ಅಂಬಿಕಾ. ೨೧-೫೬). [ಪದ್ದು?+ಪಾಡು$_3$]

ಪದ್ದ್ವಂದ್ವ (ನಾ). = ಪದಯುಗ : ದುರದುಂಡಿ ಮುಂದಿರ್ದೂದಂ ನೋಡಿ ... ಕರೆಂದು ಮೂರ್ತಿಗೊಳಿಸುತ್ತೆ ಪದ್ದ್ವಂದ್ವವಂ ತೊಳೆದು (ದುರಪು. ೨೯-೬). [ಸಂ. (ಪದ್+ದ್ವಂದ್ವ)]

ಪದ್ಧತಿ (ನಾ). ೧. ಹೆಜ್ಜೆ ; ಅಡಿ. ೨. ಹೆಜ್ಜೆಯ ಗುರುತು,-ಚಿಹ್ನೆ : ಕಾಳಿಯನಂ ನೋಡಿ ನೀನಿಲ್ಲಿರಲ್ವೇಡ ... ನಿನ್ನ ಪೆಡೆದುಱಗ ಲೊಳೆನ್ನ ಪದಪದ್ಧತಿಗಳೆರ್ದಪುವು ... ಪೋಗೆಂದು ಪೇಳಿ ಕಟಾಪೆ (ಜಗವಿ. ೬-೧೧೪ ವ). ೩. ಮಾರ್ಗ ; ದಾರಿ ; ಹಾದಿ : "ಅಧ್ವಾ, ಪಂಥಾಃ, ಪದ್ಧತಿಃ ... ನಿಗಮಃ – ಈ ೧೨ ಬಟ್ಟೆ" (ಹಲಾಯು. ೪೩-೧೦೫). ೪. ಸಂಪ್ರದಾಯ ; ಆಚಾರ ; ರೂಢಿ : ಪದ್ಧತಿಯ ಮೇರೆಗೆ ಪುರೋಹಿತರ್ ನಾಮಕರಣಂಗೆಯ್ದು (ಶ್ರೀರಾಮಾ. ೧೬-೪೨೯) ; ಅತಿಥಿಯನ್ನು ... ಮಾತಾಡಿಸುವುದು ಅನೂಚಾನವಾದ ಪದ್ಧತಿ (ಸಂಟರು. ೪೧). ೫. ಕ್ರಮ ; ವಿಧಾನ ; ರೀತಿ : ಏನೆಂಬ ಸರ್ವನಾಮಂ ... ಬಹುವಚನಾರ್ಥಮಾನಾಲ್ ಸಾಲ್ದತ್ತು ಮತ್ತೆ ಕೃತಿ ಪದ್ಧತಿಯೊಳ್ (ಶಸಾದ. ೭೯). ೬. ವ್ರತನಿಯಮ. ೭. ಸಾಲು ; ಪಂಕ್ತಿ. [ಸಂ.]

ಪದ್ಧತಿಕೆ (ನಾ). [ಛಂದ] ಪಜ್ಝಟಿಕೆಯೆಂಬ ಮಾತ್ರಾಛಂದಸ್ಸು : ಪಲತೆಱದ ಪದ್ಯದಿಂದಂ ಲಲಿತವಚೋರಚನನಿಚಯಪದ್ಧತಿಕೆಗಳಂ ಸಲೆ ನಿಲೆ ಸಮೆದುದು ಸರಸಾಖಿಲವರ್ಣನಮಾದೊಡದುವೆ ಬಾಜನೆಗಬ್ಬಂ (ಕಾವ್ಯಾಸ. ೯೫೫). 'ಪಜ್ಝಟಿಕೆ' ಪರಾ. [ಸಂ. ಪದ್ಧತಿಕಾ]

ಪದ್ಮ (ನಾ). ೧. ತಾವರೆ ; ಕಮಲ : "ಸಹಸ್ರಪತ್ರಂ ... ಪದ್ಮಂ, ಪಂಕಜಂ – ಈ ೧೭ ತಾವರೆ" (ಹಲಾಯು. ೧೧೨-೫೮) ; ಹರಿಸಂದೋಹ ವಿರಾಜಿತಂ ವಿವಿಧಪದ್ಮಾಲಂಕೃತಂ ಹಂಸಸಂಚರಣಪ್ರೌಢ ಉದಾತ್ತ ನಿತ್ಯಮಗುಣೋದ್ಯತ್ಪುಂಡರೀಕಾಂಕಂ (ಎಕ. V, ಅರಸೀ.೩೯-೮; 1186). ೨. ಕನ್ನೈದಿಲೆ ; ಉತ್ಪಲ. ೩. ಆನೆಯ ಮೈ ಮೇಲೆ ಕಂಡು ಬರುವ ಬಿಳಿಯ ಅಥವಾ ಬಣ್ಣದ ಚುಕ್ಕೆ ; ಚಿಬ್ಬು : "ಆ ಬಿಂದು ಪದ್ಮಂ ಮೆಯ್ಯ ಚಿಬ್ಬಕ್ಕುಂ" (ಪಂಗರಾ. ೪೬-೨). ೧, ೩ : ಸ್ಥಿರಪದ್ಮ ವಕ್ಷದಿಂದುರುತರವಂಶದಿಂದೆಸೆವ ದಾನದಿನೀ ನರಸಿಂಹಭೂಭುಜಂ ಪರಿಚಿತ ಭದ್ರಲಕ್ಷಣದಿನೊಪ್ಪುವ ಬಪ್ಪನ ಗನ್ಧವಾರಣಂ (ಎಕ. V, ಚೇಲೂರು. ೧೯೩-೫೧; 1181). ೪. ಅಷ್ಟಫಣಿಗಳಲ್ಲಿ ಒಂದು : "ಭಸದನಂತಂ ವಾಸುಕಿ ... ಪದ್ಮಂ ಕುಳಿಕನೆಂದು ನಾಗರ ಕುಲಂಗಳೆಂಟಕ್ಕೆ ನಾಮಂ" (ಪಂಗರಾ. ೧೧೯-೪) ; ಇಂದ್ರಾಗ್ನಿ ಮೊದಲಾದೆಂಟುದಿಕ್ಕಿನ ಭೂಮಿಯಂ ಕ್ರಮದಿಂ ಪೊತ್ತು ಅನಂತ ... ಪದ್ಮ ಕರ್ಕೋಟಕ ಕ್ರೋಡ ಶಾಳ ವೆಂಬಷ್ಟಕುಲಫಣಗಳಿರ್ಕುಂ (ವಿವೇಕ. ೧೫೦). ೧, ೪ : ಚರಣಮುಂ ಬಾಸೆಯುಂ ಪದ್ಮಮಂ ಪದ್ಮಮುಮನಿರದೆ ಪೋಲ್ತಿರಲಲ್ಲಿ ಬಾಲೆಯರ್ ... ಕಣ್ಣೆಸೆದರು (ಚಿಬಪು. ೧೦-೪೯). ೫. ಚಂದ್ರ : ಸಾರಂಗ ಪದ್ಮಧರ ಚೀಮೂತಹಾರಮಣ ... ಸಿದ್ಧನಂಜೀಶ ಪಾಲಿಪುದು (ಚಿಬಪು. ೬೩-೭೭ ಅ). ೬. ಸುಗಂಧಯುಕ್ತವಾದ ಒಂದು ಬಗೆಯ ಮೂಲಿಕೆ. ೭. ನೀರು ; ಜಲ. ೮. ಕಮಲದ ಆಕಾರದಲ್ಲಿ ರಚಿಸಿದ ಒಂದು ಬಗೆಯ ಸೇನಾವ್ಯೂಹ : 'ಪದ್ಮವ್ಯೂಹ' ಪರಾ. ೯. ಕೊಳ ; ಸರೋವರ. ೧೦. ಡೊಂಕು; ವಕ್ರತೆ. ೧೧. ಯತಿ; ಮುನಿ. ೧೨. ದಿಟ್ಟ; ಧೈರ್ಯಶಾಲಿ. ೧೩. ಒಂದು ಬಗೆಯ ಮರ : "ಸಂದ್ಯಾವರ್ತಃ, ಸರಲಃ ... ಪದ್ಮಃ, ಸ್ಕಂದನಃ, ಮೋಕ್ಷಃ– ಎಂದಿವು ಮರಂಗಳುಮಪ್ಪುವು" (ಹಲಾಯು. ೧೩೫-೨೬). ೧೪. ಒಂದು ನರಕದ ಹೆಸರು : ವಿಕರಾಳ ಪ್ರಕಂಪ ಪದ್ಮ ಸುವಕ್ತ್ರ ಕಾಲವೆಂಬೈದು ಮಂತ್ರಿನರಕಂಗಳಿಂದಾವರಿಸಿ ಅಘೋರವೆಂಬರಸುನರಕವಿಹುದು (ವಿವೇಕ. ೧೭೯). ೧೫. ಹದಿನೆಂಟು ಮಹಾಪುರಾಣಗಳಲ್ಲಿ ಒಂದು : ಪರಮಶೈವ ... ಪದ್ಮಾಗ್ನೇಯ ಬ್ರಾಹ್ಮ ಬ್ರಹ್ಮಕೈವರ್ತ ಸಾಂಗ ದಿಂದಷ್ಟಾದಶಪುರಾಣಂಗಳೊಳೆಸೆವ ಭಸಿತಸೇವಾಸಂಗವಾಯಿತ್ತೆನ್ನ ಜನ್ಮವು ಸಫಲವಾಯಿತ್ತು (ಬಸಪು. ೪೫-೭೬). ೧೬. = ಪದ್ಮಮುದ್ರೆ ೨ : ಚಕ್ರಮುದ್ರೆಯಲ್ಲಿ ಹಿಂಕಾರನಾಮದಿಂದಲೂ ... ಪದ್ಮದಲ್ಲಿ ಪ್ರಸ್ತಾವ ನೆಂಬ ಹೆಸರಿನಿಂದಲೂ ... ಇರುವನು (ಹಸಾರ. ೮-೨೮ ಶಾಸ್ತ್ರಮರ್). ೧೭. [ಗಣಿತ] ಒಂದು ಸಂಖ್ಯೆ ; ನೂರುಕೋಟಿ : ಎಕ್ಕಂ ... ಪದ್ಮಂ ... ಮಹಾಪರಿಮಿತ ಈ ೪೦ ಸ್ಥಾನದ ಉಗ್ಗಡಣೆ (ವ್ಯಸಹಾ. ೮-೨೪) ; ಮೂಲಬಲ ಮುನ್ನೂಱುಪದ್ಮಪ ಛಾಳಲೋಚನನಂತೆ ಲಯಿ ಸಿದನಂದು ರಘುರಾಯ (ಕೌಶಿಂಗಾ. ೩೭ ಪಲ್ಲವಿ) ; ನೆರೆದುದು ... ಹರಿವ ರಥ ಶತಕೋಟಿ ವಿಂಶತಿಪದ್ಮ ಕಾಲಾಳು (ಮೈರಾಕಾ.೪-೩೩) ; ಪಗಡೆಯ ನಾಡಿ ಸಾರಿಯನಿರಿಸುವ ರೇಖೆರೇಖೆಗೆ ಪದ್ಮಪದ್ಮ ದ್ರವ್ಯವ ಸೋಕನು (ಧೃಪಸೂ. ೧೦೧); ಶ್ರೀ ಬೆಟ್ಟದ ಚಾಮರಾಜ ನಾಮದ ಮಹಿಮೆಗಳನ್ನು ಪದ್ಮ ಖರ್ವ ಮಹಾಭೂರಿ ಗಣನೆಯ ಗ್ರಂಥಗಳಲ್ಲಿ ಹಾಡುವೆನು (ಸುಗುಗಂ. ೭೦-೧೫). ೧೮. [ಯೋಗ] ಪೂಜೆ, ಧ್ಯಾನ ಮುಂತಾದ ಸಮಯ ದಲ್ಲಿ ಕುಳಿತುಕೊಳ್ಳುವ ಒಂದು ಭಂಗಿ : "ಕಮಲ ಯತಿ ಲಕ್ಷ್ಮಿ ಕೊಳ ಚಂದ್ರಮ ನೀರ್ಪಾವಾನೆಮೊಗದ ಚಿಬ್ಬುಂ ಲೆಕ್ಷುಂ ಕುಮುದಾಸನ ವ್ಯೂಹ ಭಟಂ ಕ್ರಮದಿಂ ಪದಿಮೂಱು ಪದ್ಮ ಶಬ್ದಂ" (ನಾನಾಕಂ.೮೮೨). 'ಪದ್ಮಾಸನ' ಪರಾ. ೧೯. ಕುಬೇರನ ಮಹಾಪದ್ಮ, ಪದ್ಮ, ಶಂಖ, ಮಕರ, ಕಚ್ಛಪ, ಮುಕುಂದ, ಕುಂದ (ಅಥವಾ ನಂದಕ), ನೀಲ, ವರ (ಅಥವಾ ಖರ್ವ) ಗಳೆಂಬ ಒಂಬತ್ತು ನಿಧಿ ಗಳಲ್ಲಿ ಒಂದು: ಮಹಾಪದ್ಮ ಪದ್ಮ ... ವರವೆಂಬ ನವನಿಧಿಗಳಿಗಧಿಕಾರ ಮುಂಟಾಗಿ (ವಿವೇಕ. ೨೨೧). ೨೦. [ಜೈನ] ಚಕ್ರವರ್ತಿಯ ಕಾಳ, ಮಹಾಕಾಳ, ನೈಸರ್ಪ, ಪಾಂಡುಕ, ಪದ್ಮ, ಪಿಂಗಳ, ಮಾಣವಕ, ಶಂಖ, ಸರ್ವರತ್ನಗಳೆಂಬ ಒಂಬತ್ತು ನಿಧಿಗಳಲ್ಲಿ

ಒಂದು : ಅನುಕ್ರಮದಿಂ ಶ್ರೀಗೃಹದೊಳ್ ಪುಟ್ಟಿದ ಶಾಳ ಮಹಾಶಾಳ ನೈಸರ್ಪ ಪಾಂಡುಕ ಪದ್ಮ ಪಿಂಗಳ ಸಾಣವಕ ಶಂಖ ಸರ್ವರತ್ನಂಗಳೆಂಬ ನವನಿಧಿಗಳುಂ (ಅಪಿಪು. ೧೫-೩ ೭); ಶಾಳ ಮಹಾಶಾಳ ಪದ್ಮ . . . ಎಂಬೊಂಬತ್ತು ನಿಧಿಗಳುಮನನುಕ್ರಮದೊಳರ್ಚಿಸಿ (ಚಂದ್ರಪು.೬-೧೨೧೧೭). 'ನವನಿಧಿ' ಪರಾ. ೨೧. ಒಂದು ಕಾಲಗಣನೆ : ಎಂಬತ್ತುನಾಲ್ಕು ಮತ್ತು ಎಂಬತ್ತುನಾಲ್ಕು ಲಕ್ಷ ಗುಣಿತಕ್ರಮದಿಂದ ಕುಮುದಾಂಗ ಮತ್ತು ಕುಮುದ, ಪದ್ಮಾಂಗ ಮತ್ತು ಪದ್ಮ . . . ಎಂಬಿವು ಕ್ರಮದಿಂದ ಆಗುತ್ತವೆ (ಜೈನಸಿ. ೩೦೬).

ಪದ್ಮದ ಸುತ = ತಾವರೆಯಲ್ಲಿ ಹುಟ್ಟಿದವನು ; ಬ್ರಹ್ಮ : ಪದ್ಮದ ಸುತನುಳಿಕಳಾಸದ್ಮಂ (ಅರ್ಧನೇ. ೬-೮೯). **ಪದ್ಮದ ಹಾವು** = ಕೃಷ್ಣ ಸರ್ಪದಂತೆ ಹೆಡೆಯಲ್ಲಿ ಪದ್ಮದ ಚಿಹ್ನೆಯುಳ್ಳ ಒಂದು ಬಗೆಯ ಸಣ್ಣ ಜಾತಿಯ ವಿಷಸರ್ಪ : (ಪ). [ಸಂ.]

ಪದ್ಮಕ (ನಾ). ೧. ಆನೆಯ ಮೈಮೇಲೆ ಕಂಡುಬರುವ ಬಿಳಿಯ ಅಥವಾ ಬಣ್ಣದ ಚುಕ್ಕೆ : "ಬಿಂದು, ಪದ್ಮಕಂ–ಈ ೨ ಚಿಬ್ಬು" (ಹಲಾಯು. ೩೬-೬೬). ೨. ಒಂದು ಬಗೆಯ ಮರ ಮತ್ತು ಅದರ ಚೆಕ್ಕೆ : "ಪದ್ಮಕಂ–ಪದ್ಮಕ . . . ಕೋಷ್ಠ" (ಓಷಧಿ. ೯೦); ಮಧು ಜೀವನ ಪದ್ಮಕಂಗಳಂ ತಳ್ತೊಳ್ಮಾಗಧಸಹಿತಂ ಪ್ರತಿಪಾನದ ವಿಧಾನಮಂ ಶರದದಂದು ಮಾಟ್ಟುನುನಯದಿಂ (ಅಶ್ವಶಾ. ೬-೮೩); ಪದ್ಮಕ, ಅಡು ಸೋಗೆಸೊಪ್ಪು . . . ತಾವರೆಗೆಣಸು–ಇವು ಪ್ರತ್ಯೇಕ ಗ ೨ ತೂಕ ಹಾಲಿನಿಂದ ಸಣ್ಣನಾಗಿ ಅರೆದು (ಸಕವೈ. ೧೩೯); ಬಟ್ಟೆಯೊಳ್ ಪಟ್ಟಣಗರುರಿಸಿದರ್ ಚಂದನಾಗರು ಸರಳ ಪದ್ಮಕದ ಚೂರ್ಣದಿಂದಲ್ಲಲ್ಲಿ ಧೂಪಮಂ ರಾಜಭಕ್ತಿಗೆ (ಶ್ರೀರಾಮಾ. ೧೧೯-೨೧೨). ೩. ಸುಗಂಧಯುಕ್ತವಾದ ಒಂದು ಬಗೆಯ ಮೂಲಿಕೆ ಮತ್ತು ಅದರಿಂದ ಮಾಡುವ ಸುಗಂಧ ದ್ರವ್ಯ : ಸಕುಟಿಲರಕ್ತೆ ವಶ್ಯತಿಲಕಂ ಸಕಲೌಷಧಿ ಕಾಮಯಂತ್ರಮುದ್ರಿಕೆ . . . ಪದ್ಮಕಕ[ದ]ನುಲೇಪನಂ (ಸಳಚಂ. ೩೦೯). ೪. ಒಂದು ಬಗೆಯ ಸರ್ಪ : ಬೆನ್ನಿನಲ್ಲಿ ರಕ್ತವರ್ಣವಾದ ಬಿಳಿದುಗಳುಳ್ಳದು ಪದ್ಮಕ ವೆನಿಸಿಕೊಂಬದು (ವಿಜಚಿ. ೨-೪). [ಸಂ.]

ಪದ್ಮಕರ್ಣಿಕೆ (ನಾ). ಕಮಲದ ಮಧ್ಯಭಾಗ,—ಬೀಜಕೋಶ : ಪದ್ಮನೇತ್ರಂ ಪದ್ಮಕರ್ಣಿಕಾನಾಸಿಕಂ . . . ಸಿರಿಯಿಂದೆ ಪದ್ಮೆಗೆಣೆಯಾಗಿ ಪದ್ಮಶ್ರೀವೆಸರನೆ ತಾಂ ಪಡೆದಳನ್ವರ್ಥದಿಂ (ಸಮ್ಯಕೌ. ೯-೩).

[ಪದ್ಮ + ಕರ್ಣಿಕೆ]

ಪದ್ಮಕಾಷ್ಠ (ನಾ). = ಪದ್ಮಕಾಷ್ಠ : ಸೂರ್ಯ ಚವಾಳಾ ಮಣದ ಮೇಲೆ ಕಿಮ್ಮತ್ತು ಇಪತಕ್ಕ ಚೀನಸಗಳು. ೧, ಅಕ್ಕಲಖಾರ . . . ೧೨೪, ಪದ್ಮಕಾಷ್ಠ (ಮುಂಬಪ್ರಾ. ೧೩೬). [<ಸಂ. ಪದ್ಮಕಾಷ್ಠ]

ಪದ್ಮಕಾಷ್ಠ (ನಾ). ೧. ಒಂದು ಬಗೆಯ ಮರ : "ಪದ್ಮವೃಕ್ಷಂ, ಪದ್ಮಕಾಷ್ಠಂ–ಈ ಯೆರಡುಂ ಪದ್ಮಕ" (ಓಷಧಿ. ೯೩). ೨. ಪದ್ಮವೆಂಬ ಮರದ ಸುಗಂಧಮಯವಾದ ಸೌದೆ,—ಕಟ್ಟಿಗೆ. [ಸಂ.]

ಪದ್ಮಕೇಸರ (ನಾ). ತಾವರೆಯಲ್ಲಿರುವ ಕುಸುರು ; ಕಿಂಜಲ್ಕ : "ಪಂಚಸುಗಂಧಃ – ಶ್ರೀಗಂಧ . . . ಪದ್ಮಕೇಸರ, ತಾವರೆಯ ಕೇಸರ" (ಓಷಧಿ. ೯೩) ; ಸಾಮುದ್ರಲವಣ, ಪದ್ಮಕೇಸರ ಇವೆರಡನು ಸಮಾಂಶವಾಗಿ ತೆಗೆದುಕೊಂಡು ನೀರಿಂದ ಅರೆದು ಪಾನವ ಮಾಡಿಸಲು ಓಕಿಯ ಎಲ್ಲಾ ವಿಷಗಳೂ ಶಮನವಹುವು (ವೈದ್ಯಸಾ. II, ೨೨೦). [ಪದ್ಮ + ಕೇಸರ]

ಪದ್ಮಕೇಸರಿ (ನಾ). = ಪದ್ಮಕೇಸರ : ನಾಗಕೇಸರಿ, ಪದ್ಮಕೇಸರಿ, ತಾವರೆಗೆಡ್ಡೆ, ನೈದಿಲೆಗೆಡ್ಡೆ . . . ಖಜೋರ–ಇಷ್ಟನೂ ಸಮಭಾಗವಾಗಿ ಕೂಡಿ ಚೂರ್ಣವಂ ಮಾಡಿ (ಸಕವೈ. ೨೯೯).

[<ಸಂ. ಪದ್ಮಕೇಸರ]

ಪದ್ಮಕೋಶ (ನಾ). ೧. ತಾವರೆಯ ಮೊಗ್ಗು : ಪದ್ಮಕೋಶಸ್ತನೆ ಚಪಲಚಕೋರಾಕ್ಷಿ ನಿಂದಿರ್ದೊಡೆ (ರಾಜಶೇ. ೪-೧೩). ೨. [ನಾಟ್ಯ] ಹಸ್ತಮುದ್ರೆಗಳಲ್ಲಿ ಒಂದು ಬಗೆ : ಅಸಂಯುತಹಸ್ತಗಳು ಯಾವುವೆಂದರೆ – ೧ ಪತಾಕ . . . ೧೨ ಪದ್ಮಕೋಶ (ಅಭಾನ್ಯ. ೪೮).

[ಪದ್ಮ + ಕೋಶ]

ಪದ್ಮಗಂಧಿ$_1$ (ನಾ). ಕಮಲದ ಹೂವಿನಂತೆ ಸುಗಂಧವುಳ್ಳವಳು ; ಪದ್ಮಿನೀಜಾತಿಯ ಸ್ತ್ರೀ : (ಪ). [<ಸಂ. ಪದ್ಮಗಂಧಾ]

ಪದ್ಮಗಂಧಿ$_2$ (ನಾ). ಒಂದು ಬಗೆಯ ಮರ : "ಪದ್ಮಗಂಧಿ–ಹಿಪ್ಪಲಿ ಮೂಲ, ಪದ್ಮಕ" (ಓಷಧಿ. ೯೩). [ಸಂ.]

ಪದ್ಮಗಣ (ನಾ). [ಛಂದ] "ಮುಡಿಗಿಂತಲೂ ಅಕ್ಷರಪ್ರಮಾಣದಲ್ಲಿ ಉದ್ದವಾಗಿ, ಮುಕ್ತಾಯದ ಭಾವನೆಯನ್ನು ಅದಕ್ಕಿಂತ ಸಾವಕಾಶವಾಗಿ ತರುವ ೮೮೮ ಲಕ್ಷಣದ ವಿಶೇಷಗಣಕ್ಕೆ "ಪದ್ಮಗಣ" ಎಂಬ ಹೆಸರು" (ಸಮಾಲೋ. ೨೧೩). [ಪದ್ಮ + ಗಣ]

ಪದ್ಮಗದ್ದುಗೆ (ನಾ). ಕಮಲದ ಆಕಾರದಲ್ಲಿ ರಚಿಸಿರುವ ಪೀಠ : ಶ್ರೀಕೃಷ್ಣಯತಿತೋಷದಿಂ ಪದ್ಮಗದ್ದುಗೆಯಡರೆ (ನವನೇ. ೧೦-೬೯).

[ಪದ್ಮ + ಗದ್ದುಗೆ$_2$ (<ಗರ್ದುಗೆ$_2$)]

ಪದ್ಮಗರ್ಭ (ನಾ). ಕಮಲದಲ್ಲಿ ಜನ್ಮ ತಾಳಿದವನು ; ಬ್ರಹ್ಮ : ಅಳ್ಸುಂ ನಿರಾಳಂಬಮಾ ಬನವಾಸಂ ರಸೆಗೆಂಬ ಶಂಕೆಯೊಳೆ ದೇವೇಂದ್ರಾಲಯಂಗಳ್ಗೆ ದೇವನಗಂ ಪೋಲ್ವುದು ಪದ್ಮಗರ್ಭನ ಕಿರೀಟಸ್ತಂಭಮುಂ ಸ್ತಂಭಮುಂ (ಅಜಿಪು. ೨-೩). [ಪದ್ಮ + ಗರ್ಭ]

ಪದ್ಮಚಾರಿಣಿ (ನಾ). ಒಂದು ಬಗೆಯ ಸಸ್ಯ ; ಬೆಟ್ಟದಾವರೆ : "ಅನ್ಯಥಾ, ಅತಿಶರಾ, ಪದ್ಮಾ, ಚಾರಟೀ, ಪದ್ಮಚಾರಿಣೀ–೫ ಕಾಶ್ಮೀರ ದೇಶದಲ್ಲಿರುವ ಬೆಟ್ಟದಾವರೆ ಹೆಸರು" (ಸಿದ್ಧಾಂತಿ. ೧೪೫).

[ಸಂ. ಪದ್ಮಚಾರಿಣೀ]

ಪದ್ಮಜ (ನಾ). = ಪದ್ಮಗರ್ಭ : ಜಗಮಂ ಮಾಡಿದ ಪದ್ಮಜಂ ಪಡೆದ ನಲ್ಲೀ ಕನ್ನೆಯಂ (ಪಂಪಭಾ. ೪-೭೫); ವಿಪುಲಶ್ರೀಯು ಪದ್ಮಜ ಸೋಮಧರ ನಾರಾಯಣರು ಕೊಡಲೆಂದು ಹರಸಿತು ಭೂಸುರವ್ರಾತ (ಕುಮ್ಮಾಅ. ೧೦-೪೦). [ಸಂ.]

ಪದ್ಮಜನಿ (ನಾ). = ಪದ್ಮಗರ್ಭ : ಮಂಡಿತಮತಿಯಿಂದೆ ಪದ್ಮಜನಿಯಂ . . . ಜಯಿಸಿರ್ದನುದಾತ್ತವೈಭವಂ (ರಾಜಶೇ. ೪-೧೧೧). [ಸಂ.]

ಪದ್ಮಜಸೂನು (ನಾ). ಬ್ರಹ್ಮನ ಮಗ ; ಜಾಂಬವಂತ : ಓಲಗ ನಡೆಕಂದರಾ ಕಪಿಪಾಲ ಪದ್ಮಜಸೂನು ಕೇಸರಿ ಶೂಲಿಸಮಬಲ ಹನುಮ ಹರಿಸುತಸುತ ಸುಷೇಣಕರು (ತೊರರಾ. ೬-೧೦-೧೬). [ಸಂ.]

ಪದ್ಮಜಾಂಡ (ನಾ). ಬ್ರಹ್ಮಾಂಡ; ವಿಶ್ವ: ಒಡೆದುದೊ ಪದ್ಮಜಾಂಡಮವನೀವಳಯಂ ಸಿಳಗಿತ್ತೊ (ಚಂದ್ರಪು. ೬-೩೧) ; ದೆಸೆಯೊಗಸಗಳಾವೆಡೆಯೊಳೆಂದುಸುರಲ್ಕೆ ಬಾರದಾದುದು ಪದ್ಮಜಾಂಡಮದು ಬೆಸುಗೆ ಬಿಡದಿರದೆಂಬ ಮಾಳ್ಕೆಯಿಂ (ಭೋರಾಸು. ೬-೪). [ಪದ್ಮಜ + ಅಂಡ$_2$]

ಪದ್ಮಜಾಪತಿ (ನಾ). ಲಕ್ಷ್ಮಿಯ ಒಡೆಯ; ವಿಷ್ಣು : ಹಿರಿಯ ಒಡೆಯನಲ್ಲವೆ . . . ಪದ್ಮಜಾಪತಿ ದೈತ್ಯನ ಕೊಂದು ವೇದ ಕಮಲೋದ್ಭವಗಿತ್ತು ಕಾಯಿದ ಕಾರಣದಿಂದ (ಪುರಂದ. ಧಾ. ೩-೧೨೨-೨). [ಸಂ.]

ಪದ್ಮತಂತ್ರ (ನಾ). [ಶೈವ] ಸ್ವಾಯಂಭುವಾಗಮದ ಮೂರು ಪ್ರಕಾರಗಳಲ್ಲಿ ಒಂದು : ಸ್ವಯಂಭೂತ ಪ್ರಜಾಪತಿಮತ ಪದ್ಮತಂತ್ರವೆಂದು ಸ್ವಾಯಂಭುವಾಗಮದ ತ್ರಿಭೇದಂಗಳು (ವಿವೇಕ. ೬೫).

[ಪದ್ಮ + ತಂತ್ರ]

ಪದ್ಮನಾಭ (ನಾ). ೧. ಹೊಕ್ಕುಳಲ್ಲಿ ಕಮಲವುಳ್ಳವನು ; ವಿಷ್ಣು : "ವಿಷ್ಣುಃ . . . ಪದ್ಮನಾಭಃ . . . ಗದಾಧರಃ–ಈ ೪೫ ನಾರಾಯಣನ

ಪೆಸರ್" (ಪಲಾಯು. ೫-೨೨) ; ಒಂದು ಧನುವಿಂಗೆ ಮೂಱಿಂಬ ಪಿಡಿದೆ ಒಂದು ಬಾಣವ ಬಿಡಲಾಗಿ ಪದ್ಮೋದ್ಭವನ ಸೃಷ್ಟಿಯ ಕಟ್ಟತ್ತು ಮತ್ತೊಂದು ಬಾಣವ ಬಿಡಲಾಗಿ ಪದ್ಮನಾಭನ ಹೆಡಗಯ್ಯ ಕಟ್ಟತ್ತು (ಸಕಪ. III, ೧೦೨-೧೯೧, ಗಾಣದ ಕಪ್ಪಣ್ಣನ ಸಚಿಸ) ; ಶೋಭನ ಶೋಭನವೆ . . . ಪದ್ಮನಾಭ ಶ್ರೀಪುರಂದರವಿಠಲಗೆ ಪದ್ಮಾವತೀಪ್ರಿಯ ಶ್ರೀನಿವಾಸಗೆ (ಪುರಂದ. ಧಾ. ೧-೧೫೬-೫). ೨. [ಗಣಿತ] (?) : ಮುಗ್ಗಿ ಗಣಿತ×××ಮಂಗಳಿ ಅಳತೆ ರಾಜನೀತಿ ಬಡ್ಡಾಂತರ ಪದ್ಮನಾಭ . . . ತಗುಣಿ ಉತ್ಕರಿತ ಗುಣಮುತ್ಪನ ಜೆಲ್ವಿನ ಗುಣಿತವುಂ ಅಷ್ಟಾದಶಗುಣಿತಂಗಳು (ಕ್ಷೇತ್ರಗ. ೨-೪). [ಸಂ.]

ಪದ್ಮನಾಲ, ಪದ್ಮನಾಳ (ನಾ). ಕಮಲದ ದಂಟು,—ದೇಟು,—ಕಾವು. **ಪದ್ಮನಾಳ:** ಪದ್ಮನಾಳಪ್ರತೋಳಿಯ ಸವುತೆಗೊಳದ ಕೋಮಲಿತ ಸದ್ಭಾಹುಯುಗದಿ . . . ಪದ್ಮವನದಂತೆ ರಸಿಕೌಘರೋಲಂಬನಲಿಯಲ್ ಸತಿಯರ್ವೆತಂದರು (ಸಂದಿಸಾ. ೪-೧೩). [ಪದ್ಮ+ನಾಲ,]

ಪದ್ಮನಾಳ 'ಪದ್ಮನಾಲ' ನೋ.

ಪದ್ಮಪತ್ರ (ನಾ). ೧. ತಾವರೆಯ ಎಲೆ ; ಕಮಲಪತ್ರ : ಪದ್ಮಪತ್ರದ ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ (ಸಂರಾಮಾ. ೯-೬೬) ; ಪದ್ಮಪತ್ರಂಗಳಿಂದೊತ್ತಿ ಸಿಳೊಳುತ್ತೆ ಕಾಮನಂದಿಂ ಮುಮ್ಮಳಿಗೊಳುತ್ತೆ (ಸಂಬಿರ. ೧೩-೧೧೬) ; ಪದ್ಮಪತ್ರದ ಗುಣ–ತಾವರೆಎಲೆಯಲ್ಲಿ ಊಟ ಮಾಡುವುದರಿಂದ . . . ಹೊಟ್ಟೆಯಲ್ಲಿ ಹುಟ್ಟುವ ಸಕಲರೋಗ ಸಮೂಹವನ್ನೂ ಹೋಗಲಾಡಿಸುವುದು (ಸಕವೈ. ೪೭). ೨. ತಾವರೆಯ ದಳ ; ಕಮಲದ ರೇಕು. ೩. ಒಂದು ಬಗೆಯ ಸಸ್ಯ ; "ಪುಷ್ಕರ ಮೂಲ" (ಪಂಡಿತ. ೨೪೪): "ಪೌಷ್ಕರಂ, ಕಾಶ್ಮೀರಂ, ಪದ್ಮಪತ್ರಂ–೩ ಪೌಷ್ಕರಮೂಲೇ – ತಾವರೇಗಡ್ಡೆ, ಕಾಶ್ಮೀರದಲ್ಲಿ ನೆಲತಾವರೇಗಡ್ಡೆ" (ಸಿದ್ಧಾಂತಿ. ೧೪೫).

ಪದ್ಮಪತ್ರಜಳ = ತಾವರೆಎಲೆಯ ಮೇಲಿನ ನೀರಿನ ಹನಿ : ಪೊಯ್ಯ ಕಂತುಕದ ಚಿಂದಂ ವಿಕ್ಕು ಮೇಲ್ಕುರ್ಬುತಂ ನಡೆದರ್ ನೋಳ್ಪೊಡೆ ಪದ್ಮಪತ್ರಜಳದಂತಲ್ಲಾಡದಾಶ್ಚರ್ಯದಿಂ(ತ್ರಿಪುವಿ.೨೪-೨೬೬).

[ಪದ್ಮ+ಪತ್ರ]

ಪದ್ಮಪಾಣಿ (ನಾ). ೧. ತಾವರೆಯನ್ನು ಕೈಯಲ್ಲಿ ಹಿಡಿದಿರುವ ವ್ಯಕ್ತಿ. ೨. ಲಕ್ಷ್ಮಿ. ೩. ಪಾರ್ವತಿ. ೪. ವಿಷ್ಣು . ೫. ಬ್ರಹ್ಮ . ೬. ಬುದ್ಧ. ೭. ಸೂರ್ಯ. [ಪದ್ಮ+ಪಾಣಿ]

ಪದ್ಮಪೀಠ (ನಾ). ೧. ಕಮಲದ ಪೀಠ : ಪದ್ಮಪೀಠದಗ್ರಭಾಗದೊಳ್ಕರಂ ವಿರಾಜಿಪಾ ಪದ್ಮಸದ್ಮಯಂತೆ ತೋರ್ಪ ಯಂತ್ರಮಧ್ಯದಲ್ಲಿ . . . ತತ್ಪದ್ಮನೇತ್ರೆಯೊಪ್ಪಿದಳ್ (ಉದ್ಭವ. ೫-೫೫). ೨. ಕಮಲದ ಆಕಾರದಲ್ಲಿ ರಚಿಸಿರುವ ಪೀಠ,–ಆಸನ : ಶಿವಾರ್ಚನೆಗುಪಯುಕ್ತನುಗಿ ಅನಂತಪೀಠ...ಪದ್ಮಪೀಠ...ಪ್ರಣವಪೀಠಗಳ ಭಾವನೆಯೆಂದುಪಕಲ್ಪಿತಮಾದ ದಿವ್ಯಮಂಟಪಮಧ್ಯಗತಸಿಂಹಾಸನಕ್ಕೆ (ವಿವೇಕ. ೧೦೪) ; ಪ್ರತಿಮೆಗಳಿಗೆ ಬೇಕಾದ ಪೀಠಗಳು ಅನೇಕವಿಧವೆಂದೂ ಅವುಗಳಲ್ಲಿ ಮುಖ್ಯವಾದುದು ಭದ್ರಪೀಠ, ಪದ್ಮಪೀಠ . . . ಶ್ರೀಕಾಮ್ಯವೆಂದೂ ಹೇಳಿದೆ (ಭಾವದ. ೫೧೭). [ಪದ್ಮ+ಪೀಠ]

ಪದ್ಮಪುರಾಣ (ನಾ). ಹದಿನೆಂಟು ಮಹಾಪುರಾಣಗಳಲ್ಲಿ ಒಂದು : ಬ್ರಹ್ಮಪುರಾಣ ಪದ್ಮಪುರಾಣ . . . ವೈಷ್ಣವಪುರಾಣ ಶೈವಪುರಾಣ . . . ಬ್ರಹ್ಮಾಂಡಪುರಾಣವೆಂಬವೇ . . . ಹದಿನೆಂಟು ಮಹಾಪುರಾಣಂಗಳು (ವಿವೇಕ. ೫) ; ಪದ್ಮಪುರಾಣವ ವಿಚಾರಿಸು ಮನುಜ ಅಲ್ಲಿ ಸ್ಪಷ್ಟವಾಗಿ ಪೇಳುವುದು ವಚನ (ಪುರಂದ. ೫-೧೬೧-೧೧೧೦).

[ಪದ್ಮ+ಪುರಾಣ]

ಪದ್ಮಪುಷ್ಕರ (ನಾ). ಒಂದು ಬಗೆಯ ಸಸ್ಯ : ಪದ್ಮಪುಷ್ಕರ, ಪುಷ್ಕರ ಮೂಲ (ಮೈಪಿಗಿ. ೪೬-೯೧೬). [ಪದ್ಮ+ಪುಷ್ಕರ]

ಪದ್ಮಪ್ರಭ (ನಾ). ೧. ಕಮಲದಂತೆ ಕಾಂತಿಯುಳ್ಳದು. ೨. [ಜೈನ] ಆರನೆಯ ತೀರ್ಥಂಕರನ ಹೆಸರು : ವ್ಯಸಭ ಅಜಿತ . . . ಪದ್ಮಪ್ರಭ . . . ವರ್ಧಮಾನರೆಂದಿಪ್ಪತ್ತುನಾಲ್ವರ್ ತೀರ್ಥಕರರ್ (ಜಾವುಂಪು. ೪೦೨). ೧,೩: ವದನಂ ಚಂದ್ರಪ್ರಭಂ ವಿಕ್ರಮಭುಜಮಜಿತಂ ಪಾಣಿ ಪದ್ಮಪ್ರಭಂ . . . ತಾನದಱಿಂ ಪ್ರತ್ಯಕ್ಷ ತೀರ್ಥೇಶ್ವರನೆನೆ ನೆಗಟ್ಟಂ ಪದ್ಮನಾಭಪ್ರಧಾನಂ (ಅರ್ಧನೇ. ೧-೪೩). [ಸಂ.]

ಪದ್ಮಬಂಧು (ನಾ). ತಾವರೆಯ ಗೆಳೆಯ,—ಬಂಧು ; ಸೂರ್ಯ. [ಪದ್ಮ+ಬಂಧು]

ಪದ್ಮಬೀಜ (ನಾ). ೧. ತಾವರೆಯ ಬೀಜ. ೨. ಒಂದು ಬಗೆಯ ಸಸ್ಯ : (ಮೈಪಿಗಿ. ೪೮-೯೪೯) ; (ಸಸ್ಯಸಿ. ೬೮). [ಪದ್ಮ+ಬೀಜ]

ಪದ್ಮಭವ (ನಾ). ೧. = ಪದ್ಮಗರ್ಭ : ಪದ್ಮಭವನ ಸುತಿಗಂ ಹರಿ ನಿನ್ನ ಮಹತ್ವಂ ಪ್ರಥಿತಮಗಾಧಂ (ಜಗವಿ. ೩-೧೦೫) ; ಒಮ್ಮೆ ಬಗೆವನೆ ಪದ್ಮಭವ ನಿನ್ನ ಸ್ವಲ್ಪಪದವಿಯನು (ಬಸಪು. ೨-೧೯) ; ಬಿಡದೆ ಕಾದುವ ಗಂಡ ಪೆಂಡಿರನೇತಕೆ ಪಡೆದನಳಟಿ ಪದ್ಮಭವನು (ಹವಿಬ. ೬-೯). ೨. [ಛಂದ] ಬ್ರಹ್ಮಗಣ : ಎರಡಜಿಂಗಳಾಜಿಂಬ ಸಂಖ್ಯೆಯೊಳ್ ಬರೆ ಪದ್ಮಭವ ನುಬಾದುವು ಮೆಚ್ಚುವ ತೆಱದಿಂದಿರೆ ಮುಂದಣ ಪದಂ ಮುನ್ನಿನಂತಿರೆ ಕರಂ ಗೀತಕೆಯಿಂತಕ್ಕುಂ (ಛಂದೋಂಬು. ೫-೨೫೬). [ಪದ್ಮ+ಭವ]

ಪದ್ಮಭವಾಂಡ (ನಾ). = ಪದ್ಮಜಾಂಡ : ಪಾಯುಂ ಪೊಯ್ದೊಡವರ್ ಪದ್ಮಭವಾಂಡಮಂ ಮೃಡನ ಭಕ್ತರ್ ಬಲ್ಲಿದರ್ಧೂವರಾ (ರಾಜತೇ. ೬-೧೧೫೪). [ಪದ್ಮಭವ+ಅಂಡ್]

ಪದ್ಮಭೂ (ನಾ). ಬ್ರಹ್ಮ : "ಬ್ರಹ್ಮಾ, ಸ್ರಷ್ಟಾ, ಧಾತಾ, ಪರಮೇಷ್ಠೀ, ಪದ್ಮಭೂಃ . . . ಕಮಲಾಸನಃ – ಈ ೩೦ ಬ್ರಹ್ಮನ ಪೆಸರ್" (ಪಲಾಯು. ೨-೬). [ಸಂ.]

ಪದ್ಮಭೂಷಣ (ನಾ). ಕಲೆ, ವಿಜ್ಞಾನ, ಸಮಾಜಸೇವೆ, ಆಟಪಾಟಗಳು ಮುಂತಾದ ಯಾವುದಾದರೂ ಕ್ಷೇತ್ರದಲ್ಲಿ ವಿಶೇಷ ಸಾಧನೆಯನ್ನು ಮಾಡಿದ ವ್ಯಕ್ತಿಗೆ ಭಾರತಸರ್ಕಾರದವರು ಕೊಡುವ ಒಂದು ದೊಡ್ಡ ಪ್ರಶಸ್ತಿ ; P ಇದು 'ಪದ್ಮಶ್ರೀ'ಗಿಂತಲೂ ಮೇಲ್ಮಟ್ಟದ ಪ್ರಶಸ್ತಿ : ಪದ್ಮಭೂಷಣ, ಪದ್ಮಶ್ರೀಗಳು ಹಲ್ಮಾಜನರ ಸೊತ್ತಾಗ್ತಾ ಇವೆ. ಇದಕ್ಕೆ ಕಾರಣ – ನಮ್ಮ ಜನದ ಮೊದ್ದುತನ (ಸತೆದಾ. II, ೧೨೧೬). 'ಪದ್ಮವಿಭೂಷಣ' ಪರಾ. [ಸಂ.]

ಪದ್ಮಮಂದಿರೆ (ನಾ). ತಾವರೆಯೇ ಮನೆಯಾಗಿರುವವಳು ; ಲಕ್ಷ್ಮಿ : "ಶರಧಿಸುತೆ ರಾಮ ಗೋವಿಂದ ಲಕ್ಷ್ಮಿ ಪದ್ಮಮಂದಿರೆ . . ಮನ್ಮಥಮಾತೆಯೆನಲು ಸಿರಿಗಳ್ಕು ನಾಮಂ" (ಮಂಗಂರಾ. ೬-೧೪).

[ಸಂ. ಪದ್ಮಮಂದಿರಾ]

ಪದ್ಮಮಣಿ (ನಾ). ಒಂದು ಬಗೆಯ ಆಭರಣ (?) : ಚಿಲ್ಲಣಂ ಬಾಲಗ್ಯೆಪಂ . . . ಬಲ್ಲೆಯಂ ಚಕ್ರ ಗಿರುಗಟಿ ತೊಡಕುವಳೆ ವಂಕಿ ಕಲ್ಲಮಣಿ ಪದ್ಮಮಣಿ ಪುತ್ರಜೀವಿಯು ಹುಲ್ಲುಮಣಿ ಪಟಿಕವಣಿ ಭೂಷಣಂ (ಗುರುಚಾ. ೩-೫೦). [ಪದ್ಮ+ಮಣಿ]

ಪದ್ಮಮಿತ್ರ (ನಾ). ತಾವರೆಯ ಗೆಳೆಯ ; ಸೂರ್ಯ : ಕೆಂಪೇಱುತು ಮೂಡಣದಿಸೆ . . . ಸಕಳಜಗಂ ಪೆಂಪೇಱುತು ಪದ್ಮಮಿತ್ರನುದಯಿಸುವಾಗಳ್ (ನಿಸಿಕ. ೫-೪). [ಪದ್ಮ+ಮಿತ್ರ]

ಪದ್ಮಮುಖಿ (ನಾ). ೧. ತಾವರೆಯಂತೆ ಮುಖವುಳ್ಳವಳು: ಪದ್ಮಮುಖಿ. . . ಪದ್ಮಪ್ರಜಮಂ ಪದ್ಮಾಕರದಲ್ಲಿ ಕೊಯ್ದುಳುತ್ಸವದಿಂದಂ (ತ್ರಿಪುವಿ. ೨೪-೬೬). ೨. [ಛಂದ] ಪ್ರತಿಪಾದದಲ್ಲಿ ಹದಿನಾರು

ಅಕ್ಷರಗಳನ್ನುಳ್ಳ, ಅಷ್ಟಿಛಂದಸ್ಸಿನಲ್ಲಿಯ ಒಂದು ಸಮವಾದ ವೃತ್ತದ ಹೆಸರು : ಇಂದುಗಣಂ ಶರಸಂಖ್ಯೆಯೊಳೊಂದಿರೆ ಚಂದ್ರಧರಂ ಪಿಂದು ಪದಾಂತದೊಳರ್ದೊಡೆ . . . ಜಗದ್ವಂದಿತ ಪದ್ಮಮುಖೀ ನಿಜ ನಾಮದೆ ಪದ್ಮಮುಖೀ (ಛಂದೋಂಬು. ೨-೧೬೧). [ಸಂ. ಪದ್ಮಮುಖೀ]

ಪದ್ಮಮುದ್ರೆ (ನಾ). ೧. ಮಂತ್ರಶಾಸ್ತ್ರದಲ್ಲಿ ಹೇಳಿರುವ ಕಮಲದ ಆಕೃತಿಯುಳ್ಳ ಮುದ್ರೆ ; ವಿಶೇಷವಾಗಿ ಮಾಧ್ವರು ಹಣೆಯಲ್ಲಿ ಧರಿಸುವ ಮುದ್ರೆಗಳಲ್ಲಿ ಒಂದು : 'ಚಕ್ರಮುದ್ರೆ' ಪರಾ. ೨. ಧ್ಯಾನಕಾಲದಲ್ಲಿ ತೋರಿಸುವ ಮಂತ್ರಶಾಸ್ತ್ರಪ್ರಸಿದ್ಧವಾದ ಒಂದು ಬಗೆಯ ಹಸ್ತಮುದ್ರೆ : ಪದ್ಮಮುದ್ರೆ . . . ಸಂಹಾರ ಮುದ್ರೆಯೊಂಬಾದಿಯಾಗಿ ಸಕಲ ಮುದ್ರೋಪಮುದ್ರಾಬಂಧ ಲಕ್ಷಣಂಗಳಂ ಗುರುಮುಖದಿಂದಱಿತು (ವಿವೇಕ. ೧೧೦) ; ಪದ್ಮದಲಿ = ಪದ್ಮಮುದ್ರೆಯಲ್ಲಿ, ಪ್ರಸ್ತಾವ = ಪ್ರಸ್ತಾವನಾಮಕ ಪರಮಾತ್ಮನು . . . ಇರುವನು (ಹಸಾರ. ೮-೨೮ ಪದ್ಯಾರ್ಥ). [ಪದ್ಮ+ಮುದ್ರೆ]

ಪದ್ಮಯ (ನಾ). ಒಬ್ಬಾತನ ಹೆಸರು : ಆತನ ಅನುಜ ಪದ್ಮಯನು ಆತನ ತಮ್ಮ ಚಿಕ್ಕತಂಮ್ಮಗೌಡರು (ಎಕ. VII, ೩ಪಮೊ. ೧೧೪-೧೬ ; 950 ?). [ಪದ್ಮ+ಅಯ್ಯ (<ಅಯ್ಯ)]

ಪದ್ಮಯೋನಿ (ನಾ). = ಪದ್ಮಗರ್ಭ : ಬರೆವೊಡೆ ಚೀರಳಿಟ್ಟ ಕರುವಿಟ್ಟಪನೆಂದೊಡೆ ಪದ್ಮಯೋನಿ ಕಂಡರಿಪೊಡೆ ವಿಶ್ವಕರ್ಮನಱಿಗುಂ ನೆಱೆಯಂ (ಪುಷ್ಪಪು. ೨-೯೨). [ಪದ್ಮ+ಯೋನಿ]

ಪದ್ಮರಾಗ (ನಾ). ೧. ಕಮಲದ ಬಣ್ಣ ; ಕೆಂಪುಬಣ್ಣ. ೨. ಕೆಂಪು ಬಣ್ಣದ ರತ್ನ ; ಮಾಣಿಕ್ಯ : "ಶೋಣಾಶ್ಮ, ಪದ್ಮರಾಗಃ – ಈ ೨ ಮಾಣಿಕ್ಯಂ" (ಹಲಾಯು. ೨೯-೨೧) ; ಸಸುರ್ಪವಡೆದ ನೆಲದೊಳ್ ಪದ್ಮರಾಗದ ಪರಲ್ಗಳಂ ಬಲಿಗೆದಱಿದಂತೆ ಉಪಾಶ್ರಯಂಬಡೆದಳಂಕರಿಸುವಿಂದ್ರಗೋಪಂಗಳುಮಂ . . . ಕಂಡು (ಪಂಪಭಾ. ೭-೨೫ ಪ) ; ಓರೊಂದೆಡೆಯೊಳ್ ಪೊಳೆದುವು ರಾರಾಜಿಪ ಪದ್ಮರಾಗರುಚಿಮಂಜರಿಗಳ್ (ಪಂರಾಮಾ. ೧೨-೮೮) ; ಪದ್ಮರಾಗಂಗಳಂ ಮೌಕ್ತಿಕವ್ರಜಮನನುಮಾಡಿಕೊಂಡು ಮಂಗಳವಾಡದ ಬಸವನ ಮಹಮನೆಯ ಮುಂದೆ ಪೋಗಿರೆಂದು ಕುಬೇರನಂ ಕಳುಪುತಿರ್ದಂ (ಬಸರ. ೧೨-೩೪). [ಪದ್ಮ+ರಾಗ]

ಪದ್ಮರಿಪು (ನಾ). ಕಮಲದ ಶತ್ರು ; ಚಂದ್ರ : ವಿಶ್ರುತಯಶದಿಂದೆ ಪದ್ಮರಿಪುವಂ ರಿಪುವಂ ನಿಜತೇಜದಿಂದೆ . . . ಜಯಿಸಿರ್ದನುದಾತ್ತವೈಭವಂ (ರಾಜಶೇ. ೪-೧೧೧). [ಪದ್ಮ+ರಿಪು]

ಪದ್ಮರೇಖೆ (ನಾ). ೧. ಕಮಲದ ಆಕಾರದಲ್ಲಿ ಬರೆಯುವ ವಿನ್ಯಾಸ,— ರಂಗವಲ್ಲಿ : ವೃತ್ತಂ ಲತೆ ಸ್ವಸ್ತಿಕಂ ಪದ್ಮರೇಖೆ ಗೃಹ ಲಕ್ಷಣಮೆನಿಪ್ಪ ಬಂಧಂ ರಂಗವಾಲಿಯುಕ್ಕು (ಮಂಗರಾ. ೬೦-೧೪). ೨. [ಸಾಮುದ್ರಿ] ಅತುಳೈಶ್ವರ್ಯವನ್ನು ಪಡೆಯುವುದನ್ನು ಸೂಚಿಸುವುದೆಂದು ನಂಬಲಾದ ಅಂಗೈಯ ಒಂದು ರೇಖೆ,— ಗೆರೆ : ಹಸ್ತದಲ್ಲಿ ಪದ್ಮರೇಖೆಯಿರಲು ಕೋಟಿ ದ್ರವ್ಯಾಧಿಪತಿಯಾಗುವನು (ಸಾಮುಲ. ೫೫-೨೦) ; ಕರತಳದ ಪದ್ಮರೇಖಾಂಕಿತನ ನೋಡಿ ಗಿರಿವರ ತನೂಭವೆಯ ವದನಾಬ್ಜ ವೀಕ್ಷಿಸಿ . . . ಮೃದುಲತರ ಪರಿಯಂಕದಿಂ ಸಕಲ ಲೋಕಚೈತನ್ಯಾತ್ಮನುಸ್ಪವಡಿಸಿದ ಮುದದೊಳು (ನಂದಿಮಾ. ೨೪-೪). [ಪದ್ಮ+ರೇಖೆ]

ಪದ್ಮಲತೆ (ನಾ). ತಾವರೆಯ ಬಳ್ಳಿ : ಅಂತೊಂದೊಂದೆ ತನ್ನೀರಜಾಸ್ಪದಮೊಂದೊಂದಱೊಳೊಂದೆ ಪದ್ಮಲತೆ ಸಂದಿರ್ಕುಂ ಲಸತ್ಪತ್ರದಿಂ (ನೇಮಿಪು. ೮-೧೨೩). [ಪದ್ಮ+ಲತೆ]

ಪದ್ಮಲಾಂಛನ (ನಾ). ೧. ತಾವರೆಯ ಚಿಹ್ನೆಯನ್ನು ಹೊಂದಿರುವವನು. ೨. ಪದ್ಮರೇಖೆಯುಳ್ಳವನು ; ರಾಜ ; ದೊರೆ. ೩. ಬ್ರಹ್ಮ. ೪. ಕುಬೇರ. ೫. ಸೂರ್ಯ. [ಪದ್ಮ+ಲಾಂಛನ]

ಪದ್ಮಲೇಶ್ಯೆ (ನಾ). [ಜೈನ] ಕರ್ಮಸಂಬಂಧವಾದ ಬೂದು, ಕೃಷ್ಣ, ನೀಲ ಮೊದಲಾದ ಆರು ಲೇಶ್ಯೆಗಳಲ್ಲಿ ಒಂದು; P "ಕಮಲದ ಬಣ್ಣದಂತಿರುವುದು, ದಾನಶೀಲತೆ, ಭದ್ರಪರಿಣಾಮ, ಇಷ್ಟಾನಿಷ್ಟಉಪದ್ರವಸಹನೆ, ಮುನಿಗುರುಪೂಜಾಪ್ರೀತಿ – ಇವು ಇದರ ಲಕ್ಷಣ" (ಜೈನಕೋ. ೧೫೭) : ಗುರುಭಕ್ತಂ ಋಜು ಧರ್ಮಾನುರಾಗಿ ಭದ್ರಂ ಕ್ಷಮಾಗುಣಂ ತ್ಯಾಗಿ ದಯಾಪರನೆನಿಸುವ ನರನಂತಿಲ್ಲಿರವೊಪ್ಪಿರ್ದವನೆ ಪದ್ಮಲೇಶ್ಯೆಯ ಜೀವಂ (ಶ್ರಾವಕಾ. ೭೧-೧೭). 'ಲೇಶ್ಯೆ' ಪರಾ. [ಪದ್ಮ+ಲೇಶ್ಯೆ]

ಪದ್ಮಲೋಚನ (ನಾ). ೧. ಕಮಲದಂತೆ ಕಣ್ಣುಗಳುಳ್ಳವನು. ೨. ವಿಷ್ಣು : ಬಾರೆಲೆ ಪದ್ಮಲೋಚನನ ಮುಯ್ಯುನ ಪಾಂಡವ ನಿನ್ನ ಭಕ್ತವಿಸ್ತಾರಮಿದಿತ್ತುದೆನ್ನ ಬಗೆಗುತ್ಸವಮಂ (ಶಬಕಂ. ೫-೫೦). [ಪದ್ಮ+ಲೋಚನ]

ಪದ್ಮಲೋಚನೆ (ನಾ). ಕಮಲದಂತೆ ಕಣ್ಣುಗಳುಳ್ಳವಳು : ಪದ್ಮಮುಖಿ ಪದ್ಮಲೋಚನೆ . . . ಪದ್ಮವ್ರಜಮಂ ಪದ್ಮಾಕರದಲ್ಲಿ ಕೊಯ್ದುಳುತ್ಸವದಿಂದಂ (ತ್ರಿಪುವಿ. ೨೪-೬೭). [ಸಂ. ಪದ್ಮಲೋಚನಾ]

ಪದ್ಮವಾಸೆ (ನಾ). ಕಮಲದಲ್ಲಿ ವಾಸಿಸುವಳು ; ಲಕ್ಷ್ಮಿ : "ಲಕ್ಷ್ಮೀಃ, ಶ್ರೀಃ . . . ಪದ್ಮವಾಸಾಃ . . . ಈ ೯ ಲಕ್ಷ್ಮಿಯ ಪೆಸರು" (ಹಲಾಯು. ೬-೩೨). [ಸಂ. ಪದ್ಮವಾಸಾ]

ಪದ್ಮವಿಭೂಷಣ (ನಾ). ಕಲೆ, ವಿಜ್ಞಾನ, ಸಮಾಜಸೇವೆ, ಆಟಪಾಟಗಳು ಮುಂತಾದ ಯಾವುದಾದರೂ ಕ್ಷೇತ್ರದಲ್ಲಿ ವಿಶೇಷ ಸಾಧನೆಯನ್ನು ಮಾಡಿದ ವ್ಯಕ್ತಿಗೆ ಭಾರತಸರ್ಕಾರದವರು ಕೊಡುವ ಒಂದು ದೊಡ್ಡ ಪ್ರಶಸ್ತಿ ; P ಇದು 'ಪದ್ಮಶ್ರೀ', 'ಪದ್ಮಭೂಷಣ'ಗಳಿಗಿಂತ ಮೇಲ್ಮಟ್ಟದ ಪ್ರಶಸ್ತಿ. [ಸಂ.]

ಪದ್ಮವಿಷ್ಟರ (ನಾ). = ಪದ್ಮಪೀಠ ೧ : ನಿಂದ ಶಿಲೆ ತಪನತಪ್ತಮಿದೆಂದಂಬುಜನಿಳಯೆ ಪದ್ಮವಿಷ್ಟರಮಂ . . . ಆಕೃತೀಚ್ಛಂಗೆ ಪಡೆದು ಪದಪಂ ಮೆಱೆದಳ್ (ಆದಿಪು. ೯-೮೫); ಪರಮಂಗೆ ಲಕ್ಷ್ಮಿ ಪರಮಾದರದಿಂದಂ ಗೂಢ ಪದ್ಮವಿಷ್ಟರಮಂ ತಂದಿರಿಸಲ್ (ಅಜಿಪು. ೭-೯). [ಪದ್ಮ+ವಿಷ್ಟರ]

ಪದ್ಮವೃಕ್ಷ (ನಾ). ಒಂದು ಬಗೆಯ ಮರ : "ಪದ್ಮವೃಕ್ಷಂ, ಪದ್ಮಕಾಷ್ಠಂ— ಈ ಯೆರಡುಂ ಪದ್ಮಕ" (ಓಷಧಿ. ೯೩). [ಪದ್ಮ+ವೃಕ್ಷ]

ಪದ್ಮವೇದಿಕೆ (ನಾ). ಕಮಲದ ಆಕಾರದಲ್ಲಿ ರಚಿಸಿರುವ ಜಗಲಿ: ಅ ಜಂಬೂದ್ವೀಪದ ನಟ್ಟನಡುವೆ . . . ಪದ್ಮವೇದಿಕಾಪರಿವೃತರತ್ನತೋರಣಾಂಚಿತಜಿನಭವನಪರಿವೃತಮುಂ (ಆದಿಪು. ೧-೪೯ ಪ). [ಪದ್ಮ+ವೇದಿಕೆ]

ಪದ್ಮವ್ಯೂಹ (ನಾ). ೧. ಕಮಲಗಳ ಸಮೂಹ,—ಗುಂಪು. ೨. ಕಮಲದ ಆಕಾರದಲ್ಲಿ ನಿಲ್ಲಿಸಿದ ಒಂದು ಬಗೆಯ ಸೇನಾರಚನೆ : ಅಸಮಪದ್ಮವ್ಯೂಹವನು ಭೇದಿಸುವನಾವನೆನಲು ಕೇಳಿದು ಶಿಶುತನದ ಲಾಹವಕೆ ನಡೆದನು ನಾವು ಬೇಡೆನಲು (ಕುಸ್ಯಾದ್ರೋ. ೮-೨೨) ; ಸುತ್ತ ಪದ್ಮವ್ಯೂಹಮಂ ರಚಿಸಿ ನಡುವೆ ನರನುತ್ತಮತುರಂಗಮಂ ಕಟ್ಟಿ (ಜೈಮಿಭಾ. ೧೨-೧೦) ; ನನಗೆ ತಂದೆಯು ಪದ್ಮವ್ಯೂಹವನ್ನು ಭೇದಿಸಿ ಒಳಕ್ಕೆ ಹೋಗುವುದನ್ನು ಹೇಳಿಕೊಟ್ಟಿದ್ದಾನೆ (ಪಚಭಾ. ೨೮೩). ೧, ೨ : ಕೆದಱುದುದು ಶಿಲೀಮುಖಪಾತದಿಂದೆ ಶೋಣಿತಪರಾಗತತಿ ಪದ್ಮವ್ಯೂಹದೊಳೆಸೆ ಕೃಷ್ಣ ಶರಾಘಾತದಿನೊಗೆದುದು ದೈತ್ಯಬಲದೊಳರುಣಜಲೌಘಂ (ಜಗವಿ.೧೨-೧೩). 'ಚಕ್ರವ್ಯೂಹ' ಪರಾ. [ಪದ್ಮ+ವ್ಯೂಹ]

ಪದ್ಮಶ್ರೀ (ನಾ). ಕಲೆ, ವಿಜ್ಞಾನ, ಸಮಾಜಸೇವೆ, ಆಟಪಾಟಗಳು ಮುಂತಾದ ಯಾವುದಾದರೂ ಕ್ಷೇತ್ರದಲ್ಲಿ ವಿಶೇಷಸಾಧನೆಯನ್ನು ಮಾಡಿದ ವ್ಯಕ್ತಿಗೆ ಭಾರತಸರ್ಕಾರದವರು ಕೊಡುವ ಒಂದು

ದೊಡ್ಡಪ್ರಶಸ್ತಿ : ಇದರ ಕರ್ತೃ ಪದ್ಮಶ್ರೀ ಡಾ. ರಂಗನಾಥನ್‌ರು ಭಾರತದ ಅತ್ಯಮೂಲ್ಯ ಸೊತ್ತಾಗಿದ್ದಾರೆ (ಗ್ರಂಥಾಲ.೨೬); ಪದ್ಮಭೂಷಣ, ಪದ್ಮಶ್ರೀಗಳು ಹಲ್ಕಾ ಜನರ ಸೊತ್ತಾಗ್ತಾ ಇವೆ. ಇದಕ್ಕೆ ಕಾರಣ—ನಮ್ಮ ಜನದ ಮೊದ್ದುತನ (ನಡೆದಾ. II, ೧೨೧೬). 'ಪದ್ಮಭೂಷಣ', 'ಪದ್ಮವಿಭೂಷಣ' ಪರಾ. [ಸಂ.]

ಪದ್ಮಷಂಡ (ನಾ). ೧. ಕಮಲಗಳ ಸಮೂಹ,—ಗುಂಪು : ನೀಲೋತ್ಪಲಷಂಡಂ ಪದ್ಮಷಂಡಂ ಲಲಿತವನಲತಾಷಂಡಮುಂ ತಂಡತಂಡಂಗಳಿನೀ ಬಂದಪ್ಪುದೆಂಬಂತೆಸೆದುದು ಭರತಾಂತಃಪುರಸ್ತ್ರೀಸಮೂಹಂ (ಅದಿಪು. ೧೧-೧೩೫) ; ಪದ್ಮಷಂಡಂಗಳೊಳೆತ್ತಂ ಸುತ್ತುಗೊಂಡಿರ್ದಳಿಕುಳಂ (ಸುಕುಮಾ. ೧-೭೧). ೨. ತಾವರೆಯ ಕೊಳ ; ಕಮಲಸರೋವರ: ಆ ಕುಂಡಮನೆ ಪದ್ಮಷಂಡಂ ಮಾಡಿಯಲ್ಲಿ ಸಹಸ್ರದಳಸುವರ್ಣತಾಮರಸಮುಮದಱ ಕರ್ಣಿಕೆಯ ಮೇಲೆ ಸಿಂಹಾಸನಮುಮಂ ವಿಗುರ್ವಿಸಿ (ಸಂರಾಮಾ. ೧೬-೨೯ ವ). [ಪದ್ಮ+ಷಂಡ]

ಪದ್ಮಸಂಭವ (ನಾ). = ಪದ್ಮಗರ್ಭ. [ಪದ್ಮ+ಸಂಭವ]

ಪದ್ಮಸಂಹಿತೆ (ನಾ). ಆಗಮಶಾಸ್ತ್ರದಲ್ಲಿ ಒಂದು ಭೇದ : ಪ್ರಭೂತಾಗಮ ವೀರೋದ್ಭೂತಾಗಮ ಪಾರ್ವತೀತಂತ್ರ ಪದ್ಮಸಂಹಿತೆಯೆಂದು ಆಜಿತಾಗಮದ ನಾಲ್ಕು ಭೇದಂಗಳು (ವಿನೇಕ. ೬೫). [ಪದ್ಮ+ಸಂಹಿತೆ]

ಪದ್ಮಸಖ (ನಾ). = ಪದ್ಮಬಂಧು : ಪದ್ಮಸಖಕೋಟಿಗಳ ಕಾಂತಿತಾ ಕಾಂತೆಯ ರೂಪಾದವೊಲ್ . . . ಕಣ್ಗೆಸೆದಳ್ (ನಂದಿಮಾ. ೭-೮) ; ನೀಳ್ದ ಪತಾಕೆಗಳ ಪಸರಿಸಿದ ಪಟಪಟಲಂ ಪದ್ಮಸಖರುಚಿಯಂ ಪರಿಭವಿಸೆ (ರಾಜಶೇ. ೬-೧೧ ವ). [ಪದ್ಮ+ಸಖ]

ಪದ್ಮಸದ್ಮ (ನಾ). ೧. ಕಮಲವನ್ನೇ ಮನೆಯಾಗಿ ಉಳ್ಳವನು ; ಬ್ರಹ್ಮ : ತನ್ನ ಸಾಮರ್ಥ್ಯಮೆ ರೂಪಾದನ್ತೆ ನಾಭ್ಯಂಬುರುಹದಿನೊಗೆದಂ ಚಿನ್ಮಯಂ ಪದ್ಮಸದ್ಮಂ (ಎಕ. VII, ಶಿಳಾರಿ. ೧೨೩-೪ ; 1159) ; ತಪ್ಪಿತೃದ್ವಂದ್ವದ ಮನಕೆ ಸಮಾಕಾರ ಸಂಪದ್ವರಾಲಾಭದುರಂತೋದ್ವೇಗಮಂ ನೀಡಿದನತಿತರನಿರ್ಬಂಧದಿಂ ಪದ್ಮಸದ್ಮಂ (ಚಂದ್ರಪು. ೫-೯೭) ; ಮುರಹರಪದ್ಮಸದ್ಮಮುಖನಿರ್ಜರಕೋಟಿಯನೊಕ್ಕಲಿಕ್ಕಿ (ರಾಜಶೇ. ೧-೫); ತುಂಬಿ ತುಳ್ಕುವ ಮೊಗದ ಮೊಗಂಬಡೆದ ಸೊಬಗು ಪದ್ಮಸದ್ಮನ ಮೊಗಸಿರಿಯನೆಡವುತೆಡಂಮಾಡೆ (ರಾಮಾಶ್ವ. ೧೩೯-೧೧). ೨. ತಾವರೆಯ ಕೊಳ : ಮಿಸುಪ ಪಿರಿಯ ಮೀಂಗಳ್ ದಾಡೆ ತಾಮಾಗಿಳಾರಾಕ್ಷಸಿಯ ತೆಱೆದ ಬಾಯಂತಿರ್ದುದಾ ಪದ್ಮಸದ್ಮಂ (ಚಂದ್ರಪು. ೫-೪೧). [ಪದ್ಮ+ಸದ್ಮ]

ಪದ್ಮಸದ್ಮೆ (ನಾ). ಕಮಲವನ್ನು ಮನೆಯಾಗಿ ಉಳ್ಳವಳು; ಲಕ್ಷ್ಮಿ : ಪದ್ಮಪೀಠದಗ್ರಭಾಗದೊಳ್ಕರಂ ವಿರಾಜಿಪಾ ಪದ್ಮಸದ್ಮೆಯಂತೆ ತೋರ್ಪಯಂತ್ರಮಧ್ಯದಲ್ಲಿ . . . ತತ್ಪದ್ಮನೇತ್ರೆಯೊಪ್ಪಿದಳ್ (ಉದ್ಭಟ.೫-೫೫). [ಸಂ. ಪದ್ಮಸದ್ಮಾ]

ಪದ್ಮಸಾಲೆ, ಪದ್ಮಸಾಳಿ (ನಾ). ನೇಕಾರರಲ್ಲಿ ಒಂದು ಪಂಗಡ : ಶ್ರೀ ಪ್ರಸಂನಆಂಜನೇಯಸ್ವಾಮಿಯವರಿಗೆ ಸರ್ಜಾಪುರದಲ್ಲಿರುವ ಪದ್ಮಸಾಲೆಯವರು . . . ಬರೆಸಿಕೊಟ್ಟ ದಾನಶಾಸನಕ್ರಮ (ಎಕ. IX (೪), ಆನೆಕ. ೧೦೭-೪ ; 1802). **ಪದ್ಮಸಾಳಿ** : ನೇಕಾರರು . . . ೧ನೇವರ್ಗದಲ್ಲಿ ಪದ್ಮಸಾಳಿ, ಸುಕಸಾಳಿ, ಸಕ್ಕುಲಸಾಳಿಯೆಂಬ ಮೂರು ಪೊಳಹಾತಿಗಳಿವೆ (ಕಭಾಗೆ. ೧೫೯). [ಪದ್ಮ+ಸಾಲೆ$_2$(<ಸೇಲೆ$_1$)]

ಪದ್ಮಸಾಳಿ 'ಪದ್ಮಸಾಲೆ' ನೋ.

ಪದ್ಮಹ್ರದ (ನಾ). = ಪದ್ಮಾಕರ ೧: ಪದ್ಮಹ್ರದದಲ್ಲಿ ಪ್ರಭವಿಸಿದ ಕಾರಣಮಾ ಕೂಸಿಂಗೆ ಪದ್ಮಾವತಿಯೆಂಬ ಪೆಸರನಿಟ್ಟು (ಪುಣ್ಯಾಸ್ರ. ೨-೩೧ ವ). [ಪದ್ಮ+ಹ್ರದ]

ಪದ್ಮಾಂಕಿತ (ನಾ). ಕಮಲವನ್ನು ಲಾಂಛನವಾಗಿ ಉಳ್ಳದು : ವರದಂ ಪದ್ಮಾಂಕಿತಂ ತೋಳೆರಡು ನಿಶಿತವಜ್ರಪ್ರಭಾಭಾಸುರಂ ತೋಳೆರಡು (ಅದಿಪು. ೧-೭). [ಪದ್ಮ+ಅಂಕಿತ]

ಪದ್ಮಾಂಗ (ನಾ). [ಜೈನ] ಒಂದು ದೊಡ್ಡ ಸಂಖ್ಯೆ; ℙ"ಕುಮುದವನ್ನು ಎಂಬತ್ತನಾಲ್ಕರಿಂದ ಗುಣಿಸಿದಾಗ ಬರುವ ಲಬ್ಧ" (ಜೈನಕೋ. ೧೫೭) : ಎಂಬತ್ತುನಾಲ್ಕು ಮತ್ತು ಎಂಬತ್ತುನಾಲ್ಕುಲಕ್ಷ ಗುಣಿತಕ್ರಮದಿಂದ ಕುಮುದಾಂಗ ಮತ್ತು ಕುಮುದ, ಪದ್ಮಾಂಗ ಮತ್ತು ಪದ್ಮ . . . ಎಂಬಿವು ಕ್ರಮದಿಂದ ಆಗುತ್ತವೆ (ಜೈನಪ. ೩೦೬). [ಪದ್ಮ+ಅಂಗ$_2$]

ಪದ್ಮಾಕರ (ನಾ). ೧. ಕಮಲಗಳಿಗೆ ಆಶ್ರಯಸ್ಥಾನವಾದುದು ; ತಾವರೆಯ ಕೊಳ ; ಕಮಲಸರೋವರ : "ಪದ್ಮಾಕರಃ, ತಟಾಕಃ . . . ೨ ತಾವರೆಗಳುಳ್ಳ ಕೆರೇ ಹೆಸರುಗಳು" (ಸಿದ್ಧಾಂತಿ. ೮೫); ಬಳಸಿರ್ದುದ್ಯಾನಮುದ್ಯಾನದೊಳೊದವಿದ ಪದ್ಮಾಕರಂ (ಸುಕುಮಾ. ೧-೭೧); ಶ್ರೀಕಾಂತೆ ತನ್ನುರಃಪದ್ಮಾಕರದೊಳ್ ಹಂಸಿಯಂತೆ ನೆಲಸಿರೆ (ಪುಷ್ಪಪು. ೩-೧) ; ಕಡುಪರಿಮಳದ ಪಸರದ ಸೊಗಸು ತೀವಿತು ವಿಮಳ ಪದ್ಮಾಕರದ ಪವಮಾನ (ಕುಸ್ಯಾಅ. ೨೩-೧೩). ೨. ಲಕ್ಷ್ಮಿಯ ಕೈ. ೧, ೨ : ಪದ್ಮಾಕರಾಬ್ಜಗ್ರಹಣಕಳಿತನಿತ್ಯೋದಯಂ ಲೋಕದೊಳ್ ಸುಸ್ಥಿರಮಕ್ಕೇ ದೋರ್ಯಶಶ್ರೀರತಭರತಭವದ್ಭಾಗ್ಯಚಂಡಾಂಶುಬಿಂಬ (ಎಕ. VI, ಚಿಕ್ಕಮ. ೧೬೦-೫೪ ; 1103). [ಸಂ. (ಪದ್ಮ+ಆಕರ ; ಪದ್ಮಾ+ಕರ)]

ಪದ್ಮಾಕ್ಷ (ನಾ). ೧. ಕಮಲದ ಬೀಜ ; ℙ ಇದನ್ನು ಜಪಸರದ ಮಣಿಯಾಗಿ ಉಪಯೋಗಿಸುತ್ತಾರೆ. ೨. ಕಮಲದಂತೆ ಕಣ್ಣುಳ್ಳವನು : ಉಷ್ಟಕರ ಶೃಂಗ ಪಿಂಗಳ ಪಾರಿಭದ್ರ ಸೌರಾಷ್ಟ್ರಕಂ ಶೈಲಭಧ್ವಜ್ರದಂತಾನಂಗಕೋಷ್ಟ ಪಿಂಜರಲೋಚಮಾನ ಪದ್ಮಾಕ್ಷ ಪಾರ್ಶಿಕ ಪುಂಗವಾಂಗ . . . ಕರ್ಣಪೂರ್ಣಂ ಮುಖ್ಯಗಣರ ಸಂದಳಿಯಿರ್ದುದು (ನಂದಿಮಾ. ೨೪-೨೫). ೩. ಸೂರ್ಯ. [ಸಂ.]

ಪದ್ಮಾಕ್ಷಿ (ನಾ). = ಪದ್ಮಾಕ್ಷ ೧: ರುದ್ರಾಕ್ಷಿಯ ಧರಿಸಲೊಲ್ಲದೆ ಪದ್ಮಾಕ್ಷಿ ತೊಳಸಿಯ ಮಣಿಯಂ ಕಟ್ಟಿಕೊಂಬಿರಿ (ಸರ್ವಪ. ೧೭೯-೮೨೯). [ಸಂ. ಪದ್ಮಾಕ್ಷೀ]

ಪದ್ಮಾಗಮ (ನಾ). ಆಗಮಶಾಸ್ತ್ರದಲ್ಲಿ ಒಂದು ಭೇದ : ಮಾತಂಗತಂತ್ರ ಯಕ್ಷಿಣೀಶಾಸ್ತ್ರ ಪದ್ಮಾಗಮ ಪೌಷ್ಕರ ಸುಪ್ರಯೋಗ ಹಂಸಾಗಮ ಸಾಮಾನ್ಯಾಗಮವೆಂದು ಪಾರಮೇಶ್ವರಾಗಮದೇಳು ಭೇದಂಗಳು (ವಿನೇಕ. ೬೬). [ಪದ್ಮ+ಆಗಮ]

ಪದ್ಮಾಟ (ನಾ). ಒಂದು ಬಗೆಯ ಮರ ; "ಚಕ್ರಮರ್ದ" (ಪಂಡಿತ. ೨೪೦) : "ಪ್ರಪುನ್ನಾಟಃ, ಏಡಗಜಃ, ದದ್ರುಘ್ನಃ, ಚಕ್ರಮರ್ದಕಃ, ಪದ್ಮಾಟಃ, ಉರಣಾಕ್ಷಃ . . . ೬ ತಗಚೇಗಿಡದ ಹೆಸರುಗಳು, ತಗಿಚಿ, ತಗ್ಗಚ್ಚಿ" (ಸಿದ್ಧಾಂತಿ. ೧೪೬). [ಸಂ.]

ಪದ್ಮಾನಂದಿ (ನಾ). ೧. ಕಮಲವನ್ನು ಸಂತೋಷಪಡಿಸುವವನು; ಸೂರ್ಯ. ೨. ಲಕ್ಷ್ಮಿಯನ್ನು ಸಂತೋಷಪಡಿಸುವವನು ; ವಿಷ್ಣು. ೧, ೨: ಹರಿ ಪದ್ಮಾನಂದಿ ಪೀತಾಂಬರೋಲ್ಲಸಿತಂ ಚಕ್ರಸಹಾಯನಾಕ್ರಮಿಸಿದಂ ಭೂಚಕ್ರಮಂ ಪಾದದಿಂ ರಸೆಗಾಗಳ್ ಬಲಿದುಸ್ತಮಂ ತಳರ್ವಿನಂ ದಾನಪ್ರಬದ್ಧಾಕುಳಂ (ಪುಷ್ಪಪು. ೮-೨೩). [ಸಂ. ಪದ್ಮಾನಂದಿನ್]

ಪದ್ಮಾನುಷಂಗಿತ್ವ (ನಾ). ೧. ಕಮಲದೊಡನೆ ಕೂಡಿಕೊಂಡಿರುವುದು. ೨. ಐಶ್ವರ್ಯದೊಂದಿಗೆ ಕೂಡಿಕೊಂಡಿರುವುದು. ೧,೨ : ಸದಾಳಿಪ್ರಿಯಂ ವರದಾನೋನ್ನತಭದ್ರಲಕ್ಷಣಪದಂ ಪದ್ಮಾನುಷಂಗಿತ್ವಮಾಗಿರೆ ಪೆಂಪಚ್ಚರಿಯಾದ ದೇವಗಣಪಂ ರಕ್ಷಿಕ್ಕೆ ಭೂಚಕ್ರಮಂ (ಜಗವಿ. ೧-೫). [ಸಂ.]

ಪದ್ಮಾಲಯ (ನಾ). ೧. ಕಮಲಗಳಿಗೆ ಆಶ್ರಯವಾದುದು. ೨. ಐಶ್ವರ್ಯಕ್ಕೆ ನೆಲೆಯಾಗಿರುವುದು. ೧, ೨ : ತೋಯಜಾಕರದಂತೆ ಪದ್ಮಾಲಯಂ . . . ಕಾಯಜನ ಪಿತನಂತನಂತಮಣಿರಂಜಿತದೊಳರಮನೆ ವಿರಾಜಿಸಿದುದು (ಚಿಒ.ಪು. ೫–೫೩). [ಪದ್ಮ+ಆಲಯ]

ಪದ್ಮಾಲಯೆ (ನಾ). = ಪದ್ಮಮಂದಿರೆ : "ಲಕ್ಷ್ಮೀ, ಪದ್ಮಾಲಯಾ, ಪದ್ಮಾ, ಕಮಲಾ, ಶ್ರೀ, ಹರಿಪ್ರಿಯಾ–೬ ಲಕ್ಷ್ಮೀದೇವಿಯ ಹೆಸರುಗಳು" (ಸಿದ್ಧಾಂತಿ. ೧೪); ಧರೆಯಂ ಸ್ಥಿರೆಯೆನಿಸಿದನಿಂದಿರೆಯಂ ಪದ್ಮಾಲಯಾಪ್ರಿಯೆಯೆಂದೆನಿಸಿದಂ . . . ಅದೇಂ ಸಮರ್ಥನೊ ಪದ್ಮಂ (ಪುಷ್ಪಪು. ೬–೨). [ಸಂ. ಪದ್ಮಾಲಯಾ]

ಪದ್ಮಾಲಿಂಗಿತ (ನಾ). ೧. ಐಶ್ವರ್ಯದಿಂದ ಕೂಡಿದವನು. ೨. ಲಕ್ಷ್ಮಿಯಿಂದ ಆಲಿಂಗಿತನಾದವನು ; ವಿಷ್ಣು : ಪದ್ಮಾಲಿಂಗಿತನಂತ ಶ್ರೀಲೋಲತೆಗಂ ದೂರಮೆನಿಸಿದಂ ಕಿಜಾಯಂದುಂ (ಶಾಂತಿಪು. ೬–೧೧೬). [ಸಂ.]

ಪದ್ಮಾವತಿ (ನಾ). ೧. ಲಕ್ಷ್ಮಿ : ಶೋಭನ ಶೋಭನವೆ . . . ಪದ್ಮನಾಭ ಶ್ರೀ ಪುರಂದರವಿಭಲಗೆ ಪದ್ಮಾವತೀಪ್ರಿಯ ಶ್ರೀನಿವಾಸಗೆ (ಪುರಂದ. ಧಾ. ೨–೧೫೭–೫). ೨. [ಜೈನ] ಒಬ್ಬ ದೇವತಾಸ್ತ್ರೀ : ಇಳಾದೇವಿ ಸುರಾದೇವಿ ಪೃಥ್ವಿ ಪದ್ಮಾವತಿ . . . ಭದ್ರೆಯೆಂಬಿಪ್ಪರುಮಾಶಾವಧೂವರರನಾದಿಪುರುಷಾಂಬಿಕೆಗೆ . . . ವಿಚಿತ್ರಾತಪತ್ರಂಗಳಂ ಪಿಡಿಯಲುಂ . . . ಬೆಸಸುವುದುಂ (ಆದಿಪು. ೭–೩ ಪ), ಪದ್ಮಾವತೀಲಬ್ಧವರಪ್ರಸಾದಾಸಾದಿತ ವಿಪುಳತುಳಾಪುರುಷ ಮಹಾದಾನಹಿರಣ್ಯಗರ್ಭೈತ್ಯಯಾಧಿಕದಾನ (ಎಕ. VIII, ನಗರ. ೩೫–೩ , 1077). ೩. ಒಬ್ಬ ಯಕ್ಷಿಯ ಹೆಸರು ; ಇಪ್ಪತ್ತುಮೂರನೆಯ ತೀರ್ಥಂಕರನಾದ ಪಾರ್ಶ್ವನಾಥನ ಯಕ್ಷಿ.

ಪದ್ಮಾವತಿಯ ಕಲ್ = ಪದ್ಮಾವತಿಯೆಂಬ ಜೈನದೇವತೆಯ ವಿಗ್ರಹ : ಬಾಯವ್ಯದೊಳ್ ಪದ್ಮಾವತಿಯ ಕಲ್ (ಎಇ. XVI, ೫೬–೩೩ ; 1053). [ಸಂ. ಪದ್ಮಾವತೀ]

ಪದ್ಮಾಸನ (ನಾ). ೧. ಕಮಲವನ್ನು ಪೀಠವನ್ನಾಗಿ ಉಳ್ಳವನು ; ಬ್ರಹ್ಮ : ಈಡಲಿರ್ಪಂ ಬಲದೇವನೆನ್ನನುಜೆಯಂ ದುರ್ಯೋಧನಂಗಾನೊಡಂಬಡೆನೀವಬ್ಬಾಯದಾಗಳುಂ ನಿನಗೆ ದಲ್ ಪದ್ಮಾಸನಂ ತಾನೆ ನೇರ್ಪಡಿಸಲ್ ಕೂಡಿದಂ (ಪಂಪಭಾ. ೫–೨೦) ; ಪಲರ್ಗಂ ಕಾಮಸುಖಾರ್ಥವಿಚ್ಛಿತನನೋರ್ಪಂತುಂ ಸಮಂತಾರೋಳಂ ಡಲಮಂ ಕೋಪಿಯುಮಾಗದಂತೆ ಪಡೆದಂ ಪದ್ಮಾಸನಂ ವೇಶ್ಮೆಯಂ (ಪುದತಿ. ೧೦–೧). ೨. [ಯೋಗ] ಧ್ಯಾನ, ಪೂಜೆ ಮುಂತಾದ ಸಂದರ್ಭಗಳಲ್ಲಿ ಕುಳಿತುಕೊಳ್ಳುವ ಒಂದು ಭಂಗಿ ; ಒಂದು ಬಗೆಯ ಯೋಗಾಸನ ; ☞"ಮೊದಲು ಬಲದಡಿಯನ್ನು ಎಡಪಾದದ ಮೇಲೆ ಎತ್ತಿರಿಸಿ, ಬಳಿಕ ಎಡದಡಿಯನ್ನು ಬಲದೊಡೆಯ ಮೇಲಿಟ್ಟು, ಅಮೇಲೆ ಬಲಗೈಯಿಂದ ಎಡಗಾಲ ಹೆಬ್ಬೆರಳನ್ನೂ, ಎಡಗೈಯಿಂದ ಬಲಗಾಲ ಹೆಬ್ಬೆರಳನ್ನೂ, ಹಿಡಿದೆಳೆದು, ಆಯಾಸ್ಥಾನಗಳಲ್ಲಿ ಮೇಲ್ಕೊಗ ಮಾಡಿದ ಅಂಗಾಲುಗಳನ್ನು ಸರಿಯಾಗಿ ಅಳವಡಿಸಿ, ಅನಂತರ ಎದೆಯ ಬಳಿ ಅಂದರೆ ಅದರಲ್ಲಿನ ನಾಲ್ಕು ಬೆಟ್ಟ ನಷ್ಟು ಪ್ರದೇಶದಲ್ಲಿ ತಲೆ ತಗ್ಗಿಸುವುದರ ಮೂಲಕ ಗದ್ದವನ್ನು ಒತ್ತಿಟ್ಟು, ದಿಟ್ಟಿಯನ್ನು ಮೂಗಿನ ತುದಿಯಲ್ಲಿ ನೆಟ್ಟರಬೇಕು. ಇದೇ 'ಪದ್ಮಾಸನ'ದ ಭಂಗಿ" (ಯೋಗದೀ. ೧೦೫) ; ವರಪದ್ಮಾಸನದೊಳ್ ಕನನ್ಮಣಿಮಯಂ ಸಿಂಹಾಸನಂ ... ವಿಜ್ಞಾನದಿಂದಂ ಜಗದ್ಗುರುವಾದಂ (ಗದಾಯು. ೧–೩) ; ಬಲಿದ ಪದ್ಮಾಸನಂ ಮುಗಿದಕ್ಷಿ ಮುಚ್ಚಿದಂಜಲಿವೆರಸಿ ಗುರುವಸಿಷ್ಠಂಗೆಱಗಿ (ಪಚಕಾ. ೧೩–೧೪) ; ಸಿದ್ಧಪದ್ಮಾಸನದೊಳಿರ್ದು ವಿಶುದ್ಧತನು ತಾನಾಗಿ (ಬಸಪು. ೩–೫) ; ರಣಮಂಡಲದೊಳಗೆ ಪದ್ಮಾಸನವನನುಕೊಳಿಸಿ ಯೋಗಾರೂಢನಾದನು ವರಸಮಾಧಿಯಲಿ (ಕುವ್ಯಾದ್ರೋ. ೧೪–೩೧). ೩. [ಕಾಮಶಾ] ಕರಣಗಳಲ್ಲಿ ಒಂದು ಬಗೆ ; ಪಂಕಜಾಸನ : ಪದ್ಮಿನಿ ಪದ್ಮಾಸನದಿಂ ನಾಗರಕಬಂಧದಿಂ ಚಿತ್ರಿಣಿ ಶಂಖಿನಿ ವೇಣುದಾರಿತದೆ ಹಸ್ತಿನಿ ತನಕುಂ ಸ್ಕಂಧವಾದದಿಂ ಕೂಡುವಿನಂ (ಸುಸ್ಮದಿ. ೨–೪) ; ಮೆಲ್ಲನೆ ಮಲಗಿರ್ದ ಸ್ತ್ರೀ ತನ್ನೆರಡು ತೊಡೆಗಳಂ ಮೇಲಕ್ಕೆ ಎತ್ತಿ ಪಲ್ಲಟ ಮಾಡಿ ಎಡದ ಕಾಲ ಹೆಬ್ಬೆರಳಂ ಎಡಗೈಯಿಂ ಪಿಡಿದು ಇರೆ ರಮಿಸುವುದು ಪದ್ಮಾಸನಮೆಂಬ ಕರಣಂ (ಕಾಮಶಾ. ೨೬೫). [ಪದ್ಮ+ಆಸನ]

ಪದ್ಮಾಸನಸ್ಥೆ (ನಾ). ಪದ್ಮಾಸನವನ್ನು ಹಾಕಿ ಕುಳಿತಿರುವವಳು : ಅಳೆ . . . ಗಂಟೆಗಳ ಕಾಲ ಪದ್ಮಾಸನಸ್ಥೆಯಾಗಿ ಧ್ಯಾನದಲ್ಲಿ ಕುಳಿತಳು (ಶಾಂತಲಾ. ೨೯೨). [ಸಂ. ಪದ್ಮಾಸನಸ್ಥಾ]

ಪದ್ಮಾಸೀನ (ನಾ). ಕಮಲದಲ್ಲಿ ಕುಳಿತಿರುವವನು,—ನೆಲಸಿರುವವನು : ಪದ್ಮಾಸೀನನಾದ ಬುದ್ಧನನ್ನು ಕುರಿತು ಹಾಡಿದ ಕವನದಲ್ಲಿ . . . ರಮಣೀಯವಾದ ದರ್ಶನವು ಚಿತ್ರಿತವಾಗಿರುವುದು (ಪ್ರಬಂಧ.೪೦). [ಪದ್ಮ+ಆಸೀನ]

ಪದ್ಮಾಸ್ಯೆ (ನಾ). ಕಮಲದಂತೆ ಮುಖವುಳ್ಳವಳು : ಪದ್ಮಾಸ್ಯೆಯರ್ ಭೃಂಗಕುಂತಳೆಯರ್ . . . ವರ್ತಿಸಿದರ್ ಕುಮಾರನ ಮನಶ್ಶಾಸ್ತ್ರೀ ಸಾರಕಾಸಾರದೊಳ್ (ಪುಷ್ಪಪು. ೧೨–೧೧೨). [ಸಂ. ಪದ್ಮಾಸ್ಯಾ]

ಪದ್ಮಿ (ನಾ). ೧. ಕಮಲಗಳಿಂದ ಕೂಡಿದುದು : ವನಮಾಲಿಯಂದದಿಂ ಪದ್ಮಿ ಪದ್ಮಿಯವೋಲ್ಬುವನಕುಕ್ಷಿ . . . ಕುವಲಯಧಾರಿವೋಲ್ವನಮಾಲಿಯೆನಿಸಿ ರಂಜಿಸುವ ಕಾಸಾರಮಂ ಸರ್ವಮಂಗಳೆ ಕಂಡಳು (ಜೈಮಿಭಾ. ೧೫–೧೨). ೨. ಬಣ್ಣ ಬಣ್ಣದ ಚುಕ್ಕೆಗಳಿಂದ ಕೂಡಿದುದು. ೩. ಆನೆ : "ದಂತೀ, ದಂತಾವಳಃ, ಹಸ್ತಿನ್ . . . ಇಭಃ, ಸ್ತಂಬೇರಮಃ, ಪದ್ಮೀ – ೧೫ ಆನೆಯ ಹೆಸರುಗಳು" (ಸಿದ್ಧಾಂತಿ. ೨೪೬). ೪. ವಿಷ್ಣು : ವನಮಾಲಿಯಂದದಿಂ ಪದ್ಮಿ ಪದ್ಮಿಯವೋಲ್ಬುವನಕುಕ್ಷಿ . . . ಕುವಲಯಧಾರಿವೋಲ್ವನಮಾಲಿಯೆನಿಸಿ ರಂಜಿಸುವ ಕಾಸಾರಮಂ ಸರ್ವಮಂಗಳೆ ಕಂಡಳು (ಜೈಮಿಭಾ. ೧೫–೧೨). [ಸಂ. ಪದ್ಮಿನ್]

ಪದ್ಮಿನಿ (ನಾ). ೧. ತಾವರೆಯ ಬಳ್ಳಿ ಮತ್ತು ಅದರ ಹೂವು ; ಕಮಲ : "ನಳಿನೀ, ಬಿಸಿನೀ, ಪದ್ಮಿನೀ–೩ ಕಮಲಲತೆಗೆ ಹೆಸರುಗಳು" (ಸಿದ್ಧಾಂತಿ. ೪೯); ದಿನಕರನುನ್ನತಪ್ರಮತಿಗೆ ಪದ್ಮಿನಿ ಚೈತ್ರಮಹೋತ್ಸವಕ್ಕೆ ನಂದನವನಲಕ್ಷ್ಮಿ . . . ಸಂತತಮಹೋತ್ಸವದಿಂ ಪೊರೆಯೇಜುವಂತೆ ತನ್ನಿಸಯನ ಕಾಣ್ಕೆಯಿಂ ಸುದತಿ ನೂತನಕಾಂತಿಯನಾಂತುದೊಪ್ಪದೇ (ಸಳಚಂ. ೭೩೬) ; ಇನವಿರಹಿಣಿ ಪದ್ಮಿನಿ ಕಾಂತನಗಲ್ಕೆಯನಾಂತರಿಸುಗೆ ಮುಳಿಪ ನಿಶಾಕಾಂತನ ಕರಕೆ ಬೆಟ್ಟಿ ಮುಚ್ಚಿದಳೆನೆ ಮೊಗವಂ ಮುಗಿವ ಪಂಕಜಂ ಕರಮೆಸೆಗುಂ (ರಾಜಶೇ. ೧೧–೧೦) ; ಸವತಿಯೊಂದು ಪಿಸುಣ್ಣಿ ಎಜಿಯಂ ಮಾಜುವೋದನೆಂಬೊಂದುಬ್ಬೆಗದಿಂ ಕೊರಗಿದಳೆನೆ ಪದ್ಮಿನಿ ನಾಡೆ ಬಾಡೆ (ರಾಸೂಶ್ವ. ೨೩–೧೦). ೨. ಕಮಲಗಳ ಸಮೂಹ,—ಗುಂಪು. ೩. ತಾವರೆಗಳಿಂದ ಕೂಡಿದ ಕೊಳ ; ಕಮಲ ಸರೋವರ : ಪದ್ಮಲದೇವಿ ರಾಜಿಸುತಮಿರ್ಪಳು ಹುಳ್ಳರಾಜಾಂತರಂಗಮರಾಳಂ ರಮಿಯಿಪ್ಪ ಪದ್ಮಿನಿಯನೊಲು (ಎಕ. II, ೩೪೬–೧೧ ; ಸು. 1165). ೪. [ಕಾಮಶಾ] ನಾಲ್ಕು ಬಗೆಯ ಸ್ತ್ರೀಜಾತಿಗಳಲ್ಲಿ ಮೊದಲನೆಯದು ಮತ್ತು ಆ ಜಾತಿಗೆ ಸೇರಿದ ಸ್ತ್ರೀ: ತನುಮಧ್ಯಂ ಭ್ರಮರಾಳಕಂ . . . ಪಿಳಧ್ವನಿ ವಜ್ರದ್ವಿಜಮಾಗೆ ಪದ್ಮಿನಿಯೆವಳ್ (ಸುದತಿ.೨–೧); ಜಲಜಾಸ್ಯಂ ತಕ್ಕುಗಂಧಾಕ್ಷ ತಿರತಿಸಲಿಲಂ ಶ್ರೀಫಲೋದ್ಯತ್ಕುಚಂ ಕೋಕಿಲನಾದಂ ಹಂಸಯಾನಂ ಮೃದುಲಳುತರಭ್ರೂಕರ್ಣಸತ್ಕುಂತಲಂ ಪಿಪ್ಪಲವರ್ತಾಕಾರಗುಹ್ಯಂ ಚಕಿತಮೃಗದೃಶಂ ಲಜ್ಜೆ ಮೇರ್

ಶ್ಯಾಮವರ್ಣಂ ತಿಲಪುಷ್ಪಘ್ರಾಣವಾ ಪಾಂಡುರಭರಣಮಯಂ ಪದ್ಮಿನೀ ನಾರಿಗಕ್ಕುಂ (ಮನ್ಮವಿ. ೨-೩); ಸರಸತರಲಾವಣ್ಯರಸದಿಂದುರಿ ಮಸಗೆ ಜನಹೃದಯದಲಿ ಮೈಪರಿಮಳದ ಪಸರದಲಿ ಪದ್ಮಿನಿ ಬಂದಳೊಲವಿನಲಿ (ಕುಪ್ಯಾವಿ. ೫-೩೪); ಬಿಳಿದುಡುವ . . . ಒಳಗುಗುಡದೋಜೆ ಕಂಗೊಳಿ ಸುತಿರ್ಪವಳೆ ಕೋಮಲೆ ಕೇಳು ಪದ್ಮಿನಿಯೆನಿಪ್ಪಳಿಳೆಗೆ (ಜನವ. ೨-೧೧); ಮೂಡಲದು ಹಸ್ತಿನಿಗೆ . . . ತೆಂಕಲಿನ ಬೀಡು ಪದ್ಮಿನಿಗೆ (ಸರ್ವಜ್ಞ. ೧೬೨೦). [ಸಂ. ಪದ್ಮಿನೀ]

ಪದ್ಮಿನೀಪ್ರಿಯ(ನಾ). ಕಮಲಕ್ಕೆ ಪ್ರಿಯನಾದವನು ; ಸೂರ್ಯ : ಉದಯಗಿರೀಂದ್ರವೇದಿಕೆಯನೇಱಿದನೊಯ್ಯನೆ ಪದ್ಮಿನೀಪ್ರಿಯಂ(ಕಾದಂಉ. ೪೩೦); ಅವನೀಶ್ವರಂ ಪುರುಷರಾರುಂ ಕಾಣದಂತಂಗನಾಚಯವಿರ್ದಲ್ಲಿಗೆ ಭೋಂಕನೆಯ್ದಿ ವಿಲಸತ್ತೇಜೋಮಯಂ ಪದ್ಮಿನೀಪ್ರಿಯನೆಂದೊಂದು ವಿಳಾಸದಿಂ ನೆಲಸಿದಂ ಶೃಂಗಾರರಂಗಸ್ಥಳಂ (ನಳಚಂ. ೨೬೯). [ಸಂ.]

ಪದ್ಮಿನೀಮಿತ್ರ (ನಾ). ೧. ಸೂರ್ಯ. ೨. [ಗಣಿತ] ಹನ್ನೆರಡು ಎಂಬ ಸಂಖ್ಯೆಯ ಸಂಕೇತ : ಅನಿಲಂ . . . ಮುಂದೆ ನಿಲಲ್ ಭೂತೇಶಂ ದೇವ ಕಡೆಯೊಳ್ ವಿಶ್ರಮಣೋದಯಂ ಪದ್ಮಿನೀಮಿತ್ರನೊಲ್ (ಛಂದೋಂಬು. ೨-೧೩೬). [ಸಂ.].

ಪದ್ಮಿನೀವಲ್ಲಭ (ನಾ). ಸೂರ್ಯ : "ಕರ್ಮಸಾಕ್ಷೀ, ಜಗಚ್ಚಕ್ಷುಃ, ಅಂಶುಮಾಲೀ, ತ್ರಯೀತನುಃ . . . ಪದ್ಮಿನೀವಲ್ಲಭಃ, ಹರಿಃ —೧೨ ಸೂರ್ಯನಾಮಂಗಳು" (ಸಿದ್ಧಾಂತಿ. ೩೨). [ಸಂ.]

ಪದ್ಮಿನೀಷಂಡ (ನಾ). ೧. ಕಮಲಗಳ ಸಮೂಹ,—ಗುಂಪು : ಮಿಹಿರಪ್ರದ್ಯೋತಿ ಸಂಧ್ಯಾಭವನಸಮಯದೊಳ್ ಪದ್ಮಿನೀಷಂಡದೊಳ್ ಪೊದಟ್ಟು . . . ಮುಗುಳೊಳ್ ಸಿಲ್ಕಿ(ಸುಕುಮಾ. ೩-೧೫).೨.ಪದ್ಮಿನೀ ಜಾತಿಯ ಸ್ತ್ರೀಯರ ಸಮೂಹ. ೧, ೨ : ಚಂಡವಿರೋಧಿಸಾಧನ ತಮಸ್ತಮಮೋಡೆ ವಿಶಿಷ್ಟಪದ್ಮಿನೀಷಂಡಮರಲ್ದು ರಾಗದಿನೊಱಲ್ದಿರೆ (ಪಂಪಭಾ. ೧-೩). [ಸಂ.]

ಪದ್ಮೆ (ನಾ). ೧. ಲಕ್ಷ್ಮಿ : "ಲಕ್ಷ್ಮೀಃ, ಶ್ರೀಃ, ಕಮಲಾ, ಪದ್ಮಾ . . . ಈ ೯ ಲಕ್ಷ್ಮಿಯ ಪೆಸರು" (ಹಲಾಯು. ೬-೩೨); "ಶ್ರೀ ರಾಮೆ . . . ಪದ್ಮೆ . . . ದನುಜಾರಿಪ್ರಿಯೆಯೆಂದಿವಿಂದಿರಾನಾಮಂಗಳ್" (ವಸ್ತುಕೋ. ೫-೨೬). ೨. ಒಂದು ಬಗೆಯ ಸಸ್ಯ ; ನೆಲದಾವರೆ: "ಅವ್ಯಥಾ, ಅತಿಚರಾ, ಪದ್ಮಾ, ಚಾರಟೀ, ಪದ್ಮಚಾರಿಣೀ—೫ ಕಾಶ್ಮೀರ ದೇಶದಲ್ಲಿರುವ ಬೆಟ್ಟದಾವರೇ ಹೆಸರು" (ಸಿದ್ಧಾಂತಿ. ೧೪೫). ೩. ಒಂದು ಬಗೆಯ ಸಸ್ಯ ; ಗಂಟುಭಾರಂಗಿ ; "ಭಾರ್ಗಿ" (ಪಂಡಿತ. ೨೪೨); "ಹಂಜಿಕಾ . . . ಬ್ರಾಹ್ಮಣೀ, ಪದ್ಮಾ, ಭಾರ್ಗೀ . . . ಬರ್ಬರಃ, ವಂದಕಃ—೯ ಭಾರಂಗೀ ಹೆಸರುಗಳು. ಗಂಟುಭಾರಂಗೀ ಎಂಬುವ ಗ್ರಂಥಿಕದ್ರವ್ಯವು ಪ್ರಸಿದ್ಧವಾದದ್ದು" (ಸಿದ್ಧಾಂತಿ. ೧೩೨). ೪. ಲವಂಗ. [ಸಂ. ಪದ್ಮಾ]

ಪದ್ಮೇಶ (ನಾ). ೧. ಕಮಲಕ್ಕೆ ಒಡೆಯ ; ಸೂರ್ಯ. ೨. ಸಂಪತ್ತಿಗೆ ಒಡೆಯ; ಅತ್ಯಂತ ಶ್ರೀಮಂತ. ೧,೨ : ಮನುಜನಿದಱೊಂದೆ ಕುವಲಯಮನೊಂದೆ ಪದ್ಮಮನುಮಾಧಿಪಂಗೇಱಿಸೆ ತೊಟ್ಟನೆ ಕುವಲಯ ಪತಿ ಪದ್ಮೇಶನಪ್ಪ ಪೂಗೊಳನೆ ಬನದ ಪೂಗೊಳನೆಲ್ಲಂ (ಜಗವಿ. ೧೬-೪೦). [ಪದ್ಮ+ಈಶ]

ಪದ್ಮೋದರ (ನಾ). ಹೊಟ್ಟೆಯಲ್ಲಿ ಕಮಲವನ್ನುಳ್ಳವನು ; ಕಮಲನಾಭ ; ವಿಷ್ಣು : ವರ ಸಂಧ್ಯಕ್ಷರದಂತಿರೆ ಗುರು ದೀರ್ಘಂ ಗೂಢಸಂಧಿಯೆನೆ ತೋಳ್ ನಾಲ್ಕುಂ ಕರಮೆಸೆದಿರ್ಕುಂ ಪದ್ಮೋದರಂಗೆ ಚಕ್ರಾಸಿ ಶಂಖ ಶಾರ್ಙ್ಗಸಮೇತಂ (ಕಾಪ್ಯಾವ. ೧೪). [ಪದ್ಮ+ಉದರ]

ಪದ್ಮೋದ್ಭವ (ನಾ). = ಪದ್ಮಗರ್ಭ : ಪದ್ಮೋದ್ಭವೋದ್ಭಾವಕಂ ವಿದಿತಾರ್ಥಾನುಗನಾಮನಲ್ತೆ. ವಿನಯಾದಿತ್ಯಾವನೀಪಾಲಕಂ (ಎಕ. III, ಮಳನ. ೩೧-೧೧; 1117); ಒಂದು ಧನುವಿಂಗೆ ಮೂಜಂಬ ಹಿಡಿದೆ ಒಂದು ಬಾಣವ ಬಿಡಲಾಗಿ ಪದ್ಮೋದ್ಭವನ ಸೃಷ್ಟಿಯ ಕಟ್ಟಿತ್ತು (ಸಕವ. III, ೧೦೨-೧೯೧, ಗಾಣದ ಕಪ್ಪಣ್ಣನ ವಚನ). [ಪದ್ಮ+ಉದ್ಭವ]

ಪದ್ಮೋದ್ಭವತ್ವ(ನಾ).ಬ್ರಹ್ಮನ ಪದವಿ,—ಸ್ಥಾನ : ಕಂತುವೆ ತಾಂ ಪದ್ಮೋದ್ಭವತ್ವಂಬಡೆದುಲಿದು ತಪಸ್ತಪ್ತನಾ ಕಾಂತೆಯಂ . . . ನಿರ್ಮಿಸಿ ಜಯಿಸಿದಂ (ಪುಷ್ಪಪು. ೩-೨೩). [ಸಂ.]

ಪದ್ಯ (ಗು). ೧. ಪದಗಳಿಂದ ಕೂಡಿದ. ೨. ಪಾದಕ್ಕೆ ಸಂಬಂಧಿಸಿದ ; ಪಾದಗಳಿಂದ ಕೂಡಿದ ; ಸಾಲುಗಳುಳ್ಳ. (ನಾ). ೩. ಮೂರು, ನಾಲ್ಕು, ಆರು ಇತ್ಯಾದಿ ನಿಯತವಾದ ಸಾಲುಗಳುಳ್ಳ ಛಂದೋಬದ್ಧವಾದ ರಚನೆ: "ಶ್ಲೋಕಂ ಯಶಮುಂ ಪದ್ಯಮುಂ . . . ತಾನಕ್ಕುಂ" (ವಸ್ತುಕೋ. ೧೨೧-೨೦) ; ಪದ್ಯಂ ಸಮಸ್ತಜನತಾ ಹೃದ್ಯಂ ಪದವಿದಿತಪಾದನಿಯಮನಿವೇದ್ಯಂ (ಕವಿರಾ. ೧-೩೦) ; ಪದ್ಯಂಗಳ್ ನವರಸನಿರವದ್ಯಂಗಳ್ ಸುಜನಸಂಕುಳಕ್ಕೆ ನಿರಂತಂ ಹೃದ್ಯಂಗಳ್ (ಗಿರಿಕ. ೧-೧೩) ; ಮರುಳುಹಾರುವ ಗದ್ಯಪದ್ಯದ ಸರಸವಿದ್ಯಗಳಲ್ಲದೀ ಸಂಗರದ ಕರ್ಕಶವಿದ್ಯೆ ನಿಮಗೇಕೆಂದನಾ ಕರ್ಣ (ಕುಪ್ಯಾವಿ. ೭-೧೧) ; ಪದ್ಯಂ ವಧ್ಯಂ ಗದ್ಯಂ ಹೃದ್ಯಂ (ರಾಮಾಶ್ವ. ೫-೧೪). ೪. ಭಗವಂತನ ಪಾದದಲ್ಲಿ ಹುಟ್ಟಿದವನು ; ಶೂದ್ರ : "ಶೂದ್ರಃ, ಅಂತ್ಯವರ್ಣಃ, ವೃಷಲಃ, ಪದ್ಯಃ—ಈ ೪ ಶೂದ್ರಂ" (ಹಲಾಯು. ೯೬-೪೩೨) ; "ನೆಱೆ ಪಂಚಮಂ ಪದ್ಯನಕ್ಕು" (ಮಂಗರಾ. ೧೧೦-೬). 'ಗದ್ಯ' ಪರಾ. [ಸಂ.]

ಪದ್ಯಕಾವ್ಯ (ನಾ). [ಕಾವ್ಯಮೀ] ಕಾವ್ಯಗಳಲ್ಲಿ ಒಂದು ಪ್ರಕಾರ ; ಪದ್ಯದಲ್ಲಿ ರಚಿಸಿದ ಕಾವ್ಯ : ಬಗೆಯದೆ ಸತೃಣಾಭ್ಯವಹಾರಿಗಳುಸಿರ್ವರ್ಗದ್ಯಕಾವ್ಯದೊಳ್ ನಿರ್ಬಂಧಂ ಪುಗದೆಂದರೋಚಗಳದಂ ತೆಗಟಿಂದಾ ಗದ್ಯಪದ್ಯಕಾವ್ಯದೊಳಿಕ್ಕರ್ (ಶಮದ. ೬೦) ; ಸರೇಫಮಿದಿರಾಗೆ ಶಿಥಿಲ ಮಪ್ಪುದೆಂಬ ಸಂಧಿಯನಜ್ಞರ್ ಗದ್ಯಕಾವ್ಯದೊಳ್ಬೆಚ್ಚಿಕಮೆಂಬರ್ ; ಪ್ರಾಜ್ಞರದಂ ದೂಷ್ಯಮೆಂದು ಪದ್ಯಕಾವ್ಯದೊಳೆಂತಂತೆ ಗದ್ಯಕಾವ್ಯದೊಳಂ ಪ್ರಯೋಗಿಸರ್ (ಶಮದ. ೬೦ ವೃತ್ತಿ); 'ಪದ್ಯ' ಎಂಬುದನ್ನು ಲಾಕ್ಷಣಿಕರು ಪದ್ಯಕಾವ್ಯವೆಂಬ ಅರ್ಥದಲ್ಲೆ ಪ್ರಯೋಗಿಸಿರುವಂತೆ ತೋರುತ್ತದೆ (ಸಂಶೋಧ. ೧೨೪). 'ಗದ್ಯಕಾವ್ಯ' ಪರಾ. [ಪದ್ಯ+ಕಾವ್ಯ]

ಪದ್ಯಗಂಧಿ (ನಾ). ಪದ್ಯದ ಲಯ ತೋರುವ ಗದ್ಯ : ಸಂಸ್ಕೃತದಲ್ಲಿ 'ಚೂರ್ಣಿಕೆ'—ಮೊದಲಾದ ಪದ್ಯಗಂಧಿ ಗದ್ಯಗಳಿವೆಯಷ್ಟೆ (ನಾಡೋಜ. ೨೭೫); ತ್ರಿಪದಿಯು ಪದ್ಯಗಂಧಿಯಾಗಿರುವ ಗದ್ಯದಂತೆ ಕಾಣಿಸುವುದೆ 'ವಚನ' ಎನಿಸಲು ಕಾರಣವಿರಬಹುದು (ಸಂಶೋಧ. ೧೪೫). [ಸಂ.]

ಪದ್ಯನಾಟಕ (ನಾ). ಛಂದೋಬದ್ಧವಾದ ಸಂಭಾಷಣೆಗಳನ್ನು ಒಳಗೊಂಡಿರುವ ದೃಶ್ಯಕಾವ್ಯ : ಪದ್ಯನಾಟಕ . . . ಅಣಕುವಾಡು —ಎಲ್ಲವೂ ಇಂದು ಕನ್ನಡದಲ್ಲಿ ನೆಲೆಗೊಂಡಿವೆ (ನವ್ಯಕಾ. ೨೪). [ಪದ್ಯ+ನಾಟಕ]

ಪದ್ಯರಚನೆ (ನಾ). ಪದ್ಯವನ್ನು ಕಟ್ಟುವುದು ; ಪದ್ಯದ ರಚನೆ, —ಬರೆವಣಿಗೆ : ಪದ್ಯರಚನೆಯೊಳ್ ಕಾಳಿದಾಸನುಂ ಗದ್ಯರಚನೆಯೊಳ್ ಬಾಣನುಂ . . . ನೆಗಟ್ಟರ್ (ಗದಾಯು. ೧-೯). [ಪದ್ಯ+ರಚನೆ]

ಪದ್ಯಾರ್ಧ (ನಾ). ಪದ್ಯದ ಅರ್ಧಭಾಗ : ಪದ್ಯಾರ್ಧ ವಾಕ್ಯವೇಷ್ಟನ ದೆಡೆಗಂ ಸ್ಫುರದನುಕೃತಿಗಂ ಸ್ವರಮವು ಪರಮಿರೆ ಯತ್ವಕ್ಕಮಂತೆ ಸಂಧಿ ವಿಕಲ್ಪಂ (ಶಮದ. ೬೧). [ಪದ್ಯ+ಅರ್ಧ]

ಪದ್ಯೆ (ನಾ). ಮಾರ್ಗ ; ದಾರಿ ; ರಸ್ತೆ : "ಅಧ್ವಾ . . . ಪದ್ಯಾ, ನಿಗಮಃ—ಈ ೧೨ ಬಟ್ಟೆ" (ಹಲಾಯು. ೪೩-೧೦೫) ; "ಅಯನಂ,ವರ್ತ್ಮನ್,

ಮೂರ್ಗಃ . . . ಪದಾತಿ, ಪರ್ಯಾಣ, ವಿಳಪದೀ – ಇವು ಪಾಯಿ ಹೆಸರು ಗಳು" (ವಿದ್ಯಾಂತಿ. ೧೭). [ಸಂ. ಪದಾತಿ]

ಪದ್ಮಂತಿಕೆ (ನಾ). (?) : ಎಡೆಮಾರ್ಗದಿ ಪದ್ಮಂತಿಕೆಗಳಿಂದ ಫಳಫಳಿಸಿ ಬೆಳಗುತ ಧರದಾತ್ಮಜಮುನಿಪನಂ ಕಂಡು . . . ಸಮುಂದಮೆತ್ತುಪಚರಿಸಿ (ಪರಶು. ೪೧-೨೯). [?]

ಪದ್ಮಲಿ (ನಾ). ಒಂದು ಬಗೆಯ ಸಸ್ಯ : ಕೀಮುಖಾ, ಪರೇರಾ ಬೇರು, ಪದ್ಮಲಿ, ಪಾತ, ಕಾಡುಬಳ್ಳಿ (ಮೃಚಿಗಿ. ೨೧-೩೪). [?]

ಪಧಿ 'ಪದಿನ್' ನೋ.

ಪನ್$_1$ 'ಪದಿನ್' ನೋ.

ಪನ್$_2$, ಪಂ (ಸಪೂರೂ). ಸಮಾಸದಲ್ಲಿ 'ಪಸಿ' ಎಂಬ ನಾಮ ವಾಚಕಕ್ಕೆ ಬರುವ ಆದೇಶರೂಪ : 'ಪಂದಲೆ', 'ಪಂದೋಲ್' ಪರಾ. ಹಂ : 'ಪಂಬಸಲೆ' ಪರಾ. 'ಪೊಂ' ಹೋ. [<ಪಸಿ$_3$]

ಪನ, ಪನವು (ನಾ). ರಹಸ್ಯಸ್ಥಳ ; ಗುಟ್ಟಾಗಿ ಗೊತ್ತುಪಡಿಸಿದ ಪ್ರದೇಶ ; ಸಂಕೇತಸ್ಥಳ : "ಪನಂ = ಸಂಕೇತಸ್ಥಳಂ" (ಶಸುದ.ಪಂ.೨); ಸಮರಸನ್ನದ್ಧತೆಯ ಸನ್ನಣದ ಸಂಭಾರಗಳನ್ನು ತಕ್ಕೆಡೆಯ ಪನದಲ್ಲಿ ಸಂಗ್ರಹಿಸಿಕೊಂಡು ಸಜ್ಜಾಗಿರುವನು (ಪುಂತ್ರಶ. ೧೩೪-೬). **ಪನವು** : "ಸಂಕೇತಸ್ಥಳಕ್ಕೆ ಪನವೆಂದು ಕೊಂಬೆಂದು ಪೆಸರ್" (ಕಬ್ಬಕ್ಕ. ೧೬೨) ; 'ಮೂಗಿಯ ಕಾಲಕ್ಕೆ ಹೇಗಿದ್ದೆ ಕೋಗಿಲ ?', 'ಹೋಗಿದ್ದೆ ಬನವಾಸಿ ಪನವಿನೊಳೆ' (ಸಪೀಗೀ. ೧೪-೧೬೪). [ದೇ. ಕಿ]

ಪನಂಬುಬಳ್ಳಿ (ನಾ). ಒಂದು ಬಗೆಯ ಬಳ್ಳಿ : (ಮೃಚಿಗಿ.೩೩-೬೪೧). [ಪನಂಬು$_0$+ಬಳ್ಳಿ]

ಪನಟಿ (ನಾ). ಒಂದು ಊರಿನ ಹೆಸರು (?) : ಗಂಗೆಸಟ್ಟ ಕಲಸ್ಯಜಿ ಪನಟಿಯ ತುರುಗೊಳಿಳ್ಕೊಣ್ಡು ಪುಯ್ಕಲ್ಲೋಗಿ ಅನ್ತಿಱುದು ಸಗ್ಗ ಮೇಱುದಂ (ಎಳ. X, ಕೋಲಾವ. ೨೪೫-೩ ; 966). [?]

ಪನಪನ (ನಾ). ಒಂದು ಅನುಕರಣ ಶಬ್ದ : ತನ್ನ ಸಹಜಕವಚಮಂ ನೆತ್ತರ್ ಪನಪನ ಪರಿಯೆ ತಿದಿಯುಗಿವಂತುಗಿದು ಕೊಟ್ಟೊಡೆ (ಪಂಪಭಾ. ೧-೧೧೨ ಪ) ; ಅಂತು ಸಹಜಕವಚ ರತ್ನಕುಂಡಲಂಗಳಂ ನೆತ್ತರ್ ಪನಪನ ಪನಿಯೆ ತಿದಿಯುಗಿವಂತುಗಿದು ಕೊಟ್ಟುದರ್ಕೆ ಮೆಚ್ಚಿ (ಪಂಪಭಾ. ೯-೬೩ ಪ).

ಪನವು 'ಪನ' ನೋ.

ಪನಸ 'ಪಲಸು' ನೋ.

ಪನಸವಾಡಿ, ಹನಸವಾಡಿ (ನಾ). ಒಂದು ಊರಿನ ಹೆಸರು : ಸರ್ವ ನಮಸ್ಕಾಮಾಗೆ ಪನಸವಾಡಿಯಂ ಬಿಟ್ಟು (ಎಳ. VII, ೨೮ಮೊ. ೧೦-೫೨ ; 1085 ?). **ಹನಸವಾಡಿ** : ಚಿಕ್ಕಕೂಡಲಿಯ ಹನಸವಾಡಿಯ ಪೂರ್ವಾಯ ಅಪೂರ್ವಾಯ ಆಳುಯನ್ಯಾಯ ಯೇನೂಯಿಲ್ಲೆಂದು ಧಾರಾಪೂರ್ವ ಮಾಡಿದ ಧರ್ಮ (ಎಳ. VII, ೨೮ಮೊ. ೬೪-೬ ; 1513).

[ಪನಸ (<ಪಲಸು)+ಪಾಡಿ$_2$]

ಪನಸಾರೆ, ಪಸಾರ್$_2$, ಪಸಾರೆ (ನಾ). ೧. ಪಿಪ್ಪಲಿ, ಸರ್ಪಿ, ಸಿತ, ಕ್ಷೌದ್ರ, ಪಯಸ್ಸುಗಳೆಂಬ ಐದು ಬಗೆಯ ಸಾರಗಳು ; ಪಂಚ ಸಾರ : ಆ ಮೂಲಿಕೆಗೆ, ಕೆಲವು ಪನಸಾರೆ ಮದ್ದುಗಳನ್ನು ಬೆರಸಿ . . . ಮದ್ದನ್ನು ತಯಾರಿಸಿದ (ಹುರಿಹಾ. ೪೪). **ಪಸಾರ್$_2$** : ೨. ಔಷಧ ದ್ರವ್ಯ ; ಗ್ರಂದಿಗೆದ್ರವ್ಯ : 'ಪಸಾರಿ' ಪರಾ. **ಪಸಾರೆ** : ೧. ಔಷಧಕ್ಕೆ ಪಸಾರೆ ಸಾಮಾನು ಬೇಕೆಂದು...ಹೊರಟು (ಪುಸುಗ. ೧೩೭). ℙ'ಪನಸಾರ', 'ಪಂಸಾರ' ಎಂಬ ರೂಪಗಳೂ ಇದ್ದಿರಬಹುದು. ಪ್ರಯೋಗಗಳು ದೊರೆತಿಲ್ಲ. [<ಪಂಚಸಾರ]

ಪನಸು 'ಪಲಸು' ನೋ.

ಪನಸೋಗೆ, ಹನಸೋಗೆ (ನಾ). ೧. ಒಂದು ಸ್ಥಳದ ಹೆಸರು ; ℙ ಈಗಿನ ಹುಣಸೂರು ತಾಲ್ಲೂಕಿನಲ್ಲಿರುವ ಹನಸೋಗೆ : ಶ್ರೀರಾಜಕೇಸರಿವರ್ಮ್ಮಪೆರ್ಮ್ಮಾನಡಿಗಳ್ ನಿಲ್ಲದೆ ಪನಸೋಗೆಯ ಕಾಳೆಗದ ಲೊಟ್ಟೆಕೆಯ್ದಂ (ಎಳ. IX, ಕೊಡಗು. ೪೬-೫ ; ಸು. 1003). **ಹನಸೋಗೆ** : ೧. ಸ್ವಸ್ತಿಶ್ರೀ ಮೂಲಸಂಘ ದೇಕೀಯಗಣ ಪೊಸ್ತಕ ಗಚ್ಛ ಕೊಂಡಕುಂದಾನ್ವಯ ಹನಸೋಗೆಯ ಬಳಿಯ ಶ್ರೀಬಾಹುಬಲಿ ಮಲಧಾರಿದೇವ (ಎಳ. IV, ಹುಣಸೂ. ೧೪-೨ ; 1303) ; ಹನಸೋಗೆಯ ಆದಿಶ್ರೀ ಅಷ್ಟಗಳು (ಎಳ. I (R), ೧೯-೩೬ ; 1344). ೨. [ಜೈನ] ಯತಿಗಳ ಒಂದು ಶಾಖೆ : ಅಸ್ತಯಗಳು : ಪೊರಳ್ . . . ಹನಸೋಗೆ, ಮೈಲಾಪ (ಕಜಾಆ. ೪೬). [?]

ಪನಾಯಿತ (ಗು). ೧. ಹೊಗಳಲ್ಪಟ್ಟ ; ಕೊಂಡಾಡಲ್ಪಟ್ಟ. (ನಾ). ೨. ಹೊಗಳಲ್ಪಟ್ಟುದು ; ಕೊಂಡಾಡಲ್ಪಟ್ಟುದು : "ಈಡಿತಂ, ಶಸ್ತಂ, ಪಣಾಯಿತಂ, ಪನಾಯಿತಂ, ಪ್ರಣುತಂ . . . ಈಳಿತಂ, ಸ್ತುತಂ—ಇವು ಹೊಗಳಲ್ಪಟ್ಟವ್ವು..ಕೊಂಡಾಡಲ್ಪಟ್ಟವ್ವು, ಬಣ್ಣಿಸಲ್ಪಟ್ಟವ್ವು" (ವಿದ್ಯಾಂತಿ. ೩೫೨). [ಸಂ.]

ಪನಾಳಿ$_1$ 'ಪನ್ನಾಳ್' ನೋ.

ಪನಾಳಿ$_2$ (ನಾ). ಬ್ರಿಟಷ್ ಆಡಳಿತಕ್ಕೆ ಮೊದಲು ಬಳಕೆಯಲ್ಲಿದ್ದ, ಪನಾಳವೆಂಬಲ್ಲಿ ಟಂಕಿಸಿದ ನಾಣ್ಯ ; ಹದಿನಾರು ಪ್ರಕಾರದ ನಾಣ್ಯಗಳಲ್ಲಿ ಒಂದು : ಬ್ಯೆಯ ನಾಣ್ಯಗಳು . . . ೧. ಔರಂಗಾ ಬಾದಿ . . . ೮. ಹೈದರಾಬಾದಿ ೯. ಪನಾಳೀ (ಕಭಾಗೆ. ೨೪೧).

[<ಪನ್ನಾಳ್$_2$ (<ಪನ್ನಾವಟಿ)]

ಪನಿ$_1$, **ಹನಿ**$_1$ (ಕ್ರಿ). ಪನಿತು, ಹನಿತು(ಭೂತನ್ಯೂ). ೧. ತೊಟ್ಟು ತೊಟ್ಟಾಗಿ ಬೀಳು; ತೊಟ್ಟಿಕ್ಕು; ಒನರು; ಜಿನುಗು : ಆ ಕೂಸಿನ ತಲೆಯೊಳಿನಿಸಾನುಂ ವಿಷದಿಂದು ಪನಿತುದಱುಂದಾತಂಗೆ ಬಿಂದುಸಾಗರ ನೆಂದು ಪೆಸರನಿಟ್ಟು (ವಡ್ಡಾರಾ. ೧೫೧-೬) ; ಕವಿಯೊಳಮೆರ್ದಿನ ಪನಿ ಪನಿವಿನಮೆಸೆದರರಿಬರಳಿಕುಳರುತಿಯಿಂ (ಆದಿಪು. ೧೧-೬೯) ; ಸೊನೆವನ ಜಂಜುವಿಂ ಪನಿಯೆ ಮಾಂಗೊನರಂ ನಸುಗರ್ಚ್ . . .ಪುಗಲ್ ಪುಗಲೆಂದುದು ಕೋಕಿಲವ್ರಜಂ (ಜಗವಿ. ೧೪-೩೮) ; ಸತಿಯ ನೊಸಲರ್ಧಚಂದ್ರಾ ಕೃತಿಯಪಱಿಂ ಪನಿತ ಸುಧೆಯ ಬಿಂದುಗಳೆಂಬಂತೆ . . . ಪೊಸಮೂಳುತ ಮುಱಿದತ್ತು (ಪಳಜಂ. ೩೨೩). ೨. (ನೀರಿನ) ತೊಟ್ಟುಗಳಿಂದ ಕೂಡಿರು,—ಬಿಂದುಗಳಿಂದ ಕೂಡಿರು : ಮೇಘಂಗಳ್ ಪನಿತಡರೆ ಮೇಘಂ ಕುಂಭ(ದ)ಮೇಘಮೆಂಬವೊಲೆ ಮಟಿ ಕೊಳ್ಗುಂ (ಉಪ್ಪಸು. ೪-೪೭). ೩. (ಮಳೆಯಂತೆ) ಸತತವಾಗಿ ಸುರಿ; ಧಾರೆಯಾಗಿ ವರ್ಷಿಸು : ಅಂತು ಸಹಜಕವಚರತ್ನಕುಂಡಲಂಗಳಂ ನೆತ್ತರ್ ಪನಪನ ಪನಿಯೆ ತಿದಿಯುಗಿವಂತುಗಿದು ಕೊಟ್ಟುದರ್ಕೆ ಮೆಚ್ಚಿ ದೇವೇಂದ್ರನಾತಂಗ ಮೋಘಶಕ್ತಿಯನಿತ್ತಂ (ಪಂಪಭಾ. ೯-೬೩ ಪ) ; ಪನಿತುವ ಮುಂಗಾರೊಳ್ ಬಲ್ವನಿಗಳ್ (ಶಸುನಾ. ೬-೨೬) ; ಕಡುಗೆದಱುದ ಕೇಶದಿಂದ ನೀರ್ಪನಿಗಳು ಬಿಡದೆ ಪನಿತವೇನೆಂಬೆ(ಚಂಪ್ರಸಾಂ.೧೬-೨೧೯). **ಹನಿ**$_1$: ೧. "ಹನಿ—ಬಿಂದುಪತನೇ"(ಶಪುಧಾ); ಉರಿವ ದಿಸಿಲು ತಾಗಿಯೂ ಮಂಡೆಯ ಬೆಣ್ಣೆ ಕರಗಿ ಕನಿತು ನೋಡುವವರ ಮಂಡೆಯ ಮೇಲೆ ಹನಿತು ಬೀಳಲು (ನೇಮಿಸಂ. ೬-೧೧೧); ಮಾನವತೆಯ ಪುಣ್ಯಾಗಂಗೆ ಪರಿವಂತಿಹುದು ಮಂಗಲತೆಯ ಹಿಮವು ಕರಗಿ ಹನಿವಂತಿಹುದು (ಕನಸಿ. ೧೯-೧೬). ೨. ಕಲ್ಲು ಕವಣೆಯ ನುಂಗಿಯಿಜುವಾತನ ಹಣೆ ತಾಕಿತ್ತು ಹಣೆ ಹನಿತು ಮೂಜು ಸೊನೆಯಾಯಿತು (ಪುಸುಗುಂ. ೪೬-೫) ; ಅವರ ಕಣ್ಣು ಹನಿಯಿತು (ಪುಗಿದು. ೬). ೪. ಸೋರು ; ಹರಿದುಹೋಗು : ತನುವ ದಂಡಿಸುತುದಯಕೆ ತಂದರಾ ಕರ್ಮ ಹನಿತು ಹೋಹುಡೆ ಕೃತಪಾಕಾ

(ಧರಣ. ೬೮-೭೫). ೫. ಮಳೆಯು ಬೀಳು,—ಸುರಿ ; ವರ್ಷಿಸು : ಈ ವರ್ಷ ಸ್ವಲ್ಪವೂ ಹನಿತಿಲ್ಲ (ರೂಢಿ).

ಹನಿದಿರು = (ದ್ರವಬಿಂದುಗಳಿಂದ) ತುಂಬಿರು : ಕಳ್ಳಿಯೊಳು ಹಾಲು ಮುಳುಗಳ್ಳಿಯೊಳು ಹೆಜ್ಜೇನು ಎಳ್ಳಿನೊಳಗೆಣ್ಣೆ ಹನಿದಿರಲು ಶಿವಲೀಲೆ ಸುಳ್ಳೆನ್ನಬಹುದೆ (ಸರ್ವಜ್ಞ. ೧೯೪).

[ದೇ.॥ ತಮಿ. ಮಲ. ಪನಿ ; ತುಳು. ಪನಿ, ಪಣಿ; ಕೊಡ. ಪನ್ನ್]

ಪನಿ$_2$, ಹನಿ$_3$ (ನಾ). ೧. (ನೀರು ಅಥವಾ ಯಾವುದೇ ದ್ರವಪದಾರ್ಥದ) ತೊಟ್ಟು,—ಬಿಂದು : ತಱಿಸಂದಾ ಸಕ್ಕದಮುಮನಱಿಯದೆ ಕನ್ನಡಮುಮಂ ಸಮಾಸೋಕ್ತಿಗಳೊಳ್ ಕುಱಿತು ಬೆರಸಿದೊಡೆ ವಿರಸಂ ಮಱುಗುವ ಪಾಲ್ಗಳೆಯ ಪನಿಗಳಂ ಬೆರಸಿದವೋಲ್ (ಕವಿಗಾ. ೧-೫೬) ; ಇನಿಯವು ಮೊದಲೊಳ್ ನಂಜಿನ ಪನಿ[ಪಾಠಾಂ. ಸವಿ]ವೊಲ್ ಬಱಿಕೆಯ್ದೆ ಮುಳಿದು ಕೊಂದಿಕ್ಕುವುವಿಂತೆನೆಯೆನೆ ವಿಷಯವಿಷಾಸ್ವಾದನದೊಳ್ ಲಂಪಟರಿದೇಕೆಯೋ ನರಪಶುಗಳ್ (ಅದಿಪು. ೧೪-೧೨೫) ; ರುದ್ರನ ಬಾಣಹತಿಯಿನುಗುತರುತಿರೆ ದೈತ್ಯರ ನೆತ್ತರ ಪನಿಯೊಳ್ಸಾಸಿರವಪ್ಪರ್ದೈತ್ಯರೆಂಬರಿನ್ನವು ಪುಸಿಗಳ್(ಸಮಪ. ೧೦-೬೮) ; ಚಾದಗೆ ಕಾರ್ಮುಗಿಲ್ವನಿಯಂ . . . ಪಾರ್ವ ತೆಱದಿಂ (ದಶಕು. ೨-೬೭). ೨. ಮಳೆ ; ವೃಷ್ಟಿ : ಪನಿಯಿಲ್ಲದೊಣಗಿರ್ಪ ಸಸ್ಯಾಳಿಗಂ ಮೇಘವನಿಯ ಕಂಡಂದದಿಂ (ವೆಂಕಾರಾ. ೫-೭-೨೫) ; ಬಾನಿಂದ ಪ[ಪಾಠಾಂ. ಹ]ನಿ ಬಿಟ್ಟೊಡಲ್ಲದೆ ಮತ್ತಂತೆ ಪಸುಂಬುಲ್ತಲೆ ಕಾಣ್ಬುದರಿದು (ಕುಱಳ್. ೧-೨-೬). ೩. ಮಂಜಿನ ಹನಿ ; ತುಷಾರ ಕಣ : ಬೆಳಗಪ್ಪ ಜಾವದಯ್ಯಿಲ್ ಕೊಳೆ ಶೀತಕ್ಕಾಱದಳ್ಕಿ ತೊಟ್ಟರ್ದ ಧರಾತಳಮೆಂಬ ಪೆಣ್ಣ ಪೊಸಕಂಚುಳಿಕೆಯ ಸೀರ್ಮುತ್ತಿನಂದಮಾದುವು ಪನಿಗಳ್ (ಕಾವ್ಯಸಾ. ೬೯೪ ಶೂದ್ರಕ). 'ಪನಿಪುಲ್', 'ಪನಿಪೊಳ್ತು' ಪರಾ. ೪. ತಂಪು; ಶೀತಲ: 'ಪನಿನೀರ್' ಪರಾ. ೫. ಕಣ್ಣೀರು ; ಕಂಬನಿ : 'ಪನಿಗೊಳ್' ಪರಾ. ೬. ಸುವಾಸನೆ ; ಪರಿಮಳ : 'ಪನ್ನೇರಳು', ಪನ್ನೇಱಳೆ' ಪರಾ. ಹನಿ$_3$: ೧. "ವಿಪ್ರುಷಃ, ಬಿಂದುಃ—ಈ ೨ ಹನಿ" (ಹಲಾಯು. ೧೧೨-೫೫) ; ಹೊಸಹಾಲ ಹನಿಗಳಡಸಿದ ತೆಱದ ತೆನೆಗಳಂ ತಿಱಿತಿಱಿದು ತಂದು ತಂದು (ಸಿದ್ಧರಾ. ೨-೨೯) ; ಸ್ವಾತಿವರುಷಂ ಸುರಿಯಲೆಂತಹ ಹನಿಗಳಿಗೆ ಏಪರಿಯೊಳಂ ಕಱಿಗೊಳ್ಳದಂತಾಗಿದಱ ಪರಿ ಬೇಱೆ (ಬಸಪು. ೫೧-೨೪) ; ವರಸುಧೆಯ ಹನಿಯೊಂದು ಯಮುನೆಯ ಪರಿಯೊಳುಕ್ಕಿತು (ಸಂಭಪ. ೫-೫೭); ಹನಿ ಕೂಡಿದರೆ ಹಳ್ಳ, ತೆನೆ ಕೂಡಿದರೆ ಭತ್ತ (ಗಾದೆ). ೨. "ಮಳೆ, ಸರಿ, ಸರವು, ಸೆಳಕು, ಸೋನೆ, ಹನಿ, ಸಿಡಿಸಲು" (ಕಂನುಹು. ೮೯) ; ಬಸವನೆಂದರೆ ಪಾಪದೆಸೆಗೆಟ್ಟು ಹೋಗುವದು ಬಿಸಿಲಿಂಗೆ ಹಸುರೊಳೆಸೆದಿರ್ಪ ಹನಿಯಾಱಿಹುಸಿದು ಹೋದಂತೆ (ಸರ್ವಜ್ಞ. ೨೯೪). ೩. (ಆಲಂ)ಅತಿ ಸ್ವಲ್ಪ ; ತೀರ ಕೊಂಚ ; ಲವಲೇಶ : ಮನೆಯಲ್ಲಿ ಹನಿ ಎಣ್ಣೆಯೂ ಇಲ್ಲ (ರೂಢಿ).

ಪನಿಯ ಪೊಳ್ತಾರೆ = ಮಂಜು ಬೀಳುವ ಬೆಳಗಿನ ಹೊತ್ತು ; ಮುಂಜಾವ : ಪನಿಯ ಪೊಳ್ತಾರೆ ಜಿನಪದ ಮೊಗವ ಕಂಡು ವನಿತೆಯರುಗಳಾದ ನಾವು ವಿನಯದಿಂದತ್ತೆಮ್ಮನವರ ಪಾದ ಕಂಡು ಮನದಕ್ಕರಿಂ ಶರಣೆಂದು . . . ತಮ್ಮೊತ್ತಿಗೆ ಬಹೆವು(ಜ್ಞಾನಚ. ೨೪-೧೦೪). ಹನಿಯಾಗು = (ಕಣ್ಣೀರಿನ)ತೊಟ್ಟುಗಳಾಗು : ಸುಡುವಳಲ್ ಹನಿಯಾಗಿ ನುಡಿಯಾಗಿ ನೆರವಾಗಿ . . . ನಿಂದಂ (ಕಾಲೂರ. ೧೦೯-೨೨೪).

[<ಪನಿ$_1$./ತಮಿ. ಮಲ. ನಾಯ್ಕಿ. ಪನಿ ; ತುಳು. ಪನಿ, ಪಣಿ, ಹನಿ ; ತೊದ. ಪೊನಿ ; ಕೋಲಾ. ಪನೀ]

ಪನಿಗಿಱು (ಕ್ರಿ). ಹನಿಯೆಂದು ಭಾವಿಸು,—ಎಣಿಸು : ನಡುನೆತ್ತಿ ಬಿರಿದು ಮುತ್ತುಗಳೊಡೆದುಚ್ಚಳಿಸುತ್ತೆ ಪಾಱೆ ಪನಿಗೆತ್ತು ನವಿಲ್ ತುಡುಕೆ (ರಾಜಶೇ. ೫-೪). [ಪನಿ$_2$ + ಗಿಱು]

ಪನಿಗೊಳ್ (ಕ್ರಿ). ಕಣ್ಣೀರಿಡು ; ಕಂಬನಿದುಂಬು ; ದುಃಖಿಸು : ಜನನೀಯಗ್ರಜನಲ್ಲಿಗೆಯ್ದು ಬಹುಶಾಸ್ತ್ರಾರ್ಥೋಕ್ತಿಯಂ ಕಲ್ತುದಂ ಪನಿಗೊಂಡುಂಡುದನೋದಿ ಬಂದೊಡರಸಂ ಮಂತ್ರಿತ್ವಮಂ ಕೊಟ್ಟುದಂ ನೆನೆವೋ (ಸುಕುಮಾ. ೫-೨೫). [ಪನಿ$_2$+ಕೊಳ್$_1$]

ಪನಿತ (ಗು). ೧. ಹೊಗಳಿದ ; ಸ್ತುತಿಸಿದ. (ನಾ). ೨. ಹೊಗಳಲ್ಪಟ್ಟುದು ; ಕೊಂಡಾಡಲ್ಪಟ್ಟುದು : "ಈಡಿತಂ, ಶಸ್ತಂ, ಪಣಾಯಿತಂ, ಪನಾಯಿತಂ, ಪ್ರಣುತಂ, ಪಣಿತಂ, ಪನಿತಂ . . . ಈಳಿತಂ, ಸ್ತುತಂ —೧೨ ಹೊಗಳಲ್ಪಟ್ಟದ್ದು, ಕೊಂಡಾಡಲ್ಪಟ್ಟದ್ದು, ಬಣ್ಣಿಸಲ್ಪಟ್ಟದ್ದು" (ಸಿದ್ಧಾಂತಿ. ೩೫೨). [ಸಂ.]

ಪನಿತರ್ (ಕ್ರಿ). ಹನಿಯಾಗಿ ಬೀಳು ; ತುಂತುರಾಗಿ ಬರು : ಸುರಿವ ಮುಗುಳುಗಳ ಮಳೆಯೊಳು ಕೂಡಿ ಪನಿತರ್ಪ[ಪಾಠಾಂ. ಪ್ಪ] ಕುರುವಿಂದಮಣಿಮೌಕ್ತಿಕದ ಪರಲೊಪ್ಪಿದುವಾಲಿಕಲ್ಲಿಂದ್ರಗೋಪದ ದೊರೆಯೆನೆ ಕಣ್ಗಡ್ಡಮಾಗಿ (ಶ್ರೀಪಾಲ. ೬-೮೪). [ಪನಿ$_2$+ತರ್]

ಪನಿದಂದಲ್ (ನಾ). ಹನಿಹನಿಯಾದ ಮಳೆ ; ತುಂತುರುಮಳೆ ; ಸೋನೆ : ತೋರ ಬಾಷ್ಪದ ಪನಿದಂದಲಂ ಸುರಿಯುತುಂ ಕುಸುಮಾವಳಿದೇವಿ ನಾಡೆ ನೋಡಿದಳ್ . . . ಮದೀಯ ಮುಖಾರವಿಂದಮಂ (ಕುಸುಮಾ. ೧೨-೧೪೪). [ಪನಿ$_2$ + ತಂದಲ್]

ಪನಿನೀರ್, ಪನಿನೀರು, ಪನ್ನೀರ್, ಪನ್ನೀರು (ನಾ). ೧. ತಂಪಾದ ನೀರು ; ಮಂಜಿನ ನೀರು ; ಶೀತಲವಾರಿ : ಸೇವಂತಿಗೆಯ ತೋಂಟದೊಳ್ ಮಿಂಟುವರಿವ ಪರಿಮಳದ ಪನಿನೀರ ಪಳ್ಳಮಂ ದಾಂಟಲಾಱದ ಬಾಲಮರಾಳಂಗಳಂ . . . ದಾಂಟಸುತಿರ್ಪ ರಾಜಹಂಸರಾಜಿಗಳಿಂ (ಗಿರಿಕ. ೨-೭೧ ವ) ; ಮಳಯರುಹದ ಕರ್ಪೂರದ ಪಳಿಕಿನ ಪನಿನೀರ . . . ಶೀತಳತೆಯಿನವನಿಪನನಾಪ್ತರುಜ್ಜೀವಿಸಿದರ್ (ಅನಂಪು. ೧೧-೬೮) ; ಚಿತಪಚ್ಚೆಯಂ ಪುಡಿಗೆಯ್ದು ಪನಿನೀರೊಳೊಡಗಲಸಿ ಕಣ್ಗೆಚ್ಚೆ (ಸೌಂದಪು. ೮-೧೯). ೨. ಸುಗಂಧಯುಕ್ತವಾದ ನೀರು; ಸುವಾಸನೆಯ ನೀರು; ಪರಿಮಳೋದಕ : ಚಂದನರಸಮಂ ಪನಿನೀರೊಳ್ಮೇಳಿಸಿ ಸಂತಸದಣ್ಪಂಗೈದುಂ ಲಸದಕ್ಷತೆಯಂ ತ್ರ್ಯಕ್ಷಂಗಿತ್ತು (ಉದ್ಭದೇ. ೩-೪೬) ; ಪೊನ್ನಗೊಪ್ಪರಿಗೆದೀವಿದ ಪುಣುಗು ಕತ್ತುರಿ ಜವಾದಿಗೂಡಿದ ಕುಂಕುಮರಸಂಗಳಿಂ ಬಿತ್ತರಂಬಡೆದ ಪನಿನೀರ್ (ಹಾಲಾಸ್ಯ. ೧-೬-೨೭ ವ). **ಪನಿನೀರು** : ೨. ಕಸ್ತೂರಿ ಕಾಶ್ಮೀರ ಪನಿನೀರು ಸಿರಿಖಂಡಾದಿಯಾದ ಸೌರಭ್ಯಲೇಪನಮುಮಂ ಧರಿಸಿ (ಸಮ್ಯಕೌ. ೯-೩೪) ; ಕುಂಕುಮರಸ ಪನಿನೀರ ಬಟ್ಟ ಬಲ್ಮೊಲೆಗೆ ಸಿಂಪಿಸಲು ಇಟ್ಟ ಮಂಡಿಗೆಯ ಪೊಂಬುಜ್ಜಣಿ ತೈಲಸಂಘಟ್ಟದಿಂ ಪೊಂಗಿದಂತಾಯ್ತು (ಮೋಹತ. ೨೮-೧೮) : ಧರಣೀಶನ ಸಿರಿಮುಡಿಗಾಗ ನಾರಿಯರ್ ನೆಱೆ ಪನಿನೀರ ಸೂಸಿದರು (ಕಂನವಿ. ೨೨-೫೬). **ಪನ್ನೀರ್** : ೧. "ಹಿಮವಾರಿ ಪನ್ನೀರೆನಿಕ್ಕುಂ"(ಮಂಗಂಾ. ೯೯-೨೨), ಒಡನಾಡಿಗಳಡಿಗಡಿಗೆ ತಳಿವ ಪನ್ನೀರ ತುಂತುರ್ಮನಿಗಳಿಂ ಪೊಸತಪ್ಪ ಕಾರ ಸಿರಿಯ ಪರಿಯಂ ಪಡೆದಂತಿರ್ಪಳ್ (ಕಬ್ಬಿಕಾ. ೩೧೫). ೨. ಪನ್ನೀರ ಪರಿಮಳದ ಪೂಗೊಂಡು ಮುಂದೆ ತೋಱುತ್ತಿರ್ಪ ಪೂಗಿಡುಗಳಂ ಕಂಡು (ಪುಷ್ಪರ. ಹ. ೫೨೪-೧೧); ಕಮ್ಮೆಣ್ಣೆಯಿಂ ಮರ್ದನಂ ಮಾಡಿಸಿ ಪನ್ನೀರಿಂ ಮಜ್ಜನಂಬುಗಿಸಿ (ಧರ್ಮಪ. ೨-೫೨ ವ) ; ಗಂಧಾದಿಗಳನೆಲ್ಲಂ ತೆಗೆದು ತೆಗೆದು ಪನ್ನೀರಿಂದ ಮೇಳಯಿಸಿ . . . ಮೃಗನಯನೆ ಗನುಲೇಪಿಸಿದರು (ಬಸಪು. ೪-೩೫) ; ಬೆರಸಿದರು ಪನ್ನೀರ ಹೊಂಗೊಪ್ಪರಿಗೆಯಲಿ (ನಳಚ. ೩-೬೪). **ಪನ್ನೀರು** : ೧. ತೈತ್ಯ ಸೌರಭ್ಯ ಮಾಂದ್ಯಮೆಂಬ ತ್ರಿವಿಧಮದಸಮೃದ್ಧಿಮಾದ ಪನ್ನೀರು . . . ಕರ್ಪೂರವೃಕ್ಷ ಹಿಮಾದಿ ಸಂಪರ್ಕದಿಂ . . . ಪ್ರೇಕ್ಷಣೀಯಮಾಗಿರ್ಕುಂ (ವಿವೇಕ. ೨೨೭). ೨. ಕೇರಕೇರಿಯ ಬೀದಿಗಳ ಪನ್ನೀರ ಚಳೆಯದ . . .

ಸೂರನೀಧಿಯ ರಚನೆಯಲಿ ರಚಿಸಿದರು ಪಟ್ಟಣವ (ಕುವ್ಯಾಆ. ೧೩–೪); ಪಚ್ಚೆಗಪ್ಪರ ಪನ್ನೀರು ಪ್ಪುಗನಾಭಮುಖ್ಯಲೇಪನದಿ ತಿಗುರನಿಕ್ಕಿದರಾಳಿಯರು (ಪೋಹಪ. ೨೩–೧೨); ಪನ್ನೀರನೊಡನೊಡನೆ ತೊಡೆದೊಡದಕೆ ವಿಗೆ ಬೆಚ್ಚಿತುರಿಯೆಂದು ಮತ್ತೆ ಸಿಡಿನಿಡಿಗೊಂಡು (ಜೈಮಿಭಾ. ೩೧–೨); ಪನ್ನೀರು ಕರ್ಪೂರವೀಳೆಯ ಮೋಹನದನುಲೇಪನಾದಿ ವಸ್ತುಗಳ. . . ಅನುಗೊಳಿಸಿದನು (ಕಂಸವಿ. ೧೧–೩೯).

ಪನಿನೀರ ಗಿಂಡಿ, ಪನ್ನೀರ ಗಿಂಡಿ = ಪರಿಮಳಯುಕ್ತವಾದ ನೀರನ್ನು ಚಿಮುಕಿಸಲು ಬಳಸುವ ಗಿಂಡಿ; ಪನ್ನೀರುದಾನಿ: ಗಂಡುಗಳನು ದಿಂಡುಗೆದಿಸುವ ಕುಸುಮಕೋದಂಡನ ರಾಜಸಿಯಂತೆಸೆವ ಪುಂಡರೀಕಾಕ್ಷಿಯ ಸಭೆಯೊಳು ಪನಿನೀರ ಗಿಂಡಿಯ ಪಿಡಿದೊರ್ವಳಿಹಳು (ಚಂಪ್ರಸಾಂ. ೯–೨೦); ಅವರ ಮನೆಯ ಪನ್ನೀರ ಗಿಂಡಿ ತುಂಬ ಜೆನ್ನಾಗಿದೆ (ರೂಢಿ). ಪನ್ನೀರ ದಾನಿ = ಪನಿನೀರ ಗಿಂಡಿ: ನಮ್ಮ ಮನೆಯಲ್ಲಿ ಬೆಳ್ಳಿಯ ಪನ್ನೀರ ದಾನಿ ಇದೆ (ರೂಢಿ).

[ಪನ್ನೀರ್ + ಕಿಂಡಿ/ತಮಿ. ಪನೀರ್, ಪನ್ನೀರ್; ಮಲ. ಪನೀರ್; ತುಳು. ಪ್ನೀರ್; ಕೊಡ. ಪನ್ನಿರಿ; ತೆಲು. ಪನ್ನೀರು, ಪನ್ನೀರಮು]

ಪನಿನೀರು 'ಪನಿನೀರ್' ನೋ.

ಪನಿನೀರೆಜ್ಜೆ (ಕ್ರಿ). ಪನ್ನೀರನ್ನು ಧಾರೆಯಾಗಿ ಸುರಿ;—ಹಾಕು: ನಡುಗಂಬೆಳಗುಜೊನ್ನದೊಳು ಮುಳುಗಿಸಿ ತಮ್ಮ ಲಾವಣ್ಯಯೆಂಬ ಪನಿನೀರೆಜ್ಜೆದು (ಸಾಳ್ವಭಾ. ೧–೬೨). [ಪನಿನೀರ್ + ಎಜ್ಜೆ]

ಪನಿನೀರ್ಗುಪ್ಪಿಗೆ (ನಾ). ಪನ್ನೀರನ್ನು ತುಂಬಿಡುವ ಜಾಡಿ,—ಭರಣಿ: ಪನಿನೀರ್ಗುಪ್ಪಿಗೆ ಪುಡಿಗಪ್ಪುರಿಯ ತಟ್ಟೆ . . . ಕರ್ಪೂರದ ನಾಳಿಗಳ ಪಿಡಿದೊಡನೆ ನಡೆದರೊಲಿದು (ಪದ್ಮರಾ. ೪–೬).

[ಪನಿನೀರ್ + ಕುಪ್ಪಿಗೆ]

ಪನಿನೀರ್ದಳಿ, ಪನ್ನೀರ್ದಳಿ (ಕ್ರಿ). ಪನ್ನೀರನ್ನು ಚಿಮುಕಿಸು,—ಸಿಂಪಡಿಸು: ಸಿರಪಚ್ಚೆಗರ್ಪುರದ ಪಳಯನೊಡೆದಾ ಧೂಳಿಯಂ ಪರಪಿ ಮೇಲೆ ಪನಿನೀರ್ದಳಿದು ತನ್ನನಿಯನಂ ಕಳವಳಿಪ ಕಾಂತೆಯ ಮುಲಂಗಿಸಿ (ಪದ್ಮರಾ. ೪–೪೨). **ಪನ್ನೀರ್ದಳಿ**: 'ಪನ್ನೀರ್ದಳಿಪ' ಪರಾ.

[ಪನಿನೀರ್ + ತಳ್[1]]

ಪನಿಪುಲ್ (ನಾ). ಮಂಜಿನ ಹನಿಯನ್ನು ಹೊಂದಿರುವ ಹುಲ್ಲು; ಇಬ್ಬನಿಯಿರುವ ಹುಲ್ಲು: ಮಾನಸವಾಟಿಂಬುದು ಪನಿಪುಲ್ಲ ಮುಗಿಲ ಸಂಜೆಯೊಳೋರಂತಪ್ಪ ದಜಾಂದದಾರ್ ಬಾರಿಸಿದೊಡಂ ನಿಲ್ವೆನಲ್ಲಿಂ (ಪಡ್ಡಾರಾ. ೪೭–೬); ಎನಿತಾನುಮಂಬುನಿಧಿಗಳನನೇಕ ನಾಕಂಗಳಲ್ಲಿ ಕುಡಿದುಂ ಪೋಯ್ತಿಲ್ಲೆನಗೆ ನರಭೋಗಮೆಂದೀ ಪನಿಪುಲ್ಲಂ ನಕ್ಕೆ ಕೃಷ್ಣೆ ಪೇರ್ ಪೋದಪುದೇ (ಅವಿಪು. ೯–೫೬); ಸಮುಜ್ವಲ ತಾರಕಪುಂಜಮೆಂಬ ವಿಭ್ರಮವನೆ ಬೀಜುತಿರ್ದುದೆನಸುಂ ಪನಿಪುಲ್ಲ ಪಯಃಕಣವ್ರಜಂ (ಕುಸುಮಾ. ೧೦–೮೦). [ಪನ್ನಿ + ಪುಲ್]

ಪನಿಪೊಳ್ತು, ಪನಿಹೊತ್ತು, ಹನಿಹೊತ್ತು (ನಾ). ಇಬ್ಬನಿ ಬೀಳುವ ಸಮಯ; ಉಷಃಕಾಲ; ಬೆಳಗಿನ ಜಾವ: ಅಲರೇಱುವ ಶತ ಪತ್ರಂ . . . ಉಡುಗುವ ತಾರಾತತಿ ಸದಮಲವಡೆದಾಕಾಮುಖಮೊಪ್ಪಿದುದಾ ಪನಿಪೊಳ್ತಿನೊಳು (ಜಯಕಾ. ೧೨–೧); ಅಂಬುಜದೊಳು ಪಾಡುವ ಪಜಿಮೆನಜಂಗಳಿಸೆದುವು ಪನಿಪೊಳ್ತಿನ ಸಮಯದೊಳು (ಜಯಕಾ. ೧೪–೮೮). **ಪನಿಹೊತ್ತು**: ಇವಳನನುಮಾನಿಸದೆ ಪನಿಹೊತ್ತಿನೊಳ್ಕರಿ ಇವಳು ನುಡಿದಾ ನಾಲಗೆಯನುತ್ತರಿಸಬೇಕು (ಸಮ್ಮಕಾ. ೧೦–೫೯). **ಹನಿಹೊತ್ತು**: ಹನಿ[ಪಣಕಾಂ. ನಿ]ಹೊತ್ತಿನೊಳು ತಂದ ನೀರ ಕಳಸಗೆಯೊಳಾ ದಿನದ ಹಗಲಿರುಳು ಮಾಳಿಗೆಯ ಮುಚ್ಚಿನೊಳು . . . ಇರಿಸಿ (ಸೂಸಶಾ. ೨–೪೧); ದೊರೆದೊರೆಗಳು ಹನಿಹೊತ್ತಿಗೆ ಮುನ್ನೆಳ್ದು ತುರಗವನೇಱಿ ಭೂವರನ ಪರಿವೇಷ್ಟಿಸಿದರು (ಶ್ರೀಕಾಲ. ೧೩–೮೩).

[ಪನಿ + ಪೊಳ್ತು (< ಪೊಟ್ಟು)]

ಪನಿಯಾಲ (ನಾ). ಒಂದು ಊರಿನ ಹೆಸರು: ಅನ್ತೆ ಬನ್ದು ಪನಿಯಾಲಕಾಲ ಬಡ(ಗ)ಣ ಬೇಲಿಯಿಂ (ಎಕ. III, ಸಂಜಸ. ೧೩೯–೧೫೫; 915 ?). [?]

ಪನಿವಾರ 'ಪಣಿಯಾರ' ನೋ.

ಪನಿಸಿರಿ (ನಾ). ತಂಪಿನ ಹೆಚ್ಚಳ; ಶೀತಲತೆಯ ಆಧಿಕ್ಯ: ಪೂಸುವ ಸಿರಿಗಂಪ ಪಾಸುವ ತಳಿರ್ಗಳ ಸೂಸುವ ಪನಿಸಿರಿಯೆಳಪ ಓಸರಿಸದೆ ನೆಳಲುಗಳ ಸಾರುವ ದೇಶದೇಶದ ಜನಗಳೊಪ್ಪಿದರು (ಕಂಸವಿ. ೯–೧೩). [ಪನಿ[2] + ಸಿರಿ]

ಪನಿಸು, ಹಣಿಸು[2], ಹನಿಸು (ಕ್ರಿ). ೧. ಹನಿಹನಿಯಾಗಿ ಬಿಡು; ತೊಟ್ಟುತೊಟ್ಟಾಗಿ ಹಾಕು: ನರಮೂತ್ರದೊಳರುತಾಳದ ಪರದಕ್ಕಳಲಂ ಸಮುದ್ರಳಲಮೆಂಬೆರಡಂ ಬೆರಸರೆದು ಪನಿಸು ಮುಗಿಸಿನೊಳುರಗಳುಳೋ ಗ್ರೋಗ್ರತರ ವಿಷಂಗಳ್ ತಿಡುಗುಂ(ಜಸುದ. ೭–೪). **ಹಣಿಸು[2]** ೨. ಸುರಿ; ಎರೆ; ಹಾಕು: ಆನೆಗಳು ಶುಂಡಿಲದೊಳಗೆ ನೀರು ತುಂಬ ತಂದು ಗಿಡಗಳಿಗೆ ಹಣಿಸುವುದು (ಮುಂಬಯಿ. ೫–೩೧೧); ಜೇನುತುಪ್ಪದಲ್ಲಿ ಹೊಯ್ನಾರ ಹಣಿಸಿದರೆ ಬೇವು ತನ್ನ ವಿಷವ ಬಿಡಲಿಲ್ಲ (ಕಜಾಗೀ. ೩೪); ಅಲ್ಲಿ ನೀರಂತೆ ಹಣಿಸಿದ ಮಾಳೆಯ ರಕ್ತವನ್ನು ನೋಡುವ ಕಣ್ಣೇ ಇಲ್ಲ! (ಸಪ್ಕಾ. ೩೩). **ಹನಿಸು**: ೧. ಗಾಯದ ಮೇಲೆ ಈ ರಸವನ್ನು ದಿನಕ್ಕೆ ಎರಡು ಸಲ ಹನಿಸು (ರೂಢಿ). ೨. "ಹನಿಸು—ರಸದಾನೇ (ನುರಿ)" (ಶಮುಧಾ); ಒಬ್ಬ ಕರ್ಪೂರವನಿರಿಸಿಲ್ಲಿ ಕೂಡೆ ಮತ್ತೊಬ್ಬ ಕೈಲವನಿಲ್ಲಿ ಹನಿಸಿ ಇಬ್ಬರು ಹೋಗಿರೈ (ಭರಡ. ೪೫–೭೨); ನಾಳ್ಕಜಿಲ್ಲಿ ಒಂದು ಪಾಲು ಎಣ್ಣೆಯ ಹನಿಸಿ ಆ ಎಣ್ಣೆಗೆ ಸರಿಮೊಸರ ಹನಿಸಿ ಪಾಳವ ಮಾಡುವಲ್ಲಿ ಅದಕ್ಕೆ ಹಾಕುವ ಕಲ್ಕದ್ರವ್ಯ (ವೈದ್ಯಸಾ. I, ೨೨೭); ಹಳ್ಳದಿಂದ ನೀರು ತಂದು ವಿದ್ಯಾರ್ಥಿಗಳು ಕೈಕೋಟಕ್ಕೆ ಹನಿಸುತ್ತಾರೆ (ಕಪಪು. ೫–೧). ೩. ಚಿಮುಕಿಸು; ಸಿಂಪಡಿಸು; ತಳಿ: ತಾರೆಗಳಾಚೆಯ ನೀಲಿಮೆಯಂತೆ ಹನಿಸದೆ ಬರಿ ಸುರಿಯುವಳು (ಆರಳು. ೧೩–೬); ಮುಖದ ಮೇಲಿಷ್ಟು ನೀರು ಹನಿಸಿದ (ರಂಗಸ. ೪೩). [ಪನಿ[2] + -ಸು[1]]

ಪನಿಹೊಳ್ತು 'ಪನಿಪೊಳ್ತು' ನೋ.

ಪನ್ನೆ[1], ಹನ್ನೆ[1] (ನಾ). ಒಂದು ಬಗೆಯ ಮರ; ತಾಳೆ: "ತಳಮುಂ ತಾಳಮುಮೆನೆ ಪನೆ" (ನಸ್ತಕೋ. ೩೩–೪); ಬನ್ನಿ ಚಂಪಕ ಜೂತ ಪನೆ . . .; ಆಗಿಲು ನಾನಾವರ್ಣದುತ್ತಮತರುಗಳಿಂದೆಸೆದುದು ಮಹೋದ್ಯಾನ (ಪ್ರಹ್ಲಾಚ. ೧೩–೪); ನೆಲ್ಲಿ ನೇಜಲ್ ತದುಕು ಪನೆ[ಪಾಣಕಾಂ. ಪರಂ] ಗಳೊಪ್ಪಿರ್ಕುಮಾ ಕಾಡೊಳೆತ್ತಂ (ಶಬಶಂ. ೩–೩೨); ಅಡಕೆಯ ಬಾಗಿನಿ, ಪನೆ ಇಬ್ಬಾಗಿನಿ . . . ತೆಂಕಣ ಗಾಳಿಯು ಕೊಂಕಣನೀಮೆಗೆ ಬಂತ್ಯೆ! (ಕನಪು. ೨೮–೫). **ಹನ್ನೆ[1]**: "ತುಂಗದ್ರುಮ—ಹನೆ" (ಓಷಧಿ. ೭೧); ಅಸುರನ ಹೆಣನನುತ್ಕಟರೋಷದಲಿ ತಿರುಹಿಟ್ಟನೊಪ್ಪುವ ಹನೆಯು ಕೊನೆಗಳಿಗೆ (ನಿಭಾಗ. ೧೦–೧೫–೩೨); ಅದು ಈ ಹನೆಗರಗಳ ಕರೆಕರೆಯಲ್ಲಿ ಯಾರಿಗಾದರೂ ಕೇಳಿಸಬೇಕೆ? (ಸುರಪು. ೧).

ಪನೆಯ ಮರ, ಹನೆಯ ಮರ = ಪನ್ನೆಮರ: "ಪುರುಷ–ಸೆಗುಡಿತೆ, ಸುರುಗಿ, ಪನೆಯ ಮರ" (ಓಷಧಿ. ೧೦೦); "ತುಂಗದ್ರುಮ—ತೇಗು, ಹನೆಯ ಮರ" (ಓಷಧಿ. ೭೦); ಹನೆಯ ಮರದ ಬನವಿರ್ಕುಂ(ಚಳಪ. ೩೪).

[ದೇ. ‖ ತಮಿ. ಪನ್ಮೈ; ಮಲ. ಪನ; ತುಳು. ಪನೆ, ಪಣೆ; ಕೊಡ. ಪನೆ]

ಪನ್ನೆ[2], ಹನ್ನೆ[2] (ನಾ). ೧. ಹೊಸದಾಗಿ ಹುಟ್ಟಿದ ಹಲ್ಲು; ಅದೇ ತಾನೆ ಮೊಳೆಯುತ್ತಿರುವ ಹಲ್ಲು; ಮೊಳೆಹಲ್ಲು: "ಪನೆಯೆಂದು ಮೊಳೆವಲ್" (ಕಕಸಾ. ೭೨–೩೪೨); ಪನೆಗಳ್ ತೋಱಿದ ಮುಂದಹಾಸರುಚಿ ಮುದ್ದಂ ನಾಡೆಯಂ ಬೀಱಿ (ಕಾದಂಪು. ೩೫೫); ತೆಂಗಿನ ಪನೆಯಂತೆ ಬೆಳ್ಳಗೆ ಹೊಳೆಯುವ ಹಲ್ಲುಗಳ (ಕಾದಂಪು. ೩೫೫); ಹನ್ನೆಯ ಮೊಗದ ಮಗುವಿಂಗೆ ಮೊಲೆಯನೀವ ಕಾಲಮಿದು

ಪನೆ ದಿಜಂಗಲ್ ಮುಗುಳ್ಗೆ ನಗುತ್ತೆ (ಜಗವಿ. ೩-೩೮); ನನೆದೋಱ ತ್ತದಿರ್ಗಂತಿ ಮುಂತೆ ಪನೆಗಳ್ ತೋರ್ಪಂತೆ (ಅನಂಪು.೬-೭೨). ೨. ಹಲ್ಲು: ಪಣೆ ಕರ್ಣ ಕಿವಿ ನೆತ್ತಿಯ ಕಣ್ಣನೆ[ಪಾಠಾಂ.ಕರ್ಣ ಪಣೆ]ಯೆಂದಿವಱೊಳಗೆ ಬೇನೆಯಾಗಲ್ ಗುರುಗಂ . . . ಎಣ್ಣೆಯ ಬೆರಸಿ ನಸ್ಯಗೆಯ್ಯಲ್ ಕಿಡುಗುಂ (ಲೋಕೋಪ. ೯-೧೩೭); ಆಹಾರಮನಗಿದೀವುವಲ್ತೆ ರಸನೆಗೆ ಪನೆಗಳ್ (ನೀತಿಮಂ. I, ೨೭). 'ಕೊಂಕುಂಬನೆ' ಪರಾ. ೩. ಕೋರೆಹಲ್ಲು; ದಾಡೆ: 'ನಿಡುಪನೆ' ಪರಾ. **ಹನೆ₂**: ೧. "ಹನೆ—[ಮೊಳೆಪಲ್ಲು], ಹಲ್ಲು" (ಕಂಸುಹು. ೯೧).

ಪನೆಕೋಡುಪಾದಿ (ನಾ). (?): ದೇಯು ತಾತ್ತದೀ ಪನೆಕೋಡುಪಾದಿ ಮೂಱು ಭಾಗಕೆ [ಕೈ] (ಇಅ. XIV, ೨೩೨-೫೪; ೨ನೆಯ ಶತ). [?]

ಪನೆಗರ್ಚು (ನಾ). ಹಲ್ಲು ಕಚ್ಚುವುದು,—ಕಡಿಯುವುದು: ಪನೆಗರ್ಚಂ ಕುಡಿಮೀಸೆ ಕೂಂಕಿ ಕುಣಿಯಲ್ (ಪ್ರೃಸೂಮಿ. ೪-೩೬).

[ಪನೆ₂ + <ಕರ್ಚು₁]

ಪನೆಡ್ಗುಂಟೆ (ನಾ). ಒಂದು ಸ್ಥಳದ ಹೆಸರು: ಉದಕಪೂರ್ವನ್ದತ್ತ ಪೊಲಮೇರೆ ಪ್ರಾಚೀದೆಸೆ ಪನೆಡ್ಗುಣ್ಟೆಯನ್ಮೂಡಾಯಕಡೆ ಆಗ್ನೇಯದೆಸೆ ಪುಲ್ಲಾಯಱೆ (ಎಕ.X (೬), ಮುಳಬಾ. ೩೨೮-೪೯; 650). [?]

ಪನೆಬೆಲ್ಲ (ನಾ). ತಾಳೆಮರದ ರಸದಿಂದ ತಯಾರಿಸಿದ ಬೆಲ್ಲ; ತಾಳೆಬೆಲ್ಲ. [ಪನೆ₁ + ಬೆಲ್ಲ₁]

ಪನೆಮರ, ಹನೆಮರ (ನಾ). ತಾಳೆಯ ಮರ; ತಾಲವೃಕ್ಷ: ದಾಳಿಂಬಂ ಬಕ್ಕೆವಲಸು ಪನೆಮರಂಗಳ್ ಎಡೆಯೆಡೆಯೊಳ್ ಮನೋಹರ ಮಾಗಿರ್ಕುಂ (ರಾಮಾಶ್ವ. ೮-೨೫); ಮಾಮರಂ, ಪನೆಮರಂ ಮುಂತಪ್ಪ ಮರಂಗಳಾವೆಗಂ ಫಲಗಳಿಂ ತುಂಬಿರ್ಕುಂ (ಅದ್ಭುತ. ೪೦-೧೭); ಕಾಮಾತ್ಮಕಂ ಮೇನಕೆಯನಾಟಸೆ ವಿಶ್ವಾವಸುವವನಂ ಕಾಲಿಂದವೊದೆದ ನಲೆ ಸಿಡಿಲಿಂದೆ ಪನೆಮರವನಂತೆ ಕಿನಿಸಿಂ (ಸೌನಂದ. ೭-೩೯). **ಹನೆಮರ**: ಬೆಳಗಿನ ಬಿಸಿಲು ತೆಂಗು, ಹನೆಮರಗಳ ಹನಿಯಿಂದ ತೊಯ್ದು ಹೆಡೆಗಳನ್ನು ಮುದ್ದಿಸುತ್ತಿತ್ತು (ಮರಸು. ೪೮); ಮಳೆಗಾಲ ಬಂದರೆ ಯಾರನ್ನಾದರೂ ಬೇಡಿ ಕಾಡಿ, ಇನ್ನೊಂದು ಹತ್ತು ಹನೆಮರದ ಗರಿಗಳನ್ನು ತಂದು ನಾಲ್ಕು ಸುತ್ತಲೂ ತೂಗಿಸುತ್ತಾನೆ (ಹಹಸ. ೭೬). [ಪನೆ₁ + ಮರ₁]

ಪನ್ನ₁, ಪನ್ನಿ, ಹನ್ನ₁ (ನಾ). ೧. ಸೊಕ್ಕು; ಬಿಂಕ; ಜಂಬ: "ಕಾಮಕರ ಗಟ್ಟ ಬಿಂಕ ಪನ್ನಮುಮುರ್ಕೆನಲ್ ಗರ್ವವು"(ಶಬ್ದಮಂ.೩೯); ತನ್ನ ಪನ್ನಂ ಕಟಲ್ಗುಂ ಮನದೊಳ್ ತೊಟ್ಟಾಗ್ರಹಂ ಮದ್ವಿಭುಗಮಿಭುವರಂ ಶೌರ್ಯಸಂಲಬ್ಧಮಕ್ಕುಂ (ಚಂದ್ರಪ್ರ. ೯-೧೧೨ ಪ). **ಪನ್ನಿ**: ೧. ಹಯ ಶಿಕ್ಷಾಕ್ರೀಡೆಯಂ ತೋಱುವ ಹರಿಸುತನೋ ತಾನೆನಿಪ್ಪಂದದಿಂ ಪನ್ನಿಯ ಸೋಂಕುಂ ಬಿಂಕಮುಂ . . . ನೂಂಕುವ ಬಿಡುವ ಪೊಡವರ್ಪುಂ ಪೊದ ಟ್ಟೊಟ್ಟಿರಲ್ ನಾಡೆಯುಮಾ ಕಂದರ್ಪದೇವಂ ಸುರುಚಿರ ತುರಗಾರೂಢಿ ಯೊಳ್ ಪ್ರೌಢನಾದಂ (ಕುಸುಮಾ.೭-೭೫); ಹೊಸ ಪಕೀಲನ ಪನ್ನಿ ಅನಕ ತಡಕೊಳ್ಳುವದೇ ಪ್ರಯಾಸ (ಪಾರ್ಥಿವಿ. ೧೮೭); ಬನ್ನಿ ಎಂದರೆ ಪನ್ನಿ ಹೆಚ್ಚು (ಗಾದೆ). ೨. ಅಹಂಕಾರದ ಮಾತು; ಜಂಬದ ಮಾತು; ಸೊಕ್ಕಿನ ನುಡಿ: ಕಾಳಗದಿ ಕರ್ಣನಂ ಗೆಲಲರಿದು ನಿನಗಿಂದು ಬರಿ ಪನ್ನಿಯನ್ನಾಡಬೇಡೆಂದನು (ತುರಂಗ. ೬೪-೪೦); ಚನ್ನಿಗ ಕೇಳಿತ್ತಲು ನೀ ಹರಟದ ಪನ್ನಿಗಳೆಲ್ಲಿ ಪೇಳು (ಚಂದ್ರಾಸ. ೧೩). **ಹನ್ನ₁**: ೧. ಅನ್ನೆಗಂ ಕೊಲೆಗೆ ಸಿಲ್ಕಿದ ಹಣ್ಣನಲ್ಲೆಂಬರತಿಗನ್ನಗದಿಕಿನಿಂದ ಹನ್ನದಿಂ ಹರುಷಗೆಡಿಸಿದರು (ಲಕ್ಷ್ಮಭಾ. ೩-೩೪). [ದೇ.ಪ್ರ ತುಳು. ಪನ್ನ, ಪನ್ನಿ]

ಪನ್ನ₂ (ನಾ). ವೇದದ ಒಂದು ಭಾಗ: ನಮಕ ಚಮಕ ನಾರಾಯಣ ಪನ್ನವೋದುವಿ ಯೇನಂತವೋದಿದೆ ಕತ್ತೆ ಸಮನಿಸಲಿಲ್ಲ ವೇದಾಂತಾರ್ಥವು ನಿನಗೆ (ಚಿದಾಕೋ. ೨೨-೧).[←ತೆಲು.ಪನ್ನ./ಪ್ರಾ.ಪಣ್ಣ./ಸಂ.ಪ್ರಶ್ನ]

ಪನ್ನ₃, ಪರಣ₁, ಪರ್ನ, ಹನ್ನ₂ (ನಾ). ಎಲೆ; ಪರ್ಣ: 'ಪನ್ನ ಗುಡಿ' ಪರಾ. **ಪರಣ₁**: ಪರಣದ್ವಾಸಿಗೆಯಲ್ಲಿ ಮಲಗಿದ ಶಿಶುವ ಸೂಪರಣಗಳು ನೋಡುತಾಗ ಕಿರಣ ಬೀಳದಲೆ ಸೂರ್ಯಗೆ ಮರೆಮಾಡುತ ತಮ್ಮ ರೆಕ್ಕೆ ಪಸರಿಸುತಾಗ (ಕರ್ನಾಳ. ೨೯೪). **ಪರ್ನ**: ತಱುದರೆಯು ಪರ್ನಗಳ ಕಾಪ್ಪಕೆ ಮುಱುದರಾ ಶಾಖೆಗಳ . . . ತರುತನುವ ತೆಱುವಂತೆ ದೇಹದೊಳೊರೆದ ಗರ್ವವ ಬಿಟ್ಟು ಕೇಳ್ಳೆ ಪರರ ಕೆಲಸವ ಮಾಡದವನೇ ಪಾಪಯುತನೆಂದ (ನಿಘಾಗ. ೧೧-೧೩-೨೪). 'ಪರ್ನಕುಟಿ', 'ಪರ್ನ ಶಾಲೆ' ಪರಾ. **ಹನ್ನ₂**: 'ಹನ್ನವಣಿಗೆ' ಪರಾ.

[<ಪ್ರಾ. ಪಣ್ಣ./ಸಂ. ಪರ್ಣ]

ಪನ್ನ₄(ಗು). ೧. ಕೆಳಕ್ಕೆ ಬಿದ್ದ; ಪತಿತ. ೨. ಹೋದ; ಚಲಿಸಿದ. ೩. ಪಡೆದ; ಹೊಂದಿದ. (ನಾ). ೪. ಕೆಳಕ್ಕೆ ಬಿದ್ದುದು: "ಪನ್ನಂ, ಪತಿತಂ—ಈ ೨ ಬಿಟ್ಟುದು" (ಪಲಾಯು. ೧೨೬-೮೨); "ಪತಿತ ಮೆನೆ ಪನ್ನಮೆನೆ ಬಿದ್ದುದು" (ಮಂಗರಾ. ೧೩೨-೨೬). ೫. ಕೆಳಕ್ಕೆ ಬೀಳುವುದು. ೬. ದೂರ ಹೋದುದು: "ಪನ್ನಂ ಪತಿತಂ ಪರಿಚ್ಯುತಂ ವಿಗತಾರ್ಥಂ" (ಸಸ್ತುಕೋ. ೧೦೬-೪೮). ೭. ನೆಲದ ಮೇಲೆ ದೇಕುವುದು; ತೆವಳುವುದು. [ಸಂ.]

ಪನ್ನ₅ 'ಪನ್ನಾ' ನೋ.

ಪನ್ನಂಗ₁ 'ಪಲ್ಲಂಗ' ನೋ.

ಪನ್ನಂಗ₂ (ನಾ). ಹಾವು; ಸರ್ಪ: 'ಪನ್ನಂಗಧರ', 'ಪನ್ನಂಗ ಶಾಯಿ' ಪರಾ. [<ಸಂ. ಪನ್ನಗ]

ಪನ್ನಂಗಧರ (ನಾ). ಹಾವನ್ನು ಧರಿಸಿರುವವನು; ಶಿವ: ಅದರ ಮ್ಯಾಗ ಪನ್ನಂಗಧರನ ಬರೆಯಿರೆ (ಲೋಕಗೀ. ೧೬); ಕನ್ನ ಬೇಟೆಯ ನಾಡಿ ಹೊನ್ನ ಬೆಟ್ಟವ ತಿರುಗಿ ಪನ್ನಂಗಧರಗೆ ಎಡಮಾಡಿ (ಕನ್ನಜಾ. ೧೩೮). [<ಸಂ. ಪನ್ನಗಧರ]

ಪನ್ನಂಗಶಯನ (ನಾ). = ಪನ್ನಂಗಶಾಯಿ: ಇನ್ನಾದರು ನಿನ್ನ ದಾಸಸಂಗವನಿತ್ತು ಮನ್ನಿಸಿ ದಯೆ ಮಾಡೊ . . . ಪನ್ನಂಗಶಯನ ಶ್ರೀ ಪುರಂದರವಿಠಲ (ಪುರಂದ. ಧಾ. ೨-೩೧-೨); ಕರಿಯಜಿನ ಪೊತ್ತವನೊ ಗೋಪಾಲಾ ನೆರೆದ ಭೂತ ತಂದವನೊ ಶರಧಿಶಯನ ನಿನ್ನ ಚರಣಪಂಕಜ ಭೃಂಗ ಪುರಂದರವಿಟ್ಠಲ ಪನ್ನಂಗಶಯನನೆ (ಪುರಂದ. ಧಾ. ೪-೩೮-೫).

[ಪನ್ನಂಗ₂ + ಶಯನ]

ಪನ್ನಂಗಶಾಯಿ (ನಾ). ಹಾವಿನ ಮೇಲೆ ಮಲಗಿರುವವನು; ವಿಷ್ಣು: ಪನ್ನಂಗಶಾಯಿ ಹಯವದನನ ನಿಜಭಕ್ತ ನಿನ್ನ ಪೋಲುವರುಂಟೆ ಮಧ್ವಮುನಿರಾಯಾ (ಪಾವಿಕೀ. ೨೭-೫). [<ಸಂ. ಪನ್ನಗಶಾಯಿನ್]

ಪನ್ನಂಗಿ (ನಾ). ೧. ಒಂದು ಬಗೆಯ ಗಿಡ; ನೆಲಬೇವು: "ಗೌಂ ಗೊಟ್ಟಕ್ಕಿ ಪನ್ನಂಗಿಯೆನೆ ನೆಲಬೇವು" (ಮಂಗರಾ. ೪೪-೪೫). ೨. ಬಿದಿರಿ ನಲ್ಲಿ ಒಂದು ಬಗೆ: ಪನ್ನಂಗಿ, ಇಬ್ಬಿದಿರು (ಪ್ರೃಔಗಿ. ೫೯-೧೧೮೨). [<ಸಂ. ಪನ್ನಗಿಣಿ]

ಪನ್ನಂಬರ, ಪೊನ್ನಂಬರ (ನಾ). ೧. "ಉಷ್ಣವಲಯದ ಸಮುದ್ರ ಗಳಲ್ಲಿ ತೇಲುತ್ತ ದೊರೆಯುವ, ಒಂದು ಜಾತಿಯ ತಿಮಿಂಗಿಲದ ಕರುಳಿನಲ್ಲಿ ಹುಟ್ಟುವ, ಮೇಣದಂತೆ ಮೆತ್ತಗಿರುವ ಸುಗಂಧ ದ್ರವ್ಯ" (Ambergis. ಇಂಕನಿ): ತಿಮಿಂಗಿಲ ಸತ್ತ ಮೇಲೆ . . . ಹೊಟ್ಟೆಯನ್ನು ಬಗೆದು ಪನ್ನಂಬರವನ್ನೂ ಅದರ ತಲೆಯನ್ನು ಸೀಳಿ ಪೀಪಾಯಿಗಟ್ಲೆ ಎಣ್ಣೆಯನ್ನೂ ತೆಗೆಯುತ್ತಾರೆ (ಪ್ರವಾಇ. II, ೪೫). **ಪೊನ್ನಂಬರ**: ೧. ಬೆಳ್ಳಗಿರುವುದನ್ನು ಪುವಂಬರ್ (ಪೊನ್ನಂಬರ) ಎಂತಲೂ, ಇದಕ್ಕೆ ಬಹಳ ಬೆಲೆಯೆಂತಲೂ ಹೇಳುತ್ತಾರೆ (ಪ್ರವಾಇ. II, ೩೪೧). ೨. "ಬಡಾಯಿ ಕೊಚ್ಚಿಕೊಳ್ಳುವುದು" (ಅನಂನಾ). 'ಪನ್ನ₁' ಪರಾ. [←ತುಳು. ಪನಂಬರ, ಪನ್ನಾಂಬ್ರ]

ಪನ್ನಕದಱ ? (ನಾ). ಒಬ್ಬಾತನ ಹೆಸರು (?) : ಶ್ರೀಮದ್ದಿವ್ಯ ಶಕ್ತಿಪಣ್ಡಿತಭಟಾರರ ಮಯ್ದುಗಾವುಣ್ಡನುಂ ಪಾದಮೂಲಮುಂ ಪನ್ನಕದಱನಿವುಣ್ಡಕ್ಕಳುಮಿಟ್ಟು (ಎಕ. X (೪), ಚಿಕ್ಕಬ.೨೬-೭; 9ನೆಯ ಶತ).

[?]

ಪನ್ನಕೇಣಿ (ನಾ). ವೀಳೆಯದೆಲೆಯ ಮೇಲಿನ ಒಂದು ಬಗೆಯ ಸುಂಕ (?) : ಪನ್ನಕೇಣಿ ವಡ್ಡಲಾಗುಳದ ಸುಂಕವೆರ್ಗ್ಗಡೆ ಸಂಗವಯ್ಯನುಂ ಬನವಾಸಿ ಪನ್ನಿಱ್ಱಾಸಿರದ ಸುಂಕವೆರ್ಗ್ಗಡೆ(ಡೆ) ಚಾವುಣ್ಡಮಯ್ಯನುಂ (ಎಇ. XVI, ೭೮-೩೨ ; 1037). 'ಪನ್ನಾಯ' ಪರಾ.

[ಪನ್ನ$_3$ + ಕೇಣಿ?]

ಪನ್ನಗ (ನಾ). ೧. ಹಾವು ; ಸರ್ಪ : "ವಿಷಧರಃ . . . ಪನ್ನಗಃ, ನಾಗಃ . . . ಭುಜಂಗಮಃ—ಈ ೨೫ ಪಾವಿನ ಪೆಸರ್" (ಹಲಾಯು. ೧೦೫-೧೮) ; ತನ್ನೊಳಗಣ ಪನ್ನಗನಂ ಮುನ್ನೀನ್ ಪಿಡಿದೊಗೆಯೆ ಕಾಯಲಾಱದೆ ಪಿರಿದುಂ ಬನ್ನದ ಕರ್ಪೆಸೆದುದು ತೊಱೆಗೆ (ಪಂಪಭಾ. ೫-೫೪) ; ಪರಿಪಂಥಿಪನ್ನಗವೈನತೇಯನೆನಿಪ ಬಿಜ್ಜಳಭೂಪನೊಪ್ಪುವ ಸಮಯದೊಳು (ಬಸರ. ೬-೬೪) ; ಪನ್ನಗಂಗಳು ಸಾವಿರವಱೊಳಗುನ್ನತಪ್ಪ ಫಣಗಳೆನಲ್ಕೆ ಬಲಂ ನಿಗುರ್ದಪವೆಂಟುಜಾವಗಳಿಗೆ ಪತಿಗಳಾಗಿ (ಬಸಪು. ೪೬-೨೭) ; ಪನ್ನಗನ ಸಿರಿಮಂಚದಾತನು ಬೆನ್ನಲಿರಲೀ ಪಾಂಡುತನಯರಿಗಿನ್ನು ಮಂಗಳವೆನುತ ಸಂಜಯು ಬಂದನಿಧಪುರಿಗೆ (ಕುಮ್ಯಾಉ. ೨-೪೮). ೨. ಕಶ್ಯಪನ ಪತ್ನಿಯಾದ ಕದ್ರುವಿನಲ್ಲಿ ಜನಿಸಿದ ಒಂದು ದೇವಸಂತತಿ ; ಪಾತಾಳಲೋಕದ ನಾಗವಂಶ : ವಿದ್ವಿಷ್ಟವಿದ್ರಾವಣನ ಮೊನೆಯಂದಿನಂಬೇಱಂಗಳ್ಕೆ . . . ವಿದ್ಯಾಧರರಧರರಾಗೆಯುಂ ಪನ್ನಗರ್ ಪನ್ನತಿಕೆಯಿಂ ಬಂದಾಂತೊಡೆ (ಪಂಪಭಾ. ೫-೮೮ ವ) ; ಪನ್ನಗ ಗರುಡಾಮರಕರೊಳಗಾರಾನುಂ ಮುನ್ನಿ[ನ] ರೋಷಭವತ್ಸಂಪನ್ನತೆಯಿಂದೊಯ್ದುರಕ್ಕುಮಾತ್ಮಾರ್ಥಳನಂ (ಬಂಹರಿ. ೮-೭) ; ಇಲ್ಲ ನೋಡ ಜುನಗೆ ಪಡಿ ನರರಲ್ಲಿ ನಿರ್ಜರರಲ್ಲಿ ಪನ್ನಗರಲ್ಲಿ (ಕುಮ್ಯಾಉ. ೫-೧೬).. ೩. [ಗಣಿತ] ಐದು ಎಂಬ ಸಂಖ್ಯೆಯ ಸಂಕೇತ : ಪಂಚವ್ರತ . . . ಪನ್ನಗ ಹರವಕ್ತ್ರ ಪಾಂಚಜನ್ಯ ಶುಕ್ಲ ಇಂತಿನಿತುಂ ೫ಕ್ಕೆ ಹೆಸರು (ವ್ಯವಹಾ. ೧೦-೨೨). [ಸಂ.]

ಪನ್ನಗಕಟಕ (ನಾ). ಹಾವನ್ನು ಕಡಗವನ್ನಾಗಿ ಧರಿಸಿರುವವನು; ಶಿವ : ಎನ್ನ ನಾಲಗೆಯ . . . ಮಹಾನುಭಾವಿಗಳ ಚರಣಕ್ಕಂ ಹೊನ್ನ ಹಾವಿಗೆಯ ಮಾಡೆಲೆ ಪನ್ನಗಕಟಕಾ (ಶಂಕಕಂ. ೧-೩).

[ಪನ್ನಗ + ಕಟಕ$_3$]

ಪನ್ನಗಕನ್ನಿಕೆ (ನಾ). ನಾಗಲೋಕದ ಹೆಣ್ಣು ; ನಾಗಕನ್ಯೆ : ಪನ್ನಗಕನ್ನಿಕೆಯರೆಯ್ತಂದು ಮಂಜುಳರೀತಿಯಲಿ ಪಾಡುತ್ತಿರಲು (ಬಸಪು. ೨೬-೧೦). [ಪನ್ನಗ + ಕನ್ನಿಕೆ$_1$]

ಪನ್ನಗಕನ್ಯೆ (ನಾ). = ಪನ್ನಗಕನ್ನಿಕೆ : ಪನ್ನಗಕನ್ಯೆಯೊರ್ವಳುಪದೇಶಮನಿತ್ತಳೊ ನಾಗಬಂಧಮಂ (ಕಾವ್ಯಾವ. ೫೩೭). [ಪನ್ನಗ + ಕನ್ಯೆ]

ಪನ್ನಗತಲ್ಪ (ನಾ). = ಪನ್ನಂಗಶಾಯಿ : ಪನ್ನಗತಲ್ಪಂ ಕಂಸಹರಂ ನಗಧರಂ (ಕಾವ್ಯಾವ. ೧೯೮). [ಪನ್ನಗ + ತಲ್ಪ (= ತಲ್ಪ)]

ಪನ್ನಗಧರ (ನಾ). = ಪನ್ನಂಗಧರ : ಎನ್ನ ಮಗಳ ಹರಣಮಂ ಕಾವುದೆಂದು ಬಿನ್ನವಿಸೆ ಪನ್ನಗಧರಂ ಕೇಳ್ದು (ನಂಬರಿ. ೧೨೭-೩೫) ; ಮುನ್ನ ಕೈಲಾಸದಲಿ ಪನ್ನಗಧರನಾಳು ಎನ್ನಯ ಪೆಸರು ಪುಷ್ಪದತ್ತನು (ಸರ್ವಜ್ಞ. ೩). [ಸಂ.]

ಪನ್ನಗಧ್ವಜ (ನಾ). ೧. ಹಾವಿನ ಚಿಹ್ನೆಯುಳ್ಳ ಧ್ವಜ. ೨. ತನ್ನ ಬಾವುಟದಲ್ಲಿ ಸರ್ಪವನ್ನು ಚಿಹ್ನೆಯಾಗಿ ಉಳ್ಳವನು ; ದುರ್ಯೋಧನ : ಬರೆಪಂ ಚಿತ್ರಿತ ಚಿತ್ರದಂತೆ ಮೃದುರೇಖಾಮಂಡನಾಡಂಬರ ಸ್ಫುರಿತಂ ಬಾಜನೆ ಪನ್ನಗಧ್ವಜಮಹೀಭೃತ್ಸೇನೆವೊಲ್ ಕರ್ಣಸೌಂದರ ಮುದ್ಯತ್ಕವಿತಾಗುಣಂ ಗಣಕೆವೊಲ್ ಭಾವಾದ್ಯಲಂಕಾರಬಂಧುರಮೆಂಬುನ್ನತಿಯಿಂ ಜಗಕ್ಕೆ ನೆಗೞ್ದಂ ವಾಕ್ಪ್ರೀಧರಂ ಶ್ರೀಧರಂ (ಜಾತಕಿ. ೧-೭).

[ಪನ್ನಗ + ಧ್ವಜ]

ಪನ್ನಗಪತಾಕ (ನಾ). = ಪನ್ನಗಧ್ವಜ ೨ : ಅಂತು ಮೂರ್ಧಾಪ್ರಸಂಗನಾದ ಪನ್ನಗಪತಾಕಂಗೆ ಶಿಶಿರೋಪಚಾರಕ್ರಿಯೆಗಳಂ ಮಾಟ್ಟಿ ಸಂಜಯನಿರವಂ ತಪ್ಪರಿಜನಂ ಕಂಡು (ಗದಾಯು. ೩-೭೭ ವ).

[ಪನ್ನಗ + ಪತಾಕ$_1$]

ಪನ್ನಗಪತಿ (ನಾ). ಹಾವುಗಳ ಒಡೆಯ ; ಆದಿಶೇಷ : ದೀಪದೊಳ್ ಪನ್ನಗಪತಿಯ ಫಣಾರತ್ನದೀಪಂ . . . ತುಱುಗಿದುವು (ಅದಿಪು. ೧೬-೨) ; ಪನ್ನಗಪತಿ ಗರುಡ ರುದ್ರ ಇಂದ್ರಾದ್ಯರಿಗೆ ಉನ್ನತಗುರುವಾಗಿ ಮೀಱಿದ (ಪುರಂದ. ಧಾ. ೧-೭-೨). [ಪನ್ನಗ + ಪತಿ$_2$]

ಪನ್ನಗಭೂಷಣ (ನಾ). ಹಾವನ್ನು ಆಭರಣವನ್ನಾಗಿ ಧರಿಸಿರುವವನು ; ಶಿವ : ಪನ್ನಗಭೂಷಣ . . . ಚೆನ್ನಯ್ಯನೆನ್ನ ಮುತ್ತಯ್ಯನ ಜ್ಞನಪ್ಪನಯ್ಯಾ (ಬಸವ. ೩೪೭) ; ನಿನ್ನ ಮಗನ ಮಗನೊ ಗೋಪಾಲಾ ಪನ್ನಗಭೂಷಣನೋ ಧನ್ಯನಾಗಿ ಶ್ರೀರಾಮನಾಮವನು ಚೆನ್ನಾಗಿ ಚಿಂತಿಪನೊ (ಪುರಂದ. ಧಾ. ೪-೩೮-೪). [ಪನ್ನಗ + ಭೂಷಣ]

ಪನ್ನಗರಾಜ(ನಾ). ೧. = ಪನ್ನಗಪತಿ: ಸುರ ಖಚರ ರವಿ ಗರುಡ ವಿದ್ಯಾಧರ ಪನ್ನಗರಾಜವಂದಿತಂ (ಛಂದೋಂಬು. ೪-೨೩೬) ; ಅವಂದಿರಂ ಪನ್ನಗರಾಜಂ ಕೊಂದನೆಂಬುದಪಸಿದ್ಧಾಂತಂ (ಅಜಿಪು. ೧೨-೨೯) ; ಪನ್ನಗರಾಜನ ಸಿರಿಗಂ . . . ಎನ್ನ ಸಿರಿ ಮಿಗಿಲ್ (ಧರ್ಮಾಮೃ. ೧೪-೪೧). ೨. [ಗಣಿತ] ಒಂದು ಎಂಬ ಸಂಖ್ಯೆಯ ಸಂಕೇತ : (೨). [ಪನ್ನಗ + ರಾಜ]

ಪನ್ನಗಲೋಕ (ನಾ). ಹಾವುಗಳ ಲೋಕ ; ನಾಗಲೋಕ : ಪನ್ನಗಲೋಕದ ಜೀವರಾಶಿಗಳ್ ಪೊತ್ತುವ ಮಾಟ್ಕೆಯಿಂ ತಿದಿಗಳಿಂ ಪೊಗೆದಪ್ಪರೊ ಭಿಲ್ಲರೆಂದಿನಂ ಪುತ್ತನಗುಟ್ಟು ಪೆರ್ಗರಡಿಗಳ್ ಮೊಗಮಿಟ್ಟೆಸೆಗುಂ ವನಾಂತದೊಳ್ (ದಶಕು. ೨-೧೧೯) ; ಪನ್ನಗಲೋಕಮಂ ಬಿಡದೆ ಮೆಟ್ಟಮನುಷ್ಯರ ಲೋಕಮೆಲ್ಲಮಂ ತನ್ನಯ ಪಾದಸೇವನೆಯೊಳೊಂದಿಸಿ (ಜಾಧಪು. ೧-೬೬). [ಪನ್ನಗ + ಲೋಕ]

ಪನ್ನಗವಿದ್ಯೆ (ನಾ). ಹಾವಿನ ವಿಷಕ್ಕೆ ಮದ್ದುಮಾಡುವುದೇ ಮುಂತಾದ ವಿಷವೈದ್ಯ ವಿದ್ಯೆ ; "ಸರ್ಪವಿದ್ಯೆ (?)" (ಜೈನಕೋ. ೧೫೭) : ವಜ್ರಾವರ್ತ ಸಾಗರಾವರ್ತಂಗಳೆಂಬ ಬಿಲ್ಲಳಂ ಗಾಂಧಾರ ಪನ್ನಗವಿದ್ಯೆಗಳನಿತ್ತು ಪೋದಂ (ಜಾಮಂಪು. ೩೮). [ಪನ್ನಗ + ವಿದ್ಯೆ]

ಪನ್ನಗವಿರೋಧಿ (ನಾ). ಹಾವಿನ ಶತ್ರು ; ಗರುಡ : ನಿನ್ನ ಪೆಡೆ ದುಱುಗಲೊಳೆನ್ನ ಪದಪದ್ಧತಿಗಳಿರ್ದಪುವು . . . ಇವಂ ಕಂಡೊಡೆ ಪನ್ನಗವಿರೋಧಿಯುಂ ಕಾದು ಕಟಿಪುಗುಂ (ಜಗವಿ. ೩-೧೧೩ ವ).

[ಪನ್ನಗ + ವಿರೋಧಿ]

ಪನ್ನಗವೀಥಿ (ನಾ). ನಾಗಲೋಕದವರು ಸಂಚರಿಸುವ ಮಾರ್ಗ : ಪನ್ನಗರು ಬರ್ಪ ಪನ್ನಗವೀಥಿಗಳ ನಡುವೆ . . . ಬರುತಿರಲು (ನಂಬರಿ. ೯-೮೮). [ಪನ್ನಗ + ವೀಥಿ]

ಪನ್ನಗವೇಣಿ (ನಾ). ಹಾವಿನಂತೆ ಉದ್ದವಾದ ಜಡೆಯುಳ್ಳವಳು ; ಮನೋಹರವಾದ ನೀಳಕೇಶರಾಶಿಯುಳ್ಳವಳು : ವಾಣಿ ನೀರಜವಾಣಿ ಬ್ರಹ್ಮನ ರಾಣಿ ಪನ್ನಗವೇಣಿ . . . ವರಗೀರ್ವಾಣಿ ರಕ್ಷಿಸು (ನಳಚಿ. ೩-೬೩). [ಸಂ. ಪನ್ನಗವೇಣೀ]

ಪನ್ನಗವೈರಿ (ನಾ). ೧. = ಪನ್ನಗವಿರೋಧಿ : ಮನದ ಬಯಕೆಗೆ ಬಡತನಂಗಳೆ ಅನುವನಱಿದೈತರಲಿ ಪನ್ನಗವೈರಿಯೊಂದೆನಲು (ಕೌತಿಂಗಾ. ೧೯-೫೬). ೨. "ನವಿಲು" (ಅನಂನಾ). [ಪನ್ನಗ + ವೈರಿ]

ಪನ್ನಗಶಯನ (ನಾ). = ಪನ್ನಂಗಶಾಯಿ : ಪನ್ನಗಶಯನನವತರಣೋದ್ಯೋಗದಿಂ ನಾಗೇಂದ್ರನಂ ನೋಡಿ (ಜಗವಿ. ೨-೫೬ ಪ) ; ಪನ್ನಗಶಯನನ ಕಣ್ಣಿನಿಂದಲಿ ಕಂಡು ಧನ್ಯನಾದೆ ನಾ (ಪುರಂದ. ೩-೮೨-೧) ; ಪನ್ನಗಶಯನನೆ ಕುಣಿಯೊಮ್ಮೆ ಕುಣಿಯೆಂದು ಕುಣಿಸಿ ನಗುವ ಪುಣ್ಯವೆಂತು ಪಡೆದಳಯ್ಯ (ಕನಕ. ೧೪೮-೨). [ಪನ್ನಗ+ಶಯನ]

ಪನ್ನಗಶರಣ (ನಾ). ಹಾವುಗಳಿಗೆ ಆಶ್ರಯಸ್ಥಾನವಾಗಿರುವುದು ; ಸಾಗರ ; ಸಮುದ್ರ: "ಪನ್ನಗಶರಣಮಕೂಪಾರಮುದಧಿ ಪಾರಾವಾರಂ" (ಪಸ್ತುಕೋ. ೨೨-೨). [ಪನ್ನಗ+ಶರಣ]

ಪನ್ನಗಾಂತಕ (ನಾ). ಹಾವನ್ನು ಕೊಲ್ಲುವುದು ; ಗರುಡ : (ಕಿ). [ಪನ್ನಗ+ಅಂತಕ]

ಪನ್ನಗಾಧಿಪ (ನಾ). = ಪನ್ನಗಪತಿ : 'ಪನ್ನಗಾಧಿಪಹಾರ' ಪರಾ. [ಪನ್ನಗ+ಅಧಿಪ]

ಪನ್ನಗಾಧಿಪಹಾರ (ನಾ). ಹಾವನ್ನು ಮಾಲೆಯಂತೆ ಧರಿಸಿರುವವನು ; ಶಿವ : ಪನ್ನಗಾಧಿಪಹಾರ ಹಾ ಎನಗಿನ್ನು ಗತಿ ನೀನೊಬ್ಬನೆ ನುತಂ (ಬಸಪು. ೧೪-೩೧). [ಪನ್ನಗಾಧಿಪ+ಹಾರ್$_4$]

ಪನ್ನಗಾಭರಣ (ನಾ). = ಪನ್ನಗಭೂಷಣ : ಪನ್ನಗಾಭರಣನ ಪಸಿವನಾಱಿಸುವುದೆಂದು ಅಱುಪೆ (ಇಳಿರ. ದೇ. ೫೩-೨೨) ; ಪನ್ನಗಾಭರಣಂ ನಿಷೇಧವದೆನ್ನದಾರೋಗಿಸಿದನು (ಬಸಪು. ೩೩-೧೬) ; ಪನ್ನಗಾಭರಣನಂ ನುತಿಗೆಯ್ದು (ಚಿಬಪು. ೪೭-೩). [ಪನ್ನಗ+ಆಭರಣ]

ಪನ್ನಗಾರಿ (ನಾ). = ಪನ್ನಗವಿರೋಧಿ : 'ಪನ್ನಗಾರಿಧ್ವಜ' ಪರಾ. [ಪನ್ನಗ+ಅರಿ$_2$]

ಪನ್ನಗಾರಿಧ್ವಜ (ನಾ). ೧. ಗರುಡಚಿಹ್ನೆಯುಳ್ಳ ಧ್ವಜ. ೨. ಧ್ವಜದಲ್ಲಿ ಗರುಡನ ಚಿಹ್ನೆಯುಳ್ಳವನು ; ಕೃಷ್ಣ : ಪನ್ನಗಾರಿಧ್ವಜನ ರಾಜಗೃಹಮಂ ಕಂಡು . . . ಪವನಜಂ ತಳರ್ದಂ (ಜೈಮಿಭಾ. ೬-೪೦) ; ಪನ್ನಗಾರಿಧ್ವಜನ ಮುಂದಲೆಯ ಕೊಯ್ದು ಸಂಪನ್ನನೆನಿಸುವ ಶಂಖುಕರ್ಣಗಣನಾಥನೇಕೋರಾಮಿತಂದೆಯೆಂಬ ಉನ್ನತದ ನಾಮದಿಂ . . . ಜನಿಸಿದಂ (ಗುರುಚಾ. ೨-೪೧). [ಪನ್ನಗಾರಿ+ಧ್ವಜ]

ಪನ್ನಗಾಶನ (ನಾ). ೧. ಹಾವನ್ನು ತಿನ್ನುವುದು ; ಗರುಡ : "ಗರುತ್ಮಾನ್, ಗರುಡಃ, ತಾರ್ಕ್ಷ್ಯಃ . . . ಸುಪರ್ಣಃ, ಪನ್ನಗಾಶನಃ—೯ ವಿಷ್ಣುದೇವರ ವಾಹನವಾದ ಗರುಡನ ಹೆಸರುಗಳು" (ಸಿದ್ಧಾಂತಿ. ೧೮). ೨. ನವಿಲು. [ಪನ್ನಗ+ಅಶನ]

ಪನ್ನಗುಡಿ, ಪರ್ನಕುಟಿ (ನಾ). ಎಲೆಮನೆ ; ಪರ್ಣಕುಟೀರ : ಮೈಥಿಲಿ ಪನ್ನಗುಡಿಯ ಕಣೆಯೆಲೆವಾಗಿಲಂ ತೆರೆದು ನೋಡಿದಳಹಾ ! (ಶ್ರೀರಾಮಾ. ೧೯೮-೧೧೬) ; ಪನ್ನಗುಡಿ ತಡಿಕೆಪಡಿಯಂ ಕೆಲಕ್ಕೋಸರಿಸಿ ಬಂದಳು ಬಯಲ್ಗೆ (ಶ್ರೀರಾಮಾ. ೪೮೬-೪೦). **ಪರ್ನಕುಟಿ** : ನಿನಗೆ ಬಗೆಯೊಪ್ಪೆ ರಚಿಸುವೆನನುತ್ತಮಂ ಪರ್ನಕುಟಿಯಂ (ಶ್ರೀರಾಮಾ. ೧೯೬-೫೬). [<ಸಂ. ಪರ್ಣಕುಟೀ]

ಪನ್ನಗೇಂದ್ರಾಭರಣ(ನಾ).ನಾಗಭೂಷಣ; ಶಿವ: ಪನ್ನಗೇಂದ್ರಾಭರಣ ನಿಮಗೆಂದುನ್ನಿಸಿದ ಚೆಲುವಕ್ಕಿಯವು (ಬಸಪು. ೨೬-೧೮). [ಸಂ.]

ಪನ್ನತ (ನಾ). ಶೂರ ; ವೀರ ; ಪರಾಕ್ರಮಿ : ಪನ್ನತರ ನಡುವನುಡಿಯಲ್ಕೆನ್ನ ಭುಜಾರ್ಗಳಮೆ ಸಾಲ್ಗುಂ (ಪಂಪಭಾ. ೬-೨೬) ; ತನ್ನಂ ಬೇಯಿಪ ಶಶಿಯಂ ಪನ್ನತನೆಂದರ್ದೆಯ ಕಿಚ್ಚಿನೊಳ್ ತುಱುಕುವವೊಲ್ (ಲೀಲಾವ. ೧೧-೩೩) ; ಎನ್ನ ತನೂಜನನೊಯ್ದುವರೆನ್ನರೊ . . . ಆ ಪನ್ನತರಳವೆನಿತಾದುದು (ಬಂಹರಿ. ೮-೬).

ಪನ್ನತಿ (ನಾ). = ಪನ್ನತಿಕೆ ೧ : ಅವನು ಪನ್ನತಿಯಿಂದ ಭೋರನೆ ಬಂದು (ಭೈರವೇ. ೧-೧೨೦). [<ಪನ್ನತ]

ಪನ್ನತಿಕೆ (ನಾ). ೧. ಶೌರ್ಯ ; ಪರಾಕ್ರಮ : "ಪನ್ನತಿಕೆ—ಪರಾಕ್ರಮಂ" (ಶಮದ. ಪರಿ. ೨) ; ಪನ್ನಗರ್ ಪನ್ನತಿಕೆಯಿಂ ಬಂದಾಂತೊಡೆ (ಪಂಪಭಾ. ೫-೮೮ ಪ) ; ಆ ರವಮನೆಯ್ದೆ ರುದ್ರಂ ಕೇಳಿ ಕೋಪದಿಂದೀ ರವಿಯ ನೋಡೆ . . . ಸೂರನುಱೆ ಬಿಳ್ದು ಪೊರಳುತ್ತಿರ್ದನಣಿಯರಂ ತನ್ನ ಪನ್ನತಿಕೆ ಜಾಱೆ (ಅರಾಚ. ೧-೬-೪೧) ; ಮೇಘಾಸ್ತ್ರಕ್ಕೆ ಪನ್ನತಿಕೆಯಿಂದೆ ವಾಯವ್ಯಾಸ್ತ್ರಮಂ ಪೂಡಿ (ಚಿಬಪು. ೪೩-೨೬). ೨. ಯೋಗ್ಯತೆ; ಅರ್ಹತೆ ; ಸಾಮರ್ಥ್ಯ : ನನ್ನ ನುಡಿಯೊಳ್ ಬಣ್ಣಬಣ್ಣದಲಿ ಬಣ್ಣಿಸುವ ಪನ್ನತಿಕೆ ಬರುವನಕ ನನ್ನ ಬಾಳಿದು ನರಕ ! (ಭಾರಂಗ. ೧-೧೫). [ಪನ್ನತ+-ಇಕೆ]

ಪನ್ನತಿಕೆವೆಱು (ಕ್ರಿ). ಪರಾಕ್ರಮವನ್ನು ಹೊಂದು ; ಶೌರ್ಯದಿಂದ ಕೂಡಿರು : ಸಿಂಹಳೇಂದ್ರಂ . . . ತನ್ನ ಪನ್ನತಿಕೆವೆತ್ತ ಪಾರ್ಥಿವ ಕುಮಾರರೊಂದುಗೂಡಿ ಗಂಧಸಿಂಧುರಸ್ಕಂಧಾರೂಢನಾಗಿ ಕಡುವಹಿಲದಿನಿ ದಿರ್ಚಿ ಬರ್ಪಾಗಳ್ (ರಾಜಶೇ. ೬-೮೧ ಪ). [ಪನ್ನತಿಕೆ+ಪೆಱು$_1$]

ಪನ್ನವಣ, ಹನ್ನವಣ (ನಾ). ೧. ವೀಳೆಯದೆಲೆಯ ಮೇಲಿನ ಒಂದು ಬಗೆಯ ತೆರಿಗೆ : ಗಾತ್ರಿಗರುಂ ಪನ್ನವಣಮುಂ ಕೊಟ್ಟಿಲೆ [ಯ] ಹೇಱು ಅಂತು ಹೇಱಿಗೆ [ನಡೆ] ೨೦೦ (ಸೌಇಇ. XX, ೪೫-೨೫ ; 1071). **ಹನ್ನವಣ** : ೧. ಬೆಲ್ಲಂ ಭಣ್ಡಿಗೆ ೧೦ ಹೇಱಿಂಗೆ ೨ ಹನ್ನವಣದಲ್ಲಿ ಹೇಱಿಂಗೆ ಯೆಲೆ ೫೦ (ಸೌಇಇ. IX-i, ೧೬೨-೩೪ ; 1106). ೨. ಮಾರುಕಟ್ಟೆಯ ಸುಂಕದ ಅಧಿಕಾರಿ : ನಾನಾದೇಸಿ ಗಾತ್ರಿಗರು ಹನ್ನವಣರುಂ (ಎಇ. XII, ೩೩೦-೩೨ ; 1105). [ಪನ್ನ$_3$+ಪಣ$_3$]

ಪನ್ನವಳ 'ಪನ್ನಾವಟೆ' ನೋ.

ಪನ್ನಸ 'ಪನ್ನಸು' ನೋ.

ಪನ್ನಸಾದು (ನಾ). ಕರ್ಪೂರ ಬೆರಸಿ ಮಾಡಿದ ಸಾದು,-ಬಟ್ಟು : ಪನ್ನೀರು ಪರಿಮಳ ಮೃಗನಾಭಿ ಭರಣಿಯ ಪನ್ನಸಾದಿನ ಕಂಪು ಎಸೆಯೆ (ಅಬ್ಬಲೂ. ೩-೬೮). [<ಪನ್ನೆ$_2$+ಸಾದು$_2$ (<ಸಾಂದು)]

ಪನ್ನಸಿ 'ಪನ್ನಸು' ನೋ.

ಪನ್ನಸಿಗ, ಹನ್ನುಸಿಗ (ನಾ). ಪನ್ನಸು ಎಂಬ ತೆರಿಗೆಯ ಉಸ್ತುವಾರಿ ಮಾಡುತ್ತಿದ್ದ ಅಧಿಕಾರಿ : ಪನ್ನಸಿ [ಗ]ರ್ಗ್ಗೆ ಮತ್ತರೆಣ್ಣಾಸಿರ ಮವರ್ಗ್ಗೆ ಮಾನ್ಯಮೆಂಟುನೂಱು ತೋಂಟಮೆಂಟು (ಸೌಇಇ. IX-i, ೭೭-೧೯ ; 992) ; ಪನ್ನಸಿಗ ತೀಮಯ್ಯನ ಕಯ್ಯೊಳ್ ಸಿರಿವುರದ ಪನ್ನಸಿನ ಇರ್ಪ್ಪತ್ತನಾಲ್ಕು ಮತ್ತರ್ಕ್ಕೆಯ್ಯಮ್ ಮಾಱುಗೊಣ್ಡು (ಎಇ. XV, ೩೩೫-೧೩ ; 1040) ; ಗಾವುಣ್ಡುಗಳುಂ ಪನ್ನಸಿಗರು ಮೊ [ಳಂ]ಬ×ಕೊ [ಳಂ]ಗೆಯಿ ವಾಡಂ (ಸೌಇಇ. XX, ೩೮-೨೭ ; 1058) ; ಪನ್ನಾಸು . . . ತೆರಿಗೆಯನ್ನು ನೋಡಿಕೊಳ್ಳುತ್ತಿದ್ದ ಅಧಿಕಾರಿಯನ್ನು 'ಪನ್ನಸಿಗ' ನೆಂದು ಕರೆಯುತ್ತಿದ್ದರು (ಕಶಾಅ. ೪೦೦). **ಹನ್ನುಸಿಗ** : ದೇವರ್ಗ್ಗೆ ಎರ್ಕ್ಕಯ್ಯ ಮನೆಗಳ್ ೧೩ ಗಾಣ ೧ ಹನ್ನುಸಿಗಂ ಪದ್ಮನಾಭ ××× ತ್ತರ್ ೧೨ ಗಟ್ಟಿ ಕಮ್ಮ ೪೫೦ (ಸೌಇಇ. XI-i, ೮೬-೪೩ ; 1050). [ಪನ್ನಸು+-ಇಗ]

ಪನ್ನಸು, ಪನ್ನಸ, ಪನ್ನಸಿ, ಪನ್ನಾಸು, ಪನ್ನೆಸೆ, ಪೆನ್ನಸ, ಹನಸು$_1$, ಹನ್ನಸು, ಹನ್ನಾಸಿ (ನಾ). ೧. ಶೇಕಡ ಐವತ್ತರಷ್ಟು ತೆರಿಗೆ ವಿನಾಯಿತಿಯನ್ನು ಕೊಟ್ಟ ಭೂಮಿ; ಅರ್ಧತೆರಿಗೆಯ ಜಮೀನು: ಇಱುವ ನೊಟಂಬಂ ಭಾಗೆ ಅಯ್ಗೊಳ ಕಟಿನ ಪನ್ನಸು ಬಿಟ್ಟೊ (ಎಕ. X, ಚಿಂತಾಮ. ೫೦-೩ ; ಸು. 950) ; ಅಣ್ಣಯಭಟ್ಟಂಗೆ ಕೊಟ್ಟ ಪನ್ನಸು ಅಱುಗಣ್ಡುಗಂ (ಎಕ. XII, ಶಿರಾ. ೯-೯೧; 1072) ; ಗವಱೇಶ್ವರದೇವಗೆಯಿಂ ಪಡುವ ಮಂನೆಯ ಪಂನಸು ತೆಂಕ ಭೂ ೧೪೦ ಹ ೨೩ (ಸೌಇಇ. IX-i, ೨೫೨-೪೦ ; 1148); ತೆಂಕಲು ಮೂತೆನೆಯ ಪಂನಸಿನ

ದಾರಿಯ ಪತ್ತಿರೆ (ಕೊಲ್ಹಾಶಾ. ೧೩-೩೧ ; 1166) ; 'ಪನ್ನಾಸ' ಪರಾ. **ಪನ್ನಸ :** ೧. ಶ್ರೀಮತ್ ಶೋಟಮಹರಜನ್ಕೆಟ್ಟು ಬರ್ವ್ವರಿಗೆಯಿತ್ತ ಪನ್ನಸ ಪನ್ನಿರ್ಖಣ್ಡುಗದ ಬೆದೆ (ಸೌಇಇ. IX-i, ೪೦೧-೪ ; ?). **ಪನ್ನಸಿ :** ೧. ಪನ್ನಸೀ ಭೂಮಿ ೨೦೦ ಮೈಲಾರ ದೇವಾಭೂಮಿ ೨೦೦ (ಇಆ. XIV, ೧೪೨-೩೦ ; 12ನೆಯ ಶತ). **ಪನ್ನಾಸು :** ೨. ಶೇಕಡ ಐವತ್ತರಷ್ಟು ತೆರಿಗೆ ; ಅರ್ಧತೆರಿಗೆ : ಲೋಕೇಶ್ವರದಾ ನರೆಯಂಗಲ್ಲ ಪನ್ನಾಸುಗಳಾನಿತ್ತ ಸಮಯಮೊರ್ಮ್ಮತ್ತರ್ಗೆ ಇರ್ಕ್ಕುಳ ಹೋಳಮ್ ಕುಡುವುದು (ಇಆ. X, ೧೬೬-೩ ; 7ನೆಯ ಶತ); ಶ್ರೀತರುಣವಸನ್ತನ್ ಸಾಮನ್ತಕೇಸರಿಯಾ ಕೊಟ್ಟ ಪನ್ನಾಸು ಸಿಂಗುಟ್ಟಿಯಾ ಲಿಖಿತಂ ಬಲ್ಲವರಸರ ಸೂಟೂಱಕ್ಕು (ಸೌಇಇ. IX-i, ೪೬-೧೮ ; ಸು. 9ನೆಯ ಶತ); ಪನ್ನಾಸು . . . ಈ ತೆರಿಗೆಯನ್ನು ನೋಡಿಕೊಳ್ಳುತ್ತಿದ್ದ ಅಧಿಕಾರಿಯನ್ನು 'ಪನ್ನಸಿಗ'ನೆಂದು ಕರೆಯುತ್ತಿದ್ದರು (ಕಶಾಅ. ೪೦೦). **ಪನ್ನೆಸೆ :** ೨. ಅಯಿರಡಿ ಅಳ್ವ ವಿಕ್ರಮಾದಿತ್ಯರ್ಕೊಟ್ಟೊದು [ಪ]ನ್ನೆಸೆ ಉಞ್ಚರು ತಾಟೆಱೆಯರ್ಗೆ ಎರೆಕಾಡು ಇರ್ಪ್ಪತ್ತೈಮತ್ತರು (ಸೌಇಇ. IX-i, ೪೬-೬ ; ಸು. 9ನೆಯ ಶತ). **ಪೆನ್ನಸ :** ೧. ಪಾಣ್ಡ್ಯಗಾವುಣ್ಡಂ ತಮ್ಮ ಕೆಱೆಯೊಳ್ ಮಾಧವಯ್ಯಂಗೆ ಇರ್ಕಣ್ಡುಗ ಮಣ್ಣ ಪೆನ್ನಸ ಬಿಟ್ಟ (ಎಕ. XV, ಹೊಳನ. ೭೮-೮; 974). **ಹನಸು₁ :** ೨. ಗಾಉಂಡುಗ ××× ವತ್ತೊಕ್ಕಲುಂ ಹನಸುಂ ಕಿಱು ×××ಗೋಲ (ಸೌಇಇ. XI-ii, ೨೦೫-೧೭ ; ?). **ಹನ್ನಸು :** ೧. ನರಯಂಗಲ್ಲ ತೆಂಕಣ ಭಾಗದ ಹಿರಿಯ ಹನ್ನಸಿನ ತಿಪ್ಪಣಯ್ಯನಾಯಕರು ತಿಪ್ಪಣೇಶ್ವರದೇವರ್ಗ್ಗೆ ತನ್ನ ಹನ್ನಸಿನ ಬಳದೊಳಗೆ (ಸೌಇಇ. XV, ೪೨-೩೭ ; 950) ; ಗಂಜಿಗೆಱೆಯಿಂ ಬಡಗಣ ತೋ × × ಕಮ್ಮಱ ಹನ್ನಸು ಮ ೧೨ (ಸೌಇಇ. IX-i, ೧೬೬-೩೧ ; 1099). **ಹನ್ನಾಸಿ :** ೧. [ನೈ]ವೇದ್ಯಕ್ಕಂ ನಂದಾದೀವಿಗೆಗಂ ಬಿಟ್ಟ ಹನ್ನಾಸಿ×××ಮತ್ತರು ೧ (ಸೌಇಇ. IX-i, ೧೮೨-೮ ; 1110). [<ಸಂ. ಪಂಚಾಶತ್]

ಪನ್ನಾ₃, ಪನ್ನ₅ (ನಾ). (ಬಟ್ಟೆ, ಗೋಡೆ ಮೊದಲಾದುವುಗಳ) ಅಗಲ : ಅವರ ಹತ್ತಿಬಟ್ಟೆಗಳ ಪನ್ನಾ—ಅಗಲ ಮೂರು ಅಂಗುಲ (ಗಲಿಪ್ರ. ೭೫). **ಪನ್ನ₅ :** ಅವನಿಗೆ ಒಂದು ಸೂಟಿಗೆ ಅರು ಗಜ ಡಬ್ಬಲ್ ಪನ್ನ ಬಟ್ಟೆ ಇಲ್ಲದಿದ್ದರೆ ಆಗದು (ರಂಗಕ. ೨); ಬನಾತು ಬಟ್ಟೆ ಎಂಬುದು ಎಂಟು ಮೊಳ ಉದ್ದದ ಎರಡು ಪನ್ನಗಳನ್ನು ಸೇರಿಸಿ ಹೊಲಿದ ಹೊದಿಕೆ (ಪ್ರವಾಇ. I, ೮೮ ಅಡಿಟ). [←ಹಿಂ. ಪನಹಾ ; ಮರಾ. ಪನ್ಹಾ]

ಪನ್ನಾಡೆ (ನಾ). ತಾಳೆ, ತೆಂಗು, ಅಡಕೆ ಮುಂತಾದ ಮರಗಳಲ್ಲಿ, ಸೋಗೆಗಳ ಬುಡದಲ್ಲಿರುವ, ಬಲೆಯಂತಹ ತೆಳ್ಳಗಿನ ಪೊರೆ : (ಶಿ).
[ದೇ.॥ ತಮಿ. ಪನ್ನಾಟ್ಟಿ ; ಮಲ. ಪನ್ನಾಡ]

ಪನ್ನಾಯ (ನಾ). = ಪನ್ನವಣ ೧ : ಮಾಳಿಕಬ್ಬರಸಿ ತುಂಬುರ ಬೆಳದ ಬೋಗಿನಲು ಎಡೆಯೂರ ಪೊಲದೊಳ್ ಬಿಟ್ಟ ಮತ್ತರ್ಪನ್ನೆರಡು ಪನ್ನಾಯ ಕೊಳಗಟ್ಟೆಯಂ ಬಿಟ್ಟಳ್ (ಎಕ. XI, ಮೊಳಕಾ. ೪೦-೬ ; 987) ; ಆ ತೋಂಟಕೆ ಸುಂಕಾ ಪಂನ್ನಾಯ ಸ(ಂ)ಮಸ್ತವುಂ ಮಂನ್ನಣೆ (ಸೌಇಇ. XI-i, ೬೯-೪೧ ; 1033) ; ಎಲೆಯಂ . . . ಪೇಱುನಲುಂ ತಲೆವೊಱೆಯಲೆಲ್ಲಿ ತಂದದಂ ದೇವರ್ಗ್ಗೆ ಪನ್ನಾಯದ ಸುಂಕಮುಮಂ ಪುರಿಗೆಱೆಯಲು ಮಾಱುವೆಲೆಯ ಪಂನಾಯಮುಮನತ್ತ ಸುಂಕವಿಕ್ಕಿ (ಎಇ. XVI, ೩೪-೩೮ ; 1102) ; ಆ ತೋಂಟದೆಲೆಯ ಪಂನ್ನಾಯದೆಲ್ಲಾ ಸುಂಕಮುಮಂ . . . ಬಿಟ್ಟು ಕೊಟ್ಟ (ಎಕ. VII, ಶಿಕಾರಿ. ೧೦೪-೫೨ ; 1156) ; ಪಟ್ಟಣದಲು ಮುಂನ ನಡುಉತಿರ್ದ್ದ ಪಂನಾಯಮಂ ಧಾರಾಪೂರ್ವ್ವಕಮಾಗಿ ಬಿಟ್ಟ ಶಾಶನ (ಸೌಇಇ. XV, ೬೧೧-೯ ; 1231). 'ಅಚ್ಚುಪನ್ನಾಯ', 'ಪಂಗ₁' ಪರಾ. [ಪನ್ನ₃ + ಆಯ₇]

ಪನ್ನಾಲೆ (ನಾ). ಲಾಳಿಕೆ ; ಬುದ್ಧಿವಂತ : ಅಗಲ ಕಿರಿದಾಗುತ್ತ ಹೋಗುವ ಕೊಳವೆ . . . ಲಾಳಿಕೆ ; ಆಲಕಿ ; ಪನ್ನಾಲೆ (funnel. ಇಂಕನಿ) ; ಕಡಿಮೆಯಾದ ಆಳವನ್ನುಳ್ಳ ಪನ್ನಾಲೆಯ ಆಕೃತಿಯ ದೊಡ್ಡ ಮಡುಗಳಿವು (ಜ್ಯೋತಿರ್ವಿ. ೮೯) ; ಈ ಹಲ್ಲು-ಕೊಂಡಿಗಳ ಮಧ್ಯೆ ಬಾಯಿತೆರೆ—ಗಲ್ಲದ ಪನ್ನಾಲೆ (Buccal funnel) . . . ಇದೆ (ಕೀಟಬೆ. ೮೧). 'ಪನ್ನಾಳ₁' ಪರಾ. [←ಇಂ: funnel]

ಪನ್ನಾವಟೆ₃, ಪನ್ನವಳ, ಪನ್ನಾಳ₂, ಪನ್ನಾಳೆ₂ (ನಾ). ಒಂದು ಊರಿನ ಹೆಸರು : ಪನ್ನಾವಟೆಯ ಕೋಟೆಯ . . . ಪಾಞ್ಚಾಳ ಲಾಳರಂ ಭುಜಬಳದಿಂ ಕ ××× [ಕೊಣ್ಡಾಳ್ದನು] (ಸೌಇಇ. XI-i, ೮೬-೧೦ ; 1050). **ಪನ್ನವಳ :** ವಂದನಮಂ ಕಿಳಿಗಿಳಮಂ ಚಂದನ ಚಾಣಕ್ಯ ಚೌಕ ಪನ್ನವಳಗೆಯಿಸನ್ದಣಿಗಡಗನಿಕರಮನೊನ್ದರನಿಮಿಷದೆ ಕೊಣ್ಡ ವೀರಪಾಣ್ಡ್ಯ (ಸೌಇಇ. IX-i, ೧೧೮-೬೩ ; ಸು. 1057). **ಪನ್ನಾಳ₂ :** ಪನ್ನಾಳೋನ್ಮೂಳನಂ (ಎಇ. XVI, ೭೮-೨೬; 1037). **ಪನ್ನಾಳೆ₂ :** ಪನ್ನಾಳೆಯ ಕೋಟೆಯ ನೆಲೆವೀಡಿನೊಳ್ (ಎಇ. XV, ೭೮-೯ ; 1050). [?]

ಪನ್ನಾಸ (ನಾ). ಒಂದು ಸಂಖ್ಯೆ ; ಐವತ್ತು : ತಿಂಗಳಾ ಪನ್ನಾಸ ಕೊಟ್ಟು ನನ್ನ ಹಸನನ ಇಲ್ಲೆ ಕಾವಲಿಟ್ಟಾರ (ರಕ್ತಧ್ವ. ೩೨೭). 'ಪನ್ನಸು' ಪರಾ.
[<ಪ್ರಾ. ಪನ್ನಾಸ, ಪಣ್ಣಾಸ./ಸಂ. ಪಂಚಾಶತ್./ಹಿಂ. ಪಚಾಸ್; ಮರಾ. ಪನ್ನಾಸ್]

ಪನ್ನಾಸು 'ಪನ್ನಸು' ನೋ.

ಪನ್ನಾಳ₁, ಪನಾಳಿ₁, ಪನ್ನಾಳಿ, ಪನ್ನಾಳೆ₁ (ನಾ). ೧. ನೀರು ಹರಿದುಹೋಗಲು ಮಾಡಿರುವ ಕೊಳವೆ ; ಹರಿನಾಳಿಗೆ ; ಪೋರಿ: ಹರಿತೆಗೆಯೊ ಸೂಜಿಯೊ . . . ರೊಟ್ಟಿಗೆಯೊ ನಾಳಮೋ ಪನ್ನಾಳಮೋ (ಕುಮುರಾ. ೧೩-೨೯). ೨. ಕೊಳವೆ ; ನಳಿಕೆ : 'ಪನ್ನಾಳಗಿಂಡಿ' ಪರಾ. **ಪನಾಳಿ₁ :** ೨. ತವರಿನ ಪನಾಳಿಯ ಕಲ್ಯೆ ಮಾಡಿಸಿದವುಗಳು (ಮುಂಬವ್ಯಾ. ೧೭ ಪ್ರಸ್ತಾವನೆ). **ಪನ್ನಾಳಿ :** ೧. ಭೀಮೇಶ್ವರಸ್ವಾಮಿಯ ಪಂನಾಳಿ ಗಾರೆಯು ಜೀರ್ನವಾಗಿ (ಮೈಆರಿ. ೧೯೪೫, ೪-೨ ; 1903). **ಪನ್ನಾಳೆ₁ :** ೧. ಭೀಮೇಸ್ವರ ಸ್ವಾಮಿಯ ದೇವಸ್ಥಾನದ ಪಂನಾಳೆ ವಗೈರೆ ಜೀರ್ನವಾಗಿ ಹೋದಂತಾದ್ದು (ಮೈಆರಿ.೧೯೪೫, ೩-೪ ; 1870). 'ಪನ್ನಾಲೆ' ಪರಾ.
[<ಪ್ರಾ. ಪಣಾಲ./ಸಂ. ಪ್ರಣಾಲ./ಮರಾ. ಪನಾಳ್, ಪನ್ಯಾಳ್, ಪನ್ಹಾಳ್]

ಪನ್ನಾಳ₂ 'ಪನ್ನಾವಟೆ₃' ನೋ.

ಪನ್ನಾಳಗಿಂಡಿ (ನಾ). ಕೊಂಬು ಅಥವಾ ಸೊಂಡಿಲಿರುವ ಸಣ್ಣ ಪಾತ್ರೆ : ಪನ್ನಾಳಗಿಂಡಿ ನಡು ಮಧ್ಯ ಇಟುಕೊಂಡು ಅಂಗಳಕೆ ನ್ಯಾಯ ಹರದಾಳೆ (ಹಳ್ಳಿಯ. ೧೬೦). [ಪನ್ನಾಳ₁ + ಗಿಂಡಿ]

ಪನ್ನಾಳಿ 'ಪನ್ನಾಳ₁' ನೋ.

ಪನ್ನಾಳೆ₁ 'ಪನ್ನಾಳ₁' ನೋ.

ಪನ್ನಾಳೆ₂ 'ಪನ್ನಾವಟೆ₃' ನೋ.

ಪನ್ನಿ 'ಪನ್ನ₁' ನೋ.

ಪನ್ನಿಕ್ಕಂಡುಗ 'ಪನ್ನೆರಡು' ಪರಾ.

ಪನ್ನಿಚ್ಛಾಸಿರ 'ಪನ್ನೆರಡು' ಪರಾ.

ಪನ್ನಿತ್ತೆಱ 'ಪನ್ನೆರಡು' ಪರಾ.

ಪನ್ನಿನುಡಿ₁ (ಕ್ರಿ). ಗರ್ವದ ಮಾತನಾಡು; ಜಂಭ ಕೊಚ್ಚಿಕೊಳ್ಳು : ಮುನ್ನಿನವರ ಬಗೆಯ ಕಂಡು ಪನ್ನಿನುಡಿವೆ ಚೋರರಾಕ್ಷಸಾ(ಪುಕಾಪ್ರ. ೨೫).
[ಪನ್ನಿ (<ಪನ್ನ₁)+ನುಡಿ₁]

ಪನ್ನಿನುಡಿ$_2$ (ನಾ). ಗರ್ವದ ಮಾತು ; ಸೊಕ್ಕಿನ ನುಡಿ : ಕನ್ನಡಿಯ ಹೊಳಹಿನೊಳ್ ರತ್ನಮಂ ತೋರ್ದಂತೆ ಪನ್ನಿನುಡಿಯಂ ನುಡಿದು ನಾಕದ ಪುಷೀಶ್ವರಂ ತನ್ನೆದೆಗೆ ತಾಡಮಂ ಬೀರಿ ತಾಂ ಪಾರಿದಂ (ಪರಶು. ೬-೨೫). [ಪನ್ನಿ(<ಪನ್ನ$_1$)+ನುಡಿ$_2$]

ಪನ್ನಿಬ್ಬರ್ 'ಪನ್ನೆರಡು' ಪರಾ.

ಪನ್ನಿಬ್ಬರು 'ಪನ್ನೆರಡು' ಪರಾ.

ಪನ್ನಿರಂಡು 'ಪನ್ನೆರಡು' ನೋ.

ಪನ್ನಿರುವರ್ 'ಪನ್ನೆರಡು' ಪರಾ.

ಪನ್ನಿರ್ಕಂಡುಗ 'ಪನ್ನೆರಡು' ಪರಾ.

ಪನ್ನಿರ್ಕುಳ 'ಪನ್ನೆರಡು' ಪರಾ.

ಪನ್ನಿರ್ಕೋಳ 'ಪನ್ನೆರಡು' ಪರಾ.

ಪನ್ನಿರ್ಕೋಟಿ 'ಪನ್ನೆರಡು' ಪರಾ.

ಪನ್ನಿರ್ಕೋಲ್ 'ಪನ್ನೆರಡು' ಪರಾ.

ಪನ್ನಿಱ್ಪತಿರ 'ಪನ್ನೆರಡು' ಪರಾ.

ಪನ್ನಿಱ್ಪಸಿರ 'ಪನ್ನೆರಡು' ಪರಾ.

ಪನ್ನಿಳ್ಪಸಿರ 'ಪನ್ನೆರಡು' ಪರಾ.

ಪನ್ನಿರ್ಕೆಱ 'ಪನ್ನೆರಡು' ಪರಾ.

ಪನ್ನಿರ್ಪಳ್ಳಿ 'ಪನ್ನೆರಡು' ಪರಾ.

ಪನ್ನಿರ್ಬರ್ 'ಪನ್ನೆರಡು' ಪರಾ.

ಪನ್ನಿರ್ಮತ್ತ 'ಪನ್ನೆರಡು' ಪರಾ.

ಪನ್ನಿರ್ಮತ್ತರ್ 'ಪನ್ನೆರಡು' ಪರಾ.

ಪನ್ನಿರ್ವರ್ 'ಪನ್ನೆರಡು' ಪರಾ.

ಪನ್ನಿರ್ವರು 'ಪನ್ನೆರಡು' ಪರಾ.

ಪನ್ನಿಱ್ಪಾಸಿರ 'ಪನ್ನೆರಡು' ಪರಾ.

ಪನ್ನೀರ್ 'ಪನಿನೀರ್' ನೋ.

ಪನ್ನೀರು 'ಪನಿನೀರ್' ನೋ.

ಪನ್ನೀರುಗುಲಾಬಿ (ನಾ). ಒಂದು ಬಗೆಯ ಗುಲಾಬಿಯ ಗಿಡ ಮತ್ತು ಪನ್ನೀರಿನಂತೆ ಸುವಾಸನೆಯುಳ್ಳ ಅದರ ಹೂವು : ಅತ್ತರು ರೋಜಾಹೂ, ಪನ್ನೀರುಗುಲಾಬಿ (ಮೈಪಿಗಿ. ೬೬-೧೩೫). [ಪನ್ನೀರು(<ಪನಿನೀರ್)+ಗುಲಾಬಿ]

ಪನ್ನೀರುದಾನಿ (ನಾ). ಪನ್ನೀರನ್ನು ಹಾಕಿಡುವ ಪಾತ್ರೆ ; "ರಂಧ್ರಗಳಿಗುವ ಮುಚ್ಚಳವುಳ್ಳ ಸುಗಂಧದ್ರವ್ಯಸಂಪುಟ; ಪನ್ನೀರುದಾನಿ; ಅತ್ತರುದಾನಿ" (Cassolette. ಇಂಕಾ): 'ಅತ್ತರುದಾನಿ' ಪರಾ. [ಪನ್ನೀರು (<ಪನಿನೀರ್)+ದಾನಿ$_2$]

ಪನ್ನೀರೆಲೆ (ನಾ). ಪನ್ನೀರಿನ ಸುವಾಸನೆಯುಳ್ಳ ಒಂದು ಬಗೆಯ ಸಸ್ಯ ಮತ್ತು ಅದರ ಎಲೆ : ನಿತ್ಯಮಲ್ಲಿಗೆ ಮರುಗ ರಾಜಶೇಖರನಿಗೆ ಪನ್ನೀರೆಲೆ (ಸಿದ್ಧಪು. ೧೮-೮೯). [ಪನ್ನೀರು(<ಪನಿನೀರ್)+ಎಲೆ$_1$]

ಪನ್ನೀರ್ಗಾಲ್ವೆ (ನಾ). ಪನ್ನೀರಿನ ಕಾಲುವೆ,—ತೋಡು : ಪನ್ನೀರ್ಗಾಲ್ವೆಯೊಳಂ ಕುಂಕುವದ ಮಡುಗಳೊಳಂ . . . ಕಂಪಿನ ಪೊಟಲೆಂಬ ಬೀಡು ಬಗೆಗೊಳಿಸುತಿರ್ಪುದು (ಕಬ್ಬಿಕಾ. ೧೧೮). [ಪನ್ನೀರ್(<ಪನಿನೀರ್)+ಕಾಲ್ವೆ (<ಕಾಲ್ವಾಯ್)]

ಪನ್ನೀರ್ಗೊಡ (ನಾ). ಪನ್ನೀರು ತುಂಬಿರುವ ಕೊಡ : ಪದಂಗೊಳಿಸಿದ ಪನ್ನೀರ್ಗೊಡಂಗಳಂ ಮುತ್ತಿನ ರಂಗವಲ್ಲಿಗಳಂ (ರಾಜಶೇ. ೮-೫ ಪ). [ಪನ್ನೀರ್ (<ಪನಿನೀರ್)+ಕೊಡ$_2$]

ಪನ್ನೀರ್ಚಳೆಯ (ನಾ). ಪನ್ನೀರನ್ನು ಚಿಮುಕಿಸುವುದು,—ತಳಿಯುವುದು : ಕಮ್ಮಲರ್ಗಳಿಯ ಪನ್ನೀರ್ಚಳೆಯದ ಪರಿಮಳಂ ಪರಿಕಲಿಸಿ ಮೊರೆವ ಮುಱಿದುಂಬಿಗಳ ತೆಱನಱಿತು ಸುಳಿವೆಳೆಯ ಗಾಳಿ (ನಂದಿಮಾ. ೭-೩). [ಪನ್ನೀರ್ (<ಪನಿನೀರ್)+ಚಳೆಯ$_1$]

ಪನ್ನೀರ್ದಳಿ 'ಪನಿನೀರ್ದಳಿ' ನೋ.

ಪನ್ನೀರ್ದಳಿಪ (ನಾ). = ಪನ್ನೀರ್ಚಳೆಯ : ಪನ್ನೀರ್ದಳಿಪದಿಂ ಕತ್ತುರಿಯ ಸಾರಣಿಯಂ . . . ಕಂಗೊಳಿಸೆ (ವೃಷವಿ. ೫-೪೪ ವ). [ಪನ್ನೀರ್ದಳಿ (<ಪನಿನೀರ್ದಳಿ)+-ಪ$_2$]

ಪನ್ನೀರ್ವರ್ 'ಪನ್ನೆರಡು' ಪರಾ.

ಪನ್ನು (ನಾ). ಒಂದು ಬಗೆಯ ತೆರಿಗೆ : ನಾಳು ಬಂದು ನಿಂ[ಮ]ನು ನಂಮ ಪೆನುಗೊಂಡೆಯ ಹ[ಟ್ಟ]ದೆರೆಯ ಕುಳದ ಒಕ್ಕಲು ನಂಮ ಕುಳದ ಪಂನು ತೆರಬೇಕುಯೆಂದು ನಿಂಮನು ಹಿಡಿಯಲಾಗಿ (ಸೌಇಇ. VIII, ೩೬೨-೬ ; 1507) ; ಅಗ್ರಹಾರದಲು × × × ಕೊಡುವ ಪಂನಿನ ರೊಕ್ಕವನು (ಸೌಇಇ. IX-II, ೬೫೦-೧೧ ; 1553). [ದೇ.॥ ತಮಿ. ತೆಲು. ಪನ್ನು]

ಪನ್ನುವಕ (?) (ನಾ). (?) : ಶ್ರೀಪುರುಷ × × ಹಾರಾಜರ್ ಪ್ರಿಥುವೀ × ಜ್ಯಂಗೆಯ ಮಾದಿಗೋ × × ಳ ಪನ್ನುವಕ ಸಹಿಲ್ಲರಾಳಂ ಕಲ್ಕುನ್ದೋನ್ಕವು ಒನ್ದು ಕೆಱುವುಜ × × ಮುಮನೆ ತಾಗಿಮು ಕೊಟ್ಟರ್ (ಎಕ. XIV, ತಿರುಮ. ೧೫೧-೪ ; ?). [?]

ಪನ್ನೆ$_1$ (ನಾ). ಕರ್ಪೂರ : "ಪ್ರಾಲೇಯಮೆನಲು ಘನಸಾರಮೆನೆ . . . ಪನ್ನೆಯಕ್ಕುಂ" (ಮಂಗರಾ. ೯೯-೨೨) ; ಪಚ್ಚೆಕಪ್ಪುರ ಕೂರು ಒಂದಕ್ಕೆ ಹಾಗ ಪನ್ನೆ ಕುರು ಒಂದಕ್ಕೆ ಬೇಳೆ (ಎಕ. V, ಬೇಲೂರು. ೭೫-೮೦ ; 1382). [←ತಮಿ. ಪನ್ನೈ]

ಪನ್ನೆ$_2$ (ನಾ). ಅಲಂಕಾರಕ್ಕಾಗಿ ಗಂಡಸರ ಕೆನ್ನೆಯ ಮೇಲೆ ವಿಶಿಷ್ಟರೀತಿಯಲ್ಲಿ ಕಿವಿಯ ಕೆಳನೇರದವರೆಗೆ ಕತ್ತರಿಸಿದ ಕೂದಲು : ಕತ್ತರಿಸಿದ ಪನ್ನೆಯೊತ್ತಿದ ಕೊನೆಮೀಸೆ . . . ಕಣ್ಣೆಸೆಯೆ (ಕುರಾಸಾಂ. ೪೧-೯೨) ; ಕರ್ಣಾಭರಣದ ಕಾಂತಿಯೆಡೆಯಾಡಲವನ ಪನ್ನೆಯೊಳು ಗಡಣಿಸಿ ಕಾರ ಮುಗಿಲೊಳೆಡೆಯಾಡುವ ಕುಡುಮಿಂಚಿನಂತಿಹುದಲ್ತೆ (ಭರಶ. ೬-೫೦) ; ಪನ್ನೆಗಳ ಕೊನೆಮೀಸೆಗಳ ಹೊಸಹೊನ್ನ ಜವ್ವನದವರುಗಳು . . . ಸಡೆತಂದರೈ (ಪ್ರಹ್ಲಾಶ. ೧೭-೨೩) ; ಒತ್ತಿದ ಪನ್ನೆ ಬವರಿಗಡ್ಡ ಕೊರಳೊಳು ಸುತ್ತಿದ ಯಜ್ಞೋಪವೀತ (ಜ್ಞಾನಚಿ. ೩೫-೨೫), [←ತುಳು. ಪನ್ನೆ = ಕೆನ್ನೆ./ಹಿಂ. ಪನ್ನಾ = ಕುರಿಯ ಕೆನ್ನೆಯ ಮೇಲೆ ಕತ್ತರಿಸಿದ ಕೂದಲು]

ಪನ್ನೆ$_3$ (ನಾ). ಕುರು ; ಬೊಟ್ಟೆ ; ಗುಳ್ಳೆ (?) : ಆ ಪನ್ನೆಪೊಡದು ಯಿದ್ದರೆ ಅಳಲೆಕಾಯಿ ಚೂರ್ನ ಕಾಚನ ಚೂರ್ನವಂ ಕೂಡಿ (ಅಶ್ವವೈ. ೧೮-೮ ಟೀಕು) ; ಉಮ್ಮತದ ಸೊಪ್ಪು ಉಪ್ಪಂ ಹುರಿದು ಪುಡಿಮಾಡಿ ಇಕ್ಕುವುದು ಪನ್ನೆ ಮಾಣ್ಪುಂ (ಅಶ್ವಟೀ. ೧೧೮-೧೧). [?]

ಪನ್ನೆಗಪ್ಪುರ (ನಾ). = ಪನ್ನೆ$_1$: ಸಿರಿಪಚ್ಚೆ ಪನ್ನೆಗ[ಪಾಠಾಂ. ಕ]ಪ್ಪುರದ ರಾಶಿಗಳು . . . ಬಿನ್ನಾಣವಡೆದುವಲ್ಲಲ್ಲಿ (ಭರಶ. ೪೭-೧೮). 'ಪರ್ನಕರ್ಪೂರ' ಪರಾ. [ಪನ್ನೆ$_1$+ಕಪ್ಪುರ]

ಪನ್ನೆತಿದ್ದು (ಕ್ರಿ). ಕೆನ್ನೆಯ ಮೇಲಿನ ಕೂದಲನ್ನು ಕತ್ತರಿಸಿ ಸರಿಪಡಿಸು : ಸೆಳೆದ ಕುಡಿಮೀಸೆ ಕತ್ತರಿಗಡ್ಡ ಪನ್ನೆತಿದ್ದಿದ ವಿಶಾಲಮಲ ಫಣೆಯು (ಸಮವೋ. ೧೭-೫೫). [ಪನ್ನೆ$_2$+ತಿದ್ದು$_1$ (<ತಿರ್ದು$_1$)]

ಪನ್ನೆಮೀಸೆ (ನಾ). ಕತ್ತರಿಸಿದ ಕೆನ್ನೆಗೂದಲಿನವರೆಗೂ ಬೆಳೆದಿರುವ ಮೀಸೆ : ಆ ಕೋಲುಮುಖದ ಗಲ್ಲಗಳಲ್ಲಿ ಹರಡಿಕೊಂಡು ಹೊರವಾಗಿ ಬೆಳೆದಿರುವ ಪನ್ನೆಮೀಸೆ (ಬೆಳುಮ. ೧೫). [ಪನ್ನೆ$_2$+ಮೀಸೆ]

ಪನ್ನೆರಂಡು 'ಪನ್ನೆರಡು' ನೋ.

ಪನ್ನೆರಡಬ್ದ 'ಪನ್ನೆರಡು' ಪರಾ.

ಪನ್ನೆರಡಿನ 'ಪನ್ನೆರಡು' ಪರಾ.

ಪನ್ನೆರಡು, ಪನ್ನಿರಂಡು, ಪನ್ನೆರಂಡು, ಪನ್ನೆರಾಟ್ಟು, ಹದಿನೆರಡು, ಹನ್ನೆರಡು (ನಾ). ಒಂದು ಸಂಖ್ಯೆ; ಹತ್ತಕ್ಕೆ ಎರಡನ್ನು ಸೇರಿಸಿದ ಸಂಖ್ಯೆ; ದ್ವಾದಶ : ಪಿಟ್ಟಗೆಱೆ ಪನ್ನೆರಡು ಗಾಮುಣ್ಡ ಪ್ರಜೆರ್ ಸಕ್ಷಿ (ಎಕ. XI, ಚಿತ್ರದು. ೨೪-೧; ಸು. 500 ?); ಪನ್ನೆರಡು ಗದ್ಯಾಣ ದಣ್ಡ (ಮೈಅರಿ. ೧೯೪೨, ೪೭-೨೧; ಸು. 790); ಪನ್ನೆರಡು ತಲೆಯ ಪಾವಂ ಕಂಡುದಱಿಂದಿಲ್ಲಿಂ ತೊಟ್ಟೇ ನಾಡೊಳ್ ಪನ್ನೆರಡು ವರ್ಷಂಬರಂ ರೌದ್ರ ಪಸವಮುಕ್ಕುಂ(ಪಡ್ಡಾರಾ.೮೬-೧೧); ಪನ್ನೆರಡು ವರುಷದವಧಿಯುಮಿನ್ನೆಱೆಯಲ್ ಬ[ಂ]ದುದಹಿತನಿಳೆಯಂ ಕುಡಂ (ಪಂಪಭಾ. ೭-೬೪); ಪನ್ನೆರಡುಂ ಗಱ್ಡಿ ನೀರ್ಮುಣ್ಣುಮಂ . . . ಕೊಟ್ಟರ್ (ಎಕ. IV, ಚಾಮರಾ. ೧೮-೧೪; ಸು. 1000 ?); ಪನ್ ಎಂಬುದರ್ಕೆ – ಪನ್ನೊಂದು, ಪನ್ನೆರಡು (ಶಮದ. ೧೯೨ ಪ್ರಯೋ). **ಪನ್ನಿರಂಡು :** ಪನ್ನಿರಂಡು ಗಿಡ್ಡುಗೆಗೊಟ್ಟು (ಎಕ.X, ಚಂತಾಮ. ೩೪-೩; 955). **ಪನ್ನೆರಂಡು :** ಪನ್ನೆರಡು ಪನ್ನೆರಡ್ಡೆ ಪರಿಹಾರ (ಎಕ. XVI, ತಿರಾ. ೧೨೩-೧೪; 788). **ಪನ್ನೆರಾಟ್ಟು :** ಪಾಲ್ಮುರ್ಗೆ ಪನ್ನೆರಾಟ್ಟ × ಪಡ್ಡೆ × × × ಸತಿ ಪನ್ನೆರಾಟ್ಟು ಕಿಱುದೆಱೆಯು (ಎಕ. XVI, ತಿರಾ. ೧೨೩-೯; 788). **ಹದಿನೆರಡು :** ವೆಂಕಟನೆಂಬ ಕವಿಯು ಹದಿನೆರಡುಸಾವಿರ ಪದ್ಯಗಳ ರಾಮಾಯಣವನ್ನು ಬರೆದ ವೆಂಕಾಮಾತ್ಯನನ್ನು ಸ್ಮರಿಸಿದ್ದು ಕಾಣುತ್ತದೆ (ಯಕ್ಷಬ. ೩೪). **ಹನ್ನೆರಡು :** ಹಕ್ಕನಕೆಱೆಯ ಗದ್ದೆಯಿಂ ಮೂಡಲು ಕೆಯಿ ಮತ್ತರು ಹನ್ನೆರಡು (ಸೌಇಇ. XI-ii, ೧೨೨-೧೬; 1072); ಹನ್ನೆರಡು ಗಾವುದದಳತೆಯ ಸಮುನ್ನತಿಯ ಕಲ್ಯಾಣಪುರವಂ ಮುನ್ನವೇ ಸಿಂಗರಿಸವೇಳ್ದು (ಬಸಪು. ೫-೧೩); ಪಾಂಡಾಲರಲಿ ಹನ್ನೆರಡುಸಾವಿರ ರಾಜಪುತ್ರರು ಜಱೆದು ಜೋಡಿಸಿತು (ಕುವ್ಯಾದ್ರೋ. ೧೬-೩೯); ನಮ್ಮಿ ಪಡೆಯ ನೆರಹಲು ಸರಿದವವಧಿಗೆ ದಿವಸ ಹನ್ನೆರಡು (ತೊರರಾ. ೪-೬-೨೯); ಹನ್ನೆರಡು ವರ್ಷ ಸಾಧಕ ಮಾಡಿ ಮನೆಯ ಮುದುಕಿ ಸೊಂಟ ಮುರಿದ ಹಾಗೆ (ಗಾದೆ).

ಪನ್ನಿರ್ಕಂಡುಗ, ಪನ್ನಿಕ್ಕಂಡುಗ = ೧. ಹನ್ನೆರಡು ಖಂಡುಗದ ಪ್ರಮಾಣ : ಪನ್ನಿರ್ಕಂಡುಗದಕ್ಕಿಯ ಕೂಟುಮು[ನ]ರ್ಕೆ ತಕ್ಕ ಪರಿಕರ ಮುಮನೊರ್ವ ಮಾನಸಂ ಕೊಂಡು ಪೋಪಂ (ಪಂಪಭಾ. ೩-೨೫ ಪ). ೨. ಹನ್ನೆರಡು ಖಂಡುಗದಷ್ಟು ಬೀಜವರಿಯುಳ್ಳುದು : ಪನ್ನಿರ್ಕಣ್ಡುಗವೆದೆನೆಲ್ಮಣ್ಣ್ಡೆನ್ದು (ಇಅ. V, ೧೩೩-೧೪; 434); ಪನ್ನಿರ್ಕಣ್ಡುಗ ಬೆದೆ ಮಱ್ಗೊಟ್ಟಾರ್ (ಮೈಅರಿ. ೧೯೪೪, ೬-೩; ಸು. 808); ಶಿವಕೆಱೆಯೊಳ ಪನ್ನಿಕ್ಕಣ್ಡುಗ ಬಿಟ್ಟ ನಿಮ್ಮಣ್ಣು (ಎಕ. XIV, ಕೃಷ್ಣರಾ. ೩೪-೧೮; ?). **ಪನ್ನಿರ್ಕುಳ = ಹನ್ನೆರಡುಕೊಳಗದ ಪ್ರಮಾಣ :** ಪನ್ನಿರ್ಕುಳ ವಿಸಾರಿಯುಂ ಒಕ್ಕುಳ ತುಪ್ಪ (ಎಕ. III, ಮಂಡ್ಯ. ೧೪-೧೧; 907). **ಪನ್ನಿರ್ಕೊಳ = ಪನ್ನಿರ್ಕುಳ :** ತುರಂಗಲ್ಲೊಳ್ ಪನ್ನಿರ್ಕೊಳ ಗಱ್ಡಿ ಸಲ್ಗು (ಎಕ. X (೩), ಬಾಗೇಪ. ೯೩-೮; 10ನೆಯ ಶತ). **ಪನ್ನಿರ್ಕೋಟಿ = ಹನ್ನೆರಡು ಕೋಟಿ :** ವೇದವಿದರಂ ಪಂನಿರ್ಕೋಟಿಯ ತೀರ್ಥದ ತಡಿಯೊಳು ಕೋಟಿಮುಹಾದಿನದೊಳಳಿದ ಧರ್ಮ್ಮಮನಳಿದನು (ಎಕ. VI, ತರೀಕೆ. ೬೬-೩೭; 1130). **ಪನ್ನಿರ್ಕೋಲ್ = ಹನ್ನೆರಡು ಕೋಲು,—ಗಳೆ (?) :** ಪಱುಗೋಲ ಪನ್ನಿರ್ಕೋ[ಪಾಶಾಂ.ಕ್ಕೋ]ಲಿಂದಂ ದೋಣಿಯೊರ್ಕೋಲ್ ಲೇಸೆಂಬಂತೆ(ಧರ್ಮಾಮೃ. ೭-೧೩೬). **ಪನ್ನಿರ್ಘಾಸಿರ, ಪನ್ನಿಱ್ಬಾಸಿರ, ಪನ್ನಿರ್ಬ್ಬಾಶಿರ, ಪನ್ನಿರ್ಬ್ಬಾಸಿರ, ಪನ್ನಿಟ್ಬಾಸಿರ, ಹನ್ನಿರ್ಬ್ಬಾಸಿರ = ಹನ್ನೆರಡು ಸಾವಿರ :** ಮದ್ರರಾಜನಂ ಪನ್ನಿರ್ಘಾಸಿರಮಾನೆವೆರಸು . . . ನೀಳನೆಡೆಗೊಂಡು ತಾಗಿದಾಗಳ್ (ಪಂಪಭಾ. ೧೦-೧೦೮ ಪ); ಲಕ್ಷಣಂ . . . ಪನ್ನಿರ್ಘಾಸಿರ ವರ್ಷಮಂ ಜೀವಿಸಿ (ಪಂರಾಮಾ.೧೬-೬೨ ಪ); ತಪ್ಪುದಂಡಕ್ಕೆ ಪನ್ನಿಱ್ಬಾಸಿರ ಹೊನ್ನಂ ಕೊಟ್ಟು (ಬಸರ. ೬-೮೬); ಬಾಣರವಾಡಿ ಪನ್ನಿರ್ಬ್ಬಾಶಿರದ ಬಳಂಜನೆಲ್ಲ ನೆರದು (ಎಕ. X (೩), ಮುಳಬಾ. ೩೦೬-೩; ಸು. 950); ಬನವಾಸಿ ಪನ್ನಿರ್ಬ್ಬಾಸಿರಮುಮನಾಳುತ್ತಿರೆ (ಇಎ. ೧೯೪೭, ಹಾನಗಲ್. ೨೧೪-೧೮; 948); ಶುದ್ಧಪೃಥ್ವಿಗೆ ಪನ್ನಿರ್ಬ್ಬಾಸಿರ ವರ್ಷಂ (ಶಾಸ್ತ್ರಟೀ. ೨೭-೪); ಲಡ್ಡುಗೆಯ ನೇಮಧಾರಿಗಳು ಪನ್ನಿರ್ಬ್ಬಾಸಿರ (ರಾಭಶ. ೮-೩೧); ಲೋಕಟಿ ಬನವಸೆ [ಪ]ನ್ನಿಱ್ಬಾಸಿರಮುಮನಾಳೆ (ಸೌಇಇ.XX, ೧೫-೫; 904); ಪಾನುಂಗಲ್ಲಯ್ಯೂಱಱ ಹಲಸಿಗೆ ಹನ್ನಿರ್ಬ್ಬಾಸಿರದ ಹೆಜ್ಜುರಂಕ (ಇಎ. ೧೯೪೭, ಹಾನಗಲ್. ೨೦೯-೨೪; ?). **ಪನ್ನಿರ್ತೆಱ, ಪನ್ನಿತ್ತೆಱ = ಹನ್ನೆರಡು ಬಗೆ,—ವಿಧ :** ಪನ್ನಿರ್ತೆಱದ ತಪದೊಳುತ್ತರೋತ್ತರಂ ನೆಗಱ್ದು (ಧರ್ಮಾಮೃ. ೨-೨೩೪); ಅಕ್ಷರಮಾಹಾರಾಂಗದಿ ಭೇದದಿಂ ಪನ್ನಿತ್ತೆಱನುಮುಕ್ಕುಂ (ತತ್ವಸಾರ. ೨೧). **ಪನ್ನಿರ್ಪಳ್ಳಿ = ಹನ್ನೆರಡು ಹಳ್ಳಿಗಳು :** ನಿರಟ್ಟೂರಾ ಪನ್ನಿರ್ಪಳ್ಳಿಯ . . . ಕೊಟ್ಟರ್ (ಎಕ. IX, ಹೊಸಕೋಟೆ. ೮೨-೪; ಸು. 750); ಪಿಳೀಱೂರ್ಪನ್ನಿರ್ಪ್ಪಳ್ಳಿಯುಮಂ . . . ಕೊಟ್ಟರ್ (ಇಅ. VI, ೧೦೩-೮; 887). **ಪನ್ನಿರ್ಮತ್ತ, ಪನ್ನಿರ್ಮತ್ತರ್ = ಹನ್ನೆರಡು ಮತ್ತರಷ್ಟು ವಿಸ್ತೀರ್ಣವುಳ್ಳುದು :** ಬಿಸಮರಸರ ದೇಗುಲಕೆ ಕೊಟ್ಟ ಕೆಯ್ಯು ಪನ್ನಿರ್ಮತ್ತ (ಎಕ. XI, ಚಳ್ಳಕೆ. ೩೩-೨೩; ಸು. 815); ಪನ್ನಿರ್ಮತ್ತರ್ಕೆಯ್ಯಂ ಮಾಱುಗೊಣ್ಡು ಬಿಟ್ಟನಾ ಪನ್ನಿರ್ಮತ್ತರ್ಕೆಯ್ಯಂ ನಾಲ್ಕುಗೆಯ್ದು [ದೇವ]ಮನ್ಯ[ಗ್ಗಾ]ಗಿ ಬಾಟ್ಟುದು (ಸೌಇಇ. XI-i, ೩೪-೧೨; 925); ಕೂಸುಗಳ್ . . . ಪನ್ನಿರ್ಮತ್ತರ್ ಪರ್ವಿದಾಲದ ಮರದ ಮೊದಲ್ಗೆ ವಂದು (ಪಂಪಭಾ. ೨-೩೦ ಪ). **ಪನ್ನಿರ್ವರ್, ಪನ್ನಿಬ್ಬರ್, ಪನ್ನಿಬ್ಬರು, ಪನ್ನಿರುವರ್, ಪನ್ನಿರ್ಬರ್, ಪನ್ನಿರ್ವರು, ಪನ್ನೀರ್ವರ್, ಹನಿಬ್ಬರು, ಹನ್ನಿಬ್ಬರ್, ಹನ್ನಿಬ್ಬರು, ಹನ್ನಿರ್ಬರ್, ಹನ್ನಿರ್ವರು = ಹನ್ನೆರಡು ಜನ,—ಮಂದಿ :** ಪನ್ನಿರ್ವರಾ ಏಟ್ಟರಾ ಪೊಯ್ದು ಧರ್ಮ್ಮಂ (ಎಕ.IV, ಚಾಮರಾ.೬೩-೯; ಸು.750); ನೀನಿಂದು ಪನ್ನಿರ್ವರ್ ಪಾರ್ವರ್ಗೆ ಸಾರಮಪ್ಪ ಕ್ಷೀರಭೋಜನಮಂ ಮಾಡಿಸಿದೆಯಪ್ಪೊಡೆ . . . ಮನೋರಥ ಸಿದ್ಧಿಯುಮುಕ್ಕುಂ (ಪಂಚತಂ. ೧೫೪-೧೦); ಪನ್ನಿರ್ವರ್ ಬೇಚರಕನ್ನೆಯರಂ ಮದುವೆನಿಂದು (ಪಂರಾಮಾ. ೧೦-೩೯ ಪ); ಮೇಲೆನಿಪ ಭಂಡಾರಿಗಳು ಪನ್ನಿಬ್ಬರ್ (ಬಸಪು. ೫-೧೮); ಬಸವಮಂತ್ರಿಯನು ಕರೆದು ಮನ್ನಣೆವೆತ್ತ ಪನ್ನಿಬ್ಬರು ಮಹಾಮಾತ್ಯರೊಳಗಗ್ರೇಶ್ವರನೆಸಲು (ಬಸಪು. ೫-೬೫); ಪನ್ನಿರುವರುಂ ರಟ್ಟವಾಡಿ ಮೇಗೆ ದಣ್ಡುವೋದಲ್ಲಿ (ಎಕ. XII, ಮದ್ದೂರು. ೯೨-೨; ಸು. 750); ಪನ್ನಿರ್ಬರ್ ಚೌ[ವೇ]ರರುಮಂ . . . ಕವಿಲೆಯುಮನಟ್ಟಿದ ಮಹಾಪಾತಕಂ(ಸೌಇಇ.XI-i,೪೦-೧೬; 965); ಅರಿಯೂರ ಪನ್ನಿರ್ವರು (ಎಕ. IV, ಗುಂಡ್ಲುಪೇ. ೮೯-೧; ಸು. 750); ಪನ್ನೀರ್ವರು ಮಹಾಪರಿಸೆಯುಂ ಎಡೆನಾಡ ಮುವನ್ನಾಱ್ಬುಮುಣ್ಡುಗಳುಂ ಸಕ್ಕಿ (ಎಕ. III, ನಂಜನ. ೧೫೫-೮; ಸು. 970 ?); ವರ ದಿವಾಕರರು ಪನ್ನೀರ್ವರುಂ . . . ಇರ್ದರೀಶನೊಡ್ಡೋಲಗದೊಳು (ಸಿದ್ಧೇಪು. ೧-೩೯); ಹನಿಬ್ಬರು ನಾಯಕರು ಕೋಳಿಯೂರ ಕೋಟೆಯ ಮುತ್ತಲು (ಎಕ.XIV, ಎಡತೊ. ೮೧-೫; ಸು.1125); ಶೂರರು ಹನಿಬ್ಬರಯ್ಯಾ (ಬಸವ. ೧೬); ಸೋಮೇಶ್ವರದೇವನೊಳಗಾಗಿ ಹಂನಿಬ್ಬರರಸುಗಳಂ (ಸೌಇಎ. ೧೯-೪೦, ಸಿದ್ಧವಟ್ಟ. ೯-೧೬; 1160); ಗುತ್ತಿ ಹನ್ನಿಬ್ಬರೆ ಗಂಡ ಪಟ್ಟ (ಇಅ. V, ೪೧-೬; 1586); ದೇವರ ಬ್ರಹ್ಮಪುರಿಯ ಹನ್ನಿಬ್ಬರ್ಗ್ಗಂ ಸೂರ್ಯ್ಯಗ್ರಹಣದಲು ಧಾರಾಪೂರ್ಬಕಂ ಮಾಡಿ ಕೊಟ್ಟರು (ಸೌಇಇ. IX-i, ೨೫೧-೪೩; 1140); ಮಹಾಜನಮುಂ ಹಂನಿಬ್ಬರುಂ . . . ನಡಿಸಿಕೊಟ್ಟ ಕೆಯಿ (ಕಇ. I, ೩೩-೩೫; 1246); ದೇವಪುತ್ರಿಕರು ಹಂನಿರ್ವರಿಗೆ ಗದ್ಯಾಣವಿರ್ಪತ್ತನಾಲ್ಕು (ಚೊಂಕಶಾ. ೧೯೩೩, ಹಾವೇರಿ. ೩೦-೨೧; ?).

ಪನ್ನೆರಡಬ್ದ = ಹನ್ನೆರಡು ವರ್ಷಗಳ ಕಾಲ,—ಅವಧಿ : ಮತ್ತಮಿರ ವೇಟ್ಟುದು ಪನ್ನೆರಡಬ್ದಮುಂ ಮನಂ ಮಱುಗೆ ಬನಂಗಳೊಳ್ (ಪಂಪಭಾ. ೯-೪೯). ಪನ್ನೆರಡಿನ = ಹನ್ನೆರಡು ಜನ ಸೂರ್ಯರು ; ದ್ವಾದಶಾದಿತ್ಯರು : ಪನ್ನೆರಡಿನರು ಪನ್ನೊಂದು ರುದ್ರರು . . . ನೆರೆದು ಭಜಿಸಲು (ಬಸಪು. ೧೦-೩೧). ಹನ್ನಿಬ್ಬರ ಗಂಡ = ದ್ವಾದಶಚಕ್ರವರ್ತಿಗಳಿಗಿಂತ ಹೆಚ್ಚು ಪರಾಕ್ರಮಿಯಾದವನು ; ಒಂದು ಬಿರುದು : ಕದನ ಪ್ರಚಂಡ ಹಂನಿಬ್ಬರ ಗಂಡ ಮಂಡಳಿಕಭೈರವಂ (ಸೌಇಇ. XX, ೨೨೧-೮; 1283). ಹನ್ನಿರ್ಕಯಿ = ಹನ್ನೆರಡುಮಾರುಗಳಷ್ಟು ವಿಸ್ತೀರ್ಣವುಳ್ಳುದು : ಹಂನಿರ್ಕಯಿಯುಗಲವೆಯಗಲವಾಗಿ ಬಿಟ್ಟ ಮತದ ಮನೆ (ಕಾ. I, ೨೫-೮೨ ; 1186) ; ಹ[ತ್ತು]ಕಯಿ ಅಗಲ . . . ಹನ್ನಿರ್ಕಯಿ ಅಗಲದ ನಿವೇಶನ (ಸೌಇಇ. XX, ೧೩೧-೧೧ ; ?). ಹನ್ನಿರ್ಧಾನ್ಯ = ಹನ್ನೆರಡು ಬಗೆಯ ಧಾನ್ಯಗಳು : ಶ್ರೀಭಂಡಾರದ ಹನ್ನಿರ್‌ಧಾನ್ಯಮುಂ . . . ಏಗಾದಿ ಏಗೋತ್ತರವಾಗಲು (ಎಕ. V, ಬೇಲೂರು. ೨೦-೪ ; 1180). [ಪನ್ $_1$ (< ಪತ್ತು $_3$) + ಎರಡು]

ಪನ್ನೆರಳ್ 'ಪನ್ನೆರಟ್ಟೆ' ನೋ.

ಪನ್ನೆರಳ್ಕೋಟ 'ಪನ್ನೆರಟ್ಟೆ' ಪರಾ.

ಪನ್ನೆರಳ್ಬರಿಸ 'ಪನ್ನೆರಟ್ಟೆ' ಪರಾ.

ಪನ್ನೆರಳ್ಬೇದ 'ಪನ್ನೆರಟ್ಟೆ' ಪರಾ.

ಪನ್ನೆಸೆ 'ಪನ್ನಸು' ನೋ.

ಪನ್ನೆರಟ್ಟೆ, ಪನ್ನೆರಳ್ (ನಾ). 'ಪನ್ನೆರಡು' ಎಂಬ ಸಂಖ್ಯಾವಾಚಿಗೆ ವ್ಯಂಜನಾದಿ ಶಬ್ದ ಸೇರಿದಾಗ ಉಂಟಾಗುವ ರೂಪ. **ಪನ್ನೆರಳ್** : ಅಸುರವೀರರಂ ಕಂಡೊಡನೆ ಪನ್ನೆರಳ್ನಯನದಿಂ ಕಿಡಿ ಸುರಿಯೆ . . . ಗುಹನೆಸೆದನು (ಚಿಬಪು. ೫೯-೧೮).

ಪನ್ನೆರಟ್ಟುಪ = ಹನ್ನೆರಡು ಬಗೆಯ ತಪಸ್ಸು : ಪನ್ನೆರಟ್ಟುಪಮೊಳುತ್ತಮನಾರ್ತು ಸಮಾಧಿವೆತ್ತು . . . ಪಡೆದಂ ಸುರರಾಜಪೂಜ್ಯಮುಂ (ಶಾಂತಿಪು. ೯-೫೪). 'ದ್ವಾದಶತಪ' ಪರಾ. **ಪನ್ನೆರಟ್ಬರಿಸ, ಪನ್ನೆರಳ್ಬರಿಸ** = ಹನ್ನೆರಡುವರ್ಷಗಳ ಕಾಲ : ನೆಱೆದುವು ಪನ್ನೆರಟ್ಬರಿಸ [ಪಾಶಾಂ. ಟ್ಟರುಷ]ಮುಗ್ರವಿರೋಧಿಜನಕ್ಕೆ ಮಿಟ್ಟುಗಳ್ ನೆಱೆವ ಪೊಲ್ (ಪಂಪಭಾ. ೮-೪೯) ; ಮುನಿವರಂ ಪನ್ನೆರಳ್ಬರಿಸಕ್ಕೆ ತಿವನ ಕೃಪೆಯೊದಗಿತೆನುತಿಂತೆಂದನು (ರಾಘಚಿ. ೧೦-೭೫). **ಪನ್ನೆರಳ್ಕೋಟ** = ಹನ್ನೆರಡುಕೋಟಿ : ಪನ್ನೆರಳ್ಕೋಟ ಚರಲಿಂಗಕೊಲ್ದು . . . ಪರಮಾನ್ನ ಮುಖ್ಯಂಗಳಂ ಹರಿಸದಿಂದೊಪ್ಪಿಸಿದೊಡೊಲ್ಲದಾಂ ಮನಮೊಸೆದು ಪರಮ ಪ್ರಸಾದಮಂ ಕೊಂಬುದಿಲ್ಲ (ಅರಾಚ. ೨-೧೩-೨೨) ; ಪನ್ನೆರಳ್ಕೋಟ ಭೈರವರ್ ಪೌಲಸ್ತ್ಯದೆಸೆಯ ಬಾಗಿಲ ಕಾದು ಸಂತತ ವಿಶಾಲ ಸೌಭಾಗ್ಯದಿಂದರ್ ಭೀಷಣನಾಮ ಭೈರವ (ಸಂದಿಮಾ. ೩-೧೨). **ಪನ್ನೆರಳ್ಬೇದ** = ಹನ್ನೆರಡು ಬಗೆ,—ರೀತಿ : ಕ್ರಮದಿಂದಂ ಪನ್ನೆರಳ್ಬೇದಮನೆ ತಳೆದ ಕೇಶಸ್ತ್ರಿಗಂ . . . ಕಮಲಾಕ್ಷಂಗಂ ತಮರ್ ತಾಮೆನುತ (ಶಾಕುಂತ. ೧೧೨-೧೯೦). [< ಪನ್ನೆರಡು]

ಪನ್ನೆರಟ್ಟುಪ 'ಪನ್ನೆರಟ್ಟೆ' ಪರಾ.

ಪನ್ನೆರಟ್ಬರಿಸ 'ಪನ್ನೆರಟ್ಟೆ' ಪರಾ.

ಪನ್ನೆರಾಟ್ಟು 'ಪನ್ನೆರಡು' ನೋ.

ಪನ್ನೇರಲು 'ಪನ್ನೇಱಳೆ' ನೋ.

ಪನ್ನೇರಲೆ 'ಪನ್ನೇಱಳೆ' ನೋ.

ಪನ್ನೇರಳು 'ಪನ್ನೇಱಳೆ' ನೋ.

ಪನ್ನೇರಳುಮರ 'ಪನ್ನೇರಳೆಮರ' ನೋ.

ಪನ್ನೇರಳೆ 'ಪನ್ನೇಱಳೆ' ನೋ.

ಪನ್ನೇರಳೆಮರ, ಪನ್ನೇರಳುಮರ (ನಾ). ೧. ಪನ್ನೇರಳೆ ಹಣ್ಣಿನ ಮರ : ಪನ್ನೇರಳೇಮರ ಅವಳ ಸಮಾಧಿಯ ಮೇಲೆ ನೆರಳನ್ನು ಹರಡಿತ್ತು (ಸಾಲ್ಬಮ. ೧೩೪) ; ಅವರ ಮನೆಯ ಕೈತೋಟದಲ್ಲಿ ದೊಡ್ಡ ಪನ್ನೇರಳೆಮರವಿದೆ (ರೂಢಿ). **ಪನ್ನೇರಳುಮರೆ** : ೨. ಹೂವುಗಳನ್ನು ಬಿಡುವ ಒಂದು ಬಗೆಯ ಮರ ; ಬಿಳಿಹೂವಿನ ಲಕ್ಕಿಮರ : (ಕ).

[ಪನ್ನೇರಳೆ (< ಪನ್ನೇಱಳೆ) + ಮರ $_1$]

ಪನ್ನೇರಿಳೆ 'ಪನ್ನೇಱಳೆ' ನೋ.

ಪನ್ನೇಳು 'ಪದಿನೇಟ್ಟೆ' ನೋ.

ಪನ್ನೇಱಳೆ, ಪನ್ನೇರಲು, ಪನ್ನೇರಲೆ, ಪನ್ನೇರಳು, ಪನ್ನೇರಳೆ, ಪನ್ನೇರಿಳೆ (ನಾ). ೧. ಒಂದು ಬಗೆಯ ಮರ ಮತ್ತು ಸುವಾಸನಾಯುಕ್ತವಾದ ಅದರ ಹಣ್ಣು : ಗುಚ್ಛದ್ರಾಕ್ಷೆ ಸೀಬಿ ಪನ್ನೇಱಳೆ . . . ತರುನಿಕರಂಗಳುಂ (ವಿವೇಕ. ೨೧೧) ; ಅತ್ತಿ ಪನ್ನೇಱಳೆ ನೆನೆಗಡಲೆಯು (ವಾದಿಕೀ. ೧೪೯-೨). **ಪನ್ನೇರಲು** : ೧. 'ಗುಡ್ಡ ಪನ್ನೇರಲು' ಪರಾ. **ಪನ್ನೇರಲೆ** : ೧. ಪನ್ನೇರಲೆ ಕೆಕ್ಕರಿಕೆ ಮಿಣಕೆ . . . ಮುಂತಾದ ಮಧುರಫಲಂಗಳ್ (ಸೌಗಂಧಿ. ೩೭-೩) ; (ಮೈಚಿಗಿ. ೪೭-೯೩೦). **ಪನ್ನೇರಳು** : ೨. ಸುವಾಸನೆಯ ಹೂವುಗಳನ್ನು ಬಿಡುವ ಒಂದು ಬಗೆಯ ಮರ : "ಬೀಳಿಹೂವಿನ ಲಕ್ಕಿಮರ, ಪನ್ನೇರಳು" (ಸಸ್ಯಸಿ. ೩೭) ; "ಪನ್ನೇರಳು, ಬೀಳೆಹೂವಿನ ಲಕ್ಕಿಮರ" (ವೃಕ್ಷಾಪ. ೧೧೭). 'ಪನ್ನೇರಳುಮರ' ಪರಾ. **ಪನ್ನೇರಳೆ** : ೧. 'ಪನ್ನೇರಳೆಮರ' ಪರಾ. **ಪನ್ನೇರಿಳೆ** : ೧. ಡೇರಾ, ನಂದಿಬಟ್ಟಲು ಗಿಡಗಳ ಮಧ್ಯೆ ಪನ್ನೇರಿಳೆ ಹಣ್ಣಿನ ಮರ (ಹೊಸಕ್ತಿ. ೧೨೩). ೨. ಇಲ್ಲಿ ಪನ್ನೇರಿಳೆ ; ಅಲ್ಲಿ ಹೊಂಗುಲಾಬಿ ಹಂತಿ . . . ಹೊಸತೆ ಬಂತೊ ತಾಯ ಹರಕೆ ಹೂವ ರೂಪ ತಾಳಿ ! (ಅಶಿಕೇ. ೨೦-೯).

[ಪನ್ $_2$ + ನೇಱಳೆ (< ನೇಱುಲ್)]

ಪನ್ನೊಂದು, ಹನ್ನೊಂದು (ನಾ). ೧. ಹತ್ತಕ್ಕೆ ಒಂದು ಸೇರಿದ ಸಂಖ್ಯೆ ; ಏಕಾದಶ : ಪತ್ತುಪವಾಸಂಗೆಯ್ದು ಪನ್ನೊಂದನೆಯ ದಿವಸದಂದು ಚರಿಗೆವೊಕ್ಕಡವಿಯಂ ತೊಟಲ್ವನ್ನೆಗಂ (ಪಡ್ಡಾರಾ. ೮೯-೧೯) ; ಒಂದಾದಿಯಾಗೆ ಪನ್ನೊಂದುವರಂ ಗುಣವದ್ವ್ರತಚಿಹ್ನಂ ಗುಣಮಣಿಭೂಷಣಸೂತ್ರಮಮರ್ದುದವರ್ಗೆನ್ನಿಂದಂ (ಆದಿಪು. ೧೫-೨೪); ಅರ್ಜುನನ ರಥಮೆಸಪ ಪನ್ನೊಂದನೆಯದು ಸೂತಾವತಾರಮುಂ ಹರಿಗಾಯ್ತೇ (ಗದಾಯು. ೩-೪೪) ; ಮುನ್ನಿನ ಗುಣದೊಳ್ಕೂಡಿರ್ಪನ್ನೆಱೆಯುದ್ದಿಷ್ಟವಿರತ ಪನ್ನೊಂದನೆಯಂ (ಧರ್ಮಾಮೃ. ೫-೧೪೩) ; ಪನ್ ಎಂಬುದಕ್ಕೆ— ಪನ್ನೊಂದು, ಪನ್ನೆರಡು (ತಮದ. ೧೯೨ ಪ್ರಯೋ). **ಹನ್ನೊಂದು** : ೧. ಅಲ್ಲಿಂ ಮೇಗೆ ಹನ್ನೊಂದು ಹನ್ನೆರಡನೆಯ ಕಲ್ಪಂಗಳ್ (ಅಜಿಪು. ೧೧-೨೬೫); ಚಾಳುಕ್ಯ ವಿಕ್ರ[ಮ] ××× ಹನ್ನೊನ್ದೆನೆಯ ಕ್ಷಯಸಂವತ್ಸರದ...ಆದಿವಾರ[ದ]ಂದು(ಸೌಇಇ. XI-ii, ೧೩೨-೩೪ ; 1086) ; ಹತ್ತಱೊಳಗೆ ಹನ್ನೊಂದಾಗಿ ನೀರ ತಾವರೆಯಂತಿಪ್ಪೆನು (ಮಹಾದೇ. ಬ. ೯೯-೨೫೦) ; ಹನ್ನೊಂದು ಓದಿದ ಮೇಲೆ ಇನ್ನೊಂದು ಕೇಳಬೇಡ (ಗಾದೆ). ೨. (ಸತ್ತ) ಹನ್ನೊಂದನೆಯ ದಿವಸದ ಶ್ರಾದ್ಧದ ಭೋಜನ : ಪದಮಿನಂ ತಂದಿರ್ಪ ಬೇಳೆ ಬೆಲ್ಲಗಳನುಂ ಬದಿಗಿಕ್ಕಿ ಬರ್ಪ ಹನ್ನೊಂದ ಕಾಯುವೆನೆ (ಕಾಲೂರ. ೧೭೭-೩೯೯) ; ಹನ್ನೊಂದರೊಳ್ ನೆರವಿಯಿಂ ಬಳಗವೆರೆದು ಚೆನ್ನಿಯಂ ಪೆಸರೆತ್ತಿ ತಣಿದುಂಡು ಮರೆಯಾಯ್ತು (ಕಾಲೂರ. ೧೮೫-೪೨೧).

ಪನ್ನೊರ್ವರ್, ಪನ್ನೊರ್ಬರ್, ಪನ್ನೋರ್ವರು = ಹನ್ನೊಂದು ಜನ : ಶತಾನೀಕ ಶತದ್ಯುಮ್ನ ಶತಚಂದ್ರಂ ಮೊದಲಾಗಿ ಪನ್ನೊರ್ವರ್ ತಮ್ಮಂದಿರುಂ ಬೆರಸು (ಪಂಪಭಾ. ೯-೯೫ ಪ) ; ಶ್ರೀದಾಸಿಅಮ್ಮನ್

ಕಂಟಿಯೊಳ್ ಪನ್ನೊರ್ಬರನ್ ಎಱಿದು ಸ್ವರ್ಗ್ಗಿ ಅದನ್ (ಮೈಅರಿ. ೧೯೭೯, ೨೩-೮; ಸು. 740); ಅವ್ಯಾಬಾಧರು ಪನ್ನೊಂಸಾಸಿರದ ಪನ್ನೋರ್ವರು (ತಸೂವ್ಯ. ೧೭೬). [ಪನ್$_1$(<ಪತ್ತು$_3$)+ಒಂದು$_3$]

ಪನ್ನೂಲ (ನಾ). ಪಾದದ ಅಡಿ,—ಕೆಳಭಾಗ : ವರ ಪನ್ನೂಲಮನಾನ ನಾಬ್ಬ ಮನವರ್ಕಾಣಲ್ಕದೇನಾರ್ತರೇ (ರಾಜಶೇ. ೬-೧೦). [ಸಂ.]

ಪಪಾಯ 'ಪಪ್ಪಾಯಿ' ನೋ.

ಪಪುಳ್ಳಿ 'ಪೊಪ್ಪಳಿ$_1$' ನೋ.

ಪಪುಳ್ಳಿ ಅಚ್ಚಡ (ನಾ). ಬಣ್ಣಬಣ್ಣಗಳಿಂದ ಕೂಡಿದ ಹಚ್ಚಡ,—ದುಪ್ಪಟಿ : ಪಡ್ಡರ ಯೀರನ ಬೋಯಿಗೆ ಕಡಗ ಸ ೧ . . . ಬೆಟಪಾಗು ೧ ಪಪುಳ್ಳಿ ಅಚ್ಚಡ ೧ ಸಹ ಯಿನಾಮು ಕೊಟ್ಟು (ಎಕ. XI, ಹಿರಿಯೂ. ೩೬-೧೪; 1533 ?). [ಪಪುಳ್ಳಿ(<ಪೊಪ್ಪಳಿ$_1$)+ಅಚ್ಚಡ$_2$(<ಪಚ್ಚಡ)]

ಪಪ್ಪ (ನಾ). ಸ್ತುತಿಪಾಠ ; ಹೊಗಳಿಕೆ ; ಸ್ತೋತ್ರ : ಬಗೆದಂದಮಪ್ಪ ತನು ಬಗೆವುಗೆಯುಂ ಬಗೆದಂದಮಪ್ಪ ಕೆಯ್ತಂ ಚಿತ್ತಂಬುಗೆಯುಂ ಪಪ್ಪದ ದೇವರ್ ತೆಗೆದರ್ ಕಿಱುಕಿಱುದೆ ದುರಿತಹರಣನ ಬಗೆಯುಂ (ಶಾಂತಿಪು. ೧೦-೧೪).

ಪಪ್ಪವರ್ = ಸ್ತುತಿಪಾಠಕರು ; ಮಂಗಳಪಾಠಕರು ; ವೈತಾಳಿಕರು : ಗಡಣದ ಸಂಗಡಂ ಪೊಗೞ್ದ ಪಪ್ಪವರುಂ (ಶಾಂತಿಪು. ೭-೭೪); ಪ[ಪಾಠಾ. ದ]ಪ್ಪವರ ಪರಿಹಾಸಕರ ರಾಜರಾಜವಲ್ಲಭರಂದಣದ ಗೊಂದಣಂ . . . ತಿಂತಿಣಿಗೊಂಡು (ಅನಂಪು. ೬-೯೪ ಪ); ಪಪ್ಪವರ ಮಂಗಳೋಕ್ತಿಯಿನುಪ್ಪವಡಿಸಿ (ಪುಷ್ಪಪು. ೯-೧೦೫).

ಪಪ್ಪಂಗಾಯಿ 'ಪಪ್ಪಾಯಿ' ನೋ.

ಪಪ್ಪಕ$_1$ 'ಪಂಪಕ' ನೋ.

ಪಪ್ಪಕ$_2$ (ನಾ). ಪ್ರಾತಃಕಾಲದಲ್ಲಿ ರಾಜನನ್ನು ಎಚ್ಚರಿಸುವ ಮಂಗಳಪಾಠಕ ; ವೈತಾಳಿಕ : ಉಪ್ಪವಡಿಸುವುದುಮಱಿಕೆಯ ಪಪ್ಪಕರೊಡನಾಡಿಗಳ್ ಪ್ರಬೋಧಿಸಿದರ್ ಮೇಲಪ್ಪ ಪದರಚನೆಯಿಂದೊರೆಯಪ್ಪ ಮಹಾಮಂಗಳಪ್ರಬೋಧನೆಯಿಂದಂ (ಶಾಂತಿಪು. ೫-೮೩).

[<ಪಪ್ಪ]

ಪಪ್ಪಕ$_3$ 'ಪಪ್ಪುಕ$_2$' ನೋ.

ಪಪ್ಪಡ, ಪಪ್ಪಳ, ಹಪ್ಪಳ, ಹಪ್ಪಟ (ನಾ). ಉದ್ದು ಮೊದಲಾದ ಹಿಟ್ಟಿಗೆ ಸಂಬಾರವಸ್ತುಗಳನ್ನು ಹಾಕಿ, ತೆಳ್ಳಗೆ ಲಟ್ಟಿಸಿ, ಒಣಗಿಸಿದ ನಂತರ, ಕರಿದು ಅಥವಾ ಸುಟ್ಟು ನಂಜಿಕೊಳ್ಳುವ ಒಂದು ಬಗೆಯ ವ್ಯಂಜನಪದಾರ್ಥ : ಯಥೇಷ್ಟ ಶಾಕ ಪಪ್ಪಡ ಪಳಿಚ್ಯಾ ದಧಿ ವ್ಯಂಜನವು ತಂಡತಂಡದ್ದಂರಿವಾಣಗಳ ಚಪಕದೊಳಗೆ ತುಂಬಿಕೊಂಡು ಬಂದರು (ಪ್ರಸಭಾ. ೩೫-೫). 'ಪಪ್ಪಡಕಾರ' ಪರಾ. **ಪಪ್ಪಳ :** "ಪಪ್ಪಳ(ಡ) = ಪರ್ಪಟ" (ತದ್ಭವಕೋ. ೨೪); ಪಪ್ಪಳ ಸಂಡಿಗೆ ಪಚ್ಚಡಿಯುಪ್ಪಿನ ಕಾಯ್ . . . ಮುಗಿದವು ಬೇಗಂ (ಹಾಲಾಸ್ಯ. ೧-೮-೨೦); ಶರ್ಕರೆಯ ಜೇನ್ತುರುಡೆ ಪಪ್ಪಳಂ ತುಂಟಿ ಯಾಲಕ್ಕಿ ಕರೆಯುಂ (ಪರಶು. ೧೫-೩೨). **ಹಪ್ಪಳ :** "ಹಪ್ಪಳ . . . ಪರ್ಪಟ = ಪಪ್ಪಳ" (ತದ್ಭವಕೋ. ೪೮); ಹಪ್ಪಳಂ ಕುಂಬಳದ ಸಂಡಗೆಯು ಸೇವಗೆಯೆನಿಪ್ಪವಿವು ಮೊದಲಾಗಿ . . . ತಂದೊಪ್ಪಿಸಿದಡೆ (ಸಿದ್ಧರಾ. ೮-೫೨); ತೆಗೆ . . . ಸಜ್ಜಿಗೆಯ ಗುಡ ಹಪ್ಪಳದ ಪುರಿಸಂಡಿಗೆಯು ಹೂರಿಗೆಯು (ತೊರರಾ. ೫-೮-೭೦); ತುಪ್ಪದೊಳಗೆ ಹದವಱಿದು ತಾಳಿಸಿದ ಕಮ್ಮನಪ್ಪ ಹಪ್ಪಳ ಸಂಡಿಗೆಗಳ . . . ಬಡಿಸಲು ಚಪ್ಪರಿದುಣುತಿರ್ದರು (ಗೋಮಟೇ. ೨-೧೨೯); ಹಱಕು ಹೋಳಿಗೆ ಲೇಸು ಮುಱುಕ ಹಪ್ಪಳ ಲೇಸು (ಸರ್ವಜ್ಞ. ೧೧೩೦); ತರಗು ತಿನ್ನುವವನ ಮನೆಗೆ ಹಪ್ಪಳಕ್ಕೆ ಹೋದರು (ಗಾಜಿ). △ **ಹಪ್ಪಟ:** ಪರ್ಪಟಂ, ಹಪ್ಪಟಂ (ಶಬ್ದಾನು. ೧೪೦ ವ್ಯಾಖ್ಯಾ).

ಹಪ್ಪಳ ತುಪ್ಪಾನ್ನ = ಹಪ್ಪಳವನ್ನು ಕರಿದು, ಚೂರು ಮಾಡಿ, ಸಂಬಾರವಸ್ತುಗಳೊಂದಿಗೆ ಅನ್ನದಲ್ಲಿ ಕಲಸಿ ಮಾಡುವ ಒಂದು ಬಗೆಯ ಕಲಸನ್ನ : ಅವರ ಮನೆಯಲ್ಲಿ ಹಪ್ಪಳ ತುಪ್ಪಾನ್ನ, ಕೇಸರಿಭಾತು ಮಾಡಿದ್ದರು (ರೂಢಿ). **ಹಪ್ಪಳದ ಎಲೆ** = ಹಪ್ಪಳದಂತಹ ಅಗಲವಾದ ದಪ್ಪ ಎಲೆಗಳುಳ್ಳ ಒಂದು ಬಗೆಯ ಸಸ್ಯ : (ಕ). **ಹಪ್ಪಳ ಹುರಿಯ ಅನ್ನ** = ಹಪ್ಪಳ ತುಪ್ಪಾನ್ನ : ಎನಗಿತ್ತ ಹಪ್ಪಳ ಹುರಿಯ ಅನ್ನ ಅದೆ ಕೊಡುವುದೀಗೆನಗೆ ಮಧುರಭೋಜನವಾ (ಕಎಪು. ೨೫-೩).

[<ಪ್ರಾ. ಪಪ್ಪಡ./ಸಂ. ಪರ್ಪಟ./ಮರಾ. ಪಾಪಡ, ಪಾಪಡೀ/ತಮಿ. ಅಪ್ಪಳ; ಮಲ. ಪಪ್ಪಡ; ತುಳು. ಪಪ್ಪಡ, ಪಪ್ಪಳ, ಅಪ್ಪಳ, ಹಪ್ಪಳ ; ತೆಲು. ಅಪ್ಪಡ, ಅಪ್ಪಳ, ಅಪ್ಪಲ]

ಪಪ್ಪಡಕಾರ, ಪಾಪಡಖಾರ, ಹಪ್ಪಳಕಾರ, ಹಪ್ಪಳಖಾರ (ನಾ). (ಹಪ್ಪಳವನ್ನು ತಯಾರಿಸುವಾಗ ಬಳಸುವ) ಒಂದು ಬಗೆಯ ಕ್ಷಾರ,—ಲವಣ ; "ಹಪ್ಪಳಕಾರ ಎಂಬ ವಸ್ತು" (ಅನಂಕಾ). **ಪಾಪಡಖಾರ :** ಪಾಪಡಖಾರ (ಹಪ್ಪಳಖಾರ) (ಮುಂಬಪ್ಯಾ. ೧೨೦). **ಹಪ್ಪಳಕಾರ :** ಸೋಡಿಯಂ . . . ಇದು ಉಪ್ಪು, ಸೈಂಧವಲವಣ, ಹಪ್ಪಳಕಾರ ಮುಂತಾದ ಲವಣಕ್ಷಾರಗಳಲ್ಲಿ ಇರುತ್ತದೆ (ಮುಂಬಯಿ. ೬-೧೭); ಹಪ್ಪಳಕಾರ (Baking Powder) ಎಂಬೊಂದು ಹುಡಿಯಿದೆ (ಬಾಲಪ್ರ. II, ೯೯೮). **ಹಪ್ಪಳಖಾರ :** ಪಾಪಡಖಾರ (ಹಪ್ಪಳಖಾರ) (ಮುಂಬಪ್ಯಾ. ೧೨೦).

[ಪಪ್ಪಡ+ಕಾರ$_2$./ ತಮಿ. ಅಪ್ಪಳಕ್ಕಾರಮ್]

ಪಪ್ಪಯಿ 'ಪಪ್ಪಾಯಿ' ನೋ.

ಪಪ್ಪಲ (ನಾ). (?) : ಪಪ್ಪಲದಲರ್ಗಳ್ ಸಂಬಳಮಪ್ಪಿನಮುಪವನಕೆ ನಿಷ್ಟವಯಣಂ ಬರುತುಂ ಪಪ್ಪಕಮಾಗಿರೆ ಪಱಮೆಗಳುಪ್ಪಯಣಂಗೆಯ್ದು ವಂದು ಪೊಸಮಲ್ಲಿಗೆಯೊಳ್ (ಅಜಿಪು. ೬-೨೧). [?]

ಪಪ್ಪಳ 'ಪಪ್ಪಡ' ನೋ.

ಪಪ್ಪಳಿ 'ಪೊಪ್ಪಳಿ$_1$' ನೋ.

ಪಪ್ಪಳಿಬಟ್ಟೆ (ನಾ). ಚೌಕಳಿ ನಮೂನೆಯಾಗಿ ನೆಯ್ದ ಅಥವಾ ಅಚ್ಚೊತ್ತಿದ ಬಟ್ಟೆ : "ಚೌಕುಳಿಬಟ್ಟೆ ; ಪಪ್ಪಳಿಬಟ್ಟೆ ; ಚೆಕ್ಕುಬಟ್ಟೆ" (Check. ಇಂಕಸಿ). [ಪಪ್ಪಳಿ (<ಪೊಪ್ಪಳಿ$_1$)+ಬಟ್ಟೆ$_2$]

ಪಪ್ಪಾಯಿ, ಪಪಾಯ, ಪಪ್ಪಂಗಾಯಿ, ಪಪ್ಪಯಿ (ನಾ). ಒಂದು ಬಗೆಯ ಮರ ಮತ್ತು ಅದರ ಹಣ್ಣು ; ಪರಂಗಿ : ತೋಟದಲ್ಲಿ ಬಾಳೆ, ಪಪ್ಪಾಯಿ . . . ಬಗೆಬಗೆಯ ಹಲಸಿನ ಮರಗಳು ಅಲ್ಲಿದ್ದವು (ಶ್ಯಾಮಸುತಾ. ೧೧); ಎರಡು ದೊಡ್ಡ ಪಪ್ಪಾಯಿಹಣ್ಣು ತಗೊಂಡು ಮಾಸ್ತರ ಜತೇಲಿ ಹೋಗು (ಚರಸ್ಮೃ. ೯೮); ಮಾವು ಮತ್ತು ಪಪ್ಪಾಯಿ ಹಣ್ಣುಗಳಲ್ಲಿ 'ಎ' ಜೀವಾತು ವಿಶೇಷವಾಗಿದೆ (ಅಡುಸೌ. ೬೧). **ಪಪಾಯ :** ಪರಂಗಿಹಣ್ಣು, ಪಪಾಯ (ಮೈಬಿಗಿ. ೧೮-೩೨೧). **ಪಪ್ಪಂಗಾಯಿ :** (ಕ). **ಪಪ್ಪಯಿ :** ಪಪ್ಪಯಿ ಗಿಡಗಳನ್ನು ಹಾಗು ಮತ್ತೊಂದು ಕಡೆಗೆ ಕಬ್ಬನ್ನು . . . ಮಾಡಿಸಿ (ಕೃಷಿಪ್ರ. ೧೪೩).

[<ಪೋರ್ಚು. ಸ್ಪ್ಯಾನಿಷ್. Papaya, Papayo./ಮಲ. ಪಪ್ಪಾಯ; ತುಳು. ಬಪ್ಪಂಗಾಯ; ತೆಲು. ಪಪಯಿ, ಪಪ್ಪಾಯಿ./ಹಿಂ. ಪಪೈಯಾ; ಮರಾ. ಪಪಈ, ಪಪಯಿಾ, ಪಪೈಯಾ, ಪೋಪಈ, ಪೋಪಯಾ]

ಪಪ್ಪು 'ಪರುಪು' ನೋ.

ಪಪ್ಪುಕ$_1$ 'ಪಂಪಕ' ನೋ.

ಪಪ್ಪುಕ$_2$, ಪಪ್ಪಕ$_3$, ಪೊಪ್ಪುಕ (ನಾ). ಬೇಟೆಯಲ್ಲಿ ಪೊದೆಗಳನ್ನು ಬಡಿದು ಬೇಟೆಯ ಪ್ರಾಣಿಯನ್ನು ಎಬ್ಬಿಸುವುದು ; ಸೋವುವುದು : "ಪಪ್ಪುಕಮೆನೆ ಸೊಪ್ಪುಗುಟ್ಟುವುದು" (ಕರ್ಣಾನಿ. ೩೬) ;

ನಿಯತದ್ವಿತ್ವಕ್ಕೆ—ಪಪ್ಪುಕಂ, ಕಪ್ಪಡಿ (ಶಮದ.೩೬ ಪ್ರಯೋ.). **ಪೆಪ್ಪುಕ್ಕ** : (ಶ). **ಪೊಪ್ಪುಕ** : "ಪೊಪ್ಪುಕಂ-ಸೊಪ್ಪುಗುಟ್ಟುಹಂ" (ಶಮದ. ಪಂ. ೨).

ಪಪ್ಪುರಶುಂಠಿ (ನಾ). ಒಂದು ಬಗೆಯ ಶುಂಠಿ : "ಷಡ್ಗ್ರಂಥಿಕಾ—ಪಪ್ಪುರಶುಂಠಿ" (ಓಷಧಿ. ೧೭೩). [ಪಪ್ಪುರ್ $_0$ + ಶುಂಠಿ $_2$]

ಪಪ್ಪುಳಿ, ಪೊಪ್ಪಿ (ನಾ). ಒಂದು ಬಗೆಯ ಸಸ್ಯ : ಪೊಪ್ಪಿ, ಪಪ್ಪುಳಿ (ಮೃಡಿಗಿ. ೭೭-೧೫೭೮). **ಪೊಪ್ಪಿ** : ಮೇಲಿನ ಪ್ರಯೋಗವನ್ನು ನೋಡಿ. [?./ತಮಿ. ಪಪ್ಪಿಳಿ]

ಪಬು, ಹಬು (ನಾ). ಯಜಮಾನ ; ಒಡೆಯ ; ಸ್ವಾಮಿ : (ಶ). **ಹಬು** : "ಹಬು-ಪ್ರಭು—ಒಡೆಯ" (ತದ್ಭವಕೋ. ೪೮) ; ಪ್ರಭು-ಹಬು (ಶಮದ. ೨೬೧ ಪ್ರಯೋ.) ; ಪ್ರಭು, ಹಬು ; ಪ್ರಸರ, ಹಸರ (ಶಬ್ದಾನು. ೧೫೪ ಪ್ರಯೋ.) ; ಕೊಟ್ಟಂ . . . ಹಬುಗಳ ನೆಟ್ಟನೆಯ ವಿಚಿತ್ರಮಾದ ತೊಡರ್ಗಳನೊಲವಿಂ (ಜಾಲಾಸ್ಯ. ೧-೧೩-೪೨).

[<ಪ್ರಾ. ಪಭು./ಸಂ. ಪ್ರಭು]

ಪಬ್ಬ 'ಪರ್ಬ' ನೋ.

ಪಬ್ಬತಿ (ನಾ). ಗಿರಿಜೆ ; ಪಾರ್ವತಿ : "ನಗನಾಥಾತ್ಮಜೆಯಲ್ಲಿ ಪಬ್ಬತಿಯೆನಲ್" (ಕಣಾಗಸಿ. ೯೭). [<ಸಂ. ಪಾರ್ವತೀ]

ಪಯ್ $_1$ 'ಪಯನ್' ನೋ.

ಪಯ್ $_2$ (ನಾ). ೧. ಅಡಿ ; ಪಾದ : ದತ್ತಕ್ಕೆ ಯತ್ವಂ ಪದ,—ಪಯ (ಶಮದ. ೨೬೭ ಪ್ರಯೋ.) ; ಪದ, ಪಯ (ಶಬ್ದಾನು. ೧೬೦ ಪ್ರಯೋ.). ೨. ಕಾಳಗದಲ್ಲಿಯ ಒಂದು ವರಸೆ ; ಯುದ್ಧದಲ್ಲಿ ಹೆಜ್ಜೆ ಹಾಕುವ ಒಂದು ಕ್ರಮ, - ತಂತ್ರ : ನೆಲನ ತಗ್ಗಿನಲುಪ್ಪರದ ಮೆಯ್ಯೊಲವಿನಲಿ ಪಾರಗದ ಬವರಿಯ ಸುಳುಹಿನಲಿ ಚಮ್ಮಟದ ಪಯ ವಂಚನೆಯಲಿ . . . ಕಾದಿದರು (ಕುವ್ಯಾದ್ರೋ.೧೪-೬) ; ಪಯ ಮೈಲುಳಿಯಲೊಲೆದರು ಪಾದರಸದಂದದಲಿ ಪಟುಭಟರು (ಕುವ್ಯಾಗ. ೭-೨) ; ೩. [ನಾಟ್ಯ] ಹೆಜ್ಜೆಯನ್ನು ಹಾಕುವ ರೀತಿ, - ಕ್ರಮ ; ಪದಗತಿ : ಪಾದದೊಳ್ಪಯಂ ಮೇಳಿಸಿ ಝುಂಕೆ ಬಿಂಕದೊಳೊಂಡಬಡೆ . . . ಭೂಪಾಳನ ಚಿತ್ತವಲ್ಲಭೆಗೆ ಸಂದುದು ರಂಭೆಯ ಲಾಸ್ಯವಿಭ್ರಮಂ (ಅಸಂಪು. ೪-೧೦) ; ಪಯದ ಕರಾಭಿನಯದ ದೃಷ್ಟಿಯ ಕರಣದ ಭಾವದಂಗಹಾರದ ನಯಮಾಶ್ರಯಮಾಗೆಬೆಡಂಗಿಂಗಾಕೆಯನಾ ಭೂಪಾಳಬಾಳರಭಿವೀಕ್ಷಿಸುತುಂ(ಮಹಾನೇ. ೪-೫೬). 'ಪಯಪಾಡು' ಪರಾ. [<ಪ್ರಾ. ಪಯ./ಸಂ. ಪದ]

ಪಯ್ $_3$ (ನಾ). ೧. ನೀರು ; ಉದಕ : "ಅಮೃತೋದಕಮುಂ ಯೋಚಿಸಲೀಯರಡುನಾಮ ಪಯಶಬ್ದಂಗಳ್" (ನಾನಾರ್ಥಂ. ೧೦೦) ; "ಅಪಃ, ವಾಃ, ವಾರಿ,ಸಲಿಲಂ, ಕಮಲಂ; ಜಲಂ, ಪಯಃ . . . ಮೇಘಪುಷ್ಪಂ, ಘನರಸಂ-೨೬ ಉದಕದ ಹೆಸರುಗಳು, ಅಂದರೆ ನೀರು" (ಸಿದ್ಧಾಂತಿ. ೬೬) ; ಪಾಲಂ ಕೊಂಡು ಪಯಮನಿಳಿಕೆಯ್ದು ಮರಾಳಂ ಬೊಲಿ (ಜಯಕಾ. ೧-೨೨). ೨. ಹಾಲು ; ಕ್ಷೀರ : "ಊಧಸ್ಯಂ . . . ಪಯಃ, ಪೀಯೂಷಂ-ಈ ೬ ಪಾಲ್" (ಹಲಾಯು. ೪೬-೧೧೯) ; ಸಲೆ ವತ್ಸನುಣ್ಣದ ಪಯಂ ನೇಮವೆಂದಡಂ . . . ಕೋಡಿದನೆ ಕೊಂಕಿದನೆ (ಬಸರ. ೬-೬೨) ; ಸವಿವ ಪಯಂ ತವರಾಜಂ ತನಿವಣ್ಣಳು ಶಿವಾರ್ಪಿತವಲ್ಲದುದಂ ಸವಿದ ಶರಣನಂತೆ ನಾಲಗೆಯೇಱು (ಸಂಬರ. ೧೬-೧೫). ೧, ೨ : ಉಚಿತವಹ ಸಮಯದಲನಾಯಾಸದಿಂ ಪಯವ ಸೃಜಿಸಿ ಜನರೆಲ್ಲರಿಗೆ ಹಂಚಿ ಕೊಟ್ಟು (ಧ್ವನ್ಯಾಲೋ. ೧೩). [ಸಂ. ಪಯಸ್]

ಪಯಂಬಡೆ (ಕ್ರಿ). ಪ್ರತಿಫಲವನ್ನು ಪಡೆ : ನಿಲ್ಲದಿರೀಯೆಡೆಯೊಳ್ ಪಸೆಯಲ್ಲಿಗೆ ನಡೆ ಶೌರಿಯಿಂ ಪಯಂಬಡೆದಾ × × × ನಿಲ್ಲಿಗೆ 'ಬರ್ಪೆಂ (ಚಿಸಮಿ. ೬-೨೬೮). [ಪಯ್ $_0$ (P←ತಮಿ. ಪಯ)+ಪಡೆ $_1$]

ಪಯಃಕಣ (ನಾ). ನೀರಿನ ಹನಿ,—ಬಿಂದು : ಆ ಕುರುತಿಲಕನ ಮೆಯ್ಯೊಳನೇಕಪಯಃಕಣಗಣಂ ಪೊದಟ್ಟುವು ಮುಕ್ತಿಶ್ರೀಕಾಂತೆಯಿತ್ತ ಮುತ್ತಿನ ವೈಕಕ್ಷದ ತೆಱದಿನಭಿಷವೋತ್ಸವವಿಧಿಯೊಳ್ (ಶಾಂತಿಪು.೧೦-೪೬) ; ಸಂಸಾರಸಮುದ್ರಮಂ ತೃಣಪಯಃಕಣದಿಂದಿಟಾಕೆಯುಂ (ಪಂರಾಮಾ. ೧-೧೪) ; ಶಿಶಿರಪಯಃಕಣವೆರಸಿದ ಕುಶೇಶಯಚ್ಛದಮನಕ್ಷಿಗಳ್ ಬಾಷ್ಪಜಲಪ್ರಶಮಿತರುಚಿಗಳ್ ಪೋಲ್ಪಿರೆ (ಜಗಿ. ೩-೪೬). [ಸಂ.]

ಪಯಃಕಣಿಕೆ (ನಾ). = ಪಯಃಕಣ : ಬಳಸಿದ ಬಂಬಲ್ಗುರುಳೊಳ್ ಪೊಳೆವ ಪಯಃಕಣಿಕೆ ಸಿಂಧುವಾರಲತಾಂತಾವಳಿಯೆನಿಸಿ ತುಱುಗೆ(ಶಾಂತಿಪು. ೧೦-೪೮). [ಸಂ. ಪಯಃಕಣಿಕಾ]

ಪಯಃಕೇಲಿ, ಪಯಃಕೇಳಿ (ನಾ). ನೀರಾಟ ; ಜಲಕೇಳಿ. **ಪಯಃಕೇಳಿ** : ಕುಂತಳಕೌಟಲ್ಯವೃತ್ತಿ ಪಿಂಗಿದುದಬಳಾಸಂತತಿಗೆ ಪಯಃಕೇಳಿಯೊಳ್ (ಚಂದ್ರಪ್ರ. ೬-೧೪೫). [ಸಂ.]

ಪಯಃಕೇಳಿ 'ಪಯಃಕೇಲಿ' ನೋ.

ಪಯಃಪತಿ (ನಾ). ೧. ನೀರಿನ ಅಧಿದೇವತೆ ; ವರುಣ. ೨. ಅಷ್ಟದಿಕ್ಪಾಲಕರಲ್ಲಿ ಒಬ್ಬ ; ಪಶ್ಚಿಮದಿಕ್ಕಿನ ಒಡೆಯ : ಅತಿಶಯಸಾಮವೇದಮದು ಗೋಪುರಮಾಗಿ ವಿರಾಜಿಕುಂ ಪಯಃಪತಿದಿಶೆಯೊಳ್(ಶಬಕಂ. ೧-೬೬). [ಸಂ.]

ಪಯಃಪಯೋಧಿ (ನಾ). ಹಾಲಿನ ಸಮುದ್ರ ; ಕ್ಷೀರಸಾಗರ : ಪಯಃಪಯೋಧಿ ಭೇನಸಂಕಾಶದುಕೂಲಪ್ರಚ್ಛದಾಚ್ಛಾದಿತ ವಿಚಿತ್ರ ನೇತ್ರೋಭಯೋಪಧಾನ ಶಯ್ಯಾತಲದೊಳ್ (ಆದಿಪು. ೫-೨೨ ವ). [ಸಂ.]

ಪಯಃಪೂರ (ನಾ). ೧. ನೀರಿನಿಂದ ತುಂಬಿರುವುದು ; ಸರೋವರ. ೨. ಹಾಲಿನ ಪ್ರವಾಹ ; ಹಾಲಿನ ಪೂರ : ಸಲಿಲಾಶಯಂ ಪಯಃಪೂರಮನಾಂತುದೋ ದಿಟಕೆ ತಾನೆನಿಸಿತ್ತಮೃತಾಂಶುರಶ್ಮಿಯಿಂ (ಚಂದ್ರಪ್ರ. ೮-೩೯). [ಸಂ.]

ಪಯಃಪ್ರತಾನ (ನಾ). ಹಾಲಿನ ಮೊತ್ತ,—ಸಮೃದ್ಧಿ : ಆ ಕಳಮಧಾತ್ರಿ ಕಣಿಶಕುಚಾಕಲಿತ ಪಯಃಪ್ರತಾನದಿಂ ಬಳೆಯಿಸೆ . . . ರಾಜಶುಕಾನೀಕಶಿಶುಪ್ರತತಿ ಬಳೆವುದು (ಚಂದ್ರಪ್ರ. ೧-೧೩). [ಸಂ.]

ಪಯಃಪ್ರವಾಹ (ನಾ). = ಪಯಃಪೂರ ೧ : ಕ್ಷೀರವಾರಿಧಿವಾರಿಯೆಲ್ಲಮನೊರ್ಮೊದಲೊಳೆ ಪೊಯ್ವಂತೆ ಪೊಯ್ದ ಪಯಃಪ್ರವಾಹಮಂ ಬಾಲಕನಬಲಂ ಸೈರಿಸಂ (ಶಾಂತಿಪು. ೧೦-೪೨ ವ). [ಸಂ.]

ಪಯಗತಿ (ನಾ). ೧. ನಡೆಯುವ ರೀತಿ,—ಕ್ರಮ ; ಹೆಜ್ಜೆಯಿಡುವ ಬಗೆ : "ಪಯಗತಿ-ಪದಗತಿ = ಗಮನ ಕ್ರಮ" (ತದ್ಭವಕೋ. ೨೪) ; ಪದಗತಿ-ಪಯಗತಿ (ಶಮದ. ೨೮೯ ಪ್ರಯೋ.). ೨. ಕಾಳಗದ ಒಂದು ವರಸೆ ; ಯುದ್ಧದ ಒಂದು ಬಗೆಯ ತಂತ್ರ,—ಉಪಾಯ : ಚಾರಿಯನು ಚಾರಿಗಳ ಪಯಗತಿಯೋರೆಪೋರೆಯ ಬವರಿಗಳ ಸಂಚಾರಚಯಲಬ್ಬರಿಸಿ ತಿವಿದನು ರಾಘವೇಶ್ವರನ (ತೊರರಾ.೬-೨೮-೪೮). [ಪಯ್ $_2$ + ಗತಿ]

ಪಯಗರಡಿ (ನಾ). ಈದ ಕರಡಿ ; ಮರಿ ಹಾಕಿದ ಕರಡಿ : ಹರಿ ನೀಳೋಪಳವುಂ ಪಯಗರಡಿಯುಮಿರೆ ನೀಳಯುಗಳಮೆಂದೆಸೆ (ಶಾಂತಿಪು. ೨-೧೭) ; ಮರದಡಿಯೊಳ್ ಮುದುಡಿದ ಪಯ[ಪಾಠಾಂ. ಮುದು]ಗರಡಿಯ ಮೈಯಲ್ಲಿ ಪರಿಯೆ ಪರೆದೆಲೆಯೆಡೆಯಿಂ ತರುಣರವಿಕಿರಣತತಿ (ಲೀಲಾವ. ೬-೧೧೪) . [ಪಯ್ $_1$(<ಪಯನ್)+ಕರಡಿ $_1$]

ಪಯಗರಿ (?) (ನಾ). (?) : ಊರುಂ ಮೂಳೆಯುಂ ತಿಂಬಗುರು ಪಯಗರಿಯ ತನಿಗೊಂಬಂ ಬಳೆಗೊಯ್ಯಲ್ ಪೂಣ್ದು ತುದಿಯೊಳೋಡಿ ಪೋಪ ಭೀರುವಪ್ಪ ಪಣಿದಕಾಜನಂತೆ (ಶಾಂತಿಪು. ೮-೪೯ ವ). [?]

ಪಯಗಱಿ (ಕ್ರಿ). ಹಾಲನ್ನು ಕರೆ,—ಹಿಂಡು : ಘನಕಾಮಧೇನುವ ಬರಿಸಿ ವಿನುತ ಪಯಗಱಿದು ವಲ್ಮೀಕವ ಕರಗಿಸಿ ಚನುಮಯಮೂರ್ತಿಯ

ಕಂಡ (ಕಂನವಿ. ೫-೩೧). [ಪಯ$_3$ + ಕಱ$_1$]

ಪಯಗೂಡು (ಕ್ರಿ). ಕಾಲಿನೊಳಗೆ ಸೇರು,—ಹೊಗು : ಹೂರಂ ತ್ರಿಕಟುಕಮಂ ಕಾಟ್ಟೀರೆ ಸುತಕ್ಕೋಲಘಟ್ಟ ಸಿತಜಲಧರಮುಂ ವಾರಿ ಯೊಳರೆದೀಂಟದುವೆ ನಿವಾರಿಕು ಪಯಗೂಡಿದೆಯ್ಯ ಮುಳ್ಳಿನ ವಿಷಮಂ (ಖಸುದ. ೨-೧೩೧). [ಪಯ$_2$ + ಕೂಡು$_1$]

ಪಯಣ, ಪೈಣ (ನಾ). ೧. ಪ್ರವಾಸ; ಪ್ರಸ್ಥಾನ; ಪ್ರಯಾಣ : "ಯಾತ್ರಾ, ಪ್ರಯಾಣಂ, ಪ್ರಸ್ಥಾನಂ—ಈ ೩ ಪಯಣಂ" (ಹಲಾಯು. ೭೪-೨೯೮); ಭೋಂಕೆನೆ ಪಯಣದೊಳೆಮ್ಮಂ ಸೋಂಕಿದ ಶರದೃತುವೆ ಬನದೊಳವತರಿಸಿದುದೋ (ಅದಿಪು. ೧೧-೮೭); ಪಯಣದೊಳಶೇಷಶಕುನಂ ನಯಮಂ ಕುಡೆ ಕಾರ್ಯಸಿದ್ಧಿ (ಲೋಕೋಪ. ೧೨-೫); ಮರುಳ ಪಯಣಕ್ಕೆ ತಱಗೆಲೆಯೆ ಸಂಗಡಿಗನೆಂಬಂತೆ (ಧರ್ಮಾಮೃ. ೧-೧೯೫); ಹಾದಿಯನು ಸವಱಿದರು ಯಮಪುರದತ್ತ ಪಯಣಕ್ಕೆ (ಕೌಶಿಂಾ. ೨೦-೧೬); ಆ ಸಂಜೆಯ ಸಮಯದಲ್ಲಿ ಪಯಣವನ್ನು ನಿಧಾನ ಮಾಡುವುದಕ್ಕೆ ಇಷ್ಟವಿರಲಿಲ್ಲ (ಕಳಹು. ೪). ೨. ಶತ್ರುಗಳನ್ನು ನಿಗ್ರಹಿಸಲು ಮಾಡುವ ಪ್ರಯಾಣ ; ದಂಡಯಾತ್ರೆ : ನಿಶಾವಸಾನಸಮಯದೊಳ್ ಪಯಣದ ಸೂಟುಗಾಳೆಗಳಂ ಪಿಡಿದು ಬೀಡೆತ್ತಲುದ್ಯೋಗಂಗೆಯ್ವುದಂ ಕಂಡು (ಪಂಚತಂ. ೧೨೬-೧೨); ಅಖಿಳಸೇನಾತತಿಗೆ ಪಯಣಮಂ ಪೇಳ್ದನಾಗಳ್ (ಚಿಬಪು. ೨೫-೨); ಮುಂದಣ ಪಯಣವ ನಿರ್ಧರಗೈದಾಗ ಬಂದು ಬಿಟ್ಟನು ಹೊಱಬೀಡ (ಕಂನವಿ. ೧೧-೬೯); ಎಲ್ಲರೂ ಯುದ್ಧಕ್ಕೆ ಪಯಣ ಮಾಡಿ ಜಗನ್ನಾಥಸ್ವಾಮಿಯ ದೇವಸ್ಥಾನದ ಬಳಿಗೆ ಬಂದು ಸೇರಿದರು (ಅರ್ಯಕೀ. ೮೧). ೩. ಒಂದು ದಿನದಲ್ಲಿ ನಡೆಯುವ ಹಾದಿ,—ಮಾರ್ಗ ; ಒಂದು ದಿನದ ಹಾದಿ : ಶ್ರೀವಿಜಯನುಂ ವಿಜಯನುಮುರ್ವರಾಸ್ಯತಿಲಕನುಮಂ ಜ್ಯೋತಿಃಪ್ರಭೆಯುಮಂ ಕಟಿಪಲ್ ಮೂಱು ಪಯಣಮೊಡವೋಗಿ (ಶಾಂತಿಪು. ೬-೨೦ ವ); ಕೆಲವಾನುಂ ಪಯಣಂಗಳ್ ಸಲೆ ಸಮನಿಸೆ (ಕುಸುಮಾ. ೧೫-೮೮); ಉದ್ಭಟಭೂಮಿಪಾಲಕಂ . . . ಪಿರಿದುಂ ಪಯಣಂಗಳಿಂ ಸಮಂತೆಟ್ಟಿಂದಂ (ಉದ್ಭಟ. ೨-೧೦೨); ಭರದ ಪಯಣದ ಮೇಲೆ ಪಯಣದಲುರವಣಿಸಿ ನಡೆತಂದು... ಹರಹಿದವು ಗುಡಿ (ಕುಮ್ಯಾಅ. ೨೨-೬). **ಪೈಣ** : ೧. ಶ್ರಮಸಾಧ್ಯವಾಗದಂತೆ ಪೈಣವಿತ್ತು ತಮೋರಜಗುಣದವರ ಬಾಧಿಯ ತಪ್ಪಿಸಿ ಉತ್ತಮಯಾತ್ರಿ ಮಾಡಿಸುವದು (ವಿಪ್ರಸು. ೨೪-೧); ಸುಗಂಧರಾಜೇಂದ್ರನು ಉದಯಕಾಲದೊಳ್ ಪೈಣವಂ ಮಾಡುವಾಯಂದು ಅಪ್ಪಣೆಯನ್ನಿತ್ತು (ಸೌಗಂಧಿ. ೩೫೬-೫); ಏಕಾಏಕಿ ಪೈಣ ನಡೆದು . . . ಕಾಶಿ ಪಟ್ಟಣವನ್ನು ಶೇರಿದರು (ಕಥಾಮಂ. IV, ೨೩); ಒಂದು ದಿನ ಮಧ್ಯಾಹ್ನದ ಪೈಣ ಅದ ತರುವಾಯ ನಮಗೆ ದಾರಿ ತಪ್ಪಿ ಹೋಯಿತು (ಸುಮಚ.೨೫೮).

ಪಯಣಮಾಗು = ಮುತ್ತಿಗೆಗಾಗಿ ಪ್ರಯಾಣಕ್ಕೆ ಹೊರಡು : ಬಂದೊದವಿದ ದೊರೆಗಳ ಪೌಜುಂ ಪದಪಿಂದಂ ಪಯಣಮಾದುದಾಡಂಬರದೊಳ್ (ಹಮ್ಮೀರ. ೩-೨೮). [<ಪ್ರಾ. ಪಯಾಣ./ಸಂ. ಪ್ರಯಾಣ]

ಪಯಣಂಗೆಯ್, ಪಯಣಗೈ (ಕ್ರಿ). ಪ್ರಯಾಣಮಾಡು ; ಸಂಚಾರಕ್ಕೆ ಹೊರಡು : ಭೂಲೋಕದತ್ತಣಿಂ ಪಯಣಂಗೆಯ್ದ ನೃಪನ ಪುಣ್ಯಕೀರ್ತಿ ಯುವತಿಗೆ (ನರಚ. ೭೯-೨೦೫ ವ). **ಪಯಣಗೈ** : ನವೀನದಂಪತಿಗಳಿರ್ವರುಂ ರಸದ ಹರಿಗಲನೇರಿ ಜೇನುಹೊಳೆಯಲಿ ತೇಲಿ ಪಯಣಗೈದರು (ಚಿತ್ರಾಂಗ. ೪೧-೧೧೨೭). [ಪಯಣ + ಕೆಯ್$_1$]

ಪಯಣಂಬರ್ (ಕ್ರಿ). ಪ್ರಯಾಣ ಮಾಡಿ ಬರು,—ನಡೆತರು : ಅಂತು ಪುಂಡರೀಕಿಣಿಗಭಿಮುಖನಾಗಿ ಪಯಣಂಬಂದು . . . ಬೀಡಂ ಬಿಡಿಸಿದಾಗಳ್ (ಅದಿಪು. ೪-೯೨ ವ); ಕೆಲಕೆಲದೊಳ್ ರಾಜಸುತರ್ ಕೆಲಬರ್ ಬರೆ . . . ವಜ್ರಬಾಹು ಪಯಣಂಬಂದಂ (ಪಂಂಾಮಾ. ೨-೧೨); ಒರ್ವಂ ದೂರದಿಂ ಪಯಣಂಬಂದು ನಾಡೆಯುಂ ಬಟಲ್ದು . . . ನಿದ್ರೆಗೆಯ್ಯುತ್ತುಂ (ಧರ್ಮಾಮೃ. ೨-೪೭).

[ಪಯಣ + ಬರ್ (<ವರ್)]

ಪಯಣಂಬೋಗು (ಕ್ರಿ). ಪ್ರಯಾಣಕ್ಕೆ ಹೊರಡು ; ಸಂಚಾರಕ್ಕೆ ತೆರಳು : ಅವರ್ಗೆ ಲೋಚುಗೆಯ್ದು ಬ್ರತಂಗಳನೇಱಿಸಿ ಪಡಿಕಮಣಂ ಬೇಟ್ಟೊಡಗೊಂಡುತ್ತರಾಪಥಕ್ಕೆ ಪಯಣಂಬೋಗಿ . . . ದೇಶಮನೆಯ್ದಿ (ವಡ್ಡಾರಾ. ೯೧-೨೫); ಪಾಂಡವರ್ . . . ಶಕುನಂಗಳೆಲ್ಲಮುತ್ತರೋತ್ತರಂ ತಿರ್ದುವಿನಮುತ್ತರಾಭಿಮುಖರಾಗಿ ಪಯಣಂಬೋಗಿ (ಪಂಪಭಾ. ೩-೩೩ವ); ಅಂಬರಚರರಾಜನಂಬರಚರಗೋಚರೋಚಿತಪ್ರಸ್ಥಾನದಿಂ ಪಯಣಂಬೋಗಿ (ಶಾಂತಿಪು. ೫-೩೭ವ); ಪೊಟಲ ನಡುವಣ ಕ್ಷುಲ್ಲಕ ದ್ವಾರದಿಂ ಪೊಱಮಟ್ಟು ದಕ್ಷಿಣಾಭಿಮುಖರಾಗಿ ಪಯಣಂಬೋವುದುಂ (ಪಂರಾಮಾ. ೭-೭ ವ).

[ಪಯಣ + ಪೋಗು$_1$ (<ಪೋ$_1$)]

ಪಯಣಗತಿ, ಪೈಣಗತಿ (ನಾ). ಪ್ರಯಾಣದ ನಡೆ,—ಮಾರ್ಗ : ಆ ಮುಂದಣ ಪಯಣಗತಿಯ ಸಂಚುವಱಿಯುವ ಸಂಬಂಧಮಂ ಶರಣಮನದಲ್ಲಿ ತಿಳಿದು (ಘನವ. ೪೯-೪೫); ಹರುಷಪುಳಕದ ಹರಹಿನಲಿ ಹಯಕರಿ ವರೂಥಪದಾತಿಬಲಸಹಿತರಿದಿಶಾಪಟಮಲ್ಲ ಬಂದನು ಪಯಣಗತಿಗಳಲಿ (ತೊರಂಾ. ೧-೬-೭); ಆ ಮಾಧವಂ ಪಯಣಗತಿಯಿಂದೆ ಗಜಪುರದ ಸೀಮೆಗೈತಂದು (ಜೈಮಿಭಾ. ೭-೧೩). **ಪೈಣಗತಿ** : ನಿನ್ನಯ ನೆನವೆ ಮುಕುತಿಪಥಕೆ ದಾರಿಗಿದೆ ಪೈಣಗತಿಗೆ ಕಟ್ಟಿದ ಬುತ್ತಿ (ಮೋಕ್ಷದೀ. ೪೦-೩).

[ಪಯಣ + ಗತಿ]

ಪಯಣಗೈ 'ಪಯಣಂಗೆಯ್' ನೋ.

ಪಯಣನಡೆ (ಕ್ರಿ). ಪ್ರಯಾಣಕ್ಕೆ ಹೊರಡು; ಸಂಚಾರಮಾಡು : ಕಲೆತು ನಾನವರೊಡನೆ ಪಯಣನಡೆವೆನು ಮುಂದೆ (ಇಂಗೀತ. ೯೩-೨೧).

[ಪಯಣ + ನಡೆ$_1$]

ಪಯಣಪರ (ನಾ). ಪ್ರಯಾಣದಲ್ಲಿ ಆಸಕ್ತನಾದವನು : ದೇವದುಂದುಭಿ ಮೊಳಗೆ ಪರಮನು ಪಯಣಪರನಾದ (ಕೌಶಿಂಾ. ೪೪-೧೧).

[<ಸಂ. ಪ್ರಯಾಣಪರ]

ಪಯಣಲಗುನ (ನಾ). ಪ್ರಯಾಣ ಮಾಡಲು ತಕ್ಕ ಮುಹೂರ್ತ,—ಒಳ್ಳೆಯ ಕಾಲ : ಬೇಟ್ಟೊಡಗೊಂಡುತ್ತರಾಪಥಕ್ಕೆ ಪಯಣಂಬೋಗಿ ಮಟ್ಟನುರೆ ಸಾಕೇತಪುರಿಗಾಗಿ (ರಾಮಾಸಂ. ೧-೫-೧).

[<ಸಂ. ಪ್ರಯಾಣಲಗ್ನ]

ಪಯಣವೀಳೆಯ (ನಾ). ಪ್ರಯಾಣಕ್ಕೆ ಹೊರಡುವ ಮೊದಲು ಕೊಡುವ ತಾಂಬೂಲ; ಬೀಳ್ಕೊಡುಗೆಯ ಸಮಯದಲ್ಲಿ ಕೊಡುವ ವೀಳೆಯ : ಪಯಣವೀಳೆಯವಾಗುವವರೆಗೆ ಈ ಯಿನಿಬರೂ ನಮ್ಮ ಅರಮನೆಯೊಳಗೇ ಗೌರವದ ರಾಜಮರ್ಯಾದೆಯ ಅತಿಥಿಗಳಾಗಿರಲಿ (ಬಿರುಗಂ. ೩೭-೭). [ಪಯಣ + ವೀಳೆಯ]

ಪಯಣಸನ್ನದ (ನಾ). ಯುದ್ಧೋದ್ಯೋಗಕ್ಕೆ ಸಿದ್ಧವಾಗುವಿಕೆ : ಪಲವುಂ ಗಡಿಗೋಂಟಿಗಳ ಬಲಮಂ ಪಯಣಸನ್ನದಂಗೆಯ್ವುದೆಂದು ರಾಯಸಂಗಳಂ ಕಳುಪಿ (ಚಿಕವಿ. ೫-೭೭). [<ಸಂ. ಪ್ರಯಾಣಸನ್ನದ್ಧ]

ಪಯಣಿಗ, ಪೈಣಿಗ (ನಾ). ಪ್ರಯಾಣಿಕ; ಪ್ರವಾಸಿ : ಕೂರ್ಮೆಯಿನೆಮ್ಮ ಜಾತ್ರೆವಯಣಿಗರ್ಗೆ ನೇರಿಟ್ಟಾಧಿವ್ಯಾಧಿಗಳಂ ಪರಿಹರಿಸಿ ಪೊರೆಯೈ (ರಾಮಾಶ್ವ. ೬೮-೧೯); ಅದು ಒಬ್ಬ ಪಯಣಿಗನನ್ನು ಕುರಿತು ಬರೆದ ಕವಿತೆಯಾಗಿತ್ತು (ಬರಬಾ. ೬). **ಪೈಣಿಗ** : ಪೈಣಿಗರಾಗುವಡೆ ಮನೆಗೈದಿ ಬರಲವನಿಪನು ಕಲಿಕರ್ಣಾ ರಾಗವತಿ ನಡೆತಂದು ವಿನಮಿತಳಾಗಿ ನೀವೀಗಾರ ಕಾರ್ಯಕೆ ಹೋಗುವಿರಿ ಪ್ರಾಣೇಶಯೆಂದಳು ನಗುತ ಭಾನುಮತೀ (ಜಿನಭಾ. ೫೬-೪೬). [ಪಯಣ + -ಇಗ]

ಪಯಣಿಸು (ಕ್ರಿ). ೧. ಪ್ರಯಾಣ ಮಾಡು ; ಸಂಚರಿಸು : ಮಾವ ಅಳಿಯ ಮಂಗಳೂರಿಗೆ ಪಯಣಿಸಿದರು (ಒಡ್ಡಉ. ೪೨). ೨. ತಿರುಗು ; ಓಡಾಡು : ಶ್ವಾಸ ನಿಶ್ವಾಸದೊಳು ಒಳಹೊಕ್ಕು ಹೊರಬರುತ ಲೋಮದೊಳು ರಕ್ತಕಣದೊಡನೆ ಪಯಣಿಸುತ . . . ಕೊರಗುತಿರುವೆಲೆ ಅಹಂಭಾವ (ಮಲೆದೇ. ೩೩-೪). [ಪಯಣ+-ಇಸು$_3$]

ಪಯಣೋದ್ಯೋಗ (ನಾ). ೧. ಪ್ರಯಾಣಕ್ಕೆ ತೊಡಗುವಿಕೆ : ಮುನಿಪನು . . . ಪಯಣೋದ್ಯೋಗಮನನಾದನು ಸರಾಗದಲಿ(ತೊರರಾ. ೧-೧೨-೩) ; ಕಾಗದವೆಲ್ಲವ ಕೈಕೊಂಡು ಪಯಣೋದ್ಯೋಗವ ನೆನೆದಳಳ್ತಿಯಲಿ (ಮೋಹತ. ೨೮-೩೮). ೨. ಪ್ರಯಾಣಕ್ಕೆ ತೊಡಗಿದವನು : ಅಯೋಧ್ಯಾಪುರಿಗೆ ಪಯಣೋದ್ಯೋಗರಾದರು ಜನಕನಾಜ್ಞೆಯಲಿ (ತೊರರಾ. ೧-೧೬-೧). [<ಸಂ. ಪ್ರಯಾಣೋದ್ಯೋಗ]

ಪಯದಳ (ನಾ). ಕಾಲಾಳುಗಳ ಸೈನ್ಯ ; ಪದಾತಿಬಲ : ಕೈಯ ಕೈದುವನಿಳುಹಿ ಪಯದಳ ಬೀಳುಗೊಂಡುದು ಖೇಚರೇಶ್ವರನ (ಕುಪ್ಯಾಆ. ೧೯-೫೩) ; ತಳಪಟವ ತುಂಬಿತ್ತು ಪಯದಳ (ಕುಪ್ಯಾದ್ರೋ. ೧೨-೮). [ಪಯ$_2$+ದಳ$_2$(=ದಲ)]

ಪಯನ್, ಪಯ$_1$, ಪಯಿನ್$_1$, ಹಯನ$_1$, ಹಯನು, ಹಯಿನು, ಹಯ್ನು, ಹಯ್ನು, ಹೈನ, ಹೈನು (ನಾ). ೧. ಈದ ಹಸು, ಎಮ್ಮೆ, ಹುಲಿ ಮುಂತಾದ ಪ್ರಾಣಿ : ತನ್ನ ಗೋಮಂಡಳದೊಳಗೊಳ್ಳಿದುವಪ್ಪ ಪತ್ತು ಪಯನುಮಂ ಮೂಸಾಸಿರಗಂಡುಗ ಬತ್ತಮುಮಂ . . . ಕೊಟ್ಟೊಡೆ (ವಡ್ಡಾರಾ. ೨೨-೩) ; ಪಶುವೆಮ್ಮೆ ಕುಱುಗಳೆಂಬಿವು ವಸುಧೆಗೆ ಪಯನ್ (ಸಮಪ. ೯-೧೧೬). **ಪಯ$_1$** : ೧. ಕೆಚ್ಚಲ ಬಾಹು ಪುಟ್ಟಿದುದು ತೊಟ್ಟನೆ ನಮ್ಮ ಪಯಕ್ಕೆ (ಪಸಾರ. ೪೬೮) ; ಪಡೆವೊಡೆ ಪಯದಿಂ ಪಯಮಂ ತಡೆಯದೆ ಕೆಳೆಗೊಳ್ವರದಱ ಕಱುವಂ ಚದುರರ್ (ನೀತಿಮಂ. I, ೩). **ಪಯಿನ್$_1$** : ೧. ಪಯಿನಂ ಕಂಡು ಕಱುವಂ ಬಿಡುವಂತೆ (ಧರ್ಮಾಮೃ. ೧೪-೧೩೦). **ಹಯನ$_1$** : ೨. ಹಸು, ಎಮ್ಮೆ ಮುಂತಾದುವುಗಳಿಂದ ದೊರಕುವ ಹಾಲು, ಮೊಸರು ಮುಂತಾದುವು : ಹಾಲ ಸಮುದ್ರಕ್ಕೆ ಹಯನವನ್ನು ಕೊಟ್ಟಂತೆ ಅವನ ಕೊಡುಗೆಯಾಗಿತ್ತು (ಕರ್ನಾಕ. ೧೩೯) ; ಹಯನಕ್ಕಾಗಿ ಕಟ್ಟಿದ ಆಕಳ ಹಿಂಡುವುದು (ಬೆಟ್ಟಹೊ. ೨೨). **ಹಯನು** : ೧. ಕಾಮಧೇನು ಮನೆಯಲಿರಲು ಬೇಱೆ ಹಯನನಱಸಲೇಕೆ (ಬಸವ. ೬೦೨) ; ಬಱಡಂ ಹಯನ ಮಾಳ್ಪರೆಂದು . . . ನುಡಿಯೆ (ಚೆಬಪು. ೬೨-೭೦); ಹಸುಮಕ್ಕಳ ಹಯನುಗಳ ಬಸವಳಿಸದೆ . . . ಬಗೆಯೊಸೆದುಚಿತದೊಳೋವುವುದು (ಹದಿಬ. ೪-೪೫) ; ಬಹಳಪ್ಪು ಬರಡು, ಒಂದೆರಡು ಹಯನು (ಚಂದ್ರಮಾ. ೧೭-೨). ೨. ಪಾಲ್ಗಡಲಿದಿರಲಿರೆ ಹಯನನಱಸುವರೆ (ನಂಬಿರ.೧೩-೪) ; ಈ ಸುತನು ಜನಿಸಿದೊಡಿವಗೆ ಹಯನಿಲ್ಲ (ಸಂಭಪ. ೧೭-೮೨) ; ಕಟ್ಟಬೇಕು ಕಾಟದೆಮ್ಮೆ ಅದಱ ಹಯನ ಎಷ್ಟಾದರು ಉಣಬೇಕು (ಪುರಂದ. ೨-೫೫ ಪಲ್ಲವಿ) ; ಮನೆಯಲ್ಲಿ ಹಯನು ಇಲ್ಲ (ಅಶೋಕ. ೭೮). **ಹಯಿನು** : ೧. ನಡಿಯಿರಿ, ಹೊಲೆಯರಲ್ಲಿ ಹಯಿನು ಕಾದುಕೊಂಡಿದೆ (ಮೊಸಂಸಾ. ೩೨). **ಹಯ್ನು** : ೨. ದನಕರುಗಳು ಬಹಳ ಇದ್ದವು. ಹಯ್ನುವೂ ಸಮೃದ್ಧಿಯಾಗಿತ್ತು (ಮುಂಬಯಿ. ಕಿ. ೪-೨೨೦). **ಹಯ್ನು** : ೨. ಜೋಳದ ಬೋನಕ್ಕೆ ಬೇಳೆಯ ತೊಗೆಯಾಗಿ ಕಾಳೆಮ್ಮೆ ಕಱೆದ ಹಯ್ನಾಗಿ [ಪಾಠಾಂ. ಹಯನಾಗಿ] ಬೆಳವಲಮೇಳವ ನೋಡ (ಸರ್ವಜ್ಞ. ೧೬೧೬) ; ಆಕಳ ಹಯ್ನು ತುಸು ಆದಾಗ್ಯೂ ಬಹು ಆರೋಗ್ಯವು (ಮುಂಬಯಿ. ಕಿ. ೧-೨೧). **ಹೈನ** : ೧. ಕಱೆವ ಹೈನಂ [ಪಾಠಾಂ. ಹೈನು]ಗಳಲ್ಲದೆ ಬಂಜೆವಯ್ನಿಲ್ಲ (ಶ್ರೀಪಾಲ. ೧-೪೬); ಹೈನದ ಕೆಲಸ. . . ಮಕ್ಕಳ ಉಪಚಾರ—ಇವುಗಳಲ್ಲಿ ಬೇರೆಯ ವಿಚಾರಕ್ಕೆ ಅಸ್ಪದವೇ ದೊರೆಯುತ್ತಿರಲಿಲ್ಲ (ಜನಜೀ. ೩೮); ಕೈಗೊಬ್ಬ ಕಾಲಿಗೊಬ್ಬ ಅಳು. ಬತ್ತದ ಹೈನ (ಮಣ್ಣಮ. ೯). ೨. ಮಲ್ಲಾಡದ ಆಕಳು ಜವಾರೀ ಆಕಳಿಗಿಂತ ಕಿರಿದಾದದ್ದು ; ಅದರ ಹೈನವೂ ಅಷ್ಟಕ್ಕಷ್ಟೆ (ಕಭಾಗೆ. ೫೭) ; ಎಮ್ಮೆ ಆಕಳುಗಳು ಹೈನದ ಸಲುವಾಗಿ ಉಪಯುಕ್ತವಾದವು (ಕಾರವ. ೩೬) ; ಹಾಲು—ಹೈನ ಹೊಟ್ಟೆಗೆ ಹೆಚ್ಚುಹೆಚ್ಚು ಹೋದಷ್ಟೂ ಸಂತಾನ ವೃದ್ಧಿಯಾಗದಿರುತ್ತದೆಯೆ ? (ಹೊಸಕ್ಷಿ. ೨೯). **ಹೈನು** : ೧. ಬರಡು ಹೈನಾಗಿರಲು ತನುಧರ್ಮಕ್ಕೆ ನೆಲೆಯುಂಟೆ (ವಿವೇಭ. ೧೦-೪೧); ಕಂದಯ್ಯ ಅತ್ತಾರೆ ಕಣಗೀಲು ಚಿಗತಾವು . . . ಬಾಲನ ಬರಡಾಕಳೆಲ್ಲ ಹೈನಾಗೆ (ಹಳ್ಳಿಬಾ. ೭೯). ೨. ದನಕರುಗಳ . . . ಹೈನು ಹೆಚ್ಚಾಗಿ ಲಭಿಸುತ್ತದೆ (ಕಎಪು. ೭-೧೪).

ಪಯನಾಗು, ಹಯನಾಗು, ಹೈನಾಗು = ಹಾಲನ್ನು ಕರೆಯುವ ಹಸುವಾಗು ; ಕರಾವಾಗು : ಪಯನಪ್ಪ ಪಸುವಂ ತಣಿಪಿ ನಯದಿಂ ಕಱೆದು ಪಾಲಂ ಕೊಳ್ವಂತೆ (ಜೀವಸಂ. ೨೧೮-೬) ; ನೀನೊಲಿದರೆ ಬಱಡು ಹಯನಾಗುವು[ಪಾಠಾಂ. ಹಯನಹು]ದಯ್ಯಾ (ಬಸವ.೬೬); ನಿನ್ನ ಶೀಲಂಗಂಡು ಸುರಭಿ ಹಯನಾಯಿತ್ತು (ಒಸರ. ೯-೮೨) ; ಬಱಡು ಹಯನಾಯ್ತು (ರೇಪಣ. ೩೩-೫೪) ; ಹೇಱುವ ಗೊಡ್ಡು ಹಯನಕ್ಕು ಗುರುಕರುಣ ತೋಱುವ ದಿನಕೆ (ಸರ್ವಜ್ಞ. ೮೭) ; ಅಡ್ಡಡ್ಡ ಮಳೆ ಬಡಿದು ದೊಡ್ಡೊಡ್ಡ ಕೆರಿ ತುಂಬಿ ಗೊಡ್ಡಗಳೆಲ್ಲ ಹೈನಾಗಿ (ಕನ್ನಜಾ. ೧೫೩). ಹೈನ ಮಾಡು = ಪಶುಪಾಲನೆ ಮಾಡು : ಈ ಪರಗಣೆಗಳಲ್ಲಿಯ ಜನರು ಹೈನ ಮಾಡುತ್ತಾರೆ (ಗ್ರೇಟಬ್ರಿ. ೪) ; ಇವರಿಗೆ ಹೈನ ಮಾಡುವುದು ತಿಳಿದಿದ್ದಿತೆ (ಕರ್ನಾಟ. ೩೩೮).

[ದೇ.॥ ತಮಿ. ಪಯ = ಫಲ, ಲಾಭ, ಸವಿ./ಪ್ರಾ. ಪಯಾ = ಜನ್ಮ ನೀಡು./ಸಂ. ಪ್ರಜನನ = ಗರ್ಭಧಾರಣೆ, ಜನನ]

ಪಯನಾವು (ನಾ). ಈದ ಹಸು ; ಕರು ಹಾಕಿದ ಆಕಳು : ಆ ಮುನಿಪಂ ನೋಂತು ಬಡವಾಗಿ ವಿಕರಾಳಮಾದ ರೂಪುಮಂ ಕಂಡು ಕೆಂಗೋಲ್ಮಸಗಿದ ಪಯನಾವು ಪರಿದಿಱುವುದುಂ (ಜಾವುಂಪು. ೧೪೧) ; ಆದೊಡವಂ ಕೊಟ್ಟು ಪಯನಾವಂ[ಪಾಠಾಂ. ನಾಕಳಂ]ಕೊಳ್ವೆಂ (ಪಂಚತಂ. ೧೮೬-೭) ; ಬರುತಿರ್ಪಾ ಮುನಿಪನ ಕೃಶಶರೀರಮಂ ಕಂಡು ಬೆರ್ಚಿ ಪಯನಾಟ[ವು] ಕರಂ ಪರಿತಂದು ಪಾಯೆ (ಶಾಂತೀಶ್ವ. ೭-೩೩).

[ಪಯನ್+ಅವು]

ಪಯನು (ನಾ). ಸವಿ : ಇತ್ತಲು ಪರವೆಗೆ ನಂಬಿಗೆ ಪಲವು ಕಾಲದಗಲ್ಕೆ ಪಯನಾಗಿ [ಪಾಠಾಂ. ಯ ಹಯನಾಗಿ] ಪ್ರಣಯಕಲಹಂ ಕಾಲೂಱು ಸುಖದ ಮಳೆ ಕಱೆದು ನೇಹದ ಬಿತ್ತಂಕುರಿಸಿ ತವಕಂ ತಳಿರ್ತು ಸಮಾನುರಾಗವರಲ್ಲು ಪ್ರೇಮಾಲಿಂಗನದೊಳ್ ಶಿವಾರ್ಪಿತಂ ಸಿಲ್ಕಿ ಸಫಲವಾಗಲ್ (ನಂಬಿರ. ೧೬-೯೬). 'ಪಯನ್' ಪರಾ. [←ತಮಿ. ಪಯ]

ಪಯಪಾಡು, ಪೈಪಾಡು (ನಾ). ೧. ಹೆಜ್ಜೆಯಿಡುವ ಕ್ರಮ,—ರೀತಿ : (ಕಿ). ೨. ಕಾಳಗದ ಒಂದು ವರಸೆ,—ಪಟ್ಟು ; ಯುದ್ಧದಲ್ಲಿ ಹೆಜ್ಜೆಯಿಡುವ ಒಂದು ಬಗೆಯ ತಂತ್ರ : ಸುಳಿದರೆಡಬಲ ಚಾರಿಯಲಿ ಚಾಪಳದ ಪಯಪಾಡಿನಲಿ . . . ಭೀಮ ಕೌರವರು (ಕುಪ್ಯಾಗ. ೬-೨೨) ; ಲುಳಿಯ ಪಯಪಾಡುಗಳ . . . ಲಾಘವದೊಳು ವಿಚಿತ್ರದ ವೀರರೊಪ್ಪಿದರಸಮಸಮರದಲಿ (ತೊರರಾ. ೬-೩೧-೨೨) ; ಪಯಪಾಡು ಮುರಿಪು ಮೈಲುಳಿ ಲಾಗುಲವಣಿ ಲಕ್ಷ್ಯಂಗಳಿಂ ಧುರದೊಳೇಱಂ ತೋಱು (ಚೆಬಪು. ೩೮-೩೮) ; ಖಳ ದನುಜಾಂತಕರು ಕಾದಿದರು ಪಯಪಾಡಿನಲಿ ಸಮವಾಗಿ (ಕೋಗಯ. ೧೦-೫೦). 'ಪಯಗತಿ' ಪರಾ. ೩. [ನಾಟ್ಯ] ಹೆಜ್ಜೆಯನ್ನಿಡುವ ಭಂಗಿ ; ಪದವಿನ್ಯಾಸ : ಪಯಪಾಡು ನಿಚ್ಚವಣೆ ಚಾಳೆಯಂ . . . ಲುಳಿ ಪುದಿದೆಸೆವಿನಂ ಕರಂ ನರ್ತಿಸಿದಳ್(ಧರ್ಮಪ.೨-೨೬);

ನೇಮನೆಲೆ ಪಯಪಾಡು . . . . ತಿರುಪಿನಲಿ . . . ಮಾಯಾದೇವಿ ಮೋಹಿಸಿ ಪಾತ್ರವಾಡಿದಳು (ಪ್ರಭುಲೀ. ೪-೫೭). **ಪೈಪಾಡು :** ೩. ಮೃಡನೊಲ್ದು . . . ವಿನೂತನದ ಪನ್ನೆರಡು ಪೈಪಾಡು ಪಿರಿದೆನಿಸು ವೈವತ್ತೊಂದು ಚಾಲಿಯಿಂದೆ ತಿರುಪುಗಳ್ಪತ್ತು ತೆಱದಿಂದೆ ನಾನಾತೆಱದ ಕರಣಂಗಳಿಂ ನರ್ತನಂಗೆಯ್ವುತಿರೆ (ಪಾಸೋಪು. ೧-೪೮).

[ಪಯ$_2$+ಪಾಡು$_3$]

ಪಯಬಿಂದು (ನಾ). ಹಾಲಿನ ಹನಿ,—ತೊಟ್ಟು : ಗಣನೆಯಿಲ್ಲದ ಜನನಿಯರು ಮೊಲೆಯುಣಿಸಲಾ ಪಯಬಿಂದುಗಳನದನೆಣಿಸಲಳವೇ (ಹುಸಾ. ೬೨). [ಪಯ$_3$+ಬಿಂದು]

ಪಯವುಲಿ (ನಾ). ಈದ ಹುಲಿ; ಮರಿ ಹಾಕಿದ ಹುಲಿ : ಪಯವುಲಿಗಳ್ ಮೊಲೆಯೂಡಿದುವಾ ಹರಿಣಂಗಳಂ (ಕಾವ್ಯಾವ. ೮೨೬).

[ಪಯ$_1$(<ಪಯನ್)+ಪುಲಿ]

ಪಯಶ್ಚರ (ನಾ). ೧. ನೀರಿನಲ್ಲಿ ಸಂಚರಿಸುವ ಮೊಸಳೆ ಮೊದಲಾದ ಜಲಜಂತು,—ಜಲಚರ : ಕುಪಿತ ಮರುತ್ಸುತರವಕಳ್ಕಿ ಪಯಶ್ಚರನಿಕರಸಂಭ್ರಮೋಲ್ಲಹಂಕೆ ಭಾವಿಪೊಡೆ ಜನಕ್ಕೆ ಕೊಳಂ ಕಿಟ್ಟು ಪಾಱುವಂತಾಯ್ತು ಕಮಲಜಾಂಡಂಬರೆಗಂ (ಗದಾಯು. ೭-೨೦). ೨. ಮೀನು : ಭಯಾಬ್ಧಿಯಲ್ಲಿ ಮುಂಕೊಂಡು ಮುಳುಂಗಿ ತೇಲ್ದು ವವನೀಕ್ಷಣಯುಗ್ಮಪಯಶ್ಚರದ್ವಯಂ (ಶಬಶಂ. ೪-೧೧೦). [ಸಂ.]

ಪಯಸ್ಯ (ನಾ). ಹಾಲಿನಿಂದ ಉತ್ಪನ್ನವಾಗುವ ಬೆಣ್ಣೆ, ಮೊಸರು ಮುಂತಾದುವು : "ಪಯಸ್ಯಂ ಆಜ್ಯ ದಧ್ಯಾದಿ—ಹಾಲಿನಿಂದ ಹುಟ್ಟುವ ತುಪ್ಪ, ಮೊಸರು, ಬೆಣ್ಣೆ ಮುಂತಾದ್ದಕ್ಕೆ ಪೆಸರು" (ಸಿದ್ಧಾಂತಿ. ೨೮೯). [ಸಂ.]

ಪಯಸ್ವಿನಿ (ನಾ). ೧. ಕರೆಯುವ ಆಕಳು ; ಹಯನು : ವಸುದೇವ ದೇವಕೀದೇವಿ ಬಲದೇವರ್ಗೆ ನಂದಗೋಪನುಂ ತತ್ಸತಿಯುಮನುಕ್ರಮದಿಂ ಪೊಡೆವಟ್ಟು ಪ್ರಚುರಪಯಸ್ವಿನಿಗಳಪ್ಪ ಪಶುಗಳಿಂದಱಂಬುಗಱಿಯಿಸಿದನಂತರಂ ಸಂಭಾಷಿಸುತ್ತಿರ್ಪುದುಂ (ಮಹಾನೇ. ೬-೩೭ವ) ; ಒಮ್ಮೆ ಪಯಸ್ವಿನಿಯಾದ ಧೇನುವಿನಂತೆ ತೋರುವ ಉಷೆ ಮತ್ತೊಂದೆಡೆ ನವವಧುವಿನಂತೆ ಗೋಚರಿಸುತ್ತಾಳೆ (ಸೌಂದಸ. ೯೭). ೨. ನದಿ ; ಹೊಳೆ. ೩. ಒಂದು ನದಿಯ ಹೆಸರು. ೪. ಗಂಗಾನದಿ. ೫. ರಾತ್ರಿ; ಇರುಳು. ೬. ಆಡು. ೭. ಹದಿನಾಲ್ಕು ನಾಡಿಗಳಲ್ಲಿ ಒಂದು : ತರಳ ತಿಳಿ ನಾಡಿಗಳ ಚೌದಶಗಳಿಗೆ ನಾಮಗಳಾಯುರು ಸುಷುಮ್ನೆಯು... ಪಯಸ್ವಿನಿ ಗಂಧವಾರಿಯು ವರಸೆದಪ್ಪದೆಯಿರುವವು (ಗಗತಾ. ೯-೧೨).

[ಸಂ. ಪಯಸ್ವಿನೀ]

ಪಯಸ್ಸದ್ಮ (ನಾ). ನೀರಿಗೆ ಆಶ್ರಯವಾಗಿರುವುದು ; ಸಮುದ್ರ: ಅಮಲ ಪಯಸ್ಸದ್ಮದಿಂ ಶುದ್ಧವೃತ್ತಂ (ಶಾಂತಿಪು. ೯-೩೧೦). [ಸಂ.]

ಪಯಸ್ಸು (ನಾ). ೧. ನೀರು ; ಉದಕ : ಪಯಸ್ಸು, ನಭಸ್ಸು, ರಜಸ್ಸು (ಶಬ್ದಾನು. ೬೯ ಪ್ರಯೋ). ೨. ಹಾಲು. [ಸಂ. ಪಯಸ್]

ಪಯಳ (ನಾ). "ಮೇಘದಲ್ಲಿ ತುಂಬಿದ ನಿರ್ಮಲಜಲ" (ವಿಸ್ತೋಸು. ೧೩-೫ ಅಡಿಟಿ) : ಸುಯತಿಗಳು ನುಡಿದ ಶಬ್ದಾ ಪಯಳಾಯಂತಿದೆ (ವಿಸ್ತೋಸು. ೧೩-೫). [?]

ಪಯಾಳ (ನಾ). (?) : ಜಗತೀಶಂ ನೋಟ್ಟಿ ಕಣ್ಗಂ ನುಡಿವ ದನಿಗಮಿಂದಾಗಿ ಕುಳ್ಳಿರ್ದರಂದೋಳಿಗಳಿಂ ದಂಡಾಧಿಪರ್ ಮಾಂಡಳಿಕರಥಿಕ ಸಾಮಂತರಂತರ್ನಿಯುಕ್ತರ್ ವಗೆಕಾಱರ್ ಗಾಯಕರ್ ಪಾತಕರಡಪದವರ್ ನೆತ್ತಕರ್ ವಾಸಕಾಱರ್ ನಗೆಕಾಱರ್ ವಾದ್ಯಕರ್ ಚಿತ್ರಕರಣುಗಿನವರ್ ಸೂಳೆವಾಳರ್ ಪಯಾಳರ್ (ಅನಂಪು. ೨-೨೬) ; "ಕಾಲಾಳು" (ಪ್ರಭಣ್ಣ). [?]

ಪಯಿಂಛಾಸಿರ, ಪಯಿಂಜಾಸಿರ (ನಾ). ಒಂದು ಸಂಖ್ಯೆ ; ಹತ್ತುಸಾವಿರ : "ಎಕ್ಕಸರಂ . . . ಒಂಬಯ್ನೂಱು, ಪಯಿಂಛಾಸಿರಂ—ಇವು ಸಂಖ್ಯಾನಂಗಳ್" (ಕಶಸಾ. ೬೮-೫೨೯) ; ಪಯಿಂಛಾಸಿರಂ (ಭಾಷಾಭೂ. ೧೬೨ ಉದಾ) ; ಪತ್ತರ್ಕೆ—ಪಯಿಂಛಾಸಿರಂ (ಶಮದ. ೧೯೧ ಪ್ರಯೋ) ; ಪಯಿಂಛಾಸಿರಂ ಮತ್ತೆ ರಾಜಿಸುವ ವಿಖ್ಯಾತವೀರಗಣಾಳಿ ಇರ್ಪುದವರಾರೆಂಬೊಡಂ ಪೇಳ್ವೆವು (ಅರಾಚ. ೧-೧೩-೬೪) ; ಆಲರಿಚನಂಚೆಗೆಡೆಯಪ್ಪ ಪಯಿಂಛಾಸಿರೆಸಟ ಕೆಂದಾವರೆಗಳಿಂ ಕೂಡಿ ಕಿಚ್ಚಿನೊಲ್ ಬೆಳಗುತಿರ್ಪ ಪುಷ್ಕರಮೊಂದಿರ್ಕುಂ (ಅದ್ಭುತ. ೩೯-೨೩). **ಪಯಿಂಜಾಸಿರ :** ಹೆಬ್ಬುಲಿಯನಡರಿ ಕೊಂಕಣಜೋಗಿಯಾ ಪಯಿಂಜಾಸಿರದ ಪಡೆಗೂಡಿ ಬರುತಿರ್ದೊಡೆ (ಚೇರಮ. ೯-೬) ; ಪಯಿಂಜಾಸಿರಂ, ಪತ್ತುಸಾಸಿರಂ (ಶಬ್ದಾನು. ೩೬೩ ಪ್ರಯೋ).

ಪಯಿಂಛಾಸಿರ್ವರ್ = ಹತ್ತುಸಾವಿರ ಜನ,—ಮಂದಿ : ನಿಚ್ಚಂ ಧರಾಧೀಶರಂ ಪಡಲಿಟ್ಟಂತಿರೆ ಮಾಟ್ಟಿನೋವದೆ ಪಯಿಂಛಾಸಿರ್ವರಂ ಯುದ್ಧದೊಳ್ (ಪಂಪಭಾ. ೧೦-೨೫) ; ಅಂತು ಭೀಷ್ಮಂ . . . ಮಹಾಪ್ರಳಯಭೈರವನಂತೆ ಮಸಗಿ ಪಯಿಂಛಾಸಿರ್ವರ್ ಮಕುಟಬದ್ಧರಂ ಕೊಂದಾಗಳ್ (ಪಂಪಭಾ. ೧೧-೪೦ವ).

[ಪಯಿನ್$_2$(<ಪತ್ತು$_3$)+ಸಾಸಿರ]

ಪಯಿಂಜಾಸಿರ 'ಪಯಿಂಛಾಸಿರ' ನೋ.

ಪಯಿಂಟು 'ಪಾಯಿಂಟು' ನೋ.

ಪಯಿಕ, ಪಯೀಕ, ಪಯ್ಕ, ಪೈಕ (ನಾ). ೧. ಗುಂಪು; ಬಳಗ; ಪರಿವಾರ : ಬಾಚಿಗೌಡನ ವರಸುಜಾತನೆಂದೆನಿಸುವನು ಕೂಚಿಮಾರನು ತನ್ನ ಪಯಿಕದೊಡನಿರೆ ನಿಗಮಗೋಚರನು (ಮರುಚಾ. ೨-೫೩). ೨. ಒಂದು ವಿಶಿಷ್ಟವಾದ ಪರಿಚಾರಕವರ್ಗದ ಹೆಸರು : ಅಂತು ಪಯಿಕ ಮೂಱಕ್ಕಂ ಅಕ್ಕಿ ಹಾನೆ ನಾಲ್ವತ್ತಱಲೆ××× ಮೂಡೆ ನೂಱ ಮೂವತ್ತಱಯಿದು (ಸೌಇಇ. IX-ii, ೪೧೭-೩೯ ; 1377) ; ವಶಿಷ್ಟಗೋತ್ರದ ನೆಲಮನೆಯ ಪಯಿಕದ ಹೆಬ್ಬಲಿಗೆಯ ಗೋವಿಂದಅಧಿಕಾರಿಗಳ ಮಗದಿರೂ (ಎಕ. VIII, ನಗರ. ೧-೧೩ ; 1566) ; ಹಿಂದೆ ನಂಮ ಮೊರಸ ಪಯಿಕಕ್ಕೆ ನಡವ ಆಚಾರ ಕಟ್ಟಳೆ ಅಪುತ್ರಿಕವಿಲ್ಲ (ಎಕ. IX (s), ಮಾಗಡಿ. ೯೬-೨೪ ; ಸು. 1650) ; ಚನ್ನಕೇಶ್ವರಸ್ವಾಮಿಗೆ ನಿತ್ಯೋತ್ಸವ ಪಕ್ಷೋತ್ಸವ . . . ಮುಂತಾದ ಶೇವೆ ಪಡಿತರ ದೀಪಾರಾಧನೆ ಸಕಲವಿನಿಯೋಗ ಪಯಿಕಕ್ಕೆ ಸಮರ್ಪಿಸಿದು (ಎಕ. IX, ದೇವನ. ೩೦-೧೪ ; 1729). ೩. ನಾಡಿನ ಒಂದು ವಿಭಾಗ ; ಕಂಪಣ : "ವಿಷಯಮೆನೆ ಕೊಟ್ಟಮೆನೆ ಪಯಿಕ [ಪಾಠಾಂ. ಪಯ್ಕ, ಪೈಕ]ಮೆನೆ ಕಂಪಣಕೆ ಪೆಸರೆನಿಕ್ಕುಂ" (ಮಂಗರಾ. ೫೬-೨) ; "ಪಯಿಕ—ಪದಿಕ = ಕಾಲ್ನಡೆ, ಪ್ರದೇಶ" (ತದ್ಭಕೋ. ೫೧). ೪. ಜಮೀನಿನ ಒಂದು ಭಾಗ,—ತುಂಡು : ಯಿಂತೀ ಪಯಿಕ ನಾಲ್ಕಱ ಬಾಳು ಮನೆ [ಉ]ಪ್ಪು ನಾಗರಕೆಱೆ ಬಾವಿ . . . ಬೆಟ್ಟು ಸಹಿತವಾಗಿ ಬಹ ಭತ್ತ ನಾಗಂಡುಗದ ಮೂಡೆ ನೂಱ ಇಪ್ಪತ್ತುನಾಲ್ಕು (ಸೌಇಇ. IX-ii, ೪೦೯-೨೩ ; 1365). **ಪಯೀಕ :** ೨. ಸುಂಕ ತಳವಾಱಕೆ ಮಣಿಹ ಪಯೀಕ ಸಹ ಸರ್ವಮಾನ್ಯವಾಗಿ ಸಮರ್ಪಿಸಿ ಕೃತಾರ್ಥನಾದನು (ಎಕ. XI, ದಾವಣ. ೧೮-೨೬ ; 1561). **ಪಯ್ಕ :** ೨. ದಳವಾಯಿ ಬೆಟ್ಟದ ಅರಸುವಿನ ಸಜ್ಜನಿಕೆಯನ್ನೂ ದುರುಪಯೋಗಪಡಿಸಿಕೊಂಡು ಧೂರ್ತರಾಗುತ್ತಿದ್ದ ಹಳೆಯ ಪಯ್ಕದವರನ್ನು . . . ನಿಗ್ರಹಿಸುವುದಕ್ಕೆ ಸಮರ್ಥನೊಬ್ಬನು ಬೇಕಾಗಿತ್ತು (ಸಂಸಕ. ೧೦೨). ೫. ಒಂದೇ ವರ್ಗಕ್ಕೆ ಸೇರಿದ ಅನೇಕ ವಸ್ತುಗಳು : (ಕ). **ಪೈಕ :** ೧. ಮೆಟ್ಟಕ್ಕಿಯಂ ಮೆಟ್ಟಿಯಾಯತವಾಯತವ ಕೇಳ್ದುತಕ್ಕೆರಡು ಪೈಕ ಸುಮುಹೂರ್ತಮೆನಲಱಾವವರ ಚರಣಾಂಬುಜಕ್ಕೆ ಶರಣು (ಲಕಿಚಿಂ. ೧೫-೨೫) ;

ನಿಮ್ಮ ಪೈಕಕೆ ಖುಲ್ಲತನ ಸಹಜ (ಕುವ್ಯಾವಿ. ೭-೫); ಅಳಿಯ ಮಕ್ಕಳ ಪೈಕ [ಪಾಠಾಂ. ಪಯಿಕ]ಭಾವ ಸಂಗಮದೇವನೊಳಗೆ ಸೇರಿತು ಪಕ್ಷ ವಱಿತು (ಕುರಾಸಾಂ. ೩೧-೫೮); ಕಲಿ ಸಾಲ ಖಡರರ ಪೈಕವನು ಕಲ ಕಿದನು ಕಲ್ಪಾನಳನ ಕಡುಹಿನಲಿ (ಅಂಬಿಕಾ. ೨೨-೮). ೨. ಬೆಟ್ಟದ ಚಾಮೇಂದ್ರ ಸಾಕಿದ ಹಳೆಯ ಪೈಕದ ನಾಯಕರು ಒಳಹೊಳ್ಳು ವೈರಿ ಮಾರ್ಬಲವನು ಸದೆದು (ಕಂಸವಿ. ೬-೭೯); ಸಕಲ ವಿನಿಯೋಗ ಪೈಕ ಸಹಾ ಸಮರ್ಪ್ಪಿಸಿದ (ಎಕ. IX, ದೇವಸ. ೩೭-೧೧; 1698); ಹಳೆಯಾ ಪೈಕ ಸಂದಣಿ ಅಂದಣದ ಎಡಬಲದಿ (ಶರಲೀ. ೫೪೨-೧); "ಪೈಕ" (ದಂಡಾಳು)ಯೆಂಬ ಶಬ್ದವಾದರೂ ಇದೇ ಅಭಿಪ್ರಾಯವನ್ನು ತಿಳಿಸುತ್ತದೆ (ಕಭಾಗೆ. ೧೮೧); ಪ್ರಾಚೀನಕಾಲದಲ್ಲಿ ಹಟ್ಟಿಕಾರರ ಈ ಒಳಪಂಗಡಕ್ಕೆ ಪತ್ತಿಗಳು, ಪದಾತಿಗಳು ಎಂದು ಹೆಸರಿತ್ತು. ಇವರೇ ಮುಂದೆ ಪಾಯಿಕರು, ಪೈಕರು . . . ಎಂದು ಮುಂತಾಗಿ ಕರೆಯಲ್ಪಟ್ಟಿದ್ದಾರೆ(ಕರ್ಣಾಪೂ. ೨೭). ೪. ಬಡಗಲು ಪೈಕದ ಕೇರಿಯಲಿ (ಬೊಂಕಶಾ. ೧೯೩೮. ಇಂಡಿ. ೩೫-೨೮; ?). ೫. ಬಣ; ಪಂಗಡ; ಪಕ್ಷ: ಏನ ಹೇಳುವೆ ನಿನ್ನವರ ಜಯಮಾನವನು ಮತ್ತೊಂದು ಪೈಕದ ಮಾನಭಂಗಸ್ಥಿತಿಯನೆಲೆ ಜನ ಮೇಜಯಕ್ಷಿತಿಪ (ಕುವ್ಯಾಆ. ೧೭-೨); ಪೈಕವೆರಡ ವಿಷಮವೀರರ ವಿಗ್ರಹದ ಸರಭಸದ ಸೌರಂಭಾತಿಶಯ ನಡೆದುದು ಸುರಾಸುರರ (ತೊರರಾ.೬-೧೪-೧). ೭. ಹೊನ್ನು; ಹಣ; ದ್ರವ್ಯ: ಹಿರಿಯರು ಸಮಧಾತು ಭಕ್ತಿಯ ನೆಱೆವರು ಭರವಸಕ್ಕೆ ಬಂದು ಭರಿತಘಟ ಪೈಕವ ಮತ್ತೆ ಧರಿಸದಂತೆ (ತಿವಗೀ. ೮೧-೩೯೪); ತನ್ನರಮನೆಯ ಪೈಕದ ವಾರಕದ ಭಂಗಾರವೊಡ್ಡಿತು ಕೋಟಿಸಂಖ್ಯೆಯಲಿ (ಕುವ್ಯಾಸ. ೧೪-೯).

ಪೈಕವರು, ಪೈಕದವರು (ಬಹುವ): ಗರುವ ಕೇಳಯ್ಯ ಪಾರ್ವತಿಯ ಪೈಕದರು ನಾವ್ (ಲಶಿಚಿಂ. ೩೭-೫೨); ಇವರು ಬಿಲ್ಲಾಸುರನ ಪೈಕದವರು ಇವರು ಭಸ್ಮಾಸುರನ ಕುಲದವರು ಭಾವಿಸುವೊಡಿವರಂಧಕಾಸುರನ ಗೋತ್ರದವರು (ವೀಶೈಪು. ೨-೧೨-೨೯).

[<ಪ್ರಾ. ಪಯಿಕ್ಕ./ಸಂ. ಪದಿಕ./ತೆಲು. ಪಯಿಕ, ಪೈಕ./ಮರಾ. ಪೈಕಾ]

ಪಯಿಕರ 'ಪತಿಕರ' ನೋ.

ಪಯಿಕಿ 'ಪೈಕಿ' ನೋ.

ಪಯಿತ್ರ, ಪೈತ್ರ$_1$ (ನಾ). ಚೈತ್ರಮಾಸದಲ್ಲಿ ಆಚರಿಸುವ ಒಂದು ಉತ್ಸವ: ಧುಪ ದೀಪ ನಿವೇದ್ಯ ಚೈತ್ರಪಯಿತ್ರಕ್ಕೆ ಸಲಿಸುವದು (ಕಇ. II, ೩೨-೧೧; 1204). **ಪೈತ್ರ**$_1$: ವರ್ಷಂಪ್ರತಿ ಚೈತ್ರಕ್ಕೆ ಹಾಗ ಮತ್ತಂ ಪೈತ್ರಕ್ಕೆ ಹಾಗಮಂ ಬಿಟ್ಟರ್ (ಸೌಇಇ. XV, ೧೩೫-೫೪; 1179). 'ಚೈತ್ರಪವಿತ್ರ' ಪರಾ. [<ಸಂ. ಪವಿತ್ರ]

ಪಯಿತ್ರಾರೋಪಣ (ನಾ). ಶ್ರಾವಣಮಾಸದಲ್ಲಿ ದೇವರ ವಿಗ್ರಹಕ್ಕೆ ಯಜ್ಞೋಪವೀತವನ್ನು ತೊಡಿಸುವ ವಿಧಿ ಮತ್ತು ಆ ಸಮಯದಲ್ಲಿ ಆಚರಿಸುವ ಉತ್ಸವ: ಶ್ರಾವಣಶುದ್ಧ ಚತುರ್ದ್ದಸೆ ಸೋಮವಾರದಂದು ಪಯಿತ್ರಾರೋಪಣ ಸಮಯದಲು (ಎಕ. XI, ದಾವಣ. ೧೬೨-೧೫; 1265). [<ಸಂ. ಪವಿತ್ರಾರೋಪಣ]

ಪಯಿನ್$_1$ 'ಪಯನ್' ನೋ.

ಪಯಿನ್$_2$ 'ಪದಿನ್' ನೋ.

ಪಯಿನ್ನೂಱು (ನಾ). ಒಂದು ಸಂಖ್ಯೆ; ಹತ್ತುನೂರು; ಸಾವಿರ: ಪಯಿನ್ನೂಱು, ಪತ್ತುನೂಱು (ಶಬ್ದಾನು. ೩೬೩ ಪ್ರಯೋ).

[ಪಯಿನ್$_2$ (<ಪತ್ತು$_3$)+ನೂಱು$_2$]

ಪಯಿಮ್ಮೆ (ನಾ). ಹತ್ತು ಸಲ,—ಬಾರಿ: ಪಯಿಮ್ಮೆ, ಪಯಿಂಬರ್ (ಶಬ್ದಾನು. ೩೬೩ ಪ್ರಯೋ). [ಪಯಿನ್$_2$ (<ಪತ್ತು$_3$)+-ಮ್ಮೆ$_2$]

ಪಯಿರ್, ಪಯಿರು, ಪೈರು (ನಾ). ೧. ಹೊಲ, ಗದ್ದೆಗಳಲ್ಲಿ ಬೆಳೆಯುವ ಬೆಳೆ: (ಕಿ). ೨. ಗಿಡ, ಮರ, ಬಳ್ಳಿ ಮುಂತಾದ ಸಸ್ಯ; ಹಸುರು ಬೆಳೆ: (ಕಿ) 'ಪಸುರ್$_2$' ಪರಾ. **ಪಯಿರು**: ೧. ಪಯಿರ್ಕೆದದಿರೆ ಸುರಿವ ಮಳೆಯ ಸುರಿಸದಿದ್ದರೆ ಅವರೇತರದಲ್ಲಿ ನೀಡುವರಯ್ಯಾ (ದೇದಾವ. ೪೦-೭೮); ನಾನಾ ಜೀವಿಗಳ್ಗೆ ಸಂಪತ್ಸೌಖ್ಯವಪ್ಪಂತು ಸಕಲ ಫಲಮಂ ಪಯಿರನಿಕ್ಕುವ ಮಹಾಪ್ರಜೆಗಳು (ಚಿಬಪು. ೨೯-೪೦); ಯೇನುಂಟಾದ ಪಯಿರುಗಳನು ಆಗುಮಾಡಿ ನಿಂಮ ಪುತ್ರ ಪೌತ್ರಪಾರಂಪರೆಯಾಗಿ . . . ಅನುಭವಿಸಿಕೊಂಡು ಬಹಿರಿ (ಮೈಅರಿ. ೧೯೩೩, ೬೬-೧೬; 1598); ಮಳೆಯಿಲ್ಲದ್ದರಿಂದ ಪಯಿರುಗಳು ಹಾಳಾಗಿ ಜನಗಳು ಸತ್ತರು (ವ್ಯಾಸಬಿ. ೧೬೦). **ಪೈರು**: ೧. ಪೈರಿಗೆ ನೀರು ಬೇಡೆಂಬಲ್ಲಿ ಉಚಿತವನಱಿದು ಬಿಡಬೇಕು (ಸರ್ವವ. ೧೦೬-೫೭೧); ಒಣಗಲ್ ಪೈರಿಗೆ ಬಾರದಿರ್ದ ಮಟ್ ತಾಂ ಬಂದೇನು (ಸೋಮೇಶ. ೧೬); ಬೆಳೆದಿಹ ಪೈರುಗಳ ಬಿಟ್ಟು ಜನವಂಚಿ ಜಗುಳಿದರು (ಕಂಸವಿ. ೧೧-೪೮); ದೇವಸ್ಥಾನಗಳಿಗೆ ಸಲ್ವ ಪೈರು (ಎಕ. III, ಶ್ರೀರಂಗ. ೧೦೦-೧೬೨; 1724); ಗದ್ದೆ ಕೋಗಿನಲಿ, ಹಳದಿಯ ಪೈರು ಬೆಳೆಬೆಳೆದು ಹಬ್ಬಿಯಿರೆ ತಾಲಿವನ ವನಧಿಯ ಸುವಿಸ್ತೀರ್ಣ ಲಂಬಾಯಮಾನ ಸೈಕತವೇಲೆಯನು ಹೋಲಿ (ಚಿತ್ರಾಂಗ. ೫೨-೧೪೩೨).

ಪೈರುಪಚ್ಚೆ = ಬೆಳೆ; ಫಸಲು: ಅರಣ್ಯಕ್ಕೆ ಎರಡು ಆನೆ ಬಂದು ಇದೆ. ರೈತರ ಪೈರುಪಚ್ಚೆ ಕರಡು ಮಾಡುತ್ತದೆ (ರಾಜೇಂದ್ರ. ೨೬೯); ಕೊಳವು ಕುಂಟೆಯು ಪೈರುಪಚ್ಚೆಯು ತಳೆದ ಮನೆ ಅಲ್ಲಿದ್ದವು (ಕಎಪು. ೧೭-೧೦).

[ದೇ.॥ ತಮಿ. ಮಲ. ಪಯಿರ್; ತುಳು. ಪೈರ್; ತೆಲು. ಪಯಿರು, ಪೈರು]

ಪಯಿರು 'ಪಯಿರ್' ನೋ.

ಪಯಿಲಾ, ಪೈಲಾ (ಗು). (ಉಕ) ೧. ಮೊದಲನೆಯ; ಒಂದನೆಯ: 'ಪಯಿಲಾನಂಬರು' ಪರಾ. (ನಾ). ೨. ಮೊದಲನೆಯದು; ಪ್ರಥಮಸ್ಥಾನದಲ್ಲಿರುವುದು: ಆ ಸೆಟೆಗೋಡಿನ ಎತ್ತು ಲಡಾಯದಲ್ಲಿ ಗೂಳಿ ಹೋರಿಗಿಂತಲೂ ಪಯಿಲಾ ಆಗುವುದರಲ್ಲಿ ಸಂದೇಹವಿಲ್ಲ (ರೂಢಿ). **ಪೈಲಾ**: ೩. ಮೊದಲನೆಯವನು; ಪ್ರಥಮಸ್ಥಾನದಲ್ಲಿರುವವನು: ಎಲ್ಲಾದರಾಗ ಪೈಲಾ ಬಂದಾನ ಅಪ್ಪಾ (ಮುಗಿಮ. ೬೪). ೪. ಮೊದಲನೆಯ ತಾರೀಖು; ಒಂದನೆಯ ತಾರೀಖು: ಎಷ್ಟು ಬೇಕೋ ಅಷ್ಟು ನಾನು ಕೊಡ್ತೀನಿ. ಪೈಲಾಕ್ಕೆ ಪರತು ಕೊಟ್ಟು ಬಿಡುವಂತಿ (ದಾಕೂಟ. ೨೧); ಮಾರ್ಚ್ ಪೈಲಾಕ ಮನೀ ನಿರೋಪ ತಗೊಂಡರಂದರ ಆತು (ದೀಪಹ. II, ೨೩೦); ಸಾಮಾನು ಅಷ್ಟಕ್ಕಷ್ಟ ಅದ. ಪೈಲಾದ ತನಕ ಹೋಗತದ (ಗೀಚುಗೆ. ೧೮).

[<ಪ್ರಾ. ಪಹಿಲ./ಹಿಂ. ಪಹಲಾ, ಪಹಿಲಾ; ಮರಾ. ಪಹಿಲಾ]

ಪಯಿಲಾನಂಬರು, ಪೈಲಾನಂಬರು (ನಾ). ೧. ಮೊದಲನೆಯ ಸ್ಥಾನ: ಗಳಿಗಿ ಪುಸ್ತಕ ಹಿಡಿಯೂದಿಲ್ಲಾ ಮನ್ಯಾಗ, ಪರೀಕ್ಷದಾಗ ನೋಡಿದ್ಯಾ ಪಯಿಲಾನಂಬರು (ಪೈನಿ. ೨೦). **ಪೈಲಾನಂಬರು**: ೨. ಶ್ರೇಷ್ಠದರ್ಜೆ; ಉತ್ತಮಮಟ್ಟ: ಪೈಲಾನಂಬರ ಪರಾ ಅವ (ತಿಡುಗು. ೫೯). [ಪಯಿಲಾ+ನಂಬರು]

ಪಯಿಲ್ವಾನ್ 'ಪೈಲವಾನ' ನೋ.

ಪಯಿಸರಿಸು 'ಪೈಸರಿಸು' ನೋ.

ಪಯಿಾಕ 'ಪಯಿಕ' ನೋ.

ಪಯೋಂಬುಧಿ (ನಾ). = ಪಯೋಧಿ ೧: ಒಗೆದವು . . . ಕೌಸ್ತುಭಾದಿ ನಾನಾವಿಧವಸ್ತುಗಳೊಡನೆ ಪಯೋಂಬುಧಿಯೊಳಗೆ (ಭಂದೋಂಬು.ಕಿ. ೧-೨೪). [ಸಂ.]

ಪಯೋಜ (ನಾ). ನೀರಿನಲ್ಲಿ ಹುಟ್ಟಿದುದು ; ತಾವರೆ ; ಕಮಲ : ಪಯೋಜೋಪಮವಕ್ತ್ರೆ ತಳ್ಪತಳದಿಂದೊಸೆದೆಟ್ಟು (ಶಾಂತಿಪು. ೯-೨೦೯) ; ಮುನಿಮಂಡಳೀಪದಪಯೋಜಶುಶ್ರೂಷೆಯಿಂ . . . ಕಳೆವನಂತು ಪೊಟ್ಟಂ ನೃಪಂ (ಕಾದಂಪೂ. ೨೨) ; ತತ್ಪ್ರಿಯಾನನ ಪಯೋಜಮಂ ಕುಟ್ಮಳೀಕೃತಂ ಮಾಡಿದುದೇ (ಸುಕುಮಾ. ೯-೯೨) ; ಹೂನವಾಮರನತ ಪಾದ ಪಯೋಜನ ಸೇನೆ ಸಂಭ್ರಮ ಮೀಱುತಿಹುದು (ತ್ರಿಪುಸಾಂ. ೧೧-೧೨೧). [ಸಂ.]

ಪಯೋಜಂತು (ನಾ). ನೀರಿನಲ್ಲಿ ವಾಸಿಸುವ ಮೀನು, ಮೊಸಳೆ ಮುಂತಾದುವು ; ಜಲಚರ. [ಸಂ.]

ಪಯೋಜಜ (ನಾ). ಕಮಲದಲ್ಲಿ ಜನಿಸಿದವನು ; ಬ್ರಹ್ಮ : ಇಂದು ಪಯೋಜಜಂಗೆ ಕೃತಕೃತ್ಯತೆ ಸಾರ್ದುದು (ಚಂದ್ರಪು. ೬-೭೯). [ಸಂ.]

ಪಯೋಜನಾಭ (ನಾ). ಹೊಕ್ಕುಳಲ್ಲಿ ಕಮಲವುಳ್ಳವನು; ವಿಷ್ಣು : ಪಯೋಜನಾಭನು ನಿರ್ಮಿಸನೆ ಚೌರಾಸಿದುರ್ಗಗಳ (ಬಸಪು. ೫೪-೩೬). [ಸಂ.]

ಪಯೋಜನ್ಮ (ನಾ). ೧. ನೀರಿನಿಂದ ಹುಟ್ಟುವುದು ; ಮೋಡ. ೨. "ಕಮಲ" (ಅನಂನಾ). [ಸಂ.]

ಪಯೋಜಸಖ (ನಾ). ತಾವರೆಯ ಗೆಳೆಯ ; ಸೂರ್ಯ : 'ಪಯೋಜಸಖಗೇಹ' ಪರಾ. [ಪಯೋಜ+ಸಖ]

ಪಯೋಜಸಖಗೇಹ (ನಾ). [ಜ್ಯೋತಿ] ಸೂರ್ಯನಿರುವ ರಾಶಿ ; ಸಿಂಹರಾಶಿ : ಪಯೋಜಸಖಗೇಹಸ್ಥಾಯಿಯಾದಂದು ಸದ್ಯುವತೀ ನಾಯಕನಂಗನಾರ್ಜಿತಧನಂ ಮಂದಾತ್ಮಜಂ ತನ್ನರಂ (ಜಾತಕ. ೧೭-೩೦). [ಪಯೋಜಸಖ+ಗೇಹ]

ಪಯೋಜಸೂತ್ರ (ನಾ). ಕಮಲದ ನಾಳ,—ದೇಟು : ಬಕುಳದ ಪೂವಿನಕ್ಷವಳಯಕ್ಕೆ ದುಕೂಲದ ಚೆಲ್ವನಪ್ಪ ಸಾಟಿಗೆಗೆ ಪಯೋಜಸೂತ್ರನವ ಮುಂಜಿಗೆ ನೇತ್ರದ ಕೋವಣಕ್ಕೆ ಮಿಕ್ಕಗುರುವ ಬೂದಿಗೊಡ್ಡೆ ತನುವಂ . . . ನಿಂದಳೊರ್ವಳಂ ಕಂಡು (ಶಾಂತಿಪು.೮-೯೦). [ಪಯೋಜ+ಸೂತ್ರ]

ಪಯೋಜಿನಿ (ನಾ). ತಾವರೆ ; ಕಮಲ : ಪಯೋಜಿನಿಗುಳ್ಳರಲಿಂಪುವೆತ್ತ ಸಂಪಗೆಗಲರ್ಜೊಂಪಮುದ್ಗಮದಮಂಜರಿ ಪಾಟಳಿಗಾಗೆ ಬಂದಂ . . . ಮಾಧವಂ (ರಾಜಶೇ. ೧೦-೩). [ಸಂ. ಪಯೋಜಿನೀ]

ಪಯೋದ (ನಾ). ನೀರನ್ನು ಕೊಡುವುದು ; ಮೋಡ : ಸ್ತನಿತಘನ ಬೃಂಹಿತಂ ದುರ್ದಿನಮದಪೂರಂ ಪಯೋದಗಜಘಟೆ ಸುಟಿದತ್ತು (ಚಂದ್ರಪು. ೪-೩೨) ; ಉಣ್ಮುವ ಮಿಂಚದು ದೀಪಮಾಲೆಯುತ್ತುಂಗ ಪಯೋದಮಿಟ್ಟ ತೆರೆ . . . ಅಲಿವರಲೊಪ್ಪುವ ಮುತ್ತಿನ ಸೇಸೆಯಾಗೆ ಕಾರುಂ ಗಗನಸ್ಥಳೀರಮೆಯುಮೊಂದಿದರೊಂದು ವಿವಾಹಲೀಲೆಯಂ (ರಾಜಶೇ. ೮-೧೧೮). [ಸಂ.]

ಪಯೋದಪಥ (ನಾ). ಮೋಡಗಳು ಸಂಚರಿಸುವ ಮಾರ್ಗ ; ಆಕಾಶ : ನಿರವಧಿಪ್ರಕಾಶಮಯಂ ತಾನಾದುದು ಭಾವಿಸಿ ನೋಡೆ ಪಯೋದಪಥಂ ಪ್ರಥಿತಮಾದ ದೇವಾಗಮದೊಳ್ (ವರ್ಧಪು. ೧೩-೯೧). [ಪಯೋದ+ಪಥ]

ಪಯೋದಮಾರ್ಗ (ನಾ). = ಪಯೋದಪಥ : ಇದಿರ್ವಂದು ಪವನ ಪವನಂ ತದ್ವಿಮಾನಗತವದನಸ್ವೇದನವಜಲಕಣಗಣಾಂಭಮನಿನಿಸಾಱಿಸಿದುದು ಪಯೋದಮಾರ್ಗಾಗಮದೊಳ್ (ಶಾಂತಿಪು. ೩-೪). [ಪಯೋದ+ಮಾರ್ಗ]

ಪಯೋದಾಗಮ (ನಾ). ಮೋಡಗಳ ಬರುವಿಕೆ ; ಮಳೆಗಾಲ : ನವಿಲಾಟಂ ಸೊಗಯಿಸುಗುಂ ಸುವಿನೀಲಾಯತಗಳಂ ಪಯೋದಾಗಮದೊಳ್ (ಕವಿಶಾ. ೩-೭). [ಪಯೋದ+ಆಗಮ]

ಪಯೋಧ (ನಾ). ೧. ಮಳೆಯ ಮೋಡ ; ಕಾರ್ಮೋಡ : ಹರಿ ನೀಲದ ಭಿತ್ತಿಯೊಳಂಬುರುಹಾನನೆ ಕೂಡೆ ಕುಂಕುಮದ ಕಾರಣೆಯಂ ವಿರಚಿಸಿದಳರರೆ ಮುಂಗಾರ್ ಸಿರಿ ಸೆಳೆಮಿಂಚಂ ಪಯೋಧದೊಳ್ಪುಟ್ಟಿಪ ಪೋಲ್ (ರಾಜಶೇ. ೮-೪). ೨. ಸಮುದ್ರ. ೩. ಕೆರೆ, ಕೊಳ ಇತ್ಯಾದಿ. [ಸಂ. ಪಯೋಧಸ್]

ಪಯೋಧರ (ನಾ). ೧. ನೀರನ್ನು ಹೊಂದಿರುವುದು ; ಮೋಡ : "ಅಭ್ರಂ . . . ಪಯೋಧರಃ . . . ಬಲಾಹಕಃ— ಈ ೧೦ ಮುಗಿಲ ಪೆಸರ್" (ಹಲಾಯು. ೧೧-೫೮) ; ಚೆಲ್ವನಾವರಿಸಿದುವಂದು ಸಂದಣಿಸಿ ನೀಳ್ದ ಪಯೋಧರವಾರಿಧಾರೆಗಳ್ (ಜಗವಿ. ೪-೩೧); ಆ ಪಯೋಧರತಂಡ ಜಂಝಾಮಾರುತರೆನಿಸುತ . . . ಕೊತ್ತಳಾಳ್ವೇರಿ ದುರ್ಗಮ ಬಳಸಿ ಕೊಂಡಿರ್ಪರು (ನವಮೋ. ೨-೫೮). ೨. ಮೊಲೆ; ಸ್ತನ : "ಉರಸಿಜಂ... ಪಯೋಧರಃ, ಸ್ತನಃ—ಈ ೫ ಮೊಲೆ" (ಹಲಾಯು. ೮೭-೩೭೨) ; ಪಯೋಧರದ್ವಯಂಗಳ ತುದಿ ಕರ್ಗಿ ತೋಱುತಮಲೇಂದುವ ಲಾಂಛನ ದಂದದಂತೆ (ಕಾವ್ಯಸಾ. ೩೬೦ ಶೂದ್ರಕ) ; ನೋಡಿದಂ . . . ಗುರುಜಘನ ಪಯೋಧರಯುಗಭರವಿಧುರೆಯಂ (ಕವಿರಾ. ೨-೫೬) ; ಎರಡುಮಚಲಂಗಳೆಡೆಯೊಳ್ ಪರಿವಮರನದೀಪ್ರವಾಹದಿಂದೆಸೆವ ವಸುಂಧರೆಯಂದದಿನಲಘು ಪಯೋಧರವಿಲಸಿತಹಾರಲತಿಕೆ ಸತಿ ಸೊಗಯಿಸಿದಳ್ (ಕಾದಂಪೂ. ೪೯೬). ೧,೨ : ದಿನನಾಥಂ ನವವರ್ಷಾವನಿತೆಯ ಪೀವರಪಯೋಧರಸ್ಪರ್ಶನದಿಂ ವಿನತಾಂಶುಕನಾದಂ (ಜಗವಿ. ೪-೧೧) ; ಸ್ಫುರಿತಪಯೋಧರಂಗಳೆ ಪಯೋಧರಮಂ ಮರಲೊತ್ತೆ . . . ಮುಖಾಬ್ಜಮದಬ್ಜಲೀಲೆಯಂತಿರೆ ಸುರಕಾಂತೆಯರ್ ಸಜಳಕಾಂತೆಯರೊಪ್ಪಿದರಾ ಪ್ರಯಾಣದೊಳ್ (ಪುಸ್ಪಪು. ೧೦-೩೮). ೩. ಸಮುದ್ರ ; ಕಡಲು. ೪. ಕಣ್ಣು ; ನಯನ : "ನಯನಂ ಮೇಘಂ ಉದಧಿ ಕುಚಂಗಳು ನಾಲ್ಕುಂ . . . ಪಯೋಧರ ಶಬ್ದಂ" (ನಾನಾಕಂ. ೨೧) ; "ನಯನಾಭ್ರ ಕುಚಾಂಬುಧಿಗಳ್ ಪಯೋಧರಂ" (ನಾನಾರ. ೭). ೫. ಕೆಚ್ಚಲು. ೬. ಬೆನ್ನೆಲುಬು ; ಕಶೇರು. [ಸಂ.]

ಪಯೋಧರಕಾಲ (ನಾ). ಮೋಡಗಳಿರುವ ಕಾಲ ; ಮಳೆಗಾಲ : ತಮಗಿದಿರಂ ಬರ್ಪಂತೆ ಬಂದ ಪಯೋಧರಕಾಲದೊಳೆರಡು ತಡಿಯುಮಂ ಪೊಯ್ದು ಪರಿವ ತೊಱೆಗಳುಮಂ . . . [ಜ]ರಿವೊನಲ್ಗಳುಮಂ ಕಂಡು (ಪಂಪಭಾ. ೭-೨೫ ಪ). [ಪಯೋಧರ+ಕಾಲ]

ಪಯೋಧರಶರ (ನಾ). (ಮಳೆಯನ್ನು ಸುರಿಸುವ) ಮೋಡವನ್ನು ಸೃಷ್ಟಿಸುವ ಬಾಣ ; ವಾರುಣಾಸ್ತ್ರ : ವಿಯಚ್ಚರಾಧಿಪತಿಯೆಚ್ಚ ಕೃಶಾನುಪೃಷತ್ಕಮಂ ಪಯೋಧರಶರದಿಂ . . . ಎಚ್ಚು ತೂಳ್ದಿದಂ (ಚಂದ್ರಪು. ೬-೩೯). [ಪಯೋಧರ+ಶರ]

ಪಯೋಧರಶಿಲೀಮುಖ (ನಾ). = ಪಯೋಧರಶರ: ಪಯೋಧರಶಿಲೀಮುಖಮಂ ಮರುದುಗ್ರಬಾಣದಿಂ . . . ಎಚ್ಚು ತೂಳ್ದಿದಂ (ಚಂದ್ರಪು. ೬-೩೯). [ಪಯೋಧರ+ಶಿಲೀಮುಖ]

ಪಯೋಧಾರೆ (ನಾ). ನೀರಿನ ಧಾರೆ : ಸುಟಿದುದು . . . ಜಳದೇವೀ ಸಮೂಹಂಬೊಲಂಭೋದಪಯೋಧಾರಾಳಿ ತಳ್ಪೊಯ್ವಿನಮೆಸೆದಿರುಳೊಳ್ ಹಾರನಾರೀಕದಂಬಂ (ಜಗವಿ. ೪-೨೯). [ಸಂ. ಪಯೋಧಾರಾ]

ಪಯೋಧಿ (ನಾ). ೧. ನೀರಿಗೆ ಆಶ್ರಯವಾದುದು ; ಸಮುದ್ರ; ಕಡಲು : ಪಯೋಧಿಗೊರ್ಮೆ ಜಿನಮಂದಿರಸುಂದರಮಂದಿರಕ್ಕೆ ಮತ್ತೊರ್ಮೆ ಮನುಷ್ಯಲೋಕ ಜಿನಪೂಜೆಗೆ ಪೋಗೆ (ಶಾಂತಿಪು. ೭-೩೫) ; ಶ್ರುತ ಪಯೋಧಿಯನೀಸಿದ ವರ್ಧಮಾನಭಟ್ಟಾರಕರಂ...ಅರ್ಚಿಪೆಂ (ಪಂರಾಮಾ. ೧-೧೪) ; ಮುಱುದು ಮಂದರಗಿರಿ ಪಯೋಧಿಯ ತೆರೆಗಳನು ತುಳಿವಂತೆ (ಕುಸ್ಯಾದ್ರೋ. ೩-೧೮). ೨. [ಜೈನ] ಕಾಲದ ಒಂದು ಗಣನೆ;

ಸಾಗರ : ಅಮರರನೇಂ ನಿರ್ಮೂಳಿಸುವನೊ ವಿಧಿ ಪಯೋಧಿಯುಗಳಾ ವಧಿಯೊಳ್ (ಮಲ್ಲಿಪು. ೧೩-೧೧೦). [ಸಂ.]

ಪಯೋಧಿಕೇಳಿ (ನಾ). ನೀರಾಟ; ಜಲಕೇಳಿ : ತೀರದ ನೀರದಂ ನೆಗೆದು ಗರ್ಜಿಪುದೆಂದು ಪಯೋಧಿಕೇಳಿಯಂ ಸಾರಮರಾಳನೇನುಳಿದುದೆ (ರಾಜಶೇ. ೧೩-೧೯). [ಪಯೋಧಿ + ಕೇಳಿ$_3$ (= ಕೇಲಿ)]

ಪಯೋನಿಧಿ (ನಾ). ೧. = ಪಯೋಧಿ ೧ : ಶ್ರೀಯನರಾತಿಸಾಧನ ಪಯೋನಿಧಿಯೊಳ್ ಪಡೆದುಂ ಧರಿತ್ರಿಯಂ ಜೀಯೆನೆ ಬೇಡಿಕೊಳ್ಳದೆ (ಸಂಪಭಾ. ೧-೧). ೨. ಹಾಲಿನ ಸಮುದ್ರ; ಕ್ಷೀರಸಾಗರ : ಪಯೋನಿಧಿಯಿಂದಂ ನಿಖಿಳಾವನೀಶ್ವರಭಯಸ್ಥಾನಂ . . . ಸುಪುತ್ರ ನೊಗೆತರ್ಕುಂ ನಿಮ್ಮೊಳುರ್ವೀಶ್ವರಾ (ಪುಷ್ಪಪು. ೩-೧೨೨); ಪಯೋನಿಧಿಯ ಕೆನೆಯೊಪ್ಪಮಲ್ಲದೆ ನೀರ್ಮೊಗೆಯಲಿಳಿವ ಮೇಘಂಗಳಲ್ಲೆನಿಸಿದುವು ಕಡಲೊಳು (ಚೈಮಿಭಾ. ೬-೬). [ಸಂ.]

ಪಯೋಬಿಂದು (ನಾ). ೧. ಹಾಲಿನ ಹನಿ,—ತೊಟ್ಟು: ಹರಿಯ ಪದಕಮಲಾಭಿಷೇಕದ ವರಪಯೋಬಿಂದುಗಳು. . . ಕಡಲಾಗಿ ಕೈಗೊಳಲು (ಕುವ್ಯಾಉ. ೮-೧೫). ೨. ನೀರಿನ ಹನಿ. [ಸಂ.]

ಪಯೋಭೃತ್ತು (ನಾ). ಮೊಲೆ; ಸ್ತನ : ರಜನೀಕಾಂತಾಪಯೋಭೃತ್ತಟಮಲಯಜಪತ್ರಂ . . . ಬೆಡಂಗಾಯ್ತು (ಚಂದ್ರಪು. ೮-೩೪); ಪಯೋಭೃದ್ಭರನಮ್ರಾಂಗಾಂಗನಾಚಾಲಿತ ಚಮರರುಹದ್ವಂದ್ವಪಾರ್ಶ್ವಂ (ರಾಜಶೇ. ೩-೨೭). [ಸಂ. ಪಯೋಭೃತ್]

ಪಯೋರಸ (ನಾ). ೧. ನೀರು; ಜಲ : ಪಯೋರಸಂ ತೀಡುವ ತೆಂಬೆಲರ್ ಮನದೊಳುರ್ಕೆಗಳಂ ಸುರತಾವಸಾನದೊಳ್ ಮಾಡೆ (ಶಾಂತಿಪು. ೮-೧೦೦). ೨. ಹಾಲು : ಚಂದಳಿರ್ದಂಪಂ ಬಿಂಬದೊಳೊಂದಿದ ಕೆಂಪಂ ಪಯೋರಸದೊಳಮರ್ದಿಂಪಂ ಕುಂದದ ರನ್ನದಲಂಪಂ ತಂದೊಂದೆನಿಸಿದ ವೊಲಧರಮೊಪ್ಪಿದುದವಳಾ (ರಾಜಶೇ. ೭-೫೩). [ಸಂ.]

ಪಯೋರಾಶಿ (ನಾ). ಸಮುದ್ರ; ಕಡಲು : ಪಯೋರಾಶಿತಟದೊಳಾತನ ಕೀರ್ತಿಪ್ರಮದೆ ಪಥಶ್ರಮದಿಂ ವಿಶ್ರಮಿಸಿದಳ್ (ಶಾಂತಿಪು. ೮-೫೫); ಪಯೋರಾಶಿಗಳಂ ಮುಟ್ಟಿತ್ತು ದಾನಪ್ಲವದೊಡನೆ ಪರಕ್ಷೋಣಿ ಪಾಲಾಂಗನಾದೃಗ್ವಿಗಳದ್ಭಾಷ್ಪಾಂಬುಧಾರಾಪ್ರಸರಂ (ಅಜಿಪು. ೯-೧೭); ತರಣಿ ಪಶ್ಚಿಮಪಯೋರಾಶಿಗೈತಂದನು (ಹಚಕಾ. ೯-೩೭). [ಸಂ.]

ಪಯೋರುಹ (ನಾ). ನೀರಿನಲ್ಲಿ ಹುಟ್ಟಿದುದು; ತಾವರೆ; ಕಮಲ: ಮುನೀಶ್ವರರ್ಗಳೆ ದೈವಮೆಂದವರ ಪಾದಪಯೋರುಹಸೇವೆಯಲ್ಲಿ ತತ್ಪರರೆನಿಪರ್ಗೆ ಪೇರ್ಟ್ ಪಡೆಯಲಾಱದುದೇಂ (ಕಾದಂಪೂ. ೩೪೮); ಕೈಮುಗಿವ ಮಿಲ್ಲಿಂದೆ ಪಿತೃಪದಪಯೋರುಹಕೆ (ಶ್ರೀರಾಮಾ. ೧೫೯-೧೯೯). [ಸಂ.]

ಪಯೋವಾರ್ಧಿ (ನಾ). = ಪಯೋಧಿ ೧ : ಪಯೋವಾರ್ಧಿಗೆ ಚಂದ್ರಮನಂ . . . ತೋರ್ಪಂತಾ ವಿಮಳೆಗೆ ಗಿರಿಜೆಗೆ ಶಿವಲಿಂಗಮನಧಿಕಮನಃ ಪ್ರಮೋದದಿಂ ತೋಱುವುದುಂ (ಗಿರಿಕ. ೩-೫೩). [ಸಂ.]

ಪಯೋವಿಕಾರ (ನಾ). ಹಾಲಿನ ರೂಪಾಂತರವಾದ ಮೊಸರು, ಬೆಣ್ಣೆ, ತುಪ್ಪ ಮೊದಲಾದುವು : ಪಯೋವಿಕಾರದಿಂ . . . ಫಳಮಕ್ಕುಂ . . . ಮನುಜಂಗೆ ಚಂದ್ರದತೆಯಪ್ಪಾರೋಹಿಗೇ ಹಂಗಳೊಳ್ (ಜಾತತಿ. ೯-೧೯). [ಸಂ.]

ಪಯ್ಕ 'ಪಯಿಕ' ನೋ.

ಪಯ್ಕನೆ (ಅ). ಬೇಗನೆ; ಕೂಡಲೆ : ಪಯ್ಕನೆ ರಥಂ ಪರಿದತ್ತು (ಕಬ್ದಾನು. ೨೦ ವ್ಯಾಖ್ಯಾ). [? + —ಅನೆ$_1$]

ಪಯ್ತು (ನಾ). (?) : ಶ್ರೀಕಾಂತಾಕಾಂತನಾತ್ಮೋದರಭವನದೊಳೊಂದರ್ಕ್ಕಱಂ ಬಯ್ತು ಪಯ್ತುಂ ಲೋಕಾಲೋಕಂಗಳಂ (ಸೌಇಇ. XV, ೩೨-೪; 1147).

ಪಯ್ತುಮಾಗು = (?) : ವಿದ್ಯೆಯಂ ಕೊಂಡು ಬಂದಪೆನಾನೀಗಳ್ ಬರ್ಪಿನಂ ಮನೆಗೆ ನೀನಿಂ ಪಯ್ತುಮಾಗೆಂದು ಪೇಟ್ಟು ಪುರಾಭ್ಯಂತರದಿಂದ ಮಂದು ಪೊಱಮಟ್ಟಂ ಸೂರ್ಯಮಿತ್ರದ್ವಿಜಂ (ಸುಕುಮಾ. ೩-೨೩). [?]

ಪಯ್ದುಗೆ (ನಾ). ಒಂದು ಸ್ಥಳದ ಹೆಸರು : ಪಯ್ದುಗೆಯೆದೆ ಜನ್ನಯ್ಯ ××× ಮಗ ನರಸಿಂಗಯ್ಯಂಗೆ ಕೊಟ್ಟ ಸಶನ (ಎಕ. IV, ಗುಂಡ್ಲುಪೇ. ೫೭-೫; ಸು. 900 ?); ಕಡೆಕೊಳಂ ಖಾರವುರಂ ಪಯ್ದುಗೆಯ ಮುಕ್ಕೂ ಡಲ್ತೆಜ್ಜಮೊಗದೆ ಪೋಗಿ (ಮೈಅರಿ. ೧೯೩೪, ೩೮-೬; 11ನೆಯಶತ). [?]

ಪಯ್ಯ, ಪೆಯ್ಯ (ನಾ). ೧. ಹುಡುಗ; ಬಾಲಕ : ಸಯ್ಯರ್ಣ್ಣಗತ್ತೆಯೆಡೆಯೊಳ್ ಪಯ್ಯರ್ಬಿಲ್ಗಲ್ಪೆಡೆಯೊಳೆ ನೆಗಟ್ಟವರ್ಗಳ್ ಕೆಯ್ಯಂಬಪ್ಪೊಡುರ್ಚಿ ಮೆಯ್ಯಂಬಂ ಕಿಟ್ಟುಕೊಂಡು ಕೂಕಿಱದೆಚ್ಚರ್ (?) (ಬಂಹರಿ. ೧೨-೫೮); ಅಱಾದೆನದನೀ ಪಯ್ಯನಿನ್ (ಅಂತಿಗೊ. ೪೫-೯೩೪). **ಪೆಯ್ಯ** : ೨. ಕರು; ವತ್ಸ : ಹಾಲೆಂಜಲು ಪೆಯ್ಯ[ಪಾಠಾಂ. ಪೆಯ, ಪೇಯ]ನ ಉದಕವೆಂಜಲು ಮತ್ಸ್ಯದ . . . ಎಂತು ಪೂಜಿಸುವೆನಯ್ಯಾ (ಬಸವ. ೮೮೫).

[ದೇ.॥ತಮಿ. ಪೈಯ; ತುಳು. ಪಯ್ಯ, ಪಯ್ಯೆ, ಪೈಯ್ಯೆ; ತೆಲು. ಪರ್ಜಿ. ಗೊಂಡಿ. ಪೆಯ್ಯ]

ಪಯ್ವೆಗುಂದುಪುರ (ನಾ). ಒಂದು ಸ್ಥಳದ ಹೆಸರು; ಈ ಈಗಿನ ಹೊನ್ನಾವರ ತಾಲ್ಲೂಕಿನ ಹೈಗುಂದ : ಚಂಡಮಹಾಸೇನ ಪುತ್ರಸ್ಯ ಪಯ್ವೆಗುನ್ದುಪುರೇಶ್ವರಸ್ಯ ಪಲ್ಲವರಾಜೇನ ದತ್ತಃ (ಎಇ. XXI, ೨೯-೫; 8ನೆಯ ಶತ). [? + ಪುರ$_2$]

ಪಯ್ವೆನಾಡು (ನಾ). ಒಂದು ಸ್ಥಳದ ಹೆಸರು; ಈ ಉತ್ತರಕನ್ನಡ ಜಿಲ್ಲೆಯ ಒಂದು ಸ್ಥಳ : ಬನವಾಸಿ ಪನ್ನಿರ್ಚ್ಛಾಸಿರಮುಮಂ ಪಯ್ವೆನಾಡುಮಂ (ಎಇ. XV, ೩೩೧-೬; 1028). [? + ನಾಡು]

ಪಯ್ಸರ 'ಪೈಸರ' ನೋ.

ಪಯ್ಸರವೋಗು 'ಪೈಸರಂಬೋಗು' ನೋ.

ಪಯ್ಸರಿಸು 'ಪೈಸರಿಸು' ನೋ.

ಪರ್ (ನಾ). ಒಂದು ಅನುಕರಣ ಶಬ್ದ : ಮಗು ಪುಸ್ತಕವನ್ನು ಪರ್ ಎಂದು ಹರಿದು ಹಾಕಿತು (ರೂಢಿ).

ಪರ$_1$ (ನಾ). ಪಕ್ಷ; ಕಡೆ.

ಪರವಾಗಿ = ೧. ಸಲುವಾಗಿ; ವತಿಯಿಂದ: ನನ್ನ ಪರವಾಗಿ ನೀನು ಎರಡು ಮಾತುಗಳನ್ನು ಅಡಬಾರದೆ ? (ಹಾಹುತ್ತ. ೨); ನೀನೇ ನನ್ನ ಪರವಾಗಿ ಅಲ್ಲಿಗೆ ಹೋಗಿ ಬಂದು ಬಿಡು (ರೂಢಿ). ೨. ಪಕ್ಷವಹಿಸಿ; ಪಕ್ಷಕ್ಕೆ ಸಹಾಯವಾಗುವಂತೆ : ಆ ಪಕ್ಷದ ಪರವಾಗಿ ನಿಂತಿದ್ದ ಅಭ್ಯರ್ಥಿಗೆ ಸೋಲಾಯಿತು (ರೂಢಿ). 'ಪರ$_3$' ಪರಾ. [ದೇ.॥ತಮಿ. ಪರ]

ಪರ$_2$ 'ಪರ್ಬ' ನೋ.

ಪರ$_3$ (ಗು). ೧. ದೂರದ; ಹತ್ತಿರವಲ್ಲದ. ೨. ಪ್ರತಿಯಾದ; ವಿರುದ್ಧವಾದ. ೩. ಮುಂದಿನ; ಎದುರಿನ. ೪. ಭವಿಷ್ಯದ. ೫. ಬೇರೆಯ; ಅನ್ಯ. ೬. ಶ್ರೇಷ್ಠವಾದ; ಉತ್ತಮವಾದ. ೭. ಪರಾಕಾಷ್ಠೆಯ; ತುಟ್ಟತುದಿಯ. ೮. ಶತ್ರುತ್ವದಿಂದ ಕೂಡಿದ; ಹಗೆಯನ್ನು ಸಾಧಿಸುವ. ೯. ತಲ್ಲೀನತೆಯನ್ನು ಹೊಂದಿದ; ಮಗ್ನವಾದ. (ನಾ). ೧೦. ದೂರವಾದುದು; ಹತ್ತಿರವಲ್ಲದುದು: "ವಿಪ್ರೇಕೃಷ್ಟಂ, ಪರಂ . . . ವ್ಯವಹಿತಂ — ಈ ೫ ದೂರಂ" (ಹಲಾಯು. ೧೧೫-೮); "ಪರಂ ದೂರಮೆನಿಸಿಪ್ಪುದು" (ಮಂಗರಾ. ೧೨೬-೫). ೧೧. ಪ್ರತಿಯಾದುದು; ವಿರುದ್ಧವಾದುದು. ೧೨. ಎದುರಿನಲ್ಲಿರುವುದು; ಮುಂದುಗಡೆಯಲ್ಲಿರುವುದು : ಪರದ ಪವರ್ಗದ ನೆಲೆಗಕ್ಕುಂ ವತ್ಸಂ (ಶಮದ. ೬೬). ೧೩. ಮುಂದೆ ಬರಲಿರುವ ಕಾಲ; ಭವಿಷ್ಯತ್ತು: ಇರವುಂ ಪರವುಂ ತಿರುನಾಳಾದುದು (ತಿರುನಾ. ದೇ. ೨೧೬-೧೫);

೧೪. ಅನ್ಯವಸ್ತು; ಬೇರೆಯವರ ಪದಾರ್ಥ : ಶಂಭುವಿನ ಭಕ್ತಂಗಖಿಳ ಸಂಗತ ವಿವರಣೆಯು ತಾ ನೈಜವಲ್ಲದೆ ಪರವೆ ಪರಿಕಿಸಲು (ಬಸಪು. ೯-೫೩). ೧೫. ಅನ್ಯ; ಬೇರೆಯವನು; ಪರಕೀಯ; ಹೊರಗಿನವನು: ಪರರ್ಗುಪಕರಿಪೆಡೆಗಳ್ಗುಪಕರಣಂ ತನು ತೃಣದ ತೆಱದೆ ಲಘುಜೀವಿತಮೆಂಬೆರಡುಂ ಪಾವುಡಮಿಂತೀ ಬರವಿಂಗೆ (ಕಾದಂಉ. ೧೫೪); ಕಾಮಧೇನು ನಿಮ್ಮ ಸಾರಿರಲು ಪರರ ಬೇಡಲಾಱೆನಯ್ಯಾ (ಬಸವ. ೨೬೧); ಹರ ಕೊಲ್ಲಲ್ ಪರ ಕಾಯ್ವನೇ (ಸೋಮೇಶ. ೨೯); ತನ್ನಂತೆ ಪರರ ಬಗೆದಡೆ ಕೈಲಾಸ ಬಿನ್ನಾಣವಕ್ಕು (ಸರ್ವಜ್ಞ. ೬೦೩); ಮನೆಗೆ ಮಾರಿ ಪರರಿಗೆ ಉಪಕಾರಿ (ಗಾದೆ). ೧೬. ಶ್ರೇಷ್ಠವಾದುದು; ಉತ್ತಮವಾದುದು: ಪರಕ್ಕೆ ಪರತರವೆನಿಪ ದೈವದ ಪರಮತತ್ವರಹಸ್ಯವನು ವರ್ಣಿಸಿದನು (ನಿಭಾಗ. ೧೦-೬೩-೧); ಪರಕೆ ಪರವೆನಿಪಾ ಕ್ಷರಾಕ್ಷರಪುರುಷರೀ ಪ್ರಕೃತಿಯಂ ತೋಱಲು(ಅಮೃತ. ೪-೫೬);ಗುರುವಿನಿಂದೆ ಪರವಿಲ್ಲವೆಂದು ಸಕಲಶ್ರುತಿಗಳು ಹೊಗಳುತಿಪ್ಪುವು ನೋಡಾ (ಅಖಂಡೇ. ೧೭-೧). ೧೭. ಶ್ರೇಷ್ಠನಾದವನು; ಉತ್ತಮ : "ಪರಂ ಪ್ರಧಾನಂ ಪ್ರವರಂ . . . ಅಗ್ರಗಣ್ಯಂ" (ವಸ್ತುಕೋ. ೯೮-೨). ೧೮. ಪರಮಾತ್ಮ; ದೇವರು : ಪರವಿದ್ದು ಪ್ರಾಣನ ಪ್ರಕೃತಿಯು ಹರಿಯದ ಭೇದವ ನರರೆತ್ತ ಬಲ್ಲರೈ (ದೇದಾವ. ೫-೯); ಪರನಪರಂ ಭವನಭವಂ . . . ನಿನ್ನ ನಿಜವದೇಂ ಕೇವಳಮೇ(ಜಗವಿ. ೩-೯೭); ಪರನೆಂದರೆ ತ್ರಿಪಾದ್ವಿಭೂತಿಯಲ್ಲಿ . . . ಜ್ಞಾನಶಕ್ತಿ ಮೊದಲಾದ ಅನಂತಕಲ್ಯಾಣಗುಣವಿಶಿಷ್ಟನಾದ ಪರಬ್ರಹ್ಮ, ವಾಸುದೇವ ಮುಂತಾದ ನಾಮಗಳುಳ್ಳ ನಾರಾಯಣನು (ಭಾತತ್ತ್ವ. ೭೬೮). ೧೯. ಅತ್ಯಂತ ಶ್ರೇಷ್ಠವಾದ ಪದವಿ ; ಮೋಕ್ಷ; ಕೈವಲ್ಯ : ಪರವು ಸಾಧ್ಯವಾಯಿತ್ತೆಂದು ಕ್ರೀಯೆಲ್ಲವ ಮೀಱಿ ನಡೆವೆನು (ಬಸವ. ೮೮೮). ೨೦. ಪರಲೋಕ : ಇಹಮಂ ಪರಮಂ ಬಗೆದಂತೆ ಮಾಟ್ಟಿ ಸನ್ಮಹಿತ ಜಿನೇಂದ್ರಧರ್ಮಮಭಿವಾಂಛಿತದಾಯಿಯೆನಿಪ್ಪುದೊಪ್ಪದೇ(ಪುಷ್ಪಪು.೧-೯); ಭಜಿಸು ನಿತ್ಯಾನಿತ್ಯವಸ್ತುವ ವಿಜಯನಹೆ ಇಹ ಪರಕೆ ತತ್ವದ ನಿಜವಿದೆಲೆ (ಕುಪ್ಯಾಉ. ೪-೧೦) ; ಸಿರಿಯದಾರಿಂಗಾದೊಡಪ್ಪುದು ಇರದೆ ಬಹುದಾ ಪಾಪ ಪುಣ್ಯವು ಪರಕೆವುಳಿವುದು ಕೀರ್ತ್ಯಕೀರ್ತ್ಯಗಳೆರಡು ಜಗದೊಳಗೆ (ಕೌತಿರಾ. ೨೩-೧೮); ಪರಕೆ ನಡೆಸುವ ಜಂಘೆ ಹರಿವ ಗಂಗೋತ್ತುಂಗೆ (ಪುರಂದ. ೨-೨೭-೩). ೨೧. ಹಗೆ ; ಶತ್ರು : "ಅರಿ . . . ಪರನಹಿತಂ. . . ವಿದ್ವಿಷ್ಟಂ" (ವಸ್ತುಕೋ. ೯೯-೧೦). ೨೨. ನದಿಯ ಆಚೆಯ ತೀರ; ಎದುರುದಂಡೆ : "ಪಾರವೆನೆ ಪರಮೆನಲು ನದಿಯಾಚೆಯೆನಿಸಿಕ್ಕು" (ಮಂಗರಾ. ೧೨೩-೧೨). ೨೩. (?) : ಹಿತ್ತಿಲ ಚತುಸ್ಸೀಮೆಯ ವಿವರ . . . ಸೋವಣಸೆಟ್ಟಯ ಪರದ ಗಡಿಯಿಂದಂ (ಸೌಇಇ. IX-ii, ೪೬೪-೨೫ ; 1472).

ಪರಮಾಗು, ಪರವಾಗು = ೧. ಮುಂದೆ ಬರು ; ಮುಂದುಗಡೆಯಲ್ಲಿರು : ಮಹಚ್ಛಬ್ದಕ್ಕೆ ಮಾ ಎಂಬಾದೇಶಮಕ್ಕುಂ. ಇವರ್ಕೆ ಸಂಸ್ಕೃತಪದಂ ಪರಮಾದೊಡಂ ದೋಷಮಿಲ್ಲ (ತಮವ. ೧೭೫ ವೃತ್ತಿ). ೨. ಪರಲೋಕಕ್ಕೆ ಹೋಗು; ಮರಣಹೊಂದು : ಪರವೆ ಪರವಾದ ಳೇನೆಂದಂಬೆನೆಲೆ ದೇವ ಪರವೆ ಕೈಲಾಸಕ್ಕೆ ಮುಂಕೊಂಡಳೆಲೆ ದೇವ (ನಂಬಿರ. ೧೭-೧೨೭). [ಸಂ.]

ಪರಂಕಲಿಸು 'ಪರಕಲಿಸು' ನೋ.

ಪರಂಗ 'ಫಿರಂಗಿ' ನೋ.

ಪರಂಗಿ 'ಫಿರಂಗಿ' ನೋ.

ಪರಂಗಿ ಅಕ್ಕಿಹುಲ್ಲು (ನಾ). ಹುಲ್ಲಿನಲ್ಲಿ ಒಂದು ಬಗೆ: ಮರಅಕ್ಕಬುಹುಲ್ಲು, ಪರಂಗಿಅಕ್ಕಿಹುಲ್ಲು (ಮೈಔಗಿ. ೭೫-೧೫೩೦).

[ಪರಂಗಿ (<ಫಿರಂಗಿ) + ಅಕ್ಕಿಹುಲ್ಲು]

ಪರಂಗಿಗಿಡ(ನಾ). ೧. ಪಪ್ಪಾಯಿಹಣ್ಣಿನ ಗಿಡ: ಅವರ ಮನೆಯಲ್ಲಿರುವ ಪರಂಗಿಗಿಡದಲ್ಲಿ ಹಣ್ಣುಗಳು ತುಂಬಿವೆ (ರೂಢಿ). ೨. (ಕರಾ) ಒಂದು ಬಗೆಯ ಹಣ್ಣಿನ ಗಿಡ ; ಅನಾನಸು.

[ಪರಂಗಿ (<ಫಿರಂಗಿ) + ಗಿಡ (<ಗಿಡು)]

ಪರಂಗಿಚೆಕ್ಕೆ 'ಫಿರಂಗಿಚೆಕ್ಕೆ' ನೋ.

ಪರಂಗಿಮಣೆ 'ಫರಂಗಿಮಣೆ' ನೋ.

ಪರಂಗಿಮೆಣಸಿನಕಾಯಿ (ನಾ). ಮೆಣಸಿನಕಾಯಿಯಲ್ಲಿ ಒಂದು ಬಗೆ : (ಮೈಔಗಿ. ೧೭-೩೧೪).

[ಪರಂಗಿ (<ಫಿರಂಗಿ) + ಮೆಣಸಿನಕಾಯಿ]

ಪರಂಗಿರೋಗ 'ಫಿರಂಗಿರೋಗ' ನೋ.

ಪರಂಗಿಹಣ್ಣು (ನಾ). ಪಪ್ಪಾಯಿಗಿಡದ ಹಣ್ಣು : ಪರಂಗಿಹಣ್ಣು, ಪಪಾಯ (ಮೈಔಗಿ. ೧೮-೩೨೧) ; ಪರಂಗಿಹಣ್ಣು ಆರೋಗ್ಯಕ್ಕೆ ಒಳ್ಳೆಯದು (ರೂಢಿ). [ಪರಂಗಿ (<ಫಿರಂಗಿ) + ಹಣ್ಣು$_3$ (<ಪಣ್$_3$)]

ಪರಂಗಿಹಲಸು (ನಾ). ೧. = ಪರಂಗಿಹಣ್ಣು : (ಕಿ). ೨. ಅನಾನಸು ಗಿಡ ಮತ್ತು ಅದರ ಹಣ್ಣು : ತೋಟದಲ್ಲಿ ಬಾಳೆ, ಪಪ್ಪಾಯಿ, ಪರಂಗಿಹಲಸು . . . ಹೀಗೆ ಬಗೆಬಗೆಯ ಹಲಸಿನ ಮರಗಳು ಇದ್ದವು (ಶ್ಯಾಮತಾ. ೧೧). [ಪರಂಗಿ (<ಫಿರಂಗಿ) + ಹಲಸು (<ಪಲಸು)]

ಪರಂಗಿಹುಣ್ಣು 'ಫಿರಂಗಿಹುಣ್ಣು' ನೋ.

ಪರಂಚಾಟ (ನಾ). (ಕರಾ) ಗೊಣಗಾಟ ; ಆಕ್ಷೇಪ : ಅವನು ಕೆಲಸ ಹುಡುಕುವ ಕೆಲಸಕ್ಕೆ ಪ್ರಾರಂಭಿಸಿದನು . . . ಮನೆಯವರ ಪರಂಚಾಟ ಸಾಗಿದೆ (ಚಿಗುರು. ೭೨). [←ತುಳು. ಪರೆಂಚಾಟ, ಪರೆಂಚಣ]

ಪರಂಜ (ನಾ). ೧. ಕತ್ತಿಯ ಅಲಗು ; ಧಾರೆ. ೨. ಕತ್ತಿ ; ಖಡ್ಗ. ೩. ತೈಲವನ್ನು ತೆಗೆಯುವ ಯಂತ್ರಸಲಕರಣೆ ; ಗಾಣ. ೪. ನೊರೆ ; ಬುರುಗು. [ಸಂ.]

ಪರಂಜಯ (ನಾ). ೧. ಶತ್ರುವನ್ನು ಜಯಿಸುವುದು,—ಗೆಲ್ಲುವುದು. ೨. ನೀರಿನ ಅಧಿದೇವತೆ ; ವರುಣ. [ಸಂ.]

ಪರಂಜಳ (ಗು). ನಿರಾಳವಾದ (?).

ಪರಂಜಳವಾಗು = ಸ್ಪಷ್ಟವಾಗು (?) : ಅಂಜಿಸುವದೇನೊ ಪರಂಜಳವಾಗಿದೆ . . . ಕಿಂಜನನ ನಿನ್ನದು ನಿನಗಂಜಲ್ಯಾತಕೊ (ವಿದಾಕೃ. ೧೫೫-೧). [←ಮರಾ. ಪರಂಜಳ, ಪರಂಜಲ./ಸಂ. ಪ್ರಾಂಜಲ]

ಪರಂಜು 'ಪರಜು' ನೋ.

ಪರಂಜೋತಿ (ನಾ). = ಪರಂಜ್ಯೋತಿ : ಈ ತೆಱದ ರಕ್ತಭಿಕ್ಷದ ನೆವದೊಳಾ ಪರಂಜೋತಿ ವಿಶ್ವಾತ್ಮ ನಿಶ್ಚೈಸಿ . . . ಚರಿಸಲು (ವೀಕೈಪು. ೨-೩-೫). [<ಸಂ. ಪರಂಜ್ಯೋತಿಸ್]

ಪರಂಜ್ಯೋತಿ (ನಾ). ದಿವ್ಯವಾದ ತೇಜಸ್ಸುಳ್ಳವನು; ಪರಮಾತ್ಮ: ಪರಂಜ್ಯೋತಿ ಮುಕುಂದನೆನ್ನ ಬಗೆಯೊಳ್ ನಿಲೆ . . . ಪೇಟಲೊಡರ್ಚಿದೆನೀ ಪ್ರಬಂಧಮಂ (ಜಗವಿ. ೧-೧೭) ; ಪರಂಜ್ಯೋತಿಯೆ ಪರೋತ್ತಮ ಕರುಣಿಸುವುದು (ಕುಪ್ಯಾಅ. ೬-೮೭) ; ಪರಮ ಪರಂಜ್ಯೋತಿ ಕೋಟಿ ಚಂದ್ರಾದಿತ್ಯಕಿರಣ ಸುಜ್ಞಾನಪ್ರಕಾಶ (ಭರಚ. ೧-೧).

[ಸಂ. ಪರಂಜ್ಯೋತಿಸ್]

ಪರಂತಪ (ಗು). ೧. ಶತ್ರುಗಳಿಗೆ ತಾಪವನ್ನುಂಟುಮಾಡುವ : ಆ ಪರಂತಪ ಬಲಿಯ ಭವನದ ಕೈಪಱೆಯ ನಾರಿಯರ ವಚನಾಲಾಪ ಹಾಸ್ಯದ ಭಿಕ್ಷದವನಿವನಲ್ಲಲೇ (ತೊರರಾ. ೬-೧೦-೪೮). (ನಾ). ೨. ಶತ್ರುಗಳಿಗೆ ತಾಪವನ್ನುಂಟುಮಾಡುವವನು ; ವೀರ ; ಪರಾಕ್ರಮಿ : ಇತ್ತ ವಿಕ್ರಮಾರ್ಜುನಂ ಪರಂತಪಂ ತಪೋನಿಯಮನಿಯಮಿತನಾಗಿ (ಪಂಪಭಾ. ೭-೭೭ ವ) ; ಪರಂತಪನಾ ಜಿನಚಂದ್ರಂ ಜೈನಪಾದನತಮಕುಟ

ವರ್ತಿಯಂ ಬಿನ್ನವಿಕುಂ (ಶಾಂತಿಪು. ೬-೫೭) ; ನೀನು ಪರಂತಪ. ಪರರನ್ನು ತಪಿಸುವಂತೆ ಮಾಡಬೇಕಾದ ನೀನು ಪರರಿಗಾಗಿ ತಪಿಸುತ್ತಿದ್ದೀಯೆ (ಭಾರದ. ೧೧೨). [ಸಂ.]

ಪರಂತಪನ (ಗು). ಅತ್ಯಂತ ತಾಪವನ್ನು ಕೊಡುವ; ಘೋರವಾದ: ಅಪರಾಜಿತನಿತ್ತ ಪರಂತಪನ ತಪಶ್ಚರಣವೊಂದೆ ಪೊಱಗೆನೆ ನಿರ್ವೇಗಪರಾಯಣಂ ಮನಂಗೊಂಡು ಪವಿತ್ರಶ್ರಾವಕವ್ರತಂಗಳೊಳೊಪಾರ್ದಂ (ಶಾಂತಿಪು. ೧-೮೭). [ಸಂ.]

ಪರಂತಿ, ಪರತಿ$_2$, ಹರತಿ, ಹರತ್ತಿ (ನಾ). ಒಂದು ಸ್ಥಳದ ಹೆಸರು : ಮುಗುಳಿ ಪರನ್ತಿ ಮುಳ್ಳುನ್ನು ಏಕೇಸಾಂ . . . ಮಥ್ಯಸ್ಥಿತೇ (ಇಅ, VII, ೨೨೦-೨೯ ; 658). **ಪರತಿ$_2$** : ಅನ್ತು ಮೂಱುಸ್ಥಾನಮುಂ ಪರತಿಯುಂ ಕಣಿಯುಂ ಮತ್ತಂ ಶ್ರೀಜಗದೇಕಮಲ್ಲದೇವರ್ಗ್ಗೆ ನಿವೇದಿಸಿ (ಸೌಇಇ. XI-i, ೬೪-೧೦ ; 1028). **ಹರತಿ** : ಶ್ರೀಮನ್ಮಹಾನಾಯಕಾಚಾರ್ಯ್ಯರಾದ ಹರತಿಯಿಮ್ಮಡಿಕೆಳ್ಳಪನಾಯಕರಯನವರು . . . ಕೊಟ್ಟಂತ ಗ್ರಾಮದ ದಾನಪಟ್ಟೇ ಕ್ರಮವೆಂತೆಂದರೆ (ಎಕ. XII, ತಿರು. ೧-೬ ; 1609) ; ಶ್ರೀಮನ್ಮಹಾರಾಜ ಶ್ರೀಹರಿಸಂಮೇಟ ಸರಜ ರಂಗಪ್ಪರಾಜರವರ ಪೌತ್ರರಾದ ಕೃಷ್ಣಪ್ಪರಾಜರವರ ಪುತ್ರರಾದ ರಾಯಪ್ಪರಾಜರವರು. . . ಕೊಟ್ಟ ಭೂದಾನಧರ್ಮ್ಮಶಾಸನದ ದಾನಪಟ್ಟ (ಎಕ. VII(R), ನಾಗಮಂ. ೯೬-೨೩; 1680). **ಹರತ್ತಿ** : ಚೆರಿಂದು ಚಲ್ವರ ಗಂಡ ಹರತ್ತಿ ಯಿಮ್ಮಡಿ ರಂಗನಾಯ್ಕ (ಎಕ. XII, ತಿರು. ೮೪-೫ ; 1612). [?]

ಪರಂತು (ಅ). ೧. ಆದಾಗ್ಯೂ ; ಆದರೂ ; ಆದರೆ : ಪರಂತು ಯುದ್ಧದಲ್ಲಿ ಅವರಿಗೆ ಜಯವಾಗಲಿಲ್ಲ (ಭೀಷ್ಮಚ.೨೮); ಪರಂತು, ರಾಜ್ಯವು ಅನ್ಯಾಕ್ರಾಂತವಾಗಲಿಲ್ಲ (ಅರ್ಯಕೀ. ೩೪) ; ಪರಂತು, ಅಆ ನಿಶಾನಿಗಳೆರಡು ಸ್ಥಿರವಾದದ್ದು (ಭೂಮಿಅ. ೧೬). ೨. ಹೊರತು ; ಅಲ್ಲದೆ : ನಾವು ಈಶ್ವರಪೂಜೆ ಮಾಡಿದ್ದಕ್ಕೆ ಈ ದಿನ ವೀರಸ್ವರ್ಗವೇ ಪರಂತು ಎರಡನೇ ಮಾತೇ ಇಲ್ಲ (ಚಿತ್ರಸಾ. ೫೬). [ಸಂ.]

ಪರಂಧಾಮ (ನಾ). ೧. ಶ್ರೇಷ್ಠವಾದ ನೆಲೆ; ಸ್ವರ್ಗ. ೨. ಸ್ವರ್ಗವೇ ನೆಲೆಯಾದವನು ; ಪರಮಾತ್ಮ : ಪದ್ಮನಾಭನೆ ಪರಂಧಾಮನೆ . . . ನಿಮಗೆಯು ನಮೋ ನಮೋ (ಗೋಹಾಡು. ೨೦-೧೧೪) ; ಪಾಪಿಗಳನ್ನು ಆ ಪರಂಧಾಮ ಯಾವ ಯಾವ ರೀತಿಗಳಲ್ಲಿ ಶಿಕ್ಷಿಸಬಹುದು (ಎಮುಳ. ೩೬).

ಪರಂಧಾಮವನ್ನೈದು = ಸಾಯು ; ಮರಣ ಹೊಂದು : ಪತಿ ಪರಂಧಾಮವನ್ನೈದಿದ ಮೇಲೆ ಮಹಾದೇವಿಅಕ್ಕನವರು ಗಂಗರಾಜರನ್ನು ಮಹಾಸಚಿವಸ್ಥಾನಕ್ಕೂ ತಂದುಕೊಂಡರು (ಶಾಂತಲಾ. ೧೮) ; ಪಂಚನಮಸ್ಕಾರವನ್ನು ಜಪಿಸುವಾಗಲೇ ಲಲಿತಾಂಗ ಪರಂಧಾಮವನ್ನೈದಿದನು (ದಾನಚಿಂ. ೧೫). [ಸಂ.]

ಪರಂಧಾಮರೂಪ (ನಾ). ಪರಮಾತ್ಮನ ಸ್ವರೂಪಿಯಾದವನು : ಪರಂಧಾಮರೂಪಂ ವಿಪುಳ ಜ್ಞಾನಾಢ್ಯಸತ್ಯಂ . . . ವಿರೂಪಾಕ್ಷ ರಕ್ಷಿಪ್ಪುದೆನ್ನಂ (ರತ್ನಾಕ. ೮೫). [ಪರಂಧಾಮ+ರೂಪ]

ಪರಂಪದ (ನಾ). ಶ್ರೇಷ್ಠವಾದ ನೆಲೆ ; ಪರಮಪದ : ಕ್ಷುಲ್ಲಕರ ಕೂಡಾಡದೆ ಶ್ರೀವಲ್ಲಭನ ಸದ್ಗುಣಗಣಂಗಳ ಬಲ್ಲವರ ಕೂಡಾಡಿ ಸಂಪಾದಿಸು ಪರಂಪದವ (ಜಗದಾ. ೩೩೧). [ಸಂ.]

ಪರಂಪರ (ಗು.) ೧. ಒಂದನ್ನೊಂದು ಅನುಸರಿಸುವ ; ಸಾಲಾಗಿರುವ ; ಕ್ರಮವಾಗಿರುವ. (ನಾ). ೨. ಸಾಲು ; ಪರಿವಿಡಿ ; ಪಂಕ್ತಿ : ಸುರದ್ರುಮವಂಕುರಿತ ಪಲ್ಲವಿತ ಕೋರಕಿತ ಪ್ರಸವಿತ ಫಲಿತ ಪರಂಪರದಾ ವಿವರದಿಂ ವರ್ಧಿಸಿತು (ಬಸವು.೩೬-೪೯). ೩. ಅನುಕ್ರಮ; ಪರ್ಯಾಯ : ಇಂತೆಮ್ಮ ವಂಶಪರಂಪರದಿ ಬಹುದು (ಬಸವು. ೫೮-೨೬). [ಸಂ. ಪರಂಪರಾ]

ಪರಂಪರಾಕ (ನಾ). ಯಜ್ಞಯಾಗಗಳಲ್ಲಿ ಪ್ರಾಣಿಗಳನ್ನು ಬಲಿ ಕೊಡುವಿಕೆ : "ಪರಂಪರಾಕಂ, ಶಸನಂ . . . ೨ ವಧಾರ್ಥಕಂ, ಯಜ್ಞದಲ್ಲಿ ವೇದೋಕ್ತಪ್ರಕಾರವಾಗಿ ಮಾಡುವ ಪಶುವಿಶಸನವೆಂಬ ಶ್ರೌತ ಪಶುವಧೆ" (ಸಿದ್ಧಾಂತಿ.೨೨೧). [ಸಂ.]

ಪರಂಪರಾಗತ (ಗು). ೧. ಹಿಂದಿನಿಂದ ಬಂದಿರುವ : 'ಪರಂಪರಾಗತಪಾಠ' ಪರಾ. (ನಾ). ೨. ಒಂದಾದ ನಂತರ ಮತ್ತೊಂದು ಬರುವುದು ; ಕ್ರಮವಾಗಿ ಬರುವುದು : ಬಾಹುಬಲಿಯ ವೈರಾಗ್ಯಪಕಥೆಗೆ ನಡುವೆ ಭರತಚಕ್ರವರ್ತಿಯ ಭೋಗವೈಭವ ಮಹತ್ವಾಕಾಂಕ್ಷೆಯ ಚಿತ್ರ ಪರಂಪರಾಗತವಾಗಿ ಚಿತ್ರಿತವಾಗಿದೆ (ಪರಿಶೀ.೧೩೨). [ಸಂ.]

ಪರಂಪರಾಗತಪಾಠ (ನಾ). ಗ್ರಂಥದಲ್ಲಿ ಹಿಂದಿನಿಂದ ಬಂದಿರುವ ಲಿಖಿತಭಾಗ : (ಹಸ್ತಪ್ರತಿಗಳಿಗೆಲ್ಲ ಸಮಾನವಾದ) 'ಪರಂಪರಾಗತಪಾಠ' ವಾಗಲೀ (Transmitted Reading) . . . ಅರ್ಥಹೀನವಾಗಿ ಬಿಟ್ಟಿರುವುದು (ಭಾರದ. ೩೭). [ಪರಂಪರಾಗತ + ಪಾಠ$_2$]

ಪರಂಪರಾನುಗತ (ನಾ). ವಂಶಕ್ಕೆ ಸೇರಿರುವುದು; ಕುಲಕ್ಕೆ ಸಂಬಂಧಿಸಿರುವುದು : ಪರಂಪರಾನುಗತವಾದ ಸತ್ಸಂತಾನದಿಂದಲೇ ಪಿತೃಕರ್ಮಗಳು ನಡೆಯಬೇಕು (ಭಾರದ.೧೧೨). [ಸಂ.]

ಪರಂಪರಿತ (ಗು). ಒಂದನ್ನು ಅನುಸರಿಸಿ ಮತ್ತೊಂದು ಬರುವ; ಒಂದರ ಹಿಂದೆ ಮತ್ತೊಂದು ಬರುವ: 'ಪರಂಪರಿತರೂಪಕ' ಪರಾ. [ಸಂ.]

ಪರಂಪರಿತರೂಪಕ (ನಾ). [ಕಾವ್ಯಮೀ] "ಒಂದು ರೂಪಕಕ್ಕೆ ಮತ್ತೊಂದು ರೂಪಕವು ಕಾರಣವಾದರೆ ಅಂಥ ರೂಪಕಕ್ಕೆ ಪರಂಪರಿತ ರೂಪಕವೆಂದು ಹೆಸರು. ಲಕ್ಷ್ಯ–ಸನಕಾದ್ಯರ್ಕಳ ಮಾನಸಾಂಬುಜಮರಾಳಂ ನೀನೇ ವೇದಾಂತನಂದನ ಕೇಳೀರಸಲೋಲದಿವ್ಯಶುಕರಾಜಂ ನೀನೇ . . . ಶೈವಾಗಮೌಘನಭೋಮಧ್ಯ ಮನೋಜ್ಞ ಬಾಲಮಿಹಿರಂ ನೀನೇ ಭವಾನೀಧವಾ' (ಕೃಪಿಡಿ. ೨೬೪). [ಪರಂಪರಿತ+ರೂಪಕ]

ಪರಂಪರಿತಹೇತು(ನಾ).[ಕಾವ್ಯಮೀ]ಮುಂದೆ ಸೂಚಿಸುವಕಾರಣಗಳಿಗೆ ಹಿಂದೆ ಸೂಚಿಸಿರುವುದನ್ನು ಕಾರಣವಾಗಿ ವರ್ಣಿಸುವುದು: ಪರಂಪರಿತಹೇತುಗೆ—ವಿನಯಮನಿತ್ತುದಿಂದ್ರಿಯಜಯಂ ವಿನಯಂ ಗುಣಸಂಪದಂಗಳಂ ಜನಿಯಿಸಿದತ್ತು (ಕಾವ್ಯಾಪ. ೬೨೮). [ಪರಂಪರಿತ+ಹೇತು$_2$]

ಪರಂಪರೆ (ನಾ). ೧.ಒಂದರ ನಂತರ ಮತ್ತೊಂದು ಬರುವುದು ; ಸಾಲು ; ಪರಿವಿಡಿ ; ಓಳಿ : ಸರ್ವಜನಧವ್ಯಜನಂಗಳಭ್ಯುದಯಪರಂಪರಾದಿವೃದ್ಧಿಯನತ್ಯಧಿಕಂ ಮಾಡಿಯುಂ (ಅಜಿಪು. ೧೨-೪ ಪ); ತತ್ಕಾಂತೆ ಚಿಂತಾಪರಂಪರೆಯಂ ತಾಳ್ದಿದಳ್ (ಮಲ್ಲಿಪು. ೬-೧೦೭); ಅವರ್ . . . ಪರಸಿ ಪರಮೋತ್ಸವಪರಂಪರೆಯನೆಯ್ದಿ ಸುಖವಿರ್ಪುದುಂ (ಪುಷ್ಪಪು. ೮-೯೫ ಪ) ; ೩೦೦ ರಿಂದ ಈಚಿನ ಕಾಲಗಳಲ್ಲಿ ಬ್ರಾಹ್ಮೀಲಿಪಿಯ ಮತ್ತು ಅದರ ಸಂತಾನಗಳ ಅವಿಚ್ಛಿನ್ನ ಪರಂಪರೆ ಇದೆ (ದ್ರಾವಿವಿ. ೫೪). ೨. ಅನೂಚಾನವಾಗಿ ಬಂದಿರುವುದು ; ಸಂಪ್ರದಾಯ; ರೂಢಿ : ವಾಲ್ಮೀಕಿಗೆ ಆದಿಕವಿಯೆಂಬ ಹೆಸರೂ ಪರಂಪರೆಯಿಂದ ಬಂದಿದೆ (ಭಾರದ. ೮೩); ಹಬ್ಬಕ್ಕೊಮ್ಮೆ ಹೊಸ ಬಟ್ಟೆ ತೊಡುವ ಪರಂಪರೆ ನಮ್ಮಲ್ಲಿ ಉಂಟು (ದೇಕನ್ನೆ. ೩೬). ೩. ಹಿಂದಿನ ಸನ್ನಿವೇಶ ; ಹಿನ್ನೆಲೆ : ಸಂಪ್ರದಾಯವು . . . ಇಂದು ಹುಟ್ಟಿ ಇಂದೇ ಬೆಳೆದು ಜನಾಂಗದಲ್ಲಿ ಬಂದಿಲ್ಲ. ಅದಕ್ಕೆ ದೊಡ್ಡ ಪರಂಪರೆಯುಂಟು (ಕನ್ನಜಾ. ೧೨೯). ೪. ಕುಲ; ವಂಶ; ಪೀಳಿಗೆ : ಅವರ ಪರಂಪರೆಯಲ್ಲಿ ಯಾರೂ ಇಂತಹ ಕೆಲಸಕ್ಕೆ ಕೈಹಾಕಿರಲಿಲ್ಲ (ರೂಢಿ). ೫. ಹಾನಿಮಾಡುವುದು ಕೇಡನ್ನು ಮಾಡುವುದು. ೬. ಕೊಲ್ಲುವುದು. [<ಸಂ. ಪರಂಪರಾ]

ಪರಂಪೋಕು 'ಪರಂಬೋಕು' ನೋ.

ಪರಂಬರಿಕೆ 'ಪರಾಮರಿಕೆ' ನೋ.

ಪರಂಬರಿಸು 'ಪರಾಮರಿಸು' ನೋ.

ಪರಂಬೆ, ಪೆರಂಬ, ಪೆರಂಬೆ, ಪೆರುಂಬೆ (ನಾ). ಒಂದು ಬಗೆಯ ಸಸ್ಯ : "ಖದಿರಾಹ್ವಯಃ–ಪರಂಬೆ" (ಓಷಧಿ. ೪೪). **ಪೆರಂಬ :** ಉತ್ತನ ಪತ್ನಿ . . . ಶುಂಠಿ, ತೆಂಗಿನಕಾಯಿ ಮತ್ತು ಪೆರಂಬಕೊಡಿಗಳನ್ನು ತಂದು ಮಡಗಿದಳು (ಹುಲಿಹಾ. ೧೮೭). **ಪೆರಂಬೆ :** ಮರಗಳು : ಹೆಸರ . . . ಪೆರಂಬೆ (ನಮ್ಮನು. ೨೩೬). **ಪೆರುಂಬೆ :** ವುನ್ನೆ, ಪೆರುಂಬೆ (ಮೈಔಗಿ. ೬೪–೧೩೦೪). 'ಪಾರಂಬಿ', 'ಹಬ್ಬೆ' ಪರಾ.

[ದೇ.॥ ತಮಿ. ಪರಮ್ಪ್ಯೆ, ಪಿರಮ್ಪು = ಬೆತ್ತ ; ಮಲ. ಪೆರಮ್ಪು, ಪುರಮ್ಪು = ಬೆತ್ತ ; ತೆಲು. ಪ್ರಬ್ಬ = ಬೆತ್ತ]

ಪರಂಬೋಕು, ಪರಂಪೋಕು, ಪೊರಂಬೋಕು (ನಾ). ಬಂಜರಾಗಿರುವುದರ ಕಾರಣ ಅಥವಾ ಸಾರ್ವಜನಿಕರ ಉದ್ದೇಶಕ್ಕಾಗಿ ಮೀಸಲಾಗಿರುವುದರಿಂದ ಕಂದಾಯ ಕೊಡಬೇಕಾಗಿಲ್ಲದ ಭೂಮಿ : ಸುಬ್ರಹ್ಮಣ್ಯದೇವಸ್ಥಾನ ಸ್ಥಾನಿಕ ಹೆಬ್ಬಾರರ ಮೂಲಿವರ್ಗ ನಂಬ್ರ ೩ ರಲ್ಲಿತ್ತು ; ಅದು ಅನಂತರ ಪರಂಬೋಕು ಆದುದು (ತುಳುನಾ. ೧೧೮) ; ಅ ಮನೆಯಿರುವ ಸ್ಥಳ ಪರಂಬೋಕು ಅಂತೆ (ಚಿಗುಬ. ೪೮). **ಪರಂಪೋಕು :** (ರೈಸ್‌ಗೆ. II, ೫೫೮). **ಪೊರಂಬೋಕು :** ಈ ದಾರಿ ಪೊರಂಬೋಕಾಗಿ ವಿಂಗಡಿಸಲ್ಪಟ್ಟದೆಯೋ ಅಥವಾ ಭಟ್ಟರ ದರ್ಕಾಸ್ತಿಗೆ ಸೇರಿರುವುದೋ ? (ಮಣ್ಣನಂ. ೩೦).

[ದೇ.॥ ತಮಿ. ಪುರಮ್ಪೋಕ್ಕು ; ತೆಲು. ಪೊರಂಬೋಕು./ಮರಾ. ಪರಂಪೋಕ್]

ಪರಕ (ನಾ). ಕಣ್ಣಿಗೆ ಕಾಣದಿರುವುದು ; ದೃಷ್ಟಿಗೆ ದೂರವಾಗಿರುವುದು ; ಪರೋಕ್ಷ : "ಪರಕಂ = ಪರೋಕ್ಷಂ" (ಶಮದ. ಪರಿ. ೨) ; "ಪರಕಂ ಪರೋಕ್ಷದೊಳ್" (ಕರ್ಣಾನಿ. ೨೦); "ಪರಕಮೆಂದಾ ಪರೋಕ್ಷಂ" (ಕಬ್ಬಿಕೈ. ೮೩). [< ಸಂ. ಪರೋಕ್ಷ./ಪ್ರಾ. ಪರೋಕ್ಷ]

ಪರಕಯ್ಯ (ನಾ). ಒಬ್ಬಾತನ ಹೆಸರು : ಕಳಿಂಗಬ್ಬೆಯ ಮಗಂ ಪರಕಯ್ಯಂ (ಎಕ. XI, ದಾವಣ. ೧೭–೯; 889).[ಪರಕ್ಯ + ಅಯ್ಯ]

ಪರಕರ 'ಪರಕಾರ' ನೋ.

ಪರಕರಿಸು 'ಪರಕಲಿಸು' ನೋ.

ಪರಕರು 'ಪರಕಾರ' ನೋ.

ಪರಕರ್ತೃ (ನಾ). [ವ್ಯಾಕ] ಬೇರೆಯವನು ಕರ್ತೃವಾಗಿರುವುದು; ಪ್ರೇರಕ ಕರ್ತೃ : ಧಾತುಗಿಸು ಕನ್ನಡಕ್ಕಾ ಹೇತುವಿನೊಳ್ ಸ್ವಪರಕರ್ತೃವೊಳ್ . . . ಇಸು ಜಾತಂ (ಶಮದ. ೨೩೧). [ಪರ್ಯ + ಕರ್ತೃ]

ಪರಕರ್ತೃಕ (ನಾ). = ಪರಕರ್ತೃ : ಕನ್ನಡದ ಧಾತುವಿಂಗೆ ಹೇತುವಿನೊಳಂ ಸ್ವಯಂಕರ್ತೃಕ ಪರಕರ್ತೃಕದೊಳಂ ಇಸುವಕ್ಕುಂ (ಶಮದ. ೨೩೧ ವೃತ್ತಿ). [ಸಂ.]

ಪರಕಲ (ನಾ). ಒಂದು ಸುಳಿಯ ಹೆಸರು (?) : ದನಾ ಪರೀಕ್ಷೆ ಮಾಡೋವಾಗ ಹೀನಸುಳಿ, ಪಾತಾಳಸುಳಿ, ದಾವಣಸುಳಿ, ಪರಕಲಸುಳಿ . . . ಇವೆಲ್ಲಾನೂ ಚಂದಾಗಿ ನೋಡಿ ಒಳ್ಳೆ ಸುಳಿ ಇರೋದ ತತ್ತಾಲಾ (ಹುಟ್ಟಹ. ೧೬೫). [?]

ಪರಕಲಿಸು, ಪರಂಕಲಿಸು, ಪರಕರಿಸು, ಪರಿಕಲಿಸು, ಹರಕರಿಸು, ಹರಕಲಿಸು, ಹರಿಕರಿಸು (ಕ್ರಿ). ೧. ವ್ಯಾಪಿಸು ; ಹರಡು ; ಆವರಿಸು : ಅಂತು ನೂರ್ವರೊಳೊರ್ವನಗುರ್ಬು ಪರ್ಬಿ ಪರ[ಪಾಠಾಂ. ರಿ]ಕಲಿಸೆ (ಪಂಪಭಾ. ೧–೧೩೧ ವ) ; ಕೋಡನೂಱು ಪಾಡಱುದು ಪರ[ಪಾಠಾಂ. ರಿ]ಕಲಿಸಿ ಕೆಡೆದ ಮದಾಂಧಸಿಂಧುರಂಗಳಡಿಯೊಳಡಂಗಿದನೆ ಗೆತ್ತು (ಗದಾಯು. ೬–೨೮ ವ) ; ಪಿರಿದು ಪರಕಲಿಸಿ ಮೇರುವನರುಹನ ಮಜ್ಜನ ಪಯಃಪ್ಲವಂ ಮುಸುಕಲೊಡಂ (ಅನಂಪು. ೫–೬೭) ; ಕಾವ್ಯವೆಂದೆಂಬ ಕಲ್ಪವಲ್ಲರಿಯ ಸಲಹುಗೆ ಕೃಪಾಮೃತರಸವನಿರದೆಱೆದು ಪರಕಲಿಸಿ ಪರ್ಬುವಂತೆ (ಸೌಂದಪು. ೧–೬). ೨. ಹೆಚ್ಚಾಗು ; ಅಧಿಕವಾಗು ; ಅತಿಶಯವಾಗು : ಮರಗಿ[ಡು]ವಿನ ಕತ್ತಲೆಯುಂ ಪರಕಲಿಸಿ ಪೊದಟ್ಟ ಶೋಣಮಣಿದೀಧಿತಿಯುಂ ನೆಱೆದಿಪ್ಪುದು (ವರ್ಧಮಾ. ೫–೫೫) ; ಅಲ್ಲಿಂ ನಡೆದು ಪರಕಲಿಸಿ ಪರಿವ ಕರ್ಪೂರರಸದ ಪರಿಕಾಲೊಳ್ ಕಾಲಂ ನೀಡಿ (ಲೀಲಾವ. ೧೧–೫೬ ವ) ; ಕಾಳಗತ್ತಲೆ ಲೋಕದೊಳು ಪರ್ಬಿ ಪರ[ಪಾಠಾಂ. ರಿ]ಕಲಿಸಿ ಮಡಲಿಱುದುದು (ಸೋಮಚ. ೨–೭) ; ಸಿದ್ಧನಂಜೇಶ ಹೇಳಿದಂ ಸರಸಮೃದುಮಧುರವಚನಾಮೃತಂ ಪರಕಲಿಸಿ ಹೊಱಸೂಸಲು (ಗುರುಚಾ. ೪–೪೪). ೩. ವ್ಯಾಪಿಸುವಂತೆ ಮಾಡು ; ಹಬ್ಬಿಸು ; ವಿಸ್ತಾರಗೊಳಿಸು : ರಕ್ಷಾವಿಚಾರಮಂ ಪರಕಲಿಸಿ (ಚೇರಮ. ೧–೨೪) ; ಚಂದ್ರಿಕೆಯ ಪರಕಲಿಸಿ ಚಂದ್ರನುದಯಂ ಗೆಯ್ದನು (ಪ್ರೌಢರಾ. ೯–೨೭). ೪. ಹೆಚ್ಚುಮಾಡು ; ಅಧಿಕಗೊಳಿಸು : ವಿರಾಜಿಸುತ್ತಿಹುದು ಸುರಪುರದಂತೆ ವಿಬುಧಸಂಚಯಕೆ ಸುಖವ ಪರಕಲಿಸೆ . . . ತಿರುವಾವಲೂರು (ಸೌಂದಪು. ೨–೮). ೫. ತೊಡೆ; ಲೇಪಿಸು; ಬಳಿ : ತೊಳಪ ಬೆಳ್ಳಿಯ ಪಲಗೆಗೆ ಕತ್ತುರಿಯ ಮಿಸುಪ ರಜಮಂ ಪರಕಲಿಸುತ್ತ (ಜಯಕಾ. ೧೨–೫೨). **ಪರಂಕಲಿಸು:** ೧. ಗಱುಸನ್ನೆಗೆಯ್ದು ತೆಗೆನೆಱೆದೆಱಗಿ ಪರಂಕಲಿ[ಪಾಠಾಂ. ವಿ]ಸಿ ಪರ್ವಿ ಕೂಕಿಱುದಿಸೆ ಕೆಂಗಱುಯ ಮೊನೆಯಂಬುಗಳ್ ಕಣ್ದೆಱೆಯಿಸಿದುವು . . . ಕಡುವಿತ್ತೆಗರಂ (ಪಂಪಭಾ. ೧೦–೭೩). **ಪರಕರಿಸು :** ೨. ಪರಕರಿಸಿ ಹಂಜಿಯಂ ಹಂಜರಿಸಿಯಿರುತಿರೆ ತೆರೆನೆಗೆಯೆ ಯಮಪುರದ ಸೋಪಾನವೆಂಬಂತೆ (ಪಿಂಡೋರ. ೨–೧೦) ; ಎರೆಗೊಂಡಡರ್ದವಲ್ಲಿಯ ಮರಂಗಳಂ ಬಿಗಿದು ಸುತ್ತಿ ಮೊಗಮೆತ್ತಿದ ಸುಯಿ ಪರಕರ[ಪಾಠಾಂ. ಲಿ]ಸೆ ಗರಳ ಭಯದಿಂ ಚರಿಯಿಸರದಜಗ್ರಭಾಗದೊಳ್ ಖಚರರ್ಕಳ್ (ಮಹಾನೇ. ೪–೭೪). **ಪರಿಕಲಿಸು :** ೧. ಪಚ್ಚು ಪರಿಕಲಿಸಿ ಬೆನ್ನಂ ಮುಚ್ಚಿರೆ ಮುಡಿ ಕಳ್ಳಬೆಳ್ಳಿವಟ್ಟಲ್ ಬಾಯೊಳ್ ಬೆಚ್ಚಂತಿರೆ ಸತಿ ಶಶಿಯಂ ಕಚ್ಚಿ ನೆಲಕ್ಕಿಟುದ ರಾಹುವಂ ನೆಱೆ ಪೋಲ್ತಳ್ (ಕಾವ್ಯಸಾ. ೯೬೬ ಶೂದ್ರಕ) ; ಚಕ್ರವರ್ತಿಯ ಪಡೆ ಗಂಗಾನದ್ಯುಭಯತೀರಂಗಳೊಳ್ ಪಚ್ಚು ಪರಿಕಲಿಸಿ ನಡೆದು (ಶಾಂತಿಪು. ೧೧–೭೦ ವ) ; ಜಳಕೇಳಿಲೋಲಭಾವನ ಲಳನಾಕುಚ ತಟವಿಲಿಖಿತಮೃಗಮದಪತ್ರಾವಳಿ ಪರಿಕಲಿಸಿ ತರಂಗಂಗಳೊಳೀವುದದರ್ಕ ಪೂರ್ವಜಳನೀಳಿಕೆಯಂ (ಚಂದ್ರಪು. ೧೫–೩೪). ೨. ಪರೆದು ಪರಿ(ರ)ಕಲಿಸಿ ಕವಿವಾ ಪರೆಯಂ ತೆಗೆದರಿದು ಕಳೆದು (ಅಶ್ವಶಾ.೧೫–೧೨) ; ಪರಿಕಲಿಸಿದುರು ಮೌಕ್ತಿಕವ ಸಂಚರಿಸುವಾನೆಯ ಮತ್ತಮದನಿರ್ಜರವ . . . ಅಸುರ ಸಭಾಂಗಣವ ಕಂಡ (ತೊರರಾ. ೫–೨–೬೨) ; ಕಾವ್ಯವಿನಚಂದ್ರಧರೆಗಳುಳ್ಳನ್ನೆಗಂ ಪರಿಕಲಿಸಿ ಮೆಱೆವುದು (ಭಾವಚಿಂ. ೧–೧೬). ೩. ಬಿರುದಿನ ಪಲ್ಲವಸತ್ತಿಗೆ ಮೆಱೆದುವು ಪರಿಕಲಿಸುತ ದಿವ್ಯಪ್ರಭೆಯ (ಕಂಸವಿ. ೨೦–೨೧). ೬. ಕೂಡು ; ಸೇರು : ತರುಣತಮೋರುಚಿ ಕಮಲಾಕರದೊಳ್ ನವ ಚಂದ್ರಕಿರಣಮುತ್ಪಲವನದೊಳ್ ಪರಿಕಲಿಸಿದಂತೆ ಕತ್ತುರಿ ಸಿರಿಗಂಧಗಳಣ್ಪು ರಾಮಕೃಷ್ಣರೊಳೆಸೆಗುಂ (ಜಗವಿ. ೬–೨೨) ; ಪರಮಜಿನ ದಿವ್ಯಾಂಗಗಂಧದಿ ಪರಿಕಲಿಸಿ . . . ಪಿರಿದು ನಿರ್ಜರವಾಗಿ ಪರಿವಾ ಪರಮಪಾವನಗಂಧಜಲವನು ತಿರದೊಳಾಂತುದು ತಮತಮಗೆ ಭಕ್ತಿಯಲಿ ಸುರನಿಕರ (ಸಾಳ್ವಭಾ. ೩೩–೬೯). ೭. ಗುಂಪುಗೂಡು ; ಒಟ್ಟಾಗು : ಧನುರ್ವಲಂ ತೆಗೆ ನೆಱೆದು ಪೊಕ್ಕು ಕೂಕಿಱುದಾರ್ದು ಪರಿಕಲಿಸಿ ಬಂದೊಂದೆವುಲ್ಲೆಗಂಬು ದೊಟ್ಟಂತೆಲ್ಲಮೊರ್ವನನೆ ಲಕ್ಷ್ಯಂ ಮಾಡಿ ಶರಾಸಾರದಿಂ ದೂರಪಾತಮಿಸುವುದುಂ (ಶಾಂತಿಪು. ೪–೮ ವ). ೮. ಮೀರು ; ಅತಿಕ್ರಮಿಸು :

ಪರಿಕಲಿಸಿರೆ ತೋಳೆ ಕೊಂಬಂ ಕರಜಂಗಳೆ ಪೂಗಳಂ ತಳಂ ತಳಿರಂ ಪೋಲ್ತಿರೆ . . . ಕಲ್ಪತರುವನೆ ಪೋಲ್ತಂ (ಅಜಿಪು. ೪-೫೦). **ಹರಕರಿಸು :** ೧. ಬಲುಬೇಡವಡೆ ಕಡಗಿ ಹರಕರಿಸಿ [ಪಾಠಾಂ. ಪಡಿಸಲಿಸಿ] ನಡೆಯೆ (ಹಚಕಾ. ೫-೧೪). ೯. (ಆಲಂ) ಚಂಚಲವಾಗು ; ಹರಿದಾಡು: ಕರಣಸಂತತಿಗಳನು ಹರಕರಿಸ [ಪಾಠಾಂ. ಹರಕಲಿಸ]ಲೀಯದೆ ಪರಿಣಮಿಸಿ ಮಾಡೆ ಗುರುಭಕ್ತಿ ನೋಡಾ (ಶಿವಗೀ. ೨೦-೭೮). **ಹರಕಲಿಸು :** ೧. ಕರೆದರ್ ಕಿವಿಯೊಳ್ ಹರಕಲಿಸಿತಂಗಲತೆಯೊಳ್ ಹರಣಂ ಸುಯ್ ನಿಮಿರ್ದು ನಡೆದುದು (ಲೀಲಾವ. ೧೦-೭೭). ೨. ಮಡಲಿಱಿದು ಹಬ್ಬಿ ಹರಕಲಿಸಿ ಬೆಳೆದೆಳಲತೆಗಳಿಡುಕುಱಿಂ (ಹಚಕಾ. ೩-೩೩). ೩. ಆಸುರ ದೊಳಾನೆದೊಗಲಂ ಬಿಚ್ಚಿ ಹರಕಲಿಸಿ ಹಾಸಿ (ಸೋಮಚ. ೫-೫೫). ೭. ತೆರಳುವ ತೇರು ಪತಾಕೆ ಹರಕಲಿಸಿದ ಭಟರಿಂದೊತ್ತಿ ಬರುತಿರ್ದ ಭರತೇಶ (ಭರಚ. ೩೨-೪೨). **ಹರಿಕರಿಸು :** ೩. ಹರಿಕರಿಸಿ ದಂತಚ್ಛವಿಯ ಬೆಳುದಿಂಗಳನು ಸುರಿವ ಕರಚೆಲುವ ಬಾಯ್ದೆಱೆಯ ಪರಮೇಶ್ವರಿ (ಪ್ರಭುಲೀ. ೨-೩೦). [<ಪರೆ$_1$+?+-ಇಸು$_3$]

ಪರಕಳತ್ರ (ನಾ). ಬೇರೆಯವನ ಹೆಂಡತಿ ; ಪರನಾರಿ ; ಪರಸ್ತ್ರೀ : ಪರಕಳತ್ರಮನಪ್ಪಿದುರಂಬೆರಸು ಖಳನ ತಲೆಯಂ ಕೊಳ್ವೆಂ (ಶಾಂತಿಪು. ೬-೭೮). [ಪರ$_3$+ಕಳತ್ರ(=ಕಲತ್ರ)]

ಪರಕಾಯ (ನಾ). ಬೇರೆಯ ದೇಹ,—ಶರೀರ : ಪರಕಾಯದಿ ಪ್ರವೇಶ ಬಲ್ಲಾತನಾಗಿ ಕುಕ್ಕುರನೊಂದು ಸತ್ತು ಬಿದ್ದಿರಲದಱ ಕಾಯದೊಳು ಪೊಕ್ಕು (ಪ್ರೌಢರಾ. ೧೯-೨೦). 'ಪರಕಾಯಪ್ರವೇಶ' ಪರಾ. [ಪರ$_3$+ಕಾಯ]

ಪರಕಾಯಪ್ರವೇಶ(ನಾ). ಅಲೌಕಿಕ ಸಾಧನೆಯಿಂದ ತನ್ನ ಪ್ರಾಣವನ್ನು ಬೇರೊಂದು ಶರೀರದಲ್ಲಿ ಪ್ರವೇಶಿಸುವಂತೆ ಮಾಡುವುದು; ಚೌಷಷ್ಟಿಕಲೆಗಳಲ್ಲಿ ಒಂದು : ಎಮ್ಮ ಗುಣಾಪಹಾರಾರ್ಥಂ ಬಂದೀ ಶ್ಯೇನ ಪಾರಾವತಂಗಳೊಳ್ ಪರಕಾಯಪ್ರವೇಶದಿಂ ನುಡಿವುದದು ಕಾರಣದಿನೀ ಪುರುಷಭಾಷಾನುವಾದಂಗಳೊಳವೆಂಬುದುಂ (ಶಾಂತಿಪು. ೯-೯೧ ವ); ಪರಕಾಯಪ್ರವೇಶ ... ಖಗೋಳಜ್ಞಾನ ಮೊದಲಾದುವುಗಳು ಅವಾಂತರ ಸಿದ್ಧಿಗಳು (ಭಾರದ. ೧೬೫).

ಪರಕಾಯಪ್ರವೇಶ ಮಾಡು = ತನ್ನ ಪ್ರಾಣವನ್ನು ಬೇರೆಯವರ ಶರೀರದಲ್ಲಿ ಹೊಗಿಸು,—ಪ್ರವೇಶಿಸುವಂತೆ ಮಾಡು: ಹುಡುಗರಿಗೆ ಬೋಧೆ ಮಾಡುವುದು ಪರಕಾಯಪ್ರವೇಶ ಮಾಡುವುದು ಎರಡೂ ಒಂದೇ (ಮಾಮರ. ೫೬). [ಪರಕಾಯ+ಪ್ರವೇಶ]

ಪರಕಾರ, ಪರಕರ, ಪರಕರು, ಪರಿಕರ$_2$, ಪರಿಕಾರ$_2$ (ನಾ). (ಉಕ) ಸಾಮಾನ್ಯವಾಗಿ ಚಿಕ್ಕಹುಡುಗಿಯರು ಧರಿಸುವ ಒಂದು ಬಗೆಯ ಉಡುಪು ; ಲಂಗ : ಶಾಂತಾ . . . ಪರಕಾರದ ಬದಲು ಸೀರೆ ಧರಿಸತೊಡಗಿದಳು (ಗಂಮಾಯಿ. ೨೨೪) ; ಅಕ್ಕನ ಮದುವೆ ನಿಶ್ಚಯವಾದಾಗ ನಾನಿನ್ನೂ ಪರಕಾರ ಉಟ್ಟುಕೊಳ್ಳುತ್ತಿದ್ದೆ (ವೈನಿ. ೭). **ಪರಕರ :** ಥಾಯಲಂಡದ ಚಪ್ಪಟೆಮುಖದ ಪರಕರ ಉಟ್ಟ ಗಿಡ್ಡ ಹುಡುಗಿ . . . ನುಸುಳಿ ಹೋಗುವಾಗ (ಕ್ಷಿತಿಜ. ೮) ; ವಸೂ ಪರಕರದ ಪೋರಿಯಾಗಿ ಉಳಿಯದೆ . . . ಹೆಣ್ಣಾಗಿ ಬಂದಿದ್ದಳು (ದೀಪಹ. I, ೧೧೬). **ಪರಕರು :** ಮೈಮೇಲೆ ಷರ್ಟು, ಪರಕರು . . . ಸಾದಿನ ಬೊಟ್ಟು ಇಟ್ಟುಕೊಂಡ ಬಾಲಕಿಯರು—ಇವರೇ ತುಂಬಿಬಿಟ್ಟರು (ಮುಂಗಾಪು. ೨೭). **ಪರಿಕರ$_2$:** ಹೆಂಗಸರು ಪರಿಕರವನ್ನುಟ್ಟುಕೊಂಡು ಬಲಕ್ಕೆ ಶರಗು ಹೊದ್ದುಕೊಳ್ಳುವರು (ಕಭಾಗೆ. ೧೦೫). **ಪರಿಕಾರ$_2$:** ಹೆಂಗಸರು ಪರಿಕಾರ ಉಟ್ಟುಕೊಂಡು ಮಾರವಾಡಿ ಹೆಂಗಸರಂತೆ . . . ಸೆರಗು ಹೊದ್ದುಕೊಳ್ಳುತ್ತಾರೆ (ಕಭಾಗೆ. ೧೦೮) ; ಅಜ್ಜಿ ಚಿನ್ನಮ್ಮನಿಗೆ ಪರಿಕಾರ ಬಿಡಿಸಿ ಕಿರಿಗೆ ಉಡಿಸಿದ್ದಳು (ಮಲೆಮ. ೯೩).

ಪರಕಾರದ ಗೆಳತಿ = ಬಾಲ್ಯದ ಸ್ನೇಹಿತೆ: ನಾವೀರ್ವರೂ ಪರಕಾರದ ಗೆಳತಿಯರು (ಭೂಮಿತಾ. ೨೩). ಪರಕಾರದ ಹುಡುಗಿ = ಎಳೆಯ ವಯಸ್ಸಿನ ಹುಡುಗಿ ; ಬಾಲಕಿ : ಆಗ ಅವಳಿನ್ನೂ ಪರಕಾರದ ಹುಡುಗಿ (ಅಲ್ಪವಿ. ೧೩೨).

[←ಪಾರ. ಪರಕಾರ್ ; ಮರಾ. ಪರಕರ್, ಪರಕೋರ್]

ಪರಕಾರ್ಯ (ನಾ). ಪರೋಪಕಾರ ; ಪರಾರ್ಥ : ಕೃಷ್ಣನಲ್ಲಾ ನರನ ಸಾರಥಿಯಾಗನೇ ಪರಕಾರ್ಯದನುವಱಿದು (ಕುವ್ಯಾಕ. ೫-೨೫). 'ಪರಕಾರ್ಯನಿಷ್ಠ' ಪರಾ. [ಪರ$_3$+ಕಾರ್ಯ]

ಪರಕಾರ್ಯನಿಷ್ಠ (ನಾ). ಪರೋಪಕಾರದಲ್ಲಿ ಶ್ರದ್ಧೆಯುಳ್ಳವನು; ಪರೋಪಕಾರಿ : ಸತ್ಪುರುಷರೇ ಪರಕಾರ್ಯನಿಷ್ಠರು(ಕುವ್ಯಾಕ.೫-೨೫). [ಪರಕಾರ್ಯ+ನಿಷ್ಠ]

ಪರಕಾಲ (ನಾ). ೧. ಬೇರೆಯ ಸಮಯ : ಉಳ್ಳುದನಲ್ಲದಾರ್ಗ ಮಿಲ್ಲೆನಲ್ ಬಾರದುಳ್ಳುದುಂ ಪರದ್ರವ್ಯ ಪರಕ್ಷೇತ್ರ ಪರಕಾಲ ಪರಭಾವದಿಂದಮಿಲ್ಲದಿರ್ಕುಂ (ಶಾಂತಿಪು. ೮-೧೩೮ ವ). ೨. ಶತ್ರುಗಳಿಗೆ ಯಮನಂತಿರುವವನು. ೩. ತಮಿಳುನಾಡಿನ ವಿಷ್ಣುಪಂಥದ ಹನ್ನೆರಡು ಜನ ಆಳ್ವಾರರುಗಳಲ್ಲಿ ಒಬ್ಬರಾದ ತಿರುಮಂಗೈಆಳ್ವಾರರ ಹೆಸರು : ಶ್ರೀಕೃಷ್ಣ ಮಧುರಕವಿ . . . ಶ್ರೀಕೃಷ್ಣಮುನಿವಾಹನರ್ ಶ್ರೀಕೃಷ್ಣ ಪರಕಾಲರ್ (ಎಕ. V (R), ಮೈಸೂರು. ೪೯-೯ ; ?) ; ತಿರುಮಂಗೈಆಳ್ವಾರ್—ಪರಕಾಲ, ಕ್ರಿ.ಪೂ.೪೮೫೧ (ಭಾರದ.೨೫೭ಅಡಿಟಿ). 'ಪರಕಾಲಮಠ' ಪರಾ. [ಸಂ.]

ಪರಕಾಲಮಠ (ನಾ). ತಮಿಳುನಾಡಿನ ತಿರುಮಂಗೈ ಆಳ್ವಾರರಿಗೆ ಸಂಬಂಧಿಸಿದ ಮಠ : ಶ್ರೀಮದ್ಘಂಟ್ಟಾವತಾರ ಪರಕಾಲಮಠಕ್ಕೆ . . . ಕೃಷ್ಣರಾಜವಡಯರವರು ಸಮರ್ಪಿಶಿದ ರತ್ನಪಡಿ ಶಠಗೋಪ (ಎಕ.V (R), ಮೈಸೂರು. ೨೫-೧ ; 1816). 'ಉತ್ತರಾಧಿಮಠ' ಪರಾ. [ಪರಕಾಲ+ಮಠ]

ಪರಕಾಳೆ (ನಾ). ೧. ಒಂದು ಬಗೆಯ ಬಟ್ಟೆ : ಗಾಂಧಾರಿಯು . . . ವತ್ತಾಗಿರುವ ಪರಕಾಳೆ ವಸ್ತ್ರವನ್ನು ಗಳಿಗೆ ಮಾಡಿ ಅದರಿಂದ ಕಣ್ಣುಗಳನ್ನು ಕಟ್ಟಿಕೊಂಡಿದ್ದಳು (ಕೃಪಾಅ. ೨೦೫). ೨. "ಪರಕಾರ" (ಜಾನಕೋ.೧೪).[←ಪಾರ. ಪರಕಾಲಾ; ಮರಾ. ಪರಕಳಾ, ಪರಕಾಳೇ, ಪರಕಾಳಾ./ತಮಿ. ಪಱಕ್ಕಾಳಿ ; ತುಳು. ಪರಕಳೆ, ಪರಕಾಳಿ]

ಪರಕಿ (ನಾ). ಒಬ್ಬಾಕೆಯ ಹೆಸರು : ಪರಕಿಯ ಮಗಳ್ ಕಳಿಂಗಬ್ಬೆ (ಎಕ. XI, ದಾವಣ. ೧೭-೮ ; 889). [?]

ಪರಕೀಯ (ಗು). ೧. ಹೊರಗಿನ ; ಅನ್ಯ : ಅದನ್ನೂ ಎರಡು ವಿಧವಾಗಿ ವಿಂಗಡಿಸಿರುವರು ; ಸ್ವಯಂಸಲಹೆ ; ಪರಕೀಯ ಸಲಹೆ (ಶಿಕ್ಷದ. ೫೫೩). ೨. ಶತ್ರುತ್ವದಿಂದ ಕೂಡಿದ ; ಹಗೆಯನ್ನು ಸಾಧಿಸುವ. (ನಾ). ೩. ಹೊರಗಿನ ವ್ಯಕ್ತಿ; ಅನ್ಯವ್ಯಕ್ತಿ: ನಾನು ನಿಮಗೆ ಅಷ್ಟು ಪರಕೀಯಳಾದೆನೇ ? (ನಿರ್ದೋಷಿ. ೧೫೯) ; ಲಲಿತೆಯು ಅವನಿಗೆ ಪರಕೀಯಳಂತೆ ಕಾಣತೊಡಗಿದಳು (ಪರಿಣೀ.೫೨) ; ಆಮ್ಮಾ ಪರಕೀಯನಾದ ಇವನಾವನು ? (ಶಾಕುಂತ. ೧೦೯-೬). [ಸಂ.]

ಪರಕೀಯತೆ (ನಾ). ಬೇರೆಯೆಂಬ ಭಾವ ; ಹೊರಗಿನದು ಎಂಬ ಭಾವ : ವೃತ್ತಗಳು ಮಾತ್ರ ತಮ್ಮ ಪರಕೀಯತೆಯನ್ನು ಮರೆಯಲಿಲ್ಲ (ಸಮಾಲೋ. ೧೬೧). [ಸಂ. ಪರಕೀಯತಾ]

ಪರಕೀಯೆ (ನಾ). ೧. ಬೇರೆಯವನ ಹೆಂಡತಿ ; ಪರಸ್ತ್ರೀ. ೨. [ಕಾವ್ಯಮಿಾ] ಮೂರು ಬಗೆಯ ನಾಯಕಿಯರಲ್ಲಿ ಒಬ್ಬಳು; ಬೇರೆಯವನಿಗೆ ಸೇರಿದವಳು ; ಅನ್ಯೆ : ಸ್ವಕೀಯೆ ಪರಕೀಯೆ

ಸಾಮಾನ್ಯೆಯರೆಂಬ ತ್ರಿವಿಧನಾಯಕಿಯರಿಂ (ವಿನೇಕ. ೨೪೪).
[ಸಂ. ಪರಕೀಯಾ]

ಪರಕುಲ (ನಾ). ಬೇರೆಯ ಮನೆತನ,—ವಂಶ : ಪರಕುಲಕ್ಕೆ ಕಳುಹಿಸುವುದಕ್ಕಾಗಿ ನಮ್ಮನ್ನು ಪೋಷಿಸುವರು (ಹತ್ತುಮ.೨೫).
[ಪರ$_3$+ಕುಲ]

ಪರಕೃತಿ (ನಾ). ಬೇರೆಯವರು ರಚಿಸಿದ ಕಾವ್ಯ,—ಗ್ರಂಥ : ಇದು ಲೋಹಪಿನದ್ಧ ಮೆನಿಪ್ಪುದು ಪರಕೃತಿನುತಿಯೊಳಖಿಳಖಳಜನವಕ್ತಂ (ಚಂದ್ರಪು. ೧-೪೦). [ಪರ$_3$+ಕೃತಿ$_1$]

ಪರಕೆ$_1$, ಹರಕೆ$_1$, ಹರಿಕೆ$_1$ (ನಾ). ೧. ಆಶೀರ್ವಾದ;ಆಶೀರ್ವಚನ : ಪಾಂಡವರಯ್ವರುಂ . . . ಮಹಾಬ್ರಾಹ್ಮಣರ್ ಪರಸುವ ಪರಕೆಗಳುಮನಿಕ್ಕುವ ಸೇಸೆಗಳುಮನಾಂತುಕೊಳುತ್ತುಂ (ಪಂಪಭಾ. ೨-೯೩ ಪ); ಸಾಸಿರ್ಬ್ಬರಿತ್ತ ಪರಕೆಯ ಕೈಕೊಣ್ಡು ಕಲ್ಲ ನಿಱಿಸಿದಂ (ಎಕ.VIII, ಸೊರಬ. ೨೪೮-೩ ; ಸು. 950 ?) ; ಗುರುಚರಣಂಗಳ್ಗಱಗದೆ ಪರಕೆಯನಾದರದಿ ನಾಂತುಕೊಳ್ಳದೆ ಮೋನಂಬೆರಸಿರ್ಪುದು ನಿನಗುಚಿತಮೆ (ಗದಾಯು. ೩-೮೦) ; ಪರಸುವ ಸಪ್ತಮಾತೃಕೆಯರ ಪರಕೆಯೊಳಂ ... ಗಿರಿಜಾತೆ... ಬಳೆಯುತಿರ್ದಳ್ (ಗಿರಿಕ. ೩-೬೯ ಪ). ೨. ತನ್ನ ಅಭೀಷ್ಟಸಿದ್ಧಿಗಾಗಿ ದೇವರಲ್ಲಿ ಮಾಡಿಕೊಳ್ಳುವ ಸೇವೆಯ ನಿರ್ಧಾರ,—ಸಂಕಲ್ಪ : ಬಳಾರಿಯ ಮನೆಯಂ ಪರಕೆಯ ಕುಱಿಯಂ ಪುಗಿಸುವಂತೆ (ಪಂಚತಂ. ೧೭೫-೧೦) ; ಕಾವುದೆಂದಾ ಪಾದಪೀಠದೊಳ್ ಪೊರಳ್ದು ಪರಕೆಯಂ ನುಡಿದು (ಲೀಲಾವ. ೧೧-೭ ಪ) ; ಜನ್ನಿಗಿಯಾವಂ ಪರಕೆಯ ಪೊನ್ನಂ ಪರಿಯಣಮನುಯ್ವ ಕಳ್ಳನ ನಂತಿಂತೆನ್ನದು ಗಡಮೆನೆ ದೈವದ ಸನ್ನಿಧಿಯಂ ನೋಡೆ ಮನೆಯ ಕುನ್ನಿ ವಿಶೇಷಂ (ಪದ್ಯಸಾ. II, ೮೨೧) ; ಆ ಪರಕೆ ಕೈಗೂಡಲು(ಜೈಮಿಭಾ. ೬-೨೨) , ಪರಕೆಯ ನೋಂಪಿಯೆಂದು ಪಡೆದಬ್ಬೆಗೆ ಪರ್ಬಿದೆ ಬೇನೆಯೆಂದು . . . ಒರೆಯುತೆ(ಚಿಕವಿ.೬-೯೨). ೩. ಅಭೀಷ್ಟಸಿದ್ಧಿಗಾಗಿ ಸಂಕಲ್ಪ ಮಾಡಿಕೊಂಡು, ಅದು ಈಡೇರಿದ ಮೇಲೆ ದೇವರಿಗೆಅರ್ಪಿಸುವ ವಸ್ತು, ಪ್ರಾಣಿ ಮುಂತಾದುವು;ಮೀಸಲು; ಮುಡಿಪು : ಸಿಸಿರಮನೆ ಪಿಡಿದು ಪರಕೆಗೆ ಬಸಂತನಲರ್ವೋದ ಮಾವಿನಡಿ ಮಂಚಿಕೆಯೊಳ್ ಕುಸುರಿದಱಿದಡಗಿನಂತೆವೊಲೆಸೆದುವು ತದ್ವನದೊಳುದಿರ್ದ ಮುತ್ತದ ಮುಗುಳ್ಗಳ್ (ಯಶೋಚ. ೧-೩೭) ; ಜಗದಂಬಿಕೆಯೆನಿಸುವ ದುರ್ಗೆಗೆ ಪರಕೆಯನೀವೆಂ (ದಶಕು. ೫-೯೦). **ಹರಕೆ$_1$** : ೧. "ಹರಕೆ—ಸ್ವಸ್ತಿ, ಆಶಿಸ್" (ಸಾಚಿರಾ. ೬) ; ಹರಸಿ ಮಾಡುವುದು ಹರಕೆಯ ದಂಡ (ಬಸವ. ೨೨೮) ; ನಿಮ್ಮ ಹರಕೆಯದಿನಿತುಮಿಲ್ಲದೆ ಕಾಲಪವನಾಶನನ ಕೈದುತ್ತಾಪನಲ್ಲಾ (ಬಸಪು. ೪೬-೩೭) ; ಹರಿಯ ಚರಣಕ್ಕೆಱಗಿ ವಿಜಯದ ಹರಕೆಗಳ ಕೈಕೊಂಡು (ಕುಮ್ಯಾಉ. ೧೧-೩೭) ; ಶುಕ್ರಾಚಾರ್ಯ ಹರ ಕಮಲಜರ ಹರಕೆಗಳ ತಳೆದು . . . ಖಳದೇವ ಪೂಜಾಲಯಕೆ ನಡೆತಂದ (ತೊರರಾ. ೬-೨-೩). ೨. ಹಬ್ಬಕ್ಕೆ ತಂದ ಹರಕೆಯ ಕುಱಿ ತೋರಣಕ್ಕೆ ತಂದ ತಳಿರ ಮೇಯಿತ್ತು (ಬಸವ. ೧೨೯) ; ತಂದೆ—ತಾಯಂದಿರು . . . ಹೊರದಿದ್ದ ಹರಕೆಯಿರಲಿಲ್ಲ (ಕಂಬಹು.೫೫);ಸುಮ್ಮನೇ ಮುಂದಕ ಯಾಕ ಹಾಕಬೇಕು ದೇವರ ಹರಕೇನ? (ಗಂಗಾಸಾ. ೮೪). ೩. ಹಣ್ಣ ಹರಕೆಯದೆತ್ತ ನಿಮ್ಮಗರಣ್ಯದನುಭವವೆತ್ತ (ಕುಮ್ಯಾಅ. ಓರಿಇ. ೪-೫೫) ; ಹೊಡೆಸಿದರು ಕುಱಿ ಕೋಣ ಕಾಟಯ . . . ಉಡಿದ ಕೈಗಳ ಮೃತ್ಯುದೇವಿಗೆ ಕೊಡುವ ಹರಕೆಯ ಕಂಡು ರಾವಣ ನೋಡಿ ಮೆಚ್ಚಿರ್ದ (ಕೌತಿರಾ. ೨೧-೧೨) ; ಗುಣಪಡಿಸೆನ್ನಿನಿಯಳ ರುಜೆಯಿದನಿಂದೆ ಸಲಿಸುವೆ ಹರಕೆಯನೆಂದೆ (ಇಂಚಾಪ. ೪೯-೩೪). **ಹರಿಕೆ$_1$** : ೧. ಹರಿಕೆಯಿಲ್ಲದ ದಾನ . . . ಅನ್ನದ ಕರಕ ಸವಿದಂತೆ (ಸರ್ವಜ್ಞ. ೧೭೨೫) ; ಹಿರಿಯರ ಹರಿಕೆಯ ಕೈಕೊಂಡು ಜಿನದತ್ತ (ಜಿರಾಮಾ. ೬-೧೩೯). ೨. ಎಷ್ಟೊ ಹರಿಕೆಗಳನ್ನು ಹೊತ್ತೆನು (ವಿಧಿವೈ. ೧೫೫) ; ನರಕದಲ್ಲಿ ' ಬೀಳುವವನು ಹರಿಕೆ ಹೇಳಿದರೆ ತಪ್ಪೀತೇ ? (ಗಾದೆ). ೩. ದೇವಕಾರ್ಯಕ್ಕೆಂದು ಧಾರಾಪೂರ್ವ್ವಕವಾಗಿ ಕೊಟ್ಟ ಹರಿಕೆ (ಎಇ. XVIII, ೧೯-೩೫೬ ; 1274) ; ಇತ್ತರು ಸಕಲ ಹರಿಕೆಯನು (ಸಂಭಪ. ೧೭-೭೫).

ಹರಕೆ ಮಾಡಿಕೊಳ್ಳು = ಕಾರ್ಯಸಿದ್ಧಿಗಾಗಿ ದೇವರ ಸೇವೆಯ ನಿರ್ಧಾರವನ್ನು ಕೈಗೊಳ್ಳು : ಉಮ್ಮತ್ತೂರಿನ ನಾಯಕನು ಹರಕೆ ಮಾಡಿಕೊಂಡಿದ್ದಾನೆಂದೂ . . . ಮಹಂತರು ತಿಳಿಸಿದರು (ಶ್ರೀರಾಯ.೭). ಹರಕೆಯ ಗೊಂದಲ = ಹರಕೆಯನ್ನು ನೆರವೇರಿಸಲು ಅಂಬಾಭವಾನಿಯನ್ನು ಕುರಿತು ಮಾಡುವ ಒಂದು ಬಗೆಯ ಧಾರ್ಮಿಕವಿಧಿ : ನಮ್ಮಲ್ಲಿ ವಿಶೇಷ ಸಮಾರಂಭಗಳಲ್ಲಿ 'ಹರಕೆಯ ಗೊಂದಲ' ಗಳನ್ನು ಹಾಕಿಸುವ ರೂಢಿಯುಂಟು (ಕಥಕ. ೩).
[<ಪರಸು$_1$+-ಕೆ./ಮಲ. ಪರಿಕ್ಕ ; ತುಳು. ಪರಕೆ, ಪರ್ಕೆ, ಹರಕೆ ; ಕೊಡ. ಪರಕೆ]

ಪರಕೆ$_2$ 'ಪೊರಕೆ' ನೋ.

ಪರಕೆಗಟ್ಟು, ಹರಕೆಕಟ್ಟು (ಕ್ರಿ). ಕಾರ್ಯವು ಕೈಗೂಡಲೆಂದು ದೇವರಲ್ಲಿ ಸೇವೆಯ ಸಂಕಲ್ಪವನ್ನು ಮಾಡಿಕೊಳ್ಳು : ದೆಯ್ವಕೆ ಪರಕೆಗಟ್ಟುತ ಭ್ರಮೆಗೊಳುತಿರ್ದರು (ಜೀವಂಸಾಂ. ೧೦-೭೦). **ಹರಕೆಕಟ್ಟು** : ಹರಕೆಕಟ್ಟ ಹತ್ತುವರ್ಷಗಳಾದರೂ ಇನ್ನೂ ತಿರುಪತಿಗೆ ಹೋಗಲು ಸಾಧ್ಯವಾಗಿಲ್ಲ (ರೂಢಿ). [ಪರಕೆ$_1$+ಕಟ್ಟು$_1$]

ಪರಕೆಗುಡು 'ಪರಕೆಗೊಡು' ನೋ.

ಪರಕೆಗೈ (ಕ್ರಿ). ಹರಸು ; ಆಶೀರ್ವದಿಸು : ಕನ್ನೆರನ್ನೆಯರು ಪರಕೆಗೈಯಲಾ ಮನೆಯುನ್ನತಿವಡೆದೊಪ್ಪುವುದು (ಹದಿಬ. ೫-೨೫).
[ಪರಕೆ$_1$+ಕೈ$_1$ (<ಕೆಯ್$_1$)]

ಪರಕೆಗೊಡು, ಪರಕೆಗುಡು, ಹರಕೆಕೊಡು (ಕ್ರಿ). ಹರಕೆಯನ್ನು ಮಾಡಿಕೊಂಡ ಮೇರೆಗೆ ದೇವರಿಗೆ ಮೀಸಲನ್ನು ಒಪ್ಪಿಸು : ದೇವತೆಗೆ ಕುಡದೆ ಸತ್ತರೆ ತೀವಿದ ಮನೆಗಳನೆ ಪರಕೆಗೊಟ್ಟುಂ ಸತ್ತರ್ (ಸಮಪ. ೫-೧೧). **ಪರಕೆಗುಡು** : ಸೋಮಶರ್ಮನೆಂಬೊಂ . . . ಮಕ್ಕಳಂ ಬೇಡಿ ಸಂಬರನಾಗಶಾಣಕ್ಕೆ ಪರಕೆಗುಡಲ್ ಪೋಪುದಂ . . . ಕಂಡು (ವಡ್ಡಾರಾ. ೧೨-೫) ; ದೇವತೆಗೆ ಪರಕೆಗುಡೆ ನಾನಾವಿಧ ರುಜೆ ಪಿಂಗಿ ಪೋಗೆ (ಸಮಪ. ೫-೧೧). **ಹರಕೆಕೊಡು** : ಹರಕೆಕೊಡಲು ಹಣ್ಣು ಕಾಯಿಗಳನ್ನು ಸಂಗ್ರಹಿಸಿದನು (ಕಾಲೂರ. ೬ ಕಥಾಸಾರ) ; ಹರಕೆಕೊಟ್ಟರೂ ಹರಿಯೋದು ನಿಲ್ಲಲಿಲ್ಲ (ಗಾದೆ). [ಪರಕೆ$_1$+ಕೊಡು$_1$]

ಪರಕೆಗೊಳ್, ಹರಕೆಗೊಳ್, ಹರಕೆಗೊಳ್ಳು (ಕ್ರಿ). ಆಶೀರ್ವಾದವನ್ನು ಪಡೆ,—ಹೊಂದು : ಎನ್ನ ಪೆತ್ತ ತಂದೆಯುಮಂ . . . ಕಂಡು ಪರಕೆಗೊಂಡಲ್ಲದಾಹಾರಂಗೊಳ್ಳೆಂ (ಅರ್ಧನೇ. ೨-೫೩ ಪ) ; ಮುನಿಸಭೆಗೆ ವಂದಿಸಿ ಪರಕೆಗೊಂಡು . . . ಅರ್ಜುನಂ ಪೊಱಮಟ್ಟನು (ಜೈಮಿಭಾ. ೮-೧೧) ; ಆನತ್ತೆವಿರ್ಗೆಱಗಿ ಪರಕೆಗೊಂಡೆನಿಲ್ಲ ! (ರಾಮಾಶ್ವ. ೨೬-೨೭). **ಹರಕೆಗೊಳ್** : ಸದ್ಗುರು ದೇವಭಕ್ತರ ಹರಕೆಗೊಂಬುದು ಲೇಸು (ಬಸಪು. ೧೩-೭) ; ಕಂದ ಗಮಿಸಿದನವರ ವಂದಿಸಿ ಹರಕೆಗೊಳಲೆಂದು (ಸಂಭಪ. ೧೭-೫೧). **ಹರಕೆಗೊಳ್ಳು** : ಚೌಡಯ್ಯಂಗಳಿಗೆ ವಂದಿಸಿದ ಬಾಲಕಿ ಹರಕೆಗೊಳ್ಳಳೆ (ಬಸಪು. ೪೬-೪೩). [ಪರಕೆ$_1$+ಕೊಳ್$_1$]

ಪರಕೆವಿಡಿ (ಕ್ರಿ). = ಪರಕೆಗಟ್ಟು : ತನ್ನ ಸಂಗಡತಿಯರ್ಗೊಲವಕ್ಕೆ ನುತ್ತೆ ಮಾರಿಗೆ ಪರಕೆವಿಡಿದೆತ್ತಿದಳ್ ಕುಲಟೆಯೊರ್ವಳ್ (ಚಿಬಪು. ೯-೧೧).
[ಪರಕೆ$_1$+ಪಿಡಿ$_1$]

ಪರಕೆವೆಱು (ಕ್ರಿ). = ಪರಕೆಗೊಳ್ : ಅತನೊಳ್ಪರಕೆವೆತ್ತೊಡನೆ ಕಳುಹಿಸಿಕೊಂಡು (ಜೈಮಿಭಾ. ೨೯-೪೦). [ಪರಕೆ$_1$+ಪೆಱು$_1$]

ಪರಕೊತ್ತಟಿ (ನಾ). ಬೇರೆಯ ಗುಂಪು,— ಸಮೂಹ: ಪರದೇಸಂ, ಪರಕೊತ್ತಟಿ, ಪರವೆಗ್ (ಭಾಷಾಭೂ. ೧೩೨ ಉದಾ). [ಪರ್+ಕೊತ್ತಟಿ]

ಪರಕ್ಷಿತೀಶ (ನಾ). ೧. ಬೇರೆಯ ರಾಜ. ೨. ಶತ್ರುರಾಜ: ಸದಾಚಾರ ಚಕ್ಷುರಧಿವ್ಯಕ್ತಪರಕ್ಷಿತೀಶಗೃಹವೃತ್ತಂ ವೃತ್ತದೋರ್ಬಂಧುರಂ . . . ಪುಟ್ಟಿದಂ (ಪುಷ್ಪಪ್ರ. ೧೩-೧೦). [ಪರ್+ಕ್ಷಿತೀಶ]

ಪರಕ್ಷೇತ್ರ (ನಾ). ಬೇರೆಯ ಪ್ರದೇಶ,—ಸ್ಥಳ: ಉಳ್ಳುದುಂ ಪರದ್ರವ್ಯ ಪರಕ್ಷೇತ್ರ ಪರಕಾಲ ಪರಭಾವದಿಂದಮಿಲ್ಲದಿರ್ಕುಂ (ಶಾಂತಿಪು. ೮-೧೩೮ ಪ). [ಪರ್+ಕ್ಷೇತ್ರ]

ಪರಕ್ಷ್ಮಾಪ (ನಾ). =ಪರಕ್ಷಿತೀಶ ೨: ಈ ಪೊಟ್ಟಿ ಪೊಬ್ಬಾಗೆ ಪೋಗಿ ಪರಕ್ಷ್ಮಾಪರನಿಕ್ಕಿ . . . ನಿಷ್ಕಂಟಕಂ ಮಾಡುವೆಂ (ಶಾಂತಿಪು. ೭-೫೫) ; ಉದ್ರಿಕ್ತಪರಕ್ಷ್ಮಾಪ ಪ್ರತಾಪೋತ್ಕಟಳಳಭನೀ ಬಂದನೀ ಬಂದನು (ರಾಜಶೇ. ೬-೧೭). [ಪರ್+ಕ್ಷ್ಮಾಪ]

ಪರಗಣ 'ಪರಗಣೆ' ನೋ.

ಪರಗಣಹಾಕಿಮ್ (ನಾ). ಜಿಲ್ಲೆಯ ಆಡಳಿತಾಧಿಕಾರಿ: ಹನ್ನೆರಡು ಮಂತ್ರಿವರ್ಯರ ಸ್ಥಾನದಲ್ಲಿ ಒಬ್ಬ ಡೆಪ್ಯುಟಿಕವಿಮಿಷನರ್ ಮತ್ತು ಒಂದೆರಡು ಪರಗಣಹಾಕಿಮ್ (Sub-divisional Officer) . . . ನಿಯುಕ್ತರಾದರು (ಝಾಂಸಿರಾಣಿ. ೧೫೬). [ಪರಗಣ (<ಪರಗಣೆ)+ಹಾಕಿಮ್]

ಪರಗಣೆ, ಪರಗಣ, ಪರ್ಗಣ, ಪರ್ಗನ, ಪರ್ಗುಣ (ನಾ). ಹಲವು ತಾಲ್ಲೂಕುಗಳನ್ನು ಒಳಗೊಂಡ ನಾಡಿನ ಒಂದು ಭಾಗ; ಜಿಲ್ಲೆ: ಶಿಷ್ಟ ತೊರೆಸಾಲ ಪರಗಣೆಯ ಕೋಲಾರಪುರಕೆ ದೇಸಾಯಿ ನಾಡೆಜ್ಜೆಯನಹ (ಪ್ರೌಢಕಾ. ೧-೨೫) ; ದೇವರಾಜನು . . . ಹೊಸಕೋಟೆಯ ಪರಗಣೆಯನ್ನು . . . ತನ್ನ ರಾಜ್ಯಕ್ಕೆ ಸೇರಿಸಿದನು (ಮುಂಬಯಿ. ೪-೪೨) ; ಅರಸಪ್ಪನಾಯಕನು . . . ಸ್ವಾದೀಪರಗಣೆಯ ಹದಿನಾರುಸಾವಿರವರಹದ ಸೀಮೆಯನ್ನು ವಾದಿರಾಜಂಗೆ ಧಾರೆಯೆರೆದನು (ಕಥವಿ. ೧೬೪). **ಪರಗಣ:** 'ಪರಗಣಹಾಕಿಮ್' ಪರಾ. **ಪರ್ಗಣ:** ಒಟ್ಟು ರಾಜ್ಯ ಪರ್ಗಣಗಳಾಗಿ ವಿಭಾಗವಾಗಿ, ಪ್ರತಿಯೊಂದು ಪರ್ಗಣಕ್ಕೂ ಒಬ್ಬ ಅಮಿಾರನೂ . . . ಇದ್ದರು (ಇಸ್ಲಾಂಸಂ. ೬೩). **ಪರ್ಗನ:** ಇದಕ್ಕೆ ೧೦ ರಿಂದ ೪೦ ಡಿಸ್ಟ್ರಿಕ್ಟ್‌ನವರೆಗೂ ಸೇರಿತ್ತು. ಇಂಥಾ ಒಂದು ಪ್ರದೇಶಕ್ಕೆ ಮಹಲ್ ಅಥವಾ ಪರ್ಗನ ಎಂದು ಹೆಸರು (ಪಾಳಗಾ. ೧೨). **ಪರ್ಗುಣ:** ೩೪ ಪರ್ಗುಣಗಳು ("ಪರ್ಗುಣ" ಅಂದರೆ ಕೆಲವು ಗ್ರಾಮಗಳ ಮೊತ್ತ) (ಭೂಗೋಳ. ೪೩).

[←ಪಾರ. ಪರಗನಾ ; ಹಿಂ. ಪರಗನ, ಪರಗನಾ; ಮರಾ. ಪರಗಣಾ, ಪರ್ಗಣಾ]

ಪರಗತಿ (ನಾ). ಶ್ರೇಷ್ಠವಾದ ನೆಲೆ; ಮೋಕ್ಷ; ಕೈವಲ್ಯ: ಹಂಸ್ಮರಣೆ ಮಾಡೋ ನಿರಂತರ ಪರಗತಿಗೆ ಇದು ನಿರ್ಧಾರ (ಪುರಂದ. ೫-೮೫ ಪಲ್ಲವಿ) ; ಪರಸಂತಾಪದಮಂ ಪರಗತಿವಿಲಯಾಸ್ಪದಮುಂ ಕಾರ್ಯಮನುದಾರಮತಿ ನೆಗಳ್ದಪನೇ (ರಾಜಶೇ. ೧೩-೧೨) ; ಈಯೆಸಕದೊಳಿರೆ ಶೂದ್ರರಾದೊಡಂ ಪರಗತಿಗೆ ತಾವಾಯಾಸವಿಲ್ಲದೇಅುವರು (ಹವಿಬ. ೯-೧೫). [ಪರ್+ಗತಿ]

ಪರಗಮನ (ನಾ). ಯಾವುದಾದರೊಂದು ವಿಷಯದಲ್ಲಿ ವಿಶೇಷವಾದ ಆಸಕ್ತಿಯನ್ನು ಹೊಂದಿರುವುದು; ಪೂರ್ಣಪಾಂಡಿತ್ಯ: "ಪರಗಮನಂ ಪಾರಾಯಣ ಪರಾಯಣೋಪಾತ್ತಮಪ್ಪುಗೆ ಸಾಕಲ್ಯಾರ್ಥಂ" (ಪಸ್ತು ಕೋ. ೧೧೬-೩೧). [ಪರ್+ಗಮನ$_2$]

ಪರಗಿ, ಬರಗಿ, ಹರಗಿ (ನಾ). ಮುಳ್ಳುಗಳಿರುವ ಒಂದು ಬಗೆಯ ಹಣ್ಣಿನ ಗಿಡ ; ಕರಮರಿಕೆ ; ಕಮರಾಕ್ಷಿ: ಪರಗಿ (ಕರವಂದ).— ಸಣ್ಣ ಗಿಡ, ಕಂಟಿಯ ಜಾತೀದು (ಕಥಾಗೆ. ೪೩). **ಬರಗಿ:** ಬರಗಿ . . . ಇದರ ಹಣ್ಣು ಹುಳಿಯಾಗಿ ರುಚಿಕರವಿರುತ್ತದೆ (ಕಥಾಗೆ. ೪೩). **ಹರಗಿ:** ಒಂದೆಡೆಯಲ್ಲಿ ಕೆಂಪುಹರಗಿ, ಇನ್ನೊಂದೆಡೆಯಲ್ಲಿ ಸೊಕ್ಕಿ ನಿಂತ ಬದನೆಯು ನಿಡಗಳು (ಸೂರುದಾ. ೨೪೬). [←ತೆಲು. ಪರಿಗೆ, ಪರಿಗಿಯ]

ಪರಗು, ಹರಗು$_1$ (ಕ್ರಿ). ೧. ಭೂಮಿಯನ್ನು ಹರತೆ ಹೊಡೆ,—ಕುಂಟೆ ಹೊಡೆ: ಧಾರಿಣಿಯಂ ಪರಗುವ ಬಿತ್ತುವ ಬಹುವಿಧ ಪರಿಗಳಿಂದುಣ್ಬುಪಾಯಮುಂ ವಿಧು ಪೇಟ್ಟಂ (ಸಭಪ. ೨-೧೧) ; ಪ(ಹ)ರಗಲ್ ಕೇಳ್ ತ್ವರಿತದೆ ತಾರ್ವರಿಯಲ್ ಪೋಪಾಗ (ಪಂದು)ವಾಯಸಂ ಯೆಡದೆಸೆಯೊಳ್ ಸರವಿಾಗೆ ಪೋಗೆ ಬೆಳಗುರ್ವರೆಯ(ಯಿ)ಂ ಬರ್ಪ ಬಲನೊಳಧಿಕಂ ಬೆಳಗುಂ (ಜಿಟ್ಟಪು. ೯-೩೫) ; ಪೊಲವೆಲ್ಲಮುಂ ಪರಗಿದ್ಯೆ ಕ್ಷಣದಲ್ಲಿ ಶಿವಾಮರೇಶ್ವರಾ (ಅಮಶ.೯). ೨. ಕೇಳು; ಕೆತ್ತುಹಾಕು ; ಮೂಲೋತ್ಪಾಟನ ಮಾಡು : ಕಾಯ್ದ ಕಬ್ಬೋನ್ನ ಸೂಜಿಗಳಂ ಬೆರಲ್ಗಳೊಳ್ ಬಿಟ್ಟುವರುಂ ನಟ್ಟು ಪರಗುವರುಂ (ಅದಿಪು. ೫-೮೫ ಪ) ; ನಟ್ಟು ಪರಗುವುದುಂ . . . ತಿಂದು ತೇಗುವುದುಂ ಎಂದಿನ ಮೊದಲಾದ ಪಲವುಂ ತೆಱದ ದಾರುಣೋದಗ್ರನಿಗ್ರಹವಿಗ್ರಹಕ್ಕೆ ತಮ್ಮವಿಗ್ರಹಂಗಳನೊಡ್ಡಿ (ಸುಕುಮಾ. ೧೧-೪೬ ಪ) ; ಒಕ್ಕಲಿಗನಂತೆ ಮೆಟ್ಟಿ ಪರಗುವರ್ (ಧರ್ಮಾಮೃ. ೩-೭೩) ; ಕುತ್ತಿ ಕೂರಲಗಿನೊಳ್ನಭಕೆತ್ತುವ ನಟ್ಟು ಕೋಪದಿಂ ಪರಗುವ (ಪಸಾರ. ೩೦೧). **ಹರಗು$_1$:** ೧. "ಹರಗು-ಸಸ್ಯಕ್ರಿಯಾಯಾಂ" (ಶಪುಧಾ) ; ಹಸನ ಮಾಡಿ ಹರಗಿ ಹೊಲದಲ್ಲಿ ಕಸವಿತ್ತುವ ಮರುಳರಂತೆ (ವಚಸಂ. ೧೨೯-೧೧೩) ; ಉತ್ತು ಹರ [ಸಾಣಾಂರಿ] ಗಿದ ಹೊಲದೊಳಖಿಳಬೀಜಂಗಳಂ ಬಿತ್ತಿದಡೆ ಏನಾಯ್ತು (ದೀಕ್ಷಾಬೋ. ೩೭-೧೨) ; ಹರಗಿ ಹಸನಾದಿಳೆಯೊಳು . . . ಹುರಿಕರಿಯಾದ ಬೀಜವ ವಿತ್ತುವವರಂತೆ (ಪ್ರಭುಲೀ. ೬-೧೦) ; ಉತ್ತೊಮ್ಮೆ ಹರಗುವದು ವಿತ್ತೊಮ್ಮೆ ಹರಗಿ ಕಳೆದೆಗೆದರಾ ಬೆಳೆಯು ಎತ್ತುಗೈಯುದ್ದ (ಸರ್ವಜ್ಞ. ೧೩೫೪). ೩. (ಆಲಂ) ಸರ್ವನಾಶ ಮಾಡು ; ಧ್ವಂಸಗೊಳಿಸು: ಇಟ್ಟೂರಸಿ ಕಳೆಯಲ್ಬಗೆದನವನ ಜನ್ಮಮಂ ನೆಟ್ಟು ಹರಗಲ್ಬಗೆದನವನ ಕುಲವೆಲ್ಲಮಂ (ವೀಶರ. ಹ. ೪೮೬-೪) ; ಹರಗಿ ಬರಿಕ್ಕೈದಪೆನು ಬಿಡು ಪಡ (ಅಂಬಿಕಾ. ೪೧-೫). [ದೇ.॥ ತಮಿ. ಪರುಜ್ಜು, ಪಲುಕು]

ಪರಗುಣ (ನಾ). ೧. ಬೇರೆಯವರ ಸ್ವಭಾವ,—ಗುಣ: ಅಶೇಷ ಜನಂಗಳೊಳ್ ಪರಗುಣಾಸ್ತ (ಸ)ಹನನಲ್ಲದನಾತ್ಮಗುಣೋದಯಾಂಶ ಸರೂಪನ×××ಪಾರಪರಾಯಣಂ (ಕವಿಾ. ೩-೨೨೭) ; ಪರಗುಣದೋಷಸಹನಂ ಮಚ್ಚರಮೆನಿಕುಂ (ಪಸ್ತು ಕೋ. ೧೩೯-೧೨೪). ೨. ವೈರಿಯ ಗುಣ ; ಶತ್ರುವಿನ ಸ್ವಭಾವ : ಪರಗುಣಗಣಮುಂ ಸೈರಿಸುವರಮಗನುಮನುಜರೊಲ್ವರ್ (ಅರ್ಧನೇ. ೪-೧೩೪). [ಪರ್+ಗುಣ]

ಪರಗ್ರಹ (ನಾ). ೧. ಬೇರೆಯವರ ಮನೆ; ಅನ್ಯಗೃಹ: ಮನುಷ್ಯನು . . . ಪರಾನ್ನಭೋಜಿಯೂ ಪರಗೃಹಶಾಯಿಯೂ ಆದರೆ, ಅದರಿಂದು ಃಖಕ್ಕೆ ಕೊನೆ ಇರುವುದಿಲ್ಲ (ನಿಬಂಧ. II, ೩೦೬). ೨. ಬೇರೆಯವರ ಮನೆಯಲ್ಲಿರುವವನು : ಕುಟುಂಬವಿಲ್ಲದವಂ ಪರಗೃಹನೆಂಬುದು (ಕಾಮಶಾ. ೨೫೨). [ಪರ್+ಗೃಹ]

ಪರಗೇಹ (ನಾ). =ಪರಗೃಹ ೧ : ಪರಗೇಹೋಪಾರ್ಜಿತಾರ್ಥಂ . . . ಚಾರುದೃಷ್ಟಿಗಮನಂ ಕನ್ಯಾನಿವಾಸೋದ್ಭವಂ (ಜಾತಕ. ೧೭-೬). [ಪರ್+ಗೇಹ]

ಪರಘಾತ (ನಾ). [ಜೈನ]ನಾಮಕರ್ಮದಲ್ಲಿ ಪಿಂಡಪ್ರಕೃತಿಯೆಂಬ ನಲವತ್ತುಮೂರು ಪ್ರಕೃತಿಗಳಲ್ಲಿ ಒಂದು ; ಇನ್ನೊಂದು ಜೀವಕ್ಕೆ ಹಿಂಸೆಯನ್ನುಂಟುಮಾಡುವುದು : ಪಿಂಡಾಪಿಂಡಭೇದದಿಂದ್ಗತಿ ಜಾತಿ ಶರೀರ . . . ಅಗುರು ಲಘುಕ ಉಪಘಾತ ಪರಘಾತ ಉಚ್ಛ್ವಾಸ ಆತಪ . . . ತೀರ್ಥಕರನಾಮಮೆಂದಿಂತಲ್ಲಿ ಗತಿನಾಮಕರ್ಮಂ ಚತುರ್ವಿಧಮಕ್ಕುಂ (ಗೊಮ್ಮಸಾ. ೩-೬). [ಪರ್+ಘಾತ್$_2$]

ಪರಘಾಯ (ನಾ). ಶತ್ರುವು ಕೊಡುವ ಪೆಟ್ಟು ; ಎದುರಾಳಿಯು ಕೊಡುವ ಪೆಟ್ಟು : ಬವರಯಲಿ ಪೈಸರಿಸಿ ಪರಘಾಯವನು ವಂಚಿಸಿ ಭಟರ ಕೊಱೆದೆತ್ತುವರು . . . . ಕೋಡಕೈಯವರು (ಕುಮಾಭೀ. ೪-೪೩). [ಪರ$_3$ + ಘಾಯ (<ಗಾಯ)]

ಪರಚಕ್ರ(ನಾ). ೧. ಶ್ರೇಷ್ಠವಾದ ತಿಗುರಿ: 'ಪರಚಕ್ರಭ್ರಾಂತಿ' ಪರಾ. ೨. ವೈರಿಗಳ ಪಡೆ ; ಶತ್ರುಸೈನ್ಯ : ಪರಚಕ್ರಂಗಳನಂಜಿಸಿದ ಪರಸೈನ್ಯ ಭೈರವನ ಮೇಗಿಲ್ಲದ ಬಲ್ಲಾಳ್ತನಮುಮಂ ಕಂಡುಂ ಕೇಳ್ದುಂ ನಿನಗೆ ಸೆಣಸಲೆಂತು'ಬಗೆ ಬಂದಪುದು (ಪಂಪಭಾ. ೯-೫೨ ಪ) ; ಪರಚಕ್ರಕ್ಕೀಗೇ ಪಲ್ಮೊರೆದನೆ ಜವಂ (ಪುಷ್ಪಪು. ೫-೧೧) ; ಆ ಪರಚಕ್ರವನು ನಿರ್ಘಾಮಭೂಮೋಪಕ್ರಮವ ನೆಱೆ ಮಾಡಿ (ನಿಭಾಗ. ೧೦-೬೫-೪೬). ೩. ಶತ್ರುಗಳ ಆಧಿಪತ್ಯ,-ಆಡಳಿತ : ಪರಚಕ್ರಕ್ಕೆಡೆಮಾಡಿ ಭೂವಲಯಮುಂ . . . ತಪಕ್ಕೆ ಪೋಪುದನಯಂ (ಪಂರಾಮಾ. ೨-೩೨). ೪. ಶತ್ರುರಾಜ್ಯ; ರಿಪುಮಂಡಲ : ಪರಚಕ್ರಭೂಪರಿಟ್ಟದ ಕರಿಗಳ್ಬೆಡುತಪ್ಪ ಮದದ ಪೊನಲಿಂದೆತ್ತಂ . . . ಕೆಸಱಕ್ಕುಂ (ಕವಿರಾ. ೩-೧೮೧) ; ಅರಸಂ ಪರಚಕ್ರಮಂ ಸಾಧಿಸಿ ಬಂದು ಮಗಂ ಕುರುಡಾದುದಂ ಕಂಡು (ಪಡ್ಡಾರಾ. ೬೫-೨೨) ; ಪರಚಕ್ರಂಗಳನೊತ್ತಿ ಕೊಂಡದಟರಂ ಕೊಂದಿಕ್ಕಿ (ಪಂಪಭಾ. ೬-೧೭). ಪರಚಕ್ರಭಯಂಕರ = ಶತ್ರುಸೈನ್ಯಕ್ಕೆ ಉಗ್ರವಾಗಿರುವವನು ; ಒಂದು ಬಿರುದು : ಚಕ್ರಂ ಪುಟ್ಟಲೊಡಂ ಪರಚಕ್ರಭಯಂಕರ ಬರಲ್ಕೆ ವೇಟ್ಟುದನಱಿದೆಂ (ಅದಿಪು. ೧೨-೧೧೩). ಪರಚಕ್ರಭೈರವ = ಶತ್ರುಸೈನ್ಯಕ್ಕೆ ಭೈರವನಂತಿರುವವನು ; ಒಂದು ಬಿರುದು : ಮಣ್ಡಳಿಕ ಕಣ್ಠೀರವಂ ಪರಚಕ್ರಭೈರವಂ (ಸೌಇಇ. XX,೪೭-೯; 1074) ; ಪರಚಕ್ರವಕ್ರ = ಪರಚಕ್ರಭಯಂಕರ : ಪರಚಕ್ರವಕ್ರಂ ನಾಮಾದಿ ಸಮಸ್ತ ಪ್ರಸಸ್ತಿಸಹಿತಂ (ಸೌಇಇ. XX, ೫೧-೧೩ ; 1077). [ಪರ$_3$ + ಚಕ್ರ$_1$]

ಪರಚಕ್ರಭ್ರಾಂತಿ (ನಾ). ೧. ಶ್ರೇಷ್ಠವಾದ ತಿಗುರಿಯ ವೃತ್ತಾಕಾರವಾದ ಚಲನೆ. ೨. ಶತ್ರುಸೈನ್ಯವೆಂಬ ಭ್ರಮೆ. ೧, ೨ : ನೆರೆದ ವಿಸಂವಾದಂ ಪಂಜರಶುಕತತಿಯೊಳ್ಕುಲಾಲಗೇಹಂಗಳೊಳಂ ಪರಚಕ್ರಭ್ರಾಂತಿಗಳಧ್ವರದೊಳೆ ನೆಗಟ್ಟುಂ ಮಹಾಹವಧ್ವನಿನಿಯತಂ (ಕವಿರಾ. ೩-೧೧೧). [ಪರಚಕ್ರ + ಭ್ರಾಂತಿ]

ಪರಚಿಂತೆ (ನಾ). ಬೇರೆಯವರನ್ನು ಕುರಿತ ಕಳವಳ,—ದುಃಖ : ಪರಚಿಂತೆ ಎನಗೇಕಯ್ಯಾ ನಮ್ಮ ಚಿಂತೆ ನಮಗೆ ಸಾಲದೆ (ಬಸವ. ೫೨೦). [ಪರ$_3$ + ಚಿಂತೆ]

ಪರಚಿತ್ತ (ನಾ). ಬೇರೆಯವರ ಮನಸ್ಸು : 'ಪರಚಿತ್ತಗ್ರಹಣ' ಪರಾ. [ಪರ$_3$ + ಚಿತ್ತ]

ಪರಚಿತ್ತಗ್ರಹಣ (ನಾ). ಬೇರೆಯವರ ಮನಸ್ಸನ್ನು ತಿಳಿಯುವುದು : ಅಗ್ರಾಮ್ಯವಚನವೃತ್ತಿ . . . ಮಧುರಂ ನಿರ್ಮಗ್ರ ಪದವಿಸ್ಮೃತಿ ಪರಚಿತ್ತಗ್ರಹಣಸಮರ್ಥಂ (ಶಾಪ್ಯಾವ. ೫೦೯) ; ಪರಚಿತ್ತಗ್ರಹಣ ವಿಧಾನದ ಮೂಲಕ ಪೋಲೀಸಿನವರು ತನ್ನನ್ನು ಪೀಡಿಸುತ್ತಿದ್ದ ಕತೆಯನ್ನು ವಿವರಿಸಿದನು (ಪುಸರು. ೪೪೯). [ಪರಚಿತ್ತ + ಗ್ರಹಣ]

ಪರಚು (ಕ್ರಿ). ೧. (ಉಗುರಿನಿಂದ) ಕೆರೆ ; ಗೀರು : ಕೂರುಗುರ್ಗಳಿಂ ಪರಚುತ್ತೆ . . . ಕಾಡಿದುವು ಬಾವಲಿಗಳ್ (ಚಂದ್ರಪ್ಪ. ೫-೧೧೦) ; ಈ ಕಡಲು ತನ್ನ ಬಂಧಿಸುವರೆಯ ಪಡವನಲೆಪಂಜದಿಂ ಪರಚಿ—ಮೇಲೇರಿ ಬರಲೆಳಸಿ (ಗಣೇಶ. ೩೫-೩) ; ಒಬ್ಬರ ಮೇಲೊಬ್ಬರು ಬಿದ್ದು . . . ಪರಚಿ, ಕೂಗಿ; ಕಿರುಚಿಕೊಳ್ಳುತ್ತಿದ್ದೆವು (ಸೂರ್ಗದ. ೨೩). ೨. ಹರಿ ; ತರಚು : ಕೆಲವರು ತುಂಟರಾದ ರಾಕ್ಷಸರ ಹುಡುಗರು . . . ಹುವುಗಳಂ ಪರಚಿ (ಸೌಗಂಧಿ. ೪೦೯-೯).

ಪರಚಿಕೊಳ್ಳು = ಕೆರೆದುಕೊಳ್ಳು : ನನಗಂತೂ ಕೈಕಾಲುಗಳನ್ನು ಪರಚಿಕೊಳ್ಳುವ ಹಾಗಾಯಿತು (ಶಾಲೆಮ. ೬೫) ; ಕೈಲಾಗದವ ಮೈ ಪರಚಿಕೊಂಡ (ಗಾದೆ).

[ಬೇ.॥ ತುಳು. ಪರಂಕು, ಪಂಕ್ಕು, ಪಕ್ಕು ; ಕೋಲಾ. ಪರ್ಸ್; ಪರ್ಜಿ. ಪರ್ಜ್; ಗಡಬ. ಪಾರ್ಜ್; ಕುವಿ. ಪರಲಿ]

ಪರಚ್ಛಂದ(ನಾ). ೧. ಬೇರೆಯವರ ಇಚ್ಛೆ,—ಅಪೇಕ್ಷೆ. ೨. ಬೇರೆಯವರ ಇಚ್ಛೆಯನ್ನು ಅವಲಂಬಿಸಿರುವವನು ; ಪರಾವಲಂಬಿ : "ಪರವಾನ್ . . . ಪರಚ್ಛಂದಃ, ಗೃಹ್ಯಕಃ—ಈ ೮ ಹೆಸರ ವಶದಾತಂ" (ಹಲಾಯು. ೫೬-೧೮೬) ; "ಪರವಶಂ . . . ಪರಚ್ಛಂದನೆನೆ ಪರರ ವಶದವನಕ್ಕುಂ" (ಮಂಗರಾ. ೬೮-೬). [ಪರ$_3$ + ಛಂದ$_2$]

ಪರಜನ (ನಾ). ಪರಕೀಯರು ; ಇತರರು : ಸಮನಿಸಿ ಬರ್ಕುಂ ಕೇಮದ್ರುಮಯೋಗಸಮುದ್ಭವಂಗೆ ಪರಜನಭೃತಕತ್ವಮುಂ . . . ಧರಾಧೀಶವಂಶದೊಳ್ ಪುಟ್ಟ[ರೆಯುಂ] (ಜಾತಕ. ೧೪-೪) ; ದಿನನಾಥಂ . . . ನಿಲೆ ಕರ್ಕಿಯೊಳ್ ಪರಜನಪ್ರೇಷ್ಯಂ ಖಳಂ (ಜಾತಕ. ೧೭-೧೫). [ಪರ$_3$ + ಜನ]

ಪರಜಾತ (ಗು). ೧. ಬೇರೆಯವರ ಪೋಷಣೆಗೆ ಒಳಗಾದ ; ಇತರರನ್ನು ಅವಲಂಬಿಸಿರುವ. (ನಾ). ೨. ಬೇರೆಯವರನ್ನು ಜೀವನಕ್ಕಾಗಿ ಅವಲಂಬಿಸಿರುವವನು : "ಪರಜಾತಃ, ಪರೈಧಿತಃ—ಈ ೨ ಹೊಱಕುಳಿ" (ಹಲಾಯು. ೫೮-೧೯೬). [ಪರ$_3$ + ಜಾತ]

ಪರಜಾತಿ (ನಾ). ಬೇರೆಯ ಕುಲ ; ಅನ್ಯಜಾತಿ : ಪರಜಾತಿಯನು ರತಿಸದಂತಿಹ ಕುಲಂಗಳಲಿ ರತಿಸಲದಕೇನು (ದೀಕ್ಷಾಬೋ. ೪೫-೨) [ಪರ$_3$ + ಜಾತಿ]

ಪರಜಿ (ನಾ). (?) : ಭೂವರಂ ರಸಿಕ ನೀ ಪೋಗೆನಲು ಕೈಮುಗಿದು ಪೋದಂತೆ ಮಾಡಿ ಪರಜಿಯೊಳಡಗಲು (ಪ್ರಭುಪು. ೬-೧೬೪). [?]

ಪರಜು, ಪರಂಜು, ಪರುಜು$_1$, ಫರುಜು (ನಾ). ೧. ಕತ್ತಿಯ ಅಲಗು,—ಬಾಯಿ; ಖಡ್ಗಧಾರೆ : "ಪರ್ಗಜು(ಜಿ)—ಪರಂಜ(-ನ) = ಕತ್ತಿಯ ಬಾಯಿ" (ತದ್ಭವಕೋ. ೨೪) ; ಸುಲಿಪಲ್ ಫಲಿಲ್ಲೆನುಗೆ ಬಾಳನ ಕೀಳ್ಪರ ಜಿಂದೆ ಮೋದದಿರ್ಪನೆ (ಎಕ. XI, ಪಾಪಣ. ೪೨-೩೬; 1162); ಹಱಯದ ಕತ್ತಿಯೊಳ್ಕೊಱೆವರೆ ಮೂಗನು ಅಱಿಯದಿದೊಂದ ಮಾಡಿದರೆ ಇಱುವರೆ ಪರಜಿ[ಜಿ]ಲ್ಲದಲಗಿಲಿ (ಅಮುಸಾಂ. ೬-೮೯) ; ಕತ್ತಿಯ ಪರಜಿನಂ ನೆತ್ತಿಯಂ ತಿವಿಯುತ್ತೆ (ಚಕವಂ. ೪೨-೨೧). ೨. ಕತ್ತಿಯ ಹಿಡಿ,–ಹಿಡಿಕೆ: ವಿಭೂತಿಯಂ ತಱ್ಪುರಿಕೆಗಂ ತಳಿದು ಲಿಂಗಾರ್ಚಿತಂಗೆಯ್ಯುತೆ ಅನುವಿನಿಂದ ದಜ ಪರಜಿನೊಳೊಲ್ದು ಕೈಯಿಕ್ಕೆ (ಅರಾಚ. ೪-೯-೪೮); ಪರಜಿರಲು ಹಿಡಿವ ಕಠಾರಿ ಮೊನೆ ಮೆಱೆವಂತೆ (ತಿಮ್ಮಶಾಂ. ೧-೨೨); ಕನಕರಚಿತಗಳಾಗಿ ದಂತದ ಪರಜುಗಳಿಂದ ಒಪ್ಪುತಲಿರುವ ಕತ್ತಿಗಳು (ಕೃಪಾಭೀ. ೧೫೧). ೩. ಕತ್ತಿ ; ಖಡ್ಗ : ತಲೆಯಿಲ್ಲದ ತನುವ್ಯಾತಕೆ . . . ಅಲಗಿಲ್ಲದ ಪರಜ್ಜಾತಕೆ(ಚಿದಾಕೋ. ೧೫೨-೯); ವೈರಿಯ ಪರಜಿನಲ್ಲಿ ಬಂಡಿಕೋಲಿನ ಪೆಟ್ಟು ಆವದು ಅದು ಅದಿರುಘಾಯಯೆಂದು ಹೆಸರು (ಖಡ್ಗಟೀ. ೫-೬೦). **ಪರಂಜು** : ೨. "ಪಾಳಿ ಪರಂಜುವೆನಲು ಮೋಹಳಮಕ್ಕುಂ" (ಮಂಗರಾ. ೮೮-೩೬). **ಪರುಜು$_1$** : ೨. ಶಲ್ಯನು ಸುವರ್ಣಮಯವಾದ ಪರುಜುಳ್ಳ ಖಡ್ಗವನ್ನೂ . . . ಹಿಡಿದು(ಕೃವಾಸ. ೧೨೧). **ಫರುಜು** : ೨. ಗಜದಂತದಿಂದ ಮಾಡಲ್ಪಟ್ಟ ಫರುಜುವುಳ್ಳ ಒಂದು ಖಡ್ಗವನ್ನು ಕೈಯಲ್ಲಿ ಹಿಡಿದು (ಕೃವಾಕ. ೩೦).

[<ಸಂ. ಪರಂಜ./ತಮಿ. ಪರಿಞ್ಚು;ಮಲ. ಪರಿಞ್ಞು; ತೆಲು. ಪರುಜು]

ಪರಜ್ಞಾನ (ನಾ). ಶ್ರೇಷ್ಠವಾದ ಜ್ಞಾನ : ಭಗವದನುಗ್ರಹದಿಂದ ತಾತ್ಕಾಲಿಕವಾದ ಪರಿಪೂರ್ಣ ಪರಬ್ರಹ್ಮ ಸಾಕ್ಷಾತ್ಕಾರವನ್ನು ಉಂಟು

ಮಾಡುವುದು, ಈ ಸಾಕ್ಷಾತ್ಕಾರವೇ ಪರಜ್ಞಾನ (ಹಿಂದಸಾ.೨೫೭). [ಪರ₃+ಜ್ಞಾನ]

ಪರಟಿ, ಪರಟಿ₂ (ನಾ). ೧. ಕೆದರಿದುದು ; ಚೆದರಿರುವುದು: 'ಪರಟತಲೆ' ಪರಾ. **ಪರಟಿ₂** : ೨. ಒರಟಾದುದು ; ಬಿರುಸಾದುದು : 'ಪರಟಿದಲೆ' ಪರಾ.

[ದೇ.॥ ತಮಿ. ಪರಟ್ಟಿ ೃ, ಪಜಟ್ಟಿ ೃ; ಮಲ. ಪಜು]

ಪರಟತಲೆ, ಪರಟಿದಲೆ (ನಾ). ೧. ಕೆದರಿದ ಕೂದಲುಳ್ಳ ತಲೆ : ಪರಟಿ-ತಲೆ, ಇದಕ್ಕೆ-ಪರಟುತಲೆ (ಜೋಗುಮಗ.೨೪). **ಪರಟಿದಲೆ** : ೨. ಒರಟುಕೂದಲಿನ ತಲೆ ; ಬಿರುಸುಕೂದಲುಳ್ಳ ತಲೆ: (೬).

[ಪರಟ+ತಲೆ₁./ತಮಿ. ಪಜಟ್ಟಿ ೃತ್ತಲೈ]

ಪರಟು₁ 'ಪರಟಿ₁' ನೋ.

ಪರಟು₂ 'ಪಲ್ಟಿ' ನೋ.

ಪರಟೆ₁, ಪರಟ್ಟಿ, ಪರಡ್ಡಿ, ಪರಡೆ₁ (ನಾ) ೧. ಮಡಕೆಯ ಓಡು; ಬೋಕೆ: ಕೈಯಲ್ಲೊಂದು ಪರಟೆ ಹಿಡಿದು ದೀನಮುಖದಿಂದ ಭಿಕ್ಷುಕನು ಕೂಗಹತ್ತಿದ (ತಂಪುತ. ೮೮). ೨. (ತೆಂಗು ಮೊದಲಾದುವುಗಳ) **ಚಿಪ್ಪು; ಕರಟ** : ಮಡ್ಕದ ಪರಟೆಗಳೆಲ್ಲ ಎಲ್ಲೆಲ್ಲಿಗೋ ಮುಖ ಮುಚ್ಚಿ ಕೊಳ್ಳಲು ಸರಿದಾಡಿದವು (ಗ್ರಾಸೂಯು. ೪೯೨); ಅಷ್ಟಾಗರೂಳಕೆಯಿಂದ ಬಿದ್ದ . . . ತೆಂಗಿನ ಜುಟ್ಟಿ ಪರಟೆ ತುಣುಕುಗಳೂ ದೇವಸ್ಥಾನದ ಪವಿತ್ರತೆಯನ್ನು ಹೀಗಳೆಯುತ್ತಿದ್ದವು (ರಕ್ತಧ್ವ. ೨೪೩); ಒಂದೇ ಒಳ್ಳೆಯ ಬಾವಿ . . . ಬೇಸಿಗೆಯಲ್ಲಿ ಅಲ್ಲಿಂದಲೂ ನೀರನ್ನು ಪರಟೆಯಿಂದ ಕೆರೆಯಬೇಕು (ಹಬ್ಬಬು.೧೪). ೩. ಜಮಖದ ಅಗಲವಾದ ಮುಂಭಾಗ: (೬). ೪. ತಟ್ಟೆ ; ಪರಾತ : (೬). ೫. ಗುದ್ದಲಿಯ ಚೂಪಾದ ಭಾಗ,—ಮೊನೆ : (೬). ೬. ಮೊಣಕಾಲಿನ ಮೇಲೆ ಚಿಪ್ಪಿನಂತೆ ಗಟ್ಟಿಯಾಗಿರುವ ಭಾಗ; ಮೊಣಕಾಲು ಚಿಪ್ಪು' : ನಂಗನ ಎಡಗಾಲ ಪರಟೆಯ ಸಂದು ತಪ್ಪಿದ್ದರಿಂದ ಆದು ಇನ್ನೂ ವಾಸಿಯಾಗಿದ್ದಿಲ್ಲ (ಜೀವಪ್ರ. ೧೦೬). ೭. (ಆಲಂ) ದೇಹ; ಶರೀರ : ಎಂದಾದರೂ ಸತ್ತರೆ ಬಿಟ್ಟು ಹೋಪ ಈ ಪರಟೆಯನ್ನು ಯಾರು ಎಳೆದು ಹಾಕುವರು (ಎರಸೆ. ೬೫). **ಪರಟ್ಟಿ₁** : ೨. ತೆಂಗಿನಕಾಯಿಯಲ್ಲಿ ಎಲ್ಲಕ್ಕೂ ಮೇಲೆ ತೋಟಿ . . . ಅದರ ಕೆಳಗೆ ಪರಟೆ, ಅದರ ಕೆಳಗೆ ಕೊಬ್ಬರಿ (ಮುಂಬಯಿ. ೬-೨೪೭). ೬. ಆಣಸಿನ ಬಡಿಗೆಯಿಂದ ನಂಗನ ಮೊಣಕಾಲ ಪರಟೆಗೆ . . . ಹೊಡೆದನು (ಜೀವಪ್ರ. ೧೦೫). ೮. ಚಿಕ್ಕವುಟ್ಟ ಪಾತ್ರೆ : ಕೈಯಲ್ಲಿ ಪಾತ್ರೆ ಪರಟೆ ಹಿಡಿದುಕೊಂಡೋ ಹೋಗುತ್ತಿದ್ದು . . . ನೆರವಾಗುತ್ತಿದ್ದನು (ಮಲೆಮ. ೬೧೪). ೯. (ಆಲಂ) ಭಿಕ್ಷಾಪಾತ್ರೆ : ನನ್ನ ಕೈಯಲ್ಲಿ ಪರಟೆ ಬರುವ ಭೀತಿಯುಂಟಾಗಿದೆ (ಮೊಪಾಸಾ. ೬೨). **ಪರಡಿ₃** : ೮. ಸೇವಿಗೆಯ ಪಾಯಸವ ಪರಡಿಗಳಲಾಳಿಯರು ಬಡಿಸಿತು(ಕಾತಿರಾ. ೨-೬೫) ; ಹೆಚ್ಚಿನ ಪಾತ್ರೆ ಪರಡಿಗಳು ಮನೆ ಸೇರಿಕೊಂಡಾವು (ಪರಾಪ. ೧೬೬); ಪಾತ್ರೆ-ಪರಡಿಗಳನ್ನೆಲ್ಲ ಹುಣಸೆಹಣ್ಣಿನಿಂದ ತಿಕ್ಕಿ ಲಕಲಕ ಮಾಡಿದಳು(ಮುತ್ತೈದೆ. ೨೩). **ಪರಡೆ₁** : ೯. ಮಕ್ಕಳ ಕೈಯಲ್ಲಿ ಪರಡೆಯು ಬಂದೀತು (ಭಾರಥಿ. ೪೬).

ಪರಟೆ ಕೊಡು = ಭಿಕ್ಷಾಪಾತ್ರೆಯನ್ನು ಕೊಡು; ಭಿಕ್ಷೆ ಬೇಡುವಂತೆ ಮಾಡು : ಈಗ ಜೌದಲ್ಲೂ ಕೇಕ್ಯಾನ್ನ ಕೈಯಾಗ ಪರಟೆ ಕೊಟ್ಟು ಕಳಿಸೋದು ? (ಸಸುಜೀ. ೨೪). **ಪರಟೆ ಕುದುರೆ** = ಕರಟದ ಕಣ್ಣಿನಲ್ಲಿ ತೂತು ಮಾಡಿ ದಾರವನ್ನು ಪೋಣಿಸಿ, ಹೆಬ್ಬೆರಳು ಮತ್ತು ಅದರ ಪಕ್ಕದ ಬೆರಳಿನ ಮಧ್ಯದಲ್ಲಿ ತೂರಿಸಿ, ದಾರವನ್ನು ಕೈಯಲ್ಲಿ ಹಿಡಿದು ಕರಟದ ಮೇಲೆ ನಡೆಯುವ ಒಂದು ಬಗೆಯ ಆಟ ; **ಚಿಪ್ಪು ಕುದುರೆ** : ಇವು ಪರಟೆ-ಕುದುರೆಗಳನ್ನು ಮೆಟ್ಟಿ ಕಿಳ್ಳಿಕೇತನಕ್ಕೆ ಹೊರಟು ಹರಟೆಗಳಲ್ಲ (ಗಾಇಡ. X ಮೆಟ್ಟಿಗೆಯ ಮಾತು). **ಪರಟೆ ಹಿಡಿ** = ಭಿಕ್ಷಾಪಾತ್ರೆಯನ್ನು ಹಿಡಿ ; **ಚಿಪ್ಪು ಹಿಡಿ** : ಮುಂದೆ ನನ್ನ ಮಕ್ಕಳು ಕೈಲಿ ಪರಟೇ ಹಿಡಿಯೋ ಹೊತ್ತು ಬರುತ್ತೆ (ಹಾಡುಹ. ೬೭) ; ನಿನ್ನ ಮಾತನ್ನು ಕೇಳಿ ಕೈಯಲ್ಲಿ ಪರಟೆ ಹಿಡಿಯುವ ಮನಸ್ಸು ನನಗಿಲ್ಲ (ಸುಜ್ಞಿಸ. ೨೬೯). [ದೇ.॥ ತೆಲು. ಪರಟಿ, ಪನಟಿ, ಪನಂಟಿ, ಪಂಟಿ]

ಪರಟ್ಟಿ₂ 'ಪರಟೆ' ನೋ.

ಪರಟ್ಟಿ₃ 'ಪರಡೆ₄' ನೋ.

ಪರಟೆದಲೆ 'ಪರಟತಲೆ' ನೋ.

ಪರಡ 'ಪರಡು₃' ನೋ.

ಪರಡಕ್ಕೆ 'ಪಡಡಕ್ಕೆ' ನೋ.

ಪರಡಿ₁ (ನಾ). (ಉಕ) ಸಾಮಾನ್ಯವಾಗಿ ಗೋದಿ ಹಿಟ್ಟು ಅಥವಾ ರವೆಯನ್ನು ಹದವಾಗಿ ಕಲಸಿ, ಹೊಸೆದು ಮಾಡಿದ ಸಣ್ಣ ಸಣ್ಣ ಜೂರು ಮತ್ತು ಅದರಿಂದ ಮಾಡಿದ ಪಾಯಸ : ಬೆಳ್ಳಯರ ವುಡಿಯಂತಿರೆಸಿವ ಸೊಜ್ಜಿಗೆಗುಟ್ಟ . . . ಮಾಡಿದರು ಪರಡಿ ಸರವಳಿಗೆಯ (ಸಿದ್ಧರಾ. ೮-೫೧); ಪರಡಿ ಕಿಜುಗೋದಿ ಸೇವಗೆ . . . ಪರಿವಡೆಯಲಣ್ಣ ವಾಲಿಂ ಬೆರಸಿದ ಸಕ್ಕರೆಯು ತುಯ್ಯಲಿಕ್ಕಿದರ್ (ನಳಚಂ. ೪೪೧); ಪರಡಿಯ ಶಾವಿಗೆಯ ಪರಿಪರಿಯ ಪಾಯಸದ . . . ನವಘೃತ ಸೂಪದಂಶಕದಲ್ಲಿ ನೋಡಲಿ ನಮ್ಮನೆಂದುದು ಧೂರ್ತವಟುನಿಕರ (ಕುಸುಬಾ. ೧೫-೭); ವಡೆ ಪರಡಿ ಸೇವಿಗೆಯ ಸೂಸಲುಗಡುಬು . . . ಚಿತ್ರಾನ್ನಗಳ ಬಡಿಸಿದರು (ಅನಂರಾ. ೬-೨೫-೪೦).

ಪರಡಿ₂ 'ಪರಡು₃' ನೋ.

ಪರಡಿ₃ 'ಪರಟಿ₁' ನೋ.

ಪರಡಿ₄ 'ಪರಡೆ₄' ನೋ.

ಪರಡಿ₅, ಪರುಡಿ, ಪರೋಟು (ನಾ). ೧. ಮರವನ್ನು ಕಡೆಯುವ ಯಂತ್ರ : ಚರಕೆ: ಮುಂಚದ ಕಾಲು ಮುಂತಾದುವನ್ನು ಪರಡಿಯಲ್ಲಿ ಕಡೆದು ಮಾಡುತ್ತಾರೆ (ರೂಢಿ). **ಪರುಡಿ: ೨.** ಹಲಗೆಗಳನ್ನು ಗರಗಸದಿಂದ ಕೊಯ್ದು ತೆಗೆಯುವಾಗ ಉಳಿಯುವ, ಉಪಯೋಗಕ್ಕೆ ಬಾರದ ಮರದ ದಿಮ್ಮಿಯ ಹೊರಭಾಗದ ತುಂಡು : ಕರಗಸದ ಗುಂಡಿಯಲ್ಲಿ ಹಲಗೆಗಳಾವುದೂ ಇಲ್ಲದಂತೆ ಮಾಡಿದ್ದರು. ಗಾರ್ಡನು ಬಂದು ಬರಿಯ ಪರುಡಿಗಳನ್ನು ನೋಡಿ ಮಹಜರು ಮಾಡಿಕೊಂಡು ಹೋದನು (ರೂಢಿ). **ಪರೋಟು: ೨.** ಕಳ್ಳರು ಪರೋಟನ್ನು ಮಾತ್ರ ಬಿಟ್ಟು ಹಲಗೆಗಳನ್ನೆಲ್ಲಾ ಕದ್ದೊಯ್ದಿದ್ದರು (ರೂಢಿ).

[←ತುಳು. ಪೋರೊಟು]

ಪರಡಿಗೆ₁ (ನಾ). = ಪರಡಿ₁ : ಅವುಗು ತಿಜುಸೇವಗೆಯನು ಸರವಳಿಗೆ ಪರಡಿಗೆಯ ನಱುವಿತ್ತಿಲ್ಲ [ಪಾಪಾಂ. ಸರಳಿಗೆಯ ಪರಡಿಯನು ನಱುವಿ ಮುಂಲ್ಲಕ್ಕಿ, ಸರವಳಿಗೆ ಪರಡಿಗೆಯು ನಱುಮಲ್ಲತ್ತಿ] ಲಡ್ಡುಗೆಯನು . . . ಗಡಣಿಸುತ್ತ (ಸಿದ್ಧರಾ. ೮-೮೫). [ಪರಡಿ₁ +-ಗೆ]

ಪರಡಿಗೆ₂ (ನಾ). ತಕ್ಕಡಿಯ ಎರಡು ಕಡೆಗಳಲ್ಲೂ ಅಳವಡಿಸಿರುವ ತಟ್ಟೆ; ಪರಡೆ : ಒಂದು ವ್ಯಕ್ತಿಯನ್ನು ಒಂದು ಪರಡಿಗೆಯಲ್ಲಿ, ಅನೇಕ ವ್ಯಕ್ತಿಗಳನ್ನು ಮತ್ತೊಂದು ಪರಡಿಗೆಯಲ್ಲಿ ಹಾಕಿ ತೂಗಲು (ಕುಟುಂಬ. ೨೨). [ಪರಡಿ₄ (< ಪರಡೆ₄)+-ಗೆ]

ಪರಡು₁, ಹರಡು₁ (ಕ್ರಿ). ೧. (ಬೆರಳು, ಉಗುರು, ಗುದ್ದಲಿ ಮುಂತಾದುವುಗಳಿಂದ) ಕೆರೆ ; ಗೆಬರು : ನೆಲಸಂ ಪೊಕ್ಕಡಂಗಿದ ಪಗೆವರನಗುಬ್ಬಿ ಕೊಲ್ವುದನುದಾಹರಿಸುವಂತೆ ದಕ್ಷಿಣಚರಣದೊಳ್ ನೆಲಸಂ ಪರಡಿ ಗಂಭೀರನಿನಾದದಿಂ ಹೇಷಿತಂಗೆಯ್ವ ವಿಜಯಹಯಮುಂ ವಿಜಯನ ವಿಜಯಮನೆ ಸೂಚಿಸೆ (ಪಂಪಭಾ. ೯-೯೫ ಪ) ; ಪಡಿ ಕೊಟ್ಟರೂ ಪರಡೋದು ಬಿಡ (ಗಾದೆ). ೨. ಹುಡುಕು ; ತಡಕಾಡು :

ಆದರ ಅವಶೇಷವು ಆ ಪ್ರಾಂತದಲ್ಲಿ ಈಗಲೂ ಇದೆಯೋ ಎಂದು ಪರಡು (ಹುಡುಕು)ತ್ತಾರೆ (ನಾಡೋಜ. ೨೧೯); ಅವನು ತಲೆದಿಂಬಿನ ಅಡಿಯಲ್ಲಿರಿಸಿದ ಕಡ್ಡಿಪೆಟ್ಟಿಗೆಯನ್ನು ತೆಗೆಯಲೆಂದು ಕೈಹಾಕಿ ಪರಡಿದ (ನಡದಾ. II, ೧೧೨೩). **ಪರಡು$_1$** : ೧. "ಹರಡು–ಅಂಗುಲಿ ಖನನೇ (ಬೆರಳಿನಿಂದ ಕೆದಕು), ಪ್ರಸಾರಣೇ, ಗುಲ್ಫೇ ಚ (ಕಾಲಿನ ಹರಡು)" (ಶಮಧಾ). ೩. ಕೆತ್ತು; ಕೇಳು: ಮೊದಲು ಒಂದಿಷ್ಟು ಗೆಣಸಿನ ಬುಡಗಳನ್ನು ಹರಡಿ ರಾಶಿ ಹಾಕಿದಳು (ಕುಡಿಕೂ. ೧೬೦).

[ದೇ.॥ ತಮಿ. ಪಱಣ್ಬು, ಪಱಾಣ್ಬು; ಮಲ. ಪರಣ್ಬು]

ಪರಡು$_2$, ಹರಡು$_2$ (ಕ್ರಿ). ೧. ಅಗಲವಾಗಿ ಹಾಸು,—ಹರಹು: ಕುದಿಸಿ ಉದಕದೊಳಲುಬಿ ಬೀಸುತೊಗೆದು ಪರಡಿ ತೆಗೆತೆಗೆದು ಪಳಗೆಯನೊದಗಿಪುದು (ಬಸಪು. ೩೬–೪೬). ೨. ಅಗಲವಾಗು; ವಿಸ್ತಾರಗೊಳ್ಳು: ಪರಡಿಗ[ರೆ] ಸೋಗೆ ಗಿ[ಂ]ಡುಗೊರಳಿಂ ತಿಱಿ ಮುಂದೆಱ ಗಿಟ್ಟಿನಂ ತೃಷಾ? ಪರಿವೃತನಾಗಿ ನೀಗುಡಿಯುತಿರ್ದುದನೊಯ್ಯನೆ ಬಂದು ಭೂತಳೇಶ್ವರನಿಸೆ (ಸೂಕ್ತಿಸು. ೩–೧೨೪). **ಹರಡು$_2$**: ೧. "ಹರಡು–ಅಂಗುಲಿ ಖನನೇ (ಬೆರಳಿನಿಂದ ಕೆದಕು), ಪ್ರಸಾರಣೇ, ಗುಲ್ಫೇ ಚ (ಕಾಲಿನ ಹರಡು)" (ಶಮಧಾ); ಒಗೆದೊಗೆದೊಂದನೊಂದಂ ಹರಡಿಗಳಿಗೆಯನೊಂದಿಸುತ್ತಾ ಮಡಿಗಳಂ ತೆಗೆದೊಟ್ಟ ಮಿಗೆ ಬಿಗಿದು (ಬಸಪು. ೨೧–೮); ಹರಡಿದಂ, ಕದಡಿದಂ (ಶಬ್ದಾಸು. ೪೮೭ ಪ್ರಯೋ). ೩. ಹಬ್ಬು; ವ್ಯಾಪಿಸು: ಊರ ಹೊರಗೆ ಹರಡದ ಹೆಸರಾತಗೆ (ನಳ್ಳ. ೩–೧೩). ೪. (ಆಲಂ) ಆಡಂಬರವನ್ನು ತೋರಿಸು,—ಪ್ರದರ್ಶಿಸು: ಒಂದೊಂದು ತಡವೆ ಅಂಗಡಿಯನ್ನು ಹರಡಬೇಕಾಗುವುದು. ಅದಕ್ಕೆ . . . ಒಂದೊಂದು ತಡವೆ ಅತಿ ಜಂಭವೂ ಬೇಕು (ದೇವೀಚಾ. ೬೭).

ಹರಡಿಕೊಳ್ಳು = ೧. ಅಗಲವಾಗು; ವಿಸ್ತಾರಗೊಳ್ಳು: ವಿಸ್ತೃತರಃ . . . ಹರಡಿಕೊಳ್ಳುವದು (ಸಿದ್ಧಾಂತಿ. ೩೩೧). ೨. ಚೆಲ್ಲಾಪಿಲ್ಲಿಗೊಳಿಸು; ಕೆದರು: ಮಗು ಆಟದ ಸಾಮಾನುಗಳನ್ನೆಲ್ಲಾ ಹರಡಿಕೊಂಡು ಕೂತಿದೆ (ರೂಢಿ). [ದೇ.॥ ತಮಿ. ಮಲ. ಪರತ್ತು; ತುಳು. ಪರಡ್, ಹರಡು; ಕೊಡ. ಪರತ್; ತೆಲು. ಪಱಚು]

ಪರಡು$_3$, ಪರಡ, ಪರಡಿ$_2$, ಪರಡೆ$_2$, ಹದಡ, ಹದಡು, ಹದರು$_2$, ಹದಿರು$_2$, ಹರಡಿ, ಹರಡು$_3$, ಹರಡೆ$_1$ (ನಾ). ೧. ಹಿಮ್ಮಡಿಯ ಗಂಟು; ಗುಲ್ಫ: "ಪರಭಾಗಂ ಪಾರ್ಷ್ಣಿ ಮಡಂ ಪರಡುಗ[ಳ]ವೆ ಗುಲ್ಫ ಘಂಟಿಕಾ ನಾಮಂಗಳ್" (ವಸ್ತುಕೋ. ೬೭–೨); ಪರಡು ಸಂದಿ ನೊಸಲ್ ಪಣೆ ಕಣ್ ಕದಂಪಿನೆಂಬೆಡೆಯನೆ ನಟ್ಟುವುರ್ಡುವು. . . ಪಾರ್ಶ್ಣಿನಂಬುಗಳ್ (ಸಂಪಭಾ. ೧೧–೧೩೬); ಪರಡು ನಿಗೂಢಂ ಲಲಿತಲತಾಂಗಿಯ ವರಜಂಘಾಯುಗಲಂಗಳ ಭಂಗಿಯನಜಾಯಿಂ ಪೊಗಟಲ್ (ಸುಕುಮಾ. ೫–೫೦ ರಗಳೆ); ಪರಡಿರ್ಬದಿ ತೋಳುರಂ . . . ಮಡಂಗಳೆಂಬೆಡೆಗಳಂ ನೆಱೆ ನಟ್ಟುವು ಬಾಣಕೋಟಿಗಳ್ (ಶಾಂತೀಶ್ವ. ೮–೬೬); ಪರಿವಿಡಿಯೊಳುಂಗುಟದೊಳಡಿಯೊಳು ಪರಡಿನೊಳು . . . ಕಚಭರದೊಳೀ ಪರಿಯಿಂದೆ ತತ್ತತ್‌ಸ್ಥಾನಕಳಗಳಲಿ (ಬಸಪು. ೪೦–೧೯). **ಪರಡ** : ೧. ವಿಸ್ತರಗಂಗಳುಯರಡುಂ ಪಾದವು ಪರಡಗಳುಬ್ಬಿಹವು (ತ್ರಿಭುವೋ. ೬–೨೧). **ಪರಡಿ$_2$** : ೨. ಮುಂಗೈಗೆ ತೊಡುವ ಒಂದು ಬಗೆಯ ಆಭರಣ: ಕಂಕಣಂ ಜೂಡೆ ದೋರೆಯು ಪರಡಿ ಪೊಂಬಳೆಯುಮಂ ಕರದ್ವಯದ ಮಣಿಬಂಧದಲಿ ಒಲವಿನಿಂದಿಟ್ಟರು (ನನಮೋ. ೨೩–೪೦). **ಪರಡೆ$_2$** : ೨. ನೂಪುರ ಕಡಗ ಪೆಂಡೆ ಪರಡೆ (ವಿಜಾಕ್ಷ. ೧೧–೧). **ಹದಡ** : ೩. ಕೈಯ ಮಣಿಕಟ್ಟು; ಪ್ರಕೋಷ್ಠ: ಕಿಟ್ಟ ಎಷ್ಟು ಅಂಗಲಾಚಿದರೂ ಶಾಲಿಗ್ರಾಮವು . . . ಹದಡದ ಗುಂಟ ಹರಿದು ಬಂದು ಹೊರಕ್ಕೆ ಸಿಡಿದು ಹೋಯಿತು (ಗಂಸಾಯಿ. ೧೭೯). **ಹದಡು** : ೩. ಪಟುಭೀಕರ ವಿಷೋರಗವು . . . ಪೊಡವಿಯೊಡೆಯನ ಕೈಯ ಹದಡಂ ಕಡುವಿಷಂ ಮಿಗೆ ಕಚ್ಚೆ (ಬಸಪು. ೪೬–೨೨); ಕರಭ—ಮುಂಗೈಯಿಂದ ತಿರಿಬೆರಳಿನ ತನಕ ಇರುವ ಹದಡು (ಗಂಗಾಸು. ೭೨). **ಹದರು$_2$** : ೩. ಕಯ್ಯ ಹದರನೊಡೆಗಚ್ಚೆ ಜಡಿಯುತ್ತ ಭೋಂಕನೆ ಬಂದ ರೌದ್ರಸರ್ಪನನು ಕಂಡು ಹೆದಱ ಹವ್ವನೆ ಹಾಱಿ (ಹಚಕಾ. ೧೨–೯); ಕೊರಳ ಹದರಿನಲೌಕಿ ಹಿಡಿದೊಡೆ (ತೊರರಾ. ೬–೪–೨೯). **ಹದಿರು$_2$** : ೩. ನಗುತ ಲಕ್ಷ್ಮಣ ನಾಕೆಯ ಹೆಗಲ ಹದಿರಿನಲೌಕಿ . . . ಹೊಱವಡಿಸೆ (ತೊರರಾ. ೩–೪–೩೦). **ಹರಡಿ** : ೨. ದೋರೆಯ ಹರಡಿಯೊ ತಿರುಗುವ ಬಗೆಯು ದೃಢಗೆಡುತಿಹುದೆ ಮಾಯೊ (ಚಿದಾಕೋ. ೩೫–೧೧); ಹರಡಿ ಹಿಂಬಳೆ ಸಾಲ್ಪರಳ್ಕೆದರ ಮೇಲೆ ಸುರುಚಿರರೇಖೆ ಚಂದ್ರಮಸ ಸೋಲಿಪ ನಖ (ವಿವಾಕ್ಷ. ೧೦೩–೧); ವಾಲೆ ಮೂಗುತಿ ಕಪ್ಪ ಬಂದಿ ಗೀರ್ಬಳೆ ಹರಡಿ (ಸಿದ್ಧಕಾ. ೧೧–೧೫); ದೋರೆಕಂಕಣವೆ ಹರಡಿಯೋ . . . ಮೂಗುತಿಯೆ ಎಂದು ನೆನದಿಂತು ಶೋಕಿಸಿದರು (ಮಲ್ಲಚ. ೭–೬). ೪. ಒಂದು ಬಗೆಯ ಆಭರಣ: ಪಂಕಜಾನನೆ, ಕಚದಿ ಹರಡಿಗಳು ಮೆರೆದಿಹವೆ? (ಮಲ್ಲಾರಿ. ೨–೩೨). **ಹರಡು$_3$** : ೧. "ಘುಟಿಕಾ, ಗುಲ್ಫಃ – ಈ ೨ ಹರಡು" (ಹಲಾಯು. ೮೫–೩೬೧); ಕುಲಗಿರಿ ಸಪ್ತಕುಲಪರ್ವತಂಗಳೂ ಶ್ರೀಗುರುವಿನ ಹರಡಿನಲ್ಲಿಹವು(ಅತ್ರಿ- ೫ ಟೀಕೆ); ಆ ಪದಯುಗಳಮಂ ಪಿಡಿದು ಹರಡಿನ ಮೊದಲಿಗಿಕ್ಕಡಿಯಾಗಿ ಕಡಿಕಡಿದುರಪಣಿಸುತಿರಲು (ಬಸಪು. ೫೯–೩೪); ಹರಡುಗಳು ಬೆರಲು ಸಿರೆ ಗೂಢವಾ ಬಡನಡುವಿನುರುರಕ್ತಚರಣವಾ ಕೆಂಚೆಳೆಯ ಕಡೆಗಣ್ಣ ತರುಣಿ ಸುಖಿಯಹಳು (ವೀಕ್ಷಿಸು. ೪–೨೩–೩೨). **ಹರಡೆ$_1$**: ೧. "ಘುಟಿಕಾ, ಗುಲ್ಫಃ – ೨ ತದ್ಗ್ರಂಥೀ, ಆ ಪಾದದ ೨ ಪಕ್ಕಗಳಲ್ಲಿಯೂ ಯಿರುವ ಮೂಳೆ ಗೆಣ್ಣುಗಳ ಮೇಲೆ ಮಾಂಸಖಂಡದ ದಿಮ್ಮಿ ಚೀಲ . . . ಹರಡೆ" (ಸಿದ್ಧಾಂತಿ. ೧೮೯). ೫. ಆನೆ, ಕುದುರೆಗಳಿಗೆ ತೊಡಿಸುವ ಒಂದು ಬಗೆಯ ಆಭರಣ: ೪ ಆನೀನು ೨ ಹರಡೆ ೧ ತನಾಲು (ಎಕ. XIV, ನಂಜನ. ೨೯೩–ಪುಟ ೧೪೩; 1847). ೬. ಈಟಿ ಮುಂತಾದ ಆಯುಧಗಳಿಗೆ ಅಲಂಕಾರಕ್ಕಾಗಿ ಅಳವಡಿಸುವ ಲೋಹದ ಕಟ್ಟು; ಅಣಸು: ಚಿನ್ನದ ಹರಡೆ ಬೆಳ್ಳಿಯ ಕಟ್ಟು ಮುತ್ತುಗಳುನ್ನತಕುಚ್ಚಿನಿಟ್ಟಿಗಳ ಸನ್ನಾಹದ ಬಲುಭಟರು . . . ಕಾದಿಹರು (ಕಂಸಸಿ. ೧೧–೧೪೫).

ಹರಡಿಕಂಕಣ, ಹರಡೆಕಂಕಣ = ಒಂದು ಬಗೆಯ ಹಸ್ತಾಭರಣ: ಕರೆದೊಬ್ಬರಿಗೆ ಅನ್ನವಿಕ್ಕುವೆನೆಂತೆಂಬ ಹರಡಿಕಂಕಣವನಿಡೆ ನಿನ್ನ ಕೈಗೆ (ಕಥವಿ. ೧೯೫); ಹರಡೇಕಂಕಣ ಕಮಲಾದೇವೀ ಒಂಕಿ ಬಾಪೂರೀ (ಹುಟ್ಟಿಹ. ೧೮೩). ಹರಡಿಗುಂಡು = ಒಂದು ಬಗೆಯ ಒಡವೆ: ಪೌಂಚಿ, ಹರಡೀಗುಂಡು, ಗೆಜ್ಜೆ ... ಡಾಬು ಮೊದಲಾದ ಆಭರಣಗಳನ್ನು ಧರಿಸಿಕೊಂಡು . . . ಹೊರಟರು (ಮಲೆಮ. ೩೮).

[ದೇ.॥ ತಮಿ. ಪರಟು, ಪರಟ್ಟೈ; ತೆಲು. ಅರಡಾ = ಕಂಠಾಭರಣ; ಪಯಿಂಡಿ, ಪೈಂಡಿ = ಬಂಗಾರ]

ಪರಡೆ$_1$ 'ಪರಟೆ$_1$' ನೋ.

ಪರಡೆ$_2$ 'ಪರಡು$_3$' ನೋ.

ಪರಡೆ$_3$, ಹರಡೆ$_2$ (ನಾ). ೧. ಒಂದು ಬಗೆಯ ನೀರುಹಕ್ಕಿ: ಭೋರೆಂದೆಱಗಿ ಪೊಯ್ದು ಪರಡೆಗಳೆ ವಿಜಯಭೀರಂಗಳಾಗೆಯುಂ (ವರ್ಧಮಾ. ೫–೪೧ ಪ); ಉಂಚೆಯ ಪರಡೆಯ . . . ಚದುರರು ತಂಗಲ್ಲಿ ಹಿಂಡು ಮುಂಬಗೆ ಪಾಱುಸುತಿಹರು (ಕುರಾಸಾಂ. ೪–೮೪); ಸಾಳ್ವಂ ಪಸುಂಬಂ ಪರಡೆ [ಪಾಠಾಂ. ಡಿ] ತಿಱಿ ಶುಕಂ ತದ್ವನಾಂತಸ್ಥಮಿರ್ಕುಂ (ಶಬಶಂ. ೩–೩೩). ೨. ಶಕುನದ ಹಕ್ಕಿ; ಹಾಲಕ್ಕಿ: ಪರಡೆ ಪಸುಂಬಂ ... ಶರಕಮಿವು ಪೋಗೆ ಶಾರುಂಬರೆಯೆಡಕೆಯಂದೂರೊಳೊಳ್ಪುಂ (ಲೋಕೋಪ.

೧೨-೧೭). **ಹರಡೆ$_2$:** ೧. "ಕರ್ಕರೇಟುಃ, ಕರೇಟು—ಈ ೨ ಹರಡೆ" (ನಾಚಿರಾ. ೧೧೪); ಶಬರನಿಕರಂ . . . ಹರಡೆ ಗೌಜು ಟಟ್ಟಭ . . . ರಾಗಧರನೆಂಟ ಪಕ್ಷಿಗಳ ದನಿಯಿಂ ಕರೆಯಲು (ಹಚಕಾ. ೫-೪೨); ಹರಡೆ ಗೀಜಗ . . . ಕಪಿಂಜ ಗಿಂಚಲು ಗರಿಗ ಮೊದಲಾದಖಿಳಖಗಕುಲ ಬಿದ್ದು ದುರಿಯೊಳಗೆ (ಕುವ್ಯಾಳ. ೨೦-೫೬); ಅರಸಿ ನೋಡೀಚೆಯಲಿ ಹುದುಗಿ ಹರಡೆ ಹಂಗ ಮಯೂರ . . . ಇವೆಯೆಂದ (ತೊರರಾ. ೬-೧-೬೨). ೨. ಹರಡೆ ವಾಮಾಸೆಯಿಂದಂ ಸರಂಗೆಯ್ಯಲದುಂ ಮೇಣ್ ನಟ್ಟೊಡಂ ಪಿಂಗಲಿಯತಿಶುಭದಂ (ಖಮದ. ೩-೮೬); ದೆಸೆವಿಡಿದು ಕೆದಱಂದವು ಹೊಲದಲಿ ಹಸುಬ ಹರಡೆ[ಪಾಠಾಂ. ಡಿ]ಗಳೇನನೆಂಬೆನು ಶಕುನಸೂಚಕವ (ಕುವ್ಯಾಳ. ೧೩-೨೧); ಅರ್ಜುನನು ತಪಸ್ಸಿಗೆ ಹೊರಟ ಆ ಸೂರ್ಯೋದಯ ಸಮಯದಲ್ಲಿ ಹರಡೆ ಎಡಗಡೆ ಪುಧುರಸ್ವರದಲ್ಲಿ ಉಲಿಯಿತು (ಭಾಮಣಿ. ೯೧). [ದೇ.॥ ತಮಿ. ಪರಣ್ಟೈ./ಸಂ. ವರಟಾ, ವರಟೇ]

ಪರಡೆ$_4$, ಪರಟೆ$_3$, ಪರಡಿ$_4$, ಪಾರಟ, ಪಾರಡೆ (ನಾ). ೧. ವಸ್ತುಗಳನ್ನು ತೂಗಲು ತಕ್ಕಡಿಯ ಎರಡು ಕಡೆಗಳಲ್ಲೂ ಅಳವಡಿಸಿರುವ ತಟ್ಟೆ,—ಬಟ್ಟಲು: ಚೀಟನೊಳು ಬೇಗ ಪಂಚಾಕ್ಷರಿಯ ಬರೆದು ತೀರ್ಥದ ತಟ್ಟೆ ಭಸಿತವೆರಸೊಂದೆಶೆಯೊಳು ಪೋಗೆ ವೈಷ್ಣವ ದ್ವಿಜರನೊಂದು ಪರಡೆಯೊಳಿರಿಸಿ ತೂಗಿ (ಗುರುಚಾ. ೧೦-೪೩); ಇಲ್ಲಿ ಎರಡೂ ಪರಡೆಗಳು ಸಾಟಯಾಗಿರುವವು (ಸಾಲಂಸಾ. ೩೭); ದೊರೆಗಳು ತಮ್ಮ ಪಕ್ಕದಲ್ಲಿ ಕುಳಿತಿದ್ದ ನೇತ್ರಾವತಿಯ ಸೌಂದರ್ಯವನ್ನೂ . . . ಸಂಜೆಯ ಸೌಂದರ್ಯವನ್ನೂ ತಮ್ಮರಸಿಕತೆಯಪರಡೆಯಲ್ಲಿ ತೂಗಿ (ತಿಲಾಮು. ೨೬). **ಪರಟೆ$_3$:** ೨. ಮನೆಯ ಸುತ್ತಲೂ ಇರುವ (ತಗ್ಗಾದ) ಪೌಳಿ ಗೋಡೆ: (ಕಿ). **ಪರಡಿ$_4$:** ೧. ತ್ರಾಸು ಪರಡಿಯೊಳಿಟ್ಟು ಅಂಡಜ ಏಸು ಪರಿ ಶರೀರವನು ಕೊರದಿಡೆ ವಾಸರವು ತಾ ಹೆಚ್ಚಿ ಸವತಟ್ಟು ಅಂಡ ಬರದಲಿ (ನಂದಿಲೀ. ೧೪-೩೦); ಆ ಶಿಬಿರಾಯ ತಕ್ಕಡಿಯ ತರಿಸಿ ತನ್ನಯ ಮಾಂಸವಂ ಕೊಯ್ದುಯಿಕ್ಕಿದನು ವಂದು ಕಡೆಗೆ ಹಕ್ಕಿಯಂ ಪರಡಿಯೊಳಗಿರಿಸಿ ತೂಗಲ್ಕೆ (ತುರಂಗ. ೩೧-೭); ರುಕ್ಮಿಣಿ ಬಂಗಾರವನ್ನೆಲ್ಲ ತೆಗೆಸಿ ಒಂದು ತುಲಸೀದಲವನ್ನಿಟ್ಟಳು. ತುಲಸೀ ದಲದ ಪರಡಿ ನೆಲಕ್ಕೇ ಕೂತಿತು (ಕರ್ನಾಕ. ೨೮೮). **ಪಾರಟ:** ೨. ಅ(ಆ) ಬಾದಾವಿಯ ದುರ್ಗ್ಗವನು ಮೂಡಣ ಪಾರಟವನು ಚಾಮರಾಜ ರಚಿಸಿದನಾ ಮಂಗಳ ಮಹಾ ಶ್ರೀ ಶ್ರೀ ಶ್ರೀ (ಇಅ. X, ೯೩-೧೩; 1339). **ಪಾರಡೆ:** ೧. ೫೦. ಪಂಚಪಾತ್ರಿಗಳು. ೫೧. ಪಾರಡೆಗಳು (ತಕ್ಕಡಿ ಪಾರಡಿ) (ಮುಂಬಸ್ಕಾ. ೧೦೨).

[←ಮರಾ. ಪರಡೇ, ಪಾರಡೇ]

ಪರಣ$_1$ 'ಪನ್ನ$_3$' ನೋ.

ಪರಣ$_2$, ಹರಣ$_1$ (ನಾ). ೧. ಎಲ್ಲ ಪ್ರಾಣಿಗಳಲ್ಲೂ ಇರುವ ಚಿದ್ವಸ್ತು; ಜೀವ; ಪ್ರಾಣ: "ಪರಣಂ ಪ್ರಾಣಾರ್ಥದೊಳ್" (ಕರ್ಣಾನಿ.೮೬); ನಾ ಪರಣವ ಕೊಂಬೆ ನೋಡೆಂದು ದೈತ್ಯಚಮೂಪನನೆಚ್ಚು ಬೊಬ್ಬಿಱಿದ (ಮೋಹತ. ೧೨-೫೭); ಸತ್ತ ಕುವರಂಗೆ ಪರಣಮಂ ಕೊಟ್ಟನು (ಚಬಪು. ೫೭-೧೫); ತಾಪಸೋತ್ತಮ ಮೂಱು ಝಾವದಯ್ಯನ ನೇಮವೇ ಪರಣವಾಗಿ ಗಮನಿಸದಂತೆ . . . ಸೂರಳಂ ಮಿಾಜಲಸಮರ್ಥನಾಗಿ (ರಾಘಶ. ೧೪-೫೩). ೨. (ಆಲಂ) ಅತ್ಯಂತ ಪ್ರಿಯನಾದವನು: ಕನ್ಯಾಪತಿ ಪ್ರಸನ್ನವಿಜಯವಿಠ್ಠಲ . . . ಎನ್ನಯ ಪರಣ (ಮೋಕ್ಷದೀ. ೧೯-೧). **ಹರಣ$_1$:** ೧. ಹರಣವುಳ್ಳನ್ನಕ್ಕ ನಿಮ್ಮ ಚರಣವ ನೆನೆವುದ ಮಾಣೆ ಮಾಣೆ (ಬಸವ. ೬೯೨); ತೇಜದೇಳ್ಗೆಗೆ ನಿನ್ನ ಹರಣಕ್ಕೆ ಕೇಡು ಬಂದಡೆ ಬರಲಿ ಮಿಗೆ ಸತ್ಯಮಂ ಬಿಟ್ಟು ಕೆಡದಿರು (ಹಚಕಾ. ೬-೫೭); ಮಡಿದಿರ್ದ ಪಶುಗಳ ಹರಣಮಂ ಕೊಟ್ಟಾರುಹತರಂ ಪೊರೆಯನೇ (ಬಸಪು. ೫೦-೬೧); ಮಕುಟಬದ್ಧರ ಹರಣದನಿಲಸಮೂಹ ಬೀಸಿತು ನಭಕೆ ಬಿಱುಬಿನಲಿ (ಕುವ್ಯಾದ್ರೋ. ೧೦-೧೧); ದುರುಬುದ್ಧಿಗಳನೆಲ್ಲ ಬಿಡಿಸೊ ನಿನ್ನ ಕರುಣ ಕವಚವೆನ್ನ ಹರಣಕ್ಕೆ ತೊಡಿಸೊ (ಪುರಂದ. ೧-೯-೧); ನನ್ನ ಹರಣ ನಿನಗೆ ಶರಣ ಸಕಲಕಾರ್ಯಕಾರಣಾ ನಿನ್ನ ಮನನದಿಂದ ತನನವೆನುತಿದೆ ತನುಪಾವನಾ (ಗರಿ. ೧೧೩-೧).

ಹರಣದ ಹರಣ=ಪ್ರಾಣಕ್ಕೆ ಪ್ರಾಣದಂತಿರುವವನು; ಅತ್ಯಂತ ಪ್ರೀತಿಪಾತ್ರ: ತರುಣ ಸಂತತಿಯೆನ್ನ ಹರಣದ ಹರಣವಾಗಿಹ ನಿನ್ನುವಂ ಬೋಸರಿಸಿ ಕೊಂಡಾಡುವೆನು (ಬಸಪು. ೧೫-೩೧). **ಹರಣದೆಱೆಯ**= ೧. ಜೀವದ ಒಡೆಯ: ಹರಣದೆಱೆಯನೆ ನೀನೆ ಬಲ್ಲೆಯೆಂದು . . . ಸಾಷ್ಟಾಂಗದಿಂದೆಱಗೆ (ಪದ್ಮರಾ. ೨-೨೫). ೨. ನಲ್ಲ; ಕಾದಲ; ಪ್ರಾಣೇಶ್ವರ: ಹರಣದೆಱೆಯ ಕೇಳಾದರೆ ಸ್ವಪ್ನದೊಳು . . . ನಾನಳುತಿದ್ದೆ (ಜೀವಂಸಾಂ. ೪-೬೧); ಹರಣದೆಱೆಯ ಚಿತ್ತೈಸು (ಜಯಕಾ. ೧೨-೩೪). **ಹರಣದೊಡತಿ**=ಜೀವದ ಒಡತಿ; ಸ್ವಾಮಿನಿ: ಶಾರದೆ ನಿಗಮವಂದಿತಳೆ ಹರಣದೊಡತಿಯೆನ್ನ ಹೃದಯದೊಳಗೆ ನಿಂದು ಸೇರಿಸು ನಿನ್ನ ಸುಮತಿಯ (ಅಬ್ಬಲೂ. ೧-೭).

[<ಪ್ರಾ. ಪರಾಣ./ಸಂ. ಪ್ರಾಣ]

ಪರತ, ಪರತು, ಪರ್ತ (ಅ). (ಉಕ) ಮರಳಿ; ತಿರುಗಿ; ಪುನಃ: ಇಂದು ಮನಿಯಾರ್ಡರ ಊರಿಂದ ಪರತ ಬಂದಿತಲ್ಲ (ಪ್ರಭಾ. ೫೧); ಹಣಾ . . . ಪರತ ಬಾರದ ಏನ ಮಾಡತದ? (ಹೂಬಿಸಿ. ೩೧). **ಪರತು:** ಠೇವುದಾರನಿಗೆ ಹಣ ಪರತು ಸಿಗಲಾರದು (ಬ್ಯಾಂಕಕೈ. ೧೧); ನಾನು ಕೊಡ್ತೀನಿ. ಪೈಲಾಕ್ಕೆ ಪರತು ಕೊಟ್ಟು ಬಿಡುವಂತಿ (ದಾಕೂಟ ೨೧); ತಾನು ಕಳುಹಿದ ಕಾಗದವೂ ಪರಪಾಟನಿಂದ ಪರತು ಬಂದಿತು (ತಿಂಮತ. ೧೦೦). **ಪರ್ತ:** ಹಬ್ಬಕ್ಕೆ ಮಗಳ್ನ ಕರೀಲಿಕ್ಕೆ ಬಂದಾಳ . . . ಹಬ್ಬ ಮುಗಿದ ಕೂಡಲೇ ಪರ್ತ ಕರಕೊಂಡು ಬಾ (ಜೀವಪ್ರ. ೪೮).

ಪರತ ಮಾಡು, ಪರತು ಮಾಡು=ವಾಪಸು ಮಾಡು; ಹಿಂದಿರುಗಿಸು: ನಿಮ್ಮ ಲೆಕ್ಕದ ಕಾಗದವನ್ನು ಪರತ ಮಾಡಲಾಗಿದೆ(ದೇಕನ್ಯೆ.೬೦); ಪೋಲೀಸರು ನೋಟೀಸನ್ನು ಪರತು ಮಾಡಿದ್ದರು (ಪಾನಕ. ೭೭).

[←ಮರಾ. ಪರತ]

ಪರತಂತ್ರ (ನಾ). ೧. ಬೇರೆಯವರಿಗೆ ಅಧೀನವಾಗಿರುವಿಕೆ; ಪರಾಧೀನತೆ: ಎಷ್ಟು ದಿನಗಳ ಕೆಳಗೆ ಹಾಕಿದೆವೋ ಏನೋ ಈ ಪರತಂತ್ರದ ಹಾಸಿಗೆಯನ್ನು (ಸಾಹಿಜೀ. ೮೬). ೨. ಬೇರೆಯದನ್ನು ಆಶ್ರಯಿಸಿರುವಂಥದು; ಪರಾವಲಂಬಿಯಾದುದು: ಆವಂ ಆವಳ್ ಆವುದು ತಾನೆಂಬಿವು . . . ಪರತಂತ್ರಂಗಳ್ (ಶಮದ. ೧೪೩ ವೃತ್ತಿ). ೩. ಇತರರಿಗೆ ಅಧೀನನಾಗಿರುವವನು; ಪರಾಧೀನ: "ಪರವಾನ್ . . . ಪರತಂತ್ರಃ, ಪರಾಯತ್ತಃ, ಪರಚ್ಛಂದಃ, ಗೃಹ್ಯಕಃ—ಈ ಅಹೆಜರ ವಶದಾತಂ" (ಹಲಾಯು. ೫೬-೧೮೬); ಪರತಂತ್ರನೆನಿಸಿದೆನಗಿನ್ನರ ಸೇವುದೊ ಹಾಸಮೆಂಬವೊಲ್ (ಲೀಲಾನ. ೪-೪); ಇಂದಿನಿಂದ ನಾನು ಪರತಂತ್ರನಾದೆ (ಉದನ್ಯ. ೮೭); ಇಂತೆಂದು ಮರುಮರುಗಿ ಬೊಂಕುತಲೆ; ಪರತಂತ್ರ ತಾಂ ತೋರದಿರೆ (ಕಎಪು. ೪೨-೪). ೪. ಬೇರೆಯವರ ತಂತ್ರ,—ಶಾಸ್ತ್ರ: ಇವರಲ್ಲಿ ಕೆಲವರು ಈ ಪರತಂತ್ರವನ್ನು ಬಹಳ ಚೆನ್ನಾಗಿ ಕೂಡಿಸಿಕೊಂಡು, ಐರೋಪ್ಯದೃಷ್ಟಿಯಿಂದ ಉತ್ತಮವೆನಿಸಿಕೊಳ್ಳುವಂಥ ಕಲಾಕೃತಿಗಳನ್ನು ನಿರ್ಮಿಸಿದ್ದಾರೆ (ಭಾರದ. ೫೩೩). [ಸಂ.]

ಪರತಂತ್ರಜೀವನ (ನಾ). ಬೇರೆಯವರನ್ನು ಅಥವಾ ಬೇರೆಯ ವಸ್ತುವನ್ನು ಅವಲಂಬಿಸಿ ನಡೆಸುವ ಜೀವನ: ಇದು ಪ್ರೌಢಾವಸ್ಥೆಯನ್ನು ಮುಟ್ಟುವ ಮೊದಲು ಕೆಲವು ಕಾಲ ಒಂದು ಜಾತಿಯ ಮಿಾನಿನ ದೇಹಕ್ಕೆ ಅಂಟಿಕೊಂಡು ಪರತಂತ್ರಜೀವನವನ್ನು ನಡೆಸಬೇಕು(ಪರಜೀ.೮).

[ಪರತಂತ್ರ + ಜೀವನ]

ಪರತಂತ್ರಜೀವಿ (ನಾ). ಬೇರೆಯವರನ್ನು ಅಥವಾ ಬೇರೆಯ ವಸ್ತುವನ್ನು ಆಶ್ರಯಿಸಿ ಬದುಕುವ ಪ್ರಾಣಿ; ಪರಾವಲಂಬಿ ಜೀವಿ: ಕೆಲವು ಜೀವಿಗಳು . . . ತಮ್ಮ ಆಹಾರಕ್ಕೆ ಇತರ ಜೀವಿಗಳನ್ನು ಆಶ್ರಯಿಸುತ್ತವೆ; ಇವಕ್ಕೆ ಪರತಂತ್ರಜೀವಿಗಳು (Parasitic) ಎಂದು ಹೆಸರು (ಪರಜೀ. ೨); ತಮ್ಮನ್ನು ಆಕ್ರಮಿಸುವ ಪರತಂತ್ರಜೀವಿ ಮತ್ತು ಕೊಳ್ಳೆಹೊಡೆಯುವ ಕೀಟಗಳಿಗೂ ಸಿಕ್ಕುವುದಿಲ್ಲ (ಕೀಟಬೆ. ೨೩).

[ಪರತಂತ್ರ+ಜೀವಿ$_1$]

ಪರತಂತ್ರಿ (ನಾ). ಪರಾವಲಂಬನೆಗೆ ಒಳಗಾದವನು; ಸ್ವತಂತ್ರನಲ್ಲದವನು: ತನ್ನಿಂದರಿದೆನೆಂದಡೆ ಸ್ವತಂತ್ರಿಕೆ ಇಲ್ಲ ಇದಿರಿಂದರಿದೆನೆಂದಡೆ ಪರತಂತ್ರಿಯಲ್ಲ (ವೋಳಮಾ. ೯-೩೧). [ಸಂ. ಪರತಂತ್ರಿನ್]

ಪರತಟ (ನಾ). ಆಚೆಯ ದಡ; ಪಾರ: "ಪಾರಂ ಪರತಟಮರ್ವಾಕ್ತೀರ ಮವಾರಾಖ್ಯಂ" (ವಸ್ತುಕೋ. ೨೪-೧೩). [ಪರ$_3$+ತಟ$_3$]

ಪರತತ್ತ್ವ (ನಾ). ೧. ಶ್ರೇಷ್ಠವಾದ ತತ್ತ್ವ; ಮೋಕ್ಷತತ್ತ್ವ; ಪರಮಾರ್ಥ: ಪರತತ್ತ್ವವನಱಿದೆನೆಂಬನ್ನಕ್ಕ ಜ್ಞಾನಕಾಂಡಿಯಲ್ಲ (ಬಸವ. ೮೮೮); ಪ್ರತ್ಯೇಕತೆಯನ್ನು ಹೊಂದಿರುವ ಅನಂತಜೀವರುಗಳಿಗಿಂತಲೂ ಬೇರೆಯಾದ ಪರತತ್ತ್ವವೊಂದಿದೆ (ಯಕ್ಸಾರ. ೨೩೩). ೨. ಪರಮಾರ್ಥಸ್ವರೂಪವುಳ್ಳವನು; ಪರಮಾತ್ಮ: ಪ್ರಣವಮಯ ಪರತತ್ತ್ವ . . . ಶ್ರೀಮಲ್ಲಿಕಾರ್ಜುನ ಸಲಹು ಮೂಜಗವ (ಅಮ್ಮತ. ೪-೭೨); ಗುರುವೆ ಪರತತ್ತ್ವವು ತಾನೆ ನೋಡಾ . . . ಗುರುವೆ ಪರಶಿವನು ತಾನೆ ನೋಡಾ (ಅಖಂಡೇ. ೧೭-೧). [ಪರ$_3$+ತತ್ತ್ವ]

ಪರತತ್ತ್ವ (ನಾ). ೧. = ಪರತತ್ತ್ವ ೧: ಪರತತ್ತ್ವವಿಚಾರದಿನಚ್ಚರಿಯಾಗೆ ಜಿನೇಂದ್ರಭಕ್ತಿಯಿಂ ಸಂದ ಮಹಾಪುರುಷರ ಕಥೆಗಳ ಕೇಳ್ಪೆಯಿಂ . . . ಮನದೊಳ್ ಚಿಂತಿಸಿ (ಧರ್ಮಾಮೃ. ೩-೨೧೬); ಮಥಿಸಿ ಮಥಿಸಲು ಉದ್ಭವಿಸುವುದು ಮತಿಯಲೇ ಪರತತ್ತ್ವಮದರಿಂ ಮಥನವನೆ ಪೊರಗೊಳಗೆ ಲಂಬಿಸಿ ಸಿದ್ಧನಾಗು (ಗಗತಾ. ೧೬-೫೪); ಮತಮೆಲ್ಲಂ ಪರತತ್ತ್ವಮಂ ನಿರವಿಕುಂ (ಮೈಸೂಮ. ೮೧-೧೮೮). ೨. = ಪರತತ್ತ್ವ ೨: ನಿಜವ ಬೆರಸುವ ವಿಗಡರಿಗೆ ಪರತತ್ತ್ವ ಚಿನುಮಯರೂಪ ತಾನು (ಕುಮ್ಯಾಭೀ. ೩-೫೭).

[ಪರ$_3$+ತತ್ತ್ವ$_1$]

ಪರತಪಾವತಿ (ನಾ). ಯಾವುದಾದರೊಂದು ವಸ್ತುವನ್ನು ಪಡೆದುದಕ್ಕಾಗಿ ದಾಖಲೆಗಾಗಿ ಬರೆದುಕೊಡುವ ಪತ್ರ; ರಸೀತಿ: ಪೋಸ್ಟಮನ್ ಪಾಂಡೂ . . . ಪರತಪಾವತಿಯ ಮೇಲೆ ಸಹಿ ಮಾಡಿಸಿಕೊಂಡ (ದೀಪಹ. II, ೮೩). [ಪರತ+ಪಾವತಿ]

ಪರತಿ$_1$ (ನಾ). ಚಂಡಾಲಸ್ತ್ರೀ; ಹೊಲತಿ: ವಸಿಷ್ಠನುಂ ಕಾಮದಿಂ ಪರತಿಯಾದಕ್ಷಮಾಲೆಯನೊಂದಿದಂ (ಸೌನಂದ. ೭-೨೮). [←ತಮಿ. ಪಱತ್ತಿ]

ಪರತಿ$_2$ 'ಪರಂತಿ' ನೋ.

ಪರತು 'ಪರತ' ನೋ.

ಪರತೇಜ (ನಾ). ಪರಕೀಯರ ತೇಜಸ್ಸು,—ಕಾಂತಿ: ಶಾಂತಿ ಪ್ರಧಾನಮುನಿಗಳ್ . . . ಪರತೇಜಂ ತಗುಳ್ಳೊಡೆ ಸಲೆ ತೋರ್ಪರದಂ ತಾಂ ಸ್ಪರ್ಶಾನುಕೂಲ ರವಿಕಾಂತಂಬೊಲ್ (ಶಾಕುಂತ. ೨೩-೪೨).

[ಪರ$_3$+ತೇಜ$_1$]

ಪರತ್ರ$_1$ (ನಾ). ಮೋಕ್ಷ; ಮುಕ್ತಿ: ಶತ್ರು ಮಿತ್ರರು ತಾವು ತಮ್ಮ ತಮ್ಮ ಕ್ಷೇತ್ರದೊಳಗಿರವುಳಿದು ಮುಂದೆ ಪರತ್ರವಿಲ್ಲದೆ ಪಾಱುತಿರೆ (ಬಸಪು. ೩-೭). [ಸಂ.]

ಪರತ್ರ$_2$ (ಅ). ೧. ಬೇರೆಲ್ಲಿಯಾದರೂ; ಬೇರೆ ಕಡೆಯಲ್ಲಿ. ೨. ಇನ್ನು ಮುಂದೆ; ಭವಿಷ್ಯದಲ್ಲಿ. ೩. ಬೇರೆಯ ಅಥವಾ ಮುಂದಿನ ಲೋಕದಲ್ಲಿ. ೪. ಬೇರೆ ಬಗೆಯಾಗಿ; ಅನ್ಯಥಾ. [ಸಂ.]

ಪರತ್ರೆ (ನಾ). = ಪರತ್ರ$_1$: ಅರಸಂ . . . ಜಿನದೀಕ್ಷೆಯಂ ಕೈಕೊಂಡು ಪರತ್ರೆಯಂ ಸಾಧಿಸಿದೊಂ (ಪಡ್ಡಾರಾ. ೭೫-೨೯); ಕುಲವಿಭ್ರಂತೆಯರೊಳ್ಮನೋಜಸುಖಮಂ ಮಾಟ್ಟಂಗೆ . . . ಪರತ್ರೆಯಟಿಗುಂ ಶೌಚಂ ಕಿಲುಂಬಕ್ಕುಂ (ಮದತಿ. ೯-೧); ನೋಂತುಂ ಪಸಿದುಮಂತ್ಯದೊಳ್ ಸಂನ್ಯಸನದಿಂ ಪರತ್ರೆಯಂ ಸಾಧಿಸುವೆಂ (ಪಂರಾಮಾ. ೧೫-೭೯ ಪ). 'ಇಹತ್ರೆ$_1$' ಪರಾ. [ಸಂ. ಪರತ್ರ]

ಪರತ್ವ (ನಾ). ೧. ಸ್ಥಳ, ಕಾಲಗಳಲ್ಲಿ ಮೊದಲು, ಆದಿ ಎಂಬ ಸ್ಥಿತಿ: ಪರಿಸ್ಪಂದರೂಪಕ್ರಿಯೆ ಕ್ಷೇತ್ರಕೃತಂಗಳುಂ ಕಾಲಕೃತಂಗಳುಂ ಪರತ್ವಾಪರತ್ವಂಗಳಪ್ಪುವು (ತತ್ತ್ವಪ್ರ. ೨೪೧). ೨. ಪ್ರಭಾವ; ವರ್ಚಸ್ಸು. ೩. ಹಗೆ; ವೈರ. ೪. [ದ್ವೈತ]ನಲವತ್ತು ಗುಣಗಳಲ್ಲಿ ಒಂದು: ಪರಮಾತ್ಮ, ಲಕ್ಷ್ಮಿ . . . ಪರತ್ವ, ಅಪರತ್ವ . . . ಸೌಭಾಗ್ಯವೆಂದು, ಸಾಮಾನ್ಯವಾಗಿ ನಲವತ್ತು ವಿಧ ಗುಣಗಳು (ಹಿಂದಸಾ. ೨೭೫). [ಸಂ.]

ಪರದ$_1$, ಹರದ$_1$ (ನಾ). ವ್ಯಾಪಾರಿ; ವರ್ತಕ; ವೈಶ್ಯ: "ಊರು ಭವಂ ಭೂಮಿಸ್ಪೃಶನೂರವ್ಯಂ ವೈಶ್ಯನರ್ಯನೆನೆ ಪರದಂ" (ವಸ್ತುಕೋ. ೬೨-೬೨); ಪರದರ್ಗೆ . . . ಕುಡಿಯರಪ್ಪ ನಾಲ್ವರ್ಗಾಗಳ್ ಸ್ಥಿರಗೋಪಾಧ್ಯಾಯಕ್ಷ್ಮಾಪರಿಪಾಲ್ಯಕ್ಷೇತ್ರಕರ್ಷಣಂಗಳ್ ಕ್ರಿಯೆಗಳ್ (ಕವಿರಾ. ೧-೬೪); ಪೊಟಲ ಪಾರ್ವರ ಪರದರ . . . ಕಸವರಮೆಲ್ಲಮಂ ಕಳ್ದೊಡಂ (ಪಡ್ಡಾರಾ. ೧೨೩-೧೭); ನಾಗದತ್ತನೆಂಬ ಪರದಂಗಮಾತನ ಪರದಿತಿ ವಸುದತ್ತೆಗಂ ಪುಟ್ಟಿದ . . . ಐವರ್ ತನಯರ್ (ಅದಿಪು. ೩-೩೩ ಪ); ಪರದಪನ್ನಿರ್ವ್ವರು . . . ಸಾಕ್ಷಿಯಾಗೆ (ಎಕ. VI, ಮೂಡಗೆ. ೨೬-೧೧; ಸು. 950 ?). **ಹರದ$_1$**: "ಪಣ್ಯಾಜೀವಃ . . . ವೈದೇಹಃ—ಈ ೭ ಹರದಂ" (ಹಲಾಯು. ೯೩-೪೧೭); ಹರದರ್ಗೆ ಪೇಟ್ಟು ಛಿದ್ರಿಸುವಳು (ಮದತಿ. ೧೦-೬); ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ ಹರದ ಕುಳ್ಳಿರ್ದ ನಮ್ಮ ಮಹದೇವಸೆಟ್ಟ (ಬಸವ. ೧೧೫); ನೀಂ . . . ಸ್ಫುರಿತ ರತ್ನಪರೀಕ್ಷೆಯಂ ತಾನಱಿದು ಕೈಕೊಂಬ ಹರದನಂದದಿ (ಬಸಪು. ೮-೯); ಹರದನು ಲೆಕ್ಕ ತಪ್ಪಿಸಿ ಹೊಡೆವನಳತೆಯ ತೂಕ ತೊಲೆಗಳಲಿ ನಕ್ಕುನಂಬಿಸಿ ಹೊತ್ತುಗಳೆವಾ ಶಕ್ಕತನದಲಿ ತೆಗೆದುಕೊಂಬಾ (ಕೌತಿರಾ. ೧೦-೨೪).

[ಪರದು+-ಅ$_7$]

ಪರದ$_2$ 'ಪರದೆ' ನೋ.

ಪರದಗೆಱೆ (ನಾ). ಒಂದು ಊರಿನ ಹೆಸರು: ಅಸ್ಯ ಗ್ರಾಮಸ್ಯ ಪೂರ್ವ್ವದಿಕ್ಸೀಮಾನಿ ದುತೂಂಬುರ್ಪ್ಪಳ್ಳಂ ದಕ್ಷಿಣತಃ ಪರದಗೆಱೆ ಪಳ್ಳಂ (ಮೈಆರಿ. ೧೯೪೪, ೧೫-೪೦; ಸು. 725). [ಪರದ? + ಕೆಱೆ]

ಪರದರ್ಶನ (ನಾ). ಬೇರೆಯ ತತ್ತ್ವ,—ಸಿದ್ಧಾಂತ: ಒತ್ತರಿಪ ಸಿತಕೀರ್ತಿಯೊಳು ಪ್ರಭವೆತ್ತು ಪರದರ್ಶನದ ಮೂಗಿನ ಕತ್ತಿಯೆಂಬಾ ತೆಕ್ಕೆಯವನಾ ಪುರದೊಳೆತ್ತಿಸಿದ (ಬಸಪು. ೫೩-೫೭). [ಪರ$_3$+ದರ್ಶನ]

ಪರದವಟ್ಟಗೆ (ನಾ). (?): ಮಗಳ್ ಗೌರಕ್ಕನ ಕೊಟ್ಟು ತಜ್ಜೆಯದ ಪರದವಟ್ಟಗೆಯುಮಂ ಪುಳುಮಾದಲು ಮುಟ್ಟವಾಳುಮಂ ಕೊಟ್ಟರ್ (ಮೈಆರಿ. ೧೯೩೬, ೫೫-೭; 1054). [?]

ಪರದಳ (ನಾ). ಶತ್ರುಸೈನ್ಯ; ವಿರೋಧಿಬಲ.

ಪರದಳವಿಭಾಡ = ಶತ್ರುಸೈನ್ಯವನ್ನು ನಾಶಮಾಡುವವನು; ಒಂದು ಬಿರುದು: ಎಲ್ಲರ ಗಂಡಂದಿರು ಪರದಳವಿಭಾಡರು (ಸರ್ವವ. ೬೪-೩೪೧); ಕಾಮಿನೀಕನ್ದಱ್ಪನ್ . . . ಪರದಳವಿಬಾಡನ್ (ಎಕ. V (R), ತಿರುಮ. ೧೧೬-೩೭; 1720). [ಪರ$_3$+ದಳ$_2$(=ದಲ)]

ಪರದಾ 'ಪರದೆ' ನೋ.

ಪರದಾಟ 'ಪರಿ$_2$' ಪರಾ.

ಪರದಾಡು$_1$ 'ಪರಿ$_2$' ಪರಾ.

ಪರದಾಡು₂, ಪರದಾಡು (ಕ್ರಿ). ವ್ಯಾಪಾರವನ್ನು ಮಾಡು,—ವ್ಯವಹರಿಸು : ನಂಬುಗೆಯಿಂ ಪರದಾಡುವಾಕೆ ಬಂದೊತ್ತೆಯನೇನಳೆಂದು ಕಿಱುದಂಗೆಯನಂಗನೆ ಜುನ್ನಪಾಡಿದಳ್ (ಪಂಪಭಾ. ೬-೦೦); ಕದ್ದು ಪರದಾಡುವಂ ಸುಂಕಿಗನ ಕಯ್ಕೊಳೆ . . . ಸಿಕ್ಕುವಂತೆ (ಧರ್ಮಾಮೃ. ೧೬-೧೪೫); ಜನಕನುಪಾರ್ಜಿಸಿಟ್ಟ ಧನಮೆಲ್ಲಮನಾಕೆ[ಗೆ] ತೀರ್ಚಿ ತಾಯುಮಂ ವನಿತೆಯುಮಂ ಬಿಸುಟ್ಟು ಪರದಾಡಿ ಧನಂಬಡೆಯಲ್ಕೆ ಪೋಗೆ (ಪಾರ್ಶ್ವನೇ. ೪-೧೧೬); ಚಂಡವೇಗನಿನಿಪ್ಪಂ ಪರದಾಡಿ ಪಲವು ಸೂಟಿಂಳ್ ಪಿಂದರ್ಥಂ ನಪ್ಪವಾಗೆ ಬಡತನವಾಗಲ್ (ಧರ್ಮಪ. ೪-೧೨). **ಪರದಾಡು :** ಒಬ್ಬುಳ್ಳ ಮಗ . . . ಪರದಾಡಿ ಗಳಿಸಿದಪೆನೆಂಬುದನು ನಮ್ಮೊಡಲು ಹದುಳಪ್ಪಲ್ಲಿ ಕಂಡಿವು (ಸೋಮಜ. ೧-೯೭).

[ಪರದು+ಆಡು₁]

ಪರದಾಯಿ (ನಾ). (ಪೂರ್ವಕಾಲದಲ್ಲಿ ಬಳಕೆಯಲ್ಲಿದ್ದ) ಒಂದು ಬಗೆಯ ನಾಣ್ಯ : ಗೋವೆಯಿಂದ ವಿಜಾಪುರಕ್ಕೆ ಪ್ರತಿವರ್ಷ ಹತ್ತು ಸಾವಿರ "ಪರದಾಯಿ"ಯೆಂಬ ಚಿನ್ನದ ನಾಣ್ಯಗಳು ಸಲ್ಲುತ್ತವೆ (ಆಭಾಗ. ೬೫೦).

[?]

ಪರದಾರ (ನಾ). ೧. ಬೇರೆಯವನ ಹೆಂಡತಿ ; ಪರವನಿತೆ ; ಅನ್ಯಸ್ತ್ರೀ : ಪರದಾರಾಭಿಗಮಕ್ಕೆ ಹೇತುವಪ್ಪಿಂಗನ್ಯಸ್ವಮಂ ಕೊಳ್ವ ದುಶ್ಚರಿತಂಗಂ . . . ಪರಮೆಂಬೀ ನುಡಿಯಂ ವಿಚಾರಿಸದವಂ ಪಾಪಕ್ಕೆ ಪಕ್ಕಾಗನೇ (ಸನುಪ. ೫-೩೦); ಪರದಾರಾಭಿಗಾಮಿಯ . . . ಕೃಪಣನ ನರಕವಾಗಲಿ ಕೊಲ್ಲದಿದ್ದರೆ ನಾಳೆ ಸೈಂಧವನ (ಕುಮ್ಯಾದ್ರೋ. ೮-೩೬); ಧಾರಾದತ್ತದಿಂ ಬಂದ ಸ್ತ್ರೀಯರೊಳು ವಿಹಾರಿಸೆ ಪಾಲುಂಬಂತೆ ಮೇರೆ ದಪ್ಪಿಯೆ ಪರದಾರದಿ ಜರಿಸಲಾರಯೆ ಸುರೆಯಿಸಾಂಟುವಂತೆ (ಜೀವಂಸಾಂ. ೧೪-೩೦). ೨. ಹಾದರ ; ವ್ಯಭಿಚಾರ : ಪರಮುದ್ರೋಹಂ ಶೌರ್ಯಂ ಪರದಾರಂ ನೆಗಟ್ ತದ್ವಿಘಾತಮದುಗ್ರಂ (ಶೃಂಗಾರ. ೨-೪೯) ; ಪರದಾರದ ದಿತ್ತರಮಂ ನಿನಗಾನೊರೆವೆಂ (ಜನವ. ೧೨ ಸೂಜನಿ).

ಪರದಾರಸೋದರ = ಅನ್ಯಸ್ತ್ರೀಗೆ ಒಡಹುಟ್ಟಿದವನಂತಿರುವವನು ; ಒಂಮ ಬಿರುದು : ಇದು ಪರದಾರಸೋದರ ರಾಮುನಾಥನ ಪದಕ್ಕೃತಿ (ಕುರಾಸಾಂ. ೨-೧೦೮). [ಸಂ.]

ಪರದಾರಗಮನ (ನಾ). ಪರಸ್ತ್ರೀಯೊಂದಿಗೆ ಬೆರೆಯುವುದು ; ಪರಸ್ತ್ರೀಯ ಸಹವಾಸ ; ವ್ಯಭಿಚಾರ : ಆಯುತವೆ ಪಾರದರಿಗನ ಪಾಯಮನೆತ್ತಿ ಜೀವನುಚಿತಪಾಕಾರ್ಥಂ ಕೊಳ್ಗೀಯೆ ಪರದಾರಗಮನಮನಾಯುಷ್ಯಂ ತಮಮೆನಲ್ ಮುನಿಂದಂದಪನೇ (ಶಾಂತಿಪು. ೫-೫೧); ಪರದಾರಗಮನಪರರೆನಿಪರದಾರ ಮನೆಕ್ಕೆ ವರ್ಪರ್ (ಪಾರ್ಶ್ವಪು. ೪-೩೩); ಪೂರ್ವದಲಿ ಕಮಲಾಯತಾಕ್ಷಿಯರುಂಟು ಹಲಬರು ಪಾಯಮನಮ ಪರದಾರಗಮನವ ಮೆಚ್ಚಿದನು (ಕುಮ್ಯಾಸ. ೫-೧೩). [ಸಂ.]

ಪರದಾರಪ್ರಿಯ (ನಾ). ಪರಸ್ತ್ರೀಯಲ್ಲಿ ಆಸಕ್ತಿಯುಳ್ಳವನು ; ಹಾದರಿಗ : ಪರದಾರಪ್ರಿಯನಾದ ಪಾತಕನೆ ಯುದ್ಧಕ್ಕಳ್ಕಿ . . . ಮೆಯ್ಗೊರೆದಿದೇನಂ ಜಾನಿಸುತ್ತಿರ್ದಪೈ (ಪಂಂಪಾಮಾ. ೧೪-೯೮).

[ಪರದಾರ+ಪ್ರಿಯ]

ಪರದಾರವಿದೂರ (ನಾ). ಪರಸ್ತ್ರೀಯರಿಂದ ದೂರವಿರುವವನು : ಗುರುದೇವ ದ್ವಿಜಭಕ್ತಂ . . . ಪರೇಂಗಿತಜ್ಞನುದಾರಂ ಪರಿವಾರ ಕಲ್ಪ ವೃಕ್ಷಂ ಪರದಾರವಿದೂರನಖಿಲಭುವನಾಧಾರಂ (ಪಂಚತಂ. ೨೧೬-೨೪).

[ಪರದಾರ+ವಿದೂರ]

ಪರದಾರಶೀಲ (ನಾ). ಪರಸ್ತ್ರೀವ್ಯಸನಿ; ವ್ಯಭಿಚಾರಿ : ಕ್ಷಿತಿಜನೊಳೊಂದಿದ ಗುರುವಿಂ [ನೇತಾರಂ] . . . ಭೃಗುಸುತನಿಂ ಪರದಾರಶೀಲನೆ ನಿಕುಂ ಮನುಜಂ (ಜಾತಕ. ೧೫-೩). [ಪರದಾರ+ಶೀಲ]

ಪರದಾರಸೂತಕಿ (ನಾ). ಪರಸ್ತ್ರೀಯ ಸಹವಾಸದಿಂದ ಕಳಂಕಿತನಾದವನು : ಪಾತಕಿಗೆ ನುಡಿದ ಸೊಲ್ಲು ನಿಯಹುದು ಪರದಾರಸೂತಕಿಗೆ ನೆನೆದೆಣಿಕೆ ಬಯಲಹುದು (ಜೈವಿಭಾ. ೪-೪). [ಪರದಾರ+ಸೂತಕಿ₂]

ಪರದಾರಾತಿಕ್ರಮಣ (ನಾ). ಪರಸ್ತ್ರೀಯ ವಿಷಯದಲ್ಲಿ ತಪ್ಪಿ ನಡೆಯುವುದು ; ಅತ್ಯಾಚಾರ : ಅಲ್ಲಿ ಪರಾನುಮೇಯಮಪ್ಪ ಬಾಹ್ಯಂ ನಿಷ್ಕಾರಕ್ರೋಶನ ನಿಶಾತನ ವದನ ತಾಡನ ಪೀಡನ ಪರದಾರಾತಿಕ್ರಮ ಣಾದಿ ಲಕ್ಷಣಮಕ್ಕುಂ (ಆಜಿಪು. ೪-೨೪ ವ). [ಪರದಾರ+ಅತಿಕ್ರಮಣ]

ಪರದಾಸ್ಯ (ನಾ). ಪರಕೀಯರ ಊಳಿಗ,—ಸೇವಾವೃತ್ತಿ; ಗುಲಾಮುಗಿರಿ: ಕರ್ನಾ ಹೊರೆ ಹೊರಿಸಿರುವ ಆಳು ಆಳುಳು ಪರದಾಸ್ಯ ಸಂಕಲೆಯ ಕಳಚುತ್ತೆ ಬಾಳು ತಿರುಗುವುದು (ದ್ರಾಕ್ಷಿವಾ. ೬೨-೧).

[ಪರ₃+ದಾಸ್ಯ]

ಪರದಿ (ನಾ). ವರ್ತಕನ ಹೆಂಡತಿ : ಇಂದ್ರದತ್ತನೆಂಬ ಸೆಟ್ಟಗಂ ಶ್ರೀಕಾಂತೆಯೆಂಬ ಪರದಿಗಂ ಮಗಳಳಯಮತಿಯೆಂಬೊಳ್ (ಪಡ್ಡಾರಾ. ೧೬೫-೪); ದೇವಿಲನೆಂಬ ಪರದಂಗಂ ಬಂಧುಶ್ರೀಯೆಂಬ ಪರದಿಗಂ ನೀಂ ಶ್ರೀದತ್ತೆಯೆಂಬ ಮಗಳಾಗಿ ಪುಟ್ಟಿದ್ಯೆ (ಜಾವುಂಪು. ೩೦೦); ಎನ್ನ ಪರದಿ ತಾನುಂ ಸೊ[ಸೆ]ದಿರುಮಾತನಂ ಕಂಡಡೆ ಬಿಂತಿಸಿ ವಿಕಳೆಯಂರಾದರು (ಬಂಹರಿ. ೧-೫೪). [ಪರದ₁+-ಇ₂]

ಪರದಿಕೆ, ಪರದಿಕೆ (ನಾ). ವ್ಯಾಪಾರ ; ವಾಣಿಜ್ಯ : ಧನವಂ ತನುವಂ ಬೇಡಿದ ಮನುಜಂಗೆರಡಿಲ್ಲದೀವುದಿದು ಪರದಿಕೆಯೇ (ಬಂಹರಿ. ೪-೨೩). **ಪರದಿಕೆ :** "ಪರದಿಕೆ-ವಾಣಿಜ್ಯ, ವಣಿಜ್ಯೆ" (ನಾಚರಾ. ೬); ಪರದಿಕೆಯಂ ಪರಿಬಕ್ಕೆ . . . ಭಾಸುರದ ರತ್ನಪಂಕ್ತಿಗಳೊಳು. ಪರಿಣತನ ಮಾಡಿದನಯ್ಯನಾದಯ್ಯನ (ಸೋಮಜ. ೧-೯೩); ನಮಗುಳ್ಳ ಪರದಿಕೆಯು ನೆವಹಾರದುದ್ಯೋಗಕಿಕ್ಕದೇ . . . ನಿಜಜನನಿಜನಕರೋವೃತ್ತಿರ್ದರೀ ಸಾಪಿಯಂ (ಸಮ್ಯಕ್ತಾ. ೧೦-೭). [ಪರದು+-ಇಕೆ]

ಪರದಿತಿ (ನಾ). ೧.= ಪರದಿ : ಪರದಂ ಸಾಗರದತ್ತಂಗಮಾತನ ಪರದಿತಿ [ಪಾತಾಂ. ಪರದಿ] ಧನವತಿಗಮುಗ್ರಸೇನನೆಂಬೊಂ ತನೂಜಂ (ಆದಿಪು. ೫-೧೪ ಪ); ಸಾಗರದತ್ತನೆಂಬ ಪರದನಾತನ ಪರದಿತಿ [ಪಾತಾಂ. ಪರದಿ] ಸುಮತಿಗಂ ನಂದ . . . ಜಯಸೇನನೆಂಬಯ್ವರ್ತನಯರ್ (ಜಾವುಂಪು.೧೮); ನಯದತ್ತನೆಂಬ ಪರದಂಗಮಾತನ ಪರದಿತಿ[ಪಾತಾಂ.ಪರದಿ] ಸುನಂದೆಗಂ ಪ್ರಥಮಜನ್ಮದೊಳ್ ಧನದತ್ತನೆಂಬ ತನೂಜನಾಗಿ (ಪಂಂಪಾಮಾ.೧೬-೩೬ವ). ೨. "ವರ್ತಕಿ ; ವ್ಯಾಪಾರಮಾಡುವವಳು" (ಪ್ರಭಣ್ಣ).

[ಪರದ₁+-ಇತಿ₁(<-ಇತ್ತಿ)]

ಪರದು, ಪರದು (ನಾ).=ಪರದಿಕೆ : "ಸತ್ಯಾನೃತಮದು ಪರದು" (ಪಸ್ತ್ರಕೋ. ೬೨-೬೪) ; ನಂದಿಮಿತ್ರನೆಂಬೊಂ ಸೆಟ್ಟ ಸಾರ್ಥಂಬೆರಸು ಪರದಿಂಗೆ ಪೋಗುತ್ತಿ[ಪಾತಾಂ. ಪರದುವೋಗಿ]ರ್ದಾತನೆಡೆಯೊಳೊಂದೂರೊಳ್ ಬಿಟ್ಟಿರ್ದಂ (ಪಡ್ಡಾರಾ. ೧೬೩-೨೩); ಲೋಭಿಯು ಕೋಡುಂ . . . ಲಾಭಮನಜುಯೆದ ಪರದುಂ ಶೋಭಿಸಲಾರ್ತಪುವೆ (ಧರ್ಮಾಮೃ.-೧೧೩); ಫಾಲ್ಗುನದ ಪೂರ್ಣಿಮೆಯೊಳ್ ಕುಜುಪಾಗೆ ಗಂಧಮುಂ . . . ಕಂದ ಮೂಲಮುಂ ಬಿಸುಡದೆ ಬಯ್ತು ನೂಜುಜೊಡೆ . . . ಪರದಿರ್ಮಡಿಯಾಗೆ ಪೆರ್ಚುಗುಂ (ಜಟ್ಟಪು. ೬-೪೨). **ಪರದು :** "ವಣಿಜ್ಯಂ, ವಾಣಿಜ್ಯಂ, ವಣಿಕ್ಕ್ರಿಯಂ– ಈ ೩ ಪರದು" (ಪಲಾಯು. ೧೨೫-೨೬); ಮೊದಲುಗೆಡದ ಪರದೆನಗಾದುಪಯ್ಕೆ (ತಸಗೀ. ೪೪–೪೧೨); ಪರದಂ ಮಾಳ್ಪಡೆ ಪೋದ ಸೆಟ್ಟಗದಱಂ ಲಾಭಂಗಳಾಗಲ್ಕೆ (ಸನ್ನಜಾ. ೬-೩೪) ; ವಾರದಕ್ಕೆಯ ಹಾರವರು ಶೃಂಗಾರದೋದಿನ ವಿಟರು ಪರದಿಗೆ ದೂರದೇಶಕೆ ಬಂದವರು ನೆರೆದಿಹರು (ಕೂಲ್ಲಾಚ. ೯೫).

[ದೇ.‖ಕೊಂಡ.ಪೊರ್ = ಮಾರು; ಪೆಂಗು.ಪ್ರೊ = ಮಾರು; ಕುವಿ.ಪ್ರಾತ್]

ಪರದುಂಗೈ 'ಪರದುಗೆಯ್' ನೋ.

ಪರದುಗೆಯ್, ಪರದುಂಗೈ, ಪರದುಗೈ, ಹರದುಗೆಯ್, ಹರದುಗೆಯ್ಯು (ಕ್ರಿ). ವ್ಯಾಪಾರ ಮಾಡು; ವ್ಯವಹಾರ ನಡೆಸು : ಪಿರಿದೆನಿಸಿದ ಕೊಳಗದಿಂದ ಮುಂ ತಾಂ ಕೊಂಡಂತಿರೆ ಪೆಜರ್ಗೆ ಕುಡುಗೆ ಕುಂದಿಸಿ ಪರದುಗೆಯಲ್ಸಲ್ಲದೆಂದು ನೆಗಳ್ವಂ ಜೈನಂ (ಸಮಯ. ೫-೪೬); ಪರದುಗೆಯ್ದುರ್ತ್ಥಮುಂ ನ್ಯಾಯದಿಂದಂ ಪಡೆದರ್ತ್ಥಂ ದೇವತಾಪೂಜೆಗೆ. . . ನಿಷ್ಠಂ ಕುಡೆ (ಎಕ. V, ಅರಸೀ. ೧-೩೫; 169); ಪರದುಗೆಯ್ಯದೆ ಸುಮ್ಮನಾಡಿಕೊಂಡಿರ್ಪುದು ಪರದರಿಗನುಚಿತವು (ನೇಮಿಸಂ. ೪-೧೦). **ಪರದುಂಗೈ** : ಹರದರು ರತ್ನದ ಹೇರಂ ಪರದುಂಗೈನಲ್ಲಿ ಪೋಗು (ಕಂದಹೊ. ೨೧೦). **ಪರದುಗೈ** : ಕೆಲವು ದಿವಸದಿಂ ಬಯಿಕಾ ಶ್ರೀಧರ ಸೆಟ್ಟಿ ಪರದುಗೈಯಲ್ ಭರದಿಂ ಜಲಮಾರ್ಗದಲ್ಲಿ ಪೋಪುದುಂ (ಧರ್ಮಪ. ೧೦-೭೫); ರೊಕ್ಕದಾಸೆಗೆ ಪರದುಗೈಯಲೆ ಪೋಪೆನು (ಸಾಳ್ವಭಾ. ೧೭-೫೯); ಆ ವಿಪಿನಾಂತರದ ಕತ್ತುರಿಯಿಂದು ನೃಪತಿ ಪರದುಗೈಯಲು ಬಂದೆ (ನಾಗಕು. ೧೪-೪೯). **ಹರದುಗೆಯ್** : ಒಂದುವುದಟಗ ಪ್ರತ್ಯಯ ಮಾಡುವ ದೀವಿಗೆವಿಡಿವ ಹರದುಗೆಯ್ವನಿಬರೊಳಂ (ಶಾಸಿ. ೨೦೪). **ಹರದುಗೆಯ್ಯು** : ಹೊರನಾಡುಗಳಿಗೆ ಹರದುಗೆಯ್ಯಲು ಹೋದ ಹರದರು ಹಿಂದಿರುಗಿದೊಡನೆಯೆ. . . ಔತಣದ ಆಮಂತ್ರಣ ಬಂತು (ಭಾಸರ. ೬೫). [ಪರದು + ಕೆಯ್$_1$]

ಪರದುಗೈ 'ಪರದುಗೆಯ್' ನೋ.

ಪರದುವೋಗು (ಕ್ರಿ). ವ್ಯಾಪಾರಕ್ಕಾಗಿ ದೂರದೇಶಕ್ಕೆ ಪ್ರಯಾಣ ಮಾಡು : ನಂದಿಮಿತ್ರನೆಂಬೊಂ ಸೆಟ್ಟಿ ಪಿರಿದುಂ ಸಾರ್ಥಂವೆರಸು ಪರದುವೋಗಿ (ಪಡ್ಡಾರಾ. ೧೬೩-೨೩); ಇರ್ವರ್ ಪಣಕ್ಕುತ್ರರ್ ಪುದುವಿನೊಳ್ ಪರದುವೋಗಿ ಪಿರಿದಪ್ಪ ಪೊನ್ನಂ ಪಡೆದು ಮುಗುಟ್ಟು (ಪಂಚತಂ. ೧೭೦-೪); ಪರದುವೋಪೆನೆಂಬ ಬಗೆಯಂ ತಂದು. ಯಥೋಚಿತಮಪ್ಪ ಭಂಡಮಂ ಕೊಂಡು ಶುಭದಿನದೊಳ್ ಪೊಱವೀಡಂ ಬಿಟ್ಟು (ಧರ್ಮಾಮೃ. ೧-೯೪). [ಪರದು + ಪೋಗು$_1$ (< ಪೋ$_1$)]

ಪರದೆ, ಪಡದೆ, ಪರದ$_2$, ಪರದಾ, ಫರದೆ (ನಾ). ೧. ತೆರೆ; ಜವನಿಕೆ: ರೋಹಿಣಿಯು ಪರದೆಯ ಹಿಂದಿನಿಂದ ಅವರ ಮಾತನ್ನು ಕೇಳಿದ್ದಳು (ಬಂಕಿಮ. ೬೨); ಕೆಲವು ಚಿಕ್ಕ ಹೆಣ್ಣುಮಕ್ಕಳು ಸೊಗಸಾದ ಉಡುಪಿನಲ್ಲಿ ರಾಜನ ಎದುರಿಗಿದ್ದ ಸುಂದರವಾದ ಪರದೆಯ ಹಿಂದೆ ಇದ್ದರು (ಸ್ರವಾಇ. II, ೧೬೫); ಸುರೇಶ. . . ಕಿಡಕಿಯ ಪರದೆಯನ್ನು ಸರಿಸಿ ಹೊರಗೆ ನೋಡಿದ (ಅಪೋಲೀ.೮೭). ೨. ಸೊಳ್ಳೆಗಳು ಬರದಂತೆ ಹಾಸುಗೆಯ ಸುತ್ತಲೂ ಕಟ್ಟುವ, ಸಣ್ಣ ಸಣ್ಣ ಕಂಡಿಗಳಿರುವ ಬಟ್ಟೆಯ ಸಾಧನ; ಮಚ್ಚರದಾನಿ : ರಾತ್ರಿಯ ವೇಳೆ ಪರದೆಯನ್ನು ಕಟ್ಟಿಕೊಳ್ಳದೆ ಮಲಗುವುದು ಅಶಕ್ಯವಾಗಿ ಪರಿಣಮಿಸಿದೆ (ಸಂಬಲ. ೧೨); ಇಲ್ಲಿ ತೂಗುತ್ತಿರುವ ನಯವಾದ ಪರದೆ ಕೈಮಾಡಿ ಕರೆಯುತ್ತಿದೆ (ನಡವಾ. III, ೨೦೭೨). ೩. ಸಿನಿಮಾದಲ್ಲಿ ಚಿತ್ರವನ್ನು ಮೂಡಿಸುವ ಪಟ; ರಜತಪರದೆ : "ಚಲನಚಿತ್ರದ, ದೀಪಚಿತ್ರದ, ಛಾಯಾಚಿತ್ರದ, ತೆರೆ, ಪರದೆ" (Screen. ಇಂಕಿಸಿ). ೪. ನಾಟಕಗಳಲ್ಲಿ ಬಳಸುವ ಬೇರೆ ಬೇರೆ ದೃಶ್ಯಗಳಿಗೆ ಸಹಾಯಕವಾದ (ಚಿತ್ರಗಳುಳ್ಳ) ತೆರೆ : ದೃಶ್ಯದ ಪರದೆಗೆ ಬದಲಾಗಿ ಅಂಕದ ಪರದೆಯೇ ಅತುರದಿಂದ ಬಿದ್ದಿತು (ರಂಗಸಾ. ೩). 'ಅಂಕಪರದೆ' ಪರಾ. ೫. (ಸಾಮಾನ್ಯವಾಗಿ ಮುಸಲ್ಮಾನ ಹೆಂಗಸರು ಧರಿಸುವ) ಮುಸುಕು; ಅವಕುಂಠನ : ಮುಖದ ಮೇಲೆ ಪರದೆ, ಮುಸುಕು ಏನೂ ಇಲ್ಲವೇ ಆ ಹೆಣ್ಣುಮಕ್ಕಳಿಗೆ? (ಸಾಹೇಬ್. ೨೭). **ಪಡದೆ** : ೧. ಅಲ್ಲಲ್ಲಿಗೆ ಜರತಾರಿಯ ಪಡದೆಗಳನ್ನು ಇಳಿಬಿಡಿಸಿದ್ದನು (ಮಂಜುಳ. ೧೮೮). ೪. ಪಾತ್ರ ಮಾತ್ರ ಪಡದೇದ ಹಿಂದಿಂದ ಮಾತಾಡ್ತಾವ (ಹುಚ್ಚಾಟ.೮೬); ಹನ್ನೆರಡೂವರೆ ಗಂಟೆಗೆ ಪಡದೆಯ ಹಿಂದೆ ಗಂಟೆ ಬಾರಿಸಿತು (ದೀಪಸ. II, ೩೮೮). ೬. ಹುಣಿಸೆಹಣ್ಣಿನ ಬೀಜದ ಸುತ್ತಲೂ ಇರುವ ಪೊರೆ,–ಪದರ : ಹಣ್ಣಿನ ಒಳಗೆ ಇರುವ ಪಡದೆಯು ಸಪೇತಿರ ಬೇಕು (ಮುಂಬವ್ಯಾ. ೪೫). **ಪರದ$_2$** : ೧. ಬಣ್ಣಬಣ್ಣದ ಹೂವುಗಳಿಂದ ಕೂಡಿದ ಪರದೆಗಳನ್ನು ಬಾಗಿಲು, ಕಿಟಕಿಗಳಿಗೆ ಇಳಿಬಿಟ್ಟಿದ್ದರು (ಮೂಷ). **ಪರದಾ** : ೪. ನಾಟಕಶಾಲೆಗಳಲ್ಲಿ ಚಿತ್ರಗಳನ್ನು ಬರೆದು ಪರದಾಗಳನ್ನು ಹಾಕಿರುವುದಿಲ್ಲವೆ? (ಗಲಿಪ್ರ. ೧೫). **ಫರದೆ** : ೧. ಕಿಟಕಿ–ಬಾಗಿಲುಗಳಿಗೆ ಸಿಲ್ಕ್ ಫರದೆಗಳು (ನಟಸಾ. ೬೩೫); ಆ ಚಂದ್ರಶಾಲೆಗಳ ಮೇಲುಗಡೆ ಕನಾತಿನ ಫರದೆಗಳು . . . ಕಟ್ಟಲ್ಪಟ್ಟಿದ್ದವು (ಶ್ರೀರಾಮ. ೪೫). ೪. ಅದರಲ್ಲಿ ಫರದೆ ಇದೆ, ಸೀನರಿಯಿದೆ (ಸ್ವಪ್ನಹೊ. ೧೩೮); ಇಂತಹ ಕಂಪೆನಿಗಳ ಯೋಗ್ಯತೆಯನ್ನು ಜನ ಅಳೆಯುತ್ತಿದ್ದುದು ಅವರ ಹತ್ತಿರ ಎಷ್ಟು ಫರದೆಗಳಿವೆಯೆಂಬುದರ ಮೇಲೆ (ನಟಸಾ. ೧೧).

[← ಪಾರ. ಪರದಾ; ಹಿಂ. ಪರದಾ, ಪರ್ದಾ; ಮರಾ. ಪಡದಾ]

ಪರದೇವತೆ (ನಾ). ಶ್ರೇಷ್ಠವಾದ ದೇವರು,—ದೈವ : ಪತಿಯೊಳು ಪರಭಕ್ತಿಗೈವುದು ಲಕ್ಷ್ಮೀಪತಿಯಾಣತಿಯೆಂದು ಬಗೆದು ಪತಿಯನೆ ಪರದೇವತೆಯೆಂದು ಭಜಿಸುವ ಸತಿಯರ ಸನ್ನುತಿಸುವೆನು (ಹರಿಚಿ. ೨-೩). [ಪರ$_3$ + ದೇವತೆ]

ಪರದೇಶ (ನಾ). ತನ್ನದಲ್ಲದ ದೇಶ; ಬೇರೆಯ ದೇಶ; ವಿದೇಶ : ಹೇಷಿತದಲಮರಾವಳಿಗೆ ಪರದೇಶವನು ಮಾಡುತ್ತ ವನವನು ಘಾಸಿ ಮಾಡುತ . . . ನಡೆತಂದನಂತಕನಂತೆ ಗೋಕುಲಕೆ (ನಿಘಾಗ. ೧೦-೩೨-೩) ನಿನ್ನನ್ನು ಪರದೇಶದಲ್ಲಿ ಮರಣದಿಂದ ತಪ್ಪಿಸುವವರು ಸಿಗಬಹುದು (ಮಣಿಸ. ೪೪). [ಪರ$_3$ + ದೇಶ]

ಪರದೇಶಸ್ಥ (ನಾ). ಹೊರನಾಡಿನಲ್ಲಿ ನೆಲಸಿರುವವನು. [ಸಂ.]

ಪರದೇಶಿ (ಗು). ೧. ಹೊರನಾಡಿಗೆ ಸೇರಿದ; ವಿದೇಶೀಯ : ಸ್ವದೇಶಿಯ ಹೆಸರಿನಲ್ಲಿ ಪರದೇಶಿ ಬಟ್ಟೆಯನ್ನು ಸುಡಲಾಗಿದೆ (ಧರ್ಮಾಸಾ. ೬೨); ಲಿಪ್‌ಸ್ಟಿಕ್ ಇತ್ಯಾದಿ ಪರದೇಶಿ ವಸ್ತುಗಳ ಭೂಷಣವಿಲ್ಲದೆ ಆಕೆ ಎಂದೂ ಸಾಲೆಗೆ ಹೋಗುವುದಿಲ್ಲ (ಹಳ್ಳಿಹಾ. ೯೮). ೨. ಅನಾಥವಾದ; ದಿಕ್ಕಿಲ್ಲದ; ತಬ್ಬಲಿಯಾದ : ಪರದೇಶಿ ತಪಸಿಯ ಹೆಣನನಾ ಚವುಡಯ್ಯ ನಯ್ಯೋ ಕಾಣನೇ (ಬಸಪು. ೩೨-೫೩); ಏಷ್ಟಾದರೂ ತಂಗಿಯ ಮಗ, ಪರದೇಶಿ ಪೋರ ಎಂಬ ಆತ್ಮೀಯತೆ ಕನಕರದಿಂದಾಗಿ (ಹೊಸಕ್ಷಿ ೩೧). (ನಾ). ೩. ಹೊರನಾಡಿನವನು; ಪರದೇಶಕ್ಕೆ ಸೇರಿದವನು : ಪರದೇಶಿ ದುರ್ಜನಂ. . . ಅತಿಪಾಪಿಯಲ್ಲದೆ ತುರಂಗನಿಕರಕ್ಕೆ ಗೋಪರಪ್ಪರೆ ಸತತಂ (ಸಳಚಂ.೬೫೬); ಕಾರಿರುಳಿನಲಿ ಪರದೇಶಿ ಬಂದಿರಲುರಗನಾ ಊರೊಳಗೆ ಕೊಲುತಿರ್ಪುದು ನಿರಂತರವು (ಬಸಪು. ೫೫-೨೬). ೪. ದಿಕ್ಕಿಲ್ಲದ ವ್ಯಕ್ತಿ; ಅನಾಥವ್ಯಕ್ತಿ : ಪರದೇಶಿ[ಪಾಠಾಂ. ಸಿ] ವಿತ್ತಹೀನಂ ಕುತ್ತಂಗಳಿಯಕ್ಕೆ ಜೈನನೆನೆ ಜಿನನಿಳಯಕ್ಕೊಯ್ದೊವಿ ಲೇಸು ಮಾಪ್ಪನೆ ಜೈನಂ (ಸಮಯ. ೪-೩೧); ಪರಿಚಾರಕಜನಂಗಳಿಗುಳಿದ ಪರದೇಶಿಗಳಿಗೀ ದೇಗುಲದೊಳಗೆ ಹುಗಬಾರದು (ಬಸಪು. ೪೩-೪೫); ದ್ರೌಪದಿಯನ್ನು . . . ಕರ್ಣ ದುಶ್ಶಾಸನರು ದಿಕ್ಕುದೆಸೆಯಿಲ್ಲದ ಪರದೇಶಿಯನ್ನು ಕಂಡ ಹಾಗೆ ಕಂಡು (ಕೃವಾಳು. ೧೫೧).

ಪರದೇಶಿ ಅಯ್ಯ = ಬೇರೆ ಸ್ಥಳದಿಂದ ಬಂದು ನೆಲಸಿದ ಸಂನ್ಯಾಸಿ: ರಂಗಸ್ವಾಮಿಯವರ ಸ್ಥಾನದಲ್ಲಿಯಿದ್ದಂಥಾ ಪರದೇಶಿ ಅಯ್ಯನವರು ಮೂವತ್ತೈದುವರುಷದಾರಭ್ಯ . . . ಭಿಕ್ಷಾವೃತ್ತಿಯಲ್ಲಿ ಮಾಡಿದ ದೇವಸ್ಥಾನ ವುಪರಿಗೆ ಬಾಗಿಲು ಮಹಾನವಮಿಮಾಮಂಟಪಕರೆಯೆಂಬವು ಸಹ ಸಮರ್ಪಿಸಿದ ಸೇವೆ (ಎಕ. XII, ತಿಪಟೂ. ೬೯-೫ : 1770).

[ಸಂ. ಪರದೇಶಿನ್]

ಪರದೇಶಿತನ (ನಾ). ನಿರ್ಗತಿಕವಾಗಿರುವ ಸ್ಥಿತಿ; ಅನಾಥವಾಗಿರುವಿಕೆ : ನನಗೆ ಚಿಕ್ಕಂದಿನಲ್ಲೇ ಪರದೇಶಿತನ ಬಂತು (ವೈ.ಸಿ. ೪೦೬).

[ಪರದೇಶಿ+-ತನ]

ಪರದೇಸ (ನಾ). = ಪರದೇಶ : ಪರದೇಸಂ, ಪರಕೊತ್ತಲು (ಭಾಷಾಭೂಷ. ೧೬೨ ಉದಾ). [ಪರ್ಯ+ದೇಸ]

ಪರದೇಸಿ (ನಾ). ೧. = ಪರದೇಶಿ ೩ : ಪರದೇಸಿಯೆಸ[ನೆ]ಮ್ಮವರೆಲ್ಲರುಮಂ ಮನೆಮಾರೆ ತೊಱೆದು . . . ಆಳಮಂ ಹಱುಯಿಸಿದೆಂಬರ್ತಿಯಿಂದಮಿಲ್ಲಿಗೆ ಬಂದೆಂ (ಧರ್ಮಾಮೃ. ೬-೩೦). ೨. = ಪರದೇಶಿ ೪ : ಪರದೇಸಿ ನಾನಿಂದತಿಕ್ಷುಧೆಯಡಸಲು ಪರಿದೆಯ್ದಿದೆ ನಿನ್ನ ಬಳಿಗೆ(ಜೀವಂಧಾಂ. ೬-೧೮); ಕೆಳಗಾರಾದರೂ ಅರಿದೇಸಿ ಪರದೇಸಿಗಳಿದ್ದರೆ ಕರೆದು ಫಲವನ್ನು ಕೊಡ ಹೇಳಿ (ಬತ್ತೇಸ. ೩೭).

ಪರದೇಸಿಯಪ್ಪ = ಬೇರೆ ಸ್ಥಳದಿಂದ ಬಂದು ನೆಲಸಿದ ಸಂನ್ಯಾಸಿ: ಸ್ಥಾನಿಕ ಪರದೇಸಿಯಪ್ಪರಾದ ಮಸ×ಣ ಜೀಯರ××××ಯನ ಕೈಯಲು . . . ಕೊಟ್ಟ ದತ್ತಿ (ಎಕ. VII (R), ಸುಡ್ಡೂರು. ೬೯-೭೩; 1261); ಶ್ರೀ ವಞ××ವ ದೇವರ ಸ್ಥಾನಾಪತಿ ಪರದೇಸಿಯಪ್ಪ ×××ಯಪ್ಪ ಜೀಯರು (ಎಕ. VII (R), ಸುಡ್ಡೂರು. ೬೬-೧೪; 1278).

[<ಸಂ. ಪರದೇಶಿನ್]

ಪರದೈವ (ನಾ). ೧. ಬೇರೆಯ ದೇವರು; ಅನ್ಯದೈವ : ಭಲ ಬೇಱು ಶರಣಂಗೆ ಪರದೈವಮನೊಲ್ಲೆನೆಂಬ (ಬಸವ. ೬೭೬); ಪರದೈವಗಳನವಿಚಾರದಿಂ ಮುಟ್ಟೆನು (ಬಸಪು. ೫೬-೫೦); ಹರಿಪಾದವಿರಲಿಕ್ಕೆ ಪರದೈವಂಗಳೆಗೆಲಗೆ ಲೇಕೆ (ಪುರಂದ. ೪-೧೪೭ ಪಲ್ಲವಿ). ೨. = ಪರದೇವತೆ : ನಿತ್ಯ ಪರದೈವ ಚಿಂತನೆಯೊಳ್ ಮುಳುಂಗಿ (ಅಮಿತ. ೨೬). [ಪರ್ಯ+ದೈವ]

ಪರದೈವತ (ನಾ). = ಪರದೇವತೆ : ಎಲೆ ಕೃಷ್ಣ . . . ನೀಂ ಪರದೈವತ ಕಳಾಸ್ವರೂಪನಾಗಿ ತೋರ್ದೆ (ಜಗವಿ. ೪-೬೯ ಪ). [ಪರ್ಯ+ದೈವತ]

ಪರದ್ರವ್ಯ (ನಾ). ೧. ಬೇರೆಯ ವಸ್ತು; ಅನ್ಯಪದಾರ್ಥ. ೨. ಇತರರ ಸಂಪತ್ತು; ಬೇರೆಯವರಿಗೆ ಸೇರಿದ ಆಸ್ತಿ: ಉಳ್ಳುದುಂ ಪರದ್ರವ್ಯ ಪರಕ್ಷೇತ್ರ ಪರಕಾಲ ಪರಭಾವದಿಂದಮಿಲ್ಲದಿರ್ಕುಂ (ಕಾಂಪು. ೪-೧೬೬ ಪ); ಪರದ್ರವ್ಯ ಪರಸ್ತ್ರೀ . . . ಮಲತ್ರಯದಲ್ಲಿ ಮೋಹಿಸದೆ (ಪುಡಿನೂ. ೬೮-೧೦೦). [ಪರ್ಯ+ದ್ರವ್ಯ]

ಪರದ್ರೋಹ (ನಾ). ಇತರರಿಗೆ ಕೇಡನ್ನು ಬಗೆಯುವುದು : ಹುಸಿ ಪರದ್ರೋಹವು . . . ಅತ್ಮಸ್ತುತಿಯೆನಿಸ್ವಿವನು ಬಿಸುಟು ತದ್ವಿಪರೀತದಲಿ ವರ್ತಿಸುವವನೇ ರಾಯನು (ಕುವ್ಯಾಉ. ೩-೬೧); ಪರದ್ರೋಹವನ್ನು ಮಾಡಲೂ ಬಾರದು, ಚಿಂತಿಸಲೂ ಬಾರದು (ಅಯ್ಯಧ. ೦೫).

[ಪರ್ಯ+ದ್ರೋಹ]

ಪರಧನ (ನಾ). = ಪರದ್ರವ್ಯ ೨ : ಪರಧನಹರಣಾರ್ಥಂ ನಿಜಗುರು ವಧೆಯಂ ಮಾಪ್ಪ ದುಷ್ಟಬುದ್ಧಿಯ ಕಥೆಯಂ ನಿರುತಂ ನೋಡಲ್ ಬರ್ಪಂತಿರೆ ಬಂದಂ ಪೂರ್ವಗಿರಿಗೆ ಸರಸಿಜಮಿತ್ರಂ (ಪಂಚತಂ. ೧೭೫-೨೪೯); ಒಂದಕ್ಕೆಂಜುವೆ ಒಂದಕ್ಕಳುಕುವೆ ಪರಸ್ತ್ರೀ ಪರಧನವೆಂಬೀ ಜೂಜಿಂಗಂಜುವೆ (ಬಸವ. ೪೪೬); ನಾಸ್ತಿಕನ ನಿಂದಾಳುಕನ ಪರಧನ ಬಾಧಕನ ದತ್ತಾಪಹಾರಕನ . . . ಪರಿದಲಿತ ಧರ್ಮಾನ ಗತಿಗಳಲಿ ತಾನಾವೆನಿಂದೇ ಕೊಲ್ಲದಿರ್ದರೆ ಸೂತನಂದನನ (ಕುವ್ಯಾಕ. ೧೪-೬); ಪರಧನ ಪರಸತಿ ಪರನಿಂದೆಗಳುಕುತ ತೊಱೆಯೊಳು ನಿಂದಿರೆ ಪುಂತ ಪೋಗುವುದೆ (ಪುರಂದ. ೪-೧೪೪-೬).

[ಪರ್ಯ+ಧನ]

ಪರಧರ್ಮ (ನಾ). ಬೇರೆಯ ಧರ್ಮ; ಅನ್ಯಧರ್ಮ : ಭಾರತ ಪರಧರ್ಮಸಹಿಷ್ಣುತೆಗೆ ಹೆಸರುವಾಸಿಯಾದ ದೇಶ (ಭಾರದ. ೬೫೫).

[ಪರ್ಯ+ಧರ್ಮ]

ಪರನಾಡು (ನಾ). = ಪರದೇಶ : ಪಾಲ್ಬಿನ್ನಿಯು ಸಿಂಹಲದ್ವೀಪದಿಂದೆ ಪರನಾಡುಗಳಿಗೆ ಹೋಗುತ್ತಿದೆ (ಮುಂಬಯಿ. ೬-೬೪). [ಪರ್ಯ+ನಾಡು]

ಪರನಾರಿ (ನಾ). ಬೇರೆಯ ಹೆಂಗಸು; ಅನ್ಯಸ್ತ್ರೀ : ಪರನಾರಿಯ ಸಂಗವ ತೊಱೆಯಿಂ ಭೋ (ಬಸವ. ೬೪೪); ಪರನಾರಿ ಭೂರಿಸೌಖ್ಯ ನಿವಾರಿ ಕೇಡಿನ ದಾರಿ (ಕೌಶಾಂ. ೨೬-೨೪).

ಪರನಾರೀದೂರ = ಪರಸ್ತ್ರೀಯರಿಂದ ದೂರವಿರುವವನು; ಒಂದು ಬಿರುದು : ಪರನಾರೀದೂರ ನಲುವತ್ತನಾಲ್ವರ್ದುರ್ಜ್ಞಳಕರ ಕಲಿಗೊಣ್ಣ ಗಣ್ಣ (ಎಕ. XII, ತಿರು. ೪೦-೬೧; 1040); ಪರನಾರೀದೂರಂ ಸರಣಾಗತ ಪ್ರಿಯಂ (ಕಇಶ. ೪೧-೫೯-೧೦; 1128). ಪರನಾರೀಪುತ್ರ = ಅನ್ಯಸ್ತ್ರೀಯರಿಗೆ ತಾನು ಮಗನೆಂದು ಭಾವಿಸಿರುವವನು; ಒಂದು ಬಿರುದು : ಪರನಾರೀಪುತ್ರ ಜಯಲಕ್ಷ್ಮೀನಿವಾಸ ಕೀರ್ತ್ಯವಿಳಾಸನಧನವ ವಿಕ್ರಮಾದಿತ್ಯ (ಸೌಇಇ. XX, ೬೯-೧೯; 1084); ಪರನಾರೀಪುತ್ರಸುಂ ಪಾರ್ಶ್ವದೇವಪಾದಾರಧಕನು(ಂ)ಮಪ್ಪ ಕಲುಚಣನಾಡಾಳ್ವ ಸಾವಂತ ಸೋವೆಯ ನಾಯಕಂ (ಎಕ. VII (R), ನಾಗಮಂ. ೧೬೯-೭೬; 1142). ಪರನಾರೀಪುತ್ರಕ = ಪರನಾರೀಪುತ್ರ : ಪರನಾರೀಪುತ್ರಕ ನಣ್ಮರ ತೊಟ್ಟು . . . ಗುಣ್ಡಚಕ್ಕ್ರಜೆಡ್ಡುಗಂ (ಎಕ. II (R), ೪೭೮-೧; 10ನೆಯ ಶತ). ಪರನಾರೀವ್ರತ = ಅನ್ಯಸ್ತ್ರೀಯರನ್ನು ಬಯಸುವುದಿಲ್ಲವೆಂದು ವ್ರತವನ್ನು ಹಿಡಿದಿರುವವನು; ಒಂದು ಬಿರುದು : ಪರಹಿತವ್ಯಾಪಾರನೇ ಪೇಚರಂ ಪರನಾರೀಬ್ರತಯುಕ್ತನೇ ಪವನಜಂ (ಎಕ. VI, ಕಡೂರು. ೩೮-೫೩; 1191). ಪರನಾರೀಸಹೋದರ = ಅನ್ಯಸ್ತ್ರೀಯರಿಗೆ ಒಡಹುಟ್ಟಿದವನೆಂತಿರುವವನು; ಒಂದು ಬಿರುದು : ವಿವೇಕಜಾಜಾಕ್ಕಂ. ಪರನಾರೀಸಹೋದರಂ (ಸೌಇಇ. XX, ೪೭-೮; 1074); ಪರನಾರೀಸಹೋದರನಪ್ಪ ಗಂಗಣ್ಣನ ಲಿಖಿತ (ಎಕ. II (R), ೧೭೩-೧೦೭; 1145). [ಪರ್ಯ+ನಾರಿ$_2$]

ಪರನಾರೀಸಂಗ (ನಾ). ಅನ್ಯಸ್ತ್ರೀಯ ಸಹವಾಸ,—ಸಂಬಂಧ : ಪರನಾರೀಸಂಗದೋಸಂ . . . ಪೊರ್ದುಗುಮೆನಗೆ(ದಶಕು. ೧೦-೬೧). [ಸಂ.]

ಪರನಿಂದಕ (ನಾ). ಇತರರನ್ನು ದೂಷಿಸುವವನು,—ತೆಗಳುವವನು : ಕೇಳು ಪರನಿಂದಕನೆ ನಿಂದ್ಯನು (ಕುನ್ಯಅ. ೨೩-೪೩).

[ಪರ್ಯ+ನಿಂದಕ]

ಪರನಿಂದೆ (ನಾ). ಇತರರನ್ನು ಕುರಿತು ಮಾಡುವ ದೂಷಣೆ,—ತೆಗಳಿಕೆ : ಆತ್ಮಸ್ತುತಿ ಪರನಿಂದೆಯು ಕೇಳಿಸದಿರಯ್ಯಾ ನಿಮ್ಮ ಧರ್ಮ (ಬಸವ. ೪೦೭); ಕರದಲಿ ಜಪಮಾಲೆಮಣಿಗಳನೆಣಿಸುತ ಪರನಿಂದೆ ಬಾಯಲಿ ಮಾಡುವರಯ್ಯ (ಪುರಂದ. ೪-೧೪೪-೩); ಪರನಿಂದಾ ಪರವಸ್ತುಜಾತ ಪರಕಾಂತಾಕಾಂಕ್ಷೆಯಂ ಮಾಣ್ದು . . . ಮೆಱೆವಾತಂ ತಾನೆ ಭಕ್ತೋತ್ತಮಂ (ವೈಜಪಿ. ೩-೭೩); ಪರನಿಂದೆ ಗೃಹಕ್ಷಯ, ಯತಿನಿಂದೆ ಕುಲಕ್ಷಯ (ಗಾದೆ). [ಪರ್ಯ+ನಿಂದೆ]

ಪರನಿಂದೆಗೆಯ್(ಕ್ರಿ). ಇತರರನ್ನು ಹೀಯಾಳಿಸು,—ತೆಗಳು : ಪರನಿಂದೆಗೆವ್ವ ಅವನು . . . ಇಂತಿವ ನರಕದೊಳಗಿಂತೆನವಧಿಗೆ ನಿಮ್ಮ ಧನವನೀಯದಿರಿ (ಪಡಕಾ. ೮-೫೭). [ಪರನಿಂದೆ+ಕೆಯ್$_1$]

ಪರನಿಮಿತ್ತ (ನಾ). ಬೇರೆಯ ಉದ್ದೇಶ,—ಕಾರಣ; ಅನ್ಯ ನಿಮಿತ್ತ : 'ಪರನಿಮಿತ್ತಂಗ್ಳೆ' ಪರಾ. [ಪರ್ಯ+ನಿಮಿತ್ತ]

ಪರನಿಮಿತ್ತಂಗ್ಳೆ (ಕ್ರಿ). ಬೇರೆಯ ಕಾರಣವನ್ನು ಉಂಟುಮಾಡಿಕೊಳ್ಳು : ಬರೆ ನಾನಿದಿರೊಳ್ ನೋಟವ ತಿರುಪುತ್ತಂ ನಗೆಯ ಪರನಿಮಿತ್ತಂಗ್ಳೆದಾ ತರುಣಿಯ ನಾಣಂ ಮುದನಂ ನೆರೆಮರೆಯೆನಿಸಿಲ್ಲಮಂತೆ ಮೆರೆದನುಮಲ್ಲಂ (ಶಾಕುಂತ. ೨೫-೪೬).

[ಪರನಿಮಿತ್ತ + ಕ್ಳೆ$_1$(<ಕೆಯ್$_1$)]

ಪರನಿರ್ವೃತಿ (ನಾ). ಲೋಕೋತ್ತರವಾದ ಸುಖ ; ಪರಮಾನಂದ: ಈ ಪುನರ್ಮಿಳನವೆ ಪರನಿರ್ವೃತಿ ಎನಲೀ ಸಂಲೀನತೆಯೇ ಭವವೃತಿ (ಗಣೇಶ. ೧೬-೪೦೧). [ಪರ$_3$+ನಿರ್ವೃತಿ]

ಪರನೃಪ (ನಾ). ಶತ್ರುರಾಜ : ಪರನೃಪರೋಲಗಿಸಿದ ಪದ್ಮರಾಗಮಣಿಯಿಂ . . . ಮಣಿದೀಪದ ಸರಮೊಪ್ಪಿದುದು (ಅಜಿಪು. ೬-೫) ; ಪರನೃಪರಟ್ಟದ ಕಪ್ಪಕರಿಗಳ ಮದಜಳಮನುಂಡು ಕಂಪೇಱಿದ ತದ್ಧರಣೇಶ ಗೃಹಾಂಗಣದೊಳ್ ಪಱಿವಱಿಯಾಡುವುವು ಪಱಮೆವಱಿಗಳ ಬಳಗಂ (ಚಂದ್ರಪು. ೭-೩೩). [ಪರ$_3$ + ನೃಪ]

ಪರನೃಪಮಂಡಳ(ನಾ). ಶತ್ರುರಾಜ್ಯ: ಪರನೃಪಮಂಡಳಕ್ಕೆ ಭಯಮಂ . . . ಇತ್ತನಂದು ಬಿತ್ತರಿಸೆ ಸನತ್ಕುಮಾರ ನಳಕೂಬರ ಕಂತುನಿಭಂ ನೃಪಾತ್ಮಜಂ (ಪುಷ್ಪಪು. ೪-೭೦).

[ಪರನೃಪ+ಮಂಡಳ (=ಮಂಡಲ)

ಪರನ್ರಿಪತಿ (ನಾ). = ಪರನೃಪ : ಪರನ್ರಿಪತಿಮಕುಟಘಟ್ಟಿತ ಚರಣಾರವಿಂದಯುಗಳಂ (ಸೌಇಇ. XX, ೪೧-೫ ; 1068). [ಪರ$_3$ + ನ್ರಿಪತಿ]

ಪರಪಂಚ (ನಾ). ೧. ಜಗತ್ತು ; ವಿಶ್ವ : "ಪರಪಂಚ—ಪ್ರಪಂಚ" (ತದ್ಭಕೋ. ೨೪). ೨. ವ್ಯತ್ಯಾಸ ; ಪಕ್ಷಪಾತ ; ಭೇದ : ಪಂಕ್ತಿಯೊಳ್ ಪರಪಂಚಮಂ ಮಾಡೆ ದೋಷಮೆಂದೆಲ್ಲರ್ಗೆ ಸರಿಯಾಗಿ ಬಡಿಸಲ್ (ಸಮ್ಯಕೌ. ೯-೪೩). [<ಸಂ. ಪ್ರಪಂಚ]

ಪರಪಕ್ಷ (ನಾ). ೧. ಇನ್ನೊಂದು ಪಕ್ಷ ; ಪ್ರತಿಪಕ್ಷ ; ವಿರೋಧಪಕ್ಷ : ಎಂದು ಪರಪಕ್ಷದೂಷಣಪುರಸ್ಸರಮನೇಕೋಪಪತ್ತಿಗಳಿಂ ಸ್ವಪಕ್ಷಸ್ಥಾಪನಂಗೆಯ್ದು (ಆದಿಪು. ೨-೨೨ ವ) ; ಪರಪಕ್ಷಾಪರಪಕ್ಷಂ ದೊರೆಕೊಂಡುದು ವಿಧಿಗೆನುತ್ತೆ ಬಯ್ದುಳ್ (ಹಮ್ಮೀರ. ೨-೮೨). ೨. ಶತ್ರುಗಳ ಸಮೂಹ,—ಗುಂಪು: ಪರಪಕ್ಷಮುಳ್ಳಿನಂ ತನಗಿರವುಬ್ಬಸಮದಱಿನ [ಱಿ]ವುದದನೇಗೆಯ್ದುಂ (ಕವಿಗಾ. ೩-೧೫೦). ೩. ಶತ್ರು ; ಹಗೆ : "ಅಪಕ್ಷನೆನೆ ಪರಪಕ್ಷನೆಂದೆನಿಕ್ಕುಂ" (ಮಂಗರಾ. ೭೨-೨೨). [ಪರ$_3$+ಪಕ್ಷ]

ಪರಪತಿ (ನಾ). ಸಾಲ ; ಕೈಗಡ : ಕಾಯಕವೆಂದು ಕಲ್ಪಿಸಿ ಮಾಡುವಲ್ಲಿ ತುಡುಗುಣಿಯಂತೆ ಮಡದಿ ಮಕ್ಕಳಿಗೆಂದು ಹೆಡಗೆ ಗಳಗೆಯಲ್ಲಿ ಹೊಯಿದು ಕಡ ಪರಪತಿ ಎಂದು ಕೊಟ್ಟಡೆ ಅದು ಗುರು ಪರ ಚರ ಈ ಮೂಱಱೊಡವೆಯಲ್ಲ (ಸರ್ವಸ. ೬೨-೩೩೦).

[←ತೆಲು. ಪರಪತಿ, ಪರಪತ್ತೆ]

ಪರಪತ್ನಿ (ನಾ). ಬೇರೆಯವನ ಹೆಂಡತಿ ; ಪರಸ್ತ್ರೀ : ಪರಪತ್ನಿಯನ್ನು ಬಣ್ಣಿಸತಕ್ಕುದಲ್ಲ (ಶಾಕುಂತ. ೬೫-೭). [ಪರ$_3$+ಪತ್ನಿ]

ಪರಪದ (ನಾ). ೧. ಶ್ರೇಷ್ಠವಾದ ಸ್ಥಳ ; ಮೋಕ್ಷ: ಸ್ವಾತ್ಮಾರಾಮಸ್ವಾಮಿಯು ರಾಜಯೋಗ . . . ಪರಪದ . . . ತುರೀಯಾವಸ್ಥಾ ಇವುಗಳೆಲ್ಲ ಒಂದೇ ಅರ್ಥವೆಂದು ತಿಳಿಸಿರುತ್ತಾನೆ (ಭಾರದ. ೧೬೫). ೨. [ವ್ಯಾಕ] ಸಂಧಿ ಅಥವಾ ಸಮಾಸಗಳಲ್ಲಿ ಪೂರ್ವಪದಕ್ಕೆ ಮುಂದೆ ಬರುವ ಪದ: ಪರಪದಪೂರ್ವಂ ದ್ವಿತ್ವಾಕ್ಷರಮಾಗಿರೆ ಪೂರ್ವಪದದ ಚರಮಂ ಹ್ರಸ್ವಾಕ್ಷರಮಾಗೆ ಸಂಧಿದೋಷಂ (ಶಮದ. ೫೯).

[ಪರ$_3$+ಪದ$_1$]

ಪರಪಮುದು (ನಾ). ದೇವರ ನೈವೇದ್ಯಕ್ಕಾಗಿ ಕೊಡುವ ಬೇಳೆ : ಆ ಕೈಂಕರ್ಯಗಳ ದಾನಗಟ್ಟಳೆಯ ವಿವರ ಪ್ರತಿದಿನ ೧ಕ್ಕೆ ನಡವ ನಿತ್ಯಸಂಧಿ ೧ಕ್ಕೆ ಅಮೃತಪಡಿ ಖಂ ೧/೪ ಕೆ ತಳಿಗೆ ೬ ಅರ್ಧ ಪರಪಮುದು ಕಱಿಯಮದು ನೈಯಮದು ಚುರುಳೊಮುದು ಸಹ ವರ್ಷ ೧ಕೆ ಸಲುವುದು (ಎಕ. XIV, ಶ್ರೀರಂಗ. ೯೫-೨ ; 1535).

[ಪರಪ್ಪು$_3$ (<ಪರುಪು) + ಅಮುದು (<ಅಮರ್ದು). / ತಮಿ. ಪರುಪ್ಪಮುತು]

ಪರಪರ (ನಾ). ಬಟ್ಟೆ, ಕಾಗದ ಮುಂತಾದುವು ಹರಿಯುವುದನ್ನು ಸೂಚಿಸುವ ಒಂದು ಅನುಕರಣಪದ : ಮಗು ಪುಸ್ತಕವನ್ನು ಪರಪರ ಎಂದು ಹರಿದು ಹಾಕಿತು (ರೂಢಿ).

ಪರಪಾಕ (ನಾ). ಬೇರೆಯವರು ಮಾಡಿದ ಅಡುಗೆ : ಪರಪಾಕ ಪರವಸ್ತ್ರ . . . ಕಾಂಕ್ಷೆ ಮಲತ್ರಯದಲ್ಲಿ ಮೋಹಿಸದೆ (ಮಡಿಮಾ. ೬೮-೧೦೦); ನಿರತ ತಮ್ಮಯ ಸ್ವಜಾತಿಯ ಧರ್ಮವ ನಡಸುತ್ತ ಪರಪಾಕಮುಮನು ವರ್ಜಿಸಿ (ನವಮೋ. ೨-೩೩). [ಪರ$_3$+ಪಾಕ$_1$]

ಪರಪಾಟಕ 'ಪರ್ಪಾಟಕ' ನೋ.

ಪರಪಾಟು, ಪರಿಪಾಟು$_2$ (ನಾ). ಪ್ರಮಾದ ; ಗೊಂದಲ : ನಿಮಗೆ ಮರೆತು ಹೋಗಿರಬೇಕು. ಪರಪಾಟು ಆಗಿರಬೇಕು (ದಿವಾಬ. ೮೯) ; ಹುಬ್ಬಳ್ಳಿಯ ನಿಲ್ದಾಣದಲ್ಲಿ ಪರಪಾಟು ಆಗಿ ಧಾರವಾಡದ ಗಾಡಿಯನ್ನು ಬಿಟ್ಟು ಹಾವೇರಿಯ ಗಾಡಿಯಲ್ಲಿ ಹತ್ತಿದ್ದೇನೆ (ಹುಚ್ಚುಹು. ೧೯). **ಪರಿಪಾಟು$_2$** : ಎಂದೂ ಇಲ್ಲದ ಪರಿಪಾಟು ಈ ದಿನವೇ ಆಗುತ್ತದೆಯೇ ಹೇಳು ? (ಮರಳಿ. ೬೨). [←ತೆಲು. ಪೊರಪಾಟು].

ಪರಪಾಟ್ಲು (ನಾ). = ಪರಪಾಟು : ನಂದು ಪರಪಾಟ್ಲು ಅತು (ಬೆಂಗಬ. ೧೪). [ಪರಪಾಟು+-ಅಲು(<-ಅಲ್$_2$)]

ಪರಪಾರ (ನಾ). ಆಚೆಯ ದಡ ; ಎದುರುದಂಡೆ : ಅಪಾರ ಪಾರಾವಾರ ಪರಪಾರಸಮುತ್ತಾರಿತ ಕುಂದೇಂದುಕುಮುದ್ವತೀ ತರಳತರ ತಾರಹಾರನೀಹಾರರೋಚಿರ್ಮಂಜರೀನಿಚಯವಿಶದಯಶೋರಾಶಿವಳಯನುಂ (ಶಾಂತಿಪು. ೧-೭೧ ವ). [ಪರ$_3$+ಪಾರ$_2$]

ಪರಪಾಷ್ಟಕ 'ಪರ್ಪಾಟಕ' ನೋ.

ಪರಪಿಂಡಾದ (ನಾ). ಬೇರೆಯವರಿಂದ ಆಹಾರವನ್ನು ಪಡೆಯುವವನು ; ಪರಾಧೀನ : "ಪರಾನ್ನಃ, ಪರಪಿಂಡಾದಃ – ಈ ೨ ಹೆಱರಿಕ್ಕಿದ ಕೂಟನುಂಬುವಂ" (ಹಲಾಯು. ೫೮-೧೯೬). [ಸಂ.]

ಪರಪಿಂಡಿ (ನಾ). ೧. = ಪರಪಿಂಡಾದ ೧ : "ಹೆಱರಾರಿ ತಿಂಬವಂ ಪರಾನ್ನಂ ಪಾರಧಿಕನಾ ಪರಪಿಂಡಿಯಕ್ಕು [ಪಾಠಾಂ. ಪರಪಿಂಡೆಯಕ್ಕು, ಪರಪಿಂಡಾದನಕ್ಕುಂ]"(ಮಂಗರಾ. ೬೯-೧೦). ೨. ಪರಾವಲಂಬಿ ಜೀವಿ: ಕಾಳಜ್ವರದ (ಕಾಲಾಅಜಾರ್) ಪರಪಿಂಡಿಯಿಂದ . . . ಕರುಳಲ್ಲಿ ಸೊಂಕಾದರೆ . . . ಹಲವಾರು ಬಗೆಗಳ ಜೀವಾಣುಗಳು ಹೊರಬೀಳಬಹುದು (ಕವಿಕೋ. I, ೮೨೬) [ಸಂ. ಪರಪಿಂಡಿನ್]

ಪರಪೀಡನ (ನಾ). ಇತರರನ್ನು ಹಿಂಸಿಸುವುದು,—ಕಾಡುವುದು : "ಪರಪೀಡನಂ ಸಪತ್ರಾಕರಣಮೆನಲು ಲೋಗರನು ಬಂಧಿಸಲು ನಾಮಂ" (ಮಂಗರಾ. ೧೩೪-೩೨). [ಪರ$_3$ + ಪೀಡನ]

ಪರಪೀಡನೆ (ನಾ). = ಪರಪೀಡನ : ಸದಾ ಪರಪೀಡನೆಯಲ್ಲಿಯೇ . . . ಉದ್ಯುಕ್ತರಾಗಿರುವವರು ಮೊದಲು ಸ್ವಲ್ಪ ಸುಖವುಳ್ಳವರಾಗಿ ತೋರಿದರೂ ಪರ್ಯವಸಾನದಲ್ಲಿ ಅವರ ಸರ್ವನಾಶ ಖಂಡಿತ (ಭಾರದ. ೯೮); ಪರಪೀಡನೆಯೆ ಪಾಪಕರವು (ಇಂಚಾಪ. ೧೮೦-೮೮). [ಪರ$_3$ + ಪೀಡನೆ]

ಪರಪೀಡೆ (ನಾ). = ಪರಪೀಡನ : ಪರಪೀಡಾಮುಖದುಷ್ಟದುರ್ಜನನಿಕಾಯಾತಂಕದಿಂ ಸದ್ಗುಣಾಕರಮಂ ಸದ್ರಸಭಾವಮಂ ಸಮೆವುದಂ ಮಾಣಲ್ಕದೇಕಾಯ್ತೊ ಬಂಧುರಮಂ ಕಾವ್ಯನಿಬಂಧನಮಂ (ಚಂದ್ರಪು. ೧-೪೫) ; ಪರಪೀಡೆಯನೆಸಗುವವಂ ನರಕವನುಂಡುಂಡು ದಣಿಯನೇತೆಱದಿಂದಂ (ನಳಚಂ. ೬೦೩). [ಪರ$_3$ + ಪೀಡೆ]

ಪರಪು$_1$, ಪರೆಪು$_1$, ಪರ್ಬು$_1$, ಪರ್ವು$_1$, ಹಂಬು$_1$, ಹಬ್ಬು$_1$, ಹರಗು$_2$, ಹರವು$_1$, ಹರಹು$_1$, ಹರುಹು$_1$, ಹರ್ಬು, ಹರ್ವು (ಕ್ರಿ). ೧. ವ್ಯಾಪಿಸುವಂತೆ ಮಾಡು ; ಹರಡು : ಪೊಳೆವಿನಕಿರಣಂ ಸ್ಥಳನಳುರೆ ಕನಲ್ಲಗಿದು ಸೋಗೆಯಂ ಪರಪಿ (ಆದಿಪು. ೧೧-೪೯) ; ಪರಪಿದ

ಮಲ್ಲಿಕಾಮುಕುಳಮಾಲೆಯ ಪೂವಲಿ (ಕುಸುಮಾ. ೨-೧೨೩); ಸರಸೀಜಾತ ಸಖಂ ಸಹಸ್ರಕರದಿಂ ಸರ್ವೋರ್ವಿಯೊಳ್ ಕೆಂಡಮಂ ಪರಪುತ್ತಿರ್ದನೊ (ದಶಕು. ೪-೨೧); ಮಲ್ಲಿಗೆಯಲರ್ಮುಡಿಯ ತನಿಗಂಪ ನೆರವಿ ನೆರವಿಗೆ ತಂದೆಲರ್ಮೆಲ್ಲಮೆಲ್ಲನೆ ಪರಪುತಿರ್ದುದಾ ರಾಜಮಾರ್ಗದೊಳ್ಪಿಸುಣರಂತೆ (ಜೈಮಿಭಾ. ೬-೧೨); ಚೆಂಬವಳದ ಸರದ ಪರಪಿದ ಪೊಂದಟ್ಟೆಗಳಿಂ ರಂಜಿಸಿ (ರಾಮಾಶ್ವ. ೧೦೩-೮). ೨. (ವದಂತಿಯಂತೆ) ಹಬ್ಬಿಸು ; ಪ್ರಚಾರ ಮಾಡು : ನೀರೊಳ್ಪೊಕ್ಕೆಣ್ಣೆಯಂತೆ ಪೆಱರ ದೋಷಮಂ ಪರಪದೆ (ಧರ್ಮಾಮೃ. ೫-೯೯). ೩. ಚೆಲ್ಲೊಡು ; ಚೆಲ್ಲಾಪಿಲ್ಲಿ ಮಾಡು ; ತೂರು ; ಎಸೆ : ಪರಪಿದ ಕೂಟ್ಗೆ ಮುಸುಱು ಮಡಿದ ಮಕ್ಷಿಕಾದಿ ಜೀವಸಾವದ್ಯಮುಮಂ (ಶಾಂತಿಪು. ೫-೭೦ ವ); ಉಟಜಾಂಗಣದೊಳ್ ಪರಪಿದ ಪಲತೆಱದ ಫಲಂಗಳಿಂ (ಕಾದಂಪೂ. ೨೨೩) ; ಚಿತ್ರಗ್ರೀವಂ ಸಪರಿಗ್ರಹಂ ಬಂದು ಪರಪಿರ್ದ ಕೂಟಂ ಕಂಡೆಱಗಲ್ (ಪಂಚತಂ. ೨೮೮-೧೭); ತುಱುಕಾರ್ತಿಯರ್ ತಿಱುತಂದು ಪಾಱುತನಕ್ಕೆ ಪರಪೆ ಪರೆದು ಕೊರಗಿರ್ದ ಕರಿಯ ನೆಯ್ದಿಲ್ಗಳಿಂ (ಲೀಲಾವ. ೫-೬೭). ೪. ವ್ಯಾಪಕವಾಗು ; ವ್ಯಾಪಿಸು : ಛಂದಂ ಪಿಂಗಳನಿನವನಿಯೊಳ್ ಪರಪಿದೊಡೆ (ಛಂದೋಂಬು. ೧-೩೦) ; ಪರಪೆ ಕೇಕಿಗಳ ತಾಂಡವಮಂ ನುಣ್ಣರದ ತಿಣ್ಪು ಘನಘೋಷಗಭೀರಂ (ಕಾವ್ಯಾವ. ೭೪). ೫. ದೂರಕ್ಕೆ ಓಡಿಸು ; ದೂರವಾಗುವಂತೆ ಮಾಡು : ಪರಪುತ್ತಂ ಪುಲ್ಲೆಗುಂಪಂ ಪದಕೆ ತೊಡರ್ದ ಪೆರ್ಬಳ್ಳಿಗಳ್ ಪಾಶದಂತೊಪ್ಪಿರೆ . . . ಸೊರ್ಕಾಂತಾನೆಯ್ಯೆ ತಂದಪುದು (ಶಾಕುಂತ. ೧೭-೩೩). ೬. ಕೆದರಿಕೊಂಡಿರು ; ಅಸ್ತವ್ಯಸ್ತವಾಗಿರು : ಮರುಳಂತೆ ಮರುಳೆ ತಲೆಯಂ ಪರಪಿರದೆ ಮನೋನುರಾಗದಿಂ ಮುಡಿ ಮುಡಿಯಂ (ಧರ್ಮಾಮೃ. ೩-೧೨೬). ೭. ಚಾಚು ; ನೀಡು : ಕನ್ನೈದಿಲ್ವಾಸಿನೊಳಾ ಚೆನ್ನೆ ವಿರಾಜಿಸಿದಳ್ . . . ಚೆಂಬೊನ್ನದ ಕಾಂತಿಯಿನೊಡಲ್ ಪರಪಿ ತಾಪಿಸುತುಂ (ಉದ್ಭಟ. ೭-೫೧); ನೀಂ ಪೊರೆವುದೆಂದಾತ್ಮಾಂಗಮಂ ಧಾತ್ರಿಯೊಳ್ಪರಪುತ್ತುಂ (ವೃಷವಿ. ೨೬-೩೦). ೮. ಆವರಿಸು ; ಕವಿ ; ಮುತ್ತು : ವಲ್ಲೀನಿವಾಸಂಗಳಂ ಪರಪುತ್ತುಂ ಮಳಯಾವನೀಧರಚರಂ ತಾಂ ಬಂದುದು . . . ಅಂಗಜಗಜಂ ಬರ್ಪಂತೆ ಚೈತ್ರಾನಿಳಂ (ಚಂದ್ರಪು. ೭-೩೮). ೯. ಹರಡಿಡು ; ಅಗಲವಾಗಿಡು : ಧರಾಲತಾಂಗಿ ಪರಮರಾಮೇಶ್ವರಂಗೆಯುರುತರದುಲುಪಿಗಳ ತಂದು ಪರಪಿದಳೊ (ವಿಕೋಪು. ೪-೧೭). ಪರೆಪು$_1$: "೧. ಪರೆಪು (ಪರಪು)—ಪ್ರಸಾರೇ (ಹರಡು)" (ಶಮಧಾ) ; ಲತಾಂಗಿಯರ ಮೇಲ್ಪೊದೆದ ದುಕೂಲಮಂ ಮೋಹರಾಜನೆಂಬ ಬೇಂಟೆಗಾಱಂ ಪರೆಪಿದ ಬಲೆಯೆನ್ನದೆ ಕಾಮಧ್ವಜಮೆಂದೊಡಂ . . . ತನ್ನ ಕೇಡಂ ಬಗೆವನಲ್ಲದೆ ಸುಖಮಂ ಬಗೆಯಂ (ಧರ್ಮಾಮೃ. ೭-೧೫೫); ಶೀತಲಮಂ ಪರೆಪುತ್ತೆಣ್ಡೆಸೆಯೊಳ್ಸಂಚರಿಸಿದುದೊಯ್ಯನೆ ಲಸತ್ಪ್ರಭಾತಸಮೀರಂ (ಉದ್ಭಟ. ೧೦-೧೧೮); ದಶದಿಶೆಯೊಳಿಂದುಕರರುಚಿಯಶಮಂ ಪರೆ[ಪಾಠಾಂ. ರ]ಪಲ್ (ರಾಜಶೇ. ೧೩-೧೫). ೨. ಈ ಪೊಲ್ಲವಾತಂ ಪರೆಪಿದೊಕ್ಕಲಿಗರ ನಾಲಗೆಯಂ ಕಿಟ್ಟುಕ್ಕುವೆಂ (ಪಂಚಾಮಾ. ೧೫-೭೧ವ). ೩. ಪಿಂಗಾಕ್ಷನ ವಕ್ಷಸ್ಥಳಮಂ ತನ್ನ ಗದಾಲಾಂಗೂಲದಿಂದಿರ್ಬಗಿಯಾಗೆ ಪೋಟ್ದು ಪರೆಪಲುಂ (ಗದಾಯು. ೬-೧೬ ವ). ೧೦. ಮಾಡು ; ನೆರವೇರಿಸು : ಮದುವೆಯಂ ಭವನಾಂಗಣ ಬಾಲಚೂತದೊಳ್ಪರೆ[ಪಾಠಾಂ. ಳ್ವೆರ]ಪೊಲವಿಂದೆ ಮಾಧವಿಯೊಳ್ (ಕಾದಂಉ. ೫೯೦). ಪರ್ಬು$_1$: ೪. "ಪರ್ಬು—ವಿಸ್ತಾರೇ" (ಶಮಧಾ); ಅಂತು ನೂರ್ವರೊಳೊರ್ವನಗುರ್ಬು ಪರ್ಬಿ ಪರಕಲಿಸೆ ಸಂಪೂರ್ಣವಯಸ್ಕನಾಗಿ ಘೃತಘಟವಿಘಟನುಮಾಗಿ ಪುಟ್ಟುವುದುಂ (ಪಂಪಭಾ. ೧-೧೩೧ ವ); ಕೀರ್ತ್ಯಂಗನೆ . . . ಪರ್ಬಿದಳ್ ದಿಗ್ವನಿತಾಸಂದೋಹಮಂ ತಾಪಿನಂ (ಗದಾಯು. ೧೦-೧೧); ಪೊಗಟ್ಟೆಂ ಮನೋಜನಂ ಕೇಸುರಿಯಂತೆ ಪರ್ಬಿ ಪಟುವಾಗಿ ಪೊದಟ್ಟುಳುರ್ದಂತರಂಗಮಂ ಕಾಸಿ ಕಪಾಲಿಯಂ ಪಿಡಿದೊಱಲ್ದರೆವೆಣ್ಣನೆ ಮಾಡಿದಿಟ್ಟನಂ (ಲೀಲಾವ. ೧-೮೫); ಕಣ್ಣನರೆ ಮುಚ್ಚಿ ಬಿಸಿಲ್ ಪರ್ಬಿರೆ ಕಾಯುತ್ತಿರ್ದುದು ಕೊರ್ಬಿದ ವೃಕ್ಷಾಗ್ರದಲ್ಲಿ ಮರ್ಕಟರಾಜಂ (ದಶಕು. ೨-೮೭); ಕಾಮೋಜ ಪಿಡಿದ ಸೂತ್ರದ ಕರ್ಗೆಱೆಯೆನೆ ರೋಮಾಳಿ ನಸುಪರ್ಬಿತೊಡಲ (ಮೋಹತ. ೨೩-೨೧). ೭. ಸ್ಥಿರತರಮಾಗಿ ಪರ್ಬಿದ ಸುಪರ್ವಶರಾಸನಮಾಳೆ . . . ವಿತಾನಮೆಂದೆನೆ ನಭೋಂಗಣಮಂ ನೆಱೆ ತಿಂಬುತಿರ್ಪುದುಪ್ಪರಿಗೆ ನಿರಂತರಂ ನಿಖಿಳರತ್ನಮರೀಚಿಕಳಾಕಳಾಪದಿಂ (ಕುಸುಮಾ. ೨-೧೨೪). ೮. ಮೊದಲೊಳ್ ನೀಳ್ದು ಪೊದಟ್ಟು ಪರ್ಬಿ[ಪಾಠಾಂ ರ್ವಿ] . . . ಕೊಂದುದು ಕೃಷ್ಣಾಗರು ಧೂಪಧೂಮನಿವಹಂ ಕೃಷ್ಣೋರಗಂ ಕೊಲ್ವವೋಲ್ (ಆದಿಪು. ೫-೨೩); ಘನಾಗಮಂ ಮೊದಲ್ಗಿಡೆ ಶರದಾಗಮಂ ನೆಱೆಯೆ ಪರ್ಬೆ ಸಮಸ್ತಮಹೀವಿಭಾಗಮಂ (ಪಂಪಭಾ. ೬-೬೯); ದಂತಕಾಂತಿನಿಕಾಯಂ ನಿಮಿರ್ದಾ ಸಭಾಜನಮನೆತ್ತಂ ಪರ್ಬೆ (ಕುಸುಮಾ. ೧೫-೬೫); ನಳನ ರಾಣಿಗೆ ಶೋಕ ಪರ್ಬಿದ ತೆಱದಿ ಕತ್ತಲೆ ಲೋಕವನು ಮುಸುಕಿದುದು ಭರಣಿಯ ಮುಚ್ಚಿದಂದದಲಿ (ನಳಚ. ೫-೧೪); ಬಲುತವಕಮುಂ ತಲೆದೋಱೆ ಕಾತುರ ಪರ್ಬಿ ವಿರಹಾಗ್ನಿ ಸಂತತ ಫಲದೋಱದುದು (ಕಂನವಿ. ೯-೧೭೧). ೧೧. (ಬಳ್ಳಿಯಂತೆ) ಹೋಗು,—ಹರವಿಕೊಳ್ಳು,—ಹರಡಿಕೊಳ್ಳು : ಬಳ್ಳಿ ಮೊದಲಾಗಿ ಮೊದಲೊಳಗೆಳ್ಳನಿತುಂ ಪೊನ್ನನಿಕ್ಕದೊಡೆ ಪರ್ಬದು ಪೊನ್ನುಳ್ಳ ನರನಿತ್ತೊಡಲ್ಲದೆ ಬೆಳ್ಳನೆ ಪರ್ಬುಗುಮೆ ಕೀರ್ತಿಲತೆ ದಿಕ್ತಟಮಂ (ಲೀಲಾವ. ೧-೪೩); ಪರ್ಬುವ ಕನಲ್ಕೆಯೆಂಬ ಬಳ್ಳಿ ಕೂರದಂಟಾದಂತೆ ಪಿಡಿದಲಾಗುಳಮುಂ ಅಂಜಿಕೆಯಂ ಪುಟ್ಟಿಸೆ (ಕಬ್ಬಿಕಾ. ೩೧೦). ೧೨. ಹತ್ತು ; ಏರು : ದುರ್ಬಲನಾಗಿ ಮೋಹಾಸುರ ತ್ರಿಪುರದ ಪೆರ್ಬಾಗಿಲುಗಳನಿಡಿಸಿ ಅಬ್ಬರ ಪಿರಿದಾಗಲು ಪುರದೊಳು ಪೋಗಿ ಪರ್ಬಿದನೊಂದಟ್ಟಳೆಯನು (ತ್ರಿಪುಸಾಂ. ೨೨-೨೪೭); ಸೆಲದಿಪುಳುವಾ ಲಿಂಗತನುವಂ ಪರ್ಬುತಿರಲು (ಬಸಪು. ೧೩-೧೯). ೧೩. ಅಧಿಕವಾಗು ; ಹೆಚ್ಚಾಗು : ಪರ್ಬಿದಾನಂದರೂಪೋನ್ನತನಿರ್ದಂ ಪ್ರಾಜ್ಞನಾಜ್ಞಾನಿಧಿ ಕಪಿಲಮುನೀಂದ್ರಂ (ಕುಸುಮಾ. ೧-೧೧೯). ೧೪. (?) : [ಚ]ನ್ದ್ರ [ಕುಳಾದ್ಯು]ವತೀಜ[ನ] ಮನೆಯ್ದೆ ಪರ್ಬ್ಬಿದವೆರೆಸುಪದಹನಂ ಗುಣಗಣನಿಳಯರ್ (ಸೌಇಇ. XI-i, ೪೧-೪೩ ; 969). ಪರ್ವು$_1$: ೧. ಓಂಕಾರವಪ್ಪ ಪ್ರಣಮವ ಪರಿಣಾಮಿಸಿ ವ್ಯಾಪಾರದ ಲತೆಯ ಬಳ್ಳಿಯ ಬೇರ ಕಿತ್ತು ಪರ್ವಿ ಪ್ರಕಾರದಿಂದ ಉರ್ವಿಯ ಸುತ್ತಿ ಮುತ್ತಿ . . . ಮಲ್ಲಿಕಾರ್ಜುನನಲ್ಲಿ ಸರ್ವಾಂಗದಲ್ಲಿ ನಿರ್ಲೇಪವಾದುದೇ ಶರಣಸ್ಥಲ (ಮೋಳಿಮಾ. ೧೦೦-೩೯೭). ೪. "ಮಡಲ್ತುದೆಂದು ಪರ್ವಿದುದು" (ಕಶಸಾ. ೫೪-೧೮೬) ; ಉರ್ವಿ ಪರ್ವಿ ಪರಿದತ್ತಾ ಶಾಂತರಕ್ಕಂ ವಿಯದ್ವಲಯಕ್ಕಂ ಕನಕಾದ್ರಿಕಂದರತಟಚ್ಛಾಚ್ಛೋಚ್ಚಲಚ್ಛೀಕರಂ (ಆದಿಪು. ೭-೧೦೦); ಪರ್ವತಮಂ ನರೇಂದ್ರಸುತನೇಱು ವಿರಾಜಿತ ಕೇಶಪಾಶಮಂ ಪರ್ವಿದ ಮೋಹಪಾಶದೊಡನೊರ್ಮೊದಲೊಳ್ ಪಱುದಿಕ್ಕಿದಂ ಜಸಂ ಪರ್ವುವಿನಂ ಜಗತ್ತ್ರಯಮಂ (ಪಂಚಾಮಾ. ೨-೨೩) ; ಸಮುನ್ನತರಾಜಲೀಲೆಯಂ ಬೀಱುತೆ ಪೂರ್ವಪಶ್ಚಿಮಕೆ ಪರ್ವಿದ ಪರ್ವತರಾಜನೊಪ್ಪುಗುಂ (ಗಿರಿಕ. ೧-೫೦) ; ಪದನಖಂಗಳು ಪರ್ವಿಯುರ್ವಿಯೊಳದಱ ಬೇರುಗಳೆಯ್ದೆ (ಬಸಪು. ೩೪-೫). ೬. ಮುಂದೆ ತಮ್ಮ ಪಗೆ ಪರ್ವುದಂತೆ ಪನ್ನಿರ್ಮತ್ತರ್ ಪರ್ವಿದಾಲದ ಮರದ ಮೊದಲ್ಗೆ ವಂದು (ಪಂಪಭಾ. ೨-೩೦ವ). ೮. ಆಕಾಶಮಂಡಳಮಂ ಪರ್ವಿದ ಬೆಳ್ಮುಗಿಲ್ (ಪಂಪಭಾ. ೬-೭೧); ಕಾಲದ ಮರ್ವು ಪರ್ವಿದ ವೊಲಿರ್ದ ತಮಾಲವನಂಗಳಿಂದೆ (ಕಾದಂಪೂ. ೬೯೧); ಪರಿಯೆ ಪರ್ವಿದ ಮಂಜು ರಂಜಿಸುವಂತೆ ತಾವರೆ ನಾಡೆಯುಂ ಕೊರಗಿದಾನನಮಾಗಳಾಗಳದೇನರಲ್ದುದೊ (ಮಲ್ಲಿಪು. ೪-೩೧). ೧೧. "ಪರ್ವಿದುದೆನೆ ಕುಡಿವರಿದುದು" (ಚತುನಿ. ೪೯); ಶಿವಭಕ್ತಿಲತೆ ಪರ್ವು

ವಿನಂ ಧರ್ಮ್ಮಪ್ರಯುಕ್ತರತಿಮುದದಿಂದಂ . . . ದಿವ್ಯಶ್ರೀಪಾದಪದ್ಮಂಗಳ್ಗೆ . . . ಧಾರಾಪೂರ್ವ್ವಕ(ಂ)ಮ್ಮಾಡಿ (ಸೌಇಇ. IX-1, ೧೫೩-೫೨ ; 1083); ಬಸವನ ಪುಣ್ಯಕೀರ್ತಿಲತೆ ಬೇರ್ವರಿಯಿತ್ತುರಗೇಂದ್ರಲೋಕದೊಳ್ ದೆಸೆಗಳನಗ್ಗಳಂ ಮುಸುಕಿ ಪರ್ವಿದುದಾಗಳ್ ಮರ್ತ್ಯಲೋಕದೊಳ್ (ಬಸರ.೧೨-೧); ಭಕ್ತಿಲತೆ ಪಲ್ಲವಿಸಿ ಪರ್ವಿ ಮಡಲಿಡೆ (ಪದ್ಮರಾ.೨-೬); ತಡಂ ಬಡೆದಳ್ ನೀಹಾರಮಹೀಧರಮಂ ಪರ್ವಿದ ಶೃಂಗಾರಮರುಲ್ಲತೆಗೆ (ಉದ್ಭದೇ. ೪-೪೪). ೧೩. ಫಳಭಾರದಿನುರ್ವಿಗಗುರ್ವ್ವ ಪರ್ವೆ ತಳ್ತೆಱಗಿದ ಬಾಟಿಪಣ್ಗೊನೆಗಳಿಂ (ಸುಕುಮಾ. ೯-೪೭); ಶಿವನ ಭಕ್ತರ್ಬರಲು ಸಂತಸಂ ಪರ್ವಿ ಪುಳಕಂಗಳೇಳುತ್ತಿರಲು (ಇಹರ. ದೇ. ೨೯-೧೪); ಹರನಿತ್ತಾಯುಷ ಮಂತು ಪರ್ವಿರಲುಂ . . . ನೂರ್ವತ್ಸರಂ ಧಾತ್ರಿಯಂ ಪೊರೆದು(ಉದ್ಭಟ. ೧೨-೨೫); ಪರ್ವಿದ ಗರ್ವದಿನುರ್ವಿ . . . ಸಾಗಿದಂ (ಚಿಕವಿ. ೨-೨೦). ೧೫. ವಿಶಾಲವಾಗು ; ವಿಸ್ತಾರವಾಗು : ಪೊಳೆವ ದಾಡೆಗಳ ಕೆಂಗಣ್ಣ ಪರ್ವಿದೊಡಲೊಳು ಪೊದಱುಗೊಂಡಿರ್ದ ವಜ್ರರೋಮದ . . . ಎಕ್ಕಲ ನಿರ್ದುದೊಂದೆಡೆಯೊಳು (ಸೌಂದಪು.೧೮-೩೦). ೧೬. ಉಬ್ಬು ; ಹಿಗ್ಗು : ಕುಣಿವುತಂ ಕುಕಿಲಿಱುವುತಂ ಪರ್ವಿ ಕೊರ್ವುತಂ ತ್ರಿಣಯನನ ಬೆಸನನಾಂ ಪಡೆದೆನೆನುತುರ್ವುತಂ (ಬಸರ. ೧-೩೭); ಪಾರ್ವತಿಯಂ ಹರ್ಷಮೇಱಿ ಬಿಜಯಂಗೆಯ್ಸುತ್ತುರ್ವುತೆ ಕೊರ್ವುತೆ ಪರ್ವುತೆ[ಪಾಠಾಂ.ನಲವಿಂ] ಪರ್ವತ ರಾಜಂ ಪುರಕ್ಕೆ ತಿರುಗಿದಂ (ಗಿರಿಕ. ೩-೧೧೨). **ಹಂಬು₁** : ೧೧. ಮನದೊಳು ಚಿಂತಾಲತೆಯದು ಹಂಬುತ (ರತ್ನಾಕ. ೨೬); ಹೆಬ್ಬಳ್ಳಿ ಹಂಬುವ ತೆರದಿ ಹೆಮ್ಮರನ ಮೆಯ್ಗೆ ಕಲ್ಪದ್ರುಮದ ಗಾತ್ರಮಂ ತನ್ನ ನೀಳ್ದೀರ್ಯೆದುಸೊಂಡಿಲ್ಗಳಿಂ ಸುತ್ತಿ (ತ್ರೀರಾಮಾ. ೪೯-೫೭೧); ಲಾವಣ್ಯರಸ ಗಂಗೆಯು ಅಗ್ನಿ-ವರುಣದಿಕ್ಕಿನಲ್ಲಿ ಹಂಬಿ ನಿಂತಿರುವಳು (ಜಯಂತ. ೧೪೮). **ಹಬ್ಬು₁** : ೧. ಕಡೆದು ಬೇಯಿಸಿ ಕಲ್ಲುವೊಲೆ ಕಿಚ್ಚುಗಳ್ ದಣಿಯೆ ಸಡಗರದ ತಿನಿಸುಣಿಸು ಹಬ್ಬುತಿದೆ ಕಂಪು (ಕಾಲೂರ. ೭೧-೧೨೬). ೨. ಬೀದಿಗಲಹದ ಕದಡು ಬೀಡಿನಲ್ಲೆದೆ ಹಬ್ಬಿತು (ಕುಪ್ಯಾಅ. ೮-೨); ಸದ್ಧರ್ಮಿಗಳು ಭರ್ವುಶರ್ಮರನ್ನು ಕೊಲೆ ಮಾಡಲು ನಿಶ್ಚಯಿಸಿದ್ದಾರೆಂಬ ಸುದ್ದಿಯೂ ನಗರದಲ್ಲಿ ಹಬ್ಬಿತ್ತು (ಬಾಣಅ. ೩೯೪). ೪. ಹಬ್ಬಿದಾಲ ತಮಾಲತರುಗಳ ಮೊಬ್ಬುಗಳ ಹೆಮ್ಮೆಳೆಯ . . . ಕಾಂತಾರದೊಳಗಿವರಬ್ಬರಿಸುತ್ತೆದಿದರು (ತೊರರಾ. ೩-೧-೬); ಮಲೆಯ ಬೀಡಿನೆದೆಯ ಮೇಲೆ ದಟ್ಟಗಾಡು ಹಬ್ಬಿರೆ (ಅನಿಕೇ. ೪೨-೬). ೮. ವೀರಸೇನಾಪತಿಯ ಸನ್ನೆಗೆ ಭೂರಿಬಲ ಹಬ್ಬಿದುದು (ಕುಪ್ಯಾಭೀ. ೮-೧೧); ಹೊಗೆ ಚಡಾಳಿಸಿ ಹಬ್ಬಿತಂಬರವ (ಕೌತಿರಾ. ೨೨-೩೫); ಕೋಂಟೆಯನು ತಡವಿನ್ನೇಕೆಯೆಂದು ಹಬ್ಬುತಿರ್ದುದರಿವಾಹಿನಿ (ಸಮ್ಯಕೌ. ೮-೫೪); ಹೊನ್ನಿನುರಿ ಹೊಮ್ಮಿ, ತಣ್ಣಗೆ ಹಬ್ಬಿ . . . ಹೊನ್ನ ಸರಿ ಪ್ರವಹಿಸಿತು (ಚಿತ್ರಾಂಗ. ೨೦-೫೫೫). ೧೧. ಶಿವನ ನೇಹಂ ಮನದೊಳಂಕುರಿಸಿದರ್ಕೆಲರು ಹರಪೂಜೆ ಹಸ್ತದೊಳು ಹಬ್ಬಿ ಬೆಳೆದರ್ಕೆಲರು (ತಿರುರ.ದೇ. ೧೪-೧೯); ಸಭ್ಯತಾಲತೆ ಹೂತು ಹಸರಿಸಿ ಹಬ್ಬಿ ಫಲವಾದಂತೆ ಕಾಯವ ನಿಬ್ಬರದಲೀಡಾಡಿದಳು ಹರಿಪದಪಯೋಜದಲಿ(ಕುಪ್ಯಾಅ.೧೬-೩೪); ಮನಕೆ ಬಾರದ ಹೆಣ್ಣು ಮನೆಗೆ ಹಬ್ಬಿದ ಬಳ್ಳಿ ಗುಣವಿಲ್ಲದ ಮನುಜಸಂಗ ಸಮವೊ (ಪುರಂದ. ೧-೭೮-೫); ಬಳ್ಳಿಯನ್ನು ತಡಕೆಗಳ ಅಥವಾ ಕಂಭಗಳ ಮೇಲೆ ಹಬ್ಬಲು ಬಿಡಬಹುದು (ಅಡುಸೌ. ೧೨೯). ೧೬. ಹಬ್ಬಿ ಹಾರೈಸಿ ತೇರೈಸಿ ತೆಕ್ಕನೆ ತೀವಿ . . . ಸಂತೈಸಿಕೊಳಲಾಱದಲ್ಲಿ ಪರಿಪರಿದಾಡಿ (ಬಸರ. ೯-೨೭). ೧೭. ಪ್ರಕಟವಾಗು ; ಗೋಚರಿಸು : ತನ್ನಾಳ್ದ ಡೇವನ ಮಾರಪಿತ ಬಾಯೆನಲು ಹಬ್ಬಿದನಾಗ ಕಂಭದಲಿ (ಸಂಭಪ. ೮-೭೭). **ಹರಗು₂** : ೧. ಹಟ್ಟಿಗೆ ಸೊಪ್ಪನ್ನು ಹರಗುವಂತೆ ಆ ಎಲೆಗಳನ್ನು ತಂದು . . . ದಾರಿಯಲ್ಲಿ ಹಾಕಿದನು (ಈಕಥೆ. ೧೭); ಗೊಬ್ಬರ ಹರಗುವುದು ಬೇಲಿ ಕಟ್ಟುವುದು ಒಡ್ಡುಹಾಕುವುದು (ಮಲೆಮ. ೭೨೭); **ಹರವು₁** : ೨. ಮೇದಾರ ಕೇತಯ್ಯ ಹೋದಿರುಳು ನೀಗಿದುದು ಚೋದ್ಯೆಂದು ಸುದ್ದಿ ಮಂಟಪಕೆ ಹರವಿದನು (ಕನ್ನಜಾ. ೨೬೯). ೩. ಅಲ್ಲಲ್ಲಿ ಉರುಟು ಉರುಟು ಬೆಣಚುಕಲ್ಲುಗಳು ಹರವಿ ಬಿದ್ದಿದ್ದವು(ಬೆಟ್ಟಜೀ.೧೩೮); ಸಿಗರೇಟನ ಬೂದಿ . . . ಟೇಬಲ್ಲಿನ ಆಸು-ಪಾಸು ರಂದಿ ಹರವಿದ್ದವು (ದೀಪಹ. II, ೨೯೭). ೯. ಚಾವಣನು ನಕ್ಷೆಗಳನ್ನು ಹರವಿ ತಂದೆಯ ಮುಂದೆ ಇಟ್ಟನು (ಸವತಿ. ೪೪); ಈ ಬಣ್ಣದ ಆಟಿಕೆಗಳನ್ನು ಎನ್ನ ಹಾದಿಯಲಿ ಹರವಬೇಡ (ಅಂತರಾ. ೨೮) ; ಮೀನಿನ ರಾಶಿಯನ್ನೇ ದಿನ ಸಂಜೆ ಮನೆಗೆ ತರುತ್ತಿದ್ದರು. ತಂದುದನ್ನು ಮರಳ ಮೇಲೆ ಹರವಿ ಒಣಗಿಸಿ ಮಾರುತ್ತಿದ್ದರು (ಮುಂಗಾಮು.೬೮). ೧೫. ಇವಳ ಟೊಂಕವು ಅಷ್ಟೊಂದು ಹೇಡಿಯೆ? ಮುಖವನ್ನು ನೋಡಿಯೆ ತೀರುವೆನೆಂಬ ಹೆಮ್ಮೆಯಿಂದ ಹರವಿ ನಿಂತಿದೆ (ವೈದ್ಯರಾ. ೪೮). ೧೮. ವ್ಯಕ್ತಪಡಿಸು ; ಪ್ರಕಟಗೊಳಿಸು : ರುಕ್ಮಿಣಿ ಬೆಳಗಿನಿಂದ ಮನಸ್ಸನ್ನು ಕೊರೆಯುತ್ತಿದ್ದ ಚಿಂತೆಯನ್ನು ಪುಟ್ಟಣ್ಣನ ಎದುರು ಹರವಿದಳು (ನಿರಾತೆ. ೧೧೪). **ಹರಹು₁** : ೧. ಶಿವಭಕ್ತಿಯ ಧ್ವಜವನೆತ್ತಿಸಿ ಮರ್ತ್ಯಲೋಕದೊಳಗೆ ಹರಹಿದ ಭೇದವ ಭೇದಿಸಿ ನೋಡಿ ಆನು ಅಱಿದೆ (ಅವಚಂ.೨೩೧-೧೦೪೭); ಪಚ್ಚೆಗರ್ಪುರದ ಹಳಿಯನೊಡೆದಾ ಧೂಳಿಯಂ ಹರಹಿ (ಪದ್ಮರಾ. ೮-೯೨); ಹರಹಿದ ಹಸಿಯ ತೊಗಲಿನ . . . ಮೀನಂಗಡಿಯಲ್ಲೆತಂದ (ಕುಪ್ಯಾಅ.೧೫-೮); ಅಂಕುರವಡೆದ ಪೂಗಿಡು ವೃಕ್ಷಲತೆವೇರ್ಗೆ ಬೆಂಕಿಯ ಹರಹಿದಂತಾಯ್ತು (ಮೋಹತ. ೨೮-೨೦); ಆಡುತಿಹ ಗರಿಗಳನು ದೆಸೆದೆಸೆಗೆ ಹರಹುತ್ತ ನಿಂತ ತೆಂಗಿನ ಮೇಲೆ ಹರಿವುದೆನ್ನ ಬಗೆ(ಮಲೆದೇ. ೪೨-೩). ೨. ಉರಿಗಣ್ಣಿನಿಂದುರುಪುವ ಶಕ್ತಿಯೀಶ್ವರ ಗಿರುತಿರ್ದು ಸಕಲಬಲವನು ನೆರಪಿ ಯುದ್ಧವ ಮಾಡಿದನೆಂಬ ಮಾತನು ಹರಹಬಹುದೆ ಧರೆಯೊಳಗೆ (ತ್ರಿಪುಸಾಂ. ೩-೩೦); ಇರುಳು ಬೇಹಿನ ಚರರು ಪಾರ್ಥನ ನಿರುಪಮಿತ ಗಾಢಪ್ರತಿಜ್ಞಾಚರಿತವನು ಕೌರವನ ಸಭೆಯಲಿ ತಂದು ಹರಹಿದರು (ಕುಪ್ಯಾದ್ರೋ. ೮-೫೦); ಅಕಂಪನ ಮರಣವಾರ್ತೆಯ ನಸುರಚಕ್ರೇಶ್ವರನ ಸಭೆಯಲಿ ಹರಹಿದರು ಹರಿಕಾಜರು (ತೊರರಾ. ೬-೧೯-೧). ೩. ಮೈಗಳ ಕಡಿದು ಹರಹಿದಡೆ ಬಿಡೆನು ಬಿಡೆ ನಿಮ್ಮ ಚರಣವ (ಸಿದ್ಧವ. ಕ. ೧೮೯-೬೩೦); ಮುಱಿದಿಕ್ಕುಗೆ ಮಾರಿ ಭೈರವಂ ಹರಹುಗೆ ಮೇಳೆಯಂ ಮುಱಿಗೆ (ಲೀಲಾವ. ೨-೧೦೬); ಭಾರ್ಗವರಾಮನವರನು ಪರಶುಹತಿಯಿಂ ಕಡಿದು ಸೇನೆಯ ಹರಹಿದನು ಕಾಲಂಗೆ ಹೊಸತಿನ ಬೋನವೆಸೆವಂತೆ (ಸಂಭಪ. ೨೬-೧೦೬); ಕಾಗೆ ಹದ್ದಿಗೆ ಹರಹುವೆನು ಕಡಿದೀ ಚತುರ್ಬಲವ (ತೊರರಾ.೨-೬-೧೯); ಮಾರಾರಿಯೊಡನೆ ಕಾದುವೆನು ನರನ ಬೇರ ಕಿತ್ತು ಹರಹುವೆನು (ಪಾಂಡಚ. ೭೪-೨೦). ೪. ವಿಮಲಾಶ್ರಮದ ವಿಪಿನೋಪಕಂಠದಲಿ ಹರಹಿದವು ಗುಡಿ (ಕುಪ್ಯಾಅ. ೨೨-೬); ರಾಜಿಯ ರೂಮಿನ ಕಿಟಕಿಯಿಂದ ಬೆಳದಿಂಗಳು ಮಂಚದ ಮೇಲೆ ಹರಹಿತ್ತು (ಭೀಮಕಾ. ೧೮೮). ೭. ಧರಣಿಪತಿ ಹರಹಿದನು ನಿಜತನುವನಾ ಮುನಿಯ ಚರಣಸರಸಿಜದೆಡೆಯೊಳು (ಹಡಕಾ. ೫-೬೯); ಅವಯವವನವನಿಯೊಳು ಹರಹಿದಂ ಸೌಂದರಂ (ಸೌಂದಪು. ೧೭-೭೧) ; ನಿಱಿಗುರುಳಬಲೆ ನಿನ್ನಯ ದಿವ್ಯದೇಹವ ಬಱಿನೆಲದೆಡೆಯಲ್ಲಿ ಹರಹಿ . . . ನಾಗರಮಱಿಯಂತೆ ಹೊರಳಬೇಡ (ಮೋಹತ. ೩೩-೪೮). ೧೯. ಹಾಯಿಸು ; ಹರಿಯುವಂತೆ ಮಾಡು : ಪಾತಾಳದ ಉದಕವ ತಂದು ಪಾತೆಗೆ ಹರಹಿದ ತೆಱನರತೆ (ಮೋಳಿಮಾ. ೧೦೪-೪೧೫). ೨೦. ಓಡಿಸು ; ದಬ್ಬು ; ನೂಕು : ಗಾಳಿಸು ಗೆಲ್ವನಂ ಹರಹು ಹೂಜೆಗನಂ (ಲೀಲಾವ.೨-೧೦೭). **ಹರುಹು₁** : ೧೫. ಹರುಹಲಿರುವೆದೆ ಬರಿದೊ ಬರಿದು (ಉಯ್ಯಾಲೆ. ೧೨-೭). **ಹರ್ಬು** : ೪. "ಅಲತೀತಿ ಹರ್ಬಿದಪುದೆಂಬುದು"(ಕಾಶಕೃ.೪೭). **ಹರ್ವು** : ೪ ಹುವ್ವಿನ ಜಾ[illegible] ವಿಶಿಷ್ಟರ ಹರ್ವ್ವಿದ ಬಡತನದ ಕೊರ್ವ್ವನುಡುಗಿಸುಂ (ಎಇ. V, ೧೭-[illegible] ; 1142).

ಹಬ್ಬಿ ಹರಡು—ಹರಡಿಕೊಳ್ಳು ; ವ್ಯಾಪಿಸು : ಹಬ್ಬಿ ಹರಡಿದೆ ತೋಟ (ನೆಲಮು. ೨೨-೧೭); ಈಗ ಸುಮಾರು ಮೂವತ್ತು ನಲವತ್ತು ವರ್ಷಗಳಿಂದಲೂ ನಮ್ಮ ಸಾಹಿತ್ಯ ನಾನಾ ಶಾಖೆಗಳಲ್ಲಿ ಮುಂಬರಿದು ಹಬ್ಬಿ ಹರಡುತ್ತಿದೆ (ಬಂಕಿಮ. IX, ಮುನ್ನುಡಿ). ಹರಹಿಕೊಳ್ಳು—೧. ಹರಡಿಕೊಳ್ಳುವಂತೆ ಮಾಡು ; ಹರವು : ಹದನಾಗಿ ಕಾಯ್ದ ಹಾಲಿನ ಗಟ್ಟಿಕೆನೆ ತೆಗೆವುತದನೊಂದು . . . ತಳಿಗೆಯೊಳಗೆ ಹರಹಿಕೊಂಡು (ಸೂಪಶಾ. ೧-೫೯). ೨. ವ್ಯಾಪಕವಾಗು ; ವ್ಯಾಪಿಸು ; ಹಬ್ಬು : ತೂರ್ಯತೂರ್ಯಾತೀತವೆಂಬೆರಡು ಸರಸತರವಹ ಬಲೆಯ ಬೀಸಿಯೆ ಹರಹಿಕೊಂಡಿಹುದೀ ಮನಸ್ಸು (ಪ್ರಭುಲೀ. ೨೪-೯); ಇರಲಿ ಮೇಣ್ ದೂರದಲಿ ಹತ್ತಿರೆಯಿರಲಿ ತನ್ನವರೆಂದರತ್ತಲೆ ಹರಹಿ ಕೊಂಬನು ಕೃಷ್ಣನು (ಕುವ್ಯಾದ್ರೋ. ೨-೬೪). ೩. ಪ್ರದರ್ಶಿಸು ; ತೋರ್ಪಡಿಸಿಕೊಳ್ಳು : ಅರಿಯದ ವೈರಾಗ್ಯ ಹರಹಿಕೊಂಬುದಕಿಂತ ಅರಿತು ಮೊರೆಹೊಗಿರೋ ಗೋಪಾಲವಿಠಲನ್ನ (ಜಗದಾ. ೬೯).

[ಪರೆ₁+—ಪ್ಪು₁./ತಮಿ. ಪರಪ್ಪು, ಪರಮ್ಪು, ಪರವು, ಪರೆಮ್ಪು ; ಮಲ. ಪರವು ; ತುಳು. ಪರಪು, ಪರ್ಬು, ಪರಂಬು ; ತೆಲು. ಪರವು, ಪರ್ವು, ಪರುವು, ಪರಗು, ಪಱಪು, ಪ್ರಬ್ಬು, ಪಂಬು, ಪಮ್ಮು ; ಪರ್ಜಿ. ಪರ್ಪ್ ; ಗೊಂಡಿ. ಪರ್‌ಹಾನಾ ; ಕುಇ. ಪ್ರಹ್ಪ]

ಪರಪ್ಪು₂, ಪರೆಪ್ಪು₂, ಪರ್ಬು₂, ಪರ್ವು₂, ಹಂಬು₂, ಹಬ್ಬು₂, ಹರವು₂, ಹರಹು₂, ಹರಿಹು₁, ಹರುಹು₂, ಹೊಂಬು (ನಾ). ೧. ಹರಡಿರುವುದು ; ವಿಸ್ತಾರ ; ವೈಶಾಲ್ಯ : ಜಲದದ ನೆಟಲುಂ ಪರಪುಂ [ಪಾಠಾಂ. ಪರಮಂ] . . . ನೆಲಸವು ಚಲಂಗಳಾದಂ ವಿಲಾಸಿನೀಜನದ ನಲ್ಮೆಯುಂ ಸಂಗಮಮುಂ (ಕವಿರಾ. ೬-೯೭); ಪರಪಿನ ನೀಳದ ಕಡೆಯುಂ ಮರುಳಂ ತವೆ ನೋಡಲಾಱದಂಬರತಳಮಂ ಕರಿದೆಂಬಂತಿರೆ (ಪಂಪಭಾ. ೬-೨೦); ನಿರ್ಮಲಿನಮಪ್ಪ ಪರಪಿನ ಪೆರ್ಮಡುಗಳ ತೊಜೆಯ . . . ಸಂಚಲಿಸುವ ನೀರ್ಮಾನಸಲಹರಿ ಸರ್ವದೋಷಾಪಹರಂ (ಅಶ್ವಶಾ. ೬-೬೦); ಆ ಶೈಲದುದ್ದಮೊಂದೇ ಸಾಸಿರಂ ಪರಪದಯ್ನೂಱುಯೋಜನಂ (ಚಿಬಪು. ೧೫-೧೭); ಹೆಲಸಿನಲಿ ಬಾಳ್ವಳೊಬ್ಬಳು : ಒಬ್ಬಳೇಷಿಯ ಪರಪಿನೀ ಭೂಮಿಯಲಿ (ಪಾರಸಿ. ೯-೨೦೫). ೨. ವಿಸ್ತಾರವಾದ ಬಯಲು,—ಪ್ರದೇಶ : ಪಸಲೆಯೊಳ್ ಪಸುರೇಱೆ ಪರಪಿನೊಳ್ ಪೊರೆಯೇಱೆ . . . ಪರಿವ ಬರಿವೊನಲೆಸೆದುವೋರೊಂದು ತಾಣದೊಳ್ (ಅನಂಪು. ೯-೧೬ ರಗಳೆ). **ಪರೆಪ್ಪು₂** : ೧. ಪರೆಪನೆ ತೋಱಿ ಪೋಪ ಅಲದಂತೆ ಬಳಸನೆ ಸುತ್ತಿ ಪೋಗದೆ (ಧರ್ಮಾಮೃ. ೧೪-೪); ಏಟಿಲೆವಾಟೆಯ ಪರೆಪಿನಿಂದತೋಕೆಯ ಪೊದಱಿಂ . . . ತೊಲಗದು ಬನದೊಳಗೆ ಬಳೆದ ಕಟ್ಟಲೆ ಪಗಲುಂ (ಕಾವ್ಯಾವ. ೩೨೦). ೩. ಹರಡುವಿಕೆ; ಹಬ್ಬುವಿಕೆ; ಪ್ರಸರ: ಮೊದಲೊಳ್ ನೀಳ್ದು ಪೊದಟ್ಟು ಪರ್ವಿ ಪರೆಪಂ [ಪಾಠಾಂ. ಪದೆಪಂ, ಪರಪಂ] ಕೈಕೊಂಡು. . . ಕೊಂದುದು ಕೃಷ್ಣಾಗರುಧೂಪಧೂಮನಿವಹಂ ಕೃಷ್ಣೋರಗಂ ಕೊಲ್ವ ಪೋಲ್ (ಅದಿಪು. ೫-೨೩) ; ಸರಿಗಮಪಧನಿಗಳ ನೇಮ ತಪ್ಪದೆ ಹರಣ ಭರಣದ ಪರೆಪು [ಪಾಠಾಂ. ಹೆಂಪು] ತಿರುಪುಗಳ . . . ರಚನೆಯಲ್ಲಿ ಸನಾಮನೆನಿಸುವನವನೆ ಗಾಯಕನು (ಕುವ್ಯಾಉ. ೩-೯೫). **ಪರ್ಬು₂** : ೩. ಪುರ್ಬುಗಳೋ . . . ಪುಣ್ಯಲತಾಪರ್ಬುಗಳೋ ಮದನವಿಭ್ರಮದ ಕೊರ್ಬುಗಳೋ (ಗಿರಿಕ. ೧೦-೪೯) ; ನಯನಾಂತು ಗಗನಕೆ ತಟಲ್ಲತೆಯ ಪರ್ಬಂ ಪಡೆಯಲು . . . ಬರುತಿರ್ದರಖಿಳಸ್ತ್ರೀಯರು (ಚಿಬಪು. ೫-೧೨). ೪. ಹರಿಯುವಿಕೆ ; ಪ್ರವಹಿಸುವಿಕೆ : ಲತಾಮಂಟಪಸ್ಥಾನದಿಂ ಪರಿಕಾಲ ಪರ್ಬಿಂ ಪೂದೋಂಟದ ಕೊರ್ಬಿಂ (ಗಿರಿಕ. ೨-೭೧ ವ) ; ನಾನಾ ಪ್ರಕಾರದಿಂದೆ ಒತ್ತಿ ಭೋರ್ಗರೆವ ರವದುರ್ಬಿನಿಂ ಪರ್ಬಿನಿಂ ಹತ್ತೊಂದು ಗೂಡಿ ವಿಸ್ತೀರ್ಣದಿಂ ಪೂರ್ಣದಿಂ ತುತ್ತಿದುದು . . . ತಜ್ಜಲಮದೇನೆಂಬೆನು (ಚಿಬಪು. ೪೬-೨೯). ೫. ಹೆಚ್ಚಳ ; ಆಧಿಕ್ಯ : ಒಡರ್ವ ಮೊಲೆಗಳ ಕೊರ್ಬು ಭವನ ಹರುಷದ ಪರ್ಬು . . . ನುಡಿಯ ಮಾತಿನ ಮುದ್ದು ಶಿವನನೊಲಿಸುವ ಮದ್ದು ತಾನೆನಲ್ ಶಿವೆ ಮೆಱೆದಳು (ಚಿಬಪು. ೩೭-೨೨). **ಪರ್ವು₂** : ೩. ಕ್ಷಿತಿಚಕ್ರಂ ತನ್ನ ಪರ್ವಿಂ ತೆರೆಮಸಗಿದ ವಾರಾಸಿಯಂ ಪೋಲ್ವಿನಂ . . . ನೆರೆದುದು . . . ದಿವ್ಯಾಶ್ವಸೈನ್ಯಂ (ಜಗವಿ. ೧೫-೬೫) ; ಎಲೆಯ ಪರ್ವಿಂ ಸುರ್ವುಗೊಂಡು ಬಾಟ್ವೇಲಿಯಾಗಿ ಬಳಸಿದ ಕೇತಕೀಪಂಕ್ತಿಗಳುಂ (ಚಂದ್ರಪು. ೧-೧೦೫ ವ). ೫. ಸಿಂಧುರಘಟಾಸಂದೋಹದಿಂ ವಾಜಿವರ್ಗದ ಪರ್ವಿಂ . . . ಸೇನಾಚಕ್ರಮೇನೊಪ್ಪಿತೋ (ಪುಷ್ಪಪು. ೧೪-೪೬). **ಹಂಬು₂** : ೬. ಬಳ್ಳಿ ; ಲತೆ : "ಚಾರುವಲ್ಲಿ ಯಲೆಯ ಹಂಬು" (ಅಳಾನಿ. ೧೦-೨೧) ; ಓಡ ಕುದುರೆಯ ಮೇಲೆ ಮಸಿಯ ಹಲ್ಲಣವ ಹಾಕಿ ಬಸಲೆಯ ಹಂಬ ಬಾಯಿಗೆ ಕಟ್ಟಿ (ಕೋಲಶಾಂ. ೨೪-೧೦) ; ಹಂಬು ಹರಿದುರುಳ್ವ ನರಗಿರದೆ ತಿಂಥಿಣಿಯ ಪೆರ್ಗೊಂಬು ಕೈಬಸಮಾದೊಲು (ಮದೇಪು. ೩೦-೯) ; ಅಂಬುಜ ಅಡಕೆಯ ಬನದಿಂದ ಹಂಬು ಹಬ್ಬಿದ ನಾಗವಲ್ಲಿ (ಶರಲೀ. ೫೭೨-೮) ; ಎಲ್ಲಿಯೂ ಗೆಣಸಿನ ಹಂಬುಗಳು ಕಾಣುವುದಿಲ್ಲ (ಕುಡಿಕೂ. ೧೬೯). ೭. ವೀಳ್ಯದೆಲೆಯ ಬಳ್ಳಿ : ಹಂಬಿನ ತುಂಡುಗಳನ್ನು ಗೊಬ್ಬರ ಹಾಕಿ ಸರಿಮಾಡಿರುವ ಗುಣಿಗಳಲ್ಲಿ ನೆಟ್ಟು ಹಂಬು ಹಬ್ಬುವುದಕ್ಕೆ ಅನುಕೂಲವಾದ ಗಿಡಗಳನ್ನು ಪಕ್ಕದಲ್ಲಿ ಬೆಳಸಬೇಕು (ವ್ಯವಸು. ೫೫) ; ಈ ಹಂಬನ್ನ ಹೇಗೆ ಬೆಳೆಸಿದ್ದೇನೆ. ಈ ಹಂಬಿನಲ್ಲಿ ಈ ವರುಷ ಮುವ್ವತ್ತು ಕಟ್ಟು ಎಲೆ ತೆಗೀತೀನಿ (ತಿವರಾ. ೭). ೮. (ನೇಣು ಹಾಕುವ) ಹಗ್ಗ ; ಪಾಶ : ದೊಂಬಿಸಾಕ್ಷಿ ಹಂಬಿಗೆ ಕಾರಣ (ಗಾದೆ). **ಹಬ್ಬು₂** : ೯. ನೀಳ ; ಉದ್ದ : ಬೆಕ್ಕಿನ ಮೈ ಹಬ್ಬು (ಮುಂಬಯಿ. ಕಿ. ೩-೩೦). **ಹರವು₂** : ೧. ಜಂಗಮದ ಹರಿದ ಹರವು ಜಂಗಮದ ನಿಂದ ನಿಲವು (ಬಸವ. ೪೨೮) ; ಅವನ ಹರವನ್ನ ಹಣೆಯೂ ಉದ್ದನ್ನ ಮೂಗೂ ಎದ್ದು ಕಾಣಿಸುತ್ತಿರುವವು (ಮುಂಬಯಿ. ೫-೩೦೪) ; ಆದಿಪಂಪನಿಂದ ಬಸವೇಶ್ವರನ ವರೆಗೆ ಈ ಯುಗದ ಹರವನ್ನು ಇಟ್ಟುಕೊಂಡಿದೆ (ಕಸಾಚ. ೭೭). ೩. ಕೇರಿಕೇರಿಯ ಬೀದಿಗಳ ಘನಸಾರಧೂಳಿಯ ಹರವುಗಳ ಪನ್ನೀರ ಚಳೆಯದೊಳೆಸೆದುದಾ ಪುರವು (ಜೀವಂಚ. ೭-೨೨). ೫. ನೆಗೆದಱಿಚಿ ಬೀಳುವ ಕಪಿವೆಣಂಗಳ ಹರವಿ [ಪಾಠಾಂ. ಬುಬಿ]ನಲಿ ರೌಕುಳದ ಮಯವಾಯ್ತವನಿ ರಣಮಯದ (ತೊರರಾ. ೬-೩೫-೪೭). ೧೦. ಭೂಮಿಯ ಒಂದು ವ್ಯಾಪ್ತಿ ; ಕ್ಷೇತ್ರ ; ಪ್ರದೇಶ : ಅರಸ ಕೇಳೀ ಹರವು ಚಂಪಾಪುರವಿದಱ ಪತಿ ವಿಮಲವಾಹನ (ಸಾಳ್ವಭಾ. ೧೭-೨); ಈ ಸಿದ್ಧರು ನಾಗತೇರ ಹರವಿನಲ್ಲಿಯೂ ಕಿನ್ನರಿಕಲ್ಲಿನಲ್ಲಿಯೂ . . . ಮಲಗಿರುತಾ ಯೂರೂ ಕಾಣದ ಹಾಗೆ ಮಾಯವಾದರಂತೆ (ಚಿತ್ರಪಾ. ೧೫); ಎತ್ತರದ ಒಂದು ಹರವು. ಅಲ್ಲಿಂದ ನೆಲ ಇಳಿಜಾರಾಗಿ ತಗ್ಗಿತಗ್ಗಿ ಒಂದು ತಪ್ಪಲಿಗೆ ಮುಟ್ಟಿದೆ (ನಮ್ಮನು. ೨೩೧). ೧೧. ಬಡಾವಣೆ ; ವಿಸ್ತರಣೆ; ಮೊಹಲ್ಲಾ : ನೀನು ಹದಿನಾಲ್ಕು ವರ್ಷದವಳಾಹಾಗ ಚಾಮುಂಡಿ ಹರವಿನಲ್ಲಿ ನಿಮ್ಮ . . . ಹೊಸಮನೆಗೆ ಹೊರಟುಹೋದೆ (ಹೊಸಕ್ಷಿ. ೨); ಇಂಗ್ಲಿಷ್ ಶಬ್ದಗಳ ಸ್ವೀಕರಣದ ನಾಲ್ಕನೆಯ ರೀತಿಯೆಂದರೆ, ಆ ಶಬ್ದಗಳನ್ನು ತದ್ವತ್ತಾಗಿ ಕನ್ನಡದಲ್ಲಿ ಭಾಷಾಂತರಿಸುವುದು . . . Extension ಹರವು, ವಿಸ್ತರಣ, ಬಡಾವಣೆ (ಭಾಷಾಶಾ. ೧೭೬) ; ಬರಿಯ ಹೆಸರಲ್ಲ ಸಿದ್ಧಿಸಾರಿರುವ ಹಿರಿಯ ಸಾಧನದ ಕೇರಿ ! ಚೆಲುವ ಸೂಸುತಿಹ ಹಸುರ ನುಟ್ಟಿರುವ ಹರವಿಗಿತ್ತಿಹರು ಕೋರಿ (ವಿಜದ. ೨೧-೧೦). **ಹರಹು₂** : ೧. ಅಮ್ಮಮ್ಮ ಹರಿನಿಕರ ಹರಹಿನಿಂ[ಪಾಠಾಂ. ಹರುಷದಿಂ]ದೊಪ್ಪಿರಲು (ಬಸರ. ೧-೧೮) ; ಕುರುಬಲದ ಬೆಳವಿಗೆಯ ಬೆಳಸಿನ ಹರಹನೀಕ್ಷಿಸಿ ಸರಳ ಬಿಡಲು (ಕುವ್ಯಾದ್ರೋ. ಓರಿಇ. ಪರಿ. ೨೮೭) ; ಕೊತ್ತಳದ ಹುಲಿಮುಖದ ಹರಹಿನಲೆಸೆದುದಾ ದುರ್ಗ (ತೊರರಾ. ೬-೭-೧೬) ; ಬಡಪಾಯಿ ನದಿ ;

ನಮ್ಮ ಊರಿನ ಸಾಮಾನ್ಯನಿಯ ಪರಿಹೂ ಅದಕ್ಕಿಲ್ಲ (ಅಪೂಪ. ೩೦). ೩. ಅಹವವಿಜಯವಾತೆಯ ಪರಹಿನಲಿ ಹೊರೆಯೇಱಿ ಹೊಂಪುಳಿಯೋದ ರಡಿಗಡಿಗೆ (ಕುವ್ಯಾಭೀ. ೬-೩೪); ಹೊಂಬೆಳಕುಗಳ ಪರಹು [ಪಾತಾಂ. ಹೊಗರು]ಗಳೊ ಸಿಡಿಲಿನ. ಸುಳಿವೊ ಸರಳಬ್ಬರವೊ ತಾನೆನೆ ಮೆಱೆದ ನಿಂದ್ಯಾರಿ (ತೊರಣಾ. ೬-೩೫-೪೩). ೪. ಪೂವಳೆಯು ಪೂರದ ಪರಹಿನಲಿ ಜನ ಮುಳುಗಿತದ್ಭುತರಭಸವಳ್ಕಿಱುದುದು ಜಗತ್ಪ್ರಯವ (ಕುವ್ಯಾಳ. ೧೫-೩೧); ಪರಿಳಟೆದುರವಣೆಗೆ ನಿರಿ ನೆಲ ಸರಿಸವಾದುದು ನದಿನದಂಗಳ ಪರಹು ನಿಂದವು (ತೊರಣಾ. ೪-೯-೯). ೫. ಪರಿಭವಕೆ ಗುಱಿಯಾಗಿ ಹಾಸ್ಯದ ಪರಹಿನಲಿ ಹಳುವಾಗಿ ಪಾಂಡವರರಸನನು ಬೀಳ್ಕೊಂಡು ಹಸ್ತಿನ ಪುರಕೆ ಕೊಜಿವಂಟೆ (ಕುವ್ಯಾಸ. ೧೧-೩೫); ಪರುಷಪುಳಕದ ಪರಹಿನಲಿ ನಿಜಶರಣನನು ಮೈದಡವಿ . . . ತೆಱೆದನು (ತೊರಣಾ. ೬-೧೪-೩೮). ೧೦. ಬ್ರಹ್ಮಾಂಡಮುಧ್ವದೊಳ್ ಐಗೆ ಚಿಲ್ಮನಾಂತರ್ದುದ್ಯೆವಕ್ಕು ಕೋಟಿ ಯೋಜನದ ಪರಹು (ನಂದಿಮಾ. ೩-೩). **ಪರಿಹು**$_1$: ೧೦. ಹಿರಿಯ ಕೆಱೆಯ ಪಡುವಣ ಪ[೦]ಹಿನಲ್ಲಿ ರಾಮನಾಥದೇವರೆ ಭೂಮಿಯಿಂ ಪಡುವಲು (ಕಾಇ. IV, ೧-೧೦೦ ; 1204). **ಪರುಹು**$_2$: ೧. ಅರು ಹಾಗಬೇಕು, ಪರುಹಾಗಬೇಕು ಬಿಳತುದಿಗೆ ಏಳಬೇಕು (ಅರಳು.೩೯-೧೯). ೧೦. ಮಾಯದೇವಗಳಿಗೆ ತೆಂಕಣಹಳ್ಳದ ಪರುಹಿನಲು ತೋಟಸ್ಥಳ (ಸೌಇಇ. IX-11, ೪೪೦-೪೪ ; 1419). **ಪೊಂಬು** : ೩. ಪುನಃ ಓಡಿಬಟ್ಟಾನೆಂದು . . . ಕೈಗಳನ್ನು ಜೋಡಿಸಿ ಹೊಂದಿನಲ್ಲಿ ಕಟ್ಟಿ ತರ ಬೇಕಾಯ್ತು (ಜಂಗಾಳ್ವ. ೬೭).

ಪರವಾಗು = ೧. ವಿಶಾಲವಾಗು ; ವಿಸ್ತಾರವಾಗು ; ಅಗಲವಾಗು : ಇನ್ನೊಂದು ಪರವಾದ ಪರಿವಾಣಮಂ ನೀಂ ಕೊಡೆಂದೆನಲು (ಸುಲ್ಲಡ. ೮-೩೨) ; ಬರಬರುತ್ತಾ ಕಾಲುದಾರಿಯು ಪರವಾಗುತ್ತ ಬಂಡಿಯ ದಾರಿಯಾಯ್ತು ದೊಡ್ಡದಾಯಿತು (ಮೇದಿಮು. ೧೧೪೪) ; ಪರವಾದ ಎಲೆಗಳುಳ್ಳ ದೊಡ್ಡ ದೊಡ್ಡ ಮರಗಳು ಬೆಳೆಯುವವು (ಕಪಶು. ೬-೧೩). ೨. ಅನುಕೂಲವಾಗು : ಪ್ರಥಮಸ್ತಳಸಂಜಾತವಾದ ಹಳಿಕಾಜಿ ಪರವಾಗಿ ಗೌಡುಂಕೆಯಾಗಿ ಅರಮನೆ ತೆಜುಮಾರುಗಳನೂ ಉಂಡಿಗೆಯ ತಿರುಕೊಳ್ಳ ಸಲ್ಲ (ಸೌಇಇ. IX-11, ೪೩೫-೫೬ ; 1408). **ಪರಹಿನ ಡುಣ್ಣ, ಪರಹಿನ ಡುಣ್ಣಗ** = ದೊಡ್ಡ ಜಾತಿಯ ಒಂದು ಬಗೆಯ ಬತ್ತ : ಕೊಡಗು ಮಳಲ ಕಂತೆ ಪರಹಿನ ಡುಣ್ಣಗಳೊಡನೆ . . . ಎಡೆವಿಡದೆಸೆದು ವರ್ತಿಯಲಿ (ಕಂಸವಿ. ೫-೭೦) ; ಈ ಬತ್ತಗಳಲ್ಲಿ ಅನೇಕ ಜಾತಿಯವುಗಳಿದ್ದುವು ; ಅವಾವುವೆಂದರೆ :– ಕಣಿವೆಯ ಸಣ್ಣ . . . ಪರಹಿನ ಡುಣ್ಣಗ, ಬೈರಾವಳಿ (ಕರ್ನಾಜ. ೧೫೪). [<ಪರಪು$_1$/ತಮಿ. ಪರಪ್ಪು, ಪರಮ್ಪು, ಪರಪ್ಪೆ; ತುಳು. ಪರಪು ; ತೆಲು. ಪರಪು, ಪಜಪು]

ಪರಪು, 'ಪರುಪು' ನೋ.

ಪರಪುಟ್ಟ (ನಾ). ೧. ಬೇರೆಯವರ ಪೋಷಣೆಗೆ ಒಳಗಾದವನು : "ಪರಪುಟ್ಟ–ಪರಜಿತ, ಪರಿಷ್ಕಂದ, ಪರಜಾತ, ಪರ್ಯೆಧಿತ" (ನಾಚರಾ. ೬) ; ಜಾತಿಗೋವಳಿತ ರಟ್ಟನ ನೀಂ ಪರಪುಟ್ಟನಾದೆ (ಜಗ. ೧೭-೪೧) ; ನರಸಿಂಗ ಪೊನೆಯೂರು ಕೊಂಡರ್ಕಿಯಿಂ ಪೊರೆದ ಪರಪುಟ್ಟನವನು (ಸೌಂದಪು. ೪-೬೨) ; ಚಂದಿರ ದೋಷಾಕರ ಪರಪುಟ್ಟನು ಕೋಗಿಲೆಯು ತರುಣಿಯ ನೋವನಾನ್ನಾರಿಗಱಿಪುವೆನು (ಜೀಸಂಶಾಂ. ೧೨-೬೯) ; ಪರಪುಟ್ಟನಾಗಿ ಪಟ್ಟಣದ ಬೀದಿಗಳೊಳಗೆ ತಿರುಗುತಿಹ ಬಾಲಕನ ರೂಪವಂ ಕಂಡು ಕರೆ ಕರೆದು (ಜೈಮಿಭಾ. ೨೪-೨೧). ೨. ಕೋಗಿಲೆ : "ಪಡಿಯಜವಕ್ಕಿ. . . ಪರಪುಟ್ಟಂ – ಈ ೫ ಪಿಕಂ" (ಕಪಶಾ.೫೫-೨೦೫) ; ಎಲೆ ಪರಪುಟ್ಟ ಕೇಳ್ (ಅಜಿಪು. ೬-೧೧೨) ; ಸೊರ್ಕಿ ನಿರಂತಂ ಕರೆದತ್ತು ಮಾವಿನೊಳ್ ಪರಪುಟ್ಟಂ (ಗಿರಿಕ.೨-೪೨); ಪರಪುಟ್ಟಧ್ವನಿಯಿಂ . . . ಅವಗಂ ಪಿರಿದೊಪ್ಪಂಬಡೆದಿರ್ಪ ಕೇಳಿವನಮುಂ . . . ಕರಂ ರಂಜಿಕುಂ (ತ್ರಿಪುರಿ. ೨೮-೩೫) ; ಮೊರೆವ ಹುಂದಿಗಳಿಂದೆ ಪರಪುಟ್ಟನಿಂದೆ ಬಿತ್ತರಿಸಿ ಪಾಡಿಸಿ ಪೊಗಳಿಪಂತೆ ಪುರಮುಂ ಬಳಸಿದುಪವನಂ ಕಣ್ಮನಿಸೆದುದು (ಜಬಪು. ೧೧-೩೬).

[<ಸಂ. ಪರಪುಷ್ಟ]

ಪರಪುರುಷ (ನಾ). ೧. ಅನ್ಯಪುರುಷ ; ಪರಕೀಯ ; ಗಂಡನಲ್ಲದವನು : ಪರಪುರುಷಸೇವನಾಕೃತ ಸುರತವಿಕಾರಂಗಳೆಲ್ಲಮುಂ ನಿಜಪತಿಯೊಳ್ ನೆರೆವಾಗಳ್ ಮಱೆಯಲ್ಬಗೆದಿರವದು ನಗಿಸುತ್ತು ಪೀನಪಯೋಧರೆಯೂ (ಕವಿಶಾ. ೬-೧೫೬) ; ಪರಪುರುಷನೆನಿಸ್ಪ ದಿವಾಕರನ ಕರಸ್ಪರ್ಶನಕ್ಕೆ ಸೈರಿಸದೆ (ಕಾದಂಭು. ೧೫೯) ; ಪರಪುರುಷ ಸಮೃಷ್ಟದೆ ಈಜ ಭರಮಂ . . . ಬಿಟ್ಟು ಮುಂದಿವಡೆ ನಿರುತಂ ನೀಂ ಪಾಪ್ಯೆಯೆಂದು ಬಗೆಗಾವಧುವಂ (ಮುದತ್ರಿ. ೮-೬೯) ; ಪರಪುರುಷರ ಮುಖವ ನೋಡದಂತೆ ಮಾಡಾ (ಬಸಪ. ೫೦೧). ೨. ಅತ್ಯಂತ ಶ್ರೇಷ್ಠನಾದವನು; ವಿಷ್ಣು.

[ಪರ$_3$+ಪುರುಷ]

ಪರಪುರುಷಗಮನ (ನಾ). ಅನ್ಯಪುರುಷನ ಸಹವಾಸ : ಪರಪುರುಷ ಗಮನವನುಳ್ಳ ಸ್ತ್ರೀಯರ ನೆರವೆನೆಂಬ ಕಾತರಕ್ಕ . . . ಉರುತರ ಕಡಿಯತಿ ಚಾರ (ದ್ವಾದಶಾ. ೧೧೦-೧೬೪). 'ಪರಸತಿಗಮನ' ಪರಾ.

[ಪರಪುರುಷ+ಗಮನ$_2$]

ಪರಪುಷ್ಟ (ನಾ). ೧. ಅನ್ಯರಿಂದ ಪೋಷಿಸಲ್ಪಟ್ಟುದು : ಪುಳ್ಳ ಪರಪುಷ್ಟ . . . ಎಲ್ಲೆ ಸೊಳ್ಳೆ ! ನನ್ನ ಮಾತು ಕೇಳು (ನಡಿದಾ. III, ೨೦೬೮). ೨. ಕಾಗೆಯಿಂದ ಸಾಕಲ್ಪಟ್ಟುದು ; ಕೋಗಿಲೆ : "ಅನ್ಯಭೃತ, ಪರಪುಷ್ಟ . . . ೬ಳಃ – ಈ ೫ ಕೋಗಿಲೆ" (ಹಲಾಯು. ೪೧-೪೦) ; ಉದ್ಯಾನವನಂ ಮದೋತ್ಕಪರಪುಷ್ಟೋದ್ಯಾಮಕೋಳಾಹಳಂ (ಆದಿಪು. ೫-೨೯) ; ಪಾಪರೂಪನಿದಂ ಪುಗಲ್ವೇಡೆಂಬಂತೆ ಪುಗಿಲ್ಪುಗಿಲೆನುತಿರ್ಪ ಪುಷ್ಟ ಪರಪುಷ್ಟಂಗಳನುಂ (ಪಂಚತಂ. ೧೧೪೪-೪) ; ಪರಿವಾರ ಕಲ್ಪಲತೆ ಪತಿನೀಕ್ಷಣಭ್ರಷ್ಟನುರಮಲ್ಲಿಕಾಲತೆ ವಿದ್ವತ್ಪರಪುಷ್ಟ ಚೂತಲತೆಯೆನೆ ಸಿರಿದೇವಿಗವಲ್ತೆ ಸಾತ್ಯಕ್ಕ ಪರ್ಯಾಯಂಗಳ್ (ಎಳ. XI, ದಾವಣ, ೩೫-೩೩ ; ಸು. 1160).

ಪರಪುಷ್ಟವಾಗು = ಬೇರೆಯವರ ಪೋಷಣೆಗೆ ಒಳಗಾಗು : ಕೇಜ ಮೊಡೆದು ಪರಪುಷ್ಟವಾದ ಗೃಹಮಾಲೆಯಾದ ಹಾಗೆ (ಹೃದಸ. ೫೦-೩).

[ಸಂ.]

ಪರಪುಷ್ಟಿ (ನಾ). ಹೆಣ್ಣು ಕೋಗಿಲೆ : ಎನಗೆ ಪುರಪುಷ್ಟಿಯೆ ಸದಾ ಪರಪುಟ್ಟ[ಪಾತಾಂ. ಟ್ಟ] ದೊರಕುವುದೆ (ಬಸಪು. ೪೫-೪೪).

[<ಸಂ. ಪರಪುಷ್ಟಾ]

ಪರಪೋಷ್ಯ (ನಾ). ಮತ್ತೊಬ್ಬರ ಪೋಷಣೆಯಲ್ಲಿರುವುದು ; ಪರಾವಲಂಬನೆ : ಮಾನಂಗಳೆಲ್ಲಿಪ್ಪುವ್ಯೆ ಪರಪೋಷ್ಯಕ್ಕೊಳಗಾಗಿರಲ್ (ಸುಚಮೋಕ. ೬೫).

[ಪರ$_3$+ಪೋಷ್ಯ]

ಪರಪ್ರಕಾಶ (ನಾ). ೧. ಬೇರೆಯ ಒಂದು ವಸ್ತುವಿನ ಮೂಲಕ ಸ್ಪಷ್ಟವಾಗುವುದು : ಜ್ಞಾನ ಎಂಬ ಪ್ರಕಾಶವುಂಟು. ಆ ಪ್ರಕಾಶಕ್ಕೆ ಪ್ರಕಾಶವು ಬೇಕೇ ಅಥವಾ ಬೇಡವೇ ಎಂಬ ವಿಚಾರವೇ ಸ್ವಯಂಪ್ರಕಾಶ, ಪರಪ್ರಕಾಶವೆಂಬ ವಿವಾದ (ಹಿಂದಸಾ. ೫೩). ೨. ಅಲೌಕಿಕವಾದ ತೇಜಸ್ಸಿನಿಂದ ಕೂಡಿರುವವನು ; ಪರಮಾತ್ಮ : ಪರಿಪೂರ್ಣ ಪರ ಪ್ರಕಾಶನೊಳ್ ಪಶುಪತಿಯೊಳ್ . . . ಇದಿರ್ಪುಕೆಚ್ಚಾಡಿದನೇ (ಶಬಶಂ. ೪-೧೧೯).

[ಪರ$_3$+ಪ್ರಕಾಶ]

ಪರಪ್ರತ್ಯಯ (ನಾ). ೧. ಬೇರೆಯವರ ಅಭಿಪ್ರಾಯ,—ಜ್ಞಾನ : ಯಾರೊ ಮಾಡಿಟ್ಟ ಹಾಡುಗಳನ್ನು ಪರಪ್ರತ್ಯಯ ನೇಯಬುದ್ಧಿಯಾಗಿ ಇದ್ದಂತೆ ಹಾಡುವ ದಾಸ್ಯವೃತ್ತಿಯೂ ಅನನಿಗೆ ಒಪ್ಪದು (ಗಾಳಪ. ೪೩).

೨. [ವ್ಯಾಕ] ಪದದ ಮುಂದೆ ಸೇರಿಸುವ ಪ್ರತ್ಯಯ : ಪ್ರತ್ಯಯಂಗಳಲ್ಲೂ ಅನೇಕ ಬಗೆಗಳುಂಟು. ಪೂರ್ವಪ್ರತ್ಯಯ (ಪ್ರಿಫಿಕ್ಸ್) ಪರಪ್ರತ್ಯಯ (ಸಫಿಕ್ಸ್) ಮತ್ತು ಅಂತಃಪ್ರತ್ಯಯ (ಇನ್‌ಫಿಕ್ಸ್) (ಕವಿಕೋ. I, ೬೮೫). [ಪರ್ಯ + ಪ್ರತ್ಯಯ]

ಪರಪ್ರೇಷಿತ (ನಾ). ಬೇರೆಯವರ ಸೇವೆಯಲ್ಲಿರುವವನು ; ಸೇವಕ; ಭೃತ್ಯ : ಉಡುರಾಜಂ ನಿಲೆ ಲಗ್ನದೊಳ್ ಕಿವುಡನುನ್ಮತ್ತಂ ಪರಪ್ರೇಷಿತಂ (ಜಾತಕಿ. ೧೮-೬). [ಪರ್ಯ + ಪ್ರೇಷಿತ]

ಪರಪ್ರೇಷ್ಯ (ನಾ). = ಪರಪ್ರೇಷಿತ : ಶನಿಗೃಹದೊಳ್ ಬುಧನಿರೆ ಋಣಿ . . . ಪರಪ್ರೇಷ್ಯನೆನಿಕ್ಕುಂ (ಜಾತಕಿ. ೧೬-೨೫). [ಪರ್ಯ + ಪ್ರೇಷ್ಯ]

ಪರಬರಿಣಗೆಯ್ (ಕ್ರಿ). (?) : ಪ್ರತಿವೀರವ ಕಟ್ಟಿ ತ××ಳಂಗೆ ಪರಬರಿಣಗೆಯ್ದು (ಎಕ. IV, ಎಡತೊ. ೩೬-೧೫ ; 1034). [? + ಕೆಯ್ಯ್]

ಪರಬಲ, ಪರಬಳ (ನಾ). ಶತ್ರುಸೈನ್ಯ ; ವೈರಿಬಲ : ಪರಬಲದ ನೆತ್ತರ ಕಡಲೊಳಗಣ ಜಿಗುಟಿ ಬಳೆವ ತೆಜದೊಳೆ ಬಳೆದಂ (ಪಂಪಭಾ. ೧-೪೬) ; ಪರಬಲದೊಳ್ ಪಾರ್ಥಂ ನಿಷ್ಠುರಬಾಹಾಬಳನಿರಲ್ ಜನಾಧಾರನೆ ನೀಂ ಪರಿಕಿಸದೆ ವೀರಪಟ್ಟಮನರಸಾ ತಾಳ್ದುವುದು (ನೇಮಿಪು. ೧೨-೧೪೩) ; ಅರೆದುದೋ ಪರಬಲವ . . . ಮಾರ್ಬಲದ ವೀರರು ಹರೆದುದೋ ಹವಣಿಲ್ಲ ದಂತಿಯ ಸಮರಸೌರಂಭ (ಕುಪ್ಯಾದ್ರೋ. ೩-೧೬). **ಪರಬಳ :** ಪರಬಳದಾನವಸಂಹಾರಾರುಣಜಳಲಿಪ್ತಖರ್ಗ್ಗನುನ್ನತತೇಜಂ (ಎಕ. VI, ಮೂಡಗೆ. ೨೨-೨೩ ; 1129).

ಪರಬಲಕಾಲಭೈರವ = ಶತ್ರುಸೈನ್ಯಕ್ಕೆ ಪ್ರಳಯಕಾಲದ ಶಿವನಂತಿರುವನು ; ಒಂದು ಬಿರುದು : ಈ ಪಂಕರುಹಮುಖಿ ಬೆಸಲಾದಳೊಂದೇ ವರುಷ ಗರ್ಭವ ಧರಿಸಿ ಪರಬಲಕಾಲಭೈರವನ (ಕುಪ್ಯಾಅ. ೪-೪೮). ಪರಬಲದುಂಪದೂಳಿ = ಶತ್ರುಸೈನ್ಯವನ್ನು ನಿರ್ನಾಮಗೊಳಿಸುವಂಥದು; ಒಂದು ಬಿರುದು: ಪರಬಲದುಂಪದೂಳೀ ಕರಿಗಳರಸ ಕಸ್ತುರಿರಂಗ ಮೊದಲಾದ ಬಿರುದಿನಾನೆಗಳ್ಳೆದಿದುವು (ಕಂನವಿ. ೩-೪೨). ಪರಬಲಸಾಧಕ, ಪರಬಳಸಾಧಕ = ಶತ್ರುಸೈನ್ಯವನ್ನು ಗೆಲ್ಲುವವನು; ಒಂದು ಬಿರುದು : ಪರಬಲಸಾಧಕ ಪರಾಶರ ಪರಮಭಟ್ಟಾರಕಲಬ್ಧವರಪ್ರಸಾದ (ಎಕ.III (R), ಗುಂಡ್ಲುಪೇ. ೨೩೩-೨೧ ; 1315); ಪರಬಳ ಸಾಧಕರು ಮಪ್ಪ ಕುಮಾರಮಾಧವದಂಣ್ಣಾಯಕರುಂ ಕೇಶವದಂಣ್ಣಾಯಕರುಂ . . . ಅಳುತ್ತಮಿರ್ದು (ಎಕ. III (R), ಹೆಗ್ಗಡ. ೮೧-೧೭; 1218). ಪರಬಳಕೇಸರಿ = ಶತ್ರುಸೈನ್ಯಕ್ಕೆ ಸಿಂಹಸದೃಶನಾದವನು ; ಒಂದು ಬಿರುದು : ಪರಬಳಕೇಸರಿ ವೈರಿಬಳಜಳಧಿಬಡವಾನಳಂ (ಎಕ. VII, ಶಿಕಾರಿ. ೨೦-೧೮ ; 1032). ಪರಬಳಗೂಳಿ = ಶತ್ರುಪಡೆಗೆ ಗೂಳಿಯಂತಿರುವವನು ; ಒಂದು ಬಿರುದು: ಪರಬಳಗೂಳಿ ರಣಮಂ ಹೊತ್ತು . . . ತಳ್ತಿಱಿದು ಮೆಱದು ಸುರಲೋಕಪ್ರಾಪ್ತನಾದ (ಎಕ. VIII, ಸಾಗರ. ೮೬-೧೦ ; 1282). [ಪರ್ಯ + ಬಲ್ಯ]

ಪರಬಲಾಂತಕ (ನಾ). ವೈರಿದಳಕ್ಕೆ ಯಮಸ್ವರೂಪಿಯಾದವನು : ಪರಬಲಾಂತಕನೆದ್ದು ನಿಂದನು ಸಿಂಹನಾದದಲಿ (ಕುಪ್ಯಾಅ. ೧೦-೩೪) ; ಪರಬಲಾಂತಕ ಪಾರ್ಥನಿ[ನ]ಟ್ಟಲೆಡವಂಕದಲಿ ನೆರೆದು ಬಂದೋಡಿದಾ ಭೀಷ್ಮಭೂಪನ ಬಲವನರವರಿಸದಿಸುವಲ್ಲಿ ಕರ್ಣಾಂತ ಪೂರಿಸಿದ ತಿರುವ ತೊಲಗದ ಕೈಗಳು (ಸಾಳ್ವಭಾ. ೨೫-೨೨). [ಪರಬಲ + ಅಂತಕ]

ಪರಬಲಾಪಹ (ನಾ). ೧. ಶತ್ರುಸೈನ್ಯವನ್ನು ನಾಶಮಾಡುವವನು. ೨. ಶತ್ರುವಾದ ಬಲನೆಂಬ ರಾಕ್ಷಸನನ್ನು ನಾಶಮಾಡುವವನು. ೧, ೨ : ಸುರೇಂದ್ರನಂತೆ ಸಹಸ್ರನೇತ್ರಾಶ್ರಿತ ವಿಪುಳವಿಗ್ರಹಪರಬಲಾಪಹನುಂ (ರಾಜಶೇ. ೩-೯ ವ). [ಸಂ.]

ಪರಬಳ 'ಪರಬಲ' ನೋ.

ಪರಬಳಕೃತಾಂತ (ನಾ). = ಪರಬಲಾಂತಕ : ಪರಬಳಕೃತಾಂತಂ ಕರಹತ್ಥ ಮಲ್ಲಂ ಮಲ್ಲೆಯಸಾಹಣಿಯರುಂ (ಕೊಲ್ಹಾಶಾ. ೧೬-೪೦ ; 1189) ; ಪರಬಳಕೃತಾನ್ತ ಸ್ವೀಕಾರಸಾರೋದಯ ಅನ್ನದಾನವಿನೋದ ಸುವರ್ಣ್ಣದಾನಶೂರ (ಎಕ. V (R), ತಿರುಮ. ೮೮-೨೫ ; 1276).

[ಪರಬಳ(= ಪರಬಲ) + ಕೃತಾಂತ]

ಪರಬೊಮ್ಮ (ನಾ). = ಪರಬ್ರಹ್ಮ : ಲೀಲೆಯದು ಪರಬೊಮ್ಮದ ಇಚ್ಛೆ (ಸಿದ್ಧವ. ೯೯-೫೯೦) ; ಸಾಕಾರನಿಷ್ಠೆ ಭೂತಂಗಳೊಳಗನುಕಂಪೆ ತಾನೆ ಪರಬೊಮ್ಮವೆನಲು (ಸಿದ್ಧರಾ. ೯-೪೩) ; ಪರಬೊಮ್ಮ ನೀ ಮೈದೋಱಿದೈ ತನಗೆ (ಕುಪ್ಯಾಅ. ೨-೧೪) ; ನಿನ್ನಲಿ ನೆಮ್ಮಿದಧಿಕದ್ವೇಷವೀ ಪರಬೊಮ್ಮದಿದಿರಲಿ ಬಿಟ್ಟುದು (ತೊರಂಗಾ. ೪-೪-೫೯) ; ಪರಬೊಮ್ಮನೆಂದು ಜನಂ ಆವುದನು ಕಾಣದೊಡಮಳ್ತಿಯಿಂ ನಂಬಿಹುದೊ ಆ ವಿಚಿತ್ರಕೆ ನಮಿಸೊ (ಮಂಕುಕ. ೧). [ಸಂ. ಪರಬ್ರಹ್ಮನ್]

ಪರಬೊಮ್ಮರಸಿಕ (ನಾ). ಪರಬ್ರಹ್ಮದಲ್ಲಿ ಆಸಕ್ತಿಯುಳ್ಳವನು : ಪರಬೊಮ್ಮರಸಿಕನಪ್ಪಲವರು ನಮ್ಮ ಜನ್ಮವೆ ಜನ್ಮವೆಂದು . . . ಉಬ್ಬಿದರು (ಭರಜೆ. ೬೦-೮೮). [ಪರಬೊಮ್ಮ + ರಸಿಕ]

ಪರಬೊಮ್ಮಿಣಿ (ನಾ). ಆದಿಶಕ್ತಿ : ಆ ಪರಬ್ರಹ್ಮನಂತೆ ಮಾಯವಿಸ್ತಾರವಾದೊಳು ಆ ಪರಬೊಮ್ಮ ಪರಬೊಮ್ಮಿಣಿಯವರಿಬ್ಬರಿಂದ ಪರೋಪರಿ ಪಸರಿಸಿತು (ಉದ್ಭೋಪ್ರ. ೩-೧೧-೨೨). [<ಸಂ. ಪರಬ್ರಹ್ಮಾಣೀ]

ಪರಬೋಧೆ (ನಾ). ಬೇರೆಯ ಬೋಧನೆ : ಪರವಸ್ತ್ರ ಪರಬೋಧೆ ಪರದ್ರವ್ಯ . . . ಕಾಂಕ್ಷೆ ಮಲತ್ರಯದಲ್ಲಿ ಮೋಹಿಸದೆ (ಮಡಿಮಾ. ೬೮-೧೦೦). [ಪರ್ಯ + ಬೋಧೆ]

ಪರಬ್ಬಯರಶಿ (ನಾ). ಒಬ್ಬಾಕೆಯ ಹೆಸರು : ಕುನ್ದತ್ತೂರ ಪರಬ್ಬಯರ[ಶಿ]ಯರ್ಕ್ಕುನ್ದತ್ತೂರನಾಳುತ್ತಮಿರೆ (ಎಕ. IV (R), ಕೊಳ್ಳೇಗಾ. ೧೦-೫ ; ಸು. 10ನೆಯ ಶತ). [?]

ಪರಬ್ರಹ್ಮ (ನಾ). ಪರಮತತ್ತ್ವ ; ಪರಮಾತ್ಮ : ಘನಮಹಾಲಿಂಗವೆಂಬ ಪರಬ್ರಹ್ಮವು ಗುರುಕರುಣದಿ ಬಹಿಷ್ಕರಿಸಿ ಕರಸ್ಥಲಕ್ಕೆ ಇಷ್ಟಲಿಂಗವಾಗಿ ಬರಲು (ಪಚಸಂ. ೩೬೧-೧೩೭); ವಿಮಳಿತ ಪರಬ್ರಹ್ಮವೆಂದಡೆ ಹರನ ನಾಮವಿವು (ಬಸಪು. ೫೫-೩೯) ; ಆ ಅಂತರ್ಯಾಮಿ ಮೊದಲಾದ ಈಶ್ವರತ್ರಯಾಧಿಷ್ಠಾತೃ ಪರಬ್ರಹ್ಮ ಪರತತ್ವ . . . ಎಂಬಿವು ಮೊದಲಾದವೇ ಬ್ರಹ್ಮದ ಪರ್ಯಾಯನಾಮಂಗಳಕ್ಕುಂ (ವಿವೇಕ. ೨೯) ; ಗುರುವೆ ಪರಬ್ರಹ್ಮವು ತಾನೆ ನೋಡಾ (ಅಖಂಡೇ. ೧೭-೧). [ಸಂ. ಪರಬ್ರಹ್ಮನ್]

ಪರಬ್ರಹ್ಮನಾಡಿ (ನಾ). ದೇಹದ ನಾಡಿಗಳಲ್ಲಿ ಒಂದು : ಉತ್ತಮದಲುತ್ತಮವು ತ್ರೈನಾಡಿಗಳಿರುವವವರೋಳ್ ಎರಡನತಿಗಳೆದುಳಿದಿರುವದೇ ಪರತರದ ಪರಬ್ರಹ್ಮನಾಡಿಯು (ಗಗತಾ. ೯-೧೧). [ಪರಬ್ರಹ್ಮ + ನಾಡಿ$_1$]

ಪರಭಂಡ (ನಾ). ಬೇರೆಯವರಿಗೆ ಸೇರಿದ ವಸ್ತು ; ಪರದ್ರವ್ಯ : ನಡೆ ಪರಭಂಡ[ಪಾಠಾಂ.ಪರಬಂದ]ದಲಿ ಮನವೇಕೆಮಗೆ (ನಿಭಾಗ. ೧೧-೬೦-೨೯). [ಪರ್ಯ + ಭಂಡ$_2$]

ಪರಭಕ್ತಿ (ನಾ). ಶ್ರೇಷ್ಠವಾದ ಭಕ್ತಿ : ಈ ಪರಭಕ್ತಿ ಭಗವತ್ಸಾಕ್ಷಾತ್ಕಾರವಾಗಬೇಕೆಂಬ ಉತ್ಕಟೇಚ್ಛಾರೂಪವಾದ ಅಭಿನಿವೇಶವನ್ನು ಉಂಟುಮಾಡಿ . . . ಪರಿಪೂರ್ಣ ಪರಬ್ರಹ್ಮಸಾಕ್ಷಾತ್ಕಾರವನ್ನು ಉಂಟುಮಾಡುವುದು (ಹಿಂದಸಾ. ೨೫೬) ; ಪರಮಾತ್ಮಪ್ರಾಪ್ತಿಗೆ . . . ತನ್ಮಯನಾಗಿ ಪ್ರವರ್ತಿಸುವಿಕೆಯೇ ಎರಡನೆಯ ಪರ್ವ ಪರಭಕ್ತಿ (ಭಾರದ. ೨೬೫).

[ಪರ್ಯ + ಭಕ್ತಿ]

ಪರಭಾಗ (ನಾ). ೧. ಉತ್ತಮಿಕೆ ; ಮೇಲ್ಮೆ ; ಶ್ರೇಷ್ಠತೆ : ಚಿತ್ರಕರಂ ಬೋಲ್ಪರಭಾಗಭಾವವಿಲಸದ್ವರ್ಣಕ್ರಮಾವೃತ್ತಿಯಂ ಪ್ರಕಟಂಮಾಡಿರೆ (ಕವಿಮಾ. ೧-೧೫೦) ; ತ್ರಿದಶಸ್ತುತ ನೋಡ ಪೊದಟ್ಟೊದವಿದ ತಾಳೀ

ತಮೊಳನೀಳದ ಕರ್ಪಿಂ ಪುದಿದು ಪರಭಾಗಮಂ ಪಡೆದಿದಱಿರದುಂ ಕೆಲದೊಳಸೆವ ವನರಾಜಿಗಳಂ (ಆದಿಪು. ೧೧-೫೮); ಅಂಬರಚರಪುರಭಾಗಮೆ ಪರಭಾಗಮೆನಿಪುವುದಾನಂಗಳ್ (ಶಾಂತಿಪು. ೨-೮೯). ೨. ಹಿಂಭಾಗ; ಹಿಂದುಗಡೆ: ಆ ದನಿತಾರಿಯ ಕೀರ್ತಿ ಲೋಕಮಂ ವ್ಯಾಳ ತೊಟಲ್ದು ತನ್ನನಮನಶ್ರಮಮಂ ಳಕೆಯಲ್ಕೆ ತನ್ನಹೀಪಾಳಶಿರೋಜರಾಜಿ ಪರಭಾಗಮ ನಾಶ್ರಯಿಸಿರ್ದಳೆಂದಿನಂ (ಶಾಂತಿಪು. ೩-೩೩); ಅಳವಡೆ ಪರಭಾಗಂಬಡೆದೆಳೆಯಳಪರಭಾಗದಲ್ಲಿ ಸೋಮರ್ಮುಡಿ ಸೊಬಗಂ ತಳೆದಸೆದುದು ಕನಕಶಿಳಾತಳಾಗ್ರದೊಳ್ ಮುರಿದು ಪರಿದ ಜಗುನೆಯ ಪೊನಲಂ(ಚಂದ್ರಪು.೧೧೧-೧೧೦). ೩. ಶೋಭೆ; ಸೌಂದರ್ಯ; ಮನೋಹರತೆ: 'ಪರಭಾಗಂಬಡೆ' ಪರಾ. ೪. ಒಳ್ಳೆಯತನ; ಸಜ್ಜನಿಕೆ: "ಪರಭಾಗಃ, ಗುಣೋತ್ಕರ್ಷ-ಈ ೨ ಒಳುಹು [ಒಳ್ಪು]" (ಪಲಾಯು. ೧೩೦-೧೦೧); "ಪರಭಾಗಮೆನೆ ಗುಣೋತ್ಕರ್ಷಮೆನಲೊಪ್ಪುಕ್ಕುಂ" (ಪುಂಗರಾ. ೧೩೪-೩೪). ೫. ಶ್ರೇಷ್ಠನಾದವನು; ಉತ್ತಮನಾದವನು: ತ್ರಿಭುವನಭೂಷ ಣೋಪಮೆಗೆ ಸಂಗಮದೊಳ್ ಪರಭಾಗವಿಂ[ನೀ] ಸ್ವಯಂಪ್ರಭೆಗೆ ಲಲತ್ತ ಟ್ಟಪ್ರಭೆಗೆ ಬಂಧುರಸಿಂಧುರ ನೀಲನೀರದಪ್ರಭನಭಯಂ ತ್ರಿಪೃಷ್ಠಂ (ಶಾಂತಿಪು. ೫-೨೪). [ಸಂ.]

ಪರಭಾಗಂಬಡೆ (ಕ್ರಿ). ೧. ಉತ್ಕರ್ಷವನ್ನು ಹೊಂದು; ಮೇಲ್ಮೆಯಿಂದ ಕೂಡಿರು: ದೇವಮಾನವಸಭಾಸಂದೋಹದಿಂ ನಾಡೆಯುಂ ಪರಭಾಗಂಬಡೆದೇಂ ಬೆಡಂಗಿದಿದುದೋ ತನ್ನಾಭರಾಜಾಲಯಂ (ಆದಿಪು. ೪-೨೦); ದಿಜ್ಜನೆ ಬೀಗುವ ಪೊಸಸಿರಿವಂತನಂತೆ ವಾತಪೂರಣಂಗಳೊಳಂ ಪರಭಾಗಂಬಡೆದು (ಶಾಂತಿಪು. ೧೦-೨೧ ಪ). ೨. ಅತಿಶಯವಾದ ಶೋಭೆಯನ್ನು ಪಡೆ; ಉಜ್ವಲಕಾಂತಿಯಿಂದ ಕೂಡಿರು: ರತ್ನದ ಕೇರ್ಗಳ್ ಜಾಗಂಬೊಯ್ದಂತಿರೆ ಪರಭಾಗಂಬಡೆದುವು ವಿವಾಹಗೇಹಾಂತರದೊಳ್ (ಆದಿಪು. ೪-೩೧); ಅಳವಡೆ ಪರಭಾಗಂಬಡೆದೆಳೆಯಳಪರಭಾಗದಲ್ಲಿ ಸೋಮರ್ಮುಡಿ ಸೊಬಗಂ ತಳೆದಸೆದುದು ಕನಕಶಿಳಾತಳಾಗ್ರದೊಳ್ ಮುರಿದು ಪರಿದ ಜಗುನೆಯ ಪೊನಲಂ (ಚಂದ್ರಪು. ೧೧-೧೦೦).[ಪರಭಾಗ+ಪಡೆ,]

ಪರಭಾಗಂಬೆಜ್ಜು (ಕ್ರಿ). ೧.=ಪರಭಾಗಂಬಡೆ ೧: ಧರೆಯೊಳು ಮುನ್ನುಳ್ಳ ವಿಪ್ರೋತ್ತಮರ ಚರಿತದೊಳ್ ತನ್ನ ಚಾರಿತ್ರಮೆತ್ತಂ ಪರಭಾಗಂಬೆತ್ತಿರಲ್ (ಎಇ. XV, ೬೫೨-೨೮; 1098). ೨. ಸೊಗಸಿನಿಂದ ಕೂಡಿರು; ಶೋಭಿಸು: ಮದವದ್ದಂತಿಮದಾಂಬುಧಾರೆಗಳ್ . . .ರಥಾಶ್ವಸಂಕುಳಖುರಿನೋದ್ಧೂತಲಾಲಾಜಲಂ ಕದಡಿಟ್ಟ್ಯತ್ತಮವುಂಕೆ ಬೇಱೆ ಪರಭಾಗಂಬೆತ್ತು ಲೋಕಕ್ಕೆ ಸನ್ನಿದಮಾಗಿರ್ದುವು ಕೌರವಧ್ವಜಿನಿಯೊಳ್ ಕಾಳಿಂದಿಯುಂ ಗಂಗೆಯುಂ (ಪಂಪಭಾ. ೧೦-೩೧) ; ಪರಭಾಗಂಬೆತ್ತಿರೆ ಪದ್ಮರಾಗಮಣಿ ಪಾಣಿಪದ್ಮರಾಗದಿನೊರ್ಮಂ ನರನಾಥಸುತಂ ಮೆಜ್ಜಿದಂ ಕೀರ್ಟಮುಂತಿರ್ದುವಂತೆ ಭುಜಶಾಖೆಗಳಿಂ (ಪಂರಾಪಾ.೫-೫೪); ಕಬರೀ ಭರದಿಂ ಪರಭಾಗಂಬೆತ್ತಾಕೆಯಪರಭಾಗಂ ಪತಿಯ ಮನವನುಜೆಜ್ಜೆ ವಿಡಿಗುಂ (ಜಗವಿ. ೧೦-೪೭). [ಪರಭಾಗ+ಪೆಜ್ಜು,]

ಪರಭಾರಿ, 'ಪರಭಾರೆ,' ನೋ.

ಪರಭಾರಿ, 'ಪರಭಾರೆ,' ನೋ.

ಪರಭಾರೆ,, ಪರಭಾರಿ, (ನಾ). ೧. ತಮ್ಮ ವಶದಲ್ಲಿರುವ ವಸ್ತು, ಆಸ್ತಿ ಮೊದಲಾದುವನ್ನು ಬೇರೆಯವರಿಗೆ ಒಪ್ಪಿಸಿಕೊಡುವಿಕೆ: ವ್ಯವಸಾಯದ ಜಮಾಖಾನ ಮರ್ಗಾವಣೆ, ಪರಭಾರೆ ಮತ್ತು ವ್ಯವಸಾಯ ಸಂಬಂಧದ ಸಾಲಗಳು (ಭಾಧಾಸ. ೨೮೯). ೨. ಪ್ರತ್ಯೇಕವಾದುದು; ಹೊರಗಿನದು: ಅವರಿಗೇ ಎಂದು ಒಂದು ಪರಭಾರೆಯಾದ ಕೋಣೆಯ ವಿವಾಹಾಡಾಗಿತ್ತು (ಹಳ್ಳಹಾ. ೧೭). **ಪರಭಾರಿ,** : ೧. ಪಿತ್ರಾರ್ಜಿತವಾದ ಅವರ ಆಸ್ತಿಯು ಇಂದು ಪರಭಾರಿ ಆಗುವ ಸ್ಥಿತಿಯಲ್ಲಿದೆ (ರೂಢಿ).

ಪರಭಾರೆ ಮಾಡು=ಆಸ್ತಿ, ವಸ್ತು ಮುಂತಾದುವನ್ನು ಬೇರೆಯವರ ವಶಕ್ಕೆ ಒಪ್ಪಿಸು,—ಅಧೀನಕ್ಕೊಳಪಡಿಸು: ಈ ದಿನ ಗದ್ದೆ ಮತ್ತು ರೂಪಾಯಿಗಳನ್ನು ಕೊಟ್ಟಿನೋ, ನಾಳೆಯೇ ಪರಭಾರೆ ಮಾಡಿ ಬಿಡುತ್ತಾನೆ (ರಂಗಳ. ೧೩೪); ಮೈನರ್ ಮಗನಿರುವಾಗ ತಂದೆಯು ಆಸ್ತಿಯನ್ನು ಯಾವ ರೀತಿಯಲ್ಲೇ ಆಗಲಿ ಪರಭಾರೆ ಮಾಡುವುದಕ್ಕೆ ಅಧಿಕಾರವೇ ಇಲ್ಲ (ಭಾಟೀಮು. ೨೮). ಪರಭಾರೆಯಾಗಿ=೧. ಪರೋಕ್ಷವಾಗಿ; ನೇರವಾಗಿ ಅಲ್ಲದೆ: ಬಂದವರು ಪರಭಾರೆಯಾಗಿ "ಬೆಟ್ಟಂಪಾಡಿಗೆ ಸುಬ್ರಾಯರು ಮರಳಿದ್ದಾರೆಯೇ" ಎಂದು ವಿಚಾರಿಸಿದಾಗ (ಕರುಕ.೨೬). ೨. ಪ್ರತ್ಯೇಕವಾಗಿ: 'ಹಾಡಿದವರ್ಯಾರು? ಎಲ್ಲಿದ್ದಾರೆ?' ಎಂದು ಪರಭಾರೆಯಾಗಿ ವಿಚಾರಿಸಿ, ಅರಮನೆಯನ್ನು ಸೇರಿದನು (ಕಳವಿ. ೬೧೩). ಪರಭಾರೆಯಾಗು=ಆಸ್ತಿ ಮುಂತಾದುವು ಪರಾಧೀನವಾಗು,—ಬೇರೆಯವರ ವಶಕ್ಕೆ ಒಳಪಡು: ಜಮೀನು ಪರಭಾರೆಯಾಗಿದ್ದರ ದುಃಖ ಅವನ ಮನಸ್ಸನ್ನು ಕೊರೆಯುತ್ತಿತ್ತು (ಗಂಗಾಕಾ. ೬೫); ಮುದುಕಳೆಯ ಆಸ್ತಿಪಾಸ್ತಿಯೆಲ್ಲ ಪರಭಾರೆಯಾಗುವಂತೆ ತಂತ್ರ ಹೂಡಿದ್ದ ವಕೀಲ . . . ಬಂದನು (ಪುನರು. ೨೯). [←ಮರಾ. ಪರಭಾರೇ]

ಪರಭಾರೆ,, ಪರಭಾರಿ,(ಅ). ೧. ಇನ್ನೊಬ್ಬರ ಮುಖಾಂತರವಾಗಿ; ಅಪರೋಕ್ಷವಾಗಿ: ಪರಭಾರೆ ಕೆಲಸ ಮಾಡಿಸಿಕೊಳ್ಳುವವರನ್ನು ಕಂಡರೆ ನಮಗೆ ಅದರ ಹೇಗೆ ಹುಟ್ಟೀತು? (ಗಾಳಿ.೧೧೪); ಮುನಸೀಪಾಲಿಟಿಯ ಅಧಿಕಾರದಲ್ಲಿದ್ದ ಜಾಗೆಯ ದಾಡಿಗೆಯನ್ನು ಪರಭಾರೆ ಒಬ್ಬ ಸದಸ್ಯ ತೆಗೆದುಕೊಂಡು (ಅಪನಾ. ೨೨೩). ೨. ಹೊರಗಿಂದ ಹೊರಗೆ: ಕೆಲವು ಕೆಡುಕ ಮತ್ತು ಕೆಲವು ಚಲೋ ಹೀಗೆ ಮಾಲವನ್ನು ತುಂಬಿ ಪರಭಾರೆ ಸ್ಟೇಶನದ ಮೇಲೆ ಏರಿಸುತ್ತಾರೆ (ಮುಂಬಪ್ಯಾ. ೯೫). ೩. ಬೇರೆ ಮಾರ್ಗವಾಗಿ; ಬೇರೆ ರೀತಿಯಲ್ಲಿ: ಚಿತ್ರದುರ್ಗ ನಮಗೆ ಅಸಾಧ್ಯ ಬೌಜು ಭಾರಿಯಿದೆಯೆಂಬಾ ಪ್ರಸ್ತಾಪ ಮಾಡುತ್ತಾನೆಂದು ಪರಭಾರೆ ವರ್ತಮಾನಾ ಕೇಳುತ್ತಾ ಇಧೇವೆ (ಪುದಚ. ೭೨೮); ಕೊತ್ತತ್ತಿಗ್ರಾಮದ ಬಳಿಯಲ್ಲಿ ಇಳಿದಿರುವ ಮರಾಟಿಯವರ ದಂಡಿನ ಬಳಿಗೆ ನೀವು ಪರಭಾರೆ ಹೋಗಿ (ಚಾಸುವಂ. ೧೦೮); ಅಲ್ಲಿಂದ ಪರಭಾರೆ ಯಾರಿಗಾದರು ಉಳ್ಳ ತರಿಸುವದಿದ್ದರೆ . . . ಹಣವು ಕಳಿಸಬೇಕು (ಮುಂಬವ್ಯಾ. ೨೬). ೪. ಬೇರೆಯ ಸ್ಥಳದಲ್ಲಿ; ಬೇರೆಯ ಕಡೆಯಲ್ಲಿ; ಹೊರಗೆ: ಅವರ ಹಗಲಿನ ಊಟಗಳೆಲ್ಲ ಪರಭಾರೆ (ಮುರಮು: ೫). ೫. ಪ್ರತ್ಯೇಕವಾಗಿ; ಬೇರೆಯಾಗಿ: ಊಟಾ-ಉಡಿಗಿ ಪರಭಾರೆ ಹೋಗಿ ಮ್ಯಾಲ ದಹಾ-ಬಾರಾ ರೂಪಾಯಿ ಕೈಗೆ ಹತ್ತತಾವ (ದೀಪಹ. ೭೫, ೧೩). **ಪರಭಾರಿ,** : ೧. ಎಷ್ಟೋ ವರ್ಷಗಳಾದ ಮೇಲೆ ಊರಿಗೆ ಬಂದ ನಾನು ಅವರ ವಿಷಯವನ್ನು ಪರಭಾರಿ ತಿಳಿದುಕೊಳ್ಳಬೇಕಾಯಿತು (ರೂಢಿ).

[←ಮರಾ. ಪರಭಾರೇ, ಪರಭಾರಾ, ಪರಭಾರೀ]

ಪರಭಾವ (ನಾ). ೧. ಬೇರೆಯವರ ಇಂಗಿತ,—ಆಲೋಚನೆ. ೨. ಇನ್ನೊಂದು ಸ್ಥಿತಿ: ಉಳ್ಳುದನಲ್ಲದಾರ್ಗಮಿಲ್ಲೆನಲ್ ಬಾರದುಳ್ಳುದುಂ ಪರದ್ರವ್ಯ ಪರಕ್ಷೇತ್ರ ಪರಕಾಲ ಪರಭಾವದಿಂದಮಿಲ್ಲದಿರ್ಕುಂ (ಶಾಂತಿಪು. ೪-೧೩೮ ಪ). [ಪರ,+ಭಾವ,]

ಪರಭಾವಜ್ಞ (ನಾ). ಬೇರೆಯವರ ಇಂಗಿತವನ್ನು ತಿಳಿಯಬಲ್ಲವನು: ಪರಭಾವಜ್ಞಂ ಕೃತಜ್ಞಂ ರಸಿಕಂ . . . ಸಭೇಂದ್ರಂ (ಲಾಸ್ಯರಂ. ೧-೩೩). [ಸಂ.]

ಪರಭಾಷೆ (ನಾ). ಬೇರೆಯ ಭಾಷೆ; ಪರಕೀಯ ಭಾಷೆ: ದ್ರಾವಿಡ-ಕನ್ನಡರು ಇಂದು ಪರಭಾಷೆಯನ್ನಾಡುವ ಅನೇಕ ಪ್ರದೇಶಗಳನ್ನು ಆಕ್ರಮಿಸಿದ್ದರೆಂಬುದಕ್ಕೆ . . . ಸಂಬಂಧಪಟ್ಟ ಅಂಶಗಳಿವೆ (ಭಾಷಾಶಾ. ೧೯೩). [ಪರ,+ಭಾಷೆ]

ಪರಭೂಪಾಲ (ನಾ). ಶತ್ರುರಾಜ : ಪರಭೂಪಾಲದ್ವೀಪಾಂತರಾಳ ಕೇಳೀವನಂಗಳಂ ಕಿಟ್ಟು (ಪಂರಾಮಾ. ೩-೧೦೦) ; ಪರಭೂಪಾಲರ ಬಾಳಂ ಪರಿಹಾಸ್ಯಂ ಮಾಡುವಂತೆ ಹಸನಂಗೆಯ್ವಂ (ಹಮ್ಮೀರ. ೨-೨೭).

[ಪರ$_3$+ಭೂಪಾಲ]

ಪರಭೃತ (ನಾ). ಅನ್ಯರಿಂದ ಪೋಷಿಸಲ್ಪಟ್ಟುದು ; ಕೋಗಿಲೆ : ಪರಭೃತಂಗಳುಲಿವ ರವಂಗಳ್ ಸಹಸಾ ತಳಮಳಗೊಳಿಸಿದವಹೋ . . . ವಿರಹಿಗಳಾ (ಕವಿರಾ. ೧-೫೪) ; ವಿರಹಿಗಳ ಸುಯ್ಯ ಬೆಂಕೆಯೊಳ್ . . . ಕರಿಮುರಿಕನಾದುವುನ್ಮದಪರಭೃತಷಟ್ಚರಣ ರಾಜಕೀರಕುಲಂಗಳ್ (ಪಂಪಭಾ. ೫-೯೦); ನವಾಮ್ರದ ಪೂಮಿಡಿಯಂ ಕರ್ದುಕಿದುದು ಪರಭೃತಂ ಪರಭೃತದಿಂ (ಸುಲ್ಲಿಪು. ೫-೩೮); ಪರಭೃತಂಗಳವೇಕೆ ಮುನಿದಹವಾ ತಳಿರುಗಳಿಗೆ (ಬಸಪು. ೪-೧೫) ; ಗತಿಗೆ ಕುಣಿದವು ಹಂಸೆ ಸಂಭಾಷಿತದ ಮೃದುರವಕೊದಗಿದವು ಪರಭೃತವು (ತೊರರಾ. ೧-೫-೪೬). [ಸಂ.]

ಪರಭೃತಿಕೆ (ನಾ). ಹೆಣ್ಣುಕೋಗಿಲೆ : ಮಾವಿನ ಚಿಗುರನ್ನು ನೋಡಿ ಪರಭೃತಿಕೆಯು ಉನ್ಮತ್ತೆಯಾಗುವುದಿಲ್ಲವೆ ? (ಶಾಕುಂತ. ೮೦-೧).

[ಸಂ. ಪರಭೃತಿಕಾ]

ಪರಮ(ಗು). ೧. ಬಹಳ ದೂರದ; ಸಮೀಪವಲ್ಲದ. ೨. ಮುಖ್ಯವಾದ ; ಪ್ರಧಾನವಾದ : ನೀನತ್ತೆ ಮಾವಂದಿರಂ ಸೇವಿಸುತ್ತೀಯೆಡೆಯೆ ಧರ್ಮಮಾಚರಿಸುತಿರ್ಪುದೆ ಪರಮಕರ್ತವ್ಯಂ (ಶ್ರೀರಾಮಾ. ೮೭-೨೫೪). ೩. ಶ್ರೇಷ್ಠವಾದ ; ಉತ್ಕೃಷ್ಟವಾದ : ಶ್ರೀಮಾಸೇನರ್ಪ್ಪರಮ ಪ್ರಭಾವರಿಷಿಯರ್ಕ್ಕಟ್ಟಿಪ್ಪಿನಾ ವೆಟ್ಟದುಳ್ಳ್ರೀಸಂಗಂಗಳ ಪೇಟ್ದ ಸಿದ್ಧಸಮಯನ್ತಪ್ಪಾದೆ ನೋನ್ತು (ಎಕ. II, ೨೭-೧ ; ಸು. 700); ಆ ಪರಮಕ್ಷತ್ರತೇಜೋರಾಶಿಗೆ ಮುನಿಸೆಂಬ ಕಿಚ್ಚಿನೊಳೆ ಬೆಂದು ನಿಲ್ಲದಂಬುಧಿಯ ನೋಡಿ ಪೊಕ್ಕರಿನೃಪಸಾಧನದಿರವಿನಂದಮೆಂತೆನೆ (ಶಾಂತಿಪು. ೯-೧೫೨ ಪ) ; ಪರಮಕವೀಂದ್ರವೃಂದ ವಿನುತೋತ್ತಮವಾಣಿ ಸರಸ್ವತೀಸ್ವಯಂವರವರನಬ್ಜಜೋಪಮನಪಾಸ್ತರಜಂ (ಪಂಚತಂ. ೩-೨೧) ; ದ್ರಾವಿಡಭಾಷಾವಿಜ್ಞಾನಕ್ಷೇತ್ರದಲ್ಲಿ ಪರಮಪರಿಣತ ಪಂಡಿತರಲ್ಲಿ ಒಬ್ಬರಾದ ಥಾಮಸ್‌ಬರೊ . . . ಪರಿಶೀಲಿಸಿದ್ದಾರೆ (ದ್ರಾವಿವಿ. ೪೩). ೪. ಶುದ್ಧವಾದ; ಪವಿತ್ರವಾದ : 'ಪರಮಪಾವನ' ಪರಾ. ೫. ಕೊಟ್ಟಕೊನೆಯ; ಪರಾಕಾಷ್ಠೆಯ. ೬. ಹೆಚ್ಚಾದ ; ಅಧಿಕವಾದ : ಪರಮದಯಾನಿಧಿಯೆನಿಸಿದ ಪರಮನ ಸನ್ನಿಧಿಯೊಳುಷ್ಟಮೂ ಪರಪೀಡಾಕರಮಂ ತೋಱದ ಬಾಲಾರ್ಕರಶ್ಮಿಯೆನಿಸಿದುವು ರತ್ನದೀಪಪ್ರಭೆಗಳ್ (ಸುಲ್ಲಿಪು. ೧೨-೧೦೮). (ನಾ). ೭. ಶ್ರೇಷ್ಠವಾದುದು ; ಉತ್ಕೃಷ್ಟವಾದುದು : ಉತ್ತರರಾಮಚರಿತದ ಶ್ರೀರಾಮನು ಇದಕ್ಕೆ ಪರಮವಾದ ಉದಾಹರಣೆ (ವೀರಯೋ.V,ಮುನ್ನುಡಿ). ೮. ಪರಮಾತ್ಮ ; ದೇವರು : ಶಿರವ ಹಱಿದಿಕ್ಕೆ ಪರಮನಿದ್ದೆಡೆಯು ಕಾಣದೇನಿಳೆಯಲ್ಲಿ (ಬಸವ. ೬೫೬) ; ಎಸೆವ ಪಂಚಾಕ್ಷರಿಯೆ ಪರಮನರಮನೆ ನೋಡ (ತಿರುರ. ದೇ. ೩-೪) ; ಫಣಿಯ ಮಂಚದ ಮೇಲೆ ಪವಡಿಸಿ ಪರಮನೆನಿಸಿದ ಲೀಲೆಯೆತ್ತಲು ಮನುಜಭಾವದ ನಟನೆ ತಾನೆತ್ತ (ಕೌತಿರಾ. ೪೩-೪೫) ; ಪರಮನೊಳು ಪ್ರಾಣ ಬೆರೆದಿಪ್ಪ ಐಕ್ಯಂಗೆ ಚಿರಮುಕ್ತಿಯಹುದು (ಸರ್ವಜ್ಞ. ೧೪೮). ೯. [ಜೈನ] ಜಿನ ; ಅರ್ಹಂತ : ಪರಮಂ ಬೆಸಸಿದನಾಗಳ್ ಭವ್ಯಪ್ರಸಾದಕರ ನಿಜವಚೋಂಶುಗಳ್ ಬೆಳಗುವಿನಂ (ಆದಿಪು. ೫-೭೫) ; ಪರಮನ ಚರಮಕಲ್ಯಾಣಂ ಪರಿಪೂರ್ಣಮಾಗೆ (ಶಾಂತಿಪು. ೧೨-೩೭ಪ) ; ಅಜಿತಂಜಯಂ ಚಕ್ರಧರಪುರಸ್ಸರಂ ಪರಮನ ಪದಪಯೋಜವಂದನಾನಂದದಿಂ ಬಂದು (ಚಂದ್ರಪು. ೭-೫ ಪ) ; ಪರಮಂ ಪ್ರಾಣತಕಲ್ಪದಾರುಣವಿಮಾನೋದ್ದೇಶದಿಂ ಬಂದು ಬಂಧುರ ವಕ್ತ್ರಾಬ್ಜನಿವಿಷ್ಟನಾಶ್ರಯಿಸಿದಂ ರಾಮಾಂಬಿಕಾಗರ್ಭಮಂ (ಪುಷ್ಪಪು. ೯-೧೧೩). [ಸಂ.]

ಪರಮಂಡಲ, ಪರಮಂಡಳ (ನಾ). ೧. ಬೇರೆಯ ದೇಶ ; ವಿದೇಶ; ಪರದೇಶ : ಚರಗೃಹಮಷ್ಟಮಮಾಗಿರೆ [ಪರ]ಮಂಡಲ[ಪಾಠಾಂ. ಣ] ದೊಳ್ . . . ಮಡಿಗುಂ (ಜಾತತಿ. ೨೩-೩). 'ನಿಜಮಂಡಲ' ಪರಾ. ೨. ಶತ್ರುರಾಜ್ಯ ; ಶತ್ರುಮಂಡಲ : ಪರಮಂಡಲಕೆ ಪಯಣವ ಮಾಡುವೆವು ನಾವಳುಕಿದವರಲ್ಲ (ಕುವ್ಯಾಉ. ೭-೨) ; ದಾಯಾದರಿಲ್ಲ ಮಾರ್ಮಲೆವ ಪರಮಂಡಲದ ನಾಯಕರ ಸುಳಿವಿಲ್ಲ (ಜೈಮಿಭಾ. ೨-೫೪). **ಪರಮಂಡಳ** : ೨. ಪ[ರ]ಮಣ್ಡಳೈಕರಾಮಶ್ಚಾಳುಕ್ಯಕುಳತಿಳಕಃ (ಕಇಆ. ೨೩-೮-೮ ; 9ನೆಯ ಶತ) ; ಅದಿರದ ಬೀಕರಕ್ಕಮಿಕ ಪೂಣಿಗ ರಂಜೆ(ಲೆ)ಗಣ್ಣನಿತ್ತು ಬಾಳದ ಪರಮಂಡಳಂ ತಿಱದ [ಕೊ]ಂಕಣಮೀಯದ ಮಾಳವಂ (ಕಇಆ. ೪-೨-೧೨೪ ; 1058).

ಪರಮಂಡಳ ಸೂಱೆಕಾಱ = ಶತ್ರುರಾಜ್ಯವನ್ನು ಕೊಳ್ಳೆಹೊಡೆಯುವವನು ; ಒಂದು ಬಿರುದು : ಸಂಸ್ತುತ್ಯವಂದಿಜನಂ ಪರಮಣ್ಡಳ ಸೂಱೆಕಾಱಂ (ಎಕ. I, ೬೨-೧೪ ; 1095) ; ಪರಮ[ಂ]ಡಳಸೂಱೆಕಾಱನಪ್ಪ ಶ್ರೀಮತು ಹಬ್ಬೆಯನಾಯಕಂ . . . ಸಂಪತ್ತಿಯಿಂ ಸುಖದಿನನುಭವಿಸುತ್ತಿರ್ದು (ಕೊಲ್ಹಾಶಾ. ೧೫-೬೫ ; 1186). [ಪರ$_3$+ಮಂಡಲ]

ಪರಮಂಡಲಿಕ, ಪರಮಂಡಳಿಕ (ನಾ). ೧. ಪರದೇಶದ ದೊರೆ,— ಅರಸು. **ಪರಮಂಡಳಿಕ** : ೨. ಶತ್ರುರಾಜ್ಯದ ಅಧಿಪತಿ,— ಮಾಂಡಲಿಕ: ಬಲುಹ ನೀ ನೋಡುವರೆ ಪರಮಂಡಳಿಕರನು ತಂದೊಡ್ಡು (ಕುವ್ಯಾಭೀ. ೩-೪೦). [ಪರ$_3$+ಮಂಡಲಿಕ]

ಪರಮಂಡಳ 'ಪರಮಂಡಲ' ನೋ.

ಪರಮಂಡಳಿಕ 'ಪರಮಂಡಲಿಕ' ನೋ.

ಪರಮಕವೀಶ (ನಾ). ಶ್ರೇಷ್ಠಕವಿ ; ಕವಿಪುಂಗವ : ಕನ್ನಡದೊಳ್ ಸಂತತಗುಣಮಂ ಕೈಕೊಳ್ವಂತಾಗಿರೆ ಬಗೆದು ಪೇೞ್ಗೆ ಪರಮಕವೀಶರ್ (ಕವಿರಾ. ೩-೧೫೩). [ಪರಮ+ಕವಿ$_5$+ಈಶ]

ಪರಮಕವೀಶ್ವರ (ನಾ). = ಪರಮಕವೀಶ : ಪರಮಕವೀಶ್ವರ ಚೇತೋಹರಮೆಂದಿನಮೆಸೆವ ಮಾಳವೀಮಾಧವಮಂ ವಿರಚಿಸಿದ ಕನ್ನಮಯ್ಯಂಬರ ಮಾಗಂ ಸುಕವಿ ಬಗೆವೊಡಿನ್ನುಂ ಮುನ್ನುಂ (ಪಂಚತಂ. ೫-೫).

[ಪರಮ+ಕವಿ$_5$+ಈಶ್ವರ]

ಪರಮಕಾರಣಿಕ (ನಾ). ಶ್ರೇಷ್ಠನಾದ ಕಾರಣಪುರುಷ : ಪರಮಕಾರಣಿಕ ನಮ್ಮ ಕೂಡಲ ಸಂಗಮದೇವ (ಬಸವ. ೫೬೪). [ಪರಮ+ಕಾರಣಿಕ]

ಪರಮಕಾರುಣಿಕ (ನಾ). ಅತ್ಯಂತ ಕರುಣೆಯುಳ್ಳವನು ; ಪರಮದಯಾಳು : ಪರಮಕಾರುಣಿಕನಪ್ಪನಪಾಕೃತದೋಷಂ (ಕವಿರಾ. ೩-೨೨೧). [ಪರಮ+ಕಾರುಣಿಕ]

ಪರಮಕಾಷ್ಠಯುತ (ನಾ). ಶ್ರೇಷ್ಠವಾದ ಗುರಿಯುಳ್ಳವನು : ಹುತ್ತು ಹೊಱಗೆ ಹೊದಿಸಿದ ಪರಮಕಾಷ್ಠಯುತರಂ ತೋಱಿದಂ ವೃಶ್ಚಿಕಾರೂಢನು (ಸಿದ್ಧರಾ. ೩-೪). [ಸಂ.]

ಪರಮಕಾಷ್ಠೆ (ನಾ). ಅಧಿಕ್ಯ ; ಪರಾಕಾಷ್ಠೆ : ನಡುಗುತೆ ಬೆಮರ್ದು ಭೀತಿಯ ಪರಮಕಾಷ್ಠೆಯಿಂ ನುಡಿಯಲಱಿಯದೆ (ತಿರುರ. ದೇ. ೧೨-೧೫); ಪರಮಪಾತಕದ ಪರಮಕಾಷ್ಠೆ ಯಾವುದು . . . ಎಂದೆನೆ ಪೇಳ್ವರು ಪರವೆಣ್ಗಳೊಡನಾಟವೆಂದು (ಕುರಾಸಾಂ. ೩೩-೧೦೮). [ಪರಮ+ಕಾಷ್ಠೆ]

ಪರಮಕೂಳ (ನಾ). ಒಬ್ಬಾತನ ಹೆಸರು : ಪರಮಕೂಳರ್ಮ್ಮಗನ್ದಿರರ ಕೇಸಿಗಳ್ . . . ಪ್ರಸಾದಂಗೆಯ್ದಾರ್ (ಎಕ, III, ತಿರುದು. ೧-೭ ; 726).

[?]

ಪರಮಕೃಪೆ (ನಾ). ಅಧಿಕವಾದ ದಯೆ,— ಕರುಣೆ : ಪರಮಕೃಪೆಯಿಂದೆ ಕುಲಚರಿಯರ ಭಕ್ತಿಗೆ ಚಾರುತರದ ಗಣಪದಮಂ ಕೊಟ್ಟು (ತ್ರಿಪುವಿ. ೩೩-೮೯). [ಪರಮ+ಕೃಪೆ]

ಪರಮಕೋಟಿ (ನಾ). =ಪರಮಕಾಷ್ಠೆ : ಅಹಮಿಂದ್ರರ್ . . . ಪಾಪಹರಂಗೆಜಗುವರೆಸಿದ ಮಹಿಮೆಯ ಪಬುಗಟ್ಟಿದ ಪರಮಕೋಟಿಯೊಳಿರ್ದರ್ (ಶಾಂತಿಪು. ೯-೧೨೪); ಅಕ್ಷೂಣಲಕ್ಷಣಲಕ್ಷಿತಂಗಳಪ್ಪ ಪುತ್ರನಂಗಪ್ರತ್ಯಂಗಂಗಳಂ ನೀಡುಂ ಭಾವಿಸಿ ನೋಡಿ ಸಂಸಾರಸುಖದ ಪರಮಕೋಟಿಯನೆಯ್ದಿದಂತಾಗಿ (ಚಂದ್ರಪು. ೬-೧೦೨ ಪ). [ಪರಮ+ಕೋಟಿ]

ಪರಮಗತಿ (ನಾ). ೧. ಅತ್ಯುನ್ನತವಾದ ಸ್ಥಾನ; ಮೋಕ್ಷ : ಪರಮಗತಿಯೆಂಬುದು ನೆರಮನೇ ಹಟ್ಟಿಯೋ ? (ಗಾಧ). ೨. ಶ್ರೇಷ್ಠವಾದ ಆಶ್ರಯ,—ದಿಕ್ಕು : ನಾನು . . . ಅನುಭವದಿಂದ ಹೆಂಗಸರಿಗೆ ಪತಿಯೇ ಪರಮಗತಿಯೆಂದು ತಿಳಿದೆನು (ಕಪಾಕುಂ. ೧೨೦). ೩. ಮುಖ್ಯವಾದ ಗುರಿ ; ಮೂಲೋದ್ದೇಶ. [ಪರಮ+ಗತಿ]

ಪರಮಗುಣ (ನಾ). ಶ್ರೇಷ್ಠವಾದ ಗುಣ : ಪರಮಗುಣಪರೀತಕಾವ್ಯರತ್ನಾಕರಪರುಪಾರಮನೆಯ್ದುಗುಂ ಮಹಾತ್ಮಂ (ಕವಿಗಾ. ೩-೨೩೦); ಪರಮಗುಣಾಂಬುರಾಶಿ ಜಿನಧರ್ಮಮರುತ್ಪಥತೀರತರಿ ವಾಗ್ವಿಂಸದೆ ವಜ್ರವೇದಿಕೆಯೊಳಿಂದೆಡೆಯಂ (ಧರ್ಮಾಮೃ. ೯-೨೩೬); ಪರಮಗುಣಮೊಂದೆ ಸಂಯಮಿಗೆ (ಪುಷ್ಪಪು. ೧೩-೫೨). [ಪರಮ+ಗುಣ]

ಪರಮಗುರು (ನಾ). ಶ್ರೇಷ್ಠನಾದ ಗುರು,—ಆಚಾರ್ಯ : ತದನಂತರಂ ಭೂಚರ ಪರಮಗುರು . . . ಇಂತೆಂದು ಬೆಸಸುಗುಂ (ಶಾಂತಿಪು. ೧೨-೬ ಪ) ; ಎನಗಬ್ಜಗರ್ಭ ನೀಂ ಗುರು ನಿನಗಂ ಪರಮಗುರು ವಿಷ್ಣು (ಜಗವಿ. ೧-೨೩) ; ಪತಿಯೆ ಪರಮಗುರು. (ಹದಿಬ. ೩-೪).

[ಪರಮ+ಗುರು$_2$]

ಪರಮಜಾತಿ(ನಾ). [ಜೈನ]ಪಾರಿವ್ರಾಜಕ ಲಕ್ಷಣವಾದ ಜಾತಿಯ ನಾಲ್ಕುಪ್ರಕಾರಗಳಲ್ಲಿ ಒಂದು : ದಿವ್ಯಜಾತಿಯಿಂದಹಮಿಂದ್ರತ್ವಮುಂ . . . ಪರಮಜಾತಿಯಿಂದಮಾರ್ಹಂತ್ಯಮುಂ . . . ಪಡೆಯಲಕ್ಕುಂ (ಜಾವುಂಪು. ೨೨೮). [ಪರಮ+ಜಾತಿ]

ಪರಮಜಿನ (ನಾ). [ಜೈನ] ಶ್ರೇಷ್ಠನಾದ ಅರ್ಹಂತ : ಪರಮಜಿನ ಶಿಷ್ಯರಂ ಗಣಧರರೆಂ ಮಕುಟಾಗ್ನಿಯಿಂದಮಗ್ನಿಕುಮಾರರ್ ಸುರಪತಿಮತದಿಂದಂ ಸಂಸ್ಕರಿಸಿದರ್ (ಶಾಂತಿಪು. ೧೩-೩೮); ಪರಮಜಿನನೆಂಬ ಗುಣಗಣಸುರತ್ನನಿಧಿಗಿಂದ್ರರೆಂಬ ತರುಗಳ್ ಬೀಟಲ್ವಂದಿರಿಂತರ್ದುವು ತತ್ಪತ್ಕರಶಾಖಾಳಿತಳಶಧಾರಾಕ್ಷೀರಂ (ಚಂದ್ರಪು. ೧೨-೧೨೬) ; ಪರಮಜಿನ ಪದಾಂಭೋಜಾತದೊಳ್ ಭೃಂಗಮಾಲಾಪರಿಕರಮೆನೆ ಕಣ್ಗಳ್ . . . ದೇವತಾನಿಷ್ಠನಾದಂ (ಆಸಂಪು. ೪-೬೫). [ಪರಮ+ಜಿನ$_2$]

ಪರಮಜಿನೇಂದ್ರ (ನಾ). =ಪರಮಜಿನ : ಪರಮಜಿನೇಂದ್ರವಾಣಿಯೆ ಸರಸ್ವತಿ ಬೇಱದು ಪೆಣ್ಣ ರೂಪಮಂ ಧರಿಯಿಸಿ ನಿಂದುದಲ್ತು (ಆದಿಪು.೧-೯); ಪರಮಜಿನೇಂದ್ರಧರ್ಮಪರಿಪಾಲನಶೀಲಸಮರ್ಥನಂ . . . ಪಡೆವನ್ನೆಗಂ (ಸುಕುಮಾ. ೧೦-೩೦). [ಪರಮ+ಜಿನೇಂದ್ರ]

ಪರಮಜ್ಞಾನ (ನಾ). ೧. ಶ್ರೇಷ್ಠವಾದ ಅರಿವು,—ತಿಳಿವಳಿಕೆ : ಪರಮಜ್ಞಾನವೆಂಬ ಸಸಿಗೆ ಗುರುಭಕ್ತಿಯೆಂಬ ಭೂಮಿಯ ಪಣ್ಣ ತಂದು ದಾತೆಯುಂ ಕಟ್ಟಿದೆ (ಅಪಚಂ. ೪. ೩೫೮-೯೬೯); ಬುದ್ಧನು . . . ಪರಮಜ್ಞಾನವನ್ನು ಕಂಡುಕೊಂಡ ದಿವಸ ನೈಶಾಖಕುಳ್ಳ ಪೂರ್ಣಮಾ (ರಾಮಾಂಜ. ೬೯). ೨. [ಜೈನ] ಕೇವಲಜ್ಞಾನ : ಪರಮಜ್ಞಾನನಿಧಾನದೀಶ್ವರನೊಳಾಯುರ್ವಾನಮಗೋತ್ರಂಗಳಂ ಸರಿಕಂಡಿರ್ದ ಮಹಾನುಭಾವರಿರ್ (ಆಸಂಪು. ೧೪-೫೧). [ಪರಮ+ಜ್ಞಾನ]

ಪರಮಜ್ಞಾನಿ (ನಾ). ಶ್ರೇಷ್ಠವಾದ ಅರಿವುಳ್ಳವನು : ಪರಮಜ್ಞಾನಿಯೆ ವಿವೇಕವಿಳಕರವೋಲ್ ಬಾಲರ ತಲೆಯನರಿದು ತಂದೆಯೊ (ಗದಾಯುಃ. ೯-೩೪) ; ಪರಮಜ್ಞಾನಿ ಮರಳ್ವನೇ ಪೆಜರ್ಗೆ (ಪುಷ್ಪಪು. ೧೩-೯೧). [ಪರಮ+ಜ್ಞಾನಿ]

ಪರಮಜ್ಯೋತಿ (ನಾ). ಅಲೌಕಿಕವಾದ ತೇಜಸ್ಸುಳ್ಳವನು ; ಪರಮಾತ್ಮ ; ಪರಂಜ್ಯೋತಿ : ಪುರುಷಾಕಾರತ್ರಯಮದು ನಿನ್ನ ವಿಡಂಬಮಲ್ತೆ ಪರಮಜ್ಯೋತೀ (ಜಗವಿ. ೩-೧೦೫). [ಪರಮ+ಜ್ಯೋತಿ]

ಪರಮತ (ನಾ). ೧. ಬೇರೆಯ ತತ್ತ್ವ,—ಸಿದ್ಧಾಂತ : ಪರಮತರುಚಿಯಿಂ ವಿಷಯಾನುರಾಗದಿಂ . . . ಪರಿಪಾಲಿತಶೀಲವ್ರತವಿರಮಣದಿಂದಶುಭಕರ್ಮದಾಶ್ರವಮಕ್ಕುಂ (ಅಜಿಪು. ೩-೫೭); ಪಟ್ಟೆಕ್ಕಪಣ್ಮುಖರು ಪರಮತತಪತ್ತ್ರರಣನಿರತರು (ಸೌಇಇ. XX, ೪೩-೩೭ ; 1072) ; ಪರಮತದತ್ತ ಪೊಕ್ಕಜಾವನೊಕ್ಕು (ಜೀವಸಂ. ೩೨೦-೧೪) ; ಪರಮತಗರ್ವಗಂಧಗಜಭಂಜನಕೇಸರಿ ಬಂದಂ (ನೃಪವಿ. ೧೪-೭). ೨. ಬೇರೆಯ ಜಾತಿ; ಅನ್ಯಮತ: 'ಪರಮತಸಹಿಷ್ಣುತೆ' ಪರಾ. [ಪರ$_3$+ಮತ]

ಪರಮತತ್ತ್ವ(ನಾ). ಶ್ರೇಷ್ಠವಾದ ತತ್ತ್ವ,—ಸಿದ್ಧಾಂತ : ಪರಮತತ್ತ್ವದ ನಿಜಸಂಯುಕ್ತರ ಆನು ನೀನೆಂಬ ಶಬ್ದಸುಖಿಗಳ ತೋಱಿ ಎನಗೆ (ಬಸವ. ೪೪೦) ; ಪರಮತತ್ತ್ವ ರಹಸ್ಯವನು ವಿಸ್ತರಿಸಿ(ಗಗಶಾ. ೧-೧). [ಪರಮ+ತತ್ತ್ವ]

ಪರಮತತ್ಪ (ನಾ). =ಪರಮತತ್ತ್ವ : ಜಾಣನಲ್ಲಾ ಪರಮತತ್ಪದೊಳ್. . . ಬಸವಣ್ಣ (ಬಸಪು. ೩೬-೪೯); ನರಗೆ ಬೋಧಿಸಿ ಪರಮತತ್ವವ ವರರಹಸ್ಯವನೆಲ್ಲವನು ವಿಸ್ತರಿಸುತ (ಗಗಶಾ. ೧೯-೪೩). [ಪರಮ+ತತ್ಪ$_1$]

ಪರಮತಪೋಧನ (ನಾ). ಶ್ರೇಷ್ಠನಾದ ತಪಸ್ವಿ : ಪರಮತಪೋಧನರ್ ಪುಗುವರೆಂಬುದಸಂಭವಮಲ್ತೆ ಭೋಗಭೂಚರರ ನಿವಾಸಮಂ (ಆದಿಪು. ೫-೩೬); ಪರಮತಪೋಧನರ್ಗೆ ಬೆಸಕೆಯ್ವ ಮಹಾತ್ಮರೆ ಸೌಖ್ಯ ಭಾಜನರ್ ಧರಣಿಯೊಳ್ (ಧರ್ಮಾಮೃ. ೯-೧೩೬); ಪರಮ ತಪೋಧನನಂ ಬಲ್ಲರಡಿಯಮೊಲೆಸುತ್ತೆ ನುಡಿದ ಕತದಿಂ ಧರೆಯೊಳ್ ಕರತಿಗಳಾಗಿರಿ ನೀಂ (ನೃಪವಿ. ೨೨-೨೬). [ಪರಮ+ತಪೋಧನ]

ಪರಮತಪೋನಿಧಿ (ನಾ). =ಪರಮತಪೋಧನ : ಪರಮತಪೋನಿಧಿಯೆನಿಸಿದ ಗುರುವಿಂಗಭಿವಂದಿಸುತ್ತೆ ಹಾರೀತಂ ಕುಳ್ಳಿರೆ(ಕಾದಂಪು.೨೬೪). [ಪರಮ+ತಪೋನಿಧಿ]

ಪರಮತವಾದಿ (ನಾ). ಬೇರೆಯ ಮತದ ಪರವಾಗಿ ವಾದಿಸುವವನು : ಅಖಂಡತಪ್ರತಾಪ ದಿವಾಕರಕಿರಣ ಪರಮತವಾದಿ ಮದಧಿರಾಕರಣನುಂ (ಎಕ. VIII, ಸೊರಬ. ೨೬೬-೧೨; 1070). [ಸಂ.ಪರಮತವಾದಿನ್]

ಪರಮತಸಹಿಷ್ಣುತೆ (ನಾ). ಬೇರೆಯ ಮತದ ಬಗೆಗೆ ಇರುವ ತಾಳ್ಮೆ,—ಸಹನೆ: ಪರಮತಸಹಿಷ್ಣುತೆಯ ಪಿಡಿದಾರ್ಯದ ಫಲ (ಜುಕ್ಸಾ.೮. ೧೨೩ ಪೀಠಿಕೆ). [ಪರಮತ+ಸಹಿಷ್ಣುತೆ]

ಪರಮತಾವಲಂಬನ (ನಾ). ಬೇರೆಯ ಮತವನ್ನು ಆಶ್ರಯಿಸುವುದು. [ಪರಮತ+ ಆವಲಂಬನ]

ಪರಮತಾವಲಂಬಿ (ನಾ). ಬೇರೆಯ ಮತವನ್ನು ಆಶ್ರಯಿಸುವವನು. [ಸಂ. ಪರಮತಾವಲಂಬಿನ್]

ಪರಮದರುಶನಿಕ(ನಾ). [ಜೈನ]ಶ್ರೇಷ್ಠನಾದ ದಾರ್ಶನಿಕ; ಶ್ರಾವಕರ ಹನ್ನೊಂದು ವರ್ಗಗಳಲ್ಲಿ ಮೊದಲನೆಯ ವರ್ಗಕ್ಕೆ ಸೇರಿದವನು: ಅಖಿನರ್ಘವನಾಪ್ತಂ . . . ಪರಮದರುಶನಿಕನಂತವಂ ಪ್ರಾಥಮಿಕಂ (ಸುಕುಮಾ. ೬-೩೬). [< ಸಂ. ಪರಮದರ್ಶನಿಕ]

ಪರಮದೀಕ್ಷೆ (ನಾ). ಶ್ರೇಷ್ಠವಾದ ನಿಯಮ,—ವ್ರತ : ಅಂತು ಕ್ಷೇಮಂಕರಂ ದುರಿತಾರಿಸೈನ್ಯಮುಂ ಬೆಂಕೊಳಲ್ ಬಗೆವಂತೆ ಪರಮದೀಕ್ಷೆಯುಂ ಕೆಯ್ಕೊಳಲ್ ಬಗೆದು (ಶಾಂತಿಪು. ೪-೧೧೬ ಪ); ಪರಮದೀಕ್ಷೆಗುಪದೇಶಿಸಿದಂ ವಿವೇಕಿಯೆ? (ಪುಷ್ಪಪು. ೧೩-೩೪). [ಪರಮ+ದೀಕ್ಷೆ]

ಪರಮದ್ರೋಹ (ನಾ). ೧. ಅತ್ಯಧಿಕವಾದ ದ್ರೋಹ,—ವಿಶ್ವಾಸಘಾತ. ೨. ಅತಿಯಾದ ದ್ರೋಹವನ್ನು ಬಗೆಯುವವನು :

ಪರಮದ್ರೋಹರೊಳೊಂದಿ ತನ್ನೊಳಿಱಿಯಲ್ಗೋವಿಂದರಂ ಬರ್ಪುದುಂ (ಅಜಿಪು. ೧-೩೬) ; ಪರಮದ್ರೋಹನನಾಂ ಪ್ರತಿಜ್ಞೆಯಿನೆಲೇ ಕೊಂದಪ್ಪೆಂ (ನೇಮಿಪು. ೧೨-೮೦). [ಪರಮ+ದ್ರೋಹ]

ಪರಮಧನ್ಯ (ನಾ). ಅತ್ಯಂತ ಪುಣ್ಯವಂತ : ಪರಮಧನ್ಯ ಕೃತಾರ್ಥನಾದೆನು (ಗಗತಾ. ೨೦-೩೮). [ಪರಮ+ಧನ್ಯ$_2$]

ಪರಮಪಂಡಿತೆ(ನಾ). ಶ್ರೇಷ್ಠಳಾದ ವಿದುಷಿ: ಕಯ್ಕೊಂಡ ಕಳಾಪರಿಣತೆಯೊಳ್ ಪಂಡಿತೆಯಿಂದಾಕೆ ಪರಮಪಂಡಿತೆಯಾದಳ್(ಅದಿಪು. ೩-೨೧).

[ಪರಮ+ಪಂಡಿತೆ]

ಪರಮಪತಿವ್ರತೆ (ನಾ). ಉತ್ತಮಳಾದ ಗರತಿ,—ಹದಿಬದೆ : ಪರಮಪತಿವ್ರತೆಗೆ ಗಂಡನೊಬ್ಬ (ಬಸವ. ೬೧೫); ಪರಮಪತಿವ್ರತೆಯರ ಕುಲಗುರು ಬಸವನ ಭಕ್ತಿಯಿಂದೆ ಮಾನೋನ್ನತಿಯೋಸರಿಸದೆ ಸಭೆಯೊಳ್ಮಹಿಮೆಯನಿರದಾಂತೇಳ್ತಂದು ದೇವಿ ಗೃಹಮಂ ಪೊಕ್ಕಳ್ (ವೃಷವಿ. ೮-೩೮).

[ಪರಮ+ಪತಿವ್ರತೆ]

ಪರಮಪತ್ರಾನ್ವಿತ (ನಾ). ೧. ಶ್ರೇಷ್ಠವಾದ (ತಾವರೆ) ಎಲೆಗಳಿಂದ ಕೂಡಿರುವುದು ; ಕೊಳ. ೨. ಶ್ರೇಷ್ಠವಾದ ವಾಹನದಿಂದ ಕೂಡಿರುವವನು. ೧, ೨ : ಹರನಂತೆ ವಿಷಧಾರಿ . . . ಆ ಕರಕಮಲ ಸಂಗಿಯೊಲ್ ಪರಮಪತ್ರಾನ್ವಿತಂ ಪರಮಪತ್ರಾನ್ವಿತನೊಲಾಸರಸಿ ಕಣ್ಗೆಸೆದುದು (ಚಿಬಪು. ೪೫-೪೯). [ಪರಮ+ಪತ್ರಾನ್ವಿತ]

ಪರಮಪದ (ನಾ). ೧. ಅತ್ಯುನ್ನತವಾದ ಸ್ಥಾನ,—ಪದವಿ. ೨. ಮೋಕ್ಷ ; ಕೈವಲ್ಯ : ಪುರುಪರಮೇಶ್ವರನೈದಿದ ಪರಮಪದಂ ನಮಗಮದುವೆ ನೆಲೆ ಪೆಜತುಂಟೇ (ಅದಿಪು. ೧೬-೫೭) ; ಶ್ರೀಗೆ ನೆಲೆಯೆನಿಸಿ ವಿದ್ಯಾಶ್ರೀಗಾಶ್ರಯಮೆನಿಸಿ ಪರಮಪದಮಂ ಪಡೆವುದ್ಯೋಗದಿನೊಗೆದಂ . . . ಅಭಿನವಪಂಪಂ (ಮಲ್ಲಿಪು. ೧೨-೧) : ಪರಮಪದವೀವ ಪರಮಪುರುಷೋತ್ತಮನು ಬಂದನು (ಕುವ್ಯಾಉ. ೮-೫೩) ; ಮುಕ್ತರಾದ ಜೀವರುಗಳು ಲೋಕಾಕಾಶದಲ್ಲೇ ಸರ್ವೋರ್ಧ್ವಭಾಗದಲ್ಲಿ ಸಕಲಲೋಕಗಳ ಉಪರಿಸ್ಥಾನದಲ್ಲಿರುತ್ತಾರೆ. ಅದೇ ಪರಮಪದ (ಹಿಂದಸಾ. ೮೨). ೩. ಮೋಕ್ಷ ಸ್ವರೂಪನಾದವನು; ಪರಮಾತ್ಮ : ಪರಮಪದನಾತನಾ ಮುರಹರನನೊಡಂಬಡಿಪೊಡೆನ್ನ ನಣ್ಪಿನ ನುಡಿಯೊಳ್ ಪುರುಳಿಲ್ಲ (ಜಗವಿ. ೧೧-೨೭). [ಪರಮ+ಪದ$_2$]

ಪರಮಪದವಿ (ನಾ). =ಪರಮಪದ ೧ : ಅಮಿತದಾನಿ ಗುಣಗಣದ ಪರಮಪದವಿಗೆ ಮೊದಲೆಂಬುದನೆನಿಸಿ ನೆಗಟ್ಟುಮಾ ನೃಪನುದಾತ್ತಗುಣಗಣರ ತುತ್ತತುದಿಯೊಳನೂನಂ (ಶಾಂತಿಪು. ೧-೭೦) ; ಪರಮಪದವಿಯ ನಿಮ್ಮ ಕೊರಳಲ್ಲಿ ಕಟ್ಟಿಕೊಳ್ಳಿ, ಪರಮಪದವಿಯ ನಿಮ್ಮ ತಲೆಯಲ್ಲಿ ಹೊತ್ತುಕೊಳ್ಳಿ, ಎನಗೆ ನಿಮ್ಮ ತೊತ್ತುತನವೇ ಸಾಕು (ಗಜೇವ. ಕ. ೨೦೩-೯೦).

[ಪರಮ+ಪದವಿ]

ಪರಮಪದಸ್ಥ (ನಾ). ಪರಮಾತ್ಮ : ಕಸ್ತೂರಿಗಂಧಿಯರ್ ಬನದೊಳು ಬಹು ಫಲವಸ್ತುಗಳನು ಸೇಂದಿಕೊಂಡು ಮುಸ್ತೈದೆಯರಾಗಿ ಬಂದರು ಪರಮಪದಸ್ಥ ಶ್ರೀಕೃಷ್ಣನಿರ್ದೆಡೆಗೆ (ಮೋಹತ. ೪-೬೧). [ಸಂ.]

ಪರಮಪವಿತ್ರ(ಗು). ೧. ಅತ್ಯಂತ ಪಾವನವಾದ ; ಬಹಳ ಪೂಜ್ಯವಾದ : ಶುಭಪರಿಣಾಮದೊಳ್ ನೆಗಟ್ ಪರಮಪವಿತ್ರೋತ್ತಮಪಾತ್ರಕ್ಕೆ ಶ್ರೀಷೇಣಂ . . . ಪಾತ್ರದಾನಮನಿತ್ತಂ (ಶಾಂತಿಪು. ೯-೭೨ ವ). (ನಾ). ೨. ಬಹಳ ಪಾವನನಾದವನು ; ಅತ್ಯಂತ ಪೂಜ್ಯನಾದವನು : ಪರಮಪವಿತ್ರನ ಕರಸರಸಿರುಹಪುಟಾಂತರದೊಳ್ . . . ಅತಿಮುದದಿಂ ಪರಮಾನ್ನಮನಿಕ್ಕಿದಂ (ವರ್ಧಪು. ೧೫-೨೧). ೩. ಬಹಳ ಶುದ್ಧನಾಗಿರುವವನು,—ಸ್ವಚ್ಛನಾಗಿರುವವನು : ಪರಮಪವಿತ್ರನಂತೆ ಧರೆ ನೀರಜಮಾದುದು (ಅನಂಪು. ೫-೩). [ಪರಮ+ಪವಿತ್ರ]

ಪರಮಪವಿತ್ರೆ (ನಾ). ಬಹಳ ಪೂಜ್ಯಳಾದವಳು ; ಅತ್ಯಂತ ಪಾವನೆ : ಪರಮಪವಿತ್ರೆ ಪುಲೋಮಪುತ್ರೆ ಪರಿವಾರದೇವೀಸಮನ್ವಿತೆ ಪೋಗಿ ಮಹಾದೇವಿಯ ಪ್ರಸೂತಿಕಾನಿಕಾಯಮಂ ಪೊಕ್ಕು (ಶಾಂತಿಪು. ೧೦-೫ ವ). [ಸಂ. ಪರಮಪವಿತ್ರಾ]

ಪರಮಪಾತಕ (ನಾ). ೧. ಅತ್ಯಧಿಕವಾದ ಹೀನಕಾರ್ಯ,—ಪಾಪ : ಪ್ರಾಣಿರಕ್ಷಣಮೆ ಪರಮಧರ್ಮಂ ಪ್ರಾಣಿವಧೆಯೆ ಪರಮಪಾತಕಂ (ಪಂಚತಂ. ೫೦-೨೧); ಅರಸನಾದಡೆಯು ನಿರಪರಾಧಿಯನಿಂತು ಕೊಲುವನೆ ಪರಮಪಾತಕವಾಗದೇ (ಬಸಪು. ೨೮-೩೧). ೨. ಅತ್ಯಂತ ಹೀನಕಾರ್ಯ ಮಾಡುವವನು : ಅವನೊಬ್ಬ ಪರಮಪಾತಕ (ರೂಢಿ).

[ಪರಮ+ಪಾತಕ]

ಪರಮಪಾತಕಿ (ನಾ). ಅತ್ಯಂತ ಘೋರವಾದ ಕಾರ್ಯವನ್ನು ಮಾಡಿದ ವ್ಯಕ್ತಿ ; ಮಹಾಪಾಪಿ : ಪರಮಪಾತಕಿಯಾದೆ ವೈಜೀಗೊರವನೆಲ್ಲಿಗೆ ಸರಿದನೋ ಆಕರಿಸಿಕೊಳ್ಳದೆ ತೋಱು ನೀ (ಬಸಪು. ೫೨-೬). [ಪರಮ + ಪಾತಕಿ]

ಪರಮಪಾವನ (ಗು). ೧. ಬಹಳ ಪರಿಶುದ್ಧವಾದ ; ಅತ್ಯಂತ ಪವಿತ್ರವಾದ : ಮಿಥ್ಯಾಜ್ಞಾನಿ ಭವಸುಖಮನೊಲ್ವವೊಲೇನೊಲ್ಗುಮೆ ಪರಮಪಾವನಜ್ಞಾನಪರಂ (ಮಲ್ಲಿಪು. ೧೩-೧೬೩); ಪರಮಪಾವನ ವರಸಿದ್ಧ ಬೆಳೆದನು ಸುರಮ್ಯಶಿವನ ಲೀಲೆಯಲಿ (ಸಿದ್ಧಪು. ೩-೬೩). (ನಾ). ೨. ಬಹಳ ಪರಿಶುದ್ಧನಾದವನು ; ಅತ್ಯಂತ ಪವಿತ್ರನಾದವನು : ರಾಮನಾಥನನರ್ಚಿಸಿದವರು ಪರಮಪಾವನರು (ಬಸಪು. ೫೧-೬೦).

[ಪರಮ + ಪಾವನ]

ಪರಮಪಾವನೆ (ನಾ). =ಪರಮಪವಿತ್ರೆ : ವರರೂಪವತಿ ತಾನೆಂದು ಪರಮಪಾವನೆಯೆಂದು ಬಱಿದೆ ಬೆಱೆಯದನುಸರಿಸುವುದಾತ್ಮವಲ್ಲಭನ (ಹದಿಬ. ೩-೩೧). [ಸಂ. ಪರಮಪಾವನಾ]

ಪರಮಪುರುಷ (ನಾ). ೧. ಶ್ರೇಷ್ಠವ್ಯಕ್ತಿ ; ಬಹಳ ಉತ್ತಮನಾದವನು : ಸರಸಿಜಾನನೆ . . . ಕರ್ಪುರದ ವೀಳ್ಯಂಗಳ ಪರಮಪುರುಷಂಗಿತ್ತು . . . ಸಂತೋಷಶರಧಿಯೊಳಗೋಲಾಡುತಿರ್ದಳು (ತುರಂಗ. ೯೨-೧೩). ೨. ದೇವಾಧಿದೇವ; ಪರಮಾತ್ಮ : ಪರಮಪುರುಷತ್ರಯ ಪರತ್ರವಿಚಿತ್ರಚಾರಿತ್ರ ಪರಮಪರ ಪರಮಾತ್ಮ . . . ಚಿತ್ತೈಸು (ಬಸಪು. ೬೧-೪೫); ಪದುಮನಾಭ ಪರಮಪುರುಷ ಪರಂಜ್ಯೋತಿಸ್ವರೂಪ (ಪುರಂದ. ೪-೮೧-೧) ; ಇವನೇ ಪರಮಸಿದ್ಧನು, ಪರಮಯೋಗೀಶ್ವರನು, ಪರಮಪುರುಷನು (ಹಿಂದಸಾ. ೯೭). [ಪರಮ+ಪುರುಷ]

ಪರಮಪುರುಷಾರ್ಥ (ನಾ). ೧. ಮನುಷ್ಯನು ಸಾಧಿಸಬೇಕಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ನಾಲ್ಕು ಗುರಿಗಳಲ್ಲಿ ಕೊನೆಯದು ಹಾಗೂ ಅತ್ಯಂತ ಶ್ರೇಷ್ಠವಾದುದು ; ಮುಕ್ತಿ : ಪರಮಪುರುಷಾರ್ಥಮಿರ್ದುದು ಚರಮದೊಳನ್ನೆವರಮುಟಿದ ಪುರುಷಾರ್ಥದೊಳಾಚರಿಸುವುದು ತಕ್ಕುದು (ಪಂರಾಮಾ. ೯-೧೨೯); ಪರಮಪುರುಷಾರ್ಥಮಂ ವಿಸ್ತರದಿಂ ಸಾಧಿಸುವೆಂ (ನೇಮಿಪು. ೧-೯೫); ಪರಮಾತ್ಮಪ್ರಾಪ್ತಿಯೇ ಪರಮಪುರುಷಾರ್ಥವೆಂದು ತಂತ್ರವಾರ್ತಿಕ ವ್ಯಾಕರಣಾಧಿರಕಣದಲ್ಲಿ ಕುಮಾರಿಲಭಟ್ಟಾಚಾರ್ಯರು ನಿರೂಪಿಸಿರುವರು (ಹಿಂದಸಾ. ೧೭೨). ೨. ದೊಡ್ಡಸಾಧನೆ; ಅತಿಮುಖ್ಯವಾದ ಸಿದ್ಧಿ: ವಿಶ್ವದ ಅನಂತತೆ – ಗಾಂಭೀರ್ಯಗಳನ್ನೂ ಅನುಭವಿಸಿ, ಆನಂದಿಸುವ ಭಾಗ್ಯವನ್ನು ಪಡೆಯಬೇಕು. ಈ ಆನಂದವೇ ಪರಮಪುರುಷಾರ್ಥ (ಋಕ್ಸಾರ. ೨. ಪೀಠಿಕೆ); ಶ್ರೀರಾಮಪ್ರೇಮದೊಳೆ ಕಂಡಳ್ ಜನಕಜಾತೆ ಜೀವನದ ಪರಮಪುರುಷಾರ್ಥಮಂ (ಶ್ರೀರಾಮಾ. ೫೪-೧೭).

[ಪರಮ + ಪುರುಷಾರ್ಥ]

ಪರಮಪ್ರಭಾವ (ನಾ). ೧. ಅಧಿಕವಾದ ಹಿರಿಮೆ,—ಘನತೆ. ೨. ಬಹಳ ಘನತೆಯುಳ್ಳವನು: ಪರಮಪ್ರಭಾವರಂ ಶ್ರೀಧರದೇವರಂ . . . ಅಖಿಳಾವನೀತಳಂ ಕೀರ್ತಿಸುಗುಂ (ಸುಕುಮಾ. ೧-೨೧).

[ಪರಮ + ಪ್ರಭಾವ]

ಪರಮಪ್ರಮಾಣ (ನಾ) ೧. ಪರಮಾವಧಿ ; ಉನ್ನತ ಮಟ್ಟ : ಪರಮಪ್ರಮಾಣಮಜುಸಾನಿರಂಬರಂ ಮತ್ತೆ ಮಧ್ಯಮಸ್ಥಿತಿ ನಾಲ್ಕಾನಿರ ಮಧಮಮಾತ್ರವಿರ್ಘಾನಿರಂ ಶರಾಸನವದು ಕ್ರಮುಕ್ರಮದಿಂದಂ (ಶಾಂತಿಪು. ೬-೧೦೩). ೨. ಅತ್ಯಂತ ನಿರ್ಧಾರಕವಾದ ಆಧಾರ : ಅವರ ಮಾತನ್ನೇ ಪರಮಪ್ರಮಾಣವೆಂದು ಎಲ್ಲರೂ ಒಪ್ಪಿಕೊಂಡರು (ರೂಢಿ). [ಪರಮ+ಪ್ರಮಾಣ]

ಪರಮಪ್ರಸಾದ(ನಾ). ೧. ಅತ್ಯಧಿಕವಾದ ಅನುಗ್ರಹ,—ದಯೆ : ಕ್ಷೇಮಂಕರನುಹಾರಾಜಂ ಪರಿತೋಷಪ್ರಾದುರ್ಭಾವಪರಿಪ್ಲುತಪರಮ ಪ್ರಸಾದಸ್ಫೋರಮುಖಂ ಪ್ರಿಯಾತ್ಮಜಾನನಾರವಿಂದನಿರೀಕ್ಷಣಾನಂತರಂ (ಶಾಂತಿಪು. ೪-೬೭ಪ). ೨. [ವೀಶೈ] ಪ್ರಸಾದಗಳಲ್ಲಿ ಒಂದು ವಿಧ : ಜೀವಭಾವದಲ್ಲಿ ಕೂಡಲಿಕ್ಕಾಗಿ ಪರಮಪ್ರಸಾದ ಆ ಪರಮಪ್ರಸಾದ ವ್ಯತಿರಿಕ್ತವಾಗಿ ಕಾಣಿಸಿಕೊಂಡಲ್ಲಿ ಪ್ರಸಾದವಾಯಿತ್ತು (ಸರ್ವಜ್ಞ. ೧೧೬-೬೦೪);ಪರಮಪ್ರಸಾದಮಂ ಪುಟ್ಟುರುವ ದಯಂಗ್ಯೆವುದು(ಉದ್ಭಟ. ೫-೧೦೬). [ಪರಮ+ಪ್ರಸಾದ]

ಪರಮಪ್ರಸಾದಿ(ನಾ).[ವೀಶೈ]ಪ್ರಸಾದಿಗಳಲ್ಲಿ ಶ್ರೇಷ್ಠನಾದವನು: ಇಂತಪ್ಪ ಪರಮಪ್ರಸಾದಿಗಳ ಶ್ರೀಚರಣಕ್ಕೆ ನಮೋನಮಃ ಎಂಬೆನಯ್ಯ (ಅಖಂಡೇ. ೧೫೧-೧). [ಪರಮ + ಪ್ರಸಾದಿ]

ಪರಮಪ್ರಿಯ (ಗು). ೧. ಅತ್ಯಂತ ಪ್ರೀತಿಪಾತ್ರವಾದ : ಪರಮ ಪ್ರಿಯವಸ್ತುಗಳಂ ಪರಮಪ್ರಯುತಂಗಳಂ ಸಮಂತು ನಿಜಾಂತಃಕರಣ ದೊಳಣಮುಲ್ಲಿಂಬಂತಿರುತಿರ್ಪ ಗಭೀರವೃತ್ತಿ ವಿಖ್ಯತನೆನಿಕ್ಕುಂ (ಶೃಂಗಾರ. ೨-೬೪). (ನಾ). ೨. ಅತ್ಯಂತ ಪ್ರೀತಿ,—ಮೆಚ್ಚುಗೆ : ಪರಮ ಪ್ರಿಯದಿಂ ವಿಶ್ವಂಭರಭೂಪಂ ತನ್ನನಿರದೆ ಬರವೇಬ್ದನೆನಲ್ (ಕುಸುಮಾ. ೧೫-೧೩೬); ಪರಮಪ್ರಿಯದಿಂ ಪಚಿ ತನ್ನರಸನೆನಿಪಮರಪತಿಗೆ ತೋಱಸಿ ಪತಿಬಂಧುರಮಣಿದರ್ಪಣಮೆಂಬಂತಿರಲೊಪ್ಪಿತ್ತು ದಯಭೂಧರದೊಳಿನಬಿಂಬಂ (ತ್ರಿಪುವಿ. ೨೭-೧೦೯). ೩. ಬಹಳ ಪ್ರೀತಿಪಾತ್ರನಾದ ವ್ಯಕ್ತಿ : ಪರಮಪ್ರಿಯರೆತ್ತಾನುಂ ಪರಲೋಕಪ್ರಾಪ್ತರಾದರೊಡವರ ಪರೋಕ್ಷಾಂತರದೊಳ್ ಮಱುಗುವ ಮಱುಕಂ ಕರುಣಾತ್ಮಕವಿಪ್ರಲಂಭವೆನೆ ಪೆಸರ್ವಡೆಗುಂ (ಶೃಂಗಾರ. ೪-೪೯). [ಪರಮ+ಪ್ರಿಯ]

ಪರಮಪ್ರೀತಿ (ನಾ). ಅತ್ಯಂತ ಅನುರಾಗ ; ಅತಿಶಯವಾದ ಪ್ರೇಮ : ಪರಮಪ್ರೀತಿಯಿನತಿಶಾರ್ಥರಭಕ್ತಿಯಿನಾ ಜಿನಾರ್ಚಕಕ್ರಮ ಯುಗಮಂ ಶಿರದೊಳ್ತಾಳ್ದಿ ಶಚೀಪತಿಕಿರೀಟವಿಮಿತ್ತು ಪಾದ್ಮಮಂ ನಿಜ ರುಚಿಯಿಂ (ಪುಲ್ಲಪು. ೧೨-೫೦); ಪರಮಪ್ರೀತಿಯನಪ್ಪಿಕೆಯಮ್ಮ ನಳ ಧಾತ್ರೀವಲ್ಲಭಂ ಸಿಂಹದಿಸ್ವರದೊಳ್ ಕುಳ್ಳಿರಲ್ (ನಳಚಂ. ೭೬೯).

[ಪರಮ+ಪ್ರೀತಿ]

ಪರಮಶ್ರೇಮ (ನಾ). = ಪರಮಪ್ರೀತಿ : ಪರಮಶ್ರೇಮಂ ಜನ್ಮಾಂತರದಿಂದೊಡವಂದುದೆನಿಸಿ ಗೆಡೆ ಬೆಚ್ಚವೊಲಚ್ಚರಿಯಾಗೆ ರಾಮಲಕ್ಷ್ಮೀಧರರೊಳನಾದತ್ತು ಭರತ ಶತ್ರುಘ್ನರೊಳಂ (ಪಂಂಪಾ. ೩-೧೪೩); ಪರಮ ಶ್ರೇಮಾವಸ್ಥಾಂತರದ ವಿಭೇದಕ್ಕೆ ವಿವಿಧಮಧುರೋಕ್ತಿಗಳಿಂ ವಿರಚಿಸಿದ ನುದಾಹೃತಿಯಂ ಪರಿಣತಿಯೊಳ್ (ಶೃಂಗಾರ. ೪-೪೬).

[ಪರಮ+ಶ್ರೇಮ]

ಪರಮಬ್ಬೆ (ನಾ). ಒಬ್ಬಾಕೆಯ ಹೆಸರು : ಕೂಗ್ಗರ್ಗಲ್ಲ ಬೂತುಗನರಸಿ ಪರಮಬ್ಬೆಯಾಳುತ್ತಿರೆ ಕೂಗರ್ಗಲ್ಲಗಾವುಂ ತಮ್ಮುತ್ತಿಬ್ಬೆರ್ ತುಜುಗೊಳೊಳ್ಳಾದಿ ಸತ್ತರ್ (ಎಕ. IV, ಪುಣಸೂ. ೯೨-೬ ; ಸು. 920).

[ಪರಮ + ಅಬ್ಬೆ]

ಪರಮಬ್ರಹ್ಮ (ನಾ). ಅತ್ಯಂತ ಶ್ರೇಷ್ಠನಾದ ಪರಮಾತ್ಮ; ಪರ ಬ್ರಹ್ಮ : ಪರಮಬ್ರಹ್ಮತನೂಭವರ್ ದ್ವಿಜವರರ್ ವರ್ಣೋತ್ತಮರ್... ಧರಾಮರರೀ ಬ್ರಾಹ್ಮಣರೆಂದು ಕೊಂಡುಕೊನೆದು (ಆದಿಪು. ೧೫-೨೧) ; ಪರಮಬ್ರಹ್ಮಶರೀರಪುಷ್ಪಿ ಜನತಾಂತರ್ಬಹಿಷ್ಪಿ . . . ಸರ್ವಾಂಗಸಂಪದಿ ವಿದ್ಯಾನಟ ನಾಟಕಂ ನಲಿಗೆ ಮತ್ಸ್ಯಾವ್ಯಕ್ತಲೀರಂಗದೊಳ್ (ಸಂಂಪಾಮಾ. ೧-೬) ; ಪರಮಬ್ರಹ್ಮನ ನಂದನಂ ಭರತಚಕ್ರಾಧೀಶದರ್ಪಾಪಹಂ ಚರ ಮಾಂಗಂ ಕುಸುಮೇಷು ಬಾಹುಬಲಿದೇವಂ (ಅಸಂಪು. ೧೧-೧೧).

[ಪರಮ + ಬ್ರಹ್ಮ]

ಪರಮಭಕ್ತಿ (ನಾ). ಅತ್ಯಂತ ಶ್ರೇಷ್ಠವಾದ ಭಕ್ತಿ,—ಶ್ರದ್ಧೆ : ವರಶೈವವೈಷ್ಣವಾಗಮಗಳ ಚರ್ಚೆಯಿ ಸಂಬಂಧ ಮತದಿ ಪ್ರವರ್ತಿಸಿ . . . ದೈವಜ್ಞನಾಗಿ ಶುಚಿಯೋಳರಿ ಪರಮಭಕ್ತಿಯುಂ (ನೇಮಾಂಪ. ೯) ; ಭಗವ ದಪರೋಕ್ಷವೆಂಬ ಸಾಕ್ಷಾತ್ಕಾರವಾದರೆ ಭಗವಂತನಲ್ಲಿ ನಿರಂತರ ನಿರವಧಿಕ ಪ್ರೇಮಪ್ರವಾಹವುಂಟಾಗುವುದು. ಇದೇ ಪರಮಭಕ್ತಿ (ಹಿಂದಸಾ.೨೯೨).

[ಪರಮ+ಭಕ್ತಿ]

ಪರಮಭಟಾರಕ (ನಾ). ಬಹಳ ಪೂಜ್ಯನಾದವನು ; ಒಂದು ಬಿರುದು : ಶ್ರೀಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮ ಭಟಾರಕಂ ಸತ್ಯಾಶ್ರಯಕುಳತಿಳಕಂ ಚಾಳುಕ್ಯಾಭರಣಂ (ಸೌಇಇ. XX, ೪೬-೩ ; 1072) ; ಮಹಾರಾಜಾಧಿರಾಜಪರಮೇಶ್ವರ ಪರಮಭಟಾರಕ ದ್ವಾರಾವತೀಪುರವರಾಧೀಶ್ವರ (ಎಕ. IX, ಸೊರಬ. ೧೫೫-೨ ; 1315).

[ಪರಮ+ಭಟಾರಕ]

ಪರಮಭಟ್ಟಾರಕ (ನಾ). = ಪರಮಭಟಾರಕ : ಪರಮಭಟ್ಟಾರಕಂ ಸತ್ಯಾಶ್ರಯಕುಳತಿಳಕಂ ಚಾಳುಕ್ಯಾಭರಣಂ (ಕಇಆ. ೫-೨-೧೬೯ ; 1058) ; ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕ ಸತ್ಯಾಶ್ರ ××× ನೂರ್ಮ್ಮಡಿಚಕ್ರವರ್ತ್ತಿ ಶ್ರೈಳೋಕ್ಯಮಲ್ಲದೇವರು ಕಲ್ಯಾಣ ಪುರದ ನೆಲೆವೀಡಿ ××× ಗೆಯ್ಯುತ್ತಮಿರೆ (ಕೂಲ್ಹಾಶಾ. ೧೧೧-೯ ; ?).

[ಪರಮ+ಭಟ್ಟಾರಕ]

ಪರಮಯೋಗಿ (ನಾ). ಶ್ರೇಷ್ಠನಾದ ಮುನಿ,—ಋಷಿ : ಪರಮ ಯೋಗಿಗೆ ಯೋಗನಯೋಗಘಾತಮಂ ಘಟಿಯಿಸೆ (ಶಾಂತಿಪು. ೯-೨೮).

[ಪರಮ+ಯೋಗಿ]

ಪರಮರಹಸ್ಯ (ನಾ). ಅತ್ಯಂತ ಗೌಪ್ಯ ; ಬಹಳ ಗುಟ್ಟು : ಪರಮ ರಹಸ್ಯಮಿದಂ ಸಾದರದಿಂದೇಕಾಂತದಲ್ಲಿ ಪೇಳ್ವಂ (ತ್ರಿಪುವಿ. ೨೫-೧೪) ; ಪರಮರಹಸ್ಯಮಿದಾ ಮತಮಹತ್ವಮಿದೆಮ್ಮ ಕುಬುದ್ಧಿಗಳ್ಗೆ ಗೋಚರಿಕುಮೆ. (ನ್ಯಸವಿ. ೬೯-೮೨). [ಪರಮ + ರಹಸ್ಯ]

ಪರಮರ್ಷಿ(ನಾ). = ಪರಮಯೋಗಿ : ಪರಮರ್ಷಿ ನಾರದಂ ತನಗೊರೆದು ಕೂಡೆ ತಾನುರಿಯೊಪ್ಪ ವೇಡಿಸಿದಂ (ಜೈಮಿಭಾ. ೫-೩೨).

[ಪರಮ + ಋಷಿ]

ಪರಮವ್ರತ (ನಾ). ೧. ಶ್ರೇಷ್ಠವಾದ ನೋಂಪಿ,—ವ್ರತ. ೨.[ಗಣಿತ]ಐದು ಎಂಬ ಸಂಖ್ಯೆಯ ಸಂಕೇತ: ಪುರಹರವಕ್ತ್ರಂ ಪಂಚಂ ಪರಮವ್ರತಭೂತವಿಂದ್ರಿಯಂ ಇಸುಪತ್ರಂ . . . ಐದಱ ನಾಮಂ (ನ್ಯಸಹಾ. ೯-೫). [ಪರಮ + ವ್ರತ]

ಪರಮಸುಖ(ನಾ). ೧. ಅತಿಶ್ರೇಷ್ಠವಾದ ಸಂತೋಷ,—ಆನಂದ: ಪರಮಸುಖಪದ ಶ್ರೀಧರ್ಮಕಾಮಾರ್ಥಮೋಕ್ಷಸ್ಥಿರವಿಷಯವಿಶೇಷಾವ್ಯಾನ ವಿಖ್ಯಾತ ತತ್ತ್ವಂ (ಕವಿಂಾ. ೩-೫೧೦) ; ಒದವುವುದು ನಿಷ್ಪ್ರವೀಚಾರದಿನ ವರ್ಗೇ ಮುನೋಜಪರಮಸುಖದಿನ್ನ ವರಭ್ಯುದಯಮನದನ್ನೇವೇಟ್ಟುದೊ

(ಶಾಂತಿಪು. ೯-೧೨೮); ನಿಮ್ಮ ನೋಟವನಂತಸುಖ ಕೂಟ ಪರಮಸುಖ (ಬಸವ. ೪೯೧); ಆ ದಯಾನಿಧಿಯಡಿಗೆ ಸಾರಿದೊಡಹುದು ಪರಮಸುಖ (ಕೌತಿರಾ. ೨೩-೧೩). ೨. ಪರಮಾವಧಿಯಾದ ಆನಂದ; ಮೋಕ್ಷ; ಮುಕ್ತಿ: ಅದಱಿಂ ಸಕಲಕಲಾಗಮವಿದರಿಂದಂ ತಪ್ಪದಂತು ನೆಗೞ್ದಿಂ ನೆಗೞ್ದಂದುದಿತೋದಿತ ಪರಮಸುಖಾಸ್ಪದಕ್ಕೆ ಬಗೆದಂತೆ ನೀಮೆ ಮೊದಲಿಗರಪ್ಪಿರ್ (ಆದಿಪು. ೧೫-೧೮). [ಪರಮ+ಸುಖ]

ಪರಮಸುಖಿ (ನಾ). ಅತಿಶ್ರೇಷ್ಠವಾದ ಆನಂದವನ್ನು ಹೊಂದಿದ ವ್ಯಕ್ತಿ: ಅನಾಯಾಸದಿಂದ ಮನೆಯ ಮಾಡಿ ನಿರಾಯಾಸದಿಂದ ಪರಮಸುಖಿ (ಬಸವ. ೯೧೬). [ಪರಮ+ಸುಖಿ]

ಪರಮಸ್ಥಾನ(ನಾ). [ಜೈನ](ಮೋಕ್ಷಕ್ಕೆಸಂಬಂಧಿಸಿದ) ಏಳುಬಗೆಯ ಉತ್ತಮ ಸ್ಥಿತಿಗಳು; ೧ ಒಳ್ಳೆಯ ಜನ್ಮದಲ್ಲಿ ಹುಟ್ಟುವುದು, ಒಳ್ಳೆಯ ಶ್ರಾವಕನಾಗುವುದು, ಮನೆ ತೊರೆದು ತಪಸ್ವಿಯಾಗುವುದು, ದೇವೇಂದ್ರಪದವಿ, ಚಕ್ರವರ್ತಿಪದವಿ, ಅರ್ಹತ್ಪದವಿ ಮತ್ತು ಮುಕ್ತಿ ಎಂಬ ಮೋಕ್ಷಸಾಧನೆಯ ಏಳು ಹಂತಗಳು: ಸಜ್ಜಾತಿ ಸದ್ಗೃಹತ್ವ ಪರಿವ್ರಾಜ್ಯಪದ ಸುರೇಂದ್ರತ್ವ ಸಾಮ್ರಾಜ್ಯ ಪರಮಾರ್ಹಂತ್ಯ ಪರಿನಿರ್ವಾಣಮೆಂಬೇಟುಂ ಪರಮಸ್ಥಾನನಾಮಕೃತಾನ್ವಯಕ್ರಿಯೆಗಳಂ . . . ಅಱಿಪಿ (ಆದಿಪು. ೧೫-೧೬ ಪ); ದರ್ಶನದಿಂ ಜ್ಞಾನದಿನೊಪ್ಪುವ ಪರಮಸ್ಥಾನಮನಾಂ ಪಡೆವೆನಕ್ಕೆ ಪಂಚಮಗತಿಯಂ (ಆಜಿಪು. ೨-೭೩). 'ಸಪ್ತಪರಮಸ್ಥಾನ' ಪರಾ. [ಪರಮ+ಸ್ಥಾನ]

ಪರಮಸ್ನೇಹ (ನಾ). ಉತ್ಕೃಷ್ಟವಾದ ಗೆಳೆತನ,—ಮೈತ್ರಿ: ಪರಮಸ್ನೇಹಾಮೃತಾರ್ದ್ರೇಕ್ಷಣರುಚಿನಿಚಯಂ ಸೇಸೆ ಸಂಭಾಷಣಂ ತೂರ್ಯರವಂ . . . ಒಲವು ಮೌಹೂರ್ತಮಾಗಲ್ ತದಲ್ಪೋದರಿಯೊಳ್ ವೈವಾಹವಪ್ಪನ್ನೆಗವಭಿನವವೈವಾಹದಿಂ ಕೃಷ್ಣನಿರ್ದಂ (ಜಗವಿ. ೧೧-೫೩); ಪರಮಸ್ನೇಹರಸಂ ರುಚಿಚ್ಛಲದಿನಾದಂ ನೇತ್ರದಿಂ ತಾಂ ಕಡಲ್ವರಿಯುತ್ತಿರ್ದಪುದೆಂಬವೋಲ್ ಪದೆದು ನೋಡುತ್ತುಂ (ಕುಸುಮಾ. ೧೦-೫೮). [ಪರಮ+ಸ್ನೇಹ]

ಪರಮಹಂಸ (ನಾ). ೧. ಪರಮಾತ್ಮ; ಪರಬ್ರಹ್ಮ: ಪರಮಹಂಸ ಪರಾತ್ಮ ಪರಮೇಶ್ವರ . . . ಪರೋತ್ತಮ ಕರುಣಿಸುವುದು (ಕುವ್ಯಾಅ. ೬-೮೭); ಪರಮಹಂಸಂ ಲಿಂಗ ಪದಿನಾಱು ಸ್ವರಗಳೇ ಗೋಮುಖ (ಶಂಕದಾ. ೪-೫೯). ೨. (ಧ್ಯಾನದಿಂದ ಇಂದ್ರಿಯನಿಗ್ರಹ ಮಾಡಿದ) ಶ್ರೇಷ್ಠವರ್ಗದ ಸಂನ್ಯಾಸಿ; ೧ ಕುಟೀಚಕ, ಬಹೂದಕ, ಹಂಸ, ಪರಮಹಂಸರೆಂಬ ಸಂನ್ಯಾಸಿಗಳ ನಾಲ್ಕುಪ್ರಕಾರಗಳಲ್ಲಿ ಕೊನೆಯ ವರ್ಗ: ಅಸ್ಮನ್ಮನೋ[ಸ]ಬಳಂ(?) ತೀರ್ವಡೆ ತೀರ್ಗುಮಾ ಪರಮಹಂಸಸ್ವಾಮಿಯಿಂದೆಂದು ವಿಕ್ಲಬದಿಂ ತಾಂ ಬರವೇೞ್ವುದುಂ ಪರಮಹಂಸಂ ಬಂದು ಕುಳ್ಳಿರ್ದೊಡೆ (ಸುಕುಮಾ. ೩-೬); ಯತಿಯು ಪ್ರವೃತ್ತಿಭೇದದಿಂ ಕುಟೀಚಕ ಬಹೂದಕ ಹಂಸ ಪರಮಹಂಸರೆಂದು ನಾಲ್ಕು ತೆಱನಾಗಿರ್ಪರು (ವಿವೇಕ. ೧೪೪); ನೂರಕ್ಕೆ ನೂರರಷ್ಟು ಒಳ್ಳೆಯವರಾಗಿರುವವರು ಪರಮಹಂಸರೆಂದೆನಿಸಿಕೊಳ್ಳುತ್ತಾರೆ (ಪಂಜಪಂ. ೧೨೧). ೩. ಒಂದು ಉಪನಿಷತ್ತಿನ ಹೆಸರು: ಶ್ರೀರುದ್ರ ಬೃಹದಾರಣ್ಯಕ . . . ಹಂಸ ಪರಮಹಂಸ . . . ಮುಂಡಕವೆಂಬಿವು ಮೊದಲಾದವೇ ಉಪನಿಷತ್ತುಗಳು (ವಿವೇಕ. ೪). [ಸಂ.]

ಪರಮಹಿತವ (ನಾ). ಬಹಳ ಒಳ್ಳೆಯದನ್ನುಂಟುಮಾಡುವವನು,—ಶುಭವನ್ನುಂಟುಮಾಡುವವನು: "ಆ ಪರಮಹಿತವಂ ತಕ್ಕಂ" (ಶಬ್ದಮಂ. ೪೮). [ಪರಮ+ಹಿತವ]

ಪರಮಾ (ನಾ). ಒಂದು ಬಗೆಯ ಗುಹ್ಯರೋಗ; ಮೇಹ; "ಒಂದು ಜನನೇಂದ್ರಿಯ ರೋಗ" (ಸಿರಿಕೋ. ೩೧೮); "ಸ್ತ್ರೀ ಸಂಬಂಧದಿಂದ ಬಂದ ರೋಗ, ಗನೋರಿಯಾ" (ಕಸ್ತೂಕೋ. ೫೮೧). [←ಮರಾ. ಪರಮಾ./ಸಂ.ಪ್ರಮೇಹ]

ಪರಮಾಂಡಳಿಕ(ನಾ). ಬೇರೆಯ ಮಂಡಳಿಕ; ಅನ್ಯಪ್ರಾಂತವನ್ನು ಆಳುವವನು: ಪರಮಾಂಡಳಿಕರ್ ಭಯದಿಂ ಕರಂಗಳಂ ಮುಗಿದು ಕಪ್ಪಮಂ ತಂದೀವರ್ (ಧರ್ಮಾಮೃ. ೧೧-೧೩೪). [ಪರ್ಯ+ಮಾಂಡಳಿಕ(=ಮಾಂಡಲಿಕ)]

ಪರಮಾಕೃತಿ (ನಾ). ಶ್ರೇಷ್ಠವಾದ ಸ್ವರೂಪ: ನಾಕಿಗಳಿಂದ್ರಾದ್ಯರ್ ಪರಮಾಕೃತಿ ಮರ್ಲಕ್ಷ್ಯವೆಂದೆನಲ್ ನಿನ್ನವತಾರಾಕೃತಿಯನರ್ಚಿಪರ್ (ಜಗವಿ. ೬-೧೦೭). [ಪರಮ+ಆಕೃತಿ]

ಪರಮಾಗಮ (ನಾ). ೧. ಪರಂಪರೆಯಿಂದ ಶ್ರೇಷ್ಠವಾದ ಅರಿವನ್ನು ಕೊಡುವ ಶಾಸ್ತ್ರಗ್ರಂಥ: ಪರಮಾಗಮಕೋವಿದನಪ್ಪುದು ಪೂರ್ವಕಾವ್ಯರಚನೆಗಳಂ ತಾಂ ಮೊದಲೊಳ್ಳಲ್ತಂಗಲ್ಲದೆ ಪದದೊಳ್ಬಾಣುಂ ಬೆಡಂಗುಮಕ್ಕುಮೆ ಕೃತಿಯೊಳ್ (ಕವಿರಾ. ೧-೯); ಅರಿದಿದು ಬಾಳಬಟ್ಟೆ ಪರಮಾಗಮಮಲ್ಲದೆ ಜಾರ ಚೋರ ವೀರರ ಕಥೆಯಂತೆ ಬಾಯ್ಸವಿಯ ಮಾತುಗಳಂ ಬಱಿಕೆಯ್ವ ಚರ್ಚೆಯಲ್ಲ (ಅನಂಪು. ೧-೩೬). ೨. [ಜೈನ] ಧರ್ಮಗ್ರಂಥ; ಜಿನಾಗಮ: ಉದಾತ್ತವೃತ್ತಿ ಪರಮಾಗಮಭಾವನೆ ವೃದ್ಧಸೇವೆ ಯಾನಂ ತ್ರಿಜಗದ್ಗುರುಪ್ರಣತಿಯೆಂದಿವನಾಗಳುಮೊಂದೆ ಕೀಲೆ ದಲ್ ಜಂತ್ರದ ಪಾಪೆಯಂತೊಡನೊಡರ್ಚುವನಿಂದ್ರನುಮಾ ಪ್ರತೀಂದ್ರನುಂ (ಶಾಂತಿಪು. ೬-೧೧೦); ಪರಮಾಗಮದಿಂದಲ್ಲದೆ ಪರತ್ರೆಯಂ ಪಡೆವುಪಾಯಮಿಲ್ಲ (ಧರ್ಮಾಮೃ. ೪-೫೬); ಪರಮಾಗಮಮೆಲ್ಲಮನುಚ್ಚರಿಸುವನಂತರ್ಮುಹೂರ್ತಕಾಲದೊಳೆಂಬಚ್ಚರಿವೆತ್ತ ವಾಗ್ಬಳಂ ಬಂಧುರಮಾದುದು ದುರಿತಬಳತಮೋದಿನಕರನೊಳ್ (ಚಂದ್ರಪು. ೧೪-೩೫). [ಪರಮ+ಅಗಮ]

ಪರಮಾಚಾರ್ಯ(ನಾ). ೧. ಶ್ರೇಷ್ಠನಾದ ಗುರು; ಪ್ರಾಚಾರ್ಯ: ಆ ಚಂದ್ರಪ್ರಭಜಿನನ ಮಹಾಚರಿತಪಯೋಧಿಪಾರಯಾನಕ್ಕಾನಾಲೋಚಿಸಿದೆಂ ಪ್ರಾಕ್ತನ ಪರಮಾಚಾರ್ಯಶ್ರೌತಸೇತುಬಲದಿಂದೀಗಳ್ (ಚಂದ್ರಪು. ೧-೬೭). ೨. ಶ್ರೇಷ್ಠನಾದ ವಿದ್ವಾಂಸ; ಮಹಾಪಂಡಿತ: ಅರಿದಾದಂ ಕನ್ನಡದೊಳ್ತಿರಿಕೊಱೆ ಗೊಂಡಱಿಯೆ ಪೇೞ್ವೆನೆಂಬುದಿದಾರ್ಗಂ ಪರಮಾಚಾರ್ಯರವೊಲ್ಸಯ್ತಿರಲಱಿಯರ್ಕನ್ನಡಕ್ಕೆ ನಾಡವರೋಜರ್ (ಕವಿರಾ. ೧-೪೨). [ಪರಮ+ಆಚಾರ್ಯ]

ಪರಮಾಣು(ನಾ). ೧. ಅತ್ಯಂತ ಸಣ್ಣದಾದ ವಸ್ತು; ಆಣುವಿನಲ್ಲಿ ಆಣು: ಕರಿಗಂ ಪರಮಾಣುಗಮಂತರಮಾವುದೊ ನಿಮಗಮಸುರವೈರಿಗಮೇನಂತರಮಂತೆ ನಿಮ್ಮೊಳಗ್ಗದ ಪರಶುಧರಂ ಪೊಣರ್ದು ತಾನದಂದೇನಾದಂ (ಪಂಪಭಾ. ೧೦-೬); ಪರಮಾಣುಪ್ರಾಯಂ ಗುಣಮಿರೆ ಮೆಚ್ಚುವ ಸುಜನರಿಂದೆ ದುರ್ಜನರೆಮಗಿಂ ಗುರುಗಳ್ ದೋಷಲವಮುಮಿರೆ ಪರಿಹರಿಪಂತೊಱೆ ತೋಱೆ ನುಡಿವುದಱಿಂದಂ (ಪಾರ್ಶ್ವಪು. ೧-೮೧). ೨. ಕೊಂಚ; ಅತ್ಯಲ್ಪ: ಹೇಳುವರೆ ಪರಮಾಣು ಗುಣವಾಬಾಲ ವೃದ್ಧರೊಳಿಲ್ಲ ಠಕ್ಕಿನ ಕೌಳಿಕಾಱರು ಮಾದ್ರದವರೆಲೆ ಶಲ್ಯ (ಕುವ್ಯಾಕ. ೯-೨೦). ೩. [ಜೈನ] "ಪುದ್ಗಲದ್ರವ್ಯದ ಅತಿ ಸೂಕ್ಷ್ಮಾತಿ ಸೂಕ್ಷ್ಮಭಾಗಕ್ಕೆ ಪರಮಾಣುವೆನ್ನುವರು" (ಜೈನಪ. ೩೦೭): ಅಂತು ಪರಮಾತಿಶಯರೂಪರಸಗಂಧಸ್ಪರ್ಶಗುಣವತ್ಪರಮಾಣುಪರಿವೃತಮೂರ್ತಿಯಪ್ಪ ಪರಮನ ಪರಿಪೂರ್ಣಯೌವನಶ್ರೀಯಂ ನಾಭಿರಾಜಂ ನೋಡಿ (ಆದಿಪು. ೮-೬೮); ಅಂತುಪವಾಸಕೃಶೀಕೃತಾಂಗರಾಗಿ ಪರೀರ ಕರ್ಮಪರಮಾಣುಗಳನೊಡನೊಡನೆ ತವಿಸಿ . . . ಉತ್ತರಾಶಾಭಿಮುಖರಾಗಿ ಪೋಗಿ (ಶಾಂತಿಪು. ೬-೬೧ಪ); ಪರಮಾಣುವಿನಲ್ಲಿ ರೂಪ, ರಸ, ಗಂಧ, ಸ್ಪರ್ಶ ಗುಣಗಳು ತಮ್ಮ ಪರ್ಯಾಯಗಳನ್ನನುಸರಿಸಿಯೇ ಇರುವುವು

(ಜೈನಧ. ೫೭). ೪. [ವಿಜ್ಞಾ] ವಿಭಜನೆ ಮಾಡಲು ಅಸಾಧ್ಯವಾದ ಅತಿಸೂಕ್ಷ್ಮ ಪರಿಮಾಣದ ಕಣಾಂಶ; ಮೂಲವಸ್ತುವಿನ ಅತ್ಯಂತ ಸೂಕ್ಷ್ಮಾಂಶ; ℙ 'Atom' ಎಂಬ ಆಂಗ್ಲ ಪಾರಿಭಾಷಿಕ ಶಬ್ದವನ್ನು ಕೆಲವರು 'ಅಣು' ಎಂದೂ ಕೆಲವರು 'ಪರಮಾಣು' ಎಂದೂ ಭಾಷಾಂತರಿಸುತ್ತಾರೆ: ಈ ಪ್ರಕಾರದ ಪರಮಾವಧಿಗೆ ಮುಟ್ಟದಂಥ ಅತಿಸೂಕ್ಷ್ಮಕಣಗಳಿಗೆ ಪರಮಾಣುಗಳೆಂಬ ಹೆಸರು(ಮುಂಬಯಿ. ೫-೩೩); ಆಮ್ಲಜನಕದ ಒಂದು ಪರಮಾಣು ಮತ್ತೊಂದು ಪರಮಾಣುವಿನ ಮೇಲೆ ಪ್ರಭಾವವನ್ನುಂಟುಮಾಡುತ್ತದೆ (ಜೀವಾತ್ಮ. ೧೦೩); ಪರಮಾಣುವೆಂದರೆ ರಾಸಾಯನಿಕ ವಿಕ್ರಿಯೆಗಳಲ್ಲಿ ವಿಭಾಗ ಹೊಂದದೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಅತ್ಯಂತ ಸಣ್ಣಮೂಲವಸ್ತುಭಾಗವೆಂದು ಹೇಳಬಹುದು (ಭೌತವಿ. ೨೮೧). [ಸಂ.]

ಪರಮಾಣುಮಾರ್ಗ (ನಾ). ಅತಿಸೂಕ್ಷ್ಮಘಟಕಗಳು ಚಲಿಸುವ ಹಾದಿ; ಆಕಾಶ: ಜಡದುಯ್ಯನಾ ಖಚರನಿರ್ಮರುಮಂ ಪರಮಾಣುಮಾರ್ಗದಿಂ (ಪಂಪಭಾ. ೩-೩೩). [ಪರಮಾಣು+ಮಾರ್ಗ]

ಪರಮಾತುಮ (ನಾ). = ಪರಮಾತ್ಮ ೧: ಆತುಮ ತುಂಬಿ ತುಂಬಿ ನೋಡಾ ಪರಮಾತುಮ ತುಂಬಿ ತುಂಬಿ ನೋಡಾ ಗುಹೇಶ್ವರನೆಂಬ ಲಿಂಗಕ್ಕೆಱಗಿ ನಿಬ್ಬೆಱಗಾಯಿತ್ತು ತುಂಬಿ ನೋಡಾ (ಅಪಚಂ. ೬೯-೩೦೬); ಪ್ರತ್ಯಗಾತ್ಮನನಾತ್ಮರಿಗೆ ನಿಜಸತ್ಯವನು ಸತ್ಯಂಗಳಿಗೆ ಮತಿ ವೃತ್ತಿ ಲಕ್ಷಿಸಲಱಿವುದೈ ಪರಮಾತುಮನನು (ನಿಭಾಗ. ೯-೩-೨೫).

[ಪರಮ + ಆತುಮ]

ಪರಮಾತ್ಮ (ನಾ). ೧. ಆತ್ಯಂತಿಕವಾದ ಚೈತನ್ಯ; ದೇವರು; ಪರಬ್ರಹ್ಮ: ನೆಗೞ್ದ ಮಹಾತ್ಮಂ ನರಸಿಂಹಸೞಿವಿನೊಳ್ ಪರಮಾತ್ಮಂ (ಪಂಪಭಾ. ೧-೩೧); ಶುದ್ಧಾತ್ಮ ಪರಮಾತ್ಮರಿಬ್ಬರೂ ಒಂದು ರತ್ನಕ್ಕೆ ಹೆಣಗಾಟವನಾಡಿಹರು (ಬಸವ. ೯೦೫); ಪರಮಾತ್ಮ ಪರಮೇಶ್ವರ . . . ಪರಂಜ್ಯೋತಿಸ್ವರೂಪ ನಿರೂಪ ಚಿತ್ಕೃಷು (ಬಸಪು. ೬೧-೪೫); ನಿಜ ನಿರ್ಮಳವೆನಿಪ ಪರಮಾತ್ಮ ಜಿನುಮಯರೂಪ ತಾನು (ಕುವ್ರಾಜ್ಯೋ. ೩-೬೬); ಪವದಿಸು ಪರಮಾತ್ಮನೆ ನೀನು ಭವರೋಗವೈದ್ಯ ಭಕ್ತರ ನಿಧಿಯೆ (ಪುರಂದ. ೩-೧೩೧ ಪಲ್ಲವಿ). ೨. [ಜೈನ] ಜಿನೇಶ್ವರ; ತೀರ್ಥಂಕರ: ಪರಮಾತ್ಮಂ ನಿಷ್ಕಿತಾತ್ಮಂ ಜಿನಪತಿ ಪರಮಸ್ವಾಮಿ ಸದ್ಧರ್ಮಮೂರ್ಮಂ ಗುರುವಂದ್ಯಂ ಪರ್ಧಮಾನವ್ರತಿಪತಿ ಸುಕುಮಾರಂ ಕಥಾನಾಯಕಂ (ಸುಕುಮಾ. ೧-೬೦); ಏಕೊರೆಯನಾತ್ಮನೆಂದೊಡನಾದಿಯನಂತಂ ನಿರಕ್ಷಯಂ ಚಿನ್ಮಯ ನಿಃಪ್ರಾದೇಶಿಕನೆಂದಾತನುಪಾದೇಯಂ ಮುಕ್ತಿಮುಕ್ತನುಂ ಪರಮಾತ್ಮಂ (ಯಶೋಧ. ೪-೨೬); ಜಿನನಿಗೆ ಅರ್ಹನ್, ಜಿನೇಶ್ವರ, ತೀರ್ಥಂಕರ, ಪರಮೇಷ್ಠಿ, ವೀತರಾಗ, ಪರಮಾತ್ಮ ಮೊದಲಾದ ಹೆಸರುಗಳುಂಟು (ಭಾತತ್ತ್ವ: ೨೨೬). ೩. ಸಿದ್ಧಿಯನ್ನು ಪಡೆದವನು; ಸಿದ್ಧ; ℙ "ಕೇವಲಜ್ಞಾನದಿಂದ ಲೋಕಾಲೋಕಗಳನ್ನು ಅರಿತವನು ಮತ್ತು ಆತ್ಮಾನುಭವದಿಂದುಂಟಾದ ಅತೀಂದ್ರಿಯಸುಖದಿಂದ ಸಂತೃಪ್ತನಾದವನು" (ಜೈನಕೋ.೧೫೯): ಯೋಗಮರ್ಹನಮೊದಂ ತಮಗೆಂದುಮಿಲ್ಲೆನಿಸಿಯುಂ ಸಿದ್ಧರ್ಳೆಂಬ ಪೆಂಪಿನಮೂರ್ತರ್ ಪರಮಾತ್ಮರುದ್ಧರಿಸುಗೆಮ್ಮಂ ಸಿದ್ಧಿಯಪ್ಪನ್ನೆಗಂ (ಪಾಪ್ರಪು. ೧-೨); ಇಲ್ಲಿಂದ ಮುಂದಿನ ಆತ್ಮನು ತನ್ನ ಜ್ಞಾನ ದರ್ಶನಗಳಿಗೆ ಇಂದ್ರಿಯ ಮೊದಲಾದುವುಗಳ ನೆರವನ್ನು ಅಪೇಕ್ಷಿಸುವುದಿಲ್ಲ. ಅದರಿಂದ ಕೇವಲಿಯೆನ್ನಿಸಿಕೊಳ್ಳುವನು. ಇವನಿಗೇ "ಪರಮಾತ್ಮಾ"ಎಂಬ ಸಂಜ್ಞೆಯು ಸಲ್ಲುವುದು (ಜೈನಸ. ೨೮೭); ೪. [ದ್ವೈತ]ಜೀವಾತ್ಮಕ್ಕಿಂತ ಭಿನ್ನವಾದ ಆತ್ಮ; ಇಪ್ಪತ್ತು ದ್ರವ್ಯಗಳಲ್ಲಿ ಒಂದು: ಪರಮಾತ್ಮ, ಲಕ್ಷ್ಮಿ, ಜೀವಾತ್ಮ. . . ಪ್ರತಿಬಿಂಬ ಎಂದು ದ್ರವ್ಯಗಳು ಇಪ್ಪತ್ತು (ಹಿಂದುಸಾ. ೨೬೫); ಪರಮಾತ್ಮ ಜೀವರು ಸಹಜವಾಗಿ ಭಿನ್ನರಾಗಿರುವರು (ಶಕ್ತಿವಿ. ೧೭). [ಸಂ. ಪರಮಾತ್ಮನ್]

ಪರಮಾದರ (ನಾ). ಬಹಳವಾದ ಆಸಕ್ತಿ: "ಅತೀವತ್ಪರಿತಂ ವಿಭೂತಿ ಪರಮಾದರಮೆಂಬಿವು ಸಂಭ್ರಮಾಭಿಧಾಯಕಮಕ್ಕುಂ" (ಪಸ್ತುಕೋ. ೧೩೨-೮೫); ಸಹಸ್ರಪುಸ್ತಕಪ್ರಸೆರಮನ್ತುಮುಟ್ಟೆ ಪರಮಾದರದಿಂ ಬರೆಯಲ್ಕೆವೇಟ್ಟ ಪೆಂಪಸದಳಂ (ಶಾಂತಿಪು. ಪರಿ. ೧-೨); ಮಲಗಿ ಪರಮಾದರದಿ ಪಾಡಲು ಕುಳಿತು ಕೇಳುವ . . . ನಲಿದರೆ ಸಲಿವೆ ನಿಮಗೆಂಟಾ ಸುಲಭನೋ ಹರಿ (ಹಸಾರ. ೨-೫). [ಪರಮ + ಆದರ]

ಪರಮಾದೇಶ (ನಾ).(ನ್ಯಾಯಕ್ಕೆ ಅನುಸಾರವಾದ) ಪರಮಾವಧಿಯಾದ ಅಪ್ಪಣೆ,—ಆಜ್ಞೆ: ಉಚ್ಚತಮನ್ಯಾಯಾಲಯದವರು ಅಯಾ ಸಂದರ್ಭದಲ್ಲಿ ಉಚಿತವಾಗಿರಬಹುದಾದಂತೆ, ೧ ಬಂದೀಪ್ರತ್ಯಕ್ಷೀಕರಣ, ೨ ಪರಮಾದೇಶ . . . ಉತ್ಪ್ರೇಕ್ಷಣಸ್ವಭಾವದ ನಿರೂಪಲೇಖವೂ ಸೇರಿಯಾವ ನಿರ್ದೇಶವನ್ನಾಗಲಿ, ಆದೇಶವನ್ನಾಗಲಿ ಅಥವಾ ನಿರೂಪಲೇಖವನ್ನಾಗಲಿ ಸಾದರುಮಾಡಲು ಶಕ್ತರಾಗಿ ಇರತಕ್ಕುದು (ಭಾಧಾನ. ೧೯).

[ಪರಮ+ಆದೇಶ]

ಪರಮಾಧಿಕಾರ (ನಾ). ಅತ್ಯುನ್ನತವಾದ ಆಡಳಿತ ನಡೆಸುವ ಹಕ್ಕು; ಸಂಪೂರ್ಣಾಧಿಕಾರ: ಅವನ ಸರ್ವೋದ್ಯಮ ಸರ್ವಪ್ರಯತ್ನಗಳ ಹಿಂಗಡೆಯಲ್ಲಿ ಪರಮಾಧಿಕಾರ ಸಂಪಾದನೆಯ ಮಹತ್ವಾಕಾಂಕ್ಷೆ ನೆಲಸಿದ್ದುದಾಗಿ ನೆಕ್ಕುದೋವನಿಗೆ ಮನವರಿಕೆಯಾಗಿತ್ತು (ಪುನರು. ೫೩೬).

[ಪರಮ + ಅಧಿಕಾರ]

ಪರಮಾನಂದ (ನಾ). ೧. ಅತಿಶಯವಾದ ಸಂತೋಷ; ಮಹಾನಂದ: ಅನಂದನಾಟಕಂ ಪರಮಾನಂದಮನಂದು ಮಾಡೆ (ಆದಿಪು. ೧೬-೫೪); ಪರಮಾನಂದರಸದೊಳವರ್ ತಮ್ಮೊಳೋರೊರ್ಬರೊಂದೊಂದು ಮಾತಂ ತಮ್ಮ ಮನಕ್ಕೆ ತೋಱುವಂತೆ ನುಡಿಯುತ್ತಿರಲ್ (ಜಗವಿ. ೩-೨ ವ); ಪರಮಾನಂದವಾಗಲು ನಳಿನನಾಥನು ಸೇನೆಸಹಿತಾ ಪುಷ್ಕರವನಿಂದು ಸೆಳೆದು ಬಿಗಿಯಪ್ಪಿದನು ಭರತನ (ಕೌಶಿಂಪ. ೪೪-೪೫); ಕುಂದದ ಸುಕೃತಂ ಪರಮಾನಂದಂ ಸೌಭಾಗ್ಯಕೀರ್ತಿವಿಜ್ಞಾನಂಗಳ್ ಮಂದತರನಾಟ್ಯಮಾರ್ಗದೊಳೊಂದಿದವಂಗಲ್ಲದಜ್ಞನೊಳ್ ಸಮನಿಪವೇ (ಲಾಸ್ಯರಂ. ೧-೨೪); ವಿಜಯೋತ್ಸವವೂ ಕುಮಾರಜನ್ಮೋತ್ಸವವೂ ಒಟ್ಟಿಗೇ ಆದ ಪರಮಾನಂದದಲ್ಲಿ ವಿಷ್ಣುವರ್ಧನನು . . . ಪತ್ತಿಯನ್ನು ಬಿಡುತ್ತಾನೆ (ಸವಿ. VII, ಪ್ರಸ್ತಾವನೆ). ೨. ಪರಮಾವಧಿಯಾದ ಸಂತೋಷ; ಲೋಕೋತ್ತರವಾದ ಆನಂದ; ಮೋಕ್ಷ: ವೇದನಾತೀತ ತುರ್ಯ ಪರಮಾನಂದನಿರವಯಂ . . . ಬೆಳಗಿನೊಳಗಣ ಮಹಾಬೆಳಗಿನ ಬೆಳಗು ನಮ್ಮ ಕೂಡಲಸಂಗಯ್ಯ (ಬಸವ.೯೫೫); ಸಕಲರಾಗಾದಿ ಕ್ಲೇಶಾವರಣವೂ ಜ್ಞೇಯಾವರಣವೂ ಹೋಗಿ ಸರ್ವಜ್ಞತ್ವವು ಬಂದು . . . ಬುದ್ಧಪದವಿಯು ಪ್ರಾಪ್ತವಾಗುವುದು. ಇದೇ ಪರಮಪದ. ಇದೇ ಪರಮಾನಂದ (ಹಿಂದುಸಾ. ೪೧). ೩. ಆನಂದಸ್ವರೂಪನಾದವನು; ಪರಮಾತ್ಮ; ದೇವರು: ತುರೀಯಪರಮಾನಂದನು ನಿರವಯಸೂರ್ಯಕೋಟಿ ಪ್ರಭೆಯ ಬೆಳಗಿನ ಸಹಸ್ರಕಿರಣದ ಅಗ್ರಪಟಲದ ಬೆಳಗು ಕೂಡಲಸಂಗಯ್ಯನು (ಬಸವ. ೯೫೪). ೪. ಶ್ರೇಷ್ಠರೀತಿಯ ಆಹ್ಲಾದವನ್ನು ಪಡೆದವನು: ದೇವರಂ ಬಂದಿಸಿ ಬಟಾಕೆ ಯಥಾಕ್ರಮದಿಂದಮಳಾರ್ಚನೆಗಳಿಂದಮರ್ಚಿಸಿ ಪರಮಾನಂದಂ ಕಡೆಯ ಜಿನೇಶ್ವರಮಂದಿರದೊಳು ಕಂಡನೊರ್ವನಂಬರಚರನಂ (ಶಾಂತಿಪು. ೫-೪). [ಪರಮ + ಆನಂದ]

ಪರಮಾನು 'ಪರ್ಮಾನು' ನೋ.

ಪರಮಾನುಗ್ರಹ(ನಾ). ಬಹಳ ಶ್ರೇಷ್ಠವಾದ ಕೃಪೆ; ಅತಿಶಯವಾದ ಕರುಣೆ: ಸಾರವಸ್ತುಗಳನೋಲಗಿಸಿ ಚಕ್ರವರ್ತಿಯ ಪರಮಾನು

ಗ್ರಹಾಮೃತಮನಾಸ್ವಾದಿಸಿ ಪೋಗೆ ಪಟ್ಟಂಡಭೂವಲ್ಲಭನಂ ಹಿಮವತ್ತಟಂ ಬಿಡಿದು ಮೂಡ ಮೊಗದೆ ಪಯಣಂಬರೆ (ಶಾಂತಿಪು. ೧೧-೫೮ ವ).

[ಪರಮ + ಅನುಗ್ರಹ]

ಪರಮಾನ್ನ (ನಾ). ೧. ಉತ್ಕೃಷ್ಟವಾದ ಆಹಾರ,—ಭೋಜನ. ೨. (ಅಕ್ಕಿ, ಹಾಲು, ಸಕ್ಕರೆ ಮುಂತಾದುವುಗಳಿಂದ ಮಾಡಿದ) ಒಂದು ಬಗೆಯ ಸಿಹಿ ಪದಾರ್ಥ : "ಕ್ಷೀರೇಯಂ, ಪಾಯಸಂ, ಪರಮಾನ್ನಂ—ಈ ೩ ತುಯ್ಯಲ್" (ಪಲಾಯು. ೫೩-೧೬೫); ಪರಮಾನ್ನ ಮೋಗರಂ ಸುರುಚರ ನಾನಾಭಕ್ಷ್ಯಮುಖ್ಯಭೋಜನವಸ್ತೂತ್ಕರಮಂ ಕುಡುವುದು ತಡೆಯದೆ ಕರಮಂ ನೀಡಿದೊಡೆ ಭೋಜನಾಂಗಮಹೀಜಂ (ಶಾಂತೀಶ್ವ. ೬-೮೭); ಕೆಲಕೆ ತಾಳೆಯ ತಳಿರವೊಟ್ಟಲು ಕಲರವಂಗೈವಂತೆ ಪರಮಾನ್ನವನು ಭುಜಿಸಿದರು (ಕೌಶಿಂಾ. ೨-೬೩); ಮಿಸುಪ ಕಾಂಚನ ಪಾತ್ರೆಯಲಿ ಪೂರಿಸಿದ ಪರಮಾನ್ನವನು . . . ಕರಯುಗಬಿಸರುಹದಿನೊಲಿ ದಿತ್ತುದಾ ನಿಜಮೂರ್ಛ ದಶರಥಗೆ (ತೊರರಾ. ೧-೭-೫೫). ೩. ಒಂದು ಬಗೆಯ ಪಾಯಸ : ದಧ್ಯಾನ್ನ ಗೂಡಾನ್ನ ಪರಮಾನ್ನ ಪಾಯಸಂ ಪಂಚಭಕ್ಷ್ಯಂ . . . ಫಲಾವಳಿಯ ಮುಖ್ಯಭೋಜನದ್ರವ್ಯವಾ ತರುಣಿಯರು ಪೊಸಬಿಸುನಿಪರಿವಾಣದೊಳು ತೀವಿಯಿರದೆ ತಂದೀಯಲು (ನಮೋ. ೧೯-೨೯). [ಪರಮ + ಅನ್ನ$_3$]

ಪರಮಾಯಿಷಿ 'ಪರಮಾಷಿ' ನೋ.

ಪರಮಾಯು (ನಾ). ೧. ಬಹಳ ದೀರ್ಘವಾದ ಆಯುಷ್ಯ ; ಅತಿ ಹೆಚ್ಚಾದ ಜೀವಿತದ ಅವಧಿ : ಗ್ರಹಮೇಟುಂ ಜನನೋದಯ ಗೃಹಮುಂ ಬಲಯುಕ್ತಮೆನೆ ಪರಸ್ಪರಪೀಡಾರಹಿತಂ ಸ್ವಗೃಹಸ್ಥಂ ತದ್ಗ್ರಹಮೆನೆ ಪರಮಾಯುವಂ ಯಥೋಕ್ತಂ ಕುಡುಗುಂ(ಜಾತಕ. ೮-೯); ಯುಗ ಹದಿನೆಂಟುಸಹಸ್ರ ಕೂಡೆ ಬ್ರಹ್ಮಂಗೆ ಪರಮಾಯು (ಮೋಳಿಮಾ. ೫-೧೮); ಆ ವರುಷಶತವೆಂಬುದೀ ಸುರಪತಿಗೆ ಪರಮಾಯುವು (ಹಚಕಾ. ೨-೨೫); ಪಾಪಿಗೆ ಪರಮಾಯು, ಲೋಭಿಗೆ ಚಿರಾಯು (ಗಾದೆ). ೨. ಆಯುಸ್ಸಿನ ಪ್ರಮಾಣ; ಜೀವಿತಾವಧಿ: ಪರಮಾಯು ಮೂಱು ದಿವಸಂ ಚರಿತಂ ಚರಿತಾರ್ಥನಾ [ಗು ನೀ]ನೆಂಬವೊಲಾ ಪುರದೊಳಗೆ ಮೂಱುಜಾವಂ ಪರಿವಡಿಸಿತ್ತೋಕು ತನಗೆ ಬೇಟ್ಟಂತಾಗಳ್ (ಸುಕುಮಾ. ೧೧-೮೩). ೩. [ಜೈನ] ಒಂದು ಪೂರ್ವಕೋಟಿಯಷ್ಟು ಪ್ರಮಾಣದ ಜೀವಿತದ ಕಾಲ,—ಆಯುಸ್ಸು : ತೊಲಗದು ಪುಬ್ಬಕೋಟಿ ಪರಸಂಖ್ಯೆವರಂ ಪರಮಾಯು . . . ಪಂಚಧನುಶ್ಶತಂ ಪವಣ್ ನೆಲೆ ನರರ್ಗೆಂದೊಡಿನ್ನಿವರೆ ಬಣ್ಣಿಸಲಾನಱಿಯಂ ವಿದೇಹಮಂ (ಆದಿಪು. ೧-೫೨); ಧರೆಯಂ ಪಾಲಿಸಿ ಪದ್ಮೋದರನೆಣ್ಬತ್ತೊಂದುಲಕ್ಷಬರಸಂ ಬಟ್ಟಾ ಪರಮಾಯುವ ತೌಕಲೊಳರ್ಧರಾತ್ರದೊಳ್ ಕಟಾಯ ಸಪ್ತಮಾವನಿಗಿಟಾದೊಂ (ಶಾಂತಿಪು. ೫-೭೧); ಲಕ್ಷ್ಮಣಂ ಸತ್ತನಲ್ಲದಾತಂಗೆ ಪರಮಾಯು ನೆಱೆಯೆ ಸತ್ತನೆಲ್ಲೆಂಬುದುಂ (ಪಂಚಾಮೃ. ೧೬-೬೨ ವ). [ಪರಮ + ಆಯು$_2$]

ಪರಮಾಯುಷ್ಯ (ನಾ). ೧. ಆಯುಸ್ಸಿನ ಪರಮಾವಧಿ : ಪರಮಾಯುಷ್ಯಮದಯ್ದುರುಳ್ವೆರಸು ನೂಱಾರ್ಷತ್ತುವರ್ಷಂ ನರದ್ವಿರದೌಘಕ್ಕೆ (ಲೋಕೋಪ. ೧೧-೧೦೫). ೨. = ಪರಮಾಯು ೧ : ಪರಮಶಿವ ಲಿಂಗದರ್ಶನಮಾತ್ರದಿಂದೆ ಜಾತಿಸ್ಮರತ್ವ ಮಹದೈಶ್ವರ್ಯ ಪರಮಾಯುಷ್ಯ ಶುದ್ಧ ವಿದ್ಯಂಗಳು . . . ದೊರೆಕೊಂಬುವು ನೋಡಾ (ಅಖಂಡೇ. ೨೬-೨). ೩. = ಪರಮಾಯು ೩ : ತೊಲೆಯಿಂ ಕರಮಟಱಯೆಯುಂ ನೊಂದು ಪ್ರಾಣಮನೆಂತಾನುಂ ಪರಮಾಯುಷ್ಯಂಬರಂ ನಿಱಸಿ (ಶಾಂತಿಪು. ೭-೯೮ ವ). [ಪರಮ + ಆಯುಷ್ಯ]

ಪರಮಾರಾಧ್ಯ (ನಾ). ಪರಮಪೂಜ್ಯನಾದ ವ್ಯಕ್ತಿ : ಪರಮಾರಾಧ್ಯರಪ್ಪ ಶ್ರೀಮತ್ಪುರಾಣದ ದಿವಾಕರಭಟ್ಟೋಪಾಧ್ಯಾಯರ ಸರ್ವ್ವ ನಮಸ್ಯದಗ್ರಹಾರಂ (ಸೌಇಇ. XX, ೬೪-೯ ; 1100) ; ಪರಮಾರಾಧ್ಯ ಜಗತ್ರಯಾಧಿಪತಿಯೈ ನೀಂ (ಅನಂಪು. ೬-೫೭). [ಪರಮ + ಆರಾಧ್ಯ]

ಪರಮಾರ್ಥ (ನಾ). ೧. ಮೋಕ್ಷಪ್ರದವಾದುದು : ಪರಮಾರ್ಥಮಪ್ಪುದಂ ಮಱ್ಱರಿಸದೆ ಕೋಸಿಸದೆ . . . ಒಂದೆ ಮನದಿಂ ನಿರುತಂ ಕೇಳ್ವವನೆ ಧರ್ಮದೊಳಗಂ ತಿಳಿಗುಂ (ಧರ್ಮಾಮೃ. ೧-೧೮೧). ೨. ನಿಶ್ಚಿತವಾದುದು; ನಿಜ; ಸತ್ಯ : ಭೂನುತನೆಟ್ಟರ್ಕುಮೆಂಬಿದುಂ ಪರಮಾರ್ಥಂ (ನೇಮಿಪು. ೪-೧೦); ಮಡದಿ ಮಾಡಿದ ಪಾತಕವು ಪತಿಗೊಡಲಹುದು ಪರಮಾರ್ಥವಿದು ಪರಿವಿಡಿಯನಱಯದೆ ಕೆಡುವುದೀ ಜಗ (ಕುನ್ಯಾಉ. ೪-೧೯). ೩. ಮೋಕ್ಷತತ್ವ ; ಪರತತ್ವ : ಪ್ರಭುಗಳ ಧರ್ಮಶ್ರದ್ಧೆ ಇನ್ನೂ ಹೆಚ್ಚಿತು; ಪರಮಾರ್ಥವಿಚಾರಶಕ್ತಿ ಉದಯಿಸಿತು (ಶಾಂತಲಾ. ೨೧೩). ೪. ಅತಿಮುಖ್ಯವಾದ ಉದ್ದೇಶ,—ಗುರಿ : ಒಲುಮೆಗಿಂತಲೂ ಬೇರೆ ಪರಮಾರ್ಥವಿನ್ನಿಲ್ಲ ನರರ ಬದುಕಿನಲಿ (ಚಕ್ರಾಂಗ. ೬೬-೧೭೧). ೫. (ಮನುಷ್ಯನು ಸಾಧಿಸಬೇಕಾದ) ನಾಲ್ಕು ಪುರುಷಾರ್ಥಗಳಲ್ಲಿ ಕೊನೆಯದು ; ಮೋಕ್ಷ : ಕಣ್ಣ ಮುಚ್ಚಿ ಕನ್ನಡಿಯ ತೋಱುವಂತೆ ಇರುಳುಹಗಲಿನ ನಿದ್ರೆ ಸಾಲದೆ ಬೆರಳನೆಣಿಸಿ ಪರಮಾರ್ಥವ ಹಡೆದರೆ ಚೋದ್ಯವಲ್ಲವೆ(ಬಸವ. ೫೮೨); ವಿಜ್ಞಾನವು ಜಗತ್ತಿಗಾಗಲಿ ಮಾನವನ ಜೀವಿತಕ್ಕಾಗಲಿ ಸಾಧಿಸಬೇಕಾದ ಪರಮಾರ್ಥವೊಂದಿದೆಯೆ ಎಂಬುದನ್ನು ಗಮನಿಸದೆ ಜಗತ್ತನ್ನು ಯಾಂತ್ರಿಕವಾದದಿಂದ ವಿವರಿಸಲು ಯತ್ನಿಸಿತು (ಪುಕ್ಕಾರ. ೩೦ ಪೀಠಿಕೆ). ೬. ವಸ್ತುಸ್ಥಿತಿ; ಸತ್ಯಸ್ವರೂಪ : ನಾಕಿಗಳಿಂದ್ರಾದ್ಯರ್ ಪರಮಾಕೃತಿ ದುರ್ಲಕ್ಷ್ಯವೆಂದೆನಲ್ ನಿನ್ನವತಾರಾಕೃತಿಯನರ್ಚಿಪರ್ ಮಹಿಮಾಕರ ಪರಮಾರ್ಥವಾರ್ಗೆ ಲಕ್ಷ್ಯಂ ನಿನ್ನಾ (ಜಗವಿ. ೩-೧೦೭). ೭. ಅತಿಶ್ರೇಷ್ಠವಾದ ಪ್ರಯೋಜನವನ್ನು ಹೊಂದಿರುವುದು; ಉತ್ಕೃಷ್ಟವಾದ ಫಲವನ್ನು ಕೊಡಲು ಸಮರ್ಥವಾಗಿರುವಂಥದು : ಪರಮಾರ್ಥಂ ಪುಣ್ಯತೀರ್ಥಂ . . . ಬಪ್ಪಿತ್ತು ಶೈಲಂ ವರಕೂಟಂ ಶೃಂಗಮಾಟಂ ಮೃಗಧರಧರಜೂಟಂ ಕರಂ ಹೇಮಕೂಟಂ (ಗಿಂಕ. ೫-೨೧).

[ಪರಮ + ಅರ್ಥ]

ಪರಮಾರ್ಥಂ (ಅ). ನಿಜವಾಗಿ; ಸತ್ಯವಾಗಿ: ಶ್ರೀರೂಪಲೀಲಾಧನವಿಭವ ಮಹಾರಾತಿಗಳ್ಳಿಲ್ಲವಾರ್ಗ್ಗಂ ಪರಮಾರ್ತ್ಥಂ ಮೆಚ್ಚೆನಾನೀ ಧರಣಿಯುಳಿರವಾನೆನ್ದು ಸನ್ಯಾಸನಂಗೆಯ್ದುರುಸತ್ವನ್ನನ್ದಿಸೇನಪ್ರವರಮುನಿವರನ್ದೇವ ಲೋಕಕ್ಕೆ ಸನ್ದಾನ್ (ಎಕ. II, ೮೮-೩ ; ಸು.700); ಪಾರ್ಥಿವಗುಣಯುತಮಾಗಿಯುಮರ್ಥಿತಫಲದಾಯಿಯಾಗಿಯುಂ ನಿನ್ನೊಳ್ತಾಂ ವ್ಯರ್ಥತೆಯಂ ಪಡೆಗುಂ ಪರಮಾರ್ಥವಚೇತನತೆಯಿಂದೆ ಕಲ್ಪಕುಜಾತಂ (ಕವಿರಾ. ೩-೪೪); ಈ ಲೋಕದೊಳೀತನೆ ಪರಮಾರ್ಥಂ ಸುಖಿಯೆಂದೊಸೆದರಸನವಂತಿ ಸುಕುಮಾರನೆಂದು ಪೆಸರನಿಟ್ಟಂ (ವಡ್ಡಾರಾ. ೨೬-೧೨); ಪರಮಾರ್ಥಂ ನಿಜಜನಕರ್ ಪರಸಿದ ಪರಕೆಗಳು ಬಯ್ದು ಬಯ್ಯುಳ್ ಮಕ್ಕಳ್ಗಿರದೆಯ್ದುಗುಂ (ಕಾದಂಬ. ೪೮೭); ದೇವ ಭವದೀಯ ಸುತರಂ . . . ಸಮಸ್ತನೃಪವಿದ್ಯಾವರರಪ್ಪಂತು ಮಾಡುವೆಂ ಪರಮಾರ್ಥಂ (ಪಂಚತಂ. ೧೮-೧೪). [ಸಂ.]

ಪರಮಾರ್ಥಂಗೆಯ್ (ಕ್ರಿ). ನಿಶ್ಚಯಿಸು; ನಿರ್ಧಾರವಾಗಿಸು : ವಿಸ್ತರರೂಪದೊಳ್ ಸಂಸಾರ ತದ್ಧೇತುಬಂಧ ತನ್ನಿಮಿತ್ತ ಮೋಕ್ಷ ತತ್ಕಾರಣ ಪ್ರಪಂಚಮಂ ದಿವ್ಯಚಿತ್ತದೊಳ್ ಪರಮಾರ್ಥಂಗೆಯ್ದು ಪರಿನಿಷ್ಕ್ರಮಣ ಕಲ್ಯಾಣಾಭಿಮುಖನಾಗಿರ್ದ ಚಕ್ರವರ್ತಿಯ ಬಗೆಯನಱಿದು (ಶಾಂತಿಪು. ೧೧-೯೧ ವ). [ಪರಮಾರ್ಥ+ಕೆಯ್$_1$]

ಪರಮಾರ್ಥಂಪಡೆ (ಕ್ರಿ). ಮೋಕ್ಷವನ್ನು ಗಳಿಸು ; ಕೈವಲ್ಯವನ್ನು ಸಾಧಿಸು : ಶ್ರೀರೇವಮ್ಮನ ಅಣ್ಣನ್‌ಕ್ತಿಗನ್ ನೆರದರೆಲ್ಲರಳದೊಳೆ ತಾಪ್ಪಿಟ್ಟು ಪರಮಾರ್ತ್ಥಮ್ಪಡೆದ (ಎಕ. XVI, ತುಮಕೂ. ೯೨-೨೫ ; ?).

[ಪರಮಾರ್ಥ + ಪಡೆ$_1$]

ಪರಮಾರ್ಥತೆ (ನಾ). ಪರತತ್ವದ ಪ್ರಾಪ್ತಿ ಮತ್ತು ಚಿಂತನೆ ; ಮೋಕ್ಷಸಾಧನೆ : ಪರಮಾರ್ಥತೆ ಹಿತಮಹಿತಮಪರಮಾರ್ಥತೆಯೆನ್ನ ದಾತ್ಮಜನಕಜ್ಞಾನಸ್ಥಿರತೆಯೊಡನೆಂದನೆ . . . ಮುಂಡಕೌಶಿಕಸುಖದಂ (ಶಾಂತಿಪು. ೬-೨೬). [ಸಂ. ಪರಮಾರ್ಥತಾ]

ಪರಮಾರ್ಥವಾದ (ನಾ). ಮೋಕ್ಷಾವಸ್ಥೆಯಲ್ಲಿ ಆತ್ಮವ್ಯತಿರಿಕ್ತವಾದ ಮತ್ತಾವುದೂ ಇರುವುದಿಲ್ಲ ಎಂಬ ತತ್ವವನ್ನು ಪ್ರತಿಪಾದಿಸುವಿಕೆ ; ಪ್ರತಿಷೇಧವಾದ : ಈ ಮಾರ್ಗದಲ್ಲಿ ಬಹುಕಾಲ ಪರಿಶ್ರಮ ಪಟ್ಟವರು ಮೂರನೆಯ ಸೋಪಾನವೆಂಬ ಸುಷುಪ್ತ್ಯವಸ್ಥಾಸದೃಶವಾದ ಪರಮಾರ್ಥಾವಸ್ಥೆಗೆ, ಉತ್ತಮಾಧಿಕಾರಕ್ಕೆ ಅರ್ಹರಾಗುವರು. ಇದೇ ಪ್ರತಿಷೇಧವಾದ, ಪರಮಾರ್ಥವಾದ (ಹಿಂದಸಾ. ೧೯೧).

[ಪರಮಾರ್ಥ + ವಾದ$_2$]

ಪರಮಾರ್ಥವಾದಿ (ನಾ). ಅತಿಶ್ರೇಷ್ಠವಾದ ಸತ್ಯವನ್ನು ಪ್ರತಿಪಾದಿಸುವವನು : ಅರಸಿ ಕೇಳೀ ಹೊನ್ನಿ ಸರಸಸಾಹಿತ್ಯದ ವರದೇವತೆ ತಾನೆಂದು ಪರಮಾರ್ಥವಾದಿಯಳಸಿಂಗರಾರ್ಯನು ಪರಿಪರಿಯೊಳು ಬಣ್ಣಿಪನು (ಹರಿಚಿ. ೧-೨೩). [ಸಂ. ಪರಮಾರ್ಥವಾದಿನ್]

ಪರಮಾರ್ಥಿ (ನಾ). ಪರಮಾರ್ಥವನ್ನು ಬಯಸುವವನು : ಪರಮಾರ್ಥಿಯಾದಡೆ ಪರಮನ ಸಂಶವನಱಯಬೇಕು (ಸಕವ. I, ೪೦-೪೨).

[ಸಂ. ಪರಮಾರ್ಥಿನ್]

ಪರಮಾವಧಿ (ಗು). ೧. ಅತಿಹೆಚ್ಚಿನ ; ಅತ್ಯಂತವಾದ ; ಪರಾಕಾಷ್ಠೆಯ : ಅನುವಂಶೀಯ ಗುಣಗಳು ಮಕ್ಕಳು ಪಡೆಯಬಹುದಾದ ಪರಮಾವಧಿ ಮಟ್ಟವನ್ನು ನಿರ್ಧರಿಸುತ್ತವೆ (ಶಿಕ್ಷದ. ೯೧); ಇದರಿಂದ, ಹುಲ್ಲಿನ ಪರಮಾವಧಿ ಪ್ರಯೋಜನವು ಆಗದೆ ಹೋಗುವದು (ಗೋಬ್ರಾಸ. ೧೦೪). (ನಾ). ೨. ಅತ್ಯಂತ ಕೊನೆಯ ಮಿತಿ,—ಎಲ್ಲೆ; ಚರಮಸೀಮೆ : ಸಹನಶೀಲತೆಯ ಪರಮಾವಧಿಯದು (ಹಳ್ಳಿಪಾ. ೧೧೬) ; ಅದು ಸುಖದ ಪರಮಾವಧಿ. ನಾನು ಅದಕ್ಕೆ ಅರ್ಹನಲ್ಲ (ಮಲೆನಾ. ೧೭೪); ಶಕುಂತಲೆಯ ದುರ್ದೈವದ ಪರಮಾವಧಿಯನ್ನು ಕಾಣಲು ನಾವು ಐದನೆಯ ಅಂಕಕ್ಕೆ ಹೋಗಬೇಕು (ಧರ್ಮಸಾ. ೭೧). ೩. ಅತಿಹೆಚ್ಚು ; ವಿಪರೀತ : ಚೀನಾದೇಶದ ಜನರಿಗಂತೂ ಅಫು ತಿನ್ನುವ ವ್ಯಸನವೂ ಸೇದುವ ವ್ಯಸನವೂ ಪರಮಾವಧಿಯುಂಟು (ಮುಂಬಯಿ, ೪-೪೦). ೪. [ಜೈನ] ಅವಧಿಜ್ಞಾನದ ಮೂರು ಭೇದಗಳಲ್ಲಿ ಒಂದು : ಪರಮಾವಧಿಯುಂ ಭವಮನಱಯದು ಯತಿಪತಿ ನುಡಿದಂ (ಆದಿಪು. ೩-೩೭). ☞ "ಅವಧಿಜ್ಞಾನದಲ್ಲಿ ದೇಶಾವಧಿ, ಪರಮಾವಧಿ, ಸರ್ವಾವಧಿ ಎಂದು ಮೂರು ಭೇದಗಳಿವೆ. ಪರಮಾವಧಿ ಮತ್ತು ಸರ್ವಾವಧಿ ಜ್ಞಾನಗಳು ಚರಮಶರೀರಿಯಾದ ಅಥವಾ ತದ್ಭವಮೋಕ್ಷಗಾಮಿಯಾದ ಮುನಿಗಳಿಗೆ ಮಾತ್ರ ದೊರಕುತ್ತವೆ" (ಅಪಿಪು. ಪಾರಿಭಾಷಿಕ ಶಬ್ದಕೋಶ) ; ಸಂಯಮಮಂ ಕೈಕೊಂಡು ಚಾರಣಋದ್ಧಿಯುಮಂ ಪರಮಾವಧಿಯುಮಂ ಪಡೆದಂ (ಚಾವುಂಪು. ೬೫). [ಪರಮ + ಅವಧಿ]

ಪರಮಾಶಿ 'ಫರಮಾಯಿಷಿ' ನೋ.

ಪರಮಾಶೀರ್ವಾದ (ನಾ). ಉತ್ಕೃಷ್ಟವಾದ ಹರಕೆ : ಪರಮಾಶೀರ್ವಾದದಿಂ ಪರಸಿ ಮಗನಂ (ಕಾದಂಪು. ೪೯೧) ; ಪರಮಾಶೀರ್ವಾದನಾದಂ ಜನಿಯಿಸೆ ಪರಮೋತ್ಸಾಹಮಂಗಲ್ಯತೂರ್ಯೋತ್ಕರನಾದಂ ಪೊಣ್ಡರಾರಾಜಿಸೆ (ಪುಷ್ಪಪು. ೭-೧೮). [ಪರಮ+ಆಶೀರ್ವಾದ]

ಪರಮಾಶೀರ್ವಾದನ (ನಾ). = ಪರಮಾಶೀರ್ವಾದ : ಕರಕಮಳಮುಕುಳಯುತ ಕುನ್ತಳನಾಡ ಕುನ್ತಳನಾಥನಂ ಪರಮಾಶೀರ್ವ್ವಾದನಗಳಿಂದಂ ಕುಳ್ಳಿದ್ದುರ್ (ಸೌಇಇ. XX, ೪೬-೩೮ ; 1072).

[<ಪರಮಾಶೀರ್ವಾದ]

ಪರಮಾಶ್ಚರ್ಯ (ನಾ). ಅತಿಯಾದ ಅಚ್ಚರಿ ; ಅತ್ಯಾಶ್ಚರ್ಯ : ಪರಮಾಶ್ಚರ್ಯಪರ್ಯಾಕುಲಿತಃಕಂಪಬೆರಸು ಸುರಪತಿ ಕೆಯ್ಯೊಱಿದು (ಶಾಂತಿಪು. ೧೦-೭೫ ಪ). [ಪರಮ + ಆಶ್ಚರ್ಯ]

ಪರಮಾಶ್ರಯ (ನಾ). ಶ್ರೇಷ್ಠವಾದ ನೆಲೆ ; ಪರಮಾತ್ಮ : ಪರಮಾಶ್ರಯವೇ ತಾನಾಗಿ ಶತಪತ್ರಕಮಳಕರ್ಣಿಕಾಮಧ್ಯದಲ್ಲಿ ಸ್ವತಃ ಸಿದ್ಧನಾಗಿರ್ಪ ನಮ್ಮ ಕೂಡಲಸಂಗಮದೇವ (ಬಸವ. ೮೧೬).

[ಪರಮ + ಆಶ್ರಯ]

ಪರಮುಖ (ನಾ). ಮೋಕ್ಷಾಪೇಕ್ಷಿಯಾದವನು ; ಮುಮುಕ್ಷು : ಶಂಕಿಪರೆ ಪರಮುಖರು ಶಂಬರಸುರೇಂದ್ರನೊಳಿದಂ ಕರುಣದಿಂದ ರಕ್ಷಿಸುತಾಯೆಯೆನಲು (ಸಪಮೋ. ೧೨-೧೬). [ಸಂ.]

ಪರಮುಖಜಾಣ (ನಾ). ಇನ್ನೊಬ್ಬರ ಮುಖವನ್ನು ನೋಡಿ ಅವರ ಭಾವನೆಗಳನ್ನು ತಿಳಿಯಬಲ್ಲ ಚತುರ ; ಇಂಗಿತಜ್ಞ : ಪರಮುಖಜಾಣನೆ ಸ್ವಾಮಿ ನೀನಱಯದ ಸುರುಚಿರಕಲೆಗಳೇನುಂಟೆ (ಭರಚಿ. ೪೮-೬೪). [ಪರ್ಯ + ಮುಖ + ಜಾಣ]

ಪರಮೆ$_1$ 'ಪಱಮೆ' ನೋ.

ಪರಮೆ$_2$ (ನಾ). ೧. ಶ್ರೇಷ್ಠಳಾದ ದೇವತೆ ; ಶಿವೆ ; ಪಾರ್ವತಿ : ಪರಮೆಯಾಡಿದ ನುಡಿಯ ಪರಮೇಶ್ವರನು ಸಲಿಸುವ ಮುಂದಣುತ್ಸವವಱಿತು ವಾಗ್ದೇವಿಯೊಳು ಪಾರ್ಥನ ಗೆಲವನೆಡಸುತಿರೆ ಹರ ಹರಿಯ ಪೊಗಳಿದನು (ಕೃಷ್ಣಾಶಾ. ೨೨-೫). ೨. [ಛಂದ]ಮೂರು ಅಕ್ಷರಗಳುಳ್ಳ ಮಧ್ಯಾಛಂದಸ್ಸಿನ ಒಂದು ಅಕ್ಷರವೃತ್ತದ ಹೆಸರು : ಸುರರ ನೆರವಿ ನೆರೆಯೆ ಪರಮೆ (ಛಂದೋಂಬು. ೨-೬೦). [ಸಂ. ಪರಮಾ]

ಪರಮೆಮೊರೆ (ನಾ). ದುಂಬಿಯ ಝೇಂಕಾರ ; ತುಂಬಿಯ ಧ್ವನಿ: ಪೊಸಗಂಪು ಪರಮೆಮೊರೆಯಂ ಬಳಿಗೆ ಕರೆಯೆ (ಶ್ರೀರಾಮಾ.೨೨೪-೨೩)

[ಪರಮ್ಮೆ$_1$(<ಪಱಮೆ) + ಮೊರೆ$_3$]

ಪರಮೇಶ (ನಾ). ೧. ಶ್ರೇಷ್ಠನಾದ ಒಡೆಯ,—ಸ್ವಾಮಿ : ಪರಮೇಶಂ ಜೀವಿತೇಶಂ ತಮಗೆ ದಿಟದಿನೆಂದರ್ಕೆ ಕಾಂತಾಜನಂ ಮತ್ತರುಹಂ ರಾಜ್ಯಾರ್ಹನೆಂದೊಲ್ದೆಜಗೆ ಧರೆ (ಚಂದ್ರಪು. ೧೩-೫೬). ೨. ಶಿವ ; ಈಶ್ವರ : ಪರಮೇಶ ಭಕ್ತಜನಶಂಕರ ಶಂಕರ ನಿನ್ನ ಮಾತನಾಂ ಮನ್ನಿಸಿದಂ (ಜಗವಿ. ೧೮-೬೭) ; ಸುಮತಿಗಳು ಪರಮೇಶನೆಂದರೆ ರಮಣದಿಂ ಪರಮಾತ್ಮನೆಂದಡೆ ವಿಮಳಿತ ಪರಬ್ರಹ್ಮವೆಂದಡೆ ಹರನ ನಾಮವಿವೆ (ಬಸಪು. ೫೫-೩೯). ೩. ವಿಷ್ಣು ೪. ಇಂದ್ರ. ೫. ಚಕ್ರವರ್ತಿ : ಪುರುಪರಮೇಶನ ಹಿರಿಯ ಕುಮಾರನು ಸರಲೋಕಕೊಬ್ಬನೆ ರಾಯ (ಭರಚಿ. ೧-೨೦). ೬. [ಜೈನ] ತೀರ್ಥಂಕರ ; ಜಿನ : ಪರಮೇಶಂ ಮಧ್ಯದ ಮಂದರದಂತೆರೆ ಸಮವಸರಣವಳಯಂ ವಿಳಸದ್ಗಿರಿಸಿಂಧುನದೀಪುರಭಾಸುರ ಜಂಬುದ್ವೀಪಮೆಂದಿನಂ ಸೊಗಯಿಸುಗುಂ (ಚಂದ್ರಪು. ೧೫-೩).

[ಪರಮ + ಈಶ]

ಪರಮೇಶ್ವರ(ನಾ).೧.ಬಹಳಶ್ರೇಷ್ಠನಾದವನು;'ಕವಿಪರಮೇಶ್ವರ' ಪರಾ. ೨. ಚಕ್ರವರ್ತಿ ; ಸಾಮ್ರಾಟ : ಪುರುಪರಮೇಶ್ವರ ಪುತ್ರಂ ಧರಣೀಶ್ವರಚಕ್ರವರ್ತಿ ಬಂದಿರ್ದಂ (ಆದಿಪು. ೧೨-೮೯) ; ಆ ಪುಣ್ಯಾಂಕುರಪಾಕಪ್ರರೋಹಾಯಮಾಣಸುಮಪ್ಪ ಪರಮೇಶ್ವರಂಗೆ ಬಗೆಗೊಂಡರಸಿಯರವರಿರ್ವರ್ (ಶಾಂತಿಪು. ೯-೪೦) ; ಶ್ರೀಪೃಥ್ವೀವಲ್ಲಭಮಹಾರಾಜಾಧಿರಾಜ ಪರಮೇಶ್ವರ . . . ತ್ರೈಲೋಕ್ಯಮಲ್ಲದೇವರು ಕಲ್ಯಾಣಪುರದ ನೆಲೆವೀಡಿ × × × ಗೆಯ್ಯುತ್ತಮಿರೆ (ಕೊಲ್ಹಾಶಾ. ೧೧-೯ ; ?). ೩. ಪರಶಿವ; ಈಶ್ವರ: "ಈಶಾನಃ, ಶಶಿಶೇಖರಃ . . . ಪರಮೇಶ್ವರಃ . . . ನೀಲಲೋಹಿತಃ—ಈ ೪೫ ಮಹಾದೇವರ ಪೆಸರ್" (ಹಲಾಯು. ೩-೧೧) ; ಪಾರ್ವತಿ ಘನವೆಂಬೆನೆ ಪರಮೇಶ್ವರನ ಅರ್ಧಾಂಗಿಯಾದಳು (ಬಸವ.೮೭೬);

ಸರಸಿಜಾನನೆ ಹೋಗಿ ಪರಮೇಶ್ವರನ ದೇಗುಲಮಂ ಹೊಗಲು (ಒಸಪು. ೫೨-೨೬). ೪. ವಿಷ್ಣು. ೫. ಇಂದ್ರ. ೬. ಬ್ರಹ್ಮ. ೭. [ಜೈನ] ತೀರ್ಥಂಕರ; ಜಿನ: ಅಂತು ಪುರಂದರನಾನಂದನೃತ್ಯಾವಸಾನದೊಳೀ ಪರಮೇಶ್ವರಂ ಧರ್ಮಾಮೃತವರ್ಷದಿಂ ಭವ್ಯಸಸ್ಯಸಮೃದ್ಧಿಯಂ ಮಾಡುವುದಱಂ ವೃಷಮೆಂಬುದು ಧರ್ಮಮುದಱಂದೊಪ್ಪುವುದಱಂದಂ (ಆದಿಪು. ೭-೧೨೭ ಪ); ಪರಮೇಶ್ವರನಂ ತ್ರಿಜಗದ್ಗುರುವಂ ನೆಗೞ್ದಿತ ನಾಥನಂ ತನ್ನ ತನೂದರದೊಳ್ ತಾಳ್ದಿದ ಪೆಂಪಱ್ಚರಿಯೆನಿಸಿದುದಾ ಸುರಾಂಗನಾಧೃಷ್ಟತೆಯಾ (ಆಪು. ೩-೧೮); ಪರಮೇಶ್ವರನಂ . . . ಮಣಿಮಯವಿಷ್ಟರದೊಳ್ ನೆಲಸಿರ್ದ ಭವ್ಯಚಿಂತಾಮಣಿಯಂ . . . ಕಂಡು (ವರ್ಧಪು. ೧೦-೭೭).

ಪರಮೇಶ್ವರ ದತ್ತಿ = ಚಾಲುಕ್ಯರಾಜರ ಹೆಸರಿನಲ್ಲಿ ಬಿಟ್ಟ ದತ್ತಿ: ಶ್ರೀಮದ್ಭುವನಯ್ಯ (ನೈಕ)ಮಲ್ಲದೇವರ್ಗ್ಗೆ ಬಿನ್ನಪಂಗೆಯ್ದು ಪರಮೇಶ್ವರ ದತ್ತಿ ಮಾಡಿ . . . ದೇಗುಲದ ಬೇಸಕ್ಕಂ ದೇವಪೂಜೆಗಂ . . . ಬಿಟ್ಟ ಬನವಸೆ ನಾಡ ಕಂಪಣಂ (ಇಅ.IV, ೨೦೯-೨೮; 1075). **ಪರಮೇಶ್ವರ ದೀಕ್ಷೆ** = ಜೈನಸಂನ್ಯಾಸವನ್ನು ಹೊಂದುವ ವ್ರತ; ಜಿನದೀಕ್ಷೆ: ಗುರುಪದಪದ್ಮಾಂತಿಕದೊಳ್ ಪರಮೇಶ್ವರದೀಕ್ಷೆಯಂ ಮನಂದಿಡೆ ಕೊಂಡೀ ಧರೆಯಂ ಪೊಗೞಿಸಿದನಿದೇಂ ಪುರುಪರಮೇಶ್ವರಸುತರ್ ಪರಿಚ್ಛೇದಿಗಳೋ (ಆದಿಪು. ೧೪-೧೫೯). [ಪರಮ + ಈಶ್ವರ]

ಪರಮೇಶ್ವರಾವತಾರ (ನಾ). ಶಿವನ ಅಂಶದಿರಿದ ಹುಟ್ಟಿದವನು; ಅಶ್ವತ್ಥಾಮ: ಪರಮೇಶ್ವರಾವತಾರನೆ ಪರಮಜ್ಞಾನಿಯೆ . . . ದೊರೆಕೊಂಡುದು ನಿನಗೆ ಪಾತಕಂ ಬಾಲವಧಂ (ಗದಾಯು. ೯-೩೪).

[ಪರಮೇಶ್ವರ + ಅವತಾರ]

ಪರಮೇಶ್ವರಿ (ನಾ). ೧. ಶ್ರೇಷ್ಠಳಾದ ಒಡತಿ,—ಸ್ವಾಮಿನಿ: ನೀರದಮಂ ಕುಡುವಿಂಬು ಪೊರ್ದಿ ಶೋಭಿಸುವವೊಲಾ ಸುರಾಧಿಪನನಾ ಪರಮೇಶ್ವರಿ ಪೊರ್ದಿ ನಾಡೆ ಕಣ್ಣೆಸೆದಳ್ (ಶಾಂತಿಪು. ೭-೨೯); ಪರಮೇಶ್ವರಿ ನಿಜಸುತಮುಖನಿರೀಕ್ಷಣದೊಳೊಡನೊಗೆದ[ಗೆ]ಪುಳಕಂಗಳಿನೇಂ ಕರಮೆಸೆದಳೊ (ಅಜಿಪು. ೪-೫); ಕುರುಕುಲಜೀವಾಕರ್ಷಣಪರಿಣತಮಿದು ಕಾಳಹಸ್ತಮಲ್ಲದೆ ಪರಮೇಶ್ವರಿ ಕೇಶಹಸ್ತಮಕ್ಕುಮೆ ಪರಾಭವಜ್ವಲನಧೂಮ ಕೃಷ್ಣಂ ಕೃಷ್ಣೇ (ಗದಾಯು. ೧-೬೭). ೨. ಪಾರ್ವತಿ; ದುರ್ಗೆ: ನೇವುರದ ಕಳಧ್ವಾನಮೊಗೆದು ನಗಮಂ ಜಗಮಂ ಪರಿವೇಷ್ಟಿಸೆ ಬರುತಿರ್ದಳ್ ಪರಮೇಶ್ವರಿ ಚಂದ್ರಧರನನೀಕ್ಷಿಪ ಭರದಿಂ (ಗಿರಿಕ. ೫-೩೦); ರಘುಪುಂಗವನ ನುಡಿಗೇಳ್ದು ಪರಮೇಶ್ವರಿಯಿಂತೆಂದಳ್ (ಅದ್ಭುತ. ೫೩-೧೭). ೩. ಅರುವತ್ತುನಾಲ್ಕು ಯೋಗಿನಿಯರಲ್ಲಿ ಒಬ್ಬಳು: ಬ್ರಾಹ್ಮಿ . . . ದೇವಿ ದಿವ್ಯಯೋಗಿನಿ . . . ಪರಮೇಶ್ವರಿ ಕ್ರೋಧಿನಿ... ಹುಂಕಾರಿಯರೆಂಬ ಚತುಷ್ಷಷ್ಟಿಯೋಗಿನಿಯರುಂ (ವಿವೇಕ. ೨೧೪).

[ಪರಮ + ಈಶ್ವರಿ]

ಪರಮೇಶ್ವರಿನೋಟು 'ಪ್ರಾಮಿಸರಿನೋಟು' ನೋ.

ಪರಮೇಷ್ಠಿ (ನಾ). ೧. ಶ್ರೇಷ್ಠದೈವ; ಬ್ರಹ್ಮ; ಸೃಷ್ಟಿಕರ್ತ: "ಬ್ರಹ್ಮಾ, ಸ್ರಷ್ಟಾ, ಧಾತಾ, ಪರಮೇಷ್ಠೀ . . . ಕಮಲಾಸನಃ—ಈ ೨೦ ಬ್ರಹ್ಮನ ಪೆಸರ್" (ಹಲಾಯು. ೨-೬); ಸುರಭೂರುಹದಗೆಯಂ ಬಿತ್ತರದಿಂ ಪರಮೇಷ್ಠಿ ತಂದು ಮನುಜಾಕೃತಿಯಿಂ ವಿರಚಿಸಿ ಪುಟ್ಟಿಸಿದ ನೆನಲ್ ದೊರೆವೆತ್ತಂ ದೀಲನಪಿಳಲಕ್ಷ್ಮೀಲೋಲಂ (ಶಾಪಮಂ. ೨೯೭-೧೪೫೯; 1151); ಪರಮೇಷ್ಠಿಯಂಜೆ ಕೃಷ್ಣನ ಗರುಡಂ . . . ಮುನ್ನೀ ಗಿರಿವರದೊಳ್ಪುಟ್ಟಿ ನೆಗೞ್ದವೆನಿಸುವು[ವನಿಶಂ] (ಸೂಕ್ತಿಸು. ೩-೧೪೭); ಬಳಿಕ ಹರಿದುದು ದೇವಕುಲ ಪರಮೇಷ್ಠಿಯಲ್ಲಿಗೆ (ಕುಮಾಕ. ೭-೧೭); ಪರಮೇಷ್ಠಿ ನಿಜಚಾತುರಿಯನಳೆಯೆ ಸರವಿಸಿದನೆರಡುಕೈಯಿಂದೆರಡು ಜಂತುಗಳ (ಮಂಕುಕ. ೧೯೩). ೨. ಶಿವ. ೩. ವಿಷ್ಣು. ೪. ಗರುಡ. ೫. ಅಗ್ನಿ. ೬. [ಜೈನ] ತೀರ್ಥಂಕರ; ಜಿನ: "ಪರಮೇಷ್ಠಿ ಪರಂಜ್ಯೋತಿಸ್ಸ್ವರೂಪನಾಪ್ತಂ . . . ತೀರ್ಥಕರಂ" (ಪಸ್ತುಕೋ. ೨-೮); ಪೀಠತ್ರಯಾಗ್ರನಿಷ್ಠಿತನಂ ಪರಮೇಷ್ಠಿಯಂ ಪ್ರದಕ್ಷಿಣಂಗೆಯ್ದು (ಚಂದ್ರಪ್ರ. ೬-೫೮); ದೇವದೇವ ಪರಮೇಷ್ಠಿ ದಯಾಶ್ರಯಶರಣವೆಂಬ ಸುರಕೋಟಿಯ ಕಳಕಳಮೆಸೆದುದು (ಪುಷ್ಪಪು. ೧೧-೪); ಜಿನನಿಗೆ ಅರ್ಹನ್, ಜಿನೇಶ್ವರ, ತೀರ್ಥಂಕರ, ಪರಮೇಷ್ಠೀ, ವೀತರಾಗ, ಪರಮಾತ್ಮಾ ಮೊದಲಾದ ಹೆಸರುಗಳುಂಟು (ಭಾತತ್ತ್ವ. ೨೨೬). ೭. ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಮತ್ತು ಸಾಧುಗಳೆಂಬ ಐದು ಜನ ಗುರುಗಳು: "ಸರಸಿಜವಾಸ ಪಂಚಪರಮೇಷ್ಠಿಗಳುಂ ಪರಮೇಷ್ಠಿ ಯೆಂದೆನಿಕ್ಕುಂ"(ನಾನಾರ. ೧೫೧); ಅದೇ ಪರಮಪದ. ಆದುದರಿಂದಲೇ ಅವರಿಗೆ ಪರಮೇಷ್ಠಿಗಳೆಂದು ಪ್ರಸಿದ್ಧಿ (ಛಂದಸಾ. ೮೨). 'ಪಂಚಪರಮೇಷ್ಠಿ' ಪರಾ.

[ಸಂ. ಪರಮೇಷ್ಠಿನ್]

ಪರಮೇಷ್ಠಿ ತನ (ನಾ). ಪರಬ್ರಹ್ಮಪದವಿ; ಬ್ರಹ್ಮತ್ವ: ಬೇಡ ತನಗೆಲೆ ದೇವ ನಿಮ್ಮಡಿ ಮಾಡಿದೀ ಪರಮೇಷ್ಠಿ ತನದಿರವು (ತಿಭಾಗ. ೧೦-೧೪-೩೩).

[ಪರಮೇಷ್ಠಿ + -ತನ]

ಪರಮೇಸೂರನೋಟು 'ಪ್ರಾಮಿಸರಿನೋಟು' ನೋ.

ಪರಮೇಸ್ವರ (ನಾ). = ಪರಮೇಶ್ವರ ೨.

ಪರಮೇಸ್ವರ ದತ್ತಿ = ಪರಮೇಶ್ವರದತ್ತಿ: ಸುಧಾಕರ್ಮ[ದುಪ] ಭೋಗಕ್ಕಂ ಪಂಚೋಪಚಾರಪೂಜೆಗಂ ಪರಮೇಸ್ವರದತ್ತಿಯಾಗಿ (ಕಇಅ. ೧೦೩-೮-೨೨; 1076). [<ಪರಮೇಶ್ವರ]

ಪರಮೈಶ್ವರ್ಯ (ನಾ). ೧. ಆತ್ಯಂತಿಕವಾದ ಅಧಿಕಾರ; ಪರಮಾಧಿಕಾರ. ೨. ಉತ್ಕೃಷ್ಟವಾದ ಸಂಪತ್ತು,—ಸಿರಿ: ಶ್ರೀತಿಂಕರ ವಿಮಾನದೊಳ್ ಮೂವತ್ತೊಂದುಸಾಗರೋಪಮಮುಮಮಿತ ವಿಕ್ರಮಾಭಿಧಾನಮುಮಹಮಿಂದ್ರ ಪರಮೈಶ್ವರ್ಯಮುಂ ದೊರೆಕೊಳೆ ಸುಖಾತ್ಮನಿರೆ (ಶಾಂತಿಪು. ೯-೩೦ ಪ); ಪರಮೈಶ್ವರ್ಯದಿನೆಸೆದಾ ಪುರದೊಳ್ . . . ಅಚ್ಯುತಸಮಾಖ್ಯಂ ಭಕ್ತಂ ಮೆಱೆವಂ (ತ್ರಿಪುವಿ. ೫೪-೩). ೧,೨: ಉಮಾಕಾಮಿನೀಜೀವಿತೇಶಂ ಪರಮೈಶ್ವರ್ಯಸ್ಪದಂ ರಕ್ಷಿಸುಗೆ ವಸುಧೆಯಂ ಯುದ್ಧರಂಗತ್ರಿಣೇತ್ರಂ (ಜಗವಿ. ೧-೩). [ಪರಮ + ಐಶ್ವರ್ಯ]

ಪರಮೋತ್ಕೃಷ್ಟ (ಗು). ಬಹಳ ಶ್ರೇಷ್ಠವಾದ; ಅತ್ಯುತ್ತಮವಾದ: ಅಂತು ಹುಂಡಸಂಸ್ಥಾನರುಂ ನಪುಂಸಕರುಮಪ್ಪ ನಾರಕರ ಜನ್ಮಭೂಮಿಗಳಾದೇಟುಱೊಳಂ ನೆಲಸುವ ಜೀವಂಗಳ ಕರ್ಮತಾರತಮ್ಯಪರಮೋತ್ಕೃಷ್ಟಸ್ಥಿತಿ (ಶಾಂತಿಪು. ೭-೧೦೦ ಪ). [ಪರಮ + ಉತ್ಕೃಷ್ಟ]

ಪರಮೋತ್ಸವ (ನಾ). ಅಧಿಕವಾದ ಸಂತೋಷ,—ಸಂಭ್ರಮ: ಸುಹೃಜ್ಜನಾಗ್ರಗಣ್ಯನಂ ಹಿರಣ್ಯನಂ ಸನ್ಮಾನಪೂರ್ವಕಂ ವಿಸರ್ಜಿಸಿ ಪರಮೋತ್ಸವದಿನಿರ್ದಂ (ಚಂದ್ರಪ್ರ. ೬-೪೨ ಪ); ಪರಮೋತ್ಸವದಿಂ ನಡೆತಂದು . . . ಪಡ್ಡಳಿಯರಲಂ ತಿಱಂದಳ್ ಭವಾನಿ ಶಿವಪೂಜಾರ್ಥಂ (ಗಿರಿಕ. ೫-೫೬).

[ಪರಮ + ಉತ್ಸವ]

ಪರಮೋದನ (ನಾ). = ಪರಮಾನ್ನ ೩: ಮಡದಿಯರು ಮೂವರಿಗೆ ಮುನಿಕುಲಮೃಡ ವಸಿಷ್ಠನ ನೇಮದಲಿ ಪಿಂಗಡಿಸಿ ಕೊಟ್ಟನು ನೃಪತಿ ಪರಮೋದನವನುಚಿತದಲಿ (ತೊರಲಾ. ೧-೬-೫೭). [ಪರಮ + ಓದನ]

ಪರಮೋದಯ (ನಾ). ೧. ಬಹಳವಾದ ಏಳಿಗೆ,—ಶ್ರೇಯಸ್ಸು: ಪರಿಚಿತಸನಾಭಿರಾಗಾಂಕುರಜಲಸೇಚಂ ವಿರೋಧಿತರುದವದಹನಂ ಪರಮೋದಯರವಿಗಗನಂ ಪರಾಕ್ರಮವದೆನೆ ವಿಭಿನ್ನರೂಪಕಮಕ್ಕುಂ (ಕವಿಗಾ. ೬-೨೨). ೨. ಅಧಿಕವಾದ ಉತ್ಕರ್ಷವನ್ನು ಹೊಂದಿದವನು; ನೃಪತುಂಗನ ಒಂದು ಬಿರುದು: ಸತತಂ ಪೆರ್ಚ್ತು ನಿಜಾಯತಿ

ಯೊಡನೆ ಮಹಾವಿಭೂತಿ ಪರಮೋದಯನಾ (ಕವಿರಾ. ೩-೧೫೫).

[ಪರಮ + ಉದಯ]

ಪರಮೋರ್ಧ್ವ (ನಾ). ಬಹಳ ಎತ್ತರವಾದ ಸ್ಥಾನ; ಊರ್ಧ್ವ ಲೋಕ: ಜೀವನದ ಮೂಲ ಮೇಲಿಹುದು ಪರಮೋರ್ಧ್ವದಲಿ (ಮಂಕು.ಕ. ೫೬೦). [ಪರಮ + ಊರ್ಧ್ವ]

ಪರಮೋಕಿ 'ಭರಾಮೋಷಿ' ನೋ.

ಪರಮೌದಾರಿಕ (ಗು). "ಘಾತಿಕರ್ಮ ನಾಶವಾಗಿ, ಅರ್ಹದವಸ್ಥೆಯಲ್ಲಿರುವ" (ಜೈನಕೋ. ೧೫೯): ಪರಮೌದಾರಿಕ ದಿವ್ಯಮೂರ್ತಿ ವಸನಾಲಂಕಾರಮುದಾರಶೇಖರಮ್ಮಂ ಧೃತಯೌವನಂ (ಆದಿಪು. ೮-೫); ಪರಮೌದಾರಿಕದಿವ್ಯಶರೀರನುಂ . . . ಸುಂದರಾಕಾರನುಮಪ್ಪ ತೀರ್ಥಕರ ಕುಮಾರಂಗೆ . . . ಪ್ರಸಾಧನಪ್ರಾರಂಭಂಗೆಯ್ದೆ (ಶಾಂತಿಪು. ೧೦-೫೬ಪ); ಪರಮೌದಾರಿಕದಿವ್ಯದೇಹ ಸಹಜಾಮೋದಂಗಳಿಂದಂ ಸರೋವರ ಗಂಗಾದಿ ನದೀಜಲಕ್ಕೆ ಮೆಚ್ಚೆದುಂ ಗಂಧೋದಕಾಖ್ಯಾನಂ (ಅನಂಪು. ೫-೭೭).

[ಪರಮ + ಔದಾರಿಕ]

ಪರಮ್ಮಪುರುಷ (ನಾ). ದೇವರು; ಪರಮಾತ್ಮ: ಅನಂತಾನಂತ ಪರಮ್ಮಪುರುಷ ಪುರುಷೇಶ್ವರ (ಮೋಕ್ಷದೀ. ೨೬-೨). [<ಪರಮಪುರುಷ]

ಪರಯ, ಪರೆಯ$_2$, ಹರಯ, ಹರೆ$_6$, ಹರೆಯ (ನಾ). ೧. ತಾರುಣ್ಯ; ಯೌವನ: "ಪರಯಮೆನೆ ಪ್ರಾಯಮಕ್ಕುಂ" (ಕಶಕ. ೧೨೬). **ಪರೆಯ$_2$**: ೧. ಪರೆಯಂ ವರ್ಣವಳಂಕೆಗೊಂಡ ನಯವತ್ಯಾಶ್ಚರ್ಯಸೌಂದರ್ಯಮೊಂದಿರೆ ಭೇದಂ ಲವಮಿಲ್ಲದಾತ್ಮಜೆಯೆ ದಲ್ ತಾನಿಂತೆಂಬಂತೆ ಚಿತ್ರರಿಸುತ್ತಿರ್ಪ ತದೀಯ ಚಿತ್ರಪಟಮಂ ನೋಡುತ್ತುಮಿರ್ದಂ . . . ಚಂದ್ರಧ್ವಜೋರ್ವೀಶ್ವರಂ (ಕುಸುಮಾ.೧೫-೭೦); ನೋಡೆನ್ನೋರಗೆ ವೆಣ್ಗಳ್ ಕೂಡೆ ಮನಂಗೊಳ್ವ ಮಕ್ಕಳಂ ಮುದದಿಂ ಮುದ್ದಾಡಿಸುತಿರ್ದರ್ಪರ್ ತಾಮೇಡಿಸುವಂತೆನ್ನ ಸಿರಿಯುಮಂ ಪರೆಯಮುಮಂ (ಪುಷ್ಪಪು. ೩-೮೦); ಆ ಲಕ್ಷ್ಮಿಯುಂ ರೂಪುಮಾ ಪರೆಯಂ ಬೇವಿನ ಸುಗ್ಗಿ ಪಾಟ್ಟನೆಯ ಚಿತ್ರಂ ಕಾಡ ಚಂದ್ರಾತಪಂ (ಕಾವ್ಯಸಾ. ೧೯೮). 'ಎಳವರೆಯ', 'ಮುಂಬರೆಯ' ಪರಾ. **ಹರಯ**: ೧. ಜಡಿದು ಗಿಳಿ ಸೋವ ಹರಯದ ಮಡದಿಯರ ಶರೀರವರ್ಣರೂಪಂ . . . ತಮ್ಮೊಳ ಮೆಡೆಗೊಂಡವೊಲಿರ್ಪ ನೆಲ್ಲಳೇನೊಪ್ಪಿದುವೋ (ದಶಕು. ೧-೩೧); ಪುರ್ಬುಗಳ್ ಕಾಮಕೋದಂಡಮಂ ದಂಡಿಸಿದುವಾ ಮುಖಂ ಮುಕುರದಿರವಂ ಪಳಿದುದು . . . ಎನಲೆಳೆಯ ಹರಯಮಮರ್ದುದು ಕುವರನ (ಚಿಪು. ೫-೪೪); ಹರಯದ ಹೊಸಲಿನಲ್ಲಿ ಕಾಲಿಡುತ್ತಿದ್ದ ಸೀತಾರಾಮುವಿನ ಬಾಳಿಗೆ ಉದಯವೇ ಇಲ್ಲದ ಕತ್ತಲು ಕವಿಯಿತು (ಕಳಹಿ. ೮೯). ೨. ವಯಸ್ಸು: ನಂದನರೆನ್ನಯ ಹರಯದ ಸೌಂದರಿಯರ್ಗಾದರಾಗರೆನಗೆನ್ನದಿರ್ (ಅರ್ಧನೇ. ೧-೧೦೬); ಸಾವ ಹರಯವೆ ಎನುತ ಗಗನದ ದೇವತತಿ ಮಱುಗಿತ್ತು (ಕುಮಾರವ್ರೂ. ೬-೬೩); ಮಕ್ಕಳಾದವು ಕಂಡು ಬದುಕುವೆನೆಂಬ ಹರಯದಲಿ ಅಕ್ಕಟೇ ವಿಧಿಯಾಯ್ತು ವನಿತೆಗೆ (ತಿಭಾಗ. ೬-೨-೩೬). **ಹರೆ**: ೧. ಬಿಲ್ಲು ಶಬರಗೆ ಲೇಸು ಚಲ್ಲಾಟ ಲೇಸು ಹರೆಯಲಿ ಸೂಳೆಗೆ ಗುಲ್ಲಾಟ ಲೇಸು (ಸರ್ವಜ್ಞ. ೧೯೦೪); ಕೋಲ್ಮಿಂಚು ಇಣಿಕಿಣಿಕಿ ಕಣ್ಮುಣಿಸಿ ಕೆಣಕೆಣಕಿ ಬಾ ಗೆಣೆಯ ಹೊರಗೊ ಎನುವಾಗ ಒಳಸೇರಿ ಹರೆ ಮೀರಿಧ್ಹಾಂಗ ಕುಳಿತೇವೊ (ಉಯ್ಯಾಲೆ.೭೫-೧೨). **ಹರೆಯ**: ೧. ಹರನ ಮನೋಹರಂ ಗಿರಿಜೆಯಾ ನಡೆ . . . ಈ ಸುರುಚಿರಕಾಂತಿಯಾ ಹರೆಯವೀ ಸುಕುಮಾರತೆಯಾ ಸುಧಾಮಯಂ (ಗಿರಿಕ. ೪-೫೭); ಹರೆಯದ ಮೇಲೆ ಬರ್ಪುದೇ ಸದ್ವಿವೇಕಂ (ಪದ್ಮರಾ. ೨-೭೩); ಕರಮೆಸೆವ ರೂಪು ರೂಪಿಗೆ ತಕ್ಕ ಹರೆಯ(ಸೌಂದಪು. ೪-೧೫); ಇವಳ್ಗೆ ಹರೆಯದಿಂದಮೆ ಕುದೇರಂ ದೊರೆದಿರ್ಕುಂ (ಚಿಕವಿ. ೬-೧೯೪ಪ); ಹರೆಯದಲಿ ಮುಪ್ಪಿನನುಭವ ಸೇರಲೆಂದು, ಜರೆಯೊಳಗೆ ಹರೆಯದುತ್ಸಾಹ ಇರಲೆಂದು . . . ಹರಸಿದೆವು (ಕಎಪು. ೧೬-೮). ೨. ಆರ ತನಯಂ ಪೆಸರಾವುದು ರೂಪದೆಂತುಟೋ ಹರೆಯಮದಿನ್ನೆಗಂ ತಡೆದೆ ನೀಂ ನುಡಿಯಾದುದೆ ನಿನ್ನೊಳಾತನೊಳ್ ಪರಿಚಯಮೆಂತು (ಕಾದಂಉ. ೨೯); ಚಂದ್ರಂಗೆ ಸಕಳಕಳೆಗಳ್ ನೆರೆವ ಮಾಳ್ಕೆಯಿಂ ಅಂದು ಹದಿನಾಱು ಹರೆಯಮದಾಗಲ್ (ಸಂಬರ. ೩-೧೮); ಹರೆಯವೇ ಕಿಱುದಲ್ಲದೇ ಎನ್ನಾತ್ಮ ಕಿಱುದಲ್ಲ (ಬಸಪು. ೨೪-೧೩); ಸಾವ ಹರೆಯವೆ ಭರತ ಮರಳ್ಕೆ (ಕೌಶಿರಾ. ೪೪-೪೧); ತನಯಂ ಹುಟ್ಟುವ ಹರೆಯಂ ಬಾಲಿಕೆ ನಿನಗಿನ್ನುಂ ಸಾಲದು (ಜಯಕಾ.೨-೪೪); ಎರಡು ತಿಂಗಳ ಹರೆಯ-ಮಂಗಳ ಬರಲು-ತುಂದಿತು ವಕ್ಷಗೇ (ಕಎಪು. ೨೦-೩೪).

ಹರಯದವ, ಹರೆಯದವ = ೧. ಪ್ರಾಯಕ್ಕೆ ಬಂದವನು; ತರುಣ; ಯುವಕ: ಯುವಯತಿ, ಕನಯತಿ = ಹರಯದವನ ನುಡಿದಪಂ (ಕಾಕೃಕೃ. ೨೯೨); ಹರೆಯದವನಂ ಭವಾನೀವರನ ಗಣಸ್ತ್ರೀಯರಿರ್ದ ಕಾವಿಂಗುಯ್ಯಲ್ (ದಶಕು. ೧೧-೩೮); ಕೂಸಿಗೆ ತಾಯಿಯಿರೆ ಲೇಸು ಹರೆಯದಗೆ [ಪಾಠಾಂ. ಹಿರಿಯರಿಗೆ]ಮಾಸೆ ಲೇಸು (ಸರ್ವಜ್ಞ: ೧೧೩೨). ೨. ವಯಸ್ಸಿನವನು: ವಿಪ್ರೋತ್ತಮಂ ನಿನ್ನಯ ಹರೆಯದವಂ ಬಂದನೊರ್ವಂ ಕುಮಾರಂ (ಕಾದಂಉ. ೫೪೩). ಹರೆಯದವಳು = ಪ್ರಾಯಕ್ಕೆ ಬಂದವಳು; ತರುಣಿ; ಯುವತಿ: "ಯುವತಿ = ಹರೆಯದವಳು" (ಗಂಗಾಮ. ೨೬೮). [<ಸಂ. ಪ್ರಾಯ]

ಪರಯಿಸು 'ಪರೆಯಿಸು' ನೋ.

ಪರರಾಜ (ನಾ). ಶತ್ರುರಾಜ; ಅರಿನೃಪ: ಪರರಾಜೋದಗ್ರತೇಜಂ ಕಿಡೆ ರಿಪುಕುಮುದಂ ಕುಂದೆ . . . ನಿತ್ಯಾಭ್ಯುದಯದಿನೆಸೆದಂ ಗೋಪಮಾರ್ತಾಂಡದೇವಂ (ಜಗವಿ. ೧೬-೧೪೦); ವಿಕ್ರಮಾದಿತ್ಯನು ಸಿಂಹಾಸನವನ್ನೇರುವವರೆಗೆ ಚಾಳುಕ್ಯರಾಜ್ಯವು ಪರರಾಜರ ಕೈಯಲ್ಲಿತ್ತು (ಕರ್ನಾಅ. ೬೮).

ಪರರಾಜದರ್ಪದಲ್ಲಣ = ಶತ್ರುರಾಜರ ಗರ್ವಕ್ಕೆ ಹೆದರಿಕೆಯನ್ನುಂಟುಮಾಡುವವನು; ಒಂದು ಬಿರುದು: ಪರರಾಜದರ್ಪದಲ್ಲಣನೆಂಬ ಪೆಂಡೆಯವ ಚರಣದೊಳಗಳವಡಿಸಿ . . . ಪವಳದಾವುಗೆಯ ಮೆಟ್ಟಿ ಬರಲು (ಸೌಂದಪು. ೪-೨೫). [ಪರ$_3$ + ರಾಜ]

ಪರರಾಜಕ (ನಾ). ಶತ್ರುಗಳ ಸಮೂಹ: ತೇಜೋನಿಧಿಕರಹತ ಪರರಾಜಕನವದೋಷದಿಗ್ಜಯಂ ಪದ್ಮರಜೋರಾಜಪ್ರತಾಪನುಪಮಿತತೇಜಸ್ವತಿ ಖಚರರಾಜನವನೀತಲದೊಳ್ (ಶಾಂತಿಪು. ೩-೫೫). [ಪರ$_3$ + ರಾಜಕ]

ಪರರಾಯ (ನಾ). = ಪರರಾಜ: ಪರರಾಯರ್ಕಳ ಸೇನೆಯಂ ಗೆಲಿದು ಮತ್ತೇಭಂಗಳಂ ಸೀಳ್ದು ತನ್ನರಿಯೆಂದೆಂಬರನೊಕ್ಕಳಿಕ್ಕುವ ಭಟರ್ಗಂ ಗಂಜಿ ಕೀಟ್ಟ್ ನಾಯ್ಗಳಂ ನಿರುತಂ ಭೋಜ್ಯವಿಶೇಷಮಿತ್ತು ಪೊರೆವರ್ (ಸೋಮೇಶ. ೬೫). [ಪರ$_3$ + ರಾಯ]

ಪರರಾಷ್ಟ್ರ (ನಾ). ೧. ಬೇರೆಯ ನಾಡು; ಅನ್ಯದೇಶ. ೨. ಶತ್ರುರಾಜ್ಯ: "ಬೆಸಕೆಯ್ಯದಲ್ಲದಿದಿರಪ್ಪ ಸೀಮೆಗಳವೆಯ್ದೆ ಪರರಾಷ್ಟ್ರಮೊಂದೆ ನಿಕ್ಕುಂ" (ಮಂಗರಾ. ೫೬-೨). [ಪರ$_3$ + ರಾಷ್ಟ್ರ]

ಪರಲ್, ಪರಲು$_1$, ಪರಳ್, ಪರಳು, ಹರಲು, ಹರಳ್, ಹರಳು (ನಾ). ೧. ಕಲ್ಲಿನ ಚೂರು; ಸಣ್ಣಕಲ್ಲು; ನೊರಜು: ಅರಜನಿಯಂ ವಿರಜನಿಯಂ ಪರಾಜಿತಂ ಮಾಡಿ ಭಾವಿಸುತ್ತಿರ್ದಂ ಪನ್ನೆರಡುಮನು ಪ್ರೇಕ್ಷೆಗಳಂ [ಗಿರಿ] ನೆರೆಯದುವೆನೆ ಪರಲದೇಂ ನೆರೆದಪುದೇ (ಶಾಂತಿಪು. ೯-೯೯); ಕಡಕುಂ ಪರಲ್ಗಳುಂ ಮೆಲ್ಲಡಿಗಳನೆಡೆಯುಡುಗದೊತ್ತಿ ದೆಡೆಯುಂ ನೆತ್ತರ್ಬೀಡದೆಚ್ಚು ಪಾಯೆ (ಸುಕುಮಾ. ೧೨-೧೮); ಎಡವಿ ಪರಲ್ಗಳಂ ದೆಸೆಗೆ ಬೆಚ್ಚುತೆ ಗೋವನ ಗಾಳಿಗೆಯ್ದೆ ಪಿಂಡಡಸುತೆ . . . ಬರ್ಪ ಪಲವಾಕಳ ನೀಕ್ಷಿಸಿದಂ ನರಾಧಿಪಂ (ಲೀಲಾವ. ೫-೧೦೬); ಅತಿನಿಷ್ಠುರತರ ವಾತಾಹತಿಗೆ

ಪರಲ್ಪಾಱುವಂದದಿಂದಮದೇಂ ಪರ್ವತಮುಂ ಪಾಱುಗುಮೇಂ (ಪಾರ್ಶ್ವಭು. ೪-೧೪೩); ಪರಲೆಲ್ಲಂ ಮುತ್ತುಮಾಣಿಕಂ ಪಾಸಱೆಗಳ್ ಪರುಸಂಗಳ್ (ಶಮದ. ೬೯ ಪ್ರಜೋ). ೨. (ವಜ್ರ ಮೊದಲಾದ) ಬಹಳ ಬೆಲೆ ಬಾಳುವ ಮಣಿ ; ರತ್ನ : ಪದ್ಮರಾಗದ ಪರಲ್ಗಳಂ ಬಲಿಗೆದಱೆದಂತೆ ಉಪಾಶ್ರಯಂಬಡೆದಳಂಕರಿಸುವಿಂದ್ರಗೋಪಂಗಳುಮಂ (ಪಂಪಭಾ. ೬-೨೫ ಪ); ನಡುವಣ ಕರ್ಣಕೆಯೆ ಕೇವಣಂ ಕೇವಣದೊಳ್ ತೊಡರ್ದಳಿ ನೀಲದ ಪರಲೆನೆ ಮೃಡರಿಪುಮುದ್ರಿಕೆವೊಲಾಯ್ತು ಕನಕಾಂಬುರುಹಂ (ಗದಾಯು. ೬-೪೨); ಪೊಂಗೇಡಗೆಯ ಬಾಚ್ಕೇಲಿಯನೊಳಪೊಕ್ಕಂತೆ ಪೊಡೆ ತನಿಗಂಪನುಂಡು ಬಿಡೆಯುಂ ಪೊಜಪಡುವ ಮಱುದುಂಬಿಗಳಿಂ ರತ್ನಗರ್ಭ ನೀಲದ ಪರಲನುಗುಳ್ವ ಚೆಲ್ವು ನೆಲಸೆ ನೆಲಂ ಬಿರಿಯೆ ಬೇರಿಂ ಪಣ್ತ ಬಕ್ಕೆ ವಲಸುಗಳುಂ(ಲೀಲಾವ.೬-೬೦ಪ); ಪರಲೊಳ್ಪರುಸಂಧೇನೂತ್ಕರದೊಳ್ಸುರ ಧೇನು . . . ಎಸೆವಂತಿರೆ ಸಲೆ ನಾಗರಬಂಡದೊಳೆಸೆವುದೆಸೆವ ಬಾಂಧವ ನಗರಂ (ಎಳ. VII, ಶಿಕಾಂ. ೨೫-೫೭ ; 1204); ಮಿಡಿ ಪಚ್ಚೆಯ ಪರಲೆನೆ ಕೆಂಪಿಡದೆರೆವಣ್ಣದ್ಮರಾಗಮೆನೆ . . . ನೇಜಾಲೆಸೆದುದು ಬನದೊಳ್ (ರಾಜಶೇ.೨-೪೭). 'ಕೆಂಬರಲ್' ಪರಾ. ೩. (ಆಲಿಕಲ್ಲು, ಕರ್ಪೂರ ಮುಂತಾದುವುಗಳ) ಚೂರು ; ಹಳುಕು ; ಶಕಲ . ಕಾಮಕಾಂತೆ ಬಟಿಯಂ ತನ್ನಿಚ್ಛೆಯಿಂ ಮೆಚ್ಚ ಬಣ್ಣವುರಂ ತೀವಿದ ಮಾಟಕ್ಕಿಯಾಯ್ತು ನವಿಲಿಂ ಕುಂದಂಗಳಿಂದಿಂದ್ರಗೋಪವಿಳಾಸಂಗಳಿನಾಲಿಕಲ್ಲ ಪರಲಿಂ ಕಾರೊಳ್ ಮಹೀಮಂಡಲಂ (ಪಂಪಭಾ. ೬-೨೪) ; ಅರಮಗನಿರ್ಪನೋಲಗದೊ ಕೋಲಗಕಾರ್ತಿಯರುಟ್ಟಿಗಿಟ್ಟ ಕಪ್ಪುರದ ಪರಲ್ಗೆ ಬಿರ್ದರಲ್ಗೆ . . . ದರ್ಪಕಂ ತಿರಿಪುವ ಚಕ್ರದಂತೆ ತಿರಿಯುತ್ತಿರೆ ಮೇಲೆ ಮದಾಳಿಮಾಳೆಗಳ್ (ಅರ್ಧನೇ. ೨-೬೬); ಪರಲಾಗದಂತು ವಸ್ತ್ರಾಂತರದೊಳ್ ಸೋದಿಸಿದ ಸುಣ್ಣದೊಳಗರಿದಾಳಂ ಬೆರಸಿಯುದನಟ್ಟು ಪೂಸುಗೆ (ಅತ್ಯಶಾ. ೧೨-೨೦) ; ಕಪ್ಪುರವರಲ ಸೇಸೆಗಳ ತಣ್ಗಂಪಿನಿಂ ಹರಿಗಳಂ ಕುವರರೆಯ್ದೆ (ಭಾಪಚಂ. ೮-೪). ೪. ಹೀಚು ; "ಮಿಡಿ ; ಕಾಯಿ" (ಪ್ರಭಣ್ಣ). ಪರಲು₁ : ೨. ಪಲವು ಪರಲುಗಳ ತೆತ್ತಿಸಿ ಮೆಚ್ಚಿಪ ತಾಲಿಗಳ ಇತ್ತನು ವೀರಭಟಾಳಿಗೆ ಸಂತಸವೆತ್ತಾ ನೃಪಕುಲತಿಲಕ (ಚಂಪ್ರಸಾಂ. ೨೧-೫). 'ಪರಲುಗ' ಪರಾ. ಪರಳ್: ೨. 'ಕಂಕಳವರಳ್' ಪರಾ. ೪. ಪೊಸತಳಿರೊಂದೆಸೆ ಕುಸುಮಗಳೊಂದೆಸೆ ನಸುಪರಳ್ಮೊಡಿಗಾಯಿಗಳು ಪಸರಿಸಿದವು ಸತಿಯರಿಗಾದ ಸಂತಸದೆಸಕವ ನೋಡಿ ವೃಕ್ಷಗಳು (ಅಂಜಚ. ೧೦-೮೩). 'ಪರಳ್ಗಾಯಿ' ಪರಾ. ೫. ನೊರಜುಗಲ್ಲಿನ ಭೂಮಿ : ಮೊಗೆಯ ಮತ್ತರು ೫ ಭಟ್ಟ ವೃತ್ತಿ ನ್ಯಾಸದೆರೆ ಮತ್ತರು ೧೫ . . . ಪರಳ್ಮತ್ತರು ೧೦ (ಸೌಇಇ. XX, ೩೦೦-೧೪ ; ಸು. 12ನೆಯ ಶತ). ಪರಳು : ೧. ಬಾಲೆಯರು . . . ನಡೆವೆಡೆಯೊಳು ಪರಳಡಿಯನೊತ್ತಲು ಪಾದವೊಡೆದು ರಕುತ ಧರೆಯೊಳಗೆ ಮಡುವೆನಿಸಿಯೆ ಪರಿಯಲು (ಅಂಜಚ. ೯-೮೬); ಪರಳೆಂಬರೆ ಸುರಮಣಿಯಂ ಕರುವೆಂಬರೆ ಕಲ್ಪಭೂಜಮಂ (ತ್ರಿಪುವಿ. ೩೩-೯೭) ; ತಗ್ಗಿನಿಂ ತೆವರಿನಿಂ ಪರಳಿಂ ಪುತ್ತದಿಂ . . . ಶಾಕಿನಿಯರಿಂ ಡಾಕಿನಿಯರಿಂದಮಾ ಪಥಂ ಬೆದಱಿಸುವುದು (ಚಿಪು. ೫೬-೨೩). 'ಪರಳೊತ್ತು' ಪರಾ. ೨. 'ಪರಳೋಲೆ' ಪರಾ. ೪. 'ಪರಳುಗಾಯಿ' ಪರಾ. ಪರಲು: ೨. ನೀಲದ ಹರಲೆಸೆಯೆ ಕರಂಡಕಮಂ ಸಿಡಿದೊರ್ವಳಬಲೆ ಕಣ್ಮೊಪ್ಪಿದಳು (ಜಯಕಾ. ೨-೧೭). 'ಹರಲುಗ' ಪರಾ. ಪರಳ್ : ೧. 'ಹರಳೊತ್ತು' ಪರಾ. ೫. ನ್ಯಾಸದೆರೆ ಮತ್ತರು ೧೫ ಹರಳ್ಮತ್ತರು ೧೦ (ಸೌಇಇ. XX, ೩೦೦-೧೩ ; ಸು. 12ನೆಯ ಶತ). ೬. (ಎಣ್ಣೆ ತೆಗೆಯುವ) ಬೀಜ ; ಬಿತ್ತ : ಪರುಸದಿಂದೊಳಗಾದ ಹತ್ತಿಯ ಹರಳ ರಸವ ಬೆರಸಿ ಕಾಸಿದೊಡೆ (ಸೂಪಶಾ. ೨-೧೮). ಹರಳು : ೧. ಎರಡುಂ ಪಳ್ಳದ ಮೊದಲ ಮೂಡಣಗೇರಿ ಕಲ್ಲ ಬಿಳಿಯ ಹರಳೆ ಅಂತಾ ಎರಡುಂ ಪಳ್ಳದ ನಡುವಣ ತೆವರೆ (ಎಳ. XI, ದಾವಣ. ೧೯-೧೯ ; 1043); ಅಳುಪೆಂಬ ಹರಳ[ಪಾಶಾಂ. ಳಂ]ಕಳೆದು ದಯಾಮ್ಯತವೆಂಬ ಹಾಲಿನಲ್ಲಿ ಬೋನಮಂ ಮಾಡಿ (ಅವಚಂ. ೨೭೬-೧೨೭೦) ; ಧರಣಿಪಾಲನು . . . ನಾಯಿಯ ಸಾಕುತಿರಲು ನರನೊಬ್ಬ ನೋಡಿ ಸೈರಿಸದಲೆ ನಾಯಿಯ ಹರಳೆಲೆ ಹಾಕಲು (ವಿಪಾಸು. ೭೬-೩) ; ಅವಳು ಹಾಗೂ ಹೀಗೂ ಮಾಡಿ ಊಟವನ್ನೆಲ್ಲ ಸಾಗಿಸಿದಳಂತೆ. ಆದರೆ, ಕೊನೆಯ ತುತ್ತಿನಲ್ಲಿ ಹರಳು ಬರುವುದಿತ್ತು (ಭಾಷಾಶಾ. ೨೮) ; ಹಸಿಗೋಡೆಯಲ್ಲಿ ಹರಳು ನೆಟ್ಟಂತೆ (ಗಾದೆ). 'ಹರಳುಗಲ್ಲು' ಪರಾ. ೨. ಹರಳುಗಳ ಕೇವಣದ ಮಂಗಳ ತರವೆನಿಪ ತೊಡಿಗೆಗಳ . . . ಪರಿಜನಂಗಳು ಕಮಲಭವಪುರದಲ್ಲಿ ನೆಲಸಿದರು (ಕಾಮ್ಯಾಅ. ೬-೩೧); ಪಳಲನುಂಗುಟದಿಂದ ವಿಾಂಟದ ಹೊಳೆವ ಹರಳನು ವಿಾಂಟುವಂದದಿ (ಸಾಳ್ವಭಾ. ೨೧-೬೩) ; ಹರಳಿನ ಆ ಕಡಗ ಅಯ್ಯೋ ! ಮೊಳಕೈಗೆ ಹತ್ತುತ್ತಿದೆ ಕಾಣಿರಿ (ಸಸಕಿ. ೨೦೫). ೩. ಆಲಿಕಲ್ಲ ಹರಳಿನಂತೆ ಅರಗಿನ ಪುತ್ಥಳಿಯಂತೆ ತನು ಕರಗಿ ನೆರೆವ ಸುಖವ ನಾನೇನೆಂಬೆ (ಬಸವ. ೮೪೭) ; ಕೆಲವಂ ಗುಳ್ಳದೆಳೆಗಾಯ ಹರಳಂತೆ ಕತ್ತರಿಸಿಯೊಗರು ಹೋಹಂತುಕ್ಕರಿಸಿಕೊಂಡು . . . ಹಸನು ಮಾಳ್ಪುದು (ಸೂಸಶಾ. ೪-೩೨) ; ಅಮೋಘಯಂ ಲವಣಗಳು, ಮ್ಯಾಲ್ಪಿಗಿಯನ್ ನಾಳಗಳಲ್ಲಿ ಸೂಕ್ಷ್ಮ ಹರಳುಗಳಂತಿವೆ (ಕೀಟಬೆ. ೬೫). ೬. ಹೊಂಗೆಯ ಹರಳೊಕ್ಕುಳಕಂ ಹಿಂಗದೆ ತಾಂ ಯೆಣ್ಣೆ ಮಾಸನಯ್ದುಂ ಕೊಡುವರ್ (ಸ್ವಪಹಾ. ಅನುಬಂಧ. I, ೧೭-೨೫). ೭. ಔಡಲ ಗಿಡ ಮತ್ತು ಅದರ ಬೀಜ : ಅರಿನೃಪರನು ಕೊಂದು ಪುರವ ಪಾಳ್ಗೈದಾಗ ಹರಳ ಬಿತ್ತಿಸಿದರೇನೆಂಬೆ (ಕಂನವಿ. ೩-೧೭); ಹರಳುಗಳಂ ಹಂದಿಗಳ ರಕ್ತವಪೆಗಳಲ್ಲಿಯೂ ಅಂಕೋಲೆ ಕೈಲದಲ್ಲಿಯೂ ನೆನಸಿ ಬಿತ್ತಲು ಅದರಲ್ಲಿ ಹಾಗಲಕಾಯಿ ಹುಟ್ಟುವದು (ಪೌಗಂಧಿ. ೪೩೭-೧೪) ; ಹರಳು, ತೊಗರಿ, ಅವರೆ-ಇವುಗಳನ್ನು ಬೇರೆ ಬೇರೆ ಪೈರಾಗಿ ಬೆಳೆಯುವ ಪದ್ಧತಿ ನಮ್ಮಲಿಲ್ಲ (ಸ್ವಸಮ. ೪೪). 'ಹರಳೆಣ್ಣೆ' ಪರಾ.

ಪರಲ ದಿನ್ನೆ = ಕಲ್ಲಿನ ತಿಟ್ಟು,—ದಿಣ್ಣೆ : ಕಡಿಲವಾಗಿಲ ಹಲು ಹಾದಿಯ ದ್ವೆಸಿಮೆ ಪರಲ ದಿನ್ನೆ ಪ್ರಾಪ್ಯ ತಥಾತು ದಕ್ಷಿಣ (ಇಅ. VIII, ೧೫ ; 444). ಪಳಕೆಯಿ, ಹರಳ ಕೆಯ, ಹರಳ ಕೆಯ್, ಹರಳ ಕೆಯಿ = ೧. ನೊರಜು ಹೆಚ್ಚಾಗಿರುವ ಭೂಮಿ ; ಹರಳುಗದ್ದೆ (?): ದೇವರ ಮೂಡಣದೆಸೆಯಲ್ ಪಳಕೆಯಿ ಮತ್ತರು ೪ ತುಡುಕೆವಟ್ಟನಲ್ಲಿ ಅಱುವಣದೇ ತುಣ್ಬದು ಮಣಲ ಕೆಯಿ ಮತ್ತ ೬ (ಸೌಇಇ. IX-i, ೧೨೦-೧೫ ; ಸು. 1038) ; ℙ ಇದು 'ಪರಳ ಕೆಯಿ' ಎಂಬುದರ ಅಪಲಿಖಿತವಿರಬಹುದು. ೨. ಔಡಲಗಿಡಗಳನ್ನು ಬೆಳೆದ ಹೊಲ : ಬೊಂಬಸಮುದ್ರದ ಹಿಂದಣ ಹರಳ ಕೆಇ ೧ (ಎಳ. XVI, ಚಕ್ಕಸಾ. ೫೮-೨೮ ; 1260) ; ಊರ ಹಡುಪಣ ಹರಳ ಕೆಯಲು ಮತ್ತ ರೊಂದು ೧ (ಮ್ಯಾಅಂ. ೧೯೪೩, ೨೯-೪೪ ; 1174) ; ಕುಱುಂಬೆಟ್ಟದ ಮೂಲಿಗ ಹೊಲ್ಲಿಗೌಡ ಶ್ರೀಮಲ್ಲೇಸ್ವ(ಶ್ವ)ರ ದೇವರ ಸಂದಾದೀವೀ(ವಿ)ಗೆಗೆ ತಂನ ಮೊಂನ್ಯದೊಳಗೆ ಕೊಟ್ಟ ಹರಳ ಕೆಯ ಕಂಭ ೧೦೦ (ಎಇ. XIX, ೨೬-೬೫ ; 1245) ; ಅರಗಿಲ್ವಾಳ ಹೊಲದ ಮೇರೆಯ ಮೂಡ ಹರಳ ಕೆಯಿ ಮತ್ತರು ೫ (ಸೌಇಇ. XI-ii, ೧೬೫-೨೪ ; 1113); ಹರಳ ಕೆಯಿ ಮತ್ತ ೧ ಕ(ಂ)ಮ್ಮುಂ ೪೫೦ (ಸೌಇಇ. IX-i, ೨೬೬-೪೬ ; 1183). ಹರಳ ಕಮ್ಮ = ಔಡಲಗಿಡ ಬೆಳೆಯುವ ಭೂಮಿ : ಚಂಡಗೌಡನ ಬಾವಿಯಿಂಮ್ಮೂಡ ಹರಳ ಕಮ್ಮವಿನ್ನೂಱು ಮತ್ತಂ (ಕಇ. I, ೨೪-೨೦ ; 1148). ಹರಳ ಕಾಯಿ = ಔಡಲ ; ಏರಂಡ : ತಲೆಯಲ್ಲಿ ಬೂದಿಯಂ ಪೊಯ್ದುಕೊಂಡು ಕೊರಳಲ್ಲಿ ಹರಳ ಕಾಯ ಕಟ್ಟಿಕೊಂಡು ನಾವು ಕರದಡೆ ಮಾತನಾಡದಿದ್ದಳು (ಭೈರಸೂ. ೧೪೭). ಹರಳ ಬೆಂಚೆ =

ಕಲ್ಲುಕಟ್ಟೆಯಿಂದ ಕೂಡಿರುವ ಕುಂಟೆ : ಪೊಗಣ ಕಂನೇಶ್ವರ ದೇವರ್ಗ್ಗಂ ರಾಮನಾಥದೇವರ್ಗ್ಗಂ ಹರಳ ಬೆಂಚೆಯುಂ ಮೂಡಲನಾದಿ ಕಾಲದಿಂ ನಡವುತ್ತಿರ್ದ್ದ ಮತ್ತರು ೨ (ಸೌಇಇ. IX-i, ೨೯೮-೩೦ ; 1196). ಹರಳಾಗು = ಕಲ್ಲಾಗು ; ಶಿಲೆಯಾಗು : ಹರಳಾ[ಪಾಠಾಂ. ಕಲ್ಲಾ]ದಹಲ್ಯೆಯ ಶಾಪಹರಣವಿದು ಚರಣವಿದು (ಕುಮಾಅ. ೬ರಿಇ. ೧೭-೩೬).

[ದೇ.॥ ತಮಿ. ಮಲ. ಪರಲ್ ; ತುಳು. ಪರೆಲ್ ; ಕೊಡ. ಪರ ; ಕೋತ. ಪರ್ಲ್]

ಪರಲಾಲ (ನಾ). ನೊರಜುಕಲ್ಲಿನ ಪ್ರದೇಶದಲ್ಲಿ ಬೆಳೆದಿರುವ ಆಲದ ಮರ (?) : [ಯಿ][ಪ್ಪ]ಳ್ಳದಿ[ನ್ದೆ] ಕೆಬಗಣ ಪರಲಾಲ ಅದಜ ಮೂಡಣ ಕೋವನ[ಕೆಜ[3]] (ಎಇ. X, ೬೭-೨೪ ; 892). [ಪರಲ್ + ಆಲ$_1$]

ಪರಲು$_1$ 'ಪರಲ್' ನೋ.

ಪರಲು$_2$, ಪರ್ಲು (ನಾ). (ಉಕ) ಸಂಬಂಧ ; ಸಂಪರ್ಕ : ಅವನ ಉದ್ಧಟತನವನ್ನು ಕಂಡು ಅವನ ಪರಲು ಕಡಿದುಕೊಳ್ಳಬೇಕೆನಿಸಿತ್ತು (ತೊಳಮು. ೧೫೨). **ಪರ್ಲು :** ಅವರ ಪರ್ಲು ತಪ್ಪಿ ಬಹಳ ವರ್ಷಗಳೇ ಆದವು (ರೂಢಿ).

ಪರಲು ಹರಿ. ಪರ್ಲು ಹರಿ = ೧. ಸಂಬಂಧವನ್ನು ಕಡಿ ; ಋಣಾನುಬಂಧ ಇಲ್ಲವಾಗಿಸು : ಕೆಡಿಸಿದ ಹುಡುಗಿಗೆ ಅಸಾಧ್ಯ ಕಠಾರಿನಿಂದ ಪರಲು ಹರಿಯಬೇಕೆನ್ನುವಿಯಾ ? (ರಕ್ತಧ್ವ. ೨೫೪). ೨. ಋಣವಿಮೋಚನವಾಗು ; ಹಂಗು ತೀರು : ನಿನ್ನ ಪರಲು ಹರಿಯತೆಂದು ಮಂದಾಕಿನಿ ಇಷ್ಟು ಹಣವನ್ನು ಕೊಟ್ಟದ್ದಾಳೆ (ಬೆಸರ. ೧೪೦) ; ಒಮ್ಮೆ ಮದ್ವೀ ಮಾಡಿಬಿಟ್ರೆ ಪರ್ಲು ಹರ್ಧೋತು (ತಿಹುಗು. ೨೭). **ಪರಲು ಹರಿದು ಕೊಳ್ಳು, ಪರ್ಲು ಹರಿದುಕೊಳ್ಳು** = ಸಂಬಂಧವನ್ನು ಕಡಿದುಕೊಳ್ಳು : ಇರುವ ಎರಡು ಹೊಲಗಳಲ್ಲಿ ಒಂದನ್ನು ಕೊಟ್ಟು ಪರಲು ಹರಿದುಕೊಂಡಳು (ಮಣ್ಣುಮ. ೧೦೬) ; ಹೇಗಾದರೂ ಮಾಡಿ ಈ ಮದುವೆಯ ಪರಲು ಹರಿದುಕೊಂಡು ಅಲ್ಲಿಗೆ ಹೋಗಬೇಕೆಂಬ ಇಚ್ಛೆಯು ಪ್ರಬಲವಾಯಿತು (ಕ್ರೀಕಾಂತ. ೫) ; ನಿಮ್ಮ ಲೇಖನವನ್ನು ಪ್ರಕಟ ಮಾಡಿ ಒಮ್ಮೆ ನಿಮ್ಮ ಪರ್ಲು ಹರಿದುಕೊಳ್ಳಬೇಕು (ಮುಗಿಸು. ೮೦).

[?./ತುಳು. ಪರ್ಲ್ = ಕತ್ತಿಯಂತೆ ತೀಕ್ಷ್ಣವಾಗಿ ಕತ್ತರಿಸು]

ಪರಲುಂಗುರ, ಹರಳುಂಗುರ (ನಾ). (ವಜ್ರ ಮುಂತಾದ ಬೆಲೆ ಬಾಳುವ) ರತ್ನದ ಅಂಗುಳೀಯಕ ; "ರತ್ನಾಂಗುಲಿ, ರತ್ನವನ್ನು ಕುಂದಣ ಹಾಕಿದ ಉಂಗುರ" (ಪ್ರಭಣ್ಣ). **ಹರಳುಂಗುರ:** ಯುಧಿಷ್ಠಿರನ್ಯಪನ ಹರಳುಂಗುರ ವಿಘಾತಿಯೊಳುಗಿದು ಬಿದ್ದುದಗಾಧ ಕೂಪದಲಿ (ಕುಮಾಅ. ೬-೩೭) ; ಹಸ್ತಕಟಕ ಹರಳುಂಗುರ ಹೊಂಬಳೆ ವಿಸ್ತಾರ ನವರತ್ನಹಾರ (ಶಾಂತೀಶ. ೩-೬೮). [ಪರಲ್ + ಉಂಗುರ]

ಪರಲುಗ, ಹರಲುಗ (ನಾ). ಹರಳುಗಳ ವ್ಯಾಪಾರ ಮಾಡುವವನು ; ರತ್ನಪಡಿವ್ಯಾಪಾರಿ : ಪೊನ್ನುಗಂ, ನಾರುಗಂ, ಪಾಲುಗಂ, ಪರಲುಗಂ (ಶಬ್ದಾಸು. ೪೨೪ ಪ್ರಯೋ). **ಹರಲುಗ:** ಹೊನ್ನುಗನು, ಮಣ್ಣುಗನು, ಪಾಲುಗನು, ಹರಲುಗನು ಇತ್ಯಾದಿ (ಹೊಸುಗ. ೮೮).

[ಪರಲ್ + -ಉಗ]

ಪರಲೂರ್ (ನಾ). ಒಂದು ಸ್ಥಳದ ಹೆಸರು : ಆಸೀದ್ವಿನಯಸನ್ದೀತಿ ಪರಲೂರ ಗಣಾಗ್ರಣೀ (ಇಅ. XI, ೬೯-೧೨ ; 567) ; ಪರಲೂರಾ ಚೇದಿಯಬ್ಬಜ ಪ್ರಭಾಚನ್ದ್ರಗುರುವಾರ್ಪಡೆ[ದಾರ್] (ಸೌಇಇ. XX, ೯-೨೦ ; ಸು. 7ನೆಯ ಶತ). [ಪರಲ್+ಊರ್]

ಪರಲೆ (ನಾ). ಒಂದು ಬಗೆಯ ಔಷಧಿ ಸಸ್ಯ : ಇಬ್ಬನೆ, ಪರಲೆ, ಇಟ್ಟೇವು, ಯಿಸಗ, ಮದರಾಸ್ ಮಲ್ಲಿಗೆ (ಮೈಔಗಿ. ೨೩-೪೧೮). [?]

ಪರಲೊತ್ತು, ಪರಳೊತ್ತು, ಹರಳೊತ್ತು (ಕ್ರಿ). ೧. (ಅಂಗಾಲಿಗೆ) ಕಲ್ಲು ಚುಚ್ಚು ; ಕಲ್ಲೊತ್ತು : ಪರಲೊ[ಪಾಠಾಂ.ಳೊ]ತ್ತೆ ಸೈರಿಸುತ್ತುಂ . . . ಸೀತೆ ಸೆಡೆದು ಮೆಲ್ಲನೆ ನಡೆದಳ್ (ಪಂರಾಮಾ. ೬-೨೭). ೨. ಹರಳುಮೊಲೆ ಮೂಡು,—ಕಾಣಿಸಿಕೊಳ್ಳು : ಪೀನಕುಚಂ ಪರಲೊತ್ತುವ ದಿನದಿಂ ನೀನಲ್ಲದೆಯನ್ಯರನೇನಱಿಂದಳೆ (ಜಯಕಾ. ೧೪-೬೬). **ಪರಳೊತ್ತು :** ೧. ಪರಳೊತ್ತಿ ನೊಂದುವಮ್ಮಾಜಿ ಪಾದಗಳು (ನಾಗಕು. ೯-೧೫). **ಹರಳೊತ್ತು :** ೧. ಹಲವು ಹರಳೊತ್ತಿ ಬೊಕ್ಕೆಗಳು ಮೂಡಿ ನಡೆಗೆಟ್ಟ ಮೆಲ್ಲಡಿಯ ನಿಜವನಿತೆಯಂ ನೋಡಿ (ಜಡಕಾ. ೯-೨೯) ; ಹರಳೊತ್ತಿ ಸುಡುಗಾಡೊಳಗೆ ಮಲಗಿದನು (ಜೀವಂಚಿ. ೫-೪) ; ಹರಳೊತ್ತಿ ಪಾದವು ಬೊಕ್ಕೆಯೊಡೆದು ಹಸ್ತಕೆ ದಾವತಿಯಿಲ್ಲ (ಅಮುಸಾಂ. ೬-೫). ೨. ಹರೆಯವೇಱದ ಮುನ್ನವೆ ಹರಳೊತ್ತುವ ಹರೆಯದ ರಾಜಪುತ್ರಿಯರು ವರಿಸುವ ನವಮೋಹನಾಂಗವಾ ಕುವರಗೆ ದೊರೆಕೊಂಡುದು (ಚಂಪ್ರಸಾಂ. ೨-೨೬). [ಪರಲ್ + ಒತ್ತು$_1$]

ಪರಲೋಕ (ನಾ). ಮುಂದಿನ ಜಗತ್ತು ; ಪರತ್ರೆ ; ಸ್ವರ್ಗ : "ಪರಲೋಕಮಱಿಗೆ ಲೋಕಾಂತರಮಕ್ಕುಂ" (ಸಸ್ತುಕೋ. ೫೯-೪೬) ; ಪರಲೋಕಿಯೆ ಮುನ್ನವಿಲ್ಲೆನೆ ಪರಲೋಕಮೆತ್ತಣಿಂ ಬಂದುದು (ಶಾಂತಿಪು. ೮-೧೨೮ಪ) ; ಜಂಗಮವೆನ್ನೊಡೆಯರೆಂದು ಒಕ್ಕುದ ಕೊಂಡು ಉದಾಸೀನವ ಮಾಡಿದರೆ . . . ಪರಲೋಕಕ್ಕೆ ದೂರ (ಬಸವ. ೪೨೨) ; ಇಹಲೋಕ ಪರಲೋಕಂಗಳಿಗೆ ಜಗದೇಕರಕ್ಷಕಶಿಕ್ಷಕನಲ್ಲದೆ ಬಳಿಕದಾರುಂಟು (ಬಸಪು. ೨೮-೬೫) ; ಪಾಂಡುರಾಜನು . . . ಎಳೆಯ ಮಕ್ಕಳನ್ನೂ ಹೆಂಡತಿಯನ್ನೂ ಬಿಟ್ಟು ಪರಲೋಕವನ್ನೈದಿದನು (ವಚಭಾ. ೧೫) ; ಪಾಪಿಗೆ ಪರಲೋಕವಿಲ್ಲ, ಪಾಪೋಸಿಗೆ ಮಡಿಯಿಲ್ಲ (ಗಾದೆ).

ಪರಲೋಕಯಾತ್ರೆ = ಮುಂದಿನ ಲೋಕಕ್ಕೆ ಹೋಗುವುದು : ಯುಧಿಷ್ಠಿರನು ಸೋದರರು ಮತ್ತು ಪತ್ನಿಯೊಡನೆ ಪರಲೋಕಯಾತ್ರೆ ಹೊರಡುತ್ತಾನೆ (ಭಾರದ. ೧೦೩). [ಪರ$_3$+ಲೋಕ]

ಪರಲೋಕಕ್ರಿಯೆ (ನಾ). ಅಪರಕರ್ಮ ; ಉತ್ತರಕ್ರಿಯೆ : ಗಾಂಗೇಯನುಂ ಸತ್ಯವತಿಯುಮತ್ಯಂತಶೋಕಾನಲದಹ್ಯಮಾನಮಾನಸರ್ಕಳಾಗಿ ಅತಂಗೆ ಪರಲೋಕಕ್ರಿಯೆಗಳಂ ಮಾಡಿ (ಸಂಪಭಾ.೧-೮೦ಪ).

[ಪರಲೋಕ+ಕ್ರಿಯೆ]

ಪರಲೋಕದೂರ (ನಾ). ಸ್ವರ್ಗಲೋಕದಿಂದ ತಿರಸ್ಕೃತನಾದವನು,—ಬಹಿಷ್ಕೃತನಾದವನು : ಐಕೆ ಹುಟ್ಟಿಸಿದೆ ಇಹಲೋಕ ದುಃಖಿಯ ಪರಲೋಕದೂರನ (ಬಸವ. ೬೪). [ಪರಲೋಕ + ದೂರ]

ಪರಲೋಕಸುಖ (ನಾ). ಬೇರೆಯ ಲೋಕದಲ್ಲಿ ಸಿಗುವ ಸಂತೋಷ ; ಸ್ವರ್ಗಸುಖ : ವೃಥಾ ಸ್ನಾನವಧಯಂ ಮಾಣು ಪರಲೋಕಸುಖಮಂ ಪಡೆದುಕೊಳ್ಳುದೆ ಬುದ್ಧಿ (ಪಂಶತಂ. ೬೧-೧೦).

[ಪರಲೋಕ + ಸುಖ]

ಪರಲೋಕಿ (ನಾ). ಸ್ವರ್ಗಲೋಕಕ್ಕೆ ಸೇರಿದವನು ; ಸ್ವರ್ಗವಾಸಿ: ಪರಲೋಕಿಯೆ ಮುನ್ನವಿಲ್ಲೆನೆ ಪರಲೋಕಮೆತ್ತಣಿಂ ಬಂದುದು(ಶಾಂತಿಪು. ೮-೧೨೮ ಪ). [ಸಂ. ಪರಲೋಕಿನ್]

ಪರಲ್ಮೊಲೆ, ಪರಳುಮೊಲೆ, ಪರಳ್ಮೊಲೆ (ನಾ). ಆಗ ತಾನೆ ಮೂಡುತ್ತಿರುವ ಮೊಲೆ ; ಸಣ್ಣ ಮೊಲೆ: ಮುಗುಳ್ಮೊಲೆಯ ಪರಲ್ಮೊ[ಪಾಠಾಂ. ಳ್ಮೊ]ಲೆಯ . . . ಬೆದರ್ದ ಕಣ್ಣ ನೋಟದ ಬಾಲೆಯರ್ (ಚಿಪು. ೧೦-೧೯). **ಪರಳುಮೊಲೆ :** ಪರಳುಮೊಲೆಗಳ ಪಿಡಿಯಲು ನಿಟ್ಟಿಸಿ ನೋಳ್ಪ ತರಳೆಣ್ಣುಗಳೊಪ್ಪಿದರು (ಕಂಸವಿ. ೬-೧೭೫). **ಪರಳ್ಮೊಲೆ :** ಮುಱ್ಱುಮಜೆಯೆಂಬುದೆಳೆಣ್ಣಳ ಪರಳ್ಮೊಲೆಯೊಳ್ . . . ಅಲ್ಲದಿಲ್ಲವಾ ದೇಶದೊಳಗೆ (ಉದ್ಭವೇ. ೨-೧೪). [ಪರಲ್+ಮೊಲೆ$_1$]

ಪರಲ್ವಿಲ್ (ನಾ). ಕಲ್ಲನ್ನು ಬೀಸಿ ಎಸೆಯುವ ಒಂದು ಬಗೆಯ ಸಾಧನ ; ಕವಣೆ : ಪಾಮರಿಯರ ಕುಡುವುರ್ವಿನ ಕೊನೆಮುಟ್ಟಿದ ತುಜುಗೆವೆಗಳ ನಡುವೆ ಕರಿಯೂಲಿಗಳೆಸೆದುವು ಚತ್ತಭವಂ ವಿರಹಿವಿಹಂಗ ವನಿಸುವ ಪರಲ್ವಿಲ್ಲೆರಡು ಹೆದೆಯ ಮಧ್ಯದ ಹರಿನೀಲದ ಗೋಳಕವೆಂಬಂತೆ (ಜಯಕಾ. ೧-೪೦). [ಪರಲ್+ಬಿಲ್$_2$]

ಪರವಂಚನೆ (ನಾ). ಬೇರೆಯವರಿಗೆ ಮೋಸ ಮಾಡುವುದು ; ಇತರರನ್ನು ವಂಚಿಸುವುದು : ಪರವಂಚನೆ ವಿದ್ಯೆಯೆಂದು ಕಲ್ತಾ ಜನಗಳ ನುಡಿಗಳ್ ಪ್ರಮಾಣಮಲ್ಲವೆ ಜಗದೊಳ್ (ಶಾಕುಂತ. ೭೧-೧೨೫) ; ಹಗಲೆಲ್ಲ ಪರವಂಚನೆಯ ತಾಮಸ ತಿನಿಸನ್ನು ತಿಂದು . . . ರಾತ್ರಿಯಲ್ಲಿ ಆತ್ಮವಂಚನೆಯ ಘೋರನಿದ್ರೆಯೊಳಗೆ ಕಾಲಹರಣ ಮಾಡುವವರು, ಕರ್ತವ್ಯವೆಂದು ಹೇಳಬಂದಿದ್ದಾರೆ (ಉದವೈ. ೭೪). [ಪರ$_3$+ವಂಚನೆ]

ಪರವಣಿಗೆ, ಹರವಣಿಗೆ (ನಾ). ಕೆದರಿ ಬಿದ್ದಿರುವ ರೀತಿ ; ಚೆಲ್ಲಾಪಿಲ್ಲಿಯಾಗಿರುವ ಸ್ಥಿತಿ : ಆ ಪಡುವ ಪಲವು ಪಾಟುಗಳಾ ಪೋರಟೆಯೂ ಪೊರಳ್ಳೆಯೂ ಪುಯ್ವುಗೆ ಮತ್ತಾ ಪರವಣಿಗೆಗಳಾ ಪಟಾವಾ ಪೇಸಿಕೆಗೆಯ್ದೆಯಿರವನೇವಗೆಯೊರೆವಂ (ಚಕವಿ. ೬-೧೪೫). **ಹರವಣಿಗೆ :** ಊರಿಂದ ಬಂದ ಮೇಲೆ ಮನೆಯ ಹರವಣಿಗೆಯನ್ನು ಸರಿಮಾಡುವಷ್ಟರಲ್ಲಿ ಸನಗೆ ಸಾಕಾಯಿತು (ರೂಢಿ). [<ಪರೆ$_1$+-ವಣಿಗೆ]

ಪರವಧು (ನಾ). ಬೇರೆಯವನ ಪತ್ನಿ ; ಇನ್ನೊಬ್ಬನ ಹೆಂಡತಿ: ಪರವಧುದುರ್ವ್ಯಸನಂ ನಿನಗೆಂದಮರ್ದಪ್ಪಿಸುವರ್ ಕೆಂಪೆಸೆಯೆ ಕಾಯ್ದುಯಃಪುತ್ರಿಕೆಯಂ (ಅದಿಪು. ೫-೮೭) ; ಪರವಧುಗಾಸೆಗೆಯ್ವುಧಿಕ ಪಾತಕಮೊಂದು ರಘುಪ್ರವೀರನೊಳ್ಳುರದೊಳಿರ್ಚದೋಸರಿಸಿ ವಂಚಿಸೀತೆಯನುಯ್ವ ಭೀತಿಯೊಂದು (ಪಂರಾಮಾ. ೯-೮೯) ; ಕಂಗಳಿಟ್ಟೆಗೆ ಪರವಧುವ ನೆರೆವರು (ಬಸವ. ೧೦೬); ಬೇಟವೇ-ಪರವಧುವಿನಲಿ ಕೈಮಾಟವೇ ಪರವಿತ್ತದಲಿ (ಕುವ್ಯಾವಿ. ೨-೪೪). [ಪರ$_3$+ವಧು]

ಪರವನಿತೆ (ನಾ). = ಪರವಧು : ಪರವನಿತೆಗಳಿಪಿ ರಣದುರ್ಧರನೆನಿಸಿರ್ದಶನಿ ಘೋಷನಟಿಯುದನಸುರೇಶ್ವರ ನೀನೇನಱಯದನೇ(ಪಂರಾಮಾ.೧೪-೧೨೪); ಪರವನಿತೆಯರನೊಮ್ಮೆಯುಂ ನೀ ನೋಡದಿರು (ಬಸಪು. ೪-೬೫).

[ಪರ$_3$+ವನಿತೆ]

ಪರವರಶಿ, ಪರವರಸಿ, ಪರವರ್ಷ, ಪರವರ್ಷಿ, ಪರ್ವರ್ಷ, ಪರ್ವರ್ಷಿ, ಪರ್ವಷಿ (ನಾ). ೧. ಪಾಲನೆ ; ಪೋಷಣೆ ; ಸಂರಕ್ಷಣೆ : ಆ ಪರವರಶಿಯ ತಾರೀಖು ಯಾವ ಜಿಹ್ವೆಯಿಂದ ಮಾಡಬೇಕು (ರಾಜೇಂದ್ರ. ೨೨೨). **ಪರವರಸಿ :** ೧. ಸಣ್ಣವರಿಗೆ ದೊಡ್ಡವರಿಗೆ ಯಾವತ್ತರಿಗೂ ಪರವರಸಿ ಮಾಡುವ ಬಗ್ಗೆ, ತಮ್ಮನ್ನು ಮಹಾದೇವನು ಹೈದಾ ಮಾಡಿ ಇದ್ದಾನೆ(ರಾಜೇಂದ್ರ. ೨೧೧). **ಪರವರ್ಷ :** ೧. ಈ ದೌಲತ್ತು ಕೊಡುವಂಥಾದ್ದು ಸರಫರಾಜು ಮಾಡುವಂಥಾದ್ದು ಯಾನತ್ತು ತಮ್ಮ ಪರವರ್ಷ ಮೆಹರ್ಬಾನಗಿಯಿಂದಾ ಎಂಬದು ನಮಗೆ ನಿಶ್ಚಯವಿದೆ (ರಾಜೇಂದ್ರ. ೨೬೫). **ಪರವರ್ಷಿ :** ೧. ಸರ್ಕಾರಕ್ಕೆ ಅನುಕೂಲ, ಪ್ರಜೆಗೆ ಪ್ರಯೋಜನ, ರೈತಪರವರ್ಷಿ ಇವುಗಳ ಮೇಲೆ ಸಂಪೂರ್ಣದೃಷ್ಟಿಯಿಟ್ಟು . . . ಖಾವಂದರವರು ವಿಚಕ್ಷಣೆಯಿಂದ ಅಜ್ಞೆ ಯಮಪಾಲಿಸಿದ ಕ್ರಮವು ವ್ಯಕ್ತವಾಗುತ್ತೆ (ಮಹಾಪಂ. II, ೫೮). **ಪರ್ವರ್ಷ :** ೨. ಏಳಿಗೆ ; ಅಭಿವೃದ್ಧಿ : ಇಂಗ್ರೇಜ ಬಹಾದ್ದರ ಕುಂಪನಿ ದೊಡ್ಡ ಸರಕಾರದ ಆಶ್ರಯದ ಒಳಗೆ ಇದ್ದು ಅಬ್ರು ಹುರಮತ್ತಿನಿಂದ ಪರ್ವರ್ಷ ಆಗುತ್ತಾ ಇದ್ದೇವೆ (ರಾಜೇಂದ್ರ.೨೫೭). **ಪರ್ವರ್ಷಿ :** ೧. ಆ ಪರ್ವರ್ಷಿ ಹೊರ್ತು, ನಾವು ಮತ್ತೊಬ್ಬರ ಒಡವೆ ಮೇಲೆ ಅಪೇಕ್ಷೆ ಮಡಗುವದಿಲ್ಲಾ (ರಾಜೇಂದ್ರ.೨೫೭). **ಪರ್ವಷಿ :** ೧. ಛತ್ರ, ದೇವಸ್ಥಾನ . . . ಶಕೀರ್ ಪರ್ವಷಿ ಇವು ಮೊದಲಾದ ಮುಂಜರಾಯಿ ಬಾಬುಗಳನ್ನು ಖಾವಂದರವರು ವಿಚಾರಿಸಿ (ಮಹಾಪಂ. II, ೫೬).

[←ಪಾರ. ಪರ್‌ವರಿಶ್, ಪರ್ವರಿಶೀ; ಹಿಂ. ಪರವರಿಶ್, ಪರ್ವರಿಶ್ ; ಮರಾ. ಪರ್‌ವರಿಶೀ, ಪರ್‌ವರಸ್, ಪರ್‌ವರೀಸ್, ಪರ್‌ವರ್ಷೀ]

ಪರವರಸಿ 'ಪರವರಶಿ' ನೋ.

ಪರವರಿ, ಹರವಡಿ, ಹರವರಿ$_2$, ಹರಾವರಿ, ಹರುಬರಿ(ನಾ). ೧. ನೆಲೆ ; ನಿವಾಸ ; ಗೊತ್ತು : ಹಸ್ತಿನಪುರಂ . . . ಭೂವನಿತೆಯ ಕರ್ಪುರದ ಕರಂಡಗೆ ಸೌಖ್ಯದ ಪರವರಿ ಪೊಸವೇಟದಿರ್ಕೆ (ಶಾಂತಿಪು. ೯-೧೫೯) ; ಉರಿಯಂ ಕೆಂದಳಿರ್ಗಳ್ ಧೂಮರಾಜಿಯಂ ಭೃಂಗರಾಜಿ ಕಿಡಿಯಂ ಪಣ್ ಪೋಲ್ತಿರೆ ಕಾಮಿಗೆ ಕಾಮಾಗ್ನಿಯ ಪರವರಿಯೆನಿಸಿದುವು ಬಂದ ಮಾವಿನ ಮರಂಗಳ್ (ಅಜಿಪು. ೬-೧೬) ; ಆ ನೆಲನನಿತುಂ ಸುರಚಾಪದ ಬೆಳಸಿನ ಪ[ಪಾಶಾಂ. ಹ]ರವರಿಯೆನಿಕುಂ ಪಂಡರತ್ನರುಚಿವಲ್ಲರಿಯಿಂ (ಪಂರಾಮಾ. ೧-೬೪). ೨. ಹೆಚ್ಚಳ ; ಅತಿಶಯ ; ಹೆಚ್ಚುಗಾರಿಕೆ : ಸರಸತೆ ಕೊರಗದ ವಿದ್ಯೆಯ . . . ಪರವಶತೆ ಪೊಣ್ಮದೊಲವಿನ ಪರವರಿ [ಪಾಶಾಂ. ಶೆ]ಯಂ ಬಲ್ಲನುಳ್ಳೊಡಾತನೆ ಬಲ್ಲಂ (ಲೀಲಾವ. ೪-೫೧). ೩. ಸಾಗುವಳಿ ಮಾಡುವ ಭೂಮಿ,—ಜಮೀನು,—ನಿವೇಶನ : ಕಿಟ್ಟೂ ನೇಶ್ವರದಾ ದೇವರ ಪರವರಿಯ ಭತ್ತಮುಂ ಕವಿಲೆಯ ಪಾಲುಂ ಎಟ್ಟುಂ ××× ದೇವಾನ್ದೇವನ ಪರಿಜನಮಲ್ಲಾಡೆ ಪೆಟನೊರ್ವನಾರು ಮುಣ್ಡೊಮೆಣ್ಡಕಂ (ಎಕ. VI, ಕೊಪ್ಪ. ೩೭-೩ ; ಸು. 675 ?). **ಹರವಡಿ :** ೪. ಪ್ರಕಟಣೆ ; ತೋರಿಕೆ ; ಪ್ರದರ್ಶನ : "ಪ್ರಕಟಕ್ಕೆ ಹರವಡಿ" (ಕಬ್ಬಕೈ. ೫೧); "ಹರವಡಿಯೆನಲ್ ಪ್ರಕಟಂ" (ಕವಿಕಂ.೧೧೭) ; ನಾನು ಹೆಸರ ವೇಶ್ಯ ಸೂಳೆ ಎಂಬುದನ್ನು ಡಂಗುರಿಸಿ ಬೀದಿವಾತು ಮಾಡಿ ಹರವಡಿಯಿಂದ ಹರೆಹದಿದ್ದರೆ . . . ಕೊಸವನನ್ನು ಕಣ್ಣೆರಿಹಿ ಮರುಳ್ಮಾಡಿ ಎಳೆಕಂದೊಪ್ಪಿಸುವುದು ಹೇಗೆ ? (ಮಂತ್ರಶ. ೨೭-೧). ೫. ಪ್ರಸಿದ್ಧಿ ; ಖ್ಯಾತಿ ; ಕೀರ್ತಿ : "ಹರವಡಿ—ಪ್ರಸಿದ್ಧವಾದಂಥ"(ಗುವಿಮೋ. ೧೬೯). **ಹರವರಿ$_2$:** ೧. ದವಾಗ್ನಿಯ ಸತ್ರಂ ಹರಿಣಂಗಳ ಹರವರಿ ಕೇಸರಿಗಳ ಸರಿ ಪರ್ವದಡವಿ ಪಡೆದುದಗುರ್ವಂ (ಚಂದ್ರಪು. ೫-೪೭) ; ತಳರಿ ತಾಣಂ ಕುಸುಮಕುಲದ ನೆಲೆ . . . ಪುಳಿನಾಕೀರ್ಣ ಕೊಳನ ಹರವರಿ ನವಿಲ ನಂದನವೆನಿಪ್ಪ ಕೇಳೀವನಕ್ಕೆಯ್ತಂದನು (ಹಜಿಕಾ. ೬-೨೬) ; ವಿರಹಿಜನದುರಿ ಮನಸಿಜನ್ನೆದಂಬಿನಲರ್ಗೆ ಹರವರಿ . . . ಎನಿಸಿರ್ಪಾತನ ಪರಿ ಪೊಸತಾಯ್ತು ಚೈತ್ರಭೂಪಾಲಕನಾ (ನಳಚಂ. ೫೫) ; ವರವಸಂತನ ಬೀಡೊ . . . ಚಂದ್ರಮನ ಹರ[ಪಾಶಾಂ.ರಿ]ವರಿಯೊ . . . ಎನೆ ನೆಱೆ ಮೆಱೆದುದಾ ಭೂಮಿ (ತೊರಾ. ೧-೬-೯) ; ಹೊನ್ನದ ಹರವರಿಯೊ . . . ಎನೆ ತಿಳಿದ ಪೂಗೊಳನೊಂದು ಚೆಲುವಾಯ್ತು (ಸಾಳ್ವಭಾ. ೧೬-೮). ೨. ಹರಂ ಮಾಹೇಶ್ವರಜ್ವರವನಟ್ಟದಂ ಹರಣದೊಳು ಹರವರಿಯ ತಾಪಮಂ ಕಟ್ಟದಂ (ಸಂಬರ. ೧೭-೧೧೬) ; ಚಿಂತೆಯ ಹಬ್ಬುಗೆಯ ಹರವರಿಯ [ಪಾಶಾಂ. ಸದ]ಖೇದದ ಮಬ್ಬಿನಲಿ ಹಣಗಿದರು ಪವನಜ ಫಲುಗುಣಾದಿಗಳು (ಕುವ್ಯಾಸ. ೧೬-೫೬) ; ಕಡಲು ವಿಘೂರ್ಣಸುತಿಹುದು . . . ಮತ್ಸ್ಯ ಮಕರಾದಿಗಳ ಹರವರಿಯಿಂ ಕೀಳರಗಳಿಂ ನೊರೆಗಳಿಂ ಕರಮೆ ವಿರಾಜಿಸುತಿಹುದು (ನಾಗಕು. ೨-೬) ; ಹರವರಿಯ ಮೋಹದಿಂ ಹಿರಿದಾಗಿ ಹಿಗ್ಗುತ್ತ ಸಲಹುತಿರ್ದರು ಪುತ್ರನ (ರಾಘಚ. ೨-೪೬). ೩. ಹಡುವಣ ಡೊಂಗನ ಹರವರಿಯಲ್ಲಿ ಮತ್ತರು ೧ (ಎಕ. VI, ಕಡೂರು. ೩೦-೪೭ ; 1170) ; ತಂಮ ಹರವರಿಯ ಭೂಮಿಯ ಕಾರಣದ್ದೆಯೊಳಗೆ ಪೋಟೂರಗೊಕಂದದ ವಿಶ್ವಾಮಿತ್ರಗೋತ್ರದ ಶಂಕರಭಟ್ಟಾಹಿತಾಗ್ನಿಗಳ ಮಕ್ಕಳು (ಎಇ. XXVII, ೨೮-೩೦ ; 1256) ; ಕಿಳುಂದದ ನಾಡ ಹರವರಿಗಳ ವಳಗೆ ಗಿಣಿಕಲ್ಲು . . . ಚಿಕ್ಕಕೊಡನಾಡ ವಳಗಣ ನಾರವೆ ಅಂತು ಹರವರಿಗಳು ೫೦ ಕುಳವ ಕಡಿದು ಸಮರ್ಪಿಸಿದೆಱು (ಮೈಅರಿ. ೧೯೫೫, ೫೫-೪೮ ; 1380) ; ಕುಪ್ಪವಳ್ಳಿಯೊಳಗಣ ದೇವಿ

ಯಕ್ಕನ ಹರವರಿಯ ನಾಲ್ಕು ಹಣವಿನ ಕುಳದ ಭೂಮಿಯನು . . . ತಾಳು ಆ ನಾಗಂಣಗಳಿಗೆ ಧಾರೆಯನೆಜದು ಕೊಟ್ಟ ಶಿಲಾಶಾಸನ (ಮೈಆರಿ. ೧೯೩೨, ೪೨-೮; ಸು. 1418). ೪. "ಹರವರಿ [ಪ್ರಾಕಾಂ. ಪರಿವಡಿ, ಹರವಡಿ]ಯೆಂದು ಪ್ರಕಟಂ" (ಕಶಸಾ. ೬೬-೪೭೪). ೫. ನರಸಿಂಗ ಮೊನೆಯರ ವಿಚಿತ್ರಾನುರಾಗಮಂ ಹರವರಿಯ ನಂದಿಯಣ್ಣನ ಸಕಲ ಭೋಗಮಂ ಬಂದು ನೋಡಲು ನೆರೆದ ಸಕಲ ಸಾಮಂತರಿಂ (ನಂಬರ. ೫-೪೦); ಹರಿರಾಯನೆನಿಪ ನರಪತಿಯು . . . ಹರವರಿಯ ಸಕಲ ಸೌಭಾಗ್ಯಸಂದೋಹದಿಂ ರಾಜ್ಯವಾಳುತ್ತಲಿ (ಗುರುಚಾ. ೬-೧೦). ೬. ವಿಹಾರಸ್ಥಾನ: ರಾಜವೀಥಿ ವಿಪಣಮಾರ್ಗ ಗಣಿಕಾವಾಟಸರಣಿ ಸಂತಾನಂ ವಸಂತವಲ್ಲಭನ ಹರವರಿಯಂತಿರ್ಪುದು (ಅನಂಪು. ೧-೧೦೫ ಪ); ಕಾಲನ ಹರವರಿಯೊ ಹೆಬ್ಬೆಳಸ ಮುತ್ತುವ ವಿಹಗಸಂತತಿಯೊ . . . ಹಿಳುಕಬ್ಬರಿಸಿ ಗಬ್ಬರಿಸಿದುವು ದಿಗುತಟವನು ಶರವ್ರಾತ (ಕುಪ್ಯಾಭೀ. ೪-೧೫); ಜವನ ಹರವರಿಯೋ . . . ಕಪರ್ದಿಯ ಕವತೆಯೋ ಕಾಣೆನು ಸುರಾಸುರಕದನಕೇಳಿಯಲಿ (ತೊರರಾ. ೬-೧೩-೪೦). ೭. ಬಹಳವಾದ ವಿಸ್ತಾರ; ಹೆಚ್ಚಾದ ವ್ಯಾಪ್ತಿ,—ಹರವು: ವರಸ್ವಪ್ನಕಲ್ಪಿತನೆ ಹರವರಿಯ ವಿಶ್ವನೆಂಬರು (ಮನೋವಿ. ೬-೨೨); ಕಿಱುಕಿಚ್ಚು ಹರವರಿಯ ಬಿಂಜದಡವಿಯ ನಿಮಿಷದೊಳ್ ದಾಮದೂಮಮಂ ಮಾಡದಿಹುದೇ (ಸಮ್ಯಕೌ. ೧-೪೮). ೮. ಸಮೂಹ; ಗುಂಪು: ದೆಸೆಗೆಟ್ಟೋಡುತಿಹ ನಿರ್ಜರರ ಹರವರಿಯನು ಸುರೇಶ್ವರ ನೋಡಿ ಖತಿಗೊಂಡ (ಉತ್ತರಾ. ೨೨-೧) ೯. ಚೆಲ್ಲಾಪಿಲ್ಲಿ; ಚೆದರಿ ಹೋಗಿರುವಿಕೆ: ಮರುತನ ಗತಿ ಜೀವಿತಬಿಂದುವಿನಂಕುರತರ ದೇಹವಹಂಗೆ ಮನಸ್ಸಿನ ಹರವರಿ ವೃತ್ತಿಯೆನಿಪ್ಪುದಱಂ ಕಾರಣರೂಪುಗಳಾಗಿ (ಯೋಗಾಂವಿ. ೨-೧೮). ೧೦. ಚಲನೆ; ಓಡಾಟ: ಪೂರ್ವನಗದಗ್ರದೊಳಗುದಯವಾದನಾತರಣಿ ಕಣ್ಮಾಲ್ಗೆ ಹರವರಿಯ ಸರಣಿ (ಭಾವಚಿಂ. ೭-೧೪). **ಹರಾವರಿ:** ೨. ಕೊಂಡುದು ಪ್ರಸಾದ ನಿಂದುದು ಓಗರವೆಂದು ಹರಾವರಿಯಿಂದನು ಭವಿಸದೆ (ಚಚಶಾ. I. ೩೭೪). ೩. ಆ ಕ್ಷೇತ್ರದ ಚತುಃಸೀಮೆಯೊಳಗುಳ್ಳ ಹರಾವರಿ ಮುಂತ್ತಾದವರಲ್ಲಿ ಸಲುವ ಗೇಣಿ (ಇಆ. V, ೪೧-೧೬; 1586).

ಹರುಬರಿ: ೩. ಕಾರೆಮಕಿಯ ಹರುಬರಿಯೊಳಗೆ ಕಾರುಕದ ಮನ್ಯ ತುಂಡುಗದೆಯೊಳಗೆ ಬಿಟ್ಟ ದತ್ತಿ (ಮೈಆರಿ. ೧೯೩೦, ೭೦-೧೩; 1568).

ಹರವರಿಯಾಗು=೧. ಹೆಚ್ಚಾಗು; ಅಧಿಕವಾಗು: ಹರವರಿಯಾಗಿ ನುಡಿಯನು ಧೈರ್ಯದೊಳು ಮಂದರದಂತಿಹನು ರಾಜೇಂದ್ರ (ಭರಚಿ. ೨-೨೭); ಹಣಕಾಸಿನ ವೆಚ್ಚದ ಮೊಗ ನೋಡದೆ ಹರವರಿಯಾಗೀಯಲ್ಬಹುದು (ಭಕ್ತಿಸ. ೪-೧೨-೧೯). ೨. ವಿಶಾಲವಾಗು; ವಿಸ್ತಾರವಾಗು; ವ್ಯಾಪಕವಾಗು: ಹರವರಿಯಾಗಿ ಹಲವು ದಿಙ್ಮುಖದೊಳ್ ಪರಕಲಿಸಲಿ ನಿನ್ನ ಯಶೋವಲ್ಲರಿ (ಜಯಕಾ.೮-೩೯). ೩. ದಟ್ಟವಾಗು; ಒತ್ತಾಗು: ಹರವರಿಯಾದ ಪೇರಡವಿಯೊಳ್ ಕಡು ಕೊರ್ವಿದ ಬೆಳ್ ಮೃಗಂಗಳಂ ಹರಿಹರಿದಿಟ್ಟಯಿಂ ತಿವಿದು (ನಳಚಂ. ೮೨). ೪. ಚೆದರು; ಕಲಕು; ಅಸ್ತವ್ಯಸ್ತವಾಗು: ಹಜಾಹಂಜಾದುದು ಬಗೆ ಹರವರಿಯಾದುದಜಾವು ಬೀತುದು ಬಿಂಕದೇಳ್ಗೆ (ಕ್ರೀಪಾಲ. ೫-೭೧).

[<ಪರಿ$_1$ + ಪರಿ$_1$]

ಪರವರಿಸು, ಹರವರಿಸು (ಕ್ರಿ). ೧. ದೊಡ್ಡದಾಗು; ವಿಶಾಲವಾಗು: ನರಮುರ್ಬದೆ ನವಿರಿಲ್ಲದೆ ಪರವರಿಸದೆ ವೃತ್ತಮಾದ ಜಂಘೆಗಳಿರೆ ಭೂವರವಧುವವಳ್ (ಹಾಲಾಸ್ಯ. ೧-೧೩-೨೮). **ಹರವರಿಸು:** ೨. ಆಕ್ರಮಿಸು; ಮುತ್ತು: ಅರಿವರ್ಗವೆಂಬುದೆಡೆವಿಡದೆನ್ನ ಮುರಿದೊತ್ತಿ ಹರವರಿಸಿ ಹಗೆಯಂತೆ ಕೊಂದು ಕೂಗುವುದು (ಕೈಕವ. ೧-೧೬-೪).

[ಪರವರಿ + -ಸು$_1$]

ಪರವರ್ತನೆ (ನಾ). ಆಮೇಲೆ ಆಗುವಂಥದು; ಅನಂತರ ನಡೆಯುವುದು: ಅಹಿಂಸೆಯು ಹಿಂಸೆಗೆ ಪೂರ್ವಭಾವಿಯಾದ ವರ್ತನವಾದರೆ ಪಶ್ಚಾತ್ತಾಪವು ಪರವರ್ತನವು (ಅರ್ಯಭ. ೬೨). [ಪರ$_3$+ವರ್ತನ]

ಪರವರ್ದಿಗಾರ್ 'ಪರವರ್ದಿಗಾರ' ನೋ.

ಪರವರ್ದಿಗಾರ, ಪರವರ್ದಿಗಾರ್ (ನಾ). ಸಂರಕ್ಷಿಸುವವನು; ಪರಿಪಾಲಿಸುವವನು; ದೇವರು: ಖುದಾವಂದ್, ಪರವರ್ದಿಗಾರ-ಎಲ್ಲಾ ಒಳ್ಳೇದು ಮಾಡುತ್ತದೆ (ಸಧುನ. ೬೫). **ಪರವರ್ದಿಗಾರ್:** ಪರವರ್ದಿಗಾರ್! ನನ್ನ ತೋಳುಗಳಿಗೆ ಬಲ ಕೊಡು (ಅನ್ನಾಪ. ೨೧).

[←ಪಾರ. ಹಿಂ. ಮರಾ. ಪರ್ವರ್ದಿಗಾರ್]

ಪರವರ್ಷ 'ಪರವರಶಿ' ನೋ.

ಪರವರ್ಷಿ 'ಪರವರಶಿ' ನೋ.

ಪರವಶ (ಗು). ೧. ಬೇರೆಯವರಿಗೆ ಅಧೀನವಾದ; ಇನ್ನೊಬ್ಬರ ಇಚ್ಛೆಯನ್ನು ಅವಲಂಬಿಸಿದ. (ನಾ). ೨. ಬೇರೆಯವರಿಗೆ ಅಧೀನವಾಗಿರುವಿಕೆ; ಅಧೀನತೆ; ಪರತಂತ್ರ: "ಪರವಶ [ಪ್ರಾಕಾಂ. ಸ]ಮೆಂಬುದು ಪಾರವಶ್ಯಮೆಂದೆನಪರ್ಥಂ" (ಚತುರಿ. ೧೧೯); ಪರವಶಂ ದೆಲ್ಲವೂ ದುಃಖಕರ. ಆತ್ಮವಶವಾದುದುದೆಲ್ಲವೂ ಸುಖಾಸ್ಪದ (ಭಾರದ ೫೪). ೩. ತನ್ಮಯತೆ; ಮಗ್ನತೆ: ಪರವಶದ ಭಕ್ತಿಯಿಂ ಬಂಧುರ ಲಿಂಗದ ಮುಂದೆ ಕುಣಿದು (ಕ್ರಿಪುವಿ. ೪೪-೧೨). ೪. ಮೈಮರೆವು; ಅನ್ಯಮನಸ್ಕತೆ: ಒಡಲ ಹಿಡಿದಾಡದಿರು ನುಡಿಯ ಹೋಗಾಡದಿರು ನಡೆಯೊಳಿಚ್ಛೆಜವ ಬಿಡದಿರು ಪರವಶದಿ ದೃಢವನಗಲದಿರು (ಸರ್ವಜ್ಞ. ೩೦೦). ೫. ಜ್ಞಾನ ತಪ್ಪುವುದು; ಬವಳಿ; ಮೂರ್ಛೆ: ಪರವಶದೊಳಿರ್ದರೋ ಮೇಣ್ಪರಾರ್ಜಿತಪ್ರಾಣರಾದರೋ ದ್ರೌಪದಿಯಂ ಪರಿಭವಿಸುವಲ್ಲಿ ನೋಡುತ್ತಿರಲಕ್ಕುಮೆ ಪವನಸೂನುಗಂ ಪಾರ್ಥಂಗಂ (ಗದಾಯು. ೧-೬೧). ೬. ಇನ್ನೊಬ್ಬರನ್ನು ಆಶ್ರಯಿಸಿರುವವನು; ಬೇರೆಯವರ ಅಂಕಿತದಲ್ಲಿರುವವನು; ಉಪಜೀವಿ; ಆಶ್ರಿತ: "ಪರವಾನ್, ಪರಾಧೀನಃ, ನಿಷ್ಣಃ, ಪರವಶಃ . . . ಗೃಹ್ಯಕಃ—ಈ ಲೆಜರ ವಶದಾತಂ" (ಹಲಾಯು. ೫೩-೧೮೬); "ಪರವಶಂ ನಿಷ್ಣಂ . . . ಪರಶ್ಛಂದನೆನೆ ಪರರ ವಶದವನಕ್ಕುಂ" (ಮಂಗರಾ. ೬೮-೭). ೭. ಮಾರುಹೋದವನು; ಮರುಳಾದವನು: ಈ ಲೋಕಕ್ಕೆ ಪರವಶನಲ್ಲಂ ಹರವಶಂ (ನಂಬರ. ೮-೫೦). ೮. ಮೂರ್ಛೆ ಹೋದವನು; ಜ್ಞಾನ ತಪ್ಪಿದವನು: ಧೊಪ್ಪನವನಿಗೆ ಕೆಡೆದು ಪರವಶನಾದನು (ಕುಪ್ಯಾಅ. ೨೩-೧೯); ಅರಸುಗಳು ಬಾಯ್ದೆಱೆಯದೇ ನೆಲನೆನುತ ಪರವಶರಾದರಲ್ಲಲ್ಲಿ (ತೊರರಾ. ೧-೧೭-೪). [ಸಂ.]

ಪರವಶಗೊಳಿಸು (ಕ್ರಿ). ಮಾರುಹೋಗುವಂತೆ ಮಾಡು; ಮರುಳಾಗಿಸು: ಪಾಶ್ಚಾತ್ಯ ವೈಜ್ಞಾನಿಕ ಸಂಸಿದ್ಧಿಗಳು . . . ವಿದ್ಯಾವಂತರನ್ನೆಲ್ಲ ಪರವಶಗೊಳಿಸಿದವು (ಪುಕ್ಕಾಪ. ೧೧೭ ಪೀಠಿಕೆ).

[ಪರವಶ + ಕೊಳ್$_1$ + -ಇಸು$_3$]

ಪರವಶತೆ (ನಾ). ೧. ಪರಾಧೀನತೆ; ಅಧೀನವಾಗಿರುವಿಕೆ; ಅಂಕಿತದಲ್ಲಿರುವುದು. ೨. ತನ್ಮಯತೆ; ತಲ್ಲೀನತೆ: ನಿರ್ಭರಪ್ರಣಯಪರವಶತೆಯಿಂ ನೆರೆವ ಕಾದಲರ ಕಾಮಕೇಳೀಕೂಜಿತದೊಳ್ (ಚಂದ್ರಪು.೮-೬೬ ಪ); ಚಿಂತಾಪರವಶತೆಯಿನಿನಿಸಂ ತಡೆದಿದಿರೇಚದಾತ್ಮಪರ್ಯಂಕದೊಳಾ ಕಾಂತಂ ಕುಳ್ಳಿರೆ (ಪುಷ್ಪಪು. ೩-೬೦). ೩. ಅರಿವು ತಪ್ಪುವಿಕೆ; ಮೂರ್ಛೆ.

[ಸಂ. ಪರವಶತಾ]

ಪರವಶತ್ವ (ನಾ). ೧. ಅಧೀನತೆ. ೨. ಮೈಮರೆವು. [ಸಂ.]

ಪರವಶವರ್ತಿ (ನಾ). ಇನ್ನೊಬ್ಬನಿಗೆ ಅಧೀನನಾದವನು: "ಅಧೀನನಜಾಗಾಯತ್ತಂ ನಿಷ್ಣಂ ಪರವಶವರ್ತಿ" (ಪಸ್ತುಕೋ. ೧೦೧-೨೧).

[ಸಂ. ಪರವಶವರ್ತಿನ್]

ಪರವಶೆ (ನಾ). ೧. ಬೇರೆಯವರ ಅಧೀನದಲ್ಲಿರುವವಳು ; ಸ್ವಾತಂತ್ರ್ಯವಿಲ್ಲದಿರುವವಳು : ತಿಳಿವೆಂ ಮುನಿಶಕ್ತಿಯನಾಯೆಯಳ್ ಪರವಶೆಯೆನಿಪ್ಪುದುಮನಾದೊಡಮಾಂ ಸೆಳೆಯಲ್ಕಾರೆಂ ಪಲಮಾನಳಿನಾಂಬಕಿಯುತ್ತಣಿಂದಮೆನ್ನೀ ಮನಮಂ (ಶಾಕುಂತ. ೩೧-೫೫). ೨. ಮೈಮರೆತಿರುವವಳು ; ತನ್ಮಯಳಾಗಿರುವವಳು : ಸ್ಮರಶರ ಸಂಧಾನಕ್ಕಂಬುರುಹೇಕ್ಷಣೆ ಲಕ್ಷ್ಮಮಾಗೆ ನಲ್ಲನನುಟಾದಾ ಪರವಶೆ ತನ್ನೊಲ್ಲದನಂ ಕರೆದಳ್ ಬೆಟ್ಟೇಱಿ ಮಿಟ್ಟುಗರೆವಂತೀಗಳ್ (ಶಾಂತಿಪು. ೮-೮೨); ಪರವಶೆ ಪಾದರಿ ವಿಭಲೆ ವಿಹ್ವಲೆ ವಿಷಮೆ ವಿರಹಿ ... ತಾಮಸಿಯೆನಿಪ ವನಿತೆಯರ ನಿಜಕ್ಕೆ ನಲಿಸಿ ನಿಶ್ಚೈಸಿದೊಡೆ ಬಳಿಕ ಬಳಲಿಕೆ ಬಾರದೆ (ಚೈಮಿಭಾ. ೫-೬೧). [ಸಂ. ಪರವಶಾ]

ಪರವಸ, ಹರವಸ (ನಾ). ೧. ಅಧೀನತೆ ; ಅವಲಂಬನೆ : "ಪರವಸ [ಪಾಠಾಂ.ಶ]ಮೆಂಬುದು ಪಾರವಶ್ಯಮೆಂದೆನಿಪರ್ಥಂ" (ಚತುರಿ. ೧೧೯). ೨. ಪರವಶತೆ; ಮೈಮರೆವು : ಕರುಣದಿಂದಂ ಮನ್ನು ಮಿಕ್ಕು ಪರವಸದಿಂದಂ ಕಣ್ಣೇರ್ಗಳ್ ಬಂದು (ಪಡ್ಡಾರಾ. ೯-೨೬); ಅಂತು ಪರವಸ [ಪಾಠಾಂ.ಶ]ದೊಳ್ ಮನ್ನುಮಿಕ್ಕು ಸೈರಿಸಲಾಱದೆ (ಸುಕುಮಾ. ೪-೬೨ಪ); ಬಗೆಯ ಬೆರಸದ ಪರವಸ[ಪಾಠಾಂ.ಶ]ದೊಳಾ ನಗೆಯೊಳಿಡೆಗೊಂಡಮಳ ಜನ್ದದ ಮುಗುದ ಪಾಂಡವರೆಱಗಿದರು ಧೌಮ್ಯಾದಿಗಳು ಸಹಿತ (ಕುಸ್ಯಾಅ.೧೬-೩೧). ೩. ಬವಳಿ ; ಜ್ಞಾನ ತಪ್ಪುವುದು; "ಮೂರ್ಛೆ" (ಪ್ರಭಣ್ಣ). **ಹರವಸ :** ೧. ಪರವಶ-ಹರವಸ (ಶಮದ. ೨೫೮ ಪ್ರಯೋ); ಹರವಸದಿಂ ಹದವಟಾಱೇಂ ಕರುಣಾಳುಗಳೊಳರೆ ಕಾವುದಟಾಯದ ಮುನ್ನಂ ಎಂಬ ನುಡಿಯನಾಲಿಸುತ್ತೆ (ಚಿಕವಿ. ೬-೭೧). ೨. "ಹರವಸಮೆನಲ್ಕೆ ಮೈಮರೆಯುವಿಕೆಯಕ್ಕುಂ" (ಕಶರ. ೧೧೩); ಒಮ್ಮೆ ಹರವಸದಿಂ ಮೂರ್ಛೆಯಾಗುವೆಯಮ್ಮ (ತಿಪಗೀ. ೧೫೬-೭೫); ತನುವನೀ ಕಮ್ಮರಿಗೆ ಕುಡುವೆನೆಂದಾಡುತಿರೆ ಹರವಸಂ [ಪಾಠಾಂ. ಪರವಶಂ] ಕೈ ಮಿಕ್ಕುದು (ಸಿದ್ಧರಾ. ೨-೬೬) ; ತೊಡೆದನು ತರಣಿ ತನುಕಾಂತಿಯನೆನಲು ಹರವಸಕೆ ಹರಹಿನಲಿ . . . ಉದಯೂರುಣಿಮೆ ರಂಜಿಸಿತು (ನಿಭಾಗ. ೧೦-೨೯-೪೧) ; ಸೊದೆಯಂ ಸವದೀಂಟುವಂತೆಯುಂ ಹರವಸದಿಂದೆ ಕಣ್ಣೊಳಿಸಿದಂ ಸುಕುಮಾರನನಾ ಕುಮಾರನಂ (ಚಿಕವಿ. ೪-೬೮). ೩. "ಹಮ್ಮದಂ, ಹರವಸಂ, ಮುಚ್ಚೆ—ಈ ೩ ಮೂರ್ಛೆ" (ಕಶಸಾ.೧೨-೨೩೨). ೪. ಮೋಹಾತಿರೇಕ: ಹರವಸಮೊಯ್ಯನಾಱೆ . . . ಪೋದ ಕೂಟಮಂ ಪರಿವಿಡಿಗೆಯ್ದೆ ಚಿತ್ತಮೆಳಸಿತ್ತು ರತಾಂತಸುಖಾಂತಮೋಪರಾ (ಚಂದ್ರಪ್ರ. ೮-೭೦) ; ಹರವಸದಿಂದೆ ಚುರ್ಚುವೆರ್ದೆಗಿಚ್ಚನ ಪೆರ್ಚುಗೆಯಂ ಕಟಲ್ಬುವರ್ ನರಪತಿಯೊಳ್ಪೊಣರ್ಕೆವಡೆದಾರೆಯ ರಾಯರ ರಾಣೆವಾಸಿಯರ್ (ಅಪ್ರತಿ. ೬೯-೧೯). ೫. ಆವೇಶ ; ಆವೇಗ : ಮೃಗಂಗಳೊಳಿಂದು ಪತ್ತಿಸಿದ ಹರಿಣಗೋರಿಯ ಹರ್ಷದ ಹರವಸದ ಭಾವಪ್ರಪಂಚಮಂ . . . ಬಂದು ನೋಡಲ್ಕೇಟ್ಟುಂ (ಅಸಂಪು. ೧೧-೩೯ ಪ) ; ಹರವಸದಿಂ ನಿನಗಿದಿರಾದಗಿಯರೆನಿಪ್ಪಾರಾತಿಗಳ ಹರಣಂ ಹೌವನೆ ಹಾಱಲಿ (ಜಯಕಾ.೮-೩೯), ಅತಿಕಾಯ ವೈರಿಯುಸಿರ್ದ ಸೊಲ್ಲನಾಲಿಸೆ ಬೀರದ ಹರವಸಂ ತೋಱುಗುಂ (ರಾಮಾಶ್ವ. ೩೪-೨೬). ೬. ಮರೆವು ; ವಿಸ್ಮೃತಿ : ರಾಮನು ಪೊಡೆಯಲರನೆಂದ ಱಯಬಾರದೆ ನಿನಗೆ ಹರವಸವೆ (ತೊರರಾ. ೬-೫-೪೦). [<ಪರವಶ]

ಪರವಸಂಗೊಳ್ (ಕ್ರಿ). ಆವೇಶಹೊಂದು ; ಉದ್ವೇಗಗೊಳ್ಳು : ಪಲ್ಲಳಿ ಬಣಂಬೆಗಳೊಳ್ ಪರವಸಂಗೊಂಡು ಮೆಟ್ಟಯುಂ ಅಟ್ಟಿಯ ಬೆಟ್ಟ ಘಟ್ಟದಿಟ್ಟಿಡೆಗಳೊಳ್ ನಿಟ್ಟಿಸಿಯುಂ . . . ದುರ್ಯೋಧನನಂ ಅಱಸಿ ಕಾಣದೆ (ಗದಾಯು. ೬-೨೮ ಪ). [ಪರವಸ+ಕೊಳ್$_1$]

ಪರವಸತೆ, ಹರವಸತೆ (ನಾ). ೧. ಮೈಮರೆಯುವಿಕೆ ; ಮಗ್ನತೆ ; ತಲ್ಲೀನತೆ : ಸುರತರುವಿನ ತಣ್ಣೆಳಲೊಳು ಸುರತದ ಪರವಸ[ಪಾಠಾಂ.ಶ]ತೆಯೊಳೊಱಗಿರ್ಪ ಗರುಡ ಗಂಧರ್ವ ಯಕ್ಷಾಮರಾಂಗನೆಯರಿಂ ಕರಮೆಸೆದಿಹುದಮರಾದ್ರಿ (ಕುಂದಾಸಾಂ. ೨-೧೩). **ಹರವಸತೆ :** ೨. ಬಾಹ್ಯ ಪ್ರಚೋದನೆಗೆ ಮಾತ್ರ ಗಮನ ಕೊಡುವ, (ಕೃತಕವಾದ) ಗಾಢನಿದ್ರೆಯಂಥ ಸ್ಥಿತಿ : ಹರವಸತೆ (ಹಿಪ್ನೊಟಿಸಂ) : ಯುದ್ಧ ಸೆರೆವಾಸಿಗಳ ಶಿವಿರದಲ್ಲಿದ್ದಂತೆ ಬೇಕಾದಷ್ಟು ಅರಿವಳಿಕೆ ವಸ್ತುಗಳು ಇಲ್ಲದಾಗಲೂ ಹಲ್ಲಿನ ಚಿಕಿತ್ಸೆಗಳಲ್ಲೂ . . . ಬಳಸಬಹುದು(ಕವಿಕೋ. I,೪೭೨). [<ಪರವಶತೆ]

ಪರವಸ್ತು (ನಾ). ಅತ್ಯಂತ ಶ್ರೇಷ್ಠವಾದ ತತ್ವ ; ಪರತತ್ವ ; ಪರಮಾತ್ಮ : ಪ್ರಥಮದಲ್ಲಿ ವಸ್ತು ಅನಿರ್ವಾಚ್ಯವಾಗಿದ್ದಿತು. ಆ ಅನಿರ್ವಾಚ್ಯವಾಗಿದ್ದ ಪರವಸ್ತು ತನ್ನ ಲೀಲೆಯಿಂದ ತಾನೆ ಪರಬ್ರಹ್ಮವೆಂಬ ನಾಮವಾಯಿತು (ಅವಚಂ. ಕ. ೨೮೩-೩೮೧) ; ಗುರುವೆ ಪರವಸ್ತುವು ತಾನೆ ನೋಡಾ(ಅಖಂಡೇ. ೧೩-೧) ; ಈಕೆ ಪರವಸ್ತುವಿನಲ್ಲಿ ಐಕ್ಯವಾಗುವ ಕಾಲ ಬಂದಿದೆ (ಶೂನ್ಯಕು. ೧೦೯) ; ಅರಿಸ್ಟಾಟಲಿನ ಪ್ರಕಾರ ಪರವಸ್ತುವೇ ಜಗತ್ತಿಗೆ ಆದಿ ಮತ್ತು ಅಂತ್ಯ (ಇಸ್ಲಾಂಸಂ. ೨೦೫). [ಪರ್ಯ+ವಸ್ತು]

ಪರವಾ 'ಪರವೆ' ನೋ.

ಪರವಾದಿ (ನಾ). ಪರಮತದ ಪರವಾಗಿ ವಾದವನ್ನು ಮಾಡುವವನು ; ಪರಮತವಾದಿ : ಪರವಾದಿಗಳ ಮೊಗಂಗಳ್ ಕರಿಂಕುವಂದಂತೆ ಕಂದಿ ಕುಂದಿರೆ (ಆದಿಪು. ೨-೨೩) ; ಪರವಾದಿಯಂ ದಾನಸನ್ಮಾನಾದಿಗಳಿಂ ಸಂತೋಷಂಬಡಿಸಿ (ಸುಕುಮಾ. ೨-೨೯ ಪ) ; ಬೇಡವೋ ಪರವಾದೀಗಳಹದಿರು (ಬಸವ.೫೬೯); ಪರವಾದಿಗಳ ಗರ್ವಮಂ ಮುಱಿದು ಜಯಿಸುತ್ತ (ಪ್ರೌಢರಾ. ೭-೨೨).

ಪರವಾದಿಗಜಮೃಗರಾಜ = ಪರಮತವಾದಿಯೆಂಬ ಆನೆಗೆ ಸಿಂಹಪ್ರಾಯನಾದವನು ; ಒಂದು ಬಿರುದು : ಜ್ಞಾನನಿಧಾನದೀಪವರ್ತ್ತಿಗಳುಂ ಮಂತ್ರವಾದಿಮಕರಧ್ವಜರುಂ ಪರವಾದಿಗಜಮೃಗರಾಜರುಂ (ಕಇಅ. ೯೪-೩-೧೩ ; 1124). ಪರವಾದಿಜನಭಂಜನ = ಪರಮತವನ್ನು ವಾದಿಸುವ ಪ್ರತಿವಾದಿಗಳನ್ನು ಸೋಲಿಸುವವನು,—ಭಂಗಿಸುವವನು ; ಒಂದು ಬಿರುದು : ಪರವಾದಿಜನಭಂಜನನೆಂಬ ಬಿರುದಿನ ತೊಡರ್ಪುಣಱುಣಿಸಲೇಳ್ದು ವೀರಭಕ್ತಪರಿವೃತಂ ಸಂಪೂರ್ಣಸಂಭ್ರಮದಿಂ ತದಾಸ್ಥಾನಕ್ಕೆ ಬಂದು (ಸೃಷಪಿ. ೩೭-೬೭ಪ). ಪರವಾದೀಶರಭಭೇರುಂಡ = ಪರಮತವಾದಿಯೆಂಬ ಶರಭಕ್ಕೆ ಗಂಡಭೇರುಂಡದಂತಿರುವವನು ; ಒಂದು ಬಿರುದು : ಪರವಾದೀ[ಶರಭ]ಭೇರುಣ್ಡಾ ಪರನಾಮಧೇಯಂರಪ್ಪ ಶ್ರೀಮತ್ ಶ್ರೀನನ್ದಿಪಣ್ಡಿತದೇವರ್ (ಸೌಇಇ. XX, ೪೬-೨೭ ; 1072). [ಸಂ. ಪರವಾದಿನ್]

ಪರವಾನಗಿ, ಪರವಾನಿಗಿ, ಪರವಾನಿಗೆ (ನಾ). ೧. ಅನುಮತಿ ; ಒಪ್ಪಿಗೆ ; ಸಮ್ಮತಿ : ಮುನಿಸಿಪಾಲಿಟಿಯ ಪರವಾನಗಿ ಸಿಗಬೇಕಾದರೆ ಎರಡು ವರ್ಷ ಕುಣಿಯಬೇಕಾಯಿತು (ಅಳಿ. ೨೫೦) ; ಅವನು ರಾವಜೀ ಕಾಕಾ ಅವರ ಪರವಾನಗಿಯನ್ನು ಪಡೆದಿರಲಿಲ್ಲ (ದೀಪಹ. II, ೮) ; ನಿನಗೆ ಧಾರವಾಡದಲ್ಲಿ ಇರಲಿಕ್ಕೆ ಪರವಾನಗಿ ಕೊಟ್ಟಿದ್ದೇ ತಪ್ಪಾಯಿತು (ಮುಕ್ತಿ. ೧೯೧). **ಪರವಾನಿಗಿ :** ೧. ನಮ್ಮ ಮಾಲು ಮಾರಾಟ ಮಾಡುವದಕ್ಕೆ ಪರವಾನಿಗಿ ಕೊಟ್ಟಿದ್ದು ಇನ್ನೂವರೆಗೂ ಯಾಕೆ ಮಾರಲಿಲ್ಲ?(ಮುಂಬಪ್ಪಾ. ೨೯ ಪ್ರಸ್ತಾವನೆ) ; ಶಿವ ಹೋದ ತನ್ನ ಕೈಲಾಸಕ ಶಿವದೂತರನಿಟ್ಟು ಬಾಗಿಲ ಕಾಯುವದಕ ಬಂದ ಮಂದಿ ಪರವಾನಿಗಿ ತಗೊಂಡ ಬಿಟಕೊಡ್ರಿ ಅಂದನೊಳಯಾಕ (ಕನ್ನಜಾ. ೧೫೦). **ಪರವಾನಿಗೆ :** ೧. ಈಗ ನಾಟಕ ಬರೆಯೋದಕೇ ನಿಂ ಪರವಾನಿಗೆ ತಕ್ಕೋಬೇಕೇನು ? (ನಡದಾ. I, ೩೩೨) ; ಇನ್ನೊಂದು ರೀತಿಯ ಪ್ರತಿಲೇಖನವು ಪರವಾನಿಗೆಯೇ ಇಲ್ಲದೆ ಅವ್ಯವಸ್ಥಿತವಾಗಿ ನಡೆಯುವಂಥದು (ಭಾರಪ. ೩೪) ; ಮೊದಲು ನಮಗೆ ಪರವಾನಿಗೆ

ಯಿಂದ ಸಮೀಪದ ಸ್ಥಳಗಳಿಗೆ ಕಾವಲಿನೊಡನೆ ಹೋಗುವ ಸವಲತ್ತು ಇತ್ತು (ಸೇಂದಿಮ. ೧೭೪). ೨. ಯಾವುದಾದರೂ ವಸ್ತುವನ್ನು ಹೊಂದಿರುವ ಅಧಿಕಾರ: ನಿಮಗೆ ಬಂದೂಕದ ಪರವಾನಿಗೆ ಇರುವದೋ? (ವಿಕೋದ. ೯೮). ೩. ಅಧಿಕಾರಪತ್ರ; ರಹದಾರಿ; ಅಪ್ಪಣೆಚೀಟಿ; ಸನ್ನದು: ಸೈದುಮಹಮ್ಮದು . . . ಬರಸಿ ಕೊಟ್ಟ ಪರವಾನಿಗೆ ಕ್ರಮ (ಎಕ. IX, ಚನ್ನಪ. ೧೪೬-೬; 1763).

[←ಪಾರ. ಹಿಂ. ಪರ್ವಾನಗೀ; ಮರಾ. ಪರವಾನಗೀ, ಪರ್ವಾನಗೀ, ಪರವಾಣಗೀ, ಪರ್ವಾನಗೀ, ಪರ್ವಾಣಗೀ]

ಪರವಾನಾ 'ಪರವಾನೆ' ನೋ.

ಪರವಾನಿಗಿ 'ಪರವಾನಗಿ' ನೋ.

ಪರವಾನಿಗೆ 'ಪರವಾನಗಿ' ನೋ.

ಪರವಾನು 'ಪರವಾನೆ' ನೋ.

ಪರವಾನೆ, ಪರವಾನಾ, ಪರವಾನು, ಫರವಾನೆ (ನಾ). ೧. ಅಪ್ಪಣೆ; ಅನುಜ್ಞೆ; ಅನುಮತಿ: ಭೋಟಿಯ ಜಾತಿಯವರೆಂದು ಕರೆಯಲ್ಪಟ್ಟ ಯಜ್ಞೋಪವೀತಧಾರಿಗಳು ನಾರಾಯಣಶಾಸ್ತ್ರಿಯ ಮೇಲೆ ದೂರು ಹೇಳುವುದಕ್ಕೆ ಪರವಾನೆ ಕೇಳಿದರು (ಝಾಂಶಾಣ. ೪೨). ೨. ಯಾವುದಾದರೂ ವಸ್ತುವನ್ನು ಹೊಂದಿರುವ ಅಧಿಕಾರದ ಪತ್ರ; ಅಪ್ಪಣೆಚೀಟಿ; ಸನ್ನದು; ನಿರೂಪ: ಸೈದುಮಹಮ್ಮದು . . . ಬರಸಿ ಕೊಟ್ಟ ಪರವಾನೆಯ ಕ್ರಮ (ಎಕ. IX, ಚನ್ನಪ. ೧೮-೮; 1767); ಅಸಂಖ್ಯಾತ ವಿಷಯಗಳನ್ನು ಒಳಗೊಂಡಿರುವ ಅಧೀನನಿಯಮಗಳನ್ನು ಅನೇಕ ಹೆಸರುಗಳಿಂದ ಕರೆಯುತ್ತಾರೆ. ಅವುಗಳನ್ನು . . . ಅಪ್ಪಣೆಚೀಟಿ ಅಥವಾ ಪರವಾನೆಗಳೆಂದೂ (ಲೈಸೆನ್ಸಸ್) . . . ಸೂಚನಾಪತ್ರಗಳೆಂದೂ (ಮಿನಿಟ್ಸ್) ಕರೆಯಬಹುದು (ಕವಿಕೋ. I, ೨೮೭); ಒಂದೆರಡು ದಿನಗಳಲ್ಲಿ ಅರಮನೆಯ ದೊಡ್ಡಮುದ್ರೆ ಒತ್ತಿರುವ ಪರವಾನೆಯು ಜ್ಞಾನಸಾಗರ ತೀರ್ಥರಿಗೆ ತಲ್ಪಿತು (ಪಾರ್ವತೀವಿ. ೮೨); ಜೇಬಳಿಂದ ಒಂದು ಪರವಾನೆಯನ್ನು ತರಿಸಿ ತನ್ನ ಖೋಜೆಯೊಡನೆ ಅವಳನ್ನು ಕಳುಹಿಸಿದಳು (ಬಂಕಿಮ. ೨೨೨). **ಪರವಾನಾ:** ೧. ಪರವಾನಾ—ಪರವಾನೆ (ಹೊನಗ. ೧೧೨). ೨. ಹೀಗೆ ವಿಲಾಯತಿಯಿಂದ ಬಂದ ತಸರೀಫ್ ಪದಾರ್ಥಗಳನ್ನು . . . ಪರವಾನಾ ಸಮೇತ . . . ಪರಿಗ್ರಹಿಸಿದರು (ಮಹಾಸಂ. II, ೧೧೮). **ಪರವಾನು:** ೨. 'ಧರ್ಮಪರವಾನು' ಪರಾ. **ಫರವಾನೆ:** ೨. ಪಟ್ಟದಿಂದ ಖಂಡೇರಾಯರು ಫರವಾನೆಗಳು ತನ್ನ ಹೆಸರ ಪತ್ರಗಳ ಸಹಾ ಗಡಿಗಳಿಗೆಲ್ಲಾ ಮೋಡಿಸಿ (ಹೈದರ. ೪೭). 'ಫರ್ಮಾನು' ಪರಾ.

[←ಪಾರ. ಪರ್ವಾನಾ; ಹಿಂ. ಪರವಾನಾ; ಮರಾ. ಪರವಾನಾ, ಪರ್ವಾನಾ]

ಪರವಾಸ (ನಾ). ಬೇರೆಯದಾದ ವಾಸಸ್ಥಳ; ಇನ್ನೊಂದು ವಾಸಸ್ಥಾನ,—ತಂಗುದಾಣ: ಪರದೇಶಕ್ಕೆ ಹೋದರೆ ಪರವಾಸ ತಪ್ಪದು (ಗಾದೆ); ಸೊಸೆಗೆ ಗೃಹಪ್ರವೇಶ, ಅತ್ತೆಗೆ ಪರವಾಸ (ಗಾದೆ).

ಪರವಾಸ ಮಾಡು – ಬೇರೆಯ ಸ್ಥಳದಲ್ಲಿ ನೆಲಸು; ಇನ್ನೊಂದು ಜಾಗದಲ್ಲಿ ತಂಗು: ಪರವಾಸ ಮಾಡಿದರೂ ಸಹವಾಸ ಬೇಕು (ಗಾದೆ); ಪರವಾಸ ಮಾಡುವವನ ಭರವಸ ಸಲ್ಲದು (ಗಾದೆ). [ಪರ್ಯ + ವಾಸ2]

ಪರವಾಸುದೇವ (ನಾ). ಬಹಳ ಶ್ರೇಷ್ಠನಾದ ದೇವರು; ಪರಮಾತ್ಮ: ಪರಮಪುರುಷನ ಪರವಾಸುದೇವನ ಪುರಂದರವಿಠಲನ ಅಡಿಪಡಿಕೆಶೋದೆ (ಪುರಂದ. ೪-೧೬೬-೩); ಪರವಾಸುದೇವನಿರವಂ . . . ನೆನೆದಂ (ಚಕವಿ. ೫-೧೧೩). [ಪರ್ಯ + ವಾಸುದೇವ]

ಪರವಿ, ಹರಬಿ, ಹರವಿ1, ಹರಿಬಿ1, ಹರಿವೆ1, ಹರುವಿ, ಹರುವೆ1 (ನಾ). ಕೊಡದಂತಿರುವ ದೊಡ್ಡ ಪಾತ್ರೆ; ಪಾಸಾಲೆ: "ಪರವಿ ಕಾಯ ಗಜೋತ್ಕರಮುಂ ಘಟಾಂಕಿತಂ" (ಸಾನಾರ. ೧೧೦); ಸಂತೋಷದಾಳಿಯರ್ ತೂಂತುವೋದ ಪರವಿಯಂತೆ ಬಿಟ್ಟು ಪರಯೆ (ಧರ್ಮಾಮೃ. ೪-೧೫೯); ಪರವಿಯೊಳ್ತೀವಿದ ಪಾಲೆಲ್ಲಂ ಇನಿಸಾನುಂ ಪುಳಿ ಪೊರ್ದಿದನಿತಜೊಳೆ ಮುನ್ನಿನ ಗುಣಮುಂ ಸವಿಯುಂ ಕಿಡುವಂತೆ (ಜೀವಸಂ. ೧೦೧-೧೦); ಪರವಿಯೊಳಗಿಕ್ಕಿ ಕಳಿಪುವುದರಸನ ನಿಕಟಕ್ಕೆ ಕೂಸ್ಮಾಂಡದ ಪಣ್ಣಂ ಪಿರಿದೊಂದಂ (ಪುಣ್ಯಾಸ್ರ. ೩-೩೨). **ಹರಬಿ:** ಎರಡು ಕೈಗಳಿಂದಲೂ ಹೊಳೆನೀರನ್ನು ಒಂದು ಘಂಟಿಕಾಲ ತಳ್ಳಿ ಬಿಂದಿಗೆಯನ್ನು ತುಂಬುತ್ತಿರುವಾಗ ಶೂದ್ರವನು ಮೇಲೆ ಹರಬಿಯನ್ನು ನೀರಿಗೆ ಅದ್ದಿಬಿಡುತ್ತಾಳೆ (ಗರುಬಾ. ೧೫೭). **ಹರವಿ1:** "ಘಟಃ, ಕರೀರಃ—ಈ ೨ ಹರವಿ" (ಹಲಾಯು. ೫೩-೧೬೧); ತಾಳಮರದ ಕೆಳಗೆ ಒಂದು ಹಾಲ ಹರವಿಯಿರ್ದೊಡೆ ಅದ ಹಾಲ ಹರವಿಯೆನ್ನರು ಸುರೆಯ ಹರವಿಯೆಂಬರು (ಬಸವ. ೯೦); ಕೆಡೆಯದ ಹಾಂಗೆ ಹಿಡಿದನು ಬಸವನಾ ಗೊಲ್ಲತಿಯ ಹರವಿಯನು (ಬಸಪು. ೧೦ ಸೂಚನೆ); ಹಾಲು ತುಪ್ಪದ ಹಲವು ಹರವಿಗಳ . . . ಕಳವೆಯಕ್ಕಿಯ ಕೂಳ ರಾಶಿಯ ಬಂಡಿ ಹೋಡಿಸಿತು (ಕುಸ್ಯಾಅ. ೧೦-೨೫); ಎರಡು ಬೂದುಗುಂಬಳಕಾಯಿಗಳಿದ್ದುವು. ಒಂದು ದೊಡ್ಡದು; ಸಾಧಾರಣವಾಗಿ ಒಂದು ಹರವಿಯ ಗಾತ್ರವಿತ್ತು (ಚಿಂಗಾಳ್ವ ೧೩೯). **ಹರಿಬಿ1:** ನೀರು ತರುವುದಕ್ಕೆ ಹರಿಬಿಗಳನ್ನು ತೆಗೆದುಕೊಂಡು ನಮ್ಮ ಜತೆಯಲ್ಲಿಯೇ ಬಂದರು (ಚಿಂಗಾಳ್ವ. ೭೩). **ಹರಿವೆ1:** ನಿನ್ನ ಕೈಯಲ್ಲಿರುವ ಮದ್ಯದ ಹರಿವೆಯನ್ನು ಕೈಯಲ್ಲಿ ಕೊಡು (ತಿಪದ. ೨೧೩-೩); ಛಿದ್ರವುಳ್ಳ ಹರಿವೆಯಲ್ಲಿರುವ ನೀರಿನೋಪಾದಿಯಲ್ಲಿ ಆತನ ಪ್ರಜ್ಞೆಯು ಸ್ರವಿಸಿ ಹೋಗುವುದು (ಕೃಪಾಲು. ೪೬); ಪುಟ್ಟ ಮಣ್ಣಿನ ಕೊಡದಲ್ಲಿ ನೀರು ತಂದು ಹರಿವೆಗೆ ತುಂಬುವುದು (ಪಾತರ. ೨೫); ಹಣೇಲುಂಡೆ, ಹರಿವೇಲುಂಡೆ, ನಿನ್ನಲ್ಲುಂಡೆ ತಿರುಕಸಾಲೆ (ಗಾದೆ). **ಹರುವಿ:** ತೈಲ ತುಪ್ಪ ಕರ್ಪೂರ ಹರುವಿಯನಿಟ್ಟು (ಕರಿಕ. ೧೩೪-೩). **ಹರುವೆ1:** ಏಳುದಿನದ ಗೋತ್ರ ಸಗಣಿಯು ಬರಬೇಕು ಹೇಳಿದನಾಗ ಶಂಕರನು ಅಳೋಚಿಸಿಕೊಂಡು ಹೊತ್ತರು ಹರುವೆಯ (ಮಾದೇಸಾಂ. ೨-೭೬).

ಪರವಿತ್ತ (ನಾ). ಬೇರೆಯವರ ಧನ; ಅನ್ಯರ ಹಣ: ಬೇಟವೇ ಪರವಧುವಿನಲ್ಲಿ ಕೈಮಾಟವೇ ಪರವಿತ್ತದಲಿ (ಕುಸ್ಯಾವಿ. ೨-೪೪).

[ಪರ್ಯ + ವಿತ್ತ]

ಪರವಿದ್ಧ (ನಾ). ಎದುರಿಗೆ ಇಲ್ಲದ ವಸ್ತು ಅಥವಾ ಮನುಷ್ಯನ ಚಿತ್ರಣ; ಪರೋಕ್ಷವಾದ ರೂಪಚಿತ್ರಣ: ಅಂತು ಪರವಿದ್ಧ ಪರಿಣತಿಯಂ ಮೆಚ್ಚಿದಾ ಪಟಮಂ . . . ಮಣಿಭವನದೊಳಗೆ ನೆರಪಿ ಪೋಪುದುಂ (ಪಂಚಾಮೃ. ೪-೮೯ ದ); ಶ್ರುತಿವಿದ್ಧಮಾತ್ಮವಿದ್ಧಂ ಪರವಿದ್ಧಮೆಂಬ ವಿದ್ಧಪದ್ಧತಿಯುಮಂ . . . ಭಂಗಿಯುಮಂ ಮೃದುರೇಖಾವಿಳಾಸಮುಮಂ ಪರಿಭಾವಿಸಿ ನೋಡಿ (ಮಲ್ಲಿಪು. ೫-೪೨). 'ಆತ್ಮವಿದ್ಧ' ಪರಾ. [ಪರ್ಯ + ವಿದ್ಧ]

ಪರವಿದ್ಯಾಭೇದಿನಿ (ನಾ). [ಜೈನ] ಮತ್ತೊಬ್ಬರ ಮಾಯಾವಿದ್ಯೆಯನ್ನು ನಾಶಮಾಡುವ ಒಂದು ಬಗೆಯ ವಿದ್ಯೆ: ಇರ್ವರುಂ ವಿದ್ಯಾಧರರಲ್ಲಿಗೆ ವಂದೊಡವರೊಳೊರ್ವಂ ಪರವಿದ್ಯಾಭೇದಿನಿ [ಪಾಠಾಂ. ವಿದ್ಯಾನಿಧಿ]ಯೆಂಬ ವಿದ್ಯೆಯಿನಾ ವೈತಾಳಿಯಂ ಪ್ರಕಟಂಮಾಡ್ಪುದುಂ (ಚಾವುಂಪು. ೧೮೯); ಬಿಜ್ಜಣನು ಪರವಿದ್ಯಾಭೇದಿನಿಯಿಂದ ಬಸವಣ್ಣನನ್ನು ಜಯಿಸಿದನು (ಬಿಜ್ಜಪು. ೮ ಪ್ರಬೀಜಿಕೆ). [ಸಂ. ಪರವಿದ್ಯಾಭೇದಿನೀ]

ಪರವಿದ್ಯೆ (ನಾ). ಬಹಳ ಶ್ರೇಷ್ಠವಾದ ಜ್ಞಾನ,—ತಿಳಿವಳಿಕೆ; ಆಧ್ಯಾತ್ಮವಿದ್ಯೆ: ಇನ್ನು ಪರವಿದ್ಯೆ. ಅದರಿಂದ ಆ ಅಕ್ಷರವನ್ನು ತಿಳಿಯುವದಕ್ಕಾಗುತ್ತದೆ . . . ಇಲ್ಲಿ ಪರವಿದ್ಯೆಗೆ ವಿಷಯವೆಂದು ಅಕ್ಷರವನ್ನು ಹೇಳಿರುತ್ತದೆ (ಪ್ರಬ್ರಹ್ಮಾ. ೩೨೧).

ಪರವಿದ್ಯಾಧಿಕ = ಅತ್ಯುತ್ತಮವಾದ ಜ್ಞಾನವನ್ನು ಪಡೆದವನು; ಪಂಡಿತ; ಒಂದು ಬಿರುದು: ಕುಮಾರದಿಕ್ಕುಂಜರಂ ಪರವಿದ್ಯಾ [ಧಿಕಂ] ಸಕಳಕಳಾಧರಂ (ಸೌಇಇ. XX, ೭೧-೧೧; 1109).

[ಪರ್ಯ+ವಿದ್ಯೆ]

ಪರವೂರು (ನಾ). ೧. ಬೇರೆಯ ಪಟ್ಟಣ; ಇನ್ನೊಂದು ಊರು: ಪರವೂರಿಂದ ಬಂದು, ನೆಲಸಿದವರಾದರೂ ಅವರಿಗೆ ರಂಗಾಪುರವೆಂದರೆ ಅಭಿಮಾನ (ಅಪನಾ. ೯೬); ನನ್ನ ಪರಮಮಿತ್ರರೊಬ್ಬರು ಒಮ್ಮೆ ಪರವೂರಿಗೆ ನನ್ನೊಡನೆ ಬಂದಾಗ (ಮುಂಗಾಪು. ೩೬). ೨. ಒಂದು ಊರಿನ ಹೆಸರು: ದುಗ್ಮೊನೆಲ್ಮಲ್ಲಿ ಗಟಿಞ್ಞವಾಗಿಲು ಸಱಮು ಎಟ್ಟುಹ್ಡೆ ಪರವೂರು ಕೂಡಲೆ ಇನಿತುಮಂ ಪೊಲಮೇರೆಸಹಿತಮಿತ್ತನ್ (ಎಕ. IX, ಬೆಂಗಳೂ. ೮೩-೧೪; ಸು. 890).

[ಪರ್ಯ+ಊರು$_2$ (<ಊರ್)]

ಪರವೆ, ಪರವಾ, ಪರಿವೆ, ಪರ್ವಾ (ನಾ). ೧. ಕಾಳಜಿ; ಗೊಡವೆ; ಚಿಂತೆ: ಕಂಡ ಕಂಡಾ ವಿಷಯಕೆ ಮನ ಜರಿವೆ ಅಂಡುಗೊಂಡಿದೆ ಅಜ್ಞಾನ ಮರವೆ ನಿನಗೇನು ಪರವೆ (ಚಿದಾಕೋ. ೩೧-೪); ಶರಧಿಯೊಳು ಮೀನೊಂದು ಪುಟ್ಟಲೇಂ ಸಾಯಲೇಂ? ಪರವೆಯೇನಿಲ್ಲವೆಲೊ (ಮಂಕುಕ. ೫೬೨). ೨. ಎಚ್ಚರ; ಗಮನ; ಲಕ್ಷ್ಯ; ನಿಗಾ: ನಮ್ಮ ವಾಕ್ಯದ ಪರವೆಯುವಗಿಲ್ಲ (ಅನಂರಾ. ೧-೫-೩೪); ಓದುತ್ತ ಅವಳು ಅದರಲ್ಲಿ ತನ್ಮಯಳಾದಳು. ಮೈಮೇಲೆ ಪರವೆಯೇ ಇರಲಿಲ್ಲ (ಪ್ರತಿಬಿಂ. ೩೧); ಅವರೇ ಇಷ್ಟು ಪರವೆಯಿಲ್ಲದೆ ನಡೆದುಕೊಂಡರೆ ನಮಗೇನು ಅಡಗಾಣಿಸಿದೆ? (ಸ್ಮೃತಿಚಿ. ೨೪). **ಪರವಾ**: ೩. "ಸಂಬಂಧ" (ಜಾನಕೋ. ೧೪). **ಪರಿವೆ**: ೧. ಬರಲಿ ಬರುವುದು; ಸರಿಯುವುದೆಲ್ಲ ಸರಿಯಲಿ; ನಿನಗೆ ಪರಿವೆಯೇನಿಲ್ಲೆಲವೊ (ಮಂಕುಕ. ೧೫೦); ಅವಳ ಅಮೋಘ ರೂಪಲಾವಣ್ಯಗಳ ಪರಿವೆಯು ಅವಳು ಮಾಯವಾದ ಮೇಲೆ ದ್ವಿಗುಣವಾಯಿತು (ಶ್ರೀರಾಯ. ೨೮೬). ೨. ನಿನ್ನ ಪರಿವೆಯೆ ಇಲ್ಲದಂದದೊಳು ತೊಲಗುತಿಹುದಿಲ್ಲಲಾ ನಿನ್ನ ಹೇವ! (ಮಲೆದೇ. ೩೩-೧೦); ಅರಿವೆನು ಎನ್ನುವ ಮನದ ಪರಿವೆಯೇ ಅಹುದೋ ಇಲ್ಲವೋ ಎನಿಸುತಿರೆ (ಅರಳು. ೧೨೨-೩); ಅವರ ಸಂಗೀತದಲ್ಲಿ ಮಗ್ನಳಾಗಿ ನಾನು ಅನೇಕ ಸಲ ವೇಳೆಯ ಪರಿವೆ ಇಲ್ಲದೆ ಕೂತುಬಿಡುತ್ತಿದ್ದೆ (ಕುಂಕುಮ. ೨೮); ತಾಯಿ ಎಂಕಮ್ಮ ಊಟಕ್ಕೆಬ್ಬಿಸಿದರೂ ಅವನಿಗೆ ಪರಿವೇ ಇರುತ್ತಿದ್ದಿಲ್ಲ (ಒಡ್ಡಿಉ. ೪೩). **ಪರ್ವಾ**: (ಕಿ).

ಪರವಾ ಇಲ್ಲ, ಪರವಾಗಿಲ್ಲ, ಪರವಾಯಿಲ್ಲ, ಪರ್ವಾ ಇಲ್ಲ, ಪರ್ವಾಗಿಲ್ಲ = ಕಾಳಜಿ ಮಾಡುವ ಪ್ರಮೇಯವಿಲ್ಲ; ಚಿಂತೆ ಇಲ್ಲ; ಅಡ್ಡಿ ಇಲ್ಲ: ಪರವಾ ಇಲ್ಲ; ನನಗೆ ನಿಂತಿರುವುದೇ ಇಷ್ಟ (ಅಳಸಿ. ೩೫); ಜಿಗಳೂರಿನ ಪರವಾದರೆ ಪರವಾ ಇಲ್ಲ (ಮನೆಬೆ. ೧೩೬); ಪರವಾಗಿಲ್ಲ ಒಳ್ಳೇ ಶಕುನ (ಉಡುಗೊ. ೫೪); ಪರವಾಗಿಲ್ಲ ಬಿಡಿ ಸಾರ್ (ನಡದಾ. II, ೧೦೨೫); ಇಂದು ಅಫೀಸಿಗೆ ತಪ್ಪಿದರೂ ಪರವಾಯಿಲ್ಲ (ಭಾರತಿ. ೨೮); ಪರವಾಯಿಲ್ಲ ಅವರಿಂದಾದ್ರೇನು, ನಮ್ಮಿಂದಾದ್ರೇನು (ರೂಪಸಂ. ೪೮); ಪರ್ವಾ ಇಲ್ಲ, ನನಗೆ ಅದರಿಂದ ಯಾವ ತೊಂದರೆಯೂ ಇಲ್ಲ (ರೂಢಿ); ಈಗ ಪರ್ವಾಗಿಲ್ಲ ಮುದ್ದಪ್ಪ (ಕಲಾಸಾ. ೬). ಪರವೆ ಮಾಡು = ಲಕ್ಷ್ಯ ಕೊಡು; ಗಮನಿಸು: ಹತ್ತುಹೆಜ್ಜೆ ಹೋಗುತ್ತಲೇ ಬೆಕ್ಕೊಂದು ಅಡ್ಡ ಬಂದಿತು. ಇವುಗಳ ಪರವೆ ಮಾಡದೆ ಮುಂದುವರಿದ (ಕುಡಿಕೂ. ೬).

[←ಪಾರ. ಪರ್ವಾ; ಹಿಂ. ಪರ್‌ವಾಹ್, ಪರ್ವಾ; ಮರಾ. ಪರವ, ಪರ್ವಾ]

ಪರವೆಣ್, ಪರಹೆಣ್ಣು (ನಾ). = ಪರವಧು: ತೊದಳ್ನುಡಿಯದಿರ್ಪ ಚಲಂ ಪರವೆಣ್ಣೊಳೋತೊಡಂಬಡದ ಚಲಂ (ಎಕ. II, ೧೩೩-೨೨; 982); ನೀಂ ಪರವೆಣ್ಗಳನಪ್ಪುವುದನೆ ಬಯಸುತಿರ್ಪೆ (ಸುಕುಮಾ. ೧೧-೪೩); ಪರವೆಣ್ಣಂ ತಂದನೋ ತಂದನೊ ಪೆಸರ್ಗಿಡೆ ಪೆರ್ಮೋರಿಯಂ ನಮ್ಮ ದುರ್ಗಕ್ಕರಸಂ (ಅನಂಪು. ೧೧-೮೧). **ಪರಹೆಣ್ಣು**: ಹೇಗೆ ಉದ್ಧಾರ ಮಾಡ್ಯಾನು . . . ಪರಹೆಣ್ಣು ಪರಹೊನ್ನು ಕರಗತವಾಯ್ತೆಂದು ಪರಲೋಕ ಭಯ ಬಿಟ್ಟು ತಿರುಗುವನ (ಪುರಂದ. ೧-೧೫೩-೨).

ಪರವೆಂಡಿರಣ್ಣ = ಅನ್ಯಸ್ತ್ರೀಯರಿಗೆ ಸಹೋದರನಂತಿರುವವನು; ಪರನಾರೀ ಸೋದರ; ಒಂದು ಬಿರುದು: ಶ್ರೀಪರವೆಣ್ಡಿರಣ್ನ ನೀಸರಯ್ಯ (ಎಕ. II, ೪೪೫; 900). [ಪರ್ಯ+ಪೆಣ್]

ಪರವೇಶ್ಮಸ್ಥ (ನಾ). ಇನ್ನೊಬ್ಬರ ಮನೆಯಲ್ಲಿ ವಾಸಿಸುವವನು; ಅನ್ಯರ ಗೃಹವಾಸಿ. [ಸಂ.]

ಪರವೋಗು (ಕ್ರಿ). ಬೇರೆಯ ಕಡೆ ಹೋಗು; ದೂರದ ಸ್ಥಳಕ್ಕೆ ಹೋಗು: ಪರಚಕ್ರಮೆ ಕಯ್ಗೆವರಲ್ ಕರಚಕ್ರಂ ಪೂಣ್ಡು ಪೋದ ಬೇಗದೊಳ್ ಪರಂ ಪರವೋದಂ (ಶಾಂತಿಪು. ೬-೧೫೬).

[ಪರ್ಯ+ಪೋಗು$_1$ (<ಪೋ$_1$)]

ಪರವ್ಯಪದೇಶ (ನಾ) [ಜೈನ]ಅತಿಥಿ ಸಂವಿಭಾಗವೆಂಬ ನಾಲ್ಕನೆಯ ಶಿಕ್ಷಾವ್ರತದ ಅತಿಚಾರಗಳಲ್ಲೊಂದು; ಪಾತ್ರದಾನ ಮಾಡುವಾಗ ತನ್ನ ಶರೀರ ಸಂಬಂಧವಿಲ್ಲದವರಿಗೆ "ಅತಿಥಿಯನ್ನು ಕರೆದು ತನ್ನಿ" ಎಂದು ಹೇಳುವುದು: ಕ್ರಮದೆ ಪರವ್ಯಪದೇಶಂ ಸಮತ್ಸರತ್ವಂ . . . ಅತಿಕ್ರಮಮಕ್ಕುಂ ಪಾತ್ರದಾನಮಂ ಕುಡುವೆಡೆಯೊಳ್ (ಸುಕುಮಾ. ೬-೨೨). [ಪರ್ಯ+ವ್ಯಪದೇಶ]

ಪರವ್ಯಾಪಾದ (ನಾ). ಬೇರೆಯವರ ವಿಷಯದಲ್ಲಿ ಮಾಡುವ ದ್ರೋಹ ಚಿಂತನೆ; ಇನ್ನೊಬ್ಬರಿಗೆ ಕೇಡು ಬಯಸುವುದು: ಪರವ್ಯಾಪಾದವಾತ್ಮಸ್ತುತಿ . . . ನಿಜಾನ್ವಯಧರ್ಮಕರ್ಮಚ್ಯುತಿಗಳಿವು ದೋಷಾಂಕುರಂಗಳು (ಕುವ್ಯಾಅ. ೧೫-೧೪). [ಪರ್ಯ+ವ್ಯಾಪಾದ]

ಪರವ್ಯೂಹ (ನಾ). ಶತ್ರುಸೈನ್ಯ; ವೈರಿಸೇನೆ: ಉಪಮಾತೀತದ ಬಿಲ್ಲ ಬಲ್ಮೆ ಸಮಸಂದೊಂದೊರ್ವರೊಳ್ ಪರ್ವೆ ಪರ್ವಿ ಪರವ್ಯೂಹಭಯಂಕರಂ ನೆಗೆದು ಪಾರ್ದಾರ್ದೆಚ್ಚೊಡೆ (ಪಂಪಭಾ. ೧೧-೧೭). [ಪರ್ಯ+ವ್ಯೂಹ]

ಪರಶಕ್ತಿ (ನಾ). ೧. (ಜಗತ್ತಿಗೆ ಮೂಲವಾದ) ಆದಿವಸ್ತು; ಮೂಲಪ್ರಕೃತಿ: ಪರಮಗುಣ ಪರಶಕ್ತಿವಾಗೀಶ್ವರ . . . ಕರುಣಿಸುವುದು (ಕುವ್ಯಾಅ. ೬-೮೭); ಪರಶಕ್ತಿಯುತನೊಳ್ ಪರತರಮಹಿಮನೊಳಾಂತಿ ದಿರ್ಚುತೆಚ್ಚಾಡಿದೆನೇ (ಶಬಶಂ. ೪-೧೧೯); ಭೂಮಿ ಜಲ ಅಗ್ನಿ ಮರುತ್ ಆಕಾಶಕ್ಕೆ ಕ್ಷೇತ್ರಜ್ಞನೆಂಬಾರಕ್ಕೆ ಭೂತಾಂಗಸ್ವರೂಪವಾದ ಪರಶಕ್ತಿಯೇ ಕಾರಣವು (ಉದ್ಧವಾ. ೧೩-೬). ೨. ಪಾರ್ವತಿ: ಪೊಳೆಪೊಳೆವ ಪರಶಕ್ತಿ ಯಾವನ ನೆಳಲೆನಿಸುತಿಹಳು . . . ಅವನನೀಶ್ವರನೆಂದು ಭಜಿಸೆಂದ (ಗಗತಾ. ೧೨-೬೯). ೩. ಶಕ್ತಿಯ ಅಧಿದೇವತೆ: ಹಾಲಾಸ್ಯ ಕದಂಬ ಪೀಠದೊಳ್ವಿರಾಜಿಪ ಪರಶಕ್ತಿ ಯಾವುದೆಂದು ವಿದ್ಯಾವತಿ ಕೇಳಲೊಡಂ (ಹಾಲಾಸ್ಯ. ೧-೫-೩೬ ಪ). [ಪರ್ಯ+ಶಕ್ತಿ]

ಪರಶಿವ (ನಾ). ಈಶ್ವರ; ಪರಮಶಿವ: ಪರಶಿವನೆ ನಿಮ್ಮನಾಂ ಪ್ರಾರ್ಥಿಸುವೆಂ ಮದ್ಬಸವಗುರುವಿನಂತೆಮ್ಮ ನಿನ್ನೊಳಗಿರಿಸಿಕೊಳ್ಳಯ್ಯ (ಅರಾಚ. ೫-೧೦-೧೨); ಗುರುವೆ ಪರಶಿವನು ತಾನೆ ನೋಡಾ (ಅಖಂಡೇ. ೧೬-೧).

[ಪರ್ಯ+ಶಿವ]

ಪರಶು (ನಾ). ಗಂಡುಗೊಡಲಿ; ಕುಠಾರ: "ಪರಶು ಕುಠಾರಾಭಿಖ್ಯಂ" (ವಸ್ತುಕೋ. ೮೪-೧೫); ಕೂರಿ[ಸೆ]ಗುರು ಶುಶ್ರೂಷೆಯೊಳಾ ರಾಮನನುಗ್ರ ಪರಶುಪಾಟಿತರಿಪುವಂಶಾರಾಮನಂ (ಪಂಪಭಾ. ೧-೧೦೪); ಕೈಯ ಕರಾಳ ಪರಶುವನ್ನೆತ್ತಿ ನೆಲದಲಿ ಬೀಳ ಹೊಡೆದನು ಪಿತನ ತಲೆಯನು (ಒಸಪು. ೮-೧೩); ಖಳರು ಕಕ್ಕಡೆ ಪರಶು ಕೊಂತದಿ ಹೊಳೆವಡಾಯುಧ ಶೂಲ

ಶರದಲಿ ಹಳಚಿ ಕಾದಿತು (ಕೌಶಿರಾ. ೨೦-೧೫); ಹೆರರ ಕೊಲ್ಲಲು ಕತ್ತಿ ಪರಶು ತೋಮರ ಬೇಕು (ಪಾಂಚಜ. ೪೧-೫). [ಸಂ.]

ಪರಶುಧರ (ನಾ). ೧. ಕೊಡಲಿಯನ್ನು ಹಿಡಿದವನು. ೨. = ಪರಶುರಾಮ : ಪರಶುಧರಂ ಚಕ್ರಧರಂ ಸುರಪತಿ ಭೂಕಾಂತೆ ಕೊಂತಿಯೆಂದೀ ಪೇಟ್ಟಯ್ವರ್ ಕೂಡಿ ನಿನ್ನ ಕೊಂದರ್ನರನೊರ್ವನೆ ಕೊಂದನಲ್ಲ ನಂಗಾಧಿಪತೀ (ಗದಾಯು. ೫-೨೬). ೩. ಗಣೇಶ : "ಪರಶುಧರಂ ಗಣಪತಿ . . . ವಿನಾಯಕಂ ಹೇರಂಬಂ" (ವಸ್ತುಕೋ. ೪-೧೭); ಪರಶುಧರ ಗಣಪತಿ ವಿನಾಯಕ ಗಜಾಸ್ಯ ಜಯ (ನಳಚಂ. ೨೩೨ ರಗಳೆ). ೧,೨,೩: ಈ ಮಹಾಪುರುಷಂ . . . ಕ್ರೌಂಚಾರಾತಿಯಾಗಿಯುಂ ಷಣ್ಮುಖನಲ್ತು ಪರಶುಧರನಾಗಿಯುಂ ದ್ವಿರದಾಸ್ಯನಲ್ತು (ಜಗವಿ. ೮-೧೦ವ). ೪. ಶಿವ. [ಸಂ.]

ಪರಶುಧಾರ (ನಾ). = ಪರಶುಧರ ೩ : ಗಜಮುಖನೆ ಮೆಱೆವೇಕ ದಂತನೆ ನಿಜಗುಣಾನ್ವಿತ ಪರಶುಧಾರನೆ . . . ತ್ರಿಜಗವಂದಿತ ಗಣಪ ಮಾಳ್ಪುದು ಮತಿಗೆ ಮಂಗಳವ (ಕುಪ್ಯಾಅ. ೧-೪). [ಸಂ.]

ಪರಶುರಾಮ (ನಾ). ಗಂಡುಗೊಡಲಿಯನ್ನು ಕೈಯಲ್ಲಿ ಹಿಡಿದವನು; ಜಮದಗ್ನಿಯ ಮಗ ; ವಿಷ್ಣುವಿನ ಹತ್ತು ಅವತಾರಗಳಲ್ಲಿ ಒಂದು: ಪರಶುರಾಮನನಂಜಿಸಿ ಬೀರಕ್ಕಾಗರಮಾದ ನದೀಜನೇದೊರೆಯನೇ ದೊರೆಯಂ (ಪಂಪಭಾ. ೭-೬೫); ಪರಶುರಾಮನು ಸಮುದ್ರಕ್ಕೆ ಗುಱಿಯಾದನು (ಬಸವ. ೫೭೧); ನರೇಶ್ವರರಂ ನೀಂ ತಱಿದೊಟ್ಟದ್ಯೆ ಪರಶುರಾಮಾಕಾರದಿಂದಚ್ಯುತಾ (ಜಗವಿ. ೧-೬೦); ರಾಜನಿಕರಮಂ ತಱಿದೀಯನೇ ಪರಶುರಾಮನೀ ಧರೆಯನವನೀಸುರರ್ಗೆ (ಜೈಮಿಭಾ. ೨-೩೩). [ಪರಶು + ರಾಮ]

ಪರಶುರಾಮಕ್ಷೇತ್ರ (ನಾ). "ಸಮುದ್ರದಿಂದ ಬಿಡಿಸಿ ಕಶ್ಯಪನಿಗೆ ರಾಮನು ದಾನ ಮಾಡಿದ ಎರಡು ಕೊಂಕಣಸ್ಥಲಗಳು" (ಅನಂನಾ) ; ℙ ಈಗಿನ ದಕ್ಷಿಣಕನ್ನಡ ಜಿಲ್ಲೆ : ಉತ್ತರ ಸಹ್ಯಾದ್ರಿ ಖಂಡವು ಪರಶುರಾಮ ಕ್ಷೇತ್ರದ ನಿರ್ಮಾಣದಿಂದ ಆರಂಭ (ತುಳುನಾ. ೧೦೦). [ಪರಶುರಾಮ + ಕ್ಷೇತ್ರ]

ಪರಶುಶರ (ನಾ). "ಕೊಡಲಿಯಾಕಾರದ ಬಾಣ" (ಪಂಪದೀ ೩೬೯) : ಪರಶುಶರನಿಕರದಿಂ ಕುಮ್ಮರಿಗಡಿದವೊಲೊಡನೆ ಕಡಿಯೆ (ಪಂಪಭಾ. ೧೦-೮೮). [ಪರಶು + ಶರ]

ಪರಶೆ 'ಪರಿಸೆ$_1$' ನೋ.

ಪರಶ್ವಧ (ನಾ). = ಪರಶು : "ಪರಶು ಕುಠಾರಾಭಿಖ್ಯಂ ಪರಶ್ವಧಂ ಸ್ವಧಿತಿಯೆಂಬುದಕ್ಕುಂ" (ವಸ್ತುಕೋ. ೮೪-೧೫); ಶೂಲ ಪರಶು ಪರಶ್ವಧಾದಿಗಳಾಳುತೊಪ್ಪುವ ಕರಚತುಷ್ಟಯೆ ಪಾಲಿಸೆಮ್ಮನು (ಕುಪ್ಯಾವಿ. ೧-೧೧); ಕೃತಾಂತನ ಪರಿಘ ದಂಡದ ಪಾಶಪಾಣಿಯನುರು ಪರಶ್ವಧ [ಪಾತಾಂ. ತ, ರ, ವ]ದ ಹರನ ಮಿತ್ರನ ಗದೆಯ . . . ಸರಿಸದ ಕೈದುಗಳ ನೆಱೆ ಕಾಣಲಾಯ್ತಲ್ಲಿ (ತೊರರಾ. ೬-೭-೨೨); ಧರೆಯ ನಿಃಕ್ಷತ್ರವನು ಮಾಡುತ ಪರಶುರಾಮನು ಮುನ್ನ ತೊಳೆತೊಳೆದುರು ಪರಶ್ವಧವನು ತದ್ಗದ ರುಧಿರವಾರಿಯಲಿ (ನಿಭಾಗ. ೧೦-೭೩-೨). [ಸಂ.]

ಪರಷೆ 'ಪರಿಸೆ$_1$' ನೋ.

ಪರಸ$_1$ 'ಪರಿಸೆ$_1$' ನೋ.

ಪರಸ$_2$, ಪರಿಸ$_2$ (ನಾ). ಒಂದು ಬಗೆಯ ಆಯುಧ : ಕುಂತಾಯುಧ (?) : "ಪರಸ(ಪರಿಸ) ಪ್ರಾಸ ಒಂದು ಆಯುಧ" (ತದ್ಭಕೋ. ೨೪). **ಪರಿಸ$_2$** : ಪರಿಸ ಬೋಳೆಯ ಕೋಲೆಸೆವ ಹೆಱೆಸರ ಕೊಡನೆ . . . ಬತ್ತಳಿಕೆಗಳು ನೆರೆದಿರ್ದುವವರಲ್ಲಿ (ಸಾಳ್ವಭಾ. ೫-೧೪). 'ಪರಸು$_2$' ಪರಾ. [<ಸಂ. ಪ್ರಾಸ]

ಪರಸಂಗ (ನಾ). ಸಮಯ ; ಸಂದರ್ಭ : ನಮ್ಮ ಓಣಿ ಮರ್ಯಾದಿಗೆ ಧಕ್ಕೆ ಬರುವಂಥ ಪರಸಂಗ ಬಂದಾಗ (ಮನೆಬೆ. ೧೭) ; ದಣೀ ಮ್ಯಾಗ ಸೇಡು ತೀರಿಸಿಕೊಣ್ಣಾಕ ನಿನಗೊಂದು ಆಪರೂಪ ಪರಸಂಗ ಒದಗಿ ಬಂದರ ಹ್ಯಾಗಲೇ ? (ಮೇದಿಮ. ೧೩). [<ಸಂ. ಪ್ರಸಂಗ]

ಪರಸಗಟ್ಟೆ (ನಾ). ಉತ್ಸವ ಜರುಗುವ ವೇದಿಕೆ : ಕಲ್ಯಾಣದ ಶರಣರ ಪಾವಿತ್ರ್ಯವು ಒಂದು ಕಣದಷ್ಟಾದರೂ ಉಳಿದಿದೆಯೇ ಎಂದು ನಾನು ಕೇಳುತ್ತೇನೆ. ಬಸವಣ್ಣನ ಪರಸಗಟ್ಟೆಯು ಕಟುಕರಂಗಡಿ ; ಕಲ್ಯಾಣವು ಕಟಕಗೇರಿ (ಬೆಟ್ಟಹೊ. ೮೯). 'ಪಾದಗಟ್ಟೆ' ಪರಾ. [ಪರಸ$_1$ (<ಪರಿಸೆ$_1$)+ಕಟ್ಟೆ$_1$]

ಪರಸತಿ (ನಾ). = ಪರವಧು : ಛಲ ಬೇಕು ಶರಣಂಗೆ ಪರಸತಿಯನೊಲ್ಲೆನೆಂಬ (ಬಸವ. ೬೭೬) ; ಪರಸತಿಯಲ್ತು ಮತ್ಸತಿ ಪರಾರ್ಥಮದಲ್ತು ಮದೀಯ ವಿತ್ತಂ (ದಶಕು. ೧೨-೧೫೬) ; ಪರಸತಿಯ ನೆಱೆಗೈಯೆ ಮುತ್ತಿತು ನೆರೆದು ಕೋಡಗವಿಂಡು (ಕುಪ್ಯಾವಿ. ೨-೩೩) ; ಪರಸತಿಯೊಲುಮೆ ನಿನಗೆ ಒಪ್ಪಿತೊ ದೇವ (ಪುರಂದ. ೧-೧೬೩-೨). [ಪರ$_3$+ಸತಿ$_1$]

ಪರಸತಿಗಮನ (ನಾ). ಅನ್ಯಸ್ತ್ರೀಯ ಸಹವಾಸ : ಪರಸತಿಗಮನವತಾ ಮಾಡುವುದಿಲ್ಲ (ದ್ವಾದಶಾ. ೧೧-೧೫೬). [ಪರಸತಿ+ಗಮನ$_2$]

ಪರಸತಿಮೇಳ (ನಾ). ಅನ್ಯಸ್ತ್ರೀಯ ಸಂಸರ್ಗ ; ಪರಸ್ತ್ರೀಯೊಡನೆ ಸಹವಾಸ ; ವ್ಯಭಿಚಾರ : ಪರಸತಿಮೇಳ ಲೇಸಲ್ಲೆನುತ ಬೀಳ್ಕೊಟ್ಟಳು ನಿಜಾನುಜನ (ಕುಪ್ಯಾವಿ. ೨-೪೮). [ಪರಸತಿ+ಮೇಳ (= ಮೇಲ)]

ಪರಸತ್ಯ (ನಾ). ಅತಿಶ್ರೇಷ್ಠವಾದ ನಿಜತತ್ವ ; ಪರಮಸತ್ಯ : ಅನುಭವವೇ ಪರಸತ್ಯಕ್ಕೆ ಸತ್ಯತೆಯನ್ನು ನೀಡುವುದು (ಪರಪ. ೯೮). [ಪರ$_3$+ಸತ್ಯ]

ಪರಸದನ (ನಾ). ಇನ್ನೊಬ್ಬರ ಮನೆ ; ಅನ್ಯಗೃಹ : ಇವನನು ಪರಸದನದೊಳಗಿಟ್ಟು ಸಾಕಿದ ಗೋಕುಲದೊಳಗೇ (ಕರ್ನಾಕ. ೩೧೩). [ಪರ$_3$+ಸದನ]

ಪರಸನ (ನಾ). ಪ್ರಶ್ನೆ : ಪ್ರಶ್ನ, ಪರಸನ (ಶಬ್ದಾನು. ೧೪೭ ಪ್ರಯೋ); ಪ್ರಶ್ನ—ಪರಸನ (ಹೊನುಗ. ೧೧೫). [<ಸಂ. ಪ್ರಶ್ನ]

ಪರಸನೆ (ನಾ). = ಪರಸನ : ಹೊರಸಿನ ಪರಸನೆ ಇಲ್ಲ, ಜಗಕ್ಕೂ ಕೊರತೆ ಇಲ್ಲ ; ಆದರೆ ಒಬ್ಬಳೇ ಹೆಂಗ ಇರುತ್ತಾಳೆ ? (ಶ್ರೀಮಾಶ್ರ. ೪೧). [<ಪ್ರಶ್ನೆ]

ಪರಸನ್ನ (ಗು). ೧. ಕೃಪೆಯುಳ್ಳ ; ದಯೆಯುಳ್ಳ ; ಪ್ರಸನ್ನವಾದ : ಪರಸನ್ನ ಹಯವದನ ಚರಣಸರಸಿಜ ಮಧುಕರನು (ಪಾದಿಕೀ. ೭೯-೩). (ನಾ). ೨. ಪ್ರಸನ್ನವಾದ ವ್ಯಕ್ತಿ : ವಾಣಿ ಮೊದಲಾದ ದೇವಿಯರು . . . ವರಗಳನು ಪಾಲಿಪರೆ ಪರಸನ್ನರಾಗಿ ಸರಸಿಜಾಕ್ಷಿಯ ಮುಂದೆ ನಿಲಲ್ (ಹಮಚ. ೨೧೮). [<ಸಂ. ಪ್ರಸನ್ನ]

ಪರಸನ್ಮೋಹನ (ನಾ). ಮತ್ತೊಬ್ಬರನ್ನು ಮರುಳುಗೊಳಿಸುವುದು,—ವಶಪಡಿಸಿಕೊಳ್ಳುವುದು : ದ್ಯೂತಸಿದ್ಧಿಯ ಮಂತ್ರ ಪರವಿದ್ಯಾತಿಶಯ ವಿಚ್ಛೇದ ರಕ್ಷವಿಧೂತ ರಿಪುಮತಿ ಯಂತ್ರ ಪರಸನ್ಮೋಹನೌಷಧಿಯ ಈತಗಳು ಮೇಳವಿಸಿದರು (ಕುಪ್ಯಾಸ. ೧೩-೨೨). [ಪರ$_3$+ಸನ್ಮೋಹನ]

ಪರಸಮಯ (ನಾ) ೧. ಬೇರೆಯ ಧರ್ಮ, ಅನ್ಯಮತ : ಪರಸಮಯದ ಪಿರಿದೆನಿಸಿದ ಪುರಾಣಮಂ ಜೈನರಲ್ಲಿ ವಾಕ್ಯಮದೊಂದಂ ಪರಿಕಿಸಿ ನೋಟ್ಟಾಗಳ್ (ಸಮಿಪ. ೩.೮೨). ಮುಳಿದು ಪರಸಮಯಂಗಳಂ ವೆಗ್ಗಳಿಸಿ ತಾಗುವ ಹರನ ನಿಟಲಾನಲನದುಗ್ರದ ತಗರು ಬಂದಿದೆ (ಬಸವು. ೨೯-೫) ; ಪರಸಮಯನಿರ್ಧೂಮಧಾಮ ನಿಷ್ಠೆಯ ನೇಮ (ವೀಶ್ಯವು. ೮-೬-೨) ; ಖೂಳಕುಜ ಪರಶು ಪರಸಮಯವಾರಣಸಿಂಹ ಭಾಳಲೋಚನನ

ಮತರಿಪುಗೋತ್ರಜಂಭಾರಿ (ಪ್ರೌಢರಾ. ೧೫-೩೪); ಪರಸಮಯದವನಾದಡೂ ಆಗಲಿ ಶಿವಸಮಯದವನಾದಡೂ ಆಗಲಿ ವರ್ಮಗೆಟ್ಟು ನುಡಿವ ಕರ್ಮಜೀವಿಗಳ ಬಾಯಲ್ಲಿ ಬಾಲ್ವುಳ ಸುರಿಯದೆ ಮಾಣ್ಬುವೆ (ಅಖಂಡೇ. ೨೬೬-೬). ೨. ಬೇರೆಯ ಧರ್ಮಕ್ಕೆ ಸೇರಿದವನು; ಅನ್ಯಮತದವನು: ಅನ್ಯದೈವಗಳೋದುವಂದದಿ ಪರಸಮಯಮುಖ ಬಾಡುವಂದದಿ . . . ತೆರಳಿದನು ನವಿಲೆಯ ಪುರಾಧೀಶಂ (ಶಂಕವಾ. ೯-೧೧).

ಪರಸಮಯಧ್ವಂಸಕ = ಅನ್ಯಮತಗಳನ್ನು ನಾಶ ಮಾಡುವವನು; ಒಂದು ಬಿರುದು: ಶ್ರೀಮತ್ಮಲೆಗೊಳ್ಳದ ಅರಿಟ್ಟನೇಮಿ ಪಣ್ಡಿತರ್ ಪರಸಮಯಧ್ವಂಸಕ (ಎಕ. II (R), ೨೩೩-೨; ?).

[ಪರ$_3$ + ಸಮಯ$_1$]

ಪರಸಮಯಿ (ನಾ). ಬೇರೆಯ ಧರ್ಮಕ್ಕೆ ಸೇರಿದವನು; ಅನ್ಯಮತೀಯ: ಇದುವೆ ಪರಸಮಯಿಗಳಂ ಮುದದಿಂ ಪಥಕ್ಕೆ ತರಲಾರ್ಪುದು (ಸಮಪ. ೧-೬೧); ಮತ್ತೆಯುಂ ಪರಸಮಯಿಗಳು ಬಾಯೆತ್ತಲಂಜಿಂ ತೆಂದರು (ಬಸಪು. ೫೩-೬೧); ಬಿಜ್ಜಳನು . . . ಪರಸಮಯಿಗಳ ಚಾಡಿ ಕೇಳಿ ಬಸವೇಶ್ವರನೊಂದಿಗೆ ಲೆಕ್ಕ ವಿಚಾರಿಸಿ ಸೋತು ಹೋದನೆಂದು . . . ಹೇಳಿರುವಲ್ಲಿ (ಮೂರುಉ. ೯೦). [ಸಂ. ಪರಸಮಯಿನ್]

ಪರಸಾಂಗು (ನಾ). ಸುಮಾರು ಐದು ಮೈಲಿ: ಒಂದು ದ್ವೀಪಕ್ಕೂ ಮತ್ತೊಂದು ದ್ವೀಪಕ್ಕೂ ಮೂರು ನಾಲ್ಕು ಪರಸಾಂಗುಗಳಷ್ಟು ದೂರವಿರುತ್ತದೆ (ಪ್ರವಾಇ. I, ೩೦೨). [←ಪಾರ. ಹಿಂ. ಫರ್‌ಸಂಗ್]

ಪರಸಾದ 'ಪಸಾದ' ನೋ.

ಪರಸಿಗಲ್ಲು 'ಫರಸುಗಲ್ಲು' ನೋ.

ಪರಸು$_1$, ಹರಸು$_1$ (ಕ್ರಿ). ೧. ಆಶೀರ್ವಾದ ಮಾಡು: ಪರಸುವೆನೆನ್ನದಾಂ ಪರಪೆನೆಂಬುದಿದಾಗದು ಚಿತ್ತನಾಥನೊಳ್ (ಕವಿರಾ. ೨-೧೦೭); ಕರ್ಮಕ್ಷಯಮುಮಕ್ಷಯದಾನಮುಮಕ್ಕೆಂದು ಪರಸಿ ಪೊಱಮಟ್ಟು ಬಸದಿಗೆ ಪೋಪಾಗಳ್ (ಪಡ್ಡಾರಾ. ೭೮-೨೬); ಭರತೇಶ್ವರಚಕ್ರವರ್ತಿ ನಿಜಪ್ರಿಯಾನುಜನಂ ಬಾಹುಬಲಿಕುಮಾರನಂ ಪರಮಾಶೀರ್ವಾದದಿಂ ಪರಸಿ (ಆದಿಪು. ೧೪-೪೬ ಪ); ರಾಮ ಲಕ್ಷ್ಮಣರುಮಂ ಸೀತೆಯುಮಂ ಪರಸಿ ಗಗನಚಾರಣರ್ ಪೋಪುದುಂ (ಸಂರಾಮಾ. ೯-೧೫ ಪ). ೨. ಒಳ್ಳೆಯದನ್ನು ಹಾರೈಸು; ಶುಭ ಕೋರು: ಈತನಂ ಭೋಂಕೆನೆ ಕಂಡಟ್ಕಿರ್ತು ನೋಟಂಬೆರಸು ಪರಸಿ ತಟ್ಕೈಸಿಕೊಂಡು (ಆದಿಪು. ೨-೨೦); ವೀರಶ್ರೀವಿಜಯನ ಕೆಯ್ಸಾರೆ ಸುರಾಂಗನೆಯರೊಸೆದು ಪರಸುವರವಮುಂ . . . ಎಸೆದುವಂಬರತಳದೊಳ್ (ಕಾವ್ಯಾವ. ೭೮); ಚೆನ್ನೆಯರ್‌ತಂದಾರತಿಯನೆತ್ತಿ ಪರಸೆ (ಪದ್ಮರಾ. ೩-೭೬); ಪುರವರ ಮಹಾಸತಿಯರತಿ ಭಯಭರಿತ ಭಕ್ತಿಯಿಂದೆ . . . ಆರತಿಗಳಿಂ ನಿವಾಳಿಸಿ ಪರಸಿಸೇಸೆಯಂ ತಳಿದರಧಿಕೋತ್ಸವದೊಳು (ಚಿಒಪು. ೫-೧೬). ೩. ಹರಕೆ ಹೊರು,—ಮಾಡಿಕೊಳ್ಳು; ಹರಸಿಕೊಳ್ಳು; ಮುಡಿಪು ಕಟ್ಟು: ಅನಿಮೇಷರ್ ನೂತನಪ್ರಸ್ತುತ ಸುರಭಿಸುಧಾಕ್ಷೀರಾಭಿಷೇಕಾರ್ಚನೆಯಂ . . . ಪ್ರತ್ಯಗಚಿಂತಾಮಣಿಯ ರಚನಾಶ್ಚರ್ಯನಿಶ್ಶೇಷಭೂಷಾರ್ಚನೆಯಂ ಸರ್ವಜಬಿಂಬಾವಳಿಗೆ ಪರಸಿದರ್ ಮಸ್ತಕನ್ಯಸ್ತಹಸ್ತರ್ (ಆದಿಪು. ೧೪-೧೧೪) ಈರ್ವರುಂ ಭೂತಂಗಳ್ಗೆ ಪರಸಿ ಮುಂಡಕೌಶಿಕನೆಂಬ ಮಗನಂ ಪಡೆದಿರ್ಪಿನಂ (ಚಾವುಂಪು. ೨೮೭); ಸಂತಾನಮಿಲ್ಲದುಬ್ಬೆಗದಿಂ ಪುತ್ರಾರ್ಥಿಗಳಾಗಿ ನಾಗಸ್ಥಾನದ ನಾಗರ್ಗೆ ಪರಸಲ್ಪೋದರ್ (ಸುಕುಮಾ. ೫-೪೪ಪ); ಪಲವು ದೈವಕ್ಕೆ ಪರಸಿದೊಡಂ ತನ್ನನಿಕ್ಕಿದೊಡಂ . . . ದೊರೆಕೊಳ್ಳದು (ಧರ್ಮಾಮೃ. ೬-೧೬೬ ಅಡಿಟಿ). ೪. ಪ್ರಾರ್ಥಿಸು; ಧ್ಯಾನಿಸು: ಪರಸು ಪರಸೆಲವೊ ಕಾಶೀಪುರೇಶನಂ ನೀಡು ಗೋಣನೆಂಬಾಗಳ್ (ದಶಕು. ೯-೪೮). **ಹರಸು$_1$**: ೧. ನಾನು ನಿಮ್ಮ ಶಿಶುವೆಂದು ಚೆನ್ನಮಲ್ಲಿ ಕಾರ್ಜುನನ ಬೆರಸೆಂದು ಎನ್ನ ಹರ[ಪಾಠಾಂ.ರಿ]ಸುತ್ತಿಹುದು (ಮಹಾದೇ.ಬ. ೩೧-೬೭); ಸರ್ವಸಾಮರ್ಥ್ಯಸಳವಡಲಿ ನಿನಗೆಂದು ಹರಸಿ ಹಾರೈಸಿ (ಸಿದ್ಧರಾ. ೧-೬೦); ಸಂಹರಿಸು ದೈತ್ಯನನೆಂದು ತಾರ್ಯ್ ಹರಸಿದಳು ನಂದನನ (ಕುಸ್ಯಾಅ. ೧೦-೨೬); ಶ್ರೀಕೃಷ್ಣ ವಲ್ಲಭೆಗೊರ್ವ ಮೊಮ್ಮಗ ನಾಗಲೆನುತೆ ಹರಸಿದ (ಮೋಹತ. ೧೩-೪೯); 'ಮರಳಿ ಬಾರ, ಕಂದಾ, ನನ್ನುದರದಿ' ಎಂದು ತಬ್ಬಿ ಹರಸೆನ್ನ (ಗಿಳಿವಿಂ. ೪೭-೫); ಹ[ಪಾಠಾಂ. ಪ]ರಸಿ ಸೇಸೆಯನಿಕ್ಕಿದಳು ತನ್ನ ವಲ್ಲಭನ ಸಿರಿಮುಡಿಯೊಳು (ಸೋಮಚ. ೨-೧೨೦); ಹರಸುತಿರ್ದುದು ರಾಮರಾಜ್ಯದೊಳಖಿಳಜನನಿವಹ (ಕೌಶಿರಾ. ೪೪-೫೬); ಮಳೆ ಬಂದು ಬೆಳೆ ಬೆಳೆದು ಧರೆ ತಣಿಯಲೆಂದು . . . ಇಳೆಯೊಳಗೆ ಹರಸಿದೆವು ಬಾಲಕರು ಬಂದು (ಕನ್ನಡಾ. ೭೯). ೩. ಕಂಚಲದೇವಿಯರುಂ ಪದ್ಮಾವತಿದೇವಿಗೆ ಹರಸಿ ಪೆರ್ಮ್ಮಾಡಿದೇವನಂ ಹಡೆದು (ಎಕ. VII, ಶಿವಮೊ. ೪-೯೨; 1122); ಹರಸಿ ಮಾಡುವುದು ಹರಕೆಯ ದಂಡ (ಬಸವ. ೨೨೮); ಪೊಡವೀಶ್ವರಂ ಹಿಂದೆ ಹರಸಿ ಹಾಳಂಬಟ್ಟು ಹಡೆದ ಸುತನೀತನು (ಹಚಕಾ. ೧೨-೪೨); ಹರಸೋದು ತಪ್ಪೋದಿಲ್ಲ, ತಿರಿದುಂಬೋದು ಹೋಗೋದಿಲ್ಲ (ಗಾದೆ). ೫. ಕೊಂಡಾಡು; ಸ್ತುತಿಸು; ಹೊಗಳು: ಓತು ಕೊಂಡಾಡುತಂ ಹಾಡುತಂ ಹರಸುತಂ ಹೊಸಹೊಸ ಪರಿಯ ಸಿರಿಯ ನೇಮದಚಲರ್ ಕೆಲರು (ಬಸರ. ೭-೮೨); ಮರುಳುಪಡೆಗಳು ಉಂಡು ಹರಸಿದವಂದು ರಾಘವನ (ಕೌಶಿರಾ. ೨೨-೪೯).

ಹರಸಿಕೊಳು, ಹರಸಿಕೊಳ್ಳು = ಹರಕೆ ಹೊರು; ಮುಡಿಪು ಕಟ್ಟು: ಮಹಾ ಮಹೇಶ್ವರರಿಗರ್ಚನೆಗೆಯ್ವೆನೆಂದಿರುಳು ಹರ[ಪಾಠಾಂ.ರಿ]ಸಿಕೊಳು ತಿರ್ದಳಂದು (ಸೋಮಚ. ೧-೭೮); ತೇರಸಗಣಂಗಳಿಗೆ ನಮಿಸಿಯಪಾರ ಪರಿಯಲಿ ಹರಸಿಕೊಂಡಿಹೆವು (ಬಸಪು. ೪೮-೧೮); ಹರಸಿಕೊಂಡರು ಗಣಪಯಕ್ಷೇಶ್ವರಿ ಕಳಾವತಿ ದುರ್ಗಿ ಭುವನೇಶ್ವರಿಗಳಿಗೆ (ಕುಸ್ಯಾಸ. ೧೩-೨೧).

[ದೇ.॥ ತಮಿ. ಪರಚು, ಪಟಿಚ್ಚು; ಕೋತ. ಪರ್ಚ್; ತೊದ. ಪರ್ತ್; ತುಳು. ಪರಸು = ಆಶೀರ್ವಚನ, ಹರಕೆ]

ಪರಸು$_2$ (ನಾ). ಕೊಡಲಿ; ಕುಠಾರ: ಪರಸಿನೊಳೆರ್ದೆಯಂ ಸೀಳ್ದುಂ ಗಜಂಗಳಿಂದಿಕ್ಕಿ ಮೆಟ್ಟಿಸಿಯುಂ (ಧರ್ಮಾಮೃ. ೩-೭೩); ಕೊಂತ ಪರಸು ಕಕ್ಕಡಯಿಂಬಿ ಖಂಡೆಯ (ದೇವಾಂಪು. ೩-೨೦೨); ಆ ಜಾಗೀರದಾರ್ರು ನನ್ನ ಕರಿಸಿ ಕೊಲ್ಲು ಎಂದರ್ರಿ. ಹಾರ್ರ ಹುಡುಗ, ನಾ ಒಲ್ಲೆಂದೆ, ತಾವೇ ಪರಸು ತಗೊಂಡು ಇಕ್ಕರಿಸಿದರ್ರಿ (ಕನಕೆ. ೩೬). [<ಸಂ. ಪರಶು]

ಪರಸುರಾಮ (ನಾ). ಒಬ್ಬಾತನ ಹೆಸರು: ಪರಸುರಾಮನ್ ಎಱೆದು ಬಿಟ್ಡನ್ (ಸೌಇಇ. IX-i, ೪೦೦-೩; ಸು. 8ನೆಯ ಶತ). [<ಪರಶುರಾಮ]

ಪರಸುರಾಮಯ್ಯ (ನಾ). ಒಬ್ಬಾತನ ಹೆಸರು: ಇದ ಬರೆದೊಂ ಪರಸುರಾಮಯ್ಯ (ಎಕ. V, ಅರಕ. ೫-೮; ಸು. 915).

[ಪರಸುರಾಮ + ಅಯ್ಯ$_1$]

ಪರಸೆ 'ಪರಿಸೆ$_1$' ನೋ.

ಪರಸೇನೆ (ನಾ). ಶತ್ರುಗಳ ದಂಡು; ವೈರಿಸೈನ್ಯ: ಮುಂದಿರ್ದ ಭೂಪರು ಪರಸೇನೆಯಿಱಿವಲ್ಲಿ ಶೌರ್ಯಾಟೋಪದಿ ಮೆಱೆದರದ್ಭುತದಿ (ಪರ್ಧಚ. ೭-೧). [ಪರ$_3$ + ಸೇನೆ]

ಪರಸೇವೆ (ನಾ). ಬೇರೆಯವರ ಚಾಕರಿ; ಅನ್ಯರಿಗೆ ಮಾಡುವ ಊಳಿಗ: ಸಂತಂ ಮೃಗಗಣ ವೃತ್ತಿಯನಿಂತಪ್ರಸ್ತುತಮನಱಿಪಿದಂ ಪರಸೇವಾಚಿಂತಾವಿಷಾದಿತಾಂತಸ್ಸ್ವಾಂತಂ ಸಂತೈಸಲೆಂದು ತನ್ನಂ ತಾನೇ (ಕವಿರಾ. ೩-೧೪೦); ನಾನು ಪರಸೇವೆಯ ಮಾಡುವೆನಯ್ಯಾ ಜಂಗಮವಾಸೋಹಕ್ಕೆಂದು (ಬಸವ. ೬೦೮); ಪರರಾಳುತನವೆಮಗಾಯ್ತು ಪರಸೇವಾಲಘುಸ್ಥಿತರೆಮ್ಮನೇತಕೆ ನುಡಿಸಿದಪೆ (ಕುಸ್ಯಾಭೀ. ೨-೨೫).

[ಪರ$_3$ + ಸೇವೆ$_1$]

ಪರಸೈನ್ಯ (ನಾ). = ಪರಸೇನೆ : ಪರಸೈನ್ಯಜಳಧಿಸಂಜಾತಜಯಶ್ರೀಪತಿ ಪತಿಹಿತಚರಿತಂ ಶ್ರೀಪತಿದನ್ಮಾ ಧಿನಾಥನೆಸೆದಂ ಧರೆಯೊಳ್ (ಸೌಇಗ. XX, ೬೪–೫; 1112).

ಪರಸೈನ್ಯಭೈರವ = ಶತ್ರುಸೇನೆಗೆ ಭಯಂಕರಸ್ವರೂಪನಾದವನು; ವೈರಿಸೈನ್ಯಕ್ಕೆ ರುದ್ರನಂತಿರುವವನು : ಪೊಕ್ಕನಾ ಪ್ರಮಥ ಮುಂದಿರಮಂ ಪರಸೈನ್ಯಭೈರವಂ (ಪಂಪಭಾ. ೩–೬೪).

[ಪರ್ಯ + ಸೈನ್ಯ]

ಪರಸೊಮ್ಮು (ನಾ). ಬೇರೆಯವರ ಸ್ವತ್ತು, —ಆಸ್ತಿ : ಕಟ್ಟದರೇನು ಕೊಟ್ಟು ಕಳುಹಿದರೇನು ಮುಟ್ಟುವರಲ್ಲ ಪರಸೊಮ್ಮನೆಂದಳು (ಕರಡ. ೩೦೪).

[ಪರ್ಯ + ಸೊಮ್ಮು೩]

ಪರಸ್ತ್ರೀ (ನಾ). = ಪರವಧು : ಕೊಲೆಯೆಂದೊಂದನಸತ್ಯಮೆಂಬೆರಡನು . . . ಪರಸ್ತ್ರೀಯೆಂಬು ನಾಲ್ಕಂದನಾಕುಲಮೆಂದಯ್ದನನಾಕುಳಂ ತೊಜ್ ದೊಡೇಂ ಹೃಲ್ಲಾಸಮೇ . . . ಸಂತಾಪಮೇ ಬೇವಸಂ (ಶಾಂಪು. ೭–೫); ಒಂದಕ್ಕಂಜುವೆ ಒಂದಕ್ಕಳುಕುವೆ ಪರಸ್ತ್ರೀ ಪರಧನವೆಂದೀ ಜೂದಿಂಗಂಜುವೆ (ಒಸನ. ೪೪೬); ಪರಿಜನಕೆ ದಯೆಯನು ಪರಸ್ತ್ರೀಯರಲಿ ಭೀತಿಯ . . . ನೀ ವಿರಚಿಪೆಯೋ ಬೇಸಜುವೆಯೋ ಭೂಪಾಲ ಕೇಳೆಂದ (ಕುಪ್ಯಾಸ. ೧–೫೭); ನನ್ನನ್ನು ಪರಸ್ತ್ರೀಯೆಂದು ತಿಳಿದುದರಿಂದ ನೀನು ಹೀಗಾಗಿರುವೆ (ಶಾಕುಂತ. ೬೯–೩). [ಪರ್ಯ + ಸ್ತ್ರೀ]

ಪರಸ್ತ್ರೀಗಮನ (ನಾ). ಮತ್ತೊಬ್ಬನ ಹೆಂಡತಿಯೊಡನೆ ಸಹವಾಸ ಮಾಡುವುದು ; ವ್ಯಭಿಚಾರ ; ಹಾದರ : (ಕ).

[ಪರಸ್ತ್ರೀ+ಗಮನ]

ಪರಸ್ತ್ರೀಲೋಲ (ನಾ). ಅನ್ಯಸ್ತ್ರೀ ಲಂಪಟ : ದನುಜೇಜ್ಯಂ ಕುಜಗೇಹದೊಳ್ ನಿಲೆ ಪರಸ್ತ್ರೀಲೋಲಂ (ಜಾತಕ. ೧೭–೨೯).

[ಪರಸ್ತ್ರೀ + ಲೋಲ]

ಪರಸ್ತ್ರೀವ್ಯಸನ (ನಾ). ಪರಸ್ತ್ರೀಯರಲ್ಲಿ ಲಂಪಟತೆ ; ಜಾರತನ ; ಹಾದರಿಗತನ : ಪರಸ್ತ್ರೀವ್ಯಸನಪೇಯವಸೂಯೆ . . . ಎನಿಪ್ಪಿವನು ಬಿಸುಟು ತದ್ವಿಪರೀತದಲಿ ವರ್ತಿಸುವನವನೇ ರಾಯನು (ಕುಪ್ಯಾಉ. ೩–೭೧). [ಪರಸ್ತ್ರೀ + ವ್ಯಸನ]

ಪರಸ್ಥ (ನಾ). ೧. ಬೇರೆಯವರಲ್ಲಿರುವುದು : ವಿವಿಧ ಕ್ರೋಧಾದ್ಯಾವೇಶದಿಂ ಆತ್ಮಸ್ಥಂಗಳುಂ ಪರಸ್ಥಂಗಳುಂ ಉಭಯಸ್ಥಂಗಳುಂ ಅಪ್ಪುದಱಿಂ (ತತ್ತ್ವಪ್ರ. ೨೬೦); ಹಾಸ್ಯವು ಅಥವಾ ನಗುವು 'ಆತ್ಮಸ್ಥ', 'ಪರಸ್ಥ' ಎರಡೂ ಆಗಬಹುದು (ಬಂಕಿಮ. ೩೫೧). ೨. ಬೇರೆಯ ಸ್ಥಳದವನು : ಪರಸ್ಥರು ಯಾವ ಪ್ರದೇಶದಿಂದಲೇ ಈ ಹವೆಯೊಳಗೆ ಬರಲಿ . . . ಆರೋಗ್ಯವೆನಿಸುತ್ತದೆ (ಕಳಾಗ. ೫೧). [ಸಂ.]

ಪರಸ್ಥಲ, ಪರಸ್ಥಳ (ನಾ). ಬೇರೆಯ ಪ್ರದೇಶ ; ಬೇರೆಯ ಊರು.

ಪರಸ್ಥಳ : ಆಗ್ಗೆ ಸರಿಯಾಗಿ ಸುಲ್ತಾನ್‌ಬೇಗನು ಏನೋ ಕೆಲಸಕ್ಕಾಗಿ ಪರಸ್ಥಳಕ್ಕೆ ಹೊರಡಲೇಬೇಕಾದ ಪರಿಸ್ಥಿತಿ ಬಂತು (ತೇಜಕಥೆ. ೧೮೪); ಪರಸ್ಥಳವೋ ಪರದಾಟವೋ (ಗಾಪ).

[ಪರ್ಯ + ಸ್ಥಲ]

ಪರಸ್ಥಳ 'ಪರಸ್ಥಲ' ನೋ.

ಪರಸ್ಥಾನ (ನಾ). ಪ್ರಯಾಣದ ದಿನ ಪ್ರಶಸ್ತವಲ್ಲದಾಗ, ಆದಕ್ಕೆ ಹಿಂದಿನ ಶುಭಕರವಾದ ದಿನದಲ್ಲಿ, ಪ್ರಯಾಣದ ವಸ್ತುಗಳನ್ನು ಮತ್ತೊಬ್ಬರ ಮನೆಗೆ ಸಾಗಿಸುವುದು ; ಹೊರಪ್ರಯಾಣ ಮಾಡುವುದು : ನಾಳೆ ನವಮಿ, ಅದ್ದರಿಂದ ಇವತ್ತೇ ಪರಸ್ಥಾನ ಮಾಡಿಬಾ (ರೂಢಿ). [<ಸಂ. ಪ್ರಸ್ಥಾನ]

ಪರಸ್ಪರ (ಗು). ೧. (ಇಬ್ಬರಲ್ಲಿ ಅಥವಾ ಕೆಲವರಲ್ಲಿ) ಒಬ್ಬೊಬ್ಬರಿಗೂ ಸಂಬಂಧಪಟ್ಟ. (ನಾ). ೨. ಒಬ್ಬೊಬ್ಬರಿಗೆ ಸಂಬಂಧಪಟ್ಟವರು : ಸ್ನೇಹಿತರು ಮುಂತಾ"ವರ ಭೆಟ್ಟಿಯನ್ನು ತಕೊಳ್ಳಬೇಕು. ಅದರಿಂದ ಪರಸ್ಪರರಲ್ಲಿ ಪ್ರೀತಿ ಹೆಚ್ಚಾಗುವುದು (ಮುಂಬಯಿ. ೪–೩೪). ೩. ಬೇರೆ ಬೇರೆಯಾಗಿರುವುದು : "ಪರಸ್ಪರಂ, ಮಿಥಃ, ಅನ್ಯೋನ್ಯಂ, ಇತರೇತರಂ—ಈ ೪ ಬೇಱೆಬೇಱೆ" (ಹಲಾಯು. ೧೧೯–೩೫); "ಅನ್ಯೋನ್ಯಮಿತರೇತರ ಮಿಥಃ ಪರಸ್ಪರಮೆನಲು ಬೇಱೆಬೇಱೆಂಬುದನು ಸೂಚಿಸಿಕ್ಕುಂ" (ಪುಂಗರಾ. ೧೨೯–೧೫). ೪. [ಕಾವ್ಯವಿಮಾ] ಒಂದು ಅರ್ಥಾಲಂಕಾರ ; ಅನ್ಯೋನ್ಯಾಲಂಕಾರ : ಜಾತಿಸಹೋಕ್ತ್ಯ . . . ಪರಸ್ಪರಸಾರಧಿವಿಲಸನಂಗಳೆಂದೀ ತೆಱದಿಂದಮೊಂದಿ ನೆಗಟ್ಟುಂ ನೆಜ್ ವಾಸ್ತವಭೇದವೃತ್ತಿಗಳ್ (ಕಾವ್ಯಾವ. ೬೦೬); ಇತರೇತರಕಾರಕ ಸಂಪ್ರತಿಪತ್ತಿ ಪರಸ್ಪರಂ ಸಮೂಹದೊಳೆನಿಸುವೊಂದತಿಶಯಗುಣದಿಂ ನಿರ್ಧಾರಿತ ಮಪ್ಪುದು ಸಾರಮೆಂಬ ಸದಲಂಕಾರಂ (ಕಾವ್ಯಾವ. ೬೫೪). [ಸಂ.]

ಪರಸ್ಪರತೆ (ನಾ). ಒಂದಕ್ಕೊಂದು ಪೂರಕವಾಗಿರುವಿಕೆ : ಸುಂಕ ಸಂಧಾನಗಳು ಆರಂಭವಾದಾಗ ಸುಂಕ ವಿನಾಯಿತಿಗಳ ಪರಸ್ಪರತೆಯ ನೀತಿಯಲ್ಲಿ ಮುಖ್ಯ ಬದಲಾವಣೆಯೊಂದನ್ನು ಹಿಂದುಳಿದಿರುವ ರಾಷ್ಟ್ರಗಳ ಹಿತದೃಷ್ಟಿಯಿಂದ ಮಾಡಲಾಯಿತು (ಅಂತಸಂ. ೧೪೭).

[ಸಂ. ಪರಸ್ಪರತಾ]

ಪರಸ್ಪರಸಂಬಂಧ (ನಾ). ಒಂದಕ್ಕೊಂದಕ್ಕಿರುವ ಬಾಂಧವ್ಯ ; ತಮ್ಮ ತಮ್ಮಲ್ಲಿರುವ ನಂಟುತನ : ಅವುಗಳ ಸ್ವರೂಪ ಲಕ್ಷಣ ಪರಸ್ಪರ ಸಂಬಂಧಗಳ ನಿರೂಪಣೆ . . . ಇವೇ ಮೊದಲಾದ ಅನೇಕ ವಿಷಯಗಳನ್ನೊಳಗೊಂಡಿದೆ (ದ್ರಾವಿವಿ. V, ಮುನ್ನುಡಿ); ಈಶ್ವರಸಂಹಿತೆಯಲ್ಲಿ ಪ್ರತಿಮಾಲಕ್ಷಣವನ್ನು ಹೇಳುವಲ್ಲಿ ಸಮಗ್ರತೆಯೊಂದಿಗೆ ಅದರ ಅಂಶಗಳು ಇರಬೇಕಾದ ಪರಸ್ಪರ ಸಂಬಂಧವನ್ನೂ ಪ್ರಮಾಣವನ್ನೂ ಹೇಳುವಾಗ ಸೌಂದರ್ಯ ಮತ್ತು ಲಾವಣ್ಯಗಳ ವಿಷಯವೂ ನಿರೂಪಿತವಾಗಿದೆ (ಸೌಂದಸ. ೧೨೬). [ಪರಸ್ಪರ+ಸಂಬಂಧ]

ಪರಸ್ಪರಸಾಮ್ಯ (ನಾ). ಒಂದಕ್ಕೊಂದಕ್ಕೆ ಇರುವ ಹೋಲಿಕೆ : ಪರಸ್ಪರ ಸಾಮ್ಯ ಕಂಡುಬಂದ ಮಾತ್ರಕ್ಕೆ ಅವುಗಳಿಗೆ ಸಂಬಂಧವೂ ಇದೆಯೆಂದು ಅರ್ಥವಲ್ಲ (ದ್ರಾವಿವಿ. ೩೮). [ಪರಸ್ಪರ+ಸಾಮ್ಯ]

ಪರಸ್ಪರೋದೀರಿತ (ಗು). ೧. ಒಬ್ಬರಿಗೊಬ್ಬರು ಹೇಳಿದ,—ನುಡಿದ. (ನಾ). ೨. [ಜೈನ] (ನಾರಕರು ಒಬ್ಬರಿಗೊಬ್ಬರು ಕೊಡುವ) ಐದು ಬಗೆಯ ದುಃಖಗಳಲ್ಲಿ ಒಂದು : ಅಂತು ಶಾರೀರ ಮಾನಸ ಕ್ಷೇತ್ರಜ ಪರಸ್ಪರೋದೀರಿತ ದನುಜೋದೀರಿತಂಗಳೆಂಬಯ್ದುಂ ತೆಱದ ದುಃಖಂಗಳಿಂದರ್ ನಿಮಿಷಮಾತ್ರಮುಪ್ಪೊದಮುಸಿರ್ ಪೊತ್ತಂ ಪಡೆಯದೆ (ಆದಿಪು. ೫–೮೮ ಸ); ಶಾರೀರಂ ಮಾನಸಂ ಕ್ಷೇತ್ರಜಂ ಪರಸ್ಪರೋದೀರಿತಂ ಸಂಕ್ಲಿಷ್ಟಾಸುರೋದೀರಿತಂಗಳೆಂಬ ಪಂಚಪ್ರಕಾರದುಃಖಂಗಳನನೇಕ ಪ್ರಕಾರದಿನನುಭವಿಸುತ್ತಂ (ಸುಕುಮಾ. ೧೧–೪೬ ಪ).

[ಪರಸ್ಪರ + ಉದೀರಿತ]

ಪರಸ್ಮೈಪದ (ನಾ). [ವ್ಯಾಕ] ಇನ್ನೊಬ್ಬನನ್ನು ಉದ್ದೇಶಿಸಿ ಉಪಯೋಗಿಸುವ ಪದ; ಮಾಡುವ ಕ್ರಿಯೆಯ ಫಲವು ಇತರರಿಗೆ ಸೇರಿದುದೆಂದು ಹೇಳುವ ಪದ. 'ಆತ್ಮನೇಪದ' ನೋ. [ಸಂ.]

ಪರಸ್ವ (ನಾ). ಬೇರೆಯವರ ಸೊತ್ತು ; ಅನ್ಯರ ಸಂಪತ್ತು : ಪರಸ್ವವನ್ನಪಹರಿಸುವುದಕ್ಕೆ ಹೋಗುವುದು ಅಪಾಯ (ಅರ್ಥಧ. ೩೭).

[ಸಂ.]

ಪರಸ್ವತ್ತು (ನಾ). = ಪರಸ್ವ : ಅದು ಎಷ್ಟು ಅಲ್ಪವಾದರೂ ಪರಸ್ವತ್ತಲ್ಲವೆ? (ತೀಚಿಂ. IV, ೨೪). [ಪರ್ಯ + ಸ್ವತ್ತು೩]

ಪರಹಸ್ತ (ನಾ). ಬೇರೆಯವರ ಕೈ ; ಮತ್ತೊಬ್ಬರ ಹಸ್ತ : (ಕ).

[ಪರ್ಯ + ಹಸ್ತ]

ಪರಹಸ್ತ (ನಾ). ೧. = ಪರಹತ್ತ : ಇದು ಪರಹಸ್ತವನ್ನು ಸೇರಿದ್ದರೆ ದುಃಖಪಡಿಸತಕ್ಕುದಾಗುತ್ತಿತ್ತು (ಶಾಕುಂತ. ೮೬-೧೬). ೨. (ಆಲಂ) ಮತ್ತೊಬ್ಬರ ಕ್ರಿಯೆ,—ಕೆಲಸ : ಕದನದಲಿ ಕಯ್ಯಾರೆ ದೈತ್ಯರ ಸದೆದು ಭೂಭಾರವನು ಪರಹಸ್ತದಲಿ ಕಟ್ಟಿಸಿ . . . ಪಯಣವ ಮಾಡಿದನು ಮುರವೈರಿ ನಿಜಪುಂಗೆ (ಕುಮಾರ್ಗ. ೧೩-೧೩). [ಪರ$_3$ + ಹಸ್ತ]

ಪರಹಿಂಸೆ (ನಾ). ಇನ್ನೊಬ್ಬರನ್ನು ನೋಯಿಸುವುದು ; ಬೇರೆಯವರನ್ನು ಕಾಡುವುದು : ವೀರಶೈವನಾದಡೆ . . . ಎಂತೂ ಪರಹಿಂಸೆಯನೆಸಗದಿರಬೇಕು (ಚೆನ್ನವ. ಕ. ೧೦೬-೨೩೯) ; ಕೊಲುವುದೇ ನೊಂದರಿದೆ ಟಿಕ್ಕರಿಗಳೆವುದೇ ಪರಹಿಂಸೆ ಲೋಗರ ಹಳಿವುದೇ ವಧೆ ಶಸ್ತ್ರವಧೆ ವಧೆಯಲ್ಲ (ಕುಮಾರ್ಕ. ೧೬-೨೬). [ಪರ$_3$ + ಹಿಂಸೆ]

ಪರಹಿತ (ಗು): ೧. ಉಪಕಾರ ಬುದ್ಧಿಯುಳ್ಳ ; ಸ್ನೇಹಪರವಾದ. (ನಾ). ೨. ಬೇರೆಯವರಿಗೆ ನೆಮ್ಮದಿಯನ್ನುಂಟುಮಾಡುವುದು ; ಪರೋಪಕಾರ : ನರಮಹಿತಾ ನಿನಗೇನಹಿತರುಮೊಳರೇ ಸತತ ಪರಹಿತಾಚಾರಪರಾ (ಕವಿರಾ. ೧-೮೨); ಪರಹಿತಮಿದಾತ್ಮಹಿತಮೆಂಬೆರಡು ಮನುಟುಂಬಟಲನೆಮಗೆ ಮಾಡಿದವಂ ನಿತ್ತರಿಸಂ (ಕಾವಂಉ. ೪೮೪) ; ಪುರು[ಷಾ]ರ್ತ್ಥದ ನೆಲೆ ಸತ್ಯದ ಕರು ಪರಹಿತಲಕ್ಷ್ಮಿಗಿಕ್ಕೆದಾಣಂ (ಸೌಇಇ. XX, ೬೬-೨೬ ; 1118) ; ಪರಹಿತದೆ ನೆಗೆಟ್ಟೆ ನಾನಿಂ ಪರತ್ರೈಯಂ ಪಡೆವೆನೆಂಬ ಮುನಿಪಾ (ಜೀವಸಂ. ೩೫-೧೬) ; ಪರಹಿತದೊಳ್ ನಯಕ್ರಮದೊಳ್ . . . ನಿನಗಾರ್ ದೊರೆ (ಪುಷ್ಪಪು. ೧-೮೦) ; ಪರಹಿತಮಾಡಿ ತನ್ನ ಹಿತ ತಪ್ಪಿಸಿಕೊಂಡ (ಗಾದೆ). ೩. ಬೇರೆಯವರಿಗೆ ನೆಮ್ಮದಿಯನ್ನುಂಟುಮಾಡುವವನು ; ಇತರರಿಗೆ ಸೌಖ್ಯ ನೀಡುವವನು ; ಪರೋಪಕಾರಿ : ಪರಹಿತನೆಂಬ ಸತ್ಯನಿಧಿಯೆಂಬ . . . ಗುಣಿಯೆಂಬ ಪೆಱರ್ನರರಾರ್ ಧರಿತ್ರಿಯೋಳ್ (ಮದತಿ. ೧-೪೭) ; ಪರಹಿತರಿಲ್ಲ ಧರ್ಮಪರರಿಲ್ಲ ದಯಾನ್ವಿತರಿಲ್ಲ ಮರ್ತ್ಯರೊಳ್ (ಧರ್ಮಾಮೃ. ೧೪-೧೪೫) ; ಪರಹಿತರೊಲ್ದು . . . ಸಂವರಿಸಿದ ಜೀವನೋಚಿತಧನಂಗಳ ನೀಟ್ಟುಳಿಗೊಳ್ಳ ತೀವ್ರನಪ್ಪರಸನ ಮಾಟಕ್ಕೆಯಿಂದಮೆ (ಪಾರ್ಶ್ವಪು. ೧೧-೬) ; ವೇದವಿದಂ . . . ಅಶೀರ್ವಾದಪರಂ ಪರಹಿತಂ ಪುರೋಹಿತನಕ್ಕುಂ (ಶಮದ. ೧೦೫ ಪ್ರಯೋ). [ಸಂ.]

ಪರಹಿತಚರಿತ (ನಾ). ಪರೋಪಕಾರವೇ ಸ್ವಭಾವವಾಗಿರುವವನು; ಇತರರಿಗೆ ನೆಮ್ಮದಿಯನ್ನುಂಟುಮಾಡುವುದೇ ತನ್ನ ಶೀಲವಾಗಿರುವವನು ; ಪರೋಪಕಾರಿ : ಪರಹಿತಚರಿತಂ . . . ವೈದ್ಯಾಂಬುರಾಸಿ ಕುಳತಿಳಕನೆನಿಸಿದಂ ಬಿಬ್ಬಣ್ಣಂ (ಸೌಇಇ. XI-ii, ೧೨೧-೧೫ ; 1072) ; ವರಗುಣಭರಿತಂ ಪರಹಿತಚರಿತಂ ಬೆಳ್ವಲದ ನೆಗಳ್ದ ದಂಡಾಧೀಶಂ (ಕಇಅ. ೭೪-೧೨-೨೪ ; 1170) ; ಪರಹಿತಚರಿತಂಗೆ ಜಗದ್ಬೆರುಗೆ . . . ಮುಳಿದೆಯ್ದೆ ಖಳಂ (ಪಾರ್ಶ್ವಪು. ೧೫-೧೨೫). [ಪರಹಿತ + ಚರಿತ]

ಪರಹಿತವ್ಯಸನಿ(ನಾ). ಪರೋಪಕಾರದಲ್ಲಿಯೇ ಆಸಕ್ತನಾದವನು: ಪರಹಿತವ್ಯಸನಿಗಳಲ್ಲದೆ ದುರ್ವ್ಯಸನಿಗಳಲ್ಲ (ಅಜಿಪು. ೧-೨೧ ಪ).

[ಪರಹಿತ+ವ್ಯಸನಿ]

ಪರಹಿತಾರ್ಥ (ನಾ). ಪರೋಪಕಾರದ ಉದ್ದೇಶ ; ಬೇರೆಯವರ ನೆಮ್ಮದಿಯ ಕಾರಣ,—ಗುರಿ : ಪರಹಿತಾರ್ಥಕೆ ಯನ್ನ ಕೋಮಲ ಶರೀರ ಶಿವನಾಕ್ಷಿಗಾಹುತಿಯಾದೊಡಾಗಲಿ (ನವನೀ. ೫-೩೫).

[ಪರಹಿತ + ಅರ್ಥ]

ಪರಹೆಣ್ಣು 'ಪರವೆಣ್' ನೋ.

ಪರಹೊನ್ನು (ನಾ). = ಪರವಿತ್ತ : ಪರಹೆಣ್ಣು ಪರಹೊನ್ನು ಕರಗತವಾಯ್ತೆಂದು ಪರಲೋಕ ಭಯ ಬಿಟ್ಟು ತಿರುಗುವನ(ಪುರಂದ.೧-೧೫೩-೨).

[ಪರ$_3$ + ಹೊನ್ನು$_1$ (<ಪೊನ್)]

ಪರಳ್ 'ಪರಲ್' ನೋ.

△ **ಪರಳಿಗ** 'ಹರಳಿಗ' ನೋ.

ಪರಳು 'ಪರಲ್' ನೋ.

ಪರಳುಗಲ್ಲು 'ಪರಳ್ಗಲ್ಲು' ನೋ.

ಪರಳುಗಾಯಿ 'ಪರಳ್ಗಾಯಿ' ನೋ.

ಪರಳುನೆಲ (ನಾ). ನೊರಜಿನಿಂದ ತುಂಬಿ ಬಿರುಸಾಗಿರುವ ನೆಲ : ನಡುಮನೆಯ ಪರಳುನೆಲ ಮೈಯೊಳೊತ್ತಿ ನಿದ್ರೆಯ ಕೆಡಿಸಿತು (ತುರಂಗ. ೬-೨೮). [ಪರಳು(<ಪರಲ್)+ನೆಲ]

ಪರಳುಮೊಲೆ 'ಪರಲ್ಮೊಲೆ' ನೋ.

ಪರಳೊತ್ತು 'ಪರಲೊತ್ತು' ನೋ.

ಪರಳೋಲೆ, ಹರಳೋಲೆ (ನಾ). ರತ್ನಗಳಿಂದ ಮಾಡಿದ ಕಿವಿಯ ಆಭರಣ ; ಹರಳಿನ ಓಲೆ : ಪರಳೋಲೆ ಕಂಗೊಳಿಸಿದುವು ಕರ್ಣದಲಿ (ಕಂನವಿ. ೨೪-೩೬). **ಹರಳೋಲೆ :** ಹರಳೋಲೆ ಮಕರಿಕಾಪತ್ರ ಮೂಕುತಿ ಸಣ್ಣಗೆರೆಯ ತಿಲಕ ಚವಿಚವಿಸೆ (ಭರತ. ೪೦-೫೩) ; ಹರಳೋಲೆ ಕುಣಿಯಲು ಜಡೆ ಬೆನ್ನನಲೆಯಲು (ಕಂನವಿ. ೬-೧೨೩) ; ಹರಳೋಲೆಯನ್ನು ಧರಿಸಿರುವ . . . ನೀನು ಯಾರ ಮಗಳು (ಕೃಷಾಅ. ೧೨೦).

[ಪರಳು (<ಪರಲ್)+ಓಲೆ]

ಪರಳ್ಗಲ್ಲು, ಪರಳುಗಲ್ಲು, ಪಳಗಲು, ಹರಳುಕಲ್ಲು, ಹರಳುಗಲ್ಲು (ನಾ). ೧. ಕಲ್ಲಿನ ಚೂರು ; ಚೂರುಗಲ್ಲು : ಭೀಮಾರಣ್ಯದೊಳು ಪರಳ್ಗಲ್ಲು ಮುಳ್ಳು ಬಿಸಿಲೊಳ್ಮೈಯ್ದು ಬಟ್ಟೆಯೊಳ್ ಬಜಿಗಾಲಿಂ ಚರಿಸುವರವರು (ಶಾಂತೀಚ. ೪-೨೩). **ಪರಳುಗಲ್ಲು :** ೧. ಮೊನೆಗಲ್ಲು ಗುಂಡುಗಲ್ಲುಗಳರೆಗಲ್ಲುಗಳ್ ಘನವಾದ ಪರಳುಗಲ್ಲುಗಳು . . . ವನಮಾರ್ಗವ ತುಂಬಿಹುವು (ಕಂನವಿ. ೧೮-೪೪). **ಪಳಗಲು :** ೨. ಕಲ್ಲು ತುಂಬಿದ ಭೂಮಿ ; ಹರಳು ಭೂಮಿ (?) : ಶ್ರೀಮನ್ನಾರ್ಗ್ಗಾವುಣ್ಡಂ ಚಾವುಣ್ಡಗಾವುಣ್ಡಂ ಮುಗುನ್ದದೊಳು . . . ಶ್ರೀಮತ್ಪಿರಿಯ ಗೋವರ್ಧನದೇವರ ಕಾಲಂ ಕಟ್ಟಿಸಿ ಗರ್ದ್ದೆಯುಂ ಪಳಗಲುಮಂ ಬಿಟ್ಟಂ (ಸೌಇಇ. XI-i, ೬೮-೪೯ ; 1045); ℙ ಇದು 'ಪರಳುಗಲ್ಲು' ಎಂಬುದರ ಅಪಲಿಖಿತ ವಿರಬಹುದು. **ಹರಳುಕಲ್ಲು :** ೩. ಬೆಲೆಬಾಳುವ ಮಣಿ,—ರತ್ನ : ಚನ್ನ ಬೆಳ್ಳಿ ಮುಂತಾದವುಗಳಂತೆ ಕೆಲವು ಅಮೂಲ್ಯವಾದ ಹರಳುಕಲ್ಲುಗಳು ಕಣಗಳಲ್ಲಿ ದೊರೆಯುತ್ತವೆ (ಮುಂಬಯಿ. ೪-೧೬೯). **ಹರಳುಗಲ್ಲು :** ೧. ಬಹಳ ಆಳವಾದ ಅದರ ಪಾತ್ರದಲ್ಲಿದ್ದ ಹರಳುಗಲ್ಲುಗಳು ಸಹ ಆಲ್ಲಾಡದೆ, ಇದ್ದ ಸ್ಥಳದಲ್ಲಿ ತೃಪ್ತಿಯಿಂದ ನಿಂತು ಮುತ್ತಿನಂತೆ ಹೊಳೆಯುತ್ತಿದ್ದುವು (ಯೋಧಪು. ೪೩) ; ಹರಳುಗಲ್ಲಿನ ಮೇಲೆ ಹರಿದಂತೆ ಹಿಮಗಡ್ಡೆಯ ಮೇಲೆ ರಟರಟನೆ ಸದ್ದು ಮಾಡುತ್ತ ಮೂರು ಕುದುರೆಯ ಗಾಡಿಯೊಂದು . . . ಬಂದು ನಿಂತಿತು (ಪುಸರು. ೫೫೫).

[ಪರಳ್ (<ಪರಲ್) + ಕಲ್ಲು(<ಕಲ್$_3$)]

ಪರಳ್ಗಾಯಿ, ಪರಳುಗಾಯಿ (ನಾ). ಹೀಚು ; ಮಿಡಿ ; ಕಸುಗಾಯಿ : ಬನದೊಳು ಹಿಮವೆಂಬ ಚೋರ ಮೈದೋಜೆ ಪಾದಪಲಕ್ಷ್ಮಿ ಬೆದಜಿ ಸೂಜೆ ಗೊಟ್ಟಂದದೆ ಪರಳ್ಗಾಯಿ ಮುಂತಾದ ತಾಜಕಿ ನೆಲಕುದುರಿದುವು (ಪೋಪತ. ೪-೪೩). **ಪರಳುಗಾಯಿ :** "ಮಿಡಿಯೆಂದೊಡೆ ಪರಳುಗಾಯಿ" (ಭಾರನಿ. ೬೬).

[ಪರಳ್ (<ಪರಲ್) + ಕಾಯಿ$_4$ (<ಕಾಯ್$_4$)]

ಪರಳ್ಮೊಲೆ 'ಪರಲ್ಮೊಲೆ' ನೋ.

ಪರಾಂಗನಾವಿರತಿವ್ರತ (ನಾ). ಅನ್ಯಸ್ತ್ರೀಯರ ಬಗ್ಗೆ ಆಸಕ್ತಿಯನ್ನು ತಳೆಯದಿರುವ ನೋಂಪಿ,—ನಿಯಮ : ಶೋಕಂಗೆಯ್ದು ಸೀತೆಯಂ ದಶಾಸ್ಯನನಂತವೀರ್ಯಕೇವಲಿಗಳ ಚರಣೋಪಾಂತದೊಳ್

ಕೈಕೊಂಡ ಪರಾಂಗನಾವಿರತಿವ್ರತದ ಭಂಗಮಂ ಬಗೆಯದುಯ್ದಂ (ಪಂಂಪಾಮಾ. ೯-೧೧೩ ಪ). [ಸಂ.]

ಪರಾಂಗನೆ (ನಾ). ೧. ಬೇರೆಯ ಹೆಂಗಸು ; ಅನ್ಯಸ್ತ್ರೀ : ಪುಸಿಯುದುದು ಪರಾಂಗನೆಗಾಟಸದುದು . . . ಧರ್ಮಮದಱ ತಡೆವುದಧರ್ಮಂ (ಆದಿಪು. ೫-೭೯) ; ನಿಮ್ಮಲ್ಲಿ ಶ್ರೀಯ ಬೇಡುವೆನೆ ಪರಾಂಗನೆಯ ಪಾಪ (ಸಮಾಪ. ೯-೩೩). ೨. ಕೈವಲ್ಯವೆಂಬ ಸ್ತ್ರೀ : ತಂದೆ ಮಕ್ಕಳಿಬ್ಬರೂ ಪರಾಂಗನೆಯ ನೆರೆದು ಪರಾಪರವಸ್ತುವಾದುದನೇನೆಂಬೆನಯ್ಯ (ಸಿದ್ಧೇಶ. ೩೬-೯೫). ೧, ೨ : ಪರಾಂಗನೆಗೆ ಮೆಯ್ದೊಟ್ಟರ್ಮಮತ್ಕಂಶಸಚ್ಚರಿತರ್ . . . ತಾಪಸರೆನಲ್ಕೇನೆಂಬೆನಾಶ್ಚರ್ಯಮಂ (ತ್ರಿಪುವಿ. ೧-೫೫).

ಪರಾಂಗನಾಪುತ್ರಕ=ಅನ್ಯಸ್ತ್ರೀಯರಿಗೆ ಮಗನಂತಿರುವವನು ; ಅನ್ಯಸ್ತ್ರೀಯರಿಗೆ ಮಗನಂತೆ ವರ್ತಿಸುವವನು ; ಒಂದು ಬಿರುದು: ಗೋತ್ರವಿಧೂಷಣಂ ಪರಾಂಗನಾಪುತ್ರಕಂ . . . ಶ್ರೀಮದಂತಃಪುರವರ್ಗ್ಗಡೆ ದಂಡನಾಯಕಂ (ಸೌಇಇ. XX, ೬೪-೫ ; 1100). [ಪರ್ಯ+ಅಂಗನೆ]

ಪರಾಂಬರಿಕೆ 'ಪರಾಮರಿಕೆ' ನೋ.

ಪರಾಂಬರಿಸು 'ಪರಾಮರಿಸು' ನೋ.

ಪರಾಕ (ನಾ). ೧. (ಯಜ್ಞ ಯಾಗಾದಿಗಳಲ್ಲಿ ಉಪಯೋಗಿಸುವ, ಒಂದು ಬಗೆಯ)ಕತ್ತಿ. ೨. ಒಂದು ಬಗೆಯ ಉಪವಾಸ ವ್ರತ ; ಮೈಮರೆಯದೆ ಹನ್ನೆರಡು ದಿವಸಗಳು ಮಾಡುವ ಪ್ರಾಯಶ್ಚಿತ್ತ ರೂಪವಾದ ಉಪವಾಸವ್ರತ : 'ಪರಾಕಕೃಚ್ಛ್ರ' ಪರಾ. ೩. ದೂರ. ೪. ಒಂದು ಬಗೆಯ ರೋಗ. [ಸಂ.]

ಪರಾಕಕೃಚ್ಛ್ರ (ನಾ). =ಪರಾಕ ೨ : ಮಹಾಕಷ್ಟಂಗಳಾದ ತಪ್ತಕೃಚ್ಛ್ರ . . . ಪರಾಕ [ಸಾಕಾಂ. ಪರಾ, ಪರಾಕಾ] ಕೃಚ್ಛ್ರ ದೇವಕೃಚ್ಛ್ರ ಯಾವಕಕೃಚ್ಛ್ರಾದಿ ಕೃಚ್ಛ್ರಂಗಳಿಂ ಪಕ್ಷ ಮಾಸಾದಿಗಳಲ್ಲಿ ಅನ್ನಮಂ ಪೆಚ್ಚಿಸಿ ತಗ್ಗಿಸಿಕೊಂಬುದು ಮೊದಲಾದುದೇ . . . ತಪವೆನಿಸುವುದು (ವಿವೇಕ. ೧೨೨). [ಪರಾಕ+ಕೃಚ್ಛ್ರ]

ಪರಾಕಾಷ್ಠ (ನಾ). ಪರಮಾವಧಿ ; ತುತ್ತತುದಿ : ಹೀಗೆ ವಿದ್ಯಾವಿಷಯಕವಾದ ಪ್ರೇಮವು ಅದರ ಪರಾಕಾಷ್ಠ ಸ್ಥಿತಿಯನ್ನು ಮುಟ್ಟುವಂತೆ ಮಾಡಿಕೊಳ್ಳುವುದಕ್ಕೆ ಪ್ರತಿಯೊಬ್ಬನೂ ಆದಷ್ಟು ಹೆಣಗಬೇಕು (ನೀಗಟ್ಟು. ೭೯). [ಸಂ. ಪರಾಕಾಷ್ಠಾ]

ಪರಾಕಾಷ್ಠತೆ (ನಾ). =ಪರಾಕಾಷ್ಠ : ಇದೂ ಅಜ್ಞಾನದ ಪರಾಕಾಷ್ಠತೆಯೇ (ಜೀವಾತ್ಮ. ೧೦೬); ನಾಗರೀಕತೆಯ ಪರಾಕಾಷ್ಠತೆಯಲ್ಲಿದ್ದೆವು ನಾವು (ಸ್ವಾಮಿಸ್ನೇ. ೧೧೨). [ಸಂ. ಪರಾಕಾಷ್ಠತಾ]

ಪರಾಕಾಷ್ಠೆ (ನಾ). =ಪರಾಕಾಷ್ಠ : ಪರತೋಷ ಪರಾಕಾಷ್ಠೆಯೊಳ್ ನಿಷ್ಠಿತಾತ್ಮನಾಗುತ್ತುಂ (ಪುಷ್ಪಾ. ೧೦-೨೧ ಪ) ; ದೋಷದ ಪರಾಕಾಷ್ಠೆಯಿಂದ ಗುಣದ ಪರಾಕಾಷ್ಠೆಯು ಜನಿಸುವುದು (ಗುರುಚಿ. ೯೪); ಈ ಕಣ್ಗೇರಿನಿಂದ ಅವನ ಆನಂದ ಪರಾಕಾಷ್ಠೆಯನ್ನು ಮುಟ್ಟುತ್ತಿತ್ತು (ಪುನರು. ೩೪೬). [ಸಂ. ಪರಾಕಾಷ್ಠಾ]

ಪರಾಕಿ (ನಾ). ಹನ್ನೆರಡು ದಿನ ಉಪವಾಸ ಮಾಡುವ ವ್ರತವನ್ನಾಚರಿಸುವ ವ್ಯಕ್ತಿ ; ಪರಾಕ ಕೃಚ್ಛ್ರವನ್ನು ಹಿಡಿದ ವ್ಯಕ್ತಿ : ಅಶನವ ಬಿಟ್ಟರೇನೋ ಪರಾಕಿಯಂತೆ ವಿಷಯವ ಬಿಟ್ಟರೇನೊ ಅಶಕ್ತ ನಪುಂಸಕನಂತೆ (ಉರಿಜೆ. ೧೨೨-೧೧೦) ; ಯತಿಗೆ ಪರಾಕಿಯಾಯಿತ್ತು ಮಾಯೆ (ಮಹಾದೇ. ಬ. ೧೫-೨೬); ಇತ್ತೊಡೆ ಬೇಟನಿಯದೊಡೆ ಕಾಟಮದುಂ ಬೆಲೆವೆಣ್ಗೆ ಬಾಯಿಕಂಬತ್ತುವ ಬೇಟಮಂ ಸುಡು ಪರಾಕಿಯ ನೋಂಪಿಯಗಂಡರಿರ್ವರೊಳ್ ಕತ್ತುಂ ಕಪ್ಪುರಂತೊಡಿಗೆ [ನಾಱು]ವದಂಬು ಲವಚ್ಛವಾಸಿಗಂ . . . ಸುಗ್ಗಿಯಲ್ಲವೇ (ಸೂಕ್ತಿಸು. ೮-೩೬೬) ; (ಅನಂಪು. ೮-೪೮ ನೋ). [ಸಂ. ಪರಾಕಿನ್]

ಪರಾಕಿತನ (ನಾ). ಪರಾಕಿಯೆಂಬ ವ್ರತದಲ್ಲಿರುವಿಕೆ ; ಪರಾಕ ಕೃಚ್ಛ್ರದ ವ್ರತಿಯಾಗಿರುವಿಕೆ : ಸುಧಮ್ರಯುಂ ಸುಲಸೆಯರೆಂ ಬರ್ಮಜೆಣ್ಣೂಸುಗಳಾಗಿ ತರ್ಕವ್ಯಾಕರಣಂಗಳೊಳ್ಪರಿಣತೆವೆತ್ತಾ ವಿದ್ಯಾಗರ್ವದಿಂ ಕಿಱುಗೂಸುತನದೊಳ್ ಪರಾಕಿತನಮಂ ಕೈಕೊಂಡಿರುತ್ತಿರಲ್ (ಪುಣ್ಯಾಸ್ರ.೪-೨೯ ಪ). [ಪರಾಕಿ+-ತನ]

ಪರಾಕಿಸು (ಕ್ರಿ). ಕಡೆಗಣಿಸು ; ಉಪೇಕ್ಷಿಸು : ಸಾಕ್ಕೆ ನಿಲ್ಲಿ ನಿಮ್ಮಣ್ಣಂದಿರೀಗೆಮ್ಮ ಹಾಕಿ ಹೋಗುವೆವೆಂದು ನೆನೆದ ಹೋಕೆಯ ಕಂಡುದಿಲ್ಲವೆ ಅವರೆನ್ನ ಪರಾಕಿಸಿ ಹೋಗರೆಯೆಂದ (ಧರಚ. ೪೫-೧೦೪).

[ಪರಾಕು+-ಇಸು$_3$]

ಪರಾಕು (ನಾ). ೧. ಅಲಕ್ಷ್ಯ;ಉಪೇಕ್ಷೆ ; ಉದಾಸೀನತೆ : ಕಾಪುರುಷರೈದಾಱು ಮಂದಿ ಸಮೀಪದಲಿ ಕಾಡುವರು ಎನ್ನನು ನೀ ಪರಾಮರಿಸದೆ ಪರಾಕಾಗಿಹುದು ಲೇಸಲ್ಲ (ಹರಿಸಾ. ೬೪) ; ಓಲಗದೊಳಿರ್ದು ಮದನಂಗೆ ಬಿನ್ನೈಸಲ್ಪರಾಕಾದೊಡಿಂತೆಂದನು (ಜೈಮಿಭಾ.೩೦-೪೬); ಸುಲಿಂಗವ ಧರಿಸುವಾಗ ಪರಾಕುವಾದುದೊ (ಶಂಕದಾ. ೭-೧೪). ೨. ಲಕ್ಷ್ಯ ; ಗಮನ : ಅರಸೆ ನೋಡು ಪರಾಕಿನಲಿ (ಬಿಜ್ಜಳರಾ. ೧೦-೨೦) ; ನುಡಿಯಸೆ ಪರಾಕವಗಸಿ ಮಾತಾಡ ವಂದಿಸನು ಯೋಗ್ಯರಿಗೆ (ಶಂಕದಾ. ೮-೫೬); ಅಂ ಪರಾಕಿನಿಂ ಕೇಳ್ದುದಿಲ್ಲ , ಅದೇನೆಂದಪುದದಂ ಪೇಳ್ಲ್ (ಮಿತ್ರಗೋ. ೨೫) ; ಊರಲ್ಲಿರುವ ಮಕ್ಕಳುಗಳೊಡನೆ ಮಕ್ಕಳಾಟಕೆಯ ಪರಾಕಿನಲ್ಲಿ ವಿದ್ಯಾಭ್ಯಾಸವು ಸಾಗದೆಂದು (ವಚಕಾ. ೬).೩. ಎಚ್ಚರಿಕೆ; ಜಾಗರೂಕತೆ : ಮೆಟ್ಟಲುಗಳು ಇವೆ-ಎಂದು ಪರಾಕು ತಿಳಿಸದಿದ್ದರೆ ಅಪಾಯವಾಗುತ್ತಿತ್ತು (ಕಲಸಿ. ೨೨೪). ೪. ಹೊಗಳಿಕೆ ; ಸ್ತುತಿ : ಜೋಕೆವಿಡಿದು ನೀಡುವೆಳೆಯ ಭಳಿಗೆಯ ಪರಾಕಿನೊಳಗೆ ಕೈಕೊಳುತ (ಧರಚ. ೧-೩೮) ; ಇದು ಭೀಮನ ಪಾಲಿನ ಪರಾಕು (ಯಕ್ಷಬ.೪೫); ಜೈನ ಸಮಾಜದಲ್ಲಿ ಪದ್ಮಾವತಿದೇವಿ ಒಬ್ಬಳು ಆರಾಧ್ಯದೇವತೆ. ಅವಳ ಉತ್ಸವ ಪೂಜೆಗಳಲ್ಲಿಯೂ ವಾಡಿಕೆಯ ಪರಾಕುಗಳ ಪಠಣವಿದೆ (ಜಾನಗೀ. ೧೬). ೫. ಹಿರಿಯರನ್ನು ಸಂಬೋಧಿಸುವಾಗ (ಗಮನ ಸೆಳೆಯಲು) ಉಪಯೋಗಿಸುವ ಶಬ್ದ : ರಾಯ ಪರಾಕೆಂದು ಕೈವಾರಿಸ ತೊಂಡೆವಾಯ ಪಾಕಕಿಯರೊಪ್ಪಿದರು (ವೋಹತ. ೪-೬) ; ಪುರಹರ ಪರಬ್ರಹ್ಮ ಮೂರುತಿ ಪರಾಕು (ಸಂದಿಮಾ. ೫-೪೧); ಕೆಯ್ಯಂ ನೆಗಪಿ ವಂದಿಗಳ್ ಪರಾಕು ಪರಾಕೆಂದು ಬಿರುದಾವಳಿಯನ್ನುಚ್ಚರಿಸುತಿರ್ದರ್ (ಚಿಕ್ಕದೇ. ೧೩೪ ಪ) ; ಇಕ್ಕೆಲದೊಳಂ ಚೆಯ್ಯ ಪರಾಕೆಂದು ನುಡಿದು (ನವಮೋ. ೪-೩೮). ೬. ಮೈಮರೆವು; ಅಜಾಗರೂಕತೆ :(ಕ).

ಪರಾಕು ಮಾಡು=ಪರಾಕಿಸು : ಪರಾಕು ಮಾಡದೆ ಪರಾಂಬರಿಸಿ ಎನ್ನ ಅಪರಾಧಂಗಳ ಕ್ಷಮಿಸೋ (ಪುರಂದ.೧-೬೩ ಪಲ್ಲವಿ); ಬೇಕಾದರಾಲಿಸುವುದು ಬೇಡವಾಗೆ ಪರಾಕು ಮಾಡುವುದು (ಧರಚ. ೮೦-೧೧೬); ವಾಳು ಕೇಳು ಪರಾಕು ಮಾಡದೆ (ವಿದಾಕೃ. ೪೭ ಪಲ್ಲವಿ). ಪರಾಕು ಹೇಳು, ಪರಾಕ್ ಹೇಳು='ಪರಾಕು' ಎಂದು ಉಗ್ಗಡಿಸು : ಅರಸರು ನಾಟ್ಯಭವನಕ್ಕೆ ಬರುತ್ತಿದ್ದಾರೆಂಬುದನ್ನು ವಂದಿಮಾಗಧರು ಸಾರುತ್ತ ಮುಂದೆ ಮುಂದೆ ಪರಾಕು ಹೇಳುತ್ತ ನಡೆದಿದ್ದರು (ಕುಂಕುಮ. ೬೪); ಕೀರ್ತನೆಯ ಸ್ವಾರಸ್ಯಕ್ಕೆ ಭಂಗ ಬರಬಹುದೆಂದು ವಂದಿಮಾಗಧರು ಪರಾಕು ಹೇಳಲಿಲ್ಲ (ಶ್ರೀರಂಗಾಯ. ೬೨) ; ನಿಶೆವೆಣ್ಣಿಗೆ ಪರಾಕ್ ಹೇಳುತ್ತಾ ಬರುತ್ತಿರುವ ಆ ಹಿಂದು ಯಾವ ಪ್ರಾಣಿಗಳದು? (ನಿಶಿಳು. ೧೬).

[<ಸಂ. ಪರಾಂಜ್/ತಮಿ. ಪರಾಕ್ಕು ; ತುಳು. ಪರಾಕು, ಪರಾಕೆ; ತೆಲು. ಪರಾಕು]

ಪರಾಕ್ರಮ (ನಾ). ೧. ದಂಡೆತ್ತಿ ಹೋಗುವುದು ; ಮೇಲೆ ಬೀಳುವುದು; ಆಕ್ರಮಣ.೨.ಶೌರ್ಯ; ಕಲಿತನ: "ಸಾಹಸಂ ದಲವದಾನಂ

ವಿಕ್ರಾಂತಂ ಪರಾಕ್ರಮಂ . . . ವೀರ್ಯಂ"(ಪಸ್ತು ಕೋ. ೧೧೨-೮); ಅಯನಯ ಪರಾಕ್ರಮೋಪಾಶ್ರಯಂಗಳಂ ಶ್ರೀಗಡಪ್ಪು ಮಾಡಿದ ನಿನ್ನಿಂದ್ರಿಯ ಜಯಮೆ ಕೂಡೆ ಲೋಕತ್ರಯದಿಂ ಪೊಗಟಿಸಿದುದು (ಪಂಪಭಾ.೯-೩೫); ಕಡು ಪರಾಕ್ರಮ ಪಿತ್ತ ನೆತ್ತಿಯ ಹಿಡಿದು ನೀ ಗಳಹಿದರೆ(ಕುವ್ಯಾಳ. ೯-೧೧). ೩. ಶ್ರಮ ; ಪ್ರಯತ್ನ; ಉದ್ಯಮ : (ಪ). ೪. ಶೌರ್ಯವುಳ್ಳವನು ; ಬಲಶಾಲಿ ; ಪರಾಕ್ರಮಿ : ಉರ್ಬ್ಬಿಯೊಳ್ಸಕಲಮೊಕ್ಕರ್ಬ್ಬನೆ ಗಣ್ಡ ಶ್ರೀಚನ್ದ್ರಮನೆನ್ದು ಮೊಳ್ಪಿಡೆಯವ್ ಗೊನ್ದಿಸುತಂ ಪರಾಕ್ರಮನ್ (ಎಇ. XXIV, ೩೬-೭ ; ಸು. 885).

ಪರಾಕ್ರಮಧನ = ಶೌರ್ಯವೇ ಧನವಾದವನು; ಬಹಳ ಶೂರ; ಒಂದು ಬಿರುದು : ರಿಪುಕುಳಪರ್ಬ್ಬತ ಕುಳಿಶಾಯುಧಂ ಪರಾಕ್ರಮಧನನೋ ನೂರ್ಬ್ಬರ ಸಂಸಾರಂ ಸಳಕೊರ್ಬ್ಬರೆಯೊಳ್ ಚಟ್ಟಸಿಟ್ಟ ಬೀರರ ಬೀರಂ (ಕೊಲ್ಹಾ ಶಾ. ೮-೫೮ ; 1147). ಪರಾಕ್ರಮ ಧವಳ = ಶೌರ್ಯದಿಂದ ಪ್ರಸಿದ್ಧನಾದವನು ; ಕೀರ್ತಿಹೊಂದಿದವನು ; ಒಂದು ಬಿರುದು : ಶ್ರೀಗೆ ಫಳಂ ಬಾಗಂ ವಾಳ್ ಶ್ರೀಗೆ ಫಳಂ ಸರ್ವಶಾಸ್ತ್ರ ಪರಿಣತ . . . ಎಂದಿಂತಾಗಳುಮುಚಿತವಿಸಗಿದಂ ಪರಾಕ್ರಮಧವಳಂ (ಪಂಪಭಾ. ೬-೧); ಆತನ ತತ್ಪುತ್ರಂ ನುಡಿದಂತೆ ಗಂಡ ಪರಾಕ್ರಮಧವಳಂ . . . ಮಹಾಸಾಮನ್ತಂ ಹುಳ್ಳೆಯ ನಾಯಕಂ (ಎಇ.VII (R), ನಾಗಮು. ೧೩೨-೪೬ ;ಸು. 1179). [ಸಂ.]

ಪರಾಕ್ರಮಣ (ನಾ). ಶತ್ರುಗಳ ದಾಳಿ ; ಅನ್ಯರ ಮುತ್ತಿಗೆ : ಪರಾಕ್ರಮಣ ತಪ್ಪು ಮಾಡಿ ಸಕಲ ಸಂಕ್ರಮಣಗಳಿಗೂ ವಿದ್ಯಾಕ್ಷೇತ್ರವನ್ನು ಹದಮಾಡುವದು ಜಿಗುಟು ಶ್ರದ್ಧೆಯ ಕಾರ್ಯ (ನೆಲಮು. VI, ಮುನ್ನುಡಿ) ; ಕನ್ನಡದೇಶ ತನ್ನ ಭಾಷೆಯ ಮೇಲಿದ್ದ ಪರಾಕ್ರಮಣವನ್ನು ಬಿಡಿಸಿಕೊಂಡು ಬೆಳೆಯಬೇಕು (ಸೌಂದಸ. ೩೬೪). [ಪರ್ಯ+ಆಕ್ರಮಣ]

ಪರಾಕ್ರಮಭೀಮ (ನಾ). ಶೌರ್ಯದಲ್ಲಿ ಭೀಮನಂತಿರುವವನು ; ಮಹಾ ಪರಾಕ್ರಮಶಾಲಿ ; ಒಂದು ಬಿರುದು : ಶ್ರೀ ಮೈಳಾರ ಚಮೂಪಂ ಸಾಮಜಂಬಿಪುವಿಕ್ರಸುಂ ಪರಾಕ್ರಮಭೀಮಂ (ಕೊಲ್ಹಾ ಶಾ. ೮-೫೩ ; 1147). [ಪರಾಕ್ರಮ+ಭೀಮ]

ಪರಾಕ್ರಮಶಾಲಿ (ನಾ). = ಪರಾಕ್ರಮಿ : ಯಾವ ಪುರುಷನು ತಾನೇ ನಿಮ್ಮಪ್ಪ ಪರಾಕ್ರಮಶಾಲಿಯಾಗಿರುವನು ? (ದಾಲಚ. ೧೫೯); ರಾಜ ಒಡೆಯರು ಅಪ್ರತಿಮ ಪರಾಕ್ರಮಶಾಲಿಗಳೆಂದು ಪ್ರಸಿದ್ಧಿಗೆ ಬರುತ್ತಿದ್ದರು (ಶ್ರೀರಂಪಾಯ. ೫). [ಸಂ. ಪರಾಕ್ರಮಶಾಲಿನ್]

ಪರಾಕ್ರಮಹೀನ (ನಾ). ಶೌರ್ಯವಿಲ್ಲದವನು ; ಹೇಡಿ : ತವ ಸೂನುವಿನ ಸುಭಟರು ಪರಾಕ್ರಮಹೀನರೇ (ಕುವ್ಯಾದ್ರೋ. ೨-೨೯) ; ನೀನು ಈಗ ನಿಸ್ಸತ್ವನಾಗಿರುವೆ ! ಪರಾಕ್ರಮಹೀನನಾಗಿರುವೆ (ಶ್ರೀರಂಪಾಯ. ೨೯೧). [ಪರಾಕ್ರಮ+ಹೀನ]

ಪರಾಕ್ರಮಿ (ನಾ). ಶೌರ್ಯವುಳ್ಳವನು ; ಕಡುಗಲಿ ; ವೀರ : ರವಿಸುತನಂತೆನೋಲಧಿಕದಾನ ಪರಾಕ್ರಮಿ ಸಿಂಗದಂತೆನೋಲ್ (ಕಪಾದ. ೨೧೪ ಪ್ರಯೋ) ; ಮೇದಿನಿಯೊಳಾರಾದೊಡಂ ಮಿಡುಕುಕೊಡುನ್ನತ ಪರಾಕ್ರಮಿ ತಡೆಯಲಿ ವಾಜಿಯನು (ಜೈಮಿಭಾ. ೨-೨೪) ; ಅವನು ರಾಮನಂತೆ ವೀರ . . . ಅರ್ಜುನನಂತೆ ಪರಾಕ್ರಮಿ ಎಂದವೇ ಕನ್ನಡಿಗರ ಮನೆಮಾತುಗಳು (ನಾಚಿಸ. ೧೫). [ಸಂ. ಪರಾಕ್ರಮಿನ್]

ಪರಾಖ್ಯಾನ (ನಾ). ೧. ಬೇರೆಯವರ ವೃತ್ತಾಂತ. ೨. [ಕಾವ್ಯಮೀಮಾ] ಹೋಲಿಸುವಾಗ ಪರಸ್ಪರ ಸಾಮ್ಯವಿಲ್ಲದ ವಿಶೇಷಣಗಳನ್ನು ಹೇಳುವ ಒಂದು ಅಲಂಕಾರ : ಉಪಮಾನ ಪ್ರತಿಮಸ್ವರೂಪಕ ... ಪರಾಖ್ಯಾನ ... ಎಂದುಪಮಾಭೇದವಿವಕ್ಷಂ (ಕಾವ್ಯಾನ. ೬೬೫). [ಪರ್ಯ+ಆಖ್ಯಾನ]

ಪರಾಗ (ನಾ). ೧. ಹೂವಿನ ಹುಡಿ ; ಪುಷ್ಪಧೂಳಿ : "ಕುಸುಮದ ರಜಂ ಪರಾಗಂ" (ಪಸ್ತು ಕೋ. ೩೧-೧೧) ; ಪರಾಗರಾಗಮುದಿತಾಶಾಭಾಸಮುದ್ಯನ್ಮಧೂನ್ಮದಭೃಂಗಧ್ವನಿ ಮುಂಗಳಧ್ವನಿಯೆನಲ್ ಸಾಲ್ವನ್ನೆಗಂ ತಾನೆ ತಕ್ಕುದು ಕಾಮಂಗೆ ವಿವಾಹದುಂಟಪಮೆನಲ್ಕಾ ಮಾಧವೀ ಮಂಟಪಂ (ಪಂಪಭಾ. ೫-೬) ; ನೂಲ ಪಾಕೂಲಮನುಟ್ಟು ಪರಾಗದ ತಿಲಕವನಿಕ್ಕಿ (ಸಂಬರ. ೧೧-೬೨) ; ನವಪರಾಗದ ತಿಲಕದುಂ ರಚಿಸಿ ಪುಲ್ಲಿಗೆಯ ವಿವಿಧ ಮುಕುಳದ ಕಂಠಮಾಲೆಯುಂ ತಳೆದು . . . ಮುಂಜು ಳಾಂಗಂ ಮೆಱೆದನು (ಚಬಪು. ೩೫-೫) ; ಕೇಸರಗಳು ಪರಾಗವನ್ನು (Pollen-grains) ಕೊಡುತ್ತವೆ (ಸಸ್ಯಶಾ. ೪೯). ೨. ಧೂಳು ; ಪುಡಿ ; ಚೂರ್ಣ : "ರಜದಲ್ಲಿಯುಂ ಪರಾಗಮೆಂಬುದು" (ಪಲಾಯು. ೧೩೫-೨೩). ೩. (ಸ್ನಾನ ಮಾಡಿದ ನಂತರ ಉಪಯೋಗಿಸುವ) ಗಂಧ, ಬುಕ್ಕಿಟ್ಟು ಮುಂತಾದ ಸುಗಂಧದ ಪುಡಿ. ೪. ಚಂದನ. ೫. ಸೂರ್ಯ ಅಥವಾ ಚಂದ್ರಗ್ರಹಣ. ೬. ಕೀರ್ತಿ ; ಖ್ಯಾತಿ. ೭. ಸ್ವಾತಂತ್ರ್ಯ. [ಸಂ.]

ಪರಾಗಕೇಸರ (ನಾ). "ಹೂವಿನ ಗಿಡದ ಪುರುಷಾಂಗ" (ಅನಂನಾ). [ಪರಾಗ+ಕೇಸರ]

ಪರಾಗಕೋಶ (ನಾ). ಹೂವಿನ ಧೂಳಿಯಿರುವ ಕೇಸರಭಾಗ : ಪುಷ್ಪಪೀಠದಿಂದ ಕೋಲಿನಂತೆ ಆರಂಭವಾಗುವ ಭಾಗವೆ ಕೇಸರದಂಡ (Filament). ಇದನ್ನು ಪರಾಗದಂಡವೆಂದೂ ಕರೆಯುವರು. ಅದರ ತುದಿಯಲ್ಲಿ ಎರಡು ಮಡಿಕೆಯಾಕಾರದ ಕೋಶವಿದೆ. ಇದೇ ಪರಾಗಕೋಶ (Anther)(ಸಸ್ಯಶಾ. ೫೮) ; ಪುಷ್ಪಪರಾಗವಿರುವ ಕೇಸರಭಾಗ ; ಪರಾಗ ಕೋಶ (Anther. ಇಂಕಸಿ). [ಪರಾಗ+ಕೋಶ]

ಪರಾಗತಿ (ನಾ). ಹಿಂದಕ್ಕೆ ಹೋಗುವುದು,—ಚಲಿಸುವಿಕೆ : ಪ್ರಗತಿಯಲ್ಲಿಯೇ ಪರಾಗತಿಯ ಕಾಲ್ತೊಡಕೂ ಇದ್ದುಬಿಟ್ಟಿದೆ (ಕರ್ಕಾಪೂ. ೬). [ಸಂ.]

ಪರಾಗಪಾಂಸು (ನಾ). = ಪರಾಗ ೧ : ತಾವರೆಯೊಳ್ಪರಾಗಪಾಂಸುಗ [ಪಾಪಾಂ. ೪೪, ೫೮] ಮೆಳದುಂದಿಗಳ್ಕೊಂಡಿ ವನೊಲ್ಪ ದನೂಪುರಹೇಮ ಕಿಂಕಿಣೀಕಳರವಮುಣ್ಕೆ ಬಾಲೆಯರದೇಂ ಪೊಜಮಟ್ಟರೊ ನಾಟ್ಯಶಾಲೆಯಂ (ಪುಲ್ಲಪು. ೮-೭೦) ; ಕುಸುಮತರುಗಳ್ ಸುರುದಾಹತಿಯಿಂ ಪರಾಗ ಪಾಂಸುಪ್ರಸರಂಬೆರಸರಲಂ ಸುರಿದಪುವು (ಜಗವಿ. ೪-೭೦).

[ಪರಾಗ+ಪಾಂಸು]

ಪರಾಗಸ್ಪರ್ಶ (ನಾ). (ಸಸ್ಯಗಳಲ್ಲಿ) ಗರ್ಭಾಧಾನಕ್ಕೆ, ಹೂವಿನ ಧೂಳಿಯನ್ನು ಶಲಾಕಾಗ್ರದ ಮೇಲೆ ಚಿಮುಕಿಸುವುದು : ಪರಾಗಸ್ಪರ್ಶವೆಂದರೆ ಪರಾಗಕೋಶದಲ್ಲಿ ಉತ್ಪತ್ತಿಯಾದ ಪರಾಗವನ್ನು ಅದೇ ಹೂವಿನ ಶಲಾಕಾಗ್ರದ ಮೇಲಾಗಲಿ ಅಥವಾ ಬೇರೆ ಹೂವಿನ ಶಲಾಕಾಗ್ರದ ಮೇಲಾಗಲಿ ಬೀಳಿಸುವುದು ಎಂದರ್ಥ (ಸಸ್ಯಶಾ. ೬೦) ; ಗಾಳಿ, ಜೀರು ಮತ್ತು ಪ್ರಾಣಿಗಳು—ಈ ಮೂರು ಪ್ರತಿನಿಧಿಗಳಿಂದ ಪರಾಗಸ್ಪರ್ಶವಾಗುವದು (Pollination) (ಸಸ್ಯಶಾ. ೬೦).

[ಪರಾಗ+ಸ್ಪರ್ಶ]

ಪರಾಗ್ರೂಪ (ನಾ). ಹೊರಗೆ ಕಾಣುವ ವಸ್ತು ; ಎದುರಿಗೆ ಬಹಿರಂಗವಾಗಿ ತೋರುವ ಆಕಾರ : ಆತ್ಮನು ಪ್ರತ್ಯಗ್ರೂಪನು ಎಂದರೆ ನಮ್ಮೊಳಗಿನ ಸ್ವರೂಪ; ಅನಾತ್ಮವು ಪರಾಗ್ರೂಪ ಎಂದರೆ ನನಗೆ ಹೊರಗೆ ಎದುರಿಗೆ ತೋರುವ ವಸ್ತು (ಬ್ರಹ್ಮಭಾ. ೨-೧೬) ; ಏಕೋಶ್ಯ ಜೀವನ, ಲಲಿತಕಲೆಗಳು ಪರಾಗ್ರೂಪದಲ್ಲಿ ಅಭಿವ್ಯಕ್ತವಾದರೆ ಭಾರತೀಯ ಜೀವನ ಲಲಿತಕಲೆಗಳು ಪ್ರತ್ಯಕ್ಷ ರೂಪಿನಲ್ಲಿ ಅಭಿವ್ಯಕ್ತವಾಗಿವೆ (ಭಾರದ. ೫೭೬). [ಸಂ.]

ಪರಾಙ್ಮುಖ (ಗು). ೧. ಮುಖವನ್ನು ತಿರುಗಿಸಿದ; ವಿಮುಖವಾದ. ೨. (ಬೆನ್ನು, ಮನಸ್ಸು ಇತ್ಯಾದಿಗಳನ್ನು) ಬೇರೆ ಕಡೆಗೆ ತಿರುಗಿಸಿದ. ೩. ಉಪೇಕ್ಷೆ ಮಾಡಿದ; ಕಡೆಗಣಿಸಿದ: ಹೀನಮುಖ ಬಹುಮುಖ ಪರಾಙ್ಮುಖ . . . ಬಹಿರ್ಮುಖದ ಕಾರ್ಯದಲಿ ಆ ನರೇಂದ್ರನ ವರ್ತನಕೆ ದುಸ್ಥಾನವಾಗದೆ ಬಿಡದು (ಕುಸುಮಾ. ೮-೩೭). ೪. ವಿರೋಧವಾದ; ಪ್ರತಿಕೂಲವಾದ. (ನಾ). ೫. ಹಮ್ಮೆಟ್ಟುವುದು; ಹಿಂದಿರುಗುವಿಕೆ; ವಿಮುಖವಾಗುವುದು: ನಿಜೋಪನ್ಯಸ್ತಮಪ್ಪ ಕಾಪಿಲಸಿದ್ಧಾಂತಮುಮಂ ಯೋಗಶಾಸ್ತ್ರಮುಮಂ ತೋಱ ಲೋಕಮಂ ಸಮ್ಯಗ್‌ಜ್ಞಾನಪರಾಙ್ಮುಖಂ ಮಾಡಿರೆ (ಆದಿಪು. ೯-೧೩೫); ರಾವಣಂ ವಿಘ್ನವಿನಾಯಕಶಾಸ್ತ್ರದಿಂದಿಸುವುದುಮದಂ ಲಕ್ಷ್ಮಣಂ ಸಿದ್ಧಾರ್ಥವಿದ್ಯಾಶಿಲೀಮುಖದಿಂ ಪರಾಙ್ಮುಖಮಾಟ್ಟುದುಂ (ಪಂಚಮಾ. ೧೪-೧೭೨ ಪ). ೬. ವಿಮುಖನಾದವನು: "ಪರಾಙ್ಮುಖಾ, ಪರಾಚೀನಃ—೨ ಅಭಿಮುಖವಾಗದೆ ಹಿಂದೆ ತಿರುಗಿದವನ ಪೆಸರುಗಳು" (ಸಿದ್ಧಾಂತಿ. ೩೩೧); ಅಂತು ವನಿತಾಸುಖಪರಾಙ್ಮುಖಂ ಪೊಱಮ್ಬುಗಳೆವುತ್ತಿರ್ದೊಂದುದಿವಸಂ ಪ್ರಭಾತಸಮಯದೊಳೊಡ್ಡೋಲಗದೊಳೆರೆ (ಕಾದಂಪು. ೨೩); ಮುನ್ನಮೊರ್ಮೆ ದಶಮುಖಂಗೆ ರಣಮುಖದೊಳೆ ದರ್ಪದ ವರುಣನಂ ಪರಾಙ್ಮುಖಂ ಮಾಡಿ ಗೆಲ್ದು ಕುಡೆ (ಪಂಪಾಮಾ. ೧೧-೧೦೩ ಪ); ಬಡತನಗಳಡಸಿದೊಡೆ ಬಂಧುಗಳೆಡಹಿ ಕಾಣರು ಭಂಟ ತಾನಾದೊಡೆಯು ಬಂದಾಪತ್ತಿನೊಳಗೆ ಪರಾಙ್ಮುಖನೆಯಾಗಿ ನುಡಿಸದವನೇ ಹಗೆ (ಕುಮ್ಮಾಉ. ೩-೬೪); ಪುಣ್ಯದ ಆಶೆ, ಪಾಪದ ಅಂಜಿಕೆ ಅವನನ್ನು ನಿಯತಕರ್ಮದಿಂದ ಪರಾಙ್ಮುಖನನ್ನಾಗಿ ಮಾಡಿದೆ (ಭಾರದ. ೧೧೭). ೭. [ನಾಟ್ಯ] ಹಸ್ತಚಲನೆಯ ಉತ್ತಾನ, ಅಧೋಮುಖ, ಪಾರ್ಶ್ವತಳ, ಅಗ್ರತಳ, ಸ್ವಸಮ್ಮುಖತಳ, ಊರ್ಧ್ವಮುಖ, ಅಧೋವದನ, ಪರಾಙ್ಮುಖ, ಸಮ್ಮುಖ, ಪಾರ್ಶ್ವತೋಮುಖ, ಊರ್ಧ್ವಗತಮುಖ, ಅಧೋಗತಮುಖ, ಪಾರ್ಶ್ವಗತ, ಅಗ್ರಗತ, ಸಮ್ಮುಖಾಗತಗಳೆಂಬ ೧೫ ಬಗೆಗಳಲ್ಲಿ ಒಂದು: ಉತ್ತಾನ, ಅಧೋಮುಖ ಪಾರ್ಶ್ವತಳ, ಅಗ್ರತಳ, ಸ್ವಸಮ್ಮುಖತಳ, ಊರ್ಧ್ವಮುಖ, ಅಧೋವದನ, ಪರಾಙ್ಮುಖ . . . ಸಮ್ಮುಖಾಗತ — ಈ ಹದಿನೈದು ಕರತಳ ಭೇದಂಗಳ್ (ಲಾಸ್ಯರಂ. ೪-೪ ಪ). [ಸಂ.]

ಪರಾಙ್ಮುಖತೆ (ನಾ). ೧. ಮುಖವನ್ನು ಬೇರೆ ಕಡೆಗೆ ತಿರುಗಿಸುವುದು; ವಿಮುಖವಾಗುವಿಕೆ. ೨. ಹೇವರಿಕೆ; ಇಷ್ಟವಿಲ್ಲದಿರುವುದು; ಜುಗುಪ್ಸೆ: 'ಧರ್ಮಪರಾಙ್ಮುಖತೆ' ಪರಾ.

[ಸಂ. ಪರಾಙ್ಮುಖತಾ]

ಪರಾಙ್ಮುಖಿಸು (ಕ್ರಿ). ಕಡೆಗಣಿಸು; ಅಲಕ್ಷ್ಯ ಮಾಡು; ತಿರಸ್ಕರಿಸು: ಆ ತೃಷ್ಣೆಗಳನೆಲ್ಲ ವೈರಾಗ್ಯದಿಂ ನಿಷ್ಪಟ ನಿರೋಧಿಸಿ ಪರಾಙ್ಮುಖಿಸಿ ನೀಗಿ ಬಿಸುಟವುಗಳಂ ನೆರೆ ಮುಕ್ತನಹುದೆ ದುಃಖನಿರೋಧವೆಂಬ ಮೂರನೆಯಾರ್ಯಸತ್ಯ (ವೈರಾಶಾ. ೮೪-೫೭೪).

[ಪರಾಙ್ಮುಖ+-ಇಸು$_3$]

ಪರಾಚೀನ (ಗು). ೧. ಬೇರೆಯ ಕಡೆಗೆ ತಿರುಗಿದ; ವಿರುದ್ಧವಾದ ದಿಕ್ಕಿಗೆ ತಿರುಗಿಕೊಂಡ; ವಿಮುಖವಾದ. ೨. ಪಶ್ಚಿಮದೇಶದಲ್ಲಿರುವ. (ನಾ). ೩. ಬೇರೆಯ ಕಡೆಗೆ ತಿರುಗುವುದು; ವಿಮುಖವಾಗುವಿಕೆ: "ವಿಪರೀತಂ, ಪರಾಚೀನಂ—ಈ ೨ ಹಿಂದುಮುಂದಾಗುಹ"(ಪಲಾಯು. ೧೨೫-೬೨); "ವಿಪರೀತಂ ಪರಾಚೀನಮೆಂದೊಡದು ಹಿಂದುಮುಂದೆಂಬುದಕೆ ಪೆಸರೆನಿಕ್ಕುಂ" (ಮಂಗರಾ. ೧೩೦-೧೫). ೪. ವಿಮುಖನಾದವನು: "ಪರಾಙ್ಮುಖಃ, ಪರಾಚೀನಃ—೨ ಅಭಿಮುಖವಾಗದೆ ಹಿಂದೆ ತಿರುಗಿದವನ ಪೆಸರುಗಳು" (ಸಿದ್ಧಾಂತಿ. ೩೩೧). [ಸಂ.]

ಪರಾಜಯ(ನಾ). ಸೋಲು; ಅಪಜಯ: "ಪರಾಜಯಃ, ರಣಭಂಗಃ—ಕಾಳಗದಲ್ಲಿ ಸೋತುಹೋಗುವಿಕೆ" (ಸಿದ್ಧಾಂತಿ. ೨೭೧); ಸಲೆ ಪರಾಜಯ ಜಯವನೀಶ್ವರ ಶಿವ (ಕೌಶಿಕಾ. ೨೧-೨೫); ರಾಜಶೇಖರನುರಿಗಣ್ಣಿಂದ ಸ್ಮರಗೆ ಪರಾಜಯವಾಯ್ತು (ಮೋಹತ. ೮-೪); ಪರಾಜಯಮಿದುವೆ ಪರಮಜಯವಿಂದೆನಗೆ! (ಚಿತ್ರಾಂಗ. ೩೯-೧೦೫೨). [ಸಂ.]

ಪರಾಜಿತ (ಗು). ೧. ಸೋತ; ಸೋತು ಹೋದ; ಸೋಲಿಗೆ ಗುರಿಯಾದ: ಸರಸಿರುಹಮಿಂದುದೀಧಿತಿಪರಾಜಿತ ಶ್ರೀವಿಲಾಸಮಾ ನಿನ್ನ ಮುಖಂ (ಕವಿಗಾ. ೩-೭೧). (ನಾ). ೨. ಸೋತು ಹೋದ ವ್ಯಕ್ತಿ; ಸೋತು ಹೋದವನು: "ಪರಾಜಿತಃ, ಪರಾಭೂತಃ—೨ ಸೋತು ಹೋದವನ ಹೆಸರುಗಳು" (ಸಿದ್ಧಾಂತಿ. ೨೭೧); ಈ ಅಂದಿಗರ ಹುಡುಗಿಯಿಂದ ಪರಾಜಿತನಾದ ರಾಜಬಡೆಯನು ಯಾರೆಂಬುದು . . . ತಿಳಿದಿದ್ದರೆ ಸಾಕು (ಶ್ರೀರಾಯ. ೫); ಪರಾಜಿತನೆಂದರೆ ಹೆಣ್ಣಿನ ತಂದೆ ಎಂದು ಇಂದು ಮೊದಲ ಬಾರಿ ತಮ್ಮ ಅನುಭವದಿಂದ ಅವರು ಅರಿದಂತಾಗಿತ್ತು (ಹೊಸಕ್ತಿ. ೪೬). ೩. ವಾತೂಲಾಗಮದ ಹನ್ನೆರಡು ಭೇದಗಳಲ್ಲಿ ಒಂದು: ವಾತೂಲ ಉತ್ತರವಾತೂಲ ಕಾಲಜ್ಞಾನ ಪರಾಜಿತ . . . ವಿಶ್ವಾತ್ಮಕಾಗಮವೆಂದು ವಾತೂಲಾಗಮದ ದ್ವಾದಶಭೇದಂಗಳು(ವಿವೇಕ. ೬೨).

ಪರಾಜಿತಂ ಮಾಡು = ಸೋಲಿಸು: ಅರಜನಿಯಂ ವಿರಜನಿಯಂ ಪರಾಜಿತಂ ಮಾಡಿ ಭಾವಿಸುತ್ತಿರ್ದಂ ಪನ್ನೆರಡುಮನುಪ್ರೇಕ್ಷೆಗಳಂ (ಶಾಂತಿಪು. ೯-೯೯). [ಸಂ.]

ಪರಾಜ್ಞಾನ (ನಾ). ಶ್ರೇಷ್ಠವಾದ ಜ್ಞಾನ; ಬ್ರಹ್ಮಜ್ಞಾನ: ನಿದ್ರೆಯೊಳಗೆಱಯದಿರ್ದಾ ಮೂನಿಸನನೆಬ್ಬಿಸುವ ಮಾಳ್ಕೆಯಿಂದಾ ಪರಾಜ್ಞಾನದೇಳ್ಕೆಯಿಂದೇ ನಂದಿ ಭೃಂಗೀಶಾದಿ ಗಣನಿಕರದೊಳಗೆಯಾನಂದಿಂ ವರ್ತಿಸೂದ ಪರಸುಜ್ಞಾನವೈ (ವೀಶೈಪು. ೬-೬-೫೭). [ಸಂ.]

ಪರಾತ, ಪರಾತು, ಪರಾಯತ, ಬರಾತ$_1$ (ನಾ). ಅಗಲವಾದ ಹಾಗೂ ಅಂಚುಳ್ಳ ದೊಡ್ಡಮರಗೆಯಾಕಾರದ ಲೋಹದ ಪಾತ್ರೆ; ಹರಿವಾಣ: ಒಂದು ದೊಡ್ಡ ಬೆಳ್ಳಿಯ ಪರಾತದಲ್ಲಿ ಉತ್ತಮವಾದ ಚೀನಾಂಬರ, ವಕ್ಷವಸ್ತ್ರ . . . ಎಲ್ಲವನ್ನೂ ತಂದು (ಶಾಂತಲಾ. ೩೫); ದೊಡ್ಡದೊಂದು ಪರಾತದಲ್ಲಿ ಹಿಟ್ಟನ್ನು ಸುರವಿಕೊಂಡಳು (ಮೊಸಾಸಾ. ೫); ಮತ್ತೊಂದೆಡೆ ದೊಡ್ಡ ಪರಾತದಲ್ಲಿ ದೊಡ್ಡ ದೊಡ್ಡ ಒಟ್ಟಿದ ಜಾರದಾಣಿಯ ರಾಶಿ! (ವೈನಿ. ೧೫೩). **ಪರಾತು**: ಬಕ್ಕರಿ ಬಡಿಯುವ ಪರಾತಿನ ಮೇಲೆ ಪಟಪಟ ಹನಿಯುದುರಿಸುತ್ತ ಹಿಟ್ಟನ್ನು ನಾದಿದಳು (ಅನ್ನ. ೩೪); ಅಧಿಕಾರದಿಂದ ಪಂಚತರಾಗುವ ದುಃಖದ ಭಾರ ನಮ್ಮ ಪಾಲಿಗೆ—'ಅವೇದನೆ, ನಿವೇದನೆಗಳ ಪರಾತನ್ನು ತಲೆಯ ಮೇಲೆ ಹೊತ್ತುಕೊಂಡಷ್ಟು ಭಾರವಾಗದು' ಎಂದು ನಾನು ಹೇಳಿದ್ದೆ (ನಿಬಂಧ. I, ೪೯೯). **ಪರಾಯತ**: ಆ ನೀರನ್ನು ಚೆಲ್ಲುವುದಕ್ಕೆ ಚಿನ್ನದ ದೊಡ್ಡ ಪರಾಯತಗಳನ್ನೂ ಸಿದ್ಧಪಡಿಸಿದರು (ಗುಣಸಾ. ೬೯). **ಬರಾತ$_1$**: ದೊಡ್ಡ ದೊಡ್ಡ ಬರಾತಗಳಲ್ಲಿ ಅನ್ನಗಳ ತುಂಬಿಸಿ ವರಸೆಯಾಗಿ . . . ಇಡಿಸಿದನು (ಕಥಾಮಂ. IV, ೮೧).

[←ಹಿಂ. ಮರಾ. ಪರಾತ್]

ಪರಾತು 'ಪರಾತ' ನೋ.

ಪರಾತ್ಪರ (ಗು). ೧. ಅತ್ಯಂತ ಶ್ರೇಷ್ಠವಾದ; ಪರಮ: ಸಾಕ್ಷಾತ್‌ಪರಾತ್ಪರ [ಪರಾಂ. ಪರಾಪರ]ಸದಮಳಿತ ಶಿವಲಿಂಗಮಂ ತೋಱಿದೆನೆಂದೆ ಬನ್ನಿ (ಬಸಪು. ೫೧-೮೦). (ನಾ). ೨. ಅತ್ಯಂತ ಶ್ರೇಷ್ಠವಾದುದು; ಪರಮಾರ್ಥ: ಪ್ರಸಾದವೇ ಗುರು ಪ್ರಸಾದವೇ ಲಿಂಗ ಪ್ರಸಾದವೇ ಜಂಗಮ ಪ್ರಸಾದವೇ ಪರಾತ್ಪರ (ಉರಿಪ. ೧೨೧-೧೦೯);

ಜಯು ಪರಾತ್ಪರವೆ ಜಯು (ಪ್ರಾಥಂ. ೧-೫೨). ೩. ಬಹಳ ಶ್ರೇಷ್ಠವಾದ ಸ್ಥಾನ ; ಮೋಕ್ಷ ; ಮುಕ್ತಿ : ಪರಾತ್ಪರ [ಪಾಠಾಂ. ಪರಾಪರ]ಕ್ಕೆ ಹೋಗಿ ಪರಮನ ಸುದ್ದಿಯ ಕೊಂಡು ಬರುತ್ತಿದ್ದನೊಬ್ಬ (ಬಸವ. ೯೩೬). ೪. ಬಹಳ ಶ್ರೇಷ್ಠನಾದವನು ; ಪರಮಪುರುಷ : ಪರಮಭಟ್ಟಾರಕ ಪರಾತ್ಪರ [ಪಾಠಾಂ. ಪರಾಪರ] . . . ಪರಮಾತ್ಮ ಪರಮೇಶ (ಬಸಪು. ೨-೧೭); ಏಂದು ಪೂಡುಳಿವಿಲ್ಲದಂದು . . . ಈ ಶಕ್ತ್ಯಮಸ್ಯಾದಿ ವಾಕ್ಯಾರ್ಥವಿಲ್ಲದಂದು ಅಲ್ಲಿಂದತ್ತ ನೀನೇ ಪರಾತ್ಪರನು ನೋಡಾ (ಸಿದ್ಧೇಶ. ೬-೧೬). [ಸಂ.]

ಪರಾತ್ಪರತೆ (ನಾ). ಅತಿ ಶ್ರೇಷ್ಠಸ್ಥಾನ : ಮೋಹದ ಈ ಪರಾತ್ಪರತೆಯನ್ನು ನೀವು ಒಪ್ಪುತ್ತೀರಾ ? (ಸಮುಚೇ. ೩೧೧). [ಸಂ. ಪರಾತ್ಪರತಾ]

ಪರಾತ್ಮ (ನಾ). ದೇವರು ; ಪರಮಾತ್ಮ : ಪರಮಹಂಸ ಪರಾತ್ಮ ಪರಮೇಶ್ವರ . . . ಪರೋತ್ತಮ ಕರುಣಿಸುವುದೆಂದ (ಕುಮ್ಮಾ. ೬-೪೬) ; ಸತ್ಯವಚ ಲಕ್ಷ್ಮೀಧವನು ಮಿಗೆ ತಪ್ಪ ಲಕ್ಷಣಿಯಿಂದ ಲಕ್ಷಿಸೆ ಪ್ರತ್ಯಗಾತ್ಮ ಪರಾತ್ಮರೈಕ್ಯವ ಸಿದ್ಧಿಸುವದೆಂದ (ಅಮೃತ. ೩-೨೩). [ಪರ್ಯ + ಆತ್ಮ]

ಪರಾಧಿ (ನಾ). ೧. ಬೇಟೆ; ಶಿಕಾರಿ. 'ಪಾರದಿ' ಪರಾ. ೨. ಅತಿಶಯವಾದ ಮಾನಸಿಕ ಕ್ಲೇಶ. [ಸಂ.]

ಪರಾಧೀನ(ಗು). ೧. ಬೇರೆಯವರ ಅಂಕೆಗೆ ಒಳಪಟ್ಟ; ಮತ್ತೊಬ್ಬರ ಕೈಕೆಳಗಿನ ; ಅನ್ಯರಿಗೆ ಅಧೀನವಾದ. (ನಾ). ೨. ಬೇರೆಯವರ ಅಧೀನದಲ್ಲಿರುವಿಕೆ ; ಪರಾಧೀನತೆ : "ಪ್ರಾಪಾರದಲಿ ಸಂತೋಷದಲಿ ಪರಾಧೀನದಲಿ . . . ಕ್ಷಣಾಮ್ಯಮುಳ್ಳಂ" (ಪುಂಗರಾ. ೧೪೫-೩೦) ; ಮಾನವನು ಪರಾಧೀನವಾದ ಕರ್ಮವನ್ನು ಸಾಧ್ಯವಾದ ಮಟ್ಟಿಗೆ ತ್ಯಜಿಸಿ ಆತ್ಮಾಧೀನವಾದ ಕರ್ಮವನ್ನು ಪ್ರಯತ್ನಪೂರ್ವಕವಾಗಿ ಅನುಷ್ಠಾನ ಮಾಡಬೇಕು (ಭಾಪದ. ೫೪). ೩. ಬೇರೆಯವರ ಆಂಕೆಯಲ್ಲಿರುವವನು; ಅನ್ಯರ ಪ್ರಭುತ್ವಕ್ಕೆ ಒಳಪಟ್ಟವನು:"ಪರವಾನ್,ಪರಾಧೀನಃ . . . ಗೃಹ್ಯಕಃ—ಈ ೮ ಹೊರ ಮಶದಾತಂ" (ಪರಾಯು. ೫೬-೧೫೬) ; "ಪರವಶಂ ನಿಶ್ಚಿಂ ಪರಾಧೀನನೆಂದೆನಲು . . .-ಪರರೆ ಪಶದವನಕ್ಕುಂ" (ಪುಂಗರಾ. ೬೨-೬) ; ಕುದುರೆವರಿಜಂ ತಳೆದು ಪರಾಧೀನನಾಗಿ ಪಲ ಕೋಟಿಲೆಗಳನನುಭವಿಸಿದೆ (ಕಾದಂಬ. ೬೩೯) ; ಪರಾಧೀನನಾದರೆ ನರಜನ್ಮ ಹೋದೀತೇ ? (ಗಾದೆ). ೪. (ಅಸ್ತಿ ಮುಂತಾದುವುಗಳ) ವರ್ಗಾವಣೆ ; ಪರಭಾರೆ: ಇವತ್ತು ತೀನಪ್ಪ ಸೇರೆಗಾರರ ಆಸ್ತಿ, ಆಸ್ತಿ ಎರಡೂ ಪರಾಧೀನವಾಗುತ್ತವೆ (ಹಪಸ. ೩೪). ೫. [ಕಾಮಶಾ] ನಾಲ್ಕು ಬಗೆಯ ರತಿಭಾವಗಳಲ್ಲಿ ಒಂದು : ರತಿಭಾವಂ . . . ನಾಲ್ಕು ಪರಿ ನಿಜ ನಿರೋಧ ಪರಾಧೀನ ಸ್ವಾಧೀನ . . . ಆಲಿಂಗನ ಚುಂಬನಂಗಳ ಮಾಡಲ್ಕೆ ಮೆಲ್ಲಮೆಲ್ಲನೆ ಸೈ ಏಸುತಾಗಿ ಏಸುಸುಯ್ದಾಗಿ ಬೆಚ್ಚನೆಯುಳಿಯಸಿಗಿ ಸ್ವಲ್ಪ ಸ್ರವಿಸಿದೊಡೆ ಪರಾಧೀನ ರತಿ (ಕಾಮಶಾ. ೨೩೧). [ಪರ್ಯ + ಅಧೀನ]

ಪರಾಧೀನತೆ (ನಾ). ಬೇರೆಯವರನ್ನು ಆಶ್ರಯಿಸಿರುವುದು ; ಮತ್ತೊಬ್ಬರನ್ನು ಅವಲಂಬಿಸಿರುವಿಕೆ : ಸಲಹೆಯನ್ನು ಸ್ವೀಕರಿಸಲು ಮಕ್ಕಳ ಹುಟ್ಟುಗುಣವಾದ ಪರಾಧೀನತೆ ನೆರವಾಗುತ್ತದೆ (ಶಿಪ್ರ. ೫೫೫). [ಸಂ. ಪರಾಧೀನತಾ]

ಪರಾಧೀನೆ (ನಾ). ೧. ಬೇರೆಯವರನ್ನು ಅವಲಂಬಿಸಿರುವವಳು ; ಮತ್ತೊಬ್ಬರನ್ನು ಆಶ್ರಯಿಸಿರುವವಳು : ಆಳುವಾಡೋ ಪರಾಧೀನೆ ; ಅಲ್ಲಿ ಗುರುಜನಗಳೂ ಸವಿವಾಪದಲ್ಲರಲಿಲ್ಲ (ಶಾಳುಂತ. ೨೫-೧೪). ೨. [ಕಾಮಶಾ] ಪರಾಧೀನವೆಂಬ ರತಿಭಾವವನ್ನು ಉಳ್ಳವಳು : ಪರಾಧೀನೆ ಳುಸುಮಬಾಣಾಸನಾಗಮತೋವಿದೆ (ಜನಪ. ೮-೩೭). [ಸಂ. ಪರಾಧೀನಾ]

ಪರಾನ್ನ (ನಾ). ೧. ಬೇರೆಯವರು ಒದಗಿಸಿದ ಆಹಾರ; ಮತ್ತೊಬ್ಬರು ನೀಡಿದ ಭೋಜನ : ಪರಧನ ಪರಾನ್ನ ಪರಸ್ತ್ರೀಯರಾತಿ ಬಿಡದು (ನಳವ. III, ೧೪೧) ; ವಾಚಸದೆ ವೇದಾರ್ಥನಿಚಯವನು . . . ಪರಾನ್ನಪೂರಿತ ತಪ್ತಕನುವಾದ ನೀಚನಹ ಭೂಸುರನ ಕರುಳನು ತೋಚು ವಳಲ್ಕೆ ಮ್ಮುತ್ತು (ಕುಪ್ಯಾಳು. ೪-೯೪) ; ಪರಾನ್ನ ಅವರಿಗೆ ತಪ್ಪಿದ ದಿನ ವೆಂದು ? (ಹೊಸಕ್ತಿ. ೨೯). ೨. ಬೇರೆಯವರು ನೀಡಿದ ಆಹಾರದಿಂದ ಜೀವಿಸುವುದು,—ಹೊಟ್ಟೆಹೊರೆಯುವುದು. ೩. ಬೇರೆಯವರು ನೀಡುವ ಆಹಾರದಿಂದ ಜೀವಿಸುವವನು ; ಮತ್ತೊಬ್ಬರನ್ನು ಊಟಕ್ಕಾಗಿ ಆಶ್ರಯಿಸಿರುವವನು : "ಪರಾನ್ನಃ, ಪರಪಿಂಡಾದಃ—ಈ ೨ ಹೆಬ್ಬರಿಕ್ಕಿದ ಕೂಬನುಂಬವಂ" (ಪಲಾಯು.೫೪-೧೯೩); "ಪೆಬ್ಬರಾರಿಕ್ಕಿತಂ [ಪಾಠಾಂ. ಹೆಜ್ಜರಾರಿ ತಿಂಬವಂ]ಪರಾನ್ನಂ ಬಾರಧಿಳನಾ ಪರಪಿಂಡಾದನಕ್ಕುಂ" (ಪುಂಗರಾ. ೬೯-೧೦). [ಪರ್ + ಅನ್ನ]

ಪರಾಭವ (ನಾ). ೧. ಸೋಲು ; ಅಪಜಯ : ಎಯ್ದೂರೆ ಕಲಹ ದೊಳ್ನಿಂ ಪರಾಭವಂಗಳವರ್ಗಳ್ (ಅವಿಪು. ೧೪-೨೬) ; ಗೋಗ್ರಹಣ ದಂದೇನಾದಿರಂ[ತಾ] ಪರಾಭವನುಂ ಬಿಃ ಮುಜೆದಿರ್ದರಪ್ಪೊಡಂ (ಪಂಪಭಾ. ೯-೫೬) ; ಪೂಜ್ಯನೆ ಪರಾಭವಂ ನಿನಗೆಂತೊ ? (ಶ್ರೀರಾಮಾ. ೨೬೦-೮೫೦). ೨. ಅಪಮಾನ ; ಅವಮಾನ : ಏಳಾವಶಾಕ್ಷೋಹಿಣೀಪತಿಯಪ್ಪ ರಾಜಾಧಿರಾಜನಂ ಪರಾಭವಂಬಡಿಸದಿರೆಂದು ಬಲದೇವಂ ಬಾಂಸೆ ಬಾಂಸೆ (ಪಂಪಭಾ. ೧೩-೯೬ ಪ) ; ಕುರುಕುಲಜೀವಾತರ್ಷಣಪರಿಣತಮಿದು ಕಾಳ ಹಸ್ತಮಲ್ಲದೆ ಪರಮೇಶ್ವರಿ ಕೇಶಹಸ್ತಮಕ್ಕುಮೆ ಪರಾಭವಜ್ವಲನಧೂಮ ಕೃಷ್ಣಂ ಕೃಷ್ಣೇ (ಗದಾಯು. ೧-೬೬). ೩. ಅನಾದರ ; ತಿರಸ್ಕಾರ : "ಪ್ರ (ಅ)ತ್ಯಾಕಾರಃ, ಪರಿಭವಃ . . . ಪರಾಭವಃ . . . ತಿರಸ್ಕಾರಃ—ಈ ೬ ಪರಿಭವಂ" (ಪಲಾಯು. ೧೧೬-೧೯) ; "ನಿರಾಕಾರಂ ಪರಾಭವಮನಾದರಮೆನಲು ತಿರಸ್ಕಾರಂ" (ಪುಂಗರಾ.೧೨೬-೬). ೪. ಮರೆಯಾಗುವುದು ; ಅಗೋಚರವಾಗುವಿಕೆ. ೫. ಬೇರೆ ಬೇರೆಯಾಗುವಿಕೆ ; ವಿಘಟನೆ. ೬. ಅರುವತ್ತು ಸಂವತ್ಸರಗಳಲ್ಲಿ ಒಂದು ; ನಲವತ್ತನೆಯ ಸಂವತ್ಸರ : ಮತ್ತಮಾ ವರುಷವೇ ಪ್ರಭವ ವಿಭವ . . . ಪರಾಭವ ಪ್ಲವಂಗ . . . ಅಕ್ಷಯವೆಂದಿಪತ್ತು ತೆಜನಾಗಿಹುದು (ವಿಕೇಶ. ೩೨೧) ; ಪರಾಭವಸಂವತ್ಸರದ ಸ್ರಾವಣದ ×××[ಳ್]ಪುವಾರದಂದು (ಕೊಲ್ಹಾಶಾ. ೪೩-೧ ; ?). ೭. ನಾಶ. ೮, ೯ : ಪರಾಭವಂ ಸಂವತ್ಸರದೊಳ್ . . . ಪಂಕ್ತಿಭೇದಂ ಲಿಪಿಗಳೊಳ್ ಅಳ್ಕುಮುಲ್ಲದೆ ಜನಪದದ ಜನಂಗಳೊಳಿಲ್ಲ (ಜಗಪಿ. ೨-೧ ಪ). [ಸಂ.]

ಪರಾಭವಿಸು (ಕ್ರಿ). ೧. ಸೋಲಿಸು ; ಅಪಜಯಗೊಳಿಸು : ಪರಾಭವಿಸಿದಂ ಗುಣಪ್ರಗುಣಖಂಡಕೋದಂಡದಿಂ . . . ಸುರೇಂದ್ರಧನು ಮೂಡಿದಂಬರಮನಂದು ಪೀತಾಂಬರಂ (ಪಂಂಪಾ. ೫-೧೦೧) ; ಪರ ವಿತ್ರನಂ ಪರಾಭವಿಸಿ . . . ಮುಪಾಸಾಭನುಜಂ ಬೆಂಕೊಂಡನರಿಬಲವನು (ಚಿಪು. ೬೯-೧೬) ; ನನ್ನನ್ನೇ ದ್ವಂದ್ವಯುದ್ಧದಲ್ಲಿ ಪರಾಭವಿಸಿದನು (ಗುರುಸ. ೧೦೪). ೨. ಅವಮಾನಗೊಳಿಸು ; ಗೌರವಕ್ಕೆ ಹಾನಿತರು : ಮುರೋದರ ಸ್ಮತಿಳರದೊಳ್ಪರಾಭವಿಸಿ ಕೃಷ್ಣೆಯನುಯ್ದಪರಾಧಿಯೆಲ್ಲಿದಂ (ಗದಾಯು. ೬-೨೯). [ಪರಾಭವ + -ಇಸು]

ಪರಾಭೂತ (ಗು). ೧. ಸೋತು ಹೋದ ; ಪರಾಭವ ಹೊಂದಿದ. ೨. ತಿರಸ್ಕಾರದಿಂದ ಕಂಡ; ಕೀಳಾಗಿ ಕಂಡ.(ನಾ). ೩. ಸೋತು ಹೋದವನು ; ಪರಾಜಿತ : "ಪರಾಜಿತಃ, ಪರಾಭೂತಃ—ಈ ಸೋತು ಹೋದವನ ಹೆಸರುಗಳು" (ಅಡ್ಡಂಡ. ೨೬೧). [ಸಂ.]

ಪರಾಭೂತಿ (ನಾ). ಸೋಲು ; ಪರಾಭವ : 'ಪರಾಭೂತಿವೆಜು' ಪರಾ. [ಸಂ.]

ಪರಾಭೂತಿವೆಜು (ಕ್ರಿ). ಅಪಜಯವನ್ನು ಹೊಂದು ; ಸೋಲು : ಪರ್ಬಿದತ್ತೆಜ್ಜೆಸೆಯೊಳ್ ನೆಗಳ್ದಪಯಶಮಿಶಬರನಿನೊಗೆದ ಪರಾಭೂತಿವೆತ್ತ ಕಾರಣದಿಂದಂ (ಶಬರಂ. ೪-೯೫). [ಪರಾಭೂತಿ+ಪೆಜು$_1$]

ಪರಾಭೇದ್ಯ (ನಾ). ಬೇರೆಯವರಿಂದ ಜಯಿಸಲು ಅಸಾಧ್ಯನಾದವನು : ಶ್ರೀಕಾಳಿದಾಸಂ ಪರಾಭೇದ್ಯಂ ಮಾಳಲದೇವಿಗಂ ಮಧುವ ದಣ್ಡಾಧೀಶ್ವರಂಗಂ ಜಯಾಪಾಪ್ತಂ ಪುಟ್ಟಿದಂ (ಕಇಅ. ೮-೩-೨೭೧ ; 1062). [ಪರ$_3$+ಅಭೇದ್ಯ]

ಪರಾಮರಿಕೆ, ಪರಂಬರಿಕೆ, ಪರಾಂಬರಿಕೆ (ನಾ). ೧. ಪರಿಶೀಲನೆ; ಗಮನಿಸುವಿಕೆ ; ಪರಿಭಾವನೆ : "ಪರಾಮರಿಕೆ (ಪರಾಂಬರಿಕೆ)—ಪರಾಮರ್ಶಿಕಾ" (ತದ್ಭಕೋ. ೨೪). ೨. ಉಪಚಾರ; ಆರೈಕೆ : ಕೂಸಿನ ಪರಾಮರಿಕೆ ತೆಗೆದುಕೊಳ್ಳದೆ ಹಿಂಗೆ ಮೈಮರದು ಇರುತ್ತಾರೆ (ಶಾಪ್ರನಿ. ೬೫-೨೫) ; ದಿನವಹಿ ಜಿಲ್ಲಾಸಾಹೇಬರ ಬಂಗಲೆಗೆ ಹೋಗಿ ಅಮ್ಮಾವರ ಪರಾಮರಿಕೆ ನೋಡಿಕೊಂಡರು (ದಾಕೂಬ. ೧೦); ಹೆಂಗರುಳಿನ ಪರಾಮರಿಕೆಯಲ್ಲಿ ಒಂದು ಹಿತವಿದ್ದರೂ ಅದೊಂದರಿಂದಲೇ ಎಲ್ಲ ಕೆಲಸವಾಗದು (ಸಾಹಿವಿ. ೬) ; ತೇಷಣ್ಣ ಮಡಿ ಉಟ್ಟುಕೊಂಡೆ ಎಲ್ಲರ ಪರಾಮರಿಕೆ ಮಾಡುತ್ತಿದ್ದ (ವೈನಿ.೧೮೩). ೩. ವಿಮರ್ಶೆ; ವಿವೇಚನೆ : ಆ ಪ್ರಸ್ತಾವದೊಳು ಬಸವರಾಜದೇವರ ಪರಾಮರಿಕೆಯನೇನೆಂಬೆ (ಶೂನ್ಯಸಂ. ೩೭೫-೩೮). **ಪರಂಬರಿಕೆ :** ೩. "ಚೀಕ, ಸೀಕ—ಅಮರ್ಷಣೆ, ಪರಂಬರಿಕೆಯೊಳ್" (ಕಾಶಕ್ಯ. ೨೯೩). **ಪರಾಂಬರಿಕೆ :** ೧. ಅಖಿಲಲೆಕ್ಕಪತ್ರಗಳೂ ಅಲ್ಲಿ ನಮ್ಮ ಪರಾಂಬರಿಕೆಗೆ ಸಿದ್ಧವಾಗಿರಬೇಕು (ವಿಗಡ. ೬-೨೪) ; ಮೂರು ಒಳ್ಳೆಯ ಅಧರಣದ ಪೆಟ್ಟಿಗೆಗಳು ಮಾರಾಟಕ್ಕೆ ಬಂದಿವೆ. ತಕಟದಾಸನು ತಮ್ಮ ಪರಾಂಬರಿಕೆಗಾಗಿ ಕಳುಹಿಸಿದ್ದಾನೆ (ರಾಕ್ಷಮು. ೪೧).

ಪರಾಮರಿಕೆ ಮಾಡು, ಪರಾಂಬರಿಕೆ ಮಾಡು=ಉಪಚಾರ ಮಾಡು ; ಯೋಗಕ್ಷೇಮ ವಿಚಾರಿಸು ; ಆರೈಕೆ ಮಾಡು : ಹೀಗೆ ತಮ್ಮ ಕೈಬೆ ಅದಷ್ಟು ಬಡವರ ಪರಾಮರಿಕೆ ಮಾಡಬೇಕು (ಮುಂಬಯಿ. ೨-೪೮) ; ಚಂಪಕ್ಕ ಮಾತ್ರ ಬಂದು ತುಸು ಪರಾಮರಿಕೆ ಮಾಡುತ್ತಿದ್ದಳು (ಗಂಮಾಯಿ. ೧೩೧) ; ಹುಬ್ಬಳ್ಳಿಯ ಕೇವಡೆಯ ಮನೆತನವು ಅವರನ್ನು ಇಂದಿನವರೆಗೂ ತಮ್ಮ ಮನೆಯವರೆಂದೇ ತಿಳಿದು ಅವರ ಪರಾಂಬರಿಕೆ ಮಾಡುತ್ತಿದೆ (ಸೇನಾಹ. ೬೯). [ಪರಾಮರಿಸು+—ಇಕೆ]

ಪರಾಮರಿಸು, ಪರಂಬರಿಸು, ಪರಾಂಬರಿಸು, ಪರಾಮ್ಮರಿಸು (ಕ್ರಿ). ೧. ಗಮನಿಸು; ಲಕ್ಷಿಸು ; ಪರಿಶೀಲಿಸು : ಪರಾಮರಿಸಿ ಮನ್ನಿಪೆ[ಸೆ]ನ್ನಯ ಮಾತನೆಂದೆಂದ್ದೆ ದೈನ್ಯದಿಂದಂ ನುಡಿದು ಕೊಂಡೊಯ್ದುಳೊರ್ ಪಥು ತನ್ನ ಮೋಹದ ನಲ್ಲನ (ಸೌಂದಪು.೧೬-೪೩); ಪರಾಕು ಮಾಡದೆ ಪರಾಮರಿಸಿ[ಪಾಠಾಂ. ಪರಾಂಬರಿಸಿ]ಎನ್ನ ಅಪರಾಧಂಗಳ ಕ್ಷಮಿಸೊ (ಪುರಂದ. ೧-೬೩ ಪಲ್ಲವಿ) ; ಪರಾಮರಿಸು ಸ್ವಾಮಿ ಪರಾಕೆಂದು ಬಿನ್ನೈಸುವ ಅವಸರದ ಗುರಿಕಾರರ ಕೋಲಾಹಲ (ಸೌಗಂಧಿ. ೧೧-೮). ೨. ಉಪಚರಿಸು ; ಆದರಿಸು ; ಆರೈಕೆ ಮಾಡು : ಕಾರ್ಯದಲ್ಲಿ ದ್ದಾಗ ಕೆಲಸಗಾರರ ಅನ್ನ-ನೀರುಗಳ ಲಕ್ಷ್ಯ ಅವರಿಗಿರುವುದಿಲ್ಲ ; ಮುಗಿದ ಮೇಲೆ ಮುಕ್ಕಳಂತೆ ಪರಾಮರಿಸುವರು (ಸೇನಾಹ. ೯೪) ; ಎತ್ತುಗಳಿಗೆ . . . ತಕ್ಕಂಥ ಆಹಾರಗಳನ್ನು ಅವುಗಳಿಗೆ ಯಥೇಷ್ಟವಾಗಿ ಕೊಟ್ಟು ವೇಳೆವೇಳೆಗೆ ಮೇವು ನೀರಿನಿಂದ ಪರಾಮರಿಸುತ್ತಿರಬೇಕು (ಕೃಷಿಪ್ರ. ೧೯). ೩. ವಿಮರ್ಶೆ ಮಾಡು ; ವಿಮರ್ಶಿಸು : ಸುಕಾವ್ಯರುಚಿರಸಾರಮಂ ವಿಮಳಮಾನಸಸತ್ಕವಿಯಂತೆವೋಲ್ ವಸುಂಧರೆಯೊಳದೇಂ ಪರಾಮರಿಸಬಲ್ಲನೆ ಕಲ್ಮಷಚಿತ್ತದುರ್ಜನಂ (ದಿವ್ಯಕ.೧-೩೩). ೪. ಪಾಲನೆ ಮಾಡು; ಪೋಷಿಸು : ಜನರು ಎಷ್ಟು ನೀಚರಾದಾಗ್ಯೂ ದೇವರು ಅವರನ್ನು ಪರಾಮರಿಸದೆ ಇರುವುದಿಲ್ಲ (ಮುಂಬಯಿ. ೪-೧೪೦). **ಪರಂಬರಿಸು :** ೧. ಚದುರರಿಂತಿದನು ಪರಂಬರಿಸುವರೇ ಸದಮಲಬೋಧನೆಯುಂತರು (ನೇಮಿಸಂ. ೩೨-೪೩) ; ಗುರುವೆ ಬಿನ್ನಹ ಪರಂಬರಿಸು (ಜಿನರಾ. ೪-೪೬); ಭೂಪತಿಯೆ ಅನ್ಯಾಯ ನಿನ್ನದು ನೀ ಪರಂಬರಿಸು (ಕೃಷ್ಣಾಶಾ. ೬-೩೪). **ಪರಾಂಬರಿಸು :** ೧. ತದನಂತರಂ ತನ್ನಂ ತಾನೆ ಪರಾಂಬರಿಸಿ ಈ ಪರಿಜುಮಾರ ರೂಪೆನೆ (ಪುಣ್ಯಾಸ್ರ. ೬-೪೪ ಪ) ; ಹಿಮವಂತ ದೇವನೀತನು ಪರಾಂಬರಿಸೆಲೆ ನದುರಾಜಯೆಂದು ತೋಱುದರು (ಧರಚ. ೩೮-೨೮) ; ಬಹುಚಿತ್ರಮಾಗಿರುವ ಮಂದಾರಮಾಲೆಯಂ . . . ಪರಾಂಬರಿಸಬೇಕು (ಸೌಗಂಧಿ. ೧೨೩-೨). ೨. ಇದರಿಂದ ನಿನ್ನ ವಂಶವು ಉತ್ತರೋತ್ತರವಾಗಿ ಬೆಳೆಯುವುದು ಎಂದು ರಾಯರನ್ನು ಪರಾಂಬರಿಸಿದರು (ಸಮಚೇ. ೪೨).

ಪರಾಮ್ಮರಿಸು : ೧. ತಾವೆಲ್ಲ ಪರಾಮ್ಮರಿಸಿ ಅದಂ ನೆರವೇರಿಸುವಂತೆ ಮಾಡಬಹುದು (ಸೌಗಂಧಿ. ೨೨೮-೨). [<ಪರಾಮರ್ಶಿಸು]

ಪರಾಮರ್ಶ(ನಾ).೧. ಎಳೆಯುವಿಕೆ; ಸೆಳೆಯುವಿಕೆ. ೨. ಮುತ್ತಿಗೆ; ಮೇಲೆ ಬೀಳುವುದು. ೩. ಜ್ಞಾಪಕ ; ನೆನಪು. ೪. ಪರಿಶೀಲನೆ ; ಚಿಂತನೆ : ಪರಾಮರ್ಶ, ಪರಿಭಾವನ (Consideration. ಪಾರಿನಿ. ೨೧). ೫. ವಿಮರ್ಶೆ ; ವಿವೇಚನೆ. ೬. ತೀರ್ಪು; ನಿರ್ಣಯ : ಮುಖ್ಯ ನ್ಯಾಯಾಧಿಪತಿಯವರನ್ನು ಬಿಟ್ಟು ಇತರ ಯಾರೊಬ್ಬರು ನ್ಯಾಯಾಧೀಶರ ನಿಯುಕ್ತಿಯ ವಿಷಯದಲ್ಲೂ ಸರ್ವದಾ ಭಾರತದ ಮುಖ್ಯನ್ಯಾಯಾಧಿಪತಿಯವರ ಪರಾಮರ್ಶವನ್ನು ಕೇಳತಕ್ಕುದು(ಭಾಧಾಸ. ೬೬). ೭. (ರೋಗಿಗಳು, ದರಿದ್ರರು, ಸ್ನೇಹಿತರು ಮುಂತಾದವರ) ಯೋಗಕ್ಷೇಮ ಅಥವಾ ಕುಶಲವನ್ನು ವಿಚಾರಿಸುವುದು. ೮. [ತರ್ಕಶಾ] ಅನುಮಾನ ಪ್ರಯೋಗದಲ್ಲಿ ಬರುವ ನಿಶ್ಚಿತವಾದ ತಿಳಿವಳಿಕೆ,—ಜ್ಞಾನ : ಈ ಪ್ರದೇಶವು ವಹ್ನಿವ್ಯಾಪ್ಯವಾದ ಧೂಮವನ್ನುಳ್ಳದೆಂಬ ಜ್ಞಾನಕ್ಕೆ 'ಪರಾಮರ್ಶ' ಎಂದು ಹೆಸರು . . . ವ್ಯಾಪ್ಯವು ಪಕ್ಷದಲ್ಲಿರುವುದೆಂಬ ಜ್ಞಾನಕ್ಕೆ 'ಪರಾಮರ್ಶ' ಎಂದು ಹೆಸರು (ಭಾತತ್ತ್ವ.೨೬೧).

ಪರಾಮರ್ಶ ಮಾಡು=೧. ವಿಮರ್ಶೆ ಮಾಡು ; ವಿವೇಚಿಸು : ರಾಜ್ಯಗಳ ಉಚ್ಚನ್ಯಾಯಾಲಯಗಳ ನ್ಯಾಯಾಧೀಶರುಗಳೊಡನೆ ಪರಾಮರ್ಶ ಮಾಡಿದ ತರುವಾಯ . . . ನೇಮಕ ಮಾಡತಕ್ಕುದು (ಭಾಧಾಸ. ೬೬); ಸರ್ವಪ್ರಕಾರವಾಗಿ ನಿಮ್ಮ ಪರಾಮರ್ಶ ಮಾಡಬೇಕೆಂದು ನನ್ನ ವಜೀರನಿಗೆ ಆಜ್ಞೆ ಕೊಡುವೆನು (ಕಗದ್ಯ. II,೧೫). ೨. ಆರೈಕೆ ಮಾಡು:"ಉಪಚರಿಸು—ಪರಾಮರ್ಶ ಮಾಡು" (ಗಂಗಾಮ.೪೩).[ಸಂ.]

ಪರಾಮರ್ಶಕ (ನಾ). ೧. ಪರಿಶೀಲಿಸುವವನು. ೨. [ಕಾವ್ಯವಿಮಾ] ನೆನಪಿಗೆ ತಂದುಕೊಳ್ಳುವವನು : ಇಲ್ಲಿ ಪರಾಮರ್ಶಕನು ರಸಾವೇಶದಲ್ಲಿರುವವನು (ಧ್ವನ್ಯಾಲೋ. ೧೨೬ ಅಡಿಟಿ). [ಸಂ.]

ಪರಾಮರ್ಶಿಸು (ಕ್ರಿ). ಪರೀಕ್ಷಿಸು ; ಪರಿಶೀಲಿಸು : ಈಗ ನಾನು ತಮ್ಮಲ್ಲಿಗೆ ಬಂದಿರುವ ವಿಚಾರವನ್ನು ಪರಾಮರ್ಶಿಸಬೇಕೆಂದು ಪ್ರಾರ್ಥಿಸುತ್ತೇನೆ (ಹಂತಿರು. ೬೬) ; ಭೂಮಿಯ ಹುಟ್ಟಿಗೆ ಸಂಬಂಧಿಸಿದ ನಮ್ಮ ಹೊಸಸಿದ್ಧಾಂತವು ಇನ್ನೂ ಒಂದು ಮೂಲವನ್ನೂ ಪರಾಮರ್ಶಿಸಿದೆ (ಭೂಹುಟ್ಟು. ೯೬) ; ಕಪಿಲನಾಗಿ ವಿಮರ್ಶಿಸಿದ ಭಗವಚ್ಛಕ್ತಿಯೇ ಶ್ರೀಕೃಷ್ಣನಾಗಿ ಪರಾಮರ್ಶಿಸುತ್ತಿದೆ (ಭಾರದ. ೧೧೩).

[ಪರಾಮರ್ಶ+—ಇಸು$_3$]

ಪರಾಮರ್ಶೆ (ನಾ). ವಿವೇಚನೆ ; ಪರಿಶೀಲನೆ : ಗಮಕದೊಳಾಯೆಂಬುದು ಪೂರ್ವಪರಾಮರ್ಶೆಗಮೊದವುಗುಮಾ ರೂಢಿಗಂ ಕವೀಶ್ವರ ಮತದಿಂ (ಪಪುದ. ೧೬೯) ; ರಾಜಸ ತಾಮಸರ ಮಾತರಲಿ . . . ಸೌಂದರ್ಯವನ್ನು ಶುದ್ಧ ಪರಾಮರ್ಶೆಯಿಂದ ಗ್ರಹಿಸಲಾರೆ (ಕಾವ್ಯಕು. ೧೩೨) ; ಆಡಿದ ಮಾತಿನ ಪರಾಮರ್ಶೆ ಮಾಡಿದರೆ ಅವಳು ನಡೆದದ್ದನ್ನೇ ಹೇಳುತ್ತಿದ್ದಳು (ಮೂಕಜ್ಜಿ. ೧೫೬). [ಸಂ.]

ಪರಾಮೃಷ್ಟ (ನಾ). ೧. ಹಾಳಾದುದು : ಅನಂತವೀರ್ಯನೀ ಕ್ಷೇತ್ರದೊಳನೇಕಕಾಲಂ ಪರಾಮೃಷ್ಟಮಾದ ಮುಕ್ತಿಮಾರ್ಗಮಂ ಮುನ್ನಮೆ ಸಮಱುವೆನೆಂಬಂತೆ ಮೋಕ್ಷಲಕ್ಷ್ಮೀವಲ್ಲಭನಾದಂ (ಆದಿಪು. ೧೦-೬೫ ಪ). ೨. ಹಾಳು ಮಾಡುವುದು; ಭಂಗಪಡಿಸುವಿಕೆ : ಕಾಕಿಣೀರತ್ನದಿಂದಲ್ಲಿ ಮುನ್ನಿರ್ದುದೊಂದು ಪ್ರಶಸ್ತಿಯಂ ಪರಾಮೃಷ್ಟಂ ಮಾಡಿ (ಶಾಂತಿಪು. ೧೧-೬೩ ಪ). [ಸಂ.]

ಪರಾಮೋಶಿ 'ಫರಾಮೋಷಿ' ನೋ.

ಪರಾಮ್ಮರಿಸು 'ಪರಾಮರಿಸು' ನೋ.

ಪರಾಯ, ಪರಾಯಿ, ಪರಾಯೀ (ಗು). ೧. ಬೇರೆಯ ; ಅನ್ಯ. (ನಾ). ೨. ಅನ್ಯ ವ್ಯಕ್ತಿ ; ಪರಕೀಯ ವ್ಯಕ್ತಿ : ತುಸು ನೋಡ್ರಿ ಮಾರೀ ತಿರುವಿ ಪರಾಯರಲ್ಲ, ಪ್ರತ್ಯಕ್ಷ ನಿಮ್ಮ ಹೆಣ್ತಿ ನಾನು (ಬಾಂಡಾಯ. ೧); ಪತ್ತಲಾ ಉಟ್ಟಾಕ್ಷಣಕ್ಕೆ ಪರಾಯರಾಕಿ ಆಗಲಿಲ್ಲ (ಬಾಂಡಾಯ. ೮೦). **ಪರಾಯಿ** : ೧. ಇದಲ್ಲದೆ ಸ್ವಾದೆ ಅರಸುಗಳು ಪರಾಯಿ ಪೋರ್ಚುಗೀಸ್ ತಾಲೂಕು ಗೋವೆ ಒಳಗೆ ಇರುತಾರೆ (ರಾಜೇಂದ್ರ. ೨೧೩); ಪ್ರತಿವರ್ಷದಲ್ಲಿಯೂ ಸುಮಾರು ೧೪೫ ಕೋಟಿ ರೂಪಾಯಿಗಳ ಪರಾಯಿದೇಶದ ವರ್ತಕವು ನಡಿಯುತ್ತದೆ (ಭೂಗೋಳ. ೩೯). **ಪರಾಯೀ** : ೧. ಪುತ್ತ ಪರಾಯೀ ಹುಡಿಗ್ಗೆ ಬೆದರಿಕಿ ಹಾಕೋ ಮಾತು ಅಡ್ತಾರ (ಜೂಜು. ೨೭).

[←ಹಿಂ. ಪರಾಯಾ, ಪರಾಈ ; ಮರಾ. ಪರಾಯ, ಪರಾಯಾ; ಪ್ರಾ. ಪರಾಯ./ಸಂ. ಪರಕೀಯ]

ಪರಾಯಣ (ಗು). ೧. (ಯಾವುದಾದರೊಂದು ವಿಷಯದಲ್ಲಿ) ಅತ್ಯಂತ ಆಸಕ್ತಿ ಹೊಂದಿದ; ತಲ್ಲೀನವಾದ ; ನಿರತವಾದ. (ನಾ). ೨. ಪ್ರಮುಖವಾದ ಉದ್ದೇಶ; ಪರಮ ಗುರಿ,—ಧ್ಯೇಯ. ೩. ಹೋಗುವಿಕೆ; ತೆರಳುವಿಕೆ. ೪. ಮೂಲವಸ್ತು,—ಪದಾರ್ಥ: ನೀನೇ ಈ ಸರ್ವಭೂತಗಳಿಗೂ ಪರಾಯಣವು (ಕೃಪಾಭೀ. ೧೦೬) ಆಕಾಶವೇ ಇವುಗಳಿಗಿಂತ ದೊಡ್ಡದು, ಪರಾಯಣವು (ಬ್ರಹ್ಮಭಾ. ೧೮೯). ೫. ಪರಿಪೂರ್ಣತೆ; ಪೂರ್ಣವಾದುದು : "ಪರಗಮನಂ ಪಾರಾಯಣ ಪರಾಯಣೋಪಾಖ್ಯಮಱಿಗೆ ಸಾಕಲ್ಯಾರ್ಥಂ" (ವಸ್ತುಕೋ. ೧೧೬-೩೧). ೬. (ಯಾವುದಾದರೊಂದು ವಿಷಯದಲ್ಲಿ) ಬಹಳವಾಗಿ ಆಸಕ್ತನಾದವನು ; ತತ್ಪರನಾದವನು ; ನಿರತನಾದವನು : "ತತ್ಪರಃ, ಪರಾಯಣಃ—ಈ ೨ ಆಸಕ್ತಂ" (ಹಲಾಯು. ೫೮-೧೯೭) ; ಹಿಮವತ್ಪರ್ವತದೊಳ್ ತಪಶ್ಚರಣಪರಾಯಣರಾಗಿಂ (ಪಂಪಭಾ. ೧೩-೧೦೭ ಪ) ; ಸಿರಿಪತಿ ಪಂಡಿತಂ ಶಶಿಮೌಳಿ ಭಕ್ತಪರಾಯಣಂ (ಒಸಪು. ೫೫-೨೪). ೭. ಪ್ರೀತಿಸುವವನು : "ಪ್ರೇಮಿ ಪ್ರಿಯಂ ಸಹಚರಂ ಪರಾಯಣನೆನಲ್ ಪ್ರೇಮಗೈವನೆನಿಕ್ಕು" (ಮಂಗರಾ. ೬೮-೮). [ಸಂ.]

ಪರಾಯಣತೆ (ನಾ). ಆಸಕ್ತಿ ; ತತ್ಪರತೆ : ಇಂತಹ ಪರಾಯಣತೆಯಿಂದ ಅವನು ಮೋಕ್ಷಪ್ರಾಪ್ತಿಯ ಸಿದ್ಧಿಯನ್ನು ಪಡೆಯಬಲ್ಲನು (ಅನಾಸ ೫). [ಸಂ. ಪರಾಯಣತಾ]

ಪರಾಯಣತ್ವ (ನಾ). ಮೂಲವಸ್ತುವಾಗಿರುವಿಕೆ : ಪರಾಯಣತ್ವವೂ (ಎಲ್ಲಕ್ಕೂ) ಪರಮಕಾರಣವಾಗಿರುವುದರಿಂದ ಪರಮಾತ್ಮನಿಗೇ (ಆಕಾಶಕ್ಕಿಂತ) ಹೆಚ್ಚು ಒಪ್ಪುತ್ತದೆ (ಬ್ರಹ್ಮಭಾ. ೧೯೦). [ಸಂ.]

ಪರಾಯಣಿ (ನಾ) ರಕ್ಷಿಸುವವಳು ; ಆದಿಶಕ್ತಿ : ಆದಿನಾರಾಯಣಿ ಪರಾಯಣಿ ನಾದಮಯೆ ಗಜಲಕ್ಷ್ಮಿ (ಕುಪ್ಯಾಅ.೧-೬).[ಸಂ.ಪರಾಯಣೀ]

ಪರಾಯತ 'ಪರಾತ' ನೋ.

ಪರಾಯತ್ತ (ಗು). ೧. ಬೇರೆಯವರಿಗೆ ಅಧೀನವಾದ ; ಪರತಂತ್ರವಾದ ; ಪರಾಧೀನವಾದ : ಪರಾಯತ್ತಕಾರಣಗಳಿಂದಾಗಿ ಆ ಕೆಲಸವಾಗಲಿಲ್ಲ (ಕೂಡಿ). (ನಾ). ೨. ಬೇರೆಯವರಿಗೆ ಅಧೀನವಾಗುವಿಕೆ ; ಪರಾಧೀನತೆ : ಸ್ತ್ರೀಯರು ಕೆಡಬೇಕಾದರೆ ಎರಡು ವಿಧವಾದ ಕಾರಣಗಳು. ಒಂದು ಪರಾಯತ್ತ. ಇನ್ನೊಂದು ಆತ್ಮಾಯತ್ತ (ಆರ್ಯಧ. ೧೬೧). ೩. ಬೇರೆಯರಿಗೆ ಅಧೀನನಾದವನು ; ಮತ್ತೊಬ್ಬರ ಅಂಕಿತಕ್ಕೆ ಒಳಪಟ್ಟವನು : "ಪರವಾನ್, ಪರಾಧೀನಃ . . . ಪರಾಯತ್ತಃ, ಪರಚ್ಛಂದಃ, ಗೃಹ್ಯಕಃ—ಈ ೮ ಹೆಱರ ವಶದಾತಂ" (ಹಲಾಯು. ೬೫-೧೮೬). [ಸಂ.]

ಪರಾಯಿ 'ಪರಾಯ' ನೋ.

ಪರಾಯೀ 'ಪರಾಯ' ನೋ.

ಪರಾರಿ$_1$ (ನಾ). ಕಳೆದ ವರ್ಷದ ಹಿಂದಿನ ವರ್ಷ : "ಸಮತೀತಾಬ್ದಂ ಪರುದಾಖ್ಯಮದಕ್ಕುಂ ತಾಂ ಪರಾರಿ ತತ್ಪೂರ್ವಗತಂ" (ವಸ್ತುಕೋ. ೧೬-೧೧). [ಸಂ.]

ಪರಾರಿ$_2$ 'ಫರಾರಿ$_1$' ನೋ.

ಪರಾರ್ಜಿತ (ಗು). ಅನ್ಯರ ಕೈವಶವಾದ ; ಬೇರೆಯವರಿಗೆ ಸಿಕ್ಕ : ಪರವಶದೊಳಿರ್ದರೋ ಮೇಣ್ಪರಾರ್ಜಿತಪ್ರಾಣರಾದರೋ ದ್ರೌಪದಿಯಂ ಪರಿಭವಿಸುವಲ್ಲಿ (ಗದಾಯು. ೧-೬೧). [ಪರ್ಯ + ಆರ್ಜಿತ]

ಪರಾರ್ತಿಹರ (ನಾ). ಬೇರೆಯವರ ವ್ಯಥೆಯನ್ನು ನಿವಾರಿಸುವವನು: ಪರಮಗುಣ ಪರಶಕ್ತಿವಾಗೀಶ್ವರ ಪರಾರ್ತಿಹರೇಶ . . . ಕರುಣಿಸುವುದು (ಕುಪ್ಯಾಅ. ೬-೮೭). [ಸಂ.]

ಪರಾರ್ಥ (ನಾ). ೧. ಬೇರೆಯವರ ಹಿತ ; ಪರೋಪಕಾರ: ಅವನರ್ಥ ಪರಾರ್ಥದಲಿ ಸಂಜೀವನಿಯನೈದಿತು ಪರಾರ್ಥದೊಳಾವನಸು ನಿರ್ವಾಣ ಮಾದುದು ಲೋಕ ಮೂಱರಲಿ ಆ ವಿರಿಂಚಿ ಪುರಂದರಾದಿಯ ದೇವತತಿಗಿ ವರಿಬ್ಬರೇ ಸಂಭಾವನೀಯರು(ಕುಪ್ಯಾಅ.೧೦-೨೦); ಪರಾರ್ಥವಾಗಿ ಕಾಣುವ ಅರ್ಜುನನ ಮನೋಭಾವದಲ್ಲಿ ಎಂಥ ಸ್ವಾರ್ಥ ಹುದುಗಿದೆ(ಭಾರದ. ೧೧೭); ಲೋಕದಲ್ಲಿ ಬುದ್ಧಿಪೂರ್ವಕ ಪುರುಷರ ಪ್ರಯತ್ನ ಸ್ವಾರ್ಥ ಅಥವಾ ದಯೆಯಿಂದ ಪರಾರ್ಥ (ಹಿಂದಸಾ. ೬೨). ೨. ಮುಕ್ತಿ ; ಮೋಕ್ಷ(?) : ಪ್ರಸಿದ್ಧಾನಮಂ ಪಡೆದ ಪರಾರ್ಥಮಂ ಶಾಶ್ವತಮೆಂಬುದನುಕ್ತಸಿದ್ಧಮಲ್ಲದಂದಭಿಧಾನಂ ನಿರರ್ಥಕರಮುಮಾಧಾರರಹಿತಮಕ್ಕುಮೆಂದುಮಿಲ್ಲದ ಪದಾರ್ಥಕ್ಕಭಿಧಾನಮನಿಡುವ ಮರುಳಾವೊಂ (ಶಾಂತಿಪು. ೪-೧೩೮ ಪ).

ಪರಾರ್ಥನಿಧಿ = ಪರೋಪಕಾರವನ್ನೇ ನಿಧಿಯಾಗುಳ್ಳವನು ; ಪರೋಪಕಾರಿ; ಒಂದು ಬಿರುದು: ತೇಜಿರಾಜ ದಂಡಾಧಿಪನಂ ಪರಾರ್ಥನಿಧಿಯಂ . . . ಕೈಯಂ ಮುಗಿದು (ಕಇಅ. ೭೪-೧೨-೨೨ ; 1170). [ಪರ್ಯ + ಅರ್ಥ]

ಪರಾರ್ಥಕಂಟಕ (ನಾ). ಇನ್ನೊಬ್ಬರ ಹಿತಕ್ಕೆ ಉಂಟುಮಾಡುವ ಧಕ್ಕೆ,—ಅಡ್ಡಿ : ವ್ಯರ್ಥವಿದು ತಾ ಹೋಗಲಿನ್ನು ಪರಾರ್ಥಕಂಟಕವಾಗಲೇತಕೆ ತೀರ್ಥವೈಸಲೆ ಶಸ್ತ್ರಧಾರೆಯಿದೆಂದನಾ ಮಗಧ (ಕುಪ್ಯಾಸ. ೨-೮೯). [ಪರಾರ್ಥ + ಕಂಟಕ]

ಪರಾರ್ಥಚರಿತ (ನಾ). ಬೇರೆಯವರಿಗೆ ಹಿತವನ್ನುಂಟುಮಾಡುವುದೇ ಆಚಾರವಾಗಿ ಉಳ್ಳವನು ; ಪರೋಪಕಾರಶೀಲ : ಜಿನಪೂಜೆಯಂ . . . ನೆಗಟೆಂದು ಪುರೋಹಿತಂಗೆ ಸಜ್ಜನಮಹಿತಂಗೆ ಪೇಟ್ಟನಭಿರಾಮನಶೇಷಕಲಾಕಲಾಪಕೋಕನದಭವಂ ಪರಾರ್ಥಚರಿತಂ(ಪಂರಾಮಾ. ೧೫-೮೪). [ಪರಾರ್ಥ + ಚರಿತ]

ಪರಾರ್ಥನಿಪುಣ (ನಾ). ಬೇರೆಯವರ ದ್ರವ್ಯವನ್ನು ದೋಚುವುದರಲ್ಲಿ ಕುಶಲನಾದವನು : ವಕ್ರಪ್ಪರಾರ್ತ್ಥನಿಪುಣರೆನಿಪ್ಪೀ ನೀಚರ್ಮ್ಮಾಟ್ಟರೆ ಕರಣವ ರೇಚಣನಂತಿಷ್ಟಜನಕವಾಶ್ರಿತಜನಕಂ (ಕೊಲ್ಹಾಶಾ. ೧೦-೨೧ ; 1151). [ಪರಾರ್ಥ + ನಿಪುಣ]

ಪರಾರ್ಥಪರ (ನಾ). ೧. ಇನ್ನೊಬ್ಬರ ಹಿತಚಿಂತನೆಯಲ್ಲೇ ಮಗ್ನನಾದವನು. ೨. ಬೇರೆಯವರ ಸಂಪತ್ತಿಗೆ ಆಸಕ್ತಿ ವಹಿಸುವವನು. ೩. ಮೋಕ್ಷದಲ್ಲಿ ಆಸಕ್ತಿಯುಳ್ಳವನು; ಮೋಕ್ಷವಿಚಾರಪರ. ೧, ೨, ೩: ಮತ್ತಮಾ ನೃಪಂ ಸಪ್ತಾಂಗಸಂಗಿಯಾಗಿಯುಂ ಸಪ್ತಾಂಗಸಂಗಿಯಲ್ತು . . . ಪರಾರ್ಥಪರನಾಗಿಯುಂ ಪರಾರ್ಥಪರನಲ್ತು (ಪುಷ್ಪಪು. ೯-೩೯ ಪ). [ಸಂ.]

ಪರಾರ್ಥವ್ಯಸನಿ (ನಾ). = ಪರಾರ್ಥಪರ ೧: ಪರಾರ್ಥವ್ಯಸನಿಯೇ ಸಜ್ಜನನು ಸರ್ವಾಧೀಶ ಕೇಳೆಂದ (ಕುಸುಮಾ. ೧೩-೫೮)

[ಪರಾರ್ಥ+ವ್ಯಸನಿ]

ಪರಾರ್ಥಸಾಧಕ (ನಾ). ಇನ್ನೊಬ್ಬರ ಹಿತಚಿಂತನೆ: ತೀರ್ಥವಿನ್ನೇಕ ತಿಥಿಯಿರಲು ಪರಾರ್ಥಸಾಧಕವೆಮಗೆ [ಪಾಠಾಂ. ಸಾಧನತನವೆ] ಪರಮಸ್ವಾರ್ಥವೆಂಬರು ಸುಜನರು (ಸಂಭಪ. ೩೭-೧೫). [ಪರಾರ್ಥ+ಸಾಧಕ]

ಪರಾರ್ಥಸ್ಪೃಹೆ (ನಾ). ೧. ಬೇರೆಯವರ ಐಶ್ವರ್ಯದ ಬಗ್ಗೆ ಇರುವ ಆಸಕ್ತಿ,—ಹಂಬಲ. ೨. [ಕಾವ್ಯಮೀಾ] ಇನ್ನೊಬ್ಬರ ಅಭಿಪ್ರಾಯವನ್ನು ತಾನು ಬಳಸಿಕೊಳ್ಳುವುದು,—ಸ್ವೀಕಾರ ಮಾಡುವುದು: ಭರತಕ್ಷೇತ್ರದ ಮಧ್ಯದೊಳ್ ಮಧ್ಯದೇಶಮುಂಟು ಅದಱ ಪೆಂಪನಭಿವರ್ಣಿಸುವೊಡೆ ವರ್ಣಸಂಕರಂ ಚಿತ್ರದೊಳ್ . . . ಪರಾರ್ಥಸ್ಪೃಹೆ ಗುಣವಿಶೇಷದೊಳ್ . . . ಅಕ್ಕುಮಲ್ಲದೆ ಜನಪದದ ಜನಂಗಳೊಳಿಲ್ಲ (ಜಗವಿ.೨-೧ ಪ). [ಪರಾರ್ಥ+ಸ್ಪೃಹೆ]

ಪರಾರ್ಥಹರ (ನಾ). ಶತ್ರುಗಳ ಸಂಪತ್ತನ್ನು ಅಪಹರಿಸುವವನು: ಸಂಜನಿತಪರಾರ್ಥನಾಗಿಯುಮುದಗ್ರಪರಾರ್ಥಹರಂ ಪ್ರದತ್ತಕಾಮನುಮೆನಿಸಿರ್ದು ಕಾಮಮಥನಂ . . . ಎನಿಸಿರ್ದನಹೀಂದ್ರಭೂಷಣಂ (ರಾಜಶೇ. ೧೪-೧೪೪). [ಸಂ.]

ಪರಾರ್ಥಾನುಮಾನ (ನಾ). [ನ್ಯಾಯ] ಬೇರೆಯವರ ಪ್ರಯೋಜನಕ್ಕಾಗುವ ತರ್ಕ: ಅನುಮಾನವು ಮತ್ತೊಬ್ಬರ ಉಪಯೋಗಕ್ಕಾದರೆ ಅದು 'ಪರಾರ್ಥಾನುಮಾನ' ಎನಿಸುವುದು (ಭಾತತ್ತ್ವ. ೨೬೩).

[ಪರಾರ್ಥ+ಅನುಮಾನ]

ಪರಾರ್ಥಾಪಹಾರ (ನಾ). ಇನ್ನೊಬ್ಬರ ಸಂಪತ್ತನ್ನು ಕದಿಯುವುದು; ಬೇರೆಯವರ ಐಶ್ವರ್ಯವನ್ನು ಅಪಹರಿಸುವುದು: ಜೀವಘಾತಾನೃತವಚನಪರಾರ್ಥಾಪಹಾರಾನ್ಯನಾರೀಗಮ ಬಹ್ವಾರಂಭ ಪಾರಿಗ್ರಹಮೆನಿಸುವವಯ್ದುಂ ಮಹಾಪಾತಕಂಗಳ್ (ಸುಕುಮಾ. ೫-೪೩).

[ಪರಾರ್ಥ+ಅಪಹಾರ]

ಪರಾರ್ಘ್ಯ (ಗು). ೧. ಬಹಳ ಶ್ರೇಷ್ಠವಾದ; ಅತ್ಯುತ್ತಮವಾದ: ಪರಮಜಿನಮಾಲೆ . . . ಮುನಿಮಾಲೆ ನಿರಂತರಮಿಾಗೆ ಭವ್ಯಮಾಲೆಗೆ ಪರಾರ್ಘ್ಯಗುಣರತ್ನಮಾಲೆಯುಂ ದಯೆಯಿಂದಂ (ಆದಿಪು. ೧-೧೫) ; ಶಾಂತಿಜಿನಜನ್ಮಜಲಧಿಗೆ ಶಾಂತಿಪುರಾಣಮೆ ಪರಾರ್ಘ್ಯರತ್ನಮಿದಂ ಪೇಟ್ವಂತು ಕವಿಚಕ್ರವರ್ತಿಯೆ ನೋಂತಂ ಪೆಸರಿಂ ಪುರಾಣಚೂಡಾಮಣಿಯಂ (ಶಾಂತಿಪು. ೧-೧೨) ; ಪರಾರ್ಘ್ಯಮಣಿಮಂಡನಂಗಳುಮಂ ದಿವ್ಯವಸನಕುಸುಮಮಾಲಾನುಲೇಪನಂಗಳುಮನವಟ್ಟಿಸಿ ಕೆಳಿಯುಂ ತಾನುಂ ಕೈಗೈದು (ಲೀಲಾವ. ೧೪-೨೨ಪ). (ನಾ). ೨. ಅತ್ಯಂತ ಶ್ರೇಷ್ಠವಾದುದು; ಅತ್ಯುತ್ಕೃಷ್ಟವಾದುದು: "ಪ್ರಧಾನಂ... ಪರಾರ್ಘ್ಯಂ, ಅಗ್ರಂ . . . ಅಗ್ರಿಯಂ—೧೬ ಮುಖ್ಯವಾಗಿಯೂ, ಉತ್ತಮವಾಗಿಯೂ ಇತರರಿಂದ ಅಪೇಕ್ಷಿಸಲ್ಪಡತಕ್ಕದ್ದಾಗಿಯೂ ಇರುವ ಶ್ರೇಷ್ಠವಾದಂಥಾದ್ದರ ಹೆಸರುಗಳು" (ಸಿದ್ಧಾಂತಶಿ.೩೩೮) ; ಪರಿಹೃತದೋಷಂ ಸಗುಣಾಂ ಪರಾರ್ಘ್ಯಮುತ್ಪ್ರಭಮತರ್ಕ್ಯಸಾಮರ್ಥ್ಯಮಳಂಕರಿಸಿರ್ಕೆ . . . ಮದೀಯಮತಿಮಾನಿನಿಯಂ (ಚಂದ್ರಪು.೧-೬). [ಸಂ.]

ಪರಾರ್ಧ (ಗು). ೧. = ಪರಾರ್ಘ್ಯ ೧. (ನಾ). ೨. ಇನ್ನೊಂದು ಭಾಗ; ಎರಡನೆಯ ಅರ್ಧಭಾಗ; ಉತ್ತರಾರ್ಧ: ಪರಾರ್ಧದೊಳ್ಶಶಮೃಗಾಕ್ಷಿ ಲಘುವೊಂದೆ ಬರ್ಕೆ ಗಡ ರಸದೆಡೆಯೊಳ್ (ಛಂದೋಂಬು. ೪-೨೩೨). ೩. (ಬಹಳ ಹೆಚ್ಚಾದ) ಒಂದು ಸಂಖ್ಯೆ; ಕೋಟ್ಯನುಕೋಟಿ ಬ್ರಹ್ಮನ ಆಯುಃಪ್ರಮಾಣದಲ್ಲಿ ಅರ್ಧಭಾಗ: ಅಂಕೆಗಳ ಶ್ರೇಣಿ ಹದಿನೆಂಟರ ವರೆಗೂ ಹೋಗುತ್ತದೆ. ಈ ಹದಿನೆಂಟುಶ್ರೇಣಿಗಳು ಯಾವುವೆಂದರೆ: ಏಕಂ, ದಶಂ . . . ಅಂತ್ಯ ಮತ್ತು ಪರಾರ್ಧ (ಪ್ರಪಾಇ. ೧, ೩೫೬). [ಸಂ.]

ಪರಾರ್ಘ್ಯ (ಗು). ೧. ಅತ್ಯುತ್ಕೃಷ್ಟವಾದ; ಶ್ರೇಷ್ಠದರ್ಜೆಯ: ಅಂತು ವರತನುವಿನ ಕೈಯೊಳಭೇದ್ಯಕವಚಮುಮಂ ಚೂಡಾರತ್ನಮುಮಂ ರತ್ನಕಟಕಂಬೆರಸು ಪಲವುಂ ಪರಾರ್ಘ್ಯ[ಪಾಠಾಂ. ರ್ಘ್ಯ]ರತ್ನಂಗಳಂ ಕೊಂಡು (ಆದಿಪು. ೧೩-೩೭) ; ಒಡವುಟ್ಟಿದ ತಳದಳಿಸುವ ತುಡುಗೆಯುದುಗುಲದ ನಮೇರುದಾಮಕದೊಳ್ ಪಱ್ಚುಡಿದುದು ಪರಾರ್ಘ್ಯಕೂಟದ ಬೆಡಂಗೊಡಂಬಟ್ಟುದಿರ್ವರಹಮಿಂದ್ರರೊಳಂ (ಶಾಂತಿಪು. ೯-೧೩೦) ; ಪರಾರ್ಘ್ಯಗುಣಮಾಲೆಯಂ ಪಿಡಿವಂತಾ ವಸ್ತ್ರಮಾಲೆಯಂ ಪಿಡಿದು . . . ತಪೋವನಮಂ ಪುಗುವಂತಾ ಬನಮಂ ಪೊಕ್ಕು (ಸುಕುಮಾ. ೧೧-೮೩ ಪ). ೨. ಬಹಳ ದೂರವಾದ. (ನಾ). ೩. ಪ್ರಮುಖವಾದುದು: "ಅಗ್ರ್ಯಂ, ಪ್ರಧಾನಂ . . . ಪರಾರ್ಘ್ಯಂ . . . ಅಗ್ರಣೀಃ—ಈ ೧೩ ಮುಖ್ಯಂ" (ಹಲಾಯು. ೧೧೫-೫) ; "ಅಗ್ರಂ ಪ್ರಧಾನಂ ಪುರೋಗ್ರಂ ಪರಾರ್ಘ್ಯಂ . . . ಮುಖ್ಯಕ್ಕೆ ನಾಮಂ" (ಮಂಗರಾ. ೧೨೬-೪). [ಸಂ.]

ಪರಾವರ್ತ (ನಾ). ೧. ವಿಮುಖವಾಗುವಿಕೆ; ಹಿಂದಿರುಗುವಿಕೆ. ೨. ವಿನಿಮಯ. ೩. ಜೀರ್ಣೋದ್ಧಾರ; ಪರಿಷ್ಕರಣ.

ಪರಾವರ್ತಗೊಳಿಸು = ವಿಮುಖವಾಗುವಂತೆ ಮಾಡು; ಹಿಂದಿರುಗಿಸು: ರಾಘವ ಅಕೆಯನ್ನು ನಾಟಕಗಳಿಂದ ಪರಾವರ್ತಗೊಳಿಸಿದುದಕ್ಕೆ ಇದೊಂದೇ ಕಾರಣವಲ್ಲ (ಗಂಮಾಯು. ೧೪೬). [ಸಂ.]

ಪರಾವರ್ತಕ (ನಾ). (ಕಿರಣ, ಬಿಂಬ ಮೊದಲಾದುವುಗಳನ್ನು) ಪ್ರತಿಫಲಿಸುವ ಸಾಧನ: ಗೋಲಾಂತರ ಕಾಚಿನಂತೆ ಧಾತುಗಳ ಪಾತ್ರೆಗಳನ್ನು ಮಾಡಿರುತ್ತಾರೆ. ಅವುಗಳ ಒಳ ಮೈಯು ಕನ್ನಡಿಯ ಹಾಗೆ ನುಣುಪಾಗಿ ಹೊಳೆಯುತ್ತಿರುತ್ತದೆ. ಈ ಪಾತ್ರೆಗಳಿಗೆ ಪರಾವರ್ತಕಗಳೆಂಬ ಹೆಸರುಂಟು (ಮುಂಬಯಿ. ೬-೯೦). [ಸಂ.]

ಪರಾವರ್ತನ (ನಾ). ೧. ತಿರುಗುವುದು; ಸುತ್ತುವಿಕೆ: ಭವಪರಿಣಾಮಪರಾವರ್ತನದಿಂ ಬಂದು ವಿಂಧ್ಯಾಟವೀಮಧ್ಯದೊಳ್ ಸೋಮನಾಮಧೇಯತಾಪಸಂಗಂ ಶ್ರೀದತ್ತಿಗಂ ಸೋಮಿಲನೆಂಬೊಂ ಮಗನಾಗಿ (ಶಾಂತಿಪು. ೯-೯೧ ಪ). ೨. ಹಿಂದಿರುಗುವುದು; ವಿಮುಖತೆ; ಹಿಂದೆಗೆಯುವಿಕೆ. ೩. ಬದಲಾವಣೆ; ಪಲ್ಲಟ; ಪರಿವರ್ತನೆ: ಅಟ್ಟಾಯಿಂದಿರ್ವರ್ ದೇವಿಯರಾ ಕೃತಿಯ ಪರಾವರ್ತನದಿಂ ಮಾನವಸ್ತ್ರೀರೂಪದಿಂ ಪ್ರಿಯಮಿತ್ರೆಯಂ ನೋಡಲ್ಬಂದು (ಶಾಂತಿಪು. ೯-೧೧೦ ಪ) ; ಪಾಪಿಗಳ ಪರಾವರ್ತನಕ್ಕಾಗಿ ಅಲ್ಲದಿದ್ದರೆ ಸಾಧು ಇರಬೇಕಾದರು ಏಕೆ? (ಕಗದ್ಯ. ೧೨೦). ೪. [ವಿಜ್ಞಾ] (ಬೆಳಕಿನ ಕಿರಣಗಳು ಪ್ರತಿಫಲಿತವಾಗಿ) ಹಿಂದಿರುಗುವಿಕೆ; ಮರುಕೊಳಿಸುವಿಕೆ: ಹವೆಯಲ್ಲಿ ಪ್ರಕಾಶಕಿರಣಗಳ ವಕ್ರೀಭವನದಿಂದಲೂ ಪರಾವರ್ತನದಿಂದಲೂ ಇಂದ್ರಧನುವು ಮೂಡುತ್ತದೆ (ಮುಂಬಯಿ. ೬-೧೪೬). ೫. [ಜೈನ] ಅಶುಭನಾಮಪ್ರಕೃತಿಗಳಲ್ಲಿ ಒಂದು: ಬಬಾಯಮಂತರ್ಮುಹೂರ್ತಕಾಲಂ ಪ್ರಮತ್ತಾಪ್ರಮತ್ತಪರಾವರ್ತನಸಹಸ್ರಂಗೆಯ್ದು . . . ಆಯುಃಕರ್ಮಮೆನುಬುಃಸಿ (ಆದಿಪು. ೧೦-೧೪ ಪ) ; ಮತ್ತಾ ಪ್ರಮತ್ತಪರಾವರ್ತನಸಹಸ್ರಂಗಳನಂತರ್ಮುಹೂರ್ತದೊಳ್ ನಿರ್ವರ್ತಿಸಿ (ಜಾಧಪು. ೧೬-೧೨೬ ಪ). [ಪರ್ಯ+ಆವರ್ತನ]

ಪರಾವರ್ತನಗೊಳಿಸು (ಕ್ರಿ). ವಿಮುಖಗೊಳಿಸು : ಮಗನ ಮುಂದೆ ಒಮ್ಮೆ ಎಲ್ಲ ಇತಿಹಾಸವನ್ನು ಹೇಳಿ ಅವನನ್ನು ಇದರಿಂದ ಪರಾವರ್ತನ ಗೊಳಿಸಬೇಕೆಂದು ಶ್ರೀನಿವಾಸನು ಅನೇಕ ಸಲ ಯೋಚಿಸಿದನು (ರಂಗರೂ. ೧೯೮). [ಪರಾವರ್ತನ+ಕೊಳ್$_1$+–ಇಸು$_3$]

ಪರಾವರ್ತನೆ (ನಾ). ೧. = ಪರಾವರ್ತನ ೨ : ಅವನು ನೆನ ಹೇಳುತ್ತಿದ್ದನು. ಓಸ್ಪರ್ನನು ಅವನನ್ನು ಅದರಿಂದ ಪರಾವರ್ತನೆ ಹೊಂದಿಸುತ್ತಿದ್ದನು (ಬೆಂಜನ್. ೬೨). ೨. = ಪರಾವರ್ತನ ೩ : ಈ ಭಾವನೆಗಳು ಜೀವಾಳದಲ್ಲಿ ಬೆರೆತು ಜೀವನದ ಕ್ಷೇತ್ರದಲ್ಲಿ ಪರಾವರ್ತನೆಯನ್ನು ಹೊಂದಿದಾಗ ಮಾತ್ರ ಕಾವ್ಯಕ್ಕೆ ವ್ಯಕ್ತಿತ್ವವು ಬರುವದು (ಗೊತ್ತುಗು. ೨೯). [ಪರ್ತ$_3$+ಅವರ್ತನೆ]

ಪರಾವರ್ತಿಸು (ಕ್ರಿ). ಬದಲಾಯಿಸು ; ಮಾರ್ಪಾಟು ಮಾಡು : ಹೀಗೆ ಎಷ್ಟೋ ಮಾತುಗಳಿಗೆ ತಾನೆ ಹೊಣೆ ಏನೋ ಎನ್ನುತ್ತಿರುವಂತೆಯೂ ಆಗಾಗ ಅವನ ಮುಖಭಾವಗಳನ್ನು ಪರಾವರ್ತಿಸುತ್ತಿತ್ತು (ಅಪನಾ. ೪). [ಪರಾವರ್ತನ + – ಇಸು$_3$]

ಪರಾವಲಂಬನ (ನಾ). ಬೇರೆಯವರನ್ನು ಆಶ್ರಯಿಸಿರುವುದು ; ಮತ್ತೊಬ್ಬರನ್ನು ಆಸರೆಯನ್ನಾಗಿ ಮಾಡಿಕೊಂಡಿರುವಿಕೆ : ಆಶ್ರಯಜೀವನವು ಒಂದು ಬಗೆಯ ಪರಾವಲಂಬನ (ಸಸ್ಯಶಾ. ೧೦೬). [ಪರ$_3$ + ಅವಲಂಬನ]

ಪರಾವಲಂಬಿ (ಗು). ೧. ಬೇರೆಯವರನ್ನು ಆಶ್ರಯಿಸಿರುವ ; ಮತ್ತೊಬ್ಬರನ್ನು ಆಧಾರವನ್ನಾಗಿ ಉಳ್ಳ. (ನಾ). ೨. ಬೇರೆಯವರನ್ನು ಆಶ್ರಯಿಸಿರುವುದು ; ಉಪಜೀವಿ. ೩. = ಪರಾವಲಂಬಿ ಸಸ್ಯ : ಹರಿತ್ತಿಲ್ಲದ ಸಸ್ಯಗಳಿಗೆ ಆಹಾರ ತಯಾರು ಮಾಡಲು ಶಕ್ತಿಯಿಲ್ಲ. ಇವು ಸಹಿತ ಪರಾವಲಂಬಿಗಳೆ (ಸಸ್ಯಶಾ. ೧೦೬); ಪಕ್ಕದ ಪೊದರುಗಳ ಕೆಳಗೆ ಒಂದು ಬಗೆಯ ಪರಾವಲಂಬಿ (Parasite) ಬೆಳೆಯುತ್ತಿತ್ತು (ಹಸುಹೊ. ೧೫೨). ೪. ಪರಾಧೀನ ವ್ಯಕ್ತಿ : ನಾವು ಈ ತನಕವೂ ಪರಾವಲಂಬಿಗಳಾದುದು ಹೆಚ್ಚಾಯಿತು (ಕೃಲಾಕ. ೫೦); ಆರ್ಥಿಕವಿಷಯದಲ್ಲಿ ಮಹಿಳೆ ಪರಾವಲಂಬಿಯಾಗಿದ್ದರೂ ಸಂಯುಕ್ತ ಕುಟುಂಬವು ಅವಳಿಗೆ ಎಲ್ಲ ವಿಧದ ರಕ್ಷಣೆಯನ್ನು ಒದಗಿಸಿತ್ತು (ಕರ್ನಾಕ. ೬೦). [ಪರ$_3$+ಅವಲಂಬಿ]

ಪರಾವಲಂಬಿಸಸ್ಯ (ನಾ). ಆಹಾರಕ್ಕಾಗಿ ಇತರ ಸಸ್ಯಗಳನ್ನು ಅವಲಂಬಿಸುವ ಸಸ್ಯ : ಇವನ್ನು ಪೂರ್ಣ ಪರಾವಲಂಬಿ (Complete—Parasite) ಸಸ್ಯಗಳೆಂದು ಕರೆಯಬಹುದು (ಸಸ್ಯಶಾ. ೧೦೬). [ಪರಾವಲಂಬಿ + ಸಸ್ಯ]

ಪರಾವಾಕ್ಯ (ನಾ). ಶಬ್ದೋತ್ಪತ್ತಿಯ ನಾಲ್ಕು ಅವಸ್ಥೆಗಳಲ್ಲಿ ಒಂದು; Pಪರೆ, ಪಶ್ಯಂತಿ, ಮಧ್ಯಮೆ, ವೈಖರಿಗಳೆಂಬುವು ನಾಲ್ಕು ಅವಸ್ಥೆಗಳು : ಪರಾವಾಕ್ ಪಶ್ಯಂತೀವಾಕ್ ಮಧ್ಯಮಾವಾಕ್ ವೈಖರೀವಾಕ್‌ಯೆಂದು ಚತುರ್ವಿಧಂ (ವಿವೇಕ. ೧೬೯). [ಸಂ. ಪರಾವಾಕ್]

ಪರಾವಿದ್ಯೆ (ನಾ). [ವೇದಾಂತ] ಎರಡು ಬಗೆಯ ವಿದ್ಯೆಗಳಲ್ಲೊಂದು ; ಆಧ್ಯಾತ್ಮ ವಿದ್ಯೆ; ಬ್ರಹ್ಮವಿದ್ಯೆ: ಭಾರತೀಯರು ಆಧ್ಯಾತ್ಮಿಕ ಸಾಧನೆಗೆ ಸಹಾಯಕವಾದುದನ್ನು ಪರಾವಿದ್ಯೆಯೆಂದೂ . . . ಕರೆದರು (ಭಾರದ. ೩೯೩) ; ವೈದಿಕವಾಙ್ಮಯಶಿಕ್ಷಣವು . . . ಪರಾವಿದ್ಯೆಯನ್ನು ಗಳಿಸುವ ತ್ಯಾಗಕ್ಕೆ ಸಿದ್ಧವಾಗಿದ್ದ ಬ್ರಾಹ್ಮಣಕುಟುಂಬದವರಿಗೆ ಮಾತ್ರವೇ ದೊರೆಯುವಂತಾಯಿತು (ಕ್ರಿಯಾಶಿ. ೯೧). [ಸಂ. ಪರಾವಿದ್ಯಾ]

ಪರಾವೃತ್ತ (ಗು). ೧. ಸುತ್ತ ತಿರುಗಿದ. ೨. ಹಿಂದಿರುಗಿದ ; ವಿಮುಖವಾದ ; ಹಿಮ್ಮೆಟ್ಟಿದ. (ನಾ). ೩. ಪ್ರತಿಫಲನ ; ಮರುಕೊಳಿಸುವಿಕೆ. ೪. ಸುತ್ತುವುದು :(೬). ೫. [ನಾಟ್ಯ] ಹತ್ತೊಂಬತ್ತು ಶಿರೋಭೇದಗಳಲ್ಲಿ ಒಂದು; P "ಹಿಂಭಾಗವನ್ನು ನೋಡುವಂತೆ ತಲೆಯನ್ನು ತಿರುಗಿಸುವುದು. ವಿ — ಕೋಪ, ನಾಚಿಕೆ, ಹಿಂದುಗಡೆ ನೋಡುವುದು, ಪರಾವೃತ್ತಾನುಕರಣ; ಇವುಗಳನ್ನು ತೋರಿಸುವಾಗ" (ಲಾಸ್ಯರಂ. ೨೨೨ ಗದ್ಯಾನುವಾದ) : ಧುತವಿಧುತಮುಂ . . . ಪರಾವೃತ್ತೋತ್ಕ್ಷಿಪ್ತವಧೋಮುಖಂ . . . ಕೇಳ್ ಸಮಂತು ಹತ್ತೊಂಬತ್ತುಂ ಶಿರಭೇದಮೆಂದು ಪೇಳ್ವರ್ (ಲಾಸ್ಯರಂ. ೧–೭೭); ಹಿಂದಕೆ ತಿರುಗಿದ ಮೊಗಮಾದಂದದ ಶಿರಮುದು ಪರಾವೃತ್ತಂ (ಲಾಸ್ಯರಂ. ೧–೮೪). ೬. ಮೂವತ್ತೆರಡು ಬಗೆಯ ಅಂಗವಿನ್ಯಾಸಗಳಲ್ಲಿ ಒಂದು : ಪರಾವೃತ್ತಂ . . . ಸ್ವಸ್ತಿಕ ರೇಚಿತಮಿಂತುಂ ವಿಸ್ತರ ಮಾದಂಗಹಾರ ಮೂವತ್ತೆರಡುಂ . . . ವಿರಚಿಸುವೆಂ (ಲಾಸ್ಯರಂ. ೫–೬). ೭. ಹತ್ತು ಬಗೆಯ ಜಂಘಾಭೇದಗಳಲ್ಲಿ ಒಂದು ; P "ಕಾಲನ್ನು ಹಿಂದಕ್ಕೆ ಮಾಡಿ ಮಂಡಿಯನ್ನು ಊರಿ ಜಂಘೆಯನ್ನು ನೆಲದ ಮೇಲಿಡುವುದು" (ಲಾಸ್ಯರಂ. ೨೬೪ ಗದ್ಯಾನುವಾದ) : ಅವರ್ತಿತ, ನತ, ಉತ್ಕ್ಷಿಪ್ತ, ಉದ್ವಾಹಿತ, ಪರಿವರ್ತಿತ, ನಿಸೃತ, ಪರಾವೃತ್ತ, ತಿರಶ್ಚೀನ, ಬಹಿರ್ಗತ, ಕಂಪಿತ – ಈ ಹತ್ತು ಜಂಘಾಭೇದಂಗಳ್(ಲಾಸ್ಯರಂ.೨–೧೪೪ವ); ಮುಂದಕ್ಕೆ ನೀಡೆ ನಿಸೃತಂ ಚಂದದಿ ಪೆಜಗೆಯ್ದು ಧರೆಯನೊಂದೆ ಪರಾವೃತ್ತಮೊಂದು ಬಹಿಃಪಾರ್ಶ್ವಂ ಧರೆಯೊಂದೆನಿಸುವ ಜಂಘೆಯೇ ತಿರಶ್ಚೀನಾಖ್ಯಂ (ಲಾಸ್ಯರಂ. ೨–೧೪೭). ೮. ಇಪ್ಪತ್ತುಮೂರು ವಿಧವಾದ ದೇಶೀಯ ಸ್ಥಾನಕಗಳಲ್ಲಿ ಒಂದು ; P "ಒಂದು ಕಾಲಿನ ಹಿಮ್ಮಡಿಯಲ್ಲಿ ಇನ್ನೊಂದು ಕಾಲಿನ ಹೆಬ್ಬೆರಳೂ, ಇನ್ನೊಂದು ಕಾಲಿನ ಹಿಮ್ಮಡಿಯಲ್ಲಿ ಮೊದಲ ಕಾಲಿನ ಕಿರುಬೆರಳೂ ಸೇರಿರುವಂತೆ ನಿಂತುಕೊಳ್ಳುವುದು. [ಪಾದಗಳನ್ನು ಹಿಂದು ಮುಂದು ಮಾಡಿ ಕೂಡಿಸಿ ನಿಂತುಕೊಳ್ಳುವುದು.]" (ಲಾಸ್ಯರಂ. ೩೩೦ ಗದ್ಯಾನುವಾದ) : ಸ್ವಸ್ತಿಕ, ವರ್ಧಮಾನ, ನಂದ್ಯಾವರ್ತ . . . ಏಕಜಾನುಗತ, ಪರಾವೃತ್ತ . . . ವೃಷಭಾಸನ ಈ ಇಪ್ಪತ್ತುಮೂಱು ದೇಶೀಯ ಸ್ಥಾನಕಂಗಳ್ (ಲಾಸ್ಯರಂ. ೭–೧೨ ವ) ; ಪದಮೊಂದಱ ಮಡದೊಳ್ ಬಂದೊಡದಿರೆ ಮತ್ತೊಂದು ಪಾದದಂಗುಟಮಿಂತಾ ಪದಮಡಕೆ ಮೊದಲ ಪಾದದೊಳು ದಿಸಿದ ಕಿಱುವೆರಲೆ ಪತ್ತಿರೆ ಪರಾವೃತ್ತಂ (ಲಾಸ್ಯರಂ. ೭–೪೨).

ಪರಾವೃತ್ತವಾಗು = ಹಿಂದಕ್ಕೆ ಹೋಗು ; ಹಿಂದಕ್ಕೆ ಚಿಮ್ಮಿಸಲ್ಪಡು : ಒಂದು ವರ್ಷದೊಳಗೆ ಭೂಮಿಯಿಂದ ಪರಾವೃತ್ತವಾಗಿ ಆಕಾಶಕ್ಕೆ ಹೋಗುವ ಸೆಕೆಯು ಸುಮಾರು ೨೮ ಘಟಿ ದಪ್ಪಾದ ಬರ್ಫದ ಕವಚವನ್ನು ಕರಗಿಸುವಷ್ಟು ಮಾತ್ರವುಂಟು (ಮುಂಬಯಿ. ೫–೨); ಧ್ವನಿಯ ತೆರೆಯು 'ಕ' ಪರಾವರ್ತಕದ ಮೇಲೆ ಅಪ್ಪಳಿಸಿ ಅಲ್ಲಿಂದ ಪರಾವೃತ್ತವಾಗಿ . . . ಹೋಗುತ್ತದೆ (ಮುಂಬಯಿ.೬–೯೧).[ಪರ್ತ$_3$ + ಅವೃತ್ತ]

ಪರಾವೃತ್ತತಲ (ನಾ). [ನಾಟ್ಯ] ಮೂವತ್ತೈದು ವಿಧವಾದ ದೇಶೀಯ ಭೌಮಚಾರಿಗಳಲ್ಲಿ ಒಂದು; P "ಅಂಗಾಲನ್ನು ಮೇಲಕ್ಕೆ ಮಾಡಿ ಕಾಲನ್ನು ಹಿಂದಕ್ಕೆ ನೀಡುವುದು" (ಲಾಸ್ಯರಂ. ೩೨೧ ಗದ್ಯಾನುವಾದ) : ರಥಚಕ್ರ, ಪರಾವೃತ್ತತಲ, ನೂಪುರ . . . ಸಮುಸ್ಖಲಿತ ; ಈ ಮೂವತ್ತೈದು ದೇಶೀಯ ಸಂಬಂಧದ ಭೌಮಚಾರಿಗಳು (ಲಾಸ್ಯರಂ. ೬–೧೭ ವ) ; ಪದಮೊಂದಂ ಪೊಜಗೆ ನಿಮಿರ್ದೋದವಲ್ ತಲ ಮೂರ್ಧ್ವದಿಂ ಪರಾವೃತ್ತತಲಂ (ಲಾಸ್ಯರಂ. ೬–೬೩). [ಪರಾವೃತ್ತ+ತಲ]

ಪರಾವೃತ್ತವದನ (ನಾ). ೧. ಹಿಂದಕ್ಕೆ ತಿರುಗಿದ ಮುಖ. ೨. ಮುಖವನ್ನು ತಿರುಗಿಸಿಕೊಂಡಿರುವವನು ; ವಿಮುಖನಾದವನು: ಪೊಸಗೆಂಪು ಪಸರಿಸಿದ ಕಣ್ಗಳಂ ಬಲ್ಪಿಂ ಬರೆತೆಗೆದು ಮಾನವಮದನಂ ಪರಾವೃತ್ತವದನನಾಗೆ (ಲೀಲಾವ. ೪–೧೪೬ ವ). [ಪರಾವೃತ್ತ + ವದನ]

ಪರಾವೃತ್ತಿ (ನಾ). ಕೊಡುಕೊಳ್ಳುವಿಕೆ ; ವಿನಿಮಯ : "ಪರಾವೃತ್ತಾಖ್ಯಂ ವಿನಿಮಯನಂ" (ಸಮ್ಮತಿ. ೬೨-೬೪). [ಸಂ.]

ಪರಾಶಕ್ತಿ (ನಾ). ೧. ಮೂಲಶಕ್ತಿ; ಆದಿ ಪ್ರಕೃತಿ. ೨. [ವೀಶೈ] ಚಿಚ್ಛಕ್ತಿ, ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಗಳೆಂಬ ಶಿವನ ಆರು ಶಕ್ತಿಗಳಲ್ಲಿ ಒಂದು: ತನ್ನಿಚ್ಛೆಯಿಂ ಶಿವಂ ತೆನೆಯಲಾಗಿ ಅವನ ಚಿತಾಶಕ್ತಿ ತೋಱದ ಸಹಸ್ರಾಂತದ ವಿಪುಲಪರಾಶಕ್ತಿಯುಂ ಸಹಸ್ರಾಂತಭವನುವಿಚಾರದಿಂದಾದಿಶಕ್ತಿಯಾಕೆಯು ಸಹಸ್ರಾಂತದಿಂದಿಚ್ಛೆಯಾಯ್ತು (ವೀಶೈಪ್ರ. ೧೧-೪೫-೧೬); . ಶಾಂಕ್ಕತೀತ ಕಲೆಯೆಂಬ ಪರಾಶಕ್ತಿಯುಂ . . . ನಿವೃತ್ತಿಕಲೆಯೆಂಬ ಕ್ರಿಯಾಶಕ್ತಿಯುಂ ಎಂದು ಆರು ವಿಧವಾದ ಶಕ್ತಿಗಳಿರುವವು (ಶಿವಸಂಪ್ರ. ೪೦-೨೫ ಟೀಕೆ); ಈ ಶಕ್ತಿ ಪರಮಾತ್ಮನಂತೆಯೇ ಸಚ್ಚಿದಾನಂದರೂಪಿಣಿಯಾಗಿ ಪರಾಶಕ್ತಿ ಎನಿಸಿದೆ (ಶಕ್ತಿವಿ. ೩೦); ಆಗ ಶಿವನೊಳಿರುವ ಶಕ್ತಿಯು ಚಿಚ್ಛಕ್ತಿ, ಪರಾಶಕ್ತಿ . . . ಕ್ರಿಯಾಶಕ್ತಿ ಎಂಬ ಪಡ್ರೂಪದಿಂದ . . . ಷಡ್ಲಿಂಗಗಳನ್ಕಾಶ್ರಯಿಸಿರು (ಭಾರದ. ೨೫೩). [ಸಂ.]

ಪರಾಶರ (ನಾ). ೧. (ಧರ್ಮಶಾಸ್ತ್ರವನ್ನು ಬರೆದ) ವ್ಯಾಸಮುನಿಯ ತಂದೆಯ ಹೆಸರು : ಸತ್ಯವತಿಗೆ ಪುನಃಕನ್ಯಾಭಾವಮಂ ದಯೆಗೆಯ್ದು ಪರಾಶರಂ ಪೋದಂ (ಪಂಪಭಾ.೧-೬೯ ಪ); ಮತ್ಸ್ಯಗಂಧಿಗಿ ಬೆಳ್ವುತಿರ್ದಳು ಸಂಗವಾಯ್ತು ಪರಾಶರಪ್ರತಿಯ (ಕುಮ್ಮಾಭ. ೨-೨೬); ವರಪರಾಶರ ಭರದ್ವಾಜ . . . ಮುಖ್ಯಮುನಿಗಳಾ ಕ್ರತುವರದೊಳು (ಜೈಮಿಭಾ. ೬೬-೬೯). 'ಪರಾಶರಸ್ಮೃತಿ' ಪರಾ. ೨. ವ್ಯಾಸಮುನಿ : "ವೈತಂಪಾಯನಂ ಸತ್ಯವಾದಿ ಪ[ಪಾಠಾಂ.ಪಾ]ರಾಶರಂ ವ್ಯಾಸನಕ್ಕುಂ" (ಮುಂಗರಾ. ೬೬-೧೦); ಪರಾಶರ . . . ಉಪಮನುಸ್ಮೃತೊದಲಾದಶ್ವಾತೀತಿ ಸಹಸ್ರಮುತೀಶ್ವರರ್ಗಾನಂತಾಶ್ರಯಂಗಳುಂ (ವಿವೇಳ. ೧೬೪); ಯದುಳುಲ ವಂತಲಳ ಪರಾಶರಾನತ ದೇವ ರಕ್ಷಿಸು ನಮ್ಮನು (ಹರಸಾ. ೧೧೧). [ಸಂ.]

ಪರಾಶರಪುರಾಣ (ನಾ). ಪರಾಶರಮುನಿಯಿಂದ ರಚಿತವಾದ ಪುರಾಣ : ಸನತ್ಕುಮಾರಪುರಾಣ . . . ಸೌರಪುರಾಣ ಪ[ಪಾಠಾಂ.ಪಾ]ರಾಶರಪುರಾಣ . . . ಭಾಗ್ಯವಪುರಾಣವೆಂಬವೇ ಆಯಾಯ ನಾಮಧೇಯ ಮುಳ್ಳವಱಿಂ ನಿರೂಪಿತಂಗಳಾದ ಹದಿನೆಂಟು ಉಪಪುರಾಣಂಗಳು (ವಿವೇಳ. ೯). [ಪರಾಶರ+ಪುರಾಣ]

ಪರಾಶರಸುತ (ನಾ). ಪರಾಶರಮುನಿಯ ಮಗ; ವ್ಯಾಸ : ಹಿಮಗಿರಿಯೋರ್ವ ಧನಮಂ ತರಿಸವೇಳ್ಪುದೆಂದು ಆ ಪರಾಶರಸುತಂ ನೇಮಿಸಿದೊಡೆ (ಜೈಮಿಭಾ. ೫-೬೦). [ಪರಾಶರ+ಸುತ]

ಪರಾಶರಸ್ಮೃತಿ (ನಾ). ಪರಾಶರಮುನಿಯಿಂದ ರಚಿತವಾದ ಸ್ಮೃತಿ : ಮನುಸ್ಮೃತಿ ಅತ್ರಿಸ್ಮೃತಿ . . . ಪರಾಶರಸ್ಮೃತಿ ವ್ಯಾಸ ಸ್ಮೃತಿ . . . ಎಂದಿವೇ ಆಯಾಯ ನಾಮಧೇಯಮುಳ್ಳವಱಿಂದುತ್ತ ಮೂದ ಹತ್ತೊಂಬತ್ತು ಧರ್ಮಶಾಸ್ತ್ರಂಗಳವಱೊಳಗೆ . . . ಕಲಿಯುಗದಲ್ಲಿ ಪರಾಶರಸ್ಮೃತಿಧರ್ಮವೇ ಮುಖ್ಯವಾಗಿಹುದು (ವಿವೇಳ. ೫); ಒಟ್ಟನಲ್ಲಿ ಕಲಿಯುಗಕ್ಕೆ ಪರಾಶರಸ್ಮೃತಿಯು ಹೆಚ್ಚು ಪ್ರಾಮಾಣಿಕವೆಂದು ಅಂಗೀಕೃತವಾಗಿದೆ (ಭಾರದ. ೫೩). [ಪರಾಶರ+ಸ್ಮೃತಿ]

ಪರಾಶರಿ (ನಾ). ೧. ಒಂದು ಕಡೆಯಲ್ಲಿ ನೆಲೆಯಾಗಿ ನಿಲ್ಲದ ಭಿಕ್ಷು,—ಸಂನ್ಯಾಸಿ ; ಪರಿವ್ರಾಜಕ. ೨. ತಪಸ್ವಿ ; ಸಂನ್ಯಾಸಿ : "ಪರಾಶರೀ, ಬ್ರೂತೇ . . . ತಾಪಸಃ—ಈ ೨ ತಪಸ್ವಿ" (ಹಲಾಯು. ೬೮-೨೫೫); "ತಾಪಸಂ . . . ಪರಾಶರಿ ತಪಸ್ವಿಯೆನಿಸ್ಕುಂ" (ಮುಂಗರಾ. ೬೬-೯).

[ಸಂ. ಪರಾಶರಿನ್]

ಪರಾಶ್ರಯ (ನಾ). ಬೇರೆಯವರ ಆಸರೆಯಲ್ಲಿರುವಿಕೆ ; ಪರಾಧೀನತೆ : ಅಲ್ಲಿ ಪರಾಶ್ರಯಂ ಪುಣ್ಯಬಂಧಸ್ಯಾಶ್ರಯಂ ನವಿಳ್ಪ ನಿರ್ಜಳ್ಪ ಮೆಂದಿತ್ತೆಜಂ (ಪಸಾದ. ೧೧೬); ಸ್ವಾತಂತ್ರ್ಯವಿಲ್ಲದ ಪರಾಶ್ರಯ ಜೀವಕ್ಕಿಂತ ಅನಪತ್ಯರಾದ ಸನ್ಯಾಸಿಯಲ್ಲುವೆಂದು ಅನರ ಅಧಿಪ್ರಾಯ (ಪುಣ್ಯಾಸ. ೧೧೧ ಪೀಠಿಕೆ). [ಪರ+ಆಶ್ರಯ]

ಪರಾಶ್ರಿತ (ಗು). ೧. ಬೇರೆಯವರ ರಕ್ಷಣೆಯಲ್ಲಿರುವ; ಮತ್ತೊಬ್ಬರ ಅಧೀನದಲ್ಲಿರುವ. (ನಾ). ೨. ಬೇರೆಯವರ ರಕ್ಷಣೆಯಲ್ಲಿರುವವನು ; ಪರಾಧೀನ : ತಾನು ಪರಾಶ್ರಿತನೆಂಬುದೇ ಒಂದು ಕೀಳಂಮೆಯಾಯಿತು ಅವಗೆ (ಕೂಡಿ). [ಪರ+ಆಶ್ರಿತ]

ಪರಾಸ (ನಾ).೧. ಹಾಸುಗೆ ಹಾಸುವ, ಕಸ ಬಳಿಯುವ ಮುಂತಾದ ಕೆಲಸಕ್ಕಾಗಿ ಶ್ರೀಮಂತರ ಬಳಿಯಿರುವ ನೌಕರ. ೨. ಸೇವಕ ; ನೌಕರ: ಜೋಪದಾರ, ಮಹಲದಾರ . . . ಪರಾಸರು, ಗೊಲ್ಲ, ಬೋಯಿ . . . ಮುಂತಾದವರು ಅಲಾಹಿದ. ಸಾಗಿರ್ದ್ಹೇಷಾಳೇಂ ಪಾಪಲ್ (ಮಹಾಪ್ರ. I, ೨೨೪). [<—ಪಾರ. ಪಂ. ಫರಾಶ್ ; ಮರಾ.ಪರಾಸ್]

ಪರಾಸನ (ನಾ). ಕೊಲ್ಲುವುದು ; ಕೊಲೆ ; ವಧೆ : "ಪ್ರಮಾಪಣಂ, ನಿಬರ್ಹಣಂ, ನಿಕಾರಣಂ, ನಿಕಾರಣಂ, ಪ್ರದಾಸನಂ, ಪರಾಸನಂ . . . ವಧಃ — ೪೦ ಕೊಲ್ಲುವುದಕ್ಕೆ ಹೆಸರುಗಳು, ಸಂಹಾರ ಮಾಡುವಿಕೆ" (ನಿಘಂ೨ಪ. ೨೬೨). [ಸಂ.]

ಪರಾಸು (ಗು). ೧. ಜೀವ ಹೋದ ; ನಿರ್ಜೀವವಾದ ; ಸತ್ತ. (ನಾ). ೨. ಮರಣಹೊಂದಿದ ವ್ಯಕ್ತಿ : "ಪರಾಸುಃ . . . ಸಂಸ್ಕೃತಃ, ಮೃತಃ—ಈ ೫ ಶಬ್ದಾರ್ಥಂ" (ಪಲಾಯು. ೧೦೪-೬); ಪುಟ್ಟಿದಾಗಳೆ ಮಾತಾಪಿತೃಯುಗಳಂಗಳ್ ನೀಂತುಮಾಗುಂಗಳಿಪುವಂ ಪರಾಸುಗಳಾಗೆ (ಆದಿಪು. ೫-೪೧ ಪ); ಶತ್ರುತಿ ಪರಾಸುವಾದಳೆ ಗೆಲ್ದು ಪರೇತಪಸಕ್ಕೆ ಕೊಂದು ಪೋಪುದುಂ (ಸುಳುಮಾ. ೬-೮ ಪ); ಅಂತಾ ಪರಾಕ್ರಮಧನಂ ಹರಿ ಪರಾಸುವಪ್ಪುದುಂ (ವಧ್ಯಮಾ. ೫-೪ ಪ). [ಸಂ.]

ಪರಾಸ್ಕಂದ (ನಾ). ಹೇಡಿ : "ಪರಾಜಿತಃ, ಪರಾಸ್ಕಂದಃ, ಪರಜಾತಃ, ಪಕ್ಕಿಥಃ—ಈ ಹೇಡಿ ಅಳ ಹೆಸರು" (ನಿಘಂ೨ಪ. ೩೨೨). [ಸಂ.]

ಪರಾಸ್ಕಂದಿ (ಗು). ೧. ಪರರ ಮೇಲೆ ಆಕ್ರಮಣ ಮಾಡುವ. (ನಾ). ೨. ಕಳ್ಳ ; ದರೋಡೆಕೋರ : "ಪರಮೋಷಿ . . . ಪರಾಸ್ಕಂದಿ ಖಳಂ . . . ಎನಿಪ್ಪನಳ್ಕುಂ ಸ್ತೇನಂ" (ಪಸ್ತುತೀ. ೬೫-೪೧); "ಆ ಪಾರಿಪಂಥಿಕಂ . . . ಪರಾಸ್ಕಂದಿ . . . ಮುಲಿ ಮ್ಮುಜನೆನಲ್ ಕಳ್ಳಂಗೆ ನಾಮಮುಳ್ಕುಂ" (ಮುಂಗರಾ. ೬೬-೪).

[ಸಂ. ಪರಾಸ್ಕಂದಿನ್]

ಪರಾಸ್ತ (ಗು). ೧. ಎಸೆದ ; ಬಿಸಾಡಿದ. ೨. ಹೊರದಬ್ಬಿದ ; ಹೊರದೂಡಿದ. ೩. ಖಂಡಿಸಿದ ; ತಿರಸ್ಕರಿಸಿದ. ೪. ಸೋತು ಹೋದ ; ಹಿಮ್ಮೆಟ್ಟಿದ. (ನಾ). ೫. ಹಿಮ್ಮೆಟ್ಟಿದವನು ; ಸೋತವನು : ದೇವಿಯ ಕೌಶಲದಿಂದೊಂದು ವಿನಾಡಿಯಲ್ಲಾ ಐನೂರು ಮಂದಿ ಶುಂಭನಿಯ ನಿಶಾಯಿಗಳೂ ಪರಾಸ್ತರಾಗಿ ಹೋದರು (ದೇವೀಜಾ. ೧೫೧). [ಸಂ.]

ಪರಾಹ್ಣ (ನಾ). ಹಗಲಿನ ಉತ್ತರಾರ್ಧ ಭಾಗ; ಅಪರಾಹ್ಣ ; "ಮಧ್ಯಾಹ್ನದಿಂದ ಸಂಜೆ ತನಕ ಇರುವ ಹೊತ್ತು" (ಗಂಗಾಮ. ೧೯೮). [ಸಂ.]

ಪರಾಳ 'ಫಲಾರ' ನೋ.

ಪರಿ1 'ಪಱಿ' ನೋ.

ಪರಿ2, ಪಱಿ2, ಹರಿ2, ಹಱಿ2 (ಕ್ರಿ). ೧. ಚಲಿಸು ; ನಡೆ ; ಸಾಗು : ಅತನಂ ಕಂಡು ಕರುಮಾಡದಿಂದಿಟ್ಟಡು ಪರಿದು (ಪಜ್ಜಾರಾ. ೧೧೭-೨೧); ಅಂತು ಪೋಜಮಟ್ಟು ನುಂದೆ ಪರಿವ ಧವಳಚ್ಛತ್ರಚಾಮರಂಗಳುಂ . . . ತನಗೆ ರಾಜರಾಜಮನಸ್ಯರ್ಥಂ ನೂಡೆ (ಪಂಪಭಾ. ೧೦-೨೬ ಪ);

ನಿತ್ತರಿಸದೆ ಲಜ್ಜಿಸಿ ಪೊಕ್ಕಳ್ ಪರಿದು ಮಹಾಶ್ವೇತೆ ನಿಜಗುಹಾಭ್ಯಂತರಮಂ (ಕಾದಂಉ. ೬೬೯) ; ಕಾಲಿಲ್ಲದೆ ಪರಿವೆನೆಂಬ ಕೀಲಿಲ್ಲದೆ ಪಡಿದೆಱೆವೆನೆಂಬ . . . ಪಚ್ಚಪಸಿಯೆಗ್ಗನಂ ಪೋಲ್ಕುಂ (ಧರ್ಮಾಮೃ. ೧-೬೩) ; ಪರಿದೊಡೆ ಪರಿವ ನಿಲಲ್ ಚೆಚ್ಚರನೊಲ್ಕಿಂ ನಿಲ್ವ ಹೋಕೆಯಿಂದಾಗಳ್ಗೋಪರ ಸನ್ನೆಯನೊಲ್ಡಾಲಿಸುತಿರದೇಳ್ತರುತಿರ್ದುವಲ್ಲಿ ನೆಱೆ ಪೆರ್ದುಱುಗಳ್ (ತ್ರಿಪುವಿ. ೧೫-೨೧). ೨. ಓಡು; ಧಾವಿಸು : ಪರಿದೆಯ್ದಿ ತಾಗಿದಂ ಭಾಸುರತರ ರಘುಕುಲಲಲಾಮನೊಳ್ . . . ದಶವದನಂ (ಕಮಿಾ. ೨-೯೩) ; ಪಿರಿದೊಂದುಶ್ಸುಕಭಾಪದಿಂ . . . ನೋಡಲೆಂದು ಪರಿದಳ್ ಚಕ್ರೇಶಸೌಂದರ್ಯಮಂ (ಆದಿಪು. ೧೧-೨೨) ; ಲಜ್ಜೆ ಪಿಂದೆ ನಿಲೆ ಮುಂದೆ ಮದಿಂದ್ರಿಯ ವರ್ಗವಾವಗಂ ಪರಿಯೆ (ಕಾದಂಪೂ. ೮೯೩) ; ಪರಿವಂಬಂ ಪರಿದು ಪಿಡಿದು ಬೇಗಂ ತರ್ಪಂತಿರೆ ಪವನಜವದೆ ಪವನಜ ಪರಿದಂ (ಗದಾಯು. ೬-೨೮) ; ತಿರುಗಿ ಮುಂದೆಗೆ ಬರುತ ಪಶುಗಳು ನೆನೆದು ತಮ್ಮಾಕರುಗಳನ್ನು ಪರಿದು ಲಂಘಿಸಿ ಚಿಮ್ಮಿ ನೆಗೆಯುತ ಭರದಿ ಬಂದವು ದೊಡ್ಡಿಗೆ (ಗೋಹಾಡು. ೫-೨೨). ೩. (ನೀರಿನಂತೆ) ಪ್ರವಹಿಸು : ಪರಿವ ತೊಱೆಗಳುಮಂ ತೊಪಲ್ತು ಸೊಗಯಿಸುವಡವಿಗಳುಮಂ (ಪಂಪಭಾ. ೭-೨೫ ವ); ಸರೋಜವನದಿಂ ಶಾಳಿವನಕ್ಕೆ ಪರಿವ ಪರಿಕಾಲ್ಗಳಂ ನೆರೆದು (ಸುಕುಮಾ. ೧೦-೫೭ ವ) ; ಗಿರಿಯ ಸಾನುಗಳಿಂದ ಪರಿವ ರಸದೊಜ್ಜರದ ಪರಿಕಾಲ ನೀರುಂಡು (ಸಿದ್ಧಂಾ. ೧-೧೬) ; ಆದರಾಹಾ ಮರಳಿ ಜಡವಾಗಿ ಪರಿದಪಳ್ ಮತ್ತೆ ತಾಂ ಕಡಲೊಡಲಿ ಗೇಕಾಕಿನಿ ! (ಚಿತ್ರಾಂಗ. ೬೧-೧೬೭೯). ೪. ಓಡಾಡು; ಸುತ್ತಾಡು ; ತಿರುಗಾಡು : ಆ ನರೇಂದ್ರನಂದನನ ಮುಂದೆ ಪರಿವ ಪಲತೆಱದ ಪಡೆಯ ಬಹಳಕೋಲಾಹಲಂಗಳುಂ (ಕಾದಂಪೂ. ೬೦೨) ; ರಾತ್ರಿಯೊಳುನ್ಮೀಳಿತ ದೃಷ್ಟಿಯಾಗಿ ಪುರದೊಳ್ ಪರಿದೆಂ (ದಶಕು. ೮-೨೨೦) ; ಕೇರಿಕೇರಿಯೊಳು ಪರಿದು ಲೂಟಯಾಡಿದರೂರು ಕಿಚ್ಚಿನ ಬೀಡಾಯ್ತು (ಕುರಾಸಾಂ.೧೦-೬೪). ೫. ಹಿಮ್ಮೆಟ್ಟು ; ಹಿಂದಕ್ಕೆ ಓಡು ; ಪಲಾಯನ ಮಾಡು : "ಆಕ್ಕುಳಿಸಿತೆಂದುಂ, ಮೆಯ್ದೆಗೆದುದೆಂದುಂ . . . ಪರಿದುದೆಂದುಂ . . . ಪಾರಗೆಯ್ಯೆಂದುಂ—ಈ ೧೩ ಅಪಸರಣಕ್ಕೆ ಪೆಸರ್" (ಕಶಸಾ. ೭೨-೬೪೯); ಗೊ × ವೆಣ್ಡೆ ಕದಿ ಸತ್ತ ಕಳ್ಳ ಪರಿಯೆ ಮರಂಗಲ್ಲೊಳ್ ಪನ್ನಿಕ್ಕೊಳ ಗಟ್ಟಿ ಸಲ್ಗು (ಎಕ. X(S), ಬಾಗೇಪ. ೯೩-೬ ; 10 ನೆಯ ಶತ) ; ಅಂತು ನೆರೆದ ಖೇಚರರೆಲ್ಲಂ ಸಿಗ್ಗಾಗಿ ಪರಿದುವೋಗೆಯುಂ (ಧರ್ಮಾಮೃ. ೮-೧೩೮) ; ಕಿರಣಾಳಿ ಪರಿಯಲು ಮುರಿದನಸ್ತಾಚಲಕೆ ದಿನನಾಥ (ನಿಭಾಗ. ೧೧-೧೦-೩೪) ; ಮುರಿದನಿಂದ್ರನು ಪರಿದನನಲನು . . . ಭೀತಿಯಲಿ (ಆನಂರಾ. ೧-೫-೧೯). ೬. ಹೋಗು ; ತೆರಳು : ಪಲವೇಳೆಯೊಳು ಪರಿಯದೆ ತಾಯ್ವನೆಗಲ್ಲಿ ಪಲವಗಲಿದ್ದು ನೆಲಸದೆ (ಹದಿಬ. ೮-೪೦) ; ಪರಿದು ಮಿತಂಪಚ ಸಭೆಯೊಳ್ ಪಿರಿಯರ್ತಾಮೆನಿಸಿ ನೆಗಟ್ಟಿ ಬುಧರಂತಿರಲಿಂ ಗುರುಕವಿಯಿದಿರಲ್ಲಿ ಕಲಾಧರತನಯಂ ವಿಬುಧರಿಂದೆಯುಂ ಬುಧನೆನಿಕುಂ (ಚಿಕವಿ. ೧-೭೯). ೭. (ದೃಷ್ಟಿ, ಗಮನ, ಲಕ್ಷ್ಯ ಮುಂತಾದುವು) ಬೀಳು : ಪರಿವ ಕಟಾಕ್ಷಂಗಳನೋಸರಿಸುತ್ತುಂ ನಿಮಿರ್ವ ಸುಯ್ಗಳಂ ಕುಸಿಯುತ್ತುಂ ಶರಪಾಶಂಗಳ ನಡುವಣ ಹರಿಣಿಯವೋಲ್ ಮನದೊಳಾಗಳಾಕುಳಿಯಾದಳ್ (ಆದಿಪು. ೪-೫೦). ೮. ವ್ಯಾಪಿಸು ; ಹರಡು ; ಹಬ್ಬು : ಕಾಂತಾರಮನೊಂದು ಬೇಗೆ ಪರಿವಂತೆ (ಪಂಪಭಾ. ೮-೯೮) ; ಸುರಿದವಿರ್ಬರ ಮೇಲೆ ಹೂಮಳೆಗಳುರ್ವಿನಿಂ ಪರಿಹವೆಣ್ಡೆಸೆಯ ಭೇರೀರವಂ ಕೊರ್ವಿನಿಂ (ಅನೀರ. ದೇ. ೧೦೩-೧೦) ; ವಿಷಜ್ವಾಲೆಗಳೆನೆ ಪರಿದುವು ಶರಜಾಲಂ (ಉದ್ಭಟ. ೪-೯೦) ; ಚಂಬಕ ಪಟಹ . . . ಬುರುಗು ನಪಿರಿಯ ಇಂಬಿನ ರವವೆಂಟುದಿಕ್ಕಿನ ಹೊರಿಗೆಯ ಮುಂಬರಿದೊಡನೆ ಪರಿದುದು (ಕಂನವಿ. ೧೧-೨೪). ೯. (ಗುಂಪು, ಕೂದಲು ಮೊದಲಾದುವುಗಳಂತೆ) ಕೆದರು ; ಚೆದರು ; ಚೆಲ್ಲಾಪಿಲ್ಲಿಯಾಗು : ಪರಿದ ತಲೆಬಿಟ್ಟ ಬಾಯ್ . . . ಅರುಣಜಲದಿಂ ಪೊರೆದ ತನುವೆರಸು ಬೀಭತ್ಸರಸಮನಭಿನಯಿಸುತಿರ್ದರಿಲ್ಲಿ ಭಟರ್ಕಳ್ (ಗದಾಯು. ೪-೨೫) ; ದುರ್ಜನನ ನುಡಿಯಂತೆ ಕೊಂಕಿ ಪರಿದ ಜಡೆಗಳುಂ ಕುಟಲನ ಚಿತ್ತದಂತೆ ಬಹುಪ್ರಕಾರಮಾದ ಮೆಯ್ಯ ಬಣ್ಣಮುಂ (ಧರ್ಮಾಮೃ. ೪-೭೫). ೧೦. ಹೊರಟು ಹೋಗು ; ಇಲ್ಲವಾಗು ; ಅಳಿದು ಹೋಗು ; ಮಾಯವಾಗು : ಪರಿಯೆ ಪಸುರ್ಪು ಬೆಳ್ಪಡರೆ ಬಲ್ಮುಗುಳೊಳ್ ಪೊರೆದೋಱೆ . . . ಮಲ್ಲಿಗೆಗಳ್ ವಸಂತದೊಳ್ ಬಿರಿದೊಡೆ (ಆದಿಪು. ೧೧-೧೦೬) ; ಕಾಮನ ಸರದಿಂದ ಲಜ್ಜೆ ಪರಿಯಲ್ಪದವೆತ್ತನುರಾಗವಿಭ್ರಮಂ ಜನಿಯಿಸಲಾಗಳಾಕುಲತೆಯಂ ತಳೆದೆನ್ನನೊಱಲ್ದು ನೋಡಿದಳ್ (ಕಾದಂಉ. ೩೧೪) ; ದೂರ್ತರ್ ಮಾರ್ತಾಂಡನಂ ಕಂಡ ಮಂಜಿನಂತೆ ಪರಿಯೆ (ಧರ್ಮಾಮೃ. ೨-೬೯). ೧೧. (ಕಷ್ಟ, ದುಃಖ ಮುಂತಾದುವುಗಳಂತೆ) ನಿವಾರಣೆಯಾಗು ; ಕಳೆ ; ಪರಿಹಾರವಾಗು : ಸಂಸಾರಿಗೆ ಪರಿ[ಪಾಠಾಂ. ರೆ] ಗುಮಟಿಲ್ ಜಿನಪದಾಬ್ಜಮಂ ಪೊರ್ದಲೊಡಂ (ಸಮಪ. ೧-೧೪೦); ತೋಳನೆಗಹಿ ನೀರೆಱೆಯೆ ಗಳತೃಷ್ಣೆ ಪರಿದೊಡಮಿಾಂಟುವ ನೆವದಿ ಹೆಂಗಳ ಮುದ್ದುಮೊಗವ ನೋಡುವರು (ಮೋಹತ. ೨-೩೦) ; ಗುರುಪಾದಸೇವೆ ತಾ ದೊರೆಕೊಂಡಿತಾದಡೆ ಪಿರಿದಪ್ಪ ಪಾಪ ಪರಿದಿಹುದು (ಸರ್ವಜ್ಞ. ೧೦೦) ; ಅರಣ್ಯದೊಳಿರುವ ಅರಳಿಯ ಮರನ ಸ್ವಕರದ್ವಯಂಗಳಿಂ ಮುಟ್ಟ ಸ್ಮರಿಸಿದೊಡೆ ನೂರೆಂಟುವೇಳೆಯು ಪರಿದು ಪೋಪುದು ಮೃತ್ಯು (ಗಗತಾ. ೪-೭೬). ೧೨. (ಕಷ್ಟ, ದುಃಖ, ಆಯಾಸ ಮುಂತಾದುವುಗಳನ್ನು) ನಿವಾರಿಸು ; ನೀಗು ; ಪರಿಹಾರ ಮಾಡು : ಈ ಪಾಟಿಯ ಸಮರ್ಥಿಕೆಯಲ್ಲಿ ಬಲದ ಸಂತಾಪವ ಪರಿದನೆಂದೆನುತೆ ಶ್ರೀಪರಮೇಶರಮೇಶಂಗೆ ಮೆಚ್ಚಿ ಸಲ್ಲಾಪದಿಂ ಕೈವಾರಿಸಿದ (ಮೋಹತ. ೩೭-೫೯); ಜೀವನದೊಳಗೆಮ್ಮರಳನೊಂದಿಸಿ ನೆಱೆ ಸೇವಿಸಿದವರ ಶ್ರಮಗಳ ಗಾವಳಿಯನು ಪರಿದಪೆವೆಂದು ನಱುಗಂಪು ತೀವಿದ ಪಾಟಲಿಯಿಹುವು (ಕಂನವಿ. ೭-೫೩) ; ಪಸಿವಲಸಿಕೆಗಳ ಪರಿದು ಕೆಲದೆ ನಿಂದು . . . ನಲವಿನೊಳು (ಹದಿಬ. ೩-೧೬) ; ಗುರುವರನು ಶಿಷ್ಯನ ಮನದ ಸಂಶಯಮರೆಯ ಪರಿಯುವೆನೆಂಬ ವಾತ್ಸಲ್ಯದಲಿ ಮೈದೋರೆ (ಗಗತಾ. ೧-೮). ೧೩. ತೀರು ; ಮುಗಿ ; ಕೊನೆಗಾಣು : ಇರ್ಕೇರಿ ಬಸವಪಟ್ಟಣದುರ್ಕರಸರ್ಗೊಂದು ನೆವದೊಳಂದಿಂಗೆ ಪುಯಿಲ್ ಪೆರ್ಕಳಿಸಿ ಪರಿಯದಿರೆ ಭೃಶಕರ್ಕಶರಟಾಗೆಯ್ಯೆ ವಟ್ಟಿಗೊಡನಡಿಯಿಟ್ಟರ್ (ಚಿಕವಿ. ೨-೯೦). ೧೪. (ಓಲಗ, ಸಭೆ ಮುಂತಾದುವು) ಮುಕ್ತಾಯವಾಗು ; ಬರಖಾಸ್ತು ಆಗು ; ವಿಸರ್ಜಿತವಾಗು : ಮಜ್ಜನಕ್ಕುಜ್ಜುಗಂಗೆಯ್ದೊಡ್ಡೋಲಗಮಂ ಪರಿಯಲ್ವೇಟ್ಟಾಸ್ಥಾನಮಂಟಪದಿಂಮಹೀಪಾಲನೇಟ್ಟುದುಂ (ಕಾದಂಪೂ. ೬೭). ೧೫. ಬಿಡು; ತ್ಯಜಿಸು : ನಂಬು ಕೀಲ್ಮೇಲಾಗಲೆಂತೆಂದೆಂಬ ಸಂದೇಹವನು ಪರಿ (ಗಗತಾ. ೧೪-೨೬). ೧೬. ಚಂಚಲವಾಗು ; ಅಸ್ಥಿರವಾಗು : ತಿರುಗುವ ತನು ಬೆರ್ಚುವ ಕಣ್ ಪರಿವ ಮನಂ ನಟ್ಟ ಕಿವಿಯಡಂಗುವ ಸುಯ್ಯಿಂ ಸರಳಂ ಮೀಱುತೆ ಹರಿಣಂ ಸರಳಿಸಿತಯ್ದಾಱನೇಳನೆಂಟೊಂಬತ್ತಂ (ಗಿರಿಕ. ೧-೯೧). ೧೭. (ಕೆಲಸ ಮುಂತಾದುವುಗಳಂತೆ) ತೃಪ್ತಿಕರವಾಗಿ ಸಾಗು ; ಅಭಿವೃದ್ಧಿಗೆ ಬರು ; ಮುಂದುವರಿ : (ಕಿ). ೧೮. (ಸಾಲ, ಋಣದಂತೆ) ಬಿಡುಗಡೆಯಾಗು; ಋಣಮುಕ್ತವಾಗು : (ಕಿ). ೧೯. ಚಿಗುರಿಡು ; ಕುಡಿಯಿಡು : "ಪರಿದುದೆನಲ್ ಕುಡಿಯಿಟ್ಟುದು" (ಕವಿಕಂ. ೭೧). ೨೦. ಧಾಳಿ ಮಾಡು; ಮುತ್ತಿಗೆ ಹಾಕು : ಆನೆಯ ಮೇಲೆಯುಂ ಆಳ ಮೇಲೆಯುಂ ಕುದುರೆಯ ಮೇಲೆಯುಂ ಪರಿದುದೊಂದೆ ಗಜಂ ಭುವನೈಕರಾಮನಾ (ಶಮದ. ೧೨೦ ಪ್ರಯೋ). ೩, ೨೦ : ತೊಱೆಯಂತಹೋರಾತ್ರಂ ಪರಿಯುತ್ತುಂ ಈ ಮಾರ್ಗದಿಂ ಬಾಧೆಯಂ ಮಾಡೆ (ಧರ್ಮಾಮೃ. ೨-೭೧). △ ಪಱಿ2 : ೨. ಗೋದಾ

ಪರಿಯಾ ಮುಣ್ಡಂ ರಿಷಿಪೊಳಲೊಳೆ ಪಱಿದು ಪುಳನ ಬಲಮುಟ್ಟೆ ××× ವನದನಾವಾಸವನಾಗಿ[ಟ್ಡ] ತೈಲನೇಮ್ಮೆಚ್ಚಿದನೊ (ಸೌಇಇ. XI-1, ೭೬-೧೦; ಸು. 1045). **ಹರಿ$_2$: ೧.** ತಲೆಯಿಲ್ಲದ ಮೃಗ . . . ಹಜ್ಜೆಯಿಲ್ಲದೆ ಹರಿಯಿತ್ತು (ಅವಚಂ.೧೮೦-೮೧೧); ಮುಂದೆ ಹರಿದರು[ಪಾಠಾಂ. ದುದು] ಕೈಯ ಕಂಬಿಯ ಸಂದಣಿಯ ಪಡೆವಳರು (ಕುಪ್ಯಾಭೀ. ೧-೧೭); ಹರಿವ ಬೆಳ್ಮುಗಿಲೊಳು ತೋಱಿ ಮಱಸುವ ಚಂದಿರನೋ ಭಾಸ್ಕರನೋ (ಭರಚ. ೧-೫೭). **೨.** "ಹರಿ (ಪರಿ)—ಧಾವನೇ (ಓಡು)" (ಶಮಧಾ); ಸುಡು ಸುಡು ಮನವಿದು ವಿಷಯಕ್ಕೆ ಹರಿವುದು (ಬಸವ. ೩೪); ಹರಿದು ವಿಶ್ವಾಮಿತ್ರಮುನಿಗೆಱಗಿ ಚರಣಸರಸಿರುಹಮಂ ತೊಳೆದು (ಹಚಕಾ. ೩-೭); ಹರಿದುದು ಚಿತ್ತವಘಪಥಕೆ (ತೊರರಾ. ೨-೫-೧೧); ಚೀರುತ್ತ ಅಬ್ಬರಿಸುತ್ತ ನನ್ನನ್ನು ತಿನ್ನುವವರಂತೆ ಹರಿದು ಬಂದರು ನನ್ನ ಹಡೆದಮ್ಮ (ಸುವಸಂ. ೧೮). **೩.** ತೆಂಕಣಕೋಡಿಯಿಂ ಪಡುವ ಮುಂದಾಗಿ ಹರಿದ ಪಳ್ಳವೆ ಮೇರೆ (ಎಕ. VII, ತಿಕಾರಿ. ೩೨೩-೨೩; 1046); ಹರಿವ ನದಿಯ ತೆಱನ ಹೋಲ ಬಲ್ಲರೆ ಭಕ್ತಿ (ಬಸವ. ೫೨೫); ಉಕ್ಕಿದುದು ತನಿವೀರರಸ ಕುದಿದುಕ್ಕಿ ಹರಿದುದು ರೌದ್ರರಸ (ಕುಪ್ಯಾಕ. ೧೬-೨೭); ಹರಿವ ನೀರಿನ ತೀರದಿ ಕುಳಿತರೇನು ಬಕಧ್ಯಾನದಿ (ಪುರಂದ. ೧-೧೮೦-೨). **೪.** ಪಾದರಿ ಮಾವು ಹರಿಚಂದನ ದೆಡೆಗಳೊಳು ಹರಿದಱಿಸಿದೆವಮ್ಮ ಕಂತುಕ ಕಣ್ಗೆ ಗೋಚರಿಸಿದುದಿಲ್ಲ ವನದೊಳು (ಕುರಾಸಾಂ. ೩೨-೨೫). **೫.** ಆ ನರೇಂದ್ರನ ತಲೆ ಸಹಸ್ರ ವಿಧಾನದಲಿ ಬಿರಿದುದು ಸುಯೋಧನಸೇನೆ ಹರಿದುದು (ಕುಪ್ಯಾದ್ರೋ. ೧೪-೪೪); ಹರಿ ಹರಿದನಗ್ನಿ ಭಗ್ನೀಕೃತವಿಜಯನಾದಂ (ಚಿಬಪು.೪೧-೨೯); ಕಡೆಯೊಳುಱುಬೆಗೆಱಗದೆ ಹರಿಯದರಿದು ಕೊಳ್ಳೆನುತೆ ಕೋಲ್ಗಱೆದೊಡೆ (ಜೈಮಿಭಾ. ೨೭-೩೮). **೬.** ಇವನ ದೃಷ್ಟಿಗಳೀಗ ಬೋನದ ಮೇಲೆ ಹರಿವವೊ ಎನುತ ಕೆರಹಿನಲಿ ಬೇಗದಿಂದಲೆ ಮುಚ್ಚಲು (ಬಸಪು. ೫೭-೨). **೮.** ಹರಿವನಿಲ ಆಗ್ನಿ ಜಲ ಮೊಳೆದೋಱದಂದು ಹುಟ್ಟಿದಳೆಮ್ಮವ್ವೆ (ಅವಚಂ. ೨೧೦-೯೪೩); "ಬೀಸು" (ಅವಚಂ. ಕೋಶ); ಕರ್ಣಪಾರಂಪರೆಯೊಳೀತನ ಹೆಸರು ಜಗದಲಿ ಹರಿದುದು (ಸಂಭಪ. ೧೪-೪೧); ಓಲಗಕೆ ಬಂದ ನೃಪಕೋಟಿಕೋಟೀರಪ್ರಭಾಲಹರಿ ಹರಿದು ಮುಸುಕಿತು ತತ್ಸಭಾಮಣಿಜ್ವಾಲೆಗಳ ನಿಕರಮಂ (ಜೈಮಿಭಾ. ೧೭-೨೮). **೧೦.** ಹರಿವು ತಿದೆಯರಿಸಿನದ ಸಿರಿ . . . ಓಸರಿಸುತಿದೆ ಮುತ್ತೈದೆತನವೆಲೆ ಸರಮೆ ಕಳುಹೌ ಬೇಗ ಪತಿಯೆಡೆಗೆಂದಳಾ ಸೀತೆ (ತೊರರಾ. ೬-೧೨-೩೪). **೧೧.** ಉಪಪಾತಕ ಮಹಾಪಾತಕಂಗಳ ಮಾಡಿದ ಕರ್ಮಂಗಳು ಕೋಟ್ಯನು ಕೋಟ ಒಬ್ಬ ಶಿವಶರಣನ ಅಂಗಳವ ಕಂಡಲ್ಲಿ ಹರಿದು[ಪಾಠಾಂ. ಅಳಿದು] ಹೋಹವು ನೋಡಾ (ಅವಚಂ.೨೭೪-೧೨೬೧); ಎಂದಿಗೆನಗೀ ಪೀಡೆ ಹರಿಗು ಪುರಂತರಿರ ಹೇಳಿ (ಬಸಪು. ೪೫-೪೭); ಹರಿದುದಘಕುಲವೆನುತ ಪುಳಕೋತ್ಕರದ ಹರುಷದಲಾ ಧನಂಜಯ ಪರಮ ಗದುಗಿನ ವೀರನಾರಾಯಣನ ಕರುಣದಲಿ (ಕುಪ್ಯಾಅ. ಓರಿಇ. ೭-೧೧೬); ಪರಮಪುರುಷನ ದೃಷ್ಟಿಪಾತದಿನಿರದೆ ಸಂಚಿತ ಸಕಲದುಷ್ಯತ ಹರಿ[ಪಾಠಾಂ. ರ, ರೆ]ದುದಿಸಿದಳು ಶಿಲೆಯ ಮಧ್ಯದೊಳಬಲೆ ಗೌತಮನ (ತೊರರಾ. ೧-೧೨-೧೯). **೧೨.** ದ್ವಯವಿಡಿದುದಕ್ಕೆ ಎರಡಿಲ್ಲದೆ ಮೀಱಲಿಲ್ಲವಾಗಿ ... ಸಂಸಾರವ ಹರಿವುದಕ್ಕೆ ನಿಃಕಳಂಕ ಮಲ್ಲಿಕಾರ್ಜುನನಲ್ಲದಿಲ್ಲವಾಗಿ(ಮೋಳಿಮಾ. ೧-೧); ತಾಪಸೋತ್ತಮ . . . ಪಾಪ ಹರಿವಿಷ್ಟಲಿಂಗದ ಪೂಜೆಗೆಯ್ಯುತಾ ರಾತ್ರಿಯಂ ಕಳೆದು (ಪ್ರೌಢರಾ. ೧೦-೪೯); ಯುಗಭಾಗ್ಯ ಹರಿವನ್ನ ಸಾವು ಬಾಳ್ಕೆಗಳಿತ್ತು ಬಗೆಯನುದ್ದೀಪಿಸುತೆ ಜ್ವಲಿಸುವಾತ (ವಿಸೀಗೀ. ೩೩-೧೭). **೧೩.** ಹಾಲಿನೊಳು ನೆಱೆ ತುಪ್ಪವಿಪ್ಪುದ ಹೇಳಿದರೆ ಹರಿಯದು (ಪ್ರಭುಲೀ. ೧೭-೧೧); ಹರಿಯದಿಲ್ಲಿಯ ಬವರ ರಾಯನನಱಸಬೇಹುದು (ಕುಪ್ಯಾಗ. ೨-೯). **೧೪.** ಗೋಷ್ಠಿ ಹರಿದಲ್ಲಿ ತಮ್ಮ ತಮ್ಮ ಇರವಿನ ಹಾದಿ (ಮೋಳಿಮಾ. ೭-೨೪); ಓಲಗ ಹರಿದ ಮರುಚಣದಲ್ಲಿ ಪ್ರಭುಗಳಲ್ಲಿ ಎಷ್ಟು ಜನ ಅಧಿಕಾರಿಗಳು . . . ನಿನ್ನ ಪರವಾಗಿ ವಾದಿಸಿದವರು ! (ಕಪಪು. ೬-೯೩). **೧೫.** ಪುರಾಣವನಱಿದಲ್ಲಿ ಪುಂಡರ ಸಂಗವ ಹರಿಯಬೇಕು (ಮೋಳಿಮಾ. ೧೬-೬೦). **೨೦.** ಬಿದಿರೂರ ರಕ್ಕಸ ಮೊನೆಯಾಳ್ವದೇವ ಈ ಯಾನೆಯ ಕುದುರೆಯ ದಳದಲು ಹರಿದಿಱಿಯದು ಕಯ್ಯ[ಂ]ಬು ತವಲು ದೇವಂಣಗೆ ಬಿನ್ನಪಂಗೆಯ್ಯಲು (ಮೈಆರಿ. ೧೯೩೨, ೩೨-೨; 1125). **೨೧.** ಸಾಧ್ಯವಾಗು ; ಶಕ್ಯವಾಗು : ಜಂಗಮವು ಲಿಂಗರೂಪವಹ ವಿವರವೆಂತೆಂದಡೆ ಮಾತಿನಲ್ಲಿ ನಾನು ಲಿಂಗರೂಪೆಂದಡೆ ಹರಿಯದು (ಅವಚಂ. ೧೬೦-೭೨೭); ತನಗೆ ಬೇಂಟೆಯುವೆರಡು ಮೂಱ್ ದಿನ ತನಕ ಹರಿಯದ ಡುಮ್ಮಳಿಸಿ ಮಱುದಿನ ಬಲೆಯನೊಯ್ದೆತ್ತಿ ಹಾಕಲು (ಬಸಪು. ೨೬-೨೨); ನಾಳಿನಾಹವ ಖಚರಕಿಂಪುರುಷರಿಗೆ ಆಸದಳವಚಲಬಲ ಗಾಂಡಿವಿಗೆ ಹರಿಯದು (ಕುಪ್ಯಾದ್ರೋ. ೯-೫); ಸರಸಿಜಾಸನ ತನ್ನ ಕೈಯಲಿ ಹರಿಯದೆನಲ್ಲಿಂದ ಕಂಡೆನು ಹರನ ಪದಯುಗವ (ಕೋಗಯ. ೧೧-೫೩); ವೀರ್ಯಗುಣವಿಲ್ಲದಿದ್ದರೆ ಅಂಥವನ ಕೈಯಲ್ಲಿ ಏನು ಹರಿದೀತು ? (ವಚಭಾ. ೭೭). **೨೨.** (ಹಾವು ಮೊದಲಾದುವುಗಳಂತೆ)ಮೆಲ್ಲನೆ ಸರಿ; ಹರಿದಾಡು: ಹರಿವ ಹಾವಿಂಗಂಜೆ ಉರಿಯ ನಾಲಗೆಗಂಜೆ . . . ಪರಸ್ತ್ರೀ ಪರಧನವೆಂಬೀ ಜೂಬಿಂಗಂಜುವೆ (ಬಸವ. ೪೪೬); ಹರಿವ ಹಾವವನಾಣೆಯೆಂದೊಡೆ ಹರಿಯಲಮ್ಮದು (ಸಾಳ್ವಭಾ. ೪-೧೬); ಸಣ್ಣ ಹುಳದಂತೆ ಹರಿಯುತ ಇದ್ದನಾಗ (ಕಎಪು. ೧೧-೨). **೨೩.** ಇತ್ಯರ್ಥವಾಗು ; ಬಗೆಹರಿ : ಕವಿ . . . ಎಂದಿಗೂ ಹರಿಯದ ಜೀವನಸಮಸ್ಯೆಯನ್ನು ತಲೆಯಲ್ಲಿ ತುಂಬಿ ರಂಗಮಂದಿರದಿಂದ ಹೊರಗೆ ಕಳಿಸುವನು (ಕಾವ್ಯಸ. ೧); ಎಲ್ಲಿಗೂ ಹರಿಯದಿಹ ಸಂಶಯವೆ (ವಿಸೀಗೀ.೭೫); ಈ ರಹಸ್ಯವು ಮುಂದೆ ಹರಿಯಬೇಕು (ಜ್ಯೋತಿರ್ವಿ. ೧೨೫). △ **ಹಱಿ$_2$: ೩.** ಎರಡು ಕೋಡಿಯಲುಂ ನೀರು ಹಱಿದು ಗದ್ದೆಯ ಪಂಥವಾದ ಠಾವಿಂಗೆ ಆತತ್ತಿನವರು ತಂಮ ಬೆದ್ದಲಿಂಗೆ ಪ್ರತಿಕ್ಷೇತ್ರವನು ತಾಳಕೆಱೆಯಲ್ಲಿ ಕೊಂಬರು (ಎಕ. XII, ತಿಪಟೂ. ೨-೧೩; 1263).

ಪರಿಪರಿ$_1$, ಪರಿಂಪರಿ, ಪರಿವರಿ, ಹರಿಹರಿ (ದ್ವಿರುಕ್ತಿ) : ಪುಲಿಪುಲಿ ಪರಿಪರಿ ಪೋಪೋಗೆಲೆಎಲೆ ಪೆಱಪಿಂಗುಪಿಂಗು(ಕವಿರಾ. ೨-೨೬); ಅವಡವಿಗಳೊಳ್ ಪಣ್ಣಲಮಾವಗಮೊಳವಲ್ಲಿಗಱಿಸಿ ಪರಿಪರಿದು (ಪಂಪಭಾ. ೭-೪೬); ಸ್ವಸ್ತಿಶ್ರೀ ಮಹೇಂದ್ರಾಧಿರಾಜ ಗಂಗರ ಮೇಗೆ ಪರಿಂಪರಿಯೆ(ಎಕ. X, ಚಿಂತಾಮ. ೧೧೬-೨; ಸು. 690); ಧರಣೀಶಂ . . . ಪರಿವರಿದಲ್ಲಲ್ಲಿಗುರುಳು ತಿರ್ದಂ (ಧರ್ಮಾಮೃ. ೩-೨೦೫); ಗೋಪಾಲಕರು ತಮ್ಮೊಳಗೆರಡು ಬಗೆಯಾಗಿನಿತು ಗೆಲವಿಗೆ ಹರಿಹರಿದು ನಾವಾಡುವೆವು ಬನ್ನಿರೆ. . . ಎನುತ (ಬಸಪು. ೩೨-೧೭); ಅಟ್ಟ ಹರಿಹರಿದುಱೆ ಬಳಲ್ದು ಕಾಹುರದೆ ಕಂಗೆಟ್ಟು ಕಳೆಗುಂದಿ ಮೆಲ್ಲನೆ . . . ಪಶ್ಚಿಮಗಿರಿಯ ತಪ್ಪಲಂ ಸಾರ್ದನೆನೆ ರವಿ ಪಡುಗಡೆಯೊಳೆಸೆದನು (ಜೈಮಿಭಾ. ೨೬-೪). **ಪರಿದಾಟ, ಪರದಾಟ, ಹರಿದಾಟ— ೧.** ಓಡಾಟ ; ಸುತ್ತಾಡುವುದು : ನಿನ್ನ ರಾಜಾಲಯಂ ಹೊಱತಾಗಿ ಮಿಕ್ಕೆಡೆಯೊಳು ಹಾವಳಿಯೆ ಘನವವರ ಪರಿದಾಟ ಪಿರಿದು ವೇಶ್ಯಾವಾಟವಾದಿಯಾದಲ್ಲಿ ನಿಮ್ಮಂಘ್ರಿರಾಜೀವದಾಣೆಂದು ಬಿನ್ನವಿಸಿದಂ ಎನುತ (ಚಿಬಪು. ೭-೨೦); ದರ್ಪಣದ ಪ್ರತಿಬಿಂಬಕ್ಕೊಂದು ಚೇಷ್ಟೆಯುಂಟೆ ನೆಳಲಿಂಗೊಂದು ಹರಿದಾಟ ಉಂಟೆ (ಅದನ. ೨೮-೮೦); ಬೇಹ ಮಂತ್ರಿಗಳೊಡನೆಣಿಸದೆ ಕಾರ್ಯವ ನೀ ಹರಿದಾಟಕೆಣಿಪರೆ (ಕುರಾಸಾಂ. ೩೦-೩೫). **೨.** ತೊಳಲಾಟ ; ಬವಣೆ : ಕರಣೇಂದ್ರಿಯಾದಿಗಳ ಪರಿದಾಟಮಂ ಬಿಡಿಸಿ ಲಿಂಗಾಂಗಸಂಯೋಗದೊಳ್ ನಿಲಿಸುವ ಸಮಭಾಷೆ (ಪದ್ಮರಾ. ೪-೨೧); ವಿವಿಧ ಸುರಭಟರ ಪರಿದಾಟಮಂ ನೋಟಮಂ

ವಿವರಿಸುವದೇನಮರರೋಡಿದರ್ ಕೂಡಿದರ್ ಸುರಪಾಲನರೆನೆಲೆಯನು (ಚಿಬಪು. ೪೬-೫); ದೋಣಿ ದೂರ ದೂರ ಹೋದಂತೆ ಹುಲಿಯನ ಪರಿದಾಟ ಹೆಚ್ಚಾಗಿ (ಪುಲಿಪು. ೭೧೯); ಕೊಡುವುದರಲ್ಲಿ ತೆಗೆದು ಕೊಳ್ಳುವುದರಲ್ಲಿ ಎರಡು ಕಡೆಯವರಿಗೂ ಪರದಾಟವಾಗುತ್ತಲೇ ಇತ್ತು (ದೂಲಸ. ೧೫೫); ದುಡ್ಡಿದ್ದರೆ ಮರ್ಯೂ; ಇಲ್ಲದಿದ್ದರೆ ಪರದಾಟ (ಅನಾಥೆ. ೧೪೨); ಪ್ರವಾಸಿಕರ ಸಂಖ್ಯೆಯ ಪ್ರಮಾಣದಿಂದ ಪತ್ರಿಕೆಗಳನ್ನು ಪೂರೈಸಿದಲ್ಲಿ ಕಚ್ಚಾಟ ಹರಿದಾಟಗಳು ಕಡಿಮೆಯಾದಾವು (ಗಾಳಿಪ. ೩೫). ಪರಿದಾಡು, ಪರದಾಡು$_1$, ಹರಿದಾಡು = ೧. ಓಡಾಡು; ಸುತ್ತಾಡು; ಸುಳಿದಾಡು; ಅಲೆದಾಡು: ಪುಲಿಗಳ ಮಱಿಗಳೊಳ್ ಪರಿದಾಡುವ ತರುಣಹರಿಣಂಗಳುಮಂ (ಪಂಪಭಾ. ೧-೧೧೫ಪ); ಪರಿದಾಡುವ ಸುತನ ಪದಾಂಬುರುಹಂಗಳೊಳುಲಿವ ಪೊನ್ನ ಗೆಜ್ಜೆಯ ದನಿಯಂತಿರೆ ನಚ್ಚಿನ ವೀಣಾವೇಣುರವಂಗಳ್ಕಱೆಯವಲ್ಲೆ ಕರ್ಣಾಮೃತಮಂ (ಮಲ್ಲಿಪು. ೩-೧೧೯); ಎನ್ನ ಕಣ್ಣೊಳಗೆ ಪರಿದಾಡು ಕೂಡಲ ಸಂಗ (ಬಸರ. ೩-೯೭); ಚಿಂತೂರವರು . . . ಬರೀ ಪರದಾಡುತ್ತಿದ್ದರಲ್ಲದೆ, ಅವರಿಗೆ ಅಳಿಯಂದಿರ ಗೋಳೇ ಕೇಳದು (ಮಾಮನೆ. ೨೦೮); ಅರಸು ಬಂಟನ ಕೆಳಗೆ ಹರಿದಾಡುವದ ಕಂಡೆ (ಮೋಳಿಮಾ. ೨೬೭-೮೧೯); ನಂದಮುದ್ರಿತಕಂಕಣಂಗಳ ಗೊಂದಣದ ಭೂಷಣಗಳಲಿ ಗೋವಿಂದ ರಾಮರು ಮೆಱೆದರಂಗಣದೊಳಗೆ ಹರಿದಾಡಿ (ನಿಭಾಗ. ೧೦-೮-೩); ಅಟ್ಟ ಹರಿದಾಡುವದು ಬಟ್ಟೆಯಲಿ ಮೆಱೆಯುವದು . . . ಒಂದು ಸೆರೆ ಹಿಟ್ಟು ಕಾಣಯ್ಯ (ಸರ್ವಜ್ಞ. ೧೯೮೬). ೨. ಪ್ರವಹಿಸು: ಮಂದಾಕಿನಿ ಮಾದೇವನ ಜಡೆಗಳ ಬಂಧದಿಂ ಬಿಡುಗಡೆಯೊಂದಿ ನಂದನದೊಳು ಬಂದು ಪರಿದಾಡುವ ಚೆಲುವಿಂದೆ ಕಾಲುವೆಗಳೊಪ್ಪಿದುವು (ಮೋಹತ. ೨೪-೫೭); ನೆಱೆ ತನ್ನ ಶುಭ್ರಕೆ ಸರಿಗಾಣೆನೆಂದಾಗ ಪರಿದಾಡುತಿಹಳು ಕಾವೇರಿ (ಕಂಸವಿ. ೫-೪೨). ೩. ವ್ಯಾಪಿಸು; ಪಸರಿಸು; ಹರಡು: ಮೋಹನಂ ಮೋಹರಿಸೆ ಗಾಡಿ ಪರಿದಾಡೆ ಪೊಸದೇಸಿ ಸೂಸೆ . . . ಪಡೆದು ಕೃತಿಯಂ ಶಿವಾರ್ಪಿತವನೆಸಗುವ ನಿನ್ನ ಸೈಪಿಂಗೆ ಸಾಟಿಯುಂಟೇ (ಪದ್ಮಂಗಾ. ೧-೩೧). ೪. ತೊಳಲಾಡು; ಬವಣೆಪಡು: ಪರಿದಾಡಂ ನಿಜನಿಷ್ಠೆಯಂ ಮಱೆದು (ಶತಕ. ೩೪); ಮಿತ್ರಮಾವುತ ಬೆನ್ನಟ್ಟಿ ನೀರ್ಗೆಡಹಿದ ಮತ್ತಗಜೇಂದ್ರ ಸೂತಿಯಲಿ ಎತ್ತಲೆಂದಱಿಯದೆ ಪರಿದಾಡುವಂತೆ ಕರ್ಗತ್ತಲೆ ತೀವಿತುರ್ವಿಯಲಿ (ಮೋಹತ. ೧೮-೪); ಹೀಗೆ ಪರದಾಡುತ್ತಿದ್ದಾಗಲೇ ಅರ್ಧ ಗಂಟೆ ಕಳೆದು ಹೋಯಿತು (ಕಾಬಝೂ. ೮); ಹಾಗೆ ಮಾಡಿದರೆ ಮುಂದೆ ತುಂಬಾ ಪರದಾಡಬೇಕಾಗುತ್ತೆ (ಮರಳಿ. ೧೬೧). ೫. (ಯುದ್ಧದಲ್ಲಿ) ಧಾವಿಸು; ಮುನ್ನುಗ್ಗು: ತಾಮ್ರಧ್ವಜಂ ಹರಿನಾದಮಂ ಮಾಡಿ ಹರಿದಾಡುತಿರೆ ಕೂಡೆ ಹರಿಣಾಂಕಕುಲಜಂ ವಿಹರಿಸಿದಂ ಬಾಣದಿಂ ಹರಿಕಿರಣಮಡಗುವಂತೆ (ಜೈಮಿಭಾ. ೨೫-೪೬). ೬. (ದೇಹದಲ್ಲಿ ರಕ್ತದಂತೆ) ಚಲಿಸು; ಪ್ರವಹಿಸು: ಹರಿ ಹರ ಸಾಮ್ಯದ ವಿಚಾರಪ್ರಣಾಲಿ ಆ ಕಾವ್ಯದ ನರನರದಲ್ಲಿ ಹರಿದಾಡುತ್ತಿದೆ (ತಪನಿ. ೧೬೦). ೭. (ಹಾವು ಮುಂತಾದುವುಗಳಂತೆ) ಸರಿ; ಸರಿದಾಡು: ಹಲ್ಲಿ ಹಾವುಗಳು ಅವನ ಕಾಲ ಮೇಲೆ ಹರಿದಾಡಿದುವು (ಪುಣಿಸ. ೯೨). ಪರಿದೋಡು, ಹರಿದೋಡು = ೧. ಇಲ್ಲವಾಗು: ವೀತರಾಗನ ಸ್ಮರಣೆಗಳಾ ರೀತಿಯಱಿತು ಹಾಡಿದರು ಕೇಳ್ವರೆಲ್ಲರ ಪಾತಕ ಪರಿದೋಡುವಂತೆ (ಭರಜ. ೧-೭೬). ೨. ಧಾವಿಸಿ ಓಡು: ಸಾರಿದರೆ ನೂರಾಗಿ ಹರಿದೋಡುತಿಹನು (ಕಎಪು. ೧೧-೬). ಪರಿವಡಿ$_1$ = ದಾಪುಗಾಲು; ದಾಟುಗಾಲು: ಭೀಮನು . . . ಶೀಘ್ರವಾಗಿ ಎದ್ದು ದಂಡೆಯಿಕ್ಕಿ ಪರಿವಡಿಯಿಂದ ನಡೆದು ಬರಲು (ಕೃಪಾವಿ. ೪೪). ಹರಿದಾಡಿಸು = ಚೆದರಿಸು; ಚೆಲ್ಲಾಪಿಲ್ಲಿ ಮಾಡು: ಬರುತಿದೆ—ಸಡಲಿಸಿ ಮಡದಿಯರುಡಿಯನು ಮುಡಿಯನು, ಬಡಮುದುಕರ ಕೊಡೆಗರಿ ಹರಿದಾಡಿಸಿ (ಕಎಪು. ೨೮-೫). ಹರಿಯ ಬಿಡು = ೧. ಅಲೆದಾಡಿಸು; ತಿರುಗಾಡುವಂತೆ ಮಾಡು: ಒಳ್ಳೆಯ ಪ್ರಶ್ನೆಗಳು ಬೇರೆ ವಿಷಯಗಳ ಕಡೆ ಮನಸ್ಸನ್ನು ಹರಿಯ ಬಿಟ್ಟು ಪಾಠದಲ್ಲಿ ವಿಮುಖರಾಗಿರುವ ಮಕ್ಕಳ ಅವಧಾನವನ್ನು ಪಾಠದ ಕಡೆ ಸೆಳೆಯಲು ನೆರವಾಗಬೇಕು (ಶಿಕ್ಷದ. ೨೭೭). ೨. ಮುಂದುವರಿಯುವಂತೆ ಮಾಡು: ಬಮ್ಮಲದೇವಿ . . . ಪಿರಿಯರಸಿಯಾಗಿಯೇ ಇದ್ದರೂ ರಾಜಪೀಳಿಗೆಯನ್ನು ಹರಿಯಬಿಟ್ಟ ಮಕ್ಕಳು ಅವಳಿಗುಳಿಯಲಿಲ್ಲವಾದ್ದರಿಂದ ಅವಳು ಮರೆಯಾಗಿಯೇ ಉಳಿದಿರಬೇಕು (ಸವತಿ. VI, ಪ್ರಸ್ತಾವನೆ). ೩. ಮುನ್ನುಗ್ಗಿಸು; ಧಾವಿಸುವಂತೆ ಮಾಡು: ವಾರುವನಾಕಳದೊಳಗೆ . . . ಸಾಗಿದುದೊಸೆದು ಹರಿಯ ಬಿಡಲವನು (ಕುರಾಸಾಂ. ೯-೧೦೧); ಧುರಕೆ ಕಂಪಿಲನೃಪ ಸಂಗಮದೇವನ ಹರಿಯ ಬಿಟ್ಟನು ಬೇಗದೊಳು (ಕುರಾಸಾಂ. ೧೩-೨೩). ೪. ಮುನ್ನುಗ್ಗುವುದಕ್ಕೆ ಅವಕಾಶ ಕೊಡು: ನೀವಿನ್ನಱಿಯರೆಮ್ಮನು ಹರಿಯ ಬಿಡಿ ಸಾಕೆಂದನಾ ಭೀಮ (ಕುಪ್ಯಾವಿ. ೯-೪೦). ೫. ಪ್ರವಹಿಸುವಂತೆ ಮಾಡು: ಪರಮಾತ್ಮನ ಪಾದದೆಡೆಗೆ ಭಕ್ತನು ತನ್ನ ಭಾವಗಳ ಪ್ರೇಮಪ್ರವಾಹವನ್ನು ಹರಿಯ ಬಿಡುವನು (ಜಗದಾ. ೮). ℙ ಉಚ್ಚಾರಣಾ ಸಾದೃಶ್ಯದಿಂದ 'ಪರಿ', 'ಪಱಿ' ಈ ಎರಡು ಪದಗಳ ಅರ್ಥಗಳೂ ಮಿಶ್ರಣಗೊಂಡು ಈ ಶಬ್ದಗಳಿಂದ ವ್ಯುತ್ಪತ್ತಿಹೊಂದಿದ ಇತರ ಶಬ್ದಗಳಲ್ಲಿಯೂ ಅರ್ಥದ ಗೊಂದಲ ಉಂಟಾಗಿರುವುದು ಸಾಧ್ಯ.

[ದೇ.॥ ತಮಿ. ಪರಿ; ತುಳು. ಪರಿ, ಹರಿ; ತೆಲು. ಪರಗು; ಮಲ್ತೊ. ಪರ್ಚೆ, ಪರ್ಚ್ರೆ]

ಪರಿ$_3$, ಹರಿ$_3$ (ನಾ). ೧. ಚಲಿಸುವುದು; ನಡೆಯುವುದು: (ಕಿ). ೨. ಓಟ; ಧಾವಿಸುವುದು: 'ನಿಡುವರಿ' ಪರಾ. ೩. ರಭಸದಿಂದ ಮುಂದುವರಿಯುವಿಕೆ; ನುಗ್ಗುವುದು: 'ಆನೆವರಿ$_1$' ಪರಾ. ೪. ಹರಿಯುವುದು; ಪ್ರವಾಹ; ನೀರಿನ ಹರಿವು: ತಿರಿದಾ ಕೂಟಂ ನೀರೊಳ್ ಗರಗರನಪ್ಪಂತು ಕರ್ಚಿ ಮೇಣುಂಡಪರೋ ಪರಿಯೊಳ್ ಮೇಣ್ಮಂದಪರೋ ಮರುಳೀತಂ ಶ್ರವಣರಾವ ತಪಮಂ ಕಂಡರ್ (ಧರ್ಮಾಮೃ. ೧-೧೦೬); ಕುಸುಮರಜಾನಿಳನಿಂ ಪಗರೆಯ ಪರಿಯಿಂ ತಳರದ ಸಿರಿ ಬಲ್ಲಕುಂದೆನಾಳ್ಕೆಸೆದಿರ್ಕ್ಕುಂ (ಸೌಇಇ. IX-i, ೨೪೯-೧೬; 1147); ಆಗರದೊಳು ರಸದಾಳಿ ತೆಂಗಾಳಿಯಿಂ ತಾಗಲೊಂದಱೊಳೊಂದು ಹಳಚಿ ಮೇಗೋಲ್ಗಳೊಡೆದಿನಿರಸದ ಪರಿಯೊಳಿಕ್ಷುಸಾಗರ ತುಂಬಿದಂತಾಯ್ತು (ಮೋಹತ. ೨-೪೮). ೫. (ದೂರದ ಅಳತೆಯನ್ನು ಸೂಚಿಸುವ) ಒಂದು ಪ್ರಮಾಣ: 'ಪರಿದಾರಿ' ಪರಾ. ೬. ಓಡಾಡುವ ಸ್ಥಳ: ಆ ಗಜೇಂದ್ರಕ್ಕೆ ಸರಂದೋಱುವುದುಮಾ ಧ್ವನಿಗೇಳ್ದು ಕೋಪಾನಳನಿಂ ಕಣ್ಗಾಣದೆಯ್ತುಪ್ಪಾನೆಗಾಸೆಗೊಟ್ಟು ಪರಿದು ಪರಿಯೊಳ್ ನಿಲ್ದಡೆ (ಬಂಹರಿ. ೨-೫೧ಪ). ೭. ರೀತಿ; ಕ್ರಮ; ಬಗೆ; ಪ್ರಕಾರ: "ವ್ಯಾಕೂ(ಕೃ)ತಿಃ, ಭಂಗಿಃ—ಈ ೨ ಪರಿ" (ಹಲಾಯು. ೧೨೫-೭೭); ಕಾಸಕುಗುಪೆಯ ದಾಱಿಯಲಿ ××× ದೊಳಗೌಡಂ ಸತ್ತ ಪರಿಯೆಂತೆಂದಡೆ (ಎಕ. VIII, ಸೊರಬ. ೪೬೬-೮; ಸು. 960?); ಎಲ್ಲರ ಗಂಡರ ಪರಿಯಂತಲ್ಲ ನೋಡವ್ವಾ ನಮ್ಮ ನಲ್ಲ (ಬಸವ. ೮೪೯); ಭೃಂಗೀಶ ನರ್ತನಕೆ ನಿಂದಾಗ ಹೊಸ ಪರಿಯ ಗತಿಗಳಂ ನಟಿಸಿ ತೋಱುತ್ತಮಿರೆ (ಬಸರ. ೧-೨೫); ಹಿಂದೆ ಗಳಹುವನಿವನು ಬಾಯಿಗೆ ಬಂದ ಪರಿಯಲಿ (ಕುಪ್ಯಾಭೀ. ೧-೧೦); ಈ ಪರಿಯ ಸೊಬಗಾವ ದೇವರಲಿ ನಾ ಕಾಣೆ (ಪುರಂದ. ೨-೧೬೪ ಪಲ್ಲವಿ). ೮. ಸ್ಥಿತಿ; ಪಾಡು: ಈಗಳ್ನೀನರ್ಪಿರವಿನ ಪರಿಯೇನೆಂದಾಂ ಸರೋಜ

ಮುಖಿ ಮುಕುಳಿತಾಕ್ಷನಂ ಬೆಸಗೊಂಡೆಂ (ಕಾದಂಪೂ. ೮೪೧); ಹಾ ಭಣೇಂದ್ರಪತಾಕಾ ವಿಧಿವಶದೆ ನಿನಗಮಿಾ ಪರಿಯಾಯ್ತೇ (ಗದಾಯು. ೯-೨೨); ತಿರುಗಿ ಕಂಡನು ಕೃಷ್ಣನೀತನ ಪರಿಯನಱಿದನು (ಕುಮಾರ್ಯುದ್ಧ. ೩-೩೩); ಪೊಸಪೂರಿಗೆಯ್ದು ಮತ್ತೊಮ್ಮೆ ಪೆಣ್ಣಂ ನೋಡಿ ಪೊಸಪಿಡ್ಡಿನರ ಮನೆಯ ಪರಿಗಳಂ ತಿಳಿದು ಸಸಿನಮಾದೊಡೆ ಮದುವೆಯೊಸಗೆಯಪ್ಪುದೆನಲ್ಕೆ (ಶಾಲೂರ. ೫೭-೧೧). ೯. ಸೇನೆ; ದಂಡು: ನನ್ನಿಯಗಂಗನ ಪರಿಬನ್ದು ಬೆಳ್ಗೊಱೆಯುಂ ಕುನ್ದೂರುಮನಿಱಿದು ಹೋಗೆ (ಎಕ. XII, ತಿಪಟೂ. ೫೫-೧; ಸು. 880); ಕರ್ಪೂರ ತುಱುವಂ ನೊಟಮ್ಮಟ್ಟನ ಪರಿಬನ್ದು ಹೆಮ್ಮಾಗೆಯ ಪಳ್ಳಿಯೊಳ್ಕೆ (ಎಕ. XII, ತಿಪಟೂ. ೧೦-೬; ಸು. 930?); ಬೇಡರ ಬೀರಮ್ಮನ ಪರಿಯೊಳ್ಳಲ್ಲೂರಟಾವಿನೊ ××× ಪರಿಯಲ್ದೊರೆಗವುಣ್ಡ ಕುದುರೆಯೊಳ್ ಪೆ ×× ಱಂದು ಸರ್ಗ್ಗಕೆ ಸನ್ದನ್ (ಎಕ. V, ಹಾಸನ. ೨೪-೪; 985); ಬನವಸೆಯ ಚಟ್ಟ ನಾಗರಕಣ್ಣಕ್ಕೆ ಮುನಿದು ಪರಿಯನಟ್ಟಿದಡೆ ತೊದಕ್ಕಿಯನಱಿದು (ಎಕ. VIII, ಸೊರಬ. ೨೩೪-೮; 999). ೧೦. ಅಧ್ಯಾಯ; ಪ್ರಕರಣ: ಒಂಬತ್ತು ಪರಿಗಳ ಒಂದು ಕಾದಂಬರಿ ಇದು (ಸಮಜೀ. ೧. ಪೀಠಿಕೆ). ೧೧. ವಿಶೇಷ; ಹೆಚ್ಚಳ; ಆಧಿಕ್ಯ; ಅತಿಶಯ: ಪರಿಮೂತ್ರಂ ಭಿನ್ನಲಂಡಂ ಸುರಿಯೆ ಮದಜಳಂ ಮೆಯ್ಯೊಳಳ್ಕಾಡೆ . . . ಪಿಳಾಕುಂಜಮಂ ಪೊಕ್ಕೆವಮಿಡುಕದೆ ನಿಂದತ್ತು (ಪಲ್ಲಿಪು. ೧೦-೧೨). 'ಪರಿಗೊಳ್' ಪರಾ. ೧೨. ಬೇಟೆಯಲ್ಲಿ ಪ್ರಾಣಿಗಳು ಸಿಗುವ ಜಾಗ,—ಸ್ಥಳ: 'ಪರಿಗೊಳ್' ಪರಾ. ೧೩. ದಾರಿ; ಹಾದಿ; ಮಾರ್ಗ: 'ಪರಿಸಾರ್' ಪರಾ. **ಹರಿ₃**: ೨. "ಪ್ರವಹಣಂ, ಡಯನಂ—ಈ ೨ ರಥದ ಹರಿ"(ಹಲಾಯು. ೩೩-೨೧೧). ೪. ಹರಿವ ಹೊಳೆಯ ನೋಡಿ ದುರುಳನು ಸ್ಥಿರಿಸದೆ ತ್ವರಿತದಿಂದಲಿ ಪೋಗಿ ಬೆರಳಿಟ್ಟು ಮಧ್ಯದಲಿ ಭರದಿ ಪೋಗುವ ಹರಿಯ ತಿರುಹುವೆನೆಂದು (ವಿಶಾಸು. ೮೪-೬); ಧರೆಯ ವಸುಂಧರೆಯ ಬದುಕ ನೋಡು—ಹಳ್ಳ ಹೊಳೆಯ, ಝರಿಯ ಹರಿಯ ಸೆಳವು ಹೊಳವು ಹೊಳವು ನುಱುಪು ರೂಪುಗೊಡುತಲಿಹುದು (ಮೂರ್ತಿಕಾ. ೧೩-೯); ನೀರಿನ ಹರಿಯು ಚನ್ನಾಗಿ ಆಗುವಂಥ ಸಮತಳಭೂಮಿ (ಕೃಷಿಪ್ರ. ೫೪); ಗೀತೆಯು ದುಃಖದ ಕೊನೆಯ ಮೆಟ್ಟಲನ್ನಾಳಿದು ಕಣ್ಣೀರಿನ ಹರಿಯಲ್ಲಿ ಜಾರಿದಳು (ಕನಕಿ. ೫೧). ೫. 'ಹರಿಯಂತರ' ಪರಾ. ೬. ಇವರು . . . ವ್ಯಾಪಾರದ ಹರಿಯನ್ನು ಬಲ್ಲವರು (ಕಭಾಗೆ. ೨೫೬); ಅವನಿಗೆ ಬದುಕು ಮಾಡುವ ಹರಿಯು ಗೊತ್ತಾಗಲಿಲ್ಲ (ಗುರುಪ್ರ. ೩). ೯. ಊರ ಹರಿ ಬನ್ದು ಕಾದೊ ಮಱೆವೊಕ್ಕೋಸಂ ಕಾದು ಕಱಪ್ಪಿ ವೈರಿಬಲಕ್ಕೆ ಇದಿರನ್ನಡೆದು ಸತ್ತು ಯಸವಂ ಪಡೆದಂ (ಎಕ. XI, ಚಳ್ಳಕೆ. ೬-೨; ಸು. 925); ನೀತಿ ಮಹಾರಾಜನ ಹರಿಯಲ್ಗಣ್ಡರ ದುಮ್ಮ ಕಾಟಿಯ್ಯನ ಹರಿಯಲ್ . . . ರಾಜಯನ ಮಗ ಮಾಡ . . . ಸತ್ತ (ಸೈಅರಿ. ೧೯೩೯, ೩೬-೨; ಸು. 1034). ೧೪. ದೂತ; ಹರಿಕಾರ: ಕೃತಾಂತನ ಹರಿಯಂತೆ ಕವಿದು ಬೇಂಟೆಯೊಳೊರ್ವಂ ಬೇಡಂ . . . ಪಿಡಿದನಂತಾ ಪಿಳುಕಂ (ಯಶೋಧ. ೩-೩೫). ೧೫. ನೀರು ಹರಿದು ಹೋಗಲು ಮಾಡಿದ ದಾರಿ; ಚರಂಡಿ; ಗಟಾರ: "ಮೋರಿ, ಬಚ್ಚಲು, ಗಟಾರು, ಹರಿ" (ಕಂನುಹು. ೮೧); ಹೊಲಸುನೀರು ಹರಿದು ಹೋಗಲಿಕ್ಕೆ ಹರಿಗಳನ್ನು ಮಾಡಿರುತ್ತಾರೆ (ಮುಂಬಯಿ. ೫-೩೩); ಅಲ್ಲರೊ, ಹುಚ್ಚುಗೊಟ್ಟೆಗೋಳಾ, ಮನೆ ಮುಂದ ಹರೀ ಯಾಕ ಕೆದರಾಕ ಹತ್ತೀರಿ ಅಂತ? (ಕಮ್ಮಟ. ೧). ೧೬. "ಚಿಕ್ಕ ಚರಂಡಿಯಂತಹ ಹೆಳ್ಳ" (ಕಪಪು. ೬-೧೩೩): ಅವನಿಗಾಗಿ ರಸ್ತೆಯಲ್ಲಿ ಹರಿಗಳನ್ನು ಹಾಕಿದರು. ಆ ಹರಿಗಳಲ್ಲಿ ಕೋಲಾಡಿ ಸುತ್ತ ಲುಯಿ ತಾಲೆಗೆ ಹೋಗುತ್ತಿದ್ದನು (ಕಪಪು. ೬-೧೩೨). ೧೭. (ಮನೆಗಳ) ಸಾಲು: ಪಡುವಗೇರಿಯ ಪಡುವಣ ಹರಿಯೊಳ್ ಮನೆಯೊಂದು ಹಿರಿಯ ಮೂಡಗೇರಿಯ ಪಡುವಣ-ಹರಿಯೊಳ್ (ಎಇ. XIII, ೨೧-೧೩; ಸು. 1204). ೧೮. ಹರಡಿರುವುದು; ಹರಹು: (೪). ೧೯. ಗುಂಪು; ಸಮೂಹ; ರಾಶಿ: "ಪಂಗುಳಿ ತೆರಳ್ಕೆ . . . ಸಂತೆ ಹರಿ [ಪಾಕಾಂ. ೮] ಬಂಬಲ್ . . . ಜಾಳಿಗೆಯುಮೆನೆ ಕ್ರೀಣಕಾಮ್ಯಂ" (ಕಬ್ಬಿಕೃ. ೧೩).

ಹರಿಪರಿ₂, ಹರಿವರಿ (ದ್ವಿರುಕ್ತಿ) ೧. ಬಹಳ ವಿಧ; ಅನೇಕ ರೀತಿ: ಮುನ್ನಿನ ಕಲಿವೀರಧೀರರು ಕಾದಿದ ರಣಗಳನು ಪರಿಪರಿಯಲಿ ಬಣ್ಣಿಸಿ ಹೇಳಬಹುದಲ್ಲದೆ . . . ಕಾದಿ ಕೋಱಲು ಬಾರದು (ಬಸವ. ೬೭೮); ಪರಿಪರಿಯ ಕಾಯ್ಗಳಿಲ ಕಾಯ್ಮಾಯ್ ಹರ ಹರಾ ಎನಲಾಗದೇ (ಬಸಪು. ೪೫-೪೨); ಪರಿಪರಿಯ ಬಿನ್ನಾಣದೊಳಗರಗಿನ ಮನೆಯ ಮಾಡಿಸಿದ (ಕುಮಾಅ. ೮-೬೯); ಪರಿಪರಿಯ ಸಿಂಧ ಸೀಗುರಿ ಪತಾಕಾವಳಿಯು . . . ದೊರೆಗಳ್ಕೆತಂದರು (ಚೈಮಿಪಾ. ೩೩-೨೬). ೨. ಹರಿಯುವಿಕೆ; ಪ್ರವೃತ್ತಿ: ಮನದ ಹರಿವರಿ ಹೊನ್ನ ಮಣ್ಣಿನ ವನಿತೆಯರ ಮೇಲಿರದೆ ಸದ್ವರ್ತನೆಯಲಿರ್ದೊಡೆ ದೋಷವೇನು (ಪ್ರಭುಲಿಂ. ೧೩-೫೩). **ಹರಿಯ ತಾಣ**—ಬೇಟೆಯ ಪ್ರಾಣಿ ಸಿಗುವ ಅಥವಾ ಓಡಾಡುವ ಜಾಗ,—ಸ್ಥಳ: ನಾರಾಯಣನುಂ ತಾನುಮಂತಃಪುರಪರಿವಾರಂಬೆರಸು ಬೇಂಟೆಗೆ ಪೊಱಮಟ್ಟು ಪರಿಯ ತಾಣಕ್ಕೆ ವಂದು (ಪಂಪಭಾ. ೫-೪೭ ಪ); "ಗೊತ್ತಿನ ಸ್ಥಾನ; ಅನುಕೂಲ ಸ್ಥಾನ" (ಪ್ರಭಣ್ಣ). **ಪರೋಪರಿ**—ಹಲವು ರೀತಿ; ಅನೇಕ ಬಗೆ: ಪೋಡಿ ಹುಡಿಗಿ, ಪರೋಪರಿಯಿಂದ ಕಾಡ್ದದ (ಬಾಂಡಾಯ. ೨೩); ದಾಸಪ್ಪ ಸತ್ತರೂ ಲಕ್ಷ್ಮಿ ನೀಮಾಳಿಗೆ ಪರೋಪರಿಯಿಂದ ಮಾಡಿದಳು (ಬಾಬಲ. ೧೩೦).

[<ಪರಿ₂./ತಮಿ. ಮಲ. ತುಳು. ಪರಿ; ತೆಲು. ಪರಿ, ಪರುಗು, ಪರುವು, ಪಱು]

ಪರಿ–₄ (ಉಪ). ನಾಮಪದ, ಕ್ರಿಯಾಪದಗಳ ಹಿಂದೆ ಅಧಿಕವಾಗಿ, ಚೆನ್ನಾಗಿ ಮುಂತಾದ ಅರ್ಥಗಳಲ್ಲಿ ಸೇರುವ ಸಂಸ್ಕೃತದ ಒಂದು ಉಪಸರ್ಗ. 'ದುರ್–' ಹೋ. 'ಪರಿವೆರಸು', 'ಪರಿವೆಸ' ಪರಾ. [ಸಂ.]

ಪರಿಕಣಿ, ಹರಿಕಣಿ, ಹರಿಕುಣಿ, ಹರಿಕುಳಿ, ಹರುಕಣಿ (ನಾ). ೧. ಹರಿಯುವ ಜಾಡು: ದಕ್ಷಿಣೋತ್ತರಾಯಣಗತಿಯೊಳ್ ಪರಿವ ರವಿರಥದ ಗಾಲಿಯ ಪರಿಕಣಿಯೆನೆ ಪೊನ್ನ ಕೋಂಟೆ ಸೊಗಯಿಸಿ ತೋರ್ಕುಂ (ವರ್ಧಪು. ೧-೫೦). ೨. (ನೀರು) ಪ್ರವಹಿಸುವ ಜಾಗ; ಕಾಲುವೆ: ಪರಿವೇಷದ ತೆಱದಿಂದನವರತಂ ಕರ್ಪೂರರಸದ ಪರಿಕಣಿ ಸುತ್ತಂ ಪರಿಯಲ್ (ಕಾದಂಉ. ೨೨೩). **ಹರಿಕಣಿ**: ೩. ಮರದ ಸುತ್ತಲೂ ನೀರು ನಿಲ್ಲುವಂತೆ ಕಟ್ಟಿದ ಕಟ್ಟೆ; ಪಾತಿ: "ಅವಾಲಂ, ಅಲವಾಲಂ—ಈ ೨ ಮರಕ್ಕೆ ನೀರೆಱೆವ ಹರಿಕಣಿ" (ಹಲಾಯು. ೩೦-೩೦). **ಹರಿಕುಣಿ**: ೨. ಎರಡು ಗಲ್ಲದ ನುಯಿನವಾಯು ಹರಿಕುಣಿಯ ನಿಲಿಸದನು ಸಂಜಯನರಸನನು ಕುಳ್ಳಿರಿಸಿ ಬೆನ್ನಿಗೆ ಚಾಚಿದನು ಮಲಗ (ಕುಮಾಕ. ೧-೯). ೩. "ಯಾನಮೆನಲ್ಕೆ ಸಾರಥಿಯೆನಲ್ ನೀರ ಹರಿಕುಣಿಯೆನಿಕ್ಕುಂ" (ಮಂಗರಾ. ೧೨೫-೧೯). **ಹರಿಕುಳಿ**: ೨. ಹರಿವ ಹರಿಕುಳಿಯಲ್ಲಿ ಕೈಯನಿಕ್ಕಿ ನೋಡಿ ಅಡಗಿದ್ದಾವೆಯ ಹಿಡಿದೆ (ಸರ್ವಜ. ೬೦-೩೧೩). **ಹರುಕುಣಿ**: ೧. ಕರಪತಿ ಮಂತ್ರಿಯ ಬೆಂಕೊಳೆ ಕಂಗೆಟ್ಟು ಹರುಕಣಿಯೊಳು ಸಾಗಿದನು (ಜ್ಞಾನಪ. ೧೪-೩೬). 'ಹರಿಕೇಣಿ' ಪರಾ.

[ಪರಿ₂ + ಕಣಿ₅]

ಪರಿಕಥೆ (ನಾ). [ಕಾವ್ಯಮಿಾ] ಒಂದು ಗದ್ಯಕಥಾರೂಪ; "ಒಂದೇ ಪುರುಷಾರ್ಥದ ಪ್ರತಿಪಾದನೆಗೆ ಅನೇಕ ವರ್ಣನೆಗಳು ಬರುವುದು ಪರಿಕಥೆ" (ಧ್ವನ್ಯಾಲೋ. ೧೪೨ ಅಡಿಟಿ): ಸಂಸ್ಕೃತದಲ್ಲಿಯೂ ಹಿಂದೆ

ಗದ್ಯದಲ್ಲಿ—ಮುಖ್ಯವಾಗಿ—ಕಥೆಗಳನ್ನು ಬರೆದಿದ್ದಂತೆ ತೋರುತ್ತದೆ. ಇವು ಆಖ್ಯಾಯಿಕೆ . . . ಪರಿಕಥೆ, ಕಥಾನಿಕೆ ಎಂಬಂತೆ ಐದು ವಿಧವಾಗಿದ್ದಂತೆ ಅಗ್ನಿಪುರಾಣವು ತಿಳಿಸುತ್ತದೆ (ಕೃಷಿಡಿ. ೧೮೦). [ಸಂ. ಪರಿಕಥಾ]

ಪರಿಕರ$_1$ (ನಾ). ೧. ಸುತ್ತುಮುತ್ತಲಿನ ಜನ; ಪರಿವಾರ; ಪರಿಜನ: ಪರಿಕರಜನ್ಯಕಾನಿಕರದೊಳ್ ಕಳಭಾಷಿಣಿ ಬುದ್ಧಿವಂತೆಯಾ ತರುಣಿ (ಕುಸುಮಾ. ೧೫–೩೩); ರಥ ಪರಿಕರ ಸಹಿತವಾತ್ಮಾನುರಾಗದಲಿ ಚಂಡ ತೇಜದಿ ನಡೆವುತಿರಲು (ಬಸವು. ೫–೧೪); ಭೂಸುರರ ಸಚಿವರ ಪರಿಕರರ ಧೌಮ್ಯಾದಿ ಮಂತ್ರಿಗಳ . . . ಮುಂದಿರಿಕೆ ಕಳುಹಿದನು (ಕುವ್ಯಾಅ ೨೩–೫೨). ೨. ಗುಂಪು; ಸಮೂಹ: ದೊರೆಕೊಳಿಸುಗೆ ನಿನಗೆ ತಡೆಯದಾ ಪುರುಷರಮೇಶ್ವರನ ನಿರತಿಶಯಗುಣಪರಿಕರಮುಂ ತತ್ಪ್ರೀತಿ ಹಾರ್ಯಮುಂ ಮಂಗಳಮುಂ (ಅದಿಪು. ೧೨–೫೩); ವಿಶ್ವಂಭರಾಣ ನವನಳಿನ ಪರಿಕರಾಕೃಷ್ಟಮಧುಕರರಮಣೀಯ . . . ವನಮನೆಯ್ದಿ ವಂದು (ಪಂಪಭಾ. ೫–೧೦ಪ); ಮರವಾಯ್ವ ಪೊಣರ್ಮ . . . ಇಭಪರಿಕರ ಮೆಸೆಗುಂ ಮುರಾರಿ ನೆಗಪಿದ ನಗದೊಳ್ (ಜಗವಿ. ೪–೯೩). ೩. ಆರಂಭ; ಮೊದಲಾಗುವಿಕೆ; ಪ್ರಾರಂಭ. ೪. ನಡುಕಟ್ಟು; ನಡುಪಟ್ಟಿ. ೫. ಹಾಸುಗೆ; ಶಯ್ಯೆ: "ಪರ್ಯಂಕಂ ಪರಿಕರಮೆನೆ ಪರ್ಯಸ್ತಿಕೆ" (ವಸ್ತುಕೋ. ೫೮–೩೬). ೬. ವಿವೇಚನೆ; ವಿಮರ್ಶೆ: ಆವರಿಸೆ ಜಿನೇಂದ್ರಭಕ್ತಿ ಪೊಜಿಪೊಣ್ಕೆ ದಯಾರಸಮಿಂತು ನಾಡೆಯುಂ ಪರಿಕರದಿಂ ಮನಕ್ಕಜಿಪ್ಪು ಸಾರೆ . . . ಕಳೆಗುಂ ಖಲಕರ್ಮಬಂಧಮಂ (ಅದಿಪು. ೫–೫೩); ತತ್ವಮಸಿಯಂದೆನ್ನಲದೆಂತಿಹುದು ಅರಿವ ಪರಿಕರವೆಂತು ಎನಗಿದನರುಹಿ ಕರುಣಿಪುದು (ಗಗತಾ. ೨೨–೪). ೭. ಸಹಾಯಕ; ಸಂಗಡಿಗ: × ಟಂಬಕುಲಾನ್ತಕ ಬೀರರ ಬಣ್ಣ ಪರಿಕರ ನಕಿಗಂ (ಎಕ. II (R), ೪೮; ಸು. 1000). ೮. ಸೇವಕ ವರ್ಗ: ಭೂಪಾಲ ಮಕರ ಧ್ವಜಂ ನಡೆಯೆ ತಡವೇಂಟಿಗೆ ಪರಿಕರದ ಪರಿವಾರವನುವಾಗಿ ವಿಪಿನದೊಳು ಹರೆದು ನಡೆಯಲ್ಕೆ (ಹಜಕಾ. ೬–೧). ೯. ಸಾಮಗ್ರಿ; ಸಲಕರಣೆ: "ಪರಿವಾರಃ, ಪರಿಕರಃ, ಪರಿಸ್ಪಂದಃ, ಪರಿಗ್ರಹಃ—ಈ ೪ ಪರಿಗ್ರಹಂ" (ಹಲಾಯು. ೫೧–೧೫೧); ಕೋಕಿಲನ ಕೊರಲ ಮಧುರಧ್ವನಿಯೊಂದೆ ಸಮರ್ಥಂ ಶೂಲಿಯ ತಪದೆಸಕಮನುಡುಗಿಸುವೊಡುಳಿದ ಪರಿಕರವೇಕಯ್ (ಗಿರಿಕ. ೭–೬೧); ಗ್ರಾಸಮನಪರಿಕರವಿಲ್ಲದಿರೆ ಕಟ್ಟಾಸುರದೊಳು ಗಾಳುಗೆಡದೆ . . . ಬೇಸಱಸದೆ ಬಿನ್ನವಿಪುದು (ಹದಿಬ. ೩–೨೧); ಬಿಳಿಯ ಕಾಗಪ, ನಾನಾಬಣ್ಣದ ಪೆನ್ಸಿಲ್ ಮೊದಲಾದ ಪರಿಕರಗಳು ಮೇಜಿನ ಮೇಲೆ ಚೋಡಣೆಗೊಂಡಿದ್ದುವು (ಕುನರು. ೩೨). ೧೦. ಊಟಕ್ಕೆ ಸಹಾಯಕವಾದ ವ್ಯಂಜನ; ಮೇಲೋಗರ: ಪರ್ಣಕ್ಕಂಡುಗದಕ್ಕಿಯ ಕೂಟುಮು[ನ]ದರ್ಕೆ ತಕ್ಕ ಪರಿಕರಮುಮನೊರ್ಮ ಮಾನಸಂ ಕೊಂಡು ಪೋಪಂ (ಪಂಪಭಾ. ೩–೨೫ ಪ). ೧೧. (ಪೂಜೆ, ಯಜ್ಞ ಮುಂತಾದ ಸಮಯಗಳಲ್ಲಿ ಬಳಸುವ ಪಾತ್ರೆ, ಹೂವು, ಧೂಪ ಮುಂತಾದ) ಉಪಕರಣ: ಚೈತ್ಯಾವಸಥಂಗಳ್ಕೂಡೆ ನಾನಾವಿಧ ಪರಿಕರ ದಿವ್ಯಾರ್ಚನಾನೀಕದಿಂ ತೀವೆ ಸುರೇಂದ್ರಂ ಸಂದ ಸಂದೀಶ್ವರ ಮಹಿಮೆಯನಾನಂದದಿಂ ಮಾಡುತಿರ್ಪಂ (ಸುಕುಮಾ. ೧೧–೫೩); ನಗಾರ್ಚನ ಪರಿಕರಂಗಳಂ ನೆರಪುವ . . . ಘೋಷನಿನಾಸಿಗಳಿಂದಮಾಯ್ತು ಕಳಕಳ ನಿನದಂ (ಜಗವಿ. ೪–೮೦); ಮುನಿನಾಥನು . . . ಮರುತಮಿತ್ರ ಕಾರ್ಯದ ಪರಿಕರಂಗಳಂ ಸವಕಟ್ಟುತಿರಲು ಭೂಪತಿ ಕಂಡನು (ಹಜಕಾ. ೫–೫೪); ಮುಖಪರಿಕರಮಂ ಮಾಡಿಟ್ಟರಾಗಳಾ ವೇದಿಕೆಯೊಳ್ (ತ್ರಿಪುವಿ. ೪–೮). ೧೨. = ಪರಿಕರಾಲಂಕಾರ; ☞ ರೂಪಕಗಳಲ್ಲಿ ಮುಖ ಸಂಧಿಯ ಒಂದು ಅಂಗ. ಕಾವ್ಯಾರ್ಥದಲ್ಲಿ ಮುಖ್ಯಫಲಕ್ಕೆ ಕಾರಣಭೂತವಾದ ರತಿ, ಉತ್ಸಾಹಾದಿಗಳು ಇನ್ನೂ ವೃದ್ಧಿ ಹೊಂದುವುದು: ಸಮಾಸೋಕ್ತಿ ಪರ್ಯಾಯೋಕ್ತಿ . . . ಪರಿಕರ . . . ಉದಾತ್ತಾದ್ಯಲಂಕಾರಗಳೊಡಗೂಡಿ (ವಿವೇಕ. ೨೨೫). [ಸಂ.]

ಪರಿಕರ$_2$ 'ಪರಕಾರ' ನೋ.

ಪರಿಕರಣ (ನಾ). ಸಲಕರಣೆ; ಸಾಮಗ್ರಿ: ಆಧುನಿಕ ಪರಿಕರಣಗಳನ್ನು ಸಯೋಗಿಸಿ, ಬೆಳೆಯ ಉತ್ಪನ್ನವನ್ನು ಹೆಚ್ಚಿಸಿಕೊಳ್ಳುವ ಕಾರ್ಯಕ್ಕೆ ಅತಂಕಗಳು ಇಲ್ಲದೇ ಇಲ್ಲ (ತಿಕ್ಷದ. ೨೬); ಮನೆಯಲ್ಲಿ ಮಂಚ ಕುರ್ಚಿ ಮುಂತಾದ ಸಕಲ ಪರಿಕರಣಗಳು ಇದ್ದುವು (ಚತ್ರಕಾ. ೧೨೧). [ಸಂ.]

ಪರಿಕರಣೆ (ನಾ): ೧. ಏರ್ಪಾಡು; ಸಿದ್ಧತೆ: ಆರಸನಱಿಯದೆ ಬಿಟ್ಟಗೆಲಸದ ಪರಿಯಲಾಯಿತೆ ಎನ್ನ ಮಾಟದ ಪರಿಕರಣೆ ಫಲವೀಯಲಱಿಯದೆ (ಸ್ರಭುಲೀ. ೨೨–೪). ೨. ಗೌರವ; ಮರ್ಯಾದೆ; ಮನ್ನಣೆ: ಸೂಕ್ಷ್ಮ ನಿರಾಕರಣೆಯೆನ್ನದೆ ಪರಿಕರಣೆಯೆನ್ನದೆ ನಿತ್ಯ ನಿಜವಾದ ಪ್ರಸಾದಿ (ಚನ್ನವ. ಕ. ೫೫೬–೧೨೧೫); ಮನ್ನಣೆಯೊಳಲ್ಪತೆಯ ನುಡಿಯೊಳ ಗುನ್ನತಿಯನೆಸಗುವುದು ಪರರಿಗೆ ತನ್ನವರಿಗುಗ್ಗಡದ ಪರಿಕರಣೆಯನು ಮಾತಿನಲಿ ಭಿನ್ನವನು ತೋಱುವುದು ರಾಯರ ಗನ್ನಗತಕ ಕಣಾ (ಕುಮ್ಯಾಸ. ೧–೬೯). [ಸಂ. ಪರಿಕರಣ]

ಪರಿಕರಶ್ಲೋಕ (ನಾ). [ಕಾವ್ಯಮೀಾ] "ಕಾರಿಕೆಯಲ್ಲಿ ಹೇಳಿದ ವಿಷಯಕ್ಕೆ ಹೆಚ್ಚಿನ ಪರಿಷ್ಕಾರವನ್ನೊದಗಿಸುವ ಶ್ಲೋಕವೇ ಪರಿಕರಶ್ಲೋಕ" (ಧ್ವನ್ಯಾಲೋ. ೨೭ ಅಡಿಟಿ): ಇದನ್ನು ಸಂಗ್ರಹಿಸಿರುವ ಪರಿಕರಶ್ಲೋಕ ಕೆಳಗಿನದು (ಧ್ವನ್ಯಾಲೋ. ೨೭). [ಪರಿಕರ$_1$ + ಶ್ಲೋಕ]

ಪರಿಕರಾಂಕುರ (ನಾ). = ಪರಿಕರಾಂಕುರಾಲಂಕಾರ: ಎಸೆಯಲಭಿಪ್ರಾಯವು ವಿಶೇಷ್ಯದಲ್ಲಿಯೆ ತಾಂ ಹೊಸ ಪರಿ ಪರಿಕರಾಂಕುರವು (ಕುವಲ. ೫೩). [ಪರಿಕರ$_1$ + ಅಂಕುರ]

ಪರಿಕರಾಂಕುರಾಲಂಕಾರ (ನಾ). [ಕಾವ್ಯಮೀಾ] (ಅಭಿಪ್ರಾಯ ಗರ್ಭಿತವಾದ ವಿಶೇಷ್ಯಗಳನ್ನುಳ್ಳ) ಒಂದು ಬಗೆಯ ಅಲಂಕಾರ: ವಿಶೇಷ್ಯವು ಅಭಿಪ್ರಾಯಗರ್ಭಿತವಾಗಿ ಹೊಸಪರಿಯಿಂದ ತೋಱಲು ಪರಿಕರಾಂಕುರಾಲಂಕಾರವೆನಿಸುವುದು. ಬಿಸಜನಾಭನೆಂಬುದುದಾಹರಣ. ನಾಲ್ದೋಳನೆಂಬಂಥಾ ವಿಶೇಷ್ಯಪದದಲ್ಲಿ ಒಮ್ಮೆಯೇ ನಾಲ್ಕು ಪುರುಷಾರ್ಥಗಳನ್ನು ಕೊಡುವ ಸಾಮರ್ಥ್ಯವುಳ್ಳವನೆಂಬಭಿಪ್ರಾಯಗರ್ಭ ವಿಹುದು (ಕುವಲ. ೫೪); ವಿಶೇಷ್ಯವು ಸಾಭಿಪ್ರಾಯವಾಗಿದ್ದಲ್ಲಿ ಪರಿಕರಾಂಕುರಾಲಂಕಾರವೆನ್ನಿಸಿಕೊಳ್ಳುವುದು (ಕೃಷಿಡಿ. ೨೭೧). [ಪರಿಕರಾಂಕುರ + ಅಲಂಕಾರ]

ಪರಿಕರಾಲಂಕಾರ (ನಾ). [ಕಾವ್ಯಮೀಾ] ಒಂದು ಬಗೆಯ ಅರ್ಥಾಲಂಕಾರ: ವಿಶೇಷಣವು ಅಭಿಪ್ರಾಯಗರ್ಭಿತವಾಗಿ ತೋಱಲ್ಕೆ ಪರಿಕರಾಲಂಕಾರವೆನಿಪುದೆಂಬ ಲಕ್ಷಣಾರ್ಥ . . . ತಾಪನಾಶನದಲ್ಲಿ ಚಂದ್ರನ ದರ್ಶನವು ಶೀತಲತ್ವಾಭಿಪ್ರಾಯಗರ್ಭಿತವು (ಕುವಲ. ೫೨); ವಿಶೇಷಣವು ಸಾಭಿಪ್ರಾಯವಾಗಿದ್ದರೆ ಪರಿಕರಾಲಂಕಾರವೆನ್ನಿಸಿಕೊಳ್ಳುವುದು (ಕೃಷಿಡಿ. ೨೭೦). [ಪರಿಕರ$_1$ + ಅಲಂಕಾರ]

ಪರಿಕರಿತ (ನಾ). ಜೊತೆಗೂಡಿದುದು; ಹೊಂದಿದುದು: ಎರಡೆರಡಟ್ಟಳೆಗೆ ತರಂತರದಿಂದೊಂದೊಂದು ಗೋಪುರಂ ಪ್ರವಿರಾಜನ್ಮರಕತಮಣಿ ತೋರಣಪರಿಕರಿತಂ ಪುರವಧುಗೆ ವದನಮಿರ್ಪಂತಿರ್ಕುಂ (ಅದಿಪು. ೬–೧೦೬). [ಸಂ.]

ಪರಿಕರಿಸು (ಕ್ರಿ). ಸಿದ್ಧತೆ ಮಾಡು; ಸಜ್ಜುಗೊಳಿಸು; ಅಣಿಮಾಡು: ಅನಘ ದೇಶಿಕ ಕುಲೋತ್ತಮನ ಸಂಧ್ಯಮಕೊಲ್ಡು ವನಲಕ್ಷ್ಮಿ ಪರಿಕರಿಸಿ ಗುಡಿಗಟ್ಟಿದಳೊ . . . ಎನಿಸಿ ಸುಳಿವಿಡಿದಡೆಕೆ ಮೊದಲಾದವಱ ಸಸಿಗಳಂ ತೋಂಟಗಳ್ ಮೆಱೆದವು (ಪದ್ಮರಾ. ೬–೭೪). [ಪರಿಕರ$_1$ + –ಇಸು$_3$]

ಪರಿಕರ್ಮ (ನಾ). ೧. (ವಸ್ತ್ರ, ಪರಿಮಳ, ಲೇಪನ ಮುಂತಾದುವುಗಳಿಂದ) ದೇಹವನ್ನು ಅಲಂಕರಿಸಿಕೊಳ್ಳುವಿಕೆ : ಕುಸಲ ಪರಿಕರ್ಮದಿಂ ಶೃಂಗಾರಗೊಂಡು ಕಲೆ ಬಾದಿರುವ ಮೊಗವೆತ್ತಿ ಬೇಡುತಿಹ ವರವೇ (ಮಲೆದೇ. ೨೫-೫). ೨. ಅಲಂಕಾರ ; ಭೂಷಣ : ನಿರ್ಮಳಾಂತಃಕರಣಕೃತ ಪರಿಕರ್ಮವಿಳಸಿತೆ ತಾಯೆ ಸೈರಿಪುದುಮ್ಮಳವು ಬೇಡ (ಕುಮ್ಯಾಗ. ೧೧-೫೩). ೩. ಆರಾಧನೆ ; ಪೂಜೆ. ೪. ಶುದ್ಧಿಗೊಳಿಸುವಿಕೆ ; ಸ್ವಚ್ಛಗೊಳಿಸುವಿಕೆ. ೫. ಸೇವಕ ; ಆಳು. ೬. [ಗಣಿತ] ಒಂದು ಸಂಖ್ಯೆಯ ಮೊತ್ತವನ್ನಾಗಲಿ, ಬೆಲೆಯನ್ನಾಗಲಿ ಗುಣಾಕಾರ, ಭಾಗಾಕಾರ ಮೊದಲಾದುವುಗಳಿಂದ ವ್ಯತ್ಯಾಸಗೊಳಿಸುವ ಗಣಿತಕ್ರಿಯೆ : ಸಂಖ್ಯೆಗಳನ್ನು ಗುರ್ತಿಸುವ ವಿಧಾನವು ಸ್ಥಿರಪಟ್ಟ ಮೇಲೆ, ಅವುಗಳ ಮೇಲೆ ಪರಿಕರ್ಮಗಳನ್ನು ಮಾಡುವ ವಿಧಾನಗಳೂ ಏರ್ಪಟ್ಟುವು. ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಹಾರ ಎಂಬವು ನಾಲ್ಕು ಪರಿಕರ್ಮಗಳು (ಕವಿಕೋ. I, ೨) ; ಎಷ್ಟು ದೊಡ್ಡ ಸಂಖ್ಯೆಯನ್ನಾದರೂ ಬರೆಯುವ ಕ್ರಮವು ಏರ್ಪಟ್ಟ ಮೇಲೆ, ಅಂಕಗಣಿತದ ನಾನಾ ಪರಿಕರ್ಮಗಳ (operations) ವಿಧಾನಗಳನ್ನು ಸುಲಭವಾಗಿಯೇ ಕಂಡುಹಿಡಿದಿರಬೇಕು (ಗಣಿತ. ೬೪) ; ಗಣಿತವು ಎಣಿಕೆಯಿಂದ ಆರಂಭವಾಗಿ, ಅನೇಕ ವಿಧ ಹೊಸ ಸಂಖ್ಯೆಗಳನ್ನೂ ಅವುಗಳ ಪರಿಕರ್ಮಗಳನ್ನೂ (operations) ಕುರಿತು ಚರ್ಚಿಸುವುದು (ವಿಜ್ಞಾಕ. ೩). ೭. [ಜೈನ] ದೃಷ್ಟಿವಾದಾಂಗದ ಪರಿಕರ್ಮ, ಸೂತ್ರಕೃತ, ಪ್ರಥಮಾನುಯೋಗ, ಪೂರ್ವಗತ, ಚೂಲಿಕಾ ಎಂಬ ಐದು ವಿಭಾಗಗಳಲ್ಲಿ ಒಂದು ; ಲಿಪಿವಿಜ್ಞಾನ ಮತ್ತು ಗಣಿತಗಳನ್ನೊಳಗೊಂಡ ಭಾಗ : ಪನ್ನೊಂದಂಗಮುಮನೆರಡುಪರಿಕರ್ಮಮುಮಂ . . . ಯಥೋಚಿತ ವಿಧಿಯಿಂ ನೋಂತು (ಅಪಿಪು. ೩-೪೦ವ) ; ಪರಿಕರ್ಮಂ ಸೂತ್ರಂ ವಿಸ್ತರಿತ ಪ್ರಥಮಾನುಯೋಗಮೂ ಪೂರ್ವಗತಂ ವರಚೂಳಿಕೆಯೆಂಬಿವು ಪನ್ನೆರಡನೆಯಂಗಕ್ಕೆ ತೋರ್ಕುಮಯ್ದುವಿಕಲ್ಪಂ (ಚಂದ್ರಪು. ೧೪-೪೭). [ಸಂ. ಪರಿಕರ್ಮನ್]

ಪರಿಕರ್ಮಾಷ್ಟಕ (ನಾ). [ಗಣಿತ] ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರ, ವರ್ಗ, ಘನ, ವರ್ಗಮೂಲ ಮತ್ತು ಘನಮೂಲ ಎಂಬ ಎಂಟು ಬಗೆಯ ಗಣಿತ ಕ್ರಿಯೆ : ಈ ಅಧ್ಯಾಯಗಳಲ್ಲಿ ಕೋಷ್ಟಕಗಳು, ಸಂಖ್ಯೆಗಳು, ಪರಿಕರ್ಮಾಷ್ಟಕ . . . ಮುಂತಾದ ವಿಷಯಗಳು ಆಡಕವಾಗಿವೆ (ಗಣಿತ. ೨೬೩). [ಪರಿಕರ್ಮ+ಅಷ್ಟಕ]

ಪರಿಕರ್ಮಿ (ನಾ). ಸೇವಕ ; ಆಳು : ನಿನ್ನನ್ನು ನನ್ನ ಬಳಿಯಲ್ಲೆ ನನ್ನ ಪರಿಕರ್ಮಿಯಾಗಿ ನೇಮಿಸುತ್ತೇನೆ (ಮಾರ್ಟಿನ. ೧೮).

[ಸಂ. ಪರಿಕರ್ಮಿನ್]

ಪರಿಕಲಿತ, ಪರಿಕಳಿತ (ಗು). ೧. ಚೆನ್ನಾಗಿ ಕೂಡಿದ,—ಸೇರಿದ : ಯುವರಾಜಕಂಠಿಕಾಪರಿಕಲಿತ ಕಂಠಲಂಠನುಮಾಗಿ . . . ಗಾಂಗೇಯಂ ಸುಖದೊಳರಸುಗೆಯ್ದುತ್ತಿರ್ಪನ್ನೆಗಂ (ಪಂಪಭಾ. ೧-೬೮ ಪ) ; ವ್ಯಾಳಂಬಿ ಸ್ವರ್ಣಘಂಟಾವಳಿಪರಿಕಲಿತೋತ್ಕಾಳ ನಕ್ಷತ್ರಮಾಳಂ ಪೌಳೋಮಿಸ್ವಾಮಿ ಚಿತ್ತಂಬುಗೆ ಬಗೆಯಲೊಡಂ ಬಂದುದಂದಭ್ರಭಾಗಂ (ಪರ್ಧಮಾ. ೧೨-೩) ; ಪರಿಕಲಿತಕಳಚಕಸ್ತೋಮ್ಭರಗಾತ್ರಂ ವೀರರಸಮನಾವರಿಸಿದನೀ ಧುರದೊಳ್ವಿಭು (ಶೃಂಗಾರ. ೧-೮೦). ೨. ಆವರಿಸಿದ ; ಸುತ್ತುವರಿದ : ಪರಿಕಲಿತ[ಪಾಠಾಂ. ಗಳಿತ]ಶಿಖೀಮುಖ ವಾನರಚಿಹ್ನಂ ಪತ್ರಿಕುಲಚರಿತ್ರಂ ರಿಪುಭೀಕರಮೆನಿಪಂತಕಕೃತ ನವತರುವಿಪ್ರಾಂತರ್ದುದಲ್ಲಿ ಗಾಂಡಿವಿಯ ರಥಂ (ಗದಾಯು. ೪-೩೪) ; ಪರಿಕಲಿತ ಗಂಡಶೈಲೋತ್ಕರಮಧ್ಯದೊಳಮರ್ದುರಂಜಿಪಂಜನಗಿರಿಯಂ ಕರಿ ಪೋಲ್ತಿರೆ (ಪುಷ್ಪಪು. ೫-೮೩). (ನಾ). ೩. ಕೂಡಿದುದು ; ಸೇರಿದುದು : ಸುರಭಿನವಕುಸುಮ ಸೌಮನ ಪರಿಕಲಿತಂ ನಗವನಾಂತುಪವನಂ ನಯದಿಂದರಸನನಿದಿರ್ಗೊಂಡೊಯ್ದಂತಿರೆ ತೀವಿದುದು (ಪರ್ಧಮಾ. ೯-೨೯). **ಪರಿಕಳಿತ :** ೧. ಪರಿಕಲಿತ ಕಳಂಕಚ್ಛವಿವರಿಸುಜ್ಜ್ವಳಿಪರ್ಧಚಂದ್ರನಂ ಪೋಲದದೇಂ ವರಕಸ್ತೂರೀತಿಲಕದಿನುರುಶೋಭಾಘಾಟಮೆನಿಪ ನಿನ್ನ ಲಲಾಟಂ (ಕುಸುಮಾ. ೩-೪೭) ; ಪರಿಕಳಿತಾಪಹಹೃದ್ಯಂ ಪರಿಲಬ್ಧಭ್ರಮಣನಿಂದ್ಯಂ (ಶಾಂತೀಶ್ವ. ೫-೧೪೦). ೩. ಕಳೆ ಪರಿಕಳಿತಂ ಪೃಥ್ವಿ (ಪಸ್ತುಕೋ. ೧೩೩-೯೪) ; ಪರಿಕಳಿತ ಮಪ್ಪಧಸ್ತನ ಪರಿಣಾಮಂಗಳ್ವಿರಾಜಿತಾರ್ಥಸ್ಥಿತಸತ್ಪರಿಣಾಮಂಗಳ್ಸಮಮಾಗಿರಲಂತದಧಃಪ್ರವೃತ್ತಕರಣಮೆನಿಕ್ಕುಂ (ಶಾಂತೀಶ್ವ. ೧೬-೧೬). [ಸಂ.]

ಪರಿಕಲಿಸು 'ಪರಕಲಿಸು' ನೋ.

ಪರಿಕಲ್ಪ (ನಾ). ಕ್ರಮ ; ಏರ್ಪಾಟು ; ವ್ಯವಸ್ಥೆ : ಕರಮೆಸೆದುವು ರತ್ನತ್ರಯ ಪರಿಕಲ್ಪದೆ ಪರಶುರಾಮಚರಿತಂ ಚಕ್ರೇಶ್ವರಚರಿತಮಚಿತ ತೀರ್ಥೇಶ್ವರಚರಿತಂ ರತ್ನನಿಂದೆ ಭುವನತ್ರಯದೊಳ್ (ಅಜಿಪು. ೧೨-೪೪). [ಸಂ.]

ಪರಿಕಲ್ಪಂಗೆಯ್ (ಕ್ರಿ). ನಿಶ್ಚಯಿಸು ; ನಿರ್ಧಾರಮಾಡು : ಪರಿಕಲ್ಪಂಗೆಯ್ದುದನ್ನಂ ಕುಡದಮರಕುಜಂ ಪೆಚ್ಚು ಕುಂದುಳ್ಳುದಾಸಾಗರಂ (ಕುಸುಮಾ. ೨-೧೩೦). [ಪರಿಕಲ್ಪ+ಕೆಯ್$_1$]

ಪರಿಕಲ್ಪನೆ (ನಾ). ನಿಶ್ಚಯ ; ತೀರ್ಮಾನ (?) : ನವವಿಧ ವೈಶೇಷಿಕ ಗುಣೋಚ್ಛೇದಂ ಪುರುಷಂಗೆ ಮೋಕ್ಷಮೆಂಬ ಪರಿಕಲ್ಪನಮುಂ ಇಲ್ಲದುದೇ ಪ್ರದೀಪನಿರ್ವಾಣಕಲ್ಪಮಾತ್ಮನಿರ್ವಾಣಮೆಂಬುದು ತಮ್ಮಿಂದಮೆ ನಿರಾಕರಿಸೆಪಟ್ಟುದಱಿಂ (ತತ್ತ್ವಪ್ರ. ೫). [ಸಂ.]

ಪರಿಕಲ್ಪನೆ, ಪರಿಕಳ್ಪನೆ (ನಾ). ಯೋಜನೆ; ಏರ್ಪಾಟು; ವ್ಯವಸ್ಥೆ : ಇದರಂತೆ, ವಿಜ್ಞಾನ (consciousness)ವೆಂಬುದೊಂದೇ ಸತ್ಯ. ಕ್ಷಣಿಕ ಪ್ರಪಂಚವು(world of phenomena)ಇದರ ಪರಿಕಲ್ಪನೆ (projection) (ತತ್ತ್ವಪ್ರಾ. ೬೪೦). **ಪರಿಕಳ್ಪನೆ :** ಮುನ್ ಪಲವು ಸೂಳುವಾ ದೇವಿಯಿಂ ತಮ್ಮಭೀಷ್ಟಿತಸಿದ್ಧಿಯಾದುದಱಿನಾ ದೇವಿಗೆ ತಕ್ಕ ವೃತ್ತಿ ಪರಿಕಳ್ಪನೆಯಂ ಮಾಳ್ಪ ಸಂಕಳ್ಪದಿಂ (ಶಾಸಪ. ೯೫-೧೬ ; 1179).

[ಸಂ. ಪರಿಕಲ್ಪನಾ]

ಪರಿಕಲ್ಪಿತ (ಗು). ನಿಶ್ಚಿತವಾದ ; ನಿಗದಿಮಾಡಿದ : ಕತಿಪಯ ಮುಹೂರ್ತಪರಿಕಲ್ಪಿತಸ್ನಾನ ದೇವತಾರ್ಚನಾದಿ ಕಲ್ಪರಚನಾವಿಧಾನೆಯುಂ (ಚಂದ್ರಪು. ೧೨-೧೩ಪ) ; ಪರಿಕಲ್ಪಿತ ವ್ರತ ಸಮಾಧಿ ಸಲೆ ತೀರ್ಥಯಾತ್ರೆ ಜಪ ತಪ ನಿಷ್ಠೆ ಬೇಕೆಂಬ ವಿಲಗವಿಲ್ಲ (ಜೈಮಿಭಾ. ೫-೬೨). [ಸಂ.]

ಪರಿಕಲ್ಪಿಸು (ಕ್ರಿ). ನಿಶ್ಚಯ ಮಾಡು ; ತೀರ್ಮಾನಿಸು : ಜ್ಞೇಯಾಕಾರಪರಿಚ್ಛೇದಪರಾಙ್ಮುಖಮಪ್ಪ ಚೈತನ್ಯಂ ಮುಕ್ತಾತ್ಮಸ್ವರೂಪಮೆಂದು ಪರಿಕಲ್ಪಿಸುವರ್ (ತತ್ತ್ವಪ್ರ. ೫) ; ಇದಲ್ಲಿಯ ನೈಜಮಕ್ಕುಮೆಂದಿಂತು ಮಹೀಶಕಂತು ಪರಿಕಲ್ಪಿಸುತುಂ ಪದೆಪಿಂದೆ ನೋಡಿದಂ (ಕುಸುಮಾ. ೧೩-೧೫). [ಪರಿಕಲ್ಪನ+-ಇಸ್ಕು]

ಪರಿಕಳಿತ 'ಪರಿಕಲಿತ' ನೋ.

ಪರಿಕಳ್ಪನೆ 'ಪರಿಕಲ್ಪನೆ' ನೋ.

ಪರಿಕಾಂಕ್ಷಿತ (ಗು). ೧. ಬಹಳವಾಗಿ ಆಸೆಪಟ್ಟ ; ಅಧಿಕವಾಗಿ ಬಯಸಿದ. (ನಾ). ೨. ಭಕ್ತ ; ಆರಾಧಕ. [ಸಂ.]

ಪರಿಕಾಂಕ್ಷೆ (ನಾ). ಹಿರಿಯ ಆಸೆ ; ದೊಡ್ಡ ಬಯಕೆ.

[ಸಂ. ಪರಿಕಾಂಕ್ಷಾ]

ಪರಿಕಾರ$_1$ (ನಾ). ೧. ಪರಿವಾರ ; ಪರಿಜನ : "ಪರಿವಾರಮಾ ಪರಿಸ್ಪಂದಂ ಪರಗ್ರಹಂ ಪರಿಕಾ[ಪಾಠಾಂ. ವಾ]ರಮಕ್ಕುಂ" (ಸಂಗರಾ. ೬೦-೧೫). ೨. (ಉಪ್ಪು, ಮೆಣಸು ಮೊದಲಾದ) ಒಗ್ಗರಣೆ ಸಂಬಾರ ; ಉಪಸ್ಕರ : "ವೇಶವಾರಃ, ಉಪಸ್ಕರಂ— ಈ ೨ ಊಟದ

ಪರಿಕಾರಂ" (ಹಲಾಯು. ೫೬–೧೬೬); ಅದರಲ್ಲಿಯೂ ಪರಿಕಾರ ಹಾಕಿದ ತುಪ್ಪದ ಪರಿಮಳವಂತೂ ಹೇಳ ತೀರದು (ಸನ್ನೂರು. ೯). ೩. "ಹಾರವನ್ನು ಉಪ್ಪು, ಮೆಣಸು ಮುಂತಾದ ಸಂಬಾರಪದಾರ್ಥಗಳಿಂದ ಸಂಸ್ಕರಿಸುವುದು : (ಕ). [<ಸಂ. ಪರಿಕರ]

ಪರಿಕಾರ$_2$ 'ಪರಕಾರ' ನೋ.

ಪರಿಕಾಲ್ (ನಾ). ನೀರು ಹರಿಯುತ್ತಿರುವ ಕಾಲುವೆ,—ನಾಲೆ: ಆ ಲವಣಜಳಧಿಯಂ ಪರಿಕಾಲನೆ ಬಗೆವಂತೆ ಬಗೆದು (ಆದಿಪು. ೧೨–೮೧); ಮರಾಳಿ ಪರಿಕಾಲೊಳ್ ಕಾಲನಿಟ್ಟತ್ತು (ಅರ್ಧನೇ. ೨–೫೮); ಚಂದ್ರಕಾಂತರಸದ ಪರಿಕಾಲ್ಗಳಂ ದಾಂಟಿ (ಉದ್ಭಟ. ೫–೧೫); ತೀವಿ ಬಹಕೆನ್ನೀರಿಂ ಪರಿಕಾಲ್ವಿರಾಜಿಕುಂ (ಎಕ. XI, ದಾವಣ. ೨೯–೪೩; 1424).

[ಪರಿ$_2$+ಕಾಲ್$_2$]

ಪರಿಕಾಲುವೆ 'ಪರಿಗಾಲುವೆ' ನೋ.

ಪರಿಕಾಲ್ವೆ 'ಪರಿಗಾಲುವೆ' ನೋ.

ಪರಿಕಾಱ, ಹರಿಕಾರ, ಹರಿಕಾಱ, ಹಱಿಕಾಱ$_2$ (ನಾ). ೧. ಚುರುಕಾದ ವ್ಯಕ್ತಿ ; ಜೋರಾಗಿ ಓಡುವವನು; ವೇಗಶಾಲಿ : ಪರಿಕಾಱರೊಳೀತಂ ಕಾಲ್ವಲ್ಲಿದಂ. ಕಾದುವರೊಳೀತಂ ಮೆಯ್ಗಲಿ (ಶಮದ. ೧೩೩ ಪ್ರಯೋ). ೨. ಓಡುತ್ತ ಹೋಗಿ ಸುದ್ದಿಯನ್ನು ಮುಟ್ಟಿಸುವವನು ; ಸಂದೇಶವಾಹಕ ; ಚಾರ ; ದೂತ : ಲತೆಯೆಂಬ ತುರಂಗಮುಮಂ ಪೊರಳ್ಚಿ ಧೌತಾಂಬುತರಂಗಮೆಂಬ ಪರಿಕಾಱನನಟ್ಟಿ . . . ಸೋವುದು ಸಮೀರಣವಾರಣಮಾ ಪ್ರದೇಶದೊಳ್ (ಕಾವ್ಯಾವ. ೬೮೯); ಬೇಗಮೊತ್ತರಿಸುತ್ತುಂ ಪರಿಕಾಱನಂ ತಿಮಿರಮಂ ಬೆನ್ನಟ್ಟಿ ಪಾದಂಗಳಿಂದೊರಸಿತ್ತೇನತಿಚೋದ್ಯಮೋ ವಿಧು ಮದೋನ್ಮತ್ತೇಭ ವಿಕ್ರೀಡಿತಂ (ಚಂದ್ರಪು. ೮–೩೩); ಆಕಾಶಮಂಡಲದೊಳಗೆ ಲೋಕೇಶನ ಪಟ್ಟಣವಿರ್ಪುದು ನೋಡಾ ಆ ಪಟ್ಟಣಕ್ಕೆ ನಾಲ್ಕು ಬಾಗಿಲು . . . ಕೇರಿಗಳೊಳಗೆ ಪರಿಕಾಱರ [ಪಾಠಾಂ. ಪಾರಿಕಾರರ, ಪರಿವಾರದ]ಕಟ್ಟಳೆ ನೋಡಾ (ಅಖಂಡೇ. ೧೯೯–೨೭); ನಂಬುಗೆಯ ಪರಿಕಾಱನಾಗಿರ್ದು, ಆ ಪರಮನನ್ ಬೆಸಕೆಯ್ವ ಎಸಕದಿನ್, ಒಳ್ಳಿತ್ತೆ–ದಿಟಂ, ಆ ಕೆಲದಱಿಗೆ ಕಟ್ಟುಗೊಳ್ವೆಸಕಂ (ಬದ್ಧಪ್ರ. ೫೧–೧೧೧೫). ೩. (ಆನೆಯನ್ನು) ನಡೆಸಿಕೊಂಡು ಹೋಗುವವನು : ಪರಿಜನಮುಮಾಪ್ತಜನಮುಂ ಪರಿಕಾಱರುಮೋಜೆವಿಡಿಯುಮೊಡವರೆ . . . ಅರಣ್ಯಮಂ ಮುಟ್ಟೆವಂದನಂದು ನರೇಂದ್ರಂ (ಪಂರಾಮಾ. ೪–೧೧೮); ಆನೆಯ ಪರಿಕಾಱನಂತೆ ಪಲವಂ ಚಿಂತಿಸಿ . . . ಮೆಲ್ಲನಿಂತೆಂದಂ (ಧರ್ಮಾಮೃ. ೩–೩೫); ಆ ಕೈಟಭನೆಂಬ ಕಟ್ಟಾನೆ . . . ಕ್ರೋಧಿನಿಯೆಂಬಯ್ದನೆಯ ಮದದೊಳ್ ಮದಕ್ಕೆವಂದ ಕೀನಾಶನಂತೆ ಮಾಮಸಕಂ ಮಸಗಿ ಬರೆ ಮುಂದೆ ಪರಿತಪ್ಪ ಪರಿಕಾಱರ್ ರಾಮಕೃಷ್ಣರಂ ತೊಲಗು ತೊಲಗೆನೆ (ಅರ್ಧನೇ. ೮–೮೪ ವ). **ಹರಿಕಾರ** : ೨. ಹರಿಕಾರ ಬೊಮ್ಮಣಹೆಗ್ಗಡೆ . . . ಕೊಟ್ಟ ಶಿಲಾಶಾಸನದ ಕ್ರಮವೆಂತೆಂದರೆ (ಎಕ. VI, ಶೃಂಗೇರಿ. ೩೩–೧೦ ; 1418); ಅವನ ಸಂಗಡ ಹರಿಕಾರರ ಕೂಡಿಸಿ ಕಳುಹಿಸಿದಲ್ಲಿ. ಹೈದರಲ್ಲಿಖಾನರು ಆ ಕಾಗದವನ್ನು ನೋಡಿ ಬಹಳ ಸಂತೋಷಪಟ್ಟು (ರಾಜೇಂದ್ರ. ೨೧); ಚಿನ್ನದ ಕೋಲಿನ ಹರಿಕಾರ ನನಗೆ ಬಂದು ಹೇಳಿ ಹೋದ (ಶಾಂತಲಾ. ೬); ದೇವತೆಗಳ ಹರಿಕಾರ ಹರ್ಮೀಸ್ ಅಲ್ಲಿಗೆ ಬರುತ್ತಾನೆ (ಬದ್ಧಪ್ರ. XXI, ಪೀಠಿಕೆ). ೪. ಪ್ರಯಾಣಿಕ ; ಪಾಂಥ : "ಪಾಂಥಃ, ಪಥಿಕಃ, ಪಂಥನ್ ಈ ೩ ಹರಿಕಾರಂ" (ಕಾಶಕೃ. ೨೫೮). ೫. ಮುನ್ಸೂಚನೆ ; ಮೊದಲೆ ತಿಳಿಯಪಡಿಸುವಿಕೆ : ಈ ಹರ್ಷಭಾವನೆ ಯಾವ ಘಟನೆಗೆ ಹರಿಕಾರನಾಗಿರುವುದೋ, ಅದು ಯಾವಾಗ, ಯಾವ ರೂಪದಲ್ಲಿ ಬರಬೇಕೆಂದಿದೆಯೋ ಹಾಗೇ ಬರಲಿ (ಬೆತಂಬಾ. ೨). **ಹರಿಕಾಱ** : ೧. "ಜಂಘಾಳಃ, ಜವನಃ, ವೇಗೀ—ಈ ೩ ಹರಿಕಾಱಂ" (ಹಲಾಯು. ೫೯–೨೦೬); "ಹರಿಕಾಱಂ ವೇಗಾಯ್ಲ ಶೀಘ್ರಗಾಮಿಕನಕ್ಕುಂ" (ಕವಿಕಂ. ೧೧೨). ೨. ಮಾಸಾಳ್ಗಳಂತೆ ಬೀಡೆನುತ್ತುಂ ಹರಿಕಾಱರಂತೆ ಕಾಸೆನುತ್ತುಂ . . . ಈ ಮಾರ್ಗದಿಂ ಬಾಧೆಯಂ ಮಾಡೆ (ಧರ್ಮಾಮೃ. ೨–೭೧); ಓಲಗದೊಳಗಕಂಪನಮರಣ ವಾರ್ತೆಯನಸುರಚಕ್ರೇಶ್ವರನ ಸಭೆಯಲಿ ಹರಹಿದರು ಹರಿಕಾಱರೈತಂದು (ತೊರರಾ. ೬–೧೯–೧) ; ಹರಿಕಾಱರ ಖಂಡೆಯಕಾಱರ ಬಲು ಹರಿಗೆಕಾಱರ ಸಬಳಿಗರ . . . ವಾಹಳಿ ಪುರದ ಪೊಱಗೆ ಕಣ್ಗೆಸೆದವು (ಕುರಾಸಾಂ. ೪–೮೨). △ **ಹಱಿಕಾಱ$_2$** : ೨. ಹಱಿಕಾಱರ್ಗ್ಗೆ ಎ[ರೆ]ಮತ್ತರು ೬ (ಸೌಇಇ. XI–i, ೮೬–೩೬ ; 1050).

[ಪರಿ$_2$+–ಕಾಱ./ಪಾರ. ಹಿಂ. ಮರಾ. ಹರ್‌ಕಾರಾ]

ಪರಿಕಿಸು, ಪರುಕಿಸು, ಪರ್ಕಿಸು (ಕ್ರಿ). ೧. ತಾರತಮ್ಯವನ್ನು ಕಂಡುಹಿಡಿ; ಶೋಧಿಸು; ಪರೀಕ್ಷಿಸು : ಪರಿಕಿಪೆನೀ ಮೃಗೋಪ್ಪವದ ಕಂಪುಮನೀಕೆಯ ಸುಯ್ಯ ಕಂಪುಮಂ (ಪಂಪಭಾ. ೮–೬೦); ಪರಿಕಿಪೊಡಂ ವಿಕ್ರಾನ್ತಧನಂ ವಾಸುದೇವದಣ್ಣಾಧೀಶಂ (ಸೌಇಇ. XI–i, ೧೦೧–೧೭ ; 1068); ಪರಿಕಿಸಲು ಪರಮಾತ್ಮ ದಿನಕರ ಹರಿಹರ ವಿರಿಂಚಿಗಳು ಸೂರ್ಯನ ನೆರೆದು ಸುತಿ ಕೈವಾರಿಸುತ್ತಿರೆ (ಕುಪ್ಯಾಱ. ೭–೬೧); ಸುರಪನಾ ಪವನಜನ ಪರಿಯನು ಪರಿಕಿಸಲು ನಿರ್ಮಿಸಿದನಾಕ್ಷಣ ಸುರಸೆಯನು (ತೊರರಾ. ೫–೧–೧). ೨. ಆಲೋಚನೆ ಮಾಡು ; ಯೋಚಿಸು ; ಭಾವಿಸು : ಸರಸಿಜಸಂಭವಂ . . . ಆದಿವಿದ್ಧಮೆ ಜಿನೇಶ್ವರವಿದ್ಧಮಿದೆಂದು ಪೇಟ್ವುದಂ ಪರಿಕಿಸದೇಕೆ ಮೂಢಜನಮೂಳ್ವರೊ ನೂತನಮೆಂದು ಜೈನಮಂ (ಸಮಪ. ೨–೮); ಅಂಬರಕೆ ಪರಿಕಿಪಂದುಂಟೆ ಪಂಕಪ್ರಲೇಪಂ (ವರ್ಧಪು. ೧೪–೮೫); ಸರ್ವೋರ್ವರೆಯ ರಕ್ಷೆಗಾ ಶಿಕ್ಷೆ ಗುಳಿಜೆಲ್ಲದರ್ಕೆ ಪರಿಕಿಸಲ್ ನೀವಲ್ಲದಾರುಂಟು (ಪದ್ಮರಾ. ೪–೬) ; ಹರಿಹರ ಬ್ರಹ್ಮಾದಿಗಳನೆ . . . ಕಾಡುವೆನೆಂದು ನೀ ನುಡಿದೆ ಮರುಳೆ ನಿನ್ನನ್ನದಾರು ನಾನಾಪರಿಯಲಾಡಿಸುವವರು ನೀನಿದ ಪರಿಕಿಸದೆ ಗರ್ವದಲಿ ನುಡಿವರೆ (ಪ್ರಭುಲೀ. ೭–೬೧). ೩. ಗಮನಿಸು ; ನೋಡು ; ಲಕ್ಷಿಸು : ಕರಣವಿಕಾರಮೊಂದಿ ಕುಸುಮಾವಳಿ ಮೂರ್ಛೆಯನೆಯ್ದಿದಂದಮಂ ಪರಿಕಿಸಿ ಭೀತಿವಟ್ಟು (ಕುಸುಮಾ. ೧೨–೧೧೩); ಬಂಧುಗಳಂ ಬಗೆಯದೆ ಪುರಜನಮಂ ಪರಿಕಿಸದೆ ಹರಭಕ್ತಿಯೊಳಾತುರದಿಂ ಬಾಗೆವಾಡಿಯಂ ಪೊಱಮಟ್ಟು (ಬಸರ. ೨–೪೬); ಬರುತಿರಲಿಕವರನುವನಾಗಳು ಪರಿಕಿಸಿದರಾ ರಾಹುಕೇತುಗಳಱಿದರಾ ಕ್ಷಣ ಬಿಟ್ಟು ಬಂದರು ದೈತ್ಯಪಂಕ್ತಿಯನು (ಸಂಭವ. ೫–೧೨೪); ಸ್ಮರನು ಗುರಿಗೊಂಡೆಚ್ಚ ಕಣೆಯೊಂದರಲಿ ಯೋಗವನುಳಿದು . . . ನಾಲ್ಕರೊಳಚಲಸುತೆಯನು ಪರಿಕಿಸಿದನು (ಅನಂರಾ. ೧–೧೯–೧೬). ೪. ಸ್ವಚ್ಛಗೊಳಿಸು ; ಶುದ್ಧಿಮಾಡು : ತಿಳಮಂ ಪರಿಕಿಸಿ ವಾಸಿಸು ಬಟಿಕ್ಕದಂ ಪುಲ್ಲಪುಷ್ಪಸಂಕುಲದಿಂದಂ ಪಿಟಿದೆಣ್ಣೆಯೊಳಾ ಪೂವಂ ಪಟಿಯಂದದೆ ವಾಸಿಸೆಣ್ಣಗಾ ಪೆಸರಕ್ಕುಂ (ಲೋಕೋಪ. ೭–೨೨). **ಪರುಕಿಸು** : ೧. ಪರುಕಿಸಿ ನೋಡಲೆಂದು ಭೂಪತಿಯು ಸ್ವಲ್ಪ ಸ್ವಲ್ಪ ಮಾತಿನ ಪೀಠಿಕೆ ಹಾಕಿದನು (ಇಪ್ಪಕ. ೨೭೭). **ಪರ್ಕಿಸು** : ೧. ಧರಣೇಂದ್ರಪುರಕ್ಕದೇ(ಂ) ತೆಱದಿಂದಂ ಪರ್ಕ್ಕಿಪಡೆ ಕಾರ್ತ್ತಿಕೇಯನ ಪುರವಧಿಕಂ ಕೊಟ್ಟತೊಣೆ ಸಮಸ್ತಾವನಿಯೊಳು (ಸೌಇಇ. IX–i, ೨೭೦–೨೮ ; 1169). [ಪರಿಕ್ಕೆ$_2$+–ಇಸು$_3$]

ಪರಿಕೀರ್ಣ (ಗು). ೧. ಚೆದರಿದ ; ಹರಡಿದ. ೨. ತುಂಬಿದ ; ಭರ್ತಿಯಾದ. (ನಾ). ೩. ಗುಂಪು ; ಸಮೂಹ : "ಭರಿತಂ ಪ್ರಪೂರ್ಣಮಚಿತಂ ನಿಚಿತಮಾಕುಳಂ ಪರಿಕೀರ್ಣಮಾಚ್ಛದನಮೆನಲು ಸಂದಣಿಯಕ್ಕು" (ಮಂಗರಾ. ೧೨೮–೯). [ಸಂ.]

ಪರಿಕೂಟ (ನಾ). ೧. ಪಟ್ಟಣದ ಅಥವಾ ಕೋಟೆಯ ಬಾಗಿಲ ಬಳಿ

ಯಿರುವ ಅಡ್ಡಗಟ್ಟು,—ಕಟ್ಟಿ ; "ಕೋಟಿ ಬಾಗಿಲಿನ ಹತ್ತಿರ ವಿರುವ-ಕಟ್ಟೆ" (ಅನಂಸಾ). ೨. ದೊಡ್ಡ ಬಾಗಿಲು ; ಹೆಬ್ಬಾಗಿಲು: "ಹಸ್ತಿನಮಃ, ಪರಿಕೂಟ(೦)ಃ—ಈ ೨ ಹೆದ್ಬಾಗಿಲ ಕಟ್ಟು" (ಹಲಾಯು. ೪೪-೧೬೩) ; "ಪರಿಕೂಟಮಾ ಹಸ್ತಿನಮೆನಲು ಪೆರ್ಬಾಗಿಲಕ್ಕುಂ" (ಪುಂಗರಾ. ೫೭-೪).

[ಸಂ.]

ಪರಿಕೃತ (ಗು). ೧. ಆವರಿಸಿದ ; ಸುತ್ತುಗಟ್ಟಿದ. (ನಾ). ೨. ಬಳಸಲ್ಪಟ್ಟವನು ; ಅವೃತನಾದವನು ; ಸುತ್ತುಗಟ್ಟಲ್ಪಟ್ಟವನು : ಒಂದುದಿವಸಮುಚಿತಂಜಯಮಹಾರಾಜಂ . . . ಸರ್ವಾವಸರಸಭಾಮಂಟಪದೊಳಂತಃಪುರಾಂಗನಾಜನಸಂಗತನುಮಿಳಪ್ರಧಾನಪರಿವಾರಪರಿಕೃತನುಮಾಗಿರೆ (ಜಂದ್ರಪ್ರ. ೫-೨೪). [ಸಂ.]

ಪರಿಕೆ$_1$ (ನಾ). ಧಾಳಿ ; ಆಕ್ರಮಣ: 'ಬಲ್ವರಿಕೆ' ಪರಾ.

[ಪರಿ$_2$ + -ಕೆ]

ಪರಿಕೆ$_2$ (ನಾ). ಪರಿಶೀಲನೆ; ಪರೀಕ್ಷೆ: "ಪರಿಕೆ ಪರೀಕ್ಷೆ" (ಕಣಾಕಾಸಿ. ೪); ಪರೀಕ್ಷಾ—ಪರಿಕೆ (ಕಪುದ. ೨೬೨ ಪ್ರಯೋ); ಗುತ್ತಿಗೆವಿಡಿದಂತೆ ನೆಜಿಸಾಧಿಸದಜುಪತ್ತುನಾಲುಕು ಬಿಡ್ಡೆ ಗುಜುಹ ವೃತ್ತಕುಜಾನ್ವಿತೆಯರ ಪರಿಕೆಯ ನೋಡು ಚಿತ್ತಯಿಸೆಂದರಂಗಜಗೆ (ಮೋಹಶ. ೧೬-೧೧) ; ಎಲೆ ಬೃಹಂದಳೆ ನಿನಗೆ ಕವನ ನಾಟ್ಯದ ವಿದ್ಯೆಗಳ ಪರಿಕೆಯಿದ್ದಲ್ಲಿ ನಿಲಲರಿಯೆ (ತುರಂಗ. ೩೬-೫೬) ; ನೊಸಲ ಪೊರೆಯಾಯ್ತು ಪಾತದ ಭಾರ ಜಂತೆ . . . ಬಸವಳಿದು ಬರಿದೆ ಸೇರ್ದೆನು ಪರಿಕೆ ಸಂತೆ (ಪಂಚಿಪಿ. ೧೬೫-೨). [<ಸಂ. ಪರೀಕ್ಷಾ./ಪ್ರಾ.ಪರಿಕ್ಖ, ಪರಿಖ./ತಮಿ. ಪರಿಕ್ಕೈ ; ತುಳು. ಪರಿಕೆ]

ಪರಿಕೆ$_3$ (ನಾ). ೧. ಕಂದಕ ; ಕೋಟೆಯ ಅಗಳು : ಪರಿಖ—ಪರಿಕೆ (ಕಪುದ. ೨೫೧ ಪ್ರಯೋ). ೨. ಕೊಳ ; ಹೊಂಡ : "ಪರಿಕೆ [ಪಾಠಾಂ. ಖೆ]ಯನೆ ದೀರ್ಘಿಕೆಯೆನಿಕ್ಕುಂ" (ಪುಂಗರಾ. ೧೨೩-೧೫).

[<ಸಂ. ಪರಿಖಾ]

ಪರಿಕೊಳೆ (ನಾ). ಹರಿಯುತ್ತಿರುವ ಕೊಳೆ ; ಸೋರುವ ಕಶ್ಮಲ ; ಕೀವು, ರಕ್ತ ಮುಂತಾದುವು : ಪರಿಕೊಳೆಯೂ ನೀನಾ ಪಾಳ್ಕನೆಯುಂ ಪರಿಕೊಳೆಗಿಂಬುಂ ಪೆಣ್ಗಳೊಡಂಬುಂ (ಸೌನಂದ. ೪-೪೭).

[ಪರಿ$_2$ + ಕೊಳೆ$_2$(<ಕೊಟ್ಟೆ$_2$)]

ಪರಿಕ್ರಮ (ನಾ). ೧. ನಡೆಯುವಿಕೆ ; ತಿರುಗಾಟ ; ಸಂಚಾರ : "ಗತಃ, ವಿಂಖಃ . . . ಪರಿಕ್ರಮಃ—ಈ ೫ ನಡೆಪ" (ಹಲಾಯು. ೧೨೦-೪೧) ; "ವಿಂಖಂ ವಿಹಾರಂ ಪರಿಕ್ರಮಂ ಪರಿಸರ್ಪಮೆನೆ ನಡೆ" (ಪುಂಗರಾ. ೧೩೦-೧೬). ೨. ತಿರುಗುವಿಕೆ ; ಸುತ್ತುವುದು : ಕರಣದ ಚಾರಿಯ ಚಲ್ಲಿಯ ಪರಿಕ್ರಮಕ್ರಮದ ಭಂಗಿಗಳ್ ನೆಗಚ್ವೆಡೆಯೊಳ್ ಸುರವಂದಿಗಳಿಂ ಹೋಹೋಯಿರೆಯೆನಿಸಿದುದಾಟವಿಂತು ನೀಲಾಂಜನೆಯಾ (ಆದಿಪು. ೪-೬೯); ಈ ಕೊನೆ ಇಲ್ಲದ ಪರಿಕ್ರಮದಲ್ಲಿ ನವೌಲ್ಯದ ತಂತು ಕೆಲವು ವೇಳೆ ಮುರ್ಚುಲವಾಗಬಹುದು (ಸಂಕಪ್ಯ ೪೪೦). ೩. ಪ್ರದಕ್ಷಿಣೆ : ತ್ರಿಣಯನಕೃತಾಂಘ್ರಿಪರಿಕ್ರಮನೆ ಪರಮೇಷ್ಠಿ ವಂದ್ಯನೆ ಪರಮಗುಣನಿಧಿಯೆ (ನಿಭಾಗ. ೧೦-೬೧-೩೪). ೪. = ಪರಿಕ್ರಮಸಂಧಿ : ಆ ಸಂಧಿ ಯಾವು ವೆಂದೊಡೆ:—ಸಂಪ್ರದಾನ . . . ಪರಿಕ್ರಮ ಅರಿಪರದೂಷಣ ಸ್ಕಂಧೋಪನಯಮೆಂದು ಸೋಡಶವಿಧಮಕ್ಕುಂ (ಪಂಚತಂ. ೨೫೦-೫). [ಸಂ.]

ಪರಿಕ್ರಮಣ (ನಾ). = ಪರಿಕ್ರಮ ೨ : "ಪರಿಕ್ರಮಣ"ವೆಂದರೆ ಇನ್ನೊಂದು ವಸ್ತುವು ಕೇಂದ್ರವಾಗಿದ್ದು ಅದರ ಸುತ್ತಲೂ ಸುತ್ತುವುದು (ಜ್ಯೋತಿರ್ವಿ. ೨೯ ಅನುಬಂ). [ಸಂ.]

ಪರಿಕ್ರಮಸಂಧಿ (ನಾ). [ರಾಜನೀ] ವಿರೋಧಿಗಳೊಡನೆ ಮಾಡಿಕೊಳ್ಳುವ ಹದಿನಾರು ಬಗೆಯ ಒಪ್ಪಂದಗಳಲ್ಲಿ ಒಂದು ; ಕೋಶದ ಎಲ್ಲಾ ಸಂಪತ್ತು ಅಥವಾ ಅದರ ಅರ್ಧಭಾಗವನ್ನು ಶತ್ರುವಿನ ವಶಕ್ಕೆ ಕೊಟ್ಟು ಮಾಡಿಕೊಳ್ಳುವ ಸಂಧಾನ : ಭಂಡಾರ ಮನೆಕ್ಕೆ ಅದಜೋಳಧಾನ್ಯಮನೆಕ್ಕೆ ಕೊಟ್ಟು ದೇಶಪ್ರವೃತ್ತಿಯಂ ರಕ್ಷಿಸುವ ಸಂಧಿ ಪರಿಕ್ರಮಸಂಧಿಯೆಂಬುದಕ್ಕುಂ (ಪಂಚತಂ. ೨೨೦-೨೨).

[ಪರಿಕ್ರಮ+ಸಂಧಿ]

ಪರಿಕ್ರಮಿಸು (ಕ್ರಿ). ಹೋಗು ; ತೆರಳು. [ಪರಿಕ್ರಮ+-ಇಸು$_3$]

ಪರಿಕ್ರಯೆ (ನಾ). ೧. ಸುತ್ತುವರಿಯುವುದು ; ಸುತ್ತುಗಟ್ಟುವುದು : "ಪರಿಸರ್ಪಃ, ಪರಿಕ್ರಯಾ—ತ ಅಲ್ಲಿಯಲ್ಲಿ ತಿರುಗಿ ಬರುವಿಕೆ, ಸುತ್ತಿ ಬರುವಿಕೆ" (ನಿಘಂ೦ತಿ. ೩೬೨). ೨. ಸುತ್ತಲೂ ಬೇಲಿ ಹಾಕುವುದು ಅಥವಾ ಕಂದಕ ತೋಡುವುದು. [ಸಂ. ಪರಿಕ್ರಿಯಾ]

ಪರಿಕ್ರುದ್ಧ (ಗು). ಬಹಳವಾಗಿ ಕೋಪಗೊಂಡ ; ಹೆಚ್ಚಾಗಿ ಕ್ರೋಧ ಹೊಂದಿದ : ಭವಬದ್ಧವೈರಮುಂ ತಳಿದು ವಿಭಂಗಜ್ಞಾನದಿಂದೆ ಪರಿಕ್ರುದ್ಧಮನರ್ ನವಖಂಡಮಾಗೆ ಮಾಬ್ಬರ್ ನವನಾರಕರಂ ಪುರಾಣ ನಾರಕರಾಗಳ್ (ಮಲ್ಲಿಪು. ೧೩-೧೩೫). [ಸಂ.]

ಪರಿಕ್ಲಿನ್ನ (ಗು). ತೊಯ್ದಿರುವ ; ಒದ್ದೆಯಾದ : ಉಚ್ಚಳಿಸಿದ ಪರಿಕ್ಲಿನ್ನಾಂಗಕ್ಕೆ ಪೇಸಿ ಮನೆಯಿಂ ಪೊಱಮಟ್ಟು ಪೋದೆ (ಶಾಂತಪು. ೪-೬೬ ಪ). [ಸಂ.]

ಪರಿಕ್ಲೇಶ (ನಾ). ಕಷ್ಟ ; ಸಂಕಟ ; ನೋವು : ಹಿಂಸಕಪುರುಷಂ ಈ ಭವದೊಳ್ ವಧಬಂಧ ಪರಿಕ್ಲೇಶಾದಿಗಳಂ ಮಜುಭವದೊಳ್ ಅಶುಭ ಗತಿಯಂ ಪಡೆಗುಂ (ತತ್ತ್ವಪ್ರ. ೫೭೧) ; ವನವಾಸದ ಪರಿಕ್ಲೇಶಾನುಸಂತಾಪವನು ಬೀಳ್ಕೊಡಿಸಿ . . . ಜೀವ ಸಲಹುವುದು (ಕುವ್ಯಾವಿ. ೧೦-೩೭). [ಸಂ.]

ಪರಿಕ್ಷಯ (ನಾ). ನಾಶ ; ಅವನತಿ : ವಿವಿಧಧಾನ್ಯಭೇದಂಗಳುಂ ಕಲ್ಪವೃಕ್ಷಪರಿಕ್ಷಯದೊಳ್ ಪ್ರಜಾಜೀವನೋಪಾಯಹೇತುಗಳಕ್ಕಪ್ಪ ಪಶ್ವಂಗಳಾಗಿ ಬೆಳೆದುಬಗಿರೆಯುಂ (ಆದಿಪು. ೩-೬೨ ಪ). [ಸಂ.]

ಪರಿಕ್ಷಯಿಸು (ಕ್ರಿ). ನಾಶಮಾಡು ; ಇಲ್ಲವಾಗಿಸು : ಭವಸಂಯೋಜನಗಳನ್ನು ಪರಿಕ್ಷಯಿಸಿ ಸಮ್ಯಕ್‌ಜ್ಞಾನದ ಬಲದಿಂದ ವಿಮುಕ್ತಿಹೊಂದಿದ ಭಿಕ್ಷುಗಳು . . . ಪರಕ್ಕೆ ಹೋಗುವರು (ತೀರ್ಥಕ. ೧೩).

[ಪರಿಕ್ಷಯ+-ಇಸು$_3$]

ಪರಿಕ್ಷಿಪ್ತ (ಗು). ೧. ಎಸೆದ ; ಕೆದರಿದ ; ಚೆಲ್ಲಾಪಿಲ್ಲಿಯಾದ. ೨. ಸುತ್ತುಗಟ್ಟಿದ ; ಬಳಸಿದ. (ನಾ). ೩. ಸುತ್ತುವರಿದುದು : "ನಿವೃತಂ, ವೇಷ್ಟಿತಂ . . . ಪರಿಕ್ಷಿಪ್ತಂ—ಈ ೫ ಸುತ್ತಲ್ಪಟ್ಟುದು" (ಹಲಾಯು. ೧೧೮-೨೭). [ಸಂ.]

ಪರಿಕ್ಷೀಣ (ನಾ). ೧. ನಾಶ ; ಅಳಿವು : ಕುರುಕುಲವೆಲ್ಲಾ ಪರಿಕ್ಷೀಣವಾದ ಮೇಲೆ ಹುಟ್ಟಿದ ಮಗುವಾದ್ದರಿಂದೆ ಅದಕ್ಕೆ "ಪರೀಕ್ಷಿತ್ತು" ಎಂದು ಹೆಸರಾಯಿತು (ಸಭಾ. ೫೬೩). ೨. ಕಡಮೆಯಾಗುವಿಕೆ ; ಕುಂದುವಿಕೆ : ಆಗ ವಿಲಿಂದರಾಜನು . . . ಆಯುಸ್ಸು ಪರಿಕ್ಷೀಣವಾದ ದೇವಪುತ್ರನಂತೆ ಭೀತನಾದನು (ಬುದ್ಧ ಪ. ವಿಲಿಂದ. ೩೧). [ಸಂ.]

ಪರಿಕ್ಷುಬ್ಧ (ಗು). ಅಲ್ಲೋಲಕಲ್ಲೋಲವಾದ : ಪ್ರಕ್ಷುಬ್ಧವಾದ : ಅವಿಧೇಯಕ್ಷತ್ರಸಂವರ್ತನಸಮುಯಪರಿಕ್ಷುಬ್ಧವಾರಾಶೀವೀಚೀನಿವಹಂ ಮಯರ್ಯಾದೆಯಂ ದಾಂಟಿದುದೆನೆ (ಪುಲ್ಲಪು. ೪-೧೩೪); ನೆಜಿ[ಜಿ]ನುಜ್ಞ ಪಾಯ್ದು ನೆತ್ತರ್ಗುಜಿಗೆ ಪರಿಕ್ಷುಬ್ಧ ಬಲಜಲಧಿಯೊಳ್ಕೆಂಬಾವುಜಿ ಪೊಜಿದು ಪಜಾವ ತೆಜದಿಂ ಗಜಾಗಣ ನೆಜಿ ಮೊಜಿದು ಪಜಾದು ವೆರಡುಂ ಬಲದೊಳ್ (ರಾಜಶೇ. ೬-೪೭). [ಸಂ.]

ಪರಿಕ್ಷೇಪ (ನಾ). ೧. ಸುತ್ತಲೂ ಎಸೆಯುವಿಕೆ. -ಚೆಲ್ಲುವಿಕೆ. ೨. ಸುತ್ತುಗಟ್ಟುವಿಕೆ ; ಬಳಸುವುದು : ಪ್ರಬಲರಿಪುಬಳಭುಜಬಲ

ಪರಿಕ್ಷೇಪಪೂರ್ಣತಾರ್ಣಪ್ರಳಯಾರ್ಣವನುಂ (ಗದಾಯು. ೨-೧೮) ; ಏಳಾಲತೆಯ ವಿಳಾ[ಸ]ಭಿತ್ತಿಯಿಂ ದ್ರಾಕ್ಷಾಲತೆಯ ಪರಿಕ್ಷೇಪದಿಂದೊದವಿಲತೆಯ ಮಂಡಪದಿಂದಳಂಕರಿಸಿ ನಿಂದ ಸಹಕಾರಲತೆಯ ಬಾಳ್ಗೊಂಪದೊಳ್ . . . ವಿಶ್ರಮಿಸಿದಾಗಳ್ (ವರ್ಧಮಾ. ೮-೬೬ ಪ). ೩. ವರ್ತುಲ; ಮಂಡಲ ; ಪರಿಧಿ. ೪. ಇಂದ್ರಿಯ. [ಸಂ.]

ಪರಿಖಂಡಿತ (ಗು). ನಾಶಮಾಡಿದ : ಚಂಡಗಜಗಮನೆ ಪರಿಖಂಡಿತಾಘಾಳಿಯಂ ಕಂಡಳೇರೆಂಟುಮೊಳ್ಗಸಿನಿಸೆವೋಳಿಯಂ (ಆದಿಪು.೭-೨೭ರಗಳೆ).

[ಸಂ.]

ಪರಿಖಚಿತ (ಗು). ೧. ಕೂಡಿಸಿದ ; ಕುಂದಣಿಸಿದ : ಅವಱೊಳಗಣ ಗಣನಾತೀತ ರಮ್ಯಮಣಿಕನಕರಜತಪರಿಖಚಿತಹರ್ಮ್ಯಪ್ರಾಕಾರ(ಂ ಕರ) ಮೊಪ್ಪುಗುಂ (ಶಾಂತಿಪು. ೩-೬ ರಗಳೆ) ; ವ್ಯಕ್ತಾಮುಕ್ತಾಫಳಪ್ರಕರ ಪರಿಖಚಿತವಿಳಾಸಸೌಧಾಗ್ರ . . . ಗುಣಾಗ್ರಗಣ್ಯಸಮುದಯಸಮುಂಚಿತಮುಂ (ರಾಜಶೇ. ೧೪-೧೦೬ ಪ). ೨. ಕೂಡಿಸಿದ ; ಸೇರಿಸಲ್ಪಟ್ಟ (?) : ಉತ್ತೋರಣ ಪರಿಖಚಿತಾದರ್ಶಬಿಂಬಾಸ್ಯೆ ವೇಲ್ಲತ್ಪರಿಖಾಂಬುಳ್ಪಾಸೆ ಪಾಂಥಪ್ರತತಿಗೊದವಿಕುಂ ತತ್ಪುರೀಲಕ್ಷ್ಮಿ ಚೆಲ್ವಂ (ಆಂದ್ರಪು. ೬-೧೭). [ಸಂ.]

ಪರಿಖಾಚಕ್ರ (ನಾ). ಕಂದಕದ ವರ್ತುಲ ; ಮಂಡಲಾಕಾರವಾದ ಅಗಳು : ಅಂತತಿಗಂಭೀರಮಾದ ಪರಿಖಾಚಕ್ರದಿಂದೊಳಗೆ (ಜಗವಿ. ೨-೧೮ ಪ). [ಸಂ.]

ಪರಿಖಾತ (ನಾ). ೧. ಕಂದಕ ; ಅಗಳು. ೨. ಹಳ್ಳ ಬಿದ್ದ ಜಾಡು. ೩. ಮಣ್ಣು ಅಗೆಯುವ ಸ್ಥಳ. ೪. ಪುಷ್ಕರಿಣಿ ; ಕಲ್ಯಾಣಿ : "ವಾಪಿ ದೀರ್ಘಿಕೆ ಪರಿಖಾತಂ" (ವಸ್ತುಕೋ. ೨೪-೧೫) ; ಶ್ರೀಕರುಣಿಕೇಳಿಗೃಹಂ ಭೂತಳವಿಖ್ಯಾತಿತಂ ಲಸಚ್ಚೀವನವಿಖ್ಯಾತಂ ತಾನೆಸೆವುದು ಪರಿಖಾತಂ ಪ್ರಭುಪುರುಷನಂದದಿಂದನವರತಂ (ವರ್ಧಪು. ೧-೫೧). [ಸಂ.]

ಪರಿಖೆ (ನಾ). ೧. (ಪಟ್ಟಣದ ಅಥವಾ ಕೋಟೆಯ ಸುತ್ತಲೂ ಅಗೆದಿರುವ) ಕಂದಕ ; ಅಗಳು : "ಪರಿಖಾಭಿಖ್ಯಂ ಪೇಯಂ" (ವಸ್ತುಕೋ. ೪೬-೬); ತಜ್ಜನಪದಮಧ್ಯಂಗಳೊಳ್ ಪರಿಖಾವಪ್ರಪ್ರಾಕಾರಗೋಪುರಾಟ್ಟಾಲಕಾಲಂಕೃತಂಗಳಪ್ಪ ರಾಜಧಾನಿಗಳುಮಂ (ಆದಿಪು. ೮-೬೩ಪ) ; ಆ ಪುರಸ್ತ್ರೀಯು ರತ್ನಕಂಠಿಕಾಮಯೂಖಲೇಖಾವಿಲಾಸಮಂ ತಳೆದು ಪರಿಖೆಯ ತೆರೆವೊಯ್ಲಿಂದಂ ತೆರಳ್ದು ತಡಿವಿಡಿದು ತೆಕ್ಕೆಗಟ್ಟಿದ ಪೊಂದಾವರೆಯ ರಜದಂತೆ ನೃಪಮಂದಿರಮಂ ಬಳಸಿರ್ದ ಪೊಮ್ಮುಗಿಲ್ಪೊಗಯಿಸುಗುಂ (ಮಲ್ಲಿಪು. ೨-೬೪) ; ಇರ್ಪುದಪ್ರತಿಮಕೋಟಾಚಕ್ರಮಂ ಸುತ್ತಿ . . . ಪರಿಖಾಂತರಂ (ಪುಷ್ಪಪು. ೨-೬೨) ; ಆ ಪರಿಖೆ ಕಲ್ಯಾಣದಲಿ ಕಂಗಿದಿರಾಯಿತಲ್ಲಮಗೆ (ಪ್ರಭುಲೀ. ೧೪-೯). ೨. ಕೊಳ ; ಕಲ್ಯಾಣಿ : "ಪರಿಖಾ, ದೀರ್ಘಿಕಾ—ಈ ೨ ದೀರ್ಘಿಕೆ" (ಹಲಾಯು. ೧೧೧-೫೪) ; ರಮಣೀಯಮಾದ ವನವಳಯದಿಂದೊಳಗೆ . . . ಈ ನರನಾಥನೆನ್ನವೊಲೆನುತ್ತಂಭೋಧಿ ತಾಂ ಬಂದು ನಂದನೆಯುತ್ತಲ್ಲಿಯೆ ನಿಂದವೋಲ್ಪರಿಖೆ ಚೆಲ್ವಂ ಬೀಱು ಕೞ್ಗೊಪ್ಪುಗುಂ (ರಾಜಶೇ. ೨-೮೩).

[ಸಂ. ಪರಿಖಾ]

ಪರಿಖೇದ (ನಾ). ಬಹಳ ವ್ಯಥೆ ; ಅಧಿಕವಾದ ಕಳವಳ, — ದುಃಖ : ಇಂತೀ ಪರಿಖೇದಮೋತೆಜದಿನಾಯ್ತುತ್ತಾನಸೀನಸ್ತನೀ (ಅನಂಪು. ೧೨-೫೫) ; ಹೇಳು ಮುರಹರ ಬುದ್ಧಿ ಕದಡಿ ಭಡಾಳಿಸಿತು ಪರಿಖೇದವೊಸಗೆಯ ಕೇಳಲಱಿಯೆನು ರಾಜವಾರ್ತೆಯನೆಂದನಾ ಪಾರ್ಥ (ಕುವ್ಯಾಕ. ೧೩-೧). [ಸಂ.]

ಪರಿಖ್ಯಾತಿ (ನಾ). ವಿಶೇಷವಾದ ಯಶಸ್ಸು,—ಪ್ರಸಿದ್ಧಿ. [ಸಂ.]

ಪರಿಗ$_1$ (ನಾ). = ಪರಿಘೆ ೨ : ಪರಿಗ ಮುಸಲ ಮುಸುಂಡಿಯ ಶಲ್ಯಮುದ್ಗರ ಕರದೈದು ಬಾಣದ ಹರಿಗೆ ಬೆರಸಿ ಹುಂಕರವೆದ್ದು ಕಡಿದಾಡಿ ರಗುತದಿ ಸರದಿಯವುಧಯಪಾಯದಳವು (ದೇವಾಂಪು. ೪-೫೨).

[<ಸಂ. ಪರಿಘ./ತಮಿ. ಪರಿಕ, ಪರಿಕೈ]

ಪರಿಗ$_2$ (ನಾ). (?) : ಈ ಬೆಸನಪ್ಪೊಡೆ ದೂತರ್ಗೆ ಭಟ್ಟರ್ಗೆ ಪರಿಗರ್ಗಲ್ಲದೆ ನೀಂ ಮಾಡಲ್ತಕ್ಕುದಲ್ಲ (ಪಂಚತಂ. ೪೨-೫). [?]

ಪರಿಗಣನ (ನಾ). ೧. ಖಚಿತವಾದ ಲೆಕ್ಕಾಚಾರ ; ನಿಖರವಾದ ಎಣಿಕೆ. ೨. ಉದ್ದೇಶಪೂರ್ವಕವಾದ ವಿಚಾರ,—ಆಲೋಚನೆ : ಕವಿಕರ್ಮದಲ್ಲಿ ಲೋಕಭಾವಗಳು ತಮ್ಮ ಪರಿಗಣನಮೌಲ್ಯದಿಂದ ರಸಲೋಕದ ಮೌಲ್ಯಗಳಾಗಿ ಪರಿವರ್ತಿತವಾಗುತ್ತವೆ (ಸೌಂದಸ. ೪೨೧).

[ಸಂ]

ಪರಿಗಣನೆ (ನಾ). ೧. (ಉದ್ದೇಶ ಪೂರ್ವಕವಾಗಿ) ಗಮನಕೊಡುವಿಕೆ,—ಪರಿಶೀಲನೆ : ಬರವಣಿಗೆಯ ವೇಗದ ಪರಿಗಣನೆ (ಶಕ್ತಿದ. ೩೪೯). ೨. ಲೆಕ್ಕಾಚಾರ ; ಎಣಿಕೆ : ನಿಮ್ಮನುಜ್ಞೆಯಲಿ ಚರಿಸುವೆನು ವನವಾಸದಲಿ ಗೋಚರಿಸುವೆನು ನೀವ್ ನುಡಿದ ವರುಷದ ಪರಿಗಣನೆ ಪರಿಯಂತವೆಂದನು ಕೈಕೆಗಾ ರಾಮ (ತೊರರಾ. ೨-೨-೫೦).

[ಸಂ. ಪರಿಗಣನಾ]

ಪರಿಗಣಿತ (ಗು). ೧. ಗಣಿಸಿದ ; ಎಣಿಸಿದ ; ಪರಿಭಾವಿಸಿದ ; ನಿರೀಕ್ಷಿಸಿದ : ಪರಿಗಣಿತ ಪರಮಾನ್ನ ಸಂಘಟಿಸಿದುದು ಭಾಗೆಯಲಿ (ತೊರರಾ. ೧-೬-೫೮). ೨. ನಿಖರವಾಗಿ ಯೋಚಿಸಿದ,— ಆಲೋಚನೆ ಮಾಡಿದ : (ಕ). (ನಾ). ೩. ಎಣಿಕೆಗೊಂಡುದು ; ಪರಿಭಾವಿತವಾದುದು : ಮಾನವನು ಅನುಸರಿಸಬೇಕಾದ ನೈತಿಕತತ್ವಗಳೂ ಜಗತ್ತಿನ ಭೌತತತ್ವಗಳಿಗೆ ಅನುರೋಧಗಳೆಂದು ಪರಿಗಣಿತವಾದುವು (ಯಕ್ಷಾರ. ೩೦ ಪೀಠಿಕೆ) ; ಹಾಸ್ಯವು ನವರಸವೆಂದು ನಮ್ಮ ಲಾಕ್ಷಣಿಕರಿಂದ ಪರಿಗಣಿತವಾಗಿದ್ದರೂ . . . ಮಿಕ್ಕ ರಸಗಳ ಪ್ರಾಧಾನ್ಯವಿರಲಿಲ್ಲ (ಬಂಕಿಮ. ೩೪೯). ೪. ಲೆಕ್ಕ ; ಎಣಿಕೆ : ದಾಯ ಬಂದುದು ನಮಗೆ ಹೋ ಲೇಸಾಯಿತೇಳು ವಿಶೋಕ ಸಾಕುಳಿದಾಯುಧದ ಪರಿಗಣಿತವನು ಹೇಳೆಂದನಾ ಭೀಮ (ಕುವ್ಯಾಕ. ೧೮-೧೯). ೫. ಪರಿಭಾವಿತ ವ್ಯಕ್ತಿ : ಶ್ರೀದೇವಿಯು ಅವರ ಗುಂಪಿನಲ್ಲಿಯೇ ಒಬ್ಬಳೆಂತೆ ಪರಿಗಣಿತಳಾದಳು (ಶ್ರೀರಾಯ. ೨೧೯). [ಸಂ.]

ಪರಿಗಣಿಸು (ಕ್ರಿ). ಎಣಿಸು ; ಲಕ್ಷ್ಯಕ್ಕೆ ತಂದುಕೊಳ್ಳು; ಭಾವಿಸು; ಯೋಚಿಸು : ಪರಿಗಣಿಸಲಗ್ನೀಂದ್ರನಂದನರ್ . . . ನೆಗಳ್ವ ಭದ್ರಾಶ್ವ ಕೇತುಮಾಲ್ಯಾದಿಗಳ್ಗೆ ಧರೆಯನೊಂಭತ್ತುಭಾಗಂ ಮಾಡಿ ಕೊಡಲು (ಚೆಬಪು. ೧೫-೧೫) ; ನನಗೆ ಏನು ಆಗುತ್ತಿದೆ ಎಂಬುದನ್ನು ಪರಿಗಣಿಸದೆ ಅವಳ ಕಿಟಕಿಯ ಬಳಿ ರಾತ್ರಿಯನ್ನೆಲ್ಲಾ ಕಳೆದಿದ್ದೇನೆ (ಮಲೆನಾ. ೧೭೬) ; ನಮ್ಮವನಿವನೆಂದು ಅನ್ಯನು ಅವನೆಂದು ಅಲ್ಪರು ಪರಿಗಣಿಸುವರು (ಇಂಜಾಪ. ೯೧-೪೨) ; ಈ ದಿನ ಒಂದು ಮಹಾಸುದಿನವೆಂದೇ ನಾವು ಪರಿಗಣಿಸಿದ್ದೇವೆ (ಪ್ರತಾಪ. ೫೦). [ಪರಿಗಣನ+—ಇಸು$_3$]

ಪರಿಗತ (ಗು). ೧. ಸುತ್ತುವರಿದ ; ಬಳಸಿದ ; ಸುತ್ತುಗಟ್ಟಿದ : ಪರಿಗತ ನಿರ್ಜರಿಣಿಯೊಳಾ ಗಿರಿಯೊಳ್ . . . ಇರ್ಪುದಾ ಕಪಿಯುಗಳಂ (ಅರ್ಧನೇ. ೪-೧೨೫). ೨. ಅಧಿಕವಾದ ; ಹೆಚ್ಚಾದ ; ಆವರಿಸಿದ ; ತುಂಬಿದ : ನರಪತಿತನಯನನಾಯತ ತರಳಾಪಾಂಗದೊಳ್ ನೋಡಿ ಕೆಳದಿಯರೊಡನಾಂ ಪರಿಗತ ಹಾಸ್ಯದೊಳರ್ದೆಂ (ಕವಿಗಾ. ೧-೬೦) ; ಅದಱ ನವಿರಳವಾತೂಳಿಕಾಭ್ರಮಣಪರಿಗತತೂಳಿಕಾತಳಮಪ್ಪ ಮನಕ್ಕೆಂತಾನುಂ . . . ಪರಿಣಮಿಸಿದ ಸುಸ್ಥತೆಯಂ ವ್ಯರ್ಥಂ ಮಾಡದೆ (ಆಂದ್ರಪು. ೪-೧೮ ಪ); ಮತ್ತಮಾ ವನಂ . . . ಪರಿಗತ ಶಬರೋಪಯುಕ್ತಮಾಗಿಯು

ಮವಿಗ್ರಹಸಮಗ್ರಸ್ಥಳಮುಂ (ರಾಜಶೇ.೫–೭೪ ಪ). ೩. ತಿಳಿದ; ಅರಿತು ಕೊಂಡ. ೪. ಹೊಂದಿದ; ಪಡೆದ: ಧರಣೀವಲ್ಲಭ ತನ್ನುನಿನೀಕ್ಷಣ ಕ್ಷಣದೊಳಲರ್ದು ಕಡವಿನ ಮರಗಳ್ ಪರಿಗತರೋಮಾಂಚತೆಯಿಂ ದೊರೆ ಮಾಡಿದುದೆನ್ನ ತನುವುಮಂ ನೆಱೆ ತನ್ನೊಳ್ (ಚಂದ್ರಪ್ರ. ೨–೧೯); ನಿಟಲನೇತ್ರನ ನಯನಶಿಖಿಯುಬ್ಬಟೆಗೆ ಸಮಜೋಡಿಸಿತು ಕರ್ಣನ ಚಟುಳ ವಿಕ್ರಮಪವನಪರಿಗತ ಬಾಣಶಿಖಿನಿಕರ (ಕುಮಾಕ. ೧೩–೩೯); ಮರದೊಳೆಸೆ ಪೊಂದು ನೆವದಿಂ ಮರಸಡರ್ದಂ ಶಿಖಿ ದಿವಾಕರಂ ನೀರ್ವೊಕ್ಕಂ ಪರಿಗತ ಬಿಂಬಪ್ರಾಜದಿನರರೆ ಹಿಮಾಗಮಮಹೀಶನೇಂ ಕಡುಗಲಿಯೋ (ರಾಜಶೇ. ೯–೧೧). ೫. ಹೋದ; ನಡೆದ. (ನಾ). ೬. ಆವರಿಸಿರುವುದು; ತುಂಬಿರುವುದು: ಪನಿಪುಲ್ ಪಚ್ಚೆಯ ನೆಲಗಟ್ಟಿನ ಮುತ್ತಿನ ರಂಗವಲಿಯ ತೆಱನಂ ಮನದೊಳ್ ಜನಯಿಸೆ ಶಶಿ ಮಸುಳೆ ವಿನೂತನ ರವಿರಥಪಾಂಸು ಪರಿಗತಂಬೋಲ್ ನಭದೊಳ್ (ಶಾಂತಿಪು. ೮–೧೧೨). ೭. ಸೇರಿರುವುದು; ಕೂಡಿರುವುದು: ಅನ್ಯೋನ್ಯಪ್ರಣಯಸಂಜಾತಸಂಪತ್ಪರಂಪರಾಪರಿಗತ ಮಾಗಿ ನಿಳಿಂಪದಂಪತಿಯನೆ ಪೋಲ್ವ ತದ್ದಂಪತಿಗಳ್ಗೆ (ಸುಕುಮಾ. ೯–೯೬ಪ); ಸ್ಮರಣವಿಚಾರಾಮಂತ್ರಣಪರಿಗತವೆನಿಸಿರ್ಪುವೆಲೆಲೆ ಏ ಎಂದಿವು (ತಮಪ. ೩೧೧). ೮. ಹೋದುದು; ನಡೆದುದು: ತುರಗವಿವು ನಾಳಿನಲಿ ಕುಂಡಿನಿಪುರಿಗೆ ಪರಿಗತವಾಗವು (ತೊರಾ. ೩–೨–೧೯). [ಸಂ.]

ಪರಿಗಲಿತ, ಪರಿಗಳಿತ (ಗು). ೧. ಮುಳುಗಿದ. ೨. ತಟ್ಟನೆ ಕೆಳಗೆ ಬಿದ್ದ,—ಉರುಳಿದ. ೩. ಕರಗಿದ. ೪. ಹರಿದ; ಪ್ರವಹಿಸಿದ: ಶಶಿಮಣಿಪ್ರಾಸಾದಪರಿಗಲಿತ [ಪಾಠಾಂ. ಪರಿಮಳಿತ] ಸದಮಳಜಳಪ್ರವಾಹ ನಿಷ್ಠಯಾಸ ಪರಿವರ್ಧಿತಾಸಲ್ಪಕಲ್ಪತರುಪಂಕ್ತಿಸಂತತದರದಳಿತ ಪರಿಮಳ ಭರಿತ ಕುಸುಮವಿಸರವಿಸರದ ಮಂದಮರಂದರಸ ಕದಂಬಕರ್ದಮಿತ ವಿಧು ರವಿವೀಥಿಸನಾಥಮುಂ (ರಾಜಶೇ. ೧೪–೧೦೬ ಪ). (ನಾ). ೫. ಹರಿಯುವುದು; ಪ್ರವಹಿಸುವುದು. ೬. ದ್ರವ. **ಪರಿಗಳಿತ:** ೭. ಸೋರಿದ: ಕಂಗೊಳಿಸಿದರುರುಶರಹತಿಪರಿಗಳಿತಕ್ಷತಜಾತಕಲಿತಕಾಯ ರಜೇಯರ್ (ರಾಜಶೇ. ೬–೫೧). ೮. ಹೊರಗೆ ಬಂದ; ಹೊಮ್ಮಿದ; ಸೂಸಿದ: ಪರಿಗಳಿತ ಪೂತಿಗಂಧರ್ . . . ಭಲ್ಲನಿಕರ ನಿಷ್ಕುರನಿನದರ್ (ಶಾಂತೀಶ್ವ. ೯–೧೦೬). [ಸಂ.]

ಪರಿಗಳಿತ 'ಪರಿಗಲಿತ' ನೋ.

ಪರಿಗಾಲುವೆ, ಪರಿಕಾಲುವೆ, ಪರಿಕಾಲ್ವೆ, ಹರಿಗಾಲುವೆ (ನಾ). = ಪರಿಕಾಲ್: ಭಾಗೀರಥಿದೇವಿಯರು ಸಾಸಿರಮೊಗವಾಗಿ ಸಾಗರವೆರೆದಂತೆ ರಾಗಿಸ ಪರಿಗಾಲುವೆ ಸಾಸಿರಮೊಗವಾಗಿ ಸದ್ವನವ ಸಾರಿದುವು (ಮೋಹತ. ೨–೩೯). **ಪರಿಕಾಲುವೆ:** ಕಾವೇರಿಯ ವಕ್ಷದ ಚಾರುಹಾರನೆಂಬಂತೆ ಅನೇಕ ಪರಿಕಾಲುವೆಗಳು ಊರನ್ನು ಬಳಸಿಕೊಂಡು ಹರಿಯುತ್ತಿರುವುವು (ಕರ್ನಾಜ. ೧೫೪). **ಪರಿಕಾಲ್ವೆ:** ಪೆಣನ ಮೆದೆ ಮಾಂಸದೊಟ್ಟಿಲ್ ಬಸೆಯ ಪರಿಕಾಲ್ವೆ . . . ತದ್ರಣರಂಗದೆಲ್ಲೆಡೆಯೊಳುಂ ತೀವೆ (ಚಿಬಪು. ೪೮–೫೬). **ಹರಿಗಾಲುವೆ:** ಬಂದರು . . . ಹೊಳೆಯ ಹರಿಗಾಲುವೆಯ ಹರಹಿನ ಬೆಳೆದ ಸಂದನದುಬ್ಬುಗೊಟ್ಟಿನ ಕಳಮೆ ಕದಳಿ ದ್ರಾಕ್ಷಿ ಧವಳೇಕ್ಷು ಗಳನೀಕ್ಷಿಸುತ (ತೊರಾ. ೩–೧೨–೨೫).

[ಪರಿ$_2$ + ಕಾಲುವೆ (<ಕಾಲ್ವಾಯ್)]

ಪರಿಗಿಡು 'ಪರಿಗೆಡು' ನೋ.

ಪರಿಗೀತ (ಗು). ಚೆನ್ನಾಗಿ ಹೇಳಿದ: ಪರಿ[ಪಾಠಾಂ. ರ]ಗೀತಾರ್ಥಂ ಪೂರ್ವಾಪರದೊಳ್ಪಗೆವಾಗಳೆಂದುಮೊಂದಱೊಳೊಂದುಂ ದೊರೆಕೊರಿಡೊಂದ ದೊಡದು ದುಷ್ಕರಮೆ ವಿರುದ್ಧಾರ್ಥಮೆಂಬುದಾಪಂ ದೋಷಂ (ಕವಿಗಾ. ೧–೮೦). [ಸಂ.]

ಪರಿಗೂಢ (ಗು). ಅತ್ಯಂತ ಗುಪ್ತವಾದ; ತಿಳಿಯಲಸಾಧ್ಯವಾದ: ರೂಢಿಗಚ್ಚರಿಯಾಯ್ತಲಾ ಪರಿಗೂಢ ಮೃಗಗಣವಿಲ್ಲವಿದೆ ನಿರ್ಮೂಢರನು ಹಿಡಿತರಿಸುಯೆಂದನು ದೂತನೊಡೆಯಂಗೆ (ಕುಮಾಭ. ೧೨–೧೬). [ಸಂ.]

ಪರಿಗೃಹೀತ (ಗು). ೧. ತೆಗೆದುಕೊಂಡ; ಸ್ವೀಕರಿಸಿದ: ಇವರ್ಗಂ ಪುಟ್ಟದೊಂ ಮೃಗಶೃಂಗನೆಂಬೊಂ ತಾಪಸಕುಮಾರನಾತಂ ಬಾಲಕಾಲಪರಿ ಗೃಹೀತತಾಪಸಾಚರಣಂ ತಪೋರೂಪಮಾರ್ಗಮಂ ಮೆಚ್ಚದೆ ಮಿಥ್ಯಾಂಧ ಕಾರಾವಕುಂಠಿತ ಸಮ್ಯಗ್ದರ್ಶನನಾಗೆ (ಶಾಂತಿಪು. ೭–೪೩ ಪ); ಬಾಲ್ಯಕಾಲ ದೊಳ್ ತೊಡಂಗಿ ಪರಿಗೃಹೀತ ಬ್ರಹ್ಮಚರ್ಯವ್ರತಪರಿಣತನಾದೆಂ(ಗದಾಯು. ೫–೪೪ ಪ). ೨. ಹೊಂದಿದ; ಪಡೆದ: ರತ್ನಮಂಡನಾಯೋಗಪರಿ ಗೃಹೀತ ಸುರೇಂದ್ರ ಕರೀಂದ್ರಪೃಷ್ಠಗತಸಪ್ತಮರೇಂದ್ರನನೆ ಪೋಲ್ತುಂ ಸೌಜನ್ಯಕಂದಾಂಕುರನಿರ್ಪುದುಂ (ಶಾಂತಿಪು. ೫–೯೪ ಪ). ೩. ಒಪ್ಪಿದ; ಅಂಗೀಕರಿಸಿದ; ಸಮ್ಮತಿಸಿದ. ೪. ಮದುವೆಯಾದ. [ಸಂ.]

ಪರಿಗೆ, ಹರಿಗೆ$_2$ (ನಾ). ೧. ಯುದ್ಧದಲ್ಲಿ ಸ್ವರಕ್ಷಣಾರ್ಥವಾಗಿ ಬಳಸುವ ಒಂದು ಬಗೆಯ ಸಾಧನ; 'ಗುರಾಣಿ; ಢಾಲು; ಅಡ್ಡಣ: "ಅಡ್ಡಣಮೊಂದೆನಲ್ ಪರಿಗೆ" (ಕರ್ಣಾನಿ. ೧೪); ವೀರ ದೊಳ್ ಕೂಡಿ ಪರಿಗೆಯುಂ ಬಿಟ್ಟೀಜುಂ ಬೆರಸಿರ್ಪಂತೆ ಕ್ಷತ್ರಿಯಂಗೆ ಪುಟ್ಟ ಸಿಂಹಾಸನಮುಂ ಬೆಳ್ಗೊಡೆಯುಂ ಬೆರಸಿರ್ಪಂತೆ . . . ಕೊಲ್ಲದ ವ್ರತ ದೊಳಂ ಪುಸಿಯದ ವ್ರತದೊಳಂ ಬೆರಸಿರ್ಪುದು (ಧರ್ಮಾಮೃ. ೧೧–೨); ಪರಿಗೆಗಳಲ್ಲಿ ಕೀಲಿಸಿದ ಗೆಜ್ಜೆಯ . . . ಪರಿ ನಾಡೆಯುಮೊಪ್ಪುದುದಿರ್ವಲಂ ಗಳೊಳ್ (ಕಬ್ಬಿಗಾ. ೨೬೩); ಮಡಿದ ಪೆಣಗಳ ಬಳಿಯೊಳೊತ್ತುವರ್ ಸುತ್ತುವರ್ ಪರಿಗೆಯಿಂ ದಿವಿಜಭಟರು (ಚಿಬಪು. ೪೨–೩೯); ಖರ ಖಡ್ಗ ಪ್ರಾಂಶು ವಿದ್ಯುದ್ಯುತಿ ಪರಿಗೆಗಳಂಭೋಧರಂಗಳ್ (ರಾಜಶೇ. ೬–೧೩). ೨. ಒಂದು ಬಗೆಯ ವಾದ್ಯ: ಸುತಿ, ಮೌರಿ, ಡೋಲು, ತಂಬಟೆ, ಈಣ, ಡಕ್ಕೆ, ಪರಿಗೆ, ಕೊಂಬು . . . ಮುಂತಪ್ಪ ಬದ್ಧವಣಂಗಳ ಬಿರುಸರಂ ಎಲ್ಲೆಡೆಯೊಳಂ . . . ಮಾರ್ದನಿಗುಟ್ಟಿದುದು (ಅದ್ಭುತ. ೩೨–೧೦). ೩. ಒಂದು ಸ್ಥಳದ ಹೆಸರು: ಪರಿಗೆಯ ಬನ್ದುಗಿಯರ್ ಈ ಊರ್ಗ್ಗೆ ಬನ್ದು ಅರಿದರೊಳ್ ಫಲಮಿನೆ ನಾಲ್ಕೆಟ್ಟುನ ಬಳನ ಕಿಡಿಸಿ ಅಜೆಟ್ಟು ಮಾಡಿ (ಎಕ. VIII, ಸೊರಬ. ೧೦–೧೦; ಸು. 800). **ಹರಿಗೆ$_2$:** ೧. "ಪೇಟಕಂ, ಫಳಕಂ, ಚರ್ಮ, ಆವರಣಂ—ಈ ೪ ಹರಿಗೆ" (ಹಲಾಯು. ೭೬–೩೦೬); ಕಾಳಗದಿಱುಡೆ ತನ್ನಾಟ್ಟಂಗೆ ಹರಿಗೆಯಂನಿಕ್ಕಿ ಬಂದು ಕುದುರೆಯಂ ರಾಹುತನಂ ಕೊಂದು ಸ್ವರ್ಗ್ಗಸ್ತನಾದ (ಸೌಇಇ. IX–1, ೨೫೬–೯; ಸು. 1149); ಸರಸಿಜದೆಲೆಗೊಡೆಯಂ ಸಿಡಿದರಸನ ನೀರ್ವೊಯಸೆ ನಿಂದು ಕುನಿದಾಂತೊರ್ವಳ್ ಮರಕತದ ಹರಿಗೆಯೋಡೆಯನರಲಂಬನ ಮುಂದೆ ಮೆಱೆವ ರತಿಯವೊಲೆಸೆದಳ್ (ಅನಂಪು. ೭–೪೩); ಹರಿಗೆ ಖಡ್ಗ ಕಠಾರಿ ಕುಂತದ . . . ವರೂಥಾರೋಹಕರ ಮೋಹರದ ಮೇಳದಲಬ್ಬರಿ ಸುತೊಳಹೊಕ್ಕನತಿಕಾಯ (ತೊರಾ. ೬–೩೪–೪೬). ೨. ತಿಗಡಲೊದ ಱುವ ಹರಿಗೆಗಳ ಗೌಜಿಗಿವ ಹೆಗ್ಗಹಳೆಗಳ . . . ಮಹಾಧ್ವನಿ ಬಗಿದುದ್ಯೆ ತಾವರೆಯ ತನಯನ ಕರ್ಣಕೋಟರವ (ಕುಮಾಭೀ. ೨–೪). ೩. ನೊಕ್ಕ ವೆರ್ಗ್ಗಡೆ ಹರಿಗೆಯಲೆತ್ತಿಸಿದನೆರಡು ಹೆನಮಂದಿರಮಂ (ಎಕ. VII, ತಿಪಮೊ. ೧೦–೪೭; 1083 ?); ಹರಿಗೆಯ ನೆಲೆವೀಡಿನೊಳು ಸುಖದಿನಾಳುತ್ತಿರ್ದು (ಎಕ. VII, ತಿಪಮೊ. ೬೪–೧೩; 1112 ?); ಹರಿಗೆಯ ಗ್ರಾಮದೊಳು ×××ಣಿ ಪಾದಪಂಕಜಸದಾಸಂಸೇವೆಯಂ(ಎಕ. VII, ತಿಪಮೊ. ೮೭–೪೭; ಸು. 1245). ೪. (ಅಲಂ) ಹರಿಗೆಕಾರರ ಸೈನ್ಯ: ಬಲಸಮುದ್ರದ ಬುದ್ಬುದಂಗಳೊ ತಿಳಿಯಲರಿದೆನೆ ಹರಿಗೆ ಮುಸುಕಿತು (ಕುಮಾಭೀ. ೪–೨೬).

ಹರಿಗೆಯವ = ಗುರಾಣಿಯನ್ನು ಹಿಡಿದಿರುವವನು: ಹರಿಗೆಯವ ರೊಂಬತ್ತುಲಕ್ಷವು (ಕೌತಿಗಾ. ೨೮–೩೧); ಬಿಗಿದುಟ್ಟ ದಟ್ಟಿಯ ಹರಿಗೆಯ ವರು ತಱುದಿದರು (ಕುರುಸಾಂ. ೧೧–೩೧); ಒಬ್ಬೊಬ್ಬ ಬಿಲ್ಲುಗಾರನಿಗೆ

ಏಳು ಏಳು ಮಂದಿ ಹರಿಗೆಯವನನ್ನು ಸವರಿಸಿ ವ್ಯೂಹಂಗಳನ್ನು ಒಡ್ಡುತ್ತಿದ್ದರು (ಕೃಷ್ಣಭೀ. ೨೩). [ದೇ.॥ ತಮಿ. ಪರಿಚ್ಚೆ]

ಪರಿಗೆಕಾಱ, ಹರಿಗೆಕಾರ, ಹರಿಗೆಕಾಱ (ನಾ). ಗುರಾಣಿಯನ್ನು ಹಿಡಿದು ಯುದ್ಧಮಾಡುವ ಯೋಧ,—ಶೂರ : ಬಿಲ್ಲಡೆ ಪಡಲಿಡೆ ಕಂಡಾರ್ದು ಪರಿಗೆಕಾಱರ ತಂಡಂ ನಡೆದು ಪಳಂಚಿದುದು (ಕಬ್ಬಿಗಾ.೨೬೧). **ಹರಿಗೆಕಾರ :** ಹರಿಕಾರರ ಖಂಡೆಯಕಾರರ ಹರಿಗೆಕಾರರ . . . ವಾಹಳಿಗಳೂ ಏರ್ಪಾಡಾಗುತ್ತಿದ್ದುವು (ಸಂಖುಂಡ. ೧೩೨). **ಹರಿಗೆಕಾಱ:** ಕಟ್ಟುಬ್ಬಟೆಯ ಬಿರುದಿನ ಹರಿಗೆಕಾಱರ ಪರಿವೀಥಿಯೊಳಂ (ಗಿರಿಕ. ೬-೫೫ ಪ); ಬಂದತ್ತುಱದೆ ಮಱೊಗೋಗಿಲೆಗಳೆಂಬಱಿಕೆಯ ಪೆಸರ್ವೆತ್ತ ಹರಿಗೆಕಾಱರ ತಂಡಂ (ಕಬ್ಬಿಗಾ. ೨೧೪); ಅಸಮಾನದ ಬಿರುದಿನೆವ ಹರಿಗೆಕಾಱರ್ ಮೆಱೆದರ್ (ದಶಕು. ೬-೫೮); ಹರಿಗೆಕಾಱರು ಹಲಗೆಯವರುಬ್ಬರದ ಡೊಂಕಣಿಕಾಱರಾಂತು ಕೃತಾಂತನಾಲಯವ ಹರಹರದಿ ತೀವಿದರು (ಕುಮ್ಯಾಭೀ. ೪-೪೬); ಹರಿಕಾಱರ ಖಂಡೆಯಕಾಱರ ಬಲುಹರಿಗೆಕಾಱರ ಸಬಳಿಗರ . . . ವಾಹಳಿ ಪುರದ ಪೊಱಗೆ ಕಣ್ಣಸೆದವು (ಕುರಾಸಾಂ. ೪-೮೨); ಕೊಂಡಗಾಱರ ಹರಿಗೆಕಾಱರ ಕೈದುಗಾಱರ ಪಡೆವೆರಸು . . . ತೇರಾಳ್ಗಳ್ ದಂಡೆತ್ತಿ ಪೋದರ್ (ರಾಮಾಶ್ವ.೯೩-೨೮). [ಪರಿಗೆ+-ಕಾಱ]

ಪರಿಗೆಡು, ಪರಿಗಿಡು, ಹರಿಗೆಡು (ಕ್ರಿ). ೧. ರೀತಿ ಕೆಡು ; ಕ್ರಮತಪ್ಪು : ಅಱುನೀರ್ವಳ್ಳಂ ನೆಟಲ್ಗುಂದಿದ ತರುಸಿಡಯಂ ಧೂಳಡರ್ದುರ್ಬಿಗಿಷ್ಟಂ ಪರಿಗೆಟ್ಟಪ್ಪಾಸೆ ನಿಷ್ಟೇಷ್ಟೆಯ ತನು (ದಶಕು. ೩-೧೨). **ಪರಿಗಿಡು :** ೨. (ಪ್ರವಾಹವು) ಹರಿಯುವುದು ನಿಂತುಹೋಗು ; (ಪ್ರವಾಹದ) ಹರಿವು ಕೆಡು : ತೊಱೆಗಳ್ ಪರಿಗೆಟ್ಟುವು ಬೆಳ್ಳಯಲೊಳ್ ಸರಳಿಸಿದುವು ಮರುಮರೀಚಿಕಾವಾಹಂಗಳ್ (ಪಂಚಾಸಾ. ೭-೮೬); ಪರಿಗಿಡೆ ಕಣ್ಣ ನೀರಱುತುದೆಕ್ಕಸರಂಗಳ ತೋರಮುತ್ತುಗಳ್ ಪರಿದವೊಲಾದುವು . . . ಆಕೆಯ ಮೆಯ್ಪಿಸುಪೇನಳುಂಬಮೋ (ಕಬ್ಬಿಗಾ. ೩೧೩). ೩. "ಪ್ರವಾಹಕ್ಕೆ ಅಡ್ಡಿಪಡಿಸು" (ಅಸಂನಾ). **ಹರಿಗೆಡು :** ೪. ಚಲನೆಯಿಲ್ಲದಾಗು ; ಓಟವಿಲ್ಲದಾಗು : ಮರೆ ಹರಿದಾಡೆ ಹಂದಿ ಹರಿಗೆಟ್ಟರೆ . . . ಬೇಂಟೆವಱೆಯುಬ್ಬರಮಬ್ಬರಮಾಯ್ತರಣ್ಯದೊಳ್ (ಸೂಕ್ತಿಸು. ೩-೧೧೬). ೫. ಮುಗಿ ; ನಿರ್ಣಯವಾಗು ; ಬಗೆಹರಿ : ಅವರಿಬ್ಬರೂ ಮಾತಿಗೆ ಕೂತರೆ ಬೆಳಗಾದರೂ ಹರಿಗೆಡುವ ಹಾಗಿಲ್ಲ (ರೂಢಿ).

[ಪರಿ$_3$ + ಕೆಡು$_1$]

ಪರಿಗೊಳ್ (ಕ್ರಿ). ೧. ಓಡಿಹೋಗು ; ಓಡು ; ಪಲಾಯನಮಾಡು : ಎತ್ತಮೆತ್ತಿದ ಕುಡಿವಾಲಮಂದೆಸೆಯೆ ಕರ್ಬಸುಗಳ್ ಪರಿಗೊಂಡುವಾಱೆಯೊಳ್ (ಪಂಪಭಾ. ೮-೧೦೪). ೨. ಪ್ರವಹಿಸು ; ಹರಿ : ಕೊಂಕಿ ಪರಿಗೊಳ್ವ ನದೀನದಜಾಳದಿಂ ಮಹೀತಲಮಹಿಲೋಕದಂತೆಸೆದುದಾ ಜಗತೀಪತಿಗೂರ್ಧ್ವಯಾನದೊಳ್ (ಅರ್ಧನೇ. ೬-೩); ಪರಿಗೊಂ [ಪಾಠಾಂ. ಕೊಂ]ಡತ್ತು . . . ಅಂದಿಗರ್ನಾಪಿಯಂ ಭರದಿಂದಿಕ್ಕಿದ ಕೂಟ್ಟೆಯಾಯ್ತು ನದಿಯೆಂದೆಂಬನ್ನೆಗಂ (ಪಾರ್ಶ್ವಪು. ೮-೧೬). ೩. ವ್ಯಾಪಿಸು ; ಹರಡು : ನನೆವಿಲ್ಲನ ಬೀರಮನೊಲ್ದು ಪೇಟ್ಟೆನಾಂ ತಿಂಗಳ ಸೊಂಪುಗುಂಪುವಡೆದೆಟ್ಟೆಸೆಗಂ ಪರಿಗೊಂಡುದೆಂಬಿನಂ (ಕಬ್ಬಿಗಾ. ೧೬). ೪. ಅತಿಶಯವಾಗಿ ಹೊಂದು,—ಪಡೆ : ನೆಟಲಪೊಲೊರ್ಮೆಯುಂ ಬಿಡದೆ ನೀನೆ ನತಾದೊಡೆಯುಂ ಮನೋಭವಾಸಳನ ಪೊದಟ್ಟವಸ್ಥೆಯನಿದಂ ಪರಿಗೊಂಡಳೆನಿಪ್ಪ ಭಂಗಿಯಂ ತಳೆದಿರುತಿಪ್ಪುದರ್ಕಲಸೆ[ಸಿ]ತ್ತಿಯುಂ ಕಳಭಾಷಿಣಿ ಬಿಟ್ಟುಪೋದೆ (ಕುಸುಮಾ. ೧೩-೮೫). ೫. ಪ್ರಾಣಿಗಳು ಬೇಟೆಗೆ ಸಿಗುವಂತೆ ಮಾಡು : ಅಡಲಾಡಿಸಲ್ ಪಾಱಿಯಂ ನಿಱಿಸಲುಂ ಪರಿಗೊಳಲ್ ತೊವಲಿಕ್ಕಳೊಳಗಂ ಬರಲ್ . . . ಹರಿಗ ಕೇಳಾನೆ ಬಲ್ಲೊಂ (ಪಂಪಭಾ. ೫-೪೧). [ಪರಿ$_3$ + ಕೊಳ್$_1$]

ಪರಿಗ್ರಹ (ನಾ). ೧. ಹಿಡಿಯುವುದು ; ಗ್ರಹಿಸುವುದು. ೨. ತೆಗೆದುಕೊಳ್ಳುವುದು ; ಸ್ವೀಕಾರ. ೩. ಪಡೆಯುವುದು ; ಹೊಂದುವುದು. ೪. ಮದುವೆ ; ಪಾಣಿಗ್ರಹಣ. ೫. ಹೆಂಡತಿ ; ಪತ್ನಿ. ೬. ಗಂಡ; ಪತಿ. ೭. ಮನೆತನ; ಕುಟುಂಬ; ಸಂಸಾರ: ನಿಮ್ಮೊಂದು ವಚನಮಾತ್ರದಿಂ ನಮ್ಮ ಪರಿಗ್ರಹಮೆಲ್ಲಂ ಪಲವು ಕಾಲಂ ಪಸಿಯದುಂಡು ಬಾಟ್ಟಂತರ್ಥಂ ಸಾರ್ದಪ್ಪುದು (ಪಂಚತಂ. ೧೭೨-೧೯). ೮. ಆಸ್ತಿ ; ಸಂಪತ್ತು ; ಐಶ್ವರ್ಯ. ೯. ಸಂಬಂಧ ; ಬಾಂಧವ್ಯ : "ಮುಖ್ಯದಲ್ಲಿ ಬಲುತಂತ್ರದಲಿ ಪರಿಗ್ರಹದಲ್ಲಿ . . . ತಂತುವದು" (ಮಂಗರಾ. ೧೫೪-೬೬). ೧೦. ಪರಿಜನ ; ಪರಿವಾರ : "ಪರಿವಾರಃ, ಪರಿಕರಃ, ಪರಿಸ್ಕಂದಃ, ಪರಿಗ್ರಹಃ—ಈ ೪ ಪರಿಗ್ರಹಂ" (ಹಲಾಯು. ೫೧-೧೫೧); ತನ್ನ ಸಂಗಡದವರುಂ ಪರಿಗ್ರಹಮುಮೆಯ್ತರಲಾಜಿದೆ ಪಿಂದೆ ನಿಲ್ವಿನಂ ಕಡುಪಿನೊಳಂದು ಬಿಟ್ಟನತಿಶೀಘ್ರದೆ ವಾಜಿಯನಾ ನೃಪೋತ್ತಮಂ (ಕಾದಂಪೂ.೬೨೦); ಕರಣದ ಲೋಕಣನುಂ [ಪೂಜದ ವಿಪೋ] ಕಣ್ಣನುಂ ಚಿಕ್ಕಮಲ್ಲಿಯುಂ ಸಮಸ್ತಪರಿಗ್ರ[ಹ]ಮುಂ ಮಲೆಗುಳ ಪ್ರಭುಗಳುಂ ತಮ್ಮ ಧರ್ಮ್ಮವಾಗಿ (ಕಇಅ. ೧೩-೪-೧೭; 1093); ಪುತ್ರಕಳತ್ರ ಪರಿಗ್ರಹಗಾತ್ರಧನೈಶ್ವರ್ಯಮೆಂಬಿವಾರ್ಗಮನಿತ್ಯಂ (ಪುಷ್ಪಪು. ೧೩-೨೬). ೧೧. ಆಶ್ರಯ ಕೊಡುವುದು; ದಯೆ; ಅನುಗ್ರಹ. ೧೨. ರಕ್ಷಣೆಯನ್ನು ಪಡೆಯುವ ಜನ ; ಪೋಷಣೆಯನ್ನು ಪಡೆಯುವವರು ; ಆಶ್ರಿತ ಜನ : "ಪರಿಗ್ರಹಂ ಪೋಷ್ಯವರ್ಗಮುಂ" (ವಸ್ತುಕೋ. ೧೨೦-೧೭). ೧೩. ಗೌರವ ; ಮನ್ನಣೆ. ೧೪. ರಾಜ್ಯಭಾರ ; ಆಡಳಿತ. ೧೫. ಮೀಸಲುಪಡೆ ; ಹಿಂಜೂಣಿ ಸೈನ್ಯ : ರಸರು ಮಗುಳಿವನಲಿ ರೊದ್ದದ ಪರಿಗ್ರಹಂ ರಾಸಿನಾನೊರ್ವ್ವನುಂ ಲಕ್ಷಣವೆನ್ನು ಮಗುಱ್ದು ಹಲಂಬರನಿಱುಂ ಕಾಲಾಳ್ಗೊಲಾಲವಿಣ್ಡೆರೆ ಪರಿಚ್ಛೇದಿಗಣ್ಡ ಮಣ್ಡಳಿಕ ಮಾಣ ಸುರಲೋಕಪ್ರಾಪ್ತನಾದ (ಎಕ. XVI, ತುಮಕೂ. ೧೦೯-೧; 1163). ೧೬. ಜಯಿಸುವುದು ; ಗೆಲ್ಲುವುದು. ೧೭. ಅಂತಃಪುರ ; ರಾಣಿವಾಸ. ೧೮. ತಿಳಿದುಕೊಳ್ಳುವುದು ; ತಿಳಿವಳಿಕೆ. ೧೯. (ಆಸೆ, ದುಃಖ ಮೊದಲಾದುವುಗಳ) ವಿಸರ್ಜನೆ ; ತ್ಯಾಗ : ಪರಿಗ್ರಹವೆಂದರೆ ದುಃಖಪ್ರತಿಗ್ರಹವಿಲ್ಲದೆ ಯಿಹಣ (ಈಶ್ವಸ್ವ. ೨೧-೧೩). ೨೦. ಶಾಪ : "ಬಯ್ಯುಳ್—ಶಾಪ, ಪರಿಗ್ರಹ" (ನಾಚಿರಾ. ೬). ೨೧. ಮೂಲ ; ಬುಡ ; ಉತ್ಪತ್ತಿಸ್ಥಾನ. ೨೨. ಬೀಸಣಿಗೆ. ೨೩. ಸೂರ್ಯ (ಅಥವಾ ಚಂದ್ರ) ಗ್ರಹಣ : "ತ್ಯಜಮುಂ ಕೀಳ್ವೆಡೆ ಸಂಶಯಂ ನುಚಿಸಮಾಖ್ಯಂ ಸೇನೆಯುಂ ದಾನಮುಂ ವ್ಯಜನಂಗಳ್ಗೆ ಪರಿಗ್ರಹಾಖ್ಯಂ" (ನಾನಾರ. ೧೬೭). ೨೪. ವಿಷ್ಣು. ೨೫. [ಜೈನ] ಮಮತೆ ; ವಾಂಛಲ್ಯ ; ☞ ಮಮತೆಗೆ ಕಾರಣವಾದ ವಸ್ತುಗಳೂ ಸಹ ಪರಿಗ್ರಹವೆಂದೇ ಭಾವಿಸಲ್ಪಡುತ್ತವೆ. ಇದು ಬಾಹ್ಯ ಮತ್ತು ಅಭ್ಯಂತರ ಎಂದು ಎರಡು ವಿಧವಾಗಿದೆ. ಧನ, ಧಾನ್ಯ, ಬೆಳ್ಳಿ, ಬಂಗಾರ, ಮನೆ, ಹೊಲ ಮುಂತಾದುವು ಬಾಹ್ಯಪರಿಗ್ರಹಗಳು. ಮಿಥ್ಯಾತ್ವ, ಕ್ರೋಧಾದಿ ಕಷಾಯ, ಹಾಸ್ಯಾದಿ ನೋಕಷಾಯ ಮುಂತಾದುವು ಅಭ್ಯಂತರ ಪರಿಗ್ರಹಗಳು : ಎನಿತು ಪರಿಗ್ರಹದ ತೊಡರ್ಪನಿತೆ ಮನೋದುಃಖಮದಱ ಕುಂದೆನಿತು ಮನಕ್ಕನಿತೆ ಸುಖಮೆಂಬುದಂ ನೆಟ್ಟನೆ ತಿಳಿದಂ ಜನ್ಮಜಲಧಿಯೊಳ್ ಮುಱುಗುವನೇ (ಅಪಪು. ೩-೬೨); ಕೊಲೆಯೆಂದಸತ್ಯಮೆಂದು . . . ಪಳಂಚಲೆವ ಪರಿಗ್ರಹಮೆಂದಿವಱೊಳಾದಪೇಕ್ಷೆಯನು ಪೇಕ್ಷಿಸು (ಸುಕುಮಾ. ೭-೩೮); ತನ್ನ ಸಹಸ್ರಕುಂತಲಮಂ ಪಂಡಮುಷ್ಟಿಯಿಂ ಪಱಿದುಕೊಂಡು ಬಾಹ್ಯಾಭ್ಯಂತರ ಪರಿಗ್ರಹಂಗಳಂ ಪರಿತ್ಯಾಗಂಗೆಯ್ದು (ಪಂಚಾಮಾ. ೧೫-೫೬ ಪ); ಸ್ತ್ರೀ, ಪುತ್ರ, ಧನ, ದ್ರವ್ಯ

ಮೊದಲಾದ ವಸ್ತುಗಳಲ್ಲಿ ಅವು ತನ್ನವೆಂದು ಮಮತ್ವವನ್ನು ಇಡುವುದರ ಪರಿಣಾಮವೇ ಪರಿಗ್ರಹವಾಗಿದೆ (ಜೈನಸ. ೪೬೬). ೨೬. [ನಾಟ್ಯ] ಇಪ್ಪತ್ತು ಬಗೆಯ ಕರಕರ್ಮಭೇದಗಳಲ್ಲಿ ಒಂದು : ಧೂನನಮುಂ . . . ನಿಗ್ರಹಮುಂ ಪರಿಗ್ರಹೋತೃಷ್ವಂಗಳ್(ಲಾಸ್ಯರಂ.೪-೧೧); ಧೂನನ, ಕ್ಷೇಪ, ವಿಕ್ಷೇಪ, ಕ್ಷೇಪ, ರಕ್ಷಣ, ಮೋಕ್ಷಣ, ಪರಿಗ್ರಹ . . . ತರ್ಜನ – ಈ ಇಪ್ಪತ್ತು ಕರಕರ್ಮಭೇದಂಗಳ್ (ಲಾಸ್ಯರಂ. ೪-೧೩ ಪ). [ಸಂ.]

ಪರಿಗ್ರಹಣ (ನಾ). ೧. ಹಿಡಿಯುವುದು ; ಗ್ರಹಿಸುವುದು : ಶಾಸ್ತ್ರದಲಿ ವಿದಿತವಾಕ್ಯಪರಿಗ್ರಹಣವಿಂತಿದಱ ಮೇಲಿಲ್ಲೆಂಬ ಮುನಿತರ್ಕದ ಘಡಾವಣೆ ಘಾಡಿಸಿದುದಾ ಯಜ್ಞಮಂಟಪವ (ತೊರವಿ. ೧-೬-೪೫). ೨. ಸ್ವೀಕರಿಸುವುದು ; ತೆಗೆದುಕೊಳ್ಳುವುದು. ೩. ತಿಳಿದುಕೊಳ್ಳುವ ಶಕ್ತಿ ; ಗ್ರಹಣಶಕ್ತಿ : ಇಲ್ಲಿ ಕೂಡ ಅದರ ಶಕ್ತಿಯ ಅಂತಿಮರಹಸ್ಯವನ್ನು ನಮ್ಮ ವೈಯಕ್ತಿಕಪರಿಗ್ರಹಣದಲ್ಲೇ ಅರಸಬೇಕು (ಸಾಹಿಪ್ರ. ೫೮). [ಸಂ.]

ಪರಿಗ್ರಹಪರಿಮಾಣವ್ರತ (ನಾ). [ಜೈನ] ಮಮಕಾರವನ್ನು ಕಡಮೆ ಮಾಡಿಕೊಳ್ಳಲು ಮಾಡುವ ನೋಂಪಿ ; ವಾಂಛಲ್ಯವನ್ನು ತ್ಯಜಿಸಲು ಕೈಗೊಳ್ಳುವ ವ್ರತ : ಸ್ತ್ರೀ, ಪುತ್ರ, ಧನ, ದ್ರವ್ಯ ಮೊದಲಾದ ವಸ್ತುಗಳಲ್ಲಿ ಅವು ತನ್ನವೆಂದು ಮಮತ್ವವನ್ನು ಇಡುವುದರ ಪರಿಣಾಮವೇ ಪರಿಗ್ರಹವಾಗಿದೆ. ಈ ಮಮತ್ವಕ್ಕೆಂದು ಮಿತಿಯನ್ನಿಟ್ಟುಕೊಳ್ಳುವುದೇ ಪರಿಗ್ರಹಪರಿಮಾಣವ್ರತವಾಗಿದೆ (ಜೈನಸ. ೪೬೬).

[ಪರಿಗ್ರಹ + ಪರಿಮಾಣ + ವ್ರತ]

ಪರಿಗ್ರಹವಿರತ (ನಾ). ೧. [ಜೈನ] ಸ್ತ್ರೀ, ಪುತ್ರ, ಧನ ಮೊದಲಾದ ವಸ್ತುಗಳಲ್ಲಿ ಮಮಕಾರವನ್ನು ತ್ಯಜಿಸುವಿಕೆ : ಧನಧಾನ್ಯಾದಿಪರಿಗ್ರಹಗಳು ಬಂಧಕಾರಣವೆಂದು ಗ್ರಹಿಸಿ ಉತ್ಸಾಹಪೂರ್ವಕವಾಗಿ ಅವುಗಳ ತ್ಯಾಗ ಮಾಡುವುದು ಪರಿಗ್ರಹವಿರತಪ್ರತಿಮೆಯು (ಜೈನಧ. ೧೧೬). ೨. ಸ್ತ್ರೀ, ಪುತ್ರ, ಧನ, ಧಾನ್ಯಾದಿ ವಸ್ತುಗಳಲ್ಲಿ ಮಮಕಾರವನ್ನು ತ್ಯಜಿಸಿದವನು ; ತನ್ನದು ಎಂಬ ಮೋಹವನ್ನು ಕಳೆದುಕೊಂಡವನು ; ತನ್ನ ಸಾಂಸಾರಿಕವ್ಯವಹಾರಗಳನ್ನೆಲ್ಲಾ ಮಗನಿಗೆ ಒಪ್ಪಿಸಿ ವಿರತನಾದವನು : ಇಂತು ದರ್ಶನಿಕಂ ವ್ರತಿಕಂ . . . ಆರಂಭಕಂ ಪರಿಗ್ರಹವಿರತಂ ಅನುಮತಿವಿರತಂ ಉದ್ದಿಷ್ಟವಿರತನೆಂದಿಂತು ಪನ್ನೊಂದು ವಿಕಲ್ಪಮನುಳ್ಳ ಶ್ರಾವಕರೊಳ್ (ಸುಕುಮಾ. ೬-೩೬ ಪ); ಮಕ್ಕಳು . . . ಸಮರ್ಥರಿರುತ್ತಾರೆಂದು ತಿಳಿಯಲು ಅವರಿಗೆ . . . ಕೌಟುಂಬಿಕಜನರನ್ನು ರಕ್ಷಿಸುವ ಭಾರವನ್ನು ಹೊರಿಸುವುದೂ ಆದ ಮೇಲೆ ಶ್ರಾವಕನು ಪರಿಗ್ರಹವಿರತನೆನಿಸುವನು (ಜೈನಸ. ೬೭೬); ಪರಿಗ್ರಹವಿರತ :—ತನ್ನ ಎಲ್ಲ ವ್ಯವಹಾರಗಳನ್ನೂ ತನ್ನ ಮಕ್ಕಳಿಗೊಪ್ಪಿಸುವನು (ಭಾರದ. ೧೮೪). [ಪರಿಗ್ರಹ + ವಿರತ]

ಪರಿಗ್ರಹಿಸು (ಕ್ರಿ). ೧. ಸ್ವೀಕರಿಸು ; ತೆಗೆದುಕೊಳ್ಳು : ಇವರಿಂದಗ್ಗಳಮಾಂ ಪರಿಗ್ರಹಿಸೆನೆಂದಾ ಮಾರ್ಗದಿಂದಲ್ಲಿ . . . ನೋಡಲ್ಕೆ (ಸಮಸ. ೫-೮೬); ಮಧುರತಾಂಬೂಲವ ಪರಿಗ್ರಹಿಸಿ . . . ಚೆಲ್ವಿಂದ ಲೆಸದಂ ಗಣವರೇಣ್ಯನಾ ನಂಬುಣ್ಣನು (ಸೌಂದಪು. ೬-೫೩); ಕಲೆಯಱಿದಮಲಭಾವಜ್ಞರು ತಮ್ಮ ಕಾದಲೆಯರ ಕರೆವ ಸನ್ನೆಯಂಲಿ ಸಲೆ ಪರಿಗ್ರಹಿಸಿ ಶೋಭಿಸುತಿರ್ಪ ಲಲಿತಬೆಳ್ಳೆಲೆಗಳಂಗಡಿಗಳೊಪ್ಪಿದುವು (ಮೋಹತ. ೩-೧೩). ೨. ಒಪ್ಪಿಕೊಳ್ಳು ; ಅಂಗೀಕರಿಸು : ಸೆಱೆಯಿರ್ದ ಸೀತೆಯಂ ಪಾವಕನ ಮುಖದಿಂ ಪರಿಗ್ರಹಿಸಿ . . . ಅಯೋಧ್ಯಾಪುರಿಗೆ ದೂವಾಳಿಸಿದನು (ಜೈಮಿಭಾ. ೧೮-೮); ಗರ್ಭಚಿಹ್ನೆಯುಳ್ಳ ಈಕೆಯನ್ನು ನನ್ನ ಪತ್ನಿಯೆಂದು ಹೇಗೆ ತಾನೆ ಪರಿಗ್ರಹಿಸಲಿ ? (ಶಾಕುಂತ. ೬೬-೨೨).

[ಪರಿಗ್ರಹ + –ಇಸು$_3$]

ಪರಿಗ್ರಾಹ್ಯ (ಗು). ೧. ಸ್ವೀಕರಿಸಲು ಯೋಗ್ಯವಾದ. (ನಾ). ೨. ಸ್ವೀಕರಿಸಲು ಯೋಗ್ಯವಾದುದು. [ಸಂ.]

ಪರಿಘ (ನಾ). ೧. (ಬಾಗಿಲನ್ನು ಭದ್ರಪಡಿಸಲು ಉಪಯೋಗಿಸುವ) ಮರದ ಅಥವಾ ಕಬ್ಬಿಣದ ಅಗುಳಿ ; ಲಾಳವಿಂಡಿಗೆ : "ಅರ್ಗಳಃ, ಪರಿಘಃ – ಈ ೨ ಅಗುಟು" (ಹಲಾಯು. ೫೦-೧೪೫); ಈ ಹೊಸ ಬಾಗಿಲುಗಳಿಗೆ ಲೋಹಪರಿಘಗಳನ್ನು ಹಾಕಿ ಬಿಗಿಸಿತ್ತಾದ್ದರಿಂದ, ಅವು ಅನೆಗಳ ದಾಳಿಯನ್ನೂ ತಡೆದುವು (ಶಾಂತಲಾ. ೪೦೦). ೨. ಕಬ್ಬಿಣದ ಒಂದು ಬಗೆಯ ಆಯುಧ ; ಕಬ್ಬಿಣದ ಮೊನೆಗಳಿಂದ ಕೂಡಿದ ಗದೆ : "ಪರಿಘಾತನಂ ಪರಿಘಮೆನೆ ಪಿಲ್ಲಣಿಗೆ"(ಮಂಗರಾ. ೮೮-೩೬) ; ಎರಡುಂಕೆಲನುಮನೆರಡುಂ ಕರಪರಿಘದಿನಡಿಗೆ ಗುರ್ದಿ (ಪಂಪಭಾ. ೩-೩೦); ಮಾಲಿಯ ಬಾಹಾಪರಿಘನಿತಿತಾಸ್ತ್ರಹತಿಯಿಂ ಸುರಲೋಕಪ್ರಾಪ್ತನಾದನಾ ನಿರ್ಘಾತಂ (ಪಂರಾಮಾ. ೧೦-೧೩೧); ಪರಿಘದಲಿ ಕಾದಿದರು ಹೊಕ್ಕರು ಹಲಗೆ ಖಡ್ಗದಲಿ (ಕುಮ್ಯಾವಿ. ೪-೫೨) ; ಪರಿಘ ಎಂದರೆ ಕಬ್ಬಿಣದ ಮುಳ್ಳುಗಳಿರುವ ಉದ್ದವಾದ ಗದೆ (ನಾಳೀಜಂ. ೪೮). ೩. ಗಾಜಿನ ಅಥವಾ ಮಣ್ಣಿನ ಪಾತ್ರೆ,—ಹೂಜಿ. ೪. ಮನೆ ; ಗೃಹ. ೫. ಕೊಲ್ಲುವುದು ; ವಧೆ. ೬. ಹೊಡೆತ ; ಪೆಟ್ಟು. ೭. ಗಾಯಗೊಳಿಸುವುದು. ೮. ಅರಮನೆ, ಕೋಟೆ ಅಥವಾ ಪಟ್ಟಣದ ಬಾಗಿಲು,—ದ್ವಾರ. ೯. ಪ್ರಾಕಾರ. ೧೦. ಗೋಪುರ. ೧೧. ಕೊತ್ತಳದ ಸುತ್ತಳತೆ. ೧೨. ಅಳವಿನ ಪ್ರಭಾವದ ಕಕ್ಷೆ : ತಾನಾಗಿಯೇ ಯಾರ ಪರಿಚಯಕ್ಕಾಗಿ ಹಂಬಲಿಸುವವನಲ್ಲ ; ಆದರೆ ತಾವೇ ತನ್ನ ಪರಿಘದಲ್ಲಿ ಬಂದಾಗ, ತನ್ನ ಮನಸ್ಸಿಗೆ ಸರಿದೋರಿದರೆ ಅವರನ್ನು ಕೂಡಿಕೊಳ್ಳುವವನು (ಗಂಮಾಯಿ. ೭೪) ; ನೂರು ತೇಜದ ಗೋಲ ತಿರುಗುತಿವೆ ಪರಿಘದಲಿ ಊರುಗೋಲಿಗೆ ಸಾಕ್ಷಿ ನಕ್ಷತ್ರವೀಧಿ (ನೆಲಮು. ೨೧-೨೩). ೧೩. ಉದಯದಲ್ಲಾಗಲೀ ಅಸ್ತದಲ್ಲಾಗಲೀ ಸೂರ್ಯಬಿಂಬಕ್ಕೆ ಅಡ್ಡಲಾಗಿ ಕಾಣುವ ಮೋಡಗಳ ಸಾಲು : ಪರಿಘಂ ನಿರ್ಘಾತಮುಳ್ಳ (ಟ್ಟಂ) ಸುರಧನು ಬಡಪಂ ಪಶ್ಚವಾತಂ ತಮೌಘಂ . . . ಎಂಬ ಚಿಹ್ನಂ ನೆರೆಯಲ್ ಮಾಸಂಗಳೊಳ್ ಪುಣ್ಣಮೆಯೊಳಱುದು ಪೇಟರ್ಘಮಂ (ಜಟ್ಟಮ. ೬-೩೦). ೧೪. [ಜ್ಯೋತಿ]ಇಪ್ಪತ್ತೇಳು ಯೋಗಗಳಲ್ಲಿ ಹತ್ತೊಂಬತ್ತನೆಯದು : ವಿಷ್ಕಂಭ ಪ್ರೀತಿ . . . ಪರಿಘ ಶಿವ . . . ಐಂದ್ರ ವೈಧೃತಿಗಳೆಂಬ ಇಪ್ಪತ್ತೇಳು ಯೋಗಂಗಳುಂ (ವಿವೇಕ. ೩೨೦) ; ಧ್ರುವ ಪರಿಘವೇಕಾದಶದ ಯೋಗಗಳು ಶುಭ (ಗಗಶಾ. ೪-೬೯). [ಸಂ.]

ಪರಿಘಾತ (ನಾ). ೧. ಹೊಡೆತ ; ಪೆಟ್ಟು. ೨. ಕೊಲ್ಲುವುದು ; ವಧೆ. ೩. ಒಂದು ಬಗೆಯ ಆಯುಧ ; ಪರಿಘ. ೪. ತೆಗೆದು ಹಾಕುವುದು ; ತೊಲಗಿಸುವುದು ; ನಿವಾರಣೆ. ೫. ಒಕ್ಕಿದ ಧಾನ್ಯದ ರಾಶಿ,—ಗುಡ್ಡೆ : "ಪರಿಘಾತಂ ಬಹುಲೀಭೂತರಾಶಿ" (ಪಸ್ತುಕೋ. ೯೫-೨೦). [ಸಂ.]

ಪರಿಘಾತನ (ನಾ). ೧. ಹೊಡೆತ ; ಪೆಟ್ಟು. ೨. ಕೊಲ್ಲುವುದು ; ವಧೆ. ೩. ಒಂದು ಬಗೆಯ ಆಯುಧ ; ಪರಿಘ : "ಪರಿಘಾತನಂ ಪರಿಘಮೆನೆ ಪಿಲ್ಲಣಿಗೆ" (ಮಂಗರಾ. ೮೮-೩೬); "ಪರಿಘಃ, ಪರಿಘಾತನಃ— ೨ ಕಬ್ಬಿಣದ ಕಟ್ಟು ಹಾಕಿದ ಮರದ ಗುದಿಗೆ" (ಸಿದ್ಧಾಂತಿ. ೨೩೫).

[ಸಂ.]

ಪರಿಘೂರ್ಣಿತ (ಗು). ಶಬ್ದ ಮಾಡುತ್ತಿರುವ ; ಘೋಷಿಸುತ್ತಿರುವ : ಸಾಹಸಿಕಂ ಮುರಾರಿ ಪುಗುತಂದಂ . . . ಪರಿಘೂರ್ಣಿತಗೀತವಾದ್ಯಸಂದೋಹಮಂ . . . ಶಸ್ತ್ರಗೇಹಮಂ (ಜಗವಿ. ೬-೨೮). [ಸಂ.]

ಪರಿಘೂರ್ಣಿಸು (ಕ್ರಿ). ಅತಿಶಯವಾಗಿ ಮೊರೆ,—ಶಬ್ದಮಾಡು : ನಿಸರ್ಗಮಾದ ಸಂಗೀತರಸಾಬ್ಧಿ ಪೆರ್ಚಿ ಹರಿಲೋಚನಚಂದ್ರಿಕೆಯಿಂ ವಿಧೂ

ದುಮ್ಮೀಕಸುಧಾಬ್ಧಿಯಂತೆ ಪರಿಘೂರ್ಣಿಸುತಿರ್ದುದು ರಾಸಕೇಳಿಯೊಳ್ (ಜಗದಿ. ೫-೧೧). [ಸಂ. ಪರಿಘೂರ್ಣನ+-ಇಸು$_3$]

ಪರಿಘೋಷ (ನಾ). ೧. ಧ್ವನಿ ; ಶಬ್ದ : ಕುರುಕುಲಚೂಡಾಮಣಿ... ತದ್ಭುಜಗಳ ದೀರ್ಘೋಚ್ಛ್ವಾಸನೆ ಪರಿಘೋಷಮುಮಾಗೆ [ಪಾಠಾಂ. ಪರಿಜನಮಾಗೆ] ಮೂರ್ಛೆಯಿಂದೆಚ್ಚತ್ತಂ (ಗದಾಯು. ೩-೮೪). ೨. ಅಯೋಗ್ಯವಾದ ಮಾತು ; ಅವಾಚ್ಯಶಬ್ದ. ೩. ಗುಡುಗು ; ಮೇಘಧ್ವನಿ. [ಸಂ.]

ಪರಿಚಯ (ನಾ). ೧. ಗುರುತು ; ಮಾಹಿತಿ : "ಸಂಸ್ತವಃ, ಪರಿಚಯಃ—ಈ ೨ ಮೊಗನಱಿತಂ" (ಶಲಾಯು. ೧೨೬-೮೮) ; ಪರಿಚಯಮಿಲ್ಲ ಕಂಡಱಿಯೆಯೋ ಸಱ ಕೊಟ್ಟೆನಲಿಂತು ಬಿಟ್ಟು ಪೋಪರೆ (ಕಾದಂಬಾ. ೯೦೩) ; ಪರಿಚಯಮಾದೊಡಲ್ಲದವರಾಡುವ ಪಾಡುವರಲ್ಲ ಸೇವೆಯೊಳ್ ಚರಿಯಿಪರಲ್ಲ ನರ್ತಕಿಯರ್ (ಶಾಂತೀಶ್ವ. ೮-೨) ; ಅವನ ಪರಿಚಯವೇ ರಾಯರಿಗೆ ಆಗಲಿಲ್ಲ (ಕಂಬಹು. ೧೩೪) ; ಸಂಗೀತದಲ್ಲಿ ಪರಿಶ್ರಮವಿಲ್ಲದಿದ್ದರೆ ಹೋಗಲಿ, ಪರಿಚಯವಾದರೂ ಇಲ್ಲದಿದ್ದವನು ಹೇಗೆ ಸುಸಂಸ್ಕೃತನೆನ್ನಿಸಿಕೊಳ್ಳುವನು ? (ಭಾರತ. ೫೩೫). ೨. ಸಲಿಗೆ ; ಸದರ : ಪರಿಚಯದೊಂದು ಪೆರ್ಚುಗೆಯೋಳ್ ಶುಕನಾ ಕುಸುಮಾವಳೀತನೂದರಿಯ ಕುಚಾಗ್ರದಲ್ಲಿ ಪರಿತಂದೆಜಗಲ್ಕೆ (ಕುಸುಮಾ. ೧೩-೨೬) ; ಅವಳಿಗೂ ನನಗೂ ಪರಿಚಯ ಬೆಳೆಯುತ್ತ ನಡೆಯಿತು (ಪ್ರಣಸ. ೪). ೩. ಅಭ್ಯಾಸ ; ವ್ಯಾಸಂಗ : 'ಪರಿಚಯಿಸು' ಪರಾ.

ಪರಿಚಯ ಮಾಡಿಕೊಡು = ಗುರುತು ಮಾಡಿಕೊಡು ; ಪರಿಚಯಿಸು : ಒಬ್ಬೊಬ್ಬರನ್ನಾಗಿ ಪರಿಚಯ ಮಾಡಿಕೊಟ್ಟರು (ಹತ್ತುಮು. ೧೩೪). ಪರಿಚಯವಾಗು = ಗುರುತಾಗು : ವಿಶ್ವಾಮಿತ್ರನಿಗೆ ಶಬಲೆಯ ಪರಿಚಯವಾಯಿತು (ಮಹಾಭಾ. ೧೨೯) ; ತನಗೆ ಒಬ್ಬೊಬ್ಬರ ಪರಿಚಯವಾದಾಗಲೂ ಅವರಿಗೆ ನಮಸ್ಕಾರ ಮಾಡುತ್ತಾ ಹಾಗೇ ಆಲೋಚಿಸಿದನು (ಹತ್ತುಮು. ೧೩೪). ಪರಿಚಯ ಹತ್ತು = ಗುರುತು ಸಿಗು : ತಾಯಿಯ ಧ್ವನಿಯನ್ನು ಗುರುತಿಸಿ ಅವಳಿಂದ ಮೈ ಸವರಿಸಿಕೊಂಡ ಮೇಲೆ, ಅವನಿಗೆ ಪರಿಚಯ ಹತ್ತಿತು (ಜಾರುದಾ. ೨೭೫). [ಸಂ.]

ಪರಿಚಯಂಬಡೆ (ಕ್ರಿ). ಸೇರು ; ಹೊಂದಿಕೆಯಾಗು : ಕತ್ತುಂ ಯೊಳಂಟ ಪರಿಚೆಯುಂ ಪರಿಚೆಯೊಳ್ ಪರಿಚಯಂಬಡೆದ ಮದವಟ್ಟೆಯುಂ (ಅಪಿಪು. ೪-೪೧ ಪ). [ಪರಿಚಯ+ಪಡೆ$_1$]

ಪರಿಚಯಪತ್ರ (ನಾ). ಒಬ್ಬರನ್ನು ಇನ್ನೊಬ್ಬರಿಗೆ ಪರಿಚಯ ಮಾಡಿಕೊಡುವುದಕ್ಕಾಗಿ ಬರೆದು ಕೊಡುವ ಪತ್ರ : ಕಿಟ್ಟಣ್ಣನಿಗೊಂದು ಕೆಲಸ ಕೊಡಿಸಲು ನೆರವಾಗಬೇಕೆಂದು ಪರಿಚಯಪತ್ರಗಳನ್ನು ಬರೆದುಕೊಟ್ಟಿದ್ದರು (ವಿದ್ಯಾಪಿ. ೮೫) ; ಈ ಪರಿಚಯಪತ್ರ ತರುವ ನಮ್ಮ ಮಿತ್ರರಿಗೆ ಕೂಡಲೆ, ಅದಷ್ಟು ಬೇಗ, ಅನುಕೂಲತೆ ಕಲ್ಪಿಸಿಕೊಡಬೇಕು (ಜಾರುದಾ. ೨೫೮). [ಪರಿಚಯ+ಪತ್ರ]

ಪರಿಚಯಸ್ಥ (ನಾ). ಪರಿಚಿತನಾದವನು ; ಗುರುತಿನವನು : ತುಸ ದೂರದಲ್ಲಿದ್ದ ಪರಿಚಯಸ್ಥರ ಮನೆಗೆ ನನ್ನ ಮಡದಿ ವಿತಕ್ಕಾಗಿಯೋ ಹೋಗಿದ್ದಳು (ಸಂಬರು. ೫೯) ; ಸಂತೆಯ ಮಾಳವನ್ನೆಲ್ಲಾ ಸುತ್ತುತ್ತಾ, ಪರಿಚಯಸ್ಥರೊಡನೆ ಹರಟುತ್ತಾ ಇರುವುದರಲ್ಲಿ ಹೊತ್ತು ಸಂಜೆಗೆ ತಿರುಗಿತ್ತು (ಸರ್ವಮಂ. ೪೭). [ಸಂ.]

ಪರಿಚಯಿಸು (ಕ್ರಿ). ೧. ಪರಿಚಯ ಮಾಡಿಸು ; ಗುರುತು ಮಾಡಿಕೊಡು : ಅನಿಲಾತ್ಮಜಂ . . . ಶಾಂತಿಯಿಂ ಪರಿಚಯಿಸಿದನು ದಶರಥಾತ್ಮಜಗೆ ಕಿಷ್ಕಿಂಧೆಯಂ (ತ್ರೇತಾಮಾ. ೨೯೦-೧೪೪) ; ಸೆಲೆ ನೀನ್ ಹಳೆಯ ಮಿತ್ರನಿಗೆ ತನ್ನ ಸೂತನದೃಷ್ಟಿಯನ್ನು ಪರಿಚಯಿಸಿಕೊಡಲು ಕುತೂಹಲಿಯಾಗಿದ್ದಂತೆ ನುಡಿದನು (ಪುಸರು. ೩೬೯). ೨. ಅಭ್ಯಾಸ ಮಾಡು ; ಪರಿಶ್ರಮಿಸು : ಚಂದ್ರಾಯುಧದಿ ವಜ್ರಾಯುಧ ರವಿಹಾಸ ಚಂದ್ರಹಾಸದೊಳು ಸಾಧನೆಯಾ ಚಂದ್ರಾದಿಕ್ಕರಂತರ್ವರ್ಮರು ಮನುಜೇಂದ್ರರು ಪರಿಚಯಿಸಿದರು (ಭರತ. ೬೩-೬೪). ೩. ಕಲಿಸು ; ಹೇಳಿಕೊಡು : ಪರಿಪರಿಯಾಯುಧಾಭ್ಯಾಸವನವನಂದು ಪರಿಚಯಿಸಿದನುದಯದೊಳು (ಕುರುಸಾಂ. ೨೮-೨). [ಪರಿಚಯ+-ಇಸು$_3$]

ಪರಿಚರ (ನಾ). ೧. ತಿರುಗಾಡುವುದು ; ಸುತ್ತಾಟ. ೨. ಪರಿಚಾರಕ ; ಸೇವಕ : ಅವ ತೆಜದಿಂದಮಿಗಳ್ ದೇವರ್ ತಾಮೇಕೆ ತಡೆಯದುಪ್ಪವಡಿಸರೆಂದಾವಜಾಯೆವೆಂದು ಪರಿಚರರಾಳಿ ಮತಿವರ್ಧನಂಗೆ ತಮತಮಗುಸಿಡರ್ (ಕುಸುಮಾ. ೧-೫೮) ; ಕೌಶಿಕನ ಪರಿಚರನು ಅವನ ಆಗಮನವನ್ನು ತಿಳಿಸಿದನು (ಮಹಾಭಾ. ೧೩). ೩. ಅಂಗರಕ್ಷಕ. ೪. ಸೈನ್ಯದ ಸುತ್ತಣ ಕಾವಲಿನವನು : "ಪರಿಧಿಸ್ಥಃ, ಪರಿಚರಃ—೨ ದಂಡಿನ ಸುತ್ತಲೂ ಕಾದಿರುವ ಪೌಜು, ಕಾವಲ್ ಜನರ ಹೆಸರುಗಳು" (ಸಿದ್ಧಾಂತಿ. ೨೫೫). [ಸಂ.]

ಪರಿಚರಣ (ನಾ). ೧. ಸೇವೆ ; ಶುಶ್ರೂಷೆ ; ಪರಿಚರ್ಯೆ : ಸದಾ ವಿನಯದಿಂ ಶರಣಪರಿಚರಣಕ್ರಿಯೆಗಳೆಸೆಯೆ (ಬಸವು. ೨೨-೪). ೨. ಸೇವಕ ; ಪರಿಚಾರಕ. [ಸಂ.]

ಪರಿಚರಿಯ 'ಪರಿಚರಿಯೆ' ನೋ.

ಪರಿಚರಿಯೆ, ಪರಿಚರಿಯ (ನಾ). ೧. ಸೇವೆ ; ಶುಶ್ರೂಷೆ : ತಾಯಿಗೆ ಪರಿಚರಿಯೆಯನು ಮಾಡುತಿರ್ದನು ಕಪಟಿಭಾವದಲಿ (ನಿಘಾಗ. ೬-೧೬-೨೬). **ಪರಿಚರಿಯಃ** ೧. ಎಮ್ಮ ದೇವಾರ್ಚನೆಗೆ ವನತೆಯೊಬ್ಬಳನೀವುದಾ ಪರಿಚರಿಯದೆಡೆಗೆ (ಇಹರ. ದೇ. ೩೪-೧೮) ; ಅಖಿಲಮಾಹೇಶ್ವರರಿಗಿಷ್ಟಾರ್ಥಂಗಳಿಂದಾದರಿಸಿ ಪರಿಚರಿಯಂಗಳಿಂ ತಣಿಸುತ್ತ (ಬಸವು. ೪-೪೭) ; ಪರಮಸತಿದಮಯಂತಿಯನು ನೀಂ ಪರಿಚರಿಯ[ಪಾಠಾಂ. ಯಳನುಪಚರಿಯಂ] ದಲಿಯೆನಗೊಲಿಯೆ ಮಾಡೆಂದುರುತರದ ವಸ್ತುಗಳನಿತ್ತಬಲೆಯರ ಬೀಳ್ಕೊಟ್ಟ (ನಳಚ. ೩-೧೪). ೨. ಪೂಜೆ ; ಆರಾಧನೆ ; ಉಪಾಸನೆ : ಪಂಚಾಗ್ನಿಯನು ಕ್ರಮದಿಂ ಪ್ರತಿದಿನಂ ಪರಿಚರಿಯ ಮಾಳ್ಪುದು ಲೇಸ ಬಯಸುಪರೆ (ಕುಮಾಲು. ೩-೩೭). [<ಸಂ. ಪರಿಚರ್ಯಾ]

ಪರಿಚರಿಸು (ಕ್ರಿ). ಅಭ್ಯಾಸ ಮಾಡು ; ವ್ಯಾಸಂಗಮಾಡು : ನಾನಾ ಕುಶಲಶಾಸ್ತ್ರವನು ವಿದ್ಯಾನೀಕವನು ಪರಿ[ಪಾಠಾಂ. ನೇಕಗಳನುಪ]ಚರಿಸಿ ಪರಿಣತೆಯಾಗಿ ಸುಖದಿಂದೆ ಆ ಕುಮಾರಿತಿಯಿರುತಿರಲು (ಪ್ರಭುಲಿಂ. ೩-೩೬). [ಪರಿಚರ+-ಇಸು$_3$]

ಪರಿಚರ್ಯೆ (ನಾ). ೧. ಸೇವೆ ; ಶುಶ್ರೂಷೆ : "ಪರಿಚರ್ಯಮೆನೆ ಸೇವೆಯಕ್ಕುಂ" (ಮಂಗರಾ. ೮-೨೭) ; ಅತಿಪ್ರಯತ್ನಪರಿಚರ್ಯಾರಂಭದಿಂ ಪುತ್ರ ಸೀತೆಯುಮಂ ರಾಮನುಮಂ ಸಮಾಹಿತಮನರ್ಮಾಡು (ಪಂರಾಮಾ. ೬-೧೩೬). ೨. ಬಾಂಧವ್ಯ ; ಸಲಿಗೆ ; ಸದರ : ಕೆಕ್ಕೆಯು ಬರುವ ಪರಿಯಂತವು ನಮ್ಮ ಆಶ್ರಮದಲ್ಲಿ ಸಾಕಿಕೊಂಡಿದ್ದು ಬಿಟ್ಟು ಬಿಟ್ಟರೆ ತನ್ನ ಮನಸ್ಸು ಬಂದ ಬಳಿಗೆ ಹೋದೀತು ; ಪರಿಚರ್ಯದಿಂದ ಇಲ್ಲಿಯಾದರೂ ಇದ್ದೀತು (ಪಚಕಾ. ೪). [ಸಂ. ಪರಿಚರ್ಯಾ]

ಪರಿಚರ್ಯೆ (ನಾ). ೧. ಸೇವೆ ; ಶುಶ್ರೂಷೆ : "ಪರಿವಸ್ಕಾ, ಪರಿಚರ್ಯಾ, ಶುಶ್ರೂಷಾ . . . ಉಪಚಾರಃ—ಈ ೧೧ ಬೆಸಕೆಯ್ವುದರ್ಕೆ ಪೆಸರ್" (ಶಲಾಯು. ೨೧-೧೨೯) ; ಶರೀರರಕ್ಷಣೆಗಂ ಪರಿಚರ್ಯೆಗಂ ಸಮಯೋಚಿತಕುಶಲರಪ್ಪ . . . ಜನಮಂ ಸಮರ್ಪಿಸುವುದುಂ (ಮಲ್ಲಿಪು. ೪-೯೩) ; ಸರಸಿಜಾನನೆಗಾಯ್ತು ಯತಿಪದಸರಸಿರುಹಪರಿಚರ್ಯೆ [ಪಾಠಾಂ. ಪರಿಚಯ] (ನಿಘಾಗ. ೧೦-೭೨-೨೩) ; ಪರಿಚರ್ಯೆ ಮನೆವಾಳ್ತೆಯೆಂದೆಂಬ ತಳ್ಳಿಯವಳಲ್ಲ (ಜೈಮಿಭಾ. ೧೦-೨೪). ೨. ಪೂಜೆ ; ಆರಾಧನೆ. [ಸಂ. ಪರಿಚರ್ಯಾ]

ಪರಿಚರ್ಯೆಗೆಯ್ಯು (ಕ್ರಿ). ಸೇವೆಮಾಡು ; ಶುಶ್ರೂಷೆಮಾಡು: ನೀಂ ಪ್ರೀತಿಪರಿಚರ್ಯೆಗೆಯ್ಯುತಿರಲಾಂ ಶಾಂತಿಯಿಂ ಸೇರಿದಪೆನಧ್ಯಾತ್ಮಮಂ (ಶ್ರೀರಾಮಾ. ೨೭೬-೩೫೫). [ಪರಿಚರ್ಯೆ+ಕೆಯ್ಯು(<ಕೆಯ್[1])]

ಪರಿಚಲನೆ (ನಾ). ತಿರುಗುವಿಕೆ ; ಸಂಚಾರ ; ಚಲನೆ: ಬಲಿದ ಮಚಿವೆಯು ಕರಣವೃತ್ತಿಯ ಕಳವಳದ ಪಂಚೇಂದ್ರಿಯದ ಪರಿಚಲನಸಂಚದ ಶಿಥಿಲಮೂಲಾಧಾರ ಮಾರುತನ (ಕುಮಾ. ೧೦-೨). [ಸಂ.]

ಪರಿಚಲನೆ (ನಾ). ೧. = ಪರಿಚಲನ : ಕಶಗಳ ಚಲನದಿಂದ ಸೀಲೆಂಟರಾನ್ ಅವಕಾಶದಲ್ಲಿ ದ್ರವಗಳ ಪರಿಚಲನೆಯಾಗುತ್ತದೆ (ಪ್ರಾಣಿಶಾ. ೧೦೮). 'ರಕ್ತಪರಿಚಲನೆ' ಪರಾ. ೨. ಉಪಯೋಗದಲ್ಲಿರುವಿಕೆ ; ಚಾಲನೆಯನ್ನು ಹೊಂದಿರುವಿಕೆ : ಗ್ರಂಥಗಳ ಸಂಗ್ರಹಕ್ಕೆ, ಪರಿಚಲನೆಗೆ . . . ಸಾಕಷ್ಟು ಸ್ಥಳಾವಕಾಶವಿರಬೇಕು (ಗ್ರಂಥಾಲ. ೬) ; ಗ್ರಂಥವಿಂಗಡಣೆ, ಪರಿಚಲನೆಗಳಿಗೆ ಇದು ತುಂಬ ಸುಲಭ ಸುಗಮ ಪದ್ಧತಿಯೆಂದು ಅನುಭವಕ್ಕೆ ಬಂದಿತು (ಗ್ರಂಥಾಲ. ೧೮). [ಸಂ. ಪರಿಚಲನ]

ಪರಿಚಾಯ್ಯ (ನಾ). ಪರಿಚಾಯ್ಯ, ಉಪಚಾಯ್ಯ, ಸಮಾಹ್ಯಗಳೆಂಬ ಮೂರು ಬಗೆಯ ಯಜ್ಞಾಗ್ನಿಗಳಲ್ಲಿ ಒಂದು ; ಮಂಡಲಾಕಾರವಾಗಿ ಉರಿಯುವಂತೆ ರಚಿಸಿರುವ ಹೋಮಾಗ್ನಿ. [ಸಂ.]

ಪರಿಚಾರ (ನಾ). ೧. ಸೇವೆ ; ಪರಿಚರ್ಯೆ : ಪ್ರಾಣಲಿಂಗದ ಪರಿಚಾರವ ಮಾಡುವರನೊಬ್ಬರನು ಕಾಣೆ (ಚನ್ನಬ. ೪. ೪೩೫-೯೨೨) ; ಸಾರಮತಿಯಲಿ ಕಂದಮೂಲಾಹಾರನಾಗಿಂತಲ್ಲಿಯೇ ಪರಿಚಾರವಂ ಮಾಡುತ್ತಮಿರಲ್ (ಬಸವು. ೩೪-೭) ; ಗರತಿಗೆಲಸವೆಂದು ಗೆಲ್ಲಗೊಂಡುರ್ಬದೆ ಪರಿಚಾರವೆಂದು ಪಳಿಯದೆ . . . ನಿರವಿಸಿದುದನೆಸಗುವುದು (ಹರಿಬ. ೩-೩೩). ೨. ಸೇವಕ; ಆಳು : ಕಂಸಂ . . . ಪರಿಚಾರರಪಚಾರಮೆನೆ ನಾಕಿಗಳವಿವೇಕಮೆನೆ. . . ಪಾಸಱೊಳ್ ಕೂಸನಪ್ಪಳಿಸಿ (ಜಗವಿ. ೨-೫೩ ಪ). [ಸಂ.]

ಪರಿಚಾರಕ (ನಾ). ೧. = ಪರಿಚಾರ ೧ : ಇತರೇಂದ್ರರ್ ಪರಿಚಾರಕ ಪ್ರಭೃತಿಯಿಂ ಮುಂದಾಡೆ . . . ಸಂತತಮೇನಂದು ಜಿನಾರ್ಚಕಂಗೆಸೆದುದೋ ಜನ್ಮಾಭಿಷೇಕೋತ್ಸವಂ (ಆದಿಪು. ೭-೮೧). ೨. ಸೇವೆ ಮಾಡುವವನು ; ಪರಿಚಾರ ; ಸೇವಕ : "ಪರಿಚಾರಕರ್ಗಱುಳಾಯ್ತು ರೆಂದೆಂಬ ಪೆಸರ್" (ಕಬ್ಬಿಗೈ. ೩೫) ; ಅಂತು ಪ್ರಥಮನಾಕನಾಯಕಪ್ರಗ್ರಹಾಮರರ್ . . . ಅವನತಮಣಿಮಕುಟರಾಗಿ ಪರಿಚಾರಕಕೃತ್ಯದೊಳ್ ನೆಗೞೆ (ಶಾಂತಿಪು. ೧೧-೯೯ ಪ) ; ಜಂಗಮವ ಪರಿಚಾರಕರೆಂಬ ಕೇಡಿಂಗೆ ಬೆಜಗಾದೆನಯ್ಯಾ (ಬಸವ. ೪೧೪); ವೈದ್ಯ, ಔಷಧ, ರೋಗಸ್ಥ, ಪರಿಚಾರಕ ಈ ನಾಲ್ಕೂ ಚಿಕಿತ್ಸಾಂಗವೆನಿಸಿಕೊಂಬುವುವು . . . ರೋಗಸ್ಥನಲ್ಲಿ ಪ್ರೀತಿಯುಳ್ಳವನಾಗಿಯೂ . . . ವೈದ್ಯನಲ್ಲಿ ಸ್ನೇಹ ಬಯಸುವವನಾಗಿರುವಂಥಾವನೇ ಪರಿಚಾರಕನೆನಿಸಿಕೊಂಬನು (ಸಕವೈ. ೨೩) ; ನಾನು ತಮ್ಮ ಸೇವಕ, ತನುಗೆಳ್ತು ಮುಂದಿ ಪರಿಚಾರಕರನ್ನು ಕರೆತರಲಿ ?(ಮಣಿಸ. ೩೦).

[ಸಂ.]

ಪರಿಚಾರಕತ್ವ (ನಾ). ಸೇವಕತನ; ಊಳಿಗ: ಸಕಲಸುರಸಮಾಜಮಂ ಪರಿಚಾರಕತ್ವದೊಳ್ ಯೋಜಿಸಿಯುಂ (ಚಂದ್ರಪ್ರ. ೯-೫೫ ಪ).

[ಸಂ.]

ಪರಿಚಾರಕಿ (ನಾ). ಊಳಿಗವನ್ನು ಮಾಡುವವಳು ; ಸೇವಕಿ ; ದಾಸಿ : ಚಾಮರದಡಪದ ಕನ್ನಡಿಯ ಪರಿಚಾರಕಿಯರಿಂ ಕೂಡೆ ಸಂದಣಿಸಿದ ಬಾಗಿಲೊಳ್ (ಕಾದಂಪು. ೮೭೦) ; ಪರಿಚಾರಕಿಯರನೊಪ್ಪಿರೆ ಕರಮಕ್ಕನ ಮನವನಱಿದು ಬೆಸಗೆಯ್ವುದು ಚೆಟ್ಟರಮೆಂದು ಪೇಟ್ವುಮತ್ತೋದರರ್ (ಧರ್ಮಾಮೃ. ೩-೫೩) ; ಚತುರ ಚತುರಿಕೆಯರಪ್ಪ ಪರಿಚಾರಕಿಯರುಂ . . . ಭಾನುಮತಿಯಂ ಮಂಗಳವಸದನಂಗೊಳಿಸಲವಸರಂಬಡೆದು (ಪುಷ್ಪಪು. ೮-೫೩ ಪ). [ಪರಿಚಾರಕ+-ಇ[2]]

ಪರಿಚಾರಗಿತ್ತಿ (ನಾ). = ಪರಿಚಾರಕಿ : ಎಲ್ಲಾರ ಕೈಲೂ ದಂಡಿಸಿಕೊಳ್ಳೋಕೆ ನಾನೇನು ಪರಿಚಾರಗಿತ್ತೀನಾ ? (ಚಂದಕೋ. ೨೩೨).

[ಪರಿಚಾರ+-ಗಿತ್ತಿ]

ಪರಿಚಾರಿಕೆ[1] (ನಾ). ಊಳಿಗ ; ಸೇವೆ ; ಪರಿಚರ್ಯೆ : ಎಲ್ಲಾರ್ಗೂ ಪರಿಚಾರಿಕೆ ಮಾಡೋದೇ ನಮ್ಮಕೇಲರಾ ಆಯ್ತು (ಚಂದಕೋ. ೨೫೧).

[ಪರಿಚಾರ+-ಇಕೆ]

ಪರಿಚಾರಿಕೆ[2] (ನಾ). = ಪರಿಚಾರಕಿ : ಕುಂಚದಡಪದ ದವಕೆಯ ಪರಿಚಾರಿಕೆಯರೆಲ್ಲರುಮಂ ಕಣ್ಗೆತ್ತಿ ಕಳೆದೇಕಾಂತದೊಳ್ ಕನ್ನೆಯನಿಂತೆಂದಳ್ (ಪಂಪಭಾ. ೪-೬೧ ಪ) ; ಕೆಲದೊಳ್ ಪರಿಚಾರಿಕೆ ಪಿಡಿದಿರ್ದಾ ಸ್ವರವರ್ಧನವೆಸರ ವೀಣೆಯಂ ತಾಂ ಕೊಂಡಳ್ (ಕುಸುಮಾ. ೧-೩೫) ; ಪರಿಚಾರಿಕೆಯರ್ವೆರಸತಿಧರದಿಂದಂ . . . ಬರುತಿರ್ಪಾಗಳ್ (ತ್ರಿಪುವಿ. ೨೯-೧೦).

[ಸಂ. ಪರಿಚಾರಿಕಾ]

ಪರಿಚಾರಿಣಿ (ನಾ). = ಪರಿಚಾರಕಿ : ನಿಖಿಳ ಪರಿಚಾರಿಣೀಜನಂ ನಿಜ ನಿಯೋಗನಿಷ್ಠಾಪರತೆಯಿಂ ನಿರಂತರಮೋಲಗಿಸುತೊಪ್ಪುತಿರೆಯಿರೆ (ಕುಸುಮಾ. ೬-೬ ಪ) ; ಪರಿಚಾರಿಣಿಯರು ತೊಡೆದು ನಾಟ್ಯಗೃಹವ ಸಿಂಗರಿಸಿದರು (ಭರಜ. ೧೨-೧೪೫); ಸಮ್ಮುಖದ ಪರಿಚಾರಿಣಿಯಾದ ಚತುರಿಕೆಗೆ ನೀನು ಆಜ್ಞಾಪಿಸಿ ಇರುವೆಯಷ್ಟೆ (ಶಾಕುಂತ. ೮೪-೬). [ಸಂ. ಪರಿಚಾರಿಣೀ]

ಪರಿಚಾರಿಸು (ಕ್ರಿ). ಸೇವೆ ಮಾಡು ; ಊಳಿಗ ಮಾಡು : ಅಲಸದೆ ಪರಿಚಾರಿಪುದಲ್ಲಿಗಲ್ಲಿ ಬಲ್ಲನಿತರೊಳಂ ಸರಸಪ್ರಸಂಗೈಯಲು ಸರಸಿಜಭವರಾಣಿಯೊಲಿಯದೇಂ ಮಾಣ್ಡಪಳೇ (ನೀತಿಸಾ. ೨೩).

[ಪರಿಚಾರ+-ಇಸು[3]]

ಪರಿಚಿತ (ಗು). ೧. ಕೂಡಿದ ; ಸೇರಿದ : ಇಂದ್ರನಂತೆ ಪರಿಚಿತಸುರಧಿರಮ್ಯನಮೃತಾರ್ಚಿಯಂತೆ ವಿಸ್ತರಿತಕುವಲಯಂ (ಜೈಮಿಭಾ. ೨-೧೩). ೨. ತುಂಬಿದ ; ಭರ್ತಿಯಾದ : ಅನರ್ಘರತ್ನಮಣಿಮಕುಟಕಿರೀಟಮಯೂಖಮಾಲಿಕಾಪರಿಚಿತಪ್ರಭಾಕದಂಬಕಪ್ರತಿದಿಂಬಿತ ವಿಮಾನಧಿತ್ತಿ ವಿತಾನಂ (ಶಾಂತಿಪು. ೭-೧೩ ಪ) ; ಕರಮೆಸೆದಿಳ್ಪುದಾತತಗುಹಾದ್ವಯವಜ್ರಮಯಿಂದರೀಪ್ರಭಾಪರಿಚಿತಪಾರ್ಶ್ವಮಗ್ರನಿಭೃತಾಂಬುಧರಂ ವಿಜಯಾರ್ಧಭೂಧರಂ (ಚಂದ್ರಪ್ರ. ೬-೨). ೩. ಗುರುತುಳ್ಳ ; ಪರಿಚಯವಿರುವ : ಪರಿಚಿತ ಮರಗಿಡಗಳು, ಪ್ರಾಣಿಗಳು, ನಿಸರ್ಗದ ಅಗುಹೋಗುಗಳು— ಇವು ಆ ವಿಷಯದಲ್ಲಿ ಸೇರಿದ್ದುವು(ಶಿಕ್ಷದ. ೭೩೮). ೪. ಆಪ್ತವಾದ ; ಸಲಿಗೆಯುಳ್ಳ ; ಬಳಕೆಯಲ್ಲಿರುವ ; ಪರಿಚಿತ ಸನಾಭಿರಾಗಾಂಕುರ ಜಲಸೇಚಂ ವಿರೋಧಿತರುದವದಹನಂ ಪರಮೋದಯರವಿಗಗನಂ ಪರಾಕ್ರಮವದೆನೆ ವಿಭಿನ್ನರೂಪಕಮಕ್ಕುಂ (ಕವಿಗಾ. ೩-೨೨) ; ಪರಿಚಿತ ಚಕ್ರವಾಕವಿಭುನಂಗಳನೊಯ್ಯನೆ ನಿದ್ರೆಗೆಯ್ಸುವಳ್ (ಕಾದಂಉ. ೨೪) ; ಪರಿಚಿತ ಪರಿಜನಮಂ ಪರಿಹರಿಸಿ ಪರಿಸ್ಪಂದಮೊಂದುಮಿಲ್ಲೆನೆ ತನ್ನೊಳ್ ಪರಿನಿಷ್ಕ್ರಮಣಕ್ಕೆ ಮನಂ ಪರಿಯೆ (ಪುಷ್ಪಪು. ೧೩-೭೩). ೫. ತಿಳಿದ ; ಗೊತ್ತಿರುವ ; ಅರಿತ : ಪರಿಚಿತಾಶೇಷದೇಶಭಾಷನುಂ . . . ಪ್ರಸಿದ್ಧನುಮಪ್ಪ ಮಹತ್ತರನ ಕೈಯೊಳ್ ಸನ್ಮಾನದಾನಪುರಸ್ಸರಮಾಗೆ ಕೊಟ್ಟು (ಆದಿಪು. ೧೪-೪೩ ಪ). (ನಾ). ೬. ಪರಿಚಯವಿರುವಂಥದು ; ಗೊತ್ತಿರುವುದು : ಎಲ್ಲಿ ಪರಿಚಿತವಾದ ವಾದನೇದಧ್ವನಿಗಳಲ್ಲಿಗೊಯ್ಯದೆ ದಾರುದಾರುಣದ ಕೆಟ್ಟಡವಿಗಿಲ್ಲಿಗೇಕೈತಂದೆ ಸೌಮಿತ್ರಿ (ಜೈಮಿಭಾ. ೧೯-೧೧) ; ಈ ಮುಖವು ಪರಿಚಿತವಾದ ಮುಖದಂತಿದೆ (ಶ್ರೀರಾಯ. ೨೪೮). ೭. ಗುರುತುಳ್ಳ ವ್ಯಕ್ತಿ ; ಪರಿಚಯವುಳ್ಳ ವ್ಯಕ್ತಿ : ಹಿಂದಿನ ಪರಿಚಿತರ್ಯಾರ ಕಣ್ಣಿಗಾದರೂ ಬಿದ್ದರೆ ಪುನಃ ಸಂಕಟದಲ್ಲಿ ಸಿಕ್ಕಬಹುದೆಂದು ಭಯ (ಶ್ರೀರಾಯ. ೨೧೬) ; ಪ್ರೇಯಸಿಗೆ "ನೀನು ನನಗೆ ಜನ್ಮಾಂತರದಲ್ಲಿ ಪರಿಚಿತಳಾದಂತಿದೆ" ಎಂದು ಹೇಳುತ್ತೇವೆ

(ಶಿಬಂಧ. II, ೧೩೧). ೮. ಆತ್ಮೀಯ ವ್ಯಕ್ತಿ; ಆಪ್ತ: ತ್ರಿವೇದಿ, ಪಟೇಲ, ನಿಯೋಗಿಯವರನ್ನು ಕರೆಯಲು ಅವರವರ ಪರಿಚಿತರು ಬಂದಿದ್ದರು (ಸಮಚೀ. ೬೧೧). ೯. ತಿಳಿದವನು; ಅರಿತವನು: ಸವ್ಯಾಪಸವ್ಯ . . . ಮಂಡಳಾವರ್ತನಾದಿಗಳಪ್ಪ ಮೂವತ್ತೆರಡು ಗದಾವಿಕ್ಷೇಪದೊಳ ಮತಿಪರಿಚಿತರಾಗಿ ಕಾದುವಾಗಳ್ (ಪಂಪಭಾ. ೧೩-೯೨ ಪ); ವ್ಯಾಕರಣ ಪರಿಣತನಲಂಕಾರಪರಿಚಿತನನೇಕರಸನಿಪುಣನಭಿಧಾನಪ್ರವೀಣನು (ಹಚಕಾ. ೧-೧೨೪). [ಸಂ.]

ಪರಿಚಿತಿ (ನಾ). ಪರಿಚಯ; ಗುರುತು: ಊರಿನಲ್ಲಿ ಹಸುಗೂಸು ಮೊದಲ್ಗೊಂಡು ಮುದುಕರವರೆಗೂ ಅವರಿಗೆ ಪರಿಚಿತಿ ಇತ್ತು (ರಾಯಕ. ೬೯); ತಮ್ಮ ಊರಿನ ಹುಡುಗ ಹುಡುಗಿಯರ ಪರಿಚಿತಿ ತನಗಿಲ್ಲವೇ? (ತುಂಬಿಕೊ. ೭೫); ಕಲಾವಿದ ಬಳಸಿದ ಸಾಧನದ ಪರಿಚಿತಿ ಜನಕ್ಕೆ ಇರಬೇಕಾಗುತ್ತದೆ (ಕಲಿದ. ೧೧೭). [ಸಂ.]

ಪರಿಚಿತೆ (ನಾ). ಪರಿಚಯವಿರುವಾಕೆ; ಗೊತ್ತಿರುವವಳು: ಪರಿಚಿತೆ ನೀಂ ತಳೋದರಿಗೆ ಮೆಯ್ಯುಳಿಯಿಂ ಮನಮಂ ತೊಡಂಕೆ ನಾಂ ತ್ವರಿಪದಿ ನಿರ್ದು ನಿಂದಟಲನಾಱಿಸು (ಅನಂಪು. ೧೧-೯೬). [ಸಂ. ಪರಿಚಿತಾ]

ಪರಿಚುಂಬಿಸು (ಕ್ರಿ). ೧. ಮುತ್ತಿಡು; ಮುದ್ದುಕೊಡು: ಕಂಪಿನ ಪೊಂಪು ಪೊಂಪುಟಾಯೆನಲ್ ದೊರೆವೆತ್ತ ನಮೇರುಮಾಲೆಯಿಂಪಂ ಪರಿಚುಂಬಿಸಲ್ ಬಯಸಿ ಬರ್ಪಳಿಮಾಳಿಕೆಯಂತೆ (ಶಾಂತಿಪು. ೫-೩೩); ಪರಿಚುಂಬಿಸಿ ನವಕಳಿಕಾಧರರಸಮಂ ಪೀರೆ ಪರಭೃತಂ ಚೂತಲತಾತರುಣಿಗೆಸೆದತ್ತು ಶಾಖಾಕರಕಂಪಂ ತನ್ನಿನಾದನಿಭಸೀತ್ಕಾರಂ (ಲೀಲಾವ. ೯-೯೩). ೨. ಮುಟ್ಟು; ಸೋಕು; ಸ್ಪರ್ಶಿಸು: ಪದಾಘಾತಧೂಳೀಪಟಲ ಪರಿಚುಂಬಿಸಿದುದಂಬರವ (ಕುಸ್ಮಾಅ. ೧೮-೪೦).

[ಸಂ. ಪರಿಚುಂಬನ+-ಇಸ್ಯ]

ಪರಿಚೆ, ಪರಿಜೆ (ನಾ). ಒಂದು ಬಗೆಯ ಸುಗಂಧದ್ರವ್ಯ,—ಲೇಪನ ವಸ್ತು: ತೀವಿದ ಕೊಗ್ಗಿಯ ಕತ್ತುರಿಯುಂ ಕತ್ತುರಿಯೊಳಂಟ ಪರಿಚೆಯುಂ ಪರಿಚೆಯೊಳ್ ಪರಿಚಯಂಬಡೆದ ಮದವಟ್ಟೆಯುಂ ಮದವಟ್ಟೆಯೊಳೊಡಂಬಟ್ಟ ವಿಪುಲಕಪೋಲತಲಲಿಖಿತವಿಚಿತ್ರಪತ್ರಲೇಖೆಯುಂ (ಅಪಿಪು. ೪-೪೧ ಪ); ಪರಿಚೆಯನೊಗ್ಗುಡಿಸುವ ಕತ್ತುರಿಯಿಂ ಮದವಟ್ಟೆದೆಗೆವ ಟೊಟ್ಟೆಡುವ ಕುಚಾಂತರದೊಳ್ ಹಾರಮನೆಳಸುವ[ಯಿ]ರುಂ ಸ್ವಾಧೀನಪತಿ ಕರಂ ಬಗೆಗೊಂಡಳ್ (ಪರ್ಧಮಾ. ೮-೮೬). **ಪರಿಜೆ**: ಪರಿಚೆಯನಂಟು (?) ಕೆನ್ನೆಗಳಪೊಯ್ಯನೆ ನೀವುವ ಚಿನ್ನಪೂವನೋಸರಿಸುವ . . . ಕೆಯ್ತದೊಂದು ನೆವದಿಂ ಲಲಿತಾಂಗಿಯ ಶಂಕೆಯಂ ಭಯಂಬೆರಸಿದ ನಾಣುಮಂ ಕ್ರಮದೆ ಪಿಂಗಿಸು (ಪಂಪಭಾ. ೩-೭೭); ತೆಗೆಯುತ್ತುಂ ಮೇಲುಡಂ ಪೆರ್ಮೊಲೆಗೆ ಪರಿಚೆಯಂ ಹಸ್ತದಿಂದೊತ್ತುತುಂ . . . ಅಬಲೆಯರೋರೊರ್ವರೊಂದೊಂದು ಪಾಂಗಿಂ ಬಗೆಗೊಂಡೇಟ್ವನ್ನೆಗಂ ತನ್ನೊಡನೆ ಹರಿ ವನಕ್ರೀಡೆಗೆಂದೆಟ್ಟನಾಗಳ್ (ಜಗವಿ. ೧೪-೪೭). [?]

ಪರಿಚೋದನ (ನಾ). ಓಡಿಸುವುದು; ನುಗ್ಗಿಸುವುದು: 'ಪರಿಚೋದಿಸು' ಪರಾ. [ಸಂ.]

ಪರಿಚೋದಿಸು (ಕ್ರಿ). ಓಡಿಸು; ನುಗ್ಗಿಸು: ಸ್ಯಂದನಾಶ್ವಂಗಳನೊಂದೆ ದೊರೆಯೊಳ್ ಪರಿಯೆ ಪರಿಚೋದಿಸಿ ಬಾಣಪಾತಪ್ರಮಾಣದೊಳ್ ನಿಱಿಸುವುದುಂ (ಶಾಂತಿಪು. ೪-೧೦ ಪ); ತನ್ನ ರಥಮಂ ಪರಿಚೋದಿಸವೇಟ್ಟು ರಾಮನೊಳ್ ತೊಡರಲೊಡರ್ಪ ಬರ್ಪ ಪದದೊಳ್ (ಪಂರಾಮಾ. ೧೪-೧೪೩). [ಪರಿಚೋದನ+-ಇಸ್ಯ]

ಪರಿಚ್ಛದ (ನಾ). ೧. ಮುಸುಕು; ಹೊದಿಕೆ; ಆವರಣ: ಅಂಚೆಯದುಕೊಳಪರಿಚ್ಛದ ಚಾರುತಲ್ಪದಿಂ ಕಾಂಚನಮಂಚದಿಂ . . . ಮನಂಗೊಳಿಪ ಸೆಜ್ಜೆಗೆ ಮಂದಳದೊಂದು ಲೀಲೆಯಿಂ (ಮಲ್ಲಿಪು. ೧೧-೧೦೨). ೨. ಹೊದೆಯುವ ವಸ್ತ್ರ; ಮೇಲುಹೊದಿಕೆ: ಅದೇನೆಸೆದಿರ್ದನೊ ದೇಹದೀಪ್ತಿ ಚಂದ್ರಾತಪಮಂ ಪಳಂಚಲೆಯೆ ನೀಲಪರಿಚ್ಛದದಿಂ ಹಲಾಯುಧಂ (ಪಂರಾಮಾ. ೧೨-೧೧). ೩. ಪರಿಜನ; ಪರಿವಾರ: ಕೇಶವನು ಮಾತ್ಮೀಯಗುರುವಿಯೋಗದೊಳ್ ಪರಿತ್ಯಕ್ತಸಕಲರಾಜ್ಯಪರಿಚ್ಛ [ಪಾಣಾಂ. ಚ್ಛೇ]ದಂ ಪ್ರವ್ರಜ್ಯಪದವಿಯೊಳ್ ಪರಿತ್ಯಕ್ತನುಮಾಗಿ ತದಭ್ಯುತಕಲ್ಪದೊಳ್ ಪ್ರತೀಂದ್ರನಾದಂ (ಅಪಿಪು. ೬-೧೨ ಪ); ವಿಜಿತಾಹಿತನರೇಂದ್ರಾತ್ಮೀಯಾಸೇನಾಪರಿಚ್ಛದರಪ್ಪರವರವರ್ತಿಯೊಳಂ ಕೃತದಾರಪರಿಗ್ರಹನಿಂದ್ರಂ ಯುವರಾಜ್ಯಪದದೊಳ್ ನಿಂದು (ಶಾಂತಿಪು. ೬-೬೧ ಪ). ೪. (ಗೃಹಕೃತ್ಯದಲ್ಲಿ ಬಳಕೆಯಾಗುವ ಪಾತ್ರೆ, ಪೀಠ ಮುಂತಾದ) ಉಪಕರಣ; ಸಾಮಗ್ರಿ; ಸಲಕರಣೆ: "ಪರಿಬರ್ಹಂ [ಪರಿವಾರಂ] ಪರಿಚ್ಛದಂ . . . ಬಿತ್ತರಿಸುವ ಗೃಹೋಪಕರಣೋತ್ಕರಂ" (ಪಸ್ತುಕೋ. ೪೮-೨೧); ಅಂತು ಪ್ರಧಾನಪ್ರಕೃತಿಯಪ್ಪ ಕಾಮದೇವನಿಲ್ಲದೆ ಪದೀಯ ಪರಿಪೂರ್ಣಪರಿಚ್ಛದಮಂ ಪೊತ್ತು ನಿಂದಳಂ ನೋಡಿ (ಶಾಂತಿಪು. ೮-೮೩ ಪ); ಬಹುಪ್ರಕಾರ ಭಂಗುರಶೃಂಗಜಳಯಂತ್ರಾದಿ ಜಳಕೇಳಿವಿಳಾಸೋಪಯೋಗ್ಯಾತ್ಯುತ್ಕೃಷ್ಟಪರಿಚ್ಛದಂಗಳೊಳಂ . . . ಆಬಟ್ಟು ದಿಟ್ಟಿಗೊಲವನೋಲಗಿಸ ಲೀಲಾಸರೋವರಮಂ ರಾಜಹಂಸಂ ಲೀಲಾವತೀಜನಸಮೇತಂ ಪುಗೆ (ಚಂದ್ರಪು. ೬-೧೧೯ ಪ); ಕೃಷ್ಣಾಜಿನಂಗಳನುರುಪರಿಚ್ಛದಗಳನು ಕೊಡಿಸಿದನಾ ಮುನಿವ್ರಜಕೆ (ನಿಭಾಗ. ೧೦-೫೪-೨೯). [ಸಂ.]

ಪರಿಚ್ಛನ್ನ (ಗು). ೧. ಮುಚ್ಚಿದ; ಮರೆಮಾಡಿದ; ಹೊದಿಸಿದ. ೨. ಆವರಿಸಿದ; ಸುತ್ತುಗಟ್ಟಿದ. [ಸಂ.]

ಪರಿಚ್ಛಾದನೆ (ನಾ). ೧. ಮುಚ್ಚುವಿಕೆ; ಹೊದಿಸುವುದು. ೨. ಮುಸುಕು; ಹೊದಿಕೆ. [ಸಂ. ಪರಿಚ್ಛಾದನ]

ಪರಿಚ್ಛಿತ್ತಿ (ನಾ). ೧. ನಿಶ್ಚಯ; ನಿರ್ಣಯ; ನಿರ್ಧಾರ: ಮುನ್ನ ಮಧೋಲೋಕಸರ್ಗನದಲ್ಲಿ ರಜ್ಜುಪರಿಚ್ಛಿತ್ತಿ ನಿರೂಪಣಾರ್ಥಂ ವ್ಯವಹಾರ ಪಲ್ಯಾದಿವಿಕಲ್ಪಂ ಪ್ರಸ್ತುತಗಾಥಾಸೂತ್ರಂಗಳಿಂ ನಿರೂಪಿಸೆ ಪಟ್ಟೊಡಂ (ತತ್ತ್ವಪ್ರ. ೧೭೬). ೨. ಮೇರೆ; ಸೀಮೆ. ೩. ವಿಯೋಗ. [ಸಂ.]

ಪರಿಚ್ಛಿನ್ನ (ಗು). ೧. ಎರಡು ತುಂಡು ಮಾಡಿದ; ವಿಭಾಗಿಸಿದ. ೨. ಮೇರೆಯುಳ್ಳ; ಮಿತಿಯನ್ನು ಹೊಂದಿದ; ಎಲ್ಲೆಯನ್ನೊಳಗೊಂಡ: ಪೃಥಿವೀ ಮೊದಲಾದ ಸಮಸ್ತವಸ್ತುಗಳೂ ಕಾರ್ಯರೂಪವಾದುವು. ಈ ವಿಷಯದಲ್ಲಿ ಇವು ಪರಿಚ್ಛಿನ್ನ ಅಥವಾ ಅವಧಿಯುಳ್ಳ ವಸ್ತುಗಳು ಎಂಬುದೇ ಪ್ರಮಾಣ (ಭಾತತ್ತ್ವ. ೬೦೯). (ನಾ). ೩. ಪರಿಮಿತವಾದುದು; ಸೀಮಿತವಾದುದು: ಜೀವನ ಈ ಗುಣಗಳು ಅಪರಿಮಿತವಲ್ಲ—ವಿಭುವಲ್ಲ. ಮಿತ—ಪರಿಚ್ಛಿನ್ನವೆಂಬುದು ಸ್ವಯಂಸಿದ್ಧ ವಿಷಯ (ಜೀವಾತ್ಮ. ೫೨). ೪. ಖಚಿತತೆ; ಖಡಾಖಂಡಿತ: ಸುಮ್ಮನೆ ಔಷಧಗಳನ್ನು ಯಾಕೆ ತರಿಸುತ್ತೀರಿ? ನಾನು ಅವನ್ನು ಎಂದಿಗೂ ತಕ್ಕೊಳ್ಳುವುದಿಲ್ಲ ಎಂದು ಪರಿಚ್ಛಿನ್ನವಾಗಿ ಹೇಳಿದನು (ಮುಂಬಯಿ. ೪-೬೬). ೫. [ನಾಟ್ಯ]ಮೂವತ್ತೆರಡು ಬಗೆಯ ಅಂಗಹಾರಗಳಲ್ಲಿ ಒಂದು: ಸಮನಖ ಛಿನ್ನಮ ಸಂಭ್ರಾಂತಮವೆಂಬೀ ಮೂಱುಕರಣಮಂ ಮಾಡುತ್ತುಂ . . . ಸುತ ಕರಣದಿಮೊಂಬತ್ತುನ್ನತಿಯಿಂ ಕೂಡಲ್ಕೆ ಕೇಳ್ ಪರಿ [ಪಾಣಾಂ. ಕಟ] ಚ್ಛಿನ್ನಾಖ್ಯಂ (ಲಾಸ್ಯರಂ. ೫-೨೫). [ಸಂ.]

ಪರಿಚ್ಛೇದ (ನಾ). ೧. ಕತ್ತರಿಸುವುದು; ತುಂಡುಮಾಡುವುದು: ಈಯಪಾಯಕ್ಕೆ ಪಂಚನೋಪಾಯಮಾವುದುಮಿಲ್ಲ ಎನಗೆ ಪರಿಚ್ಛೇದಮೇ ಕಾರ್ಯಂ (ಪಂಚತಂ. ೮೫-೯). ೨. ದೃಢನಿರ್ಧಾರ; ನಿಶ್ಚಿತವಾದ ತೀರ್ಮಾನ,—ನಿರ್ಣಯ: ದರ್ಭಶಯನಸ್ಥನಾದ ನಿಜಪ್ರಾಣೇಶ್ವರನ ಪರಿಚ್ಛೇದಮನಱಿದು (ಪಂಪಭಾ. ೧೦-೪೪ ಪ); ನಿಜಜನಕ ಗಮನ

ಪರಿಚ್ಛೇದಮನಱಿದು ತಿಱಿಮುಱಿಕ್ಕೆ ಪಂದ ಪಾದರಸದಂತೆ ನಿಜನಿಸರ್ಗ ಧೈರ್ಯಗುಣಂ ದೆಸೆದೆಸೆಗೆ ಪೋಗೆ (ಮಲ್ಲಿಪು. ೧೦-೨೬) ; ಬಂದಲ್ ಪರಿಚ್ಛೇದದಿಂ ಕಾರಿಕಾಲಮ್ಮೆ (ಕಾರಿ.ದೇ. ೨೮೮-೪೪). ೩. ಎಲ್ಲೆ; ಮೇರೆ; ಸೀಮೆ. ೪. ಪುಸ್ತಕದ ಒಂದು ಅಧ್ಯಾಯ,—ಸರ್ಗ ; ಗ್ರಂಥದ ಒಂದು ಪ್ರಕರಣ : "ಕಾಂಡಃ = ಪರಿಚ್ಛೇದವುಂ, ಅಂಬುಂ, ನೀರುಂ" (ಕಾತಕ್ಯ. ೨೫೯) ; ಮುದ್ರಣಕ್ಕೆ ಸಂಬಂಧಪಟ್ಟ ದೋಷಗಳಲ್ಲಿ ಹೇರಳವಾಗಿರುವುವು ಯಾವುವೆಂದರೆ . . . ಅಶಾಸ್ತ್ರೀಯ ಪರಿಚ್ಛೇದ ವಿಭಜನೆ . . . ಸಾಲುಗಳ ಅಕ್ರಮ ಒಳಚಾಱುವಿಕೆ (ಮುದ್ರಕ.೩೦). ೫. ಅವಧಿ ; ಮಿತಿ: ಅವಧಿಯಿನಿಲ್ಲದೆಂದುಂ ತ್ರಿವಿಧಪರಿಚ್ಛೇದರಹಿತನಾವಂ (ವಿಷ್ಣುಪು. ೧-೪-೧೯). ೬. ವಿವೇಚನೆ : ಪಲವು ಉಪವಾಸಂ ಪತ್ತಿ ಚಿತ್ತದೊಳ್ಪರಿಚ್ಛೇದಬುದ್ಧಿಯಂ ನೆನೆದು (ತ್ರಿಪುವಿ. ೧೨-೨೫ ಪ). ೭. ಒಂದು ಅಳತೆ,—ಪ್ರಮಾಣ: "ಪರಿಚ್ಛೇದಮಂ ಮಾತ್ರೆಯೆಂಬುದು" (ಮಂಗರಾ. ೧೩೯-೬). [ಸಂ.]

ಪರಿಚ್ಛೇದಂಗೆಯ್ (ಕ್ರಿ). ನಿಶ್ಚಯಿಸು ; ತೀರ್ಮಾನ ಮಾಡು : ಪರಿಚ್ಛೇದಂಗೆಯ್ದು ನಿಬರುಂ ನಿತಂಬಿನಿಯರ್ ತಂತಮ್ಮ ಱೆಂಬೊನ್ನ ಮಾಡದ ನೆಲೆಯನೇಱೆ (ಅಜಿಪು. ೬-೧೧೦ ಪ). [ಪರಿಚ್ಛೇದ + ಕೆಯ್$_1$]

ಪರಿಚ್ಛೇದನ (ನಾ). = ಪರಿಚ್ಛೇದ. [ಸಂ.]

ಪರಿಚ್ಛೇದಿ (ನಾ). ದೃಢಸಂಕಲ್ಪದಿಂದ ಕೂಡಿದವನು ; ನಿಶ್ಚಿತವಾದ ನಿರ್ಧಾರವನ್ನು ಮಾಡಿದವನು : ಪರಮೇಶ್ವರದೀಕ್ಷೆಯಂ ಮನಂಬಿಡೆ ಕೊಂಡೀ ಧರೆಯಂ ಪೊಗೞಿಸಿದನಿದೇಂ ಪುರುಪರಮೇಶ್ವರ ಸುತರ್ ಪರಿಚ್ಛೇದಿಗಳೋ (ಅಪಿಪು. ೧೪-೧೩೯); ಕದನದೊಳ್ ಬೆಂಕೊಂಡು ಬಾಹಾಬಲೋನ್ನತಿಯಂ ಬೀಱುವೆನೆಂದು ಘೂರ್ಮಿಸಿದನೇಂ ಗಂಡಂ ಪರಿಚ್ಛೇದಿಯೋ (ಪಂಚಾಮಾ. ೯-೧೪೪). [ಸಂ. ಪರಿಚ್ಛೇದಿನ್]

ಪರಿಚ್ಛೇದಿಸು (ಕ್ರಿ). ೧. ತುಂಡುಮಾಡು; ಕತ್ತರಿಸು : (ಕ). ೨. ದೃಢನಿರ್ಧಾರ ಮಾಡು ; ನಿಶ್ಚಯಿಸು ; ತೀರ್ಮಾನಿಸು : ಕೊಟ್ಟೂಬ[ನ] ಪೊಲ[ಮನ] ಕಾದುವೆನೆಂದು ಪರಿಚ್ಛೇದಿಸಿ ನಡವಾಗಳ್ದಿ ಬಟ್ಟಗೆಱೆ ನೆಱೆಮ್ಮೆ ಕಲಿಗಳ್ಳನೆಂಬೋ × × × [ಱ]ಯ ಬಾಱೆನೆಂದು ಪರಿಚ್ಛೇದಿಸಿ (ಸೌಇಇ. XI-i, ೨೧-೭ ; 893) ; ಇಂದೆಮಗುಣಕ್ಕೆ ಬಗೆಯಿಲ್ಲುಪವಾಸಂಗೆಯ್ದಪ್ಪೆಮೆಂದು ಪರಿಚ್ಛೇದಿಸಿ ನುಡಿದೊಡೆ (ಪಡ್ಡಾರಾ. ೮೧-೧೦) ; ತನ್ನ ನಲ್ಲನ ಕಳೇವರಮಂ ತಱೆಕ್ಕೈಸಿಕೊಂಡು ತನ್ನ ಸಾವಂ ಪರಿಚ್ಛೇದಿಸಿ ಪಲ್ಲಂ ಸುಲಿಯುತ್ತುಮಿರ್ದ ಮಾದ್ರಿಯಂ ಕಂಡು (ಪಂಪಭಾ. ೨-೨೪ ಪ) ; ನೀನೆನ್ನ ಸೋಂಕಿದೊಡೆ ನಾಲಗೆಗಿಟ್ಟು ಸಾವೆನೆಂದು ಪರಿಚ್ಛೇದಿಸಿ ನುಡಿಯೆ (ಪಂಚಾಮಾ. ೯-೧೪೮ ಪ). ೩. ನಿವಾರಿಸು ; ಪರಿಹರಿಸು : ಮನದ ಸಂಶಯಮಂ ಪರಿಚ್ಛೇದಿಸಿ ಕಾರ್ಯಾಂಶವಿಶೇಷಾರ್ಥಮಂ ನೆನೆದು ತಿಳಿದಾ ಧರಾಧೀಶ್ವರಂ ಮಂತ್ರಶಕ್ತಿಗೆ ಜನ್ಮಭೂಮಿಯಾದಂ (ಮಲ್ಲಿಪು. ೩-೧೧). [ಪರಿಚ್ಛೇದನ + -ಇಸು$_3$]

ಪರಿಚ್ಯುತ (ಗು). ೧. ಕೆಳಗೆ ಬಿದ್ದ ; ಕಳಚಿದ. ೨. ಕಳೆದು ಹೋದ ; ನಷ್ಟವಾದ. ೩. ಚೆಲ್ಲಿದ ; ಸುರಿದ : ಉಗ್ರವೈರಿ ಸಂಘಾತಕರೀಂದ್ರರುಂದ್ರ ಕಟಕೂಟಪರಿಚ್ಯುತಭೃಂಗಮಾಳಕಾಪೀತ ಮದಾಂಬುಕಂ . . . ಕದನಂ ಕದನತ್ರಿಣೇತ್ರನಾ (ಪಂಪಭಾ. ೧೪-೩) ; ಯುವತಿಯರ ಕರಪರಿಚ್ಯುತಸಲಿಲಂಗಳ್ಳೊಳೆ ಬಿಡೆ ಕೆದಱುವ ಕಿಂಜಳ್ಕದಿ ನಾದುದು ಸರೋವರಂ ಕಪಿಶಜಳಂ (ಶಪುದ. ೨೩೦ ಪ್ರಯೋ). (ನಾ). ೪. ಕೆಳಗೆ ಬಿದ್ದುದು : "ಪನ್ನಂ ಪತಿತಂ ಪರಿಚ್ಯುತಂ ವಿಗತಾರ್ಥಂ" (ಪಸ್ತಕೋ. ೧೦೬-೪೮). ೫. ಕೆಳಗೆ ಬಿದ್ದವನು : ದಿವಿಜವನಿತಾಸವಿಭ್ರಮಧವಳಾಪಾಂಗಮ ನಿಜಾಯುರಂಭೋನಿಧಿಯಂ ತವೆ ಪೀರ್ದುದೆನಿಸೆ ತೊಟ್ಟನೆ ದಿವದಿಂದಂ ಶ್ರೀಧರಂ ಪರಿಚ್ಯುತನಾದಂ (ಅಪಿಪು. ೫-೯೯) ; ಅಂತಲ್ಲಿಂ ಪರಿಚ್ಯುತರಾಗಿ ಬಂದು (ಶಾಂತಿಪು. ೯-೩೮ಪ). [ಸಂ.]

ಪರಿಜನ (ನಾ). ೧. ಸೇವೆಮಾಡುವ ಜನ ; ಸೇವಕವರ್ಗ : ಪುರೋಹಿತಂ ತಮ್ಮಂ ಮಱುದಿವಸಂ ಭಿದ್ರಿಸುವೆನೆನಲುಂ ಮುನ್ನಿನ ದಿವಸಮೊಳಗಣ ಪರಿಜನಮೆಲ್ಲಮಂ ಪಾರ್ವರನೂಡುವ ನೆವದೊಳ್ ಪೊಱಮಡಿಸಿ (ಪಂಪಭಾ. ೩-೪೭) ; ಪರಿಜನಸಂಭ್ರಮಕ್ಕೆ ತಹಿಮಕರಣಿ ನೆಟ್ಟಱುತುಂ (ಪರ್ಧಪು. ೯-೫೯) ; ಆವಾಂತರವಾದರೆ ಪರಿಜನರನ್ನು ಕರೆಯಲಿಲ್ಲವೇಕೆ ? (ಪೌಲಿತ್. ೧೧೦). ೨. ಸೇವಕ ; ಪರಿಚಾರಕ. ೩. ದಾಸೀಸಮೂಹ ; ಸಖೀಜನ : ಪರಿಜನಸಹಿತಂ ಮಂಡೋದರಿ ಬಂದು ಮುನೀಂದ್ರ ರಕ್ಷಿಸೆಂದಱಗುವುದುಂ (ಪಂಚಾಮಾ. ೧೦-೧೩೬) ; ವಾರನಾರೀಪರಿಜನಪರೀತನುಂ . . . ವನಮಹತ್ತರಪುರಸ್ಸರನುಮಾಗಿ ಬರ್ಪಾಗಳ್ (ಚಂದ್ರಪು. ೭-೮೩ಪ). ೪. ಸುತ್ತಲಿನ ಜನ; ಪರಿವಾರ: ಪರಿಜನಮುಂ ಸಖೀಜನಮುಮೆನ್ನನೆ ಚಿಂತಿಸದಂತು ತಂಗಿ ನೀಣಿರು ಕರು ಮಾಡದೊಳ್ (ಕಾದಂಬ. ೫೯೦) ; ಪರಿಜನದ ಭೂಷನಂತಃಪುರದಬಳಾಜನದ ನೆಗೆದ ಹಾಹಾರವಮೆಯ್ತರೆ ಕಿವಿಗೆ (ಪಂಚಾಮಾ. ೩-೩೦) ; ಪರಿಜನಂಗಳು ಪುರಜನಂಗಳು ನೆರೆದು . . . ಅಳುತ್ತಿರೆ (ಬಸಪು. ೪೬-೩೫) ; ಅವಳನ್ನು ರಾಜಧಾನಿಗೆ ಕರೆದುಕೊಂಡು ಹೋಗಲು ಪರಿಜನರು ಬರುವರೆಂದು ಮಾತುಕೊಟ್ಟು (ಕಾವ್ಯಸ. ೪೬). ೫. ಪೋಷಣೆಗೆ ಒಳಪಟ್ಟವರು ; ರಕ್ಷಣೆ ಹೊಂದಿದ ಜನ ; ಆಶ್ರಿತ ವರ್ಗ : ಪರಿಜನಕ್ಕೆ ಡಱದೊಡೆ ಪೊರೆವುದುಂ . . . ಮೊದಲಾಗಿ ಮತ್ತಮುತ್ತಮಗುಣಂಗಳೊಳವು (ಪಂಚತಂ. ೨೯೪-೧) ; ಪರಿಜನಜೀವನಂ ಸಕಲದೇಶಸಮಾಹಿತವೃತ್ತಿ . . . ಎಂದಿನಂ ಕರಣಗಣಾಗ್ರಹಸ್ಸರರ ಮಾಲೆ ಮನಕ್ಕೆಸಗಿತ್ತು ಲೀಲೆಯಂ (ಅನಂಪು. ೨-೨೪).

ಪರಿಜನ ಪಾರಿಜಾತ = ಪರಿಜನರಿಗೆ ಅಥವಾ ಸೇವಕವರ್ಗಕ್ಕೆ (ಕೇಳಿದುದನ್ನು ಕೊಡುವ) ಪಾರಿಜಾತವೃಕ್ಷದಂತಿರುವವನು ; ಒಂದು ಬಿರುದು : ಚಾಳುಕ್ಯಾನ್ವಯಪ್ರಸೂತಂ ಪರಿಜನಪಾರಿಜಾತಂ ಭೂಪಮಾನ್ಧಾತಂ (ಸೌಇಇ. XX, ೭೧-೮ ; ಸು. 1109). [ಸಂ.]

ಪರಿಜಪನ (ನಾ). ಜಪ : 'ಪರಿಜಪನಂಗೆಯ್' ಪರಾ. [ಸಂ.]

ಪರಿಜಪನಂಗೆಯ್ (ಕ್ರಿ). ಜಪವನ್ನು ಮಾಡು : ಪರಮನೊಳಗೊಳಗದೊಂದಂ ಪರಿಜಪನಂಗೆಯ್ಯೆಯುಂ ನೆಗೞ್ದವ್ಯಕ್ತಾಕ್ಷರದಿಂ ನಿಗೂಢತರ ನಿರ್ಝರರವ ಗುಂಜದ್ಗುಹಾತಳಕ್ಕೆಣೆಯಾದಂ (ಅಪಿಪು. ೯-೮೬).

[ಪರಿಜಪನ + ಕೆಯ್$_1$]

ಪರಿಜು (ನಾ). ೧. ರೂಪ ; ಆಕಾರ ; ಆಕೃತಿ : "ಪರಿಜೆಂದನೆ ರೂಪನಾಮದೊಳ್" (ಕರ್ಣಾಟಿ. ೧೯) ; ಈ ಪರಿಜೀ ತನುಚ್ಛವಿಯನೀ ಪೊಸಜೌವನವೀ ಬೆಡಂಗನೀ ರೂಪುಮನೀ ವಿಳಾಸಮುಮನೇನೊಳ ಕೊಳ್ಳುಮೊ (ಅಪಿಪು. ೩-೨೦) ; ಆ ಭಾವಮೂ ಪರಿಜಾ ವಿಭ್ರಮಮೂ ಬೆಡಂಗು . . . ಏಂ ಮನಂಗೊಳಿಸಿತೋ ಚಾಳುಕ್ಯಕಂದರ್ಪನಾ (ಗದಾಯು. ೮-೫೦) ; ಆವನೊಂದೊದವಿದ ರೂಪುಮಂ ಬಯಸಲಾಗಳೆ ನಾಗನಿಳಿಂಪಯುಕ್ಷವರ್ಗದ ಪರಿಜಂ ದಿಟಂ ಪಡೆವಂ (ಪುಣ್ಯಾಸ್ರ. ೭-೧೧) ; ಪರಿಜೆಂದೆಲ್ಲಂದದೊಳಂ ನರರಂ ಪೋಲ್ತಿರ್ಪರಕಟ ನೀಚರ್ (ನೀತಿಮಂ. ೨-೩೭೧). ೨. ಪ್ರತಿಮೆ ; ವಿಗ್ರಹ ; ಬೊಂಬೆ : ಪೊಸಮುತ್ತಿಂ ಕಡೆದಾ ಪರಿಜೆನೆ . . . ಕರಮೆಸೆದಂ ಭೂಪತಿ ಪುರಸತಿಯರ ಕಣ್ಗಳ ಕದಿರಿಂದ (ಜಯಕಾ. ೧೦-೫೬) ; ಮಿಸುನಿಯ ಪರಿಜೋ ಪೊಸಚಿನ್ನದ ಕರುವೊ (ಚಂಪ್ರಸಾಂ. ೭-೫೨) ; ಚಂದ್ರೋಪಲದ ಪರಿಜೆಂಬಂತೆ ಕಣ್ದೊಪ್ಪುತಿರ್ದರ್ (ರಾಜಶೇ. ೪-೧೨). ೩. ಚಿತ್ರಪಟ : ತರುಣಿ ನಲ್ಲನ ಪರಿಜನಲ್ಲಿ ತೋಱೆನಲು (ಸೌಂದಪು. ೧೭-೪೮). ೪. ರೀತಿ ;

ಬಗೆ ; ಪ್ರಕಾರ : ಎರಡುಂ ಕರ್ಣದೊಳಂ ಪೊಳೆವ ರತ್ನಮಯಪತ್ರ ದಿಂದಮಿನದಿಂಬಯುಗಾಂತರತಿಮನಿಂದುದಿಂಬದ ಪರಿಜಂ ಪರಭಾವಿಸ ದೇಕೆ ನಿನ್ನಯ ವದನಂ (ಚಂದ್ರಪು. ೩-೫೯); ಸುರಪತಿ ದಿಲೀಪ ರಾಮರ ಪರಿಜೊಂದಿರೆ ಗುರು ವಸಿಷ್ಠ ವಿಶ್ವಾಮಿತ್ರರ್ ಬೆರೆಗೊಂದೆನಿಸಿದ ರೇನನುಸರಿಸಿದನಳಸಿಂಗರಾರ್ಯನದ್ಭುತಚರ್ಯಂ (ಚಿಕಪಿ. ೩-೬೯); ಎರಡು ಪರಿಜನಳವರೆಡರಿಂ ತುಂದಿ ಬಹುದೆಂದು: ಮರಿಯ ತಿಂದಾಮೇಲೆ ಎಳೆ ಸವುತೆಯಂ ಮೆದ್ದು ಮೊರೆದು ದೊಂದುಳಿಯನ್ನು ಸಾರುತ್ತಲಿಹುದು (ಕಾಲೂರ. ೫೩-೮೧). ೫. ಭಂಗಿ ; ನಿಲವು ; ಶೀವಿ : ಇದು ಲೀಲಾಂದೋಳಮಿಂದೋಳದ ಪನ ನೆಜೆಗೊಳ್ವನ್ನೆಗಂ ಪಾಡಲೆಂದೇಱು ದಳಂ ತೂಗುತ್ತುಮಿರ್ದನ್ನಯ ಪರಿಜು (ಅಪಿಪು. ೪-೯); ಶುಭ್ರಾಬ್ಜಮಂ ರಾಜಮರಾಳಂ ರಾಗದಿಂದೇಱುವ ಪರಿಜನ[ಪಾಠಾಂ. ಜದ] ವೋಲ್ . . . ಸಿಂಹಾಸನಾಸೀನನಾದಂ (ಕುಸುಮಾ. ೩-೮೨). ೬. ಅವತಾರ : 'ಪತ್ತುವರಿಜು' ಪರಾ.

ಪರಿಜು ಮಾಡು = ಆಕೃತಿಯನ್ನು ಮಾಡು ; ಆಕಾರವನ್ನು ರಚಿಸು : ವಿನಯದಿಂ ಶಿವನೊಂದು ಪರಿಜು ಮಾಡಲ್ಕೆನೆಯಲನಜಜೊಳೆ ರೂಪಾಗಿ ಶೂಲಿಗೆ ತುಳಿಲ್ಗೆಯ್ದು (ಅರಾಚ. ೧-೧-೯೧).

[ದೇ.॥ ತಮಿ. ಪರಿಚು ; ಮಲ. ಪರಿಜು; ತೆಲು. ಪರಸು, ಪರುಸು]

ಪರಿಜುವಡೆ (ಕ್ರಿ). ಆಕಾರವನ್ನು ತಳೆ ; ಆಕೃತಿಯನ್ನು ಹೊಂದು; ರೂಪವನ್ನು ಪಡೆ : ಶಿವಭಕ್ತಿಯೇ ಮೂರ್ತಿಗೊಂಡಂತೆ ರುದ್ರಯಜ್ಞವೆ ಪರಿಜುವಡೆದಂತೆ . . . ರೂಪು ವಿರಾಜಿಸಲ್ಕೆ ಬಂದಾ ಶಿವಬ್ರಾಹ್ಮಣಂ (ಸೌಂದಪು. ೧೫-೪೪); ತದಂಗನೆಯ ಭಾಸುರಮಾದ ವಿಶ್ವಾಸಮಣಿಯರಂ ಪರಿಜುವಡೆದುದೊ (ಅರಾಚ. ೧-೧೦-೬); ಶಶಿಕಳೆ ಭುವನದೊಳೀ ಕುವರವರಿಜುವಡೆದುದಯಿಸಿಂಬವೊಲೆಸೆದು ಕಳೆಗಳೊಡವೆರೆಯೆ ವಿಳಾಸಂ ಬೆತ್ತು ಬಳೆದನನಿಪತನಯಂ (ರಾಜಶೇ. ೪-೬೪).

[ಪರಿಜು+ಪಡೆ$_1$]

ಪರಿಜುವೆರು 'ಪರಿಜುವೆಱು' ನೋ.

ಪರಿಜುವೆಱು, ಪರಿಜುವೆರು (ಕ್ರಿ). ೧. = ಪರಿಜುವಡೆ : ವರೀರ ಶೈವಪ್ರವರ್ತನಂ ಭಾವಿಸಲ್ ಪರಿಜುವೆತ್ತುವೊ ಶಾಂತಿದಾಂತ್ಯಾಧಿಗಳ್ ನಾಡೆ ಪರಿಕಿಪೊಡೆ ರೂಪುವಡೆದುವೊ ಎಂದು ಭೂಜನಂ ಕೀರ್ತಿಸುತ್ತಿರೆ (ಅರಾಚ. ೧-೧-೨). **ಪರಿಜುವೆರು** : ೧. ಕಡುರಯ್ಯ ಪರಿಜುವೆತ್ತಿಡಿ ಕಿರಿದ ವಿಟಪಿಯಿಂ (ವಿಕೋಪು. ೨-೧೯). ೨. ಮಹಿಮೆಯನ್ನು ಪಡೆ : ನೀರ್ಮಗಳ ಗಂಡನಂ ಪೆಂಡತಿಯೊಲಾಳ್ದ ಪನ್ನಗಿಕೆಯಿಂ ಪರಿಜುವೆತ್ತ ಬಿಸುಗೊರಲ ರಕ್ಷಿಸು ಪೂಗುವರತ್ತಿಯಂ (ವಿಕೋಪು. ೩-೩).

[ಪರಿಜು+ಪೆಱು$_1$]

ಪರಿಜುಸೊಡರ್ (ನಾ). ಚಿತ್ರದಲ್ಲಿ ಬರೆದ ದೀಪ : ಪರಿಜುಸೊಡರಂತವಂ ಬಿಳ್ಕು ನಿಳ್ಕುವಮಲ್ತು (ಸೌನಂದ. ೬-೪೮).

[ಪರಿಜು+ಸೊಡರ್]

ಪರಿಜೆ 'ಪರಿಚೆ' ನೋ.

ಪರಿಜೆವಿಡು (ಕ್ರಿ). ಉಂಬಳಿ ಕೊಡು ; ದತ್ತಿ ಬಿಡು : ಬಾಣಗಾವುಣ್ಡಂಗಾ ಕೆರೆಯ ಬವರಿ ಪರಿಜೆವಿಟ್ಟರ್ (ಪ್ರೆಅರಿ. ೧೯೨೬, ೯೨-೬; ?).

[ಪರಿಜೆ ?+ಬಿಡು$_1$]

ಪರಿಜ್ಞಾನ (ನಾ). ಸಂಪೂರ್ಣವಾದ ಜ್ಞಾನ ; ಕೂಲಂಕಷವಾದ ಜ್ಞಾನ : ಕಲ್ಪನಾಂಶ . . . ನಿಜವಾಗಿ ಶಕ್ತವೂ ತೀವ್ರವೂ ಆದ ಪರಿಜ್ಞಾನದ ಕಾರ್ಯ (ಸಾಹಿಪ್ರ. ೮); ಲೌಕಿಕ ಮತ್ತು ಪಾರಲೌಕಿಕ ವಿಷಯಗಳ ಪರಿಜ್ಞಾನ ಮಾಡಿಕೊಡುವರು (ಗ್ರಂಥಾಲಿ. ೨); ಸಮಯ ಸಂದರ್ಭಗಳ ಪರಿಜ್ಞಾನವು ಸಮಗ್ರವಾಗಿರಬೇಕು (ಆರ್ಯಧ. ೪). [ಸಂ.]

ಪರಿಜ್ಞಾನತೆ (ನಾ). ವಿಶೇಷವಾದ ಜ್ಞಾನ ; ಅಧಿಕವಾದ ತಿಳಿವಳಿಕೆ : ಲಾಭಾಲಾಭದೊಳು ಪರಿಜ್ಞಾನತೆಯುಂ ಪುಣ್ಯಾಪುಣ್ಯದೊಳು ವಿಚಾರನಿಪುಣತೆಯುಂ . . . ಪೀತಲೇಶ್ಯಾಪರಿಣಾಮಮೆಂದಱಿಪುದು (ಪಸಾರ. ೪೧೫). [ಪರಿಜ್ಞಾನ+-ತೆ$_3$]

ಪರಿಠವ 'ಪರುಠವ' ನೋ.

ಪರಿಠವಣೆ 'ಪರುಠವಣೆ' ನೋ.

ಪರಿಠವಿಸು 'ಪರುಠವಿಸು' ನೋ.

ಪರಿಡಕ್ಕೆ 'ಪಡಡಕ್ಕೆ' ನೋ.

ಪರಿಡೋಣಿ (ನಾ). ನೀರು ಹರಿದು ಹೋಗಲು ಮಾಡಿರುವ ಕೊಳವೆ,–ದೋಣಿ : ನವಕಾಂಚನಕೇತಕೀದಳಂಗಳ ಪರಿಡೋಣಿಯಂ . . . ಸಮೆದಾಡುವ ಜೂಟಳಂಗಳಂ (ಶಾದಂಉ. ೨೧೫).

[ಪರಿ$_2$+ಡೋಣಿ$_2$(<ದೋಣಿ$_3$)]

ಪರಿಣತ (ಗು). ೧. ಬಾಗಿದ ; ಬಗ್ಗಿದ. ೨. ಕೊನೆಯ ಅವಸ್ಥೆಗೆ ಬಂದ ; ವಯಸ್ಸಾದ ; ಮುಪ್ಪಾದ : ಪರಿಣತದನಿರದಂತೆ ಖರಕಿರಣಂ ಕಾಲಚಕ್ರಪ್ರತಿಯಿಂ ಕೆಡೆಯಲ್ ಸುರಿದು ಪರೆದರುಣಜಲದಂತೆ ಪಸರಿಸುತಿರ್ದುದಪರಸಂಧ್ಯಾರಾಗಂ (ಲೀಲಾವ. ೧೦-೧೯). ೩. ಮಾಗಿದ ; ಹಣ್ಣಾದ : ನೀಹಾರಶಕಲಧವಲಪರಿಣತ ಕಪಿತ್ಥಫಲಪರಿಮಳಮಧುರದಧಿಯುಮಂ . . . ಭರತೇಶನಾರೋಗಿಸಿದಂ (ಅಪಿಪು. ೧೧-೨೬ ಪ); ಪರಿಣತ ಗಂಧಶಾಲಿವನಗಂಧದಿನುಲ್ಲಸಿತಾಂಬುಜಾಕರೋತ್ಕರನವಗಂಧದಿಂ . . . ದಿಶಾಪರಿಧಿಯನೆಯ್ದೆ ಬಾಸಣಿಸುತಿರ್ಪುದು ಸಾರ್ಥತೆಯಂ ನಿಜಾಖ್ಯೆಯೊಳ್ ನೆರೆಸಿ ಸುಗಂಧಿಮಂಡಲಂ (ಚಂದ್ರಪು. ೩-೧೧). ೪. ಪರಿಪಕ್ವಸ್ಥಿತಿಗೆ ಬಂದ ; ಪ್ರೌಢವಾದ : ಕ್ಷಿತಿಪೂಜ್ಯಂ ಜಿತದುರಿತಂ ನುತಸಂಪ್ರತಿಭೂತಭಾವಿಪರಿಣತತತ್ತ್ವಂ (ಶಾಂತಿಪು. ೧-೧೮); ಪರಿಣತ ಪ್ರೌಢಿಗಳಿಗಂತಃಕರಣನೆನೆವುದು ಸುಜನರಿಗೆ ನಿಷ್ಠುರತೆಗಲ್ಲದೆ ಮನವನೀಯದು ಮುಹಿಯ ಮೂಢ ಜನ (ಕುಪ್ಪಾಉ. ೯-೪೫). ೫. ಬದಲಾಯಿಸಿದ ; ವ್ಯತ್ಯಾಸಹೊಂದಿದ. ೬. ನೈಪುಣ್ಯವುಳ್ಳ ; ನುರಿತ ; ಸಮರ್ಥವಾದ : ಅರಿನರ ಪಶರೋದಳನಪರಿಣತೋಗ್ರಾಸಿಭಯಂಕರಕರರ್ (ಪಂಪಭಾ. ೧-೨೨); ಪರಿಣತಕವೀಂದ್ರವದನಾಜಿರದೊಳ್ . . . ರಂಜಿಸೆ ನರ್ತಿಪ ಸರಸ್ವತೀಲಾಸ್ಯಭೇದಮಂ ಜಡನಱಿಯಂ (ಪಲ್ಲಿಪು. ೧-೩೪); ಅನುಜರವಿವೇಕಿಗಳು ಪರಿಣತಜನರಲಧಿಕನು ನೀ (ಕುಪ್ಪಾಉ. ೨೩-೩೫). ೭. ಚೆನ್ನಾಗಿ ಬೆಳೆದ,—ವಿಕಾಸ ಹೊಂದಿದ. (ನಾ). ೮. ಪರಿಪಕ್ವವಾದುದು : ಆ ಭೂತಂಗಳುಂ ಕಾಯಾಕಾರಪರಿಣತಂಗಳಕ್ಕುಮಿದು ಪ್ರತ್ಯಕ್ಷಪ್ರಮಾಣಸಿದ್ಧಂ (ಶಾಂತಿಪು. ೮-೧೨೮ ಪ); ಪರಿಣತಮನಿರ್ದಂತಃಕರಣಚತುಷ್ಟಯ ಗುಣಸ್ವಭಾವಂಗಳಂ . . . ಅಭಿವರ್ಣಿಸುವೆಂ (ಶೃಂಗಾರ. ೧-೨೬). ೯. ಪ್ರೌಢನಾದವನು ; ಪರಿಪೂರ್ಣನಾದವನು : ಚತುರ್ಜ್ಞಾನನೇತ್ರರಂ ಭೋಂಕನೆ ಕಂಡು ರಹರಹ ಪರಿಣಾಮಪರಿಣತನಾಗಿ ಸಮುದಾಯಮಂ ಬಂದಿಸಿ (ಸುಕುಮಾ. ೮-೪೮ ಪ); ನರೇಂದ್ರಂ . . . ಪರಿನಿಷ್ಕ್ರಮಣಕ್ಕೆ ಮನಂ ಪರಿಯೆ ಪರಿಚ್ಛೇದಿಸಲ್ಕದೇಂ ಪರಿಣತನೋ (ಪಾಪ್ಪಪು. ೧೩-೬೬). ೧೦. ವಯಸ್ಸಾದವನು ; ವೃದ್ಧ ; ಮುದುಕ : ಶಾಕುಂತಲವನ್ನು ಪುನಃಪುನಃ ಓದದೇಕೆನ್ನಿಸುತ್ತದೆ . . . ಅದು ತರುಣರಿಗೆ ಪ್ರೇಮಕಥೆ ಪರಿಣತರಿಗೆ ಆತ್ಮಸಂಸ್ಕಾರ (ಧರ್ಮಾಸಾ. ೬೬). ೧೧. ನೈಪುಣ್ಯವುಳ್ಳವನು ; ನಿಷ್ಣಾತ ; ವಿಶಾರದ : ಅಂತರ್ಗೆ . . . ಸೋದಶಕ್ರಿಯೆಗಳಂ ಗಾಂಗೇಯಂ ತಾಂ ಮುಂತಿಟ್ಟು ಮಾಡಿ ಶಸ್ತ್ರಶಾಸ್ತ್ರಂಗಳೊಳತಿಪರಿಣತರಂ ಮಾಡಿ (ಪಂಪಭಾ. ೧-೮೬ ಪ); ಪರಿಣತನಪ್ಪುದಱಿಂ ವ್ಯಾಕರಣದೊಳವಯವದಿನವಱ ಶಬ್ದಾರ್ಥಮನಱಿಯಲ್ಕುವಟ್ಟು ಭಾವಿಸುತ್ತುಂ (ಧರ್ಮಾಮೃ. ೮-೬೩); ರಾಮಣನ ಮಗನಿವನು . . . ಆವ

ಕೈದುಗಳಾವ ಶಸ್ತ್ರಾಸ್ತ್ರದಲಿ ಪರಿಣತನು (ಕೌತಾ.೨೬-೧೨). ೧೨. ತನ್ನ ಕೊಂಬಿನಿಂದ ಅಡ್ಡವಾಗಿ ತಿವಿಯುವ ಆನೆ: "ಅಡ್ಡವಿಱಿವಾನೆ ಪರಿಣತಮೆಂಬುದು" (ಹಲಾಯು. ೩೭-೬೭). [ಸಂ.]

ಪರಿಣತಪ್ರಜ್ಞೆ (ನಾ). ಪರಿಪಕ್ವವಾದ ಜ್ಞಾನ; ಪ್ರೌಢವಾದ ತಿಳಿವಳಿಕೆ,-ಅರಿವು: ಮಾಸ್ತಿಯವರ ಕತೆಗಳಲ್ಲಿಯ ಪರಿಣತಪ್ರಜ್ಞೆ ಬೇರೆಲ್ಲಿಯೂ ಕಂಡುಬರುವುದಿಲ್ಲ (ಹೊಸಕ್ಷಿ. ೨೭೭).

[ಪರಿಣತ+ಪ್ರಜ್ಞೆ]

ಪರಿಣತಮತಿ (ನಾ).೧. = ಪರಿಣತಪ್ರಜ್ಞೆ. ೨. ಪ್ರೌಢವಾದ ಜ್ಞಾನವುಳ್ಳವನು: ಆ ನಾಡವರ್ಗಳ್ ಚದುರ್ನ್ನಿಜದಿಂ ಕುಱುತೋದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್ (ಕವಿಗಾ. ೧-೩೮).

[ಪರಿಣತ+ಮತಿ]

ಪರಿಣತವಯಸ (ನಾ). ವಯಸ್ಸಾದವನು; ವೃದ್ಧ: ತರುಣ ವೃಷಂ ಕೆಲೆದು ತೊಟಿಲ್ತರೆ ಕಂಡುದಱಿಂದೆ ಜೈನದೀಕ್ಷೆಗೆ ಮೆಯ್ಯಂ ತರುಣಜನಂಗಳೆ, ತರ್ಪರ್ ಪರಿಣತವಯಸರ್ಕಳಪ್ಪವರ್ ಮೆಯ್ದಾರರ್ (ಆದಿಪು. ೧೫-೪೪); ಅಂತು ಪ್ರಿಯಪುತ್ರವಿಯೋಗವಿಹ್ವಲೀಭೂತ ಚೇತನೆಯಿಂ ಮೆಯ್ಯಂ ನಿಱಿಸಲಾಱದೆಯುಂ ಪರಿಣತವಯಸನಾಗಿಯುಂ ಬಾಳಮರಣಮನೆತ್ತಿಕೊಂಡು (ಶಾಂತಿಪು. ೬-೯೧ ವ); ಪರಿಣತವಯಸರೆಮಿಕ್ಕಣ್ಗುರುಡರೆಮೆಮಗಿಂಬುಕೆಯ್ವುದುಚಿತಂ (ಗದಾಯು. ೪-೨).

[ಸಂ. ಪರಿಣತವಯಸ್]

ಪರಿಣತಿ (ನಾ). ೧. ಬಾಗುವಿಕೆ; ಬಗ್ಗುವಿಕೆ. ೨. ಪರಿಪಕ್ವತೆ; ಪ್ರಬುದ್ಧತೆ: ಅಂತು ಮನದೊಳೊಗೆದ ಕಾರುಣ್ಯರಸಮೆ ಸೀತೆಯೊಳಾದನುರಕ್ತತೆಯಂ ಕರ್ಚಿ ಕಳೆವುದುಂ ಸ್ವಭಾವಪರಿಣತಿಯೊಳ್‌ನಿಂದು ಸ್ವಕೀಯಾಪ್ತಪುರುಷಪರಿಷಜ್ಜನಕ್ಕಿಂತೆಂದಂ (ಪಂರಾಮಾ. ೧೪-೧೧೩ ವ); ಸತ್ಕ್ರಿಯೆಗಳೊಳಿಹಂಗೆ ಗರ್ವಿಸಿ ನುಡಿದವಂಗಂ ಸಾಂಗವಹುದೇ ಭಕ್ತಿಪರಿಣತಿ[ಪಾಠಾಂ. ಣಯ] (ಬಸಪು. ೨೪-೮೯). ೩. ವ್ಯತ್ಯಾಸ; ಬದಲಾವಣೆ; ರೂಪಾಂತರ: ಕಲಲಘನಘೇನ ಬುದ್ಬುದಾದಿ ಪರಿಣತಿಯಿಂ ನವಮಾಸಾವಸಾನಸಮಯದೊಳ್ ಸ್ತ್ರೀಪುರುಷ ಯುಗಳಮೆಯಾಗಿ ಪುಟ್ಟುಗುಂ (ಆದಿಪು. ೫-೪೧ ವ); ಬಹುವಚನಸ್ಫುರಿತ ಕ್ರಿಯೆಗೇಕತೆ ನಿಜಪರಿಣತಿ[ಪಾಠಾಂ. ತೆ] ಮೇಣ್ ಧಾತುಗೇಕವಚನದೊಳತ್ವಂ (ಶಮದ. ೧೨೫). ೪. ಸಫಲತೆ; ಈಡೇರುವಿಕೆ: ಮನಕ್ಕೆಂತಾನುಂ ಕಾಲಲಬ್ಧಿವಶದಿಂ ನಿವೃತ್ತಿಪರಿಣತಿಯೊಳ್ ಪರಿಣಮಿಸಿದ ಸುಸ್ಥತೆಯಂ ವ್ಯರ್ಥಂ ಮಾಡದೆ (ಚಂದ್ರಪು. ೪-೧೮ ವ); ಪುಣ್ಯದ ಫಲದ ಪರಿಣತಿಯೆಂತುಟೋ (ನಿಭಾಗ. ೧೦-೧೫-೧೭). ೫. ಫಲ; ಪರಿಣಾಮ: ಕಲುಷಮತಿ ಶಬರನಾದಂ . . . ಲುಬ್ಧಕಂ ಬದ್ಧರೋಷದಿಂ ಬೆಕ್ಕಾದಂ ಅಂತು ಪರಸ್ಪರೋಪಘಾತಪರಿಣತಿಯಿಂ (ಪಂರಾಮಾ. ೧೦-೯೬ ವ). ೬. ಮುಕ್ತಾಯ; ಕೊನೆ: ವೃಷಭನ ಅನಿಮಿತ್ತ ರೋಷಾವೇಶವಿಷಮತೆ ಗಮಾ ಜರಾದುರ್ಬಲಬಲೀವರ್ಧದುರ್ದರ್ಶಮರಣಾಯಾಸಪರಿಣತಿಗಂ ವಿಸ್ಮಯಂಬಟ್ಟು (ಚಂದ್ರಪು. ೨-೩೦). ೭. ಮುಪ್ಪು; ವೃದ್ಧಾಪ್ಯ. ೮. ನೈಪುಣ್ಯ; ಪ್ರೌಢಿ; ಕುಶಲತೆ: ಶ್ರೀಗೆ ಫಳಂ ಚಾಗಂ ವಾಕ್‌ಶ್ರೀಗೆ ಫಳಂ ಸರ್ವಶಾಸ್ತ್ರಪರಿಣತಿ (ಪಂಪಭಾ. ೬-೧); ತರುಪಾಷಾಣಾದಿ ಕರ್ಮ್ಮಾಂತರಪರಿಣತಿಯಂ ಪದ್ಮಜಂ ಲೋಕದೊಳ್ಪಿತ್ತರಿಸಲ್ವೇಟ್ಕುಂ (ಎಕ. VII, ಶಿಕಾರಿ. ೧೨೩-೫೨; 1158); ಅಶ್ವಾರೋಹಣ ಪರಿಣತಿಯಿಂ ಪರಿಶೋಭೆವಡೆದು (ರಾಜಶೇ. ೧೩-೮೨ ವ). [ಸಂ.]

ಪರಿಣತಿದೋಱು (ಕ್ರಿ). ನೈಪುಣ್ಯವನ್ನು ತೋರು; ಪ್ರೌಢಿಮೆಯನ್ನು ಪ್ರದರ್ಶಿಸು: ಪರಿಣತಿದೋರ್ಪ ವಾಹಳಿತನಂ ಬಗೆಗೊಂಡುದು ಮಂತ್ರಿಪುತ್ರನಾ (ರಾಜಶೇ. ೧೩-೮೨). [ಪರಿಣತಿ+ತೋಱು]

ಪರಿಣತಿವಡೆ (ಕ್ರಿ). ೧. ಪರಿಪಕ್ವತೆಯನ್ನು ಹೊಂದು; ಪರಿಪೂರ್ಣತೆಯನ್ನು ಹೊಂದು: ಗುರುಸನ್ನಿಧಿಯೊಳ್ಮುನ್ನಂ ಪರಿಣತಿವಡೆದಿರ್ದ ಸಕಳವಿದ್ಯೆಯನೀಗಳ್ ಪರಿವಿಡಿಗೆಯ್ವಂತೆ ಕಳಾಧರನಾದಂ ಶ್ರೀಧರಂ (ಮಲ್ಲಿಪು. ೪-೧೩೪); ಪರಿಣತಿವಡೆದಂ ವಿದ್ಯಾಪರಿಕರದೊಳಮಾತ್ಯಸುತನುಂ (ಪುಷ್ಪಪು. ೪-೬೨). ೨. ನಿಪುಣತೆಯನ್ನು ಪಡೆ: ಆಗಳೊರ್ವಳಂತಃಪುರಕಾಂತೆ ವಯಃಪರಿಣತಿಯೊಡನೆ ಪರಿಣತಿವಡೆದ ವಚನಚಾತುರ್ಯಮಂ ಮೆಱೆಯಲರಸಿಗಿಂತೆಂದಳ್ (ಮಲ್ಲಿಪು. ೪-೮೧). [ಪರಿಣತಿ+ಪಡೆ$_1$]

ಪರಿಣತಿವೆಱು (ಕ್ರಿ). ಸಫಲತೆಯನ್ನು ಹೊಂದು; ಸಿದ್ಧಿಯನ್ನು ಪಡೆ: ಪಲವು ಸುಕೃತಮಿಂತು ಪರಿಣತಿವೆತ್ತುದೊ . . . ಎನೆ ಕುಲವಧು ಕುಱುಹುಗೊಂಡಿಹಳು(ಹದಿಬ. ೨-೧೮). [ಪರಿಣತಿ+ಪೆಱು$_1$]

ಪರಿಣತಿಸುಖ (ನಾ). ಕಟ್ಟಕಡೆಯ ಸುಖ; ಕೊನೆಯ ಆನಂದ: ಪರಿಣತಿಸುಖಮಂ ಭಾವಿಸೆ ಶರೀರಿಗರ್ಹತ್ಪ್ರವಚನಮಲ್ಲದೆ ಪೆಱತಿಲ್ಲ (ಚಂದ್ರಪು. ೨-೩೯). [ಪರಿಣತಿ+ಸುಖ]

ಪರಿಣತೆ$_1$ (ನಾ).ನಿಪುಣೆ; ಚತುರೆ: ಚಿತ್ರಕರ್ಮಚತುರೆಯರುಂಸುಭಾಷಿತ ಪಠಣಪರಿಣತೆಯರುಂ ಎನಿಸಿದ ಕನ್ನಿಕೆಯರೊಡನೆ . . . ಬಿಜಯಂಗೆಯ್ದಂ (ಕಾದಂಉ. ೭೫); ವಿದ್ಯಾನೀಕವನು ಪರಿಚರಿಸಿ ಪರಿಣತೆಯಾಗಿ ಸುಖದಿಂದೆ ಆ ಕುಮಾರಿತಿಯಿರುತಿರಲು (ಪ್ರಭುಲೀ. ೩-೩೬). [ಪರಿಣತ+-ಎ$_2$]

ಪರಿಣತೆ$_2$ (ನಾ). ೧. ನಿಪುಣತೆ; ಪ್ರೌಢಿ; ಚಾತುರ್ಯ: ಇಭ ಪರಿಣತೆಯೊಳಮಾನುಷವಿಭವದೊಳ್ (ಎಇ. XIII, ೩೩೦-೯; 929); ತರುಣತೆ ಪೋಗಿ ಜಿನಾಗಮಪರಿಣತೆ ನಿಮಗಾಗೆ (ಅಜಿಪು. ೨-೧೦೧); ಏನು ಪರಿಣತೆ ನಿನಗೆ ಬಾಣಸಿಯಾನು (ಕುವ್ಯಾವಿ. ೧-೨೨). ೨. ಪರಿಪಕ್ವತೆ; ಪ್ರಬುದ್ಧತೆ: ಪರಿಣತೆಗಿನ್ನುಮಿಲ್ಲಬಳೆ ತಾನಿದು ಮೈನೆರೆದೊಂದು ಸುಗ್ಗಿ ಬಿತ್ತರಿಸುಗುವಣ್ಣ ನಿಮ್ಮ ದೆಸೆಯಿಂ ಕಳೆಯೊಳ್ ಶ್ರಮಮುಂಟು (ಸೂಕ್ತಿಸು. ೮-೪೨೮). [<ಸಂ. ಪರಿಣತಿ]

ಪರಿಣದ್ಧ (ಗು). ೧. ಸುತ್ತಿದ; ಕಟ್ಟದ. ೨. ವಿಶಾಲವಾದ; ಅಗಲವಾದ: ಲೋಕದ ಚೆಲ್ವೆಲ್ಲಮನೊಳಕೊಂಡು ರೇಖೆಗೊಂಡ ಲಾಟೀಲಲಾಮನೆ ಪರಿಣದ್ಧಕಂಧರಂ ಯುವರಾಜಕಂಠಿಕಾಭರಣಮಂ ಕಟ್ಟುವುದರ್ಕೆ ನೋಂತು ತನ್ನ ಚೆಲ್ವನಲ್ಲದೆ ಪೆಱರ ಚೆಲ್ವನಾಸೆವಡದಂತಾದುದು (ಪಂಪಭಾ. ೨-೩೯ ವ). [ಸಂ.]

ಪರಿಣಮ (ನಾ). ೧. ಮುಕ್ತಾಯ; ಕೊನೆ: ಅನ್ನಮುಣ್ಣದ ಬ್ರತಮಂ ಪರಿಣಮಂ ಮಾಡಿ ದೇವರ ದಿಬ್ಯಶ್ರೀಪಾದಮಂ ಪೂಜಿಸುತ್ತಮಿರೆ (ಎಕ. XI, ದಾವಣ. ೧೫೫-೩೦; 1124). ೨. ಫಲ; ಪರಿಣಾಮ: ಮೊರೆವ ಝೇಂಕೃತಿಯ ದಶನಾದಗಳೆಂದಂಬ ಶರಧಿಯೊಳು ಮುಳುಗಿ ಮೈಮಱೆದ ಪರಿಣಮವೇ (ಕೈಕವ. ೪-೧೦-೧). [< ಸಂ. ಪರಿಣಾಮ]

ಪರಿಣಮತೆ (ನಾ). ಪ್ರಬುದ್ಧವಾಗುವುದು; ಪ್ರೌಢತೆ: ಬಳಿಕಾಗರ್ಭದೊಳಗೆ ಮೂಱು ಪೊಱಗೆ ಮೂಱು ವರ್ತಿಸುವ ಜಾಯತೆ ಅಸ್ತಿತೆ ಪರಿಣಮತೆ [ಪಾಠಾಂ. ವಿಪರಿಣತೆ] . . . ವಿನಶ್ಯತೆ ಎಂಬಾ ಷಡ್ಭಾವ ವಿಕಾರಮುಳ್ಳಾತನೆನಿಸಿ (ವಿವೇಕ. ೨೫೭); ಊರ್ಮಿಭೂತಗಳಾರು, ಅಸ್ತಿ, ಜಾಯತೆ, ಪರಿಣಮತೆ . . . ವಿನಶ್ಯತೆ ಎಂಬ ೬ ತರಂಗಗಳಿಂದ ಕೂಡಿರುವುದು (ಹಸಾರ. ೭-೭ ಪದ್ಯಾರ್ಥ); ಪರಿಣಮತೆ = ಶೈಶವಾವಸ್ಥೆ ದಾಟುವುದು (ಹಸಾರ. ೭-೭ ಶಾತ್ಪರ್ಯ). [< ಸಂ. ಪರಿಣಾಮತಾ]

ಪರಿಣಮನ (ನಾ). ಬದಲಾವಣೆ; ಮಾರ್ಪಾಟು; ರೂಪಾಂತರ: ನಿಜನಿರಂಜನಪರಮಾತ್ಮನಲ್ಲಿ ಸಂಯಮನಂ ಗಮನಂ ಪರಿಣಮನಂ . . . ಆದಿ ದ್ವಾದಶವಿಧಾನುಷ್ಠಾನಂ ತಪಮೆಂಬುದಕ್ಕುಂ (ತತ್ತ್ವಪ್ರ. ೨೪೮); ಕುಂಬಾರನ ಮಡಿಕೆ, ಕುಡಿಕೆಗಳಿಗೆ . . . ಪರಿಣಮನ ಕ್ರಿಯೆಗಾಗಿ ಒದಗಬೇಕಾಗುತ್ತವೆ (ಕಾವ್ಯಕು. ೬೬). [ಸಂ.]

ಪರಿಣಮಿಸು (ಕ್ರಿ). ೧. ಬಾಗು ; ವಂದಿಸು ; ನಮಸ್ಕರಿಸು : ಸೋಪಾನಪಂಕ್ತಿತ್ರಯರೂಪದಿನಂಬರಮೆ ಜಿನರಾಜಭಕ್ತಿಯಿಂ ಪರಿಣ [ಪಾಠಾಂ. ಣಾ]ಮಿಸಿದಂತೆ ಸೊಗಯಿಸಿರ್ದ ಸೋಪಾನಪಂಕ್ತಿಮಾರ್ಗಂಗಳೊಳ್ (ಆದಿಪು. ೭-೫೭ ಪ) ; ಆಹ್ಲಾದಮಾನಸರಾಗಿ ಭಕ್ತರು ಪರಿಣಮಿಸುತಿರಲು (ಬಸಪು. ೯-೧೮) ; ಅಲ್ಲಮಪ್ರಭು ಬರಲು ಮುಕ್ತಾಯಿಗಳು ಪರಿಣಮಿಸಿದರು ಭಕ್ತಿಯಲಿ (ಪ್ರಭುಲೀ. ೧೨-೪). ೨. ಬದಲಾವಣೆಯಾಗು ; ರೂಪಾಂತರ ಹೊಂದು ; ಮಾರ್ಪಾಟಾಗು : ನೀನೆಮಗಿದಿರಂ ಬಂದು ವಂದಿಸಿ ವಿಧಿಯಿಂದರ್ಚಿಸಲೊಡಂ ನಿಧಿಗಳಾಗಿ ಪರಿಣಮಿಸುವೆವೆಂದು ಪೇಟ್ಟುದುಂ (ಪಂಚತಂ. ೧೯೧-೯) ; ಆಕೆಗೆ ರಾಮನಲ್ಲಿದ್ದ ಮೋಹವು ಕಡೆಗೆ ಕ್ರೋಧವಾಗಿ ಪರಿಣಮಿಸಿತು (ಕಲಾಧ. ೯೬) ; ಅಂಡಯ್ಯನ ಕೈಯಲ್ಲಿ ಕಾಮದಹನದ ಕಥೆಯು ಮನ್ಮಥವಿಜಯವಾಗಿ ಪರಿಣಮಿಸಿತು (ಸಾಹಿಸ. ೧೩೭). ೩. ಆಕಾರವನ್ನು ಪಡೆ ; ಮೈದೋರು ; ರೂಪು ತಳೆ : ಹೈಮಾಚಲಮಂಭೋರೂಪದಿಂದಂ ಪರಿಣಮಿಸಿದುದು . . . ಎನಲ್ ಚೆಲ್ವದಾಯ್ತಬ್ಜ ಪಂಡಂ (ಕಾದಂಪೂ. ೬೩೪) ; ಪರಿಣಮಿಸಿದುದಿಲ್ಲಿ ಜಳಸ್ವರೂಪದಿಂ ತಿಂಗಳ್ (ಚಂದ್ರಪು. ೧-೮೯) ; ಪರಿಣಮಿಸಿರ್ಕುಂ ಪ್ರಕೃತಿಸ್ವರೂಪದಿಂ ಮಧ್ಯಮೈಕವಚನಂ ವಿಧಿಯೊಳ್ (ಶಮದ. ೨೩೦) ; ಕನ್ನಡಿಯಲ್ಲಿ ಕಂಡ ಕನ್ನೆಯ ರೂಪಿನಂತೆ ಪರಿಣಮಿಸಿ (ಸೌಗಂಧಿ. ೩೯೦-೩೩). ೪. ಉಂಟಾಗು ; ಸಂಭವಿಸು : ಅಂತು ಸೂತ್ರಿಸಿದ ಸೂತ್ರ[ದ] ವೃತ್ತಿ ನಿಜಾತ್ಮವೃತ್ತಿವೋಲ್ ಪರಿಣಮಿಸಿತ್ತು (ಪಂಪಭಾ. ೨-೩೪) ; ಮನಕ್ಕೆಂತಾನುಂ ಕಾಲಲಬ್ಧಿವಶದಿಂ ನಿವೃತ್ತಿಪರಿಣತಿಯೊಳ್ ಪರಿಣಮಿಸಿದ ಸುಸ್ಥತೆಯಂ ವ್ಯರ್ಥಂ ಮಾಡದೆ (ಚಂದ್ರಪು. ೪-೧೮ ಪ); ಅರಮೆ ಕಕಾರಂ ಡಟದಿಂ ಪರಿಣಮಿಕುಂ (ಶಮದ. ೨೫೭) ; ತಾಯಿಯ ಮುದ್ದು, ತಂದೆಯ ಕಾಠಿಣ್ಯ ಅನೇಕ ವೇಳೆ ಮಕ್ಕಳ ಪುರೋಭಿವೃದ್ಧಿಗೆ ಕುಂದಕಗಳಾಗಿ ಪರಿಣಮಿಸುತ್ತವೆ (ಚಿಂಗಾಳ್ವ. ೪). ೫. (ಗುಣದಂತೆ) ಪರಿಪಕ್ವವಾಗು ; ಪರಿಪೂರ್ಣವಾಗು : (ಕಿ). ೬. ಮುಪ್ಪಾಗು ; ವಯಸ್ಸಾಗು : (ಕಿ). ೭. ಫಲ ಕೊಡು ; ಫಲಿಸು ; ಪ್ರಾಪ್ತವಾಗು : ದೊರೆಕೊಳಿಸುವ ತಕ್ಕ್ರಿಯೆಯೊಳ್ ಪರಿಣಮಿಸುವ ಫಳಮನಸ್ತ್ರಶಸ್ತ್ರತನುತ್ರೋತ್ಕರರಹಿತಂಗೆ . . . ದೊರೆಕೊಳಿಸುವವೋಲ್ (ಆದಿಪು. ೧೫-೧೭). ೮. ಹರ್ಷಗೊಳ್ಳು ; ಸಂತೋಷಿಸು ; ತೃಪ್ತಿಹೊಂದು : ವಿಮಳವ್ರತಿಗಳ್ ಸಲೆ ಕಂದ ಮೂಲಫಲದಿಂದೆ ತಣಿದು ಪರಿಣಮಿಸಿರ್ಪರ್ (ಗಿರಿಕ. ೧-೬೧) ; ಚೆನ್ನಮಡಿವಳನಮಳಚಾರಿತ್ರೋನ್ನತಿಗೆ ಭಕ್ತರು ಪರಿಣಮಿಸೆ (ಬಸಪು. ೨೧-೪೫) ; ಕಲಿಗಳ ದೇವನೀ ಕಪಿಯೆಂದು ಹೊಗಳಿದ ರಾವಣನ ಮಗ ಮತ್ಸರಂಗಳ ಬಿಟ್ಟು ಪರಿಣಮಿಸಿ (ಕೌತಿರಾ. ೩೪-೪೩) ; ಕುಮತಿ ದುರ್ಜನರು ಪರಿಣಮಿಸದಿರಲೇನಾಯ್ತು (ಭಾವಚಿಂ. ೧-೧೮). [ಪರಿಣಮನ+-ಇಸು$_3$]

ಪರಿಣಯ (ನಾ). ೧. ಮದುವೆಯಲ್ಲಿ ವಧೂವರರನ್ನು ಪವಿತ್ರವಾದ ಅಗ್ನಿಯ ಸುತ್ತಲೂ ನಡೆಸುವುದು. ೨. ಮದುವೆ ; ವಿವಾಹ : "ಉಪಯಾಮ ವಿವಾಹೋದ್ವಾಹ ಪರಿಣಯಂ ಪಾಣಿಪೀಡನ ಕ್ಕಾಖ್ಯೆ" (ಪಸ್ತುಕೋ. ೫೩-೧೧) ; ಪರಿಣಯಕ್ಕೆಟ್ಟಂದೆಲ್ಲಾ ಪುರಜನ ಪರಿಜನಮನಖಿಳವಸ್ತುಗಳಿಂ ಸತ್ಕರಿಸಿ (ಉದ್ಭಟ. ೮-೮೦) ; ಪರಿಣಯಮಂ ನೆಗಳ್ದು ಸಮಾಪ್ತಿಯಂ ಮಾಡಿ (ಬಸಪು. ೩೨-೩೯) ; ನರಚರಿತ್ರದ ರಾಮಭದ್ರಗೆ ಪರಿಣಯ ಮಾಳ್ಪುಜ್ಜುಗವ ನಿರ್ಧರಿಸಿ (ತೊರರಾ. ೧-೧೨-೩) ; ಗುರುಜನವೆಸಗಿದ ಪರಿಣಯವೇ ಸರಿ (ಶಾಕುಂತ. ೭೧ ಅಡಿಟಿ). [ಸಂ.]

ಪರಿಣಯನ (ನಾ). = ಪರಿಣಯ ೨ : "ಉಪಯಾಮಃ, ಪರಿಣಯನಂ . . . ಉದ್ವಾಹಃ—ಈ ೫ ಮದುವೆ" (ಹಲಾಯು. ೮೧-೩೪೧) ; ಪರಿಣಯನಾರ್ಥಂ . . . ಆದಿತ್ಯನನಾದರದಿಂದಂ ನೆನೆದು ಬರಿಸಿದಂ ಮುನಿಮುಖ್ಯಂ (ಪಂಚತಂ. ೨೫೭-೧೬) ; ಪರಿಣಯನ ನಿಮಿತ್ತಂ ದಶಶಿರನತ್ತಲ್ ಪೋಗೆ (ಪಂರಾಮಾ. ೧೦-೧೬೭) ; ಪರಿಣಯನವೇದಿಕಾಶೇಖರ ಪದಪಂಕರುಹರಾಗಿಸಲ್ಕೆಂದು ವಧೂವರರನೊಡಗೊಂಡು ಬಂದರ್ . . . ಕುಲವೃದ್ಧರ್ (ಶಾಂತೀಶ್ವ. ೪-೨೮೪). [ಸಂ.]

ಪರಿಣಯನಗೃಹ (ನಾ). ಮದುವೆ ಮನೆ ; ವಿವಾಹ ನಡೆಯುವ ಗೃಹ : ಪರಿಪೂರ್ಣೋತ್ಸವಮುತ್ಸವಮುರಜಧ್ವನಿಯಿಂದಮಾ ವಧೂವರರಂ ಪೋ ಬರವೇಟಿಂಬಂತಿರ್ದುದು ಸುರವಾರಸ್ತ್ರೀವಿಲಾಸಪರಿಣಯನಗೃಹಂ (ಆದಿಪು. ೮-೧೯) ; ಅತಿಶಯಮಾದತ್ತು ಪರಮಪರಿಣಯನಗೃಹಂ (ಪುಷ್ಪಪು. ೮-೫೧). [ಪರಿಣಯನ+ಗೃಹ]

ಪರಿಣಯನೋತ್ಸವ (ನಾ). ಮದುವೆಯ ಸಮಾರಂಭ ; ವಿವಾಹ ಮಹೋತ್ಸವ : ಪರಿಣಯನೋತ್ಸವಂ ರತಿಗನಂಗನೊಳಾಗೆ (ಆದಿಪು. ೧೧-೧೧೩) ; ಪುಷ್ಪದಂತಪುರಾಣದೊಳ್ ಕುಮಾರಪರಿಣಯನೋತ್ಸವ ಪರಿವರ್ಣನಂ (ಪುಷ್ಪಪು. ೧೨-೧೧೪ ಪ). [ಪರಿಣಯನ+ಉತ್ಸವ]

ಪರಿಣಯೋತ್ಸವ (ನಾ). = ಪರಿಣಯನೋತ್ಸವ : ಪರಿಣಯೋತ್ಸವೋತ್ಸುಕನಾಗಿ ಶಿಶುಪಾಲದಾನವಂ ಬಂದಿರ್ದ ಭೀಷ್ಮಕಪುರಕ್ಕಭಿಮುಖನಾಗಿ (ಜಾವಿ. ೧೦-೫೩ ಪ). [ಪರಿಣಯ+ಉತ್ಸವ]

ಪರಿಣಾಮ (ನಾ). ೧. ಬದಲಾವಣೆ ; ರೂಪಾಂತರ ; ಮಾರ್ಪಾಟು : "ಪರಿಣಾಮಮದು ವಿಕಾರಂ" (ಪಸ್ತುಕೋ. ೧೧೪-೨೨) ; ಕಾರಕಮುಖದಿಂ ವಿಭಕ್ತಿ ಪರಿಣಾಮಿಸುವುದಾಗಿ, ವಿಭಕ್ತಿಪರಿಣಾಮಕ್ಕೆ (ಶಮದ.ನ. ೧೫೬ ಪ್ರಯೋ); ಬೀಜಪುಷ್ಪ ಫಲಂಗಳ್ಗೆ ಮದಿರಾಭಾವದಿಂದಂ ಪರಿಣಾಮಮೆ (ಗೊಮ್ಮಸಾ. ೪-೪) ; ಪರಿಣಾಮವೆಂದರೆ ಬದಲಾವಣೆ ... ಈ ಪರಿಣಾಮವು ಪ್ರತಿಕ್ಷಣದಲ್ಲೂ ಪ್ರತಿವಸ್ತುವಿನಲ್ಲೂ ನಡೆಯುತ್ತದೆ (ಹಿಂದಸಾ. ೩೫). ೨. ಕಾರ್ಯದ ಫಲ : ಕಿಜಾಯಾತಂ ನಿಸರ್ಗದಿಂ ವಕ್ರಗತಿಪರಿಣಾಮದಿನುದ್ವೃತ್ತಚಿತ್ತದಿನುನ್ಮತ್ತನಾದಂ (ಸುಕುಮಾ. ೨-೫೭ಪ) ; ಗಮನವಿಲ್ಲದೆ ಸುಳಿಯಬಲ್ಲಡೆ ನಿರ್ಗಮನಿಯಾಗಿ ನಿಲಬಲ್ಲಡೆ ಅದಕ್ಕದೆ ಪರಿಣಾಮ ಅದಕ್ಕದೆ ಸಂತೋಷ(ಅವಚಂ.೯೯-೪೪೭);ನಂದನಲಾಭವಾಂಭೆ ನಿನಗುಳ್ಳಿನೆಗಂ ಸಮನಿಸದಣಂ ವಿರತಿಪರಿಣಾಮಂ (ಚಂದ್ರಪು.೩-೭೫) ; ಅರಿದ ಮುಂಡವ ನೋಡು ರಾಮನ ಕರದ ಚಾಪವಿದಹುದೆ ದಿಟ್ಟಿಸು ಹಿರಿದು ಸಂಶಯ ಬಿಟ್ಟುದೆ ಪರಿಣಾಮ ನಿನಗಾಯ್ತೆ (ಕೌತಿರಾ. ೧೭-೫೨). ೩. ಪರಿಪಕ್ವತೆ; ಪ್ರೌಢತೆ: ಕರಿಗೆ ಕೇಸರಿ ವೈರಿ ದುರಿತಕ್ಕೆ ಹರ ವೈರಿ ಉರವಣಿಸಿ ಬರುವ ಸಂಸಾರದುಃಖಕ್ಕೆ ಪರಿಣಾಮ ವೈರಿ (ಸರ್ವಜ್ಞ. ೧೫೧೪) ; ಅಮ್ಮಾಜಿ, ನಿನ್ನ ಪರಿಣಾಮ ಸಾತ್ವಿಕವಾದುದು. ನಮ್ಮಂಥ ಯತಿಗಳೂ ನಿನ್ನ ದರ್ಶನ ಮಾಡಿ ಮಾರ್ಗದರ್ಶನ ಪಡೆಯಬೇಕು (ದಾನಚಿಂ. ೧೭೭). ೪. ಕೊನೆ; ಮುಕ್ತಾಯ: 'ಪರಿಣಾಮಪಥ್ಯ' ಪರಾ. ೫. ಮುಪ್ಪು; ವೃದ್ಧಾಪ್ಯ. ೬. ಒಳಿತು ; ಕ್ಷೇಮ ; ಕಲ್ಯಾಣ : "ಕೀರ ಪರಿಣಾಮ ಸುಕ ಶಬ್ದ" (ಶಬ್ದಮಂ. ೬೯) ; ಬಂದಿರೆ ಪರಿಣಾಮವೆ ಮನೆಯೊಳಗಕ್ಕಂದಿರನುವೆ ಮಕ್ಕಳು ಪದುಳವೆ (ಜಯಕಾ. ೧-೨೦) ; ಗುರುಪಾದಕೆಟಗಿದರೆ ಶಿರಸು ತಾ ಮಣಿಯಕ್ಕು ಪರಿಣಾಮವಕ್ಕು ಪದವಕ್ಕು (ಸರ್ವಜ್ಞ. ೯೯) ; ಆ ಲಕ್ಷ್ಮಿಯ ದೌಲತ್ತಿನಿಂದಾಗಿ ಹಣ್ಣು ಹಣ್ಣಾಗಿರುವೆನು. ಅದಕ್ಕಾಗಿ ನಾವು ಈಗಿಂದೀಗಲೇ ಉಪಾಯ ಯೋಚಿಸದಿದ್ದರೆ ಪರಿಣಾಮವಿಲ್ಲ ! (ಕೃಲಾಕ. ೩೮). ೭. ಫಲಿತಾಂಶ : ಮೊದಲನೆಯ ವಕೀಲಿಪರೀಕ್ಷೆಯನ್ನು ಮುಗಿಸಿ ಪರಿಣಾಮ ಈಗ ತಿಳಿದು ಬಂದಿತ್ತು (ಸಮಜೀ. ೮೬೯). ೮. ಬಾಗುವುದು ; ಬಗ್ಗುವಿಕೆ. ೯. ಸುತ್ತಲೂ ಹರಡುವಿಕೆ ; ಪ್ರಸಾರ. ೧೦. ವಿಸ್ತಾರ ; ಹರಹು. ೧೧. ನಿರ್ಧಾರ ; ತೀರ್ಮಾನ: ನಗುತ ರಾವಣ ಪೊಡವಿಜೆಗೆ ಪರಿಣಾಮವಾಗಲಿ ತಲೆಯ ತಾಯೆಂದ (ಕೌತಿರಾ. ೧೭-೪೮). ೧೨. ಆನಂದ ; ಹರ್ಷ ; ಸಂತೋಷ : ಲಿಂಗದೊಡವೆ ಲಿಂಗಕ್ಕೆ ಸಾರಿತ್ತಾಗಿ ಬಂದಿತ್ತೆಂಬ ಪರಿ

ಣಾಮವಿಲ್ಲ ಬಾರದೆಂಬ ದುಃಖವಿಲ್ಲ (ಬಸವ. ೨೨೯); ಸೋಮಲಾಂಛನ ಲಾಂಛನರು ಪರಿಣಾಮವಂಕುರಿಸಲ್ಕೆ ಸುಖಗೋಷ್ಠೀಮಧುರವಚನಂಗಳಿಂ ಮಾತುಗಳನಾಡುತ್ತ (ಒಸಪು. ೨೫-೨); ಸುಭದ್ರೆ ನಡೆತಂದು ನೆಲಕೆ ದೊಪ್ಪನೆ ಕೆಡೆದು ಸಭೆಯಲಿ ಹಲುಬಿದಳು ಕೊಳುಗುಳಕೆ ಕಂದನ ಕಳುಹಿದವರಿಗೆ ಸಂದುದೇ ಪರಿಣಾಮವೆಂದೆನುತ (ಕುವ್ಯಾದ್ರೋ. ೭-೧೩). ೧೩. ಶಾಂತಿ; ಸಮಾಧಾನ: ಎಂದೋ ಮನದಲ್ಲಿ ಪರಿಣಾಮವಹುದೆನಗೆಂದೋ (ಬಸವ. ೨೨); ಎಲ್ಲ ಸಂದುದೇ ಪರಿಣಾಮವೇ ಇನ್ನು ಹೋಹೆನೇ ಮುನಿನಾಥ ಕರುಣಿಸಿದಿರೇ ಎಂದು (ಹಚಶಾ. ೯-೪). ೧೪. ಪ್ರಭಾವ; ವರ್ಚಸ್ಸು. ೧೫. ಪ್ರತಿಕ್ರಿಯೆ: ವೈದ್ಯರು ಕೊಟ್ಟ ಔಷಧಿಗಳ ಪರಿಣಾಮದಿಂದ ಅವರ ಆರೋಗ್ಯ ಸುಧಾರಿಸಿತು (ರೂಢಿ). ೧೬. [ಕಾವ್ಯಮೀ] ಆರೋಪಿಸಲ್ಪಡುವ ವಸ್ತುವು (ವಿಷಯಿ), ಆರೋಪಕ್ಕೆ ವಿಷಯವಾದ ವಸ್ತುವಿನ ರೂಪವಾಗಿ ಬದಲಾವಣೆ ಹೊಂದಿ ಪ್ರಕೃತಕಾರ್ಯಕ್ಕುಪಯೋಗವಾಗುವ ಒಂದು ಬಗೆಯ ಅಲಂಕಾರ: ಸಮಾಸೋಕ್ತಿ . . . ಪರಿಣಾಮ . . . ಉದಾತ್ತಾದ್ಯಲಂಕಾರಗಳೊಡಗೂಡಿ (ವಿವೇಕ. ೨೨೫); ವರ್ಣಿಸುವ ವಸ್ತುವನುಪಮಾನವಸ್ತುವೆಂದೇ ದಿಟಂಗೊಳಿಸಿ ಅದಟುಂದಪ್ಪ ಕಾರ್ಯಮುಮಂ ಪೇಳೆಯದು ಪರಿಣಾಮಮೆನಿಪುದು (ಅಪ್ರತಿ. ೪೪-೫); ಉಪಮಾನವು ಉಪಮೇಯವಾಗಿ ಪರಿಣಮಿಸುವುದರಿಂದ ಪರಿಣಾಮವೆಂದು ಹೆಸರು (ಕುಪಲ. ೧೯೭). ೧೭. [ಗಣಿತ] ಸಿದ್ಧಾಂತವಾದ ಒಂದು ಪ್ರತಿಜ್ಞೆಯೊಡನೆ ಸೇರಿಸಿದ, ಆ ಪ್ರತಿಜ್ಞೆಯಿಂದ ಸುಲಭವಾಗಿ ಅನುಮಾನಿಸಬಹುದಾದ, ಮತ್ತೊಂದು ಪ್ರತಿಜ್ಞೆ; ಉಪಸಿದ್ಧಾಂತ: ರೇಖಾಗಣಿತಕ್ಕೆ . . . ಪ್ರಾಶಸ್ತ್ಯವು ಬಂದಿದ್ದಿತಾದರೂ ಜ್ಞಾನಭಾಗವನ್ನು ಆಧಾರವಚನ . . . ಪರಿಣಾಮ (Corollary) ಹೀಗೆ ವಿಂಗಡಿಸಿ ತರ್ಕ ಮಾಡಿ ಇದನ್ನು ಶಾಸ್ತ್ರದ ಮಟ್ಟಕ್ಕೆ ಎತ್ತಿ ಪರಮೋಪಕಾರ ಮಾಡಿದ ಮಹನೀಯ ಯೂಕ್ಲಿಡ್ (ಶಿಲ್ಪನಾ. ೮೮). ೧೮. [ಜೈನ] ವಸ್ತುವಿನ ಶುಭ, ಅಶುಭ ಮತ್ತು ಶುದ್ಧ ಎಂಬ ಮೂರು ಬಗೆಯ ಭಾವ,— ಅವಸ್ಥೆ: ಪರಿಣಾಮವಸಂಖ್ಯಾತಂ ಪರಿವರ್ತಿಸುತಿರ್ಪುವಲ್ಲಿ ಶುಭಪರಿಣಾಮಂ ಬೆರೆಸೊಸೆದಿರ್ಕಾಗಳುಮಾರ್ತ ರೌದ್ರದೊಳ್ ಮೂಡಿ ಮುಟುಗುತಿರ್ಪುದೆ ಚದುರಂ (ಅಜಿಪು. ೧೧-೩೯); ಪರಿಣಾಮದ ಪೊಲ್ಲಮೆಗಳ್ ದೊರೆಕೊಳೆ ಬಿಡದೊದವಿ ಬರ್ಪ ಪಾಪಾಸ್ರವಮಂ ಬರಲೀಯದೆ (ಜೀವಸಂ. ೧೫೨-೧).

ಪರಿಣಾಮ ಬೀರು = ಪ್ರಭಾವವನ್ನುಂಟುಮಾಡು: ಇವುಗಳ ಫಲಿತಾಂಶ ವಿದ್ಯಾರ್ಥಿಗಳ ಕಲಿವಿನ ಮೇಲೆ ಪರಿಣಾಮ ಬೀರತಕ್ಕುವು (ಶಿಕ್ಷದ. ೩೦೨). ಪರಿಣಾಮ ಮಾಡು = ಪರಿಣಾಮ ಬೀರು: ನದಿಗಳು ನಾನಾವಿಧಗಳಲ್ಲಿ ಸಲ್ಲಿಸುವ ಸೇವೆ ಮಾನವನ ಮನಸ್ಸಿನ ಮೇಲೆ ಪರಿಣಾಮ ಮಾಡದೆ ಹೋಗಲಿಲ್ಲ (ನನದಿ. ೮). [ಸಂ.]

ಪರಿಣಾಮಕಾರಿ (ನಾ). ಫಲಕಾರಿಯಾದುದು; ಪ್ರಯೋಜನಕರವಾದುದು: ಅಗಸನನ್ನು ಬದಲಿಸುವುದೂ ಗೌಳಿಗನನ್ನು ಬದಲಿಸುವುದೂ ಅಷ್ಟೆ ಪರಿಣಾಮಕಾರಿಯೆಂದು ಅನುಭವಿಕರು ಬಲ್ಲರು (ದೇಕನ್ಯೆ. ೩೬); ಈಗ ಆಚರಣೆಯಲ್ಲಿರುವ ಪದ್ಧತಿ ಕ್ರೂರತಮವಾದದ್ದು; ಪರಿಣಾಮಕಾರಿಯಾದದ್ದಲ್ಲ (ಪುನರು. ೪೩೦); ನೊಣಗಳ ಬೆಳವಣಿಗೆಯನ್ನು ಪರಿಣಾಮಕಾರಿಯಾಗಿ ತಡೆಯಬೇಕಾದರೆ ಅವುಗಳ ಜೀವನಚರಿತ್ರೆಯನ್ನು ಸರಿಯಾಗಿ ತಿಳಿದುಕೊಳ್ಳುವುದು ಅವಶ್ಯ (ಅಡುಸೌ. ೫೦).

[ಸಂ. ಪರಿಣಾಮಕಾರಿನ್]

ಪರಿಣಾಮಗುಣ (ನಾ). [ಜೈನ] ಮೋಕ್ಷಕ್ಕೆ ಕಾರಣವಾದ, ಜೀವನ ಪರಿವರ್ತನೆಯಾಗುವ ಗುಣ (?): ಗಂ ××× ಂ ಚೌಡ್ಯಾಪಾದಿ ಪಾದಿ ಕೆಳೆಯೆಂಬಿನಿತು ××× ಮಾನಡೆಯಲಿರ್ದ್ದು ತಡೆದ ಡಱಿದ ××× ದೆಂದೀಕ್ಷಿ ಪರಿಣಾಮಗುಣಮುತ್ತ ವೇದೊರೆಯನೆಂದೊಡೆ . . . ಪಡೆದದ್ದಂ ಧರ್ಮ್ಮಬೀಯಕೊಡರಿಸದಿರ್ಪ್ಪಂದದಿರ್ಕ್ಕೆ ಪರಿಣಾಮಗುಣಂ (ಕೊಲ್ಹಾಶಾ. ೧-೨೨; ?). [ಪರಿಣಾಮ + ಗುಣ]

ಪರಿಣಾಮಗೊಳಿಸು (ಕ್ರಿ). ಪರಿವರ್ತಿಸು: ಕುಂಬಾರನು ಮಣ್ಣನ್ನು ಗಡಿಗೆಯಾಗಿ ಪರಿಣಾಮಗೊಳಿಸುವನು (ಭಾರದ. ೨೩೧).

[ಪರಿಣಾಮ + ಕೊಳ್$_1$ + -ಇಸು$_3$]

ಪರಿಣಾಮಗೊಳ್ಳು (ಕ್ರಿ). ಪರಮಾನಂದವನ್ನು ಹೊಂದು: ಸುರತಸಂಭ್ರಮದ ಚುಂಬನಂಗಳಿಂದೆ ಕೂಡಿ ಪರಿಣಾಮಗೊಳ್ಳಯ್ಯಾ ಎನ್ನ (ಅಖಂಡೇ. ೨೮೬-೪೧). [ಪರಿಣಾಮ + ಕೊಳ್ಳು$_1$ (< ಕೊಳ್$_1$)]

ಪರಿಣಾಮಜಲ (ನಾ). ೧. ಸಂತೋಷದಿಂದುಂಟಾದ ಕಣ್ಣೀರು; ಆನಂದಬಾಷ್ಪ: ತನು ಉಬ್ಬಿ ಮನ ಕರಗಿ ಕಂಗಳಲ್ಲಿ ಪರಿಣಾಮಜಲ ಉಕ್ಕಿ ಕಡೆಗೋಡಿವರಿವುತ್ತ . . . ಆ ನಿಷ್ಕಲ ಪರಶಿವನೊಡನೆ ಬೆರೆದು (ಅಖಂಡೇ. ೨೦೬-೪೬). ೨. [ವೀಶೈ] ಹತ್ತು ವಿಧವಾದ ಪಾದೋದಕಗಳಲ್ಲಿ ಒಂದು ಬಗೆ: ಚಿತ್‌ಪೃಥ್ವಿಹೃದಯಮಧ್ಯದಲ್ಲಿ ನೆಲಸಿರ್ಪ ಪರಿಣಾಮಜಲವ ಚಿದ್ಭಾಂಡದೊಳಗೆ ಪರಿಣಾಮಪಾವಡದಿಂದ ತೋಧಿಸಿ (ಚನ್ನವ. ಕ. ೮೨-೧೬೬). 'ದಶವಿಧಪಾದೋದಕ' ಪರಾ.

[ಪರಿಣಾಮ + ಜಲ$_2$]

ಪರಿಣಾಮತೆ (ನಾ). ಆನಂದ; ಸಂತೋಷ: ಕೂಡಿ ಸುಖಂಬಡೆವುದು ಜಂಗಮಲಿಂಗದ ವಿಷಯ ಸುಖಂಬಡೆದು ಪರಿಣಾಮತೆಯನೈದುವುದು ಪ್ರಸಾದಲಿಂಗದ ವಿಷಯ ಪರಿಣಾಮತೆಯನೆಯ್ದಿ ನಿಶ್ಚಯಬಡೆವುದು ಮಹಾಲಿಂಗದ ವಿಷಯ (ಅದವ. ೫-೧೨). [ಸಂ. ಪರಿಣಾಮತಾ]

ಪರಿಣಾಮಪಥ್ಯ (ನಾ). ಕೊನೆಯಲ್ಲಿ ಹಿತವಾದುದು; ಕಡೆಯಲ್ಲಿ ಮಂಗಳಕರವಾದದು: ಪರಿಣಾಮಪಥ್ಯಮಂ ಸುಖಪರಿಕರಮಂ ಮೆಚ್ಚದನ್ನರಾರೀ ಮಾತಂ ನಿರತಿಶಯರಸಸಮೇತಮಂ (ಕವಿಶಾ. ೩-೧೫೨); ಪರಿಣಾಮಪಥ್ಯಮುಮಪ್ಪ ಕೃತ್ಯಮಂ ನಿಜಮನಶ್ಚತುರಸಚಿವ ಸಹಸಮಾಲೋಚದಿಂ ಕಂಡು (ಚಂದ್ರಪು. ೯-೧೨೬ ವ). [ಪರಿಣಾಮ + ಪಥ್ಯ]

ಪರಿಣಾಮಪ್ರಧಾನ (ನಾ). ಮನಸ್ಸಿಗೆ ತಟ್ಟುವುದರಲ್ಲಿ ಮುಖ್ಯವಾದುದು; ಪರಿಣಾಮಕಾರಿಯಾದುದು: ಎಲ್ಲ ವಿಮರ್ಶೆಯೂ ಮೂಲಭೂತವಾಗಿ ವ್ಯಕ್ತಿನಿಷ್ಠವಾದುದು ಮತ್ತು. ಪರಿಣಾಮಪ್ರಧಾನವಾದುದು (ಸಾಹಿಪ್ರ. ೩೦೦). [ಪರಿಣಾಮ + ಪ್ರಧಾನ]

ಪರಿಣಾಮರಮಣೀಯ (ನಾ). ಕೊನೆಯಲ್ಲಿ ಚೆನ್ನಾಗುವುದು: ಅವಿನೀತರಾಜಪುತ್ರನೊಳಾಳೋಚಿಸಿದ ಮಂತ್ರದಂತೆ ಪರಿಣಾಮರಮಣೀಯಮಾಗದೆ ಕಿಡೆಯುಂ (ಗದಾಯು. ೭-೨೬ ವ).

[ಪರಿಣಾಮ + ರಮಣೀಯ]

ಪರಿಣಾಮರಮಣೀಯತೆ (ನಾ). = ಪರಿಣಾಮರಮಣೀಯ: ಒಂದೇ ಒಂದು ಸಣ್ಣ ಚಿತ್ರ ಇದು. ಇದರಲ್ಲಿ ಅಣಕವಿದೆ . . . ಪರಿಣಾಮರಮಣೀಯತೆಯೂ ಇದೆ (ಸೌಂದಸ. ೩೧೩).

[ಪರಿಣಾಮ + ರಮಣೀಯತೆ]

ಪರಿಣಾಮವಡೆ (ಕ್ರಿ). ಪರಮಸುಖವನ್ನು ಪಡೆ; ಪರಮಾನಂದವನ್ನು ಹೊಂದು: ಆ ಪಶುಕಾಯವಂ ಕಳೆದು ಆನು ಪರಿಣಾಮವಡದವಳಯ್ಯಾ (ನೀಲಪ. ಕ. ೨೬-೮೦); ನಿನ್ನಂ ಕಂಡು ಬದುಕಿದೆವು ಪರಿಣಾಮವಡೆದೆವು (ಸೋಮಚ. ೨-೮೯). [ಪರಿಣಾಮ + ಪಡೆ$_1$]

ಪರಿಣಾಮವಾದ (ನಾ). ೧. [ತತ್ತ್ವಶಾ] ಸಾಂಖ್ಯಮತದ ಪ್ರಕಾರ ಹೇಳುವ 'ರೂಪಾಂತರ' ತತ್ವದ ಮತ: ಕುಂಬಾರನು ಮಣ್ಣನ್ನು ಗಡಿಗೆಯಾಗಿ ಪರಿಣಾಮಗೊಳಿಸುವನು. ಮಣ್ಣಿನಲ್ಲೇ ಮರೆಯಾಗಿದ್ದ ಗಡಿಗೆಯು ಕುಂಬಾರನ ಪ್ರಯತ್ನದಿಂದ ಹೊರಪಡುವುದು

ಎಂದು ಸಾಂಖ್ಯವಾದ. ಇದನ್ನೇ ಪರಿಣಾಮವಾದವೆಂದೂ ಸತ್ಕಾರ್ಯವಾದವೆಂದೂ ಹೇಳುವರು (ಭಾರದ. ೨೩೧) ; ಈ ಪ್ರಪಂಚವನ್ನು ಸುವರ್ಣ ಪರಿಣಾಮವಾದ ಭೂಷಣದಂತೆ ಬ್ರಹ್ಮದ ಪರಿಣಾಮವೆಂದು ಕೆಲವರು ತಿಳಿಯುವರು... ಇವುಗಳಲ್ಲಿ ಒಂದು ಪರಿಣಾಮವಾದ, ಮತ್ತೊಂದು ಆರಂಭವಾದ (ಹಿಂದಸಾ. ೨೦೬). ೨. [ವಿಜ್ಞಾನ] ಸಜೀವವಸ್ತುವು ಆದಿ ಕಾಲದಿಂದಲೂ ತಳೆದಿರುವ ರೂಪಾಂತರವನ್ನು ಕುರಿತವಾದ ; ವಿಕಾಸವಾದ ; "ಗರ್ಭಧಾರಣವಾಗುವುದರಿಂದ ಭ್ರೂಣವು ಹೊಸದಾಗಿ ಸೃಷ್ಟಿಯಾಗುವುದಿಲ್ಲವೆಂದೂ, ಹಿಂದಿನಿಂದ ಬಂದದ್ದೇ ವಿಕಾಸವಾಗುವುದೆಂದೂ ಹೇಳುವ ವಾದ : ವಿಕಾಸವಾದ" (Theory of Evolution. ಇಂಕನಿ); ಖಗೋಳಜ್ಞರಿಗೆ ಭೂಗರ್ಭಶಾಸ್ತ್ರದ ಪರಿಚಯವೂ ಡಾರ್ವಿನ್ನನು ಪ್ರತಿಪಾದಿಸಿದ ಪರಿಣಾಮವಾದವೂ (Theory of Evolution) ಉಪಯುಕ್ತವಾಗಿದೆ (ವಿಜ್ಞಾಕ. ೧೦) ; ಶಾಕ್ತಸಂಪ್ರದಾಯವು . . . ಪರಿಣಾಮವಾದವನ್ನು ಅಂಗೀಕರಿಸುತ್ತದೆ (ಭಾರದ. ೨೨೭). [ಪರಿಣಾಮ + ವಾದ$_2$]

ಪರಿಣಾಮವಾದಿ (ನಾ). [ವಿಜ್ಞಾನ] ವಿಕಾಸವಾದವನ್ನು ಪ್ರತಿಪಾದಿಸುವವನು : ಈ ಸೃಷ್ಟಿಯ ಸಿದ್ಧಾಂತವನ್ನು ಕುರಿತು ದೃಷ್ಟಿಭೇದಗಳನ್ನು ಇಂದಿನ ಆರಂಭವಾದಿ, ಪರಿಣಾಮವಾದಿ . . . ಮುಂತಾದ ದಾರ್ಶನಿಕರು ಭಿನ್ನ ಭಿನ್ನ ಕೋನದಲ್ಲಿ ಈ ಸೃಷ್ಟಿಕ್ರಮವನ್ನು ಕುರಿತು ಸಾಪೇಕ್ಷವಾಗಿ ಹೇಳುತ್ತಿರಬಹುದು. (ಶರೀಭ. ೬೩ ಕವಿಕಾವ್ಯಪರಿಚಯ). [ಸಂ. ಪರಿಣಾಮವಾದಿನ್]

ಪರಿಣಾಮಶುದ್ಧಿ (ನಾ). [ಜೈನ] "ಮನಃಪರಿಪಾಕ" (ಆದಿಪು. ಸಂಗ್ರಹ. ಕೋಶ) : ಪರಿಣಾಮಶುದ್ಧಿ ದೊರೆಕೊಳೆ . . . ಭರತಂಗೆ ಶಾಸ್ತ್ರಲಕ್ಷಣಪರಿಕರದಿಂ ತೊಟ್ಟನವಧಿ ಪುಟ್ಟಿತ್ತಾಗಳ್ (ಆದಿಪು. ೧೫-೨೨) ; ಪರಿಣಾಮಶುದ್ಧಿಯಿಂದಮಾಹಾರದಾನಮನಿತ್ತು (ಶಾಂತಿಪು. ೯-೮೩ ಪ) ; ನಿರ್ಭರಭಕ್ತಿಭರದಿನತ್ಯಾದರದಿಂ ಪರಿಣಾಮಶುದ್ಧಿಯಿಂ ವಂದಿಸಿದಂ (ಸುಕುಮಾ. ೪-೨೧). [ಪರಿಣಾಮ + ಶುದ್ಧಿ]

ಪರಿಣಾಮಶೂಲೆ (ನಾ). ಅಜೀರ್ಣವಾದ ಸಮಯದಲ್ಲಿ ಹೊಟ್ಟೆಯಲ್ಲಿ ಆಹಾರವು ತಳೆಯುವ ಮಾರ್ಪಾಟುಗಳಿಂದ ಉಂಟಾಗುವ ವೇದನೆ, — ನುಲಿತ ; ತೀವ್ರವಾದ ನೋವುಂಟುಮಾಡುವ ಅಜೀರ್ಣರೋಗ : ಬಜೆ, ಲವಣ ಸಹ ಕಲ್ಕವ ಮಾಡಿ ಕೊಟ್ಟು . . . ಸಾಸುವೆಯಂ ಬಿಸಿನೀರಿಂದರೆದು ಕಲ್ಕವ ಮಾಡಿ ಕೊಡಲು ಅಮಾತಿಸಾರ, ಉದಾವರ್ತ, ಪರಿಣಾಮಶೂಲೆ ಸಹ ಮಾಣ್ಗುಂ (ಸಕವೈ. ೩೧೪). [ಪರಿಣಾಮ + ಶೂಲೆ$_1$]

ಪರಿಣಾಮಾಲಂಕಾರ (ನಾ). = ಪರಿಣಾಮ ೧೬ : ಪರಿಣಾಮಾಲಂಕಾರಮೆಂತೆನೆ . . . ವರ್ಣಿಸುವ ವಸ್ತುವನುಪಮಾನವಸ್ತುವೆಂದೇ ದಿಟಂಗೊಳಿಸಿ ಅದಱಿಂದಪ್ಪ ಕಾರ್ಯಮುಮಂ ಪೇಳೆಯದು ಪರಿಣಾಮಮೆನಿಪುದು (ಅಪ್ರತಿ. ೪೪-೧). [ಪರಿಣಾಮ + ಅಲಂಕಾರ]

ಪರಿಣಾಮಿ (ಗು). ೧. ಬದಲಾಯಿಸುವ ; ರೂಪಾಂತರ ಹೊಂದುವ. (ನಾ). ೨. ಬದಲಾವಣೆ ಹೊಂದಿದುದು ; ರೂಪಾಂತರ ಹೊಂದಿದುದು : ಪರಿಭಾವಿಸೆ ಕಾಲತ್ರಯ ಪರಿಣಾಮಿಗಳೆನಿಸಿ ನೆಗಟ್ಟಿ ಮೂಱುಂ ಕ್ರಿಯೆಯೊಳ್ ನಿರುತಂ ಪ್ರತಿಷೇಧಕ್ರಿಯೆ ಬರೆ ಭೂತಾರ್ಥದೊಳ್ ಸಲ್ವುದು (ಶಮದ. ೨೨೨) ; ಸತ್ವ, ರಜಸ್ಸು, ತಮಸ್ಸುಗಳುಳ್ಳ ವಿಶ್ವವೆಲ್ಲಾ ಪರಿಣಾಮಿ ಮತ್ತು ಅನಿತ್ಯವಾದುದು (ಭಾರದ. ೨೬೬) ; ಕೆಲವರು ಆತ್ಮ ಎಂಬ ವಸ್ತುವನ್ನು ಶಾಶ್ವತ, ನಿತ್ಯ, ಯಾವ ವಿಧವಾದ ಪರಿಣಾಮಿಯಲ್ಲವೆಂದು ಹೇಳುತ್ತಾರೆ. ಕೆಲವರು ಅದನ್ನು ಪರಿಣಾಮಿಯೆಂದು ತಿಳಿಯುವರು (ಹಿಂದಸಾ. ೩೫). ೩. ಬದಲಾವಣೆ; ಮಾರ್ಪಾಟು. ೪. [ವೀಶೈ] "ಲಿಂಗಾನಂದಾನುಭಾವಿ" (ಮೋಳಿಮಾ. ಕೋಶ) : ನಾನೇಕೆ ಬಂದೆ ಸುಖವ ಬಿಟ್ಟು ಬಂದುದಕ್ಕೆ ಒಂದೂ ಆದುದಿಲ್ಲ ಸಂಸಾರದಲ್ಲಿ ಸುಖಿಯಲ್ಲ ಪರಮಾರ್ಥದಲ್ಲಿ ಪರಿಣಾಮಿಯಲ್ಲ (ಮೋಳಿಮಾ. ೩೬-೧೫೦); ನೀನು ಪರಿಣಾಮಿಯಾದೆ ಬಸವಾ ರೂಪು ನಿರೂಪುವಿಡಿದೆ ಬಸವಾ (ನೀಲವ. ಕ. ೧೧-೨೬); ಚೇತನಂ ತಾನಾಗಿಯುಂ ನಿಶ್ಚೇತನದ ಪರಿಣಾಮಿ . . . ಮಹಾನುಭಾವಪ್ರಜ್ಞಮಾನಸನು (ಬಸಪು. ೮-೧೨). [ಸಂ. ಪರಿಣಾಮಿನ್]

ಪರಿಣಾಮಿದ್ರವ್ಯ (ನಾ). ಬದಲಾವಣೆಯಾಗುವ ವಸ್ತು ; ಮಾರ್ಪಾಟಾಗುವ ಸ್ವಭಾವವುಳ್ಳ ಪದಾರ್ಥ : ಜೀವ ಪುದ್ಗಲಗಳೆರಡು ಕ್ರಿಯಾಶ್ರಯದ್ರವ್ಯಗಳು, ಪರಿಣಾಮದ್ರವ್ಯಗಳು (ಹಿಂದಸಾ. ೮೧). [ಪರಿಣಾಮಿ + ದ್ರವ್ಯ]

ಪರಿಣಾಮಿಸು (ಕ್ರಿ). ೧. ಬದಲಾವಣೆಯನ್ನು ಹೊಂದು ; ರೂಪಾಂತರವಾಗು : ಇಂತರ್ಥವಶದಿಂ ವಿಭಕ್ತಿ ಪರಿಣಾ [ಪಾಠಾಂ. ಣ] ಮಿಪುವು (ಶಮದ. ೯೩ ಪ್ರಯೋ). ೨. ಆನಂದವನ್ನು ಹೊಂದು ; ಹರ್ಷವನ್ನು ತಾಳು : ಶಿವಭಕ್ತರು ಪರಿಣಾಮಿಸಿದರೆ ಒಡನೆ ಶಿವ ಪರಿಣಾಮಿಸುವ ನೋಡಾ (ಮಹಾದೇ. ಬ. ೬೬-೧೬೫); ನಿನ್ನಾಚಾರಸದ್ಗುಣವೃಂದಮಂ ಕೇಳ್ದಾಗಳುಂ ಪರಿಣಾಮಿಸುತ್ತಿಹೆವು (ಬಸಪು. ೪-೬೧); ಅಖಿಲ ಸುರಜಾಲ ಪರಿಣಾಮಿಪರು (ನವಮೋ. ೫-೧೮). ೩. ವರ್ಧಿಸು ; ಅಭಿವೃದ್ಧಿಹೊಂದು : (ಕಿ). [ಪರಿಣಾಮ + -ಇಸು$_3$]

ಪರಿಣಾಮೋದಕ (ನಾ). = ಪರಿಣಾಮಜಲ ೨: ಪರಿಣಾಮೋದಕ ನಿರ್ನಾಮೋದಕ ಇವೆರಡು ಬಟ್ಟಲೆತ್ತಿ ಸಲಿಸಿದಂತಹ ಜಂಗಮಪಾದೋದಕದಲ್ಲಿ ಸಂಬಂಧವು (ಚನ್ನವ. ಕ. ೬೯-೧೬೪); ದಶವಿಧ ಪಾದೋದಕಗಳು :-ಇವು ಗುರುಪಾದೋದಕ . . . ಪರಿಣಾಮೋದಕ, ನಿರ್ನಾಮೋದಕ, ಸತ್ಯೋದಕ ಎಂದು ಹತ್ತು ಇರುತ್ತವೆ (ಶಿವಾಕೋ. ೧೦೪); ಆ ಬಟ್ಟಲಲ್ಲಿದ್ದ ತೀರ್ಥವನ್ನು ಮೂರು ಸಲ ಸ್ವೀಕರಿಸಿದ್ದೇ ಪರಿಣಾಮೋದಕ (ಕರ್ನಾಕ. ೧೩೭). 'ದಶವಿಧಪಾದೋದಕ' ಪರಾ. [ಪರಿಣಾಮ + ಉದಕ$_2$]

ಪರಿಣಾಯ (ನಾ). ಚದುರಂಗ, ಪಗಡೆ ಮುಂತಾದ ಆಟಗಳಲ್ಲಿ ಕಾಯಿಯನ್ನು ಚಲಿಸುವಂತೆ ಮಾಡುವುದು,-ನಡೆಸುವುದು : "ಪರಿಣಾಯಃ-ಪಗಡೆಕಾಯಿ ನಡಿಸುವುದು" (ಸಿದ್ಧಾಂತಿ. ೩೨೦). [ಸಂ.]

ಪರಿಣಾಶಗೈ (ಕ್ರಿ). ನಾಶಪಡಿಸು ; ಧ್ವಂಸಮಾಡು : ಮಹೋನ್ನತಿಯಂ ಪರಿಣಾಶ[ಶ]ಗೈದು ಮೇಣ್ ಶೋಭಿಪ ಸದ್ವ್ರತಾಚರಣೆಯಂ ಪರಿಭಂಗಿಸಿ ಕಾಡುತಿರ್ಪುದೀ ಲೋಭವಿದೆನ್ನನಾವಗಮಿದಂ ಸಲೆ ದೂಡು ಶಿವಾಮರೇಶ್ವರಾ (ಅಮಶ. ೪೧). [ಪರಿಣಾಶ$_0$ + ಗೈ(<ಕೆಯ್$_1$)]

ಪರಿಣಾಹ (ನಾ). ೧. ಅಗಲ; ಹರಹು; ವಿಸ್ತೀರ್ಣ : "ಪರಿಣಾಹಃ, ವಿಶಾಲತಾ-ಈ ೨ ಸುತ್ತು" (ಹಲಾಯು. ೧೩೦-೧೦) ; ಅದು ಜಂಬೂದ್ವೀಪೋಪಮಾನ ವಿಸ್ತಾರಪರಿಣಾಹಪರಿಣಾಮಮಂ ಕೈಕೊಂಡು (ಆದಿಪು. ೬-೩೪ ಪ); ಕುವಲಯಾಪೀಡೇಭಂ . . . ವಿಂಧ್ಯಭೂಭೃದಾಯಾಮದೊಳಂ ಮಹಾವರಾಹಪರಿಣಾಹದೊಳಂ . . . ಪವನವೇಗದೊಳಮಗುರ್ವುಮದ್ಭುತಮುಮೆನಿಸಿ (ಜಗವಿ. ೬-೩೫ ಪ); ಪೆಸರಿಂದಂತದು ಸರ್ವಾರ್ಥಸಿದ್ಧಿ ಪರಿಣಾಹದಿಂದೆ ಜಂಬೂದ್ವೀಪಕ್ಕೆ ಸಮಂ (ಚಂದ್ರಪು. ೧೧-೨೮). ೨. ವೃತ್ತದ ಆವರಣರೇಖೆ ; ಪರಿಧಿ. [ಸಂ.]

ಪರಿಣಿಚಿತ (ಗು). ತುಂಬಿದ ; ವ್ಯಾಪಿಸಿದ : ಪಾರಿಜಾತ ಸಂತಾನಕ ಹರಿಚಂದನ ವನಪರಿವೃತಪರಿಣ[ಣಿ]ಚಿತವಿಶಾಳಹರಿನೀಳರುಚಿರುಚಿರವಿರಚಿತ ನೀಳಾಭ್ರವಿಭ್ರಮಕುಟ್ಟಿಮದೊಳ್ (ಸುಕುಮಾ. ೧೨-೪೨ ಪ). [ಸಂ.]

ಪರಿಣೀತ (ಗು). ೧. ಸುತ್ತು ಬರಿಸಿದ ; ಪ್ರದಕ್ಷಿಣೆ ಬರುವಂತೆ

ಮಾಡಿದ. ೨. ಮದುವೆಯಾದ ; ವಿವಾಹವಾದ : ಒಂದುದಿವಸಂ ಪರಿಣೀ [ಪಾಠಾಂ. ಣ]ತಭಾರ್ಯನುಮಾಶ್ಚರ್ಯಸೌಂದರ್ಯನುಂ . . . ಆದ ಕುಮಾರನಂ . . . ಮಹಾರಾಜಂ ದೊರದೊಳೆ ಕಂಡು (ಚಂದ್ರಪು. ೪-೧೨ ಪ). ೩. ಪೂರ್ತಿಮಾಡಿದ ; ಮುಗಿಸಿದ. (ನಾ). ೪. ಮದುವೆಯಾದ ವ್ಯಕ್ತಿ ; ವಿವಾಹಿತವ್ಯಕ್ತಿ : ಯಮರಾಯ ಹೃದಯವಿಹೀನ . . . ನೂತನ ಪರಿಣೀತರನ್ನಗಲಿಸಿ ವಿರಹಯಾತನೆಗೆ ಗುರಿಮಾಡುವ (ಪರಿನ. ೫೨).

[ಸಂ.]

ಪರಿತ$_1$ (ಗು). ೧. ಹಿಡಿದ ; ಗ್ರಹಿಸಿದ. (ನಾ). ೨. ಆವರಿಸಿರುವುದು; ಬಳಸಿರುವುದು (?): ಪ[ಪಾಠಾಂ. ದು]ರಿತಮದೊಂ[ದೊಂ]ದೊಳಗಿರೆ ಪರಿವೇಷಂ ಕಲಹದೋಱಿ ಪೆರ್ವಸಮಕ್ಕುಂ ಪಿರಿದಕ್ಕುಮಿನ ಶಶಾಂಕರ ಪರಿವೇಷಂ ಬೆಳ್ಳನಾದೊಡಂ ಮಱೆ ಕಿಡುಗುಂ (ಜಟ್ಟಮ. ೫-೧೫). [<ಸಂ. ಪರೀತ]

ಪರಿತ$_2$ (ನಾ). ಒಂದು ಬಗೆಯ ಹಕ್ಕಿ : ಪರಿತ ಪಾಲ್ವಣ ಸ್ವೇತ ಸೋರೆಯು ಪರಿವ ಗೀಜಗ ಮೆರೆದವು (ಗೋಹಾಡು. ೨೪).[?]

ಪರಿತಂ (ಅ). ೧. ಎಲ್ಲಾ ಕಡೆಗಳಲ್ಲಿಯೂ. ೨. ಅಭಿಮುಖವಾಗಿ.

ಪರಿತಂ ಮಾಡು = ಅಭಿಮುಖವಾಗಿಸು ; ಎದುರಾಗಿಸು : ಅಂತುದಾಸೀನಮಾನಸಂ ಮಸಕಮಿಲ್ಲದ ಸಾರ್ವಭೌಮಂ ಪೇರಡ್ಡಮಾಗಿ ಕೆಲದ ಚಕ್ರಾಯುಧನೊಳ್ ತಮ್ಮಂಗಬಾಹ್ಯವಸ್ತುವಂ ಪರಿತಂ ಮಾಡುತ್ತಿರೆ (ಶಾಂತಿಪು. ೧೦-೧೧೬ ಪ). [ಸಂ.]

ಪರಿತಪನ (ನಾ). ಅತಿಯಾದ ದುಃಖ ; ಬಹಳವಾದ ಕಳವಳ : 'ಪರಿತಪಿಸು' ಪರಾ.

[ಸಂ.]

ಪರಿತಪಿಸು (ಕ್ರಿ). ಅತಿಯಾಗಿ ದುಃಖಿಸು ; ಬಹಳವಾಗಿ ಕಳವಳಪಡು : ಹರಣವಳಿದು ಧರೆಗುರುಳಿದ ಪಕ್ಕಿಯ ಪರಿಯ ನಿಟ್ಟಿಸಿ ಪರಿತಪಿಸಿ (ಹದಿಬ. ೨-೩೫); ದಿನವೆಲ್ಲಾ ದುಡಿದರೂ ಹೊಟ್ಟೆ ತುಂಬದೆ ಪರಿತಪಿಸುವ ಬಡಜನಕೋಟಿಗೆ ನಮ್ಮಲ್ಲಿ ಬರಗಾಲವಿಲ್ಲ (ಕಣ್ಮಣಿ. ೫ ಮೊದಲಮಾತು); ತಮ್ಮನ್ನು ನಂಬಿ ಕೈಹಿಡಿದ ಜೀವ ಪರಿತಪಿಸುವುದನ್ನು ಕಂಡು ಹೃದಯವನ್ನು ಗರಗಸದಿಂದ ಕುಯ್ಯುತ್ತಿದ್ದ ಹಾಗಾಯಿತು ಅವರಿಗೆ (ರಂಗಪ. ೧೧೮). [ಪರಿತಪನ+-ಇಸು$_3$]

ಪರಿತಪ್ತ (ಗು). ೧. ಚೆನ್ನಾಗಿ ಕಾದ : ನುಣ್ಮಣಲಂ ಮಣಲ್ದೀಂಟೆಗೆತ್ತದಱ ಪರಿತಪ್ತ ಲೋಹರಜಸ್ಸಿಕತಿಳತಳದೊಳ್ ಮೆಯ್ಯನೀಡಾಡುವುದುಂ (ಶಾಂತಿಪು. ೭-೯೧ ಪ). ೨. ದುಃಖ ಹೊಂದಿದ ; ತಾಪ ಹೊಂದಿದ. (ನಾ). ೩. ತಾಪ ಹೊಂದಿದ ವ್ಯಕ್ತಿ ; ಸಂತಪ್ತ ವ್ಯಕ್ತಿ : ಹಸಿವಿನ ಬಾಧೆಯಿಂದ ಪರಿತಪ್ತಳಾದಳು (ಶ್ರೀರಾಯ. ೨೩೦).

[ಸಂ.]

ಪರಿತರ್, ಪರಿತರು, ಹರಿತರ್, ಹರಿತರು (ಕ್ರಿ). ೧. ಓಡಿಬರು ; ಧಾವಿಸು ; ರಭಸದಿಂದ ಮುನ್ನುಗ್ಗು : ಕರುಮಾಡದಿಂದಿಱಿದು ಪರಿತರ್ಪನ್ನೆಗಂ (ಪಡ್ಡಾರಾ. ೧೧೬-೧೩) ; ಪರಿಜನಮನಿತುಂ ತುರಿಪದೆ ಪರಿತಂದಿನ್ನೇವೆವೆಂದು ಕಪ್ಪುರದ ರಜಂಬೊರೆದ ಕರಕಾಂಬುವಂ ತಳಿದು (ಆದಿಪು. ೪-೧೭); ರಾಗದಿನಾಗಳು ನೀಡುಂ ಪರಿತಂದೋರ್ವಳು ನೋಡಿದಳೊಲ್ದು ರೂಪವಿದ್ಯಾಧರನಂ (ಸುಕುಮಾ. ೧೧-೧೩); ಶರ್ವಂ ಪರಿತಂದು ನಿಲ್ವನೆಂದೊಡೆ ಗಿರಿಜೆಯ ಸೌಭಾಗ್ಯದಿರವನಾರ್ ಬಣ್ಣಿಸುವರ್ (ಗಿರಿಕ. ೩-೯೪). ೨. ನಡೆದು ಬರು ; ಆಗಮಿಸು ; ಸಾಗಿ ಬರು : ಮನೋಭವನೊಡ್ಡಣದಂತೆ ತಂಡತಂಡದೆ ಪರಿತಂದು ಸೂಸಿದುದು ಸೇಸೆಯನಂದು ಪುರಾಂಗನಾಜನಂ (ಪಂಪಭಾ. ೪-೩೫). ಮದೀಯಾಂಬಿಕೆಯ ಮುಂದೆ ಪರಿತರ್ಪ ದೌವಾರಿಕೆಯರಿಂ . . . ಪರಿಚಾರಕಿಯರಿಂ ಕೂಡೆ ಸಂದಣಿಸಿದ ಬಾಗಿಲೊಳೆಂತಾನುಂ ನುಸುಳ್ದು ಪೋದಂ (ಕಾದಂಪೂ. ೮೭೦); ಜಗಂಗಳಂ ಬಗೆಯದೆ ನುಂಗಲೆಂದು ಪರಿತಂದಪುದಂತಕನಾಜ್ಞೆಯಿಂದಮಿಂ ಪಗೆವಡೆಗಿಲ್ಲ ಜೀವನಂ (ಪಂಠಾಮಾ. ೧೪-೧೫೯). ೩. ಪ್ರವಹಿಸು ; ಹರಿದು ಬರು : ಹಿಮಶೈಳಾಗ್ರದಿನಿಱಿತಂದಮರಾಪಗೆ ಕೆಱಗೆ ನಿಂದ ಜಿನಬಿಂಬದ ಮೇಲಮರ್ದಿರೆ ಪರಿತಂದುದಱಿಂದಮೆ ಪಾವನಮಾಯ್ತು (ಸಮಪ. ೨-೫೩); ಹುಣ್ಣಿಮೆಯ ಸಸಿಯ ಬಟ್ಟೊಸರ್ದು ಪರಿತರ್ಪ ದಿವ್ಯಾಮೃತದ ತೊಱೆಯೊ (ಪದ್ಮರಾ. ೧-೩೦); ಕಣ್ಬನಿವೊನಲ್ಪರಿತರ್ಪವೊಲೊಪ್ಪೆ ವೃಷ್ಟಿ (ರಾಜಶೇ. ೧-೧೧೮). **ಪರಿತರು** : ೧. ಮತ್ತೆ ಜೋಡಿಸಿ ಪರಿತರಲು ಮುರಿಯೆಚ್ಚು ಪುನರಪಿ ಹುರುಳುಗೆಡಿಸಿದನಱಿಸಿ ಹರಿದನು ಮತ್ತೆ ಪವನಜನ (ಕುಪ್ಯಾಕ. ೨೦-೧೫); ಅಲಘುಭುಜಬಲ ಹಲಗೆ ಖಂಡೆಯವಿಡಿದು ಪರಿತರಲು (ನಿಭಾಗ. ೧೧-೩೬-೧೬). **ಹರಿತರ್** : ೧. ನೆಱೆ ಕೇಳ್ದು ಹರಿತಂದು . . . ತರುಣಿಯರ ಹರಣಮಂ ಕಾಯ್ದು (ಸಿದ್ಧರಾ. ೧-೩೫); ಪಟುಭೀಕರವಿಷೋರಗವಾಗಳೊಂದುರವಣಿಸಿ ಹರಿತಂದು (ಬಸಪು. ೪೬-೨೧). ೨. ಕಣಜಂಗಳಿಗೆ ಹರಿತಂದು ಪಡಿಗಳನಳವ ಬಾಚರಸಂಗೆ ಇಂತೆಂದ (ಬಸಪು. ೫೩-೧೬). ೩. ನಿರ್ಝರಮೆನಲು ಗಿರಿಯ ತುದಿಯಿಂದೋಸರಿಸಿ ಹರಿತರ್ಪ ಹಳ್ಳಕ್ಕೆ ನಾಮಮಕ್ಕುಂ (ಮಂಗರಾ. ೩೦-೨). **ಹರಿತರು** : ೧. ಮಡದಿಯರು ಹರಿತಪ್ಪ ಕಡುಸಂಭ್ರಮವನೇನೆಂಬೆ (ಬಸಪು. ೫-೨೮); ಕಳವಳಿಸಿ ಸಾತ್ಯಕಿ ಘಟೋತ್ಕಚರುಲಿದು ಹರಿತರೆ (ಕುಪ್ಯಾದ್ರೋ. ೧-೬೩); ನಂದಾದಿಗೋಪರ ಮೊತ್ತವೀ ಪ್ರಳಯದ ಮಹಾಧ್ವನಿಯೆತ್ತಲೇನೇನೆನುತ ಹರಿತಂದು (ನಿಭಾಗ. ೧೦-೧೦-೩೪). ೨. ತೊಪ್ಪತೊಪ್ಪನೆ ಪಿರಿಯ ಕಲ್ಲೊಳು ತಪ್ಪಲಿಡುತಂ ಸೋಹುತಂ ಹರಿತಪ್ಪ ಕೆಲವಾಡುಗಳಂ ಬೊಬ್ಬುಲಿಯ ಮರನಿಪ್ಪ ನೆಪ್ಪಿಗಾತನು ಹೊಡೆದು (ಬಸಪು. ೨೦-೧೪); ಹರುಷ ಮಿಗೆ ಹರಿತಂದು ಬಂಡಿಯ ಶಿರದ ಹಲಗೆಯನಡರಿದನು (ಕುಪ್ಯಾಆ. ೧೦-೨೭); ಕಾಮಲತೆ ನೀನಿದಂ ಮುಡಿಗೆ ಮುಡಿಯೆಂದು ಕೊಡಲಾಗಲಾ ಮಾಲೆಯೇ ಹಾವಾಗಿ ಹರಿತಂದುದಂ ಕಂಡೆನು (ಸಮ್ಯಕೌ. ೬-೪೭). ೩. ತಪ್ಪಿಸಿದ ಮೈಮೈಗಳಲಿ ಹರಿತಪ್ಪ ರಕ್ತವ ಸುಱಿದು ಕೆಂಧೂಳುಪ್ಪರಿಸಿದುದು (ಕುಪ್ಯಾರ. ೨-೨೮).

ಪರಿವರಿತರು, ಪರಿಪರಿತರ್ (ದ್ವಿರುಕ್ತಿ) : ಮಹಾದೇವಿಯ ತಮಾನಿನ್ದರ ಪರಿವರಿತರೆ ನೆಲಮಕ್ಕಳ್ನೆಲದೆ ಸನ್ದು (ಎಕ. XVI, ಪುದ್ದಗಿ. ೧೩೩-೨ ; ?); ಪರಿಪರಿತಂದು ಮೆಯ್ಗಳೆರಡಿಲ್ಲೆನೆ ಪಕ್ಕದಿನಪ್ಪಿ . . . ಕಾಂತನೊಳ್ ನೆರೆದು ರಸಾಂಗಕಾಂತೆಯೆರ್ದೆಯಾಱಿದುದಾದಮೆ ತತ್ಪಭಾತದೊಳ್ (ಚಂದ್ರಪು. ೮-೧೦೧). [ಪರಿ$_2$+ತರ್]

ಪರಿತರು 'ಪರಿತರ್' ನೋ.

ಪರಿತರ್ಪಿಸು (ಕ್ರಿ). ತೃಪ್ತಿಗೊಳಿಸು ; ತೃಪ್ತಿಪಡಿಸು : ಧೂರ್ತಜನಂ ನಿಜವ್ಯಸನಮಂ ಪರಿತರ್ಪಿಸ [ಪಾಠಾಂ. ಪ್ಪಿಸ]ಲೆಂದಧರ್ಮದೊಳ್ ವರ್ತಿಸುವಂತು ಯೋಜಿಸುಗುಮಾಳ್ದರನೆಂದೊಡೆ (ಪಾರ್ಶ್ವಪು. ೩-೬೯).

[ಸಂ. ಪರಿತರ್ಪಣ+-ಇಸು$_3$]

ಪರಿತಾಪ (ನಾ). ೧. ಕಾವು ; ಉಷ್ಣ ; ಶಾಖ : ಪರಿತಾಪಂ ಕಿಡೆ ಪುಳಕಾಂಕುರಮೊದವೆ ಲತಾಂಗದೊಳ್ . . . ಪಶ್ಚಿಮಾನಿಲಂ ಸೋಂಕಲೊಡಂ (ಪಂಠಾಮಾ. ೬-೧೪೦) ; ನವಘನಮಾಲಾರವದಿಂದವನೀದೇವಿಯ ನಿದಾಘಪರಿತಾಪಮಡಂಗುವವೋಲ್ (ಜಗವಿ. ೨-೭೦). . ೨. ಜ್ವರ ; ತಾಪ : ಚಂದನರಸದಿಂದೆ ಮಾಗಿಯಾ ನೀರಿಂದಂ ನಂದದು ಪರಿತಾಪಾನಳ ನಿಂದಱಿದೆಂ ನಿನ್ನ ಮೆಯ್ಯ ಕಾಮಜ್ವರಮಂ (ಕವಿರಾ. ೩-೧೬೪). ೩. ಅತಿಯಾದ ದುಃಖ ; ಬಹಳವಾದ ಸಂಕಟ,—

ಬೇಗುದಿ: ಪರಿತಾಪಮನೆನಗೆ ನಿಶಾಕರನಾಗಿಸುಗುಂ . . . ಸುರಭಿ ಸಮಯೋದಿತಂ ಹಿಮಕರನುಲಂ ಪಡೆವನೆಂಬುದಿದು ವಿಪರೀತಂ (ಕವಿಕಾ. ೩-೩೬); ರೌದ್ರಶಾಪಪರಿತಾಪ ವಿಳಾಪಮೊಳಾ ಮಹೀಶ್ವರಂ . . . ಚಿಂತಿಸುತ್ತಂ ಪೊಬಲ್ಗೆ ಮಗುಟ್ಟುವಂದು (ಪಂಪಭಾ. ೧-೧೧೩); ಒಡ ಹುಟ್ಟಿದರ ಕೈಯಾರ ಕೊಂದರೆ ಮುಟ್ಟದೇ ಕಡುಪಾಪ ಘನಪರಿತಾಪ ತನಗೆ (ಕುಪ್ಯಾಭೀ. ೩-೨೩); ಕಾರ್ಯದವಿವೇಕಮಂ ಲೆಕ್ಕಿಸದೆ ಕಾರಣದ ಪರಿತಾಪಮಂ ಗಣಿಸಿ ಕ್ಷಮಿಸಿಮಪರಾಧಮಂ (ಚಿತ್ರಾಂಗ. ೩೩-೧೩೮೯). ೪. ಆಯಾಸ; ದಣಿವು: "ದಪಥುಃ, ಪರಿತಾಪಃ—ಈ ೩ ಬಟಲಿಕೆ" (ಹಲಾಯು. ೪೮-೪೪೩). ೫. ಭಯ; ನಡುಕ. ೬. ಒಂದು ನರಕದ ಹೆಸರು. [ಸಂ.]

ಪರಿತಾಪಪಡು (ಕ್ರಿ). ಅತಿಯಾಗಿ ದುಃಖಪಡು; ಬಹಳವಾಗಿ ಕಳವಳಗೊಳ್ಳು,—ಬೇಗುದಿಪಡು: ಗುರಿಯಿಲ್ಲದೆ ಅಲೆಯುವ ದ್ಯೂತಕಾರನ ಪತ್ನಿಯು ಅವನಿಂದ ತ್ಯಜಿಸಲ್ಪಟ್ಟವಳಾಗಿ ಪರಿತಾಪ ಪಡುತ್ತಾಳೆ (ಹುಕ್ಸಾರ. ೩೦೯); ಮುಂದೆ ದುಷ್ಯಂತನು ಪರಿತಾಪ ಪಡುವಾಗ ಸಾನುಮತಿ . . . ಆ ವೃತ್ತಾಂತವನ್ನು ಶಕುಂತಲೆಗೆ ಮುಟ್ಟಿಸುತ್ತಾಳೆ (ಕಾವ್ಯಸ. ೩೩). [ಪರಿತಾಪ+ಪಡು$_1$]

ಪರಿತಾಪಶ್ರಾಂತೆ (ನಾ). ಬಹಳವಾದ ದುಃಖದಿಂದ ಬಳಲಿದವಳು; ಅತಿಯಾದ ಸಂಕಟದಿಂದ ನೊಂದವಳು: ಭವಿತವ್ಯತೆಗೇಕೀ ವ್ಯಥೆ ಓ ಪರಿತಾಪಶ್ರಾಂತೆ! (ಅಪಶ್ಯ. ೧೧೧-೩೪).

[ಸಂ. ಪರಿತಾಪಶ್ರಾಂತಾ]

ಪರಿತಾಪಿಕೆ (ನಾ). [ಜೈನ] ಬೇರೆಯವರಿಗೆ ದುಃಖವನ್ನುಂಟು ಮಾಡುವುದು; ಪಂಚವಿಂಶತಿಕ್ರಿಯೆಗಳಲ್ಲಿ ಒಂದು: ಪಂಚವಿಂಶತಿ ಕ್ರಿಯೆಗಳು — ೧. ಸಮ್ಯಕ್ತ್ವಕ್ರಿಯೆ . . . ೯. ಪರಿತಾಪಿಕೆ (ಪರದುಃಖೋತ್ಪಾದನ) (ಜೈಸಧ. ೬೩). 'ಪಂಚವಿಂಶತಿಕ್ರಿಯೆ' ಪರಾ. [?]

ಪರಿತಾಪಿತ (ಗು). ಅಧಿಕವಾಗಿ ಕಳವಳಕ್ಕೆ ಒಳಗಾದ; ಬಹಳವಾಗಿ ಪೀಡಿತವಾದ: ತನ್ನ ನಾಜ್ಞಾಪನೆ ಬಗೆದತನುಪರಿತಾಪಿತಶರೀರನುಮಾಗಿ ಶಂತನು ಕರಂಗೆರ್ದುಗಿಡೆ ತದ್ವೃತ್ತಾಂತಮೆಲ್ಲಮಂ ಗಾಂಗೇಯನಱಿದು (ಪಂಪಭಾ. ೧-೬೧ ಪ). [ಸಂ.]

ಪರಿತು (ನಾ). ನೀರನ್ನು ದಾಟುವ ಒಂದು ಬಗೆಯ ಸಾಧನ; ನಾವೆ; ತೆಪ್ಪ: ಹಂಜಮಾನರ ಹೆಂಣುಗಂಡುಸಹಿತ ಯೆಲರನು ದೋಣಿ ದುಗ್ಗಿ ಪರಿತಿನ ಮೇಲೆ ಪತಿಸಿ . . . ನಡದಲಿ (ಕಇ. I, ೪೮-೧೪; 1427). [?]

ಪರಿತುಷ್ಟ (ಗು). ೧. ಪೂರ್ತಿಯಾಗಿ ತೃಪ್ತಿಗೊಂಡ,—ತಣಿದ; ಸಂತುಷ್ಟಿಗೊಂಡ: ಎಸೆಗುಂ ಸಹಕಾರಕೋಮಳಾಂಕುರಪರಿತುಷ್ಟಪುಷ್ಟ ಪರಪುಷ್ಟಗಳಧ್ವನಿ ನಂದನಂಗಳೊಳ್ (ಪಂಪಭಾ. ೨-೧೩); ಪರಿತುಷ್ಟಸುರತಸೌಖ್ಯಾಯಮಾನಮಾನಸರಾಗಿ (ಶಾಂತೀಶ್ವ. ೫-೧೩೪ ಪ). ೨. ಸಂತೋಷಗೊಂಡ; ಆನಂದಿಸಿದ. (ನಾ). ೩. ಸಂತೃಪ್ತಿ ಹೊಂದಿದವನು; ಸಂತುಷ್ಟಿಗೊಂಡವನು: ಆ ಲಿಂಗಕ್ಕೆ ಮುತ್ತೆ ಮುತ್ತೆ ಜಗಿಯೂ ಪರಿತುಷ್ಟನಹೆ ನೃಪಗೆ ಮುಂತ್ರಾಕ್ಷತೆಯನಿತ್ತು (ಹಜಳಾ. ೫-೪೩); ಪಂಡಿತರು ಪರಿತುಷ್ಟರಾದರು (ಕೌಟಿಶಾ. ೧-೬೩). [ಸಂ.]

ಪರಿತುಷ್ಟಿ (ನಾ). ಸಂತೃಪ್ತಿ; ಸಂತುಷ್ಟಿ; ಪರಿತೋಷ: ಜಾನಕಿ ನೋಡ ನಿನ್ನ ನಗೆಗಣ್ ಪರಿತುಷ್ಟಿ[ಪಾರಾಂ. ತೃಪ್ತಿ]ಯನಪ್ಪ ಕೆಯ್ಯೆ ಲಂಕಾನಗರೀಬಹಿಃಪುರನಮೇರುವಿಲಾಸವನಂಗಳೇಬುಮಂ (ಪಂರಾಮಾ. ೯-೧೩೪). [ಸಂ.]

ಪರಿತುಷ್ಟವಡೆ (ಕ್ರಿ). ಸಂತೃಪ್ತಿಯನ್ನು ಹೊಂದು; ಸಂತುಷ್ಟವಾಗು: ಅಮ್ಮೃತಮತಿಮಹಾದೇವಿ . . . ಹರಪ್ರಸಾದಸುಧಾಸ್ವಾದನಂ ಗೆಯ್ದು ಪರಿತುಷ್ಟೆವಡೆದು (ರಾಜೇ. ೪-೧೪ ಪ). [ಪರಿತುಷ್ಟಿ+ಪಡೆ$_1$]

ಪರಿತುಷ್ಟಿವೆಱು (ಕ್ರಿ). = ಪರಿತುಷ್ಟಿವಡೆ: ಪರಿತುಷ್ಟಿವೆತ್ತು ಸುರತದ ಪರಿಶ್ರಮಮನಾಜಾಸಲ್ ತದೀಯಲತಾಮಂದಿರದಿಂ ಪೊದಮಟ್ಟರ್ (ಶಾಂತೀಶ್ವ. ೫-೧೩೫). [ಪರಿತುಷ್ಟಿ+ಪೆಱು$_1$]

ಪರಿತೃಪ್ತ (ಗು). ೧. ಸಂತೃಪ್ತಿ ಹೊಂದಿದ; ತಣಿದ: ಪವನಂ ಜಯನಂ ಪಲ್ಲಣಿಸಿ ಪರಿತೃಪ್ತ ಬಳಾಹಾರನಂ ಮಾಡಿ (ಕುಸುಮಾ. ೧೪-೫ ಪ). (ನಾ). ೨. ಸಂತೃಪ್ತಿ ಹೊಂದಿದ ವ್ಯಕ್ತಿ: ಪರಮಸುಖಪೀಯೂಷ ಪರಿತೃಪ್ತರಾಗಿ ಕುಸುಮಾವಳೀದೇವಿಯುಮಂ ಕಂದರ್ಪದೇವನುಮಿರ್ದುಂ (ಕುಸುಮಾ. ೧೩-೧೧೧ ಪ). [ಸಂ.]

ಪರಿತೃಪ್ತಿ (ನಾ). ಸಂತುಷ್ಟಿ; ಸಂತೃಪ್ತಿ: ಸರ್ವನಾಥಶಕ್ತಿ ಪರಿಯಂ ಪರಿತೃಪ್ತಿಯನೆಯ್ದುಲೀಪ್ಸಿತಾರ್ಥಮನಿತ್ತಂ (ಕುಸುಮಾ. ೬-೧೧೩); ಗುಣದಿಂದ ಹುಟ್ಟಿದ್ದಕ್ಕೆ ಪರಿತೃಪ್ತಿಯಿಲ್ಲ (ಬಂಕಸು. ೬೧). [ಸಂ.]

ಪರಿತೃಪ್ತಿವೆಱು (ಕ್ರಿ). ಸಂತೃಪ್ತಿಯನ್ನು ಹೊಂದು; ಸಂತುಷ್ಟವಾಗು: ಸುರತಪ್ರೀನನೋದಕಮನೂಡಿ ಮುನಂ ಪರಿತೃಪ್ತಿವೆತ್ತು (ಕುಸುಮಾ. ೪-೩೮). [ಪರಿತೃಪ್ತಿ+ಪೆಱು$_1$]

ಪರಿತೋಷ (ನಾ). ೧. ಆಸೆಯಿಲ್ಲದಿರುವಿಕೆ; ವಿರಕ್ತಿ: ಅವನಲಿ ದೊರೆಕೊಂಬುದೀ . . . ಪರಿತೋಷವೀ ನಿರ್ವ್ಯಾಳುಲತೆ (ನಿಘಾಗ. ೧೦-೨-೩೪). ೨. ಸಂಪೂರ್ಣವಾದ ತೃಪ್ತಿ; ಸಂತುಷ್ಟಿ: ಳೌರವನ ಛಲ ಸಂದುದಿನ್ನಹಿತಾವನೀಶರಿಗಾಯ್ತು ಪರಿತೋಷ (ಕುವ್ಯಾಳ. ೨೩-೩೩). ೩. ಅಧಿಕವಾದ ಆನಂದ,—ಸಂತೋಷ: ಕ್ಷೇಮಂಕರ ಮಹಾರಾಜಂ ಪರಿತೋಷಪ್ರಾದುರ್ಭಾವಚಿಹ್ನ ಭೂತಪರಮಪ್ರಸಾದಸ್ಮೇರ ಮುಖಂ ಪ್ರಿಯಾತ್ಮಜಾನನಾರವಿಂದನಿರೀಕ್ಷಣಾನಂತರಂ (ಶಾಂತಿಪು. ೪-೩೩ ಪ).ಪರಿತೋಷಪರಾಶ್ಮೆಯೊಳ್ ನಿಷ್ಕಿತಾತ್ಮನಾಗುತ್ತುಂ (ಪುಪ್ಪಪು. ೧೦-೨೧ ಪ); ಕರಣ ನಿರ್ಮಳವಾಯ್ತು ಮನವುಬ್ಬರಿಸಿತಪರಿತೋಷದೇಳಿಗೆ ಪರಮಸುಖದಲಿ ತನುವ ಮಱೆದನು (ಕುವ್ಯಾಳು. ೪-೩). ೪. ಆಸೆ; ಬಯಕೆ: ದ್ವೇಷಂ ವಿರಹಿಗಳೊಳ್ ಪರಿತೋಷಂ ಮಧುಮತದೊಳಾಗೆ ಬಂದರ್ ಕೆಲರುಂ ಯೋಷಿಜ್ಜನಮಲರಂದಿನ ವೇಷಂಗೊಂಡಂತೆ ನೆಱಿದು ಪೂದುಡುಗೆಗಳಂ (ಕಾಂತಿಪು. ೪-೨೩). ೫. ಪಾರಿತೋಷಕ: ಪಾದ್ರಿಯಿಂದ ಅನೇಕಾನೇಕ ಪರಿತೋಷಗಳನ್ನು ಪಡೆದು, ಆತನಿಗೆ ತಾನು ಕ್ರೈಸ್ತಜಾತಿಗೆ ಸೇರುತ್ತೇನೆ ಎಂಬ ನಂಬುಗೆ ಬರುವಂತೆ ಮಾಡಿ (ಮುಲಿಮ. ೫೬೧).

ಪರಿತೋಷವಾಗು = ಬಹಳ ಸಂತೋಷವಾಗು; ಅಧಿಕವಾದ ಆನಂದವುಂಟಾಗು: ಳೌರವರಾಯನಾಳಲಿ ಪೊದವಿಯನು ಪರಿತೋಷವಾಗಲಿ ನೃಪನ ಮಿತ್ರರಿಗೆ (ಕುವ್ಯಾದ್ರೌ. ೩-೫೭); ವಿಷರಿಂದ ಅವನಿಗೆ ಪರಿತೋಷವಾಗುವದು ಎಂಬುದೇ ಅವರಿಗೆ ತಿಳಿಯಲಿಲ್ಲ (ಇಪ್ಪಳ. ೧೩೫).

[ಸಂ.]

ಪರಿತೋಷಂಬಡೆ, ಪರಿತೋಷವಡೆ (ಕ್ರಿ). ೧. ಬಹಳವಾದ ಸಂತೋಷವನ್ನು ಹೊಂದು; ಅಧಿಕವಾದ ಆನಂದವನ್ನು ಪಡೆ: ಪರಿತೋಷಂಬಡೆದಗಜಾವರಸೋಮೇಶ್ವರನನರ್ಚಿಸುತ್ತ (ಉದ್ಭಟ. ೧೧-೧೧೩). **ಪರಿತೋಷವಡೆ**: ೧. ಪರಿತೋಷವಡೆದು ಪ್ರಾಜೇಶನಂಘ್ರಿಗೆ ನಮಸ್ಕರಿಸಿ ಮೌನದಿ ನಿಂದಿರಲು (ಜೋಷತ. ೪-೨೫). ೨. = ಪರಿತುಷ್ಟಿವಡೆ: ಸಿತ ರಾಜಾನ್ನ ಸಪ್ಪೃತತೊವ್ವೆಗೂಡಿ ನಿರ್ಮತವಾದ ತೋರ ದುತ್ತುಗಳ ಜತನದಪ್ಪಡೆ ಕೈಕೊಂದರು ಕೃಷ್ಣಾರ್ಪಿತವೆಂದು ಪರಿತೋಷವಡೆದು (ಜೋಷತ. ೩-೨೫). [ಪರಿತೋಷ+ಪಡೆ$_1$]

ಪರಿತೋಷವಡು (ಕ್ರಿ). ಬಹಳವಾಗಿ ಸಂತೋಷಪಡು,—

ಆನಂದಿಸು : ಕಟ್ಟಾಣಸುಡಿಗೇಳಿ ಕಡುಮೆಚ್ಚಿ ಪರಿತೋಷವಟ್ಟು (ಸೋಮೇಶ. ೩೩-೫೩). [ಪರಿತೋಷ + ಪಡು$_1$]

ಪರಿತೋಷವಡೆ 'ಪರಿತೋಷಂಬಡೆ' ನೋ.

ಪರಿತೋಷಾಶ್ರು (ನಾ). ಬಹಳ ಸಂತೋಷದಿಂದುಂಟಾದ ಕಣ್ಣೀರು ; ಆನಂದಬಾಷ್ಪ : ಕರುಣಾಳು ಪರಿತೋಷಾಶ್ರುಪೂರ್ಣ ವಿಶಾಲಲೋಚನ ನೋಡಿದನು ತನ್ನವರನೊಲವಿನಲಿ (ಕುಪ್ಪಾಸ. ೧೧-೧೬). [ಪರಿತೋಷ + ಅಶ್ರು]

ಪರಿತೋಷಿ (ಗು). ೧. ತೃಪ್ತಿಗೊಂಡ ; ಸಂತುಷ್ಟಿ ಹೊಂದಿದ. ೨. ಆನಂದಗೊಂಡ ; ಸಂತೋಷ ಹೊಂದಿದ. (ನಾ). ೩. ಆನಂದವನ್ನು ಕೊಡುವವನು : ಶರಣಜನಪರಿತೋಷಿ ಕಾಲದ್ವೇಷಿ ನಿರ್ದೋಷಿ (ಬಸಪು. ೬-೪). [ಸಂ. ಪರಿತೋಷಿನ್].

ಪರಿತೋಷಿತ (ಗು). ೧. ಸಂತೋಷದಿಂದ ಕೂಡಿರುವ : ಪರಿತೋಷಿತಾತ್ಮವೃಂದಿಯೊಳಿರದತ್ಯಭಿಲಷಿತದಾನದಾನಂದೆಯೊಳಾ ನರಪಂ ಸುನಂದೆಯೊಳ್ ಪಿರಿಯರಸಿಯೊಳೊಡಗೂಡಿ ಸುಖದಿನಿರಲ್ (ಸಮಾಸೇ. ೨-೩). (ನಾ). ೨. ಸಂತೋಷದಿಂದಿರುವವನು : ಬಗುವ ಕಂಬನಿಗಳಲಿ ಕಂಠವ ಬಿಗಿದ ಸೆರೆಗಳ ಸೇದುವಕ್ಕೆಯ ವಿಗತ ಪರಿತೋಷಿತನು ಪಾವನತರಿಗಿಂತೆಂದ (ತೊರಾ. ೧-೪-೬). [ಸಂ.]

ಪರಿತ್ಯಕ್ತ (ಗು). ೧. ಬಿಟ್ಟ ; ತ್ಯಜಿಸಿದ : ಪರ್ವತದೊಳಿರ್ದ ಶಾರ್ದೂಲಂ ಜಾತಿಸ್ಮರನಾಗಿ ಪರಿತ್ಯಕ್ತಾಹಾರಶರೀರನುಪಶಾಂತಸ್ವಾಂತನಿರ್ದುದೆಂಬುದಂ . . . ಅಱಿದು (ಅವಿಪು. ೫-೧೧ ಪ). (ನಾ). ೨. ಬಿಡಲ್ಪಟ್ಟವನು ; ತ್ಯಜಿಸಲ್ಪಟ್ಟವನು : ಭಕ್ತರಲ್ಲಿ, ನೆರೆ ಮುಕ್ತರಲ್ಲಿ, ಸಲೆ ಪರಿತ್ಯಕ್ತರಲ್ಲು ಒಂದೆ ಉಕ್ತಿ (ನಿಲುಮು. ೩೪-೧೬) ; ಕೊನೆಗೆ ಪ್ರಮಾಲೆಯಿಂದ ಪರಿತ್ಯಕ್ತನಾಗಿ ಕುಡಚಿ ಕಡಾಳದ ಮೇಲೆ ಹೊಡೆಯಿಸಿಕೊಂಡಾಗ (ಸಮಜೀ. ೧೦ ಪೀಠಿಕೆ). ೩. (ಆಸೆ ಮುಂತಾದುವನ್ನು) ಬಿಟ್ಟವನು; ತ್ಯಜಿಸಿದವನು: ಕೇಶವನುಮಾತ್ಮೀಯಗುರುವಿಯೋಗದೊಳ್ ಪರಿತ್ಯಕ್ತ ಸಕಲರಾಜ್ಯಪರಿಚ್ಛೇದಂ ಪ್ರವ್ರಜ್ಯಪದವಿಯೊಳ್ ಪರಿತ್ಯಕ್ತನುಮಾಗಿ ತದಚ್ಯುತಕಲ್ಪದೊಳ್ ಪ್ರತೀಂದ್ರನಾದಂ (ಅವಿಪು. ೬-೧೨ ಪ). [ಸಂ.]

ಪರಿತ್ಯಕ್ತೆ (ನಾ). ೧. ತಿರಸ್ಕಾರಕ್ಕೆ ಪಾತ್ರಳಾದವಳು ; ಉಪೇಕ್ಷೆಗೊಳಗಾದವಳು : ಈ ಕವಿಪರಿತ್ಯಕ್ತೆಯರ ಪೈಕಿ ಯಾರಿಗೆ ಯಾರು ತಮ್ಮ ಹೃದಯದಲ್ಲಿ ಆಶ್ರಯ ಕೊಡುತ್ತಾರೆಂಬುದು . . . ಅಭಿರುಚಿಯ ಮೇಲೆ ಹೋಗುತ್ತದೆ (ನಿಬಂಧ. II, ೩೫೩). ೨. ಗಂಡನಿಂದ ತಿರಸ್ಕೃತಳಾದವಳು ; ಗಂಡ ಬಿಟ್ಟವಳು. [ಸಂ. ಪರಿತ್ಯಕ್ತಾ]

ಪರಿತ್ಯಜನ (ನಾ). ಬಿಡುವುದು ; ತ್ಯಜಿಸುವುದು ; ಪರಿತ್ಯಾಗ : ಜೀವಂಗಳ್ . . . ನಾನಾಕಾರ ಶರೀರೋಪಾದಾನಪರಿತ್ಯಜನಪುರಸ್ಸರಂ ಪರಿಭ್ರಮಿಸುಗುಂ (ಅವಿಪು. ೧೬-೫೬ ಪ). [ಸಂ.]

ಪರಿತ್ಯಜಿಸು (ಕ್ರಿ). ಬಿಟ್ಟುಬಿಡು ; ವರ್ಜಿಸು ; ತ್ಯಾಗ ಮಾಡು : ಐಹಿಕವನ್ನು ಪರಿತ್ಯಜಿಸಬೇಕೆಂದು ಎಲ್ಲಿಯೂ ಹೇಳಿಲ್ಲ (ಅರ್ಥಪ. ೪೨) ; ನನ್ನನ್ನೇ ನಂಬಿ ನನ್ನನ್ನು ಹಿಂಬಾಲಿಸಿರುವ ಈ ನಾಯನ್ನು . . . ನಾನು ಪರಿತ್ಯಜಿಸಲಾರೆನು (ಹಿಂಕಿರು. ೧೩). [ಪರಿತ್ಯಜನ + –ಇಸು$_3$]

ಪರಿತ್ಯಾಗ (ನಾ). = ಪರಿತ್ಯಜನ : ಆಗಳಾ ಸ್ವಯಂಬುದ್ಧಂ . . . ಬಾಹ್ಯಾಭ್ಯಂತರಪರಿಗ್ರಹಪರಿತ್ಯಾಗಪುರಸ್ಸರಂ . . . ಪ್ರತ್ಯಾಖ್ಯಾನಮಂ ಕೊಟ್ಟು (ಅವಿಪು. ೨-೫೧ ಪ) ; ನೃಪನ ಮೂದಲೆ . . . ಪ್ರತಿಭಟರ ನಗೆ ಸೌಭಟಪರಿತ್ಯಾಗ . . . ಈ ಭೂಮಿಸರ ಮರಳಿಚತು (ಕುಪ್ಪಾಗ. ೧-೨೩); ಕಾವೇರಿಯ ಪವಿತ್ರಜಲಗರ್ಭದಲ್ಲಿ ಈ ದೇಹವನ್ನು ಪರಿತ್ಯಾಗ ಮಾಡುತ್ತೇನೆ (ತ್ರೈರಾಯ. ೨೦೮). [ಸಂ.]

ಪರಿತ್ಯಾಗಿ (ನಾ). ತ್ಯಾಗಮಾಡುವವನು ; ತ್ಯಜಿಸುವವನು : ಭವಿ ಸಂಸರ್ಗಪಥಸಂತತಪರಿತ್ಯಾಗಿ (ಬಸಪು. ೨೧-೩). [ಸಂ. ಪರಿತ್ಯಾಗಿನ್]

ಪರಿತ್ಯಾಜ್ಯ (ಗು). ಬಿಡಲು ಯೋಗ್ಯವಾದ ; ವರ್ಜಿಸಲು ತಕ್ಕುದಾದ. [ಸಂ.]

ಪರಿತ್ರಾಣ (ನಾ). ೧. ರಕ್ಷಣೆಮಾಡುವುದು ; ಕಾಪಾಡುವಿಕೆ ; ಸಂರಕ್ಷಣೆ : "ಪರ್ಯಾಪ್ತಿಃ, ಪರಿತ್ರಾಣಂ, ಹಸ್ತವಾರಣಂ—೩ . . . ರಕ್ಷಿಸುವದಕ್ಕೆ ಬೆಸರುಗಳು" (ಸಿದ್ಧಾಂತಿ. ೩೫೫) ; ಹರಿಯ ಪರಮಾಂಶದಲಿ ನೀನವತರಿಸಿದೆಯಲಾ ತಂದೆ ಗೋದ್ವಿಜಧರಣಿಧರ್ಮಾಮರ ಪರಿತ್ರಾಣಾರ್ಥದಲಿ ತನುವ ಧರಿಸಿ (ನಿಭಾಗ. ೪-೧೩-೨೦) ; ಈ ಸಣ್ಣ ಭರಣಿಯೊಳಗೇ ಆ ಸ್ವಧರ್ಮಸಂಪತ್ತು ರಕ್ಷಿಸಲ್ಪಟ್ಟು ಪರಿತ್ರಾಣವನ್ನು ಪಡೆಯುತ್ತದೆ (ನಿಬಂಧ. II, ೧೯೮). ೨. ರಕ್ಷಣೆ ಮಾಡಲು ಉಪಯೋಗಿಸುವ ಸಾಧನ ; ಕಾಪಾಡಲು ಬಳಸುವ ಸಲಕರಣೆ. ೩. ಆತ್ಮರಕ್ಷಣೆ. [ಸಂ.]

ಪರಿತ್ರಾಸ (ನಾ). ಹೆದರಿಕೆ ; ಅಂಜಿಕೆ : ಅಂತು ಪರಿತ್ರಾಸನಿರ್ಯಾತ ಕಿರಾತಸಂಜಾತಮೊಡವರೆ ಪನ್ನತಿಕೆಯಿಂ ಬರ್ಪಾಗಳ್ (ರಾಜಶೇ. ೫-೧೨೦ ಪ). [ಸಂ.]

ಪರಿದರ (ನಾ). ಒಸಡಿನ ಚರ್ಮವು ಸುಲಿದು ಹೋಗಿ ರಕ್ತವು ಒಸರುವ ಬಂದು ಬಗೆಯ ರೋಗ : ಪರಿದರ ಎಂಬ ದಂತಮೂಲ ರೋಗದಲ್ಲಿ ಎಣರುಗಳು ಒಡೆದು ಅವಾಗಲೂ ಬಿಡದೇ ರಕ್ತ ಸುರಿವದು (ವೈದ್ಯಸಾ. II, ೧೨೫). [ಸಂ.]

ಪರಿದಲಿತ, ಪರಿದಳಿತ (ಗು). ೧. ಪೂರ್ತಿಯಾಗಿ ಅರಳಿದ ; ಸಂಪೂರ್ಣವಾಗಿ ವಿಕಸನ ಹೊಂದಿದ : ಪರಿದಲಿ[ಪಾಠಾಂ. ಳಿ]ತ ಕಮಲದ ಕಂಪುಗಳ . . . ವೆಗ್ಗಳಿಕೆ ಝಳಪಿಸಿ ಹೊಯ್ದು ಸೆಳೆದುದು ಜನದ ಕಣ್ಮನಮ (ಕುಪ್ಪಾಅ. ೫-೮). **ಪರಿದಳಿತ** : ೨. ಸೀಳಿದ : ಪವನಬಲಪರಿದಳಿತಕದಳೀನಿವಹದಲಿ ನಭ ಧಾತುಗೆಟ್ಟುದು (ಕುಪ್ಪಾದ್ರೋ. ೩-೧೦) ; ಇಳಿದುದೀ ಕಣನೊಳಗೆ ದಿಗುಮಂಡಲದ ಸಂಧ್ಯಾರಾಗವೆನೆ ಪರಿದಳಿತ ಚದುರಂಗದಲಿ ಮುಸಗಿದುದರುಣಜಲರಾಶಿ (ಕುಪ್ಪಾದ್ರೋ. ೧೫-೨೬). [ಸಂ.]

ಪರಿದಳಿತ 'ಪರಿದಲಿತ' ನೋ.

ಪರಿದಳಿತಧರ್ಮ (ನಾ). ಧರ್ಮವನ್ನು ನಾಶಪಡಿಸುವವನು ; ಅಧರ್ಮಿ : ಶಿಶುಘಾತಕನ ಪರಿದಳಿತಧರ್ಮನ ಗತಿಗಳಲಿ ತಾನಿಳಿವೆನಿಂದೇ ಕೊಲ್ಲದಿರ್ದರೆ ಸೂತನಂದನನ (ಕುಪ್ಪಾಕ. ೧೮-೬). [ಪರಿದಳಿತ (= ಪರಿದಲಿತ) + ಧರ್ಮ]

ಪರಿದಾನ (ನಾ). ಅದಲು ಬದಲು ; ವಿನಿಮಯ. [ಸಂ.]

△ **ಪರಿದಾರಿ** 'ಹರಿದಾರಿ' ನೋ.

ಪರಿದಿಟ್ಟಿ (ನಾ). ಹರಿದಾಡುವ ದೃಷ್ಟಿ ; ಚಂಚಲವಾದ ನೋಟ : ತರುಣಹರಿಣಗಣಕ್ಕೆ ಸರಸೇಕ್ಷಣದ ಸವಿನೋಟಮನುಸಪದೇಶಿಪಂತೆ ದೆಸೆ ವಡೆದು ಮುರಿದಿಟ್ಟ ಪರಿದಿಟ್ಟ ನೆಜ್ಜೆ ಮೆಜ್ಜೆಯ (ರಾಜಶೇ. ೧-೧೩೫ ಪ). [ಪರಿ$_2$ + ದಿಟ್ಟಿ]

ಪರಿದೇವ (ನಾ). = ಪರಿದೇವನ : ಜಾತಿಕಾರಣವಾಗಿ ಜರಾ–ಮರಣ–ಶೋಕ–ಪರಿದೇವ . . . ಸಂಭವಿಸುವುವು (ಬುದ್ಧಪ. ಮಿಲಿಂದ. ೬೯). [ಸಂ.]

ಪರಿದೇವನ (ನಾ). ಪ್ರಲಾಪ ; ವಿಲಾಪ : "ಕ್ರಂದಿತಂ, ರುದಿತಂ, ವಿಲಾಪಃ, ಪರಿದೇವನಂ–ಈ ೪ ಅಳ್ಕೆ" (ಹಲಾಯು. ೧೦೫–೧೬); ಪರಿದೇವನ ಪ್ರಚುರಹಾಹಾರಾವಮುಂ ಶೋಕವಿಹ್ವಲದಿಂ ಕೂಟ್ಟುದಿಗೊಂಡುದಾ ಕುರುಕುಲಕ್ಷ್ಮಾಪಾಲನಂತಃಪುರಂ (ಗದಾಯು. ೧೦–೧೩) ; ಕುಟಲದಿಂ ಹರಿಸೇನೆಯುಂ ನೋಡಲ್ಕೆತಂದ ಚಟುಲವಿಕ್ರಮಶುಕನ ಪರಿದೇವನವ

ನೋಡಿ (ವೆಂಕಾರಾ. ೬-೬ ಸೂಚನೆ). [ಸಂ.]

ಪರಿದೇವನಂಗೈ (ಕ್ರಿ). ರೋದಿಸು ; ಗೋಳಾಡು : ದನುಜಾನ್ವಯದ ಪಂಪಾಲನೆಯು ಸತ್ಕೀರ್ತಿ ನಿನಗಡಸವೇಳ್ಕೆಯುತ ಪರಿದೇವನಂಗೈದನಾ ದೈತ್ಯಕುಲನಾಥನು (ವೆಂಕಾರಾ. ೬-೨೬-೨೪).

[ಪರಿದೇವನ+ಗೈ (<ಕೆಯ್,)]

ಪರಿಧಾನ (ನಾ). ೧. (ವಸ್ತ್ರ ಮುಂತಾದುವನ್ನು) ಉಡುವುದು ; ಧರಿಸುವುದು. ೨. ವಸ್ತ್ರ ; ಉಡುಪು : "ಉಪಸಂವ್ಯಾನಂ, ಪರಿಧಾನಂ, ಅಂತರೀಯಂ, ನಿವಸನಂ—ಈ ೪ ಉಟ್ಟುದು" (ಹಲಾಯು. ೧೦-೨೯) ; ಕಂಬುಲತಾಸುಲಲಿತಲವಣಾಂಬುಧಿ ಪರಿಧಾನನಾಗಿ ಚೆಲ್ವಂ ಪಡೆದೀ ಜಂಬೂದ್ವೀಪಪ್ರಭುಗಿದು ಪೊಂಬೆಸದೊಳೆ ಸಮೆದ ಮಳುಟ ವಿರ್ಪಂತಿರ್ಪುಂ (ಆದಿಪು. ೭-೬೨) ; ಪರಿಧಾನಮುಂಡವಸ್ತ್ರಂ . . . ಕರದ ಳಮಂಡಲು ತೋಧಿಸುತಿರೆ ನಾರದನಿಬ್ಬುದು ಬಂದು ನೀರದಪಥದಿಂ ಮುರರಿಪುವಂ . . . ಪರಸುತ್ತುಂ (ಪಾಹಾನೇ. ೭-೪೨) ; ದಿಗದ ರೂಪಂ ತಾಳಿಯೋಡುತಿರ್ಪಾ ಹರಿಯ . . . ತೊಗಲ ತೆಗೆದುಟ್ಟನಾ ಪರಮೇಶ್ವರಂ ಶಂಕರಂ ಶಶಿಧರಂ ಬಗೆದಿವಂ ಪರಿಧಾನಮುಂ ಮಾಡಿ (ಆರಾಚ. ೩-೧೨-೪). ೩. ಮೇಲುಡುಪಿನ ಒಳಗೆ ತೊಡುವ ವಸ್ತ್ರ,—ಬಟ್ಟೆ ; ಒಳ ಉಡುಪು. ೪. ಖಡ್ಗದ ಒರೆ. ೫. ಉಪಾಯನ ; ಕಾಣಿಕೆ ; ಉಡುಗೊರೆ : ಜನ್ಮೋತ್ಸವಂತಂಗೆ ಪರಿಧಾನಮನಿತ್ತು ಒಳಗು ಮಾಡಿ ಕೊಂಡು ಶಿವಪ್ಪನಾಯಕನಂ ಕೈವಶಮಂ ಮಾಡಿಕೊಳಬೇಕೆಂದು (ಕಳಸ್ಯ. ೬-೩೭) ; ತೋಂಟಿಯಂ ವೇಧ್ಯೆಸಿದ ಗುರಿಮಾನಸರ್ಗಂ ಮತ್ತಂ ಕೆಲಂಬರ್ಪಾಯೋಗಿಗಳ್ಗಂ ಪರಿಧಾನವನಿತ್ತು (ಕಳಸ್ಯ. ೬-೪೬). ೬. ಆವರಣ ; ಪರಿಧಿ: ಪರಿಧಾನದಿ ಸುರಿಯುತಿರೆ ತುಂಬುವೆರೆಯ ಕಿರಣ ರಾಶಿ (ಚಂತಸ. ೩-೭). ೭. ನೋಟ; ದೃಶ್ಯ: ಬೆಳಗಾಗಲು ವಾರಿಧಿಯು ಹೊಂಬಸಿರನೊಡೆದು ಬರುವ ದಿವ್ಯಕರೀ ದಿನಮಣಿ, ಕಣ್ಣುಳಟ್ಟಾದ ಪರಿಧಾನ—ಇವುಗಳನ್ನೆಲ್ಲ ನೋಡಿ ಮೊದಲೆಂದಿಗೂ ತೋರದ ಬಾಳಿನ ಹಿಂಪೆಯೊಂದು ಅವನ ಮನದಲ್ಲಿ ಮನೆಮಾಡಿಕೊಂಡಿತು (ಸಮುಜೀ. ೫೯೨). [ಸಂ.]

ಪರಿಧಾನಕ (ನಾ). ಉಡುಪು ; ವಸ್ತ್ರ : ಪಿಸಾನ ಚಿಪ್ಪಿನ ಲೋಹಬದ್ಧದ ಚೀನಗೆಲಸದ ಮೃಗನಖದ ಪರಿಧಾನಕದ ಪಾರಿಯದ . . . ಕೈನೆಗಹಿ ನುಬ್ಬಾದ ಚೂರಿತಮಾನ ಕಳ್ಕಸದಸುರರಾವ್ರರು ಬಳಸಿದರು ಪಿಳಿನ (ತೊರರಾ. ೬-೨೯-೧೬). [ಸಂ.]

ಪರಿಧಾನಿಸು (ಕ್ರಿ). ಧಾರಣೆ ಮಾಡು ; ಧರಿಸು : ವಿಶ್ವಾತ್ಮಕನು ಸರ್ವಾಗಳನ್ನು ರತ್ನಾಭರಣಗಳನಥವಾ ಮಳುಟ ಪರಿಧಾನಿಸಿದರೇನು . . . ಸರ್ವೇಶ್ವರನ ರೂಪದ ಜ್ಞಾನವಾಗುವದೆ (ಪಾಪ್ರಪ. ೨-೬೯).

[ಪರಿಧಾನ+ಇಸು,]

ಪರಿಧಾವನ (ನಾ). ೧. ವೇಗವಾಗಿ ಓಡುವುದು ; ರಭಸವಾದ ಓಟ : ಸ್ವಕೀಯಪರಿಧಾವನವೇಗವಿಘಟಿತವೈರಿಬಾಲಶಕಟನೆಂಬ ಶಕಟ ನುಮಂ . . . ಕರೆದು (ಜಗದಿ. ೩-೨೨ ಪ) ; ಪರಿಧಾವನೋದ್ಗತ ಧೂಳಿ ಮುಸುಕಿತು ತರಣಿಮಂಡಲವ (ಕುವ್ಯಾಕ. ೩-೩). ೨. ಬಹಳವಾಗಿ ಉಜ್ಜುವುದು. [ಸಂ.]

ಪರಿಧಾವನೆ (ನಾ). = ಪರಿಧಾವನ ೧ : ದುರಿಯೋಧನಾನುಜರು ತೇರ ಸೂತನ ಸೂಚನೆಯು ಚೀತ್ಕಾರ ಪರಿಧಾವನೆಯು ಧೂಳಿಯಲೋರಣದ ಭಾರಣೆಯಲ್ಕೈದಿದರನಿಲನಂದನನ (ಕುವ್ಯಾಕ. ೧೯-೨೧). [ಸಂ. ಪರಿಧಾವನ]

ಪರಿಧಾವಿ (ನಾ). ೧. ಜೋರಾಗಿ ಓಡುವುದು. ೨. ಅರುವತ್ತು ಸಂವತ್ಸರಗಳಲ್ಲಿ ನಲವತ್ತಾರನೆಯದು : ಪರಿಧಾವಿ ಸಂವತ್ಸರದ ಆಷಾಢದ ಪೂರ್ಣಿಮೆ ××× ದಕ್ಷಿಣಾಯನಸಂಕ್ರಾಂತಿಯ ಪರ್ವದಲು ××× (ಕೊಲ್ಹಾಶಾ. ೧೦-೪೧ ; 1192). [ಸಂ. ಪರಿಧಾವಿನ್]

ಪರಿಧಾವಿಸು (ಕ್ರಿ). ಜೋರಾಗಿ ಓಡು : ಆವಾವ ದಿಕ್ಕಿನೊಳಮಾವಗಂ ಬೆದಕಿ ಜೀವ ಪರಿಧಾವಿಪವೊಲ್ (ಮುಂಕುಳ. ೨೨೨).

[ಪರಿಧಾವನ+ಇಸು,]

ಪರಿಧಿ (ನಾ). ೧. ಗೋಡೆ, ಆಳ್ವೇರಿ ಮುಂತಾದ ಸುತ್ತುಗಟ್ಟಿರುವ ಆವರಣ : "ಪರಿಧಿ ಪ್ರಾಕಾರ ವಪ್ರನಾಮಂ" (ಪಸ್ತು ಕೋ. ೪೬-೬) ; ಪರಿಧಿಯ ಶಿಖರಂಗಳ ಪದ್ಮರಾಗರುಚಿ ಪುದಿದ ತಕ್ಕುರೀವರದ ಪಯಃಪರಿಪಾ ವಳಯಂ ಮಿಗೆ ಬಿತ್ತರಿಪುದು ಪಗಲೊಳಮುದಭ್ರಸಂಧ್ಯಾಭ್ರಮನುಂ (ಸಧಪು. ೧೩-೨೪) ; ಪೊಳೆವ ನೀಲದ ಭಿತ್ತಿ ಸ್ವರ್ಗಗಳೊಳಗೆ . . . ಸ್ಫಟಿಕದಲಿ ಪರಿಧಿಗಳಿಪವು ಒಂಭತ್ತು (ಬಜ್ಜಪು. ೧೨-೫೧). ೨. ಚಂದ್ರ ಅಥವಾ ಸೂರ್ಯನ ಸುತ್ತ ಇರುವ ಪ್ರಭಾಮಂಡಲ ; ಪರಿವೇಷ: "ಪರಿಧಿಃ, ಪರಿವೇಷಃ (ಸ್ಯಾತ್), ಮಂಡಲಂ, ಉಪಸೂರ್ಯಕಃ—ಈ ೪ ಪರಿವೇಷದ ಪೆಸರ್" (ಹಲಾಯು. ೪-೪೧) ; ವಳಯವೇಳಜ ಕೋಟಿ ಚಂದ್ರನ ಬಳಸಿ ತೋನುವ ಪರಿಧಿಯಂತದೆ ಸಿಳಯವವೆ ತಾರಾಗ್ರಹಂಗಳ ಬಹಳ ತೇಜದಲಿ (ತೊರರಾ. ೬-೫೪-೧೫). ೩. ವೃತ್ತದ ಆವರಣ ರೇಖೆ ; ಮಂಡಲದ ಸುತ್ತುಗೆರೆ. ೪. ಪವಿತ್ರವಾದ ಹೋಮಾಗ್ನಿಯ ಸುತ್ತಲೂ ಇಟ್ಟಿರುವ ಸಮಿತ್ತು. ೫. ಸುತ್ತಲಿನ ಮೇರೆ,—ಎಲ್ಲೆ : ನಾನೆನುವ ಕೇಂದ್ರದಿನೆ ಹೊರಟೆ ಸತ್ತ್ವದ ಪರಿಧಿ ಬಾನಾಡಿ ಹಬ್ಬಿಹುದೊ ? (ಮುಂಕುಳ. ೧೩೮) ; ರಸ್ಮಿತಿಯಲ್ಲಿ ಈ ಇರವಿನ ಪರಿಧಿಗೆ ನಾವು ಸಲ್ಲುತ್ತೇವೆ (ಕಾವ್ಯಕು. ೩೭). ೬. ವೃತ್ತ ; ಮಂಡಲ : ವಿಗತ ದಿಗಿಭವಾಶಾವೇತವಸ್ತ್ರಂಗತಾರ್ಕಂ ಗಗನಪರಿಧಿ ಯಾತಪ್ರಾಣವಾತಂ ಶರೀರಂ ಸೊಗಯಿಸದವೊಲ್ (ಪಂಚಾಮಾ. ೬-೧೫೬) ; ಒಂದು ರೇಖೆಯಿಂದ ಸುತ್ತಲ್ಪಟ್ಟುದಿರುವ ಪ್ರದೇಶವನ್ನು . . . ವರ್ತುಳ, ಪರಿಧಿ-ಮ-ವೃತ್ತವೆಂದು ಹೇಳುವುದು (ಭೂಮಿಅ. ೯). ೭. ದಿಕ್ಕಿನ ತುದಿ ; ದಿಗಂತ ; ಕ್ಷಿತಿಜ : ವಿಶ್ವಪರಿಧಿಯದೆಲ್ಲೊ ಸೂರ್ಯಚಂದ್ರರಿನಾಡೆ ವಿಶ್ವಕೇಂದ್ರವು ನೀನೆ (ಮುಂಕುಳ. ೧೩೬). ೮. ಚಕ್ರದ ಹೊರ ಅಂಚು; ನೇಮಿ. ೯. ಮರದ ಕೊಂಬೆಯ ತುದಿ,—ಮೊನೆ : "ಶಾಖೆಯ ಲ್ಲಿಯುಂ ಪರಿಧಿಯೆಂಬುದುಂ" (ಹಲಾಯು. ೧೩೪-೨೧) ; "ವೃಕ್ಷಶಾಖಾಗ್ರಮಂ ಪರಿಧಿಯೆಂಬುದುಂ" (ಮುಂಗರಾ. ೧೪೦-೧೧). ೧೦. ಹೊದಿಕೆ ; ಆಚ್ಛಾದನೆ. ೧೧. ಮರ ; ವೃಕ್ಷ. ೧೨. ನೀರು ; ಜಲ : "ಭೂಜ ಮಂಭಸ ಸಾಲಂ ಪರಿವೇಷಮುಂ ಪರಿಧಿಯುಳ್ಕು" (ನಾನಾರ್ಥ. ೧೨೨). ೧೩. [ಗಣಿತ] ಸುತ್ತಳತೆ : ದಿನಗತಿಯನ್ನು ದ್ವಿಗುಣಗೊಳಿಸಿದರೆ ಸೂಚೀ ಪ್ರಕ್ಷೇಪ ಸೂಚೀಪ್ರಕ್ಷೇಪವರ್ಗವನ್ನು ೧೦ ರಿಂದ ಗುಣಿಸಿ ವರ್ಗಮೂಲವನ್ನು ತೆಗೆದರೆ ಪರಿಧಿಯು ಬರುತ್ತದೆ (ತತ್ತ್ವಪ್ರ. ೩೦೦) ; ಜಂಬೂದ್ವೀಪವು ಒಂದು ಲಕ್ಷಯೋಜನ ವ್ಯಾಸವುಳ್ಳ ವೃತ್ತದ ಆಕಾರದಲ್ಲಿದೆಯೆಂದೂ, ಅದರ ಪರಿಧಿ (ಸುತ್ತಳತೆ) . . . ಸ್ವಲ್ಪ ಅಧಿಕ ಎಂದೂ ಹೇಳಿದೆ (ಗಣಚ. ೬೩). [ಸಂ.]

ಪರಿಧಿಗೊಳ್ (ಕ್ರಿ). ಸುತ್ತುಗಟ್ಟು ; ಬಳಸು : ಧಾರಿಣಿಯೆಂದೆಂಬ ವನಿತೆಯ ಮಧ್ಯದೆ ಸೇರಿದ ರತ್ನಮೇಖಲೆಯ ಚಾರುಶೃಂಗಾರದಂದದಲಿ ಪರಿಧಿಗೊಂಡು ಪಾರಾವಾರ ರಂಜಿಸಿತು (ಕಂಸವಿ. ೨-೩).

[ಪರಿಧಿ+ಕೊಳ್,]

ಪರಿಧಿಸ್ಥ (ನಾ). ೧. ವೃತ್ತಾಕಾರದಲ್ಲಿ ನಿಂತಿರುವ ಪಹರೆಯವರ ಸಮೂಹದ ಒಬ್ಬಾತ : ಪರಿಧಿಸ್ಥಃ, ಪರಿಚರಃ,—೨ ದಂಡಿನ ಸುತ್ತಲೂ ಕಾದಿರುವ ಭೌಜು, ಕಾವಲ್‌ಜನರ ಹೆಸರುಗಳು" (ಸಿದ್ಧಾಂಶಿ. ೨೫೫). ೨. ಯುದ್ಧದಲ್ಲಿ ರಾಜನ ರಕ್ಷಣೆಗಾಗಿ ಸುತ್ತಲೂ ನಿಲ್ಲುವ ಸೈನ್ಯದ ಸೈನಿಕ. ೩. ವೈಗಾವಲಿನವನು ; ಅಂಗರಕ್ಷಕ.

೪. ಸೇನಾಪತಿಯ ಅಥವಾ ರಾಜನ ಆಜ್ಞೆಯನ್ನು ಇತರರಿಗೆ ತಲುಪಿಸುವುದು ಮುಂತಾದ ಕಾರ್ಯಗಳನ್ನು ಮಾಡಲು ಸಹಾಯಕನಾಗಿರುವ ಅಧಿಕಾರಿ. [ಸಂ.]

ಪರಿಧೂತ (ಗು). ನಿವಾರಿತವಾದ; ಬಿಡಲ್ಪಟ್ಟ; ಪರಿತ್ಯಕ್ತ: ಪರಿಧೂತಕೇತುಧೀತಂ ಕುರಂಗನಪಹರಿಸೆ ಮುದವನೆಯ್ದುವಂ . . . ಚಂದ್ರಂ (ಅಸಂಪು. ೧-೧೦೫). [ಸಂ.]

ಪರಿಧೌತ (ಗು). ೧. ತೊಳೆದ; ಸ್ವಚ್ಛಗೊಳಿಸಿದ: ಪರಿಧೌತಪದಾಸ್ಯೆಯಾಗಿ ವಿಶ್ರುತೆ ಕಳಭಾಷಿಣಿ . . . ಪೊಱಮಟ್ಟಳಟ್ಟುಯಿಂ (ಕುಸುಮಾ. ೧೨-೬). ೨. ಅತ್ಯಂತ ಶುದ್ಧವಾದ; ಧವಳ. ೩. ಪವಿತ್ರವಾದ: ಪಸರಿಸಿದ ಪರಿಧೌತಕೀರ್ತಿಪ್ರಸರದಲಿ ಬೆಳುವಾಯ್ತು ಜಗ (ಕುವ್ಯಾಅ. ೪-೫). (ನಾ). ೪. ಪವಿತ್ರವಾದುದು; ಪುನೀತವಾದುದು: ಪ್ರಜ್ಞೆ ಶೀಲದಿಂದ ಪರಿಧೌತವಾಗುವುದು, ಪ್ರಜ್ಞೆಯಿಂದ ಶೀಲ ಪರಿಧೌತವಾಗುವುದು (ಬುದ್ಧಪ. ೧೨೬). [ಸಂ.]

ಪರಿನರ್ತನ (ನಾ). ವಿಶೇಷವಾದ ನೃತ್ಯ,—ನಾಟ್ಯ: ಪರಿನರ್ತನಂಗೆಯ್ವುತಿರೆ ನವಿಲು (ರಾಭಿಚ. ೧೭-೭೧). [ಸಂ.]

ಪರಿನಾಳ (ನಾ). ನೀರು ಹರಿದುಹೋಗಲು ಮಾಡಿರುವ ಕೊಳವೆ: ಕರೆಗಣ್ಮುವ ನಿಜಲಾವಣ್ಯರಸಂ ಪರಿನಾಳಮಿಕ್ಕಿದತ್ತೆನೆ ತಂದಳ್ಪುರಸುಂದರಿ ಚಂದನರಸಭರಿತಾಯತಕೇತಕೀದಳದ್ರೋಣಿಗಳಂ (ಪಂರಾಮಾ. ೧೬-೯೦).

[ಪರಿ$_2$+ನಾಳ$_1$(=ನಾಲ$_1$)]

ಪರಿನಾಳಿಕೆ (ನಾ). =ಪರಿನಾಳ: ಅಪರಿಮಿತಂ ಪೊಣ್ಮುವ ಬಾಷ್ಪಪಯೋಧಾರಾಳಿ ಪರಿವ ಪರಿನಾಳಿಕೆಯೊಂದುಸಮೆಗೆ ಬಂದಿರ್ದುದು ಕರ್ಣಪೂರನವಕೇತಕೀದಳಂ ಕಾಮಿನಿಯಾ (ಕಾದಂಬ. ೨೨೪).

[ಪರಿ$_2$+ನಾಳಿಕೆ (=ನಾಲಿಕೆ)]

ಪರಿನಾಳಿಗೆ, ಹರನಾಳಿಗೆ, ಹರಿನಾಳಿಗೆ (ನಾ). =ಪರಿನಾಳ: (ಪ್ರಧಾಣ). **ಹರನಾಳಿಗೆ:** "ಪ್ರಣಾಲ—ನೀರ ಹರನಾಳಿಗೆ" (ಗಂಗಾಮಾ. ೨೧೯); ಕಾರೋಗೇಟೆಡ್ ಆಯರ್ನಶೀಟ್ ಹರನಾಳಿಗೆಯ ತಗಡುಗಳು (ಮುಂಬಪ್ಪಾ. ೩೮ ಪ್ರಸ್ತಾವನೆ); ಹರನಾಳಿಗೆಯಿಂದ ನೀರು ಜೋರಾಗಿ ಬೀಳುತ್ತಿದ್ದುದನ್ನು ನೋಡಿ ಮಕ್ಕಳು ಕುಣಿಯುತ್ತಿದ್ದರು (ರೂಢಿ). **ಹರಿನಾಳಿಗೆ:** ಸುಮಾರುವೊಂದು ಮೊಳ ಅರ್ಧವರ್ತುಲಾಕೃತಿಯ ಹರಿನಾಳಿಗೆಯಂತೆ ನೆಗ್ಗನ್ನು ಕಟ್ಟಿಯೊಳಗೆ ಬುಡದಿಂದ ಮೇಲಿನವರೆಗೆ ಹಾಕುವರು (ಕಳಭಾಗ. ೨೭); ಬಂಗಲೆ ಮಾತ್ರ ಸ್ವಲ್ಪ ಹಳೆಯ ತರದ್ದೆಂದೇ ಹೇಳಬೇಕು. ಕರಿಯ ಹರಿನಾಳಿಗೆಯಾಕಾರದ ಹಂಡುಗಳನ್ನೇ ಹೊಚ್ಚಿದ್ದಾರೆ (ಭೂಮಿತಾ. ೮೭). [<ಪರಿನಾಳಿಕೆ]

ಪರಿನಿರ್ಮಲ (ನಾ). ಬಹಳ ಸ್ವಚ್ಛವಾದುದು,—ಶುದ್ಧವಾದುದು: ಪರಿನಿರ್ಮಲವಾದ ಕನ್ನಡಭಾಷೆಯಲ್ಲಿ ವಿವರಿಸುವ ಕಲೆಗಾರಿಕೆ ಡಿ.ವಿ.ಜಿ. ಅವರಲ್ಲಿ ಸಿದ್ಧಿಯನ್ನು ಕಂಡಿದೆ (ಸುವರ್ಣ. ೨೧೬). [ಸಂ.]

ಪರಿನಿರ್ಮಾಣ (ನಾ). ಚೆನ್ನಾದ ರಚನೆ,—ನಿರ್ಮಾಣ: 'ಪರಿನಿರ್ಮಿಸು' ಪರಾ. [ಸಂ.]

ಪರಿನಿರ್ಮಿತ (ಗು). ೧. ಚೆನ್ನಾಗಿ ರಚಿಸಲ್ಪಟ್ಟ: ಮತ್ತಂ ಮಿಥ್ಯಾವಿರತಿಪ್ರಮಾದಕಷಾಯಯೋಗಾಭಿಧಾನಬಂಧಹೇತೂಚ್ಚನೀಚಕರ್ಮ ಪರಿನಿರ್ಮಿತಚತುರ್ಗತ್ಯುಪಲಕ್ಷಿತಂ (ಶಾಂತಿಪು. ೬-೪೯ ವ); ಜಿತವಿಶ್ವಕರ್ಮ ಪರಿನಿರ್ಮಿತಕೃತಿಯಂ ತ್ರಿಃಪ್ರದಕ್ಷಿಣಂಗೆಯ್ದು (ಶಾಂತಿಪು. ೮-೧೫೭). (ನಾ). ೨. ಚೆನ್ನಾಗಿ ರಚಿತವಾದುದು: ಬಾಹುಬಲಿಪಂಡಿತದೇವ ಪರಿನಿರ್ಮಿತಮಪ್ಪ ಧರ್ಮನಾಥಪುರಾಣದೊಳ್ . . . ಪರಿವ್ಯಾವರ್ಣನಂ (ಬಾಧಪು. ೧೬-೪೩೩ ವ). [ಸಂ.]

ಪರಿನಿರ್ಮಿಸು (ಕ್ರಿ). ರಚಿಸು; ನಿರ್ಮಾಣ ಮಾಡು: ಪರಿನಿರ್ಮಿಸಿದತ್ತೊ ಪಂಚರತ್ನದಿನಮರೇಂದ್ರಚಾಪನಿಕುರುಂಬಕದಿಂ ಪೆಚೆದತ್ತೊ ಚಿತ್ರಮಿಂತಿದು ಬಗೆಗೆಂದಿನಂ . . . ಎಸೆದತ್ತು ಕೀರಿಕಿಕಹಂಸನಿನಾದವಿಡಂಬನಂ ಬನಂ (ಜಗವಿ. ೧೦-೫೫); ಪರಿನಿರ್ಮಿಪ ಮಾಱುಡುವ . . . ಶಿಲ್ಪದ ಮೂಲದ ನರನಂ ಪೇಟ್ಟಲ್ಲಿ ಮಾಟ್ಟುಗ ಪ್ರತ್ಯಯಮಂ (ಪಮದ. ೧೯೬); ಸುರಪುರಕಾಂ ಪೋಗಲೊಡಂ ಪುರವರಮಂ ನೀಂ ವನಾಂತರಾಳದೊಳೆಸೆ ಪರಿನಿರ್ಮಿಸಿರಿಂ (ಸೌಂದ. ೧-೩೩). [ಪರಿನಿರ್ಮಾಣ+-ಇಸು$_3$]

ಪರಿನಿರ್ವಾಣ (ನಾ). ೧. [ಜೈನ] ಪಂಚಕಲ್ಯಾಣಗಳಲ್ಲಿ ಒಂದು; ಅರ್ಹಂತನ ದೇಹಾವಸಾನ: ಇತ್ತ ಚತುರ್ನಿಕಧದೇವನಿಕಾಯಮುಂ ಪುರುದೇವಪರಿನಿರ್ವಾಣಮಹಾಕಲ್ಯಾಣಪೂಜಾನಿರ್ವರ್ತನಾಭಿಲಾಷಿಯಾಗಿ (ಆದಿಪು. ೧೬-೫೧ ವ); ಪರಿನಿರ್ವಾಣಮನೆಯ್ದಿದರ್ಮುದದೆ ಪತ್ತೊಂಬತ್ತು ಮುಂ ತೀರ್ಥಕೃದ್ವರರ್ (ಪಾರ್ಶ್ವಪು. ೧೬-೧೬೬); ಪರಿನಿರ್ವಾಣನಿವಾಸಲಕ್ಷ್ಮಿಯ ವಿವಾಹೋತ್ಸಾಹಮಂ ತಾಳ್ದಿದೀಶ್ವರಂ . . . ನಿರಂತರಮೊಲ್ದೀಗೆ ವಿನೇಯಸಂತತಿಗೆ . . . ಜಗಚ್ಛ್ರೀಯಮಂ (ಅಸಂಪು. ೧೪-೭೩). ೨. [ಬೌದ್ಧ] ಬುದ್ಧನ ಇಹಲೋಕಪರಿತ್ಯಜನ,—ನಿರ್ಯಾಣ: ಇಂದು ರಾತ್ರಿಯಂತಿಮಯಾಮದಲಿ ತಥಾಗತನ ಪರಿನಿರ್ವಾಣವಾಗಲಿಹುದೆಂದರುಹಿ ಬಾರ! (ವೈತಾಪಿ. ೭೮-೩೮೯); ಅಜಾತಶತ್ರು ಪಟ್ಟಕ್ಕೆ ಬಂದ ಎಂಟನೇ ವರ್ಷದಲ್ಲಿ ಬುದ್ಧನ ಪರಿನಿರ್ವಾಣ ನಡೆಯಿತು (ಹತ್ತುಮ. ೭೦). [ಸಂ.]

ಪರಿನಿರ್ವಾಣಕಲ್ಯಾಣ (ನಾ). [ಜೈನ] ತೀರ್ಥಂಕರನಿಗೆ ನಡೆಸುವ ಪಂಚಕಲ್ಯಾಣಗಳಲ್ಲಿ ಕೊನೆಯದು; ಅರ್ಹಂತನ ದೇಹಕ್ಕೆ ಮಾಡುವ ಅಂತಿಮಸಂಸ್ಕಾರ: ಆಗಳ್ ಪರಿನಿರ್ವಾಣಕಲ್ಯಾಣ ಸೂಚನಾಚಿಹ್ನಂಗಳ್ ತಂತಮ್ಮ ಲೋಕಂಗಳೊಳ್ ನೆಗೆಟೆ (ಶಾಂತಿಪು. ೧೨-೩೪ವ); ಅಮರನಿಕಾಯಂ ಸುವಿಧೀಶ್ವರಂಗೆ ಪರಿನಿರ್ವಾಣಕಲ್ಯಾಣ ಮಹಾಪೂಜೆಯಂ ಮಾಟ್ಟಿ ಭಕ್ತಿಯಿಂ ಬಂದು (ಪುಷ್ಪಪು. ೧೪-೫೩ ವ). 'ಪಂಚಕಲ್ಯಾಣ' ಪರಾ. [ಪರಿನಿರ್ವಾಣ+ಕಲ್ಯಾಣ]

ಪರಿನಿರ್ವಾಣಕ್ರಿಯೆ (ನಾ). [ಜೈನ] ತೀರ್ಥಂಕರನು ದೇಹತ್ಯಾಗ ಮಾಡಿದ ಸಂದರ್ಭದಲ್ಲಿ ಅತನಿಗೆ ಮಾಡುವ ಆರಾಧನೆ,-ಉತ್ಸವ: ಪರಿನಿರ್ವಾಣಕ್ರಿಯೆಯಂ ಪರಮೋತ್ಸವದಿಂದೆ ತೀರ್ಚಿ ಸಕಳವಿನೇಯೋತ್ಕರಮಂದು ನಯದೆ ನಿಜನಿಜಧರೆಗಳ್ಗಲ್ಲಿಂದೆ ತಳರ್ದು ಪೋಯ್ತು ಕೃತಾರ್ಥಂ (ಪರ್ಧಪು. ೧೬-೮೩). [ಪರಿನಿರ್ವಾಣ+ಕ್ರಿಯೆ]

ಪರಿನಿರ್ವಾಣಕ್ಷೇತ್ರ (ನಾ). [ಜೈನ] ತೀರ್ಥಂಕರನು ದೇಹತ್ಯಾಗ ಮಾಡಿದ ಸ್ಥಳ; ಪರಿನಿರ್ವಾಣ ಹೊಂದಿದ ಸ್ಥಳ: ತ್ರಿಜಗತ್ಪೂಜ್ಯನೆನಿಸಿದ ಶ್ರೀವಾಸುಪೂಜ್ಯಭಟ್ಟಾರಕರ ಪರಿನಿರ್ವಾಣಕ್ಷೇತ್ರಮಂ ಕಂಡು (ಸುಕುಮಾ. ೪-೪೬ ವ). [ಪರಿನಿರ್ವಾಣ+ಕ್ಷೇತ್ರ]

ಪರಿನಿರ್ವಾಣವಡೆ 'ಪರಿನಿರ್ವಾಣವಡೆ' ನೋ.

ಪರಿನಿರ್ವಾಣಪೂಜೆ (ನಾ). =ಪರಿನಿರ್ವಾಣಕ್ರಿಯೆ: ವಿನಯಂಧರಯೋಗಿಗಳ ಪರಿನಿರ್ವಾಣಪೂಜೆಯಂ ಮಾಡಿ (ಆದಿಪು. ೩-೫೮ ವ); ಮಹೀಧರನುಂ. . . ಪಡುವಣದೆಸೆಯ ದೇವದಾರುವನದೊಳು ವಿನಯಂಧರಯೋಗಿಗಳ ಪರಿನಿರ್ವಾಣಪೂಜೆಯಂ ಮಾಡಿ (ಚಾವುಂಪು. ೨೦).

[ಪರಿನಿರ್ವಾಣ+ಪೂಜೆ]

ಪರಿನಿರ್ವಾಣಮಹೋತ್ಸವ (ನಾ). =ಪರಿನಿರ್ವಾಣಕಲ್ಯಾಣ: ಸುರಲೋಕಾವತರೋತ್ಸವಂ . . . ಪರಿನಿರ್ವಾಣಮಹೋತ್ಸವಂ ಜಿನಕಲ್ಯಾಣಮಯ್ದುಂ ಸವಿಸ್ತರದಿಂದರ್ಪುವು ವರ್ಣಕಂಗಳಿವಱಂ ಧನ್ಯಾಂಗಮೇನೊಪ್ಪದೇ (ಅಜಿಪು. ೧-೯೫). [ಪರಿನಿರ್ವಾಣ+ಮಹೋತ್ಸವ]

ಪರಿನಿರ್ವಾಣವಡೆ, ಪರಿನಿರ್ವಾಣಪಡೆ (ಕ್ರಿ). ಮೋಕ್ಷವನ್ನು ಹೊಂದು: ತಥಾಗತಂ . . . ಈ ರಾತ್ರಿಯಂತಿಮಯಾಮದಲ್ಲಿ ಪರಿನಿರ್ವಾಣ

ವಡೆದಪಂ (ಸೈಕಾಪಿ. ೭೮-೩೯೬). **ಪರಿನಿರ್ವಾಣಪಡೆ** : ಬುದ್ಧನು ಪರಿನಿರ್ವಾಣಪಡೆದ ನೂರುವರ್ಷಗಳ ವೇಳೆಗೆ ಮೂಲಸಂಘವು ಎರಡಾಗಿ ಒಡೆಯಿತು (ಭಾರದ. ೨೦೪). [ಪರಿನಿರ್ವಾಣ + ಪಡೆ$_1$]

ಪರಿನಿರ್ವೃತಿ (ನಾ). = ಪರಿನಿರ್ವಾಣ ೧ : ಸರ್ವಾಂಗಮಲಧರಂ ಪರಿನಿರ್ವೃತಿಸೌಖ್ಯೋನ್ಮುಖಂ . . . ಋಷಿಯಿರ್ದನಾತ್ಮಗುರುಸೌಹಾರ್ದಂ (ಚಂದ್ರಪು. ೯-೨೦). [ಸಂ.]

ಪರಿನಿರ್ವೃತಿಭೂಮಿ (ನಾ). = ಪರಿನಿರ್ವಾಣಕ್ಷೇತ್ರ : ಅಗ್ರಮಂದಿರೋಪಾಂತಮನೆಯ್ದುವಂದು ಪರಿನಿರ್ವೃತಿಭೂಮಿಯನಾ ಸುರೋತ್ತಮಂ ಸಂತಸದಿಂದೆ ಭಕ್ತಿವೆರಸಾಗಳ್ ಪೂಜಿಸಿ (ಸುಕುಮಾ. ೯-೩೧).

[ಪರಿನಿರ್ವೃತಿ + ಭೂಮಿ]

ಪರಿನಿರ್ವೃತಿಸು (ಕ್ರಿ). = ಪರಿನಿರ್ವಾಣವಡೆ : ತಥಾಗತನೆಮ್ಮ ನಗರದೊಳ್ ಪರಿನಿರ್ವೃತಿಸಿದನಾದೊಡಮೆಮಗೆ ಅವನ ಪಶ್ಚಿಮದರ್ಶನಂ ಕಟಾಲಭಿಸಿಲ್ಲ ! (ಸೈಕಾಪಿ. ೭೮-೩೯೮). [ಪರಿನಿರ್ವೃತಿ + -ಇಸು$_3$]

ಪರಿನಿರ್ವೇಗ (ನಾ). ೧. ಪೂರ್ಣವಾದ ವಿರಕ್ತಿ ; ಪರಮವೈರಾಗ್ಯ. ೨. ಪರಮವೈರಾಗ್ಯವನ್ನು ಹೊಂದಿದವನು ; ವಿರಕ್ತ : ಸಂಸಾರಶರೀರಭೋಗಪರಿನಿರ್ವೇಗಂ ತಪಃಪ್ರೀತಿಯಿಂ ತೊಟ್ಟಲ ಮಗಂಗೆ ಪಟ್ಟಂಗಟ್ಟಿ . . . ಜಿನದೀಕ್ಷೆಗೊಂಡಂ (ಪಂಚಾಮಾ. ೨-೩೬). [ಸಂ.]

ಪರಿನಿಷ್ಕ್ರಮಣ (ನಾ). [ಜೈನ] ತೀರ್ಥಂಕರನು ಸಂಸಾರತ್ಯಾಗ ಮಾಡಿ ತಪಸ್ಸಿಗೆ ಹೊರಡುವಿಕೆ : ಕ್ಷೇಮಂಕರಂ ದುರಿತಾರಿಸೈನ್ಯಮಂ ಬೆಂಕೊಳಲ್ ಬಗೆವಂತೆ ಪರಮದೀಕ್ಷೆಯಂ ಕೆಯ್ಕೊಳಲ್ ಬಗೆದು ಪರಿನಿಷ್ಕ್ರಮಣೋದ್ಯುಕ್ತನಾದುದಂ . . . ಅಱಿದು (ಶಾಂತಿಪು.೮-೧೧೭ ಪ); ಎನ್ನ ಪರಿನಿಷ್ಕ್ರಮಣದೊಳ್ ಪರಿಪಂಥಿಭಾವಮಂ ಪೊರ್ದದೊಡಂ ಬಡುವುದೆ ನಿನಗೆ ವಿನಯಂ (ಚಂದ್ರಪು. ೪-೧೮ ಪ); ನರೇಂದ್ರಂ . . . ಪರಿನಿಷ್ಕ್ರಮಣಕ್ಕೆ ಮನಂ ಪರಿಯೆ ಪರಿಚ್ಛೇದಿಸಲ್ಕದೇಂ ಪರಿಣತನೋ (ಪುಷ್ಪಪು. ೧೩-೮೭). [ಸಂ.]

ಪರಿನಿಷ್ಕ್ರಮಣಕಲ್ಯಾಣ (ನಾ). [ಜೈನ] ಪಂಚಕಲ್ಯಾಣಗಳಲ್ಲಿ ಒಂದು ; ತೀರ್ಥಂಕರನು ವಿರಕ್ತನಾಗಿ ಸಂಸಾರತ್ಯಾಗ ಮಾಡಿ ಹೊರಡುವ ಸಂದರ್ಭದಲ್ಲಿ ಮಾಡುವ ಉತ್ಸವ : ಶ್ರೀಭುವನಗುರು ಪರಿನಿಷ್ಕ್ರಮಣಕಲ್ಯಾಣಶರದಾಗಮನಪ್ರತೀಕ್ಷಣದಿವ್ಯಹಂಸರುಂ (ಆದಿಪು. ೯-೬೦ ಪ) ; ಒಂದುದಿವಸಂ ಆದಿದೇವನ ಪರಿನಿಷ್ಕ್ರಮಣಕಲ್ಯಾಣಮತ್ಯಾಸನ್ನಮೆಂಬುದಂ ನಿಜಾವಧಿಯಿಂದಱಿದು (ಚಾವುಂಪು. ೩೬).

[ಪರಿನಿಷ್ಕ್ರಮಣ + ಕಲ್ಯಾಣ]

ಪರಿನಿಷ್ಕ್ರಾಂತಿ (ನಾ). = ಪರಿನಿಷ್ಕ್ರಮಣ : 'ಪರಿನಿಷ್ಕ್ರಾಂತಿ ಮಹೋತ್ಸವ' ಪರಾ. [ಸಂ.]

ಪರಿನಿಷ್ಕ್ರಾಂತಿಮಹೋತ್ಸವ (ನಾ). = ಪರಿನಿಷ್ಕ್ರಮಣ ಕಲ್ಯಾಣ : ಸುರಲೋಕಾವತರೋತ್ಸವಂ . . . ಪರಿನಿಷ್ಕ್ರಾಂತಿ ಮಹೋತ್ಸವಂ ಪ್ರವಿಮಲಂ ಕೈವಲ್ಯಬೋಧೋತ್ಸವಂ ಪರಿನಿರ್ವಾಣ ಮಹೋತ್ಸವಂ ಜಿನ ಮಹಾ ಕಲ್ಯಾಣಮಯ್ದುಂ ಸವಿಸ್ತರದಿಂದಿರ್ಪುವು ವರ್ಣಶಂಗಳಿವಱಿಂ ಭವ್ಯಾಂಗಮೇನೊಪ್ಪದೇ (ಅಜಿಪು. ೧-೯೫).

[ಪರಿನಿಷ್ಕ್ರಾಂತಿ + ಮಹೋತ್ಸವ]

ಪರಿನಿಷ್ಠಿತ (ಗು). ೧. ಪಾರಂಗತವಾದ ; ನಿಷ್ಣಾತವಾದ ; ಸಂಪೂರ್ಣವಾಗಿ ಅರಿತುಕೊಂಡ : ವೇದಶಾಸ್ತ್ರಪರಿನಿಷ್ಠಿತ ವಾಗ್ವಿಭವರ್ಕ್ಕಳಾ ವಿವಾಗ್ರಣಿ ದೊರೆಕೊಳ್ಳುದೆಂಬುದಿದು ಪುಣ್ಯಫಳಂ ಕೃತಪುಣ್ಯ [ನೊಳ್] (ಸೌಇಇ. XI-1, ೪೫-೨೮ ; 800). (ನಾ). ೨. ಪಾರಂಗತವಾದುದು ; ನಿಷ್ಣಾತವಾದುದು : ವಿಶ್ವವನ್ನು . . . ಪರಿನಿಷ್ಠಿತವಾದ ವಿದ್ವದ್ದೃಷ್ಟಿಯಿಂದೊಮ್ಮೆ ಎಣ್ಣಿಸ್ಪು ವಿವೇಚಿಸಿದರೂ ಚಿತ್ತಕ್ಕೆ ಅಯಾಸವಾಯಿತೇ ಹೊರತು . . . ಸೌಖ್ಯ ದೊರೆಯಲಿಲ್ಲ ! (ಧ್ವನ್ಯಾಲೋ. XXVII ಪೀಠಿಕೆ). [ಸಂ.]

ಪರಿನೀರ್, ಹರಿನೀರು (ನಾ). ೧. ಹರಿಯುವ ನೀರು; ಪ್ರವಹಿಸುವ ನೀರು : ಪರಿನೀರೊಳಗಣ ನೆಲಂತಿರೆ ತನ್ನಂ ನೋಡಿ ನಡುಗೆ ಜಾನಕಿ (ಪಂಚಾಮಾ. ೯-೧೬೨); ಪರಿನೀರ ನಡುವನಿಱಿಂತಿರೆ ಖಂಡಿಸಿ ಕುಸುರಿದಱಿಯೆ ಸಣ್ಣಸೆ ಪಟೆಯಂತಿರವಿಕ್ರಿಯಾಶರೀರಂ ದೊರೆಕೊಳ್ಳುದು ನಾರಕರ್ಗೆ ಪಾಪದ ಫಲದಿಂ (ಮಲ್ಲಿಪು. ೧೩-೧೪೦); ಅದೇವಮಾತೃಕಃ = ಮಳೆಯಿಲ್ಲದೆಯುಂ ಕೆಱೆ ತೊಱೆ ಕಾಲುವೆಗಳ ಪರಿನೀರಿಂ ಬೆಳೆವುದುಂ (ನೀತಿವಾ. ೧೮-೮). ೨. ಕಾಲುವೆಗಳ ಮೂಲಕ ಹಾಯಿಸುವ ನೀರು; ಕಾಲುವೆನೀರು: ಸುರಿವ ದಾಳಿಂಬದ ಪಣ್ಣಳ ತನಿರಸದ ಪರಿಪೊನಲೆ ಪರಿನೀರಾಗೆಯಂಕುರವೊತ್ತಿ ಬೆಳೆಯುತ್ತಿರ್ದ ಕರ್ದನ ಮಡಲ್ಗಳುಮಂ (ಪಂಚತಂ. ೧೧೩-೧೬); ಅಲ್ಲಿಂ ಮೂಡ ಮೊದಲ ಪಸುಗೆಯ ಪರಿನೀರ ತೋಂಟಿ ಮೂಡಲು ಪಳ್ಳವಾಯ್ಕಾಲು ತೆಂಕಲುದ್ದಿಯ ಕಾಲು ಪಡವಲು ನಾರಾಯಣಯ್ಯನ ಜೇಷ್ಠಾಂಸದ ಭೂಮಿ (ಕಇಶಿ. ೭೯-೧೩-೨೮;1088); ಮುದಮೂರೂರಬಲಾಜನಕ್ಕೆ ಪರಿನೀರೂರೂರ ತೋಂಟಕ್ಕೆ . . . ಅತಕ್ಕ ಮದಱಂ ರಮ್ಯಂ ತದುರ್ವೀತಳಂ (ಕಾವ್ಯಾಪ. ೨೮೯). **ಹರಿನೀರು:** ೧. ಕೊಳಲೆಲ್ಲೊ ಉಲಿಯೆ ಹರಿನೀರು ನಲಿಯೆ (ಸೂರ್ಯಪಾ. ೩೫-೨). ೨. ಪಿರಿಯ ಕೆಱೆಯ ಕೆಳಗೆ ಲಾಲಬಾಗಿನ ಹರಿನೀರಲ್ಲಿ ಬಿಟ್ಟಡೆಗೆ ತೋಂಟಕಂಮಂ ನೂಱೆಪ್ಪತ್ತು (ಸೌಇಇ. IX-1, ೨೬೭-೬೪; 1160). ೩. (ಮದುವೆಯ ಸಂದರ್ಭದಲ್ಲಿ) ಮುತ್ತೈದೆಯರು ತರುವ ಪವಿತ್ರ ಜಲ, - ಮಂಗಳೋದಕ : ಹತ್ತು ಮಂದ್ಯಾಗ ಹರಿನೀರ ತರುವಂಥಾ ಮುತ್ತೈದಿತನವ ಕೊಡು ಶಿವನೆ (ಗರಡಿ. ೧೨೬). [ಪರಿ$_2$ + ನೀರ್]

ಪರಿನ್ಯಸ್ತ (ಗು). ೧. ಇಟ್ಟ ; ಇಡಲ್ಪಟ್ಟ : ನಿಜಮಸ್ತಕಪರಿನ್ಯಸ್ತ ಹಸ್ತನನು ಪ್ರಸ್ತುತಬುಧಸ್ತವನಭಾಜನಶಸ್ತನಂ . . . ನೋಡಿ (ಬಸವ. ೩೯-೫೪). ೨. ಹರಡಿದ; ಚಾಚಿದ. (ನಾ). ೩. ಇಟ್ಟರುವುದು ; ಜೋಡಿಸಿರುವುದು : ನಿಖಿಲೌಷಧಿಪುಂಜಿತಂ ಪರಿನ್ಯಸ್ತಮದೊಂದು ಪೂರ್ಣಕಲಶಂ ತಳೆದತ್ತತುಳಂ ವಿಳಾಸಮಂ (ಚಂದ್ರಪು. ೬-೫೩). [ಸಂ.]

ಪರಿಪಂತಿ (ನಾ). ಸಾಲು ; ಪಂಕ್ತಿ : 'ಪರಿಪಂತಿವಿಡಿ' ಪರಾ.

[ಪರಿ$_3$ + ಪಂತಿ]

ಪರಿಪಂತಿವಿಡಿ (ಕ್ರಿ). ಸಾಲಾಗಿರು ; ಪಂಕ್ತಿಗೊಳ್ಳು : ಸಾಲ್ವಿಡಿದು ಸರಸವಿಡಿದೋರಣಂಬಿಡಿದು ಪರಿಪಂತಿವಿಡಿದು . . . ಉಭಯವೀಧಿಗಳು ಮೆಱೆದವು (ಹಚಕಾ. ೧೦-೩೪). [ಪರಿಪಂತಿ + ಪಿಡಿ$_1$]

ಪರಿಪಂಥಿ (ಗು). ೧. ಎದುರಿಸುವ ; ಹಗೆಯಾದ; ವಿರೋಧಿಸುವ: ಕರ್ದನ ಬಿಲ್ ತದಗ್ರದೊಳ್ ನಿಳಿರ್ವ ತಮಾಳಪಲ್ಲವದ ಚಾಮರದುಪ್ಪರವಟ್ಟಮೊಪ್ಪೆ ಬಂದಲೆದಿಸುವೊಂ ಬನಂಬಿಡಿದು ಪಾಂಥರನಾ ಪರಿಪಂಥಿಮನ್ಮಥಂ (ಚಂದ್ರಪು. ೧-೧೧೧). (ನಾ). ೨. ಎದುರಾಳಿ ; ಶತ್ರು ; ಹಗೆ : "ಅಭಿಯಾತಿಃ, ಅರಾತಿಃ . . . ಪರಿಪಂಥೀ . . . ದ್ವಿಷತ್-ಶತ್ರು ಹಗೆ" (ಹಲಾಯು. ೬೫-೬೦೧); ಪರಿಪಂಥಿಪನ್ನಗವೈನತೇಯನೆನಿಪ ಬಿಜ್ಜಳಭೂಪನೊಪ್ಪಿಪ್ಪ ಸಮಯದೊಳು (ಬಸರ. ೬-೬೩); ಬುದ್ಧನು ಆರ್ಯಸಂಸ್ಕೃತಿಯ ರಕ್ಷಕನೆ ಅಥವಾ ಪರಿಪಂಥಿಯೆ ಎಂಬ ವಿಷಯದಲ್ಲಿ ವಿಪ್ರತಿಪತ್ತಿಯಿದೆ (ಮಳ್ಳಾರ. ೧೦೫ ಪೀಠಿಕೆ) ; ತನ್ನ ಮನೋರಥದ ಮಾರ್ಗದಲ್ಲಿ ಪರಿಪಂಥಿಯಾಗಿರುವ ರಮಾಕಾಂತನನ್ನು ದೂರೀಕರಿಸುವ ದುರಾಲೋಚನೆಯಿಂದ. . .ಇಂದಿರೆಗೆ ಹೇಳಿದನು (ಇಂದಿರೆ.೧೭). ೩. ದರೋಡೆಕಾರ ; ಕಳ್ಳ : "ಪರಿಪಂಥಿ ಚೋರಕಂ ತಸ್ಕರಂ" (ಪಸ್ತುಕೋ. ೬೫-೮೧). [ಸಂ. ಪರಿಪಂಥಿನ್]

ಪರಿಪಂಥಿನಿ (ನಾ). ಅಡ್ಡಿಯಾದವಳು : ಸುಖಪರಿಪಂಥಿನಿಯುಂ

ದುಃಖೈಕವಾಸನಿಪುಣೆಯುಂ ಪರಕ್ಷದುಯಪೀಡಾಪೇಕ್ಷಣೆಯುಮುಪ್ಪ ಲಜ್ಜೆಯುಂ ಕಾಯಲುಜ್ಜುಗಂಗೆಯ್ದು (ಕಾದಂಬ. ೩೭೧).

[ಸಂ. ಪರಿಪಂಥಿನೀ]

ಪರಿಪಂಥಿಭಾವ (ನಾ). ವಿರೋಧಭಾವ; ಎದುರಾಗುವ ಮನಸ್ಸು: ಎನ್ನ ಪರಿನಿಷ್ಕ್ರಮಣದೊಳ್ ಪರಿಪಂಥಿಭಾವಮುಂ ಪೊರ್ದೊಡಂಬಡುವುದೆ ನಿನಗೆ ವಿನಯಂ (ಚಂದ್ರಪ್ರ. ೪-೧೮ ಪ). [ಪರಿಪಂಥಿ+ಭಾವ]

ಪರಿಪಕ್ವ (ಗು). ೧. ಚೆನ್ನಾಗಿ ಬೆಂದ,—ಬೇಯಿಸಿದ. ೨. ಚೆನ್ನಾಗಿ ಮಾಗಿದ,-ಕಳಿತ; ಪೂರ್ಣವಾಗಿ ಹಣ್ಣಾದ: ಸುಜನೋತ್ತಮರಂತೆ ಭರದಿನೆಱಗಿದುವಮೇಯಪರಿಪಕ್ವಗಂಧಶಾಲಿವನಂಗಳ್ (ಶಾಂತಿಪು. ೧-೫೯); ಪರಿಪಕ್ವಫಲಪ್ರಕರಂ ಜರೆಯಂ ಕಿಡಿಸುವುದು (ಪಂಚತಂ. ೨೭೯-೧೧); ಮಣಿಕನಕರಜತಪಾತ್ರಂಗಳೊಳ್ ಪರಿಪಕ್ವ . . . ಫಳಕುಳಂಗಳುಂ ಸೊಗಯಿಪುವು (ಚಂದ್ರಪ್ರ. ೬-೫೪ ಪ); ನಸುಬಿರಿದ ಪರಿಪಕ್ವಪಾಡಿಮವಸರದೊಳಗಱಬಟ್ಟೆಗೆಯ ದರಹಸಿತಪಂಕಜಗಳಿತಮುಕರಂದದ ಪಕೋಕದಲಿ (ಕುಮಾಬಾ. ೭-೨೪). ೩. ಚೆನ್ನಾಗಿ ತಿಳಿದ; ವಿಶೇಷವಾದ ಅರಿವುಳ್ಳ; ಪ್ರೌಢವಾದ: ಪರಿಪಕ್ವಶಾಸ್ತ್ರಸಂಸ್ಕಾರಂ . . . ಈತನೆಂದು ಕೈವಾರದೆ ಬಣ್ಣಿಂಪಂ ವಿಬುಧಮಂಡಳಿ ಪಂಡಿತ ನಾಗವರ್ಮನಂ (ವಸ್ತುಕೋ. ೧೧೭-೩೬); ಧ್ವನ್ಯಾಲೋಕ . . . ಆನಂದವರ್ಧನನ ಪರಿಪಕ್ವಪ್ರತಿಭೆಯ ಫಲವೆಂದು ಭಾವಿಸಲ್ಪಡ್ಡಿಯಿಲ್ಲ (ಧ್ವನ್ಯಾಲೋ. XXVII ಟೀಕೆ). (ನಾ). ೪. ಚೆನ್ನಾಗಿ ಬೆಂದಿರುವುದು; ಹದವಾಗಿ ಬೇಯಿಸಿರುವುದು: ಪರಿಪಕ್ವಮಧಿನವಂ . . . ಎನಿಸಿರ್ಪಾ ನಿರವದ್ಯಾನ್ನಮನತ್ಯಾದರದಿಂ ತನ್ನುನಿವರಗೆ ನೃಪವರನಿತ್ತಂ (ಶಾಂತೀಶ್ವ. ೬-೫೮). ೫. ಚೆನ್ನಾಗಿ ಮಾಗಿರುವುದು,—ಕಳಿತಿರುವುದು: ಪರಿಪಕ್ವಮಾದ ಗರ್ದುಗಿನತಿರುಳುಂ ಶುಂಠಿಯುಮನರೆದು ನಸ್ಯಂಗೆಯ್ದು (ಲೋಕೋಪ. ೯-೧೦೦); ಪರಿಪಕ್ವಂ ಫಳರಾಜಿಸೌರಭನಿದಾನೋಜ್ಜ್ವಲಂಧಿತಂ ಪುಷ್ಪಮಂಜರಿ ನಾನಾಲತಿಕಾವಳೀವಿಪುಳಶಾಖಾಹಸ್ತದೊಳ್ ಶೋಭಿಸುತ್ತಿರೆ . . . ಚೆಲ್ವಾಯ್ತು ಚೈತ್ರಾಗಮಂ (ಪಾರ್ಶ್ವಪು. ೧೩-೫).

ಪರಿಪಕ್ವವಾಗು = ಪ್ರಬುದ್ಧವಾಗು; ಪ್ರೌಢತೆಯನ್ನು ಹೊಂದು: ಪರಿಪಕ್ವವಾದ ಮಾನವನ ಹೃದಯವೇ ನಿರ್ಮಲವಾದ ಸ್ನೇಹಕ್ಕೆ ಆಶ್ರಯಸ್ಥಾನ (ಭಾರದ. ೨೮೧). [ಸಂ.]

ಪರಿಪಕ್ವಂಬೆಱು (ಕ್ರಿ). ಚೆನ್ನಾಗಿ ಮಾಗು; ಪರಿಪಕ್ವತೆಯನ್ನು ಹೊಂದು: ಪರಿಪಕ್ವಂಬೆತ್ತ ಪಣ್ಣಂ ನಱದಿನಱದು ಸೋರ್ವಾ ರಸಾಸ್ವಾದನಂಗೆಯ್ದು . . . ಗಳಸಿದತ್ತಾಮ್ರದೊಳ್ ತಾಮ್ರತುಂಡಂ (ತ್ರಿಪುವಿ. ೨೪-೪೬). [ಪರಿಪಕ್ವ+ಪೆಱು]

ಪರಿಪಕ್ವತೆ (ನಾ). ಮಾಗಿರುವಿಕೆ; ಪರಿಣತಿ; ಪರಿಪಾಕ: ಇದು ತುಂಬುಜೀವನದ ಭಾವಾನುಭಾವಗಳ ಪರಿಪಕ್ವತೆಯ ಫಲ (ಸಾಹಿಸ. ೩೪); ಭಾವದ ಪರಿಪಕ್ವತೆಯನ್ನು ಕಾಣದ ಕವನಗಳು ಪರ್ಣನೆಯಲ್ಲಿ ಜನ್ಮ ತಾಳತೊಡಗಿದವು (ರಂಗರೂ. ೧೩೨). [ಸಂ. ಪರಿಪಕ್ವತಾ]

ಪರಿಪಟ್ಟು 'ಪರಿವಟ್ಟು' ನೋ.

ಪರಿಪಠನ (ನಾ). ಚೆನ್ನಾಗಿ ಓದುವುದು,—ಪಠಿಸುವುದು: ಪ್ರವಚನ ಪರಿಪಠನಕ್ಷಮತೆ ವಾಣಿಯಂ ತೀರ್ಥಯಾನದಕ್ಷತೆ ಪದಮಂ ಕಿವಿಯಂ ಜಿನವರಚರಿತಶ್ರವಣಪಟುತೆ ಪಿಂಗದನ್ನಮಾರ್ಜಿಪೆನಣನಂ (ಚಂದ್ರಪ್ರ. ೪-೧೭). [ಸಂ.]

ಪರಿಪಠಿತ (ಗು). ಚೆನ್ನಾಗಿ ಪಠಿಸಿದ; ಚೆನ್ನಾಗಿ ಹೇಳಿದ,-ನುಡಿದ: ಸೌಧಾಗ್ರಪ್ರತ್ಯಗ್ರರತ್ನಪಂಜರಮಂಜುಳಶುಕಸಾರಿಕಾನಿಕುರುಂಬಪರಿಪಠಿತ ನಿಟಿಲನಯನಲೀಲಾಕಥಾಕಲಾಕರ್ಣನಕರ್ಣಕೌತುಕಾಂತರಂಗಸಂಗತ . . . ಗುಣಾಗ್ರಗಣ್ಯಸಮುದಯಸಮುಂಚಿತಮುಂ (ರಾಜಶೇ. ೧೪-೧೦೬ ಪ).

[ಸಂ.]

ಪರಿಪಡು (ಕ್ರಿ). ಓಡು; ಧಾವಿಸು: ಪರಿಪಟ್ಟೋರಂತಾಕಾಶಮಾರ್ಗದೆ ಬಂದು ಪಾಡಲಾದ ಸಮನಂ ಮುಂದಾಂ ಕಂಡೆಂ ಕಪಿಂಜಲನಂ (ಕಾದಂಬ. ೭೧೪). [ಪರಿ$_3$+ಪಡು$_1$]

ಪರಿಪಣ (ನಾ). ಮೂಲಧನ; ಬಂಡವಾಳ: "ನೀವೀ, ಪರಿಪಣಂ, ಮೂಲಧನಂ—ಬಂಡವಾಳದ ಪಡವೆ" (ಸಿದ್ಧಾಂತಿ. ೨೯೭). [ಸಂ.]

ಪರಿಪತ್ರ$_1$ (ನಾ). (ಒಂದು ಕಡೆಯಿಂದ ಮತ್ತೊಂದು ಕಡೆಗೆ ಒಯ್ದು ಅನೇಕ ಮಂದಿಗೆ) ಪ್ರತಿ ಮಾಡಿ ಹಂಚುವ ತಿಳಿವಳಿಕೆಯ ಪತ್ರ; ಪ್ರಸಾರಣಪತ್ರ; ಸುತ್ತೋಲೆ: ಯುದ್ಧಗಳ ಸಂತರ ಈ ರೀತಿ ಪರಿಪತ್ರಗಳ ಮೂಲಕ ಸುದ್ದಿಗಳನ್ನು ಮುಟ್ಟಿಸಲಾಗುತ್ತಿತ್ತು (ಪತ್ರಿಕಾ. ೭); ಪರಿಪತ್ರ, ಸುತ್ತೋಲೆ (Circular. ಪತ್ರಿನಿ. ೧೬).

[ಪರಿ$_2$+ಪತ್ರ]

ಪರಿಪತ್ರ$_2$ (ನಾ). ಒಂದು ಬಗೆಯ ಔಷಧಿದ್ರವ್ಯ: "ಪರಿಣಾ-ಚಪ್ಪ, ಗಜಹಿಪ್ಪಲಿ, ಪರಿಪತ್ರ, ತಾಳೀಸಪತ್ರ, ಲವಂಗಪತ್ರ" (ಔಷಧಿ. ೨೪). [?]

ಪರಿಪಥಿಕ (ನಾ). ಅಡ್ಡಿಪಡಿಸುವವನು; ವಿರೋಧಿಯಾದವನು: ಮತಿಹೀನನಾದಂದು ಯುಕ್ತಾಯುಕ್ತಮನಱಯದೆ ಮಿಥ್ಯಾಜ್ಞಾನಲವೋದ್ಧತರಿಂ ಪರಿಪಥಿಕರಾಗಿ ಕಿಡುಗುಂ (ಜಾವುಂಪು. ೨೨೦). [<ಸಂ. ಪರಿಪಥಕ]

ಪರಿಪಾಂಡು (ಗು). ಅಚ್ಚ ಬಿಳಿಯ; ಬಹಳ ಬಿಳುಪಾದ; ಕಡು ಬಿಳುಪಿನ: ಒಪ್ಪಿದುದು ಸುಧಾಪರಿಪಾಂಡುವರ್ಣದಿಂ ಸುರನರನಯನ ಚಕೋರಚಂದ್ರಬಿಂಬಮಳುಂಬಂ (ಪುಷ್ಪಪು. ೧೨-೭೮). [ಸಂ.]

ಪರಿಪಾಂಡುರ (ಗು). = ಪರಿಪಾಂಡು: ಆ ಪರಿಪಾಂಡುರಪ್ರತಿಮಯಾದ್ಯುತಿ . . . ಈಗಳದೆತ್ತವೋದುದೆಂದಾ ಪೃಥಿವೀಶ್ವರಂ ಪಗಲ ತಿಂಗಳ ನಚ್ಚರಿವಟ್ಟು ನೋಡಿದಂ (ಚಂದ್ರಪ್ರ. ೯-೬); ಪರಿಪಾಂಡುರತನುಗೆ ನಿಶಾಕರಕರಪೀಡಿತೆಗೆ . . . ಕರದಿಂ ರವಿ ಸೋಂಕಿ ಹರುಷಮಂ ಪುಟ್ಟಿಸಿದಂ (ಪಾರ್ಶ್ವಪು. ೩-೨೯). [ಸಂ.]

ಪರಿಪಾಂಸು (ನಾ). ಸುತ್ತಲೂ ಎದ್ದ ಧೂಳು: ತುರಗಖುರಕ್ಷುಣ್ಣೋಪರಿಪಾಂಸುಪರಾಗಮಿಳಕಟಾಳಿಗಳೊಳ್ ಪಾಯ್ದಿರೆ (ಶಾಂತಿಪು. ೧೧-೧೬). [ಸಂ.]

ಪರಿಪಾಕ (ನಾ). ೧. ಪೂರ್ತಿಯಾಗಿ ಬೆಂದುದು; ಸಂಪೂರ್ಣವಾಗಿ ಬೇಯಿಸಿದುದು. ೨. ಸಂಪೂರ್ಣವಾಗಿ ಮಾಗಿರುವುದು,-ಹಣ್ಣಾಗಿರುವುದು. ೩. ಆಹಾರವನ್ನು ಸಿದ್ಧಪಡಿಸುವಿಕೆ; ಅಡುಗೆಮಾಡುವುದು: ಪಂಚಭಕ್ಷ್ಯವನು . . . ಚಮರಿನಿಂದೆ ಪರಿಪಾಕಮಂಗೈದೊಲಿದು ಪಂಡನಿಲ್ಲದೆಯುಸುರದಂಪತಿಗಳಿಗೆ ನೀಡೆ (ನಪಕೋ. ೯-೫). ೪. ಪರಿಪೂರ್ಣತೆ; ಪರಿಪಕ್ವತೆ: ಶಿವನು ಜೀವಕೋಟಿಯ ಮೇಲಿರುವ ಕರುಣೆಯಿಂದ ಜೀವಾತ್ಮರುಗಳ ಪರಿಪಾಕಕ್ಕೆ ತಕ್ಕಂತೆ ಅನುಗ್ರಹಿಸುತ್ತಾನೆ (ಭಾರದ. ೨೧೫); ಗೀತಾಂಜಲಿಯ ಪದ್ಯಗಳಲ್ಲಿ ವೇದಾಂತದ ಪರಿಪಾಕವಿದೆ (ಧರ್ಮಸಾ. ೮೨); ನಮ್ಮ ಜೀವನ ಎಂಬುದು ಅನುಭವಗಳ ಪರಂಪರೆ ಮತ್ತು ಅದರಿಂದ ಬದಗುವ ಪರಿಪಾಕ (ಪರಿಕೀ. ೧೨). ೫. (ಕರ್ಮದ) ಫಲ; ಪರಿಣಾಮ: ಪನಿತ ತೋಣಕಬಿಂದುಗಳ್ ತನ್ನ ಮೆಯ್ಗೆ ಪಾಪಪರಿಪಾಕದಿಂ ತಣ್ಪಂ ಪಡೆಯೆ (ಅಜಿಪು. ೨-೧೪ ಪ); ಈ ಸಂಯಮ ಸಂಧಾನ ಸಮನ್ವಯಗಳ ಧರ್ಮವೂ ಆರ್ಯಸಂಸ್ಕೃತಿಯ ವೈಶಿಷ್ಟ್ಯದ ಪರಿಪಾಕ (ಭಾರದ. ೩೬೮). ೬. ಚಾತುರ್ಯ; ಕೌಶಲ. ೭. (ಸಸ್ಯದ) ಬೆಳವಣಿಗೆ; ಅಭಿವೃದ್ಧಿ: "ಪರಿಪಾಕಂ ಬೆಳಸು" (ವಸ್ತುಕೋ. ೯೫-೨೦). [ಸಂ.]

ಪರಿಪಾಕಗೈಸು (ಕ್ರಿ). ಆಹಾರವನ್ನು ಸಿದ್ಧಪಡಿಸು; ಅಡುಗೆ ಮಾಡಿಸು: ಪರಮಾನ್ನಭಕ್ಷ್ಯಶಾಕಗಳ ಪರಿಪಾಕಗೈಸಿ (ಪ್ರೌಢರಾ. ೧೪-೩೦). [ಪರಿಪಾಕ+ಕೈಸು (<ಕೆಯ್ಸು)]

ಪರಿಪಾಕಗೊಳ್ಳು (ಕ್ರಿ). ಹದಗೊಳ್ಳು; ಮಾಗು; ಪರಿಪಕ್ವವಾಗು: ಅವನ ಜೀವನ ಶೋಕದಿಂದಲೇ ಪರಿಪಾಕಗೊಂಡಿದೆ (ಸ್ವದರ್ಶ. ೩೧); ಶಾಂತರಸವು ಈ ಪುಣ್ಯಭೂಮಿಯಲ್ಲಿಯೇ ಮೊದಲು ಪರಿಪಾಕಗೊಂಡುದು (ಸಾಹಿಸ. ೧೫). [ಪರಿಪಾಕ+ಕೊಳ್ಳು$_1$ (<ಕೊಳ್$_1$)]

ಪರಿಪಾಕಪಥ್ಯ (ನಾ). ಫಲಿತಾಂಶದಲ್ಲಿ ಹಿತವಾದುದು; ಪರಿಣಾಮದಲ್ಲಿ ಮಂಗಳಕರವಾದುದು: ಎನ್ನ ನುಡಿಯೆಂಬುದು ನಿನಗೆ ಪರಿಪಾಕಪಥ್ಯಂ (ಶಾಂತಿಪು. ೪-೯೮ ಪ). [ಪರಿಪಾಕ+ಪಥ್ಯ]

ಪರಿಪಾಕವಡೆ (ಕ್ರಿ). ಹದಕ್ಕೆ ಬರು; ಪರಿಪಕ್ವವಾಗು: ಪೌರ್ಮನಸ್ಯದಲಿಂತು ಳಿದುದು ತಮ್ಮೊಳಗೆ ಫಲಕಾಲ ದಕ್ಷಿಣಕರ್ಮಫಲ ಪರಿಪಾಕವಡದಂದದಲಿ (ನಿಭಾಗ. ೪-೧-೧೫). [ಪರಿಪಾಕ+ಪಡೆ$_1$]

ಪರಿಪಾಕವೆರು (ಕ್ರಿ). ಚೆನ್ನಾಗಿ ಬೇಯು; ಪರಿಪಕ್ವತೆಯನ್ನು ಹೊಂದು: ಪರಿಪಾಕವೆತ್ತ ಮಳಕಜ್ಜಾಯವಾ ಸೊಗಸಿನಿಂದೊಬ್ಬುಳಿಸಿ ಸವಿಸವಿದು ವುಣಲು (ನಮೋ. ೨೬-೪).

[ಪರಿಪಾಕ+ಪೆರು$_1$ (<ಪೆಱು$_1$)]

ಪರಿಪಾಕಹೊಂದು (ಕ್ರಿ). = ಪರಿಪಾಕವಡೆ: ಅವರು ರೂಢಿಸಿಕೊಂದಿದ್ದ ಸಾಹಿತ್ಯಜ್ಞಾನವೂ ಅವರ ತಳಹದಿಯಾದ ಲೋಕಾನುಭವವೂ ಇಂಗ್ಲೆಂಡಿನ ಹೊಸ ಆವರಣದಲ್ಲಿ ಪರಿಪಾಕಹೊಂದಿದುವು (ಸಮೂಲೋ. ೬೬); ಶಿಕ್ಷಣಸಂಸ್ಕಾರಗಳಿಂದ ಪರಿಪಾಕಹೊಂದಿದ ಸ್ತ್ರೀಯರ ಪಾತ್ರಗಳಿಗೆ ರಾಮಾಯಣದಲ್ಲಿ ಕೊರತೆಯಿಲ್ಲ (ಕರ್ನಾಳ. ೭).

[ಪರಿಪಾಕ+ಹೊಂದು$_1$ (<ಪೊರ್ದು)]

ಪರಿಪಾಟ, ಪರಿಪಾಟ್ಟು$_3$ (ನಾ). ವಾಡಿಕೆ; ರೂಢಿ; ಅಭ್ಯಾಸ: "ಪರಿಪಾಟ=ರೂಢಿ" (ಗಂಗಾಮ. ೧೯೯); ಮಳೆಗಾಲಗಳನೆಣಿಸುವ ಪರಿಪಾಟವು ನನ್ನದು ನನಗಿದು ಹಿತವು (ಇಂಚಾಸ. ೬೧-೯೧); "ನನ್ನ ಗಂಡನ್ಯೆರೋಬಯಲ್ಲಿದ್ದಾನೆ" ಎಂದು ಹೇಳುವ ಪರಿಪಾಟವನ್ನು ಆಕೆ ಇಂದಿಗೂ ಬಿಟ್ಟರಲಿಲ್ಲ (ವಾತ್ಸಲ್ಯ. ೧೬೬). **ಪರಿಪಾಟ್ಟು$_3$**: ಇದೇ ಕಾರಣ ದೇಶದಿಂದ ಮಾಲಿನ ವಿಮಾ ಇಳಿಸುವ ಪರಿಪಾಟು ಇಲ್ಲೇ ಬಹಳ ಬಿದ್ದಿರುತ್ತದೆ (ಮುಂಬಪ್ಯಾ. ೨೦೬). [ಪರಿ$_3$+ಪಾಟ$_2$]

ಪರಿಪಾಟಲು, ಪರಿಪಾಟ್ಲು (ನಾ). ಕಷ್ಟ; ಬಾಧೆ: ಮಕ್ಕಳನ್ನು ಹೆತ್ತು ಹೊತ್ತು ಪರಿಪಾಟಲು ಪಡುವವರು ನಾವು (ಸಾಡಿಗೇ. ೧೭೦). **ಪರಿಪಾಟ್ಲು**: ದುರುಳ ಮಾರನುವೆನ್ನಯೆದೆಗೆ ಸರಳನೂಡಿ ಪರಿಪಾಟ್ಲ ಮಾಡಿದನಬಲೆ (ಕಂಸವಿ. ೮-೧೨೯). 'ಪಡಿಪಾಟಲು' ಪರಾ.

[ಪರಿಪಾಟ್ಟು$_1$+-ಅಲು (<-ಅಲ್$_2$)]

ಪರಿಪಾಟಿ$_1$ (ನಾ). ಸಮಾನತೆ; ಸರಿಸಾಟಿ: ರವಿರಥತುರಗಮುಮುಷ್ಟೈಶ್ರವಮುಂ ಪರಿಪಾಟಿಯಲ್ಲದಿವಜೋಳ್ ರೋಮಶ್ವವಿಗಮೆನಲ್ ಕಣ್ಣಸೆದಿರ್ಪುವು ಪಳುಕಿನ ಮಂಡಪಂಗಳೊಳ್ ತುರಗಂಗಳ್ (ಜಗವಿ. ೯-೧೨೦). [ಪರಿ$_4$-+ಪಾಟಿ$_1$ (<ಪಾಟ್ಟಿ$_2$)]

ಪರಿಪಾಟ್ಟಿ$_2$ (ನಾ). ೧. ರೀತಿ; ಕ್ರಮ; ವಿಧಾನ: ಸುರತರು ಕುಡುವಂಬರದೊಳ್ಪರಿಪಾಟ್ಟಾಯೆ ನೆಯ್ದ ನೂಲಿಂ ರಂಗಿಂ ದೊರೆಕೊಳ್ಳದೆನಿಪ ದಿವ್ಯಾಂಬರಂಗಳೆಂದೆಸೆವುವಲ್ಲಿ ದೂಷಿಗವಸರಂ (ಜಗವಿ. ೯-೧೧೧); ಸೇನಾನಿಕರದಾರ್ಯೆಗಳು ಪಾಂಚಾಲಕನಗಾದುದು ರಂಜಿಸಿತು ಪರಿಪಾ[ಪಾಂಚಾ. ಪಾ]ಟಿಯೊಡ್ಡವಡೆ (ಕುವ್ಯಾಸ. ೬-೨೧); ಅಹಿಪತಿ ಕೂರ್ಮರಗ್ಗಳಿಕೆ ಪಾಟಿಗೆಡೆ ತೋಱಿಸಿದರೇ ಪರಿಪಾಟಿಯಲಿ ಫಣಪತಿಗೆ ನಾಲಗೆ ನಾಟದೆಣಿಸಲು ಗಣನೆಯಿಲ್ಲದ ರಾಮಸೈನಿಕವ. (ತೊರರಾ. ೪-೭-೨೫); ಅಳಸಿಂಗರಾರ್ಯರ ಪ್ರೌಢೋಕ್ತಿಯೊಳ್ ಸಾಹಿತ್ಯ ಪರಿಪಾಟಿಯಿಂ ಬೇಟ್ಟಂ (ಚಕವಿ. ೪-೫೦). ೨. ರೂಢಿ; ಅಭ್ಯಾಸ; ಪದ್ಧತಿ: ಬಾದವಾದಿಗಿಯೆಂಬ ಗ್ರಾಮಕೀ ಶಿವಯೋಗಿ ಸಾದರದೆ ಪೋಪ ಪರಿಪಾಟಿಯಂತಲ್ಲಿಗಂ ಪೋದೊಡನೆ . . . ಐತಂದರು (ಸುಹಾಂತೇ. ೯-೬೧); ಸಾಂಪ್ರದಾಯಿಕರ ಸ್ನಾನದಲ್ಲಿ ಪವಿತ್ರತೀರ್ಥಗಳ ಹೆಸರನ್ನೋ ದೇವತಾಸ್ತೋತ್ರಗಳನ್ನೋ ಹೇಳಿ ರಾಗ ಎಳೆವ ಪರಿಪಾಟಿಯುಂಟು (ಗಾಕಾಸ. ೪೪); ನಮ್ಮ ಭರತಭೂಮಿಯಲ್ಲಿ . . . ಭಗವಂತನನ್ನು ಉಪಾಸನಾ ಮಾಡುವ ಕ್ರಮಗಳು ರೂಪುಗೊಂಡಿದ್ದವು. ಅವುಗಳ ಸಮ್ಮೇಳನವೇ ನಮ್ಮ ಜನಾಂಗದ ಪರಿಪಾಟಿಯಲ್ಲಿ . . . ಇಂದಿಗೂ ಸಜೀವವಾದ ಸಂಸ್ಕೃತಿಯಾಗಿ ಉಳಿದಿದೆ (ಭಾರದ. ೨೨೦). ೩. ಸಾಲು; ಪಂಕ್ತಿ: ಕೋಟಾನುಕೋಟಿ ಭಕ್ತರ ಮನೆಗಳಿ ಪರಿಪಾಟಿಯಿಂದಱಸುತ್ತ ಗಂಗಾಜೂಟನಗ್ಗದ ಜಂಗಮಾಂಘ್ರಿಗೆ ನಮಿಸಿ (ಬಸವ. ೩೫-೫೫); ಕೋಟಿ ಕೋಟಿ ಮನುಷ್ಯಮುಖ ಪರಿಪಾಟಿಯೊಳು ವೈವಿಧ್ಯಖಗಮೃಗಕೀಟ ನರದಾಂಪತ್ಯ ಕೃಷಿಯಿಪ್ಪು ನೋಟ (ನೀಸಾರಾ. ೪೭-೨೮೮). ೪. ಅನುಕ್ರಮ; ಪರಿವಿಡಿ: "ಪರಿಪಾಟೀ, ಅನುಪೂರ್ವೀ . . . ವಿಶಾಯಃ-ಈ ೭ ಪರಿವಿಡಿ" (ಹಲಾಯು.೧೨೨-೫೫); ವಂದಿಪೆ ಹಲಾಯುಧನೆ ಸಾಮವೇದಿಗೆ ಮಲಯರಾಜಂಗೆ ಪರಿಪಾಟಿಯಿಂ (ಚಕಪು. ೬-೭-೨). ೫. ಓರಣ; ವ್ಯವಸ್ಥೆ: 'ಪರಿಪಾಟಿದಪ್ಪು' ಪರಾ. [ಸಂ.]

ಪರಿಪಾಟಿದಪ್ಪು (ಕ್ರಿ). ಓರಣ ತಪ್ಪು; ಅಸ್ತವ್ಯಸ್ತವಾಗು: ಆ ಪ್ರಾಣವಲ್ಲಭೆಯ ಲಲಾಟಪಟ್ಟದೊಳ್ ಚಾಮರದ ಕೋಮಲಪವನ ಪರಿಯಟನದಿಂ ಪರಿಪಾಟಿದಪ್ಪ [ಪ್ಪೆ] ಸುಳಿಗುರುಳೆಂಬ ತುಂಬಿಯ ಬಂಬಲಂ ತನ್ನ ಬೆಳ್ಪೆಳಗನುಗುಟ್ಟ ಸೆಳ್ಪುಗುರೆಂಬ ಪೊಂಗೇದಗೆಯ ಕುತ್ತುಂಗಜಾಗಳ್ ಪತ್ತೆಸಾರ್ಚ ಪಂತಿಗೊಳಿಸುವಿನೆಗಂ (ಅನಂಪು. ೬-೬೯ ಪ).

[ಪರಿಪಾಟ್ಟ$_2$+ತಪ್ಪು$_1$]

ಪರಿಪಾಟ್ಟು$_1$ (ನಾ). ಕಷ್ಟ; ಬಾಧೆ: ಪತಿವಿಯೋಗದಿ ಬಿದ್ದ ಪರಿಪಾಟುಮುಮನೆಲ್ಲ ನೆನೆಯದೆ ಸುತನ ನೋಡಿ (ನನಮೋ. ೧೫-೪೬).

[<ಪಡಿಪಾಡು]

ಪರಿಪಾಟ್ಟು$_2$ 'ಪರಪಾಟು' ನೋ.

ಪರಿಪಾಟ್ಟು$_3$ 'ಪರಿಪಾಟಿ' ನೋ.

ಪರಿಪಾಟ್ಲು 'ಪರಿಪಾಟಲು' ನೋ.

ಪರಿಪಾಠ (ನಾ). ೧. (ವೇದಗಳ) ಕಂಠಪಾಠ. ೨. ಅಭ್ಯಾಸ; ಪದ್ಧತಿ; ರೂಢಿ: ದೇವರ ಮೇಲಿನ ಹೂವು ತಪ್ಪೀತು, ಅವಳ ಈ ಪರಿಪಾಠವೆಂದಿಗೂ ತಪ್ಪಲಿಲ್ಲ (ಹೂಬಿಸಿ. ೧೬); ಸುಮಿತ್ರೆ ಹಾಸ್ಟೆಲಿನಲ್ಲಿ ಇದ್ದಾಗ ಬೆಳಗಿನ ಜಾವಕ್ಕೆ ಎದ್ದು ಸ್ನಾನ ಮಾಡಿ ಓದಿಕೊಳ್ಳುವ ಪರಿಪಾಠವಿಟ್ಟುಕೊಂಡಿದ್ದಳು (ವಿದ್ಯಾರ್ಥಿ. ೨೧೩). [ಸಂ.]

ಪರಿಪಾಠಿ 'ಪರಿಪಾಡಿ' ನೋ.

ಪರಿಪಾಡಿ, ಪರಿಪಾಠಿ, ಪರಿಪಾಳಿ, ಪರಿಪಾಟಿ (ನಾ). ೧. ಅನುಕ್ರಮ; ಪಾಳಿ; ಪರಿವಿಡಿ: ಋಷಿಸಮುದಾಯಮಂ . . . ಪರಿಪಾಡಿಯಿಂದೊಸೆದು ಬಂದಿಸಿ (ಬಂಹರಿ. ೨-೫೯). ೨. ಸಿದ್ಧತೆ; ಏರ್ಪಾಡು: ಬೇಡುವೆನು ಪೊಡವಂಟು ದೇವರು ಮಾಡುವುದು ಕಾರುಣ್ಯವನು . . . ಮಾಡಲಾಗ[ದು]ದು ಪರಿಣಯದ ಪರಿಪಾಡಿಯನು (ನಿಭಾಗ.೧೦-೫೮-೪೧). ೩. ಸಿದ್ಧ ಮಾಡಿದುದು; ರಚನೆ; ನಿರ್ಮಿತಿ: ಹೋಡಿಸಿದ ಜಾಂಬೂನದದ ಪರಿಪಾಡಿ [ಪಾಂಚಾ. ಡು]ಗಳ ಪಲ್ಲವದ ಪಳಿಯ ಪವಾಡಗಳ ಕೇತನನಿಕೇತನವೆಸದವಲ್ಲಲ್ಲಿ (ತೊರರಾ. ೫-೨-೨೫). **ಪರಿಪಾಠಿ**: ೪. ರೂಢಿ; ಅಭ್ಯಾಸ; ಪದ್ಧತಿ: ಅದು ಮುಂದೆ ಒಂದು ಪರಿಪಾಠಿಯೇ ಆಗಿ ಹೋಗಿ ಕೆಲವೊಮ್ಮೆ ಗಂಡನಿರುವಾಗ ಆಭಾಸವಾದೀತೆಂಬ ಭಯ

ಆಕೆಗೆ (ಮಸಕೂ. ೫೨). **ಪರಿಪಾಳಿ :** ೨. ಭರತನಧಿಕಕ್ಕಪಾಳುವನು ಕಾಬುಱ್ಱುಗದ ಪರಿಪಾಳಿಯಿಂದೈದಿದನು ಕೃಂಗೀವೇರಪುರವರವ (ತೊರಂಗಾ. ೨-೬-೧೧). ೫. ಸಾಲು ; ಪಂಕ್ತಿ : ತದ್ವಳಯದಲಿ ಪರಿಪಾಳಿಯಾಯಿತ್ತಖಿಳಭೂಜನಶಾಲಕ ವರವರುತ್ತಮಾಧಮಮಧ್ಯಮಂಗಳಲಿ (ತೊರಂಗಾ. ೧-೧೩-೧). ೬. ರೀತಿ ; ಕ್ರಮ : "ಪರಿಪಾಳಿ (ಪರಿಬಾಳಿ)-ಪರಿಪಾಟಿ(ಟೀ) = ರೀತಿ, ಅಭ್ಯಾಸಕ್ರಮ" (ತದ್ಭವಕೋ. ೨೪) ; ಛಲಪದದ ಪರಿಪಾಳಿಯಿಂದುಪ್ಪವಡಿಸಿದನುಪ್ಪರದ ಗರ್ವದಲಿ (ತೊರಂಗಾ. ೬-೧೦-೧) ; ಪರಮೇಶ್ವರನ ಲೋಲಕರ ಪಂಚಮುಖದಿಂದೆ ತೋಛಿಸುತೆ ಪರಿಪಾಳಿಯಿಂದಾಗಮಂಗಳ್ಳಸನವಾದವಿಪರ್ತ್ತೆಂಟುಸಂಖ್ಯೆಯಿಂದೆ (ಪಾಸೋಕಾ. ೧೦-೧೨೧). **ಪರಿಪಾಟಿ :** ೫. ಒಸಗೆಗಳಂದು ಬಿಟ್ಟ ಶುಕ ಶಾರಿಕೆಗಳ್ ಸಲಿವಾಱುವಾಱು ರಾಗಿಸಿ ದಮಿತಾರಿನಾಮ ಪರಿಪಾಟಿಯನೋಳಿಯುನೋದೆ (ಶಾಂತಿಪು. ೨-೪೮). ೬. "ಪರಿಪಾಟಿಯೊಳಂ ಕ್ರಮಂ" (ಮತ್ತಕೋ. ೧೩೮-೧೨೨). [<ಸಂ. ಪರಿಪಾಟಿ]

ಪರಿಪಾತನ (ನಾ). ಸಂಪೂರ್ಣವಾದ ನಾಶ : ಲಘುಕರ್ಮಪರಿಪಾತನ ಕೃತ್ಪ್ರಾಪ್ತಿನಿಮಿತ್ತಂ ಪಂಡಕವಾಟಪ್ರತರಲೋಕಪೂರಣಕ್ರಿಯೆಗಳಂ ಪ್ರತಿಸಮಯಂ ಪ್ರಯೋಗಿಸಿ (ಪಂಂಾಮಾ. ೧೬-೬೯ ವ). [ಸಂ.]

ಪರಿಪಾರ್ (ಕ್ರಿ). ದಾರಿ ಕಾಯು ; ಹಾದಿ ನೋಡು : ಸರಸೀರುಹಾಸ್ಯೆ ನೀನೀ ಪುರದೊಳ್ ಮಾಱುವಿನ[ಮಿಂತು] ನಾಮಿಾ ಬನದೊಳ್ ಪರಿಪಾರುತಮಿರ್ದಪೆಂ (ಬಂಹರಿ. ೯-೬೯). [ಪರಿ₃ + ಪಾರ್₁]

ಪರಿಪಾರ್ಶ್ವ (ಗು). ಪಕ್ಕದಲ್ಲಿರುವ ; ಪಾರ್ಶ್ವದಲ್ಲಿರುವ. [ಸಂ.]

ಪರಿಪಾಲ (ನಾ). ಕಾಪಾಡುವವನು ; ರಕ್ಷಣೆ ಮಾಡುವವನು ; ಸಂರಕ್ಷಕ : ಸುರುಚಿರಾಗಮತ್ಯೈವಶಾಸ್ತ್ರವಿರಚಿತಸಂಚಿತಧರ್ಮಮಾರ್ಗಾವಿರತಪರಿಪಾಲ ಪ್ರಮಥವರಪರಿಷದನುಕೂಲ (ಬಸಪು. ೩೮-೩೩). [ಸಂ.]

ಪರಿಪಾಲಕ (ನಾ). = ಪರಿಪಾಲ : ವಿಕಟಜಂಬೂದ್ವೀಪಪರಿಪಾಲಕರು ನಮ್ಮಿನಿಬರಿಗೆ ಸದರವೆ (ಕುವ್ಯಾಸ. ೩-೭). [ಸಂ.]

ಪರಿಪಾಲನ, ಪರಿಪಾಳನ (ನಾ). ೧. ಕಾಪಾಡುವುದು ; ರಕ್ಷಣೆ ಮಾಡುವುದು ; ಸಂರಕ್ಷಣೆ : ಪರಮಾರ್ಥಂ ಪರಿಪಾಲನಕರದಿಂದಪರಾಜಿತಾಬ್ಜಮಿತ್ರಂ ಕಳೆದಂ ನರಪತಿಗಮದೊಳೊಡನೊಗೆದರಸಿಯರ ಮುಖಾಬ್ಜಶೋಕಹಿಮಜಲಲವಮಂ (ಶಾಂತಿಪು. ೧-೯೫) ; ಅದಕ್ಕೆ ಅನುಕೂಲವಾಗಿ ಪ್ರವಡನಪರಿಪಾಲನ, ಸಂವರ್ಧನ, ಶುಶ್ರೂಷಣವೆಂಬ ವರ್ಣಧರ್ಮಗಳೂ ಇದ್ದುವು (ಹಂದಸಾ. ೨೬೧). ೨. ನಡೆಸುವುದು ; ನೆರವೇರಿಸುವುದು ; ಆಚರಣೆ : ವ್ರತಪರಿಪಾಲನದಿಂದುನ್ನತಸೌಖ್ಯಾಪ್ತಿಯಕ್ಕುಂ (ಪಸಾರ. ೩೦೩) ; ಸತ್ಯಕ್ಕೆ, ಧರ್ಮಕ್ಕೆ, ಪಿತೃವಾಕ್ಯಪರಿಪಾಲನಕ್ಕೆ . . . ಹರಳೆಗೈ (ಶ್ರೀರಾಮಾ. ೮೪-೧೫೮). **ಪರಿಪಾಳನ:** ೧. ಮತಿ(ಪರಿ)ಪಾಳನಂ . . . ಪ್ರಜಾಪಾಳನಮೆಂಬ ಪಂಚವಿಧದೊಳಲ್ಲಿ ಮತಿ(ಪರಿ)ಪಾಳನಮೆಂಬುದು ಹಿತಾಹಿತವಿವೇಕಮುಂ ಉಭಯಲೋಕಹಿತಮುಂ . . . ಧರ್ಮಾರ್ಥಶಾಸ್ತ್ರವಿಜ್ಞಾನಮುಮುಕ್ಕುಂ (ಜಾವುಂಪು. ೨೨೦). [ಸಂ.]

ಪರಿಪಾಲನೆ (ನಾ). ೧. ಕಾಪಾಡುವುದು ; ರಕ್ಷಿಸುವುದು ; ಸಂರಕ್ಷಣೆ ಮಾಡುವುದು : "ವ್ಯವಹಾರ ಧನಾಹಿಕಾಯ . . . ಸೇನೆ ಪರಿಪಾಲನೆ ಕಾಮುಕಿಯಿಂತು ಭೋಗಮಕ್ಕುಂ" (ನಾನಾರ. ೧೧೪). ೨. ಪಾಲಿಸುವುದು ; ಪೋಷಣೆ. ೩. ಆಳುವುದು ; "ಆಳಿಕೆ, ರಾಜ್ಯಭಾರ" (ನಾನಾಶ. ೧೫೬). ೪. (ಯಾವುದಾದರೂ ಕೆಲಸವನ್ನು) ನಡೆಸುವುದು,—ನೆರವೇರಿಸುವುದು. [ಸಂ. ಪರಿಪಾಲನ]

ಪರಿಪಾಲಿತ (ಗು). ಪೋಷಣೆ ಮಾಡಿದ; ಸಲಹಿದ: ವಿನಿರ್ಜಿತನಿರವಶೇಷನಿಂಜನಾಥವಿಭವನುಮಪಾಕೃತ ಪ್ರಕೃಷ್ಟಾಪ್ತ ಲೋಕಪಾಲ ಪರಿಪಾಲಿತ ಸಾಹಸನುಂ (ಶಾಂತಿಪು. ೧-೭೧ ವ). [ಸಂ.]

ಪರಿಪಾಲಿಸು, ಪರಿಪಾಳಿಸು (ಕ್ರಿ). ೧. ಕಾಪಾಡು ; ಸಂರಕ್ಷಣೆ ಮಾಡು; ಸಲಹು: ಲೀಲೆಯಿನದಱ ನೆಲಂ ಪರಿಪಾಲಿಸಿದುವು ಕಕ್ಷೆ ನಾಡೆ ಮೌದ್ಗಂ ಮಾಷ್ಕಂ . . . ಯವ್ಯಂ (ಚಂದ್ರಪ್ರ. ೧-೯೧) ; ಭೋಜರಾಜನು . . . ಪ್ರಜೆಗಳನ್ನು ಸತ್ಯ ಧರ್ಮಗಳಿಂದ ಪರಿಪಾಲಿಸಿ ದಿಗಂತವಿಶ್ರಾಂತಕೀರ್ತಿಯನ್ನು ಪಡೆದನು (ಕಲಾಧ. ೭೯). ೨. ಆಳು ; ರಾಜ್ಯಭಾರ ಮಾಡು ; ಅಧಿಕಾರ ನಡೆಸು : ಧರಣಿಯನವಯವದಿಂದವೆ ಪರಿಪಾಲಿಸಲೆನ್ನ ಭುಜಮೆ ಸಾಲ್ವುದು (ಶಾಂತಿಪು. ೨-೧೩) ; ರಾಜವತಿಯಾಯ್ತು ಧರೆ ತಿಂ ರಾಜರ್ ಪರಿಪಾಲಿಸುತ್ತುಮಿರೆ (ಅಜಿಪು. ೯-೮) ; ವಿಕ್ರಮಕೌರವನಾಮನವನಿಯಂ ಪರಿಪಾಲಿಸಿ ಪಡೆದಂ ನಿರ್ವಾಣವನು (ಜಯಂತಾ. ೧ ಸೂಚನೆ) ; ಈತನ ತಾಯಿಯಾದ ದೀವಾಂದಿಕೆಯು ರಾಜ್ಯವನ್ನು ಪರಿಪಾಲಿಸುತ್ತಿದ್ದಳೆಂದೂ ಆವನಿಶಾಸನದಲ್ಲಿ ಹೇಳಿದೆ (ಸೊಳಂಬ. ೫೩). ೩. ನಡೆಸು ; ನೆರವೇರಿಸು : ಜಿನಸಮಯದುರುತಿರವನರಿವೆನು ಭಾಷೆಯಂ ಪರಿ[ಪಾಠಾಂ. ಪ್ರತಿ]ಪಾಲಿಸುವೆನು (ಬಸಪು. ೪೯-೧೩) ; ಆಜ್ಞೆಯನ್ನು ವಿಚಾರವಿಲ್ಲದೆ ಪರಿಪಾಲಿಸುವುದು ಪ್ರತಿಯೊಬ್ಬನ ಕರ್ತವ್ಯವಾಗಿತ್ತು (ರಾಜವ. ೩೮) ; ಪತಿಯ ಆಜ್ಞೆಯನ್ನು ಪರಿಪಾಲಿಸುವುದೇ ಹಿಂದೂಸತಿಯ ಪರಮಧರ್ಮ (ಹಿಂತಿರು. ೮೩). **ಪರಿಪಾಳಿಸು :** ೧. ಪಾಳಿಸುತ್ತಿರ್ದ ವಿಷ್ಣು ಪರಿಪಾಳಿಕೆ ಜಿಷ್ಣುವಲಂಕರಿಷ್ಣು (ಶಮದ. ೨೨೯ ಪ್ರಯೋ). [ಪರಿಪಾಲನ + -ಇಸು₃]

ಪರಿಪಾಲ್ಯ (ನಾ). ನಡೆಸಲು ಅರ್ಹವಾದುದು ; ಅನುಸರಿಸಬೇಕಾದುದು : ಸನಾತನಿಗಳಲ್ಲಿ ಪಾತಿವ್ರತ್ಯವು ಸ್ತ್ರೀಗೆ ಸದ್ಧರ್ಮ, ಸ್ವಧರ್ಮ. ಧರ್ಮವಾದುದರಿಂದ ಪರಿಪಾಲ್ಯವು (ಅರ್ಥಧ.೧೬೧). [ಸಂ.]

ಪರಿಪಾಳನೆ 'ಪರಿಪಾಲನ' ನೋ.

ಪರಿಪಾಳಿ 'ಪರಿಪಾಡಿ' ನೋ.

ಪರಿಪಾಳಿಸು 'ಪರಿಪಾಲಿಸು' ನೋ.

ಪರಿಪಾಟಿ 'ಪರಿಪಾಡಿ' ನೋ.

ಪರಿಪೀಡನ (ನಾ). ೧. ಹಿಸುಕುವುದು ; ಹಿಂಡುವುದು ; ಮರ್ದನ : ಗುರುಕುಚಪರಿಪೀಡನಪ್ರರೂಢಾಂಕುರಪುಳಕಾಹತಿಚಂಪ್ರಮಾನ ಚಿತ್ತೇಶ್ವರಪರಿರಂಭೆ ನಿಮಿರ್ಚಿ ಮೂರ್ಛೆವೋದಳ್ ಕುರವಕದಟ್ಟಿಗೆ ವಿಪ್ರಲಬ್ಧೆಯೊರ್ವಳ್ (ಲೀಲಾವ. ೧೩-೯೩). ೨. ಬಹಳವಾಗಿ ಹಿಂಸಿಸುವುದು ; ಚಿತ್ರಹಿಂಸೆ : "ಪರಿ[ಪಾಠಾಂ.ರ]ಪೀಡನಂ ಸಪತ್ನಾಕರಣಮೆನಲು ಲೋಗರನು ಬಂಧಿಸಲು ನಾಮಂ" (ಮಂಗರಾ. ೧೩೪-೩೨). [ಸಂ.]

ಪರಿಪೀತ (ನಾ). ಅಧಿಕವಾದ ಹಳದಿಬಣ್ಣ,—ಹೊಂಬಣ್ಣ ; ದಟ್ಟವಾದ ಬಂಗಾರದ ವರ್ಣ : ಪರಿಪೀತದೇಹದಿಂಬತೆವೆರಸಿಂತು ಪತ್ರತಿಶಯಂಗಳೆವೇಂ ಜಿನನೊಳ್ ಪೊದಟ್ಟುವೋ (ಅಧಿಪು. ೧೦-೯೩) ; ಪರಿಪೀತಮಾಯ್ತು ರತ್ನಾಕರನೀ ಕಳಕಜನಿನೆಂದವನ ಬಟಾಸಂದಂತಿರೆ ಬದ್ಧವೇಣಿ ಗೋದಾವರಿ ಬಂದವಕರಿಸಿದುದು ತದಾತ್ರಮಪದಮಂ (ಕಾದಂಪು. ೧೦೬). [ಸಂ.]

ಪರಿಪು₁ 'ಪರುಪು' ನೋ.

ಪರಿಪು₂ (ನಾ). ಒಂದು ಬಗೆಯ ತೆರಿಗೆ : ಪರಿಪುಂ ಪಾರಣೆಯುಂ ಮೊದಲಾಗಿ ಕಿರುಕುಳಬಾಧೆಯೊನ್ದುಮಿಲ್ಲದನ್ತಾಗಿ ಗಾವುಣ್ಡರ್ ಪ್ರತಿಪಾಳಿಸುವರ್(ಸೌಇಇ. XI-i, ೭೮-೫೬ ; 1045) ; ಪರಿಪು, ಪಾರಣೆ ಇವೆರಡೂ 'ತಿಱುಕುಳ'ಗಳು, ಎಂದರೆ ಸಣ್ಣ ತೆರಿಗೆಗಳು (ಶಶಾಅ. ೪೦೦). [<-ತಮಿ. ಪೊಱುಪ್ಪು]

ಪರಿಪು$_3$ (ನಾ). ಅವಧಿ (?) : ಪೂಜಿಸಿ ಪೊಡವಟ್ಟೊಪ್ಪೆ ವಿರಾಜಿಸಿ (ಬೆ)ದೆಯನಱಿದು ಪರಿಪುಮಂ ದಾಂಟದೆ ನೀನೋಜೆಯು ಬಲ್ಲೆಟ್ಟುಗಳಂ ಯೋಜಿಸಿ ಸಲೆ ಪಿಡಿದು ಮೇಳೆ(ಡೆ)ಯುಂ ತಕ್ಕ್ರಮದಿಂ (ಜಟ್ಟಮ. ೯-೨೯). [?]

ಪರಿಪುಷ್ಟ (ಗು). ೧. ಪಾಲನಗೊಂಡ ; ಪೋಷಣೆ ಹೊಂದಿದ : ಅದಾರವಂ ದೇವಿಯ ಕೃಪಾದೃಷ್ಟಿಪರಿಪುಷ್ಟಪುಣ್ಯಪಾತ್ರಂ ? (ಚಿತ್ರಾಂಗ. ೩೬-೧೯೯). ೨. ಅಭಿವೃದ್ಧಿಗೊಂಡ ; ಬೆಳವಣಿಗೆ ಹೊಂದಿದ ; ಚೆನ್ನಾಗಿ ಬೆಳೆದ : ಅಷ್ಟವಿಧಭಕ್ತಿಕ್ರಿಯಾಪರಿಪುಷ್ಟಸಚ್ಚೀಕಸನು (ಬಸವ. ೩೬-೩). ೩. ಹೇರಳವಾದ; ವಿಪುಲವಾಗಿರುವ : ಮನಂ ಸಂತಸಂಬಡೆ ಪರಿಪುಷ್ಟಹರ್ಷೋತ್ಕರ್ಷಚಿತ್ತನಾಗಿ (ಶಾಂತಿಪು. ೧೦-೬೦ಪ). (ನಾ). ೪. ಅಭಿವೃದ್ಧಿಯಾದುದು ; ಬೆಳವಣಿಗೆ ಹೊಂದಿರುವುದು ; ದೃಢವಾಗಿರುವುದು : ಕಾವ್ಯದ ಜೊತೆಜೊತೆಗೆ ಶಾಸ್ತ್ರವೂ ಬೆಳೆದ ಹೊರತು ಸಾಹಿತ್ಯ ಸರ್ವಾಂಗಪರಿಪುಷ್ಟವಲ್ಲ (ರಾಮರಾ. ೪೪) ; ಕೋಳುಗಳು ರಕ್ತ ಮಾಂಸಗಳಿಂದ ಪರಿಪುಷ್ಟವಾಗಿದ್ದು, ನೆಲ್ಲನ್ನು ಮುದಿಯುವ ಒನಕೆಗಳಂತೆ ಕೋರುತ್ತಿದ್ದುವು (ಕಪಪು. ೬-೬೪). [ಸಂ.]

ಪರಿಪುಷ್ಟಿ (ನಾ). ಅಭಿವೃದ್ಧಿ ; ಬೆಳವಣಿಗೆ : ಆಯಾ ಪಾತ್ರಗಳ ಪರಿಪುಷ್ಟಿಗೆ ಬೇಕಾದ ರಸಾವೇಶ, ಭಾವ . . . ಅಭಿನಯ ಇವು ಪ್ರತಿಯೊಬ್ಬ ವೇಷಧಾರಿಯಲ್ಲಿಯೂ ಕಾಣಬಂದಿತು (ಯಕ್ಷಗಾ. ೧೦) ; ರಸಭಾವಗಳ ಪರಿಪುಷ್ಟಿಯಿಲ್ಲದೆ ಕಾವ್ಯ ಅಳ್ಳಕವಾಗಿಲ್ಲ, ಸೀಕಲಾಗಿಲ್ಲ (ಸಂಬುಂಡ. ೧೫೧). [ಸಂ.]

ಪರಿಪೂಜಿಸು (ಕ್ರಿ). ವಿಶೇಷವಾಗಿ ಆರಾಧಿಸು ; ಅಧಿಕವಾಗಿ ಪೂಜೆ ಮಾಡು : ನೀವೆ ಪೂಜ್ಯರೆಮಗೆಂದು ದಿವ್ಯವಸನಪ್ರಸವಾಭರಣಂಗಳಿಂದಮಾದರಮಮರ್ಚಂತು ತದ್ಯುಗಳಮಂ ಪರಿಪೂಜಿಸಿದಂ ಸುರೇಶ್ವರಂ (ಆದಿಪು. ೬-೧೧೨) ; ನಿಜೇಷ್ಟಲಿಂಗಮಂ ಪಾತಕದೂರರಾಗಿ ಪರಿಪೂಜಿಸರ್ಚಪರನ್ಯೈವಮಂ ಘಾತಕರಲ್ತಿವರ್ ಪರಮಲಿಂಗಿಗಳೆಂತು ಶಿವಾಮರೇಶ್ವರಾ (ಅಮಶ. ೨೫). [ಪರಿಪೂಜನ$_0$+-ಇಸು$_3$]

ಪರಿಪೂತ (ಗು). ೧. ಪೂರ್ಣವಾಗಿ ಶುದ್ಧಿಗೊಂಡ,-ನಿರ್ಮಲವಾದ: ಅರುಣಾತ್ಮರಶ್ಮಿಯಿಂ ಪಸರಿಸಿ ಚಿತ್ರವರ್ಣರುಚಿಗಳ್ ಪರಿಪೂತಖಗಪ್ರಸೂತಿ ರಾಜಿಸುವುದು ಚಾಪದಂತೆ ಭುವನಸ್ತುತ ದಕ್ಷಿಣಪಶ್ಚಿಮಾನಗಂ (ಪರ್ಧಮಾ. ೬-೫೯) ; ಕೇತಿದೇವಂ ಬಸವರಾಜನು ಪ್ರೀತಿಯುಂ ಭೀತಿಯುಮೆರಸಿ ಪರಿಪೂತಚೇತಸರಾಗಿ ಮಾಣಯ್ಯಂಗೆಱಗಲೊಡನೆ (ಬಸವ. ೩೬-೫೬). ೨. ಪವಿತ್ರವಾದ; ಪಾವನವಾದ : ತುರಗಂಗಳೇ ! ನೀಮುಂ ಧನ್ಯರ್ ; ಸೀತಾಕಟಾಕ್ಷವೀಕ್ಷಣಪರಿಪೂತಗಾತ್ರರಲ್ತೆ ! (ರಾಮಾಶ್ವ. ೨೯-೧೦). [ಸಂ.]

ಪರಿಪೂರ (ನಾ). ಪರಿಪೂರ್ಣತೆ ; ಸಂಪೂರ್ಣತೆ : 'ಪರಿಪೂರಿಸು' ಪರಾ. [ಸಂ.]

ಪರಿಪೂರಿತ (ಗು). ೧. ಪರಿಪೂರ್ಣವಾಗಿರುವ ; ತುಂಬಿರುವ : ಪರಿಪೂರಿತಾಮೃತಕಿರಣರುಚಿಯಂ ರುಚಿಸುವ ಚಕೋರ ಸೇರಿ ಮರ್ದಿಂಗೆಸಲುವುದೆ (ಬಸವ. ೧೧-೧೦). (ನಾ). ೨. ಆವರಿಸಿರುವುದು ; ತುಂಬಿರುವುದು : ತದುಜ್ಜ್ವಲರತ್ನದೀಪ್ತಿ ದಿಗ್ವಿವರನಭೋವಿಭಾಗ ಪರಿಪೂರಿತಮಾಗಿರೆ (ಆದಿಪು. ೮-೫೫). [ಸಂ.]

ಪರಿಪೂರಿಸು (ಕ್ರಿ). ಪೂರ್ತಿಯಾಗಿ ಆವರಿಸು ; ಪೂರ್ಣವಾಗಿ ತುಂಬು : ಸುರವಂದಿಪ್ರಜಯಜೀಯರವಂ ಪರಿಪೂರಿಸಿದತ್ತಾಶಾಂಬರವಂ (ಚಂದ್ರಪು. ೪-೬೩). [ಪರಿಪೂರ+-ಇಸು$_3$]

ಪರಿಪೂರ್ಣ (ಗು). ೧. ಪೂರ್ತಿಯಾಗಿ ತುಂಬಿದ ; ಸಂಪೂರ್ಣವಾಗಿ ತುಂಬಿದ; ವೃದ್ಧಿಗೊಂಡ : ಪರಿಪೂರ್ಣೋತ್ಕಟದಾನಧಾರೆಕಟದಿಂ ಪಾಯ್ತುಳ್ದುಮಂ. . .ಚಕ್ರಿಯ ಮನಂಗೊಂಡಿತ್ತು ಮತ್ತದ್ವಿಪಂ (ಆದಿಪು. ೧೨-೫೮) ; ರಚಿತಪದಪ್ರಸನ್ನಪರಿಪೂರ್ಣರಸೋಚಿತಂ . . . ಕಾಳಿದಾಸನುಮನೇಳಿಸಿತೀ ಕೃತಿ ನಾಗವರ್ಮನಾ (ಛಂದೋಂಬು. ೧-೭) ; ಪರಿಪೂರ್ಣಗರ್ಭಭರದಿಂ ಬರಲಾಜಿಪೆ ನಿಂದೊಡೈದಿ ನದಿಯಂ ಜಲಮಂ . . . ಏಱೆದುದು ಕರಣಿಯಂದೆ ಕರಣಿಗಿಳೇಂದ್ರಂ (ಚಂದ್ರಪು. ೯-೩೬) ; ತರುಣಶಶಿ ಪರಿಪೂರ್ಣಚಂದ್ರಮನಾಗಳಾದಂತೆ ಹರುಷದಲಿ ಹೊರೆಯೇಱಿ ಹಿಗ್ಗಿದರೆಸಿ (ಶಾಂತಿರಾ. ೪೩-೧೨). ೨. ಪೂರ್ತಿಯಾದ ; ಸಂಪೂರ್ಣವಾದ ; ಸಮಗ್ರ : ಪರಿಪೂರ್ಣೋತ್ಸವಮುತ್ಸವ ಮುರಜಧ್ವನಿಯಿಂದಮಾ ವಧೂವರರಂ ಪೋ ಬರವೇಱೆಂಬಂತಿರ್ದುಮು ಸುರವಾರಸ್ತ್ರೀವಿಲಾಸಪರಿಣಯನಗೃಹಂ (ಆದಿಪು. ೮-೧೯) ; ಅಂತು ಪ್ರಧಾನಪ್ರಕೃತಿಯಪ್ಪ ಕಾಮದೇವನಿಲ್ಲದೆ ತದೀಯ ಪರಿಪೂರ್ಣಪರಿಚ್ಛದಮಂ ಪೊಕ್ತು ನಿಂದಳಂ ನೋಡಿ (ಶಾಂತಿಪು. ೮-೮೩ ಪ). (ನಾ). ೩. ಪೂರ್ತಿಯಾಗಿ ತುಂಬಿದುದು; ಸಂಪೂರ್ಣವಾಗಿ ಭರ್ತಿಯಾದುದು : ಪರಿಪೂರ್ಣಂ ಕೋಶಗೃಹಂ . . . ಎನೆ ತನಗಾರ್ದೋರೆಯೆನೆ ವೈಶ್ರವಣನರಸುಗೆಯ್ದುತ್ತಿರ್ದಂ (ಮಲ್ಲಿಪು. ೪-೧೫೧) ; ಬಯಲಂ ನಿಜಕೇಶರರುಚಿಯಿನಲರ್ದೋಟ್ಟಂದರಸಿ ಬನಕ್ಕಂ ಬಟಾಕ್ಕೆ ಸಿರಿ ಪರಿಪೂರ್ಣಂ (ಚಂದ್ರಪು. ೬-೭೨) ; ಕಂಗಳುಂ ದಾಕ್ಷಾಂಬುಪರಿಪೂರ್ಣಂಗಳು (ಬಸವ. ೪೦-೬೮). ೪. ಪೂರ್ತಿಯಾಗಿರುವುದು ; ಸಂಪೂರ್ಣವಾಗಿರುವುದು; ಸಮಗ್ರವಾದುದು : "ಪರಿಪೂರ್ಣಮಾಭೋಗಮೆನಲ್ಕೆ ನೆಱೆವಣಿಗೆ" (ಮಂಗರಾ. ೧೩೪-೩೨) ; ಸತ್ತು ಚಿತ್ತು ಆನಂದ ನಿತ್ಯ ಪರಿಪೂರ್ಣ ಅಖಂಡವೆಂಬ ಅಖಂಡಲಕ್ಷಣಯುಕ್ತವಾದ ಮಹಾಲಿಂಗವೇ ಪತಿ (ಅಖಂಡೇ. ೨೩೪-೧). ೫. ಲೋಪದೋಷಗಳಿಲ್ಲದವನು ; ಶ್ರೇಷ್ಠನಾದವನು : ನಿತ್ಯ ಪರಿಪೂರ್ಣನಪ್ಪ ಪರಶಿವಚಿತ್ಪ್ರಾಣಶಕ್ತಿಯಿಂದ ಪರಮಜ್ಞಾನಶಕ್ತಿ ಉದಯಿಸಿದಳು ನೋಡಾ (ಸಿದ್ಧೇಶ್ವ. ೧೭-೪೪) ; ಪರಿಪೂರ್ಣನನಘನದ್ವಯನುರುತರಮಹಿಮಾಂಕಂ (ವೃಷಪಿ. ೩೬-೧೧೮) ; ನಿರುತ ಪರಿಪೂರ್ಣಂಗೆ ಪ್ರದಕ್ಷಿಣದಿರುಗಲೆಲ್ಲಿ (ಗಗಶಾ. ೧೯-೩೮).

ಪರಿಪೂರ್ಣನಾಗು = ೧. ಲೋಪದೋಷವಿಲ್ಲದವನಾಗು ; ಉತ್ತಮವ್ಯಕ್ತಿಯಾಗು : ಓದಿನಿಂದ ಮನುಷ್ಯ ಪರಿಪೂರ್ಣನಾಗುತ್ತಾನೆ (ವಿಕಾಸ. VI ವಿಚಾರದರ್ಪಣ). ೨. ಮರಣ ಹೊಂದು ; ಸಾಯು : ಶ್ರೀವಿದ್ಯಾರಂಣ್ಯ ಶ್ರೀಪಾದಂಗಳು ಪರಿಪೂರ್ಣರಾದಲ್ಲಿ ಪಂಪಾಕ್ಷೇತ್ರದಲ್ಲಿ . . . ಶ್ರೀ ವಿದ್ಯಾರಂಣ್ಯಪುರವಾಗಿ ಮಾಡಿ ದಾನಧಾರಾಪೂರ್ವಕವಾಗಿ ಕೊಟ್ಟ ತಾಮ್ರಶಾಸನ (ಮೈಅರಿ. ೧೯೫೫. ೨೪-೩೬; 1387). **ಪರಿಪೂರ್ಣಮಾಗು, ಪರಿಪೂರ್ಣವಾಗು** = ೧. ಪೂರ್ತಿಯಾಗು ; ಸಂಪೂರ್ಣವಾಗು : ಅಕ್ಕರಂಗಳಕಾರಂ ಮೊದಲಾಗಿ ಳಕಾರಪರ್ಯಂತಂ ಪರಿಪೂರ್ಣಮಾಗಿರ್ಪುವು (ಶಮದ. ೪ ವೃತ್ತಿ)' ; ಇನ್ನೂ ಚಿಕಿತ್ಸೆಯ ಪರಿಣಾಮ ಪರಿಪೂರ್ಣವಾಗಿಲ್ಲ (ಕಾವೇರಿ. ೨೦೦). ೨. ಕೊನೆಗೊಳ್ಳು ; ಮುಕ್ತಾಯವಾಗು ; ಸಮಾಪ್ತವಾಗು : ಪರಮನಚರಮಕಲ್ಯಾಣಂ ಪರಿಪೂರ್ಣಮಾಗೆ (ಶಾಂತಿಪು.೧೨-೩೬ ಪ). [ಸಂ.]

ಪರಿಪೂರ್ಣಚಂದ್ರ (ನಾ). ಸಂಪೂರ್ಣವಾಗಿ ವೃದ್ಧಿಗೊಂಡಿರುವ ಚಂದ್ರಬಿಂಬ ; ಹುಣ್ಣಿಮೆಯ ಚಂದ್ರ : ಪರಿಪೂರ್ಣಚಂದ್ರನಂ ತಿಗ್ಮರೋಚಿಯುಂ . . . ಆ ಕಾಂತೆ ನಿಶೆಯ ಕಡೆಯೊಳ್ ಕಂಡಳ್ (ಪುಷ್ಪಪು. ೩-೧೨೦). [ಪರಿಪೂರ್ಣ+ಚಂದ್ರ$_2$]

ಪರಿಪೂರ್ಣತೆ (ನಾ). ೧. ತುಂಬಿರುವಿಕೆ; ಸಂಪೂರ್ಣವಾಗಿರುವಿಕೆ; ಸಮಗ್ರತೆ : "ಅಭೋಗಃ, ಪರಿಪೂರ್ಣತಾ—ಈ ೨ ನೆಱೆವಣಿಗೆ" (ಪಲಾಯು. ೧೨೪-೭೦). ೨. ಲೋಪದೋಷಗಳಿಲ್ಲದಿರುವಿಕೆ ; ಪರಿಪೂರ್ಣವಾಗಿರುವುದು : ಪರಿಪೂರ್ಣತೆಯುಮನಭವನ ನಿರುತಶಯ್ಯೆಶ್ವ

ರ್ಯಮಂ . . . ಬಿತ್ತರಿಪುದು ನಿಗಮಾಂತಶಯಮುಮಾಗಮತತಿಯುಂ (ವೃಷವಿ. ೩೫-೧೯); ದೇಶದ ಜನರಿಗೆ ಹೊಸಜೀವನವನ್ನು ಎರೆದು, ಅವರು ಪರಿಪೂರ್ಣತೆಯನ್ನೂ ಪರಮಾರ್ಥವನ್ನೂ ಪಡೆಯುವಂತೆ ಮಾಡುವುದೇ ಪ್ರೌಢಶಿಕ್ಷಣದ ಗುರಿ (ರಾಮರಾ. ೩೮); ಪರಿಪೂರ್ಣತೆಯೆಂಬುದು ಮಹಾದೇವನಿಗೆ ವಿಾಸಲಾಗಿರುವಂತಹುದು (ಶಕ್ತಿವಿ. ೧); ಪ್ರಕೃತಿಯೂ ಯಾವುದೋ ಪರಿಪೂರ್ಣತೆಯನ್ನು ಪಡೆಯುವ ಸಲುವಾಗಿ ಸಂತತವಾಗಿ ಯತ್ನಿಸುತ್ತಿದೆ (ಪುಷ್ಪಾರ. ೨೯ ಸೀಕೆಳೆ). ೩. ಸಂತೃಪ್ತಿ.

[ಸಂ. ಪರಿಪೂರ್ಣತಾ]

ಪರಿಪೂರ್ಣತೆವಡೆ (ಕ್ರಿ). ಸಂಪೂರ್ಣತೆಯನ್ನು ಹೊಂದು,—ಪಡೆ : ನಾ ಪದಪಿಂದವನಂಗವ ಭೂಪತಿಗೇಳೊಯ್ಯನೆ ತಡಪಿದೊಡಾತ್ಮನೆ ಪರಿಪೂರ್ಣತೆವಡೆದುದು (ತ್ರಿಭುವಿ. ೧೯-೩೭). [ಪರಿಪೂರ್ಣತೆ+ಪಡೆ$_1$]

ಪರಿಪೂರ್ಣತ್ವ (ನಾ). ೧. = ಪರಿಪೂರ್ಣತೆ ೧ : ಅಪೂರ್ಣತೆಯಂ = ಪರಿಪೂರ್ಣತ್ವಮಂ (ಶಮದ. ೪ ಟೀಕೆ). ೨. = ಪರಿಪೂರ್ಣತೆ ೨ : ನೀನ ದನಱಸುವಾಗ ನಿನಗಾವಲ್ಲಿ ನಿಶ್ಚಯ ತೋಱುತ್ತು ಅದೀಗ ನಿನ್ನ ಪರಿಪೂರ್ಣತ್ವದ ನೆಲೆ (ಅಪಚಂ. ೧೩೫-೭೮); ನಿನ್ನ ಅದಿಮಧ್ಯಾವಸಾನ ಅಖಂಡಪರಿಪೂರ್ಣತ್ವವನಱಿದ ಅವಿರಳಜ್ಞಾನಸಂಬಂಧಿಗಳಪ್ಪ ಗಣಾಧೀಶ್ವರರು ಇಲ್ಲದಂದು (ಸಿದ್ಧೇಸ. ೫-೧೪). [ಸಂ.]

ಪರಿಪೂರ್ಣಶಶಿ (ನಾ). = ಪರಿಪೂರ್ಣಚಂದ್ರ : ಪರಿಪೂರ್ಣಶಶಿಗೆ ಚಂದ್ರಿಕೆ ಪಿರಿದೆನೆವಂತೊಲ್ದು . . . ಪತ್ನಿಯರ್ಪಳುತ್ಸವದಿಂದಂ (ತ್ರಿಪುವಿ. ೫೧-೪). [ಪರಿಪೂರ್ಣ+ಶಶಿ]

ಪರಿಪೂರ್ಣಾಂಗಿ (ನಾ). ಕುಂದಿಲ್ಲದ ಶರೀರವುಳ್ಳವಳು ; ಲೋಪದೋಷಗಳಿಲ್ಲದ ಅಂಗಾಂಗಗಳನ್ನು ಹೊಂದಿದವಳು : ಮಗ್ಗಿರಱು ವರನಿಬರಂ ಪಿರಿಯೈ ನೀಂ ಪರಿಪೂರ್ಣಾಂಗಿಯೈ ಶ್ರೀದತ್ತೆಯೆಂಬ ಮಗಳಾಗಿ ಪುಟ್ಟಿದೈ (ಶಾಂತಿಪು. ೪-೬೬ ಪ). [ಸಂ.ಪರಿಪೂರ್ಣಾಂಗೀ]

ಪರಿಪೂರ್ಣಾವಧಿ (ನಾ). ಕೊನೆ ಮುಟ್ಟಿರುವ ವಾಯಿದೆ; ಪೂರ್ಣಗೊಂಡ ಅವಧಿ : ಪರಿಪೂರ್ಣಾವಧಿದಿವಸಸಾಯಂತನಸಮಯದೊಳ್ ಶ್ರೀವಿಜಯನಿರ್ಪ ಚಿತ್ರಶಾಲೆಯೊಳಗಣ ಸಿಂಹಾಸನದೊಳ್ . . . ವೈಶ್ರವಣಪ್ರತಿಮೆ ಶ್ರೀವಿಜಯನಾಸ್ಥಾನದೊಳಿರೆ (ಶಾಂತಿಪು. ೬-೨೮ ಪ).

[ಪರಿಪೂರ್ಣ+ಅವಧಿ]

ಪರಿಪೂರ್ಣೇಂದು (ನಾ). = ಪರಿಪೂರ್ಣಚಂದ್ರ : ಪರಿಪೂರ್ಣೇಂದುವಿನಿಂದಖಂಡಧರಣೀನಾಥಂ . . . ಸುತನಾದಪಂ ನಿನಗೆ ಪಂಕೇಜಾತಪತ್ರೇಕ್ಷಣೇ (ಪಾರ್ಶ್ವಪು. ೭-೬೩); ಪರಿಪೂರ್ಣೇಂದುವ ಗೆಲಿಂದರಸ್ಮಿತಸ್ಮೇರವಕ್ತ್ರಶಶಿಯೊಳ್ ಮತ್ತೊಂದರೆ ಕಲೆಯೆನಿಸಿತೆನೆ ಸುಂದರಮಾಯ್ತು ನ್ವರ್ಥಮಾಗಿ ಪೆಱೆನೊಸಲವಳಾ(ಪುಷ್ಪಪು. ೩-೫೩).

[ಪರಿಪೂರ್ಣ + ಇಂದು$_3$]

ಪರಿಪೂರ್ತಿ (ನಾ). ೧. ಪರಿಪೂರ್ಣತೆ; ಪೂರ್ಣವಾದ ಅಭಿವೃದ್ಧಿ,—ಬೆಳವಣಿಗೆ : ಎಲ್ಲ ಕಡೆಗೆ ಕಥಾಬೀಜದ ಸತ್ವವು ತನ್ನ ಪರಿಪೂರ್ತಿಯನ್ನು ಪಡೆದು ಬೆಳೆಯುವಂತೆ ರಾಘವಾಂಕನು ಅದಕ್ಕೆ ತನ್ನ ಪ್ರಭುಲ್ಲವಾದ ಪ್ರತಿಭೆಯ ಎರಕ ಹೊಯ್ದುದ್ದಾನೆ (ತನಾ. ೧೦೮). ೨. ಮುಕ್ತಾಯ ; ಕೊನೆ : ಬಿಡದೆ ನಿಮ್ಮಯ್ಯಗಳವಸರವನೊಡನೆ ಪರಿಪೂರ್ತಿಗಳನೆಯ್ದುಸಿ ಕಡೆಯದೀಗಳೆ ಕಂದ . . . ಕಡೆಯೊಳಾಂ ತಿಳುಹಿದಪೆನೆರೆ ನೀ ನಿದ್ರೆಗೆಯ್ದುತಿರು (ಬಸಪು. ೪೭-೨೨). [ಸಂ.]

ಪರಿಪೇಲವ (ಗು). ೧. ಬಹಳ ಚಿಕ್ಕದಾದ,—ಸಣ್ಣದಾದ. ೨. ಬಹಳ ಸೂಕ್ಷ್ಮವಾದ,—ನಾಜೂಕಾದ. (ನಾ). ೩. ಸುಗಂಧಪೂರಿತವಾದ ಒಂದು ಬಗೆಯ ಸಸ್ಯ ; ಕೊನ್ನಾರಿಗೆಡ್ಡೆ : "ಕುಟನ್ನಟಂ, ದಾಶಪುರಂ, ವಾನೇಯಂ, ಪರಿಪೇಲವಂ . . . ಕೈವರ್ತೀ, ಮುಸ್ತಕಂ-ಅ ತುಂಗಮುಸ್ತದ ಹೆಸರುಗಳು" (ಸಿದ್ಧಾಂತಿ. ೧೪೨). [ಸಂ.]

ಪರಿಪೋಗು (ಕ್ರಿ). ಧಾಳಿ ಮಾಡು; ಮುತ್ತಿಗೆ ಹಾಕು; ಮುತ್ತು : ನಿಧಿಮಲ್ಲಂ ಪರಿಪೋಗಿ ಕಾದೊಡೆ ಆತನ ತಮ್ಮಂ ಬೆನವಯ ಸಗ್ಗಿಯಾದಮ್ (ಮೈಅರಿ. ೧೯೨೬, ೬೩-೩ ; ೨ನೆಯ ಶತ).

[ಪರಿ$_2$+ಪೋಗು$_1$ (<ಪೋ$_1$)]

ಪರಿಪೋಷ (ನಾ). ಅಧಿಕವಾದ ಪೋಷಣೆ : ಮಹಾಕಾವ್ಯದಲ್ಲಿ ಕಥಾನಿರೂಪಣೆಗಿಂತಲೂ ರಸಪರಿಪೋಷಕ್ಕೆ ಹೆಚ್ಚಿನ ಪ್ರಾಶಸ್ತ್ಯ (ಭಾಪಗೀ. ೬) ; ವ್ಯಥಿಚಾರಿಗಳೇ ಆಂತರಿಕ ಪರಿಪೋಷ, ಅನುಭಾವಗಳೇ ಬಹಿರಂಗವ್ಯಾಪಾರ ಎಂದೂ ಹೇಳಬಹುದು (ಸಾಹಿವಿ. ೩). [ಸಂ.]

ಪರಿಪೋಷಕ (ನಾ). ಪೋಷಣೆ ಮಾಡುವವನು; ಪಾಲಿಸುವವನು; ಸಲಹುವವನು : ಕರ್ನಾಟಕದ ಇತರ ಹಲವು ಅರಸುಮನೆತನಗಳಂತೆಯೆ ನೊಳಂಬರೂ ಸರ್ವಧರ್ಮಪರಿಪೋಷಕರಾಗಿ ಬೆಳಗಿದವರೆಂದು ಹೇಳಬಹುದಾಗಿದೆ (ನೊಳಂಬ. ೭೪). [ಸಂ.]

ಪರಿಪೋಷಣ (ನಾ). ೧. ಸಲಹುವುದು ; ಪೋಷಿಸುವುದು ; ಸಂರಕ್ಷಣೆ. ೨. ಪೋಷಣೆ ಮಾಡುವವನು ; ಸಂರಕ್ಷಿಸುವವನು : ಪ್ರಣುತಿಸಲು ಗುರುಭಕ್ತಿ ಪರಿಪೋಷಣನತುಳಗುರುಭಕ್ತಿಗುಣಭೂಷಣನೆನಲು ಗುರುಭಕ್ತಿಯಲಿ ಗುರುಭಕ್ತನೊಪ್ಪುವನು (ಬಸಪು. ೩೯-೨). [ಸಂ.]

ಪರಿಪೋಷಣೆ (ನಾ). ಬೆಳವಣಿಗೆ ; ಅಭಿವೃದ್ಧಿ : ನಿಸರ್ಗವರ್ಣನೆ ಮತ್ತು ಶೃಂಗಾರರಸಪರಿಪೋಷಣೆಯಲ್ಲಿ ಮಾತ್ರವಲ್ಲದೇ . . . ಲೋಕಾನುಭವವನ್ನು ನಿರೂಪಿಸುವದರಲ್ಲಿಯೂ ಈ ಕವಯಿತ್ರಿಯರು ತಮ್ಮ ಕೌಶಲ್ಯವನ್ನು ತೋರಿಸಿದ್ದಾರೆ (ಸಂಕವ. ೯). [ಸಂ. ಪರಿಪೋಷಣ]

ಪರಿಪೋಷಿತ (ಗು). ಅತಿಯಾಗಿ ಬೆಳೆದ,—ವೃದ್ಧಿ ಹೊಂದಿದ : ಪರಿಪೋಷಿತಾಶಾಧೀನನಂ ದುಃಕೃತಯುತನನಪರಾಧದಶಶತನ ಎನ್ನನೇನಂ ಮಾಡಿಕೊಂಬೆನೊ (ಬಸಪು. ೬೦-೫೬). [ಸಂ.]

ಪರಿಪೋಷಿಸು (ಕ್ರಿ). ಚೆನ್ನಾಗಿ ಪುಷ್ಟಿಗೊಳಿಸು,—ಪಾಲನೆ ಮಾಡು : ಪ್ರಾಣೋಪಹಾರದಿಂದ್ರಿಯಸಮೂಹವೆಲ್ಲಂ ಪರಿಪೋಷಿಸಲ್ಪಡುವಂತೆ (ವಿವೇಕ. ೧೦೧). [ಪರಿಪೋಷಣ+—ಇಸು$_3$]

ಪರಿಪ್ರಮಾಣ (ನಾ). ಅಳತೆ ; ಪ್ರಮಾಣ : ಆ ನರಕಬಿಲಂಗಳೆಲ್ಲ ಮೆಣ್ಬತ್ತು ನಾಲ್ಕುಲಕ್ಷಪರಿಪ್ರಮಾಣಮಾಗಿಯುಂ (ಸುಕುಮಾ.೧೧-೪೧ ಪ); ಆ ವಿಸಮಾಹಿಯ ವಿಷಮುಖಪಾವಕನಿಂ ಪಾಱುತಿರ್ಪ ಖಗಕುಳಮುಂ... ಬೇವುದು ಯೋಜನಪರಿಪ್ರಮಾಣಾಂತರದೊಳ್ (ಜಸಿ. ೩-೮೦) ; ಆ ಮಹಾಕಲ್ಯಾಣದ ವಿಸ್ತಾರ ಹನ್ನೆರಡುಯೋಜನ ಪರಿಪ್ರಮಾಣ (ಮೋಕ್ಷಮಾ. ೨೩ ಪ್ರಸ್ತಾವನೆ). [ಸಂ.]

ಪರಿಪ್ರಶ್ನ (ನಾ). ಮತ್ತೆ ಮತ್ತೆ ಕೇಳುವ ಪ್ರಶ್ನೆ ; ಪುನಃ ಪುನಃ ಕೇಳುವ ಪ್ರಶ್ನೆ : ಪರಿಪ್ರಶ್ನವೆಂದರೆ ಬಾರಿಬಾರಿಗೂ ಕೇಳುವುದು (ಅನಾಸ. ೨೯). [ಸಂ.]

ಪರಿಪ್ರಶ್ನೆ (ನಾ). = ಪರಿಪ್ರಶ್ನ : ನಿಲ್ಲದೆ ಪರಿಪ್ರಶ್ನೆ ಮಾಡಲು ತಿವಲಿಖಿತದಿಂದ ಹೇಳಿ ಅವರನ್ನು ನಿರುತ್ತರಗೊಳಿಸಿದನು (ರಾಘಚ. ೮೭ ಕಥಾಸಾರ); ಜ್ಞಾನಪ್ರಾಪ್ತಿಗೆ ಪ್ರಣಿಪಾತ, ಪರಿಪ್ರಶ್ನೆ, ಸೇವೆ ಎಂಬೀ ಮೂರು ಒಪ್ಪಂದಗಳಿರುವುವು (ಅನಾಸ. ೨೯). [ಸಂ. ಪರಿಪ್ರಶ್ನ]

ಪರಿಪ್ಲವ (ಗು). ೧. ಚಂಚಲವಾದ ; ಕ್ಷುಬ್ಧವಾದ ; ಅಸ್ಥಿರವಾದ. (ನಾ). ೨. ಅತ್ತಿತ್ತ ಚಲಿಸುವುದು,-ತಿರುಗಾಡುವುದು. ೩. ಅಲ್ಲಾಡುವುದು; ಅಲುಗಾಟ. ೪. ನಡುಗುವುದು; ಕಂಪಿಸುವುದು. ೫. ಚಂಚಲತೆ ; ಅಸ್ಥಿರತೆ : "ಲೋಲಂ, ಚಪಲಂ . . . ಪರಿಪ್ಲವಂ . . . ಸಂಚಳಂ—ಈ ೧೦ ಸಂಚಳಂ" (ಹಲಾಯು. ೧೧೫-೧೦);

ಅವಬೋಧಂ ವಿಷಯಪರಿಪ್ಲವಂ (ಮನೋವಚನಕಾಯನಿಯಮಂ ಪಾರಿಪ್ಲವ) ಮಿನಿತಿಲ್ಲದೆ ಮೂಱುಂ ಭುವನಮನೆಱಗಿಸುವ ಸಮತೆ ಸಮನಿಸಿದಪುದೇ (ಶಾಂತಿಪು. ೯-೧೧೯). ೬. ಈಜುವುದು. ೭. ತೇಲುವುದು. ೮. ತೊಂದರೆ ; ಕಾಟ ; ಹಿಂಸೆ : ಪರಿಹರಿಸಿ ಕೊಡುವೆನು ದುಷ್ಟಪಾಟಚ್ಚರ ಪರಿಪ್ಲವವ (ಕುವ್ಯಾಅ. ೧೯-೩). [ಸಂ.]

ಪರಿಪ್ಲಾವಿತ (ಗು). ೧. ತೇಲುತ್ತಿರುವ. ೨. ತಲ್ಲೀನವಾಗಿರುವ ; ಆವೃತವಾದ : ಅಮರಲೋಕದರ್ಶನಾನಂತರೋತ್ಪನ್ನ ರಾಗಸಾಗರೋದಾರಪೂರಪರಿಪ್ಲಾವಿತಾಂತರಂಗಂ . . . ಈಶಾನಕಲ್ಪದ ಚೈತ್ಯಾಲಯಂಗಳನರ್ಚಿಸಿ(ಅದಿಪು. ೨-೬೯೫); ಕರಟಕಟಗಳಿತ ಮದಜಳಧಾರಾಪೂರಪರಿಪ್ಲಾವಿತ ಸಕಳಭೂತಳಮಪ್ಪ ನಾಲ್ಕುಲಕ್ಕ ಭದ್ರಹಸ್ತಿಯುಮನೊಂದುಮಾಡಿ (ಪಂಪಭಾ. ೧೦-೫೭೫); ಅಂತು ದಿವ್ಯಸುಖಪರಂಪರಾಪರೀತಾಂಗನನಂಗರಾಗರಸಪೂರಪರಿಪ್ಲಾವಿತಾಂತರಂಗನಚ್ಯುತಾಮರೇಶ್ವರಂ ನಂದೀಶ್ವರದ್ವೀಪಕ್ಕೆ ಪರಿವಾರಾಮರೇಶ್ವರರ್ ಸಹಿತಂ ಪೋಗಿ (ಶಾಂತಿಪು. ೪-೧೧೫೫). [ಸಂ.]

ಪರಿಪ್ಲುತ (ಗು). ೧. ತುಂಬಿದ; ಒಳಗೊಂಡ. (ನಾ). ೨. ತುಂಬಿದುದು ; ಒಳಗೊಂಡಿರುವುದು : ಸಾಕಷ್ಟು ವಿಷಯಪರಿಪ್ಲುತವಾಗಿದ್ದರೂ ಈ ಗ್ರಂಥ ಸಂಪೂರ್ಣವಾಗಿಲ್ಲವೆಂಬುದನ್ನು ನಾನು ಬಲ್ಲೆ (ಭಾರದ. ೧ ಮುನ್ನುಡಿ) ; ಈ ಪ್ರಶ್ನೆಗಳು ವಿಚಾರಪರಿಪ್ಲುತವಾಗಿದ್ದು ವಿಚಾರಮಂಥನಕ್ಕೆ ಎಡೆಮಾಡಿ ಕೊಟ್ಟವೆ (ದ್ರಾವಿವಿ. ೨೮೫). ೩. ತುಂಬಿದವನು; ಒಳಗೊಂಡವನು: ಚಿದಾಕಾಶದಲ್ಲಿ ಬಹ್ವಂಶ ಪರಿಪ್ಲುತನಾದ ರವಿಯಂಥ ಕವಿತಾರಕೆಗಳು ಬಹಳ ವಿರಳ (ಕಾವ್ಯಕು. ೫೭). [ಸಂ.]

ಪರಿಪ್ಲುಷ್ಟ (ನಾ). ಸುಟ್ಟುದು ; ದಗ್ಧವಾದುದು : ಕಷ್ಟಂ ದುಃಖಾನಳಪರಿಪ್ಲುಷ್ಟಂ ಚಿಃ ಗಿಚಿತುಷ್ಟಯಂ ಪ್ರಾಣಿಗೆ (ಅದಿಪು. ೯-೫೧). [ಸಂ.]

ಪರಿಬಂಧನ (ನಾ).ತಡೆ ; ನಿರ್ಬಂಧನ : 'ಪರಿಬಂಧಿಸು' ಪರಾ. [ಸಂ.]

ಪರಿಬಂಧಿಸು (ಕ್ರಿ). ತಡೆ ; ನಿರ್ಬಂಧಿಸು : ಇನಿ ಮುತ್ತಿ ಮುಸುಱು ಪರಿಬಂಧಿಸಿದುವು ನರರಥತುರಂಗಮಂಗಳಂ . . . ಅವನ ಸರಲ್ಗಳ್ (ಪಂಪಭಾ. ೧೨-೧೬೫). [ಪರಿಬಂಧನ+-ಇಸು$_3$]

ಪರಿಬದ್ಧ (ಗು). ಧರಿಸಿದ ; ಉಳ್ಳ ; ಕೂಡಿಕೊಂಡ : ಬಳಿಕ ಯೋಜನಗಂಧಿಯಲ್ಲಿಂದಿಳಿದನೆಬ್ರಶ್ಯಾಮನುರುಪಿಂಗಳಜಟಾಪರಿಬದ್ಧ ವೇದವ್ಯಾಸಮುನಿರಾಯ (ಕುವ್ಯಾಅ. ೨-೨೩). [ಸಂ.]

ಪರಿಬರ್ಹ (ನಾ). ೧. ಉಪಕರಣ ; ಸಲಕರಣೆ : "ಉಪಕರಣಂ, ಪರಿಬರ್ಹಃ, ಪರಿಚ್ಛದಃ-ಈ ೩ ಉಪಕರಣಂ" (ಹಲಾಯು. ೫೧-೧೫೧); "ಪರಿಬರ್ಹಂ ಪರಿಚ್ಛದಂ ನೆರಹಿದುಪಕರಣಮುಕ್ಕು" (ಮಂಗರಾ. ೬೦-೧೫೫). ೨. ರಾಜಲಾಂಛನ ; ರಾಜಚಿಹ್ನೆ : ನಿಜಾನುಜಕನ್ಯಾನ್ವಿತಮುತ್ಸವಧ್ವಜದ ಕೋಟಿಪರಿಬರ್ಹವಿರಾಜಮಾನ ರಾಜಮಂದಿರಮಂ ಮಚ್ಚಿ ಬಿಚ್ಚಳಿಸುತ್ತುಂ (ಶಾಂತಿಪು. ೪-೭೫೫). ೩. ಸೇವಕಜನ ; ಪರಿಜನ. [ಸಂ.]

ಪರಿಬವಣೆಗೆ (ನಾ). ತಿರುಗುವಿಕೆ ; ಸುತ್ತುವಿಕೆ : "ಪರಿಬವಣೆ(-ಗೆ)-ಪರಿಭ್ರಮಣ=ಸುತ್ತಾಟ" (ತದ್ಭವಕೋ. ೨೪); ಕುಲಾಲಚಕ್ರದ ಪರಿಬವಣೆಗೆಯ ಪಾಡಿನಲಿ ಕಾತರಿಸುತವನಿಗೆ ಮೈಯನಿತ್ತನು ನೀಡಿ ಭುಜಯುಗವ (ಕುವ್ಯಾಅ. ೬-೭೯). [ಪರಿಬವಣೆ+-ಅಗ್ಗಿ$_0$]

ಪರಿಬವಣೆ (ನಾ). ೧. ನಿರಂತರವಾದ ಸುತ್ತಾಟ,-ಅಲೆದಾಟ : ತುರಗ ರಥವೆಮಗಿಲ್ಲ ವಿಸಿನದ ಪರಿಬ[ಪಾಠಾಂ. ಭ]ವಣೆಗಿವರೇಕೆ ಬೆಸಗೊಳು ಭೀಮ ನೀನೆಂದ (ಕುವ್ಯಾಅ. ೧-೩). ೨. ತೊಳಲಾಟ ; ಕಳವಳ : ಧರೆಯೊಳಣುಮಾತ್ರ ಬೀಳಲ್ ನರಕಕೋಟಿಗಳ ಪರಿಬವಣೆಯುಪ್ಪುದದನಱಿದಾ ವಿಭೂತಿಯಂ ಧರಿಸಿ ತ್ರಿಪುಂಡ್ರದಿಂ ಸ್ನಾನಮಂ ಬಿಡದೆ ಮಾಳ್ಪುದು (ಲಕಿಂ. ೪೧-೧೩); ಅರಿಯದನೆ ನೀಂ ನಿನಗಿದೇಕೀ ಪರಿಬವಣೆ ಚಿತ್ತದಲಿ (ರಾಮಾಸಂ. ೩-೫-೨೩). [<ಸಂ. ಪರಿಭ್ರಮಣ]

ಪರಿಬೃಢ (ನಾ). ಮುಖಂಡ ; ಪ್ರಧಾನ ವ್ಯಕ್ತಿ : ಊರುಗಳನುಡಿವೆನೊದೆವೆಂ ಕೌರವಪರಿಬೃಢನ ಮಕುಟಮಂ (ಗದಾಯು. ೧-೮೦); ಪಂಡವದನಂಗಂ ಶಾಕ್ಯರಪರಿಬೃಢನೆನಿಪಂಗಂ ವಿರಕ್ತಿಯಪ್ಪಂತು ಮಾಟ್ಟುದಿಂತಿದು ಕಜ್ಜಂ (ಪಂಚತಂ. ೬೯-೮). [ಸಂ.]

ಪರಿಬ್ರಿಡ (ಗು). ಸಾಂದ್ರವಾದ ; ದಟ್ಟವಾದ : ಶ್ರೀಮದಮರೇಂದ್ರರುಂದ್ರಶಿಖಾಮಣಿಗಣತರುಣಕಿರಣಪರಿಬ್ರಿಡಚರಣಂ (ಸೌಇಅ. XX, ೮೭-೧ ; ?). [< ಸಂ. ಪರಿಬೃಢ]

ಪರಿಭಂಗ (ನಾ). ೧. ಮುರಿಯುವುದು ; ಭಂಗಿಸುವುದು. ೨. ಕೇಡು; ನಾಶ: ಪರಿಭಂಗಂಗಳೆಂದುಂ ಇಲ್ಲದಿಹ ನಿನ್ನ ಕಣ್ಣನೀಕ್ಷಿಸಿದವರು ಬಗೆವರೆ (ಬಸಪು. ೧೮-೬೮). [ಸಂ.]

ಪರಿಭಂಗಿಸು (ಕ್ರಿ). ೧. ನಾಶಮಾಡು ; ಹಾಳುಮಾಡು : ಕೋಭಿಪ ಸದ್ವ್ರತಾಚರಣೆಯಂ ಪರಿಭಂಗಿಸಿ ಕಾಡುತಿರ್ಪುದೀ ಲೋಭವಿದೆನ್ನನು (ಅಮಶ. ೪೧). ೨. ಸೋಲಿಸು ; ಅಪಜಯವನ್ನು ಹೊಂದುವಂತೆ ಮಾಡು : ದುರುಳವೇದಾಂತ ಮತ್ತೋರ್ವಂ . . . ಪರಮಧರ್ಮವನಿರಾಕರಿಸುತಂ ಸಂಚರಿಸುತಿರುವದಂ ತಿಳಿದು ಸಭೆಗರೆದಾತನಂ ಕರಿಸಿ ಪರಿಭಂಗಿಸಿದನು (ಕುಮಾಪು. ೯-೩೨). [ಪರಿಭಂಗ+-ಇಸು$_3$]

ಪರಿಭಂಬೆಱು (ಕ್ರಿ). ನಾಶವಾಗು ; ಅಳಿವನ್ನು ಹೊಂದು: ತ್ರೈಪುರಮೊರ್ವ್ವ ತಾಪಸನ ಕಿಂಚಿನ್ಮಾತ್ರಕೋಪಾಗ್ನಿಯಿಂ ಪರಿಭಂಬೆತ್ತುವು (ಕಇಅ. ೯೪-೩-೩೨ ; 1124). [ಇದು 'ಪರಿಭವಂಬೆಱು' ಎಂಬುದರ ಅಪಲಿಪಿತವಿರಬಹುದು]

ಪರಿಭವ (ನಾ). ೧. ಗಮನ ಕೊಡದಿರುವುದು ; ತಿರಸ್ಕಾರ ; ಅನಾದರ : "ಪ್ರ(ಅ)ತ್ಯಾಕಾರಃ, ಪರಿಭವಃ . . . ತಿರಸ್ಕಾರಃ-ಈ ೭ ಪರಿಭವಂ" (ಹಲಾಯು. ೧೧೭-೧೯). ೨. ಅವಮರ್ಯಾದೆ ; ಅಗೌರವ ; ಅವಮಾನ : ಏನುಮನಱಿಯದೆ ಪರಿಭವಾ[ನಿ]ಲನಿಂ ಕೋಕಾನಲನಿರ್ಮಡಿಸೆ ನಡನಡುಗಿ ಕಾಯ್ದಿನೊಳ್ [ಪಿ]ಡುಗಿ ತಳೋದರಾವೃಕೋದರನಲ್ಲಿಗೆ ಬಂದು (ಪಂಪಭಾ. ೮-೭೦೫) ; ಅಸಹ್ಯಪರಿಭವಾನಲದಂದಹ್ಯಮಾನಗಾತ್ರೆಯುಮಾಗಿ (ಗದಾಯು. ೧-೫೫೫); ಅನರಿಗಳನು ಸಂಹರಿಸಿ ನಿನ್ನಯ ಪರಿಭವಾಗ್ನಿಯಂ ನಂದಿಸುವೆ ನಿಲ್ಲೆಂದನಾ ಪಾರ್ಥ (ಕುವ್ಯಾಅ. ೪-೩೧). ೩. ಸೋಲು; ಪರಾಜಯ : ಭೂಪತಿಗೆ ಕಪ್ಪವನಿತ್ತವನೀಶನತ್ತಣಂ ಪರಿಭವಮಂ ಕಟಲ್ಬುವುದು (ಕವಿಗಾ. ೧-೧೧೪); ಪರಿಭವದ ಪೊಱೆಯನಾಂತರ್ದರಾತಿಗಳ್ಗಳ್ಕಿ . . . ಬಾಟ್ಟುಂ ಗಂಡರೂಪಿನೊಳ್ ಗಂಡನಲ್ತು ಪೆಂಡತಿಯೆ ಪಲಂ (ಅದಿಪು. ೧೨-೯೬); ಕಡಲ ನುಂಗಿದ ಕಪ್ಪಿನ ಪರಿಭವ ನವಸಾಸಿರ ಸಿಡಿಲು ಹೊಯ್ದ ಬಯಲಿಂಗೆ ಬಣ್ಣವುಂಟೆ (ಅಪಚಂ. ೯-೩೫); ಕೃಷ್ಣಭಕ್ತರ ಪರಿಭವವು ಜೀವರಿಗೆ ಪಥ್ಯವೆ ಎಂದನಾ ಕರ್ಣ (ಕುವ್ಯಾದ್ರೋ. ೨-೬೩). ೪. ದುಃಖ ; ಕ್ಲೇಶ ; ಕಷ್ಟ : ಪ್ರಣಯಿನೀವಿಯೋಗಪರಿಭವಾನಲದಹ್ಯಮಾನಮಾನಸನಪ್ಪ ಶ್ರೀವಿಜಯನುಮಂ ಭಂಗಿಸಿ (ಶಾಂತಿಪು.೩-೩೩ ವ) ; ಎನಗಾದೊಂದು ಪರಿಭವಮನಾರ್ಗೆ ದೂಱದೆಂ (ಕಾದಂಬ. ೨೯೮) ; ನಿಜಗೋಕುಲದ ಪರಿಭವವನಾ ಸಂಕ್ಲೇಶಸಂಸ್ಥಿತಿಯ ಶೋಕವನು ಕಾಣುತ್ತ . . . ಕೃಪಾಕರನು ದೈತ್ಯಾಪಹರಣಕೆ ಮಾಡಿದನು ಮನವ (ನಿಭಾಗ. ೧೦-೭-೧೧) ; ಎನ್ನ ಪರಿಭವವ ತಪ್ಪಿಸಿದ ಶ್ರೀ ಗುರುವಿಂಗೆ ನಮೋನಮಃ ಎಂಬೆನಯ್ಯ (ಅಖಂಡೇ. ೧೯-೭).

ಪರಿಭವಮಾಗು, ಪರಿಭವವಾಗು—೧. ಸೋಲಾಗು; ಅಪಜಯ

ವುಂಟಾಗು : ಎನ್ನ ಸನ್ನಿಗೀಗಳೆ ಪರಿಭವಮಾಯ್ತೆಂದು ಧರ್ಮಜಂ ಚಿಂತಿಸಿದಂ (ಗದಾಯು. ೮-೨೯); ತರುಣ ಪರಿಭವವಾಯ್ತಲಾ ನೀ ಮರಳಿ ಹೋಗಂಗದನೆ ಬಾಲಿಯ ನೆರೆಗೆ ಹೋದನು ತಮ್ಮ ನಿನ್ನಯ ಪುರವನಾಯಕವು (ಕೌಶಿಂಗ. ೨೨-೬೨). ೨. ಅವಮಾನವಾಗು ; ಅಗೌರವವಾಗು : ಅರಸ ನೀ ಮುಂದಿರಲು ನನಗೀ ಪರಿಯ ಪರಿಭವವಾಯ್ತು (ಕೌಶಿಂಗ. ೩೮-೪೩). [ಸಂ.]

ಪರಿಭವಂಗೆಯ್ಯು, ಪರಿಭವಗೈ (ಕ್ರಿ). ೧. ಹೀಗಳೆ ; ಅಲ್ಲಗಳೆ : ಪರಿಭವಂಗೆಯ್ಯುತ್ತೆ ಕೋಟಿಸೂರ್ಯಪ್ರಭೆಯನುರುದರ್ಪಣಾಂತರದೊಳಗೆ ಕನ್ನ ಪಡಿರೂವು ಪಿರಿದು ಪೊಳೆಯಲ್ಕೆ (ಅಂಗಾ. ೪-೬-೫). **ಪರಿಭವಗೈ** : ೨. ತಾತ್ಸಾರ ಮಾಡು; ತಿರಸ್ಕಾರವನ್ನು ತೋರು: ತರವಱಿಯದೆ ತಲೆಯೊಳು ಪೊತ್ತು ಲಾಲಿಸೆ ಪರಿಭವಗೈದು ಪಳಿವಳು (ಹದಿಬ. ೬-೨೯). [ಪರಿಭವ + ಗೆಯ್ಯು (< ಕೆಯ್ಯ್ಯ)]

ಪರಿಭವಂಬಡಿಸು (ಕ್ರಿ). ಅವಮಾನಗೊಳಿಸು ; ಅವಮರ್ಯಾದೆ ಮಾಡು : ನಿನ್ನನಿನಿತು ಪರಿಭವಂಬಡಿಸಿದುದು ಸಾಲ್ಗುಂ (ಪಂಪಭಾ. ೨-೬೪ ವ). [ಪರಿಭವಂಬಡು + -ಇಸು$_3$]

ಪರಿಭವಂಬಡು (ಕ್ರಿ). ೧. ಅವಮಾನವನ್ನು ಹೊಂದು : 'ಪರಿಭವಂಬಡಿಸು' ಪರಾ. ೨. ಕಷ್ಟಪಡು ; ಕ್ಲೇಶವನ್ನು ಹೊಂದು : ನಾಮಿಾತನ ಕೆಯ್ಯೊಳಂದು ಪರಿಭವಂಬಟ್ಟಂದು ಮುಂ ಭಿಕ್ಷುಕಕ್ರಮದಿಂದೇಳಿದರಾಗಿ ಬಾರದ ಭವಂ ಬಂದಂದಮೇಂ ಪೇಟಿದೇ (ಸುಕುಮಾ. ೪-೨೯). [ಪರಿಭವ + ಪಡು$_1$]

ಪರಿಭವಂಬಡೆ (ಕ್ರಿ). ಪರಾಜಯವನ್ನು ಹೊಂದು ; ಸೋಲು : ಮುಖಪಂಕ್ತಿಯಿಂದೆ . . . ಸುಧಾಕರಮಂಡಲಂಗಳಂ ಪರಿಭವಿಪಾಕೆಯರ್ ಪರಿಭವಂಬಡೆದರ್ ಕುಸುಮಾಸ್ತ್ರಪಾತದಿಂ (ಜಗವಿ. ೧೬-೮೮). [ಪರಿಭವ + ಪಡೆ$_1$]

ಪರಿಭವಗೈ 'ಪರಿಭವಂಗೆಯ್ಯು' ನೋ.

ಪರಿಭವಿಸು (ಕ್ರಿ). ೧. ಅಸಡ್ಡೆಯಿಂದ ಕಾಣು ; ಅನಾದರವನ್ನು ತೋರು ; ಅಲಕ್ಷಿಸು : ಕರ್ಮಕ್ಷಯಾರ್ಥಂ ತಪಂಬಟ್ಟಾತನನಿಳಿಸಿ ಪರಿಭವಿಸಿ ಮುಟ್ಟುಗಿಡಿಸಿ ನುಡಿಯಲ್ವೇಡೆಂದು ಬಾರಿಸಿದೊಳಂ ಜಯಾವತಿ ಕಣ್ಕೆತ್ತಿ ಬಾರಿಸಿದೊಡೆ (ವಡ್ಡಾರಾ. ೪೬-೧೩); ಬಿಸತಂತುವಿನೊಳ್ಕೊರೆಯೆನಿ ಪೆಳಮನದೆನ್ನಂ ಪರಿಭವಿಪುದೆ ಕಂಡು ಕನ್ನೆಯಂ ಯುವರಾಜಂ (ಕಾದಂಉ. ೩೦೧) ; ಅಂತಿರ್ದೊಡದನೆ ದೋಷಂಗೆಯ್ದು ರೋಷಗ್ರಹಾವೇಶನಾಗಿ ನಿಷ್ಕಾರಣಂ ಪರಿಭವಿಸಿ ನೋಯಿಸಿದೆ (ಪಂಚತಂ. ೭೭-೧೦) ; ಪಾರ್ಥನ ಕೆರಳಿಚಿದರೋ . . . ಪ್ರಚಂಡಪ್ರಳಯಭೈರವನ ಪರಿಭವಿಸಿದರೊ (ಕುಪ್ಪಾಗ. ೧-೯). ೨. ಅಪಮಾನಗೊಳಿಸು ; ಅವಮಾನವಾಗುವಂತೆ ಮಾಡು : ಚಾಣಾಕ್ಯನೆಂಬ ಭಟ್ಟನಂ ನಂದಂ ಪರಿಭವಿಸಿ ನೂಂಕಿಯಟ್ಟ ಕಳೆಯಿಸಿದೊಡೆ (ವಡ್ಡಾರಾ. ೭೫-೭) ; ಆತನ ಮೇಲ್ವಾಯ್ದೊಡೆ ಪಡೆಮಾತೇಂ ಪರಿಭವಿಸಿ ಕಳೆದನುದ್ಧತನೆನ್ನಂ (ಪಂಕಾಮಾ. ೯-೪೪) ; ಹೀನರಂ ಪರಿಭವಿಸಿದುದುಂ . . . ಎಂಬಿವು ಮೊದಲಾದುವೆಲ್ಲಂ ಪ್ರತ್ಯಕ್ಷೋಪಚಾರವಿನಯಮೆಂಬುದು (ಪಸಾರ. ೩೭೮) ; ಇವನು ತಮ್ಮಯ್ಯನನು ನೆಱೆ ಪರಿಭವಿಸನೇ ಚಿಕ್ಕಂದು (ಕುಪ್ಪಾದ್ರೋ. ೧೯-೨೩). ೩. ಸೋಲಿಸು; ಅಪಜಯವನ್ನು ಹೊಂದುವಂತೆ ಮಾಡು: ಅವರಿನದಂ ಪರಿಭವಿಸುವೆನೆಂದು ಪೊಂಗುಗುಂ ಮಿಥ್ಯಾತ್ವಂ (ಸಮಪ. ೫-೧೧೬); ಮಂಜೀರದ ಮಧುರಧ್ವನಿಯಿಂ ಘೋರತಪೋಮಯನನಭವನಂ ಪರಿಭವಿಪೆಂ (ಗಿರಿಕ. ೭-೬೬) ; ಅವರನೊಂದೇ ನಿಮಿಷದಲಿ ಪರಿಭವಿಸಿ ನಡೆತರೆ (ಕುಪ್ಪಾಕ. ೧೪-೧೪) ; ರವಿಸುತನ ಸೂನುವಂ ಪರಿಭವಿಸಿ . . . ಮಹಾರಥರನೊಂದೇ ರಥದೊಳಾ ಸುರಥನೊಡೆದುಳಿದನು (ಚೈಮಿಭಾ. ೧೪-೫). ೪. ಮೀರು ; ಅತಿಕ್ರಮಿಸು : ಶಶಿರುಚಿಯಂ ಪರಿಭವಿಸಿ ನಭಮನಡರ್ದುವು ನರೇಂದ್ರತಾಪಸತಪೋಮಯೂಖಾವಳಿಗಳ್ (ಪಂಪಭಾ. ೮-೧೦); ಮುಖಪಂಕ್ತಿಯಿಂದೆ . . . ಸುಧಾಕರಮಂಡಲಂಗಳಂ ಪರಿಭವಿಪಾಕೆಯರ್ ಪರಿಭವಂಬಡೆದರ್ ಕುಸುಮಾಸ್ತ್ರಪಾತದಿಂ (ಜಗವಿ. ೧೬-೮೮) ; ಗರುಡನಂ ಪರಿಹಾಸಂಗೆಯ್ದು ಪವನನಂ ಪರಿಭವಿಸುವ...ಜಾತ್ಯಶ್ವಂಗಳ ಪಳಯಮಂ ಸೋಂಕದ (ಗಿರಿಕ. ೬-೫೫ ವ) ; ಹರಿಯುರದೊಳೆಸೆವ ಕೌಸ್ತುಭದಿರವಂ ಪರಿಭವಿಸಿ ಮೆಱೆದುದದು (ರಾಜಶೇ. ೫-೨೭). [ಪರಿಭವ + -ಇಸು$_3$]

ಪರಿಭಾಗಿಸು (ಕ್ರಿ). ಪರಿಶೀಲನೆ ಮಾಡು ; ಪರ್ಯಾಲೋಚಿಸು : ಲೋಕದೊಳು ಶ್ರೀಗುರುಕರಸ್ಪರುಶನದಿ ಪರಿಭಾಗಿಸಲು ಕುಲಮೊಂದೆಯಲಾ (ಬಸಪು. ೫೭-೬೯). [< ಪರಿಭಾವಿಸು]

ಪರಿಭಾಗೆ (ನಾ). ಸರಿಯಾದ ವಿಭಾಗ,—ವಿಂಗಡಣೆ : ಚಿತ್ರಕ . . . ಹಿಂಗುಗಳನು ಪರಿಭಾಗೆಯ ಮಾಡಿಯಂಬಿಲ ತಕ್ರದಿಂದಿರದೆ ಮರ್ದಿಸಿ (ಸಾಕ್ಷ್ಯಸಾಂ. ೯). [ಸಂ. ಪರಿಭಾಗ]

ಪರಿಭಾವ (ನಾ). ಆಲೋಚನೆ ; ವಿಚಾರ ; ಚಿಂತನೆ. [ಸಂ.]

ಪರಿಭಾವಕತ್ವ (ನಾ). ವಿಚಾರ ಮಾಡುವುದು ; ಆಲೋಚನೆ : 'ನಿಸ್ಸಂಗಪರಿಭಾವಕತ್ವ' ಪರಾ. [ಸಂ.]

ಪರಿಭಾವನೆ (ನಾ). = ಪರಿಭಾವ : ಎಲ್ಲ ಮಾನಸಿಕ ಪರಿಭಾವನೆಯ ಅನುಕರಣಗಳೇ (ಸೌಂದಸ. ೧೨೮) ; ರಾ. ನರಸಿಂಹಾಚಾರರ ವಿವರಣೆ ಪರಿಭಾವನೆಗೆ ಅರ್ಹವಾಗಿದೆ (ದ್ರಾವಿವಿ. ೨೮೩). [ಸಂ. ಪರಿಭಾವನ]

ಪರಿಭಾವಿತ (ಗು). ೧. ಆಲೋಚಿಸಿದ ; ಚಿಂತನೆ ಮಾಡಿದ : ಸಮುಚಿತಕೃತಿದೋಷದೂಷ್ಯ ಮಾರ್ಗಕ್ರಮಪರಿಭಾವಿತ ಚಿತ್ತವೃತ್ತಿಯಪ್ಪೊಂಗಮಳಿನಕವಿತಾಗುಣೋದಯಶ್ರೀ ಸಮನಿಸುಗುಂ ಸತತಾಭಿಯೋಗದಿಂದಂ (ಕಾವ್ಯಾವ. ೪೯೬). ೨. ತಾತ್ಸಾರಕ್ಕೊಳಗಾಹ ; ಅವಮಾನಗೊಂಡ. ೩. ಹೊಂದಿರುವ ; ಒಳಗೊಂಡ. [ಸಂ.]

ಪರಿಭಾವಿಸು (ಕ್ರಿ). ೧. ಯೋಚಿಸು ; ವಿಚಾರ ಮಾಡು ; ಆಲೋಚನೆ ಮಾಡು : ಪರಿಭಾವಿಸಲೆನಗಿನ್ನಿದಪರಿಹಾರ್ಯಮೆನಿಪ್ಪುದೊಂದು ಮರಣಂ ಶರಣಂ (ಕಾದಂಪೂ. ೮೭೫); ತನ್ನ ಮನದೊಳ್ ಪರಿಭಾವಿಸಿದಂ ದಶಾನನಂ (ಪಂರಾಮಾ. ೧೪-೮೧) ; ಪರಿಭಾವಿಸೆ ಯೋಗಪಾಹಮವು ನಾಲ್ಕೆ ವಲಂ (ಶಮದ. ೩೨) ; ಜೀವನತಿಮಲಿನಂ ಶಿವಂ ಪರಿಭಾವಿಸುವಡತಿ ನಿರ್ಮಳಂ (ಬಸಪು. ೫೧-೨೭). ೨. ಗಮನ ಕೊಡು ; ಲಕ್ಷಿಸು : ಅವ್ಯಕ್ತಾವಯವದೊಳಂ ಕುಮಾರನುನ್ನತಿಕೆಯನುದ್ಭಾವಿಸುತಿರ್ದಪು[ದಂ ಪರಿ]ಭಾವಿಸು ನೀಂ ಚಕ್ರವರ್ತಿಚಿಹ್ನೋತ್ಕರಮಂ (ಕಾದಂಪೂ. ೪೧೯) ; ದೇವಿಯ ಮೊಲೆವಾಲಂ ಪರಿಭಾವಿಸಳಾರಯ್ಯಳಂಜಳಳ್ಳಳ್ (ಗಿರಿಕ. ೩-೧೦೦); ಈ ವಿಜ್ಞಾಪನಮಂ ಪರಿಭಾವಿಸಿ ಸಂತಕ್ಕೆ ನಡೆ ಸಮುನ್ನತಸತ್ವಾ (ರಾಜಶೇ. ೬-೧೩೨). ೩. ಸೂಕ್ಷ್ಮವಾಗಿ ನೋಡು ; ಚಿಂತಿಸಿ ತಿಳಿ ; ಗ್ರಹಿಸು: ದೇವ ಭವಸ್ಥಿತಿಯಂ ಪರಿಭಾವಿಸಿಯುಂ ವಿರತಿಭಾವಮೆನಗಾದುದೇಂ (ಚಂದ್ರಪು. ೩-೭೪) ; ಅರೆಯೊಳು ಬೈತೊಂದು ಚಾರುವಿಗ್ರಹವನು ವರಶಿಲ್ಪಿ ಪರಿಭಾವಿಸುತ್ತೆ ಕಡಿದೊಟ್ಟ ಸುತ್ತಣ ಹೆಚ್ಚಿನ ಶಿಲೆಯನು ಬಿಡಿಸಿ ಹೊರತೆಗೆವನು ಮತ್ತೆ (ಇಂಚಾಪ. ೧೭೮-೭೬) ; ರಾಮನು ಕವಿದೃಷ್ಟಿಯಿಂದಲೂ ಈ ದೃಶ್ಯವನ್ನು ಪರಿಭಾವಿಸಬಲ್ಲನು (ಸಮಾಲೋ. ೧೦೨). ೪. ನೋಡು ; ಈಕ್ಷಿಸು : ಗಿರಿಶಭವನಮೊಂದಿರಲದನಾ ಹರಸುತನ ತ್ಯೌತ್ಸುಕ್ಯದಿ ಪರಿಭಾವಿಪೆನೆಂದು ಹರ್ಮ್ಯತಳದಿಂದಿಳೆದಂ (ತ್ರಿಪುವಿ. ೬೩-೨). ೫. ಪರಿಗಣಿಸು ; ಎಣಿಸು : ಪರಿಜನದೊಳಗೊರ್ವನೆಂದು ದೇವಿಯರೆನ್ನಂ ಪರಿಭಾವಿಪುದು (ಕಾದಂಉ. ೧೭೮) ; ಅವನು ಖೈದಿಯಾಗಿ ಪರಿಭಾವಿಸಲ್ಪಟ್ಟನು (ಹಿಂಕಿರು. ೪೬). ೬. ಶೋಧಿಸು ; ತನಿಖೆ ಮಾಡು : ಎಮ್ಮ ಕುಲಕ್ಕನುಕೂಲಮಾದ ಕನ್ಯಾರತ್ನವನೀ ಪಟ್ಟಣ

ಶ್ರಾಂತಪುರಂಗಳೊಳ್. ಪರಿಭಾವಿಸಿ ಬರ್ಪುದೆಂದು ಬಿಸಿಸೆ (ಪಂಬಿಪ. ೪-೫೧) ; ನಿಜಸ್ಥಿತಿಯನ್ನು ಪರಿಭಾವಿಸುವ ಅಪೇಕ್ಷೆಯಾಗಲಿ ವ್ಯವಧಾನವಾಗಲಿ ಅವನಿಗಿರುವದಿಲ್ಲ (ಭಾರದಿಪ. ೧೫೦). ೩. ವಾಸನೆ ಕಟ್ಟು : ಬೋಟರಸಂ ಲಘುವಿಕ್ರಿಯಂದಿವಂ ಬೆರಸಿ ಮನೋಹರಮಾಗಿ ಭೂಪಮಂ ಕುಡೆ ಪರಿಭಾವಿಸಿ ಪುಷ್ಪಶಯದಿನದು ಸಾದಕ್ಕುಂ (ಕೋಕೋಪ. ೭-೫೭).

[ಸಂ. ಪರಿಭಾವನ + -ಇಸು-]

ಪರಿಭಾಷಣ (ನಾ).ಗಿ. ಜೆನ್ನಾಗಿ ಮಾತನಾಡುವುದು; ಸಂಭಾಷಣೆ: ಸ್ಮಿತಪುರಸ್ಸರಮುಚಿತಪರಿಜನಪರಿಭಾಷಣಂಗಳಿಂ ನಿಜಿದ ರಾಜನ್ಯಕಮುಂ ಪರಸಹಿತಮ್ಯುಮುಪಚಿರೋಚನ ಪರಿಭಾಷಣದಿಂದಮಾದಮಾದರಿಸುತ್ತುಂ (ಅದಿಪು. ೯-೨). ೨. ಬಹಳ ಮಾತನಾಡುವುದು ; ಹೆಚ್ಚು ಮಾತನಾಡುವುದು. ೩. ಬುದ್ಧಿವಾದ ; ಹಿತವಚನ. ೪. ತಿರಸ್ಕಾರದ ಭುದಿ ; ನಿಂದೆ ; ತೆಗಳಿಕೆ. ೫. ನಿಯಮ ; ಕಟ್ಟಳೆ. [ಸಂ.]

ಪರಿಭಾಷಿತ (ಗು). ಹೇಳಿದ ; ವಿವರಿಸಿದ ; ನಿರೂಪಣೆಮಾಡಿದ : ಪರಮಜಿನಪತಿಪರಿಭಾಷಿತಮಪ್ಪ . ಸಕಳಶ್ರಾವಕವ್ರತಂಗಳಂ . . . ಪಂಚಮುಷ್ಠಾಳಕ್ಕಾಣಂಗಳುಮಂ ನಾಮೋದ್ದೇಶಂಗೆಯ್ದಂ (ಅದಿಪು. ೬-೪೦೮). [ಸಂ.]

ಪರಿಭಾಷೆ (ನಾ). ೧. ಲಕ್ಷಣನಿರೂಪಣೆ ; ವ್ಯಾಖ್ಯೆ ; ವಿವರಣೆ. ೨. (ಶಲೆ, ಶಾಸ್ತ್ರ, ವಿಜ್ಞಾನ ಮುಂತಾದ) ತಾಂತ್ರಿಕವಿಷಯಗಳಿಗೆ ವಿಶಿಷ್ಟವಾದ ಪದವಿನ್ಯಾಸ ; ಪಾರಿಭಾಷಿಕ ನುಡಿಗಟ್ಟು : ಈ ವಿದ್ಯಾಧರಶ್ರೇಣಿಯ ಪರಿಭಾಷೆಗಳ್ ನಿನ್ನವಾಗದೆ (ಶಾಂತಿಪು. ೬-೧೬೮); ಕಾಮು ಕೇಳಿದ್ದ ಯಾವುದೋ ವ್ಯಾಪಾರಗಾರರ ಮತಿನ ತನಗರ್ಥವಾಗದ ಪರಿಭಾಷೆಯನ್ನು ಪ್ರಯೋಗಿಸಿ ಒಪ್ಪಿಗೆ ಕೊಟ್ಟಿದ್ದನು (ಮಲಿಮ. ೭೮೨) ; ಕನ್ನಡದ ಹೆಮ್ಮೆಗೆ ಕೋಡು ಮೂಡಿದಂತೆ ಹೊಸ ಪರಿಭಾಷೆಯನ್ನು ಸೃಷ್ಟಿಸಿ ಕೃತಾರ್ಥರಾಗಿದ್ದಾರೆ (ಸಾಹಿಪ್ರ. XIII ಪ್ರಸ್ತಾವನೆ). ೩. ನಿಂದೆ ; ತೆಗಳಿಕೆ ; ಅಪವಾದ: ಭರತಜರೊಳ್ಮುನ್ನಿಲ್ಲದ ಪರಿಭಾಷೆಯನುಂ ಬಿಜಗಡಿಯಿಟ್ಟಂ ಕಾರುರಾಜಂ (ಗದಾಯು. ೬-೬೯).

[ಸಂ. ಪರಿಭಾಷಾ]

ಪರಿಭಾಸಿ (ಗು). ಹೊಳೆಯುತ್ತಿರುವ ; ಶೋಭಿಸುತ್ತಿರುವ ; ಪ್ರಕಾಶಿಸುತ್ತಿರುವ : ಆ ವಿಜಿಗೀಷುವ ಸೈನ್ಯಸಮೂಹಾನದಿನಧಿಕಪೊಪ್ಪಿ ಕೋಜಾದುದು ಮರೀಚಾವಿಷ್ಕಹಾರೀತವನಾವಳಿಪರಿಭಾಸಿ ಮುಲಯ ಪರ್ವತಕಟಕಂ (ಶಾಂತಿಪು. ೧೧-೧೧). [ಸಂ. ಪರಿಭಾಸಿನ್]

ಪರಿಭಿನ್ನ (ನಾ). ಬೇರೆಯಾಗಿರುವುದು ; ವಿಭಿನ್ನವಾದುದು : ಆ ಕೆಜನಂತೆ ಪರಿಭಿನ್ನವಾಗಿ ಸ್ವಸ್ಥಾನಂಗಳಲ್ಲಿ ಮುಟ್ಟಿ ವೇಧಿಸಿಕೊಂಬ ಮನ್ತು ಒಂದಾದಲ್ಲಿ ಅದು ಖಂಡನೆಯ ಪತ್ರದ ಖಂಡಿಕಾಕಾರಣದಂತೆ . . . ಲಿಂಗವು ಭಿನ್ನರೂಪನಲ್ಲ (ನೀತಿಮಾ. ೧೫೮-೪೧೫). [ಸಂ.]

ಪರಿಭೂತ (ಗು). ೧. ಅವಮಾನಗೊಳಿಸಲ್ಪಟ್ಟ ; ಉಪೇಕ್ಷೆಗೊಳಗಾದ ; ತಿರಸ್ಕರಿಸಲ್ಪಟ್ಟ. ೨. ಜಯಿಸಿದ ; ಮೀರಿದ : ಅಧರಣ ಪ್ರಭಾಪರಿಭೂತಪ್ರಭೂತಜ್ಯೋತಿಃಪ್ರಭೆಯುಂ ಜ್ಯೋತಿಃಪ್ರಭೆಯುಂ ಪ್ರತೀಹಾರಂ ಪುಗಧಾಧಿರಾಜಾಧಿಮುಖಂ ಪೂಡಿ (ಶಾಂತಿಪು. ೫-೧೧೫೨). (ನಾ). ೩. ಅವಮಾನಿತನಾದವನು; ತಿರಸ್ಕಾರ ಹೊಂದಿದವನು: ಶಾಸನಭದ್ಧನಾಗಿ ಪೆಜರಿಂ ಪರಿಭೂತನಕ್ಕುಂ (ಜಾವುಂಪು. ೨೩೮). [ಸಂ.]

ಪರಿಭೂತಿ (ನಾ). ಅನಾದರ ; ತಾತ್ಸಾರ ; ಅಸಡ್ಡೆ : "ಪರಿಭೂತಿ ಪ್ರತಿಕಾರಮನಾದರಂ ತಿರಸ್ಕಾರಂ" (ಪಸ್ತು ಕೋ. ೧೧೧-೨). [ಸಂ.]

ಪರಿಭೃತ (ಗು). ಕಾಪಾಡಿದ ; ಸಲಹಿದ ; ರಕ್ಷಿಸಿದ : ಪರಿಭೃತ ವಂಶನೂರ್ಜಿತನುದಾತ್ತಮನಂ . . . ನಮಗೆ ನಂದನನಾಪಪಂ (ಅನಂಪು. ೪-೧೨೮). [ಸಂ.]

ಪರಿಭೇದ (ನಾ). ವ್ಯಕ್ಯಾನ ; ಅಂತರ : ಈತಗಳು ಕೌಂತೇಯು ಮಾದ್ರೇಯರಾತಿಯ ಪರಿಭೇದರಹಿತಖ್ಯಾತರೆಂದರು (ಕುವ್ಯಾಪ. ೪-೭೦). [ಸಂ.]

ಪರಿಭೋಗ (ನಾ). ಸಂತೋಷಾನುಭವ : ಪಜಗೆರೆಯ ಪುಂಜಮುಂ ಕಂಡುದಱಂದಮನುಷ್ಯ ಮುಧುಜೀವನ ರುಜಾಹರಾದಿ ಸಾರದ್ರವ್ಯಂಗಳ್ಗುದ ಅಸಾರದ್ರವ್ಯವಿಕಲ್ಪಂಗಳೆ ಮನುಷ್ಯಗೂಪಭೋಗಪರಿಭೋಗಹೇತುಗಳಕ್ಕುಂ (ಜಾವುಂಪು. ೫೪) ; ಉಪ(ಸಂ)ಭೋಗಪರಿಭೋಗಂಗಳಂ ತೋಜಾ ಸೀತೆಯ ಮನಮುಂ ರಂಜಿಸುವೊಡವರ್ಗಳುಪಭೋಗಾದಿ ದನ್ತುಗಳಂ ಪೆಱರುಳ್ಕನಸಿನೊಳಪ್ಪೆಡಂ ಕಾಣಲ್ಬಾರದು (ಜಾವುಂಪು. ೬೦೬).

[ಸಂ.]

ಪರಿಭ್ರಂಶ (ಗು). ೧. ಬೀಳುವ ; ಪತನ ಹೊಂದುವ. (ನಾ). ೨. ಕೆಳಕ್ಕೆ ಬೀಳುವಿಕೆ ; ಪತನ : ಧರ್ಮಪರಿಭ್ರಂಶಕಾರಕಳಪಾಯೋದಯದೊಳ್ ಸ್ವಪರಧರ್ಮಪ್ರತ್ಯವನಪರಿಪಾಲನಂ ಸ್ಥಿತಿಕರಣಂ(ತತ್ತ್ವಪ್ರ. ೨೬೫) ; ದಿವಸದೊಳಸಿತಾಬ್ಜವಿಕಾಸವುಮಂ ಕೇಫಾಳಿಕಾತ್ಯುದಿಂದು ಪರಿಭ್ರಂಶವುಮಂ ಪೇಬಲ್ಲಾಗದು ಸವವಾಯಂ ಸಮುನಿಸಿರ್ದೂದಂ ಸತ್ಯತಿಯೊಳ್ (ಶಾವ್ಯಾಪ. ೪೭೫). ೩. ತಪ್ಪಿಸಿಕೊಳ್ಳುವಿಕೆ. [ಸಂ.]

ಪರಿಭ್ರಮ (ನಾ). ೧. ಅಲೆದಾಡುವಿಕೆ ; ಸುತ್ತಾಟ ; ತಿರುಗಾಟ : ಮೃಗಯಾಪರಿಭ್ರಮಶ್ರ[ಮೋತ್ಥ]ತಸ್ವೇದಜಲಲವಹಾರಿಯುಮಾಗಿ ಬಂದ ಮಂದಾನಿಲಕ್ಕೆ ಮೆಯ್ಯನಾಜುಸುತ್ತುಂ (ಪಂಪಭಾ. ೫-೫೩). ೨. ಚಲನೆ ; ಅಲುಗಾಟ : ಬಾಹುಪರಿಭ್ರಮಂಗಳಿಂ ಬೆದಱದೆ ಶಸ್ತ್ರಸ್ಥಕ್ಕೆಯೊಡಂಬಡೆ ನರ್ತಿಸುವಲ್ಲಿ . . . ಅದೇಂ ಪದುಳಮಾದುದೊ ದಿವ್ಯವಧೂಳಪಂಬಳಂ (ಅದಿಪು. ೬-೧೨೫). ೩. ಭ್ರಾಂತಿ ; ಮೋಹ.

[ಸಂ.]

ಪರಿಭ್ರಮಣ (ನಾ). ೧. ಅತ್ತಿತ್ತ ಓಡಾಡುವುದು ; ಸುತ್ತಾಡುವುದು ; ಅಲೆದಾಟ : "ಪರಿಭ್ರಮಣಮೊಳು ಜಲಾವರ್ತದೊಳು ಸುಳಿಯೆನಿಸ್ಕುಂ" (ಕಬ್ಬಮಂ. ೧೧೬) ; ನಿಜಪರಿಭ್ರಮಣದಿಂ ರಜಮಪ್ಪುದೆಂದು ಭೂಭುಜನೊಲ್ದನಲ್ಲ ರಥಮಂ ನೀರಜಮಪ್ಪ ನಿಜಮನೋರಥದ ನೆಲೆಯಿಂದೆ (ಮಲ್ಲಿಪು. ೧೦-೨೩) ; ವೈರಾಗ್ಯಕ್ಕೆ ಮುಕ್ತಿಯಲ್ಲದೆ ಲಿಂಗವಿಲ್ಲ ಜ್ಞಾನಕ್ಕೆ ಪರಿಭ್ರಮಣವಲ್ಲದೆ ಲಿಂಗವಿಲ್ಲ (ಮಹಾದೇ. ಬ. ೧೩೧-೨೫೪) ; ಇರುಳು ನಾನಾಸ್ವಪ್ನಕಾನನಗಿರಿಪರಿಭ್ರಮಣಕ್ಕೆಳಸಿತಾಧರಿತನಾದೆನು (ಕುವ್ಯಾಸ.೧೩-೧೪).೨. ಸುತ್ತುವುದು; ತಿರುಗುವುದು: ಈತಂ ಮಹಾಬಲನೆಂಬೊಂ ವಿದ್ಯಾಧರನನೇಳಭವಪರಿಭ್ರಮಣದಿಂ ಬಂದೀಕಾನಳ್ಪು ದೊಳ್ ದೇವನಾಗಿ (ಶಾಂತಿಪು. ೪-೧೫೧ ಗ) ; ಅನೇಳಭವಪರ್ಯಾಯಪರಿಭ್ರಮಣದಿಂ ಬಂದು ಪುಟ್ಟುಕ್ಕುಂ ಕಡೆಯೊಳುತ್ಕೃಷ್ಟಾಯುಷ್ಕಮನೆಯ್ದಿ ನಿಜೋಯಸುವ ನೆಲವಿ ಭವಪರಿವರ್ತನಮೆಂಬುದು (ಸುಕುಮಾ. ೬-೬ ಗ); 'ಪರಿಭ್ರಮಣ' ನೆಂದರೆ ತನ್ನ ಅಶ್ವದ ಸುತ್ತಲೂ ತಾನೇ ತಿರುಗುವುದು(ಜ್ಞೋತಿಪ್ರ. ೨೯ ಅಡಿಟಿ). ೩. ಭ್ರಾಂತಿ; ಭ್ರಮೆ : ಹುಟ್ಟಿ ತಿಲ್ಲವೆ ನಿನಗಜ್ಞಾನ ಧರ್ಮಸೂನು ಮುತಗೆಟ್ಟು ಹನೆ ತಿವತಿವ ವೃಥಾ ಪರಿಭ್ರಮಣ [ಪಾಣಾಂ. ಭೃಮುವೆ] ನಿಮಗಟ್ಟು ತೆಂದಮರೇಂದ್ರಸೂನುವಂ ಜಜ್ಞಿದು ಸೌಧರಿ ನುಡಿದೊಡಿಂತೆಂದನು (ಭೃಮಿಭಾ.೧೧-೨೦). [ಸಂ.]

ಪರಿಭ್ರಮಣಂಗೆಯ್ (ಕ್ರ). ಸುತ್ತು ಹಾಕು ; ತಿರುಗು : ಕೃಮದಿಂದಂ ಬಂದು ಪರಿಭ್ರಮಣಂಗೆಯ್ದು[ಪಾಣಾಂ. ದ್ಯು]ಲ್ಲಿ ಮುಂಪರಾದ್ರಿಗೆ ರತ್ನೋತ್ಪಮುಳುಂಡಲಯುಗಮೆನೆ ಪೌರ್ಣಮಿಯಂದಿನ ಚಂದ್ರಸೂರ್ಯ ಮುಂಡಲಮೆಸೆಗುಂ (ಅಜಿಪು. ೨-೪). [ಪರಿಭ್ರಮಣ+ಕೆಯ್]

ಪರಿಭ್ರಮಿಸು (ಕ್ರ). ತಿರುಗು ; ಸುತ್ತು : ಜೀವಂಗಳ್ . . . ನಾನಾ ಶರೀರೋಪಾದಾನಪರಿತ್ಯಜನಪುರಸ್ಸರಂ ಪರಿಭ್ರಮಿಸುಗುಂ (ಅದಿಪು.

೧೩-೫೭ ವ); ತರೆಯಲ್ಲಿ ವಿಚಾರಿಪ್ಪ ಪರಿಭ್ರಮಿಸುತ್ತಿತ್ತು (ಸೂರಚ. ೪೦). [ಪರಿಭ್ರಮಣ+-ಇಸು$_3$]

ಪರಿಮಂಡನ (ನಾ). ವಿಶೇಷವಾದ ಶೋಭೆ; ಅಧಿಕವಾದ ಸೌಂದರ್ಯ: ಕಂಡು ಳಮಲಾಕ್ಷಿಯರು ಕೃಷ್ಣನಖಮಂಡಸೌಭಾಗ್ಯೋದಧಿಯ ಪರಿಮಂಡನದ ಮೂರ್ತಿಯನು ಮೆಱೆದರು ಲೋಕವಿಭ್ರಮವ (ತಿಭಾಗ. ೧೦-೫೯-೨೬). [ಸಂ.]

ಪರಿಮಂಡಲ, ಪರಿಮಂಡಳ (ನಾ). ೧. ವೃತ್ತ; ವರ್ತುಲ. ೨. ಸುತ್ತುಗಟ್ಟುವುದು; ಪರಿವೇಷ: 'ಪರಿಮಂಡಲಗೊಳ್' ಪರಾ. **ಪರಿಮಂಡಳ**: ೧. 'ಪರಿಮಂಡಳಿಸು' ಪರಾ. [ಸಂ.]

ಪರಿಮಂಡಲಗೊಳ್ (ಕ್ರಿ). ಸುತ್ತುಗಟ್ಟು; ಬಳಸು: ಕಂಡನೊಪ್ಪಿ ಹುದೊಂದು ಭಾಮಂಡಲ ಪರಿಮಂಡಲಗೊಂಡಾದಿಜನಗೆ (ಭರಡ. ೬೬-೫೦). [ಪರಿಮಂಡಲ+ಕೊಳ್$_1$]

ಪರಿಮಂಡಲಿಸು, ಪರಿಮಂಡಳಿಸು (ಕ್ರಿ). ೧. ಸುತ್ತು ಹಾಕು; ತಿರುಗು: ಪರಿಮಂಡಲಿ[ಪಾತಾಂ.೪]ಸಿದರು ತಾಣದಲಿ ಜಂಘೆಯಲುಳಿಯ ಲವತಾಣದಲಿ ಮೆಱೆದರು ಭೀಮ ಶೌರವರು (ಕುವ್ಯಾಗ. ೬-೨೨). **ಪರಿಮಂಡಳಿಸು**: ೨. ಆವರಿಸು; ಸುತ್ತುಗಟ್ಟು: ರಾವುತರು ಕೈವಲುಳಿದರು ಮುತ್ತಿದರು ಪರಿಮಂಡಳಿಸಿ ಬೊಬ್ಬಿಡುದಾರಿದರು ಸಿಕ್ಕಿದನು ಹಗೆಯೆನುತ (ಕುವ್ಯಾಪ್ರೌ. ೧೪-೪೪); ಬೆಳಗು ಬೆಳಗನು ತಿವಿದು ಪರಿಮಂಡಳಿಸೆ ಪರಮಳ್ಳಪಾಳು ಜನವಸ್ಪಲನು ಮೈದೋಱಿದನು (ತಿಭಾಗ. ೬-೪-೨೬). [ಪರಿಮಂಡಲ+-ಇಸು$_3$]

ಪರಿಮಂಡಳ 'ಪರಿಮಂಡಲ' ನೋ.

ಪರಿಮಂಡಳಿತ (ಗು). ವರ್ತುಲಾಕಾರವಾಗಿ ಮಾಡಿದ; ಚೆನ್ನಾಗಿ (ಎಳೆದು) ಬಗ್ಗಿಸಿದ: ಘಡ ಹೋಗೆನುತ ಪರಿಮಂಡಳಿತ ಕೋದಂಡನೆಚ್ಚನು ಕರ್ಣನರ್ಜುನನ (ಕುವ್ಯಾಕ. ೨೨-೩೪). [ಸಂ. ಪರಿಮಂಡಲಿತ]

ಪರಿಮಂಡಳಿಸು 'ಪರಿಮಂಡಲಿಸು' ನೋ.

ಪರಿಮರ್ದನ (ನಾ). ಜಜ್ಜುವುದು; ಕುಟ್ಟುವುದು: 'ಪರಿಮರ್ದಿಸು' ಪರಾ. [ಸಂ.]

ಪರಿಮರ್ದಿಸು (ಕ್ರಿ). ೧. ಜಜ್ಜು; ಕುಟ್ಟು: ಮುಂಡ ತಿವಿ ಕುಂತಿ... ಸೈಂಧವಸಹಿತಂ ಪರಿಮರ್ದಿಸಿ ಕೆಡಹಿ ವಾರಿಯೊಳಿರದಳನವ ಸೊಕ್ಕುಮಬುವುದೊಂದಚ್ಚರಿಯೇ (ಪಾಪಪ. ೨-೧೩೩). ೨. ಹಿಂಡು; ಹಿಸುಕು; ಮರ್ದನ ಮಾಡು: ಪರಿಮರ್ದಿಸುವುದು ಪುತ್ರೋರಸಮುಖಂದಾಗಿ ಸಿಬಾದು ನೆಲದೊಳ್ ಲವಣಂಬೆರಸೊದಸಿಕೊಂಡು ಪೂಸುಗೆ (ಕಾವ್ಯಾಪ. ೨೬೧). ೩. ಅರೆ; ನುಣ್ಣಗೆ ಮಾಡು: ಶಂಖದ ಬೂದಿಯಸ್ಪೊಕಾಗಿ ಪರಿಮರ್ದಿಸಿ ಸೀಸದಿಸಂತಪನೊಂದಿರೆ ಪೂಸಿದೊಡಂ ನರೆ ಕಯ್ಯವಾಗಿ ಸೊಗಯಿಸಿ ತೋರ್ಪುಂ (ಲೋಕೋಪ. ೯-೫೦). ೪. ನಾಶ ಮಾಡು; ಧ್ವಂಸ ಮಾಡು: ಸೃಗಾಲನಂ ಕೀಂ ಧುರದೊಳ್ ಪರಿಮರ್ದಿಸೆ ನಿಜ ಗಜಮ್ಮತ ದೊರೆಕೊಂಡಪುದವನ ಸೂರ್ಯದತ್ತ ವರೂಥಂ (ಜಗದಿ. ೪-೨೧). [ಪರಿಮರ್ದನ+-ಇಸು$_3$]

ಪರಿಮಲ, ಪರಿಮಳ (ನಾ). ೧. ಕಂಪು; ಸುವಾಸನೆ; ಸೌರಭ: ಪರಿಮಲದರ ಪಟ್ಟಗಾಱರ ತಾಂಬೂಲಿಗರ ಶಿಲ್ಪಿಗರ ಗಂಧಿಗರ . . . ಅಂಗಡಿಯಿರ್ಪವಲ್ಲಿ (ತ್ರೈಪಾಲ.೧೧-೬೯). **ಪರಿಮಳ**: ೧. "ಅಮೋದಃ, ಪರಿಮಳಃ, ಸೌರಭ್ಯಂ, ಸುಗಂಧಿತಾ-ಈಳ ಕಂಪು" (ಹಲಾಯು.೧೪-೬೬); ಉದಕದೊಳಗೆ ಬಯ್ಚಿಟ್ಟ ಬಯ್ಯೆಯ ಕಿಚ್ಚನಂತಿದ್ದಿತ್ತು . . . ನನೆಯೊಳಗಣ ಪರಿಮಳದಂತಿದ್ದಿತ್ತು (ಬಸವ. ೧); ನಿಶ್ವಾಸಪವನನಂ ಪರಿಮಳಮಂ ಬೀಱುವ ವಧೂವರರಾಗವಿಷಯವಲ್ಲರಿ ಫಲಿತಮಾದುದು (ಜಗದಿ.೨-೫೩ ವ); ಪರಿಮಳಮನೆಣ್ಣೆಸೆಗೆ ಚಿತ್ತರಿಸುವ ನನೆಗಣೆಗಳಿಂದೆ . . . ಖಂಡಿಸುವೆಂ (೧೦೪. ೬-೭೦); ಗರಳಾಂಬುಜದ ಪರಿಮಳಕೆ ಗರುಡನು ಖಂದಿಯನಾದರೆ ನೇರುವುದಲೇ (ಕುವ್ಯಾದ್ರೌ. ೪-೪೪). ೨. (ಸುಗಂಧದ್ರವ್ಯವನ್ನು) ಅರೆಯುವುದು: "ಸಮ್ಮರ್ದಃ, ಪರಿಮಳಃ-ಈ ೨. ಖಿದಿವುದು" (ಹಲಾಯು. ೧೨೬-೪೪); "ಸಮ್ಮರ್ದನೆಸರ ಪರಿಮಳನೆನಲು ಖಿದಿವುದಕ್ಕುಂ" (ಮಂಗರಾ. ೧೩೪-೩೪). ೩. ಸುಗಂಧದಿಂದ ಕೂಡಿದ ವಸ್ತು; ಸುಗಂಧವುಳ್ಳ ದು: ಜಲವು ಪರುಮಶಾದಿಗಳೆಮ್ಮು ಸಿರಿಗಂಧದ ಪಣ್ಣಧಿಯುಲು ಪರಿಮಳವಾಗವೆ (ಬಸವ. ೧೫೧). ೪. (ಆಲಂ) ಸುವಾಸನೆಯಿಂದ ಕೂಡಿರುವ ಹೂವು: ಕಬ್ಬಿನ ಬಿಲ್ಲ ಪೂಡಿ ಪರಿಮಳದಲ್ಲಿ ಅಂಬ ಪೂಡಿ ನಿಲ್ಲೋ ಬಲ್ಲಾಳೆ (ಜಪಮಂ. ೩೩-೧೭). **ಪರಿಮಳದುದಕ** = ಸುಗಂಧಪೂರಿತವಾದ ಜಲ; ಸುವಾಸನೆಯಿಂದ ಕೂಡಿದ ನೀರು: ಪುರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ ಪರಿಮಳದುದಕವನೆಱೆದವರಾರಯ್ಯ (ಸುಜಾದೇ. ಬ. ೧೦-೩): [ಸಂ.]

ಪರಿಮಲಿತ, ಪರಿಮಳಿತ (ಗು). ಸುವಾಸನೆಯಿಂದ ಕೂಡಿದ; ಸುಗಂಧಪೂರಿತವಾದ: ತಾರುಣ್ಯವತಿ ಅತಿಮಧುರಪುರುಷಾಯುತ ನಿಧುವನಪರಂಪರಾಪರಿಮಲಿ[ಪಾತಾಂ.೪]ತಮೂದ ತರೀರದ ಸಹಜಸುರಭಿ ಗಂಧಮಂ ಗಂಧವಹಂಗೊಯ್ತಶಗುಡುವಂತಿರೆ. ಲಜ್ಜೆಯಿಮಿರಿಕೆ ಕಂಡು (ಚಂದ್ರಪ್ರ. ೪-೬೧ ವ). **ಪರಿಮಳಿತ**: ಪರಿಮಳಿತಸೌಂದರ್ಯ ದಾಧರ ಗಂಧಂ . . . ಈ ಮರುವಂ ಕರ್ಪಾಳಮುಮಿರೆ. ಮರುಳ್ಳವೆ ಕುಸುಮ ನಿಚಯದೊಳ್ ಪಾಯ್ವುಳಿಗಳ್ (ಆದಿಪು. ೧೧-೧೨೬); ಪರಿಮಳಿತ ಪವಮಾನನಾಡುಂಬೊಲನೊ ಚಂದ್ರಮನ ಹರವರಿಯೊ? (ತೆರಣಾ. ೧-೬-೯); ಪರಿಮಳಿತಪುಷ್ಪಾಪಚಯದಿ ಬಾನುವ ರಿಚಿಸಿ (ಚಕ್ರೇಂಗ. ೪೧-೧೧೬). [ಸಂ.]

ಪರಿಮಸಕ (ನಾ). ಹೆಚ್ಚಾದ ರಭಸ,—ಆವೇಗ: ಉಬ್ಬಿದ ಮದ ಮುಖದ ಪರಿಮಸಕ ಮುಱಿಯದುದು ಗಿರಿತರುವ್ರಜವ (ಕುವ್ಯಾಅ ೧೧-೪). [ಪರಿ$_3$+ಮಸಕ$_1$]

ಪರಿಮಳ 'ಪರಿಮಲ' ನೋ.

ಪರಿಮಳಂಬೋಗು (ಕ್ರಿ). ಸುವಾಸನೆ ಹೋಗು; ಸುಗಂಧವು ಇಲ್ಲವಾಗು: ಪರಿಮಳಂಬೋದ ಬಳಿಕಲ್ಲುಳಂ ಮುಸಿಪೊದೆ ಪರಿಪೊದೆ ನಾಡೆ ಧನವಿಲ್ಲದದರೊಡನೆ ನೆರೆದಿರ್ಪುದಲ್ತು ಬೆಲೆವೆಣ್ಣೆ (ತ್ರಿಪುರಿ.೩೪-೧೫೨). [ಪರಿಮಳ (=ಪರಿಮಲ)+ಪೋಗು$_1$ (<ಪೋ$_1$)]

ಪರಿಮಳಕಟ್ಟು (ಕ್ರಿ). ಸುಗಂಧದ್ರವ್ಯವನ್ನು ಸೇರಿಸು,—ಬೆರಸು; ವಾಸನೆ ಕಟ್ಟು: ರುಚಿಪ್ರದವಾಗಿರುವುದೇ ಪರಿಮಳಕಟ್ಟದ ಅಡಿಕೆಯ ಗುಣ (ಸಳಪ್ರ. ೬೩). [ಪರಿಮಳ (=ಪರಿಮಲ)+ಕಟ್ಟು$_1$]

ಪರಿಮಳಗೊಳಿಸು (ಕ್ರಿ). ಕಂಪುಗೊಳಿಸು; ಸುಗಂಧಿತವಾಗುವಂತೆ ಮಾಡು: ಪೂಗಸೆಯೊಳೆ ಪೂವು ಕೈಗಳನೆರಡನು ಪರಿಮಳಗೊಳಿಸುವುದಲ್ತೆ (ಇಂಜಾಪ. ೬೯-೬೩).

[ಪರಿಮಳ (=ಪರಿಮಲ)+ಕೊಳ್$_1$+-ಇಸು$_3$]

ಪರಿಮಳದಳೆ (ಕ್ರಿ). ಸುವಾಸನೆಯನ್ನು ಹೊಂದು; ಸುಗಂಧವನ್ನು ಪಡೆ: ಳಮಕ್ಷೇತ್ರದಿಕ್ಕೆಲದಲ್ಲಿ ಪರಿಮಳದಳೆದ ನೀಲಾಬ್ಜ ಪ. ಕ್ತು (ಮೋಪಶ. ೫-೨೫). [ಪರಿಮಳ (=ಪರಿಮಲ)+ತಳೆ$_1$]

ಪರಿಮಳದಿರುಕ (ನಾ). ಪರಿಮಳವನ್ನು ಆಯುವ್ದು ಸಂಗ್ರಹಿಸುವಂತಹುದು; ಭೃಮರ; "ಹುಂಬಿ" (ಹಹುಸಿ. ೬. ೨, ೨೬).

[ಪರಿಮಳ (=ಪರಿಮಲ) + ತಿರುಳ (<ತಿರುಕ್$_1$)]

ಪರಿಮಳದ್ರವ್ಯ (ನಾ). ಸುಗಂಧದಿಂದ ಕೂಡಿದ ವಸ್ತು; ಸುವಾಸನೆಯನ್ನು ಉಂಟುಮಾಡುವ ಪದಾರ್ಥ; ಸುಗಂಧದ್ರವ್ಯ: ಪರಿಮಳದ್ರವ್ಯಗಳು ಪರನಾಡುಗಳಿಗೆ ಹೋಗುವವು (ಪುಂಬುಯು.೪-೧೧೭); ಪರಿಮಳದ್ರವ್ಯಮಂ ಪೂಸಿ ಪೂಸಿ ಪೊಸಪೊಸ ಪೂವಿಂ ಪೆಱಸೆಱಸಿ ಪೆಱಸೆಱಸಿ ಪೊಸಪೊಸ ಪೂಮಾಲೆಯಂ ಪೊಸಪೊಸ

ಪರಿಮಳದ್ರವ್ಯಗಳು, ಹಸನಾಗಿಹ ರೇಷ್ಮೆ, ತವರೆ (ಭೂಗೋಳ. ೯೫). [ಪರಿಮಳ (= ಪರಿಮಲ) + ದ್ರವ್ಯ]

ಪರಿಮಳಮೃಗ (ನಾ). ಸುಗಂಧದ್ರವ್ಯವನ್ನು ಹೊಂದಿರುವ ಒಂದು ಬಗೆಯ ಜಿಂಕೆ; ಕಸ್ತೂರಿಮೃಗ: ಕೈತ್ಯ ಸೌರಭ್ಯ ಮಾಂದ್ಯ ಮೊಂಬ ತ್ರಿವಿಧಮದಸಮೃದ್ಧಮಾದ ಪನ್ನೀರು . . . ದಿವ್ಯಮೂಲ ಪರಿಮಳಮೃಗ ಕರ್ಪೂರವೃಕ್ಷ ಹಿಮಾದಿ ಸಂಪರ್ಕದಿಂ . . . ಅಶೇಕ್ಷಣೆಯ ಮಾಗಿರ್ಕುಂ (ವಿವೇಕ. ೨೨೮). [ಪರಿಮಳ (= ಪರಿಮಲ) + ಮೃಗ]

ಪರಿಮಳವಂತ (ನಾ). ಸುಗಂಧದಿಂದ ಕೂಡಿದುದು: ಪರಿಮಳವಂತಮಪ್ಪ ತರುಗುಲ್ಮಲತಾಳಿಯ ಪೂಗಳೆಲ್ಲಮಂ ಸರಭಸದಿಂದೆ ತಂದು ವರಯೋಗಿಯುಗಾಂಭ್ರಸರೋಜಯುಗ್ಮಮಂ . . . ಪೂಜಿಸಿ (ಮಹಾನೇ. ೫-೨೫). [ಪರಿಮಳ (= ಪರಿಮಲ) + -ವಂತ]

ಪರಿಮಳವಾರಿ (ನಾ). ಸುಗಂಧದ್ರವ್ಯವನ್ನು ಬೆರಸಿದ ನೀರು; ಪನ್ನೀರು: ಪರಿಮಳವಾರಿಯಿಂ ಜಳಕಮಾಗಿಪ . . . ದಿವ್ಯಚಾಮರಮನೆ ಬೀಸುವಗ್ಗದ ವಿದಗ್ಧೆಯರೊಪ್ಪಿರೆ ದೇವಿ ರಂಜಿಪಳ್ (ರಾಜಶೇ. ೪-೪೧). [ಪರಿಮಳ (= ಪರಿಮಲ) + ವಾರಿ$_2$]

ಪರಿಮಳವಾಸ (ನಾ). ವಾಸನೆ ಕಟ್ಟಿದ ಬಟ್ಟೆ; ಸುಗಂಧದಿಂದ ಆವೃತವಾಗಿರುವ ವಸ್ತ್ರ: ಪರಿಮಳವಾಸದೊಳಗೆ ಮುಖ ಮೈ ಬಡಿ ಹೊರಸಿ . . . ಪರಿಹರಿಪುದು ಪಥಶ್ರಮವ (ಕಂಸವಿ. ೬-೧೩೬). [ಪರಿಮಳ (= ಪರಿಮಲ) + ವಾಸ$_2$]

ಪರಿಮಳವೆರೆ (ಕ್ರಿ). ಸುವಾಸನೆಯಿಂದ ಕೂಡು; ಸುಗಂಧದಿಂದ ಆವೃತವಾಗಿರು: ಪರಿಮಳವೆರೆದಿಂಪಿನ ದಿವ್ಯಪುಷ್ಪವ ಪರಿಕೊಂಡತಿಹರುಪದಲಿ ಸರಗಟ್ಟಿ ಬೆಲೆಗೆ ಮಾಱುವ ಮಾಲೆಗಾತಿಯರಿರವ ನಾನೇನ ಬಣ್ಣಿಪೆನು (ಕಂಸವಿ. ೨-೮೩). [ಪರಿಮಳ (= ಪರಿಮಲ) + ಬೆರೆ$_1$]

ಪರಿಮಳವೆಱು (ಕ್ರಿ). ಸುವಾಸನೆಯನ್ನು ಪಡೆ; ಸುಗಂಧವನ್ನು ಹೊಂದು: ನೆಲದೆ ನಿಡುವೇಶನೊಳು ಪರಿಮಳವೆತ್ತು ರಂಜಿಪ ಮುಡಿವಾಳವನರವೊಪ್ಪಿದುವು (ಮೋಹನ. ೩-೧೬); ಕಡುಪರಿಮಳವೆತ್ತಿಹ ಜಾಜಿ ಸಂಪಗೆಯ ಮೊತ್ತದ ಪೂಮಾಲೆಯೋಲಗಶಾಲೆಯ ಸುತ್ತಲೊಪ್ಪಿದುವರ್ಕಿಯಲಿ (ಕಂಸವಿ. ೮-೧೦). [ಪರಿಮಳ (= ಪರಿಮಲ) + ಪೆಱು$_1$]

ಪರಿಮಳವೊಗು (ಕ್ರಿ). ಸುಗಂಧವನ್ನು ಹೊರಸೂಸು; ಸುವಾಸನೆಯನ್ನು ಚೆಲ್ಲು,—ಬೀರು: ಅಂಗನೆಯರು . . . ಮುಗುಳಂಬನ ಮುಡಿಗಮರಿದ ಪರಿಮಳವೊಗುವ ಪೂದೊಂಬೆಯಂತಿಹರು (ಕಂಸವಿ. ೬-೯೯). [ಪರಿಮಳ (= ಪರಿಮಲ) + ಒಗು$_1$]

ಪರಿಮಳಶಾಳಿ (ನಾ). ಒಂದು ಬಗೆಯ ಸುಗಂಧಪೂರಿತವಾದ ಬತ್ತ,—ಸುವಾಸನೆಯಿಂದ ಕೂಡಿರುವ ನೆಲ್ಲು; ಗಂಧಶಾಲಿ: ಶಾಳಿಗಳಂ ಬಹುಪರಿಮಳಶಾಳಿಗಳಂ ನಿಕಟಕುಮುದಸೌಗಂಧ್ಯಕೃತಾ ಶಾಳಿಗಳಂ ರುಚಿಸಿಚತದಿಶಾಳಿಗಳಂ ಬೆಳೆವ ನೆಲನೆ ಪೊಲನಾ ನೆಲದೊಳ್ (ಪುಷ್ಪಕಾ. ೨-೧೪). [ಪರಿಮಳ (= ಪರಿಮಲ) + ಶಾಳಿ (= ಶಾಲಿ$_2$)]

ಪರಿಮಳಾಂಬು (ನಾ). = ಪರಿಮಳವಾರಿ: ಸುದತಿಯರಾ ಯುವತಿಗೆ ಮಾಡಿದರೊಲಿಂದಂ ಪರಿಮಳಾಂಬುವಿಂ ಮಜ್ಜನಮಂ (ರಾಜಶೇ. ೪-೧೨). [ಪರಿಮಳ (= ಪರಿಮಲ) + ಅಂಬು$_3$]

ಪರಿಮಳಿತ 'ಪರಿಮಲಿತ' ನೋ.

ಪರಿಮಳಿಸು (ಕ್ರಿ). ಸುವಾಸನೆಯಿಂದ ಕೂಡಿರು; ಸುಗಂಧಪೂರಿತವಾಗಿರು: ಹಾಲು ಕಾಯುವೊ ಪರಿಮಳಿಸವೋ ಹಾಲು ಕಡು ಬಿಸಿಯೊದವೋ (ಬಸವು. ೧೪-೮); ಒಗುವ ನಿಶ್ವಾಸದಲಿ ದಶದಿಕ್ಕುಗಳು ಪರಿಮಳಿಸುವವು (ತೋರಣಾ. ೩-೮-೫೫); ಪರಿಮಳಿಸುವ ಸೇವಂತಿ ವರಪಾರಿಜಾತ ನಂದ್ಯಾವರ್ತ ಮೊದಲಾದವರಲೊಪ್ಪಿದುವು ಬನದೊಳಗೆ (ಕಂಸವಿ. ೫-೯೯). [ಪರಿಮಳ (= ಪರಿಮಲ) + -ಇಸು$_3$]

ಪರಿಮಳಿಸುಹ (ನಾ). ಸುವಾಸನೆಯಿಂದ ಕೂಡಿರುವುದು; ಸುಗಂಧಪೂರಿತವಾಗಿರುವುದು: ಕೇಳುಹ, ಪರಿಮಳಿಸುಹ . . . ಎಂಬಿವು ವಿಷಯಂಗಳು (ನಾಚರಾ. ೬). [ಪರಿಮಳಿಸು + -ಹ$_2$ (<-ಪ$_2$)]

ಪರಿಮಳೋದಕ (ನಾ). = ಪರಿಮಳವಾರಿ: ಮಜ್ಜನದ ಮನೆಗೆ ವಿಜಯಂಗೆಯ್ದು . . . ಪರಿಮಳೋದಕದಿಂ ಮಜ್ಜನಂಮಾಡಿ (ಸಂಚರಿ. ೧೦-೩೩). [ಪರಿಮಳ (= ಪರಿಮಲ) + ಉದಕ$_2$]

ಪರಿಮಾಣ (ನಾ). ೧. ಅಳೆಯುವುದು; ಅಳತೆ ಮಾಡುವುದು. ೨. ಅಳತೆ; ಪ್ರಮಾಣ: ತದ್ಗ್ರಹದಾಯುಷ್ಯದ ಪರಿಮಾಣಮೆ ತದ್ದಶಾಪ್ರಮಾಣಮೆನಿಕ್ಕುಂ (ಜಾತಕ. ೯-೧); ನಿರಾವರಣಗಗನದೇಶಸ್ಥಿತಾವಧೃತಪ್ರಕಾಶಪರಿಮಾಣಪ್ರದೀಪಕ್ಕೆ ಶರಾವಮಾನಿಕಾವರಕಾದ್ಯಾವರಣವಶದಿಂ ತತ್ಪರಿಮಾಣತೆಯೆಂತಂತೆ . . . ವಿಕಸ್ವಮುಂಟು (ತತ್ತ್ವಪ್ರ. ೨೩೮); ಅಸಮಾನತೆಯೊಳ್ ನೆಲಸಿರ್ಪುದು ನಿಶ್ಚಿತನಾಮಂ ಪಂಚವರ್ಣಕೃತ ಪರಿಮಾಣಂ (ಶಮದ. ೭೬). ೩. ಮೊತ್ತ; ಗಾತ್ರ: ಬಹು ಹೆಚ್ಚಿನ ಪರಿಮಾಣದ ಚಿನ್ನವನ್ನು ಕಾವಲುನಿಧಿಯಾಗಿ ಮಾಡಿ ವ್ಯರ್ಥ ಮಾಡುವುದೇ ರೂಢಿ (ಪಂಪ್ರ. ೧೭೬). ೪. ಭಾರ; ತೂಕ: ಶಾಣಮುದು ನಿಕಷಮುಂ ಪರಿಮಾಣಮುಮೆರಡುಂ (ಪಸ್ತುಕೋ. ೧೨೫-೪೪). ೫. = ಪರಿಮಾಣಪರಿಗ್ರಹವ್ರತ: ಕಡುಮೋಹಮೊತ್ತಿ ಪುಗಲೆಂದೊಡರಿಸೆ ಪರಿಮಾಣಮೆಂಬ ಸುವ್ರತದೊಳ್ಪಂ ಪಡಿಮಾಡಿ ಕೆತ್ತು ನಿಲ್ಪುದು (ಜೀವಸಂ. ೧೫೫-೯). [ಸಂ.]

ಪರಿಮಾಣತೆ (ನಾ). ಅಳತೆ; ಪರಿಮಾಣ: ನಿರಾವರಣಗಗನದೇಶಸ್ಥಿತಾವಧೃತಪ್ರಕಾಶಪರಿಮಾಣಪ್ರದೀಪಕ್ಕೆ ಶರಾವಮಾನಿಕಾವರಕಾದ್ಯಾವರಣವಶದಿಂ ತತ್ಪರಿಮಾಣತೆಯೆಂತಂತೆ . . . ವಿಕಸ್ವಮುಂಟು (ತತ್ತ್ವಪ್ರ. ೨೩೮). [ಸಂ. ಪರಿಮಾಣತಾ]

ಪರಿಮಾಣಪರಿಗ್ರಹವ್ರತ (ನಾ). [ಜೈನ] ಅವಶ್ಯಕತೆಗೆ ತಕ್ಕಷ್ಟು ಮಾತ್ರ ವಸ್ತುಗಳನ್ನು ಹೊಂದಿರಬೇಕೆಂಬ ವ್ರತ: ಇರೆ ಕುಪ್ಯ ನಿವೇಶನ ಧನ ವರಧಾನ್ಯ ಕ್ಷೇತ್ರಮುಖ್ಯಮೆಂಬಿವು ಪವಣಿಂದಿರದೇಣಿಸುವುದು ಮತ್ತಂ ಪರಿಮಾಣಪರಿಗ್ರಹವ್ರತಕೃತಿಚಾರಂ (ಸುಕುಮಾ. ೬-೧೭). [ಪರಿಮಾಣ + ಪರಿಗ್ರಹ + ವ್ರತ]

ಪರಿಮಾಣವಾಚಕ (ಗು). ೧. ಪ್ರಮಾಣವನ್ನು ಸೂಚಿಸುವ: ಕೆಲವು, ಪಲವು ಎಂಬ ಪರಿಮಾಣವಾಚಕ ಶಬ್ದಗಳು ಬಹುತ್ವವನ್ನು ಸೂಚಿಸುವುದರಿಂದ ಅವುಗಳ ಪುಂಸ್ತ್ರೀರೂಪಗಳನ್ನು ಬಹುವಚನದಲ್ಲಿ ಮಾತ್ರ ನೋಡಬಹುದು (ಕೃಪಿಡಿ. ೩೪). (ನಾ). ೨. ಪ್ರಮಾಣವನ್ನು ಸೂಚಿಸುವುದು: ಕಲವು, ಎಲ್ಲವು ಮೊದಲಾದುವೂ ಇದೇ ಬಗೆಯ ಗುಣವಾಚಕಗಳು. (ಇವನ್ನು ಪರಿಮಾಣವಾಚಕಗಳೆಂದು ಕರೆಯುವುದುಂಟು) (ಮಧ್ಯಮ. ೨೬). [ಪರಿಮಾಣ + ವಾಚಕ]

ಪರಿಮಾಣವ್ರತ (ನಾ). = ಪರಿಮಾಣಪರಿಗ್ರಹವ್ರತ: ಇನಿಸಱಂದಗ್ಗಳಂ ಮಾಡೆನೆಂಬ ಪರಿಮಾಣ(ಣಾಮ ?)ವ್ರತಮಂ ಕೆಯ್ಕೊಂಡು ನೆಗೆದ ಗೃಹಸ್ಥನ ಮೇಗೆಯುಂ . . . ಮೋಹರಾಜನುಂ ಪರಿಯದೇಕಿರ್ದಂ (ಜೀವಸಂ. ೧೫೫-೧೩). [ಪರಿಮಾಣ + ವ್ರತ]

ಪರಿಮಾಣಿಸು (ಕ್ರಿ). ಅಳತೆ ಮಾಡು; ಪ್ರಮಾಣವನ್ನು ಕಂಡುಹಿಡಿ: ಆ ಲಿಂಗದ ವೃತ್ತಮಂ ಬಳಸಿ ಸೂತ್ರದಿಂದಳೆದಾ ಸೂತ್ರಮಂ ಗೋಮುಖದ ತುದಿಗೆ ಲಿಂಗದ ಮಸ್ತಕಕ್ಕೆ ಪಿಡಿದು ಸರಿಗೊಂಡು ಮೇಲಾ ಸೂತ್ರದಿಂ ಶಕ್ತಿಯಧಃಪೀಠಮಂ ಪರಿ[ಪಾಠಾಂ. ಪ್ರ]ಮಾಣಿಸಿ (ವಿವೇಕ. ೧೦೧); ಅಳತೆ ಮಾಡು; ಪರಿಮಾಣವಾಗಿ, ಮೊತ್ತವಾಗಿ,—

ನಿರೂಪಿಸು ; ಪರಿಮಾಣಿಸು (Quantify. ಇಂಕನಿ).

[ಪರಿಮಾಣ + –ಇಸು$_3$]

ಪರಿಮಾರ್ಜನ (ನಾ). ೧. ಶುದ್ಧಿಗೊಳಿಸುವಿಕೆ ; ಸ್ವಚ್ಛಗೊಳಿಸುವಿಕೆ. ೨. ನಿವಾರಣೆ; ಪರಿಹಾರ : ಘೋರತರಸಂಸಾರರೋಗಕ್ಕೆ ಲಳಿತ ಭೇಷಜಮವನ ತಾಳಿಕನ್ಯಸ್ತ ದುರ್ವರ್ಣತತಿಪರಿಮಾರ್ಜನಂ (ಆರಾಚ. ೧-೧೨-೭); ನನ್ನ ದುಷ್ಪಕೃತ್ಯದ ಪರಿಮಾರ್ಜನವನ್ನು ಮಾಡಿಕೊಳ್ಳಲು ಕೊಂದುಕೊಳ್ಳದ ಹೊರತು ನನಗೆ ದಾರಿಯಿಲ್ಲದಾಯಿತು (ಮೊಪಾಸಾ. ೮೦); ಪೈಮನಸ್ಯವದಿರಲಿ, ಅಗೀಗ ರಣಗರ್ಜನ. ಅದಕಿಹುದು ಪರಿಮಾರ್ಜನ (ಚಿಂತನ. ೭೯-೪). ೩. ರದ್ದುಮಾಡುವುದು ; ತೆಗೆದುಹಾಕುವುದು : ಪ್ರಿವಿಕೌನ್ಸಿಲ್ ಅಧಿಕಾರವ್ಯಾಪ್ತಿ ಪರಿಮಾರ್ಜನ ಅಧಿನಿಯಮವನ್ನು ಬಿಟ್ಟು ಉಳಿದ ಸಮಸ್ತ ಅಧಿನಿಯಮಗಳನ್ನೂ ಈ ಮೂಲಕ ನಿರಸನ ಮಾಡಲಾಗಿದೆ (ಭಾಧಾನ. ೨೪೧). ೪. ಜೇನುತುಪ್ಪದಿಂದ ತಯಾರಿಸಿದ ಒಂದು ಬಗೆಯ ಭಕ್ಷ್ಯ ; ಮಧುಮಸ್ತಕ.

[ಸಂ.]

ಪರಿಮಾರ್ಜನೆ (ನಾ). ೧. ನೀರನ್ನು ಚಿಮುಕಿಸುವುದು. ೨. ನಿವಾರಣೆ ; ಪರಿಹಾರ : ಆತ ಎಲ್ಲರ ಸಮಕ್ಷಮವಾಗಿ ಅನ್ಯಾಯ ಪರಿಮಾರ್ಜನೆಗೆ ಮೊರೆಯಿಡುತ್ತಾನೆ (ಗಾಳಿಪ. ೧೫೦); ಇದು ನಾನು ನಿನಗೆ ಮಾಡಿದ ಹಾನಿಯ ಪರಿಮಾರ್ಜನೆಯೆಂದು ತಿಳಿಯಬೇಡ (ಜಯಂತ. ೩೦೭).

[ಸಂ. ಪರಿಮಾರ್ಜನ]

ಪರಿಮಿತ (ಗು). ೧. ಅಳತೆಮಾಡಿದ ; ಅಳೆದ. ೨. ಮೇರೆಯುಳ್ಳ ; ಸೀಮಿತವಾದ; ಎಲ್ಲೆಯನ್ನು ಹೊಂದಿದ: ಪರ್ಯಟನಂ ತಾನೀರ್ಯಾಚರ್ಯಾರ್ಥಂ ಪರಿಮಿತವ್ರತಸ್ಥಿತಿನಿಯಮಂ(ವಸ್ತು ಕೋ. ೫೮-೩೬); ಅಂಬುಧಿವ್ರಜಪರಿಮಿತಾವನೀತಳದೊಳಾಡಂಬರದ ಕೀರ್ತಿಯಂ ತಳೆದ ನಾನಾಮುನಿಕದಂಬಾಧಿನಾಥ ವಿಶ್ವಾಮಿತ್ರಮುನಿಸುತೆಯರಂ . . . ಹರಿಶ್ಚಂದ್ರರಾಯಂ ತಂದನೆಂಬೊಂದು ತೇಜಮಂ ಕೊಡಬೇಹುದೆನಗೆ (ಹಚಕಾ. ೮-೩೦); ಪರಿಮಿತಯೋಗಯೋಗ್ಯತರಮಪ್ಪ ನದೀನದಮಧ್ಯಶೈಲಶೇಖರ ಶಿಲೆಯೊಳ್. . . ಇರ್ದು ಯೋಗಮಂ ನಿರವಿಸಿ (ಅನಂಪು. ೯-೧೧೩); ಪರಿಮಿತಾಕ್ಷರತತಿಯೊಳಪರಿಮಿತಾರ್ಥ ರಚನೆಯಲಿ ವಿರಚಿಸುವುದದು ಕವಿಯ ಚತುರತೆ (ಬಸಪು. ೧-೨೨). ೩. ಮಿತವಾದ ; ಹೆಚ್ಚಿಲ್ಲದ : ಭಾರತೀಪತಿ ಚತುರಪರಿಮಿತೋದಾರಗಂಭೀರಭಾಷಿತಂಗಳಿಂ ಬಿನ್ನಪಂಗೆಯ್ಯೆ (ಜಗವಿ. ೧-೬೬ವ); ಪರಿಮಿತ ವಾಜಿವಾರಣಪದಾತಿವರೂಥಕದಂಬಕಾಮಿನೀ ಪರಿಚಿತ ರಾಜಪುತ್ರನಿಚಯಂ . . . ಈಕ್ಷಿಸುತ್ತೆ ಬರೆ (ಅನಂಪು. ೧೧-೪೦); ಪರಿಮಿತಪುರೋಹಿತಸಚಿವಹಿತಪರಿಕರಾವೃತನಾಗಿ ನಡೆತಂದು (ಬಸಪು. ೫-೫೨). ೪. ಹೊಂದಿಸಿದ ; ಜೋಡಣೆ ಮಾಡಿದ. (ನಾ). ೫. ಮೇರೆಯನ್ನು ಹೊಂದಿರುವುದು ; ಸೀಮಿತವಾದುದು : ನಿರುಪಮದಿಂದಂ ಪರಿಮಿತಮಪ್ಪಂತಿರೆ ಯತಿ ಯತುನಿಯತಂ ಬರೆ ತರಳಾಕ್ಷೀ ಧರೆಯೊಳಿದೆತ್ತಂ ಕರಮೆಸೆವಕ್ಕರಿಕೆ (ಛಂದೋಂಬು. ೫-೨೫೪); ಮಾನವನ ಇತಿಹಾಸದಲ್ಲಿ ಸಂಸ್ಕೃತಿಗಳ ಆಯುಸ್ಸೂ ಚಕ್ರಾತ್ಮಕ ಮತ್ತು ಪರಿಮಿತ (ಋಕ್ಸಾರ. ೯೬ ಪೀಠಿಕೆ); ನಮ್ಮ ಶಕ್ತಿಗಳು ಪರಿಮಿತ (ಜೀವಾತ್ಮ. ೫೨). ೬. ಮಿತವಾಗಿರುವುದು ; ಹೆಚ್ಚಾಗದಿರುವುದು : ಹಿತವನಾಗಿಯೆ ಬಂದು ನೀ ಪರಿಮಿತದಿ ಜೇಳಿದಡಾನು ಕೇಳುವೆ (ಕೌತಿರಾ. ೧೮-೪೭); ಮೇಲೆ ಸಂತೈಸಿದನು ಧರ್ಮನೃಪಾಲನಲ್ಲಿಂ ಬಳಿಕ ಮುರಹರನಾಲಯಕೆ ಪರಿಮಿತದೊಳರ್ಜುನನೆನ್ನ ಕರೆಸಿದನು (ಕುಪ್ಯಾಉ. ೫-೪). ೭. (ರಹಸ್ಯಸಮಾಲೋಚನೆಗೆ) ಮಿತವಾದ ಸಂಖ್ಯೆಯಲ್ಲಿ ಸೇರುವುದು : ಪರಿಮಿತಕೆ ತನ್ನಾಪ್ತಸಚಿವರ ಕರೆಸಿಕೊಂಡನು (ಕುಪ್ಯಾಉ. ೧೧-೩೦); ಪರಿಮಿತಾಲಯಕೆಯ್ದಿ ಪರಮಾನಂದಲೀಲೆಯಲಿ . . . ಭಕ್ತಿಯುಕ್ತಾದರಣೆಯನು ಕೈಕೊಳುತಲಿರ್ದನು (ಪ್ರಭುಲೀ. ೧೬-೨). ೮. [ಗಣಿತ] ಒಂದು ದೊಡ್ಡ ಸಂಖ್ಯೆ : ಎಕ್ಕಂ, ದಾಹಂ . . . ಪರಿಮಿತ, ಮಹಾಪರಿಮಿತ ಈ ೪೦ ಸ್ಥಾನದ ಉಗ್ಗಡಣೆ (ವ್ಯವಹಾ. ೮); ಸಾಗರ ಮಹಾಸಾಗರ ಪರಿಮಿತ ಮಹಾಪರಿಮಿತ . . . ಇವು ೩೨ ವುಘಡಣೆ ಹೆಸರುಗಳು (ಭಾಸ್ಕರ. ೧೨-೧).

[ಸಂ.]

ಪರಿಮಿತಪರಿಗ್ರಹ (ನಾ). = ಪರಿಮಾಣಪರಿಗ್ರಹವ್ರತ : ಕೊಲ್ಲದ ಪುಸಿಯದ ಕಳ್ಳದ ಸ್ವದಾರಸಂತೋಷಂ ಪರಿಮಿತಪರಿಗ್ರಹಮಿಂತಯ್ದುಮಣುವ್ರತಂಗಳಂ ಕೊಂಡೆಂ (ಪಡ್ಡಾರಾ. ೨೨-೧೭).

[ಪರಿಮಿತ + ಪರಿಗ್ರಹ]

ಪರಿಮಿತವೃಷ್ಟಿ (ನಾ). ಮಿತವಾಗಿ ಬರುವ ಮಳೆ; ಹೆಚ್ಚು ಕಡಮೆಯಿಲ್ಲದೆ ಸಾಧಾರಣವಾಗಿ ಬರುವ ಮಳೆ : ಪರಿಮಿತವೃಷ್ಟಿ ಭಾಗ-ಇಲ್ಲಿ ೪೦೦ಂದ ೮೦ ಅಂಗುಲಗಳವರೆಗೂ ಮಳೆ (ಭೂವಿನ. ೨೫೬).

[ಪರಿಮಿತ + ವೃಷ್ಟಿ]

ಪರಿಮಿತಾಯು (ನಾ). ೧. ದೀರ್ಘವಲ್ಲದ ಆಯುಷ್ಯ ; ಅಲ್ಪಾಯುಷ್ಯ. ೨. ಅಲ್ಪಕಾಲದ ಆಯುಷ್ಯವನ್ನುಳ್ಳವನು ; ಅಲ್ಪಾಯುಷಿ : ಮನುಷ್ಯರ್ಪರಿಮಿತಾಯುಗಳಪ್ಪುದಱಿಂದ ಧರ್ಮಾರ್ಥಕಾಮಂಗಳನೊಡನೊಡನೆ ದೇಶಕಾಲಬಲೋಪಾಯದಿಂ ಸೇವಿಸುಗೆ (ಮದತಿ. ೧-೫೮ ವ).

[ಪರಿಮಿತ + ಆಯು$_2$]

ಪರಿಮಿತಿ (ನಾ). ೧. ಅಳತೆ ; ಪ್ರಮಾಣ. ೨. ಎಲ್ಲೆ ; ಮಿತಿ ; ಸೀಮೆ : ಕನ್ನಡದ ಉಪಭಾಷಾಪರಿವೀಕ್ಷಣೆಯನ್ನು ನನ್ನ ಪರಿಚಯದ ಪರಿಮಿತಿಯಲ್ಲಿ ನಡೆಸಿದ್ದೇನೆ (ದ್ರಾವಿವಿ. ೩೮೩); ಈ ಹಿಂದುಮುಂದಿನ ಪರಿಮಿತಿಗಳಲ್ಲಿ ಹಿಂದಿನದು ನಿಶ್ಚಿತ, ಮುಂದಿನದು ಅನಿಶ್ಚಿತ (ಸಾಹಿಸ. ೧೫೨).

[ಸಂ.]

ಪರಿಮಿತಿಗೊಳಿಸು (ಕ್ರಿ). ಸೀಮಿತಗೊಳಿಸು ; ಮಿತಿಗೊಳಿಸು : ಭಾವಗೀತೆಯಾದರೋ . . . ತನ್ನ ಎಲ್ಲೆಯನ್ನು ಅಲ್ಲಿಗೆ ಪರಿಮಿತಿಗೊಳಿಸಿಕೊಳ್ಳುತ್ತದೆ (ಭಾವಗೀ. ೧೪).[ಪರಿಮಿತಿ + ಕೊಳ್$_1$ + –ಇಸು$_3$]

ಪರಿಮಿಲಿತ, ಪರಿಮಿಳಿತ (ಗು). ಸೇರಿದ; ಕೂಡಿದ: ಪರಮತತ್ವಕಳಾ ಪರಿಮಿಲಿ [ಪಾಠಾಂ.ಳಿ]ತ . . . ಪರಂಜ್ಯೋತಿಸ್ವರೂಪ ನಿರೂಪ ಚಿತ್ತೈಸು (ಬಸಪು. ೬೧-೪೫). **ಪರಿಮಿಳಿತ** : ಕಿನ್ನರಮಿಥುನಸುಖಪರಿಮಿಳಿತಗೀತಶ್ರವಣಸನ್ನುತಪುಳಿನಸುಪ್ತಮರಾಳವೆಸೆದುದು ಗಜಪುರೋದ್ಯಾನ (ಕುಪ್ಯಾಉ. ೭-೨೭).

[ಸಂ.]

ಪರಿಮಿಶ್ರ (ನಾ). ಚೆನ್ನಾದ ಬೆರಕೆ,-ಮಿಶ್ರಣ : ಕುಂಕುಮಪರಿಮಿಶ್ರದ ನೀರಂ ಕರದಿಂ ಮೇಲೆ ಚೆಲ್ಲೆ (ಹಪ್ಮೀರ. ೪-೨೫). [ಸಂ.]

ಪರಿಮಿಶ್ರಿತ (ಗು). ಚೆನ್ನಾಗಿ ಬೆರಕೆಯಾದ,-ಬೆರೆತ : ಕಡುಕೆಂಕ ಮಾದುದೊಂದೆಡೆ ನವಕುಂಕುಮದ್ರವದಿನರ್ವಿಪ ಕರ್ಪಿಡಿದಿರ್ಪನಾಳ್ದುದೊಂದೆಡೆ ಪರಿಮಿಶ್ರಿತಾರ್ದ್ರ ಮಹಿಷೀರಸದಿಂ ಸರಸೀವಿಭಾಗದೊಳ್ (ಶಾಂತಿಪು. ೮-೨೯). [ಸಂ.]

ಪರಿಮಿಳಿತ 'ಪರಿಮಿಲಿತ' ನೋ.

ಪರಿಮುಕ್ತ (ಗು). ಬಿಚ್ಚಿರುವ ; ಕಟ್ಟದಿರುವ : ಚಾಪಚ್ಯುತರನಪಗತವಾಹನರ ಪರಿಮುಕ್ತಕೇಶಿಗಳ ಗತಿವಿಹೀನರ . . . ಇಱುವುದು ಧರ್ಮವೇ (ಕುಪ್ಯಾಕ. ೨೬-೩೨). [ಸಂ.]

ಪರಿಮುತ್ತು (ನಾ). ೧. ಆವರಿಸುವುದು : 'ಪರಿಮುತ್ತುಗೊಳ್' ಪರಾ. ೨. ಕಸಿದುಕೊಳ್ಳುವುದು ; ಸೆಳೆದುಕೊಳ್ಳುವುದು : "ಪರಿಮುತ್ತೆ[ತ್ತು]ಯೆನೆ ಸೆಳೆವುದಕ್ಕು" (ಕಬ್ಬಕ್ಕೆ. ೭೦); "ಕವರ್ದು ದೀಟ್ಟುದು ಸುಲಿದುದೆನಲು ಪರಿಮುತ್ತೆನಲವತರಕು ಸೆಳೆವುದಱ ಪೆಸರ್ಗೆ" (ಶಬ್ದಮಂ. ೬೪). [ಪರಿ$_2$ + ಮುತ್ತು$_2$]

ಪರಿಮುತ್ತುಗೊಳ್ (ಕ್ರಿ). ೧. ಆವರಿಸು; ಆಕ್ರಮಿಸು; ಹಬ್ಬು : ಭೂಭುವನಮುನಿಮುಮಂ ಪರಿಮುತ್ತುಗೊಳ್ಳ ಕಟ್ಟಲೆಯ ಭಯದಿಂ (ಪರ್ಧಪು. ೬-೨೬೪); ಅನುಪಮಸುಗಂಧಿವನಜಾನನನುಂ ಪರಿಮುತ್ತುಗೊಳ್ಳ ಮುಂದಿರ್ದು ರಕ್ಷಾವಿಧಿಯೋಗಕ್ಕಿಕ್ಕಿದ ಕಾಂಚನಜಂಪಕಮಲ್ಲೆ ಸತಿಯ ನಾಸಾಮುಕುಳಂ (ಪುಷ್ಪಪು. ೬-೪೯). ೨. ಮುತ್ತಿಗೆ ಹಾಕು; ಲಗ್ಗೆ ಹಾಕು : ಕಂದರ್ಪದೇವನಂ ಕಂಡು ಪರಿಮುತ್ತುಗೊಂಡು ಪೊಡರ್ ಳುಮುಪುರ್ವಿನಿಂ ಜಡಿದು(ವೀರಾಪ. ೧೧-೪೪೮); ಉಬ್ಬಿದುಪ್ಪತ್ತರ... ದುರ್ಗಂಗಳಂ ಕುಬ್ಜುಖಂದಂ ಪರಿಮುತ್ತು ಗೊಂಡು ಪುರಮಂ ಕೆಯ್ಕೊಂಡು (ಪುಷ್ಪಪು. ೫-೫೧). ೩. ಸೋಲಿಸು; ತಿರಸ್ಕರಿಸು : ಕತ್ತರಿಸಿ ಜಂಪ್ರ ಕಳೆಯಂ ಪತ್ತಿಸಿದಂತೆಸಕ ಸತಿಯ ನುಲಿಪಲ್ಮೊಳಿಂ ಮುಂತ್ತಿನಬಿಲಾಸಮುಂ ಪರಿಮುತ್ತು ಗೊಳಲ್ಕಾ[ಪಾಠಾಂ. ಗೆಲೊಳ್ಕಾ]ಲ್ದುದೆಂಬುದೊಂದಚ್ಚರಿಯೇ (ಮಲ್ಲಿಪು. ೬-೬೫). [ಪರಿಮುತ್ತು + ಕೊಳ್[1]]

ಪರಿಮುತ್ತೆ (ನಾ). ಒಂದು ಬಗೆಯ ಹೂವು; ಅದಿಮರ್ಳ್ತೆ; "ವಸಂತದೂತಿಕೆ" (ಪ್ರಥಗ್ಣಾ). [ಪರಿ? + ಮುತ್ತೆ[2]]

ಪರಿಮೃತ (ನಾ). ಸತ್ತು ಹೋದವನು; ಮರಣ ಹೊಂದಿದವನು: ಪರಿಮೃತನಾದನೆ ವಿಶ್ರುತ ಬಹುಪ್ರತೋದಾತ್ತಯಶಂ (ಸುಳುಮಾ. ೨-೧೨). [ಸಂ.]

ಪರಿಮೃಷ್ಟ (ನಾ). ಶುದ್ಧಮಾಡಿದುದು; ಶುಭ್ರವಾದುದು : ಎಸೆವ ಶಶಿ ತಾರೆಗಳು ಕಾಂತಿಪ್ರಸರದಲಿ ಪರಿಮೃಷ್ಟವಾದುವು ದೆಸೆಗಳೆಯೇ ನೆಂದೆನಚ್ಚುತನುದಯದುಷ್ಟವಪ (ನಿಭಾಗ. ೧೦-೩-೩೧). [ಸಂ.]

ಪರಿಮೇಯ (ಗು). ೧. ಅಳೆಯಲ್ಪಡುವ. ೨. ಅಳೆಯಬೇಕಾದ. ೩. ಅತ್ಯಂತ ಅಲ್ಪವಾದ. ೪.[ಗಣಿತ] (ಮೊತ್ತ ಅಥವಾ ಪ್ರಮಾಣದ ವಿಷಯದಲ್ಲಿ) ಭಾತಮೂಲಚಿಹ್ನೆಗಳಿಲ್ಲದೆ ನಿರೂಪಿಸಬಹುದಾದ : ಸಮಾಕರಣಗಳ ಪರಿಮೇಯ (rational)ಮೂಲಗಳೆಲ್ಲಿ ಅಸಕ್ತ ಇದ್ದು, ದ್ವಿಘಾತದ ಸಾಮಾನ್ಯ ಅವಿಧಾರ್ಯ ಸಮಾಕರಣವನ್ನು ಸಂಪೂರ್ಣವಾಗಿ ಬಿಡಿಸುವುದರಲ್ಲಿ ಅವರು ಜಯ ಗಳಿಸಿದ್ದರು (ತತ್ವಸ್ತ್ರಾ. ೪೭೧). [ಸಂ.]

ಪರಿಮೋಷ (ನಾ). ಕಳ್ಳತನ; ಕಳವು. [ಸಂ.]

ಪರಿಮೋಷಿ (ನಾ). ಕಳ್ಳತನ ಮಾಡುವವನು; ಕಳ್ಳ; ಚೋರ: "ಏಕಾಗಾಂಕಃ, ತಸ್ಕರಃ . . . ಪರಿಮೋಷೀ. ಪಾರಿಪಂಥಿಕಃ, ಸ್ತೇನಃ —ಈ ೧೦ ಕಳ್ಳಂ" (ಹಲಾಯು. ೫೬-೧೪೩); "ಪರಿಮೋಷಿ ಪಸ್ಕು ... ಪ್ಕರಂ ಮುಲಿಮ್ಮು ಚನೆನಿಪ್ಪ ನಳ್ಕುಂ ಸ್ತೇನಂ" (ಪಸ್ಕು ಕೋ. ೬೫-೪೧). [ಸಂ. ಪರಿಮೋಷಿನ್]

ಪರಿಮ್ಲಾನ (ಗು). ೧. ಕಳೆಗುಂದಿದ; ಕಾಂತಿಹೀನವಾದ : ಅರಸನರಸಿಯು ಪರಿಮ್ಲಾನಮುಖಮಲಮನತಿವಿಸ್ಮಯಸ್ಫಾರಿತ ವಿಲೋಚನನಾಗಿ ನೋಡಿ (ಮಲ್ಲಿಪು. ೪-೩). ೨. ಬಳಲಿದ; ಆಯಾಸಗೊಂಡ : ಪರಿಮ್ಲಾನಪೀನಮುಖಾಬ್ಜ ಮನಭೀಕ್ಷಿಪ ನಲ್ಲಳಖಾಂಗದಿಂಗಿತಂ ಮಾನಸದೊಳ್ಕೊಡರ್ದುದು ತತ್ಕೂಳದೊಳ್ ಜಳಕೇಳಿಯಾಂಪುದಂ (ರಾಜಪೀ. ೧೧-೬೦). ೩. ದುರ್ಬಲವಾದ; ಬಲಗುಂದಿದ. [ಸಂ.]

ಪರಿಮ್ಲಾನತೆ (ನಾ). ೧. ಬಾಡಿರುವಿಕೆ; ಕಳೆಗುಂದಿರುವಿಕೆ : ಅಗಳಾಚಾರಧೂಪಗ್ರಹಣಾಂಜನಕ್ಲೇದಸಮಾಳುಲಾಕ್ಷಪರಿಮ್ಲಾನ (ತಾ) ದೀಣಾಂಳು(ದೀಭೂತ)ರ. ಕರ್ಣಪೂರದಾಟಳಗಂಡಕೇಟುಮುಖಮುಂದಳ ಜ್ಯೋತಿಃಪ್ರಥೆಯೊಂದು ಲೀಲಾಲಕ್ಷ್ಮಗಾವಾಸಮಾಗಿರೆ(ಪಂಪಪು. ೬-೧೪ ಪ). ೨. ಆಯಾಸ; ದಣಿವು; ಬಳಲಿಕೆ : ಪಥಿಕರ್ ಮುಖ ದಿಲ್ಲೆಸಲ್ ಪರಿಮ್ಲಾನತೆ ಸೈತು ಬಟ್ಟೆನಡೆಯಲ್ಪುಡೆಯರ್ ವಿಷಯಾಂತರಾಳದೊಳ್ (ಸುಲ್ಲಿಪು. ೨-೨೪); ಜಾಸಕಳಿರ್ದಶೋಕೆಯು ಸಮಾಪದೊಳ್ದರ್ . . . ಳುಜರಾಜಯನೋವದೆ ಕಟ್ಟನಿಲ್ಲ ರೊಳ್ಸಾನಲಜಾತದಿಂ ತಪನತಾಪದಿನಂದಿಳೆಗಗ್ನಳಂ ಪರಿಮ್ಲಾನತೆಯಳ್ಳಮೆಂದುಬಿಸದಂ ಕೆಲವಂ ಪದನಂಜಯೊತ್ಸಹಂ (ಪಂರಾಮಾ. ೧೧-೧೨೪). [ಪರಿಮ್ಲಾನ + -ತೆ[2]]

ಪರಿಯ (ನಾ). ಒಂದು ಬಗೆಯ ಮರ : ಪಾರಿಜಾತವು ಪರಿಯ ವೃಕ್ಷವು . . . ಕರಿಯ ಮಲ್ಲಿಗೆ ಪ್ರೇಮದೊಳ್ ವನರೊಪ್ಪಿತು (ಗೋಜಾಮು. ೨೪). [?]

ಪರಿಯಂಕ (ನಾ). ೧. ಹಾಸುಗೆ; ಶಯ್ಯೆ: ಪೇಸಿಯುಪ ಪರಿಯಂಕದಲಿ ನಿಜಪಾಸಿಯುಪ ಶಿಕ್ಷಾಸೆಯಲಿ ನಿರ್ದೋಷಿಯುಪ ಸಚಿಭಕ್ತಿಯಲಿ ಮೋಹದಲಿ ಕಾಯೆನ್ನನಿ ಏನು ಕಾರ್ಯಕೆ ಮುಂತ್ರಿಯೆನ್ನಿಸುವ ಮೈಸಿರಿಯನುಳ್ಳ ಪಳು ರಾಜೇಪಾಸವೆಂದೆನ್ನಿಸುವಳು (ಕುಪಾ೪ಳ್ಳ. ೬-೪೦); ಅರುಣೋದಯ ದಲ್ಲಿ ದುಗುನಿಂತಿ . . . ಪರಿಯಂಕದಲ್ಲಿಯ ಶಿಶುವನು ಕಾಣದೆ ಪಿರಿದಲ್ಲಿ ಳಕದಳಿಸಿದಳು (ಕಾಸುಳ. ೩-೧); ಭಾಳಲೋಚನನ ಸರ್ವಾಭರಣಮಂ ನೀನು ಹರಿಯ ಪರಿಯಂಕವೆಂಬ ಬೀಳುಮಾತನು . . . ಕೇಳಿ (ನಿಳೋಪು. ೧೩-೫). ೨. ಮಂಚ; ಪಲ್ಲಂಗ : "ಶಯನಮಾ ಪರಿಯಂಕಮಾ ಶಯ್ಯೆಯೆನೆ ಮುಂಡಮೆನಿಸಿಳ್ಕುಂ" (ಮುಂಗಶಾ. ೬೦-೧೫); ಆಗಳೆಮ್ಮ ನುದಿ ಪ್ರಮಾಣಮದಾಗೆ ಎಮ್ಮ ವಚನವೆ ಮ್ಮುದುತರಯೋಗವೇ ಪರಿಯಂಕ ತೂಲವಿದಕ್ಕೆ ದೃಷ್ಟವಲಾ (ಬಸಪು. ೩೯-೬೧); ಸಾರಮುಗಪರಿಯಂಕ ಪರಿಸಂಸ್ಕಾರದಲಿ ಮಲಗುವ ಮುಹೀಪತಿ ನೀರೊಳಗೊಜಗುವನು (ಕುಪಾ೪ಗ. ೬-೪೦); ಪರಿಯಂಕಮಜ್ಜಿತ ಚೀತ್ಕತಂ . . . ಸುರುಚಿರೋಷ್ಮ ದ್ವಂದ್ವ ತಪ್ತೀಕೃತಂ ಶರಮೊಪ್ಪಲ್ ಗಣಕಾಜನಂಗಳೊಲವಿಂ ಸಂಘೋಗಮಂ ತಾಳ್ದಿದರ್ (ತ್ರಿಪು. ೩೪-೧೪೧). ೩. ಪಲ್ಲಕ್ಕಿ; ಮೇನೆ : "ಪರಿಯಂಕ-ಪರ್ಯಂಕ = ಮಂಚ,ಪಾಲಕಿ" (ತತ್ವ ಕೋ. ೨೪). ೪. (ಆಲಂ) ವಾಹನ : ಪರಿಯ ಪರಿಯಂಕಮೆಂಬಂತೆ ಪತ್ರಾನ್ವಿತದಿ . . . ಪರಮ ಯೋಗೀಶ್ವರಂತಶಾಂತಿಯಿಂದೊಪ್ಪುವತ್ತೊಂದು ಪಟವೃಕ್ಷವು . . . ಎಸೆಯಲು (ನಪೋಸ. ೮-೩೪). [<ಪ್ರಾ. ಪರಿಯಂಕ./ಸಂ. ಪರ್ಯಂಕ]

ಪರಿಯಂಕ 'ಪರ್ಯಂತರ[2]' ನೋ.

ಪರಿಯಂತಂ 'ಪರ್ಯಂತರ[2]' ನೋ.

ಪರಿಯಂತರ[1] 'ಪರ್ಯಂತರ[1]' ನೋ.

ಪರಿಯಂತರ[2] 'ಪರ್ಯಂತರ[2]' ನೋ.

ಪರಿಯಂತರಂ 'ಪರ್ಯಂತರ[2]' ನೋ.

ಪರಿಯಂತ್ರ 'ಪರ್ಯಂತರ[2]' ನೋ.

ಪರಿಯಟಣ 'ಪರಿಯಟನ' ನೋ.

ಪರಿಯಟನ, ಪರಿಯಟಣ (ನಾ). ೧. ಚಲನೆ : ಕ್ಷಾಣವಲ್ಲಭೆಯಲಾಟಪಟ್ಟದೊಳ್ ಚಾಮರದ ಕೋಮಲಪವನಪರಿಯಟನದಿಂ ಪರಿಪಾಟದಪ್ಪ [ಪ್ಪೆ] ಸುಳಿಗುರುಳೆಂಬ ಮುಂದಿಯ ಬಂಬಲಂ . . . ಪಂತಿಗೊಳಿಸುವಿನೆಗಂ (ಆಸಂಪು. ೬-೬೯ ಪ). ೨. ಸಂಚಾರ; ತಿರುಗಾಟ; ಅಲೆದಾಟ : ಪಟನಂತೆ ಕಾಂತಾರತಲಸದ್ವಿಲಾಸಪರಿಯಟನ [ಪಾಠಾಂ. ಪರ್ಯಾಟನ]ದಿಂದೊಪ್ಪಿದುದು . . . ಮಹಾಧ್ವರತುರಂಗಮಂ (ಜೈಮಿಭಾ. ೨೫-೭). **ಪರಿಯಟಿಣ** : ೨. ಆ ಸಮಯದಲಿ ಬಂದನೊಬ್ಬನು ಭೂಸುರನು ಸಕಲತೂಪಲನು ಬಹುದೇಶಪರಿಯಟಿಣಪ್ರವಾಸಾಭ್ಯಾಸಶಿಕ್ಷೆಯಲಿ (ಕುವಾಳ. ೧೧-೨); ಲಂಕಾಪುರದ ಸಿರಿ ಸೇರಿದುರ್ವಾದಾ ಕಾರ್ಯರಿಯ ಪರಿಯಟಿಣ [ಪಾಠಾಂ. ಣಯನ, ಯಟಿನ]ಪ್ರಚಂಡ ಸುಮಾಲ್ಯವಂತಂಗೆ (ತೊರಾ. ೧-೪-೨೫). [<ಸಂ. ಪರ್ಯಟನ]

ಪರಿಯಟ್ಟು (ಕ್ರಿ). ದಂಡೆತ್ತಿ ಹೋಗು (?): ಸಾಡ್ ಆಳ ನಿಜಮಿತ್ರನ್ ಪರಿಯಟ್ಟ (ಮೈಆರಾ. ೧೯೨೪. ೧೦೪-೨ ; ?). [ಪರಿ? + ಅಟ್ಟು[2]]

ಪರಿಯಣ 'ಪರಿಯಾಣ$_1$' ನೋ.
ಪರಿಯರ 'ಪರಿಯಾರ' ನೋ.
ಪರಿಯಷ್ಟಿ 'ಪರ್ಯಷ್ಟಿ' ನೋ.
ಪರಿಯಷ್ಟಿಗೆಯ್ 'ಪರ್ಯಷ್ಟಿಗೆಯ್' ನೋ.
ಪರಿಯಳ 'ಪರಿಯಾಣ$_1$' ನೋ.

ಪರಿಯಾಣ$_1$, ಪರಿಯಣ, ಪರಿಯಳ, ಪರಿವಾಣ, ಪರ್ಯಣ, ಪರ್ಯಾಣ$_1$, ಪರ್ಯಾಳ, ಹರಿಯಣ, ಹರಿಯಾಣ, ಹರಿವಣ, ಹರಿವಾಣ$_1$ (ನಾ). ೧. ತಟ್ಟೆ; ತಾಟು: ಅಗಳಾಗರ್ಧಸುಖಿಯ ಬೆನ್ನೊಳ್ ಸಿರಿಯ ಪರಿಯಾಣಮನಿಟ್ಟದಂ ಕೆಳ್ಕನೆ ತೀವಿ ಬಡ್ಡಿಸಿದೊಡೆ (ಪಡ್ಡಾರಾ. ೬೪-೨೧); ದೇವರಾರೋಗಣೆಯ ಮಾಡಿದ ಮೇಲೆ ಮುಂದಿರ್ದ ಪರಿಯಾಣಮಂ ತೆಗೆದು ಇನ್ನೊಂದು ಪರಿಯಾಣಮಂ ತನ್ನ ಎಂಬ ಕಪ್ಪವ ನೋಡಾ (ಚನ್ನವ. ೪೨-೩); ಕನಕದಿಂ ಸಮದ ಪರಿಯಾಣದೊಳ್ ಮನವೊಸೆದು ಪೊಸ ಪೊಂಗಳಂ ತೀವಿ (ನಂಬಿರ. ೧೬-೧೬); ಪ್ರಾಣಲಿಂಗಕ್ಕಳ್ಳಱಂ ಪರಿಯಾಣದಲಿ ಪೊಸಪೊಸ ಪದಾರ್ಥಶ್ರೇಣಿಯಂ ಲೇಸಾಗಿ ಗಡಣಿಸಿ (ಬಸಪು. ೩೩-೧೧); ಬೆಳ್ಳಿಯ ಪರಿಯಾಣದ ಮೇಲಿರಿಸಿದ . . . ಎಳ್ಳುಂಡೆಯಂ (ಜ್ಞಾನಚಂ. ೬-೩೬); ತಾನು . . . ಚಿನ್ನದ ಪರಿಯಾಣದಲ್ಲಿ ಪಂಚಾಮೃತವನುಣ್ಣುತ ಎನ್ನಂ ಕದವಿನ ಮಱೆಯಲ್ಲಿ ಕುಳ್ಳಿರಿಸಿ ಒಡೆದ ಓಡಿನಲ್ಲಿ ಅಂಬಲಿಯನೆಱೆಯಲು (ಘನವ. ೪೦-೩೪). ೨. ಕೊಳಗದಪ್ಪಲೆ ಮುಂತಾದ ಸಾಧನ; ಭಾಂಡ; ದೊಡ್ಡ ಬಾಯಿಯ ಪಾತ್ರೆ: "ಪುರುಪಾತ್ರಮೆನೆ ಪರಿಯಾ[ಪಾಠಾಂ. ವಾ]ಣ ಮಕ್ಕು" (ಮಂಗರಾ. ೬೩-೨೫); ಮಹಾಘನವಪ್ಪ ಬೋನವನು ಒಂದನುವಿನ ಪರಿಯಾಣದಲ್ಲಿ ಹಿಡಿದು ಗುರುಲಿಂಗವು ಒಳಗಾದ ಲಿಂಗವಾರೋಗಣೆಯ ಮಾಡಿ ಮಿಕ್ಕುದು ಪ್ರಸಾದವೆ (ದೇವಾವ. ೫೦-೯೯). ೩. ನೈವೇದ್ಯ; ಎಡೆ: ಶಬ್ದ ಸ್ಪರ್ಶ ರೂಪ ರಸ ಗಂಧಂಗಳ ವಿವರಿಸಿ ಕಳೆದು ಪ್ರಾಣಲಿಂಗ ನಿಮಗೆ ಪರಿಯಾಣವ ಮಾಡಿದೆನೋ ಅಯ್ಯ (ಕಿವಗೀ. ೧೨೫-೬೨೦). **ಪರಿಯಣ**: ೧. ಪರೆದ ತಜಗೆಲೆಯ ಪರಿಯಣಮಾಗೆ ಪಲ್ಲಲಮೆತ್ತಿದ ಬೋನಮಾಗೆ ಸಿರಿಯ ಮಹಿಮೆಯಂ ಮೆಱೆಯಲೇ ನಾರ್ತುದೊ ಬನದೊಳಿರ್ಪರವಾ ಪಾಂಡವರಾ (ಪಂಪಭಾ. ೭-೨೮); ಪರಿಯಣದ ಬಾಣಸಿಗ . . . ಮಂಡವಿಗೆಯ ವಿಳಾಸನಿವಾಸಂಗಳಿಂದಂ (ಶಾಂತಿಪು. ೧೦-೧೪೭೭); ಪರಿಯಾಣವೆ ಭಾಜನವೆಂಬರು ಪರಿಯಣ ಭಾಜನವಲ್ಲ (ಬಸವ. ೮೩೬); ಕೆಲಕೊತ್ತು ಚಿತ್ರಿಕೇ ಪರಿಯಣ [ಪಾಠಾಂ.ಳ]ಮಂ ನೃಪೇಶ್ವರಿಯನಾರೋಗಿಸಲ್ ಕರೆ ಮಂಜುಳೋಪೆಯಂ ದರಸಿಗೆ ಬೋನಮೆತ್ತಲುಲಿದತ್ತಮರೇಂದ್ರಮಹತ್ತರೀಜನಂ (ಅನಂಪು. ೪-೮೫). ೨. ಪರಿಯಣಂ ತಳಿಗೆ ಕನ್ನಡಿ ಗಿಣ್ಣಲಾದಿಯಾಗಿರ್ದ ನಾನಾ ತೆಱದ ಪರಿಯಣದ ಸಾಲಿನಿಂದ . . . ಕಂಚುಗಾಱರ ಪಸರವೊಪ್ಪುದುದು (ಸೌಂದಪು. ೧೨-೩೩). ೪. ಮುಚ್ಚುವ ಸಾಧನ; "ಮುಚ್ಚಳ; ಶ್ರಾವೆ" (ಪ್ರಥಣ್ಣ). **ಪರಿಯಳ**: ೧. ತಳದನಿಷಸವಧುಗಳ್ ಕಣ್ಗೊಳಿಸಿದರ್ . . . ಸುವರ್ಣಮಯಪರಿಯಳಮಂ ಭಕ್ತೋಪದಂಶ ಚರುವಿಲಿಸಿತಮಂ (ಪಂರಾಮಾ. ೧೬-೯೧); ಕಪ್ಪುರದ ಪರೌಕ್ತಿಕದ ತೊಡವನೊಳಕೊಂಡು ಪೊಳೆವ ಪಳುಕಿನ ಪರಿಯಳಂ[ಪಾಠಾಂ. ಣಂ]ಗಳುಂ (ಪರ್ಧಪು. ೫-೬೩); ಕೆಂಬರಲ ಪರಿಯಳಂ[ಪಾಠಾಂ. ಣಂ]ಗಳೊಳ್ಪೆಳಗಿದ ಮಂಗಳ ಮಣಿದೀಪಂಗಳ ಬೆಳಗು . . . ಪರಕಲಿಸಿದುದೆಂಬಂತೆ ಸಂಜೆಗೆಂಪು ರಂಜಿಸುತ್ತು (ಪಾರ್ಶ್ವಪು. ೧೦-೧೫). ೫. ಜನ್ನಿಗೆಯಾವಂ ಪರಸಿದ ಪೊನ್ನಂ ಪರಿಯಳ[ಪಾಠಾಂ. ಣ]ಮನೊಯ್ದು ಕಳ್ಳರನಂತಿಂತೆನ್ನದು ಗಡ ಮನೆದೈವದ ಸನ್ನಿಧಿಕೆಯ ನೋಡೆ ಮನೆಯ ಕುನ್ನಿ ವಿಶೇಷಂ (ಪಸಾರ. ೯೩೩). **ಪರಿವಾಣ**: ೧. ಒಡೆಯರ ಸಹಪಂಕ್ತಿಯಲ್ಲಿ ಪರಿವಾಣ ಅಡ್ಡಣೆಯನಿರಿಸಿ ಕೊಂಡು ಉಂಬ ಸಮಗ್ರಾಹಕನಲ್ಲಯ್ಯಾ (ಸರ್ವಜ. ೪೬-೨೪೫); ಕುಮಾರರಂ ಪಂತಿಯೊಳಿರಿಸಿ ಪಾಯಸಮಂ ಪರಿವಾ[ಪಾಠಾಂ. ಯಾ]ಣಂಗಳನಿಟ್ಟು ಬಡಿಸಿ (ಪುಣ್ಯಾಸ್ರ. ೩-೮೫); ಮಿಂಚುವ ಪರಿವಾಣ ಕಂಚು . . . ಪಂಚಾರತಿ ಗಂಟೆಗಳಿಂದ ಮೆಱೆದುವು ಕಂಚುಗಾಱರ ಪಸರಗಳು (ಕಂಸವಿ. ೬-೬೯); ಮುಕ್ತಿಭೋಜನದ್ರವ್ಯವಾ ತರುಣಿಯರು ಪೊಸ ಮಿಸುನಿ ಪರಿವಾಣದೊಳು ತೀವಿಯಿರದೆ ತಂದೀಯಲು (ಸವೋ. ೧೯-೨೯); ಬೀಸಿದನ್ ಮೊಗಳೆ ಮೋದಿ ಪರಿವಾಣಮಂ (ಕ್ರೀರಾಮಾ. ೧೦೦-೧೧). ೪. ಪರಿವಾಣ ಮುಚ್ಚಿದ ಕುಡಿಕೆಗಳಿಗೆ ಕಣಕದ ಲೇಪ ಹಾಕಿ ಬಾಯಿ ಮುಚ್ಚಿದೆ (ಇಪ್ಪಕ. ೨೮೧). **ಪರ್ಯಣ**: ೧. ಅಂತು ಪೊನ್ನಡ್ಡಣಿಗೆಗಳ ಮೇಲಳಂಕರಿಸಿದ ಚೆಂದೊನ್ನ ಸಿರಿಯ ಪರ್ಯಣಂಗಳಂ ಪೊಂದಾವರೆಗೊಳನಲರ್ದಂತೆ ವಿರಾಜಿಸುತ್ತಿರ್ದ ಭೋಜನಲಕ್ಷ್ಮೀವಿಳಾಸ ಭವನಕ್ಕಾ ರಾಜಹಂಸನುಂ . . . ವಿಜಯಂಗೆಯ್ದು (ಸುಕುಮಾ. ೧೧-೨೯೭); ಸುವರ್ಣಪರ್ಯಣಂ[ಪಾಠಾಂ. ಪರಿಯಾಣ]ಗಳಿಂದುನ್ಮುಖಮಯೂಖಮಾಣಕ್ಯದೀಪಕಿರಣಾರುಣಕ ಮರಕತಮಣಿಪುತ್ರಿಕೆಗಳಂ (ಪಂರಾಮಾ. ೧೨-೨೮). **ಪರ್ಯಾಣ$_1$**: ೧. ಹೊಲೆಯರೆಲ್ಲ ಚಿಕ್ಕ ದೊಡ್ಡವರೆನ್ನದೆ, ಪರ್ಯಾಣ ಹಿಡಿದುಕೊಂಡು ಗೌಡರ ಮನೆಬಾಗಿಲಿನಿಂದ ಹೋಳಿಗೆ ಹಾಕಿಸಿಕೊಂಡು ತೃಪ್ತರಾಗಿ ನಡೆದರು (ಗ್ರಾಮಾಯ. ೨೩೫). **ಪರ್ಯಾಳ**: ೩. ಶ್ರೀ ಬಾಳೇಶ್ವರದೇವರ್ಗ್ಗೆ ಗಾವುಂಡ ಅಱುವ ತೊಕ್ಕಳು ದೇವರ ಪರ್ಯ್ಯಾಳಕ್ಕೆ ಸೊಂದಗೊಲ ದೇವಗೌಡನ×× ಲಿಟ್ಟ ಹಣ (ಸೌಇಇ. IX-I, ೧೬೩-೫೬; 1093). **ಹರಿಯಣ**: ೧. ಅಕ್ಕಿಯಂ ಹೂಸು ಯೆಣ್ಣೆಯನು ತೆಗೆಯೂಟಕ್ಕೆ ಮಿಕ್ಕ ಹರಿಯಣವನುಡು ತೊಡು ಹಾವುಗೆಯನೆಂದು ಚಿಕ್ಕ ಹರೆಯದ ಬಾಲೆ ವಲ್ಲಭನನ ಗಲ್ಲಳಲಿನಿಂದ ವಿಕಳತೆಗೊಂಡಳು (ಹಚಕಾ. ೪-೪೭); ಮರದ ಹರಿಯಣದೊಳುಂಡಂ (ಶಮದ. ೨೪೧ ಪ್ರಯೋ); ರಾಜಾನ್ನದಕ್ಕಿಯ ಸಾಲ ಹರಿಯಣದ . . . ವಿವಿಧ ಭಕ್ಷ್ಯಾವಳಿಯ ಬಾಣಸದೊಳಗೆ ಬಂದಳು ಮತ್ತಗಜಗಮನೆ (ಕುಮಾವಿ. ೫-೩೩); ಹೇಮದ ಸಾಲ ಹರಿಯಣಗಳ ಸುವರ್ಣದ ತಟ್ಟೆ ಬಟ್ಟಲುಗಳ . . . ಸಾಲೆಸೆದವಾ ಭವನಾಂತರಾಳದಲಿ (ಕೊರಂರಾ. ೬-೫೫-೩೮); ಸೊಡರ ಸುಳಿಸಿದರು ಹರಿಯಣದಿ (ತುರಂಗ. ೩೭-೫೯). **ಹರಿಯಾಣ**: ೧. ಹರನ ಚೆಂಗಣಿಗಿಲೆಯ ತೋಳ್ಮಾಲೆಯಂ ತರಿಸಿ ಹರುಷದಿಂದಂ ಹೊನ್ನ ಹರಿಯಾಣದೊಳಗಿರಿಸಿ (ನಂಬಿರ. ೯-೩೬); ಕ್ರಮವೆರಸಿ ಹೊಸ ಹೊನ್ನ ಹರಿಯಾಣಮನಿಳವಡಿಸಿ ಪಂಚಪಕ್ವಾನ್ನಮನಮಳದೇವಾನ್ನ ದಿವ್ಯಾನ್ನಂಗಳಂ ಬಡಿಸಿ (ಬಸಪು. ೮-೧೪); ಗಳುಡು ಸೊಣ್ಣಪ್ಪನು ಕೊಟ್ಟ ಉಪಕರಣ ಹರಿಯಾಣ ಅಡ್ಡಣಿಗೆ (ಎಕ. IX, ಬೆಂಗಳೂ. ೯೦-೮; ಸು. 1400). **ಹರಿವಣ**: ೧. ಮಂಜ್ಞೆ ಮಾಂಸದ ಹೊರಳಿಯಲಿ ರಣಭೂಪದುಣಿಸಿಗೆ ಹರಿವ[ಪಾಠಾಂ. ಯ]ಣವನಿಟ್ಟಂತೆ ಹೊಸ ಪರಿಯಾಯ್ದು ರಣಭೂಮಿ (ಕೊರಂರಾ. ೫-೬-೧೬); ತರಿಸಿದನು ನವರತ್ನಖಚಿತದ ಹರಿವಣವ (ಕೋಗಳಿ. ೯-೬೪); ಸಗುತ ಸುರಲಲನೆಯರು ಸಿಂಬೆಯ ಬಿಗಿದು ಹೊತ್ತರು ಹರಿವಣಂಗಳ (ಅಂಬಿಕಾ. ೪೫-೪೦). **ಹರಿವಾಣ$_1$**: ೧. ಅಗಮವೆ ಹರಿವಾಣವಾಗಿ ಪುರಾಣವೆ ಓಗರವಾಗಿ ಉಂಬಾತ ವೇದವಾಗಿ (ಕೂಲಕಾಂ. ೫-೧೨); ದೇವರಿಗೆ ಬೆಳ್ಳಿಯ ಹರಿವಾಣವನೂ ಕೊಟ್ಟು (ಎಕ. IX, ಚನ್ನಪ. ೬೫-೬; 1278); ಆರತಿಯ ಹರಿವಾಣ ಸುಳಿದುದು ಸಾಲು ಸೊಡರುಗಳ (ಕುಮಾಅ. ೬-೯೬); ಅವಳು ಹೊನ್ನ ಹರಿವಾಣದ ಮೇಲೆ ಮೃದುವಾದ ರೇಶ್ಮೆಯ ವಸ್ತ್ರವನ್ನು ಹಾಸಿದಳು (ಜಾಹುತ್ತ. ೪೦). ೩. ಇಷ್ಟಕೆ ಅವನೊಬನು ಪ್ರ××ಕೃತಿ ಮಾಡಿ ಅಳಸಿದಂಥವರು ಕಲಿದೇವರ ಹರಿವಾಣಕೆ ವಿಸವನಿಕ್ಕಿದು (ಎಕ. VII, ಚನ್ನಗಿ. ೫-೧೨; 1263 ?); ಯಿಾ ಧರ್ಮ್ಮಕ್ಕೆ ಬಿಟ್ಟ

ಸ್ವಾಸ್ತಿಗೆ ತಪ್ಪದರೆ ಯೀ ಸ್ವಾಮಿಗಳ ಹರಿವಾಣಕ್ಕೆ ವಿಷವನಿಕ್ಕಿದವರು (ಎಕ. XIV, ಶ್ರೀರಂಗ. ೧೯೮–೩೦ ; 1598). ೫. ನೈವೇದ್ಯಕ್ಕಾಗಿ ಕೊಡುವ ದಿನಸಿ ತುಂಬಿದ ತಳಿಗೆ : ಶ್ರೀರಂಗನಾಥದೇವರ ತಳಿಗೆ ಒಂದು ಶ್ರೀ ಲಕ್ಷ್ಮೀದೇವಿಯ ಹರಿವಾಣ ಒಂದು (ಎಕ. XIV, ಶ್ರೀರಂಗ. ೨–೧೮ ; 1529) ; ಶಾಕಮನಾಯ್ಕಿತಿ × ತಂಮ್ಮ ಹರಿವಾಣಕ್ಕೆ ಕೊಟ್ಟುದು (ಎಕ. VII, ತಿಪನೊ. ೪೬–೭ ; 1688 ?). ೬. (?) : ಪಾತಕರ ಗಣಕಯರ ವೀರರ ಹರಿವಾಣದಾಯದ ಲೆಂಕರ ಬಿಂಕದಂಕಕಾಱರ . . . ಪರ್ತಳರ ಮೊತ್ತದೊತ್ತರದ ತಿಂಥಿಣಯನೊತ್ತರಿಸಿ ಇಟ್ಟಣಿಸಿದ ಕಟ್ಟಣಕದಾಸ್ಥಾನದೊಳು (ಬಸರ. ೬–೨೧).

ಹರಿವಾಣದಾರತಿ = ತಟ್ಟೆಯಲ್ಲಿ ಮಾಡುವ ಆರತಿ : ಸುವತಿಯರ ಹರಿವಾಣದಾರತಿಗಳನು ಕೈಗೊಳುತ . . . ಒಪ್ಪಂಬಡೆದು (ಕುಮಾಅ. ೧೬–೨೮) ; ಅರಸ ರಥದೇಱದನು ನೃತ್ಯದ ತರುಣಿಯರ ಹರಿವಾಣದಾರತಿಗಳ ವಿಲಾಸದಲಿ (ತೊರರಾ. ೧–೧೬–೧೨).

[ಪರಿ$_3$ + <ವಾಣ$_1$?/ತಮಿ. ಅರುವಾಣ ; ತುಳು. ಹರಿಯಾಣೊ, ಹರಿಯಾನೊ, ಹರಿವಾಣೊ, ಅರಿಯಾನೊ, ಅರಿವಾಣೊ ; ತೆಲು. ಪರಿಯಲ, ಹರಿವಾಣ, ಅರಿವಾಣ./ಪ್ರಾ. ಪರಿಅಲ, ಪರಿಅಲಿ]

ಪರಿಯಾಣ$_2$ (ನಾ). ಜೇನು ; ತಡಿ : ಪಂಸೆರಡುಸಾವಿರವರುಶ ಶ್ರೀಣಪೊಲಂ ಕವಣಿಯ ಮಣಿಯ ಪರಿಯಾಣದಿಂ ತೋರ್ಕೆವೆತ್ತೆಯ್ತರೆ ತಂನೊಂದಾನೆಯಂ ಸೇವುಣ ನ್ರಿಪಬಳಮುಂ ನೂಂಕಿ ಬೆಂಗಟ್ಟೆ ಕೊಂದಂ (ಸೌಇಇ. IX–i, ೩೪೦–೪ ; 1224). [<ಸಂ. ಪರ್ಯಾಣ]

ಪರಿಯಾಣಪೀಠ (ನಾ). ತಟ್ಟೆಯನ್ನಿಡುವ ಪೀಠ ; ಅಡ್ಡಣಿಗೆ : ತರಳೆಕೆ ಪಾಸು ಗಟ್ಟಿಗೆಯನುಟ್ಟಳಿನಿ ನೀ ಪರಿಯಾಣಪೀಠವನಿರಿಸು (ಆನಂಚ. ೫–೫೪). [ಪರಿಯಾಣ$_1$ + ಪೀಠ]

ಪರಿಯಾಸ (ನಾ). ಸಂಚಾರ ; ತಿರುಗಾಟ. [ಸಂ.]

ಪರಿಯಾಪ್ತ (ನಾ). ಸಾಕಷ್ಟಾದುದು : ಭವಭಯಸಾಗರಕೆ ತನ್ನಂಘ್ರಿಕಮಲಪರಾಗಚಿಂತಾಪೋತವೇ ಪರಿಯಾಪ್ತವು (ನಿಭಾಗ. ೧೦–೨೫–೩೪). [<ಸಂ. ಪರ್ಯಾಪ್ತ]

ಪರಿಯಾಪ್ತಿ (ನಾ). ಸಂತೃಪ್ತಿ ; ತುಷ್ಟಿ : ಎನಗೆ ನಿಮ್ಮಡಿಗಳ ಕೃಪಾಲೋಕನವೇ ಪರಿಯಾಪ್ತಿ (ಕುಮಾಅ. ೬–೨೬). [<ಸಂ. ಪರ್ಯಾಪ್ತಿ]

ಪರಿಯಾಯ (ನಾ). ೧. ಅನುಕ್ರಮ ; ಸರದಿ ; ಪರಿವಿಡಿ : "ಅನುಪಾತ್ಯಂಗಮುಂ . . . ಪರಿಯಾಯಮನುಗತಿ ವಿಶಾಯಮೆನಲು ಸುಪರಿವಿಡಿಯೆನಿಕು" (ಪಂಗರಾ. ೧೩೦–೧೯) ; ಪರದೇಶಮಂಡಲವನಿರವನೊಂದನೆ ಮಾಡಿ ಪರಿಯಾಯಪರೀಕ್ಷೆಯನೊರೆದು ನೋಡುತ್ತ (ಚನ್ನಪ. ಕ. ೪೪೬–೯೪೬) ; ಮಾಯದಧಿರಂಜನೆಯ ರಚತೋಪಾಯದಲಿ ಗೋತ್ರಪ್ರವರಪರಿಯಾಯದಲಿ ಪದಕೆಟಗಿದರು ಪಾವನಪಶೋಧನನ (ತೊರರಾ. ೧–೫–೪೮). ೨. ರೀತಿ ; ಬಗೆ ; ಕ್ರಮ : ಗುರು ಲಿಂಗ ಜಂಗಮಕ್ಕೆ ವಾಸೋಹದ ಮಾಡುವ ಭಕ್ತನ ಪರಿಯಾಯವ ನೋಡಿರಯ್ಯಾ (ಸರ್ವಪ. ೧೪೬–೭೧೪). ೩. ಬದಲು ; ವ್ಯತಿರಿಕ್ತತೆ : ಕಣ್ಣಾರೆ ಕಂಡುದಕೆ ಪರಿಯಾಯವೇ ಕುಟಲೆ (ಕೊಟ್ಟೂಬ. ೯–೧೧). ೪. ಬದಲಿ ರೂಪ,— ಆಕಾರ ; ಪರ್ಯಾಯರೂಪ : ಬಯಲ ರೂಪಿನ ವಸ್ತು ಜೀವವದಕೆ ಗುಣನಿಯತದಿಂದಱುವು ಕಾಣ್ಕೆಗಳು ಸಯಗೆಟ್ಟ ನರಸುರರಾದಿಯಾದಾಕಾರ ಚಯಗಳದಱ ಪರಿಯಾಯ (ಭರತೇ. ೬೬–೧೨೩). [<ಸಂ. ಪರ್ಯಾಯ]

ಪರಿಯಾರ, ಪರಿಯರ (ನಾ). ತೆರಿಗೆಯಿಂದ ವಿನಾಯಿತಿ; ಕಂದಾಯ ಕೊಡುವುದರಲ್ಲಿ ರಿಯಾಯಿತಿ : ಭೂತಶರ್ಮ್ಮಗ್ಗೆ ತಾಲಿಗ್ಗಾಮೆ ಸರ್ವ ಪರಿಯಾರ ಪರಿಗ್ರಹದಿನ್ತು ಪಾಣಿಗ್ರಹಣಂ ಕೆಯ್ದು ಕೊಟ್ಟಾರ್ (ಮೈಅರಿ. ೧೯೪೧, ೧–೩೨ ; 643 ?) ; ಕಾದು ರಣಸಾಗರನ್ನರಿಯಾರಂ ಕೊಟ್ಟೆನ್ (ಸೌಇಇ. IX–i, ೩೯೨–೫ ; 8ನೆಯ ಶತ) ; ಪರಿಯಾರಮಾನ್ಯೆಡಿಸಿದೊನ್ನ ಇಮ್ಮಹಾಪಾತಕನಕ್ಕೆ (ಎಕ. XIV, ತಿರುಮ. ೨೫೩–೮ ; ಸು. 800) ; ಆರ ಮಣ್ಣಲ್ಲ ಪರಿಯಾರ ಇಲ್ಲ ಕೊಡಂಗೆಯಿಲ್ಲ (ಸೌಇಇ. IX–i, ೨೪–೫೦ ; 936). **ಪರಿಯರ :** ಮೊಜಡಿಯ ಮೊದಲೊಳ್ಕೊಟ್ಟೂರ್ತ್ತೀಶ್ವರಿಯರ ಮಾಳ್ವುದೆನ್ನು ಕೇರಿ ಸಮಸ್ತಂ ಕೆಜೆಗೆ ಪದಿನೇಟು ಮತ್ತರ್ (ಕಇ. II, ೪–೧೫ ; 918) ; ಮಾನ್ಯಕಾಜ ಮೂಱು ತ್ರಾಜೆಗೆ ಪರಿಯರ ಗದ್ಯಾಣವನ್ತಿಱುವರ್ (ಸೌಇಇ. IX–i, ೬೬–೨೯ ; 992) ; ಒಸೆದಿತ್ತರ್ಮ್ಮಾಜನಮಿಾ ಬಸದಿಯ ಸೂಳೆಗೆ ವಿಶೇಷದಿಂ ಪರಿಯರಮ್ಮಂದನತುದೆಱಮ್ಮಂದಿ ಕರವಡವಿನಿವಾಕೂಳ್ಳಾಳ[ಗ್ಗೆ]ಯ್ದು ತಳಭೋಗವಿವ (ಸೌಇಇ. XI–i, ೫೨–೬೬ ; 1007). [<ಸಂ. ಪರಿಹಾರ]

ಪರಿಯಾರವಿಡು (ಕ್ರಿ). ತೆರಿಗೆಯಲ್ಲಿ ವಿನಾಯಿತಿಯನ್ನು ತೋರಿಸು ; ಕಂದಾಯದಲ್ಲಿ ರಿಯಾಯಿತಿ ಕೊಡು : ತೋಟಮುಮಣ್ಣುಮ ಪಟೀಯ ಬಟ್ಟನ್ತೆ ಪರಿಯಾರವಿಟ್ಟಮ್ (ಎಕ. IV, ಎಡತೊ. ೬೦–೮೨ ; ಸು. 890). [ಪರಿಯಾರ + ಇಡು$_1$]

ಪರಿಯಿಡು, ಹರಿಯಿಡು (ಕ್ರಿ). ೧. ವೇಗವಾಗಿ ಹೋಗು,— ಧಾವಿಸು ; ಮುನ್ನುಗ್ಗು : ಜವಂಗಿಡಿಸಲಾ ಜವನಂ ಪರಿಯಿಟ್ಟು ಮುತ್ತಿದಂ (ಪಂರಾಮಾ. ೧೦–೧೬೨) ; ದಿವಿಜರಾಜನಿಂದೆನಗೆ ರಾಜರಾಜಾಧಿಶೇಕಮಂ ಮೆಱೆಯಿಸುವೆನಲ್ಲಿಗೀಗಳ್ ಪರಿಯಿಡುವೆನೆಂದು ತನ್ನೊಳ್ ನಿಶ್ಚಯಿಸಿ (ಜಗವಿ. ೮–೭೮ವ) ; ಭರದಿನರಮನೆಗೆ ಪರಿಯಿಟ್ಟು ಕಟ್ಟದಾನೆಗಳ ದಂತಕಾಂತಿಯಂ ಕಿಟ್ಟು ಕಳೆದುಂ (ಪರ್ಧಾಪು. ೬–೩೨); ಕೆಲರತಿವೇಗದಿಂದ ಪರಿಯಿಟ್ಟು ಕೆಲರ್ ನಡೆತಂದು ಮಂಟಪಸ್ಥಳದ ವಿಶಿಷ್ಟವಿಷ್ಟರದೊಳಿರ್ದುದು ರಾಜಿತರಾಜಸಂಕುಳಂ (ನಳಚಂ. ೩೦೮) ; ಭರದಿಂ ಚತುರಂಗಬಲಂ ಬೆರಸಧಟಿಂದುರ್ಬಿ ಕೊರ್ಬಿ ಪರಿಯಿಟ್ಟಾಗಳ್ ಧರೆ ಕಂಪಿಸೆ ಕಲಿಕಾಮನ ಪುರಮಂ ಮುಳಿಸಿಂದೆ ಮುತ್ತಿದಂ ಗಿರಿಶಸುತಂ (ತ್ರಿಪುವಿ. ೫–೭) ; ಪೊದಳ್ದು ಪಾಯ್ದು ಪರಿಯಿಟ್ಟುದು ವಾಯುರಯಂ ಹಯದ್ವಯಂ (ರಾಜಶೇ. ೧೩–೯೧). ೨. ಪ್ರವಹಿಸು ; ಹರಿ : ಅಶ್ರುಪ್ರವಾಹಂ ಪರಿಯಿಡೆ ಪುಳಕಂ ಪೊಣ್ಕೆ (ರಕ್ಷಾಶ. ೬೦) ; ಬೆಮರ್ ಕರಂ ಪರಿಯಿಡೆ ಗದ್ಗದಂ ಸುಳಿಗೊಳುತ್ತಿರೆ (ಪಂಸಾಶ. ೬). ೩. ಧಾಳಿ ಮಾಡು ; ಮುತ್ತಿಗೆ ಹಾಕು ; ದಂಡೆತ್ತಿ ಹೋಗು : ಪರಿಯಿಟ್ಟೇ ಬಪ್ಪನೇ ಬಪ್ಪನೆ ಕಡುಮುಳಿಸಿಂ ಗಂಗಪೆರ್ಮ್ಮಾಡಿರಾಯಂ ನಿರುತಂ ತಾನೆನ್ದು ಚೋಳಂ ಮದಮನುಡುಗಿದಂ (ಸೌಇಇ. IX–i, ೧೧೮–೧೮ ; 1057) ; ಮೂಜನೆಯ ದಿವಸದಂದು ಶತ್ರುಳ್ಳಂ ನಂದ್ಯಾವರ್ತಪುರಕ್ಕೆ ಪರಿಯಿಟ್ಟು ಪಲಂಭರರಸುಮಕ್ಕಳಂ ಕೊಂದು (ಪಂರಾಮಾ. ೮–೨೨೫) ; ಪರಬಳಮಂ ಪರಾಕ್ರಮಿಸಲೆಂದರೆ ಗೌಡನುದಗ್ರಕೋಪದಿಂ ಪರಿಯಿಡೆ (ಎಕ. XI, ಚತ್ರದು. ೧೩–೧೭ ; 1124 ?). **ಹರಿಯಿಡು :** ೧. ಮೇಪುಗಾಡಿಂ ಹಕ್ಕಿದಲೆಗೆ ಹರಿಯಿಡುವ ಹರಣೇಗಣದ ಕಡೆವಾಯೊಳರೆಮೆಲ್ದುಟಾದೆಳೆಗಱುಂಕೆಯೆಸಟ್ಟಳಂ ಸೆಳೆದು ತಂದಾ ಬಯಲೊಳ್ ಬಳ್ಳಿವಸಲೆಯಂ ಪೊಸಯಿಸಿಯುಂ (ಚಂಪ್ರಪು. ೮–೪ ವ). ೫. ಶ್ರೀಮತ್ತ್ರಿಭುವನಮಲ್ಲ ಪೊಯ್ಸಳ ಬಿಟ್ಟದೇವ ತಳಕಾಡ ಹರಿಯಿಟ್ಟಡೆ ಆದಿಯಮನಿದಿರಾನ್ತು ಕಾದಿ (ಮೈಅರಿ. ೧೯೩೪, ೧೨–೪ ; 1117) ; ಕವಿದ ವಿದ್ಯಾಮದೋತ್ಸಾಟನಕ್ಕೆ ಹರಿಯಿಡುವ ಬಲವೋ (ಸಿದ್ಧರಾ. ೨–೪೦). [ಪರಿ$_3$ + ಇಡು$_1$]

ಪರಿಯಿಸು, ಪರಿಸು, ಹರಿಯಿಸು, ಹರಿಸು$_2$ (ಕ್ರಿ). ೧. ಓಡುವಂತೆ ಮಾಡು ; ಓಡಿಸು ; ನುಗ್ಗಿಸು : ತದ್ರಥಮಂ ಹರಿ ವಾಯುವೇಗದಿಂ ಪರಿಯಿಸೆ ತಾಗಿದಂ ಹರಿಗನಂಕದ ಪೊಂಕದ ಸುಪ್ರತೀಕಮಂ (ಪಂಪಭಾ. ೧೧–೭೬) ; ನರಪತಿ ತೈಲಪಂ ಬೆಸಸೆ ಭೂರ್ಜರಸೇನೆಗೆ ಸೂಚಿಯಾನೆಯಂ

ಪರಿಯಿಸಿ ಗೆಲ್ದಂ (ಗದಾಯು. ೨-೪೭); ತನ್ನ ರಥಮಂ ಲಂಕೇಶ್ವರ ನಿರ್ದೊಡ್ಡಣದತ್ತಲ್ ಪರಿಯಿಸಿದನಿದೇಂ ಪ್ರತಾಪಿಯೋ ಪವನಸುತಂ (ಪಂರಾಮಾ. ೧೩-೧೨೬); ಪರಿಯಿಸೆ ಕೀಱ್ ಪಾಯ್ದ ರಥಯೂಥ ರಥಾಂಗದ ನೇಮಿಘಾತದಿಂ ಧರಣಿ ಸುರುಳ್ದು ಕಂಪಿಸೆ (ಶಾಂತೀಶ್ವ.೮-೭೮); ಪರ್ಬಾವು . . . ಬಂಡಿಯನು ಪರಿಯಿಸೆ ಪೊಲಸಿಕ್ಕಡಿಯೊದುದು (ಸಾಳ್ವಭಾ. ೨೦-೮೩). ೨. ಹರಿಯುವಂತೆ ಮಾಡು; ಪ್ರವಹಿಸುವಂತೆ ಮಾಡು: ಮೊಗೆಯಲ್ ಕೊಡಗೊಂಡು ತಿರ್ದಿ ಬಚ್ಚಲನೆಲೆದೋಂಟ ದೊಳ್ ಪರಿಯಿಸಲ್ . . . ಬಗೆದುದಂದು ಜನಂ ಘನಚಂದ್ರಿಕಾಂಬುವಂ (ಅಜಿಪು. ೬-೪೫); ಅಮೃತಾರ್ಣವಮನೆ ಮೇರುವಿನ ಮೇಖಳಾವನಕೆ ತಿರ್ದಿ ಪರಿಯಿಸಲಿಂದ್ರಂ ಸಮುದೇರಿವೊಲ್ (ಪುಷ್ಪಪು. ೧೧-೯); ಮಸಿಗತ್ತಲೆಯ ಕೊಳದ ಕಟ್ಟನೊಡೆಯುತ್ತೆ ಕರ್ಬೊನಲ ಪರಿಯಿಸುವಂತೆ ತುರುಬು ಸಡಿಲಿಸಿ ಬೀಸಿದಳ್ ಕೇಶಪಾಶಮಂ (ಚಿತ್ರಾಂಗ. ೩೩-೪೯೭). **ಪರಿಸು**$_1$: ೧. ಸಿರಿಯೊಡೆಯಂ ಕೀಬ್ಬಾಳಾಗಿರಲರಿವನೆ ಪರಿಸುತಂ ಕಿರೀಟಿಯ ರಥಮಂ (ಸಮಪ. ೮-೧೪೪); ಕಮಲಾಸನಂ ಹಂಸೆಯಂ ಕಮಲಾಂಬಕಂ ಬೇಗದಿಂ ಗರುಡನ ಒತ್ತರಿಪ ಸಕಲ ಸಂರಂಭದಿಂದೇಱ್ ಪರಿಸುತ್ತಿರಲ್ (ಚಿಬಪು. ೧೬-೧೬); ಹರಿಹಯನಶ್ವದಂದದ ತೇಜಿಗಳನೇಱ ನೆಱ್ ತೊಲಗುಭಯಬೀಧಿಗಳ ಪರಿಸುವ ಬಿರುದಿನ ರಾಯರಾವುತರ ಸಿಂಗರವಾಂತ ಕೇರಿಯೊಪ್ಪಿಹುವು (ಕಂನವಿ. ೬-೫೮). ೨. ಪರಿಸುಗುಮಿಲ್ಲಿ ಭೋಗ್ಯರೆವೆ ನೆತ್ತರ ಪೆರ್ವೊನಲಂ (ಧರ್ಮಾಮೃ. ೪-೨೩೬); ಇಳೆಯನೀರಡಿಮಾಡಿದ ಪಾದ ಜತನ ಬಾಂಬೊಳೆಯ ಪರಿಸಿದಂಘ್ರಿ ಜತನ (ನೋಕಥ. ೧೪-೧೯); ರಕ್ತದ ಬಲುಗಾಲುವೆಯ ಪರಿಸಿದರು (ಕಂನವಿ. ೧೫-೫೪). ೩. ಚಲಿಸುವಂತೆ ಮಾಡು; ಹೋಗುವಂತೆ ಮಾಡು; ನಡೆಯಿಸು; ಕಳುಹಿಸು: (ಕ). **ಹರಿಯಿಸು**: ೧. ಹರಿ ರಥಮಂ ಹರಿಯಿಸುತುಂ ತೆರಳ್ಚಿ ತತ್ತಮನೆ ಪೇಳ್ದು ಗಡ ಕಾದಿಸಿದಂ (ಸಮಪ. ೧೦-೧೬೨); ಆನೆಯಂ ಮಗುರ್ಚ ××× ಹರಿಯಿಸಿ ಕಾದಿ ಮೇಲಾಳ್ಪರ್ರ ಕೊಂಡು . . . ಜೋಳವಾಳಿಯ ನೆಱೆದ ದಾಸಿ (ಮೈಅರಿ. ೧೯೩೪, ೧೨-೬; 1117). ೪. ಕಳೆ; ಇಲ್ಲವಾಗಿಸು; ನಿವಾರಿಸು: ಪಿಂತಾದ ದುಸ್ಸಹಾವಸ್ಥಾಂತರ ಸಂತತಿಯನಾಗಳನುಭವಿಸುತಮಿರ್ಪಂತಿರ್ದಳ ಚೈತನ್ಯಮನಂತಾಗಳೆ ಹರಿಯಿಸಿತ್ತು ಮೂರ್ಛಾವೇಗಂ (ಕಾದಂಪು. ೯೨೮); ನೆಗಟ್ಟಳಿಮಂ ಹರಿಯಿಪೆನೆಂಬರ್ತಿಯಿಂದಮಿಲ್ಲಿಗೆ ವಂದೆಂ (ಧರ್ಮಾಮೃ. ೬-೩೦); ಪರಧನಹರಣನ ಹರಣಮಂ ಹರಿಯಿಪ ಪರಿಣತೆಯನುರವಣಿಸಿ ಬೆನ್ನೊಳೆ ಪರಿದು (ವರ್ಧಪು. ೨-೪೮ ವ). ೫. ತಿರುಗಿಸು; ಹೊರಳಿಸು: ಅಲ್ಲಿಂದ ಎಡಕ್ಕೆ ನಮ್ಮ ಕಣ್ಣನ್ನು ಹರಿಯಿಸಿದರೆ ಮತ್ತೊಂದು ಸುಂದರ ತಾರಾಗುಚ್ಛವು ಕಂಗೊಳಿಸುತ್ತದೆ (ನಕ್ಷತ್ರ. ೮); ಪಾತ್ರೆಗಳ ಮತ್ತು ಇತರ ಸಲಕರಣೆಗಳ ಕಡೆಗೆ ಗಮನ ಹರಿಯಿಸಬೇಕು (ಅಡುಸೌ. ೩೨). **ಹರಿಸು**$_2$: ೧. ಕಳ್ಳರು ಕದ್ದು ಹರಿಸೆ ಹರಿಗಾಡಿನೊಳು ಪಶುನಿಚಯವಂ (ಸಾಸಂಚಿ. ೩-೧೫೫); ಬಹಳಮದಗಂಧೇಭಮಂ ನಿಗ್ರಹಿಸುವನ ಮೇಲಕೆ ಹರಿಸಿ ನಿಗ್ರಹಿಸಿ ಕೊಲ್ಲು (ಬಸಪು. ೨೧-೩೮); ಧರ್ಮಜನೆಲ್ಲಿ ಮೋಹರದೆಗೆನತ್ತಲೆ ರಥವ ಹರಿಸು (ಕುವ್ಯಾದ್ರೋ. ೨-೩೦); ಹರಿಸಿದಂ ಬೇಗದಿಂ ಮಣಿವರೂಥಮಂ ಕೆಲಬಲದ ಮನ್ನೆಯರ ಗಡಣದಿಂದೆ (ಜೈಮಿಭಾ. ೪-೨೭). ೨. ಲೋಚನತಪ್ತವಾರಿಯನು ಭೂಚಕ್ರದೊಳು ಹರಿಸುವ ದುಃಖಿಯ ಕಂಡು (ನೋಕಥ. ೧೦-೧೪). ೩. ಬರಪಾರದೆ ದೂದವಿಯರ ಹರಿಸದೆ . . . ಮನವೊಲ್ದಾಗಳ್ ನೆರೆಯಲ್ ದೊರೆಕೊಳ್ವ ರತಮೆ ಸಂಕಲ್ಪರತಂ (ಕಾದಂಉ. ೩೧೮); ಬೇಹ ಹರಿಸಿದರಖಿಳ ದೆಸೆದೆಸೆಗೆ (ಕುವ್ಯಾದ್ರೋ. ೮-೪೪); ಹರಿಸುತಂ ತನ್ನ ಮೋಹರವನಿಂತೈದೆ . . . ವರೂಥಮಂ ಹರಿಸುತಂತಾ ಬಭ್ರುವಾಹನಂ ಪಾತಿಯಂ ಕೈಕೊಂಡು ಕಣಗಱೆಯಂತೆ (ಜೈಮಿಭಾ. ೨೨-೨೫). ೪. ತಪದೊಳಾದ ಕಡುಚೆಲ್ವಿಂದಂ ತಾಂ ಸಂದಳಮಂ ಹರಿಸಿ ದಿಟಂ ಸುರಗತಿವಡೆದು ಭೋಗಿಪುದು ತತ್ಫಲಮಂ (ಧರ್ಮಾಮೃ. ೬-೩೨); ಹರಿಯ ಮದವಂ ಹರಿಸುವಂ ಗಡ (ಬಸಪು. ೨೩-೨೨); ಮಾಸವಾಜಿಕ್ಕಾತನಂಗದ ದೋಷ ಹರಿಸಲು ಬಳಿಕ ರಾಜ್ಯಮಹೀಶ ಮಾಡಿದನಖಿಳಭಾರತವಂಶಮಧ್ಯದಲಿ (ಸಂಭಪ. ಪರಿ. ೩೧೩-೪೪); ಎನ್ನ ತಾಪತ್ರಯಂಗಳಂ ಹರಿಸಿ ರಕ್ಷಿಸು (ಚಿಬಪು. ೧-೧); ಹರಿಸಲಪ್ಪುದೆ ನರರು ಮತ್ಸರಿಯ ಸಂಕಟವ? (ಮಂಕುಶಿ. ೨೦೧). ೫. ದ್ರಾವಿಡ ಭಾಷೆಗಳ ಕಡೆಗೆ ಒಂದು ತೌಲನಿಕ ದೃಷ್ಟಿಯನ್ನು ಕನ್ನಡ ಕವಿಗಳೂ ವಿದ್ವಾಂಸರೂ ಹರಿಸಲಿಲ್ಲ (ದ್ರಾವಿವಿ. ೧೩ ಹಿನ್ನೆಲೆ). ೬. ತೀರಿಸು; ಮುಟ್ಟಿಸು: ಅದರೆನ್ನ ಸಾಲವನ್ನು ಹರಿಸಲೊಂದುಪಾಯವುಂಟು (ದೇವೀಚೌ. ೧೨೭). [ಪರಿ$_2$ + –ಇಸು$_3$]

ಪರಿಯುಕ್ತ (ಗು). ಸೇರಿದ; ಕೂಡಿದ: ಪರಿಯುಕ್ತವಜ್ರಿಯಿಂ ಸುರಪುರದಂತೆ ವಿಭೂತಿಕೋಭೆಯಿಂದಾ ದಿವಿಜೇಶ್ವರನಂತೆ ಕಜ್ಜನಂದಚ್ಚರಿವೆತ್ತುದು ಸೊತಕಾನಿವಾಸದ್ವಾರಂ (ಕುಸುಮಾ. ೬-೭೩). [ಸಂ.]

ಪರಿಯುಡುಗು (ಕ್ರಿ). ಪ್ರವಹಿಸುವುದು ನಿಲ್ಲು; ಹರಿಯುವುದು ನಿಂತು ಹೋಗು: ಜಿನನಂ ಶಿರದೊಳ್ಸಲೆ ತಾಳ್ಗಿ ದಾನಚಿಂತಾಮಣಿ ನಿರ್ಝರಗೋದಾವರಿಯಂ ಪುಗೆ ಪರಿಯುಡುಗಿದುದು (ಸೌಇಇ. IX-i, ೫೨-೨೧; 1007); ಪೆರ್ವೊಳೆ ಪ[ಪಾತಾಂ. ಪಿ]ರಿಯುಡುಗದ ಸಿರಿಯನೊಳ ಕೊಂಡು ಭೂಮಂಡಳಕ್ಕೆ ಮಂಡನಮೆನಿಸಿ ರಂಜಿಸಿರ್ಪುದು (ರಾಜಶೇ. ೬-೨೪ ವ). [ಪರಿ$_3$ + ಉಡುಗು$_1$]

ಪರಿಯೋಗ (ನಾ). ೧. ಚೆನ್ನಾಗಿ ಸೇರುವುದು: 'ಪರಿಯೋಗಿಸು' ಪರಾ. ೨. ಚುಚ್ಚುಮಾತನ್ನಾಡುವುದು; ಕೊಂಕುನುಡಿ: "ಪರಿಯೋಗಮದುಪಾಲಂಭಮೆನೆ ಚುನ್ನವಾಡಿ ಬೆಸಗೊಂಬುದಕೆ ಪೆಸರೆನಿಕ್ಕುಂ" (ಮಂಗರಾ. ೨೭-೭). [ಸಂ.]

ಪರಿಯೋಗಿಸು (ಕ್ರಿ). ಚೆನ್ನಾಗಿ ಸೇರಿಸು,—ಕೂಡಿಸು: ಪೂಗಣಿಯವನ ಕಿಚ್ಚು ನೂರ್ಮಡಿಯಾಗಿ ಮುಂದೆಯುಪಾಯವಂ ಪರಿಯೋಗಿಸುವುದು (ಬಸಪು. ೪೫-೩). [ಪರಿಯೋಗ + –ಇಸು$_3$]

ಪರಿರಂಜಿತ (ಗು). ಬಹಳವಾಗಿ ಪ್ರಕಾಶಿಸುವ,—ಶೋಭಿಸುವ: ಶ್ರೀಸ್ತನಸುಕುಂಕುಮರಜಸ್ತತಿವಿಲೇಪನಗಭಸ್ತಿಪರಿರಂಜಿತ ನಿಜೋನ್ನತವಿಶಾಲೋರಸ್ಥಲಪರಿಸ್ಫುರಿತಕೌಸ್ತುಭವಿಭೂಷಣರುಚಿಸ್ತಬಕಿತಾಖಿಳನಭಂ . . . ಎಸೆದಂ ಫಣಿಪತಲ್ಪಂ(ಜಗವಿ. ೧-೫೦). [ಸಂ.]

ಪರಿರಂಜಿಸು (ಕ್ರಿ). ೧. ಅತಿಶಯವಾಗಿ ಶೋಭಿಸು: ಸಂಜೆ ಪರಂಜಿಸುತಿರ್ದುದಪೂರ್ವಶೋಭೆಯಿಂ (ಪುಷ್ಪಪು. ೮-೯೮); ಲವಣಾಂಬುಧಿ ಚೆಲ್ದಂಬೆತ್ತುದು ಭೂಮಂಡಲಮೆಂಬಿಂದುವನೊತ್ತಿ ಬಳಸಿ ಪರಿರಂಜಿಪ ಪರಿವೇಷಂ ತಾನೆಂಬಂತೆ (ಜಯಕಾ. ೧-೨೯); ತೆರೆವೊಯ್ಲಿಂ ಕಂಪಿಸದಱ ಪಡಿನೆಳಲ್ ಪರಿರಂಜಿಸೆಯುಂ(ರಾಜಶೇ. ೬-೨೪ ವ). ೨. ಅಧಿಕವಾಗಿ ಆನಂದವನ್ನುಂಟು ಮಾಡು,—ಆಹ್ಲಾದಕರವಾಗಿರು: ಪರಿರಂಜಿಸುತಿರ್ದುದನುರಾಗಮೆಂಬ ಬೆಳೆಸಿರಿ ಬೆಡಂಗಂ ಬೀಱಲು (ಸೌಂದಪು. ೧೪-೬). [ಪರಿ$_4$ + ರಂಜಿಸು]

ಪರಿರಂಭ (ನಾ). ೧. ಅಪ್ಪುಗೆ; ಆಲಿಂಗನ: ಅಂತು ಸದ್ಮಸ್ಸಂತಾಪಿತ ಲೋಕಪುತ್ರಿಕಾಪರಿರಂಭಸಂಭವಪ್ಲೋಷಗಲಜ್ಜಾಂಗಲ . . . ಸಾಕ್ರಂದತ್ಸ್ವರಪರಿಗತರ್ ಸೈರಿಸಲಾಱದೆ ತಡದಡಿಸಿ ಪರಿತಂದು (ಅಪಿಪು. ೫-೮೬ ವ); ಮಾರುತಿ ಮುಂಕುಳಿತಹಸ್ತಾಂಬುಜಂ ವೀರಲಕ್ಷ್ಮೀಪರಿರಂಭೋತ್ಸಾಹದಿಂದಾ ಬೆಸನನತಿಬಳಂ ತಂದೆಯಂ ಬೇಡಿಕೊಂಡಂ (ಪಂರಾಮಾ. ೧೦-೨೧೩); ಮೇಳದ ಚಡುರಂತುಟೊಂದು ಪರಿರಂಭದ ಸಂಭ್ರಮಮಂತುಟೊಂದು ಕೂಟದ ಪರಿ ಸತ್ಯಭಾಮೆಯೊಡಗೂಡೆ ಮುರಾರಿಗೆ ಕೂಡಿತುತ್ಸವಂ

(ಜಗಿ. ೧೧-೫೬). ೨. ಸಂರಂಭ; ಸಂಭ್ರಮ; ಸಡಗರ: ಭರತಾಗ್ರಜಗೆ ಯೌವರಾಜ್ಯಾಧಿಪತ್ಯಮಂ ವಿರಚಿಪೊಡೆ ಭೂಸುರರ ಬಾಂಧವರ ಬೆಸಗೊಳಲು ಹರುಷದಿಂದೆಲ್ಲರುತ್ತರಮಿತ್ತ ಪರಿರಂಭ ಚಿತ್ತಕ್ಕೆ ವಿದಿತಮಲ್ತೆ (ವೆಂಕಾರಾ. ೨-೧-೩೮). [ಸಂ.]

ಪರಿರಂಭಂಗೆಯ್ (ಕ್ರಿ). ಅಪ್ಪು; ಆಲಿಂಗಿಸು: ತದ್ವಾಗ್ವಧುವಂ ಪರಿರಂಭಂಗೆಯ್ದೊರ್ಮ ವಿರಿಂಚಿ (ತ್ರಿಪುವಿ. ೯-೪೧). [ಪರಿರಂಭ + ಕೆಯ್$_1$]

ಪರಿರಂಭಣ (ನಾ). = ಪರಿರಂಭ ೧: "ಆಲಿಂಗನಂ, ಉಪಗೂಹನಂ, ಪರಿರಂಭಣಂ . . . ಕ್ರೋಡೀಕರಣಂ-ಈ ೭ ಅಪ್ಪಿಕೊಳುಹ" (ಹಲಾಯು. ೯೩-೪೧೪); ನಿಜಭುಜವಿಜಯಲಕ್ಷ್ಮೀಪರಿರಂಭಣಪ್ರಕಟನದಕ್ಷದಕ್ಷಿಣವಿಷಾಣ ವಿನ್ಯಸ್ತಹಸ್ತಮುಂ (ಅಪಿಪು. ೧೪-೯೦ ಪ); ಜೀವಂ ನಿನ್ನಯ ಪರಿರಂಭಣದೆ ಬಂದುದಲ್ತೆ (ಕಾದಂಉ. ೭೮೯); ಪರಿರಂಭಣಂ ಚುಂಬನಂ . . . ಪ್ರಹರಣಂಗಳು ರತಿಪ್ರಾರಂಭದೊಳು ಪಸರಿಸೆ (ಹಚಕಾ. ೪-೩೫). [ಸಂ.]

ಪರಿರಂಭಣಂಗೆಯ್(ಕ್ರಿ). = ಪರಿರಂಭಂಗೆಯ್: ಉರದೊಳೆಳೆಮುತ್ತಿ ನೊಚ್ಚರವನೆಳಲಿಡುವಂತೆ ಪರಿರಂಭಣಂಗೆಯ್ದು (ಸೌಂದಪು. ೧೪-೪); ಪರಿರಿ ಮುದದಿಂ ಗಾಢಪರಿರಂಭಣಂಗೆಯ್ದು ಮುತ್ತಿನೊಚ್ಚರವನ ಪಿರಿಯುರದೊಳಿಟ್ಟೊಡನೆ . . . ಪೋದಳು (ರಾಘಚಿ. ೧೭-೭೧).

[ಪರಿರಂಭಣ+ಕೆಯ್$_1$]

ಪರಿರಂಭಿಸು (ಕ್ರಿ). ಅಪ್ಪಿಕೊಳ್ಳು; ಆಲಿಂಗಿಸು: ಕೃಪಾವಾರ್ಧಿಯೊಳಾಳಿ ಮುಳುಂಗಿಸಿ ಪರಿರಂಭಿಸಿ ಮುದ್ದಿಸಿ ತುತಿಸೆ (ಉದ್ಧದೇ. ೭-೩೦).

[ಪರಿರಂಭಣ+-ಇಸು$_3$]

ಪರಿರಕ್ತ (ಗು). ಬಹಳ ಕೆಂಪಾಗಿರುವ: ಪರಿರಕ್ತದಿವಾಕರಭಾಸುರ ಬಿಂಬಮದಿಂಬುವಡೆದುದು (ರಾಜಶೇ. ೧೨-೩೧). [ಸಂ.]

ಪರಿರಕ್ಷ (ನಾ). ಗಮನ; ಕಾಳಜಿ; ನಿಗಾ: ಕೊಡುಗತ್ಯುತ್ತಮ ವಸ್ತ್ರಂ . . . ಪರಿರಕ್ಷಮಾಗೆ [ಪಾಠಾಂ. ಪರಿರಕ್ಷೆ ಮಾಡೆ] ವನಿತಾಸಂಗಕ್ಕೆ ಭೂಪಾಲಕಂ (ಮದಕಿ. ೮-೬೨). [ಸಂ.]

ಪರಿರಕ್ಷಕ (ನಾ). ೧. ಕಾಪಾಡುವವನು; ಸಂರಕ್ಷಕ: "ಶರಣಂ ಪರಿರಕ್ಷಕನುಂ" (ವಸ್ತುಕೋ. ೧೩೭-೧೧೬). ೨. ಕಾವಲುಗಾರ. [ಸಂ.]

ಪರಿರಕ್ಷಣ (ನಾ). ೧. ಚೆನ್ನಾಗಿ ಸಲಹುವಿಕೆ,—ಕಾಪಾಡುವಿಕೆ: ವ್ರತಪರಿರಕ್ಷಣಂ ಶೀಲಂ ಸಾಕಾರ ನಿರಾಕಾರ ವಿರಹಿತಮುಪವಾಸಂ (ಶಾಂತಿಪು. ೬-೪೯ ಪ); ಭಾರತಸಂವಿಧಾನದ ಮತ್ತು ವಿಧಿಯ ಪರಿರಕ್ಷಣ, ಸಂರಕ್ಷಣ ಮತ್ತು ಪ್ರತಿರಕ್ಷಣ ಮಾಡುತ್ತೇನೆಂದೂ . . . ಪ್ರತಿಜ್ಞೆ ಮಾಡುತ್ತೇನೆ (ಭಾಧಾಸ. ೩೦). ೨. ಹಾದಿ ಕಾಯುವುದು; ಪ್ರತೀಕ್ಷೆ. [ಸಂ.]

ಪರಿರಕ್ಷಿಸು (ಕ್ರಿ). ಕಾಪಾಡು; ಸಲಹು; ಪಾಲನೆ ಮಾಡು: ದುರ್ಗಸಿಂಹನನತುಲಪ್ರತಾಪಪರನಂ ಪರಿರಕ್ಷಿಸುತಿರ್ಕನಾರತಂ (ಪಂಚತಂ. ೨-೨೨); ಪರಿರಕ್ಷಿಸದೀ ಸ್ಥಾನಕ್ಕೆರಡಂ ಬಗೆದಳಿದವಂಗೆ . . . ಸಾಪಂ ಸಾಗರ್ಮಂ (ಎಇ. XXVIII, ೫-೬೩; 1962); ಪರಿರಕ್ಷಿಸಿ ದೇವೇಂದ್ರನ ಶರಧಿ ಶರಾಸನ ತನುತ್ರತತಿಯಂ . . . ದುರ್ಲಂಘ್ಯಪುರದೊಳತಿಬಲನಿರ್ದಂ (ಪಂಂಪಾಮಾ. ೧೦-೧೮೫); ಸತ್ಪಥದೊಳ್ಬರಿಯಿಸುವಲಘುಗುಣಪ್ರಾಭೇಂದುಪದಂ ನಮ್ಮಂ ಪರಿರಕ್ಷಿಸುಗೆ (ಜಯಕಾ. ೧-೯). [ಪರಿರಕ್ಷಣ + -ಇಸು$_3$]

ಪರಿರಚಿಸು (ಕ್ರಿ). ೧. ಉಂಟುಮಾಡು ಮುರಹರಂ ತನ್ನ ನೇಹದ ಪಿರಿಯ ಕರಿಯನತಿಭರದಿಂದೆ ಪಿಡಿದ ಮೊಸಳೆಯ ಕೂಡೆ ಸಾಸದಿಂ ಪರಿರಚಿಸಿ ಯುದ್ಧಮಂ ತಪ್ಪುದು (ಸೌಂದಪು. ೧೭-೭೫). ೨. ಅಲಂಕರಿಸು (?): ಉಚಿತದಲಿ ನಿಮ್ಮಡಿಗಳನು ಪರಿರಚಿಸಲಾವೋಲ್ಮೆಸುವೆವು (ಕುಮ್ಯಾಕ. ೬-೫).

[ಪರಿ-$_4$ + ರಚಿಸು]

ಪರಿರಮಿಸು (ಕ್ರಿ). ಕ್ರೀಡಿಸು; ಭೋಗಿಸು: ಸೌಂದರದಚ್ಛಜವ್ವನೆಯರೊಳು ಪರಿರಮಿಸುವನಿಗೆ ಮುಪ್ಪುಂಟೆ (ಭರಚಿ. ೭೬-೧೨).

[ಪರಿ-$_4$ + ರಮಿಸು]

ಪರಿರಾಜಿಸು (ಕ್ರಿ). ಪ್ರಕಾಶಿಸು; ಶೋಭಿಸು; ಒಪ್ಪು: ನಡುವಿರುಳು ನವಿರಿದಿರೆದ್ದು ತನುವಿನೊಳು ಪರಿರಾಜಿಸಲು (ರಾಘಚಿ. ೧೭-೬೪).

[ಪರಿ-$_4$ + ರಾಜಿಸು]

ಪರಿರುಂದ್ರ (ನಾ). ಬಹು ದೊಡ್ಡದು; ಮಹತ್ತಾದುದು: ಪರಿರುಂದ್ರಂ ಭೂತಿಸಾಂದ್ರಂ ಕುಡುಗೆಮಗೆ ವಿತಂದ್ರತ್ವಮಂ ಶ್ರೀವೃಷೇಂದ್ರಂ (ರಾಜಶೇ. ೧-೯). [ಸಂ.]

ಪರಿಲಂಬಿ (ಗು). ನೇಲುತ್ತಿರುವ; ತೂಗಾಡುವ: ವಿನೀಲಳನಾಳನ ಮನಳಜಿ ಪಱಂದುದು ಮುಕ್ತಾಜಾಲಪರಿಲಂಬಿಲೋಲದುಕೂಲಪತಾಕಾ ವಿರಾಜಮಾನವಿಮಾನಂ (ಅಪಿಪು. ೪-೮೫).

[ಸಂ. ಪರಿಲಂಬಿನ್]

ಪರಿಲಕ್ಷಿತ (ಗು). ಲೆಕ್ಕ ಮಾಡಿದ; ಎಣಿಕೆ ಮಾಡಿದ; ಪರಿಗಣಿತವಾದ: ಅತಿಶಿತಮೇಕಲಕ್ಷ ಪರಿಲಕ್ಷಿತಯೋಜನದುದ್ದಮಾಳ್ದು ನೀಳ್ದತಿಶಯ ಸಾಮವೇದಮದು ಗೋಪುರಮಾಗಿ ವಿರಾಜಿಕುಂ ಪಯಃಪತಿದಿಶೆಯೊಳ್ (ಶಬಕಾಂ. ೧-೬೭). [ಸಂ.]

ಪರಿಲಗ್ನ (ಗು). ಚೆನ್ನಾಗಿ ಸೇರಿದ,—ಕೂಡಿದ: ಅವನಿಪಜನಕ್ಕೆ ವಂಶಮನನ್ತಗುಣೋತ್ಕರದಿ ನೆನೆಯೆ ಜನನೀಕುಳವಂಶ[ವಿ]ಶ್ರಾನ್ತ ಪರಿಲಗ್ನ ಕೀರ್ತ್ತಿಯದೆನ್ತೆನೆ ವಿಮಳಾನ್ವಯಧಾಮಂ ಭೀಮ (ಕಇಅ. ೫೦-೪೧-೩೬; 11ನೆಯ ಶತ). [ಸಂ.]

ಪರಿಲಬ್ಧ (ಗು). ಗಳಿಸಿದ; ಹೊಂದಿದ; ಪಡೆದ: ಪರಿಲಬ್ಧಾಗಣ್ಯಪುಣ್ಯ ಪ್ರಚಯನುಪಚಿತ ಪ್ರಾಜ್ಯಸಾಮ್ರಾಜ್ಯರಾಗೋತ್ಕರಂ . . . ಒಪ್ಪಿರುತಿರ್ದಂ (ಶಾಂತೀಶ್ವ. ೪-೨೯೬). [ಸಂ.]

ಪರಿಲಿಪ್ತ (ನಾ). ಚೆನ್ನಾಗಿ ಸವರಿದುದು,—ಬಳಿಯಲ್ಪಟ್ಟುದು: ಪರಿಲಿಪ್ತಂ ಹರಿಚಂದನಂ ಹರಿಯ ಚಿತ್ತಾಹ್ಲಾದಮಂ ಮಾಡಿ ತಾಳ್ದಿರೆ ತನ್ನಾಮಮಂ (ಪಾರ್ಶ್ವಪು. ೧೪-೯೫). [ಸಂ.]

ಪರಿಲುಳಿತ, ಪರಿಲುಳಿತ (ಗು). ೧. ಪ್ರಕ್ಷುಬ್ಧವಾದ; ಕದಡಿದ; ಕಲಕಿದ. **ಪರಿಲುಳಿತ**: ೨. ಬೆರೆತ; ಕೂಡಿದ; ಮಿಶ್ರಿತವಾದ: ಕರದ ಬಸುಱನ ಹೊಯ್ಲ ಕಜ್ಜಳಪರಿಲುಳಿತ ನಯನಾಂಬುಗಳ ಕಾತರಪ ಕಮಲಾಕ್ಷಿಯರು ನೆರೆದುದು (ಕುಮ್ಯಾಗ. ೧೧-೧೫); ಶರಣಾಂಘ್ರಿನಖರ ದರ್ಪಣಮಂಜರುಚಿಯೊಳಗೆ ಪರಿಲುಳಿತಕಾಯನಾಗುತೆ ತೆಱಂಬೊಳೆವ ತಚ್ಛರಣಸಂತತಿಕೃಪಾಪಾತ್ರನಾಗುತ್ತೆ (ಅರಾಚಿ. ೧-೧-೭೪). ೩. ಸುರಿಯುತ್ತಿರುವ; ಹೊಮ್ಮುತ್ತಿರುವ: ಪರಿಲುಳಿತ [ಳ]ರ್ಮಜಲ ಮಂಜರಿ . . . ಇವಳ ರೋಮಮಂ ವಕ್ತ್ರಮಿದೆ ವಲಂ ಕನ್ನಡಿಕುಂ (ಕಾವ್ಯಾಸ. ೬೯೦); ನೃಪಕುಮಾರನ ಹೃದಯದಂತಸ್ಸಾರವನು ನಾರದನು ಕೇಳುತ್ತ ಹರುಷಜಲಪರಿಲುಳಿತ ನೇತ್ರದಲಿ ಸದಮಳನನಪ್ಪಿದನು (ಸಿಭಾಗ. ೪-೭-೧); ಭಕ್ತಿರಸಪರಿಲುಳಿತಸ್ವಾಂತಂ ಸ್ತುತಿಗೆಯ್ದುಂ ವಾಕ್ಶಾಂತಂ ಶ್ರೀ ವಿಷ್ಣುವಂ (ವಿಷು ಪು. ೫-೧-೩೯). [ಸಂ.]

ಪರಿಲುಳಿತ 'ಪರಿಲುಲಿತ' ನೋ.

ಪರಿಲೂನ (ಗು). ಕತ್ತರಿಸಿದ; ತುಂಡರಿಸಿದ: ಪರಿಲೂನದೈತ್ಯ ಪ್ರಸರಗಳನಾಳೀವಿನಿಸ್ಸೃತರುಧಿರಬಂಧುಗಳ . . . ತೊರೆಯೆ ತೊಂಗಲಿ ನೊಳಂದೆಸೆವ ಚಕ್ರವ ನೋಡಿದನು ದೈತ್ಯಾರಿ ಕೋಪದಲಿ (ಕುಮ್ಯಾಭೀ. ೬-೩೨). [ಸಂ.]

ಪರಿಲೇಸು (ನಾ). ಬಹಳ ಚೆನ್ನಾದುದು,—ಉತ್ತಮವಾದುದು: ಲೀಲೆ ಪರಿಲೇಸುವಡೆಯಲ್ಕೆ (ರೇವಣ. ೬-೪೮). [ಪರಿ-$_4$ + ಲೇಸು$_1$]

ಪರಿವಕ್ಕಿ (ನಾ). ಒಂದು ಬಗೆಯ ಪಕ್ಷಿ : ಪರಿವಕ್ಕಿ ಕೆಪ್ಪ ಕೇಲುವ ಹಂಗ ಹರಡೆಯು (ಅಬ್ಬಲೂ. ೩-೨೫). [ಪರಿ?+ಪಕ್ಕಿ]

ಪರಿವಟ್ಟ, ಪರಿಪಟ್ಟ, ಪರಿವಟ್ಟು (ನಾ). ೧. ಕೆಲವು ವಿಶೇಷ ಸಂದರ್ಭಗಳಲ್ಲಿ ಬಟ್ಟೆಯ ಪಟ್ಟಯನ್ನು (ಗೌರವಸೂಚಕವಾಗಿ ಭಕ್ತರ) ತಲೆಯ ಸುತ್ತ ಕಟ್ಟುವುದು,—ಸುತ್ತುವುದು : (ಕ). ೨. "ಶಿರಸ್ತ್ರಾಣ, ರುಮಾಲು" (ಕಸ್ತೂಕೋ. ೫೮೭) : "ಪರಿವಟ್ಟ—ಪರಿಪಟ್ಟ = ತಲೆಪಾಗು" (ತದ್ಭಕೋ. ೨೪). **ಪರಿಪಟ್ಟ** : ೨. ಮೇಲಿನ 'ತದ್ಭಕೋ' ಪ್ರಯೋಗವನ್ನು ನೋಡಿ. **ಪರಿವಟ್ಟು** : ೧. ದಿವ್ಯ ಸ್ವಯಂವ್ಯಕ್ತಸ್ಥಳಂಗಳನ್ನೈದಲ್ಲಲ್ಲಿ. . .ದೇವಾದಿದೇವರ್ಕಳನ್ನತಿವಿನಯದಿಂ ನಮಿಸಿ ಸ್ತುತಿಸಿ ತೀರ್ಥಪ್ರಸಾದ ಪರಿವಟ್ಟುಗಳಂ ಪರಿಗ್ರಹಿಸಲು (ಅಜ್ಞಾವಿ. ೧೯-೫೦ ಪ). [<ಪ್ರಾ. ಪರಿವಟ್ಟ ಅ = ಒಂದು ಬಗೆಯ ರೇಷ್ಮೆ ವಸ್ತ್ರ./ಸಂ. ಪ್ರತಿಪಟ್ಟಕ./ತಮಿ. ತೆಲು. ಪರಿವಟ್ಟ]

ಪರಿವಟ್ಟು 'ಪರಿವಟ್ಟ' ನೋ.

ಪರಿವಡಯ (ನಾ). (?) : ತಂಮಡಿಭಾಗದ ಪರಿವಡಯ ಪ್ರಾದ ಮೂಲದ ಭೂಮಿಯಿಂದ (ಸೌಇ. ೧೯೬೦, ಮಂಗಳೂರು. ೫೨೬-೬೨ ; 1375). [?]

ಪರಿವಡಿ$_1$ 'ಪರಿ$_2$' ಪರಾ.

ಪರಿವಡಿ$_2$ 'ಪರಿವಿಡಿ$_2$' ನೋ.

ಪರಿವಡಿಗೆಯ್ 'ಪರಿವಿಡಿಗೆಯ್' ನೋ.

ಪರಿವಡಿದಪ್ಪು (ಕ್ರಿ). ಕ್ರಮ ತಪ್ಪು : ತ್ರಿಲೋಕೈಕವಂದ್ಯಂ ತ್ರಿಲೋಕಪ್ರಜ್ಞಪ್ತಿಯಂ ಪರಿವಡಿದಪ್ಪದೆ ಪರಿವಡಿಗೆಯ್ವುದುಂ (ಸುಕುಸೂ. ೧೧-೬೭ ಪ). [ಪರಿವಡಿ$_2$ (<ಪರಿವಿಡಿ$_2$)+ತಪ್ಪು$_1$]

ಪರಿವಡೆ 'ಪಱಿವಡೆ' ನೋ..

ಪರಿವತ್ಸರ (ನಾ). ೧. (ಮುನ್ನೂರ ಅರವತ್ತೈದು ದಿವಸಗಳಿರುವ) ಪೂರ್ಣವರ್ಷ ; ಅಧಿಕಮಾಸವಿಲ್ಲದಿರುವ ಸಂವತ್ಸರ : ಪರಿವತ್ಸರಾಧಿವತ್ಸರ ಕ್ಷಯವತ್ಸರಾದ್ಯನೇಕ ಪರ್ಯಾಯಮಾಗಿರ್ಪುದು (ವಿವೇಕ. ೩೨೧) ; ಸಂವತ್ಸರ ಪರಿವತ್ಸರ ಇತ್ಯಾದಿ ರೂಪಗಳಿಂದ ಪುನಃ ಪುನಃ ಪರಿಭ್ರಮಣವನ್ನು ಹೊಂದುತ್ತಿರುವ ಈ ಕಾಲಚಕ್ರದಲ್ಲಿ ಸಕಲಲೋಕಗಳೂ ನೆಲಸಿವೆ (ಶಕ್ತಾರ. ೨೫೫). ೨. ಒಂದು ವರ್ಷದ ಹೆಸರು : ಇಡಾವತ್ಸರ, ಅನುವತ್ಸರ, ಪರಿವತ್ಸರ ಎಲ್ಲ ಅವ್ಯಕ್ತ ಪರಮಾತ್ಮನೊಬ್ಬನೇ ನಿತ್ಯಾನಿಮಿತ್ತಗಳ ಕಾರಣ (ಜೀದಾನ. ೬೨). [ಸಂ.]

ಪರಿವರಿ 'ಪರಿ$_2$' ಪರಾ.

ಪರಿವರಿಸು (ಕ್ರಿ). ಬಳಸು ; ಸುತ್ತುಗಟ್ಟು : ನರಗೆ ಮೈಯಿಕ್ಕಿ ಪರಿವರಿಸಿ ಮಂಚದ ಕೆಳಗೆ ಕುಳ್ಳಿರ್ಪುದುಂ (ಸಾನಂಚ. ೫-೨೦) ; ಪರಿವರಿಪ ಕಾಳ್ಕಿಚ್ಚು ಮುಂದುಗಡೆ ಕಾಲ್ಕಣ್ಣ ಕಪ್ಪು ಬಲಗಡೆ (ಸಮ್ಯಕೌ. ೨-೪೭) ; ಇಂದುವದನೆಯರು . . . ಗೋವಿಂದನನು ಪರಿವರಿಸಿ ನಿಂದರು ಕೂಡೆ ಸಮತಳಿಸಿ (ನಿಭಾಗ. ೧೦-೨೩-೨೭). [ಸಂ. ಪರಿವರಣ+-ಇಸು$_3$]

ಪರಿವರ್ಜನೆ (ನಾ). ೧. ಬಿಡುವುದು ; ತ್ಯಜಿಸುವುದು : 'ಪರಿವರ್ಜಿಸು' ಪರಾ. ೨. ಕೊಲ್ಲುವುದು ; ವಧೆ : "ಪ್ರಮಾಪಣಂ . . . ಪರಿವರ್ಜನಂ, ನಿರ್ವಾಸನಂ . . . ವಧಃ—ಈ ೨೦ ಕೊಲ್ಲುವದಕ್ಕೆ ಹೆಸರುಗಳು" (ಸಿದ್ಧಾಂತಿ. ೨೬೨). [ಸಂ.]

ಪರಿವರ್ಜಿತ (ಗು). ಬಿಡಲ್ಪಟ್ಟ ; ದೂರ ಮಾಡಿದ : ಸ್ತ್ರೀಪುನ್ನಪುಂಸಕಮೃಗಪಶುಪರಿವರ್ಜಿತ ವಿವಿಕ್ತಸ್ಥಾನಂಗಳೊಳ್ ನೆಲಸುವ ವಿವಿಕ್ತಾವಾಸಮೆಂಬಯ್ದನೆಯ ತಪದೊಳಂ ನೆಜೆಂದು (ಅಪಿಪು. ೬-೩೦ಪ). [ಸಂ.]

ಪರಿವರ್ಜಿಸು (ಕ್ರಿ). ಬಿಡು ; ತ್ಯಜಿಸು : ಪೆರಿಯ ನಂಬಿಗಳ್ ನಿಜತನುವಂ ಪರಿವರ್ಜಿಸಿಯೂ ವ್ಯಾಜದೆ ಹರಿಧಾಮಕ್ಕೆಯ್ದೆ (ದಿವ್ಯಚ. ೧೪-೨೩. [ಪರಿವರ್ಜನ+-ಇಸು$_3$]

ಪರಿವರ್ಣನೆ (ನಾ). ಸೊಗಸಾದ ವಿವರಣೆ ; ಉತ್ತಮವಾದ ಬಣ್ಣನೆ : ಆ ಪುರಾಣಕ್ಕಂ ಲೋಕಾಕಾರಕಥನಮುಂ . . . ನಗರ ಸಂಪತ್ಪರಿವರ್ಣನಮುಂ . . . ಎಂದಿಂತವಯವಂಗಳೆಂಟಕ್ಕುಂ (ಅಪಿಪು). ೧-೪೨ಪ). [ಸಂ.]

ಪರಿವರ್ತ (ನಾ). ೧. ಸುತ್ತುವುದು ; ಸುತ್ತಲೂ ಸಂಚರಿಸುವುದು; ತಿರುಗುವುದು. ೨. ಅಲೆದಾಟ ; ಸಂಚಾರ. ೩. ಬ್ರಹ್ಮಾಂಡದ ಅಂತ್ಯಕಾಲ ; ಪ್ರಳಯ : "ಸಂವರ್ತಃ, ಪರಿವರ್ತಃ . . . ಮಹಾಪ್ರಳಯಃ—ಈ ೯ ಪ್ರಳಯಕಾಲಂ" (ಹಲಾಯು. ೨೦-೧೧೭) ; "ಮಹಾಪ್ರಳಯಮೆಂದೆನಲು . . . ಸಂವರ್ತಮೆನಲು ಪರಿವರ್ತಮೆಂದೆನೆ ಜಗವಿನಾಶಮಕ್ಕುಂ" (ಮಂಗರಾ. ೨೧-೧೨). ೪. ಒಂದು ವರ್ಷ,—ಸಂವತ್ಸರ. ೫. = ಪರಿವರ್ತಿತ ೪ : ಒಗೆದುದ್ವೇಷ್ಟಿತಮದು ತಾಂ ಬಗೆ ಪರಿವರ್ತಂ ಕನಿಷ್ಪದಿಂ ಪೊಱಮಡಲುಂ (ಆಸ್ಯರಂ. ೪-೯). ೬. [ಜೈನ] ಆಹಾರವಿಷಯದಲ್ಲಿ ಅಧಃಕರ್ಮಾದಿಯಾದ ಹದಿನಾರು ದೋಷಗಳಲ್ಲಿ ಒಂದು. [ಸಂ.]

ಪರಿವರ್ತನ (ನಾ). ೧. ಸುತ್ತಲೂ ತಿರುಗುವಿಕೆ : ಇಂತಸಾರಸಂಸಾರಚಕ್ರಪರಿವರ್ತನದೊಳಗೆ . . . ಪುಟ್ಟ (ಸುಕುಸೂ. ೬-೬೮). ೨. ಅತ್ತ ಇತ್ತ ಚಲಿಸುವುದು ; ಚಲನೆ. ೩. ವಿಶ್ವದ ಅಂತ್ಯಕಾಲ ; ಪ್ರಳಯ : "ಸಂವರ್ತನದೊಳು ಪರಿವರ್ತನಮದೋರಂತೆ ಸಲುಗುಂ" (ಮಂಗರಾ.೧೪೦-೮). ೪. ವಿನಿಮಯ : ಅದಲುಬದಲು : (ಲೋಕಸ. ೧೨೫). ೫. ಬದಲಾವಣೆ ; ಮಾರ್ಪಾಟು : ಚತುರಶೀತಿ ಲಕ್ಷಪ್ರಮಾಣ ಯೋನಿಮುಖಂಗಳೊಳಾವರ್ತನ ಪರಿವರ್ತನದಿಂ ದುರಿತ ವರ್ತಿಯಾಗಿ ನಮೆವ ಸಂಸಾರಿಜೀವಕ್ಕೆ . . . ಮುನಿಪುಂಗವಂ ಪ್ರಸಾದಂಗೆಯ್ದು (ಸುಕುಸೂ. ೫-೩೨ಪ) ; ಶುಕ್ಲಪಕ್ಷಮಲ್ಲದೆ ಸಲೆ ಕೃಷ್ಣಪಕ್ಷ ಪರಿವರ್ತನಮಿಲ್ಲೆನಿಕುಂ ಪುರಾಂತದೊಳ್ (ಜಗವಿ. ೯-೧೦೪) ; ಪರಿವರ್ತನ ವೆಂದರೆ ಬದಲಾವಣೆ. ಇದು ಕಾಲದ್ರವ್ಯಕೃತ್ಯ (ಹಿಂದಸಾ. ೮೨) ; ಇದುವರೆಗೆ ಬರಿಯ ಲತೆಯಾಗಿದ್ದ 'ಅದು', ಕವಿಯ ಅಂತರ್ಗತಪ್ರತಿಭೆಯ ಸ್ಪರ್ಶಮಾತ್ರದಿಂದ 'ಚೆಲುವೆ' ಯಾಗಿ ಪರಿವರ್ತನ ಹೊಂದಿದೆ (ಭಾಪಗೀ.೮). ೬. ತಲೆಕೆಳಗು ; ಅವ್ಯವಸ್ಥೆ ; ಪಲ್ಲಟ : "ಚಲನಂ ಸಂಪರ್ತಮುಂ ಪಲ್ಲಟಂ ವ್ಯಸನಂಗಳ್ ಪರಿವರ್ತನಾಖ್ಯ" (ನಾನಾರ. ೧೫೯). ೭. [ಜೈನ] ದ್ರವ್ಯ, ಕ್ಷೇತ್ರ, ಕಾಲ, ಭವ್ಯ, ಭಾವಗಳೆಂಬ ಐದು ಬಗೆಯ ಬದಲಾವಣೆಗಳನ್ನುಳ್ಳ ಸಂಸಾರ : ಸಂಸರಣಂ ಸಂಸಾರಃ ಪರಿವರ್ತನ ಮೆಂದೊಡೇಕಾರ್ಥಂ . . . ದ್ರವ್ಯಪರಿವರ್ತನಂ ಕ್ಷೇತ್ರಪರಿವರ್ತನಂ ಕಾಲ ಪರಿವರ್ತನಂ ಭವಪರಿವರ್ತನಂ ಭಾವಪರಿವರ್ತನಮೆಂದು ತತ್ಪರಿವರ್ತನಂ ಪಂಚವಿಧಂ (ತತ್ತ್ವಪ್ರ. ೮೬) ; ಸಂಸಾರದಲ್ಲಿ ಪರಿಭ್ರಮಣ ಮಾಡುವ ಜೀವಗಳಿಗೆ ದ್ರವ್ಯ . . . ಭಾವ ಎಂಬ ಐದುವಿಧದ ಪರಿವರ್ತನಗಳಾಗುತ್ತವೆ (ಜೈನಪ. ೩೧೬ ಅಂತಿ). ೮. [ವಿಜ್ಞಾ] ವಿದ್ಯುತ್‌ಪ್ರವಾಹದ ಗತಿಯನ್ನು ಬದಲಾಯಿಸುವ ಸಲಕರಣೆ : ಪರಿವರ್ತನದಿಂದ (Commutator) ತಿರುಗಿದಾಗ ವಿದ್ಯುತ್ಪ್ರವಾಹದ ದಿಕ್ಕನ್ನು →→ ಈ ಬಾಣಗಳು ಸೂಚಿಸುತ್ತವೆ (ತಿಲ್ಪಸಾ. ೨೫೬). [ಸಂ.]

ಪರಿವರ್ತನಕರಣ (ನಾ). [ಕಾಮಶಾ] ರತಿಕ್ರೀಡೆಯಲ್ಲಿ ಒಂದು ಬಗೆ : ತರುಣ ಮಗುಳ್ದೊಡಗಿರುತೆ ; . . . ಅಪ್ಪುತೆ ನೆರೆಯಲ್ ಪರಿವರ್ತನ ಕರಣಂ (ಜನಸ. ೯-೨೬) ; ಈ ಭಾವದಲ್ಲಿ ಸ್ತ್ರೀ ತನ್ನ ಎರಡು ತೊಡೆಗಳ ನಗಲಿಸಿ ಮಾಡುತ್ತಿರಲು ಹರುಷದಿಂ ರಮಿಸೆ ಪರಿವರ್ತನಕರಣಂ (ಕಾಮಶಾ. ೨೫೬). [ಪರಿವರ್ತನ+ಕರಣ]

ಪರಿವರ್ತನಕಾಲ (ನಾ). ಬದಲಾವಣೆ ಹೊಂದುವ ಸಮಯ :

ಒಂದು ಜೀವವು . . . ಹೆಚ್ಚು ಕಾಲ ಅರ್ಧಾಯುಷ್ಕಲಪರಿವರ್ತನಕಾಲದ ಒಳಗೆ ಅವಶ್ಯವಾಗಿ ತಿರುಗಿ ಸಮ್ಯಕ್ತ್ವವನ್ನು ಸಂಪಾದಿಸುವುದು (ಜೈನಸಿ.ಪ್ರ.೩೧೬). [ಪರಿವರ್ತನ + ಕಾಲ]

ಪರಿವರ್ತನಗೊಳ್ಳು (ಕ್ರಿ). ಬದಲಾವಣೆಯಾಗು ; ಮಾರ್ಪಾಟು ಹೊಂದು : 'ಈ ಬೆಸೆಯಿಂದ' ಎಂಬುದು ಅತ್ತಣಿಂ ಎಂಬ ರೂಪದ ಪರಿವರ್ತನಗೊಂಡ ರೂಪವೆಂದು ತೋರುತ್ತದೆ(ದ್ರಾವಿ. ೨೨೪). [ಪರಿವರ್ತನ + ಕೊಳ್ಳು$_1$ (<ಕೊಳ್$_1$)]

ಪರಿವರ್ತನಶೀಲ (ಗು). ಬದಲಾವಣೆಯನ್ನು ಹೊಂದುವ ; ಮಾರ್ಪಾಡಾಗುವ : ನನ್ನ ಅಂಧತೆಯು ನನ್ನ ಕಣ್ಣಿಗೆ ಒಂದು ಅಂಜನ ತೊಡೆದುಬಿಟ್ಟು ನನ್ನನ್ನು ಈ ಪರಿವರ್ತನಶೀಲಸಂಸಾರದಿಂದ ಹೊರಗೆ ಕರೆದೊಯ್ದಿದೆ (ಇಸ್ಪಕ. ೨೧೨). [ಸಂ.]

ಪರಿವರ್ತನೆ (ನಾ). ೧. ಬದಲಾವಣೆ ; ಮಾರ್ಪಾಟು : ಮೂರ್ಮೂರ್ತಿಗಳಿರುತಿಹವು ಸಂಪೂರ್ಣಾಧನ ಗುರುಪರಿಚರಯು ಪರಿವರ್ತನೆಗಳೆಂದಿನತನತಿಗಳೆದು ತಿರುಗಿ ಬಂದೊಡೆ ನಾಲ್ಕನೆಯ ಮುತ ಬೊರಕಲರಿವುದೆ ಕಲೆಗಳನು ಸಂವರಿಸುವ ನರೋತ್ತಮರಿಗೆ (ಕುವ್ಯಾಳು. ೪-೮೮) ; ಕಾವೇರಿಯ ಮುನಮುಂದಿರದಲ್ಲಾಗುತ್ತಿದ್ದ ಪರಿವರ್ತನೆಗೆ ಮಿತಿಯಿರಲಿಲ್ಲ (ಕಾವೇರಿ. ೩೬) ; ಸ್ಥೈರುಗಳ ಪರಿವರ್ತನೆಯ ವಿಷಯವಾಗಿ ಎರಡು ಮಾತುಗಳನ್ನು ಇಲ್ಲಿ ಹೇಳಬಹುದು (ಸ್ವಸಮು. ೬೪). ೨. ಬಳಕೆ ; ಚಾಲ್ತಿ ; ಪ್ರವರ್ತನೆ : ಪಿಂದೆನಿಪ ನಾಟ್ಯಶಾಸ್ತ್ರದ ಪರಿವರ್ತನೆ ಧರೆಗೆ ಬಂದ ಪರಿಯಂ ನೀಂ ವಿಸ್ತರಿಸು (ಲಾಸ್ಯರಂ. ೧-೧೫).

ಪರಿವರ್ತನೆಯಾಗು = ಬದಲಾವಣೆ ಹೊಂದು ; ಮಾರ್ಪಾಟಾಗು : ಜೀವನದಲ್ಲಿ ವಿಜ್ಞಾನವನ್ನು ಅವಲಂಬಿಸಿರುವ ಕ್ಷೇತ್ರಗಳು ಅಷ್ಟೇ ವೇಗವಾಗಿ ಪರಿವರ್ತನೆಯಾಗುತ್ತಿವೆ (ಶಿಕ್ಷಣ. ೨೯೩). [ಸಂ. ಪರಿವರ್ತನ]

ಪರಿವರ್ತನೆಗೊಳಿಸು(ಕ್ರಿ).ಬದಲಾವಣೆ ಹೊಂದುವಂತೆ ಮಾಡು ; ಮಾರ್ಪಡಿಸು : ತಂದೆಯ ವೇಸ್ಟ್‌ಪೇಪರ್ ಬ್ಯಾಸ್ಕೆಟ್ಟ(Waste Paper basket)ನ್ನು ತಮ್ಮ ಹಡಗನ್ನಾಗಿ ನಿಮಿಷಮಾತ್ರದಲ್ಲಿ ಪರಿವರ್ತನೆಗೊಳಿಸಿಬಿಡುವರು (ಮೊಗ್ಗು. ೫೯).

[ಪರಿವರ್ತನೆ + ಕೊಳ್$_1$ + -ಇಸು$_3$]

ಪರಿವರ್ತನೆಗೊಳ್ಳು (ಕ್ರಿ). ಬದಲಾವಣೆಯಾಗು ; ಮಾರ್ಪಾಟು ಹೊಂದು: ಮನುಷ್ಯನ ಸ್ವಭಾವವಾದರೂ ಹೀಗೇ ಪರಿವರ್ತನೆಗೊಳ್ಳುತ್ತದೆಂದು ನಿರ್ದಿಷ್ಟವಾಗಿ ಹೇಳುವುದು ಅಸಾಧ್ಯ (ಹಳ್ಳಿಜಾ.೧೧೬); ಕಾತ್ಯಾಪಳಿಗೆ ಕೃಷ್ಣಯಾಗಿ ಹೃದಯ ಪರಿವರ್ತನೆಗೊಂಡು ಮತ್ತೆ ಕಾತ್ಯಾಪಳಂತೆಯೆ ವರ್ತಿಸಬಹುದೆಂದು . . . ಯೋಚಿಸಿದ್ದನು (ಪಶರು. ೧೫೭).

[ಪರಿವರ್ತನೆ + ಕೊಳ್ಳು$_1$ (<ಕೊಳ್$_1$)]

ಪರಿವರ್ತಿತ (ಗು). ೧. ಬದಲಾವಣೆಯಾದ ; ಮಾರ್ಪಾಟು ಹೊಂದಿದ. ೨. ಹಿಂದಕ್ಕೆ ತಿರುಗಿಸಿದ,—ಹೊರಳಿಸಿದ : ಪರಿವರ್ತಿತಾವಲೋಕನನಿರತಂಗಳ್ . . . ತುರಗರತ್ನಹೇಷಾರವಕ್ಕೆ ಪೂಣ್ದುವು ಹರಿಗಳ್ (ಕಾಂತಿಪು. ೧೧-೭೩). (ನಾ). ೩. ಬದಲಾವಣೆಯಾದುದು; ಮಾರ್ಪಾಟು ಹೊಂದಿದುದು : ಅಸಂಸ್ಕೃತಪರ್ಯನೆಗೆ ಪರಿವರ್ತಿತವಾದ ರಾಜ್ಯ ಸುಸಂಸ್ಕೃತಜೀವನವನ್ನು ಸಂಪಾದಿಸುವ ಸನ್ನಿವೇಶಗಳು ಕಲ್ಪಿತವಾದವು(ಪುಶ್ಕಾರ. ೧೧೪ ಪೀಠಿಕೆ) ;ಅವುಗಳಲ್ಲಿ ಗಮನಾರ್ಹ ವಿವರಣೆಯೆಂದರೆ, ತೆಲುಗುಭಾಷೆಯಲ್ಲಿ ಪೂರ್ವದ್ರಾವಿಡದ . . . ಮೂಲಸ್ವರಗಳು ಪರಿವರ್ತಿತವಾಗಿವೆ ಎಂಬುದು (ದ್ರಾವಿ.೧೬೨). ೪. [ನಾಳ್ಕು] ನಾಲ್ಕು ಹಸ್ತೀಕರಣ ಭೇದಗಳಲ್ಲಿ ಒಂದು; ☞"ವ್ಯಾವರ್ತಿತಕರಣದಲ್ಲಿ ಬಗ್ಗಿರುವ ಬೆರಳುಗಳನ್ನು ಅದೇ ಕ್ರಮದಿಂದ ನೆಟ್ಟಗೆ ಮಾಡುತ್ತ ಕೈಯನ್ನು ಎದೆಯಿಂದ ಹೊರಕ್ಕೆ ತರುವುದು" (ಲಾಸ್ಯರಂ. ೨೮೩ ಗದ್ಯಾನುವಾದ) : ಅವೇಷ್ಟಿತ, ಉದ್ವೇಷ್ಟ, ವ್ಯಾವರ್ತಿತ, ಪರಿವರ್ತಿತ—ಈ ನಾಲ್ಕು ಹಸ್ತಕರಣಭೇದಂಗಳ್ (ಲಾಸ್ಯರಂ. ೪-೬ ಪ). ೫. ಹತ್ತು ಜಂಘಾಭೇದಗಳಲ್ಲಿ ಒಂದು ; ☞"ಪಕ್ಕಕ್ಕೆ ತಿರುಗದಂತೆ ಜಂಘೆಯನ್ನು ಅಡ್ಡಲಾಗಿ ಮಾಡುವುದು" (ಲಾಸ್ಯರಂ. ೨೬೪ ಗದ್ಯಾನುವಾದ) : ಅವರ್ತಿತ, ನತ . . . ಪರಿವರ್ತಿತ [ಪಾಠಾಂ.ನಿರ್ವರ್ತಿತ] . . . ಕಂಪಿತ—ಈ ಹತ್ತು ಜಂಘಾಭೇದಂಗಳ್ (ಲಾಸ್ಯರಂ. ೨-೧೪೪ ಪ) ; ಓಸರಿಸದೆಯಡ್ಡಮಾಗೆ ಪರಿವರ್ತಿತಮುಂ (ಲಾಸ್ಯರಂ. ೨-೧೪೬). [ಸಂ.]

ಪರಿವರ್ತಿಸು (ಕ್ರಿ). ೧. ಬದಲಾವಣೆಯಾಗು ; ಮಾರ್ಪಾಟು ಹೊಂದು: ಧ್ರುವಕ್ಷೇತ್ರಕಾಲಭವಭಾವಂಗಳೊಳ್ ಮಱೆದಪ್ಪುದಂ ಪರಿವರ್ತಿಸದೆ ಬೀಜಿವೇಜಿ ಪರಿಣಮಿದಪ್ಪುದೆ ಪುಟ್ಟುವುದು ಜಕ್ರಪರಿವರ್ತನಮೆಂಬುದು (ಸುಕುಮಾ. ೬-೬ ಪ) ; ನಿರಿಗೆ ದರಿದ್ರತೆ . . . ಯೌವನಕ್ಕೆ ಮುಧಿಘಾತಮೆನುತ್ತಿರೆ ಕಂಡುಂ ಕೇಳ್ದುಂ ಗಡ ಪರಿವರ್ತಿಸರಾತ್ಮಹಿತದೊಳತಿದುರ್ಮತಿಗಳ್ (ಚಂದ್ರಪ್ರ. ೨-೩೭). ೨. ನಡೆ ; ಚಾಲ್ತಿಯಲ್ಲಿರು : ನನಧಿನಭೋನ್ನಧಿಪ್ರಮಿತಸಂಖ್ಯೆ ಶಕಾವನಿಪಾಳಕಾಳಮುಂ ನೆನೆಯಿಸೆ ಚಿತ್ರಭಾನು ಪರಿವರ್ತ್ತಿಸೆ . . . ತಾಳ್ದಿದಂ ಜನನುತನನ್ದ್ರರಾಜನಖಿಳಾವನಿರಾಜನುಹಾವಿಭೂತಿಯುಂ (ಎಕ. II, ೧೩೩-೧೫೩ ; 982). ೩. ಒಂದಾದ ಮೇಲೊಂದರಂತೆ ಬರು ; ಅನುಕ್ರಮವಾಗಿ ಬರು : ಎರಡು ಯುಗವೊಂದೆ ಕಲ್ಪಂ ಶುಕ್ಲಕೃಷ್ಣ ಪಕ್ಷಂಗಳವೋಲ್ ಪರಿವರ್ತಿಸುಗುಂ(ಪಂರಾಮಾ. ೧-೫೯), ೪. ವರ್ತಿಸು ; ಇರು ; ಉಳಿ : ಪುರುಷನಿಧಿ ದಾನಿ ಮಾಡಿದ ವರಭಮ್ಮಂ ಚಂದ್ರಸೂರ್ಯರುಳ್ಳನ್ನೆವರಂ ಪರಿವರ್ತ್ತಿಸುವನ್ತಾಗಿರೆ ಬರೆದಂ ಚಾಮುಂಡರಾಯನೀ ಶಾಸನಮಂ (ಸೌಇಇ. XI-1, ೯೨-೪೮ ; 1054). ೫. ಬದಲಾವಣೆ ಮಾಡು ; ಮಾರ್ಪಾಟು ಮಾಡು : ಮನುಷ್ಯರ ಸ್ವಭಾವ ಪರಿವರ್ತಿಸುವ ಯಂತ್ರವೆಲ್ಲಿಯಾದರೂ ಉಂಟೇ ? (ಹಳ್ಳಿಹಾ. ೧೧೪) ; ಕಳ್ಳನನ್ನೂ ಪರಿವರ್ತಿಸಬಹುದು (ದೇಶಭು. ೪೮) ; ಸೂರ್ಯಕಿರಣಗಳ ಕೇಂದ್ರೀಕರಣ, ಅವುಗಳನ್ನು ಶಕ್ತಿಯಾಗಿ ಪರಿವರ್ತಿಸುವುದು . . . ಮೊದಲಾದ ವಿಭಾಗಗಳಲ್ಲಿ ಅನೇಕ ವಿಜ್ಞಾನಿಗಳು ಸಂಶೋಧನೆ ನಡೆಸುತ್ತಿದ್ದರು (ಕಾಲಯಾ. ೯೧). ೬. ವಿನಿಮಯಮಾಡು : "ಅದಲು ಬದಲು ಮಾಡು ; ಪರಿವರ್ತಿಸು" (Commute. ಪತ್ರಿ.೩೧). ೭. ಅನುವಾದ ಮಾಡು ; ಭಾಷಾಂತರಿಸು : ಈ ಗೀತಾಂಜಲಿಯನ್ನು ಆಂಗ್ಲ ಭಾಷೆಗೆ ಪರಿವರ್ತಿಸಿದಾಗ ಆಂಗ್ಲೇಯರು ಪಟ್ಟ ಉತ್ಸಾಹ, ಆನಂದ ವರ್ಣಿಸಲಸದಳ (ಭಸುಸಾ. ೪೧). [ಪರಿವರ್ತನ + -ಇಸು$_3$]

ಪರಿವರ್ಧಕ (ನಾ). ೧. ಅಭಿವೃದ್ಧಿಯನ್ನುಂಟುಮಾಡುವುದು : ಸರದಧಿಪತಿಯುಂ ದೋಷಾಕರನಂತರ್ಮಲಿನನಾಗಿಯುಂ ಪೆರ್ಚಿಸುಗುಂ ಪರಿಣತಕಲಾಕಲಾಪಂ ಪರಿವರ್ಧ[ಕ]ಮಕ್ಕುಮತಿವಿರುದ್ಧಾತ್ಮಕ[ಮುಂ] (ಕವಿರಾ. ೩-೩೫). ೨. ಕುದುರೆಯನ್ನು, ಸಾಕುವವನು ; ಕುದುರೆಯ ಪಾಲಕ ; ಕಾಸ್ತಾರ : ತಪ್ಪ್ರಭಾಮಂಡಲಗಳಿತ ಹಿಮಸ್ಫಟಿಂ ಲಬ್ಧಸಂಜ್ಞೆಯಾಗಿ ಮುರುಳ್ದೊಂಡಂತೆ ಇಂದ್ರಾಯುಧಮಿರ್ದೆಗೆ ಪರಿತಂದು ಪರಿವರ್ಧಕಹಸ್ತದಿಂದದಂ ತೆಗೆದು (ಕಾದಂಬ. ೬೦೩). [ಸಂ.]

ಪರಿವರ್ಧಿತ (ಗು). ೧.ಅಭಿವೃದ್ಧಿ ಹೊಂದಿದ ; ಬೆಳವಣಿಗೆಯಾದ: ಶಶಿಮಣಿಪ್ರಾಸಾದಪರಿಗಳಿತ ಸದಮಳಜಲಪ್ರನಾಹನಿಷ್ಪ್ರಯಾಸಪರಿವರ್ಧಿತಾನಲ್ಪಕಲ್ಪತರುಪಂಕ್ತಿಸಂತತದರದಳಿತ ಪರಿಮಳಭರಿತಕುಸುಮವಿಸರವಿಸರದ ಮಂದಮರಂದರಸ ಕದಂಬಕರ್ದಮಿತ ವಿಧು ರವಿವೀಥಿಸನಾಥಮುಂ (ರಾಜಶೇ. ೧೪-೧೦೬ ಪ). ೨. ಹೆಚ್ಚಾದ ; ವೃದ್ಧಿಯಾದ. [ಸಂ.]

ಪರಿವರ್ಧಿನಿ (ನಾ). = ಪರಿವರ್ಧಿನೀಷಟ್ಪದಿ : ಶರ ಕುಸುಮ ಭೋಗ ಭಾಮಿನಿ ಪರಿವರ್ಧಿನಿ ನಾರ್ಧಕಂಗಳೆಂದಾಮುತೆಜಂ (ಛಂಪೋ೨ಮು. ೫-೨೫೯ ಅಡಿಟಿ) ; ಇದು ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ,

ವಾರ್ಧಕ ಎಂದಾರು ವಿಧವು (ಕೈಪಡಿ. ೯೫). [ಸಂ. ಪರಿವರ್ಧಿನೀ]

ಪರಿವರ್ಧಿನಿಷಟ್ಪದಿ (ನಾ). —ಪರಿವರ್ಧಿನೀಷಟ್ಪದಿ: ಪಾದಗಳೆರಡ ಜೊಳುತ್ತರದೆರಡುಂ ಪಾದದೆ ಹೋಡಶ ಹೋಡಶಮಾತ್ರೆಯು . . . ಕೇಳಿಂತಿದು ನಿಶ್ಚಯ ಪರಿವರ್ಧಿನಿಷಟ್ಪದಿಗೆ (ಛಂದೋಂಬು. ೫–೨೫೯ ಅಡಿಟ).

[ಪರಿವರ್ಧಿನಿ + ಷಟ್ಪದಿ]

ಪರಿವರ್ಧಿನೀಷಟ್ಪದಿ (ನಾ). [ಛಂದ] ಒಂದು ಷಟ್ಪದಿಯ ಹೆಸರು; "ಚತುರ್ಮಾತ್ರಾಗಣವು ಒಂದೆರಡು ನಾಲ್ಕಯ್ದನೆಯ ಪಾದಗಳಲ್ಲಿ ನಾಲ್ಕು ನಾಲ್ಕೂ, ಮೂರಾರನೆಯ ಪಾದಗಳಲ್ಲಿ ಆರಾರೂ ಒಂದು ಗುರುವೂ ಬಂದರೆ ಪರಿವರ್ಧಿನೀ ಷಟ್ಪದಿಯಾಗುವುದು" (ಕೈಪಡಿ. ೯೬). [ಸಂ. ಪರಿವರ್ಧಿನೀ ಷಟ್ಪದೀ]

ಪರಿವರ್ಧಿಸು (ಕ್ರಿ). ೧. ಬೆಳೆ; ಅಭಿವೃದ್ಧಿಯನ್ನು ಹೊಂದು: ಮುನ್ನವಿಂತಿನು ಮಾತೃಕಾಸ್ತನ್ಯದಿಂ ಪರಿವರ್ಧಿಸದೆ ಬಳಿಕ್ಕಿನಿತು ನವನೀತಮಂ ಹರಿಸದಿಂದುಂಡು ಬಳೆಯದೆ (ಅರಾಚ. ೨–೮–೩೭). ೨. ಅಭಿವೃದ್ಧಿಗೊಳಿಸು: ಕನ್ನೆಯಿನೀ ವನಕ್ಕೆ ಮಧುಲಕ್ಷ್ಮಿಯಿನಗ್ಗದ ಲಕ್ಷ್ಮಿಯಾದುದೆಂಬನ್ನೆವರಂ ವಿಳಾಸರಸದಿಂ ಪರಿವರ್ಧಿಸುತುಂ ವನಾಳಿಯಂ ... ದನುಜನಂದನೆ ಬಂದಳದೊಂದು ಲೀಲೆಯಿಂ (ಜಗವಿ. ೧೭–೧೦೦).

[ಪರಿವರ್ಧನ್ + –ಇಸು]

ಪರಿವರ್ಹ (ನಾ). ೧. ಸುತ್ತುಗಟ್ಟುವ ವಸ್ತು; ಬಳಸಿರುವುದು. ೨. ಪರಿಜನ; ಪರಿವಾರ. ೩. ಉಪಕರಣ; ಸಲಕರಣೆ; ಸಾಧನ: "ಪರಿವ[ಪಾಠಾಂ. ಬ]ರ್ಹಂ ಪರಿಚ್ಛದಂ ನೆರಹಿದುಪಕರಣಮಕ್ಕುಂ" (ಮಂಗರಾ. ೬೦–೧೫). ೪. ರಾಜಲಾಂಛನ,—ಚಿಹ್ನೆ. ೫. ಸುಸಜ್ಜಿತವಾಗಿರುವುದು; ಓರಣ. ೬. ಸಂಪತ್ತು; ಆಸ್ತಿ; ಐಶ್ವರ್ಯ.

[ಸಂ.]

ಪರಿವಹ (ನಾ). ಆವಹ, ಪ್ರವಹ, ಉದ್ವಹ, ಸಂವಹ, ವಿವಹ, ಪರಿವಹ ಮತ್ತು ಪರಾವಹ ಎಂಬ ಏಳು ಬಗೆಯ ವಾಯುಗಳಲ್ಲಿ ಒಂದು; ನಕ್ಷತ್ರಗಳನ್ನು ಚಲಿಸುವಂತೆ ಮಾಡುವ ವಾಯು; ೨ ಗಗನ, ಸ್ಪರ್ಶನ, ವಾಯು, ಅನಿಲ, ಪ್ರಾಣ, ಪ್ರಾಣೇಶ್ವರ ಮತ್ತು ಜೀವ ಎಂಬ ಏಳು ಬಗೆಯ ವಾಯುಗಳೂ ಉಂಟು: ತಾರಾನಿವಹವ ನಡೆಯಿಪ ಪರಿವಹ ಪವನನ ಮಾರ್ಗವಿದು (ಶಾಕುಂತ. ೧೦೦–೧೬೯). [ಸಂ.]

ಪರಿವಳಯ (ನಾ). ಸುತ್ತಣ ಪ್ರದೇಶ: ಮುಖ್ಯಗಣನಾಯಕರು ತದ್ರೂಪಗಳನೆ ಧರಿಸಿ ಪಿಂತೆ ಪಿಂತೆಸೆದು ಪರಿವಳಯಮಂ ಕಾಯ್ದುತಿಹರ್ (ಲಕಿಂ. ೧೬–೬); ಚರು ತಿಲದ ರಾತಿಗಳ . . . ಪರಿವಳ[ಪಾಠಾಂ. ಳೆ]ಯದಾಮಿಕ್ಷೆಗಳ ಪರಿಕರದ ವಿವಿಧದ್ರವ್ಯಮಯಬಂಧುರದಲೆಸೆದುದು ಯಜ್ಞವಾಟಿಕೆ ರಾಜಸೂಯದಲಿ (ಕುಮಾ. ೬–೩೦). [ಸಂ. ಪರಿವಲಯ]

ಪರಿವಾಣ 'ಪರಿಯಾಣ' ನೋ.

ಪರಿವಾದ (ನಾ). ೧. ನಿಂದೆ; ಬಯ್ಗುಳು; ತೆಗಳಿಕೆ: "ಪರಿವಾದಮದವರ್ಣವಾದಮದುಪಕ್ರೋಶಮೆನೆ ನಿಂದೆಯಕ್ಕುಂ" (ಮಂಗರಾ. ೨೬–೪): ಪರಿವಾದಂ ಪೈಶೂನ್ಯಂ ಪರಮರಹಸ್ಯಪ್ರಕಾಶಕರಣಂ ಕೂಟಾಕ್ಷರ [ನಿಧಿ]ನಿಕ್ಷೇಪಾದ್ಯಪಹರಣಂ ಸತ್ಯವ್ರತಕ್ಕತಿಕ್ರಮಮಕ್ಕುಂ (ವರ್ಧಮಾ. ೬–೯); ಆ ದುರಾಗ್ರಹಿ ಲೋಕಜನಪರಿವಾದಪದನಿರ್ಭೀತನಕ್ಷವಿನೋದ ಕರ್ದಮಮಗ್ನನೊಡ್ಡಿದನಾ ಧನಂಜಯನ (ಕುಮಾ. ೧೪–೧೮); ಆ ಮುರಹರನ ಪರಿವಾದಮಂ ಮಾಳ್ಪುದೇಕೆಂದು ದೇಕಿಕೋತ್ತಮನುಸಿರು ತಿರ್ದನೊಲವಿಂ (ಸಿದ್ಧೇಪು. ೬–೬); ಪರಪರಿವಾದಮಂ ನೆಗಳ್ಪುದೇ ಜಪಂ . . . ಎನೆ ದುರ್ಜನತಾಪಸನೇಂ ಕೃತಾರ್ಥನೋ (ರಾಜಶೇ. ೧–೪೦). ೨. ದೂರು; ಅಪವಾದ; ಆರೋಪಣೆ: "ಅಪವಾದಃ, ಉಪಕ್ರೋಶಃ, ನಿರ್ವಾದಃ, ಅವರ್ಣವಾದಃ, ಪರಿವಾದಃ, ಗರ್ಹಾ, ನಿಂದಾ, ಜುಗುಪ್ಸಾ—ಈ ೮ ಅಪವಾದದ ನಾಮಂ" (ಹಲಾಯು. ೨೪–೧೪೭); ನೆಗಳ್ದ ಕುಲದ ಚಲದೊಳ್ಪಿನ ಭೂಪನನೆನೆಗೆ ತೇರನೆಸಗೆಂದೊಡೆ ಸದ್ವಿನಯಮುಟಿದುರ್ಕಿ ಕುಲಹೀನನೆಂಬ ಪರಿವಾದಮಿಗಳೆನಗಾಗಿರದೇ (ಪಂಪಭಾ. ೧೨–೫೮); ಪರಿವಾದಕ್ಕಂಜಿ ತಾಂ ಮಾನಸಿಕೆಯನಧಿಕಂ ತಾಳ್ದಿ ಮೇಲಾಗಿ ವಿಶ್ವಂಭರೆಯಂ ನಿಃಕ್ಲೇಶದಿಂ ತಾಳ್ದಿದ ಹರಿಯೆನಿಸಂ ವಿಶ್ರಮಾದಿತ್ಯದೇವ (ಎಕ. VII, ೩೪೨. ೧೦೦–೧೦; 1129); ಆದಿಬೊಮ್ಮಕೆ ಮಗುವುತನ ಸಂಪಾದಿಸಿತುಯೆಂಬುದು ಮೃಷಾಪರಿವಾದವಿದು (ಕೊರಂಗ. ೧–೮–೬೮). ೩. ವೀಣೆ ಮುಂತಾದ ತಂತೀವಾದ್ಯಗಳನ್ನು ನುಡಿಸಲು ಉಪಯೋಗಿಸುವ ಸಲಕರಣೆ,—ಸಾಧನ. [ಸಂ.]

ಪರಿವಾದಕ (ನಾ). ೧. ಆರೋಪಣೆ ಹೊರಿಸುವವನು; ದೂರು ಹೇಳುವವನು. ೨. ವಾದ್ಯವನ್ನು ನುಡಿಸುವವನು. ೩. ಒಂದು ಬಗೆಯ ವಾದ್ಯ: ಆಗಳ್ ನಾಕಲೋಕವಾದ್ಯಂಗಳೊಳನೇಕಭೇದಂಗಳಪ್ಪುಪವಾದಕ ಪರಿವಾದಕ ವಾದ್ಯಂಗಳೊಳ್ . . . ಗೀತಂಗಳನುಕ್ರಮದೊಳೆ ನೆಗಳ್ (ಆದಿಪು. ೬–೧೧೯ ಪ). 'ಉಪವಾದಕ' ಪರಾ. [ಸಂ.]

ಪರಿವಾದಶೀಲ (ನಾ). ನಿಂದಿಸುವ ಸ್ವಭಾವವುಳ್ಳವನು; ನಿಂದಕ: ವೇದಕರ್ಮವಿರೋಧಿಗಳು ಪರಿವಾದಶೀಲರು . . . ನಿನ್ನಂಗದೇಶದ ಸಿರಿಯ ಕೇಳಿಂದ (ಕುಮಾಕ. ೯–೩೬). [ಸಂ.]

ಪರಿವಾದಿನಿ (ನಾ). ೧. ಏಳು ತಂತಿಗಳನ್ನುಳ್ಳ ಒಂದು ಬಗೆಯ ವೀಣೆ: "ಪರಿವಾದಿನಿ ವಲ್ಲಕಿ ವಿಪಂಚಿ ವೀಣಾನಾಮಂ" (ಪಸ್ತುಕೋ. ೭೯–೨೪); "ತಂತಿ ತಾವೇಟಾರಲು ಪರಿವಾದಿನಿಯೆನಿಕ್ಕು" (ಮಂಗರಾ. ೨೪–೭); ನೃತ್ಯಂ ನೆತ್ತ ಮೊಗಟು ಪರಿವಾದಿನಿನಾದಿತಮೆಂಬನೇಕಭೇದಪ್ರತರ ವಿನೋದದೊಳೆ ಸತಿಗೆ ಪೊತ್ತಂ ಕಳೆವರ್ (ವರ್ಧಮಾ. ೧೧–೫೧); ಮದನ ಪರಿವಾದಿನೀನಾದದಿನಗ್ಗಳಮೆನಿಸ ನಿನ್ನ ನುಣ್ಮುಡಿ ಪೊಱಪೊಣ್ಮದೊಡೇ ಕಾಯತ್ತಮದಾಗದೆ ಕಳರವಲಕ್ಷ್ಮಿ ಸಮದಕೋಕಿಲಕುಲದೊಳ್ (ಚಂದ್ರಪು. ೩–೬೧); ಬಳಿಕ ವಿಪಂಚಿಕೆ ಚಿತ್ರಿಕೆ . . . ಪರಿವಾದಿನಿ ಕಿನ್ನರಿ . . . ಕಾಲಕೀಯೆಂಬ ಮೂವತ್ತುಮೂಱು ತಂತ್ರೀವಾದ್ಯಂಗಳಲ್ಲಿ (ವಿನೇಕ. ೨೫೩); ನೂರುತಂತಿಗಳನ್ನು ಮೊಟ್ಟಮೊದಲಾಗಿ ಹೊಂದಿದ್ದ ವೀಣೆ, ತಂತಿಗಳ ಸಂಖ್ಯೆಯಲ್ಲಿ ಇಳುವರಿ ಹೊಂದುತ್ತಾ ಬಂದು ಎರಡು ತಂತಿಗಳ 'ಸಕುಲ,' ಮೂರು ತಂತಿಗಳ 'ಕಿನ್ನರಿ', ಏಳು ತಂತಿಗಳ 'ಚಿತ್ರಾ' ಮತ್ತು 'ಪರಿವಾದಿನಿ', ಒಂಭತ್ತು ತಂತಿಗಳ 'ವಿಪಂಚೀ' ಎಂಬ ಹೆಸರುಗಳಿಂದ ತಂತಿಗಳ ಸಂಖ್ಯೆಯಲ್ಲಿ ಏರುಪೇರು ತೋರುತ್ತದೆ (ಸಂಗೀಚಂ. ೩೧೧). ೨. ಅಪವಾದವುಳ್ಳ ಹೆಂಗಸು. [ಸಂ. ಪರಿವಾದಿನೀ]

ಪರಿವಾಪ (ನಾ). ೧. ಉಪಕರಣ; ಸಲಕರಣೆ. ೨. ಬಿತ್ತುವಿಕೆ; ಬಿತ್ತನೆ ಮಾಡುವುದು. ೩. ಜಲಾಶಯ; ಕೊಳ. ೪. ಕ್ಷೌರ; ವಪನ. ೫. ಸೇವಕ; ಪರಿಚಾರಕ. [ಸಂ.]

ಪರಿವಾಪಿತ (ಗು). ೧. ಕ್ಷೌರಮಾಡಲ್ಪಟ್ಟ; ಬೋಳಿಸಿದ. (ನಾ). ೨. ಕ್ಷೌರಮಾಡಲ್ಪಟ್ಟುದು; ಮುಂಡನ ಮಾಡಿದುದು: "ಮುಂಡಿತಂ, ಪರಿವಾಪಿತಂ–೨ ಬೋಳಿಸಲ್ಪಟ್ಟದ್ದು" (ಸಿದ್ಧಾಂತಿ. ೩೪೬).

[ಸಂ.]

ಪರಿವಾರ (ನಾ). ೧. ಸುತ್ತಲಿನವರು; ಅನುಯಾಯಿಗಳು; ಪರಿಜನ: "ಪರಿವಾರಃ, ಪರಿಕರಃ, ಪರಿಸ್ಪಂದಃ, ಪರಿಗ್ರಹಃ—ಈ ೪ ಪರಿಗ್ರಹಂ" (ಹಲಾಯು. ೫೧–೧೫೧); ಪರಿವಾರವಾರವನಿತಾಸಂವೃತನರಮನೆಯೊಳರಸಂ . . . ಒಪ್ಪಿರೆ ವಿನೋದದಿಂದುರುಮುದದಿಂ (ಕವಿರಾ. ೨–೧೦); ಪರಿವಾರಮುಂ ಪಡೆಯುಂದೆರಸು . . . ಪೊಟಲಂ ಪೊಱಮಟ್ಟು ವಿಂಧ್ಯಾಟವಿಗೆ ಪೋಗಿ (ಪಡ್ಡಾರಾ. ೧೫೯–೫); ಹರನೀವ ಕಾಲಕ್ಕೆ

ಸಿರಿಯು ಬೆನ್ನಲಿ ಬರ್ಕು ಹರಿದು ಹೆದ್ದೊಜೆಯೆ ಕೆಜೆ ತುಂಬಿದಂತಯ್ಯಾ . . . ಅರಸು ಪರಿವಾರ ಕೈವಾರ ನೋಡಯ್ಯಾ (ಬಸವ. ೧೬೯); ಪುರಜನವು ಪರಿವಾರ ಪರಿಜನ ಭರತ ಶತ್ರುಘ್ನರುಗಳರಸಿಯರುರಿಯ ಹೊಗುವುದ ನೆನೆದು ಮನದುವತ್ಕಿಳದಿ ಬೆಂದಿಹರು (ಕೌಶಿಂಗ. ೪೪-೩೭). ೨. ಸುತ್ತಲೂ ಇರುವುದು; ಸುತ್ತಮುತ್ತ ಬಳಸಿರುವುದು: ಹೀಗೆ ಸೂರ್ಯನನ್ನು ಸುತ್ತುತ್ತಿರುವ ಗ್ರಹವೂ ಸೂರ್ಯನ ಪರಿವಾರದಲ್ಲಿದೆ (ನಕ್ಷತ್ರ. ೪೫). ೩. ಗುಂಪು; ತಂಡ; ಸಮೂಹ: ತಪೋಧನರ ವಿದ್ಯಾರ್ಥಿಮಾಣಿಗಳಾಹಾರದಾನಕ್ಕಂ ಪಾವುಳ ಪರಿವಾರದ ಜೀವಿತಕ್ಕಂ . . . ಕೊಟ್ಟ ಅಲ್ಲಿಯ ಘಳೆಯ ಮತ್ತರು ಜಂ (ನಾಂದೇಡ್. ೩-೨೨ ವ; 1047); ದ್ರಾವಿಡಭಾಷಾಪರಿವಾರ ಜಗತ್ತಿನ ಹಿರಿಯ ಭಾಷಾವರ್ಗಗಳ ಸಾಲಿನಲ್ಲಿ ಐದನೆಯ ಅಥವಾ ಆರನೆಯ ಸ್ಥಾನವನ್ನು ಪಡೆಯುತ್ತದೆ (ದ್ರಾವಿನಿ. ೨ ಹಿನ್ನೆಲೆ). ೪. ಕುಟುಂಬ; ಸಂಸಾರ: ಹೆಣ್ಣಿನ ಮೇಲೆ ಹೆಣ್ಣು ಹುಟ್ಟಿ ಪರಿವಾರವು ಬೆಳೆದು ಬಿಟ್ಟತ್ತು (ಪರಿಣೀ. ೧).

ಪರಿವಾರ ಪರಿತೋಷಣ = ಪರಿಜನಕ್ಕೆ ಸಂತೋಷವನ್ನುಂಟು ಮಾಡುವವನು; ಒಂದು ಬಿರುದು: ಪರಾಂಗನಾಪರಾಙ್ಮುಖಂ ವಿನಯವಿಭೂಷಣಂ ಪರಿವಾರಪರಿತೋಷಣಂ (ಸೌಇಇ. VI, ೫೭೧-೩೩; 1070). ಪರಿವಾರ ಸಮುದ್ಧರಣೆ = ಪರಿಜನರನ್ನು ಉದ್ಧಾರಮಾಡುವವಳು; ಒಂದು ಬಿರುದು: ಕಲಿಕಾಲಸರಸ್ವತಿ ಪ್ರತ್ಯಕ್ಷಪಾರ್ವ್ವತಿ ಪರಿವಾರ ಸಮುದ್ಧರಣೆ (ಸೌಇಇ. XX, ೬೧-೮; 1094). [ಸಂ.]

ಪರಿವಾರದೇವತೆ (ನಾ). ೧. ಪ್ರಧಾನದೇವತೆಯ ಸುತ್ತ ಇರುವ ಇತರ ಅಧೀನ ದೇವತೆಗಳು. ೨. (ಆಲಂ) ದೊಡ್ಡ ಅಧಿಕಾರಿಯ ಸುತ್ತ ಮುತ್ತಿಕೊಂಡಿರುವ ಪ್ರಭಾವೀಜನ: ಅವನು ಮಂತ್ರಿಯಾದ ಮೇಲೆ ಅವನ ಪರಿವಾರದೇವತೆಗಳ ಸಂಖ್ಯೆ ಬೆಳೆದಿದೆ (ರೂಢಿ).

[ಪರಿವಾರ+ದೇವತೆ]

ಪರಿವಾರದೇವಿ (ನಾ). [ಜೈನ] ಕಲ್ಪಾದಿಗಳ ಇಂದ್ರರ ವಿಮಾನಗಳಲ್ಲಿ ಪರಿಚರ್ಯೆ ಮಾಡುವ ಸ್ತ್ರೀ: ಚಾರುವಿಲೋಲಕಟಾಕ್ಷಪಾತ ಸೌಂದರಪರಿವಾರದೇವಿಯರಿರಾ (ಅದಿಪು. ೩-೪). [ಪರಿವಾರ+ದೇವಿ]

ಪರಿವಾರಮೂರ್ತಿ (ನಾ). ಮುಖ್ಯದೇವತೆಯ ಪರಿವಾರದ ಮೂರ್ತಿ: ಪರಿವಾರಮೂರ್ತಿಗಳಾದ ಗರುಡ, ಆಂಜನೇಯ, ವೃಷಭ, ಮೊದಲಾದ . . . ಪ್ರತಿಮೆಗಳನ್ನು ಸಿದ್ಧಪಡಿಸಿದಾಗ (ಭಾರದ. ೮೦).

[ಪರಿವಾರ+ಮೂರ್ತಿ]

ಪರಿವಾರಾಂಗನೆ (ನಾ). ಪರಿವಾರಸ್ತ್ರೀ; ಪರಿಚಾರಿಕೆ: ಪರಿವಾರಾಂಗನೆಯರ್ ಮನಃಪ್ರಿಯಸಖಂ ಮೇಧಾವಿಳಂ ಪಕ್ಕದೊಳ್ ಬರೆ (ಕುಸುಮಾ. ೯-೮೦); ಪರಿವಾರಾಂಗನೆಯರ್ . . . ಎತ್ತಲುಂ ಬಳಸಿ ತನ್ನಂ ಬರ್ಪಿನಂ ಬಂದಳಾ ಸ್ಮರಚಕ್ರೇಶನ ರಾಜ್ಯಲಕ್ಷ್ಮಿಯೆನಿಪನ್ನಂ ನಾಯಿಕಾಗೌರವಂ (ಅನಂಪು. ೨-೪೬); ಪರಿವಾರಾಂಗನಾಕರತಳಪರಿಕಳಿತವಿವಿಧಾರ್ಚನಾವಿಶೇಷಂಬೆರಸು ಪ್ರಮದವನಕ್ಕೆ ಪೋಗಿ (ಪುಷ್ಪಪು. ೩-೭೪ ವ).

[ಪರಿವಾರ+ಅಂಗನೆ]

ಪರಿವಾರಿಕೆ (ನಾ). = ಪರಿವಾರದೇವಿ: ಸ್ವಯಂಪ್ರಭೆಗಂ ರಾಣೀವಾಸದ ಕನ್ನೆವಾಡದೊಳ್ ಪರಿವಾರಿಕಾ (ದೌವಾರಿಕಾ) ಸಮೇತಮಿರವಂ ಮಾಡಿ (ಶಾಂತಿಪು. ೫-೩೯ವ). [ಸಂ. ಪರಿವಾರಿಕಾ]

ಪರಿವಾರಿತ (ಗು). ಬಳಸಿದ; ಆವರಿಸಿದ; ತುಂಬಿದ: ಬಾಷ್ಪವಾರಿಧಾರಾಪೂರಪರಿವಾರಿತ ಪಲ್ಲವನೇತ್ರೆಯುಂ (ಗದಾಯು. ೧-೫೫ವ). [ಸಂ.]

ಪರಿವಾರಿಸು (ಕ್ರಿ). ಸೇವೆ ಮಾಡು; ಪರಿಚರ್ಯೆ ಮಾಡು: ಅಟ್ಟಾಯಿಚ್ಚೆಯಱಿದುಂ ಪರಿವಾರಿಸಿ ಪಾಟಮೋದಲಚ್ಚರಸಿಯರಾಡ ಲಚ್ಚರಸಿಯರ್ ಮನದಿಚ್ಚೆಯನಿಚ್ಚೆಗೆಯ್ಯಲಚ್ಚರಸಿಯರೆಂದೊಡೇವೊಗಟ್ಟುದೋ ಜಿನಚಂದ್ರವಿಭೂತಿಲೀಲೆಯಂ (ಶಾಂತಿಪು. ೭-೭೫).

[ಪರಿವಾರ+-ಇಸ್ಕು]

ಪರಿವಾಸ (ನಾ). ೧. ತಂಗುವಿಕೆ; ವಾಸಮಾಡುವಿಕೆ. ೨. ಪರಿಮಳ; ಸುಗಂಧ: ಕೆದಱಿದ ಪಿಷ್ಟಾತಕದಿಂದೊದವಿದ ಪರಿ[ಪಾಠಾಂ. ಟ] ವಾಸಚೂರ್ಣದಿಂದಳವಡೆ . . . ಪದೆಪಂ ಪುಟ್ಟಿಸಿದುದಿಟ್ಟಳಂ ನೃಪಸದನಂ (ಪಂರಾಮಾ. ೪-೨೭). [ಸಂ.]

ಪರಿವಾಹ (ನಾ). ೧. ತುಂಬಿ ಹೊರಸೂಸುವುದು: ಲೌಹಿತ್ಯಮನಂಬುಧಿಪರಿವಾಹಮನವನೀಶನೇಱೆ ತತ್ತಟನೃಪಸಂದೋಹಮೆಱಗಿದುದ ಧೀಶಗಜಾಹತಕಾಲಾಗುರುದ್ರುಮಂಬೆರಸಾಗಳ್ (ಶಾಂತಿಪು. ೧೧-೭೮), ಕದಪನಂಗೈಗಿತ್ತು ತಲೆಗುತ್ತಿದಳು ನಯನೋದಕದ ಪರಿವಾಹದಲಿ ನನೆದಳು ಮಹಿಳೆಯಿದ್ದಳು ಬಹಳಮೋನದಲಿ (ಕುವ್ಯಾಗ. ೧೧-೪೬). ೨. ಕೆರೆ ಭರ್ತಿಯಾದಾಗ ಹೆಚ್ಚಿನ ನೀರು ಹೊರಗೆ ಹೋಗಲು ಮಾಡಿರುವ ಮಾರ್ಗ; ಕೋಡಿ: "ಪರಿವಾಹಮೆನೆ ಜಲೋಚ್ಛ್ವಾಸಮೆನೆ ಕಡೆಗೋಡಿ" (ಮಂಗರಾ. ೧೨೩-೧೫). [ಸಂ.]

ಪರಿವಾಹಿತ (ನಾ). [ನಾಟ್ಯ] ಹತ್ತೊಂಬತ್ತು ಬಗೆಯ ಶಿರೋಭೇದಗಳಲ್ಲಿ ಒಂದು; ನಿರ್ಲಜ್ಜೆ, ಮೌನ, ಹರ್ಷ, ವಿಚಾರ, ವಿಸ್ಮಯ, ಮುಗುಳ್ನಗೆ, ಪ್ರಿಯಾನುಕರಣ ಇತ್ಯಾದಿಗಳನ್ನು ಸೂಚಿಸುವಾಗ ತಲೆಯನ್ನು ಚಕ್ರದಂತೆ ಎಡಕ್ಕೂ ಬಲಕ್ಕೂ ಸುತ್ತಿಸುವುದು: ಚಂದದೆ ಚಕ್ರಂಬೋಲ್ ಸುತ್ತೊಂದಕ್ಕೆಡಬಲದ ಶಿರಮೆ ಪರಿವಾಹಿತಮುಂ (ಲಾಸ್ಯರಂ. ೧-೮೨). [ಸಂ.]

ಪರಿವಿಡಿ$_1$ (ಕ್ರಿ). ನಿಯತವಾದ ಕ್ರಮವನ್ನು ಹಿಡಿ; ವ್ಯವಸ್ಥಿತವಾದ ನಿಯಮವನ್ನು ಅನುಸರಿಸು: ವೇದೋಕ್ತಮಾರ್ಗಮಂ ಪರಿವಿಡಿದು . . . ಯಜ್ಞದೀಕ್ಷೆಯಂ ಕೈಕೊಂಡು (ಉದ್ಭಟ. ೪-೫೬ವ); ಪರಿವಿಡಿದು ನಳಚರಿತ್ರಂ ಪರಮಪವಿತ್ರಂ ನಿತಾಂತ ಪುಣ್ಯಶ್ಲೋಕಂ ವಿರಚಿಸುವನದಟನೀ ಚೌಂಡರಸಂ ಕರ್ಣಾಟವಂಶಶೃಂಗಾರರಸಂ (ನಳಚಂ. ೮); ತನಯ ಕೇಳ್ ತನುವೃತ್ತಿ ಜೀವೇಶ ಮೋಕ್ಷಂಗಳನು ನಿನಗೊರೆವೆನು ಪರಿವಿಡಿದು (ಕೈಕವ. ೧೪೮); ಮೂಲವನು ಪರಿವಿಡಿದು ನಮಗದ ಹೇಳಬೇಕೆಂದೆನಲು (ಅಂಬಿಕಾ. ೩-೫೭); ಪರಿವಿಡಿದು ಪೇಳುವೊಡೆ ಸಾಲದು ಪಗಲ್ ಪತ್ತು (ಪಾರಸಿ. ೧೭-೩೮೩). [ಪರಿ$_3$+ಪಿಡಿ$_1$]

ಪರಿವಿಡಿ$_2$, ಪರಿವಡಿ$_2$, ಹರಿವಡಿ (ನಾ). ೧. ನಿಯತವಾದ ಕ್ರಮ; ವ್ಯವಸ್ಥಿತವಾದ ಕ್ರಮ; ಅನುಕ್ರಮ: "ಪರಿಪಾಟೀ, ಅನುಪೂರ್ವೀ . . . ವಿಶಾಯಃ -ಈ ೭ ಪರಿವಿಡಿ" (ಹಲಾಯು. ೧೨೨-೫೫); ದೇವವನಿತೆಯರೆ ಪರಿವಿಡಿಯೊಳಡಿ[ಪಾಠಾಂ. ಪರಿವಡಿಯೊಳಡಿ, ಪಡಿವಡಿಯಿನಡಿ] ಗುಟ್ಟಿಯುಂ ದೇವಗಣಿಕೆಯರೆ ಕೊಳೆ ಪಾಡೆ ದನಿಮುಟ್ಟಿಯುಂ (ಅದಿಪು. ೭-೨೭ ರಗಳೆ); ಇಂತಿವು ಪರಿವಿಡಿಯಿಂದಯ್ದತೀಚಾರಮಕ್ಕುಂ (ಸುಕುಮಾ. ೬-೧೪); ಅಕ್ರಮದೊಳೊಮ್ಮೆ ಪರಿವಿಡಿಯಿಂದಲೊಮ್ಮೊಮ್ಮೆ . . . ಅಚ್ಚಿಸುತ್ತ (ತಿರುರ. ದೇ. ೫-೭); ಪರಿವಿಡಿಯ ದಿನ ವೇಳೆದಪ್ಪಿಸದಿರು (ಬಸಪು. ೧೪-೩); ಅವರೊಳಗೊಬ್ಬನನು ನಮ್ಮೂರ ದಾನವನ ಪರಿವಿಡಿಯ ಭೋಜನಕೆ ತದ್ಭೂಸುರನ ತಾಯ್ಕೊಟ್ಟಳು (ಕುವ್ಯಾಅ. ೧೦-೨೮). ೨. ರೀತಿ; ಬಗೆ; ವಿಧ; ಪ್ರಕಾರ: "ತರಃ -ಪರಿವಿಡಿ" (ಕಾಸಕೃ. ೩೭); ವೈದಿಕಪರಿವಿಡಿಯಿಂದ ಮಧುಪರ್ಕಾದಿ ಪೂಜೆಗಳಿಂದ ಸತ್ಕರಿಸಿದರು ಸಚರಾಚರ ಜಗತ್ಪತಿಯ (ಕುವ್ಯಾಸ. ೮-೭); ಸುರಪಥದೊಳು ಚರಿಸುವ ದೇವಸ್ತ್ರೀಯರಿಗೆ ವಿಲಾಸವಿಭ್ರಮದ ಪರಿವಿಡಿಗಳನು ತಿಳಿಪುವೆನೆಂಬಂದದಿ ತರುಣಿಯಾಡಿದಳುಯ್ಯಲೆಯ (ಜೀವಂಸಾಂ. ೧೮-೬೭); ಮುಗುಳ್ಗಜೆಯನ ಶಕ್ತಿಗಿಡಿಪ ಪರಿವಿಡಿಯಂ . . . ಆಗಮಮಂ ವ್ಯಕ್ತೀಕರಿಸುವುಪಾಧ್ಯಾಯರನಾಂ ಭಕ್ತಿಯಿನಭಿವಂದಿಸುವೆಂ (ಜಯಕಾ. ೧-೪); ಆಗಳುಮೆಮಗೆ ಜಿನಾಗಮ

ರಾಗಂ ಸಮುನಿಸುಗೆ . . . ಗುರುಜನರ ಪೇಟ್ಟು ಪರಿವಿಡಿಯಿಂದಂ (ಪಡ್ಡಾಸು. ೨೬೪ ಪ್ರಯೋ); ಕಿರಣನಯನಸಹಸ್ರವಿಲ್ಲದ ತರೆ ಸುರಪರ ಪರಿವಿಡಿಯೊಲುರುತರದ ವೀರರ ದೇವನಹುದೆಂದೆನುತ ಬೆರಗಾದ (ಕೋಗಯ. ೧೧–೨೩). ೩. ಸಾಲು ; ಪಂಕ್ತಿ ; ಶ್ರೇಣಿ : ಸಮುಚಿತಾಸನದೊಳ್ ಕ್ರಮದಿಂ ಕುಳ್ಳಿರ್ದ ಪಟ್ಟಸಹಣಿಯರ ಪರಿವಿಡಿಯೊಳಂ (ಗಿರಿಕ. ೨–೧೦೫ಸ); ಸುಧಾಧಿತ್ತಿಗಳ ಪರಿವಿಡಿಗಳಿಂದುಭಯ ವೀಥಿಗಳು ಮೆಱೆದವು (ಹಜಕಾ. ೧೦–೩೪); ಬೆಳುಗೊಡೆಯ ಮಿಳಿರ್ವ ಪತಾಕೆಗಳ ಪರಿವಿಡಿಯ . . . ಸೌಧಗಳಲವನಿಯ ತೊಡಿಗೆಯೆನೆ ರಂಜಿಸುತ ಪುರವು (ತೊರಕಾ. ೧–೧೩–೪); ನಿಲ್ಲ ಪೆಣ್ಪಡೆಯೆನಲ್ ಪರಿವಿಡಿಯ ತೋಂಟಗಳ್ ತಲೆದೂಗೆ ತೆಂಗುಗಳ್ ಮೆರೆವ ಕಾಲೂರು (ಕಾಲೂರ. ೪೭–೬೬). ೪. ಪರಂಪರೆ : ಭರತ . . . ಪುರೂರವರಿಂದಮಿನ್ನೆಗಂ ಪರಿವಿಡಿಯಿಂದೆ ಬಂದ ಶಶಿವಂಶಮದೀಗಳವಂದಿರಿಂದೆ ನಿತ್ಯರಿಸುವುದಕ್ಕುಂ (ಪಂಪಭಾ. ೬–೧೬); ಪರಿವಿಡಿಯ ಕೇಳರಸ ಮೊದಲಲಿ (ಕುಸ್ಯಾಳ. ೫–೧೫); ಸನತ್ಕುಮಾರನು ಸರಸಿರುಹಸಂಭವನ ಸಭೆಯಲಿ ಸುರಮುನೀಂದ್ರರ ಮಧ್ಯದಲಿ ನಿಮ್ನಸ್ಥಯೋಗದ ಪರಿವಿಡಿಯ ರಘುವಂಶವನು ವಿಸ್ತರಿಸಿದನು (ತೊರಕಾ. ೧–೫–೬). ೫. ರೂಢಿ; ಬಳಕೆ ; ಅಭ್ಯಾಸ : ಪಿರಿಯರಸಿಯ ಪಟವೇಟದ ಪರಿವಿಡಿ ಮಗುಟ್ಟುಂ ಕೊನರ್ಚುದು (ಶಾಂತಿಪು. ೯–೫೨); ಪರಮಪುರುಷಾರ್ಥವಿರ್ದುದು ಚರಮದೊಳನ್ನೆವರಮುಟಿದ ಪುರುಷಾರ್ಥದೊಳಾಚರಿಸುವುದು ತಕ್ಕುದದುಂ ಪರಿವಿಡಿಯಂ ತಪ್ಪಲಾರ್ಗಮೇಂ ಬಂದಪುದೇ (ಪಂರಾಮಾ. ೬–೧೨೯). ೬. ವರ್ಗ ; ದರ್ಜೆ : ಪರಿವಿಡಿಯಿಂದಮೆಂತವರವರ್ ಪೆಱಗಿರ್ಪುದೆನುತ್ತುಮಾ ಮಹೀವರನಿರವೇಟ್ಟು ನೇಮಿಸುತಿರಲ್ (ಕುಸುಮಾ. ೧೫–೮೩); ಅರಸನಖಿಲದಿಗಂತದವನೀಶ್ವರರನವರವರುಚಿತಮಾನ್ಯದ ಪರಿವಿಡಿಯಲುಡುಗೊಱೆಗಳಲಿ ವಿನಯೋಪಚಾರದಲಿ ಹಿರಿದು ಮನ್ನಿಸಿ ಕಳುಹಿದನು (ತೊರಕಾ. ೧–೭–೬೧). ೭. ಗುಂಪು ; ಸಮೂಹ : ಉರುಳುವ ಶಿರದ ಬೀಳುವ ಭಟರ ಮೆದೆಗೆಡೆವಾನೆ ಕುದುರೆಗಳ ಪರಿವಿಡಿಯದಂತಿರಲಿ(ಕುಸ್ಯಾಳ. ೪–೨೯); ಮದಕರಿಯಿಪ್ಪತ್ತು ವರಧೀರರೆಂಟುಸಾಸಿರದ ಪರಿವಿಡಿಯಹ ಪೌಜ ಪಾನಗೆ ತೋಱುವ ನೆಱೆ ಕಲಿಯಬುದುಲ್ಲಪಾನ (ಕಂಸವಿ. ೧೧–೮೭). ೮. ಅಚ್ಚುಕಟ್ಟು ; ಓರಣ ; ಸೊಗಸು : "ಅಣಿ = ಪರಿವಿಡಿ" (ಕಾಕಶ್ಯ. ೩೩); ತದನಂತರಮಿರದಾಕೆಯನುದಾತ್ತಧಾತ್ರೀತನೂಜೆ ಪರಿವಿಡಿಯೊಳ್ ತಂದಿರೊಳ್ ನಿಱಿಸಿ (ಶಾಂತಿಪು. ೫–೧೨೧); ನರರುಧಿರಮಾಂಸೋಪಹಾರದ ಪರಿವಿಡಿಯ ಪರಿಭಾವಶುದ್ಧಿಯ ಪರಮಭಕ್ತಿಯಲೊಲಿಸಿದನು ಶಸ್ತ್ರಾಧಿದೇವತೆಯ (ತೊರಕಾ. ೬–೨೦–೪೦); ಕಳಿಂಗ ಸಿಂಹಳೇಶ್ವರರಿತ್ತ ಪಟ್ಟಾಂಶುಕಹಯ ಕರಿ ರತ್ನ ಮೊದಲಾದ ಕಪ್ಪವ ನೃಪನೀವ ಪರಿವಿಡಿಯೆಸೆದುದಾ ಸಭೆಯೊಳು (ತ್ರಿಭುವಿ. ೬–೨೨); ಸುರಪನಾಸ್ಥಾನಮಂಟಪದ ಶೃಂಗಾರದ ಪರಿವಿಡಿಯನು ಸೋಲಿಸುತ . . . ವರಚಿತ್ರಶಾಲೆಯೊಪ್ಪಿದುದು (ಕಂಸವಿ. ೬–೩೧). ೯. (ಪುಸ್ತಕದಲ್ಲಿಯ) ಗ್ರಂಥ ವಿಷಯದ ಅನುಕ್ರಮಣಿಕೆ: ವಿಷಯ ನಿರ್ಣಯಿಸುವಾಗ ಗ್ರಂಥದ ಶಿರೋನಾಮ, ಮುನ್ನುಡಿ, ಪ್ರಸ್ತಾವನೆ, ಪರಿವಿಡಿ, ಆಧಾರಗ್ರಂಥಗಳ ಪಟ್ಟಿ . . . ಇತ್ಯಾದಿಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾನೆ (ಗ್ರಂಥಾಲ. ೧೬). ೧೦. ಅಧ್ಯಯನ ; ವ್ಯಾಸಂಗ: ಪರಿವಿಡಿಗೆಯ್ದು ತಾಪಸಕುಮಾರಕರೊಳ್ ಸ್ಮೃತಿಯೂಧಮಂ ನಿರಂತರಮೊಡಗೂಡಿ ವಾದಮನೆ ತಪ್ಪದೆ ಮಾಟ್ಟುದು . . . ರಾಜಶುಕ[ಬಾಲಕ]ಜಾಲಕಂ (ಕುಸುಮಾ. ೧–೧೩೫). 'ಪರಿವಿಡಿಗೆಯ್' ಪರಾ. **ಪರಿವಡಿ₂** : ೧. ಕೆರನೂರ ಮಹಾಜನಂ ಅಯ್ವತ್ತಿಂಬರ್ಗ್ಗಂ ಇಪ್ಪತ್ತು ಗದ್ಯಾಣ ಪೊನ್ನೊಟ್ಟು ಪಡೆದರ್ ಎಚ್ಚಲೊಂದು ಪರಿವಡಿಯಂ (ಎಕ. X, ಕೋಲಾರ. ೫೭–೧೨; ಸು. 925); ಮುರರಿಪುಗೆ ಸೂಡುಸೂಟೊಳೆಬರೆ ಕರದೊಳು ಶಂಖಚಕ್ರಮುದ್ಗರಪದ್ಮಂ ಪರಿವಡಿಯಿಂ ಪೆಸರ್ಗೊಳ್ಪನ್ನೆಡೆಯಾದವು ಮೂರ್ತಿಭೇದಮೂ ವೈಷ್ಣವರೊಳ್(ಸಮಸ. ೮–೧೩೮); ಗರುಡದೇವರು ಬಳಿಕ ನಾಗರ ಹಿರಿಯರೊಳು ಪರಿವಡಿಯು ನುಡಿದರು (ಸಂಭವ. ೫–೬೦). ೨. ದರಹಸಿತಂ ಹಸಿತಂ ಸುಂದರ ಮನ್ಮಥಲಸಿತಮುಚಿತರಂಗಿತ ಮೆಂಬೀ ಪರಿವಡಿಯ ಬಾಲಕೇಲಿಯೆ ಕರಮೆ ಮರುಳ್ಪಿದುದು ತಾಯುಮಂ ತಂದೆಯುಮಂ (ಅಜಿಪು. ೮–೩೮). **ಹರಿವಡಿ** : ೧. ಆಚಂದ್ರಾರ್ಕ್ಕಸ್ಥಾಯಿ ಮಾಡಿ ಹರಿವಡಿಗೆ ಬಿಟ್ಟು ಗ್ರಾಮಕ್ಕೆ ಪಾದಪೂಜೆಗೊಟ್ಟ ಗದ್ಯಾಣಂ ನಾಲ್ಕೂರು (ಕಾ.IV, ೨೫–೨೧; 1054).

ಪರಿವಿಡಿಯಂಕ = ಕ್ರಮಬದ್ಧವಾದ ಹೋರಾಟ,—ಕಾಳಗ : ಪರಿವಿ[ಪಾಠಾಂ. ಪ]ಡಿಯಂಕದಂತೆ ಪೊಱಮಟ್ಟದೆ ಸೂಱೂಱುಮೊಕ್ಕಿದುಱ್ ಸಿಡಿಲ್ತರೆ . . . ಪೋರ್ದುವಾನೆಗಳ್ (ಪರ್ಧಪು. ೮–೫೩).

[<ಪರಿವಡಿ₁/ತೆಲು. ಪರುವಡಿ]

ಪರಿವಡಿಗಾಱ (ನಾ). ಸರದಿಯ ಪ್ರಕಾರ ಕಾವಲು ಮಾಡುವವನು ; ಪಹರೆಗಾರ : ಒಱೆಗಳನುಗಿದ . . . ಕತ್ತಿದಾಳುಗಳ ಪರಿವಡಿಗಾಱರು ಚಂಗುತಿರ್ದರು (ಕಂಸವಿ. ೧೧–೧೪೭). [ಪರಿವಡಿ₂ + –ಗಾಱ]

ಪರಿವಡಿಗೆಯ್₂ ಪರವಡಿಗೆಯ್ (ಕ್ರಿ). ೧. ಅನುಕ್ರಮವಾಗಿ ಪಠಿಸು ; ಹೇಳು ; ಒಪ್ಪಿಸು ; ನಿವೇದಿಸು : ಪರಿವಡಿಗೆಯ್ದೊಸೊಂದಿಗಿಳ ತಂದೆಯ ತಾಯ ಸಮೀಪದೊಳ್ ತನೂದರಯ ರತೋಪಯುಕ್ತರುತಮಂ (ಶಾಂತಿಪು. ೮–೮೫; ರಸರ. ೪–೧೭೭ನೋ); ಜಿನರ ಮುಂದೆ ಜೈನಾಗಮಮಂ ಪರಿವಡಿಗೆಯ್ಯರೆ ಚಂದನದ ರಸದಿ ಚಂದನದ ದೇವರಂ ಪೂಜಿಸರೆ (ಅಜಿಪು. ೬–೮೧); ಪರಿವಡಿಗೆಯ್ದೆ ರಾಜಶುಕನೋಪನ ಸಾಹಸಮಾಲೆಯಂ . . . ಬಾಷ್ಪದಿನಂದಭಿಷೇಕಪೂಜೆಯಂ ವಿರಚಿಸಿ ಭಾವಿತಾತ್ಮೆ ಮೆಱೆದಳ್ ಪತಿಗಂಗನೆ ತನ್ನ ನಲ್ಮೆಯಂ (ಶೃಂಗಾರ. ೩–೬೬). ೨. ವ್ಯವಸ್ಥೆಗೊಳಿಸು ; ಕ್ರಮಪಡಿಸು : ಮುನ್ನಂ ಪರಿಣತವಡೆದರ್ ಸಕಳವಿದ್ಯೆಯನೀಗಳ್ ಪರಿವಡಿಗೆಯ್ವಂತೆ ಕಳಾಧರನಾದಂ ತ್ರಿಭುವನಂ (ಮಲ್ಲಿಪು. ೪–೧೩೪). ೩. ಪುನರಾವರ್ತನೆಗೊಳಿಸು ; ಮತ್ತೆ ಮತ್ತೆ ನಡೆಸು ; ಪುನರಾವರ್ತಿಸು : ಪೋದ ಕೂಟಮಂ ಪರಿವಡಿಗೆಯ್ದೊಚಿತ್ತಮೆಳಸಿತ್ತು ರತಾಂತಸುಖಾಂತಮೋಪರಾ (ಚಂದ್ರಪ್ರ. ೮–೭೦). ೪. ಅಧ್ಯಯನ ಮಾಡು; ವ್ಯಾಸಂಗ ಮಾಡು: ಸರ್ವಾಂಗ ಮಲಧಾರಗಳೊಂದು ಶಿಲಾತಳದ ಮೇಗಿರ್ದಾಗಮಮಂ ಪರಿವಡಿಗೆಯ್ದುತ್ತುಮರ್ಥಮಂ ಭಾವಿಸುತ್ತಂ ಸ್ವಾಧ್ಯಾಯದೊಳ್ ತಗುಳ್ದಿರ್ದೋರಂ . . . ಕರಿಯ ಮೃಗಮಿರ್ದುದೆಂದು ಬಗೆದು (ಪಡ್ಡಾರಾ. ೯೭–೩) ; ಸಕಲಶ್ರುತಮುಮಂ ಪರಿವಡಿಗೆಯ್ವಲ್ಲಿ ಶ್ರಮವಿಲ್ಲದುದು ವಾಗ್ಬಲಮೆಂಬುದು (ತಸೂಪ್ರ. ೧೧೮) ; ಶಸ್ತ್ರವಿದರೊಳ್ ಭರದಿಂ ನಿಜಶಸ್ತ್ರವಿದ್ಯೆಯಂ ಪರಿವಡಿಗೆಯ್ದು ರಾಜಸುತರೊಪ್ಪುಗುಮಾ ಪುರಗೋಪುರಂಗಳೊಳ್ (ಜಗವಿ. ೨–೧೭) ; ಗುರುಮುಖದೊಳಾ ಕುಮಾರಂ ಪರಿವಡಿಗೆಯ್ದು ಪನತೀತಜನ್ಮಾಭ್ಯಾಸಸ್ಫುರದಖಿಳವಿದ್ಯೆಗಳಂ (ಪುಷ್ಪಪು. ೪–೫೭). **ಪರಿವಡಿಗೆಯ್** ; ೧. ತ್ರಿಲೋಕಪ್ರಜ್ಞಪ್ತಿ ಎಂಬುದಂ ಮೃದುಮಧುರಗಂಭೀರಸ್ವರದಿಂ ಭಟಾರರ್ ಪರಿವಡಿಗೆಯ್ದಾಗಳ್ (ಪಡ್ಡಾರಾ. ೨೮–೧೦) ; ತ್ರಿಲೋಕವಂದ್ಯಂ ತ್ರಿಲೋಕಪ್ರಜ್ಞಪ್ತಿಯಂ ಪರಿವಡಿದಪ್ಪದೆ ಪರಿವಡಿಗೆಯ್ವುದುಂ (ಸುಕುಮಾ. ೧೧–೭೭ ವ) ; ಪಾಠಮಂ ಪರಿವಡಿಗೆಯ್ದ ರಾಜಶುಕಪೊಲಾ ಮನೋಹರಯಾನದಿಂದೆ ಸಂಚರಿಸ ಮರಾಳಪೊಲು . . . ಸೋಲ್ವರ ಮನಮಂ ಪಳಂಚಿಲೆಯುಂತೀ ನಱುಗುನ್ನಮೆ ರಂಜಿಕುಂ (ಕಾ. V, ೨೫–೧೮ ; 1147).

[ಪರಿವಡಿ₂ + ಕೆಯ್₁]

ಪರಿವಡಿಯಿಟ್ಟು (ಕ್ರಿ). ಕ್ರಮ ತಪ್ಪಿಸು ; ಅತಿಕ್ರಮಿಸು : "ಪರಿವಡಿಯಿಟ್ಟು ಸಿಡುದೆಯ್ದೆ ನೂಂಕಿದುದು" (ಕವಿಕಂ. ೧೩೮).

[ಪರಿವಡಿ₂ + ಇಟ್ಟು]

ಪರಿವಿಡು, ಹರಿಬಿಡು, ಹರಿವಿಡು (ಕ್ರಿ). ೧. ಹೋಗಲು ಬಿಡು; ಹೋಗಗೊಡು: ಮೂಗರಿದು ಕೈಕಾಲ್ಗೆಟ್ಟು ಬಾಯ್ತೆಟ್ಟರಂ ಪರಿವಿಟ್ಟು...ತಿವಂ ಬಟ್ಟಾಡಿ ಬಿಟ್ಟೋಡಿದಂ (ಚಿಕಪಿ. ೫–೨೨). **ಹರಿಬಿಡು:** ೨. ಏಕಾಗ್ರವಾಗಿಸು: ತನ್ನೆಲ್ಲ ಶಕ್ತಿಯನ್ನು ಕೃತಿನಿರ್ಮಾಣಕ್ಕೆ ಹರಿಬಿಟ್ಟಿದ್ದಾನೆ (ತಜನಿ. ೧೦೮). ೩. ಹಾಯಿಸು; ಹರಿಯಿಸು: ದೃಷ್ಟಿಯನ್ನು ಮುದುಕಿಯ ಮುಖದ ಮೇಲೆ ಹರಿಬಿಟ್ಟ (ಮಣ್ಣುಹೆ. ೪); ಬೆನರು ಒರೆಸಿಕೊಂಡು ಮತ್ತೊಂದು ಕಡೆಗೆ ವಿಚಾರ ಹರಿಬಿಟ್ಟ (ಅಪನಾ. ೨೫೪). ೪. ಮುಂದುವರಿಸು: ಅವನು...ಪ್ರಚಾರಕಾರ್ಯವನ್ನು ಪರಿಣಾಮಕಾರಿಯಾಗಿ ಹರಿಬಿಟ್ಟನು (ಭಾರಥಿ. ೧೩). **ಹರಿವಿಡು:** ೧. ಕಡುವೇಗದಿಂದೊಂದು ಬಾಣಮಂ ಹರಿವಿಡಲ್ ಬೇಗದಿಂ ಬೆಂಬತ್ತಿ ಸರಳೆರಳೆಯಂ ಕೆಡೆಸಿತಾಕ್ಷಣದೊಳು (ಚೆಬಪು. ೩೨–೨೪).

[ಪರಿ$_2$+ಬಿಡು$_1$]

ಪರಿವಿತ್ತಿ (ನಾ). ತಾನು ಮದುವೆಯಾಗದೆ ಮದುವೆಯಾದ ತಮ್ಮನನ್ನುಳ್ಳ ಅಣ್ಣ: "ಪರಿವಿತ್ತಿ: — ೧ ತಜ್ಜ್ಯೆಯಾನ್ — ಅಂಥಾ ಪರಿವೇತ್ತನೆಂಬ ಪಾಪಿಷ್ಠನ ಅಣ್ಣನ ಹೆಸರು" (ಸಿದ್ಧಾಂತಿ. ೨೩೩).

[ಸಂ.]

ಪರಿವಿತ್ತು (ನಾ). = ಪರಿವಿತ್ತಿ: ಪಿರಿಯರ್ಗೆ ಮುನ್ನಮೆ ಮದುವೆಯಾದ ಪರಿವೇತ್ತರುಂ ಪರಿವೇತ್ತರ್ಗೆ ಪಿರಿಯರಾದ ಪರಿವಿತ್ತುಗಳುಂ (ಭಾರಶಾಂ. ೩೪೨–೪೫). [<ಸಂ. ಪರಿವಿತ್ತ]

ಪರಿವಿಷ್ಟ (ಗು). ೧. ಸುತ್ತಲ್ಪಟ್ಟ; ಬಳಸಲ್ಪಟ್ಟ: ಪರಿವಿಷ್ಟಾಖಿಲರಾಜಲೋಕಮನಿತುಂ ದತ್ತಾನನಾತ್ರೇಯಬಿಂಬರುಮಾಗೀತನಧೂತ ಪೂರ್ವತರರೂಪಂ ನಾಡೆಯುಂ ನೋಡೆ (ಕುಸುಮಾ. ೧೫–೫೯); ಪರಿವಿಷ್ಟ ಸ್ವಸ್ವ ಕರ್ಮಾಷ್ಟಕಮಲದಳಿಂ ಕೆಳ್ಪುಗಳ್ ಪೋಟ್ಟುವಾದಂ ಚರಮಾಂಗ ವ್ಯಕ್ತಿಯಿಂದೊಯ್ಯನೆ ತನುತೆಗೆ ಪಕ್ಕಾಗಿ ಜೀವಸ್ವರೂಪಂ ಹರಿಸಂ ಬೆತ್ತೊಪ್ಪೆ (ಶಾಂತೀಶ್ವ. ೧–೨). (ನಾ). ೨. ಸುತ್ತಲ್ಪಟ್ಟುದು; ಬಳಸಲ್ಪಟ್ಟುದು: "ನಿವೃತಂ, ವೇಷ್ಟಿತಂ, ಪರಿವಿಷ್ಟಂ, ವಳಯಿತಂ ಪರಿಕ್ಷಿಪ್ತಂ — ಈ ೫ ಸುತ್ತಲ್ಪಟ್ಟುದು" (ಹಲಾಯು. ೧೧೮–೨೭). [ಸಂ.]

ಪರಿವಿಸರ (ನಾ). ಸಮೂಹ; ಗುಂಪು: ಎಸೆದುದಧ್ವರವೆರಡರಧಿ ಮುಖವಸತಿಯಧಿವಳಯದಲಿ ಸಂದಾದಿಸಿದ . . . ಪರಿವಿಸರದಮಳ ಸುವರ್ಣಕುಂಭಪ್ರಸರದಲಿ ತದ್ವಿಧಿವಿಹಿತಯಜ್ಞೋಪಕರಣದಲಿ (ತೊರರಾ. ೧–೬–೩೩). [ಸಂ.]

ಪರಿವಿಸ್ತರ (ನಾ). ಹರಡುವಿಕೆ; ಹಬ್ಬುವಿಕೆ; ಪಸರಿಸುವಿಕೆ: ಕರ್ಪೂರದ ಪರಿಪರಿಯ ಕಡಸಾಲ ಪರಿವಿಸ್ತರದ ಧೂಪದ ಧೂಮಗಂಧೋತ್ಕರಸಮುದ್ರದೊಳದ್ದನೊಲ್ಲದೆ ಪಥವ ಪವಮಾನ (ತೊರರಾ. ೧–೧೩–೫).

[ಸಂ.]

ಪರಿವೀಕ್ಷಣೆ (ನಾ). ಪರಿಶೀಲನೆ; ಸಮೀಕ್ಷೆ: ಈ ಶತಮಾನದ ಪ್ರಾರಂಭದ ದಶಕದಲ್ಲಿ ಭಾರತದ ಭಾಷೆಗಳ ಪರಿವೀಕ್ಷಣೆ ನಡೆಸಿದ ಜಿ. ಎ. ಗ್ರಿಯರ್ಸನ್ ಪೆಗುಭಾಷೆಯನ್ನು ಕುಯಿಭಾಷೆಯೊಡನೆ ಸಮೀಕರಿಸಿದ್ದನು (ದ್ರಾವಿವಿ. ೧೭೨). [ಸಂ. ಪರಿವೀಕ್ಷಣಾ]

ಪರಿವೀಕ್ಷಿಸು (ಕ್ರಿ). ನೋಡು; ಪರಿಶೀಲಿಸು; ಸಮೀಕ್ಷಿಸು: ಅಕ್ಷೂಣಾರ್ಥಂ ತ್ರಿಂಶಲ್ಲಕ್ಷಂ ಹರಿಸಷ್ಟಿಲಕ್ಷಮಾಪಾದಾತಂ ಲಕ್ಷಾಲಕ್ಷಮದಂ ಪ[ರಿ]ವೀಕ್ಷಿಸಲರಿದುಱದಿರ್ಚಿ ಕಾದುವರೊಳರೇ (ಶಾಂತಿಪು. ೧೦–೧೦೭); ಪರಿವೀಕ್ಷಿಸುವುದು ನೀಮೆಂದರಸಂ ವಸುದೇವನಂ ಸ್ವಯಂವರಸದನಕ್ಕೆರ ದಾಗಳೊಯ್ದು ಸದ್ವಿಸ್ತರವಿಭವಂ ನೃಪತಿನಿಕರಪರಿವೃತನಿರ್ದಂ (ನೇಮಿಪು. ೩–೧೭೫). [ಪರಿವೀಕ್ಷಣೆ+–ಇಸು$_3$]

ಪರಿವೀಜನ (ನಾ). ಗಾಳಿ ಬೀಸುವುದು; ಗಾಳಿ ಹಾಕುವುದು: ಕುರುಕುಲಚೂಡಾಮಣಿ ನಿಜಗುರುಗಳ ನಯನಾಂಬು ತಳಿವ ಜಲಮಾಗಿರೆ ತದ್ಗುರುಗಳ ದೀರ್ಘೋಚ್ಛ್ವಾಸಮೆ ಪರಿವೀಜನ[ಪಾಠಾಂ. ಘೋಷಮು] ಮಾಗೆ ಮೂರ್ಛೆಯಿಂದೆಬ್ಬಿತ್ತಂ (ಗದಾಯು. ೩–೮೪). [ಸಂ.]

ಪರಿವೀತ (ಗು). ೧. ಸುತ್ತುಗಟ್ಟಲ್ಪಟ್ಟ. ೨. ಹರಡಲ್ಪಟ್ಟ.

[ಸಂ.]

ಪರಿವು, ಹರಿವು$_2$, ಹರಿಹು$_2$, ಹರುಹು$_3$ (ನಾ). ೧. ಹರಿಯುವಿಕೆ; ಪ್ರವಹಿಸುವಿಕೆ. ೨. ನೀರೋಟ; ಪ್ರವಾಹ: ಪಿರಿಯ ಪ[ರಿ] [ಪಾಠಾಂ. ರ]ವುಗಳ ಸುತ್ತಿದ ಪರಿಕಾಲ್ಗಳ ತುಱುಗಿದಣ್ಣಗಳ ತೀವಿದ ಪೊಕ್ಕರಣಿಗಳ ನೆಱೆದ ಕೆಱೆಗಳ ಸರೋವರಂಗಳ ಬೆಡಂಗಗುಂದಲೆ ಪುರದೊಳ್ (ಸುಕುಮಾ. ೯–೫೧); ಮೊಱೆಮೊಱೆದು ಘೊರ್ಮಿಸುವ ಪರಿವುಗಳ ಮುರಿವುಗಳ . . . ಗಂಗೆಗವನಿಜೆ ಬಂದಳು (ಚೈವಿಭಾ. ೧೯–೫). **ಹರಿವು$_2$:** ೧. "ಸ್ರೋತಸ್ = ನದಿಯ ಹರಿವು" (ನಾಚರಾ. ೫); ಬಸಕಾಂತನ ಮನೆ ನೀರುಹರಿವಿಗೆ ಎದುರಾಗಿತ್ತು (ಸಿಳಜೀ. ೪೦); ನೀರಿನ ಹರಿವಿನಲ್ಲಿ ತೇಲ ಬಿಟ್ಟು ಅವುಗಳ ಸಾಗುವಿಕೆಯನ್ನೇ ಹಿಂಬಾಲಿಸುತ್ತಿದ್ದನು (ಒಡ್ಡಿಉ. ೨). ೨. ನೊರೆ ಮೊರೆಗಳನುಳಿದೇಳುತೆ ಉರುಳೇರುವ ತೆರೆಗಳಂತೆ ಹರಿವಿನೊಳೇ ನಿದ್ರಿಪಂತೆ ಮರೆ ಮರೆಸುತೆ ಹರಿವುದು (ವಿಸೀಗೀ. ೧೨–೧೯). ೩. ಧಾಳಿ; ಮುತ್ತಿಗೆ; ದಂಡೆತ್ತಿ ಹೋಗುವುದು: ಬೀರಬಯನಾಡ ಹರಿವಿನಲು ಕಾದಿ ಕಳ್ಳರಟ್ಟಿ ಬೀರಪದಕೆ ಸಂದರು (ಮೈಅರಿ. ೧೯೪೧, ೨೩–೩; 1051). ೪. ಸ್ಥಿತಿ; ಸ್ವರೂಪ: ತ್ರಿವಿಧಭಕ್ತಿಗೆ ನೀವೇ ಕಾರಣವಾಗಿ ಬಂದಿರಿ ಪ್ರಮಥರು ಸಹಿತ ಮುಟ್ಟಿ ಪ್ರಾಣಲಿಂಗದ ಹರವ ತೋಱುಸಬೇಕೆಂಬ ನಿಮಿತ್ತ (ಚನ್ನವ. ೨೦–೪೪). ೫. ಚಾಂಚಲ್ಯ; ಅಸ್ಥಿರತೆ: ಚಿತ್ತದಲಿ ಹರಿವಿಲ್ಲದಿಪ್ಪುದೆ ಭಕ್ತಿಯಿಲ್ಲದುದಲ್ಲದರ್ಥವದಿಲ್ಲದಿಲ್ಲದುದೇ ಹೆದಱಲೇಕೆ (ಬಸಪು. ೨೭–೨). **ಹರಿಹು$_2$:** ೬. ಚಲನೆ; ನಡೆ; ಓಟ: ಸ್ಯಂದನಂ ಶಕಟಂ . . . ಚಕ್ರಿಯೊಂದೆನಲ್ ಭಂಡಿಯಕ್ಕವಱ ಹರಿಹು ಪ್ರವಹಣಂ ಡಯನಮೆಂದೆನಿಕ್ಕುಂ (ಸುಂಗರಾ. ೮೪–೨೩). **ಹರುಹು$_3$:** ೪. ಇವನು ಕಾಮುಕರ ಹರುಹನಂಗೀಕರಿಸಿ ನಮ್ಮನು ಕರಕರಿಸಲ್ಕೆತಂದ ಮತಿ ಗೋಚರಿಸುತಿದೆ (ತೊರರಾ. ೩–೭–೩೧). 'ಪಜುವು' ಪರಾ. [ಪರಿ$_2$+–ವು]

ಪರಿವುಪಯ್ (ಕ್ರಿ). ದಂಡೆತ್ತಿ ಬರು; ಧಾಳಿಮಾಡು: ಶ್ರೀ ನೊಲೆನಾಡ ಕುಡಲುರ ನಿಗಳಂಕಮಲ್ಲ ಚಂಗಾಳ್ವ ಪರಿವುಪಯ್ದುನ್ದು (ಎಕ. IV, ಹೆಗ್ಗಡ. ೧೦೪–೬; 1037).

[ಇದು 'ಪರಿವುಪಾಯ್' ಎಂಬುದರ ಅಪಲಿಖಿತವಿರಬಹುದೆ?]

ಪರಿವೃಢ (ಗು). ೧. ಶ್ರೇಷ್ಠವಾದ; ಪ್ರಮುಖವಾದ: ಪರಮ ಬ್ರಾಹ್ಮಪ್ರಭಾವಂ ಮನುಜ ಪರಿವೃಢಾಕಾರಮಂ ತಾಳ್ದಿತ್ತೆಂಬಂತೆರೆ (ಎಕ. V, ಬೇಲೂರು. ೧೭–೫೬; 1136); ಉರ್ವ್ಯೀವಶ್ಯವಾತ್ಮವನಿಪರಿವೃಢಶಾಸ್ತರ್ಥ್ಯ ಮಂತ್ರಂ (ಎಕ. VI, ಚಿಕ್ಕಮ. ೧೬೧–೧೧೯; 1137); ಹಸ್ತಕಲಿತಸುದರುಶನೋರ್ಧ್ವಗಧಸ್ತಿ ಲವಶಮಿತಾರ್ಕಪರಿವೃಢವಿಸ್ತರಣ ಚಿತ್ತೈಸು (ಕುಸ್ಯಾದಿ. ೧೦–೩೪). (ನಾ). ೨. ಶ್ರೇಷ್ಠನಾದವನು; ಪ್ರಮುಖ ವ್ಯಕ್ತಿ: ನಳ ನೀಲ ಜಾಂಬವ ಹನುಮತ್ಪ್ರಮುಖ ನಿಖಿಲಖಚರ ಪರಿವೃಢರುನಿರ್ಪುದುಂ (ಪಂಂಪಾಮಾ. ೧೨–೧೬ ಪ). ೩. ಒಡೆಯ; ಪ್ರಭು: "ಆರ್ಯಃ, ಪರಿವೃಢಃ, ಸ್ವಾಮಿ . . . ಅಧಿಪತಿಃ — ಈ ೧೦ ಒಡೆಯಂ" (ಹಲಾಯು. ೫೬–೧೮೮); ತಾಂ ತನ್ನ ಕೈಯ್ಯೊಳೆ ಕಟ್ಟದಂ ಕುರುಪರಿವೃಢಂ ಕರ್ಣಂಗಾ ವೀರವಟ್ಟದ ಪಟ್ಟಮಂ (ಪಂಪಭಾ. ೧೨–೫೨); ಈ ಪರಿಯೊಳಗತಿಬಳನಾಗಿ ತ್ರಿಪುರವನಾ ಪರಿವೃಢನಾಳುತಿರಲು (ತ್ರಿಪುಸಾಂ. ೬–೬೪); ಜಂಗಮಪರಿವೃಢಪ್ರಾಣಾಂಗ ಹರಹರ ಜಂಗಮಾ ವಿರತಾರ್ಚಿತಪ್ರಾಣ (ಬಸಪು. ೩೬–೫೩); ಪ್ರಮಥಪರಿವೃಢಂ ಪಾತು

ಪೈಕೊನ್ಮುದೂರಂ (ಪವಿತ್ಕಾರ. ೫-೬೬). [ಸಂ.]

ಪರಿವೃತ (ಗು). ೧. ಸುತ್ತುವರಿದ; ಬಳಸಿದ; ಸುತ್ತುಗಟ್ಟಿದ: ಪರಿವೃತಲವಣಾಬ್ಧಿಸರೋವರಮಧ್ಯಸ್ಥಿತವೆನಿಪ್ಪ ಜಂಬೂದ್ವೀಪಾಂಬುರುಹಕ್ಕೆ ತಾನೆ ಕರ್ಣಿಕೆಯಿರವಂ ತಳೆದೇಂ ಸುಮೇರು ಸಿರಿಗೆಡೆಯೊಯ್ದೋ (ಚಂದ್ರಪ್ರ. ೧೨-೮೪); ಪರಿವೃತವನಿತಾಲೋಚನಸಮರೀಚಿಚಂದ್ರಿಕೆಯು ಸೋಂಕಿನಂ ಸೋಪಾನಸ್ಫುರಿತೇಂದುಕಾಂತಮೊಸರಲ್ (ಕುಸುಮಾ. ೯-೪೨); ಪರಿವೃತಪ್ರಾಕಾರವಂ ಗೋಪುರವನೆತ್ತಿಸಿ . . . ಶಿವರಾತ್ರಿ ನೇಮವನು ಹರುಷದಿಂ ಸಲಿಸಿದನು (ಬಸವ. ೫೩-೩೦); ಕೃತ್ತಿಕೆಯ ತಿಂಗಳಲಿ, ಪಿಸಿನಪರಿವೃತಪುಲಪಿನ್ತರದ ಗದ್ದೆಕೋಗಿನಲಿ (ಚಿತ್ರಾಂಗ. ೫೩-೧೪೧). ೨. ಹರಡಿದ; ವ್ಯಾಪ್ತವಾದ; ಆವೃತವಾದ: ಪರಿವೃತ ಸ್ಪಷ್ಟುಂಗದೇವಮಾರ್ಗಂತರಗತಬೋಧ ವಿಶೇಷಯೂನ ಪಾತ್ರಂ (ಕವಿರಾ. ೩-೨೩೦); ಪರಿವೃತಪಲ್ಲವಾಂತರಪೊಳುದ್ಗತವಲ್ಕುಲ ಮಧ್ಯದೊಳ್ . . . ನಟನನೀಡನಕಾಯಮನೆಯ್ದೆ ಸುತ್ತಲುಂ ಪಿರಿಚಿಸಿ ನರ್ಧಯಂ ಪಲವುಮಿರ್ದವು ಕೀರಕುಳಂ ನಿರಾಕುಳಂ (ಕಾದಂಪು. ೧೫೭). (ನಾ). ೩. ಸುತ್ತುವರಿಯಲ್ಪಟ್ಟಿದು; ಬಳಸಲ್ಪಟ್ಟಿರುವುದು: ಆ ತಿರ್ಯಗ್ಲೋಕದ ನಟ್ಟನಡುವೆ ಲವಣಜಲಧಿಪರಿವೃತಮಾಗಿ (ಅದಿಪು. ೧-೪೮ ಪ); ಭೋಗೀಶ್ವರನಂ ಉರಗಪತಿ ನೋಡಲೆಯ್ದಿರ್ದುರುಪರಿವೃತವಾದ ತೆಱದೊಳಿರ್ದುದು ಕೋಂಟೆ (ಪವಿತ್ಕಾರ. ೧-೫೯); ಮೆರೆದುದನ್ನೆಗಂ ವನರಮ್ಯ ಗಿರಿಪಂಕ್ತಿಯಿಂದೆ ಪರಿವೃತಮಾಗಿ . . . ರಾಜಿಪ ಸರೋವರಂ ಮುಂದೆ (ಕ್ರಿರಾಮಾ. ೧೨೮-೪೭). ೪. ಹರಡಿರುವುದು; ವ್ಯಾಪ್ತವಾಗಿರುವುದು: ಪರಿವೃತಮಾಗಿ ಬರ್ಪ ಬಲಯಾನಸಮುದ್ಭವ ರೇಣುಜಾಲಂ . . . ಬೆರಸು ದಿಶಾವೀ ಬಹುಗುಹೋದರಮಂ ಪುದಿದಾ ಕ್ಷಣಂ ಪುಗುತ್ತಿರೆ (ಶಾಂತೀಶ್ವ. ೧೦-೨೦೧). ೫. ಸುತ್ತುವರಿಯಲ್ಪಟ್ಟ ವ್ಯಕ್ತಿ: ಪಿಗೆ ವಾತಗುಲ್ಮಪರಿವೃತರಾಗಿಯುಂ . . . ಸೊಗಯಿಪೇಕಾಕೆಗಳೆನಿ ಶಿವನನೊಲಿಸಿದ ಮುನೀಶ್ವರರು ಕಣ್ಗೆಸೆದರು (ಹಜಕಾ. ೬-೩೬); ಯನುತನುಜನಧಿಕನು ಹಿಡಿಂದಾರಮಣನತಿಬಲ್ಲಿದನು ಪಾರ್ಥನ ವಿಮಳ ವಿಗ್ರಹ ಲೇಸು ಸಕಲ ಮಹೀಶಪರಿವೃತರು ಯಮಳರಿರವತಿಚೆಲುವು (ಕುಪ್ಯಾಖು. ೪-೨೦); ಮೊಗಸಾಲೆಯೊಳ್ಳತಿಪಯಭಟಪಟಲಪರಿವೃತ ನೋಲಗಂಗೊಟ್ಟು (ರಾಜಶೇ. ೧೩-೩೧ ವ).

ಪರಿವೃತರೇಫ = ಸುತ್ತುವರಿದ ಆಕಾರದ ರೇಫ; 'ರ್' ಕಾರ: ಪರಿವೃತರೇಫಲೋಪಕ್ಕೆ—ಕ್ರೀಣಿ-ಕೇಣಿ (ಕಸುದ. ೨೬೧ ಪ್ರಯೋ).

[ಸಂ.]

ಪರಿವೃತ್ತ (ಗು). ೧. ತಿರುಗಿದ; ಸುತ್ತಿದ. ೨. ಹಿಂದಕ್ಕೆ ತಿರುಗಿದ; ಹಿಮ್ಮುಖವಾದ. ೩. ಸುತ್ತುವರಿದ; ಬಳಸಲ್ಪಟ್ಟ. ೪. ಗುಂಡಾದ; ದುಂಡಗಿರುವ; ವರ್ತುಲಾಕಾರವಾದ: ಒದವಿದ ಕರ್ಪನೆಯ್ದೆ ಪರಿವೃತ್ತಪಯೋಧರಭೂಜುಗಕ್ಕೆ ಮಾಡದೆ . . . ಬಳೆದೊಂದು ಗರ್ಭಮೆ ಮನಂಗೊಳಲಾರ್ತುದು ನುಂದಯಾನೆಯೂ (ಅದಿಪು. ೮-೪೭); ತುಜುಗಳ ಪೊತ್ತ ಮುಸುಕಿದವಧಿಕಹರುಷದಲಾ ಮುರಾಂತಕನ ಸುತ್ತಿ ನಿಂದಿದ್ದೀಕ್ಷಿಸುತ ಪರಿವೃತ್ತಲೋಚನಗಳಲಿ ಮೋಹನ ಸೂರ್ತಿಯನು (ಶಿಭಾಗ. ೧೦-೧೭-೧೩). ೫. ಕೊನೆಗೊಂಡ; ಮುಕ್ತಾಯ ಹೊಂದಿದ. ೬. ವಿನಿಮಯವಾದ; ಅದಲುಬದಲು ಮಾಡಿದ. (ನಾ). ೭. [ಛಂದ] ಪದ್ಯಗಳಲ್ಲಿ ಯಮಕಗಳು ಅಲ್ಲೊಂದು ಇಲ್ಲೊಂದು ಬಂದಿರುವುದು: ಪರಿವೃತ್ತಂ ಸಂದಪ್ಪಂ ನಿರಂತರಾವಳಿ ಸಮುದ್ಗಮೆಂಬಿವು ಮೊದಲಾಗಿರೆ ಯಮಕಭೇದಂ (ಕಾವ್ಯಾವ. ೫೪೬). ೮. [ನಾಟ್ಯ] ನೂರೆಂಟು ಬಗೆಯ ಕರಣಗಳಲ್ಲಿ ಒಂದು; ℙ"ಕೈಗಳನ್ನು ಊರ್ಧ್ವಮಂಡಲದಿಂದ ಸುತ್ತಿಸುತ್ತ, ಸೂಚೀಪಾದದಿಂದ ಬದ್ಧಚಾರಿಯನ್ನು ಮಾಡಿ ಸುತ್ತುವುದು" (ಲಾಸ್ಯರಂ. ೩೦೧ ಗದ್ಯಾನುವಾದ): ಎರಡುಕರಮೂರ್ಧ್ವಮಂಡಲ ದೊರೆಪಡೆದಿರೆ ಬದ್ಧಚಾರಿಯಂ ಪದಸೂಚಯಿನುರುತರದೆ ಮಾಡಿ ತಿರುಗಿಸಿ ತಿರುಪಂಗೊಳೆ ತಾಂ ಸಮಂತು ಪರಿವೃತ್ತವಿದುಂ (ಲಾಸ್ಯರಂ. ೪-೧೩೮). [ಸಂ.]

ಪರಿವೃತ್ತಂಬೆಱು (ಕ್ರ). ವರ್ತುಲಾಕಾರವನ್ನು ತಳೆ,–ಹೊಂದು: ಪರಿವೃತ್ತಂಬೆತ್ತ ಬಿಂಬಂ ಪಡುವಣ ಕಡಲೊಳ್ಪೊಂದಿಸಲ್ . . . ಸತ್ಕಾಂಚನ ಪಡುರುಗದಂತಿರ್ದನಂಭೋಜಮಿತ್ರಂ (ಕ್ರಿಶಿವಿ. ೨-೧೧೪).

[ಪರಿವೃತ್ತ+ಪೆಱು,]

ಪರಿವೃತ್ತತೆ (ನಾ). ವರ್ತುಲಾಕಾರ; ದುಂಡಾಗಿರುವಿಕೆ: ಪರಿವೃತ್ತತೆಯಿಂ ನುಣ್ಪಿಂ . . . ಪರಿಪಕ್ವ ತಾಳಫಲದೊಳ್ ದೊರೆಯೆನಿಸುಗುಮವಳ ಘನಪಯೋಧರಯುಗಳಂ (ಕಾಪ್ಯಾವ. ೬೬೪).

[ಸಂ. ಪರಿವೃತ್ತತಾ]

ಪರಿವೃತ್ತರೇಚಿತ (ನಾ). [ನಾಟ್ಯ] ಮೂವತ್ತೆರಡು ಬಗೆಯ ಅಂಗಹಾರಗಳಲ್ಲಿ ಒಂದು; ℙ"ನಿತಂಬ, ಸ್ವಸ್ತಿಕರೇಚಿತ, ವಿಕ್ಷಿಪ್ತ, ಅಕ್ಷಿಪ್ತ, ಲತಾವೃಶ್ಚಿಕ, ಉನ್ಮತ್ತ, ಕರಿಹಸ್ತ, ಭುಜಂಗತ್ರಾಸಿತ, ಅಕ್ಷಿಪ್ತ, ನಿತಂಬ ಈ ಕರಣಗಳನ್ನು ಭ್ರಮರದೊಡನೆ ಎಂಟುದಿಕ್ಕುಗಳಲ್ಲೂ ಮಾಡಿ ಮೊದಲ ದಿಕ್ಕಿನಲ್ಲಿ ಕರಿಹಸ್ತ, ಕಟೀಛಿನ್ನ—ಈ ಕರಣಗಳ ಪಾದಗಳನ್ನು ಮಾಡುವುದು" (ಲಾಸ್ಯರಂ. ೩೧೪ ಗದ್ಯಾನುವಾದ): ನುತಿಮಡೆದ ಭುಜಂಗತ್ರಾಸಿತಮಾಕ್ಷಿಪ್ತಾತ್ಮಿಪೊಪ್ಪ ತಿರ್ಯ ನಿತಂಬಂ ಸತಿ ಕೇಳ್ ಭ್ರಮರಾತ್ಮದೊಳಂಯುತದಿಂದೆಸೆಗಳಲ್ಲಿ ಮಾಡುತ್ತಮಿರಲ್ . . . ಮೇಣ್ ಕಟೀಛಿನ್ನ ಮುಮಂ ಪದವಂ ಮಾಡಲ್ ಪೆಸರಂ ಪುದಿದುದು ಪರಿವೃತ್ತರೇಚಿತಾಖ್ಯ ವಿದೆಂದುಂ (ಲಾಸ್ಯರಂ. ೫-೭೪). [ಸಂ.]

ಪರಿವೃತ್ತಿ (ನಾ). ೧. ತಿರುಗುವುದು; ಸುತ್ತುವುದು. ೨. ಹಿಂತಿರುಗುವುದು; ಮರಳುವುದು. ೩. ಸುತ್ತಿರುವುದು; ಬಳಸಿರುವುದು. ೪. ಕೊನೆ; ಮುಕ್ತಾಯ. ೫. ವಿನಿಮಯ; ಅದಲು ಬದಲು: "ಪರಿವೃತ್ತಿಃ, ವಿನಿಮಯಃ, ವೈಮೇಯಃ—ಈ ೩ ಗೂಜಾಡುಹಂ" (ಹಲಾಯು. ೯೪-೪೧೯); "ಪರಿವೃತ್ತಿ ವಿನಿಮಯಂ ಮಾಜಾಟಮೆಂದಿನಕ್ಕುಂ" (ಮಂಗರಾ. ೧೦೨-೨). ೬. ಬದಲಾವಣೆ; ರೂಪಾಂತರ; ಮಾರ್ಪಾಟು: ಯಾವುದಾದರೊಂದು ಭಾಷೆಯೇ ಆಗಲಿ ಅಳಿವು-ಉಳಿವುಗಳ ಮಧ್ಯೆ ಪರಿವೃತ್ತಿಯನ್ನು ಹೊಂದಿ . . . ಹೊಸಸಂಜ್ಞೆಯನ್ನೂ ಉಚ್ಚಾರವನ್ನೂ ಪಡೆಯುವುದು (ಭಾರದ. ೪೭೦); ಅಪಾರವಾದ ಕಾವ್ಯಪ್ರಪಂಚದಲ್ಲಿ ಕವಿಯೇ ಬ್ರಹ್ಮ. ಇವನ ಇಷ್ಟದ ಪ್ರಕಾರ ಈ ಇಡಿಯ ವಿಶ್ವವೇ ಪರಿವೃತ್ತಿಯನ್ನು ಪಡೆಯುತ್ತದೆ (ಧ್ವನ್ಯಾಲೋ. ೨೨೪); ಈ ಪರಿವೃತ್ತಿ ಹೊಸಗನ್ನಡದಲ್ಲಿ ಮಾತ್ರವಲ್ಲ, ಹಳಗನ್ನಡದಲ್ಲಿಯೂ ಇದೆ (ಸಂತೋಛ. ೪೪). ೭. ಮತ್ತೆ ಮತ್ತೆ ಬರುವುದು; ಪುನರಾವೃತ್ತಿ: ಉಪಮಿತಾತ್ಮರಮೆಲ್ಲಿಯುಮೀಕರೂಪ ಪರಿವೃತ್ತಿಯೊಳಿಂದಿದ ಮಾಚ್ಕಿಯಿಂದುಪಚಿತಕ್ರಮಮಮಕ್ಕುಂ (ಕವಿರಾ. ೧-೧೪೬). ೮. ಕ್ರಾಂತಿ. ೯. (ನಾಟಕದಲ್ಲಿ ಥಟ್ಟನೆ ಆಗುವ) ವಸ್ತುಸ್ಥಿತಿ ವ್ಯತ್ಯಾಸ; ಪರಿವರ್ತನೆ: ರುದ್ರನಾಟಕದ ಆಳಸ್ಪರ್ಶಿಯ ಅತ್ಯಂತ ಪ್ರಬಲಾಂಶಗಳಾದ ಪರಿವೃತ್ತಿಗಳು (Peripeties) ಮತ್ತು ಅನಜ್ಞಾನಗಳು (Anagnorisis) ವಸ್ತುವಿನ ಅಂಗಗಳೇ ಸರಿ (ಅಲಂಕಾ. ೭೬) ; ನಾಟಕದಲ್ಲಿ . . . ಬದಲಾವಣೆಯೇ ಪರಿವೃತ್ತಿ (Peripety) ಎನ್ನಿಸಿಕೊಳ್ಳುತ್ತದೆ (ಅಲಂಕಾ. ೮೮). ೧೦. [ಕಾವ್ಯವಿಮಾ] ಅಲ್ಪ ಮತ್ತು ಅಧಿಕ ವಸ್ತುಗಳ ವಿನಿಮಯವನ್ನು ವರ್ಣಿಸುವ ಒಂದು ಬಗೆಯ ಅರ್ಥಾಲಂಕಾರ: ಪರಿವೃತ್ತಿಯೆಂಬುದಕ್ಕುಂ ನಿರುಪಮಮಮರ್ಥ

ಸ್ವರೂಪವಿನಿಮಯವಚನಂ (ಕವಿಾ. ೬-೧೫೮) ; ಒಂದಂ ಕೊಟ್ಟೊಂದಂ ಕೊಳ್ವಂದಂ ಪರಿವೃತ್ತಿಯೆಂಬುದಕ್ಕುಂ (ಕಾವ್ಯಾವ. ೬೧೬); ನ್ಯೂನಾಧಿಕದಿಂ ಪರಸ್ಪರ ವಿನಿಮಯ ಪೇಳೆ ತಾನಾಗುವದು ಪರಿವೃತ್ತಿಯು (ಕುವಲ. ೧೦೨). ೧೧. ಅರ್ಥಕ್ಕೆ ಧಕ್ಕೆ ಬಾರದಂತೆ, ಒಂದು ಶಬ್ದದ ಬದಲು ಮತ್ತೊಂದು ಶಬ್ದವನ್ನು ಹಾಕುವುದು : 'ಪರಿವೃತ್ತಿಸಹತ್ವ' ಪರಾ. [ಸಂ.]

ಪರಿವೃತ್ತಿಸಹತ್ವ (ನಾ.) [ಕಾವ್ಯಮೀ] ರಚನೆಯಲ್ಲಿಯ ಒಂದು ಶಬ್ದವನ್ನು ತೆಗೆದು, ಅದೇ ಅರ್ಥವನ್ನು ಕೊಡುವ ಬೇರೆ ಶಬ್ದವನ್ನು ಉಪಯೋಗಿಸಿದಾಗ ಪ್ರಕೃತ ಅಲಂಕಾರಕ್ಕೆ ಬಾಧಕವಾಗದಿರುವಿಕೆ : ಮಮ್ಮಟನ ಮತದಲ್ಲಿ "ಪರಿವೃತ್ತಿಸಹತ್ವ"ವೇ ನಿರ್ಣಾಯಕ ; ಎಂದರೆ, ಯಾವುದಾದರೂ ಒಂದು ಕಡೆ ಇರುವ ಪದಗಳನ್ನು ಬದಲಾಯಿಸಿ ಅದೇ ಅರ್ಥ ಕೊಡುವ ಬೇರೆ ಪದಗಳನ್ನು ಹಾಕಿದಾಗ ಅಲ್ಲಿದ್ದ ಅಲಂಕಾರವು ಹೋಗಿ ಬಿಟ್ಟರೆ ಅದು ಶಬ್ದಾಲಂಕಾರಕ್ಕೆ ಗುರುತು ; ಆಗಲೂ ಹಾಗೇ ಉಳಿದರೆ ಅದು ಅರ್ಥಾಲಂಕಾರಕ್ಕೆ ಗುರುತು (ಕೈಪಿಡಿ. ೨೫೧). [ಸಂ.]

ಪರಿವೃದ್ಧಿ (ನಾ). ಬೆಳವಣಿಗೆ ; ವೃದ್ಧಿ : 'ಪರಿವೃದ್ಧಿವೆಱು' ಪರಾ. [ಸಂ.]

ಪರಿವೃದ್ಧಿವೆಱು (ಕ್ರಿ). ಬೆಳವಣಿಗೆಯನ್ನು ಹೊಂದು ; ವೃದ್ಧಿಯಾಗು : ಪರಿವೃದ್ಧಿವೆತ್ತು ಬೀಟಲ್ವರಿದುದುರಸ್ಸ್ಥಳದೊಳೀ ಮುನೀಂದ್ರನ ಹೃದಯಸ್ಫುರದಮಳಸತ್ವಮೆನೆ ಮುನಿವರನೊಳ್ ಯಜ್ಞೋಪವೀತತತಿ ಸೊಗಯಿಸುಗುಂ (ಜಗವಿ. ೧೦-೮). [ಪರಿವೃದ್ಧಿ+ಪೆಱು$_1$]

ಪರಿವೆ 'ಪರವೆ' ನೋ.

ಪರಿವೆರಸು (ಕ್ರಿ). ಜೊತೆಯಾಗಿರು ; ಹೊಂದಿಕೊಂಡಿರು; ಯುಕ್ತವಾಗಿರು : ಪದ್ಮದೊಳ್ಪರಿವೆರಸಿರ್ಪ್ಪ ಭಾರತಿಯ ಸಾರತೆಯಂ ಗೆಡೆಗೊಂಡು . . . ವಿಸ್ತರಿಸುವ ಮಾಕಿಯಕ್ಕನ ಜಸಂ ಮಸುಧಾತಳಸೇವ್ಯವಲ್ಲದೇ (ಎಕ. V, ಹಾಸನ. ೬೯-೩೫ ; 1155). [ಪರಿ-$_4$+ಬೆರಸು$_1$ (<ಬೆರೆಯಿಸು)]

ಪರಿವೆಸ, ಹರಿವೆಸ (ನಾ). ಪರಿಚರ್ಯೆ ; ಸೇವಾಕಾರ್ಯ : ಉಸುರೆ ದಿವಿಜೇಶ್ವರಂ ಪರಿವೆಸದಮರರ್ ದಾದಿಕಾಱವೆಸದಮರರದೇಂ ಬೆಸಗಲಿಗಳ್ ಬರ್ಪರೊ ಮಾನಸವೇಗರ್ ಪವನವೇಗರಿರುಳುಂ ಪಗಲುಂ (ಅಜಿಪು. ೫-೭೬). **ಹರಿವೆಸ** : 'ಹರಿವೆಸಗೆಯ್' ಪರಾ. [ಪರಿ-$_4$+ಬೆಸ$_1$]

ಪರಿವೆಸಂಗೆಯ್, ಪರಿವೆಸಗೆಯ್, ಹರಿವೆಸಗೆಯ್ (ಕ್ರಿ). ಸೇವೆ ಮಾಡು ; ಪರಿಚರ್ಯೆ ಮಾಡು : ಸಕಳಾಮರರ್ ಪಯೋವಾಹಕರಮರಿಯರಲ್ಲಿ ಪರಿವೆಸಂಗೆಯ್ವರ್ (ಚಂದ್ರಪು. ೧೨-೧೩೪). **ಪರಿವೆಸಗೆಯ್** : ಗುಣಾನ್ವಿತಾಮರರ್ ಪರಿವೆಸಗೆಯ್ವರೆಂಬೆನಱಿಯೆಂ ಪೊಗಟಲ್ ಸುರಲೋಕಸೌಖ್ಯಮಂ (ಅದಿಪು. ೩-೨) ; ವಿರಚಿಸುವಳ್ ಸಮಂತುಚಿತಮಂಗಳಮಂ ಶಚಿ ನಾಕಿನಾಯಕಂ ಪರಿವೆಸಗೆಯ್ವಂ (ಚಂದ್ರಪು. ೧೩-೪೭). **ಹರಿವೆಸಗೆಯ್** : ಹರಿವೆಸಗೆಯ್ವರಚ್ಚರಸೆಯರ್ ಬಗೆದಾಗಳೆ ಕೂರ್ತು ಬರ್ಪರಚ್ಚರಸೆಯರಿಚ್ಛೆಯಂ ಸಲಿಸಿ ಮೆಚ್ಚಱಿ ದೋಲಗಿಸುತ್ತುಮಿರ್ಪರಚ್ಚರಸೆಯರ್ (ಸುಕುಮಾ. ೯-೩೭). [ಪರಿವೆಸ+ಕೆಯ್$_1$]

ಪರಿವೆಸಗೆಯ್ 'ಪರಿವೆಸಂಗೆಯ್' ನೋ.

ಪರಿವೆಸವೋಗು (ಕ್ರಿ). = ಪರಿವೆಸಂಗೆಯ್ : ಪರಿವೆಸವೋಗಲಚ್ಚರಸಿಯರ್ ಶ್ರುತಿಯೊಳ್ ಸಮನಾಗೆ ಪಾಡಲಚ್ಚರಸಿಯರ್ . . . ಎಂದೊಡೇವೊಗಟ್ಟುದೋ ಜಿನಚಂದ್ರವಿಭೂತಿಲೀಲೆಯಂ (ಶಾಂತಿಪು. ೭-೭೫). [ಪರಿವೆಸ+ಪೋಗು$_1$<ಪೋ$_1$)]

ಪರಿವೇಣ (ನಾ). [ಬೌದ್ಧ] ವಿಹಾರಗಳಲ್ಲಿ ಭಿಕ್ಷುಗಳ ವಾಸಕ್ಕಾಗಿ ಮೀಸಲಾದ ಕೊಠಡಿ : ಅವನು ಈಗ ಸಂಖ್ಯೇಯ ಪರಿವೇಣದಲ್ಲಿ ವಾಸಿಸುತ್ತಿರುವನು (ಬುದ್ಧಪ. ಮಿಲಿಂದ. ೨೪) ; ಒಂದು ದಿನ ಉಪಾಸಿಕೆ ಸುಪ್ರಿಯೆಯು ಆರಾಮಕ್ಕೆ ಹೋಗಿ, ವಿಹಾರದಿಂದ ವಿಹಾರಕ್ಕೂ ಪರಿವೇಣದಿಂದ ಪರಿವೇಣಕ್ಕೂ ತಿರುಗಿ . . . ಭಿಕ್ಷುಗಳನ್ನು ಕೇಳಿದಳು (ಬುದ್ಧಪ. ೪೩). [←ಪಾಲಿ. ಪರಿವೇಣ]

ಪರಿವೇತೃ (ನಾ). ಅಣ್ಣನು ಮದುವೆಯಾಗುವುದಕ್ಕಿಂತ ಮೊದಲು ಮದುವೆ ಮಾಡಿಕೊಂಡ ತಮ್ಮ : ಧರಣಿಯನಿದನ್ನು ನಾಂ ಧರಿಸಿದೊಡೆ ಜಗದಲ್ಲಿ ಪರಿವೇತೃವೆಂಬ ನಾಮವನಾಂಪೆನು (ಶ್ರೀರಾಚ. ೩-೧೭). [ಸಂ. ಪರಿವೇತ್ತೃ]

ಪರಿವೇತ್ತ (ನಾ). = ಪರಿವೇತೃ : "ಪರಿವೇತ್ತಾ . . . ಅಣ್ಣನು ಮದಿವೆ ಮಾಡಿಕೊಳ್ಳದೇ ಇರುವಾಗಲೇ ತಾನು ಮದಿವೆಯಾದ ತಮ್ಮನು ಪರಿವೇತ್ತನೆಂಬ ಪಾಪಿಷ್ಠನು" (ಸಿದ್ಧಾಂತಿ. ೨೩೩) ; ಪಿರಿಯರ್ಗೆ ಮುನ್ನಮೇ ಮದುವೆಯಾದ ಪರಿವೇತ್ತರುಂ (ಭಾರಶಾಂ. ೩೪-೨೪೫). [ಸಂ. ಪರಿವೇತ್ತೃ]

ಪರಿವೇದಕ (ನಾ). = ಪರಿವೇತೃ. [ಸಂ.]

ಪರಿವೇದನ (ನಾ). ೧. ಅಣ್ಣನಿಗಿಂತ ಮೊದಲು ತಮ್ಮನ ಮದುವೆಯಾಗುವುದು. ೨. ಮದುವೆ ; ವಿವಾಹ. ೩. ಸಂಪೂರ್ಣಜ್ಞಾನ. ೪. ಪರಿಪೂರ್ಣತೆ. ೫. ಲಾಭ ; ಪ್ರಾಪ್ತಿ. ೬. ಮನೆಯಲ್ಲಿ ನಡೆಯುವ ವೈದಿಕ ಕರ್ಮಗಳಿಗಾಗಿ ಬೆಂಕಿಯನ್ನು ಕಾಪಾಡಿಕೊಂಡು ಬರುವುದು ; ಗೃಹಾಗ್ನಿಸಂರಕ್ಷಣೆ. ೭. ಸುತ್ತಲೂ ಹಬ್ಬುವಿಕೆ. ೮. ಚರ್ಚೆ ; ವಿಮರ್ಶೆ. ೯. ವ್ಯಥೆ ; ನೋವು. [ಸಂ.]

ಪರಿವೇದನೆ (ನಾ). ವ್ಯಥೆ ; ವೇದನೆ ; ನೋವು : ಅಲಘುತರ ಪರಿವೇದನಾವಿಹ್ವಳಿತ ಕಂಠಗತಾತ್ಮನೂರ್ಧ್ವಸ್ಖಲಿತ ದೀರ್ಘತ್ವಾಸನಿದ್ದನು ಕೌರವರ ರಾಯ (ಕುಪ್ಯಾಗ. ೧೦-೨). [ಸಂ. ಪರಿವೇದನಾ]

ಪರಿವೇದಿ (ನಾ). ತಿಳಿದವನು ; ಅರಿತವನು : ಪರಿವೇದಿ[ಪಾಠಾಂ. ಬೈದಿ] ನಗರದೊಳ್ ನಾಗರಕಂ (ಅನಂಪು. ೬-೯೨ ; ಸೂಕ್ತಿಸು. ೮-೩೦೮ ನೋ). [ಸಂ. ಪರಿವೇದಿನ್]

ಪರಿವೇಲ (ನಾ). ಒಂದು ಬಗೆಯ ಸಸ್ಯ : "ಗೋನರ್ದ—ಪರಿವೇಲ" (ಓಷಧಿ. ೫೧) ; "ವಲ್ಯಂ—ಪರಿವೇಲ" (ಓಷಧಿ. ೧೪೫). [?]

ಪರಿವೇಶ (ನಾ). = ಪರಿವೇಷ ೬ : ಅದಿತ್ಯೇಂದುಗಳನಾವರಿಸಿತಾ ಪರಿವೇಶ[ಪಾಠಾಂ. ಷ]ವತಿನಿರ್ಭರದೊಳನಿಲಂ ಬೀಸಿದನು (ಬಸಪು. ೬೧-೧೧). [ಸಂ.]

ಪರಿವೇಷ (ನಾ). ೧. ಸುತ್ತುವರಿದಿರುವಿಕೆ ; ಬಳಸಿರುವಿಕೆ. ೨. ಆವರಣ ; ಪರಿಧಿ ; ವಲಯ : "ಪರಿಧಿಯೆನೆ ಪರಿವೇಷಮಕ್ಕು" (ಮಂಗರಾ. ೧೧-೩) ; ಮಕುಟವ್ಯಾಲಗ್ನರತ್ನಪ್ರಭಾಪರಿವೇಷಂ ಲಲಿತಾಂಗ ಚಾಪರುಚಿಯಂ ಮಾಡಿತ್ತು ದಿಕ್ಚಕ್ರದೊಳ್ (ಅದಿಪು. ೬-೧೨೦) ; ಪರಿವೇಷದ ತೆಱದಿಂದನವರತಂ ಕರ್ಪೂರರಸದ ಪರಿಕಣ ಸುತ್ತಂ ಪರಿಯಲ್ (ಕಾದಂಉ. ೨೨೩) ; ವಿದ್ರುಮರತ್ನಬುದ್ಬುದಾಫೇನಂಗಳೋಳಿಯಿಂದೆಸೆವ ನೀರಾಕರಂ ಭೂಮಂಡಲಕ್ಕೆ ಪರಿವೇಷದಂತೆ (ಸಿದ್ಧರಾ. ೧-೧೩) ; ಪದರಜದ ಪರಿವೇಷದಲಿ ಹೂಳಿದುದು ನಭವೆಣ್ಡೆಸೆಯ . . . ವರವಧುಗಳನು ಪರಿವರಿಸಿ (ನಿಭಾಗ. ೧೦-೨-೬). ೩. ವರ್ತುಲ; ವೃತ್ತಾಕಾರ. ೪. ವರ್ತುಲದ ಸುತ್ತುಗೆರೆ,—ಆವರಣರೇಖೆ ; ವೃತ್ತದ ಸುತ್ತಳತೆ. ೫. ಮಕುಟ ; ಕಿರೀಟ : "ಪರಿವೇಷಂ ಮಕುಟೋತ್ತಮಾಂಗವಸನಂ ವೇಷ್ಟಾಭಿಧಾನಂ" (ನಾನಾರ. ೨೪). ೬. ಸೂರ್ಯ

ಅಥವಾ ಚಂದ್ರನ ಸುತ್ತ ಇರುವ ಬೆಳಕಿನ ವಲಯ,–ಪ್ರಭಾವಳಿ: "ಪರಿಧಿಃ, ಪರಿವೇಷಃ (ಸ್ಯಾತ್), ಮಂಡಲಂ, ಉಪಸೂರ್ಯಕಂ—ಈ ೪ ಪರಿವೇಷದ ಪೆಸರ್" (ಹಲಾಯು. ೮–೪೧); ಒಂದೇ ಗೃಹದೊಳ್ ನಿಂದಂದು ಸೌರೀಂದುಗಳ್ ಪರಿವೇಷಂ ದೊರೆಕೊಂಡೊಡಲ್ಲಿ ಮನುಜಂಗಕ್ಕುಂ ಕ್ಷಯವ್ಯಾಧಿ (ಜಾತಕ. ೨೧–೨೩); ರವಿಬಿಂಬಮನೊಳಕೊಂಡು ಪೊಳೆವ ಪರಿವೇಷದವೊಲ್ (ಮಲ್ಲಿಪು. ೧–೬೨); ಕುದುರೆಗಳು ಮುಗ್ಗಿದವು ಪರಿವೇಷದಲಿ ಸಪ್ತಗ್ರಹದ ವಕ್ರತೆ ಸೂರ್ಯಮಂಡಲಕೆ (ಕುಮ್ಮಾಕ. ೮–೨೬); ತೋಱುತಾ ಕಪಿಸೇನೆ ಪರಿವೇಷದವೊಲರ್ಯಮನ (ತೊರರಾ. ೬–೩೭–೪). ೭. ಕೆಲವು ವೇಳೆ ಗ್ರಹಮಂಡಲದ ಸುತ್ತಲೂ ಕಂಡುಬರುವ ವೃತ್ತಾಕಾರವಾದ ಗುರುತು: ಗ್ರಹಮಿರೆ ಪರಿವೇಷದೊಳಾ ಗ್ರಹಮಂ [ಕ್ರೂರಗ್ರಹಂ] ನಿರೀಕ್ಷಿಸುವೊಡರಿಷ್ಟಹರಂ (ಜಾತಕ. ೬–೧೯). ೮. ವಾತಾವರಣ; ಪರಿಸರ; ಸನ್ನಿವೇಶ: ಸೆರೆಯಂಗಡಿಯ ಉನ್ಮತ್ತ ಪರಿವೇಷದಲ್ಲಿ ವರ್ಣದ್ವೇಷದ ಅಮಾನುಷಚಿತ್ರ ಅವನಿಗೆ ಕಾಣುತ್ತದೆ (ಹೊಸಕ್ಷಿ. ೨೯೦); ಅಕ್ಷಾಂಶ ೩೦° ಗಳಿಂದ ೪೫° ಗಳ ವರೆಗೆ ಇರುವ ಪ್ರದೇಶಗಳು ವಾಣಿಜ್ಯಮಾರುತಗಳ ಪರಿವೇಷ (Belts) ದಲ್ಲಿರುತ್ತವೆ (ಭೂವಿನ. ೧೪೫). [ಸಂ.]

ಪರಿವೇಷಂಗೊಳ್ (ಕ್ರಿ). ತೇಜೋವಲಯವನ್ನು ಹೊಂದು; ಪ್ರಭಾವಳಿಯನ್ನು ಪಡೆ; ಗುಡಿಗಟ್ಟು: ತರಳತರವೃತ್ತಮೌಕ್ತಿಕ ಪರಿಕರಮೇಕಾಂತಕಾಂತಮೆಕ್ಕಾವಳಿ ಕಂಧರದೊಳಮರ್ದಸೆಯೆ ಪೋಲ್ತುದು ಪರಿವೇಷಂಗೊಂಡ ಚಂದ್ರನಂ ಮುಖಚಂದ್ರಂ (ಆದಿಪು. ೪–೩೭); ನೆರೆದೋಲಗಿಪಮರನರೋತ್ಕರಜಲಧರವಳಯದೊಳಗೆ ಕಾಂತಿಯ ಪುದುವಿಂ ಪರಿವೇಷಂಗೊಂಡ ನಿಶಾಕರನಂ ಪೋಲ್ತಂ ಕುಮಾರನೊಡ್ಡೋಲಗದೊಳ್ (ಶಾಂತಿಪು. ೧೦–೮೬); ಅಂತು ಪೊಱಮಟ್ಟು ಪರಿವೇಷಂಗೊಂಡ ಚಂಡಕಿರಣನಂತೆ ಕುಂಡಲಿತಕೋದಂಡನಾಗಿ (ಪಂರಾಮಾ. ೯–೬೨ಪ); ಮಣಿನಿಕರಖಚಿತಮಕುಟಕೋಟಿಗಳ್ ಮೆಱೆಯೆ ಬಹುರತ್ನಕದಂಬ ಕಾಂತಿ ಮಂಡಳಿಸಿ ಪರಿವೇಷಂಗೊಂಡ ರವಿಮಂಡಲದ ಹಿಂಡುಗಳಂತೆ ತೆಕ್ಕನೆ ತೀವಿ ಕಿಕ್ಕಿಱಿಗಿಱಿದು ಕುಳ್ಳಿರ್ದ . . . ರಾಜಪುತ್ರರ ಪಂಕ್ತಿಗಳೊಳಂ (ಗಿರಿಕ. ೨–೧೦೫ಪ). [ಪರಿವೇಷ + ಕೊಳ್$_1$]

ಪರಿವೇಷಣ (ನಾ). ೧. ಸುತ್ತುಗಟ್ಟುವುದು; ಬಳಸುವುದು: ಸ್ಥಂಡಿಲ ಪರಿಸ್ತರಣ ಪರಿವೇಷಣ . . . ಮುಖಾಹುತ್ಯಾದಿಗಳಿಂ ಸಮರ್ಚಿತನಾಗಿ ದೇವಮುಖನೆನಿಸಿ (ವಿವೇಕ. ೧೩೭). ೨. ಊಟಕ್ಕೆ ಬಡಿಸುವುದು. [ಸಂ.]

ಪರಿವೇಷ್ಟನ (ನಾ). ೧. ಸುತ್ತುಗಟ್ಟುವಿಕೆ; ಆವರಣವಾಗುವಿಕೆ: ಅಷ್ಟಮಿಾಚಂದ್ರಾಕೃತಿಯೊಳಮಷ್ಟಮಂಗಳಪರಿವೇಷ್ಟನದೊಳಂ ನೆರೆದು (ಆದಿಪು. ೭–೭೩ಪ). ೨. ವರ್ತುಲ; ಮಂಡಲ: ಮಿಗೆ ವಿಸ್ತರದಿ ನೊಪ್ಪಂಬೆತ್ತಿಹುದು ಸಿಂಗರದ ಗೋಪುರ ಸಾಲಪರಿವೇಷ್ಟನಗಳಿಂದ ಮರ್ದು (ಶಂಕವಾ. ೧–೪೫). ೩. ಹೊದಿಕೆ; ಆಚ್ಛಾದನೆ. [ಸಂ.]

ಪರಿವೇಷ್ಟಿ (ನಾ). ಸುತ್ತುವರಿದಿರುವುದು; ಬಳಸಿರುವುದು: 'ಪರಿವೇಷ್ಟಿಗೊಳ್' ಪರಾ. [ಸಂ.]

ಪರಿವೇಷ್ಟಿಗೊಳ್ (ಕ್ರಿ). ಸುತ್ತುವರಿ; ಬಳಸು: ಅಧಿಕದುರ್ಗಮಂ ವನಧಿ ಪರಿವೇಷ್ಟಿಗೊಂಡಿರ್ಪಂತೆಯತಿಘಾತದಗುಳು ಕಂಗೊಳಿಸಿರ್ದುದು (ನವಮೋ. ೨–೨೭). [ಪರಿವೇಷ್ಟಿ + ಕೊಳ್$_1$]

ಪರಿವೇಷ್ಟಿತ (ಗು). ೧. ಸುತ್ತುಗಟ್ಟಲ್ಪಟ್ಟ; ಬಳಸಿದ: ಗಂಭೀರೋದನ್ವತ್ ಪರಿವೇಷ್ಟಿತಮೇದಿನಿಯೊಳ್ ವೆಣ್ಣಮಯ್ಯನಕಲಂಕಗುಣಂ (ಭಂದೋಂಬು. ೧–೧೪); ಪರಿವೇಷ್ಟಿತ ನೃಪಸಂಕುಲಕಿರೀಟಮಣಿಗಣ ಘೃಣಿಚ್ಛಟಾಂಚಿತಹರಿವಿಷ್ಟರನಾ ವಜ್ರಾಯುಧಭೂವರನಿಂತೋಲಗದೊಳಿರ್ದಂ (ಶಾಂತೀಶ್ವ. ೧೦–೧೪). (ನಾ). ೨. ಸುತ್ತುಗಟ್ಟಿರುವುದು; ಬಳಸಿರುವುದು: "ವಳಯಿತಂ ವೇಷ್ಟಿತಂ ಪರಿವೇಷ್ಟಿತಂ ಪರಿಕ್ಷಿಪ್ತಮೆನೆ ಸುತ್ತಕ್ಕು" (ಮಂಗರಾ. ೧೨೯–೧೨). ೩. ಸುತ್ತುಗಟ್ಟಲ್ಪಟ್ಟಿರುವುದು; ಬಳಸಲ್ಪಟ್ಟಿರುವುದು: ಕರಿಣೀಶತಂಗಳಿಂ ಪರಿವೇಷ್ಟಿತನಾಗಿ ತಿಳಿನೀರ ಕೊಳದೊಳಗೆ ಕ್ರೀಡಿಸುವ ಸೊರ್ಕಾನೆಯುಮಂ (ವಡ್ಡಾರಾ. ೫೪–೧೩). ೪. ಸುತ್ತುಗಟ್ಟಲ್ಪಟ್ಟವನು: ಕುಲಾದ್ರಿಪರಿವೇಷ್ಟಿತನಂ . . . ಕಮಲಾಭಿರಾಮನಂ ಇಂತಪ್ಪ ಮಗನಂ ನೀನಮೋಘಂ ಪಡೆವೆ (ಪಂಪಭಾ. ೧–೧೪೧); ಕುಳಮಂತ್ರಿಪರಿವೇಷ್ಟಿತಂ ಸೌಜನ್ಯಕಂದಾಂಕುರಂ ಪೊಕ್ಕನಂತರಮಷ್ಟಾಹ್ನಿಕಮಹಾಮಹಿಮೆಯಂ ಜಿನೇಶ್ವರಂಗೆ ನಿರ್ವರ್ತಿಸಿ (ಶಾಂತಿಪು. ೪–೭೫ ಪ); ಉಲೂಕಂ ವೇದಪಾರಾಯಣಂಗೆಯ್ವ ಸಚ್ಛಿಷ್ಯರಿಂ ಪರಿವೇಷ್ಟಿತನಾದಾಚಾರ್ಯನಂತೆ ಕಣ್ಗೊಳಿಸಿದಂ (ಅದ್ಭುತ. ೨೨–೧). [ಸಂ.]

ಪರಿವೇಷ್ಟಿಸು (ಕ್ರಿ). ಸುತ್ತುಗಟ್ಟು; ಬಳಸು: ಅಂತು ಮೂವತ್ತಿರ್ವರಿಂದ್ರರಂ ಪರಿವೇಷ್ಟಿಸಿ ಬರೆ (ಶಾಂತಿಪು. ೧೦–೩ ಪ); ಸೆರೆದುಱುಗಲ್ಮೆಯ್ಯೆಲ್ಲಮನಿರದಡರೆ ಜರಲ್ಲತಾವಿತಾನದಿನೆತ್ತಂ ಪರಿವೇಷ್ಟಿಸಿರ್ದ ಪರಿಣತಸುರತರುವಂ ಪೋಲ್ತು ಸೊಗಯಿಸಿರ್ದಂ ಮುನಿಪಂ (ಶಾದಂಪೂ. ೨೪೦); ಅಮೃತಾಂಶುಲೇಖೆ ನಕ್ಷತ್ರಮಾಲೆಯಿಂ ಬಳಸಿದಂತೆ ಪರಿವಾರವಧೂಸಮಿತಿ ಪರಿವೇಷ್ಟಿಸಿರೆ ತರುಣಿ ಮಾಡಿದಳ್ ನಯನಕುವಲಯಾನಂದಮಂ (ಮಲ್ಲಿಪು. ೩–೯೯); ದರಹಸಿತಸಹವಾದ ಮುಖರಸ ಪರಿದು ಬರುತ ಕುಚಾದ್ರಿ ತಡೆಯಲು ತಿರಿಗಿ ಬರುತಿಕ್ಕೆಲನ ಪರಿವೇಷ್ಟಿಸಿದುದೆಂಬಂತೆ . . . ತೋರಮುತ್ತಿನ ಸರದ ಸಮುದಯ ಸೊಗಸುತಿರ್ದುವು (ಪ್ರಭುಲೀ. ೪–೧೦). [ಪರಿವೇಷ್ಟನ + –ಇಸು$_3$]

ಪರಿವೇಷ್ಟೃ (ನಾ). (ಹವಿಸ್ಸು ಮೊದಲಾದುವನ್ನು) ಅರ್ಪಿಸುವವನು: ಮರುದ್ಗಣಂಗಳೇ ಋತ್ವಿಜರಾಗಿಯುಂ ಮರುತರೇ ಪರಿವೇಷ್ಟೃಗಳಾಗಿಯುಂ ನೆಲೆಗೊಂಡಿರ್ದರು (ಭಾರಶಾಂ. ೨೯–೧೯೬). [ಸಂ.]

ಪರಿವೊನಲ್, ಪರಿವೊನಲು, ಹರಿಹೊನಲು (ನಾ). ಪ್ರವಹಿಸುವನದಿ; ಹರಿಯುವ ಹೊಳೆ: ಪರಿವ ಪರಿವೊನಲ ಹಿಮಶೀಕರಂಗಳೊಳ್ ಪುದಿದ ಮಂದಮರುತಂ (ಶಾಂತಿಪು. ೯–೭೯); ದಾಳಿಂಬದ ಪಣ್ಗಳ ತನಿರಸದ ಪರಿವೊನಲೆ ಪರಿನೀರಾಗೆಯಂಕುರವೊತ್ತಿ ಬೆಳೆಯುತ್ತಿರ್ದ ಕರ್ಬಿನ ಮಡಲ್ಗಳುಮಂ (ಪಂಚತಂ. ೧೧೭–೧೬); ಪರಿವೊನಲಿಂ ಬಿಲಂಗಳಿನರಣ್ಯದಿನಲ್ಲಿಯ ತಳ್ಪಲೊಪ್ಪುಗುಂ (ಗಿರಿಕ. ೧–೭೦); ಪರೆದು ನೆಱೆಯುರ್ಬಿ ಪರಿವ ನೈಲ್ ಪರಿವೊನಲ್ ಪೊನ್‌ಮಾಟ್ಪ ನಾಡೆಲ್ಲದಱ ಬೆಳಸವನದಾದಪುವು (ಬದ್ಧಪ್ರ. ೪೫–೯೭೭). **ಪರಿವೊನಲು**: ಸುರುಚಿರಪಲ್ಲವಪಾಣಿಯ ತನುತನುಪಿರಿದುಂ ನಡುಗಿ ಮನೋಹರಮಾದುದು ಪರಿವೊನಲೊಳ್ಸಿಲ್ಕಿದ ನವಮೋಹನಲತೆ ಕಂಪಿಸುವಂತೆ (ಜಯಕಾ. ೪–೨೦); ಹರಿಗೆಗಳ್ ಮೇಘದೊಡ್ಡಣೆ . . . ವೀರರಸವೆ ಪರಿವೊನಲಾಗೆ ವರುಷದಂತಿರ್ಪರಣಮಂ ಕಂಡು ವೀರರ ಮನಶ್ಚಾತಕಂ ನಲಿದುದು (ಚಿಬಪು. ೩೮–೩೭). **ಹರಿಹೊನಲು**: ಹರಿಹೊನಲಾದುದರುಣಜಲ (ಉತ್ತರಾ. ೬–೩೬); ಮೇಗರವಳ್ಳಿ ಸೀಮೆಯ ಜನಮನದ ಹರಿಹೊನಲಿನಲ್ಲಿ ಕಂತಿ, ಗುತ್ತಿ, ತಿಮ್ಮಿಯರ ನೆನಪೂ ಕೊಚ್ಚಿಹೋಯಿತು (ಮಲೆಮ. ೭೨೬).

[ಪರಿ$_2$ + ಪೊನಲ್]

ಪರಿವೊನಲು 'ಪರಿವೊನಲ್' ನೋ.

ಪರಿವ್ಯಾಧ (ನಾ). ೧. ಒಂದು ಬಗೆಯ ಜಲಸಸ್ಯ; ನೀರು ಹಬ್ಬೆಗಿಡ: "ಪರಿವ್ಯಾಧಃ, ವಿದುಲಃ . . . ನಾದೇಯಿಾ, ಅಂಬುವೇತಸಃ—೪ ನೀರುಹಬ್ಬೇಗಿಡ" (ಸಿದ್ಧಾಂತಿ. ೧೧೮). ೨. ಬೆಟ್ಟದಾವರೆ; ಕೊಸಗು: "ದ್ರುಮೋತ್ಪಲಃ, ಕರ್ಣಕಾರಃ, ಪರಿ

ವ್ಯಾಧಃ—ಈ ೩ ಕೊಸಗಿನ ಮರ" (ನಾಚರಾ. ೧೦೪); "ಪ್ರಮೋತ್ಪಲಃ, ಕರ್ಣಿಕಾರಃ, ಪರಿವ್ಯಾಧಃ—೩ ಬೆಟ್ಟ ತಾನರೇ ಹೆಸರುಗಳು" (ಸಿದ್ಧಾಂತಿ. ೧೩೫). [ಸಂ.]

ಪರಿವ್ರಜನ (ನಾ). ಸಂನ್ಯಾಸಿಯಾಗಿ ತಿರುಗಾಡುವುದು,—ಸಂಚರಿಸುವುದು: 'ಪರಿವ್ರಜಿಸು' ಪರಾ. [ಸಂ.]

ಪರಿವ್ರಜಿಸು (ಕ್ರಿ). ೧. ಸಂನ್ಯಾಸವನ್ನು ಸ್ವೀಕರಿಸು; ಸಂನ್ಯಾಸಿಯಾಗು: ನನ್ನ ಸ್ವಾಮಿಯು ಪರಿವ್ರಜಿಸಿ ಸರ್ವಜ್ಞಾಸನನು (ಬುದ್ಧ ಪ. ೧೧೧); ಹಲವರು ತಾವು ಪರಿವ್ರಜಿಸದಿದ್ದರೂ ತಮಗೆ ಧರ್ಮೋಪದೇಶ ಮಾಡಿದ ಪರಿವ್ರಾಜಕರನ್ನು ಗೌರವಿಸಿ ಪೂಜಿಸುತ್ತಿದ್ದರು (ತೀರ್ಥಕ. ೨೧). ೨. ಸಂನ್ಯಾಸಿಯಾಗಿ ಸಂಚರಿಸು. [ಪರಿವ್ರಜನ+-ಇಸು೩]

ಪರಿವ್ರಜ್ಯೆ (ನಾ). ೧. ತಿರುಗಾಡುವುದು; ಪರ್ಯಟನ ಮಾಡುವುದು. ೨. ಸಂನ್ಯಾಸಿಯಾಗಿ ಜೀವನವನ್ನು ನಡೆಸುವುದು. ೩. ತಪಸ್ಸುಮಾಡುವಿಕೆ; ತಪಶ್ಚರಣ; ವ್ರತಿಧರ್ಮಾಚರಣೆ: "ಪರಿವ್ರಜ್ಯಾ, ಪ್ರತಾದಾನಂ, ಪ್ರವ್ರಜ್ಯಾ, ಗತಿಃ—ಈ ೪ ತಪಂಬರುಹ" (ಹಲಾಯು. ೧೨೮-೯೧). [ಸಂ. ಪರಿವ್ರಜ್ಯಾ]

ಪರಿವ್ರಾಜ (ನಾ). ೧. = ಪರಿವ್ರಜ್ಯೆ ೩: "ಗತಿ ಪರಿವ್ರಾಜಂ ವ್ರತಂ ನಿಯಮವೆನೆ ತಪಂ" (ಪುಂಗವಾ. ೧೩೫-೩೬). ೨. = ಪರಿವ್ರಾಜಕ. [ಸಂ.]

ಪರಿವ್ರಾಜಕ (ನಾ). ೧. ಸಂನ್ಯಾಸಿ; ಚತುರ್ಥಾಶ್ರಮಿ: ಜಯಕೀರ್ತಿವೆಸರ ಮಗನಾಗಿ ರಾಜ್ಯಂಗೆಯ್ದು ಜನಕಸೂರಿಪಾರ್ಶ್ವದೊಳ್ ಪರಿವ್ರಾಜಕನಾಗಿ ಸಮಾಧಿವೆತ್ತಂ (ಪಂಚತಂತ್ರ. ೧೦-೯೮ ಪ). ೨. ಪರ್ಯಟನ ಮಾಡುವ ಸಂನ್ಯಾಸಿ; ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂಚಾರ ಮಾಡುವ ಸಂನ್ಯಾಸಿ,—ವಿರಕ್ತ: ಭಾರದ್ವಾಜನೆಂಬ ಮಗನಾಗಿ ಪುಟ್ಟಿ ಕನಕದಂಡಿಯೆಂಬ ಪರಿವ್ರಾಜಕಂಗೆ ಶಿಷ್ಯನಾಗಿ ನಾನಾದೇಶಂಗಳಂ ವಿಹರಿಸುತ್ತಂ (ಪಡ್ಡಾರಾ. ೬೪-೯); ಪರಿವ್ರಾಜಕನಾದ ಮಾತ್ರಕ್ಕೇ ಸಿದ್ಧಿ ಲಭಿಸೀತೆ? (ಸಪತಿ. ೨೩); ಪ್ರತಿಯೊಬ್ಬರೂ ಮನೆ ಬಿಟ್ಟು ಪರಿವ್ರಾಜಕರಾಗಿ ಮುಕ್ತಿಯನ್ನು ಪಡೆಯುವುದು ಸಾಧ್ಯವಿಲ್ಲ (ಭಾರದ. ೨೦೫). [ಸಂ.]

ಪರಿವ್ರಾಜಿಕೆ (ನಾ). ೧. ಸಂನ್ಯಾಸಿನಿ; ವಿರಾಗಿಣಿ: ಅನೇಕ ಪರಿವ್ರಾಜಿಕಾಸಮಾಜಂ ಸುತ್ತಮೋಲಗಿಸುತ್ತಿರಲ್ (ಕಾದಂಬ. ೧೬೭); ಭರತಪ್ರಸಂಗಮಂ ಮಾಳ್ಪ ಪರಿವ್ರಾಜಿಕೆಯರ ತ್ರಿಗ್ರಾಮಂಗಳಂ ಮುಟ್ಟಿ ಪಾಡುವ ಸಾಯಿಕೆಯರ ಸಂಭ್ರಮದ ಸಂದಣಿಯೊಳ್ (ತ್ರಿಪುವಿ. ೧೬-೧೯ ಪ). ೨. ಪರ್ಯಟನ ಮಾಡುವ ಸಂನ್ಯಾಸಿನಿ. [ಸಂ. ಪರಿವ್ರಾಜಿಕಾ]

ಪರಿಶಂಕಿಸು (ಕ್ರಿ). ಹೆದರು; ಭಯಪಡು: ತಮ್ಮ ಮುದಳ್ಕು ನಿರ್ದಾಕ್ಷಿಣ್ಯಮಿಸುತೆ ದುರ್ಜನಂಗೆ ಪರಿಶಂಕಿಸಲೇಕೆ ದುರುಕ್ತಿ ಭೀತಿಯಿಂ (ನಳಚಂ. ೬). [ಪರಿಶಂಕೆ+-ಇಸು೩]

ಪರಿಶಂಕೆ (ನಾ). ೧. ಅನುಮಾನ; ಸಂಶಯ: ಗಿರಿವರಾತ್ಮಜೆಯರಸನರವನೆಲ್ಲವನಱಿದು ಪರಿಶಂಕೆಗೊಳದೆ ಮುಂದಕೆ ನಾಗುತಿರೆ (ಪ್ರಾಥರಾ. ೬-೩೬). ೨. ಹೆದರಿಕೆ; ಭಯ: ಗಂಧಶಾಲಿವನಮಂ . . . ಕಂಪಿನಾಸೆಗೆ ಮುಸುಂಕಿದ ಭೃಂಗಕದಂಬಕಂ ಕೃಷೀವಲತತಿ ಕೀರಪೋತ ಪರಿಶಂಕೆ[ಪಾಶಾಂ. ಸಂಪೈ]ಯಿನಾವನ ನೀಲಚೀಲಸಂಕುಲದೊಳೆ ಕೂಡೆ ಬಾಸನಣಿಸಿತೆಂಬುಧಿಶಂಕೆಯನುಂಟುಮಾಡುಗುಂ (ಚಂದ್ರಪ. ೧-೯೪). [ಸಂ. ಪರಿಶಂಕಾ]

ಪರಿಶಮನ (ನಾ). ಉಪಶಮನ; ನಿಗ್ರಹ: 'ಪರಿಶಮಿಸು' ಪರಾ. [ಸಂ.]

ಪರಿಶಮಿಸು (ಕ್ರಿ). ಉಪಶಮನಗೊಳಿಸು; ನಿಗ್ರಹಮಾಡು: ಸರ್ವಕರಣದಿ ನಿಂತು ತಾಮಸೀವೃತ್ತಿಯನು ಪರಿಶಮಿಸಲು (ಪುರದೇ. ೫೯-೧೨), [ಪರಿಶಮನ+-ಇಸು೩]

ಪರಿಕಾಸನ (ನಾ). (ತನ್ನ ಆಜ್ಞೆಯನ್ನು ಇತರರು ವಿಮಾರಲಾರದಂತಹ ಪ್ರಭಾವವುಳ್ಳ) ರಾಜ; ಅರಸ: ಪರಿಕಾಸನನ ಸಂಜ್ಞೆಯಲಿ ಬಳಿಕಾ ಕೀಶಬಲ ಬರುತಿರ್ದುದಗಣಿತಭೂಮಿಯಗಲದಲಿ (ತೊರಂರಾ. ೪-೬-೮). [ಸಂ.]

ಪರಿಶಿಷ್ಟ (ಗು). ೧. ಉಳಿದ; ಮಿಕ್ಕ. ೨. ಪೂರ್ತಿಯಾದ. ಮುಗಿದ. (ನಾ). ೩. ಉಳಿದಿರುವುದು; ಮಿಕ್ಕಿರುವುದು: ಇಷ್ವಕಾಡಯನದಿಂ ರಾಜಸಿತು ಬಳಸಿ ಪರಿಶಿಷ್ಟದಿಂದೊಪ್ಪುವು ಸಲವು ವೇದಿಗಳು (ಜೈಮಿಭಾ. ೩೬-೩೭). ೪. ಮೂಲಗ್ರಂಥದಲ್ಲಿ ಬಿಟ್ಟು ಹೋದ ಅಂಶಗಳನ್ನು ಸೇರಿಸಿದ ಗ್ರಂಥದ ಕೊನೆಯ ಭಾಗ: ಪರಿಶಿಷ್ಟ೨-ಪ್ರಯೋಗಸಾರಮೆಂಬ ಶಬ್ದಾರ್ಥನಿರ್ಣಯಂ (ಶಮದ. ಪರಿ. ೨); ಪರಿಶಿಷ್ಟ . . . ಮೂಲಗ್ರಂಥಕ್ಕೆ ಸೇರಿರಲಾರದೆಂದು ತೋರಿ ಬಂದಿರುವ ಪದ್ಯಗಳನ್ನು ಈ ಕೆಳಗೆ ಕೊಟ್ಟಿದೆ (ಕುವ್ಯಾದ್ಯೋ. ಪಂ. ೨೬೫). ೫. ಮೂಲಗ್ರಂಥಕ್ಕೆ ಸಂಬಂಧಿಸಿದ ವಿಶೇಷ ವಿಷಯಗಳನ್ನು ನಿರೂಪಿಸುವ, ಗ್ರಂಥದ ಕೊನೆಯ ಭಾಗ; ಅನುಬಂಧ; ಅನುಸೂಚಿ: ಅದರ ಬಗ್ಗೆ ೧೯ನೇ ಪಾಠನಲ್ಲಿ ಮಾಹಿತಿ ದಾಖಲು ಆದೆ, ಆದರ ವಿಷಯಕ್ಕೆ ಪರಿಶಿಷ್ಟವು (ಪಾನು. ೨೪೪, ೨೪೫, ಕಲಮು. ೨೪) (ಮುಂಬವ್ಯಾ. ೪೦ ಪ್ರಸ್ತಾಪನೆ). [ಸಂ.]

ಪರಿಶಿಷ್ಟವರ್ಗ (ನಾ). ಅನುಸೂಚಿಯಲ್ಲಿ ದಾಖಲಾದ ವರ್ಗ; ಅನುಸೂಚಿತ ಪಂಗಡ: ನಮ್ಮ ಸರ್ಕಾರವು ಪರಿಶಿಷ್ಟವರ್ಗದವರಿಗೆ ಹೆಚ್ಚಿನ ಸವಲತ್ತುಗಳನ್ನು ನೀಡಿದೆ (ರೂಢಿ). [ಪರಿಶಿಷ್ಟ+ವರ್ಗ]

ಪರಿಶೀಲಕ (ನಾ). ಪರಿಷ್ಕಾರಗೊಳಿಸುವವನು; ಪರಿಶೀಲನೆಮಾಡುವವನು: ಈಗ ಕರಡುಪ್ರತಿ ಓದುವವರು ಇರುವಂತೆ ಹಿಂದೆ ಪರಿಶೀಲಕರು (Revisers) ಇರುತ್ತಿದ್ದರು. . . ಪರಿಶೀಲಕರು ಹಸ್ತಪ್ರತಿಯನ್ನು ಮಾತೃಕೆಯೊಡನೆ ಹೋಲಿಸಿ ನೋಡಿ ಹಸ್ತಪ್ರತಿಯಲ್ಲಿಯೇ ವ್ಯತ್ಯಾಸವನ್ನೋ ತಿದ್ದುಪಾಟುಗಳನ್ನೋ ಗುರುತಿಸುತ್ತಿದ್ದರು (ಭಾರಪ. ೩೦). [ಸಂ.]

ಪರಿಶೀಲನ (ನಾ). ಸೂಕ್ಷ್ಮವಾಗಿ ವಿವೇಚನೆ ಮಾಡುವುದು; ಕೂಲಂಕಷವಾದ ವಿಚಾರಣೆ: "ಅವಲೋಕನ, ಪರಿಶೀಲನ, ಸಮೀಕ್ಷೆ" (Survey. ಪತ್ರಿಶಿ. ೪೦). [ಸಂ.]

ಪರಿಶೀಲನೆ (ನಾ). = ಪರಿಶೀಲನ: ವಿಷ್ಣುವರ್ಧನನ ದಳದ ಪರಿಶೀಲನೆ ಎಂದರೆ ಸಾಮಾನ್ಯವಲ್ಲ (ಸಪತಿ. ೪೮). [ಸಂ. ಪರಿಶೀಲನ]

ಪರಿಶೀಲಿಸು (ಕ್ರಿ). ಸೂಕ್ಷ್ಮವಾಗಿ ನೋಡು; ಪರಿಶೀಲನೆ ಮಾಡು: ಉತ್ತರಗಳನ್ನು ಪರಿಶೀಲಿಸಿ ಅವಕ್ಕೊಂದು ರೂಪು ಕೊಡುವಾಗಲೂ ಅಷ್ಟೇ ಚತುರತೆಯಿಂದ ವರ್ತಿಸಬೇಕಾಗುತ್ತದೆ (ಶಿಕ್ಷಪ. ೨೪೦); ಇವುಗಳಲ್ಲಿ ಯಾವುದನ್ನೂ ಇಲ್ಲಿ ವಿವರವಾಗಿ ಪರಿಶೀಲಿಸಲು ಅವಕಾಶವಿಲ್ಲ (ಸಮಾಲೋ. ೧೨೪). [ಪರಿಶೀಲನ+-ಇಸು೩]

ಪರಿಶುದ್ಧ (ಗು). ೧. ದೋಷವಿಲ್ಲದ; ಪವಿತ್ರವಾದ: ಬುದ್ಧಿ ಪೂರ್ವಕವಿಲ್ಲದಿಹ ಬಾಲಕಂಗೆ ಪರಿಶುದ್ಧ ಸಾಲಗ್ರಾಮಶಿಲೆಯ ಸಂಸರ್ಗದಿಂದುದ್ಧತದ ಸಾಪತ್ಯಾಜ್ಯಪದವಿ ಕೈಸಾರ್ದುದು (ಜೈ ವಿಭಾ. ೩೧-೭೮). ೨. ನಿರ್ಮಲವಾದ; ಕಲ್ಮಷವಿಲ್ಲದ: ಪರಿಶುದ್ಧ ಪಕ್ಷದ್ವಯಂಗಳಂ ಸದ್ಯಶಸ್ಕುರಿತಾದಿ ಧಾವಳ್ಯದಿಂ ಸುಗತಿಯಿಂ . . . ಶೋಭಿದಳೆದ ವರರಾಜಹಂಸದಂದದಲಿ ತದ್ದೇಶದೊಳ್ ಧರಣೀಶರಾಜಹಂಸರ್ ವಿರಾಜಿಸುವರ್ (ಸಂವಿಪಾ. ೧೫-೩೧). ೩. ವಿಮೋಚನೆ ಮಾಡಿದ: ಬಿಡುಗಡೆ ಮಾಡಿದ. ೪. (ಸಾಲ ಮುಂತಾದುವನ್ನು) ತೀರಿಸಿದ;

ಸಲ್ಲಿಸಿದ. (ನಾ). ೫. ದೋಷವಿಲ್ಲದುದು ; ಶುದ್ಧವಾದುದು : ಪರಿಶುದ್ಧಮಾಗಿರ್ಪುದೀ ತುರಗಂ (ಜೈಮಿಭಾ. ೩೪-೧೮) ; ತಥಾಗತನ ಮೆಯ್ವಣ್ಣವಿಂತೆರಡುಸೂಳಾನಂದ ಅವದಾತವಾಗುತಿದೆ, ಪರಿಶುದ್ಧವಾಗುತಿದೆ (ವೈಶಾಖಿ. ೭೩-೨೩೪). ೬. ಶುದ್ಧತೆ ; ಪವಿತ್ರತೆ : ವಿಪ್ರವಧೆ ಮೊದಲಾದ ಬಹುಪಾಪಸಂಚಿತಂ ಕ್ಷಿಪ್ರದಿಂ ಪೋಗಿ ಪರಿಶುದ್ಧಮಹುದು (ಜೈಮಿಭಾ. ೩೪-೨೬). ೭. ಪವಿತ್ರನಾದೆ ವ್ಯಕ್ತಿ ; ದೋಷದೂರನಾದ ವ್ಯಕ್ತಿ : ಮಧ್ವರಾಯರ ನೆನೆದು ಪರಿಶುದ್ಧರಾಗಿರೊ (ಪುರಂದ. ೧-೨೦೯ ಪಲ್ಲವಿ) ; ಪವಿತ್ರಃ, ಪ್ರಯತಃ, ಪೂತಃ—ಪವಿತ್ರನಾದವನ ಹೆಸರುಗಳು, ಪರಿಶುದ್ಧನು (ಸಿದ್ಧಾಂತಿ. ೨೨೯). [ಸಂ.]

ಪರಿಶುದ್ಧಿ (ನಾ). ಶುದ್ಧತೆ ; ಪವಿತ್ರತೆ ; ದೋಷದೂರವಾಗಿರುವಿಕೆ : ಭಕ್ತಿಯೊಳ್ ವಿಭಾವನೆ ಪರಿಶುದ್ಧಿಯೊಳ್ ತ್ರಿಕರಣಂ ಸಮಸಂದಿರೆ (ಶಾಂತಿಪು. ೭-೩೧). [ಸಂ.]

ಪರಿಶುದ್ಧೆ (ನಾ). ದೋಷವಿಲ್ಲದವಳು ; ಪವಿತ್ರಳಾದವಳು : ಸೀತೆ ಭೂತಳವಱಿಯೆ ಪರಿಶುದ್ಧೆ (ಜೈಮಿಭಾ. ೨೧-೬೩).

[ಸಂ. ಪರಿಶುದ್ಧಾ]

ಪರಿಶುಷ್ಕ (ಗು). ೧. ಚೆನ್ನಾಗಿ ಒಣಗಿದ ; ನಿರ್ದ್ರವವಾದ : ಪರಿಶುಷ್ಕಪರ್ಣವಸ್ತ್ರಾದಿ ರವಂ ಮರ್ಮರಮೆನಿಕ್ಕುಂ (ಪಸ್ತುಕೋ. ೮೧-೩೮). ೨. ಸೊರಗಿದ ; ಮುರುಟಿ ಹೋದ. [ಸಂ.]

ಪರಿಶೆ 'ಪರಿಸೆ' ನೋ.

ಪರಿಶೇಚನ (ನಾ). ೧. (ನೀರನ್ನು) ಚಿಮುಕಿಸುವಿಕೆ ; ಸಿಂಪಡಿಸುವಿಕೆ. ೨. ಬ್ರಾಹ್ಮಣರು ಊಟಮಾಡುವ ಮೊದಲು ಊಟದೆಲೆಯ ಸುತ್ತಲೂ ಮಂತ್ರಪೂರ್ವಕವಾಗಿ ನೀರನ್ನು ಪ್ರೋಕ್ಷಿಸಿ ಸುತ್ತುಗಟ್ಟುವುದು : ಯಥಾವಿಧಿಯಾಗಿ ಅನ್ನವು ಶುದ್ಧಿಯಾಗಿ ಪರಿಶೇಚನವು ನಡೆದು ಕೇಶವಾಚಾರ್ಯರ ಊಟ ಸಾಂಗವಾಗಿ ನೆರವೇರಿತು (ಗರುದಾ. ೭೯). [<ಸಂ. ಪರಿಷೇಚನ]

ಪರಿಶೇಷ (ನಾ). ಉಳಿದಿರುವುದು ; ಉಳಿಕೆ ; ಬಾಕಿ : ಆದ್ಯಕ್ಷರದಿಂ ಬರೆ ಪದಿನಾಲ್ಕುಂ ಸ್ವರಮಿಂ ಪರಿಶೇಷಂ ವ್ಯಂಜನಂಗಳರೆಮಾತ್ರಿಕೆಗಳ್ (ಕಾವ್ಯಾವ. ೬) ; ಪರಿಶೇಷಂ ರಾಜ್ಯಚಿಹ್ನಂ ತನಗೆನೆ ಮದವತ್ಸಿಂಧುರ ಶ್ರೇಣಿಯಂ . . . ತಾನಿತ್ತಂ (ಶಾಂತೀಶ್ವ. ೫-೧೩) ; ಐದುಸಾವಿರ ತುರಗ ಪಯದಳವೆಂಟುಸಾವಿರವೆರಡುಸಾವಿರ ರಥವಿದರಿಮೋಹರದ ಪರಿಶೇಷ (ಕುಮ್ಯಾಗ. ೫-೪). [ಸಂ.]

ಪರಿಶೋಕ (ನಾ). ಅತ್ಯಂತದುಃಖ : ಸತ್ಯಪಾಮೂಲಿ ಮದಿಷ್ಟ ಮೂರ್ತಿಯೆ ಮಹಾಜನದುಕ್ತಿಗಳಂ ವಿನೋದದಿಂ ಕೇಳದೆ ಗೈವುತಿರ್ದ ಪರಿಶೋಕವ (ಅಮಶ. ೬). [ಸಂ.]

ಪರಿಶೋಧ (ನಾ). ತಿದ್ದುಪಾಟು ; ತಿದ್ದುಪಡಿ : ಪರಲೋಕದ ಸುಖಕ್ಕೆ ಕಾರಣವಾದ ಧರ್ಮ ನೀತಿಶಾಸ್ತ್ರಗಳನ್ನು ಕೆಲವರು ಕೈಕೊಂಡು ನಾನಾ ಪರಿಶೋಧಗಳನ್ನು ಮಾಡಿರುತ್ತಾರೆ (ಮುಂಬಯಿ. ೬-೪).

[ಸಂ.]

ಪರಿಶೋಧಕ (ನಾ). ೧. ಕಂಡು ಹಿಡಿಯುವವನು ; ಗೊತ್ತು ಹಚ್ಚುವವನು. ೨. ತಪ್ಪುಗಳನ್ನು ಪರಿಶೀಲಿಸಿ ತಿದ್ದಿ ಸರಿಪಡಿಸುವವನು : ಒಬ್ಬ ದೊಡ್ಡ ವಿದ್ವಾಂಸರು ಆ ಗ್ರಂಥಮಾಲೆಯಲ್ಲಿ ಪರಿಶೋಧಕರಾಗಿದ್ದಾರೆ (ರೂಢಿ). [ಸಂ.]

ಪರಿಶೋಧನ (ನಾ). ೧. ಶುದ್ಧಗೊಳಿಸುವುದು ; ನಿರ್ಮಲಗೊಳಿಸುವುದು. ೨. ಶೋಧಿಸುವುದು ; ಸೋಸುವುದು. ೩. ಪರೀಕ್ಷೆ ; ತನಿಖೆ. ೪. ತಿದ್ದುಪಡಿ ; ತಿದ್ದುಪಾಟು. [ಸಂ.]

ಪರಿಶೋಧನಿ (ನಾ). ಪರಿಶುದ್ಧಗೊಳಿಸುವ ಸಾಧನ ; ಪೊರಕೆ : "ಸಮ್ಮಾರ್ಜನಿ ಪರಿಶೋಧನಿಯೆನಲ್ ಕಸಕಿಲೆನಿಸಿಕ್ಕು" (ಮಂಗರಾ. ೬೦-೧೫). [ಸಂ. ಪರಿಶೋಧನೀ]

ಪರಿಶೋಧನೆ (ನಾ). ಸಂಶೋಧನೆ : ವಿವರಗಳ ವಿಷಯದಲ್ಲಿಯೇ ಹೊಸ ಪರಿಶೋಧನೆಗಳು ಮೊದಲು ನಡೆಯಬೇಕು (ಭೌತವಿ. ೬).

[ಸಂ. ಪರಿಶೋಧನ]

ಪರಿಶೋಧಿತ (ಗು). ೧. ಶುದ್ಧಗೊಳಿಸಿದ ; ನಿರ್ಮಲಗೊಳಿಸಿದ. ೨. ಶೋಧಿಸಿದ ; ಸೋಸಿದ. ೩. ತಿದ್ದುಪಾಟುಮಾಡಿದ ; ತಿದ್ದುಪಡಿಯಾದ. ೪. ಹುಡುಕಿದ ; ಶೋಧನೆಮಾಡಿದ. [ಸಂ.]

ಪರಿಶೋಧಿಸು (ಕ್ರಿ). ೧. ನಿರ್ಮಲಗೊಳಿಸು ; ಸ್ವಚ್ಛಮಾಡು. ೨. ಶೋಧಿಸು ; ಸೋಸು. ೩. ತಿದ್ದು ; ಸರಿಪಡಿಸು. ೪. ಸೂಕ್ಷ್ಮವಾಗಿ ಪರಿಶೀಲಿಸು : ಅದಕ್ಕೆ ಬಂದ ಪ್ರತ್ಯುತ್ತರವನ್ನು ಮತ್ತೊಂದು ಪ್ರಶ್ನೆಯ ಮೂಲಕ ಪರಿಶೋಧಿಸುವನು (ಸೋಕ್ರಮ. ೨೩) ; ಓದು ಬರಹ ಕಲಿಯಲು ನಾವು ಯೋಗ್ಯರೋ ಅಲ್ಲವೋ ಎಂದು ಪರಿಶೋಧಿಸತಕ್ಕವರು ವಿಜ್ಞಾನಿಗಳು (ಕಾಲಯಾ. ೪೮).

[ಪರಿಶೋಧನ+-ಇಸ್ಸು$_3$]

ಪರಿಶೋಭನ (ನಾ). ರಮಣೀಯತೆ ; ಶೋಭೆ : 'ಪರಿಶೋಭಿಸು' ಪರಾ. [ಸಂ.]

ಪರಿಶೋಭಿತ (ಗು). ೧. ಸುಂದರವಾದ ; ರಮಣೀಯವಾದ. (ನಾ). ೨. ಶೋಭಿಸುವುದು ; ರಮಣೀಯವಾದುದು. ೩. ಶೋಭೆಗೊಳಿಸುವಂತಹುದು ; ಕಂಗೊಳಿಸುವಂತೆ ಮಾಡುವಂತಹುದು : ನಭದಂತೆ ಕುಜಯುತಂ ದ್ವಿಜನಂತೆ ವಂಶಪರಿಶೋಭಿತಂ . . . ಆಗಿ ತಚ್ಛೈಲಮೆಸೆದಿರ್ದುದು (ಜೈಮಿಭಾ. ೧೦-೫). ೪. ಶೋಭಿಸುವ ವ್ಯಕ್ತಿ : ಸಕಲದೇವದೀಕ್ಷಾಗುರು ಅನಂತದೇವಗಣಪರಿಶೋಭಿತಂ . . . ಶಿವಲಿಂಗದೊಳ್ ಪುಗಲ್ (ನಂಬರ. ೮-೩). [ಸಂ.]

ಪರಿಶೋಭಿಸು (ಕ್ರಿ). ಕಂಗೊಳಿಸು ; ಶೋಭಿಸು : ಭೂದೇವ ಕುಲದೊಳಗೆ ಎಸೆವ ವಿಪ್ರನದಾರು ಪರಿಶೋಭಿಸುವುದೈ ಬ್ರಾಹ್ಮಣ್ಯವೇತಱ ದೆಸೆಯೊಳು (ಕುಮ್ಯಾಅ. ೧೩-೪೯) ; ಪರಿಶೋಭಿಸಿತು ಮುಂದೆ . . . ಕಮಲಕುವಲಯವಿರಾಜಿತಶ್ರೀಕರಂ ಪದ್ಮಾಕರಂ ಚೆಲ್ವೆನೆ (ಜೈಮಿಭಾ. ೧೫-೮) ; ಪರಿಶೋಭಿಸುವ ಪೀತಾಂಬರ . . . ವರಶಂಖ ಚಕ್ರಾಂಕಿತನಾದ ಲಕ್ಷ್ಮೀನರಸಿಂಹನ ಕಂಡಳಿಂತು (ಕಂಸವಿ. ೪-೫೧).

[ಪರಿಶೋಭನ+-ಇಸ್ಸು$_3$]

ಪರಿಶೋಭೆ (ನಾ). ಸೌಂದರ್ಯ ; ರಮಣೀಯತೆ : ಆಯತರಂಗವಲ್ಲಿಪರಿಶೋಭೆಯಂ . . . ಸುಂದರರಾಜಮಾರ್ಗಮಂ ಶ್ರೀಯ ನಿವಾಸಮಂ ಪುಗೆ ನೃಪೇಶ್ವರಕನ್ಯಕೆಯುಂ ಕುಮಾರನುಂ (ಶಾಂತಿಪು. ೬-೪). [ಸಂ. ಪರಿಶೋಭಾ]

ಪರಿಶೋಭೆವಡೆ (ಕ್ರಿ). ಚೆಲುವನ್ನು ಹೊಂದು ; ಅಂದವಾಗು : ಪಕ್ಕಝಲ್ಲಿಗಳಿಂ ಪರಿಶೋಭೆವಡೆದು ಪರಿವ ತುರಂಗಸಂಘದಿಂ (ರಾಜಶೇ. ೧೩-೭೭ ಪ) ; ಕಮಲಕುಮುದದ ಲತಾಂತಂಗಳಿಂದೆ ಪರಿಶೋಭೆವಡೆದಿರ್ದುದಾ ಕಾಸಾರ ಕಂಗೊಳಿಸುತೆ . . . ಒಪ್ಪಿರೆ (ನವಮೋ. ೮-೨೯).

[ಪರಿಶೋಭೆ+ಪಡೆ$_1$]

ಪರಿಶೋಭೆವೆಱು (ಕ್ರಿ). = ಪರಿಶೋಭೆವಡೆ : ಪರಿಶೋಭೆವೆತ್ತ ನಾಗೋತ್ಕರದಿಂದನವರತಮಲ್ಲಿ ಮಿಸುಗುವ ಸಸಿಯಿಂ ದೊರೆವೆತ್ತ ಗಂಗೆಯಿಂದೀಶ್ವರನ ಜಟಾಜೂಟದಂತೆ ಜನಪದಮೆಸೆಗುಂ (ಪಾರ್ಶ್ವಪು. ೧೩-೧೦೦) ; ಮೌಕ್ತಿಕಲಸತ್ಕಲಶಂ ಪರಿಶೋಭೆವೆತ್ತು ಬಜ್ಜರದ ಕವಾಟ ಮೊಂದೆ ಕರಮೊಪ್ಪಿದುದೀಶಸಭಾನಿಕೇತನಂ (ಶಬಶಂ. ೧-೭೦).

[ಪರಿಶೋಭೆ+ಪೆಱು$_1$]

ಪರಿಶ್ರಮ (ನಾ). ೧. ಬಳಲಿಕೆ; ದಣಿವು; ಆಯಾಸ: ಜಾದಿಯೊಳ್ ಮಸಗಿದ ಕಂಪು ಕಂಪನೊಳಕೊಂಡಲೆವೊಂದೆಲ[ರೆಂಬಿ]ವಂದು ಪಾಱಿಸುವುವುದಗ್ರ ವೀರಭಟರಾಹವಕೇಳಿಪರಿಶ್ರಮಂಗಳಂ (ಪಂಪಭಾ. ೧೧-೪); ಅರಸನುಪವಾಸಪರಿಶ್ರಮಮನರಮನೆಗೆ ಪಂದಶ್ರಮದೊಳೆಳೆದು (ಶಾಂತಿಪು. ೬-೬೬); ಕಾಂಡಸಖನಿಯ ಖನನಂ ವೃಥಾ ಪರಿಶ್ರಮವಲ್ತೆ ಸ್ಪರ್ಶಮಣಿ ಕರದೊಳಿರೆ? (ಚಿತ್ರಾಂಗ. ೪೦-೧೦೯೧). ೨. ಅನುಭವ; ತಿಳಿವಳಿಕೆ: ಕನ್ನಡ ಸಾಹಿತ್ಯದಲ್ಲಿ ತಕ್ಕಮಟ್ಟಿಗೆ ಪರಿಶ್ರಮವಿತ್ತು (ಕಳಹು. ೬೨). ೩. ಸತತವಾದ ಸಾಧನೆ; ನಿರಂತರವಾದ ಅಭ್ಯಾಸ: ಸಂಗೀತದಲ್ಲಿ ಪರಿಶ್ರಮವಿಲ್ಲದಿದ್ದರೆ ಹೋಗಲಿ, ಪರಿಚಯವಾದರೂ ಇಲ್ಲದಿದ್ದವನು ಹೇಗೆ ಸುಸಂಸ್ಕೃತನೆನಿಸಿಕೊಳ್ಳುವನು? (ಧಾರದ. ೫೩೫); ಅವರು ಪರಿಶ್ರಮ—ದಕ್ಷತೆಗಳಿಂದ ಇಲಿಗಳ ಸಂಖ್ಯೆಯನ್ನು ಮತ್ತೆ ಬೆಳೆಸಬಲ್ಲರು (ದೇಕನ್ಯೆ. ೪೨). [ಸಂ.]

ಪರಿಶ್ರಾಂತ (ಗು). ದಣಿದ; ಆಯಾಸ ಪಟ್ಟ: ಸೀತಾನದೀತರಂಗಾಲಿಂಗಿತ ಸಂತಾನಲತಾಲತಾಂತಸುರಭಿತರುಮಂದಾರವನವೀಧೀವಿಹಾರ ಪರಿಶ್ರಾಂತಪವಮಾನಸ್ಪರ್ಶನದಿಂ ಮದೀಯಾಂಗಸಂಗತಪರಿತಾಪವನಾಱಿಸುವೆಂ (ಅದಿಪು. ೨-೧೪೮). [ಸಂ.]

ಪರಿಶ್ರಾಂತಿ (ನಾ). ಬಳಲಿಕೆ; ಆಯಾಸ; ದಣಿವು. [ಸಂ.]

ಪರಿಶ್ರಾಂತೆ (ನಾ). ಬಳಲಿಕೆಯನ್ನು ಹೊಂದಿದವಳು; ಆಯಾಸ ಪಟ್ಟಿರುವವಳು: ಆ ಮುನೀಂದ್ರಪ್ರಭಾವದೂತಾಹೂತವಸಂತವಲ್ಲಭನವೀನಸಂಯೋಗದಿಂ ಪರಿಶ್ರಾಂತೆಯಾದುದ್ಯಾನಲಕ್ಷ್ಮಿಯ ನಱುಸುಯ್ಯ ದೆನಿಸಿ ಪಸರಿಸುವ ತಂಗಾಳಿಯುಂ (ಚಂದ್ರಪು. ೨-೧೧೪ವ).

[ಸಂ. ಪರಿಶ್ರಾಂತಾ]

ಪರಿಶ್ರುತ (ಗು). ೧. ಕೇಳಿದ; ಆಲಿಸಿದ. ೨. ಪ್ರಸಿದ್ಧವಾದ; ಪ್ರಖ್ಯಾತವಾದ. (ನಾ). ೩. ಪ್ರಸಿದ್ಧವಾದುದು; ಪ್ರಖ್ಯಾತವಾದುದು: ಈ ಪದ್ಧತಿ ಪರಿಶ್ರುತವಹುದು ಬಳಿಕೀ ಲೋಕದಲಿ ನಿನಗಹುದು ಕೀರ್ತಿ (ತೊರರಾ. ೧-೨-೧೭). [ಸಂ.]

ಪರಿಷಂಚನೆ (ನಾ). = ಪರಿಶೇಚನ ೨: ಎದ್ದುಬಿಡುವ ಎಂದರೆ ಪರಿಷಂಚನೆ ಕಟ್ಟಿಯಾಗಿದೆ (ಸಂಸ್ಕಾರ. ೧೩೭). [<ಸಂ. ಪರಿಷಿಂಚನ]

ಪರಿಷಜ್ಜನ (ನಾ). ಸಭೆಯಲ್ಲಿರುವ ಜನ; ಸಭಾಸದ ಜನ: ಅಂಜನಾಸುತನಿರೀಕ್ಷಣದಿಂ ರಘುಜಂಗೆ ಹರ್ಷಮಾದುದು ಪರಿಷಜ್ಜನಕ್ಕೆ ಪರಮೋತ್ಸವವಾದುದು (ಪಂರಾಮಾ. ೧೧-೧೬೨); ಭೂಭುಜನೊಂದು ಕೋಟಿಯಂ ಮೆಚ್ಚಱಿದೀವನೆಂದು ಪರಿಷಜ್ಜನಮಂದುಲಿಯುತ್ತು ಮಿರ್ಪಿನಂ (ಮಲ್ಲಿಪು. ೫-೪೮). [ಸಂ.]

ಪರಿಷತ್ತು (ನಾ). ೧. ಸಭೆ; ಸಮ್ಮೇಳನ; ಗೋಷ್ಠಿ: "ಸಮಾಜಃ . . . ಪರಿಷತ್, ಸದಃ—ಈ ೬ ಸಭೆ" (ಹಲಾಯು. ೧೨೩-೬೦); ಸಂವೀಕ್ಷಣಂಗೈದು ನೆರೆದಿರ್ದ ಪರಿಷತ್ತು ನಿಶ್ಶಬ್ದತೆಯ ಕಡಲೊಳಳ್ದತ್ತು (ಶ್ರೀರಾಮಾ. ೪೭-೫೧೬). ೨. ಸಂಘ; ಸಂಸ್ಥೆ: ಈಚೆಗೆ ಗಮಕ ಕಲೆಗಾಗಿ ಒಂದು ಪರಿಷತ್ತು ಹುಟ್ಟಿಕೊಂಡಿದೆ (ರೂಢಿ). ೩. ಓಲಗ; ಒಡ್ಡೋಲಗ; ಆಸ್ಥಾನ: ಅಚ್ಯುತೇಂದ್ರಂ . . . ಅಂತರ್ಮಧ್ಯಬಾಹ್ಯಪರಿಷತ್ತ್ರಕಟಿತವಿಭವನುಂ . . . ಆಗಿ (ಅದಿಪು. ೬-೧೩೮); ಅಂತರ್ಮಧ್ಯಬಾಹ್ಯ ತ್ರಿಃಪ್ರಕಾರ ಪರಿಷತ್ತ್ರಕಾಶಕರನಾಗಿ ಪರಮೈಶ್ವರ್ಯಸ[ಂಪ]ನ್ನನಾದಂ (ಸುಕುಮಾ. ೯-೩೧ವ); ಪರಿಷದ್ರಾಜಕದಂಬಮಂಬರವಿಭೂಷಾಶ್ಚರ್ಯಸೌಂದರ್ಯದಿಂ ಪಿರಿದುಂ ಭೇದಿಸಲಾರ್ತುದಿಲ್ಲಱಿದುದಾಗಳ್ ವೇದಿಕಾಭ್ಯರ್ಣದೊಳ್ (ಅನಂಪು. ೬-೬೨). ೪. ಗುಂಪು; ಸಮೂಹ. ೫. (ಪರಾಮರ್ಶಿಸಿ ಸಲಹೆ ಕೊಡುವವರ) ಮಂಡಲಿ; ಸಮಿತಿ. ೬. ಕೆಸರು; ಪಂಕ: "ಪರಿಷಜ್ಜಂಬಾಳ ನಿಷದ್ವರ ಕರ್ದಮಶಾದ" (ವಸ್ತುಕೋ. ೨೫-೨೦). [ಸಂ. ಪರಿಷದ್]

ಪರಿಷದ್ವಲಯ (ನಾ). ಸಭೆ; ಸಭಿಕ ಸಮುದಾಯ: ಹರಿಯಿಲ್ಲದ ಲೋಕಪಾಲಪರಿಷದ್ವಲಯಂ ಹರಿಯಿಲ್ಲದ ಕಾಂತಾರಂ ಹರಿ ನೀನಿಲ್ಲದ ಮದೀಯ ಗೋಕುಲಮಫಲಂ (ಜಗವಿ. ೬-೯೪). [ಸಂ.]

ಪರಿಷನ್ಮಂಡಲ (ನಾ). = ಪರಿಷದ್ವಲಯ: ಪರಿಷನ್ಮಂಡಲಮಿಂತನಂತ ಪರಿನಿಷ್ಕ್ರಾಂತಪ್ರಬುದ್ಧಪ್ರಮೋದರಸಾವೇಶದಿ ನಿಂದುದು (ಅನಂಪು. ೯-೫೦). [ಸಂ.]

ಪರಿಷಿಂಚನೆ (ನಾ). = ಪರಿಶೇಚನ ೨: ಅವರು ಪರಿಷಿಂಚನೆ ಮಾಡಿ ಊಟಕ್ಕೆ ತೊಡಗಿದರು (ರೂಢಿ). [ಸಂ. ಪರಿಷಿಂಚನ]

ಪರಿಷಿಕ್ತ (ಗು). ಸುತ್ತಲೂ ಆವರಿಸಿರುವ,—ಹರಡಿರುವ: ದಾವಾನಳಶಿಖಿಶಿಖಾನಿಕರಪರಿಷಿಕ್ತ ನೀಳಾಚಳವರ್ಣಂ ಮೇಘವರ್ಣಂ ಮುಳಿದು (ಪಂಚತಂ. ೨೪೧-೩). [ಸಂ.]

ಪರಿಷೆ 'ಪರಿಸೆ$_1$' ನೋ.

ಪರಿಷೇಕ (ನಾ). ಚಿಮುಕಿಸುವುದು; ಸಿಂಪಡಿಸುವುದು; ಸಿಂಚನ: ಕುಂದದಳಧವಳನೃಪದಶನೇಂದುಜ್ಯೋತ್ಸ್ನಾಮೃತಾಚ್ಛಜಳ ಪರಿಷೇಕಂ ಮಾಂದಿಸುವಂತಾದುದು ನೃಪನಂದನೆಯೆರ್ದೆಯೊಳಗೆ ಬಳೆದ ಶೋಕಾನಳನಂ (ಅದಿಪು. ೩-೪೯); ಧರಣೀಶ್ವರ ವಚನಾಮೃತ ಪರಿಷೇಕದೆ ಗರ್ಭಭೂಮಿಯೊಳ್ ತೀರ್ಥಕರಾಂಕುರಮುದಯಿಸಿದಂತಾಗಿರೆ ಪರಮೇಶ್ವರಿ ಮಗನನಂದು ಪೆತ್ತಂತೊಸೆದಳ್ (ಅಜಿಪು. ೩-೧೫); ಸ್ಫುರದಾಶಾಜ್ವಳನಂ ದುರ್ಧರಸುತಪಸ್ತೀರ್ಥವಾರಿಪರಿಷೇಕದಿನೆಂತಿರೆ ಕಿಡುಗುಂ ಭೋಗಾಜ್ಯೋತ್ಕರಪಾತದಿನೆಂತುಮಂತದೇಂ ಮಟ್ಟುಗುಮೇ (ಚಂದ್ರಪು. ೨-೪೩). [ಸಂ.]

ಪರಿಷೇಚನ (ನಾ). ೧. = ಪರಿಶೇಚನ ೧. ೨. = ಪರಿಶೇಚನ ೨: ಶಾಸ್ತ್ರಿಗಳು ಪರಿಷೇಚನ ಮಾಡಿ ಊಟಮಾಡತೊಡಗಿದರು (ರೂಢಿ).

[ಸಂ.]

ಪರಿಷೇಚನೆ (ನಾ). = ಪರಿಶೇಚನ ೨: ಇತರರು ಪರಿಷೇಚನೆ ಮಾಡಿ ಪ್ರಾಣಾಹುತಿಯನ್ನು ಹಾಕಿಕೊಳ್ಳುವುದಕ್ಕೆ ಮುಂಚೆ . . . ಹುಡುಗರು ಎಡೆಯನ್ನು ಮುಟ್ಟುವ ಪದ್ಧತಿ ಇಲ್ಲ (ಮಾಮರಾ. ೮೬).

[ಸಂ. ಪರಿಷೇಚನ]

ಪರಿಷ್ಕರಣ (ನಾ). ೧. ತಿದ್ದಿ ಸರಿಪಡಿಸುವಿಕೆ; ತಿದ್ದುಪಡಿ; ಪರಿಷ್ಕಾರ: ಆರ್ಯಸಂಸ್ಕೃತಿಯ ಪ್ರಸಾರವನ್ನು ಪ್ರಭಾವಯುತವನ್ನಾಗಿ ಮಾಡಲು ಇತಿಹಾಸ ಪುರಾಣಗಳ ಪರಿಷ್ಕರಣ ಬಹುಮಟ್ಟಿಗೆ ನಡೆಯಿತು (ಋಶ್ವಾರ. ೧೦೬ ಪೀಠಿಕೆ); ಸಂಪಾದಕನು ಮಾಡಬೇಕಾದ ಕಾರ್ಯನಾಲ್ಕು ಬಗೆಯಾಗಿರುತ್ತದೆ: ಸ್ವೀಕರಣ (Acceptance), ಸಂದೇಹ (Doubt), ವರ್ಜನ (Rejection), ಪರಿಷ್ಕರಣ (Alteration) ಎಂದು (ಕನ್ನಸಂ. ೧೬೬). ೨. ತಿದ್ದುಪಡಿ ಮಾಡಿದುದು; ಪರಿಷ್ಕರಿಸಿದುದು: ಶೂನ್ಯಸಂಪಾದನೆಯ ಪರಿಷ್ಕರಣಗಳು (ಶೂನ್ಯಕು. ೬೫). ೩. ಸುಧಾರಣೆ: ಬ್ರಹ್ಮಸಮಾಜವನ್ನು ಸೇರಿ, ಅವರ ಮತವನ್ನಂಗೀಕರಿಸಿ ಇಂದಿರೆಯೂ ಸುಂದರೇಶನೂ ವಿವಾಹ ಮಾಡಿಕೊಂಡರು. ಪರಿಷ್ಕರಣದಲ್ಲಭಿರುಚಿಯುಳ್ಳ ಅನೇಕ ಶ್ರೀಮಂತರೂ ಪ್ರಭುಗಳೂ ವಿವಾಹಕ್ಕೆ ಕರೆಯಲ್ಪಟ್ಟಿದ್ದರು (ನಿರ್ಭಾಗ್ಯ. ೧೦೨); ಸ್ತ್ರೀಯು ಪುರುಷನ ಅರ್ಧಾಂಗಿಯೆಂದು ಸಾರಿ, ಸಮಾಜಪರಿಷ್ಕರಣಕ್ಕೆ ಪ್ರಾರಂಭಮಾಡಿದನು (ಶೈಗಂಬ. ೧೫೪). ೪. ಸಂಸ್ಕಾರದಿಂದ ಶುದ್ಧಮಾಡುವುದು. [ಸಂ.]

ಪರಿಷ್ಕರಣಗೊಳಿಸು (ಕ್ರಿ). ಸುಧಾರಣೆ ಮಾಡು; ತಿದ್ದು: ಬುದ್ಧಿಯನ್ನು ವಿದ್ಯೆ ಪರಿಷ್ಕರಣಗೊಳಿಸುತ್ತದೆ (ಗ್ರಂಥಾಲ. ೧).

[ಪರಿಷ್ಕರಣ + ಕೊಳ್$_1$ + -ಇಸು$_3$]

ಪರಿಷ್ಕರಣಗೊಳ್ಳು (ಕ್ರಿ). ಸುಧಾರಣೆ ಹೊಂದು: ಸದ್ಭಾವನೆಗಳಿಂದ ಪರಿಷ್ಕರಣಗೊಂಡ ಅಂಥ ಸಮಾಜ ವ್ಯಕ್ತಿಗಳಿಗೆ ಅತ್ಯುತ್ತಮವಾದ ಶಿಕ್ಷಣವನ್ನು ಕೊಡಬಲ್ಲದು (ಶಿಕ್ಷದ. ೬೩).

[ಪರಿಷ್ಕರಣ+ಕೊಳ್ಳು$_1$ (<ಕೊಳ್$_1$)]

ಪರಿಷ್ಕರಿಸು (ಕ್ರಿ). ೧. ತಿದ್ದು; ಪರಿಷ್ಕಾರವಾಗುವಂತೆ ಮಾಡು: ನಮ್ಮ ಜೀವನ ತತ್ವವನ್ನೇ ಪರಿಶೀಲಿಸಿ, ಪರಿಷ್ಕರಿಸಿ ಜೀವನದ ಪ್ರಗತಿಗೂ ನಾಡಿನ ಸಂಪದಭಿವೃದ್ಧಿಗೂ ನೆರವಾಗುವಂತೆ ಮಾರ್ಪಡಿಸಿಕೊಳ್ಳುವುದು ನಮ್ಮ ಧ್ಯೇಯವಾಗಿರಬೇಕು (ಶಿಕ್ಷದ. ೨೪); ಇವನು . . . ಅರಿಸ್ಟಾಟಲಿನ ಚರಿತ್ರೆಯ ಅರಬ್ಬೀಭಾಷಾಂತರವನ್ನು ತಿದ್ದಿ ಪರಿಷ್ಕರಿಸಿದ್ದಾನೆ (ಇಸ್ಲಾಂಸಂ. ೨೧೪). ೨. ಸಿದ್ಧಗೊಳಿಸು; ತಯಾರುಮಾಡು. ೩. ಶೃಂಗಾರಮಾಡು; ಅಲಂಕರಿಸು. ೪. ಪೂರ್ಣಗೊಳಿಸು; ಮುಗಿಸು. ೫. ನಯಮಾಡು; ಮೆರುಗುಕೊಡು. ೬. ಸ್ಫುಟವಾಗು; ಸ್ಪಷ್ಟವಾಗು: ಅರುಣೋದಯಕ್ಕೆ ಕತ್ತಲೆ ಹರಿದು ಬೆಳಕು ಪರಿಷ್ಕರಿಸಿದಂತೆ ಸಮ್ಯಕ್ ಜ್ಞಾನೋದಯವಾಗಿ (ವಚರ. ೩೬-೧೩೮).

[ಪರಿಷ್ಕರಣ+-ಇಸು$_3$]

ಪರಿಷ್ಕಾರ (ನಾ). ೧. ತಿದ್ದುಪಡಿ; ಸುಧಾರಣೆ; ಪರಿಷ್ಕರಣ: 'ಪರಿಷ್ಕಾರಗೊಳ್ಳು' ಪರಾ. ೨. ಅಲಂಕರಿಸುವಿಕೆ; ಶೃಂಗಾರ ಮಾಡುವಿಕೆ. ೩. ಅಲಂಕಾರ; ಭೂಷಣ: "ಪರಿಷ್ಕಾರಃ, ಭೂಷಣಂ—ಈ ೨ ಅಲಂಕಾರಂ" (ಹಲಾಯು. ೮೯-೩೮೬). ೪. ಮುಗಿಸುವುದು; ಪೂರ್ಣಮಾಡುವುದು. ೫. ನಯಗೊಳಿಸುವಿಕೆ; ಮೆರುಗು ಕೊಡುವಿಕೆ. ೬. [ಬೌದ್ಧ] ಭಿಕ್ಷುಗಳು ಉಪಯೋಗಿಸಬಹುದಾದ ನಾಲ್ಕು ಅತ್ಯಾವಶ್ಯಕ ವಸ್ತುಗಳು: (೧) ಬಟ್ಟೆ, (೨) ಊಟ, (೩) ಮಲಗಿ ಕುಳಿತುಕೊಳ್ಳುವ ಆಸನ, ಮತ್ತು (೪) ಕಾಯಿಲೆ ಬಂದಾಗ ಬೇಕಾದ ಓಷಧಿ—ಎಂಬ ಈ ನಾಲ್ಕು ಅತ್ಯಾವಶ್ಯಕವಾದ ವಸ್ತುಗಳಿಗೆ 'ಪರಿಷ್ಕಾರ'ಗಳೆನ್ನುವರು (ತೀರ್ಥಕ. ೧೧೯).

ಪರಿಷ್ಕಾರ ಮಾಡು=೧. ತಿದ್ದು; ಪರಿಷ್ಕರಿಸು: ಗ್ರಂಥವನ್ನು ಪರಿಷ್ಕಾರ ಮಾಡಿದೆ; ಹೊಸ ಟಿಪ್ಪಣಿಗಳನ್ನು ಸೇರಿಸಿದೆ (ಧ್ವನ್ಯಾಲೋ. XV ಸಂಪಾದಕರ ಮಾತು). ೨. ಮುಗಿಸು; ಇತ್ಯರ್ಥಗೊಳಿಸು: ನನಗೂ ನಿನಗೂ ಒಂದು ವಿವಾದವಿರುವುದು; ಅದನ್ನು ಪರಿಷ್ಕಾರ ಮಾಡಿಕೊಂಡು ನೀನು ವಿವಾಹವನ್ನು ಮಾಡಿಕೊಳ್ಳಬಹುದು (ಪುರಾವಿ. ೨೪). ಪರಿಷ್ಕಾರವಾಗು=ಒಪ್ಪವಾಗು; ಓರಣ ಹೊಂದು: ಈ ವಿಷಯಗಳು ಆಕೆಯ ಮನಸ್ಸಿಗೆ ತಟ್ಟನೆ ಹೊಳೆದವು. ಅಷ್ಟೇ ಬೇಗನೆ ವಿಷಯಗಳೂ ಪರಿಷ್ಕಾರವಾದವು (ಶಾಂತಲಾ. ೩೬೬). [ಸಂ.]

ಪರಿಷ್ಕಾರಕ (ನಾ). ತಿದ್ದುಪಡಿ ಮಾಡುವವನು; ಪರಿಷ್ಕರಿಸುವವನು: ಇವಕ್ಕೆ ಹಸ್ತಪ್ರತಿಯ ಲಿಪಿಕಾರರೋ ಇಲ್ಲವೆ ಪರಿಷ್ಕಾರಕರೆಂದು ಕರೆಸಿಕೊಳ್ಳುವ ವ್ಯಕ್ತಿಗಳೋ ಕಾರಣ (ಭಾರಪ. ೩೩). [ಸಂ.]

ಪರಿಷ್ಕಾರಗೊಳ್ಳು (ಕ್ರಿ). ಸುಧಾರಣೆಯಾಗು; ತಿದ್ದುಪಡಿ ಹೊಂದು: ಅಧುನಿಕ ಭಾಷಾವಿಜ್ಞಾನದ ಸೂತ್ರಗಳಿಂದ ಪರಿಷ್ಕಾರಗೊಂಡು, ಆ ಭ್ರಮೆ ನಿರಸನಗೊಂಡಿದೆ (ದ್ರಾವಿವಿ. VI ಮುನ್ನುಡಿ).

[ಪರಿಷ್ಕಾರ+ಕೊಳ್ಳು$_1$ (<ಕೊಳ್$_1$)]

ಪರಿಷ್ಕೃತ (ಗು). ೧. ತಿದ್ದುಪಡಿ ಮಾಡಿದ; ಸುಧಾರಣೆಗೊಳಿಸಿದ: ಮೇಲಿನ ಪ್ರಶ್ನಾವಳಿಗಳ ಜೊತೆಗೆ ಇತರರು ಪರಿಷ್ಕೃತ ಪ್ರಶ್ನಾವಳಿಗಳನ್ನೋ ಹೊಸ ಪ್ರಶ್ನಾವಳಿಗಳನ್ನೋ ರೂಪಿಸಿದ್ದಾರೆ (ಶಿಕ್ಷದ. ೬೦೫). 'ಪರಿಷ್ಕೃತ ಮುದ್ರಣ' ಪರಾ. ೨. ಶೃಂಗಾರ ಮಾಡಿದ; ಅಲಂಕರಿಸಿದ: ಅಪೂರ್ವಪ್ರವಾಳಾಂಕಮಧೂಕಮಾಲಾ(ಭಾ)ಪರಿಷ್ಕೃತ ಚಂಚತ್ಪಂಚರತ್ನಮಯದಾಮಾಭಿರಾಮ ಭಾಸ್ವಜ್ಜಿನಚಂದ್ರಪ್ರಭೆಗೆ ಜ್ಯೋತಿ ಸೋಲ್ವಂತೆ ಜ್ಯೋತಿಃಪ್ರಭೆ ಸೋಲ್ತು (ಶಾಂತಿಪು. ೫-೧೫೫ವ). ೩. ಸುತ್ತುವರಿದ; ಬಳಸಿದ. ೪. ಸಿದ್ಧಪಡಿಸಿದ; ತಯಾರು ಮಾಡಿದ. ೫. ಒಪ್ಪಗೊಳಿಸಿದ; ನಯಮಾಡಿದ. ೬. ಶುದ್ಧಿಗೊಳಿಸಿದ; ಪರಿಶುದ್ಧ ಮಾಡಿದ. (ನಾ). ೭. ಅಲಂಕೃತನಾದವನು: "ಮಂಡಿತಃ, ಪ್ರಸಾಧಿತಃ, ಅಲಂಕೃತಃ, ಭೂಷಿತಃ, ಪರಿಷ್ಕೃತಃ—ಇ ಅಲಂಕರಿಸಲ್ಪಟ್ಟವನ ಹೆಸರುಗಳು" (ಸಿದ್ಧಾಂತಿ. ೧೯೮); ರಣವಿಜಯನವವಸನಮಣಿಭೂಷಣಪರಿಷ್ಕೃತನಾಗಿ ತಿರುವಿನ ಗೊಣೆಯವನು ನೇವರಿಸಿದನು ಸಂತೈಸಿ ಸಂಹನವ (ಕುವ್ಯಾಶ. ೩-೪೮). ೮. ಸುಧಾರಣೆ ಹೊಂದಿದವನು: ಭಾರತದ ದಿವ್ಯಸಂಸ್ಕೃತಿಯ ಸಂದೇಶದಿಂದ ಪರಿಷ್ಕೃತರಾಗಿ ವಿಶ್ವಪ್ರೇಮವನ್ನು ಬೆಳೆಸಿದರೆ . . . ಕಲ್ಯಾಣಕಾರಕವಾಗುವುದರಲ್ಲಿ ಸಂದೇಹವಿಲ್ಲ (ಮಕ್ಸಾರ. ೪೪ ಪೀಠಿಕೆ). ೯. ಶುದ್ಧನಾಭವನು; ಪವಿತ್ರನಾದವನು: ಅನುಸಂಧಾನದಿಂದ ಪರಿಷ್ಕೃತನಾಗಬೇಕು. ಆಗ ಚಿತ್ತತ್ವವು ವಿಕಸಿತವಾಗುತ್ತದೆ (ಭಾರದ. ೨೧೫). [ಸಂ.]

ಪರಿಷ್ಕೃತಮುದ್ರಣ (ನಾ). ತಿದ್ದಿ ಮತ್ತೊಮ್ಮೆ ಅಚ್ಚು ಮಾಡಿದುದು; ಶೋಧಿಸಿ ಮುದ್ರಿಸಿದುದು: ಸಂಪಾದಕನು ಪರಿಷ್ಕೃತ ಮುದ್ರಣದ ಕೆಲಸಕ್ಕೆ ಬಳಸುವ ವಿಮರ್ಶನೋಪಕರಣಗಳ ವಿವರಣೆಯೊಂದಿಗೆ ಈ ವಿಷಯವನ್ನು ಆರಂಭಿಸಬೇಕು (ಭಾರಪ. ೯೪).

[ಪರಿಷ್ಕೃತ+ಮುದ್ರಣ]

ಪರಿಷ್ಕೃತಿ (ನಾ). ಅಲಂಕಾರ; ಭೂಷಣ: ಚಂದ್ರಕಾಂತಿಯಂ ಕನಕಪರಿಷ್ಕೃತಿದ್ಯುತಿಕೃತಾತಪೆ ನೀಂ ತಡೆಯೆಂದರಾಳಿಯರ್ (ರಾಜಶೇ. ೭-೮೮). [ಸಂ.]

ಪರಿಷ್ವಂಗ (ನಾ). ೧. ಅಪ್ಪುಗೆ; ಆಲಿಂಗನ: "ಆಲಿಂಗನಂ, ಉಪಗೂಹನಂ, ಪರಿರಂಭಣಂ, ಪರಿಷ್ವಂಗಃ . . . ಕ್ರೋಡೀಕರಣಂ—ಈ ೭ ಅಪ್ಪಿಕೊಳುಹ" (ಹಲಾಯು. ೯೩-೪೧೪); ಆತ್ಮಜಪರಿಷ್ವಂಗಾಮೃತಾಸ್ವಾದಸೌಖ್ಯಮದೆಂತುಂ ದೊರೆಕೊಂಡಿತಿಲ್ಲ (ಕಾದಂಪೂ. ೩೪೭); ಅಂತು ರಾಮಲಕ್ಷ್ಮಣರ್ ತನೂಭವರಂಗಪರಿಷ್ವಂಗಸುಖಾನುಭವದಿಂ ತಣಿದು (ಪಂರಾಮಾ. ೧೬-೨೨ ವ); ಕಳಾನಿಲಯಂ ಮಾಡಿದನೊಲ್ದು ಚುಂಬನಪರಿಷ್ವಂಗಪ್ರಪಂಚಂಗಳಂ (ಜಗವಿ. ೧೦-೧೪೦). ೨. ಸೋಂಕು; ಸ್ಪರ್ಶ: ಆ ತಣ್ಣೆಲರ್ . . . ಮೃದುಪರಿಷ್ವಂಗದಿಂ ಪರಿಶ್ರಮಮನಿನಿಸುತೊಲಗಿಸೆ ತರುಣೀಜನಮೆಯ್ದೆವಂದಾ ಕೊಳನ ತಡಿಯೊಳ್ ನೆರೆದು ನಿಲೆ (ಲೀಲಾವ. ೧೩-೧೧೩ ವ). [ಸಂ.]

ಪರಿಷ್ವಂಗಿಸು (ಕ್ರಿ). ಆಲಿಂಗಿಸು; ಅಪ್ಪಿಕೊಳ್ಳು: ಊರ್ಮಿಳೇಶಾಗ್ರಜಂ . . . ಪರಿಷ್ವಂಗಿಸಿದನಾಂಜನೇಯನ ಪವಿತ್ರ ಗೋಪುರಗಾತ್ರಮಂ (ತ್ರೀರಾಮಾ. ೫೩೮-೨೮೧). [ಪರಿಷ್ವಂಗ+-ಇಸು$_3$]

ಪರಿಸ$_1$ 'ಪರುಸ' ನೋ.

ಪರಿಸ$_2$ 'ಪರಸ$_2$' ನೋ.

ಪರಿಸಂಖ್ಯಾಲಂಕಾರ (ನಾ). [ಕಾವ್ಯಮೀ] ಅರ್ಥಾಲಂಕಾರದಲ್ಲಿಯ ಒಂದು ಭೇದ; ಒಂದು ವಸ್ತು ಅಥವಾ ವಿಷಯವನ್ನು ಒಂದುಕಡೆ ನಿಷೇಧಿಸಿ ಅದನ್ನು ಮತ್ತೊಂದು ಕಡೆ ನಿಯಂತ್ರಿಸಿ ಹೇಳುವುದು: ಒಂದು ವಸ್ತುವಂ ಒಂದರಲ್ಲಿ ನಿಷೇಧಮಂ ಮಾಡಿ ಮತ್ತೊಂದರಲ್ಲಿ ಆ ವಸ್ತುವಿನ ಸಂಧಾನಮಂ ಮಾಡಲ್ಕೆ ಪರಿಸಂಖ್ಯಾಲಂಕಾರವೆನಿಸುವದು (ಕುವಲ. ೧೦೪); ಒಂದೆಡೆಯಲ್ಲಿ ಒಂದಾನೊಂದು ಪದಾರ್ಥವಿರುವುದೆಂದು ತೋರಿಸಿ ಅಲ್ಲಿ ಅದೇ ಪದದ ದೋಷರೂಪವಾದ ಅರ್ಥವಿಲ್ಲವೆಂದು ನಿಷೇಧಿಸುವುದೇ ಪರಿಸಂಖ್ಯಾಲಂಕಾರವೆನ್ನಿಸಿಕೊಳ್ಳುವುದು (ಕೈಪಿಡಿ. ೨೮೫). [ಸಂ.]

ಪರಿಸಂಖ್ಯೆ (ನಾ). ೧. ಎಣಿಸುವುದು; ಗಣನೆ; ಎಣಿಕೆ:

ಪರಿಸಂಖ್ಯಾತೀತಮೆನಲ್ ಸುರಪತಿ ವಿಕ್ರಿಯೆಯಿನಾದ ಭುಜಕೋಟಿ ಗಳಿಂದಿರದಾಂತುಕೊಂಡು ಪೋಲ್ಪಂ ಸುರತರು ಪಣ್ತಂದಮಂ ಸುರೇಂದ್ರಾಚಳದೊಳ್ (ನೇಮಿಪು. ೮-೧೪೦). ೨. ಒಟ್ಟು ಸಂಖ್ಯೆ; ಮೊತ್ತ: ತೊಲಗದು ಪುಬ್ಬಕೋಟಿ ಪರಿಸಂಖ್ಯೆವರಂ ಪರಮಾಯು (ಆದಿಪು. ೧-೫೨); ಕರಿದಿನಪರಾಜರಾವಣಕರಪರಿಸಂಖ್ಯಾಕ್ಷರಂ ಪೊದಟ್ಟೆಸೆಯೆ ಗಣಾಂತರಿತಂ ಪದಚತುರೂರ್ಧ್ವಂ ಪರಿಸ್ಫುಟಂ (ಛಂದೋಂಬು. ೩-೨೧೫). ೩. ಆವೃತ್ತಿ; ಬಾರಿ: ಕ್ಷಿತಿಯೊಳಗುಳ್ಳ ಭೂಭುಜರ ಬಿತ್ತು ಮೊದಲ್ಗಿಡೆ ಮುನ್ನಮೇಕವಿಂತತಿಪರಿಸಂಖ್ಯೆಯಿಂ ತವಿಸಿ (ಪಂಪಭಾ. ೨-೪೫). ೪. = ಪರಿಸಂಖ್ಯಾಲಂಕಾರ: ಸಮಾಸೋಕ್ತಿ ಪರ್ಯಾಯೋಕ್ತಿ . . . ಪರಿಸಂಖ್ಯೆ ವಿಕಲ್ಪ . . . ಉದಾತ್ತವೆಂಬ ಅಱವತ್ತೈದಲಂಕಾರಂಗಳಿಂ ದೊಡಗೂಡಿ (ವಿವೇಕ. ೧೭೯); ಒಂದರಲಿ ಜರಿದಂತಹ ವಸ್ತು ಮತ್ತೊಂದರಲಿ ಸಂಧಿಸಿ ಪೇಳೆ ಪರಿಸಂಖ್ಯಾ (ಕುವಲ. ೧೦೪).

[ಸಂ. ಪರಿಸಂಖ್ಯಾ]

ಪರಿಸಂಗ, ಹರಿಸಂಗ (ನಾ). ೧. = ಪರಿಷ್ವಂಗ ೧: ಈಶ್ವರ—ಈಸರ, ಪರಿಷ್ವಂಗ-ಪರಿಸಂಗ (ಹೊಸಗ. ೧೧೫). **ಹರಿಸಂಗ:** ೧. ಪರಿಷ್ವಂಗ—ಹರಿಸಂಗ (ಶಬ್ದಾನು. ೧೫೧ ಪ್ರಯೋ). ೨. = ಪರಿಷ್ವಂಗ ೨: "ಹರಿಸಂಗ—ಪರಿಷ್ವಂಗ = ಆಲಿಂಗನ, ಸ್ಪರ್ಶ" (ತದ್ಭಕೋ. ೯೯).

[<ಸಂ. ಪರಿಷ್ವಂಗ]

ಪರಿಸಂಭ್ರಮ (ನಾ). ಸಡಗರ; ಉತ್ಸಾಹ: ತೋಳ ನಖವ್ರಣಕೆಱಗಿದ ಬಾಳೆಗಳಂ ನೋಟ್ಟ ಬಾಳೆ ಕಣ್ಮೀನೆಂಬಾಳೋಳಮನೊಡರಿಸೆ ಸಲೆ ನೃಪಮಾಳೆಗೆ ಪಡೆದಳ್ ಮೃಗಾಕ್ಷಿ ಪರಿಸಂಭ್ರಮಮಂ (ಶಾಂತಿಪು. ೮-೪೩).

[ಸಂ.]

ಪರಿಸಂಸ್ಕಾರ (ನಾ). ಚೆನ್ನಾಗಿ ಸಜ್ಜುಗೊಂಡುದು: ಸಾರಮಣಿ ಪರಿಯಂಕಪರಿಸಂಸ್ಕಾರದಲಿ ಮಲಗುವ ಮಹೀಪತಿ ನೀರೊಳೊಱಗುವನು (ಕುವ್ಯಾಗ. ೩-೪೦). [ಸಂ.]

ಪರಿಸನ 'ಪರುಸನ' ನೋ.

ಪರಿಸಮಾಪ್ತ (ಗು). ೧. ಚೆನ್ನಾಗಿ ತಿಳಿದುಕೊಂಡ,—ಗ್ರಹಿಸಿಕೊಂಡ: ಆ ಮಹಾಬಳಂ ಬಾಲಕಾಲದಿಂ . . . ಪರಿಸಮಾಪ್ತಸಕಲ ಕಲಾವಿಜ್ಞಾನನುಮಧಿಗತಾಶೇಷಶಾಸ್ತ್ರನುಂ ಪರಿಣತ ಸಕಲಶಸ್ತ್ರನುಮಾಗಿ (ಆದಿಪು. ೧-೬೩ ಪ). (ನಾ). ೨. ಕೊನೆಗೊಂಡುದು; ಮುಗಿದುದು: ಪರಿಸಮಾಪ್ತ [ಪಾಶಾಂ. ಪ್ರಿ] ಸವನಾರ್ಚನಸ್ತವನಸಮಯಾನಂತರಂ (ಆದಿಪು. ೭-೧೦೬ ಪ); ಎರಡುಂ ಕಾಲಮುಮನೀ ಮಾರ್ಗದಿಂ ಸಮಯೋತ್ತರವೃದ್ಧಿಯಿಂ ಪರಿಸಮಾಪ್ತಮಾಗೆ ನೆಱಮೆಯ್ದಿಸುವುದು ಕಾಲಪರಿವರ್ತನಮೆಂಬುದು (ಸುಕುಮಾ. ೬-೬ ಪ); ನನ್ನ ಜೀವನವೆಂಬ ನಾಟಕವು ಇಲ್ಲಿಗೆ ಪರಿಸಮಾಪ್ತವಾಗಲೇಬೇಕು (ಗುರುಣಿ. ೮೦). [ಸಂ.]

ಪರಿಸಮಾಪ್ತಿ (ನಾ). ಕೊನೆ; ಮುಕ್ತಾಯ: ಅಂತಿಂದ್ರನಾನಂದ ನೃತ್ಯಮನಾಡಿದ ಪರಿಸಮಾಪ್ತಿಯೊಳ್ (ಶಾಂತಿಪು. ೧೦-೬೫ ಪ); ಅಱಿಯದಾರಂಭಿಸಿದೆವಿದಱಲಿ ಪರಿಸಮಾಪ್ತಿಯ ಕಂಡೆ ನೆಱೆ ಕೃತಾರ್ಥರು ವಿಘ್ನಶತವಡ್ಡೈಸದಿರವು (ಕುವ್ಯಾಗ. ೯-೧೧); ನನ್ನ ಕಥೆಯು ಸುಖಾಂತವಾಗಿತ್ತು. ಹಲಧರನದು ದುಃಖಾಂತ. ಆದರೆ ಪರಿಸಮಾಪ್ತಿ ಮಾತ್ರ ಒಂದೇ ಆಗಿತ್ತು (ಕೆಲಕ. ೩೩). [ಸಂ.]

ಪರಿಸರ (ನಾ). ೧. ಎಲ್ಲೆ; ಮೇರೆ; ಸರಹದ್ದು. ೨. ಇರವು; ಸ್ಥಿತಿ. ೩. ಸುತ್ತಲೂ ಇರುವ ಸನ್ನಿವೇಶ, ಆವರಣ, ಪ್ರದೇಶ, ಜನ ಮುಂತಾದುವು: ಗುಣಾರ್ಣವಂ . . . ಹಂಸಧವಳಶಯ್ಯಾತಳದೊಳ್ ಗಂಗಾನದೀಪುಳಿನಪರಿಸರಪ್ರದೇಶದೊಳ್ ಮಱೆದೊಱಗುವೈರಾವತದಂತೆ ಪವಡಿಸಿ (ಪಂಪಭಾ. ೪-೧೧೦ ಪ); ಪರಮಪತಿವ್ರತೆಯಿದ್ದ ಬಳಿಯೊಳಾ . . . ಸರಸತಿ ಸಾವಿತ್ರಿ ಗಾಯತ್ರಿಯರುಮಾ ಪರಿಸರದೊಳು ಬಳಸಿಹರು (ಹದಿಬ. ೨-೧೭); ಕಡುಗಲಿ ಚಿಕದೇವೇಂದ್ರ ಪಡೆವಳರಾವೆಡೆಗೆ ನಡೆವರಾ ಪರಿಸರದೊಳ್ ಪೊಡವಿ ಪೊಱೆಯಿಟುಪಿ ಸೊಗಮಂ ಪಡೆವೆಂ ತಾನೆಂದು ಪೆರ್ಚ ಪೆಂಪಿಡಿದೆಸೆಗುಂ (ಅಪ್ರತಿ. ೧೧೨-೨೨); ಸಾಂಸ್ಕೃತಿಕ, ಸಾಹಿತ್ಯಕ ಮತ್ತು ಧಾರ್ಮಿಕಪರಿಸರದಲ್ಲಿ ಕನ್ನಡವು ಸಂಸ್ಕೃತಜನ್ಯವೆಂದು ಕಲ್ಪನೆಯಾಗಿದ್ದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ (ಭಾಷಾಶಾ. ೪೫). ೪. ಹತ್ತಿರ; ಸಾಮೀಪ್ಯ; ಸನಿಹ: "ಗ್ರಾಮಾಂತಿಕಂ, ಉಪಶಲ್ಯಃ, ಪರ್ಯಂತಃ, ಪರಿಸರಃ ಕ(ಪ)ಟಃ—ಈ ೫ ಊರ ಹೊ(ಱೆ)ರೆ" (ಹಲಾಯು. ೪೩-೧೦೪); ವಿಲಾಸಮಂದಿರಪರಿಸರನಂದನಲತಾನಿಕೇತನಂ ಗಳಿರ್ದಂತೆ (ಆದಿಪು. ೮-೩೨ ಪ); ಆಲೋಕಪುರದ ಪರಿಸರದ ಪರ್ವತದ ಮೇಲೆ . . . ಮುನಿಗಣ ಪೂಜ್ಯರ್ ಪೂಣ್ದು ನಾಲ್ಕುತಿಂಗಳನಿರ್ಪರ್ (ಪರಿಂಮಾ. ೧೫-೪೭ ಪ); ಯಮುನಾಹ್ರದದ ಪರಿಸರಪ್ರದೇಶದೊಳಕ್ರೂರಂ ನಿಜವರೂಥಮಂ ನಿಲಿಸಿ (ಜಗವಿ. ೫-೧೦೨ ಪ); ವರಧನುಷ್ಕೋಟಿಯಲಿ ಮಿಂದೀಶ್ವರಪದಾಂಬುಜಕೆಱಗಿ ತತ್ಪರಿಸರದ ಪಂಚತಟಾಕದಲಿ ಘನ ಮಕರರೂಪದಲಿ ಸುರವಧುಗಳಿರಲವರ ಶಾಪವ ಪರಿಹರಿಸಿ (ಕುವ್ಯಾಅ. ೧೯-೧೫). ೫. ಹರಹು; ವಿಸ್ತೀರ್ಣ. ೬. ನಿಯಮ; ವಿಧಿ. ೭. ಸಾವು; ಮರಣ.

ಪರಿಸರ ಮಾಲಿನ್ಯ = ಜನರು ವಾಸಿಸುವ ಸ್ಥಳದ ಸುತ್ತಮುತ್ತಣ ಪ್ರದೇಶ, ವಾಯು, ಜಲಾಶಯ ಮುಂತಾದುವುಗಳಲ್ಲಿ ಉಂಟಾಗುವ ಕಲ್ಮಷ,—ಕೊಳೆ: ಕೈಗಾರಿಕೆಗಳು ಹೆಚ್ಚಿದ ನಗರಗಳಲ್ಲಿ ಪರಿಸರಮಾಲಿನ್ಯವು ಅಧಿಕವಾಗಿರುತ್ತದೆ (ರೂಢಿ). [ಸಂ.]

ಪರಿಸರಣ (ನಾ). ೧. ಓಡುವುದು; ಓಟ; ಧಾವಿಸುವುದು. ೨. ಚಲನೆ; ಪ್ರಸರಣ. ೩. ಸನ್ನಿವೇಶ; ಪರಿಸರ: ಮನೋಹರವಾದ ಪರಿಸರಣ . . . ಶಿಷ್ಯರೊಂದಿಗೆ ಹಾಸ್ಯರಂಜಿತವಾದ ಸಲ್ಲಾಪ—ಇದರಲ್ಲಿ ಗುರುಗಳು ಮಗ್ನರಾಗಿದ್ದಾರೆ (ನಂಟರು. ೨೮); ಈ ಯಷಿಗಳು ಕಲೆಯನ್ನು ಮತ್ತು ಚೆಲುವನ್ನು ತಮ್ಮ ಸುತ್ತಣ ಪರಿಸರಣದಲ್ಲಿಯೇ ಗುರುತಿಸಿ . . . ತಮ್ಮ ಅನುಭವಕ್ಕೆ ಉಕ್ತಿಯನ್ನು ನೀಡಿದರು (ಸೌಂದಸ. ೧೦೨); ತಾನು ಬೆಳೆದು ಬಂದ ಪರಿಸರಣದ ಹಳೆಯ ರೀತಿಗಳನ್ನೆಷ್ಟೋ ಇನ್ನೂ ಉಳಿಸಿಕೊಂಡು ಬಂದಿದೆ (ತತ್ವಪ್ರಾ. ೫೭೪). [ಸಂ.]

ಪರಿಸರ್ಪ (ನಾ). ೧. ನಡೆಯುವುದು; ಚಲಿಸುವುದು: "ಗತಿಃ, ವಿಂಖಃ, ವಿಹಾರಃ, ಪರಿಸರ್ಪಃ, ಪರಿಕ್ರಮಃ—ಈ ೫ ನಡೆಹ" (ಹಲಾಯು. ೧೨೦-೪೧); "ವಿಂಖಂ ವಿಹಾರಂ ಪರಿಕ್ರಮಂ ಪರಿಸರ್ಪಮೆನೆ ನಡೆ" (ಮಂಗರಾ. ೧೩೦-೧೬). ೨. ಸುತ್ತುಗಟ್ಟುವುದು; ಬಳಸುವುದು. ೩. ಅನುಸರಿಸುವುದು; ಹಿಂಬಾಲಿಸುವುದು. ೪. ಹುಡುಕುವುದು; ಅರಸುವುದು. [ಸಂ.]

ಪರಿಸರ್ಪಣ (ನಾ). = ಪರಿಸರ್ಪ ೧: "ಪರಿಸರ್ಪಣಂ ವಿಹಾರಂ ಪರಿಕ್ರಮಂ ವಿಂಖಂ" (ವಸ್ತುಕೋ. ೧೧೨-೯). [ಸಂ.]

ಪರಿಸರ್ಯೆ (ನಾ). ೧. ನಡೆದಾಡುವುದು; ಸಂಚಾರ: "ಪರಿಸರ್ಯಾ, ಪರೀಸಾರಃ—೨ ತಿರುಗುವಿಕೆ" (ಸಿದ್ಧಾಂತಿ. ೩೬೩). ೨. ಬಳಿಸಾರುವುದು; ಸಮೀಪಿಸುವುದು. ೩. ಸೇವೆ; ಕೈಂಕರ್ಯ; ಪರಿಚರ್ಯೆ.

[ಸಂ. ಪರಿಸರ್ಯಾ]

ಪರಿಸೀಮೆ (ನಾ). ಎಲ್ಲೆ; ಗಡಿ: ಜಯಪಾಲನ ಕಪಟಕಾರಸ್ಥಾನವನ್ನು ತಿಳಿಯದೆ ಅವನ ಸ್ವಭಾವಪ್ರವಾಹಕ್ಕೆ ಬಲಿದಿದ್ದು ಲಗ್ನದ ಪರಿಸೀಮೆಗೆ ಬಂದು ಮುಟ್ಟಿದ್ದರು (ಜಯಂತ. ೨೯೪); ಸಾಹಿತ್ಯದ ಶಾಂತಿರಸವು ಅದರ ಪರಿಸೀಮೆ (ಸಾಹಿವಿ. ೩೬). [ಸಂ. ಪರಿಸೀಮಾ]

ಪರಿಸು 'ಪರಿಯಿಸು' ನೋ.

ಪರಿಸುಪ್ತಿ (ನಾ). ನಿದ್ರೆ; ನಿದ್ದೆ: ಸುರತಶ್ರಾಂತಿಯೋಳೀಷತ್ ಪರಿಸುಪ್ತಿಯನೆಯ್ದಿ ಸುಖದೊಳಾನಿರೆ (ಗರಿಕ. ೮-೭೦). [ಸಂ.]

ಪರಿಸೂತ್ರ (ನಾ). (ದೇವಸ್ಥಾನದ) ಸುತ್ತಲೂ ಇರುವ ಆವರಣ; ಪ್ರಾಕಾರ; ಪೌಳಿ: ಕಲಿಯಮ್ಮರಸಂ ನಂದಾದೀಪಿಗೆಗೆ ಬಿಟ್ಟ ಪರಿಸೂತ್ರದ ಮನೆಗಳ್ ಮೂವತ್ತು (ಎಇ. XIX, ೧೮೨-೩೩; 1045); ಗದ್ದೆಯ ಕಮ್ಮ ಮೂವತ್ತು ದೇವರ ಪರಿಸೂತ್ರದಾಗ್ನೇಯದ ಗೋಟಂ ತೆಂಕ (ಕಇಅ. ೧೩-೪-೧೨೨; 1093); ಚೈತ್ಯಾಲಯದ ಪಟ್ಟಶಾಲೆಯ ಮುಂದಣ ಪರಿಸೂತ್ರದ ಸುತ್ತಣ ಸರೋವರಂಗಳೊಳಲರ್ದ ತಾವರೆಯ ತನಗಂಪಂ ತಟ್ಟೈಸಿ ತೀಡುವ ತಣ್ಗಾಳಿಯ ಸೋಂಕಿಂ (ಪಂರಾಮಾ. ೬-೪೭ ವ); ದೇವ ನಿಮ್ಮರಮನೆಯ ಪರಿಸೂತ್ರದೊಳೊರ್ವ ಸಂಕಿಲಿನಾಚಿಯುರೆಂಬನರ್ಘ್ಯರತ್ನಮಂ ಕಂಡೆಂ (ನಂಬರ. ೧೨-೬೦). [ಸಂ.]

ಪರಿಸೆ$_1$, ಪರಶೆ, ಪರಜೆ, ಪರಸ$_1$, ಪರಸೆ, ಪರಶೆ, ಪರಿಜೆ, ಪರುಜೆ, ಪರುಸೆ (ನಾ). ೧. (ಉತ್ಸವ, ಜಾತ್ರೆ ಮುಂತಾದ ಸಂದರ್ಭಗಳಲ್ಲಿ ಸೇರುವ) ಜನಸಂದಣಿ; ಜನರ ಗುಂಪು: ವನಕತಿಗಳುಂ ಮಾರ್ಗಸಂದೋಹಮುಂ ತಿಂಬಿ ಮನಮೊಲ್ದು ಬರುತಿರ್ದ ಪರಿಸೆಗಳ ನೆಱೆ ನೋಡುತೆ (ಅರಾಚ. ೫-೩-೪); ಪರಿಸೆ ಬಹಳವಿಲ್ಲ ಕಿಱಿದು ಕೂಡಿದುದು ಪನ್ನೆರಡುಲಕ್ಷದೊಳೆದ್ದುದಾಗ (ಭರಜ. ೧೬-೧೧೬); ಶ್ರೀಶೈಲಕ್ಕೆ ಪೋಪ ಪರಿಸೆಯೊಡನೆ ಒರ್ವ ಜಂಗಮಮೂರ್ತಿ ಬಂದು (ಭೈರಸೂ. I,೨೩೫); ಧುನಿರಾಣಿ ಗಂಗೆಯೆ ನಿನಗೆ ನೆನಪಿಹುದೇನಾ ಶುಭಗಳಿಗೆ ಇಳಿದಂದು ನಿನ್ನಯ ದಡದಿ ಮುನ್ನಮೆಮ್ಮ ಪರಿಸೆಯ ಸರಣಿ? (ಗಿಳಿಮಿ. ೧೧-೪). ೨. ಜಾತ್ರೆ; ಉತ್ಸವ: ಮುಳುವಾಯ ಮೂಡಣ ಪರಿಸೆಯ ಹನುಮಂತದೇವರವರ ಗುಡಿಯ ದಕ್ಷಿಣಭಾಗದಲಿ (ಎಕ. X, ಮುಳಬಾ. ೩-೧; 1521); ಅರಸ ಒಳ್ಳೆವರಂತ ವಿರಸವಾಡಲಿ ಬೇಡ ವರುಷದ ಮಾತು ಮನದಾಗೆ ಇಟುಕೊಂಡು ಪರಿಸೆಗ್ಹೋದಲ್ಲಿ ತೆಗೆದಾರು (ಹಮಪ. ೧೯); ಅಲರ ಪರಿಸೆಯಲಿ ನಿನ್ನ ನಾ ಪಾರ್ವೆನೊಸಗೆಯನುದಿನ! (ಗಿಳಿಮಿ. ೩೯-೩); ಗುಡಿಯ ಆ ಮಾಳ ಒಂದು ಪರಿಸೆಯಂತೆ ಕಂಡಿತು (ಸವತಿ. ೭೮). **ಪರಶೆ**: ೨. ಪರಶೆ ಸೇರುವುದು ಇನ್ನೂ ಮೂರುದಿವಸವಿತ್ತು (ಚಂಗಾಳ್ವ. ೩೪೪). **ಪರಜೆ**: ೨. (ಎಸಮ್ಮೆ. I, ೨೩). **ಪರಸ$_1$**: ೨. 'ಪರಸಗಟ್ಟೆ' ಪರಾ. **ಪರಸೆ**: ೧. "ಪರಸೆ (ಪರಸೆ(ಶೆ))—ಪರಿಷತ್" (ತದ್ಭವಕೋ. ೫೧); ಹತ್ತರ ಕೂಡ ಹನ್ನೊಂದು, ಪರಸೇ ಕೂಡ ಗೋವಿಂದ (ಗಾಪೆ). ೨. ಈ ಪರಸೆಯನ್ನು ನೋಡುವುದಕ್ಕೆ ಕೃಷ್ಣಾರ್ಜುನರೂ ಹೋದರು (ಪಚಭಾ. ೭೦). **ಪರಿಶೆ**: ೨. ಈ ಸಲ ಶೆಟ್ಟಿಕೆರೆಯಲ್ಲಿ ಇಷ್ಟರಲ್ಲೇ ಪರಿಶೆ ಆಗುವುದಿದೆ (ದೂರಸ. ೬೫). ೩. ಗುಂಪು; ಸಮೂಹ: ಹರಿಮಯದಿ ಹರಮಯದಿ ಸರಸಿಜತರಳಮಯ ಶಿವಮಯದಿ ಸರ್ವನ ಪರಿಶೆಯಂತೆವು ರೋಹಣದ ತೆರನಾಗಿ ಗೋಮಯದಿ ಮೆರೆವ ವೇಳಾವನದ ಸೊಂಪಿನ ತೆರನ ಮಿತ್ರರಿಗಾಗ ರಘುಪ್ರಿಯಕರದಿ ಪೇಳುತಲಿರುವ ಸಮಯದೊಳು (ಜಿರಾಮಾ. ೪೦೮-೨೧). **ಪರಿಜೆ**: ೧. ಬಸವ ತೀರ್ಥಕ್ಕೆ ಪ್ರೀತಿಯಿಂದೆಯ್ದುವ ಪರಿ[ಪಾಠಾಂ. ರು]ಜೆಯೆನೆ ಭೂತಳಂ ಬೆಸಲಾದುದೆಂಬ ವಿಭಾತಿಯಲಿ ನೆಱೆ ತೀವಿ ಸಂದಣಿಸುತ್ತ ಬಪ್ಪವರು (ಬಸಪು. ೬-೧೩); ಅಂತರದೊಳು ದೊರೆ ಮಂತ್ರಿಮಾನ್ಯರು ಬರೆ ಪಿಂತೆ ಬಂದಿಳಿದುದು ಪರಿಜೆ (ಗೊಮ್ಮಟ. ೩-೯೨). ೨. ಓಹೋ—ಶ್ರೀಶೈಲದ ಪರಿಜೆ! ಬೊಮ್ಮಯ್ಯನ ಮೈಯಲ್ಲಿ ಮಿಂಚಿನ ಸಂಚಾರವಾಯಿತು! (ಶರಚ. ೮೩); ಹಳ್ಳಿಯ ಹೃದಯವನ್ನು ತುಂಬಿಕೊಡುವುದಕ್ಕಾಗಿ ಉಪಯುಕ್ತ ಸಂದರ್ಭ ಪರಿಜೆ (ಶಿಬಂಧ. I, ೪೧೪). ೪. ಪರಿಷತ್ತು; ಸಭೆ; ಸಮಿತಿ: ಅಧಿಕಾರವುಳ್ಳ ಸಂಸ್ಥೆಗಳು . . . ಐನೂರಾಳರು ಇತ್ಯಾದಿ, ಪರಿಜೆ, ಅಧ್ಯಕ್ಷ, ಬಾಳಿಕೆಯವರು (ತುಳುನಾ. ೨೭೧). ೫. [ಬೌದ್ಧ] ಭಿಕ್ಷುಗಳು, ಭಿಕ್ಷುಣಿಯರು, ಉಪಾಸಕರು ಮತ್ತು ಉಪಾಸಿಕೆಯರೆಂಬ ನಾಲ್ಕು ವರ್ಗದವರ ಸಭೆ: ನಾನು ಪರಿಜೆಗೆ ಬಂದು ತಲೆಯ ವೇಷ್ಟನವನ್ನು ತೆಗೆದರೆ, ಅದನ್ನು ನಾನು ಶಿರಸಾ ಮಾಡಿದ ಅಭಿವಾದನವೆಂದು ಸ್ವೀಕರಿಸಬೇಕು (ಬುದ್ಧಪ. ೧೨೯); ಆ ಪರಿಜೆಯಲ್ಲಿ ರೋಹಣನು ಮಾತ್ರ ಇಲ್ಲದುದನ್ನು ಕಂಡು, ಅಶ್ವಗುಪ್ತನು ಆತನನ್ನು ಸಮಾಧಿಯಿಂದ ಕರೆಯಿಸಿದನು (ಬುದ್ಧಪ. ಮಿಲಿಂದ. ೨೧). **ಪರುಸೆ**: ೧. ವೃಷಭಧ್ವಜದ ಗಾಢದಿಂ ಶ್ರೀಪರ್ವತದ ಪರುಸೆ ಬರುತಿರ್ದುದು (ಸಿದ್ಧರಾ. ೨-೩೮); ನಿಟಲಲೋಚನ ಬಹ ಪರುಸೆಯುಕ್ಕಟದ ದೊಂದಣಗಳಸಿ ಬಂದೈಸಿರಿಗಿರಿಯೊಳಿರದೆ (ಬಸಪು. ೧೮-೯); ಘನವೈಭವಂಬೆತ್ತು ಸಡಗರಿಪ ಪರುಸೆಯೊಳ್ ವಿನುತೆಯೊರ್ವಳ್ ಶರಣ ಸಿದ್ಧೇಶನಡಿಗಂಡು . . . ನಮಿಸುತೆ (ಮಹಾವಿ. ೧೪-೯೯). **ಪರುಸೆ**: ೧. ಬರುತಿರ್ದ ಪರುಸೆಯಂ ಕಂಡು ಸತ್ಕರಿಸಿ (ಸೌಂದಪು. ೧೧-೩೪); ಸಕಲದೇಶದ ಪರುಸೆಯೆಲ್ಲವೈತಂದು ಸಿದ್ಧಂಗೆ ವಂದಿಸಿ (ಸಿದ್ಧೇಪು. ೧೬-೩). ೨. ವಿರೂಪಾಕ್ಷಲಿಂಗನ ತೇರ ಪರುಸೆಗೆಂದಾಗಳಾ ಪದ್ಮಾವತಿಯೆ ತನ್ನ ಪುರುಷನಂ ಕೂಡಿಕೊಂಡೈತಂದು (ಚೆಬಪು. ೬೩-೩೪).

[<ಪ್ರಾ. ಪರಸಾ./ಸಂ. ಪರಿಷದ್./ತಮಿ. ಪರುಚ್ಚೆ; ತುಳು. ಪರಶೆ, ಪರಸ್, ಪರಶೆ, ಪರ್ಶೆ; ತೆಲು. ಪರಸ, ಪರುಸ]

ಪರಿಸೆ$_2$ (ನಾ). ಒಂದು ಸ್ಥಳದ ಹೆಸರು (?): ಬಮ್ಮಯನಾಯಕರು ಪರಿಸೆಯ ಮೇಲೆ ಬಂದಾಗ ದೇವಯನ ಮಗ ಹರಗಾವುಣ್ಡ ಪಲರನಿಱುದು (ಮೈಅರಿ. ೧೯೨೮, ೯೧-೩; ?). [?]

ಪರಿಸೆನಡೆ (ಕ್ರಿ). (ಬೇಟೆಯ ಜನರ) ಗುಂಪಿನೊಡನೆ ಹೋಗು: ಒರ್ಮೆ ಯಶೋಮತಿ ಮೃಗಯಾನರ್ಮಮನಂ ಪರಿಸೆನಡೆದು ಮೃಗಮಂ ಪಡೆದು (ಯಶೋಚಿ. ೩-೫೭). [ಪರಿಸೆ$_1$ + ನಡೆ$_1$]

ಪರಿಸೆನೋಟ (ನಾ). ಉತ್ಸವದ ನೋಟ,–ದೃಶ್ಯ: ಪರಸೆ ನೋಟವೊ, ಹೊಳೆಯಲೂಟವೊ . . . ಎಲ್ಲ, ಎಲ್ಲಾ ಮಾಯವಾದುವು (ಇಂಗೀತ. ೮೭-೪). [ಪರಿಸೆ$_1$ + ನೋಟ]

ಪರಿಸೇಕ (ನಾ). ಚಿಮುಕಿಸುವುದು; ಸಿಂಚನ: 'ಪರಿಸೇಕಂಗೆಯ್' ಪರಾ. [<ಸಂ. ಪರಿಷೇಕ]

ಪರಿಸೇಕಂಗೆಯ್ (ಕ್ರಿ). ಚಿಮುಕಿಸು; ತಳಿ: ಕ್ಷೀರರಸಂ ಪರಿಯಲ್ಕೀಯದೆ ಬಟಾಯಂ ಪರಿಸೇಕಂಗೆ(ಯ್ಸೆ) ಪಾಲೊಳಂ ತುಪ್ಪದೊಳಂ (ಅಶ್ವಶಾ. ೧೨-೧೧). [ಪರಿಸೇಕ + ಕೆಯ್$_1$]

ಪರಿಸೇಕಂಗೆಯ್ಸು (ಕ್ರಿ). ಚಿಮುಕಿಸುವಂತೆ ಮಾಡು; ತಳಿಸು: ಗುರುಗಳ್ ಬಂದು ಶಿವಾಂಘ್ರಿವಾರಿ ಪರಿಸೇಕಂಗೆಯ್ಸು . . . ಬಾಲಂಗೊಲ್ದು ಮಾಹೇಶ್ವರಾವರಣರ್ ಮಾಡಿಸಿದರ್ ಮಹೋತ್ಸವದಿನೊಪ್ಪಲ್ ಜಾತಕರ್ಮಂಗಳಂ (ರಾಜಶೇ. ೪-೫೭). [ಪರಿಸೇಕಂಗೆಯ್ + -ಸು$_1$]

ಪರಿಸೇಕಿಸು (ಕ್ರಿ). = ಪರಿಸೇಕಂಗೆಯ್: ಸುರಧೂಪದ ಬಣ್ಣಂ ಮೇಣರ(ರೆ)ನೇಱುಲ ಪಣ್ಣ ಬಣ್ಣವಾದೊಡೆ ಪುಣ್ಣಂ ಪರಿಸೇಕಿಪ್ಪುದು ವೈಶ್ವಾನರಚೂರ್ಣಮನಿಡಲ್ಕೆವೇಡ ತದನಂತರದೊಳ್ (ಅಶ್ವಶಾ. ೧೨-೧೨). [ಪರಿಸೇಕ + -ಇಸು$_3$]

ಪರಿಸ್ಕಂದ (ನಾ). ೧. ಸೇವಕ; ಆಳು: "ಪ್ರೇಷ್ಯಃ, ಪರಿಸ್ಕಂದಃ–ಈ ೨ ಕೂಲಿಕಾಱಂ" (ಹಲಾಯು. ೬೧-೨೧೪); "ಕೂಲಿಕಾಱಂ ಪರಿಸ್ಕಂ [ಪಾಠಾಂ. ಸ್ಕಂ]ದನಕ್ಕುಂ" (ಮಂಗರಾ. ೭೦-೧೫). ೨. ದಾಸ್ಯ; ಸೇವಕತನ: ಅವರ್ಗೆ ಬಹು ವ್ಯಾಪಾರಮುಮವರ್ಗೆ ಪರಿಸ್ಕಂದಮುಂ ಪರಿಗ್ರಹಮುಂ ಬೇಡವರಂ ಸಂಕುಚಿತದೆ ಸಂತವಿಡಿಸಿ ಸಂತುಷ್ಟರಾಗೆ ಮಾಟ್ಟುದು ನರಪಂ (ಮದತಿ. ೮-೬೫). [ಸಂ.]

ಪರಿಸ್ಪಲನ (ನಾ). ಅಪ್ಪಳಿಸುವಿಕೆ: ಸುಭಟಾರೂಢ ತುರಂಗಮವೇಗ

ಬಲಪತಿತ ಖುರಖುರಟಂಕಪರಿಸ್ಪಲನಕಳಿತವಿಪಮವರಭೇರೀರಿ[ಸ್ವನ]ಮುಂ (ಸಂಪಾ. ೧೩-೫೧೭). [ಸಂ.]

ಪರಿಸ್ಪಲಿತ, ಪರಿಸ್ಪಳಿತ (ಗು). ಜಾರಿ ಬಿದ್ದ : ಆ ಪೃಥುನಿತಂಬಭರ ಪರಿಸ್ಪಲಿ[ಪಾಠಾಂ.ಳಿ]ತ ಪದವಿನ್ಯಾಸದಿಂದಂಚೆಯಂ ಪಳಂಚಲೆದ ತಣ್ಪುಟಿಲ ತಾಣಮುಮುಂ (ಪಂರಾಮಾ. ೯-೧೨೦ ಪ); ನಡುಗುತೆ ನೀನಿರಲ್ಕೆ ಭಯದಿಂದೆ ಪರಿಸ್ಪಲಿತಾಂಶುಕಾಂತೆಯಾಗೆಡೆಗಳನೆಲ್ಲ ದಿಕ್ಕುಗಳ ತೀವಿರೆ ದೈನ್ಯದೊಳಾ ವಿಲೋಕನಂ ಬಿಡದೆಯೆ ಸುಟ್ಟನಗ್ನಿ ದಯೆಯಿಲ್ಲದೆ (ಧ್ವನ್ಯಾಲೋ. ೧೨೮). **ಪರಿಸ್ಪಳಿತ :** ಮೇಲಿನ 'ಪಂರಾಮಾ' ಪ್ರಯೋಗದ ಪಾಠಾಂತರವನ್ನು ನೋಡಿ. [ಸಂ.]

ಪರಿಸ್ಪಳಿತ 'ಪರಿಸ್ಪಲಿತ' ನೋ.

ಪರಿಸ್ತರಣ (ನಾ). ೧. ಸುತ್ತಲೂ ಹರಡುವುದು,—ಹಾಸುವುದು: ಸಮಿತ್ ಪರಿಸ್ತರಣಂ . . . ದೂರ್ವಾಯುವ ಹಸ್ತಬಂಧನಾದಿ ಸಕ್ರಿಯೆಗಳಂ ಹೋಮಮುಂ ಮಾಡುತಿರ್ದು (ಗಿರಿಕ. ೧೦-೯೭ ಪ); ತೊಳತೊಳಗಿ ಶಸ್ತ್ರಾಸ್ತ್ರಸೂತ್ರಾವಳಿಪರಿಸ್ತರಣಗಳ ದೆಸೆಯುಜ್ವಲಿಸೆ ಪರಬಲಧಿಗೆ ಶಿಖಿಯುತ್ಪಾತದಂದದಲಿ (ನಿಭಾಗ. ೧೦-೪೭-೨೦). ೨. ಸುತ್ತಲಿನ ಪ್ರದೇಶ; ಪರಿಸರ : ಕೋಣತ್ರಯದ ಕುಂಡದಲಿ ಅಸುರವಿದ್ಯಾವಳಿಯಂಥರ್ವಣವೆಸೆವ ಮಂತ್ರಾಗಮದಿ ಸಂಸ್ಥಾಪಿಸಿದನಸ್ತ್ರಾವಳಿ ಪರಿಸ್ತರಣದಲಿ ಹುತವಹನ (ತೊರಾ. ೬-೪೨-೮); ವೆಂಕಟಪ್ಪನಾಯಕರಂ ಕಡಿತದ ಚಾವಡಿಯೊಳ್ ಕುಳ್ಳಿರಿಸಿ ಪೊರಗೈದದಂತೆ ಪರಿಸ್ತರಣಕವಾಟಂಗಳಂ ಬದ್ಧಂಗೈಸಲು (ಕೆಳನೃ. ೬-೪೭); ಕಟ್ಟಸಿದವರ ಮನಸ್ಸೂ ಹೃದಯ ವಿಶಾಲತೆಯೂ ಎಷ್ಟು ಸುಂದರವೊ, ಎಷ್ಟು ದೊಡ್ಡದೊ, ಅಷ್ಟು ಸುಂದರ ಆ ದೇವಾಲಯ ; ಅಷ್ಟು ವಿಶಾಲ ಅದರ ಪರಿಸ್ತರಣ (ಶಾಂತಲಾ. ೧೨೫). ೩. ಹೋಮಾಗ್ನಿಯ ಸುತ್ತಲೂ ಇಟ್ಟ ದರ್ಭೆ : ಮಂಟಪದ ನಡುವಣ ವೇದಿಕೆಯ ಹೋಮದ ಪರಿಸ್ತರಣದ ಸುತ್ತುಂ ಕುಳ್ಳಿರ್ದ ವಿಪ್ರ ಸಂಕುಳದಿಂ (ನಂಬರ. ೬-೩೩); ಪರಿಸ್ತರಣಗಳ ಮೇಲೆ ದರ್ವಿ, ಸಮಿತ್ತು, ಆಜ್ಯಪಾತ್ರೆ, ಅರ್ಘ್ಯಪಾತ್ರೆ ಇವುಗಳನ್ನಿಟ್ಟು (ಶಾಂತಲಾ. ೧೦೭). ೪. ಹೋಮಾಗ್ನಿಯ ಸುತ್ತಲೂ ದರ್ಭೆಯನ್ನು ಇಡುವುದು : ಸ್ಥಂಡಿಲ ಪರಿಸ್ತರಣ . . . ಅಭಿಮುಖೀಕರಣ ಮುಖಾಹುತ್ಯಾದಿಗಳಿಂ ಸಮರ್ಚಿತನಾಗಿ (ವಿವೇಕ. ೧೩೭). ೫. ಕಾರಣೆ ; ಮೇಜುಕಟ್ಟು : ಕಸ್ತೂರಿ ಜವಾದಿಗಳ ಸಾರಣೆಯ ಕುಂಕುಮಪರಿಸ್ತರಣದ . . . ಸಭೆ ಸಮಸ್ತಸೌಭಾಗ್ಯದಿಂದೊಪ್ಪುತಿರಲು (ಜೈಮಿಭಾ. ೧೭-೨೩). ೬. ಕದ ; ಬಾಗಿಲು : ಅಳ್ವನಳಿಯೆ ಮಿಗಿಸುವಳಲ್ಲ ದೇಹವ ಪರಿಸ್ತರಣವನಗಿಸ ಹೇಳೆಂದು ಪೇಳಿದಳು (ಮೋಹತ. ೩೪-೪). [ಸಂ.]

ಪರಿಸ್ತೋಮ (ನಾ). ೧. ಹೊದಿಕೆ; ಆಚ್ಛಾದನೆ. ೨. ಆನೆಯ ಬೆನ್ನಿನ ಮೇಲೆ ಅಲಂಕಾರಕ್ಕಾಗಿ ಹೊದಿಸುವ ಬಣ್ಣದ ಬಟ್ಟೆ : "ವರ್ಣಃ, ಪರಿಸ್ತೋಮಃ, ಕುಥಃ, ಕುಥಾ, ವಮತಂ—ಈ ೫ ಪರಿಸ್ತೋಮಂ" (ಹಲಾಯು. ೫೧-೧೫೩). [ಸಂ.]

ಪರಿಸ್ಥಿತಿ (ನಾ). ಇರವು; ಸ್ಥಿತಿ; ಅವಸ್ಥೆ : ಪದ್ಮಸರೋವರದ ಕಡೆಯಿಂದಲೇ . . . ಚೀತ್ಕಾರ ಕೇಳಿದಾಗ ಮನೆಯ ಪರಿಸ್ಥಿತಿಯೇ ಬದಲಾಗಿ ಹೋಯ್ತು (ಪದ್ಮಸ. ೧೮೩); ಇಲ್ಲಿಯ ಪರಿಸ್ಥಿತಿಯೇ ಬೇರೆಯಾಗಿ ಪರಿಣಮಿಸಿತು (ಮೂಲಾನ. ೮೨). [ಸಂ.]

ಪರಿಸ್ಪಂದ (ನಾ). ೧. ಮಿಡಿತ; ಕಂಪನ. ೨. ಚಲನೆ; ಅಲುಗಾಟ : ಶುಭಾಶುಭಮನೋವಾಕ್ಕಾಯಪರಿಸ್ಪಂದಹೇತುಕಮಾಗಿ ಬರ್ಹ ಕರ್ಮದ ಬರವಾಸ್ರವಮೆಂಬುದು (ಅಜಿಪು. ೧೦-೬೩ಪ); ಪರಿಸ್ಪಂದರೂಪಕ್ರಿಯೆ ಕ್ಷೇತ್ರಕೃತಂಗಳುಂ ಕಾಲಕೃತಂಗಳುಂ ಪರತ್ವಾಪರತ್ವಂಗಳಪ್ಪುವು (ತತ್ತ್ವಪ್ರ. ೨೪೧); ಎಲ್ಲ ಕ್ರಿಯೆಗಳೂ ಪರಿಣಾಮ ಪರಿಸ್ಪಂದಗಳೂ ಇದರಿಂದಲೇ ಸಾಧ್ಯ (ತತ್ವಪ್ರಾ. ೨೬೨). ೩. ಪರಿವಾರ; ಪರಿಜನ : "ಪರಿವಾರಃ, ಪರಿಕರಃ, ಪರಿಸ್ಪಂದಃ, ಪರಿಗ್ರಹಃ—ಈ ೪ ಪರಿಗ್ರಹಂ" (ಹಲಾಯು. ೫೧-೧೫೧); ಮುರದೊಳಗಣ ಕಿಚ್ಚು ಮುರವನು ಸುಟ್ಟು ಇದಿರನು ಸುಟ್ಟು ಪರಿಸ್ಪಂದಕ್ಕೆ ಹರಿಯಿತ್ತು (ಪಚಸಂ. ೩೯೫-೧೬); ಆನುಂ ಪ್ರಲಂಬಪ್ರಸೂದನನುಂ ಯೊದವಪರಿಸ್ಪಂದಮುಮುಂ ಮುಂದಿಟ್ಟೊಡಗೊಂಡು ಪೋದೆವು (ಜಗವಿ. ೯-೮೪ ಪ). ೪. ಸಾಧನ; ಸಲಕರಣೆ : "ಪರಿಬರ್ಹಂ . . . ಪರಿಸ್ಪಂದಂ ಬಿತ್ತರಿಸುವ ಗೃಹೋಪಕರೋಪಕರಣಂ" (ವಸ್ತುಕೋ. ೪೮-೨೧). [ಸಂ.]

ಪರಿಸ್ಪಂದನ (ನಾ). ಅದಿರುವಿಕೆ; ಕಂಪನ : ನಿಜದಕ್ಷಿಣಾಕ್ಷಿ ದಕ್ಷಿಣ ಭುಜಪರಿಸ್ಪಂದನಮೊಗೆಯೆ . . . ಎಯ್ದುದಂ ಗೋಕುಲಮಂ (ಜಗವಿ. ೫-೩೬). [ಸಂ.]

ಪರಿಸ್ಫುಟ (ಗು). ೧. ಸ್ಪಷ್ಟವಾದ; ವ್ಯಕ್ತಗೊಂಡ. (ನಾ). ೨. ಸ್ಪಷ್ಟವಾದುದು; ವ್ಯಕ್ತವಾಗಿರುವುದು : ಅಚ್ಚರಸೆಯರಾದಿ ಸಂಧ್ಯಂಗಗತನೃತ್ಯಾಂಗರಸಭಾವಾಭಿನಯಂಗಳನಿಂದ್ರಂ ಶ್ರೀದೇವಂಗೆ ನೋಡಿಕೊಳ್ಳೆಂಬಂತೆ ಪರಿಸ್ಫುಟಂ ಮಾಡಿ (ಶಾಂತಿಪು. ೭-೩೨ ಪ); ಕರದಿನಪರಾಜರಾವಣಕರಪರಿಸಂಖ್ಯಾಕ್ಷರಂ ಪೊದಟ್ಟಿಸೆಯೆ ಗಣಾಂತರಿತಂ ಪದಚತುರೂರ್ಧ್ವಂ ಪರಿಸ್ಫುಟಂ (ಛಂದೋಂಬು. ೩-೨೧೫); ಒಯ್ಯನೆಯೆನೆ ನೆಟ್ಟನೆಯೆನೆ ನೆಟ್ಟಗೆಯೆನೆ ಬಂದು ನಿಲ್ಕುಮಿವಜೀಂಳ್ ಪರಿಸ್ಫುಟಾರ್ಥವಿಧಾನಂ (ಶಮಿದ. ೩೦೭). [ಸಂ.]

ಪರಿಸ್ಫುಟಂ (ಅ). ಸ್ಪಷ್ಟವಾಗಿ; ವ್ಯಕ್ತವಾಗಿ : ಪಂಪನ ಪೊನ್ನನ ಪೇಟ್ಟ ಕಬ್ಬದೊಳ್ ನೆಜಿಂಯೆ ಪರಿಸ್ಫುಟಂ ನೆಜಿಂಯದಿರ್ದುದುಮಂ ನುಡಿದೆಯ್ದ್ದು ಬಲ್ಮೆ ಕಡ್ಡೆಜಿಂಯೆ ನೆಗಟ್ಟುದಂ ಕವಿಚತುರ್ಮುಖನಾಗಮ ವೇದಿಯಪ್ಪುದಂ (ಅಜಿಪು. ೧೨-೩೩). [ಸಂ.]

ಪರಿಸ್ಫುರಣ (ನಾ). ೧. ನಡುಗುವಿಕೆ; ಕಂಪನ. ೨. ಮೊಗ್ಗು ಬಿಡುವಿಕೆ; ಮೊಗ್ಗಾಗುವಿಕೆ. ೩. ಮೇಲಕ್ಕೆ ಚಿಮ್ಮುವಿಕೆ. [ಸಂ.]

ಪರಿಸ್ಫುರಿತ (ನಾ). ೧. ಅಲುಗಾಟ; ಚಲನೆ : ಪರಿಸ್ಫುರಿತದಿನೊರ್ಮೊದಲ್ ನೆಗಟಿ ಕಾಂಚಿಯ ನುಣ್ಣರಂ . . . ಎತ್ತಲುಂ ನಲಿದು ನರ್ತಿಸಿದತ್ತು ವಿಲಾಸಿನೀಜನಂ (ಚಂದ್ರಪು. ೩-೯೫). ೨. ಹೊರ ಹೊಮ್ಮಿದುದು : ಮಂಜೀರಕ ಮಂಜುಳಮ್ಮದುಸಿಂಜಪರಿಸ್ಫುರಿತ ಮೆಸೆಯೆ (ಶಾಂತಿಪು. ೭-೩೩). ೩. ಹೊಳೆಯುವಿಕೆ; ಪ್ರಕಾಶಿಸುವಿಕೆ : ಖುರಶಾಣಕಷಣದಿಂ ಮಣಿ ಗುರುತೇಜೋವೃತ್ತಿ ನೆಗಟ್ಟವೋಲಕ್ಕುಂ ನಿಷ್ಕುರವಾಕ್ಯಾಪಾಣಪರಿಸ್ಫುರಿತಂ ಕೃತಿರತ್ನದೊಳ್ ಸಮುಜ್ಜ್ವಲಭಾವಂ (ಚಂದ್ರಪು. ೧-೪೪). [ಸಂ.]

ಪರಿಸ್ಫುಲಿಂಗ (ನಾ). ಬೆಂಕಿಯ ಕಣ; ಕಿಡಿ : ಬೆಸಸಿದನು ಚಕ್ರವನು ಧಾರಾವಿಸರಭೂತ ಪರಿಸ್ಫುಲಿಂಗಪ್ರಸರತೇಜಃಕಣಪರಿಸೃತ ನವ್ಯಶತಭಾನು ದೆಸೆದೆಸೆಗೆ ದುವ್ವಾಳಿಸುವ ಬೆಳಗೆಸೆಯೆ ಬಂದು ಸುನೀತ ಕಂಠದ ಬೆಸುಗೆ ಬಿಡಲೆಜಗಿದುದು ಹಾಯ್ದುದು ತಲೆ ನಭಸ್ಥಳಕೆ (ಕುಪ್ಯಾಸ. ೧೦-೬೭). [ಸಂ.]

ಪರಿಸ್ಯಂದ (ನಾ). ೧. ಸ್ರವಿಸುವುದು; ಜಿನುಗುವುದು. ೨. ಪ್ರವಾಹ. ೩. ಪರಿವಾರ; ಪರಿಜನ. ೪. ಕೇಶಾಲಂಕಾರ. [ಸಂ.]

ಪರಿಸ್ರವಣ (ನಾ). ೧. ಹರಿಯುವುದು; ಪ್ರವಹಿಸುವುದು. ೨. ಜಿನುಗುವುದು; ತೊಟ್ಟಡುವುದು. [ಸಂ.]

ಪರಿಸ್ರವಣಿ (ನಾ). ಮಾದಕ ಪಾನೀಯ : ಮದ್ಯ : "ಮೈರೇಯಂ . . . ಪರಿಸ್ರ [ಪಾಠಾಂ.ಶ್ರ]ವಣಿ ಕಲ್ಮಷಿನೆ ಕಳ್ಳೆಸಿಕ್ಕು" (ಮಂಗರಾ.

೬೫-೮). [ಸಂ. ಪರಿಸ್ರವಣೇ]

ಪರಿಸ್ರುತ (ಗು). ಜಿನುಗಿದ; ಸ್ರವಿಸಿದ. [ಸಂ.]

ಪರಿಸ್ರುತೆ (ನಾ). = ಪರಿಸ್ರವಣೆ: "ಮಧು . . . ಪರಿ(ಸ್ರು)ಶ್ರುತಾ, ಮದಿರಾ . . . ಮಧು—ಈ ೨೪ ಕಳ್ಳು" (ಪಲಾಯು. ೫೫-೧೭೪).

[ಸಂ. ಪರಿಸ್ರುತಾ]

ಪರಿಹರ (ನಾ). ನಿವಾರಣೆ; ಪರಿಹಾರ: ಎನ್ನ ದುಃಖಕೆ ಮತ್ತೆ ಪರಿಹರವಾವುದೋ (ಬಸಪು. ೪೫-೩೮); ಮುಳ್ಳುಕೊಗ್ಗೆಯಂ ಕಷಾಯವಿಟ್ಟು ನಾಲ್ಕುವರಹತೂಳ ಶುಂಠಿಯ ಚೂರ್ಣವಂ ಹಾಕಿ ಕೊಡಲು ಗ್ರಹಿಣೀ ಪರಿಹರ (ಸಕವೈ. ೩೩೬); ಶಂಕೆಗೈವರಿಗಿಂತು ದ್ವೈತದ ಶಂಕೆ ದೋರುತ್ತಿಹುದು ಪರಿಹರಮಂ ಕಟಾಕ್ಷದಲರುಹಬೇಕು (ಗಗತಾ. ೧೩-೪೬).

ಪರಿಹರವಾಗು = ನಿವಾರಣೆಯಾಗು; ಕಳೆ: ನಿನ್ನ ದರುಶನ ಮಾತ್ರದಿಂದಲಿ ನಾನು ಪೂರ್ವದಿ ತಂದ ಫಲವು ಇಂದು ಪರಿಹರವಾಯಿತು (ಗೋಹಾಡು. ೨೦-೯೩). [<ಸಂ. ಪರಿಹಾರ]

ಪರಿಹರಗೈಸು (ಕ್ರಿ). ನಿವಾರಣೆಮಾಡು; ಕಳೆ: ಅಡವಿಯಲಿ ಬಿತ್ತದಲೆ ಬೆಳೆದಿಹ ಗಿಡದ ಮೂಲಿಕೆ ಸಕಲಜೀವರ ಒಡಲೊಳಿಪ್ಪಾಮಯವ ಪರಿಹರಗೈಸುವಂದದಲಿ (ಜಗದಾ. ೩೭೦). [ಪರಿಹರ+ಕೈಸು(<ಕೆಯ್ಸು)]

ಪರಿಹರಣ (ನಾ). ೧. ನಿವಾರಿಸುವುದು; ತಪ್ಪಿಸುವುದು; ತಡೆಯುವುದು. ೨. ಬಿಡುವುದು; ತೊರೆಯುವುದು; ತ್ಯಜಿಸುವುದು: 'ಪರಿಹರಿಸು' ಪರಾ. [ಸಂ.]

ಪರಿಹರಣೀಯ (ಗು). ೧. ತೊರೆಯಬೇಕಾದ; ದೂರ ಮಾಡಬೇಕಾದ. (ನಾ). ೨. ತೊರೆಯಬೇಕಾದುದು; ದೂರ ಮಾಡತಕ್ಕುದು: ಕರಣೀಯಮಿಷ್ಟಕರಣಮಕರಣೀಯಮನಿಷ್ಟಕರಣಮೆಂಬೀ ನಯಮಾದರಣೀಯಮಲ್ಲದುದು ಪರಿಹರಣೀಯಂ ಭೂಮಿಪಂಗೆ (ರಾಜಶೇ. ೧೩-೧೩). [ಸಂ.]

ಪರಿಹರಿಸು (ಕ್ರಿ). ೧. ನಿವಾರಿಸು; ನೀಗು: "ಪರಿಹರಿಸೆನಿಪ್ಪುದಕ್ಕೆ ತೀರ್ಚೆಂಬ ನುಡಿಯಕ್ಕುಂ" (ಕಬ್ಬಿಕೈ. ೬೭); ಬಾಟ್ಕೆಯೊಳಾದ ಕೃಷ್ಣೆಯಂ ಪರಿಹರಿಸಲ್ಕಮಾರ್ಗಮಾರಿದಾಗಿಯುಂ (ಕಾದಂಪೂ. ೯೪೮); ಎತ್ತಲಾನುಮರ್ಥಮಿಲ್ಲದಿರ್ದೊಡಂ ತನಗೆ ಬಂದನರ್ಥಮಂ ಪರಿಹರಿಸಲ್ ಬಹುದು (ಪಂಚತಂ. ೫೪-೧೬); ಸೋಕಿದವರ ದುರಿತವ ಪರಿಹರಿಸುತ ಶ್ರೀ ಕಾವೇರಿಯೊಪ್ಪಿಹಳು (ಕಂಸವಿ. ೨-೧೭). ೨. ಬಿಡು; ತ್ಯಜಿಸು; ತೊರೆ: ಅನರಸುಗೆಯ್ವ ಪಟುವಗೆಯನದಂ ಪರಿಹರಿಸಿದೆನಾತನನೀ ಕಿರೀಟ ಗೆಲ್ದೆನಗೆ ಪಟ್ಟವಂ ಮಾಡುವನೇ (ಪಂಪಭಾ. ೧೨-೧೨೯); ಪರಿಹರಿಸಿ ಪೋಗಲಕ್ಕುಮೆ ಕರುಣಿಸದೊರ್ವನನಾಥೆಯಂ ಭಕ್ತೆಯಂ (ಕಾದಂಪೂ. ೯೨೩); ಸಂಜೀವಕನಂ ಪರಮಸ್ನೇಹಿತನಂ ಪರಿಹರಿಸುವನಲ್ಲಂ ಸಮಸ್ತಗುಣಸಂಯುತನಂ (ಪಂಚತಂ. ೧೦೨-೧೯); ಕುರುಕುಲೋದ್ಧಾರಕನು ಮಾದ್ರೇಶ್ವರನೆನಿಪ ವಿಖ್ಯಾತಿ ಬಂದುದು ಪರಿಹರಿಸದಿರು ಮಾವ ಎಂದೆಱಗಿದನು ಚರಣದಲಿ (ಕುಪ್ಯಾಕ. ೫-೩೫). ೩. ದೂರಮಾಡು; ದೂರಸರಿಸು: ಪರಿಜನಮುಮಂ ಕೆಲಬಲದೊಳಿರ್ದ ಪಸಾಯಿತರುಮಂ ಪರಿಹರಿಸಿ (ಅನಂಪು. ೧೧-೮೬ ಪ); ಮಾರುತಸುತನು ಕೌರವರಾಯನನುಜರ ಸೀಳಿದನು ಕಳಶಜನ ಪರಿಹರಿಸಿ [ಪಾಠಾಂ. ನವಘಟಿಸಿ, ಪರಿಭವಿಸಿ] (ಕುಪ್ಯಾದ್ರೋ. ೧೨ ಸೂಚನೆ); ಪಾಡುವಡಿಪರೆಂದು ಪರಿಹರಿಸದೆ ಚುನ್ನವಾಡದೆ ಮನೆವಾಳ್ತೆಯನು ಮಾಡುವುದವರ ಸಮ್ಮತದಿಂದ (ಹರಿಬ. ೪-೧೩); ವಿದ್ಯೆಯ ಶೃಂಗಾರವಿದ್ದರು ಖಳರನು ದೂರದೊಳಿಡಿ ನೀವು ನಮಿಸಿ ಹೆಡೆಯೊಳು ರತ್ನವೆ ಇದ್ದರು ಹಾವನು ನಲಿವಂತೆ ನಾವು ಪರಿಹರಿಸಿ (ಇಂಚಾಪ. ೬೫-೧೪). ೪. ತಡೆಗಟ್ಟು; ನಿಲ್ಲಿಸು; ತಪ್ಪಿಸು: ಪರಲೋಕಾಲೋಕನಮುಂ ಪರಿಹರಿಸಿದವಲ್ತೆ ನೋಡಿಮೆಂದೀಗಳುದಾಹರಿಸುವ ತೆಱದಿಂ ಪಿಡಿಯಪೆರರಸುಗಳೆದೆವಿಡದೆ ಮೇಳಗಡಂಬರತತಿಯುಂ (ಕಾದಂಪೂ. ೫೫೫); ಪರಿಹರಿಸಿ ಪಾಟಿಯಂ ಪಾಪಿ . . . ನಿಜಸುತನಂ ಕರುಮಾಡಂಬುಗಿಸಿದಪಳ್ ಕರುಣಂಗೆಟ್ಟಾಕೆ ಕೈಕೆ ಕಲ್ಲೆರ್ದೆಯಕ್ಕುಂ (ಪಂರಾಮಾ. ೬-೧೬೪); ಉರಗನರದಿವಿಜಾದಿಗಳಿಗಿದುಪರಿಹರಿಸಲಳವಲ್ಲ . . . ಮರಣ ಜನಿಸಿದ ಬಳಿಕ ತಪ್ಪದು (ಕುಸ್ಯಾದ್ರೋ. ೭-೨೯). ೫. ತೆಗೆದುಹಾಕು; ತೆಗೆದುಬಿಡು: ಪರಿಹರಿಸೆ ಯವರ್ಣಮನಾ ಸ್ವರಂಗಳವು ನಾಮಿಯೆಂಬುವಕ್ಕುಂ (ಕಾವ್ಯಾವ. ೧೨); ಕರಮೆಸೆಯೆ ಮುನ್ನಿನ ದಿನಂ ಶಂಕರನರ್ಚಿಸಿ ಮಱುದಿವಸ ಪರಿಹರಿಸಿದಾ ಪತ್ರೆಯನಿನಿತನಾವೋಹಿಲನು ತಂದು ನಿರತದಿಂದದನೇ ಪ್ರಸಾದಸ್ಫುರಣ ಭಾವದಿನನುಭವಿಸುತಿರೆ (ಬಸಪು. ೪೩-೬೭). ೬. ಕಳೆ; ಮುಗಿಸು: ಮಱುದಿವಸ ವೇದಾವತಿಯ ಸಾರ್ದರು ಬಳಿಕ್ಕವರಲ್ಲಿ ರಜನಿಯ ಪರಿಹರಿಸಿ ದಾಂಟಿದರು ನದಿಯನು (ತೊರರಾ. ೨-೪-೯). ೭. ನಾಶಮಾಡು; ಧ್ವಂಸಮಾಡು: ನೀಮಿವರಂ ಪರಿಹರಿಸಿ ಬಾಟ್ಟುದೆಂದಱಿಪೆ (ಜಾವುಂಪು. ೧೦); ಪಡರಿಗಳಂ ಪರಿಹರಿಪ ಭಾಷೆ ಶಿವೈಕ್ಯಭಕ್ತಿಯನಲರಿಸುವ ಭಾಷೆ (ಬಸಪು. ೬-೬); ಉ(ವು)ರಿ ಕೋಶದೊಳುದಯಿಸಿದೊಡೆ ಕರಗುಗುಮುಳ್ಳರ್ಥವೆಲ್ಲಮೆರಡುಂ ರಂಧ್ರಾಂತರಮುರಿದೊಡಾಳ್ದನಂ ಪರಿಹರಿಸುಗುಮಾ ತುರಗರತ್ನಂ (ಅಶ್ವಶಾ. ೯-೬೭); ಧುರದ ಪ್ರಳಯಂಕೃತಾಂತನನು ಪರಿಹರಿಸಿದವು (ಕುಪ್ಯಾದ್ರೋ. ೬-೬೬); ಹರಿಗೆ ಮಿಥ್ಯತ್ವದಾಮಯಕುಂದೆ ಮೃಗಕುಲ ಪರಿಹರಿಸಿದವು ವೈರಿಗಳ (ವರ್ಧಶಾ. ೮-೫೭). ೮. ಮೀರು; ಉಲ್ಲಂಘಿಸು: ಪರಿಹರಿಸೆಯೆಮ್ಮ ನುಡಿಯಂ ಗುರುವಚನಮುಲಂಘನೀಯಮೆನ್ನದೆ (ಯುಕೋಚಿ. ೩-೧೯). ೯. (ಸಾಲದಂತೆ) ತೀರಿಸು; ಸಂದಾಯ ಮಾಡು: (ಕ). ೧೦. ತೆಗೆದುಕೊಳ್ಳು; ಕಸಿದುಕೊಳ್ಳು: (ಕ). ೧೧. ನಿವಾರಣೆಯಾಗು; ಪರಿಹಾರವಾಗು; ಇಲ್ಲವಾಗು: ಪರಿಹರಿಸಿ ಪೋಗೆ ಮಾಯಾಸ್ವರೂಪ ಮಳವಱುದನಿಲ್ಲ ಪೇಚರಪತಿ (ಪಂರಾಮಾ. ೧೦-೩೧); ದುರಿತತಿಮಿರ ಪ್ರಭಾವಂ ಪರಿಹರಿಪುದು ದೇವ ನಿನ್ನ ಮುಖಚಂದ್ರಮನಿಂ (ಧರ್ಮಾಮೃ. ೧-೬೩); ಗರುಡಮತದಲಿ ಸರ್ಪವಿಷ ಪರಿಹರಿಸುವುದು ದುರ್ಜನ ವಚೋನಿಷ್ಠುರಮಹಾವಿಷಕಾವ ಗಾರುಡವಾವ ಮಂತ್ರಮುಖ (ಕುಪ್ಯಾಕ. ೯-೨೩). ೧೨. ಪಾರುಮಾಡು; ರಕ್ಷಿಸು: ಇರದೆ ಹರಿತಂದಳು ಜಯದ್ರಥನರಸಿ ನೃಪತಿಯನಱಸಿ ನೃಪತಿಯ ಹೊರೆಗೆ ನೀ ಪರಿಹರಿಸಬೇಹುದು ಪತಿಯನೆಂದೆಱಗಿದಳು ಚರಣದಲಿ (ಕುಪ್ಯಾದ್ರೋ. ಒರಿಇ. ೮-೫೦ ಅಡಿಟಿ); ನನ್ನನ್ನು ಈ ಬೇನೆಯಿಂದ ಪರಿಹರಿಸಬೇಕು (ಮಣಿಸ. ೧೭). ೧೩. ಬಗೆಹರಿಸು; ಇತ್ಯರ್ಥಮಾಡು: ಮರಣಸ್ಯೆಂಥವಗಲ್ಲದಿದ್ದರೆ ಮರಣ ಪಾರ್ಥಂಗಲ್ಲದೆಡೆಯಲಿ ಪರಿಹರಿಸುವುದ ಕಾಣೆವೆಂದರು ಚರರು ಭೂಪತಿಗೆ (ಕುಪ್ಯಾದ್ರೋ. ೮-೫೦).

ಪರಿಹರಿಸಿಕೊಳ್, ಪರಿಹರಿಸಿಕೊಳ್ಳು = ೧. ನಿವಾರಣೆ ಮಾಡಿಕೊಳ್ಳು: ಹರಣದಳಲುಮಂ ಪರಿಹರಿಸಿಕೊಂಡು [ಪಾಠಾಂ. ಹಸರಿಸಿಕೊಳುತಂ] . . . ಕೊಂಡು ಕೊನೆವುತ್ತಿರ್ಸ ತಾಯ್ತಂದೆಗಳಂ ಕಂಡು (ಸಂಪಿರ. ೨-೫೮); ನಿನ್ನೊಂದು ಪೆಸರ ಪೋಲ್ವೆಯೊಳಂದಜಾಮಿಳಂ ತನ್ನ ಪಾತಕಕೋಟಿಯಂ ಪರಿಹರಿಸಿಕೊಂಡಂ (ಚೈಮಿಭಾ. ೧೫-೩೭). ೨. ತಪ್ಪಿಸಿಕೊಳ್ಳು: ತರಹರಿಸು ಬಿಲುಗಾಱನಾದರೆ ಪರಿಹರಿಸಿಕೊಳ್ಳೆನುತ ಪವನಜ ಬಿಜುಗಣೆಯಲಿರಿದಿಚ್ಛನಹಿತನ ಧನುವ ಸಾರಥಿಯ (ಕುಸ್ಯಾದ್ರೋ. ೧೩-೩೬) [ಪರಿಹರಣ+-ಇಸ್ಕು]

ಪರಿಹರ್ತವ್ಯ (ಗು). ೧. ದೂರಮಾಡಬೇಕಾದ; ನಿವಾರಣೆಯಾಗಬೇಕಾದ. (ನಾ). ೨. ಬಿಡಬೇಕಾದುದು; ತ್ಯಜಿಸ

ಬೇಕಾದುದು : ಯೂಳಾಭೀತಿಯಿಂದಂಬರಂ ಪರಿಹರ್ತವ್ಯಮೆ ಮೇಣ ಜೀರ್ಣಭಯದಿಂ ಪ್ರಾಜ್ಯಾಜ್ಯಮೇಂ ತ್ಯಾಜ್ಯಮೇ (ಚಂದ್ರಪ್ರ. ೧-೪೫).

[ಸಂ.]

ಪರಿಹಸಿತ (ಗು). ಅಪಹಾಸ್ಯಕ್ಕೆ ಈಡಾದ ; ನಗೆಪಾಟಲಿಗೆ ಗುರಿಯಾದ : ಸ್ವಕೀಯ ಮಹನೀಯಗಾಂಭೀರ್ಯಪರಿಹಸಿತಸುಧಾ ಶರಧಿಪುರಶ್ರೀಮೇಖಲಾಕಲಿತ ಪರಿಖಾವಲಯವಲಿತ . . . ರವಿವೀಥಿ ಸನಾಥಮುಂ (ರಾಜಶೇ. ೧೪-೧೦೬ ಪ). [ಸಂ.]

ಪರಿಹಾರ (ನಾ). ೧. ತೊರೆಯುವುದು ; ತ್ಯಜಿಸುವುದು. ೨. ದೂರ ಸರಿಸುವುದು ; ದೂರ ಮಾಡುವುದು. ೩. ಕಳೆಯುವುದು ; ಹೋಗಲಾಡಿಸುವುದು ; ನಿವಾರಣೆ : "ಪ್ರತಿಕ್ಷಿಪ್ತವೆನಲು ಪರಿಹಾರಮಕ್ಕುಂ" (ಮಂಗರಾ. ೧೨೮-೯) ; ಪಾತಕ ಮಹಾಪಾತಕವ ಮಾಡಿದವನು ಸದ್ಭಕ್ತರ ಮನೆಗೆ ಹೋಗಿ ಅವರೊಕ್ಕ ಪ್ರಸಾದವನಾಯ್ದುಂಡರೆ ಸಕಲಬ್ರಹ್ಮಹತ್ಯಾದಿ ಪಾತಕ ಪರಿಹಾರವು (ಬಸವ. ೪೬೯); ಎನ್ನ ಭಕ್ತಿವಿಹೀನತೆಗೆ ಪರಿಹಾರವಂತಹುದೋ (ಬಸಪು.೬೦-೫೭) ; ಅಜೀರ್ಣಪರಿಹಾರಕ್ಕೆ ಸುಲಭಯುಕ್ತಿ (ಮುಂಬಯಿ. ೪-೧೧೮) ; ಎಲ್ಲಾ ದೋಷ ಬೆಲ್ಲದಲ್ಲಿ ಪರಿಹಾರ (ಗಾಜ). ೪. ದ್ರವ್ಯಸಹಾಯ : ಬೆಂಕಿಯ ಅಪಘಾತದಲ್ಲಿ ಸತ್ತವರಿಗೆ ಸರ್ಕಾರ ಪರಿಹಾರ ನೀಡಿತು (ರೂಢಿ). ೫. ಉತ್ತರ ; ಸಮಾಧಾನ : ಶಾಸನಗಳಿಂದ ಈ ಸಮಸ್ಯೆಗೆ ಪರಿಹಾರ ದೊರಕುವುದಿಲ್ಲ (ದ್ರಾವಿವಿ. ೮೫) ; ಜಗತ್ತಿನ ಅತ್ಯಂತ ದೊಡ್ಡ ಸಮಸ್ಯೆಯೊಂದಕ್ಕೆ ರಾಜೂರವರ ಹೊಗೆರಹಿತ ಒಲೆ(ಚೂಲಾ)ಯು ಕ್ರಿಯಾತ್ಮಕ ಪರಿಹಾರವನ್ನೊದಗಿಸುತ್ತದೆ (ಅಹುಸೌ. ೧೯). ೬. ನಷ್ಟವನ್ನು ತುಂಬಿಕೊಡುವಿಕೆ ; ನಷ್ಟಭರ್ತಿ : (Compensation. ಪತ್ರಿನಿ. ೨೧). 'ಪರಿಹಾರದ್ರವ್ಯ' ಪರಾ. ೭. ಅಪರಾಧದ ನಿವಾರಣೆಗಾಗಿ ಮಾಡುವ ಕ್ರಿಯೆ ; ಪ್ರಾಯಶ್ಚಿತ್ತ. ೮. ತೆರಿಗೆಗಳಿಂದ ದೊರೆಯುವ ವಿನಾಯಿತಿ : ಎಲೆಯ ಹೊಱೆ ಪರಿಹಾರ ೫೦ ಹಸುಂಬೆ ಪರಿಹಾರ ೫೦ (ಎಕ. VII, ೩೫ಮೊ. ೮೮-೪೬; 1203). ೯. ಅನಾದರ ; ತಿರಸ್ಕಾರ; ಅವಜ್ಞೆ. ೧೦. ದಾನ; ಕೊಡುಗೆ. ೧೧. ಔಷಧಿ; ಮದ್ದು : ಅವರ ಮನೋರೋಗಕ್ಕೆ ಪರಿಹಾರವೇ ಇಲ್ಲ (ರೂಢಿ). ೧೨. [ಜೈನ] "ಪ್ರಾಯಶ್ಚಿತ್ತಭೇದ—ಕೆಲವು ಕಾಲಾವಧಿಯಿಂದ ಸಂಘದಿಂದ ಬೇರೆ ಮಾಡುವುದು" (ಜೈನಕೋ. ೧೬೨).

ಪರಿಹಾರಂ ಮಾಡು=ಇಲ್ಲದಂತೆ ಮಾಡು ; ವಿನಾಯಿತಿಯನ್ನುಂಟುಮಾಡು : ಸಾಸಿರಪೇಱುವೆತ್ತಿಂಗೆ ಪೆಜ್ಜುಂಕ ಬಿಲ್ಕೊಡೆ ವಡ್ಡರಾವುಳವೊಳಗಾಗಿ ಸುಂಕವೆಲ್ಲಂ [ಪ]ರಿಹಾರಂ ಮಾಡಿ ಬಿಟ್ಟಂ (ಎಇ. XXVIII, ೫-೫೧; 1082). **ಪರಿಹಾರವಾಗು**=೧. ನಿವಾರಣೆಯಾಗು : ಗಂಗೆಯಲ್ಲಿ ಸ್ನಾನಮಾಡುವುದರಿಂದ ಪಾಪ ಪರಿಹಾರವಾಗುತ್ತದೆ ಎಂದೂ ಹಿಂದೂಗಳ ನಂಬಿಕೆ (ಸಸದಿ. ೧೨). ೨. ಬಗೆಹರಿ ; ಇತ್ಯರ್ಥವಾಗು: ಆದರೆ ಸಮಸ್ಯೆ ಇಷ್ಟರಿಂದಲೇ ಸುಲಭವಾಗಿ ಪರಿಹಾರವಾಗುವುದಿಲ್ಲ (ದ್ರಾವಿವಿ. ೨೬೧). [ಸಂ.]

ಪರಿಹಾರಕ (ನಾ). ೧. ನಿವಾರಣೆಮಾಡುವಂತಹುದು ; ಪರಿಹರಿಸುವುದು : ಸಾಕ್ಷಾತ್ಕಾರವು ಆನಂದಮಯವು, ಆನಂದಪರಿಪೂರ್ಣವು, ಸರ್ವಸಂಶಯಪರಿಹಾರಕವು (ಪಚರ. ೬೯). ೨. ನಿವಾರಣೆ ಮಾಡುವವನು ; ಪರಿಹರಿಸುವವನು. ೩. ತೋಳುಬಂದಿ ; ಬಾಹುಪುರಿ.

[ಸಂ.]

ಪರಿಹಾರಕ್ರಿಯೆ (ನಾ).=ಪರಿಹಾರವಿಶುದ್ಧಿ : ಪರಮಾಳೋಚನದೊಳ್ . . . ಪರಿಹಾರಕ್ರಿಯೆಯೊಳ್ . . . ನಿಬಿಡಕಾಯೋತ್ಸರ್ಗದೊಳ್ ಶುದ್ಧಿ ತಪ್ಪಿರೆ ದೋಷಪ್ರತಿಕಾರಸಾರತಪಮಂ ತತ್ತಾಪಸಂ ತಾಳ್ದಿದಂ (ಸುಕುಮಾ. ೪-೧೫). [ಪರಿಹಾರ+ಕ್ರಿಯೆ]

ಪರಿಹಾರದ್ರವ್ಯ (ನಾ). ೧. (ಪ್ರವಾಹ, ಕ್ಷಾಮ, ಯುದ್ಧ ಮೊದಲಾದುವುಗಳಿಂದುಂಟಾದ ನಷ್ಟಗಳಿಗಾಗಿ) ಪರಿಹಾರ ರೂಪವಾಗಿ ಕೊಡುವ ನಿಧಿ ; ನಷ್ಟವನ್ನು ತುಂಬಿಕೊಡುವ ಹಣ ; ನಷ್ಟಭರ್ತಿ ಹಣ : ಮೊದಲ-ಯುದ್ಧದ ತರುವಾಯ ಸೋತ ಜರ್ಮನಿಯ ಮೇಲೆ ಹೇರಲಾದ ಪರಿಹಾರದ್ರವ್ಯ (Reperations) ತೀರುವೆಯ ಸಂದರ್ಭದಲ್ಲಿ . . . ಬ್ಯಾಂಕು ಒಂದನ್ನು ಸ್ಥಾಪಿಸಬೇಕೆಂದು ಶಿಫಾರಸು ಮಾಡಿತು (ಅಂತಸಂ. ೧೪೪). ೨. ಸರ್ಕಾರ ಮುಂತಾದ ಸಂಸ್ಥೆಯು ಬೇರೊಬ್ಬರ ಭೂಮಿ, ವಸ್ತು ಮುಂತಾದುವುಗಳನ್ನು ವಶಪಡಿಸಿಕೊಳ್ಳುವಾಗ ಪ್ರತಿಯಾಗಿ ಅವುಗಳ ಒಡೆಯನಿಗೆ ಕೊಡುವ ದ್ರವ್ಯ : ನಮ್ಮ ಜಮೀನಿನ ಮೂಲಕ ರಸ್ತೆ ಹಾದುಹೋದುದರಿಂದ ಸರ್ಕಾರದಿಂದ ನಮಗೆ ಐದು ಸಾವಿರ ರೂಪಾಯಿ ಪರಿಹಾರದ್ರವ್ಯ ದೊರೆಯಿತು (ರೂಢಿ). [ಪರಿಹಾರ+ದ್ರವ್ಯ]

ಪರಿಹಾರವಿಶುದ್ಧಿ (ನಾ). [ಜೈನ] ಪ್ರಾಣಿವಧೆ, ಮಿಥ್ಯಾತ್ವ ಮೊದಲಾದುವುಗಳನ್ನು ಪರಿಹರಿಸಿಕೊಳ್ಳುವುದರಿಂದ ಉಂಟಾಗುವ ಸಮ್ಯಗ್ದರ್ಶನದ ವಿಶುದ್ಧಿ ; ಚಾರಿತ್ರ್ಯಶುದ್ಧಿ : ಸಾಮಾಯಿಕಚ್ಛೇದೋಪಸ್ಥಾಪನಾಪರಿಹಾರವಿಶುದ್ಧಿ . . . ಅಸಂಯಮವಿಕಲ್ಪದಿಂ ಸಂಯಮಂ ಸಪ್ತವಿಧಂ (ತತ್ತ್ವಪ್ರ. ೧೭). [ಪರಿಹಾರ+ವಿಶುದ್ಧಿ]

ಪರಿಹಾರಶುದ್ಧಿ (ನಾ).=ಪರಿಹಾರವಿಶುದ್ಧಿ : ಸಾಮಾಯಿಕಚ್ಛೇದೋಪಸ್ಥಾಪನಾಪರಿಹಾರಶುದ್ಧಿ ಸೂಕ್ಷ್ಮಸಾಂಪರಾಯ ಯಥಾಖ್ಯಾತ ಚಾರಿತ್ರ್ಯಭೇದದಿಂ ಪಂಚವಿಧಂ (ಆದಿಪು. ೧೦-೬೩ ಪ). [ಪರಿಹಾರ+ಶುದ್ಧಿ]

ಪರಿಹಾರ್ಯ (ಗು). ೧. ಬಿಡಬೇಕಾದ ; ತೊರೆಯಬೇಕಾದ. ೨. ತಪ್ಪಿಸಿಕೊಳ್ಳಬೇಕಾದ. ೩. ಒಯ್ಯಬೇಕಾದ ; ತೆಗೆದುಕೊಂಡು ಹೋಗಬೇಕಾದ. ೪. ಬೇರೆ ಮಾಡಬೇಕಾದ ; ಪ್ರತ್ಯೇಕಿಸಬೇಕಾದ. (ನಾ). ೫. ತ್ಯಜಿಸಬೇಕಾದುದು ; ಬಿಡಬೇಕಾದುದು : ಗ್ರಾಮ್ಯಾಳಾಪಂಗಳ್ ಮಾರ್ಗಯುಗಳ ಪರಿಹಾರ್ಯಂಗಳ್ (ಕವಿಗಾ. ೨-೮೨) ; ಪರಿಹಾರ್ಯಂ ದಿನದೊಳ್ ಸಮಸ್ತಶುಭಕಾರ್ಯಕ್ಕಂ ವ್ಯತೀಪಾತಮಾ ಪರಿಳಂ ವೈಧೃತಿ (ಲೋಕೋಪ. ೧-೨೪). ೬. ಕೈಯಲ್ಲಿ ಧರಿಸುವ ಒಂದು ಬಗೆಯ ಆಭರಣ : ಕೈಬಳೆ ; ಕಂಕಣ : 'ಪಾರಿಹಾರ್ಯ' ಪರಾ. [ಸಂ.]

ಪರಿಹಾಸ (ನಾ). ೧. ವಿನೋದ ; ಸರಸ ; ಹಾಸ್ಯ : ಭೀಮಸೇನನನುಮತದೊಳ್ ನರ್ಮಸಚಿವನುಂ ಪರಿಹಾಸಕೇಳೀಶೀಲನುಮೆನಿಸಿದ ವಿದೂಷಕನೆಂದಂ (ಗದಾಯು. ೨-೮ ಪ) ; ಪರಿಹಾಸಮೊಪ್ಪಮಾದರಮೆಲೆ ಗೀತಮಕ್ಕರಗೊಟ್ಟಯಲ್ಲದಿರೆ ನಾಡ ಕೋಟಲೆಯ ಕೊಟ್ಟರವದು ಸೂಳೆವನೆಯಲ್ತು (ಲೀಲಾವ. ೨-೪೧) ; ಪರಿಹಾಸವಿವಿಧಕೇಳೀಪರಿಣತಮತಿ ವಿಪ್ರವಂಶಸಂಭೂತಂ ನೋಡೆ ರಸಾರ್ಥವಾಣಿ ಸಾಧುಸ್ವರೂಪನೆನಿಸಂ ವಿದೂಷಕಾಖ್ಯಮನಾಳ್ದುಂ (ಶೃಂಗಾರ. ೪-೧೦) ; ಪರಿಹಾಸಚರ್ಚೆಗೆಲ್ಲಾ ಶರಣರ್ ನಗುತಿರ್ದರ್ (ತ್ರಿಪುವಿ. ೪೯-೧೨). ೨. ಅಣಕ ; ಕುಚೋದ್ಯ : ಲಕ್ಷ್ಮಣಂ ಮುಳಿಸುವೆರಸಿದ ಮುಗುಳ್ನಗೆ ಪಸರಿಸೆ ಪರಿಹಾಸವಚೋವಿಳಾಸದಿನಿಂತೆಂದಂ (ಪಂರಾಮಾ. ೧೧-೨೩೧ ಪ) ; ನಿತಾಂತ ಪಸಭ್ಯಸಂಗದಿಂ ದ್ಯೂತವಿನೋದವಸ್ಥಿರಗುಣಂ ಪರಿಹಾಸವಚಃಪ್ರವೃತ್ತಿ ದುರ್ನೀತಿ ದುರಾಗ್ರಹಂ ಹೃದಯದೊಳ್ ನೆಲಸಿತ್ತು ನಳಕ್ಷಿತೀಶನಾ (ನಳಚಂ. ೫೦೨). ೩. ವಿನೋದ ಮಾಡುವುದು ; ನಕಲಿ ಮಾಡುವುದು. ೪. ಅಪಹಾಸ್ಯಮಾಡುವುದು ; ಅಣಕಮಾಡುವುದು. ೫. ಉಲ್ಲಾಸ ; ಹರ್ಷ : ಪರಿಹಾಸಹೇತುಭಾವನೆ ದೊರೆಕೊಳೆ ಚಿತ್ತಕ್ಕೆ ಹಾಸ್ಯಮೆಂಬ ರಸಂ (ಶೃಂಗಾರ. ೧-೬೬). ೬. ನಗು ;

ನಗೆ. ೭. ಹಾಸ್ಯಗಾರ; ವಿದೂಷಕ: "ಪರಿಹಾಸಃ, ದ್ರವಃ, ನರ್ಮ—ಈ ೩ ಮೇಳದಾತಂ" (ಹಲಾಯು. ೭೧-೨೭೮); ತನ್ನಯ ಮೊಗವ ಡೊಂಕಿಸಿ ನಕ್ಕು ಪರಿಹಾಸನನ್ನಿಗರನು ನಗಿಪಂತೆ (ಧರಚ. ೬೭-೧೭೨). ೮. [ಕಾವ್ಯವಿಮಾ] ಸ್ಥಾಯಿಭಾವಗಳಲ್ಲಿ ಒಂದು; ಹಾಸ್ಯರಸದ ಸ್ಥಾಯಿಭಾವ: ರತಿ ಪರಿಹಾಸಂ . . . ವಿಸ್ಮಯಾಶಯತ್ವಂ ಪ್ರತಿನಿಯತ ಸ್ಥಾಯಿಭಾವಮಿವು ತಾಮಕ್ಕುಂ (ಕಾವ್ಯಾನ. ೭೯೪). [ಸಂ.]

ಪರಿಹಾಸಕ (ನಾ). ೧. = ಪರಿಹಾಸ ೭: "ಸಟ್ಟವಕಾಱ ಪರಿಹಾಸಕಂ" (ಶಬ್ದಮಂ. ೪೯); ಪರಿಹಾಸಕರಿಗೆಱೆದಶ್ವಗಜಸಾಹಣಗಳಿಗೆ ಎಱೆದು (ಚಸಪು. ೫೯-೨೮); ಕರಣಿಕರು ಮಾಂತ್ರಿಕರು . . . ಪರಿಹಾಸಕರು ವೈತಾಳಿಕರು ರಂಜಿಸಿತು (ಕುಸ್ಯಾಉ. ೨-೨೬); ವಾದಿ ವಾಗ್ಮಿಕ ಭಟ್ಟ ಪರಿಹಾಸಕ . . . ಗಾಯಕ ನಟವರಿಂದೆಸೆದುದೊಡ್ಡೋಲಗಂ (ಪ್ರಾಥರಾ. ೧೪-೫); ಅವನ ಜೊತೆಗೆ, ಅವನ್ನೆಲ್ಲ ಪ್ರತ್ಯೇಕ ಪ್ರತ್ಯೇಕವಾಗಿ ತೋರಿಸಿ ವಿವರಿಸಿ ಹೇಳುವ ಪರಿಹಾಸಕರೂ ಇದ್ದರು (ನಾಗಳಾ. ೪೬). ೨. ವಿನೋದ; ಹಾಸ್ಯ: ತರುಣಿ ನೀನೆಂತು ಕರೆದೆಯೆಂದು ಸಭೆಯೆಲ್ಲ ಪರಿಹಾಸಕವ ಮಾಡಿದರು (ಜೀವಂಸಾಂ. ೩-೩೦); ಜಗದೀಶ್ವರನು ಪ್ರಯಾಸವಿಲ್ಲದೆ ಮನುಷ್ಯರನು ಪರಿಹಾಸಕವ ಮಾಡುತಲಿದ್ದಾನೆ (ಪಚಕಾ.೨೬). [ಸಂ.]

ಪರಿಹಾಸಕೇಳಿ (ನಾ). ವಿನೋದದಿಂದ ಕೂಡಿದ ಆಟ,—ಲೀಲೆ: ಪರಿಹಾಸಕೇಳಿ ಕೂರ್ಮನ ಬರವಂ ನೆನೆಯುತ್ತು ಮಿರ್ಪುದಭಿಲಾಷೆ (ಶೃಂಗಾರ. ೪-೭೧); ಪರಿಹಾಸಕೇಳಿಯತಿಕುಶಲಳಳಾಕೇಳಿಯ . . . ಬಿನದದೊಳೆ ಸತಿಯನವರೊಸೆಯಿಸಿದರ್ (ಪುಷ್ಪಪು. ೯-೮೨).

[ಪರಿಹಾಸ+ಕೇಳಿ$_2$(= ಕೇಲಿ)]

ಪರಿಹಾಸಗೈ (ಕ್ರಿ). ವಿನೋದ ಮಾಡು; ಹಾಸ್ಯಮಾಡು: [ಬಣ್ಣಸೆ]ವಾತಾಡುವ ಪರಿಹಾಸಗೈವ ಗಾಡಿಕಾತಿಯರು ಗಣನೆಯಿಲ್ಲದೆ ಜೋಡುಗೂಡಿರುವರು ಕೂರ್ಮೆಯೊಳು (ಪಪಿಚ. ೧-೧೭).

[ಪರಿಹಾಸ+ಗೈ(<ಕೆಯ್$_1$)]

ಪರಿಹಾಸಗೋಷ್ಠಿ (ನಾ). ವಿನೋದಕ್ಕಾಗಿ ಕೂಡಿದ ಗೋಷ್ಠಿ; ವಿನೋದಗೋಷ್ಠಿ: ಪರಿಹಾಸಗೋಷ್ಠಿಗೆಳಸನು ಹರವರಿಯಾಗಿ ನುಡಿಯನು ಧೈರ್ಯದೊಳು ಮಂದರದಂತಿಹನು ರಾಜೇಂದ್ರ (ಧರಚ. ೨-೨೭).

[ಪರಿಹಾಸ+ಗೋಷ್ಠಿ]

ಪರಿಹಾಸಿ (ನಾ). ಹಾಸ್ಯಮಾಡುವಂತಹುದು: ಭಿನ್ನ ಸಕಳಳಳಾಧರ ಮಂಡಳೋಪಮಾನ ಗಂಡಭಿತ್ತಿಗೀತನ ದಿಙ್ಮಾಗಕಪೋಲಫಲಕಪರಿಹಾಸಿಯೆನಿಸಿದ ಕಪೋಲಯುಗಳೋದಯಾಚಳಮೆ . . . ದೊರೆ (ಶಾಂತಿಪು. ೫-೧೨೬ ಪ). [ಸಂ. ಪರಿಹಾಸಿನ್]

ಪರಿಹಾಸ್ಯ (ಗು). ೧. ಹಾಸ್ಯಾಸ್ಪದವಾದ; ಅಣಕಕ್ಕೆ ಪಕ್ಕಾಗುವ. ೨. ಹಾಸ್ಯ ಮಾಡುವ; ಅಣಕ ಮಾಡುವ: ಪರಿಹಾಸ್ಯಪಂಡಿತರು ಪುಣ್ಯಶಾಸ್ತ್ರೀಕರು ಪೌರಾಣಿಕಜನರು (ಕರಿಕ. ೭-೧೦). (ನಾ). ೩. ವಿನೋದ; ಹಾಸ್ಯ: ಪರಿಹಾಸ್ಯವಾಗಿ ನುಡಿಯಲು, ಹುಡುಗಿಯರೆಲ್ಲರೂ ಕಿಲಕಿಲನೆ ನಕ್ಕರು (ಪೊಗ್ಗ. ೪೧).

ಪರಿಹಾಸ್ಯಂ ಮಾಡು, ಪರಿಹಾಸ್ಯ ಮಾಡು. ಅಣಕಮಾಡು; ಗೇಲಿಮಾಡು: ಪರಭೂಪಾಲರ ಬಾಳಂ ಪರಿಹಾಸ್ಯಂ ಮಾಡುವಂತೆ ಹಸನಂಗೆಯ್ವಂ (ಪಪಿಚಾ. ೨-೨೬); ಒಮ್ಮೊಮ್ಮೆ ಆ ಬೈಚಟ್ಟ ನಿಜದ ವೇದನೆಯು ತಾನೆ ತಾನಾಗಿ ನಿಂತು ಆತನನ್ನು ಕೆಣಕಿ ಪರಿಹಾಸ್ಯ ಮಾಡುತ್ತಿತ್ತು (ಚತೆಸ. ೧೦೬).

[ಸಂ.]

ಪರಿಹೃತ (ಗು). ೧. ಬಿಟ್ಟ; ತ್ಯಜಿಸಿದ: ಪರಿಹೃತಸಪ್ತವ್ಯಸನಂ ನಿರಂತರೋಪಾಸ್ಯಮಾನಶಾಸ್ತ್ರವ್ಯಸನಂ (ಸಂಚತಂ. ೨೧-೧೯); ಪರಿಹೃತ ಜಳಮಾಗಿ ಜಳಾಕರಮಲ್ಲಿಗೆ ಬಂದುದೆಂಬ ತೆಱದಿಂ ಮಣಿಗಾಱರ ಪಸರ ಮೆಸೆವುದಾ ಪುರವರದೊಳ್ ನವರತ್ನಕಾಂತಿಸಂತತಿಯೊಂದಂ (ಶಾಂತೀಶ್ವ. ೧-೧೨೨). ೨. ಹೊರದೂಡಿದ; ದೂರಮಾಡಿದ: ಪರಿಹೃತಸಾರಿಕಾಶುಕಶಿಶುವ್ರಜಂ . . . ಎನಿಪ ಮಂತಣಸಾಲೆಗೆ ಬಂದಂ (ಜಗವಿ. ೧೫-೪೬). ೩. ನಿವಾರಣೆ ಮಾಡಿದ; ಪರಿಹರಿಸಿದ; ಕಳೆದ: ಪರಿಹೃತತೃಷ್ಣಮಾಹಿತರಸಂ ದ್ವಿಜಸನ್ನಿಹಿತಂ . . . ಎಂದಿಸಂ ಸುರುಚಿರಮಾದ ಸನ್ಮುನಿಯ ಮಾನಸದೊಳ್ ನೆಲಸಿರ್ದ ಹಂಸಿಯಂತಿರೆ (ಕಾದಂಪು. ೨೫೦); ಪರಿಹೃತನಿಜದರಿದ್ರ ಶೂರಗುಣಶೃಂಗಾರಹಾರ (ಚಸಪು. ೩೬-೩೭). ೪. ನಿವಾರಣೆ ಮಾಡಿಕೊಂಡ; ಪರಿಹರಿಸಿಕೊಂಡ. ೫. ತೆಗೆದುಕೊಂಡು ಹೋದ; ಒಯ್ದ. ೬. ಅಪಹರಿಸಿದ. ೭. ಹಿಡಿದ. ೮. ನಿರಾಕರಿಸಿದ; ತಳ್ಳಿಹಾಕಿದ. ೯. ನಾಶಗೊಂಡ; ಧ್ವಂಸವಾದ: ಗಿರಿಸುತಾಕಾಂತನಂ ಪರಿಹೃತಕೃತಾಂತನಂ . . . ಪೂಜಿಸಿದನೊಲ್ಮೆಯಿಂ (ರಾಜಶೇ. ೧೬-೫೧ ರಗಳೆ). (ನಾ). ೧೦. ನಿರಾಕರಣೆ; ತಿರಸ್ಕಾರ: "ಪರಿಹೃತಂ ಪ್ರಖ್ಯಾತಮಪವಿದ್ಧಮೆನೆ ನಿರಾಕೃತಿ" (ಮಂಗರಾ. ೧೨೮-೯). ೧೧. ನಿವಾರಣೆಯಾದುದು; ಪರಿಹಾರವಾದುದು: "ಪ್ರ(ತ್ಯಾ)ಖ್ಯಾತಂ . . . ಪರಿಹೃತಂ—ಈ ೭ ಪರಿಹರಿಸಲ್ಪಟ್ಟುದು" (ಹಲಾಯು. ೧೧೭-೧೮). [ಸಂ.]

ಪರಿಹೃತಿ (ನಾ). ೧. ದೂರ ಮಾಡುವುದು; ತೊಲಗಿಸುವುದು. ೨. ತೆಗೆದುಹಾಕುವುದು; ನಿವಾರಿಸುವುದು. ೩. ನಾಶ; ಧ್ವಂಸ: ಪರಿಹೃತಿಯೆ ಕರ್ತವ್ಯವೆನುತುಚ್ಚರಿಸಿದನು ಮೌರ್ವೀನಿನಾದಸ್ಫುರಿತ ವಿಮಳಪ್ರಣವಮುಖಶರಸೂಕ್ತಸಂತತಿಯ (ಕುಸ್ಯಾಕ. ೨೦-೨೮). [ಸಂ.]

ಪರಿಹೃತಿಗೆಯ್ (ಕ್ರಿ). ತಪ್ಪಿಸು; ತಡೆಹಾಕು: ಅಡ್ಡಿಪಡಿಸು: ಕರಿವಕ್ತ್ರ ಷಣ್ಮುಖರೆ ತಂದೆ ಬಿಸಂಗೊಳೆ ನೋಡುತಿರ್ಪುದೇ ಪರಿಹೃತಿಗೆಯ್ಯದೆ (ವೃಷವಿ. ೯-೪೪). [ಪರಿಹೃತಿ+ಕೆಯ್$_1$]

ಪರೀಕ್ಷಕ (ಗು). ೧. ಪರೀಕ್ಷಿಸುವ; ಎಚ್ಚರಿಕೆಯಿಂದ ಪರಿಶೀಲನೆ ಮಾಡುವ; ತನಿಖೆ ಮಾಡುವ. (ನಾ). ೨. ಪರೀಕ್ಷೆ ಮಾಡುವವನು; ಎಚ್ಚರಿಕೆಯಿಂದ ಪರಿಶೀಲನೆ ನಡೆಸುವವನು; ತನಿಖೆ ಮಾಡುವ ವ್ಯಕ್ತಿ: "ಪರೀಕ್ಷಕಃ. ಕಾರಣಿಕಃ—ಈ ೨ ವಿಚಾರಮಂತಿರ್ದುವಾತಂ" (ಹಲಾಯು ೬೪-೨೩೫); ರತ್ನಪರೀಕ್ಷಕನಾಂ ಕೃತಿರತ್ನಪರೀಕ್ಷಕನೆನೆಂದು ಭಣಿಪಿಯಂ ಭಗಾರತ್ನಮುಮಂ ರತ್ನನ ಕೃತಿರತ್ನಮುಮಂ ಪೇಱ್ದು ಪರೀಕ್ಷಿಸಂಗೇಟಿರ್ದೆಯೇ (ಗದಾಯು. ೧-೪೪); ಒಮ್ಮೊಯಂತೂ ಮುಕ್ತಾಯಕ್ಕನೇ ಪರೀಕ್ಷಕಳಾಗುತ್ತಾಳೆ. ಅಲ್ಲಮನೇ ಪರೀಕ್ಷಕನಾಗುತ್ತಾನೆ (ರೂಸ್ಯಕು. ೧೨೨). ೩. (ಶಿಕ್ಷಣಸಂಸ್ಥೆಗಳಲ್ಲಿ) ಪರೀಕ್ಷಾರ್ಥಿಗಳ ಅರ್ಹತೆಯನ್ನು ನಿರ್ಣಯಿಸುವವನು: ಮೌಲ್ಯಮಾಪಕ: ಆಗ ಪರೀಕ್ಷಕರ ಭಿನ್ನತೆಗಳು ಸುಳಿಯುವಂತೆಯೇ ಇಲ್ಲ (ಶಿಕ್ಷಣ. ೩೫೨). [ಸಂ.]

ಪರೀಕ್ಷಣ (ನಾ). ಜಾಗರೂಕತೆಯಿಂದ ಪರೀಕ್ಷಿಸುವುದು; ಎಚ್ಚರಿಕೆಯಿಂದ ಪರಿಶೀಲಿಸುವುದು: "ಉಪಧಾ. ಪರೀಕ್ಷಣಂ—ಈ ೨ ಅರಯ್ಕೆ" (ಹಲಾಯು. ೧೫೫-೭೨); ನಮ್ಮ ಜೀವನದ ಸಮಸ್ಯೆಗಳ ಬಗೆಗೆ ಆಳವಾದ ಪರೀಕ್ಷಣ ತಲೆದೋರಿ, ಇನ್ನೂ ಮೇಲ್ಮಟ್ಟದ ಕಾದಂಬರಿಗಳನ್ನು . . . ಕೊಡಲಿ (ಸಾಸಮಾ. ೧೭೨). [ಸಂ.]

ಪರೀಕ್ಷಾಕೇಂದ್ರ (ನಾ). ಶಿಕ್ಷಣಸಂಸ್ಥೆಗಳಲ್ಲಿ ಪರೀಕ್ಷೆಗಳನ್ನು ನಡೆಸಲು ಗೊತ್ತಾದ ಸ್ಥಳ: ನಮ್ಮ ಹಳ್ಳಿಯ ಪ್ರೌಢಶಾಲೆ ಪರೀಕ್ಷಾಕೇಂದ್ರವಾಗಿದೆ (ರೂಢಿ). [ಸಂ.]

ಪರೀಕ್ಷಾಧಿಕಾರಿ (ನಾ). ಶಿಕ್ಷಣಸಂಸ್ಥೆಗಳಲ್ಲಿ ನಡೆಯುವ ಪರೀಕ್ಷೆಗಳಲ್ಲಿ ಅಧಿಕಾರವನ್ನು ವಹಿಸಿಕೊಂಡ ವ್ಯಕ್ತಿ,—ಅಧಿಕಾರಿ : ಈ ವರ್ಷ ಅವರು ಪರೀಕ್ಷಾಧಿಕಾರಿಯಾಗಿ ನೇಮಕಗೊಂಡಿದ್ದಾರೆ (ರೂಢಿ).

[ಸಂ. ಪರೀಕ್ಷಾಧಿಕಾರಿನ್]

ಪರೀಕ್ಷಾರ್ಥಿ (ನಾ). ಶಾಲಾ ಕಾಲೇಜುಗಳಲ್ಲಿ ನಡೆಸುವ ಪರೀಕ್ಷೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿ : ಆ ಶಾಲೆಯಿಂದ ನಲವತ್ತುಜನ ಪರೀಕ್ಷಾರ್ಥಿಗಳು ಬಂದಿದ್ದಾರೆ (ರೂಢಿ).

[ಸಂ. ಪರೀಕ್ಷಾರ್ಥಿನ್]

ಪರೀಕ್ಷಿತ (ಗು). ೧. ಪರೀಕ್ಷೆಗೆ ಒಳಗಾದ; ಪರಿಶೀಲನೆಗೆ ಗುರಿಯಾದ : ಇಲ್ಲಿ ಪರೀಕ್ಷಕನೂ-ಪರೀಕ್ಷಿತ ವಸ್ತುವೂ ಎರಡೂ ಒಂದಾಗಿ ಸೇರಿಕೊಂಡು ಬಿಡುತ್ತವೆ (ಜೀವಾತ್ಮ. ೪೩). (ನಾ). ೨. ಪರೀಕ್ಷೆಗೆ ಗುರಿಯಾದ ವ್ಯಕ್ತಿ; ವಿಮರ್ಶೆಗೆ ಈಡಾದ ವ್ಯಕ್ತಿ : ಒಮ್ಮೆಯಂತೂ ಮುಕ್ತಾಯಕ್ಕನೇ ಪರೀಕ್ಷಕಳಾಗುತ್ತಾಳೆ, ಅಲ್ಲಮನೇ ಪರೀಕ್ಷಿತನಾಗುತ್ತಾನೆ (ಶೂನ್ಯಕು. ೧೨೨). ೩. ಲೋಹಗಳನ್ನು ಪರೀಕ್ಷಿಸಲು ಉಪಯೋಗಿಸುವ ಕಲ್ಲು; ಒರೆಗಲ್ಲು; ನಿಕಷ : "ಪರೀಕ್ಷಿತಂ ವೇತ್ತಿಯೆನಲೊರೆಗಲ್ಲು" (ಮಂಗರಾ. ೧೦೫-೧೪). [ಸಂ.]

ಪರೀಕ್ಷಿಸು (ಕ್ರಿ). ೧. ಜಾಗರೂಕತೆಯಿಂದ ಪರಿಶೀಲಿಸು; ಪರೀಕ್ಷೆ ಮಾಡು : ಆತನ ಬುದ್ಧಿಯಂ ಪರೀಕ್ಷಿಸಲ್ವೇಡಿ ಭಟ್ಟಮಂಡಪದೊಳೀ ಶ್ಲೋಕಮಂ ಬರೆದು ಪೋದಂ (ಪಡ್ಡಾರಾ. ೧೮೪-೮); ಧರ್ಮಪುತ್ರನಾಮನೆಯಂ ಪರೀಕ್ಷಿಸಿ ನೋಡಲೊಡಂ (ಪಂಪಭಾ. ೩-೩ ವ); ಗುಣದೋಷಮಂ ನಿಕಷಮಿಟ್ಟು ಪರೀಕ್ಷಿಸಿ ನೋಡೆ ತಾವೆ ಪೇಳಿವೆ (ಗದಾಯು. ೧-೪೭); ಹೂದೋಂಟಗಳನುಱೆ ಹೊಕ್ಕು ಚೆಲುವನಾಗಿ ಪರೀಕ್ಷಿಸುತ್ತಂ (ಬಸಪು. ೨೨-೭). ೨. (ಶಿಕ್ಷಣ ಕೇಂದ್ರಗಳಲ್ಲಿ ಪರೀಕ್ಷಾಧಿಕಾರಿಯು) ಪರೀಕ್ಷಾರ್ಥಿಗಳ ಅರ್ಹತೆಯನ್ನು ಪರಿಶೀಲಿಸು; ಮೌಲ್ಯಮಾಪನ ಮಾಡು : ಪ್ರಾಥಮಿಕಶಾಲೆಗಳಲ್ಲಿ ಸಂಬಂಧಪಟ್ಟ ಅಧ್ಯಾಪಕರೇ ವಿದ್ಯಾರ್ಥಿಗಳನ್ನು ಪರೀಕ್ಷಿಸುತ್ತಾರೆ (ರೂಢಿ). [ಪರೀಕ್ಷೆ+-ಇಸ್ಸು$_3$]

ಪರೀಕ್ಷಿಸುಹ (ನಾ). ಜಾಗರೂಕತೆಯಿಂದ ಪರಿಶೀಲಿಸುವುದು; ಪರೀಕ್ಷೆ ಮಾಡುವುದು : ಉಪಕ್ರಮ—ಧರ್ಮಾದಿಗಳಿಂದ ಅರಸುಮಂತ್ರಿಗಳ ಚಿತ್ತಮಂ ಪರೀಕ್ಷಿಸುಹಂ (ನಾಚಿರಾ. ೬).

[ಪರೀಕ್ಷಿಸು+-ಹ$_2$(<-ಪ$_2$)]

ಪರೀಕ್ಷೆ (ನಾ). ೧. ಆಳವಾದ ಪರಿಶೀಲನೆ; ತಪ್ಪುಒಪ್ಪುಗಳ ವಿಮರ್ಶೆ,—ವಿವೇಚನೆ : "ಪುಚ್ಚವಣಮೆಂದೊಡೆ ಪರೀಕ್ಷೆಯುಮಣ್ಮುಮಕ್ಕುಂ" (ಕಬ್ಬಿಕೈ. ೮೨); ಅದುಮಂ ನೀಮೆ ಪೇಳುಮೆಂದವರೊಳ್ ಪರೀಕ್ಷಾಕ್ಷಮೋದಾರವೀರವಾಕ್ಯಂಗಳಂ ನುಡಿಯುತ್ತುಂ (ಶಾಂತಿಪು. ೪-೧೦೨ ವ); ವೇದವಿಪ್ರರ ವಿಚಾರಿಸಿ ನೋಡಲು ಉಪದೇಶ ಪರೀಕ್ಷೆ ನಾಯಕನರಕ ಎಂದುದು ಕೂಡಲಸಂಗನ ವಚನದ ಸೂಚನೆ (ಬಸವ. ೯೧); ಲಕ್ಷಿತವಾದ ವಸ್ತುವಿಗಾ ಲಕ್ಷಣಮುಂಟೋ ಇಲ್ಲವೋ ಎಂದು ವಿಚಾರಂಗೆಯ್ವುದೇ ಪರೀಕ್ಷೆಯಕ್ಕುಂ (ವಿವೇಕ. ೨೦). ೨. ಶಿಕ್ಷಣಸಂಸ್ಥೆಗಳಲ್ಲಿ ಪ್ರಶ್ನೆಪತ್ರಿಕೆಯ ಮೂಲಕ ಅಥವಾ ಮೌಖಿಕವಾಗಿ ವಿದ್ಯಾರ್ಥಿಯ ತಿಳಿವಳಿಕೆಯ ಮಟ್ಟವನ್ನು ಕಂಡುಹಿಡಿಯುವುದು; ಮೌಲ್ಯಮಾಪನ ಕ್ರಮ : ಈಚೆಗೆ ಎಲ್ಲ ದೇಶಗಳಲ್ಲೂ ಪರೀಕ್ಷೆಗಳನ್ನು ಪುನರ್ವ್ಯವಸ್ಥೆಗೊಳಿಸುವ ಯತ್ನ ನಡೆಯುತ್ತಿದೆ (ಶಿಕ್ಷದ. ೩೬೫). ೩. ರೋಗವನ್ನು ಅದರ ಚಿಹ್ನೆಗಳಿಂದ ಗೊತ್ತು ಮಾಡುವಿಕೆ; ರೋಗನಿದಾನವನ್ನು ತಿಳಿಯುವಿಕೆ : "ನಿದಾನ, ಪರೀಕ್ಷೆ" (Diagnosis. ಪಾರಿನಿ. ೨೯); ಬಿಡುಮನಸ್ಸಿನಲ್ಲಿ ಮೊದಲು ನಿಮ್ಮ ಪರೀಕ್ಷೆ ನಡಸುತ್ತೀನಿ (ಮನೋನಂ. ೧೩೭). ೪. [ನ್ಯಾಯ] ಅನೇಕ ಬಗೆಯ ಕಠಿಣಪ್ರಯೋಗಗಳ ಮೂಲಕ ಮಾಡುವ ವಿಚಾರಣೆ,—ತನಿಖೆ.

ಪರೀಕ್ಷೆ ಕೊಡು=೧. ವಿಚಾರಣೆಗೊಳಗಾಗು : (ಕ). ೨. ವಿಚಾರಣೆಯಲ್ಲಿ ಜಯಪ್ರದವಾಗಿ ತೇರ್ಗಡೆ ಹೊಂದು; ಪರೀಕ್ಷೆಯಲ್ಲಿ ಯಶಸ್ವಿಯಾಗಿ ಉತ್ತೀರ್ಣವಾಗು : (ಕ). **ಪರೀಕ್ಷೆ ತೆಗೆ**=ಪರೀಕ್ಷೆ ಮಾಡು : (ಕ). **ಪರೀಕ್ಷೆ ಮಾಡಿಸು**=ತಪಾಸಣೆ ನಡೆಯುವಂತೆ ಮಾಡು : ಆಗಿಂದಾಗ್ಗೆ ದವಾಖಾನೆಗೆ ಬಂದು . . . ಪರೀಕ್ಷೆ ಮಾಡಿಸಿಕೊಂಡು ಹೋಗುತ್ತಿದ್ದರು (ಮನೋನಂ. ೧೩೪). **ಪರೀಕ್ಷೆ ಮಾಡು**=೧. ಪರೀಕ್ಷಿಸು; ಪರಿಶೀಲಿಸು; ವಿಮರ್ಶೆ ಮಾಡು : ಪರೀಕ್ಷಕ—ಪರೀಕ್ಷೆ ಮಾಡುವವನು (ಗಂಗಾಮ. ೨೦೦); ಸಾಹಿತ್ಯಭಾಗವನ್ನು ಯಾಂತ್ರಿಕವಾಗಿ ಪರೀಕ್ಷೆ ಮಾಡುವುದು ಕಷ್ಟ (ಶಿಕ್ಷದ. ೩೬೧). ೨. ರೋಗನಿದಾನವನ್ನು ತಿಳಿ,—ತಪಾಸಣೆ ಮಾಡು : ಮಗುವನ್ನೆತ್ತಿ ಪರೀಕ್ಷೆ ಮಾಡಲೋಸುಗ ನನ್ನ ತೊಡೆಯ ಮೇಲೆ ಮಲಗಿಸಿಕೊಂಡೆ (ಮನೋನಂ. ೧೩೫). [ಸಂ. ಪರೀಕ್ಷಾ]

ಪರೀಕ್ಷೆಗಾರ (ನಾ). ಪರಿಶೀಲಿಸುವವನು; ಪರೀಕ್ಷಕ; ತಜ್ಞ : (ಕ).

[ಪರೀಕ್ಷೆ+-ಗಾರ (<-ಕಾಱ)]

ಪರೀಕ್ಷೆವಂತ (ನಾ). ಪರೀಕ್ಷಿಸಿ ನೋಡುವವನು; ಒರೆ ಹಚ್ಚಿ ನೋಡುವವನು : ಸಮರತಿ ಸಮಕಳೆ ಸಮಸುಖ ಸ್ವಾನುಭಾವ ಹಿರಿದು ಕಿಱಿದಾದುದನಾರೂ ಅಱಿಯರು ಪಾಷಾಣಪರೀಕ್ಷೆವಂತನಂತೆ ಗುರುವಿಲ್ಲದವರಂತಿರಲಿ ಕೂಡಲಸಂಗಮದೇವಯ್ಯಾ ಗುರುವುಳ್ಳವರ ನಿಜವಿಂತುಟು (ಬಸವ. ೯೨೭); ಸುವರ್ಣಮನೊರೆದುಂ ಕಡಿದುಂ ಕಾಸಿಯುಂ ಪೊಯ್ದುಂ ನೋಡಿ ಪರೀಕ್ಷೆವಂತರ್ಪರೀಕ್ಷಿಸಿ ಕೊಳ್ವಂತೆ ದೇವರಂ ತಪಮಂ ಧರ್ಮಮಂ ಪರೀಕ್ಷಿಸಿ . . . ಕೈಕೊಳ್ವುದುಂ (ಧರ್ಮಪ. ೧೦-೩೯ ವ).

[ಪರೀಕ್ಷೆ+-ವಂತ]

ಪರೀತ$_1$ (ಗು). ೧. ಕಳೆದ; ತೀರಿಹೋದ; ಗತಿಸಿದ. ೨. ಅಗಲಿದ; ಹೊರಟುಹೋದ. ೩. ಸುತ್ತುವರಿದ; ಬಳಸಿದ : ವನಧಿಪರೀತಭೂತಳದೊಳೀತನೆ ಸೋಲದ ಗಂಡಂ (ಪಂಪಭಾ. ೧-೨೬); ಪರೀತೋದ್ಯಾನೋದ್ಯದ್ದ್ರುಮಕೃತಕರತ್ನಾದ್ರಿನಿಚಯಸ್ವರೂಪಂಗಳ್ ತನ್ನೊಳ್ ಪೊಳೆಯೆ . . . ತದ್ವಪ್ರಮೆಸೆಗುಂ (ಚಂದ್ರಪು. ೧೧-೬೪); ಅಂಬುಧಿಪರೀತ ವಸುಮತಿಯನಾಳುವ ನೃಪಕದಂಬಕೋಟೀರಮಂಡಿತಪದಂ (ಭಾವಚಿಂ. ೩-೩೬); ಚತುರಂಭೋಧಿಪರೀತಭೂತಳದ ಭೂಪರ್ ಕಪ್ಪಮಂ ತರ್ಪರ್ (ರಾಜಶೇ. ೬-೩೫). ೪. ಆವರಿಸಿರುವ; ವ್ಯಾಪ್ತವಾದ : ಮತ್ತಮಧುಕರನಿಕರಝಂಕಾರಪರೀತದಿಗಂತರಾಳದೊಳ್ (ಶಾಂತಿಪು. ೧೦-೭೭ ವ). ೫. ಸುತ್ತಲೂ ಇರುವ : ಪರೀತನವಪೂಗನಾಗವನಕರ್ಬುರಾಶೋತ್ಕರಂ (ಚಂದ್ರಪು. ೫-೯೩). ೬. ವಶಪಡಿಸಿಕೊಂಡ; ಸ್ವಾಮ್ಯ ಪಡೆದ. (ನಾ). ೭. ಕೂಡಿರುವುದು; ಹೊಂದಿರುವುದು : ಬಹಿರಂತರ್ಜಗತೀತಳಪ್ರತಿಷ್ಠಾಪಿತಾಷ್ಟಮಂಗಳ ನವನಿಧಿಪರೀತಮುಂ (ಚಾವುಂಪು. ೪೪). ೮. ಆವೃತನಾದವನು; ಸುತ್ತುವರಿದವನು : ಸಾಮಾನಿಕ ತ್ರಯಸ್ತ್ರಿಂಶಲ್ಲೋಕಪಾಲಪಾರಿಷದಾತ್ಮರಕ್ಷಕಾಭಿಯೋಗ್ಯಕಿಲ್ಮಿಷಿಕಾದಿ ಪರಿವಾರಪರೀತರಾಗಿ . . . ಬರೆವರೆ (ಶಾಂತಿಪು. ೧೦-೩ ವ); ಆತ್ಮರಕ್ಷಕಾಭಿಯೋಗ್ಯಪ್ರಕೀರ್ಣಸಂಮಾನಿತಾಮರಾದಿ ಪರಿಜನಪರೀತನುಂ (ಚಂದ್ರಪು. ೪-೬೮ ವ). ೯. ಹಿಡಿತಕ್ಕೆ ಒಳಗಾದವನು : ಭೀತನನುಗ್ರಪಾವಕಪರೀತನಂ . . . ಧರಿತ್ರೀತಳನಾಥರಕ್ಷಿಸೊಲವಿಂ ಶರಣಾಗತವಜ್ರಪಂಜರಾ (ನಳಚಂ. ೫೯೩); ದನುಜನಾಗೋವಿಪ್ರವರವಧೆ ತನಗೆ ಹಿತವೆಂದೇ ನಿರಂತರ ನೆನವುತಿರ್ದನು ಮೃತ್ಯುಪಾಶಪರೀತನೆಂದೆನಿಸಿ (ನಿಭಾಗ. ೧೦-೪-೪೭). [ಸಂ.]

ಪರೀತ2 (ನಾ). ದೋಣಿ; ನಾವೆ: "ಪರೀತಂ ದೋಣಿ" (ಪುಂಗಂಠಾ. ೭೩–೨೬); "ಜೋಗಂ ಪರೀತಂ . . . ದೋಣಿಯೆಂದೆನಲ್ ನಾವೆಯಕ್ಕುಂ" (ಪುಂಗಂಠಾ. ೧೫೦–೪). [?]

ಪರೀತಾಪ (ನಾ). ಪರಿತಾಪ; ಕಳವಳ: "ದವಥು ಪರೀತಾಪಂ" (ನಸ್ತು ಕೋ. ೭೩–೩೪). [ಸಂ.]

ಪರೀಧಾವಿ (ನಾ.) ಅರುವತ್ತು ಸಂವತ್ಸರಗಳಲ್ಲಿ ಒಂದು: ಅವರುಸವೇ ಪ್ರಭವ . . . ಪರೀಧಾವಿ . . . ಆಕ್ಷಯವೆಂದಱುವತ್ತು ತೆಱನಾಗಿಹುದು (ವಿವೇಕ. ೩೫೧). 'ಪರಿಧಾವಿ' ಪರಾ.

[ಸಂ.ಪರೀಧಾವಿನ್]

ಪರೀಭಾವ (ನಾ). ತಿರಸ್ಕಾರ; ತಾತ್ಸಾರ; ಅನಾದರ: "ಅನಾದರಃ, ಪರಿಭವಃ, ಪರೀಭಾವಃ, ತಿರಸ್ಕ್ರಿಯಾ . . . ಅಸೂರ್ಷಣಂ . . . ೯ ತಿರಸ್ಕಾರದ ಪೆಸರುಗಳು" (ಪಿದ್ಧಾಂತಿ. ೬೪). [ಸಂ.]

ಪರೀರಂಭಣ (ನಾ). ಆಲಿಂಗನ; ಅಪ್ಪುಗೆ: 'ಪರೀರಂಭಣಂಗೈ' ಪರಾ. [ಸಂ.]

ಪರೀರಂಭಣಂಗೈ (ಕ್ರಿ). ಆಲಿಂಗಿಸು; ಅಪ್ಪು: ಪುಸರಪಿ ಪರೀರಂಭಣಂಗೈವುತಲಿ ಶಿರದಗ್ರವಾಘ್ರಾಣಿಂದ ಸಂಭ್ರಮಗೊಂಡಳಮಿತಾಹ್ಲಾದದಿಂದ (ಪಂಕಾರಾ. ೨-೧೦-೩೫). [ಪರೀರಂಭಣ+ಕೈ1(<ಕೆಯ್1)]

ಪರೀವರ್ತ (ನಾ). ಬದಲಿ ವ್ಯಾಪಾರ; ವಿನಿಮಯವ್ಯವಹಾರ: "ಪರಿದಾನಂ, ಪರೀವರ್ತಃ, ನೈಮೇಯಃ, ನಿಯಮಃ—೪ ಒಂದು ಬಗೇ ಜನಸು ಕೊಟ್ಟು ಅದಕ್ಕೆ ಬದಲಾಗಿ ಮತ್ತೊಂದು ಬಗೇ ಜನಸು ತೆಗೆದು ಕೊಳ್ಳುವಿಕೆ" (ಪಿದ್ಧಾಂತಿ. ೨೯೭). [ಸಂ.]

ಪರೀವಾದ (ನಾ). ಅಪವಾದ; ನಿಂದೆ; ದೂರು: "ಅಪವಾದಂ ಕ್ಷೇಪಂ ನಿಂದೆ ಪರೀವಾದಂ ವಿಗರ್ಹಣಂ ಕುತ್ಸಾರ್ಥಂ" (ನಸ್ತು ಕೋ. ೮೦–೩೪); ಆ ಕಲ್ಪಿತವೇದನೆಗಿಂತ ಈ ಪರೀವಾದದಿಂದ ಮುಕ್ತನಾಗುವುದು ಯೋಗ್ಯವಲ್ಲವೆ? (ಅಪವಾ. ೨೦). [ಸಂ.]

ಪರೀವಾಹ (ನಾ).೧. = ಪರಿವಾಹ ೧. ೨. = ಪರಿವಾಹ ೨: "ಪರೀವಾಹಃ, ಜಳೋಚ್ಛ್ವಾಸಃ—ಈ ೨ ಕಡೆಗೋಡಿ" (ಪಲಾಯು. ೧೧೨–೫೫). [ಸಂ.]

ಪರೀಷಹ (ನಾ). ೧. ತಾಳಿಕೊಳ್ಳುವಿಕೆ; ಸಹಿಸುವುದು. ೨. ಕಡೆ; ಅಡ್ಡಿ; ಎಡರು: ತ್ರಿಪುರದ ಸುತ್ತುವಳಯದೊಳಲ್ಲಲ್ಲಿ ಚಿತ್ರರದಿಂದ ಪರೀಷಹ [ಪಾಶ್ವಾಂ. ಪರಿವೇಷ]ವಿಸಿಸುವ ಕೊತ್ತಳಗಳು ರಾಜಿಪುವು (ತ್ರಿಪುಸಾಂ. ೪೪). ೩. [ಜೈನ] ಸಮ್ಯಕ್‌ಜ್ಞಾನಾರ್ಜನೆಗೆ ಇರುವ ಇಪ್ಪತ್ತೆರಡು ಬಗೆಯ ಅಡ್ಡಿ,—ಉಪದ್ರವ: ಪಸಿವುಂ ನೀರಟ್ಟಿ ಮೊದಲಾಗೊಡೆಯ ಇಪ್ಪತ್ತೆರಡು ಪರೀಷಹಂಗಳುಮಂ ಸೈರಿಸಿ (ಪಡ್ಡಾರಾ. ೧-೪); ಅಳುರ್ವ ಪರೀಷಹಾನಳಶಿಖಾವಳಿಗಳ್ ಕೊಳೆ ಧೈರ್ಯಮುಂ (ಆದಿಪು. ೨-೫೯); ಪರೀಷಹ[ಭ]ಟರಂ ಬಂಚಿಸುವಂತೆ ಕಾಪಿನ ಬಂಟರಂ ಬಂಚಿಸಿ (ಸುಕುಮಾ. ೧೧-೪೩ ಪ); ತೊಲ್ಲಿ ಪರೀಷಹಂಗಳಂ ಪೋಕಿಸಿದಂ ಜಯಾಂಗನೆಯನೇಕವಿಹಾರದೊಳಾ ಮುನೀಶ್ವರಂ (ಪಂಚಾಮೃ. ೧೬–೬೧); ಧೈರ್ಯಂ ಘೋರತಪಃಪರೀಷಹಸಮೂಹ ಪ್ರಾಪ್ತಿಯೊಳ್ (ಚಂದ್ರಪ. ೧-೩). 'ದ್ವಾವಿಂಶತಿಪರೀಷಹೆ', 'ಪರೀಷಹಜಯ' ಪರಾ. [ಸಂ.]

ಪರೀಷಹಜಯ (ನಾ). [ಜೈನ] ತಪಸ್ಸಿಗೆ ವಿಘ್ನಗಳಾಗಿ ಬರುವ ಇಪ್ಪತ್ತೆರಡು ಬಗೆಯ ಉಪದ್ರವಗಳನ್ನು ಗೆಲ್ಲುವುದು; ತೀವ್ರವಾಗಿ ಹಸಿವು, ನೀರಡಿಕೆ ಮೊದಲಾದ ಬಾಧೆ ಉಂಟಾದರೂ ಶಾಂತವಾಗಿ ಅವುಗಳನ್ನು ಸಹಿಸುವುದು; ☞ "೧. ಹಸಿವು ಸಹಿಸುವುದು. ೨. ಬಾಯಾರಿಕೆ ತಡೆಯುವುದು. ೩. ಚಳಿ ಸಹಿಸುವುದು. ೪. ಬಿಸಿ ತಡೆಯುವುದು. ೫. ಸೊಳ್ಳೆ, ಸೊಣ ಮೊದಲಾದವುಗಳ ಕಡಿತವನ್ನು ತಡೆದುಕೊಳ್ಳುವುದು. ೬. ಬಟ್ಟೆಯಿಲ್ಲದೆ ಬೆತ್ತಲೆಯಿರುವುದರಿಂದಾಗುವ ತೊಂದರೆಗಳನ್ನು ಸಹಿಸುವುದು. ೭. ಅರತಿ-ಅಪ್ರೀತಿಯ ಬಾಧೆಯನ್ನು ಸಹಿಸುವುದು. ೮. ಹೆಂಗಸರಿಂದಾಗುವ ಬಾಧೆಯನ್ನು ತಡೆದುಕೊಳ್ಳುವುದು (ಸ್ತ್ರೀ ಸಹವಾಸ ಬಿಡುವುದು). ೯. ಒಂದೇ ಕಡೆ ಹೆಚ್ಚುಕಾಲ ನಿಲ್ಲದೆ ಸಂಚರಿಸುತ್ತಿರುವುದು; ಆಗ ಉಂಟಾಗುವ ಬಾಧೆಗಳನ್ನು ಸಹಿಸುವುದು. ೧೦. ಮಲಗುವ ಕಡೆ ಆಗುವ ತೊಂದರೆಯನ್ನು ಸಹಿಸುವುದು. ೧೧. ಕುಳಿತಿರುವಾಗ ಆಗುವ ತೊಂದರೆಗಳನ್ನು ತಡೆದುಕೊಳ್ಳುವುದು. ೧೨. ಬೈಗುಳನ್ನು ಸಹಿಸಿಕೊಳ್ಳುವುದು. ೧೩. ಹೊಡೆತವನ್ನು ಸಹಿಸುವುದು. ೧೪. ಯೋಚನೆಯಲ್ಲಿ ಆಗುವ ಕಷ್ಟನಿಷ್ಠುರಗಳನ್ನು ಸಹಿಸಿಕೊಳ್ಳುವುದು. ೧೫. ಬೇಡಿ ಭಿಕ್ಷೆ ಸಿಕ್ಕದಿದ್ದರೆ ಖೇದಪಡದೆ ಸಹಿಸುವುದು. ೧೬. ತನ್ನ ತಪಸ್ಸಿಗೆ ತಕ್ಕ ಮಹಿಮೆಗಳು ಕಾಣಿಸಿಕೊಳ್ಳದಿದ್ದರೂ ಅದನ್ನು ಸಹಿಸುವುದು. ೧೭. ರೋಗ ಬಂದರೆ, ದೇಹದ ಅನಿತ್ಯತೆಯನ್ನು ಭಾವಿಸಿ ಚಿಕಿತ್ಸೆ ಮಾಡಿಕೊಳ್ಳದೆ ಬಾಧೆಯನ್ನು ಸಹಿಸುವುದು. ೧೮. ಮುಳ್ಳು ಕಲ್ಲು ತಾಕಿದ ನೋವನ್ನು ಸಹಿಸುವುದು. ೧೯. ತನ್ನ ಪ್ರಜ್ಞೆಗೆ ಅಹಂಕಾರ ಪಡದೆ ಇರುವುದು. ೨೦. ತನಗೆ ಇನ್ನೂ ಉತ್ತಮ ಜ್ಞಾನ ಬರಲಿಲ್ಲವಲ್ಲಾ ಎಂದು ತನ್ನ ಅಜ್ಞಾನಕ್ಕೆ ಕೊರಗದಿರುವುದು. ೨೧. ಸೂಕ್ಷ್ಮಪ್ರಾಣಿಗಳಿಗೆ ತೊಂದರೆಯಾದೀತೆಂದು ಮೈ ತೊಳೆಯದೆ ಅದರಿಂದಾದ ಬಾಧೆಯನ್ನು ಸಹಿಸುವುದು. ೨೨. ಜನ ತನಗೆ ಪುರಸ್ಕಾರ ಮಾಡದಿದ್ದರೆ ತಾಳಿಕೊಳ್ಳುವುದು" (ಆದಿಪು. ಸಂಗ್ರಹ. xxxiii, ಟಿಪ್ಪಣಿ): ನಯತಿಯುನಾರ್ ವಿನಾಜುಪಪರ್ ಭಯಮೇವುದೊ ಮುಟ್ಟದೆಡೆಗೆ ಸೈರಿಸುವುದೆ ಕೇಳ್ ನಯವಿದೆ ಪೆತ್ರ ಪರೀಷಹಜಯಮೆ ತಪಂ ತಪಕೆ ಬೇಜಿ ಕೋಡೆರಡೊಳವೆ (ಯಶೋಚ. ೧-೪೯); ಗುರಿ ಸಾಧಿಸುವಾಗ ಬರುವ ಹಸಿವು, ಬಾಯಾರಿಕೆ ಮೊದಲಾದ ತೊಂದರೆಗಳು ಪರೀಷಹಗಳು. ಅವನ್ನು ಗೆಲ್ಲುವುದೇ ಪರೀಷಹಜಯ (ಆದಿಪು. ಸಂಗ್ರಹ. xxxiii, ಟಿಪ್ಪಣಿ). [ಪರೀಷಹ+ಜಯ]

ಪರೀಷ್ಟಿ (ನಾ). ೧. ಪರೀಕ್ಷೆ; ತನಿಖೆ. ೨. (ಶ್ರಾದ್ಧಭೋಜನಕ್ಕಾಗಿ ಬ್ರಾಹ್ಮಣನನ್ನು) ಶ್ರದ್ಧೆಯಿಂದ ಹುಡುಕುವಿಕೆ,–ಅನ್ವೇಷಿಸುವಿಕೆ: "ಪರ್ಯೇಷಣಾ, ಪರೀಷ್ಟಿಃ, ಅನ್ವೇಷಣಾ, ಗವೇಷಣಾ—೪ ಶ್ರಾದ್ಧಾದಿಗಳಲ್ಲಿ ನಿಮಂತ್ರಣಕ್ಕೆ ಯೋಗ್ಯನಾದ ಬ್ರಾಹ್ಮಣನನ್ನು ಶ್ರದ್ಧೆಯಿಂದ ಹುಡುಕುವಿಕೆ" (ಪಿದ್ಧಾಂತಿ. ೨೨೪). ೩. ಗೌರವ; ಮರ್ಯಾದೆ. ೪. ಇಷ್ಟ; ಒಲವು. ೫. ಉಪಚಾರ; ಪರಿಚರ್ಯೆ; ಸೇವೆ: "ಪರಿವಸ್ಯಾ, ಪರಿಚರ್ಯಾ . . . ಪರೀಷ್ಟಿಃ, ಸೇವಾ . . . ಉಪಚಾರಃ—ಈ ೧೧ ಪೆಸಕೆಯ್ವುದಕ್ಕೆ ಪೆಸರ್" (ಪಲಾಯು. ೨೧೧–೧೨೯). [ಸಂ.]

ಪರೀಸಾರ (ನಾ). ಸುತ್ತಾಡುವುದು; ತಿರುಗಾಡುವುದು; ಸಂಚಾರ: "ಪರಿಸರ್ಯಾ, ಪರೀಸಾರಃ—೩ ತಿರುಗುವಿಕೆ" (ಪಿದ್ಧಾಂತಿ. ೩೬೩). [ಸಂ.]

ಪರೀಹಾರ (ನಾ). (ತೆರಿಗೆಯಲ್ಲಿ ತೋರುವ) ವಿನಾಯಿತಿ: 'ಪರೀಹಾರಲೇಖ' ಪರಾ. [ಸಂ.]

ಪರೀಹಾರಲೇಖ (ನಾ). (ತೆರಿಗೆಯಿಂದ) ವಿನಾಯಿತಿ ಮಾಡಿರುವುದನ್ನು ಸೂಚಿಸುವ ದಾಖಲೆ: ಪರಿದಾನಲೇಖಗಳು; ಪರೀಹಾರಲೇಖಗಳು . . . ಇವು ಇನ್ನೂ ಕೆಲವು ಶಾಸನಪ್ರಭೇದಗಳಾಗಿವೆ (ಕಶಾಅ. ೪೫). [ಪರೀಹಾರ+ಲೇಖ]

ಪರೀಹಾಸ (ನಾ). ವಿನೋದ; ಪರಿಹಾಸ: "ಪ್ರವಃ, ಕೇಳಿಃ, ಪರೀಹಾಸಃ . . . ನಪುಂಸ-೬ ಸ್ತ್ರೀ ಪುರುಷರ ಪರಿಹಾಸಕ್ಕೆ ಹೆಸರುಗಳು" (ಸಿದ್ಧಾಂತಿ. ೬೮). [ಸಂ.]

ಪರು$_1$ (ನಾ). ೧. ಕಬ್ಬು, ಬಿದಿರು ಮುಂತಾದುವುಗಳ ಗೆಣ್ಣು; ಪರ್ವ: "ಗ್ರಂಥಿ, ಪರ್ವ, ಪರು೩—೩ ಬಿದಿರು ಗೆಣ್ಣುಗಳ ಹೆಸರುಗಳು" (ಸಿದ್ಧಾಂತಿ. ೧೫೦). ೨. ಸ್ವರ್ಗ. ೩. ಪರ್ವತ. ೪. ಸಾಗರ. [ಸಂ.]

ಪರು$_2$ (ನಾ). [ಸಂಗೀತ] ಹಾಡಿನ ಒಂದು ಬಗೆ: ದರು ಪರಂ[ರುತ್ತಿ] ವಿಕೃತಿ ವಿಂದಾಣವೆಂಬ ಚತುರ್ವಿಧದಂಡಿಯಲ್ಲಿ ರಂಗುರಕ್ತಿ ರೀತಿದೋಜು . . . ಪಾಡಿ ಮೋಹಿಸುವ ಗಾಯಕುಳರಿಂ (ವಿವೇಕ. ೧೫೦). 'ದರು$_1$' ಪರಾ. [?]

ಪರು$_3$ (ನಾ). ಒಂದು ಪ್ರದೇಶದ ಹೆಸರು; ℙ ಆಂಧ್ರಪ್ರದೇಶದ ಹಿಂದೂಪುರ ತಾಲ್ಲೂಕಿನ ಒಂದು ಪ್ರದೇಶ: ಪರುವಿಸಯೋ ಪಿರಟ ಭೋಗೇ ಕುರಲೂರನಾಮಗ್ರಾಮೋ ದತ್ತ (ಮೈಆರಿ. ೧೯೧೫, ೧೪–೧೬; 400). [ℙಇದು 'ಪರುವಿ' ಎಂಬುದರ ಅಪಲಿಖಿತವಿರಬಹುದು]

ಪರುಕಿಸು 'ಪರಿಕಿಸು' ನೋ.

ಪರುಜು$_1$ 'ಪರಜು' ನೋ.

ಪರುಜು$_2$ (?) (ನಾ). (?): ಸಿಂಧುವಿನನೋಲ್ಮೊರವುತ್ಕೆತಂದುದುಭಯ ಬಲ ನಿಂದು ಪರುಜುಂ ಮಾಡಿ ದಳ ಜಲನವಾಯ್ತು ಸುರವ್ಯಂದ ನೋಡುತ್ತಿರಲ್ಕಭದೊಳು (ತುರಂಗ. ೪೩–೪೩). [?]

ಪರುಟವ 'ಪರುಠವ' ನೋ.

ಪರುಟವಣೆ 'ಪರುಠವಣೆ' ನೋ.

ಪರುಟವಿಸು 'ಪರುಠವಿಸು' ನೋ.

ಪರುಠವ, ಪರಿಠವ, ಪರುಟವ (ನಾ). ೧. ವಿಸ್ತಾರ; ವಿಶಾಲತೆ; ಹರಹು: "ಪರುಠವಮನೆ ವಿಸ್ತರಂ" (ಭಾರತ. ೧೪೪). ೨. ಅತಿಶಯತೆ: ಮುರಿಮುರಿದ ಕೊತ್ತಳದ ಸಾಲಿನ ಪರುಠವದ ಹುಲಿಮುಖದ ಬಾಗಿಲ . . . ಕಾಂತಿ ರಂಜಿಸಿತು (ನಳಚ. ೧-೨೦). ೩. ಹೆಚ್ಚಳ; ಆಧಿಕ್ಯ; ಸಾಂದ್ರತೆ: ಪಾತಕದ ಪರು[ಪಾಠಾಂ.ರಿ]ತವದ ಮುಖದ ಮಹೀತಳಾಧಿಪ ಸುಯ್ದು ನೊಂದನು (ಕುಮಾಭ. ೪-೧೬). ೪. ಹಿರಿಮೆ; ಶ್ರೇಷ್ಠತೆ: ಮೇಲೆ ನಿಮ್ಮಾತ್ಮಜರಿಗವನಿಯ ಪಾಲನೆಯ ಪರುಠವದ ಪಟ್ಟವ ಪಾಲಿಸುವರು (ಕುಮಾಸ. ೬೧೫. ೧೬–೬೬); ನೆರೆ ಚತುರ್ದಶಲೋಕಲೋಕದ ಹಿರಿಯರಿಮ್ಮೆಹೇಳ್ಕೆ ಕೇಳ್ಕೆಯ ಪರುಠವದೊಳ್ಕೆತಂದ ವಿತರಣಮಂತ್ರಿ ವಿತರಣನು (ಅಂಬಿಕಾ. ೧೨–೧೨). ೫. ಭದ್ರತೆ; ದೃಢತೆಯನ್ನು ಹೊಂದಿದುದು: ಮತ್ತೆ ಮುದವಂಕುರಿಸಿ ಪಲ್ಲವಿಸಿತ್ತು ದಕ್ಷಿಣಂಗರುತನದ ಪದಸ್ಥಿತಿಯ ಪರುಠವದ ಸಿದ್ಧಿಯಲಿ (ನಭಾಗ. ೪-೧-೧೬). ೬. ಸಿದ್ಧತೆ; ಏರ್ಪಾಟು; ತಯಾರಿ: ಕರೆಸು ಧೌಮ್ಯಾದಿಗಳನ್ನಿಯ ಪರುಠ[ಪಾಠಾಂ.ಟ]ವವ ಮಾಡೆಂದು (ಕುಮಾಸ. ೬-೧೪); ಕನ್ಯೆಯನಾಗಿ ನೃಪನಿದ್ದಿರವನಾ ಪೂಜಾವಿಧಾನದ ಪರಿವಿಡಿಯ ಪರುಠವವನೆಲ್ಲವ ಮುಱಿದು ಕುಳ್ಳಿರ್ದ (ನಭಾಗ. ೫-೫-೧೫); ಪರುಠವೊಳಗೊಳಗೆ ಪುಟ್ಟಿದುದು ಗಾಲವಮುನಿಪನಾಶ್ಚೆಯಲಿ (ಅಂಬಿಕಾ. ೪೮-೧೬). ೭. ಹೇಳಿ ಕೊಟ್ಟುದು; ನಿರೂಪಿಸಿದುದು: ಪಾಂಡವರರಸಿ ಬೆಸಗೊಳಲೀಕೆ ಪಾರ್ಥನ ಪರುಠವದ ಮಾತುಗಳನೆಂದಳು ನಗೆಯ ಮೊಳೆ ಮಿನುಗೆ (ಕುಮಾಭ. ೧೫-೪೮). **ಪರಿಠವ**: ೩. ನಾರಿಯರು . . . ಹೆಣಲಿ ಹೊರಳಿದರು ವಿವಿಧಪ್ರಳಾಪದ ಪರಿ[ಪಾಠಾಂ.ರು]ಠವವನೆಂತಜುದರೋ ವರ್ಣಿಸುವಡರಿದು (ಕುಮಾಗ. ೧೨-೬); ೪. ಠೀವಿ; ಸೊಗಸು; ಬೆಡಗು: ಪಾಹಳಿಯೊಳ್ ವಳಯಕ್ಕೆ ಸಾರ್ದು ಮುಂ ಪರಿಠವದೊಳ್ ಪ್ರಸಿದ್ಧ ಮೆನಿಸಿರ್ದ ತುರಂಗದ ಭಂಗಿಯಿಂದಮಾ ಹರಿಯ ಮನಕ್ಕೆ ತನ್ನ ಗತಿ ಮಾಡೆ ಮಹೋತ್ಸವಮುಂ ತುರಂಗಮುಂ (ಪುಹಾನೀ. ೬-೧೩೦). **ಪರುಟವ**: ೧. ವಿದ್ಯೈಶ್ವರ್ಯಮಷ್ಟಗುಣ ಕೇಸರದ ಪರುಟವದೊಳು ಸ್ಥಾಪಿತಂ (ಲಕಚಿಂ. ೨೭-೨೭). ೩. ತಾಯು ಗರ್ಭದಿನಯ್ವುದಿಯ ಪರುಟವದ ರಕ್ಷೆಯಂತಿರೆ (ರೇಣು. ೧೦೧-೫೪). ೪. ಮಹಾ ಪರಿಜನಂ ಪರಮಂತ್ರಿಮುಖ್ಯರ್ಪಸಾಯತರು ಬಾಹತ್ತರಂ ನಿಯೋಗ ಪರುಟವದೊಳಿದಬಲದಿ ಮುಂದೆ ಪಿಂದೆಸೆವುತಿರೆ (ಲಕಚಿಂ. ೩೧-೩೪). ೫. ರೂಢಿ; ರೀತಿ; ಬಗೆ: ನರರ ಪರುಟವದ ಭಾಷಾಂತಿಕ ಬರಹವಲ್ಲ ಈರ ಹೊಸತು ದೇವಲಿಪಿಯಹುದು (ಲಕಚಿಂ. ೩೧-೪೪); ನಮ್ಮೋಳ್ ಮೊನುಪರ ಪರುಟವಮಿಲ್ಲ [ಪಾಠಾಂ.ನೀವು ದಿಟ ಮಾನಿಸರ ಪರುಠವವಲ್ಲ] ನೀವಾರು (ಕುಮಾಭ. ೧೩-೩೧); ಪರುಪಮಾನ ಪರರೊಡ್ಡವದ ಪರುಟ[ಪಾಠಾಂ.ಠ]ವದ ಹರಹು ಹೊಗದಗ್ಗಳಿಕೆ (ತೊರಡಾ. ೧-೧-೧೦).

[<ಪ್ರಾ. ಪರಿಟ್ಠವ./ಸಂ. ಪರಿಸ್ಥಾಪನ./ತೆಲು. ಪರಿಥವ]

ಪರುಠವಣೆ, ಪರಿಠವಣೆ, ಪರುಟವಣೆ (ನಾ). ೧. ವಿಸ್ತಾರ; ವ್ಯಾಪ್ತಿ: ಸಂಧ್ಯಾರಾಗದ ದೇವತಾಂಗದ . . . ಪದ್ಮರಾಗದ ಪಾವುಡದ ಪರುಠ[ಪಾಠಾಂ. ಟ]ವಣೆ ಪಸರಿಸೆ . . . ಪರಿದು ನೆರೆದು ತರಂಗೊಂಡ ತುರಗಸಂಘಾತದಿಂ (ರಾಜಶೇ. ೬-೧೧೧ ವ). ೨. ವಿಶದ; ವಿವರ: ನಾಯಕನು ಪರುಠವಣೆಯಾಗಿ ಹೇಳಲಾರಂಭಿಸಿದನು (ಮಲ್ಲಿ. ೨೫೮). ೩. ಸಿದ್ಧತೆ; ಏರ್ಪಾಟು; ವ್ಯವಸ್ಥೆ: ಆ ಮುಂದಿರನಿಕಾಯಕೆ ಬಾಗಿಲೊಂದು . . . ಹೊಜಗೆ ಮುದ್ರಿಸಿ ಕಿಚ್ಚ ಚುಚ್ಚುವ ಪರುಠವಣೆಯಲಿ ಖಳ ಪುರೋಚನನಂದು ನಿರ್ಮಿಸಿದ (ಕುಮಾಭ. ೮-೭೦); ಸುಚರಾಚರರಿಗಿರಲಳವಡಿಕೆ ಮಾಡಿದ ಪರುಠವಣೆ ಚೆನ್ನಾಯ್ತು ಚತುರಾನನನ ಚಡುರಿನಲಿ (ಪ್ರಭುಲೀ. ೨-೩) ; ಅವನೀಶ್ವರರ ಮಾನ್ಯತೆಯ ಪರುಠ[ಪಾಠಾಂ. ಟ]ವಣೆ ವಿಜಯಂಗೆ ಸೇರಿತು (ತೊರಡಾ. ೧-೭-೨೪); ಪಿಂದು ಪೂಡೆಗೆ ಆಸ್ತ್ರಶಸ್ತ್ರದ ಪರುಠವಣೆ ನಿಷ್ಕೆಯಲಿ ಕುಳಿತ ದುರುಳ ಮೈರಾವಣನ ಕಾಣುತಲಿ (ಉತ್ತಕ. ೩೪-೫೩). ೪. ಪದ್ಧತಿ; ಕ್ರಮ: ಇರಲಿ ಲೌಕಿಕ ವೈದಿಕಂಗಳ ಪರುಠವಣೆಯಿಹಪರಗಳೆರಡಱ ಪರಿಯ ಸದ್ಗತಿಗಳನು ಸಂಗ್ರಹಿಸಲಿ ಕುಮಾರಕನೆ (ಉತ್ತಕ. ೪-೨೮) ೫. ಸಡಗರ; ಆಡಂಬರ: ವೈದಿಕಕರ್ಮನಿಷ್ಠರ ಪದವಿಗಳ ಪರುಠವಣೆಯನು ಕಲಿಪಾರ್ಥ ನೋಡು (ಕುಮಾಭ. ೭-೪೦); ಬಂದನು ರಾಮನ್ಯಪ ತನ್ನ . . . ಬಾಂಧವರಾ ಪರುಠವಣೆಯಲಿ (ರಾಮಪ. ೨೮-೫೯); ತಾನೂ ಅರಳೀ ಕಟ್ಟೆಗೆ ಹೋಗುತಾ 'ವಿಶೇಷವಾದ ಪರುಠವಣೆಯಿಂದ ತಾನೂ ಒಬ್ಬನೇ ಇಷ್ಟು ಮುರಳ್ಕೆ ಪೂಜೆ ಮಾಡುತಾ (ಮಾಸುರಾ. ೧೩೯) ; ಪದ್ಮಾಸನನ ಸಭೆಯ ಪರುಠವಣೆ ಎಣೆಯಿಲ್ಲದ್ದು (ರಾಜಸೂ. ೬). ೬. ಅಚ್ಚುಕಟ್ಟು; ಅಣಿ; ಒಪ್ಪ: ಇವಳಿಂದ ವರ್ಣಿಸಲ್ಪಟ್ಟ ಅಡಿಗೆ ಊಟದ ಪರುಠವಣೆಯನ್ನು ಕೇಳಿ ಅಲ್ಲಿ ಸೇರಿದ್ದ ಹೆಂಗಸರಲ್ಲಿ ಕೆಲವರು . . . ನಗುತಿದ್ದರು (ಅಡೂಟು. ೧೧೪); ಊಟ,ತಿಂಡಿಗಳ ವಿಷಯದಲ್ಲಿ ಅವರಿಗೆ ಪರುಠವಣೆ ಹೆಚ್ಚು (ರೂಢಿ). **ಪರಿಠವಣೆ**: ೩. ಅನ್ತು ದೇವರ ದೇಸಿಯ ಬೀಯದ ಪರಿಠವಣೆ ಗದ್ಯಾಣವಯ್ದು (ಸೌಇಇ. XX, ೧೦೧–೫೨ ; 1128); ಸೈನ್ಯವನ್ನು ಕಳುಹಿಸುವ ಪರಿಠವಣೆಯೇಕೆ ? (ಕ್ರೀಲಾಯ. ೧೫೧). **ಪರುಟವಣೆ**: ೩. ಪರಿಕರದ ಪರುಟವಣೆಯಲಿ . . . ನಿಯೋಗಿಗಳಾಪ್ತ ಜನಸಹಿತ್ಯದಿದರು ವನವ (ಕುಮಾಭ. ೧-೨೧). ೫. ಒಂದೆಡೆಯೊಳ್ ಪರುಟವಣೆಯ ಗಾನದ ನಚ್ಚಣೆಯ . . . ದೇವಾಂಗನೆಯರ ಗೊಂದಣಂ (ರಾಮಾಶ್ವ. ೭೬–೨೮); ಹಬ್ಬದ ಪರುಟವಣೆಯಿಂಪ ಅಕ್ಕಪಕ್ಕದ ಗೆಳತಿಯರನ್ನು ಮಿಂರಿ ಶೋಭಿಸ

ಬೇಕೆಂದು ಹೆಂಗಸರು ಬಗೆಬಗೆಯ ಆಹಾರಸಾಮಗ್ರಿಗಳನ್ನು ಸಜ್ಜುಗೊಳಿಸುತ್ತಿರುವರು (ಬೆನ್ನಬೇ. ೩).

ಪರಿಠವಣಂ ಮಾಡು=ಸಜ್ಜುಮಾಡು; ಸಿದ್ಧಗೊಳಿಸು: ಹಿರಿಯವಳ ಮನೆಯೊಳೆಲ್ಲಾ ಪರಿಠವಣಂ ಮಾಡೆ ಬೇಟ್ಟು ಕಳುಪಿ (ಧರ್ಮಾಪ. ೨-೪೮). [ಪರುಠವ+-ಅಣ್ಮೆ]

ಪರುಠವಿಸು, ಪರಿಠವಿಸು, ಪರುಟವಿಸು (ಕ್ರಿ). ೧. ತೋರಿಸು; ಕಾಣಿಸು: ಮಾಹೇಶ್ವರವಿಸರವನೇಕಪ್ರಕಾರದ ನಾಟಕಂಗಳಂ ಪರುಠವಿಸಿ . . . ತ್ವರಿತದಿಂ ತೋರ್ಪರ್ (ಪದ್ಮರಾ. ೬-೬೩); ಪರಿಪರಿಯ ಶಿವಲಿಂಗ ಭಕ್ತಿಯಂ ಪರುಠವಿಸಿ ಕಾಲನ ನಿವಾರಿಸಿ ಹರನನೊಚ್ಚತಗೊಂಡ ಶಿವಶರಣರಿಗೆ ಶರಣಾರ್ಥಿ (ಪ್ರಭುಲಿಂ. ೧-೬). ೨. ನೆರವೇರಿಸು; ನಡೆಸು: ಸುರಮುನಿಯ ನುಡಿವಿಡಿದು ಲಗ್ನವ ಪರುಠ[ಪಾಠಾಂ.ಟ]ವಿಸಿದರು (ತೊರರಾ. ೧-೧೬-೩೪); ಪಂದಿಸುತೆ ಪೂಜೆಯಂ ಪರುಠವಿಸಿ ಶಿಶುವ ಮುದದಿಂದೆ ಪದದೆಡೆಗೆ ಸಾರ್ಚಿ (ರಾಘವ. ೨-೩೫). ೩. ಉಂಟುಮಾಡು; ಒದಗಿಸು: ನಿಜಸುಖಮನೆರ್ದೆವನೆಯೊಳ್ ಪರುಠವಿಸುವ ಸುಜ್ಞಾನದ ತಿರುಳೆನಲೆಸೆದತ್ತು ಮೂರ್ತಿ ಪಂಪಾಂಬಿಕೆಯಾ (ಉದ್ಭಟ. ೩-೪೦); ವರುಷ ಹದಿನಾಱುಲಿ ಮೃತ್ಯುವ ಪರುಠ[ಪಾಠಾಂ.ಟ]ವಿಸಿದುದು ಕರ್ಮಗತಿ (ಕುಮಾಅ. ೧೪-೧೭); ಅಱುಹುವಱುಹುಗಳನಾ ಮಂಗಲೆಯ ಚಿತ್ತದೊಳು ಪರುಠವಿಸಿ (ಸೌಂದಪು. ೮-೭೧); ಮಿತ್ರನೆನಗೆಂದೆನಿಸುವೀ ಮೃಗಪುತ್ರನನು ಬೇರ್ಪಡಿಸಿ ತನಗೆ ಪರತ್ರಗತಿಯನು ಪರುಠವಿಸಿದ್ಯೆ (ನಿಭಾಗ. ೫-೫-೪೩). ೪. ವಿಸ್ತರಿಸಿ ಹೇಳು; ವಿವರಿಸು: ನೀ ಪರುಠವಿಸು ನಿರ್ಜರರಿಗೆ ಬಂದ ಸಂತಾಪವಿದೇನು (ವೋಪತ. ೫-೧೪); ನೃಪನ ಸಭೆಯೊಳಗೆ ಪರುಠವಿಸಿ ನೀವೆಂದ ಮಾತನು ವರಸಭಾಮಧ್ಯದಲಿ ನುಡಿಯಲ್ಕೆ (ನಳಚ. ೮-೧೯). ೫. ಆವರಿಸು; ಮುತ್ತು: ಮಹಾಪಾತಕನೆನ್ನ ಪೊಳಲ ತಾ ಪರುಠವಿಸಿಕೊಂಡತುಳಯುದ್ಧವನು ನಾನಾಪರಿಯೊಳು ಮಾಡುತಿರಲು (ಅಂಜಚ. ೧೩-೨೬೯). ೬. ಏರ್ಪಾಟು ಮಾಡು; ವ್ಯವಸ್ಥೆ ಮಾಡು; ಅಣಿಗೊಳಿಸು: ಕರೆದು ಭೀಮನ ನಕುಳನನು ಸಂಗರಕೆ ಧೃಷ್ಟದ್ಯುಮ್ನ ದ್ರುಪದರ ಪರುಠವಿಸಿ ಕಳುಹಿದನು ಸೌಭದ್ರಂಗೆ ಪಡಿಬಲವ (ಕುಮ್ಮಾದ್ರೋ. ೫-೬೨); ತುಂಬುರಮಂತ್ರಿಯುಲುಪೆ ಬೀಡಾರ ಮುಂತಾದವಂ ಪರುಠವಿಸಿ (ಸೌಂದಪು. ೧೧-೩೪); ಕದನಕೆ ಸುರಪತಿಯ ಚತುರಂಗಬಲಗಳ ಪರುಠವಿಸಿ ಕಳುಹಿದನು (ಉತ್ತಕ. ೬-೨೪). ೭. ಸಿದ್ಧವಾಗು; ತಯಾರಾಗು: ಮಧ್ಯರಾತ್ರಿಯೊಳಿಂತದಂಭವಣೆಯಲಿ ಪರುಠವಿಸಿದನು ಗುರುಸೂನು (ಕುಮ್ಮಾಗ. ೯-೧೪). ೮. ನೇಮಕ ಮಾಡು; ಗೊತ್ತು ಮಾಡು; ನಿಯಮಿಸು: ದೇವಕಿಯಂ ತರಿಸಿ ಕಾಪುವೇಟ್ಟುರಿಸಿ ಹಿತರುಮಹಿತರುಮಪ್ಪ ಪರಿಚಾರಕಿಯರಂ ಪರುಠವಿಸಿ (ಅರ್ಧನೇ. ೬-೨೮ವ); ಪರುಠವಿಸಿದರೆ ಸದಸ್ಕರ ಗುರುವೆನಲುದ್ಗಾತೃಜಟಗಳಂ ಋತ್ವಿಜರಂ (ಕುಸುಮಾ. ೪-೧೩೦); ಕರೆದು ಪಡುವಲು ಕಲಿಸುಸೇಣನ ಪರುಠ [ಪಾಠಾಂ.ಟ]ವಿಸಿದನು (ತೊರರಾ. ೪-೮-೧೨); ಕಾವಲ್ಗೆ ರಥ ಮತ್ತಗಜ ಹಯ ಪದಾತಿಗಳ ಸಂದೋಹಮಂ ಸುತ್ತಲುಂ ಪರುಠ [ಪಾಠಾಂ.ಟ]ವಿಸಿ (ಜೈಮಿಭಾ. ೫-೨೦). ೯. ರಚಿಸು; ಕಟ್ಟು: ಮುಂಗಡೆಗೆ ಚಪ್ಪರವನತ್ಯಂತವಿಸ್ತಾರದಿಂ ಪರುಠವಿಸಿ (ಸೌಂದಪು. ೧೩-೨೬); ಪರುಠ[ಪಾಠಾಂ.ಟ]ವಿಸಿದರು ವಿವಿಧ ದ್ರವ್ಯದ ಸರಸಿಗಳ ಸಂವೇಶದಲಿ ಕೊಪ್ಪರಿಗೆ ಯಂತ್ರದ್ರೋಣಗಳ ಜಾಟಾಳಸೂತ್ರಗಳ (ತೊರರಾ. ೧-೬-೮); ನನ್ನನುಜೆಯರ್ಗೆ . . . ರನ್ನ ಚಿನ್ನದೊಳು ಪೊನ್ನುಯ್ಯಲ ಪರುಠವಿಸು (ಧರಚ. ೪೪-೨೫); ಹೋಳಿಯ ಹಬ್ಬದ ಕಾಲಕ್ಕೆ ಓದಲಿಕ್ಕೂ ಹಾಡಲಿಕ್ಕೂ ಅನುಕೂಲವಾಗುವಂತೆ 'ಪಾಡುಗಬ್ಬ' ವನ್ನಾಗಿ 'ಪರುಠವಿಸಿರ'ಬಹುದೇ (ಕರ್ಣಾಜ. ೮೫). ೧೦. ಹುಟ್ಟಿಸು; ಸೃಷ್ಟಿಮಾಡು; ಉತ್ಪತ್ತಿಮಾಡು: ಧರೆಯೊಳಗೆ ತರುಲತೌಷಧಿ ವೀರುಧಂಗಳ ಪರುಠವಿಸಿದನು (ನಿಭಾಗ. ೬-೪-೭); ದುರುಳದುರ್ಯೋಧನರನ್ನೂರ್ವರಂ ಪರುಠವಿಸಿ ಧರೆಯೊಳಗೆ (ತುರಂಗ. ೬-೬೧). ೧೧. ಸಲ್ಲಿಸು; ಒಪ್ಪಿಸು; ಸಂದಾಯ ಮಾಡು: ಎಮ್ಮ ಗೃಹದೈವಕೆ ಪರಕೆಯಂ ಪರುಠವಿಸುವೆಂ (ಮಹಾವಿ. ೬-೮). ೧೨. ಪುರಸ್ಕರಿಸು; ಮನ್ನಿಸು: ಉಗ್ರಸೇನತನೂಭವನುತ್ಸಾಹರಸವಶಗತನಾಗಿ ತನ್ನ ಮಲ್ಲವಲ್ಲಭರ್ ನಾಲ್ವರುಮಂ ಪೋಷಣಮಂ ಕೊಟ್ಟು ಪರುಠವಿಸೆ (ಮಹಾನೇ. ೬-೬೬ವ), ತರಿಸಿದನು ಪೊಂಗಳಸವಾರಿಯ ಪರುಠವಿಸಿ ತನ್ನಾತ್ಮಸತಿಯಳ (ಸಂಭಪ. ೧೦-೨೩); ಪಿರಿಯೊಸಗೆವೆಟ್ಟ ರಾಣಿಯ ಪರಿಚಾರಿಕೆಗಿತ್ತು ರನ್ನಪೊನ್ನೊಡವೆಗಳಂ ಪರುಠವಿಸಿ ಕಳುಪಿದಂ (ಚಕವಿ. ೪-೪೬). ೧೩. ರಂಜಿಸು; ಶೋಭಿಸು: ಆರಸ ಬಂದನು ಮಣಿಖಚಿತಕೇಸರಿಯ ಪೀಠವ ನಡರಿದನು ನಿಜಚರಣಸೇವೆಯಲೆಸೆದರೊಡಹುಟ್ಟಿದರು ಪರುಠ[ಪಾಠಾ.ಟ]ವಿಸಿ (ಕುಮ್ಮಾವಿ. ೧೦-೬); ಕಣಗಿಲೆ ದವನ ಬಿರಿದ ಕೆಂಜಾಜಿಯೆಂಬುವ ಪುಷ್ಪದಂಗಡಿ ಪರುಠವಿಸಿರ್ದುದೇನೆಂಬೆ (ವೋಪತ. ೩-೧೫). ೧೪. ಫಲಿಸುವಂತೆ ಮಾಡು: ತನ್ನುನಿಶಾಪಶಕ್ತಿಯುಂ ಪರುಠವಿಸಲಿಚ್ಛೆಯಲಿಯಾ ಮುರಹರನ ಮಾಯೆಗೆ ಸಿಲುಕಿ ಮಡಿದರು ಸಕಲಯಾದವರು (ತಿಮ್ಮಪೌ. ೧-೬೨). ೧೫. ವಿಜೃಂಭಿಸು: ಸುರಪದವನಾ ನಹುಷರಾಯನು ಪರುಠವಿಸಿ ಕೈಕೊಂಡನು (ತಿಮ್ಮಶಾಂ. ೬-೮೭). ೧೬. ಪೀಠವನ್ನಾಗಿ ಮಾಡಿಕೊಳ್ಳು: ರಕ್ಕಸವಗೆ ಖಗರಾಜಂಗೆ ಪೇಳ್ದ ಪೆಣ್ಮಕ್ಕಳು ಭೀತಿಸದಂತೆ ಚೊಕ್ಕಟವಾಗಿ ನೀ ತಳರೆಂದು ಬಳಿಕವೆ ಪಕ್ಕೆಯ ಪರುಠವಿಸಿದನು (ವೋಪತ. ೪೨-೬). **ಪರಿಠವಿಸು:** ೫. ವಡಬಾಗ್ನಿ . . . ನೆಱೆ ಪಸಿದಜಾಂಡದಲ್ಲಿ ಪರಿಠವಿಸಿ ತುಂಬಿ ಮಡಲಿಱುದ ಕತ್ತಲೆಗಡಲನುರುರೌದ್ರದಿಂ ಪೀರ್ದು (ಏಕೋಪು. ೪-೪೫). ೬. ಸಮುದ್ರವಿಜಯಮಹಾರಾಜಂ ಸ್ವಾತ್ಮೀಯ ಸಾಮಂತ ಮಹಾಸಾಮಂತ ತದಾಯಿತ ಪಸಾಯಿತ ಪ್ರಭೃತಿ ಪರಿವಾರಕ್ಕುಚಿತಾಗಾರಂಗಳಂ ಪರಿಠವಿಸಿ (ಮಹಾನೇ. ೬-೧೩೬ ವ); ಆ ದೇವರ ಅಮೃತಪಡಿಗೆ ದಾರೆಯ ನೆಱೆದು ಪರಿಠವಿಸಿ ಕೊಟ್ಟ ಪಡಿಅಕ್ಕಿ (ಎಕ. IX, ಚನ್ನಪ. ೬೫-೧೨; 1278). ೮. ಚಿತ್ರೆ ಕಾಂಚನಚಿತ್ರೆ ತ್ರಿದಿವೆ ಸುತ್ರಾಮೆಯೆಂಬ ನಾಲ್ವರ್ದೇವಿಯರಂ ದೀಪಂಗಳಿಗೆ ಪರಿ[ಪಾಠಾಂ.ರು]ಠವಿಸಿಯುಂ (ಪುಣ್ಯಾಸ್ರ. ೧೦-೧೪ ವ). ೧೨. ವಿನೋದವಿಷಯರಪ್ಪ ಕುಬ್ಜ ವಾಮನ ಬಧಿರ ಕಿರಾತಾದಿ ಜಡಜನಂಗಳುಮಂ ಪರಿಠವಿಸಿ . . . ಅಳವಿಗರಿದೆನಿಸಿ ಬಱುವಱುಗೊಟ್ಟು (ಮಹಾನೇ. ೯-೧೧೮ ವ). **ಪರುಟವಿಸು:** ೨. ವನದೊಳ್ ಶಿವಲಿಂಗಾರ್ಚನೆಯಂ ಪರುಟವಿಸಿ ಪರಮೋತ್ಸಾಹದಿಂ ನಿಜಪುರವಂ ಪೊಕ್ಕು (ಹರಿಹರ. ೪-೩೬ ವ). ೩. ಸಲ್ಲಲಿತ ರತ್ನಪ್ರಭೂಷಣಗಳ ಪರುಟ[ಪಾಠಾಂ.ಠ]ವಿಸಿದಂ ಕನಕಗಿರಿಗೆ ಕನಕಾರ್ಪಣವ ವಿರಚಿಸುವನಂತೆಯಾ ನಂದಿ ಸದ್ಭಕ್ತಿಯಿಂ ಪುರಹರಗೆ (ನಂದಿಮಾ. ೧೬-೪೩). ೪. ಹೋಗಬೇಡಲ್ಲಲ್ಲಿಯಾಯತವಾಗಿ ಬೇಗದಿ ದೇವನೊರ ತಾನಾಗುತಿದೆಯೆಂದೊಡಱುದರು ಪಡಿಯಜರು ಪರುಟವಿಸಿ (ತಂಕದಾ. ೨-೪೮). ೫. ಸತತಂ ಕುಬೇರನನು ನಚ್ಚಿನ ಕೊಟಾರಿಕೆಗೆ ಪರುಟವಿಸಿಕೊಂಡಾಂ ಬರುತ್ತೊಡಗೊಂಡು ಬಹೆನು (ಸೋಪುಚಿ. ೧-೫೩); ಬೀಡಿವರಿಗಿದು . . . ಕರುಮಾಡವಿವರಿಗಿದೆಂದು ಪರುಟ[ಪಾಠಾಂ.ಠ]ವಿಸಿದನು ಪಾಂಚಾಲ (ಕುಮ್ಮಾಅ. ೧೨-೬); ಶಿಷ್ಟರ ಪರುಟ[ಪಾಠಾಂ.ಠ]ವಿಸಿ ಕಳುಹಿದನು ಪಾವುಡಸಹಿತ ಪಾರ್ಥಿವರ ಪುರಗಳಿಗೆ (ತೊರರಾ. ೧-೬-೯). ೯. ಮನೆಯನು ಆರಗಿನಲಿ ಪರುಟವಿಸಿ ಕೊಟ್ಟು (ಕೃಷ್ಣಾಕಾ. ೧೦-೧೫). ೧೨. ಮರುಳುಶಂಕರಗೈಕ್ಯಪದವಿಯ ಪರುಟವಿಸಿ ಕೊಟ್ಟೊಲವಿನಿಂದಲಿ

(ಪ್ರಭುಲಿಂ. ೧೬-೨). ೧೭. ಹಬ್ಬುವಂತೆ ಮಾಡು; ಹರಡು; ವಿಸ್ತರಿಸು: ಧರೆಯೊಳರಸಿನಪವಂ ಸಪ್ತಾಂಗರಾಜ್ಯಮುಂ ಪರುಟವಿಸಿ . . . ಸಿಂಹಾಸನಾಸೀನನಾಗಿರ್ಪ ಪರಿಯೊಳ್ (ಲಕಚಿಂ. ೫-೮); ಪರಮಶ್ರೀ ಗುರುನಿರಂಜನಲಿಂಗನವನಿಯಂ ಪರಿರಕ್ಷಿಸಲ್ಕೆಂದು ಬಂದಖಿಳಮಹಿಮೆಯಂ ಪರುಟವಿಸಿ ತೋಜಿಂ (ಸಿದ್ಧೇಶ್ವ. ೨೫-೨೧). ೧೮. ಅಭ್ಯಾಸ ಮಾಡಿಸು; ಕಲಿಸು: ಪರುಷವಿವಳಲಿ ನಾಟ್ಯವಿದ್ಯೆಯ ಪರುಟವಿಸಿದೆನು (ಕುಮ್ಯಾವಿ. ೧೦-೨೬). [ಪರುಟವ+-ಇಸು$_3$]

ಪರುಡಿ 'ಪರಡಿ$_5$' ನೋ.

ಪರುಪು, ಪಪ್ಪು, ಪರಪ್ಪು$_3$, ಪರಿಪ್ಪು$_1$, ಪೊಪ್ಪು (ನಾ). ೧. ಒಡೆದ ಕಾಳು; ಬೇಳೆ. ೨. ಒಂದು ಬಗೆಯ ಧಾನ್ಯ; ತೊಗರಿ: ಉಭಯಂ ಪರಿವಾಣಯರಡಕ್ಕೆ ಅಕ್ಕಿ ಇಕ್ಕುಳ ಪರುಪುಪದಾರ್ಥ ತುಪ್ಪ (ಎಕ. XIV, ಶ್ರೀರಂಗ. ೨-೧೯; 1528). ೩. ತೊಗರಿ ಮುಂತಾದ ಬೇಳೆಗಳಿಂದ ಮಾಡಿದ ಒಂದು ಬಗೆಯ ಮೇಲೋಗರ; ತೊವ್ವೆ: ಪರುಪಿಗೀ ರುಚಿಯೆತ್ತಣಿಂ ಬಂದುದೋ (ಚೆಬಸು. ೫-೬೨); ದೊಕ್ಕೆಯೊಳಗಣ ಕಸುರ ಪರುಪೆನಗೆ ನೀಡೆ (ಕರಿಕ. ೬೯-೮೦). **ಪಪ್ಪು**: ೧. ಎಳ್ಳಿಗೆ ಕಡಲೆಯ ಪಪ್ಪು ಹಾಕುತ್ತಾರೆ (ರೂಢಿ). ೪. ಬೀಜ: 'ಗೇರುಪಪ್ಪು' ಪರಾ. **ಪರಪ್ಪು$_3$**: ೩. ಮುದದ ಹಪ್ಪಳ ಸಂಡಿಗೆಯುಪ್ಪಿನ ಕಾಯಿ ಪದಪು ಪರಪು ರಾಜಾನ್ನಗಳ (ದೇವಾಂಪು. ೫-೨೨೭); ಪರ್ಪು: ಪರಪ್ಪು, ಅವರೆ ಒಡಕಲಿನಿಂದ ಅಂದರೆ ಬೇಳೆಯಿಂದ ಮಾಡುವ ತೆಳ್ಳನೆಯ ಸಾರು (ಸನ್ನೂರು. ಟಿಪ್ಪಣಿ). **ಪರಿಪ್ಪು$_1$**: ೩. ಕಡಲೆಯ ಪರಿಪನುಂಬನೇ ಸುಖಿ ಜಗದೊಳು (ಲಿಂಗಪು. ೮-೨೬). **ಪೊಪ್ಪು**: ೧. ಮಗುವಿಗೆ ಕಡಲೆಯ ಪೊಪ್ಪು, ಬೆಲ್ಲ ಕೊಡು (ರೂಢಿ).

[ದೇ.॥ ತಮಿ. ಪರುಪ್ಪು, ಪಪ್ಪು; ಮಲ. ಪರಿಪ್ಪು; ತೆಲು. ಪಪ್ಪು]

ಪರುವ 'ಪರ್ಬ' ನೋ.

ಪರುವಡಿ (ನಾ). (?): ಪರ ಧನುರ್ವಿದ್ಯೆಯೊಳು ತರಪ್ಪೆಸರದ ಲಾಗಿನ ಬವರಿಯೊಳು ಮೈಸಿರಿಯ ಪರುವಡಿ ಚಾಳಿಯೊಳು ನೆರೆ ಸೂಳು ಸಾಳಿನೊಳು ಧುರದೊಳೀರ್ವರು ಗದೆಯ ಗದೆಯಿಂದೆರಗಿ ಕಾದಿದರು (ಆಸಂಂಾ. ೬-೨-೨೯). [?]

ಪರುವತ 'ಪರ್ಬತ' ನೋ.

ಪರುಶ 'ಪರುಸ' ನೋ.

ಪರುಶನ 'ಪರುಸನ' ನೋ.

ಪರುಷ$_1$ 'ಪರುಸ' ನೋ.

ಪರುಷ$_2$ (ಗು). ೧. ಗಡುಸಾದ; ಒರಟಾದ; ಬಿರುಸಾದ: ಪರುಷಗ್ರಾವಚಯಂ ಶರ್ಕರೋಪಲಂ ಕೀಟಕಂಟಕಪ್ರಕರಂ ತದ್ಧರೆಯೊಳಿನಿತ್ತಿಲ್ಲಪ ಪೋಲ್ ಮರುದಮರರ್ಸಮಜಿಂ ಭಕ್ತಿಯಂ ನೆಜಿಂ ಮೆಜಿಂದರ್ (ಪಾರ್ಶ್ವಪು. ೧೬-೧೫೩). ೨. ಕರ್ಕಶವಾದ; ಕಠೋರವಾದ; ನಿಷ್ಠುರವಾದ: ಪರುಷಸ್ತನಿತಮನಚಿರಾಂಶುರುದ್ಧಮಂ . . . ಪುಷ್ಕರಧರಶರಮಂ ಪುಷ್ಕರಾಕ್ಷನೀಕ್ಷಿಸಿ ಕಂಡಂ (ಜಗವಿ. ೧೬-೧೦೪); ಅತಿಪರುಷಘನನಿನದಯುಕ್ತಮಾಗಿಯುಂ ಅಸಾರ್ದ್ರತಾನುವಿದ್ಧಮಲ್ತು (ಚಂದ್ರಪು. ೪-೫೨ ಪ). ೩. ಕ್ರೂರವಾದ; ನಿರ್ದಯವಾದ; ಕರುಣೆಯಿಲ್ಲದ. ೪. ತೀಕ್ಷ್ಣವಾದ; ಹರಿತವಾದ. ೫. ಭೀಕರವಾದ; ಘೋರವಾದ: ನಿಷ್ಠುರಚೀರೀರವಮುಖರ ಪರುಷಕಾನನಪವಮಾನನ ಸೋಂಕನಾಸೆಗೆಯ್ಯಲ್ ಬಗೆದೈ (ಪಂಂಾಪು. ೬-೧೦). 'ಪರುಷಾಟವಿ' ಪರಾ. ೬. ಗಂಟುಗಂಟಾದ; ಜಟಿಲವಾದ. ೭. ಕೊಳೆಯಾದ; ಅಶುದ್ಧವಾದ. ೮. (ಬಣ್ಣ ಬಣ್ಣದ) ಚುಕ್ಕೆಗಳಿಂದ ಕೂಡಿರುವ; ಶಬಲವಾದ. (ನಾ). ೯. ಬಿರುಸಾದುದು; ಗಡುಸಾದುದು: "ಪರುಷಂ, ಅಸ್ನಿಗ್ಧಂ-ಈ ೨ ಬೆಟ್ಟಿತ್ತು" (ಹಲಾಯು. ೧೨೯-೯೮); ಬೆರಸಿರೆ ಕನ್ನಡದೊಳ್ ಬಂಧುರಮಾಗದು ಕಾವ್ಯರಚನೆ ಸೇ(ಬೆಣ್ಡೊ)ಡೆ ಪೀನಂ ಪರುಷತರಮಕ್ಕುಮೊತ್ತುಂಗರಡೆಯ ಮದ್ದಳೆಯ ಜರ್ಝರಧ್ವನಿಗಳವೋಲ್ (ಕವಿಗಾ. ೧-೫೩). ೧೦. ಶತ್ರು; ಹಗೆ. ೧೧. ಕಳ್ಳತನ; ಚೌರ್ಯ. ೧೨. ಧೈರ್ಯ; ಸಾಹಸ; ದಿಟ್ಟತನ. ೧೩. ಹೊನ್ನು; ಬಂಗಾರ. ೧೪. ನೈರ್ಮಲ್ಯ; ಸ್ವಚ್ಛತೆ: "ಧೈರ್ಯದೊಳು ಹೊನ್ನಿನೊಳು ಕ್ರೂರದೊಳು ಪೀಠ [ಪಾಠಾಂ. ಪೀಠ, ವೀರ] ದೊಳು ಚೌರ್ಯದೊಳು ಶುದ್ಧದೊಳು ಪರುಷಪಕ್ಕು" (ಮಂಗರಾ. ೧೫೫-೫೧). ೧೫. ದೊಡ್ಡ ಶಬ್ದ; ಗಟ್ಟಿಯಾದ ಧ್ವನಿ: "ಪರುಷಂ ಕಠೋರ ಮಹಾರುತಂ" (ಪಸ್ತುಕೋಷ. ೮೦-೩೦). ೧೬. [ಕಾವ್ಯಮೀ] ಓಜೋಗುಣವ್ಯಂಜಕವಾದ ಮಹಾಪ್ರಾಣಾಕ್ಷರ, ರೇಫ ಮೊದಲಾದ ವರ್ಣಗಳನ್ನು ಒಳಗೊಂಡ ಅನುಪ್ರಾಸ: ರಸ 'ಅಲೌಕಿಕ'ವಾದುದರಿಂದಲೇ ಅರ್ಥಕ್ಕೆ ಉಪಯೋಗಿಗಳಲ್ಲದ ಲಲಿತ, ಪರುಷ ಮುಂತಾದ ಅನುಪ್ರಾಸಾದಿಗಳು ರಸಕ್ಕೆ ವ್ಯಂಜಕವಾಗುತ್ತವೆ (ಧ್ವನ್ಯಾಲೋ. ೫೦). ೧೭. [ವ್ಯಾಕ] ಕ, ಚ, ಟ, ತ, ಪ ಮೊದಲಾದ ಅಘೋಷವ್ಯಂಜನಗಳು: ತಮಿಳುಭಾಷೆಯ ವರ್ಣಮಾಲೆಯಲ್ಲಿ ಇರುವುದು ಪ್ರತಿವರ್ಗದಲ್ಲೂ ಮೊದಲನೆಯ ಮತ್ತು ಕೊನೆಯ ವರ್ಣಗಳು ಮಾತ್ರ; ಅಂದರೆ ಪರುಷ ಮತ್ತು ಅನುನಾಸಿಕಗಳು ಮಾತ್ರ (ದ್ರಾವಿವಿ. ೨೫೫). [ಸಂ.]

ಪರುಷಕಣಿ 'ಪರುಸಗಣಿ' ನೋ.

ಪರುಷಣ 'ಪರುಸನ' ನೋ.

ಪರುಷಣಂಗೆಯ್ (ಕ್ರಿ). ಮುಟ್ಟು; ಸೋಕು: ಪರುಷಣಂಗೆಯ್ಯೆ ದೀಕ್ಷಾರ್ಥಿಗಳನಲ್ಲಿ ಚಿತ್ತರುಣಿ ವಿಸ್ಫುರಿಸೆ (ಭಾವಚಿಂ. ೧-೩).

[ಪರುಷಣ(<ಪರುಸನ)+ಕೆಯ್$_1$]

ಪರುಷನ 'ಪರುಸನ' ನೋ.

ಪರುಷರಸ (ನಾ). ಮುಟ್ಟಿದುದನ್ನೆಲ್ಲಾ ಚಿನ್ನವನ್ನಾಗಿ ಮಾಡುವುದೆಂದು ಭಾವಿಸಲಾದ ಒಂದು ಬಗೆಯ ರಸ; ಸಿದ್ಧರಸ: ಪರುಷರಸದಂತೆ ಮಾಟಕ್ಕೊಳಗಲ್ಲ ಅದು ಮುಟ್ಟಿ ಲೋಹ ಶುದ್ಧವಲ್ಲದೆ ಪುನರಪಿ ಶುದ್ಧವಾದುದಿಲ್ಲ (ಶಿವಮಂ. ಕ. ೧೮೯-೨೦); ಎಲ್ಲಿ ನೋಡಿದಡಲ್ಲಿ ಪರುಷರಸದೊಜತೆಯಿಂದೆ . . . ಕಣ್ಣೆ ಮಂಗಳವನೀವ ಮೇರುವ ನೋಡುತ್ತೈತಂದನು (ಭಕ್ತಾಜ. ೧-೧೬). [ಪರುಷ$_1$(<ಪರುಸ)+ರಸ]

ಪರುಷವಾಕ್ಯ (ನಾ). ೧. ಒರಟಾದ ಮಾತು; ಬಿರುಸಾದ ನುಡಿ: ನನ್ನಿಂದ ತಾವು ಆ ಖಳನ ಪರುಷವಾಕ್ಯಗಳನ್ನು ಕೇಳಬೇಕಾಯಿತು (ಶಾಂತಲಾ. ೧೪೨). ೨. ಒರಟಾಗಿ ಮಾತನಾಡುವವನು: ಕನಕಂ . . . ವೃಷತೌಲಿಯೊಳ್ ನಿಲೆ ಸುವೇಷಂ . . . ಪರುಷವಾಕ್ಯಂ ಪಂದೆ ಪಾಣ್ಟಂ ನರಂ (ಜಾತಕ. ೧೬-೧೮). [ಪರುಷ$_2$+ವಾಕ್ಯ]

ಪರುಷವೃತ್ತಿ (ನಾ). [ಕಾವ್ಯಮೀ] ವೃತ್ತಿಗಳಲ್ಲಿ ಒಂದು; ಓಜೋಗುಣವನ್ನು ವ್ಯಕ್ತಗೊಳಿಸುವ ವರ್ಣಗಳಿಂದ ಕೂಡಿದ ಪದರಚನೆ: ಮಾಧುರ್ಯ ಓಜಸ್ಸು ಕೋಮಲತೆಗಳನ್ನು ವ್ಯಕ್ತಗೊಳಿಸುವ ವರ್ಣಗಳಿಂದ ಕೂಡಿದ ಪದರಚನೆಗಳನ್ನು ಕಾವ್ಯಪ್ರಕಾಶಕಾರನು ಕ್ರಮವಾಗಿ 'ಉಪನಾಗರಿಕವೃತ್ತಿ', 'ಪರುಷವೃತ್ತಿ', 'ಕೋಮಲವೃತ್ತಿ' ಗಳೆಂದು . . . ಹೇಳುತ್ತಾನೆ (ಕೈಪಿಡಿ. ೨೨೩). 'ಕೋಮಲವೃತ್ತಿ' ಪರಾ. [ಪರುಷ$_2$+ವೃತ್ತಿ]

ಪರುಷವೇದಿ 'ಪರುಸವೇದಿ' ನೋ.

ಪರುಷವ್ಯಾಹರಣ (ನಾ). ೧.=ಪರುಷವಾಕ್ಯ೧. ೨. ಕರ್ಕಶವಾದ ಶಬ್ದವನ್ನು ಮಾಡುವುದು. ೩. ಕಠೋರವಾದ ಮಾತು

ಗಳನ್ನಾಡುವವನು. ೨, ೩ : ವೃಥಾ ಪರುಷವ್ಯಾಹರಣಂ ಪರಾರ್ಥ ಚರಿತಚ್ಛಾಯಾತಿದೂರಂ ದ್ವಿಜಾವರಸೇವ್ಯಂ ತೃಣರಾಜನಿರ್ದುದು (ಮಲ್ಲಿಪು. ೧೦-೫೮). [ಸಂ.]

ಪರುಷಶರೀರ (ನಾ). ಒರಟಾದ ದೇಹ : ಕಡುಗಲಿಯರವಂದಿರ್ ಪರುಷಸ್ವರ ಪರುಷನಯನ ಪರುಷಶರೀರರ್ (ಕಾವ್ಯಾವ. ೮೬೬). [ಪರುಷ$_2$ + ಶರೀರ]

ಪರುಷಸ್ವರ (ನಾ). ಕರ್ಕಶವಾದ ಧ್ವನಿ : ಕಡುಗಲಿಯರವಂದಿರ್ ಪ[ಪಾಠಾಂ. ಪು]ರುಷಸ್ವರ ಪರುಷನಯನ ಪರುಷಶರೀರರ್ (ಕಾವ್ಯಾವ. ೮೬೬). [ಪರುಷ$_2$ + ಸ್ವರ$_2$]

ಪರುಷಾಕ್ಷರ (ನಾ). = ಪರುಷ$_2$ ೧೭ : ತಮಿಳುಭಾಷೆ ಮಾತ್ರ ಬಹುಶಃ ೧೨-೧೩ನೆಯ ಶತಮಾನದವರೆಗಾದರೂ ಪರುಷಾಕ್ಷರವನ್ನೇ ಪಡೆದಿದ್ದಿತೆನ್ನ ಬಹುದು (ದ್ರಾವಿವಿ. ೨೬೩). [ಪರುಷ$_2$ + ಅಕ್ಷರ]

ಪರುಷಾಟವಿ (ನಾ). ಭೀಕರವಾದ ಅಡವಿ; ಘೋರವಾದ ಅರಣ್ಯ : ಪರುಷತರಶರಭಕೇಸರಿ ವಿರಾವದಿಂ ಕಿವುಡುವಡಿಸುತುಂ ದೆಸೆಗಳನಾ ಸರಸಿಯು ತಡಿವಿಡಿದಿರ್ದುದು ಪರುಷಾಟವಿಯೆಂಬ ಪೆಸರರಣ್ಯಮುಗಣ್ಯಂ (ಚಂದ್ರಪ್ರ. ೫-೪೬). [ಪರುಷ$_2$ + ಅಟವಿ$_2$]

ಪರುಷೆ 'ಪರಿಸೆ$_1$' ನೋ.

ಪರುಷೇಕ್ಷಣ (ನಾ). ೧. ಕ್ರೂರವಾದ ನೋಟ; ಭಯಂಕರವಾದ ದೃಷ್ಟಿ. ೨. ಕ್ರೂರವಾದ ನೋಟವನ್ನುಳ್ಳವನು : ಅಟ್ಟಾಸುರರಧಿಕಕೋಪಪಾಟಲಪರುಷೇಕ್ಷಣರೆನಿಸಿ ದೃಷ್ಟಿಯುದ್ಧಂಗೆಯ್ದರ್ (ಗದಾಯು. ೮-೨). [ಪರುಷ$_2$ + ಈಕ್ಷಣ]

ಪರುಷೋಕ್ತಿ (ನಾ). = ಪರುಷವಾಕ್ಯ ೧. [ಪರುಷ$_2$ + ಉಕ್ತಿ]

ಪರುಷೋಕ್ತೆ (ನಾ). ಕಠಿನವಾದ ಮಾತುಗಳನ್ನಾಡುವವಳು : ಅತಿಪರುಷೋಕ್ತೆ . . . ದುಸ್ಥಿತಿಯುತೆ ಮಾರುತಪ್ರಕೃತಿಯುಳ್ಳುವಳ್ (ಮದಕಿ. ೫-೫). [ಸಂ. ಪರುಷೋಕ್ತಾ]

ಪರುಸ, ಪರಿಸ$_1$, ಪರುಶ, ಪರುಷ$_1$, ಸ್ಪರುಶ, ಸ್ಪರುಷ (ನಾ). ೧. ಸ್ಪರ್ಶ; ಸೋಂಕು : "ಪರುಸ(ಷ)-ಸ್ಪರ್ಶ" (ತದ್ಭವ ಕೋ. ೨೫); ಸ್ಪರ್ಶ-ಪರುಸ (ಶಮದ. ೨೭೨ ಪ್ರಯೋ). ೨. ತನ್ನನ್ನು ಸೋಕಿದ ಇತರ ಲೋಹಗಳನ್ನು ಚಿನ್ನವನ್ನಾಗಿ ಪರಿವರ್ತಿಸುವುದೆಂದು ಭಾವಿಸಲಾದ ಒಂದು ಬಗೆಯ ಶಿಲೆ; ಸ್ಪರ್ಶಮಣಿ : ವಿಶ್ರುತ ಮುನಿರೂಪದ ಪರುಸಂ (ಎಕ. V, ಬೇಲೂರು. ೧೯೨-೪೨; ಸು. 1165); ಸಿರಿ ಪರುಸ ಕಲ್ಪತರು ಸುರಧೇನುಗಳು ಬಂದ ಹರುಷದಿಂ ನೂರ್ಮಡಿಯೆನಿಪ್ಪ ಸಂತಸದಿಂದ . . . ಒಲಿದು ಮಾಳ್ಪೆನಾ ಕಜ್ಜಮಂ ಎನೆ (ತಿರುರ. ದೇ. ೧೧-೬); ಪರಲೆಲ್ಲಂ ಮುತ್ತುಮಾಣಿಕಂ ಪಾಸಱೆಗಳ್ ಪರುಸಂಗಳ್ (ಶಮದ. ೬೯ ಪ್ರಯೋ); ಪರುಸ[ಪಾಠಾಂ. ಷ]ವಿಲ್ಲದ ಭೂಮಿ . . . ಹೊಂದಾವರೆಗಳಿಲ್ಲದ ತಿಳಿಗೊಳಂಗಳವಿಲ್ಲ ಮತ್ತಲ್ಲಿ (ಸಾಳ್ವಭಾ. ೧-೫೮). **ಪರಿಸ$_1$** : ೨. ಪರಿ[ಪಾಠಾಂ. ರು]ಸದೊರೆಗಳ್ ಸುವರ್ಣಕ್ಕೊರೆಪಕ್ಕೆಡೆಯಾಗಿ ತೋರ್ಪವೊಲ್ ಕಪಿಗಂ . . . ನಿರಪೇಕ್ಷ ಮನಿಸೆ ನೆಱೆದಿರವೇಡಾ (ಚಂದ್ರಪ್ರ. ೧-೪೬); ಬಗೆದ ಭೂಸುರರ್ಗಿಂದನಿಸಾ ಪರಮಪಾವನನೆ ಮಿಗುವ ಕುಲಮಂತೆನಲ್ ಪರಿಸ [ಪಾಠಾಂ. ರುಷ] ಸೋಂಕಿದ ಲೋಹದಂತೆ (ಆರಾಜ. ೧-೧೩-೨೬); ಆ ಲೋಹವೊಮ್ಮೆ ಪರಿಸಕ್ಕೆ ತಾಗಿ ಪಡೆಯುವುದು ಸ್ವರ್ಣರೇಖೆ (ಮುಕ್ತಕಂ. ೧೬-೧೫). **ಪರುಶ** : ೨. ಪರುಶ ಕಬ್ಬಿಣಕ್ಕೆ ಸ್ಪರುಸ ಮಾಡಿಧಾಂಗ (ಮೂರ್ತಿಕಾ. ೪೬-೧೩). **ಪರುಷ$_1$** : ೧. ಇವರ ನೋಟಪರುಷದಿಂದ ಮಾಡಲಾಂಬಿಕೆ ತಾಯಿಯವರು ನರದೇಹನಾದಾರು (ಕಾಲಸಂ. ೧೧೪-೧); ಬಾನು ಸುರಿದ ಮಳೆಯು ಹನಿಯ ಪರುಷವು ತಾನೆ ನೆಲಕೆ ತಂದ ರೋಮಹರುಷವು (ಬಾಸಿಗ. ೩೧-೬). ೨. ಅಪ್ಪರ ವಚನ ಪರುಷ ಕಂಡಯ್ಯಾ (ಬಸವ. ೧೭೧); ಪರುಷಂ [ಪಾಠಾಂ. ರಶುಂ] ಪೊರ್ದಿದ ತತ್ಸಿದ್ಧರಸಂ ರಸಯಿಸಿದ ಲೋಹದೊಂದಂದಮನೇಂ ಧರಿಯಿಸಿದನೊ . . . ವಿಪ್ರಂ (ಪರ್ಧಪು. ೧೬-೨೧) : ಲೋಹದ ಗುಣವನಪಸುವುದೆ ಪರುಸಂ (ಬಸವು. ೩೦-೨೬); ನಿರ್ದೈವರಂಗೈತಳಕೆ ಬಂದರೆ ಪರುಷ ಪಾಷಾಣ (ಕುಮಾರ್ಧ್ರೋ. ೧೪-೪೬); ಪರುಷಂ ಮುಟ್ಟಿ ಸುವರ್ಣವಾದ ಬಳಿಕಂ ಕಾರ್ಪೋನ್ನದೆಂದೆಂಬರೇ (ತ್ರಿಪುವಿ. ೪೩-೯). **ಸ್ಪರುಶ** : ೧. ರೂಪದಲಿ ಕಂಗಳು ಶ್ರೋತ್ರ ಶಬ್ದದಲಿ ಸ್ಪರುಶದಲಿ ತ್ವಚವಿರಲು (ನಿಭಾಗ. ೨-೧-೪೭); ಆ ಸ್ಪರುಶವೆ ಮೃದುವಾದಿ ಸುಪದಾರ್ಥವು (ಚಟಪು. ೬೧-೫೬). **ಸ್ಪರುಷ** : ೧. ಪರುಶ ಕಬ್ಬಿಣಕ್ಕೆ ಸ್ಪರುಷ ಮಾಡಿಧಾಂಗ (ಮೂರ್ತಿಕಾ. ೪೬-೧೩). ℙ ಸಕಾರಯುಕ್ತವಾದ ಈ ರೂಪಗಳು ಅಪರೂಪದ ತದ್ಭವರೂಪಗಳಾಗಿವೆ.

ಪರಿಸದ ಮೊರಡಿ = ಸ್ಪರ್ಶಶಿಲೆಯ ಗುಡ್ಡ; **ಪರುಷದ ಬೆಟ್ಟ** : ಪರಿಸದ ಮೊರಡಿ ಪರಿಸ ಸಿದ್ಧರಸದ ಬಲ್‌ದೊಱೆ . . . ಮೆಱೆಗುಮಾಗಿರಿತಟದೊಳ್ (ಶಬಸಂ. ೩-೩೦). **ಪರಿಸದ ಶಿಲೆ** = ಸ್ಪರ್ಶಮಣಿ : ಪರಿಸದ ಶಿ[ಪಾಠಾಂ. ರುಷದ ನಿ]ಲೆ ಸಿದ್ಧರಸದ ನಿರ್ಜರೆ . . . ಸುರಭಿಯ ಹಿಂಡಿನ ಮೃಗವಿರಲೊಪ್ಪುತಾ ಸುರಶಿಖರಿ (ಶ್ರೀಪಾಲ. ೧-೩೩). **ಪರುಷದ ಪುತ್ಥಳಿ** = ಸ್ಪರ್ಶಶಿಲೆಯ ವಿಗ್ರಹ; ಸ್ಪರ್ಶಮಣಿಯ ಪ್ರತಿಮೆ : ಪರುಷದ ಪುತ್ಥಳಿಗೆ ಕಬ್ಬುನದ ಆಭರಣಗಳುಂಟೇ ಅಯ್ಯಾ (ಅಪಚಂ. ೧೫೪-೭೦೪). **ಪರುಷವಾಗು** = ಸ್ಪರ್ಶಮಣಿಯಾಗು : ಗುರುಚರಣವ ಪೂಜಿಸಿ ಎನ್ನ ಹಸ್ತಂಗಳು ಪರುಷವಾದುವು . . . ಗುರುಚರಣವ ನೆನೆದು ಎನ್ನ ಮನ ಪರುಷವಾಯಿತ್ತು (ಅಖಂಡೇ. ೨೩-೧೮). **ಪರುಸದ ಕಣಿ, ಪರುಶದ ಕಣಿ, ಪರುಷದ ಕಣಿ** = ಪರಿಸದ ಶಿಲೆ : ಕಲ್ಲೆಲ್ಲಂ ಪರುಸದ ಕಣಿ . . . ಉದಕಮವೆಲ್ಲಂ ಕೇಳ್ ನೃಪತಿ ಪಂಪೆಯೊಳ್ ಸಿದ್ಧರಸಂ (ಉದ್ಭಟ. ೩-೫೮); ಪರುಶದ ಕಣಿಯೆನಿಪರುಭಯ ಕೇತಗೊಂಡಂಗಳು (ಎಕ. VI, ತರೀಕೆ. ೬೧-೪೨; 1154 ?); ಶರಣರ ಪರುಷದ ಕಣಿಯಾಗಿ ನಿತ್ಯಸುಖಿಯಾಗಿ . . . ಇರ್ಪುದು (ಬಸರ. ೪-೫೩); ಎನ್ನ ಪರುಷದ ಕಣಿಯೆ ಗುಣಿಯೇ . . . ನೀನಿಂದು ಬಯಲಾದ್ಯೆ (ಬಸವು. ೩೬-೨); ಎಸೆವ ಪರುಷದ ಕಣಿಗಳಗ್ಗದ ವೀಧಿ ವೀಧಿಯಲಿ (ಕೌಶಾ. ೩೯-೬). **ಪರುಸದುಪಲ** = ಪರಿಸದ ಶಿಲೆ : ಈಡಾಡಿದನು ಮುನಿಪತಿಯಿಂದ್ರನ್ಮೈರಾವತವ . . . ಬಿಳಿಯ ಹಯವನು ಪರುಸದುಪಲವನು (ಸಂಭವ. ೫-೬೮).

[<ಸಂ. ಸ್ಪರ್ಶ./ಪ್ರಾ. ಪರಿಸ, ಪರಿಸ]

ಪರುಸಕಲ್ಲು 'ಪರುಸಗಲ್' ನೋ.

ಪರುಸಗಣಿ, ಪರುಷಕಣಿ (ನಾ). = ಪರುಸ ೨ : ಸುರಭೂಜಾರಾಮದಿಂದಂ . . . ಪರುಸಗಣಿಗಳಿಂದಂ ಮಹಾಶೋಭೆಯುಂಬೆತ್ತಿರದಾದಂ ರಾಜಿಸಿತ್ತಾ ನಿರುಪಮವರಶೈಲಂ (ಉದ್ಭಟ. ೧೨-೧೨೧). **ಪರುಷಕಣಿ** : ಮಟುಜವಣಿ ಪರುಷಕಣಿ . . . ಸಿದ್ಧಲೇಪಾದಿ ಸುವಸ್ತುಗಳನೇಕಮಾಗಿ ಅಲ್ಲಿಯಣ ಶಿವಭಕ್ತರಿಗೆ ಸುಕೃತಾನುರೂಪದಿಂದಾನಂದಕರಗಳಾಗಿರ್ಕುಂ (ವಿವೇಕ. ೨೧೦). [ಪರುಸ + ಕಣಿ$_2$]

ಪರುಸಗಲ್, ಪರುಸಕಲ್ಲು, ಪರುಸಗಲ್ಲು (ನಾ). = ಪರುಸ ೨ : ಅದೊಂದು ನೀಲಪರ್ವತಂ . . . ಸಿದ್ಧರಸದ ಮಡುವಿಂ, ಪರುಸಗಲ್ಗಳಿಂ, ಮನೋಜ್ಞಂ (ರಾಮಾಶ್ವ. ೭೨-೨೯). **ಪರುಸಕಲ್ಲು** : "ಪರುಸಕಲ್ಲು-ಸ್ಪರ್ಶಶಿಲಾ. ಸ್ಪರ್ಶಮಣಿ, ಸೋಂಕಿದುದನ್ನು ಚಿನ್ನವನ್ನಾಗಿಸುವ ಕಲ್ಲು" (ಕಸ್ತೂ. ಕೋ. ೫೯೦). **ಪರುಸಗಲ್ಲು** : ಒಂದೊಂದೂ ಮಣ್ಣಿನ ಕಣ ಪವಿತ್ರವಾಗಿವೆ; ಬಂದವರನ್ನೂ ಹೊನ್ನಾಗಿ ಮಾಡುವ ಪರುಸಗಲ್ಲು

ಗಳಾಗಿವೆ (ಸಪತಿ. ೧೩೦). [ಪರುಸ + ಕಲ್ಲ್]

ಪರುಸಗಲ್ಲು 'ಪರುಸಗಲ್' ನೋ.

ಪರುಸನ, ಪರಿಸನ, ಪರುಶನ, ಪರುಷಣ, ಪರುಷನ, ಸ್ಪರುಶಣ, ಸ್ಪರುಶನ (ನಾ). ೧. ಸೋಂಕು; ಸ್ಪರ್ಶ: ಪರು[ಪಾಠಾಂ.ರಿ]ಸನ ನೇಮಮನೆಸಗುತ್ತುರುತರ ಮುದಮಾಳ್ದು ಶರಣನಡಿದಾವರೆಗಾದರಿಂ ನಸುಬಾಗುತೆ ನಿಂದಿರೆ (ವೃಷವಿ. ೪೧-೨೪). **ಪರಿಸನ:** ೧. "ಪರಿಸನ-ಸ್ಪರ್ಶನ" (ತದ್ಭವಕೋ. ೨೪); ನಿನ್ನ ಶಿವಲಿಂಗಮೂರ್ತಿಯನಮರಕುಲ ಮೆಲ್ಲಮುಂ ತಮ್ಮ ಕರದಿಂದೆ ಪರಿಸನಮನೊಲವಿನಿಂ ಮಾಡಿ ಪೂಜಿಸಿ (ಅರಾಚ. ೧-೩-೧೫). **ಪರುಶನ:** ೧. ಪ್ರಥಮದಲ್ಲಿ ಪರುಶನ [ಪಾಠಾಂ. ಪರುಷ, ಸ್ಪರ್ಶನ]ವೆಂಬ ಪರುಶನಗುಣದಿಂದ ಪಾದೋದಕ (ಚನ್ನವ.ಕ. ೬೪೧-೧೪೪೧); ಗೌರೀವಲ್ಲಭಾಯ ನಮೋಯೆನುತ ಮೂಱುಸೂಳುಕೈಮುಟ್ಟ ಪರುಶನವನಾಚರಿಸಿ ವಂದಿಸಿ (ಬಸಪು. ೮-೮); ಬೆಮರ ಬಿಂದು ಗಡಣಂಗಳವುಮೊಡನೆ ದರುಶನ ಪರುಶನದಿನೊಗೆಯೆ (ಸಿದ್ಧೇಪು. ೨೩-೩೦); ಲಿಂಗವೇ ದರುಶನವು ಲಿಂಗವೇ ಪರುಶನವು (ಸರ್ವಜ್ಞ. ೧೫೦). **ಪರುಷಣ:** ೧. 'ಪರುಷಣಂಗೆಯ್' ಪರಾ. **ಪರುಷನ:** ೧. ಪರುಷನದಿಂ ಶೀತೋಷ್ಣವನಱಿದು ಇಚ್ಛೆಯ ಕಾಲವನಱಿದು ಪರುಷನದಿಂ ಲಿಂಗ ಪರುಷನಕ್ಕೆ ಅರ್ಪಿತವ ಮಾಡುವಲ್ಲಿ ಸ್ಪರ್ಶನೋದಕವು (ಉರಿಶಿ.ಕ. ೧೧೭-೧೮೭); ಪರುಷನದ ದೇವರನು ಬಳಸಿ ಬಳಸಿ ಬರುತ್ತ . . . ನಲಿವು ತಾವುಗಳಿರಲು (ಬಸಪು. ೬೦-೩೨); ಪರುಷವಂತಂತೆ ಶಿಷ್ಯಂಗೆ ಗುರುವಿನ ಪರುಷನವೆ ಮೋಕ್ಷ (ಸರ್ವಜ್ಞ. ೯೬). **ಸ್ಪರುಶಣ:** ೧. ಹರಿಕರ ಸ್ಪರುಶಣದೊಳೆದ್ದನುಜನಂ ನೋಡಿ (ತುರಂಗ. ೬೪-೩೮). **ಸ್ಪರುಶನ:** ೧. "ರಣಮುಂ ಮುಟ್ಟುರ್ಪುದುಂ ತಾಂ ಸ್ಪರುಶನಮೆನಿಕುಂ" (ನಾನಾರ. ೧೫೬). ೨. [ವೀಶೈ] ಗುರುವು ಶಿಷ್ಯನಿಗೆ ಕೊಡುವ ದೀಕ್ಷೆಗಳಲ್ಲಿ ಒಂದು: ಶಿಷ್ಯಮಸ್ತಕದೊಳಂ ದಕ್ಷಿಣಹಸ್ತಮಂ ಮಡಗುತ ವರಶಿವನನಾವಾಹನಂ ಮಾಡುವಾ ದೀಕ್ಷೆ ಸ್ಪರುಶನಂ (ವೀಶೈಪು. ೬-೬-೬೫). [<ಸಂ. ಸ್ಪರ್ಶನ]

ಪರುಸವೇದಿ, ಪರುಷವೇದಿ (ನಾ). ೧. ತನ್ನನ್ನು ಸೋಕಿದ ಇತರ ಲೋಹಗಳನ್ನು ಚಿನ್ನವನ್ನಾಗಿ ಪರಿವರ್ತಿಸುವುದೆಂದು ಭಾವಿಸಲಾದ ಒಂದು ಬಗೆಯ ಶಿಲೆ; ಸ್ಪರ್ಶಮಣಿ: ಮೇರು[ವ] ಪೊನ್ . . . ಪರುಸವೇದಿಯ ಕಣಿ ಭಂಡಾರದೊಳುಂಟೆನೆ ಕುಡುವನಿವಾರಿತ ದಾನಕ್ಕೆ ಪೋಲ್ವರಾರ್ ಬಡ್ಡಗನಂ (ಪಂಪಭಾ. ೧-೨೮); ಮಾಸಿದ ಪರುಸವೇದಿಯಂತೆ (ರೇವಣ: ೫-೫೦). **ಪರುಷವೇದಿ:** ೧. "ಪರುಷವೇದಿ – ಸ್ಪರ್ಶವೇದಿ = ಲೋಹವನ್ನು ಚಿನ್ನ ಮಾಡುವ ಕಲ್ಲು" (ತದ್ಭವಕೋ. ೨೫); ಕಬ್ಬುನ ಪರುಷವೇದಿಯಾದರೇನು ಕಬ್ಬುನ ಹೋಗದೊಡಾ ಪರುಷವದೇಕೊ (ಬಸವ. ೮೦೦); ಪರಮಪವಿತ್ರನಂ ಪರುಷವೇದಿಯ ತೊಟ್ಟಿಲೊಳಿಟ್ಟು . . . ಹೋಗುಳಮಂ ಶ್ರುತಿಗೂಡಿ ಪಾಡಿದರ್ (ಅನಂಪು. ೬-೩); ವರಕರತಳಸ್ಪರ್ಶನಂ ವಿಸ್ತರಿಸುವಡೆ ತಾಂ ಪರುಷವೇದಿ ಗಳಿರವನಘನಂಘ್ರಿಪ್ರಸಂಗತಿ ಮುಕ್ತಿಗಾಗರವು (ಬಸಪು. ೩೧-೧೯). ೨. ಇತರ ಲೋಹಗಳನ್ನು ಚಿನ್ನವನ್ನಾಗಿ ಪರಿವರ್ತಿಸುವ ಸಿದ್ಧಿಯ ಸಾಧನೆ: ಪರುಷವೇದಿಯ ಸಾಧಿಸಹೋದರೆ ದಾರಿದ್ರ್ಯ ಘನವಾಯಿತ್ತು (ಅವಚಂ. ೧೦೧-೪೫೬); ಪರುಷವೇದಿಯ ಬಲ್ಲ ಪಿರಿಯ ಸಿದ್ಧರಿಗತಿಪಿರಿಯ ನೆನಿಸುವ ಖರ್ಪರನು (ಭೈರವಸಾ. I, ೩೨೫). [<ಸಂ. ಸ್ಪರ್ಶವೇದಿನ್]

ಪರುಸೆ 'ಪರಿಸೆ' ನೋ.

ಪರೂಷಕ (ನಾ). ೧. ಒಂದು ಬಗೆಯ ಹಣ್ಣಿನ ಮರ. ೨. ಒಂದು ಬಗೆಯ ಬೆತ್ತ; ವಾನೀರ; ಹಬ್ಬೆ: "ಪರೂಷಕಾಹ್ವಯಂ ಶಾಖಾಳಂ" (ಪಸ್ತುಕೋ. ೩೪-೧೦). [ಸಂ.]

ಪರೂರ್ (ನಾ). ಒಂದು ಊರಿನ ಹೆಸರು: ಪರೂರ ಎಟ್ಟದಿಮ್ಮರು ಸಲಿಸುವೋರ್ (ಎಕ. III, ನಂಜನ. ೬೮-೬; ಸು. 870?). [?+ಊರ್]

ಪರೆ$_1$, ಹರೆ (ಕ್ರಿ). ೧. ಹರಡು; ವ್ಯಾಪಿಸು; ವಿಸ್ತರಿಸು: "ಪರೆ—ಪ್ರಸಾರಣೇ (ಹರಡು), ಕಾಲ್ಯೇ ಚ (ಬೆಳಗಾಗು)" (ಶಮಧಾ); ಪರೆದಿರೆ ರಾಗಂ ತನ್ನೊಳ್ನಿರಂತರಂ ಗಗನವಿವರಮೊಪ್ಪಿತ್ತಾದಂ ವರಪಾರಿಜಾತಕುಸುಮೋತ್ಕರ ಸಾಂದ್ರಪರಾಗವಿಸರ ಪಿಂಜರಿತಂಬೋಲ್ (ಕವಿರಾ. ೧-೧೦೨); ವೀಜನ ಸಾವು ಕತೆಯಾಗಿ ಪರೆದುದು ಮೂಱುವೀ ಲೋಕದೊಳಗೆಲ್ಲ (ಸೌಇಇ. IX-i, ೩೧-೧೫ ; 966); ಪುಸಿನುಡಿಯಂ ಮದಿಯಜನಕಂ ಸುಡಿದಂದು ಜನಾಪವಾದವೆಡ್ಡೆಸೆಗಮನರ್ಗಳಂ ಪರೆಗುಂ (ಪಂರಾಮಾ. ೬-೧೧೪); ಹರನ ಶರಭಂಗಳು ನರಲೋಕ ದೇವೇಂದ್ರರು ನೆರೆದು ಪರೆದು ವಿಜ್ಞಳನ ಪುರದ ಪಲವು ರಾಜವೀಧಿಗಳೊಳು ಸುಳಿತಪ್ಪಾಗಳು (ಬಸರ. ೮-೭೦). ೨. (ಬಳ್ಳಿ ಅಥವಾ ಬೇರಿನಂತೆ) ಹಬ್ಬಿಕೊಳ್ಳು; ಹಬ್ಬು: ಪವಳದ ಬಳ್ಳಿಯ ತುಱುಂಗಲ್ಪವಣೆಲ್ಲದೆ ತಳ್ತು ಬೆಳೆದು ಕುಡಿವಿಟ್ಟ ಪರಾರ್ಣವತಟದೊಳ್ಪರೆದಪುದೆಂಬವೊಲೆಸೆದತ್ತು ಸಾಂದ್ರಸಂಧ್ಯಾರಾಗಂ (ಕಾದಂಪು. ೨೬೩); ಸಭಾಂತರಾಳಮಂ ಸುರಭಿಶರಾಂಗದೀಪ್ತಿ ಪುದಿಯಲ್ ಯಮುನಾನದಿಯೊಳ್ ಸುಶ್ಯೆವಲಂ ಪರೆದವೊಲೊಪ್ಪಿ ತೋಱೆ (ನೇಮಿಪು. ೮-೨); ದೆಸೆಯೆಂಟಂ ಸಿಟ್ಟುಸುತ್ತಗ್ಗಳಮೆನೆ ಪರೆದಿರ್ಪಳ್ಗೆಗೊಂಬೇಟ್ಟಿಯಿಂದಾಗಸಮಂ ಪೊತ್ತಿರ್ಪ ಮೇಲ್ಮೊಂದಿನ . . . ವಟಭೂಜಾತಮಂ ಕಾಂತೆ ಸಾರ್ದಳ್ (ದಶಕು. ೨-೪೬); ಥಳಥಳಿಸಿ ಬಳೆದು ಬಳ್ಳಿವರಿದು ಪರೆದು ಪಸರಿಪ ಕಟಾಕ್ಷರುಚಿರರುಚಿಯೆಂಬ ವದನವಿಧುವಿಮಳಪ್ರಭಾಪಟಲಂ (ರಾಜಶೇ. ೭-೧೭೫). ೩. ಚೆದರು; ಹರಿ: ನೃತ್ಯವಾದ್ಯಗೀತಾತೋದ್ಯಂಗಳೊಳ್ ಕಿಱುದುಂ ಬೇಗಮಿರ್ದೋಲಗಮುಮಂ ಪರೆಯಲ್ಕೇಱುದ್ದು (ಪಂಪಭಾ. ೩-೮೧ಪ); ಪರಭೂಪಾಳಾನ್ಧಕಾರಂ ಪರೆಯೆ (ಸೌಇಇ. IX-i, ೧೧೮-೧೯; ಸು. 1057); ಪೇರೋಲಗಮಂ ಪರೆಯುವೇಳ್ದೆಲ್ಲರಂ ಕಳುಪಿ (ಬಸರ. ೬-೩೭); ನಿಜಪಿತನ ಜನನತಿಮಿರಂ ಪರೆಯೆ . . . ಸೌಂದರಗಣಾಧೀಶನೆಂದೆಂಬ ದಿನಮಣಿ ವಿರಾಜಿಸುತ್ತಿರ್ದಂ (ಸೌಂದಪು. ೫-೪೨). ೪. ಇಲ್ಲವಾಗು; ಹೊರಟುಹೋಗು: ನಿನ್ನ ಮರುಳ್ತನಕ್ಕೆ ಮುನ್ನಮೆ ಬೇಸತ್ತು ಬಿಟ್ಟು ಪರಿಗ್ರಹಮೆಲ್ಲಂ ಪರೆದು ಪೋದುದು (ಪಂಚತಂ. ೧೩೧-೪); ನಿಷಧನಗದ ನೆಗೆದ ಕೆಂಬೊಳಸಿನೊಳ್ ಪಳಂಚೆ ರಂಜಿಸಿದ ಸಂಜೆ ಪರೆಯೆ (ಪಂರಾಮಾ. ೧-೭೧ ಪ); ಕಟಿದ ಸುಖಂಗಳಂ ಪರೆದ ಜವ್ವನಮಂ ದೊರೆಕೊಳ್ಳದರ್ಥಮಂ . . . ಮಗುಟಾಸೆ ಮಾಡಿಯುಮ್ಮಳಿಸುವರೇಕೆ ದುರ್ಮತಿಗಳ್ (ದಶಕು. ೧೮-೨೬); ಬಿಸಿ ವಡೆದಾ ಸರೋವರದಲ್ಲಿ ಮಿಂಗಳು ಬಿಸಿ ತಾಗಿ ಬಾಯ್ವಿಡುವುದನು ಅಸಿಯಳು ಮಱುಕದಿಟ್ಟಯಲಿ ನೋಡಲ್ಕಾಗ ಪಸಿ ತಾಪ ಪರೆದುದಾ ಕ್ಷಣದಿ (ಮೋಹತ. ೯-೪೫). ೫. ನಾಶವಾಗು; ಅಳಿ: ಮಲಹರಾಣುಸ್ಮರಣಮಂ ನೆಗಳ್ದೊಡಲ್ಲದಾ ಕಲುಷಂ ಪರೆಯುದು (ಪದ್ಮರಾ. ೧೧-೯೮); ಅಸುರರ ಸಂತತಿಯುಂ ಮುಂ ತೀವಿದ ಕೃತಕಧ್ವಾಂತಮುಮಾ ಜಯಭೂಪತಿ ದಿನಕರಶರಮಂ ಬಿಡಲೊಡನೆ ತಾಂ ತೆಕ್ಕನೆ ಪರೆದತ್ತು (ಜಯಕಾ. ೬-೩೩). ೬. ಕೆದರು; ಅಸ್ತವ್ಯಸ್ತವಾಗು; ಹರಡಿಕೊಳ್ಳು: ಪೊದಟ್ಟ ಕಬರೀಭರಂ ಪರೆದು ಪರ್ವೆ (ಅಪಿಪು. ೧೨-೧೪); ಲಲಾಟದೊಳ್ಪರೆದ ಕುರುಳ್ಗಳಂ ವಿರಹವಿಹ್ವಲೆಯಾಗಿ ಲತಾಂಗಿ ತಾಳ್ದುವಳ್ (ಕಾದಂಉ. ೩೩೩). ೭. ಕಲಸಿಕೊಳ್ಳು; ಕದಡಿಹೋಗು: ಬರೆದ ವಿಚಿತ್ರಪತ್ರನಿಚಯಂ . . . ಶಶಿಕಾಂತದ ಕೇರ್ಗಳ ನೀರ್ವೊನಲ್ಗಳಿಂ ಪರೆಯೆ (ಪಂರಾಮಾ. ೧-೧೧೭); ಪರೆದ ತಿಳಕಮನೆ ಕಂಡೆಸೆದಿರೆ ಕೊಟ್ಟುದ್ದಂಡಸಾದದುಗುರ್ಗನ್ನಡಿಯೊಳ್ ತರಳಾಕ್ಷಿ ತಿರ್ದಿದಳ್ ಚೆಚ್ಚರದಿಂ – ಮತ್ತೊಂದು ಪಾದ

ದುಂಗುಟದಿಂದಂ (ಅರ್ಧನೇ. ೩-೧೦೧); ಬರೆಪದೆ ಬಣ್ಣವು ಪರೆಯೆ ಕಪೋಲದಿಂದುರುಳಿದ ಕಂಬನಿಗುರುತಿದೊ ತಿಳಿಯಾ (ಶಾಕುಂತ. ೮೯ ಅಡಿಟ). ೮. ಚೆಲ್ಲಾಪಿಲ್ಲಿಯಾಗಿ ಬಿದ್ದಿರು; ದಿಕ್ಕಾಪಾಲಾಗಿರು: ಕರುಣದಿಂದೆ ಕುಂಚದ ಕೋಲೊಳ್ ಪರೆದಿರ್ದ ಪಣ್ಗಳಂ ಕೂಸಿನ ಮುಂದೆ ಸಾರ್ಚುತ್ತಂ (ನಡ್ಡಾರಾ. ೯-೧೯); ಬೀರರ ಚೆನ್ನರ ಸಂದ ಚೆನ್ನಪೊಂಗರ ತಲೆ ತಾಟಪಣ್ ಕೆದಱದಂತೆ ನಿರಂತರಮಾಜಿರಂಗದೊಳ್ ಪರೆದಿರೆ (ಪಂಪಭಾ. ೮-೧೦೬); ತುಱುಕಾರ್ತಿಯರ್ ತಿಱಿದು ತಂದು ಪಾಱುತನಕ್ಕೆ ಪರಪೆ ಪರೆದು ಕೊರಗಿರ್ದ ಕಱಯ ನೆಯ್ದಿಲ್ಗಳಿಂ (ಲೀಲಾವ. ೫-೫೯ ಪ); ನೆತ್ತರ್‌ವೆರಸಿ ಪರೆದ ಮುತ್ತುಗಳು ತನ್ನ ಬರವಿಂಗೆ ವನದೇವತೆಯಿಟ್ಟ ರತ್ನಾಂಜುಳಿಗಳಂತಿರೆ (ಸಂಬರ. ೧೮-೨೨); ಪರೆದಿರ್ಪ ನವಗ್ರಹಮಂ ಕರದೊಳ್ಪಳೆದಿಳೆಗೆ ತಂದು ಬಲ್ಪಂ ತೋರ್ಪಂ ತರಲಾತನಂಗುಲಿಗಳೊಳ್ ಪಿರಿದುಂ ನವರತ್ನದುಂಗುರಂ ಸೊಗಯಿಸುಗುಂ (ತ್ರಿಪುವಿ. ೧೮-೪೬). ೯. ಆಗಲವಾಗು; ಅರಳು; ಬಿಚ್ಚಿಕೊಳ್ಳು: ಕೂಡಿ ಮಣಿಭೂಷಣ ಧ್ವನಿಗಾಡುವ ಸೋಗೆಗಳ ಪರೆದ ಪೀಲಿಯ ಕಣ್ಣಿಂ ಮಾಡವ ಕನ್ಯಕೆಯಂ ನಡೆ ನೋಡಲ್ ಕಣ್ದೆಱೆದುದೆಂಬಿನಂ ಸೊಗಯಿಸುಗುಂ (ಕಾದಂಬ. ೩). ೧೦. ಮುಂದಕ್ಕೆ ಸರಿ,—ಚಲಿಸು: ಚಾರುದತ್ತನೊಡವಂದ ಪರದರಂ ಪರೆಯಲೀಯದೆ ನೆರಪಿಕೊಂಡು ಬರೆ (ನೇಮಿಪು. ೪-೭೦ ಪ); ತವ ನಯನಸರೋಜಾತದಿಂ ಕ್ಷೀರಧಾರಾಕಾರಂ ಕಾಂತಿಪ್ರವಾಹಂ ಪರೆದು ಬರುತಿದೋ ಓಡಿಕುಂ ಪಾಪಮಂ ಮೇಣ್ (ಮೈಸೂಮಂ. ೨-೩೧). ೧೧. ಕೂಡು; ಸೇರು; ಒಂದಾಗು: ಪರಿವಿಡಿಯಿಂದಂ ಸಂಸ್ಕೃತರರಗುವರರ್ ಬಿಚ್ಚೆಗಲ್ಪರೊಳ್ ಮತ್ತವರೊಳ್ ನೆರೆದಂ ಕಾಮದೆ ನಂದಂ ಪರೆಯಂ ಸರ್ವಾರ್ಥಸಿದ್ಧನದರೊಳಗೆಂದುಂ (ಸೌನಂದ. ೨-೬೩). ೧೨. ಬೆಳಗಾಗು; ನಸುಕು ಹರಿ: "ಪರೆ-ಪ್ರಸಾರಣೇ (ಹರಡು), ಕಾಲ್ಯೇಚ (ಬೆಳಗಾಗು)" (ಪಮಧಾ); ದುರಿತಘನತಿಮಿರಮೆತ್ತಂ ತೆರಳ್ದು ಜಿನಸವನಮಂಗಲಕ್ಕಗಿದಾಗಳ್ ಪರೆವಂತಾದುದು ಕಾಲಾಗರುಧೂಪಶ್ಯಾಮ ಧೂಮಮೂತ್ತಲ್ಯೋನುಂ (ಆದಿಪು. ೭-೭೯). ಹರೆ$_1$: ೧. ಹರೆದು ಮೋಹಿಸುವೀ ಚರಾಚರ ನೆರೆದು ನಿಮ್ಮಯ ರೋಮಕೂಪದ ಹೊರೆಯೊಳಗೆ ಹೊಳೆದಾಡುತಿಹುದು (ಕುಮ್ಯಾಭೀ. ೩-೬೨); ರಾಜಾಧಿರಾಜರ ರಾಜಸಭೆಯೊಳಗೆ ಹರೆ[ಪಾಠಾಂ.ರ]ದುದೀ ವೃತ್ತಾಂತವು (ತೊರಂಗಾ. ೨-೧-೨೧); ಹರೆಯಬೇಹುದು ಕೀರ್ತಿ ಭುವನಾಂತರಗಳಲಿ ದೆಸೆಗಳಲಿ (ನಿಭಾಗ. ೧೦-೭೮-೩೪). ೩. ಸಾರಿದ್ದ ಬ್ರಹ್ಮನೋಲಗ ಹರೆ [ಪಾಠಾಂ. ರ]ಯಿತ್ತು (ಅಪಚಂ. ೫೫-೨೩೫); ದೆಸೆಯರೆಲ್ಲರ ಹರೆಯವೇಳ್ದಂ ಸನ್ನೆಯಿಂದೋಲಗವಂ (ಕುಮುಕಾ. ೩-೧೮); ಹರನ ಬೀಳ್ಕೊಂಡಖಿಳ ದಿವಿಜರು ಹರೆದುದು (ಕುಸ್ಯಾಕ. ೮-೧); ಹರೆದುದೋಲಗವಾ ಸಮಯದಲಿ (ತೊರಂಗಾ. ೪-೭-೨೭). ೪. ಗೊಹೇಶ್ವರನ ಶರಣರ ನಿಲವ ಕಂಡ ಬಳಿಕ ಮಱಹು ಬೆಳಗ ಕಂಡ ಕತ್ತಲೆಯಂತೆ ನೋಡ ನೋಡ ಹರೆವುದು (ಅಪಚಂ. ೨೨೮-೧೮೩), ಅತಂಗೆ ತಾಂ ತಗಲೆಡಱ ಬಡತನ . . . ಹರೆವುದು (ಪಚಕಾ. ೭-೧೨); ಗುರು ಬರ್ಪುದಂ ನೋಡಿದೊಡೆ ಕಣ್ಣ ಪಾಪವದು ಹರೆವುತದೆ (ಪದ್ಮಂಕಾ. ೮-೭೦); ಹರುಷ ಬಲಿದುದು ಮನದ ಸಂಶಯ ಹರೆದುದು (ಕುಮ್ಯಾಭೀ. ೭-೩೪); ಹರೆದುವು ತಾರೆಗಳ್ಳೆರೆದುವು ಕೋಕಗಳು (ಕಂಸವಿ. ೯-೨೦೮). ೧೩. ಹೊಟ್ಟೆ ಎಳೆದುಕೊಂಡು ಚಲಿಸು; ದೇಕು; ತೆವಳು: ಇನ್ನು ಬಗ್ಗಿಕೊಂಡು ಹರೆಯಬೇಕು . . . ಎದ್ದು ನಿಲ್ಲಬೇಡ್ರಿ (ಸ್ವಪ್ನಜೊಹ. ೨೯). ೧೪. ದೂರವಾಗು; ದೂರಕ್ಕೆ ಹೋಗು: ಹರೆ[ಪಾಠಾಂ.ರ]ದು ನಡೆ ಬಲೆಯ ಹಸರಿಸು (ಪಚಕಾ. ೫-೨೪). [ದೇ.॥ ತಮಿ. ಮಲ. ಕೊಡ. ಪರ]

ಪರೆ$_2$, ಹರೆ$_2$ (ನಾ). ಬೆಳಗಿನ ಜಾವ; ನಸುಕು; ಅರುಣೋದಯದ ಕಾಲ: ಪರೆಯ ಭಾನೂದಯದೊಳ್ಕರ್ತಲೆಯನ್ತಿರೆ ರಿಪುಗಳ್ಕರ್ತಲೆ ವೆಸರಾದುದಾತನೊಳ್ಕಲ್ತೆಸರುಂ (ಸೌಇಇ. XI-i, ೪೫-೫; 980). ಹರೆ$_2$: ಇತ್ತ ಮುದದಿಂದ ಬಂಧುಶ್ರೀಕರಂ ಹರೆಯ ಹೊತ್ತ ಜೊಳಗೆಳ್ದು . . . ಮನೆಗೆ ಪೋಗಿ (ಸಮ್ಯಕೌ. ೫-೪೯); ಆಸೆಯನುದಿನಮೇತವೆನ್ನ ಕೀವುತೆದೆಯಂ ಸಂಜೆಯನ್ನ, ಇರುಳೊಳಾಡಿಸಿ ಹರೆಯ ಮುನ್ನ ಬರಿಯ ಮರೆಗೆಯನಿಳಿಪುದು! (ಗಿಳಿವಿಂ. ೬೮-೩); ಬಾಳ್ ಬಂಜೆಯಾಗಿಹುದು; ಹರೆಯು ಬೆಳಗುವ ಮುನ್ನ ಸಂಜೆಯಾಯ್ತು (ಪಯಣಾ. ೧೯-೨೨).

[<ಪರೆ$_1$]

ಪರೆ$_3$ 'ಪಜ್ಜೆ$_1$' ನೋ.

ಪರೆ$_4$ 'ಪೊರೆ$_5$' ನೋ.

ಪರೆ$_5$, ಹರೆ$_5$ (ನಾ). ೧. ಮರದ ಕೊಂಬೆ,-ರೆಂಬೆ: ಪರ್ಮರಂ ಪರೆ ಮುರಿದುರುಳ್ದುವರ್ (ತ್ರಿಲೋಪಾ. ೪೦೩-೧೪). ಹರೆ$_5$: ೧. "ಶ್ಲಾಖಾ=ಮರದ ಹರೆ" (ಕಾಶಕೃ. ೯); ಹೂವಿನ ಆಸೆಗೆಂದೀ ಮರವೇರಲು ಸಂಪಿಗೆ ಹರೆ ಗಟ್ಟಿಯಲ್ಲ (ಚಂದ್ರವಿ. ೫೪-೧೪); ಮುಖಕ್ಕೆ ಹರೆ ಗೀರಿ ನೆತ್ತರು ಸೋರಿದ್ದುದು ಅವನಿಗೆ ಗೊತ್ತೇ ಇರಲಿಲ್ಲ (ಸುಲಿಮ. ೫೭೩); ಅದರ ದೃಷ್ಟಿ ದೂರದಲ್ಲಿ ಒಂದು ಮರವನ್ನೇರಿ ಮರದ ಹರೆಯನ್ನು ಕಡಿಯುತ್ತಿದ್ದ ವ್ಯಕ್ತಿಯೊಬ್ಬನ ಮೇಲೆ ಬಿದ್ದಿತು (ಪಂಜಪಂ. ೨೩). ೨. (ಕರಾ) ಬಿದಿರಿನ ಗಂಟುಗಳಲ್ಲಿಯ ಟಿಸಿಲು: ಬೇಲಿಗೆ ನಿಲ್ಲಿಸುವ ಹರೆಯನ್ನು ಪೂರ್ಣ ಸವರಬಾರದು (ರೂಢಿ).

ಪರೆ$_6$ (ನಾ). ಪರಾ, ಪಶ್ಯಂತೀ, ಮಧ್ಯಮಾ ಮತ್ತು ವೈಖರೀ ಎಂಬ ನಾಲ್ಕು ವಾಙ್ಮಯರೂಪಗಳಲ್ಲಿ ಒಂದು: ಪರೆಯೇ ಮಾನಸ ಭಕ್ತಿ ಚಾಕ್ಷುಷಪದಂ ಪಶ್ಯಂತಿಯೇ (ಶಶಕ. ೧೩೫-೯೩). [ಸಂ. ಪರಾ]

ಪರೆಕಟ್ಟು (ಕ್ರಿ). (ಹಣೆಯನ್ನು) ವ್ಯಾಪಿಸುವಂತೆ ಕಟ್ಟು: ತಪಶ್ರೀ ನಲವಿಂದೆ ತಾನೆ ಪರೆಕಟ್ಟಿದ ಪಟ್ಟವಿದೆಂಬಿನಂ ತ್ರಿರೇಖಾನಿಚಯಂ ವಿಭೂತಿಯೆಸೆದತ್ತು ಮುನೀಂದ್ರವಿಶಾಲಫಾಲದೊಳ್ (ಕುಸುಮಾ. ೧-೧೨೨). [ಪರೆ$_1$ + ಕಟ್ಟು$_1$]

ಪರೆಗಡಿ, ಹರೆಗಡಿ (ಕ್ರಿ). ೧. ಕತ್ತರಿಸಿ ಚೆಲ್ಲು; ತುಂಡರಿಸಿ ಹರಡು: ವರುಣೋದ್ಭವನೆಚ್ಚ ಸರಲ ಸಂದೋಹವ ಪರೆಗಡಿದಾ ಬೇಚರನು ಪುರಹರ ತ್ರಿಪುರವನೆಸಲೆಂದು ನಿಂದಾ ಪರಿಯೊಳೆಸೆದನಾಜಿಯೊಳು (ಅಂಜಚ. ೬-೧೪೫); ನಿಮಿಷದೊಳ್ಪರೆಗಡಿದನನಿತು ಚತುರಂಗಮಂ (ಚೈಮಿಭಾ. ೨೦-೧೩). ಹರೆಗಡಿ: ೧. ಭಗದತ್ತನನಿಬರೆ ಹರೆಗಡಿದು ಹೊಗರಂಬ ಸುರಿದನು (ಕುಸ್ಯಾದ್ರೋ. ೩-೩೧); ಹರೆಗಡಿದು ಬೊಬ್ಬಿರಿದು ಸವರಿದಂ ಸೀಳಿದಂ (ತುರಂಗ. ೫೨-೧೫). ೨. ನಾಶಮಾಡು: ಶತ್ರುವನು ವಹ್ನಿಜ್ವಾಲೆಯನು ರೋಗವನು ತತ್ತತ್ಕಾಲದಲಿ ಹರೆಗಡಿಯದಿದ್ದರೆ ಬಳಿಕಸಾಧ್ಯವಲಾ (ನಿಭಾಗ. ೧೦-೪-೪೩); [ಪರೆ$_1$ + ಕಡಿ$_2$]

ಪರೆಗಣ್ಣು (ನಾ). ಕಣ್ಣುಗುಡ್ಡೆಯ ಮೇಲೆ ಪೊರೆ ಬರುವ ಒಂದು ಬಗೆಯ ರೋಗ: ಮಂಗರವಳ್ಳಿ, ಕಸ್ತೂರಿ, ಅರಸಿನ ಇವಂ . . . ಜೇನುತುಪ್ಪದಿ ಹಚ್ಚಲು ಪರೆಗಣ್ಣು ಮಾಣ್ಗುಂ (ವಿವೈವಿ. ೧೩೫); ಅಳಿಗಣ್ಣೊ ಪರೆಗಣ್ಣೊ (ಕುಮಾಪು. ೪-೨೪೨).

[ಪರೆ$_4$ (<ಪೊರೆ$_5$) + ಕಣ್ಣು (<ಕಣ್)]

ಪರೆಗಳಚು 'ಪೊರೆಕಳಚು' ನೋ.

ಪರೆಗಳೆ 'ಪೆರೆಗಳೆ' ನೋ.

ಪರೆಗುಡು (ಕ್ರಿ). (ತಮಟೆಯಂತೆ) ಧ್ವನಿಯನ್ನು ಮಾಡು; ನಾದ ಹೊಮ್ಮಿಸು: ಗಾಳಿತೇರು ರೆಕ್ಕೆಗಳ ಬೀಸಿ ಪರೆಗುಡುವ ಜಯ ವಿಲಾಸ (ಅರಳು. ೨೧೬-೬).

[ಪರೆ$_3$ (<ಪಜ್ಜೆ$_1$) + ಕುಡು$_1$ (<ಕೊಡು$_1$)]

ಪರೆಪದಿಭಟ್ಟ (ನಾ). ಒಬ್ಬಾತನ ಹೆಸರು: ಆರೀದಗೋತ್ರಂ ಪರೆಪದಿಭಟ್ಟರ್ಗ್ಗೆ ಕೊಳನೆಲ್ಲೂರ ಬ್ರಹ್ಮದೇಯಂ ಕೊಟ್ಟವರ್ (ಎಕ. IV, ಎಡತೊ. ೬೦-೬೮; ಸು. 890). [?+ಭಟ್ಟ]

ಪರೆಪು$_1$ 'ಪರಪು$_1$' ನೋ.

ಪರೆಪು$_2$ 'ಪರಪು$_2$' ನೋ.

ಪರೆಪೊತ್ತಱ್ (ನಾ). ಬೆಳಗಿನ ಹೊತ್ತು; ಮುಂಜಾವ; ನಸುಕು: ಡಂಗುರಮಂ ಪೊಯ್ಸುವ ತೆಱದಿಂ ಪರೆಪೊತ್ತಱೊಳೆದ್ದು ಬೇಂಟೆವಱೆಯಂ ಪೊಯ್ವರ್ (ಸಮಪ. ೩೮೨-೩೯, ಅನುಬಂಧ. I).

[ಪರೆ$_2$+ಪೊತ್ತಱ್ (<ಪೊಟ್ಟಱ್)]

ಪರೆಬಿಡು 'ಪೊರೆವಿಡು' ನೋ.

ಪರೆಯ$_1$ 'ಪಱೆಯ' ನೋ.

ಪರೆಯ$_2$ 'ಪರಯ' ನೋ.

ಪರೆಯಿಸು, ಪರಯಿಸು, ಹರೆಯಿಸು (ಕ್ರಿ). ೧. ವ್ಯಾಪಿಸುವಂತೆ ಮಾಡು; ಪ್ರಚುರಪಡಿಸು: ಸಲೆ ಪುರಾಣಚೂಡಾಮಣಿಯೆಂದುಪ ತಮದಿಂ ಬರೆಯಿಸಿ ಮಲ್ಲಪಯ್ಯನುಂ ಪುನ್ನಮಯ್ಯನುಂ ಪರೆಯಿಸಿದರ್ (ಶಾಂತಿಪು. ೧-೩೮); ತಮ್ಮುತಿರ್ವರುಂ ಪೊನ್ನಿಗನಿಂ ಬರೆಯಿಸಿದರ್ ಸಕಳೋರ್ವಿಗೆ ಪರೆಯಿಸಿದರ್ ಸಲೆ ಪುರಾಣಚೂಡಾಮಣಿಯಂ (ಅಜಿಪು. ೧-೩೪). ೨. ಇಲ್ಲವಾಗಿಸು; ನಿವಾರಣೆ ಮಾಡು: ಸಂಧ್ಯಾ ಪ್ರದೀಪಸಂಜನಿತಸಿದ್ಧಾಂಜನಮಿದೆನಿಸಿ ಕೌಶಿಕಂಗಳ ಕಣ್ಗಳ ತಿಮಿರಮಂ ಪರೆ [ಪಾಠಾಂ. ರ]ಯಿಸೆಯುಂ (ಪರ್ಧಪು. ೬-೨೯ ಪ); ಪರೆ[ಪಾಠಾಂ. ಹರಿ]ಯಿಸಿದಂ ಪುಂವೇದದ ಪುರಾಣಸತ್ಕರ್ಮದೊಡನೆ ನೋಕರ್ಮಮನಕ್ಷರ ಪರಿಣಾಮಯುತಂ ಹಾಸ್ಯರತ್ಯರತಿಶೋಕಭಯಜಿಗುಪ್ಸಾಹ್ವಯಮಂ (ಪಾರ್ಶ್ವಪು. ೧೫-೧೫೦). ೩. ಚೆದರಿಸು: ತುಂಬಿಗಳ ಬಂಬಲ್ಗಪ್ಪಂ ಕಣ್ಣಟ್ಟು ನೋಡುವ ಕಾಂತೆಯರ ಕಡೆಗಣ್ಣ ಬೆಳಗಿಂ ಪರೆಯಿಸಲುಂ (ದಶಾವ. ೨-೯ ಪ). **ಪರಯಿಸು:** ೧. ಸುರಧೇನುವ ತೊರೆದಭೀಷ್ಟಮಂ ಕಱೆದುದೆನಲು ಧರೆಗಿತ್ತು ವಿತ್ತಮಂ ತಾಂ ಪರಯಿಸಿದಂ ಜಸಮನಗ್ರಜಂ ಹರಿಯಂಮಂ (ಸೌಇಇ. IX-1, ೨೪೯-೩೯; 1147). ೪. ಮುಗಿಸು; ಬರಖಾಸ್ತು ಮಾಡು; ಮುಕ್ತಾಯ ಮಾಡು: ತೋಟವಾಳಂಗೆ ಪಸಾಯಮನಿತ್ತು ಪಟ್ಟವಣೆಯಿಂದೇಳ್ದೋಲಗಮಂ ಪರ[ಪಾಠಾಂ. ರೆ]ಯಿಸಿ (ರಾಜಶೇ. ೧೦-೫ ಪ). **ಹರೆಯಿಸು:** ೨. ದುರಿತಮನುರಿಯ ದೈನ್ಯ ಮನೊಂದೊಂದನೆ ಸುರನದಿ ವಿಧು ಸುರಭೂಜ ಹರೆ [ಪಾಠಾಂ. ರ]ಯಿಪವಲ್ಲ ದೊಳ್ಳಿದರಂತಿವೆಲ್ಲವ ಪರಿಹರಿಸಲು ನೆರೆದಪವೆ (ಕುರಾಸಾಂ. ೧-೪೯).

[ಪರೆ$_1$+-ಇಸು$_3$]

ಪರೆಯುಚ್ಚು 'ಪೊರೆಯುರ್ಚು$_1$' ನೋ.

ಪರೇಂಗಿತ (ನಾ). ೧. ಬೇರೆಯವರಿಗೆ ಸೂಚನೆ ಕೊಡುವುದು; ಮತ್ತೊಬ್ಬರಿಗೆ ಸನ್ನೆ ಮಾಡುವುದು. ೨. ಬೇರೆಯವರ ಮನೋಗತ,-ಅಭಿಪ್ರಾಯ: ಸಾಧುಸಮಾಧಿ ಪರೇಂಗಿತಬೋಧಂ ನಿರ್ವಾದಮಪ್ಪುದಂತದು ಸೂಕ್ಷ್ಮಂ (ಕಾವ್ಯಾವ. ೬೬೪). [ಪರ$_3$+ಇಂಗಿತ]

ಪರೇಂಗಿತಜ್ಞ (ನಾ). ಬೇರೆಯವರ ಅಭಿಪ್ರಾಯವನ್ನು ಊಹಿಸಿ ತಿಳಿಯುವ ವ್ಯಕ್ತಿ; ಮತ್ತೊಬ್ಬರ ಆಶಯವನ್ನು ಅರಿಯುವ ವ್ಯಕ್ತಿ: ಗುರುದೇವ ದ್ವಿಜಭಕ್ತಂ ತರುಣವಯಸ್ಕಂ ಪರೇಂಗಿತಜ್ಞನು ದಾರಂ (ಪಂಚತಂ. ೨೧೬-೨೨); ಪರೇಂಗಿತಜ್ಞಳಲ್ಲದ ಇಂದ್ರಾಣಿ ಅದನ್ನು ಅರಿತರಲ್ಲವೆ? (ಹೊಸಕ್ಷಿ. ೨೦). [ಸಂ.]

ಪರೇಂಗಿತೆ (ನಾ). [ಸಂಗೀತ] ಒಂದು ಶ್ರುತಿಯ ಹೆಸರು: ಭೃಂಗ ಜಾತಿ ಪರೇಂಗಿತೆ [ಪಾಠಾಂ. ಪರಂಗೀತೆ] ಎಂಬೆರಡು ಶ್ರುತಿಗಳೇ ಗಾಂಧಾರ ಸ್ವರದಿಂದುದಿಸಿದವು (ವಿವೇಕ. ೧೮೬). [?]

ಪರೇಡ್ 'ಪರೇಡು' ನೋ.

ಪರೇಡು, ಪರೇಡ್, ಪೆರೇಡ್, ಪೆರೇಡು (ನಾ). ಸೈನ್ಯ, ಪೋಲೀಸು ಮುಂತಾದವರು ಮಾಡುವ ಪ್ರದರ್ಶನ: ನಾನು ಹೊರಡುತೀನಿ. ಪರೇಡಿಗೆ ಹೊತ್ತಾಗುತ್ತದೆ (ನಾಪೋಲೀ. ೨೬). **ಪರೇಡ್:** ಪರೇಡ್ ಜಾಗವೆಲ್ಲಾ ಜನರಿಂದ ತುಂಬಿ ಹೋಗಿ, ಪರೇಡ್ ನಡೆಯುವುದೇ ಕಷ್ಟವಾಯಿತು (ದಿಲ್ಲಿಪ. ೪೩). **ಪೆರೇಡ್:** ಮಿಲಿಟರಿ ಪರೇಡ್ ನಡೆದಾಗ ಆ ಹೆಂಗಸು . . . ಶೃಂಗಾರ ಮಾಡಿಕೊಂಡು ಹೊರಟದ್ದಳು (ಗೋಪುರ. ೮೬); ಅವನು ಪೆರೇಡ್ ಮೈದಾನದಲ್ಲಿ ಸೈನಿಕನು ನಿಲ್ಲುವಂತೆ ನಿಂತುಬಿಟ್ಟ (ಜೀವಾತ್ಮ. ೨೦೫). **ಪೆರೇಡು:** ಶಾಲೆಯ ಮಕ್ಕಳೆಲ್ಲ ಪೆರೇಡಿಗೆ ಸಂಭ್ರಮದಿಂದ ಹೊರಟರು (ರೂಢಿ). [←ಇಂ. Parade]

ಪರೇತ (ಗು). ೧. ಸತ್ತ; ಗತಿಸಿದ. ೨. ಅಗಲಿದ; ದೂರವಾದ. (ನಾ). ೩. ಹೆಣ; ಶವ: "ಪ್ರೇತಃ, ಪರೇತಃ, ಕುಣಪಃ, ಶವಃ—ಈ ೪ ಪೆ(ಹೆ)ಣಂ" (ಹಲಾಯು. ೧೦೪-೭). ೪. ಸತ್ತವನು; ಮರಣ ಹೊಂದಿದವನು: "ಪ್ರೇತಂ ಮೃತಂ ಪರಾಸು ಪರೇತಂ" (ವಸ್ತುಕೋ. ೫೯-೪೫). ೫. ಭೂತ; ಪಿಶಾಚಿ; ಪ್ರೇತ: ಆತು ಮರಳಿದು ಹಿಂದ ನೋಡಿ ಪರೇತವಿಭವವಲಾ ಎನುತ ಭಲಚೇತನನು ಸಲೆ ಚಂಡಿಯಾದನು ಕಳನ ಚೌಕದಲಿ (ಕುವ್ಯಾಗ. ೩-೧೫); ಲಯಕಾಲ ನೈದಿದನಖಿಳದೂತಪರೇತಗಣಸಹಿತ (ತೊರರಾ. ೬-೫೩-೪೨); ಜೀವನ ರಸವರತು ಹೋಗಿ ಜೀವಿ ಬರೆ ಪರೇತವಾಗಿ ಸಾನುಭೂತಿಯಾಗಿರು! (ಅನಿಕೇ. ೧೪-೧೩). [ಸಂ.]

ಪರೇತಕೃತ್ಯ (ನಾ). ಸತ್ತ ವ್ಯಕ್ತಿಗಾಗಿ ಮಾಡುವ ವಿಧಿ; ಅಂತ್ಯಕ್ರಿಯೆ,-ಸಂಸ್ಕಾರ: ಐವರು ಸುತರು ಸಹಿತೀ ಕುಂತಿ ಮಿಂದು ಪರೇತಕೃತ್ಯವನು . . . ಮಾಡಿಸಿ (ಕುವ್ಯಾಅ. ೫-೨೫); ತಂದೆ ನಮಗೀತನು ಕಣಾ ವಿಧಿಯಿಂದ ವಿಹಿತಪರೇತಕೃತ್ಯವ ಮಾಡಬೇಕು (ತೊರರಾ. ೩-೧೨-೧೦). [ಪರೇತ+ಕೃತ್ಯ$_2$]

ಪರೇತಪತಿ (ನಾ). ಸಾವಿನ ಒಡೆಯ; ಯಮ: ಶಿವನಂ ಭಜಿಸು ತೊಲಿಸಿ ಪರೇತಪತಿಯಂ ಗೆಲಿದು ಕಾಮ್ಯಾರ್ಥಂಗಳಂ ಪಡೆದ (ಬಸಪು. ೪೧ ಸೂಚನೆ); ವೀತಿಹೋತ್ರ ಪರೇತಪತಿ ಪುರುಹೂತ ವರುಣಾದಿಗಳು ಕಾಂಡವ್ರಾತದಲಿ ತೊಳೆದರು ಮನೋರಥಕಲಿತಕರ್ದಮವ (ಕುವ್ಯಾಅ. ೧೧-೩೧); ಪರೇತಪತಿ ಶಂಕರ ವಿರಿಂಚಾದಿಗಳಿಗಸದಳದ ಯಾತುಧಾನನ ರಾಜಧಾನಿಯಲಾ ತಮಿಸ್ರಿಯಲಱಸಿ ಕಂಡನು ಮಾತೆಯನು (ತೊರರಾ. ೫-೯-೨೨). [ಸಂ.]

ಪರೇತವನ (ನಾ). ಹೆಣಗಳನ್ನು ಸುಡುವ ಜಾಗ; ಮಸಣ; ಶ್ಮಶಾನ: ಎನ್ನ ಮೆಯ್ಯ ದುರ್ಗಂಧಕ್ಕೆ ಪೇಸಿ ಕಂಡವರೆಲ್ಲಮೆಟ್ಟಿದು ಕಳೆಯೆ ಪರೇತವನಭೂಮಿಯೊಳ್ ಜೀರ್ಣಶೀರ್ಣಚೀರಂಗಳಿಂದಂ ಪುದಿದಿರಿಸಿ ಪೋಗಿ (ಅದಿಪು. ೩-೩೪ ಪ); ಹೊಲಗೇರಿ ಪರೇತವನವಸಗವನೆ . . . ಎಂಬೆಡೆಗಳುಚಿತವೋಸಱಿಗೇಳಲ್ (ಲೋಕೋಪ. ೧೨-೫೩): ವಿಚಳಚ್ಚಿ ತಾನಳಶಿಖಾವಳಿವಿದ್ರುಮವಲ್ಲಿ ಪರ್ವುವಂತಿರೆ . . . ಆ ಪರೇತವನ ಮಂಬುಧಿಯಂತಿರೆ ಭೀಕರಂ ಕರಂ (ಅರ್ಧನೇ. ೫-೨೧); ನಿಧಿಯಂ ಲಯ ಸನ್ನಿಧಿಯೆಂದು ತನ್ನ ಕೇಳೀವನಮಂ ಪರೇತವನಮೆಂದವನೀಶನವಂ ಸಮಂತು ಸಂಭಾವಿಸಿದಂದು ಭಾವಿಸದನೊಂದನೆ ದಂದುಗದಿಂದಗಲ್ದುದಂ (ಚಂದ್ರಪು. ೯-೧೬). [ಸಂ.]

ಪರೇತವಿಭು (ನಾ). = ಪರೇತಪತಿ: "ಯಮನರ್ಕಸುತಂ . . . ಪರೇತವಿಭು ದಂಡಧರಂ . . . ಅಂತಕಂ ಕೀನಾಶಂ" (ವಸ್ತುಕೋ. ೮-೪೧). [ಸಂ.]

ಪರೇತಾಧಿಪ (ನಾ). = ಪರೇತಪತಿ: ಪರೇತಾಧಿಪತುಲಾಪಾದಪಾಲಂ

ಬನಾಪಳನನಪ್ಪನೇ ಕಾಪಾಲಿಯೇ ಬಲ್ಲನು (ಭಾಪಚಿಂ. ೯-೬). [ಸಂ.]

ಪರೇಲ್ (ನಾ). ಇಸ್ಪೀಟಿನ ಆಟದಲ್ಲಿ ಒಂದು ಬಗೆ; ಮೂರೆಲೆ ಆಟ: ಪರೇಲ್ ಆಟದ ಪ್ರಸಾದ್ ಬಂದ (ಜಿಂಗಬ. ೧೩೫). [?]

ಪರೇಶ (ನಾ). ಪರಧೈವ; ಪರಮೇಶ್ವರ: ಪರಮಪುರುಷನನಾ ಪರೇಶನನುದರಕುಹರದಲಿ ಧರಿಸಿ ಮೆಜೆ ಪರವಿಂದವದನೆಯ ಸಿರಿಯ ಬಣ್ಣಿಪೆನೇನು (ಕೌಶಿಂ. ೧-೬೫); ರಕ್ಷಿಸು ರಂಗ ಪತ್ರ ಗಣಯನ ಪರೇಶ (ಶತಸಾಂ. ೧೦-೫೬). [ಪರ್ಯ+ಈಶ]

ಪರೇಶ್ವರ (ನಾ). = ಪರೇಶ: ಗಣೇಶ್ವರಾಯ ಮುನೀಶ್ವರಾಯ ಪ[ಪಾಶಾಂ. ಸು]ರೇಶ್ವರಾಯ ನಮೋ (ಬಸವ. ೬೧-೪೬).

[ಪರ್ಯ+ಈಶ್ವರ]

ಪರೇಷ್ಟುಕೆ (ನಾ). ಹಲವು ಸಲ ಈದ ಹಸು; ಮತ್ತೆ ಮತ್ತೆ ಕರು ಹಾಕಿದ ಹಸು: "ಹಲವು ಸೂಯೀಕಳು ಪ[ಪಾಶಾಂ. ವ]ರೇಷ್ಟುಕೆಯೆನಿಕ್ಕು" (ಮಂಗರಾ. ೫೪-೪). [ಸಂ. ಪರೇಷ್ಟುಕಾ]

ಪರೈಧಿತ (ನಾ). ೧. ಬೇರೆಯವರಿಂದ ಪೋಷಣೆ ಹೊಂದಿದ ವ್ಯಕ್ತಿ: "ಪರಜಾತಃ, ಪರೈಧಿತಃ—ಈ ೨ ಹೊಜಿಕುಳಿ" (ಹಲಾಯು. ೫೮-೧೯೬). ೨. ಸೇವಕ; ಆಳು: "ಪರಾಚಿತಃ, ಪರಿಸ್ಕಂದಃ, ಪರಜಾತಃ, ಪರೈಧಿತಃ—೪ ಹೇಡೀ ಆಳ ಪೆಸರು" (ಸಿದ್ಧಾಂತಿ. ೩೧೨). ೩. ಕೋಗಿಲೆ. [ಸಂ.]

ಪರೋಕ್ಷ (ಗು). ೧. ಕಣ್ಣಿಗೆ ಕಾಣದ; ಅಗೋಚರವಾದ; ದೃಷ್ಟಿಯ ಅಳವಿಗೆ ಮೀರಿರುವ. (ನಾ). ೨. ಕಣ್ಣಿಗೆ ಕಾಣದಿರುವುದು; ಅಗೋಚರವಾಗಿರುವುದು; ದೃಷ್ಟಿಗೆ ದೂರವಾಗಿರುವುದು: ಸಚಿವಸಮೂಹಂ ಮಚ್ಚೆ ಸಮೂಲೋಚನಗೋಚರ ಚರಾಚರಂಗೆ ಪರೋಕ್ಷಮೆ ಪ್ರತ್ಯಕ್ಷಮಲ್ತೆಯೆಂದು ಪರಮಾನಂದ ದಿಂದಭಿವಂದಿಸಿ (ಶಾಂತಿಪು. ೨-೭೦ ಪ); ನಿನ್ನಿಂದಂ ಪರೋಕ್ಷದೊಳ್ ಬಾಚೆನೆಂಬರ್ (ಮದಿತಿ. ೧೦-೭೫); ತಮ್ಮನ ರಣಮಂ ನಿರೀಕ್ಷಿಸಲಪೇಕ್ಷಿಸಿ ಪೋಗೆ ಪರೋಕ್ಷದೊಳ್ ದಶಾನನನೆಟ್ಟೆತಂದನಾಂ ಜನಕನಂದನೆಯೆಂ (ಪಂಂರಾಮಾ. ೯-೧೯೧); ಮತ್ಪರೋಕ್ಷದಲಿ ಕುಲವ ನೀನುದ್ಧರಿಸು (ಕುಸ್ಯಾಅ. ೨೧-೫೫). ೩. ಕಣ್ಣಿಗೆ ಮರೆಯಾಗಿರುವ ಪದಾರ್ಥ; ಇಂದ್ರಿಯಗೋಚರವಲ್ಲದ ವಸ್ತು: "ಅತೀಂದ್ರಿಯಮಪ್ಪುದು ಪರೋಕ್ಷಂ" (ಪಸ್ತುಕೋ. ೭೧-೨೪); ನಮಗಿಂತ ಬೇರೆಯಾದ ವಸ್ತುಗಳು ಕಾಲದಿಂದಲಾಗಲಿ ದೇಶದಿಂದಲಾಗಲಿ ಬಹುದೂರವಾಗಿ ಮರೆಯಾಗಿದ್ದರೆ ಅವಕ್ಕೆ ಪರೋಕ್ಷಗಳೆಂದು ಹೆಸರು (ಬ್ರಹ್ಮಭಾ. ೨-೧೯). ೪. ಸಾವು; ಮರಣ: ದೀವಳಬ್ಬಾಸಮುದ್ರಂ ಮನುಚರಿತಂ ಮಹೇಂದ್ರಸನಿನ್ನೆ ಪರೋಕ್ಷದೊಳಾ ಮಹಾತ್ಮ್ಯನಾ ಜನನಿ ಮಹೇಂದ್ರನಾಮದೆ ಕೊಳಂ... ಮುಳುನ್ದಭವನಂಗಳನಿಂದಿನೆ ಮಾಡಿ (ಎಕ. X, ಮುಳಬಾ. ೩೮-೨೬; ಸು. ೩೦೦); ದತ್ತನುಂ ನಂದಿಷೇಣನುಂ ಎಂಬರ್ ತಂದೆಯ ಪರೋಕ್ಷದೊಳ ಕ್ಷೂಣಕನಕರಾಶಿಯಂ ಬಸನಕ್ಕೆ ತವಿಸಿ ಬಿಯಂ ನಡೆಯದಿರೆ (ಶಾಂತಿಪು. ೯-೯೦ ಪ); ಅಳಿದರಳಿವೆ ಭವತ್ಪರೋಕ್ಷದೊಳಳಿವೆನೇ ನಿನ್ನರಸಿ ಧರೆಗಾನಳುಪುವೆನೆ (ಕುಸ್ಯಾಅ. ೨೧-೫೬). ೫. ಗುಟ್ಟು; ರಹಸ್ಯ: ಶೋಕ ನಿವೃತ್ತಿ ಮಾಡುವದೆ ಅಜ್ಞಾನರಹಿತಮಾದ ಪರೋಕ್ಷವೆನಿಸುವದು (ನಾನಾಗು. ೨೮-೧೮). ೬. [ಜೈನ] ಎರಡು ಬಗೆಯ ಪ್ರಮಾಣ ಜ್ಞಾನಗಳಲ್ಲಿ ಒಂದು; "ಮನಸ್ಸು, ಇಂದ್ರಿಯಗಳ ಸಹಾಯದಿಂದ ಉಂಟಾಗುವ ಜ್ಞಾನ" (ಜೈನಕೋ. ೧೬೩); ಪರೋಕ್ಷಪ್ರತ್ಯಕ್ಷಾಭಿಧಾನ ದ್ವಿವಿಧಪ್ರಮಾಣಮಕ್ಕುಂ (ತತ್ತ್ವಪ್ರ. ೫೩); ಪ್ರಮಾಣವು ಪ್ರತ್ಯಕ್ಷ, ಪರೋಕ್ಷವೆಂದು ಎರಡು ವಿಧ. ಮೊದಲನೆಯದು ನಿರ್ಮಲವಾದ ಸ್ಪಷ್ಟವಾದ ವಿಶದವಾದ ಜ್ಞಾನ. ಅವಿಶದವಾದ ಜ್ಞಾನ ಪರೋಕ್ಷ (ಛಂದಸಾ. ೮೫). ೭. [ವಿಶಿಷ್ಟಾ] ನಾಲ್ಕು ಬಗೆಯ ಜ್ಞಾನಗಳಲ್ಲಿ ಒಂದು; ಇಂದ್ರಿಯಕ್ಕೆ ವೇದ್ಯವಾಗದುದು: ವಿಷಯಸಂಬಂಧದಿಂದ ಸಂಶಯ ನಿಶ್ಚಯ ಪ್ರತ್ಯಕ್ಷ ಪರೋಕ್ಷ ಮೊದಲಾದ ವಿಭಾಗವನ್ನು ಹೊಂದುವುದರಿಂದ ದ್ರವ್ಯವೆಂದೂ ಕ್ಷಣಿಕವೆಂದೂ ಹೇಳಲ್ಪಡುವುದು (ಛಂದಸಾ. ೨೩೯).

[ಸಂ.]

ಪರೋಕ್ಷಕ್ರಿಯೆ (ನಾ). ಅಪರಕ್ರಿಯೆ; ಸಂಸ್ಕಾರ: ಮಾಚಣ್ಣ ××ಪರೋಕ್ಷಕ್ರಿಯೆಯಂ ಗೆಯ್ದು ಕಲ್ಲ ನಿಱಿಸಿದನ್ (ಎಕ. IV (R), ಸಿರಿಯೂ. ೧೪೪-೭; 1008). [ಪರೋಕ್ಷ+ಕ್ರಿಯೆ]

ಪರೋಕ್ಷಜ್ಞಾನ (ನಾ). ೧. ಅಪ್ರತ್ಯಕ್ಷವಾದ ತಿಳಿವು; ಪರೋಕ್ಷವಾದ ಅರಿವು: ಆತ್ಮನ ಅಸ್ತಿತ್ವಮಂ ಪೇಳ್ವ ಶ್ರುತ್ಯಾಚಾರ್ಯವಾಕ್ಯ ವಿಶ್ವಾಸದಿಂ ಪ್ರತ್ಯಗಾತ್ಮನುಂಟೆಂದು ತಿಳಿವುದೇ ಮೊದಲ ಅಸತ್ವಾವರಣ ನಿವರ್ತಕಮಾದ ಪರೋಕ್ಷಜ್ಞಾನವೆನಿಸುವುದು (ವಿವೇಕ. ೪೩). ೨. = ಪರೋಕ್ಷ ೬: ಸ್ಪಷ್ಟವಲ್ಲದ ಜ್ಞಾನವು ಪರೋಕ್ಷಜ್ಞಾನವೆನಿಸುವುದು (ಜೈನಧ. xi, ಮುನ್ನುಡಿ); ಮನಸ್ಸು, ಇಂದ್ರಿಯಗಳ ಸಹಾಯದಿಂದ ಉಂಟಾಗುವ ಜ್ಞಾನವು ಪರೋಕ್ಷಜ್ಞಾನವು (ಜೈನಸ. ೨೯೭).

[ಪರೋಕ್ಷ + ಜ್ಞಾನ]

ಪರೋಕ್ಷಪ್ರಮಾಣ (ನಾ). ೧. ಪ್ರತ್ಯಕ್ಷವಲ್ಲದ ಸಾಕ್ಷಿ,—ಆಧಾರ: ಅಪರೋಕ್ಷವಾದ ಆತ್ಮಾನುಭೂತಿಯನ್ನು ಪರೋಕ್ಷಪ್ರಮಾಣಗಳಿಂದ ಅಳೆದು ನೋಡುವ . . . ವಿಮರ್ಶನಾಸಕ್ತಿ ಕ್ರಿ. ಪೂ. ಆರನೆಯ ಶತಮಾನದ ಸುಮಾರಿಗೆ ಆರಂಭವಾಗಿರಬೇಕು (ಭಾರದ. ೧೨೧). ೨. = ಪರೋಕ್ಷ ೬: ಪರೋಕ್ಷಂ—ಪರೋಕ್ಷಪ್ರಮಾಣಂ (ತತ್ತ್ವಪ್ರ. ೫೩). [ಪರೋಕ್ಷ+ಪ್ರಮಾಣ]

ಪರೋಕ್ಷವಿನಯ (ನಾ). [ಜೈನ] ಪೂಜ್ಯವ್ಯಕ್ತಿಗಳ ಮರಣಾನಂತರದಲ್ಲಿ ಅವರಿಗೆ ಸಲ್ಲಿಸುವ ಗೌರವ: ಧನುಕೀರ್ತಿಭಟಾರರ್ ಪರೋಕ್ಷವಿನಯಂ ಮಾಡಿಸಿದರ್ (ಎಕ. XII, ಗುಬ್ಬಿ. ೫೭-೧೨; 979); ಬೀಚಗವುಡ ಪರೋಕ್ಷವಿನಯಂ ನಿಸಿಧಿಗೆಯ ಕಲ್ಲ ನಿಱಿಸಿದಂ (ಎಕ. IV (R), ಹುಣಸೂ. ೪೩-೮; 1013); ಅಣ್ಣಂದಿರಂ ಸಂಸ್ಕಾರಿಸಿ ಜಳದಾನ ಕ್ರಿಯೆಯಂ ಪರೋಕ್ಷವಿನಯಮುಮಂ ಮಾಡಿ ಯಿಬ್ಬರ್ಗ್ಗಂ ಕಲ್ಲಂ ನಿಱಿಸಿದಲ್ಲಿ (ಎಕ. VIII, ಸೊರಬ. ೧೭೫-೨೧; 1156); ವಿಷ್ಣುವರ್ಧನ ಹೊಯ್ಸಳನು ತನ್ನ ತಮ್ಮ ಉದಯಾದಿತ್ಯದೇವನ 'ಪರೋಕ್ಷವಿನಯ'ಕ್ಕಾಗಿ ಕೆಲ್ಲವತ್ತಿ ಎಂಬ ಊರನ್ನು ಅಗ್ರಹಾರವಾಗಿ ಮಾಡಿ . . . ಬ್ರಾಹ್ಮಣರಿಗೆ ಧಾರಾಪೂರ್ವಕವಾಗಿ ಕೊಡುತ್ತಾನೆ (ಕಶಾಅ. ೨೧೦).

[ಪರೋಕ್ಷ + ವಿನಯ]

ಪರೋಕ್ಷವಿನೆಯ (ನಾ). = ಪರೋಕ್ಷವಿನಯ: ಪರೋಕ್ಷವಿನೆಯಾರ್ತ್ತವಾಗಿಸಿದ ಬೀರಗಲು (ಎಕ. II (R), ೫೫೪-೬; 13ನೆಯ ಶತ).

[ಪರೋಕ್ಷ+ವಿನೆಯ]

ಪರೋಕ್ಷವಿನೆಯಂಗೆಯ್ (ಕ್ರಿ). [ಜೈನ] ಪೂಜ್ಯವ್ಯಕ್ತಿಗಳಿಗೆ ಅವರ ಮರಣಾನಂತರದಲ್ಲಿ ಗೌರವವನ್ನು ಸಲ್ಲಿಸು: ತಮ್ಮ ಮಾತಾಪಿತೃಗಳಿರ್ಪ್ಪತೊಂದ ಕುಲದ ಪರೋಕ್ಷವಿನೆಯಂಗೆಯ್ದು ದೇವರ್ಗ್ಗೆ ಕೊಟ್ಟ ಭೂಮಣಲದೊ××ಪೆ ನೂಱು ಬತ್ತದ ಮಣ್ಣುಂ (ಎಕ. III (R), ಗುಂಡ್ಲುಪೇ. ೫೬-೮; 1049).

[ಪರೋಕ್ಷವಿನೆಯ + ಕೆಯ್$_1$]

ಪರೋಕ್ಷಸಾಕ್ಷ್ಯ (ನಾ). = ಪರೋಕ್ಷಪ್ರಮಾಣ: ಗ್ರಂಥವಿಮರ್ಶನು . . . ಪಾಠರೂಪವನ್ನು ಬಾಹ್ಯ ಅಥವಾ ಪರೋಕ್ಷಸಾಕ್ಷ್ಯಗಳಿಂದ ತಿಳಿಯುತ್ತಾನೆ (ಭಾರಪ. ೪೩). [ಪರೋಕ್ಷ + ಸಾಕ್ಷ್ಯ]

ಪರೋಟಾ (ನಾ). (ತುಪ್ಪ ಹಚ್ಚಿ ಬೇಯಿಸಿದ) ಒಂದು ಬಗೆಯ

ಗೋಧಿರೊಟ್ಟಿ : ಬಿಸಿನೀರಿನಲ್ಲಿ ಸ್ನಾನ ಮಾಡಿದವು. ಅನಂತರ ಪರೋಟಾ ಭೋಜನವಾಯಿತು (ಆಬಾಬ. ೫೭).

[←ಹಿಂ. ಪರಾಠಾ, ಪರೌಠಾ]

ಪರೋಟು 'ಪರಡಿ$_3$' ನೋ.

ಪರೋತ್ಕಮ (ನಾ). ಅತ್ಯಂತ ಶ್ರೇಷ್ಠನಾದವನು ; ಪರದೈವ : ಪರಶಂಕರ ಪರಂಜ್ಯೋತಿಯೆ ಪರೋತ್ಕಮ ಕರುಣಿಸುವುದು (ಕುಮ್ಯಾಅ. ೬-೪೭). [ಪರ$_3$+ಉತ್ಕಮ]

ಪರೋನ್ನತಿ (ನಾ). ಬೇರೆಯವರ ಉತ್ಕರ್ಷ ; ಇನ್ನೊಬ್ಬರ ಅಭಿವೃದ್ಧಿ : ಮುಳಿಸು ವಿಘೂರ್ಣನಂ ತಿಳಿವುದಂಬು ಪರೋನ್ನತಿ ತತ್ತರಿಂಗಸಂಕುಳವು . . . ಎನೆ ಮೇರೆದಪ್ಪಿದ ರತಾಮೃತವಾರ್ಧಿಯನೀಸಿ (ಶಾಂತಿಪು. ೬-೧೨೦). [ಪರ$_3$+ಉನ್ನತಿ]

ಪರೋಪಕಾರ (ನಾ). ಬೇರೆಯವರಿಗೆ ಮಾಡುವ ನೆರವು.—ಸಹಾಯ : ಪರೋಪಕಾರಕಾರಣಪರನಪ್ಪನಂ ಮನದೆ ನೆಚ್ಚದರಾರಧಮಾನಯಪ್ಪನಂ (ಕವಿಪ್ರ. ೧-೧೫೩) ; ಪರೋಪಕಾರವಿಭೂತಿ ಶಿವಭೂತಿ ಕರುಣಾರಸಾರ್ದ್ರಹೃದಯಂ (ಪಂಚತಂ. ೧೧೦-೧೫). [ಪರ$_3$+ಉಪಕಾರ]

ಪರೋಪಕಾರಿ (ನಾ). ಬೇರೆಯವರಿಗೆ ನೆರವು ನೀಡುವವನು ; ದಯಾಪರ : ಸ್ವಪುತೀ ಪರೋಪಕಾರೀ . . . ರಿಪುವರ್ಗಮನಲೆದು ಗೆಲ್ವೆಯೂಗಾಹವದೊಳ್ (ಕವಿಪ್ರ. ೨-೨೪). [ಸಂ.ಪರೋಪಕಾರಿನ್]

ಪರೋಪಜೀವಿ (ನಾ). ಬೇರೆಯ ಆಶ್ರಯವನ್ನು ಅವಲಂಬಿಸಿ ಬದುಕುವ ಜೀವಿ ; ಪರಾವಲಂಬನದಿಂದ ಜೀವಿಸುವ ಮನುಷ್ಯ, ಸಸ್ಯ, ಪ್ರಾಣಿ ಮುಂತಾದುವು : ಕೀಟಗಳು . . . ಪರೋಪಜೀವಿಗಳಂತೆ ಒಂದೇ ಆಶ್ರಯಜೀವಿಯನ್ನು ಅನುಸರಿಸುವುದಿಲ್ಲ (ಕೀಟವಿ. ೪). [ಪರ$_3$+ಉಪಜೀವಿ]

ಪರೋಪದೇಶಪಾಂಡಿತ್ಯ (ನಾ). ತಾವು ಆಚರಿಸದೆ ಬೇರೆಯವರಿಗೆ ಮಾತ್ರ ಬೋಧನೆ ಮಾಡುವ ಪಾಂಡಿತ್ಯ,—ವಿದ್ವತ್ತು : ಈ ಪರೋಪದೇಶಪಾಂಡಿತ್ಯವನ್ನು ಹೇಳಲು ಎಲ್ಲರಿಗೂ ಬರುತ್ತದೆ (ರಂಗರೋ. ೫೮). [ಪರ$_3$+ಉಪದೇಶ+ಪಾಂಡಿತ್ಯ]

ಪರೋಷ್ಣಿ (ನಾ). ಜಿರಲೆ ; ಜೊಂಡಿಗ : "ಪರೋಷ್ಣೀ, ಶ್ಮೆಲ ಪಾಯಿಕಾ—೩ ಹೆಂಡೇಮೂಗಕ್ಕಿಯ ಹೆಸರುಗಳು" (ಸದ್ಧಾಂತಿ. ೧೩೧).

[ಸಂ.ಪರೋಷ್ಣೀ]

ಪರ್ಕಟಿ (ನಾ). ಒಂದು ಬಗೆಯ ಮರ ; ಕರಿಬಸುರಿ ಮರ : "ಪರ್ಕಟಿಯೆನಲು [ಪಾಠಾಂ. ಪರ್ಪಟಿಕೆನಲು] ಬಸುರಿಯಕ್ಕುಂ" (ಪುಂಗರಾ. ೩೬-೨೦). [ಸಂ.ಪರ್ಕಟೀ]

ಪರ್ಕಿಸು 'ಪರಿಕಿಸು' ನೋ.

ಪರ್ಗಣ 'ಪರಗಣೆ' ನೋ.

ಪರ್ಗನ 'ಪರಗಣೆ' ನೋ.

ಪರ್ಗುಣ 'ಪರಗಣೆ' ನೋ.

ಪರ್ಚಿಸು$_1$ (ಕ್ರಿ). ಜಾಡಿಹೇಳು ; ದೂರುಹೇಳು : ಎನ್ನಯ ಸೊಬಗಂ ಗೆಲ್ದುಳ್ ಕನ್ನಿ ದಲೆಂದೆಂದು ರತಿಯೆ ಪರ್ಚಿಸುತಿರ್ಪಳ್ ತನ್ನಯನಲ್ಲನಂ (ಚಂದ್ರಪು. ೫-೧೩೫). [ಪರ್ಚು$_1$+-ಇಸು$_3$]

△ **ಪರ್ಚಿಸು$_2$** 'ಪಚ್ಚಿಸು$_2$' ನೋ.

ಪರ್ಚು$_1$, ಪಚ್ಚು$_2$, ಪಟ್ಟು (ಕ್ರಿ). ೧. ಗುಟ್ಟಾಗಿ ಕಿವಿಯಲ್ಲಿ ಹೇಳು ; ಪಿಸುಮಾತಾಡು ; ಪಿಸುಗುಟ್ಟು : "ಪರ್ಚು (ಅರ್ಚು)—ಅವ್ಯಕ್ತ ಧ್ವನಿ (ಪಿಸುಗುಟ್ಟು)" (ಕಪುಧಾ) ; ಅತಿಶಂಸಾಶೋಕನವಪ್ರವಾಳರುಚಿ ಮುಳಿಸೆ ರೂಪುಗೊಂಡವೊಲೆರಡುಂ ಕಿವಿಗಳೊಳಮಾಯಮಂ ಪರ್ಚುವ ಕಳ್ಪಿಪ ತೆಜದಿನೆಸೆದುದಾಸ್ಥಾಯಿಕೆಯೊಳ್ (ಶಾಂತಿಪು. ೩-೬೭) ; ಉದ್ಧತನಾಗಿರ್ದ ಕಂಸಂ ಪಡಿಯಜನಂ ಕರೆದು ಕಿವಿಯೊಳ್ ಪರ್ಚುವುದುಂ (ಅರ್ಧನೇ. ೮-೭೩ ಪ) ; ಸಿಂಗಾರಮ್ಮ :—(ಬಾಗಿ, ಆತನ ಕಿವಿಯಲ್ಲಿ ಪರ್ಚುತಿರುವಳು) (ಬೆಟ್ಟಅ. ೧೭-೧೯). ೨. ಜಾಡಿ ಹೇಳು ; ಪಿಸುಗಾಡು : ಮೆಲ್ಲನೆ ಮೇಳಿನ ಪರ್ಚುವ ಲಲ್ಲಯಿಸುವ ಪೆಜರನಟ್ಟ ಪೂಜನವ ಪಲವುಂ ಪೊಲ್ಲಮೆಯಂ ಕಲಿಸುವ ಮುನಿಯಲ್ಲಿ ಜಿನೋಕ್ತಿಯನೆ ಕೇಳಲಾಗದು ಚತುರಂ (ಧರ್ಮಾಮೃ. ೬-೨೧೩) ; ವಿಕಾಂತದೊಳ್ನಾರದಂ ಬಳಕೃಷ್ಣಗವತಂಸದಂತೆ ಕವಿವೊಕ್ಕೇನಾನುಮಂ ಪರ್ಚದಂ (ಅಸಂಪು. ೧೩-೪೦). ೩. ಗುಜುಗುಡು ; ಕಿಚಿಕಿಚಿ ಎಂದು ಶಬ್ದಮಾಡು : ಅಬಿಜುವ ಶಿವಗಣಂಗಳ ಪರ್ಚುವ ಮುಂಕದರಾರ್ ಪೂಲಿನಿಯರ . . . ನಲಿಪ ಬೇತಾಳಂಗಳ ಕೋಲಾಹಲಂ ಬಿಡುಸಾಗಲ್ (ರಾಮಾಶ್ವ. ೧೩೨-೨೨). **ಪರ್ಚು$_2$** : ೧. ಚಚ್ಚನೆ ಗುಜುಗುಜುಲೋಗರೊಳಚ್ಚೊತ್ತಿದ ತೆರದಿ ನೆರವು ತೊಟ್ಟಿರೊಳಾಗಲ್ ಪಚ್ಚುವ [ಪಾಠಾಂ. ಪೆರ್ಚದ] ಕಾವಿನಿ ತಪ್ಪಲೊಡರ್ಚುವಳಟ್ಟಿ ಪೆಜರೊಳಾಡೊಡೆ ನಿರತಂ (ಸೂಕ್ತಿಸು. ೪-೧೧೧ ; ಸುದತಿ. ೪-೩೭ ನೋ) ; ಅರಸಿ ಮದನ ವೀಣೆಯ ಕಿವಿಯಂ ಪಚ್ಚುವುದುಂ (ಚಂದ್ರಪು. ೩-೯೨ ಪ) ; ಕರೆಯಲ್ಕಣ್ಮದೆ ಪೀಕಮರ್ದಕನುಮೆನ್ನಂ ಪಚ್ಚುವಂ (ಅಸಂಪು. ೩-೪). △ **ಪೆಟ್ಟು$_2$** : ೨. ಅದಾನಟುವೋರೂ ಅಟುವೆಲ್ಬಟ್ಟುದೋರ್ ×× ಮನದೆ ನೆನೆವೋರುಂ ಆಟುಮೆನೆನ್ದುಪಾದೇಸಂ ಕೊಡುವೋರುಂ ಪಚ್ಚುಮಹಾಪಾತಕಸಂಯುಕ್ತರಪ್ಪೊರ್ (ಎಕ. VI, ಕೊಪ್ಪ. ೩೮-೪ ; ಸು. 675 ?).

ಪರ್ಚಿ ಪೇಟ್ಟು, ಪಚ್ಚಿ ಪೇಳ್ = ಕಿವಿಯಲ್ಲಿ ಗುಟ್ಟಾಗಿ ಹೇಳು,—ರಹಸ್ಯವಾಗಿ ಹೇಳು : ಪಗೆವರಂ ನಾಳೆ ಕಾದಿ ಗೆಲ್ವುದೆಂದು ಹಿತೋಪದೇಶಂಬೆರಸು ಜಳಮಂತ್ರೋಪದೇಶಮಂ ಕಿವಿಯೊಳ್ ಪರ್ಚ ಪೇಟ್ಟುದ್ದುರುಪಿತಾಮಹಂ ಸಂಜಯನಂ ಧೃತರಾಷ್ಟ್ರನಲ್ಲಿಗೆ . . . ಅಟ್ಟ (ಪಂಪಭಾ. ೧೩-೭೦ ಪ) ; ತೊಟ್ಟನೆ ಭೂಕಾಂತೆಗೆ ಪರ್ಚ ಪೇಟ್ಟ ತೆದನಾಯ್ತೋರಂತೆ ಪುಷ್ಪೋಪಹಾರನಿಕಾಯಕ್ಕೆಜಗಿರ್ದ ಮಾದ್ಯದಳಿನೀರುಂಕಾರಸಾರಸ್ವನಂ (ಶಾಂತೀಶ್ವ. ೩-೧೨೭) ; ನಳಂ ನಿನಗಿಂದನಳಂದಿಟಕ್ಕೆನಲ್ ಮದನದವಾಗ್ನಿಯೊಳ್ ತನುವನಾಗಳೆ ನೀಗುವಳೆಂದು ಪರ್ಚ ಪೇಟದೆ ಸಖಿಯರ್ ಸಮಂತು ದಮಯಂತಿಗೆ ಮಾಟ್ಪರನೇಕ ಶೈತ್ಯಮಂ (ನಳಚಂ. ೧೧೩) ; ಉಂಬ ತಾಣವಿದೆಂದು ಕಿವಿಯಲಿ ಪ [ಪಾಠಾಂ. ಕಿ, ಮು, ಮು]ಚ್ಚಿ ಪೇಳ್ವಂತೆ ಶಂಭು ಪಂಚಾಕ್ಷರಿಯ ನೇಮಿಸಿ . . . ಹೋದನು ದೇವ (ಪ್ರಭುಲಿಂ. ೯-೧೪). **ಪಚ್ಚಪಚ್ಚ** = ಪಿಸುಮಾತಿನಲ್ಲಿ ಹೇಳಿ ; ಗುಟ್ಟಾಗಿ ಹೇಳಿ : ಎಲ್ಲಿಲ್ಲದ ಸುರಗಣಕೆಯರೆಲ್ಲಿಲ್ಲದ ದೇವಿಯರ್ಕಳಗಲರುಸಿರ್ಪತ್ತಿಲ್ಲ ನಮಗವರೆ ಜಗತೀವಲ್ಲಭನಂ ಪಚ್ಚಪಚ್ಚ ಮೆಚ್ಚಿಸಿಕೊಂಡರ್ (ಅಜಿಪು. ೬-೧೦೦).

△ **ಪರ್ಚು$_2$** 'ಪಚ್ಚು$_3$' ನೋ.

ಪರ್ಚು$_3$, ಪಚ್ಚು$_4$ (ನಾ). ಗುಟ್ಟುಮಾತು ; ಕಿವಿಮಾತು ; ಪಿಸುಮಾತು : ಸುಕರಂ ಭಾವಿಸಿ ನೋಡೆ ದೇವ ಪಿತರೇಂ ಸಂಜೀವಕಂ ದಾನವಪಾವಕನಾದಂ ಭವದಿಷ್ಟಸೇವಕಗಣಕ್ಕೇಂ ಪರ್ಚುವೇಂ [ಪಾಠಾಂ. ಪಚ್ಚಮೇಂ]ಮುಂತಣಂ (ಪಂಚತಂ. ೧೩-೨೩) ; ಪಕ್ಕಿಗಳ ನೆರವಿಯೊಳ್ ಬೆರ್ಚು ಪಕ್ಕಿಸುವ ಮಂತ್ರದೊಳೆ ಪರ್ಚು (ಬಂಹಿ. ೧-೧೯). **ಪಚ್ಚು$_4$** : ವಿರೋಧಿ ಬೆಗತ್ತುಗೊಂಡೆನಸುಮುಂಬಿದೆಯ್ತಂದಂ ಕಾದಲ್ಕೆ ಪೂಣ್ದು ಪೊಡರ್ಪಿನಿಂದೆನೆ ಬಿಟ್ಟು[ಕ]ದಕ್ಕೇ ಪ[ಚ್ಚು] [ಪಾಠಾಂ. ಚ್ಚಂ] ಮುಂತಣಂ ತೊಡೆದೆನ್ನನೀಯ[ನುವರದೊಳೇಂ] ಬಿಟ್ಟಕ್ಕಾಂ ಸಾಲ್ವೆನಾರ್ ನೆರೆ ದಾನೆಯಂ (?) (ಪರ್ಥಸಾ. ೪-೨೬) : ಶನಿಯಂ ನೋಡೆ ಶುಭೇತರ ಗ್ರಹಗಣಂ ಪರ್ಚಕ್ಕೆ ತಲ್ಲಗ್ನಜಾತನರಂ ಸಂದೆಯಮೇನೊ ಪೊಂದುಗುಮ

ದಕ್ಕೀಂ ಪಚ್ಚ್[ಪಾಕಾಂ. ಪಂಚ್]ದೇಂ ಮಂತಣಂ (ಜಾತಕ. ೬-೧೬).

[<ಪರ್ಚು-]

ಪರ್ಚುಕೊಳ್ 'ಪಚ್ಚುಗೊಳ್' ನೋ.

ಪರ್ಚುಗುಡು 'ಪಚ್ಚುಗೊಡು' ನೋ.

ಪರ್ಚುಗೂಂಟೆ 'ಪಚ್ಚುಗೂಟೆ' ನೋ.

ಪರ್ಚುಗೊಡು 'ಪಚ್ಚುಗೊಡು' ನೋ.

ಪರ್ಚುಗೊಳ್ 'ಪಚ್ಚುಗೊಳ್' ನೋ.

ಪರ್ಜನಿ (ನಾ). ಒಂದು ಬಗೆಯ ಸಸ್ಯ; ಮರದರಿಸಿನ: "ಪೀತದ್ರುಃ, ಹಾರೇಯಕಃ . . . ದಾರುಹರಿದ್ರಾ, ಪರ್ಜನೀ—೭ ಮರದರಿಸಿನ, ಕಸೂರಿಅರಿಸಿನವೆಂದು ಕೆಲವರನ್ನುವರು" (ಸಿದ್ಧಾಂತ. ೧೬೫). [ಸಂ.ಪರ್ಜನೀ]

ಪರ್ಜನ್ಯ (ನಾ). ೧. ಮಳೆಯನ್ನು ಸುರಿಸುವ ಮೋಡ,—ಮೇಘ: ದಂತಕಾಂತಿಯಂ ಗೊಂಚಲ್ಗಿಂಜೆಂದು ಗರ್ಜನೆಯಂ ಪರ್ಜನ್ಯಜನ್ಯಧ್ವನಿಯೆಂದು ಮುಂದುಗೆಟ್ಟು ತೊಟ್ಟನೆ . . . ಬೆಗಡುಗೊಂಡು ತಳರ್ದ ಕರುಣಮರಾಳಂಗಳಂ (ರಾಜಶೇ. ೧-೧೦೨ ಪ). 'ಪರ್ಜನ್ಯಗರ್ಜನ' ಪರಾ. ೨. ಗುಡುಗಿನ ಶಬ್ದ; ಮೇಘಧ್ವನಿ: "ಅಭ್ರಗರ್ಜನೆಯ ಪರ್ಜನ್ಯವೆಂದೆಂಬುದು" (ಪುಂಗರಾ. ೧೪೧-೧೬). ೩. ಮಳೆ; ವರ್ಷ: ಅಮರಸರಿತ್ಪದ್ಮಪತ್ರೋದನೀಲೀನವಹಂ .ಪರ್ಜನ್ಯದೋಹಕ್ಷಮಬಹು ಮಹಿಷೀಸಂಕುಲಂ ಯಾಮಿನೀಸಂಧನಶುಂಭನ್ಮಂದಿರಂ ನಿಂದುದು ಪಿಕರುಚಿ ರೋತ್ತಾಳಮಂಭೋದಜಾಳಂ (ಆನಂಪು. ೯-೭). ೪. ಮಳೆಯ ಅಧಿದೇವತೆ; ಇಂದ್ರ: "ಇಂದ್ರಃ . . . ಗೋಪತಿಃ . . . ಪರ್ಜನ್ಯಃ . . . ಮೇಘವಾಹನಃ—ಈ ೫೯ ದೇವೇಂದ್ರನ ಪೆಸರ್" (ಹಲಾಯು. ೧೦-೫೨) ; ಸೂರ್ಯಪುತ್ರಿಯಾದ ಶ್ರದ್ಧೆಯು ಪರ್ಜನ್ಯನಂತೆ ಬಲಶಾಲಿಯೂ ಪೂಜ್ಯನೂ ಆದ ಸೋಮನನ್ನು ದ್ಯುಲೋಕದಿಂದ ತಂದಳು (ಋಕ್ಸಾರ. ೫೨). ೫. ಪರಮಾತ್ಮ; ವಿಷ್ಣು : 'ಪರ್ಜನ್ಯಃ ಪರಮಸ್ಯ ಜನ್ಯಮಸ್ಯೇತಿ ಪರ್ಜನ್ಯಃ'—ಜನನವಾಗುವ ಪದಾರ್ಥಕ್ಕೆ ಜನ್ಯವೆಂದು ಹೆಸರು. ಪರಮನ ಸೇವಾರ್ಥ ಹುಟ್ಟುವ ಪದಾರ್ಥಗಳುಳ್ಳವನಿಗೆ ಪರ್ಜನ್ಯನೆಂದು (ಪರಮಾತ್ಮನೆಂದು) ಹೆಸರು. ಈ ಪರ್ಜನ್ಯಗತರೂಪವು ವಾಸುದೇವನು (ಹಸಾರ. ೬-೩ ತಾತ್ಪರ್ಯ). ೬. ದ್ವಾದಶಾದಿತ್ಯರಲ್ಲಿ ಒಬ್ಬ : ಧಾತಾ ಆರ್ಯಮಾ ಮಿತ್ರ ವರುಣ ಇಂದ್ರ ವಿವಸ್ವಾನ್ ಪರ್ಜನ್ಯ ಪೂಷ ಅಂಶುಮಾನ್ ಗಭಸ್ತಿಮಾನ್ ತ್ವಷ್ಟಾ ವಿಷ್ಣುಗಳೆಂಬವರೀ ಕ್ರಮದಿಂ ದ್ವಾದಶಾದಿತ್ಯರು (ವಿವೇಕ. ೨೧೮). [ಸಂ.]

ಪರ್ಜನ್ಯಗರ್ಜನ (ನಾ). ಮೋಡದ ಗರ್ಜನೆ; ಗುಡುಗಿನ ಶಬ್ದ : ಆಗಳವನ ಗರ್ಭಗರ್ಭಂಗಳಪ್ಪ ನರ್ಭರೋಕ್ತಿಗಳಂ ಕೇಳ್ದು ಕುಮಾರಂ ಪರ್ಜನ್ಯಗರ್ಜನಮಂ ಕೇಳ್ದ ಕೇಸರಿಕುಮಾರನಂತು ಕೆಳರ್ದು (ಚಂದ್ರಪು. ೫-೭೪ ಪ). [ಪರ್ಜನ್ಯ+ಗರ್ಜನ]

ಪರ್ಜನ್ಯಜಪ (ನಾ). ಮಳೆಗೋಸ್ಕರವಾಗಿ ಮಳೆಯ ಅಧಿದೇವತೆಯನ್ನು ಕುರಿತು ಮಾಡುವ ಜಪ,—ಪ್ರಾರ್ಥನೆ: ಸಕಾಲದಲ್ಲಿ ಮಳೆ ಬರದಿದ್ದರೆ ಪರ್ಜನ್ಯಜಪ ಮಾಡುವುದರಿಂದ ಮಳೆ ಸುರಿಯುವುದೆಂಬ ನಂಬಿಕೆ ಜನರಲ್ಲಿದೆ (ರೂಢಿ). [ಪರ್ಜನ್ಯ+ಜಪ]

ಪರ್ಜನ್ಯಾಸ್ತ್ರ (ನಾ). ಮಳೆಯ ಅಧಿದೇವತೆಯನ್ನು ಅಭಿಮಂತ್ರಿಸಿ ಬಿಡುವ ಅಸ್ತ್ರ; ಮೇಘಾಸ್ತ್ರ; ವರುಣಾಸ್ತ್ರ: ಅರ್ಜುನನು . . . ಪರ್ಜನ್ಯಾಸ್ತ್ರದಿಂದ ಮೇಘಗಳನ್ನು ಬರಿಸಿ ವಾಯವ್ಯದಿಂದ ಗಾಳಿಯನ್ನು ಎಬ್ಬಿಸಿದನು (ಪಚಭಾ. ೨೩). [ಪರ್ಜನ್ಯ+ಅಸ್ತ್ರ]

ಪರ್ಜಿ (ನಾ). ದ್ರಾವಿಡಭಾಷೆಗಳಲ್ಲಿ ಒಂದು ಮತ್ತು ಆ ಭಾಷೆಯನ್ನಾಡುವ ಒಂದು ಜನಾಂಗ: ಪರ್ಜಿಭಾಷೆ ಅಸಂಸ್ಕೃತ ಅಥವಾ ಶ್ರಾವಣಭಾಷೆಗಳ ಗುಂಪಿಗೆ ಸೇರಿದ ಒಂದು ಸ್ವತಂತ್ರ ಅಥವಾ ಪ್ರತ್ಯೇಕ ಪರಿಗಣನೆಗೆ ಅರ್ಹವಾದ ಭಾಷೆ (ದ್ರಾವಿವಿ. ೧೪೨).

ಪರ್ಣ (ನಾ). ೧. ರೆಕ್ಕೆ; ಪಕ್ಷ; ಗರಿ: 'ಪರ್ಣತನು' ಪರಾ. ೨. ಎಲೆ; ದಳ; ಪತ್ರ: "ಬರ್ಹಂ, ಪರ್ಣಂ, ದಳಂ, ಪತ್ರಂ, ಪಲಾಶಂ, ಛದನಂ, ಛದಃ—ಈ ಏಳು ಮುರದ ಎಲೆ" (ಹಲಾಯು. ೩೧-೩೧) ; ಆಯತರಂಗವಲ್ಲಿಪರಿಶೋಭೆಯನಂಚಿತಚಾರುಕೀರ್ಣಪರ್ಣಾಯುಧಪಾಳಿತೋರಣವಿರಾಜಿತಮುಂ . . . ಅನಂದಿತಸುಂದರರಾಜಮಾರ್ಗಮುಂ ಶ್ರೀಯು ನಿವಾಸಮುಂ ಪುಗೆ ಸ್ವಪೇಶ್ವರಕನ್ಯಕೆಯುಂ ಕುಮಾರನುಂ (ಶಾಂಪು. ೬-೪) ; ವಸ್ತುವಿಪ್ಪ ಭೇದವ ಬಲ್ಲೆನೆಂದರೆ ಪರ್ಣದೊಳಗಿಪ್ಪ ಪಚ್ಚೆಯಂತೆ . . . ಅದು ನೆಪ್ಪಿಗೆ ಬಾಕದು (ಮೋಳಮೂ. ೬-೩೦) ; ನಾಗವಲ್ಲಿಯ ಹಿಂದು ಮುಂದನು ನೀಗಿ ಕಳೆಯದೆ ಚೂರ್ಣಪರ್ಣತ್ಯಾಗವಿಲ್ಲದೆ ದಂತಧಾವನಪರ್ಣವನು ಸವಿದು ಭೋಗಿಸುವೊಡೆ . . . ಅವನನು ನೀಗಿ ಕಳೆವಳು ಭಾಗ್ಯವಧು (ಕುಪ್ಯಾಖ್ಯ. ೬-೫೯). ೩. ವೀಳೆಯದೆಲೆ; ನಾಗವಲ್ಲಿ : ಸ್ಥೂಲವಡಿಕೆಯಾದಂತೆ ಸೂಕ್ಷ್ಮ ಪರ್ಣವಾದಂತೆ ಕಾರಣ ಚೂರ್ಣವಾದಂತೆ ಮೂಜು ಕೂಡಿದ ಮತ್ತೆ ಬಣ್ಣವಾಯಿತ್ತು ರಜ (ಮೋಳಮೂ. ೧೦೮-೪೩೦) ; ಪೊಂಬರಿಯಣಿದಿ ಪೋಳ್ಕಣಮಯವಡೆದಿರ್ದ ಸಂಬಳಿಗೆಯ ಪರ್ಣಚೂರ್ಣ ಕೊಂಬ ಕರ್ಪೂರಕರಂಡವ ಸ್ಮರನ ತಲೆಗಿಂದಿ ನೊಳ್ ತಂದಿರಿಸಿದರು (ಪೋಪಚ. ೧೬-೨೬). ೪. ಮುತ್ತುಗದ ಮರ; ಪಲಾಶ : "ಪಲಾಶಃ, ಕಿಂಶುಕಃ, ಪರ್ಣಃ, ವಾತಪೋತಃ—೪ ಮುತ್ತುಗದ ಗಿಡ" (ಸಿದ್ಧಾಂತ. ೧೧೮). ೫. ಒಂದು ಬಗೆಯ ಕ್ರಿಮಿ (?) : ಕುಂಥು ಘುಣ ಮತ್ಕುಣ ದಂಶ . . . ಇಂದ್ರಗೋಪ ಪರ್ಣ ವೃಶ್ಚಿಕ ಸಹಾದ ಕ್ರಿಮಿಕೀಟಕಾದಿ ತ್ರೀಂದ್ರಿಯಂಗಳ್ ಸ್ಪರ್ಶನ ರಸನ ಘ್ರಾಣೇಂದ್ರಿಯಬೋಧಕಲಿತಂಗಳಪ್ಪುವು (ತತ್ತ್ವಪ್ರ. ೯೮). [ಸಂ.]

ಪರ್ಣಕುಟಿ (ನಾ). ಎಲೆ, ಹುಲ್ಲು, ಗರಿ ಮೊದಲಾದುವುಗಳಿಂದ ನಿರ್ಮಿಸಿದ ಮನೆ; ಪರ್ಣಶಾಲೆ; ಎಲೆವನೆ: ಶಿಷ್ಯರನವರವರ ಪರ್ಣಕುಟಿಗಳ್ಗೆ ಕಳುಹಿ (ತ್ರೀಲಾಪೂ. ೧೪೩-೩೧) ; ತಾನೂ ಲಕ್ಷ್ಮಿಯೂ ಸಂಧ್ಯಾಸಮಯದಲ್ಲಿ ತಮ್ಮ ಪರ್ಣಕುಟಿಯ ಬಳಿ ಕುಳಿತಿದ್ದಂತೆ . . . ಕನಸು ಕಂಡಳು (ಶಾಂಕಲಾ. ೨೩೭). [ಪರ್ಣ+ಕುಟಿ2]

ಪರ್ಣಕುಟೀರ (ನಾ). = ಪರ್ಣಕುಟಿ : ಪರ್ಣಕುಟೀರದೊಳ್ ತೀರ ತಪ್ಪದೊಳಿರ್ದು . . . ಸುಖಸಮಾಧಿಯನಾಂತೆಸೆದಂ ಮುನೀಶ್ವರಂ (ದಶಕು. ೮-೫೪) ; ಅವಳ ಅಪರಿಮಿತವಾದ ಪರಿಶ್ರಮದಿಂದ ಗುಡಿಸಿಲಿನ ಎದುರು ಸುಂದರ ಕೈತೋಟವು ಏರ್ಪಟ್ಟು ಮಹಾಶ್ವೇತೆಯ ಪರ್ಣಕುಟೀರದಂತೆ ಕಾಣುತ್ತಿತ್ತು (ಹೇಮಂತ. ೯೧). [ಪರ್ಣ+ಕುಟೀರ]

ಪರ್ಣಗೃಹ (ನಾ). = ಪರ್ಣಕುಟಿ : ಕಿಕ್ಕಿರಿಯುವಂತೆ ಕವಿದುವು ಕಡಲ ತೀರಮಂ ಪರ್ಣಗೃಹಗಳ್ ಚಮರ್ಮಧಾದಿತಂ (ತ್ರೀಲಾಪೂ. ೫೪೪-೧೧೬). [ಪರ್ಣ+ಗೃಹ]

ಪರ್ಣತನು (ನಾ). ಗರಿಗಳಿಂದ ಕೂಡಿದ ಶರೀರ; ರೆಕ್ಕೆಪುಕ್ಕಗಳಿರುವ ಮೈ; ಪಕ್ಷಿಯ ದೇಹ: ಕಮಗೋಸ್ಕಿ . . . ಪರ್ಣತನುವಾಗಿ, ಹರಿಪರ್ಯಂತಂ ವೆರಸಿ ಮಿರುಮಿರುಗಿ ಬರುತಿರ್ದನಂ ಗರಿಮೆಯ್ಯನಂ ಕಂಡು ಸಂತೋಷಿಸಿತು ಶಕುನಮುಂಗಳಕೆ (ತ್ರೀಲಾಪೂ. ೬೯೨-೭೩೧). [ಪರ್ಣ+ತನು]

ಪರ್ಣದ್ರುಮ (ನಾ). ಮುತ್ತುಗದ ಮರ; ಪಲಾಶ : ಏರಿದನು ಸೌಮಿತ್ರಿ . . . ವಿರಳಪರ್ಣದ್ರುಮದ ಪುಷ್ಪಿತಶರೀರದಾ ಸ್ವರ್ಗಚುಂಬಿತ ಸಾಲದುನ್ನತಶಿರದ ಕರದ ಗೋಪುರಕೆ (ತ್ರೀಲಾಪೂ. ೧೫೬-೧೪೬). [ಪರ್ಣ+ದ್ರುಮ]

ಪರ್ಣಪುಟ (ನಾ). ಎಲೆಯಿಂದ ಮಾಡಿದ ದೊನ್ನೆ; ಪತ್ರಪುಟ:

ಮುನಿಕುಮಾರಂ ಕೃತಸ್ನಾನನಾಗಿ . . . ಎನ್ನಂ ಪರ್ಣಪುಟದೊಳ್ ತಳೆದು ನಿರ್ವರ್ತಿತ ನಿಯಮರಪ್ಪ ಮುನಿಕುಮಾರರ್ ಬೆರಸು ನಿಜಾಶ್ರಮಕ್ಕೆ ಪೋಗೆಪೋಗೆ (ಕಾದಂಪೂ. ೨೧೪). [ಪರ್ಣ+ಪುಟ$_3$]

ಪರ್ಣಪುಟಕೆ (ನಾ). = ಪರ್ಣಪುಟ: ಪರಪುಷ್ಪದಂತೆ ಪುಗಲೆಂಬರ ಮಾತಂ ಮೀಱಿ ಲಕ್ಷ್ಮಣಂ ಪೊಕ್ಕು ಸರೋವರಮಂ ಮೊಗೆದಂ ಜಲಮಂ ಸರೋಜವಿಸ್ತೀರ್ಣಪರ್ಣಪುಟಕಾಹಸ್ತಂ (ಪಂಂಾಮಾ. ೬-೧೦೫). [ಪರ್ಣ + ಪುಟಕೆ$_2$]

ಪರ್ಣಭವನ (ನಾ). = ಪರ್ಣಕುಟಿ: ರಘುಭೂಪಾಲಕನು ರಿಪು ವಿಜಯವಿಭವದ ಲೀಲೆಯಲಿ ನಿಜಪರ್ಣಭವನಕೆ ಬರಲು (ತೊರರಾ. ೩-೬-೧). [ಪರ್ಣ + ಭವನ]

ಪರ್ಣಭೋಜನ (ನಾ). ೧. ಎಲೆಯನ್ನು ತಿನ್ನುವುದು. ೨. ಗಿಡದ ಎಲೆಗಳನ್ನೇ ಆಹಾರವಾಗಿ ಹೊಂದಿರುವ ಮೇಕೆ, ಆಡು ಮುಂತಾದುವು. [ಪರ್ಣ+ಭೋಜನ]

ಪರ್ಣಮಂದಿರ (ನಾ). = ಪರ್ಣಕುಟಿ: ತೊರವೆಯ ಶ್ರೀನೃಸಿಂಹನು ಬಂದು ಹೊಕ್ಕನು ಪರ್ಣಮಂದಿರವ (ತೊರರಾ. ೩-೧-೪೮). [ಪರ್ಣ + ಮಂದಿರ$_2$]

ಪರ್ಣಮಾಲೆ (ನಾ). ಎಲೆಗಳನ್ನು ಪೋಣಿಸಿ ಮಾಡಿದ ಸರ,— ಹಾರ: ನಮ್ಮ ಮನೆಯಲ್ಲಿಯ ಗೂಟ, ಬೋದು, ಕಿಡಕಿ, ಮಾಡ, ಜಂತಿಯ ಈ ತುದಿಯಿಂದ ಆ ತುದಿ, ನಾವು ಸಂಗ್ರಹಿಸಿದ ಈ ಪರ್ಣ ಮಾಲೆಯಿಂದ ಅಲಂಕೃತವಾಗಿರುತ್ತಿದ್ದವು (ದೀಪಹ. II, ೨). [ಪರ್ಣ + ಮಾಲೆ]

ಪರ್ಣಲಘು (ನಾ). [ಜೈನ] (ಮೇಲಿನಿಂದ ಬೀಳುವಾಗ ಪೆಟ್ಟು ತಾಗದಂತೆ) ಶರೀರವನ್ನು ಎಲೆಯಷ್ಟು ಹಗುರಗೊಳಿಸುವ ವಿದ್ಯೆ: ನೊಂದು ನಿತ್ತರಿಸಲಾಱದೆ ಭೋಂಕನೆ ಬಿಟ್ಟು ತಾಂ ಮಹೀತಳಕೆ ಬೀಳುತ್ತುಂ ನಮ್ಮ ನೋವಿಂಗಾಱದೆ ಪರ್ಣಲಘುವೆಂಬ ವಿದ್ಯೆಯಂ ಬೆಸಸುವುದುಂ (ಶಾಂತಿಪು. ೪-೯೬ ವ); ಪ್ರಜ್ಞಪ್ತಿ ಕಾಮರೂಪಿಣಿ . . . ಪರ್ಣಲಘು . . . ಅಭೋಗಿನಿಯೆಂಬಿವು ಮೊದಲಾಗೆ ಕುಲವಿದ್ಯೆ ಜಾತಿವಿದ್ಯೆ ಸಾಧಿತವಿದ್ಯೆಗಳೊಳ್ ಸಂಪನ್ನನಾಗಿರ್ದು (ಜಾವುಂಪು. ೧೯೬). [ಪರ್ಣ + ಲಘು]

ಪರ್ಣಲಘುವಿದ್ಯೆ (ನಾ). = ಪರ್ಣಲಘು: ತನ್ನ ಕರ್ಣಕುಂಡಳಮಂ ಬಾಳಕನ ಕರ್ಣಯುಗಳಂಗಳೊಳಮರ್ಚಿ ಪರ್ಣಲಘುವಿದ್ಯೆಯಿನೀಡಾಡಿ ಪೋಪುದುಂ (ಪಂಂಾಮಾ. ೪-೧೯ ವ). [ಪರ್ಣಲಘು + ವಿದ್ಯೆ]

ಪರ್ಣವಿಕ್ರಯಿ (ನಾ). ವೀಳೆಯದೆಲೆಯನ್ನು ಮಾರುವವಳು: ನರ್ತಕಿಯ ನಾಪಿತೆಯ ಪರ್ಣವಿಕ್ರಯಿಯ . . . ಸೈರಂಧ್ರಿಯ ಕರ್ತವ್ಯ ದಿಂದಿನಿಬರೊಡನಾಡಿದೊಡೆ ಬಾಲೆಯರ್ತವೆ ದುರಾಚಾರಮಂ ಕಲಿವರು (ಜೈಮಿಭಾ. ೫-೫೮). [ಸಂ.ಪರ್ಣವಿಕ್ರಯಿನ್]

ಪರ್ಣಶಾಲೆ (ನಾ). = ಪರ್ಣಕುಟಿ: "ಯತಿಕುಟೀರಕ್ಷಮದು ಪರ್ಣ ಶಾಲೆ" (ವಸ್ತುಕೋ. ೪೮-೨೦); ಮೆಲ್ಲನೆ ನಿನ್ನ ಪರ್ಣಶಾಲೆಗೆ ಮುನಿ ಬಿಜಯಂಗೆಯ್ (ದಶಕು. ೮-೫೮); ಚಿತ್ರಮಯವಾಗಿ ಕಟ್ಟಿತು ಪರ್ಣಶಾಲೆ ಶತಪತ್ರಲೋಚನೆಗೆ (ಜೈಮಿಭಾ. ೧೯-೪೨). [ಪರ್ಣ+ಶಾಲೆ$_3$]

ಪರ್ಣಾಸ (ನಾ). ೧. ಒಂದು ಬಗೆಯ ಸುವಾಸನೆಯ ಸಸ್ಯ; ಕಾಮಕಸ್ತೂರಿ: "ಪರ್ಣಾಸಃ, ಕಠಿಂಜರಃ, ಕುಟೀರಕಃ— ೩ ಕಗ್ಗೊರ್ಲೇಗಿಡದ ಹೆಸರು, ಕಾಮಕಸ್ತೂರೀ ಗಿಡ" (ಸಿದ್ಧಾಂತಿ. ೧೩೦). ೨. ತುಳಸಿ. [ಸಂ.]

ಪರ್ಣಾಹಾರ (ನಾ). = ಪರ್ಣಭೋಜನ. [ಪರ್ಣ+ಆಹಾರ]

ಪರ್ತ 'ಪರತ' ನೋ.

ಪರ್ತಿ 'ಪಟ್ತಿ' ನೋ.

ಪರ್ದಲ 'ಪರ್ದಿಲ' ನೋ.

ಪರ್ದಿಲ, ಪರ್ದಲ, ಪಟ್ದಲ (ನಾ). ೧. ಒಬ್ಬಾತನ ಹೆಸರು: ನರಯಣನ ದಾನಗೊಟ್ಟ ಪಟ್ಟಿಲ ದೇವಯಾನ ದೇಗುಲಕ್ಕೆ ಕೊಟ್ಟ ನನ್ದಿ ಮಕರ ಪ್ರತಿಮೆಗಳನರಪಟ್ಟಿಗವೊನ್ದು (ಸೌಇಇ. XI-i, ೩೫-೧೦; 933). **ಪರ್ದಲ**: ೨. ಒಂದು ಸ್ಥಳದ ಹೆಸರು; ೩ ಈಗಿನ ಧಾರವಾಡ ಜಿಲ್ಲೆಯ ಹದಲಿ: ಶ್ರೀಭೈರವರಕ್ಷಣೀಯರ್ದ್ದುಷ್ಟ ನಿಗ್ರಹ ವಿಸಿ(ಶಿ)ಷ್ಟಪ್ರತಿಪಾಳಕರಪ್ಪ ಶ್ರೀಮತ್ಪರ್ದ್ದಲನಾಲ್ನೂಱಿರ್ಪ್ಪ ದಿಮ್ಬರ್ (ಇಅ. XII, ೯೨-೧೨; 1084). **ಪಟ್ದಲ**: ೨. ಲೋಕ ದೊಳ್ ನೆಗಟ್ದ ಪಟ್ದಲ ಸದ್[ದಿ]ವಿಜರೇಂ ಕೃತಾರ್ತ್ಥರೊ (ಇಅ. XIII, ೯೨-೧೪; 1084). [?]

ಪರ್ದಿಷ್ಟ (ನಾ). ಸಂಪ್ರದಾಯ; ಪದ್ಧತಿ: ಇದು ಪೂರ್ವಿಕರಿಂದ ಬಂದ 'ಪರ್ದಿಷ್ಟ' (ನಮ್ಮೂರ. ೧೨೬). [?]

ಪರ್ದು, ಪದ್ದು$_1$, ಹದ್ದು$_1$, ಹರ್ದು (ನಾ). ೧. ಒಂದು ಬಗೆಯ ಹಕ್ಕಿ; ಗೃಧ್ರ: "ಪರ್ದೆನೆ ಗೃಧ್ರಂ" (ಕವಿಕಂ. ೬೮); ಸುಭದ್ರೆಯಪ್ಪ ವ್ಯಂತರದೇವತೆ ವಿಭಂಗಜ್ಞಾನದಿಂದಱಿದು ಚಿಲಾತ ರಿಸಿಯರಂ ಕಂಡು ಪಗೆಯಂ ನೆನೆದು ಪರ್ದಿನ ರೂಪಂ ಕೈಕೊಂಡು ಬಂದು ನೆತ್ತಿಯ ಮೇಗಿರ್ದು ಕಣ್ಗಳಂ ತೋಡಿ ತಿನೆ (ಪಡ್ಡಾರಾ. ೧೬೮-೪); ನಿನ್ನಂ ಕೊಂದನ ಬಸಿಱಿಂ ನಿನ್ನಂ ತೆಗೆಯದೆಯುಮವನ ಕರುಳಂ ಪರ್ದಿಂ ಮುನ್ನುಂಗಿಸಿ ನೋಡದೆಯುಂ ಮುನ್ನಮೆ ಯುವರಾಜ ನಿನ್ನನಾಂ ನೋಡಿದೆನೇ (ಪಂಪಭಾ. ೧೩-೫೭); ತೊಡರ್ದರಿಸೈನ್ಯಂ ಬೆನ್ನಿತ್ತೊಡಱಿ ಯೆನಾಂತೊಡದನ್ನೆಱೆ ಪರ್ದಿಂಗೆ ಬಿರ್ದನಿಕ್ಕುವೆನೀಗಳ್ (ಚಂದ್ರಪು. ೧೦-೮೮); ಹರಣಂ ಹಮ್ಮೈಸಿ ಪರ್ದೆಱಗಿದುರಗಿಯಂತೆ ಮಿಡುಮಿಡನೆ ಮಿಡುಕಿ (ರಾಜಶೇ. ೧೩-೧೦೪ ವ). ೨. ಗರುಡ; ಗರುತ್ಮ: "ಪಕ್ಕಿಗಳಾಣ್ಮಂ" ಎಲರುಣಿವಗೆಯಂ, ಪರ್ದು—ಈ ೩ ಗರುತ್ಮಂಗೆ ಪೆಸರ್" (ಕಶಸಾ. ೪೭-೧೨); ತೊಳಗುವ ಸಂಕುಂ ಪಾಱುಂಬಳೆ ನೇರ್ಪಡೆ ಪರ್ದನೇಱಿ ಬಂದೊಲವಿಂ ಪಜ್ಜಳಿಪ ಮುಗಿಲೆಡೆ ಯೊಳಿರ್ದಂ ತಳತಳಿಸುವ ತೊಡವನಾಂತು ಸಿರಿವೆಣ್ಣರಸಂ (ಕಬ್ಬಿಕಾ. ೨೯೨); ಅಂಬುಜನಾಭನ ಪರ್ದು ಕಾರ್ತಿಕೇಯನ ನವಿಲ್ . . . ವಿಂಧ್ಯವಾಸಿನಿಯ ಮೃಗಾರಿ ನಾಯಿಗರಿದಲ್ಲವು ಸಾಹಸಮಲ್ಲದೇವನ (ಸೂಕ್ತಿಸು. ೩-೧೨೩). 'ಪರ್ದುದೇರ' ಪರಾ. **ಪದ್ದು$_1$**: ೧. "ದಾಕ್ಷಾಯ್ಯಃ, ಗೃಧ್ರಃ—ಹದ್ದಿನ ಹೆಸರುಗಳು, ಪದ್ದು" (ಸಿದ್ಧಾಂತಿ. ೧೫೯); ದೈತ್ಯನ ಪೃಥುಕಿರೀಟಾಗ್ರದೊಳ್ ಪದ್ದು ಕುಳ್ಳಿರಲುಮವಿತಥಮೆಂದು ತಿಳಿಯದೆ ತೆರಳ್ದನಸುರೆಂ ಮರಣಕಥನಮಂ ತಿಳಿಯಲೀವುದೆ ಮನದಹಂಕೃತಂ (ಚಿಬಪು. ೪೮-೬); ಪದ್ದು ಕಾಗೆಗಳೆಂತೊ ಸಾತ್ವಿಕಮಪರ್ಣಿಯ ತಪೋಬನ ದೊಳು (ಜೈಮಿಭಾ. ೧೫-೧೯); ಮುಳಿದು ಪದ್ದಿನಿಂದಾ ಪರಶುಪಾಣಿಯುಂ ಮುಂದೆಸಗಿ ನಡದಾ ಪ್ರಯಾಗದೆಡೆಗೆ (ಪರಶು. ೩೯-೨೬). ೨. 'ಪದ್ದುದೇರ' ಪರಾ. **ಹದ್ದು$_1$**: ೧. "ಪಕ್ಷಿಕ್ಷೇಷ್ಠಂ ಗೃಧ್ರಮೆನೆ ಹದ್ದು" (ಮಂಗರಾ. ೫೨-೯೧); ಅಂಬರಾಂತರದಲಾಡುವ ಹದ್ದಿನಲೊಂದು ಕಣ್ನುವಂ ನೋಡಿಥವರ್ಗ್ಗೆ ಶಂಕೆ ಮಿಗಿಲೆಚ್ಚ ನೆಗಳ್ತೆಯ ವಯಿಜಭೂಮಿಪಂ (ಎಕ. VI, ತರೀಕೆ. ೬೧-೨೦; 1154 ?); ಆಕಾಶದಲಾಡುವ ಹದ್ದ ನೊಂದು ಸರ್ಪ ನುಂಗಿತ್ತ ಕಂಡೆ (ಆದಪ. ೩೫-೧೦೦); ಹದ್ದು ಕಾಗೆಯ ಮನೆಗೆ ಬಾಣಸವಿದ್ದುದೋ ಗಜವೆನುತ ಬೊಬ್ಬಿಡುತಿದ್ದುದರಿಬಲ (ಕುವ್ಯಾದ್ರೋ. ೩-೪೩); ಮೇಳವಿಸಿದವು ಧೂಮಕೇತು ದಿಶಾಳಿಯಲಿ ರಥಕೇತುದಂಡದ ಮೇಲೆ ಹದ್ದೆಱಗಿದವು ಕಲಿ ಖರದೂಷಣಾದಿಗಳ (ತೊರರಾ. ೩-೫-೮); ಹಾವು ಹೊಡೆದು ಹದ್ದಿಗೆ ಹಾಕಿದ ಹಾಗೆ (ಗಾದೆ).

೨. ಹದ್ದು ಎನ್ನ ವಾಹನವಂತೆ ಹಾವು ಎನ್ನ ಹಾಸಿಗೆಯಂತೆ ಕದ್ದು ಬೆಣ್ಣೆಯ ನಾ ತಿಂದೆನಂತೆ (ಪುರಂದ. ೨-೧೯-೫). **ಹರ್ದು :** ೧. 'ಹಡೆಹರ್ದು' ಪರಾ.

ಹದ್ದಿನ ಕಣ್ಣು = ೧. ಸೂಕ್ಷ್ಮದೃಷ್ಟಿಯನ್ನುಳ್ಳ ಕಣ್ಣು ; ದೂರದೃಷ್ಟಿಯನ್ನುಳ್ಳ ಕಣ್ಣು : ಅವನ ಕಣ್ಣು ಹದ್ದಿನ ಕಣ್ಣಿನ ಹಾಗೆ (ಮುಂಬಯಿ. ೪-೪೨) ; ತನ್ನ ಮನಸ್ಸಿನ ಭಾವನೆಗಳನ್ನು ಎಷ್ಟು ಬೇಗ ಈತ ಗ್ರಹಿಸಿದನಲ್ಲ ! ನಿಜವಾಗಿಯೂ ಅವನದು ಹದ್ದಿನ ಕಣ್ಣೇ ! (ಬನಸಿ. ೫೭). ೨. ಕೆಟ್ಟದೃಷ್ಟಿ : ಅಲ್ಲಲ್ಲಿ ಭೂಗತರಾದ ದೇಶ ಪ್ರೇಮಿಗಳು ಸರಕಾರದ ಹದ್ದಿನ ಕಣ್ಣಿಗೆ ಬೀಳದೆ ಕಿರುಕುಳವನ್ನೆಸಗುತ್ತಲೇ ಬಂದರು (ಕುರುಕಾ. ೧೫೦) ; ಮೊದಲಿನಿಂದಲೂ ಈ ಹೊಲಗಳ ಮೇಲೆ ಸತ್ಯನಾಥರಾಯರ ಹದ್ದಿನ ಕಣ್ಣು ಕುಳಿತಿತ್ತು (ಮಣ್ಣೆಮ. ೭). **ಹದ್ದಿನ ದೃಷ್ಟಿ** = ಹದ್ದಿನ ಕಣ್ಣು ೨ : ಸಿದ್ಧಬಸಪ್ಪನ ಹದ್ದಿನ ದೃಷ್ಟಿ ಆ ಬಡವನ ಮೇಲೆ ಬಿತ್ತು (ನಾಪೋಲೀ. ೧೨೬). **ಹದ್ದಿನ ಪಾಲಾಗು** = ಸಾಯು ; ನಾಶವಾಗು : ನಮ್ಮ ಯಜಮಾನನು ರಾಜಾಜ್ಞೆಯನ್ನು ಪಡೆದು ಈ ಕಡೆಯೇ ನೋಡುತ್ತಿರುವನು. ಆದುದರಿಂದ ನೀನು ಹದ್ದಿನ ಪಾಲಾಗುವೆ (ಶಾಕುಂತ. ೭೭-೬). [ದೇ. ॥ ತಮಿ. ಪರುನ್ತು ; ಮಲ. ಪರುನ್ತು, ಪರನ್ತು ; ತೆಲು. ಬಂದು ; ಕೊಡ. ಪದ್ದೀ ; ಕೋತ. ಪದ್]

ಪರ್ದುದೇರ, ಪದ್ದುದೇರ (ನಾ). ಗರುಡನನ್ನು ವಾಹನವಾಗಿ ಉಳ್ಳವನು ; ಗರುಡವಾಹನ ; ವಿಷ್ಣು : "ಅರಲ್ಪೊಡೆಯಂ, ಎಲರುಣಿಯಟ್ಟೆಗಂ, ಪಾಜಂಬಳೆಗೈಯಂ, ಪರ್ದುದೇರಂ . . . ಕಾವನಯ್ಯಂ—ಈ ೧೨ ವಿಷ್ಣುಗೆ ಪೆಸರ್" (ಕಕಸಾ. ೪೭-೯) ; ಪರ್ದುದೇರನ ನೇಮದಿಂದ ಮೈಗಣ್ಣವಂ ಪದ್ದನಂತೈತಂದು ಕಾಣ್ಬಂತೆ ಜನಕನಂ ಪೊದ್ದಿ ಪಂದಿಸಿ . . . ಗದ್ದುಗೆಯನಡರೆ (ವೆಂಕಾರಾ. ೧-೨೦-೩೩). **ಪದ್ದುದೇರ :** ಶುದ್ಧಾಂಗನಾಗಿ ಭಸಿತಾಕ್ಷಮಾಲೆಯ ಧರಿಸಿ ಪದ್ದುದೇರನ ನಲ್ಲನೊಂಬತ್ತುಪದ್ಯದಿಂ ನುತಿಸುತ (ಪ್ರೌಢರಾ. ೨-೪೫).

[ಪರ್ದು + ತೇರ್$_2$ + -ಅ$_7$]

ಪರ್ದುವೇರ್ (ನಾ). ಒಂದು ಬಗೆಯ ಬೇರು ; ಗರುಡಪಾತಾಳದ ಬೇರು.

ಪರ್ದುವೇರ್ ಕಲ್ಕ = ಗರುಡಪಾತಾಳದ ಬೇರಿನಿಂದ ತಯಾರಿಸಿದ ಒಂದು ಬಗೆಯ ಮಂದವಾದ ಔಷಧ; ಮಲೆಯೋಜ ರೊದವಿದರ್ ಪರ್ದುವೇರ್ ಕಲ್ಕಮಂ ನಲವಿನಿಂ ತಿಮಿರಿದರ್ ನಂಜಿಳಿಯಲೆಂದು (ಕಾಲೂರ. ೧೦೪-೨೧೦). [ಪರ್ದು + ಬೇರ್]

ಪರ್ನ 'ಪನ್ನ$_3$' ನೋ.

ಪರ್ನಕರ್ಪೂರ (ನಾ). ಪಚ್ಚಕರ್ಪೂರ : ಪಸುರುಳಿದ ನಾಗವಲ್ಲಿಯ ಪರ್ನಕರ್ಪೂರದೆಸೆವ ಚೂರ್ಣಸ್ಥಭಾಗದ ಕ್ರಮುಕಮುಮು ಪೊನ್ನ ಸಂಬಳಿಗೆ ಯೊಳಗೆ ತೀವಿ (ನಸಮೋ. ೧೪-೧೬). 'ಪನ್ನೆಗಪ್ಪುರ' ಪರಾ.

[ಪರ್ನ(<ಪನ್ನ$_3$) + ಕರ್ಪೂರ]

ಪರ್ನಕುಟಿ 'ಪನ್ನಗುಡಿ' ನೋ.

ಪರ್ನಶಾಲೆ (ನಾ). ಎಲೆವನೆ; ಪರ್ಣಕುಟಿ : ಪರಿವಾ ಸರಸ್ವತಿಯಿಂಬದೋಳ್ ಪರ್ನಶಾಲೆಯ ರಚಿಸಿಕೊಂಡು ತಪಸಂ ಮಾಡುತಿರುತಿರ್ದರು (ಕುರಂಗ. ೮೪-೬). [ಪರ್ನ(<ಪನ್ನ$_3$) + ಶಾಲೆ$_3$]

ಪರ್ಪಟ (ನಾ). ೧. ಹಪ್ಪಳ ; ಪಪ್ಪಡ : "ಪಪ್ಪಳ(ಡ)-ಪರ್ಪಟ" (ತದ್ಭವಕೋ. ೨೪). ೨. ಕಹಿರುಚಿಯ ಎಲೆಗಳನ್ನುಳ್ಳ ಒಂದು ಬಗೆಯ ಔಷಧಿಸಸ್ಯ : "ಪರ್ಪಟ-ಹವುಣ" (ಪಂಡಿತ. ೨೦೫).

[ಸಂ.]

ಪರ್ಪಟಕ (ನಾ). = ಪರ್ಪಟ ೨: ಕೃತ್ತಿ ಕಂಟಕಿ ಪಾಂಸು ಪರ್ಪಟ [ಪಾಶಾಂ.ಟ]ಕವಕ್ಕು" (ಮಂಗರಾ. ೪೨-೩೮) ; ತೆಗೆಸಿ ಕುಡಿಯಿಸುಗೆ ಶಿವ ಕಳವಿಗೆ ಬಾಳಂ ಕಕ್ಕೆ ಮುಸ್ತೆ ಪರ್ಪಟಕಂ ಮುಟ್ಟಗೆಯೆಂಬಿವಿನಿತುಮಂ ಸೈತ್ತಿಗಜ್ವರಂ ದಾಹಮುಂ ಪ್ರಲಾಪಮುಮಟಿಗುಂ (ಲೋಕೋಪ. ೯-೧೮). [ಸಂ.]

ಪರ್ಪಟಿ (ನಾ). ೧. ಒಂದು ಬಗೆಯ ಮರ : "ಬಸರಿ ಪರ್ಪಟೀ ಪ್ಲಕ್ಷಾಶ್ವತ್ಥಂ" (ಪಸ್ತುಕೋ. ೩೩-೨). ೨. ಒಂದು ಬಗೆಯ ಸುವಾಸನೆಯ ಮಣ್ಣು. [ಸಂ.ಪರ್ಪಟೀ]

ಪರ್ಪರ (ನಾ). ಕರ್ಕಶ ; ಕಠೋರ ; ಗಡುಸು : "ಪರ್ಪರಮೆನೆ ಕರ್ಕಶದೊಳ್" (ಕರ್ಣಾಕಿ. ೩೭). 'ಪರ್ಪರಿಕೆ' ಪರಾ. [?]

ಪರ್ಪರಿಕೆ (ನಾ). ಕರ್ಕಶತೆ ; ಕಠೋರತೆ ; ಗಡುಸುತನ : "ಪರ್ಪರಿಕೆ = ಕರ್ಕಶತೆ" (ಶನುದ. ಪರಿ. ೨) ; ಬಂದಿರದವರ್ಗಿದಿರಂ ನಡೆ ತಂದೀತಂ ತಮ್ಮನಾತನಣ್ಣಂ ತಾಂ ನೋಡೆಂದು ನಿಜಸೂತನಜುಪೆ ಮುಕುಂದನ ಪರ್ಪರಿಕೆ ಮುನಿಸನೊದವಿಸೆ ಮನದೊಳ್ (ಶಾಂತಿಪು. ೪-೪೧) ; ತೇಜ್ಡೀರನೊಂದು ಪೊಡರ್ಪಿನ ಪರ್ಪರಿಕೆಯಂ ರೋಸದ ಬೀರದ . . . ಸಡಗರದ ದಟವುಟದಿಂ ಬಂದು ಮುತ್ತಿಮುತ್ತಿ ಅಜಗುಲಿಜೀವಾತ್ಮನಂ ಸೆಜ್ಜೆವಿಡಿದತ್ತು (ರಾಮಾಶ್ವ. ೬೯-೨೦) ; ಜೀಯಾ ಅದೇನಾಯಸಂ ಮುಳಿಸೇಂ ಕೀಚರ ಕೈಯ ಪರ್ಪರಿಕೆಯಿಂದೇನಾಯ್ತೊ ನೀಂ ಮನ್ನಿಸೈ (ಮೈಸೂಮಿ. ೪-೪೧). 'ಪರ್ಪರಿಕೆಗಿಡು' ಪರಾ.

[ಪರ್ಪರ + -ಇಕೆ]

ಪರ್ಪರಿಕೆಗಿಡು (ಕ್ರಿ). ಕರ್ಕಶತೆ ಇಲ್ಲವಾಗು ; ಕಠೋರತೆಯನ್ನು ಕಳೆದುಕೊಳ್ಳು : ಪರ್ಪರಿಕೆಗಿಡದೆ ಕಲಿವಿಸಖರ್ಪರನಿದಿರಾಂತೊಡಾಂತು ವಲಲಂ ತಳಮಂ ಮೂರ್ಪೊಸೆದು ತಳ್ತು ಕ[ಣ್ತೆ]ರಿತರ್ಪಿನೆಗಮವುಂ[ಕೆ] ಸಿಂಹನಾದದಿನಾರ್ದಂ (ಪಂಪಭಾ. ೮-೫೮).

[ಪರ್ಪರಿಕೆ + ಕಿಡು(<ಕೆಡು$_1$)]

ಪರ್ಪರೀಕ (ನಾ). ೧. ಸೂರ್ಯ. ೨. ಅಗ್ನಿ. ೩. ಕೊಳ, ಕೆರೆ ಮುಂತಾದ ಜಲಾಶಯ. [ಸಂ.]

ಪರ್ಪಾಟಕ, ಪರಪಾಟಕ, ಪರಪಾಷ್ಟಕ, ಪರ್ಪಾಷ್ಟಕ (ನಾ). ಒಂದು ಬಗೆಯ ಔಷಧಿ ಸಸ್ಯ ; ಪರ್ಪಟಕ : "ಚರಕಃ-ಪರ್ಪಾಟಕ" (ಔಷಧಿ. ೫೪) ; ಬಳ್ಳಿದುಱುಚೆ ನೆಲಬೇವು ಮುಸ್ತೆ ಪರ್ಪಾಟಕದಿಂ ಕುದಿದಿಟಿಪಿ ಕಟುಕರೋಹಿಣಿಯದಱೊಳಗಿರೆ ಕೆಡಿಕುಮಲ್ತೆ ಪಿತ್ತಜ್ವರಮಂ (ಕಲ್ಯಾಕಾ. ೩-೩೨) ; ಪರ್ಪಾಟಕದ ಕಷಾಯಮದೊಪ್ಪುವರುಷ್ಕರದೊಳಾದ ಶೋಭೆಯಮಂತಾ ದರ್ಪಮನಾಗಳೆ ತೊಲಗಿಪುದೊಪ್ಪುವ ಮುತ್ತದ ಕಷಾಯಮುಂ ಮೇಣ್ ಕಳೆಗುಂ (ಖನುದ. ೨-೧೦೧) ; ಭದ್ರಮುಸ್ತೆ, ನೈದಿಲ ಗೆಡ್ಡೆ . . . ತ್ರಿಗಂಧ, ಪರ್ಪಾಟಕ, ಇವಱ ಕಷಾಯವ ಕೊಡಿಸಲು ಪಿತ್ತಜ್ವರ ಹರ (ವೈದ್ಯಸಾ. I, ೫೮). **ಪರಪಾಟಕ :** ಸೊಪ್ಪುಗಳು: ಅಗಸೆ . . . ತುಂಬೆ, ಚಟಿಗಿನ, ಪರಪಾಟಕ, ದೊಡ್ಡ ಗೋರ (ಸಮ್ಮುಸು. ೨೩೭). **ಪರಪಾಷ್ಟಕ :** (ಕ). **ಪರ್ಪಾಷ್ಟಕ :** ದ್ರಾಕ್ಷಿ ಹಣ್ಣು, ಅಮರದ ವಳ್ಳಿ, ಪರ್ಪಾಷ್ಟಕ, ಭದ್ರಮುಸ್ತೆ, ಕಟುಕರೋಹಿಣಿ, ಕಕ್ಕೆಹಣ್ಣು ಇವಂ ಸಮಾನ ಕಷಾಯವಿಕ್ಕಿ ಕೊಡೆ ಹಳೆಯ ಜ್ವರ, ಪ್ರಲಾಪ, ಮೂರ್ಛೆ, ಸೀರ ದಾಹ ಮುಂತಾಗಿ ಮಾಣ್ಬುಂ (ಸಕವೈ. ೧೨೩).

ಪರ್ಪಾಟಕದ ಚೂರ್ಣ = ಪರ್ಪಾಟಕದಿಂದ ತಯಾರಿಸಿದ ಭಸ್ಮ : ಪರ್ಪಾಟಕದ ಚೂರ್ಣ- ಬಿಳಿಗಣಜೆ, ಜೀರಿಗೆ ಸಹ, ಹಳೇನೀರಿನಲ್ಲರೆದು ಕದಡಿ ಕುಡಿಯೆ ಮೂರುದಿನಕ್ಕೆ ದಾಹಜ್ವರ ಬಿಡುವುದು (ಸಕವೈ. ೭೭).

[<ಸಂ.ಪರ್ಪಟಕ]

ಪರ್ಪಾಣಿ (ನಾ). ಒಂದು ಬಗೆಯ ಸಸ್ಯ : "ಕುಂಡಲಿ—ಸರ್ಪ . . . ಪರ್ಪಾಣಿ, ಹೇರಾಣ" (ಔಷಧಿ. ೩೫). [?]

ಪರ್ಪಾಷ್ಟಕ 'ಪರ್ಪಾಟಕ' ನೋ.

ಪರ್ಬ, ಪಬ್ಬ, ಪರ್$_2$, ಪರುವ, ಹಬ್ಬ (ನಾ). ೧. ಸಂಕ್ರಮಣ, ಹುಣ್ಣಿಮೆ ಮುಂತಾದ ಪುಣ್ಯಕಾಲ; ಪರ್ವಕಾಲ: ಉತ್ತರಾಯಣ ಸಂಕ್ರಾಂತಿಯೊಳ್ ಕೂಚಭಟ್ಟಾರರ ಕಾಲಂ ಕಟ್ಟು ಧಾರೆಯೆನೆಱೆದು ಬಿಟ್ಟುಕೊಟ್ಟರ್ ಪಿಡಿವತ್ತ ಪರ್ಬ್ಬದಕ್ಕಿ (ಎಕ. IV, ಚಾಮರಾ. ೧೮-೧೭; 1000); ಉತ್ತರಾಯಣಸಂಕ್ರಾಂತಿಯ ಪರ್ಬ್ಬನಿಮಿತ್ತದಿಂ ಮೂಲಸ್ಥಾನ ನಂದಿಕೇಶ್ವರದೇವರ ದೇವಾಲ್ಯಕ್ಕಂ ಜೀರ್ಣೋದ್ಧಾರಂ ಮಾಡಿ (ಎಕ. VII, ಶಿಕಾರಿ. ೧೨೫-೨೬; 1019); ಸೋಮಗ್ರಹಣಪರ್ಬ್ಬನಿಮಿತ್ತಂ ಪುರಾಣದ ಭಟ್ಟವ್ರಿತ್ತಿಗೆ ಸರ್ಬ್ಬನಮಸ್ಯಮಾಗಿ ಪಡೆದ ರೇವದಾಸಭಟ್ಟರ ಕೆಯ್ಯಿಂ ಬಡಗ ಬಿಟ್ಟ ಪಿರಿಯ ಕೋಲ ಮತ್ತ[ಕ] ಮನೆಯ ನಿವೇಶನ ೧ (ಸೌಇಇ. XX, ೬೨-೧೦; 1111). 'ಪಂಚಪರ್ಬ' ಪರಾ. ೨. (ಸಂತೋಷದ ಸಂದರ್ಭಗಳಲ್ಲಿ ಆಚರಿಸುವ) ಉತ್ಸವ; ಸಮಾರಂಭ: "ಪರ್ಬ(ಬ್ಬ)—ಪರ್ವ=ಉತ್ಸವ" (ತದ್ಭಕೋ. ೨೫); ಬರಿಸದ ಪರ್ಬ[ಪಾಠಾಂ.ರ್ವ]ದೊಳಂ ಪರಿಹರಿಸಿದೊಡಂ ಪುಣ್ಯಮೆಂಬರೆಂದೊಡೆ ಸಲೆ ಕೊಕ್ಕರಿಸಿ ಮಧುಮಾಂಸಮಂ ಪರಿಹರಿಸಿದ ಪುಣ್ಯಾಧಿಕಂಗೆ ಸರಿಯೇ ಕುಲಜರ್ (ಸಮಪ. ೬-೯೦); ಅತಿಶಯದೊಳೊಪ್ಪುವುಳ್ಳಿಯ ಪರ್ಬವಂ ಕರಂ ಪ್ರತಿವತ್ಸರಂ ಮಾಡುತಿರ್ಪೆನಿಂತಿದು ಭರಂ ನೇಮವೆನಲು (ಬಸರ. ೧೧-೨೦೭); ಅಂಗಜಾಂತಕಭಕ್ತರಲಿ ಪರ್ಬಂಗಳಾದಡೆ ತಲೆಗಳೊಳು . . . ಲಿಂಗವಂತರ ಪಾದರಕ್ಷಾಸಂಗವಾಗಿಹ ಕುಣಿಕೆಗಳನತಿಸಾಂಗ ಮಾಗಲು ಧರಿಸಿ ಸಿತಭಸಿತಾಂಗರಂಗದಲಿ (ಒಸಪು. ೫೬-೪); ಆ ಸಮಯದೊಳೊರ್ವಂ ವಿಟಂ ವೇಶ್ಯಾಲಯದ ಪರ್ಬಕ್ಕೆ ವಧಿಸಲ್ತಕ್ಕ ಬಲ್ಗುಱಿಯಂ ಬಿಲ್ತಕೊಂಡು ಪುರವೀಥಿಯೊಳ್ಬರ್ಪಾಗಳ್ (ವೃಷವಿ. ೧೭-೮ ವ). ೩. (ಆಲಂ) ಸಂತೋಷ; ಆನಂದ; ತೃಪ್ತಿ: ಕೊರ್ಬಿದ ಶಾಕ್ವರನಂ ಭುಜಗರ್ಬದೆ ಪಿಡಿದಡಸಿ ಸೀಳ್ದು ನಿಜಗರ್ಬದಗುರ್ಬುರ್ಬಿರೆ ಕೊರ್ಬಿರೆ ಕೊಂದಾಂ ಪರ್ಬಂ ಮಾಡೆನೆ ಸೃಗಾಲ ನಾಳೆಯೆ ನಿನಗಂ (ಪಂಚತಂ. ೧೩೨-೯); ಘನದ ಮನ್ನಣೆವೆತ್ತ ಮಾತ್ಯಂ ವಿನುತಿಸಲು ಜಿಹ್ವೆಗಳ ಪರ್ಬವು ಅನಘನಂ ನೋಡಿದಡೆ ಕಂಗಳ ಪರ್ಬವಾಯ್ತೆಮಗೆ (ಒಸಪು. ೫-೫೦); ಪಡೆವುದು ಬಣ್ಣಗಬ್ಬಮದು ನಿರ್ಭರದೀ ಕಿವಿಗಳ್ಗೆ ಪರ್ಬಮಂ (ಚಿಕವಿ. ೧-೧೨). **ಪಬ್ಬ:** ೧. ಬಂದಪುದ್ಯುಗಾದಿ ದೀವಳಿಗೆ ಸಂಕ್ರಮಣಂಗಳೆಂದು ಪಬ್ಬವನೆಸಗಿ ಮಿಂದುಂಡು ಸುಖಿಯಪ್ಪೆಂ (ವೆಂಕರಾ. ೧-೩೩-೧೭). ೨. ಬೋಳ್ಳೆಸಿ ತೆತ್ತು ಕಾವನ ಕೇಳಿಯೊಳನುವೆತ್ತು ಪೊರೆವ ಪುರುಳಿಗನಂ ತಾಂ ಮೇಳ್ಳೆಸುವ ದೂದುಗನಿಂ ಸೂಳೆಗಮವರಬ್ಬೆಯರ್ಗಮಪ್ಪುದು ಪಬ್ಬಂ (ಚಿಕವಿ. ೬-೧೧೬). **ಪರ್$_2$:** ೪. ಪರ್ವಕಾಲ, ಉತ್ಸವ ಮತ್ತು ಸಂತೋಷದ ಸಂದರ್ಭಗಳಲ್ಲಿ ಅವುಗಳ ಅಂಗವಾಗಿ ಮಾಡುವ ಔತಣ; ಸಮಾರಾಧನೆ: ಹೋದ ಶಿವರಾತ್ರೀಲಿ ಪರ ಮಾಡಿದಾಗ ನನ್ನನ್ನು ಕರೆದಿದ್ದಿರಾ? ನೀವು ನೀವೇ ಆಟ್ಟುಕೊಂಡು ಉಂಡಿರಿ! (ನನ್ನೂರು. ೬೮); ಬರಗೆಟ್ಟ ದೇವರಿಗೆ ಪರ (ಔತಣ) ಮಾಡಿದಂತೆ (ಸುವರ್ಣ. ೭೮). ೫. ಗ್ರಂಥಿ; ಗಂಟು; ಗಿಣ್ಣು: "ಪರುವ(ಪರ)—ಪರ್ವ(-ನ್)=ಗ್ರಂಥಿ" (ತದ್ಭಕೋ. ೨೪). **ಪರುವ:** ೨. ಬಾಗಿಲ ಬಿಡುವಾಗ ಏನಂದ ಮಲಸಜ್ಜ ಬಾಗಿಲ ಬರಮ ನಮ ಶರಣು ಉಳಿದು ಬಂದ್ರ ಹೇರಿನ ಪರುವ ನಿಮಗಂದ (ಲೋಕಗೀ. ೨೦೩). **ಹಬ್ಬ:** ೧. "ಹಬ್ಬ-ಪರ್ವ(-ನ್)=ಪರ್ಬ" (ತದ್ಭಕೋ. ೪೮); ಹಬ್ಬಕ್ಕೆ ತಂದ ಹರಕೆಯ ಕುಱು ತೋರಣಕ್ಕೆ ತಂದ ತಳಿರ ಮೇಯಿತ್ತು (ಒಸಪ. ೧೨೯); ಸಂಗ್ರಾಮಮುಖದಲಿ ಬಿಲ್ಲ ಹಬ್ಬದ ತುಷ್ಟಿ ನಿನಗೇಕೆ (ಕುಪ್ಯಾದ್ರೋ. ೧೩-೬೩); ಹಬ್ಬ ತಪ್ಪಿದರೆ ಹೋಳಿಗೆ ತಪ್ಪಿತೇ? (ಗಾದೆ). ೨. ಪುತ್ರ ಹುಟ್ಟಿದ ದಿವಸ ಹಾಲಿನೂಟದ ಹಬ್ಬ ಮತ್ತೊಬ್ಬ ಮಗನ ಉಪನಯನ ನಾಳೆ ಅರ್ತಿಯಾಗಿದೆ ಬದುಕು ಸಾಯಲಾಱೆನು (ಪುರಂದ. ೨-೬೧-೪); ಒಬ್ಬರಿಬ್ಬರಿಗಲ್ಲ ತವಗೆಲ್ಲ ಹೊಸತೊಂದು ಹಬ್ಬ ಬಂದಂತೆ ನಲಿದರು ಹಬ್ಬವೇನಧಿಕವಂತಿರಲೊಂದು ಮದುವೆಯ ದಿಬ್ಬಣವೆನೆ ರಾಗಿಸಿದರು (ಭರಚ. ೩-೭೯). ೩. ನಡೆ ಜೀಯ ತಡವೇಕೆ ಕಣ್ಗೆ ಹಬ್ಬವ ಮಾಡುವೆಡೆಯ ತೋಱುವೆವು (ಹಚಕಾ. ೫-೭); ಒಪ್ಪಂಬಡೆದಲ್ಲಿ ಹರ್ಮ್ಯತತಿ ಮಾಟ್ಟುದು ನೋಟ್ಪರ ಕಣ್ಗೆ ಹಬ್ಬಮಂ (ಬಾಧಪು. ೧-೧೪೪); ಉಬ್ಬಿದಲ್ಲೆ ಮಧುರವಚನದ ಹಬ್ಬದಲಿ ನಿನ್ನಾತನು (ಕುಪ್ಯಾಶ. ೧-೨೮); ನೋಡು ನಾರದ ನಿನ್ನ ಕಣ್ಣ ಹಬ್ಬವನಿಂದು ಮಾಡುವೆನಾಹವದೊಳಗೆ (ಮೋಹತ. ೩೭-೫೩). ೪. ಸಾರಥಿಯ ಶಿವ ಕೊಟ್ಟನಾದೊಡೆ ಮಾರಿಗುಬ್ಬಸವಾಗದಂತಕನೂರು ತುಂಬದೆ. . .ಹಬ್ಬವಾಗದೆ ಭೂರಿಬೇತಾಳರಿಗೆ ಹೋಹುದೆ ಬಱಿದೆ ರಣವು (ಕುಪ್ಯಾವಿ. ೫-೨೫); ಇಂದು ಮಾರಿಗೆ ಹಬ್ಬವಾಯಿತು ಕೆಪಿಗಳಡಗುಗಳ ತಿಂದು ಭೂತಪ್ರೇತ ದಣಿಯಲಿ (ಕೌತಿರಾ. ೧೯-೪೨). ೬. (ಆಲಂ) ಶಿಕ್ಷೆ; ಶಾಸ್ತಿ: ಗಡಣಿಸುವ ಸಾರಥಿಯನೊಬ್ಬನ ಪಡೆದೆನಾದೊಡೆ ಕೌರವೇಂದ್ರನ ಪಡೆಗೆ ಹಬ್ಬವ ಮಾಡುವೆನು ತೋಱುವೆನು ಕೈಗುಣವ (ಕುಪ್ಯಾವಿ. ೫-೨೪); ಆ ದುಷ್ಟ ಮತ್ತೆ ಬಂದರೆ ಅವನಿಗೆ ಸರಿಯಾಗಿ ಹಬ್ಬ ಆಗಬೇಕು (ರೂಢಿ).

ಹಬ್ಬದೂಟ, ಹಬ್ಬದ ಊಟ=ಉತ್ಸವ, ಸಂತೋಷದ ಸಂದರ್ಭಗಳಲ್ಲಿ ಮಾಡುವ ಸಿಹಿ ಊಟ: ನಾನು ಹಬ್ಬದೂಟ ಮಾಡಿಕೊಂಡು ಬರುವುದು ತಡವಾಯಿತು (ರೂಢಿ); ಹಬ್ಬದ ಊಟ, ಹರಿವಾಣದ ವೀಳ್ಯ (ಗಾದೆ). **ಹಬ್ಬ ಮಾಡು**=೧. ಹಬ್ಬವನ್ನು ಆಚರಿಸು; ಉತ್ಸವವನ್ನು ನಡೆಸು: ಎಲ್ಲರನು ಕರೆಕರೆದು ಹಬ್ಬ ಮಾಡು (ನೆಲಮು. ೨೨-೨೪); ಹಾಲಿದ್ದಾಗಲೇ ಹಬ್ಬ ಮಾಡು (ಗಾದೆ). ೨. ಶಿಕ್ಷಿಸು; ಶಾಸ್ತಿಮಾಡು: ಮನೆಗೆ ಬಾ, ಅಮ್ಮ ನಿನಗೆ ಹಬ್ಬ ಮಾಡುತ್ತಾಳೆ (ರೂಢಿ). **ಹಬ್ಬ ಹರಿದಿನ**=ಪರ್ವಕಾಲ, ಪೂಜೆ, ಉತ್ಸವ ಮೊದಲಾದ ಸಂತೋಷದ ದಿನ: ಹಬ್ಬಹರಿದಿನಗಳಲ್ಲಿ ಏಕಾಸನದಲ್ಲಿ ಕುಳಿತು ಏಕಪಾತ್ರದಲ್ಲಿ ಮಧುಪಾನ ಮಾಡೋಣ (ಆರ್ಯಕ. ೮೦); ಅನೇಕ ಹಬ್ಬಗಳು ಮರೆತೇಹೋಗಿವೆ. ಕೆಲವು ಹಬ್ಬಹರಿದಿನಗಳು ನಡೆಯುತ್ತವೆ (ನನ್ನೂರು. ೩೧೬). **ಹಬ್ಬ ಹಾಡಿ**=ಹಬ್ಬ ಹರಿದಿನ: ಹಬ್ಬ ಹಾಡಿಯ ದೆಡೆಯೊಳುಂಡೆವೆ ಉಟ್ಟೆವೇ ನಿನ್ನಯ ಮನೆಗೆ ಬಂದು (ಬಸಪು. ೪೦-೩೫). **ಹಬ್ಬಹುಣ್ಣಿಮೆ**=ಹಬ್ಬಹರಿದಿನ: ಕಾಡುಮೇಡುಗಳಲ್ಲಿ ವಾಸಿಸುವ ಸೋಲಿಗರು ಹಬ್ಬಹುಣ್ಣಿಮೆಗಳಲ್ಲಿ ಹಾಡುವ. ಹಾಡುಗಳನ್ನು ಸಂಗ್ರಹಿಸುವುದು ತೀರ ಅಗತ್ಯ (ದ್ರಾವಿವಿ. ೪೦೦).

[<ಸಂ.ಪರ್ವ./ಪಾಲಿ.ಪಬ್ಬ]

ಪರ್ಬತ, ಪರುವತ (ನಾ). ದೊಡ್ಡಬೆಟ್ಟ; ಪರ್ವತ; ಗಿರಿ: "ಪರ್ಬತ—ಪರ್ವತ" (ತದ್ಭಕೋ. ೨೫); ಪಸರಿಸಿ ಪರ್ಬ್ಬಿ ಗೊಂದಳಿಸಿ ನಿಂದ ತಮಸ್ತಮಮಂ ತೆರಳ್ಚಿ ಬಂದೊಸೆವಿನನೇಱುವಂತುದಯಪರ್ಬ್ಬತಮಂ . . . ಸಿಂಘವಿಷ್ಟರಮನೇಱಿದನಾ ಜಯಸಿಂಘವಲ್ಲಭಂ (ಎಕ. VII, ಶಿಕಾರಿ. ೧೨೫-೧೫; 1019); ವರರದನಾಳದಿಂ ದಿಗಮಳಚ್ಛದದಿಂದುಡುಕೇಸರಂಗಳಿಂದುರುಘನಭೃಂಗದಿಂ ಕನಕಪರ್ಬ್ಬತಕರ್ನ್ನಿಕೆ ಕೂರ್ಮ್ಮವೃಂತದಿಂ ಪರವೆನೆ ನೆಯ್ದಲಂತೆಸೆವ ಧಾತ್ರಿಯನಾದಿವರಾಹರೂಪದಿಂ ಧರಿಸಿದನಾವನಾಹರಿಹರಂ ಪರಿಪಾಲಿಸುಗೀ ಸುಧರ್ಮ್ಮಮಂ (ಎಕ. XI, ದಾವಣ. ೫೯-೬; 1280); ಪಬ್ಬತಕೆ ವಜ್ರಾಸ್ತ್ರ ತಿಮಿರದ ಹಬ್ಬುಗೆಗೆ ರವಿಬಾಣ ಹಾವುಗಳೊಬ್ಬುಳಿಗಿ ಗರುಡಾಸ್ತ್ರವನು ಗಂಧರ್ವಪತಿಯೆಚ್ಚ (ಕುಪ್ಯಾಅ. ೧೯-೩೫). **ಪರುವತ:** ಪಾವನವ ಪರುವತವ ಪರುವತವ ಪಾವನವ ನಿಮಿಷಮಾತ್ರದಿ ಬೂಳ್ಳ (ಅಷ್ಟಾಸ್ತೋ. ೧೧೮).

[<ಸಂ.ಪರ್ವತ]

ಪರ್ಬತಾವಳಿ (ನಾ). ೧. ಪರ್ವತಗಳ ಸಮೂಹ.—ಸಾಲು. ೨. ಕಾಳಾಮುಖರ ಒಂದು ಶಾಖೆಯ ಹೆಸರು: ಪರ್ಬತಾವಳಿ ವಿಳಸಿತಧರ್ಮ್ಮಕೀರ್ತ್ತಿಲತಿಕಾಕಂದರಪ್ಪ ಶ್ರೀಮತುರುದ್ರಶಕ್ತಿಪಂಡಿತರ ಶಿಷ್ಯರು ದಸಧರ್ಮ್ಮನಿರ್ಮ್ಮಿತರಪ್ಪ ಶ್ರೀಸೋಮೇಶ್ವರಪಂಡಿತರ ಶಿಷ್ಯರು (ಸೌಇ. XI-ii, ೧೯೮-೧೨ ; 1123). [<ಸಂ. ಪರ್ವತಾವಳಿ]

ಪರ್ಬಿಸು 'ಪರ್ವಿಸು' ನೋ.

ಪರ್ಬು$_1$ 'ಪರಪು'$_1$ ನೋ.

ಪರ್ಬು$_2$ 'ಪರಪು$_2$' ನೋ.

ಪರ್ಬುಗೆ 'ಪರ್ವುಗೆ' ನೋ.

ಪರ್ಬುಗೆಡು 'ಪರ್ವುಗೆಡು' ನೋ.

ಪರ್ಬುಗೊಳ್ 'ಪರ್ವುಗೊಳ್' ನೋ.

ಪರ್ಯ (ನಾ). "ಬೆತ್ತದಿಂದ ಮಾಡಲ್ಪಟ್ಟ ಒಂದು ಗುರಾಣಿ" (ಹುಲಿಹಾ. ಕೋಶ) : ಕುಳಿತಿದ್ದವ ಎದ್ದುನಿಂತು ಎಡಗೈಯಲ್ಲಿ ಪರ್ಯವನ್ನು ಹಿಡಿದು, ಬಲಗೈಯಲ್ಲಿ ಪಾತುರಿಕೋಲನ್ನು ಎತ್ತಿ ಕುಣಿಯಲಾರಂಭಿಸಿದ (ಹುಲಿಹಾ. ೧೨೬). [←ತೊಡ. ಪರ್ಯ]

ಪರ್ಯಂಕ (ನಾ). ೧. ಮಂಚ ; ಪಲ್ಲಂಗ: "ಪರ್ಯಂಕಃ, ಶಯನಂ, ಶಯ್ಯಾ—ಈ ೩ ಮಂಚಂ" (ಪಲಾಯು. ೫೧-೧೫೨) ; ಕಣ್ಣೊಳಿಸರ್ದಂ ಪಾದಪೀಠಾಂಕಿತ ಮಣಿಮಯಪರ್ಯಂಕದೊಳ್ ವಿಕ್ರಮಾಂಕಂ (ಶಾದಂಪು. ೨೬) ; ಲಲನೆಯಂ ಪರ್ಯಂಕದೊಳಗೆ ಕುಳ್ಳಿರಿಸಿ ತಾಂ ನಲವು ದಿಗೆ ಬೋಳ್ಕೆಸಿ (ಹಚಶಾ. ಪರಿ. ೨೧೦). ೨. ಹಾಸುಗೆ; ಸುಪ್ಪತ್ತಿಗೆ. ೩. ಪಲ್ಲಕ್ಕಿ. ೪. ಸೊಂಟಕ್ಕೆ ಸುತ್ತಿಕೊಳ್ಳುವ ಬಟ್ಟೆ ; ಕಟಬಂಧ. ೫. ಆಶ್ರಯ ; ಅವಲಂಬನೆ: ಸಕಳೋರ್ವೀಶ್ವರ ನಾಕಿನಾಯಕಶಮೂಪರ್ಯಸ್ಥಿಪಾತ್ರಂ ಕ್ರಿಸಾಕ್ಷಿಕನಾಗಳ್ ಬಲಗೆಯ್ ನೊಸಲ್ಗೆಡದ ಕೆಯ್ ಪರ್ಯಂಕಮಪ್ಪಂತು ಸಾರ್ಚಿ (ಶಾಂತಿಪು. ೮-೧೨೩). ೬. [ಯೋಗ] ಒಂದು ಬಗೆಯ ಆಸನ ; ℙ ಬಲ ಪಾದವನ್ನು ಎಡತೊಡೆಯ ಮೇಲೂ ಎಡಪಾದವನ್ನು ಬಲ ತೊಡೆಯ ಮೇಲೂ ಇಟ್ಟು ಕೂಡುವುದು: ಅರಲ್ದ ಮುಖಪದ್ಮಮುಂ ನಿಡಿಬಲ್ದ ಪರ್ಯಂಕದೊಳ್ ಮರಲ್ದ ಕರಪಲ್ಲವದ್ವಿತಯಮುಂ ಬೆಡಂಗಪ್ಪಿಸಂ ನಿರಂತರವಿತೋಧಿ ಕೂಡಿರೆ ಚತುರ್ವಿಧಾರಾಧನಾಪುರಸ್ಸರತೆಯಿಂ ಸಮಾಧಿವಿಧಿಗೇಂ ಮನಂದಂದಳೋ (ಸುಕುಮಾ. ೯-೧೫). 'ಪರ್ಯಂಕಾಸನ' ಪರಾ. [ಸಂ.]

ಪರ್ಯಂಕಾಸನ (ನಾ). = ಪರ್ಯಂಕ ೬ : ತತ್ಸಮಾಪಸ್ಥಿತರಕ್ತಾ ತೋಳಪುಹೀರುಹತಳವಿಶಾಳಶಿಳಾಪಟ್ಟಕದೊಳ್ ಉತ್ತರಾಭಿಮುಖನಾಗಿ ಕುಳ್ಳಿರ್ಪ ಸಮುತ್ಸಾರಿತವಸ್ತ್ರಾಭರಣನಾಗಿ ಪರ್ಯಂಕಾಸನಪರಿಗ್ರಹದಿಂ . . . ಜಿನಶ್ರೀದೀಕ್ಷೆಯಂ ತಾಳ್ದಿದಂ (ಶಾಂತಿಪು. ೮-೧೨೨ ಪ) ; ಸುಖಸ್ಥೈರ್ಯಾನಿಷ್ಠ ಲಾವಹಮಾದ ಯೋಗಯೋಗ್ಯಾಸನಗಳಲ್ಲಿ ಶುದ್ಧಾಸನ . . . ಪರ್ಯಂಕಾಸನ ಪದ್ಮಾಸನ . . . ಅರ್ಧಾಸನಾದಿಯೊಂಭತ್ತಾಲ್ಕಾಸನಭೇದಂಗಳಂ ತತ್ತಲ್ಲಕ್ಷಣಪೂರ್ವಕಮಾಗಿ ಸ್ವಸ್ವಯೋಗಸ್ಥಿತ್ಯನುಕೂಲತೆಯಿಂ ನಿರ್ಧರಿಸಿ (ವಿವೇಕ. ೧೫೦). ℙ ಇದನ್ನು 'ವೀರಾಸನ'ವೆಂದೂ ಹೇಳುತ್ತಾರೆ. [ಪರ್ಯಂಕ + ಆಸನ]

ಪರ್ಯಂಕಿಕೆ (ನಾ). ಮಂಚ ; ಪಲ್ಲಂಗ: ಸ್ವಕೃತಪರಿಣಯನ ಮಣಿಪುತ್ರಿಕೆಗಳಮುಪ್ಪುಂಗರತ್ನಪರ್ಯಂಕಿಕೆಯಂ ಸುತ್ತಾರಿಕೆಗಳನೇಣೇಣ ಪ್ರಕಾಂಡಮಂ . . . ಅಭರಣವಿಶೇಷಮಸಂಬರಚರೇಶ್ವರಪ್ರಭು ಹುಗಳ್ಗೆ ಬಟ್ಟಾಪಟ್ಟಾಗೊಟ್ಟಂ (ವರ್ಧಮಾ. ೬-೯೯). [ಸಂ. ಪರ್ಯಂಕಿಕಾ]

ಪರ್ಯಂತ$_1$ (ನಾ). ೧. ಎಲ್ಲೆ ; ಗಡಿ ; ಮೇರೆ : "ಅವಧಿ ಪರ್ಯಂತಮಾ ಸೀಮೆಯಾಘಾಟಮೆನೆ ಹೊಲಮೇರೆಯುಂ" (ಮಂಗರಾ. ೫೬-೧) ; ಸೆಣಸುಳ್ಳುದ್ವೃತ್ತರಂ ತಳ್ತಿಱಯದೆ ಚತುರಂಭೋಧಿಪರ್ಯಂತಮಂ ಧಾರಿಣಿಯಂ ತಾಂ ಪೋಗಿ ಬಾಯ್ಕೋಳಿಸದೆ . . . ಬರ್ವಂ ಗುಣಮುಂಟೆಂದುಂಡು ಪಟ್ಟರ್ಪನನಣಮೆ ನಿರುದ್ಯೋಗಿಯಂ ಭೂಪನೆಂಬರ್ (ಸಂಪಭಾ. ೪-೧೧). ೨. ಹತ್ತಿರ ; ಸಮೀಪ ; ಬಳಿ : ಜನಪತಿ . . . ಕುಳ್ಳಿರೆ . . . ವೇತ್ರಿ ಖಡ್ಗಧರರುಂ ಪರ್ಯಂತದಲ್ಲೊಪ್ಪುಗುಂ (ಲಾಸ್ಯರಂ. ೧-೩೫). ೩. ಊರಿನ ಸಮೀಪ ; ಗ್ರಾಮದ ಹತ್ತಿರ: "ಗ್ರಾಮಾಂತಿಕಂ, ಉಪಶಲ್ಯಂ, ಪರ್ಯಂತಃ, ಪರಿಸರಃ, ಕ (ಪ)ಟಃ—ಈ ೫ ಊರ ಹೊ(ಜ್)ರೆ" (ಹಲಾಯು. ೪೩-೧೦೪). [ಸಂ.]

ಪರ್ಯಂತ$_2$ (ಅ). ವರೆಗೆ ; ತನಕ : ಆ ಸುಖ ದೊರೆಕೊಂಡೊಡವರಿಗಪ್ಪುದು ತೃಪ್ತಿ ಸಾಸಿರಬರಿಸಪರ್ಯಂತ (ಹದಿಬ. ೨-೧೨) ; ರಾಯನ ಕಣ್ಣುಗಳನ್ನು ಕೀಳಿಸಿ ಆತನನ್ನು ಆಮರಣಪರ್ಯಂತ ಕುರುಡನನ್ನಾಗಿ ಮಾಡಿಬಿಡಬೇಕೆಂಬುದಾಗಿ ಪ್ರಧಾನಿಗೆ ಆಜ್ಞಾಪಿಸಿದನು (ಕೃದೇವ. ೭) ; ಇನ್ನು ಮುಂದೆ ಅದರ ಅವಧಿ ೭ ವರ್ಷಗಳ ಪರ್ಯಂತ (ಶಿಕ್ಷದ. ೧೮೫). [<ಪರ್ಯಂತ$_1$]

ಪರ್ಯಂತಂ (ಅ). = ಪರ್ಯಂತ$_2$: ಕಾರ್ಯವೆಮಗಿದುವೆ ಶಿವಪದಪರ್ಯಂತಂಬರಮುಮೋಕ್ಷಮುದ್ಧರಿಸುಗೆ ತಾತ್ಪರ್ಯದಿನರ್ಹಸ್ತಿದ್ಧಾಚಾರ್ಯೋಪಾಧ್ಯಾಯಸರ್ವಸಾಧುಗಳೆಮ್ಮಂ (ಅದಿಪು. ೧-೬) ; ಕೇಶವನ ಶಬ್ದಮಣಿದರ್ಪಣಮುಂ ಸೂರ್ಯೋಂದುಮೇರುವಾರಿಧಿಪರ್ಯಂತಂ ಪರೆದು ನಿಲ್ಕನಾಕುಳದಿಂದಂ (ಶಮದ. ೪ ಸಮಾಪ್ತಿಪಾಠ್ಯ). [ಸಂ.]

ಪರ್ಯಂತರ$_1$, ಪರಿಯಂತರ$_1$ (ನಾ). ೧. (ಕಾಲ ಅಥವಾ ದೂರದ) ಅವಧಿ ; ಅಂತರ: (ಕಿ). **ಪರಿಯಂತರ**$_1$: ೧. ನಾನು ನೀವು ಬರುವ ಪರಿಯಂತರದಲ್ಲು ಯಿಲ್ಲಿ . . . ಇದೇನೆ (ಶೇಷಧ. ೫-೬) ; ಹದಿನೈದು ದಿವಸಗಳ ಪರಿಯಂತರವೂ ಮಹೋತ್ಸವಮಂ ಮಾಡಿಸುವೆ (ಕಗದ್ಯ. ೩). ೨. ಅನಂತರದ ಸಮಯ ; ಆಮೇಲಿನ ಕಾಲ : ಧೂರ್ತನದಿಂ ಕಾದಿ ಕೂಡುವೆನಾರ್ತು ಪರಿಯಂತರದಲಾ ತ್ರೈಮೂರ್ತಿಯನು ಮೂದಲಿಸಿದಲ್ಲದೆ ಮುಕುತಿಯಿಲ್ಲ (ಕೌಶಂಗಾ. ೨೩-೧೯). [<ಸಂ. ಪರ್ಯಂತ]

ಪರ್ಯಂತರ$_2$, ಪರಿಯಂತ, ಪರಿಯಂತಂ, ಪರಿಯಂತರ$_2$, ಪರಿಯಂತರಂ, ಪರಿಯಂತ್ರ, ಪರ್ಯಂತರಂ (ಅ). = ಪರ್ಯಂತ$_2$: ಹೊಳೆ ಪರ್ಯಂತರ ಓಟ, ದೊರೆ ಪರ್ಯಂತರ ದೂರು (ಗಾದೆ). **ಪರಿಯಂತ** : ನಡುವಗಲು ತೊಡಗಿ ಮಧ್ಯಮರಾತ್ರಿ ಪರಿಯಂತ ಎಡೆವಿಡದೆ ಈ ತೆಱದೊಳರ್ಚಿಸುತ್ತಂ ಇರುತ (ತಿರುರ. ದೇ. ೬-೧) ; ನಡುಹಗಲುಪರಿಯಂತ ಕಾಳೆಗ ಬಿಡದೆ ಬಲುಹಾಯ್ದು (ಕುಮ್ಮಾದ್ರೋ. ೧೦-೨೨) ; ನಿಮ್ಮನ್ವಯಾಗತದ ಪರಿವಿಡಿಯ ರಘುವಂಶವನು ವಿಸ್ತರಿಸಿದನು ವಿಮಳಾಗ್ನಿವರ್ಣನ ನಿಗುಪಮದ ಸಾಮ್ರಾಜ್ಯ ಪರಿಯಂತಾದಿಕಾಲದಲಿ (ತೊರರಾ. ೧-೫-೬). **ಪರಿಯಂತಂ** : ಪಾಲಿಸಿದಳಿಂತು ನಡೆನುಡಿಗಳಂ ಕಲಿವಲ್ಲಿ ಪರಿಯಂತಮಾ ತಿಶುವನು (ಜೈಮಿಭಾ. ೨೮-೧೯). **ಪರಿಯಂತರ**$_2$: ಕೋಕ ರಕಮಿನ ಜೀನಸು ಮೂರು ತಿಂಗಳ ಪರಿಯಂತರ ಮಾರಾಟವಾಗದೆ ಉಳಿದರೆ . . . ಮಜೂರಿ ತೆಗೆದುಕೊಳ್ಳುವೆವು (ಮುಂಬಮ್ಮಾ. ೩). **ಪರಿಯಂತರಂ** : ಇಂತು ಕಟಕದೊಳೇಳುದಿನಪರಿಯಂತರಂ ತಾನೆಯ್ದಿ ಮೆಱೆದು (ಬಸಪು. ೫೨-೪೩). **ಪರಿಯಂತ್ರ** : ಹಾಗವನು ಅರ್ಧಗಾಣಪರಿಯಂತ್ರ ಮಾಡಲು (ಭಾಸ್ಕರ. ೧೮-೩) ; ಪೂರ್ಣವಯವಂಗಳು ಪೊರವ ಪರಿಯಂತ್ರ ದಯಮಾಡದೆ ಒಡದು ಕೆಡಿಸಿದೆ ಸಾಸಿ (ತುರಂಗ. ೩-೧೫) ; ಹೆಬ್ಬೆರಳಿನ ಬುಡ ಮೊದಲಾಗಿ ಕಿರುಬೆರಳ ಪರಿಯಂತ್ರ ರೇಖೆಯಿರಲು ಆ ಸ್ತ್ರೀಯು ಪತಿಘಾತಕಿಯಾಗುವಳು (ಸಾಮುಲ. ೧೨೯). **ಪರ್ಯಂತರಂ**:

ಮುಳಿದು ಕರ್ಣಜನಿಸಲ್ಕಾತನಂ ಸುತ್ತಿಸಿತು ಸುಳಿಗಾಳಿಯಂದದಿಂ ಕಣಗಳರೆಗಳಿಗೆಪರ್ಯಂತರಂ ಸಂಗರದೊಳು (ಜೈಮಿಭಾ. ೨೩-೧೬).

[<ಪರ್ಯಂತಂ]

ಪರ್ಯಂತರಂ 'ಪರ್ಯಂತರ$_2$' ನೋ.

ಪರ್ಯಟಕ (ನಾ). ಪರ್ಯಟನ ಮಾಡುವವನು; ಸಂಚಾರಿ; ಪ್ರವಾಸಿಗ: ಶಾಂತಿಭಿಕ್ಷೆಗಾಗಿ ಬಂದ ಜನರಲ್ಲದೆ ದೇಶದಲ್ಲಿ ಪ್ರಯಾಣ ಮಾಡಿದ ಅರಬ್ಬಿ ಪರ್ಯಟಕರು ದೇಶವನ್ನೂ ದೇಶದ ಜನರನ್ನೂ ಕಂಡು ಆಚ್ಚರಿಯನ್ನೇ ಪಟ್ಟರು (ಭಾಇಪ್ರ. ೩೬೮); ಮಧ್ಯಏಷಿಯದ ಮರು ಭೂಮಿಯಲ್ಲಿ ಯಾವೆಲ್ಲ ಪರ್ಯಟಕರು . . . ಎಷ್ಟೋ ಸಮೃದ್ಧಶಾಲಿ ನಗರಗಳು ಮರಳು ಮುಚ್ಚಿಕೊಂಡು ಕಣ್ಮರೆಯಾಗಿರುವುದನ್ನು ಕಂಡಿದ್ದಾರೆ (ನಿಬಂಧ. I, ೩೨೧). [ಸಂ.]

ಪರ್ಯಟನ (ನಾ). ೧. ಸಂಚಾರ; ತಿರುಗಾಟ; ಸುತ್ತಾಟ: ವಿಶಾಖನಂದಿಯುಮಾಯುರವಸಾನದೊಳ್ ಸತ್ತನೇಕಭವಗಹನಪರ್ಯಟನದಿಂ ಬಂದೈರಾವತತೀರದ ಕಾನನದಾಶ್ರಮದೊಳ್ . . . ಭಾಜನನಾದೊಂ (ಶಾಂತಿಪು. ೬-೬೨ ಪ); ಅವನಿಗೆ ಮತ್ತೆ ಅನೇಕ ದೇಶಗಳನ್ನು ಪರ್ಯಟನ ಮಾಡಿ, ಜ್ಞಾನಸಂಪತ್ತನ್ನು ಹೆಚ್ಚಿಸಿಕೊಳ್ಳುವಂತಹ ಸದವಕಾಶಗಳು ಮೇಲಿಂದ ಮೇಲೆ ಬಂದವು (ಸಸ್ಯಕ. ೬೯). ೨. [ಜೈನ] ಚರಿಗೆಗಾಗಿ ಸಂನ್ಯಾಸಿಗಳು ಮಾಡುವ ಸಂಚಾರ,—ತಿರುಗಾಟ: "ಪರ್ಯಟನಂ ತಾನೀರ್ಯಾಚರ್ಯಾರ್ಥಂ ಪರಿಮಿತವ್ರತಸ್ಥಿತಿನಿಯಮಂ" (ವಸ್ತುಕೋ. ೫೮-೩೬). [ಸಂ.]

ಪರ್ಯಟನೆ (ನಾ). = ಪರ್ಯಟನ ೧: ಈ ಪರ್ಯಟನೆಯು ಅವನಿಗೆ ಬಹಳ ಲಾಭದಾಯಕವಾಯಿತು (ಮೃಗಜ. ೧೯).

[ಸಂ.ಪರ್ಯಟನ]

ಪರ್ಯಣ 'ಪರಿಯಾಣ$_1$' ನೋ.

ಪರ್ಯನುಯೋಗ (ನಾ). ವಿಷಯವನ್ನು ತಿಳಿದುಕೊಂಡು ಖಂಡಿಸುವ ಉದ್ದೇಶದಿಂದ ಮಾಡುವ ಪ್ರಶ್ನೆ; ಆಕ್ಷೇಪಕ್ಕಾಗಿ ಮಾಡುವ ಪ್ರಶ್ನೆ: "ಪರ್ಯನುಯೋಗಃ, ಉಪಾಲಂಭಃ—ಈ ೨ ಚುನ್ನವಾಡಿ ಬೆಸಗೊಳುಹ" (ಹಲಾಯು. ೨೫-೧೫೩). [ಸಂ.]

ಪರ್ಯಯ (ನಾ). ೧. ಸುತ್ತುವರಿಯುವಿಕೆ; ಬಳಸುವಿಕೆ. ೨. ಅವಧಿ ಮುಗಿಯುವಿಕೆ; ಕಾಲ ತೀರುವಿಕೆ. ೩. (ಕಾಲ) ಬದಲಾವಣೆಯಾಗುವಿಕೆ; ವ್ಯತ್ಯಾಸವಾಗುವಿಕೆ. ೪. ಬದಲಾವಣೆ; ಮಾರ್ಪಾಟು; ವ್ಯತ್ಯಾಸ. ೫. ತಲೆಕೆಳಗಾಗಿರುವ ಸ್ಥಿತಿ; ಅವ್ಯವಸ್ಥೆ; ವೈಪರೀತ್ಯ. ೬. ಸಾಂಪ್ರದಾಯಿಕ ಕಟ್ಟಳೆಗಳನ್ನು ಬಿಡುವಿಕೆ,—ಮೀರುವಿಕೆ: "ಪರ್ಯಯಃ, ಅತಿಕ್ರಮಃ, ಅತಿಪಾತಃ, ಉಪಾತ್ಯಯಃ—೪ ಕಟ್ಟಿಯನ್ನು ಮೀರಿ ಹೋಗುವಿಕೆ" (ಸಿದ್ಧಾಂತಿ. ೩೬೬). ೭. ಕರ್ತವ್ಯವನ್ನು ಅಲಕ್ಷಿಸುವಿಕೆ,—ನಿರ್ಲಕ್ಷಿಸುವಿಕೆ. ೮. ಕ್ರಮವನ್ನು ತಪ್ಪುವಿಕೆ: "ಅತಿಪಾತಃ, ಪರ್ಯಯಃ, ಉಪಾತ್ಯಯಃ—೩ ಕ್ರಮವನ್ನು ತಪ್ಪುವಿಕೆ. ಹೇಳುವುದರಲ್ಲಿ ಮಧ್ಯೆ ಕೆಲವು ಭಾಗವನ್ನು ಮರೆತು ತಪ್ಪಿ ಹೋಗುವಿಕೆ" (ಸಿದ್ಧಾಂತಿ. ೨೨೬). [ಸಂ.]

ಪರ್ಯಯಣ (ನಾ). ೧. = ಪರ್ಯಯ ೧. ೨. ಕುದುರೆಗೆ ಹಾಕುವ ಜೀನು; ತಡಿ; ಹಲ್ಲಣ. [ಸಂ.]

ಪರ್ಯವಲೋಕನ (ನಾ). ಚೆನ್ನಾಗಿ ನೋಡುವಿಕೆ; ಗಮನವಿಟ್ಟು ನೋಡುವಿಕೆ: ಈರ್ಯಾಮಾರ್ಗಪರ್ಯವಲೋಕನ ಮಂದ ಮಂದಗಮನನಿರತರವಧಿಬೋಧಾವಧೂತರೂಪದರ್ಶನಕ್ಷಪಿತ ಸಂದೇಹ ಸಂದೋಹರ್ (ಶಾಂತಿಪು. ೬-೭೦ ಪ). [ಸಂ.]

ಪರ್ಯವಸಾನ (ನಾ). ೧. ಕೊನೆ; ಅಂತ್ಯ; ಮುಕ್ತಾಯ: ಸಂದ ಧರ್ಮಮೆ ವಲಂ ಪೊತ್ತೆತ್ತುಗುಂ ಮುಕ್ತಿಪರ್ಯವಸಾನಂಬರಮಾನುಷಂಗಿಕಫಲಂ ಭೂಪೇಂದ್ರ ದೇವೇಂದ್ರರಾಜ್ಯವಿಲಾಸಂ ಪೆಱತಲ್ತು ನಂಬು (ಆದಿಪು. ೨-೭); ಸುಬಳಮಹಾರಾಜನೊಂದುದಿವಸಂ . . . ಮಂತ್ರಮೇಳಾಪಕದೊಳಿರ್ದು ತತ್ಕಾರ್ಯಾಳೋಚನತಾತ್ಪರ್ಯಪರ್ಯವಸಾನದೊಳ್ ಮಜ್ಜನಂಬುಗುತ್ತುಂ (ಸುಕುಮಾ. ೩-೨ ಪ); ಇಂಥ ಆಭಾಸದಲ್ಲಿ ಪರ್ಯವಸಾನವಾಯಿತು 'ನೆಯ್ದಿಲಾಪಹರಣ' (ಹಸುಹೊ. ೩೭೮). ೨. ನಿರ್ಧಾರ; ನಿರ್ಣಯ; ನಿಶ್ಚಯ. [ಸಂ.]

ಪರ್ಯವಸಾಯಿ (ನಾ). ಕೊನೆಗೊಳ್ಳುವಂತಹುದು; ಮುಕ್ತಾಯವಾಗುವಂತಹುದು: ಮನುಷ್ಯನ ಗುಣಗಳನ್ನು ಸಮಾಜಸಾಧಕಗಳಾಗುವಂತೆ ತಿದ್ದುವುದು—ಎಂದರೆ ಪರೋಪಕಾರಪರ್ಯವಸಾಯಿಗಳಾದ ಗುಣಭಾಗಗಳನ್ನು ಬಲಪಡಿಸಿ, ಲೋಕಕಂಟಕಗಳಾಗುವ ಗುಣಭಾಗಗಳನ್ನು ಅಣಗಿಸುವುದು ರಾಜ್ಯದ ಎರಡು ಕರ್ತವ್ಯಗಳಲ್ಲೊಂದು (ರಾಜ್ಯಾಂಗ. ೬೩). [ಸಂ.ಪರ್ಯವಸಾಯಿನ್]

ಪರ್ಯವಸಿತ (ಗು). ೧. ಮುಗಿದ; ಕೊನೆಗೊಂಡ. ೨. ನಾಶವಾದ; ಕಳೆದ. ೩. ನಿಶ್ಚಯಿಸಲ್ಪಟ್ಟ. [ಸಂ.]

ಪರ್ಯವಸ್ಥೆ (ನಾ). ವಿರೋಧ; ಪ್ರತಿಭಟನೆ: "ಪರ್ಯವಸ್ಥಾ, ವಿರೋಧನಂ—೨ ಹಗೆಗೊಳ್ಳುವಿಕೆ" (ಸಿದ್ಧಾಂತಿ. ೩೬೩).

[ಸಂ.ಪರ್ಯವಸ್ಥಾ]

ಪರ್ಯಷ್ಟಿ, ಪರಿಯಷ್ಟಿ (ನಾ). ಸೇವೆ; ಉಪಚಾರ: ಕಾನನಮಧ್ಯಸ್ಥಿತರುಂದ್ರಗಿರೀಂದ್ರಶೃಂಗದೊಳ್ ಆತ್ಮಪರಪರ್ಯಷ್ಟಿನಿರಾಪೇಕ್ಷರಾಗಿ . . . ಉತ್ತರಾಶಾಭಿಮುಖರಾಗಿ ಪೋಗಿ (ಶಾಂತಿಪು. ೭-೭೧ ಪ); ಪರ್ಯಷ್ಟಿಯನನವರತಂ ಮಾಟ್ಪಿ ಶೀಳೋತ್ಕರಂ ಕೂಡಿರೆ ವೈಯ್ಯಾಪೃತ್ಯಮೆಂಬೀ ತಪದೊಳೆಸಗಿದಂ ಸೂರ್ಯಮಿತ್ರಬ್ರತೀಂದ್ರಂ (ಸುಕುಮಾ. ೪-೧೬); ಒಡವರ್ಪೇಂ ಬೆಸನೆಂಬ ಕೈಗುಡುವ ತೀರ್ಥಕ್ಕುಯ್ವ . . . ಇರ್ದಲ್ಲಿಗೆ ಕಂದಮೂಲಫಲಮಂ ತಂದೀವ ಪರ್ಯಷ್ಟಿಯಿಂ ಪಡೆಗುಂ ತುಷ್ಟಿಯನಿಂತು ವೃದ್ಧಯತಿಗಳ್ಗಾಸ್ಥಾನದೊಳ್ ವಾನರಂ (ಜಾವಿ. ೧೬-೫೫). 'ಪರ್ಯಷ್ಟಿಗೆಯ್' ಪರಾ. **ಪರಿಯಷ್ಟಿ**: 'ಪರಿಯಷ್ಟಿಗೆಯ್' ಪರಾ. [<ಸಂ.ಪರೀಷ್ಟಿ]

ಪರ್ಯಷ್ಟಿಗೆಯ್, ಪರಿಯಷ್ಟಿಗೆಯ್ (ಕ್ರಿ). ಸೇವೆಯನ್ನು ಮಾಡು; ಉಪಚರಿಸು: ಅಂತು ಪರ್ಯೋಬಾಲಕನುಂ ಜ್ಞಾನವೃದ್ಧನುಮಪ್ಪ ಜಗದ್ಗುರುಗೆ ಸುರಸಮುದಯಂ ಪರ್ಯಷ್ಟಿಗೆಯ್ಯುತ್ತಿರೆ (ಶಾಂತಿಪು. ೧೦-೮೭ ಪ); ಆತ್ಮೀಯ ಬಹಿರಂತಃಪುರವಿಳಾಸಿನಿಯರಂ . . . ರಮಣೀರತ್ನಮನಳಂಕರಿಸಲುಂ ವಧೂಜನರ ಸಹ್ಯವ್ಯಾಪಾರಾಂತರಂಗಳೊಳನುಕರಿಸಿ ಪರ್ಯಷ್ಟಿಗೆಯ್ಯಲುಂ ನಿಯೋಜಿಸಿ ಪೋಗಲ್ವೇಟ್ಟು (ವರ್ಧಮಾ. ೧೧-೩೫ ಪ); ಪ್ರಾಯೋಪಗಮ(ನ)ಮಂಗೆಯ್ದು ಮಹಾಪುರುಷಂಗೆ ಪರ್ಯಷ್ಟಿಗೆಯ್ಯಲ್ವೇಡೆಂದು (ಪೇಟ್ದು) ಭಟಾರರಲ್ಲಿಂ ಬೆಳಗಾದಾಗಳೊಂದು ದೆಸೆಗೆ ಪೋದರ್ (ಜೀವಸಂ. ೧೧೨-೧೪). **ಪರಿಯಷ್ಟಿಗೆಯ್**: ತಪೋಧನರ್ಗಿರದೆ ಗದ್ದುಗೆಗಳಂ ಕಟ್ಟ ಧೂಪದೀಪಂಗಳುಮಂ ಕೊಟ್ಟು ಪರಿಯಷ್ಟಿಗೆಯ್ವ ಪಟುತರ ಮರ್ಕಟಸಮೂಹಂಗಳುಮಂ (ಸಂಚತಂ. ೮೯-೨೧). [ಪರ್ಯಷ್ಟಿ + ಕೆಯ್$_1$]

ಪರ್ಯಸ್ತ (ಗು). ೧. ಕೆದರಿದ; ಹರಡಿದ. ೨. ಆವರಿಸಿದ; ಸುತ್ತುಗಟ್ಟಿದ. (ನಾ). ೩. [ನಾಟ್ಯ] ಮೂವತ್ತೆರಡು ಅಂಗಹಾರಗಳಲ್ಲಿ ಒಂದು: ಸ್ಥಿರಹಸ್ತ, ಪರ್ಯಸ್ತ, ಸೂಚೀವಿದ್ಧ . . . ಸ್ವಸ್ತಿಕರೇಚಿತ—ಈ ಮೂವತ್ತೆರಡು ಅಂಗಹಾರಂಗಳ ಪೆಸರು (ಲಾಸ್ಯರಂ. ೫-೭ ಪ). [ಸಂ.]

ಪರ್ಯಸ್ತಕ (ನಾ). = ಪರ್ಯಸ್ತ ೩ : ವಿಲಸತ್ತಲಪುಷ್ಪಪುಟಂ . . . ಪ್ರಕಟಿತ ನಿತಂಬ ಕರಿಹಸ್ತ ಕಟೀಭಿನ್ನಂಗಳೆನಿಪ ಕರಣಂಗಳ್ ಕ್ರಮದೆ ಕರಂ ರಂಜಿಸೆ ಪರ್ಯಸ್ತಕಮೆಂದೆಂಬಂಗಹಾರಮಕ್ಕೀ ಪತ್ತುಂ (ಲಾಸ್ಯರಂ. ೫-೧೧). [ಸಂ.]

ಪರ್ಯಸ್ತಿ (ನಾ). ಮಂಚ ; ವಲ್ಲಂಗ. [ಸಂ.]

ಪರ್ಯಸ್ತಿಕ (ನಾ). ತಪಸ್ವಿಯ ಹಾಸುಗೆ : "ಪರ್ಯಸ್ತಿಕಃ, ಪರಿಕರಃ, ಪರ್ಯಂಕಃ— ಈ ೩ ತಪಸ್ವಿಯ ಹಾಸಿಕೆ" (ಹಲಾಯು. ೬೮-೨೫೬). [ಸಂ.]

ಪರ್ಯಸ್ತಿಕೆ (ನಾ). ೧. ಹಾಸುಗೆ ; ಶಯ್ಯೆ : "ಪರ್ಯಂಕಂ ಪರಿಕರಮೆನೆ ಪರ್ಯಸ್ತಿಕೆ" (ವಸ್ತುಕೋ. ೫೮-೩೬). ೨. ಸೊಂಟಕ್ಕೆ ಸುತ್ತಿಕೊಳ್ಳುವ ಬಟ್ಟೆ ; ಕಟಬಂಧ. [ಸಂ.ಪರ್ಯಸ್ತಿಕಾ]

ಪರ್ಯಾಕುಲ (ನಾ). ಅಂಜಿಕೆ ; ತಲ್ಲಣ : ಪದಘಾತಕ್ಕಗಿದಳ್ಳಿ ಬಳ್ಳಿದುದಧೋಲೋಕಂ ಭಯಂ ಮರ್ತ್ಯಲೋಕದೊಳಂ ಪೊಣ್ಮಿ ದುದೂರ್ಧ್ವಲೋಕದೊಳೆ ಮತ್ತಾಯ್ತದ್ಭುತಭ್ರಾಂತಿಯೆಂಬುದನೆಂಬಂ ತಿರೆಯಂತದೇಂ ಭುವನಮಂ ಪರ್ಯಾ[ಪಾಠಾಂ.ನಿರ್ವ್ಯಾ]ಕುಲಂ ಮಾಡಲಾರ್ತುದೊ ದುರ್ಯೋಧನ ಭೀಮಸೇನರ ಗದಾಯುದ್ಧಂ ತ್ರಿಧಾಭ್ರಾಂತಿಯಂ (ಗದಾಯು. ೮-೧೦). [ಸಂ.]

ಪರ್ಯಾಣ$_1$ 'ಪರಿಯಾಣ$_1$' ನೋ.

ಪರ್ಯಾಣ$_2$ (ನಾ). ಕುದುರೆಯ ಜೀನು ; ತಡಿ ; ಹಲ್ಲಣ : "ಪರ್ಯಾಣಂ, ಪಲ್ಯಯನಂ—ಈ ೨ ಹಲ್ಲಣಂ" (ಹಲಾಯು. ೭೩-೨೮೮) ; ಕಣ್ಣುಂ ಖುರಮುಂ ತೋಱೆ ಪಕ್ಕರೆಯಿಕ್ಕಿ ಪೊಳೆವ ಪೊನ್ನ ಪರ್ಯಾಣಂ ಗಳುಮೆಸೆಯೆ ಘೋಟಿಯಾಯ್ಲರ್ ಪೊಳೆಯಿಸೆ ಬಿಸಿಲ್ಗುದುರೆಗಳ್ ಪೊಳೆ ವಂತೆ ಪೊಳೆವ ಕಡುಗುದುರೆಗಳುಮಂ (ಪಂಪಭಾ. ೧೦-೫೧ ವ) ; ಎರಡುಂ ಲಕ್ಕಂಬರಂ ಸುತ್ಥಣಿಯರಶನಿಸನ್ನಾಹದಿಂ ಪನ್ನೆರಳ್‌ಸಾಸಿರವಶ್ವಶ್ರೇಣಿ ಮೇಲಜ್ಜವಣಿಯ ಮಣಿಪರ್ಯಾಣದಿಂ ತೋರ್ಕೆವೆತ್ತೆಯ್ತರೆ (ಎಕ. XI, ದಾವಣ. ೨೫-೩೨ ; 1224). [ಸಂ.]

ಪರ್ಯಾಣಕ (ನಾ). ಜೀನನ್ನು ಹೊಂದಿರುವುದು ; ಹಲ್ಲಣ ದಿಂದ ಸಜ್ಜಾದುದು : ಚಂದ್ರಾಪೀಡದೇವಂ . . . ಯಥಾಸ್ಥಿತ ಪರ್ಯಾಣಕಮಪ್ಪಿಂದ್ರಾಯುಧಮನೇಱಿ ಮಹಾಶ್ವೇತಾಶ್ರಮಮಂ ಪೊಕ್ಕು (ಕಾದಂಉ. ೫೪೧). [ಸಂ.]

ಪರ್ಯಾತೀತ (ಗು). ಅತಿಶಯವಾದ ; ಅಧಿಕವಾದ : ಪರಮಾ ಶ್ಚರ್ಯಪರ್ಯಾತೀತ ಶಿರಃಕಂಪಂಬೆರಸು (ಶಾಂತಿಪು. ೧೦-೬೫ ವ). [ಸಂ.]

ಪರ್ಯಾಪ್ತ (ಗು). ೧. ಪಡೆದ ; ಹೊಂದಿದ ; ಗಳಿಸಿದ. ೨. ಮುಗಿದ ; ಕೊನೆಗೊಂಡ. ೩. ಸಮಗ್ರವಾದ ; ಸಂಪೂರ್ಣ ವಾದ : ಉತ್ತಮಕ್ಷಮಾಮಾರ್ದವ . . . ಬ್ರಹ್ಮಚರ್ಯಾ [ಪಾಠಾಂ. ಚರ್ಯಪರ್ಯಾಯ]ಪರ್ಯಾಪ್ತ ದಶಧರ್ಮಂಗಳಂ ಕೈಕೊಂಡು (ಅದಿಪು. ೬-೩೦ ವ). ೪. ತುಂಬಿದ ; ಭರ್ತಿಯಾದ. ೫. ತೃಪ್ತಿಯನ್ನು ಹೊಂದಿದ ; ತಣಿದ : ಅಂತು ಸಹಸ್ರಲೋಚನಂ ಪರ್ಯಾಪ್ತಸಹಸ್ರ ಲೋಚನನಾಗಿ ಸಹಸ್ರಪತ್ರಾಯತನೇತ್ರನಂ ನೋಡಿ (ಜಗವಿ. ೪-೧೦೧ ವ). (ನಾ). ೬. ಮುಗಿದುದು ; ಕೊನೆಗೊಂಡುದು : "ಕೃತಮೆಂಬುದು ಪರ್ಯಾಪ್ತಂ" (ವಸ್ತುಕೋ. ೧೩೯-೧೨೬). ೭. ತುಂಬಿರುವುದು ; ಭರ್ತಿಯಾಗಿರುವುದು : ಅದರ ಮೂಲ್ಯ ಅದರೊಳಗೆ ಪರ್ಯಾಪ್ತ ವಾಗಿರುತ್ತದೆ (ನಿಬಂಧ. II, ೨೫೩). ೮. ಪರಿಪೂರ್ಣನಾದವನು : ಧನುರ್ವಿದ್ಯೆಯನ್ನಭ್ಯಾಸಗೆಯ್ದಾಗ ಪರ್ಯಾಪ್ತನಾಗಿರುವನ್ನೆ ಏಕಲವ್ಯನಾ ಭಿಲ್ಲಕುವರಂ (ಹಲ್ಲಿಪು. ೨೬-೨೫) ; ಎಲ್ಲ ದೃಷ್ಟಿಯಿಂದಲೂ ಸಂಪೂರ್ಣ ಎನಿಸುವ ಮಾನವನು 'ಪರ್ಯಾಪ್ತ'ನಾದರೆ ಕುರುಡ, ಮೂಕ, ಹೆಳವ, ಹುಚ್ಚ ಇತ್ಯಾದಿ ಕೊರತೆಗಳುಳ್ಳ ಮನುಷ್ಯನು 'ಅಪರ್ಯಾಪ್ತ' ನೆನಿಸುವನು (ಜೈನಪ. ೨೯೪). ೯. ತೃಪ್ತಿಯನ್ನು ಹೊಂದುವುದು : "ತಣಿವುದು ಸಾಹಿತ್ಯಂ ತರ್ಪಣವೆನಿಸುಗುಮಾಶಿತಂ ಭವಂ ಪರ್ಯಾಪ್ತಂ" (ವಸ್ತುಕೋ. ೯೩-೬). ೧೦. ತೃಪ್ತಿ ; ತಣಿವು : "ಪರ್ಯಾಪ್ತಂ, ಉಪಸಂಪನ್ನಂ, ತೃಪ್ತಿಃ, ಸೌಹಿತ್ಯಂ—ಈ ೪ ತ(ಣಿ)ಣುವು" (ಹಲಾಯು. ೫೪-೧೭೧). ೧೧. ಹೇರಳವಾದುದು ; ಯಥೇಷ್ಟವಾದುದು : "ನಿಕಾಮವೆನೆ ಪರ್ಯಾಪ್ತಂ" (ವಸ್ತುಕೋ. ೧೦೫-೪೨). [ಸಂ.]

ಪರ್ಯಾಪ್ತಂ (ಅ). ೧. ಕೂಡಲೆ ; ತಕ್ಷಣ. ೨. ಮನಃ ಪೂರ್ವಕವಾಗಿ. [ಸಂ.]

ಪರ್ಯಾಪ್ತಕ (ನಾ). [ಜೈನ] ಪರ್ಯಾಪ್ತಿಯನ್ನು ಹೊಂದಿರುವ ಜೀವ : ಪ್ರಥಮಪೃಥ್ವಿಯೊಳು ಪರ್ಯಾಪ್ತಕರ್ಗಂ ಅಪರ್ಯಾಪ್ತಕರ್ಗಂ ಕ್ಷಾಯಿಕಮುಂ ಕ್ಷಾಯೋಪಶಮಿಕಮುಮುಂಟು (ತಸೂವೃ. ೯) ; ಅಲ್ಲಿ ಸೂಕ್ಷ್ಮಬಾದರಪರ್ಯಾಪ್ತಕಾಪರ್ಯಾಪ್ತಕಭೇದದಿಂ ಸೂಕ್ಷ್ಮವನಸ್ಪತಿ ಕಾಯಂಗಳ್ . . . ಅಲ್ಲಿಯೆ ಸಾಯುತ್ತುಂ ಪುಟ್ಟುತ್ತುಮಿರ್ಕುಂ (ಮಲ್ಲಿಪು. ೧೩-೧೫೪). 'ಪರ್ಯಾಪ್ತಿ' ಪರಾ. [ಸಂ.]

ಪರ್ಯಾಪ್ತಜೀವ (ನಾ). = ಪರ್ಯಾಪ್ತಕ : ಜೀವವು ತನ್ನ ಶಕ್ತಿಯು ಪೂರ್ಣಗೊಳ್ಳಲಿಕ್ಕೆ ಅವಶ್ಯವೆನಿಸುವಷ್ಟು ದ್ರವ್ಯವನ್ನು ಹೊಂದು ವುದು. ಈ ದ್ರವ್ಯವನ್ನು ಯಾವ ಜೀವವು ಸಂಪೂರ್ಣವಾಗಿ ಹೊಂದಿರು ವುದೋ ಅದು 'ಪರ್ಯಾಪ್ತ' ಜೀವವು (ಜೈನಪ. ೨೯೪).

[ಪರ್ಯಾಪ್ತ + ಜೀವ]

ಪರ್ಯಾಪ್ತತೆ (ನಾ). ಎಲ್ಲವನ್ನೂ ಒಳಗೊಂಡಿರುವಿಕೆ ; ಪರಿಪೂರ್ಣತೆ : ಅಕಸ್ಮಾತ್ತಾಗಿ ಓದಲು ನಡೆದ ಯಾರಿಗಾದರೂ ಶ್ರೀ ಅರವಿಂದರ ಕಾವ್ಯ-ಕಲಾಸಿದ್ಧಾಂತದ ಪರ್ಯಾಪ್ತತೆ, ನಿರ್ವಿಕಾರ ದೃಷ್ಟಿಗಳು ಅಚ್ಚರಿಯನ್ನುಂಟುಮಾಡದಿರವು (ನವ್ಯಕಾ. ೧೦೯).

[ಸಂ. ಪರ್ಯಾಪ್ತತಾ]

ಪರ್ಯಾಪ್ತಯೋಗ (ನಾ). ತಪಸ್ಸನ್ನು ಮುಗಿಸಿದವನು,— ಪೂರ್ಣಗೊಳಿಸಿದವನು : ತನ್ಮುನೀಂದ್ರಂ ಪರ್ಯಾಪ್ತಯೋಗಂ ಕೆಯ್ಯನೆತ್ತಿಕೊಂಡು ಯಥೋಕ್ತವಿಹಾರದಿಂ ಮಾಸೋಪವಾಸದ ಪಾರಣೆ ಯೊಳ್ ರತ್ನಪುರಮಂ ಚರಿಗೆವುಗೆ (ಶಾಂತಿಪು. ೯-೨೧ ವ).

[ಪರ್ಯಾಪ್ತ + ಯೋಗ]

ಪರ್ಯಾಪ್ತಿ (ನಾ). ೧. ಹೊಂದುವುದು ; ಪಡೆಯುವುದು. ೨. ಕೊನೆ ; ಅಂತ್ಯ. ೩. ಯೋಗ್ಯತೆ ; ಅರ್ಹತೆ. ೪. ತೃಪ್ತಿ ; ತುಷ್ಟಿ : ಸುಪ್ತಂ ಪ್ರಬುದ್ಧನೆನೆ ಪರ್ಯಾಪ್ತಿಯಸಂತರ್ಮುಹೂರ್ತದಿಂ ಪಡೆದು ಸುಖಾವಾಪ್ತಿಯಿನಹಮಿಂದ್ರಂ ಪರಿತೃಪ್ತಿಯನುಪಪಾತತಳ್ಪತಳ ದೊಳ್ತಳೆದಂ (ಮಲ್ಲಿಪು. ೧೧-೬೩). ೫. ವ್ಯಾಪ್ತವಾಗಿರುವಿಕೆ ; ತುಂಬಿರುವಿಕೆ. ೬. ಸಾಕಷ್ಟಾದುದು ; ಯಥೇಷ್ಟವಾದುದು. ೭. ಹೊಡೆತದಿಂದ ರಕ್ಷಿಸುವಿಕೆ,—ರಕ್ಷಣೆ ಮಾಡುವಿಕೆ : "ಪರ್ಯಾಪ್ತಿಃ, ಪರಿತ್ರಾಣಂ, ಹಸ್ತವಾರಣಂ—೩ ಕೊಲ್ಲುವದಕ್ಕೆ ಉದ್ಯುಕ್ತನಾದವನನ್ನು ಅಡ್ಡಹಾಕಿ ಹಿಡಕೊಂಡು ಕೊಲ್ಲಲ್ಪಡಬೇಕಾಗಿದ್ದ ವನನ್ನು ಕೊಲೆಗೆ ಸಿಕ್ಕದ ಹಾಗೆ ಭಯವಿಲ್ಲದೆ ರಕ್ಷಿಸುವದಕ್ಕೆ ಪೆಸರುಗಳು" (ಸಿದ್ಧಾಂತಿ. ೩೫೫). ೮. ಆತ್ಮರಕ್ಷಣೆ; ಸ್ವಂತರಕ್ಷಣೆ. ೯. [ಜೈನ] ನಾಮಕರ್ಮಪ್ರಕೃತಿಗಳಲ್ಲಿ ಒಂದು ; ಶರೀರದ ಇಂದ್ರಿಯ ಮೊದಲಾದ ಪುದ್ಗಲ ರಚನೆಯು ಪೂರ್ಣಗೊಂಡಿರುವುದು ; ೫ ಇದರಲ್ಲಿ ಆರುವಿಧ. ೧. ಆಹಾರಪರ್ಯಾಪ್ತಿ. ೨. ಶರೀರ ಪರ್ಯಾಪ್ತಿ. ೩. ಇಂದ್ರಿಯಪರ್ಯಾಪ್ತಿ. ೪. ಶ್ವಾಸೋಚ್ಛ್ವಾಸ

ಪರ್ಯಾಪ್ತಿ. ೫. ಭಾಷಾಪರ್ಯಾಪ್ತಿ. ೬. ಮನಃಪರ್ಯಾಪ್ತಿ: ಸುಭಗ ದುರ್ಭಗ ಪ್ರತ್ಯೇಕಶರೀರಾಯಶಸ್ಕೀರ್ತ್ಯನಾದೇಯನಿರ್ಮಾಣ ಪರ್ಯಾಪ್ತಿ [ಪಾಠಾಂ. ಪರ್ಯಾಪ್ತ, ಅಪರ್ಯಾಪ್ತಿ] ನೀಚೈರ್ಗೋತ್ರಂಗಳೆಂಬ ದ್ವಿಸಪ್ತತಿಪ್ರಕೃತಿಗಳಂ ನಿರವಶೇಷಂ ಕಿಡಿಸಿ (ಆದಿಪು. ೧೬-೪೯ ವ); ಆಹಾರಕ ಶರೀರಇಂದ್ರಿಯಉಚ್ಛ್ವಾಸನಿಶ್ವಾಸಭಾಷಾಮನಃಪರ್ಯಾಪ್ತಿಯೆಂದಾಱು ಪರ್ಯಾಪ್ತಿಗಳಕ್ಕುಂ (ಪಸಾರ. ೧೪೦). [ಸಂ.]

ಪರ್ಯಾಯ (ನಾ). ೧. ಸುತ್ತುವುದು; ತಿರುಗುವುದು; ಭ್ರಮಣ. ೨. ಒಂದಾದ ಮೇಲೆ ಮತ್ತೊಂದರಂತೆ ವರಸೆಯಾಗಿ ಬರುವುದು; ಅನುಕ್ರಮ; ಪರಿವಿಡಿ: "ಪರಿಪಾಟೀ . . . ಪರ್ಯಾಯಃ, ವಿಶಾಯಃ—ಈ ೭ ಪರಿವಿಡಿ" (ಹಲಾಯು. ೧೨೨-೫೫); ಅಂತು ಶಿಲಾಪಟ್ಟದೊಳ್ ನಿರಂತರಂ ಸೂರ್ಯರಾತ್ರಿಪ್ರತಿಮಾಪರಂಪರೆಯಂ ಪರ್ಯಾಯದಿಂದಮನುಷ್ಠಿಸುತ್ತುಂ (ಶಾಂತಿಪು. ೧೧-೧೦೮ ವ); ಪ್ರಧಾನ ಜ್ಯೂರಿ ಶರೀರಭಾರವನ್ನು ಪರ್ಯಾಯವಾಗಿ ಎರಡು ಕಾಲುಗಳ ಮೇಲೆಯೂ ಬಿಡುತ್ತ, ನಡುನಡುವೆ ಕೆಮ್ಮುತ್ತ, ಪ್ರಶ್ನೋತ್ತರಗಳನ್ನು ವಾಚಿಸಿದನು (ಪುನರು. ೧೦೮). ೩. (ಕಾಲ, ಅವಧಿ ಮೊದಲಾದುವು) ಮುಗಿಯುವಿಕೆ; ಕೊನೆಗೊಳ್ಳುವಿಕೆ. ೪. ನಿಶ್ಚಿತ ಅವಧಿಯಲ್ಲಿ ಮತ್ತೆ ಮತ್ತೆ ಉಂಟಾಗುವಿಕೆ; ಕ್ರಮವಾದ ಆವೃತ್ತಿ; ಪುನರಾವರ್ತನೆ. ೫. ಸರದಿ; ಬಾರಿ; ಪಾಳಿ. ೬. ಕ್ರಮಬದ್ಧವಾದ ರಚನೆ,—ವ್ಯವಸ್ಥೆ: ಇನ್ತೀಯೆರಡುಂ ಪರ್ಯ್ಯಾಯದ ಮತ್ತರಿರ್ಪ್ಪತ್ತೊಂದುಮಂ ಪ್ರತಿಪಾಳಿಸುವವರ್ಗ್ಗೆ . . . ಸಾಸಿರ್ವ್ವರ್ ಬ್ರಾಹ್ಮಣರ್ಗ್ಗೆಯುಭಯ ಮುಖಿಗೊಟ್ಟ ಪ(ಫ)ಳಮಕ್ಕು (ಇಆ. XVIII, ೩೯-೩೧; 999); ದೇವರ ಪೂಜಗೆ ಭೀವಗೊಂಡಿಂ ಬಡೆಗಣ ಪೂದೋಣ್ಣಂ ಮತ್ತರು ೩ ಆ ಪ್ರತಿಬದ್ಧದ ಮನೆ ನಿವೇಶನ ೩ ಅನ್ತೆರಡುಂ ಪರ್ಯ್ಯಾಯದ ಮೂಱುಂ ಸ್ಥಳದ ನೆಲಂ ಕಾಲಮತ್ತರು ಸಾಸಿರದ ನಾಲ್ವರ್ತ್ತೈದು (ಕಇಆ. ೯-೩-೩೦೫; ?). ೭. ಮಾರ್ಗ; ಬಗೆ; ರೀತಿ: ಆಮುಂ ಪಲವುಂ ಪರ್ಯಾಯದಿಂ ಪೇಟ್ಟೊಡಂ ಕೇಳ್ದನಿಲ್ಲಿಲ್ಲಿಗೆ ತಕ್ಕುದಂ ನುಡಿದು ದೇವಿಯರೆಂತಾನುಮೊಡಂಬಡಿಸುವುದೆನೆ (ಪಂರಾಮಾ. ೧೪-೧೨೨ ವ). ೮. ಸಮಾನಾರ್ಥವುಳ್ಳ ಬೇರೆ ಶಬ್ದ: ಆರ್ಯಜನಪ್ರಭರೇಖಾ ನಿರ್ಯಾಣಮನೆಸೆಯೆ ಶಾಲಿಹೋತ್ರಮುನೀಂದ್ರಂ ಪ್ರಾಯಕ್ಕೆ ಪೇಟ್ಟುದಂತಾಂ ಪರ್ಯಾಯದಿನಱಿಯೆ ಪೇಟ್ಟನಭಿನವಚಂದ್ರಂ (ಅಶ್ವಶಾ. ೫-೩೦); ಇದು ಇಲ್ಲಿ "ವರ್ಣನೆಗೆ ಅಶಕ್ಯ" ವೆಂಬುದರ ಪರ್ಯಾಯವಾದ "ಅಲಂಕಾರಿಕವಾಣಿ" ಯೆಂಬ ಸಾಮಾನ್ಯಾರ್ಥದಲ್ಲಿ ಪ್ರಯುಕ್ತವಾಗಿದೆ (ಧ್ವನ್ಯಾಲೋ. ೫೨ ಅಇಟ). ೯. ಕೊನೆ; ಅಂತ್ಯ; ಮುಕ್ತಾಯ. ೧೦. ಬೇರೆ ಕ್ರಮ; ಮತ್ತೊಂದು ರೀತಿ: ಪಾಂಡವರ್ ಮರ್ಯಾದಾಪರರಲ್ಲಿ ಮೆಯ್ಗರೆದು ಸಂದೊಂದಿರ್ದೊಡಂ ಕಾಣ್ಬೊಡಿಂ ಪರ್ಯಾಯಂ ಪೆಱತುಂಟೆ ತಪ್ಪುರದ ಗೋವೃಂದಂಗಳಂ ಕೊಂಡೊಡಾ ಶೌರ್ಯಾನ್ವೀತರದರ್ಕೆ ಸೈರಿಸರವರ್ ಬಂದಾಂತಪರ್ ನಿಶ್ಚಯಂ (ನೇಮಿಪು. ೧೦-೧೩೩); ತಮ್ಮ ನಾಡು-ನುಡಿಯ ಬಗೆಗಿನ ಹೆಚ್ಚಿನ ವ್ಯಾಸಂಗಕ್ಕೆ ಇದು ಪರ್ಯಾಯದಿಂದಲಾದರೂ ಉತ್ತೇಜನಕಾರಿಯಾದೀತೆಂದು ನಂಬಿದ್ದೇನೆ (ಕರ್ನಾಪೂ. XII, ಬಿನ್ನಹ). ೧೧. ಇನ್ನೊಂದು ರೂಪ: ಒಂದು ಬಗೆಯ ವಿರಕ್ತಿ ಮತ್ತು ಅದರ ಪರ್ಯಾಯವಾಗಿ ಇರುವ ಉದಾಸೀನತೆ ಅವರ ಜೀವನವನ್ನು ಸುತ್ತುವರಿದಿದೆ (ದೂರಸ. ೮೧); ದ್ರವ್ಯವು ಸ್ವಾಭಾವಿಕವಾಗಿ ಅವಿಕೃತವಾದುದಾದರೂ ಅಸಂಖ್ಯಪರಿವರ್ತನಗಳಿಂದ ಪ್ರಕಟವಾಗುವುದಕ್ಕೆ ಪರ್ಯಾಯವೆನ್ನುವರು. ಕೊಡ, ಗಡಿಗೆ ಮುಂತಾದುವು ಮೃತ್ತಿಕೆಯ ಪರ್ಯಾಯಗಳು (ಜೈನಧ. ೧). ೧೨. ವಿಶಿಷ್ಟವಾದ ಗುಣ,—ಲಕ್ಷಣ. ೧೩. ಅವಕಾಶ; ಸಂದರ್ಭ. ೧೪. (ಕರಾ) ಉಡುಪಿಯಲ್ಲಿರುವ ಶ್ರೀಕೃಷ್ಣ ದೇವಸ್ಥಾನದ ಮೇಲ್ವಿಚಾರಣೆಯ ಸಲುವಾಗಿ, ಎರಡು ವರ್ಷಕ್ಕೊಮ್ಮೆ ಸ್ವಾಮಿಗಳ ಉತ್ತರಾಧಿಕಾರದ ಸಂದರ್ಭದಲ್ಲಿ ನಡೆಯುವ ಉತ್ಸವ: ಉಡುಪಿಯಲ್ಲಿ ಎರಡು ವರ್ಷಗಳಿಗೊಮ್ಮೆ ನಡೆವ ಪರ್ಯಾಯ, ಪಡುಬಿದ್ರೆಯಲ್ಲಿ ಜರಗುವ ಡಕ್ಕೆಬಲಿ . . . ಇವುಗಳು ಪ್ರಾಮುಖ್ಯವಾದುವುಗಳಾಗಿವೆ (ತುಳುನಾ. ೨೫೩); ತಮ್ಮ ಸರದಿಗೆ ಬಂದ ಐದನೇ ಪರ್ಯಾಯವನ್ನು ತಮ್ಮ ಚಿಕ್ಕಪಟ್ಟದ ಶಿಷ್ಯರಾದ ವೇದವೇದ್ಯರಿಗೊಪ್ಪಿಸಿ, ಆ ಕಾಲದಲ್ಲಿ ತಾವು ಸ್ವಾದಿಯಲ್ಲಿ—ಉಡುಪಿಯಲ್ಲಿ ನಡೆಸುವಂತೆಯೇ ಪರ್ಯಾಯೋತ್ಸವವನ್ನು ನಡೆಸಿದರು (ಕಭವಿ. ೧೬೬). ೧೫. ರಚನೆ; ನಿರ್ಮಾಣ. ೧೬. ಅಂಶ; ಭಾಗ; ವಿಭಾಗ: ಇಂದಿರಾ, ಯುಗಳಾಂಗುರೀಯ, ರಾಧಾರಾಣೀ—ಇವು ಮೂರೂ 'ವಂಗದರ್ಶನ'ದ ಮೊದಲ ಪರ್ಯಾಯದಲ್ಲಿ ೧೮೭೨ ರಿಂದ ೧೮೭೫ ರವರೆಗೆ ಬಂದ ಸಣ್ಣ ಕಾದಂಬರಿಗಳು (ಬಂಕಿಮ. ೧೧೬); ಇದು ಎರಡನೆಯ ಪರ್ಯಾಯ (ನಡೆದಾ. I, ೪೪೩). ೧೭. ವ್ಯತ್ಯಾಸ; ತಾರತಮ್ಯ: ಯಾರಿಗೇನು ಹಚ್ಚಬೇಕು. ಇದರ ಪರ್ಯಾಯನ ಗೊತ್ತಿಲ್ಲ. ಹ್ಯಾಂಗ ಹುಟ್ಟೇದ ಹಾಂಗ ಬೆಳೆದದ. ಆತು ಮರಾ ಬೆಳೆ ಧಾಂಗ! (ವೈನಿ. ೪೫). ೧೮. [ಕಾವ್ಯಮೀ] ಒಂದು ಬಗೆಯ ಅರ್ಥಾಲಂಕಾರ; P ಇದರಲ್ಲಿ ಎರಡು ಬಗೆಗಳಿವೆ: i. ಒಂದು ವಸ್ತುವು ಕ್ರಮವಾಗಿ ಬೇರೆ ಬೇರೆ ವಸ್ತುಗಳನ್ನು ಆಶ್ರಯಿಸಿರುವಂತೆ ವರ್ಣಿಸುವುದು. ಉದಾ: ಬಾಲೆಯ ಮುಖಕಾಂತಿ ಸರಸಿಜವನ್ನು ಬಿಟ್ಟಾಮೇಲೆ ಚಂದ್ರನನ್ನಾಶ್ರೈಸಿಹುದು (ಕುವಲ. ೧೦೧). ii. ಒಂದು ಸ್ಥಳದಲ್ಲಿ ಕಾಲಾನುಸಾರವಾಗಿ, ಕ್ರಮವಾಗಿ ಬೇರೆ ಬೇರೆ ವಸ್ತುಗಳು ಇರುವುವೆಂದು—'ಹಿಂದೆ ಇಲ್ಲಿ ಪ್ರವಾಹವಿತ್ತು, ಈಗ ಇಲ್ಲಿ ಮರಳು ಇದೆ' ಎಂಬಂತೆ ವರ್ಣಿಸುವುದು. ಉದಾ: ಪೊರೆದರ್ಕೊಂಗಣಿವರ್ಮರಾ ಬಟಿಕೆ ಬಲ್ಲಾಳರ್ಕುಱುಂಬರ್ತೆಲುಂಗರುಮಂದಿಂಗವರೊಳ್ಪುದುಂಗದೆರವೆಂಬಂತಿರ್ದುದಿಂದಿಂತು ಸಾದರದಿಂ ಕನ್ನಡರಾಯರಾಳ್ವಿನೆಗಮೀ ಕರ್ಣಾಟದೇಶಂ ಕರಂ ಹರಿಸಂಬೆತ್ತುದು (ಅಪ್ರತಿ. ೯೮-೨೧): ಒಂದಕ್ಕೆ ಪಲವಾಶ್ರಯಕ್ರಮದಿ ಪೇಳಲ್ಕೆ ಪರ್ಯಾಯವು (ಕುವಲ. ೧೦೧). 'ಪರ್ಯಾಯಾಲಂಕಾರ' ಪರಾ. ೧೯. ಪರ್ಯಾಯೋಕ್ತಿಯ ಒಂದು ಬಗೆ; P ಬೇರೊಂದು ಕಾರ್ಯದ ನೆಪವನ್ನು ಒಡ್ಡಿ ಇಷ್ಟಾರ್ಥವನ್ನು ಸಾಧಿಸುವುದು. ಉದಾ: ಬನದೊಳಗೆ ನೋಡಿ ಪೊಸಮಾವಿನ ಗೊಂಚಲನಕ್ಕ ನಿನಗೆ ತಂದಪ್ಪೆಂ ನೀನಿನಿತೊಂದು ಬೇಗಮಂ ನಿನ್ನಿನಿಯನ ಪಕ್ಕದೊಳಿರೆಂದು ಸಖಿ ತೊಲಗುವುದುಂ (ಕಾವ್ಯಾವ. ೬೨೨): ನುಡಿಯದೆ ಮನದರ್ಥಮನದು ನುಡಿದಂತಿರೆ ನುಡಿದ ನುಡಿಯೆ ಪರ್ಯಾಯಂ (ಕಾವ್ಯಾವ. ೬೨೧).

ಪರ್ಯಾಯವಾಗಿ—ನೇರವಾಗಿ ಅಲ್ಲದೆ; ಪರೋಕ್ಷವಾಗಿ: ತುಂಗಳ ಮಾಸ್ತರರ ಬಗ್ಗೆ ಅವರು ಮುಖ್ಯಾಧ್ಯಾಪಕರ ಮುಂದೆ ಪರ್ಯಾಯವಾಗಿ ದೂರಿಕೊಳ್ಳಹತ್ತಿದರು (ರಂಗರೋ. ೫೨); ನೇರವಾಗಿ ಆ ಮಾತನ್ನು ಬರೆಯುವ ಬದಲು ಪರ್ಯಾಯವಾಗಿ ಅದನ್ನು ತಿಳಿಸಿದಂತೆ ಕಾಣುತ್ತದೆ (ಮಹಾಗ. ೩೩೧). [ಸಂ.]

ಪರ್ಯಾಯಂದಪ್ಪು (ಕ್ರಿ). ಕ್ರಮವನ್ನು ತಪ್ಪು; ರೀತಿಗೆಡು: ಆಲೋಕತ್ರಯಮಧ್ಯದೊಳ್ ಮಧ್ಯಮಲೋಕಮೆಂಬ ಪೆಸರಂ ಪಡೆದು ಪರ್ಯಾಯಂದಪ್ಪದೇಂ ಸುತ್ತಿಱಿದುವೊ ವಲಯಾಕಾರದೊಂದೊಂದ ನತ್ಯಾಶ್ಚರ್ಯಂ (ಆದಿಪು. ೧-೪೮). [ಪರ್ಯಾಯ+ತಪ್ಪು.]

ಪರ್ಯಾಯದ್ವೀಪ (ನಾ). "ಬಹುಮಟ್ಟಿಗೆ ನೀರಿನಿಂದ ಆವೃತವಾದ ಅಥವಾ ಸಮುದ್ರದೊಳಕ್ಕೆ ಚಾಚಿಕೊಂಡಿರುವ

ಭೂಭಾಗ: ಪರ್ಯಾಯದ್ವೀಪ; ದ್ವೀಪಕಲ್ಪ" (Peninsula. ಇಂಕನಿ): ಕೊಂಚ ಕಡಮೆಯಾಗಿ ಎಲ್ಲಾ ಕಡೆಗಳಲ್ಲಿಯೂ ನೀರಿನಿಂದ ಸುತ್ತಲ್ಪಟ್ಟಿರುವ ಭೂಭಾಗವು "ಅರ್ಧದ್ವೀಪವು (Peninsula. ಪರ್ಯಾಯದ್ವೀಪ, ದ್ವೀಪಕಲ್ಪ)" ಎಂದು ಕರೆಯಲ್ಪಡುತ್ತದೆ (ಭೂಗೋಳ. ೧೦). [ಪರ್ಯಾಯ+ದ್ವೀಪ]

ಪರ್ಯಾಯನಾಮ (ನಾ). ಒಂದಕ್ಕೆ ಸಮಾನಾರ್ಥಕವಾದ ಮತ್ತೊಂದು ಹೆಸರು,—ಬೇರೆ ಹೆಸರು: ಸುಹೃದನೆನೆ ಸಹಾಯಂಗೆ ಪರ್ಯಾಯನಾಮಂ (ವಸ್ತುಕೋ. ೧೦೦-೧೧); ಅಕ್ಕರಮೆಂದುಂ, ವರ್ಣಮೆಂದುಂ, ಶುದ್ಧಾಕ್ಷರಕ್ಕೆ ಪರ್ಯಾಯನಾಮಂ (ಶಮದ. ೨ ವೃತ್ತಿ). [ಪರ್ಯಾಯ+ನಾಮ]

ಪರ್ಯಾಯಪದ (ನಾ). ಒಂದು ಶಬ್ದದ ಸಮಾನಾರ್ಥಕವಾದ, ಅದೇ ಭಾಷೆಯ ಮತ್ತೊಂದು ಶಬ್ದ; ಸಮಾನಾರ್ಥಕ ಶಬ್ದ; ಪ್ರತಿಪದ: ಈ ಶಬ್ದಗಳೂ ಧರ್ಮಶಬ್ದವೂ ಪರ್ಯಾಯಪದಗಳೆಂದೇ ಅವರ ಅಭಿಪ್ರಾಯವು (ಅರ್ಯಧ. ೩); ಸೌಂದರ್ಯ ಎಂಬ ಪದದ ಅರ್ಥ, ಅದರ ಪರ್ಯಾಯಪದಗಳಲ್ಲಿ ಸೂಚಿತವಾಗುವ, ಚಾರುತ್ವ, ಲಾವಣ್ಯ, ಲಾಲಿತ್ಯ ಇತ್ಯಾದಿ ಪದಗಳಿಗಿರುವ ಅರ್ಥಕ್ಕೆ ಮೀರಿದುದು (ಸೌಂದಸ. ೪೮). [ಪರ್ಯಾಯ+ಪದ$_2$]

ಪರ್ಯಾಯಪಾಠ (ನಾ). ಗ್ರಂಥದ ಒಂದು ಪಾಠಕ್ಕೆ ಬದಲಾಗಿ ಸಿಕ್ಕುವ ಬೇರೆ ಪಾಠ; ಪಾಠಾಂತರ: ಎರಡು ಪಾಠಸಂಪ್ರದಾಯಗಳಲ್ಲಿ ಸಮಾನಅಂತಃಪ್ರಾಮಾಣ್ಯವಿರುವ ಆದರೆ ಒಂದರಿಂದೊಂದು ಜನಿಸಿದ ಪರ್ಯಾಯಪಾಠ (Alternate Readings) ಗಳಿದ್ದಾಗ ಆಯ್ಕೆಯು ತುಂಬ ದುಷ್ಕರವಾಗುತ್ತದೆ (ಭಾರಪ. ೬೩). [ಪರ್ಯಾಯ+ಪಾಠ$_2$]

ಪರ್ಯಾಯಪಾರಿತೋಷಕ (ನಾ). ಸ್ಪರ್ಧೆಗಳಲ್ಲಿ ಆಯಾ ವರ್ಷ ಗೆದ್ದವರಿಗೆ ಹಿಂದಿನ ವರ್ಷ ಗೆದ್ದವರಿಂದ ತರಿಸಿ ಕೊಡುವ ಬಹುಮಾನ; ರೋಲಿಂಗ್ ಶೀಲ್ಡ್ ಅಥವಾ ಕಪ್ಪು: ರಾಷ್ಟ್ರವ್ಯಾಪಕಸ್ಪರ್ಧೆಗಳನ್ನು ಏರ್ಪಡಿಸಿ ಪರ್ಯಾಯಪಾರಿತೋಷಕಗಳನ್ನು ಸ್ಥಾಪಿಸುವುದು . . . ಇವೆಲ್ಲ ಶಾಲೆಯಲ್ಲಿ ಸಂಪ್ರದಾಯಗಳ ಸ್ಥಾಪನೆಗೂ ಬೆಳವಣಿಗೆಗೂ ನೆರವಾಗುತ್ತವೆ (ಶಿಕ್ಷದ. ೩೨೦). [ಪರ್ಯಾಯ+ಪಾರಿತೋಷಕ]

ಪರ್ಯಾಯವಚ (ನಾ). = ಪರ್ಯಾಯ ೧೯: ಪದದಿಷ್ಟಾರ್ಥಮನಾದೊಡಂತದನೆ ಮಾಡಲ್ ಬೇಱದೊಂದಾಗಲಂತದು ಪರ್ಯಾಯವಚಂ (ಉದಯಾ. ೫೦). [ಪರ್ಯಾಯ+ವಚ]

ಪರ್ಯಾಯಶಬ್ದ (ನಾ). = ಪರ್ಯಾಯಪದ: ಪರ್ಯಾಯಶಬ್ದದೊಳ್ ತಾತ್ಪರ್ಯದಿನಱಿದರ್ಥಗತಿಯಿನನ್ವರ್ಥತೆಯಿಂ ಪರ್ಯಾಲೋಚಿಸಿಕೊಳ್ಗಾಹಾರ್ಯಮಿದೆಂದನಭಿಹಿತದೊಳಭಿಯೋಗಪರರ್ (ವಸ್ತುಕೋ. ೨-೬). [ಪರ್ಯಾಯ+ಶಬ್ದ]

ಪರ್ಯಾಯಸ್ಥ (ನಾ). (ಉಡುಪಿಯ ಮಠದಲ್ಲಿ) ಶ್ರೀಕೃಷ್ಣದೇವಸ್ಥಾನದ ಮೇಲ್ವಿಚಾರಣೆಯ ಅಧಿಕಾರವನ್ನು ಹೊಂದಿದ ವ್ಯಕ್ತಿ: ಪರ್ಯಾಯಸ್ಥರಂತೆ, ಒಂದೊಂದು ಮನೆಯವರು, ತಮ್ಮ ಸರದಿ ಬಂದಾಗ . . . ಅರು ಕ್ಷೇತ್ರ ಸಾಲಿಗ್ರಾಮಗಳನ್ನೂ ಪೂಜಿಸುತ್ತಾರೆ (ಕಛವಿ. ೬). [ಸಂ.]

ಪರ್ಯಾಯಾರ್ಥಿಕನಯ (ನಾ). [ಜೈನ] ದ್ರವ್ಯಾರ್ಥಿಕನಯ ಮತ್ತು ಪರ್ಯಾಯಾರ್ಥಿಕನಯಗಳೆಂಬ ಎರಡು ಬಗೆಯ ನಯಗಳಲ್ಲಿ ಒಂದು; ವಿಶೇಷ, ಪರ್ಯಾಯ, ವ್ಯಾವೃತ್ತಿ ಇತ್ಯಾದಿ ಭೇದಗಳನ್ನು ಲಕ್ಷ್ಯವಾಗಿಟ್ಟುಕೊಂಡು ವಿಚಾರ ಮಾಡುವಿಕೆ: ಪರ್ಯಾಯಾರ್ಥಿಕನಯದಿಂ ಭಾವನಿಕ್ಷೇಪಮಱಿಯೆಪಡುಗುಂ (ತತ್ತ್ವಪ್ರ. ೧೧). 'ನಯ$_2$' ಪರಾ. [ಸಂ.]

ಪರ್ಯಾಯಾಲಂಕಾರ (ನಾ). = ಪರ್ಯಾಯ ೧೮: ಒಂದು ವಸ್ತುಮೊದಲೊಳಿರ್ಪ ತಾಣಮಂ ಬಿಟ್ಟು ಪೆಱಪೆಱತೊಂದೊಂದು ತಾಣಮಂ ಕ್ರಮದಿಂ ಸೇರಿತೆಂದು ಪೇಟೆಯದು ಪರ್ಯಾಯಾಲಂಕಾರಂ . . . ಒಂದು ತಾಣದೊಳ್ತಱುವಾಯಿಂ ಪೆಱಪೆಱತೊಂದೊಂದು ವಸ್ತುಗಳ್ಸಂಬಂಧಿಸಿದುದಂ ಪೇಟೆಯದುವುಂ ಪರ್ಯಾಯಾಲಂಕಾರಂ (ಅಪ್ರತಿ. ೯೮-೯); ಒಂದು ವಸ್ತುವಿಗೆ ಪರ್ಯಾಯದಿಂದನೇಕವಾದ ವಸ್ತುಗಳಲ್ಲಿಯಾತ್ರಯವ ಮಾಡಿ ವರ್ಣಿಸಲ್ ಪರ್ಯಾಯಾಲಂಕಾರವೆನಿಪುದು (ಕುವಲ. ೧೦೧). [ಪರ್ಯಾಯ+ಅಲಂಕಾರ]

ಪರ್ಯಾಯೋಕ್ತ (ನಾ). ೧. [ಕಾವ್ಯಮೀ] ಒಂದು ಬಗೆಯ ಅರ್ಥಾಲಂಕಾರ; ಹೇಳಬೇಕಾದ ವಿಷಯವನ್ನು ನೇರವಾಗಿ ಹೇಳದೆ ಪ್ರಕಾರಾಂತರವಾಗಿ ಚಮತ್ಕಾರದಿಂದ ಹೇಳುವುದು; ಪರ್ಯಾಯೋಕ್ತಿ: ಪೇಟತಕ್ಕರ್ಥಮಂ ಪ್ರಕಾಶಮಾಗಿ ಪೇಟದೆ ಪೆಱತೊಂದು ತೆಱದೊಳಂದಮಾಗಿ ಪೇಟೆಯದು ಪರ್ಯಾಯೋಕ್ತಂ (ಅಪ್ರತಿ. ೭೩-೮). ೨. ಬೇರೊಂದು ಕಾರ್ಯದ ನೆಪವನ್ನು ಒಡ್ಡಿ ಇಷ್ಟಾರ್ಥವನ್ನು ಸಾಧಿಸುವುದನ್ನು ವರ್ಣಿಸುವ ಅಲಂಕಾರ: ಬಗೆದರ್ಥಮನಱಿಪದೆ ಮೆಲ್ಲಗೆ ತಿರ್ದುವ ಬಗೆಯನದಱ ನೆಪದಿಂ ಪೆಱತಂ ನಿಗದಿಸುವುದು ಪರ್ಯಾಯೋಕ್ತಗತಾಳಂಕಾರಂ (ಕವಿಂಾ. ೩-೧೩೧). [ಪರ್ಯಾಯ+ಉಕ್ತ]

ಪರ್ಯಾಯೋಕ್ತಿ (ನಾ). ೧. = ಪರ್ಯಾಯೋಕ್ತ ೧: ಉಸಿರಲಪ್ಪರ್ಥಮಂ ಪ್ರಕಾಶಮಾಗುಸಿರದೆ ರೈಯಮಾದ ಮಗುಳ್ದೊಂದು ಬಗೆಯಿಂದುಸಿರಲದು ಪರ್ಯಾಯೋಕ್ತಿಯೆನಿಕುಂ (ನರಚ. ೫೩). ೨. = ಪರ್ಯಾಯೋಕ್ತ ೨: ಮಗುಳ್ದೊಂದು ಕಜ್ಜಮಂ ನೆಪಂಗೆಯ್ದು ಇಷ್ಟಮಂ ಸಾಧಿಸೆ ಇದುವುಂ ಪರ್ಯಾಯೋಕ್ತಿಯೆನಿಪುದು (ನರಚ. ೫೩). [ಪರ್ಯಾಯ+ಉಕ್ತಿ]

ಪರ್ಯಾಲೋಚನ, ಪರ್ಯಾಳೋಚನ (ನಾ). ಚೆನ್ನಾಗಿ ವಿಚಾರ ಮಾಡುವಿಕೆ; ಕೂಲಂಕಷವಾಗಿ ಆಲೋಚಿಸುವಿಕೆ: 'ಪರ್ಯಾಲೋಚಿಸು' ಪರಾ. **ಪರ್ಯಾಳೋಚನ:** ತನ್ನ ತಂಗೆಯ ಸುತಾರೆಯ ಸ್ವಯಂವರವಿವಾಹಕಲ್ಯಾಣಕಾರ್ಯಪರ್ಯಾಳೋಚನವಿರಾಮದೊಳ್ ಶ್ರೀವಿಜಯಂ ಮೊದಲಾಗೆ ವಿಶ್ವಂಭರಾಧೀತಶನೂಜ ಸಮಾಜಮಂ ಬರಿಸೆ (ಶಾಂತಿಪು. ೬-೨೨ ಪ). [ಸಂ.]

ಪರ್ಯಾಲೋಚಿತ, ಪರ್ಯಾಳೋಚಿತ (ಗು). ಚೆನ್ನಾಗಿ ಆಲೋಚಿಸಿದ; ಸೂಕ್ಷ್ಮವಾಗಿ ವಿಚಾರ ಮಾಡಿದ: ಅಂತು ಮಹಾಬಲಖಚರೇಂದ್ರಂ ಸ್ವಯಂಬುದ್ಧನೆ ತನಗೆ ಪರಮವಿಶ್ವಾಸಭೂಮಿಯಾಗೆ ತತ್ಪರ್ಯಾಲೋ[ಪಾಠಾಂ. ಳೋ]ಚಿತಕಾರ್ಯಪರ್ಯವಸಾನನುಂ ಮನೋಭಿಲಷಿತವಿಷಯಸುಖಾನುಭವನಿರತನುಮಾಗಿ ಮೂವತ್ತಾಱುಲಕ್ಕೆ ಪುಬ್ಬಂ ರಾಜ್ಯಂಗೆಯ್ಯೆ (ಅದಿಪು. ೨-೨೩ ಪ). **ಪರ್ಯಾಳೋಚಿತ:** ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಸಂ.]

ಪರ್ಯಾಲೋಚಿಸು, ಪರ್ಯಾಳೋಚಿಸು (ಕ್ರಿ). ಚೆನ್ನಾಗಿ ವಿಚಾರ ಮಾಡು; ಕೂಲಂಕಷವಾಗಿ ಆಲೋಚನೆ ಮಾಡು; ಆಮೂಲಾಗ್ರವಾಗಿ ವಿವೇಚಿಸು: ವಚನಗಳು ಯಾವ ಪ್ರಕರಣದಲ್ಲುಕ್ತವಾಗಿವೆ, ಹಿಂದಣ ಮುಂದಣ ವಾಕ್ಯಗಳೇನು ಹೇಳುತ್ತವೆ ಎಂಬುದನ್ನು ಪರ್ಯಾಲೋಚಿಸಬೇಕು (ಅರ್ಯಧ. ೪); ಈ ವಿಷಯವನ್ನು ಸರಕಾರವೂ ಸಮಾಜವೂ ಪರ್ಯಾಲೋಚಿಸಬೇಕು (ಗೋಗ್ರಾಸ. ೧೦೩).

ಪರ್ಯಾಳೋಚಿಸು : ಗುಜಿಗುಜಿಗೊಂಡು ಪರ್ಯಾಳೋಚಿಸಿ ಮನಂ ಮಗುಟ್ಟು . . . ಅಟ್ಟಿಯೊಳಾ ಕನ್ನೆಯಂ ಕನಕಕಾಂತಿಯೊಳ್ ನೆರಪಿದಂ (ಶಾಂತಿಪು. ೯-೧೬ ಪ); ಸುಯೋಧನನು ಮಾಗಳಾತ್ಮೀಯಾಮಾತ್ಯನಿಕರಮಂ ಕರೆದು ಪರ್ಯಾಳೋಚಿಪುದುಂ (ನೇಮಿಪು. ೧೦-೧೩೩). [ಪರ್ಯಾಲೋಚನ+-ಇಸು$_3$]

ಪರ್ಯಾಸ (ನಾ). ೧. ಅಂತ್ಯ; ಮುಕ್ತಾಯ. ೨. ಸುತ್ತುವಿಕೆ; ತಿರುಗುವಿಕೆ. ೩. ಹಿಂದುಮುಂದಾದ ಕ್ರಮ; ವಿಪರೀತ ವ್ಯವಸ್ಥೆ. [ಸಂ.]

ಪರ್ಯಾಹಾರ (ನಾ). ೧. ಬಿದಿರಿನ ಅಡ್ಡೆ; ಕಂಬಿ; ಕಾವಡಿ. ೨. ತಲೆಯ ಮೇಲಿನ ಭಾರ; ತಲೆಹೊರೆ: "ವಿವಧಃ, ವೀವಧಃ, ಭಾರಃ, ಪರ್ಯಾಹಾರಃ—ಈ ೪ ತಲೆಹೊಜೆ" (ಹಲಾಯು. ೧೨೫-೭೩). ೩. ಸಾಗಿಸುವುದು; ತೆಗೆದುಕೊಂಡು ಹೋಗುವುದು: "ಪರ್ಯಾಹಾರ, ವಿವಧ-ಹೊಜೆಯ ಹೊತ್ತು ಎಡೆಯಾಡುವದು" (ನಾಚಿರಾ. ಕಿ). [ಸಂ.]

ಪರ್ಯಾಳ 'ಪರಿಯಾಣ$_1$' ನೋ.

ಪರ್ಯಾಳೋಚನ 'ಪರ್ಯಾಲೋಚನ' ನೋ.

ಪರ್ಯಾಳೋಚಿತ 'ಪರ್ಯಾಲೋಚಿತ' ನೋ.

ಪರ್ಯಾಳೋಚಿಸು 'ಪರ್ಯಾಲೋಚಿಸು' ನೋ.

ಪರ್ಯುತ್ಸುಕ (ನಾ). ಕಾತರಗೊಂಡ ವ್ಯಕ್ತಿ; ತವಕಗೊಂಡ ವ್ಯಕ್ತಿ: ಅವುಗಳ ಸ್ಮರಣೆ ಕೂಡ ಈಗ ಅವನನ್ನು ಮತ್ತೆ ಪರ್ಯುತ್ಸುಕನನ್ನಾಗಿ ಮಾಡುತ್ತದೆ (ಧ್ವನ್ಯಾಲೋ. ೬೮ ಅಡಿಟಿ); ಆ ರಾಜರ್ಷಿಯನ್ನು ನೋಡಿದುದು ಮೊದಲಾಗಿ ಶಕುಂತಳೆ ಪರ್ಯುತ್ಸುಕಳಾಗಿರುವಂತಿದೆ (ಶಾಕುಂತ. ೩೪-೧೩). [ಸಂ.]

ಪರ್ಯುದಂಚನ (ನಾ). ಸಾಲ; ಋಣ: "ಅಪಮಿತ್ಯಕಂ, ಉದ್ಧಾರಃ, ಋಣಂ, ಪರ್ಯುದಂಚನಂ—ಈ ೪ ಸಾಲಂ" (ಹಲಾಯು. ೯೪-೪೧೮). [ಸಂ.]

ಪರ್ಯುಪಾಸ್ತಿ (ನಾ). ಸೇವೆ; ಶುಶ್ರೂಷೆ; ಉಪಚಾರ: "ಪರ್ಯುಪಾಸ್ತಿ ಶುಶ್ರೂಷಾಖ್ಯಂ" (ವಸ್ತುಕೋ. ೫೭-೩೫). [ಸಂ.]

ಪರ್ಯುಪಾಸ್ಯೆ (ನಾ). = ಪರ್ಯುಪಾಸ್ತಿ: "ಉಪಚಾರಂ ಸೇವನೆ ಪರ್ಯುಪಾಸ್ಯೆ ವರಿವಸ್ಯೆ ಭಕ್ತಿ ಶುಶ್ರೂಷಾರ್ಥಂ" (ವಸ್ತುಕೋ. ೨೦-೧೪). [ಸಂ. ಪರ್ಯುಪಾಸ್ಯಾ]

ಪರ್ಯುಪ್ತಿ (ನಾ). ಬೀಜವನ್ನು ಬಿತ್ತುವಿಕೆ; ಬಿತ್ತನೆಯ ಕಾರ್ಯ. [ಸಂ.]

ಪರ್ಯುಷಿತ (ಗು). ೧. ಹಿಂದಿನ; ಹಳೆಯದಾದ: ಪರ್ಯುಷಿತ ಚಂದನಾಂಗರಾಗಧೂಸರೋರುದಂಡನುಂ ಕುಂಕುಮಾಂಗರಾಗಪಿಂಜರ ರೂಪನುಂ . . . ಅಪ್ಪ ಕೇಯೂರನೆಂಬ ಗಂಧರ್ವಕುಮಾರಂ ಬೆರಸು ತರಳೆಕೆ ಮಹಾಶ್ವೇತೆಯಲ್ಲಿಗೆ ಬಂದು (ಕಾದಂಪೂ. ೯೮೬). (ನಾ). ೨. ಹಳೆಯದಾದುದು: ಅತ್ಯಾಶನ ಅತಿಪಾನ ಉಗ್ರಪ್ರತಿಗ್ರಹ ಉಚ್ಛಿಷ್ಟ ಪರ್ಯುಷಿತ ನಿಷಿದ್ಧ ದ್ರವ್ಯಂಗಳಂ ವರ್ಜಿಸುವದು (ವಿವೇಕ. ೧೩೮); ಅನ್ನವು ತನ್ನಲ್ಲಿರುವ ಅಗ್ನಿಗೇ ಆಹಾರವಾಗಿ ಜೀರ್ಣವಾಗಿ ಪರ್ಯುಷಿತವಾಗುವುದು (ಮಹಾಣ. ೨೯೪). [ಸಂ.]

ಪರ್ಯೂಷಣ (ನಾ). [ಜೈನ] ಭಾದ್ರಪದಶುದ್ಧಪಂಚಮಿಯಿಂದ ಚತುರ್ದಶಿಯ ವರೆಗೆ ನಡೆಸುವ ಒಂದು ವ್ರತದ ಹೆಸರು; ದಶಲಕ್ಷಣ: 'ಪರ್ಯೂಷಣಪರ್ವ' ಪರಾ. [ಸಂ.]

ಪರ್ಯೂಷಣಪರ್ವ (ನಾ). = ಪರ್ಯೂಷಣ: ಅವನಿಗೆ ಒಂದು ರೀತಿಯಿಂದ ಸಮಾಧಾನವನ್ನು ಉಂಟು ಮಾಡಲಿಕ್ಕೆ 'ದಶಲಕ್ಷಣಪರ್ವ' ಕಾರಣವಾಗುತ್ತದೆ. ಈ ಪರ್ವಕ್ಕೆ ಜೈನಪರಿಭಾಷೆಯಲ್ಲಿ ಪರ್ಯೂಷಣ ಪರ್ವವೆಂದೂ ಹೆಸರಿದೆ (ಜೈನಪ. ೫೭೧). 'ದಶಲಕ್ಷಣ' ಪರಾ. [ಪರ್ಯೂಷಣ + ಪರ್ವ]

ಪರ್ಯೇಷಣೆ (ನಾ). ೧. ಶ್ರಾದ್ಧಭೋಜನಕ್ಕಾಗಿ ಬ್ರಾಹ್ಮಣನನ್ನು ಶ್ರದ್ಧೆಯಿಂದ ಹುಡುಕುವಿಕೆ: "ಪರ್ಯೇಷಣಾ, ಪರೀಷ್ಟಿಃ, ಅನ್ವೇಷಣಾ . . . ಗವೇಷಣಾ-ಳ ಶ್ರಾದ್ಧಾದಿಗಳಲ್ಲಿ ನಮಂತ್ರಣಕ್ಕೆ ಯೋಗ್ಯನಾದ ಬ್ರಾಹ್ಮಣನನ್ನು ಶ್ರದ್ಧೆಯಿಂದ ಹುಡುಕುವಿಕೆ" (ಸಿದ್ಧಾಂತಿ. ೨೨೪). ೨. ಸೇವೆ; ಪರಿಚರ್ಯೆ. [ಸಂ. ಪರ್ಯೇಷಣಾ]

ಪರ್ಲು 'ಪರಲು$_2$' ನೋ.

ಪರ್ವ (ನಾ). ೧. ಜೋಡಣೆ; ಸೇರಿಕೆ; ಬೆಸುಗೆ: ಪಿಡಿದುದಿರ್ವಬಾಳ ಕಿಡಿಗ[ಳ]ನೊಡನೊಡನರೆವೊತ್ತಿ ತೊಟ್ಟ ಸನ್ನಣವುರಿಯಲ್ಕೊಡರಿಸಿ ದೊಡವಜ ಪ[ಪಾಠಾಂ. ಗ, ಸ]ರ್ವಂ ಬಿಡೆಯರಿದರಿಸಮಿತಿಯೊಡನೆ ಕಾದಿದರರೆಬರ್ (ಪಂಪಭಾ. ೧೦-೭೯). ೨. (ಕಬ್ಬು, ಬಿದಿರು ಮೊದಲಾದುವುಗಳ) ಗೆಣ್ಣು; ಗ್ರಂಥಿ: "ಗ್ರಂಥಿಃ, ಪರ್ವ, ಪರುಸ್—ಈ ೩ ಗಂಟು" (ಹಲಾಯು. ೩೧-೩೫); ಎಲರಿಂದಂ ಕಂಪಿಸುತ್ತಿರ್ಪ ಕರ್ಬಿನ ಕೋಲ್ಗಳ್ ಬಿಡದೊಂದನೊಂದೊರಸೆ ಪರ್ವಾಘಾತದಿಂದುರ್ಬಿ ಭೋರೆನೆ ಪಾಯ್ತುರ್ಪ ರಸಪ್ರವಾಳಚಯಂ (ಜಾವಿ. ೨-೯); ಪರ್ವಂ ಪ್ರತಿ ಮೂಡಿದ ಕಾಯ್ ಕೊರ್ವಿ ನೆಲಂದಾಗಿ ನೆಗೆದು ತಮ್ಮಯ ತಾಯನುರ್ವರೆಯೊಳ್ ಮುಂಡಾಡುವಗುರ್ವಂ ತಾಳ್ದಿದವು (ಮಹಾನೇ. ೧೪-೧೫). ೩. ಶರೀರದ ಕೀಲು,—ಅಸ್ಥಿಸಂಧಿ: "ತದಂಗುಳಿಗಳೊಳಾದ ಸಂಧಿ ಪರ್ವಮೆನಿಕ್ಕುಂ" (ವಸ್ತುಕೋ. ೬೯-೧೧). ೪. (ಮಹಾಭಾರತದಲ್ಲಿರುವಂತೆ) ಗ್ರಂಥದ ವಿಭಾಗ: ಹೇಗೆ ಒಂದು ವಂಶ ಅಥವಾ ಬೊಂಬಿನಲ್ಲಿ ಹಲವು ಪರ್ವಗಳಿರುತ್ತವೆಯೋ ಹಾಗೆ ಈ ಗ್ರಂಥದಲ್ಲಿ ಹದಿನೆಂಟು ಪರ್ವಗಳಿವೆ (ಭಾರದ. ೯೫). ೫. ಪ್ರತಿಪಕ್ಷದ ಅಷ್ಟಮಿ, ಚತುರ್ದಶಿ ಮತ್ತು ಹುಣ್ಣಿಮೆ, ಅಮಾವಾಸ್ಯೆ ದಿನಗಳು, ಸೂರ್ಯಚಂದ್ರಗ್ರಹಣಗಳು ಮತ್ತು ಸಂಕ್ರಮಣಕಾಲ; ಪುಣ್ಯಕಾಲ; ಸಂಧಿಕಾಲ: "ಪ್ರತಿಪತ್ಪಕ್ಷಾಂತ ಸಂಧಿ ಪರ್ವಮೆನಿಕ್ಕುಂ" (ವಸ್ತುಕೋ. ೧೬-೭); ಅನಶನವಿಧಿಯಿಂ ತಿಂಗಳಿನ ನಾಲ್ಕು ಪರ್ವದೊಳ ಮಾಪ್ತಪೂಜಾವಿಧಿಯಿಂ ಮನಮೊಸೆದಿರ್ಪಂ ನಾಲ್ಕನೆಯ ನೆಲೆಯವಂ ಪ್ರೋಷಧೋಪವಾಸಿಯೆನಿಕ್ಕುಂ (ಸುಕುಮಾ. ೬-೨೯); ಕಡುಬೆಟ್ಟ ಬೇಸಗೆ ಮಾಗಿ ಮಳೆಗಾಲದೊಳು ಪರ್ವದಲಿ ನೆಟ್ಟನೋರ್ವನೆ ಬೈಗಿನಿಂರವಿ ಪುಟ್ಟುವನ್ನೆಗ ಜಾನ ಜಪವಳವಟ್ಟು ನಿಲುವಾ ಪಾಲಕೀರ್ತಿನಮೋಸ್ತು[ಗೆ]ಜಗುವೆನು (ಸಾಳ್ವಭಾ. ೧-೨೨). 'ಪರ್ವಸಂಧಿ' ಪರಾ. ೬. ಸಂಕ್ರಮಣ ಮೊದಲಾದ ಪುಣ್ಯಕಾಲಗಳಲ್ಲಿ ಕೊಡುವ ತರ್ಪಣ ಮೊದಲಾದುವು. ೭. ಭಾಗ; ವಿಭಾಗ. ೮. (ಸಂತೋಷದ ಸಂದರ್ಭ, ಪುಣ್ಯಕಾಲ ಮೊದಲಾದುವುಗಳಲ್ಲಿ ಆಚರಿಸುವ) ಹಬ್ಬ; ಉತ್ಸವ: ದೀಪಾವಳಿಯ [ಪ]ರ್ವ್ವಕ್ಕೆ ದೇವರ ಸೊಡರಿಂಗೆ ಗಾಣದಲೊಮ್ಮಾನೆಣ್ಣೆ (ಸೌಇಇ. XX, ೧೮-೩; ೯೮೦); ಮಾರಿ ಹೊಕ್ಕ ಮನೆಯೊಳ್ ಪರ್ವಂ ಗಡ (ಅನಂಪು. ೧೧-೭೨); ಬರಿಸುವುದೊಂದೂರೊಳಿರ್ಪಳನುಪಚಾರವೆರಸಿ ಪಾರಣೆ ಪರ್ವಗಳಿಗೆ (ಹಪಿಬ. ೫-೨೯); ಹರಶರಣರೀ ಕೃತಿಯನಂಗೀಕರಿಸಿ ಲಾಲಿಸಿ ಕೇಳಿ ಕಡೆಯೊಳು ಪಿರಿದು ಪರ್ವಂಗಳನೊಡರಿ ಸಂತೋಷದೊಳು ಸುಖಿಸಿ (ಶಂಕವಾ. ೧೬-೬೯). ೯. (ಆಲಂ) ಸಂತೋಷ; ಆನಂದ: ಪುರಕ್ಕಿನ್ನಡೆತಂದು ದೇವಪಡೆ ಪೌರಜನಂಗಳ ಕಣ್ಗೆ ಪರ್ವಮಂ (ಕಾದಂಪೂ. ೪೪೭); ಮಾನಿನಿಯರ್ ಕೆಲರ್ ಮದನಲಕ್ಷ್ಮಿಯರಂತಿರೆ ವಿಂಧ್ಯವಾಸಿನೀಸ್ಥಾನಮನೆಯ್ದಿದರ್ ಪಡೆದು ನೋಟ್ಪರ ಕಣ್ಗಳ ಪರ್ವಮೆಂಬಿನಂ (ದಶಕು. ೧೨-೨೨).

ಪರ್ವದ ಕೋಣೆ = ಹಬ್ಬ, ಉತ್ಸವ ಇತ್ಯಾದಿ ಸಮಯಗಳಲ್ಲಿ ಸಮಾರಾಧನೆಯ ನೆಲುವಾಗಿರುವ ಕೊಠಡಿ : ಸದ್ಯಕ್ಕೆ ಯಾರದೋ ಮನೆಯ ಜಗುಲಿಯೋ ಬಸವಣ್ಣನ ಗುಡಿಯ ಪರ್ವದ ಕೋಣೆಯೋ ಸಾಕಲ್ಲವೆ ? (ಬೆಳಮ. ೬೫). [ಸಂ. ಪರ್ವನ್]

ಪರ್ವಕಾಲ (ನಾ). ೧. = ಪರ್ವ ೫ : ಪರ್ವಕಾಲಗಳಲ್ಲಿ ತರ್ಪಣವನ್ನು ಕೊಡಬೇಕು (ರೂಢಿ). ೨. ಬದಲಾವಣೆಯನ್ನು ಹೊಂದುವ ಕಾಲ ; ಪರಿವರ್ತನೆಯ ಸಮಯ ; ಸಂಧಿಕಾಲ : ಇದು ನಮ್ಮ ಜೀವನದಲ್ಲಿ ಪರ್ವಕಾಲ—ಇತಿಹಾಸದಲ್ಲಿಯೂ ಇದೊಂದು ಪರ್ವಕಾಲ (ರಾಜ್ಯೋದ. ೬). ೩. ಉತ್ಸವದ ಕಾಲ ; ಹಬ್ಬದ ಸಮಯ : ಹಿಂದೆ ಎಂದು ಕಂಡಿರದ ಹೊಚ್ಚ ಹೊಸ ಪರ್ವಕಾಲವಿಂದು (ನೆಲಮು. ೩೬-೧೪) ; ಇದು ಹರ್ಷ-ಹೆಮ್ಮೆ ಪಡಬೇಕಾದ ಕಾಲ. ಈ ಪರ್ವಕಾಲ ಜೀವನದಲ್ಲಿ ಎಷ್ಟು ಜನಕ್ಕೆ ಬರುವ ಯೋಗ ? (ಹೂಸಕ್ತಿ. ೩೪) ; ಶಿವಗಂಗೆಯಲ್ಲಿ ನಾಳೆ ನಾಡಿದ್ದು ಏನಾದರೂ ಪರ್ವಕಾಲವೆ ? (ಶಾಂತಲಾ. ೨೮೩). ೪. ಉನ್ನತಿಯ ಕಾಲ ; ಏಳಿಗೆಯ ಕಾಲ : ಕ್ರಿ. ಶ. ಮೂರನೆಯ ಶತಮಾನದಿಂದ ಎಂಟನೆಯ ಶತಮಾನದ ವರೆಗೂ ಇರುವ ಕಾಲ ವಾಸ್ತುಕಲೆಯ ದೃಷ್ಟಿಯಿಂದ ಒಂದು ಪರ್ವಕಾಲವೆಂದು ಎಣಿಸಬಹುದು (ಮೈವಾಸ್ತು. ೬೫). [ಪರ್ವ + ಕಾಲ]

ಪರ್ವಣಿ (ನಾ). ೧. = ಪರ್ವ ೫ : ಪ್ರತಿರಾತ್ರಿಯಲ್ಲಿ ಕಾಣುವ ನಕ್ಷತ್ರ ರಾಶಿಯನ್ನು ಜನರು ಅಲಕ್ಷಿಸುವರು ; ಅದೇ ಪರ್ವಣಿಯಂತೆ ಅವು ನೂರಾರು ವರ್ಷಕ್ಕೊಮ್ಮೆ ಬಂದರೆ ಜನತೆಗೆ ಅದರಲ್ಲಿದ್ದ ವೈವಿಕತೆಯು ಹೊಳೆಯುವದೆಂದು ಮತ್ತೊಬ್ಬ ಕವಿಯು ಹೇಳಿದ್ದನು (ಚಲುವಿ. ೫೨) ; ಅಮಾವಾಸ್ಯೆಯು ಒಂದು ದೊಡ್ಡ ಪರ್ವಣಿಯು. ಅಂದು ಚಂದ್ರ ಸೂರ್ಯರ ಭೆಟ್ಟ (ಭಾರಸಂ. ೩೫೭). 'ಪರ್ವಸಂಧಿ' ಪರಾ. ೨. ಗೆಣ್ಣು ; ಅಸ್ಥಿಸಂಧಿ : ಅಂಗುಷ್ಠದ ಪರ್ವಣಿಯಿಂ ತೊಡಗಿ ತಿಲುಳುನಿಕೆಯ ಮೊದಲ ಪರ್ವಣಿವರೆಗಂ (ಪಸಾರ. ೩೫೩) ; ನೆಟ್ಟ ನಂಗುಲಿ ಅನಾಮಿಕ ಮೂಲ ಪರ್ವಣಿಗಿಟ್ಟು ಅಂಗುಷ್ಠದ ಬಳಿಕ (ಪೂಜ್ಯಚ. ೧೦-೫೦). ೩. ಉತ್ಸವ ; ಹಬ್ಬ : ಇಂಥ ಪ್ರಸಂಗವೆಂದರೆ ಅವರಿಗೆ ಪರ್ವಣಿ (ಅನ್ನ. ೧೬೦). ೪. ಶುಭಕಾಲ ; ಸುಸಮಯ ; ಸುಸಂದರ್ಭ : ದೇವ ಏನಿದಪೂರ್ವ ಪರ್ವಣಿ ! (ಕ್ರೌಂಚಧ್ವ. ೧೬-೧೩) ; ಸಮ್ರಾಟನ ರಾಜಧಾನಿಯನ್ನು ನೋಡಲು ಮಾಡಿ, ಸಣ್ಣ ಬೀರೇಗೌಡನ ಹಳ್ಳಿಯ ವರೆಗೆ ಎಲ್ಲೆಲ್ಲಿಯೂ ಉತ್ಸವದ ಸಂಭ್ರಮವನ್ನು ಪ್ರದರ್ಶಿಸುವ ಪರ್ವಣಿ ! (ಬೆಂದಯು. ೮೭) . [ಸಂ. ಪರ್ವಣೀ]

ಪರ್ವಣಿಕಾಲ (ನಾ). ಒಳ್ಳೆಯ ಕಾಲ ; ಶುಭಸಮಯ : ಇದನ್ನು ಸಾಧಿಸಿದಾಗ ರಾಷ್ಟ್ರದ ಜೀವನದಲ್ಲಿ ಪರ್ವಣಿಕಾಲ ಬಂದೀತು (ನಸ್ಯಕಾ. ೧೩). [ಪರ್ವಣಿ + ಕಾಲ]

ಪರ್ವತ (ನಾ). ೧. ದೊಡ್ಡ ಬೆಟ್ಟ ; ಗಿರಿ ; ಶೈಲ : "ಆಚಳಃ, . . . ಗೋತ್ರಃ, ಪರ್ವತಃ . . . ಅದ್ರಿಃ, ಕುದ್ರಃ—ಈ ೧೪ ಬೆಟ್ಟು" (ಅಲಾಯು. ೨೭-೧೧) ; ಮತ್ತಿತ್ತ ಜಯಾವತಿಯುಂ . . . ಸತ್ತು ಮೊಗ್ಗಳಗಿರಿಯೆಂಬ ಪರ್ವತದೊಳ್ ಪೆಣ್ಬುಲಿಯಾಗಿ ಪುಟ್ಟಿದಳ್" (ಸಡ್ಡಾ. ದಾ. ೪೮-೨) ; ವಾರಿಧಿ ಪರ್ವತಂ ಪುರಮಧೀಶ್ವರನುದ್ಯಹನಂ . . . ವಿರೋಧಿ ಜಯಂಗಳೆಂದಿವಂ ಸೂರಿಗಳಂಗಮೆಂದು ಕೃತಿಯೊಳ್ ಪದಿನೆಂಟುಮನೆಯೆಂ ಬಣ್ಣಿಪರ್ (ಸೂಕ್ತಿಸು. ೧-೨೬). ೨. ಶ್ರೀಶೈಲ : ಕೃತಯುಗದಲ್ಲಿ ಶೀ[ದಾ]ರವೆಂಬ ಮೂಲಸ್ಥಾನ . . . ಕಲಿಯುಗದಲ್ಲಿ ಪರ್ವತವೆಂಬ ಮೂಲ ಸ್ಥಾನ (ಬಸವ. ೩೯೪) ; ಎಲ್ಲಿಹನು ಪರ್ವತದಲೇಂ ಪೆಸರು ಮಲ್ಲಿಕಾರ್ಜುನ ನೆಂಬುದು (ಸಿದ್ಧರಾಮ. ೪೨-೪೩). ೩. ಕಲ್ಲು ; ಬಂಡೆ. ೪. [ಗಣಿತ] ಏಳು ಎಂಬ ಸಂಖ್ಯೆಯ ಸಂಕೇತ: ಸ್ವರ ಸಾಗರ ಪರ್ವತಾದ್ರಿಯೇಟಱ ನಾಮಂ (ನೃಪತು. ೯-೬) ; ನೂರುಪರ್ವತವರುಷ ಬಿಡದಲೆ ಜಾರು ವೃಂದಾವನದಲಿ ವಿಸ್ತಾರ ಆರಾಧನೆಯು ಕೊಲಗದೆ ವಾರವಾರಕೆ ಆಗು ತಿಪ್ಪುದು (ವಿದಾಕ್ಕ. ೫೬-೪). [ಸಂ.]

ಪರ್ವತಕಾಕ (ನಾ). ಕಾಗೆಯ ಜಾತಿಗೆ ಸೇರಿದ ಒಂದು ದೊಡ್ಡ ಪಕ್ಷಿ ; ಡೊಂಬಕಾಗೆ : (೪). [ಪರ್ವತ + ಕಾಕ$_2$]

ಪರ್ವತನಾಥ (ನಾ). ೧. ಬೆಟ್ಟಗಳ ಒಡೆಯ ; ಹಿಮವಂತ. ೨. ಕೈಲಾಸಪರ್ವತದ ಒಡೆಯ ; ಶಿವ : ಉತ್ತಮೋತ್ತಮದುನ್ನತ ಶ್ರೀವತ್ಸ ನಿರಗಿರಿಗೆಜೆಯೆನಲು ಪ್ರಭವಿತ್ತ ಪುರವಂ ರಚಿಸಿ ಪರ್ವತನಾಥನಂ ತಂದು ಇತ್ತ ಸೊನ್ನಲಿಗೆಯೊಳಿರಿಸಿ (ಬಸಪು. ೯-೧೩). ಪರ್ವತನಾಥನಣುಗ = ೧. ಪರ್ವತನಾಥನ ಮಗ ; ಮೈನಾಕ : (೪). ೨. ಕೈಲಾಸನಾಥನ ಮಗ ; ಶಿವನ ಪುತ್ರ : ಇಳೆಯೊಳಜಾಯೂ ಎನ್ನ ಹೆಸರನು ತಿಳಿದು ನೀ ನೋಡಂತುಮಲ್ಲದೆ ಬಳಿಕ ಪರ್ವತನಾಥನಣುಗನು ಜಾವಳನೆ (ಬಸಪು. ೩೪-೨೧). [ಪರ್ವತ + ನಾಥ]

ಪರ್ವತಬಾಣ (ನಾ). ಬೆಟ್ಟಗಳನ್ನು ಸುರಿಸುವ ಬಾಣ,—ಅಸ್ತ್ರ : ಪರ್ವತಬಾಣದಿನೆಚ್ಚೊಡಗುರ್ವುದಿರೆ ಪರ್ವತಪ್ರತಾನಂ ನಭಮಂ ಪರ್ವಿ ಬರೆ (ನೇಮಿಪು. ೧೨-೧೬೬). [ಪರ್ವತ + ಬಾಣ]

ಪರ್ವತಬಾಳೆ (ನಾ). ಕತ್ತಾಳೆ ; ದೆವ್ವಬಾಳೆ : ಮುಂಡಿಸಿದ್ದ ಗೊರಟಿಹೂಗಳ ಹಳದಿಯ ನಡುವೆ ಕೆಂಪು ಪರ್ವತಬಾಳೆಯ ಹೂಗಳೂ ಭೂತಾಳೆಯ ರಕ್ತವರ್ಣದ ಎಲೆಯ ರೂಪದ ಹೂಗಳೂ ರಂಜಿಸಿದ್ದವು (ಮುಲಿನು. ೯೮). [ಪರ್ವತ + ಬಾಳೆ$_1$ (< ಬಾಟೆ)]

ಪರ್ವತರಾಜ (ನಾ). = ಪರ್ವತನಾಥ ೧ : ಸಮುನ್ನತ ರಾಜಲೀಲೆಯಂ ಬೀಜುತೆ ಪೂರ್ವಪಶ್ಚಿಮಕೆ ಪರ್ವಿದ ಪರ್ವತರಾಜನೊಪ್ಪುಗುಂ (ಗಿರಿಕ. ೧-೫೦) ; ಶ್ರೀ ಪಾರ್ವತೀದೇವಿಯಂ ಧೀರಂ ಪರ್ವತರಾಜನೊರ್ಮೆ ಪಡೆದಂ (ಹಮ್ಮೀರ. ೨-೬). [ಪರ್ವತ + ರಾಜ]

ಪರ್ವತವಳಿ$_1$, ಪರ್ವತಾವಳಿ$_2$ (ನಾ). [ಶೈವ] ಕಾಳಾಮುಖ ಶೈವರಲ್ಲಿ ಶ್ರೀಶೈಲಕ್ಕೆ ಸಂಬಂಧಿಸಿದ ಒಂದು ಪಂಗಡ : ನೈಷ್ಠಿಕ ತಪೋಧನಕರ್ಕಾಳಾಮುಖ ಪರ್ವತವಳಿಯ ಶ್ರೀತ್ರಿಭುವನಪಣ್ಡಿತದೇವರ ಶಿಷ್ಯರ್ (ಸೌಇಇ. XI-1, ೧೧೬-೧೭ ; 1075). **ಪರ್ವತಾವಳಿ$_2$** : ಅವರ ಗುರುಳುಳಮೆಂತೆಂದಡೆ ಕಾಳಾಮುಖಪರ್ವತಾವಳಿ ತಪೋ ನಿ(ನಿ)ಷ್ಠಾಪರರೆನಿಸಿ ನೆಗಳ್ದ ಕೊಪ್ಪಿನ ವಿದ್ಯಾಣದೇವರವರ ಶಿಷ್ಯಮ್ ರುದ್ರಶಕ್ತಿದೇವರು (ಎಇ. XIX, ೨೬೨-೬೫ ; 1180).

[ಪರ್ವತ + ಬಳಿ$_3$ (< ಬಟ್ಟು$_3$) ?]

ಪರ್ವತಶ್ರೇಣಿ (ನಾ). ಬೆಟ್ಟಗಳ ಸಾಲು,—ಪಂಕ್ತಿ : ಸಂಜೆಯ ಸೂರ್ಯನು ಪರ್ವತಶ್ರೇಣಿಯ ಹಿಂದಿನಿಂದ ಇಣಕಿ ನೋಡುತ್ತಿದ್ದಾನೆ (ಚೋಸುದು. ೩೩) ; ಪರ್ವತಗಳು ಒಂದಕ್ಕೊಂದು ಸೇರಿ ಪಂಕ್ತಿಯಾಗಿದ್ದರೆ "ಪರ್ವತಶ್ರೇಣಿ (Range)" ಎಂದು ಕರೆಯಲ್ಪಡುತ್ತವೆ (ಭೂಗೋಳ. ೧೧೧). [ಪರ್ವತ + ಶ್ರೇಣಿ]

ಪರ್ವತಾಧೀಶ್ವರ (ನಾ). = ಪರ್ವತನಾಥ ೧ : ಮೇರುವಿನ ದಕ್ಷಿಣ ದಿಕ್ಕಿನಲ್ಲಿ ಮೂಡಣ ಜಲಧಿಯಿಂ ಪಶ್ಚಿಮವಾರ್ಧಿಪರ್ಯಂತರಂ ಪರ್ವಿದ ಪರ್ವತಾಧೀಶ್ವರಂ ಗಿರಿರಾಜನೆಂಬ ನಾಮದಿಂದೋಪಧಿಪ್ರಸ್ಥಮೆಂಬ ಪುರದೊಳಿರ್ದು (ಗಿರಿಕ. ೧ ಕಥಾಗರ್ಭ). [ಪರ್ವತ + ಅಧೀಶ್ವರ]

ಪರ್ವತಾರೋಹಣ (ನಾ). ಬೆಟ್ಟವನ್ನು ಹತ್ತುವುದು ; ಪರ್ವತವನ್ನು ಏರುವುದು : ಕಾಲುನಡಿಗೆಯಿಂದ ಪರ್ವತವನ್ನೇರುವುದೆಂದರೆ ಅದು ಬಹಳ ಶ್ರಮದ ಕೆಲಸ . . . ಆದುದರಿಂದ ಪರ್ವತಾರೋಹಣವು ಸಾಹಸದ ಕೆಲಸಗಳ ಸಾಲಿಗೆ ಸೇರಿದೆ (ಕಪಪು. ೬-೯೧).

[ಪರ್ವತ + ಆರೋಹಣ]

ಪರ್ವತಾರೋಹಿ (ನಾ). ಪರ್ವತಾರೋಹಣವನ್ನು ಮಾಡುವವನು; ಬೆಟ್ಟವನ್ನು ಏರುವವನು: ಸದಾ ಮಂಜಿನಿಂದ ಮೇಘಗಳಿಂದ ಆವೃತವಾದ ಅದರ ಉನ್ನತ ಶಿಖರಗಳು ಎಲ್ಲೋ ಕೆಲವು ಧೀರ ಪರ್ವತಾರೋಹಿಗಳಿಗೆ ಮಾತ್ರ ಪರಿಚಿತ! (ಸೌಂದಸ. ೨೬); ಮೂರನೆಯ ಪ್ರಯತ್ನದಲ್ಲಿ ಇಬ್ಬರು ಪರ್ವತಾರೋಹಿಗಳು ತಮ್ಮ ಪ್ರಾಣವನ್ನು ಕಳೆದುಕೊಂಡರು (ಕಪಪು. ೬-೧೨). [ಪರ್ವತ+ಆರೋಹಿ]

ಪರ್ವತಾವಳಿ$_1$ (ನಾ). ಬೆಟ್ಟಗಳ ಸಾಲು,—ಪಂಕ್ತಿ: ಈ ಪರ್ವತಾವಳಿಯ ಸರಾಸರೀ ಎತ್ತರ ೨೦೦೦ ಘಾಟು (ಕಭಾಗ. ೫).

[ಪರ್ವತ+ಆವಳಿ$_1$(=ಆವಲಿ)]

ಪರ್ವತಾವಳಿ$_2$ 'ಪರ್ವತವಳಿ' ನೋ.

ಪರ್ವದಿನ (ನಾ). [ಜೈನ] ಪೂಜೆ, ವ್ರತ ಮುಂತಾದುವುಗಳನ್ನು ಮಾಡಲು ಪ್ರಶಸ್ತವಾದ ದಿನ: ಪರ್ವದಿನಂಗಳೊಳ್ ವ್ರತಂಗಳನೊಡಗೂಡಿ ನಿಂದೆಮಗೆ ಮೆಟ್ಟಲಿಳೇಶ್ವರ ಕೇಳ್ದವಾವಿದಂ ತಿಳಿಯೆ ಗಣಾಧಿಪರ್ ಬೆಸಸೆ ಧುಂಪ್ರಜೆಸೇಂದ್ರಸಭಾಂತರಾಳದೊಳ್ (ಆದಿಪು. ೧೫-೧೧); ಇಂದು ಪರ್ವದಿನಮುಪ್ಪುದಱಿಂ ದೇವಿಯುದಯಸಮಯದೊಳ್ ಸುಂಗಳಾಲಂಕಾರಾಲಂಕೃತೆಯಾಗಿ . . . ಅರ್ಚಿಸಿ (ಪುಷ್ಪಪು. ೩-೭೪ ಪ).

[ಪರ್ವ+ದಿನ]

ಪರ್ವದಿವಸ (ನಾ). = ಪರ್ವದಿನ: ಪರ್ವದಿವಸದೊಳಪ್ಪೊಡಮೊಂದಾನುಮಿಪರ್ಗುಣಶಿಕ್ಷಮೊಂಪಱಿಯುಂ ಪಂಚಮಹಾವ್ರತಕಂ (ಪಚ್ಚಾರಾ. ೪-೧೮). [ಪರ್ವ+ದಿವಸ]

ಪರ್ವಭಾಗ (ನಾ). ಶರೀರದಲ್ಲಿ ಮೂಳೆಗಳು ಜೋಡಣೆಯಾಗಿರುವ ಭಾಗ; ಅಸ್ಥಿಸಂಧಿ: ಗರ್ವದಿ ಕೊರ್ವಿಹರಗುರ್ವ ಖರ್ವಿಸೆ ಪರ್ವತಗುರುತೆಯ ತೃಣಕೀವ ದುರ್ವಾರಸತ್ವ ಬಿಲ್ಲನುಳಿದೆನ್ನ ಪರ್ವಭಾಗದೊಳು ನಿಲ್ಲು ಮಣಿಪನಿಗೊ (ಹಂಸಪ. ೨೯೪-೧೯). [ಪರ್ವ+ಭಾಗ]

ಪರ್ವರ್ 'ಪರವರತಿ' ನೋ.

ಪರ್ವರ್ಕಿ 'ಪರವರತಿ' ನೋ.

ಪರ್ವಸಿ 'ಪರವರತಿ' ನೋ.

ಪರ್ವಸಂಧಿ (ನಾ). ಚಂದ್ರನು ಬದಲಾವಣೆ ಹೊಂದುವ ಕಾಲ; ಹುಣ್ಣಿಮೆ ಮತ್ತು ಪಾಡ್ಯಕ್ಕೂ ಅಮಾವಾಸ್ಯೆ ಮತ್ತು ಪಾಡ್ಯಕ್ಕೂ ಮಧ್ಯೆ ಇರುವ ಕಾಲ: "ಪರ್ವಸಂಧಿ: . . . ಪಾಡ್ಯಮಿ ಹುಣ್ಣಿಮೆಗಳಿಗೂ, ಅಮಾವಾಸ್ಯ ಪಾಡ್ಯಗಳಿಗೂ . . . ಯಾವುದು ಮಧ್ಯಕಾಲವೋ ಅದರ ಹೆಸರು" (ಸಿದ್ಧಾಂತಿ. ೩೬). [ಪರ್ವ+ಸಂಧಿ]

ಪರ್ವಳಿಸು (ಕ್ರಿ). ಪಕ್ಕಕ್ಕೆ ಹಾಯ್ದು; ಕೆಲಕ್ಕೆ ಸರಿ: "ಪರ್ವಳಿ [ಪಾಕಾಂ.ಪೆಳ್ಳ]ಸಿತೆನಲ್ ಕೆಲಕೆ ಹಾಯ್ದುಡು" (ಭಾರನಿ. ೩೬).

[?+-ಇಸು$_3$]

ಪರ್ವಾ 'ಪರವೆ' ನೋ.

ಪರ್ವಿಸು, ಪರ್ಬಿಸು, ಹಬ್ಬಿಸು (ಕ್ರಿ). ೧. ಹರಡುವಂತೆ ಮಾಡು; ವ್ಯಾಪಿಸುವಂತೆ ಮಾಡು: ನಿರ್ಮಳಕೀರ್ತಿಯಂ ದಿಗಂಬರ ಧರಣೀತಳಾವಳಿಯೊಳಾಡಮೆ ಪರ್ವಿಸಿದಾ ಕವೀಂದ್ರರಂ ವಿರಹಿತತಂದ್ರರಂ ಪೊಗಳಬಂಗೆ ಶಕಾತ್ರಿತಪಾಣಿ ಕೂರ್ಪಳೇ (ಸರ್ಥಪು. ೧-೧೬). ೨. (ಬಳ್ಳಿ ಮೊದಲಾದುವನ್ನು) ಹಬ್ಬುವಂತೆ ಮಾಡು: ಲತಾಂಗಿ ತಾಂಗಿ ಲಲಿತಾಂಗುಳಿಯೊಳ್ ನಡೆ ನೋಡಿ ನಲ್ಲಪಟ್ಟಿಪ ದಯೆ ರತ್ನಭೂಷಣದ ಚೆಲ್ವನುಭಾಗದ ಬಳ್ಳಿವಳ್ಳಿಯಂ ಹೃದಯದೊಳಂದು ಪರ್ವಿಸುವುದುಂ ತಳೆವಳ್ ಪುಳಕಾಂಕುರಂಗಳಂ (ಮಲ್ಲಿಪು. ೪-೬೪); ಅತನುದಾಹದಲಿ ಬಸವಳಿದ ಸಂಕೀಲೆಯ ನೋಡಿ ಸಿತಗಳನ ಸುತನು ವಶನಾಮೃತವ ಕಟ್ಟಿದು ವಿಕ್ರಮತೋಷಲತೆಯ ಪರ್ವಿಸಲು ತಮುತಾಪವಡಗಿತು (ಸೌಂದಪು. ೧೩-೩೪). ೩. ಉಂಟು ಮಾಡು; ಉತ್ಪತ್ತಿಮಾಡು: ಧರೆಯೊಳ್ ಶಾಲೂರಸಂಘಂ . . . ಉರ್ವೀಧರಚಕ್ರವ್ರಾಂತದೊಳ್ ನಿರ್ಝರತತಿ ತಟಿನೀವ್ಯೂಹದೊಳ್ ಪೂರವಾರಂ ವಿರಹಿವ್ರಾತಂ ಬಿಗುರ್ವಂತೊಡನೊಡನೆ ರುತಂ ಪರ್ವಿಸುತ್ತಿರ್ದುವೆತ್ತಂ (ಕಾದಂಉ. ೫೩೨); ಒರ್ವಳನೊಡಗೂಡಿ ದಣಿವನಾ ನೃಪನೊಮ್ಮೆ ಸರ್ವರ ನೆರೆದು ದಣಿವನು ಪರ್ವಿಸುವನು ಸುರುಳಿಸುವನು ಕಾಮುವ ಸಾರ್ವಭೌಮನು ನಾಡ ನರನೇ (ಭರಚಿ. ೧೦-೧೨೧). **ಪರ್ಬಿಸು**: ೧. ಮಲಯಜಗಂಧ ಮೆಯ್ಯೊಳಗೆ ಪರ್ಬಿಸುವ ಕೋಮಲೆಯರು ತಮ್ಮ ಜವ್ವನದ ಬೆಲೆಗಟ್ಟುವರೆ (ಸೋಪಶ. ೧೮-೯೪). ೪. ಪ್ರಚುರಪಡಿಸು; ಪ್ರಚಲಿತಗೊಳಿಸು; ಜನಜನಿತವಾಗುವಂತೆ ಮಾಡು: ಕಬ್ಬಿಗರಾನುಸಿರಿದ ಕಾವ್ಯದ ಕಿಡ್ಡಿ ಪರ್ಬಿಸುವುದು ಭೂತಳದಿ (ಸೋಪಶ. ೧-೨೨). **ಹಬ್ಬಿಸು**: ೨. ಬಳ್ಳಿಯನ್ನು ನೆಲದ ಮೇಲೆ ಹಬ್ಬಿಸಬಹುದು. ಅನೇಕ ಕಡೆ ಗುಡಿಸಲು, ಮನೆಯ ಸೂರುಗಳ ಮೇಲೆ ಹಬ್ಬಿಸುತ್ತಾರೆ (ತರಶಿ. ೨೪). ೩. ತಬ್ಬಿ ತಂದಡುಗಬ್ಬುಗಳಿಗುರಿ ಹಬ್ಬಿಸುತ ಕೈದೀವಿಗೆಗಳಂತೆಬ್ಬಿಸಲು ಪ್ರಭೆ ದೆಸೆಯೊಳಾವರಿಸಲ್ಕೆ (ಬಸಪು. ೧೬-೨೦); ಗನ್ನಗದುಕುಗಳ ಕಳೆದು ಗರ್ವದ ಬಿಟ್ಟು ಹನ್ನಸಗಳನು ಹಬ್ಬಿಸದೆ ತನ್ನ ಬಾಳಿಕೆ ಬಡತನದ ಬಗೆಯನೆಲ್ಲ ಬಿನ್ನವಿಪುದು ವಿನಯದೊಳು (ಹದಿಬ. ೩-೨೨). ೪. ತಂಕರ ಮಂಗಳೂರಿಂದ ಬಂದ ಮೇಲೆ, 'ಗೆಣಸು ಸೂರೆಯಾದ ವಿಚಾರದಲ್ಲಿ, ಶ್ಯಾನುಭಾಗರು ಊರಲ್ಲೆಲ್ಲ ಹಬ್ಬಿಸಿದ ವಾರ್ತೆಗಳನ್ನು ಕೇಳಿದ್ದ (ಚಿಗುಳಿ. ೧೮೪). ೫. ಹಬ್ಬು; ಹರಡು; ವಿಸ್ತಾರಗೊಳ್ಳು: ಕನಕದಲಿ ರಜತದಲಿ ಬಲುಗಬ್ಬುಸದೊಂದೊಂದಕ್ಕೆ ಶತಯೋಜನದ ತೆಜಹುಗಳೆಡೆಗೆ ಹಬ್ಬಿಸುವಮಳ ತೋರಣದ ವಿನುತ ನಗರಿಗಳಾದುವು (ಕುಮಾಳ. ೬-೧೦).

[ಪರ್ವು$_1$ (<ಪರಪು$_1$)+-ಇಸು$_3$]

ಪರ್ವು$_1$ 'ಪರಪು$_1$' ನೋ.

ಪರ್ವು$_2$ 'ಪರಪು$_2$' ನೋ.

ಪರ್ವುಗೆ, ಪರ್ಬುಗೆ, ಹಬ್ಬುಗೆ, ಹಬ್ಬುಗೆ, ಹರ್ಬುಗೆ (ನಾ). ೧. ಹರಹು; ವಿಸ್ತಾರ; ವಿಶಾಲತೆ: ಚರಣದ ಕಾಂಚಿಯಂ ಗುರುನಿತಂಬದ ಪರ್ವುಗೆಯಿಂದೆ ಮಧ್ಯಮಂ . . . ಕರಸರೋರುಹದೊಳ್ ಕದಪಂ ಲಲಾಟದೊಳ್ ಪರೆದ ಕುರುಳ್ಗಳಂ ವಿರಹವಿಹ್ವಲೆಯಾಗಿ ಲತಾಂಗಿ ತಾಳ್ದುವಳ್ (ಕಾದಂಉ. ೩೩೩); ಪುರ್ವೆಂಬ ಜವಳಿಗಟ್ಟಿನ ಕರ್ವಿನ ವಿಲ್ಗಳ್ಗೆ ಬಿಗಿದ ಮಧುಕರಮಾಲಾಮೌರ್ವಿಯೆನೆ ಮುಗಿದ ಕಣ್ಗಳ ಪರ್ವುಗೆಯೊಳ್ ಮೆಱೆದುದವರ ತಟ್ಟೆಮೆದುಱುಗಲ್ (ಯಶೋಧ. ೨-೨೬). **ಪರ್ಬುಗೆ**: ೧. ಗರ್ಬದಿಂದಿಂತು ನೆಲನಗಲದೊಳ್ ನಡೆವ ಚಾತುರ್ಬಲಂ ಪಯಣ ಪಯಣದೊಳೆ ಖಂಡಂಗಳಂ ಘನಪರ್ವತಂಗಳಂ ಸಕಲ ಘೋರಾರಣ್ಯದ ಪರ್ಬುಗೆಗಳಂ . . . ಪೆರ್ಬೊಳೆಗಳಂ ದಾಂಟಿ ಕೈಲಾಸಪುರಪರಾಜ್ಯದ ವಳಿತಮಂ ಪೊಕ್ಕುದು (ಚಿಬಪು. ೪೮-೬); ರತ್ನಾಕರಂ ಕಳುಹಿದ ಕುಲಾದ್ರಿಗಳ ಪರ್ಬುಗೆಗಳೇ ಕರಮಿವಹುವನಲ್ಪರ್ದೊರೆಗಳೆಮ್ಮ ಬರುತಿರ್ದುವು ಮಹಾಣ್ಣದೊಳು (ಜೈಮಿಭಾ. ೬-೪). ೨. ಆವರಿಸುವಿಕೆ; ಹರಡುವಿಕೆ; ವ್ಯಾಪಿಸುವಿಕೆ: ಅನಳಧ್ವನಿಯ ಪರ್ಬುಗೆಗಿಗೆ ಕಮಲೋದ್ಭವಾಂಡವಿಟ್ಟಿಡೆಯೆನೆ ದಂತವಕ್ತ್ರದನುಜಂ ನಡೆತಂದು . . . ನೋಡಿದಂ (ಜಗವಿ. ೯-೬೬); ಒಬ್ಬರೊಬ್ಬರ ತನು ಸೋಂಕಿದ ಪುಳಕಾಂಬುವುರ್ಬಿ ಪರಿಯೆ ತನುವಿನೊಳು ಕೊರ್ಬಿ ಬೆಳೆದ ಕೋಮಾಂಜಸಸಿರಿಯೊಂದು ಪರ್ಬುಗೆಯನು ಪೇಳಲಱಿಯೆ (ಅಂಜಚ. ೮-೧೧೮); ಬೈಗಿನ ಮುತ್ತಪೊಟ್ಟಿನ ಚೆಂದುಸಿಲ ಪರ್ಬುಗೆಯ ಬೆಳಗಿನೊಂಗಿರವಿಂ ತಾವರೆಯಿರ್ದುವು (ರಾಮಾಶ್ವ. ೮೩-೧೦). **ಹಬ್ಬುಗೆ**: ೩. ಮೆಟ್ಟಲು; ಸೋಪಾನ: ಹಯೂತನು ಬೀದಿಯ ಬಾಗಿಲಿನ ಹಬ್ಬುಗೆಯನ್ನು ಹತ್ತಿ

ಬಂದಿದ್ದ . . . ನಾನು ಅರ್ಧ ಹಬ್ಬಿಗೆಯನ್ನು ಇಳಿದೆ (ಚಂಗಾಳ್ವ. ೩೧). **ಹಬ್ಬುಗೆ :** ೧. ಹಬ್ಬುಗೆಯ ಹದಿನಾಲ್ಕು ಲೋಕದ ಮೊಬ್ಬುಗಳ ನೀಡಾಡಿ ನಭದೊಳಗೊಬ್ಬನೇ ರವಿ ತೊಳಗಿ ಬೆಳಗುವವೋಲು . . . ಧರೆಯೊಳಗೊಬ್ಬನೇ ದುರ್ಯೋಧನನು ಮತ್ತೊಬ್ಬರಿಲ್ಲೆಂದೆನಿಸಿ ತೋಱುವೆನು (ಕುಪ್ಯಾಅ. ೮-೯); ತಿರುಗಿದನು ಬಲಕಾಗಿ ಹರಭೂಧರವನೇಳಿಪ ಹಬ್ಬುಗೆಯ ಹರವರಿಯ ಯೋಜನವೈದಱಳತೆಯ . . . ಮಣಿಮಂದಿರವ ಕಂಡನು ಕುಂಭಕರ್ಣ ನಿಶಾಚರೇಶ್ವರನ (ತೊರರಾ. ೫-೨-೩೭); ಉಬ್ಬಿದುರದೇರದೆಗೆದೊಡಲ ಬಾಗಿದ ಬೆನ್ನ ಹಬ್ಬುಗೆಯ ಪಚ್ಚಳದ ಸೆಳೆದ ಬಾಲದ ಕೊನೆಯ . . . ಗಬ್ಬಿನಾಯ್ಗಳ ಹಾಸನುಗಿದು ಬಿಡೆ ಪಂದಿಗಳನಬ್ಬರಿಸಿ ತುಡುಕಿದುವು (ಜೈಮಿಭಾ. ೨೮-೪೬). ೨. ಹೊಗೆಯ ಹಬ್ಬುಗೆ ಸತ್ಯಲೋಕವನುಗಿದುದುರಿನಾಲಗೆಯ ಗರವೊಟ್ಟಗೆಯ ತೊಳಲಿಕೆ ತೆರಳಿಚಿತು ತೆತ್ತೀಸುಕೋಟಿಗಳ (ಕುಪ್ಯಾಅ. ೨೦-೫೬); ಅನವರತ ಸರಸಗೋಷ್ಠಿಗೆ ನೆರೆದ ನಿರ್ಜರಾಂಗನೆಯರಂಗಚ್ಛವಿಯ ಹಬ್ಬುಗೆಯೊ . . . ಪೇಳೆನಲ್ಮೆಱೆವ ಕನಕಾಚಲಂ ಕಣ್ಗೆಸೆದುದು (ಜೈಮಿಭಾ. ೨-೧); ಕಬ್ಬೊಗೆಯ ಕೌರಿಡುವ ಹೊಗರಿನ ಹಬ್ಬುಗೆಯ ಕಿಡಿ ತುಂತುಱೋದ್ಭವದುಬ್ಬುಗೆಯ ಹೊಱಹಾಯ್ವ ಕಾಲುರಿ ಕವಿವ ಮೇಲುರಿಯ . . . ಬೊಬ್ಬೆ ಮಿಗಲಬ್ಬರಿಸಿ ನುಡಿದನು (ಕೃಷ್ಣಾಕಾ. ೨೪-೪೪). ೪. ಬೆಳೆಯುವಿಕೆ; ಬೆಳವಣಿಗೆ: ವಿಗಡ ಮುನಿ ಇಲ್ವಲನ ವಾತಾಪಿಗಳ ಮರ್ದಿಸಿ ವಿಂಧ್ಯಗಿರಿ ಹಬ್ಬುಗೆಯ ನಿಲಿಸಿದಗಸ್ತ್ಯಚರಿತವ ಮುನಿಪ ವರ್ಣಿಸಿದ (ಕುಪ್ಯಾಅ. ೯-೧೩). ೫. ಆಧಿಕ್ಯ; ಹೆಚ್ಚಳ; ಅತಿಶಯತೆ: ಭಯರಸದ ಹಬ್ಬುಗೆಯಲುಬ್ಬಿದ ಶೋಕದೊಡ್ಡಿನ ಮುಗಿಲು ಕಱೆದುದು ಕುರುಬಲದ ಕಂಬನಿಯ ಬಿಱುವಳೆಯ (ಕುಪ್ಯಾಕ. ೨೦-೩೬). ೬. ಸಾಲು; ಪಂಕ್ತಿ; ಶ್ರೇಣಿ: ರಾಘವಾನುಜನ ಉಬ್ಬಿಸಿದರೆಡಬಲನ ಸರುಹಿನ ಹಬ್ಬುಗೆಯ ಹರಹಿನಲಿ ತೆಗೆಹಿನ ತೆಬ್ಬುಗಳ ಸಂಧಿಸಿದ ಸರಳಿನ ಸನ್ನೆವಾತಿನಲಿ (ತೊರರಾ. ೩-೩-೧೦); ತಡೆ ತಗ್ಗು ತೆವರದೇಕಿಲ್ಲವುಂಟಾದರು ಪಡೆವಳ್ಳ ಸವಱ ಬಂದಿರ್ದಾ ಕಡುಬೇಗದೊಳು ಬಂದು ತೇಜಿಯಗಳ ದಾಂಟ ತುಡುಕಿ ತಾ ಗಿರಿಯ ಹಬ್ಬುಗೆಯಾ (ಭರಚ. ೨೯-೫೫). **ಹರ್ಬುಗೆ :** ೧. "ವಲಂ, ವಲಿಃ, ವಲುಃ, ವಲನಂ, ವಲನೀಯಂ-ಈ ೫ ಹರ್ಬುಗೆ" (ಕಾಶಕೃ. ೧೧೩).

[ಪರ್ವು$_1$(<ಪರಪು$_1$)+-ಗೆ]

ಪರ್ವುಗೆಡು, ಪರ್ಬುಗೆಡು, ಹರಹುಗೆಡು (ಕ್ರಿ). ವಿಸ್ತಾರವು ಕಡಮೆಯಾಗು; ಕುಗ್ಗು; ಸಂಕುಚಿತವಾಗು: ಅದಿರ್ದುದು ಪಶ್ಚಿಮಾನಿಳನಗುರ್ವಿಸೆ ಕೆಮ್ಮುಗಿಲುರ್ಬೆ ಪರ್ವು[ಪಾಠಾಂ.ರ್ಬು]ಗೆಟ್ಟುದು ಕುಡಿಮಿಂಚು ಸಂಚಳಿಸೆ ಸಂಚಳಿಸಿತ್ತು (ಚಂದ್ರಪು. ೪-೪೬). **ಪರ್ಬುಗೆಡು :** ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. **ಹರಹುಗೆಡು :** ಅವಕೃಷ್ಟಮೆನೆ ಹರಹುಗೆಟ್ಟುದೆನಿಸಿರ್ಕು (ಮಂಗರಾ. ೧೩೩-೨೯). [ಪರ್ವು$_2$(<ಪರಪು$_2$)+ಕೆಡು$_1$]

ಪರ್ವುಗೆದೋಱು (ಕ್ರಿ). ಹರಡಿಕೊಳ್ಳು; ಆವರಿಸು; ವ್ಯಾಪಿಸು: ಬಯಲೊಳ್ ಪರ್ವುಗೆದೋಱು ನುಣ್ಬಸಲೆಯೊಳ್ ಮೆಯ್ದೋಱು . . . ತಾಳವನದೊಳ್ ಕಾರ್ಕಶ್ಯಮಂ ಮಾಡಿಕೊಂಡು ಯಥಾಸಾರ ನಿಪಾತಮುಣ್ಮೆದುದು ಮೇಘೋನ್ಮುಕ್ತಧಾರಾರವಂ (ಕಾದಂಉ. ೫೩೩).

[ಪರ್ವುಗೆ+ತೋಱು]

ಪರ್ವುಗೆವೆಱು (ಕ್ರಿ). ವಿಸ್ತಾರವನ್ನು ಹೊಂದು; ವೈಶಾಲ್ಯವನ್ನು ಪಡೆ: ಉದ್ಗ್ರೀವದಿಂ ಪರ್ವುಗೆವೆತ್ತಂತಂಗಕಾಂತಿಪ್ರಕರದೆ ಪಸರಿಪ್ಪಂತೆ ಮುಂಗಾಲ್ಗಳಿಂದಂ ಮುಗಿಲಂ ಮುಟ್ಟಪ್ಪುದೆಂಬಂತತಿಜವಮಿದಿರೊಳ್ ಬಂದುದಿಂದ್ರಾಯುಧಾಶ್ವಂ (ಕಾದಂಪೂ. ೪೫೬). [ಪರ್ವುಗೆ+ಪೆಱು$_1$]

ಪರ್ವುಗೊಳ್, ಪರ್ಬುಗೊಳ್, ಹಬ್ಬುಗೊಳ್ಳು (ಕ್ರಿ). ೧. ದೊಡ್ಡದಾಗು; ಹಿರಿದಾಗು: ಅರ್ವಿಸುವಾಕೃತಿ ಪರ್ವುಗೊಂಡ ಬಿಲ್ಲೊದವಿದ ಗರ್ಜಿತಂ ಸುರಿವ ಸಾಯಕವದ್ಭುತವಾಯ್ತು ಸಾಲ್ವನಾ (ಜಗವಿ. ೧೮-೯೦). **ಪರ್ಬುಗೊಳ್ :** ೨. ನೀಡಿಕೊಳ್ಳು; ಚಾಚಿಕೊಳ್ಳು; ನೀಳವಾಗು: ವಿಸ್ತಾರಿಸಿ ಪರ್ಬುಗೊಂಡ ನಿಡುಗೊಂಬುಗಳಿಂದೆಸೆದಿರ್ದುದಾವನಂ (ಕುಸುಮಾ. ೧೧-೧೭೪). **ಹಬ್ಬುಗೊಳ್ಳು :** ೩. ಹರಡಿಕೊಳ್ಳು; ಹಬ್ಬಿಕೊಳ್ಳು; ವಿಸ್ತಾರವಾಗು: ಕರ್ನಾಟಕಸೀಮೆಯಲ್ಲಿ ಪೂರ್ವಕಾಲದಲ್ಲಿ ಅಡವಿಯು ಬಹಳ ಹಬ್ಬುಗೊಂಡಿತ್ತು (ಮುಂಬಯಿ. ೫-೧). [ಪರ್ವು$_2$(<ಪರಪು$_2$)+ಕೊಳ್$_1$]

ಪರ್ಶುಕೆ (ನಾ). ಶರೀರದ ಪಾರ್ಶ್ವದ ಎಲುಬು; ಪಕ್ಕೆಲುಬು: "ಪರ್ಶುಕಾ, ಪಾರ್ಶ್ವಾಸ್ಥಿನಿ-ಪಕ್ಕದ ಎಲುವಿನ ಹೆಸರುಗಳು" (ಸಿದ್ಧಾಂತಿ. ೧೮೯). [ಸಂ.ಪರ್ಶುಕಾ]

ಪರ್ಷ (ನಾ). ಕಂತೆ; ಕಟ್ಟು; ಸಿವುಡು: ಬೆಳೆದ ತೆನೆಗಳನ್ನು ಕುಡುಗೋಲಿನಲ್ಲಿ ಕೊಯ್ದು 'ಪರ್ಷ'ಗಳಲ್ಲಿ ಕಟ್ಟಿ ಬಡಿದು . . . ಗಾಳಿಯಲ್ಲಿ ತೂರುತ್ತಿದ್ದರು (ಶಿಲ್ಪನಾ. ೪೯). [ಸಂ.]

ಪರ್ಸ (ನಾ). ಪರ್ಷಿಯಾದೇಶದ ಹೆಸರು; ℙ ಈಗಿನ ಇರಾಣದೇಶ: ಪರ್ಸದ ಹಿರಿಯರಸುಕುಲಂ . . . ಕುದುರೆಯಡರಿ, ಬಿಲ್ಲ ಪಿಡಿದು, ಮೆರೆಮೆರೆಯುತ ನಡೆದರೇ!. (ಪಾರಸಿ. ೩-೫೦).

[←ಗ್ರೀಕ್. ಪಾರ್ಸ./ಸಂ. ಪರ್ಸ = ಪರ್ಷಿಯಾದೇಶದವನು]

ಪರ್ಸು (ನಾ). ತೊಗಲು ಮುಂತಾದುವುಗಳಿಂದ ಮಾಡಿದ ಹಣವನ್ನಿಟ್ಟುಕೊಳ್ಳುವ ಸಣ್ಣ ಚೀಲ: ಅವಳು ಮಾತನಾಡದೆ ತನ್ನ ಪರ್ಸಿನಿಂದ ಒಂದು ರೂಪಾಯಿ ತೆಗೆದು ನನ್ನ ಕೈಗಿತ್ತಳು (ದೀಪದ. ೧೮೪).

[←ಇಂ. Purse]

ಪಲ್, ಪಲು, ಪಲ್ಲು, ಹಲು, ಹಲ್ಲು (ನಾ). ೧. ಬಾಯಿಯಲ್ಲಿರುವ, ಆಹಾರವನ್ನು ನುರಿಸುವ ಅಂಗ; ದಂತ: ಬಾಯೊಳ್ ಕವಡಿಕೆಗಳಂ ಪಲ್ಗಳಂತೆ ಮಾಡಿ (ಪಡ್ಡಾರಾ. ೧೧೮-೧೭); ಒಗೆಶರ್ಪ ಪಲ್ಗಳಾನಗೆಮೊಗದ ಸರಸ್ವತಿಯನಾಗಳರ್ಚಿಸಿದ ಪೊದಟ್ಟಗಲದ ಚೆಲ್ವಿನ ಮೊಲ್ಲೆಯ ಮುಗುಳ್ಗಳನಿಳಿಸಿರೆ ಗುಣಾರ್ಣವಂ ಸೊಗಯಿಸಿದಂ (ಪಂಪಭಾ. ೨-೯); ಪಲ್ಗಳ ಬಣಂಬೆಗಳೊಳ್ ಪರವಸಂಗೊಂಡು ಮೆಟ್ಟಯುಂ (ಗದಾಯು. ೬-೨೮ ವ); ಪಲ್ಲಿಲ್ಲದ ಪುಲಿಯುಂ ನಖಮಿಲ್ಲದ ಸಿಂಹಮುಮೆನಿತು ಬಲ್ಲಿತಾದೊಡಮೇಗೆಯ್ವುದು (ಧರ್ಮಾಮೃ. ೧೩-೧೫೪). ೨. ಯಂತ್ರದ ಚಕ್ರಗಳ ಏಣು,—ಅರೆ: ಕುಣಿಕಿಲ್ಗಾಲಿ ನೊಗಂ ಪಲ್ಗುಣಿಯಚ್ಚಿನಿಸೊಂದ [ಪಾಠಾಂ.ಚ್ಚಿಸೊಂಡ, ಚ್ಚೆ ಸೊಂದ]ನೊಂದು ತೆಱೆಯದ ತೆಱದಿಂ ಗಣಕೆಯ ಬಂಡಿಯನೊದೆವವೊಲಣಿಯರಮೊದೆದಂ ಪ್ರತಾಪಿ ಕೃಷ್ಣ ಕುಮಾರಂ (ಅರ್ಧನೇ. ೭-೭೭). **ಪಲು :** ೧. 'ಪಲುಗಿರಿ' ಪರಾ. **ಪಲ್ಲು :** ೧. "ಪಲ್ಲು ಜಂತಮೆನೆ ರದನಮಕ್ಕುಂ" (ಶಬ್ದಮಂ. ೭೧); ಶಬರಾವಳಿಯ ಬಲುಸಿಬಿರವು . . . ಮೆಱೆದಿಹುದು ಸಿಂಗದ ಪ[ಪಾಠಾಂ. ಹ]ಲ್ಲ ತೋರಣದಿ (ಸಾಳ್ವಭಾ. ೫-೫). **ಹಲು :** ೧. ಜಗುಳ್ಡ ಹಲುಗಳ ಹಾಯಿದೆಲುಗಳ . . . ಮುಪ್ಪಿನ ಮುಗುದನೀತನು (ಕುಪ್ಯಾಭೀ. ೧-೩೫); ಶೂರ್ಪಣಖಿಯೆಂಬಸುರೆ . . . ಹಲುಗಳ ಮಸೆವುತ್ತೈದಿದಳು (ತೊರರಾ. ೩-೪-೧). **ಹಲ್ಲು :** ೧. "ರದನಾಃ, ದಶನಾಃ, ದಂತಾ-ಈ ೩ ಹಲ್ಲು" (ನಾಚಿರಾ. ೧೨೨); ಹಾವಿನ ಬಾಯ ಹಲ್ಲ ಕಳೆದು ಹಾವನಾಡಿಸ ಬಲ್ಲಡೆ ಹಾವಿನ ಸಂಗವೇ ಲೇಸು (ಮಹಾದೇ. ಬ. ೬೪-೧೫೭); ಬಿಸುಟ ಕೈದುಗಳರೆಗಿರಿದ ಹಲ್ಲುಗಳ . . . ಪಾಯದಳದುಬ್ಬರದ ಭಂಗವನೇನ ನೆಂಬೆನು ವೈರಿಸೇನೆಯಲಿ (ಕುಪ್ಯಾದ್ರೋ. ೧೮-೩೪); ಹಲ್ಲಿದ್ದವಗೆ ಕಡಲೆಯಿಲ್ಲ, ಕಡಲೆಯಿದ್ದವಗೆ ಹಲ್ಲಿಲ್ಲ (ಗಾದೆ). ೩. ಏಣಿಯ ಮೆಟ್ಟಲು: ನಿಚ್ಚಣಿಯ ಹಲ್ಲಿಗೆ ಅಂತರವಲ್ಲದೆ ಕೀಳು ಮೇಲುಂಟೆ (ಮೋಳಿಮಾ.

೧೬೧–೬೬೯); ನಿಚ್ಚಣಿಕೆಯನ್ನು ಹಚ್ಚಿ ಹಲ್ಲಿಗೊಬ್ಬನಂತೆ ಎಷ್ಟೋ ಮಂದಿ ಮೇಲಿಂದ ಕೆಳತನಕ ಸಾಲಾಗಿ ಕೂತಿದ್ದರು (ಮುಂಬಯಿ. ೪-೧೪೬). ೪. ಬಾಚಣಿಗೆ, ಗರಗಸ ಇತ್ಯಾದಿಗಳಲ್ಲಿ ಹಲ್ಲಿನಾಕಾರದಲ್ಲಿರುವ ಮೊನೆ: ಬಾಚಣಿಗೆಯ ಹಲ್ಲುಗಳು ಮುರಿದು ಹೋಗಿವೆ (ರೂಢಿ); ಗರಗಸದ ಹಲ್ಲುಗಳು ಬಹಳ ಚೂಪಾಗಿವೆ (ರೂಢಿ).

ಪಲ್ಲಜ್ಜಿಗುಟ್ಟು, ಹಲುಹಜ್ಜಿಗುಟ್ಟು = (ಚಳಿ ಮುಂತಾದುವು ಗಳಿಂದ) ಹಲ್ಲು ಶಬ್ದ ಮಾಡು: ಮೊರೆವ ಮೊರೆಪದಿಂ ತುಂದಿಗಳುಂ ಪಲ್ಲಜ್ಜಿಗುಟ್ಟಿದಪುವೆಂಬಂತೆಯುಂ (ಕಾದಂಬ. ೩೧೯); ಪಲ್ಲಜ್ಜಿಗುಟ್ಟು ತ್ತಮೆ ವಾನರಾಳಿ ನಡುಗುತ್ತಿರ್ದತ್ತು . ಶಾಖಾಗ್ರದೊಳ್ (ಕುಸುಮಾ. ೬-೧೩); ಮಳೆಯೊನಲೊಳಗೆ ನಿಂದು ಹಸಗುಂದುತುಂ ನಡುಗುತೊಡನೊಡನೆ . . . ನಾಡೆ ಪಲ್ಲಜ್ಜಿಗುಟ್ಟುತುಂ (ಅರಾಷ. ೧-೯-೬); ನಡುಗಿ ಹಲುಹಜ್ಜಿಗುಟ್ಟ ಬಾಗಿಲೊಳು ನಿಂದಿರಲು (ಇಳಿರ. ದೇ. ೫೨-೯). **ಪಲ್ಲಂ ತಿನ್** = (ಕೋಪದಿಂದ) ಹಲ್ಲುಕಡಿ: ಎಲ್ಲಮಂ ತಿಂದು ತನಯದೆ ಪಲ್ಲಂ ತಿಂಬಂ (ಪಂಪಭಾ. ೩-೨೫ ಪ); ಸೊಸೆಗೆ ಪಲ್ಲಂ ತಿನುತ್ತೆ ನೆತ್ತಿಯಂ ಪೊಯ್ದುಕೊಳ್ವತ್ತೆಯರುಮುಂ (ವೀರಚಾ. ೫-೧೧೪ ಪ). **ಪಲ್ಲಿಲ್ಲದವ** = ಸೊಯರ್: "ಪಗಲೆರೆಯನೆನಲು ಪಲ್ಲಿಲ್ಲದವನೆನಲು ದಿನನಾಥನಕ್ಕುಂ" (ಕಶರ. ೬೧). **ಹಲ್ಲು ಹಿಡಿದು ನೋಡು** = ೧. (ಪ್ರಾಣಿಗಳ ವಯಸ್ಸನ್ನು ತಿಳಿಯಲು) ಹಲ್ಲುಗಳನ್ನು ಪರೀಕ್ಷಿಸಿ ನೋಡು: ಧರ್ಮಕ್ಕೆ ಎಮ್ಮೆ ಕೊಟ್ಟರೆ, ಹಲ್ಲು ಹಿಡಿದು ನೋಡಿದ (ಗಾದೆ). ೨. ಮನುಷ್ಯನ ಯೋಗ್ಯತೆಯನ್ನು ಪರೀಕ್ಷಿಸು: ನಾನು ಸಲಿಗೆ ಕೊಟ್ಟುದಕ್ಕೆ ಅವನು ಹಲ್ಲು ಹಿಡಿದು ನೋಡುವುದಕ್ಕೇ ಬಂದನು (ರೂಢಿ). **ಹಲ್ಲು ಹಿಡಿದು ಮಾತಾಡು** = ನಾಲಿಗೆಯನ್ನು ಹತೋಟಿಯಲ್ಲಿಟ್ಟು ಕೊಂಡು ಮಾತನಾಡು: ಹಲ್ಲು ಹಿಡಿದು ಮಾತಾಡು, ಇಲ್ಲದಿದ್ದರೆ ಪರಿಣಾಮ ನೆಟ್ಟಗಾಗೋದಿಲ್ಲ (ರೂಢಿ).

[ದೇ.॥ ತಮಿ. ಮಲ. ಕೋಲಾ. ನಾಯ್ಕಿ. ಗಡಬ. ಗೊಂಡಿ. ಪಲ್; ತುಳು. ಪರು; ಕೊಡ. ಪಲ್ಲೀ; ತೆಲು. ಪಲು, ಪಲ್ಲು, ಪನ್ನು; ಕುಇ. ಪಲು, ಪಡು; ಕುವಿ. ಪಲ್ಲು; ಕುರುಖ್. ಪಲ್ಲ್; ಮಲ್ತೊ. ಪಲು; ಪರ್ಜಿ. ಪೆಲ್]

ಪಲ, ಪಲವು. ಹಲ, ಹಲವು (ಸ). ಬಹಳ; ಅನೇಕ: ಬಾಹುಬಲಿ ಭರತನಂ . . . ಮಲ್ಲಯುದ್ಧದೊಳ್ ಪೊಣರ್ದು ಪಲಗಾ[ಪಾತಾಂ.ಪಾತ]ಯಂಗಳೊಳ್ ಪೊಣರ್ದು ಕ್ರಾಂತವಾದಾಗಳ್ (ಚಾವುಂಪು. ೪೯). **ಪಲವು**: ತಾನುಂ ಪಲವುಂ ಎಸುವೆತ್ತು (ಎಕ. VIII, ಸೊರಬ. ೧೦-೮; ಸು. ೪೦೦); ಪೆಡೆ ಪಲವಪ್ಪ ವಾಸುಕಿಮಹೋರಗನಂ ಕಡೆಗಣ್ಣೆ ಮಾಡಿ ಪಾಲ್ಗಡಲನುಪಾಯದಿಂ ಕಡೆಯೆ (ಕಾವ್ಯಸಾ. ೧೩೮ ಶಬ್ದಕ); ಪಲವುಂ ತೆಱದ ಬಾಡುಗಳುಂ ತುಯ್ಯಲುಂ . . . ಮಹಾದೇವಿ ಬಡ್ಡಿಸಿದೊಡೆ (ಪಡ್ಡಾರಾ. ೭೮-೧೫); ಸಿಕ್ಕಿದ ಕಳ್ಳನಂತೆ ಪಲವಂ ನೆನೆಯುತ್ತುಂ (ಧರ್ಮಾಮೃ. ೧-೧೪೪); ಪಲವೊಳವದ್ಯುತವುಂ, ಅದೊಡಮದ್ಯುತವುಂ ಇನ್ನಿರದೊಂದುವುಂ ಮಾನವನಿನ್ (ಅಂತಿಗೂ. ೧೬-೩೦೯). **ಹೆಲ,**: 'ಹಲಕಾಲ' ಪರಾ. **ಹಲವು**: ದೇವನೊಬ್ಬ ನಾಮ ಹಲವು (ಬಸವ. ೬೧೫); ಸಾಯಕದ ಹೊದೆ ಹಲವು ಶಲ್ಯಗೆ ಪೀಯವಾದವು (ಕುಮ್ಯಾಕ. ೪-೪); ಹಲವು ಪಾಪಂಗಳ ಹದಗೆಡಿಸುವ ಮಂತ್ರ (ಪುರಂದ. ೨-೨-೧).

ಪಲಪಲವು (ದ್ವಿರುಕ್ತಿ): ಪಲಪಲವು ಕಳವಳಂ ಅರುಮಿಂತೆಂ ಪಣಿಯರ್ (ಅಶ್ವತ್ಥಾ. ೧-೧೪); ನನ್ನೊಳಗು ಪಲಪಲವು ಕಳವಳ ಮನುಸಿರುತ್ತೆ ತಾನ್ ಕೂಡಿದತ್ತೆನಗೆ (ಅಂತಿಗೂ. ೧೪೧-೩೦೮). **ಪಲಂಬರ್, ಪಲಂಬರು, ಪಲಬರ್, ಪಲಬರು, ಪಲರ್, ಪಲರು, ಪಲವರು** = ಪಲವು ಮುಂದಿ; ಅನೇಕ ಜನ: ಅತನುಂ . . . ತನ್ನೋರಗೆಗಳಪ್ಪ ಪಲಂಬರ್ ಮಾಣ ಗಳ್ವರನು ಪೊಜವೊಬರೊಳ್ಬಟ್ಟಾಡುತ್ತಿರೆ (ಪಡ್ಡಾರಾ.೭೬-೫೨); ಪಲಂಬರ್ [ಪಾತಾಂ.ಪಲರುಂ, ಪಲಬರುಂ] ಮ್ಲೇಚ್ಛರಾಜರಂ . . . ಮುಂದಿಟ್ಟು (ಆದಿಪು. ೧೩-೩೯ ಪ); ನಿನ್ನಂ ಪಿಡಿದು ತರಲೆಂದು ಪಲಂಬರನಟ್ಟೆದೊಡೆ (ಕಾದಂಬ. ೬೫೯); ಅರಸುಗಳ್ಪಲಂಬರು ಸಹ ಜಿನದೀಕ್ಷೆಯ ಧರಿಸಿ (ಶಾಂತೀಚ. ೫-೮೩); ನೇಸಱ ಬುಟ್ಟಯ ಪಲಂಬರರಸರರಸುಗೆಯುಮ್ಮಿರ್ದರ್ (ರಾಮಾಶ್ವ. ೬-೪); ಪಲಬರ್ಕಾಂತೆಯರೊಲ್ದು ಪೋದರ್ (ಕಾದಂಪೂ. ೬೫೧); ವೇದಶಾಸ್ತ್ರಂಗಳ್ ಭೂಷಣಮಾಗೆ ಪಲಬರುಂ ಬ್ರಾಹ್ಮಣರ್ಪರ್ದರ್ (ಎಕ. VIII, ನಾಗರ. ೧೦೯-೫೨; 1042); ಸೋಮವಂಶದಲರಸುಗಳು ನಿಸ್ಸೀಮರಿಂದ್ದರು ಪಲಬರು (ಕುವ್ಯಾಸ. ೫-೬೧); ತಂಡದೆ ತೀಱೆ ಸಾಱುವ ಪಲರ್ ಪಡೆವಳ್ಕರ ಮಾತುಗಳ್ ಮನಸಂಗೊಂಡಿರೆ (ಪಂಪಭಾ. ೧೦-೪೯); ಪಲರಿರ್ವ ಕಾದಿದರ್ ಮೆಯ್ಯ್ನಲಿಗಳ್ (ಗದಾಯು. ೪-೫೫); ಪಲರುಂ ಚೀಯೆಂದಿನಂ ಸೂಸಿದೆಂಜಲವುಟ್ಟಳನಾವಗಂ ಬೆದಳಿ ತಿಂದು (ಸುಕುಮಾ. ೧೪-೫೬); ಕಂಜಾಕ್ಷಿಯರಿರೆ ಪಲರಲ್ಲಿ ವಿವಕ್ಷಿತನಾ ಚಾರುದತ್ತ ನಭಿವೀಕ್ಷಿಸಿದಂ (ನೇಮಿಪು. ೪-೪೬); ಪಲರು ಮುನ್ನಿನ ಬಾಂಧವರು (ಹರಿಬ. ೧-೪೧); ಭದ್ರಬಾಹುಸ್ವಾಮಿಗಳುಂ ಪೊದಲಾಗೆ ಪಲಂಬರಾ ಚಾರ್ಯ್ಯಪ್ಪೋರ್ವರಿಂ ಬಳಿಯಂ ಸಮಂತಭದ್ರಸ್ವಾಮಿಗಳುದಿಯಿಸಿದರ್ (ಎಕ. VIII, ನಗರ. ೬೭-೧೪೪; 1147); ಈದಿ ಪಲಂಬರಂ ಕೊಂದು (ಎಕ. VI, ಚಿಕ್ಕಮ. ೧೫೭-೬; 1195); ಘನಪೌರುಷದಲೆಚ್ಚಾಡಿದನು ಪಲಬರ ಕೂಡೆ ಸುಕುಮಾರ (ಕುವ್ಯಾದ್ಯೋ. ೬-೧೨); ಪಲಬರುಂಟೀ ರವಿಗಳಡಿಗತ್ತಲೆಯ ಮೊತ್ತಕೆ (ತೊರಾ. ೩-೬-೩೧); ಮಾಚದೇವನು ಪಲರುಮೆಚ್ಚೆ ಪಲ್ವರ ಇಜ್ಜುದು (ಎಕ. IX, ಬೆಂಗಳೂ. ೨೫-೪; ಸು. 1140 ?); ನಾಯಕವಾಡಿಗಳು ಪೆಲರೆಂದು ಬೆಂಗೊಟ್ಟೋಡಿದನೆ (ಕುವ್ಯಾದ್ಯೋ. ೬-೧೩); ತಾವಿನ ಪಲರ ಸಹಾಯದಿಂದ ಧರ್ಮಕ್ಕೆ ಮೊಂದು ಕ್ಷೇತ್ರವನು ಕೊಡಬೇಕು ಯೆಂದು ಚಕ್ರೈಸಲಾಗಿ (ಎಇ. XX, ೮-೨೪; 1556); ಆರುಸಿಂಗೆ ಎಲ್ಲಾ ಹೊತ್ತು ಹಿತವಂ ನುಡಿವ ಮನುಷ್ಯರ್ ಪಲವರುಂಟು (ಪಂಚತಂ. ೧೦೨-೧೩); ಪಲವರು ಆದನ್ನು ಬಹಳ ಕೆಟ್ಟ ರೀತಿಯಿಂದ ಉಪಯೋಗಿಸುವುದುಂಟು (ಮುಂಬಯಿ. ೪-೪೦); **ಪಲಕೆಲವು** = ಅನೇಕ: ಕೊಂಡಾಡುತಂ ಸಂತಸುಖದಿಂ ಪಲಕೆಲವು ದಿವಸವಿನಾ ತೆಜದೊಳಿರೆ (ಬಸರ. ೬-೦೯); ಭೂಮಿಯ ಚರಾಚರವ ನುದ್ಧರಿಸಿ ಪಲಕೆಲವು ಸಾಮರ್ಥ್ಯಮಂ ತೋರ್ಪಂ (ಸಿದ್ಧರಾ. ೨ ಸೂಚನೆ). **ಪಲರಂಜೆ ಗಂಡ** = ಅನೇಕ ಜನರನ್ನು ಅಂಜಿಸುವ ವೀರ; ಒಂದು ಬಿರುದು: ವೀರಶ್ರೀಜೇತ್ರ ಗಜರಾಜಮಲ್ಲ ಪಲರಞ್ಜೆ ಗಣ್ಣ ಶ್ರೀಮತ್ಕಲದಂಕಕಾಱ ದೇವನ ಪೆರ್ಗ್ಗಡೆ (ಎಕ. ೫, ಮುಳಬಾ. ೫೯-೬; ಸು. ೪೦೦?). **ಪಲರೋಡೆ ಗಂಡ** = ಹಲವರನ್ನು ಹೆದರಿಸಿ ಓಡಿಸುವ ವೀರ; ಒಂದು ಬಿರುದು: ಪಲರೋಡೆ ಗಣ್ಣ ಇಜುವ ನೊಂಬನ್ (ಎಕ. XII, ತಿರು. ೨೮-೨೮; 943); ಪಲರೊಡೆ ಗಣ್ಣ . . . ತಾಳೆಗ ಮುಲ್ಲಂ ನನ್ನಿಯ ಗೆಂಗಂ (ಎಕ. X, ಶ್ರೀನಿವಾ. ೧೬-೫; ಸು. 1015). **ಪಲರ್ಮೆಚ್ಚೆ ಗಂಡ** = ಬಹು ಜನರು ಮೆಚ್ಚುವ ವೀರ; ಒಂದು ಬಿರುದು: ಮಹಾದಂಡನಾಯಕ ಪಲರ್ಮೆಚ್ಚೆ ಗಣ್ಣ (ಎಕ. IV, ಹಗ್ಗಡ. ೧೦೪-೧೬; 1037). **ಪಲವುಂ ನಾಲಗೆಯುಳ್ಳವಂ** = ಅನೇಕ ಜಿಹ್ವೆಗಳನ್ನುಳ್ಳವನು; ಆದಿಶೇಷ: ಪಲವುಂ ನಾಲಗೆಯುಳ್ಳಪಂ ಬಗೆವೊಡೆಂದುಂ ಬಣ್ಣಿಸಲ್ಕಾಱನಾ ನೆಲನಂ (ಕಬ್ಬಶಾ. ೧೯). **ಹಲವಾರು** = ಬಹಳ; ಅನೇಕ: ಆವರಿಗೆ ಈ ಕೆಲಸವನ್ನು ಮಾಡಲು ಹಲವಾರು ತೊಂದರೆಗಳಿವೆ (ರೂಢಿ).

[ದೇ.॥ ತಮಿ. ಮಲ. ಪಲ; ತುಳು. ಹಲವು; ತೆಲು. ಪಲು]

ಪಲ$_2$, ಪಳ$_2$ (ನಾ). ೧. ಹಣ್ಣು; ಫಲ. **ಪಳ$_2$** : ೧. ಫಕಾರಕ್ಕೆ ಪಕಾರಂ . . . ಫಲಂ-ಪಳಂ, ಫಾಲ-ಪಾಲ (ಶಮದ. ೨೫೫ ಪ್ರಯೋ); ನರದಕರಾಂಬುಜಂ ಮೆಱೆವ ಕೆಯ್ಯ ಪ[ಪಾಣಾಂ.ಫ]ಳಂ ಕಡುರಯ್ಯ ಮಾದಕೋಳಿರಡಱ ಬಿಲ್ಲ ಕೋಲ ಪೊಸದೇಸೆ ವಿಳಾಸಮಾನಾಂತ ಯಕ್ಷಿ . . . ಮಾಡುಗನಂತಮತಿಪ್ರಕಾಶಮಂ (ಅನಂಪು. ೧-೯). 'ಮಾದುಪಳ' ಪರಾ. ೨. ಕತ್ತಿ; ಖಡ್ಗ. ೩. ಕತ್ತಿಯ ಅಲಗು,—ಮೊನೆ. ೪. ಲೋಭ : "ಪಳಮಂತದಸ್ತಶಲ್ಯಂ ಪಳಮಳ್ಕುಂ ಪ್ರ[ರ]ಸ್ತಿ ಪಳಮೆನಿಕ್ಕುಂ ಲೋಭಂ" (ವಸ್ತುಕೋ. ೧೩೪-೯೫). [<ಸಂ.ಫಲ]

ಪಲ$_3$, ಪಳ$_3$ (ನಾ). ೧. ಒಂದು ತೂಕದ ಪ್ರಮಾಣ; ಮೂರು ತೊಲ; ಮೂರು ರೂಪಾಯಿ ತೂಕ; ☞ ಈ ವಿವರಣೆಯ ಬಗ್ಗೆ ಅಭಿಪ್ರಾಯಭೇದಗಳಿವೆ : "ಸಿಕ್ಕಿಸಲ್ಪೇಳೆಯೆರಡುಮನೊಂದು ಪಾಗಮುವು ನಾಲ್ಕಾಗೆ ಪಣಮೆನಿಕ್ಕುವು ದಶಂ ತೂಕಕ್ಕೆ ನಿಲ್ಕದೀರೆಂಟಾಗೆ ಪಲಮಕ್ಕುಂ" (ಮಂಗರಾ. ೧೦೪-೧೧); ಅರಿಸಿನದ ಹೇಟು ೧ಕ್ಕೆ ಪಲ ೫ (ಸೌಇಇ. IX-i, ೧೭೨-೩೨; 1106); ನಾಲ್ಕುಂ ಕರ್ಷಂ ಪಲಂ (ವ್ಯವಹಾ. ೪-೨೫); ಅನುದಿನಮೊಂದು ಪಲ ಗುಗ್ಗುಳಮನೊಸೆದು ಮನಸಿಡಾರಿಗೆ ಮೂಜುವೇಳೆಯೊಳಗರ್ಪಿಸುವೆಂ (ಆರಾಧ. ೨-೮-೭೩). ೨. ಒಂದು ಕಾಲದ ಪರಿಮಾಣ; ಘಳಿಗೆಯ ಅರುವತ್ತನೆಯ ಒಂದು ಭಾಗ : ೬೦ ಪಲ=೧ ಘಟಿಕೆ (ನಾಡಿ)=೨೪ ದಿನಿಟುಗಳು ಅಥವಾ ನಿಮಿಷಗಳು (ಜ್ಯೋತಿರ್ವಿ. ೨೦೧); ಒಂದು ಪಲವೂ ಸಾವಕಾಶ ಮಾಡದೆ ಕಟ್ಟನೆ ಎದ್ದು ಎದುರಿಗೆ ಕುಳಿತನು (ಸಣ್ಣಕ. VII, ೩೩). ೩. ದ್ರವವನ್ನು ಅಳೆಯುವ ಒಂದು ಅಳತೆ. ೪. ಅಡಗು; ಮಾಂಸ : "ಪಲಲಂ, ಜಾಂಗಲಂ, ಮಾಂಸಂ, ಪಲಂ . . . ತರಸಂ-ಈ ೮ ಮಾಂಸಂ" (ಹಲಾಯು. ೧೦೪-೯), ಪುಳಿವುದತಿ ಕೀವೇಱುವುದು ಮಿಗೆ ಕೊಳೆವುದಾ ಪಲ ಪತ್ರ ನೀವದ ಕೊಳಬಹುದೆ (ಶಂಕದಾ. ೧೪-೨೮). 'ಪಲಾನ್ನ' ಪರಾ. ೫. ಹುಲ್ಲು; ತೃಣ. ೬. ಒಂದು ಬಗೆಯ ಸಸ್ಯ : "ಪಾಂಡುತರು:—ಪಲ, ಕಹಿಪಡಲ" (ಔಷಧಿ. ೯೪). **ಪಳ$_3$** : ೨. ಒಂದು ಪಳವು ಅತನಿಗೆ ಸಂವತ್ಸರದಂತೆ ತೋರಿ (ತುಳಸೀ. ೧೫೬); ಐದು ಪಳವಾಯಿತು, ಹತ್ತು ಪಳವಾಯಿತು, ಗಳಿಗೆಯಾಯಿತು (ಕನ್ನಡಿ. ೧೩೬). [ಸಂ.]

ಪಲಂಕಷ (ನಾ). ೧. ಮಾಂಸಭಕ್ಷಕ; ರಾಕ್ಷಸ. ೨. ಗುಗ್ಗುಳ. ೩. ಮುತ್ತುಗದ ಮರ; ಕಿಂಶುಕ. ೪. ಸಿಂಹ. [ಸಂ.]

ಪಲಂಕಷೆ (ನಾ). ೧. ಒಂದು ಬಗೆಯ ಸಸ್ಯ; ನೆಗ್ಗಿಲು : "ಪಲಂಕಷಾ . . . ಗೋಕ್ಷುರಕಃ, ವನಶೃಂಗಾಟಃ—ಈ ೭ ಪಲ್ಲೇರು ಗಿಡದ ಹೆಸರುಗಳು, ನೆಗ್ಗಲು ಹೆಸರುಗಳು" (ಸಿದ್ಧಾಂತಿ. ೧೩೪). ೨. ಅರಗು : "ಪಲಂಕಷಾ—ಅರಗು" (ಔಷಧಿ. ೯೨). [ಸಂ.ಪಲಂಕಷಾ]

ಪಲಂಗ 'ಪಲ್ಲಂಗ' ನೋ.

ಪಲಂಗು 'ಪಲ್ಲಂಗ' ನೋ.

ಪಲಂಬು 'ಪಲುಂಬು' ನೋ.

ಪಲಕ (ನಾ). ಘಳಿಗೆಯ ಅರುವತ್ತನೆಯ ಒಂದು ಭಾಗ; ಪಲ : ಒಂದೇ ಒಂದು ಪಲಕದ ಅವಕಾಶದಲ್ಲಿ ಅಸೀಮ ಅಂತರವಾಗಿ ಹೋಯ್ತು! (ಇಪ್ಪಕ. ೪೫೫). [←ಪಾರ. ಹಿಂ. ಮರಾ. ಪಲಕ್]

ಪಲಕಾಲ, ಹಲಕಾಲ, ಹಲಗಾಲ (ನಾ). ದೀರ್ಘಸಮಯ; ಬಹುಕಾಲ : ಪ್ರೀತಿಯಿಂ ಪಲಕಾಲವಾ ರಘುಜಾತನೆನೆ ಧರ್ಮಾರ್ಥ ಕಾಮವನೋತು ಸಾಧಿಸಿ (ಸಾಳ್ವಭಾ. ೧-೨೬). **ಹಲಕಾಲ** : ಹೇಸಿ ನನ್ನನು ದೂರ ದಿಸುಟಳು ಮೃತ್ಯು ಬಳಲಿದೆನಂತು ಹಲಕಾಲ (ಕುಸುಮಾ. ೧೪-೨೫); ಕರುಣೆ ನಿಲ್ಲದು ಹಲಕಾಲವೀ ಜನರೊಳ್ (ವಿಸೀಗೀ. ೧೪-೬). **ಹಲಗಾಲ** : ಪ್ರಬಂಧವಿದನ್ನು ಬರೆಯಬೇಕೆಂದು ಭಾವಿಸಿ ಹಲಗಾಲ ವಾಯಿತು (ಪಾರ್ಶ್ವನಾ. ೫ ಮುನ್ನುಡಿ); ಹಲಗಾಲ ಮಳೆ ಹೊಯ್ದರೂ ಮುತ್ತುಗಕ್ಕೆ ಮೂರೇ ಎಲೆ (ಗಾದೆ). [ಪಲ$_1$+ಕಾಲ]

ಪಲಕಾಲಂ, ಪಲವುಕಾಲಂ (ಅ). ದೀರ್ಘಕಾಲದ ವರೆಗೆ; ಬಹುಕಾಲದ ವರೆಗೆ : ನಂದನೆಂಬರಸಂ ಪಲಕಾಲಮರಸುಗೆಯ್ಯುತ್ತಿರೆ (ವಡ್ಡಾರಾ. ೭೫-೬); ಪಲಕಾಲಮಗಲ್ಕ ನಲ್ಲರ್ಪರುಮೊಂದೆಡೆಯೊಳ್ ಕೂಡಿ (ಪಂಪಭಾ. ೪-೧೦೪ ಪ); ಮೆಚ್ಚಿದಿಚ್ಛೆಯಿಂ ಪಲಕಾಲಂ ವರ್ತಿಸುತ್ತಮಿರ್ದು (ವರ್ಧಪು. ೧೦-೧೯ ಪ). **ಪಲವುಕಾಲಂ** : ಪಲವುಕಾಲಂ ಪುದುವಾಱೊಡಲಾತ್ಮನೊಡನೆ ಪೋಗದೆ ಕಡೆಗಣಿಸುವುದೆಂದೊಡುಱಿದರಿಂ ನಂಬುವುದೇ (ಆದಿಪು. ೩-೬೧). [<ಪಲಕಾಲ]

ಪಲಕಿ 'ಪಲ್ಲಂಗ' ನೋ.

ಪಲಕೀರೇಸೊಪ್ಪು (ನಾ). ಒಂದು ಬಗೆಯ ಸೊಪ್ಪು : ಜೀವ ಹಾಲೇಬಳ್ಳಿ, ಪಲಕೀರೇಸೊಪ್ಪು (ಮೃಗಿಗಿ. ೪೪-೪೭೦). [ಪಲಕೀರೆ$_0$+ಸೊಪ್ಪು$_2$]

ಪಲಕು 'ಪಲುಕು$_2$' ನೋ.

ಪಲಕ್ಕಿ 'ಪಲ್ಲಂಗ' ನೋ.

ಪಲಗಂಡ, ಪಳಗಂಡ (ನಾ). ಇಟ್ಟಿಗೆ, ಗಾರೆ ಮುಂತಾದುವುಗಳಲ್ಲಿ ಕೆಲಸ ಮಾಡುವವನು : "ಪಲಗಂಡನೆನೆ ಮುಚ್ಚಿಗಂ" (ಮಂಗರಾ. ೧೧೧-೪). **ಪಳಗಂಡ** : "ಲೇಪಕಂ ಪಳಗಂಡಂ" (ವಸ್ತುಕೋ. ೬೫-೮೩). [ಸಂ.]

ಪಲಗಣ್, ಪಲಗಣ್ಣು (ನಾ). ೧. ಹಲವು ಕಣ್ಣು; ಅನೇಕ ಕಣ್ಣು : ದ್ವಿಗುಣಿಂಗೆ . . . ಪಲವುಕಣ್, ಪಲಗಣ್ (ಶಮದ. ೧೭೭ ಪ್ರಯೋ); ಪಲಗಣ್ಣೊಯ್ನಂದದ ಪೂರ್ವದಿಶಾಧೀಶ್ವರನೆಂಬಂದದಿನತಿವಿಭ್ರಾಜಿಸಿದಂ ರಾಜಪ್ರಭರಾಜಸುತಂ (ಜಯಕಾ. ೨-೬೯). **ಪಲಗಣ್ಣು** : ೨. ಕಣ್ಣಿನ ಒಂದು ಬಗೆಯ ರೋಗ : ನೀರುಗಣ್ಣು ಜಾರುಗಣ್ಣು ಮಂಜುಗಣ್ಣು ಪಲಗಣ್ಣು (ಶುಕಸ. ೩೨೮). [ಪಲ$_1$+ಕಣ್]

ಪಲಗಣ್ಣ (ನಾ). (ಮೈಯಲ್ಲಿ) ಹಲವು ಕಣ್ಣುಗಳನ್ನು ಹೊಂದಿದವನು; ಇಂದ್ರ; ಸಹಸ್ರಾಕ್ಷ : "ಪಲಗಣ್ಣಂ ಪುರುಹೂತನಿಂದಿರಂ" (ಕರ್ಣಾನಿ. ೮); ಕಣ್ಣೊಳಿಸಿದನಂತವರ ಪಕ್ಕದೊಳ್ ಪಲಗಣ್ಣಂ (ಕಬ್ಬಿಕಾ. ೧೬೩); ಪಲಗಣ್ಣನ ಪಟ್ಟದ ಸತಿ ಸಗ್ಗದ ಲಲನೆಯರೊಳ ಗೋಲಗಮಿರ್ಪಂತೆ (ಜಯಕಾ. ೨-೧೯).

ಪಲಗಣ್ಣ ಪದ=ಇಂದ್ರಪದವಿ : ಶಿವನಿಂದ ಪಲಗಣ್ಣ ಪದವ ಪಡೆದಪೆ (ಪ್ರೌಢರಾ. ೮-೯೨). ಪಲಗಣ್ಣ ಬಿಲ್=ಇಂದ್ರಧನು; ಕಾಮನ ಬಿಲ್ಲು : ಪಲಗಣ್ಣ ಬಿಲ್ವೊಲುಮಿರ್ದು ಕಣ್ಣುಳ್ಕಿಸುವ ಚಿತ್ರಬಂಧದ ಲರ್ದಂಡೆಯಂ ಕಂಡೆನ್ (ಸಂಸಪ. ೩೫-೬). [ಪಲಗಣ್+–ಅ$_7$]

ಪಲಗಣ್ಣು 'ಪಲಗಣ್' ನೋ.

ಪಲಗೆ, ಹಲಗೆ, ಹಳಗೆ (ನಾ). ೧. ಮರ, ಲೋಹ ಮುಂತಾದುವುಗಳ ಅಗಲವಾದ ಹಾಗೂ ತೆಳುವಾದ ಸೀಳು : ತೇರ ಪಲಗೆಯುಂ ಮೆಟ್ಟಿಯುಂ ಪೋಗಿಪೋಗಿ (ಪಂಪಭಾ. ೧೩-೫೩ ಪ); ಪಡಗೊಡೆಯ ಪಲಗೆಯೊಂದಂ ಪಿಡಿದು . . . ತಡಗೆಯ್ದಿದೆಂ (ದಶಕು. ೨-೮೪); ರತ್ನ ಕೆತ್ತಿಸಿದಮಲ ಬೋದಿಗೆ ಲೋಪೆ ಪಲಗೆಯೊಳ್ಮುತ್ತಿನ ಕುಚ್ಚುಗಳ್ ಮೆಱೆಯೆ (ಮೋಹಶ. ೧೬-೧೫); ನೆಲಗಟ್ಟಿನ ಪಲಗೆಯನ್ನಪ್ಪಳಿಸಿದ ಸೊಪ್ಪುಳಂ ಕೇಳುತ್ತೆ (ಚಕಪಂ. ೭೪-೬). ೨. ಚದುರಂಗ, ಪಗಡೆ ಮೊದಲಾದುವುಗಳ ಹಾಸು ಮತ್ತು ಅದರ ಒಂದು ಸುತ್ತಿನ ಆಟ : ಆ ಪಲಗೆಯುಮಂ ಸೋಲ್ತು ಮಹೀಪತಿ ಚಲದಿಂ ಬಟಾಕ್ಕೆ ಸೋಲ್ತಂ ಗಡಮಾ

ದ್ರೌಪದಿಯುಮಂ (ಪಂಪಭಾ. ೭-೪); ವಸಂತತಿಳಕೆಯುಂ ತಾ[ನುಮೊ]ದ್ದಿಯಾಡಿದರಂತಾಡಿದಾಗಳ್ ಚಾರುದತ್ತನೊಂದೆರಡು ಪಲಗೆಯುಂ ಗೆಲೆ (ಬಂಹಿ. ೩-೭೦ ಪ); ಪೂಡಿದ ಪಲಗೆಗಳನೆಲ್ಲವಂ ಪುಷ್ಕರನೊಲ್ಲಾಡಿ ಗೆಲಲ್ (ಸಳಚಂ. ೫೦೬); ವನಿತೆಗಂ ಪುರುಷಂಗಮಿವೆ ಲೋಕಕನುಸಾರಿಯೆನಿಸ ಸಾರಿಗಳಾಗೆ ಸುಪ್ರಸಾದಿಗಳೇರ್ವರನುವಿನಿಂ ಪ್ರಾವೀಣ್ಯಮುಂ ಪಲಗೆಯುಂ ಮಾಡಿಯತಿಹರ್ಷದೆಸಕದಿಂದೆ (ಆರಾಚ. ೨-೮-೩). 'ನೆತ್ತವಲಗೆ' ಪರಾ. ೩. ಚಿತ್ರ ಮುಂತಾದುವುಗಳನ್ನು ಬರೆಯಲು ಸಿದ್ಧಪಡಿಸಿದ ಮರ, ಲೋಹ ಮುಂತಾದುವುಗಳ ಸಾಧನ,—ಭಿತ್ತಿ: ಒಂದು ಚೈತ್ಯಾಲಯಮುಂ ಮಾಡಿಸುವೆನೆಂದು ಪಲಗೆಯೊಳ್ ರೇಖೆಗೊಂಡು (ಪದ್ಮಾರಾ. ೧೦೯-೬); ಪಲಗೆಗಳೊಳ್ ಪಲವು ತೆಱದ ವರ್ಣಕ್ರಮದಿಂ ಪಲವುಂ ರೂಪಂ ಬರೆಗುಂ (ಬಂಹಿ. ೬-೨೫); ಶಶಿಮುಖಿಯ ಚಿತ್ತವೆಂಬುದು ರತಿಕಲೆಯ ಪಲಗೆ (ಭರಚಿ. ೧೦-೧೨೦). ೪. ಒಂದು ಬಗೆಯ ಗುರಾಣಿ,—ಹರಿಗೆ: ಯುದ್ಧದುಳ್ ಉಜಕೀಲಿಚ್ಚಿದವಂಬುವಾಳ್ಪಲಗೆಯುಳ್ಪಟ್ಟುಟ್ಟುವಲ್ಪನ್ನಿಸಿನ್ ಮಱುಮೋಗೀಶ್ವರನುಳ್ಳೆ ಕದಿ ತಣಿದ (ಸೌಇಇ. IX-i, ೩೯೨-೩; ೩ನೆಯ ಶತ); ಪಲಗೆಗಳಂ ಪೊಳೆಯಿಸಿ ಕಡತಲೆಯಂ ಜಡಿದು (ಜಗವಿ. ೧೨-೧೬); ಕಕ್ಕಡ ಕದಿತಲೆ ಪಟ್ಟ ವಂಕುಡಿವಿಡಿದೊಕ್ಕಯ್ಯ ಪಲಗೆ ಪೆರ್ಬಡಿಗೆ ಎಕ್ಕಟಿಗರ ಮೇಲೆ ಚಮ್ಮುವ ಚಮರವ ಲೆಕ್ಕವ ಮಾಡುವರಾರು (ಮೋಹಕ. ೪೦-೧೫). ೫. ೪: ಬರೆಯಲ್ಕೇಣ್ಮಚ್ಚರದಿಂ ಕರೆಯಲ್ಕೇಣ್ಮಯ್ಗೆ ಪಲಗೆ ಬರೆ ಕಾವ್ಯಕಲಾಪರಿಣತೆಯೊಳ್ ಖಟ್ಗಪರಿಣತೆಯೊಳ್ ಭಾಳನೇತ್ರನೆನಿಪಂ ಜನ್ನಂ (ಅನಂಪು. ೧-೫೪). ೫. ಒಂದು ಬಗೆಯ ಚರ್ಮವಾದ್ಯ; ತಮಟೆ: "ಪಲಗೆ-ಫಲಕ=ಹಲಗೆ, ಡೋಲು" (ತದ್ಭಕೋ. ೨೫). **ಹಲಗೆ:** ೧. ರಕುತದ ಧಾರೆ ನಾದಿತು ರಥದ ಹಲಗೆಗಳ (ಕುವ್ಯಾಪ್ರೌ. ೬-೨೭); ಆ ಕಾಯಿ ಬೆಂದು ಕಡುಗೌರಾದ ಹದನನಱಿದಿಳುಹಿ ಹಲಗೆಯೊಳಿರಿಸಿಕೊಂಡು (ಸೂಸಶಾ. ೫-೨೭); ಮಂತ್ರಿಸಿದ ಹಲಗೆ ಕೊಡುತ್ತೇನೆ, ಕೊಟ್ಟಗೆಯಲ್ಲಿಟ್ಟು ಬಾ (ಪ್ರಶ್ನೆ. ೬೧). ೨. ಹಲಗೆಯನೀಯದೆಯುಂ ಮಱುವಲಗೆಯನೀಯದೆಯುಮಣ್ಣ ಪೋದಪೆನೆಂಬೀ ಗೆಲವು ಗೆಲವಲ್ಲದಾನೀ ನೆಲನಂ ನಿನಗೀಯೆನೆಂಬುದುಂ ಧರ್ಮಸುತಂ (ಮಹಾನೇ. ೧೦-೧೧); ಓಡಲೇಕಿನ್ನೊಂದು ಹಲಗೆಯನಾಡಿ ನೋಡುವೆನೆಂಬವೊಲು ಕೈಮಾಡಿದನು (ಕುವ್ಯಾಗ. ೨-೩೪); ವಿಗಡ ಪುಷ್ಕರನೃಪನು ಗೆಲಿದನು ಹಲಗೆಯೊಂದಱಲಿ (ಸಳಚ. ೪-೨೯). ೩. ಧರೆ ಹಲಗೆ ವೃದ್ಧಿಯಾದುದು ಧರಣಿಯ ಮೇಲಿರ್ದ ಮರನೆ ಲೆಕ್ಕಣಿಕೆ ಗಡಾ (ಭಂದೋಂಬಾ. ೧-೩೦ ಆಡಿಪದ್ಯ); ಆ ಕಡವರದ ಮೇಲೆ ಕವಿದಿರ್ದ ಶಾಸನದ ಹಲಗೆಗಳಂ ತೆಗೆದೋದಿ (ಪುಣ್ಯಾಸ್ರ. ೭-೬೮ ಪ); ನಭೋಂಗಣದ ಹಲಗೆಯ ಮೇಲೆ ದೀಪ್ತಾಕ್ಷರಗಳಿಂದ ಕೆತ್ತಿರುವ ಪದ್ಯಕ್ಕಿಂತಲೂ ಸೊಗಸಾದುದು ಬೇರೊಂದುಂಟೆ! (ಶ್ರೋತ್ರಿವಿಹಿ. ೫). ೪. ಸಮಚಿತ್ತವೆಂಬ ನೇಮದ ಹಲಗೆಯ ಪಿಡಿದು ಶಿವಚಿತ್ತವೆಂಬ ಕೂರಲಗ ಕೊಂಡು (ಬಸವ. ೭೨೫); ಕಠಾರಿಯ ಮಸೆವ ಹಲಗೆಯ ಬಲಿವ ಸುರಗಿಯ ಬಸೆಯ ಬೆಳಸುವ ವೀರ ಭಟರೊಪ್ಪಿದರು ಕಟಕದಲಿ (ಕುಮಾಭಿಸ. ೫-೩೮); ಹರಿಗೆ ಕತ್ತಿ . . . ಹಲಗೆಯನು ಭರದೆ ಪಿಡಿದು ಪರಿವಾರ ನಡೆದುದು (ಅಂಜಚ. ೬-೭೨); ಹಿಡಿದುಕೊಳಿ ಮುಟ್ಟುಗಳ, ಹಲಗೆ ಕತ್ತಿಯನು (ಇಂಗೀತ. ೧೬-೨೪). ೫. ತಟಕಂಕಟ ಧಿಕ್ಕಟ ತಟೆಕಿನಿಸುವ ಹಲಗೆಯ ಶಬ್ದಂ (ಕುಂಬಹ. ಹ. ೨೫೪-೨೮); ಹಳ್ಳಿಗರು ಡೊಳ್ಳು, ಹಲಗೆ, ದಮ್ಮಡಿ, ದಪ್ಪು, ಟುಮರಿ ಮೊದಲಾದ ವಾದ್ಯಗಳನ್ನು ಬಾರಿಸಿಯೂ . . . ಕುಣಿಯುವುದನ್ನು ಕರ್ನಾಟಕದ ತುಂಬಾ ಈಗಲೂ ನೋಡಬಹುದು (ಕನ್ನಜಾ. ೩೦). **ಹಳಗೆ:** ೫. ವಾದ್ಯ ಹಳಗೆ ಮದ್ದಳೆ ೨ (ಸೌಇಇ. IX-ii, ೪೭೦-೫೨; 1482). [<ಸಂ. ಫಲಕ]

ಪಲಗೆಗಂಟೆ (ನಾ). (?): ಮನೆದಾಣಮುಂ ಪಲಗೆಗಣ್ಣಂ ಮೊದಲಾಗೆ ಕಟನಿಯುಂ ಪಡಗಣ್ಣಾಸೀಮೆ ಪೆರಮಟೆ ಪಡುವಣ್ಣಾಸೀಮೆ ತಣವಳ್ಳಿ (ಎಇ. XXI, ೨೯-೧೧; ೩ನೆಯ ಶತ). [?]

ಪಲಗೆಗಟ್ಟು (ನಾ). ಹಲಗೆಗಳನ್ನು ಜೋಡಿಸಿ ಮಾಡಿದುದು: ಅರಲ್ಡ ತಾವರೆಯ ತಣ್ಣಲೆಯ ಪಲಗೆಗಟ್ಟನೋವರಿಗಳೊಳಗಣ ಕಪ್ಪುರ ವಳಿಕಿನಳವಟ್ಟ ಜಗಲಿಗಳ ಮೇಲೆ ಪಸರಿಸಿದ ಕುಸುಮದೆಸಱ ಪಸೆಗಳೊಳಂ (ಚಂದ್ರಪ್ರ. ೭-೯೫ ಪ); ಸಂದುವಿಡದಂತೆ ತರಂಗೊಳಿಸಿ ರಚಿಸಿದ ಕರ್ಣಕಾಶದ ಪಲಗೆಗಟ್ಟನೆಡೆಯೆಡೆಯೊಳಳವಟ್ಟ ಎಸಳ್ಗಳಂ ನೆಗಱ (ರಾಜಶೇ. ೧೦-೩೧ಪ). [ಪಲಗೆ+ಕಟ್ಟು$_2$]

ಪಲಗೆಜೂಜು (ನಾ). ಪಗಡೆಯ ಜೂಜು: ಪಲಗೆಜೂಜಾಡಿದೆಂ ಸೂಳೆಗೆಯ್ದೆಂ (ಅರ್ಧನೇ. ೫-೩೬). [ಪಲಗೆ+ಜೂಜು$_1$(<ಜೂದು)]

ಪಲಗೆರ್ದೆಯ (ನಾ). ಗುರಾಣಿಯಂತಹ (ವಿಶಾಲವಾದ) ಎದೆಯುಳ್ಳವನು: ಪಲಗೆರ್ದೆಯಂ, ನಿಡುವಣಿಯಂ, ನುಣ್ಣೊಡೆಯಳ್ (ಶಬ್ದಾನು. ೩೨೮ ಪ್ರಯೋ). [ಪಲಗೆ+ಎರ್ದೆ+-ಅ$_7$]

ಪಲಗೆವಿನ್ನಣ (ನಾ): ಗುರಾಣಿಯನ್ನೊಡ್ಡುವ ಒಂದು ಬಗೆಯ ಕೌಶಲ: ಗರುಡಿಯೊಳಗೆ ಪಲಕೆಲಂಬರ್ಮಲಗೆವಿನ್ನಣಂಗಳೊಡನೆ ಕಾಮನ ಸರ್ವತದಂತೆ ಮಾರಚಿತ್ರಭಿತ್ತಿಯೊಳ್ ಪಿಡಿಯುತ್ತುಮಿರ್ದ ಕಡುಗಲಿ ಕೇಳ್ದು (ಅನಂಪು. ೧೧-೪೮ ಪ). [ಪಲಗೆ+ಬಿನ್ನಣ(<ಬಿನ್ನಾಣ)]

ಪಲಗೋರು (ನಾ). ವ್ಯವಸಾಯದ ಒಂದು ಉಪಕರಣ; ಹತ್ತರಿಂದ ಇಪ್ಪತ್ತರವರೆಗೂ ಹಲ್ಲುಗಳಿರುವ ಕುಂಟೆ; ಜಂತಗುಂಟೆ; ಹಲುಬೆ: ನಾಲ್ಕುಬೆರಳು ಅಗಲವಾಗಿ ಮೊನೆಯಾದ ಹಲ್ಲುಗಳನ್ನು ಹತ್ತು ಹನ್ನೆರಡು ಇಪ್ಪತ್ತರವರೆಗೂ ಅದರ ಅನುವರಿತು ಹಲ್ಲುಗಳನ್ನು ಹಾಸಿರುವ ಕುಂಟೆಗೆ ಅಲಕುಕುಂಟೆ ಹಾಗು ಪಲಗೋರು ಎಂಬ ಹೆಸರು (ಕೃಷಿಪ್ರ. ೫೬).

[<ಪಲ್+ಗೋರು$_2$./ತೆಲು. ಪಲಗೋರ್ರು, ಪಲಗಾರ್ರು]

ಪಲಚ್ಛೋಗೆ (ನಾ). ಒಂದು ಊರಿನ ಹೆಸರು: ವೈಶಾಖಪೌರ್ಣಮಾಸ್ಯಮ್ ಪಲಚ್ಛೋಗೆ ನಾಮಗ್ರಾಮಂ (ಸ್ಯೆಅರಿ. ೧೯೧೮, ೧೨-೧೩; ೩ನೆಯ ಶತ). [?]

ಪಲಟಣ, ಪಲ್ಟನು, ಪಲ್ತನು (ನಾ). ಸೈನ್ಯದ ದಳ; ಪದಾತಿ ದಳದ ತುಕಡಿ; ಪಟಾಲಂ: ರಣಮುಸ್ತಖಾನನ ಆ ಎರಡೂ ಪಲಟಣಗಳಲ್ಲಿ ಮುಸಲ್ಮಾನರ ಯಾವತ್ತು ಪ್ರಕಾರದ ಆಯುಧಗಳಿದ್ದವು (ಕನ್ನಡಿ. ೩೧೬). **ಪಲ್ಟನು:** ಇಂಗ್ಲೀಷರು ತಮ್ಮ ಪಿರಂಗಿ ಬಂದೂಕುಗಳನ್ನು ಹಾರಿಸುವುದಕ್ಕೆ ಮೊದಲೇ ಅವರ ಪಲ್ಟನುಗಳನ್ನು ಕತ್ತರಿಸಿಬಿಟ್ಟನು (ಒಡೆಕ. ೭೯). **ಪಲ್ತನು:** ಪೋಲಿಸರು ಪದ್ಧತಿಯಂತೆ ತಮ್ಮ ಪಲ್ತನುಗಳ ಸಮೇತ ಬಂದು (ದುಸಾರ. ೩೪). 'ಪಟಾಲಂ' ಪರಾ.

[←ಪೋರ್ಚು. ಇಂ. Platoon./ಹಿಂ. ಪಲ್ಟನ್; ಮರಾ. ಪಲಟನ್, ಪಲಟಣ್]

ಪಲತೀಗೆಬಳ್ಳಿ (ನಾ). ಒಂದು ಬಗೆಯ ಬಳ್ಳಿ: (ಸ್ಯೆಇಗಿ. ೫೦-೯೯೪). [ಪಲತೀಗೆ$_1$+ಬಳ್ಳಿ]

ಪಲತುಡುಂಕು (ಕ್ರಿ). (?): ಗೊಟ್ಟಗಾಯಣಿಯರ ಕಾಯೆಗಳ್ಗ ತಲೆದೂಗುವ ನೆವದಿಂ ಕೊಡಂಕೆಯೊಳ್ ಪಲತುಡುಂಕಲಱಾಯದ ಪಸುಳೆದುಂಬಿಗೆ ಕನ್ನವುರದ ಚೆನ್ನೆಯ್ದಿಲ ಮಕರಂದರಸಮಂ ಸಾರ್ಚುವಂತೆಯುಂ (ಅನಂಪು. ೮-೭ ಪ). [?]

ಪಲತೆಱ (ನಾ). ಹಲವು ರೀತಿ ; ಅನೇಕ ಬಗೆ : ಇಂತು ಪಲತೆಱದೆ ಕೋಟಲೆಗೊಳುತಿರ್ದಪಂ (ಕಾದಂಪೂ. ೮೯೪); ಕೆಲಬರ್ ಪಲತೆಱದಿಂ ಜಡಿಯೆ (ಸುಕುಮಾ. ೪-೬೦) ; ಜಗದಧಿವಲ್ಲಭನಂ ಲಡ್ಡುಗೆಯಿಂ ಪಲತೆಱದ ಪುಷ್ಪದಿಂ ನಾನಾ ಪತ್ರಗಳಿಂ ಪೂಜಿಸಿ (ಧರ್ಮಾಮೃ. ೧-೧೦೭).

[ಪಲ$_1$ + ತೆಱ$_1$]

ಪಲದಿವಸ (ನಾ). ಅನೇಕ ದಿನ ; ಬಹಳ ಕಾಲ : ಪಲದಿವಸಂ ಸೂಪ್ಪಡೆಯದೆ ಕರೆವುದಕರ್ಕಾಸೆವಟ್ಟು ಮಾತಟ್ಟಿದ ಕೆಳೆಯನನೆಮ್ಮಟ್ಟಿಯ ನೊಡಂಬಡಿಸಲಕ್ಕೆನೆಂದು ಪೋಗಲ್ವೇಟ್ಟು (ಶಾಂತಿಪು. ೮-೭೭ ಪ); ಪಲದಿವಸ ನೀಲಾಂಜನೆಯೊಳಿಂತೊಲಿದಿರುತೆ (ಸಾಳ್ವಭಾ. ೧೪-೪೯).

[ಪಲ$_1$ + ದಿವಸ]

ಪಲದೆಱೆ (ನಾ). ಒಂದು ಬಗೆಯ ತೆರಿಗೆ : ತಗಡೂರಿಂಗೆ ಸಲುವ ಸ್ತ್ರಳಸುಂಕ . . . ಮನೆವಣ ಆಡಪೆಱೆ ಸಕೆಪೆಱೆ ಪಲದೆಱೆ . . . ಸರ್ವ ಸ್ವಾಮ್ಯಮ್ಮನವನು ಆಗುಮಾಡಿ (ಎಕ. III (R), ಸಂಜಪ. ೩೩೪-೧೩; 1530). [ಪಲ$_2$ + ತೆಱ$_3$]

ಪಲಪಗಲು 'ಪಲವಗಲು' ನೋ.

ಪಲಪರಲು (ನಾ). ಹಲವು ಬಗೆಯ ಪರಳು,—ರತ್ನ : ಬಲುವಸದ ತೊಡವು ಪಲಪರಲು ಪಿಸುನಿವಸನ ಪರಿಯಣದಂಗಡಿಯು ಸಾಲ್ಮುಸುಗ ಲೊಪ್ಪಿದುದಾ ಪೊಳಲು (ನೇಮಿಸಂ. ೧-೮೨).

[ಪಲ$_1$ + ಪರಲು$_1$ (<ಪರಲ್)]

ಪಲಪು (ನಾ). "ಹಗ್ಗವನ್ನು ಹೊಸೆದು ಅದನ್ನು ಮೂಗುದಾರಕ್ಕೆ ಸಿಕ್ಕಿಸಲು ಅನುಕೂಲವಾಗುವಂತೆ ತುದಿಯಲ್ಲಿ ಎರಡು ಭಾಗ ಮಾಡಿ ಒಂದಕ್ಕೊಂದು ಸೇರಿಸುವಂತೆ ಮಾಡಿದ ಉಂಗುಟ, ಕುಣಿಕೆ" (ಸನ್ನೂರು. ಕೋಶ) : ಪಲಪು ಹಾಕಿದ ಹೊಸಹಗ್ಗ ನಾಗವಾಸದ ಮೇಲಿಟ್ಟಿದ್ದೀನಿ ; ಕಪ್ಪೆತ್ತಿನ ಹಗ್ಗ ಕಿತ್ತೋದರೆ ಹಾಳು (ಸನ್ನೂರು. ೨೪೬). [←ತೆಲುಂ. ಪಲುಪು]

ಪಲಬಗೆ 'ಪಲವಗೆ' ನೋ.

ಪಲಬಿರುದು (ನಾ). ಅನೇಕ ಪದವಿ,—ಗೌರವ : ತೊಂಗಲ್ಮಂಟಿಯು ಜೋಡುಶಂಖದ ಜಗಜಂಪಿನ ಸತ್ತಿಗೆಯ ಪಲಬಿರುದುಗಳ್ಗೆಗಳ್ತೆಪಡೆಯೆ (ರಾಜಶೇ. ೬-೧೧೧ ಪ). [ಪಲ$_1$ + ಬಿರುದು]

ಪಲಬು 'ಪಲುಂಬು' ನೋ.

ಪಲಮಾತು 'ಪಲವಾತು' ನೋ.

ಪಲಮೊಗ (ನಾ). ಅನೇಕ ದಿಕ್ಕು ; ಹಲವು ದೆಸೆ : ದೆಸೆದೆಸೆಗಳಂ ಮೊಗೆಮೊಗೆದು ಮೊಗಸಿ ಪಲಮೊಗದೊಳವ್ವಳಿಸಿ ಪುಟನೆಗೆನೆಗೆದು ನೆಗಳ್ದು . . . ಎಲ್ಲರಂ ದಹಿಸತೊಡಗಿದುದು ಪಳ್ಕುರಿ ನರನ ಬಲದೊಳು (ಜೈಮಿಭಾ. ೮-೩೯). [ಪಲ$_1$ + ಮೊಗ]

ಪಲರೂಪು, ಪಲವುರೂಪು (ನಾ). ಹಲವು ರೂಪು ; ಅನೇಕ ಆಕಾರ : ರತಿ ಪಲರೂಪಾಂತಂತೆಸೆವ ಸುರಸುದತಿಯರ್ ಕಳಸ ಕನ್ನಡಿ ವಿಡಿದಿರೆಳ್ತರೆ (ಶಬಶ:. ೫-೫೭ ಪ). **ಪಲವುರೂಪು :** ದಿನಪನುಪಟಳ ದಿಂದೆ ನೆಲೆಗೆಟ್ಟು ಪಲವುರೂಪನೆ ತಾಳ್ದು . . . ಕಾರೊಡಲ ಬೇಡವಡೆ ಬೇಂಟೆಗೆ ಪಿಪನೆಡೊಳ್ಕೆತರುತಿರ್ದುದು (ಜೈಮಿಭಾ. ೨೪-೪೦) ; ಪಕ್ಷಿಮಾ ಚಲಂ ಪಲವುರೂಪಾಂತು ನಡೆಗೊಳ್ವಂತೆಯುಂ (ರಾಜಶೇ. ೧೩-೬೭ ಪ).

[ಪಲ$_1$ + ರೂಪು]

ಪಲರ್ಮೆ (ನಾ). ಅನೇಕ ಸಲ ; ಹಲವುಸಾರಿ : "ಒಮ್ಮೆ . . . ಪಲರ್ಮೆ-ಇವು ಎಣಿಸುವ ಸೂಟೂಳ್ ವರ್ತಿಪುವು" (ಕಪಸಾ. ೬೪-೫೩೦); ಸನುಸ್ತವಸ್ತುವಂ ಕುಡುವ ಪಲರ್ಮೆಯಿಂ ಪರಿಸಿ ಸೇಸೆಯನಿಳ್ಕುವ . . . ಬಹುಪ್ರಕಾರಜನಸಂಕಟವೊಪ್ಪಿದುದಾ ಪ್ರಯಾಣದೊಳ್ (ಅದಿಪು. ೪-೫೬) ; ಮನೋಭವನಂ ತೆಗೆದಪ್ಪಿಕೊಂಡು ಪಲರ್ಮೆಯುಂ ಪರಿಸಿ (ನೇಮಿಪು. ೬-೧೩೨ ಪ) ; ಒಂದು ಮೊದಲಾದ ಸಂಖ್ಯಾವಾಚಗಳಿಗೆ ಅನೃತ್ತಿ ಎಂಬರ್ಥದಲ್ಲಿ ಮೆ ಸೇರುವುದು . . . ಸಾಸಿರ್ಮೆ, ಪಲರ್ಮೆ (ಕೃಪಡಿ. ೫೨).

[<ಪಲ$_1$ + -ಮೆ$_2$]

ಪಲಲ$_1$ 'ಪಲವಲ' ನೋ.

ಪಲಲ$_2$ (ನಾ). ೧. ಮಾಂಸ ; ಬಾಡು : ಲಲನಾರೂಪಮಿದಿನಿತುಂ ಪಲಲಮಯ್ಸಂ (ಉಸಾರ. ೨೪-೧೩೬) ; ಮತ್ಸ್ಯ ಹರಿಣಪಲಲಂಗಳಂ . . . ಆ ವನಿತೆಯೊಳು ಕೂಡಿ ತಿಂದು (ವೀಶೈಪು. ೨-೭-೧೫೫) ; ಎಲುಗಳ ರಾಸಿ ಪಂದಲೆಗಳ ಇಜುಗೂಡೆ ಪಲಲದ ಪುಂಜ (ಗೂಮ್ಮಟ. ೭-೧೫). ೨. ಕೆಸರು ; ಕೊಚ್ಚೆ. ೩. ದೈತ್ಯ ; ರಾಕ್ಷಸ. [ಸಂ.]

ಪಲವಂಗೆ, ಹಲವಂಗೆ (ನಾ). ಹಲವು ರೀತಿ ; ನಾನಾ ಬಗೆ : ಪಲವಂಗದಲಿ ಕೊಂಡಾಡುವರು (ಬಸಪು. ೨೫-೩). **ಹಲವಂಗೆ :** ಹಲವಂಗ ಗುಣದವನೊಬ್ಬರಸು ತಲೆಯಿಲ್ಲದವನೊಬ್ಬ ಪ್ರಧಾನಿ (ಪುರಂದ. ೩-೧೩೭-೧) ; ಹಂಬಲಿಸುತ ಹಲವಂಗದಿ ಹಗಲಿರುಳೆಂಬುದ ತೀಯದಳಲುತ (ಕಪಸಾಂ. ೩೪-೮೩). [ಪಲ$_1$ + ಅಂಗ$_1$]

ಪಲವಂದ, ಹಲವಂದ (ನಾ). = ಪಲವಂಗೆ : ತಿವನ ಚಾರುಳ್ಕೆಯಂ ಪಡೆವುದೇ ಮಂತ್ರವೆಂದು ನಿಶ್ಚಯಿಸಿ ಪಲವಂದದಿಂದಂ . . . ಒಡಂಬಡಿಸಿ (ಪದ್ಮರಾ. ೧೧-೨೧೪) ; ಪಲವಂದದಿಂದಾತ್ಮರಿರಲೊಂದೆಂಬುದಾಗದದು ಯುಕ್ತಿಯಿಂ ಪ್ರಸಿದ್ಧಂದೋಜಾ ಭೇದವಿಹುದಾಗಿ (ಅನುಸಾ. ೩-೪). **ಹಲವಂದೆ :** ಗುರುವು ಈ ತೆರದಿಂದಲಿರಬೇಳ್ಕಲ್ಲದಲೆ ಹಲವಂದ ಬೀಳುವ ಗುರುವೆ (ಜಜ್ಜಪು. ೮೩-೩೩) ; ನಾಡಿನ ಹಲವಂದದ ಮುನ್ನಡೆಗಾಗಿ ಜೀವನವನ್ನು ಸಮರ್ಪಿಸಿ (ಮೋಳಸಾ. ೧೫೩ ಪ್ರಸ್ತಾವನೆ).

[ಪಲ$_1$ + ಅಂದ]

ಪಲವಕ್ಕೇನಿ (ನಾ). ಒಂದು ಪ್ರದೇಶದ ಹೆಸರು : ತತಃ ಪಲವಕ್ಕೇನೀ ಸೀಮ್ನಾಮ್ (ಎಕ. VIII, ಸೊರಬ. ೩೩-೪ ; ಸಾ. 420). [?]

ಪಲವಗಲು, ಪಲಪಗಲು (ನಾ). = ಪಲದಿವಸ : ಹರನ ಸಾಹಸ ಕಂಜದೆ ಪಲವಗಲು ಮುಪ್ಪುರ ಪಡಿಬರಿಸಿ ಪೋರಿದುದು (ಹದಿಬ. ೨-೪೪). **ಪಲಪಗಲು :** ಪಲಪಗಲಿಂದವೆ ಕೀಲಿಸಿ ಕೆತ್ತಿರ್ದ ಕುಲಿಶದ ಪಡಿಯ ನೋಡಿದನು (ತ್ರಿಪಾಪು. ೩-೩೪). [ಪಲ$_1$ + ಪಗಲು(<ಪಗಲ್)]

ಪಲವಗೆ, ಪಲಬಗೆ (ನಾ). = ಪಲವಂಗೆ : ಆಲಸದೆ ನಾಣ್ಚದಂಜದೆ ಯಳುಕದೆ ಪೇಳು ಪಲವಗೆ ಕಬ್ಬದೊಳ್ಪುಗಳ (ಹದಿಬ. ೧-೩೯). **ಪಲಬಗೆ :** ಸುವರ್ಣಪಳಯ ಪಳದಿಯ ಜೋನೆಗವಳಿಯ ಪಲಬಗೆಯ ಪಲ್ಲಣದ ಪಕ್ಕಜಲ್ಲಿಯ ಪದ್ಮರಾಗದ ಜಾವುಡದ ಪರಂತವಜೆ ಪಸಂಸೆ (ರಾಜಶೇ. ೬-೧೧೧ ಪ) ; ಪಲಬಗೆಯ ಬಲೆಗಳಂದಂ . . . ಎಸಗೆ ಬೇಂಟೆಗಳಂ (ಹರಿವಾನ್ಯ. ೩-೮-೧೧೧). [ಪಲ$_1$ + ಬಗೆ$_3$]

ಪಲವಣ್ಣ (ನಾ). ಅನೇಕ ವರ್ಣ : ಪಲವಣ್ಣದ ಗಮಸಣಗೆಯ ಕೋಟಿಗೆ ನೆಲೆಗೊಳಿಸಿದರೆಂಬಂತೆ ಸಲೆ ಮೆಱೆವುವು ಬಣ್ಣಪರಿಯ ಹಂಗಿಗಳು ಬಳಸಿ ಕೋಟಿಯು ಮೈವಸದೊಳು (ಕುರಾಸಾಂ. ೧೧-೩೯).

[ಪಲ$_1$ + ಬಣ್ಣ]

ಪಲವಯಣ (ನಾ). ಅನೇಕ ದಿನದ ಪ್ರಯಾಣ : ಪಲವಯಣದ ಮೇಲೆ ಜನಪಯ ನೋಳ್ಕೆಂ (ಜೀವಂಸಾಂ. ೧೫೫-೩೯). [ಪಲ$_1$ + ಪಯಣ]

ಪಲವರಿ (ನಾ). = ಪಲವಂಗೆ : ನೆಲಕೆ ಬಾಗಿಸಿದ ಪಲವರಿಯ ಜೆಂಕಣ ಕವಣೆ . . . ತಳೆಯ ಮುರದ ಗೊಂದಣದ ಸಂವರಣೆಯಿಂದಾ ಕೋಟಿ ಕಹ್ನೊಪ್ಪಿಸು (ಸಪ್ಕುಕಾ. ೪-೩೪). [ಪಲ$_1$ + ಪರಿ$_3$]

ಪಲವರ್ಥ, ಹಲವರ್ಥ (ನಾ). ಅನೇಕ ಅರ್ಥ ; ಹಲವು ಬಗೆಯ ಅರ್ಥ : ಒಂದು ಶಬ್ದಕ್ಕೆ ಪ[ಹಾಕಾಂ.ಹ]ಲವರ್ಥಮುಂ

ಪ[ಪಾಠಾಂ.ಹ]ಲವರ್ಥಕೊಂದು ಶಬ್ದಂ ನುಡಿವ ಬೆಡಗುವಿಂ ನಾನಾರ್ಥ ಮೆಂದು ಪೇಟ್ಟೆಂ (ಮಂಗರಾ. ೧೩೮-೧). **ಹಲವರ್ಥ :** ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಪಲ$_1$ + ಅರ್ಥ]

ಪಲವಲ, ಪಲಲ$_1$, ಪಲ್ಲಲ (ನಾ). ಸಣ್ಣ ಕೊಳ,—ಹೊಂಡ : "ಪುರಹೊನಲ್ ಬೆಂಚೆ ಪಲವಲಮೆನಲ್ ತಾನಲ್ಪಸರಸಿ" (ಕಬ್ಬಮಂ. ೩೬). **ಪಲಲ$_1$:** "ಬೆಂಚೆ ಪಲಲಮೆನಲ್ ತಾನಲ್ಪಸರಸಿ" (ಕಬ್ಬಿಕೃ. ೧೨). **ಪಲ್ಲಲ :** "ಪಲ್ಲಲಮೆಂದುಂ ಬೆಂಚೆಯೆಂಬು ಅಲ್ಪಸರಸಿ" (ಕಶಸಾ. ೫೩-೧೬೦). [<ಸಂ.ಪಲ್ವಲ./ಪ್ರಾ.ಪಲ್ಲಲ]

ಪಲವಸತಿಗೆ (ನಾ). ಚಿಗುರು, ರತ್ನ ಮುಂತಾದುವುಗಳಿಂದ ಅಲಂಕರಿಸಿದ ಕೊಡೆ,—ಛತ್ರಿ : ಕನಕದಂಡದ ಚವರ ಸದಕ ಹಳತಾದಡೆ ಹೊಸತ ಮಾಡಿಸುವನು ದೇವರ ಪಲವಸತಿಗೆ ಹಜ್ಜಾದಡೆ ಹೊಸ ಪಟ್ಟಗಳ [ಹೊಲ್ಸಿ]ಕ್ಕುವನು (ಸೌಇಅ. IX-ii, ೪೧೬-೪೪ ; 1377).

[P ಇದು 'ಪಲ್ಲವಸತ್ತಿಗೆ' ಎಂಬುದರ ಅಪಲಿಖಿತ]

ಪಲವಾಡು (ಕ್ರಿ). ಹಲವು ಮಾತನ್ನು ಹೇಳು ; ಹೆಚ್ಚು ಮಾತ ನಾಡು ; ಬಗೆಬಗೆಯಾಗಿ ಮಾತಾಡು : ಈ ಸುರಸಭೆಯೊಳ್ ಪಲ ವಾಡು[ಪಾಠಾಂ.ದು]ವೆನ್ನ ನಾಲಗೆ ಬಲಸ್ಥನೊರ್ವಂಗೆ ಜೀಯ ದೇವೆಂದ ಪುದೇ (ಅಪಿಪು. ೧೨-೧೦೧) ; ಅಂತು ನಿಂದು ನೋಡಿ ಪಲುಂಬಿ ಪಲವಾಡಿ (ಗದಾಯು. ೫-೪ ಪ) ; ನೊಂದು ಪಲುಂಬಿ ಪಂಬಲಿಸಿ ಮೇಣ್ಪಲವಾಡಿ ಬಳಲ್ದು ಬಾಡಿ (ರಾಜಶೇ. ೧೩-೧೩೪). [ಪಲ$_1$+ಆಡು$_1$]

ಪಲವಾತು, ಪಲಮಾತು, ಪಲವುಮಾತು, ಹಲವುಮಾತು (ನಾ). ಅನೇಕ ಮಾತು ; ಹೆಚ್ಚು ಮಾತು : ಪಲವಾತದೇನಿಲ್ಲಿಯೆ ಮಡಗಿದೆಂ ರಸಮನೊಲವಿನಿಂ ಕುಡುವುದೆನೆ (ಅರಾಚ. ೨-೧೩-೨೦). **ಪಲಮಾತು :** ಮಾತುಕಾಜತನದಲುಲಿವ ಪಲಮಾತವೇತಕೆ (ಬಸಪು. ೩-೫೬). **ಪಲವುಮಾತು :** ಈ ಪಲವುಮಾತೇತಕವನಕಿಪಾಪಿ (ಬಸಪು. ೨೮-೩೯) ; ಪಲವು ಮಾತೇನ್ನೆವರೊಡವುಟ್ಟದರು ಸನ್ನುತರು (ಸಾಳ್ವಭಾ. ೧-೪೬). **ಹಲವುಮಾತು :** ಹಲವುಮಾತೇನೊಂದೆ ಸಾಲದೇ (ಸಾಳ್ವಭಾ. ೨೫-೩೨). [ಪಲ$_1$+ಮಾತು$_1$]

ಪಲವು 'ಪಲ$_1$' ನೋ.

ಪಲವುಕಾಲಂ 'ಪಲಕಾಲಂ' ನೋ.

ಪಲವುಪಾಯ (ನಾ). ಅನೇಕ ಉಪಾಯ : ವಿಧುಹಾಸನಂ ಪಲವುಪಾಯದಿಂದೀಗ ನಾಂ ವಧಿಸದಿರ್ದೊಡೆ ತನ್ನ ಸಂತತಿಗೆ ಧರೆಯನಾಳ್ವಧಿಕಸಂಪದಮಾಗದು (ಜೈಮಿಭಾ. ೩೧-೩೭).

[ಪಲವು(<ಪಲ$_1$) + ಉಪಾಯ]

ಪಲವುಮಾತು 'ಪಲವಾತು' ನೋ.

ಪಲವುರೂಪು 'ಪಲರೂಪು' ನೋ.

ಪಲವುಸೂಳ್ 'ಪಲಸೂಳ್' ನೋ.

ಪಲವುಸೂಟ್ 'ಪಲಸೂಳ್' ನೋ.

ಪಲವೆಡೆ (ನಾ). ಹಲವು ಸ್ಥಳ ; ಅನೇಕ ಕಡೆ : ಪಲವೆಡೆಯೊಳ ಮರಿಯರಂ ಪಿರಿಯರುವಂ ಕಾದಿ ಗೆಲ್ದು ಪಲವೆಡೆಗಳೊಳಂ ಮಹಾಧ್ವಜಮ ನೆತ್ತಿಸಿ ಮಹಾದಾನಂಗೆಯ್ದು ನೆಗಟ್ಟ ಗಂಗವಿದ್ಯಾಧರಂ (ಎಕ. II, ೫೯-೧೦೧ ; 974). [ಪಲವು(<ಪಲ$_1$) + ಎಡೆ$_3$]

ಪಲವೆಣಿಕೆ (ನಾ). ಹಲವು ರೀತಿಯ ಯೋಚನೆ ; ಹಲವು ಬಗೆಯ ಆಲೋಚನೆ : ಮಿಕ್ಕ ಸತಿಯರ ನೆರವಿ ಗಜಬಜಿಸೆ ಕಂದಿಳಿಯೊಳೊಕ್ಕ ನೊಡಲಂ ಬಭ್ರುವಾಹನಂ ಮೃತಕಲ್ಪನಾಗಿ ಪಲವೆಣಿಕೆಯಿಂದೆ (ಜೈಮಿಭಾ. ೨೪-೪೫). [ಪಲವು(<ಪಲ$_1$) + ಎಣಿಕೆ]

ಪಲವೇಂಟೆ (ನಾ). ಹಲವು ಬಗೆಯ ಬೇಟೆ : ಇಂತು ಪನ್ನತಿಕೆಯಿಂ ಪಲವೇಂಟೆಯನಾಡಿ (ರಾಜಶೇ. ೫-೧೧೪ ಪ). [ಪಲ$_1$ + ಬೇಂಟೆ]

ಪಲವೋದು (ನಾ). ಹಲವು ರೀತಿಯ ವಿದ್ಯೆ,—ಅರಿವು : ಪಲ ವೋದುಗಳಿಂದ ಪಲವುಗೈಮೆಗಳಿಂದ . . . ಬೆಲೆವಡೆದಿರ್ಪನೆಂದೆಣಿಸುವಳಲ್ಲ (ಹದಿಬ. ೧-೩೩). [ಪಲ$_1$ + ಓದು$_2$]

ಪಲಸ 'ಪಲಸು' ನೋ.

ಪಲಸರ (ನಾ). ೧. ಹಲವು ಎಳೆಗಳುಳ್ಳ ಸರ : ಮನೋಹರಪುಷ್ಪಗಳ ಎಕ್ಕಸರ ದುಸರ ಪಲಸರ ದಂಡೆ ಬಾಸಿಗ ವಿವಿಧಮಾಲಾಬನ್ಧಗಳು (ಬೆಟ್ಟಅ. ೮೨-೧೦). ೨. ಹಲವು ಬಗೆಯ ಮಾಲೆ : ವಿಲೇಪನಚಂದನವಾರಿ ಗಿಂಡಿ ಲಾಮಂಚದ ವೀಜನಂ ಪಲಸರಂ ಪದಿಗಂ ರತಿಗೇಹಮೊಪ್ಪುಗುಂ (ಪುನ್ನಾವಿ. ೧೦-೩). [ಪಲ$_1$ + ಸರ$_3$]

ಪಲಸಿಗೆ$_1$ (ನಾ). ಹೊಂದಿಕೊಳ್ಳುವಿಕೆ; ಪ್ರಯೋಜನವಾಗಿರುವಿಕೆ; ಫಲಿಸಿಕೆ: ಈ ಊರಿಗೆ ನಾವು ಬಂದದ್ದು ನಮಗೆ ಆಗಿ ಬರಲಿಲ್ಲ. ಹಳ್ಳಿಗಾಡ ವಾಸ ನಮಗೆ ಪಲಸಿಗೆ ಇಲ್ಲ (ಮಾಮರಾ. ೧೯೩). [< ಫಲಿಸಿಕೆ]

ಪಲಸಿಗೆ$_2$, ಪಲಸುಗೆ (ನಾ). ಒಂದು ಊರಿನ ಹೆಸರು : ಶ್ರೀಲೊಕಟಿ ಯರಸರ್ ಬನವಾಸಿ ಪನ್ನಿಟ್ಟಾಸಿರಮುಂ ಪಲಸಿಗೆ ಪನ್ನಿಟ್ಟಾಸಿರಮು ಮಾಳ್ವಲೆವಮಜುಸಾಸಿರಂ . . . ಆಳೆ (ಎಕ. VII (S), ತಿಕಾರಿ. ೩೩೮-೫ ; 902). **ಪಲಸುಗೆ :** ಮಲವರಿಭೂಪರಂದರ್ಪ್ಪಮರ ದಿಪ್ಪುವ ವೀರಭಟಾಳಿಯಿಂ ಕರಂ ಪಲಸುಗೆನಾಗೊಡದಿಂ ಸೊಗಯಿಸಿದ್ದುದೊ ಕಳ್ಪಮಹೀಜದಂದದಿಂ (ಕಕುಲ. ೫-೫ ; 994). [?]

ಪಲಸು, ಪನಸ, ಪನಸು, ಪಲಸ, ಹಲಸು, ಹಳಸು$_3$ (ನಾ). ಒಂದು ಬಗೆಯ ಮರ ಮತ್ತು ದಪ್ಪವಾದ ಮುಳ್ಳಿನಂತಹ ಒರಟು ಮೇಲ್ಮೈಯುಳ್ಳ ಮತ್ತು ಸಿಹಿಯಾದ ತೊಳೆಗಳುಳ್ಳ ಅದರ ಹಣ್ಣು : ಬೇರ್ವಿಡಿದು ಕಾಯ್ತ ಪಲಸೆಳನೀರ್ಪೊನಲಂ ಕಜ್ಜಿಸ ತೆಂಗು (ಪಂರಾಮಾ. ೧-೧೧೨) ; ಎಳಗಾಯ್ದೊಜ್ಜೆ ತಳ್ತ ತೆಂಗು ಬೇರಿಂ ತುದಿಮುಟ್ಟಿ ಕಾಯ್ತ ಪಲಸೆಂಬಿವು ಕುಂದವು ನಂದನಂಗಳೊಳ್ (ಜಾವಿ. ೨-೧೫) ; ಪಲಸು ಮುಂತಾದ ಪಣ್ಗಳ ಮೆದ್ದು (ಮೋಹತ. ೪೨-೧೮). **ಪನಸ :** "ಪನಸಂ ಹಲಸು" (ಮಂಗರಾ. ೩೬-೧೬) : ಪನಸಾಮ್ರ ಕದಳಿ ನಾರಂಗ ನಾಳಿಕೇರೀಫಲಾಮೃತಾಸ್ವಾದದೆ ತಣ್ಣನೆ ತಣಿದು (ಅಪಿಪು. ೧೧-೭೯) ; ಪನಸಾಮ್ರ ನಾರಂಗ ದಾಡಿಮಫಲಂಗಳಂ . . . ಪೂಜಿಸಿದಂ (ಪುಷ್ಪಪು. ೯-೫) ; ಪನಸಂ ದ್ರಾಕ್ಷೆ ಜಂಬು . . . ಕಣ್ಗೆಸೆದುವು (ಜೈಮಿಭಾ. ೧೯-೬) ; ನಾರಿಕೇಳ (ತೆಂಗಿನ ಕಾಯಿ) ಮತ್ತು ಪನಸ (ಹಲಸು) (ಪ್ರವಾಇ. I, ೨೦೫). **ಪನಸು :** ಅಮ್ರಂ ಬೆಳಲಿಂಗುಳಂ ಪನಸು ನಿಂಬಂ ಜಂಬು ಜಂಬೀರಕಂ (ಕಾವ್ಯಸಾ. ೧೦೪೦ ಶೂದ್ರಕ) ; ಕದಳೀ ದಾಡಿಮ ಮಾತುಳಂಗ ಪನಸಂ ದೇಸಂ ಕರಂ ಸೋಭಿಕುಂ (ಕಲ. I, ೪೯-೬ ; 1423) ; ನೆಜ್ಜೆ ಕಾತ ಪನಸುಗಳ . . . ಸೊಗಸು ಸೆಳೆದುದು ಮನವನು (ಕುಸ್ಯಾಉ. ೬-೨೬). **ಪಲಸ :** "ಪಲಸ (ಸು)-ಪನಸ" (ಶಬ್ದಕೋ. ೨೫) : ನೆಲ್ಲಿ ಕದವೀಚಿಲ್ ಮಾರು ತುಂಬುರ್ಬೆಳಲ್ ಪಲಸಂ (ಸೂಕ್ತಿಸು. ೩-೨೩). **ಹಲಸು :** "ಪನಸಃ, ಕಂಟಕೀಫಲಃ, ಹಲಸು-ಈ ೩ ಹಲಸು" (ನಾಚಿರಾ. ೧೦೮) : ಕಟ್ಟು ಬಾಳೆ ಹಲಸು ನಾರಿವಾಳಕ್ಕೆ ಸಿಹಿನೀರನೆಜ್ಜಿದನರಾಯ್ಕ (ಮಹಾದೇ.ಬ. ೧೦-೩) ; ಫಲಭಾರಶ್ರೀಯ ಸೊಂಪಿಂದೊಲೆವ ಹ[ಪಾಠಾಂ.ಪ]ಲಸುಗಳ್ (ಕುಸುಮಾ. ೧-೮೯) : ಸುಲಭಧಾನಿಯ ಪೋಲ್ತು ಪೆರ್ಗೊನೆಯೊಳು ಕಾತ ಹಲಸಿನ ಮರಗಳೊಪ್ಪಿದುವು (ಮೋಹಕ. ೨೪-೪೬). **ಹಳಸು$_3$:** "ಪನಸ, ಕಂಟಕಿಫಲ ಹಳಸು" (ನಾಚಿರಾ. ೬).

[ದೇ.॥ ತಮಿ. ಪಲವು, ಪಲಾ, ಪಿಲಾ. ಮಲ. ಪಿಲಾವು, ಪ್ಲಾವು. ಕೊತ. ಪಲವ್ ; ತುಳು. ಪಿಲ, ಪಿಲ್ಲ ; ಕೊಡ. ಪಲಚಿ ; ತೆಲು. ಪನಸ.

ಪರ್ಜಿ. ಪೆನಶ್; ಗದಬ. ಪನಿಸ್; ಕುವಿ. ಪರ್ಜ, ಪನ್ಜ./ಸಂ. ಪನಸ, ಪಲಸ, ಫನಸ, ಫಲಸ./ಪ್ರಾ. ಪಣಸ]

ಪಲಸುಗೆ 'ಪಲಸಿಗೆ$_2$' ನೋ.

ಪಲಸುವಣ್ (ನಾ). ಹಲಸಿನ ಹಣ್ಣು : ಒದವಿದ ಪಲಸುವಣ್ ಮೃದಂಗವಾ ಕರ್ಣಕಾರದ ಪೂವೆ ಪೊಂದಾಳವು (ಪದ್ಮರಾ. ೮-೨೪).

[ಪಲಸು+ಪಣ್$_3$]

ಪಲಸೂಳ್, ಪಲವುಸೂಳ್, ಪಲವುಸೂಟ್, ಹಲವುಸೂಳ್(ನಾ). ಅನೇಕ ವೇಳೆ; ಹಲವು ಬಾರಿ : ಭುವನಾಧಿಕರಷ್ಟಗುಣಪಸಿದ್ಧರ ಪದಯುಗಕಾಂ ಪಲಸೂಳೆಜಗುವೆನು(ಜಯಕಾ. ೧-೨). **ಪಲವುಸೂಳ್**: ಬೆನ್ನುಗಳಂ ಪಲವುಸೂಳ್ ಮುರಿಮುರಿದು ಕೊಳುತ (ಬಸಪು. ೫೨-೧೨). **ಪಲವುಸೂಟ್** : ಸರ್ವಜ್ಞರ್ ಬೆಸಸೆ ಪಲವುಸೂಟ್ಗಾಮೆಲ್ಲಂ ಕೇಳ್ದಜುಬೆವು (ಆದಿಪು. ೧೨-೧೦೫ ಪ). **ಹಲವುಸೂಳ್** : ಹಲವು ಸೂಳ್ ಶೀತೋಷ್ಣನಿರ್ಮಳಸಲಿಲದಭಿಷೇಕಂಗಳಿಂ ಕೋಮಳಮಹಾಶಿವ ಲಿಂಗದಂಗಂ ಕಂದುವುದೊ (ಬಸಪು. ೬೫-೧೨).

[ಪಲ$_1$+ಸೂಳ್$_2$(<ಸೂಟ್)]

ಪಲಹಾರ 'ಫಲಾರ' ನೋ.

ಪಲಾಂಡು (ನಾ). ಈರುಳ್ಳಿ; ನೀರುಳ್ಳಿ : "ಉಳ್ಳಿ ಗೃಂಜನಂ ಲಶುನಂ ಲಸೋನಂ ಪಲಾಂಡುವಕ್ಕುಂ" (ಮಂಗರಾ. ೪೧-೬೫); ಪಲಾಂಡುವುಮಿಂಗುಂ ಘನಪಿಂಡಮೂಲಕಂ ಮುನ್ನಿನ ನಿಶೆಯೊಳೊಡರ್ಚಿದಾ ಪದಾರ್ಥಂ ಮತ್ತಂ . . . ಅಗವು ವಿಧಿಯೊಳ್ (ವಿಷ್ಣುಪು. ೩-೬-೧೬೬); ಪಲಾಂಡುವೊಳುಂಟೆ ಪಟೇರಸೌರಭಂ (ವೃಷವಿ. ೧೯-೩೧); ಚಂದದಲಿ ಶಾಕವನು ಮಾಡುವೆವೆಂದು ಸೀಳ್ದಿರಿಸಿದ ಪಲಾಂಡು ಸುಗಂಧವನು ಸೇವಿಸುತ (ಪಲಾಂಡು. ೨). [ಸಂ.]

ಪಲಾನಾ 'ಫಲಾನ' ನೋ.

ಪಲಾನೆ 'ಫಲಾನ' ನೋ.

ಪಲಾನ್ನ (ನಾ). ಮಾಂಸವನ್ನು ಬೆರೆಸಿ ಮಾಡಿದ ಅನ್ನ : ಮೃದು ಪಲಾನ್ನವಿದೊ ಕಮ್ಮಗೆ ಮೂಗನೊಲಿಸುತಿದೆ (ತ್ರೀರಾಮಾ. ೧೫೬-೧೦೬).

[ಪಲ$_3$+ಅನ್ನ$_3$]

ಪಲಾಯನ (ನಾ). ೧. ತಪ್ಪಿಸಿಕೊಂಡು ಓಡಿಹೋಗುವಿಕೆ; ಪರಾರಿ: ಕವಿದನರ್ಜುನನೋಡದಿರು ಕ ರವ ಪಲಾಯನವಳಟಕಟ ಪಾರ್ಥಿವರ ಪಂಥವೆ ಮರೆಗೆ ನಿಂದಿರು ಕೊಲುವುದಿಲ್ಲೆಂದ (ಕುವ್ಯಾವಿ. ೮-೭೫); ಸಾಯ ಬಿದ್ದರ ಬಿಟ್ಟು ಕೆಲರು ಪಲಾಯನಂಗಳ ಹೂಡೆ (ಕೌತಿಕಾ. ೨೦-೬೦). ೨. ಕುದುರೆಯ ಜೀನು.

ಪಲಾಯನಮಂತ್ರ ಜಪಿಸು=ಓಟ ಕೀಳು; ಓಡು : ರಾಜನ ರಣಪರಾಕ್ರಮವನ್ನು ಕಾಣುತ್ತಲೇ ಶತ್ರುಗಳು ಪಲಾಯನಮಂತ್ರ ಜಪಿಸಿದರು (ರೂಢಿ). **ಪಲಾಯನ ಮಾಡು**=ತಪ್ಪಿಸಿಕೊಂಡು ಓಡಿ ಹೋಗು; ಪರಾರಿಯಾಗು : ಅಲೋಚಿಸಿದ್ದ ಉತ್ಕೃಷ್ಟಭಾವಗಳೆಲ್ಲ ಎಲ್ಲಿಗೋ ಪಲಾಯನ ಮಾಡಿದ್ದುವು (ಸಂಟರು. ೩೯); ಹೇಳದೆ ಕೇಳದೆ ಪಲಾಯನ ಮಾಡಿದನು (ಬಂಕಿಮ. ೪೧). **ಪಲಾಯನ ಸೂಕ್ತವನ್ನು ಹೇಳು**=ಪಲಾಯನಮಂತ್ರ ಜಪಿಸು : ಅವರನ್ನು ಸಂತೋಷಗೊಳಿಸುವುದರೊಳಗೆ ನಾನೇ ಪಲಾಯನಸೂಕ್ತವನ್ನು ಹೇಳುವ ಸಂದರ್ಭವು ಮರಳಿ ಬಂದೊದಗಿತು (ರಾಜಾಮ. ೭೯). **ಪಲಾಯನ ಸೂತ್ರ ಪಠಿಸು**= ಪಲಾಯನಮಂತ್ರ ಜಪಿಸು : ಬೆದರಿ ಬಾಣಸಿಗರು ಪಲಾಯನಸೂತ್ರ ಪಠಿಸಿದ್ದಾಗಿತ್ತು (ಕಂಬಹು. ೨೦). [ಸಂ.]

ಪಲಾಯನಗೈ (ಕ್ರಿ). ತಪ್ಪಿಸಿಕೊಂಡು ಓಡಿ ಹೋಗು : ಅನಿಲಗಳು ಪಲಾಯನಗೈಯಲು ಶಕ್ಯವಿಲ್ಲ. ಏಕೆಂದರೆ ಭೂಮಿ ಅವುಗಳನ್ನೆಲ್ಲಾ ತನ್ನ ಕಡೆಗೇ ಬಲವಾಗಿ ಎಳೆದು ಆಕರ್ಷಿಸಿದೆ (ಆಕಾಶ. ೧೯).

[ಪಲಾಯನ+ಗೈ(<ಕೆಯ್$_1$)]

ಪಲಾಯನಪಂಡಿತ (ನಾ). (ಆಲಂ) ಹೇಡಿ : ರಣನಾಟಕ ಪಲಾಯನಪಂಡಿತರು ನೀವೆಂದನಾ ಮಗಧ (ಕುವ್ಯಾಸ. ೨-೮೮).

[ಪಲಾಯನ+ಪಂಡಿತ]

ಪಲಾಯನವಾದ (ನಾ). ಸಮಸ್ಯೆಗಳನ್ನೂ ತೊಂದರೆಗಳನ್ನೂ ಎದುರಿಸದೆ ಅವುಗಳಿಂದ ತಪ್ಪಿಸಿಕೊಳ್ಳಬೇಕೆನ್ನುವ ಸಿದ್ಧಾಂತ: ಇಕ್ಕಟ್ಟಿಗೆ ಸಿಕ್ಕಿದ ವ್ಯಕ್ತಿ ಕೆಲವು ಸಂದರ್ಭಗಳಲ್ಲಿ ಪಲಾಯನವಾದವನ್ನು ಒಪ್ಪಿಕೊಳ್ಳಬೇಕಾಗುತ್ತದೆ (ರೂಢಿ). ℙ ಇದು ಇಂಗ್ಲೀಷಿನ 'Escapism' ಎಂಬ ಶಬ್ದದ ಅನುವಾದ. [ಪಲಾಯನ+ವಾದ$_2$]

ಪಲಾಯನವಾದಿ (ನಾ). ಸಮಸ್ಯೆಗಳನ್ನೂ ತೊಂದರೆಗಳನ್ನೂ ಎದುರಿಸದೆ ಅವುಗಳಿಂದ ತಪ್ಪಿಸಿಕೊಳ್ಳಬೇಕೆನ್ನುವವನು : ಕತೆಗಳಲ್ಲಿ, ಪದ್ಯಗಳಲ್ಲಿ, ಕಲೆಯಲ್ಲಿ ಅರ್ಥ ಸಿಕ್ಕಬಹುದೆಂದು ತಿಳಿಯುವ ಮನುಷ್ಯ ಬೆದ್ದ, ಪಲಾಯನವಾದಿ (ಹೊಸಕ್ಷಿ. ೧೩೧).

[ಸಂ.ಪಲಾಯನವಾದಿನ್]

ಪಲಾಯನಸೂಜಿಕಾಜಿ (ನಾ). (ಆಲಂ) ಹೇಡಿ : ಏಜುವಡೆದವರನು ಪಲಾಯನಸೂಜಿಕಾರರನವರ ದಳದಲಿ ತೋಜಿ ಹೇಳುವರೆನ್ನ ಹವಣೇ (ಕುವ್ಯಾದ್ರೋ. ೧೭-೨೮).

[ಪಲಾಯನ+ಸೂಜಿಕಾಜಿ(<ಸೂಜಿಗಾಜಿ)]

ಪಲಾಯಿಗ 'ಪಳಾಯಿಗ' ನೋ.

ಪಲಾಯಿತ (ನಾ). ತಪ್ಪಿಸಿಕೊಂಡು ಓಡಿಹೋದವನು; ಪರಾರಿಯಾದವನು. [ಸಂ.]

ಪಲಾರ 'ಫಲಾರ' ನೋ.

ಪಲಾಲ, ಪಳಾಳ (ನಾ). ೧. ಹುಲ್ಲು; ತೃಣ : ನಮಗಿದು ಪಲಾಲಭಾರಂಬೊಲೀ ಮಹೀತಲಭಾರಂ (ಆದಿಪು. ೧೪-೩೩). ೨. ಪೈರಿನ ಕಾಂಡ,—ದಂಟು : ತನಯನಂ ಪಡೆಯದೆ ಬಾಳ್ವನ ಸಂಸಾರಮಸಾರಂ ತೆನೆಯಿಲ್ಲದ ನವಪಲಾಲದಂತಿರೆ ಧರೆಯೊಳ್ (ರಾಜಶೇ. ೩-೭೫). ೩. (ಆಲಂ) ನಿಸ್ಸಾರವಾದುದು; ಜೊಳ್ಳು; ಟೊಳ್ಳು : "ಪಲಾಲಃ, ನಿಷ್ಫಲಃ—ಫಲವಿಲ್ಲದ ಹೊಟ್ಟು, ಜಳ್ಳು" (ಸಿದ್ಧಾಂತಿ. ೨೮೦); ಅರಯೆ ಧರ್ಮಮೊಂದೆ ಶರಣೆನ್ನೆ ಪಲಾಲಮನೊಲ್ಲೆನಿನ್ ನಮಸ್ಕಾರಮೆ ಸಾಲ್ಗುಂ (ಪದ್ಮರಾ. ೧೪೩-೨೪); ಪಲರೊಳ್ ಬಜುವಾತುಗಳಂ ಪಲರ್ಮೆ ಬಿತ್ತರಿಸಿ ನುಡಿದು ಮನದೊಳಳುಂಬಂ ನಲಿವನನೇಂ ನರನೆಂಬುದೆ ಪಲಾಲಮೆನವೇಟ್ಟುಮಾತನಂ ಮಾನಸರೊಳ್ (ನೀತಿಮಂ. ೨-೧೫೩). ೪. ಜೊಳ್ಳುಮಾತು; ವ್ಯರ್ಥವಾದ ನುಡಿ : ಬೇಜಕೊಂದು ಪಲಾಲಮಂ ಗಟಿಪಿ ಚಾತುರ್ಯಕ್ಕೆ ಮುಯ್ಯಾಂಪುದೇ (ಸುಕುಮಾ. ೧೦-೧೧೪). **ಪಳಾಳ** : ೧. ಸುತ್ತಿರ್ದ ಪಳಾಳ [ಪಾಠಾಂ.ಲಾಲ]ವರ್ತಿಯಂ ಕಳೆದು ಭಟ್ಟಾರಕರ ಪಾದಮೂಲದೊಳ್ ತಂದಿಕ್ಕುವುದುಂ (ಚಾವುಂಪು. ೩೪೭). ೨. ಪಲವು ಶಾಸ್ತ್ರಂಗಳೊಳಂ ಪಳಾಳಮಂ ಬಿಸುಟು ಸಾರಮಂ ತೆಗೆದು (ಜಾತಕ. ೧-೧೮). ೩. ಒಳಗಟ್ಟಿಯದೆ ಪೊಜಗಟ್ಟಿಯದೆ ಪಳಾಳಮಂ ನುಡಿವ ನಿಮ್ಮ ನುಡಿಗೆಮುಗೀಗಳ್ ಮುಳಿಯಲೆಡೆಯಿಲ್ಲ (ಆದಿಪು. ೯-೧೦೫); ಕುತರ್ಕಾಳಾಪ ಸಂಸ್ಕಾರಮಂ ಪಿಡಿದೇನೆಂದು ಪಳಾಳಮಂ ಗಟಿಪುವೈ (ವರ್ಧಮಾ. ೧೪-೧೪). ೫. ಠಕ್ಕು; ಮೋಸ : "ಪಳಾಳಂ—ಠಕ್ಕು" (ಶಮದ. ಪರಿ. ೨); ಲಲನೆಯರ ಚರಿತಮನಿತುಂ ಪಳಾಳಂ (ಪಾರ್ಶ್ವಪು. ೪-೫); ಆಸೆಯ ಪಳ್ಳೆ ಪಳಾಳದ ವಾಸಂ ಜತ್ತಕದ ಜನ್ಮಭೂಮಿ . . . ಇದೆನೆ ಸೂಳೆಗೇರಿ ಕಕ್ಕಸೆದಿರ್ಕುಂ (ವೀರವಿ. ೬-೯೬). [ಸಂ.]

ಪಲಾವ್, ಪಲಾವು, ಪುಲಾವು (ನಾ). ೧. ಮಾಂಸದ ಅನ್ನ; ಬಿರಿಯಾನಿ. ೨. ತರಕಾರಿ, ಮಸಾಲೆಗಳನ್ನು ಹಾಕಿ ಮಾಡಿದ ಒಂದು ಬಗೆಯ ಭಾತು,-ಅನ್ನ: ಈಚೆಗೆ ಮದುವೆಯ ಮನೆಗಳಲ್ಲಿ ಪಲಾವ್ ಮಾಡಿಸುವುದು ಸಾಧಾರಣವಾಗಿದೆ (ಕೂಡಿ). **ಪಲಾವು**: ೧. ನೀರುಳ್ಳಿ, ಮೆಣಸು ಹಾಕಿದ ಕುರಿಕಾಲಿನ ಸಾರು ಅಥವಾ ಒರಟಾದ ಕುರಿಮಾಂಸದ ತುಂಡು ಸೇರಿದ ಪಲಾವು (ನಗಹೊ. ೨೩೧); ಕರಿಸಿದ್ದನ ಗಬ್ಬದ ಆಡು ಸಾಬರ ಆಡುಗೆಯ ಪಲಾವಿನ ಸಾಸನೆಯಾಗಿ ಪರಿವರ್ತಿತವಾಗಿ . . . ಬಾಯುಮಂಡಲದಲ್ಲಿ ಪಸರಿಸಿತ್ತು (ಮುಲಿಮ. ೪೪೯). **ಪುಲಾವು**: ೧. ಸಾಹೇಬರು . . . ಪುಲಾವು ತಿನ್ನದ ದಿನವಿಲ್ಲ (ಜಾರುದಾ. ೪೫). [←ಪಾರ. ಪಲಾವ್, ಪಿಲಾವ್; ಹಿಂ. ಪುಲಾವ್; ಮರಾ. ಪುಲಾವ್, ಪುಲಾವಾ]

ಪಲಾವು 'ಪಲಾವ್' ನೋ.

ಪಲಾಶ (ನಾ). ೧. ಎಲೆ; ಪತ್ರ: ಪಲಾಶವಾಸನಿಸ್ಪುರಿತಮುರಾಳನೊಂದು ಶಿಶುವಾಗಿರೆ ಬಾಣಾಯಂತೆ ಕಣ್ಣ ದೇಂ ಸುರುಚಿರಮಾಯ್ತೊ ನೀರಜನಿ (ರಾಜಶೇ. ೨-೭೩). ೨. ಮುತ್ತುಗದ ಮರ; ಕಿಂಶುಕ: "ಮುಟ್ಟುಗಮೆನೆ ಪಲಾಶಂ" (ಕವಿಕಂ. ೫೭); ಅದು . . . ವಿವಾಹಗೇಹದಂತೆ ಸಮಿತ್ಕುಶಕುಸುಮಶಿಖಾಪಲಾಶೋಪಶೋಭಿತಮುಂ . . . ಎನಿಪುದು (ಕಾದಂಪೂ. ೧೦೦); ಅರ್ಘ್ಯಪಾತ್ರೀಯಪಲಾಶಕಾಂಡಕುಶಕುಸುಮಹಸ್ತನಪ್ರಶಸ್ತಂ ಕೆಡೆನುಡಿಯೆ (ಪಂಂಪಾಪು. ೬-೧೨೫ ಪ). ೧, ೨: ಮಧುಮಧುಪಾನಪ್ರಮತ್ತಾಟನೀಪಿಂಜರಿತಾಸ್ಯಾಡಂಬರಂ ಪೂತೆಸೆದುದಸದಳಂ ಪ್ರೋತ್ಪಲಾಶಂ ಪಲಾಶಂ (ಅಸಂಪು. ೬-೭೬). ೩. ಮಾಂಸವನ್ನು ತಿನ್ನುವವನು; ರಾಕ್ಷಸ. ೨, ೩: ರಂಜಿಸಿದುದೆಸೆವ ಪೂಗೆಂಪಿನಿಂ ದಕ್ಷಿಣಾಯಾತಮಾರುನ್ನತ್ಪೋತ್ಪಲಾಶಂ ಪ್ರಸವಕೃತಘನಾಳೀ ಪಲಾಶಂ ಪಲಾಶಂ (ಜಗನಿ. ೧೪-೨೪). ೪. ಒಂದು ಬಗೆಯ ಸಸ್ಯ; ಕಾಡುಅರಿಸಿನ; "ವನಹರಿದ್ರಾ" (ಪಂಡಿತ. ೨೪೫). ೫. ಕಾರ; ಕಟು. ೬. ಕಹಿ; ತಿಕ್ತ: "ಪತ್ರಮುಂ ಮುಳುಮುತ್ತುಂ ಕಟು ತಿಕ್ತ ಮೆಂದಿವು ಪಲಾಶಾಖ್ಯಂ" (ನಾನಾರ್ಥ. ೧೪೮). [ಸಂ.]

ಪಲಾಶಪರ್ಣ (ನಾ). ಮುತ್ತುಗದ ಎಲೆ: ಪಲಾಶಪರ್ಣವೆ ಪಾತ್ರ ಭೋಜನ ಕಂದಮೂಲಫಲ (ಕುಪ್ಯಾಪ. ೧೬-೧೭).

[ಪಲಾಶ+ಪರ್ಣ]

ಪಲಾಶಪತ್ರ (ನಾ). = ಪಲಾಶಪರ್ಣ: ಪಲಾಶಪತ್ರದೊಳ್ ದವನದ ನಿಡುಪೂವುಮಂ ಮರುಗದ ಕುಡಿಯುಮುಂ . . . ತಂದು ಮುಂದಿಟುಪಿ (ಪುಲ್ಲಿಪು. ೫-೪೯). [ಪಲಾಶ+ಪತ್ರ]

ಪಲಾಶವೃಕ್ಷ (ನಾ). = ಪಲಾಶ ೨: "ಮುಟ್ಟುಗಮೆಂದು ಪಲಾಶವೃಕ್ಷಂ" (ಕಶಸಾ. ೫೦-೬೨). [ಪಲಾಶ+ವೃಕ್ಷ]

ಪಲಾಶವೃತ್ತಿ (ನಾ). ೧. (ಎಲೆಗಳಿಂದ) ಹೆಸರಾಗಿರುವಿಕೆ. ೨. ರಾಕ್ಷಸರ ವರ್ತನೆ. ೧, ೨: ಮಧುಪಾನಪ್ರವೃತ್ತಿಯೆಂಬುದು ತುಂಬಿಗಳೊಳ್ ಪ[ಲಾ][ಪಾಂಂ.ರಾ]ಶವೃತ್ತಿಯೆಂಬುದರಣ್ಯಂಗಳೊಳ್ ವರ್ಣಸಂಕರಮೆಂಬುದು ಚಿತ್ರಕರ್ಮಂಗಳೊಳಲ್ಲದೆ ಪೆಬರೆಡೆಯೊಳಿಲ್ಲ (ಪಧರಮಾ. ೧-೪೫ ಪ). [ಪಲಾಶ+ವೃತ್ತಿ]

ಪಲಾಶಶಾಲೆ (ನಾ). ಎಲೆಮನೆ; ಪರ್ಣಕುಟಿ: ಬಹುದಿವಸಂಗಳನು ನೂಕಿದನು ಸ್ವಪತಿ ಪಲಾಶಶಾಲೆಯಲಿ (ಕುಪ್ಯಾಅ. ೨೩-೪).

[ಪಲಾಶ+ಶಾಲೆ]

ಪಲಾಶಿ (ನಾ). ೧. ಎಲೆಗಳುಳ್ಳದು; ಮರ: "ವೃಕ್ಷ: . . . ಪಲಾಶೀ, ದ್ರುಃ, ದ್ರುಮಃ, ಅಗಮಃ—೧೩ ವೃಕ್ಷಗಳ ಹೆಸರುಗಳು" (ಸಿದ್ಧಾಂತಿ. ೧೫೧). ೨. ಒಂದು ಬಗೆಯ ಬಳ್ಳಿ. ೩. ಒಂದು ಬಗೆಯ ಮರ; ಅಮಟೆ: "ಪಲಾಶಿಕಾ, ಪಲಾಶೀ-ಈಯೆರಡುಂ ಅಂಬಟೆ" (ಓಷಧಿ. ೯೨). [ಸಂ.ಪಲಾಶಿನ್]

ಪಲಾಸಿ, ಫಲಾಸಿ (ನಾ). ೧. ಒಂದು ಬಗೆಯ ಸಸ್ಯ: "ವಲ್ಲ ಪತ್ರೀ-ಪಲಾಸಿ" (ಓಷಧಿ. ೧೪೮). **ಫಲಾಸಿ**: ೧. "ಖುರುಬರ್ಣ-ಫಲಾಸಿ, ಎತ್ತುನಾಲಗೆ" (ಓಷಧಿ. ೪೪). ೨. ಒಂದು ಬಗೆಯ ಮರ; ಅಮಟೆ; ಅಂಬಟೆ: "ಅಮ್ಲೋತಃ—ಫಲಾಸಿ, ಅಂಬಟೆ" (ಓಷಧಿ. ೧೧). [<ಪಲಾಶಿ]

ಪಲಿಕನಿ, ಪಲ್ಕನಿ (ನಾ). ನರೆತ ಕೂದಲುಳ್ಳವಳು; ಮುದುಕಿ; ವೃದ್ಧೆ: ಉರದ ತೋಱದೆ ನೆರೆವ ಪಲಿಕನಿಯ ಪ್ರೌಢತೆಗೆ ನಗುತ ಜೋಪ್ಕಂಬಟ್ಟನು (ಪ್ರಭುಪು. ೪-೧೪೬). **ಪಲ್ಕನಿ**: ಬಹು ಗಾದೆವಾತಂ ಕಲಿತ ಪಲ್ಕನಿಯು ಶುಕನಂತೆ ನುಡಿಯುಂಟು ನಡೆಯಿಲ್ಲದೆ (ಪ್ರಭುಪು. ೬-೧೦೫). [<ಸಂ.ಪಲಿಕ್ನೀ]

ಪಲಿಕ್ನಿ (ನಾ). ೧. = ಪಲಿಕನಿ: "ವೃದ್ಧಾ, ಪಲಿಕ್ನೀ-೩ ಮುಂದಿಕಿಯ ಹೆಸರುಗಳು" (ಸಿದ್ಧಾಂತಿ. ೧೬೦). ೨. ಹೊಚ್ಚಲುಗಬ್ಬದ ಹಸು: "ಪಲ್ಕನೀ (ಪಲಿಕ್ನೀ), ಬಾಲಗರ್ಭಿಣೀ-ಈ ೩ ಎಳೆದನೆಯೂವು" (ಹಲಾಯು. ೪೬-೧೧೪). [ಸಂ.ಪಲಿಕ್ನೀ]

ಪಲಿತ, ಪಳಿತ (ಗು). ೧. (ಕೂದಲು) ಬೆಳ್ಳಗಾದ; ನರೆತ: ಪಲವು ದುರ್ಮಾರ್ಗರಳ್ಕಸಿಯರುಂ ಗುಮಿಗೂಡಿ ಪಲಿತಕೇಶಗಳ ಕೆಂಗುರುಳ್ಗಳ ಕೆಪರ್ದೆಯೆಂ ಶತವಿಕಾರಗಳ ತೋರಿ . . . ಕಳ್ಕುಲಿತೆಗೊಳಿಸಿದರ್ (ನೆಂಕಾರಾ. ೫-೧೦-೧). ೨. ಮುಪ್ಪಾದ; ವಯಸ್ಸಾದ: "ಪಲಿತ ಕಾಯ' ಪರಾ. (ನಾ). ೩. ಬಿಳಿಯ ಕೂದಲು; ನರೆ: "ಜರೆ ಪಲಿತಮೆನೆ ನರೆ" (ಪುಂಗರಾ. ೯೫-೬); ಗರುಗಂ ಫಲತ್ರಯಂ . . . ನಾರ ನಾಳದೊಳರೆದಿಂದಿನೆ ಪೂಸೆ ಪಲಿತ ನಿರ್ಘಯಮಕ್ಕುಂ (ಲೋಕೋಪ. ೯-೪೯); ಬಾಲನೆಂಬೆನೆ ಮೇಲೆ ಪಲಿತದ ಬೀಡು ಬಿಟ್ಟಿದೆ ಪಲಿತ ತನುವಿನಲಿ (ಕುಪ್ಯಾಕ. ೫-೨೧). ೪. ಮುಪ್ಪು; ವೃದ್ಧಾಪ್ಯ: ವಶ್ಯ ಕುಟಿಲಾರಾಧನಂ ವಲಿತ ಪಲಿತನಾಶಂ ಕಾಲವಂಚನಾಳ್ಯಾಸಯೋಗಂ . . . ಬಯಸುವ ವಿಕಾರಿಸಿದ್ಧರು ಸರಿಯೆ ಸಿದ್ಧರಾಮಂಗೆ (ಸಿದ್ಧರಾ. ೧-೯). **ಪಲಿತ**: ೩. ನಿಜಪಲಿತದರ್ಶನೋತ್ಪನ್ನವೈರಾಗ್ಯಕೀರ್ತಿಗೆ ರಾಜ್ಯಮುಂ ಕೊಟ್ಟು . . . ನಿರ್ವಾಣಕ್ಕೆ ನಂದಂ (ಜಾವುಂಪು. ೬೫); ಅಂತಿದಿರ್ದ ಜರಾಂಗನಾದೂತಿ ಲಲಿತಮುಂ ಪೊತ್ತಿರ್ದ ಪಲಿತಮುಂ ಕಂಡು (ಪಧರಮಾ. ೧೦-೬ ಪ). ೫. [ಜೈನ] ಒಂದು ಕಾಲಮಾನ: ಅಪಮೃತ್ಯುವಿರಹಿತಂ ಮೂಱು ಪಲಿತಮಸಯುಷ್ಕಮುದ್ದಮಜುಸಾಸರ ಬಿಲ್ಲಪಸಾರಿತ ಮಲ ಮೂತ್ರಾದಿ ಪರೀಷಹದೋಷಮಪಥನಂ ದಂಪತಿಯಾ (ಸಂಂಾಮಾ. ೧-೬೨); ವರ್ಗಗಳೊಂದೊಂದುವೆರದು ಮೂಱು ಪಲಿತೋಪಮಂ ಬಾಳ್ವರಾ ಭೂಮಿಗಳು (ರತ್ನಕ. ೨-೬ ಪ).

[ಸಂ.]

ಪಲಿತಕಾಯ (ನಾ). ಮುದಿಯಾದ ದೇಹ; ವಯಸ್ಸಾದ ಶರೀರ: ಪಲಿತಕಾಯಕುರೂಪಿಯನು . . . ನಲಿಸುವುದಿಳೆಯೊಳಗ್ಗದ ಜಾಣರಾದ ವರರಸ ಕೇಳು (ಕುಪ್ಯಾಳು. ೬೦೫. ೬-೧೬). [ಪಲಿತ+ಕಾಯ]

ಪಲಿತಶ್ಮಶ್ರು, ಪಳಿತಶ್ಮಶ್ರು (ನಾ). ನರೆತ ಮೀಸೆ; ಬೆಳ್ಳಗಾದ ಮೀಸೆ: ಪಿಷ್ಟಾತಕಚೂರ್ಣಸಂಜಾತ ಪಿಂಜರವರ್ಣ ಪಲಿತಶ್ಮಶ್ರು ಕೂರ್ಚೋಪಶೋಭಿ ವೃದ್ಧ ಕಂಚುಕಿಸಂಜಯಮುಂ (ಚಂದ್ರಪ್ರ. ೬-೧೬ ಪ). **ಪಲಿತಶ್ಮಶ್ರು**: ಪಳಿತಶ್ಮಶ್ರುಮಹೋಚ್ಚಕೂರ್ಚವದನಂ (ಕುಸುಮಾ. ೧೧-೬). [ಪಲಿತ+ಶ್ಮಶ್ರು]

ಪಲಿತಾಂಕುರ, ಪಳಿತಾಂಕುರ (ನಾ). ನರೆತ ಕೂದಲು: ಧರಣೀಶಸುತಂ ಪಲಿತಾಂಕುರವಿಲ್ಲದ ವೃದ್ಧನಂದದಿಂದಾಚರಿಸಂ

(ಚಂದ್ರಪು. ೨-೨೦). **ಪಳಿತಾಂಕುರ :** ಕುಬೇರಸೆಟ್ಟಿಯ (ಧನಮಿತ್ರ) ಶಿರೋರುಹದೊಳ್ ಪಳಿತಾಂಕುರಮುಂ ಧನವತಿ ಕಂಡು ನಿಮಗೆ ಬಟಿ ಒಂದುದೆಂದು ಸಗುತುಂ ತೋಱಿದೊಡೆ (ಶಾಮಂಪು. ೬೧).

[ಪಲಿತ+ಅಂಕುರ]

ಪಲಿತೌಷಧ (ನಾ). ಬಿಳಿಯ ಕೂದಲನ್ನು ಕಪ್ಪಾಗಿ ಮಾಡುವ ಔಷಧಿ : ಇದು ಚೋರರದೃಶ್ಯಾಂಜನಮಿದು ವೃದ್ಧಾಂಗನೆಯರೆಸೆವ ಪಲಿತೌಷಧಮಿಂತಿದು ಕಾಮನ ಕಾರಲಗೆಸಿದುದು . . . ಅಂಧಕಾರ ಮಪಾರಂ (ಚಂದ್ರಪು. ೮-೨೦). [ಪಲಿತ+ಔಷಧ]

ಪಲಿಪಜಿ (ನಾ). ಒಬ್ಬಾತನ ಹೆಸರು : ಸನ್ದವಿಲ್ಮುಡಿಯರಾ ಮಗನ್ ಪಲಿಪಜಿ ಎಱಿದು ಸ್ವರ್ಗ್ಗಾಲಯಕ್ಕೇಱಿದೊನ್ (ಎಇ. IX, ೨೦-೮; 800). [?]

ಪಲಿಯಿಸು, ಪಳಿಸು (ಕ್ರಿ). ಫಲ ತೋರು ; ಪರಿಣಾಮ ಕಂಡು ಬರು : ಪಲತೆಱದಿಂದೆ ವೃಕ್ಷವಿಕೃತಂ ದೊರೆಕೊಂಡೊಡೆ ಪತ್ತು ತಿಂಗಳೊಳ್ ಪಲಿಯಿಕುಮಾ ಮಹೀರುಹಕೆ ಸತ್ತಿಗೆಯಂ ಪಿಡಿದಲ್ಲಿ ರುದ್ರನಂ ನಿಲಿಸಿ ಯಥೋಕ್ತಮರ್ಚಿಸಿ . . . ಕೆಯ್ಯನೊಸೆದಿತ್ತೊಡೆ ಪಿಂಗುಗುಮಾ ಮಹಾದ್ಭುತಂ (ಲೋಕೋಪ. ೪-೫೫). **ಪಳಿಸು :** ಬಳೆಗುಂ ಸಂತಸ ಮುಣ್ಮುಗುಂ ಬಗೆಯರಲ್ಗುಂ ಪ್ರಜ್ಞೆ ಸಲ್ಗುಂ ವಚಂ ಪಳಿಕುಂ ಗೈಮೆ (ಚಿಕವಿ. ೫-೧೦೬). [<ಫಲಿಸು]

ಪಲು 'ಪಲ್' ನೋ.

ಪಲುಂಬು, ಪಲಂಬು, ಪಲಬು, ಪಲುಬು, ಪಲ್ವು, ಹಲಬು, ಹಲುಂಬು, ಹಲುಬು (ಕ್ರಿ). ೧. ದುಃಖವನ್ನು ಹೇಳಿಕೊಳ್ಳು, ತೋಡಿಕೊಳ್ಳು ; ಪ್ರಲಾಪಿಸು : ತನ್ನ ಪ್ರಾಣವಲ್ಲಭೆಯೊಡನಿರ್ದಂದಿನ ಮುಳಿಸೊಸಗೆಗಳಂ ನೆನೆದು . . . ತನ್ನೊಳ್ ಪಲುಂ[ಪಾಠಾಂ. ಲಂ]ಬು ತಿರ್ದನಂ ಕಂಡು (ಪಂಪಭಾ. ೪-೧೦೭ ವ) ; ಕನವರಿಸುವ ಗೋಬ್ಬಿಱಿದಟ್ಟ ಪಲುಂ[ಪಾಠಾಂ.ಲಂ]ಬುವ ನುಡಿ ವಿರಸಮುಪಶ್ರುತಿಯೊಳೀಯ ವೆಂತುಂ ಫಲಮಂ (ಲೋಕೋಪ. ೧೨-೫೪) ; ಆರಿಗೆ ಪೇಳ್ವೆನಾರಿಗೆ ಪಲುಂಬುವೆನಾರಿಗೆ ತೋರ್ಪೆನೆನ್ನ ಸಂಸಾರದುರಾಪ್ತದುಃಖಭಯಮಂ (ಶತಕ. ೩-೨೩). ೨. ದುಃಖಪಡು; ಅಳು; ರೋದಿಸು: ಸಂಗನಂ ತಕ್ಕೈಸಿ ಪಳವಿಸಿ ಪಲುಂಬಿ ಗೋಳಿಟ್ಟು ಅಲಿಟ್ಟು ಶಿಪದಿಟ್ಟು (ಒಸರ. ೪-೩೯) ; ಕಂಬನಿಬಿಡುತೆಯ್ದಿ ಕಾಲ ಮೇಲ್ಕೆಡೆದು ಪಲುಂಬಿದರು (ಭರಚ. ೭೧-೭೯). **ಪಲಂಬು :** ೨. ಮರುಳಾದಂತೆ ಮಲ್ಲಣಿ ಮಲ್ಲಣಿಯೆಂದು ಪಲಂಬುತ್ತುಮಿರ್ಪಾ ಮಲ್ಲಣನ ಮೃದುದೈನ್ಯೋಕ್ತಿಗಳಂ ಕೇಳ್ದು (ಉದ್ಭಟ. ೧೨-೫೭ ವ) ; ಏಕೆ . ಚಿಂತಿಸುವರೇಕೆ ಪಲಂಬುವರೇಕೆ ನೋವರೋ (ಕಾವ್ಯಸಾ. ೧೧೨೫). **ಪಲಬು :** ೨. ಪಲಬಗೆಯೊಳು ಪಲಬುತಿನ್ನೇದಾರಿವಿಡಿದೆಂತಿಹಳೊ (ಕರ್ಣಾವ್ಯ. ೨-೧೯). **ಪಲುಬು :** ೧. ವಿರಹದೆ ಪಲುಬುವಳಳುವಳು ಮುಂದುಗೆಡುವಳು (ಕಂಸವಿ. ೯-೨೦೫). ೨. ಮಾರನ ಪೂಗೋಲು ತಾಗಿತೆಂದದೆಗೆಟ್ಟ ನಾರಿ ಹಮ್ಮೈಪಳು ಪಲುಬಿ (ವರ್ಧಚ. ೫-೧೫). **ಪಲ್ವು :** ೧. ಪಲ್ವಿದರ್ ಸೌಶರ್ಮ ಚಿತ್ರಾಂಗದನ ರಣದಿ ಗೆಲ್ವ ಪ್ರತಾಪರಾಶ್ಚರಿಯೇನೊ . . . ಎಂದು ಖಚರೇಂದ್ರ ಮರುಗೆ (ಜಿನಮು. ೨೭-೪). **ಹಲಬು :** ೨. ಹವಳದ ಮುಡಿಯ ಮ್ಯಾಲೆ ಹುಲ್ಲಿನ ಹೊರಿ ಹೊರಿಸಿ ಹಲಬುವ ತನಕ ಬಿಡಬಾರದ (ಕನ್ನಜಾ. ೩೫೬). **ಹಲುಂಬು :** ೨. ಹಳವಿಸಿ ಹಲುಂಬುತ್ತೆ ಪಾತ್ರೆಯಂ ಕರೆಪುತಂ ಇರೆ ಕಂಡು (ತಿರುರ. ದೇ. ೧೯-೫). **ಹಲುಬು:** ೧. ಒಳಗೊಳಗೆ ಮುಗನ ಗುಣಮಂ ಹಲುಬುತಿರಲು ಬೈದಪಳೆಂಬರು (ಹಚಕಾ. ೧೨-೧೨). ೨. ಹಂಬಲಿಸಿ ಹಲುಬಿ ಘನತಾಪ ಮನಮಂ ನಟ್ಟು ನೊಂದು (ಒಸರ. ೧೧-೭೮) ; ಬಾ ಮಗನೆ ಮೊಗದೋಱಿನುತ ಹಲುಬಿದನು ಕಲಿ ಪಾರ್ಥ (ಕುಮ್ಯಾದ್ರೋ. ೮ ಸೂಚನೆ); ಹಿಂದುವನ್ನು ಹಿಂದು ರಕ್ಷಿಸದಿದ್ದರೆ ಮತ್ತಾರು ರಕ್ಷಿಸಬೇಕೆಂದು ಹಲುಬಿದಳು (ಬಂಕಿಮ. ೩೦೧).

ಪಲುಂಬಿ ಪಂಬಲಿಸು, ಹಲಬಿ ಹಂಬಲಿಸು = ದುಃಖವನ್ನು ತೋಡಿಕೊಂಡು ಅಳು ; ಪ್ರಲಾಪಿಸು : ಕಿಱಿದುಂ ಬೇಗಮಱಿ ಮರುಳಂತು ಪಲುಂಬಿ ಪಂಬಲಿಸಿ (ಪಂಪಭಾ. ೪-೭೪ ವ) ; ಮನದೊಳ್ ಚಿಂತಿಸಿ ಪಲುಂಬಿ ಪಂಬಲಿಸದೆ (ಧರ್ಮಾಮೃ. ೩-೨೧೭) ; ಅನ್ನಾಹಾರಗಳನು ತೊರೆದು ಹಲಬಿ ಹಂಬಲಿಸಿದನು (ದೌಲತ್. ೪೭೯).

[ದೇ.॥ ತಮಿ. ಪುಲಮ್ಬು ; ಮಲ. ಪುಲಮ್ಬು ; ತುಳು. ಪಲಂಬು ; ತೆಲು. ಪಲುಮು, ಪಲವು]

ಪಲುಕಿಸು (ಕ್ರಿ). ಧ್ವನಿಯನ್ನು ಬಳುಕಿಸು : ಇಲ್ಲಿ "ತ" ಎಂಬುದನ್ನು ಮೂರು ಮಾತ್ರೆಯ ಕಾಲಕ್ಕೆ ಎಳೆದು ಪಲುಕಿಸುವುದರಲ್ಲೇ ತಲ್ಲಣದ ನಡುಕವೂ ಸೂಚಿತವಾಗುತ್ತದೆ (ಸಮಾಲೋ. ೨೦೫).

[ಪಲುಕು$_1$+-ಇಸು$_3$]

ಪಲುಕು$_1$ (ಕ್ರಿ). ೧. ಮಾತನಾಡು ; ನುಡಿ : ನಿಜವನ್ನು ಪಲುಕವ್ವ ಕನ್ಯೆಕುಮಾರಿ (ಅದೂಟ. ೨೦). ೨. (ಧ್ವನಿಯು) ಬಳುಕು; ಮಿಡಿ : ವೀಣೆಯ ಪಲುಕು ಪಲುಕಿದಂತಾಯಿತು (ಎಳೆಕ. ೬೫). ೩. ಹಾಡು ಹೇಳು ; ಗುಣುಗುಣಿಸು : ಮೆಲುದನಿಯಲ್ಲಿ ಚೋಳ ಕನ್ನೆಯರ ಭಂಗವನು ಪಲುಕಿದರಿವಳು ಮಲಗುವಂಥವಳೆ, ಈ ಮಾಯಾಂಗನೆ? (ದೀಪಮ. ೨೩-೧೨). ೪. (ಆಲಂ) ಅಪಶಕುನವನ್ನು ನುಡಿ : ಒಳ್ಳೆಯ ಕೆಲಸಕ್ಕೆ ಹೊರಟಿರುವಾಗ ಏನಾದರೂ ಪಲುಕಬೇಡ (ರೂಢಿ).

[ದೇ.॥ ತಮಿ. ಪಲುಕ್ಕು ; ತೆಲು. ಪಲುಕು, ಪಲ್ಕು]

ಪಲುಕು$_2$, ಪಲಕು (ನಾ). ೧. [ಸಂಗೀತ] (ಧ್ವನಿಯ) ಬಳುಕು ; ಮಿಡಿತ ; ಕಂಪನ : ಮಿಂಚಿನಂತೆ ಹೊಳೆಯುವ ಸ್ವರ ತಿರುವುಗಳೂ, ಪಲುಕುಗಳೂ . . . ಮೆಚ್ಚುಗೆಯನ್ನು ತಂದುಕೊಟ್ಟುವು (ಸಂಗೀತ. ೧೨೦) ; ನಿಮ್ಮ ಶಾರೀರದಲ್ಲಿ ಪಲುಕಿಲ್ಲ (ರಾಮಾನೆ. ೯೩) ; ಅವನು . . . ಹಾಡಿನ ಪಲುಕುಗಳನ್ನು ಕೂಡ ತಪ್ಪುತ್ತಿರಲಿಲ್ಲ (ಅಲಹೂ. ೭೧). ೨. (ಆಲಂ) ಧ್ವನಿಯಿಂದ ಕೂಡಿದ ರಚನೆ; ಅಂತರಾರ್ಥ ಕಲ್ಪನೆ : ಜನಪದಸಾಹಿತ್ಯದ ಒಂದೊಂದು ಪಲುಕೂ ಈ ದೃಷ್ಟಿಯಿಂದ ಭಾವಗೀತೆಯೇ (ಅನುಕ. ೩೭). **ಪಲಕು:** ೧. ರಾಜನ . . . ಸತತ ಅಭ್ಯಾಸದಿಂದ ಪಲಕುಗಳು, ನೆರವಲಗಳು ಲೀಲಾಜಾಲವಾಗಿ ನುಡಿಯುತ್ತಿದ್ದವು (ನಟಸಾ. ೫೯).

[<ಪಲುಕು$_1$/ತೆಲು. ಪಲುಕು, ಪಲ್ಕು]

ಪಲುಗಿರಿ 'ಪಲ್ಗಿರಿ' ನೋ.

ಪಲುಗುಣ, ಪಲ್ಗುಣ, ಫಲುಗುಣ, ಫಲ್ಗುಣ (ನಾ). ಪಾಂಡವರಲ್ಲಿ ಮೂರನೆಯವನು : ಅರ್ಜುನ : ಫಕಾರಕ್ಕೆ ಪಕಾರಂ . . . ಫಲ್ಗುನ-ಪಲುಗುಣ (ಶಮದ. ೨೫೫ ಪ್ರಯೋ). **ಪಲ್ಗುಣ :** ನೀಲ ಧ್ವಜಂ ತಾನೆ ತುಱುಗಿದಗ್ಗದ ಸಕಲಬಲಸಹಿತ ನೂಕಿದಂ ಪಲ್ಗು[ಪಾಠಾಂ. ಫಲುಗು, ಫಲ್ಗು]ಣನ ಪಡೆಯ ಮೇಲೆ (ಚೈಮಿಭಾ. ೮-೩೬). **ಫಲುಗುಣ :** ಹಿಡಿವೆನಾಗಳೆ ಧರ್ಮನಂದನನ ಬಂದು ಫಲುಗುಣನಡ್ಡ ವಿಸಲಿ (ಕುಮ್ಯಾದ್ರೋ. ೧-೬೫). **ಫಲ್ಗುಣ :** ನೆನೆಯದೆ ಕಜ್ಜದ ಬಿಣ್ಪಂ ಮುನಿವಯ್ ನೀನೊರ್ವನೆಂಬ ಹರಿಗಮಸಾಧ್ಯಂ ಮನುಜಪ್ರಾಕಾರಾಂಕನೊಳಿನಿಬರುಮೊಂದಾಗಿ ತಾಗುವಂ ಫಲ್ಗುಣನೊಳ್ (ಕಾವ್ಯಾನ. ೪೦೪).

[<ಸಂ.ಫಲ್ಗುನ]

ಪಲುಬಿ, ಹಲುಬಿ (ನಾ). ನವಿಲು ; ಮಯೂರ : ಪುಲಿಯ

ಚರ್ಮದ ಪಲುಬಿಯ ಗಜುಯ ತೋಳ ಕಚ್ಚಳಿಯ ಕೊಂಗಲ್ಗಂಟೆಯ . . . ಪಲ ಬಿರುದುಗಳ್ನೆಗಳ್ತೆವಡೆಯೆ (ರಾಜಶೇ. ೩-೧೧ ಪ). **ಹಲುಬಿ:** ಹಲುಬಿಯ ಗಜುಯ ಮುಸ್ತಕದೊಳಗಿರದಾಂತು (ಜ್ಞಾನಚಿ. ೨೩-೫೮). P ಇದು ಸಂಸ್ಕೃತದ 'ಕೇಕಿ' ಎಂಬುದರ ಅನುವಾದ.

[ಪಲುಬು(<ಪಲುಂಬು)+-ಇ$_3$]

ಪಲುಬು 'ಪಲುಂಬು' ನೋ.

ಪಲುಮ್ಮಗ 'ಪಲ್ಮೃಗ' ನೋ.

ಪಲುವೊರೆ 'ಪಲ್ಮೊರೆ' ನೋ.

ಪಲುಸುಲಿ 'ಪಲ್ಸುಲಿ' ನೋ.

ಪಲೆಗ (ನಾ). (?) : ಆಪ್ಪಯ ಸೆಟ್ಟಯ ಮಕನಗಜವಮುಮನ ಪಲೆಗ ಬೀರನೊಟಂಬನ ರಾಜ್ಯದೊಳ್ ತುಜುಗೊಳ್ ಕಾದಿ ಸತ್ತ (ಎಕ. X, ಗೋರೇಬಿ. ೮೫-೩ ; ಸು. 920). [?]

ಪಲ್ಕಡಿ 'ಪಲ್ಗಡಿ' ನೋ.

ಪಲ್ಕಿನಿ 'ಪಲಿಕಿನಿ' ನೋ.

ಪಲ್ಕಿರಿ 'ಪಲ್ಗಿರಿ' ನೋ.

ಪಲ್ಗಚ್ಚು 'ಪಲ್ಗರ್ಚು$_1$' ನೋ.

ಪಲ್ಗಡಿ, ಪಲ್ಕಡಿ, ಹಲುಕಡಿ$_1$, ಹಲ್ಕಡಿ$_1$, ಹಲ್ಗಡಿ, ಹಲ್ಲುಕಡಿ (ಕ್ರಿ). ೧. (ಆಕ್ರೋಶ ಇತ್ಯಾದಿಗಳಿಂದ) ಹಲ್ಲನ್ನು ಕಚ್ಚು ; ಹಲ್ಲು ಮಸೆ : ಉಗ್ರಕೋಪದಿಂ ಪಿರ್ದನೇ ತನ್ನ ನೇಮವನಕಟ ಮಗನೆಂದು ಪಲ್ಗಡಿಯುತ್ತೆತರಲ್ಕೆ (ಜೈಮಿಭಾ. ೩೧-೩೦). **ಪಲ್ಗಡಿ :** ೧. ಪೇನಂತೆ ತಲೆಯಂ ಪತ್ತಿ ಪಲ್ಗಡಿವರ್ (ಧರ್ಮಾಮೃ. ೩-೭೩). **ಹಲುಕಡಿ$_1$:** ೧. ಅ ಖಳತರುಣಿ . . . ಝಗಝಗನೆ ಹಲುಕಡಿದು [ಪಾಠಾಂ. ಹಲುದಿನುತ] . . . ಝುಡಿದಿಟ್ಟಳಿನಕುಲನ (ತೊರರಾ. ೧-೧೦-೧೫). **ಹಲ್ಕಡಿ$_1$:** ೧. ಅವರು ಸೇವಕನ ಉದ್ಧಟತನವನ್ನು ಕಂಡು ಹಲ್ಕಡಿದರು (ರೂಢಿ). **ಹಲ್ಗಡಿ:** ೧. ಖಡಖಡನೆ ಹಲ್ಗಡಿಯುತಲಿ . . . ಆಡವಿಯಲ್ಲಾರ್ಘಟ ಮಾಡಿದಳು (ಕರ್ನಾಕಾ. ೨೯೩). ೨. (ಚಳಿಯಿಂದ) ಹಲ್ಲು ಸಾಲು ಒಂದಕ್ಕೊಂದು ತಾಕುವಂತೆ ನಡುಗು : ಚಳಿಯಿಂದ ಹಲ್ಗಡಿದು ನಡುಗಿ ಗಡಗಡನೆ (ಕಾಲೂರ. ೭೭-೧೪೩). **ಹಲ್ಲುಕಡಿ :** ೧. ಪ್ರೀಚರನು . . . ಹಲ್ಲುಕಡಿಯುತ್ತ ನುಡಿದನು (ಮಹಾತ್ಮ. ೯೪). [ಪಲ್+ಕಡಿ$_1$]

ಪಲ್ಗದಿರ್ (ನಾ). ಹಲ್ಲಿನ ಕಾಂತಿ,-ಹೊಳಪು : ಭರದೆ ನುಡಿದಂ ಶಿಶುವಿನೊಡನೆ ಪಲ್ಗದಿರ್ಗೂಡಿ ದರಹಾಸಮುಣ್ಮುತಿರಲಾ (ಅರಾಚ. ೨-೧೧-೩೨). [ಪಲ್+ಕದಿರ್$_2$]

ಪಲ್ಗರ್ಚು$_1$, ಪಲ್ಗಚ್ಚು, ಹಲ್ಲುಕಚ್ಚು (ಕ್ರಿ). ೧. = ಪಲ್ಗಡಿ ೧. ೨. ಕೋಪವನ್ನು ಸಹಿಸಿಕೊಳ್ಳು,—ತಾಳಿಕೊಳ್ಳು : ಪಲವುಂ ಸೂಟುಲಿದು ಪಲ್ಗರ್ಚ ಕಲ್ಲಸರದಿಂ ಸಿಲ್ಕುವಳಿದು ಮಾಣ್ಬುದುಂ (ಪಂಚತಂ. ೧೨೭-೧೨). **ಪಲ್ಗಚ್ಚು :** ೧. ಚಾಗಕ್ಕೆ ಮುಯ್ಯಾಂಪರೀವಡೆ ಪಲ್ಗಚ್ಚುವರ್ (ಎಕ II, ೧೩೩-೬೮ ; 982). ೨. ಕಾಲ್ಗೆ ಬೀಳುತುಂ ಪಲ್ಗಚ್ಚ ದೈನ್ಯವಚನಂಗಳಿಂದೆ . . . ಉಸಿರಿ ಮೈಗರೆವುತಿರ್ದರ್ (ಚಿಬಪು. ೨೪-೨೩). **ಹಲ್ಲುಕಚ್ಚು :** ೧. ಇದಕ್ಕೆ ಪ್ರತಿಫಲ ಕೊಡದಿರಲಾರೆನೆಂದು ಹಲ್ಲುಕಚ್ಚಿದನು (ಕಾಲೂರ. ೯ ಕಥಾಸಾರ).

ಪಲ್ಗರ್ಚಿ ಸೈರಿಸು = ಬಾಯಿ ಮುಚ್ಚಿಕೊಂಡು ಸಹಿಸಿಕೊಳ್ಳು,-ತಾಳಿಕೊಳ್ಳು ; ತೆಪ್ಪಗಿರು : ಪಸುವಂ ಮೋದುವವೋಲೆ ಮೋದೆಯುಮದುಂ ಕಂಡಂತೆ ಪಲ್ಗರ್ಚ ಸೈರಿಸಿದಂ ನಿನ್ನಯ ನನ್ನಗಿನ್ನೆವರಂ (ಪಂಪಭಾ. ೬-೫೮). ಹಲ್ಲುಕಚ್ಚಿಕೊಂಡಿರು = ಸುಮ್ಮನೆ ಸಹಿಸಿಕೊಂಡಿರು : ಒಂದು ಕಡೆ ಹಲ್ಲುಕಚ್ಚಿಕೊಂಡಿರೋಕೆ ಅವಳ ಕೈಯಿಂದ ಆಗೊಲ್ಲ (ಕಸಾಸಂ. ೨೦). [ಪಲ್+ಕರ್ಚು$_1$]

ಪಲ್ಗರ್ಚು$_2$ (ನಾ). = ಪಲ್ಗಲೆ ೧: ರಿಂಕಿದ ಕುಚ ತೋಳುಗಳ ಗಲ್ಲದೆಡೆಯ ನಖಾಕಿಂತ ಪಲ್ಗರ್ಚದುವೇ ಸೋಂಕಿದ ಖೂಳನದಾವನೊ ತೋಜಿಂದು ಝುಂಕಿಸಿದಳು ತಾಯಿ ಮಗಳ (ಮೋಹತ. ೧೮-೭೬).

[<ಪಲ್ಗರ್ಚು$_1$]

ಪಲ್ಗಲೆ, ಪಲ್ಗಳೆ$_2$ (ನಾ). ೧. ಹಲ್ಲು ನಾಟದ ಗುರುತು. ೨. [ಕಾಮಶಾ] ಪ್ರಣಯಪರವಶರಾದ ಸ್ತ್ರೀ ಪುರುಷರು ರತಿಕ್ರೀಡೆಯ ಕಾಲದಲ್ಲಿ ಪರಸ್ಪರ ಶರೀರಗಳಲ್ಲಿ ಮಾಡುವ ಹಲ್ಲಿನ ಕಚ್ಚು ; ದಂತಕ್ಷತ : ಮುಟ್ಟ ಬಿಡದ ಮೈ ಕಿಜುದನಿ ಪಲ್ಗಲೆಯಟ್ಟುಳಿಯಿಲ್ಲದ ಬಾಯ್ಗೂಟಂ . . . ಎಸೆದುವು ಜೋಡರ ಸುಸಿಲೊಳ್ (ಉದ್ಧವೇ. ೪-೧೩). **ಪಲ್ಗಳೆ$_2$:** ೧. ಬರ್ವನತಿಕುಶಲನಪ್ಪ ಬಂಧುರ ಗರುಡ ಮಂತ್ರಸಿದ್ಧಂ ಬಂದು ಸಡಗರದಿ ಪಿರಿಯುರಗನೆಯ್ದೆ ಕರ್ಚಿದ ಪಲ್ಗಳೆಯ ನಡನೋಡಿ ನಿಶ್ಚೈಸಿ ನುಡಿದಂ (ಅರಾಚ. ೨-೧೦-೧೭).

[ಪಲ್+ಕಲೆ$_2$]

ಪಲ್ಗಳೆ$_1$, ಹಲುಗಳೆ (ಕ್ರಿ). ಹಲ್ಲುಗಳನ್ನು ತೆಗೆದು ಹಾಕು ; ಹಲ್ಲು ಕೀಳು : ನಡುಗಿ ಪೊಡೆವಡುವುದುಂ ಮೊಜಿಂಯಿಡುವುದು ಮೇಕಣ್ಣ ಪಿಡಿದು ಪಲ್ಗಳೆದುಂ ಪಾವಡಿಗನೆನಿಪವನ ಮೆಯ್ಯಂ ಕಿಡಿಸಲ್ಕಾರ್ತವುವೆ ತಮ್ಮ ನಚ್ಚಿನ ನಾಗರ್ (ಸಮಪ. ೯-೮೧). **ಹಲುಗಳೆ :** ಲಯಕೃತಾಂತನ ತಲೆಯ ನರೆಯರೆಗೊಯ್ದ ಕಡುಹಿನ ಕಾಲಭೈರವನ ಹಲುಗಳೆದ . . . ತಾಮಸರಿದ್ದುದು (ತೊರರಾ. ೩-೭-೬).

[ಪಲ್+ಕಳೆ$_1$]

ಪಲ್ಗಳೆ$_2$ 'ಪಲ್ಗಲೆ' ನೋ.

ಪಲ್ಗಱೆ (ನಾ). ಹಲ್ಲಿಗೆ ಬರುವ ಬಣ್ಣ ; ಹಲ್ಲಿನ ಬಣ್ಣ : ಮತ್ತಿಯೆಲೆಯಂ ತಾಂಬೂಲದೆಲೆಯೆಂದು ಮೆಲ್ದು ಪಲ್ಗಱೆಗಾಸೆಗೆಯ್ವನುಮಂ . . . ಪೋಲ್ಕುಂ (ಧರ್ಮಾಮೃ. ೧೧-೩೫). [ಪಲ್+ಕಱೆ$_2$]

ಪಲ್ಗಿಡಿಗಿರಿ (ಕ್ರಿ). ಹಲ್ಲು ಕಚ್ಚಿಕೊಂಡಿರು ; ಅಸಹಾಯನಾಗಿರು : ಜವ್ವನೆಗಾಳ್ಗನಾದ ಮುದುಪನಂತೆ ಪಲ್ಗಿಡಿಗಿರಿದು (ಧರ್ಮಾಮೃ. ೧೩-೬೯). [ಪಲ್+ಗಿಡಿಗಿರಿ]

ಪಲ್ಗಿರಿ, ಪಲುಗಿರಿ, ಪಲ್ಕಿರಿ, ಪಲ್ಲುಗಿರಿ, ಹಲುಗಿರಿ, ಹಲ್ಕಿರಿ, ಹಲ್ಗಿರಿ, ಹಲ್ಲುಕಿರಿ, ಹಲ್ಲುಗಿರಿ (ಕ್ರಿ). (ನಗು, ದುಃಖ, ಆಸೆ, ದೈನ್ಯ, ನೋವು, ಕೋಪ ಇತ್ಯಾದಿ ಭಾವಗಳನ್ನು ಸೂಚಿಸುವಾಗ) ಹಲ್ಲು ಬಿಡು ; ಹಲ್ಲು ಕಿಸಿ : ಒಳಕೆಯ್ಯೊಳಿರ್ದು ಪಲ್ಗಿರಿದೊಳವಾಲಂಗೊಂಡು ಮೊರೆವ ಭಪಕನ ತೆಜದಿಂ (ಕಾವ್ಯಾವ. ೨೪೪) : ಪುರ್ಬಿಕ್ಕಿ ಪಲ್ಗಿರಿದು ಹುಜ್ಜೆಂಕು ಕಿರಾತಕಾಂತೆಯರಂ ಮಿಗೆ ನಗಿಸುತಿರ್ಪ ಮರ್ಕಟಪ್ರಕರದಿಂ (ಗಿರಿಕ. ೧-೧೨೮ ಪ); ಅರಸ ಕೇಳವನ ಬಾಣದ ಘಾತಿಗರ್ಜುನಂ ಕೊರಗಿದಂ ಮೇಲೆ ಪಲ್ಗಿರಿದನಾ ಕಪಿ (ಜೈಮಿಭಾ. ೨೭-೪೦). **ಪಲುಗಿರಿ :** ಕತ್ತೆಗಳಂತೊಜಲಿ ಕೋಡಗಗಳಂತೆ ಪಲುಗಿರಿದು (ಒಸರ. ೮-೧೦೧); ಕಂಗಳಂ ಮೆಳ್ಳಿಸುತ ಪಲುಗಿರಿ [ಪಾಠಾಂ. ಪಲ್ಗಿರಿ]ದುಂಗುಟಂಗಳನೂಜು ನಡೆವುತ (ಬಸಪು. ೧-೪೯). **ಪಲ್ಕಿರಿ :** ತೆಕ್ಕೆಯಿಲ್ಲದ ಎತ್ತು ಬಿಕ್ಕಿ ಪಲ್ಕಿರಿದಂತೆ (ಗಾದೆ). **ಪಲ್ಲುಗಿರಿ :** ಪಲ್ಲುಗಿರಿದು ಪುರ್ಬತ್ತಿ ಬೆರಳ ಕೊನೆಯಲ್ಲಿ ಬರಿಗಳನು ತುಜುಸಿ (ಅಂಜಚ. ೨-೮೦). **ಹಲುಗಿರಿ :** ನಿಂದಿರ್ದ ಶಿವನ ಶರಣಗೆ ಹಲುಗಿರಿವುತಂ (ತಿರುಚಿ. ದೇ. ೧೫-೧೮) ; ಪಾರ್ಥನ ಕೋಜು ಕೊಡುವೆನು ತನಗೆ ಹೇಳದೆ ಬಜುದೆ ಹಲುಗಿರಿದೈ (ಕುವ್ಯಾಕ. ೯-೨). **ಹಲ್ಕಿರಿ:** ಅವನು ಶ್ರೀಮಂತನಾಗಿದ್ದು ಯಾರ ಹಂಗಿಗೂ ಹಲ್ಕಿರಿಯಬೇಕಾದ ಆವಶ್ಯಕತೆಯಿರಲಿಲ್ಲ (ಪುನರು. ೧೧೭). **ಹಲ್ಗಿರಿ :** ಈಗ ಮತ್ತೆ ನನ್ನ ಬಳಿಗೇ ಬಂದು . . . ಹಲ್ಗಿರಿಯುತ್ತಿ

ರುವೆ (ಕವಿಕ. ೪). **ಹಲ್ಲುಕಿರಿ :** ಅವನು ಅವಳ ಮುಂದೆ ಹೇಗೆ ಹಲ್ಲು ಕಿರಿಯುತ್ತಿದ್ದಾನೆ (ಮುರುಕು. ೭). **ಹಲ್ಲುಗಿರಿ :** ನೋಡಿರೈ . . . ಬಡಕೋಡಗಂಗಳು ಹಲ್ಲುಗಿರಿವಾ ಸಂಭ್ರಮಂಗಳನು (ಕೌಕಿರಾ. ೧೭-೧೬); ಆರುಮಿಲ್ಲದ ವಿಪಿನದಲಿ ಹಾಳೂರ ಕೋಳಕೆ ಕಾಲ ತಗಲಿಸಿ ದಾರಿಗರಿಗವ ಹಲ್ಲುಗಿರಿವಂದದಲಿ ಸಂಸೃತಿಯ . . . ಬಲೆಗೆ ಬಿದ್ದವಗಾರು ಗತಿ (ಅಮೃತ. ೨-೭೧). [ಪಲ್+ಕಿರಿ$_2$]

ಪಲ್ಗಿರಿಸು, ಹಲುಗಿರಿಸು (ಕ್ರಿ). ಹಲ್ಲು ಬಿಡುವಂತೆ ಮಾಡು : ಅಡಿಗಡಿಗೆ ಪಳವಿಗೆಯ ಹನುಮನಂ ಪಲ್ಗಿ[ಪಾಠಾಂ. ಹಲುಗಿ]ರಿಸಿ . . . ನೋಯಿಸಿದನು (ಜೈಮಿಭಾ. ೨೫-೩೯). **ಹಲುಗಿರಿಸು :** ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಪಲ್ಗಿರಿ+-ಇಸು$_3$]

ಪಲ್ಗಿಱ್ (ನಾ). ಒಂದು ಊರಿನ ಹೆಸರು : ಮಹೋತ್ಸವಸಮಯೇ ಮುಣ್ಡಕಲ್ಲು ಗ್ರಾಮಸ್ಯ ಪಲ್ಗಿಱ್ಗ್ರಾಮಸ್ಯ ಚ . . . ರಾಜಮಾನೇನ ದತ್ತಾ (ಇಅ. XI, ೬೭-೧೭ ; 7ನೆಯ ಶತ ?). [?]

ಪಲ್ಗುಟ್ಟುಹ (ನಾ). ಹಲ್ಲನ್ನು ಉದುರಿಸುವಿಕೆ : ನಿಕಾರ, ವಿಪ್ರಕಾರ—ಪಲ್ಗುಟ್ಟುಹಂ ಮೊದಲಾದುದು (ನಾಚಿರಾ. ೬).

[ಪಲ್+ಕುಟ್ಟುಹ]

ಪಲ್ಗುಣ 'ಪಲುಗುಣ' ನೋ.

ಪಲ್ಗುತ್ತು (?) (ಕ್ರಿ). (?): ಪಟುಗಳ್ ಪೆರ್ಬಯಲಾಗೆ ದರ್ಕಳನಿಸಾಂ ಪಲ್ಗುತ್ತ ಲೀಲೆಂಬಿನಂ (?) ಕುಱುಗಳ್ ತೀವಿರೆ ಗೋರೆಯಾಯ್ತು ನೆಲನೆಂಬಾಶಂಕೆಯಂ ಮಾಟ್ಪಿನಂ ಪುಟುಪೊಲ್ಪಾಯೆ ಮೃಗಂಗಳೋಡಲವ ಕಾಶಂ ತಾನದಿಲ್ಲೆಂಬಿನಂ ಸುಟುದಂಭೋನಿಧಿ ಮೇರೆದಪ್ಪಿದ ತೆಱಂ ಬಂದತ್ತನೀಕಾರ್ಣವಂ (ಕಾವ್ಯಸಾ. ೪೬೫ ಶೂದ್ರಕ). [?]

ಪಲ್ಟನು 'ಪಲಟಣ' ನೋ.

ಪಲ್ಟಿ, ಪರಟ$_2$, ಪೈಟ (ನಾ). ತಲೆಕೆಳಗಾಗುವಿಕೆ; ಲಾಗ. **ಪರಟ$_2$. ಪೈಟ :** (ಕಿ).

ಪಲ್ಟಿ ಹಾಕು=೧. ತಲೆ ಕೆಳಗಾಗಿ ನೆಗೆ; ಲಾಗ ಹಾಕು: ಅವರೆಲ್ಲಾ ಎತ್ತರಕ್ಕೆ ನೆಗೆದಾಡಿದರು. ಪಲ್ಟಿ ಹಾಕಿದರು (ಶಾಲೆಮ. ೧೨೧). ೨. (ಆಲಂ) ಅನುತ್ತೀರ್ಣನಾಗು ; ನಪಾಸಾಗು : ಅವನು ಸರಿಯಾಗಿ ಓದದೆ ಪರೀಕ್ಷೆಯಲ್ಲಿ ಪಲ್ಟಿ ಹಾಕಿದ (ರೂಢಿ). **ಪಲ್ಟಿ ಹೊಡೆ, ಪರಟ ಹೊಡೆ**=೧. ಪಲ್ಟಿ ಹಾಕು; ಲಾಗ ಹಾಕು: ಎದುರಾಳಿಯೂ ಚೆಂಡೂ ಇಬ್ಬರೂ ಪಲ್ಟಿ ಹೊಡೆಯುವರು (ತುಟಿವಿಾ. ೬೫); ಮೇಲಿನಿಂದ ಪರಟ ಹೊಡೆಯುವುದು (ಅದೂಟ. ೧೭೫). ೨.=ಪಲ್ಟಿ ಹಾಕು ೨: ಮ್ಯಾಟ್ರಿಕ್‌ನಲ್ಲೇ ಪಲ್ಟಿ ಹೊಡೆದ ನನಗೆ ಸ್ವಲ್ಪ ಅಧೈರ್ಯವಾದರೂ ಪ್ರೇಮವು ನನ್ನನ್ನು ಹಿಂಜರಿಯಲು ಬಿಡಲಿಲ್ಲ (ಚಿಗುಬ. ೧೦೧).

[←ಮರಾ. ಪಲಟೇ, ಪಲಟಾ. / ತಮಿ. ಪಲ್ಟಿ ; ತೆಲು. ಪಲ್ಟಿ. ಪಲ್ಲಟ]

ಪಲ್ತನು 'ಪಲಟಣ' ನೋ.

ಪಲ್ದಿನ್, ಪಲ್ದಿನು, ಪಲ್ಲುದಿನು, ಹಲುದಿನ್, ಹಲುದಿನು (ಕ್ರಿ). ೧.=ಪಲ್ಗಡಿ ೧: ಒಂದು ದಿವ್ಯಧ್ವನಿಯಾಗಸದೊಳಗೊಗೆದುದನೆ ಕೇಳ್ದವಧರಿಸಿ ದಿವ್ಯಕ್ಕೆ ಪಲ್ದಿನುತ್ತುಂ (ಅರ್ಧನೇ. ೭-೧೮ ವ). ೨. (ಕುದುರೆ, ಹಸು ಮುಂತಾದ ಪ್ರಾಣಿಗಳು ಯಾವುದಾದರೂ ರೋಗದಿಂದ) ಹಲ್ಲನ್ನು ಕಡಿ,—ಅಗಿ : ಎಸಡಿನ ಪಾಲಂ ದುಗ್ಧಾಜ್ಯ ಸಮನ್ವಿತಮಟ್ಟು ತೊಡೆಯೆ ಪಲ್ದಿಂಬುದನೋಡಿಸುಗುಂ (ಲೋಕೋಪ. ೯-೩೧) ; ಬೀಟ್ಗುಂ ಮೆಯ್ಯುರಿ ತರ್ಕುಂ ಪಲ್ದಿಂಗುಂ . . . ಅಪ್ಪೊಡಂ ತಾಂ ತುರಗಂ ಗ್ರಹಭೀತನಕ್ಕುಂ (ಅಶ್ವಶಾ. ೧೬-೧೬). **ಪಲ್ದಿನು :** ೧. ತಿಳಿದೆದ್ದು ಪಲ್ದಿನುತ ಹುಬ್ಬುಗಳ್ ಗಂಟಿಕ್ಕಿ (ತುರಂಗ. ೪೭-೧೯). **ಪಲ್ಲುದಿನು:** ೧. ಮಾತ ಕೇಳಿ ಪಲ್ಲುದಿನುತ ನಿದ್ರಾವರಣೆಯವಹ ಗೆಲ್ಲಕಾಱರು ಬಂದರಂದು (ತ್ರಿಪುಸಾಂ. ೧೬-೧೭೫). **ಹಲುದಿನ್ :** ೧. ಕಡುನೊಂದು ಹರಿತಂದು ಹಲುದಿಂದು ನುಡಿದನು (ಸೋಮಚಿ. ೨-೬೧). **ಹಲುದಿನು:** ೧. ಮಾರಿಯಂದದಿ ಹಲುದಿನುತಲತಿಘೋರತರ ರೂಪಾಂತು ಮಾಯದಿ ಕ್ರೂರಖೇಚರ ಬರುತಲಿರೆ (ಸನತ್ಕು. ೭-೨೮); ಹರಿನಂದನನು ಹಲುದಿನುತ ಹರಿತಂದೊದೆದನತಿರಥನ (ತೊರಂಾ. ೬-೩೯-೬).

[ಪಲ್+ತಿನ್]

ಪಲ್ದಿನು 'ಪಲ್ದಿನ್' ನೋ.

ಪಲ್ದೆಱ್, ಹಲುದೆಱ್, ಹಲ್ತೆರೆ (ಕ್ರಿ).=ಪಲ್ಗಿರಿ : ಮಾಂಸರಸಮಂ ಸವಿದಾಡುವ ರಕ್ಕಸರ್ಗೆ ಪಲ್ದೆಱ್ದ ಮರುಳ್ಗಳಿಂ (ಎಕ. VIII, ಸಾಗರ. ೧೦೯-೨೮ ; 1042); ನಾಳೀಜಂಘಂ ಕರಂ ಪಲ್ದೆಱ್ದು ನಡುಗಿ ಹಱ್ಱಿಂದು ಪುರ್ಬಿಕ್ಕಿತಾಗಳ್ (ರಾಜಶೇ. ೯-೨೯). **ಹಲುದೆಱ್ :** ಮಾಯಾ ಮೋಹದಲಿ ಮೈಮಱ್ದು ವಿಷಯಸುಖಂಗಳಿಗೆ ಹಲುದೆಱ್ದು . . . ನಿನ್ನನಱಿಯದು ಮೂಢಜನ (ನಿಭಾಗ. ೧೦-೫೨-೨೯). **ಹಲ್ತೆರೆ :** ಹಳಿದು ಹಲ್ತೆರೆದು ಅಣಕಿಪರೊ (ವಿದಾಕೃ. ೪೮-೩). [ಪಲ್+ತೆಱ್$_1$]

ಪಲ್ಮಡಿ, ಪಲ್ಮಾಡಿ, ಪಲ್ಮಿಡಿ, ಹಲುಮಿಡಿ, ಹಲ್ಮಿಡಿ (ನಾ). ಒಂದು ಊರಿನ ಹೆಸರು ; ೯ ಬೇಲೂರು ತಾಲ್ಲೂಕಿನಲ್ಲಿರುವ ಈಗಿನ ಹಲ್ಮಿಡಿ : ಪೆತ್ತ ಜಯನಾ ವಿಜಅರಸನ್ಗೆ ಬಾಳ್ಗಟ್ಟು ಪಲ್ಮಡಿಉಂ ಮೂಟುವಳ್ಳಿಉಂ ಕೊಟ್ಟಾರ್ (ಮೈಅರಿ. ೧೯೩೬, ೧೬-೧೨ ; 450). **ಪಲ್ಮಾಡಿ :** ಪಿರಿಯ ಮುಗುಳಿಯ ಕೊಮಾರಯ್ಯನುಂ ಪಲ್ಮಾಡಿಯ ಮೆನ್ದಮ್ಮ . . . ಇನ್ದವೂರದ ವಿಟಯ್ಯನುಂ ಮಱ್ಗಳಂ (ಎಕ. VI, ಚಿಕ್ಕಮ. ೩-೧೪ ; 899 ?). **ಪಲ್ಮಿಡಿ :** ಅತ್ಯಂತಪ್ರಾಚೀನ. ಕನ್ನಡ ಪಲ್ಮಿಡಿಶಾಸನ (ದ್ರಾವಿವಿ. ೮೧). **ಹಲುಮಿಡಿ :** ಹಲುಮಿಡಿಯ ದೇವಿಸೆಟ್ಟಿಯ ಮಗ (ಮೈಅರಿ. ೧೯೩೩, ೪-೧ ; 1523). **ಹಲ್ಮಿಡಿ :** ಸು. ೪೫೦ರ ಹಲ್ಮಿಡಿಶಾಸನವೇ ನಮಗೆ ದೊರಕಿರುವ ಅತ್ಯಂತ ಪ್ರಾಚೀನವಾದ ಕನ್ನಡ ಶಾಸನ (ಕಶಾಅ. ೭). [?]

ಪಲ್ಮಾಡಿ 'ಪಲ್ಮಡಿ' ನೋ.

ಪಲ್ಮಾಣಿಕ, ಹಲಮಾಣಿಕ, ಹಲುಮಾಣಿಕ, ಹಲುಮಾಣಿಕ್ಯ (ನಾ). ಒಂದು ಬಗೆಯ ಸಸ್ಯ ; ನಾಯಿಬೇಲ : ಜೀರಗೆಯುಂ ಪಲ್ಮಾಣಿಕಮೋರಂತಿರೆ ಕುಡಿಯೆ ಮತ್ತೆ ದಿವ್ಯೌಷಧಿಗಳ್ (ಖಮದ. ೧೬-೫೩). **ಹಲಮಾಣಿಕ:** "ಗೋಪಃ-ಹಲಮಾಣಿಕ" (ಓಷಧಿ. ೫೦). **ಹಲುಮಾಣಿಕ :** "ಗೊಳಗೊಂಟೆಯೆನೆ ಹಲುಮಾಣಿಕಂ" (ಮಂಗರಾ. ೩೫-೧೩) ; "ಕಂಟುಪಾದಃ—ಹಲುಮಾಣಿಕಾ" (ಓಷಧಿ. ೨೩). **ಹಲುಮಾಣಿಕ್ಯ :** (ಕಿ). [?]

ಪಲ್ಮಿಗ (ನಾ). ಕೋರೆಹಲ್ಲುಗಳನ್ನು ಹೊಂದಿರುವ ಸಿಂಹ, ಹುಲಿ, ಆನೆ, ಹಂದಿ ಮುಂತಾದ (ಹಿಂಸ್ರ) ಪ್ರಾಣಿ: ಮೇಪಿಂ ಪುಲ್ಮಿಗಮುಂ ಬೆಳ್ಮಿಗಮುಂ ಪಲ್ಮಿಗಮುಂ ತಣಿದುವೆಯ್ದೆ ಕಾಪಿನ ಪೊಲದೊಳ್ (ಅನಂಪು. ೧೧-೩೯). [ಪಲ್+ಮಿಗ]

ಪಲ್ಮಿಡಿ 'ಪಲ್ಮಡಿ' ನೋ.

ಪಲ್ಮುಱಿ, ಹಲ್ಲುಮುರಿ (ಕ್ರಿ). ೧. ಹಲ್ಲು ಮುರಿ ; ಹಲ್ಲು ಮುರಿದು ಹೋಗು : ಜರೆಯೆಂಬೀ ಕಾಂತೆ . . . ಪರಪಾದದ್ವಂದ್ವದಿಂ ಪಲ್ಮುಱಿಯೊದೆದೊಡೆ ಬಾಯಲ್ಲಿ ಪುಟ್ಟರ್ದ ದಂತೋತ್ಕರಮೆಲ್ಲಂ ಬಿಟ್ಟು ದೆಂಬಂತಿರೆ ಕಳೆದವು ವೃದ್ಧಂಗೆ ದಂತಂಗಳೆಲ್ಲಂ (ಬಾಧಪು. ೫-೩೩). **ಹಲ್ಲುಮುರಿ :** ೨. ಹಲ್ಲನ್ನು ಮುರಿದು ಹಾಕು,—ಉದುರಿಸು : ಹಲ್ಲು ಮುರಿಯುತ್ತೇನೆಂದು ಹೆದರಿಸಿದ ಮೇಲೆ ಅವನು ತನ್ನ ತಪ್ಪನ್ನು ಒಪ್ಪಿಕೊಂಡ (ರೂಢಿ). [ಪಲ್+ಮುಱಿ$_1$]

ಪಲ್ಮೃಗ, ಪಲುಮೃಗ (ನಾ).=ಪಲ್ಮಿಗ : ತರಳಾಕ್ಷಿ ಪಲ್ಮೃಗದ

ಬಾರಿಯೊಳ್ ಬಿಟ್ಟುಮೋ ತರುಣಿಯೆನ್ನಂ ಕಾಣದತಿಭಯಂಗೊಳ್ಳುಮೋ (ಕುಸುಮಾ. ೧೪-೧೧೯ ರಗಳೆ). **ಪಲುಮ್ಮುಗ:** ಪಲುಮ್ಮುಗ ಬೆಳ್ಮಿಗ ಪುಲುಮ್ಮುಗ ಬಂದವು ನಲವಿಂದ ಕಾಪಿನ ಪೊಲಕೆ (ಅನಂಚ. ೧೭-೯).

[ಪಲ್ + ಮ್ಮುಗ]

ಪಲ್ಮೊರೆ, ಪಲುಮೊರೆ, ಪಲ್ಲುಮೊರೆ, ಹಲುಮೊರೆ, ಹಲ್ಮೊರೆ (ಕ್ರಿ). ೧. (ಕೋಪದಿಂದ) ಶಬ್ದ ಬರುವಂತೆ ಹಲ್ಲನ್ನು ಕಡಿ: ಕುರುಬಲಕ್ಕೆ ಮಿಟ್ಟು ಪಲ್ಮೊರೆವಂತೆ ಮೊರೆದು ಪರಿವ ತನ್ನ ಕಿಸುವೊನ್ನ ರಥಮುಂ (ಪಂಪಭಾ. ೧೦-೯೭ ಪ); ಜಯಾಂಗನೆ ಪಲ್ಮೊರೆದಪಳೆನೆ ಪರಿದುವು ಜೀರ್ಗರೆವುತ್ತುಂ ಚತುರಶೀತಿಲಕ್ಷರಥಂಗಳ್ (ಶಾಂತಿಪು. ೧೦-೧೨೯); ಕೋಪದಿಂ ಪುದಿದು ಪದ್ಮಿನಿ ಪಲ್ಮೊರೆವಂದಮಾಯ್ತು (ಕುಸುಮಾ. ೪-೧೬). ೨. ಧ್ವನಿಮಾಡು; ಝೇಂಕರಿಸು: ಅಳಿ ಬಿರಿದಿರ್ದ ಜಾದಿಯೊಳೆ ಪಲ್ಮೊರೆಯುತ್ತಿರೆ ಹಂಸೆ ಪೂತ ಪೂಗೊಳದೊಳ್ ರಾಗಿಸುತ್ತಿರೆ (ಪಂಪಭಾ. ೭-೭೦); ಜಾವಳಿಪ ರಾಜಶುಕವ್ರಜಮಲ್ಲಿ ಕಾಯ್ದು ಪಲ್ಮೊರೆವ ಮದಾಳಿಯು ಸಖಿ ಸಾರದಿರಾ ಮರನಂ ವಸಂತದೊಳ್ (ಕಾವ್ಯಾವ. ೩೬೭). **ಪಲುಮೊರೆ:** ೧. ಮೂಡಳಸುವಳಸಿ ಸುತ್ತಿರ್ದು ದಂಭೋಧಿಯೆಂಬಂತೆ ಗಂಭೀರಾರಾವದಿಂ ಪಲು[ಪಾತಾಂ.ಲ್]ಮೊರೆವ ಪೊಲೆಸೆಗುಂ ಸುತ್ತಿ ಪಾನೀಯಖೇಯಂ (ಸುಕುಮಾ. ೯-೫೭); ದಿವಾಕರ ನಂದನನು ಪಲುಮೊರೆದು ಖಾತಿಯೊಳವರನಿಂತೆಂದ (ಕುವ್ಯಾವಿ. ಓರಿಇ. ೮-೫). **ಪಲ್ಲುಮೊರೆ:** ೧. ಕೆರಳ್ದ ಸಿಂಗವೋ ಪಲ್ಲುಮೊರೆವ ಕೃತಾಂತನೊ (ಪರ್ಧಚ. ೭-೬). **ಹಲುಮೊರೆ:** ೧. ಒರ್ವ ನಿಸೂಳೆ ತರುವಲಿಗೆ ಹಲುಮೊರೆದಳು (ಸೋಮಚ. ೨-೪೧); ಗರಳ ವಿಲ್ಲದೆ ಕುಪಿತಫಣಿ ಹಲುಮೊರೆದು ಮಾಡುವುದೇನು (ಕುವ್ಯಾದ್ರೋ. ೧೬-೫೫). **ಹಲ್ಮೊರೆ:** ೧. ಕರದ ಕರವಾಳುಡಿಯೆ ಬಿಡೆ ಹಲ್ಮೊರೆದು ಭರದಲಿ ಗದೆಯ ಕೊಂಡಬ್ಬರಿಸಿ (ಕುವ್ಯಾದ್ರೋ. ೬-೫೧).

[ಪಲ್ + ಮೊರೆ$_1$]

ಪಲ್ಮೊಳೆ (ನಾ). ಆಗ ತಾನೇ ಕಾಣಿಸುತ್ತಿರುವ ಹಲ್ಲು; ಮೊಳೆ ಹಲ್ಲು: ಝಣರೆನಲ್ ಪೊಂಗೆಜ್ಜೆ ಪೊಂದೊಂದು ಪಲ್ಮೊಳೆ ಚೆಲ್ವಾಗಿರೆ ಮುದ್ದುವೀಱಿ ನಗುತ್ತೇಳ್ತಂದಪ್ಪುವಂ ಮಾತೆಯಂ (ರಾಜಶೇ. ೪-೭೩).

[ಪಲ್ + ಮೊಳೆ$_2$]

ಪಲ್ಯ$_1$, ಪಲ್ಲೆ$_1$ (ನಾ). ೧. ತರಕಾರಿ; ಕಾಯಿಪಲ್ಯ: ಬಲೀ, ಪಲ್ಯ ತಂದೆಯಾ . . . ಈಗಾದರೂ ಬೇಗ ಹೋಗಿ ತಕ್ಕೊಂಡು ಬಾ (ರಕ್ತಧ್ವ. ೧೭೮). ೨. ಊಟದಲ್ಲಿ ನಂಜಿಕೊಳ್ಳಲು ತರಕಾರಿಗಳಿಂದ ಮಾಡುವ ಒಂದು ಬಗೆಯ ವ್ಯಂಜನಪದಾರ್ಥ; ತಾಳದ: ಮೇಲೋಗರ ಪಳಿದ್ಯ ಪಲ್ಯಗಳ ರಾಕೇಂದುವದನೆಯರೆಡೆಮಾಡುವ ನೃಪಯಾಗವನೇನ ಬಣ್ಣಿಪೆನು (ಮೋಹತ. ೧೪-೯); ಪರಿಪರಿಯ ಕಾಯ್ಪಲ್ಯ ಕಲಸೋಗರಗಳೊಬ್ಬಟ್ಟುಂಡೆ ಚಕ್ಕುಲಿ (ಅರ್ಜಾವಿ. ೧೭-೭೨). **ಪಲ್ಲೆ$_1$:** ೧. ಈ ಮೂಲೆಯಲ್ಲಿ ಪಲ್ಲೆ ಹೆಚ್ಚುವ ಈಳಿಗೆ ಇಟ್ಟದೆ (ಮುಂಬಯಿ. ೪-೧೭೩); ಹತ್ತು ತರಹದ ಪಲ್ಲೆ ಕೂಡಿ ಕುದಿಸಿದ ಅಡಿಗೆ ರುಚಿಯೆಂದು ಹೇಳುವರು (ನೆಲಮು. ೨೨-೧೫); ಕಾಯಿಪಲ್ಲೆ, ಕೋತಂಬರಿ ಮೊದಲಾದ ಪಲ್ಲೆಗಳನ್ನು ಮಾಡಿಕೊಳ್ಳಬೇಕು (ಕೃಷಿಪ್ರ. ೨೦೮). 'ಕಾಯಿಪಲ್ಲೆ' ಪರಾ. ೨. ನಾಗನ ಗಂಟಿನಲ್ಲಿ ಚಪಾತಿ ಪಲ್ಲೆ ಇತ್ತು (ಕಪಪು. ೩-೩೩); ಬಾಳೆಯ ಹೂ ಹಾಗೂ ದಿಂಡಿನ ಪಲ್ಲೆ ರುಚಿಕಟ್ಟು (ಸುತ್ತುಮು. ೮೦); ಸಾರನ್ನು ಬಡಿಸುವಾಗ ಅದು ಹರಿದು ಪಲ್ಲೆಯನ್ನು ಸೇರಿದರೆ ಕ್ಷಮಿಸಲು ಸಾಧ್ಯವೆ? (ಹುಚ್ಚುಹು. ೧೩).

ಪಲ್ಯ$_2$ (ನಾ). ೧. (ಒಂದು ನಿರ್ದಿಷ್ಟ ಅಳತೆಯ) ಧಾನ್ಯವನ್ನು ತುಂಬುವ ಚೀಲ. ೨. ಒಂದು ಬಹುದೊಡ್ಡ ಸಂಖ್ಯೆ. ೩. [ಜೈನ] ಬಹು ದೊಡ್ಡ ಸಂಖ್ಯೆಯ ಎಣಿಕೆಯುಳ್ಳ ಒಂದು ಕಾಲ ಪ್ರಮಾಣ; ℙ ಇವು ಮೂರುಬಗೆ. ೧. ವ್ಯವಹಾರಪಲ್ಯ. ೨. ಉದ್ಧಾರಪಲ್ಯ. ೩. ಅದ್ಧಾಪಲ್ಯ: ವ್ಯವಹಾರಪಲ್ಯಾಧಾರ ಪಲ್ಯಮುದ್ಧಾರಪಲ್ಯಮೆಂದು ಪಲ್ಯಂಗಳ್ ಮೂಱುತೆಱನಕ್ಕುಂ (ಅಜಿಪು. ೩-೧೫ ಪ); ಅನ್ವರ್ಥಸಂಜ್ಞಾಸಮನ್ವಿತ ವ್ಯವಹಾರೋದ್ಧಾರಾದ್ಧಾಭೇದದಿಂ ಪಲ್ಯಂ ತ್ರಿವಿಧಂ (ತತ್ತ್ವಪ್ರ. ೧೭೫); ಭೋಗಮನುಣ್ಬಾರ್ಯರ ಬಾಟ್ಕೆ ಪಲ್ಯಗಣನಂ ಪಲ್ಯೋಪಮಂ . . . ಅನಂತಕಲ್ಪಜರೊಳಾಯುಃಪಿಂಡಂ (ಅನಂಪು. ೯-೨೬). [ಸಂ.]

ಪಲ್ಯಂಕ (ನಾ). ೧. ಮಂಚ; ಪರ್ಯಂಕ: "ಮಂಚಃ, ಪರ್ಯಂಕಃ, ಪಲ್ಯಂಕಃ, ಖಟ್ವಾ-೪ ಮಂಚ, ಪಟ್ಟಮಂಚ, ಚಪ್ರದ ಮಂಚ, ತೂಗುಮಂಚ" (ಸಿದ್ಧಾಂತಿ. ೨೧೦). ೨. ಪಲ್ಲಕಿ; ಪಾಲಕಿ.

[ಸಂ.]

ಪಲ್ಯಂಕಾಸನ (ನಾ). [ಯೋಗ] ಒಂದು ಬಗೆಯ ಆಸನ; ಅರ್ಧಪದ್ಮಾಸನ: ಪೂರ್ವಾಭಿಮುಖನುಂ ನಿಬಿಡನಿಬದ್ಧ ಪಲ್ಯಂಕಾಸನನು ಮಾಗಿ (ಅದಿಪು. ೯-೭೬ ಪ); ಅಂತುತ್ತರಾಭಿಮುಖನಾಗಿ ಪಲ್ಯಂಕಾಸನದೊಳೆ ಕುಳ್ಳಿರ್ದು (ಶಾಂತಿಪು. ೧೧-೧೦೩ ಪ); ಪಲ್ಯಂಕಾಸನದೊಳ್ ಮೂವರುಂ ಯಥಾಕ್ರಮಮಿರ್ದರ್ (ಪಂರಾಮಾ. ೧೦-೧೪೭).

[ಸಂ.]

ಪಲ್ಯಯನ (ನಾ). ಹಲ್ಲಣ; ಜೀನು: "ಪಲ್ಲಣಮುಮೆಂದು ಪಲ್ಯಯನಕ್ಕುಂ" (ಕವಿಕಂ. ೨೬೭). [ಸಂ.]

ಪಲ್ಯೋಪಮ (ನಾ). = ಪಲ್ಯ$_2$ ೩: ಪಲ್ಯೋಪಮ ದಶಮಭಾಗಾಯುಷ್ಯನುಮಪ್ಪಗ್ರಿಮಕುಳಧರಂ ಪ್ರತಿಶ್ರುತಿಯೆಂಬಂ (ಅದಿಪು. ೬-೫೨ ಪ); ನಿಜಾಯುಃಪಲ್ಯೋಪಮತ್ರಯಾವಸಾನಮೆಯ್ತರೆಯುಂ ಕಾಮಾಂಧರಾಗಿ (ಶಾಂತಿಪು. ೭-೧೦ ಪ). 'ತ್ರಿಪಲ್ಯೋಪಮ' ಪರಾ. [ಸಂ.]

ಪಲ್ಲ$_1$ (ನಾ). ದಂತಗಳನ್ನುಳ್ಳುದು; ದಂತಿ; ಆನೆ: 'ಪಲ್ಲಮಱಿ' ಪರಾ. [ಪಲ್ + -ಅ$_7$]

ಪಲ್ಲ$_2$ (ನಾ). ದುಂಬಿ; ಅಳಿ: "ಪಲ್ಲಮೆನೆ ಪರಮೆ" (ಕಶರ. ೬೦); ಅಲ್ಲಿಗಲ್ಲಿಗೆ ಮಲ್ಲಟಿದಿರಿವ ಪಲ್ಲ ಬಲ್ಲುಲಿಗೆ ಕಲ್ಲದಾಡುವ ತೆಲ್ಲಯಿಸಿದ ಮಲ್ಲಗಿಳಿಯ ಸವಿನುಡಿಗೆ ಪಲ್ಲಟದ ಘಲ್ಲಣೆಯಲ್ಲಣೆಯ ಗಂಡುಗೋಗಿಲೆಯಿಂಚರಕ್ಕೆ ಪಲ್ಲಣೆಯ ಬೆಲ್ಲಂಗೋಲ್ವಿಲ್ಲನ ಮಲ್ಲಿಗೆಸರಲ ಜಲ್ಲಣೆಗೆ ತಲ್ಲಣಂಗೊಂಡು ಸಾವಗಿಸುವ . . . ಬಿಜ್ಜೋದರರುಂ (ರಾಮಾಶ್ವ. ೭೩-೩).

ಪಲ್ಲ$_3$ 'ಪಲ್ಲವಿ' ನೋ.

ಪಲ್ಲ$_4$ (ನಾ). ಧಾನ್ಯದ ಒಂದು ಅಳತೆ; ನೂರು ಸೇರು: ಭತ್ತ ಎಕರೆಗೆ ಹದಿನಾರು ಪಲ್ಲ ಹಾಕಿ (ಬೆಸ್ತಕ. ೨೫); ಒಂದು ಪಲ್ಲ ಸಣ್ಣಕ್ಕಿ ಕಳಿಸಿಬಿಡಿ (ನಾಡಿಗೇ. ೧೯೦).

[< ಪ್ರಾ. ಪಲ್ಲ./ಸಂ. ಪಲ್ಯ./ತೆಲು. ಪಲ್ಲಾ./ಮರಾ. ಪಲ್ಲ]

ಪಲ್ಲಂಕ 'ಪಲ್ಲಂಗ' ನೋ.

ಪಲ್ಲಂಗ, ಪನ್ನಂಗ$_1$, ಪಲಂಗ, ಪಲಂಗು, ಪಲಕಿ, ಪಲಕ್ಕಿ, ಪಲ್ಲಂಕ, ಪಲ್ಲಂಗು, ಪಲ್ಲಕಿ$_1$, ಪಲ್ಲಕ್ಕಿ$_1$, ಪಾಲಂಕಿ$_1$, ಪಾಲಕಿ, ಪಾಲಖಿ, ಪಾಲಿಕೆ$_1$, ಪಾಲ್ಕಿ, ಪಾಲ್ಕೆ, ಪಾಲ್ಲಕೆ (ನಾ). ೧. ಮಂಚ; ಪರ್ಯಂಕ: "ಪಲ್ಲಂಗ—ಪಲ್ಯಂಕ = ಮಂಚ" (ತದ್ಭಕೋ. ೨೫); ಪೆಟ್ಟಿಗೆ, ಕಪಾಟ, ಪಲ್ಲಂಗ ಮುಂತಾದವುಗಳು (ಮುಂಬವ್ಯಾ. ೧೪೨); ಹಾಗೆಯೇ ಪಲ್ಲಂಗದ ಮೇಲೆ ಬಿದ್ದುಕೊಂಡ (ವಾತ್ಸಲ್ಯ. ೪೦). **ಪನ್ನಂಗ$_1$:** ೧. "ಪನ್ನಂಗ (ಪಲಂಗ) —ಪಲ್ಯಂಕ" (ತದ್ಭಕೋ. ೨೪). ೨. ಪಲ್ಲಕ್ಕಿ, ರಥ ಮುಂತಾದುವುಗಳ ಮೇಲ್ಕಟ್ಟು,—ವಿತಾನ: ಆ ಭೈರಾದೇವಿಯೆಂಬ ಕುಮಾರತಿಯ

ಪಲ್ಲಕಿಯೊಳಗೆ ಇರಿಸಿ ಪಂನಂಗವಂ ಮುಚಿಕೊಂಡು ದಿಳ್ಳಿಯ ಸುರಿತಾನರ ಮನೆಗೆ ಕೊಂಡುಹೋಗಿ ಆ ಸುರಿತಾಳ ಮಹಾರಾಯರ ಮುಂದೆ ಪಲ್ಲಕಿಯಂ ಮುಂದಿರಿಸಿ ಪಂನಂಗವಂ ತೆಗೆದು ತೋಱಲಾಗಿ (ಮೈಆರಿ. ೧೯೩೧, ೧-೧೧; 1310); ನಸುಕಂದಿ ಮುಖ ತೋಱುತಿದೆ ನಿವಗಿಂದಿಷ್ಟು ಬಿಸಿಲು ತಾಗಿದುದಹುದಕಟಾ ಪಿಸುಣರು ದಟ್ಟದ ಪನ್ನಂಗಗಳ ನಿವಗೆಸಗಿ ತಿಲ್ಲಹುದೆಂದು ನೊಂದ (ಭರಚ. ೨೩-೭೯); ಪನ್ನಂಗದೊಳಗೆ ಚವಲವ ಹಾಕೋನ ನನ್ನ ಅಣ್ಣ ಜುಂಜಯ್ಯನ ನೆನೆದೇನೆ (ನನ್ನೂರು. ೨೪). ೩. ಮಂಚವಿರುವ ಕೊಠಡಿ; ಮಲಗುವ ಕೊಠಡಿ: ಕೊಚ್ಚಕ್ಕಿ ಅಂತಾ ಸುಲಿಹಲ್ಲಿಂದೇ ಪಾರಿ ತೆಗೆಯೆ ಪನ್ನಂಗದ ಅಗಣೇಯ (ಗೌರಪ. ೬). **ಪಲಂಗ**: ೧. ಲಕ್ಷ್ಮಿ ಪಲಂಗದ ತುದಿಯಲ್ಲಿ ಕುಳಿತುಕೊಂಡು ಅವರನ್ನು ನಿರೀಕ್ಷಿಸುತ್ತಿದ್ದಳು (ಇತಿತ್ರೀ. ೨೦). **ಪಲಂಗು**: ೧. ರಾಯ್ರ ಪಲಂಗು ಬೇಕೇನು (ಸೆಶೂರ. ೧೩) **ಪಲಕಿ**: ೪. ಉತ್ಸವ, ಮೆರವಣಿಗೆಗಳಲ್ಲಿ ದೇವತಾವಿಗ್ರಹಗಳನ್ನೂ ಮಾನ್ಯರನ್ನೂ ಕುಳ್ಳಿರಿಸಿ, ಮನುಷ್ಯರು ಹೊರುವ ಒಂದು ಬಗೆಯ ವಾಹನ: ಪಲಕಿ ಉಂಬಳಿಯ ಸಾಸನ (ಎಕ. III, ಮಂಡ್ಯ. ೩೩-೨೧; 1576); ತಿರುಮಲರಾಜನಾಯಕಗೆ ಪಲಕಿಯ ಉಂಬಳಿಗೆಗೊಡಗೆಯಾಗಿ ಕೊಟ್ಟೆವಾಗಿ (ಎಕ. III (R), ನಂಜನ. ೨೦೮-೧೬; 1586). **ಪಲಕ್ಕಿ**: ೪. ಆ ಪಲಕ್ಕಿಯ ಉಂಬಳಿಗೆ ಕೊಟ್ಟೆವಾಗಿ (ಮೈಆರಿ. ೧೯೩೩, ೪೩-೩; 16ನೆಯ ಶತ). **ಪಲ್ಲಂಕ**: ೧. ಪಲ್ಲಂಕದ ಮೇಲೆ ಪವಡಿಸಿದ್ದ ಲಕ್ಷ್ಮಿಗೆ ತಾನು ಕಾಣುತ್ತಿರುವುದು ಕನಸು ಎಂದೆನ್ನಿಸಲೇ ಇಲ್ಲ (ಹೇಮಕೂ. ೧). **ಪಲ್ಲಂಗು**: ೧. ಪಲ್ಲಂಗಿನ ಬುಡಕ್ಕೆ ಲಾಠಿಯು ಬಿದ್ದಿತ್ತು (ನಾಕಥೆ. ೨೧). **ಪಲ್ಲಕಿ**$_1$: ೪. ಸೀತೆಯ ಸುರುಚಿ ಪಲ್ಲಕಿಯಲ್ಲಿ ಬಿಜಯಂಗೈಸಿ ತರುತಿರಲು (ಕೌತಿರಾ. ೪೩-೧೪); ಪಲ್ಲಕಿಯ ಅಂದದಿಂದೇಱಿಯರಸುಮಕ್ಕಳ ಬಲುಸಂದಣಿ ಪೊಱಮಟ್ಟುದು (ತ್ರೀಪಾಲ. ೧೩-೬೩); ಎಡಕ ನಂದೀಕೋಲ, ಬಲಕ ಪಲ್ಲಕಿ (ಕನ್ನಜಾ. ೯). **ಪಲ್ಲಕ್ಕಿ**$_1$: ೪. ಜಗವ ಮೋಹಿಪ ಮಿಂಡಿವೆಂಗಳು ಪಲ್ಲಕ್ಕಿಯ ಸಾರ್ಚಿದರು (ಮೋಹತ. ೨೪-೪); ಬಂದುದಷ್ಟಱೊಳಿದಿರಾಗಿ ಪಲ್ಲಕ್ಕಿ ಜೀಯೆಂದೆನಲೇಱಿದಳೊಸೆದು (ಭರಚ. ೧೯-೧೪೨); ಪಲ್ಲಕ್ಕಿಯ ಮೇಲೇಱಿ ರಾಯರ ದೇವ ಮೆಲ್ಲಮೆಲ್ಲನೆ ಪೋಗುತಿರಲು (ಅನಂಚ. ೪-೩). **ಪಾಲಂಕಿ**$_1$: ೪. ಶಂಕರೊಡೆಯರಾ ಪಾಲಂಕಿಯಲ್ಲಿರ್ಪರು (ವೀಶೈಪು. ೮-೮-೪). **ಪಾಲಕಿ**: ೪. ಪಾಲಕಿ ಹೊತ್ತು ನಡೆದರು . . . ನಿಜನಿಕೇತನಕೆ (ಜಿನಭಾ. ೫-೭); ಮೊಗಲ ಸೈನಿಕವೇಷದಿಂದ ಪಾಲಕಿಯ ಹತ್ತಿರವಿದ್ದು ಅವಳನ್ನು ಪಾರು ಮಾಡುವ ದಾರಿಯನ್ನು ಹೇಳಿ ಕೊಟ್ಟಿದ್ದನು (ಬಂಕಿಮ. ೨೧೯); ಎಲ್ಲರೂ ಪಾಲಕೀಲಿ ಕೂತರೆ ಹೊರೋರು ಯಾರು? (ಗಾದೆ). **ಪಾಲಖಿ**: ೪. ಪಾಲಖಿಯ ಮಧ್ಯದೋಳ್ ಕೃಷ್ಣೇಂದ್ರನು ರೂಢಿಮಿಗೆ ವಿಷ್ಣುವಂದದಿ ಪೊಳೆಯುತಿರ್ಪವನು ನಾಡಾಡಿಗಳು ನೋಡಲಮ್ಮರೆ (ಅರ್ಜಾವಿ. ೨೪-೫೦). **ಪಾಲಿಕೆ**$_1$: ೪. ಏರಯ್ಯ ನೀವು ಪಾಲಿಕೆಯ (ಕುಮಾಸಾಂ. ೧೫೭). **ಪಾಲ್ಕಿ**: ೪. ಕೈಕೆ ಬಳಿಕನ್ನೆಗಂ ಪಾಲ್ಕಿಯೊಳ್ ಕುಳಿತು (ಪರಶು. ೪೩-೧೯); ಟೀಪುಸುಲ್ತಾನರ ಅವರಂಗು ಎಂಬ ಖಾಸಾ ಪಾಲ್ಕಿ ಖಾಸಾ ಕತ್ತಿ ಸಹ ಅಲ್ಲಿ ಬಿಟ್ಟು (ರಾಜೇಂದ್ರ. ೫೧); ನಿಮಗೆ ಪಾಲ್ಕಿ ಬೋಯಿಗಳನ್ನು ಕರೆಯಿಸಿಕೊಟ್ಟು ಕಳುಹುವೆನು (ದೇವೀಜಾ. ೧೫೮). **ಪಾಲ್ಕೆ**: ೪. ನಾಲ್ಕು ಹಣವುಳ್ಳನಕ ಪಾಲ್ಕೆಯಲಿ ಮೆಱೆದಿಕ್ಕು (ಸರ್ವಜ್ಞ. ೧೨೩೯). **ಪಾಲ್ಲಕೆ**: ೪. ಬೆಳ್ಳಿ ಸಾಮಾನದ ಪಾಲ್ಲಕೆ ಮುತ್ತಿನ ಕಂಠಿ ಬಂಗಾರದ ಕೊಡೆ . . . ಚಾಮರಗಳು (ಎಕ. VI, ಚಿಕ್ಕಮ. ೧೦೯-೩೫; 1717). 'ಪರ್ಯಂಕ' ಪರಾ.

ಪಲ್ಲಕ್ಕಿ ಉತ್ಸವ = ದೇವರ ವಿಗ್ರಹವನ್ನು ಪಲ್ಲಕ್ಕಿಯಲ್ಲಿರಿಸಿ ಮೆರವಣಿಗೆ ಮಾಡುವ ಸಮಾರಂಭ,—ಉತ್ಸವ: ಪಲ್ಲಕ್ಕಿ ಉತ್ಸವ ಹೊರಟದೆ. ನೋಡಿ ಬರುವ ಬಾ (ಮಗಮಾಂ. ೯೫). ಪಲ್ಲಕ್ಕಿಯ ಉಂಬಳಿ = ಹಿಂದೆ ಗೌರವಾರ್ಹ ವ್ಯಕ್ತಿಗಳಿಗೆ ವಿತೇಷಗೌರವದ ಪಲ್ಲಕ್ಕಿಯ ವ್ಯವಸ್ಥೆಗಾಗಿ ಕೊಡುತ್ತಿದ್ದ ಉಂಬಳಿ: ಪಲ್ಲಕ್ಕಿಯ ಉಂಬಳಿಗೆ ಕೊಡಗೆಯಾಗಿ ಕೊಟ್ಟೆವಾಗಿ (ಮೈಆರಿ. ೧೯೩೩, ೬೬-೧೨; 1598). [<ಸಂ. ಪಲ್ಯಂಕ./ಪ್ರಾ. ಪಲ್ಲಂಕ]

ಪಲ್ಲಂಗು 'ಪಲ್ಲಂಗ' ನೋ.

ಪಲ್ಲಕಿ$_1$ 'ಪಲ್ಲಂಗ' ನೋ.

ಪಲ್ಲಕಿ$_2$, ಪಲ್ಲಕ್ಕಿ$_2$ (ನಾ). ಒಂದು ಬಗೆಯ ವಸ್ತ್ರ: ಸಾರಂಗವಟ್ಟ . . . ಪಲ್ಲಕಿ ನಲ್ಲೂರ ತೆಳಗಾವಿಯೆಂಬಾ ಸೀರೆಗಳಂ ಸತಿಯರೊಲೆಯೊಳುರುಪಿದ ರಾಗಳ್ (ತ್ರಿಪುವಿ. ೧೦-೨೮). **ಪಲ್ಲಕ್ಕಿ**$_2$: ಕಂದು ಪೊರೆಯ ಪಲ್ಲಕ್ಕಿ [ಪಾಠಾಂ. ಕಾಪೋತಿ ಪಾಲಕಿಯು] ಕಂದವಾರದ ಸೀರೆ ಕೈಬರಹದ ಬಣ್ಣದಂದವನೇನ ಬಣ್ಣಿಸುವೆ (ಅಮುಸಾಂ. ೪-೯). [?]

ಪಲ್ಲಕ್ಕಿ$_1$ 'ಪಲ್ಲಂಗ' ನೋ.

ಪಲ್ಲಕ್ಕಿ$_2$ 'ಪಲ್ಲಕಿ$_2$' ನೋ.

ಪಲ್ಲಕ್ಕಿ$_3$ (ನಾ). ೧. ಒಂದು ಬಗೆಯ ಸಸ್ಯ: "ಮಧುರಾ—ಜೀವಕ, ಅಸಡಿ, ಪಲ್ಲಕ್ಕಿ, ಗರುಗ" (ಓಷಧಿ. ೧೧೪). ೨. ಪೈರಿನ ತೆನೆ; ಹೊಡೆ: ಮುಸುಕಿನ ಜೋಳದ ಗಿಡದಲ್ಲಿ ಪಲ್ಲಕ್ಕಿ ಹಾದಿವೆ (ರೂಢಿ). [?]

ಪಲ್ಲಕ್ಕಿಹರುಹೆ (ನಾ). ಒಂದು ಬಗೆಯ ಸಸ್ಯ: "ಪಲಾಖ್ಯಾಯಾ—ಪಲ್ಲಕ್ಕಿಹರುಹೆ" (ಓಷಧಿ. ೯೨). [ಪಲ್ಲಕ್ಕಿ$_3$ + ಹರುಹೆ(<ಹಱುಹೆ)]

ಪಲ್ಲಟ (ನಾ). ೧. ಬದಲಾವಣೆ; ಮಾರ್ಪಾಟು; ವ್ಯತ್ಯಾಸ: ಲಲಾಟದಲ್ಲಿ ವಿಭೂತಿ ಬರಲಿಕೆ ಪಾಪ ಪಲ್ಲಟವಾಗದೆ (ಬಸವ. ೭೩); ಮಾತು ಪಲ್ಲಟವಾಯ್ತು (ಬಸಪು. ೩೭-೧೧); ತನುವಿಗಾಪ್ಯಾಯನದಿನಂತರ್ಮನಕೆ ಪಲ್ಲಟವಾಯ್ತು (ಕುವ್ಯಾಗ. ೩-೩೭); ಎನ್ನ ಪುಣ್ಯ ಪಾಪಂಗಳೆಲ್ಲ ಪಲ್ಲಟವಾದುವಯ್ಯ (ಅಖಂಡೇ. ೧೦೩-೩೪). ೨. ತಲೆಕೆಳಗು; ಅವ್ಯವಸ್ಥೆ; ತಿರುವುಮುರುವು: 'ಪಲ್ಲಟಂ ಬೀಟ್' ಪರಾ.

[<ಪ್ರಾ. ಪಲ್ಲಟ್ಟ, ಪಲಟ್ಟ./ಸಂ.ಪರಿವರ್ತ./ತುಳು. ತೆಲು. ಪಲ್ಲಟ]

ಪಲ್ಲಟಂಬಾಯ್ (ಕ್ರಿ). ಬದಲಾಯಿಸು; ಮಾರ್ಪಾಟು ಮಾಡು: ಸೂಟ್ಟಿಡೆದ ಕೂಟಂ ಪಲ್ಲಟಂಬಾಯ್ತು ಬಾಯ್ಮಱುಕಂ (ಚಂದ್ರಪು. ೮-೬೮). [ಪಲ್ಲಟ + ಪಾಯ್$_1$]

ಪಲ್ಲಟಂಬೀಟ್ (ಕ್ರಿ). ಅಸ್ತವ್ಯಸ್ತವಾಗಿ ಬೀಳು; ಅವ್ಯವಸ್ಥೆಯಾಗು: ಒಂದೊಂದೆಡೆಯೊಳುಡಿದು ಪಲ್ಲಟಂಬಿರ್ದು ಸುರ್ವುಗೆಟ್ಟ ಪಲ್ಗಳಿಂ . . . ಪಿಸುಣ್ಬೇಟ್ಟ ಜೀರ್ಣತಾರ್ಣ ಸ್ಥಳಿಗಳುಂ (ಚಂದ್ರಪು. (೫-೬೫ ಪ). [ಪಲ್ಲಟ + ಬೀಟ್$_1$]

ಪಲ್ಲಟಂಬೋಗು (ಕ್ರಿ). ಅದಲುಬದಲಾಗು; ವ್ಯತ್ಯಸ್ತವಾಗು: ಮರಳಿ ಬರೆ ಲಿಂಗದ ಕದಂಬವೆದೊಡನ್ನೆತಂದು ಪೀಠಂಗಳೊಳ್ ಪಲ್ಲಟಂಬೋಗಿ ನೆಲಸಿದವು (ಚಿಬಪು. ೫೭-೨೩). [ಪಲ್ಲಟ + ಪೋಗು$_1$(<ಪೋ$_1$)]

ಪಲ್ಲಟಗೊಳಿಸು (ಕ್ರಿ). ಬದಲಾಯಿಸು; ಅದಲುಬದಲು ಮಾಡು: ಅಲ್ಪಪ್ರಾಣ ಮಹಾಪ್ರಾಣ ಅಕ್ಷರಗಳನ್ನು ಪಲ್ಲಟಗೊಳಿಸಿದಾಗಲೂ ಹಲವೆಡೆ ಅರ್ಥಭೇದವಿದೆ (ಸಂಶೋಧ. ೭೭).

[ಪಲ್ಲಟ + ಕೊಳು(<ಕೊಳ್$_1$) + —ಇಸು$_3$]

ಪಲ್ಲಟಿಸು (ಕ್ರಿ). ೧. ಬದಲಾವಣೆ ಮಾಡು; ಮಾರ್ಪಾಟು ಮಾಡು; ವ್ಯತ್ಯಸ್ತಗೊಳಿಸು: ನಿಮ್ಮ ನಿಮ್ಮ ಕಸವರಮಪ್ಪುದ ನಾರಯ್ದು ಪಲ್ಲಟಿಸಲೀಯದೆ ನೋಡಿಕೊಳ್ಳಿಂ (ವಡ್ಡಾರಾ. ೧೨೬-೩); ಎತ್ತಿಕೊಂಡ ಶ್ರುತಿಯಂ ಪಲ್ಲಟಿಸದೆಯುಂ (ಪಂಪಭಾ. ೧೪-೩೦ ಪ);

ಧಾತು ಮಾತು ಪಲ್ಲಟಿಸಿದಡೆ ಗಮನವನಿನ್ನೆಲ್ಲಿಯದೊ (ಅಪಚಂ. ೬೧–೩೬); ಭಾಳಲಿಪಿಗಳ ಲೆಕ್ಕವನು ಪ್ರತಿಕೂಲವಿಧಿ ಪಲ್ಲಟಿಸಿ ಬರೆದಡೆ ಹೇಳಿ ಫಲವೇನು (ಕುವ್ಯಾಗ. ೬–೨೪). ೨. ವ್ಯತ್ಯಾಸಗೊಳ್ಳು ; ಮಾರ್ಪಾಟು ಹೊಂದು ; ಬದಲಾವಣೆಯಾಗು : ಪಲ್ಲಟಿಸಿತ್ತು ಪೂಗುಡಿಗಳಿಂ ಗಿರಿಮಲ್ಲಿಗೆ ಶರದಾಗಮನಸ್ಪರ್ಶದೇಶದೊಳ್ (ಜಾಧಪು. ೪–೬೫). ೩. ತಿರುವುಮುರುವು ಮಾಡು ; ತಲೆಕೆಳಗು ಮಾಡು : (೪).

[ಪಲ್ಲಟ+–ಇಸು೩]

ಪಲ್ಲಣ, ಪಲ್ಲೀಣ, ಹಲ್ಲಣ, ಹಲ್ಲಳ (ನಾ). ೧. ಕುದುರೆ, ಎತ್ತು ಮೊದಲಾದುವುಗಳ ಬೆನ್ನಿನ ಮೇಲೆ ಹಾಕುವ ತಡಿ ; ಜೀನು : "ಪಲ್ಯಯನಮೆಂದೆನಲ್ ಪಲ್ಲಣಂ" (ಚತುರ. ೧೪); ಕುದುರೆಯಿಂದಿಟ್ಟುದು ಪಲ್ಲಣಮಂ . . . ಕಟ್ಟಿದು (ಪಡ್ಡಾರಾ. ೧೬೨–೧೯) ; ಸಡಗರದೇಟ್ಗೊಯುಂ ಕಳಕಳಧ್ವನಿಯುಂ ಬೆರಸಾಡುವಂತೆರಟ್ಟಪೆಯೊಳ ಮಾಗಳೊರ್ಮೊದಲೆ ಪಲ್ಲಣದಿಂಕ್ಕಿಪುದಲ್ಲಳಲ್ದೊಳಂ (ಪಂಪಭಾ. ೧೩–೩೬) ; ಕೊಳಗುವ ಪೊನ್ನ ಪಲ್ಲಣದ ನುಣ್ಪೆಳಗಾಗಸಮಂ ಮುಸುಂಕೆ (ಕಬ್ಬಕಾ. ೩೦೪). ೨. ಅಂಬಾರಿ : ಅನೆಯ ಪಲ್ಲಣಮನಾಡು ಪೊತ್ತು ಕೊಳಲಾಜಿದೆಂಬಂತೆ (ಪಸಾಕ. ೪೮೨). **ಪಲ್ಲೀಣ : ೧.** "ಪಲ್ಯಯನ–ಪಲ್ಲೀಣ, ಹಲ್ಲೀಣ" (ಪೊಸುಗ. ೧೧೭). **ಹಲ್ಲಣ : ೧.** "ಪರ್ಯಾಣಂ, ಪಲ್ಯಯನಂ, ಇವು ಹಲ್ಲಣ" (ನಾಚಿಂತಾ. ೧೩೪); ಮಾಮರದಡಿಯೊಳ್ ಹಲ್ಲಣಮಂ ಬಿಟ್ಟು (ಪಂಚತಂ. ೧೨೦–೯); ಹೊನ್ನ ಹಲ್ಲಣದ ರತ್ನದ ಪಕ್ಕರಕ್ಕೆಯ . . . ಜಾತ್ಯಶ್ವಂಗಳ ವಳಯಮುಂ (ಗಿರಿಕ. ೬–೫೫ವ); ಹಕ್ಕರಿಕೆಗಳ ಹಲ್ಲಣದ ಕವಚದ ಸೀಸಕದ . . . ಕಣೆಯ ಹೊಱೆ ಜಾಚಿದವು ಕಟಿಕಾಚಾರ್ಯನಿದಿರನಿ (ಕುಸ್ಯಾದ್ರೋ. ೧೫–೧೯). **ಹಲ್ಲಳ : ೧.** ಗುಳವನಿಳುಹಿದವಾನೆಗಳು ಹಲ್ಲಳದ ಬಿಡೆ ಭುಲ್ಲೈಸಿದವು ಹಯಕುಳ (ಕುವ್ಯಾಕ. ೫–೩). [<ಸಂ.ಪಲ್ಯಯನ]

ಪಲ್ಲಣಂಗಟ್ಟಿಸು (ಕ್ರಿ). ಜೀನು ಹಾಕಿಸು ; ತಡಿ ಹಾಕಿಸು : ಖಡರಂ ಪಿಡಿಪಟ್ಟು ಪಲ್ಲಣಂಗಟ್ಟಿಸಿಕೊಂಡುಮೇನೊ ಮುಖಲೀನ ಖಲೀನ ಕಶಾಧಿಘಾತದಿಂ ಕೊಟ್ಟಿಸಿ ನೋವನೆಯ್ದಿದಂ (ಪಂರಾಮಾ. ೪–೧೧೫). [ಪಲ್ಲಣಂಗಟ್ಟು+–ಇಸು೩]

ಪಲ್ಲಣಂಗಟ್ಟು (ಕ್ರಿ). ಜೀನು ಹಾಕು ; ತಡಿಹಾಕು : ಅಡ ಪೋರಂಗಳಂ ಕೊಂಡು ತೀಡಾಟ್ಟಲೆದು ಪಲ್ಲಣಂಗಟ್ಟ ನಡೆಯಿಸಿ (ಬಂಹರಿ. ೪–೩೪ ಪ); ಸುಲಕ್ಷಣಗುಣಾಢ್ಯಿಗಳ್ ಪಲ್ಲಣಂಗಟ್ಟ ಬಂದಿರ್ದುವು . . . ತುರಂಗಂ (ಪುಷ್ಪಪು. ೫–೧೦). [ಪಲ್ಲಣ+ಕಟ್ಟು೧]

ಪಲ್ಲಣಿಸು, ಹಲ್ಲಣಿಸು, (ಕ್ರಿ). ೧. ಜೀನು ಹಾಕು; ತಡಿಯನ್ನು ಅಳವಡಿಸು : ಪಲ್ಲಣಿಸಿದಿಂದ್ರಾಯುಧಮಂ ಗೃಹೀತಶಮಾಯೋಗನಾಗಿ (ಕಾದಂಉ. ೪೨೫) ; ಪಣ್ಣಾನೆಯಂ ಪಲ್ಲಣಿಸು ಕುದುರೆಯಂ ಪೂಡು ತೇರಂ (ಜಗವಿ. ೬–೬೫) ; ಪಲ್ಲಣಿಸಿ ತಂದಂ ವಾಹಕೋತ್ತಮಸೊರ್ಬಂ . . . ವಿಜಯಶ್ರೀಗೇಹಮಂ ವಾಹಮಂ (ಕುಸುಮಾ. ೪–೬೩). **ಹಲ್ಲಣಿಸು,** : ೧. ಹಲ್ಲಣಿಸು ವಾಜಿವ್ಯೂಹಮಂ ಕೂಡೆ ಪೂಡು ರಥವ್ರಾತಮಂ (ಗಿರಿಕ. ೬–೫೫) ; ಹಲ್ಲಣಿಸಿದ ವಾರುವ ವಿದೆ ಮಗನೆ (ಹಜಶಾ. ೧೨–೬೦ ರಗಳೆ) ; ದಾರಿದಿಗದವು . . . ಹಲ್ಲಣಿಸಿದ ಹಯಾಳಿ (ತೊರಂರಾ. ೨–೬–೫೧). ೨. ಧರಿಸು ; ತೊಡು : ಹೊನ್ನು ಹೆಣ್ಣು ಮಣ್ಣಾನಾವರಿಸಿಕೊಂಡು ಒಡವೆ ಆಭರಣಂಗಳ ಹಲ್ಲಣಿಸಿಕೊಂಡು ಬಂದು ಸರ್ವರಿಗೆ ಶಾಸ್ತ್ರೋಪದೇಶವ ಹೇಳುವರು ವೇಷಧಾರಿಗಳು (ಪುಡಿಸೂ. ೪೯–೬೯) ; ವೇಷವನು ಹಲ್ಲಣಿಸಿ ನಾನಾದೇಶದೇಶವ ತೊಳಲಿ (ಸದ್ಗುರು. ೫–೧೪) ; ಪುರಜನವ ಮೆಚ್ಚಿಸುವ ಕೋಡಿಗರಂತೆ ವೇಷಮಂ ಹಲ್ಲಣಿಸಿಕೊಂಡು ನಿಜವಿರಕ್ತರಂತೆ ವೇಶಮಧ್ಯದಲ್ಲಿ ಸುಳಿದು (ಭಸನ. ೬೪–೩೬). ೩. ಸಜ್ಜಾಗು ; ಸಿದ್ಧವಾಗು : ಹಲ್ಲಣಿಸಿದುದು ಯಾದವರ ಪಡೆ . . . ಗಂಧೀರಧೀರಿಯ ಬಹಳ ರಭಸದಲಿ (ಕುವ್ಯಾಸ. ೧೪–೬೦) ; ಹಲ್ಲಣಿಸಿ ಹರಿತಂದು ಮೋಹರವಲ್ಲಿಗಲ್ಲಿಗೆ ನಿಂದುದು (ಕುವ್ಯಾಭೀ. ೬–೨). [ಪಲ್ಲಣ+–ಇಸು೩]

ಪಲ್ಲಮರಿ 'ಪಲ್ಲಮಜಿ' ನೋ.

ಪಲ್ಲಮಜಿ, ಪಲ್ಲ ಮರಿ, ಪಲ್ಲವರಿ (ನಾ). ೧. ಅನೆಯ ಮರಿ ; ಮರಿಯಾನೆ : "ಪಲ್ಲಮಜಿ = ಅನೆಯ ಮರಿ" (ಕಪದ. ಪರಿ. ೨) ; ಪಿಡಿಯೆ ಮುಲಲ್ ಪಿಡಿ ಸ್ವಕ್ಕದೊಳಡಸಿದ ಪಲ್ಲವಕೆ ಪಲ್ಲಮಜಿ ನಿಳ್ಕುವುದುಂ ಕಡೆಗಣ್ಣೊಳ್ ಕಂಡೊಂದಿಭಮುದಿತ್ತುದು ಸಾರ್ದ್ರಸಲ್ಲಕೀ ಪಲ್ಲವಮಂ (ಕಾವ್ಯಾನ. ೧೪೫) ; ಸಂಗಳಿಸಿತದೊಂದು ಪಲ್ಲವಮಜಿ ತಾಯ್ವಿಡಿಗಂತುಮನಂತಸೌಖ್ಯಮಂ (ಜಂದ್ರಪು. ೫–೬೫) ; ಅದೊಂದು ಪಲ್ಲವಮಜಿ ಲಲ್ಲೆಯ ಜಲ್ಲಮನೇನೊಡರ್ಚತೋ (ಭಸುನಾ. ೬–೧೧೪). ೨. ಆನೆ ; ಅಡಿಯಿಡುವುವು ಪಲ್ಲವಮಜಿಯು ಮಜಿಗಳ್ ವನದೊಳ್ (ಕಬಕಂ. ೩–೪೩). 'ಪಲ್ಲವಮಜಿರಕ್ಕಸ' ಪರಾ. **ಪಲ್ಲಮರಿ :** ೧. ಳರಿ ಪಲ್ಲಮರಿಯನೆತ್ತಿರೆ ಕೆಸರಿಂ (ನಾಸಂಜ. ೪–೧೬). **ಪಲ್ಲವರಿ :** ೧. "ಪಲ್ಲವರಿಯೆಂದೆನಲ್ಕಾನೆಮರಿಯನ್ಕುಂ" (ಕಶಕ. ೬೧).

[ಪಲ್ಲ₁+ಮಜಿ೨]

ಪಲ್ಲವಮಜಿರಕ್ಕಸ (ನಾ). ಒಬ್ಬ ರಾಕ್ಷಸನ ಹೆಸರು ; ಗಜಾಸುರ : ಇದಿರಾಂತ ಪಲ್ಲವಮಜಿರಕ್ಕಸನಂ ಸದೆದು (ಶಚಶಂ. ೫–೯).

[ಪಲ್ಲವಮಜಿ+ರಕ್ಕಸ]

ಪಲ್ಲಯಿಸು 'ಪಲ್ಲವಿಸು' ನೋ.

ಪಲ್ಲಲ 'ಪಲವಲ' ನೋ.

ಪಲ್ಲವ₁ 'ಪಲ್ಲವಿ' ನೋ.

ಪಲ್ಲವ₂ (ನಾ). ೧. ಚಿಗುರು ; ಕಳಿರು : ಪೊಂಗೊಡನಂ ತಪಾಳ ಪಲ್ಲವದೊಳೆ ಮುಚ್ಚಿ ಪಂಪದೊಳೆ ಊಡುಕಮಾಂತುದು ಕರ್ಪನಾಕೆಯೂ (ಪಂಪಭಾ. ೧–೧೩೫) ; ಆ ಲತಾಂಗಿ ಲಜ್ಜಿಸಿ ತನುವಂ ನಿಜಸ್ಮಿತಸಿತಾಂಶುಕ ಪಲ್ಲವದಿಂ ಮುಸುಂಕುವಳ್" (ಕಾದಂಉ. ೪೯); ಪಾಸುವ ಪಲ್ಲವಂಬೊಲಿರೆ ಕೇಸಡಿಗೆಂಪು (ಪುಷ್ಪಪು. ೧೩–೧೧೯). ೨. ಮೊಳಕೆ; ಅಂಕುರ. ೩. ಮೊಗ್ಗು. ೪. ಅಲತಿಗೆ. ೫. ಹುಲ್ಲಿನ ಗರಿ. ೬. ರೆಂಬೆ ; ಕೊಂಬೆ. ೭. ಮುಂಗೈ. ೮. (ಬಾವುಟದ) ಬಟ್ಟೆಯ ಜುಂಗು; ವನ್ಯದ ತುದಿ: ಕೆಳ್ಕೆಯದ ಪಲ್ಲವನಗಿಯೆ ಪೆಱಿದುದು (ಕುವ್ಯಾದ್ರೋ. ೬–೪). ೯. ವಿಟ ; ಕಾಮುಕ : ಮುಲ್ಲಿಕಾಲಳನೆಯೊಳೇಂ ಮನಂದಿಡದನೋ ಬನದೊಳ್ಸಹಕಾರಪಲ್ಲವಂ (ರಾಜಶೇ. ೪–೫೪) ; ತಂದೊಡಲ್ಲದೆ ಪೊಸ ಪರ್ಬಮಂ ನೆಗಳ್ತುದಾಗದು ಮಧ್ಯಹ್ನದೇವತಾಳ ಕಾಯ್ವುದು ಪಜಿತೊಂದು ಬಲ್ಸುಜಾಯನಿಕ್ಕುತೆ ಪಲ್ಲವ ಮಾಡೆ ಪರ್ಬಮಂ (ಕೃಷಿ. ೧೬–೧೯). ೧೦. ತೋಳ ಬಂದಿ. ೧೧. ಬಳೆ ; ಕಂಕಣ. ೧೨. ಬಲ ; ಶಕ್ತಿ. ೧೩. ಹರಡಿರುವಿಕೆ. ೧೪. ಶೃಂಗಾರ ಕೇಳಿ. ೧೫. ವೀಣೆ. ೧೬. ರತ್ನಸಮೂಹ. ೧೭. ಬಾಲದಂತೆ ನೀಳವಾದ ಕೂದಲು. ೧೮. ಆನೆ. ೧೯. ಬಾಲಕ. ೨೦. ಶಬ್ದ ಸಮೂಹ : "ತಳಿರುಂ ವಿದ್ರುಮ ವೀಣೆ ರತ್ನನಿಚಯಂ ಲಾಂಗೂಲಕೇಶಂ ವಿಟಂ ಕಳಭಂ ಶಬ್ದಸಮೂಹ ಬಾಲಕರವಿಂಚುಂ ಪಲ್ಲವಾಖ್ಯಂ" (ನಾನಾರ್ಥ. ೧೩೧) ; "ಬಾಲೆಯರು ಪಸಳ ಗಜ ಜನಜಾಲಂ ವಿಟ ತಳರು ವೀಣೆ ರತ್ನಂ ಮುಳ್ಳು ಹೋಲುವ ತಲೆನವಿರುಂ ಪಶುದೇಳಿಗೆ ಪಲ್ಲವವೆಸರ್ಗಳೀ ಭೂವಿಯೊಳಂ" (ನಾನಾಕೋ. ೧೫೦). ℙ ಹದಿನೈದರಿಂದ ಇಪ್ಪತ್ತರ ವರೆಗಿನ ಅರ್ಥಗಳು ವಿಚಾರಾರ್ಹವಾದುವು. ೨೧. ಒಂದು ರಾಜವಂಶದ ಹೆಸರು ಮತ್ತು ಆ ವಂಶದಲ್ಲಿ ಹುಟ್ಟಿದವನು : ಕೇಳಯಪಲ್ಲವರಂ

ಕಾದೆಱದು ಪೆತ್ತ ಜಯಸ್ತಾ ವಿಜಆರಸನ್ನೆ ಬಾಳ್ಚಟ್ಟು ಪಲ್ಮಡಿಲುಂ ಮೂಱು ವೞಿಲುಂ ಕೊಟ್ಟಾರ್ (ಮೈಅರಿ. ೧೯೩೬, ೧೬-೧೧; 450) ; ಪಲ್ಲವ ಧುಯಗೊಣ್ಡೋಡದಿರ್ (ಎಕ. II, ೫೯-೧೧೨ ; 974) ; ಪಲ್ಲವ . . . ಕುರುಸ್ಯ ಮುರುಪ್ರಭೃತಿಭೂಪಾಲಕರಿಂ ಭಯಾನಕರಸಮುಂ . . . ನೆಗೞುತ್ತುಮಿರೆ (ಜಗವಿ. ೨-೩೯ ಪ); ಕಿಕ್ಕಿಜುಗಿಜುದು ಕುಳ್ಳಿರ್ದು ಲಾಳ ಗ್ಗಳ ಚೋಳ ಕೇರಳ ಪಾಂಡ್ಯ ಪಲ್ಲವ . . . ಮೊದಲಾದ ರಾಜಪುತ್ರರ ಪಂಕ್ತಿಗಳೊಳಂ (ಗಿರಿ. ೨-೧೦೫ ಪ). ೨ಪಿ. ಒಂದು ದೇಶದ ಹೆಸರು : ಪಲ್ಲವ ಪಾರಿಯಾತ್ರಪ್ರಭೃತಿ ನಾನಾದೇಶಯೋಷಿದ್ಗೀಯಮಾನಸೌಭಾಗ್ಯ ಗೀತನುಂ (ಚಂದ್ರಪು. ೪-೪೦ ಪ). ೨ಷಿ. [ನಾಟ್ಯ] ಮೂವತ್ತು ಬಗೆಯ ನೃತ್ತಹಸ್ತಗಳಲ್ಲಿ ಒಂದು ; ☞ "ಎರಡು ಪತಾಕ ಹಸ್ತಗಳನ್ನೂ ಹೊರಕ್ಕೆ ಸುತ್ತಿಸುತ್ತ ತೋಳುಗಳನ್ನು ಮೇಲ ಕ್ಕೆತ್ತಿ ನೀಡಿ ಒಳಕ್ಕೆ ಸುತ್ತಿಸುತ್ತ ಕೈಗಳನ್ನು ಸ್ವಸ್ತಿಕದಂತೆ ಹಿಡಿಯುವುದು" (ಲಾಸ್ಯರಂ. ೨೫೦ ಗದ್ಯಾನುವಾದ) : ಚತುರಸ್ರ . . . ಪಲ್ಲವ . . . ವಲಿತ, ಲಲಿತ—ಈ ಮೂವತ್ತು ನೃತ್ತಹಸ್ತಂಗಳ್ (ಲಾಸ್ಯರಂ. ೨-೪೪ ಪ).

ಪಲ್ಲವಕ್ಷತ್ರಿಣೇತ್ರ = ಪಲ್ಲವರ ವಂಶದಲ್ಲಿ ಶಿವನಂತಿರುವವನು; ಒಂದು ಬಿರುದು: ಪಲ್ಲವಾದಿತ್ಯ ಪಲ್ಲವಕ್ಷತ್ರಿಣೇತ್ರ . . . ಶ್ರೀವೀರಬಲ್ಲಾಳ ದೇವರಸರು . . . ಪೃಥ್ವೀರಾಜ್ಯಂಗೆಯ್ವುತ್ತಮಿರೆ (ಎಕ. III (R), ಗುಂಡ್ಲು ೫೦-೬ ; 1320). ಪಲ್ಲವಾದಿತ್ಯ = ಪಲ್ಲವರ ವಂಶದಲ್ಲಿ ಸೂರ್ಯನಂತಿರುವವನು ; ಒಂದು ಬಿರುದು : ಪಲ್ಲವಾದಿತ್ಯ ಪಲ್ಲವಕ್ಷತ್ರಿಣೇತ್ರ . . . ಶ್ರೀವೀರಬಲ್ಲಾಳದೇವರಸರು . . . ಪೃಥ್ವೀರಾಜ್ಯಂ ಗೆಯ್ವುತ್ತಮಿರೆ (ಎಕ. III (R), ಗುಂಡ್ಲು ೫೦-೬ ; 1320). [ಸಂ.]

ಪಲ್ಲವಕ (ನಾ). ೧. ಚಿಗುರು ; ತಳಿರು. ೨. ಅಕೋಕ ವೃಕ್ಷ. ೩. ವಿಟ ; ಜಾರ ; ಕಾಮುಕ : "ಪಲ್ಲವ[ಪಜಾಂ. ವಿ]ಕನಾ ವಿಟಂ ವೇಶ್ಯಾವರಂ ಭುಜಂಗಂ ಬೊಜಗನಕ್ಕುಂ" (ಮುಂಗರಾ. ೭೧-೧೫೮) ; ರುಕ್ಮಿಣಿಯಾ . . . ತಿದಿಪಳಿಗ್ಗಳ್ ಪಲ್ಲವಕಮನಃಪ್ರಮೋದಮಂ ಪೆರ್ಚು ಸುಗುಂ (ಜಗವಿ. ೧೦-೧೯) ; ಆ ಬೆಡಂಗಿನ ಕೇರಿಯೊಳ್ ಪಲ್ಲವಕಾನಂದ ನಿಧಿಯಾಗಿಯುಂ ಮಂದನಗುಣತೀಪುಂತಾಸ್ಪದಮಾಗಿಯುಂ . . . ವರ್ಧಸುತ್ತಿರ್ದನೊರ್ವ ವಿಟನಾಯಕಂ (ಪಪುರಾ. ೨-೭೧ ಪ). ೪. ಒಂದು ಬಗೆಯ ವಿಮಾನ. ೫,೪ಃ ಆ ನದಿ . . . ಪಲ್ಲವಕಮಯಮಾಗಿಯುಂ ಪಣ್ಯಾಂಗನಾವಾಟಮಲ್ತು (ತ್ರಿಪುವಿ. ೨-೨೫ ಪ). ೫. ಒಂದು ದೇಶದ ಹೆಸರು ; ಪಲ್ಲವರ ನಾಡು : ಚೇರ ಕೊಂಕಣ ಪಲ್ಲವಕ ಪಪುರಾ ಜಾಳಾಂಧ್ರ ದ್ರವಿಳ ಕಾಶ್ಮೀರ ಬಾಹ್ಲಿಕ . . . ದೇಶಂಗಳೊಳಿಸೆವ ಜಂಗಮವು ಭಕ್ತಾಳಿ (ಬಸಪು. ೬-೧೯). [ಸಂ.]

ಪಲ್ಲವಗ್ರಾಹಿ (ನಾ). (ಆಲಂ) ಆಳವಾದ ಪಾಂಡಿತ್ಯವಿಲ್ಲದವನು: ಪೆಜನೊರ್ವನೊಲ್ದು ನೊಲಿಸಿಯುಮೊಂದೆಡೆಯೊಳ್ನಿಲ್ಲದ ಪಲ್ಲವಗ್ರಾಹಿ ನೋಡಂಬಾಡನೆ ಬಂದು ಕಾಲ್ವಿಡಿವುದುಂ (ಮಲ್ಲಪು. ೬-೪೧).

[ಸಂ.ಪಲ್ಲವಗ್ರಾಹಿನ್]

ಪಲ್ಲವಜಂಗಮ (ನಾ). ವಿಟನಾದ ಜಂಗಮ : ಪಲ್ಲವಜಂಗಮುಂ ಪಣವಧೂಟಿಯ ಗೇಹದೊಳಿರ್ದು (ಪ್ರಭವಿ. ೪-೩೦).

[ಪಲ್ಲವ$_2$ + ಜಂಗಮ$_1$]

ಪಲ್ಲವತಟಾಕ (ನಾ). ಒಂದು ಊರಿನ ಹೆಸರು : ಉತ್ತರತಃ ಬೆಪ್ಪಪ್ಪಾಟ್ಟುಣಿಸೆಪ್ಪಟ್ಟಸಹಿತಂ ಪಲ್ಲವತಟಾಕವಿಮಿತಗ್ರಾಮಸ್ಯ ನಾಮ ಧೇಯಂ (ಎಕ. VII(R), ನುಂಡ್ಯ. ೩೫-೩೬ ; 713).

[ಪಲ್ಲವ$_2$ + ತಟಾಕ]

ಪಲ್ಲವನೇತ್ರೆ (ನಾ). ಚಿಗುರಿನಂತೆ ಕೆಂಪಾದ ಕಣ್ಣುಗಳುಳ್ಳವಳು: ಅನವರತಬಾಷ್ಪವಾರಿಧಾರಾಪೂರಪರಿವಾಂತ ಪಲ್ಲವನೇತ್ರೆಯುಂ (ಗದಾಯು. ೧-೫೫ ಪ). [ಸಂ.ಪಲ್ಲವನೇತ್ರಾ]

ಪಲ್ಲವಪಂಡಿತ (ನಾ). = ಪಲ್ಲವಗ್ರಾಹಿ : ಪಹಿಲವನು ವೇಧ್ಯಸುವಡೆ ನರರಹಿಪತಿಗಳೇ ಭಟರ ಪಡಿಯಿಡಬಹುದೆ ಪಲ್ಲವಪಂಡಿತರ ಸತ್ಕಾವಿಗಳ ಗತಿಯ (ಕುವ್ಯಾಕ. ೨೩-೬).

[ಸಂ.]

ಪಲ್ಲವಭಂಗ (ನಾ). ಚಿಗುರನ್ನು ಕೊಯ್ಯುವುದು : ಲತಾಂಗಿ ... ರಜರಣಕವ್ಯಥಾವ್ಯಜನಪಲ್ಲವಭಂಗವಾದಪ್ಪುದೆಂದಂಜಿ ನಡುಗುವಂತೆ ನಡುಸುಯ್ಯಗಾಳಿಯಿಂ ನಡುಗುವ ಲತಾಮಂಟಪದೊಳಿರ್ದಳ್ (ಕಾದಂಬ. ೬೭೪).

[ಪಲ್ಲವ$_2$ + ಭಂಗ]

ಪಲ್ಲವರಿ 'ಪಲ್ಲವಮಜಿ' ನೋ.

ಪಲ್ಲವಸತ್ತಿಗೆ (ನಾ). ೧. ಚಿಗುರು, ರತ್ನ ಮುಂತಾದವುಗಳಿಂದ ಅಲಂಕರಿಸಿದ ಛತ್ರಿ.—ಕೊಡೆ : ಪಲ್ಲವಸತ್ತಿಗೆ ಸಂಗಂ ದುಲ್ಲಿಳ ಜಯಮಂಗಲಂಗಳಂ ಚೋಳಮಹೀವಲ್ಲಭನತ್ತಡೆ (ಎಇ. VI, ೨೧೬-೧೧೦ ; 1037) ; ವಾರುವನ ಬೆನ್ನೆವಾಯ್ದು ಅಲ್ಲಲ್ಲಿ ಕೈದೀವಿಗೆಗಳು ತೆಲ್ಲಯ್ಸೆ ಪಲ್ಲವಸತ್ತಿಗೆ ಮೇಲ್ಮನಗೆ (ಪಂಬಿರ. ೧೦-೪೯) ; ಮುತ್ತ ಮೆಜ್ಜಿದವು ಮೇಲೆ ಪಲ್ಲವಸತ್ತಿಗೆಯ ಸಾಲುಗಳು ಬಿರುದಿನ ಕತ್ತರಿಯ ಹೀಲಿಗಳ ರುಲ್ಲರಿ ಮುಸುಕಿದವು ಗಜವ (ಕುವ್ಯಾದ್ರೌ. ೩-೬). ೨. (?) : ಕೆಲಬರ್ ಪಲ್ಲವಸತ್ತಿಗೆಗಳಂತೆ ಪೊಳೆವ ಪಲ್ಲವಸತ್ತಿಗೆಗಳನೆತ್ತಿಯುಂ (ಲೀಲಾವ. ೧೧೧-೫೪ ಪ). [ಪಲ್ಲವ$_2$ + ಸತ್ತಿಗೆ]

ಪಲ್ಲವಹಸ್ತ (ನಾ). [ನಾಟ್ಯ] ಮೂವತ್ತು ಬಗೆಯ ನೃತ್ತಹಸ್ತ ಗಳಲ್ಲಿ ಒಂದು : ಎತ್ತಿದ ಬಾಹುಗಳಿಂ ಮಿಗೆ ಚಿತ್ರಿಪ ಪತಾಕಹಸ್ತಮವು ವ್ಯಾವರ್ತಂಬೆಳ್ಕುಂ ಪಸರಿಸಿ ಮಿಗೆ ಪರಿವೃತ್ತ[ಂ] ಸ್ವಸ್ತಿಕಮವಾಗೆ ಪಲ್ಲವ ಹಸ್ತಂ (ಲಾಸ್ಯರಂ. ೨-೫೬). [ಪಲ್ಲವ+ಹಸ್ತ]

ಪಲ್ಲವಾಚಾರಿ (ನಾ). ಒಬ್ಬಾತನ ಹೆಸರು : ಪಲ್ಲವಾಚಾರಿ ಲಿಕಿತಂ (ಎಕ. II, ೨೧-೫ ; ಸು. 700). [ಪಲ್ಲವ$_2$ + ಆಚಾರಿ]

ಪಲ್ಲವಾಯುಧ (ನಾ). ಚಿಗುರನ್ನು ಆಯುಧವನ್ನಾಗಿ ಉಳ್ಳವನು; ಮನ್ಮಥ : ಪಲ್ಲವಾಯುಧನು ಳೀ ಳೀ ನಾನು ನೆನೆದುದು ಹೊಲ್ಲ ವೆಂದೊಳಗೆ ಹೇಸಿದನು (ಭರಚ. ೫೧-೧೧೫೭). [ಪಲ್ಲವ$_2$ + ಆಯುಧ]

ಪಲ್ಲವಿ$_3$, ಪಲ್ಲ$_3$, ಪಲ್ಲವ$_1$ (ನಾ). ೧. [ಸಂಗೀತ] ಹಾಡಿನ ಆರಂಭ ದಲ್ಲಿದ್ದು ನುಡಿಗೊಂದು ಸಲ ಪುನರಾವರ್ತನೆಗೊಳ್ಳುವ ಭಾಗ : ಲಿಂಗತ್ರಯ ವಚನತ್ರಯ . . . ಸಂಗೊಳಿಸದೆಯೊಂದೊಂದನೆ ಹಿಂಗದೆ ಪಿಡಿದೊರೆವುದಬಲೆ ಪಲ್ಲವಿ ಪದದೊಳ್ (ಕವಿಜ. ೩-೩೩) ; ಗಾನಸೌಧದ ಕಳಶವೇ ಪಲ್ಲವಿ . . . ಗಾಯಕನ ವಿಶಾಲಮನೋಧರ್ಮದ 'ಆಕೃತಿ ಗೋಲು ಪಲ್ಲವಿ (ಸಂಗೀಚಂ. ೯೧) ; ಈ ರೀತಿಯ ಸಮಯಸ್ಫೂರ್ತ ಸಂಗೀತಕ್ಕೆ ಐದು ಅಂಗಗಳಿವೆ. ಆಲಾಪನೆ, ತಾನ, ಪಲ್ಲವಿ, ನಿರವಲ್ ಮತ್ತು ಸ್ವರ (ಸಂಗೀತ. ೧). ೨. (ಆಲಂ) ಪುನಃ ಪುನಃ ಹೇಳುವ ಮಾತು; ಪುನರಾವೃತ್ತಿಯ ಹೇಳಿಕೆ : ಬಿಡು ನೀನು ಮುಂದೇನು ಎನುವ ಪಲ್ಲವಿಯನು (ಪಂಚಾಸ. ೧೪೨-೧೭) ; ಮತಗಳೆಷ್ಟೋ ಪಥಗಳಷ್ಟು ಎಂಬುದು ಅವರ ಉಪದೇಶದ ಪಲ್ಲವಿ (ಭಾರದ. ೬೨೩) ; ನಾನು ಅವನ ಸಂಗ ಮಾಡುವುದಿಲ್ಲ ಎಂಬುದೇ ಅವಳ ಪಲ್ಲವಿಯಾಯಿತು (ಅಶ್ರಮ. ೬೨). **ಪಲ್ಲ$_3$** : ೧. ಒಂದು ಹಿಗ್ಗಿನ ಪಲ್ಲ, ಹಲವು ನುಡಿಯಲಿ ಹರಿಯೆ ಆಟ ಪಾಟದ ಹಾಡು ಕಳಸವಿಟ್ಟಂತೆ ! (ಉಯ್ಯಾಲೆ. ೪೨-೭) ; ಮುತ್ತಿನ ನಾಲ್ವರು ಹುಡುಗರು ಪಲ್ಲಾ ಅನ್ನುತ್ತಿದ್ದಾರೆ (ಅನಂತ. ೬೨). **ಪಲ್ಲವ$_1$** : ೧. ಪದವಿಡುವೆಡೆಯೊಳ್ ಪಲ್ಲವದೊಳ್ ಪದದೊಳುಭಯಗಣ ಸಮ ನಾಗಲ್ ಸಲ್ಲಲಿತ ಕೀರ್ತಿಯಾದಪುದು (ಛಂದೋಂಬು. ೧-೪೬ ಉದಾಪದ್ಯ).

[ದೇ.‖ ತಮಿ.ಮಲ.ತೆಲು.ಪಲ್ಲವಿ./ಸಂ.ಪಲ್ಲವೀ = ರಾಗಾಂಗರಾಗ]

ಪಲ್ಲವಿಕ (ನಾ). ೧. ವಿಟ. ೨. ಮೀನು. ೧, ೨: ಆ ಮಹಾರ್ಣವಂ . . . ಗಾಣಿಕ್ಯಗೇಹರಾಜಿಯಂತೆ ಪಲ್ಲವಿಕಸಂತಾನಕ್ರೀಡಾ ಪ್ರಸಂಚಯುಂ . . . ಚತುರ್ಮುಖನಂತೆ ಸರಸ್ವತೀಪತಿಯುಮೆನಿಸಿದುದು (ಜಗವಿ. ೧-೪೪ ಪ). 'ಪಲ್ಲವಕ' ಪರಾ. [ಸಂ.]

ಪಲ್ಲವಿಕೆ (ನಾ). ಹರಡಿರುವುದು; ಜನಸಮೂಹ: ಸಕ್ರಮದ ಪಾಳಿಯ ಪಲ್ಲವಿಕೆ ಪರಿವಡೆದುದಮಳಪ್ರಣವಮಯವಾಗಿ (ಕುಪ್ಯಾಕ. ೭-೩೫). [ಪಲ್ಲವಿಸು+-ಇಕೆ]

ಪಲ್ಲವಿತ (ಗು). ೧. ಚಿಗುರಿದ; ಕುಡಿಯೊಡೆದ: ಪಲ್ಲವಿತ ಮುಕುಳಿತ ವಿಸ್ತಾರಿತ ರಮ್ಯಾಶೋಕಮಹೀರುಹಮುಂ (ಅದಿಪು. ೧೦-೪೧); ಚಿತ್ತ ಪಲ್ಲವಿತಾನುರಾಗಂಬೆತ್ತು ಕನ್ನದ ಬೊಮ್ಮಿದೇವನುದಾತ್ತಭಕ್ತಿಸ್ಥಿತಿಯೊಳೆಂದಿನ ಪರಿಯೂಳಿರುತಿರ್ದ (ಬಸಪು. ೩೧-೩೧); ಪಲ್ಲವಿತ ನವಚೂತತರು ಬೇಸಗೆಯ ಝಳಕೆ ನಿಲ್ಲದಸವಳಿದು ಜೋಲ್ವಂತೆ (ಜೈಮಿಭಾ. ೨೧-೩೬). (ನಾ). ೨. ಚಿಗುರಿದುದು; ಕುಡಿಯೊಡೆದುದು: ಅನುರಕ್ತಾಶೋಕಪಲ್ಲರಿ ಪಲ್ಲವಿತಮಾಗೆಯುಂ . . . ವಸಂತ ಸಮಯದೊಳ್ (ಮಲ್ಲಿಪು. ೫-೨). [ಸಂ.]

ಪಲ್ಲವಿಸು, ಪಲ್ಲಯಿಸು, ಪಲ್ಲೈಸು (ಕ್ರಿ). ೧. ಚಿಗುರು; ಕುಡಿಯಿಡು: ನೆಲೆಮಾಡಂಗಳನೇಱಿದ ನೀಱೆಯರಲಕ್ತಕರಾಗರಂಜಿತ ಪದಪಲ್ಲವಂಗಳಿನವನಿತಳಮೆಲ್ಲಂ ಪಲ್ಲವಿಸಿದಂತೆಯುಂ (ಕಾದಂಪೂ. ೪೭೮); ನವಸಹಕಾರದಂಕುರದಿನಂಕುರಿಸಿತ್ತು ಪೊದಟ್ಟು ನೀಳ್ದು ಪಲ್ಲವತತಿಯಿಂದೆ ಪಲ್ಲವಿಸಿತು . . . ಮನೋಜಮನೋರಥದ್ರುಮಂ (ಅಜಿಪು. ೬-೧೧); ರತಿಯ ಲಾವಣ್ಯರಸಪ್ರವಾಹದಿಂ ಪಲ್ಲವಿಸದ ಚೂತವನಮಿಲ್ಲ (ಪಂರಾಮಾ. ೧-೧೦೭ ವ); ತಳಕ್ಕೆ ನೀರನೆಱೆದರೆ ಮೇಲೆ ಪಲ್ಲವಿಸಿತ್ತು ನೋಡಾ (ಬಸವ. ೪೨೦). ೨. ಚಿಗುರಿಸು; ಚಿಗುರನ್ನು ಹೊಮ್ಮಿಸು: ಅಶೋಕೆಯನೊದೆದು ಪಲ್ಲವಿಸೆಂಬ ಹಾದರಿಯ ನೆಳಲ್ಗೆ ಹರಿಣಂಗಳಂ ಹೊಡೆಯೆಂಬ ಕೆಲಸದ ನೆವದಿಂ . . . ಕೆಳದಿಯರೆಲ್ಲರಂ ಮೆಲ್ಲ ಮೆಲ್ಲನೆ ಕಳುಪಿ (ನಂಬರ. ೧೪-೩೯). ೩. ಹರಡಿಕೊಳ್ಳು; ವಿಸ್ತರಿಸು; ಹಬ್ಬಿಕೊಳ್ಳು: ಕಲಿಯುಗದಲ್ಲಿ ಷಡುದರುಶನ ಪಲ್ಲವಿಸಿತ್ತು (ಮೋಳಿಮಾ. ೪-೧೦); ಶಿವಭಕ್ತಿ ಚಿತ್ತದೊಳು ನಳನಳಿಸಿ ಸಂತಸದೆ ಹರನೊಲವು ಕರಣದೊಳ್ಪಲ್ಲವಿಸಿ (ಮೆಱೆರ. ದೇ. ೬೯-೨೨); ಆರುಣಾಧರಕಾಂತಿಯೆ ಮಿಗೆ ಪಸರಿಸಿ ಪಿರಿದು ಪಲ್ಲವಿಸದಂತೆಸೆದುದು ವರಮಣಿಕುಂಡಲಗಳ ರುಚಿ (ತ್ರಿಭುತಿ. ೮-೧೭); ಪುಲ್ಲಶರನ ಮಾರ್ಬಲ ವನದೊಳು ಪೊಕ್ಕು ಚೆಲ್ಲವರಿದು ಪೀಡಿಸಲು ಪಲ್ಲವಿಸಲು (ಮೋಹತ. ೭-೧೦). ೪. ಹಬ್ಬಿಸು; ಹರಡು: ತ್ರಿವಿಧಭಕ್ತಿಯನೆಲ್ಲೆಡೆಯೊಳುಂ ವಸುಮತಿಗೆ ನೆಱೆ ಪಲ್ಲವಿಸಿ ಬಾ ಹೋಗು (ಬಸಪು. ೩೭-೫೫). ೫. ಅಗಲ ಮಾಡು; ಅರಳಿಸು: ತಂದು ಸುರಪನ ಛತ್ರವನು ನಲವಿಂದ ಪಲ್ಲವಿಸಿದರು (ಸಂಭಪ. ೨೦-೧೩೭). ೬. ಅರಳು; ವಿಕಾಸವಾಗು: ಪಾರಿಜಾತಾವಳಿ ಸೋಲ್ತವರ್ಗೆ ಕರಂ ಮಗುಟ್ಟು ಪಲ್ಲವಿಸಿದುವೆನಿಸಿದುವು ತಳದ ವೆಳ್ಪುಂ ಕೆಂಪುಂ (ಶಾಂತಿಪು. ೧೦-೨೮); ಪುಷ್ಪ ಪಲ್ಲವಿಸಿದೆ ಹೊಕ್ಕುಳಲಿ (ಪುರಂದ. ೨-೬೭-೨). ೭. ಕಾತರಿಸು; ಸಂಭ್ರಮಿಸು: ನಿನ್ನ ಜವ್ವನಕೊಬ್ಬಿನಲಿ ಮಱೆದು ಪಲ್ಲವಿ [ಪಾಠಾಂ. ತಲ್ಲಣಿ]ಸಿ ನೀ ಕಾಮಿಸಿದೊಡೆ (ಪ್ರಭುಲೀ. ೬-೧೮). ೮. ನಿಮಿರು: ಹರ್ಷಪ್ರಸರದಲಿ ರೋಮಾಳಿ ಪಲ್ಲವಿಸಿದುದು (ಸಂಭಪ. ೩೨-೨೯). ೯. ಮೂಡು; ಮೊಳೆ: ಧೃತರಾಷ್ಟ್ರಂಗೆ ಮಕ್ಕಳ ಮೇಲೆ ನೆನಹಾಯ್ತು ಧಿಕಶೋಕೋದ್ರೇಕ ಪಲ್ಲವಿಸೆ . . . ತನ್ನೊಳು ಹಿರಿದು ಚಿಂತಿಸಿದ (ಕುಪ್ಯಾಭೀ. ೧-೫೪); ಮುನ್ನಿನ ಲಘುತ್ವವಳಿದುದು: ಪೌರುಷತೆ ಮಾಸಿ ಪಲ್ಲವಿಸಿತಬಲಾಸಹಜಲಜ್ಜೆ (ಚಿತ್ರಾಂಗ. ೫೮-೧೬೦೫). ೧೦. ಕೂಡಿಸು; ಸೇರಿಸು; ಕಟ್ಟು: ಕರಪಲ್ಲವದಿ ನೇವರಿಸು ತುಭಯದ ಕೊರಳನಾರೈದು ಬಲ್ಲಿದನು ಫಲುಗುಣನು ತಿರುವನು ಪಲ್ಲವಿಸಿದನು (ಸಂಭಪ. ೨೦-೪೧). **ಪಲ್ಲಯಿಸು**: ೧. ಕಲ್ಲ ಬಿತ್ತಿ ನೀರ ನೆಱೆದಲ್ಲಿ ಪಲ್ಲಯಿ[ಪಾಠಾಂ. ವಿ]ಸುವದೇ (ಮದೇವ. ೨೬೪-೧೭). **ಪಲ್ಲೈಸು**: ೧. ಲತೆ ಪಲ್ಲೈಸುವ ಬಗೆ ಮಾಡೊ ಪ್ರೀತಿಯಲಿ (ಮೋಕ್ಷದೀ. ೩-೫); ಎಲ್ಲೆಲ್ಲಿ ಕುದುರೆಯು ಮೇಯ್ದಿತ್ತೋ ಆ ಸ್ಥಳಗಳಲ್ಲಿ ಕಡಲೆಯ ಗಿಡಗಳು ಪಲ್ಲೈಸುತ್ತಿದ್ದವು (ಕಭವಿ. ೧೩೫). ೩. ಆ ಕೆಂಡಕ್ಕೆ ಪ್ರತಿರೂಪಿಂದ ಉರಿ ಪಲ್ಲೈಸುವಂತೆ (ಅವರೇ. ೬೨); ಅಧಿಕ ಕ್ರೋಧಶಿಖಿ ಪಲ್ಲೈಸಿತಕ್ಷಿಯಲಿ (ಕುಪ್ಯಾಶ. ೩-೫೫); ಚಿಂತಾರಾಶಿಯಿಂ ಗಾಂಧಾರಿಯಿರ್ಪ ಸಮಯದಿ ಕುಂತಿಗಾ ಶತಶೃಂಗದೊಳ್ ಸುತನಾದ ವಾರ್ತೆ ಪಲ್ಲೈಸಲದ ಕೇಳಿ ಬಲಿಯದ ಮುನ್ನ ಸೈರಿಸದೆ ಗರ್ಭಮಂ ಪೊಸೆದಳಾಗ (ಲಕ್ಷ್ಮಭಾ. ೧-೨೫-೩೬). ೧೦. ಱಂಚೆಗಳ ಹಮ್ಮಿದರಾನೆಯಲಿ ಸತ್ತಿಗೆಗಳನು ಪಲ್ಲೈಸಿದರು ಮೇಲೆಸೆವ ಕಳಶದಲಿ (ನಳಚ. ೯-೫೭); ಮಲ್ಲಿಗೆ ಜಾಜಿ ಸಂಪಗೆಯರಳ್ಗಳ ಮಾಲೆ ಸಲ್ಲಲಿತಾಂಗಿಯರುಗಳ ಪಲ್ಲೈಸಿದ ಜಡೆಮುಡಿಗಳೊಳಗೆ ಬಹುಳೋಲ್ಲಾಸದೊಳೊಪ್ಪಿದುವು (ಕಂಸವಿ. ೨೧-೧೯). ೧೧. ಹೆಚ್ಚಾಗು; ವೃದ್ಧಿಸು: ಪೂಜೆಗೈವಾ ರಭಸ ಪಲ್ಲೈಸಿತೇವೇಳ್ವೆನು (ಲಕ್ಷ್ಮಭಾ. ೮-೬-೩೪). [ಪಲ್ಲವ$_2$+-ಇಸು$_3$]

ಪಲ್ಲಹರಕಿ (ನಾ). (?): ಕಳಿಂಗಬ್ಬೆಗಳಯ್ಯ ಪಲ್ಲಹರಕಿ ಪರಕಿಯ ಮಗಳ್ ಕಳಿಂಗಬ್ಬೆ (ಎಕ. XI, ಜಾವಣ. ೧೭-೮; 889). [?]

ಪಲ್ಲಳಿ (ನಾ). ನೊರೆ; ಬುರುಗು: ತುರಗಚಯಂ ತರಂಗತತಿ ಬೆಳ್ಗೊಡೆ ಪಲ್ಲಳಿಗಳ್ ಗಜಾಳಿ ಭೀಕರಮಕರವ್ರಜಂ (ತ್ರಿಪುವಿ. ೨೪-೩೮೫).

ಪಲ್ಲಾಱು (ಕ್ರಿ). ಹಲ್ಲು ಒಣಗಿಹೋಗು,—ನಿರ್ದ್ರವವಾಗು: ಎತ್ತಿ ಕಯ್ಯುಡಿದುಮಾಗಳ್ ಕಾಲುಡಿದುಂ ಬಟಲ್ದು ಪಲ್ಲಾಱು ಪೊಡರ್ಪುಗೆಟ್ಟುಸಿರಲಪ್ಪೊಡಮಾಱದೆ ಪೋದೊಡೆ (ಪಂಪಭಾ. ೩-೫೮). [ಪಲ್+ಆಱು$_1$]

ಪಲ್ಲಿ$_1$, ಹಲ್ಲಿ (ನಾ). (ಮನೆಗಳಲ್ಲಿ ವಾಸಿಸುವ) ಸರಟದ ಜಾತಿಯ ಕೀಟಾಹಾರಿ; ಗೌಳಿ: ಕೆಲಕ್ಕೆ ಬಿಟ್ಟೊಡೆದ ಪಲ್ಲಿಯ ತತ್ತಿಯೊಳಗಿರ್ದ ಮಱು ಕೆಲದೊಳಿರ್ದ ಮಕ್ಷಿಕಮಂ ಪಿಡಿದುಕೊಳ್ಳುದಂ ಕಂಡು (ಚಾವುಂಪು. ೭೧); ಪಲ್ಲಿ ಪಾವು ಪವರಣೆ ನವಿಲಾವೋಡೆಂಬಿವು ಕಷ್ಟಂ ಮನೆ ಮಾಡುವ ನೆಲನನಗುಟ್ಟಿ ಕಾಣ್ಬೊಡೆ (ಲೋಕೋಪ. ೩-೧೫); ಪಲ್ಲಿಯಂತೆ ಕೇರಂ ಪತ್ತುತ್ತುಂ (ಧರ್ಮಾಮೃ. ೧-೧೬೦); ತೋಱುತು ವಾಯಸನೆಡಗಡೆ . . . ದೂಱುತು ಬಲದ ಭಾಗದೆ ಪಲ್ಲಿ (ಮೋಹತ. ೬-೨೫). **ಹಲ್ಲಿ**: "ಮುಸಲೀ, ಗೃಹಗೋಧಿಕಾ—ಈ ೨ ಹಲ್ಲಿ" (ನಾಚಿರಾ. ೧೧೩); ಹಲ್ಲಿ ಹೋಗಿ ತಾ ಕಾಲನ ನುಂಗಿತು (ಪುರಂದ. ೩-೯೩-೨). ℙ ಈ ಅರ್ಥದ ಶಬ್ದವು ಪ್ರಾಯಶಃ ದ್ರಾವಿಡಭಾಷೆಯಿಂದ ಸಂಸ್ಕೃತಕ್ಕೆ ಹೋಗಿರಬಹುದು. [ದೇ॥. ತಮಿ. ಮಲ. ತುಳು. ಕೊಡ. ಪಲ್ಲಿ; ತೆಲು. ಪಲ್ಲಿ, ಪಲ್ಲಿಯ, ಪಲ್ಲೆ, ಬಲ್ಲಿ/ಸಂ. ಪಲ್ಲಿ, ಪಲ್ಲೀ]

ಪಲ್ಲಿ$_2$ (ನಾ). ೧. ಊರು; ಗ್ರಾಮ: ತೆಲುಗು ಹಾಗೂ ಕನ್ನಡ ನುಡಿಯಲ್ಲಿ 'ಪಲ್ಲಿ' ಎಂದರೆ 'ಹಳ್ಳಿ'—ಗ್ರಾಮ (ಪರಪ. ೧೨೦). ೨. ಮನೆ; ನಿವಾಸ. ೩. ಒಂದು ಬಗೆಯ ಬಳ್ಳಿ: ದಾವಣಗಟ್ಟದ ಕುದುರೆ ಗುತ್ತಮಮಪ್ಪ ಜೇವಣಿಗೆಯನಿಕ್ಕಿ ಬಳಿಕ ಓವದೆ ಹುಲ್ಲ ಪಲ್ಲಿಯ ಹಾಕಿಸುವ ರಾಯರಾವುತರೊಪ್ಪಿದರಲ್ಲಿ (ತ್ರೀಪಾಲ. ೧೩-೧೦೯); ಪಲ್ಲಿಯ ಹುಲ್ಲೊಳಡಗಿ ಭೀತಿಗೊಂಡಾಗ . . . ಪಲ್ಲ ಕಿರಿದರೇನೆಂಬೆ (ಕಂಸವಿ. ೧೫-೯೪). [ಸಂ. ಪಲ್ಲೀ]

ಪಲ್ಲಿಲಿ, ಹಲ್ಲಿಲಿ (ನಾ). ೧. ಹಲ್ಲು ಇಲ್ಲದಿರುವಿಕೆ; ಬೊಚ್ಚುಬಾಯಿಯಾಗಿರುವುದು. ೨. ಸೂರ್ಯ: "ನಿಸಿವಗೆಯ ತಾವರೆಗೆಳೆಯ . . . ಬಿಸುಗದಿರ ಪಲ್ಲಿಲಿ ಜವನ ತಂದೆ ಜಗುನೆಯಯ್ಯನೆನಲ್ಕೆ ಸೂರ್ಯ

ನಾಮಂ" (ಶಬ್ದಮಂ. ೧೫). (ಗು). ೩. ಹಲ್ಲು ಇಲ್ಲದ,—ಉದುರಿ ಹೋದ: 'ಪಲ್ಲಿಲಿವಾಯ್' ಪರಾ. **ಹಲ್ಲಿಲಿ:** ೩. 'ಹಲ್ಲಿಲಿ ಬಾಯಿ' ಪರಾ. [ಪಲ್+-ಇಲಿ$_3$]

ಪಲ್ಲಿಲಿಬಾಯಿ 'ಪಲ್ಲಿಲಿವಾಯ್' ನೋ.

ಪಲ್ಲಿಲಿವಾಯ್, ಪಲ್ಲಿಲಿಬಾಯಿ, ಹಲ್ಲಿಲಿಬಾಯಿ (ನಾ). ಹಲ್ಲು ಇಲ್ಲದ ಬಾಯಿ; ಬೊಚ್ಚು ಬಾಯಿ: ಪೊಂಗಳಂ ಸುರಿವೊಡಮಾರೊ ಸೈರಿಸುವರಾತನ ಪಲ್ಲಿಲಿವಾಯ ನಾತಮಂ (ಪಂಪಭಾ. ೪-೧೦೦); ಸೊಗಯಿಸುಗುಮೆ ಪಲ್ಲಿಲಿವಾಯಗಿಲಿಲಿಗಂಧಂ ಸಮಂತು ಕೂರಿಲಿ ಕುಡುಗೋಲ್ (ಕಾವ್ಯಾವ. ೨೫೭). **ಪಲ್ಲಿಲಿಬಾಯಿ:** ಕಬ್ಬನ್ನು ಜಗಿಯಲು ಪಲ್ಲಿಲಿಬಾಯವನಿಗಸಾಧ್ಯವಾದರೆ ಕಬ್ಬು ರಸಹೀನವಾಗುವುದೇ (ಕಾಲೂರ. ೧೧ ಅಭಿಪ್ರಾಯ). **ಹಲ್ಲಿಲಿಬಾಯಿ:** ನೋಡದೊ: ಬತ್ತಿದ ಹಲ್ಲಿಲಿಬಾಯಿ, ತೆರೆ ಸುಕ್ಕಿದ ಮೊಗದಾ ಬಡತಾಯಿ! (ಕೋಗಿಲೆ. ೭೯-೧೭). [ಪಲ್ಲಿಲಿ+ಬಾಯ್]

ಪಲ್ಲಿಲಿವಾಯ (ನಾ). ಹಲ್ಲು ಉದುರಿ ಹೋದವನು; ಬೊಚ್ಚ; ಬೋಡ: "ಪಲ್ಲಿಲಿವಾಯನೆಂಬ ನುಡಿ ಬೋಡನೊಳ್" (ಕರ್ಣಾನಿ. ೨೬). [ಪಲ್ಲಿಲಿವಾಯ್+-ಅ$_7$]

ಪಲ್ಲಿಶಕುನ (ನಾ). ಹಲ್ಲಿ ನುಡಿಯುವುದನ್ನು ಗುರುತಿಸಿ ಹೇಳುವ ಶಕುನ: ಪಲ್ಲಿಶಕುನವ ಕೇಳು ರಾಯ (ಶರಲೀ. ೪೨೩). 'ಹಲ್ಲಿಸಕುನ' ಪರಾ. [ಪಲ್ಲಿ$_1$+ಶಕುನ]

ಪಲ್ಲಿಸರ (ನಾ). ಹಲ್ಲಿಯ ಹಾಗೆ ಲೊಚಗುಟ್ಟುವಿಕೆ: ಸಖಿಯಂ ಸಂಕೇತಸದ್ಮಕ್ಕೆ ಪಲ್ಲಿಸರಂದೋಜುತೆ ಮುಂದೆ ಮುಂದೆ ನಡೆದೊಯ್ದಳ್ ದೂತಿ ಚಾತುರ್ಯದಿಂ (ಸೂಕ್ತಿಸು. ೮-೧೪೪). [ಪಲ್ಲಿ$_1$+ಸರ$_2$]

ಪಲ್ಲಿಸು (ಕ್ರಿ). ಕಚ್ಚು; ಕಡಿ: ಇಲ್ಲ ದೇವರು ನೀವು ಕೊಂಡಡಕೆಯ ಭಾಗ ಮೆಲ್ಲಿತಲ್ಲತಿಕಶಿಣಗಳು ಪಲ್ಲಿಸಿಯೆಂದುವು ನಿಮ್ಮ ಚೆಂದುಟಿಯ ನೆಂದುಲ್ಲಾಸದಿಂದ ನುಡಿದಳು (ಭರಚೆ. ೧೧-೬೭). [ಪಲ್+-ಇಸು$_3$]

ಪಲ್ಲುಗಿರಿ 'ಪಲ್ಗಿರಿ' ನೋ.

ಪಲ್ಲುದಿನು 'ಪಲ್ದಿನ್' ನೋ.

ಪಲ್ಲುಮೊರೆ 'ಪಲ್ಮೊರೆ' ನೋ.

ಪಲ್ಲೆ$_1$ 'ಪಲ್ಯ$_1$' ನೋ.

ಪಲ್ಲೆ$_2$, ಹಲ್ಲೆ$_3$ (ನಾ). ೧. ತಕ್ಕಡಿಯ ಪರಡಿ,—ತಟ್ಟೆ: ಪುರದೊಳಗುಳ್ಳ ದಿಂಡುಗಳ ವಸ್ತ್ರಚಯಂಗಳನೊಟ್ಟ ನಿಟ್ಟಸಲ್ ಧರಣಿಯನಂತು ಪಲ್ಲೆ ಬಿಡದಿರ್ಪುದಚ್ಚರಿವಟ್ಟು . . . ನವರತ್ನವಿಭೂಷಣಾಳಿಯಂ ಹರುಷದಿನಿಕ್ಕಿ ನೋಡಲದು ಮುನ್ನಿನ ಮಾಳ್ಕೆಯೊಳಿರ್ದುದದ್ಭುತಂ (ತ್ರಿಪುವಿ. ೯-೭೧). **ಹಲ್ಲೆ$_3$:** ೧. ತಂದಿಕ್ಕಿದಂ ತ್ರಾಸಿನೊಳಗೆ ಕೌಪಂ ನಗುತೆ ಇಕ್ಕೆ ನೆಲನಂ ಹತ್ತಿತೊಂದೆಸೆಯ ಹಲ್ಲೆಯದು ಮಿಕ್ಕು ನೆಗೆಯಿತ್ತು ತಾರಾಪಥಕೆ ಮತ್ತೊಂದು (ಅನೀರ. ದೇ. ೯೬-೧೩). ೨. ಚಪ್ಪಟೆಯಾದ ಬಿಲ್ಲೆ; ತೆಳುವಾದ ಪಟ್ಟಿಕೆ: ಮುತ್ತು ತೀವಿರ್ದ ಪಳಿಕಿನ ದೊಡ್ಡ ಧರಣಿಯಂತೊಪ್ಪೆ ಬ್ರಹ್ಮಾಂಡಮಾ ಬಾಯ್ಗೆ ಮುಚ್ಚಿರಿಸಿರ್ದ ಕರ್ಪುರದ ಹಲ್ಲೆಯಂತೆಸೆಯೆ ಶಶಿ ಚೆಲ್ವಾಯ್ತು ಚಂದ್ರಾತಪಂ (ಚಿಬಪು. ೯-೨೩); ಬಿಸಿಲಿನಲ್ಲಿ ನೀರ ಕೆಳಗೆ ಬೆಣಚುಕಲ್ಲಿನ ಹಲ್ಲೆಗಳು ಅಮೆಗಳಂತೆ ಬಿದ್ದಿರುವುದು ಕಾಣಿಸುತ್ತದೆ (ಸ್ವಪ್ನಹೊ. ೧೩). ೩. (ತರಕಾರಿ, ಹಣ್ಣು ಮುಂತಾದುವುಗಳನ್ನು ಹೆಚ್ಚಿ) ಚಿಕ್ಕದಾಗಿ ಮಾಡಿದ ಬಿಲ್ಲೆ: ಉತ್ತರಿಸಿ ಕುಂಬಳದ ಕಾಯ ಮೇಲಣ ಹಸುರ ಕೆತ್ತಿ ಹಲ್ಲೆಯ ಮಾಡಿ ಕುಯಿದು (ಸೂಪಶಾ. ೫-೩೨). ೪. ಅಟಕ್ಕಾಗಿ ಬಳಸುವ ಕಲ್ಲು, ಓಡು ಮುಂತಾದುವುಗಳ ಹಲವೆ; ಚಾಪು: ಗಗನವನಿತೆಯೆಚ್ಚಾಡಲ್ಕೆ ಪಸರಿಸಿದ ನಕ್ಷತ್ರಗವಡಿಕೆಯೊಳಿಳುಹಿಟ್ಟುದೊಂದು ಬೆಳ್ಳಿಯ ಹಲ್ಲೆಯೊ [ಪಾತಾಂ. ರಜತದ ಹಲಗೆಯೊ] . . . ಎನಿಸಿತ್ತು ಶಶಿಬಿಂಬವು (ಹಚಕಾ. ೩-೮೩); ಗದುಗು ಹಿಡಿಗವಡೆ ಸಡುಗುಡಂ ಸೆಂಡು ಜಿಗಿಹಲ್ಲೆ ಬೊಹರಿಗಳಾಟದಲ್ಲಿ ಮನಗೊಂಡಾಡಿ . . . ಕೆಟ್ಟುಹೋದೆಯಲ್ಲ (ಸಮ್ಯಕೌ ೧೦-೯); ಕೆಲರು ಸೂರ್ಯನ ಸೆಳೆದು ಹಲ್ಲೆಯಂ ಮಾಳ್ಪರು (ವೀಶೈಪು. ೩-೪-೧೧). ೫. (ಸಣ್ಣ ಕರುಗಳಿಗೆ ತಿನ್ನಿಸುವುದಕ್ಕಾಗಿ) ಅಂಗೈದಪ್ಪವಾಗಿ ಅಂಗೈಯಷ್ಟೇ ಅಗಲವಾಗಿ ಮಾಡುವ ಕೈರೊಟ್ಟಿ: ಬೋನಮನೊಡೆದು ಹಲ್ಲೆಯ ಮಾಡುವ ಪಟ್ಟಿಯಂ ಪಱಿದು ಚಂಡಂ ಮಾಡುವ ಕಟ್ಟಿಗ್ಗರಂತೆ ಶಾಶ್ವತಮಲ್ಲದ ಶರೀರಮಂ ಪಿಡಿದು ರತ್ನತ್ರಯಂಗಳಂ ಕಿಡಿಸುವುದು ಬುದ್ಧಿಯಲ್ಲ (ಧರ್ಮಾಮೃ. ೯-೧೬೨). ೬. (ಕುದುರೆ, ಎತ್ತು ಮುಂತಾದ ಪ್ರಾಣಿಗಳ) ಗೊರಸಿಗೆ ಬಡಿಸುವ ಲಾಳ: ಕುದುರೆಹಲ್ಲೆಗಳಿಂದ ಪ್ರಥುಮೆಯ ಮಾಡಿಸೈ ಈಗ (ಶನಿಮಾ. ೭). ೭. ರತ್ನ, ವಜ್ರ ಮೊದಲಾದುವುಗಳ ಹರಳು: ಮೂಗುಬಟ್ಟನಲ್ಲಿದ್ದ ವಜ್ರದ ಹಲ್ಲೆಯನ್ನರೆದು ಕುಡಿದುಬಿಡುವೆನೆಂದು ಸಿದ್ಧಮಾಡಿಕೊಂಡಳು (ಕಭವಿ. ೧೮೨). ೮. ಮಗುಚುಗೈಯ ತುದಿ: (ಕಿ). ೯. ಜೇನುಗೂಡು,—ಹುಟ್ಟು: ಜೇನ ಹಲ್ಲೆಗೆ ಕಲ್ಲು ಒಗೆದಾಗ ಅವು ಜೇಂಗೊಡುತ್ತ ಸಿಕ್ಕತ್ತ ಹಾರಾಡುವಂತೆ . . . ಹಳ್ಳಿಗರು ಹೊರಟುಬಿಡುತ್ತಿದ್ದರು (ಮಣ್ಣಿಮ. ೧೦೪). 'ಹಳ್ಳಿ' ಪರಾ. [ದೇ.॥ ತುಳು. ಪಲ್ಲೆ]

ಪಲ್ಲೇಣ 'ಪಲ್ಲಣ' ನೋ.

ಪಲ್ಲೇರು (ನಾ). ನೆಗ್ಗಿಲುಗಿಡ: "ಪಲಂಕಷಾ, ಇಕ್ಷುಗಂಧಾ . . . ವನಶೃಂಗಾಟಃ—೭ ಪಲ್ಲೇರುಗಿಡದ ಹೆಸರುಗಳು, ನೆಗ್ಗಲು ಹೆಸರುಗಳು" (ಸಿದ್ಧಾಂತಿ. ೧೩೪). [←ತೆಲು. ಪಲ್ಲೇರು]

ಪಲ್ಲೈಸು 'ಪಲ್ಲವಿಸು' ನೋ.

ಪಲ್ಲೊತ್ತು$_1$ (ಕ್ರಿ). ೧. ಹಲ್ಲಿನಿಂದ ಕಡಿ: ಚಿತ್ತಭವಂ ಬಿಲ್ಲಂ ಗೊಲೆಗೆತ್ತಿದನಿಸಲೆಂದು ಬಿರಯಿಯಂ ಬಿರಯಿಗೆ ಪಲ್ಲೊತ್ತುವ ತೆಱದಿಂ ಬಲ್ನನೆಯೊತ್ತುವ ಮಾಧವಿಯ ನನೆಯ ಮೊನೆಯಂಬುಗಳಿಂ (ಮಲ್ಲಿಪು. ೫-೯). ೨. [ಕಾಮಶಾ] ದಂತಕ್ಷತವನ್ನು ಮಾಡು: ಉಯ್ಯಲಾಡುವಲ್ಲಿ ಪೊಜವಾಱ ಕದಲಿಸುವುದನು ಎಲೆಗಡಿವಲ್ಲಿ ಪಲ್ಲೊತ್ತುವುದನು . . . ಕಲಿಯುತ್ತಿರುವುದನು ಕಂಡನು (ವಚಕಾ. ೪೯-೨೨). [ಪಲ್+ಒತ್ತು$_1$]

ಪಲ್ಲೊತ್ತು$_2$, ಹಲ್ಲೊತ್ತು (ನಾ). ೧. [ಕಾಮಶಾ] ದಂತಕ್ಷತ: ಕೆಂಪುದೋರುವ ಹಾಗೆ ಕಚ್ಚುತಿರೆ ಪ್ರವಾಳಮಣಿ ಹಾಗೆ ಅದು ಪಲ್ಲೊತ್ತಿನ ಕುರುಹು ಮೇಲೆ ತೋರುವುದು (ಕಾಮಶಾ. ೨೨೮). **ಹಲ್ಲೊತ್ತು:** ೧. ಎರಡು ಹಲ್ಲೊತ್ತುಗಳ ನಡು ಕೆಂಪು ಆಗುವ ಹಾಗೆ ಹಲ್ಲುಗಳಂ ಸಾಲು ತೆಗೆದು ಒಂದೊಂದು ಕ್ಷತದ ನಡುವೆ ಮತ್ತೊಂದು ಕ್ಷತಮಂ ಬೆರಸುವುದು (ಕಾಮಶಾ. ೨೨೮). ೨. ಹಲ್ಲು ಶೂಲೆ,—ನೋವು: "ಹಲ್ಲೊತ್ತು = ಹಲ್ಲುಬೇನೆ" (ಜಾನಕೋ. ೫೫). [ಪಲ್+ಒತ್ತು$_2$]

ಪಲ್ವರಸೆ 'ಪಲ್ವರಿಸೆ' ನೋ.

ಪಲ್ವರಿಸೆ, ಪಲ್ವರಸೆ (ನಾ). ಹಲ್ಲಿನ ಹೋಡಣೆ,-ವರಸೆ: ಪೆಂಪುದಳೆದ ಪಲ್ವರಿಸೆಯ ಮೋಹನಾಕಾರೆ (ಮಡಿಕ್ಯಾ. VI, ೧೬೨೭). **ಪಲ್ವರಸೆ:** ಪಲ್ವರಸೆಯಿಂ ಕರ್ಣಾಂತಲೋಚನಂಗಳಿಂ (ಸೌಗಂಧಿ. ೯-೧೭); ಮಾವಿನ ಹುವ್ವ ಗೊಂಚಲುಗಳು ಪಲ್ವರಸೆ (ಸೌಗಂಧಿ. ೧೯೧-೬). [ಪಲ್+ವರಿಸೆ]

ಪಲ್ವಲ (ನಾ). ಸಣ್ಣ ಸರೋವರ; ಕೊಳ: "ವೇಶಂತಃ, ಪಲ್ವಲಂ, ತಳ್ಪಂ—ಈ ೩ ಕೊಳಹೆ" (ಹಲಾಯು. ೧೧೧-೫೩); ಒಂದು ಪಲ್ವಲ ಪ್ರಾಂತದೊಳ್ ಕಾಂತಾರಕಳಭಪ್ರಾಯಪೋತ್ರಿಸಂತಾನದೊಳಗೆ . . . ಸೊಗಯಿಸಿತ್ತುತ್ಕೇಕರಂ ಸೂಕರಂ (ಚಂದ್ರಪು. ೫-೫೯ ವ); ಇಲ್ಲಿಯ

ಪಲ್ಮಲೋದಕಕ್ಕುಲ್ಲಸಿತಸುರಲೋಕದಮರ್ದೆಯೆ (ಪದ್ಮರಾ. ೧೩-೩೯); ಜಕ್ಕಂದೊಳಲಿ ಪಲ್ಮಲಮಂ ಮುದಕರಿ ಕದೀಪನಮಂ ಪುಗುವಂತೆ ಪೊಕ್ಕು (ಚೆಕವಂ. ೩೯-೧೦). [ಸಂ.]

ಪಲ್ಲು 'ಪಲುಂಬು' ನೋ.

ಪಲ್ಲೆಸಗೆಯ್ಮೆ (ನಾ). ರತಿಕ್ರೀಡಾಕಾಲದಲ್ಲಿ ತುಟಿ ಮೊದಲಾದುವನ್ನು ಕಚ್ಚುವಿಕೆ: ತುಡುಕಿ ತುಜುಂಬನೀಟ್ಟೆಲೆಗೆ ನಿಲ್ಕಿಪೆಯಿಂದಲರ್ವಾನಿನೊಳ್ ಪಡಲ್ವಡಿಸಿ ಕುಕಿಲ್ದು ಪಾಯ್ದಡರ್ದು ಪಲ್ಲೆಸೆ [ಸ]ಗೆಯ್ಮೆಯ ಕೈಮಯಿಂದೆ ಸೈವಡಿಸುತ (ಚಳವಿ. ೬-೩೫೪).

[ಪಲ್+ಬೆಸ1+ಗೆಯ್ಮೆ(<ಕೈಮೆ1)]

ಪಲ್ಲುಲಿ, ಪಲುಸುಲಿ (ಕ್ರಿ). ಹಲ್ಲು ತಿಕ್ಕು; ಹಲ್ಲುಜ್ಜು; ಹಲ್ಲನ್ನು ಶುಭ್ರಗೊಳಿಸು: ಶೃಂಗಾರಂಗೆಯ್ವೊಡಂ ಪಲ್ಲುಲಿವೊಡಮುಣ್ವೊಡಂ . . . ಕಾಣಲೀಯಲಾಗದು ವಧುವಂ (ಪುದೆತಿ. ೧೦-೫೦); ಪಳಿಕಿನ ಭಿತ್ತಿಯಸೊಲವಿಂ ನಳಿನಾಕ್ಷುಯರೆಯ್ದಿ ನೋಡಿ ಪಲ್ಲುಲಿಯಲ್ ನಿರ್ಮಳಮಾಡೊಡಮುಧರಚ್ಛವಿಗಳ ಪೊಳಿಪಿಂದರುಣಮಾಗೆ ಸುಲಿಯುತ್ತಿರ್ದರ್ (ಬಾಧಪು. ೧-೧೪೨); ಪಲ್ಲುಲಿಯದಿಪ್ಪರ್ಂದೇಕಭುಕ್ತಂಗಳುಂ ಬೆರಸೀ ಮಾಣಿಕಸೇನಯೋಗಿ ತಪದೊಳ್ಕಾಮೇಭಕಂತೀರವಂ (ಕಾ. I, ೪೯-೩೨ ; 1423). **ಪಲುಸುಲಿ:** ಕುವರಯನು ಪಲುಸುಲಿಯುಲಿಕೆ ಮಾಧವನು ಮುದುಪನನೆನ್ನ ಕಳುಹಿದನು (ಸಾಳ್ವಭಾ. ೩೦-೪).

[ಪಲ್+ಸುಲಿ1]

ಪವ (ನಾ). ೧. ಧಾನ್ಯಾದಿಗಳನ್ನು ಗಾಳಿಯಲ್ಲಿ ತೂರುವಿಕೆ,—ಶುದ್ಧಿಮಾಡುವಿಕೆ: "ಪವನಂ ನಿಷ್ಪಾವಮಂತೆ ಪವಂ" (ಸಪ್ತಕೋ. ೧೧೪-೨೧); "ನಿಷ್ಪಾವಃ, ಪವನಂ, ಪವಃ—ಧಾನ್ಯಾದಿಗಳನ್ನು ಗಾಳಿಗೊಡ್ಡುವಿಕೆ, ತೂರುವಿಕೆ"(ನಿದ್ಯಾಂತ. ೩೭೪). ೨. ಕೆಸರು; ಕೊಚ್ಚೆ. ೩. ದನದ ಸಗಣಿ. [ಸಂ.]

ಪವಡಿ (ನಾ). ನೆಯ್ಗೆಯಲ್ಲಿ ಹಾಸಿನ ನಡುವೆ ಹೊಕ್ಕುಗಳನ್ನು ನೇಯುವಾಗ ಎರಡು ದಾರಗಳ ನಡುವೆ ಲಾಳಿಗೆ ಸ್ಥಳ ಬರುವಂತೆ ಮಾಡಲು, ನೆಯ್ಗೆಯವನು ಕಾಲಿನಿಂದ ಒತ್ತುವ ಮರದ ಕಾಲುಮಣೆ: ಕಾಲ ಪವಡಿಗಳೆತ್ತಿ, ಕೋಲ ಕಂಬಿಗಳೆಳೆದು ನೂಲೆಳೆದು ಲಾಳಿ ಶಿವಸೂತ್ರ ಪೋಣಿಸಲು ನೀಲಪಾವಡವ ಲಿಂಗುಟ್ಟು (ಕನ್ನಚಾ. ೧೫೬).

[←ಮರಾ. ಪಾವಡಾ]

ಪವಡಿಸು, ಪವಳಿಸು, ಪವ್ವಳಿಸು1 (ಕ್ರಿ). ಮಲಗು; ಒರಗು: ಗಂಗಾತರಂಗಧವಳದುಕೂಲಪ್ರಚ್ಛದಾಚ್ಛಾದಿತಮ್ಮದುತಲ್ಪತಲದೊಳ್ ಪವಡಿಸಿರೆ (ಆದಿಪು. ೩-೨೧ಸ); ಇಂತಿದು ಸ್ವಪನಾರೋಗಿಪ ಪವಳದ ನೆಲೆಯಿಂದು ಪವಡಿಸಿರ್ದ ಚಂದನತಲ್ಪಂ (ಕಾದಂಬಿ. ೨೦೩); ಪಳ್ಳರಿಯ ಮುಂಡದೊಳ್ ಪವಡಿಸಿದ್ದೆ (ಗಿನಿಶ. ೪-೬೬); ನಿರುತವನು ತಾಮ್ ನುಡಿದು ಪವಡಿಸಿ ಭರದಿ ನಿದ್ರೆಯೊಳರಲಿಕಾಗಲೆಯಿರುಳು ತೊಡಗಿತು (ಸಂಭಪ. ೩೩-೫೦); ಪವಡಿಸು ಪರಮಾತ್ಮನೇ ನೀನು ಭವರೋಗವೈದ್ಯ ಭಕ್ತರ ನಿಧಿಯೆ (ಪುರಂದ. ೬-೧೩೧ ಪಲ್ಲವಿ). **ಪವಳಿಸು:** ತೋಳಿನಲ್ಲಿ ಬಿಗಿದಪ್ಪಿ ಪವಳಿಪ ಶ್ರೀಲಕುಮಿ ತ್ರೈಲೋಕ್ಯಮಾತೆ (ವಿನಾಕ್ಯ. ೧೧-೩); ಪಚ್ಚೆಕರ್ಪೂರದ ಪುಡಿಯ ರಾಶಿಗಳೊಳ್ ಪವಳಿಸಿರ್ದ್ (ಸೌಗಂಧಿ. ೪೭೬-೬) ; ಲವಲೇಶಮಾನುಮಿರದಿರೆ ಕಯ್ವ ಜೀವನದಿ ಪವಳಿಸಿರನೇ ನರನು ? (ಮಂಕುಳ. ೪೭೦). **ಪವ್ವಳಿಸು1:** ವಿಶಾಣ್ಣವದ ಮಧ್ಯದಲಿ ವಿಸಜದಂತಿರುವಾಲದೆಲೆಯೊಳು ಶಿಶುವೆನಿಸಿ ಪವ್ವಳಿಸಿ ಸುಳಿಯುವ ವಿಸರುಹಾಕ್ಷ (ಗಗಶಾ. ೫-೩೧). 'ಉಪ್ಪವಡಿಸು' ಪರಾ.

[ಪವಡ್ (P←ಪ್ರಾ. ಪವಡ್ಡಾ)+-ಇಸು3-/ತೆಲು. ಪವಡಿಂಪು, ಪವಳಿಂಪು, ಪವ್ವಡಿಂಪು, ಪವ್ವಳಿಂಪು]

ಪವಡೆ 'ಪಾವುಡ1' ನೋ.

ಪವಣ್, ಪವಣ, ಪವಣು, ಹವಣ, ಹವಣು (ನಾ). ೧. ಅಳತೆ; ಲೆಕ್ಕ; ಪ್ರಮಾಣ: "ಪವಣಿಂದು ಪ್ರಮಾಣಂ" (ಕಕಸಾ. ೬೯-೫೭೭); ದಾಯಿಗರತ್ನನಪ್ಪ ಪಾಯಕೋಟಿಗೆ ಪವಣಿಲ್ಲ (ಪಂಪಭಾ. ೭-೨೧); ಅತಂ ಮನಮೊಸೆದು ನೋಡುತಿರ್ಪುದುಚಿತಾಗಳಣ ಮುಜುದಳ್ಳಿ ಪೊಬ್ಬಾನ ಪವಣಂ (ಕಾದಂಬಿ. ೧೦೦); ಉಂಡ ಮೊಲೆಹಾಲ ಪವಣಂ ಕೊಂಡು ಬಿಸುಟ್ಟಿಂಡಲ ಪವಣಾದುದು ಪವಣಿಂದಾರ್ಕಂಡು ಮನಂಗೊಂಡು ಪವಣ್ಗೊಂಡಜುಪುವ ಜಡರನಾದಿಕಾಲಸ್ಥಿತಿಯಿಂ (ಸುಕುಮಾ. ೬-೪); ಪವಣಿಲ್ಲದ ಭವಸನಿತಿಗೆ ಪವಣಂ ಮಾಡುತ್ತುಮುದಯಿಪುದು ಸಮ್ಯಕ್ತ್ವಂ (ಪಧಪು. ೧೧-೭೨). ೨. ಶಕ್ತಿ; ಸಾಮರ್ಥ್ಯ; ಯೋಗ್ಯತೆ: ಬಲದ ಪವಣನನಿತಿನಿತೆಂದಾನಱಯೆಂ (ಪಂಪಭಾ. ೧೦-೫೯); ಇವನಿಂದಂ ಕಂಡೆಂ . . . ಲೋಕದ ಪವಣ ನೆನುತ್ತುಂ ಯೆಶೋಲಕ್ಷ್ಮಿ ಮೇವೆಚ್ಚಿರ್ (ವಿಕ್ರ. VII, ೨೨ಮೊ. ೬೪-೪; 1112 ?); ಪವಣಂ ನೋಡದೆ ನಾಡೆಯುಂ ನೆಣಸಿ ಮುನ್ನೆಕ್ಕೆಕ್ಕೆಯಿಂ ಪಕ್ಕಿ ನೋವನರ ಸ್ತ್ರೀಯರ ಸೀಯನಪ್ಪ ನುಡಿಯಂ ಕೇಳ್ದಾಗಳ್ (ಧರ್ಮನಾ. ೨-೨೯). ೩. ಕಟ್ಟಳೆ; ನಿಯಮ: ಯೋಗಿಯ ಪೋಲ್ ಪವಣಂ ಕಡೆಗಣಿಸದಿರ್ಪುಂ (ಚಳವಿ. ೬-೧೨). ೪. ಸಮಾನ; ಸರಿಸಾಟಿ: ಅಜವಂಟಗೆಗನ್ನ ದಾನವೆಡೆಗೀ ಜಗದೊಳ್ಪವಣಲ್ಲದೇಂ ಕೃತಾರ್ಥನೊ ನೊಳ್ಕಂ (ವಿಕ್ರ. VII, ೨೨ಮೊ. ೧೦-೪೩ ; 1085 ?) ; ನಿಮ್ಮ ಪುರಾಣದ ಪುಸಿಯಿದಜ ಪ[ಪಾಠಾಂ.ಹ]ವಣೆ ಪೇಟ್ಪುಂ (ಧರ್ಮಪ. ೫-೧೪೪); ಮುರುಳೆ ಕೇಳ್ ಪವಣಂಗೆ ಬಪ್ಪನೇಯಂಧಕಾಸುರಹರಂ ಕಾಲಹರ ಕಾಮಹರನು (ಲಕಚಂ. ೧೫-೧೦). ೫. ಶಕ್ಯವಾದುದು; ಸಾಧ್ಯವಾದುದು: ಸಜ್ಜನಿಕೆವಾಡಿದ ಸನ್ತತಶೌರ್ಯಮುರ್ವೀಗಂ ಬಗೆಯನೆ ಬಣ್ಣಿಸಲ್ಪವಣೆ ಸಾಹಣ ಕೆಂಗನ ನಾಡಲಂಪಿನಿಂ (ಸೌಇಇ. IX-೧, ೨೦೬-೨೯; 1122); ಬಣ್ಣಿಸಲ್ ಪವಣೆ ರೂಪಂ ಭೂಪನರ್ಧಾಂಗಿಯಾ (ಅನಂಪು. ೨-೧೬); ಅತನ ಬಲ್ಪಂ ಪೊಗಟ್ಪ್ಪೊಡೆನ್ನ ಪವಣಲ್ತು (ಕಬ್ಬಕಾ. ೧೬೯); ಎರಡನೆಯ ಮೃಡ ಪಮ್ಮಿರನ ನುತಿಯೆನ್ನ ಶಿಥಿಲ ಮತಿಗಂ ಪವಣೇ (ಪಮ್ಮಿರ. ೧-೨೪). ೬. ಕ್ರಮ; ರೀತಿ: ಒಗೆದುರಿಲಿಂಗದೊಂದು ಪವಣಂ ಪರಿಭಾವಿಸಲ್ (ಸಪುಪ. ೪-೭೫); ಅವರಿರವು ಸ್ವರ್ಗ ಗಿರ್ಗದ ಪದವಿಗಳ ಪ[ಪಾಠಾಂ ಹ]ವಣೆ (ತಿರು. ಚೇ. ೯-೧೩); ಪವಣಿಸೆಯೆ ಪುರುಳುಮೊಪ್ಪಿರೆ (ಚಳವಿ. ೧-೨೨). ೭. ಹೊಂದಾಣಿಕೆಯಾದುದು; ಪದವಾದುದು; ಒಪ್ಪವಾದುದು: ಸಕ್ಕದಂಗಳ ಪದಂ ಪವಣಾಗಿರೆ ಮೆಲ್ಪುನೆತ್ತು ದಾಂಗುದಿವಿಡುವಂತೆ ನೀಳ್ದು ನಿಲೆ ಪೇಟ್ಪುದು ನೀತಿ ನಿರಂತರಕ್ರಮಂ (ಕವಿಪ್ರ. ೧-೧೪೯); ಸ್ಫುಟವಾದಂ ಪವಣಾಗೆ ಜಾತ್ಯಭಿನಯಂ ಜೆಲ್ವಾಗೆ (ಅಧ್ಯಾನೇ. ೧-೧೦). ೮. ಚಳಕ; ಕೌಶಲ; ನೈಪುಣ್ಯ: ಇಸುವವರ್ಗಳ ಕೈಯೊಳ್ ನಿಟ್ಟಸಬಾರದು ತುಡುವ ಬಿಡುವ ಪವಣಂತಾಗ್ದುಂ (ಕಬ್ಬಕಾ. ೨೬೪). **ಪವಣಱ:** ೪. ನಿಶ್ಚಿತಜ್ಞಾನ: "ನಿಂದಜುತೆಯೆನಲ್ ಸಂದ ಪವಣಮೆಂದಜುಗೆ ಬುಧರ್" (ಭಾರಸಿ. ೫೪); "ಪವಣ-ಪ್ರಮಾಣ-ನಿಶ್ಚಿತಜ್ಞಾನ" (ತದ್ಭಕೋ. ೨೫). ೧೦. ಕಾರಣ; ಹೇತು: ತನಗೆ ಪ್ರತ್ಯಕ್ಷಾನುಮಾನೋಪಮಾನ ಸಂಜನಿಸುವ ಭಾವವರ್ಥಾಪತ್ತಿ ಭನಶಬ್ದವೆಂಬಿವು ತಾವಾದುಂ ಪವಣಂಗಳೆನಿಪನ್ಯವನು ಸಾಧಿಸುವಲ್ಲಿ (ಪರಜೋ. ೩-೧೩೭-೨). ೧೧. ಹಂಚಿಕೆ; ಯೋಜನೆ; ಉಪಾಯ: ಅವನು ಇದರ ಸಂಗತಿಯನ್ನೂ ನಿನ್ನ ಪವಣವನ್ನೂ ಹೇಳಿದನು (ಮುಂಜುಳ. ೫೬). **ಪವಣು:** ೧. ಕೆಳಗಣಂಡಳಿಟಾಹ ತೊಡಗಿಯೆ ಜಲವು ತುಂಬಿ ಹುಪದಜ ಭಾತವು ತಿಳಿಯಲಿಪ್ಪತ್ತೈದುಕೋಟಿಯ ಪವಣ ಪಡೆದಿಹುದು

(ಕುವ್ಯಾಅ. ೭-೨೩). ೫. ಇದರ ಮಹಿಮೆಯನೊರೆಯಲಾಲಿಸಲೆನಗೆ ನಿನಗೆ ಪವಣೆ (ಪದ್ಮರಾ. ೧೧-೧೩೧); ನರರ ಪವಣೇ ಕೀರ್ತಿಪಡೆ ಬಸವರಸ ನಿಮ್ಮಂ (ಬಸಪು. ೧-೯); ಮಹತ್ವಮಂ ತಿಳಿಯರಜ ಹರಿ ಸುರಪರು ನರದೇಹಿಯೆನ್ನ ಪವಣೇ (ಕೊಟ್ಟೂಬ. ೯-೩೫). ೬. ಎಲ್ಲಾ ಜೀವ ದೊಳಂ ದಯಮುಳ್ಳುದೆ ಸದ್ಧರ್ಮವೆಂಬ ಶಾಸ್ತ್ರದ ಪವಣಂ . . . ರಕ್ಷಿಸು ತಿರ್ಪಂ (ನನ್ನಜಾ. ೬-೨೦೭). ೭. ಪವಣಂದ ಬಗೆಬಗೆಯ ಪೊನ್ನುಗಳ ಲಧಿಕನ್ಯೂನತೆಗಳನು ನೋಡುತ್ತಲಿ . . . ಅವಿರಳದ ಸಂತಸದಲಿರ್ದರು (ವೆಂಕಾರಾ. ೫-೩-೨೪). ೧೨. ಸಂಧಿ; ಸಮಯ; ಅವಕಾಶ: ದಿವದ ರಾತ್ರೆಯಯರಡು ಜಾವದ ಪವಣಿನಲಿ ಹಸ್ತಿನಿಯ ನೆರವದು (ಕಕ್ಕೋಕ. ೯-೫೧). ೧೩. ಸ್ಥಿತಿ; ಇರವು: ಎಲ್ಲಿಯುಂ ಕಾಣದೆ ಯಕಟಕಟಯ್ಯೋ ಗಡಾ ಸತ್ತನೆಂಬೀ ಪವಣಂದಂ . . . ರಕ್ಷಿಪ್ಪುದೆನ್ನಂ (ರಕ್ಷಾಶ. ೪೦). **ಹವಣ**: ೧. ಗುರುಗುಂಜಿಯ ಹವಣದ ಗುಳಿಗೆಯ ಕಟ್ಟ (ಸಾಳ್ವಸಾಂ. ೭). ೨. ಆ ಮಹಾಬೆಳಗನೆ ಕಂಗಳಲ್ಲಿ ಹೆಱೆಹಿಂಗದೆ ನೋಡಿದರೆ ಎನ್ನಂಗದ ಹವಣ ಹೊಱಗೆ ಪರಿಪೂರ್ಣವಾಗಿದ್ದಿತ್ತು (ಲಿಂಗಪ. ೧೯-೭೬). ೧೧. ಅವರಿಂದ ಹಲವರ ಹವಣಗಳಿಗೆ ಧಕ್ಕೆ ತಗಲ ಹತ್ತಿ ಅವರ ಸ್ವಾಮಿತ್ವವನ್ನು ಆದಷ್ಟು ಹೆಚ್ಚುಹೆಚ್ಚು ಜನರಿಗೆ ಒಪ್ಪಿಸಲಾರಂಭ ವಾಯಿತು (ತಕ್ಕಡಿ. ೪೮). **ಹವಣು**: ೧. ಎಲವೊ ನಿನ್ನಯ ಬಾಯ ಹವಣಂಗಳವಡದ ಬಲುದುತ್ತನಂಗೈಗಳಲಿ ಧರಿಸಿದೆ (ತೊರರಾ. ೩-೮-೬). ೨. ಉಳಿದವರ ಹವಣಾವುದೆಂದಾ ವಸಿಷ್ಠಮುನಿಕುಲತಿಲಕನೆನಲು (ಹಚಕಾ. ೨-೨೦); ಸಾತ್ಯಕಿ ಹವಣನಱಿಯದೆ ಹೊಕ್ಕು ಸಿಕ್ಕಿದ (ಕುವ್ಯಾಕ. ೩-೭); ಮಾನವನು ತನ್ನ ಹವಣಿಗೆ ಮೀರಿದ್ದನ್ನು . . . ಬಯಸಿ ದೈವದ ಕಾಟಕ್ಕೆ ಸಿಕ್ಕುತ್ತಾನೆ (ಕಾವ್ಯಸ. ೧). ೩. ಮನಮನ ತಾರ್ಕಣೆಯ ಕಂಡು ಅನುಭವಿಸಲು ನೆನಹೇ ಘನವಹುದಲ್ಲದೆ ಅದು ಹವಣಲ್ಲಿ ನಿಲ್ಲುವುದೇ ಎಲೆ ಅವ್ವ (ಮಹಾದೇ. ಬ. ೪೪-೧೦೨). ೪. ಕಸುಗಾಯ ಹಿಸುಕಿದಡೇನು ಹಣ್ಣಿಗೆ ಹವಣಪ್ಪುದೇ (ಚನ್ನವ. ಕ. ೫೪-೧೧೭). ೫. ಅದಱ ಮಹಿಮೆಯನೆಣಿಸುವಡೆ ಫಣಿಪತಿಗೆ ಹವಣಲ್ಲ (ಬಸಪು. ೪-೫೧); ಭೀಷ್ಮನ ಬೆಗಡುಗೊಳಿಸಲು ಹರನ ಹವಣಲ್ಲ (ಕುವ್ಯಾಭೀ. ೭-೧೨); ಈಶ ನಿಮ್ಮನು ನುತಿಸುವೆನೆಂದೆನಲುರಗೇಶ ನಾಱನು ನನ್ನ ಹವಣೇ (ಮೋಹತ. ೨೫-೧೦); ಚದುರರ ತಲೆವಣಿ ತದ್ಭವಮೋಕ್ಷಸಂಪದನ ಬಣ್ಣಿಸಲೆನ್ನ ಹವಣೆ (ಭರಚ. ೧-೨೧). ೬. ಕಪಿಲ ಸಿದ್ಧಮಲ್ಲಿಕಾರ್ಜುನ ಎನ್ನ ವಿಚಾರದ ಹವಣ ನೀನೇ ಬಲ್ಲೆ (ಸಿದ್ಧವ. ಕ. ೩೨೬-೧೦೫೪); ನೀವೆನ್ನ ಮನದ ಹವಣನಾರಯ್ಯಲೆಂದನುಗೆಯ್ದಿರಿ (ಹಚಕಾ. ೮-೨೪); ಮಾತಿನ ಹವಣ ನೀ ಬಲ್ಲೆ ಹೇಳಿನ್ನೆನಗೆ ಕರ್ತವ್ಯವನು ಮಾನಿನಿ (ಕುವ್ಯಾಅ. ೪-೨೯); ಇನ್ನೀ ಹವಣಂದವೆ ಬಳೆದೊಡೆ ನಿಮ ಗೆನ್ನಾಣೆ (ಜಯಕಾ. ೫-೮). ೭. ಎನ್ನ ಕಜ್ಜಕೀ ಪರಿಕರ ಹವಣು (ಗಣೇಶ. ೬-೧೩೩). ೧೧. ಸವಿಗೂಟಕೆಡನ ಕಾಣದೆ ಕೊಂಡೆಯ್ದುವ ಹವಣನೆಣಿಸಿ ಮುಟ್ಟೆವಂದ (ಶ್ರೀಪಾಲ. ೫-೭೨); ನಿಮಗೀ ಹವಣು ತಿಳಿಯದು (ತೊರರಾ. ೨-೧-೩೩). ೧೨. ಜಾವವೆರಡಱ ಹವಣಿನಲಿ ಹರಿ ದಶ್ವತನುಜನೊಳಾಯ್ತು ಬಲುಸಮರ (ತೊರರಾ. ೬-೧೭-೧೫); ಹವಣ ನಾರಯ್ದು ಲಂಚಮಂ ಮೊದಲೆ ಕೊಂಡು (ಚಬಪು. ೭-೬). ೧೪. ಸಮಾನನಾದ ವ್ಯಕ್ತಿ; ಸರಿಸಾಟಿಯಾದವನು: ಜಯದ್ರಥನು ನಿನ್ನವನ ಹವಣೇ (ಕುವ್ಯಾಸ. ೧೦-೪೬). ೧೫. ತಕ್ಕಷ್ಟು ಪ್ರಮಾಣ ದಲ್ಲಿರುವುದು; ಸಾಕಷ್ಟು: ಉಳಿದ ತೋಟದ ಗೆಡ್ಡೆಗೆಳಸು ಹಂದಿಗೆ ಹವಣು (ಹಚಕಾ. ೩-೬೪). ೧೬. ಪ್ರಯತ್ನ; ಉದ್ಯೋಗ: ದಿವಿಜರೆ ಮ್ಮಯ ಹಗೆಗಳವರಿಗೆ ಹವಿಸನೀ ಕ್ರತುಗಳಲಿ ಮಾಡುವ ಹವಣು ಸಾಕು (ಉತ್ತಕ. ೨೬-೨೭).

ಪವಣಂ ಮೀಱು, ಹವಣು ಮೀರು=ಅತಿಶಯವಾಗು; ಮಿತಿ ಮೀರು: ಸವಿಮಾತಿನಮರ್ದು ಪರಿಕಾಲ್ ಕಿವಿವಾಯಿಂ ಪೊಕ್ಕು ಮಿಕ್ಕು ಬಗೆಗೆಱೆವೊಡೆಯಾಳ್ ಪವಣಂ ಮೀಱಿ ಪೊನಲ್ವರಿದವನೀಂದ್ರ ನೊಳುಣ್ಮಿಸಿತ್ತು ಸಂತಸಸಸಿಯಂ (ಚಕವಿ. ೪-೪೪); ಈ ಹವ್ಯಾಸವು ತನ್ನ ಹವಣು ಮೀರದಂತೆ ಮಾತ್ರ ದಕ್ಷತೆ ವಹಿಸಬೇಕು (ಕಥಕ. ೧೦). **ಪವಣ್ಮಾಡು, ಹವಣು ಮಾಡು**=೧. ಗಣಿಸು; ಲೆಕ್ಕಿಸು: ಆತಂ ನಿನ್ನ ಮಾತನೆ ಪವಣ್ಮಾಡಿ ಪೇಟ್ಟುದಂ ಕೈಕೊಳ್ಗುಂ (ಅದಿಪು. ೨-೪೩ ಪ). ೨. ಸರಿಯೆಂದು ತಿಳಿ; ಅನುಮೋದಿಸು: ನೆರೆದ ಜನಪಜನಮದನೆ ಪವಣ್ಮಾಡೆ ಕೂಡೆ ದುರ್ಯೋಧನಂ ಮಸಗಿ ಚತುರಂಗಸಾಧನಮಂ ಬೆಸಸೆ (ನೇಮಿಪು. ೯-೧೦೭ ಪ). ೩. ಉಪಾಯವನ್ನು ಹೂಡು: ಒಂದು ಹವಣು ಮಾಡಿ ತೆಗೆದೆ ಬಲೆಯನ್ನು (ಸುವಸಂ. ೩೫).

[<ಪ್ರಾ. ಪವಾಣ, ಪಮಾಣ./ಸಂ. ಪ್ರಮಾಣ]

ಪವಣ 'ಪವಣ್' ನೋ.

ಪವಣಂಬಟ್ಟೆ (ನಾ). ಉಚಿತವಾದ ದಾರಿ; ಋಜುಮಾರ್ಗ: ಪವಣಂಬಟ್ಟೆ, ಮುಗುಳುಂಬುಗುಳ್ (ಶಬ್ದಾನು. ೭೫ ಪ್ರಯೋ).

[ಪವಣ್+ಬಟ್ಟೆ]

ಪವಣಱಿ, ಹವಣರಿ, ಹವಣಱಿ (ಕ್ರಿ). ೧. ಸತ್ತ್ವವನ್ನು ತಿಳಿ; ಯೋಗ್ಯತೆಯನ್ನು ಅರಿತುಕೊಳ್ಳು: ಗಟಪರ್ ಪವಣಱಿಯದೆ ಬೆಸಗೊಳೆ ಸೆಣಸಿಂ (ಚಂದ್ರಪು. ೧-೫೭). ೨. ಕ್ರಮವನ್ನು ತಿಳಿ; ರೀತಿಯನ್ನು ಅರಿ: ಕಡುಕೆಂಪಿನ ಹಣ್ಣ ಮೇಲಿದೇಂ ಕಾಣಿಸದೊಡೊ ಪ್ಪುವರೆ ಬಲ್ಲವರ್ ಬಾಯ ನೀಂ ಮುಚ್ಚು ನಿನಗಿಪ್ಪ ಹಳದಿಯ ಕಾಯಿ ಹಣ್ಣಾದ ಬಳಿಕ ಪವಣಱಿದಿನ್ನು ಪಚ್ಚೆಯಾಡು (ಚಬಪು. ೧೦-೪೭). ೩. ಅವಕಾಶವನ್ನು ಕಾಣು; ಸಂಧಿಯನ್ನು ಸಾಧಿಸು: ಪದ್ಮ ನಾಭನ ಪದದೊಲ್ಮೆಯಂ ಪಡೆದು ಪವಣಱಿತು ಪೆಣ್ಣಂ ಪಿಡಿದಪೆನ್ (ಅದ್ಭುತ. ೧೦-೩). ೪. ಹದವನ್ನು ತಿಳಿ: ಪ[ಪಾಠಾಂ.ಹ] ವಣಱಿದುತ್ತರಂಗುಡುವ ಮೆಚ್ಚುವ ಮಾತಿನ ಗೊಟ್ಟಕೇಳ್ವ . . . ಮನದಟ್ಟಿಯಿಂ ಬರೆವ ಚಿತ್ತಮವಳ್ಗೆ ವಿಷಸ್ವರೂಪಮಾದುವು (ವರ್ಧಪು. ೪-೪೫); ಪವಣಱಿದಿಕ್ಕಿಯೋಗರಮಂ . . . ತುತ್ತುಗಳ್ ಸವಿವಡೆವಂತು ಪೊಂಬೆಸಱ ಸೂಪವನೊಪ್ಪುವ ಮಾದುರಂಗಳಂ ಯುವತಿ ತೆರಳ್ಚಿ ಬಡ್ಡಿಸಿದಳ್ (ದಶಕು. ೧೨-೧೩೦); ತವಕದನುವಱಿದಪ್ಪಿ ಮೊಗಗೊಡೆ ಪವಣಱಿದು ಚುಂಬಿಸುತೆ (ಸಾಳ್ವಭಾ. ೪-೧೦). **ಹವಣರಿ**: ೧. ವಸ್ತುಗಳೊಳವಿ ತಿರುವ ಸೆಳೆತಗಳ ಹವಣರಿತು ಸೊಗಕೆ ನವಸಂಘಾತಗಳ ನಿಲಿಸುವರಿವು (ಮಲೆದೇ. ೪೮-೫). ೨. ಬವರದಲಿ ಸಿಲುಕಿದುದ ಹವಣರಿದು ತೋಳ . . . ಹೇಳ್ದ (ಕಎಪು. ೧೩-೭). ೪. ಕಾರ್ಯಕ್ಕೆ ಹವಣರಿತು ಸಾಧನ ಸಂಪತ್ತನ್ನು ಒದಗಿಸುವ ಸೋಪಾನಮಾರ್ಗವನ್ನು ಸಿದ್ಧಗೊಳಿಸಿದನು (ಪೈಮಹ. ೯). **ಹವಣಱಿ**: ೧. ಎಡೆ ಮಾಡುವಬಲೆಯರೆಯ್ತಂದು ರಾಯ ತುತ್ತಿಡುವನ್ನದೊಳಗೊಂದು ತುತ್ತ ತುಡುಕಿ ತೆಗೆದುಕೊಂಡು ಪೋಗಿ ಪೆಂಗಳಿಗೆಲ್ಲಯೆಡೆಮಾಡಿದರು ಹವಣಱಿದು (ಭರಚ. ೪-೧೦೪). ೨. ವನಪಾಲನಾಗಳೆ ಹರುಷದಿಂ ಹರಿದು ಹೋಗಿ ಹವಣಱಿದು ಭೂತಳಪತಿ ಹರಿಶ್ಚಂದ್ರರಾಯನಂ ಕಂಡು (ಹಚಕಾ. ೧೩-೧೭). [ಪವಣ್+ಅಱಿ]

ಪವಣಿಕೆ, ಪೋಣಿಕೆ, ಪೋವಣಿಕೆ, ಹವಣಿಕೆ (ನಾ). ೧. ಹೋಡಣೆ; ಹೊಂದಿಕೆ: ನವಿಲುಗರಿ ಬಾಣದಲಿ ಹಂಗನ ಕವಲುಗರಿ ಬೋಳೆಯಲಿ ಕಣಲಿಗೆ ಪವಣಿಕೆಯ ವಿಶಿಖದಲಿ . . . ಎಚ್ಚಾಡಿದರು ಬನಮಧ್ಯದಲಿ ಹಲಕಾಲ (ಅಂಬಿಕಾ. ೩೦-೬೧). ೨. ಮೋಸ; ತಂತ್ರ; ಕಪಟ: ಪವಣಿಕೆಯ ಭಿಕ್ಷುಕಂ ತಾನಾಗಿ ಸೀತೆಯಂ ಕದ್ದೊಯ್ದನು (ಪರಶು. ೨-೯). **ಪೋಣಿಕೆ**: ೩. ಪೋಣಿಸುವಿಕೆ: ನನ್ನ ಕವನ

ತೋರಬಹುದು ಬರಿಯ ಮಾತ ಪೋಣಿಕೆ (ಗಂಗಾತ. ೬೮-೧೨); ಕನ್ನಡದ ಸತ್ವವೂ ತಿರುಳೂ ಪೋಣಿಕೆಯ ಕಣ್ಣು (ಕಬಸಾ. ೯೯). ೪. ಪೋಣಿಸಿದುದು; ಸರಗೊಳಿಸಿದುದು: ಸೂತ್ರ—ಅವಮೋಜನೇ, ಪೋಣಿಕೆಯೊಳ್ (ಶಾಕಟ. ೨೮೭). **ಪೋವಣಿಕೆ:** ೧. ತೊಳೆದ ತೋರ ಮುತ್ತಿನ ಮೊತ್ತಂ ಪೋವಣಿಕೆವಡೆದುದೆಂದಿನಮಾ ವರವನಿತೆಯರದೇಂ ಮನಂಗೊಳಿಸಿದರೋ (ಅನಂಪು. ೭-೫೪). **ಹವಣಿಕೆ:** ೫. ಹಂಚಿಕೆ; ಯೋಜನೆ: ಬುದ್ಧಿಯುರಿಗಣ್ಣನಲಿ ಸೌಕುಮಾರ್ಯವು ಕಂದಿ ನಿಲಲು ಬಾಳುವ ಹವಣಿಕೆಯು ವಿಫಲವಹುದು (ಪಯಣ. ೫೮-೧೪); ತಪ್ಪು ಹೊರಿಸಬಹುದೆಂದು ಸುಲ್ತಾನನ ಹವಣಿಕೆ (ದೌಲತ್. ೪೧); ಜೇಮ್ಸ್ ದಂಪತಿಗಳೂ ಸ್ವಾಮಿದಾಸರೊಡನೆ ನಿಲ್ಲುವ ಹವಣಿಕೆಯಲ್ಲಿದ್ದಾರೆ (ಸಮುಜೇ. ೩೦ ೫೮೪). ೬. ಹಿಡಿತ; ಹತೋಟಿ: ಮಿಣಿಯಲ್ಲಿ ಮಾಣದ ಕೊಲ್ಲಟಗಿತ್ತಿ ತನ್ನ ಹೋಕೆಯ ತೂಕದಲ್ಲಿ ತೂಗಾಡುವಳು. ಮೈಯ ಹವಣಿಕೆ ಮಿಗಿಲು (ಉಯ್ಯಾಲೆ. ೩-೧೦). ೭. ಸಿದ್ಧತೆ; ತಯಾರಿ: ಸ್ವಲ್ಪ ಸುತ್ತಾಡಿಕೊಂಡು ಬರುವ ಹೊತ್ತಿಗೆ ನೇಸರ ನಡುನೆತ್ತಿಗೆ ಬರುವ ಹವಣಿಕೆಯಲ್ಲಿದ್ದ (ನಿರೀಕ್ಷ. ೧೪೯); ಜಗತ್ತಿನ ಇನ್ನೊಂದು ಭಾಗವಾದ ಈ ಸ್ಥಳದಲ್ಲಿ ಬದುಕು ಸಾಗಿಸುವ ಹವಣಿಕೆಯಾಗಿತ್ತು (ಮಹಾತ್ಮಾ. ೨೬). [ಪವಣ್+-ಇಕೆ]

ಪವಣಿಗ (ನಾ). ಚಿಲ್ಲರೆ ವ್ಯಾಪಾರಿ (?): ಸೀರೆಯಂ ಕೊಂಡು ಮಾಱುವ ಪವಣಿಗರಲಿ ಪ್ರತ್ಯೇಕ ಬರಿಸಕ್ಕೆ ಹಾಗವೊಂದು (ಕಇ. II, ೨೧-೨೯; 1147). [ಪವಣ್ ?+-ಇಗ]

ಪವಣಿಗೆ, ಪೋಣಿಗೆ, ಪೋಹಣಿಗೆ, ಪೌಣಿಗೆ (ನಾ). ೧. ಕೂಡಿಕೆ; ಹೊಂದಾಣಿಕೆ: ಅವಳರಗಿಳಿಯೊಳು ನುಡಿದಾಡಲಾ ಮಾತ ಪವಣಿಗೆ ಮಾಡಿಕೊಂಡೊಂದು ಕವಿತೆ ಮಾಡಿದರಿವರತಿನಿಪುಣೆಯರೆಂದು (ಧರಚ. ೭-೬೮); ಯುವತಿಯಂಗದಿ ಗರ್ಭಚಿಹ್ನಂ ಪವಣಿಗೆಯೊಳೊಪ್ಪಿದುದು ಸೌಖ್ಯದಿ (ಶಂಕದಾ. ೧೬-೨೫). ೨. ರಚನೆ; ಬಂಧ; ನಿರ್ಮಾಣ: ಇವಳು ಕಾವ್ಯಾಲಂಕಾರನಾಟಕಗಳ ಪವಣಿಗೆಯಿರವ ಬಲ್ಲವಳು (ಹದಿಬ. ೧-೨೫). ೩. ಪೋಣಿಸುವಿಕೆ; ಸರಗೊಳಿಸುವಿಕೆ: ಮಣಿ ಉಳ್ಳನ್ನಕ್ಕ ಪವಣಿಗೆಯ ಹಂಗು ಬಿಡದು (ಮದೇಪ. ೨೬೧-೭). ೪. ಪೋಣಿಸಿದುದು; ಸರ; ಸೂತ್ರ: ಉರಿಯ ಮಣಿಯ ಪವಣಿಗೆಯ ಮಾಡುವುದ ಕಂಡೆನಯ್ಯ. (ಸಿದ್ಧೇಪ. ೪. ೧೬೮-೪೧೧); ಒರೆ ತೂಕ ಬಣ್ಣಕ್ಕೆ ಸರಿಯಿರಲೊಪ್ಪವಿಟ್ಟುರುತರದ ಪವಣಿಗೆಯ ಮಾಡಿ ಕಂತದೊಳು ಧರಿಸಿಕೊಂಡಿಹರು ಶರಣರು (ಗುರುದೋ. ೨-೧೫೧). **ಪೋಣಿಗೆ:** ೪. "ಸೂತ್ರಂ, ಸೂತ್ರಿತಂ, ಸೂತ್ರಣಂ, ಸೂತ್ರಣೀಯಂ-ಈ ೪ ಪೋಣಿಗೆ" (ಶಾಶಕ್ಯ. ೨೮೭); ಸೂತ್ರವು ಆಡುವಂದದಿ ಹೊಸ ಮುತ್ತುಗಳ ಹೆಜ್ಜೆವಿಟ್ಟು ಪೋಣಿಗೆಯ ತೆರದಿ (ಸಂದಿರೀ. ೧-೨೬). **ಪೋಹಣಿಗೆ:** ೪. ಸೊಕ್ಕಾನೆದಲೆಯ ಮಣಿಯಂ ತಂದು . . . ನರದ ನೇಣಿಂದ ಪೋಹಣಿಗೆಯಂ ಹಸಮಾಡಿದ ಎಕ್ಕಾವಳಿಗಳನನುರಾಗದಿಂ ತಂದು (ಸಮ್ಯಕೌ. ೧೦-೩೪). **ಪೌಣಿಗೆ:** ೫. ಒಳ್ಳೆಯ ರೀತಿ; ಅಚ್ಚುಕಟ್ಟು; ಓರಣ: ಅಟ್ಟದನು ಚರರನು ನೃಪತಿ ಗುಡಿಗೆರೆಯ ಪೌಣಿಗೆಯೊಳುರೆ ಕಟ್ಟಿ ಶುಭಕರ ಕಾಣಿಸಿಯೆ ಲಿಖಿತದಲಿ ತಳುವದೆ ಯಾಣವಾಹನ ವೇಗದಿಂದೈತಹುದು ಪುರಿಗೆನುತ (ಅಂಬಿಕಾ. ೪೮-೨೪). [<ಪವಣಿಕೆ]

ಪವಣಿಸು, ಪೋಣಿಸು, ಪೋಹಣಿಸು, ಹವಣಿಸು (ಕ್ರಿ). ೧. ಅಳತೆ ಮಾಡು; ತೂಗು: ಪವಣಿಸುವನಾವನಾ ವೈಶ್ಯಕುಲನ ಧನಸಂಕುಲಮಂ (ಸುಕುಮಾ. ೯-೮೪); ಲೆಕ್ಕವಿಡಲ್ ಶಬ್ದಂ ನೆಱೆಯವು ಪವಣಿಸಲೆನೆ ಕಂಡರಾರೊ ಕಾಲದ ಪವಣಂ [ಪಾಕಾಂ.ಕಡೆಯಂ] (ಸಂರಾಮಾ. ೧-೫೪); ಬಳ್ಳದೊಳಳೆದುದಧಿಯ ಜಳಮುಳ್ಳನಿತುಮನಾರೊ ಪವಣಿಸಲ್ ನೆಱೆವನ್ನರ್ (ಎಕ. II, ೩೪೫-೪೮; ಸು. 1159); ಪವಣಿಸಿ ನಾಭಿಮಂಡಲ ಸಮಾನದೆ ತೀವಿದೊಡಂ ತದಂಗನಾನಿವಹಕುಚಾಗ್ರಮಂ ಕುಸುಕುತಿರ್ದುದು . . . ಸಲಿಲೋತ್ಕರಂ (ಕುಸುಮಾ. ೫-೫೩). ೨. ಲೆಕ್ಕ ಹಾಕು; ಎಣಿಸು: ಜವದಿಂದಾಗಸದೊಳ್ ಪಾಱುವ ಪಕ್ಕಿಯುಮಂತುಗಾಣಲಣಮಾಜದೆ ತೇಂಗುವುದು ಪತಾಕಾಗ್ರದೊಳೆನೆ ಪವಣಿಸಲಾನಱಿಯೆನತುಳಮಂ ತದ್ಬಲಮಂ (ಚಂದ್ರಪ್ರ. ೧೦-೨೫); ಪವಣಿಸುವಡರಿದೆನುತ್ತಿರ್ಪ ಶಾಸ್ತ್ರಂಗಳಿಂ ತಮತಮಗೆ ಹೊಗಳುತೊಪ್ಪುವ ಪುರಾಣಂಗಳಿಂ (ವೀರಶ. ಹ. ೪೮೨-೧). ೩. ಲೆಕ್ಕಕ್ಕೆ ಸಿಗು; ಎಣಿಕೆಗೆ ಒಳಪಡು: ಆ ಮುನೀಂದ್ರಂ ಬಂದನೆಂಬೊಂದಾನಂದಂ ಕೈಮಿಕ್ಕು ತನ್ನಗರೀಮಂದಿರವೃಂದಂಗಳೊಳ್ ತುಂಬಿ ಪವಣಿಸದೆ ಮರ್ತ್ಯ ಮೂರ್ತಿಯಂ ಕೈಕೊಂಡು ಪೊಱಪೊಣ್ಮದುದೆಂಬಂತೆ ಪುರಜನಂಗಳ್ . . . ಪೊಱಮಟ್ಟು ಬಂದರ್ (ಬಾಧಪು. ೩-೧೬೫); ನವಿಲುಗಳ ನರ್ತನದ ಚಾತಕದ ಮನದೊಳುಕ್ಕುವ ಹರುಷರಸವನಾ ಕಾಂಬಿನೀವನಿತೆಯವಲೋಕಿಸುತ್ತುಮಾನಂದಾಶ್ರುವಾರಿ ಕಂದೆಱದೆಳೆನೆ ಮುಂಬನಿಗಳು ಪವಣಿಸದೆ ಸುರಿಯೆ (ಪಾರ್ಶ್ವಭಾ. ೨೬-೧೯). ೪. ಹೊಂದಿಸು; ಜೋಡಿಸು; ಕೂಡಿಸು: ಧನಧಾನ್ಯಕ್ಷೇತ್ರನಿವೇಶನಕುಪ್ಯಪ್ರಭೃತಿ ವಸ್ತುವಂ ಪವಣಿಸಿಕೊಂಡು (ಸರ್ಧಮಾ. ೭-೧೨); ಕೇವಲ ಹಿಂದುಹಿಂದು ಅಂಕೆಗಳನ್ನು ಪವಣಿಸಿ ವಕ್ರವೇಷ ತೊಡಿಸಿ "ಸರಳರೂಪ ಕೊಡಿರಿ" ಎನ್ನುತ್ತಾರಲ್ಲ (ಗಾಳಿಪ. ೧೮೮). ೫. ಮಣಿ, ಮುತ್ತು, ಹೂವು ಮೊದಲಾದುವನ್ನು ಸರಗಟ್ಟಲು ದಾರದಲ್ಲಿ ಸೇರಿಸು,—ಅಳವಡಿಸು: ಅರಗಿನ ಮಣಿಯ ಮಾಡಿ ಉರಿಯ ನೇಣ ಕಟ್ಟಿ ಹಿರಿಯರೆಲ್ಲರು ಪವಣಿಸಲಱಿಯರು (ಮೋಳಿಮಾ. ೧೭೪-೬೫೪); ವಜ್ರವಿಲ್ಲದ ಮಣಿಯ ದಾರವಿಲ್ಲದೆ ಪವಣಿಸುವ . . . ನಿಮ್ಮ ಶರಣನ ಪರಿಯ ನೋಡಾ (ಅಪಚಂ. ೧೫೦-೮೧೧); ಕುಶಲವಹ ದಾರದಿಂದ ಪವಣಿಸಲೆಳೆಗಳಾದ ವಿಪ್ಪತ್ತೊಂದಲ (ವೀಕೃಪು. ೭-೭-೩೦); ಸೂಚಿಯಲ್ಲಿ ದಾರ ಪವಣಿಸುವ ಹವಣಿಕೆಯಲ್ಲಿದ್ದಾಗ (ದೇಕನ್ಯೆ. ೧೨). ೬. ಸಿದ್ಧಮಾಡು; ಅಣಿಗೊಳಿಸು: ಪವಣಿಸಿ ಜಿನೇಂದ್ರಮತದಿಂ . . . ಸಹಸ್ರಯೋಜನದವಗಾಹದಿನೆಸೆವುದೀ ನಗಂ (ಪುಷ್ಪಪು. ೧೦-೫೫); ಸಭಾಮಂದಿರವನಮರವರ್ಧಕಿಗಳಿಂದ್ರನ ನೇಮದಿಂದ ಪವಣಿಸುತಿರ್ದರು (ತ್ರೈಲೋಪ. ೪೨-೩೯). ೭. ಒದಗಿಸು, ಪೂರೈಸು: ಪವಣಿಸು ನಿಪ್ಪಲಿಯಂ ಸೈಂಧವಂ ಜೀರಿಗೆಯನರೆದು ಕುಡಿ (ಕಲ್ಯಾಕಾ. ೯-೧೨); ಭುವನಕ್ಕೆ ಬಾಧೆಯೆನುತಂ ಪವಣಿಸಿದಂ ಕೆಡಿಪ ಬುದ್ಧಿಯಂ ಲಕ್ಷ್ಮೀಶಂ (ದಶಾಪ. ೮-೮); ಸಲವಗೆಯೊಳು ಪವಣಿಸಿಯವಳ್ಬೆಯ ಸಲಿಸಿ ಸಂತಸಗೊಳಿಸುವುದು (ಹದಿಬ. ೪-೨೭). ೮. ಸಾಧಿಸು: ದೈರವ ಪವಣಿಸಿ ಭಂಗಬಡುವನು (ಕರ್ಣಾಪ. ೬-೯). **ಪೋಣಿಸು:** ೪. ಶೂನ್ಯಸಂಪಾದನೆ ಒಂದು ವಚನಸಂಕಲನ, ವಚನಗಳನ್ನು ಸಂಭಾವನೆಯ ರೂಪದಲ್ಲಿ ಪೋಣಿಸಿರುವುದು ಇದರ ವೈಶಿಷ್ಟ್ಯ (ಶೂನ್ಯಕು. ೨೫). ೫. ವಿರಳವಿಲ್ಲದೆ ಮಣಿಯ ಪೋಣ[ಪಾಕಾಂ.ಪವಣ್]ಸಿ (ಮಹಾದೇ. ಬ. ೪೫-೧೦೫); ಶಶಿಕಿರಣಮನಾಯ್ದಾಯ್ದೊಳ್ಪೆಸೆಯಲ್ ಪೋಣಿಸಿದ ತೆಱದ ಮುಕ್ತಾಹಾರಂ (ದಶಕು. ೬-೪೦); ಹುಡುಗಿಯರಿಗಾಗಿ ಸೂಚಿಗೆ ದಾರ ಪೋಣಿಸುವುದು, ನಿಂಬೆ ಹಣ್ಣಿನ ಓಟ ಇವು ನಡೆದವು (ಕಪಪು. ೪-೩೪). ೯. ದಾರವನ್ನು ಸೂಚಿಕಣ್ಣಿನಲ್ಲಿ ಸೇರಿಸು: "ಕೋ-ಸೂತ್ರಪ್ರವೇಶೇ (ಪೋಣಿಸು)" (ಕಮಧಾ). ೧೦. ಚುಚ್ಚು; ನೆಡು; ನಾಟಿಕೊಳ್ಳು: ಕಡುಗಾದ ಶೂಲವೆದೆಯಲ್ಲಿ ಪೋಣಿಸಲು ಬೆನ್ನೆಡೆಯಲ್ಲಿ ಮೊನೆದೋಱ (ವೀಕೃಪು. ೪-೧೯-೩೫). **ಪೋಹಣಿಸು:** ೫. ಹಲವು ವಿತ್ತಮಂ . . . ಜಿನದತ್ತೆ ತೊಟ್ಟಳ್ ಗುಣಾಗಂಡರಂತದಕೆ ರತ್ನವನು ಪೋಹಣಿಸುವಂತೆ

(ಸಮ್ಯಕೌ. ೧೦-೨೨). **ಹವಣಿಸು:** ೧. ಸೇನನ ವೀರವ ಹವಣಿಪಡೆ ಸಹಸ್ರಜಿಹ್ವೆಯುಳ್ಳಂ ನೆರೆಯಂ (ಎಕ. XI, ದಾವಣ. ೮-೪ ; ಸು. 1265); ಭುವನದೊಳು ತನಗಧಿಕಬಲದಲಿ ಹವಣಿಸಲಿಕೆಣಿಯಿಲ್ಲ (ಸಂಭವ. ೨೮-೨೧); ತನ್ನತುಳಭಾಗ್ಯವ ಹವಣಿಸುವರಾರು (ನಿಭಾಗ. ೫-೩-೬) ; ಶಿವಶಿವಾ ಶರಣನೇಳ್ಗೆಯ ಹವಣಿಸಲ್ಕಳವೇ (ಶಂಕದಾ. ೧೫-೪೧). ೨. ಇವರು ಕಪಿಗಳೆ ಜೀಯ ಸೀತಾಯುವತಿಯರಸನು ನರನೆ ನೀನೀ ಹವಣಿನಲಿ ಹವಣಿಸುವ ಬುದ್ಧಿಗೆ ಕಾಣಿನುರುಪಥವ (ತೊರರಾ. ೬-೧೯-೫) ; ಅವಿನಯ ವೆನಿಪ ವನವು ಬಳಸಿಹುದಾ ದಿವಿಜಾರಿಯ ಪುರವರವ ಹವಣಿಸಬಾರದನಂ ತಾನುಬಂಧಿಯೆಂಬವು ವನದ ಕಮಲಪಂಡಗಳು (ತ್ರಿಪುಸಾಂ. ೪-೩೮). ೪. ಅವರ ಮನವನೊರೆದು ನೋಡುವೆನೆಂದು ಹವಣಿಸಿದನೊಂದು ವೇಷವ ಶರೀರದೊಳಂದು (ತಿರುರ. ದೇ. ೧೦-೮) ; ಸಾಗರವನಾ ಮುನಿ ಹವಣಿಸಿದ ಜಠರದಲಿ (ಕುಮ್ಯಾಅ. ೯-೧೨) ; ಇಂತೆಂದನಾ ಹನುಮಂತ ಹವಣಿಸಿದುಚಿತವಚನದಲಿ (ತೊರರಾ. ೫-೩-೭೫). ೬. ದಧಿಮುಖ ಮರನ ಹವಣಿಸೆ ಶಿರವ ಗದೆಯಿಂದಪ್ಪಳಿಸಿದರೆ ಬಿದ್ದ ದಧಿಮುಖನು (ಕೌಶಿರಾ. ೩೨-೩೮). ೭. ಹವಣಿಸಿದನು ಭಳಿ ಬಿಸಿಲು ದಿವಿಜರ ಬಲಕೆ ಶ್ರೀರಾಮ (ಉತ್ತಕ. ೬-೫೫) ; ಬಾಯಿಗೆ ಸವಿಯಾಗುವಂತೆ ಹಾಲು ಗಂಜಿಗಳನ್ನು ಹವಣಿಸಿ (ನಂಟರು. ೩೪). ೧೧. ಪ್ರಯತ್ನಿಸು ; ತೊಡಗು : ಧೂರ್ತರು ತರತರದ ಹಂಚಿಕೆಗಳಿಂದ ಜನರನ್ನು ಮೋಸಗೊಳಿಸಲಿಕ್ಕೆ ಹವಣಿಸುತ್ತಾರೆ (ಮುಂಬಯಿ. ೪-೧೯) ; ವಿಷ್ಣುವರ್ಮನು . . . ವೈಜಯಂತೀ ರಾಜ್ಯಕ್ಕಧಿಪತಿಯಾಗಲು ಹವಣಿಸುತ್ತಿದ್ದನು (ಕರ್ಣಾಅ. ೧೨). ೧೨. ಮೊದಲುಮಾಡು ; ಆರಂಭಿಸು : ಹವಣಿಸಿನ್ನೀ[ಪಾಠಾಂ. ಹವಣನಱಿಯೆನು] ತಪವನೀ ಖಳನಿವಹ ಕೊಲ್ಲದ ಮುನ್ನ ಸುಕ್ಷೇಮವನು ಮಾಡು (ನಿಭಾಗ. ೪-೭-೪೩). ೧೩. ಒದಗು ; ಉಂಟಾಗು : ದಿವಸುಧೆಯಬ್ಧಿಯನೊಲವಿಂ ತವೆ ಜನರಿಚ್ಛೆಯನೆ ಪಡೆಯಲೆಂದುಱೆ ಕಡೆಯಲ್ ಹವಣಿಸಿದ ವಿಷಮನನುಕರಿಸುವ ತೆಱದಿಂದುದಯಮುಳಿದು ತಳೆದುದು ತಮಮಂ (ಗಿರಿಕ. ೪-೭೪). ೧೪. ಸಿದ್ಧವಾಗು; ಅಣಿಯಾಗು: ಅತಿರೌದ್ರಾಕಾರವಡೆದಭವನ ಕಂಡು ರತಿರಾಜ ಹವಣಿಸಿ ನಿಂದ (ಮೋಹತ. ೭-೩೬). ೧೫. ಅಂಕೆಗೆ ತರು ; ಅಧೀನಕ್ಕೊಳಪಡಿಸು : ನೆಲನನಳೆವಂದೀ . . . ಜಲನಿಧಿಗಳೀ ಗಗನವೀ ಬ್ರಹ್ಮಾಂಡ ಹ[ಪಾಠಾಂ.ಪ]ವಣಿಸಿದ ವಿಲಸಿತದ ವಿಭುವಿಂಗೆ ದಟ್ಟಡಿ ಬಳುಕುನಡೆ ಮೆಲ್ನಡೆಗಳೆಂಬಿವು ತಿಳಿವವರ ಮನಸಿಂಗೆ ಮಱೆ ತಾನಲ್ಲವೇ (ತೊರರಾ. ೧-೮-೭೬); ಹವಣಿಸಿ ಹಲವು ಕಟ್ಟುನವ ತಾಡಿಪ ತನ್ನ ತವರವ ತಡಕೊಂಬುದರಿದೆ (ಮೋಹತ. ೪೧-೪೯). ೧೬. ವಿವರಿಸು ; ತಿಳಿಸು : ಆ ಭಕ್ತನೊಳಗೆ ಜಂಗಮವಡಗಿ ಆ ಜಂಗಮದೊಳಗೆ ಭಕ್ತನಡಗಿ ಇದೇನೆಂದು ಹವಣಿಸುವೆನಯ್ಯ ಎರಡೊಂದಾದ ಘನವ (ಬಸವ. ೫೨೪); ಹವಣಿಸಲಾವನನು ನೆರೆಯವು ನಿರಂತರ ನಿಗಮಕೋಟಿಗಳು (ನಿಭಾಗ. ೧೦-೯೦-೨೬).

[ಪವಣ್+-ಇಸು$_3$]

ಪವಣು 'ಪವಣ್' ನೋ.

ಪವಣುದೋಱು 'ಪವಣ್ದೋಱು' ನೋ.

ಪವಣ್ಗಟ್ಟು (ಕ್ರಿ). ಹೊಂದಿಸಿ ಕಟ್ಟು ; ಹವಣಾಗಿ ಕಟ್ಟು : ಅಪರಾಂಭೋಧಿತರಂಗಮಂಬ ತೊವಲೊಳ್ ತ್ರಿಂಶದ್ಘಟೀಪರ್ವದಿಂದೆ ಪವಣ್ಗಟ್ಟಿದ ದೋಂಟಿಯಂ ಕೊಳಿಸಿ (ಅನಂಪು. ೭-೬೩).

[ಪವಣ್+ಕಟ್ಟು$_1$]

ಪವಣ್ಗಱಿ, ಹವಣುಗಳಿ (ಕ್ರಿ). ಅಳತೆ ಮೀರು ; ಮಿತಿ ಮೀರು : ಕಣ್ಗುಡಿತೆಗಳಿಂದಾಕೆ ಪವಣ್ಗಱಿಬಾ ಬಾಷ್ಪವಾರಿಯಂ ಸುರಿಯುತ್ತಂ (ಕಾದಂಉ. ೫೧೮). **ಹವಣುಗಳಿ:** ಹವಣುಗಳಿದ ತುರಂಗಕೋಟಿಗಳವಯವದಿನೊಯ್ಯಾರದಿಂ ತಳರ್ದುವು (ಕುಮುರಾ. ೩-೨೯).

[ಪವಣ್+ಕಱಿ$_1$]

ಪವಣ್ಗೆಡು (ಕ್ರಿ). ಹವಣು ತಪ್ಪು ; ಅಳತೆ ತಪ್ಪು : ಅನಯಂ ಪುಟ್ಟದೆಯುಂ ಪವಣ್ಗೆಡದೆಯುಂ ತಂತಮ್ಮ ತೇಜಃಪ್ರಭಾವನೆ ಮೆಯ್ದೋಱದೆಯುಂ (ಪರ್ಧಪು. ೭-೫೯).

[ಪವಣ್+ಕಿಡು(<ಕೆಡು$_1$)]

ಪವಣ್ಗೊಳ್ (ಕ್ರಿ). ಲೆಕ್ಕ ಮಾಡು ; ಎಣಿಸು : ಗಱಿಲ್ಲೆನೆ ಸತ್ತು ಮಾಯ್ದ ಲೋಭಿಗಳ ಪವಣ್ಗೊಳಲ್ ಮನುಜರಿರ್ಕಜನಾದೊಡಮೇಂ ಸಮರ್ಥನೇ (ಎಕ. VII, ಶಿಕಾರಿ. ೧೫೧-೩೫; 1047) ; ಉಂಡ ಮೊಲೆವಾಲ ಪವಣಂ ಕೊಂಡು ಬಿಸುಟ್ಟೊಡಲ ಪವಣನಿದು ಪವಣೆಂದಾರ್ಕಂಡು ಮನಂಗೊಂಡು ಪವಣ್ಗೊಂಡಱಿಪುವ ಜಡರನಾದಿಕಾಲಸ್ಥಿತಿಯಿಂ (ಸುಕುಮಾ. ೬-೮). [ಪವಣ್+ಕೊಳ್$_1$]

ಪವಣ್ಗೊಳಿಸು (ಕ್ರಿ). = ಪವಣ್ಗೊಳ್ : ಕನಕನಂದಿಮುನೀಂದ್ರನ ಹೃದ್ಯಮಪ್ಪ ವಿದ್ಯಾವಳಿಯಂ ಪವಣ್ಗೊಳಿಪೊಡಂಬುಜಸೂನುಗಳುಂಬ ಮಾವಗಂ (ಶಾಂತೀಶ್ವ. ೧-೨೨) ; ಇಂತನಿಬರುಂ ಪೊಗಟ್ಟುದುಂ ರಾಯಂ ಮಗನ ಮೈಮೆಯಿಂದುರ್ಕುವ ಸಂತಸಮಂ ಮನದೊಳ್ ಪವಣ್ಗೊಳಿಸಿ ನುಡಿದಂ (ಚಕವಿ. ೫-೭೩). [ಪವಣ್ಗೊಳ್+-ಇಸು$_3$]

ಪವಣ್ಣುಡಿ (ನಾ). ಹವಣಾದ ಮಾತು ; ಉಚಿತವಾದ ನುಡಿ : ಅಳೆದಿರಿಸಿರ್ದುದಂ ಕುಡುವನಂತೆ ಪವಣ್ಣುಡಿಯಿಂದೆ ಭವ್ಯರಂ ತಿಳಿಪುವ (ಅಪಶ. ೪೮-೧೦೩). [ಪವಣ್+ನುಡಿ$_2$]

ಪವಣ್ದೋಱು, ಪವಣುದೋಱು (ಕ್ರಿ). ೧. ಅಳತೆಗೆ ಸಿಕ್ಕು ; ಅಳವಿಗೆ ಬರು : ತವದಾಯುಷ್ಯದ ಕುಂದದಂದದ ಬಿಯಂಗೆಯ್ದುಂ ಪವಣ್ದೋಱದುದ್ಭವದೇ ತೋಂತೆನೆನಿಪ್ಪ ರೂಪಿನ ಮನಂಗೊಂಡಿರ್ಪ ಲಾವಣ್ಯದೊಪ್ಪುವ ನೇಪಥ್ಯದಮರ್ಕೆ ನಿಲ್ಲವನಿಮಿಷೇಂದ್ರಾದಿಗಳ್ಗೆಂದೊಡಾರ್ಗಿವು ನಿಲ್ಕುಂ (ಶಾಂತಿಪು. ೭-೮). **ಪವಣುದೋಱು :** ೨. ಉಚಿತವಾಗು ; ಯೋಗ್ಯವೆನಿಸು : ಸವಿಯನೆಸಗದ ನುಡಿಯ ಪವಣುದೋಱದ[ಪಾಠಾಂ. ಱುವ] ನಡೆಯ . . . ಕುವಲಯಾಂಬಕದ ಸೌಷ್ಟವದವಳೆ ಕೊಂಕಣಿತಿ (ಜನವ. ೬-೩೧). [ಪವಣ್+ತೋಱು]

ಪವಣ್ಬಡಿಸು (ಕ್ರಿ). ಹೊಂದಿಸು ; ಹೋಲಿಕೆ ಮಾಡು : ಪವಣ್ಬಡಿಪೊಡೀತನನೀತನೆ ಪೋಲ್ವನಿನ್ನರಾರ್ (ಪಂರಾಮಾ. ೧೧-೧೦೩).

[ಪವಣ್ಬಡೆ+-ಇಸು$_3$]

ಪವಣ್ಬಡು (ಕ್ರಿ). ದೊಡ್ಡ ಆಕಾರವನ್ನು ಪಡೆ ; ಅತಿಶಯವಾಗು : ನುಣ್ಬುಟಿಲೊಳಗದಿರ್ಮುತ್ತೆ ಪವಣ್ಬಡೆ ಕಟ್ಟಲಿಸಿ ಬೆಳೆದು ಬಳಸಿರ್ದೊಡದಂ ತಣ್ಬೆಳಗನೀಯೆ ಬೆಳತಿಗೆಗಣ್ಬೆಳಗೊಳಪೊಕ್ಕು ಚಪಳೆ ಕಳಿಕೆಯನಾಯ್ದಳ್ (ಚಂದ್ರಪು. ೭-೧೦೫). [ಪವಣ್+ಪಡು$_1$]

ಪವಣ್ಬಡೆ (ಕ್ರಿ). ೧. ಅಳವಡು ; ಹೊಂದಿಕೆಯಾಗು : ಚಿನ್ನದ ಸವಂಗಮಪೂರ್ವದ ಮೊಚ್ಚೆಯಂ ಪವಣ್ಬಡೆದ ಸುವರ್ಣಪಾರಿವದ ಕುಪ್ಪಸಮೊಪ್ಪೆ . . . ಸೂಳೆಯರೊಪ್ಪಿ ತೋಱಿದರ್ (ಪಂಪಭಾ. ೯-೧೦೩). ೨. ನಿಗದಿಯಾಗು : ಕಣ್ಬೆಳಗುಂ ಲಲಿತಾಂಗದ ನುಣ್ಬೆಳಗುಂ . . . ಪವಣ್ಬಡೆವೊಡತರ್ಕ್ಯಮಾದುದು (ಕುಸುಮಾ. ೩-೯೩).

[ಪವಣ್+ಪಡೆ$_1$]

ಪವಣ್ಬುಗಿಸು (ಕ್ರಿ). ಎಣಿಕೆಗೆ ಒಳಪಡಿಸು ; ನಿಗದಿ ಮಾಡು : ಭಗಣದ ಲೆಕ್ಕಮಂ . . . ದೆಸೆಯಂತಮಂ ಪವಣ್ಬುಗಿಸಲೆರಟ್ಟಲಂಗಳ ಮದದ್ವಿಪವಾಹವರೂಥಕಿಂಕರಾದಿಗಳ ಪವಣ್ಗಳಂ ಪವಣಿಸಲ್ ಬಗೆದರ್ಪನೆ ಗಾಂಪನಾಗನೇ (ಪಂರಾಮಾ. ೧೩-೧೧).

[ಪವಣ್+ಪುಗಿಸು(<ಪೊಗಿಸು)]

ಪವನ (ನಾ). ೧. (ಧಾನ್ಯಾದಿಗಳನ್ನು) ಗಾಳಿಯಲ್ಲಿ ತೂರುವಿಕೆ ; ಶುದ್ಧಿ ಮಾಡುವಿಕೆ : "ನಿಷ್ಪಾವಃ, ಪವನಂ, ಪವಃ—೩ ಧಾನ್ಯಾದಿಗಳನ್ನು ಗಾಳಿಗೊಡ್ಡುವಿಕೆ, ತೂರುವಿಕೆ" (ಸಿದ್ಧಾಂತ. ೩೬೪). ೨. ಗಾಳಿ ; ವಾಯು : "ಪವನಃ, ಶ್ವಸನಃ, ವಾಯುಃ . . . ಮಹಾಬಲಃ—ಈ ೨೦ ಗಾಳಿಯ ಪೆಸರ್" (ಪಲಾಯು. ೧೪-೭೫) ; "ಎಲರೆನಲ್ ಪವನಂ" (ಪತುಸಿ. ೧೦). ೩. ಉಸಿರು ; ಶ್ವಾಸ : ಕಲೀ ತೆಳಗಾಗಿ ನಂದರೆತಾನ ; ಹಿಂಗಟ ಮುನೆತಾನ ; ಮುಂಗಟ ಮುಳೆತಾನ ; ಪವನ ಬರಸತಾನ (ಪಟ್ಟಹೊ. ೪೧). ೪. ಗಾಳಿಯ ಅಧಿದೇವತೆ ; ವಾಯುದೇವತೆ : "ಪವಮಾನಂ . . . ಪವನಂ ಪ್ರಭಂಜನಂ . . . ಸವಿಸಾರಣಂ ಪೃಷದಶ್ವಂ" (ಸಸ್ತುಕೋ. ೮-೪೪) ; ಪವನಂಗೆ ಪುಟ್ಟಿದಂ ರಾಘವನಣುಗಾಳ್ (ಗದಾಯು. ೬-೪೧) ; ತೊಡೆಮೆ ಶಕ್ರನ ನಾಮಮನುಂ ಕುಡುಕೆ ನೀರೊಳ್ ಮೆಟ್ಟುನೆಂ ವಹ್ನಿಯಂ . . . ಎಟ್ಟುವೆಂ ಪವನನಂ (ಜಗದಿ. ೬-೨೧). [ಸಂ.]

ಪವನಗತಿ (ನಾ). = ಪವನಜವ : ಪವನಗತಿಪ್ರಯುತಂಗಳ್ . . . ನಭದಮೊಲೆಸೆದಪು ದಿಗೆ ಪದಿನೆಂಟುಕೋಟಿ ಜಾತ್ಯಶ್ವಂಗಳ್ (ಪಾರ್ಶ್ವಪು. ೮-೭೫). [ಪವನ+ಗತಿ]

ಪವನಜ (ನಾ). ೧. ವಾಯುಪುತ್ರ ; ಹನುಮಂತ ; ಆಂಜನೇಯ : ಅದೇಗಹನಮೊ ಪವನಜಂಗೆ ಪುಗೞಮುಮುಂಟೇ (ಪಂರಾಮಾ. ೧೧-೭೬). ೨. ಭೀಮ : ಪವನಜಂದೆ ಕೌರವಕುಲಂ ಪಡಲಿಟ್ಟೆವೊಲಕ್ಕುಂ (ಪಂಪಭಾ. ೧೦-೬೩) ; ಪವನಜನಾಸ್ಯಮಲ್ತಿ ಪವನಾನನಮಪ್ಪೊಡೆ ಮಟ್ಟಿವಿರ್ದು ನೋಡುವುದೆ ಮದೀಯವಕ್ತ್ರಮನೆ (ಗದಾಯು. ೯-೭೩) ; ಒಗ್ಗರೆಗಳ ಸೌರಭಕೆ ಕೀದುದು ನಿದ್ರೆ ಪವನಜನ (ಕುವ್ಯಾಳ. ೧೦-೨೩). ೩. ಅಗ್ನಿ. [ಸಂ.]

ಪವನಜವ (ನಾ). ಗಾಳಿಯ ವೇಗ ; ವಾಯುವೇಗ : ಪವನಜವದ ಪವನಜ ಪರಿದಂ (ಗದಾಯು. ೬-೨೮) ; ಪರಮಭಾಗನತಂ . . . ಪವನಜವಾನ್ವಿತರಥದಿನೆಯ್ದಿದಂ ಗೋಕುಲಮಂ (ಜಗದಿ. ೫-೭೩) ; ಪವನಜವಮಂ ಮುಂಬ ವಾಜಿಗಳೋಟಂಗೊಂಡುವು (ರಾಮಾಶ್ವ. ೩೦-೩). [ಪವನ+ಜವ]

ಪವನಜೆ (ನಾ). ಒಂದು ಬಗೆಯ ಮರ ; ಇಂಗುಳ : "ಪವನಜೆಯಿಂಗುಳಂ" (ಮಂಗರಾ. ೪೧-೭೩). [?]

ಪವನತನಯ (ನಾ). = ಪವನಜ ೨ : ಪವನತನಯನ ಖಡಿಯ ಝಾಡಿಯ ಹವಣ ಕಂಡರು (ಕುವ್ಯಾಸ. ೧೦-೭೫). [ಪವನ+ತನಯ]

ಪವನತ್ರಯ (ನಾ). [ಜೈನ] ಭೂಲೋಕವನ್ನು ಸುತ್ತಿರುವ ಘನೋದಧಿ, ಘನವಾತ ಮತ್ತು ತನುವಾತವೆಂಬ ಮೂರು ಬಗೆಯ ಗಾಳಿಗಳು : ಭುವನಂ ಪವನತ್ರಯಾವೃತಂ (ಸುಲ್ಲಪು. ೧-೭೭). [ಪವನ+ತ್ರಯ]

ಪವನದಿಶೆ (ನಾ). ವಾಯುವಿನ ದಿಕ್ಕು ; ವಾಯವ್ಯ : ಬಗ್ಗುಡದ ಪವನದಿಶೆಯೊಳು (ಕಾ. V, ೨೬-೬೭ ; 1147). [ಪವನ+ದಿಶೆ]

ಪವನನಂದನ (ನಾ). ೧. = ಪವನಜ ೧ : ಮನದಿಂ ಬೇಗಂ ಪುಟ್ಟಿದಂ . . . ಬನದೊಳಗೆ ಪವನನಂದನನನಿಂದ್ರಗುಣನೆನೆವತೋಳಧಾತ್ರಿರುಹದಿಂ (ಪಸುಚ. ೧೦೬ ಪ್ರಯೋ). ೨. = ಪವನಜ ೨ : ಕುರುಳುಳನಂದನಂ ಪವನನಂದನನೆಂಬ ಮದಾಂಧಗಂಧಸಿಂಧುರಮೆ ಕಯುತ್ತು ಪಾಯೆ ಪಡಲಿಟ್ಟೆವೊಲಾದುದು (ಪಂಪಭಾ. ೧೩-೧೨) ; ಅಲಗಿನಲಿ ಖಡುಗದಲಿ ಹೊಯ್ದರು ಪವನನಂದನನ (ಕುವ್ಯಾಳ. ೧೦-೫೦). [ಪವನ+ನಂದನ]

ಪವನನಿರೋಧ (ನಾ). ಉಸಿರನ್ನು ತಡೆಹಿಡಿಯುವುದು ; ಶ್ವಾಸಬಂಧನ : ಪವನನಿರೋಧವಿಲ್ಲದ ಗಳೋತ್ಥ ಪುಟಾದಿ ನಿಮಿತ್ತ ವಿಲ್ಲದ . . . ನಾದಮೊಗೆದತ್ಯಭವಂಗೆ ಗಭೀರತಾಯುತಂ (ಪರ್ಶ್ವಪು. ೧೬-೨೬). [ಪವನ+ನಿರೋಧ]

ಪವನನಿರ್ಘಾತ (ನಾ). ಬಲವಾದ ಗಾಳಿ ; ಬಿರುಗಾಳಿ : ಉಲ್ಕಾಪಾತ ಪವನನಿರ್ಘಾತಂ ಕೂಡಿದೊಡೊಂದಿ ಬಂದೊಡಂ ರೌದ್ರದಂದದೊಳಕರ ಮುಹೂರ್ತಮಾಗಡೆ ಸಾಯ್ದುಂ (ಜಾತಕ. ೬-೯). [ಪವನ+ನಿರ್ಘಾತ]

ಪವನಪಥ (ನಾ). ವಾಯುಮಾರ್ಗ ; ಆಕಾಶ : ಪವನಪಥದಂತೆ ಮುಂದಂ ಶ್ರವಣೋದಯಮಾಗೆ (ಪುಲ್ಲಿಪು. ೧೬-೯೫) ; ಅಂತು ಪವನಪಥದಿನಾಬಂದಾ ಮುನೀಶ್ವರರ ಪದಕುಶೇಶಯಂಗಳನತಿಸೇವ್ಯ ದಿವ್ಯಾರ್ಘನಾನಾವಿಧಯದಿನರ್ಚಿಸಿ (ನೇಮಿಪು. ೪-೧೧೧ ಪ) ; ಪವನಪಥಂ ಪ್ರಸನ್ನತರಮಾಯ್ತು (ಶಾಂತೀಶ್ವ. ೪-೪೩). [ಪವನ+ಪಥ]

ಪವನಪುತ್ರ (ನಾ). = ಪವನಜ ೩ : ನೀವೀ ಪವನಪುತ್ರನನನುವರ ದೊಳೆಂತಳವಟ ಜಯಿಸುವಿರಿ (ಕುವ್ಯಾಳ. ೩-೧೩೨). [ಪವನ+ಪುತ್ರ]

ಪವನಭಕ್ಷಣ (ನಾ). ಗಾಳಿಯನ್ನು ಆಹಾರವಾಗಿ ಉಳ್ಳುದು ; ಹಾವು ; ಸರ್ಪ : ಕಚ್ಚುವ ಮಹಾಪ್ರಭಣೀಶ್ವರಾಂಶದ ಪವನಭಕ್ಷಣರಾಜಿ (ಬಸಪು. ೪೬-೩೦). [ಪವನ+ಭಕ್ಷಣ]

ಪವನಯೋಗ (ನಾ). [ಯೋಗ] ಉಸಿರನ್ನು ತಡೆಹಿಡಿಯುವುದು ; ಶ್ವಾಸಬಂಧನ : ರುದ್ರ ಲೆಕ್ಕವ ಮುಚ್ಚಿದು ಜಪವನೆಣಿಸುತ್ತೆ ದಾನೆ ಈಶ್ವರ ಪವನಯೋಗದಲ್ಲಿ ಮಗ್ನನಾದ (ಅಪಚಂ. ೧೧೪-೫೧೪). [ಪವನ+ಯೋಗ]

ಪವನಯೋಗಿ (ನಾ). ಪವನಯೋಗವನ್ನು ಮಾಡುವವನು,—ಸಾಧಿಸುವವನು : ಪವನಯೋಗಿಗಳ ಪ್ರಪಂಚಿಗಳೆಂದೆಂಬೆ ಲಯಯೋಗಿಗಳ ನಾಯಿನಿಂತ ಕಡೆ ಎಂಬೆ (ಸಿದ್ಧೇ. ೧೧೫-೬೫೮). [ಪವನ+ಯೋಗಿ]

ಪವನವಾರ್ತೆ (ನಾ). ಗಾಳಿಸುದ್ದಿ ; ವದಂತಿ : ಬಪ್ಪೊಸಗೆಯ ಪವನ ವಾರ್ತೆಯುಂ ಸುಳಿಯಲಾಗಲ್ಲಿಗಲ್ಲಿಗಂ (ಪರಶು. ೬೩-೧). [ಪವನ+ವಾರ್ತೆ]

ಪವನವೇಗ (ನಾ). ೧. ವಾಯುವೇಗ : ನಡೆದು ಪರಮಂಡಲದ ರಾಯರ ಜಡಿದು ಕಪ್ಪವ ತಪ್ಪ ತಿಪ್ಪರ ಗಡಣವೆನೆದುದು ಪವನವೇಗದ ರಾಯಭಾರಿಗಳು (ಕುವ್ಯಾಳ. ೪-೪೩). ೨. ವಾಯುವೇಗವನ್ನು ಹೊಂದಿದ ವ್ಯಕ್ತಿ : ಏಂ ವಿಸಗಲಿಗಳ್ ಬರ್ಪರೊ ಮಾನಸವೇಗರ್ ಪವನವೇಗರಿರುಳುಂ ಪಗಲುಂ (ಅಜಪು. ೫-೭೬). [ಪವನ+ವೇಗ]

ಪವನಸಖ (ನಾ). ವಾಯುವಿನ ಮಿತ್ರ ; ಅಗ್ನಿ : ಪವನಸಖ ನಿದಿರೊಳೊದವಿದ ನವನೀತಂ ಕರಗುವಂತೆ (ಸನ್ನಜಾ. ೩-೨೨). [ಪವನ+ಸಖ]

ಪವನಸಾಧಕ (ನಾ). = ಪವನಯೋಗಿ : ಪವನಸಾಧಕರೆಲ್ಲರು ಕಳವಳಿಸಿ ಹೋದರು (ಚನ್ನಪ.ಕ. ೧೧೦-೨೪೪). [ಪವನ+ಸಾಧಕ]

ಪವನಸುತ (ನಾ). ೧. = ಪವನಜ ೧ : ಪವನಸುತಸೇನೆ ನಡೆದುದು ಪವನಪಥಂ ನಿಜೀಯದೆಂದಿನಂ (ಪಂರಾಮಾ. ೧೦-೩೩). ೨. = ಪವನಜ ೨ : ಪವನಸುತಂಗೆ ಪಾಸಟಿಗಳೊರ್ವರುಮಿಲ್ಲ (ಪಂಪಭಾ. ೧೨-೧೨೧) ; ಪವನಸುತರಾ ಗದೆಗೊಳೆ ಗಾಂಡಿವಿ ಬಿಲ್ಗೊಳೆ ಕೆಯ್ದುಗೊಳ್ಳ ಮೂಕೊಳ್ಳದಟರ್ ಭುವನದೊಳಿಲ್ಲ (ಗದಾಯು. ೩-೧೩) ; ಬಂದೆನೊಬ್ಬನು ಪವನಸುತನ ಪುಲಿಂದನು . . . ಜೀಯ ಚತ್ರವಿಸೆಂದು ವಿನ್ನಹ ಮಾಡಿದನು ಕಲಿಭೀಮಸೇನಂಗೆ (ಕುವ್ಯಾಳ. ೧೩-೧೫). [ಪವನ+ಸುತ]

ಪವನಹತಿ (ನಾ). ಗಾಳಿಯ ಹೊಡೆತ : ಪವನಜನ ಕೈಸನ್ನೆಗಳ ಘನಪವನಹತಿಯಲಿ ಉಹರಿ ಮನಗಿತು ಬಹಳ ಬಲಜಲಧಿ (ಕುವ್ಯಾಳ. ೧೧-೨೦). [ಪವನ+ಹತಿ]

ಪವನಹಸ್ತ (ನಾ). ಗಾಳಿಯನ್ನು ಬೀಸುವ ಕೈ.

ಪವನಹಸ್ತವ ಮಾಡು = ಕೈಯಿಂದ ಗಾಳಿ ಬೀಸು : ಪನ್ನೀರಿನಲಿ ಮೊಗದೊಳದು ಪವನಹಸ್ತವ ಮಾಡಿ ವಯ್ಯಾರಿ ಕಣ್ಣೆರದು ನೋಡೆ ಮಾತಾಡೆಂದು ಅಸುರಾರಿ ಗಲ್ಲವಿಡಿದು . . . ಮನ್ನಿಸಿದ (ತ್ರಿಕೃಷಾ. ೩೯). [ಪವನ + ಹಸ್ತ]

ಪವನಾಧ್ವ (ನಾ). ಗಗನ ; ಆಕಾಶ : ಹರಿಯಿಲ್ಲದ ಪವನಾಧ್ವಂ ಹರಿ ನೀನಿಲ್ಲದ ಗೋಕುಲಮಖಲಂ (ಜಗವಿ. ೩-೯೫) ; ಪವನಾಧ್ವದೊಳ್ ಸುಟುವ ಭಾನು ಕೃಶಾನುವಿನಾಶೆಯಿಂ ಪಗಲ್ ನಡೆಯದೊಡೆಂತು ನಿತ್ತರಿಪರೆಂಬನಿತಾದುದು ಮಾಳಡಂಬರಂ (ಪುಷ್ಪಪು. ೬-೫೦). [ಪವನ + ಅಧ್ವ]

ಪವನಾಶ (ನಾ). = ಪವನಾಶನ ೩ : 'ಪವನಾಶನಾಶ' ಪರಾ [ಸಂ.]

ಪವನಾಶನ (ನಾ). ೧. ಗಾಳಿಯೇ ಆಹಾರವಾಗಿರುವಿಕೆ : ಅವರಿಸಿರ್ದ ಕಲ್ಪತರುಕಾನನದೊಳ್ ಪವನಾಶನಂ . . . ದೇವವಧೂ ಸಮೂಹದೊಳೆ ಸಂಯಮಮೊಪ್ಪೆ . . . ತಪಮಿರ್ದಪರ್ (ಶಾಕುಂತ. ೧೦೩-೧೭೫). ೨. ಗಾಳಿಯನ್ನು ಆಹಾರವಾಗಿ ಸೇವಿಸುವಂಥದು : ಹರನ ಕೊರಳಿಂಗಾಭರಣವಾದುದಗ ಪವನಾಶನವೆನಿಸುವಂತೆ (ಕುವ್ಯಾಉ. ೩-೧೨೭). ೩. ಹಾವು; ಸರ್ಪ: "ವಿಷಧರಃ, ದಂದಶೂಕಃ, ಪವನಾಶನಃ . . . ಭುಜಂಗಮಃ—ಈ ೩೫ ಪಾವಿನ ಪೆಸರ್" (ಹಲಾಯು. ೧೦೫-೧೮). [ಪವನ + ಅಶನ]

ಪವನಾಶನಪತಿ (ನಾ). ಸರ್ಪಗಳ ಒಡೆಯ ; ಆದಿಶೇಷ : ಅವರ ಪ್ರತಾಪದ ವಿವರವನುಸುರ್ವೊಡೆ ಭುವನವ ನೆಱೆ ತಳೆದಿಸೆವ ಪವನಾಶನಪತಿಗಲ್ಲದುಳಿದ ಕವಿನಿವಹಕ್ಕೆ ಗೋಚರವಹುದೆ (ತ್ರಿಪುಸಾಂ. ೫-೫೫). [ಪವನಾಶನ + ಪತಿ$_2$]

ಪವನಾಶನಾಶ (ನಾ). ೧. ಹಾವನ್ನು ಕೊಲ್ಲುವಂಥದು ; ಗರುಡ: "ವಿಹಂಗರಾಜಃ . . . ಪವನಾಶನಾಶಃ . . . ಕಶ್ಯಪನಂದನಃ (ಚ) —ಈ ೧೦ ಗರುಡನ ಪೆಸರ್" (ಹಲಾಯು. ೩-೩೧). ೨. ನವಿಲು. [ಸಂ.]

ಪವನಾಶಿ (ನಾ). ೧. ಗಾಳಿಯನ್ನೇ ಆಹಾರವಾಗಿ ಉಳ್ಳದು ; ಹಾವು: ಪವನಾಶಿಗಳಾದವರಂ ಪವನಾಶಿಗಳಂ ಬಳಿಕ್ಕೆ ಕಂಡಂತಂಜುತ್ತವರಂ ಮುಟ್ಟದೆ (ಕಂದಶ. ೧೦೨). ೨. ಗಾಳಿಯನ್ನೇ ಆಹಾರವಾಗಿ ಉಳ್ಳ ಯೋಗಿ : ಮೇಲಿನ ಪ್ರಯೋಗವನ್ನು ನೋಡಿ. [ಸಂ. ಪವನಾಶಿನ್]

ಪವನಾಹಾರ (ನಾ). = ಪವನಾಶನ ೩ : ನೀನಾರ್ತು ಪಸಿದು ಮಚ್ಚೀವಾನಿಲನಂ ಪೀರ್ವುದುಚಿತವಲ್ಲದೆ ತನುವಂ ಮಾನವನೆಯ್ದುವುದುಚಿತವೆ ಕೀನಾಶಪ್ರತಿಭಿಯೇಕೆ ಪವನಾಹಾರಾ (ನಳಚಂ. ೬೦೦). [ಪವನ + ಆಹಾರ]

ಪವನು, ಪೌನು (ನಾ). ಇಂಗ್ಲೆಂಡಿನ ಇಪ್ಪತ್ತು ಷಿಲ್ಲಿಂಗ್ ಬೆಲೆ ಬಾಳುವ ಒಂದು ಬಂಗಾರದ ನಾಣ್ಯ ; ಸವರನ್ನು : ಮಗುವಿಗೆ ನಾಲ್ಕು ಪವನಿನ ಒಂದು ಸರ ಮಾಡಿಸುವ (ಸನ್ಯಾಸಿ. ೨) ; ಹತ್ತಿಪ್ಪತ್ತು ಪವನು ಚಿನ್ನವಾದರೂ ಮೈಮೇಲೆ ಹಾಕದೆ ಇರಲಿಕ್ಕಾಗುತ್ತದೆಯೇ ? (ಸ್ವಪ್ನಹೊ. ೧೧೬) ; ನನ್ನ ಪವನುಗಳನ್ನು ನೀರಿಗೆ ಹಾಕಿ ನನ್ನನ್ನೇಕೆ ಉಳಿಸುತ್ತೀ (ಪರಾವ. ೧೫). **ಪೌನು** : ಸಾಮಾನ್ಯ ವಿದ್ವಾಂಸನೊಬ್ಬನು ಒಂದು ಘಂಟೆಯ ಕಾಲದ ಕಚೇರಿಗೆ ನೂರುಗಟ್ಲೆ ಪೌನುಗಳನ್ನು ಸಂಪಾದಿಸಬಲ್ಲನು (ಗಾನಕ. ೪). [←ತುಳು. ಪವನ್./ಮರಾ. ಪವನ್./ಇಂ. Pound]

ಪವಮಾನ (ನಾ). ೧. ಗಾಳಿ ; ವಾಯು : "ಪವನಃ . . . ಪವಮಾನಃ . . . ಮಹಾಬಲಃ—ಈ ೨೦ ಗಾಳಿಯ ಪೆಸರ್" (ಹಲಾಯು. ೧೪-೭೫) ; ಪವಮಾನಂ ತಣಿದತ್ತು (ಮಲ್ಲಿಪು. ೯-೫೪) ; ಮುಂ ಬಿಸಹೋಲ್ಪವಂ ಸಮೆದನಂಬುದಮುಂ ಪವಮಾನಧೂಮ ತೇಜೋಂಬುಗಳಿಂದಮೆಂಬ ನುಡಿ ಸತ್ಯಂ (ಚಂದ್ರಪು. ೪-೩೩) ; ಕಡುಪರಿಮಳದ ಪಸರದ ಸೊಗಸು ತೀವಿತು ವಿಮಳಪದ್ಮಾಕರದ ಪವಮಾನ (ಕುವ್ಯಾಆ. ೨೩-೧೩). ೨. ಪವಿತ್ರಗೊಳಿಸುವಂಥದು. ೧, ೨ : ಪವಮಾನನಾಗಿಯುಂ ಕುರಿಂಗವಾಹನನಲ್ತು . . . ಎಂದು ವಕ್ರೋಕ್ತಿಯಿಂ ತೋಱುತ್ತುಂ (ಜಗವಿ. ೮-೧೦ ಪ). ೩. ಗಾಳಿಯ ಅಧಿದೇವತೆ ; ವಾಯುದೇವತೆ : "ಪವಮಾನಂ ಶ್ವಸನಂ ಗಂಧವಹಂ . . . ಸೃಪದಶ್ವಂ" (ವಸ್ತುಕೋ. ೮-೪೪) ; ಪವಮಾನ ಪ್ರಿಯನಂದನಂ . . . ಮಹಾಧನ್ವಿ ಕಾದುವರಾರಾತನಂ (ಪಂರಾಮಾ. ೧೩-೧೨೧). ೪. [ಛಂದ] ಎರಡು ಲಘು ಮತ್ತು ಒಂದು ಗುರುವಿರುವ ಗಣ ; ಸಗಣ (UU—) : ಪವಮಾನಚತುಷ್ಕಯುತಂ ಯತಿಯುಂ ದಿವಸಾಧಿಪರೊಳ್ನಿಲೆ . . . ತೋಟಕಂ (ಛಂದೋಂಬು. ೨-೧೨೬). [ಸಂ.]

ಪವಮಾನಜ (ನಾ). = ಪವನಜ ೨ : ತ್ರಿಜನ ಮಱು ಭಾಪೆನಲು ಪವಮಾನಜನು ತಿರುಗಿಟ್ಟಣಿಸೆ (ಕುವ್ಯಾಭೀ. ೫-೬). [ಸಂ.]

ಪವಮಾನತನೂಜ (ನಾ). = ಪವನಜ ೨ : ಪವಮಾನತನೂಜನದೊಂದು ಬಲ್ಪು . . . ತಂನೊಳೊಪ್ಪುವುದೆನೆ ಪಾಣ್ಡವಪ್ರತಿಮನಲ್ಲನೆ ಮಣ್ಡಲಸಾಮಿ ಲೋಕದೊಳ್ (ಎಕೆ. IV, ನಾಗಮಂ. ೪೭-೩೩ ; 1199). [ಪವಮಾನ + ತನೂಜ]

ಪವಮಾನನಂದನ (ನಾ). = ಪವನಜ ೨ : ಬಿಲುದುಡುಕಿ ಪವಮಾನನಂದನನಳವಿಗೊಟ್ಟನು . . . ಘಾಯವಡೆದನು ಘೋರಸಮರದಲಿ (ಕುವ್ಯಾದ್ರೋ. ೪-೩೧). [ಪವಮಾನ + ನಂದನ]

ಪವಮಾನಸುತ (ನಾ). ೧. = ಪವನಜ ೧ : ಪವಮಾನಸುತಂ ಸಂಧಿಸ್ವವಿದ್ಯೆಯಿಂ . . . ವಿಯಚ್ಚರಪತಿಯ ಕೆಲಕೆ ಪೋಗಲ್ಬಗೆದಂ (ಪಂರಾಮಾ. ೧೧-೬೩). ೨. = ಪವನಜ ೨ : ತುರಗರಥಸಾರಥಿಗಳನು ಹೊಯ್ದೊರಸಿದನು ಪವಮಾನಸುತನು (ಕುವ್ಯಾಆ. ೧೫-೫೦). [ಪವಮಾನ + ಸುತ]

ಪವಮಾನಹೋಮ (ನಾ). ಪವಮಾನವೆಂಬ ಮಂತ್ರಗಳನ್ನು ಹೇಳಿ ಅಗ್ನಿಗೆ ಮಾಡುವ ಹೋಮ ; ಋಗ್ವೇದದ ಒಂಬತ್ತನೆಯ ಮಂಡಲದಲ್ಲಿ ಆರುನೂರ ಹತ್ತು ಪವಮಾನ ಮಂತ್ರಗಳಿವೆ. ಇವುಗಳನ್ನು ಸ್ಮಾರ್ತಕರ್ಮದಲ್ಲಿ ಪಾಪ ಪರಿಹಾರಕ್ಕಾಗಿ ಜಪಿಸುತ್ತಾರೆ ಮತ್ತು ಈ ಮಂತ್ರಗಳನ್ನು ಘೋಷಿಸಿ ಅಗ್ನಿಗೆ ಹೋಮ ಮಾಡುತ್ತಾರೆ. 'ಪೂಯತೇ ಅಸೌ ಪವಮಾನಃ' ಎಂದು ಅದರ ವ್ಯುತ್ಪತ್ತಿ : ಅವರ ಎಂಬತ್ತನೆಯ ವರ್ಷದ ಹುಟ್ಟುಹಬ್ಬದಂದು ಪವಮಾನಹೋಮವನ್ನು ಮಾಡಿದರು (ರೂಢಿ). [ಪವಮಾನ + ಹೋಮ]

ಪವರ (ನಾ). ಕುಡಿಯುವುದು ; ಪಾನ : "ಪವರಮೆನಲ್ ಪಾನಂ" (ಭಾರಣಿ. ೨೩). [?]

ಪವರಣೆ 'ಪಾವರಣೆ' ನೋ.

ಪವರ್ಗ (ನಾ). [ವ್ಯಾಕ] ಪಕಾರದಿಂದ ಮೊದಲಾಗುವ 'ಪ ಫ ಬ ಭ ಮ' ಎಂಬ ಐದು ಅಕ್ಷರಗಳ ಗುಂಪು : ಪರಿಜನಫಳವತ್ ಕ್ಷೇತ್ರೋತ್ಕರಬಂಧುಸಮೂಹಭವನಮಹಿಳಾವಳಿಯೆಂಬುರುತರ ಪವರ್ಗ ಚಿಂತಾಪರಿಗತನಪವರ್ಗಚಿಂತೆಯಂ ಮಾಡುಗುಮೇ (ಚಂದ್ರಪು. ೧೩-೮೨) ; ಈ ವರ್ಗಗಳಿಗೆ ಕ್ರಮವಾಗಿ ಕವರ್ಗ . . . ಪವರ್ಗ ಎಂದು . . . ಹೆಸರನ್ನು ಇಟ್ಟಿದ್ದಾರೆ (ಮಧ್ವಮ. ೧೩). [ಸಂ.]

ಪವಲ್ಯ 'ಪೌಳಿ₁' ನೋ.

ಪವಳ, ಹವಳ (ನಾ). ೧. ಒಡವೆಗಳಿಗೂ ಅಲಂಕಾರವಸ್ತುಗಳಿಗೂ ಉಪಯೋಗಿಸುವ ಒಂದು ಬಗೆಯ ಕೆಂಪುಬಣ್ಣದ ಮಣಿ ; ನವರತ್ನಗಳಲ್ಲಿ ಒಂದು ; ವಿದ್ರುಮ : "ಪ್ರವಾಳಮೆ ಪವಳಂ" (ಚತುಸಿ. ೭೩) ; ನೀಲದ ತಲೆನವಿರುಮಂ ಪವಳದ ಬಾಯ್ದೊಱೆಯುಮಂ ಮುತ್ತಿನ ಪಲ್ಲುಮಂ . . . ಕಾಮದೇವ ನಯ್ದಲರಂಬಿನ ಶಕ್ತಿಗಳುಮನೊಂದು ಮಾಡಿ . . . ಪೆಣ್ಮಾಡಿದಂ (ಪಂಪಭಾ. ೪-೭೫ ಪ) ; ಪವಳದ ಚಪ್ಪರವನಿಕ್ಕಿ ಮುತ್ತು ಮಾಣಿಕದ ಮೇಲುಕಟ್ಟ ಕಟ್ಟಿ (ಮಹಾದೇ. ಬ. ೩೫-೭೩) ; ಪವಳದ ಬಳ್ಳಿ ಪರ್ವಿದುದೊ (ಪುಷ್ಪಪು. ೧೧-೧೩) ; ಪವಳದಧರದ ಲಲನೆಯರು ಗಾಂಧಾರಿದೇವಿಯ ಬಳಸಿನಲಿ ನಡೆತಂದರು (ಸಂಭಪ. ೨೦-೧೯). ೨. ಕೆಂಪುಬಣ್ಣದ ಕುದುರೆ: "ತುರಗವರ್ಣಂ ಬೆಳಯದಾಗೆ ಕರ್ಕನೆನಿಕ್ಕು . . . ರಕ್ತವರ್ಣ ತಾನಿರೆ ಪವಳನಕ್ಕುಂ" (ಮಂಗರಾ. ೮೧-೧೪). **ಹವಳ:** ೧. "ವಿದ್ರುಮಂ ಹವಳಮಕ್ಕುಂ" (ಮಂಗರಾ. ೪೩-೪೧); ಹೂವಿನ ಪಡಿಗೆ ಜಾತಿಹವಳಕ್ಕೆ ತೊಲೆಗೆ ತಾ ೧ ಕಂದಕ್ಕೆ ವೀಸ ೧ ಯಿದ ಆಚಂದ್ರಾರ್ಕತಾರಂಬರಂ ಸಲಿಸುವರು (ಎಕ. II, ೨೪೧-೨; ಸು. 1175); ತೆಗೆಸಿದನು ಗಜದಂತಮಯ ಪೆಟ್ಟಿಗೆಗಳನು . . . ಹವಳದ ಮಂಚವನು (ಕುವ್ಯಾಸ. ೫-೪೫) ; ಕೆಳಗಣ ನಕ್ಷತ್ರ ಹವಳದಂತೆ ಕೆಂಪುಬಣ್ಣದಿಂದ ಹೊಳೆಯುತ್ತದೆ (ನಕ್ಷತ್ರ. ೪).

ಪವಳಬಾಯ ಪಕ್ಕಿ = ಹವಳದಂತೆ ಕೆಂಪಗಿರುವ ಮೂತಿಯ ಪಕ್ಷಿ ; ಗಿಣಿ : ಅಕ್ಕ ನೀನೇಳೇಳು . . . ಚಕ್ಕನೆ ಕಡ್ಡೆಱೆಯೆಂಬ ಪವಳಬಾ[ಸಾರಾಂ.ವಾ]ಯ ಪಕ್ಕಿ ನುಡಿಯಲೆಳ್ಗವಳು(ಶ್ರೀಪಾಲ. ೨-೨೯).

[<ಪ್ರಾ. ಪವಾಲ./ಸಂ. ಪ್ರವಾಲ]

ಪವಳದುಟ, ಹವಳದುಟ (ನಾ). ಹವಳದಂತೆ ಕೆಂಪಗಿರುವ ತುಟಿ : ಪವಳದುಟಿಯ ಪೊಸಪಜಮೆಗುರುಳ್ಗಳ ಕುವಲಯನೇತ್ರದ . . . ಯುವತೀರೂಪದ ಚಿತ್ರಮನಾ ಸುಕುಮಾರಂ ನೋಡಿದನು (ಜಯಕಾ. ೩-೧೦) ; ಪವಳದುಟರಾಗಮಂ ಮಿಗುವ ನಿರ್ಮಳರದಚ್ಛವಿಗಳೊಪ್ಪಿರೆ ಮೆಱೆದರು . . . ಬಾಲಕಿಯರು (ಚಿಬಪು. ೬-೧೩). **ಹವಳದುಟಿ :** ಪಾರಿಜಾತಗಳು ಮುದ್ದುಗರೆಯುವುವು ಹವಳದುಟಿಗಳಿಂದ (ಹಾಡುಪಾ. ೨೭-೨).

[ಪವಳ + ತುಟಿ]

ಪವಳದೊಂಡೆ, ಹವಳತೊಂಡೆ, ಹವಳದೊಂಡೆ (ನಾ). ಒಂದು ಬಗೆಯ ತೊಂಡೆ ; ಕೆಂಪುತೊಂಡೆ : ಸಕ್ಷೀರಕಂಚುಕಂ ಸುಪರೀಕ್ಷಿತದಾ ಪವಳದೊಂಡೆಯಿಂತಿಜೞೊಳ್ ಸಂರಕ್ಷಿತನೃಪತರುಚೂರ್ಣಮನೀಕ್ಷಿಸಿ ಮತ್ತೀ ಪ್ರಯೋಗಮಂ ಮಾಟ್ಕೆ ಬುಧಂ (ಪಮಪ. ೫-೯೧). **ಹವಳತೊಂಡೆ:** ಕಾಚತೊಂಡೆಯ ಬೇರು, ಹವಳತೊಂಡೆಯ ಬೇರು . . . ಸಮಾನಂಗೊಂಡು ಚೂರ್ಣಂ ಮಾಡಿ . . . ನಸ್ಯ ಮಾಡಲು ಹದಿನಾಲ್ಕು ಬಗೆ ಮೊಲನಾಗರವ್ಯಾಧಿ ಗುಣವಹುದು (ವೈವಿ. ೯೯).

ಹವಳದೊಂಡೆ: "ಗಾಂಗೇರಿಕಾ—ತುರುವೆ, ಹವಳದೊಂಡೆ" (ಔಷಧಿ. ೪೮). [ಪವಳ + ತೊಂಡೆ₁]

ಪವಳಮಣಿ (ನಾ). ಹವಳದ ಮಣಿ: ಪವಳಮಣಿಯ ಮೇಲ್ಕಟ್ಟಿನ ಸೊಬಗಿಂದ ಭುವನೇಶ್ವರಿಯೊಪ್ಪಿದುದು (ಕಂಸಹಿ. ೭-೩೫).

[ಪವಳ + ಮಣಿ₃]

ಪವಳವಣ್ಣ (ನಾ). ಹವಳದ ಬಣ್ಣ ; ಕೆಂಪುವರ್ಣ : ನವರತ್ನಗಳ ಸೆರ್ಚಿಸಿದ ಪವಳವಣ್ಣದ ಲೋಸೆಗಳಿಂದೊಪ್ಪಿತು ಭುವನೇಶನೋಲಗಶಾಲೆ (ಕಂಸಹಿ. ೨೦-೨೭). [ಪವಳ+ಬಣ್ಣ]

ಪವಳವಲಗೆ (ನಾ). ಹವಳದಿಂದ ಮಾಡಿದ ಹಲಗೆ : ಪಚ್ಚೆಗಳ ಕಂಬಂಗಳಿಂ ಪವಳವಲಗೆಗಳ ಮುಚ್ಚಳ್ಗಳಿಂ ನೀಲಮಣಿಯ ಲೋಸೆಗಳಿಂ . . . ಕೇರಿಕೇರಿಯೊಳ್ ಪೆಚ್ಚಿದುವು ಗೃಹಗೃಹದ್ವಾರಂಗಳೊಳ್ ಮಹಾಮೇರುವೆಗಳೇನೆಂಬೆನು (ಚಿಬಪು. ೫-೩). [ಪವಳ + ಪಲಗೆ]

ಪವಳವಳ್ಳಿ (ನಾ). ಹವಳದ ಬಳ್ಳಿ : ಚಲಿಪ ಕೇತನತತಿಯ ಸುಳಿಯ ಸಬಳದ ಸಾಲ ತೊಳತೊಳಪ ಪವಳವಳ್ಳಿಗಳ . . . ಸೇನಾಸಮುದ್ರವನಾಗ ಪುರಜನಂ ನಿಟ್ಟಿಸಿದುದು (ಚಿಬಪು. ೪೨-೧೪). [ಪವಳ + ಬಳ್ಳಿ]

ಪವಳವಾಯ್ (ನಾ). ಹವಳದಂತೆ ಕೆಂಪಾದ ಬಾಯಿ : ಬಂದರ್ ಪವಳವಾಯ ತಳಿರ್ವಾಯ ತೊಂಡೆವಾಯೊಳ್ಕೆಂಡಿರ್ (ಜಗವಿ. ೪-೧೨೨).

[ಪವಳ + ಬಾಯ್]

ಪವಳವಾಯ (ನಾ). ೧. ಹವಳದಂತೆ ಕೆಂಪಾದ ಬಾಯಿಯುಳ್ಳ ವ್ಯಕ್ತಿ. ೨. ಒಂದು ಬಗೆಯ ಮೀನು : ಸಿಸಿಲ್ಪವಳವಾಯಂ ಹೈದಲುಂ ಬಾಳೆ ಹೆಗ್ಗರಲುಂ (ತ್ರಿಪುವಿ. ೫೭-೮) ; ಗಱಮೀನ್ಸೀಗುಡಿ ಗೆಂಡೆಮೀನ್ಪವಳವಾಯಂ ಬಾಳೆಮೀನ್ಪಾವುಮೀನ್ಜುಮೀನ್ (ರಾಜಶೇ. ೫-೧೧೫). [ಪವಳವಾಯ್ + -ಅ₇]

ಪವಳವಾಯ್ದೊಱೆ (ನಾ). = ಪವಳದುಟಿ : ಮಿಸುಗುವ ದಾಳಿಂಬದ ಬಿತ್ತಿನ ನವರಸಮಂ ಪೊಳೆವ ಪವಳವಾಯ್ದೊಱೆಗೆಱೆದಸುಗೆಯ ತಳೆರೊಳ್ಕಲಗಿಸಿ (ಜಯಕಾ. ೨-೨೯). [ಪವಳ + ಬಾಯ್ದೊಱೆ₂]

ಪವಳಿ 'ಪೌಳಿ₁' ನೋ.

ಪವಳಿಸು 'ಪವಡಿಸು' ನೋ.

ಪವಾಡ₁ (ನಾ). ಅಮಾನುಷಕಾರ್ಯದಿಂದಾದ ಆಶ್ಚರ್ಯ ಘಟನೆ ; ಸಾಮಾನ್ಯಮಾನವನಿಂದ ಸಾಧ್ಯವಲ್ಲದ ಕಾರ್ಯ ; ಅಘಟಿತಘಟನೆ ; ಅದ್ಭುತ: ಎಂಬತ್ತೆಂಟು ಪವಾಡವ ಮೆಱೆದು ಹಗರಣದ ಚೋಕದಂತಾಯಿತ್ತೆನ್ನ ಭಕ್ತಿ (ಬಸವ. ೮೧೧) ; ರೂಢಿ ಮಚ್ಚಲು ಹಲವು ಸರಿಯ ಪವಾಡಗಳ ಮೆಱೆವುತ (ಪ್ರಭುಲಿಂ. ೯-೨೭) ; ತೇರಸರ್ ತೆಱದೊಳೆ ಪವಾಡಂಗಳಂ ಮಾಡಿ ಕೈಲಾಸಮಂ ಪೊಕ್ಕರು (ಚಿಬಪು. ೫೫-೪೭) ; ಜ್ಞಾನಿಯೆಂದು ಕರೆಯಲ್ಪಟ್ಟ ಅದರ್ಶಮಾನವ ಪವಾಡಗಳನ್ನು ಪ್ರದರ್ಶಿಸುವುದಿಲ್ಲ (ತತ್ವಪ್ರಾ. ೬೨೫).

[?./ತಮಿ. ಪಾವಾಟಮ್ ; ತೆಲು. ಪವಾಡ, ಪಾವಾಡ ; ℙ ತಮಿಳು, ತೆಲುಗು ಎರಡರಲ್ಲೂ 'ಪ್ರತಿಜ್ಞೆಯನ್ನು ಪೂರೈಸುವುದಕ್ಕಾಗಿ ದೇವತೆಯ ಎದುರಿನಲ್ಲಿ ಒಬ್ಬ ವ್ಯಕ್ತಿಯು ತನ್ನ ನಾಲಗೆಯನ್ನು ಕತ್ತರಿಸಿಕೊಳ್ಳುವಿಕೆ' ಎಂಬರ್ಥವಿದೆ]

ಪವಾಡ₂ 'ಪಾವುಡ₁' ನೋ.

ಪವಾಡಪುರುಷ (ನಾ). ಅತಿಮಾನುಷಕಾರ್ಯವನ್ನೆಸಗುವ ವ್ಯಕ್ತಿ : ಅತನುಂ ಮಹಾಬಸವನುಂ ಮಿಸುಗುವ ಪವಾಡಪುರುಷರ್ ಗಡೀಕ್ಷಿಸೆವೆಂದು ಶರಣರೈತರುತಿರ್ದರು (ಚಿಬಪು. ೬-೪೮) ; ಈ ದೇಶದ ಜನರು ಪವಾಡಪುರುಷರಾದ ಮಹಾತ್ಮರನ್ನು ಹಿಂಬಾಲಿಸಿದ್ದರು (ಪಂಜಪಂ. ೭೫). [ಪವಾಡ₁ + ಪುರುಷ]

ಪವಾಡಿ₁ (ನಾ). ಹೊಗಳುಭಟ್ಟ ; ಸ್ತುತಿಪಾಠಕ ; ವಂದಿ : ಮತ್ಸ್ಯಕೇತಯರು . . . ಪವಾಡಿಗಳ ಕಳಕಳದ ಕೈವಾರದಲಿ ಕವಿದರು ದ್ರೋಣನಿದಿರಿನಲಿ (ಕುವ್ಯಾದ್ರೋ. ೧೭-೩೦).

[←ಮರಾ. ಪವಾಡಾ, ಪೋವಾಡಾ = ಹೊಗಳಿಕೆ]

ಪವಾಡಿ₂ (ನಾ). (?) : ಭೂತದಿಂದ್ರಿಯಗಣದೊಡನೆ ನಿಜಪೌರುಷದ ಲೊದಗಿದ ಪವಾಡಿಗಳ ಗುಣವ ಝಾಡಿಸಿದರೆ ಸಮಷ್ಟಿಯಂ ಹಣತದಲಿ ಮುರಿದಿದಿರನಗಲಕೆ ಕುಣಿವ ಚೌಪಟ ಬೊಮ್ಮಗಜವಿದನಟುವರಾರು (ಕುವ್ಯಾಸ. ೯-೧೫) ; ತಾಯಿಮಳಲುಬ್ಬಳಿಸೆ ಜಲನಿಧಿ ಬಾಯ ಬಿಡೆ ಗರ್ಜಿಸುವ ನಿಸ್ಸಾಳಾಯತದ ಸೂಳೊದಗೆ ಪಯಣದ ಪವಾಡಿಯಲಿ

[ಪಾಶಾಂ. ಪಯಣದ ಮೇಲೆ ಪಯಣದಲಿ] (ಕುಮ್ಯಾವಿ. ೪-೩೧). [?]

ಪವಿ (ನಾ). ೧. ಇಂದ್ರನ ಆಯುಧ ; ವಜ್ರಾಯುಧ : "ಪವಿಃ, ಅಶನಿಃ . . . ಶಂಬಃ—ಈ ೧೨ ಇಂದ್ರನ ವಜ್ರಾಯುಧದ ಪೆಸರ್" (ಹಲಾಯು. ೧೧-೫೬) ; ಪವಿಯಂ ರಕ್ಷಿಸುವುದಱಂ ಪವಿತ್ರನಾದನೆ ಸುರೇಂದ್ರಂ (ಅಜಿಪು. ೪-೬೨) ; ಘನ ದರ್ಪೋನ್ನದ್ಧ ಬೌದ್ಧಕ್ಷಿತಿಧರ ಪವಿಯೊಬನ್ದನೀಬನ್ದನೀ ಬನ್ದನೆ (ಎಕ. II, ೧೪೦-೧೪೫ ; 1145). ೨. ವಜ್ರ ; ಹೀರೆ : ಬಗೆದಿಂದ್ರಾದ್ರಿಯೆಂದೆಂಬತುಳಪವಿಮಯ ಸ್ತಂಭದೊಳ್ ಸಂಜೆಯೊಳ್ . . . ಭಗಣಂ ತಪ್ತೀಕರಂಬೊಲ್ಮೆಱೆಯೆ (ರಾಜಶೇ. ೬-೨೮). 'ಪವಿಗಲ್' ಪರಾ. ೩. ಸಿಡಿಲು : ತವೆ ಅಖಂಡಿತಕೀರ್ತಿಯುದ್ದಂಡವಾದಿ ಗಿರಿ ಪವಿಕೋಟಿ ಪಲ್ಕಾಱ್ಕು ದೇಶಿಕೇಂದ್ರಂ ನೋಡೆ ವಿವಿಧವೈಭವದಿನರ್ಪಂ (ಅರಾಶ. ೧-೧-೮೬) ; ವಿಧಿಯ ನಿಯತಿಯ ಪವಿಯ ಘಾತಕೆ ಸಿಲುಕಿ . . . ಬೆಂದುರಿದಳೆದನೈಸಲೆ ? (ತ್ರಿರಾಮಾ. ೧೭೧-೫೧೫). ೪. ಬಂಡಿಯ ಚಕ್ರದ ಪಟ್ಟ. [ಸಂ.]

ಪವಿಗಂಬಿ (ನಾ). ವಜ್ರದ ಕಂಬಿ : ನಡವಳಿಗಳಿಂದೆ ಪೊಡವಿಯನು ನಗ್ನಿಪ ಹಸ್ತಿಗಡಣ ಪವಿಗಂಬಿಯೊಡರ್ಚಿದ ಚಕ್ರರಥವಿತತಿ (ನಪಮೋ. ೨-೨೬). [ಪವಿ+ಕಂಬಿ$_1$]

ಪವಿಗಲ್ (ನಾ.) ವಜ್ರದ ಕಲ್ಲು : ತೋರ ಪವಿಗಲ್ಗಳಂ ಬೆಳಗುತ ವಿರಾಜಿಸಲು (ನಪಮೋ. ೨-೨೬). [ಪವಿ+ಕಲ್$_3$]

ಪವಿಘಾತ (ನಾ). ವಜ್ರಾಯುಧದ ಹೊಡೆತ ; ವಜ್ರಾಘಾತ : ಬರುತೆ ಕಂಡನಳಕುಲದ ಪವಿಘಾತಭಯಶಮನೌಷಧಿಯನು (ಚೈಮಿಭಾ. ೬-೧). [ಪವಿ+ಘಾತ$_2$]

ಪವಿತ್ರ (ಗು). ೧. ಶುದ್ಧವಾದ ; ನಿರ್ಮಲವಾದ. ೨. ಪುಣ್ಯಕರವಾದ ; ಪಾವನವಾದ : 'ಪವಿತ್ರಗಾತ್ರ' ಪರಾ. (ನಾ). ೩. ಶುದ್ಧಿಗೊಳಿಸುವ ಸಾಧನ ; ಶುದ್ಧಿ ಮಾಡುವ ಸಾಮಗ್ರಿ. ೪. ಶುದ್ಧವಾದುದು ; ನಿರ್ಮಲವಾದುದು : "ಶುಚಿ, ಮೇಧ್ಯಂ, ಪವಿತ್ರಂ, ಪುಣ್ಯಂ, ಪಾವನಂ—ಈ ೫ ಶುದ್ಧಮಪ್ಪ ವಸ್ತು" (ಹಲಾಯು. ೨೨-೧೩೨). ೫. ಪುಣ್ಯಕರವಾದುದು ; ಪಾವನವಾದುದು : ನೀರೊಳ್ ಪಂಚಮಜಲಧಿಯ ನೀರೆ ಪವಿತ್ರಂ (ಶಾಂತಿಪು. ೧೦-೩೮) ; ಸ್ಮರರಿಪು ಪುಟ್ಟಿ ಧಾರಿಣಿಗೆ ಕಾಶ್ಯಪಗೋತ್ರವಿದೇಂ ಪವಿತ್ರಮೋ (ಪುಷ್ಪಪು. ೧೨-೧೫) ; ಸನಾತನವೂ ಪವಿತ್ರವೂ ಎಂದು ನಂಬಲಾಗಿದ್ದ ಹಲವು ಅಂಶಗಳು ಅವರ ಆದರ್ಶವಾಗಿದ್ದವು (ಕಿಷ್ಕಿ. ೯). ೬. ದರ್ಭೆ : "ದರ್ಭೆಯಲ್ಲಿಯುಂ ಪವಿತ್ರವೆಂಬುದು" (ಹಲಾಯು. ೧೩೩-೧೬). ೭. ಧಾರ್ಮಿಕ ಆಚರಣೆಯಲ್ಲಿ ಉಂಗುರದ ಬೆರಳಿನಲ್ಲಿ ಧರಿಸುವ ಒಂದು ವಿಶಿಷ್ಟ ರೀತಿಯ ಗಂಟುಹಾಕಿರುವ ದರ್ಭೆಯ ಉಂಗುರ : ಮೇಲುದಂ ಮಱೆದು ಮೆಯ್ಮಱೆದೊರ್ವ ಳೊಜಲ್ದು ಮುಂಬಾಲೆಯಂ ತಿರಿಪಿ ನೂಂಕಿ ಪವಿತ್ರಮನಿಟ್ಟು ಪಚ್ಚೋಲೆ ಪಚ್ಚದೊಳೊಡಂಬಡೆ (ಕಾವ್ಯಾಸ. ೨೨೧) ; ಧನದನೊಲ್ ತಿವನ ಸಬರು ವೃಷಭನೊಲು ಪುಣ್ಯಚರಿತರು ಪವಿತ್ರದೊಲ್ ಉತ್ತಮಾಂಗರು (ಪತಿಲ. ೪-೧೮) ; ನೀನೇ ಬಾ. ಪವಿತ್ರ ಹಾಕಿಕೊಂಡು ಮುಂದಿನ ಕೆಲಸ ಮಾಡು (ಪಂಶವೃ. ೪೪೬). ೮. ಉಂಗುರದ ಬೆರಳು ; ಅನಾಮಿಕೆ : "ಸಂಗಣಿಯಂಗುಷ್ಠ ಮೆನಲು ತರ್ಜನಿಯು ಮಧ್ಯಾಂಗುಲಿ ಪವಿತ್ರಂ ಕನಿಷ್ಠೆಯೆಂದೈದು ಬೆರಳಿಂಗೆ ಪೆಸರಕ್ಕುಂ" (ಮಂಗರಾ. ೯೬-೧೦). ೯. ಕಿವಿಯ ಒಂದು ಆಭರಣ : "ಪವಿತ್ರಂ = ಒಂದು ಕಿವಿದುಡುಗೆ" (ಪಮದ. ಪರಿ. ೨) ; "ಪವಿತ್ರವೆನೆ ಕಿವಿದುಡುಗೆ" (ಕಬ್ಬಿಳ್ಕೆ. ೮೪). ೧೦. ಯಜ್ಞೋಪವೀತ ; ಜನಿವಾರ. ೧೧. ಪರಿಶುದ್ಧನಾದವನು : "ಪವಿತ್ರಃ, ಪ್ರಯತಃ, ಪೂತಃ—ಪವಿತ್ರನಾದವನ ಹೆಸರುಗಳು, ಪರಿಶುದ್ಧನು" (ಸಿದ್ಧಾಂತಿ. ೨೨೯). ೧೨. ಒಂದು ವಿಶಿಷ್ಟವಾದ ಉತ್ಸವ : ಸಾಗರೇಶ್ವರದೇವರಿಗೆ ಪವಿತ್ರಕ್ಕೆ ಒಂದು ಜಾಗ (ಕಇಅ. ೩೫-೪೮-೮ ; 1148). 'ಚೈತ್ರಪವಿತ್ರ' ಪರಾ. ೧೩. ಒಂದು ಬಗೆಯ ರೋಗ : ಸ್ಫಿರೇಷು ಚ = ಪವಿತ್ರ ಮೊದಲಾದ ಬಲಿತ ರೋಗಂಗಳೊಳಂ (ವಿವೃವಿ. ೧೬೩).

ಪವಿತ್ರದ ಉಂಗುರ = ದರ್ಭೆಯುಂಗುರದಾಕಾರದಲ್ಲಿ ಮಾಡಿದ ಚಿನ್ನ ಅಥವಾ ಬೆಳ್ಳಿಯ ಉಂಗುರ : ಅವರ ಕೈಗಳಲ್ಲಿ ಪವಿತ್ರದ ಉಂಗುರಗಳು ಹೊಳೆಯುತ್ತಿದ್ದವು (ಕಳಹು. ೧). ಪವಿತ್ರದ ಬೆರಳು = ದರ್ಭೆಯ ಉಂಗುರವನ್ನು ತೊಡುವ ಬೆರಳು ; ಅನಾಮಿಕೆ : ರೋಗಾದ್ಯುಪದ್ರವಶಾಂತ್ಯರ್ಥಮಾಗಿ ಮಾಡಬೇಕಾದರೆ ಪವಿತ್ರದ ಬೆರಳಿಂದ ಕಳೆಯಬೇಕು (ಸೌಗಂಧಿ. ೩೯೧-೧೬). [ಸಂ.]

ಪವಿತ್ರಕ (ನಾ). (ಮೀನಿನ) ಬಲೆಯ ದಾರ : "ಶಣಸೂತ್ರಂ, ಪವಿತ್ರಕಂ—೨ ಬಲೆಯ ಹಗ್ಗ, ಬಲೆಯ ಹುರಿ" (ಸಿದ್ಧಾಂತಿ. ೮೧). [ಸಂ.]

ಪವಿತ್ರಕಾಯ (ನಾ). = ಪವಿತ್ರಗಾತ್ರ : ಆ ಪ್ರಸಾದವ ಕೊಂಬ ಪ್ರಸಾದಿ ಪವಿತ್ರಕಾಯನು ನೋಡಾ (ಸಿದ್ಧೇನ. ೬೯-೨೩೪). [ಪವಿತ್ರ+ಕಾಯ]

ಪವಿತ್ರಗಾತ್ರ (ನಾ). ಪಾವನವಾದ ದೇಹವುಳ್ಳವನು : ಬ್ರಹ್ಮ ಸೂತ್ರಾಭಿಧಾನ ಯಜ್ಞೋಪವೀತದಿಂ ಪವಿತ್ರಗಾತ್ರರ್ಮಾಡಿ (ಅದಿಪು. ೧೫-೧೧ ಪ). [ಪವಿತ್ರ+ಗಾತ್ರ]

ಪವಿತ್ರಗ್ರಾವ (ನಾ). ಸ್ವಚ್ಛವಾದ ಶಿಲೆ ; ಹಸನಾದ ಕಲ್ಲು : ಆ ವನದಶೋಕತರು ನುತಪಾವನಸಿಕತಿಳತಳಪ್ರದೇಶಪವಿತ್ರಗ್ರಾವದೊಳ್ . . . ವಸ್ತ್ರಾಭರಣಂಗಳಂ ಕಳೆದು (ಶಾಂತಿಪು. ೯-೬೪). [ಪವಿತ್ರ+ಗ್ರಾವ]

ಪವಿತ್ರತೀರ್ಥ (ನಾ). ಮಂಗಳಕರವಾದ ನದಿ,—ಸರೋವರ ; ಪಾವನತೀರ್ಥ : ವರಪದ್ಮಾದಿ ಪವಿತ್ರತೀರ್ಥ ಸರಸೀಪುಣ್ಯೋದಕ ಸ್ನಾನಮುಂ . . . ಆಯ್ತು (ಪುಷ್ಪಪು. ೧೧-೬). [ಪವಿತ್ರ+ತೀರ್ಥ]

ಪವಿತ್ರತೆ (ನಾ). ಪಾವನತೆ ; ಪರಿಶುದ್ಧತೆ : ಜಾಹ್ನವಿಗೆ ರವಿಸತಿಗೆ ನೂಱುಮಡಿ . . . ಸಂತತ ಪವಿತ್ರತೆ ತೇಜವೆಂಬಿವಱಂದೆ (ಬಸಪು. ೪-೩೦) ; ಅವನನ್ನು ನಿನ್ನ ಮನೆಗೆ ಕಳುಹಿಸಿದ್ದು ನಿನ್ನ ಪವಿತ್ರತೆಯನ್ನು ಪರೀಕ್ಷಿಸಲಿಕ್ಕೆಂದು (ಹಳ್ಳಿಹಾ. ೧೧೩). [ಸಂ. ಪವಿತ್ರತಾ]

ಪವಿತ್ರದಿನ (ನಾ). ೧. ಪಾವನವಾದ ದಿವಸ ; ಶುಭದಿನ : ಮತ್ತೊಂದು ಪವಿತ್ರದಿನದೊಳ್ ವಿಶ್ವಸೇನಮಹಾರಾಜನುಮೈರಾಮಹಾದೇವಿಯುಂ ಭಗವತ್ಸಿಂಹಾಸನಾಸನ್ನವರ್ತಿಗಳ್ ಮುಕುಳಿತ ಕರಕಮಳರಾಗಿ (ಶಾಂತಿಪು. ೧೦-೯೯ ಪ). ೨. ಉತ್ಸವ : ಹತ್ತು ಚೈತ್ರದಿನ ಮೂಱು ಪವಿತ್ರದಿನ ಮೂಱು ಸಂಕ್ರಮಣವೆರಡು ಪ್ರಥಮ ಉಥ್ಥಾನದ್ವಾದಶಿಯೆರಡು (ಎಕ. V (R), ತಿರುಮ. ೮೮-೪೧; 1276). [ಪವಿತ್ರ+ದಿನ]

ಪವಿತ್ರಾಂಗುಲಿ (ನಾ). ದರ್ಭೆಯ ಉಂಗುರವನ್ನಿಡುವ ಬೆರಳು ; ಅನಾಮಿಕೆ : ತಾಂ ಗೇಣಿನೊಳು ಪವಿತ್ರಾಂಗುಲಿಗೆ ಗೋಕರ್ಣಮೊಂಗು (ಮಂಗರಾ. ೯೬-೧೦). [ಪವಿತ್ರ+ಅಂಗುಲಿ]

ಪವಿತ್ರಾತ್ಮ (ನಾ). ಶುದ್ಧವಾದ ಮನಸ್ಸುಳ್ಳವನು ; ನಿರ್ಮಲಾಂತಃಕರಣವುಳ್ಳವನು : ಎಲೈ ಅಗ್ನಿಯೇ . . . ನೀನು ಪವಿತ್ರಾತ್ಮನು (ಜುಶ್ವಾರ. ೧೫). [ಪವಿತ್ರ+ಆತ್ಮ]

ಪವಿತ್ರಾರೋಹಣ (ನಾ). ದೇವರಿಗೆ ಯಜ್ಞೋಪವೀತವನ್ನು ಏರಿಸುವ ವಿಶೇಷ ಉತ್ಸವ : ಗದ್ಯಾಣವೊನ್ನವಲ್ಲಿಯ ಶ್ರೀಸ್ವಯಂಭು ಕಲಿದೇವಸ್ವಾಮಿದೇವರ ಪವಿತ್ರಾರೋಹಣಕಂ . . . ಬಿಟ್ಟರು (ಕೊಲ್ಹಾಶಾ. ೫-೧೧ ; 1076). [ಸಂ.]

ಪವಿತ್ರಿತ (ಗು). ಪಾವನಗೊಂಡ; ಶುದ್ಧಗೊಂಡ: ಸಗ್ಗಕಿದು ನಿಚ್ಚಣಿಗಿಪ್ಪವೊಲಿರ್ದುದಲ್ತೆ ಜಿನಸವನಜಳಪವಿತ್ರಿತಕಟಕಂ (ಆದಿಪು. ೨-೩೧). [ಸಂ.]

ಪವಿತ್ರೀಕರಣ (ನಾ). ಪಾವನಗೊಳಿಸುವುದು; ಶುದ್ಧಗೊಳಿಸುವುದು: ಅಂತು ಧರ್ಮಕ್ಷೇತ್ರಪವಿತ್ರೀಕರಣವಿಹಾರಾನಂತರಮನಂತ ಚತುಷ್ಟಯಪುಷ್ಟಿಪರಪುಷ್ಟ[ನುಂ] (ಶಾಂತಿಪು. ೧೨-೨೯ ಪ). [ಸಂ.]

ಪವಿತ್ರೀಕರಿಸು (ಕ್ರಿ). ಪಾವನಗೊಳಿಸು; ಶುದ್ಧಮಾಡು: ಗಂಗಾನದೀಹ್ರದಂಗಳೊಳ್ ಪಾತಾಳಮೂಲಂಬರಂ ಮುಟುಗಿ ನಿಜಗಾತ್ರಮಂ ಪವಿತ್ರೀಕರಿಸಿಯುಂ (ಚಂದ್ರಪು. ೯-೫೫ ಪ); ಆ ಕ್ಷೇತ್ರದಲ್ಲಿ ಪತಿತರನ್ನು ಪವಿತ್ರೀಕರಿಸುವ ಸತ್ಯಸತ್ವಪೂರ್ಣಸಂಕಲ್ಪದಿಂದ ನಿಷ್ಕಾಮತಪೋಬಲವನ್ನು ಧಾರೆ ಎರೆದಂತಿದೆ (ಬದುಬೈ. ೧೨).

[ಪವಿತ್ರೀಕರಣ+-ಇಸ್ಸು$_3$]

ಪವಿತ್ರೀಭೂತ (ಗು). ಪಾವನವಾದ: ತ್ರಿಭುವನೈಕ ಪವಿತ್ರೀಭೂತ ಮಹಾಪೂತಜಿನಾಲಯಮೆ ನಿರತಿಶಯಭಕ್ತಿಪುರಸ್ಸರಪೂಜಾವಿಚಿತ್ರವಿರಚನಾದಿ ಸಂಪದಾಸ್ಪದಮಾಗೆಯುಂ (ಆದಿಪು. ೪-೫೨ ಪ). [ಸಂ.]

ಪವಿತ್ರೆ (ನಾ). = ಪವಿತ್ರಾಂಗುಲಿ. [ಸಂ. ಪವಿತ್ರ]

ಪವಿತ್ರೋದಕ (ನಾ). ಶುದ್ಧವಾದ ನೀರು; ಮಂಗಳಕರವಾದ ಜಲ: ಎಂತು ನಿನ್ನ ಪೂಜೆ ಮಾಡಿ ಮೆಚ್ಚಿಸುವೆನೋ . . . ಪವಿತ್ರೋದಕದಿ ಪಾದ ತೊಳೆವೆನೆಂತೆಂದರೆ ಪಾವನೆಯಾದ ಗಂಗೆ ಪಾದೋದ್ಭವೆ (ಪುರಂದ. ಧಾ. ೧-೧೨೩-೧). [ಪವಿತ್ರ+ಉದಕ$_2$]

ಪವಿಧರ (ನಾ). ವಜ್ರಾಯುಧವನ್ನು ಧರಿಸಿದವನು; ಇಂದ್ರ: ಪವಿಧರನ ಸಭೆಯೊಳಗೆ . . . ಧರಣಿಪನ ಕಥನವೇ ಕಥನ (ಹಚಕಾ. ೧೪-೩೧); ಪವಿಧರನ ಭಯಕಂಚಿ ಸರಿದರ್ಣವದೊಳಿಹ ಮೈನಾಕದ ವಿಶಾಲವದೆನಿತು (ಬಸಪು. ೧೮-೨೭); ಅನ್ಯೋರ್ವಿಪಗರ್ವೋರ್ವೀಧ್ರ ಸಂಭೇದನಪವಿಧರನೀಬಂದಂ (ರಾಜಶೇ. ೬-೧೭). [ಸಂ.]

ಪವಿಪಂಜರ (ನಾ). ೧. ವಜ್ರದ ಪಂಜರ. ೨. (ಆಲಂ) ಭೇದಿಸಲಾಗದ ರಕ್ಷೆ: ಅಂಜದಿರು ಕಮಳಾಕ್ಷಿ ಧೌಮ್ಯನಿರಂಜನನು ನಿನಗಿಂದು ಸುತಿಪವಿಪಂಜರವಲಾಯೆನುತ ಹಾಯ್ದನು ಪವನಸುತರಥಕೆ (ಕುಪ್ಯಾಅ. ೨೨-೩೨). [ಪವಿ+ಪಂಜರ$_1$]

ಪವಿಭೃನ್ಮಣಿ (ನಾ). ಇಂದ್ರನೀಲಮಣಿ: ಚೆಂದಳಿರೆ ಚಂದಿರಗಾವಿಯ ನೂತನಾಂಬರಂ ಸುಳಿಯದೆ ನಿಂದ ತುಂಬಿಗಳ ಸಾಲ್ ಪವಿಭೃನ್ಮಣಿಮಾಲೆ (ರಾಜಶೇ. ೯-೫೪). [ಸಂ.]

ಪವಿಮೂರ್ತಿ (ನಾ). ಒಂದು ಬಗೆಯ ಸಸ್ಯ; ಮಂಗರವಳ್ಳಿ: "ಕಾಂಡೇರಿ ಪವಿಮೂರ್ತಿ ಶೃಂಖಲೆಯಸ್ಥಿವಳ್ಳಿ ಮಂಗುರವಳ್ಳಿ" (ಮಂಗರಾ. ೪೩-೪೩). [ಸಂ.]

ಪವುಂಚಿ 'ಪೌಂಚಿ' ನೋ.

ಪವುಜು 'ಫೌಜು' ನೋ.

ಪವುಡ 'ಪ್ರವುಡ' ನೋ.

ಪವುತಿ 'ಪೌತಿ' ನೋ.

ಪವುರ (ನಾ). ಪ್ರಜೆ; ಪೌರ: ಪವುರ ಕಲಕಲ ಶೂರರಾರ್ತಿಗಳ ಕೇಳುತತಿಭಾರಣೆಯ ಕೋಪದಿಂದೋಲಗಕೆ ನಡೆತಂದು (ವೆಂಕಾರಾ. ೬-೧೯-೨). [<ಸಂ. ಪೌರ]

ಪವುಳಿ 'ಪೌಳಿ$_1$' ನೋ.

ಪವ್ವಗೆ, ಪೌವಗೆ (ಅ). ಹಠಾತ್ತನೆ, ಆಕಸ್ಮಿಕವಾಗಿ ಎಂಬರ್ಥಗಳನ್ನು ಸೂಚಿಸುವ ಒಂದು ಅನುಕರಣಾವ್ಯಯ: "ಪವ್ವಗೆಯೆಂದುಂ, ಕಟ್ಟನೆಯೆಂದುಂ ಆಕಸ್ಮಿಕಂ" (ಕಶಸಾ. ೫೮-೨೮೨). **ಪೌವಗೆ:** ಪೌವನೆ, ಪೌವಗೆ (ಶಬ್ದಾನು. ೪೯ ಪ್ರಯೋ).

[ಪವ್$_0$+-ಆಗೆ$_3$]

ಪವ್ವನೆ, ಪೌವನೆ, ಹವ್ವನೆ, ಹೌವನೆ (ಅ). = ಪವ್ವಗೆ: "ಪವ್ವನೆಂದು ಕಟ್ಟನೆಯೆನ್ನುತ್ತೀ ಪರಿಯೊಳುಸಿರೆ . . . ಆಕಸ್ಮಿಕಮುಂ" (ಕವಿಕಂ. ೧೩೩); ಅದಱ ಕಲ್ಲೆರ್ದೆ ಪವ್ವನೆ ಸೀಳೆ (ಕಬ್ಬಿಕಾ. ೩೦೦); ಪರಮನಿರದೆ ಪವ್ವನೆ ಬಂದಂ (ಹಮ್ಮೀರ. ೨-೯). **ಪೌವನೆ:** ಪಾರಿತು ಧೃತಿ ಪೌವನೆ ತಲೆದೋರಿತು ತಾರಳ್ಕಂ . . . ಮಿತಿ ಮೀರಿತು ಸಂತಾಪಮಾಗಳಾ ನಳನೃಪನಾ (ದಮಸ್ವ. ೧-೬೯). **ಹವ್ವನೆ:** ಈ ಹಸಿರು ಓಳಿಗಳ ನಡುವಿನ ಜಾಗದಲ್ಲೇ . . . ಹವ್ವನೆ ಬೆಳೆದು ನಿಂತಿತ್ತು (ಮೂರುದಾ. ೯೦). **ಹೌವನೆ:** ಹೌವನೆಯಾಕಸ್ಮಿಕ ಭಯಭಾವಿತವಂತಿಂತುಗಳ್ ಪದಾಪೂರಣದೊಳ್ ಕೋವುವು (ಶಮದ. ೩೧೮).

ಪವ್ವನೆ ಪಾಱು, ಪೌವನೆ ಪಾಱು, ಹವ್ವನೆ ಹಾರು, ಹವ್ವನೆ ಹಾಱು, ಹೌವ್ವನೆ ಹಾಱು = ೧. ಇದ್ದಕ್ಕಿದ್ದಂತೆ ಹಾರು; ಹಠಾತ್ತಾಗಿ ಮೇಲಕ್ಕೆ ನೆಗೆ: ಅರನೇಱಲ ಗೊಂಚಲಂ ಕಟ್ಟಿದಿರೊಳ್ ಕಂಡು ತಾನುಂ ಸಾರಿಗೆಯುಮಿರದೆ ಪವ್ವನೆ ಪಾಱಿ ಸೆಳೆಗೊಂಬನಡರ್ದು (ರಾಮಾಶ್ವ. ೫೪-೭). ೨. ಅಧಿಕವಾಗಿ ತುಡಿ,-ಮಿಡಿ; ಹೆಚ್ಚಾಗಿ ಕಂಪಿಸು: ಮತ್ತಿದು ಪೆಱತೇನೆನುತ್ತ ಮೆರ್ದೆ ಪವ್ವನೆ ಪಾಱಲ್ (ಶಾದಂಪೂ. ೮೯೯); ತತ್ಸರೋವರದೆರ್ದೆ ಪವ್ವನೆ ಪಾಱುವಂತೆ ಪಾಱುದುವು . . . ತದ್ವಿಹಗಕುಳಂ (ಗದಾಯು. ೭-೧೭); ಎಳಹುಲ್ಲೆಯಂತೆರ್ದೆ ದಡಂದಡಿಸಿ ಪವ್ವನೆ ಪಾಱಿ (ಚಿಬಪು. ೧೯-೮೨); ಸಿಂಹನಾದದಿಂದಲ್ಲಿಯ ಜಳಚರಂಗಳೆರ್ದೆ ಪೌವನೆ ಪಾಱುವನ್ನಗಮಾರ್ದು (ಪಂಪಭಾ. ೧೩-೭೬ ಪ); ಈ ಮಾತನ್ನು ಕೇಳಿ ಶ್ರೀನಿವಾಸನ ಎದೆ ಹವ್ವನೆ ಹಾರಿತು (ರಂಗರೋ. ೨೦೬); ಪುರಕೆ ಪೋದಪೆನೆಂದು ನುಡಿಯೆ ಪರವೆಯ ಮನಂ ಬೆದಱಿ ಹವ್ವನೆ ಹಾಱಿ . . . ಮೂರ್ಛೆವೋಗಲ್ಕೆ (ನಂಬಿರ. ೧೭-೬೫); ತದ್ಧ್ವನಿಗೆ ಹಮ್ಮೈಸಿ ಹವ್ವನೆ ಹಾಱಿ ಮೂರ್ಛಿಸಿದುದಾ ಜನಚಯಂ (ಪದ್ಮರಾ. ೬-೬೧). ೩. ಶೀಘ್ರವಾಗಿ ಹೋಗು: ನಿನಗಿದಿರಾದಗಿಯರೆನಿಪ್ಪಾರಾತಿಗಳ ಹರಣಂ ಹೌವನೆ ಹಾಱಲಿ (ಜಯಕಾ. ೮-೩೯). 'ಹೌಹಾರು' ಪರಾ.

[ಪವ್$_0$+-ಅನೆ$_1$]

ಪವ್ವಶರ್ಮ (ನಾ). ಒಬ್ಬಾತನ ಹೆಸರು: ಭಾರದ್ವಾಜಗೋತ್ರ ಪವ್ವಶರ್ಮಣ ಎಕ್ಕಂಶಃ (ಇಆ. VII, ೧೮೮-೪೨; 668).

[ಪವ್ವ$_0$+ಶರ್ಮ]

ಪವ್ವಳಿಸು$_1$ 'ಪವಡಿಸು' ನೋ.

ಪವ್ವಳಿಸು$_2$, ಹವ್ವಳಿಸು (ಕ್ರಿ). ೧. ಉದ್ವೇಗದಿಂದ ಕೂಡಿರು: ಲೋಹಸೂಚಿಗಳವೋಲ್ ತನುರೋಮ . . . ಮಹೋನ್ನತಕಂಠವೆತ್ತಿ ಪ[ಪಾಠಾಂ.ಹ]ವ್ವಳಿಸುತಲುರ್ಕಿ ಸೊರ್ಕಿ ಬರುತಿರ್ದುದು ಭೀಕರನೊಂದು ಸೂಕರಂ (ತ್ರಿಪುವಿ. ೨೭-೬೦). **ಹವ್ವಳಿಸು:** ೨. ಹಾತೊರೆ; ಕಾತರಿಸು: ವೆಗ್ಗಳವೆನಿಪ ಹಸಿವಡಗದಿರೆ ಹವ್ವಳಿಸಿ ನೋಡುತಲಿದ್ದನು (ತಿಮ್ಮಆ. ೯-೧೮); ಇಂದುವಂ ಮುಡಿಯೊಳಿರೆ ಕಂಡು ಭೂಷಣದುರಗವೃಂದ ಹವ್ವಳಿಸಿದಪವು (ನಂದಿಮಾ. ೧೮-೧೨). ೩. ಹೌಹಾರು; ಹೆದರು: ತಳವಳಗೊಂಬ ಪೌರರು . . . ಹವ್ವಳಿಸಿ ಕಳವಳಿಸುವ ಕಾಂತೆಯರು ತೀವಿದುದಾ ಪೊಳಲೊಳಗೆಲ್ಲಿ ನೋಡಿದರು (ತ್ರೀಪಾಲ. ೪-೨೫); ಹರಿವೆಸರಿಗೆ ಹವ್ವಳಿಸುವಾನೆಯ ಹಿಂಡು ತರಹರಿಪುದೆಯದ ಕಂಡು (ಕುರಾಸಾಂ. ೪೦-೩೪). [?+-ಇಸ್ಸು$_3$]

ಪಶಿಗೆ 'ಪಸುಗೆ' ನೋ

ಪಶು (ನಾ). ೧. ಹಸು; ಗೋವು: ಪಶುವಿನ ಜಿಹ್ವೆಯೊಳ್ ಪೊಲೆಯರಿರ್ಪೆಡೆಯೊಳ್ ಸುಧೆ ದೇವಿ ಪದ್ಮದೊಳ್ ಮಿಸುಗುವ ಲಕ್ಷ್ಮಿ

ಪೊರ್ದಿ ನೆಲಸಿರ್ದಪಳ್ (ಧರ್ಮಾಮೃ. ೯-೯೦); ಕಱೆಯೆಂಬ ನುಡಿ ತುಂಬುವೆಱೆಯೊಳು ಪಶುಗಳೊಳು (ರಾಮವಿ. ೨-೨೧). ೨. ದನ; ಕಾಲ್ನಡೆ: ಬಳಿದಪ್ಪಿದ ಪಶು ತನ್ನ ಹಿಂಡನಱಸುವಂತೆ (ಬಸವ. ೩೬೫); ಪಶುವಿಲ್ಲದ ವ್ಯವಸಾಯ, ಶಿಶುವಿಲ್ಲದ ಮನೆತನ (ಗಾದೆ). ೩. ಪ್ರಾಣಿ; ಜೀವಿ: ವನಿತಾಪಶುಪಂಡಕವರ್ಜನಿವಾಸೋದ್ದೇಶದೆಡೆಗೊಳ್ ಚರಯಿಸುತುಂ (ಸುಕುಮಾ. ೪-೮). ೪. ಕ್ರೂರಮೃಗ; ದುಷ್ಟ ಪ್ರಾಣಿ: "ಪಶುಃ, ಶ್ವಾಪದಃ—ಈ ಎರಡು (ದೆಳ್ಳಿಗ) ಕೋಟ್ಯಂಗಂಗಳ್" (ಹಲಾಯು. ೩೯-೮೦). ೫. ಬಲಿಯನ್ನಾಗಿ ಕೊಡುವ ಪ್ರಾಣಿ: ಕೌರವೇಶ್ವರನೀತಂ ಪಶುವಾಗೆ ಬೇಳ್ಪಂ (ಗದಾಯು. ೮-೪೩). ೬. ಒಂದು ಬಗೆಯ ಸಸ್ಯ: "ಪಾವನೀ-ತುಳಸಿ, ಪಶು, ಸೂರ್ಯಭಕ್ತ, ಕಿತ್ತೀಳೆ, ಹಿಂತಾಳ್" (ಓಷಧಿ. ೧೫). ೭. (ಆಲಂ) ದಡ್ಡ; ಬುದ್ಧಿಗೇಡಿ: ನಿಖಿಳ ದಿವಿಜಾಳಿಗಳು ಪಶುಗಳಲಾ ವಿರಿಂಚನ ವಿಗಡತನದಲಿ ಕೆಟ್ಟರಕಟ (ಕುಮಾಕ. ೬-೨೩). ೮. [ಶೈವ] ಜೀವಾತ್ಮ; ಜೀವಿ: ಈ ವಿಶ್ವವನ್ನು ಉಪಯೋಗಮಾಡಿಕೊಳ್ಳುವವರು ಜೀವಿಗಳು. ಇವರಿಗೆ ಪಶುಗಳೆಂದು ಹೆಸರು (ಧಾರವ. ೩೦೭); ಪತಿಯೇ ಪರಮಶಿವನು . . . ಪಶುವೇ ಪುರುಷನು, ಜೀವಾತ್ಮನು (ಹಿಂದಸಾ. ೨೯೬). [ಸಂ.]

ಪಶುಕರ್ಮ (ನಾ). ೧. ಪ್ರಾಣಿಗಳಂತೆ ವರ್ತಿಸುವುದು; ಮೃಗ ಸ್ವಭಾವದಿಂದಿರುವುದು. ೨. ಪ್ರಾಣಿ ಬಲಿ; ಪಶುಬಲಿ.

[ಪಶು + ಕರ್ಮ]

ಪಶುಕರ್ಮಜೀವಿ (ನಾ). ಪ್ರಾಣಿಯನ್ನು ಬಲಿ ಕೊಡುವವನು: ನಿಜಮಹತ್ವವನುಡುಗಿ ಪಶುಕರ್ಮಜೀವಿಗಳು ಶ್ರುತಿದಾಹಿರರುಗಳ್ ತಾವಿಹಗೆ ಪಶುಪತಿಗಳಹರೇ (ಬಸಪು. ೫೪-೭).

[ಪಶುಕರ್ಮ + ಜೀವಿ$_1$]

ಪಶುಕರ್ಮಿ (ನಾ). = ಪಶುಕರ್ಮಜೀವಿ: ಧರಣಿಯೊಳು ಪಶುಕರ್ಮಿಯಾಗಿಹ ನರನನೀಶ್ವರನೆನುತ ಪಶುಪನ ಚರಣವಂ ಪೂಜಿಸದ ಪಶುಜೀವಿಗಳರಥಮರಿರ (ಬಸಪು. ೫೦-೪೭). [ಪಶು + ಕರ್ಮಿ]

ಪಶುಗೆಡಹಿ (ನಾ). ಪ್ರಾಣಿಗಳನ್ನು ಬಲಿ ಕೊಡುವವನು; ಯಜ್ಞ ಮಾಡುವವನು: ನೂಱು ಪಶುಗೆಡಹಿಗೆ ಸುರೇಂದ್ರನು ಮಾಱುವನು ಗದ್ದುಗೆಯ (ಕುಮಾಅ. ೬-೮೪).

[ಪಶು + ಕೆಡಹು(< ಕೆಡಪು) + -ಇ$_3$]

ಪಶುತನೂದಕ (ನಾ). ದನದ ಗಂಜಳ; ಗೋಮೂತ್ರ: ಪಶುತನೂದಕದಂತೆ ಮೂಱು ವಕ್ರಮನುಳ್ಳ ಗೋಮೂತ್ರಗತಿಯುಂ (ತತ್ತ್ವಪ್ರ. ೧೦೧). [ಪಶು + ತನು + ಉದಕ$_2$]

ಪಶುನೈವೇದ್ಯ (ನಾ). ಪ್ರಾಣಿಯ ಬಲಿ: ಆಯುಧವರೇಣ್ಯ . . . ನಿನ್ನ ನೋಂಪಿಯ ಬಲ್ಲೆನಾಂ ತೊಟ್ಟ ಮೇಲ್ ನಿನ್ನ ಬಲಿಗೆ ಪಶುನೈವೇದ್ಯವಿಟ್ಟಂತೆಯೆ ದಿಟಂ ಅರಾತಿಯಸು (ಶ್ರೀರಾಮಾ. ೮೦೫-೧೩೨).

[ಪಶು + ನೈವೇದ್ಯ]

ಪಶುಪ (ನಾ). ೧. ಪಶುಗಳ ಒಡೆಯ; ವೃಷಭ; ನಂದೀಶ್ವರ: ಈ ಪಶುಪನೆರಡನೆಯ ಶಂಭುದ್ದೀಪನಾಮಂ (ಬಸಪು. ೨-೬). ೨. ಜೀವಿಗಳನ್ನು ರಕ್ಷಿಸುವವನು; ಶಿವ: ನಿರ್ಮಲಂ ನೀಂ ದುರ್ಮಲಂ ನಾಂ . . . ನೀಂ ಪಶುಪ ನಾಂ ಪಶುವು (ಬಸಪು. ೨೨-೬೦). ೩. ದನ ಕಾಯುವವನು; ದನಗಾಹಿ; ಗೋಪಾಲ. [ಸಂ.]

ಪಶುಪತಿ (ನಾ). ೧. = ಪಶುಪ ೨: "ಈಶಾನಃ, ಶಶಿಶೇಖರಃ, ಪಶುಪತಿಃ . . . ನೀಲಲೋಹಿತಃ—ಈ ೪೫ ಮಹಾದೇವರ ಪೆಸರ್" (ಹಲಾಯು. ೩-೧೧); ಪಶು ನಾನು ಪಶುಪತಿ ನೀನು (ಬಸವ. ೫೩); ಪಶುಪತಿಯೆ ಶರಣೆನುತೆ ಸುಖದಿ ನಲಿದೋವುತುಂ (ಸಂಬರ. ೯-೧೪೨); ಸುತನಿತ್ತೆನು ನಿನಗೆ ಲೋಕತ್ರಿತಯದಲಿ ಬಲುಗ್ಯೆ ಕಣಾ ಪಶುಪತಿಗೆ ಪುರುಷೋತ್ತಮಗೆ ಸರಿಮಿಗಿಲೆಂಬ ಸಂದೇಹ (ಕುಮಾಅ. ೪-೬೦). ೨. ಒಬ್ಬಾತನ ಹೆಸರು: ಅಳಪಗಣಪಶುಪತಿ ಮಾದಕ್ಷಿಣಾಪಥ ಬಹುಶತಹವನಾಹವದು[ಳ್] ಪಶುಪ್ರದಾನ ಶೌರ್ಯೋದ್ಯಮಭರಿತೋ[ನ್ದಾನ] ಪಶುಪತಿಯೆನ್ದು ಪೊಗೞ್ (ಮೈಅರಿ. ೧೯೩೬, ೧೬-೬; ಸು. 450).

[ಪಶು + ಪತಿ$_2$]

ಪಶುಪಾಲ (ನಾ). ದನಗಳನ್ನು ಕಾಯುವವನು; ಗೋಪಾಲ: ಅಂತು ಶಾಕ್ಯರವರನಾಗಿ ಕೆಕ್ಕಳಿಸಿ ಕೆಳದೞ್ಕೆಕೊಂಡು ಬಂದ ಕಂಸನಟ್ಟದರಿಷ್ಟನಂ ಅಧೀನರಿಷ್ಟನಂ ಕೊಂದಂತೆ ಕೊಲ್ಲದೆ ಪಶುವೆಂದು ಪೇಸಿ ಪಶುಪಾಲನಪ್ಪ ಕಾರಣದಿಂ ಕರುಣಿಸಿ (ಅರ್ಧನೇ. ೮-೨೦ ವ); ಕೋಲ ಕೋಳಾಹಳವ ನೋಡೆಮ್ಮೇಳಿಗೆಯ ಭುಜಬಲವನಿದು ಪಶುಪಾಲರಲಿ ಪರಿಭೂತವಾಯ್ತು (ನಿಭಾಗ. ೧೦-೬೦-೧೨). [ಸಂ.]

ಪಶುಪಾಲಕ (ನಾ). = ಪಶುಪಾಲ: ಶಕರು ಖಡ್ಗೋತಪ್ರತಾಪರು . . . ಪಶುಪಾಲಕ ಪುಳಿಂದರು ಕಂಕಣಾಢ್ಯರು ಸಕಲದಸ್ಯುಗಳ್ಬೆದೆ ಸೋತುದು (ಕುವ್ಯಾಸ. ೩-೫೧); ಕಲಿ ಚಂಡಯಂ ಪಶುಪಾಲಕಂ ಕಲ್ಲಯಂ ಘನಗಾರುಡಂ ಮೃಗಯಾಚರಂ ಪಟು ಚೋಮಯಂ (ವೃಷವಿ. ೬-೩೮); ಅವನು ಪಶುಪಾಲಕನಾಗಿದ್ದನು (ಮಣಿಸ. ೯೪). [ಸಂ.]

ಪಶುಪಾಲನ (ನಾ). = ಪಶುಪಾಲನೆ: ಪಶುಸಂಹಾರ, ಪಶುಪಾಲನ, ಪಶುಯಜ್ಞ . . . ಪಶುಭಕ್ಷಣದಿಂದ ಬೆಳೆದ ಮಾನವಜಾತಿಯು ಪಶುವಿನ ಆವೇಶವನ್ನು ತನ್ನ ಆಚರಣೆಯಲ್ಲಿ ಪ್ರಕಟಿಸಿದರೆ ಆಶ್ಚರ್ಯವಲ್ಲ (ವಿಜಾಮಂ. ೮೨). [ಪಶು + ಪಾಲನ]

ಪಶುಪಾಲನೆ (ನಾ). ದನಕರುಗಳನ್ನು ಸಾಕುವುದು: ಪಶುಪಾಲನೆ ಪಶುಪತಿಯ ಉಪಾಸನೆಯಾಗಿ ಪಾಶಚ್ಛೇದನಕ್ಕೆ ದಾರಿ ಮಾಡಿಕೊಡುತ್ತದೆ (ಶರಚ. ೨೧೬); ವ್ಯವಸಾಯದ ಜೊತೆಗೆ ಇನ್ನೆರಡು ಉದ್ಯಮಗಳನ್ನು ಹೆಸರಿಸಬಹುದು. ಒಂದು ಕುರಿಸಾಕಣೆ. ಮತ್ತೊಂದು ಪಶುಪಾಲನೆ (ಕಶಾಅ. ೩೬೩). [ಪಶು + ಪಾಲನೆ]

ಪಶುಪ್ರದಾನ (ನಾ). ಯಜ್ಞದಲ್ಲಿ ಪಶುವನ್ನು ಬಲಿಕೊಡುವುದು: ಅಳಪಗಣಪಶುಪತಿ ಮಾದಕ್ಷಿಣಾಪಥ ಬಹುಶತಹವನಾಹವದು[ಳ್] ಪಶುಪ್ರದಾನ ಶೌರ್ಯೋದ್ಯಮಭರಿತೋ[ನ್ದಾನ] ಪಶುಪತಿಯೆನ್ದು ಪೊಗೞ್ (ಮೈಅರಿ. ೧೯೩೬, ೧೬-೭; ಸು. 450). [ಪಶು + ಪ್ರದಾನ]

ಪಶುಬಂಧ (ನಾ). ಯಜ್ಞಪಶುವನ್ನು ಬಲಿಗಾಗಿ ಬಲಿಗಂಬಕ್ಕೆ ಕಟ್ಟುವುದು: ಪಶುಬಂಧ[ಪಾಠಾಂ. ಬಂಧನ]ಕ್ಕೆ ತಂದ ಹೋತನ ತಲೆಯನಾ ದಕ್ಷನ ಮುಂಡದ ಮೇಲಿರಿಸಿ ಪ್ರಾಣಮಂ ವೀರೇಶ್ವರಂ ಕೊಟ್ಟಂ (ನನ್ನಚಾ. ೬-೯೯ ವ). [ಪಶು + ಬಂಧ]

ಪಶುಬಲಿ (ನಾ). ಜೀವಿಯನ್ನು ಕೊಲ್ಲುವುದು; ಪ್ರಾಣಿಬಲಿ: ಇಕ್ಕಲಿಕೆ ಪಶುಬಲಿಯನೆನ್ನಿವ ಸೊಕ್ಕಿ ಬಂದವನು (ಕೌಶಿರಾ. ೩೭-೧೬).

[ಪಶು + ಬಲಿ$_2$]

ಪಶುಬುದ್ಧಿ (ನಾ). ಪ್ರಾಣಿಯಂತೆ ನಡೆದುಕೊಳ್ಳುವುದು; ಮಾನವನಲ್ಲದಂತೆ ವರ್ತಿಸುವುದು: ವಿಜ್ಞಾನಿ "ಪಶುಬುದ್ಧಿ"ಯನ್ನು ಬೆಳೆಸಿಕೊಂಡರೆ ವಿಶ್ವದ ವಿನಾಶ ಶತಸ್ವತಃಸಿದ್ಧ (ವಿಕಾಸ. iv, ವಿಚಾರದರ್ಪಣ). [ಪಶು + ಬುದ್ಧಿ]

ಪಶುಮತ (ನಾ). = ಪಶುಬುದ್ಧಿ: ಶಿವ ಬೇಱೆ ಇವು ಬೇಱೆ ಎಂಬ ಅಜ್ಞಾನಿ ಕರ್ಮಕಾಂಡಿಗಳ ಪಶುಮತದವರನೆನಗೊಮ್ಮೆ ತೋಱದಿರಾ (ಸಿದ್ಧೇಪ. ೬೩-೨೦೯); ಬೆಳಗ ಕತ್ತಲೆಯೆಂಬ ಕತ್ತಲೆಯ ಬೆಳಗೆಂಬ ಪಶುಮತದ ಪಾಷಂಡಿಗಳು ನೀವು ಕೇಳಿರೇ (ಘನವ. ೧೬-೧೫).

[ಪಶು + ಮತ]

ಪಶುಯಜ್ಞ (ನಾ). ಪಶುಬಲಿಯನ್ನು ಕೊಟ್ಟು ಮಾಡುವ ಯಜ್ಞ: ಆಗ ಪಶುಯಜ್ಞವಿರಲಿಲ್ಲವೆಂದ ಮೇಲೆ ಸ್ತೂಪದ ಹೋಲಿಕೆ ಸರಿಹೋಗುವುದಿಲ್ಲ (ಭಾರದ ೨೦೮). [ಪಶು+ಯಜ್ಞ]

ಪಶುವರ್ತನೆ (ನಾ). ಪ್ರಾಣಿಗಳಂತೆ ನಡೆದುಕೊಳ್ಳುವಿಕೆ; ಅಮಾನುಷವಾದ ನಡತೆ: ಪೋಲೀಸರ ಈ ಪಶುವರ್ತನೆಯನ್ನು ಕಂಡು ಹೇಸಿ . . . ತಮ್ಮ ಸರದಿ ಯಾವಾಗ ಬರುವುದೊ ಎಂದು ನಿರೀಕ್ಷಿಸುತ್ತ ನಿಂತರು (ಸರ್ಪಮರಿ. ೧೫೦). [ಪಶು+ವರ್ತನೆ]

ಪಶುವಿಧಿ (ನಾ). = ಪಶುಯಜ್ಞ: ಅನ್ನಪ್ರಾಶನ, ಪುಂಸವನ, ಮದುವೆ, ಉಪನಯನ, ಸಮಾವರ್ತನ, ಪಶುವಿಧಿ (=ಯಜ್ಞ), ಚಾತುರ್ಮಾಸ್ಯ ಇತ್ಯಾದಿಗಳಿಗಾಗಿ ದಾನವನ್ನು ಕೊಡಲಾಗಿದೆ (ಕಶಾಅ. ೩೮೨). [ಪಶು+ವಿಧಿ]

ಪಶುವೃತ್ತಿ (ನಾ). = ಪಶುವರ್ತನೆ: ಮನುಷ್ಯ ಮನುಷ್ಯನೊಡನೆ ಇಂಥ ಪಶುವೃತ್ತಿಯಿಂದ ನಡೆದುಕೊಳ್ಳುತ್ತಾನಲ್ಲ! (ಹಳ್ಳಹಾ. ೮೮). [ಪಶು+ವೃತ್ತಿ]

ಪಶುವೈದ್ಯ (ನಾ). ೧. ಪ್ರಾಣಿಗಳ ರೋಗವನ್ನು ಗುಣಪಡಿಸಲು ಸಹಾಯಕವಾಗುವ ಚಿಕಿತ್ಸಾಶಾಸ್ತ್ರ. ೨. ಪ್ರಾಣಿಗಳ ರೋಗಕ್ಕೆ ಚಿಕಿತ್ಸೆ ಮಾಡಬಲ್ಲ ವೈದ್ಯ. [ಪಶು+ವೈದ್ಯ]

ಪಶುವೈದ್ಯಶಾಲೆ (ನಾ). ಪ್ರಾಣಿಗಳ ಚಿಕಿತ್ಸಾಲಯ; ದನಗಳ ಆಸ್ಪತ್ರೆ: ಪಶುವೈದ್ಯಶಾಲೆಯಲ್ಲಿ ಟಾಮಿಯನ್ನು ವೈದ್ಯರು ಪರೀಕ್ಷೆ ಮಾಡಿದರು (ಕಪಪು. ೩-೩೬). [ಪಶುವೈದ್ಯ+ಶಾಲೆ$_3$]

ಪಶುವ್ರಜ (ನಾ). ದನಗಳ ಹಿಂಡು; ಗೋಸಮೂಹ: ಸುತ್ತ ಗೋವರ ಸನ್ನೆಯಲಿ ಪುರದತ್ತ ಮುಂದಾದವು ಪಶುವ್ರಜವುತ್ತರನು ಮುಳುಗಿದನು ಪರಿತೋಷಪ್ರವಾಹದಲಿ (ಕುಸ್ಯಾವಿ. ೭-೪೯). [ಪಶು+ವ್ರಜ]

ಪಶುಸಂಗೋಪನೆ (ನಾ). = ಪಶುಪಾಲನೆ: ಮಾನವನ ಜೀವನ ವೃತ್ತಿಗಳಲ್ಲಿ ಪಶುಸಂಗೋಪನೆಯೂ ಒಂದು (ರೂಢಿ). [ಪಶು+ಸಂಗೋಪನೆ]

ಪಶುಸ್ತನಿ (ನಾ). ದ್ರಾಕ್ಷಿಯ ಹಣ್ಣು; ಗೋಸ್ತನಿ: "ಹಾರ ಹೂರಂ ಪಶುಸ್ತನಿ ಮೃದ್ವೀಕೆ ದ್ರಾಕ್ಷೆ" (ಮಂಗರಾ. ೩೪-೧೦). [ಸಂ.]

ಪಶ್ಚಾತ್ಕರಿಸು (ಕ್ರಿ). ಹಿಂದಕ್ಕೆ ತಳ್ಳು; ಹಿಂಭಾಗಕ್ಕೆ ನೂಕು: ಪಿರಿದಾಯಾಸದೆ ಗುಣಮಂ ದೊರೆಕೊಳಿಸಿದೊಡಂ ಖಲಂಗೆ ಗುಣಮಂ ಪಶ್ಚಾತ್ಕರಿಸಿ ಗುಣಿಯಂ ವಿಭೇದಿಪ ಪರಿತೀಕ್ಷ್ಣಮುಖಂಗೆ ಸೂಚಿಯಂತಿರೆ ಸಹಜಂ (ಶಬಶಂ.೧-೧೬). [ಸಂ. ಪಶ್ಚಾತ್ಕರಣ+-ಇಸು$_3$]

ಪಶ್ಚಾತ್ಕಾಲ (ನಾ). ಮುಪ್ಪಿನ ಕಾಲ; ಅಪರವಯಸ್ಸು: ಪೃಥ್ವಿಯೆಲ್ಲಮನಾಳ್ದು ಪಶ್ಚಾತ್ಕಾಲದೊಳೇನಾನುಮೊಂದು ವೈರಾಗ್ಯ ಕಾರಣಮಾಗಿ ಮಗಂಗೆ ರಾಜ್ಯಪಟ್ಟಂಗಟ್ಟಿ (ವಡ್ಡಾರಾ. ೯೮-೨೨). [ಸಂ.]

ಪಶ್ಚಾತ್ತಾಪ (ನಾ). ತಪ್ಪು ಕೆಲಸ ಮಾಡಿದುದಕ್ಕಾಗಿ ಅನಂತರ ಮರುಗುವಿಕೆ; ತಪ್ಪಿನ ಅರಿವಾಗಿ ವಿಷಾದಪಡುವಿಕೆ: "ವಿಪ್ರತಿಸಾರಃ, ಅನುಶಯಃ, ಪಶ್ಚಾತ್ತಾಪಃ, ಅನುತಾಪಃ–ಈ ೪ ಅನುಶಯಂಬಡುವುದು" (ಪಲಾಯು. ೧೧೯-೩೧); ಜನಮೆಂದಂತುಟೆ ಭಾವಿಸದನಯುಮನಾಂ ನೆಗೞ್ದೆನೆಂದು ಪಶ್ಚಾತ್ತಾಪಂ ತನಗಧಿಕಮಾಗೆ... ತಳೆದನಂದುಬ್ಬೆಗಮಂ (ಪಂಂಮಾ. ೧೫-೬೭); ಉತ್ತರಕ್ಷಣದಲ್ಲಿಯೇ ಶಾಂತಲೆಗೆ ಪಶ್ಚಾತ್ತಾಪ ಹುಟ್ಟಿತು (ಶಾಂತಲಾ. ೧೨೪). [ಸಂ.]

ಪಶ್ಚಾತ್ತಾಪಪಡು (ಕ್ರಿ). ಮಾಡಿದ ತಪ್ಪಿಗೆ ಮರುಗು,–ವಿಷಾದಪಡು: ಮಾನವನು ತನ್ನ ಅನಾಚಾರ ಮತ್ತು ದುರಾಚಾರಗಳಿಗೆ ಪಶ್ಚಾತ್ತಾಪ ಪಡುವುದರಿಂದ ಶುದ್ಧನಾಗಿ ಭಗವದನುಗ್ರಹಕ್ಕೆ ಪೂರ್ಣಪಾತ್ರನಾಗುವನು (ಶಕ್ತಿವಿ. ೧೦೨); ಇದರ ವಿಷಯದಲ್ಲಿ ನಾನು ಪಶ್ಚಾತ್ತಾಪ ಪಡಲಾರೆ (ಮಲೆನಾ. ೩). [ಪಶ್ಚಾತ್ತಾಪ+ಪಡು$_1$]

ಪಶ್ಚಾದ್ವಿವೇಕ (ನಾ). ಕಾರ್ಯವು ಕೈಮೀರಿದ ಮೇಲೆ ಬರುವ ತಿಳಿವಳಿಕೆ; ಅನಂತರ ಬರುವ ಅರಿವು: ಪಶ್ಚಾದ್ವಿವೇಕದಿಂದುಱ್ ನೊಂದು . . . ಮರಣಾಂತವೇ ತನಗೆ ಪ್ರಾಯಶ್ಚಿತ್ತವೆಂದಾ ಕಟಾಹ ದೊಳ್ಕುದಿವೆಣ್ಣೊಳ್ಬಿಳ್ದನಾ ಲಿಖಿತನು (ಜೈಮಿಭಾ. ೧೧-೩೯); ಏನು ಗತಿಯಾಗುತ್ತದೆಯೋ ಎಂದು ಹೆದರಿ, ಪಶ್ಚಾದ್ವಿವೇಕದಿಂದ ಪ್ರಚೋದಿತಳಾಗಿ ಅವಳು 'ಮನೆ'ಗೆ ಓಡಿ ಬರುತ್ತಿದ್ದಳು (ಮಲೆಮ. ೩೯೮). [ಸಂ.]

ಪಶ್ಚಿಮ (ನಾ). ೧. ಹಿಂಭಾಗ; ಬೆನ್ನು: "ಬೆನ್ನದು ಪಶ್ಚಿಮಂ ಪೃಷ್ಠಮಕ್ಕುಂ" (ಮಂಗರಾ. ೯೭-೧೩); ಮುಱಿದವೆ ಕಾಲ್ಗಳ್ . . . ಅಂತೆ ಪಶ್ಚಿಮಂ ಪಱಿದುವೆ (ಬಂಹರಿ. ೧೨-೬೨). ೨. ಸೂರ್ಯನು ಮುಳುಗುವ ದಿಕ್ಕು; ಪಡುವಣ ದಿಕ್ಕು: ಪಶ್ಚಿಮಮಂ ಮಿಥುನ ತುಳಾಕುಂಭಮಾಳ್ಗುಂ (ಜಾತಕಿ. ೧-೨೪); ತುಲಾ ಮಿಥುನ ಕುಂಭಯೊಳ್ ರಾಶಿಯೊಳ್ ಪಶ್ಚಿಮದಿಕ್ಕು (ಭಾಸ್ಕರ. ೬೮-೬); ಒಂದು ಭೂಪಕಕ್ಕೆ ಎದುರಾಗಿ ನಿಂತುಕೊಂಡರೆ . . . ಎಡಭಾಗವು ಪಶ್ಚಿಮವೆಂಬುದನ್ನು ತಿಳಿಯಬೇಕು (ಭೂಗೋಳ. ೧೩). ೩. ಕೊನೆಯದು; ಕಡೆಯದು. ೪. [ಯೋಗ] ತುತ್ತತುದಿಯ ಒಂಬತ್ತನೆಯ ಚಕ್ರ; ಸಹಸ್ರಾರ: ಮಹಾಪ್ರಸಾದಮಂ ಪಶ್ಚಿಮದಲ್ಲಿ ಧರಿಸಿದೆ (ಭಸಪ. ೬೯-೫೭).

ಪಶ್ಚಿಮರಾಯ = ಪಡುವಣಭಾಗದ ಒಡೆಯ; ಒಂದು ಬಿರುದು: ಗಿರಿದುರ್ಗಮಲ್ಲ ಪಶ್ಚಿಮರಾಯ ಭೋಜದೇವ ದಿಸಾಪಟ್ಟ ಶ್ರೀಮತು ಪ್ರತಾಪಚಕ್ರವರ್ತ್ತಿ ಸಿಂಗಣದೇವ (ಎಇ. XXX, ೯-೬; ಸು. 1220). [ಸಂ.]

ಪಶ್ಚಿಮಘಟ್ಟ (ನಾ). (ದಕ್ಷಿಣ ಭಾರತದ) ಪಡುವಣ ದಿಕ್ಕಿನ ಬೆಟ್ಟಗಳ ಸಾಲು: ಭಾರತದ ನದಿಗಳು ತುಂಬಿ ಹರಿಯುವುದಕ್ಕೆ ಪ್ರಧಾನಕಾರಣವೆಂದರೆ ಪಶ್ಚಿಮಘಟ್ಟಗಳ ಸಲುವಾಗಿ ಬೀಳುವ ಅತಿಶಯ ಪ್ರಮಾಣದ ಮಳೆಯೇ (ದಭಾಇ. ೬). [ಪಶ್ಚಿಮ+ಘಟ್ಟ]

ಪಶ್ಚಿಮದಿಕ್ಪತಿ (ನಾ). ಪಡುವಣ ದಿಕ್ಕಿನ ದೇವತೆ; ವರುಣ: "ವರುಣಂ ಪಶ್ಚಿಮದಿಕ್ಪತಿ" (ಪಸ್ತುಕೋ. ೮-೪೩). [ಪಶ್ಚಿಮ+ದಿಕ್ಪತಿ]

ಪಶ್ಚಿಮನಾಡಿ (ನಾ). [ಯೋಗ] ನಾಡಿಗಳಲ್ಲಿ ಒಂದು: ಮಯೂರನಾಡಿ . . . ಪಶ್ಚಿಮನಾಡಿ . . . ಸಂತೋಷನಾಡಿ ಇಂತೀ ನಾಡಿಗಳೊಳಗಾದ ಶರೀರದಲ್ಲಿ ತೋರುವ ನಾಡಿ ಜೀರ್ಣಪರ್ಣದಂತೆ (ಶರಜ. ೪೮೦). [ಪಶ್ಚಿಮ+ನಾಡಿ$_1$]

ಪಶ್ಚಿಮಬುದ್ಧಿ (ನಾ). = ಪಶ್ಚಾದ್ವಿವೇಕ: ಕಾರ್ಯ ಕೆಟ್ಟು ಕೈಮೀರಿದ ನಂತರ ಉಂಟಾಗುವ ಪಶ್ಚಿಮಬುದ್ಧಿಯಿಂದೇನು ಪ್ರಯೋಜನ? (ರೂಢಿ). [ಪಶ್ಚಿಮ+ಬುದ್ಧಿ]

ಪಶ್ಚಿಮಸಲ್ಲೇಖನ (ನಾ). [ಜೈನ] ನಾಲ್ಕು ಶಿಕ್ಷಾವ್ರತಗಳಲ್ಲಿ ಒಂದು; ಜೀವಿತದ ಕೊನೆಯ ಕಾಲದಲ್ಲಿ ಸ್ವೀಕರಿಸುವ ಸಲ್ಲೇಖನ ವ್ರತ: ಸಾಮಾಯಿಕ ಪ್ರೋಷಧೋಪವಾಸಮುಮುಪ ಭೋಗಪರಿಭೋಗಾದಿ ತಿಥಿಸಂವಿಭಾಗಮುಂ ಪಶ್ಚಿಮಸಲ್ಲೇಖನಮುಮೆಂಬ ನಾಲ್ಕುಂ ಶಿಕ್ಷಾವ್ರತಮುಂ (ಚಾವುಂಪು. ೧೯೨). [ಪಶ್ಚಿಮ+ಸಲ್ಲೇಖನ]

ಪಶ್ಚಿಮಾಚಲ (ನಾ). ಪಡುವಣ ದಿಕ್ಕಿನ ಪರ್ವತ; ಅಸ್ತಗಿರಿ: ರಂಜಿಸುವ ಪಶ್ಚಿಮಾಚಲಕಿರಾತಂ ತೊಟ್ಟ ಗುಂಜಾಭರಣಮೊ . . . ಪೇಳೆನಲ್ಕಾ ಬೈಗುಗೆಂಪೆಸೆದುದು (ಜೈಮಿಭಾ. ೮-೪೩). [ಪಶ್ಚಿಮ+ಅಚಲ]

ಪಶ್ಚಿಮಾದ್ರಿ (ನಾ). = ಪಶ್ಚಿಮಾಚಲ: "ಪಡುವೆಟ್ಟಿಂದು ಪಶ್ಚಿಮಾದ್ರಿ [ಪಾಠಾಂ. ಪಶ್ಚಿಮಾಚಲಂ]" (ಕಶಸಾ. ೪೯-೫೧); ಇನನುದಯಿಸಲಿ ಪಶ್ಚಿಮಾದ್ರಿಯೊಳನಲನೊಮ್ಮೆ ಹಿಮಾಂಶುವಾಗಲಿ . . . ಸಜ್ಜನರುಗಳು ನುಡಿದೆರಡನಾದರು ಮನ ವಚನ ಕಾಯದಲಿ)ಕುಮ್ಯಾಳು. ೩-೧೧೩); ರವಿ ಪಶ್ಚಿಮಾದ್ರಿ[ಪಾಠಾಂ. ಬ್ಧಿ]ಯಂ ಮುಚ್ಚಿಗೊಳೆ ತಮುಸ್ತೋಮಮವನಿಯಂ ಮುಸುಕಿತು (ಜೈಮಿಭಾ. ೮-೪೯). [ಪಶ್ಚಿಮ + ಅದ್ರಿ]

ಪಶ್ಚಿಮಾಭಿಮುಖ (ನಾ). ೧. ಪಡುವಣದಿಕ್ಕಿಗೆ ಎದುರಾದುದು; ಪಶ್ಚಿಮದಿಕ್ಕಿಗೆ ಮುಖವಾಗಿರುವುದು: ಪಶ್ಚಿಮಾಭಿಮುಖವಾಗಿ ಸುತ್ತಿದ್ದರೂ . . . ಹಿಂದೆ ಬಿದ್ದಿದ್ದಾನೆ (ಸಕ್ಷತ್ರ. ೩೯). ೨. ಪಶ್ಚಿಮದಿಕ್ಕಿಗೆ ಮುಖ ಮಾಡಿರುವವನು: ತುರಂಗರತ್ನಮನೇಱಿ ಪಶ್ಚಿಮಾಭಿಮುಖನಾಗಿ ನಿಂದು ಭರತೇಶ್ವರಚಕ್ರವರ್ತಿ ಗೆಲ್ದೊಂದು ಸಾತಿರೇಕಂ . . . ಭರದಿಂದಂ ದಂಡದೊಳ್ ತಾಟಿಸಿದೊಡೆ ವಿಜಯಾರ್ಧಾಚಲಂ ತೊಟ್ಟನಾಗಳ್ ಬಿರಿದತ್ತು (ಆದಿಪು. ೧೩-೩೫ ಪ); ಚಕ್ರವರ್ತಿಯುಂ ಪಶ್ಚಿಮಾಭಿಮುಖನಾಗಿ ಪಯಣದ ಮೇಲೆ ಪಯಣಂಬೋಗೆ (ಶಾಂತಿಪು. ೧೧-೧೦ ಪ). [ಪಶ್ಚಿಮ + ಅಭಿಮುಖ]

ಪಶ್ಚಿಮಾರ್ಧಗೋಳ (ನಾ). ಪಶ್ಚಿಮದ ಕಡೆಗಿರುವ ಭೂಮಿಯ ಅರ್ಧಭಾಗ; ಪಶ್ಚಿಮಗೋಲಾರ್ಧ: ಪಶ್ಚಿಮಾರ್ಧಗೋಳದಲ್ಲಿರುವ ಭೂಮಿಯ ಎರಡರಷ್ಟಕ್ಕಿಂತಲೂ ಪೂರ್ವಾರ್ಧಗೋಳದಲ್ಲಿರುವ ಭೂಮಿಯು ಹೆಚ್ಚಾಗಿದೆ (ಭೂಗೋಳ. ೧೩).

[ಪಶ್ಚಿಮ + ಅರ್ಧಗೋಳ(= ಅರ್ಧಗೋಲ)]

ಪಶ್ಚಿಮೋದಧಿ (ನಾ). ಪಡುವಣ ಕಡಲು; ಪಶ್ಚಿಮದಿಕ್ಕಿನ ಸಮುದ್ರ: ಸೇನೆ ಮೂಡಣ ಜಲಧಿಗಾಂತುದು ಪಶ್ಚಿಮೋದಧಿಯೆಂಬ ರಭಸದಲಿ (ಕುಮ್ಯಾಭಾ. ೧-೬೪). [ಪಶ್ಚಿಮ+ಉದಧಿ]

ಪಶ್ಚಿವ 'ಪಚ್ಚಿಮ' ನೋ.

ಪಶ್ಯಂತಿ (ನಾ). ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ಎಂಬ ನಾಲ್ಕು ವಾಙ್ಮಯರೂಪಗಳಲ್ಲಿ ಒಂದು; ಪರಾ ಎಂಬ ಸೂಕ್ಷ್ಮರೂಪವಾದ ನಾದವು ನಾಭಿಪ್ರದೇಶದವರೆಗೂ ಚಲಿಸಿದಾಗ ಅದರ ಸಂಬಂಧದಿಂದ ಉಂಟಾಗುವ ಶಬ್ದ: ಅನ್ನಮಯ ಯಂತ್ರಮೂಲದ ಸೂಕ್ಷ್ಮತಂತ್ರಗಳ್ ಪಶ್ಯಂತಿಗಳ್ (ಕ್ರೀಂಗಾಪಾ. ೭೧೭-೨೩೧); ಇದೇ ದೃಷ್ಟಿಯಿಂದ ಪಶ್ಯಂತೀ, ಮಧ್ಯಮಾ, ವೈಖರೀ-ರೂಪಗಳಿಂದ ವಾಙ್ಮಯವನ್ನು ಹೊರಹೊಮ್ಮಿಸುವಳಾದಾಗ್ಯೂ ಸಮಷ್ಟಿರೂಪದಲ್ಲಿ "ಪರಾ" ಎಂದೆನಿಸಿಕೊಳ್ಳುವಳು (ಭಾರದ. ೨೨೨); ಶಬ್ದ ಚೇತನದಲ್ಲಿ ಶೂನ್ಯ, ಸಂವಿತ್, ಸೂಕ್ಷ್ಮಅವಸ್ಥೆಗಳನ್ನು ದಾಟಿ ಮೂಲಾಧಾರದಲ್ಲಿ ಪರಾ ಆಗಿ ರೂಪ ಪಡೆದು ಮಧ್ಯೆ ಪಶ್ಯಂತಿಯಾಗಿ ಹೃದಯದೆದುರು ಬಂದು ಮಧ್ಯಮ ಆಗಿ ಉಚ್ಚಾರದಿಂದ ಹೊರಗೆ ಕೇಳಬಲ್ಲ ವೈಖರಿ ಸ್ವರವಾಗುತ್ತದೆ (ನಮ್ಮನು. ೩೧). [ಸಂ. ಪಶ್ಯಂತೀ]

ಪಶ್ಯತೋಹರ (ನಾ). ಎಲ್ಲರೂ ನೋಡುತ್ತಿರುವಂತೆಯೇ ಕದಿಯುವವನು; ದರೋಡೆಕೋರ; ಹಗಲುಗಳ್ಳ: "ನೋಡೆ ನೋಡೆ ಕಳುವವನಂ ಪಶ್ಯತೋಹರನೆಂಬುದು" (ಹಲಾಯು. ೫೬-೧೮೪).

[ಸಂ.]

ಪಸ$_1$, ಪಸವ$_2$, ಪಸವು, ಹಸ$_1$ (ನಾ). ೧. ಬರ; ಕ್ಷಾಮ; ದುರ್ಭಿಕ್ಷ: "ಪಸಂ ಬಱಂ" (ಕರ್ನಾನಿ. ೬೧); ಪರಿವೇಷದೊಳ್ ಗ್ರಹದ್ವಯಮಿರೆ ಕದನಂ ತ್ರಿಗ್ರಹಂಗಳಿರೆ ಪಸಮುಂ . . . ಅಕ್ಕುಂ (ಲೋಕೋಪ. ೪-೩೫); ಅನೃತಂ ಭಯಂ ಪಸಮೆಂಬ ಮಾತು ಪೊರ್ದದು (ಪರ್ಧಸೂ. ೬-೫೬); ಬೇಗಂ ಕಿಡುವ ಮಾನಿಸವಾಟ್ಟಿ ಮಾರಿಯ ಮೇಲೆ ಪಸಮೆಂಬಂತೆ ಜವನೆಂಬ ಪಾತಕಂ . . . ಎಡೆಯೊಳಿಟ್ಟು ಮುಚ್ಚಿಮುಚ್ಚಿಡುಯ್ವುಂ (ಜೀವಸಂ. ೬-೯). ೨. ಇಚ್ಛೆ; ಬಯಕೆ: "ಬಾಕುಳಿ, ಮೊಗಸು, ಪಸಂ, ಇಚ್ಛೆ—ಈ ೪ ಇಚ್ಛೆ" (ಕಶಸಾ. ೫೭-೨೩೩); ಪೊಸಪೂವಿನ ಪೊಸದುಡುಗೆಯ ಪಸವೋಡಿದುದಿಲ್ಲ (ಆದಿಪು. ೭-೭೦); ನೆರೆಗದಿರಂ ಧಾರೋಷ್ಣಂಗುಡಿದು ಮನದ ಪಸವೋಡಿ ತಸುತಣಿದು (ಅಸಂಪು. ೭-೮೦ ಪ); ಎನ್ನ ಕಣ್ಣ ಪಸವೋಡುವಂತು ಮಾಡಿ ದೊರನಿಂ ತಮ್ಮೊಳ್ ಕೂಡುವಂತೆ ಮಾಟ್ಟೆಂ (ಬಂಹರಿ. ೯-೪೧ ಪ); ಅಳಿನಿಯ ಪಸವನದರ ಸರಿದೂಗೆ ಮಿಗುಗುಮೆಯವನ ಸೊಗಸಂ? (ಗಿಳಿವಿಂ. ೨೭-೧೫). ೩. ಅತ್ಯಾಸೆ; ಅತ್ಯಪೇಕ್ಷೆ: 'ಪಸವಡು' ಪರಾ. ೪. ಆತುರ; ಕಾತರ; ತವಕ: "ಉರವಣಗೆಯರ್ಥದೊಳ್ ಪಸ" (ಶಬ್ದಮಂ. ೬೩). ೫. (ಆಲಂ) ಹಸಿವು; ಕ್ಷುಧೆ: 'ಪಸವಡು' ಪರಾ. **ಪಸವ$_2$**: ೧. ಪನ್ನೆರಡುವರ್ಷಂಬರೆಗಮಿನಾಡೊಳ್ ಅನಾವೃಷ್ಟಿಯಾಗಿ ಮಹಾರೌದ್ರಪಸವಮಕ್ಕುಂ (ಪಡ್ಡಾರಾ. ೮೮-೧೦). **ಪಸವು**: ೧. ಜ್ಞಾನಚಾರಿತ್ರಂಗಳಂ ಪ್ರತಿಪಾಳಿಸಿ ಬಡಗನಾಡ ಪಸವು ತಿಳಿದುದು (ಪಡ್ಡಾರಾ. ೯೦-೧೬); ಇಂಚೆಯ ಪಸವಿನ ಬಱದ . . . ಬಾಧೆಯಿಲ್ಲದ ಪದದೊಳ್ . . . ವಿರಿಂಚಿಯ ಕೆಯ್ವಿಡಿವೊಲಾದುವಾ ನಾಡೂರ್ಗಳ್ (ಪಂಪಭಾ. ೮-೫೧); ಪಸಿ[ಸ]ವಿನೊಳನ್ನಮಂ ಪಸಿದು ಬಂದವರ್ಗಿಕ್ಕುವ . . . ರಣಕ್ಕೆ ಶುಚಿತ್ವಮನಪ್ಪುಕೆಯ್ವ (?) ಮಾನಸಿಕೆಯ ನಾಲ್ವರುಂ ನಮಗೆ ವಂದ್ಯರ್ (ಗದಾಯು. ೪-೫೯); ಕಳವು ಪಿಸುಣ್ ಪಸವು ಬಱಂ . . . ಕುತ್ತಮಿಲ್ಲಾ ನಾಡೊಳ್ (ಶಬ್ದಾನು. ೧೪೦ ಪ್ರಯೋ). **ಹಸ$_1$**: ೧. ಈ ನೆಲಂ ನಲಿಯೆ ಭೂಭಾರಮನ್ನಿಳಿಪುವೆಂ ಕಯ್ಯ ಹಸಮಂ ಕಳಿದುಕೊಂಬೆ ನಾನೊಲಿದಿಂದು (ಇಹರ. ದೇ. ೪೦-೮); ಹಸ್ತದ ಹಸಂ ಹಜ್ಜಾವಂತೆ ಪೂಜಿಸಿದನೋಜೆಯಿಂ ರಾಜೇಂದ್ರನು (ಹಜಕಾ. ೩-೬೮); ಹಸವಿಲ್ಲ ಜನಕೆ ಬೆಳೆಯಿಂ ಹಸವಿಲ್ಲಳಿಗಲರ್ಗಳಿಂದೆ ಹಕ್ಕಿಗೆ ಬನದಿಂ ಹಸವಿಲ್ಲೆಂದೆನೆ ಮುತ್ತನ ಹೊಸವೂರ್ ಎಸೆವುದು ಸಮಸ್ತ ಸೌಖ್ಯಾವಾಸಂ (ಎಕ. V, ಅರಸೀ. ೧೦೮-೪೫; 1255); ತನ್ನ ಕಯ್ಯ ಹಸವೋಸಿನಂ ತಱಿದು ನೆತ್ತರ ಕಡಲಂ ಹರಿಸಿ (ಮೈಅರಿ. ೧೯೩೭, ೩೧-೬; 1310).

[ದೇ. ॥ತುಳು. ಪಂಜ; ಕೋತ. ಪಜ್ಂ; ತೊದ. ಪೊಝ್ಂ]

ಪಸ$_2$, ಪಸನು, ಹಸ$_2$, ಹಸನ$_1$, ಹಸನು (ನಾ). ೧. ಮನೋಹರವಾದುದು; ಚೆಲುವಾದುದು; ಅಂದವಾದುದು. ೨. ನಿರ್ಮಲವಾದುದು; ಶುದ್ಧವಾದುದು; ಸ್ವಚ್ಛವಾದುದು: 'ಪಸಗೊಳಿಸು' ಪರಾ. **ಪಸನು**: ೩. ಒಳ್ಳೆಯದು; ಉತ್ತಮವಾದುದು; ಮೇಲಾದುದು: ಪಸಗೆಟ್ಟಿರವಣಸುವ ಬಱಬೆಸನಿಗ ನೊಳ್ಪಸೆಗೆ ಸಂದು ಬೆಸವಟುವುದಱಂ ಪಸುಸೂಲದ ಬಿಸುನೆತ್ತರ್ಬಸಿವರೆಯುಸಿರ್ಮೆಣದ ಬಾಟ್ಟೆಯೇ ಪಸನಲ್ತೇ. (ಚಕವಿ. ೬-೧೪೬). **ಹಸ$_2$**: ೧. "ನಿಗರ . . . ಹಸ . . . ಪರಿವಡೆದುದು—ಈ ೧೪ ಮನೋಹರಂ" (ಕಶಸಾ. ೫೫-೨೧೧). ೨. ಮಿಸುಕಲಾರದ ಜಸಂ ಬೆಸಸಬಾರದ ಹಸಂ (ವೆಂಕಾರಾ. ೪-೯-೨೫). ೩. ನೆಗಧಿಗೆ ಕೊತ್ತಂಬರಿಕಷಾಯ ಹಸ (ರೂಢಿ). ೪. ಅಡಕೆಯಲ್ಲಿ ಒಂದು ಬಗೆ; ಚೆನ್ನಾದ ಅಡಕೆ; ಹದವಾದ ಕ್ರಮುಕ: ಶೇಖರಿಸಿದ್ದ ಕದರಡಕೆ ಬರಿಯ ಬೆಟ್ಟಿಗೋಟು . . . ಸ್ವಲ್ಪ ಹಸ ಮತ್ತು ದಳಗಳನ್ನಾದರೂ ಬೆರಕೆ ಮಾಡದಿದ್ದರೆ . . . ತನಗೆ ಕೊಡುವುದಿಲ್ಲ (ಪಲೆಮ. ೪೩೮); ತೋಟದಲ್ಲಿ ಎಷ್ಟು ಅಡಿಕೆ ಬೆಳೆದಿದೆ. ಬೆಟ್ಟೆಯೆಷ್ಟು—ಹಸ ಎಷ್ಟು (ಹೂಸಕ್ಷಿ. ೨೪೮). **ಹಸನ$_1$**: ೫. ಸ್ವಚ್ಛತೆ; ಶುದ್ಧತೆ: ಹಸನವಿಲ್ಲದಳ ಮನೆವಾರ್ತೆ ತಿಪ್ಪೆಯ ಕಸದಂತೆ ಇಹುದು (ಸರ್ವಜ್ಞ. ೧೭೨೪). ೬. ಸರಿಯಾದುದು; ಸಮರ್ಪಕವಾದುದು; ಯೋಗ್ಯವಾದುದು: ಬಸವನೇಕವಿವೇಕಿ

ಯಾದನು . . . ದೀನರಂ ಮಾಡಿದನೆ ಜಂಗಮವ ಪಸುಧೆಯೊಳು ತಾನೀವವಂ ಗಡ ಹಸನವೈ ನುಡಿ ಈ ನುಡಿಯನಾಲಿಸುವರೇ ಶಿವಭಕ್ತರು ಗಳತಿದೋಷವಹುದಲ್ಲ (ಬಸಪು. ೨೨-೪೭); ಅವರದು ಅವರಿಗೇ ಹಸನ, ನಮ್ಮದು ನಮಗೇ ಹಸನ (ಮಾಧವ. II, ೭೪). ೭. ಕ್ಷೇಮ; ಹದುಳ; ಕುಶಲ: ನೆಲವೆಲ್ಲವು ಮಸಣ ಮಸಣ ನೋಡಿದಲ್ಲಿ ಇಲ್ಲ ಹಸನ (ಸೂರ್ಯಪಾ. ೪೦-೧೬). **ಹಸನು:** ೧. ಹಸನಾದ ಹೆಣ್ಣ ಮೇಲೆ ಕುಸುಮವ ತಂದಿಕ್ಕಿ ಶಶಿಮುಖಿಯರಿಗೆಲ್ಲ ಬಸುಱು ಮಾಡಿದನೀತ (ಪುರಂದ. ೧-೯೧-೨). ೩. ರಸವಪ್ಪವಂ ಜಿಹ್ವೆ ಮುಖದಿಂದಲರ್ಪಿಸಲು ಹಸನಪ್ಪ ರುಚಿಯ ಪ್ರಸಾದವನು ಭುಂಜಿಸಲು (ದೀಕ್ಷಾಬೋ. ೧೧೦-೨೯೦); ಹಸನಪ್ಪ ಗುರುವಿನುಪದೇಶದಿಂ ಮುಕ್ತಿ ವಶವಾಗದಿಹುದೆ (ಸರ್ವಜ್ಞ. ೬೪); ಹಸನಲ್ಲದ ಕುಲದೊಳ್ ಪುಟ್ಟದಳ ಕೂಡಿ ವಸುಧೇಶ ಪುರವನೈದಿದನು (ಜಿನರಾ. ೩-೯೯). ೬. ಹಸನನುಳಿದುಸುರಿದಡೆ ಬಾಯ ತೆಱೆಯಲುಂಟೇ ಬಳಿಕ (ಬಸಪು. ೪೦-೨೪); ಹಸನು ವರ್ಣವಿಭೇದಪದ್ಧತಿ ಸಸಿನ ವೈದಿಕಮಾರ್ಗ ನಿನ್ನಲಿ ವಸುಮತೀಪತಿ ಕೇಳು ಜನಪಾಲನೆಯ ಪರಿ ಲೇಸು (ತೊರರಾ. ೧-೯-೨೩). ೭. ಹಸನಾಗಿ ಬದುಕುವಡೆ ಕುಶಲನೆಂದೆನಿಸುವಡೆ . . . ಹಸಿದರಿಗೆ ಅಸನವನು ಇಕ್ಕು (ಸರ್ವಜ್ಞ. ೬೪೨); ದೇವಕೀದೇವಿಯರು ಮೊದಲಾದ ಶಶಿವದನೆಯರು ಬಂಧುವರ್ಗವು ಹಸನೆ (ಕೋಗಯ. ೧೨-೧೯). ೮. ಒಳಿತು; ಲೇಸು; ಹಿತ: ಹಗೆಯ ಹೆಚ್ಚುಗೆ ಹಸನ ಕೊಡುವುದೆ (ಕುಪ್ಯಾಅ. ೮-೪೮); ಅಸಿಧಾರೆಯ ಜೀನ ನೆಕ್ಕೆ ನಾಲಗೆಗದು ಹಸನೆ (ಕುರಾಸಾಂ. ೩೪-೭೯). ೯. ಹದ; ಹವಣು: ಹಸಿದಾರ್ಭಟಿಸುವ ಹುಲಿಯ ಮೀಸೆಯ ಮಱಿ ಶಶಕ ಬಂದಲುಗಿದಂತೆ ಹಸನಱಿಯದೆ ಕೆಣಕಿದ ವೈರಿಬಲವನು ದೆಸೆಬಲಿಗೊಡು ಹೋಗು (ಕಂನವಿ. ೧೭-೨೪).

ಹಸನಾಗು=೧. ಚೆಲುವಾಗು; ಸುಂದರವಾಗು; ಮನೋಹರವಾಗು: ದಶರತ್ನಖಚಿತಕವಾಟಬಂಧಗಳಿಂದ ಹಸನಾಯಿತು ಕೃಷ್ಣನಗರ (ಮೋಹತ. ೨೯-೨೬). ೨. ನಿರ್ಮಲವಾಗು; ಪರಿಶುದ್ಧವಾಗು: ಹಸನಾಯ್ತು ನಿನ್ನ ಮನ . . . ಕಂಡತಿಸಂತಸವಾಯಿತು (ದೀಕ್ಷಾಬೋ. ೧೦೨-೬). ೩. ಚೆನ್ನಾಗು; ಉತ್ತಮವಾಗು: ಶ್ರದ್ಧೆಯಿಂದ ಮಾಡಿದ ಕೆಲಸ ಹಸನಾಗುತ್ತದೆ (ರೂಢಿ). **ಹಸ ಮಾಡು, ಹಸನ ಮಾಡು, ಹಸನು ಮಾಡು**=ಚೊಕ್ಕಟಗೊಳಿಸು; ಸ್ವಚ್ಛವಾಗುವಂತೆ ಮಾಡು; ನಿರ್ಮಲಗೊಳಿಸು: ಆ ಹೊಲನಂ ಹಸ ಮಾಡಿ ಬಿತ್ತುವ ಪರಿ ಇನ್ನಾವುದಯ್ಯಾ (ಸರ್ವವ. ೧೦೫-೫೬೮); ಗುಡಿಲಂ ಹೊದಿಸಿ ಹಸ ಮಾಡುವ ಕಳನ ಕೆತ್ತುವ ಮೇಟಿಯಂ ನೆಡುವ . . . ಗೊಂದಣಂ ಕುಡಿಯರುಗಳೊಳಗೊಪ್ಪಮಂ ಪಡೆದುದು (ಸಮ್ಯಕೌ. ೧-೨೪); ಅದನ್ನು ಹಸನ ಮಾಡುವವರು ಹೆಣ್ಣಾಳುಗಳು (ಬೆಳಭಾ. ೯); ಅಕ್ಕಿ ಹಸನ ಮಾಡುವುದು . . . ಮೊದಲಾದ ಕೆಲಸ ಇರುತ್ತಿದ್ದವು (ಪ್ರತಿಬಿಂ. ೨೮); ಬೆಕ್ಕು ಅಂಗಾಲಿಂದ ಮೈಯನ್ನು ಹಸನು ಮಾಡಿಕೊಳ್ಳುತ್ತದೆ (ಮುಂಬಯಿ. ೩-೩೧); ಸರಗು-ಕಸರು ತುಂಬಿದ ಜೋಳ; ಹಸನು ಮಾಡಿದರೆ ಆರು ಚಟಾಕಿಗಿಂತಲೂ ಕಡಿಮೆಯಾಗಬಹುದು (ಜನಜೀ. ೨). [ದೇ.॥ ತೆಲು. ಪಸನು]

ಪಸಂಗೊಳ್, ಹಸಗೊಳ್ಳು (ಕ್ರಿ). ಚೆನ್ನಾಗು; ಒಳ್ಳೆಯದಾಗು: ಅಮರ್ದಿನ ಮುನ್ನೀರೊಳ್ ಪಸಂಗೊಂಡ ತೇಜಂ ನೆಗೞ್ದುದು (ಚಿಕವಿ. ೩-೮೨). **ಹಸಗೊಳ್ಳು:** ಎಲ್ಲೆಲ್ಲಿ ಏನು ಕಸುವಿನಲಿ ಬೆಳೆವುದೊ ಆ ಬದುಕು ಹಸಗೊಂಡು ರಸವಾಗಲಿ (ನೆಲಮು. ೨೨-೧೪).

[ಪಸ$_2$ + ಕೊಳ್$_1$]

ಪಸಂದ್ 'ಪಸಂದು' ನೋ.

ಪಸಂದ 'ಪಸಂದು' ನೋ.

ಪಸಂದು, ಪಸಂದ್, ಪಸಂದ (ನಾ). ೧. ಒಳ್ಳೆಯದು; ಚೆನ್ನಾದುದು: ಅದು ಅಷ್ಟು ಪಸಂದಾಗಿರುತ್ತದೆ (ಅನಾಥೆ. ೧೬೬); ಗರ್ರನೆ ತಿರುಗಿದ್ದಂತೂ ಬಹು ಪಸಂದಾಯಿತು (ಮಲ್ಲಿ. ೩೨). ೨. ಅಚ್ಚುಕಟ್ಟು; ಒಪ್ಪ: ಮುದ್ದರಾಜರವರು ಮಡಿಕೇರಿಯೆಂಬ ಜಾಗ ಪಸಂದು ಮಾಡಿ (ರಾಜೇಂದ್ರ. ೨); ಆ ಸರದಾರರು ಪಸಂದು ಮಾಡಿದಂಥ ಮಾರ್ಗವನು ತಾವು ಒಡಂಬಟ್ಟು (ರಾಜೇಂದ್ರ. ೬೬). **ಪಸಂದ್:** ೧. ಈ ನಮೂನೆಗಳಲ್ಲಿ ಯಾವುದಾದರೂ ನಿಮಗೆ ಪಸಂದ್ ಬಿದ್ದೀತು (ದೇಕನ್ಯೆ. ೧೦೬); ಬಂಗಲೇ ಕಟ್ಟಸಲಿಕ್ಕೆ ಜಾಗಾ ಮಾತ್ರ ಬಹಳ ಪಸಂದ್ ಆರಿಸಿದೀರಿ ನೋಡ್ರಿ ಧಣೇರ! (ಜನಜೀ. ೧೫೬). **ಪಸಂದ:** ೧. ಒಬ್ಬರ ವಸ್ತುವನ್ನು ಇನ್ನೊಬ್ಬರು ತೆಗೆದುಕೊಳ್ಳುವುದು ಪಸಂದವಲ್ಲ (ಅಳನಿ. ೨೬). ೩. ಅಂದ; ಚೆನ್ನು: ನೀನು ಭಾರಿ ಪಸಂದವಾಗಿ ಕಾಣುತ್ತೀಯೆ (ಕುಡಿಕೂ. ೧೮೪).

ಪಸಂದ ಬೀಳು=ಚೆನ್ನಾಗಿ ಕಾಣು; ಒಳ್ಳೆಯದಾಗಿ ತೋರು: ನಿನಗೆ ಪಸಂದ ಬಿದ್ದರ ನೀ ತೊಗೋ (ಗಂಮಾಯಿ. ೨೬೯).

[←ಪಾರ. ಹಿಂ. ಪಸಂದ್]

ಪಸಗಂದು (ಕ್ರಿ). ಹಸನುಗೆಡು; ಹದಗೆಡು: ತಂದೆಯನೆನ್ನಿಂದಂ ಕಿಱುದಂದೆಗಳಟ್ಕರ್ತು ನಿಮ್ಮನೊಸೆದೋವಿದರಾ ಚೆಂದಮನಱಿತವರೊಳ್ ಪಸಗಂದದವೊಲ್ ಮೆಱೆದಪುದಿರದೆ ಪರತಂತ್ರತೆಯಿಂ (ಚಿಕವಿ. ೪-೧೭೯).

[ಪಸ$_2$ + ಕಂಪು$_1$]

ಪಸಗರಿಕೆ (ನಾ). ಒಂದು ಬಗೆಯ ಹುಲ್ಲು: ಪಸಗರಿಕೆ, ಅಕ್ಕಬರ್ಲು ಹುಲ್ಲು, ಮೇಲ್‌ಗರಿಕೆಹುಲ್ಲು (ಮೈಔಗಿ. ೨೬-೫೨೦).

[ಪಸ$_0$ + ಕರಿಕೆ (<ಕಱುಂಕೆ)]

ಪಸಗೆಡಿಸು, ಹಸಗೆಡಿಸು (ಕ್ರಿ). ೧. ಸೋಲಿಸು; ಪರಾಜಯಗೊಳಿಸು: ಪಸಗೆಡಿಸಿ ಕೆಳದಿದಟಮಂ (ಅಪ್ರತಿ. ೧೧೦-೧೪೧). **ಹಸಗೆಡಿಸು:** ೧. ಮೀಱಿ ಬಂದವರುಗಳನು ಹಸಗೆಡಿಸಿಯೆ ಕಾಡುತಿಹವು (ತ್ರಿಪುಸಾಂ. ೪-೪೫); ತಿವಿದವರನು ಹಸಗೆಡಿಸಿದನು ಬೇಗದೊಳು (ಕುರಾಸಾಂ. ೧೩-೧೪); ಅಸಮಾಕ್ಷ ದಕ್ಷಮುಖಶಿಕ್ಷ ಲೋಕಾಧ್ಯಕ್ಷ ಹಸಗೆಡಿಸಿದಂ ಶಬರನೆಮ್ಮನು (ಚೆಬಪು. ೫೩-೫೮). ೨. ಹಾಳು ಮಾಡು; ನಾಶ ಮಾಡು: ಹಾದಿಗೆ ಕೊಟ್ಟ ಬುತ್ತಿಯನು ಹಳಸಿಸಿ ಹಸಗೆಡಿಸಿದನು (ಅಂತರಾ. ೩೦). ೩. ನಿವಾರಿಸು; ಪರಿಹರಿಸು: ಹಸಿವು ತೃಷೆಯು ನಿದ್ರೆ ಮೊದಲಾದ ದುಃಖವ ಹಸೆ[ಸ]ಗೆಡಿಸುವ ಶಕ್ತಿಯುಳ್ಳ ಅಸಮವೈಭವನೆ ನನ್ನೆದೆಯೊಳಗಿರು (ಭರತ. ೧೫-೧೪೩). ೪. ದಿಗ್ಭ್ರಮೆಗೊಳಿಸು: ನೋಡುವಮರರ ಹಸಗೆಡಿ[ಪಾಠಾಂ.ಗಿಡಿ]ಸುತಲಿ ತಾರಗೆಯ ದೆಸೆಗೆಡಿಸುತ ಮಸೆದಂಬು ಪರದುದಂತವರ (ವರ್ಧಚ. ೬-೧೧೬).

[ಪಸಗೆಡು+-ಇಸು$_3$]

ಪಸಗೆಡು, ಹಸಂಗೆಡು, ಹಸಗೆಡು (ಕ್ರಿ). ೧. ಅಂದ ಕೆಡು; ರೂಪ ಕೆಡು: ಪಸಗೆಟ್ಟುರವಣಿಸುವ ಬಱುಬೆಸನಿಗನೊಳ್ಪಸೆಗೆ ಸಂದು ಬೆಸವಟುವುದಱಿಂ ಪಸುಸೂಲದ ಬಿಸುನೆತ್ತರ್ಬಸಿವರೆಯುಸಿರ್ವೆಣದ ಬಾಟ್ತಿಯೇ ಪಸನಲ್ತೇ (ಚಿಕವಿ. ೬-೧೪೬). **ಹಸಂಗೆಡು:** ೨. ಸಮಸ್ಥಿತಿಯನ್ನು ಕಳೆದುಕೊಳ್ಳು; ಹದಗೆಡು: ಕಂದಿದಾನನಂ ಕದಡಿ ಹಸಂಗೆಟ್ಟ ಮನಮಿರೆ ವಿಷಾದಂ ಪುಟ್ಟಿ ಕರಂ ಶಂಕರಂಗವಳ್ಚಿಂತಿಸಿದಳು (ವೃಷವಿ. ೯-೧೦೦). ೩. ಕುಗ್ಗು; ಬಾಡು; ನಿಸ್ತೇಜವಾಗು: ಅಲರ ಬಿಜ್ಜಣಿಗೆಯಿಂ ಬೀಸೆ ಬೀಸರಂಬೋದಂತೆ ಹಸನಂ ಹಸಂಗೆಡೆ . . . ಬಿಸುಸುಯ್ ಬೀದಿವರಿಯೆ (ರಾಜಶೇ. ೭-೯೨ ಪ). **ಹಸಗೆಡು:** ೧. ಬಿಸಿಲೊಳು ತಿರ್ರನೆ ತಿರುಗಿದ ಕಾರಣ . . . ನಿನ್ನ

ಕೋಮಲತನು ಹಸಗೆಟ್ಟು ಬಡಬಡವಾಯ್ತು (ನೇಮಿಸಂ. ೮-೬೨); ಹಸಗೆಡೆ ಭಾನು ಕಂಪಿಸೆ ಗಾಳಿ ಭಯಂಕರಮಾದುದಾಹವಂ (ಹಮ್ಮೀ. ೬-೫೦). ೪. ಸೋಲು; ಪರಾಜಯಗೊಳ್ಳು: ದೇವರ ಶರಪತಿ ಗಾಜದೆ ಹಸಗೆಟ್ಟೀ ಹಂದೆ ಮೃಗಾಕಾರವ ಧರಿಸಿದೆನು (ವೀರೇಶ. ೨-೪೨); ಎನೆವಾಳು ಕುದುರೆ ಗಜಗಳ ಮೋಹರದಲಿ ನುಸುಳಲಾಜದೆ ಪ್ರಮಾಣ ಹಸಗೆಟ್ಟು ಮುಂದಗತಿಯನ್ಯೈದಿದನು (ಕಂನವಿ. ೧೬-೨೯). ೫. ಹಾಳಾಗು; ನಾಶವಾಗು; ಕೆಟ್ಟುಹೋಗು: ಅವಗುಣಂಗಳ ಸಂಗದಿಂ ಕುಲಂ ಹಸಗೆಟ್ಟನಾಮಿಕೆಯರಾದರಲ್ಲದೆ ಸಂಗವಾರ ಕುಲಮುಂ ಕೆಡಿಸದು (ಹಜಕಾ. ೬-೩); ಹಸಗೆಟ್ಟತೆನ್ನೀ ಕಾರ್ಯ (ಪ್ರಭಂಜ. ೨-೧೪೦); ಈಸ ಕೊಲೆ ಸೇರಿಕೊಂಡು . . . ಮನೆಸಾಮಾನುಗಳು ಹಸಗೆಡುವುವು (ಗೃಪವಿ. ೧೬೯).

[ಪಸ$_2$ + ಕೆಡು$_1$]

ಪಸಗೆಯ್ಮೆ (ನಾ). ಹಸನಾದ ಕಾರ್ಯ; -ಕೆಲಸ: ಪಸಗೆಯ್ಮೆಯ ಜಳಕದೆ ಸಂತಸವಡೆದಂ (ಜಳವಿ. ೬-೧೧೫). [ಪಸ$_2$+ಗೆಯ್ಮೆ$_1$(<ಕೈಮೆ$_1$)]

ಪಸಗೆಯ್ಮೆವಾತು (ನಾ). ಹದುಳವಾದ ಮಾತು; ಸವಿಮಾತು: ಕೆಲದೊಳ್ ಕೆಳ್ಕಂಸುತೆ ಪಲಪಲವುಂ ಪಸಗೆಯ್ಮೆವಾತುಗೊಂಬವೊಲ್ತು (ಜಳವಿ. ೬-೧೩೧). [ಪಸಗೆಯ್ಮೆ+ಮಾತು$_1$]

ಪಸಗೊಳಿಸು, ಹಸಗೊಳಿಸು, ಹಸನುಗೊಳಿಸು (ಕ್ರಿ). ಹಸನು ಮಾಡು; ಶುದ್ಧಗೊಳಿಸು; ಸ್ವಚ್ಛ ಮಾಡು: ಸತ್ಕವಿಗಳುಂ ನಿಮ್ಮ ಬಾಲಕನ ತೊದಲ್ನುಡಿ ತಪ್ಪ ತಿದ್ದಿ ಪಸಗೊಳಿಸುವುದೊಲಿದು (ನಪಮೋ. ೧-೧೬); ಬುಧಜನರು ಜರಿಯದೆ . . . ತಿದ್ದಿ ಪಸಗೊಳಿಸಲಹುದು (ನಪಮೋ. ೩೪-೪೫). **ಹಸಗೊಳಿಸು:** ಕಾಳನ್ನು ಹಸಗೊಳಿಸಿ ತೆಗೆದಿಟ್ಟಳು (ಡೂಢ). **ಹಸನುಗೊಳಿಸು:** ಬಾಳನ್ನು ಹಸನುಗೊಳಿಸಲಿಚ್ಛಿಸುವವರು ಮಾತ್ರ ಅಲ್ಲಿಗೆ ಹೋಗಬಹುದು (ಜಗದಾ. ೩೬). [ಪಸ$_2$+ಕೊಳ್$_1$+-ಇಸು$_3$]

ಪಸದ 'ಪಸನದ' ನೋ.

ಪಸದನ, ಹಸದನ (ನಾ). ೧. ಸಿಂಗರಿಸುವಿಕೆ; ಅಲಂಕಾರ ಮಾಡುವಿಕೆ: "ಪಸದನ (ಪಚ್ಚ, ಪಚ್ಚೆ)-ಪ್ರಸಾಧನ = ಅಲಂಕರಣ, ಶೃಂಗರಿಸುವಿಕೆ" (ತದ್ಭವ ಕೋ. ೨೫). ೨. ಅಲಂಕಾರ; ಶೃಂಗಾರ: ಎನ್ನ ಮದುವೆಯಂದು ಪ್ರಥಮದಿವಸದ ಪಸದನಮನೆನಗೆ ತೋಜಿಲ್ವೇಟ್ಟು ಮೆಂದು ಬೇಡಿದೊಡಾಂ ಪ್ರತಿಜ್ಞೆಯಂ ನೆಜಪಲ್ ಬಂದೆಂ (ಪಡ್ಡಾರಾ. ೧೬-೧೫); ಮಾಸಿದಂದಮುಂ ಪಸದನದಂತೆ ಕಜ್ಜೆಸೆದು ತೋಱುದುದು (ಪಂಪಭಾ. ೩-೬೧); ಅಂತಳಾಕೆಯಾ ಪಸದನದೊಳ್ ಜಗತ್ತ್ರಿತಯಚಿತ್ತ ವಿಮೋಹನಶಕ್ತಿಯೇಱ್ಪಿಯಂ (ಜಂದ್ರಪ್ರ ೬-೬೬). ೩. ವೇಷ, ಭೂಷಣ ಮೊದಲಾದ ಅಲಂಕರಣಸಾಧನ; ಒಡವೆ; ತೊಡವು: "ಪಚ್ಚಂ ತೊಡವುಂ ಪಸದನವೆನಲಾಭರಣಂ" (ಕವಿಕಂ. ೧೭೮); ನಿನಗಾಪ್ತಮಾದ ಪಸದನಮನಮೂಲ್ಯಮಪ್ಪ ವಸ್ತುವನೊಂದು ಪುಸ್ತಕದೊಳ್ ಮಡಗಿಟ್ಟಿನೆಂದು ಪೇಟ್ದು ಲೋಕಾಂತರಿತನಾದಂ (ಪಂಚತಂ. ೧೯೨-೨೧); ಪಸದನದೆ ಕೋಮಳೆ ಸೊಗಯಿಸಿದಳ್ (ಪುಷ್ಪಪು. ೫-೧೬).

ಹಸದನ: ೧. ಪ್ರಸಾಧನ, ಹಸದನ (ಕಬ್ಬಾಸು. ೧೬೦ ಪ್ರಯೋ). [<ಸಂ. ಪ್ರಸಾಧನ./ಪ್ರಾ. ಪಸಾಹಣ]

ಪಸದನಂಗೆಯ್, ಪಸದನಂಗೈ, ಪಸದನಗೆಯ್, ಪಸದನಗೈ (ಕ್ರಿ). ೧. ಅಲಂಕರಿಸು; ಶೃಂಗಾರ ಮಾಡು: ದಿವ್ಯಾಭರಣ ಭೂಷಣಂಗಳಿಂ ಪಸದನಂಗೆಯ್ವಲ್ಲಿ (ಜಾಮಿ. ೧೪-೧೧೩ ವ); ತಮ್ಮ ಪರಿಕರ್ಮ ಕೌಶಲಮಂ ಮೆಱೆದು ನೆಜೆಯೆ ಪಸದನಂಗೆಯ್ಯೆ (ಪಧಪು. ೬-೯ ವ); ವಸುಧೆಯಂ ಪಾಡಾಬ್ಜರಾಗಮುಗುರ್ವೆಳ್ಪುಗಳ್ ಪಸದನಂಗೆಯ್ಯೆ (ಚಿಬಸ. ೫-೧೨). **ಪಸದನಂಗೈ:** ೧. ಪಣ್ತಿನಳೆ ತಗುವಂತೆ ಮೇಣ್ ಜೆಲ್ವರಿಯುವಂತೆನ್ನ ಪಸದನಂಗೈ (ಚತ್ಕಾಂಗ. ೧೪-೪೬).

ಪಸದನಗೆಯ್: ೨. ಅಲಂಕರಿಸಿಕೊಳ್ಳು; ಶೃಂಗರಿಸಿಕೊಳ್ಳು: ವರಕುಂಕುಮಾಂಗಿ ಮೌಕ್ತಿಕಭೂಷಪರ್ಪಣಕರೆ ಪಸದನಗೆಯ್ವುತೆಳ್ತಂದು ಕರಮಿಸೆದಳು ಪೂರ್ಣಶಶಿಯ ತಾರಾಕಾಯ ಧರಿಸಿದ ಸಂಜೆವೆಳ್ದಂಬಿಂತೆ (ತ್ರಿಭು. ೧೧೧-೨೧). **ಪಸದನಗೈ:** ೨. ಶೋಭನ ವಾಂತು ಲಕ್ಷಣಂಬೆತ್ತು ಪಸದನಗೈದು ಕಡುಸೊಬಗಿನಿಂ ಮಂಡಿಸುವ ಲಲಿತಾಂಗಮುಂ . . . ಕಂಡುಕಂಡೈದೆ ಮನದನಯುಪದಜಂತೆ ತಾನುಂ ಚಿತ್ರವಾಗಿರ್ದನ್ಕೆ (ಸಾಳ್ವಭಾ. ೨೪-೧೧). [ಪಸದನ+ಕೆಯ್$_1$]

ಪಸದನಂಗೈ 'ಪಸದನಂಗೆಯ್' ನೋ.

ಪಸದನಂಗೊಳ್ (ಕ್ರಿ). ಅಲಂಕಾರವನ್ನು ಮಾಡಿಕೊಳ್ಳು; ಶೃಂಗರಿಸಿಕೊಳ್ಳು: ನೆಜೆಯೆ ತೊಟ್ಟುಟ್ಟು ಪಸದನಂಗೊಂಡಿರ್ಪ ದೇವಗಣಕೆಯರನೆ ಪೋಲ್ವಯ್ನೂರ್ವರರಸಿಯರ್ (ಪಡ್ಡಾರಾ. ೪೧-೬) ; ಜಳಧರ ಜಲಕ್ರೀಡಾಪ್ರಾರಂಭಮಂ ಕಂಡು ನೀರಾಟಕ್ಕೆ ತಕ್ಕ ಪಸದನಂಗೊಂಡು ತಂಡತಂಡದಿಂ ಪುಗುವಾಗಳ್ (ಆದಿಪು. ೧೧-೧೬೬ ಪ); ನಿನಗತ್ಯಾನಂದಂ ಮಾಡುವನೆಂದೀ ನೆವದಿಂದಸೆಯೆ ಪಸದನಂಗೊಂಡಿರ್ದಂ (ಪಂಚತಂ. ೬೬-೪); ಪಸದನಂಗೊಂಡು ನಿಜೇಶನಲ್ಲಿಗೆ ವಂದು (ನೇಮಿಪು. ೧-೧೩೧ ಪ). [ಪಸದನ+ಕೊಳ್$_1$]

ಪಸದನಂಗೊಳಿಸು, ಪಸದನಗೊಳಿಸು (ಕ್ರಿ). ಅಲಂಕಾರ ಮಾಡು; ಶೃಂಗರಿಸು: ಪ್ರಸಾಧನಶಾಲೆಯೊಳ್ ಸ್ವಯಂಪ್ರಭೆಯನಾನೆ ಪಸದನಂಗೊಳಿಸುತ್ತುಮಿರ್ದು (ಆದಿಪು. ೪-೧೧೧ ಪ); ತರಿಸಿ ಬೊಂಬೆಯನೊಂದಂ . . . ನೆಜೆಯೆ ಪಸದನಂಗೊಳಿಸಿ (ಧರ್ಮಾಮೃ. ೩-೧೦); ಪಿನಾತಿಯ ಮನೋರಥಮಂ ಪುಣ್ಯಫಲದಿಂ ಪಸದನಂಗೊಳಿಸುವಂತೆ[ಪಾಣಾಂ.ಗೊಳ್ವಂತೆ] . . . ಶರ್ವಾಣಿಗೆ ಶೃಂಗಾರಂಗೆಯ್ದು (ಗಿರಿ. ೫-೨೬ ಪ); ಅಂಗಜನ ಬಾಣವನೆ ಮನಸೆಂಪೊಪ್ಪವಿಟ್ಟಂತೆ ಕಂಗೆಡ್ದಮಾಡ ಕಾಂತೆಯನೆಯ್ದೆ ಪಸದನಂಗೊಳಿಸಿ (ಸಾಳ್ವಭಾ. ೨೩-೪). **ಪಸದನಗೊಳಿಸು:** ವಸ್ತ್ರಾಭರಣ ಕುಸುಮಮಸುಗಂಧದಿಂ ಪಸದನಗೊಳಿಸಿ (ಸಾಳ್ವಭಾ. ೩೩-೯೦); ಜವದಿ ಪಸದನಗೊಳಿಸು (ಜಗಾಲ. ೯೫). [ಪಸದನಂಗೊಳ್+-ಇಸು$_3$]

ಪಸದನಂಬಡೆ (ಕ್ರಿ). ೧. ಅಲಂಕಾರವನ್ನು ಹೊಂದು; ಶೃಂಗಾರಗೊಳ್ಳು: ಪೊಸ ಗಂಧಸಿಂಧುರಂಗಳಂ ಬಂಧುರಮೆನೆ ಪಿಂಗದೆ ಸಿಂಗರಿಸಿ ಗಜಾರೋಹಕರ್ ಪಸದನಂಬಡೆದೇಱು (ರಾಜಶೇ. ೧೩-೬೫ ಪ). ೨. ಅಲಂಕಾರವಾಗು; ಶೃಂಗಾರವಾಗು: ವಸುಧೆಗೆ ಪಿಸನಂದ ಮನೀವ ಪಸದನಂಬಡೆದ ಪೊಸ ಪಸುರ್ವಂದರೊಸಗೆ ಪಿಂಗೆ ಮಿಸುಗುತ್ತಿರ್ದುದು (ರಾಜಶೇ. ೪-೫ ಪ). [ಪಸದನ+ಪಡೆ$_1$]

ಪಸದನಗೆಯ್ 'ಪಸದನಂಗೆಯ್' ನೋ.

ಪಸದನಗೈ 'ಪಸದನಂಗೆಯ್' ನೋ.

ಪಸದನಗೊಳಿಸು 'ಪಸದನಂಗೊಳಿಸು' ನೋ.

ಪಸನು 'ಪಸ$_2$' ನೋ.

ಪಸಯಿತ 'ಪಸಾಯ್ತ' ನೋ.

ಪಸರ್, ಪಸರು, ಹಸರು$_1$ (ಕ್ರಿ). ಹರಡು; ವ್ಯಾಪಿಸು; ಹಬ್ಬು: ಪಸರ್ದಂ, ಪಸರ್ದಂ; ಪಸರ್ಪನಂ, ಪಸರ್ಪನಂ (ಕಬ್ಬಾಸು. ೫೧೧ ಪ್ರಯೋ). **ಪಸರು:** ಕಣ್ಣಿನಿಂಪ ಉಂಡ ಅಮೃತ ಮುಖದಲ್ಲಿ ಪಸರುವುದು (ಬಾಬಲ. ೮೨); ಒತ್ತಱದಿನಲ್ಲಿ ಪಸರದೆ, ಮುಸಿ ಇಂಗುವಂತೆ, ಶ್ಯಾಮರಾಯನ ಪ್ರಕರಣದ ಪಕೀಕತ್ತನ್ನು ಖಾದರ ಪಿಕ್ಕಿಸಿಕೊಂಡ (ವೀಪಹ. ೧೧, ೧೬೨). **ಹಸರು$_1$:** ಆಗ ಎಳೆದಿಸಲು ಹಿತವಾಗಿ ಸೊಂಪಾಗಿ ಹಸರುತ್ತಿತ್ತು (ಒಡ್ಡಿಉ. ೨). [<ಪಸರ]

ಪಸರ, ಹಸರ (ನಾ). ೧. ಹರಡುವಿಕೆ; ವ್ಯಾಪ್ತಿ; ವಿಸ್ತರಣ:

"ಪಸರ (ಪ್ರಸಾರ)–ಪ್ರಸರ = ವಿಸ್ತರಣೆ" (ತದ್ಭವಕೋಶ. ೨೫) : ಅಸುಗೆಯ ಕೆಂಪು ಬಾಳೆಯ ಪಸುರ್ಪು . . . ಸುತ್ತಲುಂ ಪಸರಿಸಿ ಪರ್ವಿ ಮಾಣಿಕದ ಪಚ್ಚೆಯ ಪೊನ್ನ ಬೆಳ್ಳಿಯಾ ಪಸರದ ಚೆಲ್ವನಿಮ್ಮಡಿಸೆ (ಪುಷ್ಪಸು. ೯–೩೦). ೨. ಗುಂಪು ; ಸಮೂಹ : "ಬಂಬಲ್ . . . ಪಸರಂ . . . ಗೊಂದಣಿ . (ಉಂದಲ್)—ಈ ೪೦ ಸಮೂಹಂ" (ಶಕಸಾ. ೫೬-೨೨೨) ; ಕೆಡೆದ ಝುಲ್ಲರಿಗಳ . . . ಕಡಿಯ ರಚನೆಯ ರಾಶಿಯಮನಂಗಡಿಯ ಪಸರವಿದೆನಲು ಮೆಜ್ಜೆದುದು ಕೂಡೆ ರಣಭೂಮಿ (ಕುಮಾಕ. ೧೫–೩೦) ; ಮೂಢಜನದ ಪಸರದ ಮುಂದೆ ಕಬ್ಬವನೋದಿ ಪೇಳ್ವ ರಸಿಕನೆ (ಪರ್ಧಾಚ. ೧–೨೧). ೩. ವಸ್ತುಗಳನ್ನು ಮಾರಾಟಕ್ಕಿಡುವ ಸ್ಥಳ ; ಅಂಗಡಿ : "ಪಸರ–ಪ್ರಸರ = ಸಮೂಹ, ಅಂಗಡಿ" (ತದ್ಭವಕೋಶ. ೨೫) ; ಪಂಚರತುನದೊಳೆ ನೆಜ್ಜಿದ ಪಸರದಿಂ ತೋರಣಂಗಳೊಳೆ ತೊಡರ್ದ ತಿಸರದಿಂ ನೆಜ್ಜೆಯ ಸೊಗಯಿಸಾಯೇಕಚಕ್ರಮಂ ಮೆಚ್ಚಿದಂ ಹರಿಗಂ (ಪಂಪಭಾ. ೩–೨೨) ; ಸಕಲರತ್ನಂಗಳ ಪಸರದಿನೆಸೆದುವಲ್ಲಿ ವಿಪಣಿಪದಂಗಳ್ (ಕಾಧಂಪು. ೨೯೩) ; ಸೊಗಯಿಸಿದುದು ತೊಳಪ ಕಂಚುಗಾಜರ ಪಸರಂ (ರಾಜಶೇ. ೨–೧೦೨). ೪. ಅಂಗಡಿಯ ಸರಕು : ಎಸೆದ ಬಹುರತ್ನರಾಶಿಯ ಪಸರಂಗಳಿನದಱ ಬೀದಿಗಳ್ ಪಲವುಂ ರಂಜಿಸಿ ತೋರ್ಕುಂ (ಪಂಚತಂ. ೧೪–೧೦) ; ಸೋಂಬನಂಗಡಿಯಂತೆ ಪಸರಮಿಲ್ಲದೆ (ಧರ್ಮಾಮೃ. ೨–೧೫೫) ; ಮೊಸರು ಇಲ್ಲದ ಊಟ ಪಸರವಿಲ್ಲದ ಹರದ (ಸರ್ವಜ್ಞ. ೧೦೧೬). ೫. ತೋರ್ಕೆ ; ಪ್ರಕಾಶ : ಸಚರಾಚರಂಗಳು ಪಸರಕ್ಕೆ ಬಾರದಂದು . . . ಆನು ನೀನು ಇಲ್ಲದಂದು ಅಂದೇನೊ ಇಂದೇನೊ (ಅದನ. ೧–೧). ೬. ಸಂಭಾವನೆ ; ಉಡುಗೊರೆ ; ಕಾಣಿಕೆ : "ಉಪಹಾರಮೆನಲ್ ಪಸರಂ" (ಭಾರಶಿ. ೬೨). ೭. ಸುಲಭವಾದುದು ; ಹಗುರವಾದುದು : ಏಂ ಪಸರಮೇ ಕರ್ಮಾಸುಹೃದ್ಭಂಜನಂ (ಪರ್ಧಾಪು. ೧೦–೪೧). ೮. ಸಲಿಗೆ ; ಸದರ : 'ಪಸರಂಗೊಡು' ಪರಾ. ೯. ಅವಕಾಶ ; ಆಸ್ಪದ : 'ಪಸರಂಬಡೆ' ಪರಾ. ೧೦. ಆಶ್ರಯ ; ನೆಲೆ : ಗಾಂಗೇಯನ ನುಡಿಯೊಳವಸರಮಂ ಪಸರಮಂ ಪಡೆಯದೆ (ಪಂಪಭಾ. ೧–೬೫ ಪ) ; "ಪಸರಮಂ = ಸಲಿಗೆಯನ್ನು" (ಪಂಪದೀ. ೨೮). **ಹಸರ :** ೧. ಹಸರದ ಪಸರದ ಭಕ್ತಿಯ ಪಸರಿಸಿ 'ನಾವು ಗುರುವೆಂಬಿರಿ (ಚನ್ನವ. ೫. ೫೨೮–೧೧೩೨) ; ಕಣ್ಗೆಸೆದನುಬೆತ್ತದಡವಿಯ ಹಸರದೊಳಗೆ ಹೊಕ್ಕು ಹೊಡಕರಿಸುವ ಸಿಂಗಸಿಸುವಿನಂತಾ ವೀರರಾಮ (ಕುರಾಸಾಂ. ೪೩–೬೯) ; ಅನುಮಂದರಸ್ಥಾಯಿಾಪಂಚಮದಿಂದ ತಾರಸ್ಥಾಯಿಾಪಂಚಮದ ತನಕ ಅದರ ಹಸರವಿತ್ತು (ಸಂಗೀತ. ೪೫). ೨. ಆ ಮಾದ್ರೇಶನಂಬಿನ ಹಸರವನು ಹರೆಗಡಿವನರ್ಜುನನಗಣಿತಾಸ್ತ್ರದಲಿ (ಕುಮಾಕ. ೨–೪೯) ; ಗಿಡಗಿಡದ ಬುಡದಲ್ಲಿ ತರಗೆಲೆಯ ಹಸರ (ಕಬುತ್ರಾ. ೪೧–೧೯). ೩. ಆ ಊರ ಹಸರದ ಸುಂಕವಂ ಆಚನ್ದ್ರಾರ್ಕವಾಗಿ ನಡೆವನ್ತಾಗಿ . . . ಬಿಟ್ಟ ಧರ್ಮ (ಮೈಅರಿ. ೧೯೨೮, ೫೬–೨ ; 1380) ; ಹೇಮವೇದಿಯ ವಿವಿಧ ರತ್ನಾವಳಿಯ ಹಸರದಲಿ ಆ ಮಹಾಪುರವೆಸೆದುದು (ಕುಮಾಅ. ೧೮–೧೧) ; ಕಾಲಗತಿ ಬದಲಿಸಿದಂತೆ . . . ಹಸರದ ಇನ್ನಿತರ ಒಡವೆಗಳ ಮೇಲೂ ಅವರಿಗೆ ಮೋಹ ಬೆಳೆಯಿತು (ಕುಡಿಕೂ. ೩೦). ೧೦. ಅದನೇನೆಂದಪೆಂ ಹೇಸಿಕೆಯ ಹ[ಪಾಠಾಂ.ಪ]ಸರಮಂ (ಪಿಂಡೋರ. ಹ. ೫೦೫–೯) ; ವೈಶಿಕದ ಹರವರಿ ಹುಸಿಯುಹ [ಪಾಠಾಂ.ಪ]ಸರ ಕೃತಕದ ಕೇರಿ. . . ಎಂದೆನಿಸ ಸೂಳೆಗೇರಿಯ ಹೊಕ್ಕನಾದಯ್ಯನು (ಸೋಮಚಾ. ೨–೧೮). [<ಪ್ರಾ. ಪಸರ./ಸಂ. ಪ್ರಸರ]

ಪಸರಂಗೆಯ್ (ಕ್ರಿ). ವಿಸ್ತಾರಗೊಳಿಸು ; ಹರಡು : ರಸಭಾವಾಭಿನಯಂಗಳಂ ಭುಜಲತಾಭ್ರೂಚಾಪನೇತ್ರೋತ್ಪಲಪ್ರಸರಂಗಳ್ ಪಸರಂಗೆಯ್ಯುತ್ತಿರೆ (ಅದಿಪು. ೬–೧೨೩) ; ಗಂಧೇಭಧರ್ಮಂಗಳಂ ಪಸರಂಗೆಯ್ದನೊ ಶಂಭು (ಪಂಪಭಾ. ೪–೪೯). [ಪಸರ + ಕೆಯ್$_1$]

ಪಸರಂಗೊಡು (ಕ್ರಿ). ಸಲಿಗೆಯನ್ನು ಕೊಡು ; ಸದರವನ್ನು ನೀಡು : ಇವಂದಿರ್ಗೆ ಪಸರಂಗೊಟ್ಟೆನಪ್ಪೊಡೆ ಮುನ್ನಿನಂತುರ್ಕಿ ಕಿಡುವರ್ (ಪಡ್ಡಾರಾ. ೩–೧೫) ; ಬಾಟ್ಟನ್ನಮಿಂದ್ರಿಯಾಳಿಗೆ ಪಸರಂಗೊಟ್ಟುಂ ಮೆಯ್ಯೆಚ್ಚಿದವೋಲುಟ್ಟುಂಡುಂ ನಿದ್ದೆಗೆಯ್ದು ಸುಖಮುಂ ಪಡೆಯಾ (ಶಾಂತಿಪು. ೮–೧೩೪) ; ಅನಿವಂದಿರನಾದರಿಸಿ ಪಸರಂಗೊಟ್ಟೆನಪ್ಪಡೆನಗೆ ಸುಸರಮಾಗಿ ಬೆಸಕೆಯ್ಯಲಱಿಯರ್ (ಸುಕುಮಾ. ೨–೫೨ ಪ). [ಪಸರ + ಕೊಡು$_1$]

ಪಸರಂಗೊಳ್ (ಕ್ರಿ). = ಪಸರಂಬಡೆ ೧ : ಬಿಸುಸುಯ್ಯುಂ ನಸುಗಂದಿ ಬಾಡಿದಧರಂ ಕಣ್ಣೀರ ಬಾನಲ್ಗಳಿಂ ಬಸಿವಾಸ್ಯಂ ತಳಗಯ್ಯ ಪಜ್ಜೆ ಪಸರಂಗೊಂಡಿರ್ದ ಗಂಡಸ್ಥಳಂ . . . ಪಿಸುಣಾಡಿತ್ತಸಮಾಸ್ತ್ರಸಸ್ತ್ರಹತಿಯಂ ತತ್ಕಾಮಿನೀರೂಪಸಕಂ (ಲೀಲಾವ. ೪–೧೪೩). [ಪಸರ + ಕೊಳ್$_1$]

ಪಸರಂಬಡೆ (ಕ್ರಿ). ೧. ವಿಸ್ತಾರವನ್ನು ಹೊಂದು ; ಹರವಾಗು : ಪಲ್ಲವಪ್ರಸರದೊಳೆಯ್ದೆ ಕಣ್ಗೆ ಪಸರಂಬಡೆದೊಪ್ಪುವ ಕೆಂಪು (ಅದಿಪು. ೧–೬೬) ; ಪಥಿಕಜನದ ಕಣ್ಗಂ ಮನಕ್ಕಂ ಪಸರಂಬಡೆದು ನೆಜ್ಜೆ ಸೊಗಯಿಸುವ ಸರಸಸರಸೀರುಹಾಕರಂಗಳೊಳ್ (ಶಾಂತಿಪು. ೧–೫೭ ಪ) ; ಪುಟ್ಟಿಸಿದಂ ಪುಸಿವಡೆಯಂ ಕಡು ಮೆಜ್ಜೆದಿರೆ ಪಸರಂಬಡೆದಾನೆ ಕುದುರೆ ತೇರಾಳ್ಗಳುಮಂ (ಕಬ್ಬಿಗಾ. ೨೪೯). ೨. ಸಲುಗೆಯನ್ನು ಪಡೆ ; ಸದರವನ್ನು ಹೊಂದು : ಅವಂದಿರ್ಪಸರಂಬಡೆದು ತಂತಮ್ಮ ಕಲಿತರೂಪ ಶೌರ್ಯ ವಿಭವಂಗಳಂ ವಾಚಾಲರಾಗಿ ಬಣ್ಣಿಸುತ್ತಮಿರೆ (ಕಾದಂಬ. ೨೬೨) ; ಸೂರ್ಯಮಿತ್ರನಾತನ ಪಸರಂಬಡೆದು . . . ಪೊಗಟ್ಟು (ಸುಕುಮಾ. ೩–೬ ಪ). ೩. ಅವಕಾಶವನ್ನು ಪಡೆ ; ಅನುಕೂಲತೆಯನ್ನು ಹೊಂದು : ಮೆಯ್ಯನಾಗಳಾಱಸಲೆಂದು ಪಟ್ಟರ್ದ ಗರ್ಭೇಶ್ವರಿಯಲ್ಲಿಗೆ ದೂತನನಟ್ಟೆ ಪಸರಂಬಡೆಯದೆ (ಶಾಂತಿಪು. ೮–೮೩ ಪ).

[ಪಸರ + ಪಡೆ$_1$]

ಪಸರಂಬೆಱು (ಕ್ರಿ). ೧. ವಿಸ್ತಾರವನ್ನು ಹೊರಿದು ; ಹರಡಿಕೊಳ್ಳು ; ವ್ಯಾಪಿಸು : ಪಸರಂಬೆತ್ತೆತ್ತಲುಂ ಬೇರ್ವೆರಿದು ಬೆಳೆದು ಶಾಖಾನುಶಾಖಾಳಿ ನೀಳ್ದೆಣ್ದೆಸೆಗಂ ತಳುತೊಪ್ಪೆ (ಎಕ. V, ಬೇಲೂರು. ೧೬–೨೬ ; 1136) ; ಮಂಗಳೋತ್ತಾನಗಾನಂ ಪಸರಂಬೆತ್ತೆತ್ತಮುಣ್ಮುತ್ತಿರೆ ಪರಿಣಯಮಂ ಮಾಡಿದಂ (ನೇಮಿಪು. ೮–೬೫). ೨. ಅತಿಶಯವಾಗು ; ಹೆಚ್ಚಾಗು : ಸೋಗೆಯಂ ನೂಲ ತೊಂಗಲ್ದೆಸೆಯಂ ಕಣ್ಕೆನ್ನೆಯಂ ಭ್ರೂಲತಿಕೆಗಳುರಮಂ ಸಂಚಳತ್ತಾರಹಾರಂ ಪಸರಂಬೆತ್ತೆತ್ತ ಮೋರಂತಲೆಯೆ ಭರತನಂ ನೋಡಲ್ಕೆತಂದಳೊರ್ವಳ್ (ಅದಿಪು. ೧೧–೧೬) ; ಪಾಂಡುಮಹಿಪಂ ತಜ್ಜಾತಕರ್ಮೋತ್ಸವಂ ಪಸರಂಬೆತ್ತಿರೆ ಮಾಡಿ (ನೇಮಿಪು. ೩–೫೬) ; ಪಸರಂಬೆತ್ತಳಿ ಪಾಜ್ ಪಲ್ಲವಚರೇಂದ್ರಂಗಳ್ಕಱಂ ಪೊಂಗಳಂ ಮೊನೆಯಂಧರನೀಯನೆ (ವೃಷಪಿ. ೮–೩೫). [ಪಸರ + ಪೆಱು$_1$]

ಪಸರಣ, ಹಸರಣೆ (ನಾ). ಹರಡುವಿಕೆ ; ವ್ಯಾಪಿಸುವಿಕೆ : ಜೀವಪ್ರಸರವಿದ್ದುದು ದುಃಖಸೌಖ್ಯದ ತಾರತಮತೆಯಲಿ ಉಸುರ ಪಸರಣವಿಲ್ಲದೆನ್ನುಬ್ಬಸದ ಭೀತಿಯ ಬೇಗೆ ಮಿಗೆ ದಾಹಿಸುವುದೈ (ಕುಮಾಸ. ೧೪–೧೨೮). **ಹಸರಣೆ :** ನಿಪ್ಪಸರದೆಸುಗೆಯ ನಿಶಿತ ಬಾಣಾವಳಿಯ ಬೆಂಬಳಿಯ ಬಿಸಿಲುದೋಜದ ಬೆಳಗುಗಳ ಹೊಂಬಿಸನ ಹಿಳುಕಿನ ನವಿಲ ಗಱಿಗಳ ಹಸರಣೆಯ ಹಮ್ಮುಗೆಯಲಿಮ್ಮಿಗಿಲಾಯ್ತು ರಣರಭಸ (ತೊರರಾ. ೬–೪೪.೨೬). [<ಪ್ರಾ. ಪಸರಣ./ಸಂ.ಪ್ರಸರಣ]

ಪಸರಾಯ (ನಾ). ಅಂಗಡಿಯ ಮೇಲೆ ಹಾಕುವ ಒಂದು ಬಗೆಯ ತೆರಿಗೆ : ರಾಮಗಿರಿಯ ಪಸಿಗೆ ಪಸರಾಯವನು ಯಿಾ ಮರಿಯಾದೆಯಲು ಧರ್ಮಗಾರಿಯವನು ನಡಸವರು (ಎಕ. XI, ಹೊಳೆಳ್ಳ. ೩೫–೧೬ ; 1405 ?). [ಪಸರ + ಆಯ$_1$]

ಪಸರಾಯಿ (ನಾ). = ಪಸರಾಯ : (ಮೈಗೆಚೆ. IV, ೭೮೨).

[<ಪಸರಾಯ]

ಪಸರಿಕೆ, ಹಸರಿಕೆ (ನಾ). ೧. = ಪಸರಣ : ಪರಿಮಳದ ಪಸರಿಕೆಯ ಕುಸುಮೋತ್ಕರದ ನಸುಮಿಡಿಗಾಯಿ . . . ಭೂಜದಿನೆಸೆದುದುದ್ಯಾನ (ತೊರರಾ. ೧-೯-೧೨). ೨. ಸಮಾಚಾರ ; ಸುದ್ದಿ ; ವಾರ್ತೆ : ಲೋಪಿಸದೆ ಸೂಚಿಸಲುವೇಳ್ಕೆನೆ ತಾಪದಿಂ ಮಗುಳಲ್ಲಿಗೈತಂದೀ ಪಸರಿಕೆಯ ನರುಹೆ ಮುನಿ ಮರುಗುತ್ತ ತಿಳಿದೆಂದ (ಕಾವೇಮ. ೩೨-೧೪). **ಹಸರಿಕೆ:** ೧. ಕಲ್ಯಾಣವಿಭವದಿನೆಸೆದುದಾ ಮಣಿಮಯವಿವಾಹದ ವಸತಿ ಮುತ್ತಿನ ಚ ಕದಲಿ ವಿಮಲಾಂಕುರಾರ್ಪಣದ ಹಸರಿಕೆಯಲಿ (ತೊರರಾ. ೧-೧೬-೩೬); ಕೊರಗಿದಾನನದೊಸರ್ವ ನಯನೋದಕದ ಸುಯಿಲಿನ ಹಸರಿಕೆಯಲ್ಲೈತಂದ ರಿರುಳು ದಶಾಸ್ಯನರಮನೆಗೆ (ತೊರರಾ. ೬-೧೨-೧).

[ಪಸರ+-ಇಕೆ]

ಪಸರಿಗ, ಹಸರಿಗ (ನಾ). ೧. ಹರಡುವವನು ; ಪ್ರಸಾರ ಮಾಡುವವನು : ಪೊಕ್ಕಂ ಕಿಸುರಳಿಪಂ ಪಿಸುಣ ಪಸರಿಗಂ ನೃಪಸಭೆಯಂ (ಪಂರಾಪಾ. ೩-೧೯). ೨. ಅಂಗಡಿಕಾರ : ಪಸರಿಗನ ನೋಂಪಿನಿಂದ ಮಾರುತನು ರಾಯನ ನಗರದಲಿ ತಾ ಸಂಚರಿಸುತಿಹನೆಂದು (ಕುವಲ. ೬). **ಹಸರಿಗ :** ೩. ಪ್ರದರ್ಶನಕಾರ : ಬಸವನಾದೊಡೆಯಿಂದ್ರಜಾಲದ ಹಸರಿಗಗೆ ಮರುಳಾದನಾತನ ಗಸಣಿ ನಮಗೇಕೆನುತಲೆದ್ದುದು ಜಂಗಮ ಸ್ತೋಮ (ಪ್ರಭುಲೀ. ೨೩-೯). [ಪಸರ+-ಇಗ]

ಪಸರಿಸು, ಹಸರಿಸು (ಕ್ರಿ). ೧. ವಿಸ್ತಾರವಾಗು ; ವ್ಯಾಪಿಸು ; ಹರಡಿಕೊಳ್ಳು : [ಸುರಪತಿ]ಯ ಕಾಲ್ವಿಡಿವಂದಮನಿಟಿಸಿದವು ಪಸರಿಸಿನ ಕಿರಣಂಗಳ್ (ಪಂಪಭಾ. ೧೨-೧೦೮); ಕಣ್ಗಳ ರುಚಿ ದೆಸೆದೆಸೆಗೆ ಪಸರಿಸಿರೆ (ಪುಷ್ಪಪು. ೨-೧೮); ಮಿಂಚಿನ ಕುಡಿವೆಳಗ ದೆಸೆದೆಸೆಗೆ ಪಸರಿಸುತಡಸಿ ಬಂದುದು ಚಾಪವಾ ರಘುಭೂಪನಿದ್ದೆಡೆಗೆ (ತೊರರಾ. ೩-೬-೫೦). ೨. ಹರಡು ; ಹಬ್ಬಿಸು ; ವ್ಯಾಪಿಸುವಂತೆ ಮಾಡು : ತನ್ನ ಪಾಂಡಿತ್ಯದ ಯಶಮಂ ಪಸರಿಸಿ ತಾಯ್ತಂದೆಗಂ ಸಂತೋಸಂ ಮಾಡಿ (ವಡ್ಡಾರಾ. ೭೪-೨೦). ೩. ಅಧಿಕವಾಗು ; ಹೆಚ್ಚಾಗು : ಸಿರಿ ತುಳ್ಕಿ ಸಂತಸಂ ಪಸರಿಸೆ (ಅರ್ಥನೇ. ೧-೬೦); ಅರಮನೆಯೊಳಗೆ ಪಸರಿಸಿ ತತುಳಶೋಕದ ಜಲಧಿ (ಕುವ್ಯಾದ್ರೋ. ೭-೮); ಆತನ ಕರುಣವೆನ್ನಲಿ ಪಸರಿಸಿದೊಡದು ಲೇಸು (ನಳಚ. ೩-೪೨). ೪. ಅಧಿಕಗೊಳಿಸು ; ಹೆಚ್ಚುಮಾಡು : ಒಸೆದಿಂಬನೆ ಪಸರಿಸಿ ಕುಡಲಿರ್ದೆಂ ಜನೇಶನಿಂತೇಕೆ ಕಟಿದು ಪೋದನೋ ಪೇಟಿಂ (ಕವಿರಾ. ೨-೩೩). ೫. ಬಿಚ್ಚಿ ಹರಡು,—ಹರಹು : ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯಾ (ಬಸವ. ೫೧); ಪರದಂ ಮಾಱುವ ಬಂಡಮಂ ಪಸರಿಸದೊಡಂ ಭವ್ಯಂ ಕರ್ಮಮಂ ಕೆಡಿಸುವ ಮಹಾವ್ರತಮಂ ತನ್ನೊಳ್ಪಸರಿಸದೊಡಂ ಆತಂಗೆ ಪಣಮಾಗದು ಈತಂಗೆ ಗುಣಮಾಗದು (ಜೀವಸಂ. ೮೧-೬); ನಾರ ಸೀರೆಯಂ ಪಸರಿಪ ಕಂದಮೂಲಫಲಮಂ ತರೆ ಪೋಪ . . . ಮುನಿಮುಖ್ಯಕುಮಾರಸಮೂಹಮೊಪ್ಪುಗುಂ (ಗಿರಿಕ. ೧-೬೪). ೬. ಅಗಲವಾಗಿಸು ; ಹಿಗ್ಗಲಿಸು : ಸುಟ್ಟು ಕಾಯಿಗಳ ನಡುವೆ ಸೀಳಿ ಪಸರಿಸಿಯುಪ್ಪನಿಟ್ಟು (ಸೂಪಶಾ. ೪-೨೪). ೭. ಕೈಗೊಳ್ಳು ; ಆಚರಿಸು ; ಪಾಲಿಸು : ಜೀವಗಳ್ಳರ ದೇವ ಪಸರಿಸಿದನು ಪಲಾಯನವ (ಕುವ್ಯಾಕ. ೪-೮). ೮. ಉಂಟಾಗು : ಮನಕ್ಕೆ ವಿಸ್ಮಯಂ ಪಸರಿಸೆ (ಸುಕುಮಾ. ೧೦-೫). **ಹಸರಿಸು :** ೧. ಸೃಷ್ಟಿಯೆಲ್ಲವ ತುಂಬಿ ಹಸರಿಸುವ ನಿಸ್ಸೀಮ ಸದ್ಭಾವ (ಸುಲಿದೇ. ೫೨-೫); ಉಸಿರು ಹಸರಿಸಲಿ ಕಮ್ಮಲರ ನೀಳೆಸಳಿನಲಿ ! (ನಲ್ಮೆ. ೫೯-೪). ೨. ಬಲೆಯ ಹಸರಿಸುವ ಸೊಪ್ಪುಳವನಾಲಿಸುವ . . . ಪುಳಿಂದರು ಕಂಡರಂದೊಂದು ಸೊಕ್ಕಿದೆಕ್ಕಲನ (ಹಚಕಾ. ೬-೨); ಮಣ್ಣಿನಾನೆಯ ನಿಲಿಸಿ ಹಗ್ಗವ ಹಣ್ಣೆ ಹಸರಿಸಿ ಮುಚ್ಚಿದರೆ ಕರಿ ಹೆಣ್ಣನಪ್ಪುವೆನೆಂದು ಬಂದಾ ಕುಳಿಯ ಬೀಳ್ವಂತೆ (ನಿಭಾಗ. ೧೧-೧೪-೨೧); ನಗೆಮೊಗದ ಬೆಳಗಿನ ಬೆಳಪ ಜೊನ್ನವ ಹಸರಿಸುತ . . . ಅಮರಿಯರು ಸೊಗಯಿಪರು (ಸಾಳ್ವಭಾ. ೩೨-೧೬). ೩. ತಲೆದಡವಿ . . . ನುಡಿಯೆ ಹಬ್ಬಿ ಹಸರಿಸಿ ದಳವೇಱುವೆ (ಶಂಕಕಂ. ೭೧). ೯. ಉತ್ಕರ್ಷವನ್ನು ಹೊಂದು ; ಉತ್ತೇಜಿತವಾಗು : ಪಸವೋಡುವಿನಂ ಹರಣಂ ಹಸರಿಸುವಿನವಿಂಟದಂತೆ ಬೆಳ್ದಿಂಗಳುಮಂ ಬಿಸಿಲುಮನೇನೆಸೆದಿರ್ದುವೊ ಪೊಸನೆಯ್ದಿಲ ಪೂವುಮಲರ್ದ ತಾವರೆ ಪೂವುಂ (ಲೀಲಾವ. ೫-೨೭). ೧೦. ಕಾಣಿಸಿಕೊಳ್ಳು ; ಮೈದೋರು : ಸುರನಂದನದ ಹೊಂಗೇದಗೆಯ ತುಱುಬಿನಲಿಱುಕಿ ಹೂದಂಡೆಗಳ ಹಾರಾವಳಿ ಸಹಿತ ಹಸರಿಸಿದನಸುರೇಂದ್ರ (ತೊರರಾ. ೬-೨೦-೧೫).

[ಪಸರು(<ಪಸರ್)+-ಇಸು$_3$]

ಪಸರು 'ಪಸರ್' ನೋ.

ಪಸರೆ (ನಾ). (ಆಲಂ) ಸಾಮಾನ್ಯ ; ನಾಡಾಡಿ : ಕಂಪಿಲಗೆ ಪಸರೆಯ ದೊರೆಗಳು ಪಾಸಟಯೆ (ಕುರಾಸಾಂ. ೫-೫೦); ಆಡಿಯಳುಪುವ ಪಸರೆಯ ರಾಯರ ಗಂಡ ಕೂಡಿ ಕುಹಕವನೆಣಿಸುವ ನಾಡೆಱೆಯರ ಗಂಡ (ಕುರಾಸಾಂ. ೧೨-೨೨). [<ಪಸರ]

ಪಸಲು (ನಾ). ೧. ಭಾಗಿಸುವುದು ; ಭಾಗಾಕಾರ : ಮತ್ತರು ಪಸಲಾಗಿರೆ ವಂಭತುಂ ಶತಕಂಭವೆನಿಪುದಳತೆಯೊಳೆಲ್ಲಂ ಬಿತ್ತರದಿನೋದಿಸಿಕೊಳು (ಭಾಸ್ಕರ. ೨೮-೧). ೨. ಭಾಗವಾಗುವುದು ; ಭಾಗಗೊಳ್ಳುವುದು : ಪಸು, ಪಸಲು, ಭಾಗಂಗೊಳು . . . ಇಂತಿನಿತುಂ ಭಾಗಂಗೊಂಬುದಕ್ಕೆ ಪೆಸರು (ವ್ಯವಹಾ. ೧೨-೧೩). ೩. ಭಾಗ ; ಪಾಲು : ಬಾಚಿಶೆಟ್ಟಯೋಣಿಯಿಂ ತೆಂಕಲು ಅಳ್ವನ ಪಸಲಲು ಸರ್ವ್ವ ಬಾಧಾಪರಿಹಾರವಾಗಿ ಬಿಟ್ಟ ತೋಂಟ (ಹೈಅಸಿ. V, ೮-೩೬ ; 1088).

[ಪಸು$_1$+-ಅಲು(<-ಅಲ್$_2$)./ತಮಿ. ಪಯಲ್]

ಪಸಲುವೋಗು (ಕ್ರಿ). ಭಾಗವಾಗು : ನಾನಾಪರಮಾಣುಗಳನಪೇಕ್ಷಿಸಿ ವ್ಯಾಪಕಮಪ್ಪುದು ಪಸಲುವೋಗದು (ಪಸಾರ. ೮೦).

[ಪಸಲು+ಪೋಗು$_1$(<ಪೋ$_1$)]

ಪಸಲೆ, ಹಸಲೆ (ನಾ). ೧. ಎಳೆಯ ಹುಲ್ಲು ; ಹಸುರು ಹುಲ್ಲು : ಪಚ್ಚೆಯ ಪಸಲೆಯ ಪಸುರನಸಕಟಿದು ನಿಮಿರ್ದ ನೆಲೆವಡಲಗೆಯ ಜಾಗಂಗಳುಂ (ಅದಿಪು. ೮-೧೫ ವ); ಅಱಿವ ಹೇಳುವರೆಲ್ಲರು ಮಱವೆಯಲ್ಲಿ ಬಿದ್ದು ಮೂಱೆಲೆ ಹಿಡಿದರಲ್ಲಾ ಅದು ಬಾಯಿಗೆ ಪಸಲೆ ಕೈಗೆ ಕಳಂಕು (ಮೋಳಿಮಾ. ೧೬೯-೬೩೦); ಪಸುರ್ಗಪ್ಪಿಂ ಸುತ್ತಲುಂ ಕಟ್ಟಲಿಪ ಪಸಲೆ (ಪುಷ್ಪಪು. ೩-೭೬); ಪೊಸಸುಸಿಲೊಳ್ ಸಸಿದೆಟ್ಟ ನಿಮಿರ್ನವಿರೆನೆ ಪಸಲೆಯೆಸೆದುದು (ರಾಮಾಶ್ವ. ೩-೧೭). ೨. ಹುಲ್ಲು ಬೆಳೆದ ನೆಲ ; ಹುಲ್ಲುಗಾವಲು : ಮುಂದಾ ಬಸವಂ ಪಸಲೆಯಂ ಪುಗುವಂತೆ ಜಗುನೆಯಂ ಪೊಕ್ಕು ಪಾಯ್ದು ಪೋಗೆ (ಅರ್ಥನೇ. ೭-೪೩ ವ); ಪಸಲೆಗೆ ಬಂದ ಪುಲ್ಲೆಯನೆರಳೆ ಸೆಯೊಳ್ ಕಿಱುವೇಡರಿರ್ವರಾರ್ದಿಸೆ (ರಾಜಶೇ. ೫-೧೦೩); ಪಸಲೆಯೆಡೆಗೈತಂದ ಪಸುಪುಲ್ಲೆಯಕ್ಷಿಗಳ ಪೊಸಬೇಟಮಂ ಕಂಡು (ವಂಕಾರಾ. ೩-೬-೫೫); ಪುಲಿಯೊಡಲ ಪೊತ್ತವರ್ ಪಸಲೆಯೊಳ್ ಕುಕ್ಕಿದರ್ (ಕಾಲೂರ. ೧೦೨-೨೦೬). **ಹಸಲೆ :** ೧. ಕಲುವಾಳೆಯೆಲೆಗೊಯ್ದು ಬೆಳೆದ ಹಸಲೆಯ ಮೇಲೆ ಚಲುವಾಗಿರಿಸಿ ಮುಚ್ಚಿದನೊಂದಱಿಂ (ಕಣ್ಣರ. ದೇ. ೧೩೫-೧೭); ಹಸುರು ಹಸಲೆಯ ಮೇದು ಮೋದಗೊಂಡ ಚಗರೆ (ಭಾರಂಗ. ೭೧-೨೨). ೨. ನೆಳಲ ಹಸಲೆಯ ಮೇಲೆ ನಲಿನಲಿದು ತಪ್ಪುಗಾಲಿಕ್ಕಿ ತ್ರಿಭಂಗಿಯಿಂದಂ ನಿಂದು (ಅನಾರ. ದೇ. ೧೮೧-೧೨); ಹಸಲೆಗಳೊಳೊಸೆದು ಮೆಯ್ವೆಳಕಱುಗಳ್

(ಕುಸುಮಾ. ೧೪-೨೯ ಪ); ಚನ್ನೆಸೆವ ಮಾಮರದ ತಣ್ಣೆಳಲ ಹೊಸ ಹಸಲೆಯೊಳು ವೇಣುವಿರಚಿತವಹ ಉನ್ನತವೆನಿಪ ಮೃದುತರಾಸನವನಿತ್ತು (ಸಿದ್ಧೇಪು. ೨೧-೭೬); ಹೊಸದಾಗಿ ಮೊಳೆತಿದ್ದ ಹಸುರು ಹಸಲೆಯ ಮೇಲೆ ಮಕ್ಕಳೂ ನಾಯಿಗಳೂ ನೆಗೆಯುತ್ತ ಆಟವಾಡುತ್ತಿದ್ದವು (ಪುನರು. ೧೮೨).

ಪಸಲೆಗವಿ (ಕ್ರಿ). ೧. ಹಸುರು ಮುಸುಕು ; ಹಸುರಾಗು : ಬಿಸಿಲೆಲ್ಲ ಪಸಲೆಗವಿದುದು ಪಸುರ್ವಳಗಿಂದೆನಿಪ ಬಾಲಕದಳೀವನದೊಳ್ . . . ಹಿಮಗೃಹಮನವನಿಪಾಲಂ ಕಂಡಂ (ಕಾದಂಉ. ೨೦೯); ಮರಕತ ರತ್ನಾಂಗದ ರಶ್ಮಿರಾಜಿಯಿಂ ಪಸಲೆಗವಿದ ಭುಜಶಿಖರದೊಳಾ ಧರಣೀಶಂ ತಾಂಗುವುದಚ್ಚರಿಯೆ ಲತಾಂಗಿಯರ ಚಕಿತಹರಿಣೇಕ್ಷಣಮಂ (ಮಲ್ಲಿಪು. ೯-೨೫). ೨. ಹುಲ್ಲು ತುಂಬಿಕೊಳ್ಳು : ಕೆಸಱಂ ಕುಟಿಯಿಂ ನಾನಲಿನಸಿದಾಗಿರೆ ಕೊಂಕಿ ಪೋದ ಬಟ್ಟೆಗಳೆಲ್ಲಂ ಪಸಲೆಗವಿದಂದು ಸೈತಿರೆ (ಲೀಲಾವ. ೫-೪೧). [ಪಸಲೆ + ಕವಿ$_1$]

ಪಸವ$_1$ (ನಾ). ಕಾಮಾತುರನಾದವನು ; ಕಾಮುಕ: ಸರಲಲನೆಗಳಿಪಿಡೆ ಚಪ್ಪರಿಸುತ್ತಂ ಬಂದ ಪಸ[ವ][ಪಾಠಾಂ.ಪ]ನಂ ಪಾಂಬನನಚ್ಚರಿಯಾಗೆ ಕಾದುತಂ (ವರ್ಧಮಾ. ೪-೨೦); ಅಶೇಷಭಾಸುರಕಳಾಸಮಗ್ರೆಯನವಳಂ ಪಸದಂ[ವಂ] ನಿಶಾಟನೊರ್ವಂ ಶಶಿಕಳೆಯಂ ರಾಹು ಪಿಡಿವ ತೆಱದಿಂ ಪಿಡಿದಂ (ವರ್ಧಮಾ. ೧೩-೨೪). [ಪಸ$_1$ + -ಅ$_7$]

ಪಸವ$_2$ 'ಪಸ$_1$' ನೋ.

ಪಸವಡು (ಕ್ರಿ). ೧. ಅತ್ಯಪೇಕ್ಷೆಯನ್ನು ಹೊಂದು,—ಪಡೆ ಪೂತ ಸುರಯಿಯ ಮುಗುಳಂ ಪಸವಟ್ಟಂತೊರ್ವಳ್ ತನಗೆ ಸರಿಗೆಗಂ ಲಂಬಣಕ್ಕಮಟ್ಟುಯೆ ಕೊಯ್ದಳ್ (ಅದಿಪು. ೧೧-೯೯); ಸೂಟ್ಸೂಟೊಳ್ ಪಸವಟ್ಟಂದದೊಳೆ ಮುಸುಱಿ ಮುತ್ತಿದುವಳಿಗಳ್ (ಪಂಠಾಮಾ. ೬-೧೪೧). ೨. ಹಸಿವಿನಿಂದ ಕೂಡು ; ಹಸಿದಿರು : ಪುಲಿ ಪಿರಿದುಂ ಪಸವಟ್ಟುಂ ಮೆಲಲೇಂ ಬಗೆವುದೆ . . . ಪುಲ್ಲಂ (ನೀತಿಮಂ. I, ೧೧೭). [ಪಸ$_1$ + ಪಡು$_1$]

ಪಸವಳಿ (ಕ್ರಿ). ಇಚ್ಛೆಯು ನಾಶವಾಗು ; ಬಯಕೆಯು ಅಳಿ : ಪಸವಳಿದ ಬಗೆ ಬಿಳ್ದುದತ್ತ ಕೀಳ್ನೆಲಕೆ (ಕಾಲೂರ. ೩೬-೩೮). [ಪಸ$_1$ + ಅಳಿ$_1$(< ಅಟು$_1$)]

ಪಸವಾತು (ನಾ). ಸವಿಮಾತು ; ಸರಸವಚನ : ಪಸಿದೆಯೇಟೆಲೆ ಕಂದ ಪಗಲಿಟಿತಂದುದೆಂದುಸಿರ್ವ ಮಾತೆಯೊಳುರವಣಿಸಿ ಬಿಸುಬಿಸುನುಡಿಗಳಿಂ ಪೆಱದೆಗೆಯಿಸಿ ಮುನ್ನ ಪಸವಾತನೊಸೆದಾಲಿಪುದು (ಚಿಕವಿ. ೬-೧೫೭ ಸಾಂಗತ್ಯ). [ಪಸ$_2$ + ಮಾತು$_1$]

ಪಸವು 'ಪಸ$_1$' ನೋ.

ಪಸಟ್ (ನಾ). (?) : ಎಸಟ್, ತಮಟ್, ಪಸಟ್, ತುಟಿಲ್ (ಶಬ್ದಾನು. ೧೪೦ ಪ್ಯಾಖ್ಯಾ). [?]

ಪಸಾದ, ಪರಸಾದ, ಪಸದ, ಹಸದ, ಹಸಾದ, ಹಾಸಾದ (ನಾ). ೧. ಅನುಗ್ರಹ ; ದಯೆ : "ಪಸಾದ-ಪ್ರಸಾದ = ಅನುಗ್ರಹ, ಉಡುಗೊರೆ" (ತದ್ಭಕೋ. ೨೫); ಧರಾತಳಮಂ ನಿನಗಿತ್ತು ನಿನ್ನ ಕೊಟ್ಟುದನೆ ಪಸಾದಮೆಂದು ಪೊಡೆವಟ್ಟು (ಪಂಪಭಾ. ೧೩-೬); ಜನಪತಿ ಸಾಜದಿಂದಮೆ ಪಸಾದಮನಾದಮೆ ಮಾಡುತಿರ್ದನಾ ವನಿತೆಯ ಮೇಲೆ (ಕಾದಂಉ. ೨೬೯); ವಿದೂಷಕನರಸನ ಮಂದಸ್ಮಿತಲೋಚನಾಂಶು ಮನದನುಮತಿಯಂ ಮುಂದಿಡೆ ಭೋಂಕನೆ ಕೈಗುಡುವಂದದೊಳೆ ಪಸಾದಮೆನುತೆ ಪೊಡೆವಡುತೆಟ್ಟಂ (ಅನಂಪು. ೬-೮೯). 'ಪಸಾಯ' ಪರಾ. **ಪರಸಾದ :** ೨. ದೇವರಿಗೆ ಅರ್ಪಿಸಿದ ಹೂವು, ನೈವೇದ್ಯ ಮುಂತಾದುವು : ಗುರುವರೇಣ್ಯನ ಪರಸಾದ ಕೊಳ್ಳಲು ಹಿರಿಕಿರಿಯರು ಬರಬೇಕು (ಸಿದ್ಧಪು. ೨-೮೬); ದೇವರ ಮುಂದಿನ ಪರಸಾದ ನಾ ಆದ . . . ನಮ ಜೀವ ಹೋದಾವ ಕೈಲಾಸಕ (ಮಲ್ಲಿಗೆ. ೨೬); ತಗದು ಇಡಿರಿ ಸುಭಗಕ್ಕಾ ಪರಸಾದಾನ (ಗಂಗಾಸಾ. ೯೬). **ಪಸದ:** ೧. ಬೆಸನಂ ಶ್ರೀವಿಕ್ರಮಾಂಕಂ ಬೆಸಸೆ ಪಸದಮೆನ್ದಾನ್ತುಕೊಣ್ಡಂ (ಸೌಇಇ. IX-i, ೧೭೨-೨೬; 1106). **ಹಸದ :** ೧. ಅಸುರರಾವುದನೆಂದಡದಕೇ ಹಸದವೆಂಬುದು (ನಿಭಾಗ. ೮-೬-೧೬). **ಹಸಾದ:** ೧. "ಉಸಿರಲ್ಕಂತಾ ಪ್ರಸಾದಮಕ್ಕು ಹಸಾದಂ" (ಕವಿಕಂ. ೨೬೨); ಎನಗೆ ದೇವಿ ಹಸಾದಮನೇಕೆ ಮಾಡಿದಳ್ (ಕಾದಂಉ. ೨೬೧). ೨. ದೊರೆತುದ ಹಸಾದವೆಂದುಣ್ಣು ಗೊಣಗಿಡದೆ (ಮಂಕುಕ. ೬೦೧). ೩. ಹಿರಿಯರ ನುಡಿಗೆ ಒಪ್ಪಿಗೆಯನ್ನು ಸೂಚಿಸುವ ಮಾತು : ಅಮಾತ್ಯನಿಕರಮುಖ್ಯಂ ಹಸಾದಮೆಂದಿಂತೆಂದಂ (ಪಂಚತಂ. ೨೫೪-೧೬); ಹಸಾದಮೆಂದು ಮುನಿಪತಿಗೆ ಪೊಡೆಮಟ್ಟಿಟ್ಟು ನೃಪಚಕ್ರಿ ನಿಜಶಿಬಿರನಿವೇಶಿತನಾಗಿ (ಕುಸುಮಾ. ೧೫-೧೬೦ ಪ); ಹೋದ ಬಾಣವ ಮರಳಿ ತೊಡದಿರು ಮಾದು ಕಳೆ ವೈರವನೆನಲ್ಕೆ ಹಸಾದವೆಂದನು (ಕುವ್ಯಾಉ. ೧೦-೩೫); ಜೀಯ ಹಸಾದವೆನುತ . . . ನಾಲ್ದೆಸೆಯಲಿ ಬಲುಪೌಜ ದಾಯವಱಿತು ಮಾಡಿದರು (ಕಂನವಿ. ೧೩-೨೦). **ಹಾಸಾದ :** ೩. ಜೀಯ ಹಾಸಾದೆಂದು ನುಡಿವುತ (ಜಿನಭಾ. ೬-೭೧); ಜೀಯ ಹಾಸಾದವೆಂದ (ಜಿನಮು. ೫-೧೬).

[< ಸಂ. ಪ್ರಸಾದ./ಪ್ರಾ. ಪಸಾದ]

ಪಸಾಯ (ನಾ). ೧. ಉಡುಗೊರೆ ; ಬಹುಮಾನ ; ಮೆಚ್ಚು : "ಪಸಾಯಮುಮೆನಲುಡುಗೊಱೆ" (ಕವಿಕಂ. ೧೫೧); ನೋಡಿಯುಂ ನುಡಿದುಮಟ್ಟುತ್ತುಂ ಪಸಾಯಂಗಳಂ ಕೆಲಕೆಲ್ಲಂ ಭರತೇಶನಾರೋಗಿಸಿದಂ ಕಲ್ಯಾಣಕಾಹಾರಮಂ (ಅದಿಪು. ೧೧-೨೬); ಅಬ್ಜನೇತ್ರೆ ಪಜ್ಜಳಿಪ ಕಟಾಕ್ಷರೋಚಿಯ ಪಸಾಯಮನಿತ್ತಲಗೊಯ್ದಳಟ್ಟುಯಿಂ (ಕುಸುಮಾ. ೫-೧೧೪); ಕಮಲಾಯತಾಂಬಕಿ ಚಿತ್ರಸೇನನ ಕರೆಸಿದಳು . . . ವಸ್ತ್ರಾಭರಣದ ಪಸಾಯವಿತ್ತಳು (ಕುವ್ಯಾಅ. ೭-೯೯). ೨. ಅನುಗ್ರಹ ; ದಯೆ ; ವರ : ನೀನುಮಾ ದೇವಿಯ ಪಸಾಯದಣುಗಿನ ಕೂಸಪ್ಪುದಱಿಂ ನಿನ್ನವಸ್ಥೆಯಂ ಕಂಡು (ಲೀಲಾವ. ೧೦-೨ ಪ). 'ಪಸಾದ' ಪರಾ. [< ಪ್ರಾ. ಪಸಾಯ./ಸಂ. ಪ್ರಸಾದ]

ಪಸಾಯಂಗೊಡು (ಕ್ರಿ). ಉಡುಗೊರೆಯನ್ನು ನೀಡು; ಮೆಚ್ಚುಗೆ ಕೊಡು : ಆ ಪಣಕಾಂತೆ ದೂತಿಗೆ ಪಸಾಯಂಗೊಟ್ಟು (ವೃಷವಿ. ೮-೨೫). [ಪಸಾಯ + ಕೊಡು$_1$]

ಪಸಾಯಂಬಡೆ (ಕ್ರಿ). ಉಡುಗೊರೆಯನ್ನು ಪಡೆ ; ಪುರಸ್ಕಾರವನ್ನು ಹೊಂದು : ಪಸಾಯಂಬಡೆವರಸರ ಮಕ್ಕಳೆನಿಬರ ನಿಬರುಮೆಟ್ಟರ್ (ಶಾಂತಿಪು. ೮-೧೧). [ಪಸಾಯ + ಪಡೆ$_1$]

ಪಸಾಯತ 'ಪಸಾಯ್ತ' ನೋ.

ಪಸಾಯದಾನ (ನಾ). ಮೆಚ್ಚಿ ಕೊಟ್ಟುದು: ಪಟ್ಟದಾನೆಯ ಬದಗಂ ಬಿನದಕೆ ಪಾಡುತ್ತಿರೆ . . . ತಿಳಿದಾಲಿಸಿ ಮೃಗಲೋಚನೆ ಮುಟ್ಟದ ಮನಮನೆ ತೊಟ್ಟನೆ ಪಸಾಯದಾನಂಗೊಟ್ಟಳ್ (ಯಶೋಚ. ೨-೨೮). [ಪಸಾಯ + ದಾನ]

ಪಸಾಯನ (ನಾ). (ಒಡವೆ, ವಸ್ತು ಮುಂತಾದ) ಉಡುಗೊರೆ : "ಪಸಾಯನಮೆಂದು ಉಡುಗೊಱೆ" (ಕಶಸಾ. ೬೦-೩೨೮); ಮಗನ ಕದಪಂ ಕರ್ಚಿ ಪಸಾಯನಮಂ ಕೊಟ್ಟು (ಧರ್ಮಾಮೃ. ೨-೯೧); ಮನ್ನಣೆಯ ರಸಿಕರ್ಗೆ ಪಸಾಯನಮನಿತ್ತು (ಗಿರಿಕ. ೪-೧೦೨ ಪ); ನಿಮ್ಮಡಿದಾವರೆಗಳ ಕಂಡುದನಂತಪಸಾಯನಮೆನಗೆ (ಅಂಜಚ. ೧೪-೧೩೨); ಅಂಗದಂ . . . ರಾಯಂಗೆ ಕಾಣಿಸಿಕೊಂಡು ಪಸಾಯನಮನೊಪ್ಪಿಸಿ (ರಾಮಾಶ್ವ. ೧೪೨-೬). [< ಸಂ. ಪ್ರಸಾದನ]

ಪಸಾಯನಂಗೊಡು (ಕ್ರಿ). = ಪಸಾಯಂಗೊಡು : ಕಮಳಿನಿ . . .

ಸೀಮಂತಸಮಯವೆಂಬುದುಮರಸನವಳ್ಗೆ ಪಸಾಯನಂಗೊಟ್ಟು ಪರಮಾನಂದಮಂ ತಳೆದು (ದಶಕು. ೧-೬೯ ಪ). [ಪಸಾಯನ+ಕೊಡು$_1$]

ಪಸಾಯನದಾನ (ನಾ). = ಪಸಾಯದಾನ: ಕಾಪಾಡಿದ ನೋಡು ಆ ದೇವರು . . . ಬ್ರಿಟಿಷರಿಗೆ ನಮ್ಮನ್ನು ಪಸಾಯನದಾನ ಮಾಡಿ ಬಿಟ್ಟ (ಆಗಸ್ಟ್. ೨೪). [ಪಸಾಯನ+ದಾನ]

ಪಸಾಯಿತ 'ಪಸಾಯ್ತ' ನೋ.

ಪಸಾಯಿತಿಕೆ (ನಾ). ಪಸಾಯಿತನ ಕೆಲಸ: ಪೆಱಪೆಱರ ಪಸಾಯಿತಿಕೆಗಳಱಿಕೆಗೆ ××× ದೇವ ಸಮನ್ತಲ್ಲಿದು ಹೇರಱಿಕೆ ಪಸಾಯಿತನುಡೆವಣಿವಱಿದಿಂಬಳಿಕಂದುವಿಂದುವೆಂದುಂ ಲಕ್ಷ್ಮಂ (ಎಇ. XIII, ೩೨೧-೨೦; 1126). [ಪಸಾಯಿತ(<ಪಸಾಯ್ತ)+-ಇಕೆ]

ಪಸಾಯಿತೆ 'ಪಸಾಯ್ತೆ' ನೋ.

ಪಸಾಯ್ತ, ಪಸಯಿತ, ಪಸಾಯತ, ಪಸಾಯಿತ (ನಾ). ೧. ರಾಜನ ಅನುಗ್ರಹಕ್ಕೆ ಪಾತ್ರನಾಗಿ ಅವನ ಬಳಿಯಿರುವ ಒಬ್ಬ ಅಧಿಕಾರಿ: ಶತ್ರುಗಳಲ್ಲಿಗೆ ಮುನ್ನಮೆ ಪ್ರಧಾನರುಮಂ ಪಸಾಯ್ತರುಮನಟ್ಟಲಾಗದು (ಪಂಚತಂ. ೪೨-೯); ರಾಯಮುರಾರಿಯ ಮನದಂನನೆನಿಪ್ಪ ಸಚಿವನಂ ನೆಗಳ್ದ ಪಸಾಯ್ತನ[ನೊ]ಸೆದು (ಕಇಅ. ೭೫-೧೨-೩೩; 1170); ನಾನಾದಿಗಂತದ ಧರಣಿಪರು ಸಚಿವರು ಪಸಾಯ್ತರು ನೆರೆದುದು (ಕುವ್ಯಾಸ. ೧೩-೩೧); ತನ್ನ ಗಿಳಿಗಳ ಮಱಿಗೋಗಿಲೆಗಳ ಪಸಾಯ್ತರಿಂ ಕೂಡಿ ಭೋಂಕನೆಟ್ಟು ಇದಿರ್ಮಂದು (ರಾಮಾಶ್ವ. ೫೭-೧೪). **ಪಸಯಿತ**: ೧. ಭುವನೈಕಮಲ್ಲದೇವನ ಭವನದೊಳಂ ತಾನೆ ಮಾನಸಂ ತಾನೆ ಮಹಾವ್ಯವಸಾಯಿ ತಾನೆ ವಿಜಯ ಪ್ರವರ್ಧಕಂ ತಾನೆ ಪಸಯಿತಂ ಲಕ್ಷ್ಮನೃಪಂ (ಎಕ. VII, ತಿಕಾರಿ. ೧೩೬; 1068); ತ್ರೈಳೋಕ್ಯಮಲ್ಲವಲ್ಲಭನಾಳಿನಿಸಿದರೊಳಗೆ ಮಿಕ್ಕ ಪಸಯಿತನುಂ ಮಿಕ್ಕಾಳುಂ ಮಿಕ್ಕಣ್ಣಿನ ಬಲ್ಲಾಳುಂ ಲಕ್ಷ್ಮಣನೆ ಪೆಱರನಱಿವರುಮೊಳರೇ (ಸುಕುಮಾ. ಪರಿ. ೧-೧೨). **ಪಸಾಯತ**: ೧. ಪಸಾಯತರ್ವೆರಸು ಪರಿತಂದು (ಪಂಚತಂ. ೨೭೦-೬); ಗೋಟಿಟ್ಟು ಪುಯ್ಯಲ್ಬುವ ಪಸಾಯತರಪ್ಪ ಲೆಂಕವರ್ಗಮುಮಂ . . . ಕಂಡು (ವರ್ಧಮಾ. ೫-೯ ಪ), ಅಖಿಳದಳನಾಯಕರ ಕರೆಕರೆದು ಕದನ ಪಸಾಯತರಿಗಿತ್ತನು ನೃಪತಿ ಕರ್ಪುರದ ವೀಳೆಯವ (ಕುವ್ಯಾಕ. ೧೮-೯). **ಪಸಾಯಿತ**: ೧. ವಿರಹವಿಧುರಹೃದಯನಾಗಿಯುಮವಂ . . . ಪಸಾಯಿತರೊಳಂ ನುಡಿಯದೆ . . . ಹೇಮಕೂಟಮಂ ನೆನೆಯುತ್ತಮಿರ್ದು (ಕಾದಂಉ. ೨೬೨); ದಾಯಿತರಿಂ ಪೆಸರ್ವೆತ್ತ ಪಸಾಯಿತರಿಂ ಸುಭಟ ಚೇಟಕ ಪ್ರಕಟ ಮಹಾನಾಯಕರಿಂ ನಿರುಪಮಶೋಭಾಯತ ಮಾಯ್ತೋಲಗಂ (ಕುಸುಮಾ. ೩-೮೮); ಬಂದುದಿರುಳೋಲಗಕೆ ರಾಯನ ಮಂದಿ . . . ಸಚಿವ ಪಸಾಯಿತರು ಸಹಿತ (ಕುವ್ಯಾಕ. ೫-೫); ಕೊತ್ತಳದ ಮೇಲೆ ಅರಮನೆಯ ಮನ್ನೆಯರು, ಪಸಾಯಿತರು, ಡಣಾಯಕರು . . . ನಿಂತಿದ್ದರು (ರೂಲೇಖ. ೩). ೨. ವಂದಿ; ಮಾಗಧ: ಶಯ್ಯಾಸದನಗವಾಕ್ಷಮನೊಯ್ಯನೆ ಪೊಕ್ಕುಲಿದು ನೃಪನ ಸುಖನಿದ್ರೆಯ ಕೆಯ್ಯಂ ತೊಲಗಿಸಿತು ಮಿಗೆ ಪಳಮೆಯ್ಯ ಪಸಾಯಿತರವೋಲ್ ಪ್ರಭಾತ ಸಮೀರಂ (ಪುಷ್ಪಪು. ೮-೨೦). ೩. ಮೆಚ್ಚುಗೆಗೆ ಪಾತ್ರವಾದ ಪ್ರಾಣಿ; ಪ್ರೀತಿಪಾತ್ರವಾದ ಪ್ರಾಣಿ: ಆಯೆಡೆಗೆ ನೀರುಣಲ್ಬರೆ ಜಾಯಿಲಮರಸನ ಪಸಾಯಿತಂ ಕೋಡೆರಡುಂ ಕೋಯೆ ಸೆಳೆದಶ್ವ ಮಹಿಷನ್ಯಾಯಂ ನಿಲೆ ಕೊಂದುದು (ಯಶೋಚ. ೩-೬೬).

[<ಸಂ. ಪ್ರಸಾದಿತ ?./ಗ್ರ 'ಆಯ್ತ' ಎಂಬ ಪ್ರತ್ಯಯದಿಂದ ಕೊನೆಗೊಳ್ಳುವ ಶಬ್ದರೂಪಗಳ ಸಾಮ್ಯದಿಂದ ಈ ರೂಪ ಬಂದಿರಬಹುದು]

ಪಸಾಯ್ತೆ, ಪಸಾಯಿತೆ (ನಾ). ರಾಣಿಯ ಕೃಪೆಗೆ ಪಾತ್ರಳಾದವಳು: ಸಖಿಯರ ವಿಳಾಸಿನಿಯರ ಪಸಾಯ್ತೆಯರ ತರಿಸಿಕೊಟ್ಟನು (ಕುವ್ಯಾಸ. ೧೩-೧೨). **ಪಸಾಯಿತೆ**: ಇವಳ್ ಪಸಾಯಿತೆ ಮನೋಹರಿಗೀಕೆಯದೊಂದು ಕಾಣ್ಕೆ (ಕಾದಂಉ. ೩೯೨); ಅವದಿರ ಪಸಾಯಿತೆಯರಿಗೆ ಪಡಿಗವ ನೀಡ ಸಲ್ಲರು ಸೋಮಯಾಜಿಗಳು (ಕುವ್ಯಾಅ. ೮-೯); ಮಣಲೂರ ರಾಜನಂದಿನಿ ತನ್ನ ನಚ್ಚಿನ ಪಸಾಯಿತೆಗೆ ಬೆಸಸಲ್ . . . ಶೃಂಗಾರಗೈದಳಾ ಆಳಿ ಅಚ್ಚರಿವಡುತೆ (ಚಿತ್ರಾಂಗ. ೧೮-೪೯೪). [ಪಸಾಯ್ತ+-ಎ$_2$]

ಪಸಾರ$_1$ (ನಾ). ೧. ಅಂಗಡಿ: ಅಲ್ಲ ಬೆಲ್ಲ ಅರಿಸಿನ ಮೊದಲಾಗಿ ಕಿಱುಕುಳವೆಲ್ಲವಂ ಪಸಾರಕ್ಕೊಂದೊಂದ ಕೊಟ್ಟರು ಹತ್ತಿಯ ಪಸಾರಕ್ಕೆ ಹಿಡಿವತ್ತಿಯ ಕೊಟ್ಟರು (ಸೌಇಇ. XX, ೨೪೮-೬೪; 1228); ಪಸಾರಕ್ಕೆರಡಡಕೆಯ ಕೊಟ್ಟರ್ (ಮುಂಬರಾ. X, ೨೬೯-೭೩; 1229); ಎಲ್ಲಿ ನೋಡಲು ಮುತ್ತುರತ್ನಪಸಾರಗಳು (ವೈಕುಂಪ. ೪-೪೫). ೨. (ಅಂಗಡಿಯ) ಸರಕು: ಅನುಭಾವವೆಂಬುದೇನು ಬೀದಿಯ ಪಸಾರವೆ (ಚನ್ನವ. ೬೩-೪). ೩. (ವ್ಯಾಪಾರಕ್ಕಾಗಿ ಸರಕನ್ನು) ಹರಡಿ ಇಡುವಿಕೆ; ಪ್ರದರ್ಶನಕ್ಕೆ ಇಡುವಿಕೆ: ಮನೆ ನೋಡಾ ಬಡವರು ಮನ ನೋಡಾ ಘನ . . . ಪಸಾರಕ್ಕನುವಿಲ್ಲ ಬಂದ ತತ್‌ಕಾಲಕ್ಕುಂಟು (ಬಸವ. ೩೨೫); ನಿಮ್ಮೊಳಡಗಿದ ಲಿಂಗೈಕ್ಯವ ಪಸಾರಕ್ಕಿಕ್ಕುವ ಅಜ್ಞಾನಿಗಳೆತ್ತ ಬಲ್ಲರಯ್ಯ (ವಚಶಾ. II, ೪೪೪); ಕಣ್ಣಿಗೆ ಕಂಡರೂ ಕೈಗೆ ಸಿಗದಂತೆ ಸುತ್ತಲಿನ ಒಡವೆಗಳ ಪಸಾರದ ಉದ್ದೇಶವೇನಿರಬಹುದು ?(ಬಾಳಬ. ೪೦).

[<ಪ್ರಾ. ಪಸಾರ./ಸಂ. ಪ್ರಸಾರ]

ಪಸಾರ$_2$ 'ಪನಸಾರೆ' ನೋ.

ಪಸಾರಿ (ನಾ). ಔಷಧದ್ರವ್ಯಗಳನ್ನು ಮಾರುವವನು: ಪಿಂಜಾರಿಯರು ಪಸಾರಿಯರು . . . ಮೊದಲಾದ ನಾನಾಜಾತಿ (ಸೌಗಂಧಿ. ೧೩೫-೯). [ಪಸಾರ$_2$(<ಪನಸಾರೆ)+-ಇ$_3$]

ಪಸಾರೆ 'ಪನಸಾರೆ' ನೋ.

ಪಸಿ$_1$, ಹಸಿ$_1$ (ಕ್ರಿ). ೧. ಆಹಾರವನ್ನು ಬಯಸು; ಹಸಿವು ಉಂಟಾಗು: ತಾಯಪ್ಪ ಪೆಣ್ಬುಲಿ ಪಲವುದಿವಸಮಾಹಾರಮಂ ಪೆಱದೆ ಪಸಿದು ಮಮ್ಮಲ ಮಱುಗುತ್ತಿರ್ದು . . . ಪರಿತಪ್ಪುದಂ ಕಂಡು (ವಡ್ಡಾರಾ. ೪೮-೧೦); ಮೇಲ್ವಾಯೆ ಕರಂ ಪಸಿದ ಪುಲ್ಮರುಳ್ ಪಿಱುತಿನಿಗಳ್ ಬೇಯುತ್ತುಮಿರ್ದ ಪೆಣನಂ ನಾಯುಗಿವಂತುಗಿದು ತಿಂದುವು (ಕಾವ್ಯಸಾ. ೫೩೬ ಶೂದ್ರಕ); ಪಸಿದುಣವೇಡಿದಂ ಬಡವ ನಾನುಣಲಿತ್ತೆಂ (ಪಂಪಭಾ. ೫-೬೨); ಪಸಿದ ರಕ್ಕಸಿಯಂ ಕೆಳೆಗೊಳ್ವ . . . ಎಗ್ಗನಂ ಪೋಲ್ಕುಂ (ಧರ್ಮಾಮೃ. ೧೩-೧೩೪); ಪಸಿದೊಡಂಬುಜಭವಾಂಡಮಂ ಕಳಚಿ ಭಕ್ಷಿಸುವ . . . ವಿಷಮ ಪ್ರಮಥಗಣಮೈದುತಿರ್ದುದು (ಚಿಬಪು. ೪೧-೪೯). ೨. ಉಪವಾಸ ವ್ರತವನ್ನು ಮಾಡು; ಉಪವಾಸವಿರು: ಕೆಱೆಯ ಗಾವುಣ್ಡ ಪಸಿದು ದೇಗುಲವ ಮಾಡಿಸಿದಂ (ಎಕ. VII, ತಿವಮೊ. ೨೨-೪; 963). **ಹಸಿ$_1$**: ೧. "ಹಸಿ-ಕ್ಷುಧಾಯಾಂ, ದ್ರವದ್ರವ್ಯೇ ಚ" (ಶಮಧಾ): ಒಡಲುಗೊಂಡವ ಹಸಿವ ಒಡಲುಗೊಂಡವ ಹುಸಿವ (ದೇವಾವ. ೫೯-೧೨೩); ಹಸಿದು ನಾವೈತಂದರೀ ಪರಿ ಮಸಗಿ ಕುಣಿದಾಡಿದೊಡೆ . . . ತನಗೆ ತಣಿವಹುದೆ (ಕುವ್ಯಾಉ. ೮-೧೨); ಹಸಿದಿರ್ದುಂ ತಿನಲೊಲ್ಲದೆ . . . ಬಿಸುಸುಯ್ಯುತೆ ಹಳವಳಿಪರಗಿಳಿಯಂ ಕಂಡಳ್ ಕಮಲಾಕ್ಷಿ (ಜಯಕಾ. ೨-೨೩). ೩. (ಆಲಂ) ತೀವ್ರಾಕಾಂಕ್ಷೆಯನ್ನು ಹೊಂದು: ಅವನು ಹಸಿದ ಕಣ್ಣುಗಳಿಂದ ಅವಳ ಕಡೆಯೇ ನೋಡುತ್ತಿದ್ದಾನೆ

(ರೂಢಿ). [ದೇ.॥ ತಮಿ. ಪಚಿ ; ಮಲ. ಪಯಿ, ಪೈ]

ಪಸಿ₂, ಪಸಿವು, ಪಸು₂, ಹಸಿವು (ನಾ). ೧. ಆಹಾರದ ಬಯಕೆ; ಕ್ಷುಧೆ: "ದ್ರವದ್ರವ್ಯ ಕ್ಷುತ್ತುಗಳೊಳ್ ಪ[ಪಾಕಾಂ. ಹ]ಸಿ" (ಶಬ್ದಮಂ. ೧೧೦); ಕಾಣಲೊಡಂ ಪಸಿಯುಂ ತೃಷೆಯುಂ ಕೆಡುವುದು ರಸಶುದ್ಧಿಯಿನಾ ಮುನೀಂದ್ರಚಂದ್ರನ ಮುಖಮುಂ (ಅನಂಪು. ೯-೧೧೧); ಬಿಸಿವಡೆದಾ ಸರೋವರದಲ್ಲಿ ಮೀಂಗಳು ಬಿಸಿ ತಾಗಿ ಬಾಯ್ತೆಱವುದನು ಅಸಿಯಳು ಮಱುಕದಿಟ್ಟಯಲಿ ನೋಡಲ್ಕಾಗ ಪಸಿ ತಾಪ ಪರೆದುದಾಕ್ಷಣದಿ (ಮೋಹತ. ೯-೪೫). **ಪಸಿವು:** ೧. "ಗ್ರಾಸೇಚ್ಛಂ ಕ್ಷುದ್ಬುಭುಕ್ಷೆಗಳ್ ಪಸಿವೆನಿಕುಂ" (ಪಸ್ತುಕೋ. ೯೩-೮); ಪಸಿವುಂ ನೀರಡಿಕೆ ದಾಹ ಪಾತಂ ಸೂಲೆ ಮೊದಲಾಗೊಡೆಯ ವೇದನೆಗಳಂ ಸೈರಿಸಿ (ಪಡ್ಡಾರಾ. ೫೨-೮); ಕೆಲದೊಳ್ ಪುಳಿಂದಿಯಿರೆ . . . ಸಲೆ ಪಸಿವಂ ಮಱೆದು ತಣಿದು ಬೇಡಂ ಬೇಡಂ (ಗಿರಿಕ. ೧-೧೧೭); ನರದೇಹವಿದಕೆ ಪಸಿವಾಲಸ್ಯ ನಿದ್ರೆಗಳ್ ವೆರಸಿಪ್ಪುವು (ಚೆಪು. ೧-೩೪); ಪಸಿವು ನೀರಡಿಕೆಯುಂ ನೋವು ಸಾವಂ ಕಂಡುಂಡು ದಣಿದು ರೋಸಿದಿರಿ (ಶ್ರೀರಾಮಾ. ೩೬೮-೧೬೯). **ಪಸು₂:** ೧. ನಿನ್ನಯ ಪೆಸರಂ ನೆನೆದವನುನ್ನತ ನೀರಡಿಕೆ ಪಸುಗಳಂ ನೀಗುಗೆ ತಾಂ (ಹಾಲಾಸ್ಯ. ೧-೯-೩೭); ಕೊಡಹುತ್ತ ಹೃಷಿಕಗಳನಡಗಿಸುತ ಪಸು ತೃಷೆಗಳಡಿಗಡಿಗೆ ತನು ಕೃಶಿಸುವಂದದಿ ನಿರಾಹಾರಮಡಸಿ ತಪದೊಳಗಿರ್ಪ (ವೆಂಕಾರಾ. ೧-೧೮-೬೪). **ಹಸಿವು:** ೧. ಹಸಿವು ತೃಷೆಯುಳ್ಳಾತನು . . . ತಿರಿದುಂಬುದಕ್ಕೆ ಹೋಹನು (ಸಂಚತಂ. ೧೭೬-೧೪); ಹಸಿವಾದರೆ ಊರೊಳಗೆ ಭಿಕ್ಷಾನ್ನಂಗಳುಂಟು (ಮಹಾದೇ. ಬ. ೬೯-೧೯೯), ಹಸಿವು ಘನವಾಯ್ತೆಂದು ಕುಡಿವರೆ ವಿಷವ (ಕೌತಿಂಗ. ೩೮-೧೧); ಹಸಿವಿಲ್ಲದವನಿಗೆ ಉಣಬಡಿಸಿದರೇನು ಫಲ ? (ಮಣಿಸ. ೩). ೨. (ಆಲಂ) ಇಚ್ಛೆ; ಬಯಕೆ: ಅವರ ಜ್ಞಾನದ ಹಸಿವು ತೀವ್ರವಾಗಿತ್ತು (ರೂಢಿ). [<ಪಸಿ₁]

ಪಸಿ₃, ಪಸೆ₁, ಹಸಿ₂ (ನಾ). ೧. ಹೊಸದು; ತಾಜಾ: ಪಸಿಯ ತೊವಲ ತಿದಿಯೊಳ್ ಪುದಿದು ಪುಟಪಾಕಂ ಸುಡುವರುಂ (ಆದಿಪು. ೫-೮೫ ಪ); ನೋಡಿದರ್ . . . ಪಸಿಯ ಪೊಸಜವ್ವನೆಯರ್ (ಅಜಿಪು. ೯-೩೬); ಪಸಿಯ ಬಿಸಿಬಿಸಿನೆತ್ತರುಗುವ ರುಂಡದ ಸರಂ ಕಂಠದಲಿ ರಿಂಗಣಗುಣಿಯುತಾಡೆ (ಚತ್ರಾಂಗ. ೮೧-೨೨೨೪). ೨. ತೇವ; ಒದ್ದೆ; ಆರ್ದ್ರತೆ: "ದ್ರವದ್ರವ್ಯ ಕ್ಷುತ್ತುಗಳೊಳ್ ಪ[ಪಾಕಾಂ. ಹ]ಸಿ" (ಶಬ್ದಮಂ. ೧೧೦); ಮಣ್ಣೊಳ್ ಮಾಡಿದ ಪಸಿಯ ಮಡಕೆಯೊಳ್ ತೆಳ್ಕನೆ ತೀವಿದ ರಸಮಂ ಕಿಚ್ಚನ ಮೇಗಿಡಲ್ (ಚಾವುಂಪು. ೧೩೬); ಸಚಿತ್ತವಿಧಾನ—ಪಸಿಯಪ್ಪುದಱಂ ಮುಚ್ಚಿದಾಹಾರಮನೀವುಧುಂ (ತತ್ವಸಾರ. ೨೪೩). ೩. ಪೂರ್ತಿ ಬಲಿಯದ ಕಾಳು; ಎಳೆಯ ಕಾಳು: ಪೊಡೆಯಂ ಕೊಯ್ದು ಧಾನ್ಯವಱಸುವ ಪಸಿಯಂ ಕುಟ್ಟಯಕ್ಕಿಯಱಸುವ . . . ಬಿತ್ತದೆ ಪಸಿಯಂ ನೋಡುವ ಕಟ್ಟಿಗ್ಗನಂ ಪೋಲ್ಕುಂ (ಧರ್ಮಾಮೃ. ೧೨-೨೪). ೪. ಹಸುರುಬಣ್ಣ: ಪಸಿಯ ನೇತ್ರಮಂ ಪಚ್ಚವಡಿಸಿದಂತೆ ಪಸುರ್ಪುವಡೆದ ನೆಲದೊಳ್ . . . ಉಸಾಶ್ರಯಂ ಬಡೆದಳಂಕರಿಸುವಿಂದ್ರಗೋಪಂಗಳುಮಂ (ಪಂಪಭಾ. ೭-೨೫ ಪ); ಕಪಟದಿಂದೆ ವಿಲಾಸಿನಿಯಾದ ವೇಷಮಂ ನೆನೆಯಿಸಿದಪ್ಪುದೀ ಪಸಿಯ ಬಣ್ಣಮಿವಳ್ಗೆನೆ ಚೆಲ್ವನಾಳ್ದು ಮೆಲ್ಲನೆ ನಡೆತರ್ಪ ನೀಲಮಣಿಪುತ್ರಿಕೆಯಂದದಿನಾದವೊಪ್ಪಿದರ್ (ಕಾದಂಪೂ. ೩೮); ಪಸಿಯ ಬಣ್ಣಂ, ಬೀಳಿಯ ಕಬ್ಬು (ತಮದ. ೧೬೮ ಪ್ರಯೋ). ೫. ಒಣಗಿಸುವುದು ಅಥವಾ ಬೇಯಿಸುವುದು, ಕಾಯಿಸುವುದು, ಸುಡುವುದು ಮುಂತಾದ ಸಂಸ್ಕಾರಗಳನ್ನು ಹೊಂದದಿರುವಂತಹುದು. ೬. ಅಸಂಸ್ಕೃತವಾಗಿರುವಿಕೆ; ಅಪಕ್ವತೆಯನ್ನು ಹೊಂದಿರುವಿಕೆ: ತುಱುಗಾರ್ಕಿನಗೆ ಮನೆವೆಂಡತಿ ಪಚ್ಚನೆ ಪಸಿಯ ಗೋವನ್ನೆ (ಪಂಪಭಾ. ೬-೫೨). 'ಪಸ್ಸು₃' ಪರಾ. **ಪಸೆ₁:** ೨. ಪಡಿಗದ ಪಟುನೀರ್ಪಸೆಯೊಱದ ಪಾಟ್ಟಿಗ್ಗೆಯಿಂದಸತಿಯರಿದೆ ಪಿಡಿವರಯ್ಯೊ ಪೊಸಮಡಿಮೆಯ್ಯಂ (ಚಿಕವಿ. ೬-೧೨೦); ಅಕ್ಕಿಯನ್ನು ಚೆನ್ನಾಗಿ ತೊಳೆದು ನೀರಿನ ಪಸೆ ಆರಲು ಬಿಡಬೇಕು (ಅಡುಸೌ. ೮೨); ಮೇಲಿನ ಗದ್ದೆಗಳಿಂದ ಕೆಳಗಿನ ಗದ್ದೆಗಳಿಗೆ ಒರತೆಯ ಪಸೆಯೂ ಬಂದಿತ್ತು (ಬಾಳಿಗ. ೧೧೦). ೭. ಜಿಡ್ಡು: ಮೂರಾಟದ ಹುಡಿ ಎಳೆದರೆ ಕಣ್ಣು ಹೋಗುವುದೇ ಸರಿ. ಅದಕ್ಕೆ ಪಸೆಯೇ ಹಾಕುವುದಿಲ್ಲ (ಪಳಮೆ. ೧೫). ೮. ಸತ್ವ; ತಥ್ಯ; ತಿರುಳು: ಈ ದಿನ ಅವನನ್ನು ಪೂರಾ ಪರೀಕ್ಷೆ ಮಾಡಿಬಿಡು. ಏನೂ ಪಸೆ ಇಲ್ಲದಿದ್ದರೆ ಇನ್ನಿಲ್ಲಿಗೆ ಬರುವುದೇ ಬೇಡಾನ್ನು (ಪತಿ. ೧೦೫). **ಹಸಿ₂:** ೧. ಹಸಿಯ ನೆತ್ತರು ಬಸಿದು ಹೋಗುವಾಗ ಕುಸುಮನಾಭನ ನಾಮ ನೆನೆಗೊಡದಲೆ ಮನ (ಪುರಂದ. ೧-೧೪೨-೪). ೨. "ಉನ್ನಂ. ಕ್ಲಿನ್ನಂ-ಈ ೨ ಹು?ಸಿ[ಹಸಿ]" (ಹಲಾಯು. ೧೨೬-೮೨); ಕುಶೆಯ ಕಯ್ಯಲಿ ಪಿಡಿದು ಹಸಿಯ ಧೋತ್ರವ ಪೆಗಲೊಳಿಕ್ಕಿಕೊಂಡು (ಕುಮುರಾ. ೬-೧೩೧); ಹಸಿಯ ಚರ್ಮಗಳ ಚಮ್ಮಾವುಗೆಗಳ ಮೆಟ್ಟಿದೆಸಕವೆಂದೆಣಿಸಿದನೊಳಗೆ (ಭರಜ. ೧೨-೧೩೯). ೩. ಅರಿಯ ಖಂಡದಿ ಹಸಿಯ ಸುಂಟಗೆವೆರಸಿ ಭೂತಾವಳಿಯ ದಣಿಸಿದ (ಕುನ್ಯಾಕ. ೮-೪೨); ಹಸುಳೆ ನೋಡಿ ವನಂಡೆಯೊಳಗಣ ಹಸಿಯ ಹಾಲನು ಕುಡಿದ (ಸಾಳ್ವಭಾ. ೨೧-೪೯); ಕೆಲವು ತರಕಾರಿಗಳನ್ನು ಮತ್ತು ಹೆಚ್ಚಿನ ಹಣ್ಣುಹಂಪಲುಗಳನ್ನು ಹಸಿಯಲ್ಲೇ ತಿನ್ನಬಹುದು (ಅಡುಸೌ. ೭೬). ೯. (?): ನೊಸಲ ಕಣ್ಣು ಹಸಿಯೆನಿಪ್ಪುದಸಮನಯನನಿಡುವ ಭೂತಿ (ವಿಧೂರ. ೪-೬).

ಪಸಿಯಡಕೆ, ಹಸಿಯಡಕೆ = ಒಣಗಿಸದೆ ಅಥವಾ ಬೇಯಿಸದೆ ಇರುವ ಅಡಕೆ; ಹಸಿಯಾದ ಅಡಕೆ: ಪಸಿಯಡಕೆಯ ನಾರಂಗದ ಮಿಸುಗುವ ಸನ್ನಾದುಫಲದ ಫಲನಿಕರದಿಂ (ಧರ್ಮಾಮೃ. ೧೦-೨೪); ಹಸಿಯ ಬರಿಯೋರ್ಮನ್ನಿ ಕಸವಿಲ್ಲ ಮುಸುರೆ ಇಲ್ಲ ಹಸಿಯಡಕೆ ಸಿಪ್ಪೆ ಮೊದಲಿಲ್ಲ (ಹಳ್ಳಿಬಾ. ೫೭). ಪಸಿಯ ಬಿಸಿಲ್ = ಎಳೆಯ ಬಿಸಿಲು: ಮಿಸುಪ ನವತರುಣತರಣಿಯ ಪಸಿಯ ಬಿಸಿಲ್ ಮಸಗೆ . . . ಪೊಸದಾವರೆವೂವನೋವಿ ಭಾವಿಸಿ ತಿಱುದಳ್ (ಗಿರಿಕ. ೫-೫೯); ದಶನಕಾಂತಿ ಶಶಿಮಂಡಲದ ಪಸಿಯ ಬಿಸಿಲಂ ಬೀದಿವರಿಯಿಸಲಿಂತೆಂದರ್ (ಪುಣ್ಯಾಸ್ರ. ೧-೩೫ ಪ). ಪಸಿಯರಿಸಿನದ ಕೊಂಬು = ಒಣಗದಿರುವ ಅರಿಸಿನದ ಕೊನೆ: ಕದಿದಿಕ್ಕಿದ ಬೆರಲ ಕೊಂಡಿಕೆಗಳಂ ಪಸಿಯರಿಸಿನದ ಕೊಂಬನುಡಿದು ಸುಣ್ಣಂದೊಡೆದೀಡಾಡಿದಂತಾಗೆ (ಅರ್ಧನೇ. ೫-೨ ಪ). ಹಸಿದಡ್ಡ = ಏನೇನೂ ತಿಳಿಯದವನು; ಮಹಾ ಅಜ್ಞಾನಿ: ನಗರದೊಳಗಿನ ಹಸಿದಡ್ಡರ ಕೂಡಲೂ ಓದುವನು, ಬರೆಯುವನು (ನಿರಾಭ. ೬೭). ಹಸಿಬಸಿ = ತೇವವಾಗು; ಆರ್ದ್ರವಾಗು; ನೀರು ಸುರಿಸು: ಚಾರು ತುಂಬ ಸಿಡಿಮಿಡಿಗೊಂಡು . . . ಕಣ್ಣು ಪಿಳಪಿಳ ಪಿಳಕಿಸಿ ಅವು ಹಸಿಬಸಿವಂತಾಗಿರಲು ಸುಮ್ಮನೆ ದುರುದುರು ನೋಡ ಹತ್ತಿದಳು (ಇಪ್ಪಶಕ. ೨೮೮). ಹಸಿಬಿಸಿ = ೧. ಅರ್ಧಮರ್ಧ ಬೆಂದುದು; ಸರಿಯಾಗಿ ಬೇಯದಿರುವುದು: ವನದಿ ಮಹಾಮೃಗಗಳ ಕೊಂದು ಹಸಿಬಿಸಿ ತಿನಬೇಕು ಸವಿಸವಿದು (ರಾವಣೋ. ೧೬); ಹಸಿಬಿಸಿ ತಿಂದು ಹೊಟ್ಟೆ ಕೆಡಿಸಿಕೊಳ್ಳಬೇಡ (ರೂಢಿ). ೨. ಅರ್ಧಮರ್ಧ ಜ್ಞಾನವುಳ್ಳವನು; ಸರಿಯಾಗಿ ತಿಳಿದುಕೊಳ್ಳದವನು: ಅತನನ್ನೂ ಹಸಿಬಿಸಿ. ಈಗಲೇ ಆಫೀಸಿನಲ್ಲಿ ಸೇರಿದರೆ ನಾಳೆ ನಾನು ಸಾಹೇಬರ ಮುಂದೆ ತಲೆ ಕೆಳಗೆ ಹಾಕಬೇಕಾಗುವದು (ಕುರಿಹಿಂ. ೨೨). ೩. ಪೂರ್ಣಜ್ಞಾನವಿಲ್ಲದ; ಅಪಕ್ವಬುದ್ಧಿಯ: ಇಂಥಾ ಹಸಿಬಿಸಿ ಪಂಡಿತರಿಗೆ ಕೋರ್ಪಕಸನ ವಿಚಾರಗಳು ಎಷ್ಟರ ಮಟ್ಟಿಗೆ

ತಿಳಿದವೆಂಬುದು ಮೇಲೇ ಕಾಣುತ್ತದೆ (ಮುಂಬಯಿ. ೫-೧೮೩). ಹಸಿಯ ತುರುಕ = ಸೈರಣೆಯಿಲ್ಲದ ಮುಸಲ್ಮಾನ ; ಅಂಧಶ್ರದ್ಧೆಯ ಮುಸಲ್ಮಾನ : ಹಸಿಯ ತುರುಕನವೋಲು ಕತ್ತಿಯ ಕೊಸರು ಝಳಪಿಸಿ ಕೂಗಿ ಕೊಸರುಪನೊಡಲ ನೇವರಿಸಿ (ಅಮೃತ. ೨-೫೩). ಹಸಿಯ ಹೊಲೆಯ = ಸಂಸ್ಕೃತಿಯಿಲ್ಲದ ಹೊಲೆಯ ; ತಿಳಿವಳಿಕೆಯಿಲ್ಲದ ಹೊಲೆಯ : ಪಶುವನುಬ್ಬಸಗೊಳಿಸಿ ವಧಿಸುವ ಹಸಿಯ ಹೊಲೆಯರ . . . ಹುಸಿವ ಹೊಲೆಯರ ನುಡಿಗಳಂ ಹೋಲುವುದೆ (ಬಸವು. ೫೫-೧೮). ಹಸಿಯಿಟ್ಟಿಗೆ = ಕೇವಲ ಬಿಸಿಲಿನಲ್ಲಿ ಒಣಗಿಸಿದ ಇಟ್ಟಿಗೆ ; ಸುಡದೆ ಇರುವ ಇಟ್ಟಿಗೆ : "(ಬಿಸಿಲಿನಲ್ಲಿ ಒಣಗಿಸಿದ) ಹಸಿಯಿಟ್ಟಿಗೆ ; ಹೆಂಟೆ" (Adobe. ಇಂಕಸಿ). ಹಸಿಸುಳ್ಳು = ಅಪ್ಪಟ ಸುಳ್ಳು ; ಸಂಪೂರ್ಣ ಸಟೆಯಾದುದು : ಅವರು ಹೇಳುವುದೆಲ್ಲಾ ಹಸಿಸುಳ್ಳು (ರೂಢಿ).

[ದೇ.॥ ತಮಿ. ಪೈ ; ಮಲ. ಪಸಿ, ಪಯಿ, ಪೈ ; ತುಳು. ಪಜಿ ; ತೆಲು. ಪಚ್ಚಿ, ಪಸಿ]

ಪಸಿಂಡಿ (ನಾ). ಚಿನ್ನ ; ಬಂಗಾರ (?) : ಮೊಡ ಮಾದಿಯ್ಯ ಪಸಿಣ್ಡಿದೀಪಗಳ. (ಸೌಇಎ. ೧೯೪೧, ಜಮ್ಮಲಮಡುಗು. ೪೪೫-೫ ; ?).

[ದೇ.॥ ತೆಲು. ಪಸಿಂಡಿ, ಪಯಿಂಡಿ, ಪೈಂಡಿ]

ಪಸಿಕಿ 'ಪಸುಗೆ' ನೋ.

ಪಸಿಕೆ 'ಪಸುಗೆ' ನೋ.

ಪಸಿಗೆ 'ಪಸುಗೆ' ನೋ.

ಪಸಿದೊಗಲ್ (ನಾ). ಹಸಿಯ ಚರ್ಮ ; ಆಗ ತಾನೇ ಸುಲಿದ ತೊಗಲು : ಪಸಿದೊಗಲ [ಪಾಠಾಂ. ಪಂದೊವಲ] ಧೋತ್ರದಿಂದೊಟ್ಟೆಯೆಲುಗಳ ಕುಂಡಲಂಗಳಿಂದೆ (ಜೈಮಿಭಾ. ೧೬-೨೪).

[ಪಸಿ$_3$ + ತೊಗಲ್ (<ತೋಲ್$_1$)]

ಪಸಿಮೆ (ನಾ.) ಹಸಿಯಾಗಿರುವಿಕೆ ; ತೇವದಿಂದ ಕೂಡಿರುವಿಕೆ ; ಆರ್ದ್ರತೆ : ಅಡಕೆ ಒಣಗಿಲ್ಲ, ಇನ್ನೂ ಪಸಿಮೆ ಇದೆ (ರೂಢಿ).

[ಪಸಿ$_3$ + -ಮೆ$_1$]

ಪಸಿಯೊರಟು (ನಾ). ೧. ಅಚ್ಚ ಒರಟುತನ ; ಶುದ್ಧ ಅಸಂಸ್ಕೃತತೆ : ಪಸಿಯೊರಟು ತಂದೆಗೊಗೆದಾ ಮಗಳ ಪಸಿಯೊರಟನೊಗೆ ತವರ್ ತೋಱುಗುವರ್ (ಅಂತಿಗೊ. ೨೨-೪೫೪). (ಗು). ೨. ಶುದ್ಧ ಒರಟಾದ ; ಸಂಪೂರ್ಣವಾಗಿ ಅಸಂಸ್ಕೃತವಾದ : ಏಗಳುಂ ಸ್ಯೂಸವನ್ ಪಸಿಯೊರಟು ಮನದವನ್ (ಬುದ್ಧಪ್ರ. ೧೦-೨೦೧).

[ಪಸಿ$_3$ + ಒರಟು (<ಒಱಂಟು)]

ಪಸಿರ್ 'ಪಸುರ್$_2$' ನೋ.

ಪಸಿರ್ಗಲ್ 'ಪಸುರ್ಗಲ್' ನೋ.

ಪಸಿವು 'ಪಸಿ$_2$' ನೋ.

ಪಸಿವೆಱು (ಕ್ರಿ). ಹಸಿವುಂಟಾಗು ; ಕ್ಷುಧ್ಬಾಧೆಯುಂಟಾಗು : ಪಸಿವೆತ್ತು ಮಸಗಿ ಬಂದು ಬಿಲಂಗಳೊಳಗಣೆಱುಂ ಪೆಗಳಂ ನೊಗಮಿಟ್ಟೂದಿಯೂದಿ ತಣಯದೆ . . . ಕೆಲೆಕೆಲೆದು ಕುಪ್ಪಿಯುರ್ಬಿ ಕೊರ್ಬಿ ನಲಿದಾಡುವ ಭಲ್ಲೂಕನಿಕಾಯದಿಂ(ಗಿರಿಕ. ೧-೧೨೫ ಪ).

[ಪಸಿ$_2$ + ಪೆಱು$_1$]

ಪಸು$_1$, ಪಂಚು$_1$, ಪಚ್ಚು$_1$, ಹಂಚು$_1$, ಹಚ್ಚು$_2$ (ಕ್ರಿ). ಪಚ್ಚ$_3$ (ಭೂತಕೃ). ೧. ವಿಭಾಗಿಸು; ಪಾಲುಮಾಡು : "ಪಸು-ವಿಭಜನೇ (ವಿಭಾಗ ಮಾಡು), ಜೀವಧನೇ ಚ (ಹಸು)" (ಶಬಧಾ); ಮುಳಿದೆಚ್ಚೊಡೆ ಸೌಳನೆ ಸೀಳ್ದು ಪಚ್ಚವೋಲಾದುದು ದಂಡಧಾರ ಗಜಮಾತ ನೊಡಲ್ದೆರಸಂದು ಪಾರ್ಥನಿಂ (ಪಂಪಭಾ. ೧೩-೮೭) ; ತಂದಂಬುಸಹಿತವಿದೆ ದೇವ . . . ನಿನ್ನ ಮುಂದಿಟ್ಟು ಸರಿಯಾಗಿ ಪಸುವೆಂ [ಪಾಠಾಂ. ಹಚ್ಚುವೆ, ಹಸುವೆಂ] ನೋಡಾ (ಕಣ್ಣಪ. ಪೇ. ೧೩೦-೫೩); ಪಲವು ಕವಿತ್ವಗಳೆಂದು ಪಿಂಜುತೆ ಪಸುತುಂ ಅಳೆವರುಚುವ ಬೆಮೆಯನ್ನುಂ ಕಳಿಯುದು (ಸಂಸಪ. ೬-೧೨). ೨. [ಗಣಿತ] ಭಾಗಾಕಾರ ಮಾಡು : ಭಾಗಿಸು : ಪಂಚಾಹತರಾಶಿಯಂ ಪಸು[ಪಾಠಾಂ. ಶೆ, ಸೆ] ದಿವಾರಾತ್ರಿ ಪ್ರಮಾಣದಿಂದಂ (ಜಾತಕ. ೨೪-೩೧). **ಪಂಚು$_1$** : ೧. ಅಪೇಕ್ಷಿತಮಂ ನಿಶ್ಚಯಂ ಪಿಂಗಡಿಸಿ ಪಂಚಿ ನಿಮಗಿತ್ತಪೆಂ (ಪರಿಪು. ೬೯-೪೯). ೩. ವಿತರಣೆ ಮಾಡು : ಸಮರಲಂಪಟರೆಚ್ಚು ಪಂಚಿ[ಪಾಠಾಂ.ಪಚ್ಚಿ]ದರ್ ಕಾಕಜಂಬುಕತತಿಗೆ ರಿಪುಭಟರ ಮಾಂಸಗಳ (ಚಿಪು. ೧೬-೧೩). **ಪಚ್ಚು$_1$** : ೧. ಪಚ್ಚು[ಚ್ಚಿ] ಪರಿಕಲಿಸಿ ಬೆನ್ನಂ ಮುಚ್ಚರೆ ಮುಡಿ (ಕಾವ್ಯಸಾ. ೯೬೬ ಶಾಪ್ರಕ) ; ಎನಗಂ ಪಾಂಡುಗಮಿಲ್ಲ ಭೀದಮೆಳೆಯಂ ಪಚ್ಚಾಳ್ವಂ (ಪಂಪಭಾ. ೧೩-೯) ; ದಿವ್ಯಪಿಂಡಮನೊಂದಂ . . . ತಂದಾದರದಿಂ ಪಚ್ಚ[ಪಾಠಾಂ.ಪಂಚಿ] ಪೆಂಡಿರ್ಪರಿಗಿತ್ತಂ (ಧರ್ಮಪ. ೯-೫೬). ೩. ಬಲನೆಡನೊಳುರುಬುತಿಹ ಸುಭಟರಂ ಪಚ್ಚುವರ್ ಭೂತವೇತಾಳಜನಕೆ (ಚಿಪು. ೨೪-೧೮). **ಹಂಚು$_1$** : ೧. ನಾನು ತಂದನ್ನವನು ಜನನಿಯು ಹಂಚಿ (ಪಂಭಪ. ೨೩-೨೨) ; ಹೊಸದಾಗಿ ಕಣ್ಣು ಕೊರೆದ ಕತ್ತಿಯ ಹಾಳೆಯಲ್ಲಿ ತಲೆಗೊದಲನ್ನು ಹಂಚಿ ಗಂಟಕ್ಕಿ (ಭಾಮಿಣಿ. ೨೬). **ಹಚ್ಚು$_2$** : ೪. (ತರಕಾರಿ ಮುಂತಾದುವುಗಳಂತೆ) ಸಣ್ಣ ಸಣ್ಣ ಹೋಳುಗಳನ್ನಾಗಿ ಮಾಡು ; ತುಂಡರಿಸು : ನರನ . . . ನಿಡುಸರಗಳ್ಪೆಚ್ಚಿದವು . . . ಚುಚ್ಚಿದವು ಕೂಡೆ ಥಟ್ಟುಚ್ಚಿದವು ಸೀಳಾಗಿ ಹ[ಪಾಠಾಂ.ಪ]ಚ್ಚಿದವು (ಜೈಮಿಭಾ. ೧೩-೧೮) ; ಉಗುರುಗಳಿಂದ ಗೀರಲೂ . . . ಹಚ್ಚಲೂ ಮೀಟಲೂ ಬಹುದು (ಅಸಂಶ. ೨) ; ಹಚ್ಚಲಿಕ್ಕೆ ತಿಳಿಯದಿದ್ದರೆ ಮುಂಗೈ ಕಚ್ಚಿಕೊಂಡ ಹಾಗೆ (ಗಾಜೆ).

ಪಂಚಂಪಾಡಾಗು = ಒಡೆದು ಚೂರಾಗು : ಹರಿಹಂಚಾಗು : ಹಾಗೆ ಹೇಳಿದ್ದಾದರೆ ಅಸ್ತಿ ಪಂಚಂಪಾಡಾಗಿ ಒಂದೊಂದು ಹಿಸ್ಸೆಗೆ ಐವತ್ತು ವರಹಗಳ ಕಂದಾಯ ಸಲುವ ಭೂಮಿ ಬರುತ್ತಿತ್ತು (ಜಾರುದಾ. ೬೯) ; ಪಂಚಂಪಾಡು ಮಾಡು = ಚೂರುಚೂರು ಮಾಡು : ನಾಡ ಜನರೂರೆಲ್ಲ ಪಂಚಂಪಾಡು ಮಾಡಿದನೆಂಬ ಖಾಡಾಖಾಡಿಯಲಿ ಬಂದು (ರಾಪಶೋ. ೩೫). **ಪಂಚಿ ಕೊಡು, ಪಚ್ಚಿ ಕೊಡು, ಹಂಚಿ ಕುಡು, ಹಂಚಿ ಕೊಡು, ಹಚ್ಚಿ ಕೊಡು** = ವಿಭಾಗಿಸಿ ಕೊಡು ; ಪಾಲು ಮಾಡಿ ಕೊಡು : ನಿನಗೆ ಭಾಗ್ಯಮಿಲ್ಲದೊಡಂ ನಿನ್ನ ನೆರೆಮನೆಯವರ ಭಾಗ್ಯಮಂ ಪಂಚಿ ಕೊಡು [ಪಾಠಾಂ. ಪಂಚಿ ಕುಡು, ಪಚ್ಚಿ ಕೊಡು]ವೆಂ (ಧರ್ಮಪ. ೧-೪೫ ಪ) ; ಪಾರ್ವತಿಗೆ ದೇಹಮಂ ಪಚ್ಚಿ ಕೊಟ್ಟಭವ ಸರ್ವಾಪರಾಧಂಗಳಂ ಕ್ಷಮಿಸು (ಚಿಪು. ೫೭-೩೮) ; ನೆರೆದ ಯಾಚಕರಿಗೆ ಹಂಚಿ ಕುಡುವ ಚಿನ್ನವರದರೊಪ್ಪಿಹರು (ಪೋಹ. ೬-೨೮) ; ರಾಗರಸದೊಳನವರತ ಕಾದಲರ ಸಂಘೋಗಕ್ಕೆ ಸಮವಾಗಲೆನುತ ಅಗಮಜ್ಞರು ಹಂಚಿ ಕೊಟ್ಟಂತೆ ಪೇಟೆಯ ಭಾಗದಂಗಡಿಗಳೊಪ್ಪಿದುವು (ಪೋಹತ. ೩-೧೨) ; ಸುಖ ಮಂದಿಗೆ ಆಗುವಂತಿದ್ದರೆ ಎಲ್ಲರಿಗೂ ಹಂಚಿ ಕೊಡುತ್ತೇನೆ (ಅಪಶಾ. ೧೦೪) ; ಸಂದ ನಾಡುಂ ಬೀಡನಂದಿರದೆ ಹಚ್ಚಿ ಕೊಟ್ಟು (ಕುಮುರಾ. ೬-೫೩) ; ರಾಜ್ಯಮಂ ಹಚ್ಚಿ ಕೊಡು ಪಾಂಡವರಿಗೆ (ಕುರಂಗ. ೪೧ ಸೂಚನೆ). ಪಂಚುಪಜಿ, ಹಂಚುಹಜಿ - ಚೂರು ಚೂರಾದುದು; ಹರಿ ಹಂಚಾದುದು: ಅಂತು ಎರ್ದೆಗೆಜಗಿದಪಜಿಂದೆ ಕಿಡಮಸಿಯಾಗಿ ಕರಿಕುವೋದನ್ : ಪಂಚುಪಜಿಯಾಗಿ ಬಲಮುಡುಗಿದನ್ (ಬುದ್ಧಪ್ರ. ೨೦-೪೧೮); ಪಂಚಭೂತಂಗಳೊಳಸಂಚಲವನಜಿಯದಲೆ ಹಂಚಸೆ ಹಿಡಿದು ತಿರಿದುಂಬ ಜ್ಞಾನಿ ತಾ ಹಂಚುಹಜಿಯುಹನು (ಸರ್ವಜ್ಞ. ೩೪೮).

ಪಂಚುಪಱಿ ಮಾಡು, ಹಂಚುಂಹಱಿ ಮಾಡು, ಹಂಚುಹಱಿ ಮಾಡು = ಚೂರುಚೂರು ಮಾಡು ; ಪುಡಿಪುಡಿ ಮಾಡು ; ನಾಶ ಮಾಡು : ಪಂಚುಪಱಿ ಮಾಡಿ ಪಡೆಗುಂ ಪಂಚತ್ವಮನಾವ ಗತಿಯೊಳಂ ಜವಂ (ಪುಲ್ಲಿಪು. ೧೩-೧೫೭) ; ಪಂಚತೆ ಮುಟ್ಟಿ ಪಂಚುಪಱಿ ಮಾಟ್ಟುಂ ನಾರಕಾನೀಕಮಂ (ಅನಂಪು. ೯-೪೧) ; ಪಂಚಮಹಾಪಾತಕಮಂ ವಂಚನೆಯಂ ಪಾಪದೋಷಮಂ ಕೊಲೆ ಹೊಲೆಯಂ ಸಂಚಲಿಸದ ಬ್ರಹ್ಮೇತಿಯ ಹಂಚುಂಹಱಿಮಾಟ್ಟುದನ್ನದಾನವೆ ಸಫಲಂ (ನೀತಿಸಾ. ೬೨೭) ; ಮೋಟಂ ನೀರ್ಗುಡಿವಂತೆ ಹಂಚುಹಱಿ ಮಾಡಿ ಕಿಡಿಸದೆ (ಧರ್ಮಾಮೃ. ೧೪-೪) ; ಪಂಚೇಂದ್ರಿಯ ಸಪ್ತಧಾತು ಹಂಚುಹಱಿ [ಪಾಠಾಂ. ಹಱಿಹಂಚು] ಮಾಡಿ ಕಾಡಿಹವಯ್ಯ (ಒಸವ. ೪೭). ಪಚ್ಚಿಕೊಳ್, ಹಂಚಿಕೊಳ್ಳು, ಹಚ್ಚಿಕೊಳ್ = ವಿಭಾಗ ಮಾಡಿ ಕೊಳ್ಳು ; ಹಿಸ್ಸೆ ಮಾಡಿಕೊಳ್ಳು : ಮುನ್ನ ತನ್ನ ಮಾಡಿದ ಕರ್ಮದುದಯದಿಂದೆಯ್ದುವ ಸಾವುಮಂ ನೋವುಮಂ ಪೆಱರ್ಪಚ್ಚಿಕೊಳ್ಳಿ ಮೆಂದೊಡೆ ಪಚ್ಚಿ ಕೊಳ್ವರೆ (ಧರ್ಮಾಮೃ. ೭-೯೭) ; ಪಂಚೀಕರಣದೃಷ್ಟನ ನಿನ್ನ ಪಾಲಿಗೆ ಹಂಚಿಕೊಂಡೆನ್ನ ಪಾಲಿಪುದು (ಮೋಹತ. ೨೮-೨೭) ; ಉತ್ತಮ ಮದ್ಯಮಾದಮನೆಲನೆಲ್ಲ ಹಂಚಿಕೊಂಡು . . . ಅನುಭವಿಸೂದು (ಎಕ. X (S), ಕೋಲಾರ. ೩೧-೧೧ ; 17ನೆಯ ಶತ) ; ಮಿಕ್ಕ ಭಾಗಗಳನ್ನು ಉಳಿದವರು ಹಂಚಿಕೊಳ್ಳೋಣ (ರಾವಿಜ. ೬೬) ; ಲಗ್ಗೆಯನೊಡ್ಡಿಕೊಂಡೆರೆಯನು ಹಚ್ಚಿಕೊಂಡು ಸೆಂಡನಿಟ್ಟಾಡುವ ಮಕ್ಕಳ ಮರುಳ್ಗಳ ತಂಡ ರಂಜಿಸಿತಲ್ಲಲ್ಲಿ (ನೇಮಿಸಂ. ೮-೯೮). ಪಚ್ಚುಣ್ = ಹಂಚಿಕೊಂಡು ಊಟ ಮಾಡು : ನಾಗಜೀಯರುಂ ಸಾಮ್ಯಭಾಗಿಗಳಾಗಿ ಪಚ್ಚುಣ್ಡು ಬರುತಂ (ಎಕ. III, ನಂಜನ. ೪೪-೪ ; 1113). ಹಂಚಿ ಬಿಡು = ಪಾಲುಮಾಡಿ ಕೊಡು ; ಭಾಗಮಾಡಿ ಕೊಡು : ರೈತರಿಗೆ ಭೂಮಿಯನ್ನು . . . ಆದಷ್ಟು ಜಾಗ್ರತೆ ಹಂಚಿ ಬಿಡಬೇಕೆಂದು ಅವನು ನಿರ್ಧರಿಸಿಕೊಂಡಿದ್ದನು (ಪುನರು. ೨೯೯). ಹಂಚಿ ಹಾಯ್ಕು = ಹಂಚಿಬಿಡು : ಕುಚದ ವೃತ್ತತೆಯ ಕೊಟ್ಟಳು ಕೋಕಪಕ್ಷಿಗೆ ಕಚದ ಭಾರವ ಕೊಟ್ಟು ನವಿಲ್ಗೆ ವಚನ ಸುಸ್ವರ ತನಗೇಕೆಂದು ಶುಕಪಿಕ ನಿಚಯಕ್ಕೆ ಹಂಚಿ ಹಾಯ್ಕಿದಳು (ಮೋಹತ. ೯-೩೦). ಹಂಚಿ ಹೋಗು = ಬೇರೆ ಬೇರೆಯಾಗು ; ಚೂರು ಚೂರಾಗು : ಉಪನಿಷತ್ತಿನ ಅಖಂಡವಿಕರಸಪುರುಷೋತ್ತಮನು ಇಂದು ಚೂರು ಚೂರಾಗಿ ಹಂಚಿ ಹೋಗಿದ್ದಾನೆ (ಭಾರದ. ೪೭) ; ಬಿಕಾರ ಹಲವು ಧ್ವನಿಗಳಾಗಿ ಹಂಚಿ ಹೋಯಿತು (ದ್ರಾವಿವಿ. ೩೩೧).

[ದೇ.॥ ತಮಿ. ಪಕು ; ಮಲ. ಪಗು ; ತುಳು. ಪಗಿ ; ತೆಲು. ಪಗುಲು ; ಕುಇ. ಪಪ್ಕ]

ಪಸು$_2$ 'ಪಸಿ$_2$' ನೋ.

ಪಸು$_3$, ಪಚ್ಚೆ$_1$, ಹಚ್ಚೆ$_1$, ಹಸು$_1$ (ನಾ). ೧. ಹಸುರು ; ಹಸುರುಬಣ್ಣ : 'ಪಸುಂಬುಲ್' ಪರಾ. ೨. ಎಳೆಯದು ; ಚಿಕ್ಕವಯಸ್ಸಿನದು : 'ಪಸುಗೂಸು' ಪರಾ. ೩. ಸುಗಂಧವನ್ನು ಸೂಸುವ ಎಲೆಗಳುಳ್ಳ ಒಂದು ಬಗೆಯ ಗಿಡ : "ಗೌಪದಿ—ಬಿಳಿಯ ಗಱಿಕೆ, ಪಸು, ಅರಳಿ" (ಓಷಧಿ. ೫೧). ಪಚ್ಚೆ$_1$: ೧. "ಜಾಗವಸುರೆನೆ ಪಚ್ಚೆ" (ಶಬ್ದಮಂ. ೭೦). 'ಪಚ್ಚೆದೋರಣ' ಪರಾ. ೩. "ದೇವಕಣಿಶಂ ಪಚ್ಚೆಯಕ್ಕು" (ಮಂಗರಾ. ೪೦-೩೦) ; ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ ಪರಿಮಳದುದಕವನೆಱೆದವರಾರಯ್ಯ (ಮಹಾದೇ. ಬ. ೧೦-೩), ವನಪಾಲಂ ಕಾಣ್ಕೆಗೈದಂ ವಿಚಕಿಲದಲರಂ ಪಚ್ಚೆಯಂ ಬಾಳೆವಣ್ಣೊಳ್ಗೊನೆಯಂ (ರಾಜಶೇ. ೧೦-೨). ೪. ಹಸುರುಬಣ್ಣದ ರತ್ನ ; ಮರಕತ : "ಪಸುರ್ವರಲೆನೆ ಪಚ್ಚೆ" (ಚತುನಿ. ೧೧೦) ; ತಂತಮ್ಮ ಮನೆಯ ಮುಂದಣ ಪಚ್ಚೆಯ ಜಗಲಿಗಳೊಳಂ . . . ತಂಡತಂಡದೆ ನೆರೆದಿರ್ದ ಪೆಂಡವಾಸದೊಳ್ವೆಂಡಿರಂ ಕಂಡು (ಪಂಪಭಾ. ೪-೮೪ ಪ) ; ಶುದ್ಧಸ್ಫಟಿಕದ ನೆಲಗಟ್ಟಿಂ ಪಚ್ಚೆಯ ಕಂಬಂಗಳಿಂ . . . ಒಪ್ಪುವ ಕೃತ್ರಿಮಚೈತ್ಯಾಲಯಂಗಳಂ ಕಣ್ತಣಿವಿನಂ ನೋಡುತ್ತುಂ (ಧರ್ಮಾಮೃ. ೨-೧೪೫) ; ಪಚ್ಚೆಯ ಮಣಿಗೋಪುರದಿಂದುಚ್ಚಳಿಪಂಶುಗಳನಿಂದುಮಂಡಳದ ಮೃಗಂ ಮೆಚ್ಚುವೆಳವುಲ್ಲೆನುತ್ತುಂ ನಚ್ಚಿಯೆ ಬಂದೆಳಸಿ ಬಳಸಿ ಬೆಚ್ಚನೆ ಸುಯ್ಗುಂ (ಪಾರ್ಶ್ವಪು. ೧೬-೬೭). ೫. (ಪಗಡೆಯಾಟದಲ್ಲಿ) ಹಸುರು ಬಣ್ಣದ ಕಾಯಿ : ಪಚ್ಚೆಯಂ ನೀಂ ಪವಣಲಿತ್ತಾಡು ನಿನ್ನ ಪಳದಿಯ ಕಾಯ್ಗಳವು ಮೊದಲೆ ಹಣ್ಣಾದುವು (ಚಿಬಪು. ೧೦-೪೭ ಅ) ; ಬಚ್ಚನಾಲಗೆಯೆ ಬೀಳೆಂದು ಹಾಸಂಗಿಯಂ ಪಚ್ಚೆಯ ವಿದೂಷಕನುರುಳ್ಚಿದಂ (ಜೈಮಿಭಾ. ೬-೩೧). ೬. ಹಸುರು ಬೆಳೆ ; ಪಯಿರು : ಬಾಳೆ ಬದಣ ಮುಂತಾದ ಏನುಳ್ಳ ಕೀಳುಪಚ್ಚೆ ತೃಣಕಾಷ್ಠ ಮುಂತಾದ ಧಾನ್ಯದ ××× (ಎಕ. VII, ಶಿವಮೊ. ೭೧-೨೮ ; 1431). ೭. (ಹಣ್ಣು, ಕಾಯಿ ಮುಂತಾದುವುಗಳ) ಹಸುರಾದ ಹೊರ ಭಾಗ ; ಸಿಪ್ಪೆ : ಮಿಗೆ ಬಲಿದ ಕಗ್ಗುಂಬಳದ ಕಾಯ ಗೇಣುಗೇಣಗಲದಲಿ ಕತ್ತರಿಸಿಕೊಂಡದಱ ಪಚ್ಚೆಯಂ ತೆಗೆಯದೆ (ಸೂಪಶಾ. ೫-೧೨). ೮. ಹೊಸದಾಗಿರುವುದು ; ತಾಜಾ : (ಕಿ). ೯. ಕರ್ಪೂರ : "ಪ್ರಾಲೇಯ ಮೆನಲು ಘನಸಾರಮೆನೆ ಪಚ್ಚೆ" (ಮಂಗರಾ. ೯೯-೨೨). 'ಪಚ್ಚೆತೈಲ' ಪರಾ. ೧೦. ಕಪ್ಪು ; ಶ್ಯಾಮಲ ವರ್ಣ : 'ಪಚ್ಚೆದೇವರು' ಪರಾ. ೧೧. ಮನುಷ್ಯರ ಹಣೆ, ಕೈ ಮುಂತಾದ ಸ್ಥಳಗಳಲ್ಲಿ ಅಲಂಕಾರಕ್ಕಾಗಿ ಚಿತ್ರ ಬರೆದು, ಹಸುರುಬಣ್ಣ ತುಂಬಿ ಚುಚ್ಚುವುದು ಮತ್ತು ಹಾಗೆ ಚುಚ್ಚಿ ಆದ ಗುರುತು : (ಕಿ). ಹಚ್ಚೆ$_1$: ೩. ಪೆರ್ಗ್ಗುರುಟಿಗೆ ಹೊಡೆಮರ(ಳ)ಟ್ಟ ಹಚ್ಚೆಯೆಲೆ ಮೆಣಸಿಗೆ . . . ಉರುತರದ ವಿಷಪ್ರಹಾರಿಗ[ಳ್] ಬೆರಸಲವ(ದ)ಂ (ಖಮದ. ೧೬-೧೦೯). ೧೧. ಹೊಡೆ ಕಟ್ಟು ತೂಗು ಗುದ್ದಿಱಿ ಸೀಳು ಹೋಳೆಂಬನುಡಿ ಬಾಳೆಯಲ್ಲಿಯೊಡೆಗೆಱೆಯಲ್ಲಿ ತೊಲೆಯಲ್ಲಿ ಬಿಡೆ ನರಿಯ ಬಿಲದಲ್ಲಿ ಕೈಯ ಹಚ್ಚೆಗಳಲ್ಲಿ ತಂತುವಾಯರ ನೂಲೊಳು . . . ಅಲ್ಲದಂತಾ ನಾಡೊಳೆಂದುಮಿಲ್ಲ (ಚೇರಮ. ೨-೮) ; ಎಡದ ಗಲ್ಲದ ಮೇಲೆ ವಸುದಳ ತಾಮರಸದ ಹಚ್ಚೆಯ ಬೊಟ್ಟಿಸೆವುದಂತೆ (ಹನುಮ. ೩೫) ; ಅವರು ಮುಂಗೈ ಮೇಲೆ ಕುಚ್ಚಿಸಿಕೊಂಡಿದ್ದ ಲತಾಕಾರದ ಹಚ್ಚೆಯ ನಸುಹಸುರು ಬಣ್ಣವು ಅವರ ಗೌರವರ್ಣಕ್ಕೊಂದು ಆಭರಣವಾಗಿ ತೋರುತ್ತಿತ್ತು (ಕಾನೂರು. ೨೮). ಹಸು$_1$: ೨. 'ಹಸುಗೂಸು', 'ಹಸುಮಗು' ಪರಾ. ೩. "ರೋಹಿಣೀ-ಸಿವನ್ನಿ, ಹಸು, ಅಳಿಲೆ . . . ಜಟಾ ಮಾಂಸಿಭೇದ" (ಓಷಧಿ. ೧೪೦). 'ಪಸಿ$_3$' ಪರಾ.

ಪಚ್ಚೆಯ ಸಾರ = ಉತ್ತಮವಾದ ಮರಕತಮಣಿ ; ಪಚ್ಚೆಸಾರ : ಮುತ್ತಿನ ಮುಱಿದ ಲಂಬಣಂಗಳ್ವೆರಸೆಟಲ್ವ ಪಚ್ಚೆಯ ಸಾರದ ತೋರಣಂಗಳಂ ನುಗುಳುತ್ತುಂ ಬಂದು (ಆದಿಪು. ೪-೨೫ ಪ).

[ದೇ.॥ ತಮಿ. ಪಚು, ಪಚ್ಚೈ ; ಮಲ. ಪಚ, ಪಚು ; ತುಳು, ಕೊಡ. ಪಚ್ಚೆ ; ಕೋತ. ಪಚ್ ; ತೊದ. ಪೊಚ್]

ಪಸು$_4$, ಹಸು$_2$, ಹಸುವು (ನಾ). ೧. ಆಕಳು ; ಗೋವು : "ವಸುಧೆ ದಿವಂ . . . ಪಸುವೆಂಬಿನಿತಱೊಳಂ ವರ್ತಿಸುಗುಂ ಗೋ ಶಬ್ದಂ" (ವಸ್ತುಕೋ. ೧೩೫-೧೦೪) ; ಇದನಟುವಾತ ಕೆಱೆಯಿಂ × ಕೋಡಿಯುಮನಟುದು ಪಸುವುಮ್ಬಾರ್ವರು ××× [ಕೊನ್ದೋನವ]ನ್ತಮ್ಮಚ್ಚೆಯುನ್ತಂಗೆಯುಮು ××× ಮಾಡಿ ಕೊಣ್ಡೋ[ಂ] (ಸೌಇಇ. XI-i, ೭-೨೬, 837) ; ಕುಡುವುದು ಪಸುವಿನ ಪಾಲಂ (ಅಶ್ವಶಾ. ೧೦-೧೫) ; ಪಸುವೆನಿಸದಮಲ ಸುರಧೇನು ಮರನೆಂದೆನಿಸದಸಮ ಕಲ್ಪದ್ರುಮಂ

(ಚೆಬಪು. ೧-೧೨). ೨. ದನ; ಕಾಲ್ನಡೆ: ಅಸಿತೇಂದೀವರಲೋಲ ಲೋಚನೆಯನಂದಂತಾ ಸಭಾಮಧ್ಯದೊಳ್ ಪಸುವಂ ಮೋದುವವೋಲೆ ಮೋದೆಯುಂ (ಪಂಪಭಾ. ೬-೫೮). ೩. ಪ್ರಾಣಿ; ಜೀವಿ: 'ಪಸುಪತಿ' ಪರಾ. ೪. (ಆಲಂ) ಅಜ್ಞಾನಿ; ಜ್ಞಾನಹೀನ: "ಜೀವಧನ ವಿಭಜನಾಜ್ಞಾನಿಗಳೊಳಂ ಪಸು" (ಶಬ್ದಮಂ. ೧೧೦); ಏನು ಮಜಿಯದ ಪಸುವೆನೆ ಕೇಳಲಾಜಿನೆಂದೆನುತ ಮನದಿ ನೋಯರವರು (ಶಾಂತೀಶ. ೪-೯೬). ಹಸು$_2$: ೧. "ಹಸುವೆನಲ್ - ಗೋವು" (ಕಶರ. ೧೧೪); ಬಡಹಸುವಂ ಕೆಡೆಯದಂತು ರಕ್ಷಿಸವೇಡಾ (ಸಮಪ. ೯-೬೧); ಐದು ಪರಿಯ ಬಣ್ಣವ ತಂದು ಕೊಟ್ಟರೆ ನಾಲ್ಕುಮೊಲೆಯ ಹಸುವಾಯಿತ್ತು (ಮಹಾದೇ.ಬ. ೫೬-೧೪೧); ಕಱೆಯದಿಹ ಹಸುವಿದ್ದು ಕಷ್ಟವು (ಸಂಭಪ. ೨-೬೨); ಹಸುವಿಗಿಟ್ಟಳು ಹಾಲುಓಗರ ಬಿಸಿಮಡ್ಡಿಯ ಗಂಡಗೆ ಹಾಕಿ (ಪುರಂದ. ೧-೧೧೧-೬). ಹಸುವು: ೧. ಗೋಕುಲಂ, ಗೋಧನಂ—೨ . . . ಆಕಳ ಹಿಂಡು, ಹಸುವುಗಳ ಮಂದೆ (ಸಿದ್ಧಾಂತಿ. ೨೯೧). [<ಪ್ರಾ. ಪಸು./ಸಂ. ಪಶು]

ಪಸುಂಗಱಿ (ನಾ). ಹಸುರಾದ ಗರಿ; ಹಚ್ಚನೆಯ ಗರಿ: ಪಚ್ಚನೆಯೆಂಬುದರ್ಕೆ ಅದಿಯಿತ್ವಮಿಲ್ಲಾಗಿ-ಪಸುಂಗಱಿ, ಪಸುರ್ವಂದ ರೆಂದಾಯ್ತು (ಶಮದ. ೧೮೨ ಪ್ರಯೋ). 'ಪಸುರ್ಗರಿ' ಪರಾ.

[<ಪಸುರ್$_2$+ಗಱಿ]

ಪಸುಂಗಾಯಿ (ನಾ). ಒಂದು ಊರಿನ ಹೆಸರು (?): ಗಣೇಗೂರಾ ನರೆವೆವರುಂ ಬೆಳ್ಳಮಣಿಯರುಂ ಸನ್ನಿಗಾಲಾ ಪುಟ್ಟರುಂ ಬಟ್ಟವರುಂ ಪಸುಂಗಾಯ ಕಟ್ಟಾತರುಬಿರದರುಂ ಇ ಪೊಲನಂ ನಡಯಿಸಿದೋರ್ (ಎಕ. XVI, ಗುಬ್ಬಿ. ೭೫-೫೯; 733). [?]

ಪಸುಂಗುರಿ (ನಾ). ಹಸಿಯ ಕಾಳು, ತರಕಾರಿಗಳಿಂದ ತಯಾರಿಸಿದ ಒಂದು ಬಗೆಯ ವ್ಯಂಜನ; ಪಚ್ಚಡಿ: ತಾಳಿದ ಪಳಿಹ ಪಸುಂಗುರಿ ಸಾಸವೆ ಸೀಕರಣೆ ಹೊರಿಪಾನ ಪಳಿದೆಯವೆಂಬ ನಾನಾಭಿನ್ನ ರುಚಿಯ ಶಾಖಂಗಳುಂ (ಧರ್ಮಪ್ಯಾ. ೨-೩೮). 'ಕೋಸುಂಬರಿ', 'ಗುಗ್ಗುರಿ$_1$', 'ತಿಂಗುಱಿ' ಪರಾ. [<ಪಸುರ್$_2$+?]

ಪಸುಂಡಿ (ನಾ). ಒಂದು ಊರಿನ ಹೆಸರು; ℙ ಧಾರವಾಡ ಜಿಲ್ಲೆಯ ಈಗಿನ ಅಸುಂಡಿ: ಇಟ್ಟಗೆ ಪಸುಣ್ಡಿ ಮುಗುಳಿ ಪರಸ್ತಿ (ಇಆ. VII, ೨೨೦-೨೯; 658); ಚನ್ದಪ್ರಭಭಟಾರಾರ್ಪ್ಪಸುಣ್ಡಿಯ ನಭ್ಯಂನ್ತರಸಿದ್ಧಿಯಾಳುತ್ತಿರೆ (ಸೌಇಇ. XI-i, ೩೪-೮; 925); ಪಸುಣ್ಡಿಗೆ ಪೋದ ಬಟ್ಟೆಯಿಂ ತೆಂಕ (ಸೌಇಇ. XX, ೧೮-೪೧; 980). [?]

ಪಸುಂಡಿಗೆಱೆ (ನಾ). ಒಂದು ಊರಿನ ಹೆಸರು: ಪಸುಣ್ಡಿಗೆಱೆಯಾ ತೆಂಕಾಯ್ ಕಡೆಗೋಡು ಪಳ್ಳಗೆಱೆಯಾ ಪಳ್ಳಮ್ (ಮೈಆರಿ. ೧೯೨೪, ೮೦-೧೧೧; 799). [ಪಸುಂಡಿ+ಕೆಱೆ]

ಪಸುಂಬ, ಪಸುಬ, ಹಸುಂಬ, ಹಸುಬ (ನಾ). ಒಂದು ಬಗೆಯ ಪಕ್ಷಿ; ಶಕುನದ ಹಕ್ಕಿ: ಪರಡೆ ಪಸುಂಬಂ ಮೈನಂ ಎರಳೆ ನವಿಲ್ಕಾಗೆ . . . ಇವು ಪೋಗೆ (ಲೋಕೋಪ. ೧೨-೧೬); ಪೂಗಿಡುವಂ ಸಾರ್ದುದು ಗಂಡುಪೋದಗೆ ಪಸುಂಬಂ ಕಟ್ಟಿ ಕಬ್ಬಳ್ಳಿ ಬಂದೆಡದೊಳ್ದೀಪ್ತದೊಳಾಂದು ವೇಱಿತು (ಅನಂಪು. ೧೩-೭೨); ಘೂಕಂ ಸರಟಂ ಸಾಳ್ವಂ ಪಸುಂಬಂ ಪರಡೆ ಶಿಖಿ ಶುಕಂ ತದ್ವನಾಂತಸ್ಥಮಿರ್ಕುಂ (ಶಬಶಂ. ೩-೩೩). ಪಸುಬ: "ಚಂಚುಕಮೆನಲು ಪಸುಬನೆನಿಸಿಕ್ಕು" (ಮಂಗರಾ. ೫೨-೮); ಒಮ್ಮೆ ಆತನಿರಿಸಿದ ಉರುಳಿನಲ್ಲಿ ಪಸುಬವೊಂದು ಎರಗಿ ಸಿಲುಕಿಕೊಂಡಿತು (ಕುಡಿಕೂ. . ೯೩). ಹಸುಂಬ: ಹರಿಣಿ ಧಾತೆನಲು ಗಿಳಿ ಹಸುಂಬ [ಪಾಠಾಂ.ಪಸುಂಬೆ]ಗಳ ಗಱಿಯಂತಪ್ಪ ವರ್ಣಕ್ಕೆ ನಾಮಮಕ್ಕುಂ (ಮಂಗರಾ. ೧೩೧-೨೨). ಹಸುಬ: ಹರಡೆ ಹಸುಬಂ ಹಿಸುಣ ಹೆಬ್ಬಕ್ಕಿಗಿಡುಗ . . . ಹಕ್ಕಿಗಳ ಮಳೆಗಱೆಯುವಂತಾದುದು (ಹಚಕಾ. ೫-೪೩); ನೆಲೆಯಿಂದಂ ದಕ್ಷಿಣಸ್ಥಾನದೊಳೆ ಹಸುಬನುತ್ಸಾಹದಿಂ. . . ಉಲಿದೋಱಲ್ ಬಾಟ್ಗುಂ (ಖಮದ. ೩-೮೬); ಹರಡೆ ಕೆದಱಿತು ಬಲದಲುದಯದಲುರಿಯಲೊದಱಿತು ಹಸುಬನೆಡದಲಿ (ಕುಪ್ಯಾಸ. ೧೩-೨); ಹಸುಬ ಹಾಲ್ವಕ್ಕಿ ಮುಂತಾದ ಶಕುನವಕ್ಕಿಯುಸುರ್ದುವು ಶುಭವಚನಗಳ (ನಾಗಕು. ೩-೩೩); ಹಸುಬ ಪಲ್ಲಿಗಳ ಬಾಯ್ಮೂಗ ಮುಚ್ಚುವಿರೆ ಸಾಕೆಂದ (ಧರಚ. ೫೦-೬೦). [ದೇ.॥ ತೆಲು. ಪಸಪು]

ಪಸುಂಬರಿ (ನಾ). ಹಸಿಮೆಣಸಿನಕಾಯಿ (?): ನೀರುಳ್ಳಿಯ ಮಾಮಿಡಿಗಳ ಪಸುಂಬರಿಯ ಸವಿದಡಗಿನ ಬಾಡುಗಳ ನೆಲದೊಳೇಂ ಬೇಯಿಸಿದರ್ (ಸೂಕ್ತಿಸು. ೧೩-೨೯). 'ಪಸುಂಗುರಿ', 'ಪಸುಪೂರಿ' ಪರಾ.

[ದೇ.॥ ತೆಲು. ಪಚ್ಚ ಮಿರಿಯ]

ಪಸುಂಬುಲ್ (ನಾ). ಹಸುರು ಹುಲ್ಲು: ಬಾನಿಂದೆ ಪನಿ ಬಿಟ್ಟೊಡಲ್ಲದೆ ಮುತ್ತಂತೆ ಪಸುಂಬುಲ್ತಲೆ ಕಾಣ್ಬುದರಿದು (ಕುಜಳ್. ೧-೨-೬).

[ಪಸು$_3$+ಪುಲ್]

ಪಸುಂಬೆ, ಪಸುಬೆ, ಹಸಿಬೆ, ಹಸುಂಬೆ, ಹಸುಬೆ, ಹಸುವೆ (ನಾ). ೧. ಒಂದು ಬಗೆಯ ಚೀಲ; ಮಧ್ಯದಲ್ಲಿ ಬಾಯಿಯಿದ್ದು ಭುಜದ ಮೇಲೆ ಹಾಕಿಕೊಂಡಾಗ ಎರಡೂ ಕಡೆ ಬರುವಂತಹ ಉದ್ದನೆಯ ಚೀಲ; ಇಬ್ಬೊಟ್ಟೆಯ ಚೀಲ: ಮರ್ದುಗಳಂ ಪಸುಂಬೆಯೊಳ್ ತೆಕ್ಕನೆ ತೀವಿ (ವಡ್ಡಾರಾ. ೬೯-೧೬); ಕೈಗೆ ತೊವಲುಟಿಯಲ ಗುರ್ವಿಸಿದುದು ತೀವಿದ ಗುಳ್ಳೆಯ ಪಸುಂಬೆಯಂ [ಸೋ]ರ್ಚಿದಂತೆ ತನು ಕೀಚಕನಾ (ಪಂಪಭಾ. ೮-೭೭); ಜೀವಂ ಬೆಂಬಿಡದೀ ಪಂದೊವಲ ಪಸುಂಬೆಯೊಳೀಯೊಡಲೊಳಾವ ಸುಖಕಿರ್ದಪುದೋ' (ಅಜಿಪು. ೬-೫೪); ತೊಗಲ ಪಸುಂಬೆಯೊಳ್ಪೊಲಸಿನೋವರಿಯೊಳ್ . . . ತನುವಿನೊಳ್ಳವಿದಿರ್ದಪನಾತ್ಮಂ (ಅಪಶ. ೪೪). ೨. ಒಂದು ಹಸಿಬೆ ಚೀಲದಲ್ಲಿ ಹಿಡಿಯುವಷ್ಟು ಪ್ರಮಾಣ: ಮುಮ್ಮುರಿಧ[ದ]ಣ್ಡದ ಪಸುಂಬೆಯೊಳ್ಪ[ಣ] (ಇಆ. V, ೩೪೩-೩೪; 1093); ಪಣಮೊಂದಂ ಧ್ರುವಮಾಗೆ ಪಸುಂಬೆಗೆ ಹಾಗವನೆಱಕದೆ ಕರ್ತ್ತೆಯಲ್ಲಿ ಬೇಳೆಯನಿತ್ತರ್ (ಸೌಇಇ. IX-i, ೧೬೫-೬೧; 1099). ಪಸುಬೆ: ೧. 'ಪಸುಬೆವಳ' ಪರಾ. ೨. ನೂಳಗೇರಿಯ ಬಣಜಿಗರು ಪಸುಬೆಗೆ ಹ(ಹಾ)ಗವ ಬಿಟ್ಟರು (ಕಇ. VI, ೩೪-೩೪; 1109). ಹಸಿಬೆ: ೧. ದಾಸರು ದೇವರ ಹಸಿಬೆಯನ್ನು ಹೆಗಲಿಗೆ ಹಾಕಿಕೊಂಡು . . . ಬರುವುದು ಅನಾಥೆಯ ಕಣ್ಣಿಗೆ ಕಾಣಿಸಿತು (ಕಥಪ. ೫೯); ಅಂಚೆಯ ಹಸಿಬೆಯನ್ನು ಹೆಗಲಿಗೇರಿಸಿ ಬಟವಡೆಗೆ ಹೊರಟ (ದೀಪಪ. II, ೮೬); ದೂರದಲ್ಲಿ ಹಸಿಬೆಯನ್ನು ಹೊತ್ತುಕೊಂಡು ಬರುತ್ತಿರುವ ತಂದೆಯನ್ನು ಚಿದಾನಂದನು ಗುರುತಿಸಿದನು (ಮುತ್ತೈಪಿ. ೨೩೦). ಹಸುಂಬೆ: ೧. ಪ್ರಿಥ್ವಿಯೆ ಹಸುಂಬೆಯಾಗೆ ಅಷ್ಟಲೋಕಪಾಳಕರೇ ಗೊಂಟಾಗೆ ವಾಸುಗಿಯೇ ಬಳಸಾಗೆ ಫಣಿಕುಳಂಗಳೇ ದಾರವಾಗಿ ಬೊಕ್ಕಣವೊಳವಸುಂಬೆಯಾಗಿ (ಎಕ. VII, ಶಿಕಾರಿ. ೧೧೮-೩೦; 1054); ಭವಿಗಳು ನೆಗಪಲಾಜದ ಹಸುಂಬೆಯಂ ಜಡರೀಕ್ಷಿಸಲ್ಕೆತ್ತಿ ಲೊಕ್ಕಿಯೆಂಬೂರೊಳಗೆ ಮೆಱದ ಚೀಲಾಳದೇವಂ (ವೀಶೈಪು. ೮-೪-೩೨); ಧರೆಯೊಳು ಹಸುಂಬೆಯಂ ಮಡಗಿ (ಗುರುಚಾ. ೧೪-೯). ೨. ರಾಮೇಸ್ವರ ದೇವರಂಗಭೋಗಕ್ಕೆ ಹಸುಂಬೆ[ಗೆ] ಹಾಗವಂ ಸ್ಥಾಯಿಯಾಗಿ ಬಿಟ್ಟರು (ಸೌಇಇ. XX, ೭೮-೩೧; 1118); ಅಡಕೆಯ ಹೇಱಿಂಗೆ ೨೦೦ ಹಸುಂಬೆಗೆ ಆಯ್ವತ್ತು (ಎಕ. II, ೩೪೯-೬೬; 1159); ಆಯ್ನೂರ್ವರು ಬಿಟ್ಟ ಸುಂಕ ಹಸುಂಬೆಗೆ ವೀಸವೊಂದು ಹೇರಿಂಗೆ ವೀಸಂ ಕಾಣಿ (ಎಕ.VII, ಶಿಕಾರಿ. ೨೩೬-೮೩; 1174). ಹಸುಬೆ: ೧. ಬಂಡವ ತುಂಬಿದ

ಹಸುಬೆ ಕೊಂಡವನ ನುಂಗಿತ್ತು (ಸೋಳಿಮಾ. ೨೪೩-೭೯೪); ಬಸವ ಹಸುಬೆಯ ಸೆಟ್ಟಯಾಗಿ ತಳರುತೆ (ಪ್ರಭುಪು. ೬-೧೦೧); ಹಸುಬೆಯಲ್ಲಿದ್ದ ತಿಂಡಿಯ ಗಂಟು ದಾರಿಯುದ್ದಕ್ಕು ಅವನಿಗೆ ಜ್ಞಾಪಕ ಬರುತ್ತಿತ್ತು (ಕಳಹು. ೪). ೨. ಆ ಹಸುಬೆಗೆ ಯಡಕೆ ಹತ್ತು (ಎಕ. VI, ಕಡೂರು. ೯೬-೮೧; 1141); ಅರವಾನೆಣ್ಣೆ ಹೇಱಂಗೆ ನೂಱ ಎಲೆ ಹೊಱೆಯ ××ತು ಹಸುಬೆಗೆ ಅಡಿಕೆ ೨ ಭತ್ತಕೆ ಸೋಡಿಗೆ ಭತ (ಎಕ. VII, ಹೊನ್ನಾಳಿ. ೧೦೮-೫೬; 1203); ಎಲೆಯ ಹೇಱಂಗೆ ೫೦ . . . ಹಸುಬೆಗೆರಡಡಕೆ ೫ ಧರ್ಮವ ಹಲರು ನಡಸಿದರು (ಎಕ. XI, ಹೊಳಲ್ಕೆ. ೩೪-೩೯; 1522). ೩. ಹಸುಬೆಯ ಗುರುತಿರುವ ಕಲ್ಲು; ಹಸುಬೆಯ ಕಲ್ಲು: ಗುಂಡಿನಲಿ ಬರದ ಮುಕ್ಕೊಡೆ ಹಸುಬೆ ನೆಟ್ಟಿ ಅಲ್ಲಿಂ ತೆಂಕ ಹಿರಿಯ ಬೆಟ್ಟದ ತಪ್ಪಲ ಹಾಸಱೆಗಲ್ಲು (ಎಕ. II, ೩೩೪-೩೦; 1282); ಶ್ಯಾಲೆ ಮಾರಿ ಜಾಡನಾದ ಹಿಡಿದ ಕಬ್ಬಿಣದ ಕೋಲು ಹೇಲ ಮೇಗಳ ಹಸುಬೆ ಬೆಳ್ಳಿ ಮೂಡಿ ಬೆಳಗನೆ ಜಾವದಲ್ಲಿ ಯಳಂದಿರ ನಾಗಕೋರ್ಮನ ಹೆಡೆಯ ತುಳಿವವರು (ವಾತಾಚ. ೩-೧). **ಹಸುವೆ:** ೧. "ಮೂಲೀ = ಹಸುವೆಯುಂ, ಗೋಟುಂ" (ಕಾಶಕೃ. ೨೬೨).

ಪಸುಂಬೆಯ ಸೇಸೆ, ಪಸುಂಬೆ ಶೇಷೆ = ಒಂದು ಬಗೆಯ ತೆರಿಗೆ; ಹಸುಬೆಚೀಲದ ಸರಕಿನ ಮೇಲೆ ಹಾಕುವ ತೆರಿಗೆ (?): ಅಯ್ನೂರ್ವ್ವರುಮಿಟ್ಟು ಪಸುಂಬೆಯ ಸೇಸೆಯಲು ಪಾಗಮುಮಂ ಅಂಗಡಿಯಲು ಸೊಟಗೆ ಭತ್ತಮ ಬಿಟ್ಟರ್ (ಸೌಇಇ. IX-i, ೧೩೯-೩೯; 1074); ಗವಱೇಶ್ವರದೇವರ ಪ್ರತಿಷ್ಠಾಕಾಲದೊಳ್ಕಾಡಿದಾಯಸ್ಥಾನಮೆನ್ತೆನ್ದೊಡೆ ಪಸುಂಬೆಶೇಷೆ ದಣ್ಡಂ ದೋಷ ××× (ಶಾಸಪ. ೭೭-೨೩; 1005). **ಹಸುಂಬೆಯರು** = ಹಸುಬೆಚೀಲದಲ್ಲಿ ಸಾಮಾನುಗಳನ್ನು ಹೊತ್ತು ಮಾರುವವರು: ಇನ್ನು ಸೀವಳಿ ಗಂಧಹುಡಿ ಹಸುಂಬೆಯರಷ್ಟಶೆಟ್ಟಯರು ವ್ಯವಹರಿಪರು (ನಸಮೋ. ೨-೪೭). **ಹಸುಬೆಯ ಕಲ್ಲು** = ಹಸುಬೆಯ ಗುರುತಿರುವ ಗಡಿಕಲ್ಲು; ೫ ಶಾಸನಗಳಲ್ಲಿ ಲಿಂಗ ಮುದ್ರೆ, ಮುಕ್ಕೊಡೆ, ವಾಮನ ಮುಂತಾದ ಮುದ್ರೆಗಳಿರುವ ಕಲ್ಲುಗಳಿವೆ: ಚತುಶ್ಶೀಮೆಯನೂ ಹಸುಬೆಯ ಕಲ್ಲನೂ ನೆಡಿಸಿ (ಎಕ. IX, ಚನ್ನಪ. ೭೧-೩೨; 1331).

[ದೇ.॥ ತಮಿ. ಪಚುಮ್ಪ್ಯು; ಮಲ. ಪಯಿಮ್ಪು; ತುಳು. ಪಸುಂಬೆ, ಪಸಂಬೆ, ಪೈಂಬೆ]

ಪಸುಂಬೆವಣ (ನಾ). ಒಂದು ಬಗೆಯ ತೆರಿಗೆ: ಅಂಕವಣಂ ಪಸುಂಬೆವಣಮೆಂಬಿನಿತಱೊಳ್ (ಎಇ. XIII, ೩೩೩-೭೦; ?).

[ಪಸುಂಬೆ + ಪಣ್ಣ]

ಪಸುಗೂಸು, ಹಸುಕೂಸು, ಹಸುಗೂಸು (ನಾ). ಎಳೆಯ ಮಗು; ತೀರ ಚಿಕ್ಕ ಮಗು: ಪಸರಿಸೆ ಜರಾಯುಪಟಲಂ ಪಸುಗೂಸುಗಳೊಡಲೊಳವನಗಲ್ಚುವ ಮತಿಯಂ ವಸುಮತಿಗಱಿಪಿ . . . ಪ್ರಕಟಿಸಿದಂ (ಅದಿಪು. ೬-೬೫); ಪಸುಗೂಸು ಪಾಲ್ಗುಡಿವಂತೆ ಪಲ್ಲಿಲ್ಲದೆಮ್ಮೆ ಪುಲ್ಲಂ ಮೇವಂತೆ (ಧರ್ಮಾಮೃ. ೧೪-೪); ನಿಮ್ಮನಿಬರಂ ಪಸುಗೂಸುಗಳನಿನ್ನ ಪಹರಿಸಿ ಮಿಗೆ ಘಾಸಿಮಾಡಿದಡೇನು ಫಲವೆನಗೀಗಳ್ (ಬಸಪು. ೫೨-೩೭); ಪಸುಗೂಸು, ತಾಯಿಲ್ಲ (ಅಶ್ವತ್ಥಾ. ೨೧-೪೨೯). **ಹಸುಕೂಸು:** ಅಲದ ಮರನ ಹಸುಕೂಸು ನುಂಗಿತು (ಪುರಂದ. ೨-೧೯-೫); ಕೋಮಲವಾದ ಹಸುಕೂಸು, ಇಲ್ಲವೆ ನಿಸರ್ಗಶಕ್ತಿಗಳಾದ ನದೀನಿರ್ಝರಗಳು, ಗುಡುಗು ಮಿಂಚುಗಳು, ಗಾಳಿ ಮೋಡಗಳು ಯಾವ ಸಹಜತೆಯಿಂದ ವರ್ತಿಸುವುವು (ವಚರ. ೩೧). **ಹಸುಗೂಸು:** ಹಸುಗೂಸು ಬಸುಱ ಬಾಣತಿ . . . ಎಂಬವರ ಹಿಡಿದು ತಿಂಬ . . . ದೂಳಯ್ಯ ಕೇತಯ್ಯಗಳೆಂಬ ನೂಱುಮಡಕೆಗೆ ನಮ್ಮ ಕೂಡಲಸಂಗಮದೇವ ಶರಣೆಂಬುದೊಂದು ದಡಿ ಸಾಲದೆ (ಬಸಪ. ೫೫೫); ಹಸುಗೂಸಿನಂತೆ ಹಸಿತಂ ಮಿಗೆ ಸೋಂಕಿಲೊಳೊಪ್ಪಿ ಪುಷ್ಪಮಂಜರಿ ಪೊರಳುತ್ತುಮಿರ್ಪ ಲತೆಯಂ ಲಲಿತಾಂಗಿ ಮರಳ್ದು ನೋಡಿದಳ್ (ಲೀಲಾವ. ೭-೩೫); ಆ ಹಸುಗೂಸುಗಳು ತಾಯಿಯ ಇಂಪಾದ ಹಾಡನ್ನು ಕೇಳುತ್ತಿದ್ದಂತೆಯೇ ನಿದ್ದೆ ಹೋದರು (ಮಣಿಸ. ೭೧). [ಪಸ್ತು + ಕೂಸು]

ಪಸುಗೂಸುತನ (ನಾ). ಎಳೆಯತನ; ಹಸುಳೆತನ: ಪಸುಗೂಸುತನದೊಳಂ ಸಾಹಸವತಿಮಾನುಷವತೀಂದ್ರಿಯಂ ನಿನಗದಱಿಂ ಬೆಸಗೊಂಡಪೆವೊಂದಂ . . . ಕೃಷ್ಣ (ಜಗವಿ. ೪-೧೦೯); ಪುಟ್ಟಲೊಡನೆ ಪಸುಗೂಸುತನಂ ಪಱಿಪಟ್ಟುದು (ಜಯಕಾ. ೧೩-೪೮). [ಪಸುಗೂಸು + -ತನ]

ಪಸುಗೆ, ಪಂಚುಗೆ, ಪಶಿಗೆ, ಪಸಿಕಿ, ಪಸಿಕೆ, ಪಸಿಗೆ, ವಸಿಗೆ, ಹಸಿಗೆ, ಹಸುಗಿ, ಹಸುಗೆ, ಹಸೆಗೆ (ನಾ). ೧. ವಿಭಾಗ; ಹಂಚಿಕೆ; ಪಾಲು: ಕೀಟೊಕ್ಕಲ್ ಪಸುಗೆಗೆ ಮೂವತ್ತುಮತ್ತರುಮೊನ್ದು ತೋಂಟಮುಮಾಗೆ (ಸೌಇಇ. IX-i, ೭೭-೨೩; 992); ಪರಿವಿಡಿಯ ಕೇಳಿ ಪ್ರಸಾದವಸುಗೆಯನಿತ್ತು (ಸಿದ್ಧರಾ. ೮-೬೧); ಬಿಳಿಯಱುವೆಯಿಂದ ಸೋದಿಸಿ ಪಲ ಪಸುಗೆ ಮಾಡಿಕೊಳುತ (ಸೂಪಶಾ. ೩-೪೦); ಕೂರ್ಮೆಯಿನೆನಗೆ ತಿನವಡಿಸುವಾ ಪಸುಗೆಯ ಚಕ್ಕುಲಿಯಂ ಗಾರಿಗೆಯಂ . . . ನಿನಗಂ ಪಾಲಿತ್ತು ಮೊದಲೊಳರ್ಪಿಸುವೆಂ (ರಾಮಾಶ್ವ. ೮೮-೨೫). ೨. ವಿವೇಕ; ವಿವೇಚನೆ: ನೃಪ ಪರಮಾತ್ಮನ ಪಾಟಿಯ ಪಸುಗೆಯ ನುಡಿಗೆ ಪರಮಾರ್ತನಾಗಿ (ಪಂಪಭಾ. ೧೨-೧೭೬ ವ); ಬಗೆಯದೆ ಪಾಟಿಯಂ ಪಸುಗೆಯಂ ಗುಣಹಾನಿಯನಪ್ರಸಿದ್ಧಿಯಂ ಬಗೆಯದೆ ಬಂದ ದೂದವಿಗೆ ಚಿತ್ತಮನೊಪ್ಪಿಸಿ ಕೂಟದಾಸೆಯಂ ಬಗೆದಳ್ (ಪಂರಾಮಾ. ೪-೧೧); ಅಂತುಸಿರ್ವರ್ ಪಂತವಾತುಗಳ ಪಸುಗೆಗಳೊಳ್ (ಅಪ್ರತಿ. ೭೧-೧೫). ೩. ಹಂಚುವ ಗುಣ; ದಾನಶೀಲತೆ; ಔದಾರ್ಯ: ಕರ್ಣನೊಳ್ಜಸಮಂ ವಿಕ್ರಮದುರ್ಕುಮಂ ಪಸುಗೆಯಂ ಕೇಳುತ್ತೆ ಬಂದು (ನೇಮಿಪು. ೯-೬೭). ೪. ಉಚಿತವಾದುದು; ಯೋಗ್ಯವಾದುದು; ತಕ್ಕುದು: ಪೆಣ್ಬುಯ್ಯಲನಾರಯ್ಯದೋಸರಿಪುದೆನ್ನ ಗಂಡುಗೂಸುತನಕ್ಕೆ ಪಸುಗೆಯಲ್ತು (ಚಂದ್ರಪು. ೮-೬೬ ವ). ೫. ಔಚಿತ್ಯ; ಯುಕ್ತತೆ: ಮಾತಿನ ಪಸುಗೆ ಪಸುಗೆವಡೆದತ್ತೆನೆ ನುಡಿದಂ ಮಧುರಮೃದುಗಂಭೀರಧ್ವನಿಯಿಂ (ಅದಿಪು. ೨-೧೦); ಬಿಡದೆ ಬಣ್ಣಿಸುಗುಂ ಜಗಮೆಯ್ದೆ ಕೂಡೆ ರಾಜನನಿನತೇಜನಂ ಪಸುಗೆಗೋಜನನಾಶ್ರಿತಕಳ್ಪಭೂಜನಂ (ಎಇ. XVI, ೬೨-೩೯; 1081). **ಪಂಚುಗೆ:** ೧. 'ಪಂಚುಗೆಗೊಳ್' ಪರಾ. **ಪಶಿಗೆ:** ೧. ಆತಗಂಗಡಿ ಜಾತ್ರೆಯಲಿ ಫಲವಾತದಿ ನಿಶಿಲಿ ಪಶಿಗೆಯನು ತರಲು (ಬಿಜ್ಜಪು. ೪೫-೩೬). ೬. ವಸ್ತುವಿನ ರೂಪದಲ್ಲಿ ಕೊಡುವ ತೆರಿಗೆ: ಗೊಲ್ಲರ ಹಟಿಗೆ ಮ ೧ ಕುರುಬರ ದೊಡಿಗೆ ಮ ೧ . . . ಪಶಿಗೆ ಮುಂತ್ತಾದು ಸಂತ್ತಯಲ್ಲಿ ಪಾಸಿಗೆ ಸಕಲ ಬೆಹಾರದಲು (ಎಕ. XVI, ಗುಬ್ಬಿ. ೭೪-೬೧; ಸು. 1672). **ಪಸಿಕಿ:** ೬. ಬಿರಾ[ಡ]ವಿಲ್ಲ ಸುಂಕವಿಲ್ಲ ಪಸಿಕಿಯಿಲ್ಲ (ಸೌಇಇ. XV, ೨೬೮-೨೨; 1646). **ಪಸಿಕೆ:** ೭. (?): ಕರುಣಕಧರೆಯ ಮಹಾಜನತನ ಸಲುವುದು ಧರೆಯ ಪಸಿಕೆ ಪಳಿಗೆಗಳಾ (ದೇವಪು. ೩-೧೩೧). **ಪಸಿಗೆ:** ೬. ತೋಟಪೇಟೆಯಲು ಗಾಣಿಗರ ಯೆಂಣೆ ಪಸಿಗೆಯಿಷ್ಟನು ಕೊಟೆಉ (ಸೌಇಇ. IX-ii, ೪೭೭-೩೩; 1509); ಸಂತೆ ಪಸಿಗೆ ಮೂಲೆ ವೀಸ ಸಹಾ ಕೊಡಬೇಕು (ಎಕ. XI, ಹೊಳಲ್ಕೆ. ೭-೪೫; 1568); ಸಂತೆ ಪಸಿಗೆ ಗುಡಿ ಮುಂದಣ ಮನೆ ವಾರ ಸಹ (ಮೈಆರಿ. ೧೯೨೯, ೭-೨೧; 1673). **ವಸಿಗೆ:** ೬. ಮಲಪುರದ ಅಂಗಡಿಯ ಕಟ್ಟಿಸಿ ಸಂಥೆಯ ವಸಿಗೆಯ ಸರ್ವ್ವಮಾನ್ಯವ ಬಿ[ಟ್ಟು] ಸೂರ್ಯ್ಯನಾರಾಯಣದೇವಂಗೆ ಕೊಟ ಧರ್ಮಶಾಸನದ ಕ್ರಮವೆಂತೆಂದೆರೆ (ಸೌಇಇ. IX-ii, ೫೨೩-೧೩; 1528). ೫ ಇದು 'ಪಸಿಗೆ'ಯ ಅಪಲಿಖಿತವಿರಬಹುದು.

ಹಸಿಗೆ : ೧. ನಾಡೆಲ್ಲರೂ ನೆರೆದು ಕೂಡಿ ಮಾಡುವ ಗುಣಸಮೂಹ ಬೇಡ ಪಶುವನೆಚ್ಚು ಕೂಡಿ ಹಸಿಗೆಗೆ ಬಂದಂತೆ (ಸುಂಕಬಂ. ೮೩); ಧಾರುಣೀಪತಿ ರತ್ನಸಮುಚ್ಚಯಭಂಡಾರಸಹಿತ ಗಜಾಶ್ವರಥ ಪರಿವಾರವನು ಮಾಡಿದನು ಹಸಿಗೆಯನೆರಡುಭಾಗವನು (ಕುಮಾಅ. ೮-೭೯); ಅಯ್ಯನವರಿಗೆ ಕೊಟ್ಟ ಗ್ರಾಮದ ಹಸಿಗೆಯ ವಿವರ (ಸೌಇಇ. IX-ii, ೫೪೫-೧೫; 1532); ರಾಜ್ಯವನ್ನು ಹಸಿಗೆ ಮಾಡಿಕೊಂಡು ಪಾಂಡವರ ಸಂಗಡ ಅನುವಾಗಿರಿ (ಭೀಷ್ಮಪ. ೧೪೬). **ಹಸುಗಿ :** ೧. ಗದ್ದೆಯ ಎರಡು ಹಸುಗಿಯ ಪೊಂಬತ್ತು ಭಂಡಿ ಭತ್ತದ ಸ್ಥಳ (ಕಇ. V, ೩೨-೬೫; 1215). **ಹಸುಗೆ :** ೧. ಮಹಾಜನಗಳ್ತಮ್ಮ ಹಸುಗೆಗೆ ಬಂದಾಲದ ಹಾಡವಂ ಧಾರಾಪೂರ್ವಕವಾಗಿ ಕೊಟ್ಟ ಕಂಬಪೇಟ್ಟೂರುಮಂ . . . ಕೊಟ್ಟು (ಸೌಇಇ. IX-i, ೨೯೫-೨೧; 1172); ಕರೆಸಿ ಪಾಂಡುಕುಮಾರಕರನೀಧರೆಯ ಹಸುಗೆಯ ಮಾಡಿ ಕೊಡು (ಸಂಭಪ. ೨೧-೬೬); ಜನ್ನಕ್ಕೆ ಬಂದು ತಂತಮ್ಮ ಹಸುಗೆಯಂ ಮನಂದಣಿಯೆ ಕೈಯಾಱೆ ಕೊಂಡು (ರಾಮಾಶ್ವ. ೧೬೬-೧೧); ಬೇಟೆಯಲ್ಲಿ ದೊಡ್ಡ ಕಡವೆಯೊಂದನ್ನು ಕೊಂದು ಹಸುಗೆ ಮಾಡುತ್ತಿದ್ದಾಗ (ಕಾನೂರು. ೧೪೪). **ಹಸೆಗೆ :** ೧. ಶ್ರೀಮಾನ್ಯದ ಭೂಮಿ ಹದಿನೆಂಟರ ಹಸೆಗೆಯಲ್ಲಿ . . . ಮತ್ತರು ಸಾಲ್ಕು (ಸೌಇಇ. IX-i, ೩೨೯-೫೭; 1209). P ಇದು 'ಹಸುಗೆ'ಯ ಅಪಲಿಪಿತವಿರಬಹುದು.

ಪಸುಗೆಗೊಳ್ಗಂಡಂ = ಹಂಚುವ ಗುಣದಲ್ಲಿ ಶ್ರೇಷ್ಠನಾದವನು ; ದಾನವೀರನಾದವನು ; ಒಂದು ಬಿರುದು : ಪಣಿಧ್ವಜವಿರಾಜಮಾನ ಕಲಿಮುಟ್ಟೆಗಣ್ಡ ಪಸುಗೆಗೊಳ್ಗಣ್ಡಂ . . . ಶ್ರೀಮತ್ ಸೇನವಾರಂ (ಪಳ. VI, ಚಿಕ್ಕಮ. ೭೬-೮ ; ಸು. 1060 ?). **ಹಸುಗೆಯ ಇಲಾಖೆ** = ಪಡಿತರ ವಿಭಾಗ ; ರೇಶನ್ ವ್ಯವಸ್ಥೆಯನ್ನು ನೋಡಿಕೊಳ್ಳುವ ಆಡಳಿತ ವಿಭಾಗ : ಹಸುಗೆಯ ಇಲಾಖೆಯೆಂದರೆ ಅದಕ್ಕೆ ಮೇಲ್ವಿಚಾರಣೆಯೇ ಇಲ್ಲ (ಭ್ರಮಾನ. ೩೩). [ಪಸು$_1$+–ಗೆ]

ಪಸುಗೆಗೆಡು (ಕ್ರಿ). ವಿವೇಕವನ್ನು ಕಳೆದುಕೊಳ್ಳು ; ವಿವೇಚನೆಯಿಲ್ಲದಾಗು : ಒರ್ವರೊರ್ವರಂ ನಂಬದ ಬಗೆಯಿಂ ಕನಕಾಸ್ವಾದಮಿಲ್ಲದೆಯುಂ ಮರುಳ್ಮನಗಿ ಪಸುಗೆಗೆಟ್ಟು ಪಸಿಯ ಬಡಿಗೆಗಳನೆತ್ತಿಕೊಂಡು (ಅರ್ಥನೀ. ೪-೧೧೪ ಪ). [ಪಸುಗೆ + ಕೆಡು$_1$]

ಪಸುಗೆಗೊಳ್, ಪಂಚುಗೆಗೊಳ್, ಹಸುಗೆಗೊಳ್ (ಕ್ರಿ). ೧. ಭಾಗವನ್ನು ಪಡೆ ; ಪಾಲನ್ನು ಹೊಂದು : ಒಸೆದಿತ್ತುದನೊಡಬಡುವಳು ಪೆಣ್ ಗಂಡು ಪಸುಗೆಗೊಂಬನು ಬಲ್ಮೆಯೊಳು (ಹರಿಪ. ೫-೧೦); ಎಮ್ಮಂದಿಗರೆಂತಂತು ಪಸುಗೆಗೊಂಡುಂ (ರಾಮಾಶ್ವ. ೪೩-೧). ೨. ಹಂಚಿಕೊಳ್ಳು ; ಭಾಗಮಾಡಿಕೊಳ್ಳು : ಬೇಂಟೆಯಾಡಿದ ಮೃಗಂಗಳಂ ನೀಮೆ ಪಸುಗೆಗೊಂಡು ಹಬ್ಬಮಂ ಮಾಡಿ ಉಣ (ಚಂದ್ರಸ. ೩೯-೧೧). **ಪಂಚುಗೆಗೊಳ್** : ೧. ವಿಂಶತೀಶಂಗೆ ಲೇಶಮುಂ ಪಂಚುಗೆಗೊಂಡ ಕಾರಣವಿಲ್ಲ (ಭಾರಶಾಂ. ೫೮೧). **ಹಸುಗೆಗೊಳ್** : ೧. ಕತ್ತಲೆ ಹಸುಗೆಗೊಂಡುದು ವಲಯಂಭೂಧರದಪರಭಾಗವನು (ತಿಮ್ಮಅ. ೬-೧೦೮). [ಪಸುಗೆ + ಕೊಳ್$_1$]

ಪಸುಗೆದಪ್ಪು (ಕ್ರಿ). = ಪಸುಗೆಗೆಡು : ಪೂಜ್ಯರುಮೇಳೆ ಪೇಟ್ಟು ಪಸುಗೆದಪ್ಪುವರ್ (ಅರ್ಥನೀ. ೨-೫೩). [ಪಸುಗೆ + ತಪ್ಪು$_1$]

ಪಸುಗೆನೀಡು (ಕ್ರಿ). ಹಂಚು ; ವಿತರಣೆ ಮಾಡು ; ಪಾಲನ್ನು ಕೊಡು : ಪಸುಗೆ ನೀಡಂಕಂಗಳಂ ಸತಿಯರ್ಗೆ (ಶ್ರೀರಾಮಾ. ೧೪-೩೫೮). [ಪಸುಗೆ+ನೀಡು$_1$]

ಪಸುಗೆವಡೆ (ಕ್ರಿ). ಔಚಿತ್ಯವನ್ನು ಪಡೆ ; ಯುಕ್ತವಾಗು : ಮಾತಿನ ಪಸುಗೆ ಪಸುಗೆವಡೆದತ್ತೆನೆ ನುಡಿದಂ ಮಧುರಮೃದುಗಂಭೀರಧ್ವನಿಯಿಂ (ಅಪಿಪು. ೨-೧೦). [ಪಸುಗೆ + ಪಡೆ$_1$]

ಪಸುಗೆವೋಗು (ಕ್ರಿ). ೧. ಪಾಲಾಗು ; ಹಂಚಿ ಹೋಗು. ೨. (ಆಲಂ) ಕುಗ್ಗು ; ಕಡಮೆಯಾಗು ; ಕ್ಷೀಣಿಸು : ದಮಿತಾರಿ . . . ಪಸುಗೆವೋಗದ ಶೌರ್ಯಮುಮಂ ಸೂಱೆವೋಗದೇಜುಮಂ . . . ಪೊಗೞಿಸುವೆನೆಂದು ತಱಿಸಂದು (ಶಾಂತಿಪು. ೪-೩೬ ಪ); ಮಕರಂದಂ . . . ಮನದೊಳೆ ಬೆರ್ಚ ಬಸಮಲ್ಲದ ಬೇವಸದ ಬಿಣ್ಪು ಪಸುಗೆವೋಗೆ ಲಾಳವಮನಪ್ಪುಕೆಯ್ದಂತಿರೀಪದುನ್ಮಿಷಿತವದನಾರವಿಂದನಾಗಿ (ಲೀಲಾವ. ೪-೫೬ ಪ). [ಪಸುಗೆ+ಪೋಗು$_1$(<ಪೋ$_1$)]

ಪಸುನೊರೆ (ನಾ). (ಹುಲ್ಲಿನ ರಸದಿಂದ) ಹಸುರಾದ ನೊರೆ : ಏಣೇಸ್ಯಕ್ಷದಿಂ ಸೂಸಿದ ಪಸುನೊರೆಯಿಂ ನಾಂದು ನಿಂದೆತ್ತುಗುಂ ಸೂಕರಪೋತವ್ಯಸ್ತಮುಸ್ತಾಸುರಭಿರಸರಜಃಕಾತರಂ ಮಾತರಿಶ್ವಂ (ಲೀಲಾವ. ೬-೧೦೪). [ಪಸು$_3$+ನೊರೆ$_2$]

ಪಸುಪತಿ (ನಾ). ಜೀವಿಗಳ ಒಡೆಯ ; ಶಿವ : "ಪಸುಪತಿ–ಪಶುಪತಿ = ಶಿವ" (ತದ್ಭವಕೋ. ೨೫); ಪೂರ್ವಪದಂ ತದ್ಭವಮಾದುದರ್ಕೆ . . . ಪಶುಪತಿ–ಪಸುಪತಿ (ಶಬಿದ. ೨೮೯ ಪ್ರಯೋ). [ಪಸು$_4$+ಪತಿ$_2$]

ಪಸುಪುಲ್ಲೆ (ನಾ). ಎಳೆಯ ಹುಲ್ಲೆ ; ಮರಿ ಜಿಂಕೆ : ಪಸಲೆಯೆಡೆಗೈತಂದ ಪಸುಪುಲ್ಲೆಯಂಕ್ಷಿಗಳ ಪೊಸಬೇಟೆಮಂ ಕಂಡು ಪಾರ್ದು . . . ಕೆಡೆಪುತಿರೆ ಕೈರಾತಿಯುಂ (ವೆಂಕಾರಾ. ೩-೬-೫೫). [ಪಸು$_3$ + ಪುಲ್ಲೆ$_1$]

ಪಸುಪೂರಿ (ನಾ). ಒಂದು ಬಗೆಯ ತಿನಿಸು (?) : ಬಟಾಕ್ಕ ಪೊಸತಪ್ಪ ಪಸುಪೂರಿ [ಪಾಠಾಂ.ಪಸುಂಪತಿ, ಪಿಸುಂಭೂರಿ]ಗಳ ಮಿಸುಪ ಪುಳಿಗೆ ಬಾಯೊಱೆತು ಬಾತಂತಿರೆ ತಿಂದು ಕೈಗರ್ಚ ಮೆಚ್ಚಿ ಹರಿಹರಿ ಎನ್ನುತೆದ್ದು (ಪುಣ್ಯಾಸ್ರ. ೩-೪೮ ಪ). 'ಪಸುಂಗುರಿ, 'ಪಸುಂಬರಿ' ಪರಾ. [?+ಪೂರಿ]

ಪಸುಪೊನ್ 'ಪಸುರ್ವೊನ್' ನೋ.

ಪಸುಬ 'ಪಸುಂಬ' ನೋ.

ಪಸುಬೆ 'ಪಸುಂಬೆ' ನೋ.

ಪಸುಬೆವಳ (ನಾ). ಹಸುಬೆಚೀಲದಲ್ಲಿ ವಸ್ತುಗಳನ್ನು ತುಂಬಿ ವ್ಯಾಪಾರ ಮಾಡುವವನು ; ವೈಶ್ಯ ; ವ್ಯಾಪಾರಿ : "ಪಸುಬೆವಳನೆಂದು ವೈಶ್ಯನು" (ಕಬ್ಬಿಕೃ. ೩೩); ಎತ್ತ ನೋಡಿದಡತ್ತ . . . ಕಸ್ತೂರಿ ಜವಾದಿ ಕುಂಕುಮ ಚಂದ್ರವಿಕ್ರಯದ ಪಸುಬೆವಳರುಗಳ ಥರದ (ರುಕ್ಮಾಂಗ. ೩-೨೨). [ಪಸುಬೆ(<ಪಸುಂಬೆ)+–ವಳ]

ಪಸುಮಗ, ಹಸುಮಗ (ನಾ). ಎಳೆಯ ವಯಸ್ಸಿನ ಮಗ ; ಚಿಕ್ಕ ಹುಡುಗ : ಏಂ ನಿಷ್ಕರುಣೆಯೊ ಪಸುಮಗನೆನ್ನದೆ ಮುತ್ತಾಣ್ಮನೆನ್ನದೆ . . . ಕೊಂದಪಂ ಯಮರಾಜಂ (ಅಜಿಪು. ೧೦-೨೫). **ಹಸುಮಗ:** ಕರ್ಮಮಂ ಕೂರ್ತು ಮಾಡಿದ ಕಾಲವುಂಬ ಕಾಲಂ . . . ಹಸುಮಗನಾದ ಕಾಲವಾ ಪ್ರಾಯವಪ್ಪಾ ಕಾಲವು (ವೀರೈಪು. ೪-೫-೪೬); ಹಸುಮಗನಾದ ಪುರಂದರವಿಠಲ (ಪುರಂದ. ೧-೧೬೦-೩); ಸ್ತ್ರೀತಿಯ ಭರದಿಂದ ಆ ಹಸುಮಗನನ್ನು ಬಿಗಿದಪ್ಪಿಕೊಂಡು . . . ಹರಸಿ ಹೊರಟುಹೋದನು (ಮುಂಬಯಿ. ೫-೧೨೭); ಹೂಡುವುದು ಹೊಸಬಂಡಿ, ಹೊಡೆಯುವನು ಹಸುಮಗ (ಹಳೃಬಾ. ೩೪). [ಪಸು$_3$ + ಮಗ$_1$]

ಪಸುಮಗು, ಹಸುಮಗು (ನಾ). = ಪಸುಗೂಸು. **ಹಸುಮಗು.**

ಪಸುಮಕ್ಕಳ್, ಹಸುಮಕ್ಕಳು (ಬಹುವ) : ಪಸುಮಕ್ಕಳಂ ಗೂಳಿ ತಗುಳ್ದಂತೆ (ಧರ್ಮಾಮೃ. ೨-೭೧); ಹಸುಮಕ್ಕಳೊಡನಾಟ ಶಿವಭಕ್ತಿಯಾ ಬೇಟವಾಗೆ (ಸೌಂದಪು. ೩-೧೦); ಹಸುಮಕ್ಕಳ ಕಿರೋಮಣಿಯೆ ಸಿಂಗರದ ಕಣಿಯೆ (ಚಿಪು. ೫-೨೮); ಹಸುಮಕ್ಕಳಾದಿದರ ಹಸನವ್ವ ಅಂಗಳ (ಜನಗೀ. ೬೧); ಯುಗ–ಯುಗಗಳ ಹಣೆಬರಹವ ಒರಸಿ

ಮನ್ವಂತರಗಳ ಭಾಗ್ಯವ ತೆರೆಸಿ . . . ಹೊಸಗಾಲದ ಹಸುಮಕ್ಕಳ ಹರಸಿ ಹಕ್ಕಿ ಹಾರುತಿದೆ ನೋಡಿದಿರಾ ? (ಗರಿ. ೫೭-೪). [ಪಸು$_3$ + ಮಗು]

ಪಸುಮಱಿ (ನಾ). ಎಳೆಯ ಮರಿ; ಸಣ್ಣಮರಿ; ಶಾಬ: ಇಸೆ ಪಸು[ಪಾಠಾಂ.ಶು]ಮಱಿ ಯೋನಿಮುಖಪ್ರಸವಕ್ಕಲಸಿದವೊಲೇಱ ಬಾಯಿಂ ತಾನೊಂದಸುವೆರಸು ಬೀಟ್ಟುದುಂ (ಯಶೋಚ. ೩-೫೬).

[ಪಸು$_3$ + ಮಱಿ]

ಪಸುಮೊಗ, ಹಸುಮೊಗ (ನಾ). ಹಸುವಿನ ಮುಖ; ಗೋಮುಖ. **ಹಸುಮೊಗ:** ಶನಿ ತಾನೆ! ಸಾಧುವಿದು ಹಸುಮೊಗದ ಹಸಿದ ಹುಲಿಯಂತೆ (ಕಎಪು. ೪೩-೮).

ಪಸುಮೊಗದ ಬಗ್ಗ = ಗೋಮುಖವ್ಯಾಘ್ರ; ಸಾಧುವಿನಂತೆ ತೋರುವ ದುಷ್ಟ,-ಕಪಟ: ಪಸುಮೊಗದ ಬಗ್ಗನಾ ಖೂಳನ್ (ಶ್ರೀರಾಮಾ. ೨೫೫-೭೩೧). [ಪಸು$_4$ + ಮೊಗ]

ಪಸುರ್$_1$ (ಕ್ರಿ). ಹಸುರುಬಣ್ಣವನ್ನು ಹೊಂದು; ಹಸುರಾಗು: "ಪಸುರ್-ಹರಿತಭಾವೇ" (ಶಮಧಾ); ಕಿರಣಂಗಳ ಕಾವುಗಳೆನೆ ಹರಿದಶ್ವಂಗಳೆ ಪಸುರ್ತ ಪಸುರೆಲೆಯೆನೆ ತೋರ್ಪರುಣದಿನಮಣಿ ಬಯಲ್ದಾವರೆಯನೆ ಪೋಲ್ತಿರ್ದನಪರಗಿರಿವರಶಿರದೊಳ್ (ಕಾಸ್ಮಸಾ. ೮೮೦ ಶೂದ್ರಕ); ಪೊಳೆವ ಮರೇಂದ್ರಗೋಪದ ಪಸುರ್ತೆಳವುಲ್ಗಳ ತಳ್ತ ಕಾರ್ಮುಗಿಲ್ಗಳ (ಪಂಪಭಾ. ೬-೨೫); ಮಿಂಚು ಕಣ್ಗಳೊಳ್ ಮೊಳೆತುದು ಶಕ್ರಚಾಪಲತೆ ಪೊಣ್ಮೆ ಪಸುರ್ತುದು (ಅರ್ಧನೇ. ೪-೬೦).

ಪಸುರ್$_2$, ಪಸಿರ್, ಪಸುರು, ಹಸರು$_2$, ಹಸಿರು, ಹಸುರು (ನಾ). ೧. ಪಚ್ಚೆಬಣ್ಣ; ಹರಿದ್ವರ್ಣ; ಮರಕತವರ್ಣ: "ಶ್ಯಾಮಂ, ಶ್ಯಾಮಳಂ . . . ಹರಿತ್-ಈ ೬ ಪ(ಹ)ಸುರ್" (ಹಲಾಯು. ೧೨೧-೪); ಜಾಗಂಗಳ ಪಸುರ್ಗಳೆಸೆಯೆ ರತ್ನದ ಕೇರ್ಗಳ್ ಜಾಗಂ ಬೊಯ್ದಂತಿರೆ ಪರಭಾಗಂಬಡೆದುವು ಮೀಹಗೇಹಾಂತರದೊಳ್ (ಆದಿಪು. ೪-೩೧); ಮಿಸುಪ ಕದಳೀವನಂಗಳ ಪಸುರಿಂ ಬಾಸಣಿಸಿ ದೆಸೆಗೆ ಪೊಸ ನುಣ್ಬೆಳಗಂ ಪಸರಿಸುವ . . . ನಗರಿ ಸೊಗಯಿಸಿ ತೋರ್ಕುಂ (ಕಾದಂಪೂ. ೨೯೯); ಗಗನದೆ ಚರಿಸುವ ಗಿಳಿಯ ದೇಹಚ್ಛವಿ ಮಿಗೆ ನಮ್ಮ ಪಸುರ್ಗೆಣೆಯಹುವೆ (ಕಂನವಿ. ೫-೭೫). ೨. ಹಳದಿ ಬಣ್ಣ; ಅರಿಸಿನದ ಬಣ್ಣ: 'ಪಸುರ್ವೊನ್' ಪರಾ. ೩. ಕಪ್ಪುಬಣ್ಣ; ಕಾಳವರ್ಣ: ಮಗಮಗಿಸಿತ್ತು ಕತ್ತುರಿಯ ಕಿತ್ತಲಗಂತದು ಪಲ್ಲ ಮಿಂಚು ಮಲ್ಲಿಗೆಯ ತುಱುಂಬು ಮೆಯ್ಯ ಪಸುರೊಪ್ಪಿದುದಾತನ ವಾರಿಯಿಂದು ವೇಳೆಗೆ ಬರು ತಿರ್ದಪಂ ಸಿತಗನೆಂಬುದುಮಂಜಿ ಬೊಜಂಗನೆರ್ದು ಮೆಲ್ಲಗೆ ಪೊಱಮಟ್ಟು ಪೋಗೆ (ಲೀಲಾವ. ೨-೫೬). 'ಪಸುರ್ವಾಸೆ' ಪರಾ. ೪. ನೀಲಿಬಣ್ಣ; ನೀಲವರ್ಣ: 'ಪಸುರ್ಗಟ್ಟು' ಪರಾ. ೫. ಎಳೆಹುಲ್ಲು; ಗರಿಕೆ: (ಕ). ೬. ಸಸ್ಯಸಂಪತ್ತು; ಪೈರು: 'ಪಸುರಾದಾಯ' ಪರಾ. ೭. ಒಂದು ಬಗೆಯ ರತ್ನ; ಪಚ್ಚೆ; ಮರಕತ: 'ಪಸುರ್ಗಂಕಣ' ಪರಾ. ೮. ಎಳೆತನ; ಬಲಿಯ ದಿರುವಿಕೆ: (ಕ). ೯. ಹೊಸತನ; ತಾಜಾ; ನವೀನತೆ: (ಕ). 'ಪಚ್ಚೆ$_1$', 'ಪಯಿರ್', 'ಪಸಿ$_3$', 'ಪಸು$_3$' ಪರಾ. **ಪಸಿರ್:** ೧. 'ಪಸಿರ್ಗಲ್' ಪರಾ. ೧೦. (ಆಲಂ) ಯೌವನದ ಕೆಚ್ಚು,-ಶೌರ್ಯ: ಪರಿಯಿಸುವೆನೆಂಬನ ಪಸಿರ್ಪರೆಗುಮೀಯತಿ ವರ್ತಿಯಂ. ವಶವರ್ತಿ ಮಾಡಲುಮಂಕುಶಮಿಲ್ಲದಂಕಿಸಲುಂ ನಿನಗೆ ತೀರ್ವುದು (ಅರ್ಧನೇ. ೫-೧೧೫ ವ). **ಪಸುರು:** ೧. ಪುರವೆಂಬ ನಾರಿಯಾ ಪಸುರ ಪಟ್ಟಿಯನುಟ್ಟ ತೆಱದಿಂದ ಶಾಲಿಯ ಗದ್ದೆ ಪಿರಿದು ಶ್ರೀರಂಗಪಟ್ಟಣವ ಬಳಸಿಕೊಂಡಿರುವ ಸಂಭ್ರಮವನೇನೆಂಬೆ (ಕಂನವಿ. ೫-೬೩); ಎನಿತು ಪಸುರೊಳ್ ತೆರಮದೆನಿತು ಮಂಜಳ ಕೆಂಪದೆನಿತು ನಾಲಗೆ ನುಡಿಯದಿರ್ಪ ಪೊಗರೆನಿತು ? (ಕಾಲೂರ. ೧೧೯-೨೫೦). ೩. ಇಂಗಿದಧರಂ ಪಸುರ ದಂತಂಗಳುಂ ಬೆಳರ್ತ ಕಂಗಳುಂ ಬೆರೆತ ಮೊಗಮುಂ . . . ದುರ್ಗಂಧದಿಂ ತುಂಬಿರೆ (ಮಹಾವಿ. ೬-೪೯). **ಹಸರು$_2$:** ೧. ಅಂದ ವಾದಾ ಹಸರು ಮೇಲ್ಬಂದಿಯನುಟ್ಟಳು ದೂತಿ (ಶ್ರೀಕೃಷಾ. ೧೭). **ಹಸಿರು:** ೧. ಏನು ಹಸಿರು! ಏನು ಹಳದಿ! ಸುತ್ತುಮುತ್ತು ನೋಡು ಕೆಳದಿ! ಹುಲ್ಲು ಹೂವು ಆದರೇನು, ಹಬ್ಬದುದ್ಬಿನಲ್ಲಿವೆ (ಸಖೀಗೀ. ೭೭-೧); ಮೈಹಸಿರು ಕೆಂಚೂಚು ಕರಿಯ ಕೊರಳು ಪಚ್ಚೆ, ಮಾಣಿಕ, ಕೆಚ್ಚ ನೀಲ ಹರಳು (ಗಂಗಾತ. ೨೮-೧೧). ೩. ಹಸಿರಿನೇರುವೆ ಹಗಲ ಬೆಳಕಿನೊಳು ಬೆರೆದಂತೆ ಸಂಜೆಮುಗಿಲಿನ ಮಳಲೊಳೋಲಗಿಸುವಂತೆ . . . ನನ್ನರಿವಿನೀ ಮನೆಯೊಳಂಜಿಯಡಗಿರುವಂಥ ಮುದದಾಪ್ತಗೆ ಸನ್ನೆಗೈವನು ಹೊರಗೆ ಚೆಲುವುದೊರೆ ಬಳಿಯ ಸಾರೆಂಬ ಪರಿಗೆ (ಮಲಿದೇ. ೫೧-೧). ೫. ಮಳೆಯು ಎಳೆಯುವ ತೇರಿಗೆ ಹಸಿರು ಏರಿದೆ ಏರಿಗೆ ಹಸಿರು ಸೇರಿದೆ ಊರಿಗೆ ಹಸಿರು ಚಾಚಿದೆ ದಾರಿಗೆ (ಗಂಗಾತ. ೧೨-೪). ೬. ಉಲ್ಲಾಸದ ಹಚ್ಚನೆಯ ಹಸಿರು ಅಲ್ಲಿ ಗೋಚರಿಸದು (ಹಾಹುತ್ತ. ೯೯). 'ಹಸಿರುವಾಣಿ' ಪರಾ. ೯. ಚೇತನ ಪ್ರತ್ಯೇಕ ಚಿದ್ಭೂತಿಯೇ, ನಲವೆ. ನಿನ್ನ ಹಸಿರಾರುವುದು ನುಡಿತೇರು ಹರಿಯೆ ಸೂಕ್ಷ್ಮ ನೀ, ದಿನಬಳಕೆ ನುಣ್ಣ ಮಾತಿದು ತೋರ ಅರಿದಿದಕೆ ನಲುಗಿಸದೆ ನಿನ್ನ ಹಿಡಿಯೆ (ಮಲಿದೇ. ೪೩-೨); ಅವರು ಹೇಳಿದ ವಿಚಾರ ಮನಸ್ಸಿನಲ್ಲಿ ಇನ್ನೂ ಹಸಿರಾಗಿದೆ (ರೂಢಿ). **ಹಸುರು:** ೧. "ಶ್ಯಾಮಳಂ ಶ್ಯಾಮಂ ಪಲಾಶಮೆಂದರೆ ಹರಿದ್ರಾಮ [ಭ]ಮೆನೆ ಹಸುರು" (ಮಂಗರಾ. ೧೩೧-೨೧); ಹಸುರುಮೈ ಹಾವಿನಾಭರಣ ಬಿಡುಮಂಡೆ . . . ರುಂಡಮಾಲೆ ಗಜಗಮನ ಕೆಂಪಿನ ಪುಷ್ಪಸರಮೊಪ್ಪುವಾ . . . ದೇವಾಂಗನೆಯರೈತಂದು ಕಂಡರಪ್ರತಿಮ ಸಿದ್ಧೇಶ್ವರನನು (ಸಿದ್ಧರಾ. ೪-೮); ಹಕ್ಕಿಯಿಂಪು; ಹಸುರ ಸೊಂಪು; ಅಲ್ಲಿ ಚಳಿಯು ಕಚ್ಚದು (ಅನಿಕೇ. ೧೬-೧೭). ೫. ವಿಷಯವೆಂಬ ಹಸುರನೆನ್ನ ಮುಂದೆ ಪಸರಿಸಿದೆ ಯಯ್ಯಾ (ಬಸವ. ೫೧); ಬಸವನೆಂದರೆ ಪಾಪ ದೆಸೆಗೆಟ್ಟು ಹೋಗುವದು ಬಿಸಿಲಿಂಗೆ ಹಸುರೊಳೆಸೆದಿರ್ಪ ಹನಿಯಾಱು ಹುಸಿದು ಹೋದಂತೆ (ಸರ್ವಜ್ಞ. ೨೯೪); ಒಣಹುಲ್ಲಿನ ನಡುವೆ ಹಸುರು ಬೆಳೆದು ಇಣುಕಿ ನೋಡುತ್ತಿತ್ತು (ಯೋಧಪು. ೧). ೭. ಅವರು ಕೆಂಪು-ಹಸುರಿನ ಬಳೆ ಮಾಡಿಸಿಕೊಂಡಿದ್ದಾರೆ (ರೂಢಿ). ೧೧. ಚರ್ಮದ ಮೇಲೆ ಹಾಕಿಸಿಕೊಳ್ಳುವ ಹಚ್ಚೆ: ಅನಾಗರಿಕರು ಹೇಗೆ ಮೈಗೆ ಬಣ್ಣ ಬಳಿದುಕೊಂಡು ಹಸುರು ಚುಚ್ಚಿಸಿಕೊಂಡು ಅತ್ಯಂತ ಹೆಮ್ಮೆಪಡುತ್ತಾರೆಯೊ . . . ಹಾಗೆಯೇ ನಮ್ಮ ವಿಲಾಯತಿ ವಿದ್ಯೆಯನ್ನು ನಾವು ಮೈಮೇಲೆ ಲೇಪಿಸಿಕೊಂಡು ದಂಭದಿಂದ ದಾಪುಗಾಲು ಹಾಕುತ್ತ ನಡೆಯುತ್ತೇವೆ (ನಿಬಂಧ. I, ೨೮೭).

[<ಪಸುರ್$_1$]

ಪಸುರಂಗಿ, ಹಸುರಂಗಿ (ನಾ). ಹಸುರುಬಣ್ಣದ ಅಂಗಿ: ತಳಿರ್ಗಳ ಮರ್ಕೆವೆತ್ತ ತಲೆಕಟ್ಟು ಲತಾಂತದ ಮಾಲೆ . . . ಪಸುರಂಗಿಗೆ ಪೀಲಿಯ ಪಕ್ಕಜಲ್ಲಿ . . . ಒಪ್ಪೆ (ಶಬಶಂ. ೩-೧೬). **ಹಸುರಂಗಿ:** ಹಸುರಂಗಿಗಳ ತೊಟ್ಟನು . . . ಕಿರಾತವೇಷದ ವಿಗಡ ದೇವರ ದೇವ (ಕುಸ್ಮಾಅ. ೫-೨೮).

[ಪಸುರ್$_2$ + ಅಂಗಿ$_2$]

ಪಸುರಾದಾಯ (ನಾ). ಬೆಳೆಗಳ ಮೇಲೆ ಹಾಕುವ ತೆರಿಗೆ ಮತ್ತು ಅದರಿಂದ ಬರುವ ಆದಾಯ: ಶುಕ್ರುವಾರ ಸಂಥೆಯಲು ಹುಟ್ಟು ವಂಥಾ ಸುಂಕ ಸುವರ್ನಾದಾಯ ಪಸುರಾದಾಯ ಸರ್ವಾದಾಯವನೂ ಇ ಲಕ್ಷ್ಮೀದೇವಿ ಅ(ಂ)ಮ್ಮನವರಿಗೆ . . . ಧಾರೆನೆರಸಿ ಕೊಡಿಸಿದ ಸಂಥೆಯ ಸರ್ವಾದಾಯದ ಧರ್ಮಶಾಸನ (ಸೌಇಇ. IX-ii, ೫೮೪-೧೫; 1538).

[ಪಸುರ್$_2$ + ಆದಾಯ]

ಪಸುರಿಡಿ (ಕ್ರಿ). ಹಸುರಿನಿಂದ ತುಂಬು,—ಕೂಡು: ಪಸುರಿಡಿದು

ಕಣಿಶಮಂ ಕರ್ಚಿ ಸೊಲ್ಲಲೇ ಪಾಲ್ದುಂಬಿ ಕಾಯ್ವಲಂಗೂಡಿ ಪೊಂಬೆಳಸಾಗಿ ಪಲವು ಪರಿಯಿಂ ನೆಲ್ಲ ಗರ್ದೆಗಳೊಪ್ಪಿದವು (ಪದ್ಮರಾ. ೮-೧೨).

[ಪಸುರ್$_2$ + ಇಡಿ$_2$]

ಪಸುರು 'ಪಸುರ್$_2$' ನೋ.

ಪಸುರುಗೂಳು 'ಪಸುರ್ಗೂಳ್' ನೋ.

ಪಸುರುಡಿಗೆ, ಹಸುರುಡಿಗೆ, ಹಸುರುಡುಗೆ (ನಾ). ಹಸುರು ಬಣ್ಣದ ಉಡುವು; ಹಸುರಿನ ಉಡುವು; ℙ ಹರಕೆಯು ನೆರವೇರಿದಾಗ ಉಡುವ, ಬೇವು ಮೊದಲಾದ ಸೊಪ್ಪಿನ ಉಡುಗೆ ಎಂಬರ್ಥದ ಸೂಚನೆಯೂ ಇಲ್ಲಿದೆ: ಸಾನುರಾಗದೊಳುಟ್ಟ ಪಸುರುಡಿಗೆಯನೆ . . . ನಗರಮಂ ಬಳಸಿದುಪವನಂಗಳ್ಮೆಱೆವುವು (ಜೈಮಿಭಾ. ೩-೨೨); ಪುರಲಕ್ಷ್ಮಿ ತನ್ನೊಳಗಿರುವರಿಗಿಷ್ಟಾರ್ಥ ಪರಕೆ ಕೈಗೂಡೆ ಸಂತಸದೆ ಪಿರಿದುಟ್ಟ ಪಸುರುಡಿಗೆಯೊಯೆಂದೆನಲಾ ವರ ವನ ಬಳಸಿಕೊಂಡಿಹುದು (ಕಂನವಿ. ೨-೪೦). **ಹಸುರುಡಿಗೆ:** ಹೊಲದ ಹಸುರುಡಿಗೆ, ನೇತ್ರಾವತಿಯ ಮಾಲೆ ಮಲೆಗಾಳಿ ಸಾರುತಿಹುದಿಂತು ತವಲೀಲೆ (ಕಎಪು. ೩೧-೩). **ಹಸುರುಡುಗೆ:** ಚಿಗುರಿಸಿತು ತಾಯ್ನೆಲದ ಹಸುರುಡುಗೆಯೊಡಲಂ (ಕಾಲೂರ. ೪೫-೬೩). [ಪಸುರು(<ಪಸುರ್$_2$) + ಉಡಿಗೆ$_1$(<ಉಡುಗೆ)]

ಪಸುರುಡೆ, ಹಸುರುಡೆ (ನಾ). = ಪಸುರುಡಿಗೆ: ಬನದೇವಿ . . . ಪಸುರುಡೆಯನುಟ್ಟು ಪೊಂದೊಡವೆಗಳ ತೊಟ್ಟು . . . ಕಾದಿಹಳೊ ಎಂಬಂತೆ ತೋರುತಿದೆ (ಚಂದ್ರಸ. ೭೧-೧೦). **ಹಸುರುಡೆ:** ಹಸುರುಡೆಯ ಬನದೇವಿ ತೇಲಿ ತೇಲಿ ಪ್ರವೇಶಿಸುತ್ತಾಳೆ (ಬಿಗಾಳಿ. ೭೪); ನೆಲತಾಯಿಯು ಮತ್ತೆ ಹಸುರುಡೆ ಉಟ್ಟು ಕಳಕಳಿಸಿದಳು (ದೇಶಾಂಕ. ೬).

[ಪಸುರು(<ಪಸುರ್$_2$) + ಉಡೆ$_2$]

ಪಸುರುವಣಿ 'ಪಸುರ್ವಣಿ' ನೋ.

ಪಸುರುವೊಗರ್ (ನಾ). ಹಸುರಿನ ಕಾಂತಿ; ಹಸುರುಬಣ್ಣದ ಛಾಯೆ: ಕೊರ್ವಿ ನಳನಳಿಸಿ ನೀಳ್ದುಱೆ ಬೆಳೆದ ರಸದಾಳಿಗರ್ವುಗಳ ಸೋಗೆಗಳ ಪಸುರುವೊಗರಾಗಸಕೆ ಪರ್ವುತಿಹುದಾ ನಾಡೊಳೆಲ್ಲಿಯುಂ (ಜೈಮಿಭಾ. ೩-೫). [ಪಸುರು(<ಪಸುರ್$_2$) + ಪೊಗರ್$_2$]

ಪಸುರುಳಿ (ಕ್ರಿ). ಹಸುರುಬಣ್ಣವು ಹೋಗು,-ಮಾಸು: ಪಸುರುಳಿದ ನಾಗವಲ್ಲಿಯು ಪರ್ನಕರ್ಪೂರದೆಸೆವ ಚೂರ್ನಷ್ಟಭಾಗದ ಕ್ರಮುಕಮುಮ ಪೊನ್ನ ಸಂಬಳಿಗೆಯೊಳಗೆ ತೀವಿ (ನವಮೋ. ೧೪-೧೬).

[ಪಸುರು(<ಪಸುರ್$_2$) + ಉಳಿ$_1$(<ಉಟಿ$_1$)]

ಪಸುರೆಲೆ ಹಸುರೆಲೆ (ನಾ). ಹಸುರಾದ ಎಲೆ: ಹರಿದಶ್ವಂಗಳೆ ಪಸುರ್ತ ಪಸುರೆಲೆಯೆನೆ ತೋರ್ಪರುಣದಿನಮಣಿ ಬಯಲ್ದಾವರೆಯನೆ ಪೋಲ್ತಿರ್ದಂ (ಕಾವ್ಯಸಾ. ೮೮೦ ಶೂದ್ರಕ); ಆಭರಣದೊಳಗುರ್ಚಿದ ಪಚ್ಚೆಯ ಪಸರಿಸಿದ ಪಸುರಂ ಪಸುರೆಲೆಗೆತ್ತೆಳಸುವ ವಲ್ಲಭಹರಿಣಶಾಬಕಂಗಳ್ಗೆ (ಕಾದಂಉ. ೨೫); ಪಸುರೆಲೆಗಳ ಬಿಟ್ಟು ತನಿಗಬ್ಬಿನೊಳಗಣ ರಸವ ಕೊಂಬಾನೆಗಳಂತೆ . . . ಕೆಲರು ಭೇದಿಸಿ ನಿಜಸುಖವ ಭೋಗಿಪರು (ಭರಚ. ೧-೧೦೬). **ಹಸುರೆಲೆ:** ಗದ್ದೆಗಳಲ್ಲಿಯೂ ತೋಟಗಳಲ್ಲಿಯೂ ತೇವ ಹೆಚ್ಚಾಗಿರುವುದರಿಂದ ಹಸುರೆಲೆಯು ಇವುಗಳಲ್ಲಿ ಜಾಗ್ರತೆಯಾಗಿ ಕೊಳೆಯುವುದಕ್ಕೆ ಅವಕಾಶವಿದೆ (ವ್ಯವಸು. ೩೨); ಮಳೆ ಕೊಡುವ ಬೆಟ್ಟಗಳ ಮೊಲೆಯುಂಡು ಹಸುರೆಲೆಯ ತಳವಿಡಿದು ನೆಲದ ದಾರಿಯ ನೋಳ್ಪ ಚೆಲುವೆ (ಕಾಲೂರ. ೨೩-೭).

ಹಸುರೆಲೆಯ ಗೊಬ್ಬರ = ಹಸುರು ಎಲೆಗಳನ್ನು ಮಣ್ಣಿನಲ್ಲಿ ಬೆರೆಸಿ ಕೊಳೆಯುವಂತೆ ಮಾಡಿ ತಯಾರಿಸುವ ಗೊಬ್ಬರ: ಹಸುರೆಲೆಯ ಗೊಬ್ಬರ—ಭೂಮಿಯನ್ನು ಉಳುವಾಗ . . . ಹಸುರೆಲೆಯನ್ನು ಹಾಕಿ ಮಣ್ಣಿನಲ್ಲಿ ಬೆರಸಿದರೆ ಈ ಎಲೆ ಕ್ರಮೇಣ ಕೊಳೆತು ಅದರಲ್ಲಿರುವ ಪದಾರ್ಥಗಳೆಲ್ಲವೂ ಮಣ್ಣಿಗೆ ಸೇರಿ ಸಸ್ಯಾಹಾರವಾಗುವುದು (ವ್ಯವಸು. ೩೨). [ಪಸುರ್$_2$ + ಎಲೆ$_1$]

ಪಸುರೆಲೆವಳ್ಳಿ (ನಾ). ಹಸುರಾದ ವೀಳೆಯದೆಲೆಯ ಬಳ್ಳಿ,-ಹಂಬು: ಇರ್ತಡಿಗಾಲುವೆಯಿಂದವೆ ನೆಱೆ ಮುಸುಕಿ ಬೆಳೆದ ಚೆಂದೆಂ ಗೊಳ್ವಾಳೆಯಡಕೆ ಪಸುರೆಲೆವಳ್ಳಿ (ಜಯಕಾ. ೧-೩೮).

[ಪಸುರ್$_2$ + ಎಲೆವಳ್ಳಿ]

ಪಸುರೆಸಳು (ನಾ). ಹಸುರು ಬಣ್ಣದ ದಳ,-ಪಕಳೆ: ತಳದೊಳೊಪ್ಪುವ ಪಸುರೆಸಳ ರೋಚಿಯಿಂ ನಡುವೆ ತೊಳಪ ಕೆಂದಳದ ದೀಧಿತಿಯಿಂದೆ . . . ಹೊಳೆಹೊಳೆವ ಕೋಕನದಪಂಕ್ತಿಗಳ ಬಣ್ಣಂ . . . ಕೊಳದೊಳಾರಾಜಿಸಿತು ತುಹಿನಗಿರಿರಾಜನಂದನೆಯ ಕಣ್ಗೆ (ಜೈಮಿಭಾ. ೧೫-೧೦).

[ಪಸುರ್$_2$ + ಎಸಳು$_1$(<ಎಸಟ್)]

ಪಸುರೆಱಕೆ (ನಾ). ಹಸುರು ಬಣ್ಣದ ರೆಕ್ಕೆ: ಬಿಸಿಲೆಸಕದಿಂದೆ ಕೊರಗಿದ ದೆಸೆವೆಣ್ಗಳ ಬಿಸುಪನಾಱಿಪಂತಿರೆ ಗಿಳಿಗಳ್ ಪಸುರೆಱಕೆಯೆಂಬ ಬಾಟೆಯ ಪೊಸ ಬಿಜ್ಜಣಿಗೆಗಳಿನೆಸಗಿಪುವು ತಣ್ಣೆಲರಂ (ಕಾದಂಪೂ. ೧೩೦).

[ಪಸುರ್$_2$ + ಎಱಕೆ(<ಎಱಂಕೆ)]

ಪಸುರೇಱು (ಕ್ರಿ). ಹಸುರುಬಣ್ಣದಿಂದ ಕೂಡು; ಹಸುರಾಗು: ದೆಸೆ ಪಸುರೇಱಿ ಪಚ್ಚೆಯೊಳೆ ಮುಚ್ಚಿ ಮುಸುಂಕಿದ ಮಾಟ್ಕೆಯಾದುದು (ಪಂಪಭಾ. ೭-೨೨); ಕಳಮಾವಳಿ ನಳನಳಿಸಿ ಬೆಳೆದು ಪಸುರೇಱಿ ಲಸದ್ಭೂವನಿತೆಗೆ ಧಾತ್ರಂ ಪರಿಭಾವಿಸಿ ಪೊದಯಿಸಿದ ಹರಿತಪಟದಂತಿರ್ಕುಂ (ಗಿರಿಕ. ೨-೧೨); ಪಸುರೇಱಿದ ಕಾಯ್ಗಳವೆಲ್ಲಿಯಲ್ಲಿ ಪಣ್ಗೊನೆಗಳವೆಲ್ಲಿಯಲ್ಲಿಯೆನೆ ಸೋಲಿಸುಗುಂ ಬಿಡದಾವನಂ ಬನಂ (ಕಬ್ಬಿಕಾ. ೩೨); ವಿರಹಿವ್ರಾತಕಳಲೇಱಿ ಪೊಲನೆ ಪಸುರೇಱಿ . . . ಕಾರ್ಮುಕವೇಱಿತೈ (ಸಾಳ್ವಭಾ. ೨೬-೧೮). [ಪಸುರ್$_2$ + ಏಱು$_1$(<ಏಱ್$_1$)]

ಪಸುರ್ಗಂಕಣ (ನಾ). ಮರಕತದ ಬಳೆ; ಪಚ್ಚೆಯ ಬಳೆ: ನೂಪುರಮಂ ಪದಕ್ಕೆ . . . ಪಸುರ್ಗಂಕಣಮಂ ನಳಿತೋಳ್ಗೆ ಪತ್ರಲೇಖಾ ಪರಿಶೋಭೆಯಂ ನಿಜಕಪೋಲತಳಕ್ಕೆ ಕುಡಲ್ ಮನೋಜಸಂತಾಪನತಪ್ತ ಮಾತುರಿಸಿದಪ್ಪುದು ಮನ್ಮನಂ (ಪಂತಾಮಾ. ೯-೧೭೩).

[ಪಸುರ್$_2$ + ಕಂಕಣ]

ಪಸುರ್ಗಂಬ (ನಾ). ೧. ಹಸುರಾದ ಕಂಬ. ೨. (ಆಲಂ) ಬಾಳೆಯ ಕಂಬ: ಕುಳಿರ್ವ ಬಾಳದ ಬೇರ್ಗಳ ಕೇರ್ಗಳಿಂ ಲತಾವಳಿಯನೆ ಸುತ್ತುಗೊಂಡ ಪಸುರ್ಗಂಬದಿಂ (ಕಾದಂಉ. ೪೫೮).

[ಪಸುರ್$_2$ + ಕಂಬ$_1$(<ಕಂಭ)]

ಪಸುರ್ಗಟ್ಟು, ಹಸಿರುಗಟ್ಟು, ಹಸುರುಗಟ್ಟು, ಹಸುರ್ಗಟ್ಟು (ಕ್ರಿ). ೧. (ವಿಷದಿಂದ ಅಥವಾ ಪೆಟ್ಟಿನಿಂದ ರಕ್ತವು ಹೆಪ್ಪುಗಟ್ಟಿ, ಚರ್ಮವು) ನೀಲಿಬಣ್ಣಕ್ಕೆ ತಿರುಗು; ನೀಲಿಗಟ್ಟು: ಈ ಚಮ್ಮಟಿಗೆ ಸುಲಿದು, ಬೆನ್ ಪಸುರ್ಗಟ್ಟಿ (ಅಶ್ವತ್ಥಾ. ೬-೯೫). **ಹಸಿರುಗಟ್ಟು:** ೨. ಹಸುರು ಬಣ್ಣವನ್ನು ಹೊಂದು: ಅದರ ಮೇಲ್ಭಾಗ ಹಸಿರುಗಟ್ಟಿತ್ತು (ರಂಗರೋ. ೧೮). **ಹಸುರುಗಟ್ಟು:** ೧. ಹಸುರುಗಟ್ಟಿತು ತೋಳು (ಒಲುಮೆ. ೩೫-೧೭). **ಹಸುರ್ಗಟ್ಟು:** ೨. ಹಸುರ್ಗಟ್ಟಿತೊ ಕವಿಯಾತ್ಮಂ ಹಸುರ್ನೆತ್ತರ್ ಒಡಲಿನಲಿ! (ಪಕ್ಷಿಕಾ. ೩೪-೬).

[ಪಸುರ್$_2$ + ಕಟ್ಟು$_1$]

ಪಸುರ್ಗಣೆ (ನಾ). ಹೊಸದಾದ ಹೂವಿನ ಬಾಣ; ಕೋಮಲವಾದ ಬಾಣ (?): ಕುಸುಮಸರನ ಪಸುರ್ಗಣೆಯ ಪೊದೆಗೆ ಪುರುಡಿಸುವ ಹಾಗದ ನೆಲೆಯ ಹಡಲಗೆಗಳೊಳಂ (ಪರ್ಧಪು. ೬-೩ ವ).

[ಪಸುರ್$_2$ + ಕಣೆ$_1$]

ಪಸುರ್ಗಪ್ಪು (ನಾ). ದಟ್ಟ ಹಸುರಿನಿಂದ ಕೂಡಿದ ಕಪ್ಪು;

ಸಾಂದ್ರವಾದ ಕಪ್ಪುಬಣ್ಣ : ಪಸುರ್ಗಪ್ಪಿಂ ಸುತ್ತಲುಂ ಕಟ್ಟಲಿಪ ಪಸಲೆಯಾಕಾಸಮಂ ಮಧ್ಯದೊಳ್ ಶೋಭಿಸಿ ತೆಳ್ಪಂ ತಾಳ್ದ ಚಂದ್ರೋಪಳಂ (ಪುಷ್ಪಪು. ೩-೭೬). [ಪಸುರ್$_2$+ಕಪ್ಪು$_4$(<ಕರ್ಪು$_1$)]

ಪಸುರ್ಗರಿ (ನಾ). ಹಸುರುಬಣ್ಣದ ಗರಿ : ಬಂದೆರಗಿದಪ್ಪವಾ ವ್ರೀಹಿ ವಿಸ್ತಾರಕ್ಕೆ ಬನಮೆಚ್ಚ ಕೆಮ್ಮೊನೆಯ ಪಸುರ್ಗರಿಯ ಕಣೆಗಳೆನೆ ಗಿಳಿವಿಂಡುದಂಡು (ಚಿತ್ರಾಂಗ. ೫೩-೧೪೪೩). 'ಪಸುಂಗಱಿ' ಪರಾ.

[ಪಸುರ್$_2$+ಗರಿ(<ಗಱಿ)]

ಪಸುರ್ಗಲ್, ಪಸಿರ್ಗಲ್, ಪಸುರ್ಗಲ್ಲು, ಹಸುರುಕಲ್ಲು (ನಾ). ಹಸುರುಬಣ್ಣದ ರತ್ನ; ಮರಕತ; ಪಚ್ಚೆ : "ಪಸುರ್ಗಲ್ಲೆನೆ [ಪಾಠಾಂ.ರ್ವರಲೆನೆ] ಪಚ್ಚೆ" (ಚತುಶಿ. ೧೧೦); ಬಾಳತೃಣಂಗಳೆಂದೆಳ ಸುಗುಂ ಪಸುರ್ಗಲ್ಗಳ ಕಾಂತಿಯಂ ಮೃಗೀಬಾಳಕಂ (ಮಲ್ಲಿಪು. ೨-೭೭). **ಪಸಿರ್ಗಲ್** : ಸಿದ್ಧರಸದ ಬಲ್‌ದೊಱೆ ಬಜ್ಜರಗವಿ ಪಸಿರ್ಗಲ್ಲಱೆ ಸಸಿಗಲ್ಗೋಡು ಮೆಱೆಗುಮಾ ಗಿರಿತಟದೊಳ್ (ಶಬಶಂ. ೩-೩೦). **ಪಸುರ್ಗಲ್ಲು**: ಅಂಗಚ್ಛವಿಯ ಪೊರೆ ಸೂಸಿ ಪಸುರ್ಗಲ್ಲೊಳಂ ಪೊಳೆಯೆ ಬನಲಕ್ಷ್ಮಿಯಂತೆ ರತಿಕಾಂತೆ ಮೆರೆಯೆ (ನವಮೋ. ೧೩-೪೧). **ಹಸುರುಕಲ್ಲು** : ನೀಲಗಿರಿಯಿಂದ ತರಿಸಿದ ಹಸುರುಕಲ್ಲು, ಅಮೃತಶಿಲೆ . . . ಬ್ರೆಕ್ಕಿಯ ಇತ್ಯಾದಿ ಶಿಲೆಗಳಿಂದ ಆಭರಣಗಳನ್ನು ತಯಾರಿಸುತ್ತಿದ್ದರು (ಭಾರದ. ೧೪). [ಪಸುರ್$_2$+ಕಲ್$_3$]

ಪಸುರ್ಗಲ್ಲು 'ಪಸುರ್ಗಲ್' ನೋ.

ಪಸುರ್ಗವಿಲ (ನಾ). ಹಸುರು ಮಿಶ್ರಿತವಾದ ಕಪಿಲವರ್ಣ; ಸಾಂದ್ರವಾದ ಕಂದುಬಣ್ಣ : ಪಸುರ್ಗವಿಲನಾದ ನೀಪದ ಕುಸುಮಮುಮಂ ದೆಸೆಗೆ ಕಂಪನೆತ್ತುವ ಲೋಧ್ರಪ್ರಸವಮುಮಂ . . . ಮುಸುಱಿ ಮುತ್ತಿದುವಳಿಗಳ್ (ಪಂರಾಮಾ. ೭-೧೪೧).

[ಪಸುರ್$_2$+ಕವಿಲ$_2$(<ಕವಿಲ್$_3$)]

ಪಸುರ್ಗಱಿ (ಕ್ರಿ). ಹಸುರುಬಣ್ಣವನ್ನು ಕಳೆದುಕೊಳ್ಳು : ಪಸುರ್ವರಲ ಜಗಲಿಯೊಳ್ ರಂಜಿಸಿದುದು ಚೆಂಬೊನ್ನ ಪಟ್ಟವಣೆ ಪಸುರೆಲೆಯಿಂ ಮುಸುಕಿದ ತಾವರೆಗೊಳದೊಳ್ ಪಸುರ್ಗಱಿದು ಮರಲ್ದರಲ್ದ ಪೊಂದಾವರೆವೋಲ್ (ಪಂರಾಮಾ. ೫-೧೨೨). [ಪಸುರ್$_2$+ಕಱಿ$_1$]

ಪಸುರ್ಗಾಯ್, ಹಸರುಕಾಯಿ (ನಾ). ಹಸುರಾದ ಕಾಯಿ; ಬಲಿಯದ ಕಾಯಿ; ಎಳೆಗಾಯಿ : ತೋರಣಗಟ್ಟದಂತೆ ಪಸುರ್ಗಾಯ್ದೊಡಂಬೆಗಳಿಂ ಕಣ್ಗೊಳಿಪ ಕೌಂಗುಮರಂಗಳುಂ (ಶಬಶಂ. ೨-೪೨ ಪ). **ಹಸರುಕಾಯಿ**: ಕ್ಷಾರಕಃ, ಜಾಲಕಃ-೨ ಹಸರುಕಾಯಿ, ಹಸರುಮಗ್ಗು (ಸಿದ್ಧಾಂತಿ. ೧೧೪). [ಪಸುರ್$_2$+ಕಾಯ್$_4$]

ಪಸುರ್ಗಾವು (ನಾ). ಹಸುರುಬಣ್ಣದ ಕಾವು; ಹಸುರಾದ ಕಾಂಡ: ಆಱಡಿವಸುಳೆಗಳು ಅನುವಂ ಪಡೆದುವು ತತ್ತೃಣರಾಜಿಯ ಕೊನೆಗರ್ಚಿದ ಹರಿನೀಲದ ಪರಲೆನೆ ನನೆವಿಲ್ಲನ ಪಸುರ್ಗಾವಿನ ಮಿಗಸೊಕ್ಕಿನ ಪೊಸಮಿಂಟೆಯೆನೆ (ಜಯಕಾ. ೧-೩೯). [ಪಸುರ್$_2$+ಕಾವು$_3$]

ಪಸುರ್ಗಿಡು (ನಾ). ಹಸುರಾದ ಗಿಡ : ನಾಟರ್ದ ಪಸುರ್ಗಿಡು ಪುಷ್ಪಲತೆಯ ವೃಕ್ಷವಾಟಯೊಳ್ ಕುಸುಮಸೌರಭಕೆ ಊಟವರಿವ ತುಂಬಿಗಳ ದೊಂಬಿ . . . ಒಪ್ಪಿದುವು (ಮೋಹತ. ೫-೨೫). [ಪಸುರ್$_2$+ಗಿಡು]

ಪಸುರ್ಗೂಳ್, ಪಸುರುಗೂಳು, ಪಸುರ್ಗೂಳು, ಹಸುರ್ಗೂಳು (ನಾ). ನಿವಾಳಿ ತೆಗೆಯಲು ಬಳಸುವ ಒಂದು ಬಗೆಯ ಬಣ್ಣದ ಅನ್ನ : ಮಡದಿಯರ್ ಪಸುರ್ಗೂಳ್ಗಳಾರತಿ ನಿವಾಳಿಸಲ್ (ಪರಶು. ೮-೨೧). **ಪಸುರುಗೂಳು** : ಇಳಿದರಾನೆಯನಬಲೆಯರ ಹೊಂದಳಿಗೆಗಳ ಪಸುರು[ಪಾಠಾಂ.ಪಸ್ರು]ಗೂಳ ದೀಪಾವಳಿಯ ಸಾಲಿನ ಸೇಸೆಗಳ ಸೂಸುಗಳ ಸೊಗಸಿನಲಿ (ತೊರರಾ. ೧-೧೬-೪೪). **ಪಸುರ್ಗೂಳು** : ಬಾಲೆಯರ ಹೊಂದಳಿಗೆಗಳ ಪಸುರ್ಗೂಳುಗಳ ಪಸರಿಕೆಯ ಮಣಿದೀಪಾಳಿ ಸುಳಿದವು (ತೊರರಾ ೧-೬-೧೩). **ಹಸುರ್ಗೂಳು** : ಹಸುರ್ಗೂಳ ಹರಿವಾಣಗಳೊಳು ತುಂಬಿ . . . ನಿವಳಿಸಿದರಚ್ಯುತನಂಘ್ರಿಗಳಲಿ (ಮೋಹತ. ೪೨-೨೭). [ಪಸುರ್$_2$+ಕೂಳ್(<ಕೂಟ್$_1$)]

ಪಸುರ್ಗೂಳು 'ಪಸುರ್ಗೂಳ್' ನೋ.

ಪಸುರ್ದಳಿರ್ (ನಾ). ಹಸುರಾದ ಎಲೆ; ಚಿಗುರು : ಪಸುರ್ದಳಿರೋಳಿಯೋ ಶುಕನಿಕಾಯದೆಱಂಕೆಯ ಮಾಲೆಯೋ (ಕುಸುಮಾ. ೯-೫೬); ಮುಂದೆ ಪಸುರ್ದಳಿರ್ದೊಂಗಲಿಂದೆ ಶೋಭಾವಹಮಪ್ಪುದೊಂದು ವನಮಿರ್ದುದು (ದಶಕು. ೫-೧೪). [ಪಸುರ್$_2$+ತಳಿರ್$_2$]

ಪಸುರ್ದೆನೆ (ನಾ). ೧. ಹಸುರಾದ ತೆನೆ. ೨. ಪಚ್ಚೆಯ ತೆನೆ : ಮುಂದೆಸೆಯೊಳ್ ಗೋರಂಟೆಯ ಮರುಗದ ದವನದ ಪಸುರ್ದೆನೆಯ ಗೊಜ್ಜಿಗೆಯ ಜಾದಿಯ ಮುಡಿವಾಳದ ಮಡಿಯ . . . ಗಿಡುಗಳ ಪಂತಿಗಳ್ (ರಾಮಾಶ್ವ. ೪೩-೮). [ಪಸುರ್$_2$+ತೆನೆ]

ಪಸುರ್ದೋರಣ (ನಾ). ಹಸುರಾದ ತೋರಣ; ಹಸುರೆಲೆಯ ತೋರಣ : ಪಸುರ್ದೋರಣ ಪಳಿ ಗುಡಿ ಸಂತಸವಱೆ ಪೊಸಮುತ್ತಿನ ಬಣ್ಣವುರಂ ಮನೆಮನೆದಪ್ಪದೆ ಶೋಭಿಸಿತು (ಜಯಕಾ. ೨-೫೯); ದೊರೆಗಾದ ಪುತ್ರೋತ್ಸವಕೆ ಪಸುರ್ದೋರಣಂ ಕಟ್ಟ ಪಟ್ಟಣವ ಸಿಂಗರಿಸಿ (ಚಂದ್ರಸ. ೩೯-೭). [ಪಸುರ್$_2$+ತೋರಣ]

ಪಸುರ್ನನೆ (ನಾ). ಹಸುರಾದ ಮೊಗ್ಗು; ಕಾಯಿಮೊಗ್ಗು : ಪಸುರ್ನನೆಯೊಳಿಡಿದ ಮಲ್ಲಿಗೆತಳಿರಿಂ . . . ಪೊಸಮಾವುಗಳಿಂ ಬಸಂತ ಮೆಸೆದಪುದು (ಆದಿಪು ೧೧-೮೩). [ಪಸುರ್$_2$+ನನೆ$_3$]

ಪಸುರ್ನನೆದೋಱು (ಕ್ರಿ). ಹಸುರುಮೊಗ್ಗನ್ನು ಕಾಣಿಸು; ಕಾಯಿಮೊಗ್ಗನ್ನು ಹೊಂದು : ಮಲ್ಲಿಗೆ ಪಸುರ್ನನೆದೋಱಿದುದು (ಆದಿಪು. ೧೧-೧೦೪). [ಪಸುರ್ನನೆ+ತೋಱು]

ಪಸುರ್ನೆಲ, ಹಸುರ್ನೆಲ (ನಾ). ಹುಲ್ಲು ಮುಂತಾದ ಸಸ್ಯಗಳಿಂದ ತುಂಬಿ ಹಸುರಾದ ಭೂಮಿ,-ನೆಲ : ಆರ ಹಜ್ಜೆಗಳವು? ನಿನ್ನವಲ್ಲ! ಪೂಗಳ ಪರಾಗದಿಂದಿಡಿದ ಪಸುರ್ನೆಲದಲ್ಲಿ ಚಿತ್ರಕಾರನು ಮುದ್ರಿಸಿದ ತೆರದಿ ತೋರುತಿವೆ (ಚಂದ್ರಸ. ೮೨-೬). **ಹಸುರ್ನೆಲ** : "ಶಾಡ್ವಳಂ, ಹರಿತಂ—ಈ ೨ ಹಸುರ್‌ನೆಲಂ" (ಹಲಾಯು. ೨೬-೪).

[ಪಸುರ್$_2$+ನೆಲ]

ಪಸುರ್ಪತ್ರ (ನಾ). ಹಸುರಾದ ಎಲೆ : ಪಸುರ್ಪತ್ರ ಮುರುಟುವವು ಹಿಮಕೆ (ನವಮೋ. ೬-೩೪). [ಪಸುರ್$_2$+ಪತ್ರ]

ಪಸುರ್ಪು (ನಾ). ೧. ಹಸುರುಬಣ್ಣ; ಮರಕತ ವರ್ಣ : "ಜಾಗಮೆಂದುಂ ಪಸುರ್ಪೆಂದುಂ ಮರಕತವರ್ಣಂ" (ಕಶಸಾ. ೫೬-೨೧೯); ಪರಿಯೆ ಪಸುರ್ಪು ಬೆಳ್ಪಡರೆ ಬಲ್ಮುಗುಳೊಳ್ ಪೊರೆದೋಱೆ (ಆದಿಪು. ೧೧-೧೦೬); ಮಲ್ಲಿಕಾಕುಸುಮದ ಬೆಳ್ಪು ಮಾವಿನ ಪಸುರ್ಪು ಮದಾಳಿಯ ಕರ್ಪು (ಸುಕುಮಾ. ೯-೪೮); ನಂದನಂ ತಳೆದುವು ಕೂಡೆ ಕೆಂಪಿನ ಪಸುರ್ಪಿನ ಕರ್ಪಿನ ಬೆಳ್ಪಿನಂದಮಂ (ಗಿರಿಕ. ೬-೩೯); ಬಾಟೆಯ ಪಸುರ್ಪು ತಮಾಳದ ಕರ್ಪು . . . ಸುತ್ತಲುಂ ಪಸರಿಸಿ (ಪುಷ್ಪಪು. ೯-೩೦) ೨. ಹಸುರು ಔಷಧಿ : ಕಾಮನ ಕರವಾಳ ಕೂರ್ಪು ವಿರಹಾಹಿಯ ಕೊಳ್ವ ಪಸುರ್ಪು ಜೀಯ ಭಾಪೆನಿಸಿದುದಂಗಹಾರ ಕರಣಾಭಿನಯಂಗಳ ನೇರ್ಪು ನೀಱೆಯಾ (ಮಲ್ಲಿಪು. ೮-೫೬). [ಪಸುರ್$_2$+-ಪು$_2$]

ಪಸುರ್ಪುವಡೆ (ಕ್ರಿ). ಹಸುರುಬಣ್ಣವನ್ನು ಪಡೆ : ಪಸಿಯ ನೇತ್ರಮಂ ಪಚ್ಚವಡಿಸಿದಂತೆ ಪಸುರ್ಪುವಡೆದ ನೆಲದೊಳ್ ಪದ್ಮರಾಗದ ಪರಲ್ಗಳಂ ಬಲಿಗೆದಱಿದಂತೆ ಉಪಾಶ್ರಯಂಬಡೆದಳಂಕರಿಸುವಿಂದ್ರಗೋಪಂಗಳುಮಂ (ಪಂಪಭಾ. ೭-೨೫ ಪ). [ಪಸುರ್ಪು+ಪಡೆ$_1$]

ಪಸುರ್ಪುವೆಱು (ಕ್ರಿ). ಹಸುರುಬಣ್ಣವನ್ನು ಹೊಂದು; ಹಸುರಾಗು: ಅತಿಭಾಸುರಮಾಯ್ತು ಪಸುರ್ಪುವೆತ್ತ ಕಳಮಕ್ಷೇತ್ರಂ (ವೃಷವಿ. ೪-೧೫); ತೊಳಗುವ ದಂತದೋಲೆ . . . ಪಸು[ಪಾಶಾಂ. ಸಿ]ರ್ಪುವೆತ್ತ ಪಟ್ಟಳಿಯ ನಿಚೋಳಮೊಪ್ಪಿರೆ ಪುಳಿಂದಿಯರಾದರಮರ್ತ್ಯಕಾಂತೆಯರ್ (ಶಬಶಂ. ೩-೧೦). [ಪಸುರ್ಪು + ಪೆಱು$_1$]

ಪಸುರ್ಮಣಿ 'ಪಸುರ್ವಣಿ' ನೋ

ಪಸುರ್ಮಿಡಿ (ನಾ). ಹಸುರಾದ ಮಿಡಿಗಾಯಿ: ಕಾಂಚವಾರದ ಕಾಂಚಿಯುಮಂ ಪಸುರ್ಮಿಡಿಯ ಪಚ್ಚೆಸಾರಮುಮಂ . . . ಮನೋಹರಮೆನೆ ಸಮೆದು ತಮತಮಗೆ ಪಸದನಂಗೊಂಡು (ಚಂದ್ರಪು. ೬-೧೧೪ ಪ); ತನಗೊಂದು ಕರ್ಬು ಸಾಲದೆ ಮಱಿದುಂಬಿ ಸಾಲದೆ ಪಸುರ್ಮಿಡಿ ಸಾಲದೆ (ಕಬ್ಬಿಕಾ. ೧೯೨). [ಪಸುರ್$_2$+ಮಿಡಿ$_4$]

ಪಸುರ್ವಂದರ್, ಪಸುರ್ವಂದಲ್ (ನಾ). ಹಸುರುವಾಣಿಯಿಂದ ಕಟ್ಟಿದ ಚಪ್ಪರ: ಪಸೆಯಂ ಪಸುರ್ವಂದರುಮಂ ಪೊಸಯಿಸಿ (ಅಜಿಪು. ೯-೧೨೬); ಪಸುರ್ವೊನ್ನ ಜಗಲಿ ಪಚ್ಚೆಯ ಪಸುರ್ವಂದರ್ . . . ಎಸೆದಿರ್ದುವು ರಾತ್ರಿಮತಿಯ ಬೀಡಿನೊಳೆತ್ತಂ (ಕಾಪ್ಯಾವ. ೨೩೬); ಪಸುರ್ವಂದರ್ ನೃಪನ ಕಣ್ಗದೇಂ ರಂಜಿಸಿತೋ (ವರ್ಧಪು. ೬-೪); ಪಸದನಂ ಬಡೆದ ಪೊಸ ಪಸುರ್ವಂದರೊಸಗೆ ಮಿಗೆ ಮಿಸುಗುತ್ತಿರ್ದುದು (ರಾಜಶೇ. ೮-೫ ಪ). **ಪಸುರ್ವಂದಲ್**: ಮನಂಗೊಳಿಪ ವಿತಾನಪಂಕ್ತಿ ಪಸುರ್ವಂದಲೊಳ್ಳೊಲ್ದೆಡೆಯಾಡುವೆಯ್ದೆಯರ್ (ಪಂಪಭಾ. ೧-೧೦೭).

[ಪಸುರ್$_2$ + ಪಂದರ್]

ಪಸುರ್ವಂದಲ್ 'ಪಸುರ್ವಂದರ್' ನೋ.

ಪಸುರ್ವಕ್ಕಿ (ನಾ). ಹಸುರುಬಣ್ಣದ ಹಕ್ಕಿ; ಗಿಣಿ: ಪಸುರ್ವಕ್ಕಿ ಗೀಜಗ ಗವುಜು ಹರಡೆ ಹಂಗ ಹಸುಬ ಕರಿಯ ಹಕ್ಕಿಗಳು ಬಿಸಿಗದಿರನು ಪೋಗಲೊಡನೆ ಗೂಡುಗಳ ಬಂದಸವಸದಿಂದ ಸಾರಿದವು (ಚಂಪ್ರಸಾಂ. ೧೩-೪೯). [ಪಸುರ್$_2$ + ಪಕ್ಕಿ]

ಪಸುರ್ವಟ್ಟೆ (ನಾ). ಹಸುರುಬಣ್ಣದ ಬಟ್ಟೆ; ಹಸುರುವಸ್ತ್ರ: ಮೇಲ್ಗಟ್ಟಿನ ಪಸುರ್ವಟ್ಟೆಯಂವೋಲ್ಗಿಳಿಗಳ್ ಸುಱಿಯೆ ಗಗನದೊಳ್ (ಮಲ್ಲಿಪು. ೨-೧೭); ಕೆಂ[ಪೆಸೆವ] ದುಕೂಲಾಂಬರದ ಪಸುರ್ವಟ್ಟೆಯ ಗುಡಿಗಳುಂ (ಕುಮುರಾ. ೨-೮೦); ಆ ನಳಿನಜನಿಟ್ಟ ಪಸುರ್ವಟ್ಟೆದೆರೆಯೆನಲಾನಂದನಾಳಿಯೊಪ್ಪಿದುದು (ಪ್ರಭಂಜ. ೧-೭೧); ಪಸುರ್ವಟ್ಟೆವುಟ್ಟು ಕರಿಯ ಝುಲ್ಲಿ ಕಟ್ಟಿದ ಮಿಸುನಿವಟ್ಟಲ ಸಿಂಧದಂತೆ . . . ಕಣ್ಗೆಸೆದವು ಹೊಂದಾವರೆಗಳು (ಕುರಾಸಾಂ. ೨-೯೭). [ಪಸುರ್$_2$+ಬಟ್ಟೆ$_2$]

ಪಸುರ್ವಡು (ಕ್ರಿ). ಹಸುರಾಗು: ಒಪ್ಪುವ ಪಸುರ್ವಟ್ಟಾಲವಟ್ಟಂಗಳೊ ಚೆಲುವನಹ ಬಾಳೆಯೆಲೆಗಳೊ . . . ಎನಲ್ಕೆ ಪೆಂಪಂ ತಾಳಿದುದು (ಬಸಪು. ೨೬-೪೧). [ಪಸುರ್$_2$+ಪಡು$_1$]

ಪಸುರ್ವಡೆ (ಕ್ರಿ). ಹಸುರುಬಣ್ಣವನ್ನು ಹೊಂದು; ಹಸುರಾಗು: ವನಲಕ್ಷ್ಮಿಯ ನೇತ್ರಾಂಶುವೆನೆ ನೇತ್ರಕ್ಕೆಸೆದು ಮಿಸುಗಿ ಪಸುರ್ವಡೆದುವು ನಂದನದ . . . ಹರಿದ್ರವನಸಂತತಿಗಳ್ (ಪುಷ್ಪಪು. ೨-೪೭).

[ಪಸುರ್$_2$+ಪಡೆ$_1$]

ಪಸುರ್ವಣಿ, ಪಸುರುವಣಿ, ಪಸುರ್ಮಣಿ (ನಾ). ೧. ಹಸುರುಬಣ್ಣದ ರತ್ನ; ಮರಕತ; ಪಚ್ಚೆ: "ಜಾಗವರಲ್, ಪಸುರ್ವಣಿ-೨ ಮರಕತಂ" (ಕಶಸಾ. ೫೦-೫೯); ಪುರುಷರತ್ನಕ್ಕೆ ಸ್ತ್ರೀರತ್ನಮಲ್ಲದೆ ಸಾಮಾನ್ಯಮಣಿಯುಂ ಪಸುರ್ವಣಿಯುಂ ದೊರೆಯಲ್ಲವೆಂಬಂತೆ (ಶಾಂತಿಪು. ೪-೮೪ ಪ); ಸೊಗಸೆಸೆಯಲ್ಪಸುರ್ವಣಿಯುಂಗುರಗಳನೊಲ್ಡಸಿಯಳ ಕರಶಾಖೆಗಳ್ಗಮರ್ಚಿದಳೊರ್ವಳ್ (ಉದ್ಭಟ. ೮-೩೭); ಓರಣದಿಂ ಕೀಲಿಸಿ ಪಜ್ಜಳಿಸುವ ಪಸುರ್ವಣಿಯೆಂಬ ತೆಱದಿ ನಳನಳಿಸುತ ತುಱುಗಿ ಬೆಳೆದ ಬಹಿರುದ್ಯಾನರಿ ಕಣ್ಗೊಳಿಸಿದುದು (ಜಯಕಾ. ೧-೪೫). **ಪಸುರುವಣಿ**: ೧. "ಪಸುರುವಣಿ ಜಾಗವರಲೆನೆ ಮರಕತಂ" (ಶಬ್ದಮಂ. ೬೯). **ಪಸುರ್ಮಣಿ**: ೧. ಪಸುರ್ಮಣಿಕಂಕಣಂಗಳಿಂಚರಮೊಡನುಣ್ಮಿ ಮಾಡಿದುದು . . . ಸುತ್ತಿದಳಿನೀಕರಝುಂಕೃತಮೆಂಬ ಶಂಕೆಯಂ (ಮಲ್ಲಿಪು. ೪-೭೬). ೨. ಕಪ್ಪಾಗಿರುವ ಮಣಿ; ಕರಿಮಣಿ: ಪಸುರ್ಮಣಿಯ ನಪ್ಪೊಡಮುಱಿಯದಂತು ಚಾಗಂಗೆಯ್ದು (ಪಂಪಭಾ. ೨-೧೦೮ ಪ); ಮಣಿಯೆಂಬ ಪಸುರ್ಮಣಿಯಂ ತುರಂಗಮೆಂಬ ತುರಂಗಮುಮಂ . . . ಉಱಿಯದಂತಿರೆ ತಂದು (ಶಾಂತಿಪು. ೧೧-೫೫ ಪ). [ಪಸುರ್$_2$+ಮಣಿ$_3$]

ಪಸುರ್ವಣ್ಣ (ನಾ). ೧. ಹಸುರುಬಣ್ಣ: "ಜಾಗಮೆನಲ್ಕದು ಸಂಗತಿ ಪಸುರ್ವಣ್ಣಮೆಂದು ಧರೆಯೊಳ್ ನಿರುತಂ" (ಕವಿಕಂ. ೧೦೩). ೨. ಕಪ್ಪುಬಣ್ಣ; ಶ್ಯಾಮಲವರ್ಣ. ೩. ಕಪ್ಪುಬಣ್ಣದವನು; ಶ್ಯಾಮಲವರ್ಣದವನು; ವಿಷ್ಣು: "ಪಸುರ್ವಣ್ಣಂ ಪೊಡೆಯಲರಂ" (ಚತುನಿ. ೩೧). [ಪಸುರ್$_2$ + ಬಣ್ಣ]

ಪರ್ಸುವರಲ್ (ನಾ). ಹಸುರುಬಣ್ಣದ ರತ್ನ; ಪಚ್ಚೆ; ಮರಕತ ಮಣಿ: ಪಸುರ್ವರಲ ಜಗಲಿಯೊಳ್ ರಂಜಿಸಿದುದು ಚೆಂಬೊನ್ನ ಪಟ್ಟವಣೆ (ಪಂರಾಮಾ. ೫-೧೨೨); ಕಳಮಕ್ಷೇತ್ರವೆಸೆವುವಾ ದೇಶದೊಳು ಭೂಮಾತೆ ಧರಿಯಿಸಿದ ಪಸುರ್ವರಲ ತೊಡಿಗೆಯಂತೆ (ಸೌಂದಪು. ೨-೪); ಪಸುರ್ವರಲ್ಗಳ ಭಾಗ್ಯವೆನಿಪ ಸುರತರುಗಳಿಂ (ಭಾವಚಿಂ. ೧-೨೬); ತೊಡವಿನ ಕೆಂಬರಲ್ ಪಸುರ್ವರಲ್ಗಳ ಸಾಲ್ವೆಳಗಿಂದ್ರಚಾಪಮಂ ಪಡೆಯೆ (ಶಬಶಂ. ೧-೪೫). [ಪಸುರ್$_2$+ಪರಲ್]

ಪಸುರ್ವಸದನ (ನಾ). ಹಸುರುಬಣ್ಣದ ಬಟ್ಟೆ; ಹಸುರುಡುಗೆ: ಬೆಳೆವೊನಲೊಪ್ಪಿದುದಾ ವಸುಧಾಸತಿ ಕೈಗೈಯೆ ವಿರಾಜಿಪ ಪಸುರ್ವಸದನದಂತೆ (ಜಯಕಾ. ೧-೩೮); ವಸುಧಾರಮಣಿ ವಿಲಾಸದಿ ಕೈಗೆಯ್ದ ಪಸುರ್ವಸದನವೆಂಬಂತೆ ಮುಸುಕಿ ಬೆಳೆದ ಬೆಳೆಗೆಯ್ವನತತಿ ರಂಜಿಸುತಿಹವಾ ದೇಶದೊಳು (ಶ್ರೀಪಾಲ. ೧-೪೮). [ಪಸುರ್$_2$+ಪಸದನ]

ಪಸುರ್ವಳವಿಗೆ (ನಾ). ಹಸುರುಬಣ್ಣದ ಬಾವುಟ; ಹಸುರು ನಿಶಾನಿ: ಪೊಂಗೋಂಟೆಯ ತೆನೆಯ ಪಸುರ್ವಳವಿಗೆಯ ಕಾಂತಿ . . . ಯಮುನೆಗಂಗೆಯರ ಸಂಗಮಂ ಜನಿಸಿತಾಗಸದೊಳೇನಾಶ್ಚರ್ಯಮೆಂಬಂತೆ ಕಾಣಿಸಿದುದು (ಚಿಒಪು. ೧೧-೩೩). [ಪಸುರ್$_2$ + ಪಳವಿಗೆ(<ಪಟಯಿಗೆ)]

ಪಸುರ್ವಾಸೆ (ನಾ). ಹೊಕ್ಕುಳ ಮೇಲಿನ ಕಪ್ಪಾದ ಕೂದಲಿನ ಸಾಲು; ಬಾಸೆ: ಪಸುರ್ವಾಸೆ ಬಟ್ಟೆಯಿಂದುದ್ದೆಸಮಱಿಯದೆ ನಡೆದು ಕುಚನಗಾಂತರದೊಳ್ ಪೊಕ್ಕು ಸಿಲಿಂಕೆ (ವರ್ಧಪು. ೬-೮).

[ಪಸುರ್$_2$ + ಬಾಸೆ$_1$]

ಪಸುರ್ವಿಡಿ (ಕ್ರಿ). ಹಸುರಿನಿಂದ ಕೂಡು; ಹಸುರಾಗು: ಪಸುರ್ವಿಡಿದ ಮಾವಿನಿಂ ಬೇವಿನಿಂ ಪರಿಮಳಂಬೆತ್ತ ಸುರಹೊನ್ನೆಯಿಂ ಹೊನ್ನೆಯಿಂ . . . ಕಾನನಂ ಕಣ್ಗೆಸೆದುದು (ರಾಘಚ. ೧೭-೫೪). [ಪಸುರ್$_2$+ಪಿಡಿ$_1$]

ಪಸುರ್ವುಲ್, ಹಸುರುಹುಲ್ಲು (ನಾ). ಹಸುರಾದ ಹುಲ್ಲು; ಗರಿಕೆ: ಬೆಳೆದ ಪಸುರ್ವುಲ್ಲೆಂದಾಸೆಯೊಳೆ ಸಾರ್ದು ಮರಕತದೊಡ್ಡುಂಗಲ್ಲನೆ ಕಾರ್ದು ಮೃಗಂಗಳ್ ಕಲ್ಲನೆ ಕನಲುತ್ತುಮಿರ್ಪುವು (ಅಜಿಪು. ೯-೨೩); ಪಸುರ್ವುಲ್ಲಂ ಮೇದು ಸಂದೊಂದೆಡೆಯೊಳಮೊಡಲಿಂಬಿಲ್ಲೆನಲ್ ಕೊರ್ವಿ ಕೆಚ್ಚಲ್ ಕುಸಿವನ್ನಂ ಬೀಗಿ ಪಾಲಂಬಿಱುವಿಡೆ ಮೊಲೆಯಿಂ . . . ಮೆಲ್ಕೊತ್ತುತುಂ ನಿಂದುದು ವನಮಹಿಷೀವೃಂದಮಾನಂದದಿಂದಂ (ಪಂರಾಮಾ. ೬-೧೫೭); ಪಸುರ್ವುಲ್ಲಂ ಮೇಯುತುಂ ಮಂಜುಶಾಡ್ವಲದೊಳ್ ಕಣ್ಗೊಳಿಸಿರ್ದುದೊಂದು ಹರಿಣಂ (ಉದ್ಭಟ. ೨-೬೯). **ಹಸುರುಹುಲ್ಲು**: ಮೊಸರು ಹುಳಿ ಅಂತ ಹಸುರುಹುಲ್ಲು ಹಿಂಡಿದನಂತೆ (ಗಾದೆ).

[ಪಸುರ್$_2$+ಪುಲ್]

ಪಸುರ್ವೆಳಗು (ನಾ). ಹಸುರುಬಣ್ಣದ ಕಾಂತಿ; ಹಸುರಿನ ಪ್ರಭೆ: ಬಿಸಿಲೆಲ್ಲ ಪಸಲೆಗವಿದುದು ಪಸುರ್ವೆಳಗಿಂದೆನಿಪ ಬಾಲಕದಳೀವನದೊಳ್ (ಕಾದಂಉ. ೨೦೯); ಗಿಳಿ . . . ಪಸುರ್ವೆಳಗಂ ಪಸರಿಸುತುಂ ಮಿಸುಪ ಪಸಲೆಯ ಪಸೆಯೊಳ್ ಮನಂಗೊಳಿಪ ಕುಮಾರಪಾಲಘೂರ್ಜರನಂ ಕಂಡು (ಉದ್ಭಟ. ೬-೧೨೬ ಪ); ಪೊಸಮಾವಶೋಕೆಯೊಳ್ . . . ಗಿಳಿವಿಂಡು ಬನಸಿರಿಯೊಳು ಮಸೆದುವೊಂದೊಂದಱೊಳ್ಮಧುಮಾಸಕಂಗಜನ ದಸೆಯಂತೆ . . . ಪಸುರ್ವೆಳಗಿ[ಪಾಠಾಂ.ಸಿ]ನಂತೆ ಕೆಂಪಸಿತಂ ಪಳದಿ ಪಳುಕುಪಚ್ಚೆಗಳ ಬಣ್ಣದಿಂದೆ (ಜೈಮಿಭಾ. ೮-೪).

[ಪಸುರ್$_2$ + ಬೆಳಗು$_2$]

ಪಸುರ್ವೆಳ್ಪು (ನಾ). = ಪಸುರ್ವೆಳಗು: ಪೊಯ್ನೂರಿಂ ಪೊಱಮಡುವಂತೆ ಲತಾವಿಟಪಂಗಳ್ ನಿಜಮಾದ ಪಸುರ್ವೆಳ್ಪನೊಳಕೆಯ್ಯೆ (ಕಾದಂಉ. ೪೨೯). [ಪಸುರ್$_2$ + ಬೆಳ್ಪು$_2$]

ಪಸುರ್ವೊಡೆ (ನಾ). ಹಸುರುಬಣ್ಣದ ಹೊಡೆ; ಹಸುರು ತೆನೆ: ಮುಗುಳುಹೊಡೆಗಳರೆಹೊಡೆ ನೆಱೆ ಮೇಲಕ್ಕೆ ನಿಗುರುವ ಹೊಡೆ ಪಸುರ್ವೊಡೆಯ ಒಗುಮಿಗೆಯಲಿ ಹಾಲುದುಂಬುದೆನೆಯ ಶಾಲಿ ಸೊಗಸನಿತ್ತವು ನೋಳ್ಪರಿಗೆ (ಕಂಪವಿ. ೫-೬೨). [ಪಸುರ್$_2$ + ಪೊಡೆ$_3$]

ಪಸುರ್ವೊನ್, ಪಸುವೊನ್, ಪಸುವೊನ್ (ನಾ). ಹಳದಿಬಣ್ಣದ ಚಿನ್ನ; ಶುದ್ಧವಾದ ಬಂಗಾರ; ಅಪರಂಜಿ: ವಾರುವದ ಬೋರುಗುದುರೆಗಳ್ ಪೂಡಿದ ಪಸುರ್ವೊನ್ನ ರಥಮನೇಱಿ . . . ಗಾಂಗೇಯನಲ್ಲಿಗೆ ಬಂದು (ಪಂಪಭಾ. ೧೨-೫೬ ಪ); ಪಸುರ್ವೊನ್ನ ಜಗಲಿ ಪಚ್ಚೆಯ ಪಸುರ್ವಂದರ್ . . . ಎಸೆದಿರ್ದುವು ರಾತ್ರಿಮತಿಯ ಬೀಡಿನೊಳೆತ್ತಂ (ಕಾವ್ಯಾವ. ೨೩೬). **ಪಸುಪೊನ್**: ಪೊಸಮಸೆಯ ಬಾಳ ಪೊಳೆಪುಂ ಪಸುಪೊನ್ನಾ[ರ]ತಿಯ ತೊಳಗಿ ಬೆಳಗುವ ಮಿಂಚುಂ ದೆಸೆದೆಸೆಗ[ಳೊ]ಳೆಸೆದಿರೆ (ವರ್ಧಮಾ. ೪-೪೩). **ಪಸುವೊನ್**: ಬಿಸುಗಲ್, ಪಸುರ್ವಂದರ್, ಪಸುವೊನ್ (ಭಾಷಾಭೂ. ೧೪೬ ಉದಾ). [ಪಸುರ್$_2$ + ಪೊನ್]

ಪಸುವೊನ್ 'ಪಸುರ್ವೊನ್' ನೋ.

ಪಸುವೊನ್ನಮೊಟಿ (ನಾ). ಒಂದು ಸ್ಥಳದ ಹೆಸರು (?): ಗೋವಿನ್ದರಂ ಸಟ್ಟಿಮೂನೂಱುಂ ಕುಣುಂಗಿಲ್ ಆಯ್ನೂಱುಮಂ ಪ್ರತಿಪಾಲಿಸುತ್ತಿರೆ ನನಿಗುನ್ದದ ಪಸುವೊನ್ನಮೊಟಿಯಿಂ (ಎಕ. IX, ದೇವನ. ೪೨-೬, ಸು. 900 ?). [?]

ಪಸುಳ, ಹಸುಳ (ನಾ). ಎಳೆಯವನು; ಚಿಕ್ಕವನು; ಶಿಶು: ಪಸುಳರಿರೆ [ಪಾಠಾಂ. ಶಿಶುಗಳಿರೆ] ನಮಗೇತಕೌ ಗಡಣಿಸಿದೆ ಭಿಕ್ಷಾನ್ನಂಗಳಂ ನೀನುಸಿಕನಿರ್ಪುದು ಧರ್ಮವೇ ಕರೆಯೌ ತನೂಭವನ (ಬಸಪು. ೨೪-೬೬). **ಹಸುಳ**: ಐದುವರ್ಷದ ಹಸುಳ[ಪಾಠಾಂ. ಳೆ] ವನವೆತ್ತ ತಪವೆತ್ತ (ಪುರಂದ.೨-೬೦-೧); ಮನುಮಥನು ತನ್ಮನದಿ ಸರ್ವಮಂ ಗ್ರಹಿಸಿದಂ ಹಸುಳನೆಂದವ ಬಗೆದಿರೇ (ನವಮೋ. ೧೨-೨೫); ಹಾದಿಗಾಣದ ಹಸುಳನನು ಸಂತ್ಯಜಿಸಿ ಪೋಗುವರೆ (ರಘುವಂ. ೮-೧೨). [<ಪಸುಳೆ]

ಪಸುಳೆ, ಹಸುಳೆ (ನಾ). ೧. ಚಿಕ್ಕಮಗು; ಎಳೆಯ ಕೂಸು; ಶಿಶು: ಪಾಲ್ವಲ್ಗಳ ಪ[ಪಾಠಾಂ.ಹ]ಸುಳೆಗಳಂ ಕೊಂದು ಬಾಯೆಂದು ಪೇಟ್ಟೋ ಬೆಸನಂ ಚಾಣೂರಮಲ್ಲಂಗೆನಗೆ ಬೆಸಸಲೇಂ ತಕ್ಕುದೇ ಕಂಸರಾಜಾ (ಅರ್ಧನೇ. ೮-೬೦; ಕಾವ್ಯಸಾ. ೫೧೦ ನೋ); ಪ[ಪಾಠಾಂ.ಹ]ಸುಳೆಗೆ ತಕ್ಕ ಮಜ್ಜನಮಿದಲ್ತು (ಅನಂಪು. ೫-೬೪); ನೀಂ ಪಸುಳೆ ಪೋಗು (ಚಿಬಪು. ೪೦-೪); ಪಸುಳೆಯೆಂದು ಸೈರಿಸಿದೆ (ಜೈಮಿಭಾ. ೪-೩೪); ತೊದಲಿತು ಮುದ್ದು ಪಸುಳೆ! (ಕಂಬಹು. ೬೫). ೨. ಎಳೆಯದು; ಚಿಕ್ಕದು: 'ಪಸುಳೆಗಿಳಿ', 'ಪಸುಳೆಗೋಗಿಲೆ' ಪರಾ. **ಹಸುಳೆ**: ೧. ಎಸಳ ಸೋಗಿಲ ಹಸುಳೆಯಂ ಝಂಕಾರರವದಿಂ ಜೋಗುಳಂಬಾಡಿ ತರಂಗದಿಂ ತೂಗಿ (ಗಿರಿಕ. ೨-೬೧ ಪ); ಒಬ್ಬನೆ ಹಸುಳೆ ಹೊಕ್ಕನು ವೈರಿಮೋಹರವ (ಕುಮ್ಯಾದ್ರೋ. ೫-೫); ಹಸುಳೆ . . . ಪಶುಮೃಗಗಳು ಗಾನರಸಕೆ ಸೋಲುವವು (ಭರಣ. ೧-೮೬); ಕಿವಿಗೆ ನುಸುಳೆ ಹಸುಳೆಯಿಂಪು (ಗಿಳಿವಿಂ. ೯೫-೫೫).

[ದೇ.॥ ತಮಿ. ಪಚಲ್, ಪೈಚಲ್, ಪಯಲ್, ಪೈದಲ್, ಪೈಯಲ್; ಮಲ. ಪೈತಲ್; ತುಳು. ಪಸಿ = ಹುಡುಗ]

ಪಸುಳೆಗಾಳಿ (ನಾ) ಎಳೆಯ ಗಾಳಿ; ಮಂದಮಾರುತ: ಬೀಸುವ ಚಾಮರತತಿ ಪೆತ್ತುದು ಪಸುಳೆಗಾ[ಪಾಠಾಂ.ಘಾ]ಳಿಯನು (ಶ್ರೀಪಾಲ. ೧೩-೭೫). [ಪಸುಳೆ+ಗಾಳಿ$_1$]

ಪಸುಳೆಗಿಳಿ (ನಾ). ಎಳೆಯ ಗಿಳಿ; ಮರಿಗಿಳಿ: ಪರಿವ ಪಸುಳೆಗಿಳಿಗಳ ನುಣ್ಗೊರಲಿಂ ಪಱೆಗುಟ್ಟುವ ಪರಪುಟ್ಟದ . . . ಶಶಿಕಾಂತದ ಪರಲೆಯಿ ನೊಸರ್ವ ಕೊಳದ ಸುಭಗತೆಯಿಂ ಪಱಲೆಯನುಱೆ ಪಾಱಿಸುವುದು ನಂದನಕಾ ನಂದನದಿರವು (ಜಯಕಾ. ೧-೪೬). [ಪಸುಳೆ+ಗಿಳಿ]

ಪಸುಳೆಗೊರಲ್ (ನಾ). ಮಗುವಿನ ಗಂಟಲು; ಶಿಶುವಿನ ಕಂಠ: ಪಸುಳೆಗೊರಲಿಂ ಪೊಣ್ಮಿದಂತಿಹುದು ಶ್ರೀಹರಿಯ ನಾಮಂ (ಚಂದ್ರಸ. ೩೬-೧೨). [ಪಸುಳೆ + ಕೊರಲ್]

ಪಸುಳೆಗೋಗಿಲೆ (ನಾ). ಎಳೆಯ ಕೋಗಿಲೆ; ಮರಿಕೋಗಿಲೆ: ಅಶೋಕೆಯ ಕೊನೆದಳಿರನುಣಿಸಿತ್ತು ಪಸುಳೆಗೋಗಿಲೆಗಳಂ ಪೊರೆವ ವೀಣಾನಿನಾದೆಯರಿಂ . . . ಅತಿಮನೋಹರಮಾದ ವೇಶ್ಯಾವಾಟಂ ಕಣ್ಗೆಸೆದಿರ್ಪುದು (ಉದ್ಭಟ. ೧-೭೮ ಪ). [ಪಸುಳೆ+ಕೋಗಿಲೆ]

ಪಸುಳೆತನ, ಹಸುಳೆತನ (ನಾ). ಎಳಮೆ; ಬಾಲ್ಯ; ಚಿಕ್ಕಂದು: ಪಸುಳೆತನದೊಳ್ ಪ್ರಣವಮಂ ಶರಣಗಣಕೆ ಬೋಧಿಸುವನೀ ಕುವರನೆಂಬೊಲ್ ತೊದಲ್ವಾತು ರಂಜಿಸಿದುವು (ಚಿಬಪು. ೫-೪೧); ಪಸುಳೆತನದಂದಿಂದೆ ವೃದ್ಧಾಪ್ಯದನ್ನೆಗಂ ಬಿಸಜನಾಭನ ಭಕ್ತಿ ದೊರೆಕೊಳದ ಮನುಜರಂ ನಸುನಗುವ ಧವಳದೊಳ್ಪಿಂ ಚಂದ್ರಹಾಸನಿವನಖಿಳಭೂಮಂಡಲದೊಳು (ಜೈಮಿಭಾ. ೨೮-೬೧). **ಹಸುಳೆತನ**: ಹಸುಳೆತನದಲಿ ಹರನ ಮಗನಾವಿಷಮದೈತ್ಯನ ಸೀಳಿ ಬಿಸುಡನೆ (ಕುಮ್ಯಾದ್ರೋ. ೫-೨೫); ಹಸುಳೆತನ ಏಳುವರ್ಷಗಳ ವಯಸ್ಸಿನವರೆಗೆ (ಕ್ರಿಯಾತಿ. ೨೯). [ಪಸುಳೆ+-ತನ]

ಪಸುಳೆದಳಿರ್ (ನಾ). ಎಳೆಯ ಚಿಗುರು: ಪಸುಳೆದಳಿರ ಪಾಸಿನ ಮೇಲೊಱಗಿಸಿ ಪೊಸಗಪ್ಪುರವಳಿಕಂ ಪೊಸೆದುದಿರಿಸಿ . . . ಸಖೀಜನಮುಪ ಚರಿಸಿದುದಾಗ (ಜಯಕಾ. ೪-೩೯). [ಪಸುಳೆ + ತಳಿರ್$_2$]

ಪಸುಳೆದಿಂಗಳ್ (ನಾ). ಬಾಲಚಂದ್ರ: ಗೆರೆನಗೆಯ ಕಿರಿಯೊಡಲ ಪಸುಳೆದಿಂಗಳ್ ದಿನಂ ದಿನದಿನಂ ಬಳೆವಂತೆ (ಶ್ರೀರಾಮಾ. ೧೬-೪೩೫).

[ಪಸುಳೆ+ತಿಂಗಳ್]

ಪಸುಳೆವಿಸಿಲ್, ಹಸುಳೆಬಿಸಿಲು (ನಾ). ಎಳೆಬಿಸಿಲು; ಹೂಬಿಸಿಲು: ಪ್ರಾಕಾರದ ಮಣಿಮಯವ ಪ್ರಾಕಾರದ ಪಸುಳೆವಿಸಿಲ ಮಸಕದಿನಿರುಳುಂ ಕೋಕನದಮುಡುಗವು (ಅನಂಪು. ೧-೧೦೨); ಇದು ಪಸುಳೆವಿಸಿಲ ಮಸಕದಿನೆಸಟ್ಟುಸುಪ ಪೊಸದಾವರೆಯ ಪಸೆಯೊಳಸದಳಮೆಸೆವ ಸರಸತಿಯಂದಿದಳಿರ್ಗೆ . . . ಸಮೆದ ಕಾವನ ಗೆಲ್ಲಂ (ಕಬ್ಬಿಕಾ. ೩೪೯ ಗದ್ಯ); ಪಸುಳೆವಿಸಿಲ ಪ್ರವಾಹಂಗಳೆತ್ತಲುಂ ಪರಿವಿನಂ ದಿನಪನುದಯಂಗೈದು ಬರುತಿರ್ದನು (ಜೈಮಿಭಾ. ೯-೧೪). **ಹಸುಳೆಬಿಸಿಲು**: ಹಸುಳೆಬಿಸಿಲ ಹೊನ್ನ ಲೀಲೆ ಹಸುರ ಕಡಲ ತಬ್ಬಿರೆ (ಅನಿಕೇ. ೪೨-೭).

[ಪಸುಳೆ + ಬಿಸಿಲ್]

ಪಸುಳೆವೆಣ್ಣು (ನಾ). ಎಳೆ ಹುಡುಗಿ; ಬಾಲಕಿ: ತನಿಮಾವಣ್ಣಿನ ಮಧುರತೆ ಕಾಯೊಳು ಜನಿಪುದೆ ರತಿಸವಿ ಎಳೆಯ ವನಿತೆಯೊಳಲ್ಲದೆ ಪಸುಳೆವೆಣ್ಣಿನೊಳುಂಟೆ (ಜೀವಂಸಾಂ. ೧೯-೯೭). [ಪಸುಳೆ+ಪೆಣ್ಣು (<ಪೆಣ್)]

ಪಸೆ$_1$ 'ಪಸಿ$_3$' ನೋ.

ಪಸೆ$_2$, ಹಸೆ$_1$ (ನಾ). ೧. ಮದುವೆ ಮೊದಲಾದ ಶುಭಕಾರ್ಯಗಳಲ್ಲಿ ಹಾಕುವ ಹಾಸು,—ಆಸನ,—ಮಣೆ : ಮೂವತ್ತಿರ್ವರರಸು ಮಕ್ಕಳ ಕೂಸುಗಳಂ . . . ಒಂದೆ ಪಸೆಯೊಳ್ ಮದುವೆನಿಱಿಸಿದಳ್ (ಪಡ್ಡಾರಾ. ೪೫-೧೮) ; ಪಸುರ್ವಂದರ್ ಪಸೆ ವೇದಪಾಠಗರವಂ . . . ಮಂಗಳತೂರ್ಯನಾದಮೆಸೆಯುತ್ತಿರ್ಪನ್ನೆಗಂ ಚಕ್ರಿ ರಾಗಿಸಿ ಕೆಯ್ನಾರೆ ಜೆದಂ ಗುಣಾರ್ಣವಮಹೀಪಾಲಂಗಮಾ ಕನ್ನೆಯಂ (ಪಂಪಭಾ. ೫-೨೫) ; ಜೋಯಿಸನ ಮಗಳ್ [ಪಸೆಯ ಮೇಲೆ] ರಂಡೆಯಾದಳ್ (ಧರ್ಮಾಮೃ. ೧೨-೩೮) ; ಇರ್ವರ್ಕನ್ನೆಯರುಮನೆರಡುಂಕೆಲದೊಳಗೊಂದೆ ಪಸೆಯೊಳಿರಿಸಿ ಪಾಣಿಗ್ರಹಣಂಗೆಯ್ದು (ಬಂಹರಿ. ೨-೩೪ ಪ). ೨. ಹಾಸಿದುದು ; ಹಾಸುಗೆ ; ಹಾಸು : ಉರುಳ್ಚಿ ಪೂವಿನ ಪಸೆಯೊಳ್ ಪೊರಳ್ಚಿದನಳುರ್ಕೆಯ ಬರ್ದೆಯರಂ ಗುಣಾರ್ಣವಂ (ಪಂಪಭಾ. ೨-೪೦) ; ಕುಳಿರ್ವಲರ್ದಲರೆಸಟ ಪಸೆಯ ಮೇಲೊಱಗಿರ್ದಂ (ಕಾದಂಪೂ. ೯೦೫) ; ಚೆಂಬೊನ್ನ ಶಿಲೆಯ ಮೇಲೆ ವಿರಚಿಸಿದ ಚೆನ್ನೆಯ್ದಿಲೆಸಟ ಪಸೆಗಳುಮಂ . . . ನೋಡುತ್ತೆ (ಪಂರಾಮಾ. ೨-೧೩ ಪ) ; ವಸಂತಂಗೆ ಪೊಸತಳಿರ್ಗಳ ಪಸೆಯಂ ತಂದಿಕ್ಕಿ (ಗಿರಿಕ. ೪-೧೫೭ ಪ). **ಹಸೆ$_1$** : ೧. ಹಸೆಯ ಮೇಲಣ ಮಾತ ಬೆಸಗೊಳಲಟ್ಟಿದರೆ ಶಶಿಧರನ ಹತ್ತಿರಕ್ಕೆ ಕಳುಹಿದರೆಮ್ಮವರು (ಮಹಾದೇ. ಒ. ೨೫-೪೮) ; ಮುತ್ತಿನ ಸೇಸೆಯೊಳೆಸೆವ ರತ್ನಂಗಳು ತೆತ್ತಿರ್ದ ಹಸೆಯ ವಿಷ್ಟರದಿ ಹತ್ತಿದ ದಂಪತಿಗಳ ವಿಗ್ರಹಂಗಳು ತೆತ್ತಿಸಿದಂತೆ ಶೋಭಿಸಿತು (ಮೋಹತ. ೧೩-೭೨) ; ಈಶ್ವರಂ ಶಿವೆಗೂಡಿ ಹಸೆಯೊಳಗೆ ಮಂಡಿಸಿದನು (ಚೆಬಪು. ೩೭-೫೮). ೨. ಸೆಟ್ಟಗುತ್ತಂ ತನ್ನ ಬಿಟ್ಟಾಯಮೆಂತೆಂದೊಡೆ ಹಸುಂಬೆಯನಿಕ್ಕುವಲ್ಲಿ ಹಸೆಯ ಜವಳಿ ಗಂಧರ ಬಟ್ಟಲು ಒಂದು ಗೋಂಟು ವಿಚಾರಂಗೆಯ್ದುವರಲ್ಲಿ ಮುದ್ರಾಪಣಂ ಹೊಂಗೆ ಹಾಗಂ (ಎಇ. XIX, ೩೮-೩೦ ; 1144) ; ಕ್ರೀಡಾವನದ ಹೂವಿನ ಹಸೆಯೊಳ್ ಮಯ್ಯ ನೀಡಾಡಿ (ನಂಬಿರ. ೧೨-೧೧೬) ; ನೀರೇಜದ ನಿಟ್ಟೆಸಟ ಹಸೆಗಳಿಂದೆಸೆಯೆ ವಿರಚಿಸಿದ ಲತಾಮಂಟಪಮಂ ಕಂಡು (ಕುಸುಮಾ. ೫-೯೭ ಪ) ; ಹಸಿಬಾಳೆಯೆಲೆಯ ಹಸೆಯಲಿ ಮಲಗಿಸಿದರು (ಕಾಲೂರ. ೧೮೩-೪೧೫). ೩. ರಂಗವಲ್ಲಿಯಿಂದ ಮಾಡುವ ಚಿತ್ರರಚನೆ : ಇಂದು ರಥೋತ್ಸವ, ಮನೆಯ ಮುಂದೆ ಹಸೆ ಹಾಕಬೇಕು (ರೂಢಿ).

[<ಪಾಸು$_2$./ತುಳು.ಪಜೆ]

ಪಸೆ$_3$ (ನಾ). ಹುರುಳಿಲ್ಲದ ಮಾತು ; ಕಾಡುಹರಟೆ ; ಕೆಲಸಕ್ಕೆ ಬಾರದ ಮಾತು : ಹುಸಿಯನೇ ಹೊಸೆದು ಪಸೆಯನೇ ಕೊಚ್ಚಿ ಪಶುಪತಿಯ ಅನುಭಾವಿಗಳೆಂದು ಪ್ರಳಯಕ್ಕೊಳಗಾಗಿ ಹೋದರು ನೋಡಾ (ಸಿದ್ದೇಪ. ೧೧೫-೩೫೬) ; ಅಱಿವಿಂಗೊಡೆಯರ್ . . . ಪಸೆಯನಾರೊಳಂ ನುಡಿಯರ್ (ನೀತಿಮಂ. II, ೧೫೮).

ಪಸೆಗೆಯ್ (ಕ್ರಿ). ಹಾಸುಗೆಯಾಗಿ ಮಾಡಿಕೊಳ್ಳು : ಕೂರ್ಗಣೆಗಳಡಗಿದುವಿಳೆಯೊಳಸುರೇಂದ್ರನಸವಳಿದು ವಸುಧೆಯಂ ಪಸೆಗೆಯ್ದನು (ಜೈಮಿಭಾ. ೨೨-೧೪). [ಪಸೆ$_2$ + ಕೆಯ್$_1$]

ಪಸೆಗೊಳಿಸು (ಕ್ರಿ). ಹಸೆಯ ಮೇಲೆ ಕುಳ್ಳಿರಿಸು : ಅಂಗಜಾತಂಗೆ . . . ಶೃಂಗರಿಸಿ ಶಶಿಕಾಂತನಿಳಯದೊಳು ಪಸೆಗೊಳಿಸೆ (ನವಮೋ. ೧೩-೫೨). [ಪಸೆ$_2$ + ಕೊಳು(<ಕೊಳ್$_1$) + -ಇಸು$_3$]

ಪಸೆಜಗತಿ (ನಾ). ಹಸೆಯನ್ನು ಇಟ್ಟಿರುವ ವೇದಿಕೆ ; ಹಸೆಯ ಜಗಲಿ : ಮದುವೆಯ ಪಸೆಜಗತಿಯನೇಱುವಂತೆ (ಚಿಕವಂ. ೫೪-೨೧).

[ಪಸೆ$_2$ + ಜಗತಿ$_1$]

ಪಸೆನಿಲ್, ಹಸೆನಿಲ್ (ಕ್ರಿ). (ವಿವಾಹದ) ಹಸೆಮಣೆಯ ಮೇಲೆ ನಿಲ್ಲು ; ಮದುವೆಯಾಗು ; ವಿವಾಹವನ್ನು ಮಾಡಿಕೊಳ್ಳು : ಶಂಭು ಕೂರ್ತು ಪಸೆನಿಂದಂ ತನ್ಮಹಾದೇವಿಯೊಳ್ (ರಾಜಶೇ. ೩-೯೦) ; ಪಸೆನಿಂದಾತ್ಮಜೆಯಂದಮಾಳ್ಡ ಮುಡಿಯಂ ಕೊಯ್ದಾಯನೇ ಬೇಡೆ ತಾಪಸನಾತಂಗುಱೆ ಮಾನಕಂಜಂ (ವೃಷವಿ. ೮-೩೫) ; ದೇವಿಯರು ಮತ್ತೆ ತಪವಾಚರಿಸಿ ಪರಮೇಶನನ್ನೊಲಿಸಿ ಪಸೆನಿಂದುದಾಯ್ತು (ನಾಗರಿ. ೪). **ಹಸೆನಿಲ್** : ಹಸೆನಿಂದು ಕಂಪಿಲರಾಯಗಾನು ಬಂದವಳಲ್ಲ (ಕುರಾಸಾಂ. ೩೨-೧೧೮) ; ಮೋಕ್ಷಸತಿಯ . . . ಹಸೆನಿಂದನ ಕಥೆಯ ಮೃಗಾಕ್ಷಿ ಪೇಳುವೆನು (ರಾಮವಿ. ೨೦-೯). [ಪಸೆ$_2$ + ನಿಲ್]

ಪಸೆನೀರು (ನಾ). ತಂಪಾದ ನೀರು ; ತಣ್ಣೀರು : ಅಲ್ಲೊಂದು ಇಲ್ಲೊಂದು ಪಸೆನೀರಿನ ತೋಡುಗಳು (ಹೊಸಕ್ಷಿ. ೬೩).

[ಪಸೆ$_1$(<ಪಸಿ$_3$) + ನೀರು$_1$(<ನೀರ್)]

ಪಸೆಯಿಡು (ಕ್ರಿ). ಪೀಠವನ್ನು ಇಡು : ಶರಣೆಂದು ಬಿಜಯಮಾಡಿಸಿ ಪಸೆಯಿಟ್ಟು ಕುಳ್ಳಿರಿಸಿ ವಿಭೂತಿ ವೀಳಯವಿತ್ತು (ತ್ರಿಭುತಿ. ೧೯-೩೩).

[ಪಸೆ$_2$ + ಇಡು$_1$]

ಪಸೆಯಿರ್ (ಕ್ರಿ). ೧. ಹಸೆಮಣೆಯ ಮೇಲಿರು ; ಪೀಠದಲ್ಲಿ ಕುಳಿತಿರು : ನವರತ್ನಖಚಿತಪಲ್ಲಕ್ಕಿಯೊಳು ಪಸೆಯಿರ್ದು (ಗುರುಚಾ. ೫-೧೩). ೨. = ಪಸೆನಿಲ್ : ಪಸೆಯಿರ್ದಂ ಗರುಡವೇಗ ನೃಪನಂದನೆಯೊಳ್ (ಶಮದ. ೫೩ ಪ್ರಯೋ) ; ಕನೆಕಲತೆ ಕಾಂತಿಮತಿಯೊಡಗೂಡಿ ಸೌಂದರಂ ಮಿನುಪವನಿಯೊಳ್ ಪುಟ್ಟಿ ಪರಮನಾಚಿಯೊಳೆಸೆವ ವಿನಯನಿಧಿಯಂಗಸಂಗದೊಳೊಲ್ದು ಪಸೆಯಿರ್ದ ಕಥೆಯ ಕೇಳ್ (ಆರಾಚ. ೪-೬ ಸೂಚನೆ).

[ಪಸೆ$_2$ + ಇರ್$_1$]

ಪಸೆವಣೆ, ಹಸೆಮಣೆ, ಹಸೆವಣೆ (ನಾ). ಮದುವೆ, ಮುಂಜಿ, ಆರತಿ ಮುಂತಾದ ಶುಭಸಂದರ್ಭಗಳಲ್ಲಿ ವಧೂವರರು, ವಟು ಮುಂತಾದವರನ್ನು ಕೂರಿಸುವ (ಚಿತ್ತಾರದ) ಮಣೆ,-ಪೀಠ : ಮಿಸುಪ ರತ್ನದ ಪಸೆವಣೆಯ ಮೇಲೊಸಗೆಯ ಸುಮುಹೂರ್ತದೊಳ್ಮಂಡಿಸಿ (ಉದ್ಭಟ. ೮-೫೪ ಪ). **ಹಸೆಮಣೆ** : ತರಿಸಿ ಹೊಸ ಹಸೆಮಣೆಯೊಳಗೆ ಕುಳ್ಳಿರಿಸಿ ಕಮಲಾಕ್ಷಿಯರು . . . ನೇವರಿಸಿದರು ಸೆಳ್ಳುಗುರ್ಗಳಲಿ ಶಶಿಮುಖಿಯ ಸಿರಿಮುಡಿಯ (ತೊರರಾ. ೧-೧೪-೧೩) ; ನೀನೂ ಬಂದು, ಹಸೆಮಣೆಯ ಮೇಲೆ ಜೊತೇಲಿ ಕೂತರೆ ತಾನೆ ಆಗೋದು ? (ಮರಳಿ. ೧೦೨) ; ಅವನನ್ನು ಹಸೆಮಣೆಯ ಬಳಿಗೆ ಕರೆತಂದರು (ಕವಿಕ. ೫೦). **ಹಸೆವಣೆ** : ಸುರರ ಮುಂಡಗಳ ಹಸೆವಣೆಗಳೊಳ್ ಕುಳಿತು ಕೆಂಗುರುಳ ಬಣ್ಣದ ಬಾಸಿಂಗಗಳಂ ಧರಿಸಿ . . . ಮರುಳ ಮದವರ್ಕಳೆಸೆಯಲ್ ವೀರನಿಱಿದ ಸಮರಾಂಗಣದೊಳು (ಚೆಬಪು. ೩೨-೨೦). [ಪಸೆ$_2$ + ಮಣೆ]

ಪಸೆವರಿಸು (ಕ್ರಿ). ಹಾಸನ್ನು ಹರಡು ; ಹಸೆಯನ್ನು ಹಾಕು : ಪೊಕ್ಕು ಮಕುಟಬದ್ಧಪರಿವೃತಂ ಕರುಮಾಡದೊಳ್ ಮುನ್ನಂ ಪಸೆವರಿಸಿದ ಮೃಗಾಧಿರಾಜವಿಷ್ಟರದೊಳ್ ಕುಳ್ಳಿರ್ದು (ಶಾಂತಿಪು. ೧೧-೮೩ ಪ).

[ಪಸೆ$_2$ + ಪರಿಸು(<ಪರಿಯಿಸು)]

ಪಸೆವಾಸು$_1$ (ಕ್ರಿ). ಹಸೆಯ ಮಣೆಯನ್ನು ಹಾಸು ; ಪೀಠವಿಡು : ರಂಗವಲಿಯಿಕ್ಕಿ ತೋರಣ ಮುಂಗುಡಿಯುಮನೊಪ್ಪೆ ಕಟ್ಟ ಪಸೆವಾಸಿ ಮಹಾಮಂಗಳಕಳಶದಿನಿದಿರ್ಗೊಂಡು (ಜೀವಸಂ. ೧೯೬-೨೯).

[ಪಸೆ$_2$ + ಪಾಸು$_1$]

ಪಸೆವಾಸು$_2$ (ನಾ). ಹಸೆಯ ಮೇಲೆ ಹಾಸುವ ಬಟ್ಟೆ,—ವಸ್ತ್ರ : ಮಿಸುಗುವ ಚೌಕದ ಮುತ್ತಿನ ಪಸೆವಾಸಿನ ಪಟ್ಟವಟಿಯ ದುಗುಲದ ರುಚಿಗಳ್ ಪಸರಿಸೆ ಪೊಂಜಗಲಿ ವಿರಾಜಿಸುತಿರ್ದುದು (ಜಗವಿ. ೧೦-೯೫).

[ಪಸೆ$_2$ + ಪಾಸು$_2$]

ಪಸೆವಿಡಿ, ಹಸೆಹಿಡಿ (ಕ್ರಿ). ಹಾಸುಗೆ ಹಿಡಿ ; ಕಾಯಿಲೆ ಮಲಗು : ಮದುವೆಗೊರ್ಪಗಲುಳಿದು ಪಸೆವಿಡಿದು ಮದುಮಗಳ್ ಕುದಿವೊಡಲಿನಿಂ

ಪೊರೆ ಬಾಯ್ತೆಡುತಲಿಹಳು (ಕಾಲೂರ. ೧೪೨-೩೦೮). **ಹಸೆಹಿಡಿ :** ಆರು ತಿಂಗಳು ಹಸೆಹಿಡಿದಿದ್ದವರಂತೆ ಕಾಣುತ್ತಿ (ಒಡ್ಡಿಉ. ೧೪೫); ಅಪ್ಪರಲ್ಲಿ ಆತನ ಹೆಂಡತಿ ಗಂಗು ಜ್ವರದಿಂದ ಹಸೆಹಿಡಿದಳು (ಮುಂಗಾಮು. ೬೧); ಮನೋವ್ಯಾಕುಲದಿಂದ ಆರೋಗ್ಯ ಕೆಟ್ಟಿತು. ಹಸೆಹಿಡಿದಳು (ದೇವನು. ೪೬).

[ಪಸೆ$_2$ + ಪಿಡಿ$_1$]

ಪಸೆವೆಣ್ (ನಾ). (ಮದುವೆಯ) ಹಸೆಯ ಮೇಲೆ ಕೂರುವ ಹೆಣ್ಣು ; ಮದುವಣಗಿತ್ತಿ : ಪಸೆವೆಣ್ಣೆನಿಪ್ಪ ಕನ್ನೆಯನತಿಶಯಾನಂದ ದೊಸಗೆಯಿಂ ಕರೆದು (ಕುಮಾಪು. ೭-೧೯೪). [ಪಸೆ$_2$ + ಪೆಣ್]

ಪಹಡಿ, ಪಾಡಿ$_3$ (ನಾ). ೧. ಸಣ್ಣ ಗುಡ್ಡಗಳಿರುವ ಪ್ರದೇಶ : ಬಯಲ ಗದ್ದೆಗಳು ಬರುವ ದಾಲುಯಿತ ಆಯದ ಪಹಡಿ ಕುಂಮರಿಯೆಂಬ ಬಯಲೊಳಗೆ (ಸೌಇಎ. ೧೯೨೯, ಕಾರ್ಕಲ್, ೫೧೯-೧೦ ; ?). ೨. [ಸಂಗೀತ] ಒಂದು ರಾಗದ ಹೆಸರು : ರಾಮಕ್ರಿಯೆ . . . ಪಹಡಿ . . . ಮಧ್ಯಮಾವತಿಯೆಂಬ ಮೂವತ್ತಾಱು ರಾಗಂಗಳೇ ಮುಖ್ಯವಾಗಿ . . . ಪ್ರಸಿದ್ಧಗೊಂಡಿರ್ಪುವು (ವಿವೇಕ. ೨೩೪). **ಪಾಡಿ$_3$:** ೨. ರಾಗ ಪಾಡಿ, ಆದಿತಾಳ (ತ್ರೀಕೃಪಾ. ೨).

[←ಹಿಂ. ಮರಾ. ಪಹಾಡೀ./ಸಂ. ಪಹಾಡೀ, ಪಾಡೀ]

ಪಹಡು (ನಾ). ಗುಡ್ಡ ; ಸಣ್ಣ ಬೆಟ್ಟ : (ಕಿ).

[←ಹಿಂ. ಮರಾ. ಪಹಾಡ್]

ಪಹಣಿ, ಪಾಣಿ$_3$ (ನಾ). ೧. ಬೆಳೆಯ ಅಂದಾಜನ್ನು ಗುರುತಿಸುವುದು ; ಬೆಳೆಯ ಲೆಕ್ಕ : ಪಹಣಿಯನ್ನು ಚಕ್ಕು ಮಾಡಬೇಕಾದರೆ ಬಾಂದುಗಳಲ್ಲಿ ಒಂದು ನಿರ್ದಿಷ್ಟಭಾಗವನ್ನಾದರೂ ಅಮಲ್ದಾರ್ರು ಅಜಮಾಯಿಷಿ ಮಾಡಬೇಕು (ಕೆಲನೆ. ೧೫೪) ; ನಾಡಿಗರು ಪಹಣಿ ಬರೆಯುವುದಕ್ಕೆ ಆಗಮಿಸಿದ್ದಾಗ ಅವರೊಂದಿಗೆ ಅಹೋಬಲರಾಯರೂ ಬಂದಿದ್ದರು (ಜೆಳುಮ. ೧೨೧). ೨ (ಶಾನುಭೋಗರಲ್ಲಿರುವ) ಬೆಳೆಯ ದಾಖಲೆ ಪುಸ್ತಕ ; ಕಡತ : ಖಾತೆಯನ್ನು ಬೇರೆ ಹೆಸರಿನಲ್ಲಿಡುವುದು, ಪಹಣಿಯಲ್ಲಿ ಬಾಳೆಗೆ ಬದಲು ತೆಂಗಿನ ಫಸಲು ಎಂದು ಬರೆಯುವುದು . . . ಇವು ನನ್ನೂರ ಶಾನುಭೋಗರ ಕಿತಾಪತಿಗಳು (ನನ್ನೂರು. ೧೪೮); ಕುಳಿತಲ್ಲಿಂದಲೇ ಪಹಣಿ ಎಂಬ . . . ಸುಳ್ಳಿನ ಕಂತೆ ಒಂದನ್ನು ಗೀಚುತ್ತಿದ್ದರು (ಬೆಸ್ತಕ. ೭೨). **ಪಾಣಿ$_3$:** ೧. ಹಕ್ಕ-ರಜಿಸ್ಟರದಲ್ಲಿ ಪಾಣೀ ನಿನ್ನ ಹೆಸರಿಗೆ ಮಾಡಿಸಬೇಕು (ವೀಪಹ. II, ೧೦೩).

[←ಮರಾ. ಪಾಹಣೀ]

ಪಹಣಿಕಲ್ಲು (ನಾ). ಖಾತೆದಾರನ ಜಮೀನಿನ ಎಲ್ಲೆಯನ್ನು ಸೂಚಿಸಲು ಇರುವ ಕಲ್ಲು ; ಬಾಂದು : ಗ್ರಾಮನೌಕರರುಗಳು . . . ಜಮೀನುಗಳ ಹದ್ದು ಬಾಂದು ಪಹಣಿಕಲ್ಲು ಇತರ ಗುರ್ತುಗಳನ್ನು ಕಾಪಾಡುವಿಕೆ ಮತ್ತು . . . ಅನೇಕ ವಿಷಯಗಳಿಗೂ ಗಮನಕೊಡಬೇಕು (ಗ್ರಾಮಾಕ. ೨೦೪). [ಪಹಣಿ+ಕಲ್ಲು(<ಕಲ್$_3$)]

ಪಹಣಿಲೆಕ್ಕ (ನಾ). ಪ್ರತಿಯೊಬ್ಬ ಜಮೀನುದಾರನ ಜಮೀನಿನ ಅಳತೆ, ಬೆಳೆ ಮುಂತಾದುವನ್ನು ನಮೂದಿಸಿರುವ ದಾಖಲೆ ಪುಸ್ತಕದಲ್ಲಿರುವ ಲೆಕ್ಕ : ಮೊನ್ನೆ ಪಹಣಿಲೆಕ್ಕಕ್ಕೆ ಬೇಕಾದ ದಾಖಲೆ ತರಲು ಅಲ್ಲಿಗೆ ಹೋಗಿದ್ದೆ (ಬಾಳಿವೈ. ೧೬). [ಪಹಣಿ+ಲೆಕ್ಕ]

ಪಹರಣೆ (ನಾ). [ಸಂಗೀತ] ಮದ್ದಳೆ ಬಾರಿಸುವುದರಲ್ಲಿ ಒಂದು ರೀತಿ,—ಬಗೆ : ತೊಡರದ ಪಹರಣೆಯಿಂ ಪಯದೊಡನುಗ್ಗಡಿಸುವುದು . . . ನಚ್ಚಣಿಯರಾಟಮೇನಚ್ಚರಿಯೋ (ಚಂದ್ರಪು. ೧೫-೭೫); ಜತಿ ಜೋಕೆ ತುಡುಕು ಪಹರಣೆ ಗತಿ ಗಮಕಂ . . . ಬೆಡಂಗಿನಿತುಂ ಸಂಗತಿವಡೆಯ ವಾದನಕಳಾವತಿ ಬಾಜಿಸುತಿರ್ದಳಿಂತು ಮುರಜಮನೊರ್ವಳ್ (ಶಾಂತೀಶ್ವ. ೧೩-೨೨೭); ಆ ಸಮಯದೊಳ್ ಮದ್ದಳಿಗಂ ಮದ್ದಳೆಯಂ . . . ಚಮತ್ಕಾರ ತುಡಿಕು ರಿಗ್ಭವಣೆ ಪಹರಣೆಗಳೆಂಬ ನಾನಾಶಬ್ದಂಗಳಂ ಬಾಜಿಸಿ (ಧರ್ಮನ. ೨-೨೩೭); ಬಾಜಿಸಿದನೊರ್ವನಮರ ಮದ್ದಳೆಯ ಲೀಲೆಯೊಳು ತುಡುಕು ಪಹರಣೆ ರಿಗ್ಭವಣೆ ಮೋಡಿಗಳನು (ಗೋಮಟೇ. ೭-೧೭). [<ಪ್ರಾ. ಪಹರಣ./ಸಂ. ಪ್ರಹರಣ]

ಪಹರಿ, ಪಾರಿ$_5$ (ನಾ). ೧. ಕಾವಲು ಕಾಯುವವನು ; ಕಾವಲುಗಾರ ; ಪಹರೆದಾರ : ಇದೇ ಈಗ ಸೆರೆಮನೆಯ ಪಹರಿ ಏಳು ಹೊಡೆದಿದ್ದಾನೆ (ವಿಶೋಚ. ೨೪೪). ೨. ಕಾವಲು ಕಾಯುವುದು ; ಗಸ್ತು ; ಪಹರೆ : ಭಕ್ತರ ಮಂದಿರಕ್ಕೆ ಹೂ ಕಾಯಿ ಹಣ್ಣು ಹುಲ್ಲು ಹೊಱೆ ಕಟ್ಟಿಗೆ ಬೊಕ್ಕಸ ಪಹರಿ ಪಾಡಿತನ ಬಾಗಿಲು ಮುಂತಾಗಿ ಶುಶ್ರೂಷೆಯ ಮಾಡಿ ಉಂಬಾಗ ಒಡೆಯರೆನಿಸಿಕೊಂಬ ತುಡುಗುಣಿಗೆಲ್ಲಿಯದೋ ನಿಜಜಂಗಮಸ್ಥಲ (ಮೋಳಿಮಾ. ೪೩-೧೮೦) : ಕನ್ನಮಂ ತದ್ಧರಾಕಾಂತಗೃಹಕಿಕ್ಕೆ ಪಡಕಣದ ಪಹರಿಯ ಸುಭಟರಂತದಂ ಕಂಡು ಹೆಡಗೈಗಟ್ಟಿ (ಸಮ್ಯಕೌ. ೧೦-೧೧) ; ಉಲಿವ ಪಕ್ಕಿಯೆ ಪಹರಿಯಾಳು ಗಿಳಿ ಪಡಿಯಜರು (ಚೇರಮ. ೨-೨೧). 'ಪಹರೆ' ಪರಾ. **ಪಾರಿ$_5$:** ೧. ಹರನ ಮೋಹನದ ನಿಧಿಯಂ ಪುತ್ತುವೆರಸಿ ಫಣಿ ಪರಿಕಿಸೆ ಸದಾ ಕಾದುಕೊಂಡಿರುತ್ತಿರ್ದೊಡಂ ನಿರುತಮಬಲಾಶ್ರಯದೊಳಿರ್ದ ಕಾರಣದಿ ನೆಚ್ಚಱಿಕೆಯೇ ಕಾರ್ಯಮೆಂದು ತರತರದ ಘಂಟೆ ಪಾರಿಗಳನಿಂಬಿಟ್ಟರೆನೆ . . . ಕಟಿಸೂತ್ರಮೊಪ್ಪಿತಗಜಾತೆಯ ತನೂದರದೊಳು (ಚೆಬಪು. ೩೭-೧೪). ೨. ಪಾರಿ ಪಡಕಣದಾಳಿಂದ ವಾದ್ಯಗಳಿಂದ ಕೇರಿಕೇರಿಯೊಳು ತಿರುಗುವ ವೀರಭಟಾಳಿಯಿಂದೆಸೆದುದಾ ಕುಮ್ಮಟಿದಾರಭಟೆ (ಕುರಾಸಾಂ. ೩೮-೮೭) ; ಪಾರಿಯ ಪಟುಭಟರುಗಳು ಸುತ್ತಿದರಾಳುವೇರಿಯ (ಮೋಹತ. ೧೧-೨೦); ಪಾರಿಯ ತಿರುಗುವರನಿರಿಸಿದನು ದಿನ ರಾತ್ರೆಯಲಿ (ಜಿನಭಾ. ೫೧-೩).

[←ಹಿಂ. ಪಹರೀ./ಸಂ. ಪ್ರಹರಿನ್]

ಪಹರೆ, ಪಹಾರೆ, ಪಾರಾ, ಪಾರೆ$_3$, ಪಾಹರೆ (ನಾ). ೧. ಕಾವಲು; ಗಸ್ತು : "ಪಹರೆ(ಪಾರೆ)-ಪ್ರಹರ = ಕಾವಲು" (ತದ್ಭಕೋ. ೨೫) ; ದೈತ್ಯಾಂಗನೆಯರು ಕೈಪಿಡಿದಾಯುಧದಿಂ ಪಹರೆಯೊಳಿರೆ ಭಯದಿ (ಹನುಮ. ೯೫) ; ಅರಮನೆಗೆ ಸುತ್ತ ಪಹರೆ ಇಟ್ಟು (ರಾಜೇಂದ್ರ. ೧೬) ; ಉಭಯಪಾರ್ಶ್ವದಲ್ಲಿಯೂ ರಾವುತರ ಪಹರೆ (ತ್ರೀರಾಯ. ೪೩). ೨. ಕಾವಲುಗಾರ : (ಕಿ). ೩. ಮೂರುಘಂಟೆಗಳ ಅವಧಿ ; ಜಾವ : (ಕಿ). **ಪಹಾರೆ :** ೧. ಹೊರಮಗ್ಗುಲಿಗೆ ಅರಬಜನರ ಪಹಾರೆಯದೆ (ಮಂಜುಕ. ೪). **ಪಾರಾ :** ೧. ಗ್ರಾಮದ ಸುತ್ತ ಪಾರಾ ನಿಲ್ಲಿಸಿಬಿಟ್ಟನು (ರಾಜೇಂದ್ರ. ೩೧) ; ಸೇವಕನು ನಾಲ್ಕು ಕಣ್ಣುಗಳಿಂದ ಪಾರಾ ಕಾಯುವವನಂತೆ ನಿಂತಿದ್ದನು (ಕಾಬಝಾ. ೩೦) ; ಯಾವಾಗಲೂ ಅವಳ ಸುತ್ತಲೂ ಪಾರಾ (ವಿನಧೂ. ೧೧೪). **ಪಾರೆ$_3$:** ಅರಮನೆಯ ಸುತ್ತ ಪಾರೆ ಇರುತ್ತಿತ್ತು (ರೂಢಿ). **ಪಾಹರೆ :** ೪. ಹೊತ್ತು ; ವೇಳೆ ; ಕಾಲ : ಬ್ಯಾಸಿಗಿ ಹೊಡದದ ಬಿಸಿಲಿನ ಡೇರೆ ಮಧ್ಯಾಹ್ನದ ಪಾಹರೆ ಯಾರಿಗಿಲ್ಲ ಹ್ವಾರೆ (ಸಖೀಗೀ. ೮೨-೧೦).

ಪಹರೆ ಮಾಡು = ಪಹರೆಕೊಡು : ಗುಡಿಯ ಸುತ್ತಲೂ ಪಹರೆ ಮಾಡುವನು (ಗಂಗಾಸಾ. ೩೧) ; ಪಹರೆ ಮಾಡುವ ಪೋಲೀಸರು (ಮಣ್ಣುಹೆ. ೧೫). ಪಹರೆಯವನು = ಕಾವಲುಗಾರ ; ಗಸ್ತಿನವನು : ಮಂಕುಹಿಡಿದವನನ್ನು ನಗಿಸಿ ಕಳಿಸಿಕೊಟ್ಟಾಗ ಈ ಪೋಲೀಸಿನ ಪಹರೆಯವನಿಗೆ 'ಅಯ್ಯೋ' ಅನಿಸಿತ್ತು (ನಡೆವಾ. II, ೧೦೬೦); ರಾತ್ರಿ ಪಹರೆಯವನು ಬಾರಿಸಿದ ಗಂಟೆಯ ಸದ್ದು . . . ಎಚ್ಚರಿಕೆ ಕೊಟ್ಟಿತು (ಮನೆಬೆ. ೧೦೦).

[←ಹಿಂ. ಪಹರಾ; ಮರಾ. ಪಹಾರ, ಪಹಾರಾ./ಪ್ರಾ. ಪಹರ./ಸಂ. ಪ್ರಹರ]

ಪಹರೆಕೊಡು (ಕ್ರಿ). ಕಾವಲಿರು ; ಗಸ್ತು ತಿರುಗು : ಅಲ್ಲಲ್ಲಿ ಕಾವಲುಗಾರರು ಪಹರೆಕೊಡುತ್ತಿದ್ದರು (ಶ್ರೀರಾಮ. ೧೨೯); ಕಾರ್ಖಾನೆಯ ಬಾಗಿಲು ಬಾಗಿಲುಗಳಲ್ಲಿ ಪಹರೆಕೊಡುತ್ತಿದ್ದರು (ದುಂಬಿಕ. ೧೫೯).

[ಪಹರೆ + ಕೊಡು$_1$]

ಪಹರೆಗಾರ (ನಾ). = ಪಹರಿ ೧: ಬಿಚ್ಚುಗತ್ತಿ ಹಿಡಿದ ಪಹರೆಗಾರನು ಬಂದು ಅರಿಕೆ ಮಾಡಿದ (ಹಾಹುತ್ತ. ೪೯).

[ಪಹರೆ+-ಕಾರ$_1$(<-ಕಾಱ)]

ಪಹರೆಯಿರು (ಕ್ರಿ). ಕಾವಲಿರು ; ಕಾಯು : ಭಟರು ಅವನ ಹಿಂದೆಯೇ ಬಂದು . . . ಆತನ ಬಳಿಯಲ್ಲಿಯೇ ಇರುತ್ತ ಅವನ ಮೇಲೆ ಪಹರೆಯಿದ್ದರು (ಒಡೆಕ. ೧೬). [ಪಹರೆ+ಇರು$_1$(<ಇರ್$_1$)]

ಪಹರೇಕರಿ (ನಾ). ಕಾವಲುಗಾರ ; ಚೌಕೀದಾರ ; ಗಸ್ತಿನ ಸಿಪಾಯಿ : ಈ ರೀತಿ ಹೇಳಿದ ಪಹರೇಕರಿಯ ಮಾತನ್ನು ಕೇಳಿ ಬಸಂತಿಯ ವಿಷಯದಲ್ಲಿ ಸಂಶಯವು ಬಂತು (ಮಂಜುಕ. ೧೪೦).

[←ಮರಾ. ಪಹಾರೇಕರೀ]

ಪಹಾರೆ 'ಪಹರೆ' ನೋ.

ಪಹಿಲವಾನ 'ಪೈಲವಾನ' ನೋ.

ಪಹಿಲ್ವಾನ್ 'ಪೈಲವಾನ' ನೋ.

ಪಳ$_1$ 'ಪಟ$_1$' ನೋ.

ಪಳ$_2$ 'ಪಲ$_2$' ನೋ.

ಪಳ$_3$ 'ಪಲ$_3$' ನೋ.

ಪಳಂಕು 'ಪಳುಂಕು' ನೋ.

ಪಳಂಚಲೆ (ಕ್ರಿ). ೧. ತಾಗು; ಅಪ್ಪಳಿಸು; ಬಡಿ : "ಪಳಂಚಲೆ ತಾಂ ಪೊಣರ್ದರ್ಥನಾಮದೊಳ್" (ಕರ್ಣಾನಿ. ೧೬); ಸೀಮಾವಿವಾದದಿಂ ತದ್ಭೂಮಿಜರೋರೊರ್ವರಂ ಪಳಂಚಲೆವೆಡೆಯೊಳ್ ಸೀಮೆಗಳ ತೊಡರ ನುಡುಗಿಸಿ ಸೀಮಂಕರನೆಂಬುದೊಂದು ಪೆಸರಂ ಪಡೆದಂ (ಅದಿಪು. ೬-೫೭); ಚಕ್ರಗೊಟ್ಟದಗ್ಗದ ನೃಪರಂ ಪಳಂಚಲೆದು (ನಾಂದೇಡ್. ೩-೧೫; 1047); ದಿಗಧಿಪರಂ ಪಳಂಚಲೆವ ವಿಕ್ರಮದೇಳ್ಗೆ (ಎಕ. V, ಅರಸೀ. ೬೨-೩೦; 1177). ೨. ಅಲ್ಲಾಡು ; ಅಲುಗಾಡು : ನೆಲೆವೊಟ್ಟನೊಳೊಟ್ಟೈಸಿ ಪಳಂಚಲೆವ ಕುರುಳೋಳಿಯುಂ (ಅದಿಪು. ೪-೪೧ ವ); ತೊಡರ್ದಮರ್ದ ಬಾಳವಣ್ಣದ ತುಡುಗೆ ಪಳಂಚಲೆವ ಪಂಚಜಡೆ (ಪಂಪಭಾ. ೨-೪). ೩. ಮುಟ್ಟು ; ಸೋಕು ; ಸ್ಪರ್ಶಿಸು : ಈ ನಿಜತನೂಜೆಯನು ತ್ಸವಮಂಗಳಾನಕಧ್ವನಿ ದೆಸೆಯಂ ಪಳಂಚಲೆವಿನಂ ನೆರಪೀಗಳೆ ವಜ್ರಜಂಘನೊಳ್ (ಅದಿಪು. ೪-೨೬); ಪಾಡುವ ಗೇಯದೊಂದು ಮೆಲ್ಲುಲಿ ಕಿವಿಯಂ ಪಳಂಚಲೆಯೆ (ಧರ್ಮಾಮೃ. ೩-೧೭೪); ಕೀರ್ತಿಶ್ರೀ ದಿಶಾಭಾಗದೊಳ್ ಪರೆದಾಶಾಗಜಮಂ ಪಳಂಚಲೆಯೆ (ಎಕ. VII, ಶಿವಮೊ. ೪-೨೨; 1122); ಬಳಸಿ ಬಳಿಸಂದು ಪಳಂಚಲೆದೊಲೆದು ಪಕ್ಕಮಂ ಬಿರ್ಚಿ ಲಲ್ಲೆಗೆಯ್ದುತ್ತು ಪಾರಿವಂ ಪಾರಿವದೊಳ್ (ಗಿರಿಕ. ೨-೫೨). ೪. ಹೊಳೆ; ಥಳಥಳಿಸು: ಅಲುಗೆ ಕುರುಳ್ ತೊಡವು ಪಳಂಚಲೆಯೆ ತಳತ್ತಳಿಸಿ ಪೊಳೆಯೆ ತನುರುಚಿ (ಧರ್ಮಾಮೃ. ೬-೧೮೬). ೫. ಕಾಡು ; ಪೀಡಿಸು ; ಹಿಂಸಿಸು : ಕೊಲೆಯೆಂದಸತ್ಯಮೆಂದು . . . ಪಳಂಚಲೆವ ಪರಿಗ್ರಹಮೆಂದಿವಱೊಳಾದ ಪೇಕ್ಷೆಯನುಪೇಕ್ಷಿಸು (ಸುಕುಮಾ. ೭-೩೮); ಬಿರಯಿಗಳಂ ಪಳಂಚಲೆವ ತಣ್ಣೆಲರ್ (ಪುಷ್ಪಪು. ೨-೨೫). ೬. ಮೀರು ; ಕೇಳುಮಾಡು : ವಿಳಾಸಮಂಬರಚರಾಮರಕಾಂತೆಯರೆಲ್ಲರಂ ಪಳಂಚಲೆಯೆ (ಅದಿಪು. ೧-೭೨); ಜಳನಿಧಿಯಂ ಪಳಂಚಲೆವನೇಕತಟಾಕದಿನ್ (ಸೌಇಇ. IX-i, ೨೬೭-೨೧; 1160); ಅತ್ರೇಯದ್ಯುತಿಯಂ ಪಳಂಚಲೆದು ಕುಂದಚ್ಛಾಯೆಯಂ ಮಿಕ್ಕು (ಚಂದ್ರಪು. ೧-೩೩); ಚಂಚಲಾಕ್ಷಿಗಳ ಡಾಳಂ ಬಳ್ಳಿಮಿಂಚಂ ಪಳಂಚಲೆಯೆ (ಪದ್ಮರಾ. ೩-೩೦). ೭. ವ್ಯಾಪಿಸು ; ಆವರಿಸು : ವಿಪಂಚೀನಾದಮಿಗಳ್ಪಳಂಚಲೆವುತ್ತಿರ್ದಪುದಲ್ತೆ ಸಾಲ್ವುದಿದೆ ತದ್ಗಂಧರ್ವರಂ ಸೋಲಿಸಲ್ (ಕಾದಂಪೂ. ೬೫೨); ಭೇರಿಯ ಭೂರಿನಿನಾದಂ ದೆಸೆ ಮುಟ್ಟೆ ಪಳಂಚಲೆಯೆ (ರಾಮಾಶ್ವ. ೫೦-೨). ೮. ಸುಳಿದಾಡು ; ಕಾಣಿಸಿಕೊಳ್ಳು : ಅಚ್ಛಱನಿಟ್ಟುಳಿಗೊಂಡಲಂಪುಗಳ್ ಕನಸಿನೊಳಂ ಪಳಂಚಲೆವು[ವೆ]ನ್ನೆರ್ದೆಯೊಳ್ (ಪಂಪಭಾ. ೪-೧೦೬). ೯. ಗರ್ವಪಡು; ಬೀಗು : ಮೊಕ್ಕಳಮೇಕೆ ನೀಂ ಪಳಂಚಲೆದಪೆಯಣ್ಣ ಸೂಟ್ಪಡೆಯ ಲಪ್ಪುದು ಕಾಣ ಮಹಾಜಿರಂಗದೊಳ್ (ಪಂಪಭಾ. ೧೦-೨೩).

[ಪಳಂಚು$_1$ + ಅಲೆ$_1$]

ಪಳಂಚಾಡು (ಕ್ರಿ). ತಿರಸ್ಕರಿಸು ; ಹೀಗಳೆ : ಹರಹಾಸದ್ಯುತಿಯಂ ನಿರಾಕರಿಸಿ ಗಂಗಾಸಿಂಧುಕಲ್ಲೋಲಶೀಕರಮಂ ನಿಂದಿಸಿ ಸಿಂಧುವಾರ ಕುಸುಮಶ್ರೀಯಂ ಪಳಂಚಾಡಿ ಭಾ[ಪಾಠಾಂ.ಚಲ್ ವಿಭಾ]ಸುರ ಚಂದ್ರಾಂಶುವಿಕಾಸಮಂ ತೆಗಟ್ಟು ಮುಕ್ತಾಹಾರವಿಸ್ತಾರಡಂಬರಮಂ ಮಿಕ್ಕು ಬೆಳಪ್ಪುದುಜ್ವಳಯಶಂ ಶ್ರೀಗಂಡಮಾರ್ತಂಡನಾ (ಕಾವ್ಯಾವ. ೮೬೩).

[ಪಳಂಚು$_1$ + ಅಡು$_1$]

ಪಳಂಚಿಸು, ಪಳಚ್ಚಿಸು (ಕ್ರಿ). ೧. ಕುಟ್ಟು ; ಬಡಿ : ಸಂಬಳಿಗೋಲಿಂದಿರದೆ ಪಳಂಚಿಸಿದಳ್ ಜರ್ಝರರವಮೊಗೆಯಲ್ಕೆ ನೃಪಸಭಾ ಕುಟ್ಟಮಮಂ (ಕಾದಂಪೂ. ೩೪). **ಪಳಚ್ಚಿಸು** : ೨. ಪ್ರಕಾಶಮಾನವಾಗು ; ಬೆಳಗು : ತವೆ ಸುವರ್ಣದ ಗುಡಿಯು ರವಿ ಪಳಚ್ಚಿಸಿದವೊಲು ರಂಜಿಸಲು (ಪ್ರಭುಪು. ೬-೧೩೦). [ಪಳಂಚು$_1$+-ಇಸು$_3$]

ಪಳಂಚು$_1$, ಪಣಂಚು, ಪಳಚು, ಹಣಚು, ಹಳಚು$_1$, ಹಳಚ್ಚು, ಹೊಣಚು (ಕ್ರಿ). ೧. ತಾಗು ; ಬಡಿ ; ಹೊಡೆ ; ಅಪ್ಪಳಿಸು: "ಪಳಂಚು-ಸಂಘಟ್ಟನೇ" (ಶಮಧಾ) ; ಗಗನಮನೇನಡರ್ದುವೊ ಜಯನ ಶರಂಗಳ್ ಸಿಡಿಲಂ ಮಿಂಚಂ ಪಳಂಚಿ ಸಂಚಳಿಸುವಿನಂ (ಅದಿಪು. ೧೩-೬೩); ತನು ತನುವಂ ತಱುಂಬೆ ಮಿಗೆ ಕೂರಸಿ ಕೂರಸಿಯಂ ಪಳಞ್ಚಿ (ಎಕ. VII, ಶಿಕಾರಿ. ೨೪೨-೨೪; 1163); ಎರಡು ಬೆಳಗು ಪಳಂಚಿಯೊಂದಾದ ಪಾಂಗಿನಿಂ (ಪದ್ಮರಾ. ೧೩-೫೯); ಕರಿ ಕರಿಯೊಳ್ . . . ಪದಾತಿ ಪದಾತಿಯೊಳ್ ಘನಂ ಗಿರಿ ಗಿರಿಯಂತೆವೊಲ್ಮಿಗೆ ಪಳಂಚಿದುದು (ಹಮ್ಮೀರ. ೩-೪೮). ೨. ತಾಕು ; ಸ್ಪರ್ಶಿಸು ; ಸೋಕು : ಒಯ್ಯನಾಱಿಸಿ ಬಂದು ಕಿವಿಯೊಳ್ ಪಳಂಚಲೆರ್ದೆಯಂ ಪಿಡಿದಲುಗುವ ಸೀಯನಪ್ಪ ಗೀತಾತೋದ್ಯನಾದಕ್ಕಂ (ಅದಿಪು. ೨-೪೧ ವ); ಮಂಗಳವೃತ್ತಂಗಳೊಳಗೊಯ್ಯನೊಯ್ಯನಾಱಿ ಬಂದೆರ್ದೆಯಂ ಪಳಂಚುವ ಸಂಗೀತರವಾಕರ್ಣನದೊಳಂ (ವರ್ಧಮಾ. ೫-೪ ವ); ತೂರ್ಯಘೋಷಮವಶ್ಯಂ ದೆಸೆಯಂ ಪಳಂಚೆ (ಪುಷ್ಪಪು. ೧೩-೭೩). ೩. ಆಕ್ರಮಿಸು ; ಮುತ್ತು ; ಮೇಲೆ ಬೀಳು : ಕಾಡೊಳ್ ಬೀಡವಡೆ ಪಳಂಚಲೊಡವಂದ ಪರದ ರೆಲ್ಲರುಂ ಸಂಚಳಿಸೆ (ನೇಮಿಪು. ೪-೭೦ ವ); ತವಕದೆ ಪಳಂಚಿದುವು ಕಾಲ್ವೇಗದಾನೆಗಳ್ (ಚಬಪು. ೨೬-೧೩); ಎದ್ದು ನಭದೊಳ್ಪಳಂಚುವರೊಮ್ಮೆ ಭೂತಳದೊಳಿದ್ದು ಹೆಣಗುವರೊಮ್ಮೆ (ಜೈಮಿಭಾ. ೨೨-೨೯); ವೈರದಿಂ ವಾರಿಧಿಯೊಳ್ಪೊಕ್ಕ ಭೂರಿಭೂಧರಂಗಳ್ಪಳಂಚಲೆಂದು ಪಟುತೆಯಿಂದಿದಿರ್ಚಿ ನಿಂದವೆಂಬಂತೆ ಸಾರ್ತಂದು (ರಾಜಶೇ. ೧-೧೦೨ ವ). ೪. ಕೂಡು ; ಬೆರೆ ; ಸೇರು : ಕುರುಳ್ಗಳೊಳ್ ಸುಟಿಂದು ಮುಂದೊಂದಿರ್ದ ಸೌಭಾಗ್ಯಘಂಟೆಗಳೊಂದಿಂಚರದೊಳ್ ಪಳಂಚಿ ಸುಟಿಂದತ್ತಂದೊಂದು ಮಂದಾನಿಳಂ (ಪಂಪಭಾ. ೪-೮೦); ಮಣಿಮಯಚಿತ್ರಭಿತ್ತಿಗಳ ದೀಪ್ತಿಗಳೊಳ್ ನಿಜದೇಹದೀಪ್ತಿಗಳ್ ಸೆಣಸಿ ಪಳಂಚಿ ಸಂಚಳಿಸೆ (ಸುಕುಮಾ. ೯-೧೮); ಚಂಚಲತನ ಬೇಡ ಹೆತ್ತ ಮಗನೊಳು ಪಳಂಚದೆ ಬಿಡು ತಂದೆಯರಸಿ (ಕುರಾಸಾಂ. ೩೨-೧೨೩). ೫. ಪ್ರಕಾಶಿಸು ; ಹೊಳೆ : ಪೊಸಮಸೆಯ

ಮಿಂಚಿನಂತಮರಸಮಾಜದ ಕಣ್ಗಳೊಳ್ ಪಳಂಚಿ ರಂಜಿಸಿ (ಶಾಂತಿಪು. ೬-೩೨ ಪ); ರತ್ನದೀಧಿತಿಯೊಳೊಂದಿ ಪಳಂಚುವ ಬಳ್ಳಿವಾಡದಿಂ ಕಳಸದ ಮತ್ತವಾರಣದ ಶೋಭೆಗಳಿಂ (ಧರ್ಮಾಮೃ. ೫-೪೫); ಪೊಸಮಿಂಚಿನ ವೊಲ್ ಪಳಂಚುತಾಯದಿಂದಡಿಯಿಡುವ ತುಟಾಲಾಳ್ಗಳ . . . ಧ್ವನಿ ಪ್ರತಾನದಿಂದಾ ಬಲ್ಲಕೀನಗರಂ ವಿರಾಜಿಸುತ್ತಮಿರ್ದುದು (ಉದ್ಭಟ. ೧-೮೦ ಪ); ನವ್ಯಹೇಮತೋರಣ ಕಳಶ ಕನ್ನಡಿಯ ಪೊಳಪು ಪೊಂಬಿಸಿಲೊಳ್ ಪಳಂಚುತಲಿರೆ (ರುಕ್ಮಾಂಗ. ೩-೧೧). ೬. ವ್ಯಾಪಿಸು; ಆವರಿಸು; ತುಂಬು: ದೇಹಚ್ಛಾಯೆಯುಂ ರತ್ನಕುಂಡಲ ಭೂಷಾರುಚಿಯುಂ ಪಳಂಚೆ ದೆಸೆಯಂ . . . ಬಂದಂ ಪ್ರಭಾ ಮಂಡಲಂ (ಪಂರಾಮಾ. ೪-೯೦); ಅಂಭೋರವಮೊಗೆಯೆ ಪಳಂಚಿತ್ತು ನಕ್ಷತ್ರಮಾರ್ಗಾಂತರಮಂ (ಜಗವಿ. ೬-೬೨); ಪಂಚರತ್ನದ ಕೊಡೆ ವಿಡಿದಂತೆ ನಭವ ಪಳಂಚಲು ಮಳುಟದ ಕಾಂತಿ (ನಾಗಕು. ೧೨-೮೩); ತನುದ್ಯುತಿಯಾಗಸಮಂ ಪಳಂಚೆ (ಕಮಮಾ. ೧-೬.) ೭. ಮೀರು; ಕೀಳುಮಾಡು; ಅತಿಶಯಿಸು: ನಿರುಪಮದೇಹದೀಪ್ತಿಗಳೊಳೆಕ್ಕೆ ಯಿನೆಯ್ದೆ ಪಳಂಚಿ ಮಿಂಚುವಾಭರಣದ ಮಿಂಚು (ಆದಿಪು. ೨-೫); ಮಿಸುಗುವ ರವಿಬಿಂಬಂಗಳ್ಮಸದಲಗುಗಳಂ ಪಳಂಚಿ ಮಿಂಚುವ ಕಾಂತಿ ಪ್ರಸರದೆ . . . ಪೊಳೆದುವಂಬರತಳದೊಳ್ (ಕಾದಂಪೂ. ೪೬೬); ದಿವ್ಯ ಭೂಷಣಮರೀಚಿ ರವಿಪ್ರಭೆಯಂ ಪಳಂಚೆ (ಜಗವಿ. ೧-೪೧); ಮಿಂಚಂ ಮಿಸುಗುವ ಸಂಚಲತೆಯೊಳೆ ಪಳಂಚಿ ಗೆಲುವ ಚಟುಲಾಕ್ಷಿಗಳು (ಜಯಕಾ. ೨-೨). ೮. ಸಾಗಿಸು; ನಡೆಸು: ಜಾರೆಯರ್ . . . ಉಪಕಾಂತ ರೊಳ್ಪಂಚಶರಕೇಳೀಪ್ರಪಂಚಮಂ ಪಳಂಚುತ್ತೆಸೆದರ್ದರ್ (ಉದ್ಭಟ. ೧೦-೧೦೬ ಪ). ೯. ಚಿಮ್ಮು; ಸಿಡಿ; ಹಾರು: ಚಿಮ್ಮಿದುದು ಜಿಂಕೆಮರಿಯೊಂದು ಹೊದರೊಡಲಿಂದೆ . . . ತಿರಿಕವಣೆಯಿಂ ಪಳಂಚುವ ರತ್ನಶಿಲೆಯಂತೆ (ಚಿತ್ರಾಂಗ. ೩-೭೪). ೧೦. (ಆಲಂ) ತಪ್ಪು; ಎಡಹು: ಬಲ್ಲರ ಕಿವಿಗಳ್ಗೆ ಮಾಣಿಕದ ಮಂಜರಿಯಾಗೆ ಪಳಂಚದೋದು ವಕ್ಕರಿಗರ ಜಿಹ್ವೆಗಿಂಪಮರ್ದ ನೂತ್ನತರಾಮೃತಧಾರೆಯಾಗೆ (ಉದ್ಭಟ. ೧-೧೨). ಪಣಂಚು: ೧. ಕಡಿಕಡಿಯೆನುತುಂ ಬೊಬ್ಬಿಟ್ಟಡುರ್ತಿರ್ವಲ ಮುಱ್ ಪಣಂಚಿ ಸೆಣಸಿತ್ತಾಗಳ್ (ವೀರವಿ. ೫-೩೧). ಪಳಚು: ೧. ಮುದ್ದರವನಿಡಲೆದೆಯನದು ಪಳಚಿ ಬಸವಳಿಯಿಸಿತು (ಶೇಷರಾ. ೧೪-೪೮). ೭. ದುಂಡುದೋಳು ಬೆಳಗುತ ಪಾತಾಳದ ಫಣಿಪನ ಫಣಾವಳಿಯ ರತ್ನವ ಪಳಚಿದುವು (ಕಂನವಿ. ೨೦-೨೩). ೧೧. ಕಾದು; ಸೆಣಸು; ಯುದ್ಧ ಮಾಡು: ಕರವಾಳ ಪಿಡಿದು . . . ಪಳಚುವ ಮಹಾವೀರರ (ಸೌಂದಪು. ೮-೩೭); ಶಿಲೆಯೆರಡು ತಂತಮ್ಮೊಳು ತಾಕಿ ಪಳಚುವುದನು ಕಂಡು (ಸೇಮಿಸಂ. ೧೮-೩೧); ಪಾರ್ವತಿಯ ಪತಿಯೊಡನೆ ಪಳಚಿ ಬೊಬ್ಬಿಡುವ ವೀರವನೆನಗೆ ಪಾಲಿಸು (ವೀಶೃಪು. ೨-೧೨-೨೦). ೧೨. (ಗಾಳಿಯು) ಬೀಸು; ಸುಳಿ: ಕುಳಿರಂ ಮಾಣ್ದು ಪಳಚಲಮ್ಮದು ಗಾಳಿ (ನಂದಿಮಾ. ೨-೨೨). ೧೩. ಕಣ್ಣನ್ನು ಮಿಟುಕಿಸು; ಎವೆ ಬಡಿ; ರೆಪ್ಪೆಹೊಡೆ: ಎವೆಗಳ್ ಪಳಚುವಕ್ಷಿ ನಿಮಿಷಂ ನಿಮೇಷಮೆನಿಕ್ಕು (ಮಂಗರಾ. ೯೪-೩). ಹಣಚು: ೧೪. ಎದುರಿಸು; ಪ್ರತಿಭಟಿಸು: ಹರಿಯ ಹಣ[ಪಾಠಾಂ.ಳ]ಚಿ ಗದಾಯುಧವನೀಶ್ವರನ ಜಱೆದಜಗರವನಿಂದ್ರನ ಪರಿಭವಿಸಿ ರುಜುರೋಹಿತವ . . . ಧರಿಸಿದತಿಬಲರಿರ್ದುದುದಿತಮಹೋಗ್ರ ತೇಜದಲಿ (ತೊರರಾ. ೬-೧೦-೯). ಹಳಚು₁: ೧. ಕಲ್ಲಂ ತಾಗಿದ ಮಿಂಟೆಯಂತೆ ಬೆಟ್ಟಮಂ ಹಳಚಿದ ಭೈತ್ರದಂತೆ ಹೆಱಸಾರ್ದು ನಿಂದು (ಧರ್ಮಪ. ೧-೬೫ ಪ); ಹಳಚುವಸಿಗಳ ಖಣಿಖಟಲು (ಕುಷ್ಯಾದ್ರೋ. ೨-೨೬); ಸಾಗರಕೆ ಸಾಗರವು ಹೊಯಿಕೈಯಾಗಿ ಹಳಚಿದವೋಲು ಹಳಚಿದರು (ತಿಮ್ಮಮೌ.೧-೫೮); ಹೆಲನರಾ ನಾವೆ ಮುಂಬುಮುಂಬಿಂಗೆನಿತು ಸಂಖ್ಯೆಯಲಿ ಮುಂದಣ್ಮ ನೂಂಕಿದುದಿರ್ಚಿ ಪಾರಸಿಕನಾವೆಗಳ ಹಳಚಿ? (ಪಾರಸಿ. ೧೪-೩೨೫). ೩. ಸಂಗ್ರಾಮಭೂಮಿಯೊಳು ಹಳಚಿದವರನರೆ ಘಳಿಗೆಯೊಳಿಱಿವೆವು (ತ್ರಿಪುಸಾಂ. ೧೪-೧೫೬); ಹಳಚಿದರು ತಗರಂತೆ ಗಜದವೊಲೊಲೆದು ನಿಂದರು . . . ಕಡಿತಲೆಗಾಱರುಭಯದಲಿ (ಕುಷ್ಯಾಭೀ. ೪-೩೫); ಅತಿಕಾಯನುರವಣಿಸಿ ಹಳಚಿದನು ಹರಿದಶ್ವತನುಜನ ನಳನ ನೀಲನ . . . ದ್ವಿವಿದ ಪಟುಭಟರ (ತೊರರಾ. ೬-೩೪-೫೧); ದೊರೆದೊರೆ ಗಳು ಮೋಹರಿಸಿ ಉರುವಣೆಯಿಂ ಬಂದು ಹಳಚಿದರು (ಕುರಾಸಾಂ. ೧೩-೧೧೦). ೬. ಹಳಚಿತು ಸೂರ್ಯೋದಯಮಿಾ ಸ್ಥಳಕೆಲ್ಲಂ (ಸೂಕ್ತಿಸು. ೯-೮೩); ಹಾಲಂತೆ ಹಳಚಲೊಪ್ಪುವ ಜೊನ್ನವ ಕಂಡು (ಜಿನರಾ. ೮-೧೦೭). ೧೩. ಆಱುಕೋಟಬ್ರಹ್ಮರು ಮಡಿವಲ್ಲಿ ನಾರಾಯಣಗೊಂದು ದಿನ ವಾಯಿತ್ತು ನಾರಾಯಣರೊಂದುಕೋಟ ಮಡಿವಲ್ಲಿ ರುದ್ರನ ಕಣ್ಣೆವೆ ಹಳಚಿತ್ತು (ಒಸಪ. ೫೪೧); ಕಣ್ಣೆವೆ ಹಳಚಿ ನೋಡಿದುದಿಲ್ಲ ಮಗನ ಲಾವಣ್ಯವನೆಂದಳಲಿದಳು (ಮೋಹತ. ೪-೮೦); ಕಣ್ಣೆವೆ ಹಳಚುವಷ್ಟ ಱೊಳವನೂಳಿಗವೆಣ್ಣುಗಳೊಳ್ಪು ಮಾಡುವರು (ಭರಚ. ೧೬-೮೮). 'ಎವೆ ಹಳಚು' ಪರಾ. ೧೪. ಅಸುರಾಂತಕಂ . . . ಕಂಡುದಂ ಕಾಣ್ಬೆನಿಂ ಹಳಚಿ ನೋಡುವೆನೆನುತ್ತೋಡುವ ಸುರಾವಳಿಯಂ ಕೂಡಿ ಹುರಿಗೈದನು (ಚಿಬಪು. ೩೧-೨೮); ನಾರಿ ತಾನಿವಳೆನಿತು ಬಲುಗೈವೀರತನಮಂ ಮರೆತ ರೆಂದೇ ಸೈರಿಸಿದರಾನೈದೆ ಮೀರ್ದುದು ಹಳಚವೇಳ್ಕು (ಅಂಬಿಕಾ. ೨೪-೪೯). ೧೫. ಅಲ್ಲಾಡು; ಅಲುಗಾಡು: ನಾಳಿಕೇರದ ಫಲಗೊಂಚಲು ಘಾಳಿಯಿಂದವೆ ಹಳಚಿ ಹೊಂಬಾಳೆಗಳ ಮೇಲಿಳಿದ ಪಣ್ಗೊನೆಯೊಳಿಳಿದು (ಕೊಲ್ಲಾಚ. ೨೫). ಹಳಚ್ಚು: ೧೧. ಶಿರ ನಿನ್ನಟ್ಟಿಗೆ ಹೊಱೆಯಾದಡೆ ನಿಲಲರಿದೆಮ್ಮೊಡನೆ ಹಳಚ್ಚುವುದು (ಕುಮುರಾ. ೯-೬೩). ಹೊಣಚು: ೧೩. ದೇಹಕಾಂತಿಗುಂದುವಣ . . . ಎವೆ ಹೊಣಚದೆ ದಿಟ್ಟಿಸಿ ನೋಡುವಣ, ವೈದ್ಯರುಗಳ ಮಾತ ನಿರಾಕರಿಸುವಣ, ಹೀಗಿದ್ದರೆ ನಿಸ್ತೇಜ ಗ್ರಹವೆಂದಱುವುದು (ವೈದ್ಯಸಾ. II, ೬೮).

ಪಳಂಚು₂, ಹಳಚು₂ (ನಾ). ೧. (ಒಂದಕ್ಕೊಂದು) ತಾಗುವಿಕೆ; ಬಡಿಯುವಿಕೆ. ೨. ಹೊಳಪು; ಕಾಂತಿ. ಹಳಚು₂.

ಪಳಂಚಿನುಂಗುರ, ಹಳಚಿನುಂಗುರ = ೧. ಒಂದಕ್ಕೊಂದು ತಾಗಿ ಜಣಜಣಿಸುವ ಕಾಲುಂಗುರ,—ಸದ್ದಾಗುವ ಕಾಲುಂಗುರ: ಅಂತಪಾರಪುಣ್ಯಪಣ್ಯಾಂಗನಾಜನಕ್ಕೆ ಪಂಚರತ್ನದುಪಾಯನಮನಿತ್ತು ಪಳಂಚಿನುಂಗುರದ ನೂಪುರದ ನೂಲ ತೊಂಗಲ ಸಂಕಲೆಯ . . . ವಿವಿಧೋಪಾಯನ ರತ್ನಪಟಲಿಕೆಗಳಂ ಪಿಡಿದೊಡನೆ ಬರೆ (ಪಂರಾಮಾ. ೫-೧೨೬ ಪ); ಕಳೆದು ಪಳಂಚಿನುಂಗುರಮನೇಱ್ ಮುಸುಂಕಿ ಮರಳ್ಚಿ ಸೆಕ್ಕೆ ಮೇಖಳೆಯೊಳಡಂಗುವಂತೆ ನಿಱಿಯಂ ಸೆಱಗಿಂ ಪೊದೆದುಟ್ಟು ದೂತಿ ಕೈಕೊಳಿಸಿದ ಬಟ್ಟೆಯಿಂದೆಡಪಿ ನಿಂದೊಡಮಾಯೆನಲಮ್ಮದಂಘ್ರಿಯಂ ತಳದೊಳವುಂಕುತಂ ನಡೆದು ಕಾಹಿನ ಗೇಹಮನೊರ್ವಳೆಯ್ದಿದಳ್ (ಸೂಕ್ತಿಸು. ೮-೧೪೫); ಕನಕಕಾಂಚೀದಾಮದ . . . ಕಾಲ ಹಳಚಿ ನುಂಗುರದ ಶೃಂಗಾರಂ ಪಳಚ್ಚನಾಗೆ (ಧರ್ಮಪ. ೨-೨೩ ಪ). ೨. ಹೊಳಪಿನ ಕಾಲುಂಗುರ; ತಳತಳಿಸುವ ಕಾಲುಂಗುರ: ಕಾಲ ಪಳಂಚಿನುಂಗುರದ ಮೆಲ್ಲುಲಿಯಿಂದಮೆ ಪೇಟ್ಟು ತಮ್ಮ ಲೀಲಾಲಸ ಯಾನಮಂ (ಬಾಧಪು. ೬-೧೧೪). ಹಳಹಳಚು ಮಾಡು = ಶುದ್ಧ ಮಾಡು; ನಿರ್ಮಲಗೊಳಿಸು: ಹಂಸೋದಕದ ತೆಱದಿ ಹಳಹಳಚು ಮಾಡಿ ನವಪರಿಮಳಂಗಳನಿಕ್ಕಲಂತದುವೆ ಧಾರಾಂಬುವೆನಿಸೆ ಕಡುಸೊಗಸು ದಳೆದಿರ್ಪುದು (ಸೂಪಕಾ. ೨-೪೨). [<ಪಳಂಚು₁]

ಪಳಂಪೆ 'ಪಳಂಬೆ' ನೋ.

ಪಳಂಬೆ, ಪಳಂಪೆ (ನಾ). ಒಂದು ಬಗೆಯ ಮರ (?):

ಉತ್ತರತಃ ಬಳ್ಳಿಗೆಱೆಯ ಪಡುವ ಗಜಗೊದ ಪಳಮ್ಪೆ ಪುಣುಸೆಯೆ (ಎಕ. XII, ಗುಬ್ಬಿ. ೬೧-೯೩; 812). **ಪಳಂಪೆ :** ವೀರ್ತಂದಕೊಲ್ಲಿಯ ಪಳಮ್ಪೆಯಾಲೆ (ಇಅ. XVIII, ೩೬೭-೨೧; ಸು. ೩ನೆಯ ಶತ). [?]

ಪಳಕ್ಕ$_1$ (ನಾ). ೧. ಉಪಯೋಗ ; ಬಳಕೆ : (ಕಿ). ೨. ಅಭ್ಯಾಸ; ರೂಢಿ : (ಕಿ). ೩. ಪಳಗಿಸುವಿಕೆ ; ತರಪೇತಿ : ನಾನೀ ಪದವಿಗೆ ಮತ್ತಾರನ್ನೂ ತಿದ್ದಿ ಪಳಕ ಮಾಡಿಲ್ಲ (ದೇವೀಚೌ. ೧೧೦). 'ಪಳಗು' ಪರಾ. [ದೇ.॥ ತಮಿ. ಮಲ. ಪಟಕ್ಕ]

ಪಳಕ್ಕ$_2$ (ನಾ). ಒಂದು ಬಗೆಯ ಆಯುಧ (?) : ಬತ್ತೀಸಕಡಿಯ ಬಾಹರ ಪುಟದ ಗುಳವದ ಕಣಂಗಳ ಕುಳಿಶದಳಂ ಪಳಕದ ಪಾರಡದುಜ್ಜ ಳಿಕೆಯಿಂ ತುಟಾಲ ಸಂದರಂ ಪ್ರಳಯಕ್ಕೆ ಸಂಗಳಿಸಿ ನೆಗೆದ ಪನ್ನೆರಡುವರ್ಕ ಬಿಂಬಂಗಳನೊಕ್ಕೈಸಿ ತೆಗೆದು ಮೇಲೊಟ್ಟಕೊಂಡಂತೆಯುಂ (ಅನಂಪು. ೧೪-೬ ಪ). [?]

ಪಳಕಕಾಱ (ನಾ). ಪಳಕವೆಂಬ ಆಯುಧವನ್ನು ಹಿಡಿದವನು (?) : ಅತಿರಥರ ಮಹಾರಥರ ಅರ್ಧರಥರ ಸಮರಥರ ಪಳಕ[ಪಾತಾಂ.ಪಳ, ಫಳ, ಬಳ]ಕಾಱರ ಆರೆಕಾಱರ ನಡುವೆ . . . ಇಕ್ಕುವ ಸೀಗುರಿಯ ಬೀಸುವ ಚಾಮರದ ವಿಚಿತ್ರವಿಭ್ರಮದಿಂ ಸೌಂದರಪೆರುಮಾಳೆ ಬಿಜಯಂಗೆಯ್ದಿರಲು (ನಂಬಿರ. ದೇ. ೩೪೮-೯), [ಪಳಕ್ಕ$_2$+-ಕಾಱ]

ಪಳಕು$_1$ 'ಪಳುಂಕು' ನೋ.

ಪಳಕು$_2$ 'ಪಟಕ' ನೋ.

ಪಳಕೆ (ನಾ). ಸಲಿಗೆ ; ಬಳಕೆ : ಎಲ್ಲ, ಎಲ್ಲಾ ಮಾಯವಾದುವು ಹಳೆಯ ಪಳಕೆಯ ಮುಖಗಳು (ಇಂಗೀತ. ೮೭-೩) ; ಗೌರಿಯ ಪಳಕೆಯ ಬಳಕೆಯ ಜಾಗಗಳಲ್ಲೆಲ್ಲಾ ಅದು . . . ಅರಸಾಡಿ ಅರಚುವುದು (ನಡೆಡಾ. II, ೮೯೬) ; ಹೊಸಮುಖವಲ್ಲ. ಚಿರಪರಿಚಿತ ಪಳಕೆಯ ಮುಖ (ನಟಸಾ. ೭೭). 'ಪಳಕ್ಕ$_1$', 'ಬಳಕೆ', 'ಹಳಕೆ' ಪರಾ. [<ಪಳಗು+-ಕೆ]

ಪಳಕೆಳೆ (ನಾ). ಹಳೆಯ ಮಿತ್ರ,—ಗೆಳೆಯ ; ಬಹಳ ಕಾಲದ ಸ್ನೇಹಿತ: ನನ್ನ ನಂಬಿಕೆಯ ಪಳಕೆಳೆಯವನು (ಮೂರುನಾ. ೧೧೧-೪೩೯).

[ಪಳ$_1$(<ಪಟದು)+ಕೆಳೆ$_2$]

ಪಳಕ್ಕನೆ (ಅ). ತಟಕ್ಕನೆ; ಇದ್ದಕ್ಕಿದ್ದಂತೆ : ಕಣ್ಣೊಳಗಿಂದ ಪಳಕ್ಕನೆ ನೀರು ಚಿಮ್ಮಿದವು (ರಂಗರೋ. ೧೭೪) ; ಪಳಕ್ಕನೆ ಬೆಂಕಿಯ ಚೆಂಡು ಮುಂದೆ ಹಾದುಹೋದಂತೆ ಅರಿವಾಯ್ತು (ದೇವಹೆಂ. ೫೬).

[ಪಳಕ್ಕ$_0$+-ಅನೆ$_1$]

ಪಳಗ 'ಪಟಗ$_1$' ನೋ.

ಪಳಗಂಡ 'ಪಲಗಂಡ' ನೋ.

ಪಳಗಬ್ಬಿಗೆ 'ಪಟಗಬ್ಬಿಗ' ನೋ.

ಪಳಗಲು 'ಪರಳ್ಗಲ್ಲು' ನೋ.

ಪಳಗಾಟ (ನಾ). ಪಳಗುವಿಕೆ; ಹೊಂದಿಕೊಳ್ಳುವಿಕೆ: ಮದರಾಸಿನ ಪಳಗಾಟದಲ್ಲಿ ಸೇರಿಹೋದಂತಹ ಅವರ ರೀತಿನೀತಿಗಳನ್ನು ಕಂಡು . . . "ಎಷ್ಟು ಬೇಗನೇ ಪಟ್ಟಣದ ನಾಗರಿಕತೆಯಲ್ಲಿ ಪಳಗಿ ಬಿಟ್ಟರಿ ?" ಎಂದೆ ನಾನು (ಪತಿ. ೧೬). [ಪಳಗು+ಆಟ]

ಪಳಗಿಸು, ಹಳಗಿಸು (ಕ್ರಿ). ೧. (ಪ್ರಾಣಿ ಮುಂತಾದುವನ್ನು) ಅಂಕೆಗೆ ತರು ; ಹತೋಟಿಗೆ ತರು ; ಸಾಧುಮಾಡು : ರಾಯ ನಪ್ಪಣಿಯ ಮೇರೆ ಗಜಕ್ಕೆ ಪ್ರೀತಿಪಾತ್ರಮಾದ ಹೆಣ್ಣಾನೆಹಿಂಡುಗಳಂ ಹಿಡಿದು ಪಳಗಿಸಿ (ಸೌಗಂಧಿ. ೨೫೩-೧೬) ; ಸಿಡಿಲ ಪಳಗಿಸುವರಿವು, ರವಿಯ ಸೆರೆಹಿಡಿವರಿವು (ಪುಲಿದೇ. ೪೮-೧) ; ಮನುಷ್ಯನು ಕುದುರೆಯನ್ನು ಪಳಗಿಸಿದ್ದು ಇತ್ತೀಚೆಗೆ (ಸಮಾಲೋ. ೨೩೪). ೨. ರೂಢಿ ಮಾಡು ; ಅಭ್ಯಾಸ ಮಾಡಿಸು ; ಒಗ್ಗಿಸು : ನಾವು ಅದನ್ನು ಬಹಳ ಜನರು ಇರುವ ಕಡೆಗೆ ಕರೆದುಕೊಂಡು ಹೋಗಿ ಪಳಗಿಸಬೇಕು (ಶಾಲೆಮ. ೨೦೧) ; ಕೈಯನ್ನು ಪಳಗಿಸಿಕೊಳ್ಳುವುದಕ್ಕೋಸ್ಕರ ಬರೆದನೆನ್ನ ಬಹುದು (ಕಾವ್ಯಸ. ೫೬) ; ಅವರೇ ನಮ್ಮ ಹಳೆಯ ಭಾಷೆಯನ್ನು ಈ ಹೊಸಹೊಸ ವಿಷಯಗಳಿಗೆ ಪಳಗಿಸಿಕೊಡತಕ್ಕವರು (ಸಾಹಿಶ. ೬೩). ೩. ಬಳಸಿ ಹದಕ್ಕೆ ತರು,-ಉಪಯೋಗಕ್ಕೆ ಯೋಗ್ಯವಾಗುವಂತೆ ಮಾಡು: ಪಾದರಿಯ ಹೂವಿನಿಂದೆ ನೆಱೆ ಪಳಗಿಸಿದ ಮಡಕೆಯೊಳಗೆಱೆದು ಮತ್ತಾ ಹೂವುಗಳನು ಹೊಱೆಯಿಟ್ಟು (ಸೂಪಶಾ.೨-೧೬). ೪. ತರಬೇತು ಮಾಡು ; ತಯಾರುಗೊಳಿಸು : ಸಾಮಾಜಿಕಜೀವನದಲ್ಲಿ ಮಕ್ಕಳನ್ನು ಪಳಗಿಸುವಾಗ, ಅವರ ಸ್ವಾಭಾವಿಕಗುಣಶಕ್ತಿಗಳನ್ನು ಸರ್ವವಿಹಿತವೆನಿಸುವಂತೆ ಬೆಳಸಬೇಕೆಂಬುದು ಸ್ವಾಭಾವಿಕ (ಶಿಕ್ಷದ. ೬೮). **ಹಳಗಿಸು :** ೧. ಹಳಗಿಪಡೆ ಹುಲಿಯ ಹಸಿವೆಗೆ ಹೋತನೀವಂತೆ, ಇವರ ನೆತ್ತರ ತೃಷೆಗೆ ನಿರ್ದೋಷಿ ಈತನನ್ನೀಯುವುದೆ ನಿಶ್ಚಯಂ (ಗೊಲ್ಗೊಥಾ. ೮-೨೧೧).

[ಪಳಗು+-ಇಸು$_3$]

ಪಳಗು, ಪಳುಗು (ಕ್ರಿ). ೧. ಹತೋಟಿಗೆ ಬರು; ಅಂಕೆಗೆ ಬರು: ಹಕ್ಕಿಗಳು ಎಷ್ಟು ಪಳಗಿದ್ದುವೆಂದರೆ . . . ಅವು ಅವನ ಸುತ್ತ ಕೋಳಿಮರಿಗಳಂತೆ ಸೇರಿಕೊಳ್ಳುತ್ತಿದ್ದವು (ಪ್ರವಾಇ. II. ೫೨) ; ಅವು ಕಚ್ಚುತ್ತವೇನು ? ಇಲ್ಲ, ಇಲ್ಲ. ಅವು ಪಳಗಿವೆ (ಶಾಲೆಮ. ೪೨). ೨. ರೂಢಿಯಾಗು ; ಅಭ್ಯಾಸವಾಗು ; ಬಳಕೆಯಾಗು : ಎಷ್ಟೋ ಪದಪ್ರಯೋಗಗಳು ಭಾಷಾಶಾಸ್ತ್ರಪ್ರಯೋಗದಿಂದ ಪಳಗಿ ಸಾಧುವೆನಿಸಬಲ್ಲವು (ಸಂಶೋಧ. ೮೬) ; ವಾಸ್ತವಿಕವೂ ಪರಿಣಾಮಕಾರಿಯೂ ವಿವೇಕಯುತವೂ ಆದ ಮಾರ್ಗದಲ್ಲಿ ಪಳಗುವಂತೆ ಸಹಾಯ ದೊರೆಯಬೇಕು (ಶಿಕ್ಷದ. ೩೬೨) ; ನೋಡಿ ಪಳಗಿದ ನಮ್ಮ ದೃಷ್ಟಿಗೆ ಈ ನೋಟಗಳೆಲ್ಲವೂ . . . ಕಂಗೊಳಿಸುವುವಲ್ಲವೆ ! (ಜ್ಯೋತಿರ್ವಿ. ೬೭). ೩. ತರಬೇತಾಗು ; ನುರಿ ; ಪರಿಣತಿಹೊಂದು : ಚಿತ್ರಣಶಕ್ತಿಯ ಇಷ್ಟು ಪಳಗಿದ ಕೈಯಾಗಿದೆ ಈ ಜಾನಪದ ಕವಿಯದು ! (ಕನ್ನಜಾ. ೧೮೮) ; ಅವಳ ತಂದೆ ವ್ಯವಹಾರದಲ್ಲಿ ಪಳಗಿದ ಮನುಷ್ಯರು (ದೂರಸ. ೧೦೯) ; ಕೈ ಮತ್ತಷ್ಟು ಪಳಗಬೇಕು ಎನ್ನುವ ಹಾಗಿತ್ತು (ದೂಬೆಟ್ಟ. ೯೯). ೪. ಹದಕ್ಕೆ ಬರು; ಪಾಡಾಗು : ಈ ಲೇಹ್ಯವಂ ಮತ್ತೊಂದು ಪಳಗಿದ ಮಡಕೆಯಲ್ಲಿರಿಸಿಕೊಂಡು (ಸಕವೈ. ೩೯೩). **ಪಳುಗು:** ೪. ಪಳುಗಿದ ಮಡಕೆಯೊಳ್ ಸುರಿದು ಬಾಯಿಗೆ ಮುಚ್ಚಳ ಮುಚ್ಚಿ (ಸಾಳ್ವಸಾಂ. ೧೮) ; ಒಂದು ಸೇರು ಒಳ್ಳೆಣ್ಣೆಯನ್ನು ಪಳುಗಿದ ಮಣ್ಣು ಮಡಕೆಯಲ್ಲಿ ಹುಯಿದು (ಸಕವೈ. ೩೦).

ಪಳಗಿದ ಕೈ—ನುರಿತ ಕೈ : ಕಳವಿನ ವಿದ್ಯೆಯಲ್ಲಿ ಯಮನದು ಪಳಗಿದ ಕೈ (ಇಪ್ಪಕ. ೪೨೮).

[ದೇ.॥ ತಮಿ. ಪಟಕು ; ಮಲ. ಪಟಕ್ಕು]

ಪಳಗೆಂಪು (ನಾ). ಒಂದು ಬಗೆಯ ಪದ್ಮರಾಗ,—ಕೆಂಪುಮಣಿ : ಎಳೆನೀಲ ಪಚ್ಚೆ ಪಳಗೆಂಪು ಮುತ್ತುಗಳ ನಿರ್ಮಳಕಾಂತಿಯಿಂದೆಸೆವ ಪುಷ್ಪಕಂಗಂಡು ತಿಳಿಗೊಳನುಂ ಬನಂ ಪದ್ಮಮುಂ ಜೊನ್ನಮೆಂದು ಮೀನ್ ಮೃಗಮಳಿ ಚಕೋರಂಗಳು ಪೊಳೆವ ಚಂಚಲಿಪ ಕವಿವೊಲಿವ ನೋಟಗಳ ಕೋಮಳೆಯರ್ (ಚಿಪಪು. ೫-೧೫). [ಪಳ ? + ಕೆಂಪು$_1$]

ಪಳಚನೆ 'ಪಳಚ್ಚನೆ' ನೋ.

ಪಳಚು 'ಪಳಂಚು$_1$' ನೋ.

ಪಳಚ್ಚನೆ, ಪಳಚನೆ, ಹಳಚನೆ (ಅ). ನಿರ್ಮಲವಾಗಿ ; ನಿಚ್ಚಳವಾಗಿ ; ಸ್ಪಷ್ಟವಾಗಿ : "ಜಳಕ್ಕನೆಂದುಂ ಪಳಚ್ಚನೆಂದುಂ ನಿರ್ಮಲಂ" (ಕಶಸಾ. ೫೬-೨೧೪) : ನೆರೆದಹಮಿಂದ್ರರ ತನುಪರಿಕರದ ನೆಟಲ್ಗಳ್ ಪಳಚ್ಚನೆಸೆದಿರೆ (ಅಪಿಪು. ೬-೩೭) ; ತಿಳಿದಿರ್ದ ಕೊಳದ ಜಲದೊಳ್

ಪಳಚ್ಚನೆಸೆದಿರ್ದ ತನ್ನ ನೆಱಲಂ . ತನ್ನೋಪಳೆಗೆತ್ತು ಮುಱುಗಿ ಕಾಣದೆ ತಳವೆಳಗಾಗಿರ್ದುವಿರುಳ ವಿರಹವಿಹಂಗಂ (ಅಜಿಪು. ೬-೬೨) ; ಪೊಱಲಸಿತುಂ ಪಳಚ್ಚನಮೃತಪ್ಪವದಿಂ ತೊಳೆದಂತೆ ಸೊಂಪು ಪೊಂಪುಱುಸೆ (ಅಸಂಪು. ೭-೯೧) ; ಬೆಳುವಸನದಿಂದಾ ಕೋಮಲೆ ಕಂಗಳಿಗೆ ಪಳಚ್ಚನೊಪ್ಪಿದಳು (ಚಂಪ್ರಸಾಂ. ೨೪-೧೦). **ಪಳಚನೆ :** "ಗಮ್ಮನೆ ತಾಂ ಜಳಕನೆಂದು ಪಳಚನೆಯೆನ್ನಲ್" (ಕವಿಕಂ. ೧೦೧) ; ಪಳಚನೆ ಪೊಳೆವೆಳವೆಂಡಿರ ಬಿಳಿಯಲರ್ಗಣ್ಣವರ ಚೆಲ್ವನೆಳಕುಱಿಗೊಂದಂತಳರ್ದು ತೊಳಗಿದುವು (ಲೀಲಾವ. ೯-೬೬) ; ಬೆಳ್ದಿಂಗಳ ಸಿರಿಗೆ ಸರಿಗೆವರ್ಪುವು ಪಳಚನೆ ಕವಿಭಾಳನೇತ್ರನಿಡುವ ಪದಂಗಳ್ (ಅಸಂಪು. ೧-೫೦) ; ನಿರ್ಮಲವಾದ ಲಲಿತಾಂಗದಿಂದ ಪಳಚನೆಸೆದೊಪ್ಪವಿಟ್ಟ ಪರಂಜಿಯ . . . ಬೊಂಬೆಯಂತೆ (ಚಂಪ್ರಸಾಂ. ೧೨-೮೧). **ಹಳಚನೆ :** ಹಸನಾಗಿ ಹಳಚನೆಸೆವ ಹಾಲ ಧಾರೆಯೊಳೆಸೆದುದು ಜಿನನ ದಿವ್ಯಾಂಗ (ಚಂಪ್ರಸಾಂ. ೨೪-೧೫೭) ; ಸಾಧ್ಯಮಾದ ಬಂದೇ ಮಾರ್ಗವನು ವಿಕ್ರಮರಾಯರು ಹಳಚನೆ ಕಂಡು . . . ಸಿದ್ಧಿಯನು ಸೈವಡೆದುಕೊಂಡರು (ಬೆಟ್ಟಅ. ೨೧೬-೯).

ಹಳಹಳಚನೆ (ದ್ವಿರುಕ್ತಿ) : ಹಳಹಳಚನಾದುದಾಶಾವಲಯ (ಸಮ್ಯಕೌ. ೧-೧೯) ; ರಾಜವೀಥಿಗೆ ಬಂದು ಹಾಲಂತೆ ಹಳಹಳಚನೆ ಹೊಳೆವ ಹುಣ್ಣಿಮೆಯ ತಿಂಗಳ ಬೆಳಗಿನೊಳ್ (ಸಮ್ಯಕೌ. ೨-೧೦೨) ; ಹಳಹಳಚನೆ ಪೆಣ್ಣುರೂಪಿನ ಚೆಲ್ವ ಪುತ್ತಳಿಗಳೆಸೆದುವು ಭಿತ್ತಿಯೊಳು (ಭರತ. ೧೭-೨೨). **ಹಳಚ್ಚನಾಗು**=ನಿರ್ಮಲವಾಗು ; ಪ್ರಕಾಶಮಾನವಾಗು : ಸರೋಜಕುಮುದೋಜ್ವಲಮಾಗೆ ಕೊಳಂ ಪಳಚ್ಚನಾಗಿರೆ ಶಶಿರಶ್ಮಿ ಬಂದುದತಿನಿರ್ಮಲನೀರದವಪ್ಪ ಶಾರದಂ (ಶಾದಂಉ. ೬೩೨) ; ಪಳಚ್ಚನಾಯ್ತು ಗಗನಂ ಮೇಘವ್ರಜಂ ಪೋಗೆಯುಂ (ಕುಸುಮಾ. ೬-೪೨) ; ತೆಂಬೆಲರೂದಿತ್ತು ಪಳಚ್ಚನಾದುವು ಸರೋನದ್ಯಂಬುಗಳ್ ನಂದನಾವಲಿ ಸೊಂಪೇಱುತ್ತುದು (ವೃಷವಿ. ೩-೧೮). [<ಪಳಂಚು$_1$+-ಆನೆ$_1$]

ಪಳಚ್ಚಿಸು 'ಪಳಂಚಿಸು' ನೋ.

ಪಳಫ 'ಪಣತ' ನೋ.

△ **ಪಳದಿ** 'ಹಳದಿ' ನೋ.

ಪಳದು 'ಪಱದು' ನೋ.

ಪಳದೆ 'ಪಳಿದ್ಯ' ನೋ.

ಪಳದೇಗುಲ (ನಾ). ಹಳೆಯ ದೇವಸ್ಥಾನ : ಹೇರಡವಿಯಲ್ಲಿ ಪಳದೇಗುಲದ ಲಿಂಗಕ್ಕೆ ವೈರಿಭಯವಹುದೆಂದು ರಾಜೋಪಚಾರದಿಂದಾರಾಧನೆಯ ಮಾಡಿ (ರಾಘಚ. ೬-೨೨). [ಪಳ$_1$(<ಪಱದು)+ದೇಗುಲ]

ಪಳದ್ಯ 'ಪಳಿದ್ಯ' ನೋ.

ಪಳನುಡಿ 'ಪಱನುಡಿ' ನೋ.

ಪಳಪಳ 'ಪಱಪಱ' ನೋ.

ಪಳಪಳನೆ 'ಪಱಪಱನೆ' ನೋ.

ಪಳಪಳಿಸು (ಕ್ರಿ). ಭ್ರಮೆಗೊಳ್ಳು ; ಭ್ರಾಂತಿಯನ್ನು ಹೊಂದು : ತಳಮಳಿಪುವು ತಳಿರಿವು ಬೆರಲಿವು ಕಳಕೆಗಳಿವು . . . ಎಂದಱಾಯದೆ ಕೋಮಳೆ ಪೂಗೊಯ್ವೆಡೆಯೊಳ್ ಪಳಪಳಿಸಿದಳತಿಮುಗ್ಧೆ (ಶಾಂತೀಶ್ವ. ೧೦-೧೨೬). 'ಹಳಹಳಿಸು' ಪರಾ. [ಪಳಪಳ ? +-ಇಸು$_3$]

ಪಳಬ, ಹಳಬ (ನಾ). ೧. ವಯಸ್ಸಾದ ವ್ಯಕ್ತಿ : ಹಿರಿಯ : ಮಾಂಧಾತಂ ಪಳಬಂ ಶಕ್ರನರೆಗರ್ದುಗೆ ಪೊರ್ದಿದಂ (ಸೌನಂದ. ೧೧-೪೩) ; ಬಭ್ರುವಾಹನನ ಕಂಡು, ಪೋಲ್ವೆಗೆ ಬೆರಗುಗೊಂಡರಾ ಸೇನೆಯಲಿ ಪಳಬರಾದವರೆಲ್ಲರುಂ (ಚತ್ರಾಂಗ. ೮೧-೨೨೦೮). **ಹಳಬ :** ೨. ಬಹುಕಾಲದಿಂದ ಪರಿಚಿತನಾದ ವ್ಯಕ್ತಿ : ಹಳಬರಾಗಿಯುಂಯಿರುವ ವೇಗಶಾಲಿಗಳಾದ ಧೃತ್ಯರಂ ಕರಸಿ (ಸೌಗಂಧಿ. ೬೬೬-೧೨) ; ಹಳಬನೊ ಹೊಸಬನೊ ನೀನು (ಅಂಚಾಸ. ೬೪-೨೮). ೩. ಗೌಡ ಹಾಗೂ ಶಾನುಭೋಗರ ಕೈಕೆಳಗಿರುವ ಒಬ್ಬ ಗ್ರಾಮಸೇವಕ ; ಕುಳವಾಡಿ : ಗೌಡ ಶಾನುಭೋಗರ ಕೈಕೆಳಗೆ ತಳವಾರ, ಪಟ್ಟಣಸೆಟ್ಟ, ಹಳಬರು ಮುಂತಾದ ತಿರುಕುಳ ಕಾಮದಾರರಿರುತ್ತಾರೆ . . . ಹಳಬರು ಊರಿನ ಕಾವಲುಗಾರರಾಗಿರುತ್ತಾರೆ (ಕಭಾಗೆ. ೩೬೬) ; ಹಳಬನು ಊರಿನ ಕಾವಲುಗಾರನಿರುವನು (ವಿಚಾಭೂ. ೫೫) ; ಹಗಲು-ರಾತ್ರಿ ಚಾವಡಿಯನ್ನು ಹಳಬ ಕಾಯ್ದುಕೊಂಡು ಬಿದ್ದಿರುತ್ತಾನೆ (ಗಾಳಿಗು. ೫). [ಪಳ$_1$(<ಪಱದು)+-ಬ$_2$]

ಪಳಬದ್ದ (ನಾ). (?) : ಪಗೆಗಂ ಪಾಱುಗಂ ಪರಿಭವಕ್ಕಂ ಪಱವೆಗಂ ಪಾಗುಡಕ್ಕಂ ಪಳಬದ್ದಕಂ ವೈವಾಹಿಕಸಂಬಂಧಕ್ಕಂ ಮೈತ್ರಕ್ಕಂ . . . ಮಹಾಸಮುದ್ರದೊಳ್ ಮಹಾನದಿಗಳ್ ಕೂಡುವಂತೆ (ಸಂಪಭಾ. ೯-೯೫ ಪ) ; "ಪಳಬದ್ದಕ್ಕಂ=ಲಾಭ ಅಥವಾ ಪ್ರಯೋಜನ ಪಡೆದದಕ್ಕೂ" (ಸಂಪವಿ. ೩೩೬). [?]

ಪಳಮಂಜರಿ (ನಾ). [ಸಂಗೀತ] ಒಂದು ರಾಗದ ಹೆಸರು : ಲಲಿತ ಸಾಳಂಗ ಸಾವೇರಿ ಗುಜ್ಜರಿ ಗೌಳ ಪಳಮಂಜರಿಗಳೆಂಬ ವಿವಿಧರಾಗಂಗಳಂ ಬಳಸಿ ಪಾಡಿಸಿದನು (ಜೈಮಿಭಾ. ೨೧-೫೭). [<ಸಂ. ಫಲಮಂಜರೀ]

ಪಳಮಾತು 'ಪಳವಾತು' ನೋ.

ಪಳಮೆ 'ಪಱಮೆ' ನೋ.

ಪಳಮೊರೆ, ಹಳಮೊರೆ (ನಾ). ಹಿಂದಿನ ಪೀಳಿಗೆ; ವಂಶಾನುಕ್ರಮ : ಅಯ್ದನೆಯನ್, ಆ ಮರ್ದನ್, ಪರ್ವದ ಕಳಂಕಂ, ಪಳಮೊರೆಯ ನಾಣ್ಚಿಸಿದೊಡೆ (ಪಾರಸಿ. ೨೯-೬೬೫). **ಹಳಮೊರೆ :** (Ancestry. ಇಂಕನಿ). 'ತಲೆಮೊಱೆ' ಪರಾ. [ಪಳ$_1$(<ಪಱದು)+ಮೊರೆ$_6$(<ಮೊಱೆ$_4$)]

ಪಳಯಠಾಣ (ನಾ). ಒಂದು ಊರಿನ ಹೆಸರು : ಪಳಯಟ್ಟಾಣ ಪ್ರತ್ಯಾಸನ್ನ ಭಾಡಲಿಗ್ರಾಮಮಧಿವಸತಿ (ಎಇ. XIX, ೬೪-೨೩ ; 687). [?+ಠಾಣ(<ತಾಣ)]

ಪಳಯಿ (ಗು). ಹಿಂದಿನಿಂದ ಬಂದ : ಮೂಜಿನೆಯ ವರಸಕೆ ಪ ಯೆಂದೆಂದಿಗುಂ ನೂಜಿಕೆ ಪಳಯಿಗುದಗೆ ಮರಿಯಾದೆಯಲಿ ವುತ್ತು ಸಿದ್ಧಾಯವನು ಕಲ ಮೇಲೆ ಮಡಗುವರು (ಎಕ. XIV, ಕಿರುಪ. ೬೨-೨೪ ; 1309).

[ಇ ಇದು'ಪಱೆಯ' ಎಂಬುದರ ಅಪಲಿಖಿತವಿರಬಹುದು]

ಪಳಯಿಗೆ 'ಪಱಯಿಗೆ' ನೋ.

ಪಳಯಿಸು, ಪಳವಿಸು, ಹಳವಿಸು, ಹಳಿಸು$_2$ (ಕ್ರಿ). ಪ್ರಲಾಪಿಸು; ಗೋಳಾಡು : ತಮ್ಮ ಗಂಡರಂ ಕೊಳುಗುಳದೊಳಱಸಿ ಕಾಣದೆ ಬಾಯಱಿದು ಪಳಯಿಸುತ್ತುಂ (ಪಂಪಭಾ. ೧೪-೪ ಪ) ; ನೆನೆದಲ್ಲಿಯೆ ಕಂಡಟಲುಣ್ಕೆ ಶೋಕರಸದಿಂ ಪಳಯಿಸಿದಳ್ಕೊಂತೆ ತನ್ನ ಚೊಚ್ಚಲ ಮಗನಂ (ಗದಾಯು. ೧೦-೧೮) ; ನೀವೇಂ ನಿಮಿತ್ತ ಪಂಬಲಿಸಿ ಪಳಯಿಸುತಿರ್ದಪಿರಿ (ಸೌಂದಪು. ೧೬-೬೧) ; ಆತನ ರಾಣಿ ಪೆತ್ತ ಬಸಿಱುನೊಂದುರಿಯಿಂ ನೊಂದು ಪಳಯಿಸಿ . . . ಮುಱುಮುಱುಗಿ ಹಮ್ಮುದಂಬೋದೆಳ್ (ರಾಮಾಶ್ವ. ೬೬-೧) ; ಬಡನಾಯಿಯುಂ . . . ಆಕಾಶಕೆ ಮೊಗ ಮಾಡಿ ಪಳಯಿಸತೊಡಗಿತು (ಕೋಗಿಲೆ. ೫೦-೨೦). **ಪಳವಿಸು :** ಅಂತು ಪುಯ್ಕಲಿಟ್ಟೊಳಱಸಿ ಪಳವಿಸಿ ಬಾಯಱಿದಟ್ಟ ಸುತಾರೆಯಂ (ಶಾಂತಿಪು. ೬-೬೩ ಪ) ; ಆ ಬಳಂ ಬಾಯ್ವಿಟ್ಟು ಪಳವಿಸಿ ಪ್ರಳಾಪಂಗೆಯ್ದು ಸುಯ್ದು ವಿಕಳನಾಗಿ ಮತಿಗೆಟ್ಟು (ನೇಮಿಪು. ೧೪-೧೦೦ ಪ) ; ಕೇಳೀವನದ ತರುಲತಾ ನಿಹಂಗಮಂಗಳ್ಗೆ ಪೇಳ್ದು ಪಳವಿಸಿಯುಂ (ಪರ್ಧಪು. ೯-೭೧ ಪ) ;

ಸಂಗನಂ ತಕ್ಕೈಸಿ ಪಳವಿಸಿ ಪಲುಂಬಿ ಗೋಳಿಟ್ಟು (ಬಸರ. ೪-೩೮). **ಪಳವಿಸು** : ಹರಿಯುತ್ತ ಪಳವಿಸುತ ಬಾಯ್ ಬತ್ತಲೊಲುತ್ತ (ಸಿದ್ಧರಾ. ೨-೪೭) ; ಬದುಕೇಕೆಂದು ಪಳವಿಸಿ ಮಱುಗುತಿರಲ್ (ಶಾಂತಿಪು. ೨೯-೨೨) : ಅಳಲಿದರು ಬಳಿಕೊಬ್ಬರೊಬ್ಬರು ಪಳವಿಸುತ ಹಲವಂಗದಲಿ (ತೊರವೆ. ೨-೬-೨೬): ಮೂರ್ಛೆ ತಿಳಿದು . . . ಪಳವಿಸಿದನು ರಾಯನು (ಕುರುಸಾಂ. ೪೦-೯೫). **ಪಳಿಸು**$_2$: ಸುಳಿವ ಸಮೀರ ಪೊಂಪುಳಿಪ ಚಕೋರ ನುಮ್ಮಳಿಪ ರಾಜೀವನುಬ್ಬೀಳ್ವ ಜಳನಿಧಿ ಸಂತಸದಳಿವ ನೀಲಾಬ್ಜದಿಂ ಹಳಿಸುವ ಚಕ್ರವಾಕಗಳು (ಧೃವರಾ. ೨-೭೧). [<ಪ್ರಳಾಪಿಸು]

ಪಳರಸ (?) (ನಾ). (?) : ಕುಂಬಳದೊಳ್ಬಳರಸಮುಂ ಮೆಣಸಂ ಕೊಳಲಲಂಳ್ಕುಮೆನಿಸಿರ್ದ ನಾಯ್ಗಳತಿವಿಷಮಟಿಗುಂ (ಖಮಂ. ೧೩-೩೪). [?+ರಸ]

ಪಳವಡ (?) (?). (?) : ಬಳಗಿರ್ದ ಬದಣಿ ವರ್ಣಲಿಂಗಮಾಯ್ತು . . . ಚಿಲ್ವಸಳವಡಿಸಿ ಮುಂಡನಕೆ ಜೆಡೆ ಮೂಡೆ ಸಂತತಂ ಪಳವಡದ ರೋಮಶಾಟಿ ಪೊಳವ ರನ್ನಂ ಬಿಗಿದ ಕಂಥೆಯಾಗೊಪ್ಪಿರಲು . . . ಶುದ್ಧ ಶಂಭುರೂಪಾಗಿರ್ದರು (ಲಿಂಗಾಪು. ೨೨-೩). [?]

ಪಳವಳಿಗೆ, ಪೊಳವಳಿಗೆ, ಹೊಳೆವಳಿಗೆ (ನಾ). (?) : ಚೈತ್ರ ಪವಿತ್ರಂಗಳ ಸೋಮದೇವರುಗಳಿಗೆ ದಿನ ಹದಿನಾಲ್ಕಕ್ಕಂ ಏಣ್ಣೆ ಹತ್ತು ಕೊಳಗದ ಇಬ್ಬಳ ಪಳವಳಿಗೆಯ ಪಕ್ವಾನ್ನಕ್ಕೆ ಕೊಳಗ ಹತ್ತು . . . ಹೋಮ ಪಳವಳಿಗೆಗೆ ಸಲಗೆ ಒಂದು ಕೊಳಗ ಹತ್ತು (ಎಕ. III, ತಿರುಮ. ೧೦೧-೫೯; 1276) ; ಕಂಡರಿವರೆಣ್ದೆಸೆಯಲೊಪ್ಪುವ . . . ಹೂಮಂಡಿಗಳ ಪಳವಳಿಗೆಗಳ ನನೆಯುಂಡೆಗಳ ಸಿಂಗರದಲೊಪ್ಪಿಹ ಶಸ್ತ್ರಮಂಟಪವ (ಅಕ್ಕಾಜ. ೬-೭೧). **ಪೊಳವಳಿಗೆ** : ಚೈತ್ಯಾಲಯಮಂ ಕಟ್ಟಿಸಿ ಪ್ರತಿಷ್ಠೆಯಂ ಮಾಡಿಸಿ ಜಯಘಂಟೆ ಚಾಮರ ಪೊಳವಳಿಗೆ ಗೀತ ವಾದ್ಯ ನೃತ್ಯ ಶ್ರೀಬಲಿ ಮುಂತಾದ ವೈಭವಂಗಳಂ ಯಥಾಶಕ್ತಿಯಿಂ ಮಾಡಿಸಿ (ನೋಂಪಳ. ೨೨-೭). **ಹೊಳೆವಳಿಗೆ** : ಹೊನ್ನಾನೆಗಲ್ಲಿಂದ ಹೊಳೆವಳಿಗೆಯ ಸಾಲು ಗನ್ನಡಿಯಿಂದ . . . ಸಂಪನ್ನಗೃಹಗಳು ಮೆಱೆದುವು (ಧರಚ. ೧೫-೨೪). 'ಥಳವಳಿಗೆ'. 'ಫಳವಳಿಗೆ' ಪರಾ. [?]

ಪಳವಾತು 'ಪಟವಾತು' ನೋ.

ಪಳವಾನ್ (ನಾ). ಹಿಂದಿನಿಂದ ಇರುವ ಆಕಾಶ ; ಸನಾತನವಾದ ಗಗನ : ಪಳವಾನೇ ಪೊಸಎಲರೇ ತಳಿಮಳೆಯ ಚೆಲ್ವು ಬೆಳೆಯೆ (ಹೊಗಳು. ೪೫-೧೭). [ಪಳ$_1$ (<ಪಟದು)+ಜಾನ್$_3$]

ಪಳವಿಗೆ 'ಪಟಯಿಗೆ' ನೋ.

ಪಳವಿಸು 'ಪಳಯಿಸು' ನೋ.

ಪಳವು 'ಪಟುವ' ನೋ.

ಪಳವೆ 'ಪಟವೆ' ನೋ.

ಪಳಸು 'ಪಟಸು' ನೋ.

ಪಳಸುಗೂಳು (ನಾ). ಹಳಸಿದ ಅನ್ನ : ಪಾಲುಂಬುವರ್ ಪಳಸು ಗೂಳಿಗಿಚ್ಛೈಸುವರೆ (ಪಮ್ಮಕ್ಕೆ. ೧೨-೨೨).

[ಪಳಸು(<ಪಟಸು)+ಕೂಳು$_2$ (<ಕೂಟ್$_1$)]

ಪಳಹ$_1$ 'ಪಳಿದ್ಯ' ನೋ.

ಪಳಹ$_2$ 'ಪಟಹ' ನೋ.

ಪಳಹಗಾಱಿಕೆ (ನಾ). ಮದ್ದಳೆಯನ್ನು ಬಾರಿಸುವ ವಿದ್ಯೆ,—ಕೌಶಲ : ಅತಿಪಳಹಗಾಱಿಕೆಯಾಂತು ಮಿಳಿರ್ದ ಮಿಂಚಿನವೊಲುಂ ಪೊಳಪ ಡಂಗುರವಿದ್ಯೆಯಂ ನಿನಗೆ ಕಲಿಸಿದವನೆಂತಪ್ಪ ಗಾರುಡಿಗನೋ (ಪ್ರಭುಪು. ೫-೧೪೬). [ಪಳಹ$_2$(<ಪಟಹ)+-ಕಾಱಿ+-ಇಕೆ]

ಪಳಹರ (ನಾ). ೧. ಬಾವುಟ ; ಧ್ವಜ : ತೇರಿನ ತುರಗವನು ವಂದಿಸಿದನಾ ಪಳಹರದ ಹನುಮಂಗೆಱಗಿದನು (ಕುಮಾರವ್ಯಾ. ೯-೩೬) ; ಪಳಹರಗಳೆತ್ತಿದವು ಮುತ್ತಿನ ಮಲಕು ಜಲ್ಲರಿ ಚಿಮ್ಮಿದವು (ಅಂಬಿಕಾ. ೨೫-೮೭). ೨. ಧ್ವಜಸ್ತಂಭ : ಚಳನಯನಂಗಳಂ ಕುಸುಮಸಾಯಕ ನೊಪ್ಪಿರೆ ಕೊರ್ತು ಮಾಡಿದಂ ಹಟವಿಗೆಯಂ ತನೂದರಯಸಾಂಗಮುರೀಚ ಗಳಿಂದ ಮಾಡಿದಂ ಪಳಹರವಂ (ಸಳಚಂ. ೩೬೧). ೩. ಬಟ್ಟೆ ; ವಸ್ತ್ರ : ಸಕಳಾಯುಧಸಂಭೃತಂಗಳಪ್ಪ ಱೊಂಚೆಗಳ ಕಾಂಚನದ ಪಳ[ಪಳಹ]ರಂಗಳ ಕದಳಿಕಾಕನಕದಂಡದ ಕೆಂಗಱೆಗೆಗಳೊಳ್ ತೋರ್ಪ ತೋರದೊಳ್ ಮರಂಗಳ (ಮಹಾನೇ. ೧೨-೪೬ ಪ). [<ಪಟ+?]

ಪಳಹರವೇಂಟೆ (ನಾ). ಒಂದು ಬಗೆಯ ಬೇಟೆ : ಗೋರವೇಂಟೆ ಪಳಹರವೇಂಟೆ ಪಟವೇಂಟೆ ವಿದ್ಯಾಧರರ ವೇಂಟೆ ಚಿತ್ರವೇಂಟೆ . . . ಮೆಱೆದುತಿಪ್ಪೆಂಟುತೆಂದುಚಿತವೇಂಟೆಯನಾದಿದಂ (ಹಚಾಶಾ. ೫-೪೯).

[ಗಿ ಇದು 'ಪಳಹದ ಬೇಂಟೆ' ಎಂದಿರಬಹುದೇ?]

ಪಳಾಯಿಗ, ಪಲಾಯಿಗ (ನಾ). ಹಲಗೆಯನ್ನು ಬಾರಿಸುವವನು; ಹರೆಕಾರ : ಭವ್ಯಜನಕ್ಕೆ ಬೆಸಸುವೆನೆಂತೀಗಳು ಪಳಾಯಿಗ ನಮಗಿರ್ಪ ಮಾತಂ ಕರಸ್ಪರ್ಶನಮಾತ್ರದೊಳೆ ಮುರವಂ ನಿರಾಪೇಕ್ಷೆಯಿಂ ನುಡಿವಂತೆ (ಶ್ರಾವಕಾ. ೩-೨೩). **ಪಲಾಯಿಗ** : ವಸುದೇವನೊರ್ವನಾ ಪಲಾಯಿಗನ ಕಯ್ಯ ಪಟಕಮಂ ಕೊಂಡು ಪ್ರಹರಣಪ್ರಾಗಲ್ಭ್ಯಂ ಪ್ರಮೋದಮನೊಪವಿಸಿ . . . ಬಾಡಿಸುತ್ತವಿರ್ಪಲ್ಲಿ (ಮಹಾನೇ. ೫-೩೪ ಪ). 'ಪಟಗ$_2$' ಪರಾ.

[ಪಳಾಯ್$_0$ (<ಪಟಹ)+-ಇಗ]

ಪಳಾರ 'ಫಲಾರ' ನೋ.

ಪಳಾವಳಿ (ನಾ). ಹಣ್ಣುಗಳ ಗುಂಪು ; ಫಲಗಳ ಸಮೂಹ : ಇಟಾಪಿದ ಪಳಾವಳಿಗಳುಂ ಕೊಳ್ಳ ಪಿಟ್ಟುಗಳುಂ (ಲೀಲಾವ. ೭-೬೮ ಪ) ; ಲೇಸಿನ ಪಳಾವಳಿಯ . . . ಕಾಣಿಕೆಯನಿತ್ತು (ಸಮೋ. ೧೦-೨೦).

[ಪಳ$_2$ (<ಪಲ$_2$)+ಆವಳಿ$_1$ (=ಆವಲಿ)]

ಪಳಾಸ 'ಪಾಳಾಸ' ನೋ.

ಪಳಾಸ್ತ್ರಿ (ನಾ). ೧. "ಬಟ್ಟೆಯ ಮೇಲೆ ಬಳಿದಿರುವ, ಶರೀರ ಶಾಖದಲ್ಲಿ ಚರ್ಮಕ್ಕೆ ಅಂಟಿಕೊಳ್ಳುವ ಮುಲಾಮು, ಔಷಧ ಲೇಪ : ಪಳಾಸ್ತ್ರಿ ; ಪಟ್ಟು" (Plaster. ಇಂಕಸಾ). ೨. ಗಾಯದ ಮೇಲೆ ಕಟ್ಟುವ, ಔಷಧಿಯ ಲೇಪ ಮಾಡಿದ ಬಟ್ಟೆಯ ಪಟ್ಟು : "ಗಾಯದ ಮೇಲೆ ಹಚ್ಚುವ ಮುಲಾಮು ಪಟ್ಟು, ಮೊ.ದು; ಪಳಾಸ್ತ್ರಿ" (Patch. ಇಂಕಸಾ). [←ಇಂ. Plaster]

ಪಳಾಳ 'ಪಲಾಲ' ನೋ.

ಪಳಿ$_1$ 'ಪಟಿ$_1$' ನೋ.

ಪಳಿ$_2$ 'ಪಟಿ$_2$' ನೋ.

ಪಳಿ$_3$ 'ಪಟಿ$_4$' ನೋ.

ಪಳಿ$_4$ 'ಪಟಿ$_5$' ನೋ.

ಪಳಿ$_5$ 'ಪಡಿ$_3$' ನೋ.

ಪಳಿ$_6$ (ನಾ). ಪದ್ಧತಿ ; ಸಂಪ್ರದಾಯ : ಪಳಮಂಜಳಿಣ್ಣೆಯಂ ದೊಡ್ಡಂಗೆ ದೂಳಿಸಿದರು (ಕಾಲೂರ. ೧೪೭-೩೫೧). [?]

ಪಳಿಕ 'ಪಟಕ' ನೋ.

ಪಳಿಕು 'ಪಟಕ' ನೋ.

ಪಳಿಕುಗಮ್ಮರಿ (ನಾ). ಸ್ಫಟಿಕದ ಕೊಳ್ಳ : ಪಳಿಕುಗಮ್ಮರಿ ಪಚ್ಚೆ ಯಚ್ಚುನೀಲದ ಗಣಿ ಕುಳಿಶದೊಡೆ ಮಾಣಿಕದ ಪಳಿಕಬೀಡಾರ ರನ್ನದ ಕೋಡುಂಗಲ್ತೊಳಗಿಹವಾ ಶಿಖರಿಯೊಳು (ತ್ರಿಪುರಾ. ೪-೫೯).

[ಪಳಿಕು (<ಪಟಿಕ)+ಕಮ್ಮರಿ$_1$]

ಪಳಿಕುಗಾಳಾಂಜೆ (ನಾ). ಸ್ಫಟಿಕದ ಪೀಕದಾನಿ :

ಪುಂಡರೀಕಾಕ್ಷನ ಗಂಡೂಷೋದಕಮನಾನಲ್ಕೆ ಪಳಿಕುಗಾಳಾಂಜಿದಳೆದ ಪಟಲಾಟಾಗದವರ (ಚಕವಂ. ೧೦೨-೧೩).

[ಪಳಿಕು(<ಪಟಿಕ)+ಕಾಳಾಂಜಿ$_2$]

ಪಳಿಕುದಟ್ಟೆ (ನಾ). ಸ್ಫಟಿಕದ ಹರಿವಾಣ: ಪಸದನಕ್ಕೆಂದು ಪಳಿಕುದಟ್ಟೆಯೊಳ್ಪ ಕತ್ತುರಿಯಣ್ಪು (ಚಕವಂ. ೮೬-೨೦)

[ಪಳಿಕು(<ಪಟಿಕ)+ತಟ್ಟೆ]

ಪಳಿಕುಮಣಿ, ಪಳುಕುವಣಿ (ನಾ). ಸ್ಫಟಿಕದ ಮಣಿ: ತತ್ತ್ವಾರ್ಥ ಮನಣಯದ ಮುನ್ನಮಪಾರ್ಥಂ ರಂಜಿಸದ ಪಳಿಕುಮಣಿಯವೊಲಿರದೇ (ಜಿಪಿ. ೧-೧೪); ಈರ್ಷೆ ಕಿಲುಬುಗಳು ತೊಳೆದು ಹೋಗಿ ಅವರ ಬಗೆಗಳು ಪಳಿಕುಮಣಿಗಳಂತಾದುವು (ಧರ್ಮಪು. ೬೫). **ಪಳುಕುವಣಿ**: ಪಳುಕುವಣಿವೆರೆದ ಕಂಠದ ವಿಳಸದ್ರುದ್ರಾಕ್ಷಮಾಲೆ ಪಳಯುಡೆ ಸುಲಿಪಲ್ . . . ಮಿಸುಗೆ (ಸ್ವಪಿ. ೩೬-೧೬); ಕೆತ್ತಿಸಿದ ಪಳುಕುವಣಿಯೋಳಿಯೆನೆ ನೀರ್ಗುಳ್ಳೆಸಾಲೆಸೆದುದು (ಚತ್ರಸ್ಯ. ೪೧). [ಪಳಿಕು(<ಪಟಿಕ)+ಮಣಿ$_3$]

ಪಳಿಕುವಸೆ (ನಾ). ಸ್ಫಟಿಕದ ಹಸೆ: ಪೊಸತಾಯ್ತು ವಿಧುಬಿಂಬ ಮಧ್ಯದಂಕಂ ಪಳಿಕುವಸೆಯಿರ್ದ ಕಾಳಿಯಂತೆ (ಚಿಬಪು. ೯-೨೫).

[ಪಳಿಕು(<ಪಟಿಕ)+ಪಸೆ$_2$]

ಪಳಿಕುವಾಸಱೆ, ಪಳುಕುವಾಸಱೆ (ನಾ). ಸ್ಫಟಿಕದ ಹಾಸುಗಲ್ಲು: ತರ್ಜ ತರುಣತಮಾಲತರುವನದ ತಳದ ತಣ್ಣಳಲ ಪಳ[ಪಾಠಾಂ.ಳು]ಕುವಾ[ಪಾಠಾಂ.ಪಾ]ಸಱೆಯ (ರಾಜಶೇ. ೧-೧೩೦ ಪ). **ಪಳುಕುವಾಸಱೆ**: ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ.

[ಪಳಿಕು(<ಪಟಿಕ)+ಪಾಸಱೆ]

ಪಳಿಕುವೆಸ (ನಾ). ಸ್ಫಟಿಕದಿಂದ ನಿರ್ಮಿಸಿದುದು; ಸ್ಫಟಿಕದ ರಚನೆ,-ಶಿಲ್ಪ: ತಳರ ಕಾವಣಂಗಳಲ್ಲಿ ಪಳಿಕುವೆಸದ ಬೆಟ್ಟದಲ್ಲಿ ಪರಿವ ತೊಱೆಯ ತಡಿಗಳಲ್ಲಿ . . . ಕೂಡಿ (ಕಬ್ಬಿಕಾ. ೩೪೪).

[ಪಳಿಕು(<ಪಟಿಕ)+ಬೆಸ$_1$]

ಪಳಿಕೆಯ್ 'ಪಟುಕೆಯ್' ನೋ.

ಪಳಿಗಪ್ಪುರ, ಪಳಿಗರ್ಪುರ (ನಾ). ಹರಳುಹರಳಾದ ಕರ್ಪೂರ; ಪಚ್ಚಕರ್ಪೂರ: ಪಳಿಗಪ್ಪುರವನಿನೀರ್ ಪೊಸವಾಳೆಯ ಸುಳಿ ಕಮ್ಮಿದುವಾದೆಲರ್ (ಜಯಕಾ. ೪-೪೦). **ಪಳಿಗರ್ಪುರ**: ಎಳೆಯಲ್ಲಯಿಂಗುಳ್ಳಿ ಕಂಬೇವು ಮಾದಲದ ತಳಿರು ಮಾವಿನಕಾಯಿ ಕೇದಗೆಯ ಹೂವಿಕ್ಕಿ ಪಳಿಗರ್ಪುರವ ತಳಿದು (ಸೂಪಕಾ. ೫-೬೮). [<ಪಳಿಕು+ಕಪ್ಪುರ]

ಪಳಿಗರ್ಪುರ 'ಪಳಿಗಪ್ಪುರ' ನೋ.

ಪಳಿಗುಡಿ (ನಾ). ಒಂದು ಬಗೆಯ ಶ್ರೇಷ್ಠವಾದ ಬಟ್ಟೆಯ ಧ್ವಜ: ಪಲ ಪಸುರ್ದೋರಣ ಪಳಿಗುಡಿ ಸಂತಸವಱೆ ಪೊಸಮುತ್ತಿನ ಬಣ್ಣವುರಂ ಮನೆಮನೆದಪ್ಪದೆ ತೋಳಿಸಿತು (ಜಯಕಾ. ೨-೫೯); ಪಳಗುಡಿಗಳ ಬಳಗಗಳಿಂದ ಚೆಲ್ವನು ತಳೆದ ಸಿಂಧಗಳ ಸಾಲಿಂದ ಮಿಳೆರ್ ಪತಾಕೆಗಳಿಂದಾ ನಗರಿ ಕಂಗೊಳಿಸಿತು ಕಡುರಯ್ಯಮಾಗಿ (ಚಂಪ್ರಸಾಂ. ೧೨-೮).

[ಪಳಿ$_3$(<ಪಟ್ಟ$_4$)+ಗುಡಿ$_2$]

ಪಳಿಗುಡು 'ಪಳಿಗೊಡು' ನೋ.

ಪಳಿಗೆ$_1$, ಹಳಿಗೆ (ನಾ). ಎಣ್ಣೆ ಮೊದಲಾದ ದ್ರವಗಳ ಒಂದು ಅಳತೆ,-ಪ್ರಮಾಣ: ××× ಕ್ಕಂ ಸೊಳಸ ೧ ಱ ಲೆಕ್ಕದೆ ಬಿಟ್ಟ ಪಳಿಗೆ ೧ (ಸೌಇಇ. XX, ೧೩೮-೫೬; 1192); ನಂದಾದೀಪ[ಗೆಗೆ] ಪಳಿಗೆಯೆಣ್ಣೆಯ ತಾವನುಸಯದಿಂದಮಿತ್ತರಾಣಂದ್ರಾರ್ಕ್ಕಂ (ಕೊಲ್ಹಾಶಾ. ೨೦-೩೦; 1265); ಸಂತೆ ಪೇಟೆಗಳ ಪಳಿಗೆ ಪಸಿಗೆಗಳನು (ದೇವಾಂಪು. ೫-೧೯); ಸಂತೆಯ ಪಸಿಗೆ ಪಳಿಗೆಯನೂ . . . ಧಾರೆಯನೆಜದು ಕೊಟೆಯೂ (ಸೌಇಇ. IX-II, ೫೫೩-೧೨; 1592). **ಹಳಿಗೆ**: ತೆಲ್ಲಗೊತ್ತಳಿಗಳು ದೇವರ ನಂದಾದೀಪಿಗೆಗೆ ಗಾಣಂಗಳಲೊಂದೊಂದು ಹಳಿಗೆಯೆಣ್ಣೆಯಂ ಕೊಟ್ಟರು (ಎಇ. V, ೧೯-೬೭; 1161); ಇನ್ನೂಱು ತೆಲ್ಲಗರ ಕೊತ್ತಳಿಗಳು ಗಾಣಕ್ಕೆ ಹಳಿಗೆವೊಂದು ಬಿಟ್ಟರು (ಸೌಇಇ. XV, ೧೨೯-೫೩; 1176).

ಪಳಿಗೆ$_2$ (ನಾ). ಒಂದು ಬಗೆಯ ವಸ್ತ್ರ: "ಪಳಿಗೆ—ಪಟಿಕಾ=ವಸ್ತ್ರವಿಶೇಷ" (ತದ್ಭವಕೋ. ೨೫). [<ಸಂ.ಪಟಿಕಾ]

ಪಳಿಗೊಡು, ಪಳಿಗುಡು (ಕ್ರಿ). ಒಂದಕ್ಕೆ ಪ್ರತಿಯಾಗಿ ಮತ್ತೊಂದನ್ನು ಕೊಡು,—ನೀಡು: ಮಿತವಚನನ ಶಿರಕ್ಕೆ ಪಳಿಗೊಡದಿರ್ದಳೇಕೆ (ಭಾಪಚಂ. ೯-೮೨). **ಪಳಿಗುಡು**: ಈತನ ಶಿರವನರಿದೀ ಶಿಶುಶಿರಕ್ಕೆ ಪಳಿಗು[ಪಾಠಾಂ.ಗೊ]ಡುವುದು (ರಾಜಶೇ. ೧೪-೧೪ ಪ).

[ಪಳಿ$_5$(<ಪಡಿ$_3$)+ಕೊಡು$_1$]

ಪಳಿತ 'ಪಲಿತ' ನೋ.

ಪಳಿತಂಕ (ನಾ). ಒಂದು ಬಗೆಯ ತಪಸ್ಸಿನ ಭಂಗಿ (?); ಪಳಿತಂಕದೆ ತಾನ್ದಿವಮೇಱಿದಾನ್ (ಎಕ. II, ೧೧೩-೪; ಸು. 700); ಪದುಳಿಕೆಗುಂದದಿರ್ದ ಪಳಿತಂಕದ ಚೆಲ್ವು ಸಡಿಲ್ದುದಿಲ್ಲ ಕರ್ಮದ ಬಿಗಿಪೊಯ್ಯನೊಯ್ಯನೆ ಸಡಿಲ್ದುದು (ಸುಕುಮಾ. ೯-೧೬). [?]

ಪಳಿತಶ್ಮಶ್ರು 'ಪಲಿತಶ್ಮಶ್ರು' ನೋ.

ಪಳಿತಾಂಕುರ 'ಪಲಿತಾಂಕುರ' ನೋ.

ಪಳಿದೆ 'ಪಳಿದ್ಯ' ನೋ.

ಪಳಿದ್ಯ, ಪಳದೆ, ಪಳದ್ಯ, ಪಳಹ$_1$, ಪಳಿದೆ, ಪಳಿಹ, ಪಳಿದ್ಯ (ನಾ). ಮೊಸರು ಅಥವಾ ಮಜ್ಜಿಗೆಯಿಂದ ತಯಾರಿಸುವ ಒಂದು ಬಗೆಯ ಮೇಲೋಗರ: ಪರಿಪಯ ಮೇಲೋಗರಮಂ ಪಾನ ಪಳಿದ್ಯಂಗಳಂ ಮಾಡಿ (ಧರ್ಮಪ. ೨-೪೭ ಪ); ಪಳಿದ್ಯ ಕೊವೆ ತುಪ್ಪ" (ಎಕ. VIII, ತೀರ್ಥಹ. ೧-೪೪; 1431); ಪರಿಪಯ ತಾಳಲುಪ್ಪಿನ ಕಾಯ್ ಪಳಿದ್ಯ ಕಚ್ಚರಿ ದಾಳುಕಂಗಳ . . . ನೀಡಿಸಿದನು (ಚಿಬಪು. ೫-೬೦); ಕುಂಬಳಸಂಡಿಗೆ ಪಳಿದ್ಯ ಮುಂತಾದುವನಂಬುಜಾಕ್ಷಿಯರಿಕ್ಕಲಾಗ (ಜ್ಞಾನಚಿ. ೨-೧೪೦). **ಪಳದೆ**: ಪಳದೆಯ ಮೇಲೆ ಇವರ ಪ್ರೀತಿಯು ಬಹಳ ಇರುವುದರಿಂದ ಇವರಿಗೆ 'ಪಳದೆ'ಗಳುಯೆಂಬ ಚೇಷ್ಟೆಯ ಉಪನಾಮವು ಬಂದಿದೆ (ಕಭಾಗೆ. ೬೯). **ಪಳದ್ಯ**: ಹೆಸರು ತೋಯ ಪಳದ್ಯ ಕಲಸುಮೇಲೋಗರ (ಬೊಂಕಶಾ. ೧೯೪೦, ಕುಮಚಿ. ೧೧೩-೩೬; 1475); ಪಳದ್ಯವ ಬಡಿಸಲು ಚಪ್ಪರಿದುಣುತಿರ್ದರಾಗ (ಗೋಮಟೇ. ೨-೧೨೯); ಪಳದ್ಯ ಕಾಸಿ ಉಣ್ಣಲು ದೀಪನಮಕ್ಕುಂ (ವಿನ್ಯಾವಿ. ೪); ಘಮಘಮಘಮಾಂತ ತಿಂಡಿ-ತೀರ್ಥ, ಪಾಯಸ-ಪಳದ್ಯ, ತುಂಬಿ ತುಂಬಿ ಸುಮ್ಮಸುಮ್ಮನೆ ತುಳುಕಿ ಹೋಗುತ್ತಿದ್ದವು (ಪಶಾಕ್ರಿ. ೧೫); ನೀಲಕಂಠನ ಮದುವೆಗೆ ನೀಲಿಸೊಪ್ಪಿನ ಪಳದ್ಯ (ಗಾದೆ). **ಪಳಹ$_1$**: ಸಾಸವೆ ಶಿಖರಿಣಿ ಪಳಹಂ ಕೀಸಿದ ಹುಳಿಯುಳ್ಳಮೊಗ್ಗಿನುಪ್ಪಿನ ಕಾಯ್ಕಳ್ (ಸಳಹಂ. ೪೪೬). **ಪಳಿದೆ**: ಹಸಿಯ ಅಲ್ಲವು ಲೇಸು ಬಿಸಿಯ ಪಳದೆಯು ಲೇಸು (ಸರ್ವಜ್ಞ. ೧೧೧೬); ಕಿಚ್ಚಡಿ ಬೋಸವು ಪಚ್ಚಡಿ ತಾಳಿಲು ಹೆಚ್ಚಿನ ಪಳದೆಯು ಉತ್ಸಹ ಬನ್ನ (ಶರಲೇ. ೮೬-೧೬). **ಪಳಿಹ**: ತಾಳಿದ ಪಳಿಹ ಪಸುಂಗುರಿ ಸಾಸವೆ ಸೀಕರಣೆ . . . ಎಂಬ ನಾನಾಭಿನ್ನರುಚಿಯ ಶಾಖಂಗಳಂ (ಧರ್ಮಾಮೃ. ೨-೩೮). **ಪಳಿದ್ಯ**: "ಖಲ—ಪಳಿದ್ಯ" (ಅಕಾನಿ. ೮-೨೬); ಮಜ್ಜಿಗೆಪಳಿದ್ಯ ಸಹ (ಎಕ. VII, ಶಿಮೊ. ೬೧-೬೧; 1431).

ಪಳಿನುಡಿ 'ಪಟುನುಡಿ$_2$' ನೋ.

ಪಳಿಮರಿಯಾದೆ (ನಾ) ಪ್ರತಿಮರ್ಯಾದೆ: ಆ ಹಂಜಮಾನದವರು ತಂಮ ಪಳಿಮರಿಯಾದೆಯ ಹೊಂನಿನ ಕೆಟಿಕೆಯನು ಆರಮನೆಗೆ ಕೊಟ ಅ

ಪಳಿನುರಿಯೊದೆಯಲಿ ಬಹಂಥಾ ಕಾಟಗದ್ಯಾನ ನೂಜ ಆಯುವತ್ತು ಹೊಂನನು (ಸೌಇ. IX-II, ೪೫೯-೧೬ ; 1465).

[ಪಳಿ$_5$(<ಪಡಿ$_3$)+ಮರಿಯಾದೆ]

ಪಳಿಯಣ್ಣ (ನಾ). ಒಬ್ಬಾತನ ಹೆಸರು : ಐನೂರ್ವ್ವಾಜಾರಿಯ ಮಗ ಪಳಿಯಣ್ಣ (ಎಕ. X, ಚಿಕ್ಕಬ. ೨೬-೯ ; 880).

[ಪಳಿ ? +ಅಣ್ಣ$_1$]

ಪಳಿಯಜಿ 'ಪಡಿಯಜಿ' ನೋ.

ಪಳಿಯುಡೆ (ನಾ). ಒಂದು ಬಗೆಯ ಶ್ರೇಷ್ಠವಾದ ಬಟ್ಟೆಯಿಂದ ತಯಾರಿಸಿದ ಉಡುಪು : ಪಳಿಯುಡೆ ಸುಲಿಪಲ್ಕೊಳಪ ಲಲಾಟದ ಧನಿತದ ವಿಳೇಪನಂ (ನೃಪಜ. ೩೭-೧೩). [ಪಳಿ$_5$(<ಪಟು$_4$)+ಉಡೆ$_2$]

ಪಳಿಲಜ್ಜೆ (ನಾ). ಅಪವಾದದಿಂದುಂಟಾದ ನಾಚಿಕೆ ; ನಿಂದೆಯಿಂದಾದ ನಾಚಿಕೆ : ಪಳಿಲಜ್ಜೆಯಂ ತೊರೆದು ಬಿಂಕದಿಂ ಕನಕಲಂಕಾಲಕ್ಷ್ಮಿ ತಲೆಯೆತ್ತಿ ನಿಲ್ವಂತೆವೋಲ್ (ಶ್ರೀರಾಮಾ. ೪೩೪-೩೦೩).

[ಪಳಿ$_2$(<ಪಟು$_2$)+ಲಜ್ಜೆ]

ಪಳಿವೀಡು (ನಾ). ನಿಂದೆಯ ನೆಲೆ ; ದೂಷಣೆಯ ಬೀಡು : ಪೇಡಿತನಮಂ ಕೊಲ್ಗೆ ಬಗೆ. ಸಾಲ್ದುಮಾ ಪಳಿವೀಡು, ಸೋಲ್ಮನಂ (ಶ್ರೀರಾಮಾ. ೩೪೧-೫೨೧). [ಪಳಿ$_2$(<ಪಟು$_2$)+ಬೀಡು$_2$]

ಪಳಿವು 'ಪಟು$_2$' ನೋ.

ಪಳಿವೊಜಸು (ಕ್ರಿ). ದೋಷವನ್ನುಂಟುಮಾಡು : ಸ್ವಧರ್ಮದಿಂ ನರ್ಮಳ್ಳಮಾಗಿ ಸಕಲಪ್ರಕೃತಿಜಾತ ಜಾತುರ್ವರ್ಣಮಂ ಬಿಡದೆ ಪೊರೆವಲ್ಲಿ ನೀತಿಶಾಸ್ತ್ರಂಗಳ್ಗೆ ಪಳಿವೊಜಸದೆ ಉರ್ವಿಯಂ ನವನವಸಾಸ್ಯಮಂ ಪಾಲಿಸಿದಂ (ಜೈಮಿಭಾ. ೧೪-೧೫). [ಪಳಿ$_2$(<ಪಟು$_2$)+ಪೊಜಸು]

ಪಳಿಸಂಕು ? (ನಾ). ಒಂದು ಬಗೆಯ ಶಂಖ (?) : ಜಡಿವ ಕಹಳೆಯು ಉಕ್ಕಡ ಕೊಂಬು ಪಳಸಂಕು ಒಡನೆ ತಂಬಟೆ ಡಮಾಮಿಗಳ (ದೇಸಾಂಪು. ೩-೨೦೮).

[P ಇದು 'ಪಳಸಂಕು (=ರೇಖೆಗಳುಳ್ಳ ಶಂಖ)' ಎಂಬುದರ ಅಪಲಿಪಿತ ವಿರಬಹುದು]

ಪಳಿಸು 'ಪಲಿಯಿಸು' ನೋ.

ಪಳಿಹ 'ಪಳಿದ್ಯ' ನೋ.

ಪಳಿಹತ 'ಪಟುಹತ್ತ' ನೋ.

ಪಳಿಹತ್ತ 'ಪಟುಹತ್ತ' ನೋ.

ಪಳಿಹಸ್ತ (ನಾ). [ಅಶ್ವಶಾ] ಕುದುರೆಯ ಮೊಳಕಾಲಿನ ಕೆಳಭಾಗ ; ಜಂಘೆಯಿಂ ಕೆಟಗೆ ಪಳಿಹಸ್ತ(ತ್ತ)ಮೆಂಬ ಪೆಸರಕ್ಕುಂ ಪಳಿಹಸ್ತ(ತ್ತ)ಮನಾಶ್ರಯಿಸಿದುದಕೆ ಕೂರ್ಚಮೆಂಬ ಪೆಸರಕ್ಕುಂ (ಅಶ್ವಶಾ. ೪೮-೫೨).

[?]

ಪಳು 'ಪಟುವ' ನೋ.

ಪಳುಂಕು, ಪಣಂಕು, ಪಳಂಕು, ಪಳಕು$_1$ (ಕ್ರಿ). ವಿ. ನೂಕು ; ತಳ್ಳು : "ಪಳುಂಕು (ಪಟುಕು)-ಪ್ರೇರಣೇ (ನೂಂಕು)" (ಕಪುಧಾ) ; "ಪ[ಪಾತಕಾಂ. ಪು]ಳುಂಕಿದನೆನಲ್ ನೂಂಕಿದಂ" (ಕಬ್ಬಿಕೃ. ೯೧). ಪಿ. ಒತ್ತು ; ಅದುಮು : ಗಳದೊಳ್ ತೋಳ ಮೊದಲ್ ಪಳಂಚೆ . . . ಪೆರ್ಮೊಲೆ ವಕ್ಷಸ್ಥಳಮಂ ಪಳುಂಚೆ (ಅಸಂಪು. ೩-೧೪೮). **ಪಣಂಕು** : ಪಿ. ಒತ್ತಿ ಹಿಡಿದುಕೊಳ್ಳು ; ಗಟ್ಟಿಯಾಗಿ ಹಿಡಿ : ಮಣಿಯದವುಂಕೊಳ್ಕದರೆ ಬಗ್ಗಿಸಿ ಕುತ್ತುವ ಕೊಂತ ನಟ್ಟ ಕಂಪಣದ ಪಣಂಕುವಿಟ್ಟಗಳ (ಪಧರಾಪು. ೪-೬೫). **ಪಳಂಕು** : ಪಿ. "ಪಳಂಕು-ಗಾಢಸ್ಪರ್ಶನೇ (ಒತ್ತಿ ಹಿಡಿದುಕೊಳ್ಳು)" (ಕಪುಧಾ). ೪. ಒತ್ತಿರು ; ಅದುಮಿಕೊಂಡಿರು : ಪೂಸಿದ ಕುಂಕುಮಮೆನಸುಂ ಬೀಸರಮಾಗಿರದು ಮೊಲೆ ಪಳಂಕವು (ಬಂಹರಿ. ೩-೧೪).

ಪಳುಕು$_1$: ಪಿ. ಪರಿಭ್ರಮಿಸಿ ಪರಿಶೀಲಿಸಿ ; ಸುತ್ತಾಡಿ ಪರಿಶೀಲಿಸು : ಪಲಗೆಯನೇಜಾ ಗಾಳಿಯ ಪಕದಿಂದಂಬರಾವತಿಯೆಂಬೂರ್ಗೆ ವಂದಿಬುದೊಡೂರವರ್ ಕಂಡು ಪಳಕಿದ ಮೆಯ್ಕಂಡದಂ ಭಿನ್ನಪಾತ್ರೆಯೆಂದಬುದು ಸಂಭಾವಿಸುತಿರ್ದು . . . ಎಂದೊಡೆ (ಬಂಹರಿ. ೪-೧೫೨ ವ).

[ದೇ.॥ ತುಳು. ಪಳಂಕು]

ಪಳುಕ 'ಪಟಿಕ' ನೋ.

ಪಳುಕಿ (ನಾ). ಒಂದು ಬಗೆಯ ಮರ : ಜಾಲಿ ಜಾನೆಯು ಬೋರೆ ತರೆಯು . . . ಬಿದಿರು ಬೆತ್ತಂ ಪಳುಕಿ ತೆಂಗು ತರುಜಾಲ ಪಳಮೆಯು ಬಹುಲತೆಗಳು ಕಿಕ್ಕಿ ಕಿಕ್ಕಿರಿದ ಕಾನನದೊಳು (ನಪಪೋ. ೮-೯). [?]

ಪಳುಕು 'ಪಟಿಕ' ನೋ.

ಪಳುಕುಗಲ್ (ನಾ). ಸ್ಫಟಿಕಶಿಲೆ : ಗೋಪಿಯರ್ ಕುಳಿಗೞ್ಗಲ್ಲಜೆಯ ಮೇಲೆ ಪಾಲ್ವೆನೆಗಳಂ ಪುಂಜಿಸಿ ಪಳುಕುಗಲ್ಮಿಡಿದು ಕುಟ್ಟಿ ಕುಟ್ಟಿ ಕ್ಕಿಯಂ ಜಾಣುಮರೆ ಸಮೆದು (ಪದ್ಮಚಾ. ೮-೧೫೫). [ಪಳುಕು(<ಪಟಿಕ)+ಕಲ್$_3$]

ಪಳುಕುಗಳಕ (ನಾ). ಸ್ಫಟಿಕದ ಕಲಶ$_3$–ಕೊಡ : ಜಾಪಲಾಂದಿಕೆಯರು ಪಳುಕುಗಳಕವಿಡಿದಾ ಪಾನೀಯಶಾಲೆಯೊಳು ನಿಂದು ನೀರೆಱೆಯೆ ನಾರಾಯರೆ ಲಾವಣ್ಯನ ಸುಂದರಲೋಚನದಿಂದ ಕುಂದದೀಂಟುತ ಪಥಿಕರು ಜಲಪಾನ ಸಾಕೆಂದೆನ್ನರಾ ಬಟ್ಟೆಗಳೊಳು (ಪಧರಾಪು. ೧-೫೮).

[ಪಳುಕು(<ಪಟಿಕ)+ಕಳಶ(=ಕಲಶ)]

ಪಳುಕುಗೊಡ (ನಾ). = ಪಳುಕುಗಳಕ : ಪಳುಕುಗೊಡದೊಳಗೆ ಪೊಜಗುಜ್ವಳಿಪಂತರ್ಜ್ಯೋತಿಯಂತಿರೆ (ರಾಜವೇ. ೧೩-೫೫) ; ಒಳಗಿರ್ಪ ಪ್ರಾಣಲಿಂಗವದು ತಾನೆ ಪಳುಕುಗೊಡದೊಳು ದೀಪದ ತೆಱದಿ (ಕೃಕವ. ೪-೧೬-೩). [ಪಳುಕು(<ಪಟಿಕ)+ಕೊಡ$_2$]

ಪಳುಕುವಣಿ 'ಪಳಕುಮಣಿ' ನೋ.

ಪಳುಕುವಲಗೆ (ನಾ). ಸ್ಫಟಿಕದ ಹಲಗೆ : ಆ ಕ್ರೀಡಾಶೈಲಂಗಳೊತ್ತಿ ನೊಳ್ ಬಳಸಿದ ಪಳುಕುವಲಗೆಯ ನೆಲಗಟ್ಟುಂ (ಚಿಕವಂ. ೪೫-೫).

[ಪಳುಕು(<ಪಟಿಕ)+ಪಲಗೆ]

ಪಳುಕುವಾಸಜಿ 'ಪಳಕುವಾಸಜಿ' ನೋ.

ಪಳುಗಾಡು (ನಾ). ದಟ್ಟವಾದ ಕಾಡು ; ದಟ್ಟಡವಿ : ಓಕೊಂಡ ನಾತನುಂ ಪಳುಗಾಡೊಳೋಡೋಡಿ ಬರುತೆ (ಶ್ರೀರಾಮಾ. ೨೪೦-೨೦೪). P ಇಲ್ಲಿ ಅವಧಾರಣೆಗಾಗಿ ಒಂದೇ ಅರ್ಥದ ದ್ವಂದ್ವಶಬ್ದಗಳನ್ನು ಬಳಸಲಾಗಿದೆ. [ಪಳು(<ಪಟುವ)+ಕಾಡು$_2$]

ಪಳುಗು 'ಪಳಗು' ನೋ.

ಪಳುಗೋಂಟೆ (ನಾ). ಒಂದು ಬಗೆಯ ದುರ್ಗ ; ವನದುರ್ಗ : ಈ 'ದುರ್ಗತ್ರಯ'ವನ್ನು 'ಬೆಟ್ಟಗೋಂಟೆ', 'ಕಡಲ್‌ಗೋಂಟೆ', 'ಪಳುಗೋಂಟೆ' ಅಥವಾ 'ನೆಲಕೋಟೆ' ಎಂದು ಹೇಳುವರು (ಕರ್ನಾಡ. ೪).

[ಪಳು(<ಪಟುವ)+ಕೋಂಟೆ]

ಪಳುವ 'ಪಟುವ' ನೋ.

ಪಳುವಟ್ಟಿ (ನಾ). ಕಾಡುದಾರಿ : ಮುಳಿಯ ಪಳುವಟ್ಟಿಯಂ ಕೊಂಡು ನಡತರೆ (ಶ್ರೀರಾಮಾ. ೧೪೩-೨೧೧). [ಪಳು(<ಪಟುವ)+ಬಟ್ಟೆ$_1$]

ಪಳುವು 'ಪಟುವ' ನೋ.

ಪಳುವೆಱು (ಕ್ರಿ). ಕಾಡಿನಿಂದ ಕೂಡಿರು ; ಗಿಡಮರಗಳಿಂದ ಆವೃತವಾಗಿರು : ಕುತ್ತು ಜಾಗಿರ್ದ ಹೆಮ್ಮಳೆಗಳಂ ಸುಡುತ ಬಳವೆತ್ತ ಬೆಟ್ಟವ ಸೀಳ್ದು ನೆಕ್ಕೆಗಳಿವುತ್ತ ಪಳು[ಪಾತಾಂ.ಮುಳು, ಪುಲು]ವೆತ್ತ ನೆಲನಂ ಕರಿಕುವರಿಸುತ್ತ . . . ಸುತ್ತ ಮುತ್ತಿತ್ತು ದಾವಾನಲಂ (ಹಜಕಾ. ೧೦-೫). [ಪಳು(<ಪಟುವ)+ಪೆಱು$_1$]

ಪಳೆ 'ಪಟ$_1$' ನೋ.

ಪಳೆಂಕ, ಪಳ್ಯಂಕ (ನಾ). (ಉಕ) ೧. ಪಂಡಿತ. ೨. (ಆಲಂ) ದಡ್ಡ; ಉಡಾಳ: ನಿನ್ನ ಮೊಮ್ಮಗ ಏನೋ ಆ ನಾಟಕ ಅಡೋ ಪಳೆಂಕರ ಸಹವಾಸಕ್ಕೆ ಬಿದ್ದಾನ ಅಂತ ಕೇಳೇನಿ (ಗಂಗಾಸಾ. ೧೧೨); ಈ ನಮ್ಮ ಪಳೆಂಕ ಏನು ಮಾಡುತಾನೋ ಯಾರಿಗೆ ಗೊತ್ತು! (ಸಮಚೀ. ೫೩೭). **ಪಳ್ಯಂಕ:** ೨. ಒಬ್ಬ ಭೋಳ್ಯಾ ಮುದುಕ ಯಜಮಾನನ ಇಬ್ಬರು ಪಳ್ಯಂಕರು ಗಂಟುಬಿದ್ದು . . . ಮಸಲತ್ತು ನಡಸ್ಯಾರ (ಹೊಸಂಸಾ. ೧೧೮). [?]

ಪಳೆಗನ್ನಡ 'ಪಟಗನ್ನಡ' ನೋ.

ಪಳೆಗರ್ಪಡ (ನಾ). ಹಳೆಯ ಬಟ್ಟೆ: ಪಳೆಗರ್ಪಡಮಂ ಕರ್ಚುವ ಚಳಕದ ಕರಮತ್ತ ಶಸ್ತ್ರಚಾಳನವಿದ್ಯಾಬಳಮತ್ತ (ಸ್ವಪ್ನವಿ. ೧೨-೨೦).

[ಪಳೆ(<ಪಟದು)+ಕರ್ಪಡ]

ಪಳೆಗಾಲ (ನಾ). ತೀರ ಹಿಂದಿನ ಕಾಲ; ಪುರಾತನಕಾಲ: ಪಳೆ[ಪಾಠಾಂ.ಳ]ಗಾಲದಂಬರ ಬೀಳದಂತವನಿಗೆ ನಳನಜನೊಲಿದಾಂಕೆಗೊಟ್ಟು ಕಳಧೌತದ ಕಂಭದಂತೆಸೆದುದು ವಿಯತ್ತಳವ ಚುಂಬಿಸುತಮರಾದ್ರಿ (ಕುರಾಸಾಂ. ೨-೭). [ಪಳೆ(<ಪಟದು)+ಕಾಲ]

ಪಳೆಗೆರ್ಪು, ಹಳೆಕೆರ, ಹಳೆಗೆರಹು (ನಾ). ಹಳೆಯ ಎಕ್ಕಡ; ಜೀರ್ಣವಾದ ಪಾದರಕ್ಷೆ; ಹರಿದ ಮೆಟ್ಟು: ಮಿಱುಪ ಭಕ್ತರ ಕಂಡೊಡವರಡಿಗೆ ಸಂತಸದೆ . . . ವಂದಿಸುತ್ತವರ ಪಳೆಗೆರ್ಪುಗಳನೊಸೆದು ನೆಱೆ ಪೊಲ್ದು ಕೊಡುತೆ (ಅಂಗಾಚ. ೧-೭-೧೧). **ಹಳೆಕೆರ:** ಎರೆಯಿಲ್ಲದಾರಂಬ ದೊರೆಯು ಇಲ್ಲದ ಊರು ಹರೆಯು ಹೋದವಳ ಒಡನಾಟ ನಾಯಿ ಹಳೆಕೆರವ ಕಡಿದಂತೆ (ಸರ್ವಜ್ಞ. ೧೭೩೫). **ಹಳೆಗೆರಹು:** ನಾಯಂತೆ ಕೆಟ್ಟು ಬೊಗುಳುವ ಕುನ್ನಿಗಳ ಬೆಂದ ಬಾಯನಾ ಪುಲ್ಕಸರ ಹಳೆಗೆರಹಿನಿಂ ಹೊಡಸಿ (ವೀರಶೈವ. ೩-೨೩-೧೧).

[ಪಳೆ(<ಪಟದು)+ಕೆರ್ಪು]

ಪಳೆಗೊಂದೆ (ನಾ). ಹಳೆಯ ಎತ್ತು; ಮುದಿಬಸವ: ಪಳೆಗೊಂದೆ ಬಿಳ್ದ ಪೊಸವುಲ್ಲಳ ಪೊದಱೊಳ್ ತನ್ನನೆತ್ತುವವರಿಲ್ಲದೆ ಮೇಂಬ್ಬಳಲುತ್ತಿರ್ದಪುದು (ಸ್ವಪ್ನವಿ. ೧೦-೭). [ಪಳೆ(<ಪಟದು)+ಗೊಂದೆ$_1$]

ಪಳೆಗೊಳ್ಳಿ (ನಾ). ಹಳೆಯ ಕೊಳ್ಳಿ; ಉರಿದು ಆರಿದ ಕೊಳ್ಳಿ: ಪಳೆ[ಪಾಠಾಂ.ಳ]ಗೊಳ್ಳಿಗಳ ಭಸ್ಮದೊಡೆದೊಡುಗಳ . . . ಸುಡುಗಾಡೊಳು (ಚೈಮಿಭಾ. ೩೧-೫೫). [ಪಳೆ(<ಪಟದು)+ಕೊಳ್ಳಿ$_1$]

ಪಳೆಗೊಜಡು (ನಾ). ಹಳೆಯ ಮೋಟುಮರ; ಹಳೆಯ ದಿಮ್ಮಿ,-ಕೊರಡು: ಎಲರೊಲಪಳೆ ನನೆವೋದೆಳಲತೆ ಮೆಲ್ಲನೊಲೆವಂತೆ ಮೊಲು ಪಳೆಗೊಜಡು ಅಲುಗದು (ತ್ರೀಸಾಲ. ೧-೨೨).

[ಪಳೆ(<ಪಟದು)+ಕೊಜಡು(<ಕೊಜಂಡು)]

ಪಳೆಗೋಜಿ (ನಾ). ಹಳೆಯ ಚಿಂದಿ; ಹರುಕಲು ಬಟ್ಟೆ: ಪೊಸ ಮಿಸುನಿಪಸದನವ ಬಿಸುಟು ಬೇಗಡೆಗಱೆಕ್ಷಿಸುವಂತೆ ಪಟ್ಟಾವಳಿಯ ಬಿಟ್ಟು ಪಳೆಗೋಜಿ[ಪಾಠಾಂ. ಲಿ]ಗಂ ಬಸಿದು ಬೀಳ್ವಂತೆ (ಸಂದಿಮಾ. ೨೨-೧೬). [ಪಳೆ(<ಪಟದು)+ಕೋಜಿ$_1$]

ಪಳೆಗೌದಿ (ನಾ). ಹಳೆಯ ಕೌದಿ,-ಹಚ್ಚಡ: ಆರಾದೊಡಿನ್ನೊಂದರುವೆ ಗೊಟ್ಟು ಪಳೆಗೌದಿಯಂ ಬಿಡಿಸರ್ (ಕೂಟ್ಮಬ. ೮-೧೮).

[ಪಳೆ(<ಪಟದು)+ಕೌದಿ(<ಕವುಂದಿ)]

ಪಳೆದುಪ್ಪ, ಹಳದುಪ್ಪ (ನಾ). ೧. ಹಳೆಯ ತುಪ್ಪ: ರಸಿಕಂಗೆ ಪಳೆದುಪ್ಪವೆನಿಡೆದೊಡಂ ಸದ್ಯೋಳ್ಳತಂ ಸೊಗಸನೀಯದೇ (ಪದ್ಮರಾ. ೧-೪೬). **ಹಳದುಪ್ಪ:** ೨. ಔಷಧಿಯಂತೆ ಬಳಸುವ (ಒಂದು ಬಗೆಯ) ಹಳೆಯ ತುಪ್ಪ: ಅದ ಮೈಗಂಡಿಯೊಳು ರಕುತವ ತೋಧಿಸುತ ಹಳದುಪ್ಪವನು ತೊಡೆದಾದರಿಸಿದುದು ವೈದ್ಯಸಂತತಿ ವೀರ ಭಟರುಗಳ (ಕುವ್ಯಾಭೀ. ೬-೪೧). [ಪಳೆ(<ಪಟದು)+ತುಪ್ಪ]

ಪಳೆನುಡಿ 'ಪಟನುಡಿ' ನೋ.

ಪಳೆನೆಲ್ಲು (ನಾ). ಹಳೆಯ ನೆಲ್ಲು,-ಬತ್ತ: ಜಿನ ವನಜಾಕ್ಷ ಮನ್ಮಥ ತಿಲಂ ಪಳೆನೆಲ್ಲು ಪತಂಗ ಪಂಕಜಾಸನ ಮುನಿ ವೃಷ್ಟಿ ಕಾಮಿನಿಯಜಾದಿ ಗಳಿಂತಜಶಬ್ದಮಕ್ಕುಂ (ನಾನಾರ. ೪೮).

[ಪಳೆ(<ಪಟದು)+ನೆಲ್ಲು(<ನೆಲ್)]

ಪಳೆಯ 'ಪಟದು' ಪರಾ.

ಪಳೆಯಾಱು (ನಾ). ಒಂದು ಸ್ಥಳದ ಹೆಸರು: ಪಳೆಯಾಱೊಳ್ಕೇವ ನಾಟನ್ಡಱುದು ಮಡಿಪಿದೊಂ ಪಾಣ್ಡ್ಯನನ್ (ಎಕ. XI, ಚತ್ರದು. ೭೬-೫೬; 937). [?]

ಪಳೆಯುಳಿಕೆ, ಹಳೆಯುಳಿಕೆ (ನಾ). ಹಿಂದಿನಿಂದ ಉಳಿದು ಬಂದುದು; ಪ್ರಾಚೀನ ಅವಶೇಷ: "ಭೂಪದರದಲ್ಲಿ ಸಿಕ್ಕಿ ರಾಸಾಯನಿಕ ಅಥವಾ ಇತರ ಮಾರ್ಪಾಟನ್ನು ಹೊಂದಿದ (ಸಾ., ಚರಿತ್ರಪೂರ್ವಯುಗದ) ಸಸ್ಯ ಅಥವಾ ಪ್ರಾಣಿಯ ಅವಶೇಷವೆಂದು ಗುರುತಿಸಬಹುದಾದ ಪದಾರ್ಥ(ದ): ಪಳೆಯುಳಿಕೆ(ಯ); ಜೀವ್ಯವಶೇಷ(ದ)" (Fossil. ಇಂಕಸಿ); ಈ ಪಳೆಯುಳಿಕೆಗಳೆ ಲುಪ್ತಜೀವಿಶಾಸ್ತ್ರದ ಮೂಲಾಧಾರ (ಪ್ರಾಸಶಾ. ೧೧); ಪ್ರಾಚೀನಮಾನವ . . . ಮಾಡುವ ಕೆಲಸಕಾರ್ಯಗಳಲ್ಲಿ ಕ್ರಮೇಣ ಉತ್ತಮಮಾರ್ಪಾಟುಗಳನ್ನು ಮಾಡಲುಪಕ್ರಮಿಸಿದ್ದ ಎಂಬ ವಿಷಯಗಳು ಅವನು ಬರೆದ ಚಿತ್ರ, ಉಪಯೋಗಿಸುತ್ತಿದ್ದ ಆಯುಧಾದಿ ಪಳೆಯುಳಿಕೆಗಳಿಂದ ವ್ಯಕ್ತವಾಗುತ್ತದೆ (ಕವಿಕೋ. I, ೭೧೧); ಅಂಥ ಒಂದು ಪಳೆಯುಳಿಕೆಗೆ ವಿದೇಶಗಳಲ್ಲಿ ಪ್ರಸಿದ್ಧಿಯೇ? (ಒಂಬಿದ. ೧೪). **ಹಳೆಯುಳಿಕೆ:** ಇವು ಅವಶೇಷಗಳು, ಹಳೆಯುಳಿಕೆಗಳು (ಕಬಸಾ. ೧೨೨).

[ಪಳೆ(<ಪಟದು)+ಉಳಿಕೆ(<ಉಟುಳಿಕೆ)]

ಪಳೆವಾತು 'ಪಟವಾತು' ನೋ.

ಪಳೆವೆಸ (ನಾ). ಹಳೆಯ ಕೆಲಸ; ಹಿಂದೆ ಮಾಡಿದ ಕಾರ್ಯ: ಜಾಣರೆನೆ ಪೂಜಿಪರ್ಗ್ಗ ಪುರಾಣದ ಭಟ್ಟರ್ಗ್ಗ ಪಾತ್ರಪಾವುಳತತಿಗಂ ಮಾಣದೆ ಖಣ್ಡಸ್ಫುಟಿತಶ್ರೇಣಿಯ ಪಳೆವೆಸನ ಪೊಸತು ಮಾಡುವುದಕ್ಕುಂ (ಸೌಇಇ. IX-i, ೧೫೩-೫೭; 1083). [ಪಳೆ(<ಪಟದು)+ಬೆಸ$_1$]

ಪಳೆವೊಳ್ತಲೆ (ನಾ). ಮುಂಜಾನೆ; ಬೆಳಗಿನ ಜಾವ: ಪಳೆವೊಳ್ತಲೆಯೊಳ್ ಸುಂದರವಿಳಸಿತಪದಮಂ ಸಮರ್ಚನಂಗೆಯ್ವುದು ಮತ್ತಳುರ್ದ ನಿಡುನೇಹದಿಂ ಗುಣಿಳಯನ ಪದದೊಳ್ ವಿರಾಜಿಪುದು ನೀನೆಂದಂ (ಹಾಲಾಸ್ಯ. ೧-೪-೧೦೧).

[ಪ ಇದು 'ಪಳೆವೊಳ್ತಱೆ' ಎಂಬುದರ ಅಪಲಿಖಿತವಿರಬಹುದು]

ಪಳ್ಕು 'ಪಟಕ' ನೋ.

ಪಳ್ಕೆ 'ಪಟ್ಕೆ' ನೋ.

ಪಳ್ಕೆವನೆ 'ಪಟ್ಕೆವನೆ' ನೋ.

ಪಳ್ತ 'ಪಟ್ತ' ನೋ.

ಪಳ್ಪಳಿ (ಕ್ರಿ). (?): ದಲಿವಂ, ಪಳಿವಂ, ಹೋ ಹೋ ಪಳ್ಪಳಿವಂ ಜಗದ್ಭಕ್ತಿಕರಕ್ರೀಡಾವಿನೋದಂ ಜಿನಂ (ಶಬ್ದಾನು. ೫೩ ಪ್ರಯೋ). [?]

ಪಳ್ಯಂಕ 'ಪಳೆಂಕ' ನೋ.

ಪಳ್ಳ, ಹಳ್ಳ (ನಾ). ೧. ನೀರಿನ ಸಣ್ಣಪ್ರವಾಹ; ಚಿಕ್ಕ ನದಿ; ತೊರೆ: ಕಂದಮೂಲಫಲಂಗಳಂ ತಿಂದು ತೊಜೆಯ ಪಳ್ಳದ ನೀರ್ಗಳಂ ಕುಡಿದು (ಪಡ್ಡಾರಾ. ೯೦-೨೨); ನೆಂದ ಪಳ್ಳಂಗಳಂ ಪಾಯ್ದುಂ ನೆತ್ತರ ತೊಜೆಗಳಂ ಬಂಬಸಿಯುಂ . . . ಪೋಗಿಪೋಗಿ (ಪಂಪಭಾ. ೧೩-೫೩ ಸ); ಪಲವುಂ ಪಳ್ಳ ಸಮುದ್ರವೈ (ಸೋಮೇಕ. ೧); ಪರಿಮಳದ

ಪನಿನೀರ ಪಳ್ಳಮಂ ಪಾಂಟಲಾಜದ ಬಾಲಮರಾಳಂಗಳಂ (ಗಿರಿಕ. ೨-೬೧ ಪ); ಕೆಜಿ ಕೊಳ ಪಳ್ಳ ಬಾವಿ ಮೊದಲಾದವನೀಂಟಯುಂ (ಹಾಲಾಸ್ಯ. ೧-೯-೬). ೨. ತಗ್ಗಾದ ಪ್ರದೇಶ; ಎತ್ತರವಲ್ಲದ ಜಾಗ: (ಕ). ೩. ತಗ್ಗು; ಗುಂಡಿ: ಎತ್ತೆತ್ತಲುಂ ಪಳ್ಳಕೊಳ್ಳ ಮುಳ್ಳವನಿತಳಂ (ಚಿಪ. ೪೯-೩೧); ಮಡುಗಿಡು ಸರು ದರಿ ಪಳ್ಳಂ . . . ಕುತ್ತುಱು ನಾನಲ್ಲಳೊಳೆದೆವಿದದೋಡಿತ್ತು ಪಂದಿ (ಶಬಶಂ. ೪-೨೩); ಪಳ್ಳದಿಂಬೆ ಕಿಱುದೆಜೆಗೆಜೆಗಳ್ (ಚಕವಿ. ೧-೧೫). ಹಳ್ಳ: ೧. ಮೂಡಲು ಹಳ್ಳನೆ ಮೇರೆ (ಸೌಇಇ. VIII, ೩೭೪-೧೭; 1085); ತೃಷೆಯಾದರೆ ಕೆಜಿ ಬಾವಿ ಹಳ್ಳಗಳುಂಟು (ಸುಹಾದೇ. ಬ. ೭೯-೧೯೯); ಕಾನನದ ಹಳ್ಳದ ಶಿಲೋಚ್ಚಯ ಸಾನು (ಕುವ್ಯಾಅ. ಓರಿಇ. ೧೪-೨೪); ಎಲ್ಲಿ ನೋಡಲು ಸರಿ ಜರಿ ಹಳ್ಳ ಬರೆಗಳು ಕಲ್ಲ ಪಡೆಗಳು ಗುಹೆಗಳು (ಕಂನವಿ. ೧೮-೪೩); ಹನಿಗೂಡಿದರೆ ಹಳ್ಳ, ತೆನೆಗೂಡಿದರೆ ಬತ್ತ (ಗಾದೆ). ೨. ಅವರ ಗದ್ದೆ ಹಳ್ಳದಲ್ಲಿರುವುದರಿಂದ ನೀರು ಯಾವಾಗಲೂ ನಿಂತಿರುತ್ತದೆ (ರೂಢಿ). ೩. ಯಾವ ಆನೆಯು ಶಿರೋಭಾಗದಲ್ಲಿ ಹಳ್ಳವಾಗಿ ಹಿಂಭಾಗದಲ್ಲಿ ಸುಂದರವಾಗಿ . . . ಅತ್ಯಂತ ಮದೋದಕವಂ ಸ್ರವಿಸುವದು (ಸೌಗಂಧಿ. ೨೬೯-೩); ಅವರು ಮನೆಯ ಮುಂದೆ ಚಪ್ಪರದ ಕಂಬ ನೆಡಲು ಹಳ್ಳ ತೋಡಿದ್ದಾರೆ (ರೂಢಿ).

ಹಳ್ಳಕ್ಕೆ ಬೀಳು = ೧. ಗುಂಡಿಯಲ್ಲಿ ಬೀಳು: ತೋಳ ಹಳ್ಳಕ್ಕೆ ಬಿದ್ದರೆ ಆಳಗೊಂದು ಕಲ್ಲು (ಗಾದೆ). ೨. ಮೋಸ ಹೋಗು; ಬೇಸ್ತು ಬೀಳು: ತಿಳಿದೂ ಹಳ್ಳಕ್ಕೆ ಬೀಳುವ ಮೂರ್ಖಳು ನಾನಲ್ಲ (ನಿಶಿಳು. ೬೬). ಹಳ್ಳಗೂಡಿ ಹೋಗು = ನಾಶವಾಗು: ನಾಟಕ ಸಿನಿಮಾ ಧಾಟಿಗಳಲ್ಲಿ ಸಿಲುಕಿ ಹಿಂದಿನ ಸಾಹಿತ್ಯವು ಹಳ್ಳಗೂಡಿ ಹೋಗಬಹುದು (ರೂಢಿ). ಹಳ್ಳ ಹಿಡಿ = ಹಾಳಾಗು; ನಾಶವಾಗು; ಕೆಟ್ಟು ಹೋಗು: ನಮ್ಮ ಧರ್ಮ ಹಳ್ಳಾ ಹಿಡಿದು ಹೋಗ್ತದ ನೋಡ್ರಿ ಬೇಕಾದರ (ಹೊಸಂಸಾ. ೮); ನಮ್ಮಪ್ಪ ಹಟ್ಟಿ ಕೊಟ್ಟ ನೌಕರಿ ಇಲ್ಲದಿದ್ದರ ಹಳ್ಳಾ ಹಿಡೀತಿದ್ದ (ಗಂಮಾಯಿ. ೬೬).

[ದೇ.॥ ತಮಿ. ಪಳ್ಳಮ್; ಮಲ. ಪಳ್ಳ; ತುಳು. ಪಳ್ಳ, ಪಲ್ಲ; ತೆಲು. ಪಲ್ಲ]

ಪಳ್ಳಗಟ್ಟಿ, ಹಳ್ಳಗದ್ದೆ (ನಾ). ತಗ್ಗಾದ ಪ್ರದೇಶದಲ್ಲಿರುವ ಗದ್ದೆ; ತಗ್ಗಿನ ಗದ್ದೆ: ಇಪಗೊಣ್ಡನ ಒರೆಯ್ಗೆ ಪೊಟ್ಟ ಕಟ್ಟದ ಕೊಡಗಿ ಪಳ್ಳಗಟ್ಟಿ ನಾಲ್ಗಣ್ಡುಗ (ಎಕ. IV, ಹುಣಸೂ. ೧೧-೧೦; 1020). ಹಳ್ಳಗದ್ದೆ: ಹಳ್ಳಗದ್ದೆಗಳಾಗಿ ಕುಳ್ಳವೆರಡೆತ್ತಾಗಿ ಬಳ್ಳಿ ಗುಣದವಳು ಸೊಸೆಯಾದರಾ ಮನೆಗೆ ಬಳ್ಳದಲಿ ಹೊನ್ನು (ಸರ್ವಜ್ಞ. ೧೭೧೬).

[ಪಳ್ಳ + ಗಟ್ಟಿ]

ಪಳ್ಳನೆ (ಅ). ಒಂದು ಅನುಕರಣಾವ್ಯಯ; ತಟ್ಟನೆ; ಕೂಡಲೆ; ಇದ್ದಕ್ಕಿದ್ದಂತೆ: ಜನಕಜೆಗಾಸೆಗೆಯ್ಯೆ ಸುಕೃತಕ್ಷಯದಿಂ ಜಲವರ್ಷವಿದ್ಯೆ ಪಳ್ಳನೆ ಪೆಜಪಿಂಗೆ (ಪಂರಾಮಾ. ೧೧-೧೫೬). [ಪಳ್$_0$ + -ಅನೆ$_1$]

ಪಳ್ಳವಳ್ಳಿ 'ಬಳ್ಳಿವಳ್ಳಿ' ನೋ.

ಪಳ್ಳಾಳ್ಗಾಪಂದ (?) (ನಾ). (?): ಸತಿಪನ್ನೆರಾಟ್ಟು ಕಿಱುದೆಜೆಯುಮ್ಮುದು ಪಳ್ಳಾಳ್ಗಾಪನ್ದರು ಎಚ್ಚು ಬಿದ್ದ ಕುತ್ತಟ್ಟುಗಾಮುಣ್ಡರುಮ್ ಬಿದ್ದ ××× ಣ್ಡತ್ತಿ (ಎಕ. XVI, ಸಿರಾ. ೧೨೩-೧೦; 788). [?]

ಪಳ್ಳಿ$_{1,2}$ ಹಳ್ಳಿ$_3$, ಹಳ್ಳಿ (ನಾ). ೧. ಚಿಕ್ಕಊರು; ಗ್ರಾಮ: ಗುವಳಾಲಗೊಣ್ಬುವಾಣರಸ ಆಳೆ ವೇಗೂರಂ ಪೊಂಪುಲಂ ಆಳೆ ತುಜುಕೊಳೆ ಪಳ್ಳಿ ಅರಕ್ಕಮನ್ ತುಜುವಿಟ್ಟು ವಿಷ್ಣುಮಾಮಾನಿ (ಎಕ. X, ಮುಳಬಾ. ೨೬೫-೨; ಸು. 860); ಇಲ್ಲಿಗನತಿದೂರದೊಳ್ ಮಾತಂಗರ ಪಳ್ಳಿಯುರ್ಪುದಲ್ಲಿಗನ್ನಾಳ್ದನೊಡೆಯಂ (ಕಾದಂಬಾ. ೩೩೯); ಖೂಳ ಗೊಲ್ಲರ ಪಳ್ಳಿಯಲಿ ಕಟ್ಟಾಳಲಾ (ಕುವ್ಯಾಸ. ಓರಿಇ. ೧೧-೧೫); ಒಳ್ಳಲುದೆಗೆದಿಹ ಪುರ ಪಳ್ಳಿ ಗ್ರಾಮವ ಹೊಕ್ಕು ಸೂಜೆಯನಾದಿಕೊಳುತ (ಕಂನವಿ ೧೨-೮). ೨. ನೆಲಸುವಿಕೆ; ತಂಗುವಿಕೆ: 'ಪಳ್ಳಿರ್' ಪರಾ. ಹಳ್ಳಿ$_5$: ೧. ಸಾರಥಿಯ ಬಲದಿಂದ ನಾ ನೆಲ ನೀರುಗಳ ಮೇಲಿಂದಲೆ ದೂರದಾ ಹೊಳಲುಗಳ ಹಳಿಗಳ ಸಾರ ಬೇಗನೆ ಹಾಯುವೆ (ಕಪಿಪ. ೨೯-೬). ಹಳ್ಳಿ: ೧. ಹಟ್ಟಿಕಾಱರಿಹ ಹಳ್ಳಿ ಘೋಷಂ (ಮಂಗಾಸಾ. ೫೫-೧೦); ನೀನು ಮೇಣ್ ಗೋವಳರ ಹಳ್ಳಿಯ ಭಟನೋ (ಕುವ್ಯಾಸ. ಓರಿಇ. ೧೧-೩೭); ಮೂರುಮನೆಯ ಹಳ್ಳಿಯಿರಲಿ ಅಲ್ಲೊಂದು ಜಾವಡಿ ಕಾಣಲೇ ಬೇಕು (ಗಾಳಿಗು. ೧); ಒಳ್ಳಿಯವರ ಮಾನ ಹಳ್ಳಿಯಲ್ಲಿ ಹೋಯಿತು (ಗಾದೆ).

ಹಳ್ಳಿಪಳ್ಳಿ (ಕೂಡುನುಡಿ): ನಾಟ್ಯಕಲೆಯು ಹಳ್ಳಿಪಳ್ಳಿಗಳಲ್ಲಿ ಇದೀಗ ಹೆಚ್ಚಾಗಿ ಬೆಳೆಯುತ್ತಾ ಬಂದಿದೆ (ಅಮಗಾಂ. IV, ಮುನ್ನುಡಿ); ಹಳ್ಳಿಪಳ್ಳಿ, ಮನೆಮನೆಯಲ್ಲಿ ಜನದ ಮಾತೇ ಮನದ ಮಾತಾಗಬೇಕು (ವಿಚಾಮಂ. ೧೯); ಅಟವೆಂದರೆ ಸುತ್ತಿನ ಹಳ್ಳಿಪಳ್ಳಿಗಳಿಂದ ಜನರು ಬರುತ್ತಿದ್ದರು (ಕುಟ್ಟಿಹ. ೮೩). ಹಳ್ಳಿಯ ಗೌಡ = ೧. ಚಿಕ್ಕ ಊರಿನ ಪಟೇಲ. ೨. ಗ್ರಾಮಾಣ; ಗಾವಿಲ; ಹಳ್ಳಿಗ: ಗೌಡದೇಶದ ರಾಯನಿವನೆನೆ ಹಳ್ಳಿಯ ಗೌಡನೆಂದೆಣಿಸಿ ಸಾಗಿದಳು (ಭರಚಿ. ೫೫-೯೩).

[ದೇ.॥ ತಮಿ. ಮಲ. ಪಳ್ಳಿ; ತುಳು. ಹಳ್ಳಿ; ತೆಲು. ಪಲ್ಲಿ, ಪಲ್ಲೆ; ತೊದ. ಪೊಳಿ./ಸಂ. ಪಲ್ಲಿ, ಪಲ್ಲೀ]

ಪಳ್ಳಿ$_2$ (ನಾ). (ಕರಾ) ಒಂದು ಬಗೆಯ ಆಟ; ಇಬ್ಬರು ಹುಡುಗರಲ್ಲಿ ಒಬ್ಬನ ಎಡಗೈಯನ್ನು ಇನ್ನೊಬ್ಬನು ತನ್ನ ಎಡಗೈಯಿಂದ ಹಿಡಿದು, ಇತರರು ಬಿಡಿಸಲು ಯತ್ನಿಸಿದರೆ ಸಾಧ್ಯವಾಗದಂತೆ ಬಿಗಿಯಾಗಿ ಹಿಡಿದು ಆಡುವ ಆಟ: ಪಳ್ಳಿ ಅಡಿದರೂ ತಳ್ಳಿ ಬಿಟ್ಟು ಹೋಗದು (ಗಾದೆ). [← ತುಳು. ಪಳ್ಳಿ]

ಪಳ್ಳಿಕೆ (ನಾ). (?): ಖಣ್ಡಸ್ಫುಟಿತಮುಮುತ್ತಮನೈವೇದ್ಯಮನು ದಿನಂ ಸಲ್ವೆನಗಂ××× ಸ್ವಾಶ್ವರಮಾ ಬಳಿಯ ಪಳ್ಳಿಕೆದ ಸಮನೊನ್ದಂ (ಎಕ. VII (S), ಶಿಕಾರಿ. ೬೪೫-೪; ಸು. 1100). [?]

ಪಳ್ಳಿಕಾಱ, ಹಳ್ಳಿಕಾರ, ಹಳ್ಳಿಕಾಱ (ನಾ). ೧. ಹಳ್ಳಿಯವನು; ಗ್ರಾಮವಾಸಿ: ಗಾವುಣ್ಡ ಕಾಡಿಯಣ್ಣಜ್ಜಿ ಮೂಗಣ್ಡುಗಜ್ಜಟ್ಟಿ ಪಳ್ಳಿಕಾಱ ತುವಣ್ಣಜ್ಜಿ ಮೂಗಣ್ಡುಗಜ್ಜಟ್ಟಿ (ಸೌಇಇ. IX-i, ೨೬-೧೫; 950); ಆ ಪಳ್ಳಿಕಾಱನಂ ಕೂಡಿಕೊಂಡು ಅಲ್ಲಿಗೆ ಬಂದು (ಧೃರಸಾ. I, ೨೮೨). ಹಳ್ಳಿಕಾರ: ೧. ಹಳ್ಳಿಕಾರನಲ್ಲ ಹಾದಿಕಾರನಲ್ಲ ಭದ್ರ ಚಿನ್ನಮ್ಮ ಮಗನಲ್ಲೇ ಜಾಣೆ (ನಾಪದ, ೩೮). ೨. ದನಗಳಲ್ಲಿ ಒಂದು ಉತ್ತಮವಾದ ತಳಿ: ಅವರ ಮನೆಯಲ್ಲಿರುವುದು ಹಳ್ಳಿಕಾರ ಜಾತಿಯ ಹಸು (ರೂಢಿ). ಹಳ್ಳಿಕಾಱ: ೧. ಧರಣಪಾಲರ ಮಧ್ಯದಲಿ ಭಾಸ್ಕರನು ಗಡ ತುಜು ಹ[ಪಾಕಾಂ.ಪ]ಳ್ಳಿಕಾಱರ ಪುರದ ಭಾಸ್ಕರನೇಕನಲ್ಲಾ (ಕುವ್ಯಾಸ. ೮-೧೭); ಹಳ್ಳಿಕಾಱನ ಕುಜುಹ ಕವಿಕವಿಯೆನುತ ಪೋಎಂದುಬ್ಬಿ ಬೊಬ್ಬಿಱಿದು (ತೊರರಾ. ೩-೩-೮); ಹಳ್ಳಿಕಾಱರು ಕಾಣುತೀ ಪರಿ ತಲ್ಲಣಿಸುವಲ್ಲಿ (ನಿಭಾಗ. ೩-೮-೧೮). [ಪಳ್ಳಿ$_1$ + -ಕಾಱ]

ಪಳ್ಳಿಕೂಟ (ನಾ). ಹಳ್ಳಿಯ ಪಾಠಶಾಲೆ; ಗ್ರಾಮದ ಸ್ಕೂಲು: ಎಲ್ಲಾ ಪಳ್ಳಿಗಳೊಳಂ ಪಳ್ಳಿಕೂಟಂಗಳ ಕಲ್ಪಿಸಿಯುಂ (ಮರಾಚಿ. ೧೦೭-೩೬); ಆ ಗ್ರಾಮದ ಪಳ್ಳಿಕೂಟ(School)ದ ಅಯ್ಯನವರಿಗೆ ತನ್ನ ಮಕ್ಕಳಿಗೂ ವಿದ್ಯಾಭ್ಯಾಸ ಮಾಡಿಸೆಂದು ಮೊರೆಬಿದ್ದಳು (ಕಭವಿ. ೪೨೬). [ಪಳ್ಳಿ$_1$ + ಕೂಟ$_1$]

ಪಳ್ಳಿಗ, ಹಳ್ಳಿಗ (ನಾ). ೧. = ಪಳ್ಳಿಕಾಱ ೧: ಕಳ್ಳರುಮೊಡೆಯರುಮೊಂದಿರೆ ಪಳ್ಳಿಗರೇಗೆಯ್ವರೆಂಬ ನುಡಿಗೆಡೆಯಟ್ಟಿರ್ (ಚಕವಿ. ೬-೨೫೬). ಹಳ್ಳಿಗ: ೧. ಇವಲ್ಲ ಹಳ್ಳಿಗರಿಂದ ಬಂದ ಕಾಣಿಕೆಗಳಾಗಿದ್ದವು

(ಹಬ್ಬಬ. ೨) ; ಈ ರತ್ನವನ್ನು ಒರ್ವ ಕಗ್ಗ ಬಡ ಹಳ್ಳಿಗನ ಕೊರಳಲ್ಲಿ ಕಟ್ಟುವ ಪ್ರಸಂಗವು ಒದಗಿದೆ (ಪರಿಶಿ. ೫) ; ಇನ್ನು ಮೇಲಾದರೂ ಹಳ್ಳಿಗರನ್ನು ತಿದ್ದುವ ಕೆಲಸವನ್ನು ಕೈಗೊಳ್ಳುವುದು ಒಳ್ಳೆಯದು (ಹುಟ್ಟಹ. ೧೮೬). ೨. (ಆಲಂ) ದಡ್ಡ ; ಹೆಡ್ಡ : ಯಾವನೋ ಹಳ್ಳಿಗನು ಅದನ್ನು ಪ್ರತಿಲಿಪಿಗೊಳಿಸಬೇಕೆಂದು ಕಾಣುತ್ತಿತ್ತು (ಬಾಣಅ. ೨೦೨). [ಪಳ್ಳಿ$_1$ + –ಇಗ]

ಪಳ್ಳಿರ್ (ಕ್ರಿ). ತಂಗು ; ನೆಲಸು : ಪಳ್ಳಿರಲ್ಕೆಂದವರ್ಗೀವುದೊಳ್ಪು ನಿಲೆ ಕಂಬಿ ನೆಗಟ್ಟೆಯ ಪಾರಣಾಸಿ (ಪಂಪಭಾ. ೯–೪೩). P 'ಇರಲ್ಕೆ ಪಳ್ಳಿ' ಎಂದು ಅನ್ವಯ ಮಾಡಿದರೆ ಈ ಪದದ ಅಸ್ತಿತ್ವಕ್ಕೆ ಅಡ್ಡಿ ಬರುತ್ತದೆ ಎಂಬುದು ವಿಚಾರಣೀಯ. [ಪಳ್ಳಿ$_1$ + ಇರ್$_1$]

ಪಳ್ಳಿವರ್ (ಕ್ರಿ). (ಆಲಂ) ಗುಂಪುಕೂಡಿ ಬರು ; ಒಟ್ಟಾಗಿ ಬರು : ಮುನಿನಿಂದ್ರಂಗೆ ಸುರಾಂಗನಾತತಿ ಸುರೇಂದ್ರಾವಾಸದಿಂ ಪಳ್ಳಿವಂದು ನಿತಾಂತಂ ನೆರೆದರ್ದುರಂಬರದೊಳ್ (ಧರ್ಮಾಮೃ. ೮–೧೯೫).

[ಪಳ್ಳಿ$_1$ + ಬರ್ (<ವರ್)]

ಪಳ್ಳಿವೋಗು (ಕ್ರಿ). (ಆಲಂ) ಗುಂಪಾಗಿ ಹೋಗು ; ವಲಸೆ ಹೋಗು : ವನಜಾನೀಕಮೆ ಪಳ್ಳಿವೋಪ ತೆಱದಿಂ ಕಿಟ್ಟೆರ್ದು ಭೂಪಂ ಶಪೋವನಮಂ ಪುತ್ರಕಳತ್ರಮಿತ್ರಸಹಿತಂ ಪೊಕ್ಕಂ (ಅಜಿಪು. ೪–೮೩) ; ಆ ಬಾಲೆ . . . ನೂರ್ಮಡಿ ಸುಡುವ ವಿರಹಪರಿತಾಪಕ್ಕೆ ಕಣ್ಣಳೆಡೆ ನಾಳ್ಕಡಿ ವೋದಂತೆಯುಂ ಪ್ರಾಣಂಗಳ್ ಪಳ್ಳಿವೋ[ಪಾತಾಂ.ಳ್ತೀರೊಡೆ]ದಂತೆಯುಂ . . . ಮುಚ್ಚೆವೋಗಿರ್ಪುದುಂ (ಲೀಲಾವ. ೧೦–೭೦ ಪ).

[ಪಳ್ಳಿ$_1$ + ಪೋಗು$_1$(<ಪೋ$_1$)]

△ **ಪಱಗು** (ಕ್ರಿ). ಭೂಮಿಯನ್ನು ಹರತೆ ಹೊಡೆ ; ಹರಗು. ಪಱಗ ಕೊಳ್ = (ಆಲಂ) ಮೂಲೋತ್ಪಾಟನ ಮಾಡು ; ನಾಶ ಮಾಡು : ಪಡೆಮುಚ್ಚೆ ಗಂಡ ಮಾರ್ಕ್ಕೊಳ್ವರ ಗಂಡ ಬ[ಂ]ಟಿಸಾಸಿರ್ವರ ಬಣ್ಣಮಾಸಳೆಯ ಬಂಮಂ ತುಱುವ ವಗುಂದಿ ಪಱಗ ಕೊಂಡು ಸುರಲೋಕ ಪ್ರ[ಪ್ರ]ನಾದಂ (ಕಾ. II, ೧೭೬–೫ ; 1126). [<ಪರಗು]

ಪಱಣೆ 'ಪಱುಣೆ' ನೋ.

ಪಱಪಱುಸು (ಕ್ರಿ). ಸ್ಪರ್ಧಿಸು ; ಪೈಪೋಟಿ ಮಾಡು ; ಮೇಲಾಟ ಹೊಡು : ಬಱುದೆ ಪಱಪಱುಸಿ ನೆಱೆ ಬೆಟ್ಟಱಬೆಱತುಱೆ ಅಡಕಣ ಬಾಯಿ ವೋಱೆಮಾಡಿ ಕಿ[ಱು]ಧೆ ಮಾಂನ್ಡಪನೆ ಸುಭಟಚೂಡಾರತ್ನ ಕಕ್ಕ ಭೂಪಾಳಕನು (ಸೌಇ. XI–ii, ೧೭೮–೨೫ ; 1127) ; ಪಱಪಱುಸುವ ಭೂಪಾಲರನದಿದೆನ್ನದೆ ತತ್ತಱದಱುದು (ವೀರೇಶ. ೧–೨೫).

[ಪಱಪಱು + –ಇಸು$_3$./P. ತಮಿ. ಪಱಪಱ = ಅವಸರಪಡು, ಆತುರಗೊಳ್ಳು]

ಪಱಪಱುಸುಹ (ನಾ). ಸ್ಪರ್ಧಿಸುವಿಕೆ ; ಪೈಪೋಟಿ ; ಮೇಲಾಟ : "ಸ್ಪರ್ಧಾ, ಸಂಘರ್ಷಃ—ಈ ೨ ಪಱಪಱುಸುಹ" (ಹಲಾಯು. ೧೩೦–೧೦೧). [ಪಱಪಱುಸು + –ಹ$_2$(<–ಪ$_2$)]

ಪಱಮೆ, ಪರಮೆ$_1$, ಪಱವೆ (ನಾ). ೧. ದುಂಬಿ ; ಭ್ರಮರ : "ಅಲರ್ಮಕ್ಕಿ, ಬಂಡುಣಿ, ಪಱಮೆ . . . ಮುಯ್ಯೀರ್ದಿ–ಈ ೭ ಭ್ರಮರಂ" (ಕಶಸಾ. ೫೫–೧೯೮) ; ಪಪ್ಪಳಮಾಗಿರೆ ಪಱಮೆಗಳುಪ್ಪಯಣಂಗೆಯ್ದುವಂದು ಪೊಸಮಲ್ಲಿಗೆಯೊಳ್ (ಅಜಿಪು. ೬–೨೧) ; ಪಱಮೆಗಳ ಕಪ್ಪಿನಿಂದಂ ಮಿಱುಗುವ ಕೆಂದಳದ ಕೆಂಪಿನಿಂದಾವಿಳಮಾಗುಱೆ ಚಿತ್ರಿಸಿದಂತಾದಂ ಮೆಱೆಗುಂ ಪಿರಿದಪ್ಪ ಪುಷ್ಪಮಾಲಾನಿವಹಂ (ಜಾಧಪು. ೧–೧೩೦) ; ಗಂಧಕೆ ಪದೆದೆಱುವ ಪೊಸಪಱಮೆಗಳ ಪಸುಳೆಯಿಂಚರಮೊಪ್ಪುದುವು (ಜಯಕಾ. ೯–೪) ; ಪಱಮೆಯಂತೆ ಕರ್ಪಿಡಿದ ಮುಂಗುರುಳುಂ (ಅದ್ಭುತ. ೮–೧೨). **ಪರಮೆ$_1$** : ೧. ಅಲ್ಲಿಗಲ್ಲಿಗೆ ಪರಮೆಯರಗಿದೊವುಲ್ಲಾಸದೊಳು (ಕರಿ. ೬೯–೩) ; ಪರಮೆಗಳ ಸೇಣಿ ಹರಿನೀಲಮಣಿತೋರಣದ ಸಿರಿವಡೆಯೆ (ಶೇಷರಾ. ೭–೩೧ ;) ತುಂಬಿ ಮೊರೆದು ಪರಮೆಯನು ಕರೆಯುತಿದೆ ತುಂಬುಬಾಳಿಗಾಗಿ (ಹೃದಸ. ೫೨–೯). **ಪಱವೆ** : ೨. ಹಕ್ಕಿ ; ಪಕ್ಷಿ : ಪಱವೆಗಳೋಟದ ಆ ಋಜುಪಥಮನ್ . . . ಈಗಳ್ ಇದೆ ಕೊಳ್—ಇಟುವೆನ್ (ಬದ್ಧಪ್ರ. ೧೬–೩೨೬) ; ಬೀಸುತೆ ಪುರಿನೇಣ್ ಪೆಱೆದಾ ಬಲೆಯನ್, ಪಿಡಿವನ್ ತಿಳಿಬಾನ್ ಪಱವೆಗಳನ್ (ಅರಿಕೇಸ. ೧೬–೩೨೨).

[ದೇ.॥ ತಮಿ. ಪಱವೈ ; ಮಲ. ಪಾಱ = ಪತಂಗ]

ಪಱಮೆವಸುಳೆ (ನಾ). ದುಂಬಿಯ ಮರಿ ; ಮರಿದುಂಬಿ : ಮುನಿನಿವಹದ ಸದಪಂಕಜಕೆಱುವೆನಾಂ ಪಱಮೆವಸುಳೆಯಂತೆ (ಜಯಕಾ. ೧–೧೦). [ಪಱಮೆ + ಪಸುಳೆ]

ಪಱಮೆವಱು (ನಾ). = ಪಱಮೆವಸುಳೆ : ಪರಸ್ಪರಬೆಟ್ಟದ ಕಪ್ಪದ ಕರಿಗಳ ಮದಜಳಮನುಂಡು ಕಂಪೇಱುದ ತದ್ಧರಣೀಶಗೃಹಾಂಗಣದೊಳ್ ಪಱುವಱುಯಾಡುವುವು ಪಱಮೆವಱುಗಳ ಬಳಗಂ (ಚಂದ್ರಪು. ೬–೩೩) ; ಪರಿಮಳಕ್ಕೆ ಪಱುಮಱುಯಾಡುವ ಪಱಮೆವಱುಗಳ ಝುಂಕಾರಸಾರದಿಂದತಿವಿಚಿತ್ರಶೋಭೆವೆತ್ತಿರ್ಪುದು (ಶುಸುಮಾ. ೨–೭೧ ಪ) ; ನಱುಗಂಪಿಗಾಸೆವೆಟ್ಟೆಱಗಲಾಱದೆ ಪಱಮೆವಱುಗಳಾಡುತ್ತಿರಲು (ಸೌಂದಪು. ೩–೨೫) ; ಬಂಡಿನಲರ್ವುಡಿಯಿಂ ಪೊರೆದ ಪಱಮೆವಱುಯಂ (ರಾಮಾಶ್ವ. ೫೨–೨೬).

[ಪಱಮೆ + ಮಱು]

ಪಱಮೆವಿಂಡು (ನಾ). ದುಂಬಿಗಳ ಗುಂಪು ; ಭೃಂಗಗಳ ಸಮೂಹ : ಮಗಮಗಿಪ ಮೈಗಂಪು ಪಱಮೆವಿಂಡಂ ಸಾಲಿಡಿಸೆ ದಿಟ್ಟಗೇ ನೆಸೆದಳೋ (ಪದ್ಮಂಗಾ. ೩–೩೧) ; ಮಿಱುದ ಕಮ್ಮಲರ್ಗಳ ದೇವಾರ್ಚನೆಗೇಱುಸಗೊಡದೆಯೆಂಜಲಿಸಿ ಹೇಱುದ ಪಱಮೆವಿಂಡುಗಳ ಬಂಧಿಸಿದಂತೆ ನೇಱುಲ ಪಣ್ಣೊಪ್ಪಿದುವು (ಮೋಕತ. ೨೪–೪೫). [ಪಱಮೆ + ಪಿಂಡು$_2$]

ಪಱಲೆ, ಹರಲೆ, ಹಱಲೆ$_1$ (ನಾ). ಅಪವಾದ ; ನಿಂದೆ : ಶಶಿಕಾಂತದ ಪರಲೆಯಿನೊಸರ್ವ ಕೊಳದ ಸುಭಗತೆಯಿಂ ಪಱಲೆಯನುಱೆ ಪಾಱುಸುವುದು ನಂದನಕಾ ನಂದನದಿರವು (ಜಯಕಾ. ೧–೪೬). **ಹರಲೆ** : ಹರಲೆ ನಿನ್ನ ಬದುಕಾಯಿತು (ತ್ರಿಕೃಪಾ. ೩೪) ; ಕ್ಷುದ್ರಜನರು ನಿರರ್ಥಕವಾಗಿ ನಿಮ್ಮ ಹೆಸರಿನಿಂದ ಹರಲೆ ಮಾಡುತ್ತಾರೆ (ಸ್ಕೂಲಮಿ. ೧೪೮). **ಹಱಲೆ$_1$** : ಹಱಲೆಯೊಳು ತಂದಿಕ್ಕಿತೆನ್ನ ಡಂಬಿನ ಭಕ್ತಿ (ತಿರುಪ. ದೇ. ೨೧–೧೭) ; ಎಂದೆಂದಿಗ್ನೀ ತಲೆಗೆ ಹಱಲೆ ಬಪ್ಪುದೆಂದವನೇಳ್ವ ವೇಳೆಯೊಳು (ನೇಮಿಸಂ. ೧೮–೮೭) ; ಎಮ್ಮ ತಲೆಗೆ ಹಱಲೆಯು ತರ್ಪುದುಚಿತವೇ (ಸಮ್ಯಕ್ತ. ೧೦–೩).

[<ಪಱ$_2$?]

ಪಱವೆ 'ಪಱಮೆ' ನೋ.

ಪಱು$_1$, ಪರಿ$_1$, ಹರಿ$_1$, ಹಱು$_1$ (ಕ್ರಿ). ೧. ಕಡಿ ; ಕತ್ತರಿಸು ; ತುಂಡುಮಾಡು : "ಪಱು—ವಿಚ್ಛಿತ್ತೌ (ಹರಿ), ಭೂಸಹೇ ಚ" (ಶಬಧಾ) ; ಪಱುದು ಬಿಸುಟ ಕುಂತಳಂಗಳಂ ಪುತ್ತಿನೊಳಗೆ ಮಡಗಲೆಂದು ಕಯ್ಯಂ ಕುತ್ತಿದೊಡೆ (ಜಾಪುಂಪು. ೧೬) ; ತನ್ನ ಜಗದ್ವಿಲಾಸ ಸಾಕಾದಡೆ ಮತ್ತೆ ತಾನೇ ಪಱುವನದಱ ಮಾಯಾಪಾಶವನು (ಮಹಾದೇವ. ಬ. ೧೦–೪); ಕೊರಲ ಕಂಠಕೆಯಂ ಪಱುದು (ಜಯಕಾ. ೨–೩೭). ೨. ಕತ್ತರಿಸಿ ಹೋಗು ; ತುಂಡಾಗು ; ಸೀಳಿಹೋಗು : ಮುಳಿದು ತನಗರ್ಳ್ಕಮೆತ್ತಿದ ತಳಿಗೆಯೊಳಿಡೆ ತಿಱುದ ತೆಱದೆ ತಲೆ ಪಱುದಾಗಳ್ ಕಳಕಳಿಸಿ ನಗುತಮಿರ್ದುದು (ಪಂಪಭಾ. ೬–೩೪) ; ಪಱುದ ಶಿರಂಗಳಿಂ ಕೆದಱಬಿದ್ದರ್ ಗಜಂಗಳಿಂ (ಎಕ. VIII, ೩೧೯. ೧೦೯–೨೬ ; 1042); 'ಪುರಹರಂ ಪೊಡೆಯೆ ತೋಳ್ಪಱದ ಭೀಕರಗಜಾಸುರನೋ (ಜಚಕಾ. ೬–೨೦) ; ಕೈ ಪಱುದ ಗಜೇಂದ್ರನಂತೆ ಬರುತಿರ್ದುದು ಭೀಕರನೊಂದು ಸೂಕರಂ (ಕಾವ್ಯಸಾ. ೧೧೧೨). ೩. ಬಲವಂತದಿಂದ ಕೇಳು ; ಕೆತ್ತು ಹಾಕು ;

ತರಿ : ನನೆಗಳ ಗೊಂಚಲಂ . . . ಸೊನೆ ಸುರಿವನ್ನೆಗಂ ಪಱಾದು ನೋಯಿಸಿ ಕಾಡಿದೆವು . . . ಮೃದುಪುಷ್ಪಸ್ತಬಕಂಗಳಂ ಪಱಾದೆವು (ಅದಿಪು. ೧೧-೧೩೦). ೪. ಕಿತ್ತುಹೋಗು ; ಜಗುಳು : ಉಡೆವಣಿ [ಪ][ಪಾಠಾಂ.ವ]ಱಾಯದ ಮುನ್ನಮೆ ತೊಡಗಿ ಚಲಂ ನೆಗಳ್ (ಪಂಪಭಾ. ೧-೪೬). ೫. ಬೇರೆಯಾಗು ; ಬೇರ್ಪಡು : ಕೇಡ ತೊಡರಿಂದೆ ನಾನ್ ಪಱಾದು ಬಿಡುಗಡೆಯನಾನಲ್ಕೆ ಪಕ್ಕುಂಟು ನನಗೆ (ಅಂತಿಗೊ. ೧೯-೩೮೮). ಪರಿ₁ : ೬. ಪರಿಹರಿಸು ; ನಾಶಮಾಡು : ಚಿಂತಾತತಿಯನು ಪರಿದಿಟ್ಟನೋಯೆನಲ್ . . . ಮೂಡಲೊಳು ಮುಂಬೆಳಗು ತೋರಿದುದು (ವೆಂಕಾರಾ. ೫-೫-೨೪). ಹರಿ₁ : ೧. ಸೆರೆಯ ಹರಿ. ಅರಿಯನಿರಿ ಹುಟ್ಟಳಿಸು ಹುಡಿಯಲ್ಲಿ (ಪಾಂಚಜ. ೫-೮). ೩. ಅದಾವ ಪುಷ್ಪಗಳೋ . . . ಬಾಗಿ ಒಂದೆರಡನ್ನು ಹರಿದುಕೊಂಡೆ (ಚಿಂದುಟ. ೧೫). ೭. ನಾಶವಾಗು ; ಹಾಳಾಗು : ದೇವರು ಒಲಿದರೆ ಜೇಡನ ಬಲೆ ಸಹ ಪೊರೆವುದು ಕೋಟೆಯ ಹಾಗೆ ಮುನಿದರೆ ಹರಿವುದು ಕೋಟೆ ಕೊತ್ತಳ ಸಹ ಜೇಡರ ನೂಲಿನ ಹಾಗೆ (ಇಂಜಾಪ. ೨೧೦-೪೦). ಹಱಾ₁ : ೧. ಹಱಾಯನೆ ದಾಸನ ವಸ್ತ್ರವ ಉಣ್ಣನೆ ಚೆನ್ನಯ್ಯನ ಸಂಗಾತ (ಬಸವ. ೪೩೨) ; ನಿಱಾಯುಡಿಗೆಯಲಿ ಮಲ್ಲಗಂಟನ ಸೆಱಗ ಮೋಹಿಸಿ ಬೆರಳ ದರ್ಭೆಯ ಹಱಾದು ಬಿಸುಟನು (ಕುಸ್ಯಾದ್ರೋ. ೯-೧೫). ೮. ತೀರು ; ಮುಗಿ : ನೂಱನೋದಿ ನೂಱ ಕೇಳಿದರೇನು ಆಸೆ ಹಱಾಯದು ರೋಷ ಬಿಡದು (ಬಸವ. ೬೫೩) ; ಎನ್ನ ಕರ್ಮ ಹಱಾಯಿತ್ತು (ಬಸವ. ೭೯೩).

ಪಱಾವಱಾ₁ (ದ್ವಿರುಕ್ತಿ) : ತನ್ನ ಭೀಕರಗದಾಘಾತದೊಳ್ ಜಾಱಾ ಪಱಾವಱಾದು ಪೆಱಗೆಡೆದು ತಾಱವಱಾದ ಕಾಂಭೋಜಾವಳಿಗಳ . . . ಕೈಗುತ್ತಿ ನೋಡಿಯುಂ (ಗದಾಯು. ೬-೨೮ ಪ). ಪಱಾದಿಕ್ಕು = ಚೂರು ಚೂರು ಮಾಡು ; ಧ್ವಂಸ ಮಾಡು : ಪಱಾದಿಕ್ಕಿ ಮೋಹ ಪಾಸದ ತೊಡರಂ (ಎಕ. II, ೧೪೧-೬೭ ; 1139) ; ಪೊಱಗಣ ಮಾಯಾಭ್ರಮೆಯಂ ಪಱಾದಿಕ್ಕಿ (ಶಬಶಂ. ೨-೯೫) ; ಪಿರಿಯ ಅವಶೇಷಗಳನ್ ಪಿಕ್ಕಿ ಪಱಾದಿಕ್ಕುವುದು (ಬದ್ಧಪ್ರ. ೫೫-೧೧೮೭). ಪಱಾದಿಡು, ಪರಿದಿಡು = ಕಿತ್ತು ಹಾಕು ; ನಾಶ ಮಾಡು : ಪಱಾದಿಟ್ಟ ದಿಟ್ಟಿಯ ಬಳಿಕೊರ್ವನ ಕಾಲ ಮುಱಾದಿಟ್ಟ (ಮೋಹತ. ೧೨-೩೭) ; ಸವತಿಯರಿರ್ವರುಮಿಾ ಕೃತಿಗೇಳೆ ಬೇರ್ವರಿದಿರ್ಪ ವೈರದ ಬೇರ ಪಱಾದಿಟ್ಟರ್ವರೊಂದೆನಿಸಿಯೊಪ್ಪುವರು (ಹರಿಪ. ೧-೫೯) ; ಚಿಂತಾತತಿಯನು ಪರಿದಿಟ್ಟನೋಯೆನಲ್ . . . ಮೂಡಲೊಳು ಮುಂಬೆಳಗು ತೋರಿದುದು (ವೆಂಕಾರಾ. ೫-೫-೨೪). ಪಱಾದು ಪತ್ತಿಸು = ಹರಿದು ಮತ್ತೆ ಅಂಟಿಸು ; ತದ್ರೂಪವಾಗಿಸು : ಚುಂಬಿಸಿದರ್ ಸ್ಮರನಿರ್ದು ನಾಂಗುಲೀಕದ ಕುಸುಮಂಗಳಂ ಪಱಾದು ಪತ್ತಿಸಿದಂತೆವೊಲೊಪ್ಪಿ ತೋರ್ಪಿನಂ (ಕಾವ್ಯಸಾ. ೬೬೬ ರೂಪ್ರಕ) ; ವಸುದೇವನ ದೇಹಮನಗೆವೊಯ್ದಂತೆಯುಂ ಪಱಾದು ಪತ್ತಿಸಿದಂತೆಯುಂ ಮೊಕ್ಕಳಮಿಾ ಮಕ್ಕಳೇಕಾದುವೆಂದು ಬೆಕ್ಕಸಂಬಟ್ಟು ನೋಡೆ (ಅರ್ಧನೇ. ೫-೨ ಪ). ಪಱಾಪಟ್ಟಿ ಮಾಡು = ಪಱಾದಿಕ್ಕು : ಇಱಾದರು ತಱಾದರು ಕೊಱೆದರು ಮೂಗನು ಜರಿಟೋಪಿ ಜೋಡುದಗಲೆಯ ಪಱಾಪಟ್ಟ ಮಾಡಿ ರಾವುತರ ಮೈಯಲಿ ಬಲುಸುರಗಿಗಳನು ಸೆಕ್ಕಿದರು (ಕಂನವಿ. ೬-೬೮). ಹರಿದರೆ ಹತ್ತುವ = ಒಂದು ಬಗೆಯ ಔಷಧಿಸಸ್ಯ : ಹರಿದರೆ ಹತ್ತುವನ ಸಹಮೂಲವಂ ಮೊಸರಿನಲ್ಲರೆದು ನುಂಗಿಸಲು ಹೊಟ್ಟೆಬೇನೆ, ಗ್ರಹಣಿ ಸಹ ನಿಲ್ಗುಂ (ಸಕವೈ. ೩೫೩). ಹಱಕೊಳ್ಳು, ಹರಕೊಳ್ಳು = ಹರಿದುಕೊಳ್ಳು ; ಕಿತ್ತುಕೊಳ್ಳು : ಬರುತೇನು ತಂದೆ ಬಱಾಗೈಲಿ ಬಂದೆ ಪರನಿಂದೆಗಳ ಕಟ್ಟ ಹಱಕೊಂಡೇನೆಂದೆ (ಪುರಂದ. ೨-೫೩-೧) ; ಕುದುರೆಯು ಕಟ್ಟದ ಹಗ್ಗವನ್ನು ಹರಕೊಂಡು ಓಡಿ ಹೋಗಿತ್ತು (ಮುಂಬಯಿ. ೪-೭೯) ; ಜವರಾಯ ಬಾಳೆಯ ಸುಳಿಯ ಹರಕೊಂಡ (ನನ್ನೂರು. ೧೩೫) ; ಅವನನ್ನು ಹರಕೊಂಡು ತಿಂಬುವ ಹಾಗೆ ನೋಡುತ್ತದೆ (ಫಲಸಂ. ೧). ಹಱಾದರೆ ಹತ್ತಿಸುವ = ಹರಿದರೆ ಹತ್ತುವ : ಚೆನ್ನೆಗ್ಗಿಲು ಹಱಾದರೆ ಹತ್ತಿಸುವ (ಅದನ್ನು ಪರಡೆ ಎನ್ನುವರು) ಈ ಎರಡನ್ನು . . . ಅರೆದು (ವಿವೈವಿ. ೧೫೭).

[ದೇ.॥ ತಮಿ. ಮಲ. ಪಱಾ ; ತುಳು. ಪರಿಪು, ಪರ್ಪು ; ಕೊಡ. ಪರಿ ; ತೆಲು. ಪೆಱುಕು, ಪೆರುಕು]

△ ಪಱಾ₂ 'ಪರಿ₂' ನೋ.

ಪಱಾ₃, ಹಱಾ₃ (ನಾ). ೧. ಕತ್ತರಿಸುವಿಕೆ ; ಹರಿಯುವಿಕೆ. ೨. (?) : ಬೀಸುವಲ್ಲಿಯೆ ಬೀಸಲಱಾದೆಯಿಲ್ಲ ಪಱಾಯನಾ ದಿಟ್ಟೆ ಮುರಿವಲ್ಲಿ ಕಡುಪಿನೊಳ್ ಮುರಿದಯ್ (ಎಕ. II, ೧೩೩-೧೨೬ ; 982). ಹಱಾ₃ : ೩. ಕತ್ತರಿಸಿದುದು ; ಚೂರಾದುದು ; ತುಂಡಾದುದು : ಹಱಾ ಹತ್ತು ಹೊಲಿವುದೊಂದೇ ಸೂಜಿ (ಸರ್ವಪ. ೧೨೩-೬೩೨). 'ಹಱಾಮುಱಾ' ಪರಾ.

ಪಱಾವಱಾ₂ (ದ್ವಿರುಕ್ತಿ). ಪಱಾವಱಾಯಾಗು = ೧. ಚೂರು ಚೂರಾಗು ; ಭಿನ್ನಭಿನ್ನವಾಗು : ಜಳಕೇಳಿಗೆಂದು ಬಂದೋಲಾಡುವ ಮಾಳವವಿಲಾಸಿನಿಯರ ಪೆರ್ಮೊಲೆಯ ಪೊರ್ಕುಳಿಯೊಳ್ ಪಱಾವಱಾಯಾದ ಪೆರ್ದೆರೆಯೊಳ್ (ಕಾದಂಪೂ. ೧೬) ; ಗದಾಪರಿಘಪ್ರಹಾರದಿಂ ಪಱಾವಱಾಯಾಗಿ. . .ಬಿಟ್ಟರಿಬಲಂಗಳೆ ಪೇಟವೆ ನಿನ್ನ ಬೀರಮಂ (ಗದಾಯು. ೨-೩) ; ಜವದಿಂ ಪೋದಿನನ ವರೂಥವಾಜಿಗಳ ಮೊಗದೊಳೊಗೆದ ಫೇನಂಗಳ್ ವಾಯುವಶದೆ ಪಱಾವಱಾಯಾಗಿರ್ದುವು ಗಗನಾಂಗಣದೊಳೆನಿಸಿದುವು ಭಗಣಂಗಳ್ (ಚಂದ್ರಪು. ೮-೨೪) ; ಬಿದಿರ ಕೊನೆಯ ಕೋಳ್ಗೆ ಪಱಾವಱಾಯಾದ ಮುಗಿಲ ಪೊಱೆಯಿಂ ಸುರಿವ ಮುತ್ತುಗಳಂ (ಕಬ್ಬಿಕಾ. ೨೩೪). ೨. ಭಂಗಹೊಂದು : ಪಱಾವಱಾಯಾಯ್ತು ಪಜ್ಜಳಿಪ ಮೆಯ್ವೆಳ ಗಿಂಗೆಳಮಿಂಚೆನಲ್ಕದಾರಱಾದಭಿವರ್ಣಪರ್ ಸತಿಯ ರೂಪಿನ ರೂಢಿಸಿದೊಂದು ಗಾಡಿಯಂ (ಧರ್ಮನಾ. ೩-೫೩). [<ಪಱಾ₁]

ಪಱಾ₄ (ನಾ). ೧. ಅಲಂಕಾರ ; ಶೃಂಗಾರ ; ಭೂಷಣ : "ಪಱಾವಿಚ್ಛಿತ್ತೌ (ಹರಿ), ಭೂಷಣೇ ಚ" (ಶಮಧಾ). ೨. ಸಂತೋಷ ; ಹಿಗ್ಗು : 'ಪಱಾವಡಿಸು' ಪರಾ. [ದೇ.॥ ತಮಿ. ಪಱಾ = ಚಿನ್ನ]

ಪಱಾಕೊಳ್ (ಕ್ರಿ). ೧. (ಹೂವು ಮೊದಲಾದುವನ್ನು) ಕೀಳು ; ತಿರಿ : ಪರಿಮಳವೆರೆದಿಂಪಿನ ದಿವ್ಯಪುಷ್ಪವ ಪಱಾಕೊಂಡತಿಹರುಷದಲಿ ಸರಗಟ್ಟ ಬೆಲೆಗೆ ಮಾಱುವ ಮಾಲೆಗಾತಿಯರಿರವ ನಾನೇನ ಬಣ್ಣಿಪೆನು (ಕಂನವಿ. ೨-೮೩). ೨. ಕಿತ್ತುಕೊಳ್ಳು : ಮೂಡಣದೆಸೆವೆಣ್ ರತ್ನದ ಹಚ್ಚವ ಗಾಡಿಯೊಳಿನನಿಗಲಂಕರಿಸಲ್ಪಗೆಮಾಡದೆ ಪಡುಗಡೆವೆಣ್ಡಿಟ್ಟಿಸಿ ಕಿನಿಸಿಂದವ ಪಱಾಕೊಂಡು ನೋಡದೆ ನೂಂಕಲ್ (ಉದ್ಭದೇ. ೪-೬).

[ಪಱಾ₁ + ಕೊಳ್₁]

ಪಱಾಗಡ್ಡ (ನಾ). ಹರುಕುಗಡ್ಡ : ಮಾದೆಗನ ಪಱಾಗಡ್ಡಮನೆಡಗಯ್ಯೊಳ್ ಪಿಡಿದು (ಧರ್ಮಾಮೃ. ೧೦-೧೪೫) ; ನೊರೆವಾಯ್ ಜೋಲ್ಡುಟ ಪೆರ್ಮೂಗರಲ್ದ ಕೆಮ್ಮಾಸೆ ಕೆದರ್ದ ಪಱಾಗಡ್ಡಂ (ವೃಷವಿ. ೧೧-೬೧). [ಪಱಾ₁ + ಗಡ್ಡ₁]

ಪಱಾಗಲ್ 'ಪಱಾಗೋಲ್' ನೋ.

ಪಱಾಗೋಲ್, ಪಱಾಗಲ್, ಪಱಾಗೋಲು, ಪಱುಗಲ್, ಪಱುಗೋಲ್, ಪಱುಗೋಲು, ಹರಗಲು, ಹರಗೋಲು, ಹರಿಗಲು, ಹರಿಗೋಲು, ಹರುಗೋಲು, ಹಱಗೋಲು, ಹಱಾಗೋಲು, ಹಱುಗಲ್, ಹಱುಗೋಲ್, ಹಱುಗೋಲು (ನಾ). ನೀರನ್ನು ಛೇದಿಸಿಕೊಂಡು ಹೋಗುವ ಸಾಧನ ; ನಾವೆ ; ದೋಣಿ :

ಪಱಿಗೋಲೊಳ್ (ಪಱುಗೋಲೊಳ್) ಕುಳ್ಳಿರ್ದಂ (ಶಸುದ. ೧೩೩ ಪ್ರಯೋ); ಪಱಿಗೋಲ್ಗಳಂ ಮುಳುಂಗಿಸುವ ಸೀತಾನದಿಯಂತೆಯುಂ (ಭಾರಶಾಂ. ೮೪-೫೫೩). **ಪಱಿಗಲ್** : ನಾರೀಜನಕೆ ಪಱಿ[ಪಾಶಾಂ.ಱು]ಗಲೆಂದೇಱಲ್ . . . ನೀರಾಟಮಾಡಲ್ ನೆಱೆಗುವೆನೆ ಪೊದಟ್ಟತ್ತು ಚಂದ್ರಾಂಶುಜಾಲಂ (ಕಾದಂಬಾ. ೪೨೨). **ಪಱಿಗೋಲು** : ಪಱಿಗೋಲು, ಪಡಗು . . . ಮುಂತಾದವು ಅವರು ನೀರ್ಬಟ್ಟೆಯನ್ನು ತಿಳಿದವರಾಗಿದ್ದರೆಂದೂ . . . ಸಾರುತ್ತವೆ (ಭಾಷಾಶಾ. ೨೫೬). **ಪಱುಗಲ್** : ಪಱುಗಲಿಕ್ಕಿ ಪಾಯಲ್ಕಂ . . . ಸವಿನೋಡಲ್ಕಂ ಬಗೆವುದೆಸೆವ ನವ ಚಂದ್ರಿಕೆಯಂ (ಪರ್ಧಮಾ. ೮-೮೦); ಸುಟಿದುದು ಸುಟಿಯೊಳಗಣ ಪಱುಗಲಂತೆ ಪಾತಕನ ಮನಂ (ಪಂರಾಮಾ. ೯-೮೧). **ಪಱುಗೋಲ್** : ಮೊಗೆಯಲ್ ಕೊಡಗೊಂಡು . . . ಪಱುಗೋಲ್ಗಳನಿಕ್ಕಿ ಪಾಯಿಸಲ್ (ಅಜಿಪು. ೬-೪೫); ಪಱುಗೋಲಿಲ್ಲದೆ ತೊಱೆಯಂ ಪಾಯ್ವೆನೆಂಬ ಪಚ್ಚಪಸಿಯೆಗ್ಗನಂ ಪೋಲ್ಕುಂ (ಧರ್ಮಾಮೃ. ೧-೬೭); ಪರ್ಮಟೆ ಕೊಳಲ್ಕವಳಾ ಮುನಿಪುಂಗವಂಗೆ ತೊಟ್ಟನೆ ಪಱುಗೋಲನೊಡ್ಡಿ ದೃಢಮಪ್ಪಿನಮಾಂತು (ಮಹಾನೇ. ೧೬-೧೧). **ಪಱುಗೋಲು** : ಪಱುಗೋಲೊಳುಱೆ ಚೆಲ್ವುವಡೆದು ಕುಳ್ಳಿರ್ದು (ಸಿದ್ಧೇಪು. ೧೫-೨೨); ಬಿಜ್ಜೋದರಿ ಕಣ್ಸೋಲ ಮನಮರ್ಚಿದಳ್ ಪಱು[ಪಾಶಾಂ.ಱು]ಗೋಲೊಳ್ ಪೋಪಂತೆ ಗಗನ ಮೆಂಬಂಬುಧಿಯೊಳ್ (ಶಬರಂ. ೧-೪೩). **ಹರಗಲು** : ಮಳೆ ಬಂದರೆ ಬರಲಿ. ಹೊಳೆ ತುಂಬಬೇಡ. ಹರಗಲಿಗೆ ಬೇಕೆ ಹಿಡಿ ಹೊನ್ನು (ಹಳ್ಳಿಬಾ. ೬೭); ದೇಹವನ್ನು ಹರಗಲಿಗೆ ತೆಗೆದುಕೊಂಡು ಹೋದ ಮೇಲೆ ಸತ್ತವನ ಸಹೋದರನು ದಡಕ್ಕೆ ಹೋದನು (ಮಲೆನಾ. ೧೧೬). **ಹರಗೋಲು** : ಒಂಟಿ ಹುಟ್ಟನ ಹರಗೋಲಿನಂತೆ ಎನ್ನ ಪಾಡು (ಅಂತರಾ. ೪೫); ಕೆಸರಿಗೆ ಹರಗೋಲು ಬೇಕೆ ? (ಗಾದೆ). **ಹರಿಗಲು** : ಇವನು ಹರಿಗಲಲ್ಲಿ ಹೊಳೆ ದಾಟರಬೇಕು (ಕೆಲನೆ. ೧೦೦); ಎಷ್ಟು ಸಲ ಹರಿಗಲದಾಗೆ ತಿರಿಗಿಸಿನ್ನಿ ಅಯ್ನೋರನ್ನ ! (ಅಲೆಮ. ೨೧೬). **ಹರಿಗೋಲು** : ಹೊಳೆಯಲಿಹ ಹರಿಗೋಲು ಸದ್ಯ ಮುರಿದುದೆ (ತುರಂಗ. ೪೭-೨೯); ಹರಿಗೋಲನೇರಿಸಿ ಹರಿವ ಪ್ರವಾಹದೊಳುರುಳಿಸುವುದು ನಿನಗೊಪ್ಪೆ (ಶಾಕುಂತ. ೬೮ ಅಡಿಟ); ಇವರು ಹರಿಗೋಲು ಹತ್ತಿದರು (ನೀತಿಚಿಂ. II, ೧೧). **ಹರುಗೋಲು** : ರೊಕ ತೆಗೆದುಕೊಳುತ ಹರುಗೋಲ ಹಾಕಿ ದಾಟಿಸಿ (ಎಕ. VII, ತಿವಮೊ. ೩-೯; 1671); ಕಲ್ಲಿನ ಹರುಗೋಲಿನ ಮೇಲೇರಿದ ಅದ್ಭುತ (ಪುರಾವಿ. ೧೩೮). **ಹಱಗೋಲು** : ಹಱಗೋಲ ಸೂಳೆಯ ತೆಱನೆರಡು ಒಂದಯ್ಯ ಹಱಗೋಲನೇಱಿದವನಿಳಿಯೆ ಬೇಱೊಬ್ಬ ಹರಿದೇಱುವಂತೆ (ಸರ್ವಜ್ಞ. ೧೮೯೧). **ಹಱಿಗೋಲು** : ಸಂಸಾರವೆಂಬ ಸಾಗರವ ದಾಂಟುವರೆ ಅಱುಹೆಂಬ ಹಱಿಗೋಲನಿಕ್ಕಿ . . . ಸುಜ್ಞಾನವೆಂಬ ಸಟ್ಟುಗವ ಪಿಡಿದು (ಶೂನ್ಯಸಂ. ೧೨೬-೩೭); ತುಱುಗೆವೆಗಣ್ಣ ನೀರಿಂಗೆ ಹಱಿಗೋಲ ಹಾಯ್ಕಿಸಬೇಡೆಂದು . . . ತೊಡೆದ ಲೋಚನವ (ಮೋಹತ. ೪-೮೭); ಗೋಷ್ಪದಜಲಕೆ ಹಱಿಗೋಲದೇತಕೆ (ಜೈಮಿಭಾ. ೧೨-೧೪). **ಹಱುಗಲ್** : ನಾವಾರೋಹಃ, ನಾವಿಕಃ-ಈ ೨ ಹಱುಗಲೇಱುವಾತಂ (ಹಲಾಯು. ೬೫-೨೩೬); ಹಱಿದ ಹಱುಗಲಂತೆ ಸುಸಿಲ್ದೊಱೆಯಂ ದಾಂಟಸಲಾಱದೆ (ಲೀಲಾವ. ೨-೧೧೬ ಪ). **ಹಱುಗೋಲ್** : ಅಸಮಾಸ್ತ್ರನೇಱಲೆಂದಿಟ್ಟ ಹೊಸ ಹಱು[ಪಾಶಾಂ.ಱು]ಗೋಲೆಂಬಂತೆ ಘಳಿಗೆ ವಟ್ಟಲೆಸೆದು ಕಣ್ಗೆ ರಂಜಿಸಿತು (ಶ್ರೀಪಾಲ. ೧೦-೫೩); ಅಂಬುಧಿಯ ದಾಂಟುವಂಗೇಕೆ ಹಱುಗೋಲ್ ಸೀಮೆಯೆಂಬುದಂ ಪೂಱಿದೀ ನಿಸ್ಸೀಮ ಸಿದ್ಧರಾಮಂಗಿಷ್ಟಲಿಂಗಮೇಕೆ (ಚೆಬಪು. ೫೭-೯೧). **ಹಱುಗೋಲು** : ತುಂಬಿದ ತೊಱೆಯ ಹಾಯ್ದುಹೆವೆಂದು ಹಱುಗೋಲನೇಱುವ ಅಣ್ಣಗಳು ನೀವು ಕೇಳಿರೇ (ಅವಚಂ. ೮೦-೩೬೦); ಬಿಡು ಮರೀಚಯ ತೊಱೆಗೆ ಹಱುಗೋಲಿಡುವರುಂಟೆ (ಕುಪ್ಯಾದ್ರೋ. ೪-೩೮); ಪಾರಾಶರವ್ರತಿ . . . ಹಱುಗೋಲೊಳಗಂಬಿಗಿತ್ತಿಯ ನೆರೆದನು (ಕಂನವಿ. ೯-೧೪೮).

ಹರುಗೋಲ ತೆರು = ಒಂದು ಬಗೆಯ ತೆರಿಗೆ ; ನಾವೆಯ ಮೇಲೆ ಹಾಕುವ ತೆರಿಗೆ : ಯೀ ಆರು ಮಂದಿಗೂ ಹರುಗೋಲ ತ್ತೆರು ಸಹಾ ಬಿಟಧೆವೆ (ಎಕ. VII, ತಿವಮೊ. ೩-೨೯; 1671). **ಹರುಗೋಲ ಹಣ** = ಹರುಗೋಲ ತೆರು : ದಂಡ ಹರುಗೋಲ ಹಣ ಬಾವಲಿ ಬಿರಾಡ ಮತಿಂದೆ ಹುಟ್ಟುವ ಪೂರ್ವಾದಾಯ ಸಹವಾಗಿ (ಮೈಅರಿ. ೧೯೩೪, ೨೬-೨೨; 1430). [ಪಱಿ$_1$ + ಕೋಲ್$_3$]

ಪಱಿಗೋಲು 'ಪಱಿಗೋಲ್' ನೋ.

ಪಱಿತಿನ್, ಹಱಿತಿನ್ (ಕ್ರಿ). ಹರಿದು ತಿನ್ನು ; ಕಿತ್ತು ತಿನ್ನು : ಪೊಯ್ದಾಡಿ ಮಡಿದ ಕಲಿಗಳ ಶರೀರಂಗಳಂ ಪೊಯ್ದೆಳೆದು ಪಱಿತಿಂಬ ಮರುಳ್ಗಳ್ (ಜೈಮಿಭಾ. ೮-೩೩). **ಹಱಿತಿನ್** : ಕೊಱಚಾಡೆಲ್ಲರ ಮುಂದೆ ರಚ್ಚೆಗೆಳೆಯುತ್ತಂ ಕಿತ್ತು ಮೈಯೆಲ್ಲವಂ ಹಱಿತಿಂದು (ಸೋಮೇಶ. ೭೩); ಹಕ್ಕಿ ಹಾಲ್ದೆನೆಯ ಹಱಿತಿಂದು ಕಂಕಿಯನು ಇಕ್ಕಿ ಹೋದಂತೆ (ಸರ್ವಜ್ಞ. ೧೮೮೭). [ಪಱಿ$_1$ + ತಿನ್]

ಪಱಿದಲೆ, ಹಱಿದಲೆ (ನಾ). ೧. ತರಟುದಲೆ ; ಎಲ್ಲ ಕಡೆಯೂ ಕೂದಲು ಸಮನಾಗಿಲ್ಲದಿರುವ ತಲೆ : ಸಲೆ ಮಾಂಸಿ ನೆಲ್ಲಿ . . . ಕೋಷ್ಠಮೆಂಬಿವಂ ಕಱಿಯಿಂದಂ ತಲೆಯಂ ಪೂಸಲೊಡಂ ಪಱಿದಲೆ ನಿಱಿದಲೆಯಕ್ಕು (ಲೋಕೋಪ. ೯-೫೨); ಪಱಿದಲೆ ಕುಟಿಸೊಸಲಟಿ ಗಣ್ಣೊಱೆವಾಯ್ ಹಪ್ಪಳಿಕೆಮೂಗು (ಯಶೋಚ. ೨-೩೮). **ಹಱಿದಲೆ** : ೧. ಎಲವೆಲವೊ ಮಾರುತಿಯುಳ್ಳಿಗಡ್ಡದ ಹಱಿದಲೆಯ ರಣಮೂಢ ಸಿಲುಕಿದೆಲಾ (ಕುಪ್ಯಾದ್ರೋ. ೧೩-೬೧). ೨. ಕತ್ತರಿಸಿದ ತಲೆ : ಹಱಿದಲೆಯು ಬೊಮ್ಮಂಗೆ ಕುಱಿದಲೆಯು ದಕ್ಷಂಗೆ . . . ಸರಿಯಹರೆ ಹರಗೆ (ಸರ್ವಜ್ಞ. ೨೨೦). [ಪಱಿ$_1$ + ತಲೆ$_1$]

ಪಱಿದೊವಲ್, ಹರಿದೊಗಲು, ಹಱಿದೊಗಲು (ನಾ). ಕತ್ತರಿಸಿದ ಚರ್ಮ : ಜೀರ್ಣಮಾಗೆ ತನು ಕೂರಲಗಿನ ಪಱಿದೊವಲೊಳಿರ್ದನಂತಾ ಮುನಿಪಂ (ಅನಂಪು. ೧೨-೩೪). **ಹರಿದೊಗಲು** : ಹರಿದೊಗಲು ನೆಣವಸೆಯ ಖಂಡದಿಂ . . . ರಣಜಯಂ ರಂಜಿಸಿದುದು (ತುರಂಗ. ೫೬-೩೯). **ಹಱಿದೊಗಲು** : ಹಱಿದೊಗಲ ನೆತ್ತರನು ಕಾಣಿಸಲಱಿಯದೋಯೆಂದೊಱಲಿ ಧರಣಿಯಲೊಱಗಿದರು ಕೈದುಗಳುದಿದು ದಾಡೆಗಳು ನೆಱೆ ಮುಱಿದು (ನಿಭಾಗ. ೭-೫-೭); ಜುಱುಜುಱುಪ ಕರುಳುಗಳ ಖಂಡದ ಹಱಿದೊಗಲ ತೊಡೆ ತೋಳ್ಗಳಲಿ ಹೆದ್ದೊಱೆಗಳಾದವು (ನಿಭಾಗ. ೧೦-೮೬-೮). [ಪಱಿ$_1$ + ತೊವಲ್$_3$(<ತೋಲ್$_1$)]

ಪಱಿನಂಟ (ನಾ). ಕಡಿದು ಹೋದ ನಂಟುತನವುಳ್ಳವನು ; ದ್ವೇಷವುಳ್ಳ ನಂಟ : ಪೊಱಪೊಟಲೊಳರ್ಪರಿರ್ವರ್ ನೆಱೆದೊಕ್ಕಲ್ತನದ ಪೆರ್ಮೆಯೊಕ್ಕಲಿಗರ್ ಪೇರಱಿಕೆಯ ಶಶಿಸೂರ್ಯಾಖ್ಯರ್ ಪಱಿನಂಟರ್ (ಚಂದ್ರಪು. ೫-೮೭). [ಪಱಿ$_1$ + ನಂಟ]

ಪಱಿಪಡಿಸು 'ಪಱಿವಡಿಸು' ನೋ.

ಪಱಿಪಡು 'ಪಱಿವಡು' ನೋ.

ಪಱಿಪಾಟು (ನಾ). ಹರಿದು ಹೋಗಿರುವುದು ; ತುಂಡಾದ ಅವಸ್ಥೆ : ಸಿರದ ಮುಂಡಾಸವ ಸೀಳ್ದಿಕ್ಕಿ ದಗಲೆಯ ಪಱಿಪಾಟ ಮಾಡಿದರಾಗೆ (ಕಂನವಿ. ೧೫-೪೬). [ಪಱಿ$_1$ + ಪಾಟು$_2$(<ಪಾಡು$_3$)]

ಪಱಿಬಾರ (ನಾ). ಒಂದು ಪಂಗಡದ ಹೆಸರು (?) : ಕೊತ್ತನೂರಾ ಕುನ್ದಪ್ಪಡಿಗಳುಂ ಪಱಿಬಾರರುಂ ಬಾಣಗುನ್ದೂರಾ ದೇವಡಿಗಳುಂ (ಎಕ. XVI, ಗುಬ್ಬಿ. ೭೫-೫೭; 733). [?]

ಪಱಿಮಱಿ 'ಪಱಿವಱಿ$_3$' ನೋ.

ಪಱಿಮಱಿಗೊಳ್ (ಕ್ರಿ). ಸಂಭ್ರಮಗೊಳ್ಳು ; ಸಡಗರಗೊಳ್ಳು : ಕಂಪಿಸುವ ಕೈ ಕಮಳವೆಂದೆಱಗಿ ಪಱಿಮಱಿಗೊಂಬ ಹಸುಳೆದುಂಬಿಯನೂಡಿ ಸಾಕುವಾಸಕ್ತಿಯಿಂ ಸಿದ್ಧಪತಿಯಿಪ್ಪಾಗಳು (ಸಿದ್ಧರಾ. ೪-೩೭) ; ಪೊಱಗೆ ಚೆಲ್ಲಿದ ಕಸ್ತೂರಿಯ ರಜಕ್ಕೆ ಪಱಿಮಱಿಗೊಂಬ ಮದಾಳಿಮಾಳಿಕೆ (ರಾಜಶೇ. ೧೩-೪೫ ಪ). [ಪಱಿಮಱಿ(<ಪಱಿವಱಿ$_3$)+ಕೊಳ್$_1$]

ಪಱಿಮೂಗು (ನಾ). ಹರಿದ ಮೂಗು ; ಹರುಕಾದ ಮೂಗು : ಕೆಲಬರ್ಗೆ ಸೊಂಡಿಲಂತೆ ನಿಡುಮೂಗು ; ಕೆಲಬರ್ಗೆ ಪಱಿಮೂಗು ; ಕೆಲಬರ್ಗೆ ನಿಡುಗಣ್ (ಅದ್ಭುತ. ೪೪-೩). [ಪಱಿ$_1$+ಮೂಗು]

ಪಱಿಯಾಳ್ತನ (ನಾ). ಕಳೆದುಹೋದ ಕಲಿತನ,—ಪೌರುಷ : ಪಱಿಯಾಳ್ತನದಱಿಗಂಡಿಂದಱಿಯದೆ ಮೆಯ್ವೆರ್ಚ ಪೋಗಿ ಪರದನ ಮನೆಯಂ ತರುವಲಿತನದಿಂ ಪೊಕ್ಕೊಡೆ ಕುಱಿ ಸಾವಂತಲ್ಲಿ ಸಾವು ನಿಶ್ಚಯಮಕ್ಕುಂ (ಧರ್ಮಾಮೃ. ೬-೨೩). [ಪಱಿ$_1$+ಆಳ್ತನ]

ಪಱಿಯಿಡು (ಕ್ರಿ). ಕತ್ತರಿಸು : ಚಕ್ರದಿಂ ನಾಲ್ಕುಕಾಲುಮನೊರ್ಮೊದಲೆ ಪಱಿಯಿಟ್ಟೊಡೆ (ಪಡ್ಡಾರಾ. ೧೨೦-೧೯). [ಪಱಿ$_1$+ಇಡು$_1$]

ಪಱಿಯಿಸು, ಪಱಿಸು, ಹರಿಸು$_1$, ಹಱಿಸು (ಕ್ರಿ). ೧. ಕತ್ತರಿಸುವಂತೆ ಮಾಡು ; ಛೇದಿಸುವಂತೆ ಮಾಡು. ೨. ಕತ್ತರಿಸು ; ಛೇದಿಸು : ಇವರೀ ಶಿರಂಗಳಂ ಪಱಿಯಿಸಲೊಲ್ವೊಡೇನರಿದೆ ಶಾರ್ಙ್ಗಗೆನಲ್ ಹರಿ ಬಾಣಕೋಟಿಯಿಂ ಪಱಿಯಿಸೆ (ಜಗವಿ. ೮-೬೪). ೩. ಕೂದಲನ್ನು ಕೀಳಿಸು ; ಲೋಚು ಮಾಡು : ತಲೆಯ ರೋಮಂಗಳೆಲ್ಲಮಂ ಪಱಿಯಿಸಿ (ಧರ್ಮಾಮೃ. ೧-೧೩೫). **ಪಱಿಸು** : ೩. ಸೈರಿಸಿ ತಲೆಯಂ ಪಱಿಸಿಕೊಂಡು (ಧರ್ಮಾಮೃ. ೧-೧೩೮). ೪. ನಾಶಮಾಡು ; ಹಾಳುಮಾಡು : ಭವಪಾಶಮಂ ಪಱಿಸಿದವನೋ (ಬಸಪು. ೪೦-೪೪). **ಹರಿಸು$_1$** : ೫. (ಕೊಂಡುಕೊಳ್ಳುವುದಕ್ಕಾಗಿ ಬಟ್ಟೆ ಮೊದಲಾದುವನ್ನು) ಕತ್ತರಿಸುವಂತೆ ಮಾಡು ; ಹರಿಯುವಂತೆ ಮಾಡು : ಅವಳು ಲಂಗಕ್ಕಾಗಿ ಮೂರು ಗಜ ಬಟ್ಟೆ ಹರಿಸಿದ್ದಾಳೆ (ರೂಢಿ). **ಹಱಿಸು** : ೨. ವರಮೃಗಂಗಳನುಗ್ರಶರದಿಂ ಹಱಿಸಿ ಶಿವಲೋಕಕ್ಕೆ ಕಳುಪುತಿರೆ (ಬಸಪು. ೩೪-೩೧). [ಪಱಿ$_1$+-ಇಸು$_3$]

ಪಱಿಯೆಸು, ಹಱಿಯೆಸು (ಕ್ರಿ). ಕತ್ತರಿಸುವಂತೆ ಬಾಣವನ್ನು ಬಿಡು ; ತುಂಡಾಗುವಂತೆ ಬಾಣವನ್ನು ಹೊಡೆ : ಒಂದೆ ದಿವ್ಯಶರದಿಂ ಶಿರಮಂ ಪಱಿಯೆಚ್ಚೊಡೆ (ಪಂಪಭಾ. ೧೧-೬೯) ; ಬಿಲ್ಲ ಗೊಣೆಯುಮಂ ಪಱಿಯೆಚ್ಚಂ ಸಾರಥಿಯಂ ಕೆಡೆಯೆಚ್ಚಂ (ಪಂರಾಮಾ. ೧೧-೫). **ಹಱಿಯೆಸು** : ದಿವ್ಯಶರದಲಿ ಕರವೆರಡ ಹಱಿಯೆಚ್ಚಡಾಗಳೆ ಕೆಡೆದವನಿಯಲಿ (ಕುವ್ಯಾದ್ರೋ. ೬-೫೪). [ಪಱಿ$_1$+ಎಸು$_1$]

ಪಱಿವಡಿಸು$_1$, ಪಱಿಪಡಿಸು (ಕ್ರಿ). ೧. ಕತ್ತರಿಸು ; ಛೇದಿಸು. ೨. ನಾಶಮಾಡು : ಈಗಳೆ ಪೋಗಿ ಪೂಗೊಳನಂ ಮುತ್ತಿ ದುರ್ಯೋಧನನಂ ಪೊಱಮಡಿಸಿ ಪಗೆಯಂ ಪಱಿವಡಿಪುದು (ಗದಾಯು. ೬-೩೮ ಪ) ; ಪಗೆವನನಾವ ಬಗೆಯೊಳಮಾವ ತೆಱದಿಂ ಪಱಿವಡಿಸುವುದು ನಯಂ (ನೇಮಿಪು. ೧೨-೧೮೨ ಪ). **ಪಱಿಪಡಿಸು** : ೨. ಅಟಿವಗೆಯಂ ಪಱಿಪಡಿಸಲ್ಕೆ ಹಲಾಯುಧ ನೆಱೆದಿರ್ದಪೆನೆನಗೆ ತೋಱಿ ಬಿಡು ಕೌರವನಂ (ಗದಾಯು. ೬-೬೧) ; ಹೂಣನಂ ಕೀಟ್ಟಡಿಸಿ ಬಾಣನಂ ಪಱಿಪಡಿಸಿ ಮಗಧನಂ ಧಿಕ್ಕರಿಸಿ ಸಗರನಂ ನ್ಯಕ್ಕರಿಸಿ (ಜಗವಿ. ೧೬-೧೧೮ ರಗಳೆ) ; ಭವಪಾಶಮಂ ಪಱಿಪಡಿಸಿ ವಿಮೋಹಮನಳುರ್ಕೆಗಿಡಿಸಿ ನರೇಂದ್ರಂ . . . ಪರಿನಿಷ್ಕ್ರಮಣಕ್ಕೆ ಮನಂ ಪರಿಯೆ ಪರಿಚ್ಛೇದಿಸಲ್ಕದೇಂ ಪರಿಣತನೋ (ಪುಷ್ಪಪು. ೧೩-೭೫). ೩. ಸವೆಸು ; ಮುಗಿಸು ; ತೀರಿಸು : ಸಪ್ತಾಷ್ಟಭವದೊಳಾತ ಪಱಿಪಡಿಸುವ ಕರ್ಮತತಿಯ (ದ್ವಾದಶಾ. ೫೧-೧೨೨೪). ೪. ಭಂಗವುಂಟುಮಾಡು : ಮುಂಕೊಂಡ ಮಹಾವ್ರತಮಂ ಪಱಿಪಡಿಸದ . . . ಸತ್ಯಕ್ಕೆಱವೆಟ್ಟಿನಿಸುವ ಸಾಧುಸಮಿತಿಗತಿ ಸಮತೆಯೊಳೆಱಗುವೆನು (ಜಯಶಾ. ೧-೫). ೫. ಹೋಗಲಾಡಿಸು ; ಪರಿಹರಿಸು ; ನಿವಾರಿಸು : ವ್ಯಾಧಿಯಾದಂದಮಾಗಿರ್ದುದಿದಂ ಸದ್ವೈದ್ಯರಿಂ ನೋಡಿಸಿ ಪಱಿಪಡಿಸಿಂ (ಸುಕುಮಾ. ೧೧-೩೪) ; ಎಱೆವುದು ಕಾಂಜಿಕಮೊಂದಂ ಪಱಿಪಡಿಕುಂ(ಗುಂ) ನೆಲ್ಲ ಬೇರ ವಿಷಮಾ ಕ್ಷಣದಿಂ (ಖಮದ. ೨-೪೧). ೬. ಬಿಡು ; ತೊರೆ : ಅಟಮಟದಿನಾಚರಿಪ ಧರ್ಮಮಂ ಪಱಿಪಡಿಸು ದಿಟವನೆ ನುಡಿವ ಧರ್ಮವನೆಯಾಚರಿಸು (ಸಮ್ಯಕೌ. ೧-೫) ; ಜನನಿಜನಕರು ಬಂಧುಬಳಗವೆಲ್ಲವ ಬಿಟ್ಟು ವಿನುತಮಪ್ಪೀ ಬುದ್ಧಸಮಯಮಂ ಪಱಿಪಡಿಸಿ . . . ನಿನ್ನ ಬೆಂಬಳಿಯಲ್ಲಿ ಬಂದು ದೇಸಿಗನಾದನೀಗಲೆನ್ನಾ ಮನದಾಣ್ಮನೆಂದು ಮಱುಕಂಬಡೆಯದೆ (ಸಮ್ಯಕೌ. ೯-೪೭). [ಪಱಿವಡು+-ಇಸು$_3$]

ಪಱಿವಡಿಸು$_2$ (ಕ್ರಿ). ಸಂತೋಷಪಡು : ಪರಾಗಪುಂಜದೊಳ್ ಪಱಿವಡಿಸಿತ್ತು ಭೃಂಗಶಿಶು ನೀರಜದೊಳ್ ನಿಜಪಾಂಸುಕೇಳಿಯಂ[ಯಿಂ] (ಚಂದ್ರಪು. ೬-೬೧) ; ಭಾಗೀರಥಿಯ ಪಾವನವೆನಿಸಿದುತ್ತರದಿಶಾಕೂಲದಲಿ ಪಱಿವಡಿ [ಪಾಠಾಂ.ರಿ]ಸಿ ಮುನಿನಿಕರ ನೆರೆದಿರಲು (ನಿಭಾಗ. ೧-೨-೧೯). [ಪಱಿ$_4$+ಪಡು$_1$+-ಇಸು$_3$]

ಪಱಿವಡು, ಪಱಿಪಡು, ಹಱಿಪಡು (ಕ್ರಿ). ೧. ಕತ್ತರಿಸಿ ಹೋಗು ; ತುಂಡಾಗು : 'ಪಱಿವಡಿಸು$_1$' ಪರಾ. ೨. ನಾಶವಾಗು ; ಇಲ್ಲವಾಗು : ಇದಱ ಪೂರ್ವಜನ್ಮಸಂಸ್ಕಾರಮಿನ್ನುಂ ಪಱಿವಟ್ಟುದಿಲ್ಲ (ಪಂಚತಂ. ೨೬೨-೮) ; ಪುದಿದೆಂಟುಂ ಕರ್ಮಬಂಧಂ ಪಱಿವಡೆ (ಧರ್ಮಾಮೃ. ೧-೨). ೩. ಕಡಮೆಯಾಗು ; ಕುಗ್ಗು ; ಕ್ಷೀಣಿಸು : ಮಱುಗೆ ಶರೀರಂ ಕಣ್ಗಳ್ ಪೊಱಮಡೆ ಮೇಲ್ಸ್ವಾಸಮೆತ್ತೆ ಸೆಡೆದಳ್ಕಿ ಬಲಂ ಪಱಿವಡೆ ಜೊಮ್ಮನೆ ಜೋಲ್ಡುಂ (ಧರ್ಮಾಮೃ. ೪-೧೬೨). ೪. ಬವಣೆಪಡು ; ಭಂಗಪಡು : ಒರ್ಕುಡಿತೆ ನೀರ್ಗೆ ಪಱಿವ[ಪಾಠಾಂ. ಪ]ಟ್ಟಿರ್ಕೆಯ ಪಣ್ಣೆಲೆಯ ಮುಱುಗೆ ದೇಸಿಗರಂ ದೇವರ್ಕಳ್ಗೊಡೆಯರ್ಮಾಟ್ಟಿರೆ (ಶಮದ. ೨೪ ಪ್ರಯೋ ; ತಬ್ದಾನು. ೧೪೦ ವ್ಯಾಖ್ಯಾ ನೋ). **ಪಱಿಪಡು** : ೧. ಎನ್ನ ಮಿತ್ರನಪ್ಪ ಮೂಷಕದಿಂದಲ್ಲದೀ ಪಾಶಬಂಧನಂ ಪಱಿಪಡದು (ಪಂಚತಂ. ೨೯೧-೧೯) ; ಸೂಸುವ ಕುಂತಳಂ ನಸು ಬಟಲ್ದ ಕುಚಂ ಪಱಿಪಟ್ಟ ಹಾರಮಬ್ಜಾಸವದೊಳ್ ತೊಡರ್ದ ನಱುಸುಯರ್ . . . ಭಯಮಂ ತಳೆದಿರ್ದ ಚಿತ್ತಮತ್ಯಾಸುರಮಪ್ಪಿನಂ ಗಗನದಿಂ ಸತಿ ಭೋಂಕೆನೆ ಬಿಟ್ಟಳುರ್ವಿಯೊಳ್ (ದಶಕು. ೧೨-೧೯೧) ; ಅವರ ದುಷ್ಕರ್ಮಪಾಶಂಗಳು ಪಱಿಪಟ್ಟು ಪೋಗಲೆಂದಧಿಕವರಮಿತ್ತು (ಚಿಒಪು. ೩೨-೨೯). ೨. ಮೆಯ್ಯ ಮಮತ್ವಂ ಪಱಿಪಡೆ ಪಱಿಪಟ್ಟು ಪೋದುದಸು ಮೈಯಿಂದಂ (ಸುಕುಮಾ. ೧೨-೪೨) ; ವಜ್ರಮಯಕೋದಂಡಂ ಕಡಿಕಂಡಮಾಗೆ ಪಱಿಪಡೆ ಪೊಡರ್ಪು ಹೇಮಪ್ರಭಂ ಹತಪ್ರಭನಾದಂ (ಪಂರಾಮಾ. ೩-೬೦) ; ಬೋಧದೊಂದೆಸಕದಿಂ ಪಱಿಪಟ್ಟುವು ಪಾಪಪಾಂಶುಗಳ್ (ಚಂದ್ರಪು. ೧೧-೧೬) ; ಮನೋಧೃತಿಯಂ ಪೊದಟ್ಟ ಪಾಂಗುಱೆ ಪಱಿಪಟ್ಟು ಲಜ್ಜೆ ಲವಮಿಲ್ಲದೆ ಬಿಟ್ಟು (ಕುಸುಮಾ. ೧೩-೨೩). ೩. ತೋಕವಿಕಳದಿಂ ಶೂನ್ಯಮಾದ ಮನದಿಂ ಧೈರ್ಯಮುಂ ಪಱಿಪಟ್ಟುದು (ಶಾಂತಿಪು. ೪-೭೯ ಪ). ೪. ಪಱಿಪಟ್ಟ ಪಗೆವರಂ ನೆಱೆ ಪಱಿಪಡಲಣಮಿಯದವರನವರ್ಗಳ ಬಾಟೊಳ್ ನಿಱಿಸಲ್ ಬಗೆದೈ (ಪಂಪಭಾ. ೯-೪೫) ; ಇಂತೀ ಲಗ್ಗೆಯೊಳ್ ಪಯಿಂ ಭಾಸಿರ್ವರ್ ಪಱಿಪಟ್ಟಟಿದು (ಚಿಕವಿ. ೨-೧೧೫). ೫. ಮುಗಿ ; ತೀರು : ಮೂಗಿನೊಳುಸುರೆಂಬ ಮಾತು ಪಱಿಪಟ್ಟುದು ನಿಚ್ಚಟಂ (ವರ್ಧಮಾ. ೫-೫) ; ತಿರಿಕರ್ಗೆ ಬಡತನಮೆಂದು ಪಱಿಪಟ್ಟುದಿಲ್ಲದೇ

ನಚ್ಚರಿಯೋ (ಧರ್ಮಾಮೃ. ೯-೮೪); ಆಯುಷ್ಯಂ ಪಱಿಪಡುವಾಗಳೆ ಬೆರ್ಚಿವಂತೆ ಮಱುಗುವ ಮರುಳಿಂಗಾರಯ್ಯ ವಿಭವಂ ಮಱುಭವಂ ನಾಡೆಯುಂ ವ್ಯರ್ಥಮಲ್ತೇ (ಚಂದ್ರಪು. ೪-೧೮). ೬. ನಿವಾರಣೆಯಾಗು; ಪರಿಹಾರವಾಗು: ಓವುಮುಮಂ ಶುಂಠಿಯುಮಂ ಸೇವಿಸೆ ಪಱಿಪಡುಗುಮಾವಗಂ ಕಫರೋಗಂ (ಲೋಕೋಪ. ೯-೧೬); ಪಱಿಪಡೆ ಸೇದೆ ಪಿಂಗೆ ಶೃಷೆ ತಣ್ಗಳಸಂಗಳನೆತ್ತಿ ನಿಂದು ನೀರೆಱೆವ ಚಳಲ್ಲತಾಂಗಿಯರ ಕೊಂಕಿದ ತೋಳ ಮೊದಲ್ಗೆ (ಅನಂಪು. ೧-೮೩); ಮುಗ್ಧ ನಿಳಿಂಪರ ತಂಕೆ ಚಿತ್ತದಿಂ ಪಱಿಪಡುವಂತು ಬಾಲನಿನಿಸಂ ತಱಿಸಂದೊಡೆ (ಪುಷ್ಪಪು. ೧೧-೩೧); ಆ ಪರದಂ ತಂದಾ ಚಂದನಮಂ ನೃಪತಿಗೆಱೆಯೆ ದಾಹಜ್ವರವೆಯ್ದೊಂದೆ ನಿಮಿಷಕ್ಕೆ ಪಱಿಪಡೆ (ಧರ್ಮಪ. ೯-೧೦). ೭. ನಿಂತು ಹೋಗು; ಕೊನೆಗೊಳ್ಳು: ಆ ನುಡಿ ಪಱಿಪಡೆ ಮುಳಿದು ನೋಡುಗುಂ ಕೆಳದಿಯರಂ (ಪಂಪಭಾ. ೪-೫೬); ಬರವಿನ ಮಾತು ಮಂತ್ರಿಸುತನೊಳ್ಪಱಿಪ[ಪಾಠಾಂ.ವ]ಟ್ಟುದನೆಯ್ದೆ ಕಂಡು (ಕಾದಂಉ. ೪೫೧). ೮. ಕಾಣದಾಗು; ಅಡಗು; ಮರೆಯಾಗು: ಇಂತೊಗೆದು ಪರೆದ ಪಾಂಸುಪಟಲಂ . . . ಕುದುರೆಗಳ ಲಾಲಾಜಲಜಾಲಕದೊಳಂ ಪಱಿಪಡಲ್ (ಕಾದಂಪೂ. ೬೦೫). **ಹಱಿಪಡು**: ೨. ನಿರ್ಜರೆಯೆಂಬ ನಾಮ ಹಱಿಪಟ್ಟು ಕರ್ಮವೆಲ್ಲವು ಹೋಗಲದು ತಾನೆ ನೆಱೆ ಮೋಕ್ಷ ನಿರ್ಧರಿಸಾತ್ಮ (ಭರಚ. ೬೮-೮೬). [ಪಱಿ$_1$ + ಪಡು$_1$]

ಪಱಿವಡೆ, ಪರಿವಡೆ (ಕ್ರಿ). ಸೊಗಸಾಗಿರು; ಶೋಭಿಸು; ರಂಜಿಸು: "ನಿಗರ, ನೆಟ್ಟೆ . . . ಪಱಿವಡೆದುದು—ಈ ೧೪ ಮನೋಹರಂ" (ಕಶಸಾ. ೫೫-೨೧೧); ಪಕ್ಕಿಗಳ ಪೆರ್ಚದ ಸರಂಗಳಿಂ ಹರಣಂ ಬಡೆದಂತೆ ಪಱಿವಡೆದು ತಿಂತಿಣಿವಡೆದ ಪೇರಡವಿಯೊಳ್ (ಕಬ್ಬಿಕಾ. ೨೧೭); ಪಱಿವಡೆದು ಕಣ್ಣಪ್ಪದೇವನ ವರವಿಲೋಚನಯುಗ್ಮಮೇ ಶಿವನಕ್ಷಿಯುಗಮಾಗೆ (ಬಸಪು. ೧೮-೮೫); ಭುಲ್ಲವಿಸಿ ಹಯಪದಸಮೂಹವ ಚೆಲ್ಲಿದವು ಸಕ್ರಮದ ಪಾಳಿಯ ಪಲ್ಲವಿಕೆ ಪಱಿವಡೆದುದಮಳಪ್ರಣವಮಯವಾಗಿ (ಕುಮ್ಯಾಕ. ೬-೩೫). **ಪರಿವಡೆ**: ಕೆಲರು ಬಳಲ್ದು ಮಲಗಿನ ವಿಶ್ರಾಮ ಪೀಠಗಳ ಮೇಲೆ ಪರಿವಡೆದೊರಗಿಯೂ . . . ಇರುವರು (ವಿಗಡ. ೬-೨೩). [ಪಱಿ$_4$ + ಪಡೆ$_1$]

ಪಱಿವಱಿ$_1$ 'ಪಱಿ$_1$' ಪರಾ.

ಪಱಿವಱಿ$_2$ 'ಪಱಿ$_3$' ಪರಾ.

ಪಱಿವಱಿ$_3$, ಪಱಿಮಱಿ (ನಾ). ೧. ಒಂದು ಬಗೆಯ ಆಟ; ಹಾರುಗುಪ್ಪೆ: "ಪಱಿವಱಿಯೆನಲು ಹಾಱುಗುಪ್ಪೆ" (ಶಬ್ದಮಂ. ೫೭); "ಪಱಿವಱಿಯೆನೆ ಪೆಗಲ ಪತ್ತುವಾಟಂ" (ಕವಿಕಂ. ೨೨೬); ಕೀಱಿ ಪಾಱಿ ಬವಣಗೊಂಬ ಮಱಿವಕ್ಕಿಗಳನಟ್ಟಿ ತಱುಬಿ ಪಿಡಿವಲ್ಲಿ ಪಱಿವಱಿಯಾಟಮಂ . . . ಕಲ್ವರ್ (ಚಿಕಪಂ. ೮-೧೪). ೨. (ಆಲಂ) ಸಡಗರ; ಸಂಭ್ರಮ (?): ಅವನೀಪಾಲರ್ ಕೆಯ್ಗೆಯ್ಯಲೆಂದು ಪಱಿವ[ಪಾಠಾಂ.ಮ]ಱಿಯಾದರ್ (ಪಂಪಭಾ. ೩-೪೨). ℙ "ಪಱಿಮಱಿಯಾಡು ಎಂಬುದಕ್ಕೆ ಪಱಿಮಱಿಯಂ+ಆಡು ಎಂದು ಆಟವೆಂದೇ ಅರ್ಥವಾಗುತ್ತದೆ. ಈ ಆಟಕ್ಕಾಗಿ ಮಕ್ಕಳು ಪಡುವ ಸಡಗರ ಎಂದು ಇಲ್ಲಿ ಲಕ್ಷ್ಯಾರ್ಥವನ್ನು ಸೂಚಿಸಿದೆಯೆಂದು ಭಾವಿಸಬೇಕು" (ಪಂಪದೀ. ೧೧೦). **ಪಱಿಮಱಿ**: ೧. "ಪಱಿಮಱಿಯೆಂದು ಪೆಗಲಂ ಪತ್ತುವಾಟಂ" (ಕಶಸಾ. ೬೯-೫೫೭); ಪಱಿಮ[ಪಾಠಾಂ.ವ]ಱಿ ಪಾಱುಂಬಳೆ ಮರಗೆರಸಿ ಕುಣಿಲ್‌ಸೆಂಡು . . . ಪೊಣೆಗುಂಡೆಂಬಿವನಾ ಮುರಹರನಲ್ಲಲ್ಲಿಗಾಡುತುಂ ಬರಲ್ (ಕಾವ್ಯಸಾ. ೩೭೭; ಜಗವಿ. ೪-೪೪ ನೋ); ಮುಂಬರಿದೊತ್ತಿ ಮುತ್ತಿ ಗಜಱಿ ಗೆಲ್ಲದ ಚಲ್ಲದ ಪಱಿಮಱಿಯ ಗಂಡರನೆತ್ತಂ ಪಿಂಡುಗೆಡೆಪುತಂ (ರಾಮಾಶ್ವ. ೧೪೫-೯). ೨. 'ಪಱಿಮಱಿಗೊಳ್' ಪರಾ.

ಪಱಿವಱಿಯಾಡು, ಪರಿಮಱಿಯಾಡು, ಪಱಿಮಱಿಯಾಡು = ೧. ಹಾರುಗುಪ್ಪೆಆಟವನ್ನು ಆಡು: ಪರನೃಪರಟ್ಟಿದ ಕಪ್ಪದ ಕರಿಗಳ ಮದಜಳಮನುಂಡು ಕಂಪೇಱಿದ ತದ್ಧರಣೀಶಗೃಹಾಂಗಣದೊಳ್ ಪಱಿವಱಿಯಾಡುವುವು ಪಱಮೆವಱಿಗಳ ಬಳಿಗಂ (ಚಂದ್ರಪು. ೭-೩೩); ಬೆಮರ್ತವಯವದೊಳ್ ಪಱಿಮಱಿಯಾಡುವಂತೆ ಪರಿದವು ವಿಳೋಕನಂ ನೃಪವರನಾ (ವರ್ಧಪು. ೬-೭); ಧುರದೊಳ್ಪಱಿಮಱಿಯಾಡುವ ತೆಱದಿಂದುಱದಿಱಿದನೆಂಬ ನಿಯಮಂ ದೂಷ್ಯಂ (ಶಮದ. ೧೯ ಪ್ರಯೋ). ೨. ಸಂಭ್ರಮಗೊಳ್ಳು; ಸಡಗರಿಸು: ಯುದ್ಧದೊಳು ಪರಿಮಱಿಯಾಡುವಟ್ಟಿಗಳ (ಎಕ. VIII, ಸೊರಬ. ೧೩೨-೨೪; 1151); ನಿಡುಸುಯ್ಯ ಪರಿಮಳಕ್ಕೆ ಪಱಿಮಱಿಯಾಡುವ ಮಧುಕರನಿಕರಂ (ಗಿರಿಕ. ೫-೩೬ ವ); ಪರಿಮಳದೊಳ್ ಪಱಿಮಱಿಯಾಡುವ ಮಱಿದುಂಬಿ (ಅನಂಪು. ೩-೯೫ ವ); ಮೃಗಮದತಿಲಕದ ಪರಿಮಳಕ್ಕೆ ಬೆರಸಿ ಪಱಿಮಱಿಯಾಡುವ ಮಱಿದುಂಬಿಗಳ ಬಂಬಲಂ ಪೊಡೆವ ಕರತಳಂ . . . ಕಮನೀಯಮಾಗೆ (ರಾಜಶೇ. ೫-೧೯ ವ).

ಪಱಿವಾಯ್, ಹಱಿವಾಯ್ (ನಾ). ೧. ಹರಿದು ಹೋಗಿರುವ ಬಾಯಿ; ಹರುಕುಬಾಯಿ. ೨. ಗುಟ್ಟನ್ನು ರಟ್ಟು ಮಾಡುವ ಬಾಯಿ; ಒಡಕುಬಾಯಿ: 'ಪಱಿವಾಯ್ತನ' ಪರಾ. **ಹಱಿವಾಯ್**: ೧. ಮುಱಿದ ಹಾವಸೆಹಲ್ಲ ಹಱಿ[ಪಾಠಾಂ.ಱು]ವಾಯ ತುಱುಚೆಗಳು . . . ಸುತ್ತ ಮುತ್ತಿರಲು (ವಾಗೀರ. ದೇ. ೨೫೪-೨೬). [ಪಱಿ$_1$ + ಬಾಯ್]

ಪಱಿವಾಯ (ನಾ). ಹರುಕುಬಾಯುಳ್ಳವನು; ಒಡಕುಬಾಯಿಯವನು: ಚೆಚ್ಚರಿಗಂ ಪಱಿವಾಯಂತುಚ್ಚಳನತ್ಯುಗ್ರಕೋಪಿ ಮೂರ್ಖಂ (ಸಮಪ. ೬-೧೦೬). [ಪಱಿವಾಯ್+-ಅ$_7$]

ಪಱಿವಾಯ್ತನ (ನಾ). ಗುಟ್ಟನ್ನು ಕಾಪಾಡಿಕೊಳ್ಳದ ಸ್ವಭಾವ: ನೆಱೆ ನಿನ್ನ ಬೆನ್ನನೇನೆಂದಱಿಯೆ ನೀನಿನಿತಱಿಂದೆ ಬೆನ್ನಿಲ್ಲೆಂಬಾ ಪಱಿವಾಯ್ತನದಿಂದೇನೆಂದಱಿಯದೆ ಗಟಿಪುವರ ನುಡಿಗಳಂ ಕೈಕೊಳ್ವಾ (ಧರ್ಮಾಮೃ. ೫-೧೮೬). [ಪಱಿವಾಯ್+-ತನ]

ಪಱಿವು, ಹರಿವು$_1$, ಹರು, ಹರುವು, ಹಱಿವು, ಹಱುವು (ನಾ). ೧. ಕತ್ತರಿಸುವಿಕೆ; ತುಂಡುಮಾಡುವಿಕೆ; ಹರಿಯುವಿಕೆ: (ಕಿ). ℙ ಪಕಾರಾದಿಯಾದ ಶಬ್ದದ ನಾಮರೂಪವು ಕಾವ್ಯಪ್ರಯೋಗದಲ್ಲಿ ದೊರಕದಿರುವುದು ಪರಿಶೀಲನಾರ್ಹ. ತಮಿಳಿನಲ್ಲಿ 'ಪಱಿವು' ಶಬ್ದವು ಬಳಕೆಯಲ್ಲಿದೆ. **ಹರಿವು$_1$**: ೨. ಕೊನೆಗಾಣಿಸುವ ಉಪಾಯ; ಪರಿಹಾರದ ದಾರಿ: ರಥವೆತ್ತಿನೂಕಿ ಬರೆ ಕರ್ಣನಂ ಕಾಳಗದಿ ಗೆಲ್ಲಲು ಪಿನಾಕಿಗಸದಳ ಬಿದ್ದ ಕಾಲದೋಳ್ನೀ ಹರಿವ ಕಾಣೆಂದು ಬೋಧಿಸಿದನು (ತುರಂಗ. ೭೦-೨೬). **ಹರು**: ೨. ನಾನೇನೋ ಒಂದು ಹರು ನೆನೆದಿದ್ದೀನಿ . . . ತೀರ್ಥಳ್ಳಿ ದೋಣಿ ಗಂಡೀಲಿ ಹೊಳೆ ದಾಟಬಿಟ್ರಿ, ನಮ್ಮನ್ಯಾರೂ ಮೂಸಿ ನೋಡೂದಿಲ್ಲ ಆಮ್ಮಾಲೆ (ಮಲೆಮ. ೬೮೦). **ಹರುವು**: ೨. ವರುಷಂಪ್ರತಿ ನಡಸೋದಕೆ ಹರುವಿಲ್ಲದ ನಿಮಿತ್ತ ನಿವಗೆ ನಾವೆಲ್ಲರು ಒಪ್ಪಿ . . . ಗುಣವ ಮಾಡಿದೆವು (ಸೌಇಇ. IX-ii, ೪೬೦-೧೫; 1465). **ಹಱಿವು**: ೨. ತಾನೇ ವಿವೇಕದಲಿ ಜನಪನಳುಪಿಗೆ ಹಱಿವ ಮಾಡುವೆನು (ಪ್ರಭುಲೀ. ೧೦-೧೦). ೩. ಪರಿಹಾರ; ನಿವಾರಣೆ: ಇಂದ್ರಮುಖ್ಯರ ಹಳೆಯ ಶಾಪಕೆ ಹಱಿವ ಕಂಡನು (ಸಂಭಪ. ೩೩-೪೫); ಪ್ರಶ್ನೆಸಾಗರದ ಅಂತಗಾಣದೆ ಹಱಿವ ಹೇಳದೆ ಚಿಂತಿಸಿದನು (ನಿಭಾಗ. ೧೧-೨೦-೨೬); ತಾತನ ಋಣತ್ರಯಕೆ ಹಱಿವಹುದು ರಾಘವ ಭೀಷ್ಮರಂತೆ ಕೀರ್ತಿ ಸ್ಥಿರವಹುದು

(ಚೈಮಿಭಾ. ೨೬-೫೮). ೪. ನಾಶ; ಅಳಿವು: ನಾವ್ ನರರು ದಿಟ ತಾಪಸರು ತೀರ್ಥಾಚರಿತರಿನ್ನಾರಾದಡೇನೆಮಗಾಯ್ತು ಹಱುವು (ತೊರವಿ. ೨-೫-೧೪); ರಾವಣರಾಜನಿಗೆ ನಾನಾವ ಬಗೆಯೊಳು ಪೇಳಿದೊಡೆ ದೇವಿಯು ಬಿಟ್ಟು ಕಳುಪಿತಿಲ್ಲವನಿಗೆ ನೀವು ಹಱುವನೆಣಿಸುವುದು (ರಾಮವಿ. ೧೫-೫೩); ಉಂಬ ಮನುಜನು ತುತ್ತುತುತ್ತಿಗೆ ತುಂಬುವುದು ಬಿಡದೌಕ ದನ್ನವ ಪಂಬಳಿಯಲು ಮನಸಿಗತಿಸುವಹುದು ಕ್ಷುಧೆಯೆಂಬ ತಿಂಬ ಪೈರಿಗೆ ಹಱುವಹುದು (ನಿಭಾಗ. ೧೧-೨-೫೧). ೫. ಕೊನೆ; ಅಂತ್ಯ; ಮುಕ್ತಾಯ: ನಾನಱುತ್ತಲಱುತ್ತ ಬಂದು ಭಾವಕ್ಕಗಮ್ಯವಾದ ಮೂರ್ತಿಯ ಕಂಡೆ ನೋಡಾ ಎನ್ನ ಆಱುವಿನ ಹಱುವ ಕಂಡೆ ನೋಡಾ (ಅಪಚಂ. ೧೬೭-೭೫೨); ಕೆಱೆಯ ಕೆಲಸದಲಿ ಸಿದ್ಧೇಂದ್ರನಿರುತಿರೆ ಬಂದು ಹಱುವಿಲ್ಲವೆನುತ ಕರೆಯೋ ಒಡ್ಡರೆಱೆಯನಂ ಕೊಱೆಕೂಲಿಗೊಂಡನೋ ನಾಳೆ ಮಿಕ್ಕುದನಗೆಯ ಬಾರದೇ ಎಂಬನ್ನೆಗಂ (ಸಿದ್ಧರಾ. ೯-೩೯). ಹಱುವು: ೨. ಇವರೆಲ್ಲರ ಹಂಗಿಗೆ ಹಱುವ ಕೇಳಿಹರೆಂದಂಜಿ (ಕಲ್ಯಾಕಾಂ. ೪೪); ಏನು ಹಱುವಿಲ್ಲದೆ ಕಳವುಗೈದಾ ನಿಮಿತ್ತದಿ ಪೊಳಲರಸನಾ ಭಾನುದತ್ತನು ಪುತ್ರರನು ನಾನೆಂತು ಕೊಲಿಸುವೆನು ಎಂದು ಪೊಳಲಿಂ ಹೊಱವಡಿಸಿ (ಸಾಳ್ವಭಾ. ೨೦-೨೯); ಮುಂದೆ ನಿನಗೆ ಹಱುವ ಹೇಳತಕ್ಕೊಂದು ದೇವತೆ ನನಗುಂಟು ತಾಳು (ಭರಜ. ೪೬-೧೪೭). ೪. ಕಂದೆಱೆದು ಮುನಿ ನೋಡಿದೊಡೆ ತಮಗಿಂದು ಹಱುವಹುದು (ಕುಮ್ಯಆ. ೩-೧೭); ದುರುಳ ಬಲುಹಿಂದೆನ್ನನೆಳೆದರೆ ಕೆರಳಿದರು ಗಂಧರ್ವರೀತಗೆ ಹಱುವ ಕಂಡರು (ಕುಮ್ಯವಿ. ೬೧೯. ೩-೯೭). ೫. ಹಱುವಾಗಿ ಹೋಯ್ತು ಭವಮಾಲೆ (ಸರ್ವಜ್ಞ. ೪೫೮). ೬. ತೊಂದರೆ; ಕೇಡು; ಅಪಾಯ: ಉಂಟು ತೋಱುವರೆ ತೋಱುವಡೆ ನಿಮಗೆ ಹಱುವೇನು ಗಂಟಲಂ ಕೊಯ್ವನೋ (ಲಿಂಗಪು. ೩೦-೪). [ಪಱು$_1$+-ವು]

ಪಱುವೆಱು (ಕ್ರಿ). = ಪಱುವಡೆ: ಹರಿನೀಲಸ್ಥಳಿಯೊಳ್ ಬಣ್ಣವುರಂ ಪಱುವೆತ್ತುದು ಬಗೆ ಮರುಳ್ತನ್ನೆವರಂ (ಚಂದ್ರಪ್ರ. ೪-೬೩ ರಗಳ). [ಪಱು$_4$+ಪೆಱು$_1$]

ಪಱುವೊಱಸು (ನಾ). ಪುಕ್ಕವನ್ನು ಕತ್ತರಿಸಿದ ಹೊರಸು,-ಪಾರಿವಾಳ: ಕಿಱುವಡಿಗಾಲದಂದುಟಾದೆನೋಪಳನಾನವಳಂದೆ ಗಂಡರಂ ಪಱುವೊಱಸಾ[ಪಾಠಾಂ.ನಾ]ಗೆ ಮಾಡುವಳ್ (ಜಗವಿ. ೧೬-೧೩೪). [ಪಱು$_1$+ಪೊಱಸು]

ಪಱುಸೀರೆ (ನಾ). ಹರಿದ ಬಟ್ಟೆ; ಚಿಂದಿ: ತೊಟ್ಟನೆ ಪಱುಸೀರೆಗಳಂ ಬೆಟ್ಟಾಗಿರೆ ಗುಹೆಯ ಬಾಗಿಲೊಳ್ ತೀವಿಸಿದಂ (ಧರ್ಮಾಮೃ. ೯-೧೬೨). [ಪಱು$_1$+ಸೀರೆ$_2$]

ಪಱುಸು 'ಪಱುಯಿಸು' ನೋ.

ಪಱುಕ, ಹರುಕ, ಹಱುಕ (ನಾ). ೧. ಸಂಬಂಧವನ್ನು ಕಡಿದು ಕೊಂಡ ವ್ಯಕ್ತಿ: 'ಹಱುಕು' ನೋ. ೨. ನಾಶಕಾರಕನಾದ ವ್ಯಕ್ತಿ: ಪಱುಕನಘಟ ಸಾಸಿರಬಾಹುಮಿತನೆನ್ನ ಕಿಱುಕಾಂತನೊಳು ಕಾದುತಿಹನು (ಪೋಹತ. ೩೫-೩೮). ೩. ಕ್ಷುದ್ರವ್ಯಕ್ತಿ; ಕೇಳು ಮನುಷ್ಯ; ನೀಚ: ಪಾರ್ವತಿಜಠರದೊಳೊಗೆದವನಲ್ಲ ಸಲಾಱುಯೋನಿಜ ಗಾದ ಪಱುಕ ಗಾಱುಗೆಡೆಯ ಬೇಡ (ಪೋಹತ. ೩೮-೧೪). ಹರುಕ: ೩. ಬಿಳಿಗಲ್ಲ ಪುಡಿಯ ಮೊಸರೋಗರಮೆನುತ್ತೆ ಪ್ರಿಯದಳೆದುಂಡು ಪ್ರಾಣಗಳ ಬಿಡುವ ಹರುಕನ ತೆರದೊಳು (ವೆಂಕಾರಾ. ೨-೩೫-೧೯). ಹಱುಕ: ೩. ಹಱುಕನೇ ನೀನೆಲವೊ ರಾಯರೊಳುಱುವ ನೃಪ ನಿಮ್ಮಯ್ಯ (ಕುಮ್ಯವಿ. ೬-೨೧); ಹಱುದ ಹಱಗೋಲು ಹೊಲ್ಲ ಹಱುಕನ ಕೆಳೆ ಹೊಲ್ಲ (ಸರ್ವಜ್ಞ. ೧೭೦೬). [ಪಱುಕು+-ಅ$_7$]

ಪಱುಕು, ಹರುಕು, ಹಱುಕು, ಹಱುಕು (ನಾ). ೧. ಹರಿದು ಹೋದ ಬಟ್ಟೆ, ಕಂಬಳಿ ಮುಂತಾದುವು; ಚಿಂದಿ; ಜೂಲು: (ಕ). (ಗು). ೨. ಘನತೆಯಿಲ್ಲದ; ದೊಡ್ಡತನದಿಂದ ಕೂಡಿರದ: 'ಪಱುಕ' ಪರಾ. ಹರುಕು: ೧. ಆಕೆಗೆ ಒಳ್ಳೆಯ ಬಟ್ಟೆಯಿಲ್ಲದೆ ಹರುಕೇ ಗತಿಯಾಗಿದೆ (ರೂಢಿ). ೨. ಅವರ ಬಾಯಲ್ಲಿ ಎಂದೂ ಹರುಕು ಮಾತುಗಳು ಬರುವುದಿಲ್ಲ (ರೂಢಿ). ೩. ಬಟ್ಟೆ ಮೊದಲಾದುವು ಹರಿದು ಉಂಟಾದ ತೂತು,-ರಂಧ್ರ: ಆಕೆಯ ತಲೆಯ ಮೇಲಿದ್ದ ಗಂಟಿನ ಹರುಕಿನಿಂದ ಅಕ್ಕಿಯೆಲ್ಲಾ ಸುರಿದು ಹೋಯಿತು (ರೂಢಿ). ೪. ಘನತೆಯಿಲ್ಲದಿರುವಿಕೆ; ದೊಡ್ಡಸ್ತಿಕೆಯಿಲ್ಲದಿರುವಿಕೆ: ಸಭಾ ಮರ್ಯಾದೆಯನ್ನು ಬಿಟ್ಟು ಆತ ಹಾಗೆ ಹರುಕು ಹರುಕಾಗಿ ವರ್ತಿಸಬಾರ ದಾಗಿತ್ತು (ರೂಢಿ). ಹಱುಕು: ೩. ಕಂಬಳಿಯ ಹಱುಕಿನಲ್ಲಿ ಬತ್ತೀಸ ಕೋಟಿ ದೇವರ್ಕಳೆಲ್ಲರೂ ಸಿಕ್ಕಿ ಅಳಲುತ್ತ ಬಳಲುತ್ತಲೈದಾರೆ (ವೀರಮಾ. ಕ. ೫೮೮-೭೦೪). ಹಱುಕು: ೫. ಸಂಬಂಧವನ್ನು ಕಳೆದು ಕೊಂಡ ವ್ಯಕ್ತಿ; ದೂರವಾದವನು: ಹಱುಕುಗಳು ನಾವ್ ನೂಱು ಮಕ್ಕಳು ಹೊಱಗೆ ಬಡುಕುವೆವ್ಯಸಲೇ (ಕುಮ್ಯಸ. ೧೨-೬೩).

ಹರುಕುಮುರುಕು = ೧. ಭಿನ್ನಭಿನ್ನವಾದುದು; ಭಗ್ನ; ಮುರುಕಲು: ಭಾವನೆಗಳು ಹರುಕುಮುರುಕಾಗಿದ್ದವು (ಮುನಿಮಾ. ೨೦). ೨. ಸಂಪೂರ್ಣವಲ್ಲದುದು; ಅರೆಬರೆ: ಹರುಕುಮುರುಕಾಗಿ ಆಡುವ ಇಂಗ್ಲಿಷ್ ಮಾತು (Broken-English. ಇಂಕನಿ). [<ಪಱು$_1$]

ಪಱುಗಲ್ 'ಪಱುಗೋಲ್' ನೋ.

ಪಱುಗೋಲ್ 'ಪಱುಗೋಲ್' ನೋ.

ಪಱುಗೋಲು 'ಪಱುಗೋಲ್' ನೋ.

ಪಱುಣೆ 'ಪಱುಣೆ' ನೋ.

ಪಱುಣೆ, ಪಱಣೆ, ಪಱುಣೆ, ಹಱುಣೆ, ಹಱುಣೆ (ನಾ). ನಾರುಬಟ್ಟೆ; ನಾರುಮಡಿ (?): ಪಱುಣೆ[ಪಾಠಾಂ.ಹಱುಣೆ]ಮಡಿ ಯಾಗಿಯುಂ ಬಲ್ವಸ್ತ್ರಮಾಗದು (ಧರ್ಮಾಮೃ. ೧೧-೧೮೬). ಪಱುಣೆ: ಪೆಣಂತಪ್ಪ ಮೆಯ್ಯಂ ಪೆಂಡಿರತ್ತ ತರ್ಪಾಗಳ್ ಅವರ್ ಓಡುವ ಮೃಗದ ಮೇಲೆ ಪಱುಣೆ[ಪಾಠಾಂ. ಪರುಣೆ, ಪಱು(ವ)ಣೆ]ಯನಿಕ್ಕಿದಂತೆ ನಿಗೆ ಬೆರ್ಚುವರ್ (ಜೀವಸಂ. ೧೪೨-೧೩). ಪಱುಣೆ: ಪಱುಣೆ[ಪಾಠಾಂ. ರುಣೆ]ಯಂ ಪಡೆದೊಡಂ ಕುಱುವಡಿಯಂ ಪಡೆದೆನೆಂದರ್ಸ ಕಳ್ಳನಂತಪ್ಪರೀ ವಿವ್ಯವಸ್ತ್ರಾಭರಣಂಗಳಂ ಕೊಳ್ಳೆಂದು ಮುಂದಿಕ್ಕಿದೊಡೆ (ಸುಕುಮಾ. ೭-೨೬ ಪ). "ಹಳೆಯ ಬಟ್ಟೆ?" (ಸುಕುಮಾ. ಕೋಶ); [ಕಳ್ಳನ ನನ್ನಿಯಂತೆ] ಪಱು[ಪಾಠಾಂ.ಪುರು]ಣಿಯ ತೋಳ್ಗೆಯಂತೆ . . . ಪೊಱ ಗಣ್ಣ ರಂಜಿಸುವ ಬಹುರಾಳಾಪದ ಡೊಂಬನೊಲ್ಲದೆ (ಧರ್ಮಾಮೃ. ೮-೯೪). ಹಱುಣೆ: ವನತೆಯರಲ್ಲಿ ಕಸವಂ ಬಿಸುಡುವಂತೆ ಹಳೆದಾದ ಹಱುಣೆ [ಪಾಠಾಂ. ಹರಿಣೆ]ಯಂ ಪೇಸಿ ಪೊಱಮಡಿಪಂತೆ . . . ಬಿಡಲು (ವಿಂಡೋರ. ಹ. ೫೦೪-೩). ಹಱುಣೆ: ದುಕೂಲಮನೀಡಾಡಿ ಹಱುಣೆಯ[ಪಾಠಾಂ. ಬಣ್ಣಮ]ನುಡುವ . . . ಗಾವಿಲನಂತಾಗಿ (ಧರ್ಮಾಮೃ. ೧೪-೧೦೬). [ದೇ. ॥ ?]

ಪಱುವಿ (ನಾ). ಒಂದು ಊರಿನ ಹೆಸರು: ಎಳಂಗೂಡಲೂರ್ಮ್ಮುಱಯಾಱಗೂಡಲೂರ್ಪ್ಪಱುವಿ ಶ್ರೀಪುರಮಿತಿ ಚತುರ್ಮ್ಮ ಗ್ರಾಮೇಷು (ಎಕ. X, ಗೋರೂಬೆ. ೪೬-೪೬; 762). [?]

ಪಱುವಿನಾಡು (ನಾ). ಒಂದು ನಾಡಿನ ಹೆಸರು: ಪಱುವಿನಾಡ ವೆಂದುಱ ಪೊನ್ನೆಯೊಳಿಟ್ಟು (ಮೈಎರಿ. ೧೯೩೩, ೪೮-೯; 960); ಪಲ್ಲ ವಾದಿತ್ಯಂ ಪ್ರಿಥ್ವೀರಾಜ್ಯಗೆಯ್ತುತ್ತಂ ಪಱುವಿನಾಡವೆನ್ನುಱು ಪೊನೆಯ ಳಿಟ್ಟು (ಸೌಇಇ. IX-I, ೪೧-೧೧; 11ನೆಯ ಶತ). [ಪಱುವಿ+ನಾಡು]

ಪಱೆ₁, ಪರೆ₃, ಹರೆ₃, ಹಱೆ (ನಾ). ಒಂದು ಬಗೆಯ ಚರ್ಮವಾದ್ಯ; ಹಲಗೆ; ತಮಟೆ; ☞ ಕನ್ನಡದಲ್ಲಿ ಚರ್ಮವಾದ್ಯಗಳನ್ನು ಸೂಚಿಸುವ ಪದಗಳು ಅನೇಕ ವೇಳೆ ಒಂದಕ್ಕೊಂದು ಪಲ್ಲಟವಾಗುತ್ತವೆ. ಕವಿಗಳಲ್ಲಿ ಈ ಪದಗಳ ಉಪಯೋಗದಲ್ಲಿ ನಿರ್ದಿಷ್ಟವಾದ ಏಕಾಭಿಪ್ರಾಯವಿಲ್ಲ: "ಪಱೆ ಬದ್ದಣಮೆಂದು" (ಕರ್ಣಾಟಿ. ೬೮); ಎಕ್ಕಮದ್ದಳೆಯ ಕೊಟಲ ಝುಂಕಾರದ ಪಱೆಗಳ್ ಮುಂದೆ ಬಾಜಿಸುತ್ತಂ ಬಟಾಯಂ ಕಾಪಿನವರ್ ವರೆ (ವಡ್ಡಾರಾ. ೮೦-೧೧); ಪೊಟಲೆಲ್ಲಂ ಚೋದ್ಯಂಬಟ್ಟು ಬದ್ದಣದ ಪಱೆಗಳಂ ಪೊಯ್ಸೆ (ಪಂಪಭಾ. ೩-೩೧ ಪ); ಪಱೆಯ ಪೆರ್ಗಾಳೆಯ ಪಳಹದ . . . ಭೂರಿನಿನಾದಂ ದೆಸೆ ಮುಟ್ಟೆ ಪಳಂಚಲೆಯೆ (ರಾಮಾಶ್ವ. ೫೦-೧). **ಪರೆ₃:** ತಮಟೆ, ಪರೆ, ಹಲಗೆ, ದಮಡಿ, ಢಕ್ಕೆ (ಕಂಸುಹ. ೮೨); ಒದಗಿರ್ಪ ಪರೆ ಕೊಂಬು ಮುರಿಕೊಂಬುಗಳ ಮೊಳಗು ಪದಸಿನಂ ಬೀಗರಂ ಕರೆದುಲಿಯುತಿತ್ತು (ಶಾಲೂರ. ೧೪೬-೩೧೮). **ಹರೆ₃:** ಕಾಳೆ, ಹರೆ, ಕೊಂಬುಗಳ ಏಳಿ, ಮೊಳಗಿ, ಏಳಿ (ಇಂಗೀತ. ೧೬-೧); ಭೇರಿಗಳು ಬಾಜಿಸಿದವು; ಹರೆಗಳು ಭೋರೆಂದು ಮೊರೆದವು (ಭಾಮಚಿ. ೨೧); ಜನ ಹರೆ, ಡೋಣು, ತಮಟೆ, ಕಹಳೆ, ಕೊಂಬುಗಳ ಸಮೇತ ಕಗ್ಗಲಿಗೆ ಹೋಗಿ . . . ಪೂಜೆ ಮಾಡಿದರಂತೆ (ಸನ್ನೂರು. ೩೦). **ಹಱೆ:** ಈ ತ್ರಿವಿಧವ ಹೊಱಗು ಮಾಡಿ ಹಱೆಯ ಹೊಯಿಸಿ ಕುಱುಹ ಪೂಜಿಸುವರ ಮೆಚ್ಚ ಕೂಡಲ ಸಂಗಮದೇವ (ಬಸವ. ೨೦೬); ಬೊಬ್ಬಿಱುದವೇಳೆಂಟುಸಾಸಿರ ಶಂಖ ಪಂಚಮದ ಪಱೆಗಳಱಚಿದವು (ಹಡಕಾ. ೫-೧೧); ಬೊಬ್ಬಿಱುತದೊಡನುಬ್ಬೇಳ್ವಲಗ್ಗೆಯ ಹಱೆಗಳಬ್ಬರವಾಯ್ತು ಕರ್ಣನ ಶಸ್ತ್ರಪೂಜೆಯಲಿ (ಕುಮಾಸ. ೮-೮); ವಿವಿಧವಾದಕರೊಳಗದೋರ್ವನ ಹೆಗಲ ಹಱೆವೊಂದ ತವಕಿಸದೆ ತೆಗಕೊಂಡು (ಸಾಳ್ವಭಾ. ೧೮-೫೫).

ಹಱೆಯವ = ಹರೆಯನ್ನು ಬಾರಿಸುವವನು: ಈ ಗಜಿಬಿಜಿಗಂಜಿ ಹಱೆಯವ ಸತ್ತು ಎಚ್ಚೆಯ ಗಡಿಗೆಯ ಒಡೆಯ ಹಾಕಿದ (ವೋಳಮಾ. ೯೧-೩೬೦). [ದೇ.॥ ತಮಿ. ಪಱೈ; ಮಲ. ಪಱ; ಕೊಡ. ಪರೆ; ಕೋತ. ಪರ್; ತೊದ. ಪಱ್; ಗೊಂಡಿ. ಪರ]

ಪಱೆ₂ (ನಾ). ೧. ನಿಂದ್ಯವಾದುದು: ಪರವ ಪಸುಳಿಗಳಿಗಳ ನುಣ್ಣೊರಲಿಂ ಪಱೆಗುಟ್ಟುವ ಪರಪುಟ್ಟದ ಪಾಡುವ ಪಱಮೆವಱಯ ಫಲವೀವ ಗುಣದಿನಮರಮಹೀಜಾತವನು ಪಱೆಯೆಂಬ ಕುಜಾತದ ಶಕಿಕಾಂತದ ಪರಲೆಯನೊರ್ವನ್ ಕೊಳದ ಸುಭಗತೆಯಿಂ ಪಱೆಯನುಱೆ ಪಾಱುಸುವುದು ನಂದಸಳಾ ನಂದನದಿರವು (ಜಯಕಾ. ೧-೪೬). ೨. ನಿಂದೆಗೊಳಗಾದವನು: ಉಱುವ ಕಾರ್ಯವನ್ನೆಲ್ಲವನೊಲ್ಲದೇಳ್ಗೆಯ ತೊಱೆದಭಿಮಾನವನುಳಿದು ಪಱೆಗಳಂದದಿ ತಿಱುದುಂಬುದನೇಕಿದು ನೆಱೆ ಸಂತಸದಿ ಬಯಸುವೆ (ಕರ್ಣವೃ. ೯-೯).

ಪಱೆಕಾಱ, ಹರೆಕಾರ, ಹರೆಕಾಱ, ಹಱೆಕಾಱ, ಹಱೆಗಾಱ (ನಾ). ತಮಟೆ ಬಡಿಯುವವನು; ಹರೆ ಬಾರಿಸುವವನು: ಮತ್ತರೊನ್ದು ಪಱೆಕಾಱಗ್ಗಂ ಪಾಡುವಗ್ಗಂ (ಇಎ. ೧೫೯೦, ಹಾನುಗ. ೧೨೮-೩೪; ೨೫೦); ಪಱೆಕಾಱಗ್ಗಂ ಪಾತ್ರಕ್ಕಂ ದೇಸಿಗ ಛಾತ್ರಭೋಜನಕ್ಕಮೆಂದು . . . ಕುಡೆ (ಸೌಇಇ. IX-i, ೮೦-೧೫; 1018); ಕಪ್ಪಡಿಗನಾಗಿ ಬಂದೆಂ ತಪ್ಪದೆ ಪಱೆಕಾಱನಾಗಿ ನಿಂದೆಂ (ಬಂಹರಿ. ೫-೧೭); ಅಜ್ಞಾತಕುಲಸುಂ ಪಟಹವಾದನಮೆ ಜೀವನಮಾಗಿರ್ಪ ಪಱೆಕಾಱಂಗೆ ಕುಮಾರಿಯಂ ಕುಡುವುದುಚಿತಮಲ್ಲ (ಪಜಾನೇ. ೫-೩೯ ಪ). **ಹರೆಕಾರ:** ಮೂಲಸ್ಥಾನದೇವರಿಗೆ ಸಾಕು ಮತ್ತರು ಕೆಱ ದೇವರ ಕೆಱಯ ಬಡಗೆಯಲು ಹರೆಕಾರ ಸೋಮ ಬಿಟ್ಟ (ಸೌಇಇ. IX-i, ೨೯೧-೩೮; 11ನೆಯ ಶತ). **ಹರೆಕಾಱ:** ಹಾಡುವರ್ಗಂ ಹರೆಕಾಱರ್ಗ್ಗಂ . . . ಇನ್ತಿನಿಬರ ಜೀವಿತಂ ಬಡ್ಡಿಯಲು ನಡೆವಂತಾಗಿ (ಶಾಸಪ. ೪೭-೫೨; ಸು. 12ನೆಯ ಶತ). **ಹಱೆಕಾಱ:** ಶ್ರೀಮೂಲಸ್ಥಾನದೇವರಿಗೆ ಭೋಗವಂ ಮಾಡುವ ಹಱೆಕಾಱ ಭೋಗೋಜಂಗೆ (ಎಕ. XI, ದಾವಣ. ೧೧-೩೮; 1066); ಬೆಟ್ಟಲು ೨೦೦ ಹಱೆಕಾಱರಿಂಗೆ (ಎಕ. XV, ಬೇಲೂರು. ೩೪೩-೧೧೧; 1265). **ಹಱೆಗಾಱ:** ಹಱೆಗಾಱನಲ್ಲಿವನಿಱೆಗಾಱನೆನುತವೆ ಬೀಱಗಾಗಿ ನಾಡ ಮನ್ನೆಯರು . . . ಓಡಿದರು (ನೇಮಿಸಂ. ೧೨-೮೪).

[ಪಱೆ₁ + -ಕಾಱ]

ಪಱೆಕಾಱಗೆಯ್ (ನಾ). ಹರೆಕಾರನ ಭೂಮಿ; ತಮಟೆ ಬಾರಿಸುವವನ ಹೊಲ: ಊರಿಂ ತೆಂಕಲ್ ಮೂಱುವಡಿನ ಪೊಲದೊಳ್ ಪಱೆಕಾಱಗೆಯ್ಯತ್ತರ್ಮೂರ್ವತ್ತು (ಸೌಇಇ. XI-i, ೧೧೬-೩೫; 1075). [ಪಱೆಕಾಱ + ಕೆಯ್₄]

ಪಱೆಕೆಱೆ (ನಾ). ೧. ಒಂದು ಊರಿನ ಹೆಸರು: ತಾಯೂರ ಪಱೆಕೆಱೆ ಬಸವಯ್ಯ (ಎಕ. III, ಸಂಜನ. ೯೭-೫; 898 ?). ೨. ಒಂದು ಕೆರೆಯ ಹೆಸರು: ಹಡುವರ್ಗ್ಗಂ ಪಱೆಕೆಱೆಗೆ ತೆಂಕಣಕೋಡಿಯಲಿ ಗಱ್ಡೆ ಮತ್ತರ್ ೧ (ಎಕ. VII, ಹೊನ್ನಾಳಿ. ೧೦೭-೧೭; 1048).

[ಪಱೆ ? + ಕೆಱೆ]

ಪಱೆಗ (ನಾ). = ಪಱೆಕಾಱ: ಪೂವಣಗಂ, ಪಱೆಗಂ (ಕಬ್ಬಾನು. ೪೧೬ ಪ್ರಯೋ). [ಪಱೆ₁ + -ಗ₂]

ಪಱೆಗುಟ್ಟು, ಹಱೆಗುಟ್ಟು (ಕ್ರಿ). ೧. ಹರೆಬಡಿ; ತಮಟೆ ಹೊಡೆ: ಶ್ರೋತ್ರಿಯರುಂ ಕ್ಷತ್ರಿಯರುಂ ಪಱೆಗುಟ್ಟ ಪಶುಯಾಗಂಗೆಯ್ದು (ಪಂಚತಂ. ೬೨-೩); ಪರಮೋತ್ಸವದಿಂ ಪಱೆಗುಟ್ಟ ಬಿಚ್ಚಟಂ ಕುಣಿದವು ಭೂತಕೋಟಿ (ಪಂರಾಮಾ. ೧೦-೧೪೪); ಪಱೆಗುಟ್ಟ ಮಾಸವಳದಂಕಂ ಬಾಸೆಯಂ ಸಾಱೆ (ಅನಂಪು. ೨-೨೯). ೨. ಧ್ವನಿ ಮಾಡು; ನಾದವನ್ನು ಹೊಮ್ಮಿಸು: ಪಸರಿಸೆ ಜಾದಿಯ ಹೊಂಪಂ ಮಿಸುಪಲ್ ಪಱೆಗುಟ್ಟ ಕೊರಳ ಸರಮಂ ಕುಕಿಲೆಂದೆಸಗೆ ಕೊಳರ್ವಕ್ಕಿ (ಪ್ರಸ್ತಾಪಿ. ೬-೫೨); ನುಣ್ಣೊರಲಿಂ ಪಱೆಗುಟ್ಟುವ ಪರಪುಟ್ಟದ ಪಾಡುವ ಪಱಮೆವಱಯ (ಜಯಕಾ. ೧-೪೬). **ಹಱೆಗುಟ್ಟು:** ೨. ತುಟಿ ಮಿಡುಕು ತ್ರೀರೆ ಹಲು ಹಱೆಗುಟ್ಟುತೆ . . . ನಿಲುತ್ತಂ (ಧ್ವಂಗೀರ. ಹ. ೪೭೩-೩೦).

[ಪಱೆ₁ + ಕುಟ್ಟು₁]

ಪಱೆಗುಲ (ನಾ). ಹರೆಯನ್ನು ಬಾರಿಸುವವನ ಕುಲ; ಹೊಲೆಯರಲ್ಲಿ ಒಂದು ಸಂಗಡ: ಪರಮಭಕ್ತನೆನಿಸಿ ನೆಱೆ ನಾಯನಟ್ಟುಂಬ ಪಱೆಗುಲದೊಳಗೆವುದೆನ್ನಱೆ (ಸಾಸಂಚಾ. ೩-೫೫). [ಪಱೆ₁ + ಕುಲ]

ಪಱೆಮೆ (ನಾ). ಒಂದು ವಂಶದ ಹೆಸರು: ಸ್ವಸ್ತಿ ಶ್ರೀಮತ್ ಪಱೆಮೆಯರ ಕುಲದ ತೊರೆಯರ ಮಾರಣ್ಣಗಂ ಅನ್ನವ್ವೆಯಕ್ಕಂಗಂ ಪುಟ್ಟಿದ ಪರತಾಕಣ್ಣ (ಎಕ. IV, ಗುಂಡ್ಲುಪೇ. ೮೪-೧; ಸು. 1000 ?). [?]

ಪಱೆಯ₂, ಪರೆಯ₂ (ನಾ). ೧. ಮಾದಿಗ; ಹೊಲೆಯ: ಬಿನ್ನಣಯಹ ಪಱೆಯಂಗೊಸೆದಿರ್ದೊಡೆಡೆಗೆ ತಾಮುಣಲಿಕ್ಕುವರೊಡಂಬಡಿಂ ಮಾಲೆಯಿಕ್ಕುವನ್ನರುಮೊಳರೇ (ಬಂಹರಿ. ೫-೧೫). ೨. (?): ಅಗಳು ಪಾಣ್ಡೆಯನ ಮೇಗೆ ಎಟ್ಟು ಪಱೆಯಱೂಱಱೂದೊ (ಎಕ. X, ಶ್ರೀನಿವಾ. ೩೦-೯; 800 ?). **ಪರೆಯ₂:** ೧. "(ದ. ಇಂಡಿಯಾದಲ್ಲಿ) ಕೀಳುಜಾತಿಯವನು; ಪರೆಯ; ಹೊಲೆಯ; ಮಾದಿಗ; ಅಂತ್ಯಜ" (Pariah. ಇಂಕಸಿ). [ದೇ.॥ ತಮಿ. ಪಱೈಯ; ಮಲ. ಪಱಯ]

ಪಱೆವಡಿಗ (ನಾ). = ಪಱೆಕಾಱ: ಮೂಲೆಯಿಂ ಜೀವಿಸುವಂ, ಮೂಲೆವಡಿಗಂ . . . ಪಱೆವಡಿಗಂ, ಪೂವಡಿಗಂ (ಕಬ್ಬಾನು. ೪೧೬ ಪ್ರಯೋ).

[ಪಱೆ₁ + -ವಡಿಗ]

ಪಱೆವೊಟ್ಟು (ನಾ). ಹರೆಯನ್ನು ಬಾರಿಸುವ ಸಮಯ;

ಸಾಯಂಕಾಲ : ದಯಾಭದ್ರರೆಂಬ ರಿಸಿಯರ್ . . . ಜಿನಾಲಯ ದೊಳಾಷಾಢಮಾಸದ ಚತುರ್ದಶಿಯ ದಿವಸದಂದು ಪಟ್ಟೆಪೊಟ್ಟು ಬಂದು ಜೋಗುಗೊಂಡಿರ್ದರ್ (ವಡ್ಡಾರಾ. ೨೭-೨೪). [ಪಟ್ಟೆ$_1$ + ಪೊಟ್ಟು]

ಪಟ$_1$, ಪಳ$_1$, ಪಳೆ, ಪಟ್ಟೆ, ಹಳ$_1$, ಹಳೆ, ಹಟ, ಹಟ್ಟೆ (ಸಪೂರೂ). 'ಪಟದು' ಎಂಬ ನಾಮಪದಕ್ಕೆ ಸಮಾಸಗಳಲ್ಲಿ ಬರುವ ಆದೇಶರೂಪ : 'ಪಟಗನ್ನಡ', 'ಪಟಗಲಿ' ಪರಾ. **ಪಳ$_1$** : 'ಪಳಗಬ್ಬಿಗ' ಪರಾ. **ಪಳೆ** : 'ಪಳೆಗನ್ನಡ', 'ಪಳೆವಾತು' ಪರಾ. **ಪಟ್ಟೆ** : 'ಪಟ್ಟೆನವಿರ್' ಪರಾ. **ಹಳ$_1$** : 'ಹಳಗನ್ನಡ', 'ಹಳವಾತು' ಪರಾ. **ಹಳೆ** : 'ಹಳೆಗನ್ನಡ', 'ಹಳೆವರ' ಪರಾ. **ಹಟ** : 'ಹಟಗೂಂಟಣಿ' ಪರಾ. **ಹಟ್ಟೆ** : 'ಹಟ್ಟೆಗೂಟ್' ಪರಾ.

ಪಟ$_2$ (ನಾ). (?) : ದೇಗುಲಂ ಮಾಡಿಸಿ ಈ ಕಟ್ಟಂ ಪಡಿಸಲಿಸಲೆಂದು ಕೊಟ್ಟುದು ಯಾ ಪಟಂ (ಎಕ. VII, ಶಿಕಾರಿ. ೨೮೪-೨ ; 902). [?]

ಪಟಅಲಗು (ನಾ). ಹಳೆಯ ಖಡ್ಗಧಾರೆ,-ಕತ್ತಿಯ ಬಾಯಿ : ಪೊಸಸುಗ್ಗಿ, ಪೊಸಅಡಕೆ, ಪಟಗಟವೆ, ಪಟಅಲಗು (ಭಾಷಾಭೂ. ೧೪೪ ಪ್ರಯೋ). [ಪಟ$_1$(<ಪಟದು) + ಅಲಗು$_2$]

ಪಟಏಱು (ನಾ). ಹಳೆಯ ಏರಿ,-ಒಡ್ಡು : ಆಗ್ನೇಯದ ದೆಸೆಗೆ ಸೀಮೆ ಕುಳಪ್ಪರ್ಗೆಱೆಯ ಒಳಗಣ ಪಟಏಱುಯೆ (ಎಕ. IX (S), ಬೆಂಗಳೂ. ೧೫೧-೩೫ ; 828). [ಪಟ$_1$(<ಪಟದು) + ಏಱು(<ಏರಿ$_1$)]

ಪಟಂಗಾಸು (ನಾ). (?) : ಪಟಂಗಾಸಿನ ಪೊನ್ನ ಗಂಟೆಯವೊಲೊಪ್ಪಿದುದುದ್ಗತಭಾನುಮಂಡಲಂ (ಅಜಿಪು. ೬-೭೦). 'ಪದಂಗಾಸು$_2$' ಪರಾ.

[ℙ ಇದು ತಮಿಳಿನ 'ಪಟಜ್ಕಾಚು'(=ಹಳೆಯ ಕಾಲದ ನಾಣ್ಯ), ಎಂಬುದಕ್ಕೆ ಸಂಬಂಧಿಸಿರಬಹುದು]

ಪಟಕ 'ಪಟಹ' ನೋ.

ಪಟಗ$_1$, ಪಳಗ (ನಾ). ಒಣಗಿದ ಎಲೆ ; ತರಗೆಲೆ : "ಪಟಗಂ= ಒಣಗಿದೆಲೆ" (ಶಮದ. ಪರಿ. ೧) ; "ಪಟಗಮೆನಲೊಣಗಿದೆಲೆ" (ಸಂಜೀವ. ೪); ನಡೆಗೆಟ್ಟು ತಡೆವಟ್ಟು ಕೊಟಗಂ ಪಟಗದ ನೆರೆಯ ಮಱೆಯಱೆಯೊಳ್ ತಾಂಟದತ್ತು (ರಾಮಾಶ್ವ. ೧೩೫-೨೪). **ಪಳಗ** : ಪಳಗಂ ತಿಂದಿರ್ಪ ನೀಡುಂ ಪಸಿದುರೆ ಮರುದಾಹಾರದಿಂದೊಪ್ಪಿ ತೋರ್ಪ (ಜಾಪ್ರಾಶ. ೯೬) ; ಕೆಂದಳಿರ ನಳನಳಿಕೆ ಪಳಗಂಗಳುದಿರ್ವ ದನಿ (ಸಂಸಪ. ೩೧-೨).

[ದೇ.॥ ತಮಿ. ಪಟುಪ್ಪು = ಹಣ್ಣಾದ ಎಲೆ]

ಪಟಗ$_2$ (ನಾ). ಪಟಹವಾದ್ಯವನ್ನು ಬಾರಿಸುವವನು : ಪಱೆಯವರಲ್ಲಿಗೆ ವಂದವರೊಳ್ ಸಂಭಾಷಿಸುತಮಿರ್ದು ಪ[ಟಗ]ನ ಕಯ್ಯ ಪಟಹಮಂ [ಕೊಂ]ಡು ಬಾಜಿಸುತಿರ್ದಂ (ಬಂಹರಿ. ೫-೧೨ ಪ).

[<ಪಟಹ + -ಗ$_2$]

ಪಟಗನ್ನಡ, ಪಳೆಗನ್ನಡ, ಹಳಗನ್ನಡ, ಹಳೆಗನ್ನಡ (ನಾ). ಪ್ರಾಚೀನವಾದ ಕನ್ನಡ : ಪಟಗನ್ನಡಮಂ ಪೊಲಗಿಡಿಸಿ ನುಡಿವರಾಗವೆ ಬಲಹೀನರ್ (ಕವಿರಾ. ೧-೪೮) ; ಪಟಗನ್ನಡಂ ಪುದುಂಗೊಳೆ ಕೊಟ್ಟೆ ಸಕ್ಕದಮಂ ತಗುಟ್ಟಿ ಜಾಣ್ ಕಿಡೆ ಮುತ್ತಂ ಮೆಟಸಂ ಕೋದಂತಿರೆ ಪೇಟ್ವಟಾಗವಿಗಳ ಕವಿತೆ ಬುಧರನೆರ್ದೆಗೊಳಿಸುಗುಮೇ (ಕಾವ್ಯಾವ. ೫೫). **ಪಳೆಗನ್ನಡ** : ಒಳುಗನ್ನಡ ಬೆಳುಗನ್ನಡ ಪಳೆಗನ್ನಡ ದೇಶಿಯಂಗಳಾ ಕನ್ನಡಮಂ ತಿಳಿ (ಕವಿಜಿ. ೪-೨). **ಹಳಗನ್ನಡ** : ನಡುಗನ್ನಡಕ್ಕೆ ಹಿಂದಿನದು "ಹಳಗನ್ನಡ" (ಕೈಪಿಡಿ. ೧) ; ಹಳಗನ್ನಡದ ನಿಯಮದಂತೆ ರಾಮಂಗೆ ಆತಂಗೆ, ಅವಳ್ಗೆ-ಎಂದಾಗುವುದಷ್ಟೆ (ಸಂಶೋಧ. ೬೧). **ಹಳೆಗನ್ನಡ** : ತೆಲುಗಲಿಪಿ ನಾಗರದ ಲಿಪಿ ಗ್ರಂಥಲಿಪಿ ಹಳೆಗನ್ನಡದ ಲಿಪಿ ದ್ರಾವಿಳಲಿಪಿಯು . . . ಮೊದಲಾದ ಹಲವು ಲಿಪಿಗಳನೋದ ಬಲ್ಲಗ್ಗಳದ ಕರಣಕರಂ ಕರೆಸಿ (ಬಸಪು. ೫-೫೩) ; ಈ ಹೊಸಗನ್ನಡಯುಗದಲ್ಲಿಯೂ ಹಳೆಗನ್ನಡದ-ಅಚ್ಚಗನ್ನಡದ ಕೆಲವು ಸಾಲುಗಳು . . . ಮಿನುಗುತ್ತವೆ (ಕಾಲೂರ. ೬ ಹರಕೆ). [ಪಟ$_1$(<ಪಟದು) + ಕನ್ನಡ$_1$]

ಪಟಗಬ್ಬ (ನಾ). ಹಳೆಯ ಕಾವ್ಯ ; ಪ್ರಾಚೀನ ಕಾವ್ಯ : ಎಸೆಯದೆ ಪೊಟ್ಟು ಕೆಟ್ಟ ಪಟಗಬ್ಬಮನಾವಗಮೆಮ್ಮವೆಂದು ಬಾಚಿಸಿ (ತಾಂತಿಪು. ೧೫-೭೬) ; ಪಟಗಬ್ಬಮೆಲ್ಲಮಂ ಕಕ್ಕಿಸಿ ತಿಂದು ಕುಂಬಳದ ಮಾಟ್ಕೆಯ ಮಾಡುವೆನೆಂಬ ಸಾಸಿಗಂಗಕ್ಕಟ ಪೂಣ್ಡು ನಿರ್ವಹಿಪುದೇನರಿದಾಯ್ತೆ ಮಹಾಪ್ರಬಂಧಮಂ (ಸೂಕ್ತಿಸು. ೧-೩೬). [ಪಟ$_1$(<ಪಟದು) + ಕಬ್ಬ$_1$]

ಪಟಗಬ್ಬಿಗ, ಪಳಗಬ್ಬಿಗ (ನಾ). ಹಿಂದಿನ ಕವಿ ; ಪ್ರಾಚೀನ ಕವಿ : ಪಟಗಬ್ಬಿಗರ್ನುಡಿದ ಮಾತನೆ ಪಲ್ಲಟವಿಟ್ಟು ಕಟ್ಟುವಂ ಕವಿಗಳ ವೇಷದಿಂದೆ ಕುಣಿದೇಡಿಪ ಱೋಡಗನೆಂದು ನಕ್ಕಪೆಂ (ಅನಂಪು. ೧-೪೬). **ಪಳಗಬ್ಬಿಗ** : ವಿಭಕ್ತಿ ಸಮಾಸ ಶಿಥಿಲಗಳಾ ಪಳಿಯನೇನುಂ ಪಾಡುಗವಿತೆಗಳೊಳು ವಿಚಾರಿಸ ಸಲ್ಲವೆಂಬಗ್ಗಳದ ಪಳಗಬ್ಬಿಗರ [ಪೇಳ್ಕೆಯಂ] ತೆಱದಿ ವಿರಚಿಸದೆ (ಸಾಳ್ವಭಾ. ೧-೪೫). [ಪಟ$_1$(<ಪಟದು) + ಕಬ್ಬಿಗ]

ಪಟಗಲಿ (ನಾ). ಹಿರಿಯ ವೀರ ; ಅನುಭವಿಯಾದ ಯೋಧ : ಉಬ್ಬಾಳಿಯಳವಿಯ ಲೆಕ್ಕಕ್ಕಿಱಿದು ಬೆಸಕೆಯ್ವ ಪಟಗಲಿಗಳುಮಂ . . . ನೋಡಿ (ಗದಾಯು. ೯-೩೪ ವ). [ಪಟ$_1$(<ಪಟದು)+ಕಲಿ$_2$]

ಪಟಗಳ್ಳು (ನಾ). ಹಳೆಯ ಹೆಂಡ : ಪಟಗಳ್ಳಂ ಕುಡಿದುರ್ಕಿ ಸೊರ್ಕಿ ಕೆಡಪುತ್ತೋರೊರ್ವರೊಳ್ ಪೋರ್ದು ಪೊಯ್ದೆಟ್ಟೆಯುತ್ತುಂ (ಲೀಲಾವ. ೨-೧೨೭). [ಪಟ$_1$(<ಪಟದು) + ಕಳ್ಳು(<ಕಳ್$_3$)]

ಪಟಗಟವೆ (ನಾ). ಹಳೆಯ ನೆಲ್ಲು,—ಬತ್ತ : ಪಟಗಟವೆಯ ಕೂಟ್ ತಿವುಡುಗಳೆದ ತೊವರಿಯ ತೊವೆ (ಕಾವ್ಯಾವ. ೨೪೧) ; ಪೊಸ ಅಡಕೆ, ಪಟಗಟವೆ (ಭಾಷಾಭೂ. ೧೪೪ ಪ್ರಯೋ). [ಪಟ$_1$(<ಪಟದು) + ಕಟವೆ]

ಪಟಗಾಂಪ (ನಾ). ಮುದಿ ದಡ್ಡ ; ವಯಸ್ಸಾದ ಮೂರ್ಖ : ಪಟಗಾಂಪರ ನುಡಿ ಮುತ್ತುಂ ಮೆಟಸುಂಗೋದಂದಂ (ತಾಂತಿಪು. ೧೦-೧೮೧). [ಪಟ$_1$(<ಪಟದು) + ಗಾಂಪ]

ಪಟಗುಂಟಣಿ, ಹಟಗೂಂಟಣಿ (ನಾ). ವಯಸ್ಸಾದ ಕುಂಟಣಿ,—ತಲೆಹಿಡುಕಿ : ಚೆಲ್ಲದೊಳೆ ನುಡಿದು ಪೊಸಸವಿಯಲ್ಲಮನಿತ್ತಗಲೆ ನೂಂಕಿ ಕಳೆದಂ ಚದುರಂ ನಲ್ಲರೊಳೆ ನೆರೆಯಲೀಯದ ನಿರ್ಲಜ್ಜೆಯೆ ಲಜ್ಜೆಯೆಂಬ ಪಟಗುಂಟಣಿಯಂ (ಲೀಲಾವ. ೧೩-೧೫). **ಹಟಗೂಂಟಣಿ** : ಹಟಗೂಂಟಣಿ ಶಿಕ್ಷಿಸಿದಳ್ ಮೃಗಾಕ್ಷಿಯಂ (ತಾಂತೀಶ್ವ. ೧೧-೭೭).

[ಪಟ$_1$(<ಪಟದು)+ಕುಂಟಣಿ]

ಪಟಗೂಟ್, ಹಟ್ಟೆಗೂಟ್ (ನಾ). ಹಳೆಯ ಆಹಾರ ; ತಂಗಳನ್ನ ; ಈ ಪಟಗೂಟ ಪಂದೆಗಳ್ಗಿಂದಿನಿತೇತಕೆಂದಿಟಾಕೆಗೆಯ್ತುದು ನೀತಮಿದಲ್ತು (ಚಕವಿ. ೫-೪೫). **ಹಟ್ಟೆಗೂಟ್** : ತಾಮಿರ್ವರುಂ ಪೋಗಿ ತಿರಿತಂದೆಂಜಲು ಹಟ್ಟೆಗೂಟಾಂದೆನ್ನಂ ಸಲಹೆ (ಪೂರ್ವಪು. ೨೧).

[ಪಟ$_1$(<ಪಟದು)+ಕೂಟ್$_1$]

ಪಟಗೆಯ್ (ನಾ). ಹಳೆಯ ಹೊಲ : ಅಸವಸದಿಂ ಪಟಗೆಯ್ಯಂ ಕಸಮಂ ಸೋದಿಸದೆ ಬಿತ್ತಿದೊಕ್ಕಲಿಗನವೋಲ್ ಸಸಿಯಂ ನೋಡಿ ತಳೋದರಿ ಬಿಸುಸುಯ್ಗುಂ ಬಯ್ಗುಮಂತೆ ಮಾಡಿದ ಬಿದಿಯಂ (ಕಾವ್ಯಾವ. ೪೫೪). [ಪಟ$_1$(<ಪಟದು) + ಕೆಯ್$_4$]

ಪಟದು, ಪಳದು, ಹಳತು, ಹಳದು, ಹಟದು (ನಾ). ೧. ಹಳೆಯದು ; ಹಿಂದಿನದು ; ಪೂರ್ವಕಾಲಕ್ಕೆ ಸೇರಿದುದು : "ಜೀರ್ಣಂ, ಜರೆತ್, ಪುರಾಣಂ . . . ಪುರಾತನಂ-ಈ ೬ ಪ(ಹ)ಟದು" (ಹಲಾಯು. ೧೧೮-೨೬) ; ಪೊಸತುಂ ಪಟದುಮನಱಿದು ಪರಿಯಿಸಲ್ ನೀನೆ ಬಲ್ಲೆ

(ಪಂಪಭಾ. ೫-೪೬ ವ); ಪೊಸತು ಪುದಿಗೆದು ಪೊಜಗೊಳಗು ನವು ಮೆನಿಪ್ಪಿವಜೊಳತ್ಯಮಂತಕ್ಕೆ ನಿಪಾತನೆ ಪಡೆಗುಮವಜೊಳಗಿಂಗ ಸಂಗಡಿಂ ನಮುನಿಸರ್ತಮುಳ್ಳಾದೇಶಂ (ಶಾವ್ಯಾನ. ೨೬೯). **ಪೆಳದು**: ೧. ಪಳದೆಂದು ತೆಗೆದೊಗೆಯುಗುಂ (ತಾಲೂಕ. ೧೪೭-೪೨೫). **ಹಪಳತು**: ೧. ಥಂದಥಂದ ನವಬಂಧ ಪಡೆದು ಬಂದಿಪವು ಹಳತ ಮರೆನಿ (ಆದಿಪು. ೨೪೪-೨೦); ಹಪಳೂ ಪರ್ಜಿಗೆ ಬರಲಿ, ಹೊಸತೂ ಬರಲಿ (ಒಂಬಿಪ. ೬೪); ಹಪಳಗೆ ತೇಪೆ ಹಾಕಿ ರಿಪೇರಿ ಮಾಡುವ ಕೆಲಸದಪ್ಪು ಅದಿವೇಕ ಇನ್ನೊಂದಿಲ್ಲ (ಹೊಪ್ರ. ೪. ಮುಸ್ನು೩). (ಗು). ೨. ಹಳೆಯ; ಪ್ರಾಚೀನ: ಹಳತು ಗ ೧೫ ಅ ಶುದ್ಧ ಗಾ ಲು ಮೃಷ್ಟಾಂನ್ನ ಸಮಾರಾಧನೆ ದಕ್ಷಿಣೆ ಸಹ ಗ ೧ . . . ಅಂಪ್ತು ಹಳತು ೨೫ ೦ (ಮೈಆರ್. ೧೯೪೩, ೫೦-೨೫; 1682); ಹಳತು ಗ ೩೫ ೦ ಆಕ್ಕಾರದಲ್ಲೂ ಯಿದೇ ಹಳತು ಆಕ್ರುವರೆ ವರಹಾವಂನ್ನು . . . ಪಟ್ಟಿಸಿವ ದಾನಶಾಸನ (ಮೈಆರ್. ೧೯೩೩, ೩೧-೪೦; 1737). **ಹೆಳದು**: ೧. ಹಳದು ಮಿಂಠಿ ಹೊಸದಿಲ್ಲ, ಬಿಳದು ಮಿಂಠಿ ಬಣ್ಣವಿಲ್ಲ (ಗಾದೆ). **ಹುಬದು**: ೧. ಹುಬದಪ್ಪ ಮಾತದ್ಕೆತಿಕ್ಕಮಳ್ಳುಂ (ಮಂಗರಾ. ೩೬-೨).

ಪಳೆಯಂತೆ = ಹಿಂದಿನಂತೆ; ಮೊದಲಿನಂತೆ: ಮತ್ತೆ ಮರವಟ್ಟುಗಿ ಕ್ರಿಮಿಗಳ ಮೊಕ್ಕದಲಿ ಜನಿಸುವರು ಮನುಜರ ಸತ್ವವಹ ಪಳೆಯಂತೆ ತನ್ನಯ ಫಳುತಿಯಿಲ್ಲದಡೆ ಸುತ್ತಿ ಬಹ ಚಕ್ರದಲಿ ಸಾವುತ ಮತ್ತೆ ಹುಟ್ಟುವ ದುಃಖಸಾಗರದುತ್ತರಣವನು ಕಾಣದಿಹ ನರನಾಮಸಹನೆಂದ (ನಿಭಾಗ. ೧೧-೧೬-೪೨); ಕಣ್ಣಿದಿರನನ್ಯಯದ ಪಾರ್ಥನ ತುರಂಗಮದು ಪೆಣ್ಣು ದುರೆಯಾಗಿ ಪೆರ್ಬುಲಿಯಾಗಿ ಪಳೆ[ಪಾಠಾಂ. ೪]ಯಂತೆ ಕಟ್ಟೊಳಿಸು ವಮಲಾತ್ಮಮಾಗಿಯಾತ್ಮೈರ್ಯದಿಂಸ್ತೀ ರಾಜ್ಯಮಂ ಪೊಕ್ಕುದು (ಜೈಮಿಭಾ. ೧೫ ಸೂಚನೆ). ಪಳೆಯ ಮಾಳ್ಕೆ = ಹಿಂದಿನ ರೀತಿ; ಮೊದಲಿನ ಬಗೆ: ದೇಶದೊಳಲ್ಲಿಗಲ್ಲಿಗೆತ್ತಿತ್ತಲುಮಾವಗಂ ಪಳೆಯ ಮಾಳ್ಕೆ ಪೊಲಾದುದು ಗಂಗರಾಜನಂ (ಎಳ. II, ೭೩-೩೭; 1118). ಪಳೆಯ ರೋಗ = ಹಳೆಯ ರೋಗ; ಬಹಳ ಕಾಲದಿಂದ ಬೇರೂರಿರುವ ವ್ಯಾಧಿ: ಪಳೆಯ ರೋಗಕ್ಕೌಷಧಂಗೊಳಲ್ ನವರೋಗಮೊಲಿದು ಬಂದಂತೆ (ಚಬಪು. ೩೩-೭). ಪಟದಾಗು = ಹಳಸಿ ಹೋಗು; ರುಚಿ ಗೆಡು: ಕಾಂತೆಯರ್ಗನುರಾಗಂ ಪಟದಾಗೆ ಪುರುಷರೌಷಧಿಗಳೆಗೆಯವೊಲ್ ಮನಕ್ಕೆ, ಹೇಯಮಂ ಪುಟ್ಟಿಸುಗುಂ (ಪಶಕು. ೪-೪೫). . ಪಟಿಯ, ಪಳೆಯ, ಹಳೆಯ = ವಯಸ್ಸಾದವನು; ಹಿರಿಯ; ವೃದ್ಧ: ಮುನ್ನಂ ಪಟಿಯರುಮನಾಪ್ತರುಮಂ ಪೊಲಿಗಿಕ್ಕಿ (ಪಂಚತಂ.೧೩೯-೧೯); ಪುರದೊಳಗಣ ಭವ್ಯಜನರುಂ ಪಟಿಯರುಂ ಪ್ರಧಾನರುಂ . . . ರಾಗಿನಿ (ಧರ್ಮಾಮೃ. ೪-೨೦೩); ಸಂದಾಯಿಯೆಂಬ ಪಳೆಯನ ಕೈಯೊಳಾಗಳ್ ಕೊಟ್ಟ ಪಿರಗೊಯ್ದು ಪಳಿಗೀವುದೆನೆ (ಭೈರವೇ. ೧-೨೬೪); ಅಂದಿಂಗೆಯು ನೀನು ಹಳೆಯ ನಾನು (ಬಸವ. ೨); ಹಳೆಯರನು. ನೇವಕರನಾಪ್ತರ ಬಳಗವನು ನಿಜಮಂತ್ರಿವರ್ಗವನುಳಿದು ತಾನನುಚಿತದಿ ದುರ್ಜನರುಗಳ ಪಾಲಿಸಿದ ಫಲವು ಕೈಯೊಡನಾಯ್ತು (ಜೀನಂಚ. ೪-೭೩); ಹಳೆಯನಹಿ ನರಗೊದಲೊಂದಿಲ್ಲ (ನಿಭಾಗ. ೫-೭-೪). ಪಟಿಯ ಪಾಡಿ = ಹಳೆಯ ಸೈನ್ಯ; ಹಿಂದಿನ ಸೇನೆ: ಅಂತು ಬೆದಂಗುವೆತ್ತು ನಡೆದ ಪುಸಿವಡೆಯ ಪೋಗೆ ಪಟಿಯ ಪಾಡಿಯಂ ಕೂಡಿಕೊಂಡು . . . ನಡೆದಂ ಕಾದಂ (ಕಬ್ಬಕಾ. ೨೦೪). ಪಟಿಯ ಬೇವಿನೆಣ್ಣೆ = ಹಳೆಯದಾದ ಬೇವಿನೆಣ್ಣೆ: ಕನಲ್ವ ಕೆಂಡದ ಮೇಲೆ ಪಟಿಯ ಬೇವಿನೆಣ್ಣೆಯೊಳ್ ಕೊಯ್ದಿಕ್ಕಿದ ಬೆಳ್ಳುಳ್ಳಿಯ ತಂಪಿನಂತೆ . . ಬೇವ ಪೆಣಂಗಳ ಕ[ಂ]ಪು ನಾಜುವುದರ್ಕೆ ಸ್ಕೈರಿಸಲಾಜದೆ (ಪಂಪಭಾ. ೧೩-೭೧ ವ). ಪಟಿಯ ಸೀರೆ, ಹಳೆಯ ಸೀರೆ, ಹಳೇಸೀರೆ, ಹಟಿಯ ಸೀರೆ = ಹಳೆಯದಾದ ಬಟ್ಟೆ; ಹಳತಾದ ವಸ್ತ್ರ: ಪಟಿಯ ಸೀರೆಯಂತೆ ಗುಣದೊಳ್ ನೂನಮಾಗದೆ (ಧರ್ಮಾಮೃ. ೫-೧೪); ಅವಳು ಬಣ್ಣ ಮಾಸಿದ ಹಳೆಯ ಸೀರೆಯನ್ನು ಉಟ್ಟಿದ್ದಳು (ರೂಢಿ); ನನ್ನ ಹಳೇ ಸೀರೆ ಹರಿದು ಹೋಯಿತು (ರೂಢಿ); "ಪಟಿಚ್ಚರಮೆಂಬುದು ಪಟಿಯ ಸೀರೆ" (ಪಲಾಯು. ೧೦-೩೧೬); "ಪಟಿಚ್ಚರ. ಜೀರ್ಣವಸ್ತ್ರ—ಪಟಿಯ ಸೀರೆ" (ನಾಚರಾ. ೪). **ಪಳೆಪ್ಪೆಳ, ಪಳೆಯ ಪಯಿಳ, ಪಳೆಯ ಪೈಳ, ಪಳೇಪ್ಪೆಳ** = ೧. ಹೆಂಡ ಇಳಿಸುವುದೇ ಕುಲವೃತ್ತಿಯಾಗುಳ್ಳ ಒಂದು ಜಾತಿ ಹಾಗೂ ಆದಕ್ಕೆ ಸೇರಿದ ವ್ಯಕ್ತಿ; ಈಡಿಗ: ಪಳೆಪ್ಪೆಳದವರ ಗ್ರಾಮಾಂತ್ರಗಳಿಂದಾ ವರುಷ ೧೫೯ ವರ್ಷನೆ (ಎಳ. XII, ಮುದ್ದಗಿ. ೩೧-೩; 1686); ಪಳೆಪ್ಪೆಳರು—ಇವರು ಕಾನಡಾಜಲ್ಲೆಯಲ್ಲಿಯೂ ಧಾರವಾಡಜಿಲ್ಲೆಯ ದಕ್ಷಿಣಭಾಗದಲ್ಲಿಯೂ ಮಾತ್ರ ಇರುತ್ತಾರೆ (ಕಭಾಗ. ೧೩೭); ಯಳವರ್ಷ ಪಳೇಪ್ಪೆಳದ ಗಿರಿಯನೆಂಬ ದಂಡಿಗೇ ದಾಸನ ಮೈಮೇಲೆ ದೇವತೆಯು ಬಂದು . . . ಪೂಣಾರಿಸಿದಳಂತೆ (ಚತ್ರಪಾ. ೭); ನಮಗೋಸ್ಕರ ನಮ್ಮ ಪಳೇಪ್ಪೆಳ ದವರು ಕೆಲಸ ಮಾಡುವುದಿಲ್ಲವೆ? (ಸುಮತಿ. ೭೪). ೨. ಒಂದು ವಿಶಿಷ್ಟ ಪರಿಚಾರಕವರ್ಗ: ತಂತಮ್ಮ ನೆಚ್ಚಿಗರ್ಗಲ್ಲಿ ಪಲತೆರಗಳಿಂದ ಸ್ಥಿರರಾಗಿರುವ ಮಹಾರಾಜವಂಶದವರು, ಸಾಮನ್ತರು . . . ಪಳೆಯ ಪಯಿಳದವರು ದಣ್ಣಾಯಿಳರು (ಬಿಟ್ಟಿ. ೩೦-೪); ತಳುವದೆ ಬೆಟ್ಟದ ಡಾವಿಂದ್ರ ಸಾಕಿದ ಪಳೆಯ ಪೈಕದ ನಾಯಳರು ಒಳಹೊಕ್ಕು ವೈಂ ಮಾರ್ಬಲವನು ಸದೆದಾಗ ಕಳಿಕೊಳವನು ಮಾಡಿದರು (ಕಂಸವಿ. ೩-೭೯); ಎಳದು ಮೃಗವನು ಕೊಲ್ವ ಪಳೆಯ ಪೈಕದ ಮಂದಿ ಒದಗೆ (ಕುಮಾಸಾಂ. ೧೪೪). [ದೇ॥ ತಮಿ. ಮಲ. ಪು; ತುಳು. ಪರ; ಕೊಡ. ಪಳೆ]

ಪಟನವಿರ್, ಪಟಿನವಿರ್ (ನಾ). ೧. ಪಳೆಯ ಕೂದಲು: ಪಂದಿಗಳುಂ ಪಟನವಿರಿಕ್ಕಿದುವು (ಪಂಪಭಾ. ೫-೩೪); ಮೂಪೆಯಿಟ್ಟೆಜಗಿದ ಮಾಟ್ಕೆಯಿಂ ಪಟನವಿರ್ ನೊದಲಿಂದೆ ಕಟ್ಟುಲ್ತು ಬೆಳ್ಳವಿರ್ ತುಜುಗಿ (ಸೂಕ್ತಿಸು. ೩-೩೭). **ಪಟಿನವಿರ್**: ೨. ನರೆತ ಕೂದಲು: ಪಟಿನವಿರೆಲ್ಲಂ ಮೆಯ್ಯಂ ಪಳೆದುಂ ಬೆಳ್ಪಿಗಗಳಾಗಿ ತೀರಿದರ್ಗುವು (ಸೂಕ್ತಿಸು. ೩-೯೩). [ಪಟು (<ಪುದು) + ನವಿರ್]

ಪಟನೀರ್, ಹಳೆನೀರು (ನಾ). ಬಹಳ ದಿನಗಳಿಂದ ಶೇಖರಿಸಿಟ್ಟ ನೀರು; ಹಳೆಯ ನೀರು: ಸಾರಮಿಷ್ಟಿತ್ತರಯು ಬೇರಂ ಸ್ಥೈಂಥವಸಮುನ್ಮಿತಂ ಪಟನೀರಿಂದೋರಂತರೆ ಕಸುವೊನ್ನೊಳ್ ಜಜುಜಿ ಕೊಂಡೆಜ್ಜೆ ನೇತ್ರರೋಗಂ ಕಿಡುಗುಂ (ಕೋಕೋಪ. ೯-೬೮); ಪೀರ್ದ ಪಟನೀರ್ಗಳನೆಟ್ಟಿಸಲಾಜದೆಯ್ದೆ ಕಂಟಿಳಿಸಿ ಮಗುಟ್ಟಿ ದಪ್ಪೆದು (ಕೀಲಾವ. ೧೨-೩೮); ಪಟು[ಪಾಠಾಂ. ೨೪]ನೀರಿಂದಂ ಮರ್ದಿಸಿ ಹಳೆಯದೊಳಂ ಪೂಸಿ ಕಿಜುಯ ಕುಟಿಜದ ಬಿತ್ತಂ ಕೊಟ್ಟಾವಿನ ತೂರ್ಯನ ವಿಷಮಬಾಗುಂ (ಖಪದ. ೧೦-೩೮). **ಹಳೆನೀರು**: ಡಾಹಕ್ಕೆ ಹಳೆನೀರಂ ಬೆಜ್ಜಗೆ ಮಾಡಿ ಕುದಿಯ ಕೊಡುವುದು (ಸಳವೈ. ೩೩). [ಪಟು (<ಪುದು) + ನೀರ್]

ಪಟನುಡಿ, ಪಳನುಡಿ, ಪಳೆನುಡಿ (ನಾ). ಪ್ರಾಚೀನವಾದ ಮಾತು; ವೇದ: ಪಟನುಡಿಯಂ ಪರ್ಚದ ಮುನಿಗಳ ಪೊಗಟ್ಟಿನಮಂದು ಳುವಧನಾದ ಪೊಲಾದಂ ನಳಯಂಗೆ ನಿಖಿಲಗುಣವೊಳ್ಳೆ ಳೆಯಂಗಳಿಂಗರಾರ್ಯವರ್ಯಂ ಗೀಗಳ್ (ಚಕವಿ. ೪-೧೯); ಪಟನುಡಿಯಂ ಬಟ್ಟಿಸಂದು ಪಲವುಂ ಪಗಲ್ ತಿರೆಯಂ ಪೊರೆಯುತೆ (ರಾಮಾಶ್ವ. ೬-೧೧). **ಪಳೆನುಡಿ**: ಕಾವ ಪಳನುಡಿಯೊಡೆಯನ ವಾಹನನು ನೀನು (ವಿಜೀಗೀ. ೨೧-೬). **ಪಳೆನುಡಿ**: ರಂಗ ನಿನ್ನಯ ಸಂಕುಗೊರಲ ಗೊಂಡರದಿಂದ ಹಿಂಗುಗಳ್ದ ಭವಪಾಶ ಹಿಂಗೆಂಬ ಪಳೆನುಡಿಯರ್ಥವೆನ್ನೆರ್ದೆಯೊಳು ಮುಂಗುಡಿಗಟ್ಟಿರುತಿರ್ಪ (ಶತಸಾಂ. ೩-೧೪). [ಪಟು (<ಪುದು) + ನುಡಿ]

ಪಟಪಟ, ಪಳಪಳ, ಪಟ್ಪಟಿ (ನಾ). ಒಂದು ಅನುಕರಣ ಶಬ್ದ: ಪಟಪಟಯೆಂದಾಲಿಕಲ್ಲಳುದಿರ್ದುವು ನಳದಿಂ (ಶಮದ. ೫೪ ಪ್ರಯೋ).

ಪಳಪಳ : ಮಣ್ಣೆತ್ತಿ ಹಾಳುವಾಗ ಏನೋ ಪಳಪಳ ಹೊಳೆಯುವುದನ್ನು ಕಂಡಳು (ಶ್ಯಾಗಮ. ೧೦೬). **ಪಟ್ಪಟಿ** : 'ಪಟ್ಪಟನೆ' ಪರಾ.

ಪಟಪಟನೆ, ಪಳಪಳನೆ, ಪಟ್ಪಟನೆ (ಅ). ಒಂದು ಅನುಕರಣಾವ್ಯಯ : ಕನಕಪ್ರಾಸಾದಪಂಕ್ತಿಗಳ್ ಪಟಪಟನೆ ಬೆಳಗುವ ಸೊಡರ್ಗಳ ನಾದಿತ್ಯನ ನಂಟರೆಂದು ತಮೋರಾಜಕಂ ಮುಳಿದು ಸೆಱೆಗೆಯ್ದು ಬೆಳಗಿನ ಸೆಱೆಯ ಮನೆಗಳನ್ನವಾದುವು (ಪಂಪಭಾ. ೪-೪೯ ವ) ; ಕೆಯ್ದೂವಿಗೆಗಳ್ ಪಟಪಟನೆಸೆದಿರೆ (ಶಾಂತಿಪು. ೮-೬೪). **ಪಳಪಳನೆ** : ಮರುಳ್ಗಳಾಟಮಂ ಪಳಪಳನೆಮೆಯಿಕ್ಕದೆ ನೋಡಿ ಮುಗುಳ್ಗಗೆ ನಗುವ ವೀರಧಟರ ಪಂದಲೆಗಳುಂ (ಪಂಪಭಾ. ೧೦-೧೧೬ ವ) ; ಪಳಪಳನೆ ಸುರಿಯುತಿರೆ ಮಾಕುಗಳ ಮುತ್ತುಮಳೆ ಕಡುಬಡವನಂತಾದನರ್ಜುನಂ (ಚಿತ್ರಾಂಗ. ೩೫-೯೫೭). **ಪಟ್ಪಟನೆ** : "ಪಟಪಟನೆ, ಪಟ್ಪಟನೆ-ವಿರಲಾರ್ಥಂ" (ಶಮದ. ಪರಿ. ೧).

[ಪಟಪಟ+-ಅನೆ$_1$]

ಪಟಪು (ನಾ). ನರೆತ ಕೂದಲಿಗೆ ಹಚ್ಚುವ ಕಪ್ಪುಬಣ್ಣ ; ಕಲಪು: "ಪಟಪು (ಪಟಪು) = ನರೆಗಿಕ್ಕುವ ಕಪ್ಪು" (ಶಮದ. ಪರಿ. ೧) ; ಪಟಪು, ಪೊಟಪು (ಶಬ್ದಾನು. ೧೪೦ ವ್ಯಾಖ್ಯಾ). [?]

ಪಟಮಱೆಪು (ನಾ). ಹಳೆಯದಾಗಿ ಮರೆತುಹೋದುದು : ಪಟ್ಟಸೂತ್ರದರಡೆಟೆಯುಮಂ ಗಂಟಿಕ್ಕುವಂತೆ ಪರಂಪರಮುಂ ಪಟಮಱೆಪುಮಾದ ನಣ್ಪಂ ಪುನರ್ನವಂ ಮಾಟ್ಟ ಬಗೆಯಿಂ ಎನ್ನನಿಂತೆಂದಟ್ಟಿದ ನೆಮ್ಮರೆಸಂ (ಶಾಂತಿಪು. ೫-೩೨ ವ).

[ಪಟ$_1$(<ಪಟದು)+ಮಱೆಪು (<ಮಱಪು)]

ಪಟಮೆ, ಪಳಮೆ, ಹಳಮೆ$_1$ (ನಾ). ಹಳೆತನ ; ಪ್ರಾಚೀನತೆ ; ಪುರಾತನತೆ : ನೀಂ ಪಟಮೆಯನೆ ತೋಱಿ ಕೀಱಿ ಕೆಡೆಮಡಿದಪೆ (ಪಂಚತಂ. ೧೦೬-೮) ; ಪಟಮೆಯ ದೇವರ ಮೇಲೆಂತಯ್ . . . ಮೆಱೆದಪ್ಪಯ್ ! (ಬದ್ಧಪ್ರ. ೨೨-೪೬೫). 'ಪಟವೆ' ಪರಾ. **ಪಳಮೆ** : ಪಳಮೆಯಾಳದ ಕಣ್ಣನೆನ್ನ ಕಣ್ಣಲಿ ನೆಟ್ಟು (ಹೊಂಗಳು. ೧೭-೧೬). **ಹಳಮೆ$_1$** : ಬಳಸಿನಲಿ ಬಂದಿಹರ ಕಾಣುತಿಹೆನು . . . ಹಳಮೆಯ ಮಹಾತ್ಮರನು ಪರಮಕವಿಗಳನು (ಇಂಗೀತ. ೯೩-೪) ; ಭಾರತದೇಶದ ಇತಿಹಾಸಕ್ಕೆ ಇರುವಷ್ಟು ಹಳಮೆ, ಹಿರಿಮೆ ಪ್ರಪಂಚದ ಬೇರೆ ಯಾವ ದೇಶಕ್ಕೂ ಇಲ್ಲ (ಭಾರದ. ೪೧೭) ; ೭ನೆಯ ಶತಕದ ಬಾದಾಮಿಶಾಸನವು ತ್ರಿಪದಿಯ ಹಳಮೆಯನ್ನು ತಿಳಿಸುವುದಲ್ಲದೆ . . . ಒಬ್ಬ ಕಲಿಯ ಶಬ್ದ ಚಿತ್ರವನ್ನು ಕೊಡುತ್ತದೆ (ತವನಿ. ೧). [ಪಟ$_1$(<ಪಟದು)+-ಮೆ$_3$]

ಪಟಯಿಂಗ (ನಾ). (?) : ×× ನಮೆಸ್ಯ ನೆತ್ತರೊಗೊಡೆ[ಬಾ]ಟಿ ಮಱುವಕ್ಕ ××× ವ ಪಟಯಿಣ್ಣಗೆ[ಗೊ]ಣ್ಡೊಡೆ ಬಾಟ್‌ನೆನ್ದೀ ವೃತ[ಂ]ಗಳಂ ಸಲಿಸುತ್ತು (ಸೌಇಇ. XI-1, ೧೦-೧೦ ; 864). [?]

ಪಟಯಿಗೆ, ಪಳಯಿಗೆ, ಪಳವಿಗೆ, ಪಟವಿಗೆ, ಹಳಯಿಗೆ, ಹಳವಿಗೆ, ಹಟಯಿಗೆ, ಹಟವಿಗೆ (ನಾ). ಧ್ವಜ ; ಪತಾಕೆ ; ಬಾವುಟ : "ಪಟಯಿಗೆಯೆಂದು ಕೇತನದೊಳಂ" (ಕರ್ಣಾನಿ. ೭೯) ; ಪಟಯಿಗೆ ಬಿಟ್ಟೊಡೆ ಬೀರಡ ಪಟವಿಗೆಯ ನಿಱಿಸಲೆಂದೆ ಹರಿವಕ್ಷಮನಲ್ಲಟಿಪೋಗೆಯೆಚ್ಚು (ಪಂಪಭಾ. ೧೨-೨೦೯) ; ದಿನಕರನ ಹಯಂ ಗಗನಾಧ್ವಪೇದಮಂ ಪಟಯಿಗೆಗಳ ತಣ್ಣೆಲರ ತೀಟದಿಂ ತೊಲಗಿಸುಗುಂ (ಪಂಠಾಮಾ. ೧-೧೧೬). **ಪಳಯಿಗೆ** : ಸಾರದಿರಿತ್ತಲು ಮುಳಿದಡೆ ಮಾರಿಗಳೀ ಪಾರ್ವ್ವರೆಂದು ಕಲಿಯಂ ದೇವಾಗಾರದ ಪಳಯಿಗೆ ದೂರದೆ ಬಾಗಿಸುವನ್ತಿರ್ಕುಮಲ್ಲಿ ವಾತೋದ್ಧೂತಂ (ಸೌಇಇ. IX-1, ೧೫೮-೪೬ ; 1092) ; ಮಿಳಿರ್ವ ಪಳಯಿಗೆ . . . ಚಾಮರನಿಚಯದಿಂದೆ ಸಿಂಗರಿಸಿರ್ದ ಥಳಥಳಿಪ ಮಣಿರಥಾವಳಿಗಳು ಪಳಂಚಿದವು (ಸಾಳ್ವಭಾ. ೨೫-೧೭) ; ಕರಮಿದೆ ನನ್ನಿಯೆನುತ್ತುಂ ಬಿರಿದಿನ ಪಳಯಿಗೆಯನೆತ್ತಿಸುತ್ತೆ ಸೆದಿರ್ದಂ (ವೃಷದಿ. ೩೭-೮). **ಪಳವಿಗೆ** : "ಪಳವಿಗೆ ಕೇತನಕೆ ನಾಮಂ" (ಭಾರನಿ. ೪೧) ; ಬಗಿದು ಪಾತಾಳಮಂ ಮುಟ್ಟುವಗಳುದ್ದದಿಂ ನೆಗಳ್ದಂಬರದೊಳೆಸೆವ ಪ[ಪಾತಾಂ.ಹ]ಳವಿಗೆಗಳೊಪ್ಪದಿರಿ (ಏಕಾಂರ. ಹ. ೨೮೧-೨) ; ಪಲಪಲ ತೆಱದ ಪಳವಿಗೆಯ . . . ರಥದೊಳಗೆ ನಿಂದನು ಶಕ್ರಸಾರಥಿ ನುಡಿಸಿದನು ನರನ (ಕುಮ್ಯಾಅ. ಓರಿಇ. ೮-೧೪) ; ಪಳವಿಗೆಯ ಹನುಮನಂ ಪಲ್ಗಿರಿಸಿ ಹರಿಯನೆಚ್ಚು . . . ಸಾತ್ಯಕಿ ಬಭ್ರುವಾಹನಾದಿಗಳನುಱೆ ನೋಯಿಸಿದನು (ಜೈಮಿಭಾ. ೨೫-೩೯). **ಪಟವಿಗೆ** : "ಪಟವಿಗೆ (ಪಟಯಿಗೆ) ಕೇತನಂ" (ಶಮದ. ಪರಿ. ೧) ; ಅನೇಕ ಪ್ರಾಸಾದದ ಮೇಲೆ ಚಿತ್ರಡ ಪಟವಿಗೆಗಳಂ ತುಱುಗಲುಂ ಬಂಬಲ್ಗಳುಮಾಗೆ ಕಟ್ಟಿಸಿ (ಪಂಪಭಾ. ೩-೪೦ ವ) ; ಪೊಂಬಾಟೆಯ ಪಟವಿಗೆಗಳೊಳಂ . . . ಸೊಂಪುವಡೆದ ಕಂಪಿನ ಪೊಟಲೆಂಬ ಬೀಡು ಬಗೆಗೊಳಿಸುತಿರ್ಪುದು (ಕಬ್ಬಿಕಾ. ೧೧೮) ; ಪಟ್ಟವಣೆಯುಂ ಪಟವಿಗೆಯುಂ . . . ಮೇಲ್ಕಟ್ಟುಂ ಒಳ್ಗೆಳೆಯನು ಮೂಟಿಗದವನುಮಾಗಿಯುಂ ತಣಿಯದೆ (ಚಿಕವಂ. ೮೫-೨೧). **ಹಳಯಿಗೆ** : ರಾಜಮುದ್ರೆ, ನಾಡ ಹಳಯಿಗೆ ಮತ್ತು ನಾಡ ಶಾಸನ ಇವುಗಳ ಗೌರವವನ್ನು ಕಾಪಾಡುವುದರಲ್ಲಿ . . . ಪ್ರಾಣವನ್ನೇ ಪಣವಾಗಿರಿಸುವನು (ಕಪಪು. ೬-೮೮) ; ಚೋಳರ ಹಳಯಿಗೆಯನ್ನು ಇಳಿಸಿ ಹೊಯ್ಸಳ ಹಳಯಿಗೆಯನ್ನು ಏರಿಸಿದ ಸಂಭ್ರಮ ಸಡಗರಗಳ ಪ್ರದರ್ಶನವಾಯಿತು (ಸವತಿ. ೩). **ಹಳವಿಗೆ** : ಹೊಳೆವ ಸಿಂಧ ಪತಾಕೆ ಹಳವಿಗೆ (ಕೌಕಿರಾ. ೧೬-೪೧) ; ನವಹೇಮದಂಡದ ಹಳವಿಗೆಯ ತುದಿವಲಗೆಯಲಿ ಹಾಯ್ಕಿದರು ಪನ್ನಗನ (ಕುಮ್ಯಾದ್ರೋ. ೧೦-೪೧) ; ಬಾಲದಲಾ ವರೂಥದ ಹಳವಿಗೆಯ ಕಂಭದಲಿ ಬಿಗಿದು (ತೊರರಾ. ೬-೨೨-೧೩) ; ದಳದ ಸಿಂಗಾರದಲಿ ಬಿರುದಿನ ಹಳವಿಗೆಯನೆತ್ತಿಸಲಿ (ತಿಮ್ಮಅ. ೬-೧೨). **ಹಟಯಿಗೆ** : ಉಚ್ಚೂಡಾ, ಅವಚೂಡಾ-ಈ ೨ (ಪರಿವಿಡಿಯಿಂ) ಹಟಯಿಗೆಯ ಮೇ(ಎ)ಲೆ ಮೊಗದ ಕೆಟಗೆ ಕಟ್ಟಿದ ಕುಂಚಂ (ಹಲಾಯು. ೭೫-೩೦೪). **ಹಟವಿಗೆ** : ಗರುಹನಂತೆ ಹಾವಿನ ಹಟವಿಗೆಯನಾರಯ್ದು ನೋಡಿಯುಂ (ಗದಾಯು. ೬-೨೮ ವ) ; ಹಟವಿಗೆ ನಮ್ಮದೀ ರಥಮಿದಪ್ಪೊಡೆ ನಮ್ಮದು (ಕುಸುಮಾ. ೧೨-೫೧). [<ಪ್ರಾ. ಪಡಾಇಯಾ./ಸಂ. ಪತಾಕಿಕಾ]

ಪಟವ 'ಪಟಹ' ನೋ.

ಪಟವಂಡು (ನಾ). ಶೇಖರವಾದ ಮಕರಂದ ; ಸಂಗ್ರಹಗೊಂಡ ಮಧು : ಕುಮುದಕೇಸರದ ರಜದೊಳರ್ದ ಚರಣಚಯಮಂ ಕೀಟಲಾಱದೆ ಪಟವಂಡಿನೊಳ್ಬೆಂಡುನೆಗೆದು ಪೊರಳ್ದು ನರಳ್ದು ಮೊರೆವ ಮಱಿದುಂಬಿಗಳ ಗಱಿಯಂ ಗಿಱ್ಱನೆ ತೆಗೆದು ನೆಗಪಿಯುಂ (ಲೀಲಾವ. ೩-೨೦ ವ).

[ಪಟ$_1$(<ಪಟದು)+ಬಂಡು$_2$]

ಪಟವಗೆ, ಹಳೆಹಗೆ (ನಾ). ಹಿಂದಿನಿಂದಲೂ ಶತ್ರುವಾಗಿರುವವನು; ಬಹಳಕಾಲದ ವೈರಿ : ಪಟವಗೆಗಳಾರುಮಂ ಗೆಲ್ದಳವಿಂ ಕೈಯಿಕ್ಕಿ ನಿಂದ ಕಲಿಯೆಂದುಂ ತನ್ನೊಳಗುಂ ಪೊಱಗುಂ ತೋಱದ ಬಟಾಯಂಗೆಱಗಿರ್ದು ಬಾಟ್ವುದೀ ಮೂಲೋಕಂ (ಕಬ್ಬಿಕಾ. ೨೩೦). **ಹಳೆಹಗೆ** : ಕೆಳೆಯನೇ ಹಳೆಹಗೆಯೆಯೆಂಬವೋಲ್ ಮಳೆಕಡೆಗೆ ಮಲೆನಾಡುಗಳ ನೋಡಿ ಹಿನ್ನಡೆಯುತಿರಲು (ಕಾಲೂರ. ೫೭-೯೨). [ಪಟ$_1$(<ಪಟದು)+ಪಗೆ$_2$]

ಪಟವಟ್ಟೆ (ನಾ). ಹಳೆಯದಾಗಿ ಸವೆದ ದಾರಿ : ಬೆಟ್ಟುಗಳ್ಕೆದೆ ನುಗಿ ಪಟವಟ್ಟೆವೊಲಾಗೆ (ದಶಕು. ೭-೬೭).

[ಪಟ$_1$(<ಪಟದು)+ಬಟ್ಟೆ$_1$]

ಪಟವರ, ಹಳೆಮರ, ಹಳೆವರ (ನಾ). ೧. ಬಹುಕಾಲದಿಂದಿರುವ ಮರ. ೨. ಹಳೆಯದಾದ ಮರದ ಕೋಳ : ನಿನ್ನಾಜ್ಞೆಗೋಸಂಗಂ ಕೋಳಂ ನೆಲಸಿತ್ತೆನ್ನ ಕರದೊಳಲ್ಲದೆ ಕೇಳಾನಿನ್ನೊರ್ವರ ಬಗೆವೆನೆ ನೋಡೆನ್ನಳವನೆನುತ್ತೆ ನುಗಿದಂ ಪಟವರನಂ (ದಶಕು. ೯-೩೧).

ಹಳೆಮರ: ೧. ನಮ್ಮ ಮನೆಯ ಎದುರಿನಲ್ಲೊಂದು ನೂರುವರ್ಷಗಳಷ್ಟು ಹಿಂದಿನ ಹಳೆಮರವಿದೆ (ರೂಢಿ). **ಹಳೆವರ:** ೩. ಒಣಗಿದ ಮರ; ಒಣಮರ: ಒಟ್ಟಿದರು ತಾಳೇಳಜುದ್ದದಲಿಟ್ಟಣಿಸಿ ಹಳೆವರವನುರಿಗಳಲಿಟ್ಟು ದೊಟ್ಟಿಱಿದಬ್ಬರಿಸಿದರು ನಾಲ್ಕುಮೈಗಳಲಿ (ತೊರಂಗಾ. ೫-೬-೯). [ಪಟ$_1$(<ಪಟದು)+ಮರ$_1$]

ಪಟವಲ್ (ನಾ). ಹಳೆಯದಾದ ಹಲ್ಲು; ಸವೆದ ಹಲ್ಲು: ನರೆದಲೆ ಬೇರ್ಬಟ್ಟ ಪಟವಲ್ ಕಲೆಗಳ್ ತುಟಿಂಗರ್ದ ಮೆಯ್ (ದಶಕು. ೮-೧೨). [ಪಟ$_1$(<ಪಟದು)+ಪಲ್]

ಪಟವಱಗೋಲ್ (ನಾ). ಹಳೆಯ ಹರಿಗೋಲು; ಜೀರ್ಣವಾದ ದೋಣಿ: ಇಱಿದೇಟುಮೊಟಂ ಗಂಡರೊಳಿಪೆಂಬುದು ತನಗೆ ಮುತ್ತ ಮುದುಗೂಂಟಣಿ ತಾಂ ಕಟಿವಣ್ ಮುತ್ತದ ಪಕ್ಕಲೆ ಪಟವಱಗೋಲ್ ಪಱಿದ ಭೇರಿ ನೀರ್ ತೆಗೆದ ಕೊಳಂ (ಸಕ್ತಿಸು. ೮-೩೮೨). [ಪಟ$_1$(<ಪಟದು)+ಪಱಗೋಲ್]

ಪಟವಾಡ (ನಾ). ಕುಗ್ರಾಮ; ಬೇಡರಾಕುಗ್ರಾಮ: ಪಟವಾಡಯ್ದನೆ ಬೇಡಯುಂ ಕುಡದ ನಾನೇನೆಂದು ಸಂಧಾನಮಂ ಗಟಿಯಿಪ್ಪೆಂ (ಪಂಪಭಾ. ೧೩-೨೪). [ಪಟ$_1$(<ಪಟದು)+ಬಾಡ$_1$]

ಪಟವಾತು, ಪಳಮಾತು, ಪಳವಾತು, ಪಳೆವಾತು, ಹಳವಾತು, ಹಳೆಮಾತು (ನಾ). ೧. ಪ್ರಾಚೀನವಾದ ನುಡಿ; ವೇದ: "ಓದು, ಪಟವಾತು, ಬೇದಂ, ಸುತಿ-ಱು ಳ ವೇದಂ" (ಕಶಸಾ. ೫೭-೨೪೨); ಜಗದೊಳ್ ಶ್ರೀಚಿಕದೇವನಂ ಪಿರಿಯರೆಲ್ಲೆತ್ತಾನುಮುಂಟಾದೊಡಂ ಬಗೆಗೊಳ್ಳುಂ ಪಟವಾತಿನೊಳ್ . . . ಮೆಯ್ದೋಱದಿನ್ನೆಲ್ಲಿಯುಂ (ಗೀತಗೋ. ೨-೫); ಒಂದೆಡೆಯೊಳ್ ಪಟವಾತಂ ನುಡಿಯುತೆ ಜನ್ನದಾರಮಂ ಪೊಸೆಯುತಿರ್ಪರ್ (ಅದ್ಭುತ. ೧-೧೦). ೨. ಪರಂಪರೆಯಿಂದ ಬಂದ ನುಡಿ; ಐತಿಹ್ಯ: "ಪಟವಾತು-ಐತಿಹ್ಯಮೆಂಬುದು" (ಹಲಾಯು. ೨೪-೧೪೬). **ಪಳಮಾತು:** ೨. ಅಂಗಗುಣ ಲಿಂಗಕ್ಕಾಯಿತ್ತು ಲಿಂಗಗುಣ ಅಂಗಕ್ಕಾಯಿತ್ತು ಇವೆಲ್ಲ ಭಾವಸಂಕಲ್ಪವಿಕಲ್ಪವು ಅಂಗಲಿಂಗಮೆಂಬುದು ಪಳಮಾತು (ಸಿದ್ಧವ. ಕ. ೪೧೭-೧೩೪೪). **ಪಳವಾತು:** ೧. ಹೋಳ್ದೊಡಲ ನಜುವಾಯನ್ನೆಯ ನೀರ್ಗುಡಿಗನಂ ಸೀಳ್ದ ಪಳವಾತಿಗೊಳಗಾಗದಾರೆಗೆ ತನ್ನ ಬಾಳ್ಗೆಯುಗುಡದ ಮೂಲಚ್ಛಯ್ಯಮೊಗದ ಶಿವ ಸುಮ್ಮಾನದಿಂ ಸಲಹುಗೆ (ಸಂವಿಮಾ. ೨೧-೫೪); ರವಿಚಂದ್ರರ್ ಗಾಲಿಗಳ್ ಸಾರಥಿ ಬಿದಿ ಪಳ[ಪಾಠಾಂ.ಳೆ]ವಾತಶ್ವಂ (ಶಬಶಂ. ೨-೧೨); ಪಳವಾತನನುಸರಿಸದಿಹ ವಿದ್ಯೆಯಂದದಿಂ ತೊಳಪ ಸಂಸ್ಕಾರ ವಿರಹಿತವಾಣಿಯಂದದಿಂ (ವೆಂಕಾಂಗಾ. ೫-೮-೨). **ಪಳೆವಾತು:** ೧. "ಪಳೆವಾತೆನಿಕ್ಕು ವೇದಂ" (ಕಕರ. ೬೩); ಪಳವಾತುಗಳೆ ಸೊಣಗಗಳಾಗಲೆಸೆದನ ಮೃತ್ಯುಂಜಯಾಯೆನ್ನಿರೊ (ಭಕ್ತಿಸ. I, ೨-೨); ಪಳೆವಾತಿನಧಿಕತೆಯ . . . ಅರಾದೊಡಂ ಮೀರಿ ಬಳಸುವರೆ (ವೆಂಕಾಂಗಾ. ೨-೮-೬). **ಹಳವಾತು:** ೧. ಹಳವಾತೆ ಹುಸಿ ತೊಳೆದು ಹೊಳೆಹೊಳೆದು ಹುತ್ತಿನ ಹೊಳೆ ಹರಿದು ಬಂದಂತೆ ಹೊಸದಾಗಿದೆ (ಮುಕ್ತಕಂ. ೯-೪೩). **ಹಳೆಮಾತು:** ೩. ಮರೆಯುವಷ್ಟು ಹಳೆಯದಾದ ವಿಷಯ: ಅದು ನಮಗೆ ದಕ್ಕಿ ಹಳೆಮಾತು ಆಗಿಹೋಯಿತು (ರೂಢಿ). [ಪಟ$_1$(<ಪಟದು)+ಮಾತು$_1$]

ಪಟವಾನಿಸ (ನಾ). ಹಿರಿಯ ಮನುಷ್ಯ; ವಯಸ್ಸಾದ ವ್ಯಕ್ತಿ: ಕಳೆಯಲ್ಕಾಗದು ನರಪತಿಕುಳವನಱಿವ ಪಟವಾನಿಸನಂ (ಶಪದ. ೬೭ ಪ್ರಯೋ); ಎಳದು+ಪೆಱ್, ಎಳವೆಱ್, ಏವಂ ಬೆಳೆವೊಲಂ . . . ಪಟವಾನಿಸಂ (ಶಬ್ದಾನು. ೯೧ ಪ್ರಯೋ). [ಪಟ$_1$(<ಪಟದು)+ಮಾನಿಸ$_1$(<ಮಾನುಸ)]

ಪಟವಾವಿ (ನಾ). ಹಳೆಯ ಬಾವಿ: ಮರ್ದುಗಳೆಲ್ಲಮನೊಂದು ಪಟವಾವಿಯೊಳ್ ಪೊಯ್ದು (ವಡ್ಡಾರಾ. ೭೦-೮); ಪಟವಾವಿಯ ನೀರಂತೆ ಕಣ್ದೊಳಗಡಂಗಲುಂ (ಧರ್ಮಾಮೃ. ೬-೩೮); ಓಡಿ ಬಿರ್ದು ಪಟವಾವಿಯ ಮಧ್ಯದ ಕಾಸಮೂಲಮಂ ತೊಟ್ಟನೆ ಪತ್ತಿ (ಧರ್ಮಪ. ೧-೭೯). [ಪಟ$_1$(<ಪಟದು)+ಬಾವಿ]

ಪಟವಾವಿಗೆ (ನಾ). = ಪಟವಾವಿ: ನಿಡುಮರದ ತುದಿಗೋಡುಗಳೊಳ್ ಕಟ್ಟಿದ ತೃಣಪುಲೀಚಹ್ನಂಗಳಿನಱಿಯಲಾದ ಕಾಡ ಪಟವಾವಿಗೆಗಳೊಳಂ (ಕಾದಂಕು. ೨೬೬). [ಪಟ$_1$(<ಪಟದು)+ಬಾವಿಗೆ]

ಪಟವಿಗೆ 'ಪಟಯಿಗೆ' ನೋ.

ಪಟವೆ, ಪಳವೆ, ಹಳವೆ (ನಾ). ೧. ಬಹುಕಾಲದ ಸಂಬಂಧ; ಹಳೆಯ ನಂಟು: ಪರಿಭವಕ್ಕಂ ಪಟವೆಗಂ ಪಾಗುಡಕ್ಕಂ ಪಟಬದ್ಧಕ್ಕಂ . . . ಮೋಕ್ಷಕ್ಕಂ ಮಹಾಸಮುದ್ರದೊಳ್ ಮಹಾನದಿಗಳ್ ಕೂಡುವಂತೆ (ಪಂಪಭಾ. ೯-೯೫ ಪ); ದ್ವಾರದೊಳಿರ್ದು ಜನಾರ್ದನನ ಪಟವೆಯ ಕಳತರ್ಯಮಂಗಳಕಾರ್ಯದೊಳ್ ಕೂಸನಲಂಕರಿಸಲ್ಪಟ್ಟದಂ (ನೇಮಿಪು. ೭-೧೩೭ ಪ); ವಕಾರಕ್ಕೆ . . . ಪಟವೆ, ಎಳವೆ (ಶಪದ. ೨೨೧ ಪ್ರಯೋ). **ಪಳವೆ:** ೧. ಪಳವೆಯನೆಱಪಡೆ ಮುನ್ನಿನ ಪಳತ್ತನೊಳಗಾದ ಪಾಣ್ಡ್ಯನ್ರಿಪಸುತರೊಳ್ ತಾನೆಳಸಿ ಪಿಡಿದವನೆ ಭೂಪಂ (ಎಕ. XI, ದಾವಣ. ೮೪-೨೪; 1161). **ಹಳವೆ:** ೨. ಹಳೆಯತನ; ಹಳವೆ: ಮೌನಕಳಲುಂಟೆ? ತಾಳಮೆಗುಂಟೆ ಹಳವೆ? (ಗಿಳಿಂ. ೩೦-೯೪); ಪ್ರಾಚೀನಕಾವ್ಯಗ್ರಂಥಗಳನ್ನು ಅವುಗಳ ಹಳವೆಯಿಂದ ಎತ್ತಿ ಹೊರತಂದು ತಿರುವಿ ಹಾಕಿದ . . . ಸಾಹಿತಿಯು (ಪಾಶ್ವಾವಿ. ೪೬೦). 'ಪಟಮೆ' ಪರಾ. [ಪಟ$_1$(<ಪಟದು)+-ವೆ]

ಪಟವೇಟ (ನಾ). ಹಳೆಯದಾದ ಪ್ರಣಯ: ಮಸೆವುದು ಮಾಸಲಿರ್ದ ಪಟವೇಟಮುಗಿಷ್ಟಯ ಬಿಚ್ಚತಿಕ್ಕೆಯಂ ಪೊಸಯಿಪುದು (ಶಾಂತಿಪು. ೮-೯೧); ಪೊಸವೇಟದ ಪಟವೇಟದ ಸುಸಿಲಿನಿದಂ ಪಡೆದುದಳಿಗೆ ಬೆಳಗಪ್ಪಾಗಳ್ (ಅಜಿಪು. ೬-೬೫); ಮಕ್ಕಳ್ಕಾವಗಮಿಾ ಬೇಟಮೆ ಸಾಲ್ಪುಮೆಂದು ಪಟ[ಪಾಠಾಂ. ಬೆ]ವೇಟಮುಂ ಪೊಱಗೊಳ್ಕು ಪೆಡೆಗೆ ಹಾರಂ ಪೊಸವೇಟಮಂ ಪೊಯ್ದುಕೊಳಲುಂ (ಅರ್ಧನೇ. ೫-೨ ಪ). [ಪಟ$_1$(<ಪಟದು)+ಬೇಟ$_1$(<ಬೇಂಟ)]

ಪಟಸು, ಪಳಸು, ಹಳಸು$_1$ (ಕ್ರಿ). ೧. ಹಳೆಯದಾಗು; ಹಳತಾಗು: "ಪಟಸೆಂದು ಜರಾಸಿತಾರ್ಥದೊಳ್" (ಕರ್ಣಾಸಿ. ೭೯). ೨. ಆಕರ್ಷಣೆಯನ್ನು ಕಳೆದುಕೊಳ್ಳು; ನೀರಸವಾಗು: ಇಂದಿನ ಚಂದ್ರಿಕೆ ಕಂದು ನಾರ್ತುದೋ ಗಾವರದಿಂಪದೇಂ ಪಟ[ಪಾಠಾಂ. ಬಳ]ಸಿತೋ (ಲೀಲಾವ. ೨-೯೪); ಬಾಯ್ ಸವಿಗೆಟ್ಟ ಚುಂಬನಂ ಪಟಸಿದ ಮಚ್ಚುಮಗ್ಗಲಿಪ ನಾಣ್ಣುಡಿಯುಂ ಸತಿಗಾಗೆ (ಸಕ್ತಿಸು. ೮-೩೯೪); ನವವಿಧರಕ್ತೋಪಚಾರದಿನೆಂದುಂ ಪಟಸದು ಬೇಟಂ (ಶಪದ. ೨೪೪ ಪ್ರಯೋ); ಪೊಲ್ಲವೆಣ್ ಮನೆಯೊಳೊರ್ಪಾಸಿನೊಳ್ ಕೂಡೆ, ನೀನೊಲ್ಮೆ ತೋಳ್ತಟ್ಟೆಯದು ಪಟಸಿ ಶಣ್ಣಗಾಗುವುದಲ್ತೆ ಬೇಗಮ್ (ಅಂತಿಗೂ. ೩೦-೬೧). **ಪಳಸು:** ೩. ಆಹಾರದ ಸ್ವರೂಪ ಹಾಗೂ ರುಚಿ ಕೆಡು; ಆಹಾರವು ಹುಳಿಯಾಗಿ ನಾರು: 'ಪಳಸುಗೂಳು' ಪರಾ. **ಹಳಸು$_1$:** ೧. ಮಾತು ಹಳಸದ ಮುನ್ನ ಕೈಗಳು ಸೋತು ತೆಗೆದವೆ (ಕುಪ್ಪಾವಿ. ೮-೭೬); ಇಂದಿದ್ದದ್ದು ನಾಳೆಗೆ ಹಳಸುತ್ತದೆ. ಊರೂ ಸವು; ತಿನ್ನುವ ಊಟವೂ ಸವು (ಮೂಕಜ್ಜಿ. ೧೭೩); ಯಾವ ಹಳಸಿದ ತತ್ವಜ್ಞಾನವನ್ನು ರಾಯರು ಪ್ರಚಾರಪಡಿಸಿದವರಲ್ಲ (ಕಂಬಸು. ೧೨೧). ೩. ಕ್ಷಾಮದ ಕಾಲವು ಹೇಳುವುದಿಲ್ಲವು ಅನ್ನವು ಹಳಸಿಹುದೆಂದು (ಇಂಜಾಪ. ೨೨೫-೧೧); ಖಾನಿಯಲ್ಲಿ ಹಳಸಿದ ತಿಂಡಿ (ಚಂಡೆಮ. ೬-೧೪);

ನಾಯಿ ಹಸಿದಿತ್ತು, ಹಿಟ್ಟು ಹಳಸಿತ್ತು (ಗಾಥೆ). ೪. ಹಾಳಾಗು; ಕೆಡು; ಹಸಗೆಡು: ಹಳಸಿದಗ್ಗಳಿಕೆಗಳ ಮಿಾಸಲುಗಳೆದ ಬಿರುದಿನ . . . ಕಳವಳದ ಕನಸುಗಳಲಿದ್ದುದು ರಾಯನಾಸ್ಥಾನ (ಕುವ್ಯಾಕ. ೧-೨೦); ಹಳಸಿದುದು ಯಜ್ಞಗಿಜ್ಞದ ಮಾತು (ಚಿಬಪು. ೩೧-೨೮); ನೆಲದೊಳೊರ ಗಿರ್ಯವಳ ರಮಣನ ಹಳಸಿದೊಡಲನು ತೋರಾ (ರಾಮಾಸಂ. ೬-೩-೧೬); ಚಾಲುಕ್ಯರ ಮನಸ್ಸು ಹಳಸುತ್ತಿದೆ ಎಂಬುದನ್ನು ಹೊಯ್ಸಳರಾಜ್ಯದ ಹಿರಿಯರೂ ಕಂಡುಕೊಂಡಿದ್ದರು (ಸಪಿ. ೧೬೫).

[ಪಟ$_1$(<ಪಟದು)+-ಸು$_2$]

ಪಟಹ, ಪಳಹ$_2$, ಪಟಕ, ಪಟವ, ಬಟಪ (ನಾ). ೧. ಒಂದು ಬಗೆಯ ಚರ್ಮವಾದ್ಯ; ಪಟಹ: "ಪಟಹಂ ಪಟಹಾಭಿಧಾನದೊಳ್" (ಕರ್ಣಾಸಿ. ೮೦), ಪಟಹದ ರುತಿ ಮೊಟಗಲ್ (ಚಂದ್ರಪು. ೧೨-೭೧); ಪ[ಟಗ]ನ ಕಯ್ಯ ಪಟಹಮಂ [ಕೊಂ]ಡು ಬಾಜಿಸುತಿರ್ದರ್ (ಬಂಹರಿ. ೫-೧೨ ವ). ೨. ಬೇಟೆಹಾಗೂಕಳ್ಳತನದಸಂದರ್ಭಗಳಲ್ಲಿ, ಗಾಳಿಯು ನುಗ್ಗದಂತೆ ಕನ್ನಗಳನ್ನು ಮುಚ್ಚಲು ಉಪಯೋಗಿಸುವ (ತಮಟೆಯಂತೆ ಅಗಲವಾಗಿರುವ) ಚರ್ಮದ ಒಂದು ಬಗೆಯ ಸಾಧನ ವಿಶೇಷ: "ಪಟಹಂ-ಬೇಂಟೆಯ ತೆರೆ; ವಾದ್ಯವಿಶೇಷಂ" (ಶಮದ. ಪರಿ. ೧); ಸೋಪಿನ ತೋಪಿನ ಪಟಹದ ಕೋಪಿನ ಪಾಳವದ ಗೋರಿವೇಂಟೆಗೆ . . . ನಡೆತಂದರಲ್ಲಿ ಮುಂದೆ ಪುಳಿಂದರ್ (ಸೂಕ್ತಿಸು. ೩-೧೦೪); ವಿಳಸಿತಯೋಗ ಚೂರ್ಣತತಿ ಕರ್ಕಟರಜ್ಜು . . . ಪಟಹಮನಿಪ್ಪುಪಾಯಶತಮಂ ತಳೆದು . . . ಕನ್ನಗತ್ತಿ ಸಹಿತಂ ಪೊಱಮಟ್ಟೆಂ (ದಶಕು. ೮-೯೩); ಕನ್ನದಿಂ ಗಾಳಿ ಬಾರದಂತೆ ಮುಚ್ಚುವ ಪಟಹಮಂ ಕನ್ನದೊಳ್ ಸಂದಿಸಿದ ಕಲ್ಲಂ ತೆಗೆದಿರ್ಕುಟಂ ಮತ್ತಮನೇಕಚೌರ್ಯಸಾಧನಂಗಳಂ ಕೊಂಡು . . . ಎಟ್ಟರುತಿರ್ದೆಂ (ದಶಕು. ೮-೯೩ ವ). **ಪಹ$_2$:** ೧. ಉಲಿಯುತಿರ್ದಡೆ ಪಳಹಮೆಂತು ನಿರಪೇಕ್ಷೆಯಿಂ (ರತ್ನಕ. ೧-೪ ವ); ಪಳಹದ ಶಂಖದ ಕಹಳೆಯ ನಿನದಂ ಮೊಳಗುತ್ತಿರೆ ದಶದಿಸೆಯೊಳ್ (ವೃಷಬಿ. ೫-೨೨ ರಗಳೆ); ಶೆಗ್ಗಾಳೆಯ ಪಳಹದ ಕೊಟಲ ತಂಬಟೆಯ . . . ಭೂರಿನಿನಾದಂ ದೆಸೆ ಮುಟ್ಟೆ ಪಳಂಚಲೆಯೆ (ರಾಮಾಶ್ವ. ೫೦-೧). **ಪಟಕ:** ೧. ವಸುದೇವನೊರ್ವನಾ ಪಲಾಯಿಗನ ಕಯ್ಯ ಪಟಕ[ಪಾತಾಂ. ಸಕಳಕ]ಮಂ ಕೊಂಡು . . . ಬಾಜಿಸುತ್ತಮಿರ್ಪಲ್ಲಿ (ಮಹಾನೇ. ೫-೩೪ ವ). **ಪಟವ:** ೧. "ಡಿಂಡಿಮಾಭಿಧಾನಂ ಪುವಂ" (ವಸ್ತುಕೋ. ೭೯-೨೬); ಪಟವದ ತಿವಳಿಯ ಜುಂಕದ ಮೊಳಸಿನ ಜೇಕಿರದ ಸಿವಿಱ ಸಿಪ್ಪಿನ ಲಯದಿಂದೆಟಲದೆ ಕುಣಿದರ್ (ಅಜಿಪು. ೫-೩೨); ಕರಡೆಯ ತಾಳದ ಪಟವದ ಮದ್ದಳೆಯ ಮಿಕ್ಕ ವಾದ್ಯಮುಮೊಳವೇ (ಗದಾಯು. ೩-೪೯); ಕೊಟಲ ಪಟವದ ಪಲವುಂ ಗಿರುಗಟೆಯ ಸಿವುಱ ಸಿಪ್ಪಿನ ಕೊರಗಿನ ಕಿನ್ನರದ ಸರಮೆ ಸರಮೂ ಪೊಟಲೊಳ್ (ಸೂಕ್ತಿಸು. ೪-೧೦೪). **ಬಟಪ:** ೨. ಆ ಕಳ್ಳರ್ . . . ತನ್ನ ತಂದ ಪೊನ್ನ ಪುಡಿಕೆಯುಮನುಟಾಯುಮಂ ಬಟಪಮುಮಂ ಅಲ್ಲಿ ಸಟ್ಟರ್ ಭಟ್ಟನ ಮುಂದೆ ತಂದಿಕ್ಕಿ (ಪಂಚತಂ. ೨೩೨-೭). [<ಪ್ರಾ. ಪಡಹ./ಸಂ. ಪಟಹ./ತೆಲು. ಬಲಪ, ಬಲ್ಪ]

ಪಟ್ಟಿ$_1$, ಪಳಿ$_1$, ಹಳಿ$_1$, ಹಟ್ಟಿ$_1$ (ಕ್ರಿ). ೧. ದೂಷಿಸು; ನಿಂದಿಸು; ಬಯ್ಯು: "ಪಟ್ಟಿ-ನಿಂದಾಯಾಂ, ವಸ್ತ್ರವಿಶೇಷೇ ಚ" (ಶಮಧಾ); ಪಟ್ಟಿಗೆ ಮೇಣ್ ಪೊಗಟ್ಗೆ ಮೇಣ್ ನೆವಮಿಲ್ಲದೊಡಿಂತು ಕೈಗಟ್ಟಿಯೆ ಬಗ್ಗಿಸುಗೆ (ಕವಿರಾ. ೧-೧೩೬); ಭೂತಳಂ ಪಟ್ಟಿಯೆ ತೇಜಮೆ ಕೆಟ್ಟಿಪುದು (ಸಂಪಭಾ. ೯-೧೮); ಮುಳಿಗುಂ ಮುರಾರಿ ವಾಕ್ಪತಿ ಪಟ್ಟಿಗುಂ (ಪಂಚತಂ. ೧೩೫-೬). ೨. ನಾಯಿಯನ್ನು ಅಟ್ಟು,-ಓಡಿಸು: "ಪಟ್ಟಿಯೆನಲ್ ವರವಸ್ತ್ರದಲ್ಲಿ . . . ಕುನ್ನಿಯಂ ಪೊಱವಡಿಪ ನುಡಿಯೊಳಂ ವರ್ತಿಸಿರ್ಕುಂ" (ಸಂಜೇವ. ೧೮). ೩. (ಆಲಂ) ಮಿಾರು; ಅತಿಶಯಿಸು: ವಿಭೂಷಣಕಾಂತಿ ಸುರೇಂದ್ರಚಾಪಮಂ ಪಟ್ಟಿಯೆ (ಚಂದ್ರಪು. ೧೦-೨೬); ಕಾಂಚನಕುಂಭಮಂ ಪಟ್ಟಿವ ಪೆರ್ಮೊಲೆಯಂ ನಸುದೋಱುತುಂ (ಉದ್ಭಟ. ೧೦-೬೮); ಸುಟ್ಟಿಯಂ ಪಟ್ಟೊಪ್ಪುವ ಪೊರ್ಕುಟುಂದೆ . . . ಪಿಪ್ಪುವಳ್ (ಕಬ್ಬಿಕಾ. ೧೨೧). **ಪಳಿ$_1$:** ೧. ತನಗೆ ಕವಿತ್ವಮಿಲ್ಲ ಪೆಱರಂ ಪಳಿ[ಪಾಶಾಂ. ಜಜಿ]ದಲ್ಲದೆ ನಿಲ್ಲನಾತನೊಳ್ ಮುನಿವುದನೀತಿ (ಗಿರಿಕ. ೧-೨೯); ಬಡವರಾದವರನು ಪ[ಪಾಶಾಂ.ಹ]ಳಿಯ ದಿರೆಚ್ಚಟ್ಟಿಕೆ (ಪುರಂದ. ಧಾ. ೫-೯೬-೪); ಪರಿಚಾರಮೆಂದು ಪಳಿಯದೆ ಪಿರಿದು ಕಿಱುದುಗಳ ಭೇದವನೆಣಿಸದೆ ನಿರವಿಸಿದುದನೆಸಗುವುದು (ಹದಿಬ. ೩-೩೩); ಪಳಿವುದು ಲೋಕಂ ತಂದೆಯ ನಿಳಯದೆ ಪತಿಯುಳ್ಳ ಸತಿಯುಮಿರೆ (ಶಾಕುಂತ. ೬೬-೧೧೭). ೩. ಪಂಚಶರಮಂ ಪಳಿವ ನುಣ್ಪರಲ್ (ಕಾರಿರ. ದೇ. ೨೮೯-೧೭); ಮುಖಂ ಮುಕುರದಿರವಂ ಪಳಿದುದು (ಚಿಬಪು. ೫-೪೪); ಮಾದಳರ ಪಳಿವ ಚೆಂದುಟಿಯ ಸವಿಗೆ . . . ಬಯಸಿ (ಶೃಮಿಭಾ. ೩-೧೦); ಪಂಚಬಾಣನ ಚೆಲ್ವ ಪಳಿವ ಜಯಂತನನಂಚೆ ಗಮನೆಯಬಸಿದಳು (ಕಂಸವಿ. ೯-೧೯೯). **ಪಳಿ$_1$:** ೧. ಕಳಚೇಡ ಕೊಲಚೇಡ . . . ತನ್ನ ಬಣ್ಣಸಚೇಡ ಇದಿರ ಪಳಿಯಲು ಬೇಡ ಇದೆ ಅಂತರಂಗಶುದ್ಧಿ ಇದೆ ಬಹಿರಂಗಶುದ್ಧಿ (ಬಸವ. ೨೩೫); ರೋಗಿ ಪಳಿದೊಡೆ ಹಾಲು ಹುಳಿಯಪ್ಪುದೆ (ಹಕಕಾ. ೧-೨೬); ಅವ ಹಿರಿಯರ ಪಳಿದೆನೋ ಮುನ್ನಾವ ಧರ್ಮವ ತುಳಿದೆನೋ (ಕೌಶಾ. ೩೦-೪೩); ಸ್ಥಲವೊಂದು ನಿನಗಿಹುದು ವಿಶ್ವವೃಕ್ಷದೊಳಂತು ಹಳಯದಿರು ನಿನ್ನಿರವ (ಮಂಕುಕ. ೫೬೨). ೩. ಇಳೆಗೆ ನಳಕೂಬರ ಜಯಂತರ ಚೆಲುವ ಮದನನ ರೂಪ ರೇಖೆಯ ಪಳಿವುದಾ ನಳನೃಪನ ನಿಜಸೌಂದರಿಯ ಲೋಕದಲಿ (ನಳಚ. ೨-೩೬). **ಹಟ್ಟಿ$_1$:** ೧. 'ಹಟ್ಟಿಸು' ಪರಾ.

[ದೇ.॥ ತಮಿ. ಮಲ. ಪಟ್ಟಿ; ಕೊಡ. ಪಳಿ]

ಪಟ್ಟಿ$_2$, ಪಳಿ$_2$, ಪಳಿವು, ಪಟ್ಟಿವು, ಹಳಿ$_3$, ಹಳಿವು$_1$, ಹಟ್ಟಿವು (ನಾ). ೧. ಅನ್ಯಾಯವಾದ ಆರೋಪ; ನಿಂದೆ: "ತೆಗಟ್ಟ್, ಪಟ್ಟಿ . . . ಅಣಕಂ-ಈ ೬ ನಿಂದೆ" (ಕಶಸಾ. ೫೭-೨೫೬); ತನ್ನಮುಂ ಗೆಯ್ದ ಪಾಪಮುಮಯಶಮುಂ ಪಟ್ಟಿಯುಂ ಪೊಲ್ಲಮೆಯುಮುಂ ನೀಗಿದಂ (ಪಡ್ಡಾಂ. ೧೬೭-೨೬); ಲೋಕದ ಪಟ್ಟಿ ಪೊರ್ದದೆ ಮಾಣ್ಗೆ ಧರ್ಮಯುದ್ಧದೊಳೆಸಗಿಂ (ಅದಿಪು. ೧೪-೧೦೨); ಚಿತ್ತಭ್ರಾಂತಿಯುಮಂ ಹಳಿಯ ಪಟ್ಟಿಯುಮಂ ಪಿಂಗಿಸಿದರ್ (ಪಂರಾಮಾ. ೧೬-೫೬). ೨. ನಾಯಿಯನ್ನು ಅಟ್ಟುವುದು,-ಓಡಿಸುವುದು: "ಪಟ್ಟಿ=ವಸ್ತ್ರ ವಿಶೇಷಂ; ದೂಷಣಂ; ನಾಯ ಸೋವುವುದು; ಲೋಹದ ಘಟ್ಟ" (ಶಮದ. ಪರಿ. ೧); ಅಂತು ಪರಿದು ನೆರೆದ ರಾಜನ್ಯಕಮಂ ಪಟ್ಟಿ [ಪಾಶಾಂ. ಳ್ಳಿ]ಯಂತೆ ಪಲಾಯನಶೀಲಮ್ಮಾಡಿ ಹೇಮಪ್ರಭನಂ ಮುಟ್ಟಿವಂದು (ಪಂರಾಮಾ. ೩-೫೮ ವ). **ಪಳಿ$_2$:** ೧. ಅಳಿಪಿಲ್ಲದೆ ನೆಗೞ್ದರೆಯ್ದುವಸ್ಸುರಪುರಮಂ ಪಳಿಗಳ್ಳದಳಿವ ಪಾತಕರಿಳಿವರ್ಗ್ಗಳಗಳನೆ ನರಕಗತಿಗೆ (ಸೌಇಇ. XX, ೪೭-೩೯; 1074); ಗೋವಳತಿ ಗೋಪಿಯ ನಂದನ ಕಂದನಾದನೆಂದಾ ಪಳಿಯೆಲ್ಲಮಂ ಕಳೆಯಲ್ (ಕೊಲ್ಹಾಶಾ. ೯-೩೮; 1147); ಪಳಿವಾಂತ ಲವಣಾಬ್ಧಿಸಂಜಾತವಿದ್ರುಮವನಿಳಿಸಿ (ಸಂದಿಮಾ. ೮-೩೬); ಸಮ್ಮಯ ಕುಲದ ಯಶಶ್ಚಂದ್ರಿಕೆಯ ಪಾಳ್ಗೆಯ್ದೆ, ಪಳಿಯ ಕರ್ದಿಂಗಳಂ ಮೆತ್ತಿ (ಚಿತ್ರಾಂಗ. ೫೯-೧೬೩೪). **ಪಳಿವು:** ೧. ಕಳವು ಪುಸಿ ಹಾದರ . . . ಪಳಿವು ವಂಚನೆ ಜಾತಿಸಂಕರ ಕೊಲೆ ವಿರೋಧವು ವಿಕೃತಮಾಯಾವಳಿಗಳೆಂಬಿವು ನಿನ್ನೊಳಿಲ್ಲಲೆ ರಾಯ(ಕುವ್ಯಾಸ. ೧-೪೫); ಕಾರ್ಪಣ್ಯಮುಳಿವು ಪಳಿವನ್ಯಾಯ . . . ಕರ್ಕಶಂಗಳಿವು ಮೊಳೆದೋಱವು (ಶೃಮಿಭಾ. ೨-೫); ಪುರಜನರ ಬಿಱುನುಡಿಗೆ ತಡೆದೆ ಜಾತಿರಾಜರ ಪಳಿವ ನೊಳಕೊಂಡೆ (ತ್ರೇರಾಮ. ೩-೫೦); ಪಳಿವಾಯಿತು ಕ್ಷತ್ರಿಯ ಕುಲಕೆ

(ಕೋಗಿಲೆ. ೧೯-೧೦). ೩. ನಿಂದೆಗೆ ಗುರಿಯಾಗುವಂತಹುದು; ಹೀಯಾಳಿಕೆಗೆ ಪಾತ್ರವಾಗುವಂತಹುದು: ನಿನ್ನ ನಿತಂಬಕ್ಕೆ ಪುಳಿನ ಸ್ಥಳಂ ಪಳಿವು ನಿನ್ನ ಬಟ್ಟದೊಡೆಗೆ ಬಾಳೆ ಬಹಿಷ್ಕಾರಂ (ನಂಬಿರ. ೧೪-೧೮). **ಪಟಿವು**: ೧. "ಪಟಿವೆಂದೆನೆ ನಿಂದೆ" (ಚತುನಿ. ೪೬); ಪಟಿವನ್ಯಾಯವ ನೋಡದನ್ಯರೊಳೆ ದೂಱಿಟ್ಟಿಲ್ಲರಂ ಬಾಧಿಪಾ ತಳವಾಱಂ ಬೆಳವಾರನೈ (ಸೋಮೇಶ. ೬೬); ಕಳವು ಪಿಸುಣ್ ಪಸವು ಬಱಂ ಪಟಿವಟಿ ವಲಸೊಲಸು ಕುತ್ತುಮಿಲ್ಲಾ ನಾಡೊಳ್ (ಶಬ್ದಾನು. ೧೪೦ ವ್ಯಾಖ್ಯಾ). **ಹಳಿ$_3$**: ೧. ಹಳನೇಹವಿಹುದೆಂದು ಎಳಸಿ ಹೋಗುವನೆಗ್ಗ ಕಳವಳ ವಕ್ಕು ಹಳಿಯಕ್ಕು (ಸರ್ವಜ್ಞ. ೧೮೦೭); ಕಳ್ಳನೆಂಬ ಹಳಿ ಮೆರಸಲೇಂ ನೀ ಕಳ್ಳರ ನಡು ತೂಗಾಡಿದೆಯಾ? (ಗಿಳಿವಿಂ. ೪೧-೯); ಅಯ್ಯೋ ನಿಮಗೆ ಇಂಥ ಹಳಿ ತರೋದು ನನ್ನ ಹಣೇಲಿ ಬರೆದಿತ್ತಲ್ಲ (ಚಿಕಂಾ. ೨೧೧). **ಹಳಿವು$_1$**: ೧. ಹಳಿವು ಹೊಱದ ತಿಳಿವಿನಲ್ಲಿ ಕಳೆ ಕಣ್ಡೆಱೆದು ಉಳಿದ ನಿಜದ ಶೇಷ ಶ್ರೀಗುಹೇಶ್ವರ ನಿಮ್ಮ ಬಸವಣ್ಣ (ಅವಚಂ. ೨೯೨-೧೩೦೫); ರಕ್ಷಿಪನ ಹಳಿವಂ ಕೇಳಲೆನಗೆಂತು ಸೈರಿಸಲ್ಪಪ್ಪುದೇ (ಇಱಿರ. ದೇ. ೧೦೩-೭); ಭ್ರಮಿಯಿವನು ನೆಱೆ ಹಳಿವ ತಹನೀ ಶ್ರೋತ್ರಿಯರ ಕುಲಕೆ (ಸಂಭಪ. ೩೧-೧೪); ನಿಮ್ಮಯ ನುಡಿಗೆ ಹೊದ್ದದು ಹಳಿವು (ತೊರಂಾ. ೧-೯-೨೬). ೪. ತೊಂದರೆ; ಕೇಡು; ವಿಪತ್ತು: ಪಲವು ದೇಶಗಳೆಲ್ಲ ದುರ್ಭಿಕ್ಷದಿಂದಳಿಯೆ ಹಳಿವಿಲ್ಲದಿರ್ದುದಾ ಗೌತಮಾಶ್ರಮದಲ್ಲಿ ಮುನಿತಪಸ್ತೇಜದಿಂದ (ಲಶಿಚಿಂ. ೨೪-೩). **ಹಟಿವು**: ೧. "ನಿಃಷಮ ದುಷ್ಟಮ ಗರ್ಹ್ಯ ಎಂಬಿವು ಹಟಿವಿನೊಳ್ ಅಪ್ಪುವು" (ನಾಚಿಂಾ. ೬).

[<ಪಟ್ಟಿ$_1$./ತಮಿ. ಮಲ. ಪಟಿ]

ಪಟ್ಟಿ$_3$, ಹಳಿ$_4$, ಹಟ್ಟಿ$_2$ (ನಾ). ೧. ಲೋಹದ ಘಟ್ಟಿ ಅಥವಾ ಕಂಬಿ: "ಪಟಿ = ವಸ್ತ್ರವಿಶೇಷಂ; ದೂಷಣಂ; ನಾಯ ಸೋವುವುದು; ಲೋಹದ ಘಟ್ಟಿ" (ಶಮದ. ಪರಿ. ೧); "ಪಟಿಯೆನಲ್ ವರವಸ್ತ್ರದಲ್ಲಿ ದೂಷಣದಲ್ಲಿ ಲೋಹಮಂ ಕರಗಿಸಿದ ಘಟ್ಟಿಯೊಳ್ ಕುನ್ನಿಯಂ ಪೊಱವಡಿಪ ನುಡಿಯೊಳು ವರ್ತಿಸಿರ್ಕುಂ" (ಸಂಜೀವ. ೧೮). **ಹಳಿ$_4$**: ೧. ಕಾದ ಲೋಹದ ಹಳಿಯವೊಲು ಕೆಂಪಾದವಸುರರ ಮೋಱೆಗಳು (ಕುಪ್ಯಾಕ. ೭-೨೮); ಹೊಳಕಿದುದು ಕಿರಣಾಳಿ ಹೇಮದ ಹಳಿಗಳಲಿ . . . ಮಣಿ ಹರ್ಮ್ಯಾದಿ ಹಂತಿಗಳ ಸೊಗಸಿನಲಿ (ತೊರಂಾ. ೫-೨-೨೪). ೨. ಉಗಿ ಬಂಡಿಯ ಸರಳು; ರೈಲುಕಂಬಿ: ಯೂರೊ ಹಳಿ ಕಿತ್ತುತ್ತಾರೆ. ಡಬ್ಬಿ ಉರುಳಿಸುತ್ತಾರೆ (ಹಾಸುಹೊ. ೨೮); ಹಳಿಯ ಮೇಲೋಡುತಲಿದೆ ರೈಲು (ಚಂದ್ರವೀ. ೧೦೫-೧೮). ೩. ಬಂಡಿಯ ಗಾಲಿಯ ಕಬ್ಬಿಣದ ಪಟ್ಟಿ,-ಪಟ್ಟೆ: ಕಮ್ಮಾರರು ಗಾಲಿಗೆ ಹಳಿಯನ್ನು ಬಿಗಿಯುವಾಗ (ಮುಂಬಯಿ. ೫-೧೧೫); ಒಂದರ ಹಳಿ ಬಿಟ್ಟಿದ್ದರೆ ಮತ್ತೊಂದರ ಅಚ್ಚು ಮಣಿದು ಹೋಗಿದೆ (ಬೆಳಭಾ. ೧೭೭); ಹಳಿ ಕಟ್ಟಲು ತಂದಿಟ್ಟಿದ್ದ ಒಂದು ಗಾಡಿಚಕ್ರಕ್ಕೆ ಡಿಕ್ಕಿ ಹೊಡೆದು, ಅದನ್ನು ಮೈ ಮೇಲೆ ಬೀಳಿಸಿ ಕೊಂಡಿದ್ದನು (ಮಲೆಮ. ೨೮೮). ೪. ಹಳಕು; ಚೂರು; ಹರಳು: ಪಚ್ಚೆಗರ್ಪುರದ ಹಳಿಯನೊಡದಾ ಧೂಳಿಯಂ ಹರಹಿ (ಪದ್ಮರಾ. ೮-೯೨); ವಾಟಿಯೊಳಗೆಯುಪ್ಪಿನ ಹಳಿಯ ತಡಹಿಕೊಂಡು ಗೊಂದಣದ ಸಂಭಾರಮಂ ಮತ್ತಿ . . . ಮಡಕೆಯೊಳಿರಿಸಲದು ತುಂಬುವಾಳಗಾಯ್ವೆಸರಾದವು (ಸೂಪಶಾ. ೪-೭೪). ೫. ಮೊಸರು ಮೊದಲಾದುವುಗಳ ಗಡ್ಡೆ,-ಗರಣೆ; ಧೈಂಡಿ: ನೆನ್ನೆ ಅವರ ಮನೆಯಲ್ಲಿ ಬಡಿಸಿದ ಹಳಿ ಮೊಸರು ಸೊಗಸಾಗಿತ್ತು (ರೂಢಿ). **ಹಟ್ಟಿ$_2$**: ೧. ಮೇರುವಿನ ಹಟಿಗಳೇಂ ಭಂಡಾರಕ್ಕೆನ್ನಾಣೆ ವಜ್ರಧಾರೆಗಳೆಂಟಂಕಾರಿಸಿ ಸಲಿಸದೊಡೆಂದು ಬಲಾರಿಗೆ ದಿವಿಜಾರಿ ರಾಯಸಂ ಬರೆಯಿಸುವಂ (ಅನಂಪು. ೧೩-೮); ಕಾಯ್ದ ಕರ್ಬೊನ್ನ ಹಟಿಗಳಿಂದೇರ್ವರಿಯನಮರ್ಚುವುದುಂ (ಶಾಂತೀಶ್ವ. ೯-೧೧೦ ವ). ೪. ಅಕುಂಚಿತಮಾದ ವಾಮಪಾದಾಂಗುಷ್ಠದೊಳ್ ತೊಡರ್ದ ಪಾದುಕದ ಪಲ್ಲೆಯಂ ಪದ್ಮರಾಗದ ಹಟಿಯೊಳಿಟಿಪಿ ತ್ರಿಭಂಗಿ ಸಂಗಳಿಸೆ ನಿಂದು (ಮಹಾನೇ. ೧೪-೭೨ ವ). 'ಫಳಿ$_2$' ಪರಾ.

ಹಳಿಹಳಿ (ದ್ವಿರುಕ್ತಿ): ಹಳಿಹಳಿಯೇಳ್ವ ಮುಗಿಲ ಹೊರೆಯೊಳು ಕೂಡುವೆಳೆವಾಂಬಟ್ಟೆಗಾದರಲ ಲಲಿತಾಂಗಸೌರಭ್ಯವ ತಲೆವೊಱೆವೊತ್ತು ಸುಳಿವ ಗಾಳಿಗೆ ಮೈಯನಿತ್ತ (ಶ್ರೀಪಾಲ. ೪-೬೬); ನನ್ನ ತಟ್ಟಿಗೆ ಹಳಿಹಳಿಯಾದ ಮೊಸರನ್ನು ಹಾಕಿದರು (ಚಂಗಾಳ್ವ. ೫೮).

ಪಟ್ಟಿ$_4$, ಪಳಿ$_3$, ಪಟ್ಟು$_3$(ನಾ). ೧. ಕಸ; ಕೊಳೆ; "ಕಳೆ" (ಚತುನಿ. ಕಿ. 1, ೬೦). **ಪಳಿ$_3$**: ೨. ಪೈರು ಕಟಾವಾದ ಮೇಲೆ ಉಳಿಯುವ ಕೂಳೆ: ನಟ್ಟು ಕಡಿಸಿ ಹಸನ ಮಾಡಿದರೂ ಅಜಮಾಸು ಇಷ್ಟೇ ಹಣ ವೆಚ್ಚವಾಗುತ್ತದೆ. ಪಳೀ ಆರಿಸುವುದು ಬೇರೆ (ಕಭಾಗೆ. ೨೬೭). **ಪಟ್ಟು$_3$**: ೧. "ಬಿಂಜದೊಳ್ ಕಸದೊಳಂ ಪಟು" (ಶಬ್ದಮಂ. ೧೧೩).

ಪಟ್ಟಿ$_5$, ಪಡಿ$_4$, ಪಳಿ$_4$ (ನಾ). ಒಂದು ಬಗೆಯ ಉತ್ತಮವಾದ ಬಟ್ಟೆ: "ತೆಗಟು ವಾಸ ಪಟಿಯೆನಿಕು" (ಶಬ್ದಮಂ. ೧೧೩); ಅರ್ಧಗಪ್ಪಡಮಂ ಬಿಸುಟ್ಟು ಪಟಿಯಂ ಸಯ್ತುಟ್ಟುಕೊಂಡಿರಿಂ (ಪಡ್ಡಾಂಾ. ೯೩-೧೬); ಪಟಿ ಚಿತ್ರಾವಟಿ ಜೋಗಂ ಪಟಿಯಂ ದೇವಾಂಗಮೆಂಬ ವಸನಂಗಳನೇಂ ಗಟಿಯಿಸುವವೊ ಮಡಿವಳ್ಳನ ಪಟಿಯತನನೆ ಪೋಲ್ತು ವಿಶದವಸನಾಂಗಕುಜಂ (ಅದಿಪು. ೫-೩೪); ಚೀನದ ತಳಿರ್ವಟ್ಟೆಯ ಪಟಿಯ ವಟಿಯ ದೂಸಿಗವಸರಂ (ಲೀಲಾವ. ೭-೧೯). **ಪಡಿ$_4$**: "ಪಳಿ (ಪಡಿ)—ಪಟೀ = ಬಟ್ಟೆ" (ತದ್ಭಕೋ. ೨೫). **ಪಳಿ$_4$**: ಚಿತ್ರದಣ್ಣಂ ಪಳಿಯೆಸೆವ ಝುಳಂಬಂ ಗಜೇನ್ದ್ರಂ ತುರಂಗಂ (ಎಇ. XIII, ೩೩೦-೧೩; 929); ಅಯ್ನೂರ್ವ್ವರು ಬಿಟ್ಟ ಧರ್ಮಮೆಂತೆನೆ ಆನೆ ಮಾಣಿಕ ಪಳಿ ಪಠ್ಠಾವಳಿ ಅಡಕೆ ಮೆಳಸು (ಕಇ. V, ೩೩-೫೩; 1176); ಪಳಿಯ ನುಟ್ಟನು ಮಲ್ಲಗಂಟನಲಿ (ಕುಪ್ಯಾವಿ. ೩-೭೯); ಮಲಯಜದಣ್ಪು ಪೊಂದೊಡಿಗೆ ಪಟ್ಟೆಯ ದಟ್ಟ ಪಳಿಯ ಚಲ್ಲಣ (ಕುರಾಸಾಂ. ೧೧-೩೭).

[<ಸಂ. ಫಲಿ]

ಪಟ್ಟಿ$_6$ 'ಪಡಿ$_3$' ನೋ.

ಪಟಿಕೆಯ್ 'ಪಟಿಕೆಯ್' ನೋ.

ಪಟಿಕೆಯ್, ಪಳಿಕೆಯ್, ಪಟಿಕಯ್ (ಕ್ರಿ). ೧. ದೂಷಣೆ ಮಾಡು; ಹೀಯಾಳಿಸು; ನಿಂದಿಸು: ಪಟಿಕೆಯ್ದು ತೊಟ್ಟನುಟಿ ದಂತುಟಿದ ಮಹಾಪುರುಷರಱಿಯದುಟಿದರೆ ಸಿರಿಯಂ (ಕವಿರಾ. ೩-೧೭೫); ಪಟಿಕೆಯ್ದು ಬಂದು ನಲ್ಲಳ ಮುಳಿಸನೊಳಕೊಂಡು (ಅದಿಪು. ೧೨-೨೯ ವ); ಶಿಶುಪ್ರಕರಮನೇನಗಲ್ಚಿದೆನೊ ಧರ್ಮಮನೇಂ ಪಟಿಕೆಯ್ದೆನೋ (ಸುಕುಮಾ. ೯-೧೦೨); ಚೋಳನಂ ಪಟಿಕೆಯ್ದು ಮಾಳವನನಿಟಿಕೆಯ್ದು ಲಾಳನಂ ಱೋಡಾಡಿ (ಜಗವಿ. ೧೭-೧೧೮ ರಗಳೆ). ೨. ಕೆಟ್ಟ ಕೆಲಸವನ್ನು ಮಾಡು; ತಪ್ಪು ಮಾಡು: ಇಂ ವಿಷಯ ಸುಖಕ್ಕೆಜಗೆಂ ಪಟಿಕೆಯ್ದು ತೊಟ್ಟನುಟಿವಂತುಟಿವೆಂ (ಅಜಿಪು. ೨-೮೨); ಅಳಿಸಿ ಪಟಿಕೆಯ್ವವನಂ ಬೀಸಿ ಬಿದಿರ್ದಿಕ್ಕಿ ಕಳೆವುದು (ಲೀಲಾವ. ೧೪-೪೪). **ಪಳಿಕೆಯ್**: ೧. ಪಳಿಕೆಯ್ವಂ[ಪಾಠಾಂ. ಕೈವಂ] ಖಳನೆಂದಾಂ ಮುಳಿಯೆಂ (ಶಬಶಂ. ೧-೧೯). ೩. (ಆಲಂ) ಅತಿಶಯಿಸು; ಮೀರು: ಸರಸಿಯಂ ಪಳಿಕೆಯ್ವ ನಾಭಿಮಂಡಲವಲ್ಲಿ (ಕಾರಿರ. ದೇ. ೨೮೯-೧೩). **ಪಟಿಕಯ್**: ೧. ವಿತ್ತೇಶನೇನಿತ್ತೊಡಂ ಪಟಿಕಯ್ವರ್ ವರುಣಂ ಕರಂ ಕರುಣದಿಂ ಲಲ್ಲೈಸೆ ತಾವೊಲ್ಲರ್ (ಸೂಕ್ತಿಸು. ೪-೧೩೧).

[ಪಟ್ಟಿ$_2$ + ಕೆಯ್$_1$]

ಪಟಿಗಟಿ (ಕ್ರಿ) ದೋಷರಹಿತವಾಗು; ನಿಂದೆಯಿಲ್ಲದಿರು:

ಅಹಮಿಂದ್ರರ್ . . . ಪಾಪಹರಂಗೆಱಗುವರೆನಿಸಿದ ಮಹಿಮೆಯ ಪಟಾಗಟಾದ ಪರಮಕೋಟಿಯೊಳಿರ್ಪರ್ (ಶಾಂತಿಪು. ೯-೧೨೪).

[ಪಟ್ಟಾ$_2$ + ಕಟ್ಟಾ$_1$]

ಪಟಾಗಾಳೆಗ (ನಾ). ಪ್ರತಿಯಾದ ಯುದ್ಧ,—ಕಾಳಗ: ಆಱಾ ಮರುಳಾದಂತಾ ಲತೆಯೊಳ್ ಪಟಾ[ಪಾಠಾಂ. ಟು]ಗಾಳೆಗಂಗಾದಿ ಬರೆವರೆ (ಪಂಪಭಾ. ೫-೧೨ ವ). [ಪಟ್ಟಾ$_6$(<ಪಡಿ$_3$) + ಕಾಳೆಗ]

ಪಟಾನುಡಿ$_1$ (ಕ್ರಿ). ನಿಂದೆಯ ಮಾತನ್ನಾಡು; ಅಪವಾದವನ್ನು ಹೊರಿಸು; ದೂಷಿಸು: 'ಪಟಾನುಡಿಹ' ಪರಾ.

[ಪಟ್ಟಾ$_2$ + ನುಡಿ$_1$]

ಪಟಾನುಡಿ$_2$, ಪಳಿನುಡಿ (ನಾ). ನಿಂದೆಯ ಮಾತು; ಅಪವಾದ; ದೂಷಣೆ: ವಿಜ್ಞಾನವಿಕಲಂ ಪಶುಪ್ರಾಯಂ ಎಂಬುದು ಮೊದಲಾಗೆ ಪಟಾನುಡಿಯಂ ಸೈರಿಸುವನುಂ (ತತ್ತ್ವಪ್ರ. ೩೩೭). **ಪಳಿನುಡಿ**: ನೀವೆಲ್ಲ ಪಳಿನುಡಿಯ ಬಳಿಯಲೆಂದೇ ಕೇಳಿಗೊಂಡಿರಾ ಹೇಳಿ? (ನಡೆಯಾ. I, ೪೫೮). [ಪಟ್ಟಾ$_2$ + ನುಡಿ$_2$]

ಪಟಾನುಡಿಹ (ನಾ). ದೂಷಣೆಯ ಮಾತನ್ನಾಡುವಿಕೆ; ನಿಂದಿಸುವಿಕೆ: "ಅವರ್ಣವಾದಃ, ಪಟಾನುಡಿಹ" (ತಸೂವೃ. ೨೧೪).

[ಪಟಾನುಡಿ$_1$ + -ಹ$_2$(<-ಪ$_2$)]

ಪಟಾಯತ 'ಪಟಾಹತ್ತ' ನೋ.

ಪಟಾಯತ್ತ 'ಪಟಾಹತ್ತ' ನೋ.

ಪಟಾಯಱ 'ಪಡಿಯರ' ನೋ.

ಪಟಾವಾವುಗೆ (ನಾ)— ಮಂಚವನ್ನು ಇಡಲು ಮಾಡಿದ ಎತ್ತರದ ಪೀಠ,—ವೇದಿಕೆ: "ಪಟಾವಾವುಗೆಯ ವಲಂ ಪ್ರತಿಪಾದುಕಂ" (ಸಂಜೀವ. ೧೯); ಪಳಿಕಿನ ಪಟಾವಾವುಗೆಯಿಂ . . . ರಂಜಿಪ ರನ್ನದ ಸೆಳೆಮಂಚದ ಮೇಲೆ ಲೀಲೆಯಿಂ ಕುಳ್ಳಿರ್ದಳ್ (ಪಂರಾಮಾ. ೩-೭೫); ನಿಶ್ಶ್ರೇಯಸಶ್ರೀಯ ಸಿರಿಮಂಚದ ಕೆಟಗೆ ಪೊಳೆವ ಪಟಾವಾವುಗೆಯಂತೆ ಪಳಚ್ಚನಾದಚ್ಚವಳುಕಿನ ಸಮಾಧಿಶಿಲಾಪಟ್ಟಕಮುಂ (ಅನಂಪು. ೧೪-೬೮ ವ); ತಕಾರಕ್ಕೆ . . . ಪ್ರತಿಪಾದುಕಂ—ಪಟಾವಾವುಗೆ (ಶಮದ. ೨೧ ಪ್ರಯೋ). [<ಸಂ. ಪ್ರತಿಪಾದುಕಂ]

ಪಟಾವು 'ಪಟ್ಟಾ$_2$' ನೋ.

ಪಟಾವೊಂದು (ಕ್ರಿ). ಅಪವಾದವನ್ನು ಹೊಂಪು; ನಿಂದೆಗೊಳಗಾಗು: ಪೆತ್ತರ್ ಪಟಾವೊಂದದವೊಲಿತ್ತೆಡೆಯೊಳಡಂಗಿ ಬಾಟ್ಟುದುತ್ತಮವಲ್ತೇ (ಚಿಕವಿ. ೬-೨೮೫). [ಪಟ್ಟಾ$_2$ + ಪೊಂದು$_1$(<ಪೊರ್ದು)]

ಪಟಾಹತ (ನಾ). ತಡೆ; ವಿಘ್ನ: "ಪಟಾಹತ ಪ್ರತಿಹತಮದಕ್ಕು" (ಕವಿಕಂ. ೨೪೩). [<ಸಂ. ಪ್ರತಿಹತ]

ಪಟಾಹತ್ತ, ಪಳಿಹತ, ಪಳಿಹತ್ತ, ಪಟಾಯತ, ಪಟಾಯತ್ತ, ಫಳಿಹತ (ನಾ). ೧. ಒಬ್ಬನಿಗೆ ಬದಲಾಗಿ ಬರುವವನು; ಪ್ರತಿನಿಧಿ: ತಕಾರಕ್ಕೆ—ಪ್ರತಿಹಸ್ತಂ-ಪಟಾಹತ್ತಂ; ಪ್ರತಿಪಾದುಕಂ-ಪಟಾವಾವುಗೆ (ಶಮದ. ೨೧ ಪ್ರಯೋ). **ಪಳಿಹತ**: ಅವರ ಪಳಿಹತರು ಕೋಣವತ್ತಿಯ ಟಣಾಂತರದ ಪೆರ್ಗ್ಗಡೆಗಳು (ಕಇ. IV, ೨೨-೩೫; 1024); ವ(ಧ)ರ್ಮ್ಮಕಾರ್ಯ್ಯೋದ್ದೇಶದಿಂ ತನ್ನ ಪಳಿಹತಂ ಸಿಂಗರಸನಂ ಕರೆದು (ಎಇ. XVIII, ೧೯೧-೬; 1104); ಮೊದಲ ಪತ್ಥಳೆಯ ಪಳಿಹತ ಮಹಾದೇವಣ್ಣನು (ಎಇ. XIII, ೩೨೨-೫೫; 1126) ೨. ಪ್ರತಿನಿಧಿಗೆ ಸಲ್ಲುವ ಸುಂಕ: ಶ್ರೀಕರಣಗಳು ಪಳಿಹತಮಂ ಬಿಟ್ಟೆವಾಗಿ ಪ್ರತಿವರ್ಷಂ ಸಲ್ವಂತಾಗಿ ಬಿಟ್ಟ ಸ್ತಿತಿ (ಮೈಆರಿ. ೧೯೪೦, ೧-೭೫; ಸು. 1300). **ಪಳಿಹತ್ತ**: ೧. "ಪಳಿಹತ್ತ (ಪ್ರತಿಹತ್ತ)-ಪ್ರತಿಹಸ್ತ = ಪ್ರತಿನಿಧಿ" (ಕದ್ಬಕೋ. ೨೫); ಅವನನ್ನು ತನ್ನ ಪಳಿಹತ್ತ ಮಾಡಿ (ಮಂತ್ರಶ. ೧೨-೮). **ಪಟಾಯತ**: ೧. ಪಟಾ . . . ದೇವಾಂಗಮೆಂಬ ವಸನಂಗಳನೇಂ ಗಟಾಯಿಸುವವೊ ಮಡಿವಳ್ಳನ ಪಟಾಯತನನೆ ಪೋಲ್ತು ವಿಶದವಸನಾಂಗಕುಜಂ (ಆದಿಪು. ೫-೩೪). **ಪಟಾಯತ್ತ**: ೧. "ಪಟಾಯತ್ತ[ಪಾಠಾಂ. ಪಟಾಹತ್ತ]ಮೆಂದು ಪ್ರತಿಹಸ್ತಂ" (ಕಶಸಾ. ೭೩-೬೫೬). **ಫಳಿಹತ**: ೧. ಅವರ ಫಳಿಹತ ಪಾಕಣ್ಣನು (ಎಕ. XI, ದಾವಣ. ೧೪೧-೩೧; 1065). [<ಸಂ. ಪ್ರತಿಹಸ್ತ]

ಪಟು$_1$ 'ಪಟುವ' ನೋ.

ಪಟು$_2$ (ನಾ). ಮಿತಿ; ಮೇರೆ; ಎಲ್ಲೆ: 'ಪಟುಗಟಾ' ಪರಾ.

[ದೇ.॥ ತಮಿ. ಪಟು = ಚೌಕಟ್ಟು]

ಪಟು$_3$ 'ಪಟ್ಟಾ$_4$' ನೋ.

ಪಟುಗಟಾ (ಕ್ರಿ). ಮೇರೆ ಮೀರು; ಅತಿಶಯಿಸು: ವಿಚಾರಕ್ಕೆ ಪವಣ್ಗಳೆದ ಗುಣದಿಂ ಕರಂ ಪಟುಗಟಾದುದು ದಯೆ (ಶಾಂತಿಪು. ೧೦-೯೯); ಜಾನಕಿಯನುಱ್ ಸೆಱ್ವಿಡಿದು ಬರುತ್ತುಮಾಕೆಯ ಪಟು[ಪಾಠಾಂ. ಟಾ]ಗಟಾದ ಗಾಡಿಯಂ ನೋಡಿ (ಪಂರಾಮಾ. ೯-೧೬೦ ವ); ಅಟಲಿರದ ಗ್ರಜಾತನ ವಿಯೋಗದೊಳಾಗೆ ಮನಕ್ಕೆ ಮೊಕ್ಕಳಂ ಪಟುಗಟಾದಿರ್ದ ತನ್ನ ಸಿರಿಯಂ ಮರುಭೂತಿ ಬಿಸುಟ್ಟು (ಪಾರ್ಶ್ವಪು. ೪-೫೦)

[ಪಟು$_2$ + ಕಟ್ಟಾ$_1$]

ಪಟುವ, ಪಳವು, ಪಳು, ಪಳುವ, ಪಳುವು, ಪಟು$_1$, ಪಟುವು, ಹಳವು$_1$, ಹಳಿವು$_2$, ಹಳು$_1$, ಹಳುವ, ಹಳುವು (ನಾ). ೧. ಕಾಡು; ಅರಣ್ಯ: ನಿಮಗಿನ್ನುಮ್ಮಳಿಕೆವೇಡ ಪಟುವದೊಳ್ (ನೇಮಿಪು. ೧೦-೪೪). 'ಪಟುವಗಿಚ್ಚು' ಪರಾ. **ಪಳವು**: ೧. ನೈರಿತ್ಯದೊಳು ಬಿದಿರ ಪಳವುಂ ಪಲ್ಮಕುಡಿವುಂ (ಸೌಇಇ. IX-i, ೧೨೧-೪೬; 1057). **ಪಳು**: ೧. "ಪಳುವೆನೆ ಕಾಡು" (ಕಶರ. ೫೮); ಕೇಡಳುರ್ಕೆಯ ಪಳುವನೇಂ ಪಳಿಯೆ ತಪ್ಪೆ (ಕಾಲೂರ. ೪೯-೭೨). **ಪಳುವ**: ೧. ಈ ದಟ್ಟಪಳುವದಲಿ ಮುಕುಂದನಂ ಕರೆವರಾರ್? (ಚಂದ್ರಸ. ೩೬-೧೧). **ಪಳುವು**: ೧. ಪುರಹರಂ ಬ್ರಹ್ಮಾಂಡಕೊಡೆಯನಾದೊಡೆ ದಿಗಂಬರನಾಗಿ ಪಳುವಿನೊಳ್ ತಿರುಗಿದನದೇತರ್ಕೆ (ಆರಾಜ. ೩-೧೧-೪); ಕೋಪದಿಂದ ಪಳುವಿನೊಳಿಂತಿರಿಸಿ ಪೋದಂ (ಕಾಮಕ. ೨-೩೫). **ಪಟು$_1$**: ೧. "ಪಟುವೆಂದುಂ, ಬಿಂಜವೆಂದುಂ ಅಡವಿ" (ಕಶಸಾ. ೫೦-೮೧); ಈ ಪಟುವಿನೊಳೆನ್ನರಸನನಿಂತು ಬಿದಿಯೆ ತಂದಿಕ್ಕುವುದೇ (ಪಂಪಭಾ. ೨-೨೨); ಮಗಳೇ ನೀನಿಲ್ಲದೆ ಮನೆ ಬಗೆವಂದೆನಗಟ್ಟಿ ತಿಂಬ ಪಟುವಾದುದು (ಧರ್ಮಾಮೃ. ೩-೨೪೩); ಬಗೆಗೆ ಸುಖದುಃಖಮುಂ . . . ಪಟು ಪೊಟಲುಂ ಪಗೆ ಕೆಳೆಯುಂ ಸಮನೆನೆಯಾ ಯೋಗಿಗೆ ಸಮತೆ ಸಮಂತು ಸಮನಿಸಿತ್ತು ಸಮಗ್ರಂ (ಪುಷ್ಪಪು. ೧೪-೧೭). **ಪಟುವು**: ೧. ಪಟುವಂ ಕಡಿದನೊಕ್ಕಲಿಗಂ (ಶಬ್ದಾನು. ೨೦೪ ಪ್ರಯೋ); ಕಿರ್ಚುಂ ಗಾಳಿಯುಮೊಂದೇ ಪೆರ್ಚುಗೆಯೊಳ್ ಬೆರಸಿ ಪಟುವಿನೊಣಗಿಡಮರನಂ ಚುರ್ಚುವವೊಲ್ (ಚಿಕವಿ. ೨-೪೬). **ಹಳವು$_1$**: ೧. ಬಟಾಬಯಲು ಇದು, ಹೋ ಅಭಂಡ ತಾನರ್ಥಹೀನ ಹಳವು (ಅರಳು. ೧೯೫-೩); ಅಡವಿ, ಹಳವು, ಗಡ್ಡೆ (ಕಂನುಹು. ೮೭). **ಹಳಿವು$_2$**: ೧. ಆವ ಹೊಲದಲು ಹಳಿವ ಕಡಿದುತ್ತ ಹದಂ ಬೇಡೆಂದೆನಲಾಗದು (ಎಕ. XII, ತಿಪಟೂ. ೨-೧೭; 1263). **ಹಳು$_1$**: ೧. ಮಹಾಅರಣ್ಯವಾಗಿಯಿದ ಹಳುವನೂ (ಎಕ. VII, ಶಿವಮೊ. ೩೦-೩೧; 1413 ?); ಹೊಳೆಯ ಮಂಟಪದೊಳಗೆ ಕುಳಿತು ಹಳೆಯ ನೆನಪನು ಮನಕೆ ತಂದೆನು: ಹಳುವ ತುಂಬಿದ ಗೋಳ ಹೊಳಲನು, ಹರಿದ ಕಂಬನಿ ಕಾಲ್ವೆಯ (ಮಾಂದಳಿ. ೨೬-೭). ೨. ಒಂದು ಬಗೆಯ ಕಾಡುಗಿಡ: ವರ್ಷ ವರ್ಷವೂ ಹಳು ಹುಟ್ಟಿ ಬೆಳೆದು ಒಣಗಿ ಹೊದಿಸಿದ್ದ ಹೆಂಚುಗಳಲ್ಲಿ

ಅರೆಪಾಲು ಮುಚ್ಚಿ ಹೋಗಿದ್ದವು (ಮಲೆಸು. ೨೭). **ಹಳುವ:** ೧. ಹಳುವದಲಿ ಗಿರಿಶಿಖರದಲಿ ದಾವಾಗ್ನಿಮಧ್ಯದಲಿ ಸಿಲುಕಿದಡೆ ಬಿಡಿಸುವವಲೇ ಪ್ರತಿಫಲಿತ ಪೂರ್ವಾದತ್ತಪುಣ್ಯಾವಳಿಗಳೆಂಬುದು ತನ್ನೊಳಾದುದು (ಕುಮ್ಯಾಗ. ೪-೨೫); ನಾನಾಹಳುವವನು ಬಳಸಿದರು ಬಂದರು (ತೊರರಾ. ೩-೧-೧೨); ರಘುವರಂ ಸೀತೆಯಂ ಹಳುವಕಟ್ಟದ ಬಳಿಕ ಪಿರಿದು ಕಕ್ಕುಲತೆಯಂ ತಳೆದು . . . ಕುಳ್ಳಿರ್ಪಿನಂ (ಶೇಷರಾ. ೫-೧); ಅವನಿರುವ ಹಳುವ ನಗರೋಪವನನಂದನ (ಯಶೋಧ. ೫). **ಹಳುವು:** ೧. ಪಾಂಡವರು ಹಳುವಿನೊಳಗೆ ಹನ್ನೆರಡುವರುಷಮಿರ್ದು ಬಳಿಕೆಲ್ಲಿಗೆಯ್ದಿದರು (ನೇಮಿಸಂ. ೨೫-೧೨೪); ಈ ದ್ವೀಪದ ಪೂರ್ವಭಾಗದಲ್ಲಿ . . . ದಟ್ಟವಾದ ಹಳುವುಗಳುಂಟು (ಮುಂಬಯಿ. ೪-೨೦೧); ಹಳುವು ಆಡೆ ಕರೆವುದು (ಮಾಂದಳಿ. ೪೫-೩). [ದೇ.॥ ತಮಿ. ಮಲ. ಪಟುವ]

ಪಟುವಗಿಚ್ಚು (ನಾ). ಕಾಡುಗಿಚ್ಚು; ದಾವಾಗ್ನಿ: "ಪಟುವ ಗಿಚ್ಚು ಕಾಟ್ಕುಚ್ಚೆನಿಪ್ಪುದು" (ಚತುನಿ. ೧೧೧). [ಪಟುವ + ಕಿಚ್ಚು]

ಪಟುವಗೆ (ನಾ). (ಆಲಂ) ಕಾಡುಬುದ್ಧಿ; ಕೆಟ್ಟಮನಸ್ಸು; ದುರ್ಬುದ್ಧಿ: ಆಕೆಯವನ ಮನದ ಪಟುವಗೆಯನಱ[ಯ]ದಂತೆ ಗೆಯ್ವೆನೆಂದು (ಪಂಪಭಾ. ೮-೬೩ ಪ); ಆನರಸುಗೆಯ್ವ ಪಟುವಗೆಯನದಂ ಪರಿಹರಿಸಿದೆಂ (ಪಂಪಭಾ. ೧೨-೧೨೯). [ಪಟು$_1$(<ಪಟುವ) + ಬಗೆ$_2$]

ಪಟುವಡು (ಕ್ರಿ). ಕಾಡನ್ನು ಸೇರು; ಅರಣ್ಯವನ್ನು ಹೊಗು: ದಶರಥಂ ತಪಂಬಟ್ಟುದುಮಂ ರಾಮಲಕ್ಷ್ಮಣರ್ ಪಟು[ಪಾಠಾಂ. ಟು] ವಟ್ಟುದುಮಂ ಚರವಚನದಿನಱಿದು (ಪಂರಾಮಾ. ೮-೫ ಪ).

[ಪಟು$_1$(<ಪಟುವ) + ಪಡು$_1$]

ಪಟುವಟಲ್ (ನಾ). ನಿರ್ಜನಪ್ರದೇಶದಲ್ಲಿ ಅಳುವ ಅಳು; ಅರಣ್ಯರೋದನ: ಅನೊರ್ವಳೆ ಬಡವೆ ಬಱುವೆಯಾದೆಂ. ಉಃ! ಪೋಕೆ ಪಟುವಟಲಿನೇಂ? (ರಾಮಾಶ್ವ. ೪೦-೬).

[ಪಟು$_1$(<ಪಟುವ) + ಅಟಲ್$_2$]

ಪಟುವಟು (ನಾ). ಕಾಡುದಾರಿ; ಅರಣ್ಯಮಾರ್ಗ: ಪಟುವಟುಯಂ ತಗುಳ್ದಳುರ್ವ ಬೇಗೆವೊಲೆಚ್ಚ ಶರಾಳಿಗಳ್ ಛಟುಲ್‌ಛಟುಲೆನೆ ಪಾಯೆ (ಪಂಪಭಾ. ೮-೧೦೫). [ಪಟು$_1$(<ಪಟುವ) + ಬಟು$_3$]

ಪಟುವು 'ಪಟುವ' ನೋ.

ಪಟೆ 'ಪಟ$_1$' ನೋ.

ಪಟೆನರೆ (ನಾ). (ಆಲಂ) ಹಳೆಯದು; ಪ್ರಾಚೀನವಾದುದು; ಪುರಾತನವಾದುದು: ಮಗಳುಮನ್ ಪಟೆನರೆಯ ವಿಧಿ ಬಡಿದು ನರಲಿಸಿತ್ತು (ಅಂತಿಗೊ. ೪೪-೯೧೧). [ಪಟೆ(<ಪಟದು) + ನರೆ$_2$]

ಪಟೆನವಿರ್ 'ಪಟನವಿರ್' ನೋ.

ಪಟೆಯ 'ಪಟದು' ಪರಾ.

ಪಟೆಯುಪ್ಪು (ನಾ). ಬಹಳದಿನಗಳಿಂದ ಶೇಖರಿಸಿ ಹಳೆಯದಾದ ಉಪ್ಪು: "ವಸುವೆನಲ್ ಪಟೆಯುಪ್ಪೆನಿಕ್ಕು" (ಮಂಗರಾ. ೪೩-೪೧). [ಪಟೆ(<ಪಟದು) + ಉಪ್ಪು$_1$]

ಪಟೆಯೆಲೆ (ನಾ). ಹಳೆಯ ಎಲೆ; ಹಣ್ಣೆಲೆ: ಪಟೆಯೆಲೆ ದೋಷತ್ರಯಮಂ ಕಳೆವವೊಲೆಳೆಯೆಲೆ ಕಟಲ್ಚುವುದೆ (ಉದ್ಭಟ. ೧೦-೭೩).

[ಪಟೆ(<ಪಟದು) + ಎಲೆ$_1$]

ಪಟೆಯೊಲ್ಮೆ (ನಾ). ಹಳೆಯ ಪ್ರೀತಿ; ಹಿಂದಿನ ಒಲುಮೆ: ಪಟೆಯೊಲ್ಮೆಯನ್ ಬಿಸುಟನ್ (ಅಶ್ವತ್ಥಾ. ೩೨-೬೩೫).

[ಪಟೆ(<ಪಟದು$_1$) + ಒಲ್ಮೆ]

ಪಟೆವುಣ್, ಹಳೆಹುಣ್ಣು (ನಾ). ಹಳೆಯ ಗಾಯ: ಪವಿಯ ಮುಖಘಾತದಿಂ ಡೋಣಿವೋದ ಪಟೆವುಣ್ಗೆ ಜಿಗುಟೆಯಂ ಬಿಟ್ಟವೊಲ್ (ಸೂಕ್ತಿಸು. ೩-೮೦); ಪಲದೆವಸಕ್ಕೆಮಗೀಗಳ್ ಕಲಹಂ ದೊರೆಕೊಂಡುದಿಲ್ಲಿ ಮೆಱೆದಪಮಿಂ ದೋರ್ವಲದಳವನೆಂದು ಪಟೆವು[ಪಾಠಾಂ. ಟಪು]ಣ್ಗಲೆ ಯೊಡೆವಿನಮುರ್ವಿ ಕೊರ್ವಿದರ್ ಕಡುಗಲಿಗಳ್ (ಚಂದ್ರಪು. ೧೦-೬೨). **ಹಳೆಹುಣ್ಣು:** ಹಳೆಹುಣ್ಣಿಗೆ:—ಬೇವಿನ ಸೊಪ್ಪು, ಕಲುವು ಇವಂ ಅರೆದು ಬಿಸಿಮಾಡಿ ಕಟ್ಟಲು ಗುಣ (ವಿದೈವಿ. ೭೭).

[ಪಟೆ(<ಪಟದು) + ಪುಣ್]

ಪಟೆವೆಣ್ (ನಾ). ಹಿರಿಯಳಾದ ಹೆಣ್ಣು; ಅನುಭವಸ್ಥಳಾದ ಹೆಂಗಸು: ಪಟೆವೆಣ್ಣಿಸಗುವ ತೆಱದಿನೆಸಗಲಾರ್ಪಳೆ ಪೊಸವೆಣ್ (ಉದ್ಭಟ. ೧೦-೬೪). [ಪಟೆ(<ಪಟದು) + ಪೆಣ್]

ಪಟ್ಕು (ಕ್ರಿ). (?): ಪದಪಾಕಕ್ಕೊಳಗಾಗೆ ಬಾಗಿಸಿದ ರಾಜಾನ್ನಾನ್ನದೊಳ್ ಘಾಸಿಯಾಗದುದಂ ಸಜ್ಜುಕವಾಲ ಘಟ್ಟಮೊಸರಂ ತಂದಿಕ್ಕಿ ಪಟ್ಕೆತ್ತೆ ನುರ್ಗಿದ ಕರ್ಗಾಯ್ . . . ಕಟ್ಟದುದಂ ಕಾಮಿನಿ ತಂದು ನೀಡೆ ಕಲಸುಂಗೂಟಂ ಕರಂ ರಾಗದಿಂ (ಮಹಾನೇ. ೧೬-೪೯). [?]

ಪಟ್ಕೆ, ಪಕ್ಕೆ$_1$, ಪಳ್ಕೆ, ಹಕ್ಕೆ (ನಾ). ೧. ಹಾಸುಗೆ; ಶಯ್ಯೆ: "ಪಟ್ಕೆ-ಶಯನಂ, ಶಯನಸ್ಥಾನಂ" (ಶಮದ. ಪರಿ. ೧); ಈ ತಪೋಧನಂಗೆ ನಿವಾತಮಪ್ಪೆಡೆಯೊಳ್ ಪಟ್ಕೆಗೆಡೆಮಾಡಿ ಕುಡೆಂದು ಪೇಟ್ದು (ಪಂಚತಂ. ೬೩-೧೧); ನೀಹಾರಕರನಲಸಿ ಪಟ್ಕೆ[ಪಾಠಾಂ. ಕ್ಕೆ]ಗೆ ಸಾರಲೊಡಂ ಮಗುಟೆ ಮರ್ಬು ಪರ್ಬಿತ್ತಾಗಳ್ (ಲೀಲಾವ. ೩-೯); ಮೇಲ್ವಾಯ್ದೇಂ ಪಟ್ಕೆಗುಯ್ದು ತಟ್ಕೈಸುವೆನೋ (ಚಕವಿ. ೬-೨೧೩). ೨. ಮಲಗುವ ಸ್ಥಳ; ವಿಶ್ರಮಿಸುವ ಜಾಗ: "ಪಟ್ಕೆಯೆನಲ್ ಶಯನಸ್ಥಲಾಹ್ವಯಂ" (ಕರ್ಣಾನಿ. ೭೪); "ಶಯನಮುಂ, ಶಯನದ ಉ[ಎ]ಡೆಯೊಳುಂ ಪಟ್ಕೆ" (ಸಂಜೀವ. ೧೫). ೩. ನೆಲೆ; ಆಶ್ರಯಸ್ಥಾನ: ಠಕ್ಕಿನ ಪಟ್ಕೆ ಕಾಳಿಯ ತವರ್ ಕವಡಿಂಗೆಡೆ . . . ಬೆಲೆವೆಣ್ಗಳ ಬೀದಿಯದೇಂ ಪೊದಟ್ದುದೋ (ಚಕವಿ. ೬-೭೪). ೪. ಹಕ್ಕಿಯ ಗೂಡು: ಬಱಿಯ ಗೂಡೊಳಗೆ ಮಱಿ ಕವರ್ದ ಪಟ್ಕೆಯನ್ ಕಂಡೊಡನೆ ಚೀಱ್ವಂತೆ ಚೀಱ್ದಳ್ (ಅಂತಿಗೊ. ೨೦-೪೧೨). **ಪಕ್ಕೆ$_1$:** ೧. "ಪಕ್ಕೆಯೆನೆ ಶಯನಮಕ್ಕುಂ" (ಕವಿಕಂ. ೧೪೬); ಉದಯಾದ್ರಿಯ ಸೆಜ್ಜರಕ್ಕೆ ಪಕ್ಕೆಗೆ ಬರುತಿರ್ಪ ದೇವಗಜದಂಗಮರೇಚಿಯ ಭಂಗಿವೆತ್ತಿರಲ್ ಬಗೆಗೊಳಿಸಿತ್ತು ಚಂದನರಸಂದೊಡೆದಂದದೆ ಪೂರ್ವದಿಙ್ಮುಖಂ (ಜಗವಿ. ೧೬-೧೦೩); ತುಱುಗಿದ ತನುತಾಪದಿಂದೆ ಪಕ್ಕೆಯ ತಳಿರ್ ತಱಗೆಲೆಯಾಗಿ ತೋಱಿಸಲು (ಮೋಹಕ. ೨೮-೧೬). ೨. "ಶಯ್ಯೆ ಮನೆಗಳೊಳ್ ಪಕ್ಕೆ" (ಶಬ್ದಮಂ. ೮೦). ೩. ಇದೆ ಸರ್ವಮೃಗಪಕ್ಷಿಗಳ ಪಕ್ಕೆಯೆಂದು . . . ಬೇಂಟೆಯಾಡುತ್ತಿರ್ಪಂ (ಭಾವಚಿಂ. ೫-೧೦); ವಿಪುಳಧರ್ಮಾವಾಸ ವಿಪುಳಪುಣ್ಯದ ಪಕ್ಕೆ (ತ್ರಿಭುತಿ. ೨-೧೧). ೪. ಅಳ್ಕಟೆಯೊಳೆ ಪಕ್ಕೆಗೆ ಸಾರ್ವ ವಿಹಂಗವೀಧಿ ಚೇತರಿಸುವ ಮಾರುತಂ ನಸುಕಲಂಕುವ ಸಾಂಧ್ಯಮಯೂಖಲೇಖೆಗಳ್ (ಗಿರಿಕ. ೪-೬೬); ತಾಳಿತು ಕೆಂಪನಪರದಿಕ್ಕು ಪಕ್ಷಿಜಾಲ ಪಕ್ಕೆಗೆ ಸಾರಿದವು (ಜೀವಂಸಾಂ. ೫-೨); ಪಜ್ಜಳಿಸೆ ಪಡುಗೆಂಪು ಪಕ್ಕಿ ಪಕ್ಕೆಗೆ ಸಾರೆ (ಸಮ್ಯಕೌ. ೧-೩೭). ೫. ಮೃಗಗಳ ವಾಸಸ್ಥಾನ; ಪ್ರಾಣಿಗಳ ಇಕ್ಕೆ: ಮೃಗಮಂ ಗಾಳಿಯನಿರ್ಕೆಯಂ ಪಕ್ಕೆಯಂ . . . ಎಲ್ಲಂದದಿಂ ಬಗೆದಾಗಳ್ (ಪಂಪಭಾ. ೫-೪೩). **ಪಳ್ಕೆ:** ೧. ಕಸವರದ ತೃಷೆಯಿಂದೆ ಚಂಡಾಲರಾದೊಡಂ ಮಿಸುಪ ಪಳ್ಕೆಗೆ ಕರೆವರವಿಚಾರಿಗಳ್ (ಆರಾಚ. ೨-೫-೪೦). 'ಪಳ್ಕೆವನೆ' ಪರಾ. **ಹಕ್ಕೆ:** ೧. ತೊಡುವುದಾದೊಡೆ ಭೂತಿ ಹಕ್ಕೆಯ[ಪಾಠಾಂ. ಮಲಗುವ] ಹಾಸ ನೋಡಿದೊಡೆ ಕಡವಸಗಳಿಹ ವಾಸವಾದೊಡೆಯಡವಿಯು (ಪ್ರಭುಲೀ. ೨೦-೩೦). ೩. "ಇಕ್ಕೆ . . . ಹಕ್ಕೆ, ಗಡಿ, ಗರುಡಿ, ಆಗರಂ—ಈ ೧೫ ಆಶ್ರಯಕ್ಕೆ ಪೆಸರ್" (ಕಶಸಾ. ೫೯-೨೯೦); ಹರನ ಹರುಷದ ಹಕ್ಕೆ ಪರಮೇಶ್ವರನ ಪರಿಣಾಮದ ಪಸರ

(ಪ್ರಭುಲೀ. ೨-೨೩); ದುರ್ನೀತಿಯ ಹಕ್ಕೆ ಹಾಸ್ಯದ ಹೊಲಂ . . . ಗಣಿಕಾಪ್ರತೋಳಿ ತಾಂ (ಹಮ್ಮೀರ. ೨-೯೨); ಹದಿರ್ ಚದುರುಗಳ ಹಕ್ಕೆ ಮೋಹನದಿಕ್ಕೆಯೆನಿಪ ವೇಶ್ಯಾಶ್ರಯಂ ಮುಂದೆ ಕಡುಚೆಲ್ವಾದುದು (ಚಿಬಪು. ೧೧-೩೭). ೪. ಹಕ್ಕೆಯಿಂದಗಲ್ವ ಚಕ್ರಂ ಹೂವನಱಸುವಳಿ . . . ನಲಿವ ಜಾರೆಯರು ಸಂಜೆಯೊಳು ರಂಜಿಸಿದರು (ಹಚಕಾ. ೩-೭೭). ೫. ಕೇಳಿದನು ಮೃಗದಿಕ್ಕೆ ಹಕ್ಕೆಯ ಗಾಳಿಯನು (ಕುಮ್ಯಾಅ. ೪-೧೨); ಹಕ್ಕೆಗೆಯ್ದಿದವು ಹಲ ಮಿಗಗಳ್ (ಸಮ್ಯಕೌ. ೧೦-೨೪); ಇತ್ತಲಿದೆ ಹುಲ್ಲೆಗಳ ಹಕ್ಕೆ; ಮರಿಗಳಿಕ್ಕೆ (ಚಂದ್ರಸ. ೨೮-೧೦); ಮೃಗಗಳನ್ನು ಬೆಂಬತ್ತಿ ಅವುಗಳ ಹಕ್ಕೆಗಳನ್ನು ಕಂಡುಹಿಡಿದೆನು (ಮಣಿಸೆ. ೨೨). ೬. ದನಕರುಗಳನ್ನು ಕಟ್ಟುವ ಸ್ಥಳ; ಕೊಟ್ಟಿಗೆ; ದೊಡ್ಡಿ: "ಹಕ್ಕೆಯೆನಲ್ ಮೃಗಾಲಯದೊಳಪ್ಪುದು" (ಕರ್ಣಾನಿ. ೫೦); ಒಕ್ಕಲಿಗನ ಮನೆಯಲ್ಲಿ ದನದ ಹಕ್ಕೆಯೊಳಗೆ . . . ಅಡಗಿಕೊಂಡಿತು (ಮುಂಬಯಿ. ೪-೪೨); ಹಕ್ಕೆಯನ್ನು ಬಳಿದು ಹಸ ಮಾಡಿದಳು (ಎರಸೆ. ೫೮).

[<ಪಡು$_1$./ತುಳು. ಪರ್ಕೆ; ತೆಲು. ಪಕ್ಕ]

ಪಟ್ಕೆಗೆಡು (ಕ್ರಿ). ಆಶ್ರಯ ತಪ್ಪು; ನೆಲೆಯಿಲ್ಲದಾಗು: ಡಗೆವೊಯ್ದೆರಲೆಯ, ಪಟ್ಕೆಗೆಟ್ಟ ನರಿಯ . . . ಗಜಬಜದ ಸಂಚಾರಂ ಬಲ್ಪಿರಿದಾಯ್ತು (ರಾಮಾಶ್ವ. ೮೪-೮). [ಪಟ್ಕೆ + ಕೆಡು$_1$]

ಪಟ್ಕೆಗೆಯ್ (ಕ್ರಿ). ಮಲಗು; ವಿಶ್ರಮಿಸು: ನಿನ್ನ ಕುಚಮಧ್ಯ ದೊಳೊಯ್ಯನೆ ಪಟ್ಕೆಗೆಯ್ದು ನಾನೆಳಸಿ ಸುಖಂಗಳಂ ಸವಿವ ಕಾಲಮ ದೆಂದೆನಗಪ್ಪುದಂಗನೇ (ಕಾವ್ಯಸಾ. ೫೭೫). [ಪಟ್ಕೆ + ಕೆಯ್$_1$]

ಪಟ್ಕೆತಟ್ಕೈಸು ? (ಕ್ರಿ). ಗಾಢವಾಗಿ ಅಪ್ಪು; ಬರಸೆಳೆ (?): "ಪಟ್ಕೆತಟ್ಕೈಸಿದಂ = ತಡಕಯ್ಯಂ ಮಾಡಿದಂ" (ಶಮದ. ಪರಿ. ೧); ಪಟ್ಕೆತಟ್ಕೈಸಿದನೆಂಬಲ್ಲಿ ತಡಕೈಯಂ ಮಾಡಿದನೆಂಬರ್ಥಂ (ಶಮದ. ೧೯ ಪ್ರಯೋ). [ಪಟ್ಕೆ ? + ತಟ್ಕೈಸು]

ಪಟ್ಕೆವನೆ, ಪಕ್ಕೆವನೆ, ಪಳ್ಕೆವನೆ (ನಾ). ಮಲಗುವ ಮನೆ; ಶಯ್ಯಾಗೃಹ: "ಸೆಜ್ಜೆವನೆ, ಪಟ್ಕೆವನೆ—ಈ ೨ ಶಯ್ಯಾಗೃಹಂ" (ಕಶಸಾ. ೬೦-೩೧೭); ಬೆಳಗಪ್ಪ ಸಮಯದೆಯೆಟ್ಟೊಯ್ಯನೆ ಪಟ್ಕೆವನೆಯಂ ಪೊಱಮಟ್ಟು (ಉದ್ಭಟ. ೧೦-೧೩೬ ವ). **ಪಕ್ಕೆವನೆ**: "ಪಕ್ಕೆವನೆಯೆನ್ನಲದು ತಾನಕ್ಕು ಶಯ್ಯಾಗೃಹಕ್ಕೆ ನಾಮಂ" (ಕವಿಕಂ. ೧೪೬); ಪಕ್ಕೆವನೆಗಾಗಿ ನಡೆತಂದಳು ರಾಯನ ರಾಣಿ (ಸೊಬಸೋ. ೨-೮); ಪಕ್ಕೆವನೆಗೆ ನಡೆತಂದಳಂಜನೆದೇವಿ (ಅಂಜಚ. ೮-೮೧). **ಪಳ್ಕೆವನೆ**: ಕೈವಿಡಿದವನಂ ಪಳ್ಕೆವನೆಗವಳ್ಕೊಂಡೊಯ್ದಳ್ (ವೀರವಿ. ೬-೬೭).

[ಪಟ್ಕೆ + ಮನೆ]

ಪಟ್ಕೆವೆಟ್ಟ, ಪಕ್ಕೆವೆಟ್ಟ, ಪಕ್ಕೆವೆಟ್ಟು (ನಾ). ಸೂರ್ಯನು ವಿಶ್ರಮಿಸುವ ಬೆಟ್ಟ; ಪಶ್ಚಿಮಬೆಟ್ಟ; ಪಡುವೆಟ್ಟ: ಪೊಂಬಿಸಿಲಾದುದು ಪೊರ್ದೆ ಪಟ್ಕೆವೆಟ್ಟಮ[ಪಾಶಾಂ. ಪಕ್ಷವೇದಿಯ]ನರ್ಕಂ (ಪಂರಾಮಾ. ೧೧-೧೭೭). **ಪಕ್ಕೆವೆಟ್ಟೆ**: ನಭೋಲಕ್ಷ್ಮಿ ಸಕಳಪ್ರಕಾಶಮಂ ಮೊಟ್ಟೆಗಟ್ಟ ಪಕ್ಕೆವೆಟ್ಟದಿಟ್ಟೆಡೆಗೆ ಕಳಿಪಿದ ಕಟ್ಟೇವದ ಪೊಟ್ಟಳಮಿದೆಂಬಿನಂ ದ್ಯುಮಣಿ ಚರಮಾಚಳಶಿರೋಮಣಿಯಪ್ಪುದುಂ (ವರ್ಧಪು. ೬-೨೩ ವ); ಚೆಂಗೊಡೆಯಂತಿರ್ದುವು ಪಕ್ಕೆವೆಟ್ಟದೆಡೆಯೊಳ್ ನೀಹಾರರುಜ್ಜಂಡಲಂ (ಸೂಕ್ತಿಸು. ೯-೧೨). **ಪಕ್ಕೆವೆಟ್ಟು**: ಅಂತು ಕಾದಿ ಕಡೆಗಾಲದ ಬಱಸಿಡಿಲ ಬಳಗದೊಳ್ ತೊಡರ್ದ ಪಕ್ಕೆವೆಟ್ಟುಗಳ ತಟ್ಕೆಯಂತೆಯುಂ (ಚಂದ್ರಪು. ೧೦-೮೭ ವ). [ಪಟ್ಕೆ + ಬೆಟ್ಟ]

ಪಟ್ಕೆಸಾರ್ (ಕ್ರಿ). ಹಾಸುಗೆಯನ್ನು ಸೇರು; ಮಲಗು: ನಿದ್ರಾತುರನಾಗಿ ಪಟ್ಕೆ[ಪಾಶಾಂ. ಕ್ಕೆ]ಸಾರ್ವಂತಿರೆ ಸಾರ್ದಂ ಚಂದ್ರನಪ ವೇಲಾವನಮಂ (ಕಾದಂಉ. ೧೩೧). [ಪಟ್ಕೆ + ಸಾರ್]

ಪಟ್ಗಿ, ಹಟ್ಗಿ (ನಾ). ಹಣ್ಣಿಗೆ ಬಂದ ಕಾಯಿಗಳನ್ನು ಹೊಗೆ ಹಾಕಿ ಹಣ್ಣು ಮಾಡುವುದು,—ಅಡೆಹಾಕುವುದು,—ಮಾಗಿಸುವುದು: (ಕಿ). **ಹಟ್ಗಿ**: "ಹಟ್ಗಿ = ದೂವೆಯೊಳ್ ತಟಲಂ ಪೂಟ್ಟ ಕ್ರಿಯೆ" (ಶಮದ. ಪರಿ. ೧). ℙ ಈ ಶಬ್ದರೂಪಗಳ ಬಗೆಗೆ ಸಿದ್ಧವಾದ ಅಭಿಪ್ರಾಯವಿಲ್ಲ. [?]

△ **ಪಟ್ಟು** 'ಪರ್ಚು$_1$' ನೋ.

ಪಟ್ತಿ, ಪತ್ತಿ$_1$, ಪರ್ತಿ, ಪಳ್ತಿ, ಹತ್ತಿ$_1$ (ನಾ). (ಬೀಜಸಹಿತವಾದ) ಅರಳೆ; ಕಾರ್ಪಾಸ; ತೂಲ: "ಪಿಚವ್ಯಃ, ಬಾದರಃ, ಕಾರ್ಪಾಸಃ—ಈ ೩ ಪಟ್ತಿ (ಹತ್ತಿ)" (ಹಲಾಯು. ೩೪-೪೯); ಮಳವೆಗೆ ಪಟ್ತಿ ಪದಿನಾಱು ಪಲಂ (ಎಇ. IX, ೨೨-೭; 800); ಬಂಡಿಗಳೊಳ್ ಪಟ್ತಿ[ಪಾಶಾಂ. ತ್ತಿ]ಯುಂ ಧಾನ್ಯಮಂ ತೀವಿಕೊಂಡು ಪೊಟಲ್ಗೆ ಮಾಱಲೆಂದು ಪೋಪನ್ನೆಗಂ (ವಡ್ಡಾರಾ. ೭೬-೧೧); ಕಪ್ಪಡಕ್ಕೆ ಪಟ್ತಿಯುಂ ಬ್ರಹ್ಮಲಿಂಗಭಟರ್ಗೆ ಕೊಟ್ಟುದು (ಮೈಆರಿ. ೧೯೪೬, ೨೮-೧೯; 1032). **ಪತ್ತಿ$_1$**: ಪತ್ತಿಯುಂ ಕಿಚ್ಚು ತಗುಳ್ದಂತೆ (ಧರ್ಮಾಮೃ. ೨-೭೧); ನಾಡೆಯುಂ ನೂಲುಂ ಪತ್ತಿಯುಮಂ ಸಂಗ್ರಹಂಗೆಯ್ದು (ಬಂಹರಿ. ೪-೧೦ ವ); ಪತ್ತಿಸುವನಜ್ಞಾನಮಾರ್ಗದ ಪತ್ತಿಯಂ (ಶಂಕದಾ. ೪-೩೧). **ಪರ್ತಿ**: ಒಕ್ಕಲು ಪಣಂ ಮೂಱು ಪರ್ತ್ತಿಯ ಮಳವೆ ಪನ್ನೆರಡು ಇನ್ನಿನಿತುಮಂ ವರಿಪಪ್ರತಿ ಬಿಟ್ಟರ್ (ಎಇ. XVI, ೩೩೧-೨೧; 1077). **ಪಳ್ತಿ**: ಮಱೆವೊಕ್ಕ ಬಳಿಕೆ ಕಲ್ಮಷದುಱುವೆಂಬುದು ಪಳ್ತಿಯೊಟ್ಟಲಗ್ನಿಯ ತೆಱದಿಂತುಱೆ ಬಱಿದಪ್ಪುದು (ವಿಷ್ಣುಪು. ೧-೨-೧೭೫); ಕಿರ್ಚು ಪಳ್ತಿಯ ರಾಸಿಯಂ ದಹಿಸಿ ಬಿಡುವಂತೆ (ಭಾರಶಾಂ. ೧-೪). **ಹತ್ತಿ$_1$**: "ಹತ್ತಿ ಕಾರ್ಪಾಸಂ ಪಿಚವ್ಯಮಾ ಬಾದರಂ ಅರಳೆ ಪಿಚು ತೂಳಕಾಖ್ಯಂ" (ಮಂಗರಾ. ೩೮-೨೩); ಸಲುವುದು ಹತ್ತಿಯಡಕೆಯೆಲೆ (ಎಕ. VIII, ಸೊರಬ. ೩೨೮-೬೨; 1159); ಧರಣಿ ಹತ್ತಿಯ ಶಯನದಂದದಿ ವರಮುನಿಗೆ ತಾನಾಗೆ (ಕುಮ್ಯಾಅ. ೨೫-೨೪); ಎಡೆಗೆಡೆಗೆ ಹತ್ತಿಗಳ ಹೊಱೆಗಳ ಹೊಡಚಿದರಳೆಯ ಸುತ್ತಿದರು (ತೊರರಾ. ೫-೮-೮); ಹತ್ತಿ ತೂಗುವಲ್ಲಿ ನೊಣಕ್ಕೆ ಉಪವಾಸ (ಗಾದೆ).

[ದೇ.॥ ತಮಿ. ಮಲ. ಪರುತ್ತಿ; ತುಳು. ಕುಇ. ಕುವಿ. ಪರ್ತಿ: ತೆಲು. ಪತ್ತಿ, ಪ್ರತ್ತಿ; ಕೊಡ. ಪರತಿ]

ಪಟ್ತಿಂಗಟ್ (ನಾ). (?): ಒನ್ದಡಿ ಪಾನಿಯೆಂ ಏಟುಂ ಒನ್ನತ್ತೆ ದಿವಸಂ ಪಟ್ತಿಂ ಗಟ್ ತಮಸಿ ಮೂಱೆ ದಿವಸಂ ವೇಸನೆ ಈ ××× ರೆ ಉಟ್ಟುದು (ಎಕ. III, ಮೈಸೂರು. ೫೫-೮; ಸು. 740). [?]

ಪಟ್ತಿಯಮಟ್ತವುರ, ಪತ್ತಿಯಮತ್ತಉರ (ನಾ). ಒಂದು ಊರಿನ ಹೆಸರು; ℙ ಈಗಿನ ಧಾರವಾಡ ಜಿಲ್ಲೆಯ ಹತ್ತಿಮತ್ತೂರು: ಪಟ್ತಿಯಮಟ್ತವುರದ ನೂರ್ಱ್ಪ್ಪದಿಮ್ಬೊರುಮಿಟ್ಟು ದಯೆಗೆಯ್ಯೆ ಕಚ್ಚ ವರ ಕಾದಮ್ಮನ ವುತವುರಂ ಬಿಡಿಸಿದೊಂ (ಇಅ. XII, ೨೨೫-೮; 916). **ಪತ್ತಿಯಮತ್ತಉರ**: ಪತ್ತಿಯಮತ್ತಉರದ ದಂಡಿನೊಳು ಕಿಱಿಯ ಸಿರಿಉರದ ಸಾಯಿರಮತ್ತರ್ ಪೊಲನಂ (ಎಇ. III, ೨೩೪-೪೫; ಸು. 1070). [ಪಟ್ತಿ + ? + ಪುರ$_2$]

ಪಟ್ದಲ 'ಪರ್ದಿಲ' ನೋ.

ಪಟ್ಪಟ 'ಪಟಪಟ' ನೋ.

ಪಟ್ಪಟನೆ 'ಪಟಪಟನೆ' ನೋ.

ಕರ್ನಾಟಕ ಸರ್ಕಾರದ ಉದಾರ ಧನಸಹಾಯದಿಂದ ಕನ್ನಡಿಗರ ಬಹುದಿನಗಳ ಬೇಡಿಕೆಯಾಗಿದ್ದ ಕನ್ನಡ ನಿಘಂಟಿನ ಎಂಟು ಸಂಪುಟಗಳು ಈಗ ಪುನರ್ಮುದ್ರಣಗೊಂಡು ನಿಮ್ಮ ಕೈಸೇರುತ್ತಿವೆ.

ಸಮಸ್ತ ಕನ್ನಡಿಗರಿಗೆ ಈ ಸಂಪುಟಗಳನ್ನು ಒಪ್ಪಿಸಲು ನೆರವು ನೀಡಿದ ಕರ್ನಾಟಕ ಸರ್ಕಾರವನ್ನು ನಾನು ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತೇನೆ.

ಡಾ. ನಲ್ಲೂರು ಪ್ರಸಾದ್ ಆರ್. ಕೆ.
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು